ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೨

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೭೩
ವಿಚಾರ ಸಾಹಿತ್ಯಮಾಲೆ - ೬

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೨

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೨)

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 2** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056 ; Fourth Edition : 2015; Pp. xxvi + 1054; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ನಾಲ್ಕನೇ ಮುದ್ರಣ : ೨೦೧೫
ಪುಟಗಳು : xxvi + ೧೦೫೪
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೭, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯ ಮಾಡಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಹೆಚ್.ಆಂಜನೇಯ)

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೯೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'**, ಜೆ. ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

**(ಡಾ. ಎನ್.ಎಸ್. ಚನ್ನಪ್ಪಗೌಡ)**

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

# ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ-ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ-ಭಾಷಣಗಳ ಮೂಲಕ, ವೈಚಾರಿಕ ಚರ್ಚೆ-ಸಂವಾದಗಳ ಮೂಲಕ ಸಾಮಾಜಿಕ-ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್-III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ–ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize !! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡುಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದುಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮)

೧. ಡಾ. ಸಿದ್ಧಲಿಂಗಯ್ಯ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨-೬-೨೦೦೮ ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕರಣವನ್ನು ಕೈಗೊಂಡಿದ್ದು, ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದಾರೆ.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ. ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಈ ವಿದ್ವಾಂಸರು ಈ ಸಂಪುಟಗಳನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಪರಿಷ್ಕರಿಸಿದ್ದಾರೆ. ಅವರ ಈ ಸಹಾಯ-ಸಹಕಾರಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳಿಗೂ ಅಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲಿ ಸಹಾಯ, ಸಹಕಾರ, ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಜಯರಾಮ ರಾಜೇ ಅರಸ್ ಅವರಿಗೆ ನಮ್ಮ ಕೃತಜ್ಞತೆಗಳು.

ವಿಳಂಬಗೊಂಡಿದ್ದ ಈ ಯೋಜನೆ ಸ್ಫೂರ್ತಿಯುತವಾಗಿ ಹಾಗೂ ಶೀಘ್ರಾತಿಶೀಘ್ರವಾಗಿ ಮುನ್ನಡೆಯುವುದಕ್ಕೆ ಕಾರಣರಾಗಿರುವವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆ ದೊರೆಯಿತು. ಕೊನೆಗೆ ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದ ಈ ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಸಂಪಾದನ ಕಾರ್ಯದಲ್ಲಿ ನೆರವಾಗಿರುವ ಶ್ರೀ ವಿ. ಕೃಷ್ಣ ಅವರಿಗೆ ಹಾಗೂ ಕರಡು ಪರಿಶೀಲನೆ ಮಾಡಿರುವ ಶ್ರೀಮತಿ ಆರತಿ ನಾಗೇಶ್ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೆ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ನಾಲ್ಕನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ

ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹಾದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**

ಅಧ್ಯಕ್ಷ

ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯ ಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ. ಭೀಮರಾವ್ ರಾಮಜಿ ಅಂಬೇಡ್ಕರರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನ ದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲ ತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಅವರು ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದು, ದೀನ ದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ. ಅಂಂಬೇಡ್ಕರರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ ಜಾತಿ ನಿರ್ಮೂಲನೆ; ಶೂದ್ರರು ಯಾರು? ಅಸ್ಪೃಶ್ಯರು ಯಾರು–ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು? ರೂಪಾಯಿಯ ಸಮಸ್ಯೆ; ಪಾಕಿಸ್ತಾನ ಅಥವಾ ಭಾರತದ ವಿಭಜನೆ ಪ್ರಮುಖವಾಗಿವೆ. ಬುದ್ಧ ಮತ್ತು ಅವರ ಧರ್ಮ – ಇದು ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ.

ಅವರ ಮರಣಾನಂತರ ಇವು ಆಸ್ತಿವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ. ಅಂಬೇಡ್ಕರರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ. ಬಿ.ಆರ್. ಅಂಬೇಡ್ಕರರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರೆವಣಿಗೆಯ

ಕೆಲ ಭಾಗಗಳು, ಆದರಲ್ಲಿಯೂ ಅವರು ತಾವೇ ಆರಂಭಿಸಿ, ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ, ಜನತಾ ಮತ್ತು ಬಹಿಷ್ಕೃತ ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ. ಅಂಬೇಡ್ಕರರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಿಂದಲೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೬ ರವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೇ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳು ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡು ಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ. ಇವೂ ಅಲ್ಲದೆ ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ, ವಿವರಣೆಗಳು ಮತ್ತು ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ಧಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸಾಪ ಬಂದಾಗಲೆಲ್ಲಾ ಅವರು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ. ಅಂಬೇಡ್ಕರರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವೂ ಸಂಪೂರ್ಣವಾಗಿ ಅಳಿದುಹೋಗುವ ಅಪಾಯವೂ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರದವರು ಡಾ. ಅಂಬೇಡ್ಕರರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು ಈ ಯೋಜನೆಯ ರೂಪುರೇಷಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿ ಡಾ. ಬಾಬಾಸಾಹೇಬ ಅಂಬೇಡ್ಕರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ ಎಂಬ ಸಮಿತಿಯನ್ನು ರಚಿಸಿ, ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯ ಮಂತ್ರಿ ಶ್ರೀ ಶರದ್ ಪವಾರ್‌ರವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್‌ರವರ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ. ಅಂಬೇಡ್ಕರರ ಎಲ್ಲಾ ಬರಹಗಳನ್ನೂ ಸಂಗ್ರಹಿಸಿ ಒಟ್ಟು ಹದಿನಾಲ್ಕು ಬೃಹತ್ ಸಂಪುಟಗಳಲ್ಲಿ "ಡಾ. ಬಾಬಾ ಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು, ಇದುವರೆಗೆ ಒಟ್ಟು ಹತ್ತು ಸಂಪುಟಗಳನ್ನು ಪ್ರಕಟಿಸಿದೆ. ಇನ್ನೂ ನಾಲ್ಕು ಸಂಪುಟಗಳು ಬರಬೇಕಾಗಿವೆ. ಇದುವರೆಗೆ ಪ್ರಕಟಿತವಾದ ಹತ್ತು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ, ಭಾಷಾವಾರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ, ರಾಜ್ಯಗಳು ಮತ್ತು ಅಲ್ಪಸಂಖ್ಯಾತರು, ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡು ಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ ಹಿಂದೂ ಧರ್ಮದರ್ಶನ,

ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ, ಭಾರತ ಮತ್ತು ಸಮತಾವಾದದ ಪೂರ್ವಭಾವಿ ಅವಶ್ಯಕತೆಗಳು; ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಮುಂತಾದವು ಸೇರಿವೆ. ೧೯೮೭ರಲ್ಲಿ ನಾಲ್ಕನೆಯ ಸಂಪುಟ ಮತ್ತು ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು ರೂಪಾಯಿಯ ಸಮಸ್ಯೆ ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ ಶೂದ್ರರು ಯಾರು?.... ಮತ್ತು ಅಸ್ಪೃಶ್ಯರು ಯಾರು–ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್ ಮುದ್ರಿಸಲಾಗಿದೆ. ಇದೇ ವರ್ಷ ಪ್ರಕಟಿಸಲಾಗಿರುವ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ಮುದ್ರಣವಾಗಿದೆ. ಇದು ಅವರ ಮೇರು ಕೃತಿ. ಮುಂದಿನ ಮೂರು ಸಂಪುಟಗಳಲ್ಲಿ ಗವರ್ನರ ಜನರಲ್‌ರ ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರರು ಭಾಗವಹಿಸಿರುವುದು (೧೯೪೨–೧೯೫೬) ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು? ಹಾಗೂ ಎಜುಕೇಷನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರಹಗಳು ಮತ್ತು ಇತರ ಸಂಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಇಂತಹ ಸ್ತುತ್ಯ ಉಪಕ್ರಮಕ್ಕಾಗಿ ಮಹಾರಾಷ್ಟ್ರ ಸರ್ಕಾರ ಅಭಿನಂದನಾರ್ಹ. ಅಲ್ಲದೇ, ಪ್ರತಿ ಸಂಪುಟ ಸರಾಸರಿ ಐದುನೂರು ಪುಟಗಳಿಗಿಂತ ಹೆಚ್ಚಾಗಿದ್ದಾಗ್ಯೂ, ಪ್ರತಿಯೊಂದರ ಬೆಲೆ ಕೇವಲ ನಲವತ್ತು ರೂಪಾಯಿಗಳಿರುವುದು (ಮೊದಲನೆಯ ಸಂಪುಟದ ಬೆಲೆ ಕೇವಲ ಹತ್ತು ರೂಪಾಯಿ) ಅತ್ಯಂತ ಸ್ವಾಗತಾರ್ಹ ಸಂಗತಿಯಾಗಿದೆ. ಡಾ. ಅಂಬೇಡ್ಕರರ ಈ ಅಮೂಲ್ಯ ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ, ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ. ಬಾಬಾಸಾಹೇಬ ಅಂಬೇಡ್ಕರರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ. ಬಾಬಾ ಸಾಹೇಬ ಅಂಬೇಡ್ಕರರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ. ಅಂಬೇಡ್ಕರರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಅವಶ್ಯಕತೆಯನ್ನು ಮೊದಲು ಮನಗಂಡ ಕರ್ನಾಟಕ ರಾಜ್ಯದ ಅಂದಿನ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ. ಅಂಬೇಡ್ಕರರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

೧. ಪ್ರೊ: ಎ.ಎಂ. ರಾಜಶೇಖರಯ್ಯ – ಸಂಪಾದಕರು

೨. ಡಾ. ಸಿದ್ದಲಿಂಗಯ್ಯ – ಸದಸ್ಯರು

೩. ಶ್ರೀ ದೇವನೂರ ಮಹಾದೇವ – ಸದಸ್ಯರು

೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಸದಸ್ಯ ಕಾರ್ಯದರ್ಶಿ

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ ರಂದು ಬೆಂಗಳೂರಿನಲ್ಲಿ ಸೇರಿ ಡಾ. ಅಂಬೇಡ್ಕರ್‌ರವರ ಪ್ರಕಟಿತ ಮತ್ತು ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡಿದೆ ಮತ್ತು ಅವುಗಳಲ್ಲಿ ಕೆಲವು ಲಭ್ಯವಿಲ್ಲದಿರುವ ಕಾರಣದಿಂದಲೂ ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ತಮ್ಮ ದಿನಾಂಕ: ೨–೫–೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು.* ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ. ಅಂಬೇಡ್ಕರ್ ರವರ ಬರಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾಗಿರುವುದರಿಂದ, ಅವುಗಳ ಭಾಷಾಂತರ ಸುಲಭಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅದರ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ. ಶೈಲಿ, ಪರಿಭಾಷಾ ಪದಗಳು ಮುಂತಾದುವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು:

೧. ಡಾ. ಆರ್.ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨. ಡಾ. ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು ೩ ಶ್ರೀ ವೈ. ಎಂ. ಸಿ. ಶರ್ಮ, ಅಂದಿನ ಅಧ್ಯಕ್ಷರು, ಕರ್ನಾಟಕ ರಾಜ ಭಾಷಾ ಆಯೋಗ, ಬೆಂಗಳೂರು ಅವರ ಸ್ಥಾನದಲ್ಲಿ ಇಂದಿನ ಅಧ್ಯಕ್ಷ ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದಿತ ಭಾಗಗಳ ಪರಿಶೀಲನೆ ಮಾಡುವಾಗ ವಿವಿಧ ಭಾಷಾಂತರಕಾರರು ಪ್ರತ್ಯೇಕವಾಗಿ ಅನುವಾದ ಮಾಡಿದ ಭಾಗಗಳಲ್ಲಿ ಪದ ಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ೧೯೯೦ರ ಮೇ ತಿಂಗಳ ಕೊನೆಯ ವಾರದಲ್ಲಿ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಸಂಪಾದಕ ಸಮಿತಿಯ ಈಗಾಗಲೇ ಮೊದಲನೆಯ ಹತ್ತು ಸಂಪುಟಗಳ ಭಾಷಾಂತರ ಕಾರ್ಯವನ್ನು ವಿವಿಧ ವಿದ್ವಾಂಸರಿಗೆ ವಹಿಸಿದೆ. ಡಾ. ಬಿ. ಆರ್. ಅಂಬೇಡ್ಕರರ ಜನ್ಮ ಶತಮಾನೋತ್ಸವ ವರ್ಷವಾದ

* ಭಾಷಾಂತರ ಕಾರ್ಯದಲ್ಲಿ ಭಾಗಿಗಳಾಗಿದ್ದವರು: (೧) ಶ್ರೀ ಎನ್.ಎಸ್. ಸಂಗೋಳ್ಳಿ, (೨) ಡಾ. ವರದರಾಜ ಹುಯಿಲಗೋಳ, (೩) ಡಾ. ಪ್ರಧಾನ್ ಗುರುದತ್ತ, (೪) ಡಾ. ಸಿ.ಪಿ. ಕೃಷ್ಣಕುಮಾರ್, (೫) ಪ್ರೊ॥ ಎಲ್.ಎಸ್. ಶೇಷಗಿರಿ ರಾವ್, (೬) ಡಾ. ಸಮತೀಂದ್ರ ನಾಡಿಗ, (೭) ಡಾ. ಎ.ಎಂ. ರಾಜಶೇಖರಯ್ಯ, (೮) ಶ್ರೀ ಮಂಗ್ಳೂರ್ ವಿಜಯ.

೧೯೯೦–೯೧ರ ಅವಧಿಯಲ್ಲಿ ಸಾಧ್ಯವಾದಷ್ಟು ಸಂಪುಟಗಳ ಕನ್ನಡ ಅನುವಾದ ಮಾಡಿಸಿ ಪ್ರಕಟಿಸುವ ಕಾರ್ಯವನ್ನು ಹಮ್ಮಿಕೊಂಡಿದ್ದರ ಅಂಗವಾಗಿ ಸಂಪಾದಕ ಸಮಿತಿ ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಿ ಒಂದನೆಯ ಸಂಪುಟವನ್ನು ೧೯೯೦ ರಲ್ಲಿ ಸಿದ್ಧಗೊಳಿಸಿತು. ಒಂದನೆಯ ಸಂಪುಟವನ್ನು ಕರ್ನಾಟಕ ರಾಜ್ಯದ ಆಗಿನ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಸ್. ಬಂಗಾರಪ್ಪನವರು ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರವರ ಜನ್ಮ ಶತಾಬ್ದಿಯಂದು ಎಂದರೆ ಏಪ್ರಿಲ್ ೧೪, ೧೯೯೧ರಂದು ಬೆಂಗಳೂರಿನಲ್ಲಿ ವಿಧಾನಸೌಧದ ಎದುರು ಜರುಗಿದ ಸಾರ್ವಜನಿಕ ಸಮಾರಂಭದಲ್ಲಿ ಬಿಡುಗಡೆ ಮಾಡಿದರು.

ಕೊನೆಯಲ್ಲಿ ಈ ಎರಡನೆಯ ಸಂಪುಟದಲ್ಲಿ ಪ್ರಕಟವಾಗುತ್ತಿರುವ ಅವರ ಬರೆಹಗಳನ್ನು ಕುರಿತು ಒಂದೆರಡು ಮಾತು. ಈ ಸಂಪುಟ ಒಂದು ಮಹತ್ವದ ಸಂಪುಟವಾಗಿದೆ ಎಂದೇ ಹೇಳಬಹುದು. ಇದರಲ್ಲಿ ಡಾ. ಅಂಬೇಡ್ಕರ್‌ರವರ ಸಾರ್ವಜನಿಕ ಜೀವನದ ಮೊದಲ ಮೂರು ದಶಕಗಳಲ್ಲಿ ಅವರು ಭಾಗವಹಿಸಿದ ಮುಂಬಯಿ ಶಾಸಕಾಂಗ ಸದನಗಳ ಮತ್ತು ಲಂಡನ್ನಿನಲ್ಲಿ ೧೯೩೦–೩೨ರ ನಡುವೆ ಜರುಗಿದ ಐತಿಹಾಸಿಕ ದುಂಡು ಮೇಜು ಪರಿಷತ್ತುಗಳ ಕಾರ್ಯಕಲಾಪಗಳು ಹಾಗೂ ಅವರು ಸೈಮನ್ ಆಯೋಗಕ್ಕೆ ಸಲ್ಲಿಸಿದ ಮನವಿಗಳು, ಅವರು ಮಂಡಿಸಿದ ವಾದಗಳು ಮುಂತಾದವು ಸೇರಿವೆ. ಇವು ಅಧಿಕೃತ ದಾಖಲೆಗಳಲ್ಲಿಯಲ್ಲದೆ ಬೇರೆ ಎಲ್ಲಿಯೂ ಲಭ್ಯವಿರುವುದಿಲ್ಲ. ಈ ಸಂಪುಟದಲ್ಲಿ ಇವು ಒಂದು ಕಡೆ ಸಂಗ್ರಹಿತವಾಗಿ ಪ್ರಕಟವಾಗುತ್ತಿರುವುದು ಓದುಗರಿಗೆ ಅತ್ಯಂತ ಉಪಯುಕ್ತವೆನಿಸುವುದು. ಎರಡನೆಯದಾಗಿ, ಡಾ. ಅಂಬೇಡ್ಕರ್‌ರವರು ಸೈಮನ್ ಆಯೋಗದೊಂದಿಗೆ ಮತ್ತು ದುಂಡು ಮೇಜು ಪರಿಷತ್ತುಗಳಲ್ಲಿ ಮಾಡಿರುವ ಸುದೀರ್ಘ ವಾದಗಳು ಭಾರತದ ಸಂವಿಧಾನಾತ್ಮಕ ವಿಕಾಸದಲ್ಲಿ ಎದುರಾದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವುವಲ್ಲದೆ, ಅವರು ಆ ಸಂದರ್ಭದಲ್ಲಿ ವ್ಯಕ್ತಪಡಿಸಿದ ವಿಚಾರಗಳು ಮತ್ತು ಮಾಡಿದ ಸೂಚನೆಗಳು ಮುಂದೆ ಸ್ವತಂತ್ರ ಭಾರತ ಸಂವಿಧಾನ ರಚನೆಗೆ ಎಷ್ಟು ಸೂಕ್ತ ಮತ್ತು ಸಹಕಾರಿಯಾದವು ಎಂಬುದನ್ನು ತಿಳಿದುಕೊಳ್ಳಲು ಸಹಾಯವಾಗುತ್ತವೆ. ಅವರು ಈ ಸಮಸ್ಯೆಗಳಿಗೆ ಅಂದೇ ಪರಿಹಾರ ಹೇಳಿದ್ದರಲ್ಲದೆ ಅಲ್ಪ ಸಂಖ್ಯಾತರು, ಅದರಲ್ಲಿಯೂ ನಿಮ್ನವರ್ಗಗಳ ಹಿತರಕ್ಷಣೆಗೆ ಸಂವಿಧಾನಾತ್ಮಕ ಮಾರ್ಗವೇ ತಾರಕ ಎಂಬ ಅವರ ಅಚಲ ವಿಶ್ವಾಸ ಇಲ್ಲಿ ಸ್ಫುಟವಾಗಿದೆ. ದುಂಡು ಮೇಜು ಪರಿಷತ್ತುಗಳಲ್ಲಿ ಅವರು ಮಾಡಿದ ಬ್ರಿಟನ್ನಿನ ಮತ್ತು ಭಾರತದ ಅಂದಿನ ಗಣ್ಯ ವ್ಯಕ್ತಿಗಳ ಪಾಟೀ ಸವಾಲು ಅತ್ಯಂತ ಉನ್ನತ ಮಟ್ಟದ್ದಾಗಿತ್ತಲ್ಲದೇ ಸಾಕ್ಷಿಗಳೇ ಡಾ. ಅಂಬೇಡ್ಕರ್‌ರವರ ಬುದ್ಧಿ ಮತ್ತೆ, ದೂರದೃಷ್ಟಿ ಮತ್ತು ಅಪಾರ ಜ್ಞಾನ ಹಾಗೂ ಭಾರತದ ಭವಿಷ್ಯದ ಬಗ್ಗೆ ಅವರ ಕಳಕಳಿಗಳನ್ನು ಮುಕ್ತ ಕಂಠದಿಂದ ಹೊಗಳಿದುದು ಈ ಕ್ಷೇತ್ರದಲ್ಲಿ ಅವರ ಗರಿಮೆಯ ದ್ಯೋತಕವಾಗಿದೆ. ಓದುಗರು ಈ ಸಂಪುಟವನ್ನು ಓದಿಯೇ ಇದನ್ನು ಆನಂದಿಸಬೇಕು. ಇಂತಹ ಮಹತ್ವದ ಸಂಪುಟವನ್ನು ಓದುಗರ ಕೈಯಲ್ಲಿಡಲು ಅತ್ಯಂತ ಹರ್ಷವೆನಿಸುತ್ತದೆ.

ಈ ಎರಡನೇ ಸಂಪುಟದ ಗಾತ್ರ ಬೃಹತ್ತಾಗಿದ್ದು ಇದನ್ನು ಭಾಗ–೧ ಮತ್ತು ಭಾಗ–೨ ಎಂದು ಎರಡು ಭಾಗಗಳಲ್ಲಿ ಪ್ರಕಟಿಸಲಾಗಿದೆ. ಎರಡು ಭಾಗಗಳಲ್ಲಿ ಪುಟಸಂಖ್ಯೆ ಮುಂದುವರೆದಿದೆ. ಓದುಗರು ಇದನ್ನು ಗಮನಿಸಬೇಕೆಂದು ಕೋರಲಾಗಿದೆ.

ಈ ಸಂಪುಟದ ಎಲ್ಲಾ ಭಾಷಾಂತರಕಾರರಿಗೂ ಮತ್ತು ಇದರ ಪ್ರಕಟನೆಗೆ ಸಹಕಾರ ನೀಡಿರುವ ಎಲ್ಲರಿಗೂ ಸಂಪಾದಕ ಮಂಡಲಿ ಚಿರಋಣಿಯಾಗಿದೆ,

**ಡಾ. ಎ.ಎಂ. ರಾಜಶೇಖರಯ್ಯ**

ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


| | | |
|---|---|---|
| | ಸಂದೇಶಗಳು | v |
| | ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ | x |
| | ಮೂರನೇ ಮುದ್ರಣಕ್ಕೆ ಮುನ್ನುಡಿ | xiv |
| | ನಾಲ್ಕನೇ ಮುದ್ರಣಕ್ಕೆ ಮುನ್ನುಡಿ | xiv |
| | ಸಂಪಾದಕೀಯ | xvi |
| ೧. | ಆಯವ್ಯಯ ಪತ್ರ : ೧ | ೧ |
| ೨. | ಆಯವ್ಯಯ ಪತ್ರ : ೨ | ೭ |
| ೩. | ಆಯವ್ಯಯ ಪತ್ರ : ೩ | ೧೧ |
| ೪. | ಆಯವ್ಯಯ ಪತ್ರ : ೪ | ೨೬ |
| ೫. | ಹಣಕಾಸು ಅಧಿನಿಯಮದ ತಿದ್ದುಪಡಿ ಮಸೂದೆ | ೪೩ |
| ೬. | ಶಿಕ್ಷಣಕ್ಕೆ ಅನುದಾನ | ೪೯ |
| ೭. | ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮ ತಿದ್ದುಪಡಿ ಮಸೂದೆ–೧ | ೫೭ |
| ೮. | ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮ ತಿದ್ದುಪಡಿ ಮಸೂದೆ–೨ | ೬೭ |
| ೯. | ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮ ತಿದ್ದುಪಡಿ ಮಸೂದೆ–೩ | ೭೩ |
| ೧೦. | ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮ ತಿದ್ದುಪಡಿ ಮಸೂದೆ–೪ | ೭೬ |
| ೧೧. | ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮ ತಿದ್ದುಪಡಿ ಮಸೂದೆ–೧ | ೮೦ |
| ೧೨. | ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮ ತಿದುಪಡಿ ಮಸೂದೆ–೨ | ೮೨ |
| ೧೩. | ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮ ತಿದ್ದುಪಡಿ ಮಸೂದೆ–೩ | ೮೫ |
| ೧೪. | ಮುಂಬಯಿ ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿ ೧೯೨೮ರ ಮಸೂದೆ ಸಂ.೩ XII | ೯೧ |
| ೧೫. | ಆನುವಂಶಿಕ ಹುದ್ದೆಗಳ ಅಧಿನಿಯಮ ತಿದ್ದುಪಡಿ ಮಸೂದೆ–೧ | ೯೬ |
| ೧೬. | ಆನುವಂಶಿಕ ಹುದ್ದೆಗಳ ಅಧಿನಿಯಮ ತಿದ್ದುಪಡಿ ಮಸೂದೆ–೨ | ೧೧೩ |
| ೧೭. | ಮುಂಬೈ ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿ ೧೯೩೭ರ XXIIIನೇ ಮಸೂದೆ | ೧೧೬ |
| ೧೮. | ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿ ೧೯೩೭ರ XXIIIನೇ ಮಸೂದೆ | ೧೨೧ |
| ೧೯. | ಖೋತಿ ಪದ್ಧತಿಯ ರದ್ಧತಿ ಮಸೂದೆ ಸಂ. XX, ೧೯೨೭ | ೧೨೩ |

೨೦. ಖೋತಿ ಪದ್ಧತಿಯ ರದ್ಧತಿ ಮಸೂದೆಯನ್ನು ಕುರಿತು: ೧೭, ಸೆಪ್ಟೆಂಬರ್ ೧೯೩೭ ೧೩೦
೨೧. ಗ್ರಾಮ ಪಂಚಾಯಿತಿಗಳ ಮಸೂದೆ–೧ ೧೩೩
೨೨. ಗ್ರಾಮ ಪಂಚಾಯಿತಿಗಳ ಮಸೂದೆ–೨ ೧೪೪
೨೩. ಗ್ರಾಮ ಪಂಚಾಯಿಗಳ ಮಸೂದೆ–೩ ೧೫೧
೨೪. ಗ್ರಾಮ ಪಂಚಾಯಿತಿಗಳ ಮಸೂದೆ–೪ ೧೫೫
೨೫. ಸ್ಥಳೀಯ ಮಂಡಳಿಗಳ ಕಾಯ್ದೆ ತಿದ್ದುಪಡಿ ಮಸೂದೆ ೧೫೮
೨೬. ಸ್ಥಳೀಯ ಮಂಡಳಿಗಳ ಕಾಯ್ದೆ ತಿದ್ದುಪಡಿ ಮಸೂದೆ–೨ ೧೬೧
೨೭. ಚಿಕ್ಕ ಹಿಡುವಳಿದಾರರ ಪರಿಹಾರ ಮಸೂದೆ ಕುರಿತು–೧ ೧೬೫
೨೮. ಚಿಕ್ಕ ಹಿಡುವಳಿದಾರರ ಪರಿಹಾರ ಮಸೂದೆ–೨ ೧೬೯
೨೯. ಚಿಕ್ಕ ಹಿಡುವಳಿದಾರರ ಪರಿಹಾರ ಮಸೂದೆ–೩ ೧೭೩
೩೦. ಮುಂಬೈ ಪೊಲೀಸ್ ಕಾಯ್ದೆ ತಿದ್ದುಪಡಿ ಮಸೂದೆ–೧ ೧೭೭
೩೧. ಮುಂಬೈ ಪೊಲೀಸ್ ಕಾಯ್ದೆ ತಿದ್ದುಪಡಿ ಮಸೂದೆ–೨ ೧೮೯
೩೨. ಮುಂಬೈ ಪೊಲೀಸ್ ಕಾಯ್ದೆ ತಿದ್ದುಪಡಿ ಮಸೂದೆ–೩ ೧೯೬
೩೩. ಮುಂಬೈ ನಗರ ಪುರಸಭೆಯ ಕಾಯ್ದೆ ತಿದ್ದುಪಡಿ ಮಸೂದೆ ೨೦೪
೩೪. ಪಾನಪ್ರತಿಬಂಧವನ್ನು ಕುರಿತು ೨೦೬
೩೫. ಪ್ರಸೂತಿ ಸೌಲಭ್ಯ ಮಸೂದೆಯನ್ನು ಕುರಿತು ೨೧೦
೩೬. ಭಡಿ ಏಟಿನ ಶಿಕ್ಷೆಯನ್ನು ಕುರಿತು ೨೧೩
೩೭. ಮಂತ್ರಿಗಳ ವೇತನಗಳ ಮಸೂದೆಯನ್ನು ಕುರಿತು ೨೧೫
೩೮. ಅಪರಾಧಿಗಳ ಪರಿವೀಕ್ಷಣಾ ಅವಧಿಯ ಮಸೂದೆ ಕುರಿತು ೨೨೬
೩೯. ಹೊಗೆಸೊಪ್ಪು ಕರ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಕುರಿತು ೨೨೯
೪೦. ನ್ಯಾಯಾಂಗದ ಸ್ವಾತಂತ್ರ್ಯವನ್ನು ಕುರಿತು ೨೩೧
೪೧. ಪ್ರತ್ಯೇಕ ಕರ್ನಾಟಕ ಪ್ರಾಂತದ ರಚನೆಯನ್ನು ಕುರಿತು ೨೩೭
೪೨. ವಿಧಾನ ಸಭೆಯ ಕಾರ್ಯವಿಧಾನವನ್ನು ಕುರಿತು ೨೪೮
೪೩. ಔದ್ಯಮಿಕ ವಿವಾದ ಮಸೂದೆಯನ್ನು ಕುರಿತು ೩೫೨
೪೪. ಗಲಭೆ ವಿಚಾರಣಾ ಸಮಿತಿಯ ವರದಿಯನ್ನು ಕುರಿತು ೨೯೭
೪೫. ಯುದ್ಧದಲ್ಲಿ ಭಾಗವಹಿಸುವ ಬಗ್ಗೆ–೧ ೩೦೩
೪೬. ಯುದ್ಧದಲ್ಲಿ ಭಾಗವಹಿಸುವ ಬಗ್ಗೆ–೨ ೩೦೯
೪೭. ಯುದ್ಧದಲ್ಲಿ ಭಾಗವಹಿಸುವ ಬಗ್ಗೆ–೩ ೩೩೪

**ಅನುಬಂಧಗಳು – ಭಾಗ ೧**

ಅನುಬಂಧ–೧ : ಜನನ ನಿಯಂತ್ರಣ ಕ್ರಮಗಳ ಬಗ್ಗೆ ೩೩೬
ಅನುಬಂಧ–೨ : ಡಾ. ಬಿ.ಆರ್. ಅಂಬೇಡ್ಕರ್ ಕೇಳಿದ ಪ್ರಶ್ನೆಗಳ ಮತ್ತು ಸರ್ಕಾರ ನೀಡಿದ ಉತ್ತರ ೩೫೭
ಅನುಬಂಧ–೩ : ವಿಶ್ವವಿದ್ಯಾನಿಲಯ ಸುಧಾರಣೆಗಳ ಸಮಿತಿ ೩೮೧

**ಅನುಬಂಧಗಳು – ಭಾಗ ೨**

ಸೈಮನ್ ಕಮೀಷನ್ನಿನೊಂದಿಗೆ ೪೧೧

ಮುಂಬೈ ಪ್ರಾಂತ್ಯ ಸರ್ಕಾರದ ರಚನೆಯನ್ನು ಕುರಿತ ವರದಿ ೪೧೩

**ವಿಭಾಗ–I**

ಪ್ರಾಂತ ಪ್ರದೇಶದ ಮರುಹಂಚಿಕೆ ೪೧೪

**ವಿಭಾಗ–II**

ಪ್ರಾಂತೀಯ ಕಾರ್ಯಾಂಗ

ಅಧ್ಯಾಯ–೧ ದ್ವಿಸರ್ಕಾರ ಮತ್ತು ಏಕೀಕೃತ ಸರ್ಕಾರ ೪೨೧

ಅಧ್ಯಾಯ–೨ ಕಾರ್ಯನಿರತ ಕಾರ್ಯಾಂಗ ೪೩೪

ಅಧ್ಯಾಯ–೩ ರಾಜ್ಯಪಾಲರ ಸ್ಥಾನ ಮತ್ತು ಅಧಿಕಾರಗಳು ೪೩೯

**ವಿಭಾಗ–III**

ಪ್ರಾಂತೀಯ ಶಾಸಕಾಂಗ

ಅಧ್ಯಾಯ–೧ ಮತದಾನದ ಹಕ್ಕು ೪೪೩

ಅಧ್ಯಾಯ–೨ ಮತದಾರ ಸಮುದಾಯಗಳು ೪೫೪

ಅಧ್ಯಾಯ–೩ ಸ್ಥಾನಗಳ ವಿತರಣೆ ೪೭೧

ಅಧ್ಯಾಯ–೪ ಲಕ್ನೋ ಒಪ್ಪಂದ ೪೮೮

ಅಧ್ಯಾಯ–೫ ಮೇಲ್ಮನೆ ೪೯೪

ಅಧ್ಯಾಯ–೬ ಶಾಸಕಾಂಗದ ಅಧಿಕಾರಿಗಳು ೪೯೯

**ವಿಭಾಗ–IV**

ಪ್ರಾಂತೀಯ ಸ್ವಾಯತ್ತತೆ

ಅಧ್ಯಾಯ–೧ ಭಾರತ ಸರಕಾರ ಮತ್ತು ಪ್ರಾಂತ್ಯ ಸರ್ಕಾರಗಳ ನಡುವಣ ಸಂಬಂಧ ೫೦೫

ಅಧ್ಯಾಯ–೨ ಪ್ರಭುತ್ವ (Crown)ದೊಂದಿಗೆ ಪ್ರಾಂತ್ಯ ಸರಕಾರದ ಸಂಬಂಧ ೫೧೦

**ವಿಭಾಗ–V**

ಸಾರ್ವಜನಿಕ ಸೇವೆಗಳು ೫೧೩

೧ : ಸೇವೆಗಳ ಪುನರ್–ರಚನೆ

**ವಿಭಾಗ–VI**

ಶಿಫಾರಸುಗಳ ಸಾರಾಂಶ ೫೨೬

**ಅನುಬಂಧ** ೫೨೯

ಮುಂಬಯಿ ಪ್ರಾಂತ್ಯದ ಶಿಕ್ಷಣ ಮಂಡಳಿಯ ವರದಿಯಿಂದ ಆಯ್ದ ಭಾಗಗಳು

I. ೧೮೧೩ ರಿಂದ ೧೮೪೪ ರವರೆಗೆ ೫೩೫

II. ೧೮೫೪ ರಿಂದ ೧೮೮೨ ರವರೆಗೆ ೫೪೪

III. ೧೮೮೨ ರಿಂದ ೧೯೨೮ ೫೫೨

IV. ೧೯೨೩ ಮತ್ತು ಅನಂತರ ೫೫೮
I. ತಕ್ಕಷ್ಟು ಪ್ರಾತಿನಿಧ್ಯದ ಮೂಲಕ ರಕ್ಷಣೆ ೫೬೫
II. ಭರವಸೆಗಳ ಮೂಲಕ ರಕ್ಷಣೆ ೫೮೧
**ಅನುಬಂಧ ಎ**
ಅಂಶ–೧
(೧೯೨೮ ಫೆಬ್ರವರಿ ೮ರ 'ಟೈಮ್ಸ್ ಆಫ್ ಇಂಡಿಯ'ದಿಂದ) ೫೮೭
ಭಾರತೀಯ ಶಾಸನಬದ್ಧ ಆಯೋಗದ ಮುಂದೆ
೧೯೨೮ರ ಅಕ್ಟೋಬರ್ ೨೧ ರಂದು ಡಾ. ಅಂಬೇಡ್ಕರ್‌ರ ಸಾಕ್ಷ್ಯ ೬೦೨
ಭಾರತೀಯ ಮತದಾನ ಹಕ್ಕಿನ ಸಮಿತಿ ೬೪೦
**ಭಾಗ – ಮೂರು**
ದುಂಡು ಮೇಜಿನ ಪರಿಷತ್ತುಗಳಲ್ಲಿ ಡಾ. ಅಂಬೇಡ್ಕರ್ ೬೫೧
ಐದನೆಯ ಸಭೆ, ೧೯೩೦ರ ನವೆಂಬರ್ ೨೦ ೬೫೩
೧೬ನೇ ಡಿಸೆಂಬರ್ ೧೯೩೦ ೬೬೨
ಒಂದನೆಯ ಸಭೆ ೪ನೇ ಡಿಸೆಂಬರ್ ೧೯೩೦ ೬೬೫
ಮೂರನೆಯ ಸಭೆ ೮ನೇ ಡಿಸೆಂಬರ್ ೧೯೩೦ ೬೭೧
ನಾಲ್ಕನೆಯ ಸಭೆ ೯ನೇ ಡಿಸೆಂಬರ್ ೧೯೩೦ ೬೭೨
ಐದನೆಯ ಸಭೆ ೧೫ನೇ ಡಿಸೆಂಬರ್ ೧೯೩೦ ೬೮೨
೧೬ನೇ ಡಿಸೆಂಬರ್ ೧೯೩೦ ೬೮೬
ಎರಡನೆಯ ಸಭೆ ೩೧ನೇ ಡಿಸೆಂಬರ್ ೧೯೩೦ ೬೮೭
ಐದನೆಯ ಸಭೆ ೧೪ನೇ ಜನವರಿ ೧೯೩೧ ೬೯೫
ಆರನೆಯ ಸಭೆ ೧೬ನೇ ಜನವರಿ ೧೯೩೧ ೬೯೭
ಉಪಸಮಿತಿ ನಂ. VI (ಮತದಾನದ ಹಕ್ಕು)
ಎರಡನೆಯ ಸಭೆ ೨೨ ಡಿಸೆಂಬರ್ ೧೯೩೦ ೭೨೫
ಮೂರನೆಯ ಸಭೆ ೩೦ನೇ ಡಿಸೆಂಬರ್ ೧೯೩೦ ೭೪೧
ನಾಲ್ಕನೆಯ ಸಭೆ ೧ನೇ ಜನವರಿ ೧೯೩೧ ೭೪೫
ಅಖಿಲ ಸಮ್ಮೇಳನದ ಸಮಿತಿ
ಉಪಸಮಿತಿ VI (ಮತಾಧಿಕಾರ) ಸಲ್ಲಿಸಿದ ವರದಿಯ ಸಾರಾಂಶ:
೧೬ನೇ ಜನವರಿ ೧೯೩೧ ೭೫೨
ಅಖಿಲ ಸಮ್ಮೇಳನದ ಸಮಿತಿ ಉಪಸಮಿತಿ ನಂ. II (ರಕ್ಷಣೆ)ರ ವರದಿಯ ಮೇಲಿನ ಟೀಕೆಗಳು
೧೬ನೇ ಜನವರಿ ೧೯೩೧. ೭೫೪
**ಉಪಸಮಿತಿ ನಂ.VIII (ಸೇವೆಗಳು)**
ಎರಡನೆಯ ಸಭೆ ೭ನೇ ಜನವರಿ ೧೯೩೧ ೭೫೭

| | |
|---|---|
| ನಾಲ್ಕನೆಯ ಸಭೆ ೯ ಜನವರಿ ೧೯೩೧ | ೭೬೯ |
| ಐದನೆಯ ಸಭೆ ೧೨ನೇ ಜನವರಿ ೧೯೩೧ | ೭೭೨ |
| ಆರನೆಯ ಸಭೆ ೧೩ ಜನವರಿ ೧೯೩೧ | ೭೭೩ |
| ಎಂಟನೆಯ ಸಭೆ ೧೯ನೇ ಜನವರಿ ೧೯೩೧ | ೭೭೭ |
| ಇಪ್ಪತ್ತು ಮೂರನೆಯ ಸಭೆ ೧೬ನೇ ಸೆಪ್ಟೆಂಬರ್ ೧೯೩೧ | ೭೮೨ |
| ಇಪ್ಪತ್ತೈದನೆಯ ಸಭೆ ೧೮ನೇ ಸೆಪ್ಟೆಂಬರ್ ೧೯೩೧ | ೭೯೮ |
| ಇಪ್ಪತ್ತಾರನೆಯ ಸಭೆ ೨೧ ಸೆಪ್ಟೆಂಬರ್ ೧೯೩೧ | ೮೦೩ |
| ಇಪ್ಪತ್ತೆಂಟನೆಯ ಸಭೆ ಸೆಪ್ಟೆಂಬರ್ ೨೩, ೧೯೩೧ | ೮೧೨ |
| ಮೂವತ್ತನೆಯ ಸಭೆ ೨೫ನೆ ಸೆಪ್ಟೆಂಬರ್ ೧೯೩೧ | ೮೧೫ |
| ಮೂವತ್ತನಾಲ್ಕನೆಯ ಸಭೆ ಅಕ್ಟೋಬರ್ ೧೪, ೧೯೩೧ | ೮೧೬ |
| ಮೂವತ್ತೈದನೆಯ ಸಭೆ ೧೫ನೆಯ ಅಕ್ಟೋಬರ್ ೧೯೩೧ | ೮೨೨ |
| ಮೂವತ್ತೆಂಟನೆಯ ಸಭೆ ೨೨ನೆ ಅಕ್ಟೋಬರ್ ೧೯೩೧ | ೮೩೦ |
| ನಲವತ್ತನಾಲ್ಕನೆಯ ಸಭೆ ೨ನೆಯ ಸೆಪ್ಟೆಂಬರ್ ೧೯೩೧ | ೮೪೭ |
| ನಲವತ್ತನೆಯ ಸಭೆ ೪ನೆಯ ನವೆಂಬರ್ ೧೯೩೧ | ೮೫೦ |
| ನಲವತ್ತಾರನೆಯ ಅಧಿವೇಶನ ೧೬ನೆಯ ನವೆಂಬರ್ ೧೯೩೧ | ೮೫೧ |
| ಏಳನೆಯ ಸಭೆ ೨೮ನೆಯ ಸೆಪ್ಟೆಂಬರ್ ೧೯೩೧ | ೮೫೨ |
| ಎಂಟನೆಯ ಅಧಿವೇಶನ ೧ನೆಯ ಅಕ್ಟೋಬರ್ ೧೯೩೧ | ೮೫೫ |
| ಒಂಭತ್ತನೆಯ ಅಧಿವೇಶನ ೮ನೆಯ ಅಕ್ಟೋಬರ್ ೧೯೩೧ | ೮೬೨ |
| **ಅನುಬಂಧ–೧** | ೮೬೭ |
| ೧. ವಿಶೇಷ ಪ್ರಾತಿನಿಧ್ಯದ ವ್ಯಾಪ್ತಿ | ೮೭೬ |
| ಭಾರತದಲ್ಲಿ ಸಂವಿಧಾನಾತ್ಮಕ ಸುಧಾರಣೆ ಕುರಿತ ಸಂಯುಕ್ತ ಸಮಿತಿಯ ಎದುರು ಪಡೆಯಲಾದ ಸಾಕ್ಷಿ | ೮೭೯ |
| ೨. ಶ್ರೀಯುತ ಸಚ್ಚಿದಾನಂದ ಸಿನ್ಹಾ, ಬ್ಯಾರಿಸ್ಟರ್–ಎಟ್–ಲಾ, ಎಂಐ.ಸಿ | ೮೮೩ |
| ೩. ಮೀರ್ ಮುಖ್‌ಬೂಲ್ ಮಹಮೂದ್, ಡಾ. ಪಿ. ಕೆ. ಸೇನ್, ಶ್ರೀ ಕೆ. ಎಮ್. ಪಣಿಕ್ಕರ್, ಶ್ರೀ ಬಿ. ಕಾರ್, ಛೇಂಬರ್ ಆಫ್ ಪ್ರಿನ್ಸಸ್ (ಅರಸರ ಮಂತ್ರಾಲೋಚನೆ ಸಮಿತಿಯ)ಯ ಪರವಾಗಿ | ೮೮೯ |
| ೪. ಸರ್ ಮೈಕೆಲ್ ಓ ಡ್ವೈಯರ್ ಜಿ.ಸಿ.ಐ.ಇ. ಕೆ.ಸಿ.ಎಸ್.ಐ. | ೮೯೭ |
| ೫. ಮಿ.ಎಫ್.ಇ.ಜೇಮ್ಸ್, ಮಿ.ಡಬ್ಲ್ಯುಡಬ್ಲ್ಯು ಪೇಜ್, ಮಿ.ಟಿ. ಗಾವಿನ್–ಜೋನ್ಸ್, ಮಿ.ಜಿ.ಇ.ಕಫ್, ಮಿ.ಎಲ್.ಎ. ರೋಫೆ, ಸರ್ ವಿಲಿಯಂ ಮ್ಯಾಕ್ ಕರ್ಕರ್ ಮತ್ತು ಮಿ.ಎಫ್.ಡಬ್ಲ್ಯು. ಹಾಕೆನ್‌ಹಲ್. | ೯೦೧ |
| ೬. ಸರ್ ಜಾನ್ ಪೆರೋಸಿಟ್ ಥಾಂಪ್ಸನ್, ಕೆ.ಸಿ.ಎಸ್.ಐ. ಕೆ.ಸಿ.ಐ,ಇ., ಸರ್ ಅಲ್‌ಫ್ರೆಡ್ ವ್ಯಾಟ್ಸನ್ ಮತ್ತು ಮಿ. ಎಡ್ವರ್ಡ್ ಮಿಲ್ಲಿಯರ್ಸ್. | ೯೦೪ |

೭. ಸರ್ ಛಾರ್ಲ್ಸ್ ಇನ್ಸ್, ಕೆ.ಸಿ.ಎಸ್.ಐ. ಸಿ.ಐ.ಇ. ೯೦೫

೮. ಸರ್ ಎಡ್ವರ್ಡ್ ಬೆಂಥಾಲ್, ಸರ್ ಥಾಮಸ್ ಕ್ಯಾಟ್ಟೋ ಮತ್ತು
ಮಿ. ಜಿ.ಎಲ್.ವಿಂಟರ್‌ಬೊಥಾಮ್,
ಭಾರತದ ಅಸೋಸಿಯೇಟ್ ಛೇಂಬರ್ ಆಫ್ ಕಾಮರ್ಸ್ ಪರವಾಗಿ. ೯೦೮

೯. ಲೇಡಿ ಲೇಟನ್, ಮಿಸೆಸ್ ಓ ಸ್ಟ್ರಾಸಿ ಮತ್ತು ಸರ್ ಫಿಲಿಪ್ ಹ್ಯಾರ್ಟೋಗ್–
ಭಾರತೀಯ ಸ್ತ್ರೀಯರ ಮತದಾನ ಹಕ್ಕಿನ ಬ್ರಿಟಿಷ್ ಸಮಿತಿಯ ಪರವಾಗಿ. ೯೧೩

೧೦. ರಾಜಕುಮಾರಿ ಅಮೃತ್ ಕೌರ್ ಮತ್ತು ಶ್ರೀಮತಿ ಹಮೀದ್ ಆಲಿ–ಅಖಿಲ ಭಾರತ ಮಹಿಳಾ
ಸಮ್ಮೇಳನ ಮತ್ತು ಇತರ ಎರಡು ಮಹಿಳಾ ಸಂಘಗಳ ಪರವಾಗಿ. ೯೧೭

೧೧. ಶ್ರೀಮತಿ ಪಿ.ಕೆ. ಸೇನ್ ಮತ್ತು ಶ್ರೀಮತಿ ಎಲ್. ಮುಖರ್ಜಿ ೯೨೫

೧೨. ಪೂನಾ ಒಪ್ಪಂದದ ಮೇಲೆ ಜಂಟಿ ಸಮಿತಿಯಲ್ಲಿ ಚರ್ಚೆ ೯೨೯

೧೩. ಹಿಂದೂ ಮಹಾಸಭಾ ಪರವಾಗಿ ೯೪೦

೧೪. ಎಂ.ಕೆ. ಆಚಾರ್ಯ, ಎಲ್.ಎಂ. ದೇಶಪಾಂಡೆ, ಜೆ.ಎಲ್. ಬ್ಯಾನರ್ಜಿ,
ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ಪ್ರತಿನಿಧಿಗಳು. ೯೫೮

೧೫. ಲೆ.ಕ.ಸಿ.ಇ. ಬ್ರೂಸ್ ಸಿಎಸ್ಐ, ಸಿಐಇ, ಸಿಬಿಇ, ಲೆ. ಸರ್ ಜಾರ್ಜ್ ಮ್ಯಾಕ್ಮನ್ ಕೆಸಿಬಿ,
ಕೆಸಿಎಸ್ಐ, ಡಿಎಸ್ಓ,
ಶ್ರೀಯುತ ಎಫ್.ಎಫ್. ಲೈಯ್ಯಾಲ್, ಸಿಐಇ, ಶ್ರೀಯುತ ವಾರಿಸ್ ಅಮೀರ್ ಅಲಿ ಐಸಿಎಸ್,
ಶ್ರೀಯುತ ಒಸಿಜಿ ಹೇಯ್ಟರ್ ಮತ್ತು ಗೌರವಾನ್ವಿತ ನ್ಯಾಯಮೂರ್ತಿ ಡಬ್ಲ್ಯೂಎ ರೋಸಿಗ್ನೋಲ್. ೯೬೫

೧೬. ವಿಂಗ್ ಕಮಾಂಡರ್ ಎಡಬ್ಲ್ಯೂಎಚ್ ಜೇಂಸ್ ಎಂಪಿ ಮತ್ತು
ಡಾ. ಜೆ.ಎಚ್. ಹಟ್ಟನ್ ಸಿಐಇ, ಐಸಿಎಸ್. ೯೬೬

೧೭. ದಿ ರೈಟ್, ಗೌರವಾನ್ವಿತ ಸರ್ ವಿನ್ಸಟನ್ ಚರ್ಚಿಲ್,
ಸಿಎಚ್. ಹೌಸ್ ಆಫ್ ಕಾಮನ್ಸ್ ಸದಸ್ಯ. ೯೭೩

೧೮. ಲೆ.ಕ. ಸರ್ ಹೆನ್ರಿ ಗಿಡ್ನೆ, ಎಂ.ಎಲ್.ಐಎಂಎಸ್ (ನಿವೃತ್ತ),
ಆಂಗ್ಲೋ ಇಂಡಿಯನ್ ಮತ್ತು ಡೊಮಿಸೈಲ್ಡ್ ಯುರೋಪಿಯನ್
ಅಸೋಸಿಯೇಷನ್ ಆಫ್ ಇಂಡಿಯಾ ಪರವಾಗಿ. ೯೭೭

೧೯. ಜೆ.ಸಿ. ಫ್ರೆಂಚ್ ಮತ್ತು ಎಸ್.ಎಚ್.ಮಿಲ್ಸ್ ಭಾರತದ ಪೋಲೀಸರ ಪರವಾಗಿ ೯೭೯

೨೦. ಸಾಕ್ಷ್ಯಕ್ಕಾಗಿ ಹಾಜರಾದ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಭಾರತೀಯ
ಸಂವಿಧಾನ ಸುಧಾರಣೆಯ ಸಂಯುಕ್ತ ಸಮಿತಿ ಮುಂದೆ. ೯೮೦

**ವಿಷಯಸೂಚಿ** ೧೦೩೧

# ಆಯವ್ಯಯ ಪತ್ರ: ೧*

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಅಧ್ಯಕ್ಷರೇ, ಆಯವ್ಯಯ ಪತ್ರದ ಮೇಲಿನ ಚರ್ಚೆಯು ಸಾಕಷ್ಟು ಕಾಲದವರೆಗೆ ನಡೆದಿದೆ ಮತ್ತು ಹೇಳಬೇಕಾಗಿದ್ದ ಎಲ್ಲವನ್ನೂ ಹೇಳಲಾಗಿದೆ ಎಂದು ನನಗೆ ಅನ್ನಿಸುತ್ತಿದೆ. ಕಾರಣ ನನ್ನಂಥ ಹೊಸ ಸದಸ್ಯನು ಸುಮ್ಮನಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಈ ಸದನದ ಮುಂದೆ ಮಂಡಿಸದಿರುವ ಒಂದು ದೃಷ್ಟಿಕೋನವು ಇದೆ ಎಂದು ನನಗೆ ಅನ್ನಿಸುತ್ತದೆ ಮತ್ತು ಆ ದೃಷ್ಟಿಕೋನವನ್ನು ನಾನು ಪ್ರತಿನಿಧಿಸುತ್ತಿರುವುದರಿಂದ, ಅದನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯವಾಗಿರುತ್ತದೆ ಎಂದು ಭಾವಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಆಯವ್ಯಯ ಪತ್ರವನ್ನು ಟೀಕಿಸಲು ಪ್ರಾರಂಭಿಸಿದಾಗ ಯಾರಿಗೇ ಆದರೂ ಪ್ರಾರಂಭದಲ್ಲಿಯೇ ತಾನು ನಿಃಸಹಾಯಕನೆಂಬ ಭಾವನೆ ಬರುತ್ತದೆ. ಯಾಕೆಂದರೆ ಪರಿಣಾಮಕಾರಿಯಾದ ಟೀಕೆಯ ವ್ಯಾಪ್ತಿ ತುಂಬಾ ಚಿಕ್ಕದಾಗಿರುತ್ತದೆ. ಈ ಆಯವ್ಯಯ ಪತ್ರದಲ್ಲಿ ನಮೂದಿಸಲಾದ ಒಟ್ಟು ಅಂದಾಜು ವೆಚ್ಚವು ಸರಿಸುಮಾರು ಶೇಕಡಾ ೩೬ರಷ್ಟು. ಪ್ರಾಂತದ ಒಟ್ಟು ಅಂದಾಜು ಆದಾಯವು ಹದಿನೈದೂವರೆ ಕೋಟಿ. ಅದರಲ್ಲಿ ಸರಿಸುಮಾರು ಒಂಭತ್ತೂವರೆ ಕೋಟಿಯಷ್ಟು ಈ ಕೌನ್ಸಿಲ್‌ನ ಸಮ್ಮತಿ ಇಲ್ಲದೆಯೇ ಕಾರ್ಯಾಂಗವು ವಿಧಿಸುತ್ತಿದೆ. ಭೂ ಕಂದಾಯ ಮತ್ತು ಅಬಕಾರಿ ಕಂದಾಯಗಳನ್ನು ನಾನು ಉಲ್ಲೇಖಿಸುತ್ತೇನೆ. ಕಾರಣ ಖರ್ಚು ಮತ್ತು ಆದಾಯಗಳೆರಡನ್ನೂ ಗಮನದಲ್ಲಿರಿಸಿಕೊಂಡು ಮಾಡಿದ ಟೀಕೆಯು ನಿಜವಾಗಿಯೂ ಪರಿಮಿತವಾದುದಾಗಿರುತ್ತದೆ ಎಂದು ಹೇಳುವುದು ಉಚಿತವಾದುದಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಪರಿಷತ್ತು ಕೇವಲ ಶೇಕಡಾ ೬೪ರಷ್ಟು ವೆಚ್ಚದ ಬಗ್ಗೆ ಮತ್ತು ಶೇಕಡಾ ೪೦ರಷ್ಟು ಕಂದಾಯದ ಬಗ್ಗೆ ಮಾತ್ರ ಚರ್ಚಿಸಬೇಕಾಗುತ್ತದೆ. ಆದರೆ ಅಧ್ಯಕ್ಷರೇ, ಸಂಗತಿಗಳನ್ನು ಅವಿರುವಂತೆಯೇ ಗಮನಿಸಿದಾಗ ನನ್ನ ಸಾಮರ್ಥ್ಯಕ್ಕನುಸಾರವಾಗಿ ನನ್ನ ಸೂಚನೆಗಳನ್ನು ಮುಂದಿಡಲು ಬಯಸುತ್ತೇನೆ.

ಆಯವ್ಯಯ ಪತ್ರದ ಆದಾಯದ ಬದಿಯಿಂದ ಪ್ರಾರಂಭಿಸುತ್ತಾ ಪ್ರಪ್ರಥಮವಾಗಿ ಗೌರವಾನ್ವಿತ ಹಣಕಾಸು ಸದಸ್ಯರ ದೃಷ್ಟಿಕೋನದಿಂದ ಮತ್ತು ಎರಡನೆಯದಾಗಿ ತೆರಿಗೆದಾರನ ದೃಷ್ಟಿಕೋನದಿಂದ ಅದನ್ನು ವಿವರಿಸಲು ಪ್ರಯತ್ನಿಸುತ್ತೇನೆ. ಉತ್ತಮ ಕಂದಾಯ ಪದ್ಧತಿಯ ಅತ್ಯಂತ ಅವಶ್ಯವಾದ ಮತ್ತು ಪ್ರಪ್ರಥಮವಾದ ಅಗತ್ಯವೆಂದರೆ ಅದು ವಿಶ್ವಾಸಾರ್ಹವಾಗಿರಬೇಕು ಎಂದು ನಾನು ಹೇಳಿದರೆ ಮಾನ್ಯ ಹಣಕಾಸು ಸದಸ್ಯರು ಅದನ್ನು ಒಪ್ಪುತ್ತಾರಷ್ಟೆ. ಕಂದಾಯ ಪದ್ಧತಿಯು ಹೆಚ್ಚಿನ ಅಥವಾ ಕಡಿಮೆ ಪ್ರಮಾಣದ

---

*(ಮುಂಬಯಿ ವಿಧಾನ ಪರಿಷತ್ತಿನ)

ಬಿ.ಎಲ್.ಸಿ. ಚರ್ಚೆಗಳು ಸಂಪುಟ XIX, ಪುಟಗಳು ೧೬೮–೬೮

೨೪ನೇ ಫೆಬ್ರುವರಿ ೧೯೨೭.

೧೮ನೇ ಫೆಬ್ರುವರಿ ೧೯೨೭ರ ಶುಕ್ರವಾರದಂದು ಡಾ.ಅಂಬೇಡ್ಕರ್ ಅವರು ಮುಂಬಯಿಯ ವಿಧಾನಪರಿಷತ್ತಿನ ನಾಮ ನಿರ್ದೇಶಿತ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು.

ಕಂದಾಯವನ್ನು ತರುತ್ತದೆ ಎಂಬುದು ಇಲ್ಲಿ ಮುಖ್ಯವಲ್ಲ. ಆದರೆ ಅದು ತರುವ ಉತ್ಪನ್ನವು ಖಚಿತವಾದುದಾಗಿರಬೇಕು. ಈ ದೃಷ್ಟಿಕೋನದಿಂದ ಕಂದಾಯವನ್ನು ಪರಿಶೀಲಿಸಿದಾಗ ಆಯವ್ಯಯ ಪತ್ರದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿರುವ ಭೂಕಂದಾಯವು ೫೦ ಲಕ್ಷದಷ್ಟರ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗಬಹುದಾಗಿದೆ. ಎರಡನೆಯದಾಗಿ, ಅತಿ ಹೆಚ್ಚಿನ ಪ್ರಮಾಣದ ಕಂದಾಯದ ಮೂಲವಾದ "ಅಬಕಾರಿ"ಯನ್ನು ಗಮನಿಸಿದಾಗ, "ಸುಧಾರಣೆಗಳು" ಪ್ರಾರಂಭವಾದಾಗಿನಿಂದ ೭೩ ಲಕ್ಷದ ವ್ಯತ್ಯಾಸವನ್ನು ಅದು ತೋರಿಸಿರುತ್ತದೆ. ಕಾರಣ ಕಂದಾಯ ಪದ್ಧತಿಯಲ್ಲಿ ಈ ಎರಡು ಬಾಬುಗಳು ಈ ರೀತಿಯಲ್ಲೇ ಬದಲಾಗುತ್ತಿವೆ. ಅದರ ಪರಿಣಾಮಗಳು ಏನು ಅನ್ನುವುದನ್ನು ಪರ್ಯಾಲೋಚಿಸುವತ್ತ ನನ್ನ ಸ್ನೇಹಿತರಾದ ಮಾನ್ಯ ಹಣಕಾಸು ಸದಸ್ಯರ ಗಮನವನ್ನು ಸೆಳೆಯುತ್ತೇನೆ. ಅವು ಹಾಗೆಯೇ ವ್ಯತ್ಯಾಸಗೊಳ್ಳುತ್ತ ಹೋದರೆ, ಒಂದು ಕೋಟಿಗಿಂತ ಹೆಚ್ಚಿನ ಆಳವಿದ್ದ ಕಂದಕದಲ್ಲಿ ಅವರನ್ನು ನೂಕುತ್ತೇವೆ ಎಂದು ನಾನು ಭಾವಿಸುತ್ತೇನೆ. ಇಂಥ ಈ ಕಂದಾಯ ಪದ್ಧತಿಯು ಗೌರವಾನ್ವಿತ ಹಣಕಾಸು ಸದಸ್ಯರು ನಂಬುವಂಥದಾಗಿರುತ್ತದೆಯೇ ಹೇಗೆ ಎಂಬುದು ನನಗೆ ತಿಳಿಯದು. ಆ ಬಗ್ಗೆ ಗಮನಿಸುವುದು ಅವರ ಕಾರ್ಯವೇ ಹೊರತು ನನ್ನದಲ್ಲ. ಏಕೆಂದರೆ ಈ ದೇಶದ ಹಣಕಾಸಿನ ಹೊಣೆ ಹೊತ್ತಿರುವವರು ಅವರೇ.

ಮಾನ್ಯ ಅಧ್ಯಕ್ಷರೇ, ಈಗ ಕಂದಾಯದ ಅವೇ ಬಾಬುಗಳನ್ನು ಪರ್ಯಾಲೋಚಿಸುತ್ತ, ತೆರಿಗೆದಾರನ ದೃಷ್ಟಿಕೋನದಿಂದ ನೋಡಿದಾಗ ಈ ಪ್ರಾಂತದ ಕಂದಾಯ ಪದ್ಧತಿಯು ಅನ್ಯಾಯಪೂರ್ಣವೂ ಅಸಮರ್ಥನೀಯವೂ ಆಗಿರುವುದೆಂದು ಭಾವಿಸುತ್ತೇನೆ. ಪ್ರಪ್ರಥಮವಾಗಿ ಭೂ ಕಂದಾಯವನ್ನು ಪರಿಶೀಲಿಸೋಣ. ಶಬ್ದಾರ್ಥಗಳು ಏನೇ ಇರಲಿ, ಅದು ಕರವಾಗಿರಲಿ ಅಥವಾ ಬಾಡಿಗೆ ಅಥವಾ ಲಾವಣಿಯಾಗಿರಲಿ, ಭೂ ಕಂದಾಯವು ಉದ್ಯೋಗಸ್ಥನ ಲಾಭದ ಮೇಲಿನ ಕರವೇ ಎನ್ನುವಲ್ಲಿ ಯಾವ ಸಂಶಯವೂ ಇಲ್ಲ ಎಂದು ಹೇಳಬಹುದು. ಈ ಎರಡೂ ಕರಗಳು ಒಂದೇ ಆಗಿದ್ದರೆ, ಅವುಗಳನ್ನು ವಿಧಿಸುವ ವಿಧಾನದಲ್ಲಿ ಭಿನ್ನತೆ ಏಕೆ ಇರಬೇಕು ಎಂಬ ಬಗ್ಗೆ ನಾನು ಮಾನ್ಯ ಹಣಕಾಸು ಸದಸ್ಯರಿಂದ ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ರೈತನನ್ನು ಆತನ ಉತ್ಪನ್ನ ಎಷ್ಟೇ ಇರಲಿ, ಭೂ ಕರದ ವ್ಯಾಪ್ತಿಯಲ್ಲಿ ತರಲಾಗಿದೆ. ಆದರೆ ಆದಾಯಕರದ ನಿಯಮಗಳ ಮೇರೆಗೆ ಯಾವನೇ ವ್ಯಕ್ತಿಯು ಆಯಾ ವರ್ಷದಲ್ಲಿ ಯಾವುದೇ ಉತ್ಪನ್ನವನ್ನು ಸಂಪಾದಿಸದಿದ್ದರೆ ಆದಾಯಕರ ಸಂದಾಯ ಮಾಡುವಂತೆ ಆತನಿಗೆ ಹೇಳಲಾಗುವುದಿಲ್ಲ. ಭೂಕಂದಾಯಕ್ಕೆ ಸಂಬಂಧಪಟ್ಟಂತೆ ಈ ಪದ್ಧತಿಯನ್ನು ಅನ್ವಯಿಸಲಾಗುತ್ತಿಲ್ಲ. ಬೆಳೆಗಳು ವಿಫಲವಾಗಲಿ ಅಥವಾ ವಿಪುಲವಾಗಿರಲಿ, ಕಂದಾಯ ಸಂದಾಯ ಮಾಡುವಂತೆ ಬಡ ರೈತನನ್ನು ಕೇಳಲಾಗುತ್ತದೆ. ಮನ್ನಣೆ ಪಡೆದ, ಸಂದಾಯ ಸಾಮರ್ಥ್ಯದ ಸಿದ್ಧಾಂತವನ್ನು ಆಧರಿಸಿ ಆದಾಯ ತೆರಿಗೆಯನ್ನು ವಿಧಿಸಲಾಗುತ್ತಿದೆ. ಆದರೆ ಭೂ ಕಂದಾಯ ಪದ್ಧತಿಯ ಮೇರೆಗೆ ಒಬ್ಬ ವ್ಯಕ್ತಿಯು ಒಂದು ಎಕರೆ ಜಮೀನಿನ ಒಡೆಯನಿರಲಿ ಅಥವಾ ಜಹಾಗೀರದಾರನಿರಲಿ ಅಥವಾ ಇನಾಮದಾರನೇ ಇರಲಿ ಎಲ್ಲರಿಗೂ ಒಂದೇ ದರದಲ್ಲಿ ಕರವನ್ನು ವಿಧಿಸಲಾಗುತ್ತಿದೆ. ಇದು ಪ್ರಮಾಣಾನುಸಾರ ಕರವೇ ಹೊರತು ಇರತಕ್ಕ ಪ್ರಗತಿಪರವಾದ ಕರವಲ್ಲ. ಆದಾಯಕರದ ಕಾನೂನು ಮೇರೆಗೆ ಒಂದು ನಿಗದಿತ ಕನಿಷ್ಠ ಉತ್ಪನ್ನಕ್ಕಿಂತ ಕಡಿಮೆ ಆದಾಯವಿರುವ ವ್ಯಕ್ತಿಗಳನ್ನು ಆದಾಯ ಕರದಿಂದ ವಿನಾಯಿತಿಗೊಳಿಸಲಾಗಿದೆ. ಆದರೆ ಭೂ ಕಂದಾಯ ಕಾನೂನು ಮೇರೆಗೆ ಒಬ್ಬ ವ್ಯಕ್ತಿ ಬಡವನಿರಲಿ, ಸಿರಿವಂತನಿರಲಿ, ಯಾವುದೇ ಕರುಣೆ ಇಲ್ಲದೆಯೇ ಕರವನ್ನು ವಸೂಲು ಮಾಡಲಾಗುತ್ತಿದೆ.

"ಅಬಕಾರಿ"ಯನ್ನೇ ಪುನಃ ಗಮನಿಸೋಣ. ಇದು ತುಂಬಾ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನ

ಬರುವ ಬಾಬು ಆಗಿದೆ. ಇದು ಕಾನೂನುಸಮ್ಮತ ಸರ್ಕಾರಿ ಏಕಸ್ವಾಮ್ಯ ಎಂಬ ಬಗ್ಗೆ ಎರಡು ಅಭಿಪ್ರಾಯಗಳು ಇರಲು ಸಾಧ್ಯವಿಲ್ಲ. ಉತ್ಪನ್ನವನ್ನು ಹೆಚ್ಚಿಸಲು ಸರಕಾರವನ್ನು ಸಮರ್ಥಗೊಳಿಸುವುದು ಇದರ ಉದ್ದೇಶವಾಗಿತ್ತೆಂದು ಅರ್ಥವಲ್ಲ. ಆದರೆ ಕುಡಿಯುವ ಚಟವು ಹಬ್ಬಿ ಜನತೆಯು ನೈತಿಕ ಮಟ್ಟವನ್ನು ಕಳೆದುಕೊಳ್ಳುವುದನ್ನು ನಿಲ್ಲಿಸಲು ಸರಕಾರವನ್ನು ಹೆಚ್ಚು ಅನುಕೂಲಕರ ಸ್ಥಾನದಲ್ಲಿಡಲು ಏಕಸ್ವಾಮ್ಯವನ್ನು ಅಧಿನಿಯಮಿಸಲಾಗಿದೆ. ಕಂದಾಯದ ಸಂಗ್ರಹಣೆಯು ಮಾತ್ರವೇ ಗುರಿಯಾಗಿದ್ದರೆ ಸರ್ಕಾರಿ ಏಕಸ್ವಾಮ್ಯದ ಅವಶ್ಯಕತೆ ಇಲ್ಲ. ಈ ಏಕಸ್ವಾಮ್ಯವನ್ನು ಸರಕಾರವು ಹೇಗೆ ಜಾರಿಗೊಳಿಸುತ್ತ ಬಂದಿದೆ? ಪ್ರತಿಯೊಂದು ಪ್ರಾಂತದ ಎಷ್ಟು ಜನರು ಕುಡಿಯಲು ಎಷ್ಟು ಖರ್ಚು ಮಾಡುತ್ತಾರೆ ಎಂಬ ಬಗ್ಗೆ ಅಂಕಿಸಂಖ್ಯೆಗಳನ್ನು ಪರಿಶೀಲಿಸಿದರೆ, ಕುಡಿಯುವ ಚಟಕ್ಕೆ ಸಂಬಂಧಪಟ್ಟಂತೆ ಮುಂಬಯಿ ಪ್ರಾಂತವು ಮೊದಲನೆಯದಾಗಿರುತ್ತದೆ ಎಂಬುದು ನಿಮಗೆ ಕಂಡುಬರುತ್ತದೆ. ಪ್ರತಿ ವ್ಯಕ್ತಿಯು ಮದ್ರಾಸ್ ಪ್ರಾಂತದಲ್ಲಿ ೧ ರೂಪಾಯಿ ೩ ಆಣೆ, ೭ ಪೈ. (ರೂ.೧–೨೨), ಬಂಗಾಲದಲ್ಲಿ ೦ ರೂ. ೭ ಆಣೆ, ೧ ಪೈ (೦–೪೫), ಉತ್ತರ ಪ್ರದೇಶದಲ್ಲಿ ೦ ರೂ. ೪ ಆಣೆ ೭ ಪೈ (೯–೨೮), ಪಂಜಾಬಿನಲ್ಲಿ ೧ ರೂ. ೭ ಆಣೆ ೮ ಪೈ (ರೂ. ೧–೪೮), ಬರ್ಮಾದಲ್ಲಿ ೧ ರೂ. ೪ ಆಣೆ ೦ ಪೈ (ರೂ. ೧–೨೫), ಬಿಹಾರ ಮತ್ತು ಒರಿಸ್ಸಾಗಳಲ್ಲಿ ೦ ರೂ. ೮ ಆಣೆ ೭ ಪೈ (ರೂ. ೦–೫೮ ಪೈ), ಮಧ್ಯಪ್ರದೇಶ ಮತ್ತು ಬೆರಾರದಲ್ಲಿ ೦ ರೂ. ೧೫ ಆಣೆ ೦ ಪೈ (ರೂ. ೦–೯೪). ಅಸ್ಸಾಮಿನಲ್ಲಿ ೦ ರೂ. ಆಣೆ ೩೦ ಪೈ (ರೂ. ೦–೮೩), ಖರ್ಚು ಮಾಡುತ್ತಾನೆಂಬುದು ಕಂಡುಬರುತ್ತದೆ. ಆದರೆ ಮುಂಬಯಿಯಲ್ಲಿ ಪ್ರತಿ ವ್ಯಕ್ತಿಯೂ ೨ ರೂ. ೨ ಆಣೆ–೯ ಪೈ (ರೂ. ೨–೧೮) ಖರ್ಚು ಮಾಡುತ್ತಿರುವ ಭಯಾನಕ ಅಂಕಿ–ಸಂಖ್ಯೆ ದೊರಕುತ್ತದೆ. ಹಣಕಾಸು ಸದಸ್ಯರಾದ ನನ್ನ ಗೌರವಾನ್ವಿತ ಸ್ನೇಹಿತರನ್ನು ಇದು ಸಮರ್ಥನೀಯ ಪದ್ಧತಿಯೇ ಎಂದು ಕೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸರಕಾರವು ಪಾನ ಪ್ರತಿಬಂಧ ನೀತಿಯನ್ನು ಒಪ್ಪಿಕೊಂಡಿದ್ದು, ಆ ನೀತಿಯು ಸಫಲವಾಗುವಂತೆ ಮಾಡಲು ಹಲವಾರು ವಿಧಾನಗಳನ್ನು ಅಳವಡಿಸಿಕೊಂಡಿದೆ. ಆದರೆ ಅವರು ಹಾಗೆ ಮಾಡಿಲ್ಲ. ಅವುಗಳಲ್ಲಿನ ಮೊದಲನೆಯ ವಿಧಾನವೆಂದರೆ ಪಡಿತರ. ಮಾನ್ಯರೇ ಈಗ ಸರಕಾರವು ಪಡಿತರಗೊಳಿಸಲಾದ ದೇಶೀ ಮದ್ಯದ (ಭಟ್ಟೀ ಸಾರಾಯಿ) ಮಾರಾಟದ ಪ್ರಮಾಣವು ೧,೮೮೩,೪೦೪ ಗ್ಯಾಲನ್ನುಗಳನ್ನು ಮೀರತಕ್ಕುದಲ್ಲ ಎಂದು ಇರುತ್ತದೆ. ಆದರೆ ಈ ಮಿತಿಯು ಬಳಕೆಯನ್ನು ನಿಯಂತ್ರಿಸಲು ಮಾಡಿದ ಒಂದು ಸುಳ್ಳು ನೆಪಮಾತ್ರವಾಗಿದೆ. ಏಕೆಂದರೆ ವಾಸ್ತವವಾಗಿ ಬಳಸಲಾಗಿರುವ ಪ್ರಮಾಣವು ೧,೪೦೫.೪೩೭ ಗ್ಯಾಲನ್ ಆಗಿರುತ್ತದೆ. ಅಂದರೆ ಪರಿಮಿತಿಗೊಳಿಸಲಾಗಿರುವ ಪ್ರಮಾಣವು ವಾಸ್ತವವಾಗಿ ಬಳಸಲಾದ ಪ್ರಮಾಣಕ್ಕಿಂತ ೪೭೮,೩೬೭ ಗ್ಯಾಲನ್ ಹೆಚ್ಚಿಗೆ ಇದೆ. ಪಾನಪ್ರತಿಬಂಧ ನೀತಿಯನ್ನು ಸಫಲಗೊಳಿಸಲು ಅನುಸರಿಸಲಾದ ಎರಡನೆಯ ವಿಧಾನವೆಂದರೆ ಸಲಹಾ ಸಮಿತಿಯ ನೇಮಕ ಎಂದು ನಾನು ತಿಳಿಯುತ್ತೇನೆ. ಆದರೆ ಈ ಸಮಿತಿಯ ಸದಸ್ಯರಲ್ಲಿ ಶೇಕಡಾ ೪೦ರಷ್ಟು ಪಾನ ಪ್ರತಿಬಂಧ ವಿರೋಧಿಗಳೇ ಆಗಿದ್ದಾರೆ. ಮಾನ್ಯ ಅಧ್ಯಕ್ಷರೇ ಈ ಸಮಿತಿಯು ತನಗೆ ದೊರಕಬೇಕಾದ ಗೌರವವನ್ನು ಆಡಳಿತ ಪಕ್ಷದ ಸದಸ್ಯರಿಂದ ಪಡೆದುಕೊಳ್ಳುತ್ತದೆಯೆಂದು ನನಗೆ ಅನ್ನಿಸುವುದಿಲ್ಲ. ಮಾನ್ಯ ಅಧ್ಯಕ್ಷರೇ, ಈ ದೇಶದ ಹಣಕಾಸಿನ ಪದ್ಧತಿಯ ಬಗ್ಗೆ ನಾನು ಮಾತನಾಡುತ್ತಿರುವಾಗ, ನನ್ನ ಸ್ನೇಹಿತರಾದ ಮಾನ್ಯ ಹಣಕಾಸು ಸದಸ್ಯರಿಗೆ ಜನತೆಯ ಉತ್ಕರ್ಷವೇ ರಾಜ್ಯದ ಅತ್ಯಂತ ಹಿರಿದಾದ, ಪೂರ್ವಜರಿಂದ ಪಡೆದ ಕೊಡುಗೆಯಾಗಿದೆ ಎಂದು ಸೂಚಿಸುವುದು ಯುಕ್ತವಾಗಿದೆ ಎಂದು ಭಾವಿಸುತ್ತೇನೆ. ಅವರು ಜನತೆಯ ಸ್ಥೈರ್ಯವನ್ನು ಕಳೆಯಬಾರದು ಮತ್ತು ಅವರನ್ನು ಭಿಕ್ಷುಕರನ್ನಾಗಿ ಮಾಡಬಾರದು. ತನ್ನ ಜನತೆಯನ್ನು ಭಿಕ್ಷುಕರನ್ನಾಗಿಸುವ ರಾಜ್ಯವು ತಾನೇ ಭಿಕ್ಷೆ ಬೇಡಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಈಗ ನಾನು ಇನ್ನೊಂದು ವಿಷಯ ಪ್ರಸ್ತಾಪಿಸಬಯಸುತ್ತೇನೆ. ನನಗೆ ಕೊಟ್ಟ ಅವಧಿಯು ಅತ್ಯಲ್ಪವೆನ್ನುವುದು ನನಗೆ ಗೊತ್ತಿದೆ ಮತ್ತು ತಮಗೆ ಸಾಧ್ಯವಾದಲ್ಲಿ ನೀವು ಸ್ವಲ್ಪ ಹೆಚ್ಚು ಅವಧಿಯನ್ನು ಕೊಡುವಿರೆಂದು ನಾನು ಆಶಿಸುತ್ತೇನೆ.

ಗೌರವಾನ್ವಿತ ಅಧ್ಯಕ್ಷರು: ಇಲ್ಲ, ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಉತ್ಪನ್ನದ ಇತರ ಮೂಲಗಳಿಗೆ ಸಂಬಂಧಿಸಿದಂತೆ ಹೇಳಬೇಕೆಂದರೆ ಗೌರವಾನ್ವಿತ ಹಣಕಾಸು ಸದಸ್ಯರು ಈ ಪ್ರಾಂತದ ಸಂಪನ್ಮೂಲಗಳನ್ನು ಹೆಚ್ಚಿನ ರೀತಿಯಲ್ಲಿ ಪ್ರಯೋಜನ ಕಾರಿಯಾಗುವಂತೆ ಬಳಸಿಕೊಳ್ಳಲು ಶತಪ್ರಯತ್ನ ಮಾಡುತ್ತಿದ್ದಾರೆ ಎಂದು ನಾನು ಭಾವಿಸುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಅರಣ್ಯವನ್ನು ಉತ್ಪನ್ನದ ಮೂಲವೆಂದು ಪರಿಗಣಿಸಿದರೆ ೧೯೨೧–೨೨ರಲ್ಲಿ ಅರಣ್ಯದ ಉತ್ಪನ್ನವು ಕೇವಲ ರೂ. ೭೪ ಲಕ್ಷದಷ್ಟು ಮಾತ್ರವಿತ್ತು. ಕಾರಣ ಅಲ್ಲಿ ಉತ್ಪನ್ನದ ಬೆಳವಣಿಗೆ ನಿಂತುಹೋಗಿರುವುದು ನಿಮಗೆ ಕಂಡುಬರುತ್ತದೆ. ಆದರೆ ಅರಣ್ಯಗಳಿಗಾಗಿ ಮಾಡಿದ ಖರ್ಚನ್ನು ಗಮನಿಸಿದಾಗ ಖರ್ಚು ೪೦ ಲಕ್ಷದಿಂದ ೪೮ ಲಕ್ಷಕ್ಕೆ ಏರಿದ್ದು ಕಂಡುಬರುತ್ತದೆ. ಅಂದರೆ ಕೊನೆಗೆ ಅರಣ್ಯದಿಂದ ನಮಗೆ ದೊರಕಿದ ನಿವ್ವಳ ಲಾಭವನ್ನು ನಿರ್ಧರಿಸುವಾಗ ಸುಮಾರು ೪ ಲಕ್ಷದಷ್ಟು ಹಾನಿಯಾಗಿರುವುದು ನಿಮಗೆ ಕಂಡುಬರುತ್ತದೆ.

ಮಾನ್ಯ ಅಧ್ಯಕ್ಷರೇ, ಮುಂದೆ ನಾನು ನೀರಾವರಿ ಮತ್ತು ಸಿವಿಲ್ ಕಾಮಗಾರಿಗಳ ಬಗ್ಗೆ ಮಾತನಾಡಲು ಬಯಸುತ್ತೇನೆ. ವಿವರವಾದ ಮಾಹಿತಿಯನ್ನು ಕೊಡಹೊರಟರೆ ನನ್ನ ಸಮಯವನ್ನು ಹಾಳು ಮಾಡಿದಂತಾಗುತ್ತದೆ. ಆದರೆ ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಹೇಳಬಯಸುತ್ತೇನೆ. ಅಂದರೆ ಸರಕಾರವು ಒಂದು ಉದ್ಯಮವನ್ನು ಅಥವಾ ಕಾಮಗಾರಿಯನ್ನು ಕೈಗೆತ್ತಿಕೊಂಡಾಗ ಅದನ್ನು ಮುಖ್ಯವಾಗಿ ಆದಾಯಕ್ಕಾಗಿ ಮಾಡುತ್ತದೆ ಅಥವಾ ಅದು ಮುಖ್ಯವಾಗಿ ಸೇವೆಗೋಸ್ಕರ ಮಾಡಿದರೂ ಪ್ರಾಸಂಗಿಕವಾಗಿ ಆದಾಯಕ್ಕಾಗಿ ಮಾಡುತ್ತದೆ. ಅಥವಾ ಅದು ಮುಖ್ಯವಾಗಿ ಸೇವೆಗೋಸ್ಕರ ಮಾಡುತ್ತದೆ. ತಾನು ಕೈಕೊಂಡ ಸೇವೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ಒಂದು ಗೊತ್ತುಪಡಿಸಿದ ಅಥವಾ ಖಚಿತ ನೀತಿಯನ್ನು ಹೊಂದಿದೆ ಎಂದು ನಾನು ಭಾವಿಸುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ನಾನು ವೈಯಕ್ತಿಕವಾಗಿ ಭಾವಿಸುವಂತೆ ಈ ಸಭೆಯ ಇತರ ಗೌರವಾನ್ವಿತ ಸದಸ್ಯರ ಮತ್ತು ನನ್ನ ನಡುವೆ ಭಿನ್ನಾಭಿಪ್ರಾಯವಿರಬಹುದು. ಆದರೆ ನೀರಾವರಿ ಇಲಾಖೆಯಿಂದ ನಾವು ಪಡೆದುಕೊಳ್ಳಲು ಹಕ್ಕಿರುವಷ್ಟು ಪೂರ್ಣ ಆದಾಯವನ್ನು ಆ ಇಲಾಖೆ ನಮಗೆ ಕೊಡುತ್ತಿಲ್ಲ ಎಂದು ನಾನು ಭಾವಿಸುತ್ತೇನೆ. ಕರಪದ್ಧತಿಯ ವಿಚಾರಣಾ ಸಮಿತಿಯ ವರದಿಯನ್ನು ನನ್ನ ಗೌರವಾನ್ವಿತ ಸ್ನೇಹಿತರು ಪರಿಶೀಲಿಸಿದರೆ ನೀರಿನ ದರವು ತುಂಬಾ ಕಡಿಮೆ ಇರುವುದನ್ನು ಅವರು ಕಂಡುಕೊಳ್ಳಬಲ್ಲರು ಎಂದು ನಾನು ಭಾವಿಸುತ್ತೇನೆ. ಸಭೆಯ ಈ ಬದಿಗೆ ಇರುವ ನಾವು ಈ ಪ್ರಾಂತದ ಸಂಪನ್ಮೂಲಗಳನ್ನು ಅವರು ಇನ್ನೂ ಉತ್ತಮ ರೀತಿಯಲ್ಲಿ ವ್ಯವಸ್ಥಾಪನೆಗೊಳಿಸಬೇಕೆಂದು ಅಪೇಕ್ಷಿಸಲು ಹಕ್ಕುಳ್ಳವರಾಗಿರುವುದಾಗಿ ಭಾವಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಈಗ ನಾನು ಆಯವ್ಯಯ ಪತ್ರದ ಖರ್ಚಿನ ಭಾಗದ ಮೇಲೆ ಮಾತನಾಡುತ್ತೇನೆ. ಈ ಸಭೆಯ ಹೆಚ್ಚಿನ ಸದಸ್ಯರು ಕೊರತೆಯ ಪ್ರಮಾಣದ ಬಗ್ಗೆ ಗಾಬರಿಗೊಂಡಿದ್ದಾರೆಂಬುದನ್ನು ನಾನು ಬಲ್ಲೆನು. ನಾನು ಗಾಬರಿಗೊಂಡಿಲ್ಲ ಎಂದು ಹೇಳಬಹುದು. ಕೊರತೆಯು ಗೌರವಾನ್ವಿತ ಸದಸ್ಯರನ್ನು ಗಾಬರಿಗೊಳಿಸುವಂಥದೇನೂ ಅಲ್ಲ. ನನ್ನ ಅಶಾಂತಿಗೆ ಕಾರಣವೆಂದರೆ ಈ ಆಯವ್ಯಯ ಪತ್ರದಲ್ಲಿನ ಕೊರತೆಯು ಅದರಲ್ಲಿ ಸಾಮಾಜಿಕ ಅಭಿವೃದ್ಧಿಯ ಯಾವುದೇ ದೊಡ್ಡ ನೀತಿಯನ್ನು ಸೇರಿಸಲಾಗಿರುವುದರಿಂದ

ಉಂಟಾದುದಲ್ಲ. ಅನುತ್ಪಾದಕವಾದ ಆಡಳಿತದ ವೆಚ್ಚಗಳನ್ನು ಏರಿಸಿದ್ದೇ ಕಾರಣ. ಮಾನ್ಯ ಅಧ್ಯಕ್ಷರೇ, ಹಣಕಾಸಿನ ಇಲಾಖೆಯ ಗೌರವಾನ್ವಿತ ಸದಸ್ಯ ಕಾರ್ಯದರ್ಶಿಯವರು ನಿನ್ನೆ ಈ ಸದನಕ್ಕೆ ಅದು ತರ್ಕಸಂಗತವಾಗಿ ವರ್ತಿಸಬೇಕೆಂದು ಹೇಳುವಲ್ಲಿ ತುಂಬಾ ಜಾಣ್ಮೆ ತೋರಿದರೆಂದೇ ಹೇಳಬೇಕು. ಆಡಳಿತ ಪಕ್ಷದವರು ತಮ್ಮನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಈ ಸದನದ ಸದಸ್ಯರು ಇಚ್ಛೆಪಡುವುದಾದರೆ ಅವರೂ ಸಹ ತರ್ಕಸಂಗತವಾಗಿ ವರ್ತಿಸಬೇಕು. ಮಾನ್ಯ ಅಧ್ಯಕ್ಷರೇ, ಆ ವಾದದ ಬಲವನ್ನು ನಾನು ಒಪ್ಪುತ್ತೇನೆ. ಆದರೆ ಆ ವಾದವನ್ನು ನಾನು ಅವರಿಗೇ ತಿರುಗಿಸಲು ಇಚ್ಛಿಸುತ್ತೇನೆ. ಮತ್ತು ಈ ಪ್ರಾಂತದ ವೆಚ್ಚದಲ್ಲಿ ಉಂಟಾದ ಹೆಚ್ಚಳ ನ್ಯಾಯವಾದುದೋ ಮತ್ತು ಆಡಳಿತದ ಗುಣಮಟ್ಟವನ್ನು ಹೆಚ್ಚಿಸುವ ಆಧಾರದ ಮೇಲೆ ಅದು ಸಮರ್ಥನೀಯವೋ ಎಂದು ನಾನು ಅವರನ್ನು ಕೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ೧೯೧೦ರಿಂದ ೧೯೨೭–೨೮ರ ಅವಧಿಯಲ್ಲಿನ ಈ ಪ್ರಾಂತದಲ್ಲಿನ ಆಡಳಿತದ ವೆಚ್ಚವನ್ನು ಹೋಲಿಸಿದಾಗ– ಹೋಲಿಕೆಯ ಉದ್ದೇಶಕ್ಕಾಗಿ ಆಗ ಸಂಪೂರ್ಣವಾಗಿ ಪ್ರಾಂತೀಯವಾಗಿರುವ ಮತ್ತು ಈಗಲೂ ಸಹ ಸಂಪೂರ್ಣವಾಗಿ ಪ್ರಾಂತೀಯವಾಗಿರುವಂಥ ಇಲಾಖೆಗಳ ಅಂಕಿ–ಸಂಖ್ಯೆಗಳನ್ನು ಮಾತ್ರವೇ ತೆಗೆದುಕೊಳ್ಳುತ್ತೇನೆ. ೧೯೧೦–೧೧ರಲ್ಲಿ ಕೇವಲ ೧೭ ಲಕ್ಷ ರೂಪಾಯಿಗಳು ಸಾಮಾನ್ಯ ಆಡಳಿತದ ವೆಚ್ಚವಾಗಿತ್ತು ಎಂದು ನನಗೆ ಕಂಡುಬರುತ್ತದೆ. ಇಂದು ಆ ವೆಚ್ಚ ೧೨೬ ಲಕ್ಷ ರೂಪಾಯಿಗಳಾಗಿರುತ್ತದೆ. ನನ್ನ ಸನ್ಮಾನ್ಯ ಸ್ನೇಹಿತರಾದ ಹಣಕಾಸು ಕಾರ್ಯದರ್ಶಿಯವರನ್ನು ಇದು ನ್ಯಾಯಯುತವಾದುದೇ ಎಂದು ಕೇಳುತ್ತೇನೆ.

ಮಿ. ಜಿ. ವಿಲ್ಸ್: ಗೌರವಾನ್ವಿತ ಸದಸ್ಯರು ನನಗೆ ಅನುಮತಿಸಿದರೆ ಆಯವ್ಯಯ ಪತ್ರದ ತಃಖ್ತೆಗಳಲ್ಲಿ ಒದಗಿಸಿದ ಅಂಕಿ–ಸಂಖ್ಯೆಗಳನ್ನು ತುಂಬಾ ಎಚ್ಚರಿಕೆಯಿಂದ ಪರಿಶೀಲಿಸಬೇಕೆಂದು ರಾವಸಾಹೇಬ ದಾದೂಭಾಯಿ ದೇಸಾಯಿಯವರಿಗೆ ನಿನ್ನೆಯೇ ವಿವರಿಸುತ್ತಿದ್ದೆನು ಎಂದು ಅವರಿಗೆ ತಿಳಿಯಬಯಸುವೆನು. ಸುಧಾರಣೆಗಳ ಬಾಬಿನ ಮುಂದೆ ಕೊಟ್ಟ ಸಾಮಾನ್ಯ ಆಡಳಿತದ ವರ್ಗೀಕರಣ ಈಗ ಪರಿಗಣಿಸಲಾದ ವರ್ಗೀಕರಣವಲ್ಲ. ಜಮೀನುಗಳ ಪರಭಾರೆಯ ನಿಮಿತ್ತವಾದ ಬಾಬಿನಲ್ಲಿ ಆಗ ಮತ್ತೊಂದು ಶೀರ್ಷಿಕೆಯಲ್ಲಿ ತೋರಿಸಲಾಗಿತ್ತು. ಅದನ್ನು ಈಗ ಸಾಮಾನ್ಯ ಆಡಳಿತದ ಶೀರ್ಷಿಕೆಯಲ್ಲಿ ಸೇರಿಸಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಹಾಗೆ ಇರುವಂತೆ ಇರಲಿ. ನಿಜವಾಗಿಯೂ ಅಲ್ಲಿ ಕೊಟ್ಟಿರುವ ತಃಖ್ತೆಗಳನ್ನು ಅಲ್ಲಿರುವಂತೆಯೇ ತೆಗೆದುಕೊಳ್ಳಲು ನಾವು ಬದ್ಧ. ನನ್ನ ಗೌರವಾನ್ವಿತ ಸ್ನೇಹಿತರು ಹೇಳಿರುವ ತಿದ್ದುಪಡಿಗಳಿಗೆ ಒಳಪಟ್ಟು ಅರ್ಥಾತ್ ಈ ಪ್ರಾಂತದಲ್ಲಿನ ಸಾಮಾನ್ಯ ಆಡಳಿತದ ವೆಚ್ಚವು ಅಧಿಕವಾದುದು ಆಗಿರುತ್ತದೆ ಎಂದೇ ನಾನು ಭಾವಿಸುತ್ತೇನೆ. ವಾಸ್ತವವಾಗಿ ಈ ಪ್ರಾಂತದ ಹಿಂದಿನ ಇತಿಹಾಸದ ಆಧಾರದಿಂದಲೂ ಸಹ ಇದಕ್ಕೆ ಯಾವುದೇ ನ್ಯಾಯಯುತ ಸಮರ್ಥನೆಯಿಲ್ಲ. ಉದಾಹರಣೆಗೆ ಇಂದು ನಾಲ್ವರು ಕಾರ್ಯಕಾರಿ ಕೌನ್ಸಿಲರರು ಮತ್ತು ಮೂವರು ಮಂತ್ರಿಗಳು ಇರುತ್ತಾರೆ ಮತ್ತು ಅವರ ಕೆಳಗೆ ಹೆಚ್ಚು ಕಡಿಮೆ ೨೫ ಜನ ಕಾರ್ಯದರ್ಶಿಗಳು ಮತ್ತು ಸಹಾಯಕ ಕಾರ್ಯದರ್ಶಿಗಳು ಇರುತ್ತಾರೆ. ನನ್ನ ಗೌರವಾನ್ವಿತ ಸ್ನೇಹಿತರಾದ ಹಣಕಾಸಿನ ಕಾರ್ಯದರ್ಶಿಯವರು ಇದು ಸಮಂಜಸವೆಂದು ಹೇಳುವರೆಂದು ನಾನು ಭಾವಿಸುವುದಿಲ್ಲ. ಗೌರವಾನ್ವಿತ ಹಣಕಾಸಿನ ಸದಸ್ಯರು ಈ ಪ್ರಾಂತದಲ್ಲಿನ ಆಡಳಿತದ ಈ ದುಂದುವೆಚ್ಚವನ್ನು ವಿವರಿಸಲು ಪ್ರಯತ್ನಿಸಿರುತ್ತಾರೆ. ಮಾನ್ಯ ಅಧ್ಯಕ್ಷರೇ ನೀವು ನನಗೆ ಇನ್ನಷ್ಟು ಸಮಯವನ್ನು ಕೊಡುತ್ತೀರೆಂದು ನಾನು ಆಶಿಸುತ್ತೇನೆ.

ಗೌರವಾನ್ವಿತ ಅಧ್ಯಕ್ಷರು: ಇಲ್ಲ. ನನ್ನಲ್ಲಿ ಸಮಯ ಎಷ್ಟು ಕಡಿಮೆ ಇದೆ ಎಂಬುದು ಗೌರವಾನ್ವಿತ ಸದಸ್ಯರಿಗೆ ಗೊತ್ತು. ಅವರಿಗೆ ಈಗ ಕೇವಲ ಎರಡು ನಿಮಿಷಗಳು ಮಾತ್ರ ಉಳಿದಿವೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಅಧ್ಯಕ್ಷರೇ, ನಾನು ಹೇಳಬೇಕಾದುದನ್ನು ಬಿಟ್ಟುಬಿಡುತ್ತೇನೆ. ಮತ್ತು ಈಗ ನಾನು ಮುಕ್ತಾಯದತ್ತ ಮುಂದುವರೆಯುತ್ತೇನೆ. ಮಾನ್ಯ ಅಧ್ಯಕ್ಷರೇ, ನನ್ನ ಭಾಷಣದ ಈ ಭಾಗದಲ್ಲಿ ನನ್ನ ನಿಲುವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ತೀವ್ರವಾದ ಕಡಿತವನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುವುದನ್ನು ನಾವು ಕೇಳುತ್ತಿದ್ದೇವೆ. ನಾನು ಅವರ ಜೊತೆಗೆ ಸೇರಿದ್ದೇನೆ ಮತ್ತು ಶ್ರದ್ಧಾಪೂರ್ವಕ ಆ ಒಕ್ಕೊರಲಿನ ಕೂಗಿಗೆ ದನಿಗೂಡಿಸುತ್ತೇನೆ. ಏಕೆಂದರೆ ಕಡಿತಕ್ಕೆ ಅಲ್ಲಿ ಅವಕಾಶ ಇದೆ ಎಂದು ನಾನು ನಂಬಿದ್ದೇನೆ. ಆದರೆ ಸಂಗತಿಯನ್ನು ಬಚ್ಚಿಡಲಾರೆನು. ಕಡಿತವನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಲೆಕ್ಕ ಹಾಕಿದರೂ ಅದು ನಮಗೆ ಒಂದೆರಡು ಕೋಟಿ ರೂಪಾಯಿಗಳಷ್ಟರ ಮಟ್ಟಿಗೆ ಪರಿಹಾರ ಕೊಡಬಹುದು. ಆದರೆ ಅದು ಎಷ್ಟು ದೂರ ಹೋಗಬಲ್ಲದು. ಆ ವಿಧಾನದ ಮೂಲಕ ನಾವು ಆಯವ್ಯಯ ಪತ್ರವನ್ನು ಸಂತುಲನಗೊಳಿಸಬಹುದು. ಆಯವ್ಯಯ ಪತ್ರವನ್ನು ಸಂತುಲನಗೊಳಿಸುವುದಷ್ಟೇ ಈ ಸದನದ ಏಕಮೇವ ಆಶೆಯೋ? ಕಡ್ಡಾಯ ಶಿಕ್ಷಣ, ವೈದ್ಯಕೀಯ ಪರಿಹಾರ, ಕುಡಿತದ ಚಟದಿಂದ ಜನತೆಯ ಬಿಡುಗಡೆ ಮತ್ತು ಜೀವನದ ಎಲ್ಲ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಈ ಸದನವು ನಿಜವಾಗಿಯೂ ಶ್ರದ್ಧೆಯನ್ನು ಹೊಂದಿದೆ ಎಂದು ನಾನು ಭಾವಿಸುತ್ತೇನೆ. ಹಾಗಾದಲ್ಲಿ ಈ ಇಹಲೋಕದ ಸುಖ ಸೌಕರ್ಯದ ವಸ್ತುಗಳು ಸ್ವರ್ಗದಿಂದ ಉದುರಿಬೀಳುವುದಿಲ್ಲ ಎಂಬುದನ್ನು ಇನ್ನೊಮ್ಮೆ ಈ ಸದನದ ಗಮನಕ್ಕೆ ತರಬಯಸುತ್ತೇನೆ. ಪ್ರತಿಯೊಂದು ವಿಕಾಸಕ್ಕೂ ಬೆಲೆ ತೆರಬೇಕಾಗುತ್ತದೆ. ಆ ಬೆಲೆಯನ್ನು ಭರಿಸುವವರು ಮಾತ್ರವೇ ಆ ವಿಕಾಸವನ್ನು ಪಡೆಯುತ್ತಾರೆ.

# ಆಯವ್ಯಯ ಪತ್ರ: ೨*

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಆಯವ್ಯಯ ಪತ್ರವು ನಿಜವಾಗಿಯೂ ಕೊರತೆಯ ಆಯವ್ಯಯ ಪತ್ರವಾಗಿರುವಷ್ಟರ ಮಟ್ಟಿಗೆ ಸಮಾಧಾನಕರವಾದುದಲ್ಲ ಎಂಬ ವಿಚಾರದಲ್ಲಿ ನನಗೆ ಸಂಶಯವೇ ಇಲ್ಲ. ಅದು ಕೊರತೆಯನ್ನು ತೋರಿಸುತ್ತದೆ ಎಂಬ ಒಂದೇ ಕಾರಣಕ್ಕಾಗಿ ಅದು ಸಮಾಧಾನಕರವಾದುದು ಅಲ್ಲ ಎನ್ನುವಂತಿದ್ದರೆ ಆ ಬಗ್ಗೆ ನಾನು ಈ ರೀತಿ ಗಂಭೀರವಾಗಿ ಗಮನಹರಿಸುವುದು ಅಗತ್ಯವಾಗಿರಲಿಲ್ಲ. ಆದರೆ ಈ ಆಯವ್ಯಯ ಪತ್ರವು ಕೇವಲ ಅಸಮಾಧಾನಕರವಾದುದು ಮಾತ್ರವೇ ಆಗಿಲ್ಲ. ಮಾನ್ಯರೇ, ಅದು ಖಂಡನೀಯವಾದ ಆಯವ್ಯಯ ಪತ್ರವೂ ಆಗಿದೆ. ಅಲ್ಲದೆ, ವಸ್ತುಸ್ಥಿತಿ ನಿಜವಾಗಿಯೂ ಗಂಭೀರವಾಗಿದೆ.

ಮಾನ್ಯರೆ, ನಾವು ಈಗ ಮಾಂಟೆಗೊ ಚೆಲ್ಮ್‌ಸ್‌ಫೋರ್ಡ್ ಸುಧಾರಣೆಗಳ ಒಂದು ದಶಕದ ಮುಕ್ತಾಯಕ್ಕೆ ಬಂದಿದ್ದೇವೆ ಅನ್ನುವುದು ತಮಗೆಲ್ಲ ತಿಳಿದಿದೆ. ಹಾಗಿರುವಾಗ ೧೯೨೧ರಿಂದ ಇಲ್ಲಿಯವರೆಗೆ ಇದ್ದ ಪರಿಸ್ಥಿತಿಗಳ ಮೌಲ್ಯಮಾಪನವೂ ನಿಜವಾಗಿಯೂ ಮೌಲಿಕವಾದುದೇ ಆಗಿರುತ್ತದೆ. ಮಾನ್ಯರೇ, ಈಗ "ಕಾಯ್ದಿಟ್ಟವುಗಳು" ಎಂದು ಹೇಳಲಾಗಿರುವ ವಿಷಯಗಳಿಗಿಂತ "ವರ್ಗಾಯಿಸಲಾಗಿರುವ" ವಿಷಯಗಳ ಬಗ್ಗೆ ಸರಕಾರವು ಹೆಚ್ಚಿನ ಗಮನಹರಿಸಲಿ ಎಂಬ ಉದ್ದೇಶದಿಂದ ಈ ಸುಧಾರಣೆಗಳನ್ನು ಜಾರಿಯಲ್ಲಿ ತರಲಾಯಿತು. ಆದರೆ, ಮಾನ್ಯರೇ, ೧೯೨೧ರಿಂದ ಇಂದಿನವರೆಗೆ ಈ ಪ್ರಾಂತದ ವೆಚ್ಚವನ್ನು ವಿಶ್ಲೇಷಿಸಿದಾಗ ನಮಗೆ ಕಂಡುಬರುವುದೇನು? ಬೆಳವಣಿಗೆಗೆ ಸಹಾಯಕಾರಿ ಆಗುವ ಖರ್ಚುಗಳಿಗೆ, ಕಾನೂನು ಮತ್ತು ಶಾಂತಿಪಾಲನೆಗೆ ಸಂಬಂಧಿಸಿದ ವಿಷಯಗಳಿಗಾಗುವ ಖರ್ಚುಗಳಿಗಿಂತ ಹೆಚ್ಚಿನ ಪ್ರಾಧಾನ್ಯವನ್ನು ಈ ಹೊಸ ಆಡಳಿತ ಕೊಡುತ್ತದೆಂದು ನಾವು ಇಟ್ಟುಕೊಂಡ ಆಸೆಗಳು ನಿಜವಾಗದೆ ಹೋದವು ಎಂಬುದನ್ನು ನಾವು ಕಾಣುತ್ತೇವೆ.

ಅದು ಹೇಗೆ ಎಂಬುದನ್ನು ನಾನು ಈಗ ತೋರಿಸುತ್ತೇನೆ. "ವರ್ಗಾಯಿಸಿದ" ಮತ್ತು "ಕಾಯ್ದಿರಿಸಿದ" ಇಲಾಖೆಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಾಂತಗಳಲ್ಲಿ ಮಾಡಲಾಗಿರುವ ಖರ್ಚುಗಳ ಅಂಕಿ-ಸಂಖ್ಯೆಗಳನ್ನು ಸಂಗ್ರಹಿಸಿದ್ದೇನೆ ಮತ್ತು ಮಾನ್ಯರೆ ನಿಮ್ಮ ಅನುಮತಿಯಿಂದ ಆ ಅಂಕಿ ಸಂಖ್ಯೆಗಳನ್ನು ಈ ಸದನದ ಮುಂದಿಡಲು ಬಯಸುತ್ತೇನೆ. ಇದರಿಂದ ಪರಿಸ್ಥಿತಿಯು ಎಷ್ಟು ಶೋಚನೀಯವಾಗಿದೆ ಎಂಬುದನ್ನು ಸದನವು ಅರಿತುಕೊಳ್ಳಬಹುದು. ನಾನು ಕೊಡುವ ಅಂಕಿ-ಸಂಖ್ಯೆಗಳು ೧೯೨೫-೨೬ರ ವೆಚ್ಚವನ್ನು ೧೯೨೧-೨೨ರ ವೆಚ್ಚಕ್ಕೆ ಹೋಲಿಸಿ ನೋಡಿದಾಗ ಹಲವಾರು ಪ್ರಾಂತಗಳಲ್ಲಿ "ವರ್ಗಾಯಿಸಿದ" ಮತ್ತು "ಕಾಯ್ದಿರಿಸಿದ" ವಿಷಯಗಳಿಗೆ ಸಂಬಂಧಿಸಿ ಮಾಡಿದ ಖರ್ಚಿನಲ್ಲಿನ ಹೆಚ್ಚಳದ ಅಥವಾ ಕಡಿತದ ಶೇಕಡಾವಾರನ್ನು ತೋರಿಸುತ್ತವೆ.

ಮಾನ್ಯರೇ, ಈ ಅಂಕಿ-ಸಂಖ್ಯೆಗಳನ್ನು ಗಮನಿಸಿದಾಗ ನಮಗೆ ಕಂಡುಬರುವುದೇನು? ಮುಂಬಯಿ

---

* ಮುಂಬೈ ವಿಧಾನ ಪರಿಷತ್ತಿನ ಚರ್ಚೆಗಳು, ಸಂಪುಟ XXII
ಪುಟಗಳು ೧೬೭-೭೦, ದಿನಾಂಕ: ೨೧ನೇ ಫೆಬ್ರವರಿ ೧೯೨೮.

| | ಕಾಯ್ದಿರಿಸಿದ ಇಲಾಖೆ | | ವರ್ಗಾಯಿಸಿದ ಇಲಾಖೆ | |
|---|---|---|---|---|
| | ಶೇಕಡಾವಾರು | ಶೇಕಡಾವಾರು | ಶೇಕಡಾವಾರು | ಶೇಕಡಾವಾರು |
| | **ಹೆಚ್ಚಳ** | **ಇಳಿತ** | **ಹೆಚ್ಚಳ** | **ಇಳಿತ** |
| ಮದ್ರಾಸ್ | ೧.೨೧ | ... | ೧೪.೨೬ | ... |
| ಮುಂಬಯಿ | ೬.೩೩ | ... | ೫.೮೨ | ... |
| ಬಂಗಾಲ (ಕಾಯ್ದಿರಿಸಿದ ಇಲಾಖೆಗಳ ಖರ್ಚಿನಲ್ಲಿ ಕಡಿತ) | ... | | ೬.೧೧ | |
| ಸಂಯುಕ್ತ ಪ್ರಾಂತಗಳು * (ಕಾಯ್ದಿರಿಸಿದ ಇಲಾಖೆ ಗಳ ಖರ್ಚಿನಲ್ಲಿ ಕಡಿತ) | ... | ... | ೧೨.೫೭ | ... |
| ಪಂಜಾಬ್ | ೧೦.೪೦ | ... | ೨೯.೪೧ | ... |
| ಬರ್ಮಾ | ೩೪.೩೬ | ... | ೬.೪೪ | ... |
| ಬಿಹಾರ ಮತ್ತು ಒರಿಸ್ಸಾ | ೫.೮೯ | ... | ೪೪.೬೬ | ... |
| ಮಧ್ಯಪ್ರಾಂತಗಳು | ೬.೨೪ | ... | ೧೮.೧೫ | ... |
| ಅಸ್ಸಾಮ | ೮.೨೪ | ... | ೧೨.೭೫ | ... |

ಯಂಥ ಮಹತ್ವದ ಪ್ರಾಂತವು ಕಾಯ್ದಿಟ್ಟ ಮತ್ತು ವರ್ಗಾಯಿಸಿದ ಇಲಾಖೆಗಳ ಖರ್ಚಿಗೆ ಸಂಬಂಧಿಸಿದಂತೆ ಅತ್ಯಂತ ಕೆಳಗಿನ ಸ್ಥಾನವನ್ನು ಪಡೆದಿರುವುದನ್ನು ಕಂಡಾಗ ನನಗೆ ದುಃಖವಾಗುತ್ತದೆ ಮತ್ತು ಈ ಸದನದ ಪ್ರತಿಯೊಬ್ಬ ಸದಸ್ಯನೂ ಅದನ್ನು ಕಂಡು ದುಃಖಪಡುವುದು ಖಚಿತ. ತುಂಬಾ ಕೆಟ್ಟ ರೀತಿಯಲ್ಲಿ ಆಡಳಿತ ನಡೆಸಲಾಗುತ್ತಿರುವ ಬರ್ಮಾ ಪ್ರಾಂತವೂ ಸಹ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮುಂಬಯಿಗಿಂತ ಮೇಲ್ಮಟ್ಟದಲ್ಲಿರುವುದು ಕಂಡುಬರುತ್ತದೆ. ಸನ್ಮಾನ್ಯರೇ, ಇದು ತುಂಬಾ ಗಂಭೀರವಾದ, ನಾಚಿಕೆಗೇಡಿನ ವಿಷಯವಾಗಿದೆ. ಮುಂಬಯಿ ಪ್ರಾಂತದಂಥ ಮಹತ್ವದ ಪ್ರಾಂತದ ಹಣಕಾಸಿನ ಆಡಳಿತದ ರೀತಿಯಂತೂ ಖಚಿತವಾಗಿಯೂ ಇದಲ್ಲ. ಗೌರವಾನ್ವಿತ ಹಣಕಾಸು ಸದಸ್ಯರು "ವರ್ಗಾಯಿಸಿದ" ಇಲಾಖೆಗಳಿಗೆ ಅವರು ಈಗ ವಾಸ್ತವವಾಗಿ ಕೊಟ್ಟಿರುವುದಕ್ಕಿಂತ ಹೆಚ್ಚಿನ ಗಮನವನ್ನು ಕೊಡಬಹುದಾಗಿತ್ತೇನೋ. "ಕಾಯ್ದಿಟ್ಟ" ಇಲಾಖೆಗಳಿಗೆ ವ್ಯವಸ್ಥಿತ ರೀತಿಯಲ್ಲಿ ಅಜೀರ್ಣವಾಗುವಷ್ಟು ತಿನ್ನಿಸಿದ್ದು ಮತ್ತು ವರ್ಗಾಯಿಸಿದ ಇಲಾಖೆಗಳನ್ನು ಅರೆಹೊಟ್ಟೆಯಲ್ಲಿಟ್ಟಿರುವುದು ಅಂಕಿ–ಸಂಖ್ಯೆಗಳಿಂದ ಸ್ಪಷ್ಟವಾಗುತ್ತದೆ. ಮಾನ್ಯರೆ, ಭಾರತೀಯ ಹಣಕಾಸು ಸದಸ್ಯರು ತಮ್ಮ ದೇಶದವರ ಇಚ್ಛೆಗಳಿಗೆ ಸ್ಪಂದಿಸದಿದ್ದರೆ ಏನು ಪ್ರಯೋಜನ? ಬೆಳವಣಿಗೆಗಾಗಿ ಎಲ್ಲ ಕಡೆಯಿಂದ ಸಾಮಾನ್ಯ ಕೂಗಾಟವೇ ಇದೆ. ಈ ಕೂಗಾಟ ಪ್ರಮಾಣದಲ್ಲಿ ಎಷ್ಟು ತೀವ್ರವಾಗಿದೆ ಎಂಬುದು

ಗೌರವಾನ್ವಿತ ಹಣಕಾಸು ಸಚಿವರಿಗೆ ಗೊತ್ತಿದೆ. ಆದರೆ ದುರ್ದೈವದಿಂದ ಭವಿಷ್ಯದಲ್ಲಿಯಾದರೂ ಅಭಿವೃದ್ಧಿಯತ್ತ ಕೊಂಡೊಯ್ಯುತ್ತಾರೆಂಬ ಆಶೆಯು ಅವರ ಇಲ್ಲಿಯವರೆಗಿನ ಕಾರ್ಯಕ್ರಮದಿಂದ ಕಂಡುಬರುತ್ತಿಲ್ಲ.

ಮಾನ್ಯರೇ, ಇಲ್ಲಿನ ಹಣಕಾಸಿನ ಆಡಳಿತ ತೀವ್ರವಾಗಿ ಕೆಟ್ಟಿದೆ. ಅಲ್ಲದೆ, ಈ ಪ್ರಾಂತದ ಹಣಕಾಸಿನ ಸ್ಥಿತಿಯು ತುಂಬಾ ಗಂಭೀರವಾಗಿದೆ ಎಂದು ನಾನು ನಿವೇದಿಸುತ್ತೇನೆ. ೧೯೨೧–೨೨ರಿಂದ ಇಂದಿನವರೆಗೆ ಈ ಪ್ರಾಂತದವರು ವರ್ಷದ ಹಣಕಾಸಿನ ಸ್ಥಿತಿಯನ್ನು ನೀವು ಪರೀಕ್ಷಿಸಿದರೆ ಪ್ರತಿ ವರ್ಷವೂ ಹೆಚ್ಚುವರಿಯು ಇಳಿಮುಖವಾದದ್ದು ನಿಮಗೆ ಕಂಡುಬರುತ್ತದೆ. ಅಂದರೆ ಹೆಚ್ಚುವರಿ ಆಯವ್ಯಯದ ಬದಲಿಗೆ ನಮ್ಮ ಉಳಿತಾಯವೆಲ್ಲವನ್ನು ನುಂಗಿ ಹಾಕಿದ್ದೇವೆ ಮತ್ತು ಈಗ ನಾವು ಕೊರತೆಯ ಸರಣಿಗಳನ್ನೇ ತೋರಿಸುವ ಆಯವ್ಯಯ ಪತ್ರಗಳ ಕಾಲಕ್ಕೆ ಬಂದು ಮುಟ್ಟಿದ್ದೇವೆ. ೧೯೨೨–೨೩ರಲ್ಲಿ ೬೪ ಲಕ್ಷ ಉಳಿತಾಯವಿತ್ತು. ೧೯೨೩–೨೪ರಲ್ಲಿ ಹೆಚ್ಚುವರಿಯು ರೂ. ೨೯.೩೮ ಲಕ್ಷಕ್ಕೆ ಇಳಿಯಿತು. ೧೯೨೫–೨೬ರ ಆ ವರ್ಷ ರೂ. ೯೧ ಲಕ್ಷದ ಕೊರತೆಯಲ್ಲಿ ಮುಕ್ತಾಯವಾಯಿತು. ಅಂದಿನಿಂದ ಈವರೆಗೆ ವಸ್ತುಸ್ಥಿತಿ ಹೇಗೆ ಇದೆ ಎಂಬುದು ನಮಗೆಲ್ಲ ಗೊತ್ತಿದೆ. ಮಾನ್ಯರೇ, ಈ ಅಂಕಿ ಅಂಶಗಳಿಂದ ವರುಷ ವರುಷಕ್ಕೆ ಈ ಪ್ರಾಂತದ ಹಣಕಾಸಿನ ಪರಿಸ್ಥಿತಿಯು ಹದಗೆಡುತ್ತಾ ನಡೆದಿರುವುದನ್ನು ತಾವು ಕಾಣುತ್ತೀರಿ ಮತ್ತು ಮಾನ್ಯರೇ, ನಾನು ನಿವೇದಿಸುವುದೇನೆಂದರೆ ಸರಕಾರದ ಬದ್ಧತೆಗಳಿಗೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ನಿಜವಾಗಿಯೂ ಈ ಪರಿಸ್ಥಿತಿಯು ತುಂಬಾ ಕಳವಳಕಾರಿ ಆಗುತ್ತದೆ. ಮಾನ್ಯರೆ, ಸಾಲದ ಹೊರೆಯನ್ನು ಆದಷ್ಟು ಬೇಗನೇ ತೀರಿಸಬೇಕಾಗುತ್ತದೆ. ಆ ಎಲ್ಲ ಸಾಲವನ್ನೂ ಮರುಪಾವತಿ ಮಾಡಲು ಯಾವುದಾದರೂ ಒಂದು ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ಈಗಾಗಲೇ ಖಾಲಿಯಾಗಿರುವ ಪ್ರಾಂತದ ಹಣಕಾಸಿನ ಪರಿಸ್ಥಿತಿಯ ಮೇಲೆ ಹೆಚ್ಚಿನ ಭಾರವನ್ನು ಇದು ಹೇರಿಯೇ ಹೇರುವುದು. ಮಾನ್ಯರೇ, ಈ ಪರಿಷತ್ತು ಮತ್ತು ಸರಕಾರವು ಎಲ್ಲರಿಗೂ ಸಾರ್ವತ್ರಿಕ ಕಡ್ಡಾಯ ಶಿಕ್ಷಣ ಕೊಡುವ ಹೊಣೆಯನ್ನು ವಹಿಸಿಕೊಂಡಿವೆ. ಈ ಪರಿಷತ್ತು ಮತ್ತು ಸರಕಾರವು ಪಾನ ಪ್ರತಿಬಂಧ ನೀತಿಯನ್ನು ಜಾರಿಗೊಳಿಸಲು ಬದ್ಧವಾಗಿವೆ. ಈ ಮೂರು ಬಾಬುಗಳು ಈ ಪ್ರಾಂತದ ಹಣಕಾಸಿನ ಮೇಲೆ ತುಂಬಾ ಹೆಚ್ಚಿನ ಭಾರವನ್ನು ಉಂಟು ಮಾಡುತ್ತವೆ ಎಂಬುದನ್ನು ಸರಕಾರದ ಯಾವುದೇ ಗೌರವಾನ್ವಿತ ಸದಸ್ಯನು ಅಲ್ಲಗಳೆಯಬಹುದೆಂದು ನಾನು ಭಾವಿಸುವುದಿಲ್ಲ. ಈ ಎಲ್ಲ ಬಾಬುಗಳಿಲ್ಲದೆಯೇ ನಮ್ಮ ಹಣಕಾಸಿನ ಪರಿಸ್ಥಿತಿಯು ವರುಷ ವರುಷಕ್ಕೆ ಹಾಳಾಗುತ್ತಿರುವಾಗ ಈ ಬಾಬುಗಳಿಗೆ ಒಂದು ವ್ಯಾವಹಾರಿಕ ಆಕಾರವನ್ನು ನಾವು ಕೊಡುವಾಗ ಪರಿಸ್ಥಿತಿಯು ಎಂಥದಿರಬಹುದೆಂಬ ಬಗ್ಗೆ ನನಗೆ ಕಲ್ಪನೆ ಮಾಡಲು ಸಹ ಆಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿರುವಾಗ ಈ ವಿಷಯವು ಹಣಕಾಸು ಸದಸ್ಯರಿಗೆ ಯಾವುದೇ ರೀತಿಯ ಚಿಂತೆಯನ್ನೂ ಉಂಟು ಮಾಡಿರುವಂತೆ ಕಾಣುವುದಿಲ್ಲ ಎಂಬುದು ನನಗೆ ತುಂಬಾ ಸೋಜಿಗವನ್ನುಂಟು ಮಾಡುತ್ತದೆ. ಈ ಎಲ್ಲ ಹೊಣೆಗಳ ಕಲ್ಪನೆ ತಮಗಿದೆಯೇ ಎಂಬುದನ್ನು ಅವರು ತಿಳಿಯಗೊಟ್ಟಿಲ್ಲ. ಅವರು ಸಲ್ಲಿಸಿದ ಹಣಕಾಸಿನ ವಿವರಣೆಯಲ್ಲಿ ತನಗೆ ಈ ಹೊಣೆಗಳ ಬಗ್ಗೆ ತಿಳುವಳಿಕೆ ಇದೆ ಎಂಬುದನ್ನು ಅವರು ತೋರಿಸಿಲ್ಲ. ನಾನು ಹಾಗೆ ಹೇಳಬಹುದಾದರೆ, ಅವರು ಕೇವಲ ಕೈಯಿಂದ ಬಾಯಿಗೆ ಮಾತ್ರ ಎಂಬ ಸಿದ್ಧಾಂತವನ್ನು ಅಂದರೆ ನಾಳೆ ಏನೆಂಬ ಬಗ್ಗೆ ಚಿಂತಿಸದೆ ಇಂದಿನ ಬಗ್ಗೆ ಮಾತ್ರ ಕಾಳಜಿ ಎಂಬ ನೀತಿಯನ್ನು ಮಾತ್ರ ಅನುಸರಿಸುತ್ತಿದ್ದಾರೆ. ಭವಿಷ್ಯದ ಪರಿಸ್ಥಿತಿಯ ಅಗತ್ಯತೆಗಳಿಗಾಗಿ ಯಾವುದೇ ಒಂದು ಸಾಮಾನ್ಯ ನೀತಿಯ ರೂಪರೇಷೆಯೂ ಇಲ್ಲ. "ನನ್ನ ಅನಂತರ ಪ್ರಳಯ" ಎಂಬುದು ಅವರ ಮಾರ್ಗದರ್ಶಿ ನುಡಿಯಾಗಿವೆ ಎಂದು ನನಗೆ ಅನ್ನಿಸುತ್ತದೆ. ಆಯವ್ಯಯ ಪತ್ರದಲ್ಲಿನ ಕೊರತೆಯನ್ನು ಮಾತ್ರ ತುಂಬಲು ಅವರು ಪ್ರಯತ್ನಿಸುತ್ತಿದ್ದಾರೆ.

ಬರಗಾಲ ವಿಮಾ ಅನುದಾನದಲ್ಲಿ ಕಡಿತ ಮಾಡುವುದರಿಂದ ಮತ್ತು ಮೆಸ್ಟನ್ ದೇಣಿಗೆಯಿಂದ ಎಷ್ಟು ಪಡೆದುಕೊಳ್ಳಬಹುದೆಂಬುದನ್ನು ಆಧರಿಸಿ ಅವರು ಲೆಕ್ಕ ಹಾಕುತ್ತಿದ್ದಾರೆ. ಆದರೆ ಈ ಅತ್ಯಲ್ಪ ಮೊತ್ತಗಳು ನಿಜವಾಗಿಯೂ ಪ್ರಾಂತದ ಹಣಕಾಸಿನ ಪರಿಸ್ಥಿತಿಯನ್ನು ಸ್ಥಿರಗೊಳಿಸುವಲ್ಲಿ ನಮ್ಮನ್ನು ಎಷ್ಟು ದೂರ ಒಯ್ಯಬಲ್ಲವು ಎಂದು ನಾನು ಅವರನ್ನು ಗಂಭೀರವಾಗಿ ಪ್ರಶ್ನಿಸುತ್ತೇನೆ.

ಮಾನ್ಯರೇ, ಅವುಗಳು ಅಂಥದನ್ನು ಮಾಡಬಲ್ಲವು ಎಂದು ನಿರೀಕ್ಷಿಸುವುದು ತಪ್ಪಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಅಥವಾ ಈ ಪ್ರಾಂತದ ಆಡಳಿತದಲ್ಲಿ ಮಿತವ್ಯಯಕ್ಕೆ ಸಾಕಷ್ಟು ಸಾಧ್ಯತೆಗಳಿವೆ ಮತ್ತು ಅವು ನಮ್ಮನ್ನು ಮುಂದೆ ಮುಂದೆ ಒಯ್ಯಬಲ್ಲವು ಎಂಬ ಭರವಸೆಯನ್ನು ಗೌರವಾನ್ವಿತ ಹಣಕಾಸು ಸದಸ್ಯರು ನಮಗೆ ಕೊಡಬೇಕು. ಅಥವಾ ಕರ ವಿಧಿಸುವುದನ್ನು ಅನುಸರಿಸದ ಹೊರತು ನಮಗೆ ಬೇಕಾಗಿರುವುದನ್ನು ನಾವು ಪಡೆದುಕೊಳ್ಳಲಾರೆವು ಎನ್ನುವುದನ್ನಾದರೂ ಹೇಳಬೇಕು. ನಿನ್ನೆ ಸನ್ಮಾನ್ಯ ರಾಜ್ಯಪಾಲರು (ಗೌವರ್ನರರು) ಮಾಡಿದ ಭಾಷಣವನ್ನು ನಾನು ಗೌರವಪೂರ್ವಕ ಉಲ್ಲೇಖಿಸುತ್ತೇನೆ. ತಮ್ಮ ಆ ಭಾಷಣದಲ್ಲಿ ಸನ್ಮಾನ್ಯ ರಾಜ್ಯಪಾಲರು ವಿಧಾನ ಪರಿಷತ್ತೇ ಕರಾಕರಣೆಗೆ ಹೊಣೆಗಾರವಾಗಿರುತ್ತದೆ ಎಂದು ಹೇಳಿರುತ್ತಾರೆ. ಅಂದರೆ ಅವಶ್ಯವಿರುವಂಥ ಕರವನ್ನು ವಿಧಿಸುವುದು ಅದರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ. ವಿಧಾನ ಪರಿಷತ್ತಿಗೆ ಕರಾಕರಣೆ ಮಾಡುವ ಅಧಿಕಾರವಿರುತ್ತದೆ ಎಂಬುದನ್ನು ಒಪ್ಪುತ್ತೇನೆ. ಆದರೆ ಆ ವಿಷಯಕ್ಕೆ ಸಂಬಂಧ ಪಟ್ಟಂತೆ ಪ್ರಾರಂಭವು ಸರಕಾರದಿಂದಲೇ ಬರಬೇಕು. ತನಗೆ ಯಾವ ರೀತಿಯ ಕರ ಬೇಕೆಂಬುದನ್ನು ಸರಕಾರವೇ ಸೂಚಿಸಬೇಕು. ಸರಕಾರವು ಅದನ್ನು ಮಾಡಿದೆಯೇ? ತದ್ವಿರುದ್ಧವಾಗಿ ಸರಕಾರವು ಸಂಪೂರ್ಣ ವಾಗಿ ಮೌನವನ್ನು ವಹಿಸಿದೆ. ತಾನು ಏನು ಮಾಡಬೇಕೆನ್ನುತ್ತೇನೆ ಎನ್ನುವುದನ್ನು ಹೇಳಲೂ ಸಹ ಅದು ಇಚ್ಛಿಸುವುದಿಲ್ಲ. ಒಂದು ಯೋಜನೆಯನ್ನು ರೂಪಿಸಲು ಸರಕಾರದ ಹತ್ತಿರ ಆವಶ್ಯಕ ಮಾಹಿತಿ ಇಲ್ಲ ಎಂದು ಹೇಳಲಾಗದು. ಕರಾಕರಣೆ ವಿಚಾರಣಾ ಸಮಿತಿಯು (Taxation Enquiry Committee) ಹೊಸ ಮತ್ತು ಯಥೋಚಿತವಾದ ಹಣಕಾಸಿನ ನೀತಿಯನ್ನು ಪ್ರಾರಂಭಿಸಲು ಲೆಕ್ಕವಿಲ್ಲದಷ್ಟು ಶಿಫಾರಸುಗಳೊಂದಿಗೆ ತನ್ನ ವಿವರವಾದ ವರದಿಯನ್ನು ಒಪ್ಪಿಸಿದೆ. ಅವುಗಳು ಹಣಕಾಸು ಸದಸ್ಯರ ಮೇಜಿನ ಮೇಲೆ ಬಿದ್ದಿದೆ ಎಂದು ನನಗೆ ಖಚಿತವಾಗಿದೆ. ಆದರೆ ಆ ವಿಷಯಕ್ಕೆ ಸಂಬಂಧಪಟ್ಟಂತೆ ಏನನ್ನೂ ಮಾಡಿಲ್ಲ ಎಂಬುದು ಕಂಡುಬರುತ್ತದೆ. ಮಾನ್ಯರೇ, ಪರಿಸ್ಥಿತಿಯು ನಿಜವಾಗಿಯೂ ಗಂಭೀರವಾದುದಾಗಿದೆ ಮತ್ತು ಗೌರವಾನ್ವಿತ ಹಣಕಾಸು ಸದಸ್ಯರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಮುತ್ಸದ್ಧಿಯಂತೆ ವ್ಯವಹರಿಸಲು ನಿಶ್ಚಯಿಸಬೇಕು.

# ಆಯವ್ಯಯ ಪತ್ರ: ೩*

ಡಾ. ಬಿ. ಆರ್. ಅಂಬೇಡ್ಕರ್: (ಮುಂಬಯಿ ನಗರ) ಸನ್ಮಾನ್ಯ ಸಭಾಧ್ಯಕ್ಷರೇ, (Speaker) ನನ್ನ ಸ್ನೇಹಿತರಾದ ಗೌರವಾನ್ವಿತ ಹಣಕಾಸು ಸದಸ್ಯರು ಮಂಡಿಸಿದ ಎರಡನೆಯ ಹಣಕಾಸಿನ ವಿವರಣೆ ಇದಾಗಿದೆ. ಆದ್ದರಿಂದ ಕೂಲಂಕಷ ಪರೀಕ್ಷೆಗೆ ಮತ್ತು ತೀವ್ರತರ ಪರೀಕ್ಷೆಗೆ ಈ ಆಯವ್ಯಯ ಪತ್ರವನ್ನು ಒಳಪಡಿಸಬೇಕೆಂದು ಇಚ್ಛಿಸುವುದು ಸ್ವಾಭಾವಿಕವಾದುದು ಆಗಿರುತ್ತದೆ. ಈ ಆಯವ್ಯಯ ಪತ್ರದ ಬಗ್ಗೆ ನಾನು ಏನು ಭಾವಿಸುತ್ತೇನೆ ಎನ್ನುವುದನ್ನು ಹೇಳುವುದಕ್ಕಿಂತ ಮುಂಚೆ, ಆ ಬಗ್ಗೆ ಇಲ್ಲಿಯವರೆಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಈ ಸದನದ ಸದಸ್ಯರೆಲ್ಲರೂ ಹೊಗಳಿರುವ ಸಂಗತಿಯನ್ನು ನಾನು ಮರೆಯ ಲಾರೆನು. ಗೌರವಾನ್ವಿತ ಹಣಕಾಸು ಸಚಿವರು ಈಗ ಮಾತನಾಡಿದ ಎಲ್ಲರಿಂದಲೂ ತಮ್ಮ ಕಾರ್ಯದ ಬಗ್ಗೆ ಹೊಗಳಿಕೆಯನ್ನು ಪಡೆದುದಕ್ಕೆ ಅವರಿಗೆ ಸ್ವಲ್ಪಮಟ್ಟಿಗೆ ಸಮಾಧಾನವಾಗಿರಬೇಕು. ನನಗಿಂತ ಮುಂಚೆ ಮಾತನಾಡಿದ ಭಾಷಣಕಾರರಿಂದ ಈ ಆಯವ್ಯಯ ಪತ್ರವು ಹೊಗಳಿಸಿಕೊಂಡಂತೆ ನಿಜವಾಗಿಯೂ ಇದು ಅಂಥ ಹೊಗಳಿಕೆಗೆ ಪಾತ್ರವಾಗಿದೆಯೋ ಎಂಬುದು ನನಗೆ ತುಂಬಾ ಸೋಜಿಗವನ್ನುಂಟುಮಾಡುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳಬೇಕು. ಈಗ ಮಂಡಿಸಲಾಗಿರುವ ಹಣಕಾಸಿನ ಹೇಳಿಕೆಯ ಬಗ್ಗೆ ಪರ್ಯಾಲೋಚನೆ ಮಾಡಲು ನಾನು ಕೆಲವು ಕಾಲ ವಿನಿಯೋಗಿಸಿದ್ದೇನೆ. ಮತ್ತು ಈ ಆಯವ್ಯಯ ಪತ್ರವು ನಾನು ಇಲ್ಲಿಯವರೆಗೆ ನೋಡಿದವುಗಳಲ್ಲಿ ತೀರ ಕನಿಷ್ಠವಾದುದು ಮತ್ತು ಅರ್ಥಹೀನವಾದುದು ಆಗಿದೆ. ಅಷ್ಟೇ ಅಲ್ಲದೆ, ಅದು ಪೊಳ್ಳು ಮತ್ತು ಸತ್ವಹೀನವಾದುದು ಆಗಿದೆ ಎಂದು ಹೇಳುವುದಕ್ಕೆ ನನಗೆ ಯಾವುದೇ ಅನುಮಾನವಿಲ್ಲ. ಅದು ಭವಿಷ್ಯದ ದೃಷ್ಟಿಯನ್ನು ಹೊಂದಿಲ್ಲ ಮತ್ತು ಈ ರಾಜ್ಯವು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನಿಸುವುದಿಲ್ಲ. ಇದು ಒಂದಿಷ್ಟು ಮಟ್ಟಿಗೆ ಅತಿಶಯೋಕ್ತಿ ಎಂದು ತೋರಬಹುದು. ಆದರೆ ನಾನು ಹೇಳುತ್ತಿರುವುದಕ್ಕೆ ಸಮರ್ಥನೆ ಒದಗಿಸಲಿದ್ದೇನೆ.

ಮಾನ್ಯರೇ, ಒಂದು ಬಾಬಿಗಾಗಿ ನಾನು ಸರಕಾರವನ್ನು ಸ್ತುತಿಸಬೇಕಾಗಬಹುದು. ಆದರೆ ದುರ್ದೈವದಿಂದಾಗಿ ಆ ಪ್ರಶಂಸೆಯು ನನ್ನ ಸ್ನೇಹಿತರಿಗೆ ಸಲ್ಲುವುದಿಲ್ಲ. ಅದು ಗೌರವಾನ್ವಿತ ಗೃಹಮಂತ್ರಿಯವರಿಗೆ ಸಲ್ಲುತ್ತದೆ. ಹೊಸ ಯೋಜನೆಯಲ್ಲಿನ ೪೫ನೇ ನಂಬರಿನ ಬಾಬು ಪೋಲೀಸ್ ಪಡೆಯನ್ನು ಬಲಗೊಳಿಸುವುದಕ್ಕಾಗಿ ರೂಪಾಯಿ ೨೬,೨೧೭–೦೦ಗಳ ಹೆಚ್ಚಿನ ವೆಚ್ಚವನ್ನು ತೋರಿಸುತ್ತದೆ. ಮಾನ್ಯರೇ, ಎದುರು ಬದಿಯಲ್ಲಿ ಕುಳಿತ ಸದಸ್ಯರ ಮತ್ತು ಅವರು ಅಧಿಕಾರ ವಹಿಸಿಕೊಳ್ಳುವುದಕ್ಕಿಂತ ಮತ್ತು ಅವರು ಸರಕಾರದ ಒಂದು ಭಾಗವಾಗುವುದಕ್ಕಿಂತ ಮುಂಚೆ ಪೋಲೀಸ್ ಪಡೆಯ ನಡುವಣ ಸಂಬಂಧ ಚೆನ್ನಾಗಿ ತಿಳಿದ ವಿಷಯವೇ ಆಗಿದೆ. ನಾನೇ ಸ್ವತಃ ನೋಡಿದ ಘಟನೆಯ ನೆನಪು ನನಗೆ ಚೆನ್ನಾಗಿ ಇದೆ. ಬಿಳಿ ಬಟ್ಟೆ ಧರಿಸಿದ ಹಲವು ಜನರಿಗೆ 'ಪೀಲಿ ಟೋಪಿ ಹಾಯ್ ಹಾಯ್' ಎಂದು ಕೂಗುತ್ತಾ ಪೋಲೀಸರನ್ನು

---

ಮುಂಬಯಿ ವಿಧಾನ ಸಭೆಯ ಚರ್ಚೆಗಳು ಸಂಪುಟ–೩. ಪುಟಗಳು ೧೬೮–೭೯ ದಿನಾಂಕ ೨ನೇ ಮಾರ್ಚ್ ೧೯೩೮. ೧೯೩೭ರಲ್ಲಿ ಡಾ. ಅಂಬೇಡ್ಕರ್ ಅವರನ್ನು ಮುಂಬಯಿಯ ವಿಧಾನಸಭೆಗೆ ಚುನಾಯಿಸಲಾಯಿತು. ಮತ್ತು ಸೋಮವಾರ ೧೯ನೇ ಜುಲೈ ೧೯೩೭ರಲ್ಲಿ ಅವರು ವಿಧಾನಸಭೆಯ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು.

ಸ್ಥಳದಿಂದ ಸ್ಥಳಕ್ಕೆ ಹೋಗಿ ಬೆನ್ನು ಹತ್ತಿದುದ್ದನ್ನು ನಾನೇ ಕಂಡಿದ್ದೇನೆ. ಇದು ಒಂದೊಮ್ಮೆ ಯಾರನ್ನು ಜನರ ಮೇಲೆ ದಬ್ಬಾಳಿಕೆ ಮಾಡಲು ಮತ್ತು ನಿರಂಕುಶ ಆಡಳಿತ ನಡೆಸಲು ಒಂದು ಉಪಕರಣವೆಂದು ತಿಳಿಯಲಾಗುತ್ತಿತ್ತೋ ಅವರ ಮತ್ತು ಕಾಂಗ್ರೆಸ್ ಪಕ್ಷದ ನಡುವೆ ಇಂಥ "ಕಮರಾದೇವಿ" ಸಂಬಂಧವು ಸ್ಥಾಪಿತವಾಗಿರುವುದು ನಿಜವಾಗಿಯೂ, ನಾನು ಹಾಗೆ ಹೇಳಬಹುದಾದರೆ ಅಂಥ ಹಣವನ್ನು ಕೇಳಿ ಪಡೆದುಕೊಂಡ ಗೃಹ ಸಚಿವರನ್ನು ಅಭಿನಂದಿಸುವ ವಿಷಯವಾಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಅವರಿಗೆ ಪೊಲೀಸ್ ಪಡೆಯ ಅವಶ್ಯಕತೆ ಇದೆ. ಅವರ ನಿಷ್ಠೆಯೂ ಅವರಿಗೆ ಬೇಕು. ಏಕೆಂದರೆ ಅವರು ಈಗ ಪೊಲೀಸ್ ಪಡೆಯೊಂದಿಗೆ ಯಾವ ರೀತಿಯಲ್ಲಿ ತಮ್ಮನ್ನೇ ತೊಡಗಿಸಿಕೊಂಡಿದ್ದಾರೆ ಎಂಬುದು ನಮಗೆ ಗೊತ್ತಿದೆ ಮತ್ತು ಯಾವ ಕಾರಣಕ್ಕಾಗಿ ಪೊಲೀಸ್ ಪಡೆಯನ್ನು ನಾವು ಉಪಯೋಗಿಸಿಕೊಳ್ಳಬಹುದು ಎಂಬುದಕ್ಕೆ ಇತ್ತೀಚಿನ ಒಂದು ದೃಷ್ಟಾಂತವೂ ಇದೆ. ಧರಾವಿಯಲ್ಲಿ ನಡೆದ ಗೋಲಿಬಾರನ್ನು ನಾನು ಉಲ್ಲೇಖಿಸುತ್ತೇನೆ. ನಾನು ಇಲ್ಲಿಯವರೆಗೆ ನೋಡಿರುವಂತೆ, ಕಾರ್ಮಿಕ ಕಲ್ಯಾಣದ ಬೆಳವಣಿಗೆಯ ಬಗ್ಗೆ ಏನೂ ಕಾಳಜಿ ವಹಿಸದ ಸದ್ಯದ ಸರಕಾರವು ಕಾರ್ಮಿಕರ ವರ್ಗದವರ ವಿರುದ್ಧ ಪೊಲೀಸ್ ಪಡೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬಳಸಬಹುದು. ಕಾಂಗ್ರೆಸ್ ಪಕ್ಷವು ತನ್ನ ನಿಜರೂಪದಲ್ಲಿ ಹೊರ ಬಂದಿರುವುದು ಅಭಿನಂದನೀಯವಾದುದು ಆಗಿರುತ್ತದೆ. ಇಷ್ಟಕ್ಕೇನೇ ನಾನು ನಿಲ್ಲಬೇಕು. ಯಾಕೆಂದರೆ ಆಯವ್ಯಯ ಪತ್ರದ ಉಳಿದ ಭಾಗದಲ್ಲಿ ಸರಕಾರವು ಹೆಮ್ಮೆಪಡುವಂಥ ಯಾವುದೇ ವಿಷಯವಿಲ್ಲ. ಮಾನ್ಯರೇ, ಈ ಸದನದ ಗಮನವನ್ನು ಸೆಳೆಯಲು ನಾನು ಇಚ್ಛಿಸುವ ಪ್ರಥಮ ವಿಷಯವೆಂದರೆ ನನ್ನ ಅಭಿಪ್ರಾಯದಂತೆ ಹಣಕಾಸಿಗೆ ಸಂಬಂಧಿಸಿದ ಅನುಚಿತ ವ್ಯವಹರಣೆಯಾಗಿರುತ್ತದೆ. ಗೌರವಾನ್ವಿತ ಹಣಕಾಸು ಸಚಿವರು ಮಂಡಿಸಿದ ಹಣಕಾಸಿನ ವಿವರಣೆಯಲ್ಲಿ ಆಯ್ಕೆ ಮಾಡಿಕೊಂಡ ಐದು ಬಾಬುಗಳು ಈಗ ನನ್ನ ಮುಂದಿವೆ. ಅವೆಂದರೆ ೫೩ನೇ ಬಾಬು: ಅದು ಶಿಕ್ಷಣಕ್ಕೆ ೨೪ ಲಕ್ಷ ರೂಪಾಯಿಗಳನ್ನು ಒದಗಿಸುತ್ತವೆ. ೪೬ನೇ ಬಾಬು: ಅದು ಸ್ವಯಂ ಸೇವಾ ಪೊಲೀಸ್ ಪಡೆಗಾಗಿ ರೂ. ೨೫,೦೦೦–೦೦ಗಳನ್ನು ಒದಗಿಸುತ್ತದೆ. ೧೦೫ನೇ ಬಾಬು: ಅದು ಗ್ರಾಮ ಪಂಚಾಯತಿಗಳಿಗಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸುತ್ತದೆ. ೬೭ನೇ ಬಾಬು: ಅದು ಯುನಾನಿ ಹಕೀಮರ ತರಬೇತಿ ಎಂದು ಕರೆಯಲಾಗುವ ಬಾಬಿಗಾಗಿ ರೂ. ೮೦,೦೦೦–೦೦ಗಳನ್ನು ಒದಗಿಸುತ್ತದೆ. ಮಾನ್ಯರೇ, ಈಗ ನಮಗೆಲ್ಲ ಪೂರೈಸಿದ ನೀಲಿ ಹೊತ್ತಿಗೆಯನ್ನು ನೋಡಿದಾಗ, ಹಣಕಾಸಿನ ಪ್ರಸ್ತಾಪದಲ್ಲಿ ಸೇರಿಸಲಾಗಿರುವ ಈ ಯಾವ ಬಾಬುಗಳ ಬಗ್ಗೆಯೂ ಯಾವ ಯೋಜನೆಗಳೂ ಅಸ್ತಿತ್ವದಲ್ಲಿ ಇಲ್ಲ ಎಂದು ಸರಕಾರವು ಒಪ್ಪಿರುವುದು ಕಂಡುಬರುತ್ತದೆ. ಖರ್ಚು ಮಾಡಬೇಕೆಂದು ಉದ್ದೇಶಿಸಲಾಗಿರುವ ಈ ಎಲ್ಲ ಬಾಬುಗಳು ಇನ್ನೂ ಶೈವಾವಸ್ಥೆಯಲ್ಲಿಯೇ ಇರುವುದು ಅವರಿಗೇ ತಿಳಿದಿಲ್ಲ. ಎರಡನೆಯ ವಿಷಯವೆಂದರೆ ಯಾವ ಆಧಾರದ ಮೇಲೆ ಈ ವೆಚ್ಚಗಳನ್ನು ಮಾಡಬೇಕು ಅನ್ನುವ ಬಗ್ಗೆ ವಿಧಾಯೀ ಕ್ರಮಗಳನ್ನು ಪಾಸು ಮಾಡಿಲ್ಲ. ಈ ಸದನದಿಂದ ಮುಖ್ಯ ಬಾಬುಗಳೆಂದು ಹೆಸರಿಸಲಾಗಿರುವ ಶಿಕ್ಷಣ, ಪೊಲೀಸ್ ಇತ್ಯಾದಿಗಳ ವ್ಯಾಪ್ತಿಯಲ್ಲಿ ಬರುವ ಯಾವುದೇ ಸಂಗತಿಯ ಮೇಲೆ ಸರಕಾರದ ಸದಸ್ಯರು ತಮ್ಮ ಮನಬಂದಂತೆ ಖರ್ಚು ಮಾಡಲು ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಈ ಸದನವನ್ನು ಕೋರುತ್ತಿರುವ ಒಟ್ಟು ವೆಚ್ಚವು ೩೧ ಲಕ್ಷ ರೂಪಾಯಿಗಳಷ್ಟಾಗುತ್ತಿದೆ. ಈಗ ಇರುವ ಆಯವ್ಯಯಕ್ಕೆ ಗೌರವಾನ್ವಿತ ಹಣಕಾಸು ಸಚಿವರು ಹೊಸದಾಗಿ ಸೇರಿಸಿರುವ ಬಾಬುಗಳ ಒಟ್ಟು ಮೊತ್ತವು ೧.೧೬ ಲಕ್ಷದಷ್ಟಾಗುತ್ತಿದೆ ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಂಡಾಗ ಸರಕಾರವು ಈ ಹಣವನ್ನು ಈ ಸದನದಿಂದ ಹೇಗಾದರೂ ಎತ್ತಿಕೊಂಡು ಅದನ್ನು ತನ್ನ ಮನಬಂದ ರೀತಿಯಲ್ಲಿ ಖರ್ಚು ಮಾಡಲು

ಉದ್ದೇಶಿಸಿದೆ ಎಂಬುದು ಕಂಡುಬರದಿರದು. ಮಾನ್ಯರೇ, ಸರಕಾರವು ಸತತವಾಗಿ ಈ ಸದನದ ವಿಶೇಷಾಧಿಕಾರಗಳ ಮೇಲೆ ಆಕ್ರಮಣ ಮಾಡುತ್ತಲೇ ಬಂದಿದೆ ಎಂದು ಹೇಳಲೇಬೇಕಾಗುತ್ತದೆ. ನನ್ನ ಸ್ನೇಹಿತ ಗೌರವಾನ್ವಿತ ಗೃಹಮಂತ್ರಿಯವರು ದುರ್ದೈವದಿಂದ ಇಲ್ಲಿ ಇಲ್ಲ ಮತ್ತು ಅವರೇ ಹೊಣೆಗಾರರಾಗಿರುವ ಒಂದೆರಡು ವಿಷಯಗಳಿಗೆ ಸಂಬಂಧಿಸಿದಂತೆ ನಾನು ಉಲ್ಲೇಖಿಸಬೇಕಾಗಿರುವುದಕ್ಕಾಗಿ ನಾನು ನೊಂದುಕೊಳ್ಳುತ್ತೇನೆ. ಕಾಂಗ್ರೆಸ್ ಸರಕಾರವು ಅಧಿಕಾರ ವಹಿಸಿಕೊಂಡಾಗಿನಿಂದ, ಈ ಸದನವು ಪಾಸು ಮಾಡಿರಬಹುದಾದ ಯಾವುದೇ ನಿರ್ದಿಷ್ಟ ಕಾನೂನು ಮೇರೆಗೆ ಸರಕಾರವು ರಚಿಸಬಹುದಾದ ನಿಯಮಗಳ ಮೇಲೆ ತೀರ್ಪು ಕೊಡಲು ಈ ಸದನಕ್ಕೆ ಯಾವುದೇ ಹಕ್ಕು ಇಲ್ಲವೆಂದು ಗೌರವಾನ್ವಿತ ಗೃಹಮಂತ್ರಿಗಳು ಒತ್ತಾಯಿಸುತ್ತಲೇ ಬಂದಿದ್ದಾರೆ. ಮಾನ್ಯರೇ, ಇದು ಈ ಸದನದ ಅಧಿಕಾರದ ಮೇಲೆ ಮಾಡಿದ ಆಕ್ರಮಣವೇ ಆಗಿದೆ ಎಂದು ಹೇಳುತ್ತೇನೆ. ನಿಯಮಗಳು ನೂರಾರು ಇರುತ್ತವೆ ಎಂದು ನಾನು ಬಲ್ಲೆ, ಕೇವಲ ಆಡಳಿತ ನೀತಿಯನ್ನು ಕಾರ್ಯಗತಗೊಳಿಸುವ ನಿಯಮಗಳು ಇರುತ್ತವೆ ಮತ್ತು ನಿಯಮವು ಎಲ್ಲೆಲ್ಲಿ ಕಾನೂನಿನ ಭಾಗವೇ ಆಗಿರುತ್ತದೆಯೋ ಆಗ ಮೂಲ ಕಾನೂನಿನ ಮೇಲೆಯೂ ತೀರ್ಪು ಕೊಡಲು ಅದಕ್ಕೆ ಅಧಿಕಾರವಿರುತ್ತದೆ ಎಂದು ನಾನು ಸಾಧಿಸಬಯಸುತ್ತೇನೆ ಮತ್ತು ಹಾಗೆ ಒತ್ತಾಯಿಸುತ್ತೇನೆ ಮತ್ತು ಕಾರ್ಯಾಂಗೀಯ ಸರಕಾರವು ಈ ಕ್ಷೇತ್ರವನ್ನು ತನ್ನದಾಗಿ ಹೇಗೆ ಮಾಡಿಕೊಳ್ಳಬಲ್ಲದು ಎಂಬುದು ನನಗೆ ತಿಳಿಯದಂತಾಗಿದೆ. ಆದರೆ ಕಾಂಗ್ರೆಸ್ ಸರಕಾರವು ಹಾಗೆ ಮಾಡಿದೆ. ಸದಾಕಾಲವೂ ಅದು ಸದನದ ಈ ವಿಶೇಷ ಅಧಿಕಾರದ ಮೇಲೆ ಆಕ್ರಮಣ ಮಾಡಿದೆ. ಹಣ ಎತ್ತುವುದು ಮತ್ತು ಖಾಲಿ ಚೆಕ್ಕನ್ನು ಕೇಳುವುದು ಈ ಸದನದ ವಿಶೇಷ ಅಧಿಕಾರದ ಮೇಲೆ ಮತ್ತೊಂದು ಒಳದಾರಿಯಾಗಿದೆ ಮತ್ತು ಅತಿಕ್ರಮಣವಾಗಿದೆ ಎಂದು ನಾನು ಭಾವಿಸುತ್ತೇನೆ. ಮಾನ್ಯರೇ, ಈಗ ಏನು ಪರಿಸ್ಥಿತಿ ಇದೆ ನನಗೆ ತಿಳಿಯದು, ಆದರೆ ಹಳೆಯ ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮದ ಮೇರೆಗೆ ರಚಿಸಲಾಗಿರುವ ಡಿವೊಲ್ಯೂಶನ್ ನಿಯಮಗಳು (Devolution Rules) ಎಂದು ಕರೆಯಲಾಗುತ್ತಿರುವ ನಿಯಮಗಳ ಪರಿಚಯ ನನಗೆ ಸಾಕಷ್ಟು ಇರುತ್ತದೆ. ಮತ್ತು ಈ ನಿಯಮಗಳ ಒಂದು ಭಾಗವು ಹಣಕಾಸು ಇಲಾಖೆಯ ರಚನೆ ಎಂದು ಕರೆಯಲಾಗುತ್ತಿರುವ ನಿಯಮಗಳನ್ನು ಒಳಗೊಂಡಿರುತ್ತದೆ ಎನ್ನುವುದನ್ನು ಹೇಳಿದರೆ ನನ್ನ ಗೌರವಾನ್ವಿತ ಸ್ನೇಹಿತ ಹಣಕಾಸು ಸಚಿವರು ಸಹಿಸಿಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ. ಹಣಕಾಸಿನ ಇಲಾಖೆಯು ವರ್ಗಾಯಿಸಲಾದ ಇಲಾಖೆ ಎಂದು ಭಾವಿಸಬಾರದು ಎಂಬುದು ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮದ ಮೇರೆಗೆ ಗುರುತಿಸಲಾಗಿರುವ ಒಂದು ಮೂಲಭೂತ ತತ್ವವಾಗಿತ್ತು. ಹಣಕಾಸು ಇಲಾಖೆಯನ್ನು ವರ್ಗಾಯಿಸಲಾದ ಇಲಾಖೆಯೆಂದು ಭಾವಿಸಬಾರದೆಂಬುದಕ್ಕೆ ಕೊಟ್ಟ ಕಾರಣವು ಒಪ್ಪುವಂಥದಾಗಿತ್ತು. ಹಣಕಾಸಿನ ಇಲಾಖೆಯು ಕಾವಲು ನಾಯಿಯಾಗಿರಬೇಕೆಂದು ಉದ್ದೇಶಿಸಲಾಗಿತ್ತು. ಯಾವುದೇ ನಿರ್ದಿಷ್ಟ ಇಲಾಖೆಯ ಪ್ರಚಾರದಲ್ಲಿರುವ ಯಾವುದೇ ನಿರ್ದಿಷ್ಟ ಮಂತ್ರಿಯು ಹಾಜರುಪಡಿಸಿದ ಎಲ್ಲ ವೆಚ್ಚಗಳನ್ನು ಹಣಕಾಸಿನ ಇಲಾಖೆಯು ಪರೀಕ್ಷಿಸತಕ್ಕುದೆಂದು ಮುಖ್ಯವಾದ ಪ್ರಕಾರ್ಯವು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಕೇಳಲಾಗಿರುವ ಮೊತ್ತವು ಪ್ರಾಂತದ ಹಣಕಾಸಿನ ಪರಿಸ್ಥಿತಿಯನ್ನು ಗಮನಿಸಿ ಅವಶ್ಯವಾದುದೇ ಮತ್ತು ಅದನ್ನು ಮಂಜೂರು ಮಾಡಬಹುದೋ ಎನ್ನುವುದನ್ನು ಸಹ ಗಮನಿಸಬೇಕಾಗಿತ್ತು ಅಲ್ಲದೆ, ಕೇಳಲಾದ ಅನುದಾನವನ್ನು ಸಮುಚಿತವಾಗಿ ವಿಂಗಡಿಸಲಾಗಿತ್ತೇ ಎಂಬುದನ್ನೂ ಪರೀಕ್ಷಿಸಬೇಕಾಗಿತ್ತು.

ಹಳೆಯ ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮ, ೧೯೧೯, ಜಾರಿಯಲ್ಲಿಲ್ಲವಾದರೂ

ಮತ್ತು ಈ ಅಧಿನಿಯಮದ ಮೇರೆಗೆ ರಚಿಸಲಾಗಿರುವ ಡಿವೊಲ್ಯೂಶನ್ ನಿಯಮಗಳಲ್ಲಿ ಹೇಳಲಾಗಿರುವ ತತ್ವಗಳು ಕಾಯಂ ಆದವುಗಳು ಮತ್ತು ಎಲ್ಲಾ ಕಾಲದಲ್ಲೂ ಅನ್ವಯವಾಗುವಂತಹವುಗಳಾಗಿರಬೇಕು ಎಂಬ ಬಗ್ಗೆ ನನಗೆ ವಿಶ್ವಾಸವಿದೆ. ಶಾಸಕಾಂಗವು ಕಾರ್ಯಾಂಗಕ್ಕಿಂತ ಮುಂದುವರೆದು ನಿಯಂತ್ರಣ ವಿಧಾನದ ಒಂದು ಮಹತ್ವದ ಭಾಗವೆಂದು ಹಣಕಾಸನ್ನು ಪರಿಗಣಿಸಿದ ಕಾಲದಿಂದ ಯಾವುದೇ ಮಂತ್ರಿಯು ಯಾವುದೇ ಒಟ್ಟು ಮೊತ್ತದ ಬಗ್ಗೆ ಬೇಡಿಕೆಯಲ್ಲಿ ಸೇರಿಸಬೇಕೆಂದು ಭಾವಿಸಲಾಗಿರುವ ನಿರ್ದಿಷ್ಟ ಸೇವೆಗಳನ್ನು ನಿರ್ದಿಷ್ಟ ಬಾಬುಗಳನ್ನು ಹೇಳದೆ ಶಾಸನ ಸಭೆಯಲ್ಲಿ ಬೇಡಿಕೆಯನ್ನು ಮಂಡಿಸಬಾರದು ಎಂಬುದನ್ನು ಎಲ್ಲ ಕಾಲದಲ್ಲೂ ಒಪ್ಪಲಾಗಿದೆ. ಇದಕ್ಕೆ ಕಾರಣಗಳು ಎರಡು ಬಗೆಯವು. ಹಣವನ್ನು ಯಾವ ಬಾಬುಗಳಿಗಾಗಿ ಖರ್ಚು ಮಾಡಲು ಉದ್ದೇಶಿಸಿದೆ ಎಂಬ ಬಗ್ಗೆ ವಿವರಗಳನ್ನು ಸದನವು ತಿಳಿದಿರಲಿಕ್ಕೇಬೇಕು. ಎರಡನೆಯದಾಗಿ ಲೆಕ್ಕಪತ್ರ ಪರೀಕ್ಷಾ ಇಲಾಖೆಯು ಸದನವು ಮಂಜೂರು ಮಾಡಿದ ಹಣವನ್ನು ಖರ್ಚು ಮಾಡಲಾಗಿ ದೆಯೇ ಎಂಬುದನ್ನೂ ತಿಳಿದುಕೊಳ್ಳುವುದು ಅವಶ್ಯವಾಗಿದೆ. ಮಾನ್ಯರೇ, ನಾನು ಮತ್ತೂ ಹೇಳುವುದೇನೆಂದರೆ ಕೆಲವು ವಿಶಿಷ್ಟ ಬಾಬುಗಳಿಗಾಗಿ ಅಂದರೆ ಯಾವ ಬಾಬುಗಳ ಯುಕ್ತಾಯುಕ್ತತೆಗೆ ಸಂಬಂಧಿಸಿದಂತೆ ಈ ಸದನವು ಎಂದೂ ನಿರ್ಣಯಿಸಿಲ್ಲವೋ ಮತ್ತು ಅವುಗಳ ವಿವರಗಳ ಬಗ್ಗೆ ಸರಕಾರವೇ ದೃಢ ನಿಶ್ಚಯ ವನ್ನು ಮಾಡಿಲ್ಲವೋ ಅವುಗಳಿಗಾಗಿ ತನಗೆ ಖರ್ಚು ಮಾಡಲು ೩೧ ಲಕ್ಷ ರೂಪಾಯಿಗಳು ಬೇಕು ಎಂಬ ಬೇಡಿಕೆಯನ್ನು ಈ ಸದನದ ಮುಂದೆ ಇಡಲು ಸರಕಾರಕ್ಕೆ ಎಷ್ಟು ಧಾರ್ಷ್ಟ್ಯವಿರಬೇಕು. ನಾನು ಹೇಳುವುದೇನೆಂದರೆ ಇಂಥ ಉದ್ಧಟತನ ಕ್ಷಮಾರ್ಹವಾದುದಲ್ಲ. ಅದಕ್ಕೆಂದೇ ನಾನು ಅದನ್ನು ಉದ್ಧಟತನ ಎನ್ನುತ್ತೇನೆ.

ಈಗ ಆಯವ್ಯಯ ಪತ್ರಕ್ಕೇನೆ ಬರೋಣ. ಈ ಆಯವ್ಯಯ ಪತ್ರವು ಒಳಗೊಂಡಿರುವ ಬೇರೆ ಬೇರೆ ಬಾಬುಗಳ ಬಗ್ಗೆ ವಿವರವಾದ ಚರ್ಚೆಗೆ ನಾನು ಹೋಗುವುದಿಲ್ಲ. ಅದು ನನ್ನನ್ನು ತುಂಬಾ ದೂರಕ್ಕೆ ಕೊಂಡೊಯ್ಯುತ್ತದೆ. ಅಲ್ಲದೆ, ಸಾಮಾನ್ಯ ಚರ್ಚೆಯು ಖರ್ಚಿನ ವಿವರವಾದ ಚರ್ಚೆಗೆ ಯುಕ್ತ ಸಂದರ್ಭವೆಂದು ನಾನು ಭಾವಿಸುವುದಿಲ್ಲ. ಆಯವ್ಯಯ ಪತ್ರದ ಸಾಮಾನ್ಯ ರೂಪ ಮತ್ತು ನಾವು ಎದುರಿಸುತ್ತಿರುವ ವಿಶಾಲ ಸಮಸ್ಯೆಗಳ ಬಗ್ಗೆ ಮತ್ತು ಈ ಸಮಸ್ಯೆಗಳನ್ನು ಎದುರಿಸಲು ಹಣಕಾಸಿನ ಮಂತ್ರಿಯವರು ಅಳವಡಿಸಿರುವ ವಿಧಾನಗಳ ಬಗ್ಗೆ ಮಾತ್ರವೇ ನನ್ನನ್ನು ನಾನು ಸೀಮಿತಗೊಳಿಸಿಕೊಳ್ಳುತ್ತೇನೆ. ಪ್ರಥಮವಾಗಿ ಗಮನಿಸಬೇಕಾದ ವಿಷಯವೆಂದರೆ; ಈಗಿರುವ ಆಡಳಿತದ ಚೌಕಟ್ಟಿಗೆ ಜೋಡಿಸಲಾಗಿರುವ ಹೊಸ ಬಾಬುಗಳು ಒಟ್ಟು ರೂ. ೧,೧೬,೬೭,೦೦-೦೦ಗಳ ಮೊತ್ತಕ್ಕೆ ಬರುತ್ತದೆ. ಇಲ್ಲಿರುವ ಪ್ರಶ್ನೆಯೆಂದರೆ ನಮ್ಮ ಚಟುವಟಿಕೆಗಳ ವಿಸ್ತರಣೆಯ ವಾಸ್ತವಿಕತೆಯನ್ನು ಇದು ತೋರಿಸುತ್ತಿದೆಯೇ? ಮಾನ್ಯರೇ, ಈಗ ಈ ಅಂಕಿಯಲ್ಲಿ ನಾವು ಒಂದು ಕಡಿತವನ್ನು ಮಾಡಲೇಬೇಕು. ಅದೇಂದರೆ ರೂ. ೪೮,೧೧,೦೦೦-೦೦ಗಳ ಕಡಿತ. ಖರ್ಚಿನ ಆ ಭಾಗವು ಹಣಕಾಸಿನ ಸಚಿವರು ಒಪ್ಪಿಕೊಂಡಿರುವಂತೆ, ಅನಾವರ್ತಕ ವೆಚ್ಚವಾಗಿರುತ್ತದೆ. ಅಂದರೆ, ಸದ್ಯದ ಅಗತ್ಯಗಳಾದ ಹಂಗಾಮಿ ಬಾಬುಗಳನ್ನು ಅದು ಒಳಗೊಳ್ಳುವಂತೆ ಮಾಡಲು ಉದ್ದೇಶಿಸಲಾಗಿದೆ. ಯಾವ ಸಾಮಾಜಿಕ ಸೇವೆಗಳಲ್ಲಿನ ನ್ಯೂನತೆಯನ್ನು ಪೂರೈಸುವುದು ಸರಕಾರದ ಕರ್ತವ್ಯವಾಗಿರುತ್ತದೆಯೋ ಅವುಗಳಿಗಾಗಿ ಕಾಯಂ ಅವಕಾಶ ಕಲ್ಪಿಸಲು ಇಲ್ಲಿ ಉದ್ದೇಶಿಸಲಾಗಿಲ್ಲ. ಆದುದರಿಂದ ಒಟ್ಟು ಮೊತ್ತವನ್ನು ೧,೧೬,೦೦,೦೦೦-೦೦ ರೂ.ಗಳಲ್ಲಿ ರೂ. ೪೮ ಲಕ್ಷವನ್ನು ವಜಾ ಮಾಡಿದರೆ ರೂ. ೬೮,೫೬,೦೦೦-೦೦ಗಳ ಮೊತ್ತ ಉಳಿಯುತ್ತದೆ. ಮತ್ತು ಆದುದರಿಂದ ಈ ಪ್ರಾಂತದ ಸಾಮಾಜಿಕ ಸೇವೆಗಳಿಗಾಗಿ ವೆಚ್ಚದ ಕಾಯಂ ಹೆಚ್ಚಳವೆಂದು ಸರಕಾರವು ಮುಂದಿಟ್ಟುದುದನ್ನು ಸರಿಯಾಗಿ ಲೆಕ್ಕ ಹಾಕಿದರೆ ಅದು ಈಗ

ಅಂದಾಜು ಮಾಡಲಾಗಿರುವ ರೂ. ೧,೧೬,೦೦,೦೦೦–೦೦ಗಳ ಮೊತ್ತವಾಗುವುದಿಲ್ಲ. ಆದರೆ ಅದು ಕೇವಲ ರೂ. ೬೮,೫೬,೦೦೦–೦೦ಗಳಷ್ಟು ಮೊತ್ತವಾಗುತ್ತದೆ ಎಂದು ನಾನು ಹೇಳುತ್ತೇನೆ. ನನ್ನ ಅಂದಾಜಿನಂತೆ ಈ ಮೊತ್ತದಲ್ಲಿ ನೀವು ಇನ್ನೂ ಹೆಚ್ಚಿನ ಕಡಿತವನ್ನು ಮಾಡಬೇಕಾಗುತ್ತದೆ ಮತ್ತು ಆ ಹೆಚ್ಚಿನ ಕಡಿತವು ರೂ. ೩೧,೪೫,೦೦೦ರಷ್ಟು. ಇದು ಪಾನಪ್ರತಿಬಂಧಕ್ಕಾಗಿ ಇರುವುದು. ಅದು ಸಂಪೂರ್ಣವಾಗಿ ನಿಷೇಧಾತ್ಮಕವಾದುದಾಗಿರುತ್ತದೆ. ಪ್ರಾಂತದ ಬೇಡಿಕೆಗಳನ್ನು ಪೂರೈಸುವಲ್ಲಿ ಇದು ಯಾವ ಸಕಾರಾತ್ಮಕ ಹೆಚ್ಚಳವನ್ನೂ ಮಾಡುವುದಿಲ್ಲ. ಇದು ಸರಕಾರಕ್ಕೆ ಬರಬೇಕಾದ ಆದಾಯದ ಮೊತ್ತವನ್ನು ಕೇವಲ ಬಿಟ್ಟುಕೊಡುವುದೇ ಆಗಿರುತ್ತದೆ. ಆದುದರಿಂದ ಆಯವ್ಯಯ ಪತ್ರವು ವಾಸ್ತವವಾಗಿ ಕಾಯಂ ವೆಚ್ಚಕ್ಕಾಗಿ ಒದಗಿಸುವ ಮೊತ್ತವು ರೂ. ೩೭,೧೧,೦೦೦–೦೦ಗಳಿಗಿಂತ ಹೆಚ್ಚಿನದಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ರೂ. ೩೭,೧೧,೦೦೦–೦೦ ಹಣವನ್ನು ಸರಕಾರ ಹೇಗೆ ಹಂಚಿದೆ ಎಂಬುದು ಈ ಸದನದ ಅನೇಕ ಸದಸ್ಯರಿಗೆ ಗೊತ್ತಿದೆ. ಇಲ್ಲಿ ಎದ್ದುಕಾಣುವ ಬಾಬು ಎಂದರೆ ಶಿಕ್ಷಣ. ಅದಕ್ಕಾಗಿ ರೂ. ೨೯ ಲಕ್ಷ ಕೊಡಲಾಗಿದೆ. ಅದು ಆವರ್ತಕ ವೆಚ್ಚ. ಚಿಕ್ಕ ನೀರಾವರಿಗಾಗಿ ರೂ. ೩,೫೦,೦೦೦–೦೦. ಇದೂ ಸಹ ಆವರ್ತಕ. ಉಳಿದದ್ದು ಆವರ್ತಕವಲ್ಲ. ಮತ್ತು ವೆಚ್ಚದ ಉಳಿದ ಬಾಬುಗಳೆಂದರೆ ಗ್ರಾಮ ಪಂಚಾಯತಿಗಳು ಗ್ರಾಮದ ಖುಲ್ಲಾ ಜಾಗೆಗಳು, ನೀರು ಪೂರೈಕೆ, ಔಷಧೋಪಚಾರ, ಕ್ವಿನಾಯಿನ್, ಆಯುರ್ವೇದ ವೈದ್ಯ ಶಿಕ್ಷಣ ಇತ್ಯಾದಿ, ಇತ್ಯಾದಿ. ಅವೆಲ್ಲ ಆವರ್ತಕವಾಗಿರುತ್ತವೆ. ಅಂದರೆ ಅವುಗಳನ್ನು ವರುಷದ ಬದಲೀ ಅಥವಾ ತಾತ್ಕಾಲಿಕ ಏರ್ಪಾಡುಗಳೆಂದು ಮಾತ್ರ ಉದ್ದೇಶಿಸಲಾಗಿದೆ. ಮಾನ್ಯರೇ ಈಗ ನನ್ನ ಅಭಿಪ್ರಾಯದಂತೆ ಆಯವ್ಯಯ ಪತ್ರವನ್ನು ಹೇಗೆ ಪರಿಗಣಿಸಬೇಕಾಗಿತ್ತೋ ಆ ರೀತಿಯಲ್ಲಿ ಪರಿಗಣಿಸಿದಾಗ ನಿಜವಾಗಿಯೂ ಕೇಳಲೇಬೇಕಾದ ಪ್ರಶ್ನೆಯೆಂದರೆ ಸರಕಾರವು ಸದನದ ಮುಂದೆ ಬಂದು ವಾಸ್ತವವಾಗಿ ಕ್ಷುಲ್ಲಕ ಮೊತ್ತವಾದ ರೂ. ೩೭,೧೧,೦೦೦–೦೦ಗಳಿಗಿಂತ ಹೆಚ್ಚಿನದೇನನ್ನೂ ಕೇಳದೆ ಇರುವುದಕ್ಕಾಗಿ ನಾವು ಅದನ್ನು ಅಭಿನಂದಿಸಬೇಕೇ? ಮಾನ್ಯರೇ, ಈ ಪ್ರಾಂತದ ಬೇಡಿಕೆಗಳನ್ನೂ, ಅನಕ್ಷರತೆಯನ್ನೂ ಗಮನಿಸಿ ಅನಾರೋಗ್ಯವನ್ನೂ ಗಮನಿಸಿ, ಮಲೇರಿಯಾವನ್ನು ಗಮನದಲ್ಲಿರಿಸಿ ಕೊಂಡು, ಈ ಪ್ರಾಂತದಲ್ಲಿ ಹಬ್ಬಿರುವ ಗನೋರಿಯಾ, ಸಿಫಿಲಿಸ್ ಮತ್ತು ಇತರ ರೋಗಗಳನ್ನು ಗಮನದಲ್ಲಿಟ್ಟುಕೊಂಡು, ಇದು ಹೊಣೆಗಾರಿಕೆಯ ಯಾವುದೇ ಅರ್ಥವನ್ನು ಹೊಂದಿದೆಯೇ ಮತ್ತು ರೂ. ೩೭,೧೧,೦೦೦–೦೦ಗಳ ಕ್ಷುಲ್ಲಕ ಮೊತ್ತದ ಆಯವ್ಯಯ ಪತ್ರವನ್ನು ಮುಂದಿಟ್ಟು ತಾನು ಸಾಕಷ್ಟು ಮಾಡಿದ್ದೇನೆ ಎಂದು ಸರಕಾರವು ಸಮಾಧಾನಪಟ್ಟುಕೊಳ್ಳಬಹುದೋ ಎಂಬ ಪ್ರಶ್ನೆಯನ್ನು ಕೇಳಲು ನನಗೆ ಯಾವುದೇ ಸಂಕೋಚವಿಲ್ಲ. ಸ್ನೇಹಿತರಾದ ಗೌರವಾನ್ವಿತ ಮಂತ್ರಿಯವರು ನಗುತ್ತಿರುವುದು ನನಗೆ ಕಾಣಿಸುತ್ತದೆ. ಅವರು ನಗಲೇಬೇಕು. ಅವರು ಬೇರೆ ಏನನ್ನು ಮಾಡಬಲ್ಲರು? ಬೇರೆ ಏನನ್ನೂ ಅವರು ಮಾಡಲಾರರು (ನಗು) (ಗೌರವಾನ್ವಿತ ಸದಸ್ಯರೊಬ್ಬರು– ಅವರು ಅಳಬೇಕೇ?). ಅವರು ಅತ್ತಿದ್ದರೆ! ಅವರು ಅಳುವುದನ್ನು ನೋಡಲು ನಾನು ತುಂಬಾ ಇಚ್ಛೆಪಡುತ್ತೇನೆ. ಏಕೆಂದರೆ ಅದು ನಿಜವಾಗಿಯೂ ಕೆಲಮಟ್ಟಿನ ಭಾವನೆಯನ್ನೂ ಮತ್ತು ಅನುಕಂಪವನ್ನೂ ತೋರಿಸುತ್ತದೆ. ನಗು ನಮ್ಮನ್ನು ಎಲ್ಲಿಗೂ ಕೊಂಡೊಯ್ಯಲಾರದು ಮತ್ತು ನಿಜವಾಗಿಯೂ ಅದು ವಾದವೇ ಅಲ್ಲ.

ಮಾನ್ಯರೇ, ಪ್ರಶ್ನೆಯ ಇನ್ನೊಂದು ಮುಖವನ್ನು ಈಗ ಎತ್ತಿಕೊಳ್ಳಬೇಕು. ಅದು ಹೀಗಿದೆ. ಈ ಆಯವ್ಯಯ ಪತ್ರದಲ್ಲಿ ಒದಗಿಸಲಾಗಿರುವ ವೆಚ್ಚವು ಕಾಯಂ ಸ್ವರೂಪದ್ದಾಗಲು ಯಾವುದಾದರೂ ಅವಕಾಶ ಇದೆಯೇ? ಸರಕಾರವು ಶಿಕ್ಷಣದ ಬಗ್ಗೆ ಖರ್ಚು ಮಾಡಲು ಸೂಚಿಸಿರುವ ರೂ. ೨೯ ಲಕ್ಷ ಹಣವು

ಮುಂದಿನ ವರ್ಷ ಅಥವಾ ಅದರ ಮುಂದಿನ ವರ್ಷಕ್ಕಾದರೂ ಲಭ್ಯವಾಗುವ ಅವಕಾಶ ಇದೆಯೇ? ಚಿಕ್ಕ ನೀರಾವರಿ ಕಾಮಗಾರಿಗಳಿಗಾಗಿ ಮತ್ತು ಇತರ ಅನೇಕ ವಿಷಯಗಳಿಗಾಗಿ ಸರಕಾರವು ಅದರ ಮುಂದಿನ ವರುಷ ಹಣವು ಲಭ್ಯವಾಗುವ ಅವಕಾಶ ಇದೆಯೇ? ಈ ಎಲ್ಲವುಗಳೂ ಕಾಯಂ ಬಾಬುಗಳಾಗುತ್ತವೆ ಎಂದು ನಾವು ನಂಬಬಹುದೋ? ಮಾನ್ಯರೇ, ನಾನು ಸ್ಪಷ್ಟ ಉತ್ತರವನ್ನು ಕೊಡಲಾರೆನು. ಆದರೆ ನಾವು ಈ ಒಂದು ಪ್ರಶ್ನೆಯನ್ನು ಕೇಳಿದರೆ ನಮಗೆ ಅದು ಸ್ಪಷ್ಟವಾಗುತ್ತದೆ. ಅದೆಂದರೆ ಸರ್ಕಾರವು ಈ ವೆಚ್ಚಕ್ಕೆ ಹೇಗೆ ಹಣಕಾಸನ್ನು ಒದಗಿಸುತ್ತದೆ? ಈ ಉದ್ದೇಶಕ್ಕಾಗಿ ಅದು ಅನುಸರಿಸುತ್ತಿರುವ ಸಾಧನಗಳು ಯಾವುವು?

ಮೊದಲನೆಯದಾಗಿ ತಮ್ಮ ಈ ಆಯವ್ಯಯ ಪತ್ರವನ್ನು ರೂಪಿಸುವಲ್ಲಿ ಹಣಕಾಸು ಮಂತ್ರಿಗಳು ಪ್ರಪ್ರಥಮವಾಗಿ ಈ ವರುಷ ಜಾರಿಯಲ್ಲಿರುವ ಆಯವ್ಯಯ ಪತ್ರದಲ್ಲಿಂದ ಉಳಿಯುವ ರೂ. ೧೦,೫೦,೦೦೦–೦೦ಗಳ ಹೆಚ್ಚಳವನ್ನು ಅವಲಂಬಿಸಿರುತ್ತಾರೆ. ಆ ನಂತರ ಅವರು ಈ ವರುಷದ ಉಳಿತಾಯವು ರೂ. ೬೩ ಲಕ್ಷ ರೂಪಾಯಿಗಳಷ್ಟೆನ್ನುತ್ತಾರೆ. ಮೂರನೆಯದಾಗಿ ಈಗ ವಿಧಿಸಲಾಗಿರುವ ಕೆಲವು ಕರಗಳ ಮೂಲಕ ಬರುವ, ಅವರು ಹೆಚ್ಚಿನ ಆದಾಯವೆನ್ನುವ, ರೂ. ೮ ಲಕ್ಷ ಹಣವು ದೊರಕುತ್ತದೆ ಎಂದು ಅವರು ಆಶಿಸುತ್ತಾರೆ. ನನ್ನ ಸ್ನೇಹಿತರು ತಾವು ಆಯವ್ಯಯ ಪತ್ರದಲ್ಲಿ ಹೊಸದಾಗಿ ಸೇರಿಸಲಾಗಿರುವ ಬಾಬುಗಳ ವೆಚ್ಚವನ್ನು ತೂಗಿಸಲು ಈ ಆದಾಯದ ಮೂಲಗಳನ್ನು ಅವಲಂಬಿಸಿರುತ್ತಾರೆ. ಮಾನ್ಯರೇ, ಆದರೆ ನಾನು ಕೇಳುವ ಪ್ರಶ್ನೆ ಇದಾಗಿರುತ್ತದೆ. ನನ್ನ ಗೌರವಾನ್ವಿತ ಸ್ನೇಹಿತರಾದ ಹಣಕಾಸು ಸಚಿವರು ರೂಪಿಸಿರುವ ವಿಧಾನಗಳು ಕಾಯಂ ಆದವುಗಳು ಮತ್ತು ಕೊನೆಯವರೆಗೆ ಉಳಿಯಬಲ್ಲವುಗಳು ಆಗಿವೆಯೋ? ಪ್ರತಿ ವರ್ಷವೂ ಅವುಗಳನ್ನು ಅವಲಂಬಿಸಬಹುದೋ? ನಾವು ಈಗ ಅಂಕಿ–ಸಂಖ್ಯೆಗಳನ್ನು ವಿಶ್ಲೇಷಿಸೋಣ. ಪ್ರಪ್ರಥಮವಾಗಿ ಚಾಲ್ತಿ ವರುಷದ ಆದಾಯದಲ್ಲಿನ ೧೦,೫೦,೦೦೦–೦೦ ರೂಪಾಯಿಗಳ ಹೆಚ್ಚಳವು ಸುದೈವದಿಂದ ಅವರಿಗೆ ದೊರೆತ ಎರಡು ಉತ್ಪನ್ನಗಳ ಮೂಲಗಳಿಂದ ಬಂದುದಾಗಿದೆ ಎಂಬುದು ವಾಸ್ತವ ಸಂಗತಿ. ಆ ಎರಡು ಮೂಲಗಳೆಂದರೆ ಅಬಕಾರಿ ಮತ್ತು ಸ್ಟ್ಯಾಂಪುಗಳು. ಅವರೇ ಕೊಟ್ಟ ಅಂಕಿ–ಸಂಖ್ಯೆಗಳ ಮೇರೆಗೆ ಆದಾಯದ ಈ ಎರಡು ಮೂಲಗಳು ಅವರಿಗೆ ರೂ. ೨೧,೫೨,೦೦೦–೦೦ಗಳನ್ನು ಕೊಟ್ಟಿವೆ. ಭಾರತ ಸರಕಾರವು ಅವರಿಗೆ ರೂ.೨೭ ಲಕ್ಷಗಳನ್ನು ಆದಾಯ ಕರದ ಭಾಗವಾಗಿ ಕೊಟ್ಟಿದೆ. ಈಗ ಅವರ ಸಿದ್ಧಾಂತವನ್ನೇ ಆಧರಿಸಿದರೆ ಪಾನಪ್ರತಿಬಂಧ ಅಥವಾ ಅಬಕಾರಿ ಆದಾಯವು ಕಳಂಕಿತ ಹಣವೇ ಆಗುತ್ತದೆ. ಅವರ ಈ ಇಡಿಯ ಪ್ರದರ್ಶನವು ನಾವು ಹಾಗೆ ಹೇಳಬಹುದಾದರೆ, ಕಳಂಕಿತವಾದುದೇ ಆಗಿದೆ ಮತ್ತು ಕಳಂಕಿತ ಹಣವನ್ನು ಆಧರಿಸಿರುವುದೇ ಆಗಿದೆ. ಹಿಂದಾದುದರ ಬಗ್ಗೆ ಮಾತನಾಡುವುದು ಬೇಡ. ನಾವು ವರ್ತಮಾನವನ್ನು ಎದುರಿಸಬೇಕಾಗಿದೆ. ಮತ್ತು ಈ ಅಬಕಾರಿ ಹಣವು ಪುನಃ ಅವರಿಗೆ ಬರುವುದಿಲ್ಲ ಅನ್ನುವ ಬಗ್ಗೆ ಯಾವ ಸಂದೇಹವೂ ಇಲ್ಲ. ಅವರು ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಸಂಗ್ರಹಿಸುತ್ತಿಲ್ಲವಲ್ಲದೆ ಅವರು ತಮ್ಮ ಹತ್ತಿರ ಇದ್ದುದನ್ನು ಬಿಟ್ಟುಕೊಡುತ್ತಿದ್ದಾರೆ. ಸ್ಟ್ಯಾಂಪುಗಳು ಅವರಿಗೆ ಹೆಚ್ಚಿನ ಉತ್ಪನ್ನವನ್ನು ಕೊಡುತ್ತವೆ ಎಂದು ನಾನು ಭಾವಿಸುವುದಿಲ್ಲ. ಆ ಮೂಲದಿಂದ ಅವರು ಹೆಚ್ಚಿನದನ್ನು ಅಪೇಕ್ಷಿಸಲಾರರು ಮತ್ತು ಆ ಕಾರಣದಿಂದಾಗಿ ಮುಂಬರುವ ವರುಷಗಳಿಗೆ ಸಂಬಂಧಿಸಿದಂತೆ, ಅವರ ಉತ್ಪನ್ನವನ್ನು ಹೆಚ್ಚಿಸಿರುವ ಈ ಎರಡು ಬಾಬುಗಳನ್ನು ನಮ್ಮ ಪರ್ಯಾಲೋಚನೆಯಿಂದ ತೆಗೆದು ಹಾಕಲೇ ಬೇಕು. ಆದಾಯಕರ ಬರಬಹುದು ಅಥವಾ ಬರದಿರಬಹುದು. ಅದೂ ಸಹ ಆಕಸ್ಮಿಕವಾದ ಬಾಬೇ ಆಗಿರುತ್ತದೆ. ಆದ್ದರಿಂದ ಭವಿಷ್ಯದ ಬಗ್ಗೆ ನಮಗೆ ಈಗ ಕಂಡುಬರುವುದು ಆಯವ್ಯಯ ಪತ್ರದಲ್ಲಿ

ಅವರು ತೋರಿಸಿದ ಹೊಸ ಖರ್ಚಿನ ಬಾಬುಗಳಿಗೆ ನಿಜ ಸ್ವತ್ತಿನ ರೂಪದ ಆಧಾರವು ಈ ಪ್ರಾಂತ್ಯದಲ್ಲಿ ರೂಢಿಯಲ್ಲಿರುವ ತಂಬಾಕಿನ ಮೇಲಿನ ಕರ ಪದ್ಧತಿಯನ್ನು ಪುನಃ ರೂಪಿಸುವ ಮೂಲಕ ಪಡೆದುಕೊಳ್ಳಬಹುದಾದ ಕೇವಲ ಹಲವು ಲಕ್ಷ ರೂಪಾಯಿಗಳ ಅಲ್ಪ ಮೊತ್ತ ಮಾತ್ರವೇ ಆಗಿದೆ. ಈ ಹೆಚ್ಚಿನ ೩೭ ಲಕ್ಷ ರೂಪಾಯಿಗಳ ವೆಚ್ಚಕ್ಕೆ ನಾವು ಅವಲಂಬಿಸಬಹುದಾದ ಆದಾಯವೆಂದರೆ ಎಂಟು ಲಕ್ಷ ರೂಪಾಯಿ ಮಾತ್ರ. ಆದುದರಿಂದ ೩೭ ಲಕ್ಷ ರೂಪಾಯಿಗಳ ಆಯವ್ಯಯ ಪತ್ರದ ರೂಪದಲ್ಲಿ ನಮಗೆ ತೋರಿಸಲಾಗಿರುವ ಈ ಚಿಕ್ಕ ಪ್ರದರ್ಶನವು ಮುಂದಿನ ವರುಷ ಪುನಃ ಬರದಿರಬಹುದೆಂದು ನನಗೆ ಎನ್ನಿಸುತ್ತದೆ ಎಂದು ಹೇಳಿದರೆ ತಪ್ಪಲ್ಲ.

ಮಾನ್ಯರೇ, ಈಗ ಆಯವ್ಯಯ ಪತ್ರವನ್ನು ಇನ್ನೊಂದು ದೃಷ್ಟಿಯಿಂದ ಗಮನಿಸೋಣ. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಕಾಂಗ್ರೆಸ್ ಸರಕಾರವು ತಾನು ವಹಿಸಿಕೊಳ್ಳಲು ಸಿದ್ಧವಿರುವ ಹೊಣೆಗಾರಿಕೆಗಳು ಮತ್ತು ಜವಾಬುದಾರಿಗಳು ಯಾವುವು? ನಮ್ಮ ಒಟ್ಟು ಹೊಣೆಗಾರಿಕೆಗಳು ಎಷ್ಟು ಎನ್ನುವುದನ್ನು ಕಂಡುಕೊಳ್ಳೋಣ. ಮಾನ್ಯರೇ ಈ ಹೊಣೆಗಾರಿಕೆಗಳನ್ನು ನಾಳೆ, ನಾಡಿದ್ದು ಪೂರೈಸಬಹುದೋ ಅಥವಾ ಹೊಣೆಗಾರಿಕೆಗಳನ್ನು ಪೂರೈಸಲು ದೀರ್ಘ ಕಾಲವನ್ನು ತೆಗೆದುಕೊಳ್ಳಬೇಕಾಗುತ್ತದೆಯೋ ಅನ್ನುವುದು ಸಣ್ಣ ವಿಷಯವಾಗಿದೆ. ಅದು ಸಂಪೂರ್ಣವಾಗಿ ಬೇರೆ ಪ್ರಶ್ನೆಯೇ ಆಗಿದೆ. ಇಲ್ಲಿರುವ ನಾವೆಲ್ಲರೂ– ಸದನದ ಈ ಬದಿಗೆ ಕುಳಿತವರು ಮತ್ತು ಆ ಬದಿಗೆ ಕುಳಿತವರು– ಈ ಪ್ರಾಂತದ ಜನತೆಯ ಕಲ್ಯಾಣಕ್ಕೆ ಸಂಬಂಧಿಸಿದಂತೆ ಏನು ಮಾಡಬೇಕೆಂಬ ಪ್ರಸ್ತಾಪದ ಬಗ್ಗೆ ಮತ್ತು ಈ ಪ್ರಾಂತದ ಜನತೆಯ ಕಲ್ಯಾಣಕ್ಕೆ ಸಂಬಂಧಪಟ್ಟಿರುವಷ್ಟರ ಮಟ್ಟಿಗೆ ನಾವೆಲ್ಲ ಖಚಿತವಾಗಿ ತಿಳಿದುಕೊಳ್ಳಬೇಕು. ಇದು ತೀರಾ ಅಗತ್ಯವಾದುದು ಮತ್ತು ವಾಸ್ತವವಾಗಿ ಮೂಲಭೂತವಾದುದೇ ಆಗಿರುತ್ತದೆ. ಆದುದರಿಂದ ಅಂತಿಮ ಪರಿಸ್ಥಿತಿ ಹೇಗೆ ರೂಪಗೊಳ್ಳಬಹುದು ಎಂಬ ಬಗ್ಗೆ ನಾವು ಕಂಡುಕೊಳ್ಳುವುದು ತುಂಬಾ ಅವಶ್ಯವಾಗಿದೆ. ಅದನ್ನು ನಾವು ಹೇಗೆ ಮತ್ತು ಎಷ್ಟು ಬೇಗನೇ ಪೂರೈಸುತ್ತೇವೆ ಅನ್ನುವುದರ ಬಗ್ಗೆಯೂ ನಾವು ಅರಿತಿರುವುದು ಅವಶ್ಯ. ಮಾನ್ಯರೇ, ಈಗ ಇಂದಿನವರೆಗೆ ಈ ಪ್ರಾಂತದಲ್ಲಿ ಪರಂಪರಾಗತವಾಗಿ ಸಂಗತಿಗಳನ್ನು ಈಗಿರುವಂತೆ ಗಮನಿಸಿದಾಗ ಸರಕಾರಗಳು ಅವುಗಳ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಔಷಧ ಪೂರೈಕೆ ಕೆಲಮಟ್ಟಿನ ನೀರು ಪೂರೈಕೆಗಳನ್ನು ಒಳಗೊಂಡಂತೆ ಕೆಲವು ಹೊಣೆಗಾರಿಕೆಗಳನ್ನೂ, ಕರ್ತವ್ಯಗಳನ್ನೂ ವಹಿಸಿಕೊಂಡಿರುತ್ತವೆ. ಆದಾಗ್ಯೂ ಅವುಗಳನ್ನು ಪೂರೈಸಿಲ್ಲ ಎಂಬುದು ಸ್ಪಷ್ಟವಾಗಿದೆ. ಇವುಗಳು ಸರಕಾರದ ಕರ್ತವ್ಯಗಳೆಂಬುದು ಒಪ್ಪಲಾದ ಸಂಗತಿಯಾಗಿರುತ್ತದೆ. ೧೭ ಆಗಸ್ಟ್ ೧೯೩೭ರಂದು ಕಾಂಗ್ರೆಸ್ ಮಂತ್ರಿ ಮಂಡಲವು ಅಧಿಕಾರ ವಹಿಸಿಕೊಂಡಾಗ "ಸರಕಾರದ ಕಾರ್ಮಿಕ ನೀತಿ" ಎಂದು ಹೇಳಲಾಗಿರುವ ಹೇಳಿಕೆಯೊಂದನ್ನು ಹೊರಡಿಸಿದೆ. ಪತ್ರಿಕೆಗೆ ಕೊಟ್ಟ ಆ ಹೇಳಿಕೆಯಲ್ಲಿ ಸರಕಾರವು ಏನು ಹೇಳಿದೆ ಎನ್ನುವುದನ್ನೇ ಇವರು ನೋಡಿಲ್ಲ ಎಂಬುದನ್ನು ಆ ಹೇಳಿಕೆಯನ್ನು ಗಮನಿಸಿದರೆ ಗೊತ್ತಾಗುತ್ತದೆ. ಆ ಹೇಳಿಕೆಯಲ್ಲಿ ಸರಕಾರವು ಈ ಕರ್ತವ್ಯಗಳು ಮಾತ್ರವೇ ತನ್ನ ಹೊಣೆಗಾರಿಕೆಗಳಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿದೆಯೆಂದು ಕಂಡುಬರುತ್ತದೆ. ಇವುಗಳಲ್ಲದೆ, ಶಿಕ್ಷಣ, ಸಾರ್ವಜನಿಕ ಆರೋಗ್ಯ, ವೈದ್ಯಕೀಯ ಸೌಲಭ್ಯ ಮತ್ತು ಪೂರೈಕೆಗಳಂಥ ಅವಶ್ಯ ಸೇವೆಗಳೆಂದು ಕರೆಯಲಾಗುವ ಸೇವೆಗಳನ್ನೂ ಕಾಂಗ್ರೆಸ್ ಸರ್ಕಾರವು ತನ್ನ ಹೊಣೆಗಳೆಂದು ಒಪ್ಪಿಕೊಂಡಿದೆ. ಇತರ ಆಧುನಿಕ ದೇಶಗಳಂತೆ ಈ ಸರಕಾರವೂ ಇನ್ನಿತರ ಸಾಮಾನ್ಯ ಕರ್ತವ್ಯಗಳನ್ನು ಕೈಗೆತ್ತಿಕೊಳ್ಳಬೇಕು. ಈ ಇತರ ಕರ್ತವ್ಯಗಳೆಂದರೆ ನಿರುದ್ಯೋಗ ನಿವಾರಣೆಗೆ ಸಹಾಯ, ಅನಾರೋಗ್ಯದ ವಿಮೆ, ವೃದ್ಧಾಪ್ಯ ಪಿಂಚಣಿಗಳು, ಹೆರಿಗೆ ಸೌಲಭ್ಯಗಳು, ಅಕಾಲ ಮೃತ್ಯುವಿನ ಕಾರಣಕ್ಕಾಗಿ ಅವಲಂಬಿತರಿಗೆ

ಸಹಾಯಧನ ಇವೇ ಮುಂತಾಗಿವೆ ಎಂದು ನಾನು ಹೇಳುತ್ತೇನೆ. ಆದಕಾರಣ ನಾವು ಈ ಹಂತದಿಂದ ಪ್ರಾರಂಭಿಸಬೇಕು. ಅಂದರೆ, ಕೈಯಲ್ಲಿ ಆಡಳಿತ ಸೂತ್ರಗಳನ್ನು ಹಿಡಿದಿರುವ ಸರಕಾರವು ಈ ಕರ್ತವ್ಯಗಳನ್ನು ತನ್ನ ಕರ್ತವ್ಯದ ಭಾಗವಾಗಿ ಪರಿಗಣಿಸತಕ್ಕುದು. ಸರಕಾರವು ಈ ಹೊಣೆಗಳನ್ನು ನಿರ್ವಹಿಸುವ ಬಗ್ಗೆ ನಿರ್ಣಯಿಸಬೇಕಾಗಿದ್ದರೆ, ಸರಕಾರದ ಒಟ್ಟು ಹೊಣೆಗಳು ಎಷ್ಟು ಎಂಬುದೇ ಪ್ರಶ್ನೆಯಾಗಿರುತ್ತದೆ. ನಾನು ಹೇಳಿರುವಂತೆ ಇದು ಅಷ್ಟು ಮಹತ್ವದ್ದಲ್ಲ. ಇದನ್ನು ಇಂದು ಮಾಡುವ ಸ್ಥಿತಿಯಲ್ಲಿ ಇರುತ್ತವೆಯೋ ಅಥವಾ ಇಲ್ಲವೋ ಎನ್ನುವ ಸಮಸ್ಯೆಯನ್ನು ಇದು ಪರಿಹರಿಸುವುದಿಲ್ಲ. ನಮ್ಮ ಕರ್ತವ್ಯಗಳು ಏನು ಮತ್ತು ಅಂತಿಮವಾಗಿ ನಾವು ತೆಗೆದುಕೊಳ್ಳಬಹುದಾದ ಹೊಣೆಗಾರಿಕೆ ಏನು ಎನ್ನುವುದನ್ನು ನಾವು ತಿಳಿದುಕೊಳ್ಳುವುದು ಅತ್ಯಂತ ಅವಶ್ಯವಾದುದು. ಮಾನ್ಯರೇ, ಈಗ ಈ ಎಲ್ಲ ಅಂಶಗಳನ್ನೂ ಗಮನಿಸಿ ಈ ಚರ್ಚೆಯ ಕೊನೆಯ ಹಂತದಲ್ಲೂ ಸಹ ತನ್ನ ವಿವೇಕದ ಆಧಾರದ ಮೇಲೆ ನನ್ನ ಸ್ನೇಹಿತರು ಈ ಪ್ರಾಂತದ ಆದಾಯದ ಮೇಲೆ ನಾವು ಈ ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ಪೂರೈಸಬೇಕಾದರೆ ಬೀಳಬಹುದಾದ ಹೊಣೆಗಾರಿಕೆಯ ಒಂದು ಅಂದಾಜನ್ನು ಹೇಳಬೇಕೆಂದು ಇಚ್ಛಿಸುತ್ತೇನೆ ಮತ್ತು ಅದನ್ನು ಸ್ವಾಗತಿಸುತ್ತೇನೆ. ನನಗೆ ಸಾಧ್ಯವಿರುವಷ್ಟರಮಟ್ಟಿಗೆ ನಾನು ಇಲ್ಲಿಯವರೆಗೆ ಅಲ್ಪ ಸ್ವಲ್ಪ ಲೆಕ್ಕಾಚಾರ ಮಾಡಿದ್ದೇನೆ. ನನ್ನ ಲೆಕ್ಕಾಚಾರ ನಿಖರವಾದುದಾಗಿರಲಿಕ್ಕಿಲ್ಲ. ನನ್ನ ಹತ್ತಿರ ಮಾಹಿತಿ ಇಲ್ಲ. ನನ್ನ ಹತ್ತಿರ ವಿವರಗಳು ಇಲ್ಲ. ನನಗೆ ತಜ್ಞರ ಸಹಾಯವೂ ಇಲ್ಲ. ಆದರೆ ಸರಕಾರದ ಒಟ್ಟು ಹಣಕಾಸಿನ ಹೊಣೆಗಾರಿಕೆ ಸರಿಯಾಗಿ ಎಷ್ಟು ಆಗಬಹುದು ಎಂಬ ಬಗ್ಗೆ ಒಂದು ಅಂದಾಜನ್ನು ತಯಾರಿಸುವ ಧೈರ್ಯವನ್ನು ಮಾಡಿದ್ದೇನೆ. ಈ ಪ್ರಾಂತದ ಹೊಣೆಗಾರಿಕೆಗಳು ೨೪ ಕೋಟಿಗಳಷ್ಟಾಗುತ್ತಿದೆ. ಈ ಪ್ರಾಂತೀಯ ಸರಕಾರವು ಇದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವ ಸರಕಾರ ಬರುತ್ತದೆ ಎಂಬ ಬಗ್ಗೆ ನನ್ನ ತಕರಾರು ಇಲ್ಲ. ಈ ಸರಕಾರವು ಸಹ ನಿರಂತರವಾಗಿ ಈ ಪ್ರಾಂತದ ಆಡಳಿತವನ್ನು ನಡೆಸಬಹುದು. ಸರಕಾರಗಳಿಗೆ ತಮ್ಮ ಹೊಣೆಗಾರಿಕೆಗಳ ಅರಿವಿರುವವರೆಗೆ ನನಗೆ ಯಾವ ತಕರಾರೂ ಇಲ್ಲ. (ಕಾರಣ ನಾವು ಈಗ ಲಕ್ಷ್ಯದಲ್ಲಿಡ ಬೇಕಾದ ಪ್ರಶ್ನೆಯೆಂದರೆ ನೀವು ಈ ೨೪ ಕೋಟಿ ರೂಪಾಯಿಗಳನ್ನು ಹೇಗೆ ಸಂಗ್ರಹಿಸುತ್ತೀರಿ ಎಂಬುದು.) ಅದು ಸ್ವಲ್ಪ ಹೆಚ್ಚು ಅಥವಾ ಸ್ವಲ್ಪ ಕಡಿಮೆ ಆಗಬಹುದು. ಈ ಪ್ರಾಂತದಲ್ಲಿನ ಸರಕಾರವು ಕೈಗೊಳ್ಳಬಹುದಾದ ಜವಾಬುದಾರಿಯ ಈ ಅಂಕಿಯ ಸಮೀಪಕ್ಕೆ ಬರುವಂಥದಾಗಿರುತ್ತದೆ. ಮಾನ್ಯರೇ ನಾವು ಕೇಳುವುದಿಷ್ಟು. ಈ ಮೊತ್ತದ ಹಣವನ್ನು ಸಂಗ್ರಹಿಸುವುದು ಈ ಸರಕಾರದ ಅಥವಾ ಯಾವುದೇ ಸರಕಾರದ ಸಕ್ಷಮತೆಯಲ್ಲಿದೆಯೋ? ಜಗತ್ತಿನ ಇತರ ಭಾಗಗಳಲ್ಲಿನ ಆದಾಯದ ಅಂಕಿ–ಸಂಖ್ಯೆಗಳತ್ತ ನಮ್ಮ ಗಮನ ಹರಿಸೋಣ ಮತ್ತು ಜಗತ್ತಿನ ಇತರ ಭಾಗಗಳವರ ಪರಿಸ್ಥಿತಿಯೊಂದಿಗೆ ನಮ್ಮ ಈ ಪ್ರಾಂತದ ಪರಿಸ್ಥಿತಿಯನ್ನು ಹೋಲಿಸಿ ನೋಡೋಣ. ಹಲವು ದೇಶಗಳಲ್ಲಿನ ತಲಾ ವರಮಾನದ ಸಂಖ್ಯೆಗಳನ್ನು ದೊರಕಿಸಿದ್ದೇನೆ. ಅವು:

| | | ಪೌ.ಶಿ.ಡಿ. |
|---|---|---|
| ಕೆನಡಾ | ... | ೯–೮–೦ |
| ದಕ್ಷಿಣ ಆಸ್ಟ್ರೇಲಿಯಾ | ... | ೧೯–೦–೦ |
| ನ್ಯೂ ಸೌಥ್ ವೇಲ್ಸ್ | ... | ೧೩–೦–೦ |
| ನ್ಯೂಜಿಲೆಂಡ್ | ... | ೨೨–೦–೦ |
| ಯೂನಿಯನ್ ಆಫ್ ಸೌಥ್ ಆಫ್ರಿಕಾ | ... | ೪–೦–೦ |

(ಪ್ರಾಂತೀಯ ಸರಕಾರವು ಸಂಗ್ರಹಿಸಿದ ಆದಾಯವನ್ನು ಇದು ಒಳಗೊಂಡಿರುವುದಿಲ್ಲ.)

| | | |
|---|---|---|
| | | ಪೌ.ಶಿ.ಡಿ. |
| ಆಸ್ಟ್ರೇಲಿಯಾ | ... | ೧೨–೦–೦ |
| ಐರಿಶ್ ಫ್ರೀಸ್ಟೇಟ್ | ... | ೧೦–೦–೦ |
| ಮುಂಬಯಿ | ... | ೦–೦–೭ |

ಮಾನ್ಯರೇ, ಇದು ತುಂಬಾ ಸ್ಥೈರ್ಯಗೆಡಿಸುವ ಚಿತ್ರವಾಗಿದೆ ಎಂದು ನಾನು ಹೇಳುತ್ತೇನೆ. ಇದು ವಾಸ್ತವ ಚಿತ್ರ. ಇದು ವ್ಯತ್ಯಾಸ. ಈ ಪ್ರಾಂತದ ಸಾಮಾನ್ಯ ಜನತೆಯ ಕಲ್ಯಾಣವನ್ನು ಮಾಡುವ ಹೊಣೆ ಹೊರಬೇಕೆನ್ನುವ ಯಾವನೇ ಹಣಕಾಸು ಮಂತ್ರಿಯ ಎದೆಯು ಒಳಗೊಳಗೇ ನಡುಗುವಂತೆ ಮಾಡುವ ವ್ಯತ್ಯಾಸ ಇದು.

ಈಗ ಈ ಪ್ರಾಂತದ ಹಣಕಾಸಿನ ಸ್ಥಿತಿಗೆ ಸಂಬಂಧಪಟ್ಟಂತೆ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾದ ಇನ್ನೊಂದು ಸಂಗತಿಯೆಂದರೆ ನಮ್ಮ ಆದಾಯವು ಸಂಪೂರ್ಣವಾಗಿ ನಿಂತಲ್ಲೆ ನಿಂತುಹೋಗಿದೆ. ಹಣಕಾಸು ಮಂತ್ರಿಯವರು ಹೇಳಿದ್ದನ್ನೇ ನಾನು ಉಲ್ಲೇಖಿಸುತ್ತೇನೆ. ಹೋದ ವರುಷದ ಆಯವ್ಯಯದ ಪತ್ರದ ಮೇಲಿನ ಭಾಷಣದಲ್ಲಿ ಅವರು ೧೯೨೨ ಮತ್ತು ೧೯೩೩ನೇ ವರ್ಷಗಳ ಬೇರೆ ಬೇರೆ ಪ್ರಾಂತಗಳ ಆದಾಯದ ಹೆಚ್ಚಳವನ್ನು ಹೋಲಿಸಿ ತುಂಬಾ ಉಪಯುಕ್ತವಾದ ಅಂಕಿ–ಸಂಖ್ಯೆಗಳನ್ನು ಕೊಟ್ಟಿರುತ್ತಾರೆ. ಹೆಚ್ಚಳ ಹೀಗಿದೆ:

| | **ಶೇಕಡಾವಾರು** |
|---|---|
| ಮದ್ರಾಸ್ | ೨೬.೭ |
| ಪಂಜಾಬ್ | ೨೮.೬ |
| ಸಂಯುಕ್ತ ಪ್ರಾಂತ | ೧೬.೭ |
| ಅಸಾಮ್ | ೧೪.೭ |
| ಬಂಗಾಳ | ೧೧.೯ |
| ಮುಂಬಯಿ | ೩.೦ |

ಈ ಶೇಕಡಾ ಇನ್ನು ಸಹ ಇನ್ನೂ ಕಡಿತ ಮಾಡಿಯೇ ಗಮನಿಸಬೇಕಾಗುತ್ತದೆ. ಹೆಚ್ಚಳವು ೧೯೨೨ರಿಂದ ವಿಧಿಸಲಾಗಿರುವ ಹೆಚ್ಚುವರಿ ಕರಾಕರಣೆಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದೆಂಬುದನ್ನೇ ಆಧರಿಸಿದೆ. ೧೯೨೨ ರಿಂದ ೧೯೨೫ರವರೆಗೆ ವಿಧಿಸಲಾಗಿರುವ ಹೆಚ್ಚುವರಿ ಕರವನ್ನು ವಜಾ ಮಾಡಿದರೆ ಮುಂಬಯಿ ರಾಜ್ಯದ ಆದಾಯವು ಶೇಕಡಾ ಐದೂವರೆರಷ್ಟು ಕಡಿಮೆಯಾಗಿದೆ. ಆದುದರಿಂದ ನಾವು ಈಗ ಇಂತಹ ಪರಿಸ್ಥಿತಿ ಯಲ್ಲಿದ್ದೇವೆ. ಅಂದರೆ ನಮ್ಮ ಆದಾಯವು ಬೆಳೆಯುತ್ತಲೇ ಇಲ್ಲ. ವಾಸ್ತವವಾಗಿ ಅವು ಸ್ಥಗಿತವಾಗಿವೆ. ಆಗ ಅದಕ್ಕೆ ಎರಡು ಹೊಸ ಅಂಶಗಳನ್ನು ಸೇರಿಸಿರಿ. ಮೊದಲನೆಯದು ಸರಕಾರವು ಅಳವಡಿಸಿಕೊಂಡಿರುವ ಪಾನಪ್ರತಿಬಂಧ ನೀತಿಯಿಂದಾಗಿ ಈ ಪರಿಸ್ಥಿತಿಯು ಇನ್ನೂ ಹದಗೆಡುತ್ತದೆ ಎಂಬುದು. ಎರಡನೆಯದಾಗಿ ಈ ಸರಕಾರವು ಭೂ ಕಂದಾಯವನ್ನು ಕಡಿಮೆ ಮಾಡುವ ನೀತಿಯನ್ನು ಪ್ರಕಟಿಸಿರುವುದನ್ನೂ ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಈಗ ಕಂದಾಯದ ಈ ಎರಡೂ ಬಾಬುಗಳ ಒಟ್ಟು ಮೊತ್ತವು ಏಳು

ಕೋಟಿಗಳಷ್ಟಾಗುತ್ತಿದೆ ಎಂಬುದು ವಾಸ್ತವ ಸಂಗತಿಯಾಗಿರುತ್ತದೆ. ಸರಕಾರವು ರೂಪಿಸಿದ ನೀತಿಯನ್ನು ಗಮನಿಸಿ, ಈ ಏಳು ಕೋಟಿ ರೂಪಾಯಿಗಳನ್ನು ಅವು ಈ ಪ್ರಾಂತದ ಸ್ವತ್ತಿನಿಂದ ಕಡಿಮೆಯಾಗಿತ್ತಿದೆ ಎಂದೇ ನಾವು ಅರಿತುಕೊಳ್ಳಬೇಕು. ಕಾಯಂ ಆಗಿ ಲೆಕ್ಕ ಹಾಕಬಹುದಾದ ಖಚಿತ ಆದಾಯವು ಕೇವಲ ೫ ಕೋಟಿ ಮಾತ್ರ ಆಗುತ್ತದೆ. ನಾನು ಹೇಳಿದಂತೆ ಇದಕ್ಕೆ ವ್ಯತಿರಿಕ್ತವಾಗಿ ಕೊನೆಯದಾಗಿ ೨೪ ಕೋಟಿ ರೂಪಾಯಿಗಳ ಹೊಣೆಯನ್ನು ಸ್ಥಾಪಿಸಬೇಕಾಗುತ್ತದೆ.

ಮಾನ್ಯರೇ, ಈಗ ಇರುವ ಪ್ರಶ್ನೆ: ಈ ಪ್ರಾಂತದ ಹಣಕಾಸಿನ ಮೂಲಗಳನ್ನು ಅಭಿವೃದ್ಧಿಪಡಿಸುವ ಮಾರ್ಗಗಳು ಯಾವುವು? ನನ್ನ ಗೌರವಾನ್ವಿತ ಸ್ನೇಹಿತರು ಮಂಡಿಸಿದ ಹಣಕಾಸಿನ ವಿವರಣೆಯನ್ನು ಮತ್ತು ಆಯವ್ಯಯ ಪತ್ರದ ಭಾಷಣವನ್ನೂ ಗಮನಿಸಿ ಹೇಳಬೇಕೆಂದರೆ ಈ ಆಯವ್ಯಯ ಪತ್ರವು ಅತ್ಯಂತ ಪ್ರತಿಗಾಮಿ ಎಂದು ಹೇಳಲು ನನಗೆ ತುಂಬಾ ದುಃಖವಾಗುತ್ತದೆ. ಆದರೂ ಹಾಗೆ ನಾನು ಹೇಳಲೇಬೇಕು. ಈ ಆಯವ್ಯಯ ಪತ್ರವು ಸರಕಾರವು ಕೊಟ್ಟ ಮಾತುಗಳಿಗೆ ತಪ್ಪಿದೆ ಹಣಕಾಸು ಮಂತ್ರಿಗಳು ಮಾಡಿದ ಹಿಂದಿನ ಆಯವ್ಯಯ ಪತ್ರದ ಮೇಲಿನ ಭಾಷಣವು (ಹೊಗಳಿಕೆಗೆ ಅರ್ಹವಿರುವಾಗ ಹೊಗಳಲೇ ಬೇಕು) ಎದೆಗಾರಿಕೆಯ ಅಂಶವನ್ನು, ಕ್ರಾಂತಿಕಾರಿ ಅಂಶವನ್ನು ಹೊಂದಿತ್ತು ಮತ್ತು ಅದು ಸದನದ ಈ ಭಾಗದಲ್ಲಿ ಕುಳಿತ ನಮ್ಮ ಹೃದಯಗಳಿಗೆ ಸಂತೋಷವನ್ನುಂಟುಮಾಡಿತ್ತು. ಅವರು ಕಳೆದ ಬಾರಿ ಮಾಡಿದ ಭಾಷಣವನ್ನು ನಿನ್ನೆ ಅವರು ಮಾಡಿದ ಭಾಷಣದೊಂದಿಗೆ ತುಲನೆ ಮಾಡಿದ್ದೇನೆ ಮತ್ತು ಅವೆರಡರಲ್ಲಿ ಕಳವಳಕಾರಿ ವ್ಯತ್ಯಾಸಗಳಿದ್ದುದನ್ನು ಕಂಡುಕೊಂಡಿದ್ದೇನೆ. ಮಾನ್ಯರೇ, ಹೋದ ವರುಷ ನನ್ನ ಗೌರವಾನ್ವಿತ ಮಿತ್ರರು ಮಾಡಿದ ಭಾಷಣದ ಆಧಾರದ ಮೇಲೆ ತೀರ್ಮಾನಿಸಿದಾಗ ಅವರು ಅತ್ಯಂತ ಕಠಿಣವಾದ ಮತ್ತು ನಾವೆಲ್ಲ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ತುಂಬಾ ಮಹತ್ವದಾದ ಸಮಸ್ಯೆಯ ಬಗ್ಗೆ ತಿಳಿದವರಾಗಿದ್ದರು ಎಂಬ ಅಭಿಪ್ರಾಯ ನನ್ನದಾಗಿತ್ತು. ಆ ಸಮಸ್ಯೆಯೆಂದರೆ ಹಣವನ್ನು ದೊರಕಿಸಿಕೊಳ್ಳುವುದು. ಅದು ನಮ್ಮ ಸಮಸ್ಯೆಗಳೆಲ್ಲವುಗಳಲ್ಲಿಯೂ ತುಂಬಾ ಮಹತ್ವದೆಂದು ಅರಿತುಕೊಂಡಿದ್ದರಷ್ಟೇ ಅಲ್ಲದೆ, ಅದನ್ನು ತಾನು ಈ ಪ್ರಾಂತದ ಪ್ರಯೋಜನಕ್ಕಾಗಿ ಹೆಚ್ಚಿನ ಸಂಪನ್ಮೂಲಗಳು ಲಭ್ಯವಾಗುವಂತೆ ಮಾಡುವುದಲ್ಲದೆ, ಆ ಭಾರವನ್ನೂ ಸಹ, ಭಾರ ಹೊರಲು ಆಗದವರ ಮೇಲೆ ವಿಧಿಸದೆ ಮತ್ತು ಕೊಡಬಲ್ಲವರಿಗೆ ಕರ ವಿಧಿಸುವ ಮೂಲಕ ಸಮತೋಲನದಲ್ಲಿ ವಿಧಿಸುವಂತೆಯೂ ಮಾಡುವುದಾಗಿ ವಚನವನ್ನೂ ಸಹ ಕೊಟ್ಟಿದ್ದರು. ಅವರು ಹೋದ ವರುಷ ಮಾಡಿದ ಭಾಷಣದಲ್ಲಿನ ಕೆಲ ಭಾಗಗಳನ್ನು ಓದುತ್ತೇನೆ. ೧೪ನೇ ಪ್ಯಾರಾದಲ್ಲಿ ನನ್ನ ವಿದ್ವಾಂಸ,

ಒಬ್ಬ ಗೌರವಾನ್ವಿತ ಸದಸ್ಯ: "ಮಾನ್ಯ ಸ್ನೇಹಿತ".

ಡಾ: ಬಿ. ಆರ್. ಅಂಬೇಡ್ಕರ್: ನನಗೆ ಉಚ್ಚ ನ್ಯಾಯಾಲಯದ ಪರಿಭಾಷೆ ರೂಢಿಯಾಗಿದೆ. ಅಲ್ಲಿ ನಾವು ನಮ್ಮ ಸ್ನೇಹಿತರನ್ನು 'ವಿದ್ವಾಂಸ'ರೆಂದು ಕರೆಯುತ್ತೇವೆ. ನನ್ನ ಗೌರವಾನ್ವಿತ ಸ್ನೇಹಿತರು ಹೇಳಿದ್ದು ಇದು.

"ಕೊನೆಯದಾಗಿ ಬೇಕಾದ ಹೆಚ್ಚಿನ ಹಣವನ್ನು ರೂಢಿಸುವ ಸಲುವಾಗಿ ಹೊಸ ತೆರಿಗೆಗಳನ್ನು ವಿಧಿಸುವ ವಿಷಯಗಳತ್ತ ಗಮನ ಹರಿಸೋಣ. ಇದಕ್ಕೆ ಸಂಬಂಧಿಸಿದಂತೆ ನಮ್ಮ ಮೊದಲನೆಯ ಗುರಿಯೆಂದರೆ ಈಗಿರುವ ಕರಗಳಲ್ಲಿಯೇ ಅವಶ್ಯಕ ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು. ಮೊದಲನೆಯದಾಗಿ ಭೂಕಂದಾಯವನ್ನು ತೆಗೆದುಕೊಳ್ಳಿ, ಪ್ರಸಕ್ತ, ಹರಿದು ಹಂಚಿಹೋಗಿರುವ ಹಾಗೂ ಆ ಕಾರಣದಿಂದ ಲಾಭದಾಯಕವಾಗಿಲ್ಲದ ಹಿಡುವಳಿಗಳ ಮೇಲಿನ ಕಂದಾಯವನ್ನು ತೆಗೆದುಹಾಕುವುದು ನಮ್ಮ ಅಂತಿಮ

ಲಕ್ಷ್ಯ. ಏನೇ ಆದರೂ ಪ್ರಾರಂಭದಲ್ಲಿ ವ್ಯವಸಾಯೋತ್ಪನ್ನವು ಹೆಚ್ಚು ಇರುವಲ್ಲಿ ಶ್ರೇಣಿ ಆಧಾರಿತ ಕರ ವಿಧಾನವನ್ನು ಅನುಸರಿಸುವುದು ಅಗತ್ಯವೆಂಬುದು ನಮ್ಮ ಅಭಿಪ್ರಾಯ. ವಾಸ್ತವವಾಗಿ ಸಾಗುವಳಿ ಮಾಡು ತ್ತಿದ್ದವನಿಂದ ಭೂಮಿಯನ್ನು ಕಿತ್ತುಕೊಳ್ಳುವುದರಿಂದಾಗಿ ಹೆಚ್ಚಿನ ಪ್ರಮಾಣದ ಭೂಮಿಯು ಸಾಗುವಳಿ ಮಾಡದೆ ಲಾವಣಿ ಪಡೆದುಕೊಳ್ಳುವ ಗೈರು ಹಾಜರಿರುವ ಅಥವಾ ಭೂಮಿಯನ್ನು ಉಳದೇ ಇರುವ ಭೂಮಾಲೀಕರ ಸ್ವಾಧೀನಕ್ಕೆ ಹೋಗಿಬಿಟ್ಟಿದೆ. ಅವರ ಆದಾಯಕ್ಕೆ ಅದು ಚಿಕ್ಕದಿರಲಿ ಅಥವಾ ದೊಡ್ಡದಿರಲಿ ಸ್ವತಃ ಭೂಮಿಯನ್ನು ಸಾಗುವಳಿ ಮಾಡುವವನಿಗೆ ತೋರಿಸುವ ತೆರಿಗೆ ವಿನಾಯಿತಿಯನ್ನು ಅವರಿಗೂ ಕೊಡಬಹುದೋ? ವರ್ಗಾವಣೆ ಮಾಡಲಾದ ಭೂಮಿಗಳಿಂದ ದೊಡ್ಡ ಪ್ರಮಾಣದಲ್ಲಿ ಆದಾಯ ಬರುತ್ತಿದೆ. ಈ ಆದಾಯಗಳ ಮೇಲೆ ತೋರಿಸುತ್ತಿರುವ ವಿನಾಯಿತಿಯಿಂದ ಪ್ರತಿ ವರುಷ ಈ ಪ್ರಾಂತಕ್ಕೆ ಸುಮಾರು ರೂ.೭೦ ಲಕ್ಷದಷ್ಟು ನಷ್ಟವನ್ನುಂಟುಮಾಡುತ್ತಿವೆ. ತುಂಬಾ ಸಿರಿವಂತರಾದ ನಮ್ಮ ಖಾತೇದಾರ ವರ್ಗ ದವರಿಗೆ ತೆರಿಗೆ ವಿಧಿಸುವಾಗ ಈ ಆದಾಯಗಳನ್ನು ನಾವು ಹೇಗೆ ಪರಿಗಣಿಸಬೇಕು? ಇಂಥ ಪ್ರಶ್ನೆಗಳ ಬಗ್ಗೆ ಈ ಸದನದಲ್ಲಿರುವ ಎಲ್ಲಾ ಪಕ್ಷಗಳ ಮಾನ್ಯ ಸದಸ್ಯರ ಅಭಿಪ್ರಾಯಗಳು ಸರಕಾರವು ಖಚಿತವಾದ ಪ್ರಸ್ತಾಪವನ್ನು ಯೋಜಿಸುವುದರಲ್ಲಿ ತುಂಬಾ ಉಪಯುಕ್ತವಾಗುವುವು. ತೆರಿಗೆಯ ಹೊರೆಯನ್ನು ಸಹಿಸುವಂಥ ಭೂಮಿಯ ಉತ್ಪನ್ನದ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ವಿಧಾನವನ್ನು ಅಳವಡಿಸಿಕೊಳ್ಳುವುದರಿಂದ ಬರುವಂಥ ಸಂಪನ್ಮೂಲಗಳು ವಾಸ್ತವವಾಗಿ ಭೂಮಿಯನ್ನು ಉಳುವವರಿಗೆ ಭೂ ಕಂದಾಯದ ಭಾರ ವನ್ನು ಹಗುರಾಗಿ, ಸಹಿಸುವಂತೆ ಮಾಡಲು ಮತ್ತು ಅವರ ಬದುಕನ್ನು ಉತ್ತಮಗೊಳಿಸಲು ಉಪಯೋಗಿಸಿಕೊಳ್ಳಬಹುದೆಂಬುದು ನಮ್ಮ ಅಭಿಪ್ರಾಯ. ಹೆಚ್ಚಿನ ಪ್ರಮಾಣದ ಮತ್ತು ನ್ಯಾಯಯುತ ವಾಗಿ ಕರಾಕರಣೆ ಮಾಡಬಹುದಾದ ವ್ಯವಸಾಯ ಉತ್ಪನ್ನಗಳ ಮೇಲೆ ಶ್ರೇಣಿ ಆಧಾರಿತ ಕರಾಕರಣೆಯ ಪರಿಣಾಮದ ಪರಿಶೀಲನೆಯು ಈಗಾಗಲೇ ಆರಂಭವಾಗಿವೆ. ಹಾಗೆಯೇ ಈಗ ಜಾರಿಯಲ್ಲಿರುವ ತೆರಿಗೆ ಗಳನ್ನು ಅವುಗಳ ಹೊರೆ ಹಾಗೂ ಅವುಗಳಿಂದ ಸಾಧಿಸಬಹುದಾದ ಸಾಮಾಜಿಕ ಹಿತಗಳನ್ನು ಕುರಿತು ಹಾಗೂ ಆ ತೆರಿಗೆಗಳ ಮರು ಹೊಂದಾಣಿಕೆಯ ಬಗ್ಗೆ ಮರು ಚಿಂತನೆ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ನಾವು ಸಾಧ್ಯವಾದಷ್ಟು ವೇಗವಾಗಿ ಹೆಜ್ಜೆಯನ್ನಿಡುತ್ತಿದ್ದೇವೆ ಮತ್ತು ಮುಂದಿನ ಆಯವ್ಯಯ ಪತ್ರವನ್ನು ಈ ಸದನದ ಮುಂದೆ ಮಂಡಿಸುವಷ್ಟರಲ್ಲಿ ನಮ್ಮ ಖಚಿತ ನಿರ್ಣಯಗಳನ್ನು ಪ್ರಕಟಿಸುವ ಆಶಾಭಾವನೆ ಸರಕಾರಕ್ಕೆ ಇದೆ:

ಈ ಸಂಜೆ ನಾನು ಹೇಳಿದ್ದು ಯಾವುದೂ ಸಾಮಾಜಿಕ ಉಪಯುಕ್ತತೆಯ ಯೋಜನೆಗಳಿಗಾಗಿ ಹಣ ಒದಗಿಸಲು ಯಾವ ಹೊಸ ಕರಗಳನ್ನೂ ಸರಕಾರವು ಪ್ರಸ್ತಾಪ ಮಾಡುವುದಿಲ್ಲ ಎಂಬ ನಂಬಿಕೆಯನ್ನು ಮೂಡಿಸುವುದಿಲ್ಲ ಎಂದು ನಾನು ಆಶಿಸುತ್ತೇನೆ. ಅಂಥ ಅಭಿಪ್ರಾಯವು ಸತ್ಯ ದೂರವಾದುದೆಂದು ಹೇಳಬಹುದು. ಈ ಪ್ರಾಂತದಲ್ಲಿ ತೆರಿಗೆಯ ಹೊರೆಯು ತುಂಬಾ ಹೆಚ್ಚಿನ ಪ್ರಮಾಣದಲ್ಲಿದ್ದಾಗ್ಯೂ ಈ ಪ್ರಾಂತದಲ್ಲಿ ಅದರ ಹೆಚ್ಚಿನ ಭಾರವನ್ನು ಬಡಜನತೆಯೇ ಹೊರುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ. ಭೂ ಕಂದಾಯ, ಅಬಕಾರಿ ಕರ, ಸ್ಟ್ಯಾಂಪ್ಸ್ ಮತ್ತು ನ್ಯಾಯಾಲಯ ಶುಲ್ಕ, ಸಾರ್ವಜನಿಕ ವಾಹನಗಳ ಮೇಲಿನ ಕರ, ಹಳ್ಳಿಗಾಡಿನಲ್ಲಿ ಬೆಳೆದ ತಂಬಾಕಿನ ಮೇಲಿನ ಕರ ಈ ಎಲ್ಲವುಗಳನ್ನೂ ಹೆಚ್ಚಾಗಿ ಬಡ ವರ್ಗದವರೇ ತೆರುತ್ತಿದ್ದಾರೆ. ಆದಾಯಕರವೊಂದನ್ನು ಮಾತ್ರ ಸಿರಿವಂತರು ಕೊಡುತ್ತಾರೆ ಮತ್ತು ಅದು ಪ್ರಾಂತೀಯ ಸರಕಾರದ ವ್ಯಾಪ್ತಿಯಲ್ಲಿ ಇಲ್ಲ. ಹೆಚ್ಚಿನ ಪ್ರಮಾಣದಲ್ಲಿನ ಪ್ರಾಂತೀಯ ಕರವನ್ನು ತೆರುತ್ತಿರುವ ಬಡ ವರ್ಗದವರ ಮತ್ತು ಆದಾಯ ಕರವನ್ನು ಕೇಂದ್ರ ಸರಕಾರಕ್ಕೆ ಕೊಡುವ ಸಿರಿವಂತ ವರ್ಗಗಳ ನಡುವೆ

ತಮ್ಮ ಪ್ರಾಂತದ ಹಣಕಾಸಿನ ಹೊಣೆಗಾರಿಕೆಯ ಸ್ವಲ್ಪ ಭಾಗವನ್ನು ಹೊರಬೇಕಾದ ಜನತೆ ಗಣನೀಯ ಪ್ರಮಾಣದಲ್ಲಿ ಇರುತ್ತದೆ. ಈಗ ಪ್ರಾಂತ್ಯದ ಆದಾಯಕ್ಕೆ ಅಷ್ಟೇನೂ ಕೊಡುಗೆಯನ್ನು ನೀಡದ ಸ್ಥಳೀಯ ಶ್ರೀಮಂತ ವರ್ಗದವರು ಯಥೋಚಿತವಾಗಿ ಇದಕ್ಕಾಗಿ ತಮ್ಮ ಪಾಲನ್ನು ನೀಡುವುದು ಅಗತ್ಯವೇ ಆಗಿದೆ. ಹಲವು ನಿರ್ಬಂಧಗಳಿಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ ತೆರಿಗೆಯನ್ನು ಕೊಡಬಲ್ಲವರಾಗಿದ್ದರೂ ತೆರಿಗೆಯ ವ್ಯಾಪ್ತಿಯಿಂದ ಹೊರಗೆ ಇರುವಂತಹ ವರ್ಗಗಳನ್ನು ತೆರಿಗೆಯ ವ್ಯಾಪ್ತಿಗೆ ತರುವುದು ಅಂತಹ ಸುಲಭದ ಕೆಲಸವೇನೂ ಅಲ್ಲ. ಭಾವೀ ನಿರ್ಣಯಗಳನ್ನು ಈಗಲೇ ಊಹಿಸುವ ಸ್ಥಿತಿಯಲ್ಲಿ ನಾನಿಲ್ಲವಾದಾಗ್ಯೂ ಈ ಸದನದ ಮುಂದೆ ಇಡಲು ನಾವು ಹಲವಾರು ಪ್ರಸ್ತಾವಗಳನ್ನು, ಸಾಧನೆಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದೇವೆ. ಈ ಪ್ರಸ್ತಾವೆಗಳು ಪಾನಪ್ರತಿಬಂಧ ನೀತಿಯಿಂದಾಗಿ ಉಂಟಾಗುವ ನಷ್ಟವನ್ನು ಭರ್ತಿ ಮಾಡಿಕೊಳ್ಳಲು ಅಷ್ಟೇ ಅಲ್ಲದೆ, ಸಾಮಾಜಿಕ ಸೇವಾ ಕ್ಷೇತ್ರದಲ್ಲಿ–ಸಾಮಾಜಿಕ ಸೇವೆಯ ಅತ್ಯಂತ ವಿಶಾಲವಾದ ಅರ್ಥದಲ್ಲಿ–ನಾವು ಇಚ್ಛಿಸುವ ಕೆಲವು ಪ್ರಮಾಣದ ವಿಸ್ತರಣೆಗಾಗಿ– ಅಂದರೆ ಸಂಪೂರ್ಣ ವಿಸ್ತರಣೆ ಅಲ್ಲ–ಕ್ರಮ ಕೈಕೊಳ್ಳಲು ನಮಗೆ ಸಾಧ್ಯವಾಗುವಂತೆ ಮಾಡಲು ಅಗತ್ಯವಾದ ಹಣಕಾಸನ್ನೂ ಒದಗಿಸಲು ಅವಕಾಶ ಮಾಡಿಕೊಡುವಂಥವುಗಳು ಆಗಿರುತ್ತವೆ."

ಮಾನ್ಯರೆ, ನಂತರ ಅವರು ಈ ಅಭಿಪ್ರಾಯವನ್ನೂ ವ್ಯಕ್ತಪಡಿಸಿದರು: "ಸಂಪನ್ಮೂಲಗಳನ್ನು ಕ್ರೋಡೀಕರಿಸುವ ದಿಕ್ಕಿನಲ್ಲಿ ಸರಕಾರದ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲು ಇನ್ನೂ ಒಂದು ಬೇರೆ ಮಾರ್ಗವಿದೆ. ಒಟ್ಟಾರೆಯಾಗಿ ಸಾರ್ವಜನಿಕ ಹಿತಗಳಿಗೆ ಬಳಕೆಯಾಗಬಹುದಾಗಿದ್ದ ಹಲವು ಸೇವೆಗಳು ಇಂದೂ ಕೂಡ ಸಾರ್ವಜನಿಕ ವೆಚ್ಚದಲ್ಲಿ ಕೆಲವೇ ವರ್ಗಗಳವರ ಹಿತಕ್ಕಾಗಿ ಬಳಕೆಯಾಗುತ್ತಿವೆ. ಅವುಗಳಿಂದ ಬರುವ ಲಾಭವನ್ನು ಜನಹಿತಕ್ಕೆ ಉಪಯೋಗಿಸುವ ಉದ್ದೇಶದಿಂದ ಸರಕಾರವು ಈ ಚಟುವಟಿಕೆಗಳನ್ನು ಏಕೆ ರಾಷ್ಟ್ರೀಕರಣ ಮಾಡಬಾರದು? ಉದಾಹರಣೆಗೆ ಹೇಳಬೇಕೆಂದರೆ ಸಾರ್ವಜನಿಕರಿಗೆ ವಿದ್ಯುತ್ ಪೂರೈಕೆ. ಸಾರ್ವಜನಿಕರ ಹಿತದೃಷ್ಟಿಯಿಂದ ಸರಕಾರ ಮಾತ್ರವೇ ಒದಗಿಸಬಹುದಾದ ರಕ್ಷಣೆಯಲ್ಲಿ ಈಗ ಅದನ್ನು ಖಾಸಗಿಯವರು ಪೂರೈಸುತ್ತಿದ್ದಾರೆ. ಈ ಸಾರ್ವಜನಿಕ ಉಪಯೋಗದ ಕಾರ್ಯ ಚಟುವಟಿಕೆಯ ಲಾಭಗಳು ಸಾರ್ವಜನಿಕರ ನಂಬಿಗೆಯ ಏಜೆಂಟನಾದ ಸರಕಾರದ ಮೂಲಕ ಪುನಃ ಸಾರ್ವಜನಿಕರ ಜೇಬನ್ನು ಏಕೆ ಸೇರಬಾರದು ಎಂಬುದಕ್ಕೆ ಸಮರ್ಥನೀಯವಾದ ಯಾವುದೇ ಕಾರಣಗಳು ಇಲ್ಲ. ಈ ದಿಶೆಯಲ್ಲಿ ಇಲ್ಲಿಯವರೆಗೆ ಏನನ್ನೂ ಮಾಡಿಲ್ಲ. ಸರಕಾರಕ್ಕೆ ಆದಾಯ ತಂದುಕೊಡಬಹುದಾದ ಹಲವಾರು ಮೂಲಗಳ ಕದವನ್ನು ನಾವು ಇನ್ನೂ ತೆರೆದಿಲ್ಲ. ಈಗ ಅವುಗಳ ಲಾಭವು ಕೆಲವೇ ಮಂದಿಯ ಉಪಯೋಗಕ್ಕೆ ಸೀಮಿತವಾಗಿದೆ. ಈ ಕ್ಷೇತ್ರಗಳಲ್ಲಿನ ಅವಕಾಶಗಳನ್ನು ನಾವು ರಾಜ್ಯದ ಹಿತಕ್ಕಾಗಿ ಪರಿಶೀಲಿಸಬೇಕಾಗಿದೆ ಮತ್ತು ಆ ದಿಸೆಯಲ್ಲಿ ಸರಕಾರವು ಆತ್ಮವಿಶ್ವಾಸದಿಂದ ಮುನ್ನಡೆದು, ಸಂಪನ್ಮೂಲಗಳನ್ನು ಜನತೆಯ ಹಿತವರ್ಧನೆಗಾಗಿ ಬಳಸಿಕೊಳ್ಳಬಹುದು."

ನನ್ನ ಮಾನ್ಯ ಸ್ನೇಹಿತರು ಮಂಡಿಸಿರುವ ಹೊಸ ಆಯವ್ಯಯ ಪತ್ರದ ಮೇಲಿನ ಭಾಷಣದಲ್ಲಿ ಅಂಥದು ಏನಾದರೂ ಇದೆಯೇ? ಅವರು ತಾವು ನುಡಿದಂತೆ ನಡೆಯುವುದರಲ್ಲಿ ಹೀನಾಯವಾಗಿ ಸೋತಿದ್ದಾರೆ. ಹಿಂದಿನ ತಮ್ಮ ಆಯವ್ಯಯ ಪತ್ರದ ಮೇಲಿನ ಭಾಷಣದಲ್ಲಿ ಅವರು ಕೊಟ್ಟ ಯಾವುದೇ ಹೇಳಿಕೆಗಳ ಬಗ್ಗೆ ಸಾಂದರ್ಭಿಕವಾದ ಉಲ್ಲೇಖವೂ ಸಹ ಇದರಲ್ಲಿ ಇಲ್ಲ. ತಮ್ಮ ಮಾತನ್ನು ನಡೆಸಲಾಗದಂತಹ ಹೀನಾಯ ಸ್ಥಿತಿಯಲ್ಲಿ ಅವರೇಕೆ ಇದ್ದಾರೆ– ಇದು ನನ್ನ ಪ್ರಶ್ನೆ. ಅವರನ್ನು ಈ ಪರಿಸ್ಥಿತಿಗೆ ದೂಡಿದವರು ಯಾರು?

(ಗೌರವಾನ್ವಿತ ಸದಸ್ಯರು: "ವಲ್ಲಭ ಭಾಯಿ" "ಶೇಂಗಾವ") ಇದರ ಹಿಂದೆ ಯಾರೋ ಇರಲಿಕ್ಕೇ ಬೇಕು. ಆ ಬಗ್ಗೆ ನಾನು ಏನನ್ನೂ ಹೇಳುವುದಿಲ್ಲ. ಆದರೆ ನಾನು ಒಂದು ಸಂಗತಿಯನ್ನು ನಿರ್ವಂಚನೆಯಿಂದ ಹೇಳಬಯಸುತ್ತೇನೆ. ತೆರಿಗೆಗಳನ್ನು ಹೊಸದಾಗಿ ವಿಧಿಸಿಲ್ಲ ಎಂಬ ಕಾರಣಕ್ಕಾಗಿ ನನ್ನ ಮಾನ್ಯ ಸ್ನೇಹಿತರನ್ನು ಅಭಿನಂದಿಸಲಾಗಿದೆ ಎಂದು ನಾನು ಭಾವಿಸಿದ್ದೇನೆ. ಆದರೆ ಸರಕಾರವು ತೆರಿಗೆಯ ವ್ಯಾಪ್ತಿಯನ್ನು ವಿಸ್ತರಿಸುವುದರತ್ತ ಗಮನ ಹರಿಸದಿರುವುದನ್ನು ನಾನು ವೈಯಕ್ತಿಕವಾಗಿ ತೀವ್ರವಾಗಿ ಖಂಡಿಸುತ್ತೇನೆ. ಈ ಕಾರಣದಿಂದಾಗಿ ಈ ಆಯವ್ಯಯ ಪತ್ರವು ಸಿರಿವಂತರ ಪರವಾಗಿದೆ ಎಂದೇ ನಾನು ಹೇಳುತ್ತೇನೆ. ಅದು ಬಡವರ ಆಯವ್ಯಯ ಪತ್ರವಲ್ಲ. ಬಡವರ ಅವಶ್ಯಕತೆಗಳು ಬಹಳವಿದೆ. ಸಿರಿವಂತನು ಸರಕಾರದ ಮೇಲೆ ಅವಲಂಬಿಸಬೇಕಾಗಿಲ್ಲ. ಸಿರಿವಂತನಿಗೆ ಶಾಲೆ ಬೇಕಾಗಿಲ್ಲ. ಆತನು ಶಾಲಾ ಶಿಕ್ಷಕನನ್ನು ಇಟ್ಟುಕೊಂಡು ತನ್ನ ಮಗನಿಗೆ ಬಿ.ಎ. ಅಥವಾ ಎಂ.ಎ.ವರೆಗೆ ಅವನನ್ನು ಶಾಲೆಗೆ ಅಥವಾ ಕಾಲೇಜಿಗೆ ಕಳಿಸದೆಯೇ ಶಿಕ್ಷಣ ಕೊಡಿಸಬಲ್ಲನು. ಸಿರಿವಂತನಿಗೆ ಆಸ್ಪತ್ರೆ ಬೇಡ. ಆತನು ವೈದ್ಯರನ್ನು ಮನೆಗೆ ಕರೆಯಿಸಿಕೊಂಡು ಆತನಿಗೆ ರೂ. ೩೦.೦೦ಗಳನ್ನು ಕೊಟ್ಟು ತನ್ನನ್ನು, ತನ್ನ ಹೆಂಡತಿ ಮತ್ತು ಮಕ್ಕಳ ತಪಾಸಣೆ ಮಾಡಿಸಿಕೊಳ್ಳಬಲ್ಲ. ಬಡವನಿಗೆ ಮಾತ್ರ ಸರಕಾರದ ರಕ್ಷಣೆಯ ಅಗತ್ಯವಿದೆ. ಹೆಚ್ಚಿನ ಸೇವೆಗಳ ಅವಶ್ಯಕತೆ ಇರುವುದು ಬಡವನಿಗೆ. ಆತ್ಮಗೌರವವುಳ್ಳ ಯಾವುದೇ ಸರಕಾರವೂ ತಾನು ತೆರಿಗೆಗಳ ಮೂಲಕ ಆದಾಯವನ್ನು ಕ್ರೋಡೀಕರಿಸಲು ಅಶಕ್ತವಾಗಿರುವುದರಿಂದ ನಿಮಗೆ ಈ ಸೌಲಭ್ಯಗಳನ್ನು ನೀಡಲು ಅಸಮರ್ಥವಾಗಿದ್ದೇವೆ ಎಂದು ಬಡವರ್ಗದವರಿಗೆ ಹೇಳುವುದು ಸಾಧ್ಯವಿಲ್ಲ. ಅಂಥ ಸರಕಾರವು ಸಾಧ್ಯವಾದಷ್ಟು ಬೇಗ ತನ್ನ ಅಧಿಕಾರವನ್ನು ತ್ಯಜಿಸಿದರೆ ಅದು ಎಲ್ಲರಿಗೂ ಹೆಚ್ಚಿನ ರೀತಿಯಲ್ಲಿ ಕ್ಷೇಮಕರವಾಗುವುದು.

ಶ್ರೀ ಮುರಾರ್ಜಿ ಆರ್. ದೇಸಾಯಿ: ಅದೇ ಇಲ್ಲಿರುವ ಕಷ್ಟ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಉಲ್ಲೇಖಿಸಬೇಕಾಗಿರುವ ಇನ್ನೊಂದು ಅಂಶವಿದೆ. ಈ ಅಂಶವನ್ನು ಈ ಸದನದ ಎಷ್ಟು ಜನ ಸದಸ್ಯರು ಒಪ್ಪುತ್ತಾರೋ ನನಗೆ ಗೊತ್ತಿಲ್ಲ. ನನ್ನ ಸ್ಪಷ್ಟ ಅಭಿಪ್ರಾಯವೆಂದರೆ, ಯುರೋಪಿನ ದೇಶಗಳು ಯಾವುದನ್ನು 'ಸಮಾಜಸೇವೆ' ಎಂದು ಕರೆಯುತ್ತಾರೋ, ಅದಷ್ಟಕ್ಕೇ ಭಾರತದ ಯಾವುದೇ ಪ್ರಾಂತದ ಸರಕಾರವು, ತನ್ನ ದೃಷ್ಟಿಯನ್ನು ಸೀಮಿತಗೊಳಿಸಿಕೊಂಡರೆ, ಅವುಗಳು ಸಮಾಜಕ್ಕೆ ಒಳ್ಳೆಯದೇನನ್ನೂ ಮಾಡಲು ಸಾಧ್ಯವಿಲ್ಲ. ಬಡತನದ ಸಮಸ್ಯೆಯನ್ನು ಪರಿಹರಿಸುವುದು ಈ ಸರಕಾರದ ಮುಖ್ಯ ಕರ್ತವ್ಯಗಳಲ್ಲೊಂದಾಗಿರತಕ್ಕದ್ದು ಎಂದು ನಾನು ಒತ್ತಾಯಪೂರ್ವಕ ಹೇಳುತ್ತೇನೆ. ಈ ಪ್ರಾಂತದಲ್ಲಿ ರಾಷ್ಟ್ರೀಯ ಆದಾಯವು ವೃದ್ಧಿಯಾಗುವಂತೆ ಮಾಡಲು ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಸರಕಾರವು ತೆಗೆದುಕೊಳ್ಳಬೇಕು. ತನ್ಮೂಲಕ ಆಧುನಿಕ ಮತ್ತು ನಾಗರಿಕ ಸಮಾಜದವರಿಗೆ ಸಹಜವಾಗಿ ಅಗತ್ಯವಾಗಿರುವ ಸೌಲಭ್ಯಗಳನ್ನು ಒದಗಿಸಬೇಕು. ಯೂರೋಪಿನ ದೇಶಗಳಲ್ಲಿ ಸಮಾಜಸೇವೆಯ ಹೆಸರಿನಡಿಯಲ್ಲಿ ನಿರುದ್ಯೋಗ ಭತ್ಯೆ, ಹೆರಿಗೆ ಸಮಯದಲ್ಲಿನ ಅಗತ್ಯ ಸೌಲಭ್ಯಗಳು ಮೊದಲಾದವುಗಳನ್ನು ಧರ್ಮಾರ್ಥವಾಗಿ ಕೊಡುವುದರ ಹಿಂದೆ ಇರುವ ಚಿಂತನೆಯೆಂದರೆ, ಅಲ್ಲಿನ ಸಮಾಜದಲ್ಲಿ ಬಹುತೇಕರು ಬಡತನ ರೇಖೆಗಿಂತ ಮೇಲಿರುತ್ತಾರೆ. ಆರ್ಥಿಕ ನೀತಿಯಿಂದಾಗಿ ಅಥವಾ ವೈಯಕ್ತಿಕ ಜೀವನದಲ್ಲಿನ ದುರದೃಷ್ಟದಿಂದಾಗಿ ಬಡತನದ ರೇಖೆಗಿಂದ ಕೆಳಗೆ ಇದ್ದು ಇಂತಹ ಕೊಡುಗೆಗಳನ್ನು ಅಪೇಕ್ಷಿಸುವವರ ಸಂಖ್ಯೆ ಅತಿ ಕಡಿಮೆ ಇರುತ್ತದೆ. ಅವರಿಗೆ ಮಾತ್ರ ಸರಕಾರದ ಸಹಾಯ ಅವಶ್ಯವಿದೆ. ಇದರಿಂದಾಗಿ ಯುರೋಪದ ಸರಕಾರಗಳಿಗೆ ಒಟ್ಟು ಎಲ್ಲ ಜನತೆಯ ಸಾಮಾನ್ಯ ಆರ್ಥಿಕ ಹೆಚ್ಚಳದ ಪ್ರಶ್ನೆಯ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು ಸಂಪೂರ್ಣವಾಗಿ ಸಾಧ್ಯವಿದೆ ಮತ್ತು ಸಂಪೂರ್ಣವಾಗಿ ನ್ಯಾಯಯುತವಾದುದೂ ಆಗಿರುತ್ತದೆ. ಆದರೆ ಈ ದೇಶದಲ್ಲಿ

ನಾವು ಎದುರಿಸುತ್ತಿರುವ ಸಮಸ್ಯೆಗಳ ಸ್ವರೂಪವು ತುಂಬಾ ವಿಭಿನ್ನವಾದುದಾಗಿದೆ. ನಮ್ಮದು ಭಿಕ್ಷುಕರ ಮತ್ತು ಕೂಲಿಯವರ ರಾಷ್ಟ್ರವಾಗಿದೆ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ ಮತ್ತು ನಾನು ಹಾಗೆ ಹೇಳಿದರೆ ಈ ಸದನದಲ್ಲಿರುವ ಸದಸ್ಯರಾರೂ ಪ್ರತಿರೋಧಿಸುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ಇದು ಇಲ್ಲಿನ ಜನತೆಯನ್ನು ನೋಡಿದ ಯಾರಾದರೂ ಹೇಳುವ ಮಾತೇ ಆಗಿದೆ. ಆತ್ಮಗೌರವವಿರುವ ಯಾವದೇ ಸರಕಾರವು ಈ ಗಂಭೀರ ಪ್ರಶ್ನೆಯ ಬಗ್ಗೆ ಕೈಕಟ್ಟಿಕೊಂಡು ಕೂರಲಾರದು ಮತ್ತು ಗಮನಿಸದೆ ಇರಲಾರದು.

ಮಾನ್ಯರೇ, ಈಗ ನಮ್ಮ ಮುಂದಿರುವ ಆಯವ್ಯಯ ಪತ್ರದಲ್ಲಿನ ಪ್ರಸ್ತಾವಗಳನ್ನು ಗಮನದಲ್ಲಿಟ್ಟು ಕೊಂಡು ನೋಡಿದರೆ ಈ ಸರಕಾರಕ್ಕೆ ಈ ಸಮಸ್ಯೆಯ ತಿಳಿವಳಿಕೆ ಇದೆಯೆ? ಅದರ ಬಗ್ಗೆ ಅದು ಗಮನವನ್ನು ಹರಿಸಿದೆಯೆ? ಏನೇ ಆದರೂ ಈ ದೇಶದ ರಾಷ್ಟ್ರೀಯ ವರಮಾನವು ಹೆಚ್ಚಬೇಕೆಂಬುದೊಂದೇ ಸರ್ವಶ್ರೇಷ್ಠ ಎಂಬುದನ್ನು ಸೂಚಿಸುವಂಥದು ಏನಾದರೂ ಅದರಲ್ಲಿ ಇದೆಯೇ? ಎಂಬ ಪ್ರಶ್ನೆಗಳು ಮೂಡುತ್ತವೆ. ಅಂಥದು ಏನೂ ನನಗೆ ಕಾಣಿಸುವುದಿಲ್ಲ. ಈಗ ನಾನು ಸಾರ್ವತ್ರಿಕವಾಗಿರುವ ವಿಚಾರವೊಂದನ್ನು ಪ್ರಸ್ತಾಪಿಸುತ್ತೇನೆ. ವ್ಯವಸಾಯಗಾರರ ಬಡತನಕ್ಕೆ ಅತಿ ಹೆಚ್ಚಿನ ಭಾರವೆಂದು ಭಾವಿಸಿರುವ ಭೂಕಂದಾಯವೇ ಕಾರಣ ಎಂಬ ಅಭಿಪ್ರಾಯವು ಸಾರ್ವಜನಿಕವಾಗಿದೆ. ಹಣಕಾಸು ಸಚಿವರ ಅಭಿಪ್ರಾಯವೂ ಇದೇ ಆಗಿದೆ ಎನ್ನುವುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಅದು ಜನತೆಯ ವರಮಾನವನ್ನು ಹೆಚ್ಚಿಸಬೇಕಾದರೆ ಭೂಕಂದಾಯದ ಹೊರೆಯನ್ನು ಇಳಿಸುವುದೇ ಈಗ ಮಾಡಬೇಕಾದ ಕೆಲಸವಾಗಿದೆ. ಮಾನ್ಯರೇ, ಈಗ ಈ ಅಭಿಪ್ರಾಯಕ್ಕಿಂತ ತಪ್ಪು ಕಲ್ಪನೆಯನ್ನುಂಟುಮಾಡುವ ಬೇರೆ ಯಾವ ಅಭಿಪ್ರಾಯವೂ ಇರಲಾರದೆಂದು ಹೇಳುವ ಸ್ವಾತಂತ್ರ್ಯವನ್ನು ನಾನು ತೆಗೆದುಕೊಳ್ಳುತ್ತೇನೆ. ಅದರ ಅರ್ಥ ನಾನು ಭೂಕಂದಾಯವನ್ನು ಇಳಿಸುವುದಕ್ಕೆ ವಿರೋಧಿಯಾಗಿದ್ದೇನೆ ಎಂದು ಅಲ್ಲ. ನಾನೂ ಅದರ ಪರವಾಗಿಯೇ ಇದ್ದೇನೆ. ನಾನು ಅದನ್ನು ಒತ್ತಾಯಿಸುತ್ತೇನೆ. ಏಕೆಂದರೆ ಭೂಮಿಯ ಉಪಯೋಗಕ್ಕಾಗಿ ಇರುವ ಲಾವಣಿಗಿಂತ ಭಿನ್ನವಾಗಿರುವ ವ್ಯವಸಾಯದ ಲಾಭವೆಂದು ಪರಿಗಣಿಸಲಾಗಿರುವುದನ್ನು ಕಿತ್ತುಕೊಳ್ಳಲು ಈ ಸರಕಾರಕ್ಕೆ ನಿಜವಾಗಿಯೂ ಯಾವುದೇ ಹಕ್ಕು ಇಲ್ಲ ಎಂದೇ ನಾನು ಹೇಳುತ್ತೇನೆ. ಸದ್ಯ ಪ್ರಚಲಿತವಿರುವಂತೆ ಕಾಣುವ ಮತ್ತು ಅದರ ಆಧಾರದ ಮೇಲೆ ಈ ಸರಕಾರವು ಮುಂದುವರಿಯುತ್ತಿರುವಂತೆ ಕಾಣುವ ಒಂದು ವಿಚಾರದ ಪರೀಕ್ಷೆಗೆ ನನಗೊಂದು ಕ್ಷಣ ಕಾಲಾವಕಾಶ ಕೊಡಿ. ಅದೆಂದರೆ ಸಾಮಾನ್ಯ ಜನತೆಯನ್ನು ಬಡತನದಿಂದ ಬಿಡುಗಡೆ ಮಾಡಲು ತೆಗೆದುಕೊಳ್ಳಬೇಕಾದ ಕ್ರಮವೆಂದರೆ ಭೂಕಂದಾಯವನ್ನು ಮನ್ನಾ ಮಾಡುವುದು ಅಥವಾ ಅದನ್ನು ಕಡಿಮೆ ಮಾಡುವುದು ಎಂಬುದೇ ಆಗಿರುತ್ತದೆ. ಮಾನ್ಯರೇ, ಈ ಕ್ರಮದಿಂದ ಯಾವ ಪರಿಹಾರವನ್ನು ನಾವು ಕೊಡಬಲ್ಲೆವು ಎಂಬುದನ್ನು ನಾವು ಪರೀಕ್ಷಿಸೋಣ. ನಾವು ಸಂಗ್ರಹಿಸುತ್ತಿರುವ ಒಟ್ಟು ಭೂಕಂದಾಯವು ಮೂರೂವರೆ ಕೋಟಿ ರೂಪಾಯಿಗಳು ಮತ್ತು ಈ ಪ್ರಾಂತದ ಒಟ್ಟು ಜನಸಂಖ್ಯೆ ಸುಮಾರು ೨ ಕೋಟಿ ಗಳಷ್ಟು. ವಾದಕ್ಕಾಗಿ ಮತ್ತು ನನ್ನ ಮನಸ್ಸಿನ ವಿರುದ್ಧವಾಗಿ ಭಾವಿಸುವುದಾದಾಗ್ಯೂ, ಈ ಸರಕಾರವು ದೊಡ್ಡ ಮನಸ್ಸಿನಿಂದ ಎಲ್ಲ ಭೂಕಂದಾಯವನ್ನು ಅಂದರೆ ರೂ. ಮೂರುವರೆ ಕೋಟಿಗಳನ್ನು ಮನ್ನಾ ಮಾಡುತ್ತಿದೆ ಎಂದು ಭಾವಿಸಿದರೂ, ಈ ಬಹು ಮೌಲಿಕ ರೂ. ಮೂರೂವರೆ ಕೋಟಿಗಳನ್ನು ಎರಡು ಕೋಟಿ ಜನತೆಯಲ್ಲಿ ಹಂಚೋಣ. ಈಗ ಅಂದಾಜಿನ ಮೇಲೆ ಲೆಕ್ಕ ಹಾಕಿದಾಗ, ಈ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯ ಒಟ್ಟು ಉತ್ಪನ್ನಕ್ಕೆ ಒಂದು ರೂಪಾಯಿ ಎಂಟು ಆಣೆಗಳ ಹೆಚ್ಚಳ ಕಂಡುಬರುತ್ತದೆ. ಅದು ಅತೀ ಹೆಚ್ಚಿನದೇ ಆಗಿದೆ. ಇದನ್ನು ತಿಂಗಳ ಭತ್ಯವಾಗಿ ಲೆಕ್ಕ ಹಾಕಿದರೆ ಪ್ರತಿಯೊಬ್ಬ ವ್ಯಕ್ತಿಯ ಉತ್ಪನ್ನದಲ್ಲಿನ

ಹೆಚ್ಚಳವು ಎರಡೂವರೆ ಆಣೆಗಳಷ್ಟಾಗುತ್ತದೆ. ಇಡೀ ಭೂಕಂದಾಯವನ್ನು ಮನ್ನಾ ಮಾಡುವುದರಿಂದ ಆಗಬಹುದಾದ ಎರಡೂವರೆ ಆಣೆಯ ಹೆಚ್ಚಳದಿಂದ ನಮ್ಮಲ್ಲಿನ ಬಡತನದ ಸಮಸ್ಯೆಯನ್ನು ಹೊಡೆದು ಹಾಕುವಂಥ ಆರ್ಥಿಕ ಕಲ್ಯಾಣವನ್ನು ಸಾಧಿಸಬಹುದು ಎಂದು ಯಾರಾದರೂ ಪೂರ್ಣ ನಂಬುಗೆಯಿಂದ ಹೇಳಬಲ್ಲರೋ ಎಂಬ ಪ್ರಶ್ನೆಯನ್ನು ನಾನು ಈಗ ಕೇಳಬಯಸುತ್ತೇನೆ. ಮಾನ್ಯರೆ, ಈ ಪ್ರಶ್ನೆಗೆ ಬೇರೆ ಪರಿಹಾರಗಳ, ಸಂಪೂರ್ಣವಾಗಿ ವಿಭಿನ್ನವಾದ ಪರಿಹಾರಗಳ ಅವಶ್ಯಕತೆ ಇದೆ. ಆ ಬಗ್ಗೆ ಚರ್ಚೆಗೆ ಇಳಿಯಲು ಈಗ ನನಗೆ ಬೇಕಾಗಿಲ್ಲ. ಈ ಸದನಕ್ಕೆ ನಾನು ಈಗಾಗಲೇ ಸಾಕಷ್ಟು ದಣಿವನ್ನುಂಟುಮಾಡಿದ್ದೇನೆ. ಆದರೆ ಇದು ಸರಕಾರಕ್ಕೆ ಗೊತ್ತಿಲ್ಲದ ವಿಷಯವೆಂದು ಎಂದು ನಾನು ಭಾವಿಸಿಲ್ಲ. ಆದರೆ, ಈ ಸಮಸ್ಯೆಯನ್ನು ಪರಿಹರಿಸಲು ಯಾವುದೇ ವಿಧಾನ ಅಥವಾ ಮಾರ್ಗವಿಲ್ಲದ ಸರಕಾರವು ಯಾವುದೇ ಪರಿಹಾರವನ್ನು ಕೊಡಲಾರದು. ಅದು ಈ ಪ್ರಾಂತದ ಜನತೆಗೆ ಸುಖವನ್ನು ಒದಗಿಸಲಾರದು ಮತ್ತು ಆ ಕಾರಣದಿಂದಾಗಿ ಒಟ್ಟಿನಲ್ಲಿ ಹೇಳಬೇಕೆಂದರೆ ಈ ಆಯವ್ಯಯ ಪತ್ರವು ತುಂಬಾ ಅತೃಪ್ತಿಕರವಾದುದಾಗಿದೆ. ಈ ಆಯವ್ಯಯ ಪತ್ರವು ಸಿರಿವಂತರಿಗೆ ಪರಿಹಾರ ಕೊಟ್ಟು ಲಕ್ಷಾಂತರ ಜನರನ್ನು ಉಪವಾಸ ಕೆಡವುತ್ತದೆ (ಚಪ್ಪಾಳೆಗಳು).

# ಆಯವ್ಯಯ ಪತ್ರ: ೪*

ಡಾ. ಬಿ. ಆರ್. ಅಂಬೇಡ್ಕರ್: (ಮುಂಬಯಿ ನಗರ): ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಣಕಾಸು ಮಂತ್ರಿಯವರು ಈ ಸದನದಲ್ಲಿ ಮಂಡಿಸಿದ ಮೂರನೆಯ ಆಯವ್ಯಯ ಪತ್ರ ಇದಾಗಿದೆ. ಅವರು ಈ ಮುಂಚೆ ಮಂಡಿಸಿದ ಎರಡು ಆಯವ್ಯಯ ಪತ್ರಗಳು ತೃಪ್ತಿಕರವಾಗಿರಲಿಲ್ಲ ಎಂದರೆ ಅತಿಶಯೋಕ್ತಿ ಅಲ್ಲ ಎಂದು ನಾನು ಭಾವಿಸುತ್ತೇನೆ. ಮೊದಲನೆ ಎರಡು ಆಯವ್ಯಯ ಪತ್ರಗಳು ತೃಪ್ತಿಕರವಾಗಿರದೆ ಇರುವುದಕ್ಕೆ ಸಾಕಷ್ಟು ನೆಪಗಳೂ ಇದ್ದವೆನ್ನಬಹುದು. ಅವರು ಮಂಡಿಸಿದ ಮೊದಲನೆಯ ಆಯವ್ಯಯ ಪತ್ರವು ವಾಸ್ತವವಾಗಿ ಅವರದಾಗಿರಲಿಲ್ಲ. ಅದು ಬಹುಶಃ ಹಂಗಾಮಿ ಮಂತ್ರಿ ಮಂಡಳವು ತಯಾರಿಸಿದ್ದಾಗಿತ್ತು ಮತ್ತು ಅದರಲ್ಲಿನ ಯಾವುದೇ ದೋಷಗಳಿಗೆ ನಿಜವಾಗಿಯೂ ಹಣಕಾಸು ಮಂತ್ರಿಗಳನ್ನು ಹೊಣೆಗಾರನನ್ನಾಗಿ ಮಾಡಲು ಬರುವುದಿಲ್ಲ. ತನ್ನ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಇಡಿಯ ವಿಷಯವನ್ನು ಅಧ್ಯಯನ ಮಾಡಲು ಸರಕಾರಕ್ಕೆ ಸಾಕಷ್ಟು ಕಾಲಾವಕಾಶವಿರದಿದ್ದುದರಿಂದ ಎರಡನೆಯ ಆಯವ್ಯಯ ಪತ್ರವನ್ನು ಗಡಿಬಿಡಿಯಲ್ಲಿ ಮಾಡಲಾಯಿತು ಎಂಬ ನೆಪ ಅದಕ್ಕೆ ಇತ್ತು. ಆದರೆ ಅಂತಹ ನೆಪ ಅಥವಾ ಕಾರಣಗಳು ನಮ್ಮ ಮುಂದೆ ಮಂಡಿಸಲಾಗಿರುವ ಈ ಆಯವ್ಯಯ ಪತ್ರಕ್ಕೆ ಅನ್ವಯವಾಗುವುದಿಲ್ಲ ಎಂಬುದು ನನ್ನ ಖಚಿತ ಅಭಿಪ್ರಾಯ. ಈ ಆಯವ್ಯಯ ಪತ್ರವನ್ನು ಪಕ್ವವಾದ ಪರ್ಯಾಲೋಚನೆಗಳ ಆನಂತರವೇ ಸಿದ್ಧಪಡಿಸಲಾಗಿದೆ ಎಂದು ಹೇಳಲೇಬೇಕು. ತಮ್ಮ ದೃಷ್ಟಿಯಲ್ಲಿ ಅತ್ಯಂತ ಜರೂರಾದ ವಿಷಯಗಳೆಂದು ಭಾವಿಸಿರುವ ತೆರಿಗೆ ಸಂಗ್ರಹದ ಬಗ್ಗೆ ಮತ್ತು ಖರ್ಚಿನ ಪ್ರಸ್ತಾವಗಳ ಬಗ್ಗೆ ಮಂತ್ರಿ ಮಂಡಳ ಹೊಂದಿದ್ದ ಪೂರ್ಣ ಯೋಜನೆಯನ್ನು ನಿಜವಾಗಿಯೂ ಅದು ಒಳಗೊಂಡಿರುತ್ತದೆ. ಆದ್ದರಿಂದ ಈ ಆಯವ್ಯಯ ಪತ್ರವನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ ಎಂಬುದು ನನ್ನ ಅಭಿಪ್ರಾಯ.

ಈ ಆಯವ್ಯಯ ಪತ್ರವು ತೀವ್ರ ಚರ್ಚೆಯನ್ನು ಹುಟ್ಟುಹಾಕಿದೆ ಎನ್ನುವುದನ್ನು ಪ್ರತಿಯೊಬ್ಬನೂ ತಿಳಿದಿರುತ್ತಾನೆ. ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದ್ದವರು ನಿರಾಶರಾಗಿದ್ದಾರೆ. ಮತ್ತು ಸಂಕಷ್ಟಕ್ಕೆ ಒಳಗಾಗಿರುವವರು ಈ ಆಯವ್ಯಯ ಪತ್ರವನ್ನು ಕ್ರಾಂತಿಕಾರೀ ಎಂದು ಕರೆದಿರುತ್ತಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ಈ ಆಯವ್ಯಯ ಪತ್ರವನ್ನು ಸಮಗ್ರವಾಗಿ ನೋಡಿದಾಗ, ಅದನ್ನು ಹೀಗೆ ವರ್ಣಿಸುವುದು ಸೂಕ್ತವಾಗಬಹುದು– ಅಂದರೆ ಆದಾಯದ ಭಾಗದಲ್ಲಿ ಇದು ವಿವೇಚನೆ ಇಲ್ಲದ ಆಯವ್ಯಯ ಪತ್ರವಾಗಿದೆ ಮತ್ತು ಖರ್ಚಿನ ಭಾಗದಲ್ಲಿ ಅದು ಅರ್ಥಹೀನ ಆಯವ್ಯಯ ಪತ್ರವಾಗಿದೆ. ಈ ಆಯವ್ಯಯ ಪತ್ರದ ಭಾಗವಾಗಿರುವ ಹಣಕಾಸು ಮಸೂದೆಯಲ್ಲಿ ಸೇರಿಸಲಾಗಿರುವ ಪ್ರಸ್ತಾವಗಳ ಗುಣಾವಗುಣಗಳ ಬಗ್ಗೆ ಚರ್ಚಿಸಲು ನಿಜವಾಗಿಯೂ ಇದು ಸಂದರ್ಭವಲ್ಲ. ಈ ಪ್ರಸ್ತಾವಗಳ ವಿವರವಾದ ಟೀಕೆಯನ್ನು ಮಾಡಲು ಹಣಕಾಸು ಮಸೂದೆಯನ್ನು ಈ ಸದನದ ಮುಂದೆ ಚರ್ಚೆಗಾಗಿ ಮಂಡಿಸುವವರೆಗೆ ಕಾಯಬೇಕಾಗುತ್ತದೆ. ಏನೇ ಆದರೂ ಸಾಮಾನ್ಯ ರೀತಿಯಲ್ಲಿ ಹಣಕಾಸಿನ ಮಸೂದೆಯಲ್ಲಿ

---

* ಬಿ.ಎಲ್.ಎ. ಡಿಬೇಟ್ಸ್, ಸಂ. ೫, ಭಾಗ–I
ಪುಟಗಳು ೬೦೩–೧೬, ೨೧ ಫೆಬ್ರುವರಿ ೧೯೩೯

ಮಂತ್ರಿಯವರು ಸೇರಿಸಿದ ತೆರಿಗೆ ಸಂಗ್ರಹದ ಪ್ರಸ್ತಾವಗಳ ಬಗ್ಗೆ ನನಗೆ ಅನ್ನಿಸಿದ್ದನ್ನು ಹೇಳುವುದು ಅನುಚಿತವಾಗುವುದಿಲ್ಲ.

ಹಣಕಾಸಿನ ಮಸೂದೆಯಲ್ಲಿ ಆರು ಬೇರೆ ಬೇರೆ ಪ್ರಸ್ತಾವಗಳು ಇರುತ್ತವೆ. ಅವುಗಳಲ್ಲಿ ಮೊದಲನೆಯದು ಎಂದರೆ ಈ ಮಸೂದೆಯು ೧೯೩೨ರ ಮುಂಬೈ ಹಣಕಾಸು ಅಧಿನಿಯಮ IIರ ಮೇರೆಗೆ ಮಂಜೂರು ಮಾಡಲಾಗಿರುವ ಸ್ಟ್ಯಾಂಪ್ ಕರಗಳಿಗೆ ಮತ್ತು ನ್ಯಾಯಾಲಯ ಶುಲ್ಕಗಳಿಗೆ ಸೇರಿಸಲಾದ ನಿಯಮಗಳನ್ನು ಮತ್ತೆ ಒಂದು ವರುಷದವರೆಗೆ ಮುಂದುವರೆಸಿಕೊಂಡು ಹೋಗಲು ಸೂಚಿಸಲಾಗಿದೆ. ಎರಡನೆಯದಾಗಿ, ವಿದ್ಯುತ್ ಬಳಕೆಯ ಮೇಲಿನ ಸುಂಕವನ್ನು ಇದು ಹೆಚ್ಚು ಪ್ರಸ್ತಾವವಿದೆ. ಮೂರನೆಯದಾಗಿ ಕೆಲವು ನಿರ್ದಿಷ್ಟ ನಗರಗಳಲ್ಲಿನ ಮತ್ತು ನಗರ ಪ್ರದೇಶಗಳಲ್ಲಿನ ಸ್ಥಿರ ಸ್ವತ್ತಿನ ವರ್ಗಾವಣೆಯ ಮೇಲೆ ಸ್ಟ್ಯಾಂಪ್ ಕರವನ್ನು ಹೆಚ್ಚಿಸಿದ್ದು. ನಾಲ್ಕನೆಯದಾಗಿ ಅದು ಸ್ಥಿರ ಸ್ವತ್ತಿನ ಲಾವಣಿಯ ಮೇಲೆ ಕರವನ್ನು ವಿಧಿಸುತ್ತದೆ. ಐದನೆಯದಾಗಿ ಮುಂಬೈಯಲ್ಲಿ ಕಟ್ಟಡಗಳ ವಾರ್ಷಿಕ ಅಂದಾಜು ಬಾಡಿಗೆ ಮೌಲ್ಯದ ಮೇಲೆ ಶೇಕಡಾ ೧೦ರಷ್ಟು ಕರವನ್ನು ವಿಧಿಸುತ್ತದೆ ಮತ್ತು ಆರನೆಯದಾಗಿ ಅದು ಶೇಕಡಾ ಆರೂವರೆಗಿಂತ ಹೆಚ್ಚಾಗದಂತೆ ಮೂರು ಬಾಬುಗಳ ಮೇಲೆ ಅಂದರೆ ಮೋಟಾರು ಸ್ಪಿರಿಟ್ ಅಥವಾ ಲ್ಯೂಬ್ರಿಕೆಂಟ್, ತಯಾರಿಸಲಾದ ಬಟ್ಟೆ ಮತ್ತು ರೇಶಿಮೆ ನೂಲು– ಇವುಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸುತ್ತದೆ. ನಾನು ಹೇಳಿದಂತೆ ಕರಾಕರಣೆ ಈ ಪ್ರಸ್ತಾವಗಳ ವಿವರಗಳನ್ನು ಚರ್ಚಿಸಲು ನಾನು ಹೋಗುವುದಿಲ್ಲ. ನಾನು ಈಗ ಮಾಡುವುದೆಲ್ಲವೂ ಸಂಕ್ಷಿಪ್ತವಾಗಿ ಸಾಮಾನ್ಯ ತತ್ವಗಳನ್ನು ಆಧರಿಸಿ ನನ್ನಲ್ಲಿ ಮೂಡಿದ ಕೆಲವು ಟೀಕೆಗಳನ್ನು ಮಾತ್ರ ಮುಂದಿಡುವುದಷ್ಟೆ.

ಸ್ಟ್ಯಾಂಪ್ ಮತ್ತು ನ್ಯಾಯಾಲಯದ ಶುಲ್ಕವನ್ನು ಮುಂದುವರೆಸುವುದಕ್ಕೆ ಸಂಬಂಧಿಸಿದಂತೆ, ನನ್ನ ನೆನಪು ಸರಿಯಾಗಿದ್ದರೆ, ಅದಕ್ಕೆ ಹಳೆಯ ವಿಧಾನ ಪರಿಷತ್ತಿನ ಎಲ್ಲ ಕಾಂಗ್ರೆಸ್ಸಿಗರೂ ಯಾವಾಗಲೂ ತಕರಾರು ಮಾಡಿದ್ದರು ಎಂಬುದನ್ನು ಗೌರವಾನ್ವಿತ ಹಣಕಾಸು ಮಂತ್ರಿಗಳಿಗೆ ನೆನಪು ಮಾಡಿಕೊಡಲು ನಾನು ಇಚ್ಛಿಸುತ್ತೇನೆ. ಮಾನ್ಯರೇ, ಕಾಂಗ್ರೆಸ್ಸಿಗರು ಬಜೆಟ್ ಅಧಿವೇಶನವನ್ನು ಒಂದು ಬದಿಗೆ ಹಣಕಾಸು ಸದಸ್ಯರ ಮತ್ತು ಇನ್ನೊಂದು ಬದಿಗೆ ಕಾಂಗ್ರೆಸ್ಸಿಗರ ನಡುವಣ ವಾರ್ಷಿಕ ಕಠಿಣ ಹೋರಾಟ ವನ್ನಾಗಿ ಪರಿವರ್ತಿಸದ ಯಾವುದೇ ಆಯವ್ಯಯ ಅಧಿವೇಶನ ನಡೆದದ್ದು ನನಗೆ ನೆನಪಿಲ್ಲ. ಹಿಂದಿನ ಎಲ್ಲಾ ಬಜೆಟ್ ಅಧಿವೇಶನಗಳಲ್ಲಿ ತಾವು ಈ ತೆರಿಗೆಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಕಾಂಗ್ರೆಸ್ಸಿಗರು, ಈಗ ತಾವೇ ಅಧಿಕಾರದಲ್ಲಿರುವುದರಿಂದ, ಅದೇ ತೆರಿಗೆಗಳನ್ನು ಮುಂದುವರೆಸುತ್ತಿದ್ದಾರೆ. ಅಂದರೆ ಒಮ್ಮೆ ಬೇಡವಾದ ವಿಷಯಗಳು ಈಗ ಒಳ್ಳೆಯವಾಗಿವೆ, ಏಕೆಂದರೆ ಈಗ ಕಾಂಗ್ರೆಸ್ಸಿನವರು ಆಡಳಿತ ನಡೆಸುತ್ತಿದ್ದಾರೆ. ಮನಸ್ಸಿನ ಬದಲಾವಣೆಯ ಅಂಥ ಹಲವಾರು ಉದಾಹರಣೆಗಳನ್ನು ಹೇಳಬಹುದು. ಕಾರ್ಯಾಂಗವು ನ್ಯಾಯಾಂಗದಿಂದ ಬೇರೆಯಾಗಿಲ್ಲವೆಂದು ಕಾಂಗ್ರೆಸ್ಸಿನವರು ತೀವ್ರ ಹೋರಾಟವು ಮಾಡುತ್ತಿದ್ದುದು ನಮಗೆ ಗೊತ್ತು. ಅದು ಅತ್ಯಂತ ದಮನಕಾರೀ ಪದ್ಧತಿಯೆಂದು ಅವರು ಭಾವಿಸಿದ್ದರು ಮತ್ತು ಈಗ ಆ ಪದ್ಧತಿಯು ತುಂಬಾ ಆದರ್ಶವಾದ ಪದ್ಧತಿಯಾಗಿದೆಯೆಂದು ಅದೇ ಕಾಂಗ್ರೆಸ್ಸಿನವರು ಸಮರ್ಥಿಸುತ್ತಿದ್ದಾರೆ. ಇದಕ್ಕಿಂತ ಹೆಚ್ಚಾಗಿ ನಾನು ಏನನ್ನೂ ಹೇಳುವುದಿಲ್ಲ. ಆದರೆ, ಈ ವರ್ತನೆಯು ಕಾಂಗ್ರೆಸ್ಸಿನ ಘೋಷಿತ ನಂಬಿಕೆಗೇ ನಿಜವಾಗಿಯೂ ವಿರುದ್ಧವಾದುದಾಗಿದೆ ಎಂದು ನಾನು ಸ್ಪಷ್ಟವಾಗಿ ಎತ್ತಿ ತೋರಿಸಲು ಇಚ್ಛಿಸುತ್ತೇನೆ.

ವಿದ್ಯುತ್ ಕರದ ವಿಷಯಕ್ಕೆ ಬಂದರೆ, ಅದು ನನ್ನ ಮನಸ್ಸಿಗೆ ತಾತ್ವಿಕವಾಗಿ ಇದು ಕೆಟ್ಟ ಕರ ಎನಿಸುತ್ತದೆ. ವಿದ್ಯುತ್ತಿನ ಉಪಯೋಗಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ನಂಬುವವರಲ್ಲಿ ನಾನೂ

ಒಬ್ಬನಾಗಿರುತ್ತೇನೆ. ಯಾಕೆಂದರೆ ವಿದ್ಯುತ್ ಇಲ್ಲದಿದ್ದಾಗ ಜನರು ಸೀಮೆಎಣ್ಣೆಯನ್ನು ಉಪಯೋಗಿಸುತ್ತಾರೆ. ಅದು ಹೊಗೆಯನ್ನು ಉಂಟುಮಾಡುತ್ತದೆ. ಆ ಹೊಗೆ ಆರೋಗ್ಯಕ್ಕೆ ಹಾನಿಕರ. ಸಾಧ್ಯವಿದ್ದ ಅತ್ಯುತ್ತಮ ವಿಧಾನದಿಂದ ಅದನ್ನು ತಡೆಯಬೇಕು. ಸೀಮೆಎಣ್ಣೆಯ ಉಪಯೋಗವನ್ನು ಕಡಿಮೆ ಮಾಡುವ ಒಂದೇ ಒಂದು ಉಪಾಯವೆಂದರೆ ಸಾಧ್ಯವಿರುವಷ್ಟರ ಮಟ್ಟಿಗೆ ವಿದ್ಯುತ್ತಿನ ಬೆಲೆಯನ್ನು ಕಡಿಮೆ ಮಾಡುವುದೇ ಆಗಿರುತ್ತದೆ. ಆದುದರಿಂದ ಸಾಮಾನ್ಯ ತತ್ವಗಳ ಮೇಲೆ ನಾನು ವಿನಂತಿಸುವುದೇನೆಂದರೆ ಇದು ಕೆಟ್ಟ ಕರವಾಗಿರುತ್ತದೆ. ಈ ಕರಾಕರಣೆಯ ಪ್ರಸ್ತಾಪದ ಮೇಲೆ ನನ್ನ ಎರಡನೆಯ ಟೀಕೆ ಎಂದರೆ ಅದು ಕೆಟ್ಟ ರೀತಿಯಲ್ಲಿ ವಿಧಿಸಲಾಗಿರುವ ಕರವಾಗಿರುತ್ತದೆ. ಈ ವಿದ್ಯುತ್ ಕರದ ಬಗ್ಗೆ ಕಂಡುಬಂದ ಅತ್ಯಂತ ವಿಶೇಷವಾದ ಒಂದು ಸಂಗತಿಯೆಂದರೆ ಸಿನಿಮಾ ಮತ್ತು ಥಿಯೇಟರುಗಳು ಉಪಯೋಗಿಸುತ್ತಿರುವ ವಿದ್ಯುತ್ ಶಕ್ತಿಯ ಮೇಲೆ ಕರವನ್ನು ಏರಿಸಿಲ್ಲ. ಮಾನ್ಯರೇ, ಯಾವುದೇ ವ್ಯಕ್ತಿಗತ ಅಥವಾ ವೈಯಕ್ತಿಕ ಕರವಿದ್ದರೆ ಅದು ನಿಜವಾಗಿಯೂ ಸಿನಿಮಾ ಮತ್ತು ಥೇಟರು ಎಂದು ನಾನು ಭಾವಿಸಬಹುದಾಗಿತ್ತು. ಏಕೆಂದರೆ ಸಿನೇಮಾ ಮೇಲೆ ಅಥವಾ ಥೇಟರ್ ಮೇಲೆ ಕರವನ್ನು ವಿಧಿಸಿದರೆ ಅದನ್ನು ಖಚಿತವಾಗಿಯೂ ಬಳಕೆದಾರನೇ ಅದನ್ನು ಕೊಡದಿದ್ದಾಗ್ಯೂ, ಥೇಟರುಗಳಿಗೆ ಮತ್ತು ಸಿನೇಮಾಗಳಿಗೆ ಹೋಗುವ ವ್ಯಕ್ತಿಗಳಿಗೇನೇ ವರ್ಗಾಯಿಸಲಾಗುತ್ತಿದೆ. ಅದು ಐಷಾರಾಮದ ಮೇಲೆ ವಿಧಿಸುವ ಕರವಾಗುತ್ತದೆ. ನಾನು ಹೇಳುವುದು ನೂರಕ್ಕೆ ನೂರರಷ್ಟು ಸರಿ ಇಲ್ಲದಿರಬಹುದಾದರೂ ಗೌರವಾನ್ವಿತ ಹಣಕಾಸಿನ ಮಂತ್ರಿಯವರು ಮನೆಗಳ ಮೇಲೆ ಕರವನ್ನು ವಿಧಿಸುವುದರ ಬದಲಿಗೆ ಸಿನೇಮಾ ಮತ್ತು ಥೇಟರುಗಳ ಮೇಲಿನ ಕರದ ದರವನ್ನು ಹೆಚ್ಚಿಸಿದ್ದರೆ ಈ ಕರದ ಮೂಲಕ ತಾನು ದೊರಕಿಸಬೇಕೆಂದು ಮಾಡಿದ ಎಲ್ಲ ಆದಾಯವನ್ನೂ ಅವರು ಪಡೆಯಬಹುದಾಗಿತ್ತು. ಆದರೆ ಈ ಭಾರವನ್ನು ಹೊರಲು ಸಮರ್ಥರಾಗಿರುವವರಿಗೇ ವಿನಾಯಿತಿ ತೋರಿಸಲಾಗಿದೆ ಎನ್ನುವುದು ಅತ್ಯಂತ ವಿಶಿಷ್ಟವಾದುದಾಗಿರುತ್ತದೆ. ಆದರೆ ಮಾಡಿದ್ದೇನು? ಮಾಡಿದ್ದು ಇದು. ಈಗಿನಿಂದ ಹನ್ನೆರಡು ಯುನಿಟ್ಟುಗಳಿಗಿಂತ ಕಡಿಮೆ ವಿದ್ಯುತ್ ಬಳಸುವವರಿಗೂ ಈಗ ಕರ ವಿಧಿಸಲಾಗಿದೆ ಮತ್ತು ಹನ್ನೆರಡು ಯುನಿಟ್ಟುಗಳಿಗಿಂತ ಹೆಚ್ಚು ಯುನಿಟ್ಟುಗಳ ವಿದ್ಯುತ್ತನ್ನು ಬಳಸುವವರಿಗೆ ಕರವನ್ನು ೯ ಪೈ.ಗಳಿಂದ ೧೫ ಪೈ.ಗಳಿಗೆ ಹೆಚ್ಚಿಸಲಾಗಿದೆ. ಮಾನ್ಯರೇ, ಈ ಕರಾಕರಣೆಯ ವಿಧಾನದಲ್ಲಿನ ಕರವನ್ನು ವಿಧಿಸುವಲ್ಲಿನ ಔಚಿತ್ಯ ಏನು ಅನ್ನುವುದು ನನಗೆ ತಿಳಿಯದಾಗಿದೆ. ಥೇಟರು ಮತ್ತು ಸಿನೇಮಾಗಳು ಈ ಕ್ರಮದಿಂದ ವಿನಾಯಿತಿಯನ್ನು ಪಡೆದಿರುವಾಗ ಇಲ್ಲಿಯವರೆಗೆ ಹನ್ನೆರಡು ಯುನಿಟ್ಟುಗಳಿಗಿಂತ ಕಡಿಮೆ ವಿದ್ಯುತ್ತನ್ನು ಬಳಸುತ್ತಿರುವ ಕಾರಣದಿಂದ ಕರ ವಿಮುಕ್ತರಾದ ಜನರಿಗೆ ಈಗ ಏಕೆ ದರವನ್ನು ವಿಧಿಸಲಾಗಿದೆ? ಕೇವಲ ೯ ಕಾಸುಗಳನ್ನು (೫ ಪೈಸೆ) ಕೊಡುತ್ತಿದ್ದವರು ಈಗ ೧೫ ಕಾಸುಗಳನ್ನು (೮ನೆಯೇ ಪೈಸೆ) ಕೊಡಬೇಕು?

ಕರಾಕರಣೆಯ ಮೂರನೆಯ ಬಾಬು ಹಸ್ತಾಂತರಣದ ಮೇಲಿನ ಸ್ಟ್ಯಾಂಪ್ ಶುಲ್ಕ. ನನಗೆ ಅನ್ನಿಸಿರುವಂತೆ ಅದರಲ್ಲಿನ ಹೆಚ್ಚಳವು ಅಷ್ಟು ನ್ಯಾಯಯುತವಾದುದಲ್ಲ. ಗೌರವಾನ್ವಿತ ಹಣಕಾಸು ಮಂತ್ರಿಯವರು ಮುಂಬೈಯಲ್ಲಿನ ಕರವನ್ನು ಶೇಕಡಾ ಮೂರೂವರೆಯಿಂದ ೪ಕ್ಕೆ ಏರಿಸಲು ಸೂಚಿಸಿದ್ದಾರೆ. ಅದು ಈಗಿರುವುದಕ್ಕಿಂತ ಶೇಕಡಾ ೨೦ರಷ್ಟು ಹೆಚ್ಚಾಗಿದೆ. ಪೂನಾ ಮತ್ತು ಅಹಮದಾಬಾದಿನಲ್ಲಿ ಶೇಕಡಾ ಎರಡೂವರೆಯಿಂದ ಶೇಕಡಾ ೩ಕ್ಕೆ ಹೆಚ್ಚಿಸಲು ಸೂಚಿಸಿದ್ದಾರೆ. ಅದೂ ಸಹ ಶೇಕಡಾ ೨೦ರಷ್ಟು ಹೆಚ್ಚಾಗಿದೆ. ಸರಕಾರವು ಪ್ರಕಟಿಸುವ ಇತರ ನಗರಗಳಲ್ಲಿ ಕರವನ್ನು ಶೇಕಡಾ ಒಂದೂವರೆಯಿಂದ ಶೇಕಡಾ ೩ರಷ್ಟು ಹೆಚ್ಚಿಸಲು ಸೂಚಿಸಲಾಗಿದೆ. ಅದು ಶೇಕಡಾ ೫೦ರಷ್ಟು ಹೆಚ್ಚಳವಾಗುತ್ತದೆ. ಇತರ ಪಟ್ಟಣಗಳಲ್ಲಿ ಹೆಚ್ಚಳವು ಶೇಕಡಾ

ಒಂದೂವರೆಯಿಂದ ಶೇಕಡಾ ೨ರಷ್ಟು ಸೂಚಿಸಲಾಗಿದೆ. ಆ ಹೆಚ್ಚಳವು ಶೇಕಡಾ ಮೂವತ್ತ ಮೂರುವರೆಯಷ್ಟು ಆಗುತ್ತದೆ. ಹಣಕಾಸಿನ ಮಸೂದೆಯ ಜೊತೆಗೆ ಇಡಲಾಗಿರುವ ಗೌರವಾನ್ವಿತ ಮಂತ್ರಿಗಳವರು ಕೊಟ್ಟ ಗುರಿ ಮತ್ತು ಕಾರಣಗಳ ವಿವರಣೆಯನ್ನು ಓದಿದಾಗ ಅದರಲ್ಲಿ ಕರದಲ್ಲಿನ ಈ ಹೆಚ್ಚಳಕ್ಕಾಗಿ ಯಾವುದೇ ವಿವರಣೆಯಾಗಲೀ ಅಥವಾ ಸಮರ್ಥನೆಯಾಗಲೀ ನನಗೆ ಕಂಡುಬಂದಿಲ್ಲ. ಗೌರವಾನ್ವಿತ ಮಂತ್ರಿಗಳು ಹೇಳಬಯಸಿದ್ದು ಇಷ್ಟು ಮಾತ್ರ. ಅಂದರೆ ಹಸ್ತಾಂತರಣಗಳಿಗಾಗಿ ಇರುವ ಸ್ಟಾಂಪ್ ಶುಲ್ಕವು ಹಳ್ಳಿಗಾಡು ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಹೆಚ್ಚಿರುವುದು ಅಪೇಕ್ಷಣೀಯವಾದುದು ಎಂದು ಪರ್ಯಾಲೋಚಿಸಲಾಯಿತು ಎಂಬುದು ಮಾತ್ರವೇ ಆಗಿದೆ. ಅದು ಏಕೆ ಅಪೇಕ್ಷಣೀಯವಾಗಿದೆ? ಇಲ್ಲಿಯವರೆಗೆ ಕೊಡುತ್ತಿದ್ದುದಕ್ಕಿಂತ ಹೆಚ್ಚಿನ ಶುಲ್ಕವನ್ನು ಕೊಡುವಂತೆ ಮಾಡಲು ನಗರ ಪ್ರದೇಶದವರು ಯಾವ ಪಾಪವನ್ನು ಮಾಡಿದ್ದಾರೆ. ಈ ಬಗ್ಗೆ ಗೌರವಾನ್ವಿತ ಮಂತ್ರಿಗಳಿಂದ ಯಾವುದೇ ಉತ್ತರ ಇಲ್ಲ. ಇದು ಕರವನ್ನು ಯಾವುದೇ ತತ್ವ ಸಿದ್ಧಾಂತಗಳಿಲ್ಲದೆಯೇ ಹೆಚ್ಚಿಸಬಹುದೆಂದು ಹೇಳುವ ಕೇವಲ ನಿರಂಕುಶವಾದ ಕೃತ್ಯವಾಗಿದೆ.

ನಾವು ಐದನೆಯ ಪ್ರಸ್ತಾಪಕ್ಕೆ ಬರುತ್ತೇವೆ. ಅದು ಸ್ವತ್ತಿನ ಮೇಲಿನ ಕರ ಆಗಿರುತ್ತದೆ. ನಿಜವಾಗಿಯೂ ಇದು ಕರಾಕರಣ ಪ್ರಸ್ತಾವದ ಮುಖ್ಯಭಾಗವೇ ಆಗಿದೆ. ನನಗೆ ಅನ್ನಿಸಿದಂತೆ ಹಲವಾರು ದೃಷ್ಟಿಯಿಂದ ಈ ಪ್ರಸ್ತಾವವು ಆಕ್ಷೇಪಣೀಯವಾದುದಾಗಿರುತ್ತದೆ. ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಜಮ್ನಾದಾಸ್ ಮೆಹ್ತಾ ಅವರು ಈ ಕ್ರಮಕ್ಕೆ ಇರುವ ತಕರಾರುಗಳಲ್ಲಿ ಒಂದನ್ನು ಈಗಾಗಲೇ ಹೇಳಿರುತ್ತಾರೆ. ಆ ತಕರಾರು ಹೀಗಿದೆ. ಇಲ್ಲಿಯವರೆಗೆ ಮುನಿಸಿಪಲ್ ಆಡಳಿತಗಳಿಗೆ ಬಿಡಲಾದ ಕರಾಕರಣೆಯ ಮೂಲದ ಮೇಲೆಯೇ ಈ ಸರಕಾರವು ಈಗ ಆಕ್ರಮಣ ಮಾಡುತ್ತಿದೆ. ಮುಂಬಯಿ ನಗರ ಮುನಿಸಿಪಾಲಿಟಿಯು ಸ್ವತ್ತಿನ ಮೇಲಿನ ಕರದ ಮೂಲಕ ತನ್ನ ಆದಾಯದ ಹೆಚ್ಚಿನ ಭಾಗವನ್ನು ಪಡೆದುಕೊಳ್ಳುತ್ತದೆ. ಕೇವಲ ಮುಂಬಯಿ ಮುನಿಸಿಪಾಲಿಟಿಯು ಸ್ವತ್ತಿನ ಮೇಲಿನ ಕರದ ಮೂಲಕ ತನ್ನ ಆದಾಯವನ್ನು ಪಡೆದುಕೊಳ್ಳುತ್ತದೆ ಎಂದಲ್ಲ. ಆದರೆ, ಅದೇ ರೀತಿಯಾಗಿ ಎಲ್ಲ ಮುನಿಸಿಪಾಲಿಟಿಗಳೂ ಸಹ ಸ್ವತ್ತಿನ ಮೇಲೆ ಕರವನ್ನು ವಿಧಿಸಲು ಅನುಮತಿಸಲಾಗಿದೆ. ಮಾನ್ಯರೇ, ಮುನಿಸಿಪಾಲಿಟಿಗಳಿಗೆ ಕಾಯ್ದಿಡಲಾಗಿರುವ ಕರಾಕರಣೆಯ ಕ್ಷೇತ್ರದಲ್ಲಿ ಸರಕಾರವು ಮಾಡುತ್ತಿರುವ ಈ ಸ್ಪರ್ಧೆಯು ಸ್ಥಾನಿಕ ಸ್ವಯಮಾಡಳಿತ ಸರಕಾರಗಳ ಬೆಳವಣಿಗೆಗೆ ಹೆಚ್ಚಿನ ರೀತಿಯಲ್ಲಿ ಹಾನಿಕರವಾಗಿ ಪರಿಣಮಿಸುತ್ತದೆ ಎಂಬ ಬಗ್ಗೆ ನನಗೆ ಯಾವ ಸಂಶಯವೂ ಇಲ್ಲ. ಆ ಅಂಶದ ಮೇಲೆ ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳುವುದಿಲ್ಲ. ಆದರೆ ಪ್ರಸ್ತಾವದ ಇತರ ದೃಷ್ಟಿಕೋನಗಳ ಬಗ್ಗೆ ಉಲ್ಲೇಖಿಸುತ್ತೇನೆ. ಮೊದಲನೆಯದಾಗಿ ಮುಂಬೈ ನಗರದ ಬಾಡಿಗೆದಾರರು ಮುಂಬೈ ನಗರದಲ್ಲಿನ ಬಾಡಿಗೆ ದರಗಳು ಅಸಾಧಾರಣವಾಗಿ ಹೆಚ್ಚಿನದಾಗಿ ಇರುತ್ತದೆ ಎಂದು ಮತ್ತು ಅದನ್ನು ಕಡಿಮೆ ಮಾಡಿಸಬೇಕು ಎಂದು ಚಳವಳಿಯನ್ನೇ ನಡೆಸಿರುತ್ತಾರೆ. ಮಾನ್ಯರೇ, ಈಗ ಸರಕಾರವು ಕರಾಕರಣೆಯ ಈ ಕ್ರಮದ ಮೂಲಕ ಮಾಡುತ್ತಿರುವಂತೆ ಸ್ವತ್ತಿನ ಬೆಲೆಯ ಶೇಕಡಾ ೧೧ರಷ್ಟನ್ನು ತೆಗೆದುಕೊಳ್ಳುವುದಾದರೆ ಅದು ಅದೇ ರೀತಿಯಲ್ಲಿ ಮನೆ ಮಾಲೀಕರಿಗೆ ಅವನೂ ಸಹ ಈಗಿರುವ ಯದ್ವಾತದ್ವಾ ಬಾಡಿಗೆಯನ್ನು ಕಡಿಮೆ ಮಾಡಬೇಕೆಂದು ಚಳವಳಿ ಮಾಡುತ್ತಿರುವ ಬಾಡಿಗೆದಾರರ ಬಾಡಿಗೆಯನ್ನು ಕಡಿಮೆ ಮಾಡಬೇಕೆಂದು ಒಂದೇ ಉಸಿರಿನಲ್ಲಿ ಹೇಳಬಾರದು. ಆದುದರಿಂದ ಮುಂಬಯಿ ನಗರದ ಬಾಡಿಗೆದಾರನಿಗೆ ಮೋಸ ಮಾಡುವುದಕ್ಕಿಂತ ಹೆಚ್ಚಿನದೇನನ್ನೂ ಸರಕಾರವು ಮಾಡಿದಂತಾಗಲಿಲ್ಲ ಮತ್ತು ಅದೇ ರೀತಿಯಲ್ಲಿ ಅಹಮದಾಬಾದ್ ಮತ್ತು ಪೂನಾ ನಗರಗಳಿಗೆ ಸಂಬಂಧಿಸಿದಂತೆ ಅವರಿಗೆ ಕಾನೂನು ಮೇರೆಗೆ ದೊರಕಬೇಕಾದುದನ್ನು ಸರಕಾರವು ಅವರಿಂದ ಕಿತ್ತುಕೊಳ್ಳುತ್ತದೆ ಮತ್ತು ಈ ಕ್ರಮಕ್ಕೆ ಮಾಡಬಹುದಾದ

ಅತ್ಯಂತ ತೀವ್ರ ಸ್ವರೂಪದ ಆಕ್ಷೇಪಣೆಗಳಲ್ಲಿ ಇದೊಂದಾಗಿದೆ ಎಂದು ನಾನು ಭಾವಿಸುತ್ತೇನೆ.

ಎರಡನೆಯದಾಗಿ, ಸರಕಾರದ ಪ್ರಸ್ತಾವದ ಮೇರೆಗಿನ ಕರಾಕರಣೆಯ ವಸ್ತು ವಿಷಯವಾಗಿರುವ ಈ ಸ್ವತ್ತು ಈಗ ಕರಾಕರಣೆಗೆ ಒಳಪಡದ ಸ್ವತ್ತು ಎನ್ನಲಾಗದು ಅಥವಾ ಇದರ ಮೇಲೆ ಹಗುರಾಗಿ ಕರವನ್ನು ವಿಧಿಸಲಾಗಿದೆ ಎನ್ನಲೂಬಾರದು ಮತ್ತು ಆ ಕಾರಣದಿಂದಾಗಿ ಇನ್ನೂ ಹೆಚ್ಚಿನ ಕರಭಾರ ವನ್ನು ಅದು ತಡೆಯಬಲ್ಲದು ಎನ್ನಲಾಗದು. ಮುಂಬಯಿ ನಗರದ ಉದಾಹರಣೆಯನ್ನೇ ತೆಗೆದು ಕೊಳ್ಳೋಣ.

ಅಧ್ಯಕ್ಷರು: ಇಲ್ಲಿ ತಪ್ಪು ತಿಳಿವಳಿಕೆಯಾಗಿದೆ ಎಂಬ ಭಯ ನನಗೆ. ಕರಾಕರಣೆಯ ಪ್ರಸ್ತಾವದಲ್ಲಿ ಪೂನಾ ನಗರವನ್ನು ಸೇರಿಸಲಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಮನ್ನಿಸಬೇಕು. ಇದು ಕೇವಲ ಮುಂಬಯಿ ಮತ್ತು ಅಹಮದಾಬಾದಕ್ಕೆ ಸಂಬಂಧಿಸಿದ್ದಾಗಿದೆ. ಮುಂಬಯಿಗೆ ಸಂಬಂಧಿಸಿದಂತೆ ಗೊತ್ತಾಗುವುದು ಇಷ್ಟೆ. ಏನೆಂದರೆ ತನ್ನದೇ ಆದ ಉಪಯೋಗಕ್ಕಾಗಿ ಮುಂಬಯಿ ಮುನಿಸಿಪಾಲಿಟಿಯು ಸ್ವತ್ತಿನ ಕರ ವಿಧಿಸಬಹುದಾದ ಮೌಲ್ಯದ ಆಧಾರದ ಮೇಲೆ ಪಟ್ಟಿ ಶೇಕಡಾ ಹದಿನೆಂಟೂವರೆಯಷ್ಟು ಕರವನ್ನು ವಿಧಿಸುತ್ತದೆ. ಅದರ ಜೊತೆಗೆ ಮನೆಯ ಒಡೆಯನು ಸ್ವತ್ತು ಗುತ್ತಿಗೆ ಆಧಾರಿತವಾದುದು ಆಗಿದ್ದರೆ ಭೂ ಬಾಡಿಗೆಯನ್ನು ಕೊಡಬೇಕಾಗುತ್ತದೆ. ಅದರ ಜೊತೆಗೆ ಆತನು ತಾನು ಪಡೆಯುವ ಮನೆಯ ಒಟ್ಟು ಬಾಡಿಗೆಯ ಮೇಲೆ ಕೇಂದ್ರ ಸರಕಾರಕ್ಕೆ ಆದಾಯ ಕರವನ್ನು ಕೊಡಬೇಕಾಗುತ್ತದೆ. ಈ ಎಲ್ಲವನ್ನೂ ಒಟ್ಟಾರೆ ತೆಗೆದುಕೊಂಡಾಗ ನಿಜವಾಗಿಯೂ ಒಟ್ಟು ಭಾರವು ಶೇಕಡಾ ೨೨ರಿಂದ ೨೩ರಷ್ಟು ಆಗುತ್ತದೆ. (ಗೌರವಾನ್ವಿತ ಸದಸ್ಯರೊಬ್ಬರು ಶೇಕಡಾ ೫೦ರಷ್ಟು) ಸರಿ, ನನ್ನ ಗೌರವಾನ್ವಿತ ಸ್ನೇಹಿತರು ಅದು ಶೇಕಡಾ ೫೦ರಷ್ಟು ಆಗುತ್ತದೆ ಎನ್ನುತ್ತಾರೆ. ಅವರು ಬಹುತೇಕವಾಗಿ ಅದನ್ನು ಅನಂತರ ವಿವರಿಸುವರು. ನಾನು ಎತ್ತಿ ತೋರಿಸಬೇಕಾಗಿರುವುದು ಇಷ್ಟು. ಏನೆಂದರೆ ಈ ಸ್ವತ್ತಿನ ಮೇಲೆ ಕಡಿಮೆ ಕರವನ್ನು ವಿಧಿಸಲಾಗಿದೆ ಎನ್ನಲಾಗದು. ಈಗಾಗಲೇ ಅತಿ ಹೆಚ್ಚಿಗೆ ಭಾರವಾಗುವಂತೆ ಕರ ವಿಧಿಸಲಾಗಿರುವ ಸ್ವತ್ತು ಇದಾಗಿದೆ. ಆದುದರಿಂದ ಅದರ ಮೇಲೆ ಇನ್ನೂ ಶೇಕಡಾ ೧೦ರಷ್ಟು ಕರವನ್ನು ವಿಧಿಸುವುದು ತುಂಬಾ ಅನ್ಯಾಯದ್ದು ಆಗುತ್ತದೆ. ಈ ಬಗ್ಗೆ ಗೌರವಾನ್ವಿತ ಹಣಕಾಸು ಮಂತ್ರಿಗಳಿಗೆ ನಾನು ಹೇಳುವುದಿಷ್ಟೆ. ಈ ಕರವನ್ನು ಅವರು ಕೇವಲ ಬೆಲೆ ಎಂದು ಭಾವಿಸಿರುತ್ತಾರೆಯೇ ಹೊರತು ಕರವೆಂದಲ್ಲ. ಸರಿ ಈ ಅಂಶದ ಮೇಲೆ ಅವರೊಂದಿಗೆ ನನ್ನ ವಿವಾದವಿದೆ. ಅವರು ವಿಧಿಸುತ್ತಿರುವುದು ಕರವೇ ಹೊರತು ದರವಲ್ಲ. ದರ ಮತ್ತು ಕರದಲ್ಲಿನ ವ್ಯತ್ಯಾಸ ಇದು. ದರವೆಂದರೆ ಅದರ ಪ್ರತಿಫಲವಾಗಿ ನಿರ್ದಿಷ್ಟ ಸೇವೆಯನ್ನು ನಾವು ಪಡೆದುಕೊಳ್ಳುತ್ತೇವೆ. ನಾವು ಮುನಿಸಿಪಾಲಿಟಿಗಳಿಗೆ ದರವನ್ನು ಕೊಡುತ್ತೇವೆ. ಯಾಕೆಂದರೆ, ನಾವು ಮುನಿಸಿಪಾಲಿಟಿಗೆ ಕೊಡುವುದಕ್ಕೆ ಪ್ರತಿಫಲವಾಗಿ ನೇರವಾದ ಸೇವೆಗಳನ್ನು ಪಡೆದುಕೊಳ್ಳುತ್ತೇವೆ. ನಾವು ನೀರನ್ನು ತೆಗೆದುಕೊಳ್ಳುತ್ತೇವೆ. ಸ್ವಚ್ಛತಾ ಸೇವೆಯನ್ನು ಪಡೆದುಕೊಳ್ಳುತ್ತೇವೆ. ಬೆಳಕನ್ನು ಪಡೆದುಕೊಳ್ಳುತ್ತೇವೆ. ಇತರ ಅನೇಕ ಸೇವೆಗಳನ್ನೂ ನಾವು ಪಡೆದುಕೊಳ್ಳುತ್ತೇವೆ. ನಿಜವಾಗಿಯೂ ಇದು ಒದಗಿಸಲಾಗಿರುವ ಸೇವೆಗೆ ಕೊಡುವ ಹಾಸಲಾಗಿರುತ್ತದೆ. ಆದರೆ ಗೌರವಾನ್ವಿತ ಮಂತ್ರಿಗಳು ಪ್ರಸ್ತಾಪ ಮಾಡುತ್ತಿರುವ ವಿಷಯದಲ್ಲಿ ಸೇವೆಗಳು ಇಲ್ಲ ಮತ್ತು ನಾನು ಹೇಳುವುದೇನೆಂದರೆ ಮಂತ್ರಿಗಳು ಅದನ್ನು ಸ್ವತ್ತಿನ ಕರವೆಂದು ಕರೆಯಲು ಆಯ್ಕೆ ಮಾಡಿಕೊಂಡಿರುವರಾದರೂ ಅದು ಉತ್ಪನ್ನದ ಮೇಲಿನ ಕರವೇ ಆಗಿರುತ್ತದೆ. ಯಾಕೆಂದರೆ ಎಲ್ಲಿಯೂ ಇಲ್ಲಿ ಯಾವ ಪ್ರತಿಫಲವೂ ಇಲ್ಲ ಎಂದು ಹೇಳಲು ನಾನು ಇಚ್ಛಿಸುತ್ತೇನೆ. ಕೊನೆಯ ವಿಶ್ಲೇಷಣೆಯ ಮೇರೆಗೆ ಪ್ರಜೆಯೇ ಕರವನ್ನು

ಕೊಡುವವನು; ವಸ್ತುಗಳಲ್ಲ. ಪ್ರಜೆಗಳು ಸಂದಾಯ ಮಾಡುತ್ತಿದ್ದಾರೆ. ಅವರು ಅದನ್ನು ತಮ್ಮ ಆದಾಯದಿಂದ ಕೊಡುತ್ತಾರೆ. ಕಾರಣ ಅದು ಆದಾಯಕರ. ಆದಾಯಕರದ ಸಾಮಾನ್ಯ ಯೋಜನೆಯ ಭಾಗವಾದ ನ್ಯಾಯಯುತ ತತ್ವಗಳನ್ನು ಈ ಕರದ ಭಾಗವನ್ನಾಗಿ ಏಕೆ ಮಾಡಬಾರದು ಎಂದು ನಾನು ಗೌರವಾನ್ವಿತ ಮಂತ್ರಿಯವರನ್ನು ಕೇಳಲು ಇಚ್ಛಿಸುತ್ತೇನೆ. ಇಲ್ಲಿ ಎರಡು ವಿಷಯಗಳನ್ನು ಹೇಳಬಹುದು. ಮೊದಲನೆಯದು ಆದಾಯಕರ ಪ್ರತಿಯೊಂದು ಯೋಜನೆಯಲ್ಲಿ ವಿನಾಯಿತಿಯ ಬಗ್ಗೆ ನೀಡುವುದಕ್ಕೆ ಕೆಲವು ಆಧಾರವೂ ಇರುತ್ತವೆ. ನಿರ್ದಿಷ್ಟ ಕನಿಷ್ಠ ಪ್ರಮಾಣಕ್ಕಿಂತ ಕೆಳಗೆ ನೀವು ಕರ ವಿಧಿಸುವುದಿಲ್ಲ. ಇಂದಿನ ಆದಾಯ ಕರದ ಕನಿಷ್ಠ ಪ್ರಮಾಣವು ಅಂದಾಜು ರೂ. ೨,೦೦೦–೦೦ ಇರುತ್ತದೆ ಎಂದು ನಾನು ಭಾವಿಸುತ್ತೇನೆ. ಇದು ಆದಾಯಕರವಾದರೆ ಮತ್ತು ನಾನು ಅದು ಆದಾಯಕರವಲ್ಲದೆ ಬೇರೆ ಏನು ಅಲ್ಲವೆಂದೂ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಹೀಗಿರುವಾಗ ಅಲ್ಲಿ ವಿನಾಯಿತಿ ಏಕೆ ಇಲ್ಲ? ಎಲ್ಲ ಭೂ ಮಾಲೀಕರನ್ನು ಒಂದೆಡೆ ಕೂಡಿಹಾಕುವುದರಿಂದ ಯಾವ ಪ್ರಯೋಜನವೂ ಇಲ್ಲ. ನಾನು ಹಿಂದು ಕಾಲನಿಯಲ್ಲಿ ವಾಸಿಸುತ್ತೇನೆ. ಸರಕಾರದಿಂದ ಗ್ರಾಚ್ಯುಯಿಟಿಗಳನ್ನು ತೆಗೆದುಕೊಂಡಿರುವ ಅನೇಕ ಜನರು ಅಲ್ಲಿ ಇರುತ್ತಾರೆ. ಭವಿಷ್ಯ ನಿಧಿಯ ರೂಪದಲ್ಲಿ ಕೂಡಿಟ್ಟ ಹಣವನ್ನು ಪಡೆದುಕೊಂಡ ಅನೇಕ ಜನರೂ ಇರುತ್ತಾರೆ. ಇವರು ಭೂ ಬಾಡಿಗೆಯನ್ನು ಕೊಡುತ್ತಾರೆ. ಅವರು ಮುನಿಸಿಪಾಲಿಟಿಯ ಕರವನ್ನು ಕೊಡುತ್ತಾರೆ. ಅವರ ಬಗ್ಗೆ ವಿಚಾರಿಸುವಂಥದು ಏನೂ ಇಲ್ಲವೋ? ಕಟ್ಟಡಗಳಲ್ಲಿ ಲಕ್ಷ ಲಕ್ಷಗಟ್ಟಲೆ ರೂಪಾಯಿಗಳನ್ನು ತೊಡಗಿಸಿದವರು ಹಲವಾರು ಜನರು ಇರುತ್ತಾರೆ ಮತ್ತು ಅವರು ಬೇರೆ ಏನನ್ನೂ ಮಾಡದೆ ಕೇವಲ ಈ ಸ್ವತ್ತಿನಿಂದ ಬರುವ ಉತ್ಪನ್ನದಿಂದ ಮಾತ್ರವೇ ಜೀವಿಸುತ್ತಾರೆ. ಒಂದು ರೀತಿಯ ಭೂ ಮಾಲಿಕ ಮತ್ತು ಇನ್ನೊಂದು ರೀತಿಯ ಭೂ ಮಾಲೀಕನ ನಡುವೆ ವ್ಯತ್ಯಾಸವಿದೆ ಮತ್ತು ಅವರ ನಡುವೆ ಅಂಥ ವ್ಯತ್ಯಾಸವನ್ನು ಮಾಡಲೇಬೇಕಾಗುತ್ತದೆ. ಅಂಥ ವ್ಯತ್ಯಾಸವನ್ನು ಇಲ್ಲಿ ಏಕೆ ಮಾಡಿಲ್ಲ?

ಇನ್ನೊಂದು ಪರ್ಯಾಲೋಚನೆಯನ್ನು ಮಾಡೋಣ. ಇಂಥ ಅನೇಕ ಸ್ವತ್ತುಗಳು– ಅವು ಎಷ್ಟು ಅನ್ನುವುದು ನನಗೆ ಗೊತ್ತಿಲ್ಲ. ಆದರೆ ಅವು ಬಹಳ ಇರುತ್ತವೆ. ನಿಜವಾಗಿಯೂ ಅವು ಧಾರ್ಮಿಕ ಸಂಸ್ಥೆಗಳಾಗಿರುತ್ತವೆ. ಮುಂಬೈ ಪಟ್ಟಣವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಇಲ್ಲಿ ಸೋಷಿಯಲ್ ಸರ್ವಿಸ್ ಲೀಗ್ ಇದೆ, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಇದೆ ಮತ್ತು ಇಂಥ ಇತರ ಅನೇಕ ಸಂಸ್ಥೆಗಳಿವೆ. ಇವೆಲ್ಲವುಗಳೂ ತಮಗೆ ಬರುವ ಆದಾಯದಿಂದ ಬಡ ವಿಧವೆಯರಿಗೆ, ಅನಾಥ ಮಕ್ಕಳಿಗೆ, ಶಿಕ್ಷಣ ವಂಚಿತರಾದವರಿಗೆ ಸಹಾಯ ಮಾಡುತ್ತವೆ ಮತ್ತು ಅವರಿಗೆ ವೈದ್ಯಕೀಯ ಸಹಾಯ ಮಾಡುತ್ತವೆ. ಸಾಮಾಜಿಕ ಸೇವೆಗಳಿಗೆ ಸಂಬಂಧಿಸಿದಂತೆ ತನ್ನ ಎಲ್ಲ ಹೊಣೆಗಾರಿಕೆಯನ್ನು ಸರಕಾರವು ತಿರಸ್ಕರಿಸಿದ ಬಗ್ಗೆ ನಾನು ನಂತರ ಹೇಳುತ್ತೇನೆ. ಅಂಥ ಸೇವೆಗಳನ್ನು ಒದಗಿಸುವ ತನ್ನ ಹೊಣೆಯನ್ನು ಇಂತಹ ಸಂಸ್ಥೆಗಳಿಗೆ ಬಿಟ್ಟುಕೊಟ್ಟ ಸರಕಾರವು ಇಂತಹ ಸಂಸ್ಥೆಗಳಿಗೆ ವಿನಾಯಿತಿಯನ್ನು ಏಕೆ ತೋರಿಸಬಾರದು. ಆದಾಯ ತೆರಿಗೆ ಅಧಿನಿಯಮದ ೪ನೇ ಕಲಮು ಧಾರ್ಮಿಕ ದಾನಗಳ ಮೂಲಕ ಸಂಪಾದಿಸಲಾದ ಆದಾಯವನ್ನು ಕರಕ್ಕೊಳಪಡಿಸಬಾರದು ಎಂದೇ ಹೇಳುತ್ತದೆ. ಈ ಎಲ್ಲ ಸಂಗತಿಗಳು ಗೌರವಾನ್ವಿತ ಹಣಕಾಸು ಮಂತ್ರಿಯವರ ಗಮನಕ್ಕೆ ಏಕೆ ಬರಲಿಲ್ಲ ಎಂಬುದು ನನಗೆ ತಿಳಿಯುವುದಿಲ್ಲ ಮತ್ತು ನಾವು ಮಸೂದೆಯನ್ನು ಚರ್ಚೆಗೆ ಎತ್ತಿಕೊಂಡಾಗ ಅವರು ಏನನ್ನಾದರೂ ಹೇಳಲೇಬೇಕಾಗುತ್ತದೆ.

ಮಾರಾಟ ತೆರಿಗೆಯ ಬಗ್ಗೆ ಹೇಳಬೇಕೆಂದರೆ ವೈಯಕ್ತಿಕವಾಗಿ ಈ ತೆರಿಗೆಯ ಹೇರಿಕೆಯು ನನಗೆ ಸೇರುವುದಿಲ್ಲ. ಇದು ಉತ್ತಮ ಕರವೆಂದು ಮತ್ತು ಅದನ್ನು ವಿಧಿಸಬಹುದೆಂದೂ ನಂಬುವ ಹಲವರು

ಇರುತ್ತಾರೆ. ಆ ಬಗ್ಗೆ ನನ್ನದು ಬೇರೆ ಅಭಿಪ್ರಾಯವಿದೆ. ಭಾರತದಲ್ಲಿ ೧೮೩೪ರಿಂದ ಭಾರತೀಯ ಮಿಲ್ಲುಗಳ ಮೇಲೆ ವಿಧಿಸಲಾಗುತ್ತಿದ್ದಂಥ ಮತ್ತು ಹತ್ತಿ ತಯಾರಕರ ಮೇಲಿನ ಅಬಕಾರಿ ಸುಂಕವೆಂದು ಕರೆಯಲಾಗುತ್ತಿದ್ದಂಥ ಕರದ ವಾಸನೆಯನ್ನೇ ಇದು ಹೊಂದಿದೆ ಎಂದು ನನಗೆ ಅನ್ನಿಸುತ್ತದೆ. ಅದರ ಹೊರತಾಗಿ ಅದು ಬೇರೆ ಏನೂ ಆಗಲಾರದು. ತಯಾರಕರಿಂದ ಅಥವಾ ಮಾರಾಟಗಾರರಿಂದ ಅದನ್ನು ವರ್ಗಾಯಿಸಿದರೆ ಅದು ನಿಜವಾಗಿಯೂ ಬಳಕೆದಾರನನ್ನೇ ಬಾಧಿಸುತ್ತದೆ. ಅದು ನಿಜವಾಗಿಯೂ ಆತನ ಬದುಕಿನ ಮಟ್ಟವನ್ನೂ ನಿರ್ಧರಿಸುತ್ತದೆ. ಅದನ್ನು ವರ್ಗಾಯಿಸದಿದ್ದರೆ, ಅದನ್ನು ಯಾವ ಉದ್ಯೋಗಕ್ಕೆ ವಿಧಿಸಲಾಗುತ್ತಿದೆಯೋ ಆ ಉದ್ಯೋಗಕ್ಕೇ ಅದು ಸಂಕಷ್ಟವನ್ನುಂಟುಮಾಡುತ್ತದೆ. ಎರಡೂ ಸಂದರ್ಭಗಳಲ್ಲಿ ಅದು ಸಮಾಧಾನಕರವಾದ ಕರಾಕರಣೆ ಅಲ್ಲ. ಮಾನ್ಯರೇ, ಜೀವನದಲ್ಲಿನ ಉತ್ತಮ ವಸ್ತುಗಳು ಸ್ವರ್ಗದಿಂದ ಉದುರಿ ಬೀಳುವುದಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿರುವವರಲ್ಲಿ ನಾನೂ ಒಬ್ಬ. ಬೇರೆ ಎಲ್ಲಿಯೂ ಹಾಗೆ ಆಗಿಲ್ಲ. ನಿಜವಾಗಿಯೂ ನಿಮಗೆ ಜೀವನದಲ್ಲಿ ಉತ್ತಮ ವಸ್ತುಗಳು ಬೇಕಾಗಿದ್ದರೆ ನೀವು ಅವುಗಳ ಬೆಲೆ ಸಂದಾಯ ಮಾಡಬೇಕಾಗುತ್ತದೆ. ಅವುಗಳ ಬೆಲೆ ಕೊಡದಿದ್ದರೆ ಅವುಗಳು ನಿಮಗೆ ದೊರಕುವುದಿಲ್ಲ. ಕರಾಕರಣೆಗೆ ವೈಚಾರಿಕತೆಯಿಂದ ಕೂಡಿದ ತಕರಾರು ಇಲ್ಲದವರಲ್ಲಿ ನಾನೂ ಒಬ್ಬ. ಏಕೆಂದರೆ ಜೀವನದಲ್ಲಿ ಉತ್ತಮ ವಸ್ತುಗಳು ಬೇಕು ಮತ್ತು ಅವುಗಳಿಗಾಗಿ ಬೆಲೆ ಕೊಡಲೇಬೇಕು ಎಂದು ನಂಬುವವರಲ್ಲಿ ನಾನೂ ಒಬ್ಬ. ಆದುದರಿಂದ ನಾವು ಈಗ ಪರ್ಯಾಲೋಚಿಸಬೇಕಾದ ಪ್ರಶ್ನೆಯೆಂದರೆ ಇದು. ಈ ಎಲ್ಲಾ ಕರಾಕರಣೆ ಏಕೆ? ಇದರ ಉದ್ದೇಶ ಏನು? ಈ ಕರವನ್ನು ವಿಧಿಸುವುದರ ಮೂಲಕ ಸರಕಾರವು ಏನನ್ನು ಸಾಧಿಸಬೇಕಾಗಿದೆ?

ಕರಾಕರಣೆಯ ತನ್ನ ಈ ಯೋಜನೆ ಮೇರೆಗೆ ಹಣಕಾಸು ಮಂತ್ರಿಗಳು ಒಟ್ಟು ರೂ. ೧೬೯ ಲಕ್ಷ ರೂಪಾಯಿಗಳ ಆದಾಯವನ್ನು ಗಳಿಸಲು ಉದ್ದೇಶಿಸಿದ್ದಾರೆ. ಮಾನ್ಯರೆ, ಈಗ ಆಯವ್ಯಯ ಪತ್ರದ ಕಡೆ ತಿರುಗಿದರೆ, ಈ ಆಯವ್ಯಯದ ಪತ್ರವು ಒಳಗೊಂಡಿರುವ ಹೊಸ ಖರ್ಚಿನ ಬಾಬುಗಳು ಯಾವುವು? ಈಗ ನಾನು ಹಲವು ಖರ್ಚಿನ ಬಾಬುಗಳನ್ನು ಆಯವ್ಯಯ ಪತ್ರದಿಂದ ತೆಗೆದು ಹಾಕಿದ್ದೇನೆ. ಆ ಬಾಬುಗಳು ಕೇವಲ ಆಡಳಿತ ಇಲಾಖೆಗೆ ಸಂಬಂಧಿಸಿದವುಗಳು ಆಗಿವೆ ಮತ್ತು ಜನತೆಯ ಸಾಮಾಜಿಕ ಕಲ್ಯಾಣಕ್ಕೆ ಯಾವುದೇ ರೀತಿಯ ನೇರ ಪ್ರಯೋಜನ ಅವುಗಳಿಂದ ಆಗುವುದಿಲ್ಲ. ಆಯವ್ಯಯ ಪತ್ರದಿಂದ ಹಲವು ಖರ್ಚಿನ ಬಾಬುಗಳನ್ನು ಎತ್ತಿಕೊಂಡಿದ್ದೇನೆ. ಅವು ನನ್ನ ಅಭಿಪ್ರಾಯದಂತೆ ಜನತೆಯ ಕಲ್ಯಾಣಕ್ಕೆ ಸಂಬಂಧಪಟ್ಟವುಗಳಾಗಿವೆ. ಆಯವ್ಯಯ ಪತ್ರವು ನೀರಾವರಿಗಾಗಿ ಏಳೂವರೆ ಲಕ್ಷ ಹಣ ಒದಗಿಸಿದೆ; ಶಿಕ್ಷಣಕ್ಕೆ ಹದಿನಾರೂವರೆ ಲಕ್ಷ ಒದಗಿಸಿವೆ. ಈ ಹದಿನಾರೂವರೆ ಲಕ್ಷದಲ್ಲಿ ೫ ಲಕ್ಷವನ್ನು ಪ್ರಾಥಮಿಕ ಶಿಕ್ಷಣದ ವಿಕಾಸಕ್ಕಾಗಿ ಕೊಡಲಾಗಿದೆ. ೫ ಲಕ್ಷವನ್ನು ಕಟ್ಟಡಗಳಿಗಾಗಿ ಇಡಲಾಗಿದೆ ಮತ್ತು ಮೂಲ ಶಿಕ್ಷಣವೆಂದು ಕರೆಯಲಾಗುತ್ತಿರುವುದನ್ನು ಪ್ರಾರಂಭಿಸಲು ೧.೮೧ ಲಕ್ಷದಷ್ಟನ್ನು ತೆಗೆದಿಡಲಾಗಿದೆ. ಸಾರ್ವಜನಿಕ ಆರೋಗ್ಯದ ಬಗ್ಗೆ ಕೇವಲ ೨ ಲಕ್ಷ ಹಣವನ್ನು ಗ್ರಾಮಗಳ ನೀರು ಪೂರೈಕೆಗಾಗಿ ಒದಗಿಸುವುದನ್ನು ಹೊರತುಪಡಿಸಿ ಬೇರೇನೂ ಕಾಣುವುದಿಲ್ಲ. ವ್ಯವಸಾಯಕ್ಕೆ ಏನೂ ಇಲ್ಲ. ಸಹಕಾರಕ್ಕಾಗಿ ೨ ಲಕ್ಷದಷ್ಟನ್ನು ಕೊಡಲಾಗಿದೆ. ಹಳ್ಳಿಗಳ ಉದ್ಧಾರಕ್ಕಾಗಿ, ಇಲ್ಲಿ ಹಳ್ಳಿಗಳ ಉದ್ಧಾರವೆಂದರೆ ೨೦೦೦ ಜನ ತಿರುಗಾಡುವವರನ್ನು ಕೆಲಸಕ್ಕೆ ನೇಮಿಸಿಕೊಂಡು ಮಾನ್ಯ ಹಣಕಾಸು ಮಂತ್ರಿಗಳು ಭಾವಿಸುವಂತೆ ಜನತೆಗೆ ಸಹಾಯಕಾರಿಯಾಗುವ ಯಾವುದೋ ಒಂದು ರೀತಿಯ ಪ್ರಚಾರ ಮಾಡುತ್ತಾ ಪ್ರಾಂತದಲ್ಲೆಲ್ಲ ಸುತ್ತಾಡುವುದು ಆಗಿರುತ್ತದೆ.

ಎರಡನೆಯದಾಗಿ ಸಾಲ ಮನ್ನಾ ಮಾಡಲು ೨ ಲಕ್ಷಗಳನ್ನು ಒದಗಿಸಲಾಗಿದೆ. ನಾನು ಒತ್ತಿ ತೋರಿಸಲು ಇಚ್ಛಿಸುವ ಒಂದು ವಿಷಯವೆಂದರೆ ಪ್ರಾಂತದ ಅಗತ್ಯತೆಗಳ ಆಧಾರದ ಮೇಲೆ ಈಗ ಆಯವ್ಯಯ ಪತ್ರದಲ್ಲಿ ಅವಕಾಶ ಮಾಡಲಾಗಿರುವ ಖರ್ಚು ಸಾಕಷ್ಟಾಗಿರುತ್ತದೆಯೋ ಎಂಬ ಪ್ರಶ್ನೆಯಲ್ಲದೆ, ಇಲ್ಲಿ ಈ ಸದನವು ನೆನಪಿಡಬೇಕಾದ ಒಂದು ಸಂಗತಿ ಎಂದರೆ ಹೊಸ ಖರ್ಚಿಗಾಗಿ ಹೊಸ ಕರಾಕರಣೆಯ ಅಗತ್ಯ ಇಲ್ಲವೇ ಇಲ್ಲ ಎಂಬುದನ್ನು ಅರಿತುಕೊಳ್ಳುವುದು. ತಮ್ಮ ಆಯವ್ಯಯ ಪತ್ರದ ಭಾಷಣದಲ್ಲಿ ಮಾನ್ಯ ಹಣಕಾಸು ಮಂತ್ರಿಗಳು ತಾವೇ ಹೇಳಿರುವಂತೆ ರೂ. ೧೬೯ ಲಕ್ಷಗಳ ಒಟ್ಟು ಕರಾಕರಣೆಯಲ್ಲಿ ಕೇವಲ ೪೪ ಲಕ್ಷದಷ್ಟನ್ನು ಎರಡು ಯೋಜನೆಗಳಿಗಾಗಿ ಮಾತ್ರ ಅವಶ್ಯವೆಂದು ಹೇಳಲಾಗಿದೆ. ಅವೆಂದರೆ ಒಂದನೆಯದು ಗ್ರಾಮಾಂತರ ಶಿಕ್ಷಣದ ವಿಕಾಸ ಮತ್ತೊಂದು ಆರ್ಥಿಕವಾಗಿ ಗ್ರಾಮಾಂತರ ಬೆಳವಣಿಗೆ. ಉಳಿದ ಎಲ್ಲ ೧೨೫ ಲಕ್ಷವು ಮಂತ್ರಿಮಂಡಳವು ಮನಸ್ಸಿನಲ್ಲಿಟ್ಟುಕೊಂಡಿರುವ ಖರ್ಚಿನ ಬಾಬುಗಳಿಗಾಗಿ ಬೇಕಾಗಿಯೇ ಇಲ್ಲ. ೧೨೫ ಲಕ್ಷವು ಪ್ರತಿಬಂಧ ನೀತಿಯಿಂದಾಗಿ ಉಂಟಾಗುವ ಕೊರತೆಯನ್ನು ಹೊಡೆದುಹಾಕುವ ಉದ್ದೇಶಕ್ಕಾಗಿ ಬೇಕಾಗಿದೆ. ಆದುದರಿಂದ ವಿಚಾರಿಸಬೇಕಾದ ಪ್ರಶ್ನೆ ತುಂಬಾ ಸರಳವಾಗಿದೆ. ಈ ವಿವಾದಾಂಶವನ್ನು ತುಂಬಾ ಸೀಮಿತವಾದುದನ್ನಾಗಿ ಮಾಡಲಾಗಿದೆ. ಈ ವಿವಾದಾಂಶವು ಹೀಗಿದೆ. ಕುಡಿತವು ಸಮಸ್ಯೆಯೇ? ಕುಡಿತವು ಸಮಸ್ಯೆಯಾದರೆ ಅದು ತುರ್ತು ಸಮಸ್ಯೆಯೇ? ಈ ಸದನವು ಈ ಎರಡೂ ಪ್ರಶ್ನೆಗಳಿಗೆ ಖಚಿತ ಉತ್ತರವನ್ನು ಕೊಡಲು ಸಿದ್ಧವಿರದ ಹೊರತು ಹಣಕಾಸು ಮಂತ್ರಿಗಳು ಸೂಚಿಸಿದ ಕರಾಕರಣೆಯ ಮೇಲೆ ಮತದಾನ ಮಾಡುವುದಕ್ಕೆ ಯಾವುದೇ ಯುಕ್ತ ಕಾರಣಗಳು ಇರುವುದು ಕಂಡುಬರುವುದಿಲ್ಲ. ಮಾನ್ಯರೇ, ಪರಿಸ್ಥಿತಿಯನ್ನು ವಿಶ್ಲೇಷಿಸುವುದರಲ್ಲಿ ನಾವು ತಪ್ಪು ಮಾಡುವುದು ಬೇಡ. ಕುಡಿತವು ಅನಿಷ್ಟ ಎನ್ನುವುದರ ಬಗ್ಗೆ ಪ್ರಶ್ನೆಯೇ ಇಲ್ಲ ಮತ್ತು ಅದರ ಪರಿಣಾಮಗಳು ತುಂಬಾ ಕೆಡಕಾದವುಗಳು ಆಗಿರುತ್ತವೆ. ಕುಡಿತವು ಅನಿಷ್ಟವಾದುದು ಎಂದು ಒಪ್ಪುವುದು ಕುಡಿತವು ಒಂದು ಸಮಸ್ಯೆ ಎಂದು ಒಪ್ಪಿದಂತಲ್ಲ. ಅಲ್ಲದೆ ಅದು ತುರ್ತು ಸಮಸ್ಯೆ ಎಂದು ಒಪ್ಪಿಕೊಂಡಂತೆಯೂ ಅಲ್ಲ.

ಮಾನ್ಯರೇ, ಈಗ ಪರಿಸ್ಥಿತಿಯನ್ನು ಹೋಲಿಸಿ ಗಮನಿಸಬೇಕು. ಮುಂಬಯಿ ಪ್ರಾಂತದಲ್ಲಿನ ಪರಿಸ್ಥಿತಿ ಏನು? ಈಗ ಸಧ್ಯ ನಾವು ಉಳಿದ ಭಾರತದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಏಕೆಂದರೆ ನಾವು ಈಗ ಮುಂಬಯಿಯ ಮಂತ್ರಿಮಂಡಲದ ಆಯವ್ಯಯ ಪತ್ರದ ಬಗ್ಗೆ ಚರ್ಚಿಸುತ್ತಿದ್ದೇವೆ. ಮುಂಬಯಿ ಪ್ರಾಂತದಲ್ಲಿನ ಪರಿಸ್ಥಿತಿ ಏನು ಮತ್ತು ಕುಡಿತದ ಪ್ರಶ್ನೆಗೆ ಸಂಬಂಧಪಟ್ಟಂತೆ ಇತರ ದೇಶಗಳಲ್ಲಿನ ಪರಿಸ್ಥಿತಿ ಏನು? ಪ್ರಪ್ರಥಮವಾಗಿ ಇತರ ದೇಶಗಳಲ್ಲಿ ಅಬಕಾರಿ ಕರದ ಮೂಲಕ ಬರುವ ಆದಾಯ ಏನು ಎಂಬ ಬಗ್ಗೆ ಅಂಕಿ–ಸಂಖ್ಯೆಗಳನ್ನು ಕೊಡಲು ಅನುಮತಿಸಿ. ಏಕೆಂದರೆ ಅಬಕಾರಿ ಮೂಲದಿಂದ ಒಂದು ದೇಶಕ್ಕೆ ಬರುವ ಆದಾಯವು ಆ ದೇಶವು ಎದುರಿಸುತ್ತಿರುವ ಸಮಸ್ಯೆಯ ಗಂಭೀರತೆಯ ಸೂಚನೆಯನ್ನು ಕೊಡುತ್ತಿದೆ. ರಾಷ್ಟ್ರಗಳ ಸಂಘವು (ಲೀಗ್ ಆಫ್ ನೇಷನ್ಸ್) ಹೊರಡಿಸಿದ ನೀಲಿ ಹೊತ್ತಿಗೆಯಲ್ಲಿಂದ ಈ ಅಂಕಿ–ಸಂಖ್ಯೆಗಳು ೧೯೩೧ನೇ ವರುಷಕ್ಕೆ ಸಂಬಂಧಪಟ್ಟವುಗಳಾಗಿವೆ. ಗ್ರೇಟ್ ಬ್ರಿಟನ್ನಿನಿಂದ ಪ್ರಾರಂಭಿಸೋಣ. ಅದರ ಜನಸಂಖ್ಯೆ ೪,೪೯,೩೭,೪೪೪. ಅಬಕಾರಿ ಆದಾಯ ೧,೫೦೪,೮೯೫,೦೦೦ ಇರುತ್ತದೆ. ಆಸ್ಟ್ರಿಯಾದಲ್ಲಿ ಅದು ಈಗಿಲ್ಲ. ಆದರೆ ೧೯೩೭ರಲ್ಲಿ ಇತ್ತು. ಜನಸಂಖ್ಯೆ ೬೭,೬೦,೨೩೩ ಅಬಕಾರಿ ಮೂಲದಿಂದ ಬರುವ ಒಟ್ಟು ಉತ್ಪನ್ನ ೫೭,೧೯ ಲಕ್ಷ. ಐರಿಶ್ ಫ್ರೀ ಸ್ಟೇಟ್‌ದ ಒಟ್ಟು ಜನಸಂಖ್ಯೆ ೨,೯೬೫,೮೫೪. ಅಬಕಾರಿ ಮೂಲದ ಬರುವ ಆದಾಯ ೬೬೫ ಲಕ್ಷ. ಡೆನ್ಮಾರ್ಕ್ ದೇಶದ ಒಟ್ಟು ಜನಸಂಖ್ಯೆ ೩೭ ಲಕ್ಷ. ಅಬಕಾರಿ ಉತ್ಪನ್ನ ೫,೩೪,೮೦,೦೦೦. ಫ್ರಾನ್ಸ್‌ನ ಜನಸಂಖ್ಯೆ ೪೧೯ ಲಕ್ಷಕ್ಕಿಂತ

ಸ್ವಲ್ಪ ಹೆಚ್ಚು. ಅಬಕಾರಿ ಉತ್ಪನ್ನ ೨೦೭,೦೭೯,೫೫೦. ನಾರ್ವೆ ದೇಶದ ಅಂಕಿ–ಸಂಖ್ಯೆಗಳು ಹೀಗಿವೆ. ಅದರ ಒಟ್ಟು ಜನಸಂಖ್ಯೆ ೨,೮೧೪,೧೯೪ ಮತ್ತು ಅಬಕಾರಿ ಉತ್ಪನ್ನ ೧,೬೬,೭೨,೦೦೦. ಈ ದೇಶದಲ್ಲಿ ಸ್ಥಾನಿಕ ಆಯ್ಕೆ ಇರುತ್ತದೆ.

ಮಾನ್ಯರೇ, ಈಗ ಅಂಕಿ–ಸಂಖ್ಯೆಗಳ ಆಧಾರದ ಮೇಲೆ ನಮ್ಮ ಪ್ರಾಂತದ ಅಂಕಿ–ಅಂಶಗಳನ್ನು ಹೋಲಿಸಿ ನೋಡಿ. ಮುಂಬಯಿ ಪ್ರಾಂತದ ಜನಸಂಖ್ಯೆ ೧೮೦ ಲಕ್ಷ. ಅಬಕಾರಿ ಮೂಲದಿಂದ ಒಟ್ಟು ಆದಾಯ ೩೨೫ ಲಕ್ಷ. ಮುಂಬಯಿ ಪ್ರಾಂತದಲ್ಲಿ ಮದ್ಯ ಕುಡಿಯುವ ಈ ಪ್ರಮಾಣವು ಈ ರಾಜ್ಯವು ತೀವ್ರವಾಗಿ ಪರಿಹರಿಸಬೇಕಾದಂಥ ಸಮಸ್ಯೆಯನ್ನು ಉಂಟುಮಾಡುತ್ತದೆ ಎಂದು ಯಾರಾದರೂ ಹೇಳಬಹುದೇ? ಇದಕ್ಕೆ "ಹೌದು" ಎಂದು ಉತ್ತರ ಕೊಡುವವನು ಮತ್ತು ಈ ಪ್ರಶ್ನೆಗೆ ಸಕಾರಾತ್ಮಕ ಉತ್ತರ ಕೊಡುವವನು ತನ್ನ ಎಲ್ಲ ವಿವೇಚನಾ ಶಕ್ತಿಯನ್ನು ಕಳೆದುಕೊಂಡವನೇ ಆಗಿರಬೇಕು. (ನಗೆ) ಮತ್ತೊಂದು ಪರೀಕ್ಷೆಯನ್ನು ಗಮನಿಸಿ. ಮದ್ಯದ ಬಳಕೆಯನ್ನು ಗಮನಿಸಿದರೆ ಮತ್ತು ಈ ಅಂಕಿ ಸಂಖ್ಯೆಗಳನ್ನು ನಾನು ಮುಂಬೈ ಸರಕಾರದವರು ಕೊಟ್ಟ ವರದಿಯಿಂದಲೇ ತೆಗೆದುಕೊಂಡಿದ್ದೇನೆ. ಜನತೆ ಬಳಸುವ ಒಟ್ಟು ಮದ್ಯದ ಪ್ರಮಾಣವೆಷ್ಟು? ಈಗ ನೀಲಿ ಪುಸ್ತಕ ಅಥವಾ ಮುಂಬೈ ಸರಕಾರವು ಹೊರಡಿಸಿದ ಆಡಳಿತದ ವರದಿಗಳು ಇಡಿಯ ಪ್ರಾಂತದಲ್ಲಿ ಮದ್ಯದ ಬಳಕೆಯ ಸರಾಸರೀ ಪ್ರಮಾಣವು ಪ್ರತಿಯೊಬ್ಬನಿಗೆ ಮೂರು ಡ್ರಾಮಿನಷ್ಟು ಆಗುತ್ತದೆ. ಇದು ಒಂದು ಔಂಸಿಗಿಂತ ಕಡಿಮೆ ಎಂದು ಹೇಳಲಾಗುತ್ತಿದೆ. ವಾಸ್ತವವಾಗಿ ಅದು ಕಾಲು ಅಂಶ ಮಾತ್ರ ಎನ್ನಲಾಗುತ್ತಿದೆ. ನನ್ನ ವಿರೋಧಿ ಪಕ್ಷದ ಗೌರವಾನ್ವಿತ ಸದಸ್ಯರು ಇದನ್ನು ಸಮಸ್ಯೆ ಅನ್ನುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಬಳಕೆಯು ೧.೮ ಡ್ರಾಮಿನಷ್ಟು ಇರುತ್ತದೆ. ಪಟ್ಟಣಗಳೆಲ್ಲವನ್ನು ಒಟ್ಟಾಗಿ ಗಮನಿಸಿದಾಗ ಅದು ೮.೨ ಡ್ರಾಮಿನಷ್ಟಾಗುತ್ತದೆ. ಅದು ಒಂದು ಔಂಸಿನಷ್ಟಾದರೂ ಆಗುವುದಿಲ್ಲ. ಮುಂಬಯಿ ಪ್ರಾಂತದ ಆದಾಯವನ್ನು ಆಧಾರವಾಗಿ ತೆಗೆದುಕೊಳ್ಳಿ. ಇಲ್ಲಿ ನಾನು ಅತ್ಯಂತ ಹೆಚ್ಚಾಗಿ ಬಳಕೆಯಾಗುತ್ತಿರುವ ಬಾಬಿನ ಬಗ್ಗೆ ಅಂದರೆ ಭಟ್ಟಿ ಸಾರಾಯಿಯನ್ನು ಉಲ್ಲೇಖಿಸುತ್ತೇನೆ. ನಮ್ಮ ಅಬಕಾರಿ ವಿಷಯದಲ್ಲಿ ಭಟ್ಟಿ ಸಾರಾಯಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಈ ಭಟ್ಟಿ ಸಾರಾಯಿಯ ಮೂಲಕ ಈ ಪ್ರಾಂತವು ದೊರಕಿಸುವ ಆದಾಯವೆಷ್ಟು? ಭಟ್ಟಿ ಸಾರಾಯಿಯ ಮೂಲಕ ಬರುವ ಒಟ್ಟು ಆದಾಯವು ೧,೫೪,೪೩,೭೫೦ ರೂಪಾಯಿಗಳು ಎಂದು ಆ ವರದಿಯು ಹೇಳುತ್ತದೆ. ಇದು ಇಡಿಯ ಪ್ರಾಂತದ ಒಟ್ಟು ಲೆಕ್ಕ ಆಗಿರುತ್ತದೆ. ಇದನ್ನು ಈಗ ನಾವು ನಗರ ಪ್ರದೇಶ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಿಭಜಿಸೋಣ. ಆಡಳಿತ ವರದಿಯ ಮೇರೆಗೆ ಮುಂಬೈ ಪ್ರಾಂತದಲ್ಲಿ ೩೩ ಪಟ್ಟಣಗಳು ಇರುತ್ತವೆ. ಈ ಎಲ್ಲ ಪಟ್ಟಣಗಳ ಒಟ್ಟು ಜನಸಂಖ್ಯೆ ೨೯,೦೦,೦೦೦ ಇರುತ್ತದೆ. ಭಟ್ಟಿಸೆರೆಯ ಮೂಲಕ ಈ ಪಟ್ಟಣಗಳಿಂದ ಬರುವ ಆದಾಯ ಎಷ್ಟು? ಈಗ ೩೩ ಪಟ್ಟಣಗಳಿಂದ ಬರುವ ಒಟ್ಟು ಆದಾಯ ೧ ಕೋಟಿ ರೂಪಾಯಿಗಳಷ್ಟು ಇದೆ. ಅಂದರೆ ಬಾಕೀ ಜನತೆಯು ಪಟ್ಟಣದಲ್ಲಿರದ ಜನರು ಗ್ರಾಮಗಳಲ್ಲಿ ಇರುತ್ತಾರೆಂದು ಅರ್ಥವಾಗುತ್ತದೆ ಮತ್ತು ನನ್ನ ಲೆಕ್ಕಾಚಾರದಂತೆ ಅದು ೧,೫೨,೦೦,೦೦೦ ಇದ್ದು ಅವರು ೫೪ ಲಕ್ಷ ರೂಪಾಯಿ ಬೆಲೆಯ ಭಟ್ಟಿ ಸಾರಾಯಿಯನ್ನು ಬಳಸುತ್ತಾರೆ. ಅದನ್ನು ಪ್ರತಿಯೊಬ್ಬ ವ್ಯಕ್ತಿಯ ಆಧಾರದ ಮೇಲೆ ಲೆಕ್ಕ ಹಾಕಿದರೆ ಪ್ರತಿಯೊಬ್ಬನೂ ವರುಷ ಒಂದಕ್ಕೆ ಐದು ಆಣೆ ಬೆಲೆಯ (೩೧ ಪೈಸೆ) ಸರಾಯಿಯನ್ನು ಬಳಸುತ್ತಾನೆ ಎಂದು ಅರ್ಥವಾಗುತ್ತದೆ. ಪಟ್ಟಣಗಳಿಗೆ ಸಂಬಂಧಿಸಿದ ಅಂಕಿ–ಸಂಖ್ಯೆಗಳನ್ನು ಇನ್ನಷ್ಟು ವಿವರವಾಗಿ ವಿಶ್ಲೇಷಿಸಲು ಅನುಮತಿಸಿರಿ. ಪಟ್ಟಣಗಳಲ್ಲಿ ೨೯,೦೦,೦೦೦ ಜನರು ಒಂದು ಕೋಟಿ ರೂಪಾಯಿ ಬೆಲೆಯ ಸಾರಾಯಿಯನ್ನು ಕುಡಿಯುತ್ತಾರೆ. ಅದು ಸರಿಯೇ? ಈ ದೇಶದಲ್ಲಿ ಮಹಿಳೆಯರು ಸಾರಾಯಿ

ಕುಡಿಯುವುದಿಲ್ಲ ಅನ್ನುವುದು ನಮಗೆಲ್ಲ ತಿಳಿದಿದೆ. ಅತ್ಯಂತ ದೊಡ್ಡ ಪ್ರಮಾಣದ ಕುಡುಕನೂ ಸಹ ತನ್ನ ಹೆಂಡತಿಯು ಒಂದು ಡ್ರಾಮಿನಷ್ಟೂ ಸಾರಾಯಿಯನ್ನು ಕುಡಿಯುವುದನ್ನು ಸಹಿಸುವುದಿಲ್ಲ. ಮಕ್ಕಳೂ ಸಹ ಕುಡಿಯುವುದಿಲ್ಲ. ಆದುದರಿಂದ ಮಹಿಳೆಯರು ಮಕ್ಕಳ ಬಗ್ಗೆ ಸ್ವಲ್ಪ ಅವಕಾಶ ಕೊಟ್ಟು ಪಟ್ಟಣದ ಶೇಕಡಾ ೭೫ರಷ್ಟು ಜನತೆ ಕುಡಿಯುವುದಿಲ್ಲ ಎಂದು ಹೇಳುವುದು ನ್ಯಾಯಯುತವೆಂದು ನನಗೆ ಅನ್ನಿಸುತ್ತದೆ. ಅದನ್ನು ನೀವು ವಜಾ ಮಾಡಿದರೆ, ಅಜಮಾಸು ೧,೦೦,೦೦೦ ಜನರು ಕುಡಿತದ ದುಷ್ಪರಿಣಾಮಕ್ಕೆ ಒಳಪಟ್ಟವರಾಗಿರುತ್ತಾರೆ ಎಂದು ಅರ್ಥವಾಗುತ್ತದೆ. ಮಾನ್ಯರೇ, ನನ್ನ ಮುಂದಿರುವ ಈ ಅಂಕಿ ಸಂಖ್ಯೆಗಳ ಆಧಾರದ ಮೇಲೆ ನಾನು ಹೇಳುವುದೇನೆಂದರೆ ಈ ಅಂಕಿ ಸಂಖ್ಯೆಗಳನ್ನು ಗಮನಿಸಿದ ತಲೆ ಸಮ ಇದ್ದ ಯಾವುದೇ ವ್ಯಕ್ತಿಯು ಈ ದೇಶದಲ್ಲಿ ಕುಡಿತವು ಈ ಕೂಡಲೇ ಪರಿಹರಿಸಲೇಬೇಕಾದ ಸಮಸ್ಯೆಯಾಗಿದೆ ಎಂದು ಹೇಳಲಾರ.

ಮಾನ್ಯರೇ, ಈಗ ಅಮೆರಿಕೆಯ ಸಂಯುಕ್ತ ಸಂಸ್ಥಾನವನ್ನು ಮಾದರಿಯಾಗಿ ತೆಗೆದುಕೊಳ್ಳುವ ಹಲವರು ಇರುವುದು ನನಗೆ ಗೊತ್ತು. ಮತ್ತು ೧೯೧೯ರಲ್ಲಿ ಅಮೆರಿಕೆಯ ಸಂಯುಕ್ತ ಸಂಸ್ಥಾನದ ಸಂವಿಧಾನವನ್ನು ತಿದ್ದುಪಡಿ ಮಾಡಿ ಪಾನ ಪ್ರತಿಬಂಧ ನೀತಿಯನ್ನು ಅನುಸರಿಸಿದೆ ಎಂದು ಅವರು ಭಾವಿಸುತ್ತಾರೆ. ಈ ದೇಶವು ಅದನ್ನೇ ಅನುಸರಿಸಬೇಕು ಅನ್ನುತ್ತಾರೆ. ಮಾನ್ಯರೇ, ನಾನು ಹಾಗೆ ಹೇಳಬಹುದಾದರೆ ನಾವು ಬೆದರಿ ಅತ್ತಿತ್ತ ಓಡಾಡುವುದಕ್ಕಿಂತ ಮುಂಚೆ ಆ ದೇಶದಲ್ಲಿ ಯಾವ ಪರಿಸ್ಥಿತಿ ಇತ್ತು ಅನ್ನುವುದನ್ನು ಪರಿಶೀಲಿಸಬೇಕು. ೧೯೧೯ರಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡುವ ಮುಂಚೆ ಇದ್ದ ಸಮಸ್ಯೆಗೆ ಸಂಬಂಧಿಸಿದ ಮತ್ತು ಆ ಸಮಸ್ಯೆಯ ಬೃಹತ್ ಪ್ರಮಾಣಕ್ಕೆ ಸಂಬಂಧಿಸಿದ ಕೆಲವು ಅಂಕಿ ಸಂಖ್ಯೆಗಳು ಇಲ್ಲಿ ಇರುತ್ತವೆ. ಸಂಯುಕ್ತ ಸಂಸ್ಥಾನದಲ್ಲಿದ್ದ ಸಾರಾಯಿಯ ಒಟ್ಟು ಬಳಕೆ ಎಷ್ಟಿತ್ತು. ಪೆಲ್ಡಮನ್ ಅವರ "ಪಾನ ಪ್ರತಿಬಂಧ" (Prohibition) ಪುಸ್ತಕದ ಮೇರೆಗೆ ಪರಿಸ್ಥಿತಿ ಹೀಗಿತ್ತು. ೧೯೧೦ರಿಂದ ೧೯೧೪ರವರೆಗಿನ ಅವಧಿಯಲ್ಲಿ ಭಟ್ಟಿ ಇಳಿಸಿದ ಸಾರಾಯಿ, ಮದ್ಯ ಮತ್ತು ಬೀರು ಪೇಯಗಳ ಪ್ರತಿಯೊಬ್ಬನ ತಲಾ ಬಳಕೆಯು ೨೨.೪೩ ಗ್ಯಾಲನ್ನುಗಳಷ್ಟಿತ್ತು. ೧೯೦೫ ಮತ್ತು ೧೯೧೦ರ ಅವಧಿಯಲ್ಲಿ ಅದು ೨೧ ಗ್ಯಾಲನ್ನು ಇತ್ತು. ೧೯೦೦ ಮತ್ತು ೧೯೦೪ ಅವಧಿಯಲ್ಲಿ ಇದು ೧೮.೭೭ ಗ್ಯಾಲನ್ನು ಇತ್ತು. ಇದು ಸಾರಾಯಿ ಬಳಕೆಯ ವ್ಯಕ್ತಿಯ ತಲಾ ಪ್ರಮಾಣದಲ್ಲಿ ತೀವ್ರತರವಾದ ಹೆಚ್ಚಳವನ್ನು ತೋರಿಸುತ್ತದೆ. ೧೯೦೦ ಮತ್ತು ೧೯೦೧ರ ಅವಧಿಯಲ್ಲಿ ಅದು ೧೮ ಇತ್ತು. ೧೯೦೫ ಮತ್ತು ೧೯೦೯ರ ಆವಧಿಯ ನಡುವೆ ಅದು ೧೯.೪೭ ಇತ್ತು ಮತ್ತು ೧೯೧೦ ಮತ್ತು ೧೯೧೪ರ ನಡುವೆ ಅದು ೨೨.೪೩ ಇತ್ತು. ನಿಜವಾಗಿಯೂ ಸಂಯುಕ್ತ ಸಂಸ್ಥಾನಗಳಲ್ಲಿದ್ದ ಪರಿಸ್ಥಿತಿಗೆ ನಮ್ಮ ಪರಿಸ್ಥಿತಿಗಳನ್ನು ಹೋಲಿಕೆ ಮಾಡಲು ಎಳ್ಳಷ್ಟೂ ಸಾಧ್ಯವಿಲ್ಲ.

ಮತ್ತೊಂದು ಸೂಚನೆಯನ್ನು ಗಮನಿಸಿ. ನಮ್ಮ ದೇಶದಲ್ಲಿ ಕುಡಿತದ ರೋಗವಿದೆಯೆಂದು ನಾವು ಹೇಳಬಹುದೇ? ಅತಿ ಕುಡಿತದ ಕಾರಣದಿಂದ ಸತ್ತವರು ಇಲ್ಲಿ ಉಂಟು ಎಂದು ನಾವು ಹೇಳಬಲ್ಲವೋ ಮತ್ತು ಅತಿಶಯವಾದ ಕುಡಿತದ ಕಾರಣದಿಂದಾಗಿ ಲಿವರ್ ತೊಂದರೆಯಿಂದ ಸತ್ತವರು ಇಲ್ಲಿ ಉಂಟು ಎಂದು ಹೇಳಬಲ್ಲೆವೋ? ಈ ಪ್ರಾಂತದ ಸಾರ್ವಜನಿಕ ಆರೋಗ್ಯ ಇಲಾಖೆಯವರು ಪ್ರಕಟಿಸಿದ ಅಂಕಿ ಸಂಖ್ಯೆಗಳನ್ನು ನಾನು ಪರಿಶೀಲಿಸಿದ್ದೇನೆ ಮತ್ತು ಭಾರತ ಸರಕಾರದಿಂದ ನೇಮಿತರಾದ ಆರೋಗ್ಯ ಕಮೀಶನ್ನರು ಪ್ರಕಟಪಡಿಸಿದ ಅಂಕಿಗಳನ್ನು ಪರಿಶೀಲಿಸಿದ್ದೇನೆ ಮತ್ತು ಅವರಿಬ್ಬರೂ ಸಹ ಅಂಥ ಸಂಗತಿಗಳನ್ನು ಗಮನಿಸುವ ಅವಶ್ಯಕತೆ ಇದೆ ಎಂಬ ವಿಚಾರವನ್ನೇ ಮಾಡಿಲ್ಲ ಎಂದು ಹೇಳಬಯಸುತ್ತೇನೆ. ಕುಡಿತದಿಂದಾಗಿ

ಸತ್ತವರನ್ನು ಅಥವಾ ಲಿವರ್ ತೊಂದರೆಯಿಂದಾಗಿ ಸತ್ತವರನ್ನು ಅವರು ಗಮನಿಸದಿರುವುದಕ್ಕೆ ಕಾರಣ ವೆಂದರೆ ಅಂತಹ ಮರಣಗಳು ಭಾರತದಲ್ಲಿ ಇಲ್ಲವೇ ಇಲ್ಲ ಅನ್ನುವುದೇ ಆಗಿರುತ್ತದೆ. ಆದರೆ ಸಂಯುಕ್ತ ಸಂಸ್ಥಾನಗಳಲ್ಲಿ ಏನಾಗಿದೆ ನೋಡಿರಿ. ಸಂಯುಕ್ತ ಸಂಸ್ಥಾನಗಳಲ್ಲಿ ೧೯೧೭ರಲ್ಲಿ ೧೦೦೦ ಜನರಲ್ಲಿ ಕೇವಲ ೫ ಜನರು ಕುಡಿತದ ರೋಗದಿಂದ ಸತ್ತರು. ೧೯೧೬ರಲ್ಲಿ ಅದು ೫.೮, ೧೯೧೫ರಲ್ಲಿ ೫.೨, ೧೯೧೪ರಲ್ಲಿ ೪.೯, ೧೯೧೩ರಲ್ಲಿ ಅದು ೫.೧೦ ಇತ್ತು. ಮತ್ತೊಂದು ಸೂಚನೆಯನ್ನು ಗಮನಿಸಿ. ಲಿವರ್ ಸಿರೋಸಿಸ್ ರೋಗದಿಂದಾಗಿ ಉಂಟಾದ ಮರಣಗಳು: ೧೯೧೭ರಲ್ಲಿ ಸಾವಿರ ಜನರಲ್ಲಿ ೧೧ ಜನ, ೧೯೧೬ರಲ್ಲಿ ೧೨, ೧೯೧೫ರಲ್ಲಿ ೧೨.೬, ೧೯೧೪ರಲ್ಲಿ ೧೩, ೧೯೧೩ರಲ್ಲಿ ೧೩.೪ ಇತ್ತು. ದೇಶದ ನಮ್ಮ ಭಾಗದಲ್ಲಿ ಅಂಥ ಯಾವುದೂ ನಡೆದೇ ಇಲ್ಲ ಎಂದೇ ನಾನು ಹೇಳುತ್ತೇನೆ. ಆದಕಾರಣ ಮಂತ್ರಿ ಮಂಡಳದವರು ಇದೊಂದು ಕೂಡಲೇ ಪರಿಹರಿಸಲೇಬೇಕಾದ ಸಮಸ್ಯೆ ಎಂದು ಹೇಳುವುದು ತಪ್ಪು ಎಂಬುದೇ ನನ್ನ ವಾದವಾಗಿರುತ್ತದೆ. ನಮ್ಮ ದೇಶದ ಈ ಭಾಗದಲ್ಲಿ ಇದೊಂದು ಸಮಸ್ಯೆಯೇ ಅಲ್ಲ ಎಂಬುದೇ ನನ್ನ ವಾದವಾಗಿದೆ. ಅದಕ್ಕೆ ಎರಡು ಉತ್ತಮ ಕಾರಣಗಳು ಇರುತ್ತವೆ. ಕುಡಿತವು ಪಾಪ ಎನ್ನುವ ಪ್ರತಿಬಂಧವನ್ನು ಭಾರತದಲ್ಲಿನ ಎಲ್ಲ ಧರ್ಮಗಳೂ ಒಪ್ಪುತ್ತವೆ ಅನ್ನುವುದು ಒಂದು ಉತ್ತಮ ಕಾರಣ. ಧರ್ಮವು ಹಲವಾರು ಕಿಡಿಗೇಡಿತನದ ಕಾರ್ಯಗಳನ್ನು ಮಾಡಿರಬಹುದು. ಆದರೆ ಭಾರತದಲ್ಲಿನ ಧರ್ಮಗಳು ಹಿಂದೂ ಆಗಲಿ, ಮೊಹಮಡನ್ ಆಗಲೀ ಅಥವಾ ಝೊರೋಸ್ಟ್ರಿಯನ್ ಧರ್ಮವೇ ಆಗಲಿ ಅವು ಕೆಲವು ವಿಷಯಗಳಲ್ಲಿ ಉತ್ತಮ ಕಾರ್ಯ ಮಾಡಿವೆ ಎಂಬ ಬಗ್ಗೆ ಯಾವುದೇ ಸಂಶಯವೇ ಇಲ್ಲ. ಆ ಉತ್ತಮ ಕಾರ್ಯವೆಂದರೆ ಅವು ಅಂಥ ಪ್ರತಿಬಂಧವನ್ನು ವಿಧಿಸುತ್ತವೆ ಮತ್ತು ಹೆಚ್ಚಿನ ಜನತೆಯು ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

ನಮ್ಮ ದೇಶವನ್ನು ಇತರ ದೇಶಗಳಿಂದ ವಿಭಿನ್ನವಾಗಿ ತೋರಿಸುವ ಎರಡನೆಯ ಲಕ್ಷಣವೆಂದರೆ ಮತ್ತು ಕುಡಿತವು ಈ ದೇಶದಲ್ಲಿ ಒಂದು ಸಮಸ್ಯೆಯನ್ನುಂಟುಮಾಡಿತು ಎಂದು ತೋರಿಸುವ ಎರಡನೆಯ ಲಕ್ಷಣವೆಂದರೆ ಇಷ್ಟು ಮಾತ್ರ. ಏನೆಂದರೆ ಕುಡಿತದ ಸಾಗಣೆಯು ಸರಕಾರದ ಕೈಯಲ್ಲಿದೆ. ಅಮೆರಿಕಾ ದಲ್ಲಿದ್ದಂತೆ ಅಥವಾ ಇತರ ಯೂರೋಪದ ದೇಶಗಳಲ್ಲಿರುವಂತೆ ಇದು ಭಾರತದಲ್ಲಿ ಖಾಸಗಿ ಲಾಭಬಡುಕರ ನಿಯಂತ್ರಣದಲ್ಲಿ ಇಲ್ಲ. ಸರಕಾರವು ಹೊಣೆಗಾರ ಸಂಸ್ಥೆಯಾಗಿದೆ. ಅದು ಸಾರ್ವಜನಿಕ ಅಭಿಪ್ರಾಯಕ್ಕೆ ಒಳಪಟ್ಟುದಾಗಿರುತ್ತದೆ. ಅದು ಈ ಸದನದ ಅಭಿಪ್ರಾಯಕ್ಕೆ ಒಳಪಟ್ಟುದು. ಈ ಕಾರಣದಿಂದಾಗಿ ಖಾಸಗಿ ಲಾಭಬಡಕರು ಮಾಡಬಹುದಾದ ಕೇಡನ್ನು ಅದು ಮಾಡಲಾರದು. ನಾನು ಈಗಾಗಲೇ ಹೇಳಿರುವಂತೆ ಯಾವ ದೃಷ್ಟಿಯಿಂದ ಗಮನಿಸಿದರೂ ಇದೊಂದು ಈಗಾಲೇ ಪರಿಹರಿಸಲೇಬೇಕಾದ ಸಮಸ್ಯೆಯಾಗಿದೆ ಎಂದು ಹೇಳುವುದನ್ನು ನಾನು ತಿರಸ್ಕರಿಸುತ್ತೇನೆ.

ಮಾನ್ಯರೇ, ಈಗ ನಾನು ಕೇಳುವ ಮುಂದಿನ ಪ್ರಶ್ನೆ ಇದು. ಎಲ್ಲವನ್ನೂ ಬದಿಗಿಟ್ಟು ಪ್ರಪ್ರಥಮವಾಗಿ ಪರಿಹರಿಸಲೇಬೇಕಾದಂಥ ತುರ್ತು ಸಮಸ್ಯೆ ಇದಾಗಿದೆಯೇ? ಈ ಪ್ರಶ್ನೆಯನ್ನು ಉತ್ತರಿಸುವುದಕ್ಕಿಂತ ಮುಂಚೆ ಈ ಪ್ರಾಂತದ ಜನತೆಯ ಇತರ ಹಲವು ಬೇಡಿಕೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯವಾಗಿದೆ. ಇತರ ಬೇಡಿಕೆಗಳನ್ನು ಸಂಪೂರ್ಣವಾಗಿ ಪೂರೈಸಲಾಗಿದೆಯೇ? ಸಹನೀಯವಾದ ರೀತಿಯಲ್ಲಿ ಅವುಗಳನ್ನು ಪೂರೈಸಲಾಗಿದೆಯೇ? ಅಂದರೆ ಅವುಗಳನ್ನು ನಾವು ತಾತ್ಕಾಲಿಕವಾಗಿ ಬದಿಗಿಟ್ಟು ಈ ಒಂದೇ ಒಂದು ಸಮಸ್ಯೆಯನ್ನು ಬಿಡಿಸುವಂತೆ ಮಾಡುವಷ್ಟರ ಮಟ್ಟಿಗೆ ಸಹನೀಯವಾಗಿ ಪೂರೈಸಲಾಗಿದೆಯೇ? ಹಲವು ದೃಷ್ಟಾಂತಗಳನ್ನು ನಾನು ಹೇಳಬಯಸುತ್ತೇನೆ. ಶಿಕ್ಷಣದ ಪ್ರಶ್ನೆಯನ್ನು ಪ್ರಪ್ರಥಮವಾಗಿ ವಿಚಾರಿಸೋಣ.

ವಯಸ್ಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇವಲ ಶೇಕಡಾ ೧೪.೩ರಷ್ಟು ಪುರುಷರು ಮಾತ್ರ ಅಕ್ಷರಸ್ಥರು ಇದ್ದಾರೆ. ಮಹಿಳೆಯರಿಗೆ ಸಂಬಂಧಿಸಿದಂತೆ ಅವರು ಕೇವಲ ಶೇಕಡಾ ೨.೪ರಷ್ಟು ಮಾತ್ರ. ಇದರ ಅರ್ಥವೆಂದರೆ ಶೇಕಡಾ ೮೬ರಷ್ಟು ಪುರುಷರಿಗೆ ಮತ್ತು ಶೇಕಡಾ ೯೮ರಷ್ಟು ಮಹಿಳೆಯರಿಗೆ ಶಿಕ್ಷಣದ ಪ್ರಾರಂಭಿಕ ಅಗತ್ಯಗಳನ್ನು ಕಲಿಸುವ ಅವಶ್ಯಕತೆ ಇದೆ. ಅಂದರೆ ಅವರು ಇತರ ವರ್ಗಗಳವರ ತಂತ್ರಕ್ಕೆ ಬಲಿಯಾಗದೆ ತಮ್ಮ ದಿನನಿತ್ಯದ ಕರ್ತವ್ಯ ಕರ್ಮಗಳನ್ನು ಮಾಡಬಲ್ಲರು. ಈ ವಿಷಯಕ್ಕೆ ಸಂಬಂಧಿಸಿದಂತೆ ಸರಕಾರವು ನಮಗಾಗಿ ಒಂದು ಸಮಿತಿಯನ್ನು ನೇಮಕ ಮಾಡಿತ್ತು. ಆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಆ ಸಮಿತಿಯು ಸಲ್ಲಿಸಿದ ವರದಿಯಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಸೂಚನೆಗಳನ್ನು ಕಾರ್ಯಗತಗೊಳಿಸಲು ಯಾವುದೇ ಅವಕಾಶವನ್ನು ಈ ಆಯವ್ಯಯ ಪತ್ರದಲ್ಲಿ ಒದಗಿಸಲಾಗಿಲ್ಲ. ಮಕ್ಕಳ ಶಿಕ್ಷಣವನ್ನೇ ತೆಗೆದುಕೊಳ್ಳಿ. ಈ ಪ್ರಾಂತದಲ್ಲಿ ಅದರ ಪರಿಸ್ಥಿತಿ ಏನು? ಈ ಪ್ರಾಂತದಲ್ಲಿ ಅಲ್ಲಗಳೆಯಲು ಬಾರದೇ ಇರುವ ಒಂದು ವಿಷಯವೆಂದರೆ ಕಾಲೇಜ್ ಶಿಕ್ಷಣದ ಬಗ್ಗೆ ತನಗಿರುವ ಹೊಣೆಗಾರಿಕೆಯನ್ನು ತಿರಸ್ಕರಿಸಿರುವುದು. ಈ ಅಂಶದ ಮೇಲೆ ಯಾವುದೇ ಸಂಶಯವಿರಲಾರದೆಂದೇ ನಾನು ಭಾವಿಸುತ್ತೇನೆ. ಈ ಪ್ರಾಂತದ ಮಕ್ಕಳಿಗೆ ಉಚ್ಚ ಶಿಕ್ಷಣ ಕೊಡುವುದು ತನ್ನ ಕರ್ತವ್ಯವೆಂದು ಈ ಸರಕಾರವು ಭಾವಿಸುವುದಿಲ್ಲ. ಸರಕಾರವು ಅದನ್ನು ಖಾಸಗಿ ಏಜೆನ್ಸಿಗಳಿಗೆ ಬಿಟ್ಟುಕೊಟ್ಟಿವೆ. ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಚ್ಚು ಕಡಿಮೆ ಅದೇ ಆಧಾರ ಇರುತ್ತದೆ. ಆದರೆ ಸಾರ್ವಜನಿಕರ ಹಣದಿಂದ ಚಿಕ್ಕಮೊತ್ತ ಅನುದಾನಗಳ ಮೂಲಕ ಖಾಸಗಿಯ ಏಜೆನ್ಸಿಯವರು ಸಂಗ್ರಹಿಸಿದ ಹಣಕ್ಕೆ ಪೂರಕ ಮೊತ್ತ ಒದಗಿಸುತ್ತದೆ. ಕಾರಣ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ ನಮಗಿರುವುದು ತುಂಬಾ ಪರಿಮಿತ ಕಾರ್ಯಕ್ಷೇತ್ರ. ಇನ್ನು ಪ್ರಾಥಮಿಕ ಶಿಕ್ಷಣ. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರಕಾರವು ಏನು ಮಾಡಿದೆ? ನಿನ್ನೆ ಸಂಗ್ರಹಿಸಿದ ಅಂಕಿ ಸಂಖ್ಯೆಗಳಿಂದ ಮೇಲಿಂದ ಸಧ್ಯದ ಪರಿಸ್ಥಿತಿ ಹೀಗೆ ಇದೆ ಎಂಬುದು ಕಂಡುಬರುತ್ತದೆ. ಪ್ರಾಥಮಿಕ ಶಿಕ್ಷಣ ಅಧಿನಿಯಮವು ೬ರಿಂದ ೧೧ ವರುಷದ ಮಕ್ಕಳ ಒಟ್ಟು ಸಂಖ್ಯೆಯು ೨,೪೭೯,೦೦೦ ಇರುತ್ತದೆ. ಈ ಮಕ್ಕಳ ಪೈಕಿ ೭,೫೪,೦೦೦ ಮಕ್ಕಳು ಮಾತ್ರ ಶಾಲೆಯಲ್ಲಿ ಇರುತ್ತಾರೆ. ಉಳಿದವರು ಶಾಲೆಗೆ ಹೋಗುವುದಿಲ್ಲ. ಈ ಪ್ರಮಾಣವು ಈ ಕೆಳಗಿನಂತೆ ಇದೆ. ಮೂರು ಮಕ್ಕಳಲ್ಲಿ ಒಬ್ಬನು ಶಾಲೆಗೆ ಹೋಗುತ್ತಾನೆ. ಉಳಿದಿಬ್ಬರು ಶಾಲೆಯ ಹೊರಗೇನೇ ಇರುತ್ತಾರೆ. ಈ ಪ್ರಶ್ನೆಯನ್ನು ಬೇರೆ ದೃಷ್ಟಿಕೋನದಿಂದ ಪರೀಕ್ಷಿಸಬೇಕು. ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ಸರಕಾರವು ಒದಗಿಸಿಕೊಟ್ಟಿರುವ ಅನುಕೂಲತೆಗಳ ದೃಷ್ಟಿಯಿಂದ ಪರೀಕ್ಷಿಸಬೇಕು. ಈ ಪ್ರಾಂತದ ಪಟ್ಟಣಗಳಲ್ಲಿ ೧೮೪ ಪ್ರಾಥಮಿಕ ಶಾಲೆಗಳಿರುವುದು ಸರಕಾರವು ಕೊಟ್ಟ ಅಂಕಿ ಸಂಖ್ಯೆಗಳ ಮೇಲಿಂದ ಕಂಡುಬರುತ್ತದೆ. ಇದು ಪಟ್ಟಣಕ್ಕೆ ಸಂಬಂಧಪಟ್ಟಾಗಿದೆ. ಗ್ರಾಮಗಳಿಗೆ ಸಂಬಂಧಿಸಿದಂತೆ ಪರಿಸ್ಥಿತಿ ಏನು? ಈ ಪ್ರಾಂತದಲ್ಲಿರುವ ಒಟ್ಟು ಹಳ್ಳಿಗಳ ಸಂಖ್ಯೆ ೨೧,೪೮೪. ಇವುಗಳ ಪೈಕಿ ಕೇವಲ ೮,೫೯೯ ಹಳ್ಳಿಗಳಲ್ಲಿ ಮಾತ್ರ ಶಾಲೆಗಳಿರುತ್ತದೆ. ೧೨,೮೮೫ ಹಳ್ಳಿಗಳಲ್ಲಿ ಶಾಲೆಗಳೇ ಇಲ್ಲ. ಇದು ವಾಸ್ತವ ಪರಿಸ್ಥಿತಿ. ಪ್ರಾಥಮಿಕ ಶಿಕ್ಷಣದ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಪ್ರಶ್ನೆಯು ಒತ್ತಟ್ಟಿಗಿರಲಿ, ಸರಕಾರವು ಈ ಶಾಲೆಗಳಿಗೂ ಸಹ ಅನುಕೂಲತೆಗಳನ್ನು ಒದಗಿಸುವ ಬಗ್ಗೆ ಲಕ್ಷ್ಯವನ್ನೇ ವಹಿಸಿಲ್ಲ. ಮಾನ್ಯರೇ ಈಗ ಯಾವುದೇ ಸಂದರ್ಭದಲ್ಲಿ ನನಗೆ ಹೊಳೆಯುವ ಒಂದು ಸೋಜಿಗದ ವಿಷಯವೆಂದರೆ, ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವುದರ ವೆಚ್ಚವೆಷ್ಟು ಎನ್ನುವುದು. ಮಾನ್ಯ ಹಣಕಾಸು ಮಂತ್ರಿಗಳಿಗೆ ಹೊಳೆಯುತ್ತದೆಯೋ ಇಲ್ಲವೋ ನನಗೆ ತಿಳಿಯದು. ಪ್ರಾಥಮಿಕ ಶಿಕ್ಷಣ ಸಮಿತಿಯವರು ಸಿದ್ಧಪಡಿಸಿದ ಅಂಕಿ ಸಂಖ್ಯೆಗಳ ಮೇರೆಗೆ, ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವುದಕ್ಕಾಗಿ ಮುಂಬಯಿ ಸರಕಾರಕ್ಕೆ

ರೂ. ೧.೩೦ ಲಕ್ಷ ಬೇಕಾಗುತ್ತದೆ. ಮಾನ್ಯರೆ, ಈಗ ಮಾನ್ಯ ಹಣಕಾಸು ಮಂತ್ರಿಗಳು ಕರಾಕರಣೆಯ ಮೂಲಕ ಎತ್ತುತ್ತಿರುವ ಹಣವು ಅಷ್ಟು ಮಾತ್ರವೇ ಇರುತ್ತದೆ. ಕರಾಕರಣೆಯ ಪ್ರಸ್ತಾಪಗಳು ಒಳ್ಳೆಯವೋ ಕೆಟ್ಟವೋ ಎಂಬ ಪ್ರಶ್ನೆಯಲ್ಲದೆ, ಅತ್ಯುತ್ತಮ ವಿಧಾನದ ಉದ್ದೇಶಗಳಿಗೆ ಹಣವನ್ನು ವೆಚ್ಚ ಮಾಡಬೇಕಾದ ಆಶಯಕ್ಕೆ ನನ್ನನ್ನು ಸೀಮಿತಗೊಳಿಸಿಕೊಂಡು ಗೌರವಾನ್ವಿತ ಹಣಕಾಸು ಮಂತ್ರಿಗಳಿಗೆ ನಾನು ಕೇಳುವ ಪ್ರಶ್ನೆ ಇದು. ನೀವು ರೂ. ೧.೩೦ ಲಕ್ಷ ರೂಪಾಯಿಗಳನ್ನು ಎತ್ತುತ್ತಿದ್ದೀರಿ. ಈ ಹಣವನ್ನು ನೀವು ಕುಡುಕರ ಹಣೇಬರಹವನ್ನು ಸುಧಾರಿಸಲು ಖರ್ಚು ಮಾಡುತ್ತೀರೋ ಅಥವಾ ಶಿಕ್ಷಣವನ್ನು ಪಡೆಯಲಾಗದ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕಾಗಿ ಖರ್ಚು ಮಾಡುತ್ತೀರೋ? ನೀವು ಮಾಡುವ ಆಯ್ಕೆ ಯಾವುದು. ಇದೇ ನಿಜವಾಗಿಯೂ ದೊಡ್ಡ ಪ್ರಶ್ನೆಯಾಗಿದೆ. ಮಕ್ಕಳ ಶಿಕ್ಷಣವು ಹೆಚ್ಚು ಮಹತ್ವದ್ದೇ? ಕುಡಿಯುವುದನ್ನು ಆಯ್ಕೆ ಮಾಡಿಕೊಂಡು ಪಟ್ಟಣದ ಹತ್ತು ಲಕ್ಷ ಜನರ ಹಣೆಬರಹ ಸುಧಾರಣೆಗಿಂತ ೧೭ರಿಂದ ೧೮ ಲಕ್ಷ ಮಕ್ಕಳ ಶಿಕ್ಷಣವು ಕಡಿಮೆ ಮಹತ್ವದ್ದೋ? ಮಾನ್ಯರೇ ನನಗೆ ಅದರಲ್ಲಿ ನಂಬಿಕೆ ಇಲ್ಲ. ನಾನು ಟೀಟೋಟಲರ ಇರುತ್ತೇನೆ ಮತ್ತು ಪ್ರತಿಯೊಬ್ಬನು ಹಾಗಿದ್ದಾನೆ ಎಂದೇ ನಾನು ಭಾವಿಸುತ್ತೇನೆ. ಆದರೆ ನಿಜವಾಗಿಯೂ ಇರುವ ಸಮಸ್ಯೆ ಇದು. ನೀವು ನನಗೆ ಸುಶಿಕ್ಷಿತವಾದ ಮತ್ತು ಸೌಮ್ಯನಾದ ವ್ಯಕ್ತಿಯನ್ನು ಕೊಟ್ಟರೆ ನಾನು ಅವನನ್ನು ಸ್ವಾಗತಿಸುತ್ತೇನೆ. ಆದರೆ ಸೌಮ್ಯನಾದ ಮೂರ್ಖನನ್ನು, ದಡ್ಡನಾದವನನ್ನು, ಏನನ್ನು ತಿಳಿಯದಂಥ ವ್ಯಕ್ತಿಯನ್ನು ತೆಗೆದುಕೊಳ್ಳಲು ಹೇಳಿದರೆ ನಾನು ಕುಡುಕನಾದರೂ ಸ್ವಲ್ಪ ತಿಳಿವಳಿಕೆ ಇರುವ ವ್ಯಕ್ತಿಯನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ. ಅದು ನನ್ನ ಅಭಿಪ್ರಾಯ. ಅದ್ಭುತವಾದ ಕರಾಕರಣೆಯನ್ನು ಈ ಪ್ರಾಂತದ ಮೇಲೆ ಹೇರುತ್ತಿರುವ ಗೌರವಾನ್ವಿತ ಹಣಕಾಸು ಮಂತ್ರಿಗಳು ಅದನ್ನು ಹಂಚುವಾಗ ಗಮನದಲ್ಲಿಟ್ಟುಕೊಳ್ಳಬೇಕಾದ ಪರಿಸ್ಥಿತಿ ಇದು.

ಮತ್ತೊಂದು ಪರ್ಯಾಯ ವಿಷಯವನ್ನೇ ತೆಗೆದುಕೊಳ್ಳಿ. ನಾನು ಸಾರ್ವಜನಿಕ ಆರೋಗ್ಯವನ್ನು ಉಲ್ಲೇಖಿಸುತ್ತೇನೆ. ಈ ಪ್ರಾಂತವು ಸಾರ್ವಜನಿಕ ಆರೋಗ್ಯದ ಬಗ್ಗೆ ಮಾಡುತ್ತಿರುವ ಒಟ್ಟು ವೆಚ್ಚವು ತುಂಬಾ ಅಲ್ಪಪ್ರಮಾಣದ ಮೊತ್ತವಾಗಿದೆ. ಅಂದರೆ, ರೂ. ೩೧,೪೮,೦೦೦ ಮಾತ್ರ. ಅದು ನಮ್ಮ ಒಟ್ಟು ವೆಚ್ಚದ ಶೇಕಡಾ ಎರಡೂವರೆಯಷ್ಟು ಮಾತ್ರ ಆಗಿದೆ. ಮಾನ್ಯರೇ, ಈಗ ಹಳ್ಳಿಯ ನೀರು ಪೂರೈಕೆ ಅತ್ಯಂತ ಅಗತ್ಯ ಬೇಡಿಕೆಯಾಗಿದೆ. ನೀರಿನ ಪೂರೈಕೆಯೇ ಇಲ್ಲದ ನೂರಾರು ಹಳ್ಳಿಗಳಿರುತ್ತದೆ. ಈ ಪ್ರಾಂತದಲ್ಲಿನ ಹಳ್ಳಿಗೆ ಹೋಗುವ ಪ್ರತಿಯೊಬ್ಬನು ಅದು ಒಂದು ತಿಪ್ಪೆಯ ಗುಂಡಿ ಎಂಬುದನ್ನು ಕಂಡುಕೊಳ್ಳದೆ ಇರಲಾರನು. ಅದನ್ನು ಹಳ್ಳಿಯೆಂದು ಕರೆಯುವುದು ತಪ್ಪು. ಅದು ಮಾನವನ ವಾಸಕ್ಕೆ ಯೋಗ್ಯವಾದ ಸ್ಥಳವೆಂದು ಪರಿಗಣಿಸುವುದೂ ತಪ್ಪು. ಅನಾರೋಗ್ಯಕರ ಮತ್ತು ಅಸಹ್ಯಕರ ಪರಿಸ್ಥಿತಿಯ ಸುಧಾರಣೆಯು ನಮ್ಮ ಪ್ರಾಂತದ ಅತ್ಯಗತ್ಯದ ಅವಶ್ಯಕತೆಯಾಗಿದೆ. ನೂರಾರು ಜನರು ಮಲೇರಿಯಾದಿಂದ ಸಾಯುತ್ತಿದ್ದಾರೆ, ಇತರ ರೋಗಗಳಿಂದ ಸಾಯುತ್ತಿದ್ದಾರೆ. ಅಲ್ಲಿ ಆಸ್ಪತ್ರೆಗಳಿಲ್ಲ. ಔಷಧಿ ಹಂಚಲು ಅಥವಾ ವೈದ್ಯಕೀಯ ಸೌಲಭ್ಯ ಒದಗಿಸಲು ಯಾವುದೇ ವ್ಯವಸ್ಥೆ ಇಲ್ಲ. ನೀರು ಪೂರೈಕೆ ಇಲ್ಲ, ನಾನು ಹೋದ ವರುಷ ಹೇಳಿದಂತೆ ಅದಕ್ಕಾಗಿ ರೂ. ೧೦ ಲಕ್ಷವನ್ನು ಒದಗಿಸಲಾಗಿತ್ತು. ಆ ಹಣವನ್ನು ಹೇಗೆ ಖರ್ಚು ಮಾಡಲಾಯಿತು ಎನ್ನುವುದು ನಮಗೆ ತಿಳಿಯದು. ಈ ವರುಷವೂ ಸಹ ರೂ. ೮,೫೫,೦೦೦–೦೦ಗಳನ್ನು ಒದಗಿಸಲಾಗಿದೆ. ಬೇಡಿಕೆಯ ಅಗಾಧತೆಯನ್ನು ಗಮನಿಸಿದಾಗ ಇದೆಲ್ಲ ಏನು ಎನ್ನಿಸುತ್ತದೆ. ವೈದ್ಯಕೀಯ ಸಹಾಯ ಸಿಗದ ಕಾರಣಕ್ಕಾಗಿ, ಕುಡಿಯುವ ಸ್ವಚ್ಛ ನೀರು ಸಿಗದಕ್ಕಾಗಿ ನೂರಾರು ಜನರು ಸಾಯುತ್ತಿದ್ದಾರೆ. ಹಣಕಾಸು ಮಂತ್ರಿಗಳು ಈ ಹಣವನ್ನು ಆತ್ಮಗಳನ್ನು ಬದುಕಿಸುವುದಕ್ಕಾಗಿ ಉಪಯೋಗಿಸಲು ಆಯ್ಕೆ ಮಾಡಿಕೊಂಡಿದ್ದಾರೆ.

ಬೈಬಲ್ಲಿನ ಹೇಳಿಕೆಯು ಇಲ್ಲಿ ನೆನಪಾಗುತ್ತದೆ. ಆತ್ಮಗಳ ಶುದ್ಧೀಕರಣದಲ್ಲಿ ಅಥವಾ ಮುಂಬೈ ಮತ್ತು ಅಹಮದಾಬಾದ್‌ದಲ್ಲಿನ ಹತ್ತು ಲಕ್ಷ ಕುಡುಕರ ಉಪಪಾದ್ರಿಯಾಗಿರಲು ಈ ಹಣ ಉಪಯೋಗಿಸಲು ಆಯ್ಕೆ ಮಾಡಿಕೊಂಡಿದ್ದಾರೆ. ಮಾನ್ಯರೇ, ಈಗ ಮತ್ತೊಂದು ಅಂಶವನ್ನೂ ಗಮನಿಸಿರಿ. ನಾವು ಪಟ್ಟಣ ವಾಸಿಗಳಿಗೆ ಕರ ವಿಧಿಸುತ್ತಿದ್ದೇವೆ. ನಾವು ನಗರದ ಜನತೆಗಾಗಿ ಕರಾಕರಣೆ ಮಾಡುತ್ತಿದ್ದೇವೆ. ನಗರ ಜನತೆಗೆ ಕರವನ್ನು ನಾವು ಏಕೆ ವಿಧಿಸುತ್ತಿದ್ದೇವೆ? ಇದಕ್ಕೆ ಕಾರಣವೆಂದರೆ ಹಳ್ಳಿಯ ಜನತೆಯ ಸೌಲಭ್ಯಗಳ ಸುಧಾರಣೆಗಾಗಿ ನಗರದ ಜನತೆಯ ಮೇಲೆ ನಾವು ಕರಾಕರಣೆ ಮಾಡುತ್ತಿದ್ದೇವೆ ಅನ್ನುವುದೇ ಆಗಿರುತ್ತದೆ. ಅಂಥ ಏನನ್ನಾದರೂ ಮಾಡಿದ್ದು ಈ ಆಯವ್ಯಯ ಪತ್ರದಲ್ಲಿ ಉಂಟೋ. ನನ್ನ ಹಲವು ಸ್ನೇಹಿತರು ತುಂಬಾ ಎಚ್ಚರಿಕೆ ಮತ್ತು ಲಕ್ಷ್ಯವನ್ನು ನೀಡಿರುವ ಸಂಗತಿಯನ್ನೇ ಮಾನ್ಯ ಮಂತ್ರಿಗಳು ನಿಜವಾಗಿಯೂ ಮಾಡುತ್ತಿದ್ದಾರೆಯೆ? ಹಾಗೆ ಮಾಡಿದ್ದಾದರೆ ನನಗೆ ತುಂಬಾ ಸಂತೋಷವೇ ಆಗುತ್ತದೆ. ರೂ. ೧.೬ ಲಕ್ಷದ ಈ ಕರದ ಹಣವನ್ನು ಯಾರಿಗಾಗಿ ಖರ್ಚು ಮಾಡಲಾಗುತ್ತಿದೆ? ಪಟ್ಟಣದಲ್ಲಿ ವಾಸ ಮಾಡುತ್ತಿರುವ ಕುಡುಕನಿಗಾಗಿ ಅವರು ಖರ್ಚು ಮಾಡುತ್ತಾರೆ. ಇದರಿಂದ ಹಳ್ಳಿಯಲ್ಲಿನ ಬಡವ ಯಾವ ಪ್ರಯೋಜನವನ್ನು ಪಡೆದುಕೊಳ್ಳಲಾರ. ಭೂ ಕಂದಾಯದ ಒಂದೇ ಒಂದು ಉದಾಹರಣೆಯನ್ನೇ ತೆಗೆದುಕೊಳ್ಳಿ. ಈ ಪ್ರಾಂತದಲ್ಲಿನ ಒಟ್ಟು ಭೂ ಕಂದಾಯವು ೩,೩೮,೬೩,೦೦೦ ರೂಪಾಯಿಗಳಷ್ಟಿರುತ್ತದೆ. ಹೋದ ವರುಷ ಹತ್ತು ಲಕ್ಷದಷ್ಟು ವಿನಾಯಿತಿಯನ್ನು ಕೊಡಲಾಯಿತು. ಇದು ವಾಸ್ತವವಾಗಿ ಕಾಯಂ ಕಡಿತವಲ್ಲ. ಸುಮಾರು ೪೦ ಲಕ್ಷದಷ್ಟು ಕಾಯಂ ಕಡಿತವನ್ನು ಮಾಡಲಾಗುವುದೆಂದು ಆಯವ್ಯಯ ಪತ್ರದಲ್ಲಿ ಸೂಚಿಸಲಾಗಿದೆ. ಮತ್ತೆ ೩ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಭೂ ಕಂದಾಯದ ಹೊರೆಯನ್ನು ಗ್ರಾಮಾಂತರ ಜನತೆ ಹೊರಬೇಕಾಗುತ್ತದೆ ಎಂದು ಇದರ ಅರ್ಥವಾಗುತ್ತದೆ. ಹಣಕಾಸು ಮಂತ್ರಿಗಳಿಗೆ ನಾನು ಕೇಳುವ ಪ್ರಶ್ನೆ ಇದು. ಅವರು ಈಗ ೧.೬ ಲಕ್ಷದ ಕರವನ್ನು ನಗರವಾಸಿಗಳಿಂದ ಎತ್ತುವಂತಿದ್ದರೆ, ಒಟ್ಟು ಎಲ್ಲ ಭೂಕಂದಾಯವನ್ನು ಅವರು ಏಕೆ ತೆಗೆದು ಹಾಕಬಾರದು? ಈ ಎಲ್ಲ ಹಣವನ್ನೂ ಅವರು ಭೂಕಂದಾಯವನ್ನು ತೆಗೆದುಹಾಕುವುದಕ್ಕಾಗಿ ಖರ್ಚು ಮಾಡುವಂತಿದ್ದರೆ ಈ ಕರಾಕರಣೆಯ ಕ್ರಮಗಳಿಗೆ ಇರುವ ನನ್ನ ತಕರಾರುಗಳೆಲ್ಲವನ್ನೂ ವಾಪಸ್ಸು ತೆಗೆದುಕೊಳ್ಳುತ್ತೇನೆ. ನಿಜವಾಗಿಯೂ ವೈಯಕ್ತಿಕವಾಗಿ ನನಗೆ ತುಂಬಾ ಸಂತೋಷವಾಗುತ್ತದೆ. ಅವರು ಹಾಗೆ ಮಾಡುತ್ತಾರೋ? ಅವರು ಏಕೆ ಹಾಗೆ ಮಾಡುವುದಿಲ್ಲ?

ಮಾನ್ಯರೆ, ಈಗ ನಾನು ಹೇಳಲು ಇಚ್ಛಿಸುವ ಒಂದೆರಡು ಅಂಶಗಳು ಮಾತ್ರ ಇರುತ್ತವೆ. ಈ ಆಯವ್ಯಯ ಪತ್ರಕ್ಕಾಗಿ ಗೌರವಾನ್ವಿತ ಹಣಕಾಸು ಮಂತ್ರಿಗಳು ಎರಡು ವಿಷಯಗಳಿಂದಾಗಿ ಮೆಚ್ಚಿಗೆಯನ್ನು ಪಡೆಯುವಂತೆ ಕಂಡುಬರುತ್ತವೆ. ಮೊದಲನೆಯದು ಅಂದರೆ ಏನೇ ಆದರೂ ಅವರು ಈ ಎಲ್ಲ ಕರವನ್ನು ನಗರ ಪ್ರದೇಶದಿಂದ ವಸೂಲು ಮಾಡುತ್ತಿದ್ದಾರೆ. ಎರಡನೆಯದು, ಎಲ್ಲ ಸಂಗತಿಗಳನ್ನು ಒಟ್ಟಾರೆ ತೆಗೆದುಕೊಂಡಾಗ ಅಲ್ಲಿ ಯಾವ ಹೆಚ್ಚಿನ ಭಾರವನ್ನು ವಿಧಿಸಿಲ್ಲ. ಏಕೆಂದರೆ ಹೊಸ ಕರದ ರೂಪದಲ್ಲಿ ವಿಧಿಸಲಾದುದನ್ನು ಪಾನಪ್ರತಿಬಂಧದ ಮೂಲಕ ಬಿಟ್ಟುಬಿಡಲಾಗುತ್ತಿದೆ. ಮತ್ತು ಆ ಕಾರಣದಿಂದಾಗಿ ಒಟ್ಟಿನಲ್ಲಿ ಮೊತ್ತಗಳು ಸಮಸಮ ಇರುತ್ತವೆ. ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಕೆಲವು ಮಹತ್ವದ ಅಂಕಿ ಅಂಶಗಳತ್ತ ತಮ್ಮ ಲಕ್ಷ್ಯವನ್ನು ಸೆಳೆಯಲು ಇಚ್ಛಿಸುತ್ತೇನೆ. ಈ ಪ್ರಾಂತದ ಸ್ಥಿತಿಗಳ ಬಗ್ಗೆ ನನಗೆ ಸಾಧ್ಯವಿದ್ದ ರೀತಿಯಲ್ಲಿ ಅಭ್ಯಾಸ ಮಾಡಿ ಖಚಿತಪಡಿಸಿಕೊಳ್ಳುವುದರ ಮೂಲಕ ಸಮರ್ಥಿಸಬಹುದಾದ ನನ್ನ ಅಭಿಪ್ರಾಯವೆಂದರೆ ನಮ್ಮ ಪ್ರಾಂತಕ್ಕೆ ಸಂಬಂಧಪಟ್ಟಿರುವಷ್ಟರ ಮಟ್ಟಿಗೆ ಹೇಳುವುದಾದರೆ ವ್ಯವಸಾಯದಲ್ಲಿ ಅಗತ್ಯಕ್ಕಿಂತ ಹೆಚ್ಚು ಜನ ತೊಡಗಿಕೊಂಡಿರುತ್ತಾರೆ. ಈ ಪ್ರಸ್ತಾಪವನ್ನು ಸಮರ್ಥಿಸಿ ನಾನು ಕೆಲವು ಅಂಕಿ

ಸಂಖ್ಯೆಗಳನ್ನು ಉಲ್ಲೇಖಿಸುತ್ತೇನೆ. ಮೊದಲು ಗಮನಿಸಬೇಕಾದ ಅಂಶವೆಂದರೆ ಮುಂಬಯಿ ಪ್ರಾಂತವು ಕ್ಷೇತ್ರದ ದೃಷ್ಟಿಯಿಂದ ಚಿಕ್ಕದಾದುದಾಗಿದೆ. ಈ ಪ್ರಾಂತದ ಒಟ್ಟು ಕ್ಷೇತ್ರ ೭೬,೭೩೫ ಚೌರಸ ಮೈಲುಗಳಷ್ಟು ಇದೆ. ಇದು ಮದ್ರಾಸದ ಅರ್ಧದಷ್ಟು ಆಗುತ್ತದೆ. ಪಂಜಾಬದ ಮೂರನೇ ಎರಡರಷ್ಟಾಗುತ್ತದೆ ಮತ್ತು ಸಂಯುಕ್ತ ಪ್ರಾಂತದ ಮಧ್ಯ ಪ್ರಾಂತಗಳು ಹಾಗೂ ಒರಿಸ್ಸಾಕ್ಕಿಂತ ಸ್ವಲ್ಪ ಕಡಿಮೆ ಕ್ಷೇತ್ರವುಳ್ಳದ್ದು ಆಗಿರುತ್ತದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸಾಗುವಳಿಯ ಉದ್ದೇಶಕ್ಕಾಗಿ ಮತ್ತು ಆಹಾರ ಬೆಳೆಗಳನ್ನು ಬೆಳೆಸುವುದಕ್ಕಾಗಿ ವಾಸ್ತವವಾಗಿ ಬಿತ್ತನೆ ಮಾಡಿದ ಕ್ಷೇತ್ರವನ್ನು ಹೋಲಿಸಿ ನೋಡಬೇಕು. ಮುಂಬೈ ಪ್ರಾಂತದಲ್ಲಿ ಮಾಡಿದ ಒಟ್ಟು ಕ್ಷೇತ್ರವು ೩,೨೮,೦೧,೯೭೧ ಎಕರೆಗಳಷ್ಟು ಇರುತ್ತದೆ. ಈಗ ನಾನು ಹೇಳಿರುವಂತೆ ನಮ್ಮ ಪ್ರಾಂತವು ಗಾತ್ರದಲ್ಲಿ ಚಿಕ್ಕದಾದರೂ ನಮ್ಮ ರಾಜ್ಯಕ್ಕಿಂತ ಎರಡು ಪಟ್ಟು ದೊಡ್ಡದಾದ ಮದ್ರಾಸ್ ಮತ್ತು ಸಂಯುಕ್ತ ಪ್ರಾಂತಗಳ ರಾಜ್ಯದಲ್ಲಿ ಬಿತ್ತನೆ ಮಾಡಿದ ಕ್ಷೇತ್ರಕ್ಕೆ ಸರಿಸಮವಾದುದು ಆಗಿದೆ. ನಮ್ಮಲ್ಲಿನ ಬಿತ್ತನೆಯ ಕ್ಷೇತ್ರ ಬಿಹಾರ, ಒರಿಸ್ಸಾ ಮತ್ತು ಮಧ್ಯಪ್ರಾಂತಗಳಲ್ಲಿನ ಪ್ರದೇಶಕ್ಕಿಂತ ಅಜಮಾಸು ೮ ದಶಲಕ್ಷ ಎಕರೆಗಳಷ್ಟು ಹೆಚ್ಚಾಗಿದೆ ಮತ್ತು ಪಂಜಾಬಕ್ಕಿಂತ ೬ ದಶಲಕ್ಷ ಎಕರೆಗಳಷ್ಟು ಹೆಚ್ಚಿಗೆ ಇದೆ. ಈ ಎಲ್ಲವೂ ಈ ಪ್ರಾಂತದಲ್ಲಿ ವ್ಯವಸಾಯವು ಅತ್ಯಂತ ಜನನಿಬಿಡವಾದ ಉದ್ಯಮವಾಗಿದೆ ಎಂಬುದನ್ನು ತೋರಿಸುತ್ತದೆ ಎಂಬುದು ನನ್ನ ವಾದವಾಗಿದೆ ಮತ್ತು ಸಾಗುವಳಿ ಮಾಡಬಹುದಾದ ಪ್ರತಿ ಅಂಗುಲ ನೆಲವನ್ನೂ ಉಪಯೋಗಿಸಲಾಗಿದೆ ಮತ್ತು ಆ ಕಾರಣದಿಂದಾಗಿ ಜನತೆಯನ್ನು ವ್ಯವಸಾಯದತ್ತ ನೂಕುವುದು ಪ್ರಯೋಜನಕಾರಿಯೆನಿಸುವುದಿಲ್ಲ. ಇನ್ನೂ ಹೆಚ್ಚಿನ ಹೋಲಿಕೆಯನ್ನು ಸಾಗುವಳಿಗೆ ಅರ್ಹವಾದ ಬೀಳು ಜಮೀನಿಗೆ ಸಂಬಂಧಿಸಿದಂತೆ ಮಾಡಬೇಕು. ಸಂಯುಕ್ತ ಪ್ರಾಂತಗಳಲ್ಲಿ ಸಾಗುವಳಿ ಮಾಡಬಲ್ಲ ಬೀಳು ಜಮೀನು ೧೦ ದಶಲಕ್ಷ ಎಕರೆ ಇರುತ್ತದೆ. ಮದ್ರಾಸು ಪ್ರಾಂತದಲ್ಲಿ ೧೩ ದಶಲಕ್ಷ ಎಕರೆ ಮಧ್ಯಪ್ರದೇಶದಲ್ಲಿ ೧೪ ದಶಲಕ್ಷ ಎಕರೆ, ಪಂಜಾಬದಲ್ಲಿ ೧೪ ದಶಲಕ್ಷ ಎಕರೆ ಮತ್ತು ಮುಂಬಯಿಯಲ್ಲಿ ಇದು ಕೇವಲ ೬ ದಶಲಕ್ಷ ಎಕರೆಗಳಷ್ಟು ಮಾತ್ರ ಇರುತ್ತದೆ. ಮಾನ್ಯರೆ, ಪರಿಸ್ಥಿತಿಯು ಹೀಗಿರುವಾಗ ನನ್ನ ಅಭಿಪ್ರಾಯವೆಂದರೆ– ಮತ್ತು ನಾನು ತುಂಬಾ ವಿಚಾರ ಮಾಡಿಯೇ ಹೀಗೆ ಹೇಳುತ್ತೇನೆ– ಈ ಪ್ರಾಂತದ ವಿಮೋಚನೆ ಅಥವಾ ನಾನು ಹಾಗೆ ಹೇಳಬಹುದಾದರೆ– ಇಡಿಯ ಭಾರತದ ವಿಮೋಚನೆಗೆ ಮಾರ್ಗವು ನಗರೀಕರಣದಲ್ಲಿಯೇ ಇದೆ. ನಮ್ಮ ನಗರಗಳನ್ನು ಪುನರುಜ್ಜೀವನಗೊಳಿಸುವಲ್ಲಿ ನಮ್ಮ ಉದ್ಯಮಗಳನ್ನು ಕಟ್ಟುವಲ್ಲಿ, ಜನತೆಯನ್ನು ಹಳ್ಳಿಗಳಿಂದ ಪಟ್ಟಣಕ್ಕೆ ಸಾಧ್ಯವಿದ್ದ ಮಟ್ಟಿಗೆ ಬರುವಂತೆ ಮಾಡುವಲ್ಲಿ ಭಾರತದ ವಿಮೋಚನೆ ಅಡಗಿದೆ. ಹಳ್ಳಿಗಳಲ್ಲಿ ಏನಿದೆ? ನಮ್ಮ ಹಳ್ಳಿಯ ಜನರಿಗೆ ತಮ್ಮ ವ್ಯವಸಾಯವನ್ನು ಅತ್ಯುತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಲು ಬಂಡವಾಳವೇ ಇಲ್ಲ. ಪ್ರತಿ ದಶಕಕ್ಕೂ ಜನಸಂಖ್ಯೆ ಹೆಚ್ಚಾಗುತ್ತಾ ನಡೆದಿದೆ ಮತ್ತು ಒಬ್ಬ ವ್ಯಕ್ತಿ ಮತ್ತು ವಾರಸುದಾರರು ಸ್ಥಳಕ್ಕೆ ಬಂದ ಬಂದಂತೆ ಭೂಮಿಯು ತುಂಡಾಗುತ್ತಾ ನಡೆದಿದೆ. ಎಲ್ಲ ಕಡೆಗೂ ಪರಿಸ್ಥಿತಿಯು ನಾವು ಭಾವಿಸಬಹುದಾದಷ್ಟೂ ಕೆಟ್ಟದಾಗಿಯೇ ಇರುತ್ತದೆ. ಗ್ರಾಮಗಳಲ್ಲಿ ವಾಸಿಸುವ ಜನತೆಯ ಜೀವನ ಮಟ್ಟವನ್ನು ಹೆಚ್ಚಿಸುವ ಒಂದೇ ಒಂದು ಮಾರ್ಗವೆಂದರೆ ಅವರಿಗೆ ಚರಕಾದಂಥ ಪುರಾತನ ಮಾದರಿಯ ಯಂತ್ರವನ್ನು ಕೊಡುವುದರಿಂದ ಅಥವಾ ಸ್ಪರ್ಧಾತ್ಮಕ ಪೇಟೆಯಲ್ಲಿ ಮಾರಾಟವಾಗದಂಥ ಬಟ್ಟೆಯನ್ನು ನೇಯ್ಗೆ ಮಾಡಲು ಒತ್ತಾಯ ಮಾಡುವುದರಿಂದ ಅಲ್ಲ. ಜೀವನ ಮಟ್ಟವನ್ನು ಹೆಚ್ಚಿಸುವುದು ಉದ್ಯಮಗಳನ್ನು ಮತ್ತು ಪಟ್ಟಣಗಳಲ್ಲಿರುವ ಇತರ ಸೇವೆಗಳ ಆದಾಯವನ್ನು ಹಾಳು ಮಾಡುವುದರಿಂದ ಮತ್ತು ಅವರನ್ನು ಹಳ್ಳಿಗೆ ಹೋಗಲು ಒತ್ತಾಯಿಸುವುದರಿಂದ ಅಲ್ಲ. ಅದಕ್ಕೆ ಮಾರ್ಗವು ಬೇರೆ ದಿಕ್ಕಿನಲ್ಲಿ ಉಂಟು. ಅಂದರೆ ನಮಗೆ ಸಾಧ್ಯವಿರುವಷ್ಟರ ಮಟ್ಟಿಗೆ ಹಳ್ಳಿಗಳಿಂದ ಜನರನ್ನು ಪಟ್ಟಣಕ್ಕೆ ಕಳಿಸುವುದು

ಮತ್ತು ಉದ್ಯಮಗಳಲ್ಲಿ ಅವರಿಗೆ ಕೆಲಸ ಕೊಡಿಸುವುದು ಮತ್ತು ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದೇ ಆಗಿದೆ. ಅದೇ ಸರಿಯಾದ ಮಾರ್ಗವಾಗಿದೆ. ಅಂಥ ಚಿಕ್ಕ ಉದ್ಯಮವನ್ನು ಅಂಥ ಚಿಕ್ಕ ನಗರೀಕರಣವನ್ನು ನಾಶಪಡಿಸಲು ದೃಢಚಿತ್ತನಾದ ನಮ್ಮಲ್ಲಿರುವ ವ್ಯಕ್ತಿಯು ನಿಜವಾಗಿಯೂ ಜನತೆಯ ಹಿತಚಿಂತಕನಲ್ಲವೆಂದು ಹೇಳಲು ನಾನು ಹಿಂದುಮುಂದೆ ನೋಡುವುದಿಲ್ಲ. ನಾನು ಹಾಗೆ ಹೇಳಬಹುದಾದರೆ ಆತನು ಜನತೆಯ ವೈರಿಯೇ ಎಂದು ಹೇಳುತ್ತೇನೆ.

ಈಗ ಎರಡನೆಯ ಅಂಶಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನನ್ನ ಮಾನ್ಯ ಸ್ನೇಹಿತರು "ಏನೇ ಆಗಲಿ ನಾನು ಮಾಡುತ್ತಿರುವುದೇನು? ನಾನು ಒಟ್ಟು ಮೊತ್ತಕ್ಕೆ ಏನಾದರೂ ಕೂಡಿಸುತ್ತಿದ್ದೇನೆಯೇ? ಇಲ್ಲ. ನಾನು. ರೂ.೧.೬೯ ಲಕ್ಷವನ್ನು ಮಾತ್ರ ಎತ್ತುತ್ತಿರುತ್ತೇನೆ. ಆದರೆ ನಾನು ಕುಡಿತದ ರೂ. ೧.೨೫ ಲಕ್ಷದ ಮತ್ತು ರೂ. ೪೦ ಲಕ್ಷ ಭೂ ಕಂದಾಯದ ಆದಾಯವನ್ನು ಬಿಟ್ಟುಕೊಡುತ್ತಿದ್ದೇನೆ" ಎಂದು ಹೇಳುತ್ತಾರೆ. ಇದರ ಶ್ರೇಯಸ್ಸನ್ನು ಪಡೆದುಕೊಳ್ಳಲು ಅವರು ಶ್ರದ್ಧೆಯುಳ್ಳವರಾಗಿರುತ್ತಾರೋ ಎಂಬುದು ನನಗೆ ತಿಳಿಯದು. ಅವರು ಹಾಗಿದ್ದರೆ, ಒಬ್ಬ ಕುಂಬಾರನಿಗೆ ಮಡಿಕೆ ಮಾಡಲು ಸ್ವಲ್ಪ ಮಡಿಕೆ ಮಾಡುವ ಮಣ್ಣನ್ನು ಕೊಟ್ಟಾಗ ಅಂಥ ಕುಂಬಾರನ ಪ್ರಕರಣವನ್ನು ಅವರಿಗೆ ನೆನಪು ಮಾಡಿಕೊಡುತ್ತೇನೆ. ಮಾನ್ಯರೇ, ಆ ಮಣ್ಣಿನಿಂದ ಕುಂಬಾರನು ಗಣಪತಿಯನ್ನು ಮಾಡುವುದರ ಬದಲಿಗೆ ಮಂಗನನ್ನು ಮಾಡಿದರೆ ಅಥವಾ ಆ ಮಣ್ಣಿನಿಂದ ಉತ್ತಮ ಆನೆಯನ್ನು ಮಾಡುವ ಬದಲಿಗೆ ಕತ್ತೆಯನ್ನು ಮಾಡಿದರೆ ಆತನು ಹೆಚ್ಚಿನ ಮಣ್ಣನ್ನು ಉಪಯೋಗಿಸಲಿಲ್ಲವೆಂದು ಅವನನ್ನು ಉತ್ತಮ ಕುಂಬಾರನೆಂದು ನೀವು ಕರೆಯುತ್ತೀರೋ? ಇದಕ್ಕೆ ಉತ್ತರ ಏನಿರಬಹುದೆಂದು ನನಗೆ ಸೋಜಿಗವೆನಿಸುತ್ತದೆ. ಇದು ಸಹ ಮಂಗನನ್ನು ಮಾಡಿದಂತೆಯೇ ಹೊರತು ಬೇರೆ ಏನೂ ಅಲ್ಲ. ಆದುದರಿಂದ ಮಾನ್ಯರೇ, ನನ್ನ ಭಾಷಣದ ಪ್ರಾರಂಭದಲ್ಲಿಯೇ ಹೇಳಿದಂತೆ ನನ್ನ ನಿರ್ಣಯದಲ್ಲಿ ಕರಾಕರಣೆಗೆ ಸಂಬಂಧಿಸಿದಂತೆ ಈ ಆಯವ್ಯಯ ಪತ್ರವು ಮುಂದಾಲೋಚನೆ ಇಲ್ಲದ ಆಯವ್ಯಯ ಪತ್ರವಾಗಿದೆ ಮತ್ತು ವೆಚ್ಚಕ್ಕೆ ಸಂಬಂಧಿಸಿದಂತೆ ಈ ಆಯವ್ಯಯ ಪತ್ರವು ಅರ್ಥಹೀನವಾಗಿದೆ. ಮಾನ್ಯರೇ, ಈ ಪ್ರಾಂತವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಕರಾಕರಣೆ ಮಾಡಲಾಗಿರುವ ಪ್ರಾಂತವಾಗಿದೆ. ಬ್ರಿಟಿಷ್ ಭಾರತದಲ್ಲಿನ ಪ್ರಾಂತಗಳಲ್ಲಿ ಪ್ರತಿ ವ್ಯಕ್ತಿಯ ಮೇಲಿರುವ ತಲಾ ಕರಾಕರಣೆಯ ಪ್ರಮಾಣವು– ಇವು ನನ್ನ ಅಂಕಿ ಸಂಖ್ಯೆಗಳಲ್ಲ– ಮಾನ್ಯ ಹಣಕಾಸು ಮಂತ್ರಿಗಳ ಹೋದ ವರುಷದ ಆಯವ್ಯಯ ಭಾಷಣದಲ್ಲಿಂದ ಈ ಅಂಕಿ ಸಂಖ್ಯೆಗಳನ್ನು ನಾನು ಎತ್ತಿಕೊಂಡಿದ್ದೇನೆ– ಅವು ಈ ಕೆಳಗಿನಂತೆ ಇರುತ್ತವೆ:

| | **ರೂಪಾಯಿಗಳು** |
|---|---|
| ಬಿಹಾರ ಮತ್ತು ಒರಿಸ್ಸಾ | ೧.೨೯ |
| ಬಂಗಾಲ | ೧.೨೮ |
| ಅಸ್ಸಾಮ್ | ೨.೨೬ |
| ಮಧ್ಯಪ್ರಾಂತಗಳು | ೨.೭೨ |
| ಸಂಯುಕ್ತ ಪ್ರಾಂತಗಳು | ೨.೨೯ |
| ಪಂಜಾಬ | ೪.೪೩ |
| ಮದ್ರಾಸ್ | ೩.೨೬ |
| ಸಿಂಧ | ೪.೯೦ |
| ಮುಂಬಯಿ | ೬.೦೦ |

ನಾವು ಹೆಚ್ಚಿನ ಪ್ರಮಾಣದಲ್ಲಿ ಕರಾಕರಣೆಗೊಳಗಾದ ಜನರು ಎನ್ನುವುದನ್ನು ತೋರಿಸಲು ಇದೊಂದೇ ಸಾಕು. ವಾಸ್ತವವಾಗಿ ನಮಗೆ ಖರ್ಚು ಮಾಡಲು ಉಳಿದಿರುವುದು ತುಂಬಾ ಸ್ವಲ್ಪ ಎಂಬುದನ್ನು ತೋರಿಸುವಂತೆ ನಮ್ಮ ವೆಚ್ಚಗಳನ್ನು ನಿಯಮಿತಗೊಳಿಸಲಾಗಿದೆ. ವಾಸ್ತವವಾಗಿ ನಮ್ಮ ಖರ್ಚಿನ ಉದ್ದೇಶಗಳಿಗಾಗಿ ನಮಗೆ ನಿಜವಾಗಿಯೂ ಅತೀ ಅಲ್ಪಪ್ರಮಾಣದ ಪರಿಮಿತಿ ಉಳಿದಿದೆ. ಈ ಪ್ರಾಂತದಲ್ಲಿ ವಸೂಲಿಯ ವೆಚ್ಚವು ನಮ್ಮ ಆದಾಯದ ಶೇಕಡಾ ೧೫ರಷ್ಟು ಇರುತ್ತದೆ. ಪ್ರಯೋಜನ ಶೇಕಡಾ ೧೦ರಷ್ಟು ಇರುತ್ತದೆ. ಬಡ್ಡಿಯು ಶೇಕಡಾ ಹತ್ತೂವರೆಯಷ್ಟು ಇರುತ್ತದೆ. ನ್ಯಾಯದಾನ, ಪೊಲೀಸ್ ಮತ್ತು ಜೈಲುಗಳನ್ನೊಳಗೊಂಡಂತೆ ಕಾನೂನು ಮತ್ತು ಸುವ್ಯವಸ್ಥೆ ನಮ್ಮ ಆದಾಯದ ಶೇಕಡಾ ೧೮ರಷ್ಟನ್ನು ತೆಗೆದುಕೊಳ್ಳುತ್ತದೆ. ಮತ್ತು ಉಳಿದ ಅಲ್ಪಸ್ವಲ್ಪ ಇತರ ವಿಷಯಗಳಿಗಾಗಿ ಖರ್ಚು ಮಾಡಲಾಗುತ್ತಿದೆ. ಆ ವಿಷಯಗಳು ಸಾರ್ವಜನಿಕ ಕಲ್ಯಾಣಕ್ಕೆ ಸಂಬಂಧಿಸಿದವುಗಳು ಎಂದು ಹೇಳಬಹುದು. ಇದು ಪರಿಸ್ಥಿತಿ. ವಾಸ್ತವವಾಗಿ ಇದು ತುಂಬಾ ಕಠಿಣ ಪರಿಸ್ಥಿತಿ. ಆದಾಯಕ್ಕೆ ಸಂಬಂಧಿಸಿದಂತೆ ನಮ್ಮ ಸಾಮರ್ಥ್ಯವು ಕಡಿಮೆ ಇರುತ್ತದೆ. ನಮ್ಮ ಬಳಕೆಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಹೇಳುವುದಾದರೆ ಹಲವಾರು ಬಾಬುಗಳು ಸಾರ್ವಜನಿಕ ಕಲ್ಯಾಣದ ರೂಪದಲ್ಲಿ ನಿಜವಾಗಿಯೂ ನಮಗೆ ಏನನ್ನೂ ಕೊಡುವುದೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಗೌರವಾನ್ವಿತ ಹಣಕಾಸು ಮಂತ್ರಿಗಳು ತಾವು ಈಗಿರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಎಚ್ಚರಿಕೆ ಉಳ್ಳವರಾಗಿರಬೇಕಾದ್ದು ಅತ್ಯಂತ ಅವಶ್ಯವಾಗಿತ್ತೆಂದು ನಾನು ಭಾವಿಸುತ್ತೇನೆ. ಆದರೆ ಅವರು ಹಾಗೆ ಆಗಿಲ್ಲ ಎಂದು ಹೇಳಲು ನನಗೆ ದುಃಖವಾಗುತ್ತದೆ (ಹರ್ಷೋದ್ಗಾರ).

# ಹಣಕಾಸು ಅಧಿನಿಯಮದ ತಿದ್ದುಪಡಿ ಮಸೂದೆ ೫*

ಡಾ. ಬಿ. ಆರ್. ಅಂಬೇಡ್ಕರ್: (ಮುಂಬಯಿ ನಗರ): ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಹಣಕಾಸು ಮಂತ್ರಿಗಳು ಮಂಡಿಸಿದ ಮಸೂದೆಯನ್ನು ನಾನು ಪರಿಶೀಲಿಸಿದಾಗ ಈ ಮಸೂದೆಯಲ್ಲಿ ಮೂರು ಉಪಬಂಧಗಳಿರುವುದು ಕಂಡುಬರುತ್ತದೆ. ಮೊದಲನೆಯದು ಸ್ವತ್ತಿನ ಕರವನ್ನು ಪ್ರಥಮ ಚಾರ್ಜು ಎಂದು ಮಾಡುವುದು. ಎರಡನೆಯ ಉಪಬಂಧವು ಕರ ಕೊಡದಿರುವುದಕ್ಕೆ ಸಂಬಂಧಿಸಿ ದಂಡ ವಿಧಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಈ ಮಸೂದೆಯಲ್ಲಿರುವ ದಂಡಕ್ಕೆ ಸಂಬಂಧಿಸಿದ ಖಂಡಕ್ಕೆ ಪೂರ್ವಾನ್ವಯ ಸ್ವರೂಪ ಒದಗಿಸುವುದು ಮೂರನೆಯ ಉಪಬಂಧವಾಗಿದೆ. ಗೌರವಾನ್ವಿತ ಹಣಕಾಸು ಮಂತ್ರಿಗಳಿಗೆ ಅವರು ತಮ್ಮ ಭಾಷಣದ ಸಮಯದಲ್ಲಿ ಮಾಡಿದ ಘೋಷಣೆಯ ಬಗ್ಗೆ ಆ ಭಾಷಣವನ್ನು ನಾವು ಲಕ್ಷ್ಯಗೊಟ್ಟು ಕೇಳಿದ್ದೇವೆ– ಅವರಿಗೆ ಅಭಿನಂದನೆ ಸಲ್ಲಿಸಲು ನನಗೆ ಅವಕಾಶ ದೊರೆತದ್ದಕ್ಕಾಗಿ ನನಗೆ ಸಂತೋಷವಾಗಿದೆ. ಆ ಘೋಷಣೆಯೆಂದರೆ ದಂಡನೆಯ ಖಂಡಕ್ಕೆ ಸಂಬಂಧಿಸಿದ ಪುರ್ವಾನ್ವಯ ಸ್ವರೂಪವನ್ನು ವಾಪಸ್ಸು ತೆಗೆದುಕೊಳ್ಳುವಂತೆ ಮಾಡುವ ತಿದ್ದುಪಡಿ ಸೂಚನೆಯನ್ನು ಒಪ್ಪುವುದಾಗಿ ಹೇಳಿದ್ದು ಅಷ್ಟರಮಟ್ಟಿಗೆ ಅದು ಒಳ್ಳೆಯದೇ, ಅದೆಲ್ಲ ಸರಿ. ಆದರೆ ಈ ಅಂಶವನ್ನು ಬಿಟ್ಟು ಬೇರೆ ಅಂಶದ ಬಗ್ಗೆ ನನ್ನ ಸೋಜಿಗವನ್ನು ವ್ಯಕ್ತಪಡಿಸದೆ ಮುಂದುವರೆಯಲು ನನಗೆ ಸಾಧ್ಯವಾಗುವುದಿಲ್ಲ. ನನ್ನ ಸೋಜಿಗವೆಂದರೆ ಐದು ಜನ ಸುಪ್ರಸಿದ್ಧ ನ್ಯಾಯವಾದಿಗಳಿಂದ ಕೂಡಿದ ಈ ಸರಕಾರವು ಪೂರ್ವಾನ್ವಯ ಪರಿಣಾಮವುಳ್ಳಂಥ ವಾಕ್ಯಾವಳಿಯಿಂದೊಡಗೂಡಿದ ಈ ಮಸೂದೆಯನ್ನು ತಂದದ್ದು ಯುಕ್ತವೆಂದು ಭಾವಿಸಿದ್ದುದು. ಇದು ನಿಜವಾಗಿಯೂ ಆಘಾತಕರವಾದ ವಿಷಯವಾಗಿದೆ. ನಾನು ಈ ರೂಪದಲ್ಲಿ ಅದನ್ನು ಎಂದೂ ಮಂಡಿಸುತ್ತಿರಲಿಲ್ಲ. ಏನೇ ಆಗಲಿ ಆ ವಿಷಯವನ್ನು ಅಲ್ಲಿಗೇನೇ ಕೈಬಿಟ್ಟು ಮಸೂದೆಯಲ್ಲಿನ ಈಗ ನಮ್ಮ ಗಮನವನ್ನು ಸೆಳೆಯಬೇಕಾದ ಉಳಿದ ಎರಡು ಉಪಬಂಧಗಳು ಅಂದರೆ ಸ್ವತ್ತಿನ ಮೇಲಿನ ಕರವನ್ನು ಪ್ರಥಮ ಚಾರ್ಜನ್ನಾಗಿ ಮಾಡಬೇಕೋ ಮತ್ತು ಅದನ್ನು ಕೊಡದಿರುವುದಕ್ಕಾಗಿ ಏನಾದರೂ ದಂಡವನ್ನು ವಿಧಿಸಬೇಕೋ ಎನ್ನುವುದು.

ಎರಡನೆಯ ಅಂಶವನ್ನು ಅಂದರೆ ದಂಡಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ನಾನು ಮೊದಲು ಎತ್ತಿ ಕೊಳ್ಳುತ್ತೇನೆ. ಮಸೂದೆಯ ಸ್ವರೂಪಕ್ಕೆ ಸಂಬಂಧಿಸಿದ ಒಂದೆರಡು ಅಂಶಗಳತ್ತ ಈ ಸದನದ ಲಕ್ಷ್ಯವನ್ನು ಎಳೆಯುವುದು ಅಪೇಕ್ಷಣೀಯವಾದುದು ಎಂದು ನಾನು ಭಾವಿಸುತ್ತೇನೆ. ಮುನಿಸಿಪಾಲಿಟಿಯ ಭಾಗದ ಕರವನ್ನು ಕೊಡದಿರುವಾಗ ದಂಡವನ್ನು ವಿಧಿಸುವುದಕ್ಕೆ ಮುನಿಸಿಪಾಲಿಟಿ ಅಧಿನಿಯಮ ಯಾವುದೇ ಉಪಬಂಧವನ್ನು ಮಾಡಿಲ್ಲ ಅನ್ನುವುದನ್ನು ನನ್ನ ಪ್ರಾಜ್ಞ ಸ್ನೇಹಿತರು ಗಮನಿಸಬಹುದಾಗಿತ್ತು. ಅದಕ್ಕೆ ಅವರು ಸಾಕಷ್ಟು ಲಕ್ಷ್ಯವನ್ನೇ ಕೊಟ್ಟಿಲ್ಲ. ಮುಂಬಯಿ ನಗರ ಮುನಿಸಿಪಾಲಿಟಿ ಅಧಿನಿಯಮದ ೨೦೦ನೇ ಕಲಮು ಕರಾಕರಣೆಯನ್ನು ನಿರ್ಧರಿಸಿದ ಕೂಡಲೇ ಕರವನ್ನು ಕೊಡಬೇಕಾದ ಸ್ವತ್ತಿನ ಸ್ವಾಧೀನ

---

* ಬಿ.ಎಲ್.ಎ. ಚರ್ಚೆಗಳು, ಸಂಪುಟ VI,
ಪುಟಗಳು ೧೦೩೩–೩೭, ದಿನಾಂಕ: ೨೭ನೇ ಆಗಸ್ಟ್ ೧೯೩೯.

ದಾರನಿಗೆ ಬಿಲ್ಲನ್ನು ಜಾರಿಗೊಳಿಸಬೇಕು ಎಂದು ಉಪಬಂಧಿಸುತ್ತದೆ. ನಂತರ ೨೦೨ನೇ ಕಲಮು ಅಂಥ ಬಿಲ್ಲನ್ನು ಹಾಜರುಪಡಿಸಿದ ದಿನದಿಂದ ಹಣವನ್ನು ತುಂಬಲು ಹದಿನೈದು ದಿವಸಗಳ ಕಾಲಾವಕಾಶ ಕೊಡಬೇಕು ಎಂದು ಉಪಬಂಧಿಸುತ್ತದೆ. ೨೦೩ನೇ ಕಲಮು ಸದರೀ ಬಿಲ್ಲನ್ನು, ಅದನ್ನು ಜಾರಿ ಗೊಳಿಸಿದ ಹದಿನೈದು ದಿವಸಗಳಲ್ಲಿ ಸಂದಾಯ ಮಾಡದಿದ್ದರೆ, ಕಾನೂನಿನ ಪರಿಭಾಷೆಯಲ್ಲಿ ತಗಾದೆ ನೋಟೀಸನ್ನು (Demand notice) ಹೊರಡಿಸತಕ್ಕದು ಎಂದು ಹೇಳುತ್ತದೆ. ಸಂದಾಯವಾಗಬೇಕಾದ ಮತ್ತು ನೋಟೀಸಿನಲ್ಲಿ ಕಾಣಿಸಿದ ಹಣವನ್ನು ಹದಿನೈದು ದಿವಸಗಳಲ್ಲಿ ತುಂಬದೇ ಹೋದರೆ ಸಂದಾಯವಾಗಬೇಕಾದ ಹಣದ ವಸೂಲಿಗಾಗಿ ಮುನಿಸಿಪಾಲಿಟಿಯವರಿಗೆ ಕೆಲವು ಹಕ್ಕುಗಳು ಇರುತ್ತವೆ ಎಂದು ಈ ೨೦೩ನೇ ಕಲಮು ಹೇಳುತ್ತದೆ. ಮುನಿಸಿಪಾಲಿಟಿ ಅಧಿನಿಯಮದ ಮೇರೆಗೆ ಈಗ ಸ್ವತ್ತಿನ ಕರವನ್ನು ಸಂದಾಯ ಮಾಡುವಲ್ಲಿ ತಪ್ಪಿತಸ್ಥರಾದವರಿಂದ ಸದರೀ ಕರವನ್ನು ವಸೂಲು ಮಾಡಿಕೊಳ್ಳಲು ಮುನಿಸಿಪಾಲಿಟಿಯವರ ಕೈಯನ್ನು ಬಲಗೊಳಿಸಲು ಕೇವಲ ಎರಡೇ ಎರಡು ಉಪಬಂಧಗಳು ಮಾತ್ರ ಇರುತ್ತವೆ. ಮೊದಲನೆಯ ಕ್ರಮವೆಂದರೆ ತಪ್ಪಿತಸ್ಥನ ಸ್ವತ್ತಿನ ಬಗ್ಗೆ ಜಪ್ತಿಯ ಆದೇಶ ಮಾಡುವುದು. ಎರಡನೆಯ ಕ್ರಮವೆಂದರೆ ಸದರೀ ಹಣವನ್ನು ವಸೂಲು ಮಾಡಿಕೊಳ್ಳಲು ಸಾಮಾನ್ಯ ರೀತಿಯಲ್ಲಿ ದಾವೆಯನ್ನು ಹೂಡಲು ಮುನಿಸಿಪಾಲಿಟಿಗೆ ಅನುಮತಿ ಕೊಡುವುದು. ಆದರೆ ದಂಡಕ್ಕೆ ಸಂಬಂಧಪಟ್ಟಿರುವಷ್ಟರ ಮಟ್ಟಿಗೆ ಮಾತ್ರ ಮುನಿಸಿಪಾಲಿಟಿ ಅಧಿನಿಯಮದಲ್ಲಿ ಯಾವುದೇ ಉಪಬಂಧಗಳಿಲ್ಲ. ನಂತರ ಇತರ ಹಣಕಾಸಿನ ಕ್ರಮಗಳಿಗೆ ಸಂಬಂಧಿಸಿದಂತೆ ಹೇಳಬೇಕೆಂದರೆ ನಾನು ಆದಾಯಕರ ಅಧಿನಿಯಮದ ಉಪಬಂಧಗಳನ್ನು ಉಲ್ಲೇಖಿಸುತ್ತೇನೆ. ಆದಾಯಕರವನ್ನು ಸಂದಾಯ ಮಾಡುವಲ್ಲಿ ತಪ್ಪಿತಸ್ಥರಾದವರ ವಿರುದ್ಧ ಒಂದು ನಿಶ್ಚಿತ ರೂಪದ ದಂಡನೆಯ ಬಗ್ಗೆ ಆದಾಯಕರ ಅಧಿನಿಯಮದಲ್ಲಿ ಉಪಬಂಧಿಸ ಲಾಗಿರುವುದನ್ನು ನನ್ನ ಗೌರವಾನ್ವಿತ ಸ್ನೇಹಿತರು ಗಮನಿಸಿರಲಿಕ್ಕೇಬೇಕು. ಅದನ್ನು ಸದರಿ ಅಧಿನಿಯಮದ ೪೫ನೇ ಕಲಮಿನ ಮೇರೆಗೆ ಮಾಡಲಾಗುತ್ತಿದೆ. ಅದು ತುಂಬಾ ಉದ್ದವಾದ ಕಲಮಾಗಿರುತ್ತದೆ. ಮತ್ತು ಆ ಬಗ್ಗೆ ನಾನು ಚರ್ಚಿಸಲು ಹೋಗುವುದಿಲ್ಲ. ಅದರ ಸಾರಾಂಶವನ್ನು ನಾನು ಹೇಗೆ ಹೇಳುವುದು. ಅಂದರೆ ಈ ಕಲಮಿನಲ್ಲಿನ ಯೋಜನೆಯು ಸತತ ತಪ್ಪಿತಸ್ಥನಿಗಾಗಿ ಇರುತ್ತದೆ. ಅಂದರೆ ನೀವು ಒಂದು ದಿನದ ಮಟ್ಟಿಗೆ ತಪ್ಪಿತಸ್ಥನಾದರೆ ನೀವು ಆ ಬಗ್ಗೆ ನಿರ್ದಿಷ್ಟ ಮೊತ್ತದ ದಂಡವನ್ನು ಕೊಡಬೇಕು. ನೀವು ಎರಡು ದಿನಗಳಿಗಾಗಿ ತಪ್ಪಿತಸ್ಥನಾದರೆ ಇನ್ನೂ ಹೆಚ್ಚಿನ ದಂಡವನ್ನು ಕೊಡಬೇಕು ಎಂದು ಆ ಕಲಮಿನ ಸಾರಾಂಶವಾಗಿರುತ್ತದೆ. ಅಂದರೆ ದಂಡವು ಪುರೋಗಾಮಿ ಸ್ವರೂಪದ್ದು ಆಗಿರುತ್ತದೆ. ಇಲ್ಲಿ ನಮೂದಿಸಲಾದ ಗರಿಷ್ಠ ದಂಡವೆಂದರೆ, ತೆರಿಗೆಯ ಮೊಬಲಗಿನಷ್ಟೇ. ಇಲ್ಲಿ ಸೇರಿಸಿರುವ ಉಪಬಂಧವು ಮುಂದುವರಿದ ತಪ್ಪಿಗೆ. ಮುಂದುವರಿದ ದಂಡವಲ್ಲ. ನಂತರ ನಾನು ಮುಂಬಯಿ ಭೂ ಕಂದಾಯ ಸಂಹಿತೆಯನ್ನು ಉಲ್ಲೇಖಿಸುತ್ತೇನೆ. ೧೪೮ನೇ ಕಲಮಿನಲ್ಲಿ ದಂಡದ ಬಗ್ಗೆ ಹೇಳಲಾಗಿದೆ. ಅಲ್ಲಿ ಈ ಉಪಬಂಧ ಮಾತ್ರವೇ ಇರುತ್ತದೆ. ಒಬ್ಬ ವ್ಯಕ್ತಿಯು ತಾನು ಕೊಡಬೇಕಾದ ಕಂತನ್ನು ಗೊತ್ತುಪಡಿಸಿದ ಅವಧಿಯಲ್ಲಿ ಕೊಡದೇ ಇರುವುದರ ಅರ್ಥದಲ್ಲಿ ತಪ್ಪಿತಸ್ಥನಾಗಿರುವಾಗ, ಕಲೆಕ್ಟರನು ದಂಡವನ್ನು ಅಥವಾ ಬರಬೇಕಾದ ಹಣದ ಮೇಲೆ ಬಡ್ಡಿಯನ್ನು ವಿಧಿಸತಕ್ಕದು. ನಿಯಮಗಳ ಮೇರೆಗೆ ಈ ಬಗ್ಗೆ ನಿಯಮಗಳನ್ನು ರಚಿಸಲು ಸರಕಾರಕ್ಕೆ ಅಧಿಕಾರ ಕೊಡುವ ಒಂದು ನಿಯಮ ಇರುತ್ತದೆ. ಮುಂಬಯಿ ಭೂ ಕಂದಾಯ ಸಂಹಿತೆಯ ಮೇರೆಗೆ ಮುಂಬಯಿ ಸರಕಾರದವರು ರಚಿಸಿದ ನಿಯಮಗಳನ್ನು ಪರಿಶೀಲಿಸಿದರೆ ಸರಕಾರವು ದಂಡವನ್ನು ಅಥವಾ ಬಡ್ಡಿಯನ್ನು ವಿಧಿಸುವ ಬಗ್ಗೆ ಯಾವುದೇ ನಿಯಮಗಳನ್ನು ಮಾಡಿಲ್ಲ

ಎಂಬುದು ಕಂಡುಬರುತ್ತದೆ. ತಗಾದೆ ನೋಟೀಸಿನಲ್ಲೇ ಪ್ರಾಸಂಗಿಕವಾಗಿ ಆ ಬಗ್ಗೆ ಉಲ್ಲೇಖಿಸ ಲಾಗಿದೆ. ಅಂದರೆ ಆ ನೋಟಿಸಿನಲ್ಲಿಯೇ ಸಂದಾಯ ಮಾಡಬೇಕಾದ ಹಣದ ನಾಲ್ಕನೇ ಒಂದು ಭಾಗದಷ್ಟು ಗರಿಷ್ಠ ದಂಡವನ್ನು ವಿಧಿಸಬೇಕು ಎಂದು ಹೇಳಲಾಗಿರುತ್ತದೆ. ಮಾನ್ಯರೆ, ಈಗ ದಂಡ ವಿಧಿಸುವ ತತ್ವವು ಹೊಸದೆಂದು ನಾನು ಈ ಕೂಡಲೇ ಒಪ್ಪಿಕೊಳ್ಳುತ್ತೇನೆ. ಆದರೆ ನಿಃಸಂಶಯವಾಗಿಯೂ ಇದು ಹಲವಾರು ಹಣಕಾಸು ಉಪಬಂಧಗಳಲ್ಲಿ ಇರುತ್ತದೆ. ಈಗ ನಾವು ಪರಿಶೀಲಿಸಬೇಕಾದ ಪ್ರಶ್ನೆಗಳೆಂದರೆ ಅದನ್ನು ಗೊತ್ತುಪಡಿಸಲಾಗಿರುವ ವಿಧಾನದ ಬಗ್ಗೆ ಮತ್ತು ಗರಿಷ್ಠ ಪ್ರಮಾಣದ ದಂಡದ ಮೊತ್ತದ ಬಗ್ಗೆ ಸಂಬಂಧಿಸಿದವುಗಳಾಗಿವೆ.

ಈ ಮಸೂದೆಯ ಇತರ ಉಪಬಂಧಗಳಿಗೆ ಸಂಬಂಧಿಸಿದಂತೆ ನಮ್ಮ ಮಾನ್ಯ ಮಂತ್ರಿಗಳು ಇವೆ ಲ್ಲವುಗಳು ಕೇವಲ ಆನುಷಂಗಿಕವಾದವುಗಳು ಎಂದು ನಮಗೆ ಹೇಳಿರುತ್ತಾರೆ. ಆದರೆ ನನ್ನ ಮಟ್ಟಿಗೆ ಹೇಳಬೇಕೆಂದರೆ ಅವುಗಳು ಈ ಮಸೂದೆಯ ತುಂಬಾ ವಿವಾದಾಸ್ಪದ ವಿಷಯಗಳು ಎಂದು ನಾನು ಭಾವಿಸುತ್ತೇನೆ. ಮಸೂದೆಯಲ್ಲಿ ನನ್ನ ವಿರೋಧಕ್ಕೆ ಗುರಿಯಾಗತಕ್ಕ ಯಾವುದಾದರೂ ಉಪಬಂಧವು ಇದ್ದರೆ ಅದು ಪ್ರಕರಣ ೨೮(ಬಿ) ಇರುತ್ತದೆ ಮತ್ತು ನನ್ನ ಸ್ನೇಹಿತರು ಅದನ್ನು ಮಂಡಿಸಬಯಸುತ್ತಿದ್ದಾರೆ. ಅದು ಕೇವಲ ಆನುಷಂಗಿಕವಾದುದು ಎಂಬ ವಾದದ ಬಗ್ಗೆ ಹೇಳಲು ನನಗೆ ಅನುಮತಿ ನೀಡಿರಿ. ಇದು ಕೇವಲ ಆನುಷಂಗಿಕವೋ ಅಥವಾ ಅದು ತುಂಬಾ ತೀವ್ರಗಾಮಿ ಪರಿಣಾಮವನ್ನುಂಟುಮಾಡುವಂಥದೋ ಅಥವಾ ನಾನು ಹಾಗೆ ಹೇಳಬಹುದಾದರೆ ಕ್ರಾಂತಿಕಾರಿಯಾದುದೋ–

ಮಿ: ಎ. ಬಿ. ಲಠ್ಠೆ: ಇದು ಆನುಷಂಗಿಕವಾದುದು ಎಂದು ನಾನು ಎಂದೂ ಹೇಳಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಅದನ್ನು ವಾಪಸು ತೆಗೆದುಕೊಳ್ಳುತ್ತೇನೆ.

ಮಿ: ಎ. ಬಿ. ಲಠ್ಠೆ: ಉಪಬಂಧವನ್ನು ಸ್ಪಷ್ಟಪಡಿಸುವುದಕ್ಕಾಗಿ ಎಂದು ನಾನು ಹೇಳಿದೆ.

ಡಾ. ಬಿ. ಆರ್. ಅಂಬೇಡ್ಕರ್: ಪರಿಸ್ಥಿತಿಯನ್ನು ಸ್ಪಷ್ಟಪಡಿಸುವ ಪ್ರಯತ್ನವಾಗಿ ನನ್ನ ಮಾನ್ಯ ಸ್ನೇಹಿತ ರಾದ ಮಂತ್ರಿಗಳು ಮುಂಬಯಿ ಪಟ್ಟಣದ ಮುನಿಸಿಪಲ್ ಕಾರ್ಪೊರೇಷನ್ ಅಧಿನಿಯಮವನ್ನು ಮುಂದಿಟ್ಟಿರುತ್ತಾರೆ ಎಂದು ಹೇಳಲು ನನಗೆ ಯಾವ ಸಂಶಯವೂ ಇಲ್ಲ. ನಾವು ಈಗಿರುವ ಪರಿಸ್ಥಿತಿ ಎಂಥದು? ಅದು ಹೀಗಿರುವಂತೆ ಕಾಣಿಸುತ್ತದೆ. ಅಂದರೆ ನಗರ ಸ್ವತ್ತು ಕರಕ್ಕೆ ಸಂಬಂಧಿಸಿದಂತೆ ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್ನಿಗೆ ಬಾಕಿ ಇರುವ ಹಣವು ಮೊದಲನೆಯ ಚಾರ್ಜು ಆಗಿರಬೇಕೋ ಅಥವಾ ಬೇಡವೋ ಅನ್ನುವುದು. ಈ ಮಸೂದೆಯ ಬಗ್ಗೆ ಫೆಬ್ರವರಿಯಲ್ಲಿ ಈ ಮುಂಚೆ ಚರ್ಚೆ ಮಾಡಿದಾಗ ಈ ಮಸೂದೆಯ ವಿರುದ್ಧ ಮಾಡಲಾದ ಟೀಕೆಯ ಒಂದು ಅಂಶವನ್ನು ಈಗ ನೀವು ಪುನಃ ನೆನಪಿಗೆ ತಂದುಕೊಳ್ಳಿ. ಆ ಅಂಶವು ಪ್ರಾಂತೀಯ ಕರಾಕರಣೆಯ ಆಧಾರವಾಗಿ ನಗರ ಸ್ವತ್ತನ್ನು ತೆಗೆದುಕೊಂಡು ಸರಕಾರವು ಸಾಂಪ್ರದಾಯಿಕವಾಗಿ ಮತ್ತು ಸಾರ್ವಜನಿಕ ಸಮ್ಮತಿಯಿಂದ ಮುನಿಸಿಪಾಲಿಟಿಯವರ ಕರಾಕರಣೆಯ ಕ್ಷೇತ್ರವೆಂದು ಕಾಯ್ದಿಡಲಾದ ಕ್ಷೇತ್ರದ ಮೇಲೆ ಮಾಡಲಾಗಿರುವ ಆಕ್ರಮಣ ಎಂಬುದು ಇರುತ್ತದೆ. ಅವರ ಪರವಾಗಿ ಅನೇಕ ಸದಸ್ಯರು ಮತ್ತು ನಿರ್ದಿಷ್ಟವಾಗಿ ನನ್ನ ಸ್ನೇಹಿತರಾದ ಗೌರವಾನ್ವಿತ ಶ್ರೀ ಜಮ್ನಾದಾಸ್ ಮೆಹ್ತಾರವರು ವ್ಯಕ್ತಗೊಳಿಸಿದ ಟೀಕೆ. ಒಂದು ಅಂಶವು ತಮ್ಮ ಕರಾಕರಣೆಯ ಕ್ಷೇತ್ರದಲ್ಲಿ ಅತಿಕ್ರಮಣ ಮಾಡಿ ಸರಕಾರವು ಮುನಿಸಿಪಾಲಿಟಿಯನ್ನು ಊನಗೊಳಿಸಿದೆ ಎಂಬುದು ಆಗಿರುತ್ತದೆ. ಅದು ಅವರ ಟೀಕೆಯ ಮಸೂದೆಗೆ ವಿರುದ್ಧವಾಗಿರುವ ಟೀಕೆಯ ಮತ್ತೊಂದು ಅಂಶವೆಂದರೆ ಮುಂಬೈ ಮುನಿಸಿಪಾಲಿಟಿಯನ್ನು ಆ ಕರಗಳನ್ನು ವಸೂಲು ಮಾಡಲು ತನ್ನ ಏಜೆಂಟನನ್ನಾಗಿ

ಸರಕಾರವು ಉಪಯೋಗಿಸುತ್ತಿರುವುದು ತುಂಬಾ ಅನ್ಯಾಯದ್ದು ಎನ್ನುವುದಾಗಿದೆ. ಕೇಂದ್ರ ಸರಕಾರವು ತಾನು ವಿಧಿಸುವ ಕರವನ್ನು ಉದಾಹರಣೆಗೆ ಅಬಕಾರಿ ಕಂದಾಯ, ಆದಾಯಕರ, ಉಪ್ಪಿನಕರ ವಸೂಲು ಮಾಡುವುದಕ್ಕಾಗಿ ತನ್ನದೇ ಆದ ಸಿಬ್ಬಂದಿಯನ್ನು ಉಪಯೋಗಿಸುವಂತೆ ಮುಂಬಯಿ ಸರಕಾರವೂ ಸಹ ಈ ಕರವನ್ನು ತನ್ನ ಏಜೆಂಟರುಗಳ ಮೂಲಕವೇ ವಸೂಲು ಮಾಡಿಕೊಳ್ಳಬೇಕು ಎಂಬುದು ವಾದಿಸಲಾದ ಮತ್ತೊಂದು ಅಂಶವಾಗಿರುತ್ತದೆ. ನನ್ನ ಮಾನ್ಯ ಸ್ನೇಹಿತರು ಪ್ರತಿಷ್ಠಾಪಿತವಾದ ಅಂಥ ತತ್ವಗಳನ್ನು ಮತ್ತು ಅತ್ಯಂತ ಸಮರ್ಪಕವಾದ ರೂಢಿಯನ್ನು ಬಿಟ್ಟುಕೊಟ್ಟು ಈ ಆದಾಯವನ್ನು ಸಂಗ್ರಹಿಸಲು ಮುನಿಸಿಪಾಲಿಟಿಯವರ ಸೇವೆಯನ್ನು ಉಪಯೋಗಿಸಿದ್ದಾರೆ. ಸುದೈವದಿಂದ ಈಗ ಅವರು ಹೆಚ್ಚಿನ ತೊಂದರೆಯನ್ನು ಆಗ ಅವರು ಕೊಟ್ಟಿರಲಿಲ್ಲ. ಮುಂಬೈ ಸರಕಾರದ ಪರವಾಗಿ ನಗರ ಸ್ವತ್ತಿನ ಕರದ ಮೇರೆಗೆ ಮುನಿಸಿಪಾಲಿಟಿಯವರು ಸಂಗ್ರಹಿಸಿದ ಕರವು ಮೊದಲನೆಯ ಚಾರ್ಜು ಆಗಿರಬೇಕೆಂದು ಹೇಳುವ ಧೈರ್ಯ ಆಗ ಅವರಿಗೆ ಇರಲಿಲ್ಲ. ಆ ಬಗ್ಗೆ ಅದರಲ್ಲಿ ಯಾವುದೇ ಉಪಬಂಧವಿರುವುದು ಕಂಡುಬರುವುದೇ ಇಲ್ಲ. ಆದುದರಿಂದ ಇದು ನಾವು ಪಯಣಿಸುತ್ತಿರುವ ಹೊಸಪ್ರದೇಶವೆಂದು ಹೇಳುತ್ತೇನೆ.

ಈ ಮಸೂದೆಯ ಮುಂಚಿನ ಸ್ಥಿತಿಗತಿ ಹೇಗಿತ್ತು? ಮುಂಬೈ ಮುನಿಸಿಪಾಲಿಟಿ ಅಧಿನಿಯಮದ ೨೧೨ನೇ ಕಲಮನ್ನು ಗಮನಿಸಿದರೆ ಆಗಿನ ಸ್ಥಿತಿಗತಿ ಹೀಗಿತ್ತು ಎಂದರೆ ಈ ಕಲಮಿನ ಮೇರೆಗೆ ಮುಂಬೈ ನಗರದಲ್ಲಿ ಇದ್ದು ಮತ್ತು ಮುನಿಸಿಪಾಲಿಟಿಯವರು ಕರ ವಿಧಿಸುವುದಕ್ಕೆ ಒಳಪಟ್ಟಿದ್ದ ಸ್ವತ್ತಿನ ಮೇಲೆ ಭೂಕಂದಾಯವು ಪ್ರಥಮ ಚಾರ್ಜು ಆಗಿತ್ತು. ಭೂ ಕಂದಾಯದ ಅನಂತರ ಪ್ರಾಶಸ್ತ್ಯಕ್ಕನುಸಾರವಾಗಿ ಮೊದಲಿಗೆ ಬರುವುದು ಮುನಿಸಿಪಾಲಿಟಿಯವರ ಕ್ಲೇಮು. ಅದು ವಾಸ್ತವ ಸ್ಥಿತಿ. ಈಗ ಉಂಟಾಗುವ ಸ್ಥಿತಿ ಏನು? ಅದು ಹೀಗಾಗುತ್ತದೆ. ಭೂ ಕಂದಾಯವು ಪ್ರಥಮ ಚಾರ್ಜು ಆಗುವುದು. ಸರಕಾರಕ್ಕೆ ಬರಬೇಕಾದ ನಗರ ಸ್ವತ್ತು ಕರವು ಎರಡನೆಯ ಚಾರ್ಜು ಆಗುತ್ತದೆ. ಈ ಸ್ವತ್ತಿನಲ್ಲಿ ವಿಭಜಿಸಲಾದ ಹಿತಾಸಕ್ತಿಯನ್ನು ಹೊಂದಿರುವ ಮುನಿಸಿಪಾಲಿಟಿಯು ಕೊನೆಯದಾಗುತ್ತದೆ. ಮಾನ್ಯರೇ, ವಾಸ್ತವವಾಗಿ ೧೩ ಲಕ್ಷ ಜನತೆಯ ಕಲ್ಯಾಣದ ಹೊರೆಯನ್ನು ತನ್ನ ಭುಜದ ಮೇಲೆ ಹೊತ್ತುಕೊಂಡಿರುವ ಮುಂಬಯಿಯ ಮುನಿಸಿಪಾಲಿಟಿಯವರ ದೃಷ್ಟಿಯಿಂದ ಹೊಟ್ಟೆಕಿಚ್ಚು ಪಡುವಂಥ ಸ್ಥಿತಿ ಅದಾಗುವುದಿಲ್ಲವೇ? ಮುನಿಸಿಪಾಲಿಟಿಯ ಕ್ಲೇಮನ್ನು ಕೊನೆಯಲ್ಲಿ ಇರಿಸಿದ ಈ ವಿಧೇಯಕಕ್ಕೆ ನಮ್ಮ ಸಮ್ಮತಿ ಸರಿಯೇ? ನ್ಯಾಯಸಮ್ಮತವೆ? ಈ ನಗರ ತೆರಿಗೆ ವಿಧಿಸಲು ನಮ್ಮ ಮಾನ್ಯ ಸ್ನೇಹಿತರೇ ಹೊಣೆಗಾರರು. ತಮ್ಮ ಪ್ರಾರಂಭಿಕ ಹೇಳಿಕೆಯಲ್ಲಿ ಅವರೇ ಹೇಳಿರುವಂತೆ ಈ ಕ್ರಮವನ್ನು ಜನತೆ ವಿರೋಧಿಸುತ್ತಿದ್ದಾರೆ.

ಶ್ರೀ ಎ. ಬಿ. ಲಠ್ಠೆ: ನಾನು ಹೇಳಿದ್ದು... ಕಲಮಿನ ಮೂಲಕ.

ಡಾ. ಬಿ. ಆರ್. ಅಂಬೇಡ್ಕರ್: ಅದು ನನಗೆ ಸಾಕಷ್ಟಾಯಿತು (ನಗು) ಈ ಕ್ರಮಕ್ಕೆ ವಿರೋಧವಿದೆ ಎಂದು ಅವರೇ ಹೇಳಿದರು. ಈ ಕ್ರಮಕ್ಕೆ ವಿರೋಧವಿದ್ದರೆ ಆ ವಿರೋಧ ಯಾವ ಪ್ರಕಾರದ್ದು? ಅದನ್ನು ನಾವು ಕಂಡುಕೊಳ್ಳಬೇಕು. ನಾನು ಸುಳ್ಳು ಹೇಳಿಕೆಯನ್ನಾಗಲಿ, ಕಂದಾಯ ಮಂತ್ರಿಗಳಿಗೆ ತಿಳಿಯದಿರುವ ಹೇಳಿಕೆಯನ್ನಾಗಲಿ ಕೊಡುತ್ತಿರುವೆನೆಂದು ಭಾವಿಸುವುದಿಲ್ಲ. ಆ ಹೇಳಿಕೆಯು ಹೀಗಿರುತ್ತದೆ. ಮತ್ತು ಮಾನ್ಯ ಸ್ನೇಹಿತರಾದ ವಿರೋಧಿ ಪಕ್ಷದ ನಾಯಕರು ಭೂ ಮಾಲೀಕರ ಚಿಕ್ಕ ಗುಂಪು ಮತ್ತು ಇಡೀ ಮೊಹಮಡನ್ ಸಮುದಾಯದವರು ಈ ಮಸೂದೆಯನ್ನು ವಿರೋಧಿಸುತ್ತಿದ್ದಾರೆ ಎಂದರೆ ನನ್ನನ್ನು ಕ್ಷಮಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಇದರಲ್ಲಿ ಎಳ್ಳಷ್ಟೂ ಅತಿಶಯೋಕ್ತಿ ಇಲ್ಲ. ತಪ್ಪಾಗಲಿ ಅಥವಾ ಒಪ್ಪಾಗಲೀ, ಈ ಹಂತದಲ್ಲಿ ಅದನ್ನು ಪರೀಕ್ಷಿಸಲು ನಾನು ಹಿಂದು ಮುಂದೆ ನೋಡುವುದಿಲ್ಲ. ಆದುದರಿಂದ, ಇದು

ಕೇವಲ ಒಬ್ಬ ವ್ಯಕ್ತಿ ಉಪೇಕ್ಷೆಯಿಂದ ಸಂದಾಯಮಾಡಲೊಲ್ಲದ ವಿಚಾರವಲ್ಲ. ಇಡೀ ಸಮುದಾಯವೇ ಅದನ್ನು ವಿರೋಧಿಸುತ್ತಿರುವ ಪ್ರಸಂಗ.

ಮಾನ್ಯರೇ, ಈಗ ಈ ಮಸೂದೆಯ ಪರಿಣಾಮದಿಂದಾಗಿ ಉಂಟಾಗುವ ಪರಿಸ್ಥಿತಿ ಯಾವುದು? ಆ ಪರಿಸ್ಥಿತಿ ಇದು ಮುನಿಸಿಪಾಲಿಟಿಯು ತಾನು ಸ್ವತ್ತಿನ ಮೇಲೆ ವಿಧಿಸಿದ ತನ್ನ ಕರವನ್ನು, ಮುಂಬಯಿ ಸರಕಾರದವರು ವಿಧಿಸಿದ ಮತ್ತು ಮುಂಬೈ ಸರಕಾರದ ಪರವಾಗಿ ಮುನಿಸಿಪಾಲಿಟಿಯು ವಸೂಲಿ ಮಾಡಬೇಕಾದ ಕರವನ್ನೂ ಸಹ ವಸೂಲು ಮಾಡಬೇಕಾಗುತ್ತದೆ. ಈಗ ನನ್ನ ಮಾನ್ಯ ಸ್ನೇಹಿತರಿಗೆ ಅವರು ಸುಲಿಗೆದಾರನಂತೆ ಮುಂದೆ ಬಂದು ಮುನಿಸಿಪಾಲಿಟಿಯವರು ವಸೂಲಿ ಮಾಡಿದ ಹಣವನ್ನು ಅದನ್ನು ಸರಕಾರದ ಪರವಾಗಿ ವಸೂಲಿ ಮಾಡಲಾಗಿದೆಯೋ ಅಥವಾ ಮುನಿಸಿಪಾಲಿಟಿಯವರ ಪರವಾಗಿ ವಸೂಲಿ ಮಾಡಲಾಗಿದೆಯೋ ಎಂಬುದನ್ನು ಗಮನಿಸದೆಯೇ ಮುನಿಸಿಪಾಲಿಟಿಯವರ ಮೇಲೆ ಜಿಗಿದು ಹಾರಿ ಸುಲಿಗೆ ಮಾಡುತ್ತಾರೆ ಎಂದು ನಾನು ಹೇಳಿದರೆ ಅದು ಅವರಿಗೆ ಒಪ್ಪಿಗೆಯಾಗಲಿಕ್ಕಿಲ್ಲ. ಮುನಿಸಿಪಾಲಿಟಿಯ ಬ್ಯಾಂಕ್ ಶುಲ್ಕ ಹೆಚ್ಚಾದುದನ್ನೂ ಅವರು ಸ್ವತಃ ತೆರೆದ ಕಣ್ಣುಗಳಿಂದ ನೋಡಿದ ತಕ್ಷಣವೇ ಮುನಿಸಿಪಾಲಿಟಿಯವರ ಖರ್ಚಿನ ವಿಷಯ ಹೇಗಿದೆ ಅನ್ನುವುದನ್ನು ಪರೀಕ್ಷಿಸದೆಯೇ ಮನೆಯಲ್ಲಿಂದಲೇ ಬ್ಯಾಂಕಿಗೆ ವಾರಂಟು ಹೊರಡಿಸುತ್ತಾರೆ. ಮುನಿಸಿಪಾಲಿಟಿಯನ್ನು ಅದರ ಹಣೆಬರಹಕ್ಕೆ ಬಿಟ್ಟುಬಿಡಲಾಗುತ್ತದೆ. ಮುನಿಸಿಪಾಲಿಟಿಯು ಏನು ಮಾಡಬೇಕು? ಮಸೂದೆಯಲ್ಲಿನ ಯೋಜನೆಯಂತೆ ಮುನಿಸಿಪಾಲಿಟಿಯು ಇಡಿಯ ಸಮುದಾಯದ ವಿರುದ್ಧ ಕ್ರಮ ಕೈಗೊಂಡು ಕರವನ್ನು ವಸೂಲು ಮಾಡಬೇಕಾಗುತ್ತದೆ. ನನ್ನ ಗೌರವಾನ್ವಿತ ಸ್ನೇಹಿತರಿಗೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅವರಿಗೆ ಧೈರ್ಯವಿದ್ದರೆ ತನ್ನ ಕರವನ್ನು ತಾನೇ ವಸೂಲು ಮಾಡಿಕೊಳ್ಳಲಿ. ಸುಸಂಘಟಿತ ಪ್ರತಿಭಟನೆಯನ್ನು ಎದುರಿಸಿ, ಪರ್ದಾ ಪದ್ಧತಿಯನ್ನು ಅನುಸರಿಸುವ ಮುಸ್ಲಿಮ ಸಮುದಾಯದಿಂದ ಬರುತ್ತಿರುವ ಪ್ರತಿಭಟನೆಯನ್ನು ಎದುರಿಸಿ ಮುನಿಸಿಪಾಲಿಟಿಯು ಈ ಕರವನ್ನು ಹೇಗೆ ವಸೂಲು ಮಾಡಬಲ್ಲದು? ಅವರ ಮನೆಗಳನ್ನು ಪ್ರವೇಶಿಸಲು ಮತ್ತು ಅವರ ಹತ್ತಿರ ಯಾವ ಒಡವೆಗಳು ಮತ್ತು ಆಭರಣಗಳು ಇರುತ್ತವೆ ಎಂಬುದನ್ನು ಕಂಡುಹಿಡಿಯಲು ಯಾರಿಗೆ ಧೈರ್ಯವಿದೆ? ಈ ಸಂದರ್ಭದಲ್ಲಿ ಮುನಿಸಿಪಾಲಿಟಿಯು ಏನು ಮಾಡಬೇಕು? ಅದರ ಹತ್ತಿರ ಪೊಲೀಸ್ ಪಡೆ ಇಲ್ಲ. ಜನತೆಯ ಮೇಲೆ ಬಲಪ್ರಯೋಗ ಮಾಡಲು ಅದರ ಹತ್ತಿರ ವಸ್ತುಗಳಿಲ್ಲ ಮತ್ತು ಸಲಕರಣೆಗಳು ಇಲ್ಲ. ಏನೇ ಆಗಲಿ ಅವರು ಕರವನ್ನು ವಿಧಿಸಲೇ ಬೇಕಾದುದರಿಂದ ಅವರೇ ಹೊರಬರಲಿ ಮತ್ತು ಧೈರ್ಯವಂತ ಮನುಷ್ಯನಂತೆ ತನ್ನದೇ ಆದ ಏಜೆನ್ಸಿಯನ್ನು ನೇಮಿಸಿಕೊಳ್ಳಲಿ ಮತ್ತು ಸಂದಾಯ ಮಾಡಲು ಇಚ್ಛೆ ಇಲ್ಲದವರಿಂದ ಕಿತ್ತುಕೊಳ್ಳಲಿ. ಮುನಿಸಿಪಾಲಿಟಿಯನ್ನು ಯಾಕೆ ತೊಂದರೆಗೊಳಪಡಿಸಬೇಕು? ಇದು ನನ್ನ ವಾದ. ಉಳಿದ ವಿಷಯಗಳ ಚರ್ಚೆ ಮಾಡುವುದರ ಕಾಳಜಿಯನ್ನು ನಾನು ಮಾಡುವುದಿಲ್ಲ. ನಾನು ಬಯಸುವುದೂ ಇಲ್ಲ. ನಿಜವಾದ ಅಂಶವೆಂದರೆ ಇಷ್ಟೆ.

ಮುನಿಸಿಪಾಲಿಟಿ ಯಾವ ಕಾರಣಗಳಿಗೆ ಹೊಣೆಗಾರವಲ್ಲವೋ, ಆ ವಿಚಾರದಲ್ಲಿ ಸರ್ಕಾರ ಮುನಿಸಿಪಾಲಿಟಿಯನ್ನು ತೊಂದರೆಗೆ ಸಿಕ್ಕಿಸುವುದು ಸರಿಯೆ? ನಿಮ್ಮ ಹೊಣೆಯಿಂದ ನೀವು ಏಕೆ ಜಾರಿಕೊಳ್ಳುತ್ತೀರಿ? ಇದು ತುಂಬಾ ಹೇಡಿತನದ ಮಸೂದೆಯಾಗಿದೆ ಎಂದು ಹೇಳುವುದು ಅತಿಶಯೋಕ್ತಿ ಅಲ್ಲ ಮತ್ತು ಹಾಗೆ ಹೇಳಲು ನಾನು ಎಳ್ಳಷ್ಟೂ ಹಿಂದು ಮುಂದೆ ನೋಡುವುದಿಲ್ಲ. ನಿಮ್ಮ ಕರವು ಜನಪ್ರಿಯವಾದದ್ದು ಎಂದು ನೀವು ಹೇಳಿದರೆ ಅದನ್ನು ವಸೂಲು ಮಾಡುವ ಹೊಣೆಯಿಂದ ಜಾರಿಕೊಳ್ಳಲು

ಏಕೆ ಪ್ರಯತ್ನ ಮಾಡುತ್ತೀರಿ? ಆ ಭಾರವನ್ನು ಮುನಿಸಿಪಾಲಿಟಿಯವರ ಮೇಲೆ ಏಕೆ ಹೇರುತ್ತೀರಿ? ಅವರ ಸಂಪನ್ಮೂಲಗಳನ್ನು ನೀವೇಕೆ ನಿಯೋಜಿಸಿಕೊಳ್ಳುತ್ತೀರಿ? ಆ ದೃಷ್ಟಿಯಿಂದ ಗಮನಿಸಿದಾಗ ನಿಜವಾಗಿಯೂ ಇದು ಹೇಡಿತನದ ಮಸೂದೆಯಾಗಿದೆ ಮತ್ತು ಅದು ಸಮರ್ಥನೆ ಪಡೆಯುವಂಥದಲ್ಲ ಎಂದೇ ನಾನು ಭಾವಿಸುತ್ತೇನೆ.

# ಶಿಕ್ಷಣಕ್ಕೆ ಅನುದಾನ ೬*

ಡಾ. ಬಿ. ಆರ್. ಅಂಬೇಡ್ಕರ್: ಸನ್ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಏಕೆಂದರೆ ನಮಗೆ ಲಭ್ಯವಿದ್ದ ಅವಧಿ ತುಂಬಾ ಅಲ್ಪವೆಂದು ಗೊತ್ತಿದೆ. ಆದರೂ ಕೆಲವು ಅಂಶಗಳನ್ನು ಪರ್ಯಾಲೋಚನೆಗಾಗಿ ಗೌರವಾನ್ವಿತ ಶಿಕ್ಷಣ ಮಂತ್ರಿಯವರ ಮುಂದಿಡಲು ಇಚ್ಛಿಸುತ್ತೇನೆ.

ಅವರ ಗಮನಕ್ಕೆ ನಾನು ತರಲು ಇಚ್ಛಿಸುವ ಮೊದಲನೆಯ ಅಂಶವೆಂದರೆ ನಮ್ಮ ಮಕ್ಕಳ ಶಿಕ್ಷಣ ವಿಷಯಕ್ಕೆ ಸಂಬಂಧಿಸಿದಂತೆ ನಿಜವಾಗಿಯೂ ಅತಿ ಮಂದಗತಿಯಲ್ಲಿ ನಾವು ಪ್ರಗತಿಯನ್ನು ಸಾಧಿಸುತ್ತಿದ್ದೇವೆ ಎಂಬ ಸಂಗತಿ. ಶಿಕ್ಷಣದ ಪ್ರಗತಿಯ ಬಗ್ಗೆ ಸರಕಾರವು ನೀಡಿರುವ ವರದಿಯು ಶಿಕ್ಷಣದ ಪ್ರಗತಿಯನ್ನು ಬಹಳ ಖೇದಕರವೆಂದು ವರ್ಣಿಸಿದೆ. ಇಂದು ಯಾವ ಗತಿಯಲ್ಲಿ ನಮ್ಮ ಶಿಕ್ಷಣದ ಪ್ರಗತಿ ನಡೆದಿದೆಯೋ ಅದೇ ಗತಿಯಲ್ಲಿ ಪ್ರಗತಿಯು ಶಾಲೆಗೆ ಹೋಗಬೇಕಾದ ಎಲ್ಲಾ ಹುಡುಗರನ್ನೂ ಶಿಕ್ಷಣದ ವ್ಯಾಪ್ತಿಗೆ ತರಲು ೪೦ ವರ್ಷಗಳೂ, ಬಾಲಕಿಯರನ್ನು ತರಲು ೩೦೦ ವರ್ಷಗಳೂ ಬೇಕಾಗುತ್ತವೆ ಎಂದು ಈ ವರದಿಯು ಹೇಳುತ್ತದೆ. ಮಾನ್ಯರೇ, ನಾನು ವಿನಯಪೂರ್ವಕ ಹೇಳುವುದೇನೆಂದರೆ, ಈ ವಿಷಯದ ಕರಾಳತೆಯನ್ನು ಸದನವು ಪರಿಗಣಿಸಬೇಕು. ಗೌರವಾನ್ವಿತ ಹಣಕಾಸು ಮಂತ್ರಿಗಳು ಆಯವ್ಯಯ ಪತ್ರವನ್ನು ಮಂಡಿಸಿದ ದಿನದಂದು ೧೯೨೧–೨೨ರಿಂದ ಇಂದಿನವರೆಗೆ ಶಿಕ್ಷಣದ ವೆಚ್ಚವು ಅಜಮಾಸು ೩೯ ಲಕ್ಷದಷ್ಟು ಹೆಚ್ಚಿದೆ ಎಂದು ನಮಗೆ ಹೇಳಿದರು. ಮಾನ್ಯರೇ, ಶಿಕ್ಷಣದ ಮೇಲಿನ ವೆಚ್ಚದ ಏರಿಕೆಯನ್ನು ಗಮನದಲ್ಲಿರಿಸಿಕೊಂಡು ಮತ್ತು ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ಹೆಚ್ಚಳವನ್ನೂ ಗಮನಿಸಿದಾಗ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ಹೆಚ್ಚಳವು ಶಿಕ್ಷಣವು ವೆಚ್ಚದಲ್ಲಿನ ಹೆಚ್ಚಳಕ್ಕೆ ಹೊಂದಾಣಿಕೆಯಾಗಿರುವಂತೆ ಕಂಡುಬರುವುದಿಲ್ಲ. ೧೯೧೬–೧೭ರಿಂದ ೧೯೨೨–೨೩ರ ಅವಧಿಯ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ಶಿಕ್ಷಣದ ಮೇಲಿನ ವೆಚ್ಚವು ಶೇಕಡಾ ನೂರರಷ್ಟು ಹೆಚ್ಚಿರುವುದು ಕಂಡುಬರುತ್ತದೆ. ಆದರೆ ಅದೇ ಅವಧಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ಹೆಚ್ಚಳವು ಕೇವಲ ಶೇಕಡಾ ೨೯ರಷ್ಟು ಮಾತ್ರ ಇರುತ್ತದೆ. ಮಾನ್ಯರೇ, ಈ ಪ್ರಾಂತದಲ್ಲಿ ಹಣಕಾಸಿನ ಮುಗ್ಗಟ್ಟು ತುಂಬಾ ಇರುವುದು ಮತ್ತು ನಾವು ಈಗ ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ತೀವ್ರಗತಿಯ ಬೆಳವಣಿಗೆಯನ್ನು ನಿರೀಕ್ಷಿಸಲಾಗದ ಸ್ಥಿತಿಯಲ್ಲಿದ್ದೇವೆ ಎಂಬುದು ನನಗೆ ಗೊತ್ತಿದೆ. ಆದರೆ ನಾವು ನಿಜವಾಗಿಯೂ ಒಂದು ವಿಷಯದ ಬಗ್ಗೆ ಒತ್ತಾಯ ಮಾಡಬೇಕು. ಈ ಪ್ರಾಂತದಲ್ಲಿ ನಮಗೆ ಎರಡು ಇಲಾಖೆಗಳಿವೆ. ಅವೆರಡೂ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಕಾರ್ಯ ಮಾಡುತ್ತಿವೆ ಎಂದು ನಾನು ಹೇಳಬಹುದು. ನಮ್ಮಲ್ಲಿ ಶಿಕ್ಷಣ ಇಲಾಖೆ ಇದೆ. ಅದರ ಉದ್ದೇಶವು ಜನತೆಯನ್ನು ನೀತಿವಂತರನ್ನಾಗಿ ಮಾಡುವುದು ಮತ್ತು ಸಮಾಜ ಜೀವಿಗಳನ್ನಾಗಿ ಮಾಡುವುದು ಆಗಿರುತ್ತದೆ. ಮತ್ತೊಂದು ನಮ್ಮಲ್ಲಿರುವ ಇಲಾಖೆಯೆಂದರೆ ಅಬಕಾರಿ ಇಲಾಖೆ. ನಾನು ಹಾಗೆ ಹೇಳಬಹುದಾದರೆ, ಈ ಅಬಕಾರಿ

---

ಬಿ.ಎಲ್.ಎ. ಡಿಬೇಟ್ಸ್, ಸಂ. XIX,
ಪುಟಗಳು ೯೭೧–೭೬, ೧೨ನೆಯ ಮಾರ್ಚ್ ೧೯೨೭.

ಇಲಾಖೆಯು ತದ್ವಿರುದ್ಧ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ. ಮಾನ್ಯರೇ, ಅಬಕಾರಿ ಆದಾಯದ ರೂಪದಲ್ಲಿ ಜನತೆಯಿಂದ ಪಡೆದುಕೊಂಡಷ್ಟು ಹಣವನ್ನಾದರೂ ಶಿಕ್ಷಣದ ಮೇಲೆ ಖರ್ಚುಮಾಡಿರಿ ಎಂದು ಕೇಳುವುದು ಹೆಚ್ಚಿನದೇನನ್ನೂ ಕೇಳಿದಂತೆ ಅಲ್ಲ ಎಂದೇ ನಾನು ಭಾವಿಸುತ್ತೇನೆ. ಈ ಪ್ರಾಂತದಲ್ಲಿ ನಾವು ಪ್ರತಿಯೊಬ್ಬ ವ್ಯಕ್ತಿಗೆ ಶಿಕ್ಷಣದ ಬಗ್ಗೆ ತಲಾ ಕೇವಲ ೧೪ ಆಣೆಗಳನ್ನು ಮಾತ್ರ ಖರ್ಚು ಮಾಡುತ್ತೇವೆ. ಆದರೆ, ಅಬಕಾರಿ ಆದಾಯದ ರೂಪದಲ್ಲಿ ನಾವು ಪ್ರತಿಯೊಬ್ಬ ವ್ಯಕ್ತಿಯಿಂದ ತಲಾ ೨ ರೂಪಾಯಿ ೨ ಆಣೆ ೧೭ ಪೈಸೆಗಳನ್ನು ವಸೂಲು ಮಾಡಿಕೊಳ್ಳುತ್ತೇವೆ. ನಾವು ಜನತೆಯಿಂದ ಅಬಕಾರಿ ಕರದ ರೂಪದಲ್ಲಿ ತೆಗೆದುಕೊಂಡಷ್ಟನ್ನು ಶಿಕ್ಷಣದ ಬಗ್ಗೆ ಖರ್ಚು ಮಾಡಲು ಅವಕಾಶವಾಗುವಂತೆ ಶಿಕ್ಷಣದ ವೆಚ್ಚವನ್ನು ಹೊಂದಾಣಿಕೆ ಮಾಡುವುದು ನ್ಯಾಯಯುತವಾದುದು ಎಂದು ನಾನು ಭಾವಿಸುತ್ತೇನೆ.

ನಾನು ಹೇಳಬೇಕೆಂದಿರುವ ತುಂಬಾ ಸಾದೃಶ್ಯವಾಗಿರುವ ಮತ್ತು ನನ್ನ ಗೌರವಾನ್ವಿತ ಸ್ನೇಹಿತರಾದ ಶಿಕ್ಷಣ ಮಂತ್ರಿಗಳ ಲಕ್ಷ್ಯವನ್ನು ಸೆಳೆಯಬೇಕೆಂದಿರುವ ಇನ್ನೊಂದು ವಿಷಯವಿದೆ. ಅದೆಂದರೆ ನಾವು ಈಗ ಪ್ರಾಥಮಿಕ ಶಿಕ್ಷಣದ ಬಗ್ಗೆ ಖರ್ಚು ಮಾಡುತ್ತಿರುವ ಹಣವು ಹೆಚ್ಚಿನ ಮಟ್ಟಿಗೆ ವ್ಯರ್ಥವಾಗಿ ಖರ್ಚಾಗುತ್ತಿದೆ ಎಂಬುದು. ಪ್ರಾಥಮಿಕ ಶಾಲೆಯ ಆವರಣವನ್ನು ಪ್ರವೇಶಿಸುವ ಪ್ರತಿಯೊಂದು ಮಗುವೂ ಶಿಕ್ಷಣ ಪಡೆದುಕೊಂಡೇ ಅದನ್ನು ಬಿಡತಕ್ಕದು ಎಂಬುದೇ ಪ್ರಾಥಮಿಕ ಶಿಕ್ಷಣದ ಗುರಿಯಾಗಿರಬೇಕು. ಆದರೆ ನಾವು ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ಪ್ರಾಥಮಿಕ ಶಾಲೆಯನ್ನು ಪ್ರವೇಶಿಸುವ ಪ್ರತಿ ನೂರು ಮಕ್ಕಳಲ್ಲಿ ಕೇವಲ ಹದಿನೆಂಟು ಮಕ್ಕಳು ನಾಲ್ಕನೆಯ ವರ್ಗದವರೆಗೆ ಓದುತ್ತಾರೆ. ಉಳಿದವರೆಲ್ಲ ಅಂದರೆ ಪ್ರತಿ ನೂರರಲ್ಲಿ ೮೨ ಮಕ್ಕಳು ಪುನಃ ಅಶಿಕ್ಷಿತರಾಗಿಯೇ ಉಳಿಯುತ್ತಾರೆ. ಈ ಪರಿಸ್ಥಿತಿಗೆ ಪರಿಹಾರವೇನು? ಭಾರತ ಸರ್ಕಾರವು ಶಿಕ್ಷಣದ ಪುನರಾವಲೋಕನದ ತನ್ನ ವರದಿಯಲ್ಲಿ ಮಾಡಿದ ಟೀಕೆಯನ್ನು ಯಾವುದೇ ನೆಪವನ್ನು ಹೇಳದೆಯೇ ಈ ಸದನಕ್ಕೆ ಓದಿ ಹೇಳಲೇಬೇಕು. ಆ ವರದಿಯು ಹೇಳುತ್ತದೆ:

> "ಶೈಕ್ಷಣಿಕ ಪ್ರಯತ್ನದಲ್ಲಿ ಹಣ ಪೋಲಾಗುವುದು ತುಂಬಾ ಹೆಚ್ಚಿನ ಪ್ರಮಾಣದ್ದಾಗಿದೆ. ಮತ್ತು ಭಾರತದಲ್ಲಿನ ಶೈಕ್ಷಣಿಕ ಪ್ರಯತ್ನದಲ್ಲಿನ ಹಣ ಪೋಲಾಗುವ ಈ ಸಮಸ್ಯೆಗೆ ಒತ್ತಾಯವನ್ನು ಹೊರತುಪಡಿಸಿ ಬೇರೇ ಯಾವುದೇ ಪರಿಹಾರ ಇಲ್ಲ ಎಂದು ಬಹಳ ಜನ ಶಿಕ್ಷಣ ತಜ್ಞರು ಅಭಿಪ್ರಾಯಪಡುತ್ತಾರೆ. ಶೈಕ್ಷಣಿಕ ಪ್ರಯತ್ನದಲ್ಲಿನ ಒಟ್ಟು ಪೋಲಾಗುವಿಕೆಯು ಮತ್ತು ಅದಕ್ಕೆ ಸರಿಸಮನಾಗಿ ಪೋಲಾಗುತ್ತಿರುವ ಶಿಕ್ಷಣದ ಹಣವು ಪ್ರಾಥಮಿಕ ವರ್ಗಗಳಲ್ಲಿ ಒದಗಿಸಲಾದ ಒಟ್ಟು ಶಕ್ತಿಯ ಶೇಕಡಾ ೫೦ರಷ್ಟು ಇರುತ್ತದೆ."

ಆದುದರಿಂದ ಗೌರವಾನ್ವಿತ ಶಿಕ್ಷಣ ಮಂತ್ರಿಗಳಿಗೆ ನಾನು ವಿನಂತಿಸುವುದೇನೆಂದರೆ ಪ್ರಾಥಮಿಕ ಶಿಕ್ಷಣದ ಬಗ್ಗೆ ಹೆಚ್ಚಿನ ಹಣವನ್ನು ಖರ್ಚು ಮಾಡಲಿ. ಬೇರೆ ಯಾವುದಕ್ಕೂ ಅಲ್ಲವಾದರೂ ಕನಿಷ್ಠ ಪಕ್ಷ ತಾನು ಖರ್ಚು ಮಾಡಿದ ಹಣವು ಫಲಕಾರಿಯಾದುದಾಗಲಿ ಎಂಬ ಕಾರಣಕ್ಕಾಗಿಯಾದರೂ ಹೆಚ್ಚಿನ ಹಣವನ್ನು ಖರ್ಚು ಮಾಡಲಿ. ಬ್ಲಾಕ್ ಬೇ ರಿಕ್ಲೆ ಮೆಶಿನ್ನಿಗೆ ಸಂಬಂಧಿಸಿದಂತೆ ಸರಕಾರದ ಕಡೆಯವರು ಮಂಡಿಸಿದ ವಾದಕ್ಕಿಂತ ಇದೇನೂ ತುಂಬಾ ಬೇರೆಯಾದುದಲ್ಲ. ಬ್ಲಾಕ್ ಬೇ ಬಗ್ಗೆ ಹೆಚ್ಚಿನ ಹಣವನ್ನು ಖರ್ಚು ಮಾಡಲು ವಿನಂತಿಸಲಾಯಿತು. ಏಕೆಂದರೆ ಈಗ ಹೆಚ್ಚಿನ ಹಣವನ್ನು ಖರ್ಚು ಮಾಡದಿದ್ದರೆ ನಾವು ಈಗಾಗಲೇ ಖರ್ಚು ಮಾಡಿದ್ದೆಲ್ಲವೂ ವ್ಯರ್ಥವಾಗಿ ಹೋಗುತ್ತದೆ. ಈ ಸಂದರ್ಭದಲ್ಲಿಯೂ ಸಹ

ಅದೇ ವಾದವನ್ನೇ ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ನಾನು ಭಾವಿಸುತ್ತೇನೆ. ಮತ್ತು ಶಾಲೆಯನ್ನು ಸೇರಿದ ಪ್ರತಿಯೊಬ್ಬ ಮಗುವೂ ನಾಲ್ಕನೆಯ ತರಗತಿಯನ್ನು ತಲುಪುವಂತೆ ಮಾಡಲು ನಾವು ಸಾಕಷ್ಟು ಹಣವನ್ನು ಖರ್ಚು ಮಾಡದಿದ್ದರೆ ನಾವು ಈಗಾಗಲೇ ಅವನ ಮೇಲೆ ಖರ್ಚು ಮಾಡಿದ್ದು ಯಾವುದೇ ರೀತಿಯಲ್ಲಿ ಪ್ರಯೋಜನಕಾರಿ ಆಗುವುದಿಲ್ಲ. ಮಾನ್ಯರೇ, ಮಾನ್ಯ ಶಿಕ್ಷಣ ಮಂತ್ರಿಗಳ ಲಕ್ಷ್ಯವನ್ನು ಸೆಳೆಯಲು ನಾನೂ ಇಚ್ಛಿಸುವ ಮೂರನೆಯ ವಿಷಯವು ಇದು. ಅಂದರೆ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಈ ಪ್ರಾಂತದಲ್ಲಿ ಶಿಕ್ಷಣಕ್ಕೆ ಹಣಕಾಸನ್ನು ನಾವು ಯಾವ ರೀತಿಯಲ್ಲಿ ಒದಗಿಸಿರುತ್ತೇವೆ ಎಂಬ ಬಗ್ಗೆ ಮಾಹಿತಿಯನ್ನು ಕೊಡುತ್ತದೆ. ಕಲಾ ಮಹಾ ವಿದ್ಯಾಲಯಗಳನ್ನು ನಡೆಸಲು ನಾವು ಮಾಡಲು ಒಟ್ಟು ಖರ್ಚಿನಲ್ಲಿ ಶೇಕಡಾ ೩೬ರಷ್ಟನ್ನು, ಮಾಧ್ಯಮಿಕ ಶಾಲೆಗಳ ಮೇಲೆ ನಾವು ಮಾಡುತ್ತಿರುವ ಒಟ್ಟು ಖರ್ಚಿನಲ್ಲಿ ಶೇಕಡಾ ೩೧ರಷ್ಟನ್ನು, ಮಿಡಲ್ ಸ್ಕೂಲುಗಳಿಗೆ ಸಂಬಂಧಿಸಿದ ಒಟ್ಟು ಖರ್ಚಿನಲ್ಲಿ ಶೇಕಡಾ ೨೬ರಷ್ಟನ್ನು, ಮಿಡಲ್ ಸ್ಕೂಲುಗಳಿಗೆ ಸಂಬಂಧಿಸಿದ ಒಟ್ಟು ಖರ್ಚಿನಲ್ಲಿ ಶೇಕಡಾ ೨೬ರಷ್ಟನ್ನು ಫೀಜುಗಳ ಮೂಲಕ ಪಡೆದುಕೊಳ್ಳಲಾಗುತ್ತಿದೆ. ಮಾನ್ಯರೇ, ಇದು ಶಿಕ್ಷಣವನ್ನು ವ್ಯಾಪಾರವನ್ನಾಗಿ ಮಾಡಿದೆ ಎಂದು ನಾನು ಈಗ ಹೇಳುತ್ತೇನೆ. ಶಿಕ್ಷಣವು ಪ್ರತಿಯೊಬ್ಬನ ಅಳವಿನಲ್ಲಿರುವಂಥ ವಿಷಯವಾಗಿರಬೇಕು. ಶಿಕ್ಷಣ ಇಲಾಖೆಯೂ ಸಹ ಲಾಭಕ್ಕಾಗಿ ನಡೆಸುವ ಇಲಾಖೆಯೆಂದು ಪರಿಗಣಿಸುವಂಥದಲ್ಲ. ಸಾಧ್ಯವಿದ್ದ ಎಲ್ಲ ವಿಧಾನಗಳಿಂದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ಮಾಡಬೇಕು. ಈ ವಾದವನ್ನು ನಾನು ಮುಂದಿಡುತ್ತಿರುವುದಕ್ಕೆ ಕಾರಣವೆಂದರೆ ಸಮಾಜದ ಕೆಳವರ್ಗದವರು ಹೈಸ್ಕೂಲಿನಲ್ಲಿ, ಮಿಡಲ್ ಸ್ಕೂಲುಗಳಲ್ಲಿ ಮತ್ತು ಮಹಾವಿದ್ಯಾಲಯಗಳಲ್ಲಿ ಈಗೀಗ ಪ್ರವೇಶ ಪಡೆಯು–ತ್ತಿರುತ್ತಾರೆ. ಕಾರಣ ಇಲಾಖೆಯ ನೀತಿಯು ಉಚ್ಚ ಶಿಕ್ಷಣವು ಕೆಳವರ್ಗದವರಿಗೆ ಸಾಧ್ಯವಿದ್ದಷ್ಟು ಕಡಿಮೆ ಖರ್ಚಿನಲ್ಲಿ ಲಭ್ಯವಾಗುವಂತೆ ಮಾಡುವುದಾಗಬೇಕು. ಆದಕಾರಣ ಗೌರವಾನ್ವಿತ ಶಿಕ್ಷಣ ಮಂತ್ರಿಗಳ ಲಕ್ಷ್ಯವನ್ನು ಈ ಪ್ರಾಂತದ ಶಿಕ್ಷಣದ ಆಡಳಿತದಲ್ಲಿ ಎದ್ದು ಕಾಣುತ್ತಿರುವ ಈ ಸಂಗತಿಯ ಕಡೆಗೆ ಸೆಳೆಯಲು ಇಚ್ಛಿಸುತ್ತೇನೆ.

ಮಾನ್ಯರೇ, ನನ್ನ ಸ್ನೇಹಿತರಾದ ಗೌರವಾನ್ವಿತ ಶಿಕ್ಷಣ ಮಂತ್ರಿಗಳ ಲಕ್ಷ್ಯವನ್ನು ಸೆಳೆಯಲು ನಾನು ಬಯಸುವ ನಾಲ್ಕನೆಯ ಅಂಶವೆಂದರೆ ಈ ಪ್ರಾಂತದಲ್ಲಿ ಬೇರೆ ಬೇರೆ ವರ್ಗಗಳವರ ಶಿಕ್ಷಣದ ಪ್ರಗತಿಯಲ್ಲಿ ಮುಂದುವರೆದಿರುವಲ್ಲಿ ಇರುವ ಅಸಮಾನತೆ. ಆದರೆ ಆ ವಿಷಯಕ್ಕೆ ಹೋಗುವ ಮುನ್ನ ಒಂದು ಸಂಗತಿಯನ್ನು ವಿವರಿಸಲು ನಾನು ಪ್ರಯತ್ನಿಸುತ್ತಿದ್ದೇನೆ. ಶಿಕ್ಷಣಕ್ಕೆ ಸಂಬಂಧಿಸಿದ ಬೇರೆಬೇರೆ ಕೋಮಿನವರು ಮುಂದುವರೆದಿರುವುದನ್ನು ಹೋಲಿಸಿ ನೋಡುವ ಉದ್ದೇಶಕ್ಕಾಗಿ ಪ್ರಾಂತದ ಜನಗಣತಿಯ ವರದಿಯು ಒಟ್ಟು ಜನತೆಯನ್ನು ನಾಲ್ಕು ವರ್ಗಗಳಲ್ಲಿ ವಿಭಜಿಸಿದೆ. ಮೊದಲನೆಯ ವರ್ಗವನ್ನು "ಮುಂದುವರೆದ ಹಿಂದುಗಳು" ಎಂದು ಕರೆಯಲಾಗಿದೆ. ಎರಡನೆಯ ವರ್ಗವನ್ನು "ಮಧ್ಯಮ ವರ್ಗದ ಹಿಂದುಗಳು" ಎಂದು ಕರೆಯಲಾಗಿದೆ. ಈ ವರ್ಗವು ರಾಜಕೀಯ ಉದ್ದೇಶಗಳಿಗಾಗಿ "ಬ್ರಾಹ್ಮಣೇತರರು" (Non-Brahmins) ಎಂದು ಹೆಸರಿಸಲಾಗಿರುವ ಜನತೆಯನ್ನೂ ಅಂದರೆ ಮರಾಠಾ ಮತ್ತು ಸಂಬಂಧಿಸಿದವರನ್ನು ಒಳಗೊಳ್ಳುತ್ತದೆ.

ಮೂರನೆಯ ವರ್ಗವೊಂದಿದೆ. ಅದನ್ನು ಹಿಂದುಳಿದ ವರ್ಗವೆಂದು ಕರೆಯಲಾಗುತ್ತಿದೆ. ಅದು ದಲಿತ ವರ್ಗಗಳನ್ನು, ಗುಡ್ಡಗಾಡು ಜನಾಂಗಗಳನ್ನು ಮತ್ತು ಅಪರಾಧೀ ಜನಾಂಗಗಳನ್ನೂ ಒಳಗೊಳ್ಳುತ್ತದೆ. ನಾಲ್ಕನೆಯ ವರ್ಗವೂ ಇದೆ. ಅದು ಮಹಮಡನ್ನರನ್ನು ಒಳಗೊಳ್ಳುತ್ತದೆ. ಈ ವಿಭಾಗಗಳನ್ನು

ಮನಸ್ಸಿನಲ್ಲಿಟ್ಟುಕೊಂಡು ಗಮನಿಸಿದಾಗ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಈ ಬೇರೆ ಬೇರೆ ಕೋಮುಗಳವರು ಶಿಕ್ಷಣಪಡೆಯುವಲ್ಲಿ ಸಾಧಿಸಿದ ಪ್ರಗತಿಯನ್ನು ಹೋಲಿಸಿ ನೋಡಿದಾಗ ಅತೀ ಹೆಚ್ಚಿನ ರೀತಿಯ ಅಸಮಾನತೆ ಕಂಡುಬರುತ್ತದೆ. ಈ ವರ್ಗಗಳ ಜನತೆಯನ್ನು ಅವರ ಜನಸಂಖ್ಯೆಯ ಆಧಾರದ ಮೇಲೆ ಅವರಿಗಿರುವ ಸ್ಥಾನವನ್ನು ಮತ್ತು ಅವರು ಶಿಕ್ಷಣದಲ್ಲಿ ಪಡೆದ ಪ್ರಗತಿಯ ಆಧಾರದ ಮೇಲಿನ ಅವರ ಸ್ಥಾನವನ್ನು ಹೋಲಿಸಿ ನೋಡಿದಾಗ ನಮಗೆ ಕಂಡುಬರುವುದು ಏನು? ಮಧ್ಯಮ ವರ್ಗದವರು ಅಂದರೆ "ಬ್ರಾಹ್ಮಣೇತರರು" ಜನಸಂಖ್ಯೆಯ ಆಧಾರದ ಮೇಲೆ ಪ್ರಥಮ ಸ್ಥಾನದಲ್ಲಿ ಇರುತ್ತಾರಾದರೂ ಮಹಾ ವಿದ್ಯಾಲಯ ಶಿಕ್ಷಣದಲ್ಲಿ ಮೂರನೆಯ ಸ್ಥಾನದಲ್ಲಿ, ಮಾಧ್ಯಮಿಕ ಶಿಕ್ಷಣದಲ್ಲಿ ಮೂರನೆಯ ಸ್ಥಾನ ದಲ್ಲಿ ಮತ್ತು ಪ್ರಾಥಮಿಕ ಶಿಕ್ಷಣದಲ್ಲೂ ಮೂರನೆಯ ಸ್ಥಾನದಲ್ಲಿ ಇರುತ್ತಾರೆ. ಜನಸಂಖ್ಯೆಯ ಆಧಾರದ ಮೇಲೆ ಎರಡನೆಯ ಸ್ಥಾನದಲ್ಲಿರುವ ಹಿಂದುಳಿದ ವರ್ಗದವರು ಕಾಲೇಜ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಲ್ಕನೆಯ ಸ್ಥಾನದಲ್ಲಿ ಇರುತ್ತಾರೆ. ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಲ್ಕನೆಯ ಸ್ಥಾನದಲ್ಲಿ ಇರುತ್ತಾರೆ. ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಲ್ಕನೆಯ ಸ್ಥಾನದಲ್ಲಿ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಲ್ಕನೆಯ ಸ್ಥಾನದಲ್ಲಿ ಇರುತ್ತಾರೆ. ಜನಸಂಖ್ಯೆಯ ಆಧಾರದ ಮೇಲೆ ಮೂರನೆಯ ಸ್ಥಾನದಲ್ಲಿರುವ ಮೊಹಮಡನ್ನರು ಕಾಲೇಜು ಶಿಕ್ಷಣದಲ್ಲಿ ಎರಡನೆಯ ಸ್ಥಾನದಲ್ಲಿ, ಮಾಧ್ಯಮಿಕ ಶಿಕ್ಷಣ ದಲ್ಲಿ ಎರಡನೆಯ ಸ್ಥಾನದಲ್ಲಿ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎರಡನೆಯ ಸ್ಥಾನದಲ್ಲಿ ಇರುತ್ತಾರೆ. ಮುಂದುವರೆದ ಹಿಂದುಗಳ ವರ್ಗದವರು ಜನಸಂಖ್ಯೆಯ ಆಧಾರದ ಮೇಲೆ ನಾಲ್ಕನೆಯ ಸ್ಥಾನದಲ್ಲಿರುವವರು ಕಾಲೇಜ್ ಶಿಕ್ಷಣದಲ್ಲಿ ಮೊದಲಿನ ಸ್ಥಾನದಲ್ಲಿ, ಮಾಧ್ಯಮಿಕ ಶಿಕ್ಷಣದಲ್ಲಿ ಮೊದಲನೆಯ ಸ್ಥಾನದಲ್ಲಿ ಮತ್ತು ಪ್ರಾಥಮಿಕ ಶಿಕ್ಷಣದಲ್ಲಿಯೂ ಮೊದಲನೆಯ ಸ್ಥಾನದಲ್ಲಿ ಇರುತ್ತಾರೆ. ಬೇರೆ ಬೇರೆ ಕೋಮುಗಳವರ ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿಯಲ್ಲಿರುವ ಅಸಮಾನತೆಯ ಬಗ್ಗೆ ಒಂದು ಕಲ್ಪನೆಯನ್ನು ಕೊಟ್ಟಿರುತ್ತೇನೆ. ಆದರೆ ಈ ಅಂಕಿ ಸಂಖ್ಯೆಗಳು ನಮ್ಮ ಪ್ರಾಂತದಲ್ಲಿನ ಬೇರೆ ಬೇರೆ ಕೋಮಿನವರು ಶಿಕ್ಷಣದಲ್ಲಿ ಸಾಧಿಸಿದ ಪ್ರಗತಿಯಲ್ಲಿನ ಅಸಮಾನತೆಯ ಆಳವನ್ನು ತೋರಿಸುವುದಿಲ್ಲ. ಆದುದರಿಂದ ಗೌರ ವಾನ್ವಿತ ಶಿಕ್ಷಣ ಮಂತ್ರಿಗಳಿಗೆ ಅವರ ತೀವ್ರ ಪರ್ಯಾಲೋಚನೆಗಾಗಿ ಕೆಳಗಿನ ಅಂಕಿ ಸಂಖ್ಯೆಗಳನ್ನು ಹಾಜರು ಪಡಿಸುತ್ತೇನೆ.

**ಮೊದಲಿಗೆ ಪ್ರಾಥಮಿಕ ಶಿಕ್ಷಣ:**

| | | | |
|---|---|---|---|
| ಮುಂದುವರಿದ ಹಿಂದೂಗಳು | ಅವರ ೧೦೦೦ ಜನಸಂಖ್ಯೆಗೆ | ೧೯೯ | ವಿದ್ಯಾರ್ಥಿಗಳು |
| ಮೊಹಮಡನ್ನರು | ಅವರ ೧೦೦೦ ಜನಸಂಖ್ಯೆಗೆ | ೯೨ | ವಿದ್ಯಾರ್ಥಿಗಳು |
| ಮಧ್ಯಮ ವರ್ಗದವರು | ಅವರ ೧೦೦೦ ಜನಸಂಖ್ಯೆಗೆ | ೩೮ | ವಿದ್ಯಾರ್ಥಿಗಳು |
| ಹಿಂದುಳಿದ ವರ್ಗದವರು | ಅವರ ೧೦೦೦ ಜನಸಂಖ್ಯೆಗೆ | ೧೮ | ವಿದ್ಯಾರ್ಥಿಗಳು |

ಇದು ಪ್ರಾಥಮಿಕ ಶಿಕ್ಷಣದ ಸ್ಥಿತಿ

**ಮಾಧ್ಯಮಿಕ ಶಿಕ್ಷಣ**

| | | |
|---|---|---|
| ಮುಂದುವರಿದ ಹಿಂದುಗಳು | ಅವರ ಒಂದು ಲಕ್ಷ ಜನಸಂಖ್ಯೆಗೆ | ೩೦೦೦ |
| ಮೊಹಮಡನ್ನರು | ಅವರ ಒಂದು ಲಕ್ಷ ಜನಸಂಖ್ಯೆಗೆ | ೫೦೦ |
| ಮಧ್ಯಮ ವರ್ಗದವರು | ಅವರ ಒಂದು ಲಕ್ಷ ಜನಸಂಖ್ಯೆಗೆ | ೧೪೦ |
| ಹಿಂದುಳಿದ ವರ್ಗದವರು | ಅವರ ಒಂದು ಲಕ್ಷ ಜನಸಂಖ್ಯೆಗೆ | ೧೪ |

ಇದು ಮಾಧ್ಯಮಿಕ ಶಿಕ್ಷಣದ ಸ್ಥಿತಿ

**ಕಾಲೇಜ್ ಶಿಕ್ಷಣ**

| | | |
|---|---|---|
| ಮುಂದುವರಿದ ಹಿಂದುಗಳು | ಅವರ ಎರಡು ಲಕ್ಷ ಜನಸಂಖ್ಯೆಗೆ | ೧೦೦೦ |
| ಮೊಹಮಡನ್ನರು | ಅವರ ಎರಡು ಲಕ್ಷ ಜನಸಂಖ್ಯೆಗೆ | ೫೨ |
| ಮಧ್ಯಮ ವರ್ಗದವರು | ಅವರ ಎರಡು ಲಕ್ಷ ಜನಸಂಖ್ಯೆಗೆ | ೧೪ |
| ಹಿಂದುಳಿದ ವರ್ಗದವರು | ಇಲ್ಲ (ಇದ್ದರೆ ಒಬ್ಬ ಇರಬಹುದು) | |

ಕಾಲೇಜ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗದವರ ಸ್ಥಿತಿ ಇದು. ಅದೂ ಅವರ ಜನಸಂಖ್ಯೆ ಅಜಮಾಸು ಮೂವತ್ತ ಏಳೂವರೆ ಲಕ್ಷದಷ್ಟಿರುವಾಗ ಇದು ಅವರ ಸ್ಥಿತಿ. ಮಾನ್ಯರೇ ಈ ಅಂಕಿ ಸಂಖ್ಯೆಗಳು ಎರಡು ಸಂಗತಿಗಳನ್ನು ನಿರ್ಣಾಯಕವಾಗಿ ಹೇಳುತ್ತಿವೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಬೇರೆ ಬೇರೆ ಕೋಮಿನವರು ಸರಿಸಮಾನರಾಗಿ ಇಲ್ಲ. ಅವುಗಳ ಇನ್ನೊಂದು ಸಂಗತಿಯನ್ನೂ ಸ್ಪಷ್ಟಪಡಿಸುತ್ತೇನೆ. ನಾನು ಈ ಗೌರವಾನ್ವಿತ ಸದನದ ಲಕ್ಷ್ಯವನ್ನು ಈ ಬಗ್ಗೆ ಸೆಳೆಯಲು ಇಚ್ಛಿಸುತ್ತೇನೆ. ಅದೆಂದರೆ ಮೊಹಮಡನ್ನರು ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಮುಂದುವರೆದಿರುತ್ತಾರೆ ಎಂದರಿವಾಯಿತು. ಮಾನ್ಯರೆ, ಇದು ಕಾಲ್ಪನಿಕವಾದ ಹೇಳಿಕೆ ಅಲ್ಲ. ಗೌರವಾನ್ವಿತ ಈ ಸದನಕ್ಕೆ ನಾನು ಕೊಟ್ಟಿರುವ ಈ ಅಂಕಿಸಂಖ್ಯೆಗಳು ಮುಂಬೈ ಸಾರ್ವಜನಿಕ ವಿದ್ಯಾ ಇಲಾಖೆಯ ನಿರ್ದೇಶಕರು ೧೯೨೩–೨೪ನೇ ಸಾಲಿಗೆ ಕೊಟ್ಟಿರುವ ವರದಿಯಲ್ಲಿನವು. ಮತ್ತು ಈ ವಾದದ ಸಮರ್ಥನೆಗಾಗಿ ಸರ್ ಇಬ್ರಾಹಿಮ್ ರಹೀಮತುಲ್ಲಾ ಅವರಂಥವರ ಅಭಿಪ್ರಾಯವನ್ನು ಆಧರಿಸಿದ್ದೇನೆ. ಅವರು ಮೊಹಮಡನ್ನರ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಇದೇ ಹೇಳಿಕೆಯನ್ನು ಕೊಟ್ಟಿರುತ್ತಾರೆ. ನಾನು ಈ ಹೇಳಿಕೆಯನ್ನು ಮೊಹಮಡನ್ನರ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯದಲ್ಲಿ ಸರಕಾರವು ಮಾಡಿದ ಪ್ರಯತ್ನಗಳಿಗೆ ಹೊಟ್ಟೆಕಿಚ್ಚಿನಿಂದ ಅಥವಾ ದ್ವೇಷದಿಂದ ಮಾಡುತ್ತಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಈ ದೇಶವು ಬೇರೆ ಬೇರೆ ಕೋಮುಗಳನ್ನು ಹೊಂದಿರುವುದನ್ನು ಒತ್ತುಕೊಟ್ಟು ಹೇಳುತ್ತೇನೆ. ಈ ಎಲ್ಲ ಕೋಮುಗಳೂ ತಮ್ಮ ಸ್ಥಾನಮಾನದಲ್ಲಿ ಮತ್ತು ಬೆಳವಣಿಗೆಯಲ್ಲಿ ಸರಿಸಮಾನವಾಗುವುದಿಲ್ಲ. ಅವುಗಳನ್ನು ಸಮಾನತೆಯ ಸ್ಥಾನಕ್ಕೆ ತರಬೇಕಾದರೆ ಅನುಸರಿಸಬೇಕಾದ ಒಂದೇ ಒಂದು ಪರಿಹಾರೋಪಾಯವೆಂದರೆ ಅಸಮಾನತೆಯ ತತ್ವವನ್ನು ಅಳವಡಿಸಿಕೊಳ್ಳುವುದು ಮತ್ತು ಕೆಳಮಟ್ಟದಲ್ಲಿದ್ದವರಿಗೆ ವಿಶೇಷ ಪ್ರೋತ್ಸಾಹವನ್ನು ಒದಗಿಸುವುದೂ ಆಗಿರುತ್ತದೆ. ಇದನ್ನು ವಿರೋಧಿಸುವವರು ಮತ್ತು ಸಮಾನತಾ ಸಿದ್ಧಾಂತಕ್ಕೆ ಅಂಟಿಕೊಂಡಿರಬೇಕೆನ್ನುವವರೂ ಕೆಲವರು ಇರುವುದು ನನಗೆ ತಿಳಿದಿದೆ. ಆದರೆ ಮೊಹಮಡನ್ನರಿಗೆ ಈ ತತ್ವವನ್ನು ಅನ್ವಯಿಸುವಲ್ಲಿ ಸರಕಾರವು ಒಳ್ಳೆಯದನ್ನೇ ಮಾಡಿದೆ. ಏಕೆಂದರೆ ಅಸಮಾನ ವ್ಯಕ್ತಿಗಳನ್ನು ಸಮಾನತೆಯ ಆಧಾರದ ಮೇಲೆ ನಡೆಸಿಕೊಳ್ಳುವುದು ಉಪೇಕ್ಷೆಗೆ ಮತ್ತು ನಿರ್ಲಕ್ಷ್ಯಕ್ಕೆ ಮತ್ತೊಂದು ಹೆಸರು ಎಂಬುದು ನನ್ನ ಪ್ರಾಮಾಣಿಕ ನಂಬಿಕೆಯಾಗಿದೆ. ಈ ತತ್ವವನ್ನು ಹಿಂದುಳಿದ ವರ್ಗ ಗಳವರಿಗೆ ಅನ್ವಯಿಸುವುದು ಯುಕ್ತವಾಗಿದೆಯೆಂದು ಸರಕಾರವು ಇನ್ನೂ ಭಾವಿಸಿಲ್ಲ ಅನ್ನುವುದೊಂದೇ ನನ್ನ ತಕರಾರು ಆಗಿರುತ್ತದೆ. ಆರ್ಥಿಕವಾಗಿ ಹೇಳಬೇಕೆಂದರೆ ಹಿಂದುಳಿದ ವರ್ಗದವರಿಗಿರುವ ಅಡ್ಡಿ ಆತಂಕಗಳು ಬೇರೆ ಯಾವ ಕೋಮುಗಳವರಿಗೂ ಇಲ್ಲ. ಆದುದರಿಂದ ವಿಶೇಷ ಪ್ರೋತ್ಸಾಹ ತೋರುವ ತತ್ವವನ್ನು ಅವರಿಗೆ ಅನ್ವಯಿಸಬೇಕೆಂದು ನಾನು ಭಾವಿಸುತ್ತೇನೆ. ಮೊಹಮಡನ್ನರಿಗಿಂತ ಅವರ ಪರಿಸ್ಥಿತಿಯು ತುಂಬಾ ಕೆಳಮಟ್ಟದ್ದಾಗಿದೆ ಎಂಬುದನ್ನು ನಾನು ತೋರಿಸಿದ್ದೇನೆ ಮತ್ತು ವಿಶೇಷ ಅನುಗ್ರಹಕ್ಕೆ

ಯೋಗ್ಯರಾದವರಿಗೂ, ಅದರ ಅಗತ್ಯವಿರುವವರಿಗೂ ಅದನ್ನು ಒದಗಿಸುವುದಾದರೆ, ಆಗ ಹಿಂದುಳಿದ ವರ್ಗದವರು, ಮೊಹಮಡನ್ನರಿಗಿಂತ ಹೆಚ್ಚಿನ ರೀತಿಯಲ್ಲಿ ಸರಕಾರದ ಅಧಿಕ ಪ್ರೋತ್ಸಾಹಕ್ಕೆ ಅರ್ಹರಾಗಿರುತ್ತಾರೆ ಎಂಬುದೇ ನನ್ನ ವಾದವಾಗಿರುತ್ತದೆ. ಈ ಪ್ರಶ್ನೆಯನ್ನು ಈ ಸದನದ ಮುಂದೆ ವಿಶೇಷವಾಗಿ ಇಡಲು ಇಚ್ಛಿಸುತ್ತೇನೆ. ಮೊಹಮಡನ್ ಕೋಮಿನವರ ಉದ್ಧಾರಕ್ಕಾಗಿ ಅಳವಡಿಸಿದ ವಿಧಾನ ಮತ್ತು ತತ್ವಗಳನ್ನೇ ಹಿಂದುಳಿದ ವರ್ಗಗಳವರ ಉದ್ಧಾರಕ್ಕಾಗಿಯೂ ಅಳವಡಿಸಬೇಕೆಂದು ನಾನು ಗೌರವಾನ್ವಿತ ಶಿಕ್ಷಣ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ. ೧೮೮೨ರ ಶಿಕ್ಷಣ ಆಯೋಗದ ವರದಿಯ ಮೇಲೆ ಭಾರತ ಸರಕಾರವು ೧೮೮೫ರಲ್ಲಿ ಹೊರಡಿಸಿದ ಸೂಚನೆಗಳನ್ನು ಗೌರವಾನ್ವಿತ ಮಂತ್ರಿಗಳಿಗೆ ಉಲ್ಲೇಖಿಸುತ್ತೇನೆ. ಮೊಹಮಡನ್ ಕೋಮಿನವರ ಶಿಕ್ಷಣದ ಸುಧಾರಣೆಗಾಗಿ ಹಲವಾರು ಪ್ರಸ್ತಾಪಗಳನ್ನು ಮಾಡಲಾಗಿತ್ತು. ಆದಾಗ್ಯೂ ಭಾರತ ಸರ್ಕಾರದವರು ಮೊಹಮಡನ್ ಕೋಮಿನವರ ಶೈಕ್ಷಣಿಕ ಬೇಡಿಕೆಗಳ ಪರಿಶೀಲನೆಗಾಗಿ ವಿಶೇಷ ತನಿಖಾ ಸಿಬ್ಬಂದಿಯನ್ನು ನೇಮಕ ಮಾಡುವ ಪ್ರಸ್ತಾಪದ ಮೇಲೆ ಮತ್ತು ಶಿಕ್ಷಣದ ಅವಶ್ಯಕತೆಯನ್ನು ಅದಕ್ಕೆ ಒದಗಿಸಿಕೊಡುವುದಕ್ಕೆ ಹೆಚ್ಚು ಒತ್ತು ಕೊಟ್ಟಿತು. ದಲಿತ ವರ್ಗದವರ ಶಿಕ್ಷಣದ ಬೆಳವಣಿಗೆಯೂ ಸಹ ಅಷ್ಟೇ ತುರ್ತಿನದಾಗಿದ್ದು ವಿಶೇಷ ತನಿಖಾ ಸಿಬ್ಬಂದಿಯನ್ನು ನೇಮಕ ಮಾಡುವ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಮಾನ್ಯರೆ, ಪ್ರಾಥಮಿಕ ಶಿಕ್ಷಣ ಅಧಿನಿಯಮವು ಒಂದು ದೊಡ್ಡ ತಪ್ಪು ಎಂದು ನಾನು ಹೇಳಬಹುದು. ಗೌರವಾನ್ವಿತ ಸದಸ್ಯರು ಇದನ್ನು ಒಪ್ಪಲಿಕ್ಕಿಲ್ಲ. ಆದರೆ ಅದು ತಪ್ಪು ಎಂದೇ ನಾನು ಹೇಳುತ್ತೇನೆ. ಅದು ದೊಡ್ಡ ತಪ್ಪು ಎಂದು ಹೇಳುತ್ತೇನೆ. ಏಕೆಂದರೆ ಶಿಕ್ಷಣವು ಬಹುದೊಡ್ಡ ಅವಶ್ಯಕತೆ ಅನ್ನುವುದನ್ನು ತಿಳಿದುಕೊಳ್ಳುವಷ್ಟು ಬುದ್ಧಿಶಾಲಿಗಳಾಗಿರದವರ ಕೈಗಳಿಗೆ ಶಿಕ್ಷಣದ ಹೊಣೆಯನ್ನು ವರ್ಗಾಯಿಸಲಾಗಿದೆ. ಇದು ತಪ್ಪು. ಶಿಕ್ಷಣದ ಅವಶ್ಯಕತೆಯನ್ನು ಅರಿತುಕೊಳ್ಳುವವರು ಯಾರಾದರೂ ಇದ್ದರೆ ಅವರು ಈ ಪರಿಷತ್ತಿನಲ್ಲಿ ಇಲ್ಲ. ಸ್ಥಾನಿಕ ಮಂಡಳಿಯ ಸದಸ್ಯರು ಶಿಕ್ಷಣವು ಒಂದು ಅವಶ್ಯಕತೆ ಅನ್ನುವುದನ್ನು ಅರಿತುಕೊಳ್ಳುವಷ್ಟು ಸುಶಿಕ್ಷಿತರಲ್ಲ. ಆದುದರಿಂದ ಶಿಕ್ಷಣದ ಬಗ್ಗೆ ಯಾವುದೇ ಭಾವನೆ ಇಲ್ಲದವರ ಕೈಗಳಲ್ಲಿ ಶಿಕ್ಷಣದ ಹೊಣೆಗಾರಿಕೆಯನ್ನು ವರ್ಗಾಯಿಸಿ ಈ ಪರಿಷತ್ತು ದೊಡ್ಡ ತಪ್ಪನ್ನು ಮಾಡಿದೆ. ಪುನಃ ಹೇಳಬೇಕೆಂದರೆ ಶಿಕ್ಷಣವನ್ನು ಸ್ಥಾನಿಕ ಮಂಡಳಗಳಿಗೆ ವರ್ಗಾಯಿಸಿದ್ದೂ ತಪ್ಪು. ಏಕೆಂದರೆ ಆ ಹೊಣೆಗಾರಿಕೆಯ ಭಾರವನ್ನು ಹೊರಲು ಅಸಮರ್ಥರಾಗಿರುವವರ ಮೇಲೆ ಆ ಹೊಣೆಯನ್ನು ವರ್ಗಾಯಿಸಲಾಗಿದೆ. ಮಾನ್ಯರೇ, ಕೆಳದರ್ಜೆಯ ಜನತೆಯ ಶಿಕ್ಷಣವು, ನಮಗೆಲ್ಲ ತಿಳಿದಿರುವಂತೆ, ತುಂಬಾ ಹೆಚ್ಚಿನ ವೆಚ್ಚದ್ದು ಆಗಿರುತ್ತದೆ ಮತ್ತು ಈ ಭಾರವನ್ನು ಹೊರಲು ಸಮರ್ಥರಾದವರು ಯಾರಾದರೂ ಇದ್ದರೆ ಅದು ಹದಿನೈದೂವರೆ ಕೋಟಿ ರೂಪಾಯಿಗಳ ಆದಾಯವಿರುವ ಈ ಪರಿಷತ್ತು ಮಾತ್ರವೇ. ಕೆಲವೇ ಲಕ್ಷದ ಅಲ್ಪ ಆದಾಯವಿರುವ ಸ್ಥಾನಿಕ ಮಂಡಳಿಗಳು ಅಲ್ಲ. ಮಾನ್ಯರೇ, ಈ ಪರಿಷತ್ತು ಶಿಕ್ಷಣವನ್ನು ಸ್ಥಾನಿಕ ಮಂಡಳಿಗಳಿಗೆ ವರ್ಗಾಯಿಸಿ ಕೆಳದರ್ಜೆಯ ಜನತೆಯ ಶಿಕ್ಷಣದ ಪ್ರಸಾರವನ್ನು ಅನಿಯಮಿತ ಕಾಲದವರೆಗೆ ಮುಂದೂಡಿದಂತಾಗಿದೆ ಮತ್ತು ಹಾಗೆ ಮಾಡಿ ದೊಡ್ಡ ತಪ್ಪನ್ನು ಮಾಡಿದೆ. ಆದರೆ ಮಾನ್ಯರೇ, ಇದು ನಾನು ಹೇಳಬೇಕೆಂದಿರುವುದಕ್ಕೆ ಪೀಠಿಕೆ ಮಾತ್ರವೇ ಆಗಿದೆ. ಈ ತಪ್ಪಿನಿಂದಾಗಿ ಅತ್ಯಂತ ತೀವ್ರವಾದ ಅನ್ಯಾಯಕ್ಕೊಳಗಾದವರೆಂದರೆ ದಲಿತ ವರ್ಗದವರು. ಸ್ಥಾನಿಕ ಸ್ವಯಮಾಡಳಿತ ಸರಕಾರದ ಇಲಾಖೆಯ ಮಂತ್ರಿಗಳಿಗೆ ಗೌರವಪೂರ್ವಕವಾಗಿ ಆದರೆ ಬಲವಂತವಾಗಿ ಹೇಳುವುದೇನೆಂದರೆ ಸ್ಥಾನಿಕ ಮಂಡಳ ರಚನೆಯ ಭಾವನೆಯು ವಸ್ತು ಸಂಗ್ರಹಾಲಯದಲ್ಲಿರುವ ದುಡ್ಡುಗಳಿಸುವ ಮನೋರಂಜನಾ ಮಳಿಗೆಗಳನ್ನು ಅಂದರೆ ಅಲ್ಲಿ ಅದನ್ನು ನೋಡಿಕೊಳ್ಳುವ ಕ್ಯುರೇಟರ್‌ನು ಪ್ರತಿಯೊಂದು ವಿಶಿಷ್ಟ ಜಾತಿಗೆ ಬೇರೆ ಬೇರೆ

ಸ್ಥಳಾವಕಾಶ ಒದಗಿಸುವಂತೆ ಇದೆ. ಮಾನ್ಯರೇ, ಪ್ರತಿಯೊಂದು ಸ್ಥಾನಿಕ ಮಂಡಳದಲ್ಲಿ ದಲಿತ ವರ್ಗದ ಒಬ್ಬನೇ ಒಬ್ಬ ಪ್ರತಿನಧಿಗೆ ಅವಕಾಶ ಕೊಡಲಾಗಿದೆ. ಈ ವರ್ಗದವರ ಒಬ್ಬನೇ ಒಬ್ಬ ಪ್ರತಿನಿಧಿ ಇರುವುದರ ಉಪಯೋಗವೇನು? ನನಗೆ ಅದು ಅರ್ಥವಾಗುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಸ್ಥಾನಿಕ ಮಂಡಳದಲ್ಲಿನ ದಲಿತ ವರ್ಗಗಳ ಪ್ರತಿನಿಧಿಯ ನೇಮಕಾತಿಯ ದಲಿತ ವರ್ಗದವರ ಹಿತಾಸಕ್ತಿಗೆ ಅಗತ್ಯವಾದ ನೀತಿಯನ್ನು ಒತ್ತಾಯಿಸುವ ಉದ್ದೇಶದಿಂದ ಮಾಡಿದ್ದರೂ, ಈಗ ಅದು ವ್ಯರ್ಥವಾಗುತ್ತದೆ. ಏಕೆಂದರೆ ಹತ್ತು ಅಥವಾ ಹನ್ನೆರಡು ಸದಸ್ಯರಿರುವ ಮಂಡಳದಲ್ಲಿ ಅವನು ತುಂಬಾ ನಿಸ್ಸಹಾಯಕ ಸ್ಥಿತಿಯಲ್ಲಿರುತ್ತಾನೆ ಎಂದು ಈ ಪ್ರಾಂತದ ಎಲ್ಲ ಭಾಗಗಳಿಂದಲೂ ದೂರುಗಳು ಕೇಳಿಬರುತ್ತವೆ. ಬೆಳವಣಿಗೆಗಾಗಿ ಮತ್ತು ಉತ್ತಮ ಸ್ಥಿತಿಗಾಗಿ ಅವರಿಗೆ ಇರುವ ಆಶೆ ಆಕಾಂಕ್ಷೆಗಳನ್ನು ಯಾವುದೇ ರೀತಿಯಲ್ಲಿ ಹಂಚಿಕೊಳ್ಳುವಂಥ ಜನರಿಂದ ಈ ದಲಿತ ವರ್ಗದವರು ಸುತ್ತುವರಿಯಲ್ಪಟ್ಟಿರುತ್ತಾರೆ. ಆದುದರಿಂದ ಈ ಅಗತ್ಯವು ಇನ್ನೂ ಹೆಚ್ಚು ಅವಶ್ಯವಾದುದಾಗಿರುತ್ತದೆ. ತುಂಬಾ ಮಹತ್ವದ ವಿಷಯವಾಗಿರುವ ಶಿಕ್ಷಣದ ಹೊಣೆಯನ್ನು ವಹಿಸಿಕೊಂಡಿರುವ ಸ್ಥಾನಿಕ ಮಂಡಳಗಳು ದಲಿತ ವರ್ಗದವರನ್ನು ನಿರ್ಲಕ್ಷಿಸದಂತೆ ನೋಡಿಕೊಳ್ಳಲು ಈ ಸರಕಾರವು ನೇರವಾಗಿ ತನ್ನ ನಿಯಂತ್ರಣದಲ್ಲೇ ಇರುವ ತನಿಖಾ ಏಜೆನ್ಸಿಯನ್ನು ನೇಮಿಸಬೇಕು.

ದಲಿತ ವರ್ಗದವರ ಬಗ್ಗೆ ನಾನು ಹೇಳಬೇಕೆಂದಿರುವ ಎರಡನೆಯ ವಿಷಯವೆಂದರೆ ಆಯವ್ಯಯ ಪತ್ರದಲ್ಲಿ ನಿರ್ದಿಷ್ಟ ಮೊತ್ತದ ಹಣವನ್ನು ಹಿಂದುಳಿದ ಕೋಮಿನವರ ವಿದ್ಯಾರ್ಥಿ ವೇತನಕ್ಕಾಗಿ ತೆಗದಿಡ ಲಾಗಿರುವುದು ಕಂಡುಬರುತ್ತದೆ. ಮಾನ್ಯರೇ, ಈಗ "ಹಿಂದುಳಿದ ವರ್ಗಗಳು" ಎಂಬ ಪದಗಳು ಅವುಗಳನ್ನು ಆಯವ್ಯಯ ಪತ್ರದಲ್ಲಿ ಬಳಸಿರುವ ರೀತಿಯಲ್ಲಿನ ಒಳ ಅರ್ಥವನ್ನು ನಾನು ತಿಳಿದುಕೊಳ್ಳಲಾರದವನಾಗಿದ್ದೇನೆ. ಸಾರ್ವಜನಿಕ ಶಿಕ್ಷಣ ನಿರ್ದೇಶಕರು ತಮ್ಮ ವರದಿಯಲ್ಲಿ ಉಪಯೋಗಿಸಿರುವ ವಾಕ್ಯಾವಳಿಯನ್ನೇ ಗೌರವಾನ್ವಿತ ಮಂತ್ರಿಗಳು ಅಳವಡಿಸಿಕೊಳ್ಳಬಹುದಾಗಿತ್ತೆಂದು ನನ್ನ ಬಲವಾದ ಅನಿಸಿಕೆಯಾಗಿತ್ತು ಮತ್ತು "ಹಿಂದುಳಿದ ವರ್ಗಗಳಲ್ಲಿ" ಸೇರಲು ಇಚ್ಛಿಸುವ ಪ್ರತಿಯೊಂದು ಕೋಮಿನವರಿಗೂ ಬೇರೆ ಬೇರೆಯಾಗಿ ನಿರ್ದಿಷ್ಟ ಮೊತ್ತವನ್ನು ತೆಗೆದಿಡಲಿ ಎಂದೂ ನಾನು ಪ್ರಬಲವಾಗಿ ಪ್ರತಿಪಾದಿಸುತ್ತೇನೆ. ಹಾಗೆ ಮಾಡಿದರೆ ನಾವು ಮಧ್ಯಮ ವರ್ಗದ ಹಿಂದುಗಳು, ಹಿಂದುಳಿದ ಹಿಂದುಗಳು ಮತ್ತು ಮೊಹಮ್ಮಡನ್ನರು ವರುಷ ವರುಷಕ್ಕೆ ಹೇಗೆ ಪ್ರಗತಿಯನ್ನು ಹೊಂದುತ್ತಾರೆ ಎಂಬುದನ್ನು ತಿಳಿದುಕೊಳ್ಳಬಹುದು. ಈಗ ನಮ್ಮನ್ನು ಒಂದೇ ಗುಂಪಿನಲ್ಲಿ ಸೇರಿಸಲಾಗಿದೆ. ನಮ್ಮನ್ನೆಲ್ಲ ಹಾಗೆ ಒಟ್ಟಾಗಿ ಪರಿಗಣಿಸಲು ವಾಸ್ತವವಾಗಿ ಯಾವುದೇ ಕಾರಣಗಳು ಇಲ್ಲ. ಏಕೆಂದರೆ ನಾವು ಎಷ್ಟೇ ರೀತಿಯಲ್ಲಿ ನಾವೆಲ್ಲ ಒಂದು ಎಂದು ಹೇಳಲು ಇಚ್ಛಿಸಿದಾಗ್ಯೂ ಸಹ ನಾವು ನಿಜವಾಗಿಯೂ ಒಬ್ಬರಿಂದೊಬ್ಬರು ಭಿನ್ನವಾಗಿರುತ್ತೇವೆ.

ನಾನು ಒತ್ತಿ ತೋರಿಸಲು ಇಚ್ಛಿಸುವ ಮತ್ತು ಗೌರವಾನ್ವಿತ ಮಂತ್ರಿಗಳು ಅದಕ್ಕೆ ಸಂಪೂರ್ಣ ಗಮನವನ್ನು ಕೊಡುತ್ತಾರೆಂದು ಇಚ್ಛಿಸುವ ಮೂರನೆಯ ಅಂಶವು ದಲಿತ ವರ್ಗದ ಹುಡುಗರಿಗೆ ಶಿಷ್ಯ ವೇತನ ಕೊಡುತ್ತಿರುವ ವಿಧಾನಕ್ಕೆ ಸಂಬಂಧಪಟ್ಟಿರುವುದು ಆಗಿರುತ್ತದೆ. ಯಾವುದೇ ಸಹಾಯವಿಲ್ಲದಿರುವಾಗ ಶಿಷ್ಯವೇತನದ ರೂಪದಲ್ಲಿ ಬರುವ ಸಹಾಯವು ಉತ್ತಮವಾದದ್ದು. ಆದರೆ ನನ್ನ ಸ್ನೇಹಿತರಾದ ಮಾನ್ಯ ಶಿಕ್ಷಣ ಮಂತ್ರಿಗಳು ಇದನ್ನು ತಿಳಿದಿರಲಿ. ಏನೆಂದರೆ ನಾನು ಮಾಡಿದ ವಿಚಾರಣೆಗಳು ಮತ್ತು ನನ್ನ ಅನುಭವವು ಶಿಷ್ಯವೇತನವನ್ನು ಕೊಡುತ್ತಿರುವ ಈ ವಿಧಾನವು ಸಾರ್ವಜನಿಕ ಹಣವನ್ನು ಹಾಳು ಮಾಡುವುದೇ ಆಗಿದೆ ಎಂಬುದನ್ನು ತೋರಿಸುತ್ತದೆ. ದಲಿತ ವರ್ಗದ ತಂದೆ ತಾಯಂದಿರು ತುಂಬಾ ಬಡವರು, ತುಂಬಾ ಅಜ್ಞಾನಿಗಳಾಗಿದ್ದು ಸರಕಾರವು ಕೊಡುವ ಸಹಾಯವು ಮಗುವಿನ ಶಿಕ್ಷಣಕ್ಕಾಗಿ

ಕೊಟ್ಟಿದೆ ಎಂದು ತಿಳಿದುಕೊಳ್ಳಲು ಅಸಮರ್ಥರಾಗಿರುತ್ತಾರೆ. ಈ ಶಿಷ್ಯವೇತನವು ಕುಟುಂಬದ ವೆಚ್ಚಕ್ಕಾಗಿ ಕೊಡಲಾದ ಸಹಾಯಧನವೆಂದು ಆ ತಂದೆ ತಾಯಂದಿರು ತಿಳಿದುಕೊಳ್ಳುತ್ತಾರೆ. ಆ ಹಣವು ಮೂಲ ಉದ್ದೇಶವಾದ ಮಗುವಿನ ಶಿಕ್ಷಣಕ್ಕಾಗಿ ಉಪಯೋಗವಾಗುವುದೇ ಇಲ್ಲ. ಅಂದರೆ ಮಾನ್ಯರೇ, ಎರಡನೆಯದಾಗಿ ಈ ಶಿಷ್ಯ ವೇತನದ ಸಹಾಯದಿಂದ ಆ ಹುಡುಗನು ಎಂದೂ ತನ್ನ ಗುರಿಯನ್ನು ಮುಟ್ಟಲು ಸಮರ್ಥನಾಗುವುದಿಲ್ಲ ಎಂಬುದನ್ನು ನಾನು ಕಂಡುಕೊಂಡಿದ್ದೇನೆ. ಅದಕ್ಕೆ ಹತ್ತು ಹಲವಾರು ಕಾರಣಗಳು ಪ್ರಪ್ರಥಮವಾಗಿ ದಲಿತ ವರ್ಗಗಳ ಮಗುವು ದುಷ್ಟ ಪರಿಸರದಲ್ಲಿ ಬೆಳೆಯುತ್ತಿರುತ್ತಾನೆ.

ಗೌರವಾನ್ವಿತ ಸದಸ್ಯರು: ಅದಕ್ಕೆ ಯಾರು ಹೊಣೆ?

ಡಾ. ಬಿ. ಆರ್. ಅಂಬೇಡ್ಕರ್: ಭಗವಂತನಿಗೆ ಗೊತ್ತು. ಯಾವುದೇ ರೀತಿಯಲ್ಲಿ ಇಚ್ಛಿಸಲಾಗದಂಥ ಪರಿಸ್ಥಿತಿಗಳಲ್ಲಿ ಆತನು ಬೆಳೆಯುತ್ತಾನೆ ಮತ್ತು ಅವನು ಶಿಷ್ಯವೇತನವನ್ನು ಪಡೆದಾಗ ಎಲ್ಲ ತರಹದ ದುಷ್ಟ ಪ್ರಭಾವಗಳಿಗೆ ಸುಲಭವಾಗಿ ಬಲಿಯಾಗುತ್ತಾನೆ. ಉಚಿತ ಮಾರ್ಗದರ್ಶನವಿಲ್ಲದೆ ತನ್ನ ಶಿಕ್ಷಣವನ್ನು ಮುಂದುವರೆಸುವುದನ್ನು ಬಿಟ್ಟುಬಿಡುತ್ತಾನೆ ಮತ್ತು ಆತನ ಮೇಲೆ ಖರ್ಚು ಮಾಡಿದ ಹಣ ನಷ್ಟವೇ ಆಗುತ್ತದೆ. ಕಾರಣ ಗೌರವಾನ್ವಿತ ಮಂತ್ರಿಗಳಿಗೆ ನಾನು ಈ ಕೆಳಗಿನಂತೆ ಹೇಳಬಯಸುತ್ತೇನೆ. ಈ ಹಣವನ್ನು ಅವರ ಹಾಸ್ಟೆಲ್ಲುಗಳನ್ನು ಪ್ರೋತ್ಸಾಹಿಸುವದಕ್ಕೆ ಏಕೆ ಉಪಯೋಗಿಸಬಾರದು? ಇಂಥ ಹಾಸ್ಟೆಲ್ಲುಗಳನ್ನು ಹಿಂದುಳಿದ ವರ್ಗಗಳವರ ಶಿಕ್ಷಣದ ಬೆಳವಣಿಗೆಗಾಗಿ ಸರಕಾರವು ಪ್ರಾರಂಭಿಸಬಹುದು ಅಥವಾ ಖಾಸಗಿ ಯವರು ಪ್ರಾರಂಭಿಸಬಹುದು. ಮಾನ್ಯರೇ, ಇದರಿಂದ ಎರಡುಪಟ್ಟು ಉಳಿತಾಯವಾಗುತ್ತದೆ. ಮೊದಲನೆಯದಾಗಿ, ಹಾಸ್ಟೆಲ್ಲು ದುಷ್ಟ ಪರಿಸರದಿಂದ ಆ ಹುಡುಗನನ್ನು ಹೊರತರುತ್ತದೆ. ಅಲ್ಲಿ ಪರಿಣಾಮ ಕಾರಿಯಾದ ಕಣ್ಗಾವಲು ಇರುತ್ತದೆ. ಹಾಸ್ಟೆಲ್ಲನ್ನು ಖಾಸಗಿ ಏಜೆನ್ಸಿಯವರು ನಡೆಸಿದರೆ ಅದರಿಂದ ಸರಕಾರಕ್ಕೆ ಸ್ವಲ್ಪ ಹಣದ ಉಳಿತಾಯವೂ ಆಗುತ್ತದೆ.

ಮಾನ್ಯರೆ, ನನಗೆ ಲಭ್ಯವಿದ್ದು ಅಲ್ಪಕಾಲದಲ್ಲಿ ತುಂಬಾ ಸಂಕ್ಷಿಪ್ತವಾಗಿ ಮಾಡಲು ಇಚ್ಛಿಸುವ ಮೂರು ಸೂಚನೆಗಳು ಇವಾಗಿವೆ. ನನ್ನ ಗೌರವಾನ್ವಿತ ಸ್ನೇಹಿತರಾದ ಶಿಕ್ಷಣ ಮಂತ್ರಿಯವರು ಅವುಗಳನ್ನು ತುಂಬಾ ಲಕ್ಷ್ಯ ವಹಿಸಿ ಪರ್ಯಾಲೋಚಿಸುತ್ತಾರೆಂದೂ ಮತ್ತು ಅಗತ್ಯವಾದುದನ್ನು ಮಾಡುತ್ತಾರೆಂದೂ ನಾನು ಆಶಿಸುತ್ತೇನೆ.

# ೭

# ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮದ ತಿದ್ದುಪಡಿ ಮಸೂದೆ: ೧*

ಡಾ. ಬಿ. ಆರ್. ಅಂಬೇಡ್ಕರ್: ಸನ್ಮಾನ್ಯ ಅಧ್ಯಕ್ಷರೇ, ಮುಂಬೈ ವಿಶ್ವವಿದ್ಯಾಲಯದ ಗೌರವಾನ್ವಿತ ಸದಸ್ಯರಾದ ನನ್ನ ಸ್ನೇಹಿತರ ಭಾಷಣವನ್ನು ಅತ್ಯಂತ ಆಸಕ್ತಿಯಿಂದ ಲಕ್ಷ್ಯಗೊಟ್ಟು ಕೇಳಿದ್ದೇನೆ. ಅವರು ತಮ್ಮ ಭಾಷಣದಲ್ಲಿ ಸಂಬಂಧಪಟ್ಟ ವಿಷಯದ ಬಗ್ಗೆ ಸಮಗ್ರವಾಗಿ ಪ್ರತಿಪಾದಿಸಿರುತ್ತಾರೆ. ಅದಕ್ಕಾಗಿ ಅವರು ಒಂದು ತಾಸು ಇಪ್ಪತ್ತು ನಿಮಿಷಗಳನ್ನೇ ತೆಗೆದುಕೊಂಡಿದ್ದಾರೆ. ನನಗೆ ಹೇಳುವುದು ಏನೂ ಉಳಿದೇ ಇಲ್ಲ ಎಂಬ ಭಯ ನನಗೆ. ಆದಾಗ್ಯೂ ವಿಶ್ವವಿದ್ಯಾಲಯದ ಪ್ರತಿನಿಧಿಯಾದ ನನ್ನ ಗೌರವಾನ್ವಿತ ಸ್ನೇಹಿತರಾಗಲೀ ಅಥವಾ ನಾವು ಇಂದು ಚರ್ಚಿಸುತ್ತಿರುವ ಮಸೂದೆಯ ಬಗ್ಗೆ ಮಾರ್ಗದರ್ಶನ ಮಾಡಲು ವಿಶೇಷವಾಗಿ ಆಹ್ವಾನಿತರಾಗಿರುವ ನನ್ನ ಗೌರವಾನ್ವಿತ ಸ್ನೇಹಿತರಾದ ಪ್ರೊ. ಹ್ಯಾಮಿಲ್ ಆಗಲೀ ಸುದೈವದಿಂದ ಈ ಸದನದ ಮುಂದೆ ಮಂಡಿಸದೇ ಇರುವ ಒಂದು ಅಭಿಪ್ರಾಯವಿದೆ. ಮಾನ್ಯರೇ ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಮುನ್‌ಷಿ ಅವರು ತಮ್ಮ ಭಾಷಣದ ಬಹುಭಾಗವನ್ನು ಮುಂಬಯಿ ವಿಶ್ವವಿದ್ಯಾಲಯದ ರಚನೆಯ ಬಗ್ಗೆ ಮೀಸಲಿಟ್ಟರು. ಅವರು ಸಿಂಡಿಕೇಟ್, ಸೆನೇಟ್ ಮತ್ತು ಅಕೆಡೆಮಿಕ್ ಕೌನ್ಸಿಲ್ಲುಗಳನ್ನು ಕುರಿತು ಮಸೂದೆಯಲ್ಲಿ ತಿಳಿಸಿರುವುದರ ಬಗ್ಗೆ ತುಂಬಾ ಆತ್ಮೀಯವಾಗಿ ಮಾತನಾಡಿದರು. ವಿಶ್ವವಿದ್ಯಾಲಯದ ಸದಸ್ಯನಾಗುವ ಸೌಭಾಗ್ಯ ನನಗಿಲ್ಲ. ಆದಕಾರಣ ಈ ಮಸೂದೆಯಲ್ಲಿ ಸೇರಿಸಲಾಗಿರುವ ಉಪಬಂಧಗಳು ಈ ಮಸೂದೆಯು ಯಾವ ಪರಿಣಾಮವನ್ನುಂಟುಮಾಡಬೇಕೆಂದು ನಾವೆಲ್ಲ ಇಚ್ಛಿಸುತ್ತೇವೆಯೋ ಅಂಥ ಪರಿಣಾಮಗಳನ್ನುಂಟುಮಾಡುತ್ತದೆಯೋ ಅಥವಾ ಇಲ್ಲವೋ ಎಂದು ಅವರ ಹಾಗೆ ಅಧಿಕಾರವಾಣಿಯಿಂದ ನಾನು ಹೇಳಲಾರೆ. ಆದರೆ ಮಾನ್ಯರೇ, ವಿಶ್ವವಿದ್ಯಾಲಯದ ಸದಸ್ಯರಾದ ನನ್ನ ಗೌರವಾನ್ವಿತ ಸ್ನೇಹಿತರಿಗೆ ಯುಕ್ತ ಗೌರವದಿಂದ ಹೇಳುವುದೇನೆಂದರೆ ನನ್ನ ಗೌರವಾನ್ವಿತ ಸ್ನೇಹಿತರು ಆಶಿಸಿರುವಂತೆ ಈ ಮೂರೂ ಸಂಸ್ಥೆಗಳ ನಡುವಣ ಸಂಬಂಧವನ್ನು ಆ ರೀತಿಯಲ್ಲೇ ಪ್ರತಿಸ್ಥಾಪಿಸುವಲ್ಲಿ ಯಶಸ್ವಿಗಳಾದಾಗ್ಯೂ ನಾವು ಕೊನೆಗೆ ಕೇವಲ ಛಾಯೆಯನ್ನು ಮಾತ್ರವೇ ಪಡೆಯುತ್ತೇವೆಯೇ ಹೊರತು ಮೂಲವಸ್ತುವನ್ನಲ್ಲ ಎಂಬ ಭಯ ನನಗಿದೆ. ಗೌರವಾನ್ವಿತ ಶಿಕ್ಷಣ ಮಂತ್ರಿಯವರನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಿದ್ದರೆ ಈ ಮಸೂದೆಯ ಮುಖ್ಯ ಉದ್ದೇಶವು ಮುಂಬೈ ವಿಶ್ವವಿದ್ಯಾಲಯವನ್ನು ಒಂದು ಉತ್ತಮವಾದ ಬೋಧನಾ ವಿಶ್ವವಿದ್ಯಾಲಯವನ್ನಾಗಿ ಕಟ್ಟುವುದೇ ಆಗಿರುತ್ತದೆ. ಅದು ಈ ಮಸೂದೆಯ ಮುಖ್ಯ ಉದ್ದೇಶಗಳಲ್ಲೊಂದಾಗಿದೆ ಎಂದು ನಾನು ತಿಳಿದಿದ್ದೇನೆ. ಮಾನ್ಯರೇ, ಈಗ ಈ ಮಸೂದೆಯಲ್ಲಿ ಸೇರಿಸಲಾಗಿರುವ ಉಪಬಂಧಗಳ

---

* ಬಿ.ಎಲ್.ಎ. ಡಿಬೇಟ್ಸ್, ಸಂ. XX,
ಪುಟಗಳು ೮೮೫–೩೩, ೨೭ನೇ ಜುಲೈ ೧೯೨೭.

ವಿಶ್ಲೇಷಣೆಗೆ ಬಂದಾಗ ಈ ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ನಾವು ನಿರಾಶರಾಗುವುದು ಖಂಡಿತ ಎಂದು ನನಗೆ ಅನ್ನಿಸಿದೆ ಎಂದು ನಾನು ಹೇಳಲೇಬೇಕು. ಈ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದಾಗಿ ನಿಂದಲೂ ಅನುಭವಿಸುತ್ತ ಬಂದ ಅತ್ಯಂತ ಹಿರಿದಾದ ನ್ಯೂನತೆಯೆಂದರೆ ಪ್ರಾರಂಭದಲ್ಲಿ ಅದನ್ನು ಪರೀಕ್ಷಾ ಮಂಡಳಿಯಾಗಿ ರಚಿಸಲಾಗಿತ್ತು ಎನ್ನುವುದು.

ಮಾನ್ಯರೇ, ವಿಶ್ವವಿದ್ಯಾಲಯವು ಪರೀಕ್ಷಾ ಪದ್ಧತಿಯೇ ತನ್ನ ಏಕಮೇವ ಉದ್ದೇಶವೆಂದು ತಿಳಿದುಕೊಂಡರೆ ಅದು ಸಂಶೋಧನೆಯ ಮತ್ತು ಉಚ್ಚ ಶಿಕ್ಷಣದ ಪ್ರಗತಿಯನ್ನು ಸಾಧಿಸುವಲ್ಲಿ ಜಯಶಾಲಿಯಾಗಲಾರದು ಎಂಬುದನ್ನು ನಾವು ಕಂಡುಕೊಳ್ಳಲೇಬೇಕು. ಆ ವರದಿಯನ್ನು ಆಧರಿಸಿ ತಯಾರಿಸಲಾದ ಮಸೂದೆಯು ವಿಶ್ವವಿದ್ಯಾಲಯವನ್ನು ಅಸ್ತಿತ್ವದಲ್ಲಿ ತಂದ ಶಾಸನವನ್ನು ವಿಶ್ವವಿದ್ಯಾಲಯವು ಪರೀಕ್ಷೆಗೆ ಹಾಜರಾಗುವ ಬುದ್ಧಿವಂತರನ್ನು ಪರೀಕ್ಷಿಸುವ ಸಾಮಾನ್ಯ ಕಾರ್ಯದೊಂದಿಗೆ ನೇರವಾಗಿ ಬೋಧನೆಯ ಕಾರ್ಯವನ್ನೂ ವಹಿಸಿಕೊಳ್ಳಲು ವಿಶ್ವವಿದ್ಯಾಲಯಕ್ಕೆ ಸಾಧ್ಯವಾಗುವಂತೆ ಕಾನೂನನ್ನು ಬದಲಾಯಿಸಬೇಕು ಎಂಬ ಅಂಶವನ್ನು ೧೯೦೨ರ ವಿಶ್ವವಿದ್ಯಾನಿಲಯದ ಸಮಿತಿಯು ಅರಿತಿತ್ತು. ಮಾನ್ಯರೇ, ಈಗ ೧೯೦೪ರ ನಿರ್ದಿಷ್ಟ ಅಧಿನಿಯಮವು ಜಾರಿಯಲ್ಲಿ ಬಂದಾಗ, ವಾಸ್ತವವಾಗಿ ಆಗಲೇ ಹಲವು ಕಾಲೇಜುಗಳು ಅಸ್ತಿತ್ವದಲ್ಲಿದ್ದುವು. ವಿಶ್ವವಿದ್ಯಾಲಯವು ಬೋಧನೆಯ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲು ಅದರ ಮಾರ್ಗಕ್ಕೆ ಅಡಚಣೆಯನ್ನು ಮಾಡಿದವು. ಆದುದರಿಂದ ಮಾನ್ಯರೇ, ವಿಶ್ವವಿದ್ಯಾಲಯವು ತನ್ನನ್ನು ಸ್ನಾತಕೋತ್ತರ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಬೇಕಾಯಿತು ಎಂಬುದು ಸ್ಪಷ್ಟವಾಗಿದೆ ಮತ್ತು ೧೯೧೨ರಿಂದ ಮುಂಬೈ ವಿಶ್ವವಿದ್ಯಾಲಯವು ಅದೇ ದಾರಿಯಲ್ಲಿ ಮುಂದುವರೆದಿದೆ ಮತ್ತು ಸ್ನಾತಕೋತ್ತರ ಅಭ್ಯಾಸವನ್ನು ಮಾಡಲು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಬೋಧಿಸಲು ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರಗಳ ಶಾಲೆ (School of Sociology and Economics)ಗಳೆಂದು ಕರೆಯಲಾಗುವ ವಿಭಾಗಗಳನ್ನು ಸ್ಥಾಪಿಸಿತು. ಮಾನ್ಯರೇ, ೧೯೦೪ರ ಅಧಿನಿಯಮದ ಮೇರೆಗೆ ವಿಶ್ವವಿದ್ಯಾಲಯಕ್ಕೆ ವಹಿಸಿಕೊಡಲಾದ ಕರ್ತವ್ಯವನ್ನು ಪಾಲಿಸಲು ಅದು ಬೇರೆ ಸ್ನಾತಕೋತ್ತರ ವಿಭಾಗಗಳನ್ನು ಸ್ಥಾಪಿಸಲು ಇಚ್ಛಿಸುತ್ತಿದೆ. ಈ ಮಸೂದೆಯನ್ನು ರಚಿಸಿದವರಿಗೆ ಯುಕ್ತ ಗೌರವದೊಂದಿಗೆ, ಮಾನ್ಯರೇ, ನಾನು ಹೇಳಲೇ ಬೇಕಾದುದೇನೆಂದರೆ ವಿಶ್ವವಿದ್ಯಾಲಯವು, ಬೋಧನಾ ವಿಶ್ವವಿದ್ಯಾಲಯವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅಳವಡಿಸಿಕೊಳ್ಳಲಾಗಿರುವ ಈ ವಿಭಜನಾ ನೀತಿಯ ಪರಿಣಾಮಗಳ ಬಗ್ಗೆ ಅವರು ಯಾವುದೇ ಲಕ್ಷ್ಯವನ್ನು ವಹಿಸಿಲ್ಲ. ಮಾನ್ಯರೇ, ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಮುನ್‌ಷಿ ನನ್ನನ್ನು ಸಹಿಸಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ೧೯೦೪ರ ಅಧಿನಿಯಮದ ಈ ವಿಭಜನೆಯನ್ನು ತಂದಿತು. ಅದರ ಮೇರೆಗೆ ವಿಶ್ವವಿದ್ಯಾಲಯವು ಸ್ನಾತಕೋತ್ತರ ಬೋಧನೆಯ ಕಾರ್ಯವನ್ನು ಕಾಲೇಜುಗಳಿಗೆ ಬಿಟ್ಟುಕೊಟ್ಟಿತು. ಇದು ಒಂದು ತರದ ಪ್ರತಿಸ್ಪರ್ಧಿ ಭಾವ ಉಂಟಾಗಲು ಕಾರಣವಾಯಿತು. ಅದು ಈ ಎರಡೂ ಸಂಸ್ಥೆಗಳ ನಡುವೆ ತಕ್ಕಮಟ್ಟಿನ ವೈಮನಸ್ಸನ್ನುಂಟು ಮಾಡಿತು ಎಂದೂ ನಾನು ಹೇಳಬಹುದು. ಈ ವಿಷಯದಲ್ಲಿನ ನನ್ನ ಅನುಭವವು ಪರಿಮಿತವಾದುದಾಗಿದ್ದಾಗ್ಯೂ ನಾನು ಒಂದು ಕಾಲೇಜಿನಲ್ಲಿ ಕೆಲವು ಕಾಲ ಪ್ರಾಧ್ಯಾಪಕನಾಗಿದ್ದೆನು. ನಾನು ಈಗ ಪ್ರಾಧ್ಯಾಪಕನಾಗಿಲ್ಲದಿದ್ದರೂ ಸಹ ನನ್ನ ಹಳೆಯ ಸಹೋದ್ಯೋಗಿಗಳನ್ನು ಭೇಟಿಯಾಗುವ ಅವಕಾಶ ಇದ್ದೇ ಇದೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳ ಮತ್ತು ಕಾಲೇಜು ಪ್ರಾಧ್ಯಾಪಕರುಗಳ ನಡುವಣ ಸಂಬಂಧವು ಸಹಜವಾಗಿಯೂ ಮೈತ್ರಿಯುತವಾದುದಾಗಿಲ್ಲ ಎಂದೇ ಅವರು ಹೇಳುತ್ತಾರೆ. ಮಾನ್ಯರೇ ಅದು ಹಾಗಿರಬೇಕಾದದ್ದೇ. ಉದಾಹರಣೆಗೆ ಹೇಳಬೇಕೆಂದರೆ ವಿಶ್ವವಿದ್ಯಾಲಯವು ತನ್ನಷ್ಟಕ್ಕೇನೇ ಸ್ವಲ್ಪ ಉಚ್ಚ

ಮಟ್ಟದ್ದು ಮತ್ತು ತನ್ನದೇ ಆದ ರೀತಿಯಲ್ಲಿ ಈಗಾಗಲೇ ಶಿಕ್ಷಣದ ಕಾರ್ಯವನ್ನು ಮಾಡುತ್ತಾ ಬಂದ ಇತರ ಕಾಲೇಜುಗಳಿಗಿಂತ ಶ್ರೇಷ್ಠವಾದದ್ದು ಎಂದು ನಡೆದುಕೊಂಡರೆ, ಒಂದು ಮತ್ತೊಂದರ ಬಗ್ಗೆ ಹೊಟ್ಟೆಕಿಚ್ಚುಪಡುವುದು ಸಹಜವಾಗಿರುತ್ತದೆ. ಈಗ ನಾನು ವಿನಂತಿಸುವುದು ಏನೆಂದರೆ, ಮಾನ್ಯರೆ, ಕಾಲೇಜು ಪ್ರಾಧ್ಯಾಪಕ ವರ್ಗವು ವಿಶ್ವವಿದ್ಯಾಲಯವು ಸ್ಥಾಪಿಸಿದ ಪ್ರಾಧ್ಯಾಪಕ ವರ್ಗದೊಂದಿಗೆ ಸ್ನೇಹಭಾವದಿಂದ ಇರದೇ ಹೋದರೆ ಕಾಲೇಜಿಗಾಗಲೀ ಅಥವಾ ವಿಶ್ವವಿದ್ಯಾಲಯಕ್ಕಾಗಲೀ ಅಥವಾ ಸಾರ್ವಜನಿಕರಿಗಾಗಲೀ ಪ್ರಯೋಜನಕಾರಿ ಆಗುವ ರೀತಿಯಲ್ಲಿ ಯಾವುದೇ ರೀತಿಯ ಸಂಶೋಧನೆ ಅಥವಾ ಜ್ಞಾನದ ಪ್ರಗತಿ ಆಗಲಾರದು.

ಎರಡನೆಯದಾಗಿ, ನಾನು ವಿನಂತಿಸುವುದೇನೆಂದರೆ, ಮಾನ್ಯರೆ, ಪದವಿ ಪೂರ್ವ ಬೋಧನೆಯನ್ನು ವಿಶ್ವವಿದ್ಯಾಲಯವು ವಹಿಸಿಕೊಳ್ಳದೆ ಕೇವಲ ಸ್ನಾತಕೋತ್ತರ ಬೋಧನಾ ಕಾರ್ಯವನ್ನು ಮಾತ್ರ ಹೇರುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಮಾನ್ಯರೇ, ನಾವು ಗಮನಿಸುವ ಬೇರೆ ಬೇರೆ ಕಾಲೇಜುಗಳ ಪರಿಸ್ಥಿತಿ ಏನು? ಸರಕಾರೀ ಕಾಲೇಜುಗಳನ್ನುಳಿದಂತೆ ಇತರ ಕಾಲೇಜುಗಳು ಖಾಸಗಿಯವರ ಪ್ರಯತ್ನ ದಿಂದಾಗಿಯೇ ಸ್ಥಾಪಿತವಾಗಿವೆ. ಈ ಕಾಲೇಜುಗಳು ಪದವಿಪೂರ್ವ ತರಬೇತಿಗಾಗಿ ಅಗತ್ಯವಾದುದನ್ನು ಸಮಾಧಾನಕರವಾದ ರೀತಿಯಲ್ಲಿ ಮಾಡಲು ಸಮರ್ಥವಾಗಿದೆ ಎಂದು ನಾನು ಭಾವಿಸುವುದಿಲ್ಲ ಎಂದು ಹೇಳುವಾಗ ಈ ಕಾಲೇಜುಗಳಲ್ಲಿ ಕಾರ್ಯ ಮಾಡುತ್ತಿರುವವರಿಗೆ ನಾನು ಅಗೌರವ ತೋರಿಸುತ್ತೇನೆಂದು ಅರ್ಥವಲ್ಲ. ಮೊದಲನೆಯದಾಗಿ, ಈ ಕಾಲೇಜುಗಳಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ. ಉದಾಹರಣೆಗೆ ಹೇಳಬೇಕೆಂದರೆ ನನ್ನ ವಿಶೇಷ ವಿಷಯಗಳಾದ ಇತಿಹಾಸ ಮತ್ತು ರಾಜಕೀಯ ಅರ್ಥಶಾಸ್ತ್ರಗಳನ್ನೇ ತೆಗೆದುಕೊಳ್ಳೋಣ. ಸಾಮಾನ್ಯವಾಗಿ ಇಂಥ ಬಹು ವಿಶಾಲ ವ್ಯಾಪ್ತಿಯುಳ್ಳ ವಿಷಯಗಳಾದ ಇತಿಹಾಸ ಮತ್ತು ರಾಜಕೀಯ ಅರ್ಥಶಾಸ್ತ್ರಗಳನ್ನು ಸಮಾಧಾನಕರ ರೀತಿಯಲ್ಲಿ ಕಲಿಸಬಲ್ಲರು ಎಂದು ಭಾವಿಸುವುದು ಅಸಂಬದ್ಧವೆನಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಇದರ ಪರಿಣಾಮವೆಂದರೆ ಪ್ರತಿಯೊಬ್ಬ ಪ್ರಾಧ್ಯಾಪಕನೂ ಪ್ರತಿ ವಾರಕ್ಕೆ ಅಜಮಾಸು ಹದಿಮೂರು ಗಂಟೆಗಳ ಕಾಲ ಪಾಠ ಹೇಳುವ ಹೊಣೆ ವಹಿಸಿಕೊಳ್ಳಬೇಕಾಗುತ್ತದೆ ಎಂದು ನಾನು ಹೇಳಿದರೆ ನನ್ನ ಗೌರವಾನ್ವಿತ ಸ್ನೇಹಿತರಾದ ಪ್ರೊ.ಹ್ಯಾಮಿಲ್ಲರವರು ನನ್ನ ಅಭಿಪ್ರಾಯವನ್ನು ಪುಷ್ಟೀಕರಿಸುವರೆಂದು ಭಾವಿಸುತ್ತೇನೆ. ಈ ರೀತಿಯಲ್ಲಿ ಒಂದು ರೀತಿಯ ಗುಲಾಮಗಿರಿಯಲ್ಲಿ ಕೆಲಸ ಮಾಡಬೇಕಾದ ಪ್ರಾಧ್ಯಾಪಕನು ಪ್ರಾಧ್ಯಾಪಕ ಪದದ ನಿಜವಾದ ಅರ್ಥದಲ್ಲಿ ಪಾಠ ಹೇಳಿಕೊಡಲಾರನು. ಆತನು ಆಗಲೇ ತಯಾರಿಸಿಟ್ಟ ಟಿಪ್ಪಣಿಗಳ ಸಹಾಯದಿಂದ ತನ್ನ ಕೆಲಸ ಮಾಡುವ ವ್ಯಕ್ತಿ ಮಾತ್ರ ಆಗಬಲ್ಲನು. ಅವನಿಂದ ನಾವು ಯಾವುದೇ ಸ್ವಂತಿಕೆಯನ್ನು ಆಶಿಸಲಾರೆವು ಮತ್ತು ಆತನ ಪಾಟವನ್ನು ಕೇಳುವ ದೌರ್ಭಾಗ್ಯವಿದ್ದವರಲ್ಲಿ ಆತ ಯಾವುದೇ ಸ್ಫೂರ್ತಿಯನ್ನು ತುಂಬಲಾರ. ಇಡಿಯ ಅಭ್ಯಾಸ ಎಲ್ಲವೂ ಕೇವಲ ಯಾಂತ್ರಿಕ ಕ್ರಿಯೆ ಮಾತ್ರ ಆಗುತ್ತದೆ. ಕಾಲೇಜುಗಳಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ. ಅಷ್ಟೇ ಅಲ್ಲ, ಆ ಕಾಲೇಜುಗಳಲ್ಲಿನ ಇರುವ ಸಿಬ್ಬಂದಿಯು ತಾವು ಕಾಲೇಜುಗಳಿಗೆ ಕೊಡುವುದು ತುಂಬಾ ಇದೆ ಎಂದು ತಿಳಿದಿರುವುದಿಲ್ಲ. ಆದರೆ ಅವರನ್ನು ಕಡಿಮೆ ವೇತನಕ್ಕೆ ನೇಮಿಸಿಕೊಂಡಿದ್ದಾರೆ. ಪದವಿಪೂರ್ವ ಅಭ್ಯಾಸ ಮಾಡಿದವರ ಸೇವೆಯ ಸಹಾಯದಿಂದ ಮಾಡುವ ಯಾವುದೇ ಸಹಾಯವು ಕಾಲೇಜನ್ನು ರೂಪಿಸಬಲ್ಲದು ಮತ್ತು ಬೋಧನೆಗೆ ಪದವಿಪೂರ್ವದವರ ನಿಯಂತ್ರಣವನ್ನು ಹೊಂದಬಹುದು. ನಿಮ್ಮ ಪದವಿಪೂರ್ವ ಕಾರ್ಯವು ನಾನು ವರ್ಣಿಸಿದಷ್ಟು ಕೆಟ್ಟದಾಗಿದ್ದರೆ ಸ್ನಾತಕೋತ್ತರ ಪದವೀಧರರನ್ನು ಕೆಲಸ ಮಾಡುವಂತೆ ಮೇಲಿನಂತೆ ಒತ್ತಾಯ ಮಾಡುವ ವಿಶ್ವವಿದ್ಯಾಲಯದಲ್ಲಿ ನಿಜವಾದ ಜ್ಞಾನದ

ಅಥವಾ ನಿಜವಾದ ಸಂಶೋಧನೆಯ ಪ್ರಗತಿಯಾಗಲಾರದು. ಮೂರನೆಯದಾಗಿ ಸದ್ಯದ ಪದ್ಧತಿಯು ಸಂಪೂರ್ಣವಾಗಿ ಪೋಲು ಮಾಡುವುದೇ ಆಗಿದೆ ಮತ್ತು ವಿಶ್ವವಿದ್ಯಾಲಯವನ್ನು ಮತ್ತು ಕಾಲೇಜುಗಳನ್ನು ಉತ್ತಮ ರೀತಿಯಲ್ಲಿ ಸಂಘಟಿಸಿ ಈ ಪೋಲಾಗುವುದನ್ನು ಸುಲಭವಾಗಿ ತಪ್ಪಿಸಬಹುದು. ಉದಾಹರಣೆಗೆ ಹೇಳಬೇಕೆಂದರೆ ಮುಂಬಯಿಯಲ್ಲಿನ ರಾಜಕೀಯ ಅರ್ಥಶಾಸ್ತ್ರ ಬೋಧಿಸುವ ಪ್ರಶ್ನೆಯನ್ನೇ ಗಮನಿಸಬಹುದು. ಸೈಡೆನ್‌ಹ್ಯಾಮ್ ಸಿಡ್ನಾಮ್ ವಾಣಿಜ್ಯ ಕಾಲೇಜಿನಲ್ಲಿ ಮಾನ್ಯರೇ, ನನಗೆ ತಿಳಿದಂತೆ ಇತಿಹಾಸ, ರಾಜಕೀಯ ಅರ್ಥಶಾಸ್ತ್ರ ಮತ್ತು ವಾಣಿಜ್ಯ ಭೂಗೋಲ ವಿಷಯಗಳನ್ನು ಬೋಧಿಸಲು ಆರು ಜನ ಪ್ರಾಧ್ಯಾಪಕರು ಇರುತ್ತಾರೆ. ಇದೇ ವಿಷಯಗಳನ್ನು ಬೋಧಿಸಲು ವಿಲ್ಸನ್ ಕಾಲೇಜಿನಲ್ಲಿ ಇಬ್ಬರು ಪ್ರಾಧ್ಯಾಪಕರಿರುತ್ತಾರೆ. ಎಲ್ಫಿನ್‌ಸ್ಟೆನ್ ಕಾಲೇಜಿನಲ್ಲಿ ಇಬ್ಬರೇ ಇರುತ್ತಾರೆ. ಸೇಂಟ್ ಝೇವಿಯರ್ ಕಾಲೇಜಿನಲ್ಲೂ ಇಬ್ಬರೇ ಇರುತ್ತಾರೆ. ಮಾನ್ಯರೇ, ಮುಂಬಯಿಯಂಥ ನಗರದಲ್ಲಿ ನಾವು ಹೇಳುವುದಾದರೆ, ಇತಿಹಾಸ ಮತ್ತು ರಾಜಕೀಯ ಅರ್ಥಶಾಸ್ತ್ರಗಳನ್ನು ಬೋಧಿಸುವ ವಿಭಾಗದಲ್ಲಿ ಹನ್ನೆರಡು ಜನ ಪ್ರಾಧ್ಯಾಪಕರಿರುತ್ತಾರೆ. ಮಾನ್ಯರೇ, ನಿಜವಾಗಿಯೂ ಈ ನಾಲ್ಕೂ ಕಾಲೇಜುಗಳು ತಮ್ಮ ಹನ್ನೆರಡು ಜನ ಪ್ರಾಧ್ಯಾಪಕರೊಡನೆ ಸಂಘಟಿತರಾಗಿ ಅವರು ಕೊಡುವ ಪಾಠಗಳನ್ನು ಬೇರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳೆಲ್ಲರೂ ಒಟ್ಟಾಗಿ ಒಂದು ನಿರ್ದಿಷ್ಟ ಕಾಲೇಜಿನಲ್ಲಿ ಕೇಳುವಂತೆ ವ್ಯವಸ್ಥೆ ಮಾಡಿದರೆ, ಹಾಗೆ ಪಾಠ ಹೇಳಿಕೊಡುವ ಪ್ರಾಧ್ಯಾಪಕರಿಗೆ ಬೇರೆ ವಿಶೇಷ ಕಾರ್ಯ ಮಾಡಲು ಅವಕಾಶ ದೊರಕುತ್ತದೆ. ಅದನ್ನು ಮಾಡಿದರೆ, ಬೇರೆ ಬೇರೆ ಕಾಲೇಜುಗಳಲ್ಲಿ ಅದೇ ವಿಷಯವನ್ನೇ ಬೋಧಿಸುತ್ತಿರುವ ಈ ಹನ್ನೆರಡು ಜನ ಪ್ರಾಧ್ಯಾಪಕರು, ಪದವಿಪೂರ್ವ ವರ್ಗಗಳಿಗೂ ಬೋಧಿಸಬಲ್ಲರು ಮತ್ತು ಸ್ನಾತಕೋತ್ತರ ವರ್ಗಗಳಿಗೂ ಬೋಧಿಸಬಲ್ಲರು ಎಂಬ ಬಗ್ಗೆ ನನಗೆ ಪೂರ್ಣ ವಿಶ್ವಾಸವಿದೆ. ಹೀಗಾದರೆ ಸ್ಕೂಲ್ ಆಫ್ ಸೋಷಿಯಾಲಜಿ ಮತ್ತು ಎಕನಾಮಿಕ್ಸ್‌ನ ವಿಸ್ತರಣೆಗಾಗಿ ನಾವು ಈಗ ಮಾಡುತ್ತಿರುವ ವೆಚ್ಚವನ್ನು ಉಳಿಸಬಲ್ಲೆವು ಮತ್ತು ಅದನ್ನು ಇತರ ವಿಷಯಗಳಿಗಾಗಿ ಉತ್ತಮ ರೀತಿಯಲ್ಲಿ ಉಪಯೋಗಿಸಬಲ್ಲೆವು. ಮಾನ್ಯರೇ, ಈಗ ಈ ಪೋಲಾಗುವಿಕೆಯು ಕೇವಲ ಇತಿಹಾಸ ಮತ್ತು ರಾಜಕೀಯ ಅರ್ಥಶಾಸ್ತ್ರಗಳನ್ನು ಸ್ನಾತಕೋತ್ತರ ಪದವೀಧರರ ಬೋಧನೆಗೆ ಸಂಬಂಧಪಟ್ಟಿರುತ್ತದೆಯಲ್ಲದೆ, ಮಾನ್ಯರೆ, ನಾನು ಹೇಳುವುದಾದರೆ ಇತರ ಸ್ನಾತಕೋತ್ತರ ಸಂಶೋಧನಾ ವಿಷಯಗಳನ್ನು ವಿಶ್ವವಿದ್ಯಾಲಯವು ತಾನೇ ಇಟ್ಟುಕೊಂಡಾಗಲೂ ಸಹ ಈ ಪೋಲಾಗುವಿಕೆಯು ಖಚಿತವಾಗಿ ಮುಂದುವರಿದೇ ಇರುತ್ತದೆ. ಅದಕ್ಕೆ ತುಂಬಾ ಸರಳವಾದ ಕಾರಣವೆಂದರೆ, ನಮ್ಮ ಕಾಲೇಜುಗಳು ತಮ್ಮಷ್ಟಕ್ಕೇನೆ ಪುಟ್ಟ ಪುಟ್ಟ ವಿಶ್ವವಿದ್ಯಾಲಯಗಳೇ ಆಗಿವೆ. ಪ್ರತಿಯೊಂದು ಕಾಲೇಜೂ ಸಹ ಊಹಿಸಬಹುದಾದ ಎಲ್ಲ ವಿಷಯಗಳನ್ನೂ ಬೋಧಿಸುತ್ತಿವೆ ಮತ್ತು ವಿಶ್ವವಿದ್ಯಾಲಯದ ಪರೀಕ್ಷೆಗಾಗಿ ಗೊತ್ತುಪಡಿಸಲಾಗಿರುವ ಪ್ರತಿಯೊಂದು ವಿಷಯವನ್ನು ಬೋಧಿಸಲು ಪ್ರಾಧ್ಯಾಪಕರನ್ನು ಹೊಂದಿರುತ್ತದೆ. ವಸ್ತುಸ್ಥಿತಿಯು ಹೀಗಿರುವುದರಿಂದ ಸ್ನಾತಕೋತ್ತರ ಕೆಲಸಕ್ಕಾಗಿ ವಿಶ್ವವಿದ್ಯಾಲಯವು ಬೇರೆ ಪ್ರಾಧ್ಯಾಪಕರನ್ನು ವ್ಯವಸ್ಥೆ ಮಾಡಿಕೊಂಡರೆ ಇಮ್ಮಡಿ ವೆಚ್ಚವಾಗುತ್ತದೆಯಲ್ಲದೆ ಇಮ್ಮಡಿ ಪೋಲೂ ಆಗುವುದಲ್ಲದೆ ನನ್ನ ಭಾಷಣದ ಪ್ರಾರಂಭದಲ್ಲಿಯೇ ಹೇಳಿದಂತೆ ಹಲವಾರು ಅನನುಕೂಲತೆಗಳು ಉಂಟಾಗುತ್ತವೆ. ಆದುದರಿಂದ ಮಾನ್ಯರೇ ನಾನು ಹೇಳುವುದೇನೆಂದರೆ, ಈ ಮಸೂದೆಯ ಉದ್ದೇಶವು ಉಚ್ಚ ಶಿಕ್ಷಣ ಮತ್ತು ಸಂಶೋಧನೆಯನ್ನು ಪ್ರೋತ್ಸಾಹಿಸುವುದಾಗಿದ್ದರೆ, ಅತ್ಯುತ್ತಮವಾದ ವಿಧಾನವೆಂದರೆ, ಈಗ ಮಾಡಿರುವಂತೆ ಕಾಲೇಜುಗಳನ್ನು ವಿಶ್ವವಿದ್ಯಾಲಯದಿಂದ ಬೇರ್ಪಡಿಸದಿರುವುದು ಮತ್ತು ವಿಶ್ವವಿದ್ಯಾಲಯ ಮತ್ತು ಕಾಲೇಜುಗಳು ಸಮಾನತಾ ಆಧಾರದ ಮೇಲೆ ಪಾಲುದಾರರಾಗುವಂತೆ ಮತ್ತು ಪದವಿಪೂರ್ವ ಮತ್ತು ಸ್ನಾತಕೋತ್ತರ ಅಭ್ಯಾಸಗಳೆರಡನ್ನೂ

ಒಟ್ಟಾಗಿ ಬೆಳೆಸುವಲ್ಲಿ ಭಾಗವಹಿಸುವಂತೆ ಒಂದುಗೂಡಿಸುವುದು. ಮಾನ್ಯರೇ, ನಾನು ಹೇಳಿದ್ದು ನಿಜವಾಗಿಯೂ ನನ್ನ ಅಭಿಪ್ರಾಯವಲ್ಲ. ಇದು ಸ್ಯಾಡ್ಲರ್ ಆಯೋಗವು ಮಾಡಿದ ಶಿಫಾರಸ್ಸು ಆಗಿದೆ. ಈ ಆಯೋಗವು ಕಲಕತ್ತಾ ವಿಶ್ವವಿದ್ಯಾಲಯವು ಎದುರಿಸಿದ ಇಂಥದೇ ಸಮಸ್ಯೆಯನ್ನು ವಿಶ್ಲೇಷಿಸಿದೆ. ಸ್ಯಾಡ್ಲರ್ ಆಯೋಗವು ಈ ದೇಶವು ಹೊಂದಿದ್ದ ಆಯೋಗಗಳಲ್ಲಿಯೇ ಅತ್ಯುತ್ತಮವಾದ ತಜ್ಞ ಸಮಿತಿಯಾಗಿತ್ತು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ತಮ್ಮ ಕಾರ್ಯದಲ್ಲಿ ಎಳ್ಳಷ್ಟೂ ತಜ್ಞರಲ್ಲದವರ ವರದಿಯನ್ನು ಸರಕಾರ ಮೆರೆಸುವುದು ಏಕೆ ಮತ್ತು ಅದನ್ನು ಸ್ಯಾಡ್ಲರ್ ಆಯೋಗದಲ್ಲಿದ್ದ ತಜ್ಞರ ದೀರ್ಘವಾದ ಮತ್ತು ಪರ್ಯಾಲೋಚಿತ ತೀರ್ಪಿನ ವಿರುದ್ಧ ಎತ್ತಿಕಟ್ಟುವುದು ಏಕೆ ಎನ್ನುವುದು ನನಗೆ ತಿಳಿಯದಾಗಿದೆ.

ಮುಂಬಯಿ ವಿಶ್ವವಿದ್ಯಾಲಯವನ್ನು ಪುನಃ ಸಂಘಟಿಸುವುದಕ್ಕಾಗಿ ವಿಶ್ವವಿದ್ಯಾಲಯ ಸಮಿತಿಯು ತಯಾರಿಸಿದ ವರದಿಯನ್ನು ನಾನು ತುಂಬಾ ಎಚ್ಚರಿಕೆಯಿಂದ ಓದಿರುತ್ತೇನೆ. ಆದರೆ ನನ್ನ ಅಭಿಪ್ರಾಯವನ್ನು (ಮುಂಬಯಿ ವಿಶ್ವವಿದ್ಯಾಲಯದ ಸುಧಾರಣಾ ಸಮಿತಿಗೆ ಡಾ. ಅಂಬೇಡ್ಕರ್ ಅವರು ಕೊಟ್ಟ ಲಿಖಿತ ಸಾಕ್ಷ್ಯವನ್ನು ಅನುಸೂಚಿ–III ಎಂದು ಮುದ್ರಿಸಲಾಗಿದೆ) ಬದಲಿಸಲು ಸಹಾಯಕಾರಿ ಆಗುವಂಥ ಯಾವುದೇ ಸಂಗತಿ ನನಗೆ ಕಂಡುಬರಲಿಲ್ಲ. ನನ್ನ ಆ ಅಭಿಪ್ರಾಯವೆಂದರೆ ಸ್ಯಾಡ್ಲರ್ ಸಮಿತಿಯ ಶಿಫಾರಸುಗಳು ಮುಂಬಯಿ ವಿಶ್ವವಿದ್ಯಾಲಯ ಸಮಿತಿಯ ಶಿಫಾರಸುಗಳಿಗಿಂತ ತುಂಬಾ ಪರಿಣಾಮಕಾರಿಯಾಗಿಯೂ ಮತ್ತು ಪ್ರಯೋಜನಕಾರಿಯೂ ಆಗಿವೆ. ಆದುದರಿಂದ ನನ್ನ ಗೌರವಾನ್ವಿತ ಸ್ನೇಹಿತರಾದ ಶಿಕ್ಷಣ ಮಂತ್ರಿಗಳು ಯಾವುದೇ ರೀತಿಯಲ್ಲಿ ಅಂದರೆ ಈ ಮಸೂದೆಯಲ್ಲಿಯೇ ಹಲವು ಉಪಬಂಧಗಳನ್ನು ಸೇರಿಸುವ ಮೂಲಕ ಅಥವಾ ಸೆನೇಟಿಗೇ ವಿನಿಮಯಗಳನ್ನು ರಚಿಸುವ ಅಧಿಕಾರ ಕೊಡುವ ಮೂಲಕ "ಘಟಕ ಕಾಲೇಜು"ಗಳೆಂದು ಕರೆಯಬಹುದಾದ ಮತ್ತು ಭೌಗೋಳಿಕವಾಗಿ ಸಂಘದ ಕೇಂದ್ರಗಳಲ್ಲಿ ಇರುವ ಕಾಲೇಜುಗಳ ಮೇಲೆ ಹೆಚ್ಚಿನ ನಿಯಂತ್ರಣ ಕೊಟ್ಟು ಬೋಧನೆಯನ್ನು ಸ್ಥಾನೀಯಗೊಳಿಸುವುದು ಲೇಸು ಎಂದು ನಾನು ಭಾವಿಸುತ್ತೇನೆ. ಪೂನಾ ನಗರವು ಬೇರೆ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಈಗ ಯುಕ್ತವಾದ ಸ್ಥಳವಾಗಿ ಬೆಳೆದಿದೆ ಎಂದು ಸಮಿತಿಯು ಒಪ್ಪಿಗೆ ನೀಡಿದೆ ಎಂದು ನಾನು ಭಾವಿಸುತ್ತೇನೆ. ಮುಂಬೈ ಪಟ್ಟಣವೂ ಸಹ ತನ್ನಷ್ಟಕ್ಕೇನೆ ಬೇರೆ ವಿಶ್ವವಿದ್ಯಾಲಯವನ್ನು ಹೊಂದುವಂತಾಗಿದೆ ಎಂಬ ಬಗ್ಗೆ ಯಾವುದೇ ಸಂಶಯವಿಲ್ಲ. ಈ ಎರಡೂ ಕೇಂದ್ರಗಳಲ್ಲಿ ಇರುವ ಕಾಲೇಜುಗಳನ್ನು ವಿಭಾಗಿಸಿದರೆ ಮತ್ತು ಅವುಗಳನ್ನು ಒಟ್ಟುಗೂಡಿಸಿ ವಿಶ್ವವಿದ್ಯಾಲಯವಾಗಿ ಮಾಡಿದರೆ, ನಾವು ಉಚ್ಚ ಶಿಕ್ಷಣದ ಮತ್ತು ಸಂಶೋಧನೆಯ ಸಮಸ್ಯೆಯನ್ನು ಪರಿಹರಿಸಬಹುದೆಂದು ನನ್ನ ಭಾವನೆ. ಪ್ರಾಂತದ ಹಳ್ಳಿಗಾಡು ಪ್ರದೇಶದಲ್ಲಿ ಸ್ಥಾಪಿತವಾಗಿರುವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಾವು ಆ ಸಮಸ್ಯೆಯನ್ನು ಸ್ಯಾಡ್ಲರ್ ಆಯೋಗದವರು ಮಾಡಿದ ಶಿಫಾರಸುಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಸುಲಭವಾಗಿ ಪರಿಹರಿಸಬಹುದು. ಈ ಸ್ಯಾಡ್ಲರ್ ಆಯೋಗವು "ಗ್ರಾಮೀಣ ಮಂಡಳಿ"ಯನ್ನು ರಚಿಸುವಂತೆ ಶಿಫಾರಸನ್ನು ಮಾಡಿದೆ. ಸ್ಯಾಡ್ಲರ್ ಆಯೋಗವು ಸೂಚಿಸಿದ ಯೋಜನೆಯು ಸುಧಾರಣಾ ಸಮಿತಿಯು ಶಿಫಾರಸು ಮಾಡಿದ ಯೋಜನೆಗಿಂತ ನೂರುಪಟ್ಟು ಉತ್ತಮವಾದುದು ಆಗಿದೆ. ಅದೆಂದರೆ ರೆಕ್ಟರರನ್ನು ನೇಮಿಸುವುದು. ಮಾನ್ಯರೇ, ವಿಶ್ವವಿದ್ಯಾಲಯದ ಸಂಘಟನೆಗೆ ಸಂಬಂಧಿಸಿದಂತೆ ನಾನು ಹೇಳಬೇಕಾದ್ದು ಇಷ್ಟು ಮಾತ್ರ.

ಈಗ ನಾನು ಸೆನೇಟಿನ ರಚನೆಯ ವಿಷಯಕ್ಕೆ ಬರುತ್ತೇನೆ. ನಿನ್ನೆ ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಜಾಧವ ಅವರು ತಮ್ಮ ಭಾಷಣದಲ್ಲಿ ಈ ಮಸೂದೆಯ ಉದ್ದೇಶಗಳು ಮತ್ತು ಕಾರಣಗಳ ವಿವರಣೆಯಲ್ಲಿ ಮುಂಬೈ ವಿಶ್ವವಿದ್ಯಾಲಯದ ಸೆನೇಟ್‌ನಲ್ಲಿ ಹಿಂದುಳಿದ ವರ್ಗದವರ ಪ್ರಾತಿನಿಧ್ಯದ ಅವಶ್ಯಕತೆಯನ್ನು

ಗುರುತಿಸಿಲ್ಲ ಎಂದು ಹೇಳಿದ್ದು ವಾತಾವರಣ ತುಂಬಾ ಕಾವೇರುವಂತೆ ಮಾಡಿತ್ತು. ಮುಂಬೈ ವಿಶ್ವವಿದ್ಯಾಲಯದ ಸದಸ್ಯರಾದ ನನ್ನ ಗೌರವಾನ್ವಿತ ಸ್ನೇಹಿತರು ಒಮ್ಮೆಲೇ ಕೋಪೋದ್ರೇಕ ತೋರಿಸಿದ್ದು ನನಗೆ ಕೆಲಮಟ್ಟಿಗೆ ಸೋಜಿಗವನ್ನುಂಟುಮಾಡಿತು. ಆದರೆ ಮಾನ್ಯರೇ, ನಾವು ಮೇಲೇರಲು ಸಹಾಯಕವಾದ ಏಣಿಯನ್ನು ಯಾವಾಗಲೂ ಒದೆಯುತ್ತಲೇ ಬಂದಿದ್ದೇವೆ ಎಂದು ಎತ್ತಿ ತೋರಿಸಲು ನಾನು ಬಯಸುತ್ತೇನೆ ಮತ್ತು ವಿಶ್ವವಿದ್ಯಾಲಯದ ಸದಸ್ಯರಾದ ನನ್ನ ಗೌರವಾನ್ವಿತ ಸ್ನೇಹಿತರು ಅತ್ಯಂತ ತೀವ್ರತರವಾಗಿ ಕೋಮುವಾದವನ್ನು ತಿರಸ್ಕರಿಸಿದರೂ, ಅವರೇ ಕೋಮುವಾದಿಗಳಾಗಿದ್ದಾರೆ. ಮಾನ್ಯರೇ, ವಿಶ್ವವಿದ್ಯಾಲಯದ ಪದವೀಧರರಿಗೆ ತನ್ನನ್ನೇ ಆರಿಸಲು ಅವರೇ ಕೇಳಿ ಹೊರಡಿಸಿದ ಪ್ರಣಾಳಿಕೆಯಲ್ಲಿ ಗುಜರಾತವು ಗುಜರಾತಿಗಳಿಗೆ ಮಾತ್ರವೇ ಎಂಬ ಆಧಾರವನ್ನು ಹೇಳಿದ್ದರು ಅನ್ನುವುದನ್ನು ಅವರಿಗೆ ನಾನು ನೆನಪು ಮಾಡಿಕೊಡಲು ಇಚ್ಛಿಸುತ್ತೇನೆ. ಅದು ಕೋಮುವಾದ ಅಲ್ಲವಾದರೆ ಕೋಮುವಾದವೆಂದರೆ ಏನು ಎಂದು ನಾನು ಅವರಿಗೆ ಕೇಳಬಯಸುತ್ತೇನೆ. ಅದಕ್ಕೆ ಅವರು ಉತ್ತರ ಕೊಡಬೇಕೆಂದು ನಾನು ಇಚ್ಛಿಸುತ್ತೇನೆ.

ಶ್ರೀ ಕೆ. ಎಮ್. ಮುನ್‌ಷಿ: ಮಾನ್ಯರೇ ಆ ಹೇಳಿಕೆಯು ಸಂಪೂರ್ಣವಾಗಿ ತಪ್ಪು ಎಂದು ಹೇಳಲು ನನಗೆ ಸಂತೋಷವೆನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಸಂಪೂರ್ಣವಾಗಿ ತಪ್ಪು ಅಲ್ಲ ಅನ್ನುವುದು ಸರಿಯಲ್ಲ. ನಿಮ್ಮ ಪ್ರಣಾಳಿಕೆಯನ್ನು ನಾನೇ ಸ್ವತಃ ಓದಿರುತ್ತೇನೆ. ಏನೇ ಆದರೂ ರಾಜಕಾರಣಿಗಳಿಗೆ ಮರೆವು ಹೆಚ್ಚು.

ಈ ಸದನದಲ್ಲಿ ನಾನು ಹೇಳಬಯಸುವುದು ಇಷ್ಟು: ಅಂದರೆ ಹಿಂದುಗಳು ಮತ್ತು ಮೊಹಮಡನ್ನರೂ ಅವರು ಈಗ ತಾವಿರುವಂತೆ, ಪರಸ್ಪರ ನಡೆದುಕೊಳ್ಳುವಲ್ಲಿ ತಾವು ಕೋಮುವಾದಿಗಳಲ್ಲ ಎಂದು ಪ್ರಾಮಾಣಿಕ ವಾಗಿ ಹೇಳಬಲ್ಲರೋ? ಈ ಸದನದಲ್ಲಿಯ ಯಾರೊಬ್ಬ ಸದಸ್ಯನೂ ಸಹ ತಾನು ಕೋಮುವಾದಿ ಅಲ್ಲ ಎಂದು ಹೇಳಲಾರ. ಸದಸ್ಯರಲ್ಲಿ ಯಾರಾದರೂ ಇದನ್ನು ಅಲ್ಲಗಳೆಯಲಿ ಎಂದು ನಾನು ಸವಾಲು ಹಾಕುತ್ತೇನೆ.

ರಾವಬಹದ್ದೂರ ಆರ್. ಆರ್. ಕಾಳೆ: ನಾನು ಅದನ್ನು ಆಕ್ಷೇಪಿಸುತ್ತೇನೆ.

ಗೌರವಾನ್ವಿತ ಸದಸ್ಯರು: ನಾವೂ ಸಹ ಆ ಹೇಳಿಕೆಯನ್ನು ಆಕ್ಷೇಪಿಸುತ್ತೇವೆ.

ಸಭಾಧ್ಯಕ್ಷರು: ಶಾಂತಿ, ಶಾಂತಿ, ದಯಮಾಡಿ ಪರಸ್ಪರ ಎದುರು ಮಾತು ಬೇಡ.

ರಾವಬಹದ್ದೂರ ಆರ್. ಆರ್. ಕಾಳೆ: ಆದರೆ ಗೌರವಾನ್ವಿತ ಸದಸ್ಯರಾದ ಡಾ. ಅಂಬೇಡ್ಕರ್ ಅವರು ತಮ್ಮ ಹೇಳಿಕೆಯನ್ನು ಅಲ್ಲಗಳೆಯುವಂತೆ ಸದಸ್ಯರಿಗೆ ಸವಾಲು ಹಾಕಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ಈ ವಿಷಯದ ಬಗ್ಗೆ ಯಾವ ಖಂಡನೆಯೂ ಸಾಧ್ಯವಿಲ್ಲ. ಪ್ರತಿಯೊಬ್ಬ ಹಿಂದೂ ಮತ್ತು ಪ್ರತಿಯೊಬ್ಬ ಮೊಹಮಡನ್ನರು ಒಂದು ನಿಶ್ಚಿತ ಜಾತಿ ಅಥವಾ ಕೋಮಿನಲ್ಲಿ ಹುಟ್ಟಿರುತ್ತಾರೆ. ಕೋಮು ಪರಿಸರದಲ್ಲೇ ನಾವು ಹುಟ್ಟಿ ಬೆಳೆದಿದ್ದೇವೆ ಅನ್ನುವುದು ಯಾವುದೇ ಪ್ರತಿವಾದಕ್ಕೆ ಎಡೆಯಿಲ್ಲ. ಆ ಕೋಮಿನ ಆಶೆ ಆಕಾಂಕ್ಷೆಗಳಲ್ಲಿ ನಾವು ಪಾಲುಗೊಳ್ಳುತ್ತೇವೆ. ಆ ಕೋಮಿನ ಅಸಮರ್ಥತೆಯನ್ನು ನಾವು ಅನುಭವಿಸುತ್ತೇವೆ ಮತ್ತು ಅದರ ಪರಿಣಾಮವಾಗಿ ಈ ಸದನದಲ್ಲಿರುವ ಪ್ರತಿಯೊಬ್ಬ ಸದಸ್ಯನೂ ಮತ್ತು ಹೊರಗಿರುವ ಪ್ರತಿಯೊಬ್ಬನೂ ತಿಳಿದೋ ತಿಳಿಯದೆಯೋ ಪ್ರತಿಯೊಂದು ಪ್ರಶ್ನೆಯನ್ನೂ ಕೋಮುಭಾವನೆಯಿಂದಲೇ ನೋಡುತ್ತಾನೆ ಎಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವುದೇ ಸಂಶಯವೂ ಇಲ್ಲ.

ಗೌರವಾನ್ವಿತ ಸದಸ್ಯರು: ಇಲ್ಲ, ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಈ "ಇಲ್ಲ"ಗಳಲ್ಲಿ ನನಗೆ ಎಳ್ಳಷ್ಟೂ ನಂಬಿಗೆ ಇಲ್ಲ. ಅದನ್ನು ನಾನು ಸೋಗು ಅನ್ನುತ್ತೇನೆ. "ಇಲ್ಲ" ಎಂದು ಕೂಗುವುದು ಕೇವಲ ಬೂಟಾಟಿಕೆ. ಮಾನ್ಯರೇ, ಈ ಸದನದ ಮುಂದೆ ಬರುವ ಪ್ರತಿಯೊಂದು ವಿಷಯವನ್ನೂ ನಾನೇ ಸ್ವತಃ ಪ್ರಾಮಾಣಿಕವಾಗಿ ಪರಿಶೀಲಿಸುತ್ತೇನೆ ಮತ್ತು ಕೋಮು ಭಾವನೆಯಿಂದಲೇ ನೋಡುತ್ತೇನೆ ಮತ್ತು ಅದು ದಲಿತ ವರ್ಗದವರಿಗೆ ಒಳ್ಳೆಯದೇ ಅಥವಾ ಇಲ್ಲವೇ ಎಂದು ನನ್ನಷ್ಟಕ್ಕೇ ಪ್ರಶ್ನಿಸಿಕೊಳ್ಳುತ್ತೇನೆ.

ಶ್ರೀ ಕೆ. ಎಫ್. ನಾರಿಮನ್: ಇದು ನೋವಿನ ವಿಷಯ.

ಡಾ. ಬಿ. ಆರ್. ಅಂಬೇಡ್ಕರ್: "ನೋವಾಗುತ್ತದೆ" ಎಂದು ಹೇಳುವವರು ತಾವೇ ಈ ಕೋಮು ಭಾವನೆಯಿಂದ ಮುಕ್ತರಲ್ಲ. ಕೋಮುಭಾವನೆ ವಿರುದ್ಧ ಮಾತನಾಡುವುದು ತುಂಬಾ ಸುಲಭವಾದದ್ದು. ಏಕೆಂದರೆ ಅದು ಕೇವಲ ಮಾತು. ಮಾನ್ಯರೇ, ಉದಾಹರಣೆಗೆ ಹೇಳಬೇಕೆಂದರೆ ನಾವು ಇತರ ಕೋಮಿನವರೊಡನೆ ಸಮಾನತೆಯ ಆಧಾರದ ಮೇಲೆ ಹೊಂದಿಕೊಳ್ಳದ ರೀತಿಯಲ್ಲಿ ಮಾನಸಿಕ ಬಂಧನದಲ್ಲಿದ್ದೇವೆ. ನಮ್ಮ ಹೆಣ್ಣು ಮಕ್ಕಳ ಮದುವೆಮಾಡಬೇಕೆಂದಾಗ ಮದುವೆಯಾಗುವವನು ನಮ್ಮ ಜಾತಿಯವನೇ ಹೌದೋ ಅಲ್ಲವೋ ಎಂದು ಕೇಳಲು ಪ್ರಾರಂಭಿಸುತ್ತೇವೆ. (ನಗು) ಅತಿಥಿಗಳನ್ನು ಊಟಕ್ಕೆ ಆಮಂತ್ರಿಸುವಾಗ ಅವರು ನಮ್ಮ ಕೋಮಿಗೆ ಸೇರಿದವರೋ ಎಂದು ವಿಚಾರಣೆ ಪ್ರಾರಂಭಿಸುತ್ತೇವೆ.

ಶ್ರೀ ಬಿ. ಜಿ. ಷಹಲಾಜಾನಿ: ಇದಕ್ಕೆ ನಾನು ಆಕ್ಷೇಪಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾವು ಇವುಗಳನ್ನು ಮಾಡುವುದಿಲ್ಲ ಎಂದು ಹೇಳುವುದು ಕೇವಲ ಸೋಗು. ಗೌರವಾನ್ವಿತ ಸದಸ್ಯರು ಈ ನ್ಯೂನತೆಯನ್ನು ಅರಿತುಕೊಳ್ಳಲಿ ಎಂದು ನಾನು ಇಚ್ಛಿಸುತ್ತೇನೆ ಮತ್ತು ಆ ಬಗ್ಗೆ ನಾನು ಯಾವುದೇ ಕೋಮಿನವರನ್ನು ಆಪಾದಿಸುವುದಿಲ್ಲ. ಮಾನ್ಯರೇ, ನಾವು ಈಗ ದೋಷದಿಂದ ಕೂಡಿದವರಾಗಿದ್ದೇವೆ. ವಸ್ತುಸ್ಥಿತಿ ಹೀಗಿರುವಾಗ, ಯಾವುದೇ ಒಂದು ಕೋಮು, ಬುದ್ಧಿವಂತಿಕೆಯಲ್ಲಿ ಅದು ಎಷ್ಟೇ ಮುಂದುವರೆದಿದ್ದರೂ ಸಹ ಇತರ ಕೋಮಿನ ರಕ್ಷಕನಾಗುವುದಿಲ್ಲ ಎಂಬುದನ್ನು ನಾವು ಒಪ್ಪಬೇಕು. ಸುಧಾರಣಾ ಅಧಿನಿಯಮಗಳನ್ನು (Reform Act) ರೂಪಿಸಿದ ಶಾಸಕರೂ ಸಹ ಇದನ್ನು ಒಪ್ಪಿದ್ದಾರೆ. ಅದು ಹಾಗಿರದಿದ್ದರೆ, ಈ ಸದನದಲ್ಲಿ ಮೊಹಮಡನ್ನರಿಗೆ ಬೇರೆ ಪ್ರಾತಿನಿಧ್ಯ, ಹಿಂದುಳಿದ ವರ್ಗದವರಿಗೆ ಬೇರೆ ಪ್ರಾತಿನಿಧ್ಯ, ದಲಿತ ವರ್ಗದವರಿಗೆ ಬೇರೆ ಪ್ರಾತಿನಿಧ್ಯ ಇರುವುದನ್ನು ನಾವು ನೋಡುತ್ತಿರಲಿಲ್ಲ. ಇದಕ್ಕೆ ಕಾರಣವೆಂದರೆ ನಾವು ಸ್ವಭಾವತಃ ಪರಿಸ್ಥಿತಿಯನ್ನು ವಿಶಾಲ ದೃಷ್ಟಿಯಿಂದ ನೋಡಲು ಅಸಮರ್ಥರಾಗಿರುತ್ತೇವೆ ಮತ್ತು ಕೋಮುವಾದವನ್ನು ಜೀವಂತವಾಗಿಡುತ್ತಿರುವ ಶಕ್ತಿಗಳನ್ನು ತಡೆಗಟ್ಟುವುದಕ್ಕಾಗಿ ಈ ಎದುರು ತಡೆಯನ್ನು ಒದಗಿಸಲಾಗಿದೆ ಮತ್ತು ಶಾಸಕರು ಅದನ್ನು ತುಂಬಾ ಜಾಣತನದಿಂದ ಮಾಡಿರುತ್ತಾರೆಂದೇ ನಾನು ಭಾವಿಸುತ್ತೇನೆ. ನಾನು ಪ್ರಾಮಾಣಿಕನಾಗಿರಲು ಬಯಸುತ್ತೇನೆ. ಮಾನ್ಯರೇ, ಮತ್ತು ಗೌರವಾನ್ವಿತ ಸದಸ್ಯರೂ ಸಹ ಈ ಅಂಶದ ಬಗ್ಗೆ ಪ್ರಾಮಾಣಿಕ ರಾಗಿರುತ್ತಾರೆಂದೇ ಆಶಿಸುತ್ತೇನೆ. ಮಾತನಾಡುವುದು ಒಂದು, ನಡೆಯುವುದು ಇನ್ನೊಂದು ಆಗುವುದರಿಂದ ಯಾವುದೇ ಉಪಯೋಗವಿಲ್ಲ. ಬುದ್ಧಿವಂತಿಕೆಯಲ್ಲಿ ಮುಂದುವರೆಯದಿರುವ ಮುಂಬೈ ವಿಶ್ವವಿದ್ಯಾಲಯದ ಸೆನೆಟ್ಟಿನಲ್ಲಿ ಕೋಮುವಾರು ಪ್ರಾತಿನಿಧ್ಯದ ಅವಶ್ಯಕತೆ ಇರುವುದು ಆ ಕಾರಣದಿಂದಾಗಿಯೇ ಎಂದು ನಾನು ವಿನಯಪೂರ್ವಕ ಹೇಳುತ್ತೇನೆ. ಮಾನ್ಯರೇ, ಸೆನೇಟಿನವರು ಯಾವುದೇ ಪೂರ್ವಗ್ರಹವುಳ್ಳವರಾಗಿರುತ್ತಾರೆ ಎಂದು ನಾನು ಆಪಾದಿಸಲು ಇಚ್ಛಿಸುವುದಿಲ್ಲ ಎಂದೇ ವಿನಯ

ಪೂರ್ವಕವಾಗಿ ಹೇಳುತ್ತೇನೆ. ಆದಾಗ್ಯೂ ಸಹ ಮುಂಬಯಿ ವಿಶ್ವವಿದ್ಯಾಲಯದ ಇಲ್ಲಿಯವರೆಗಿನ ನೀತಿಯು ಹಿಂದುಳಿದ ಅಥವಾ ದಲಿತ ವರ್ಗದವರಿಗೆ ಪ್ರೋತ್ಸಾಹ ನೀಡುವಂಥದಾಗಿರಲಿಲ್ಲ ಎಂದೇ ಹೇಳುತ್ತೇನೆ. ನಾನು ಒಂದು ಉದಾಹರಣೆಯನ್ನು ಕೊಡುವೆ. ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಶಿಕ್ಷಣ ಪದ್ಧತಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ನಮ್ಮ ಪರೀಕ್ಷಾ ಪದ್ಧತಿಯು ಭಾರತದಲ್ಲಿ ಈಗ ಇರುವ ಎಲ್ಲವುಗಳಲ್ಲಿಯೂ ತುಂಬಾ ಕಠಿಣವಾದದ್ದಾಗಿರುತ್ತದೆ ಎನ್ನುವುದರಲ್ಲಿ ಯಾವುದೇ ಸಂಶಯವು ನನಗೆ ಇಲ್ಲ ಮತ್ತು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವವರು ಈ ಸಂಗತಿಯನ್ನು ಅಲ್ಲಗಳೆಯಲಾರರು. ಪರೀಕ್ಷಾ ಮಟ್ಟವನ್ನು ಎತ್ತರಿಸುವುದೆಂದರೆ ಶಿಕ್ಷಣದ ಮಟ್ಟವನ್ನು ಎತ್ತರಿಸುವುದಕ್ಕೆ ಸರಿಸಮ ಎಂದು ನಂಬಿರುವ ಹಲವು ಶಿಕ್ಷಣ ತಜ್ಞರು ಅದನ್ನು ಸಮರ್ಥಿಸುತ್ತಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಅವರಿಗೆ ಸಲ್ಲತಕ್ಕ ಗೌರವ ನೀಡುತ್ತ, ನಾನು ಅವರ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಪರೀಕ್ಷೆ ಶಿಕ್ಷಣಕ್ಕಿಂತ ತುಂಬಾ ವಿಭಿನ್ನವಾದ ವಿಚಾರ. ಆದರೆ ಶಿಕ್ಷಣದ ಮಟ್ಟವನ್ನು ಏರಿಸುವ ನೆಪದಲ್ಲಿ ಇಲ್ಲಿಯವರೆಗೆ ವಿಶ್ವವಿದ್ಯಾಲಯದ ಆವರಣವನ್ನು ಪ್ರವೇಶಿಸುವ ಅವಕಾಶವೇ ಇಲ್ಲದಿರುವ ಹಿಂದುಳಿದ ಕೋಮಿನವರಿಗೆ ಪರೀಕ್ಷೆಗಳು ಅಸಾಧ್ಯವಾಗುವಂತೆ ಮತ್ತು ಅವರು ಅವುಗಳಿಂದ ಸಂಪೂರ್ಣವಾಗಿ ಹೊರಗೇ ಉಳಿಯುವಷ್ಟು ಕಠಿಣವಾದವುಗಳನ್ನಾಗಿ ಮಾಡಲಾಗಿದೆ. ಆದರೆ ನಾನು ಆ ಸಂಗತಿಯ ಬಗ್ಗೆ ಮಾತನಾಡಲು ಇಚ್ಛಿಸುವುದಿಲ್ಲ. ಏಕೆಂದರೆ ಆ ಪದ್ಧತಿಯು ಎಲ್ಲ ಕೋಮಿನವರಿಗೂ ಒಂದೇ ಸಮನಾಗಿ ಅನ್ವಯವಾಗುತ್ತದೆ. ಆದರೆ ಮಾನ್ಯರೇ, ಆ ಬಗ್ಗೆ ನೀವೇ ಯೋಚಿಸಿ. ಏಕಕಾಲದಲ್ಲಿ ನಡೆಯುವ ಪರೀಕ್ಷೆಗಳು ಹಿಂದುಳಿದ ಕೋಮಿನವರ ಶಿಕ್ಷಣದ ಪ್ರಗತಿಯ ಮೇಲೆ ಮಾಡುವ ಪರಿಣಾಮಗಳ ಬಗ್ಗೆ ವಿಶ್ವವಿದ್ಯಾಲಯದವರು ಎಂದಾದರೂ ಯೋಚಿಸಿದ್ದಾರೆಯೇ? ಪರೀಕ್ಷೆಗೆ ಹಾಜರಾಗುವ ಒಬ್ಬ ವಿದ್ಯಾರ್ಥಿಯು ಪರೀಕ್ಷೆಯ ಎಲ್ಲ ವಿಷಯಗಳಲ್ಲೂ ಒಂದೇ ಬಾರಿಗೆ ಉತ್ತೀರ್ಣನಾಗಬೇಕು ಎಂದು ಒತ್ತಾಯಿಸುವಲ್ಲಿ ಯಾವ ಸದ್ವಿಚಾರವಿದೆಯೋ ನನಗಂತೂ ತಿಳಿಯದು. ಉದಾಹರಣೆಗೆ ಹೇಳಬೇಕೆಂದರೆ, ಯಾರ ತಂದೆ ತಾಯಂದಿರುವ ಸಾಕಷ್ಟು ಸಿರಿವಂತರಾಗಿರುತ್ತಾರೋ ಮತ್ತು ಅದರಿಂದಾಗಿ ಹಗಲಿನಲ್ಲಿ ಕಾಲೇಜಿಗೆ ಹೋಗಲು ಯಾರಿಗೆ ಸಾಕಷ್ಟು ವೇಳೆ ಸಿಗುತ್ತದೆಯೋ ಮತ್ತು ತಮ್ಮ ಎಲ್ಲ ಸಮಯವನ್ನೂ ಅಭ್ಯಾಸಕ್ಕಾಗಿಯೇ ಉಪಯೋಗಿಸಿಕೊಳ್ಳಬಲ್ಲರೋ ಅಂಥ ವಿದ್ಯಾರ್ಥಿಗಳ ವಿಚಾರವೇ ಬೇರೆ. ಆದರೆ ಬಡವರ ಬಗ್ಗೆ ಬಡತನದಲ್ಲಿ ಬಳಲುತ್ತಿರುವ ತಂದೆ–ತಾಯಿಗಳ ಬಗ್ಗೆ ಅಂದರೆ ತಮ್ಮ ಮಕ್ಕಳು ಹಗಲಿನಲ್ಲಿ ಸಂಪಾದಿಸಿ ಕುಟುಂಬದ ಸಂಪಾದನೆ ಹೆಚ್ಚಿಸಿ ಹೊಟ್ಟೆಬಟ್ಟೆಗೆ ಸರಿದೂಗಿಸುವಂತೆ ಮಾಡುವುದು ಅಗತ್ಯವಾಗಿರುವುದೋ ಅವರ ವಿಚಾರವೇನು? ಹಗಲಿನ ಹನ್ನೆರಡು ಗಂಟೆಗಳಲ್ಲಿ ವಿಶ್ವವಿದ್ಯಾಲಯದ ಅಭ್ಯಾಸಕ್ಕೆ ಅತ್ಯಲ್ಪ ಸಮಯವನ್ನು ಪಡೆಯಬಹುದಾದ ಹುಡುಗನ ವಿಚಾರವೇನು? ವಿಶ್ವವಿದ್ಯಾಲಯವು ಹಿಂದುಳಿದ ಕೋಮಿನವರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಎಚ್ಚರ ಉಳ್ಳವರಾಗಿದ್ದಿದ್ದರೆ, ನಿಜವಾಗಿಯೂ ನನ್ನ ಅಭಿಪ್ರಾಯದಂತೆ ಸಮರ್ಥನೀಯವಲ್ಲದ ಮತ್ತು ಅಸಂಬದ್ಧವಾದ ಏಕಕಾಲಿಕ ಪರೀಕ್ಷಾ ಪದ್ಧತಿಯನ್ನು ಅದು ಒತ್ತಾಯಿಸುತ್ತಿದ್ದಿಲ್ಲ. ಈಗ ತಾನೇ ನನಗೆ ಹೊಳೆದ ಇನ್ನೊಂದು ಉದಾಹರಣೆಯನ್ನು ನಾನು ನಿಮಗೆ ಕೊಡುತ್ತೇನೆ. ಏಕೆಂದರೆ ವಿಶ್ವವಿದ್ಯಾಲಯವು ಯಾರಿಗೇ ಆಗಲೀ ಯಾವುದೇ ರೀತಿಯ ಪ್ರಾಶಸ್ತ್ಯವನ್ನು ತೋರಿಸದೆಯೇ ಎಲ್ಲವನ್ನೂ ಮಾಡುತ್ತಾ ಬಂದಿದೆ ಎಂದು ನನ್ನ ಗೌರವಾನ್ವಿತ ಸ್ನೇಹಿತ ಶ್ರೀ ಮುನ್‌ಷಿ ಅವರು ಹೇಳುತ್ತಿದ್ದಾರೆ. ವಿಶ್ವವಿದ್ಯಾಲಯದ ಸೆನೇಟಿಗೆ ನೇಮಕವಾದ ನನ್ನ ಸ್ನೇಹಿತರೊಬ್ಬರು ವಿಶ್ವವಿದ್ಯಾಲಯದ ಪರೀಕ್ಷೆಗೆ ಕಟ್ಟುವ ಪರೀಕ್ಷಾ ಶುಲ್ಕದ ಬಗ್ಗೆ ದಲಿತ ವರ್ಗದ ಉಮೇದುದಾರರಿಗೆ ಸ್ವಲ್ಪ ರಿಯಾಯಿತಿಯನ್ನು ತೋರಿಸಬೇಕೆಂದು ತಾನು ಎರಡು

ಬಾರಿ ಠರಾವನ್ನು ಮಂಡಿಸಿದ್ದೆ ಎಂದು ನಿನ್ನೆ ಮಾತ್ರ ಹೇಳಿದರು. ತಾವು ಹಾಗೆ ಮಂಡಿಸಿದ ಪ್ರಸ್ತಾಪವನ್ನು ಸೆನೇಟು ಎರಡೂ ಬಾರಿ ತಿರಸ್ಕರಿಸಿತು ಎಂದು ಅವರಿಂದ ನನಗೆ ತಿಳಿಯಿತು.

ಗೌರವಾನ್ವಿತ ಸದಸ್ಯರು: ಎಲ್ಲ ಕೋಮುಗಳಲ್ಲೂ ಬಡವರಿದ್ದಾರೆ.

ಸಭಾಧ್ಯಕ್ಷರು: ಗೌರವಾನ್ವಿತ ಸದಸ್ಯರು ಅಡ್ಡಿಯನ್ನು ಲೆಕ್ಕಿಸದೆ ಮುಂದುವರೆಯಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಇತರ ಕೋಮಿನವರು ಇರುವ ಮಟ್ಟಕ್ಕೇನೇ ಅವರು ಸಹ ಬರಬೇಕೆಂಬ ಉದ್ದೇಶಕ್ಕಾಗಿ ಆರ್ಥಿಕವಾಗಿ ಬಡವರಾಗಿರುವ ಮತ್ತು ಸರಕಾರದಿಂದ ವಿಶೇಷ ಸವಲತ್ತುಗಳ ಅಗತ್ಯವಿರುವ ಹಲವು ಕೋಮುಗಳು ಇರುತ್ತವೆ ಅನ್ನುವುದನ್ನು ಸರಕಾರವೂ ಸೇರಿ ಸರ್ವತ್ರ ಒಪ್ಪಿಕೊಂಡ ಸಂಗತಿಯಾಗಿರುತ್ತದೆ. ಬುದ್ಧಿವಂತಿಕೆಯ ಈ ತತ್ವವನ್ನು ಸೆನೇಟು ಮೆಚ್ಚದಿರುವಲ್ಲಿ ಮತ್ತು ಅರಿತುಕೊಳ್ಳದಿದ್ದಲ್ಲಿ ಅದು ಎಂದೂ ಹಿಂದುಳಿದ ವರ್ಗದವರ ಹಿತಾಸಕ್ತಿಗಳ ರಕ್ಷಕನಾಗಲಾರದು.

ನನ್ನ ಗೌರವಾನ್ವಿತ ಸ್ನೇಹಿತರಾದ ಪ್ರೊ: ಹ್ಯಾಮಿಲ್ಲ ಅವರು ತಮ್ಮ ಭಾಷಣದಲ್ಲಿ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಸದನದ ವೇಳೆಯನ್ನು ಹೆಚ್ಚು ತೆಗೆದುಕೊಳ್ಳಲು ನಾನು ಇಚ್ಛಿಸುವುದಿಲ್ಲವಾದಾಗ್ಯೂ ಅವರ ಬಗ್ಗೆ ನಾನು ಹೇಳುವುದು ಅವಶ್ಯವಾಗಿದೆ. ವಿಶ್ವವಿದ್ಯಾಲಯದ ಕಾರ್ಯಕ್ಷಮತೆಯನ್ನು ಹೆಚ್ಚಿಸುವಂತಿದ್ದರೆ ದಲಿತ ವರ್ಗದವರನ್ನು ಮತ್ತು ಹಿಂದುಳಿದ ವರ್ಗದವರನ್ನು ಸೆನೇಟಿಗೆ ನಾಮ ನಿರ್ದೇಶನ ಮಾಡಬಹುದು ಎಂದು ಅವರು ಹೇಳಿದರು. ದಲಿತ ವರ್ಗದ ಸದಸ್ಯರು ಶಿಕ್ಷಣದ ವಿಷಯದಲ್ಲಿ ತಜ್ಞರಿದ್ದರೆ ಮುಂಬಯಿ ವಿಶ್ವವಿದ್ಯಾಲಯದ ಸೆನೇಟಿನಲ್ಲಿ ಅವರಿಗೂ ಒಂದು ಸ್ಥಾನವಿರಬೇಕಾದದ್ದು ಎಂಬ ಧಾಟಿಯಲ್ಲಿ ಅವರು ಮಾತನಾಡಿದರು ಎಂದು ನಾನು ಭಾವಿಸುತ್ತೇನೆ. ನನ್ನ ಗೌರವಾನ್ವಿತ ಸ್ನೇಹಿತ ಪ್ರೊ. ಹ್ಲಾಮಿಲ್ಲರವರು ಅಂಥ ಅಭಿಪ್ರಾಯವನ್ನು ವ್ಯಕ್ತಮಾಡುವಾಗ ಅವರು ಸೆನೇಟಿನ ನಿಜವಾದ ಕರ್ತವ್ಯವನ್ನೇ ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ ಎಂದು ಹೇಳಲು ನಾನು ಇಚ್ಛಿಸುತ್ತೇನೆ. ಸೆನೇಟು ವಿಶ್ವವಿದ್ಯಾಲಯದ ಕಾರ್ಯಕಾರೀ ಮಂಡಳಿಯಲ್ಲ. ಹಿಂದುಳಿದ ವರ್ಗಗಳ ಯಾವುದೇ ಸದಸ್ಯರು ಸಿಂಡಿಕೇಟಿನಲ್ಲಿ ಅಥವಾ ಅಕೆಡೆಮಿಕ್ ಕೌನ್ಸಿಲ್ಲಿನಲ್ಲಿ ಯಾವುದೇ ವಿಶೇಷ ಪ್ರಾತಿನಿಧ್ಯವನ್ನು ಕೇಳಿಲ್ಲ. ಈ ಎರಡೂ ಮಂಡಳಿಗಳು ವಿಶ್ವವಿದ್ಯಾಲಯವನ್ನೇ ನಡೆಸುತ್ತಿರುವ ತಜ್ಞರಿಂದ ನಡೆಯಬೇಕಾದವುಗಳು ಎಂಬುದನ್ನು ನನ್ನ ಗೌರವಾನ್ವಿತ ಸ್ನೇಹಿತರಾದ ಪ್ರೊ. ಹ್ಯಾಮಿಲ್ಲ ಅವರಂತೆ ನಾನೂ ಒಪ್ಪುತ್ತೇನೆ ಮತ್ತು ಅದನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ. ಆದರೆ ನಾನು ಅವರಿಗೆ ನೆನಪು ಮಾಡಿಕೊಡಬೇಕಾದುದು ಏನೆಂದರೆ ಸೆನೇಟು ಸಂಪೂರ್ಣವಾಗಿ ವಿಧಾಯಕ ಮಂಡಳಿಯಾಗಿದೆ. ಅದು ಹಿಂದುಳಿದ ಕೋಮಿನವರ ಆವಶ್ಯಕತೆಗಳನ್ನು ಮತ್ತು ಅವುಗಳನ್ನು ಪೂರೈಸಲು ಅವಶ್ಯವಾದ ಅನುಕೂಲತೆಗಳನ್ನೂ ಸೂಚಿಸಬೇಕಾಗಿದೆ. ನನ್ನ ಅಭಿಪ್ರಾಯದಂತೆ ಸೆನೆಟು ನಮ್ಮ ವಿಧಾನ ಪರಿಷತ್ತಿನಂತೆಯೇ ಇರುತ್ತದೆ. ಮತ್ತು ವಿಧಾನ ಪರಿಷತ್ತಿನಲ್ಲಿ ದಲಿತ ವರ್ಗದಿಂದ ಬಂದ ಸದಸ್ಯರಿರುತ್ತಾರೆ. ಸರಕಾರದ ಪರವಾಗಿರುವ ಇತರ ಯಾವುದೇ ಗೌರವಾನ್ವಿತ ಸದಸ್ಯರನ್ನೂ ಅಲ್ಲಿಂದ ಹೊರದೂಡುವ ಇಚ್ಛೆಯಿಂದ ನೇಮಿತರಾದವರಲ್ಲ. ಆದರೆ ಅವರ ಒಂದೇ ಒಂದು ಕೆಲಸವು ಅಸಮರ್ಥತೆಗಳಿಂದ ಬಳಲುತ್ತಿರುವ ಕೋಮಿನವರ ಅಗತ್ಯತೆಗಳನ್ನು ಸರಕಾರಕ್ಕೆ ಎತ್ತಿ ತೋರಿಸುವುದು ಮಾತ್ರವೇ ಆಗಿದೆ. ನಾವು ಕೇಳುತ್ತಿರುವುದೆಲ್ಲ ಅಷ್ಟು ಮಾತ್ರ. ಗೌರವಾನ್ವಿತ ಸ್ನೇಹಿತರು ನಾನು ಆ ಅಂಶವನ್ನು ಮುಂದಿಡುವಾಗ ಸೆನೇಟು ಏನು ಆಗಬೇಕೆಂದು ಉದ್ದೇಶಿಸಲಾಗಿದೆ ಅನ್ನುವುದನ್ನು ಸಂಪೂರ್ಣವಾಗಿ ಮರೆಯುತ್ತಾರೆ.

ಮಾನ್ಯರೇ, ಈಗ ಮುಗಿಸುವ ಮುಂದೆ ಒಂದು ವಿಷಯವನ್ನು ಎಲ್ಲ ಒತ್ತುಕೊಟ್ಟು ಹೇಳಬಯ

ಸುತ್ತೇನೆ. ಮಾನ್ಯರೇ, ಸ್ವರಾಜ್ಯ ಪಕ್ಷಕ್ಕೆ ಸೇರಿದ ಸದಸ್ಯರಿಂದ ನಮಗೆ ಪ್ರಾಂತೀಯ ಸ್ವಾಯತ್ತತೆ ಬೇಕೆಂಬ ಬೇಡಿಕೆ ಇದೆ. ಮಾನ್ಯರೆ ಅದು ಸ್ವಾಗತಾರ್ಹವಾದ ಬೇಡಿಕೆ ಆಗಿದೆ. ಆದರೆ, ಮಾನ್ಯರೇ, ಜನತೆಯ ಮುಕ್ಕಾಲು ಭಾಗದಷ್ಟು ಜನರು ಅಜ್ಞಾನದಲ್ಲಿ ಮುಳುಗಿರುವಾಗ ಸಹ ನಾವು ಸ್ವಯಮಾಡಳಿತ ಸರಕಾರವನ್ನು ಪಡೆದುಕೊಂಡರೆ ನಮ್ಮ ಪ್ರಾತಿನಿಧಿಕ ಪದ್ಧತಿಯು ಸೋಗಿನದಾಗಿರುತ್ತದೆ ಮತ್ತು ಬಡತನದ ವಿರುದ್ಧ ಐಶ್ವರ್ಯದ ಆಡಳಿತ ನಡೆಯುತ್ತದೆ ಮತ್ತು ಬಲಹೀನರ ವಿರುದ್ಧ ಬಲವಂತರ ಆಡಳಿತ ನಡೆಯುತ್ತದೆ. ನಿಜವಾಗಿಯೂ ಆಗುವುದು ಅದೇ. ಆದುದರಿಂದ ಮಾನ್ಯರೇ, ಪ್ರಾಂತೀಯ ಸ್ವಾಯತ್ತತೆಯನ್ನು ನಾವು ಇಚ್ಛಿಸಿದರೆ ಎರಡು ಸಂಗತಿಗಳ ಬಗ್ಗೆ ನಾವು ಭರವಸೆಯನ್ನು ಕೊಡಲೇಬೇಕು. ಮೊದಲನೆಯದಾಗಿ, ಶೈಕ್ಷಣಿಕವಾಗಿ ಹಿಂದುಳಿದ ಕೋಮಿನವರಿಗೆ ಅವರು ತಮ್ಮ ನಾಗರಿಕ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಅರಿತುಕೊಳ್ಳುವಂತಾಗಲು ಅವರಿಗೆ ಎಲ್ಲ ಶ್ರೇಣಿಯ ಆಧುನಿಕ ಶಿಕ್ಷಣ ಪಡೆಯಲು ಎಲ್ಲ ರೀತಿಯ ಅವಕಾಶವನ್ನು ಕೊಡತಕ್ಕುದು. ಮತ್ತು ಎರಡನೆಯದಾಗಿ ಈ ಕೋಮುಗಳವರಿಗೆ ಎಲ್ಲ ಅವಕಾಶ ದೊರಕುವಂತಾಗಲು ಸದ್ಯದ ಪರಿಸ್ಥಿತಿಗಳಲ್ಲಿ ಅವರಿಗೆ ವಿಶೇಷ ಪ್ರಾತಿನಿಧ್ಯವನ್ನು ಒದಗಿಸಿಕೊಡುವುದು ಸಂಪೂರ್ಣವಾಗಿ ಅವಶ್ಯವೆನಿಸುವುದು.

ನಾನು ಕುಳಿತುಕೊಳ್ಳುವುದಕ್ಕಿಂತ ಮುಂಚೆ, ಮಾನ್ಯರೇ, ಒಂದು ವಿಷಯವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಮಾನ್ಯರೇ, ನಿನ್ನೆ ನೀವು ನಮಗೆ ಒಂದು ನಿರ್ಣಯವನ್ನು ಕೊಟ್ಟಿದ್ದೀರಿ. ನನಗೆ ಅದು ಸ್ಪಷ್ಟ ಅರ್ಥವಾಗಿಲ್ಲ. ಮಾನ್ಯರೇ, ನಿನ್ನಿನ ನಿಮ್ಮ ನಿರ್ಣಯದಂತೆ ಕೋಮು ಪ್ರಾತಿನಿಧ್ಯವನ್ನು ತೆಗೆದುಹಾಕಲಾಗಿದೆ ಎಂದು ನಾನು ಭಾವಿಸಿದ್ದೇನೆ. ಈಗ ಕೋಮು ಪ್ರಾತಿನಿಧ್ಯದ ತತ್ವವೆಂದರೆ ಆ ಪದದ ಸಾಮಾನ್ಯ ಅರ್ಥದಲ್ಲಿಯೇ ಎಂದು ಅವರಿಂದ ನಾನು ತಿಳಿದುಕೊಂಡಿದ್ದೇನೆ. ಆದರೆ ಒಂದು ನಿರ್ದಿಷ್ಟ ಕೋಮಿನವರನ್ನೂ ಒಂದು ಗುಂಪಾಗಿಸಿ ಅವರು ತಮ್ಮ ಕೋಮಿನ ಸದಸ್ಯನನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ಹೊಡೆದು ಹಾಕಲಾಗಿದೆ ಎಂದು ಅರ್ಥ ಮಾಡಿಕೊಂಡಿದ್ದೇನೆ. ನಿಮ್ಮ ನಿರ್ಣಯವನ್ನು ನಾನು ಅರ್ಥ ಮಾಡಿದ ರೀತಿ ಇದು. ಕಾರಣ ಪದದ ಆ ಅರ್ಥದಲ್ಲಿ ವಿಶ್ವವಿದ್ಯಾಲಯದ ಹಲವಾರು ಮಂಡಳಿಗಳಿಗೆ ಕೋಮು ಪ್ರಾತಿನಿಧ್ಯದ ಪ್ರಶ್ನೆಯನ್ನು ಎತ್ತುವುದರಿಂದಲೇ ನಮ್ಮನ್ನು ನಿಷೇಧಿಸಲಾಗಿದೆ. ಅಂದರೆ ನಾಮನಿರ್ದೇಶನಕ್ಕಾಗಿ ಕಾಯ್ದಿಟ್ಟ ೪೦ ಸ್ಥಳಗಳನ್ನು ಹಂಚುವ ವಿಷಯಕ್ಕೆ ಸಂಬಂಧಿಸಿದಂತೆ ನಾವು ಹೇಳುವುದು ಏನೂ ಇಲ್ಲವೆನ್ನುವವರೆಗೆ ನಿಮ್ಮ ನಿರ್ಣಯ ಹೋಗುತ್ತದೆ ಎಂದು ನಾನು ಭಾವಿಸುವುದಿಲ್ಲ. ಆ ನಿರ್ದಿಷ್ಟ ವಿಷಯವು ಈ ಸದನದ ಗೌರವಾನ್ವಿತ ಸದಸ್ಯರಿಂದ ಸೆಲೆಕ್ಟ್ ಸಮಿತಿಯಲ್ಲಿ ಅಥವಾ ಎರಡನೆಯ ವಾಚನದ ಕಾಲದಲ್ಲಿ ಚರ್ಚೆಗೆ ಮುಕ್ತವಾದುದು ಆಗಿರುತ್ತದೆ ಎಂದು ನಾನು ವಿನಯಪೂರ್ವಕ ಹೇಳುತ್ತೇನೆ. ಆದುದರಿಂದ ನನ್ನ ಗೌರವಾನ್ವಿತ ಸ್ನೇಹಿತರಾದ ಶಿಕ್ಷಣ ಮಂತ್ರಿಯವರು ತಮ್ಮ ಉಪಸಂಹಾರದ ಹೇಳಿಕೆಯ ಕಾಲದಲ್ಲಿ ಈ ಅಂಶದ ಬಗ್ಗೆ ಸ್ಪಷ್ಟ ಹೇಳಿಕೆ ಕೊಡಬೇಕೆಂದು ನಾನು ಕೇಳುತ್ತೇನೆ. ಯಾಕೆಂದರೆ ಈ ಹಿಂದುಳಿದ ಕೋಮುಗಳಿಗೆ ಸೆನೇಟಿನಲ್ಲಿ ಪ್ರಾತಿನಿಧ್ಯ ಕೊಡದ ಹೊರತು ಈ ನಮ್ಮ ಮಸೂದೆಯು ಯಾವುದೇ ಬೆಲೆಯುಳ್ಳದ್ದಾಗುವುದಿಲ್ಲ ಎಂದು ನಾನು ಎಲ್ಲ ಒತ್ತು ಕೊಟ್ಟು ಹೇಳಬಯಸುತ್ತೇನೆ. ಮತ್ತು ನಾನು ಮಾತ್ರ ಅದಕ್ಕೆ ವಿರುದ್ಧವಾಗಿಯೇ ಮತ ಕೊಡುತ್ತೇನೆ.

# ೮

# ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮ ತಿದ್ದುಪಡಿ ಮಸೂದೆ: ೨*

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ೩ನೆಯ ವಾಕ್ಯಾವಳಿಗೆ ತಿದ್ದುಪಡಿಯನ್ನು ಸೂಚಿಸುವುದಕ್ಕಿಂತ ಮುಂಚೆ ಮೂಲ ತಿದ್ದುಪಡಿಯಲ್ಲಿ ಸೇರಿಕೊಂಡ ಬೆರಳಚ್ಚುಗಾರನ ತಪ್ಪನ್ನು ಸರಿಪಡಿಸಲು ಇಚ್ಛಿಸುತ್ತೇನೆ. ತಿದ್ದುಪಡಿಯು ಈ ರೀತಿಯಲ್ಲಿ ಇರತಕ್ಕುದು.

> "ಇತರ ಕಾಲೇಜುಗಳಲ್ಲಿ ಅಭ್ಯಾಸಕ್ಕೆ ಅವಕಾಶವಿರುವ ವಿಶೇಷ ವಿಷಯಗಳ ಅಧ್ಯಯನಕ್ಕೆಂದೇ ವಿಶ್ವವಿದ್ಯಾಲಯ ಸ್ಥಾಪಿಸಿ, ನಡೆಸಿಕೊಂಡು ಬರುವ ಕಾಲೇಜುಗಳೇ 'ಇನ್‌ಕಾರ್ಪೊರೇಟೆಡ್' ಕಾಲೇಜುಗಳು ಇತ್ಯಾದಿ"

"ಮಾನ್ಯರೇ, ನಾನು ಸೂಚಿಸಬೇಕೆಂದಿರುವ ತಿದ್ದುಪಡಿಯು ಆನುಷಂಗಿಕ ತಿದ್ದುಪಡಿಯಾಗಿದೆ. ಅದು ನಾನು ಮುಂದೆ ಸೂಚಿಸಲಿರುವ ೨೫ನೇ ವಾಕ್ಯಾವಳಿಯ ಮುಖ್ಯ ತಿದ್ದುಪಡಿಯನ್ನು ಅನುಮೋದಿಸುವುದನ್ನು ಆಧರಿಸಿದೆ. ಆ ತಿದ್ದುಪಡಿಯನ್ನು ಅನುಮೋದಿಸದಿದ್ದರೆ ಈ ತಿದ್ದುಪಡಿಯನ್ನು ನಾನು ಸೂಚಿಸುವ ಅವಶ್ಯಕತೆ ಉಂಟಾಗುವುದಿಲ್ಲ. ಕಾರಣ ನಾನು ಸೂಚಿಸುವ ೨೫ನೇ ವಾಕ್ಯಾವಳಿಯ ಮುಖ್ಯ ತಿದ್ದುಪಡಿಯನ್ನು ಅನುಮೋದಿಸಿದ ಅನಂತರ ಈ ತಿದ್ದುಪಡಿಯನ್ನು ಮಂಡಿಸಲು ನನಗೆ ಅನುಮತಿಯನ್ನು ಕೊಡಿರಿ ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಈ ತಿದ್ದುಪಡಿಯನ್ನು ನಾನು ಈಗ ಮಂಡಿಸಿದರೆ ಮತ್ತು ನಂತರ ನನ್ನ ಮೂಲ ತಿದ್ದುಪಡಿಯೇ ಬಿದ್ದುಹೋದರೆ, ನಾನು ಈ ಸದನದ ವೇಳೆಯನ್ನು ಹಾಳು ಮಾಡಿದಂತಾಗುತ್ತದೆ."

## ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಸಂಬಂಧ

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಅಧ್ಯಕ್ಷರೆ, ೭ನೇ ವಾಕ್ಯಾವಳಿಯ ತಿದ್ದುಪಡಿಯ ಮೊದಲಿನ ಭಾಗವು ಆನುಷಂಗಿಕ ತಿದ್ದುಪಡಿಯಾಗಿದ್ದು ಅದು ೨೫ನೇ ವಾಕ್ಯಾವಳಿಯ ತಿದ್ದುಪಡಿಯನ್ನು ಆಧರಿಸಿದುದಾಗಿದೆ. ಆದುದರಿಂದ ಮಾನ್ಯರೇ ೨೫ನೇ ವಾಕ್ಯಾವಳಿಯ ತಿದ್ದುಪಡಿಯನ್ನು ವಿಲೇ ಮಾಡುವವರೆಗೆ ಇದನ್ನು ತಡೆಹಿಡಿದಿಡಿರಿ ಎಂದು ವಿನಂತಿಸಿಕೊಳ್ಳುತ್ತೇನೆ.

* ಬಿ.ಎಲ್.ಎ. ಡಿಬೇಟ್ಸ್, ಸಂ. XXI,
ಪುಟಗಳು ೨೫೦–೫೩, ೧ನೆಯ ಅಕ್ಟೋಬರ್ ೧೯೨೭.

ಅಧ್ಯಕ್ಷರು: ನಾನು ಅದನ್ನು ತಡೆಹಿಡಿದಿಡುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ೭ನೇ ವಾಕ್ಯಾವಳಿಗೆ ನನ್ನ ಎರಡನೆಯ ತಿದ್ದುಪಡಿಗೆ ಸಂಬಂಧಿಸಿದಂತೆ ಗೌರವಾನ್ವಿತ ಮಂತ್ರಿಯವರು ತಾವೂ ಸಹ ಏನಾದರೂ ತಿದ್ದುಪಡಿಯನ್ನು ತರಬಹುದೋ ಎಂಬುದನ್ನು ಪರ್ಯಾಲೋಚಿಸಲು ಸ್ವಲ್ಪ ಕಾಲಾವಕಾಶ ಬೇಕೆಂದು ಇಚ್ಛಿಸುತ್ತಾರೆಂದು ನನಗೆ ತಿಳಿದಿದೆ. ಅದಕ್ಕೆ ನಾವಿಬ್ಬರೂ ಒಪ್ಪುತ್ತೇವೆ.

ಅಧ್ಯಕ್ಷರು: ಗೌರವಾನ್ವಿತ ಸದಸ್ಯರು ತಮ್ಮ ತಿದ್ದುಪಡಿಯನ್ನು ಮಂಡಿಸುವರೋ?

ಡಾ. ಬಿ. ಆರ್. ಅಂಬೇಡ್ಕರ್: ೭ನೇ ವಾಕ್ಯಾವಳಿಗೆ ಇರುವ ನನ್ನ ತಿದ್ದುಪಡಿಯು ಹೀಗಿದೆ: ಮಸೂದೆಗೆ ಕೆಳಗಿನ ವಾಕ್ಯಾವಳಿಯನ್ನು ಜೋಡಿಸಿ.

"೭(ಬಿ) ಸರಕಾರದ ಖಜಾನೆಯಿಂದ ಬರುವ ಅನುದಾನದ ಉದ್ದೇಶಗಳಿಗಾಗಿ ಸರಕಾರವು ವಿಶ್ವವಿದ್ಯಾಲಯವನ್ನು ಮಾತ್ರ ಮನ್ನಿಸತಕ್ಕದು ಮತ್ತು ವಿಶ್ವವಿದ್ಯಾಲಯದ ಮೂಲಕವಲ್ಲದೆ ಅನುದಾನವನ್ನು ಯಾವುದೇ ಕಾಲೇಜಿಗೆ ಕೊಡತಕ್ಕದ್ದಲ್ಲ."

ನಾನು ಈಗಾಗಲೇ ನೋಟೀಸು ಕೊಟ್ಟಿರುವ ತಿದ್ದುಪಡಿಯಲ್ಲಿ "ಕಾಲೇಜ್" ಪದದ ನಂತರ "ಹೊರತಾಗಿ" ಪದವನ್ನು ಸೇರಿಸಲು ನಾನು ಇಚ್ಛಿಸುತ್ತೇನೆ. ಬೆರಳಚ್ಚುಗಾರನ ತಪ್ಪಿನಿಂದಾಗಿ ಅದು ಬಿಟ್ಟು ಹೋಗಿದೆ.

ಮಾನ್ಯರೇ ಈ ತಿದ್ದುಪಡಿಯನ್ನು ಮಂಡಿಸಲು ಇರುವ ಕಾರಣಗಳು ಇವು. ಹೊಸ ಅಧಿನಿಯಮದ ಮೇರೆಗೆ ವಿಶ್ವವಿದ್ಯಾಲಯ ಈ ಹಿಂದೆ ಎಂದೂ ಮಾಡದ ರೀತಿಯಲ್ಲಿ ಶಿಕ್ಷಣದ ಕಾರ್ಯವನ್ನು ನೇರವಾಗಿ ಕೈಗೊಳ್ಳುವ ಹೊಣೆಯನ್ನು ವಹಿಸಿಕೊಡಲಾಗಿದೆ. ಈಗ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಬೋಧಿಸುವ ಹೊಣೆಯನ್ನೂ ಸಹ ವಿಶ್ವವಿದ್ಯಾಲಯದ ಮೇಲೆಯೇ ಹೊರಿಸಲಾಗಿದ್ದಾಗ್ಯೂ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಲಿರುವ ಕಾಲೇಜುಗಳು ವಿಶ್ವವಿದ್ಯಾಲಯದ ಬೋಧನೆಯ ಪ್ರಾಯೋಗಿಕ ಕಾರ್ಯವನ್ನು ಮಾಡುವ ಮುಖ್ಯ ಸಂಸ್ಥೆಗಳು ಎನ್ನುವುದನ್ನು ನಾವು ಒಪ್ಪಲೇಬೇಕು. ಮಾನ್ಯರೇ, ಕಾಲೇಜುಗಳಲ್ಲಿ ನಿಯಂತ್ರಿಸುವ ಮತ್ತು ನಡೆಯುತ್ತಿರುವ ಬೋಧನಾ ಕಾರ್ಯವನ್ನು ಕೆಲಮಟ್ಟಿಗಾದರೂ ಕ್ರಮಬದ್ಧಗೊಳಿಸುವ ಅಧಿಕಾರವನ್ನು ವಿಶ್ವವಿದ್ಯಾಲಯಕ್ಕೆ ಕೊಟ್ಟ ಹೊರತು, ಶಿಕ್ಷಣ ಮಟ್ಟವನ್ನು ಉಳಿಸಿಕೊಂಡು ಹೋಗುವುದಕ್ಕಾಗಿ ವಿಶ್ವವಿದ್ಯಾಲಯವನ್ನು ಹೊಣೆಗಾರರನ್ನಾಗಿ ನಿರ್ಧರಿಸುವುದು ನ್ಯಾಯಯುತವಾದುದು ಎಂದು ನಾನು ಭಾವಿಸುವುದಿಲ್ಲ. ವಿಶ್ವವಿದ್ಯಾಲಯವು ತನ್ನ ಹೊಣೆಯನ್ನು ನಿರ್ವಹಿಸಬೇಕಾದರೆ ಕಾಲೇಜುಗಳನ್ನು ನಿಯಂತ್ರಿಸುವ ಮತ್ತು ಅವುಗಳ ಬೋಧನಾ ಕಾರ್ಯವನ್ನು ಕ್ರಮಬದ್ಧಗೊಳಿಸುವ ಅಧಿಕಾರವನ್ನು ಅದಕ್ಕೆ ಕೊಡಲಿಕ್ಕೇ ಬೇಕು. ಮಾನ್ಯರೇ, ಈಗಿರುವ ಕಾನೂನಿನ ಮೇರೆಗೆ ಈ ಕಾಲೇಜುಗಳನ್ನು ನಿಯಂತ್ರಿಸಲು ಇರುವ ಒಂದೇ ಒಂದು ವಿಧಾನವೆಂದರೆ, ನನಗೆ ತಿಳಿದಂತೆ ವಿಶ್ವವಿದ್ಯಾಲಯವು ತನಿಖಾ ಸಮಿತಿಯನ್ನು ನೇಮಿಸುವುದು ಆಗಿರುತ್ತದೆ. ಈ ತನಿಖಾ ಸಮಿತಿಯು ನಿಶ್ಚಿತ ಕಾಲಾವಧಿಯಲ್ಲಿ ಆಗಾಗ ಈ ಕಾಲೇಜುಗಳಿಗೆ ಭೇಟಿ ಕೊಡುತ್ತದೆ, ತನಿಖೆ ನಡೆಸುತ್ತದೆ ಮತ್ತು ಅವುಗಳ ರಚನೆಯಲ್ಲಿನ ಮತ್ತು ಸಾಧನ ಸಲಕರಣೆಗಳಲ್ಲಿನ ನ್ಯೂನತೆಗಳನ್ನು ಕಂಡುಹಿಡಿಯುತ್ತದೆ. ನನಗೆ ತಿಳಿದಂತೆ ಆ ಸಮಿತಿಯು....

ಶ್ರೀ ಪಿ. ಆರ್. ಚಿಕ್ಕೋಡಿ: ಇಲ್ಲಿ ಕ್ರಮ ವಿಚಾರದ ಪ್ರಶ್ನೆಯಿದೆ. ಗೌರವಾನ್ವಿತ ಸದಸ್ಯರ ತಿದ್ದುಪಡಿಯ ಖಚಿತ ಪದಗಳು ಯಾವುವು ಅನ್ನುವುದನ್ನು ತಿಳಿದುಕೊಳ್ಳಲು ನಾನು ಇಚ್ಛಿಸುತ್ತೇನೆ.

ಅಧ್ಯಕ್ಷರು: ಅದನ್ನು ಓದಿ ಹೇಳಲಾಗಿದೆ. "ಹೊರತಾಗಿ" ಎಂಬ ಪದವನ್ನು ಸೇರಿಸಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ಈಗ ಈ ಕಾಲೇಜುಗಳ ಮೇಲಿನ ನಿಯಂತ್ರಣಕ್ಕೆ ವಿಶ್ವವಿದ್ಯಾಲಯಕ್ಕಿರುವ ಒಂದೇ ಒಂದು ವಿಧಾನವೆಂದರೆ ಈ ತನಿಖಾ ಸಮಿತಿಯ ವರದಿಯ ಮೂಲಕ ತನ್ನ ನಿಬಂಧನೆಗಳನ್ನು ಈ ಕಾಲೇಜುಗಳ ಮೇಲೆ ಜಾರಿಗೊಳಿಸಬಹುದು ಎಂದು ನನಗೆ ಕಂಡುಬರುತ್ತದೆ. ಈ ತನಿಖಾ ಸಮಿತಿಯು ಆಗಿಂದಾಗ್ಗೆ ಸಂದರ್ಶನಾ ಪ್ರವಾಸ ಕೈಗೊಳ್ಳುತ್ತದೆ ಮತ್ತು ಕಾಲೇಜುಗಳ ರಚನೆಯಲ್ಲಿನ ನ್ಯೂನತೆಗಳ ಬಗ್ಗೆ ವರದಿಯನ್ನು ಸಲ್ಲಿಸುತ್ತದೆ ಎಂದು ನಾನು ತಿಳಿದಿದ್ದೇನೆ. ಮತ್ತು ಸ್ಥಾಯಿ ಸಮಿತಿಯ ತನಿಖಾ ಸಮಿತಿಯು ಎತ್ತಿ ತೋರಿಸಿದ ನ್ಯೂನತೆಗಳ ಮೇಲೆ ತನ್ನ ಅಭಿಪ್ರಾಯ ತಿಳಿಸಿ ಸಿಂಡಿಕೇಟಿಗೆ ವರದಿ ಮಾಡುತ್ತದೆ. ಕಾಲೇಜುಗಳನ್ನು ನಿಯಂತ್ರಿಸಲು ವಿಶ್ವವಿದ್ಯಾಲಯವು ರಚಿಸಿದ ಶಿಸ್ತುಪಾಲನಾ ನಿಯಮಗಳನ್ನು ಜಾರಿಗೊಳಿಸುವ ವಿಚಾರದಲ್ಲಿ ಇಂದು ಮಾಡುತ್ತಿರುವುದು ಅದಷ್ಟೆ. ನಾನು ಈಗ ವಿನಂತಿಸುವುದೇನೆಂದರೆ ಅದು ಸಾಕಾಗುವುದಿಲ್ಲ. ಏಕೆಂದರೆ ತನಿಖಾ ಸಮಿತಿಯ ವರದಿಯನ್ನು ಆಧರಿಸಿ ವಿಶ್ವವಿದ್ಯಾಲಯವು ಕೊಟ್ಟ ನಿರ್ದೇಶನಗಳನ್ನು ಸಂಬಂಧಪಟ್ಟ ಕಾಲೇಜುಗಳು ಪಾಲಿಸದಿದ್ದರೆ, ವಿಶ್ವವಿದ್ಯಾಲಯಕ್ಕೆ ಆ ಕಾಲೇಜುಗಳ ಮೇಲೆ ಇರುವ ಏಕೈಕ ಪರಿಣಾಮಕಾರಿಯಾದ ಅಧಿಕಾರವೆಂದರೆ ಆ ಕಾಲೇಜುಗಳನ್ನು ಅಮಾನ್ಯಗೊಳಿಸುವುದು ಮಾತ್ರ ಆಗಿರುತ್ತದೆ. ಮಾನ್ಯರೆ ಈಗ ನಾನು ವಿನಂತಿಸುವುದೇನೆಂದರೆ ಅದು ತುಂಬಾ ಕಠಿಣವಾದ ಕ್ರಮವಾಗುತ್ತದೆ. ಈ ಅಧಿಕಾರವು ಸರ್ವನಾಶದ ಅಧಿಕಾರವಾಗುತ್ತದೆ. ವಾಸ್ತವವಾಗಿ, ಕಾಲೇಜಿನ ರೀತಿ ನಡಾವಳಿಯನ್ನು ತಿದ್ದುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಇಲ್ಲ. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ ಕಾಲೇಜುಗಳ ಮೇಲೆ ವಿಶ್ವವಿದ್ಯಾಲಯಕ್ಕೆ ಇರುವ ನಿಯಂತ್ರಣದ ಸಧ್ಯದ ಪದ್ಧತಿಯ ಮೇರೆಗೆ, ವಿಶ್ವವಿದ್ಯಾಲಯವು ಕಾಲೇಜನ್ನು ಸಂಯೋಜಿತಗೊಳಿಸಿ ಉಳಿಸಬಹುದು, ಅಸಂಯೋಜಿಸಿ ಅಳಿಸಬಹುದು. ವಿಶ್ವವಿದ್ಯಾಲಯವು ಸಧ್ಯದ ಪದ್ಧತಿಯ ಮೇರೆಗೆ ಅತ್ಯಂತ ಕಠಿಣ ದಂಡನೆಗೊಳಪಟ್ಟ ಕಾಲೇಜನ್ನು ಅಸಂಯೋಜಿಸುವ ಕ್ರಮವನ್ನು ತೆಗೆದುಕೊಳ್ಳದೆಯೇ ಶಿಸ್ತನ್ನು ಜಾರಿಯಲ್ಲಿ ತರಬಲ್ಲದು ಮತ್ತು ಶಿಸ್ತು ನಿಯಮಗಳನ್ನು ಪಾಲಿಸುವಂತೆ ಕಾಲೇಜುಗಳನ್ನು ಒತ್ತಾಯಿಸುವ ಅಧಿಕಾರವನ್ನೂ ಹೊಂದಿದೆ. ಮಾನ್ಯರೇ, ಈಗ ಸದರೀ ಕಾಲೇಜುಗಳನ್ನು ಅಸಂಯೋಜಿಸುವಂಥ ಕಠಿಣ ಕ್ರಮವನ್ನು ತೆಗೆದುಕೊಳ್ಳದೆಯೇ ಕಾಲೇಜಿನ ರೀತಿ ನಡಾವಳಿಯನ್ನು ತಿದ್ದಲು ಮತ್ತು ವಿಶ್ವವಿದ್ಯಾಲಯವು ಕೊಟ್ಟ ನಿರ್ದೇಶನಗಳನ್ನು ಆ ಕಾಲೇಜುಗಳು ಪಾಲಿಸುವಂತೆ ಒತ್ತಾಯಿಸಲು ಈ ವಿಶ್ವವಿದ್ಯಾಲಯಕ್ಕೆ ಅಧಿಕಾರವನ್ನು ಕೊಡುತ್ತದೆ. ಆದುದರಿಂದ ಸರಕಾರವು ವಿಶ್ವವಿದ್ಯಾಲಯವನ್ನು ಒಂದು ಘಟಕಾಂಗವಾಗಿ ಪರಿಗಣಿಸಿದರೆ– ಹಾಗೆ ಮಾಡಲೇಬೇಕು ಎಂದು ನಾನು ವಿನಂತಿಸುತ್ತೇನೆ– ಮತ್ತು ಕೊಡಲಾಗಿರುವ ಅನುದಾನವನ್ನು ಆಯಾ ಕಾಲೇಜುಗಳಿಗೆ ವಿಶ್ವವಿದ್ಯಾಲಯದ ಮೂಲಕ ಹಂಚಿದರೆ ಅಥವಾ ಸಾಧ್ಯವಿದ್ದರೆ ವಿಶ್ವವಿದ್ಯಾಲಯದ ಶಿಫಾರಸಿನ ಮೇಲೆ ಹಂಚಿದರೆ, ಆಗ ವಿಶ್ವವಿದ್ಯಾಲಯವು ತನ್ನ ಶಿಸ್ತು ನಿಯಮಗಳನ್ನು ಕಾಲೇಜುಗಳ ಮೇಲೆ ಚಲಾಯಿಸಲು ಅಗತ್ಯವಾದ ಅಧಿಕಾರವನ್ನು ಪಡೆದುಕೊಳ್ಳುತ್ತದೆ. ಈ ಉದ್ದೇಶವನ್ನು ಅಂದರೆ ತಪ್ಪಿತಸ್ಥ ಕಾಲೇಜಿನ ಮೇಲೆ ತನ್ನ ಶಿಸ್ತುಪಾಲನಾ ನಿಯಮಗಳನ್ನು ಜಾರಿಗೊಳಿಸಿ ಆ ಉದ್ದೇಶವನ್ನು ಪರಿಣಾಮಕಾರಿಯಾದುದನ್ನಾಗಿ ಮಾಡಲು ವಿಶ್ವವಿದ್ಯಾಲಯವನ್ನು ಸಮರ್ಥಗೊಳಿಸಲು ವಿಶ್ವವಿದ್ಯಾಲಯಕ್ಕೆ ಕೊಡಬಹುದಾದ ಬೇರೆ ಯಾವುದೇ ಅಧಿಕಾರ ಇಲ್ಲ ಎಂದೇ ನಾನು ಭಾವಿಸುತ್ತೇನೆ. ಮಾನ್ಯರೇ, ಈಗ

ಕಾಲೇಜುಗಳ ಮೇಲೆ ಹಣಕಾಸಿನ ನಿಯಂತ್ರಣವನ್ನು ವಿಶ್ವವಿದ್ಯಾಲಯ ಹೊಂದಿರಬೇಕೆಂಬ ಈ ಅಭಿಪ್ರಾಯವನ್ನು ಇಂಗ್ಲೆಂಡಿನ "ರಾಯಲ್ ಕಮೀಷನ್ ಆನ್ ಯೂನಿವರ್ಸಿಟಿ ಎಜ್ಯುಕೇಶನ್" ಸಹ ಹೇಳಿದೆ. ತಮ್ಮ ವರದಿಯ ೪೧ನೇ ಪ್ಯಾರಾದಲ್ಲಿ ಅವರು ಹೀಗೆ ಹೇಳಿರುತ್ತಾರೆ.

> "ಧನಬಲವು ನಿಜವಾಗಿಯೂ ವಿಶ್ವವಿದ್ಯಾಲಯವು ತನಗೆ ಸಂಬಂಧಪಟ್ಟಿರುವ ಬೋಧನೆಯನ್ನು ವ್ಯವಸ್ಥೆಗೊಳಿಸಬೇಕಾದರೆ, ಹೊಂದಿರಲೇಬೇಕಾದ ನಿಯಂತ್ರಣದ ಮಹತ್ವದ ಸಾಧನವಾಗಿದೆ. ವೇಲ್ಸ್ ಮತ್ತು ಸ್ಕಾಟಲೆಂಡ್‌ಗಳನ್ನು ಹೊರತುಪಡಿಸಿ ಇತರ ಎಲ್ಲ ಆಧುನಿಕ ವಿಶ್ವವಿದ್ಯಾಲಯಗಳು ರಾಜ್ಯ ಮತ್ತು ಮುನಿಸಿಪಾಲಿಟಿಯ ಅನುದಾನಗಳನ್ನು ಹಂಚಿಕೊಡುವುದಕ್ಕೆ ಸಂಬಂಧಪಟ್ಟಂತೆ ತಮ್ಮ ಮನೆಯಲ್ಲಿ ತಾವೇ ಒಡೆಯರಾಗಿದ್ದಾರೆ. ಏಕೆಂದರೆ ವಿಶ್ವವಿದ್ಯಾಲಯವು ಒಂದು ಘಟಕವಾಗಿರುವುದೇ ಹೊರತು ಅನೇಕ ಘಟಕಗಳ ಗುಂಪಾಗಿಲ್ಲ."

ಇದೇ ತತ್ವವನ್ನು ಲಂಡನ್ ವಿಶ್ವವಿದ್ಯಾಲಯಕ್ಕೂ ಅನ್ವಯಿಸಬೇಕೆಂದು ಇದೇ ವರದಿಯಲ್ಲಿ ಆಯೋಗದವರು ಶಿಫಾರಸು ಮಾಡಿದ್ದಾರೆ ಮತ್ತು ನನ್ನ ತಿದ್ದುಪಡಿಯೂ ಸಹ "ರಾಯಲ್ ಕಮೀಷನ್ ಆನ್ ಯೂನಿವರ್ಸಿಟಿ ಎಜ್ಯುಕೇಶನ್ ಇನ್ ಲಂಡನ್"ದವರ ಈ ಮಹತ್ವದ ಶಿಫಾರಸನ್ನೇ ಆಧರಿಸಿದೆ. ಈ ಸಂಬಂಧದಲ್ಲಿ ಮುಂಬೈ ವಿಶ್ವವಿದ್ಯಾಲಯದ ರಚನೆಯು ಪ್ರಾರಂಭದಲ್ಲಿ ಲಂಡನ್ ವಿಶ್ವವಿದ್ಯಾಲಯದ ರಚನೆಯನ್ನೇ ಮೂಲಭೂತವಾಗಿ ಆಧರಿಸಿತ್ತು ಎನ್ನುವುದನ್ನು ಎತ್ತಿ ತೋರಿಸಲು ಇಚ್ಛಿಸುತ್ತೇನೆ. ನಾವೂ ಸಹ ಈ ಮಸೂದೆಯಲ್ಲಿ ರಾಯಲ್ ಕಮೀಷನ್ನಿನ ಪರಿಣಾಮವಾಗಿ ಜಾರಿಗೊಳಿಸಲಾದ ಸುಧಾರಣೆಗಳ ಮೇರೆಗೆ ಲಂಡನ್ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳ ಸ್ಥಾನಕ್ಕೇನೇ ಮುಂಬಯಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳನ್ನು ಸೇರಿಸಲು ಅಥವಾ ಸಮೀಕರಿಸಲು ಉದ್ದೇಶಿಸಿದ್ದೇವೆ ಎಂದು ನಾನು ಭಾವಿಸುತ್ತೇನೆ. ಎರಡೂ ಸಂದರ್ಭಗಳಲ್ಲಿನ ಪರಿಸ್ಥಿತಿ ಒಂದೇ ಆಗಿದೆ. ಲಂಡನ್ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳ ಮತ್ತು ವಿಶ್ವವಿದ್ಯಾಲಯದ ಸಂಬಂಧಗಳನ್ನು ಕ್ರಮಪಡಿಸಲು ಗೊತ್ತುಪಡಿಸಲಾದ ನಿಯಮವನ್ನು ಅದೇ ಸ್ವರೂಪದ ಅನುಕೂಲಕ್ಕಾಗಿ ಮುಂಬೈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳ ಮತ್ತು ಮುಂಬೈ ವಿಶ್ವವಿದ್ಯಾಲಯದ ಸಂಬಂಧಗಳನ್ನು ಕ್ರಮಪಡಿಸಲು ಅನ್ವಯಿಸಬೇಕು ಎಂದು ನಾನು ಭಾವಿಸುತ್ತೇನೆ. ಅನುದಾನಗಳ ಬಗ್ಗೆ ಶಿಫಾರಸು ಮಾಡುವ ವಿಷಯಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯವು ಬಹುತೇಕ ತಪ್ಪಾಗಿ ನಡೆದುಕೊಳ್ಳಬಹುದು ಎಂಬ ಆಧಾರದ ಮೇಲೆ ಅಲ್ಪಸ್ವಲ್ಪ ತಕರಾರು ಇರಬಹುದು. ಯಾವುದೇ ನಿರ್ದಿಷ್ಟ ಕಾಲೇಜಿನ ವಿರುದ್ಧ ವಿಶ್ವವಿದ್ಯಾಲಯಕ್ಕೆ ಯಾವುದೇ ಖಾಸಗೀ ದ್ವೇಷ ಇರುತ್ತದೆ ಎಂಬ ಊಹೆಗೆ ಯಾವುದೇ ನ್ಯಾಯಯುತ ಸಮರ್ಥನೆ ಇರಲಾರದು ಎಂದು ನಾನು ಭಾವಿಸುತ್ತೇನೆ. ಹೊಸ ಅಧಿನಿಯಮದ ಮೇರೆಗೆ ವಿಶ್ವವಿದ್ಯಾಲಯವು ತಮ್ಮ ಹುಚ್ಚು ಮನಸ್ಸಿನಿಂದ ಮತ್ತು ಖಾಸಗಿ ಉದ್ದೇಶಗಳಿಗಾಗಿ ಒಂದು ನಿರ್ದಿಷ್ಟ ಕಾಲೇಜಿನ ಹಿತಾಸಕ್ತಿಗಳನ್ನು ಬಲಿಕೊಡುವಂಥ ಬೇಜವಾಬ್ದಾರಿಯ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ ಎಂದು ನಾನು ಭಾವಿಸುವುದಿಲ್ಲ. ಆದುದರಿಂದ ಈ ಎಲ್ಲ ಆಧಾರಗಳ ಮೇರೆಗೆ ನನ್ನ ತಿದ್ದುಪಡಿಯನ್ನು ಅನುಮತಿಸಬೇಕು ಎಂದು ವಿನಂತಿಸುತ್ತೇನೆ.

## (ಚರ್ಚೆಯ ಪುನರಾರಂಭ)

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ ಈ ತಿದ್ದುಪಡಿಯ ಹಣೇಬರಹ ಏನು ಆಗುತ್ತದೆ ಎಂಬುದು ನನಗೆ ತಿಳಿಯದೇ ಇದ್ದಾಗ್ಯೂ ಈ ತಿದ್ದುಪಡಿಯಲ್ಲಿ ಒಳಗೊಂಡಿರುವ ತತ್ವವನ್ನು ಒಪ್ಪಿ ಕೊಂಡಿರುವ ಹಲವಾರು ಗೌರವಾನ್ವಿತ ಸದಸ್ಯರು ಇಲ್ಲಿರುತ್ತಾರೆಂಬುದನ್ನು ತಿಳಿದು ನನಗೆ ತುಂಬಾ ಸಂತೋಷವಾಗಿದೆ. ಈ ತಿದ್ದುಪಡಿಗೆ ಮಾಡಲಾದ ಎಲ್ಲ ಚಿಕ್ಕ ಪುಟ್ಟ ತಕರಾರುಗಳಿಗೂ ಉತ್ತರಿಸಿ ಈ ಸದನದ ಸಮಯವನ್ನು ಹಾಳು ಮಾಡಲು ನಾನು ಇಚ್ಛಿಸುವುದಿಲ್ಲ. ಆದರೆ ನಾನು ಸೂಚಿಸಿದ ತಿದ್ದುಪಡಿಯನ್ನು ನಾನು ಅರ್ಥಮಾಡಿಕೊಳ್ಳಲು ಸಮರ್ಥನಾಗಿರುವ ಮಟ್ಟಿಗೆ ಮೊದಲನೆಯದಾಗಿ ಒಂದು ಸಂಗತಿಯನ್ನು ಎತ್ತಿ ಹೇಳಲು ಇಚ್ಛಿಸುತ್ತೇನೆ. ಅಂದರೆ ಅನುದಾನವನ್ನು ಹಂಚುವ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಅರ್ಥದಲ್ಲಿ ಇದು ವಿಶ್ವವಿದ್ಯಾಲಯವನ್ನು ಏಕಮೇವ ತೀರ್ಪುಗಾರನನ್ನಾಗಿ ಮಾಡುತ್ತದೆ ಎಂದು ನಾನು ಭಾವಿಸುವುದಿಲ್ಲ.

ನಾನು ಹೇಳಬೇಕಾದುದೆಲ್ಲವೂ ಇಷ್ಟೆ. ಅನುದಾನವನ್ನು ವಿಶ್ವವಿದ್ಯಾಲಯದ ಮೂಲಕವೇ ಹಂಚ ತಕ್ಕದ್ದು. ಅದು ಅನುದಾನದ ಹಣವನ್ನು ಮಂಜೂರು ಮಾಡುವ ಮಂತ್ರಿಯವರ ಅಧಿಕಾರವನ್ನು ಕಿತ್ತುಕೊಳ್ಳುವುದಿಲ್ಲ. ಈ ತಿದ್ದುಪಡಿಯಲ್ಲಿ ಏನೇ ಇದ್ದಾಗ್ಯೂ ಸಹ ಅನುದಾನವನ್ನು ಮಾಡುವಲ್ಲಿ ಅವರೇ ಕೊನೆಯ ನಿರ್ಣಾಯಕ ಅಧಿಕಾರಿಯಾಗಿರುತ್ತಾರೆ. ವಿಶ್ವವಿದ್ಯಾಲಯದಂಥ ಮಹತ್ವದ ಸಂಸ್ಥೆಯೊಂದಿಗೆ ಅನುದಾನಕ್ಕೆ ಸಂಬಂಧಪಟ್ಟಂತೆ ಸಮಾಲೋಚನೆ ಮಾಡುವುದಕ್ಕೆ ಗೌರವಾನ್ವಿತ ಶಿಕ್ಷಣ ಮಂತ್ರಿಗಳಿಗೆ ಯಾವುದಾದರೂ ತಕರಾರು ಇದೆ ಎಂದು ನಾನು ಭಾವಿಸುವುದಿಲ್ಲ. ಹಳ್ಳಿಗಾಡಿನಲ್ಲಿರುವ ಕಾಲೇಜುಗಳ ಪರವಾಗಿ ಇರುವ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು ಹಳ್ಳಿಗಾಡಿನಲ್ಲಿರುವ ಕಾಲೇಜುಗಳ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ಸಂಗತಿಗಳನ್ನು ರೂಪಿಸಿಕೊಳ್ಳಬಹುದೆಂದು ಭಯಪಡುವಂಥ ಗೌರವಾನ್ವಿತ ಸದಸ್ಯರು ಸರಕಾರದವರು ಅನುದಾನವೆಂದು ಕೊಡುತ್ತಿರುವ ಹಣವನ್ನು ಕಾಲೇಜಿನವರು ಉಚಿತ ರೀತಿಯಲ್ಲಿ ಖರ್ಚು ಮಾಡುತ್ತಾರೆ ಎಂಬುದನ್ನು ಗಮನಿಸುವುದು ಆ ಸದಸ್ಯರ ಮತ್ತು ಈ ಸದನದ ಪ್ರತಿಯೊಬ್ಬ ಸದಸ್ಯರ ಕರ್ತವ್ಯವಾಗಿದೆ ಎಂದು ನಾನು ಹೇಳಿದರೆ ಅವರೆಲ್ಲ ನನ್ನ ಈ ಹೇಳಿಕೆಯನ್ನು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಕರಾಕರಣೆಯ ಮೂಲಕ ಸಂಗ್ರಹಿಸಲಾದ ಮತ್ತು ಅನುದಾನವಾಗಿ ಹಳ್ಳಿಗಾಡಿನಲ್ಲಿರುವ ಕಾಲೇಜುಗಳಿಗೆ ಕೊಡಲಾದ ಹಣವು ಸರಿಯಾಗಿ ಖರ್ಚಾಗಿದೆಯೋ ಅಥವಾ ಇಲ್ಲವೋ ಅನ್ನುವುದಕ್ಕೆ ಸಂಬಂಧಿಸಿದಂತೆ ಮಂತ್ರಿಯವರಿಗೆ ಸಲಹೆ ಮಾಡಲು ವಿಶ್ವವಿದ್ಯಾಲಯಕ್ಕಿಂತ ಉತ್ತಮವಾದ ಬೇರೊಂದು ಸಂಸ್ಥೆ ಇರಲಾರದೆಂದು ನಾನು ಭಾವಿಸುತ್ತೇನೆ. ಈ ಮಸೂದೆಯನ್ನು ಪಾಸು ಮಾಡಿಸಿಕೊಂಡು ತಾವು ಪೋಷಕರಾಗುವ ಆ ಮಹತ್ವದ ಸಂಸ್ಥೆಯ ಅಭಿಪ್ರಾಯಗಳನ್ನು ಗೌರವಾನ್ವಿತ ಮಂತ್ರಿಗಳು ತಿರಸ್ಕರಿಸಲಾರರೆಂದೇ ನನ್ನ ಭಾವನೆ.

ಗೌರವಾನ್ವಿತ ಸದಸ್ಯರಾದ ಶ್ರೀಜೈರಾಮದಾಸ ಅವರು ಎತ್ತಿದ ಮತ್ತು ಆಡಳಿತ ಪಕ್ಷಗಳವರು ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ ಒಂದು ಅಂಶವಿದೆ. ಅವರ ಹೇಳಿಕೆಯಂತೆ ಈ ತಿದ್ದುಪಡಿಯು ಮಂತ್ರಿಗಳ ಮೇಲಿನ ಈ ಸದನದ ನಿಯಂತ್ರಣವನ್ನು ಕಡಿಮೆಗೊಳಿಸುತ್ತದೆ. ನನ್ನ ತಿದ್ದುಪಡಿಯ ಪರಿಣಾಮ ಹಾಗೆ ಮಾಡುತ್ತದೆಂಬುದು ನನಗೆ ತಿಳಿಯದು. ಈಗ ತಾನೇ ನಾನು ಹೇಳಿದಂತೆ ನನ್ನ ತಿದ್ದುಪಡಿಯ ಒಂದೇ ಒಂದು ಉದ್ದೇಶವೆಂದರೆ ಮಂತ್ರಿಗಳ ಕೈಗಳನ್ನು ಬಲಪಡಿಸುವುದು. ಈ ಉದ್ದೇಶ ಸ್ಪಷ್ಟವಾಗಿರದಿದ್ದರೆ, ಅದರ ಅರ್ಥವನ್ನು ಸ್ಪಷ್ಟಪಡಿಸುವಂಥ ಯಾವುದೇ ತಿದ್ದುಪಡಿಯನ್ನು ಗೌರವಾನ್ವಿತ ಮಂತ್ರಿಗಳು ತಂದರೆ

ಆ ತಿದ್ದುಪಡಿಯನ್ನು ಒಪ್ಪಲು ನಾನು ಸಿದ್ಧನಿದ್ದೇನೆ. ಮಂತ್ರಿಗಳ ಮೇಲಿರುವ ಈ ಸದನದ ಅಧಿಕಾರವನ್ನು ಅಥವಾ ಮಂತ್ರಿಗಳ ಅಧಿಕಾರವನ್ನು ಅದು ಹೇಗೆ ಸಂಕುಚಿತಗೊಳಿಸುತ್ತದೆ ಅನ್ನುವುದು ನನಗೆ ತಿಳಿಯದಾಗಿದೆ. ಈ ಅನುದಾನಗಳನ್ನು ನೀಡಲು ಈ ತಿದ್ದುಪಡಿಯ ಮೇರೆಗೂ ಸಹ ಮಂತ್ರಿಗಳೇ ಕೊನೆಯ ಅಧಿಕಾರಿ ಗಳಾಗಿದ್ದಾರೆ. ಈ ತಿದ್ದುಪಡಿಯ ಒಂದೇ ಒಂದು ಉದ್ದೇಶವೆಂದರೆ ವಿಶ್ವವಿದ್ಯಾಲಯವನ್ನು ಒಂದು ಮಾಧ್ಯಮವನ್ನಾಗಿಸಿಕೊಂಡು ಅದರೊಡನೆ ಅನುದಾನ ಮಂಜೂರು ಮಾಡುವಾಗ ಸಮಾಲೋಚಿಸಬೇಕು ಎಂಬುದೇ ಆಗಿದೆ. ಮಂತ್ರಿಗಳ ಅಧಿಕಾರದ ಮೇಲೆಯೇ ಆಗಲೀ ಅಥವಾ ಮಂತ್ರಿಗಳ ಮೇಲಿರುವ ಈ ಸದನದ ನಿಯಂತ್ರಣದ ಮೇಲೆಯೇ ಆಗಲಿ ಯಾವುದೇ ತೀವ್ರತರವಾದ ಪರಿಮಿತಿ ಇದೆ ಎಂದು ನನಗೆ ಅನ್ನಿಸುವುದಿಲ್ಲ. ಆದರೆ ಮಂತ್ರಿಗಳು ಒದಗಿಸಿದ ಮೊತ್ತವನ್ನು ಯುಕ್ತ ರೀತಿಯಲ್ಲಿ ವೆಚ್ಚ ಮಾಡಲಾಗಿದೆಯೇ ಎನ್ನುವುದನ್ನು ನಿರ್ಣಯಿಸಲು ಈ ಸದನಕ್ಕೆ ಉತ್ತಮ ಅವಕಾಶ ದೊರೆಯುತ್ತದೆ. ಈ ಮಾತುಗಳೊಂದಿಗೆ ನನ್ನ ತಿದ್ದುಪಡಿಯನ್ನು ಈ ಸದನಕ್ಕೆ ಒಪ್ಪಿಸುತ್ತೇನೆ.

## ೯

# ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮ*
# ತಿದ್ದುಪಡಿ ಮಸೂದೆ: ೩*
# ವಿಶ್ವವಿದ್ಯಾಲಯದಲ್ಲಿ ರೆಕ್ಟರರ (Rector) ನೇಮಕಾತಿ

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಜಾಧವ ಅವರು ತಂದ ತಿದ್ದುಪಡಿಯನ್ನು ಈಗ ನಾನು ಸಮರ್ಥಿಸುವವನಿದ್ದೇನೆ. ನನಗಿಂತ ಮುಂಚಿನ ಗೌರವಾನ್ವಿತ ಸದಸ್ಯರು ವಿಶ್ವವಿದ್ಯಾಲಯದ ಸಧ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಹುದ್ದೆಯು ವಿಶ್ವವಿದ್ಯಾಲಯದ ಅಲ್ಪ ಸಂಪನ್ಮೂಲಗಳ ಮೇಲೆ ಹೆಚ್ಚಿನ ಹೊರೆಯಾಗುತ್ತದೆ ಎಂದು ಹೇಳಿದರು. ಅಂಥ ಆ ವಾದವು ಸುಸಂಬಂಧ್ಧವಾದುದಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಹುದ್ದೆಯು ಆಡಳಿತ ದೃಷ್ಟಿಯಿಂದ ಅನಾವಶ್ಯಕವಾದುದು ಎಂಬುದು ತನ್ನ ಅಭಿಪ್ರಾಯ. ಮಾನ್ಯರೇ, ೧೯೧೪ರಲ್ಲಿ ಮೆಂಚೆಸ್ಟರ್ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಸರ್ ಆಲ್ಫ್ರೆಡ್ ಹಾಪಕಿನ್ಸ್ ಅವರನ್ನು ಈ ವಿಶ್ವವಿದ್ಯಾಲಯವು ಉದ್ದೇಶಿಸಿದ ಸಂಶೋಧನಾ ಯೋಜನೆಯ ಬಗ್ಗೆ ಸಲಹೆ ಕೊಡಲು ಕರೆಸಲಾಗಿತ್ತು ಎಂದು ನನಗೆ ತಿಳಿದಿದೆ. ಮತ್ತು ಮಾನ್ಯರೇ, ಆ ಅಧಿಕಾರಿಯು ಈ ಹುದ್ದೆ ಅವಶ್ಯವಿಲ್ಲ ಎಂದು ವರದಿಯನ್ನು ಕೊಟ್ಟಿದ್ದಾರೆ ಎಂದೂ ನನಗೆ ತಿಳಿದುಬಂದಿದೆ. ವಿಶ್ವವಿದ್ಯಾಲಯ ಸುಧಾರಣಾ ಸಮಿತಿಯು ೯ನೇ ಪುಟದಲ್ಲಿ ಈ ಕೆಳಗಿನಂತೆ ವರದಿ ಮಾಡಿದೆ.

> "ವೇತನ ಪಡೆಯುವವರೊಬ್ಬರು ವಿಶ್ವವಿದ್ಯಾಲಯದ ಆಡಳಿತ ಮುಖ್ಯಸ್ಥನಾಗಿರುವುದಕ್ಕೆ ಅವರ ಸಮ್ಮತಿಯಿರಲಿಲ್ಲ ಮತ್ತು ಪೂರ್ಣಾವಧಿಯ ಕುಲಸಚಿವ (Registrar)ರನ್ನು ಮತ್ತು ಮ್ಯಾಟ್ರಿಕ್ಯೂಲೇಶನ್ ಮಂಡಳಿಗೆ ಪೂರ್ಣಾವಧಿಯ ಕಾರ್ಯದರ್ಶಿಯನ್ನು ನೇಮಿಸಿಕೊಂಡು ಮತ್ತು ವಿಶ್ವವಿದ್ಯಾಲಯದ ಮತ್ತು ಕಾಲೇಜುಗಳಲ್ಲಿನ ಪ್ರಾಧ್ಯಾಪಕರನ್ನು ಆಡಳಿತದ ಕಾರ್ಯಕ್ಕೆ ಬಳಸಿಕೊಂಡು ಈ ತೊಂದರೆಗಳನ್ನು ಪರಿಹರಿಸಿಕೊಳ್ಳಲು ಸೂಚಿಸಿದ್ದರು."

ಸರ್ ಆಲ್ಫ್ರಡ್ ಹಾಪ್ಕಿನ್ಸ್‌ನ್ನರಂಥ ತಜ್ಞರ ಅಭಿಪ್ರಾಯವು ೧೯೧೪ರಲ್ಲೇ ಹಾಗಿರುವಾಗ ಈ ಮಧ್ಯಂತರದ ಅವಧಿಯಲ್ಲಿ ವಿಶ್ವವಿದ್ಯಾಲಯದ ಮೇಲೆ ಈ ಹುದ್ದೆಯನ್ನು ಒತ್ತಾಯಪೂರ್ವಕ ಹೇರುವಂಥ ಯಾವ ಹೊಸ ಸಂದರ್ಭಗಳು ಇರುವುದೂ ನನಗೆ ಕಂಡುಬರುವುದಿಲ್ಲ. ರೆಕ್ಟರರ ಹುದ್ದೆಗೆ ಆತ ನಿರ್ವಹಿಸಬಹುದಾದ

---

* ಬಿ.ಎಲ್.ಎ. ಡಿಬೇಟ್ಸ್, ಸಂ. XXI,
ಪುಟಗಳು ೨೮೬-೮೭, ೩ನೇಯ ಅಕ್ಟೋಬರ್ ೧೯೨೭.

ಕರ್ತವ್ಯಗಳು ಏನು ಅನ್ನುವುದನ್ನು ಗೊತ್ತುಪಡಿಸಲಾಗಿಲ್ಲ ಎಂಬುದೂ ಸಹ ಕಂಡುಬರುತ್ತದೆ. ವಿಶ್ವವಿದ್ಯಾಲಯ ಸುಧಾರಣಾ ಸಮಿತಿಯ ವರದಿಯ ೧೬೨ನೇ ಪುಟದಲ್ಲಿ ಇದನ್ನು ಹೇಳಲಾಗಿರುವುದು ಕಂಡುಬರುತ್ತದೆ. ಅಂದರೆ ಉಪಕುಲಪತಿಯವರು ವಿಶ್ವವಿದ್ಯಾಲಯದ ಸಾಮಾನ್ಯ ಮೇಲ್ವಿಚಾರಣೆಯನ್ನು ಮಾಡತಕ್ಕುದು ಮತ್ತು ಅಧಿನಿಯಮಗಳನ್ನು, ಶಾಸನಗಳನ್ನು, ಅಧ್ಯಾದೇಶಗಳನ್ನು ಮತ್ತು ಅವುಗಳ ಪಾಲನೆಯನ್ನು ಪರೀಕ್ಷಿಸಲು ಅಧಿಕಾರವನ್ನು ಹೊಂದಿರತಕ್ಕುದು ಎಂದು ಹೇಳಲಾಗಿದೆ. ಮಾನ್ಯರೆ, ಈಗ ರೆಕ್ಟರರ ಸ್ಥಾನಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಸುಧಾರಣಾ ಸಮಿತಿಯೂ ಸಹ ಅದೇ ಪುಟದಲ್ಲಿ ಆತನು ಐದು ವರುಷಗಳ ಅವಧಿಯವರೆಗೆ ಹುದ್ದೆಯಲ್ಲಿರತಕ್ಕುದು ಮತ್ತು ಮರು ನೇಮಕಾತಿಗೆ ಅರ್ಹನಾಗಿರತಕ್ಕುದು ಮತ್ತು ಆತನು ಮುಖ್ಯ ಕಾರ್ಯಾಂಗೀಯ ಮತ್ತು ಅಕೆಡೆಮಿಕ್ ಅಧಿಕಾರಿಯಾಗಿರತಕ್ಕುದು ಮತ್ತು ಅಧಿನಿಯಮ ಶಾಸನಗಳನ್ನು ಮತ್ತು ಅಧ್ಯಾದೇಶಗಳನ್ನು ಪ್ರಾಮಾಣಿಕವಾಗಿ ಪಾಲಿಸಲಾಗುತ್ತಿದೆಯೋ ಎನ್ನುವುದನ್ನು ಗಮನಿಸುವುದು ಮತ್ತು ಈ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಆತ ಹೊಂದಿರತಕ್ಕುದು ಎಂದು ಹೇಳುತ್ತಿದೆ. ಉಪಕುಲಪತಿಗಳ ಹುದ್ದೆಯ ಕರ್ತವ್ಯಗಳು ಮತ್ತು ರೆಕ್ಟರರ ಸ್ಥಾನಕ್ಕೆ ವಹಿಸಿಕೊಡಬಹುದಾದ ಕರ್ತವ್ಯಗಳ ನಡುವೆ ಯಾವುದೇ ಭಿನ್ನತೆ ಇರುವುದು ಕಂಡುಬರುವುದಿಲ್ಲ. ವಿಶ್ವವಿದ್ಯಾಲಯ ಸುಧಾರಣಾ ಸಮಿತಿಯ ವರದಿಯಲ್ಲಿ ಹೇಳಲಾಗಿರುವ ವಿಷಯವು ನಾನು ಈಗ ತಾನೇ ಈ ಸದನದ ಮುಂದೆ ಇಟ್ಟಿರುವಂತೆಯೇ ಇದ್ದರೆ, ಈ ಹುದ್ದೆಯು ಉಪಕುಲಪತಿಯ ಹುದ್ದೆಯಿಂದ ಮತ್ತು ವಿಶ್ವವಿದ್ಯಾಲಯದ ಕುಲಸಚಿವರ ಹುದ್ದೆಯಿಂದ ಹೇಗೆ ಭಿನ್ನವಾದುದು ಆಗುತ್ತದೆ ಎಂದು ನನಗೆ ತಿಳಿಯಲೊಲ್ಲದು. ಏಕೆಂದರೆ ಈ ವರದಿಯ ೧೬೨ನೇ ಪುಟದಲ್ಲಿ ಅದೇ ಸಮಿತಿಯವರು ರೆಕ್ಟರರ ಗೈರುಹಾಜರಿಯಲ್ಲಿ ಕುಲಸಚಿವರು ಅವರ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಹೇಳಲಾಗಿದೆ. ಆದುದರಿಂದ ರೆಕ್ಟರರ ಹುದ್ದೆಯು ಉಪಕುಲಪತಿಗಳ ಮತ್ತು ಕುಲಸಚಿವರ ಹುದ್ದೆಗಿಂತ ಯಾವುದೇ ಅರ್ಥದಲ್ಲಿ ಭಿನ್ನವಾದುದು ಆಗಿದೆ ಎಂದೂ ಮತ್ತು ಆ ಕಾರಣದಿಂದಾಗಿ ಆ ಬಗ್ಗೆ ಬೇರೊಬ್ಬ ಅಧಿಕಾರಿಯನ್ನು ನೇಮಿಸುವ ಅಗತ್ಯತೆ ಇದೆ ಎಂದೂ ನನಗೆ ನಿಜವಾಗಿಯೂ ಕಂಡುಬರುವುದಿಲ್ಲ. ಇದು ಅನಾವಶ್ಯಕವಾಗಿದ್ದು ಸದ್ಯದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಕ್ಕೆ ಅದು ಹೊರೆಯಾಗುತ್ತದೆ. ಈ ಕಾರಣಗಳನ್ನು ಆಧರಿಸಿ ನಾನು ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಜಾಧವ ಅವರ ತಿದ್ದುಪಡಿಯನ್ನು ಸಮರ್ಥಿಸುತ್ತೇನೆ.

* * *

## *(ಚರ್ಚೆಯ ಪುನರಾರಂಭ)

ಡಾ. ಬಿ. ಆರ್. ಅಂಬೇಡ್ಕರ್: ನಾನು ಈಗ ಈ ತಿದ್ದುಪಡಿಯನ್ನು ಸಮರ್ಥಿಸುವವನಿದ್ದೇನೆ.

---

* ಬಿ.ಎಲ್.ಸಿ. ಡಿಬೇಟ್ಸ್, ಸಂ. XXI, ಪುಟಗಳು ೩೨೬–೨೭
೩ನೇ ಅಕ್ಟೋಬರ್ ೧೯೨೭

ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಆಧುನಿಕ ಶೈಕ್ಷಣಿಕ ಅಂಶವನ್ನು ಸೇರಿಸುವುದಕ್ಕಾಗಿ ಪ್ರೊ. ಹ್ಯಾಮಿಲ್ ಅವರು ತಂದ ತಿದ್ದುಪಡಿಯ ಸಮರ್ಥನೆ ಮಾಡಿ ನೀಡಿದ ಭಾಷಣ.

ನಾನು ಬೇರೆ ಬೇರೆ ಕಾಲೇಜುಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯದಲ್ಲಿ ಪಾಲುಗೊಳ್ಳುವುದರ ಪರವಾಗಿ ಇಲ್ಲ. ವಿಶ್ವವಿದ್ಯಾಲಯವು ಬೆಳೆಯಬೇಕಾದರೆ, ಕಾಲೇಜ್ ಸಂಸ್ಥೆಯು ಫ್ಯಾಕಲ್ಟೀ ಸಂಸ್ಥೆಗೆ ಅಧೀನವಾಗಿರಲಿಕ್ಕೇ ಬೇಕು ಎಂದು ಅಭಿಪ್ರಾಯಪಡುವವರಲ್ಲಿ ನಾನೂ ಒಬ್ಬ. ಇದು ನನ್ನ ಸ್ವಂತ ಅನಿಸಿಕೆ. ನನ್ನ ಆ ಅನಿಸಿಕೆಯಲ್ಲಿ ಎಷ್ಟು ಜನ ಗೌರವಾನ್ವಿತ ಸದಸ್ಯರು ಭಾಗಿಯಾಗುತ್ತಾರೋ ನನಗೆ ತಿಳಿಯದು. ಹೀಗೆ ಎಲ್ಲಾ ಪ್ರಾಂಶುಪಾಲರನ್ನು ವಿಶ್ವವಿದ್ಯಾಲಯದ ನಿರ್ವಹಣೆಯಲ್ಲಿ ಪಾಲುಗೊಳ್ಳಲು ಬಿಟ್ಟರೆ, ಅದು ವಿಶ್ವವಿದ್ಯಾಲಯದಲ್ಲಿ ಗುಂಪುಗಾರಿಕೆಗೆ ಎಡೆಮಾಡಿದಂತಾಗುತ್ತದೆ. ಆದರೆ ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಹ್ಯಾಮಿಲ್ಲ ಅವರು ವಿಶ್ವವಿದ್ಯಾಲಯವು ನಡೆದುಕೊಂಡು ಹೋಗುವಂತಾಗಬೇಕಾದರೆ ಅದಕ್ಕೆ ಅವಶ್ಯವಾದ ಆಧುನಿಕ ಜ್ಞಾನದ ಪರಿಚಯವಿದ್ದವರ ಕನಿಷ್ಠ ಬಲವಾದರೂ ವಿಶ್ವವಿದ್ಯಾಲಯದಲ್ಲಿ ಇರಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈಗ ರಚಿತವಾಗಿರುವಂತೆ ವಿಶ್ವವಿದ್ಯಾಲಯದಲ್ಲಿ ಆಧುನಿಕ ಜ್ಞಾನದ ಅಂಶ ಸಾಕಷ್ಟು ಬಲವನ್ನು ಹೊಂದಿಲ್ಲ ಎಂದೂ ಅವರು ಹೇಳಿರುತ್ತಾರೆ. ಮಾನ್ಯರೇ, ಗೌರವಾನ್ವಿತ ಸದಸ್ಯರಾದ ಶ್ರೀ ಹ್ಯಾಮಿಲ್ಲ ಅವರು ಮುಂದಿಟ್ಟ ಈ ಅಂಶವು ವಿಚಾರಿಸಲು ಯೋಗ್ಯವಾದುದು ಎಂದು ನಾನು ಭಾವಿಸುತ್ತೇನೆ. ಆಧುನಿಕ ಜ್ಞಾನದ ಅಂಶವು ವಿಶ್ವವಿದ್ಯಾಲಯದಲ್ಲಿ ಇರುವುದಕ್ಕೆ ಅವಕಾಶ ಕಲ್ಪಿಸುವಾಗ ನಾನು ಈಗಾಗಲೇ ಹೇಳಿರುವ ಕಾರಣಗಳಿಗಾಗಿ ಕಾಲೇಜುಗಳ ಪ್ರಾಂಶುಪಾಲರ ಪ್ರವೇಶವನ್ನು ತಪ್ಪಿಸಬಹುದಾಗಿತ್ತು. ಆದರೆ ಅದು ಈಗ ಸಾಧ್ಯವಿಲ್ಲ ಎಂದು ನನಗೆ ಕಂಡುಬಂದಿದೆ. ಏಕೆಂದರೆ ಇನೇ ವಾಕ್ಯಾವಳಿಯಲ್ಲಿನ ವ್ಯಾಖ್ಯೆಯ ಮೇರೆಗೆ ಶಿಕ್ಷಕರು ಪ್ರಾಧ್ಯಾಪಕರನ್ನೂ ಒಳಗೊಳ್ಳುತ್ತಾರೆ. (Teachers include Professors) ಪ್ರಾಂಶುಪಾಲರು ಪ್ರಾಧ್ಯಾಪಕರಾಗಿರುತ್ತಾರೆ. ಗೌರವಾನ್ವಿತ ಸದಸ್ಯರಾದ ಶ್ರೀ ದಸ್ತೂರ ಅವರ ತಿದ್ದುಪಡಿಯನ್ನು ಒಪ್ಪಲಿ ಅಥವಾ ಬಿಡಲಿ ಅವರು ಒಳಗೆ ಬಂದೇ ಬರುತ್ತಾರೆ. ಅವರ ತಿದ್ದುಪಡಿಯು ಕೇವಲ ವಿವರಣಾತ್ಮಕವಾದುದು ಮತ್ತು ಅದು ಯಾವ ಹೊಸ ಬದಲಾವಣೆಯನ್ನೂ ಹೇಳುವುದಿಲ್ಲ. ಆದಕಾರಣ ನಾನು ಅದನ್ನು ಸಮರ್ಥಿಸುತ್ತೇನೆ.

# ೧೦

# ಮುಂಬಯಿ ವಿಶ್ವವಿದ್ಯಾಲಯ ಅಧಿನಿಯಮ ತಿದ್ದುಪಡಿ ಮಸೂದೆ: ೪*

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ಈ ತಿದ್ದುಪಡಿಯನ್ನು ಸಮರ್ಥಿಸುವವನಿದ್ದೇನೆ. ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಮುನ್‌ಷಿಯವರು ವಿಶ್ವವಿದ್ಯಾಲಯದ ಸುಧಾರಣೆ ಮತ್ತು ವಿಶ್ವವಿದ್ಯಾಲಯದ ಕರ್ತವ್ಯಗಳ ಬಗ್ಗೆ ತಳೆದಿರುವ ಅಭಿಪ್ರಾಯಕ್ಕೆ ನಾನು ಒಪ್ಪಿದ್ದರೆ, ಈ ತಿದ್ದುಪಡಿಯನ್ನು ಸಮರ್ಥಿಸಬೇಕಾದ ಪ್ರಮೇಯವೇ ಬರುತ್ತಿರಲಿಲ್ಲ. ಆದರೆ ವಿಶ್ವವಿದ್ಯಾಲಯದ ಸುಧಾರಣೆಯ ಬಗ್ಗೆ ಹಿತಾಸಕ್ತಿಯನ್ನು ವಹಿಸುತ್ತಿರುವ ಒಬ್ಬ ವ್ಯಕ್ತಿಯಾಗಿ ಮತ್ತು ಹಿಂದುಳಿದ ಕೋಮಿನಿಂದ ಬಂದವನಾಗಿ ನಾನು ಗೌರವಾನ್ವಿತ ಸ್ನೇಹಿತರಾದ ಮುನ್‌ಷಿಯವರೊಂದಿಗೆ ಈ ಬಗ್ಗೆ ಮೂಲಭೂತ ಭಿನ್ನಾಭಿಪ್ರಾಯವನ್ನು ಹೊಂದಿದ್ದೇನೆ. ಮಾನ್ಯರೇ, ಗೌರವಾನ್ವಿತ ಸ್ನೇಹಿತರಾದ ಶ್ರೀ ಮುನ್‌ಷಿಯವರು ವಿಶ್ವವಿದ್ಯಾಲಯವು ಕೇವಲ ಶಾಸನಗಳನ್ನು ಮತ್ತು ನಿಯಮಗಳನ್ನು ರಚಿಸುವ ಉದ್ದೇಶ ಹೊಂದಿದ ಸಂಸ್ಥೆಯಾಗಿದೆ, ಅಂದರೆ ಅದು ಕೇವಲ ಪರೀಕ್ಷೆಗಳನ್ನು ನಡೆಸುವ ಮತ್ತು ಮಸೂದೆಯ ಮೇರೆಗೆ ಪ್ರಾರಂಭಿಸಲು ಉದ್ದೇಶಿಸಿದ ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಸ್ನಾತಕೋತ್ತರ ಉಪನ್ಯಾಸಗಳನ್ನು ಒದಗಿಸುವ ಸಂಸ್ಥೆಯಾಗಿದೆ ಎಂದು ಭಾವಿಸಿದಂತಿದೆ. ಮಾನ್ಯರೇ, ಅದು ವಿಶ್ವವಿದ್ಯಾಲಯದ ಬಗ್ಗೆ ತುಂಬಾ ಸಂಕುಚಿತವಾದ ದೃಷ್ಟಿಕೋನವಾಗಿದೆ. ನಾನು ತಿಳಿದುಕೊಂಡಿರುವಂತೆ ವಿಶ್ವವಿದ್ಯಾಲಯದ ಅತ್ಯಂತ ಮೂಲಭೂತವಾದ ಕಾರ್ಯವೆಂದರೆ ಅಗತ್ಯವುಳ್ಳವರ ಮತ್ತು ಬಡವರ ಮನೆಯ ಬಾಗಿಲಿಗೇನೇ ಅತ್ಯುಚ್ಚ ಶಿಕ್ಷಣವನ್ನು ಕೊಂಡೊಯ್ಯಲು ಅನುಕೂಲತೆಗಳನ್ನು ಒದಗಿಸುವುದು. ಯಾವುದೇ ನಾಗರಿಕ ದೇಶದಲ್ಲಿನ ಯಾವುದೇ ವಿಶ್ವವಿದ್ಯಾಲಯವು ಕೇವಲ ಪರೀಕ್ಷೆಯ ಸಮಸ್ಯೆಗಳ ಬಗ್ಗೆ ಮತ್ತು ಪದವಿಗಳನ್ನು ಕೊಡುವ ಬಗ್ಗೆ ಮಾತ್ರ ವ್ಯವಹರಿಸುತ್ತಿದ್ದರೆ, ಅದು ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಲಾರದು. ಈಗ ಆಧುನಿಕ ವಿಶ್ವವಿದ್ಯಾಲಯಗಳ ಕರ್ತವ್ಯವು ಹಿಂದುಳಿದ ಕೋಮುಗಳವರಿಗೂ ಅತ್ಯುಚ್ಚ ಶಿಕ್ಷಣಕ್ಕಾಗಿ ಅನುಕೂಲತೆಗಳನ್ನು ಒದಗಿಸಿಕೊಡುವುದೇ ಆಗಿದ್ದರೆ, ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ಹಿಂದುಳಿದ ಕೋಮುಗಳವರಿಗೂ ಸ್ವಲ್ಪ ನಿಯಂತ್ರಣವಿರಬೇಕೆಂಬ ಉಪ ಸಿದ್ಧಾಂತವನ್ನು ಒಪ್ಪಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಮಾನ್ಯರೇ, ಆ ಮೂಲಕ ಅತ್ಯುತ್ತಮ ರೀತಿಯಲ್ಲಿ ಪ್ರಯೋಜನಕಾರಿ ಆಗುವಂತೆ ಅನುಕೂಲತೆಗಳನ್ನು

---

* ಬಿ.ಎಲ್.ಸಿ. ಚರ್ಚೆಗಳು ಸಂಪುಟ XXI,
ಪುಟಗಳು ೪೧೪–೪೧೬ ದಿ. ೫ನೇ ಅಕ್ಟೋಬರ್ ೧೯೨೭.

ಶ್ರೀ ನೂರ್ ಅಹಮದ್ ಅವರು ನಾಮ ನಿರ್ದೇಶಿತ ಸಿನೇಟ್ ಸದಸ್ಯರ ಸಂಖ್ಯೆಯನ್ನು ೪೦ರಿಂದ ೫೦ಕ್ಕೆ ಏರಿಸಬೇಕೆಂದು ಸೂಚಿಸಿ ಮುಂಬಯಿ ವಿಶ್ವವಿದ್ಯಾಲಯ ಮಸೂದೆಗೆ ತಂದ ತಿದ್ದುಪಡಿಯನ್ನು ಸಮರ್ಥಿಸಿ ಮಾಡಿದ ಭಾಷಣ.

ಉಪಯೋಗಿಸಿಕೊಳ್ಳಲು ಬೌದ್ಧಿಕವಾಗಿ ಸಮರ್ಥರಾಗಿದ್ದಾಗ್ಯೂ ಹಣದ ಕೊರತೆಯಿಂದಾಗಿ ಅಥವಾ ಇತರ ಯಾವುದೇ ಅಡ್ಡಿ ಆತಂಕಗಳಿಂದಾಗಿ ಅಂಥ ಅನುಕೂಲತೆಗಳನ್ನು ಉಪಯೋಗಿಸಿಕೊಳ್ಳಲು ಆಗದವರಿಗೆ, ಆ ಶಿಕ್ಷಣದ ಸವಲತ್ತುಗಳನ್ನು ಒದಗಿಸಿ ಕೊಡುವ ಒಂದು ಸಾಧನವೆಂಬಂತೆ ನಾನು ವಿಶ್ವವಿದ್ಯಾಲಯವನ್ನು ನೋಡುತ್ತೇನೆ. ಮಾನ್ಯರೇ, ಈಗ ವಿಶ್ವವಿದ್ಯಾಲಯವು ಮುಖ್ಯವಾಗಿ ಬುದ್ಧಿವಂತರಿಗೆ ಮತ್ತು ಶಿಕ್ಷಿತ ವರ್ಗದವರಿಗೆ ಸಂಬಂಧಪಟ್ಟ ಮತ್ತು ವಿಶ್ವವಿದ್ಯಾಲಯವು, ಚೆನ್ನಾಗಿ ಕಾರ್ಯ ನಿರ್ವಹಿಸಬೇಕಾದರೆ ಶಿಕ್ಷಿತ ವರ್ಗದವರ ನಿಯಂತ್ರಣದಲ್ಲೇ ಅದು ಇರುವುದು ಅವಶ್ಯವಾಗಿದೆ ಎಂದು ಹೇಳಲಾಗುತ್ತಿದೆ. ವಿಶ್ವವಿದ್ಯಾಲಯವನ್ನು ನಿಯಂತ್ರಿಸುವವರಾದ ಈ ಕಲಿತ ವರ್ಗದವರು ಸಾಮಾಜಿಕ ಸದ್ಗುಣವೆಂದು ನಾವು ಕರೆಯುತ್ತಿರುವ ಸದ್ಗುಣಗಳನ್ನು ಹೊಂದಿದ್ದರೆ ಈ ತತ್ವವನ್ನು ನಾನು ಒಪ್ಪುತ್ತೇನೆ. ಉದಾಹರಣೆಗೆ ಹೇಳಬೇಕೆಂದರೆ, ಕೆಳವರ್ಗದವರ ಆಸೆ ಆಕಾಂಕ್ಷೆಗಳಿಗೆ ಅವರು ಸಹಾನುಭೂತಿ ಹೊಂದಿದ್ದರೆ ಕೆಳವರ್ಗದವರಿಗೂ ಹಕ್ಕುಗಳುಂಟು ಎಂದು ಅವರು ಒಪ್ಪಿದರೆ, ಆ ಹಕ್ಕುಗಳನ್ನು ಮನ್ನಿಸಬೇಕು ಎಂದು ಒಪ್ಪಿದರೆ, ಆಗ ಬಹುತರವಾಗಿ ಹಿಂದುಳಿದ ಕೋಮುಗಳಿಂದ ಬರುವ ನಾವು ನಮ್ಮ ಅದೃಷ್ಟವನ್ನು ಮುಂದುವರೆದ ಕೋಮುಗಳೆಂದು ಕರೆಯಲಾಗುತ್ತಿರುವವರ ಕೈಗಳಿಗೆ ಒಪ್ಪಿಸಬಹುದು. ಆದರೆ ಮಾನ್ಯರೇ, ಉಚ್ಚ ಮತ್ತು ಶಿಕ್ಷಿತ ವರ್ಗದವರೆಂದು ಕರೆಲಾಗುತ್ತಿರುವವರ ಆಡಳಿತದ ಶತ ಶತಮಾನಗಳ ಕಹಿ ಅನುಭವ ನಮಗೆ ಇರುತ್ತದೆ. ಮಾನ್ಯರೇ, ಈ ದೇಶದಲ್ಲಿ ಜನತೆಯ ಬಹುದೊಡ್ಡ ಭಾಗವನ್ನು ಅಪರಾಧೀ ಜನಾಂಗವೆಂದು ತಿಳಿಯಲಾಗಿದೆ ಎನ್ನುವುದು ಮುಂದುವರಿದ ವರ್ಗಗಳವರಿಗೆ ಶೋಭೆ ತರುವಂಥದು ಅಲ್ಲವೆಂದೇ ನಾನು ಭಾವಿಸುತ್ತೇನೆ. ಈ ದೇಶದಲ್ಲಿ ಅಸ್ಪೃಶ್ಯರು ಎಂದು ಪರಿಗಣಿಸಲಾಗುತ್ತಿರುವ ಜನತೆ ಅಸ್ತಿತ್ವದಲ್ಲಿ ಇದೆ ಎನ್ನುವುದೂ ನಿಜವಾಗಿಯೂ ಅವರಿಗೆ ಶೋಭೆ ತರುವಂಥದಲ್ಲ. ಅವರು ಹಾಗೆ ಇಚ್ಛೆಪಟ್ಟಿದ್ದರೆ ದಲಿತ ವರ್ಗದವರ ಮಟ್ಟವನ್ನು ಎತ್ತರಿಸಬಹುದಾಗಿತ್ತು. ಅಪರಾಧಿಕ ವರ್ಗಗಳವರ ಮಟ್ಟವನ್ನೂ ಅವರು ಎತ್ತರಿಸಬಹುದಾಗಿತ್ತು. ತಮ್ಮ ಸಂಸ್ಕೃತಿಯನ್ನು ಅವರು ನಮ್ಮಲ್ಲಿಗೆ ತರಬಹುದಾಗಿತ್ತು ಮತ್ತು ನಮ್ಮನ್ನೂ ಅವರು ತಮ್ಮ ಸರಿಸಮಕ್ಕೆ ಬೆಳೆಸಬಹುದಿತ್ತು. ಆದರೆ ಅವರು ಹಿಂದೆ ಹಾಗೆ ಎಂದೂ ಮಾಡಿಯೇ ಇಲ್ಲ ಮತ್ತು ಭವಿಷ್ಯದಲ್ಲಿಯೂ ಸಹ ಆ ದಿಶೆಯಲ್ಲಿ ಏನನ್ನೂ ಮಾಡಲು ಅವರು ಇಚ್ಛಿಸುವುದಿಲ್ಲ. ಅವರು ನಮಗೆ ತೋರಿಸಿದ ಕ್ಷಮಾರ್ಹವಲ್ಲದ ನಿರ್ಲಕ್ಷ್ಯದಿಂದಾಗಿ ಮತ್ತು ನಮ್ಮ ಉತ್ಕರ್ಷಕ್ಕೆ ಅವರ ಪ್ರಬಲ ಪ್ರತಿರೋಧದಿಂದಾಗಿ ಅವರು ನಮ್ಮ ನಿಜವಾದ ವೈರಿಗಳೆಂಬುದನ್ನು ಮನಗಾಣಿಸಿಕೊಟ್ಟಿದ್ದಾರೆ. ಈಗ ನಾವು ಎಲ್ಲಿ ಇರುವೆವೋ ಅಲ್ಲಿಯೇ ನಮ್ಮನ್ನು ಇಡಲು ಅವರು ಇಚ್ಛಿಸಿರುತ್ತಾರೆ ಎಂಬ ಬಗ್ಗೆ ಯಾವುದೇ ಸಂಶಯವಿಲ್ಲ. ಕಳೆದ ಕೆಲವು ದಿನಗಳಿಂದ ನಡೆದು ಬಂದ ಚರ್ಚೆಯ ಬಗ್ಗೆ ಉಲ್ಲೇಖಿಸಲು ನಾನು ಬಯಸುವುದಿಲ್ಲ. ಆದರೆ ವಿರೋಧಿ ಪಕ್ಷದವರು ಇಲ್ಲಿಯವರೆಗೆ ಸರಕಾರವು ತನ್ನ ವೈರಿಯೆಂದು ತಿಳಿದುಕೊಂಡವರು ಈಗ ಈ ಉದ್ದೇಶದಿಂದ ಸರಕಾರದ ಪಕ್ಷ ವಹಿಸುತ್ತಿದ್ದಾರೆಂಬ ಸಂಗತಿಯ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ. ನಾಮನಿರ್ದೇಶನದ ಮೂಲಕ ಪ್ರಾತಿನಿಧ್ಯಕ್ಕಾಗಿ ಹಿಂದುಳಿದ ಕೋಮುಗಳವರ ಕ್ಲೇಮನ್ನು ಸೋಲಿಸುವುದರ ಹೊರತಾಗಿ ಅವರ ಈ ನಡವಳಿಕೆಗೆ ಬೇರೆ ಯಾವ ನೆಪವೂ ಇಲ್ಲ. ವರ್ಷವಿಡೀ ಯಾವ ಸರಕಾರವನ್ನು ಅವರು ವಿರೋಧಿಸುತ್ತಿದ್ದಾರೋ ಅದರೊಡನೆ ಈ ಕಾರಣದಿಂದಲೇ ಈಗ ಒಂದಾಗಿರುತ್ತಾರೆ. ಮಾನ್ಯರೇ, ಅಷ್ಟು ಸಂಕುಚಿತ ದೃಷ್ಟಿಯ ಬುದ್ಧಿವಂತರ ಬಗ್ಗೆ ನಮ್ಮಲ್ಲಿ ಯಾವುದೇ ವಿಶ್ವಾಸ ಇರಬಲ್ಲದೋ?

ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಮುನ್‌ಷಿಯವರು ಪ್ರಶ್ನೆಯ ಭೌತಿಕ ಪ್ರಯೋಜನದ

ಹಂಚಿಕೆಗೆ ಸಂಬಂಧಪಟ್ಟಿರುವುದಾಗಿದ್ದರೆ ಅವರು ಸೆನೆಟ್‌ನಲ್ಲಿ ಕೋಮು ಪ್ರಾತಿನಿಧ್ಯಕ್ಕೆ ಬಹುತರವಾಗಿ ಸಮ್ಮತಿಸುತ್ತಿದ್ದೆ ಎಂದು ಹೇಳಿದರು. ಆದರೆ ಹಿಂದುಳಿದ ವರ್ಗದವರು ಏನೇ ಆಗಲಿ ಶಿಕ್ಷಣವು ಅತ್ಯಂತ ಅಗತ್ಯವಾದುದು ಮತ್ತು ಮೌಲಿಕವಾದುದು. ಅದಕ್ಕಾಗಿ ಅವರು ಹೋರಾಡಬಲ್ಲರು ಅನ್ನುವುದನ್ನು ಅರಿತುಕೊಂಡಿರುತ್ತಾರೆ ಎಂದು ನನ್ನ ಈ ಸ್ನೇಹಿತರಿಗೆ ನಾನು ನೆನಪು ಮಾಡಿಕೊಡಲು ಇಚ್ಛಿಸುತ್ತೇನೆ. ನಾನು ಭೌತಿಕ ಪ್ರಯೋಜನಗಳನ್ನು ಬಿಟ್ಟುಕೊಡಬಹುದು. ನಾಗರಿಕತೆಯಿಂದಾಗಿ ದೊರಕಬಹುದಾದ ಸುಖಗಳನ್ನು ನಾವು ಬಿಟ್ಟುಕೊಡಬಹುದು. ಆದರೆ ಅತ್ಯುಚ್ಚ ಶಿಕ್ಷಣದ ಪ್ರಯೋಜನವನ್ನು ಪೂರ್ಣ ಪ್ರಮಾಣದಲ್ಲಿ ಪಡೆದುಕೊಳ್ಳುವ ನಮ್ಮ ಹಕ್ಕನ್ನು ಮತ್ತು ಸದವಕಾಶವನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ. ಶಿಕ್ಷಣವಿಲ್ಲದೆ ತಮ್ಮ ಅಸ್ತಿತ್ವವು ಸುರಕ್ಷಿತವಾಗಿರಲಾರದು ಎಂಬುದನ್ನು ಈಗ ಕಂಡುಕೊಂಡಿರುವುದರಿಂದ ಹಿಂದುಳಿದ ವರ್ಗಗಳವರ ದೃಷ್ಟಿಯಲ್ಲಿ ಈ ಪ್ರಶ್ನೆಯು ಮಹತ್ವದ್ದಾಗಿದೆ. ಈ ಕಾರಣಕ್ಕಾಗಿಯೇ ಸ್ಥಾನಗಳ ಹೆಚ್ಚಳಕ್ಕಾಗಿ ಹೋರಾಟವನ್ನು ನಡೆಸಲಾಗಿದೆ.

ನಾನು ಉಲ್ಲೇಖಿಸಲು ಇಚ್ಛಿಸುವ ಇನ್ನೊಂದು ಅಂಶವಿರುತ್ತದೆ. ಬೇರೆ ಬೇರೆ ಕಾಲೇಜುಗಳ ಪ್ರಾಂಶುಪಾಲರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಟ್ಟಿರುವುದರಿಂದಾಗಿ ನಿರ್ದೇಶಿತ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸುವ ಅವಶ್ಯಕತೆ ಇಲ್ಲ. ಏಕೆಂದರೆ ವಿಶ್ವವಿದ್ಯಾಲಯದಲ್ಲಿ ಪ್ರಾಂಶುಪಾಲರಿಗೆ ನೇರ ಪ್ರಾತಿನಿಧ್ಯವನ್ನು ಕೊಟ್ಟಿರದಿದ್ದರೆ, ಅವರಿಗಾಗಿ ಸರಕಾರವು ಕನಿಷ್ಟಪಕ್ಷ ೧೦ ಸ್ಥಾನಗಳನ್ನಾದರೂ ನೀಡಬೇಕಾಗುತ್ತಿತ್ತು ಎಂದು ಹಲವಾರು ಸಲ ಹೇಳಲಾಗಿದೆ. ಈಗ ಅವರಿಗಾಗಿ ಬೇರೆ ಉಪಬಂಧವನ್ನು ಮಾಡಿಕೊಡುವುದರಿಂದ ಎಲ್ಲ ೪೦ ಸ್ಥಾನಗಳೂ ಹಿಂದುಳಿದ ವರ್ಗದವರಿಗೇನೇ ಹೋಗುತ್ತವೆ. ಮಾನ್ಯರೇ, ಈಗ ಅದೇ ಕಾರಣದಿಂದಲೇ ಹಿಂದುಳಿದ ವರ್ಗದವರ ಪ್ರಾತಿನಿಧ್ಯವನ್ನು ನಿಶ್ಚಿತಗೊಳಿಸುವುದಕ್ಕಾಗಿಯೇ ನಾಮನಿರ್ದೇಶಿತ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಗೌರವಾನ್ವಿತ ಸದಸ್ಯರಾದ ಶ್ರೀ ಹ್ಯಾಮಿಲ್ಲ ಅವರ ತಿದ್ದುಪಡಿಯ ಪರಿಣಾಮವಾಗಿ ನೇರ ಪ್ರಾತಿನಿಧ್ಯವನ್ನು ಪಡೆಯುವ ಬೇರೆ ಬೇರೆ ಕಾಲೇಜುಗಳ ಪ್ರಾಂಶುಪಾಲರುಗಳು ಅವಶ್ಯವಾಗಿ ಹಿಂದುಳಿದ ಕೋಮುಗಳವರ ಸ್ನೇಹಿತರಾಗಿರುತ್ತಾರೆಂದು ಯಾವುದೇ ಭರವಸೆಯನ್ನು ಎಂದೂ ಕೊಡಲು ಆಗದು. ಈ ಪ್ರಾಂಶುಪಾಲರ ಸಾಕಷ್ಟು ಅನುಭವ ನನಗಿದೆ. ಮತ್ತು ಸೆನೇಟಿಗೆ ಆಯ್ಕೆಯಾಗುವವರು ಮೇಲಿನ ವರ್ಗದವರೇ ಆಗಿರುತ್ತಾರೆ ಮತ್ತು ಶಿಕ್ಷಣಕ್ಕಾಗಿ ಹಾತೊರೆಯುತ್ತಿರುವ ಹಿಂದುಳಿದ ವರ್ಗದವರ ರಕ್ಷಣೆಗೆ ಅವರು ಎಂದೂ ಬರುವುದಿಲ್ಲ ಎಂಬುದು ನನಗೆ ಖಚಿತವಾಗಿದೆ. ಸೆನೇಟಿನಲ್ಲಿರುವ ಮೇಲಿನ ವರ್ಗದವರ ಬಲಕ್ಕೆ ಹತ್ತು ಸ್ಥಾನಗಳನ್ನು ಗೌರವಾನ್ವಿತ ಮಂತ್ರಿಗಳು ಕೂಡಿಸಿದರೆ, ಅವರು ಹಿಂದುಳಿದ ಕೋಮಿನವರ ರಕ್ಷಣೆಗೆ ಬರಬೇಕು ಮತ್ತು ತೂಕವನ್ನು ಸಮಗೊಳಿಸಬೇಕು. ಮಸೂದೆಯಲ್ಲಿ ಈಗಾಗಲೇ ಗೊತ್ತುಪಡಿಸಲಾಗಿರುವ ಸ್ಥಾನಗಳಿಗೆ ಹತ್ತು ಹೆಚ್ಚಿನ ಸ್ಥಾನಗಳನ್ನು ಸೇರಿಸುವುದರ ಮೂಲಕ ಇದನ್ನು ಸಾಧಿಸಬಹುದು. ಮಾನ್ಯರೇ, ನಾವು ನಮ್ಮ ಭಯವನ್ನು ಮತ್ತು ಸಂಶಯಗಳನ್ನು ಹೇಳಿರುತ್ತೇವೆ. ಹಿಂದುಳಿದ ವರ್ಗಗಳವರ ಭಾವನೆಗಳು ಅಷ್ಟು ತೀವ್ರವಾಗಿರುವಾಗ ಮತ್ತು ಸೆನೇಟಿನಲ್ಲಿ ತಮಗೆ ಪ್ರಾತಿನಿಧ್ಯ ದೊರೆಯದ ಹೊರತು ನಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ ಎಂದು ಅವರು ಭಾವಿಸುತ್ತಿರುವಾಗ ಇಂಥ ವಿಷಯದಲ್ಲಿ ಸರಕಾರವು ತನ್ನ ಆಡಳಿತಾತ್ಮಕ ಬಲವನ್ನು ಉಪಯೋಗಿಸಿ ಹಿಂದುಳಿದ ವರ್ಗದವರನ್ನು ಮೇಲಿನ ವರ್ಗದವರ ದಯೆಗೆ ಬಿಟ್ಟುಕೊಡುವುದು ಯುಕ್ತವಾದುದೇ ಎನ್ನುವುದನ್ನು ಸರಕಾರವು ವಿಚಾರಿಸಬೇಕು. ಈ ಪ್ರಶ್ನೆಯನ್ನು ಈ ಸದನದ

ಮುಕ್ತ ಮತದಾನಕ್ಕೆ ಬಿಟ್ಟುಕೊಡಬೇಕು ಎಂದು ನಾನು ಈ ಸದನದ ಧುರೀಣರಿಗೆ ಮನವಿ ಮಾಡಿಕೊಳ್ಳುತ್ತೇನೆ ಮತ್ತು ಹಾಗೆ ಮಾಡುವುದೇ ವಿವೇಕವೆಂಬುದು ನನ್ನ ಅಭಿಪ್ರಾಯ. ಸದನವು ವಿವೇಚಿಸಿ ತಕ್ಕ ನಿರ್ಧಾರವನ್ನು ಕೈಗೊಳ್ಳಲಿ. ನನ್ನ ಈ ಮಾತುಗಳೊಂದಿಗೆ ಈ ತಿದ್ದುಪಡಿಯನ್ನು ಅನುಮೋದಿಸುತ್ತೇನೆ.

# ೧೧

# ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮ ತಿದ್ದುಪಡಿ ಮಸೂದೆ: ೧*

ಡಾ. ಬಿ. ಆರ್. ಅಂಬೇಡ್ಕರ್: ಈ ಪರಿಚ್ಛೇದವನ್ನು ಅರ್ಥ ಮಾಡಿಕೊಳ್ಳುವುದು ನನಗೆ ತುಂಬಾ ಕಠಿಣವಾಗಿದೆ. ೨(ಎ) ಕಲಮಿನ ಮೇರೆಗೆ ರಚಿಸಲು ಉದ್ದೇಶಿಸಲಾಗಿರುವ ಮಂಡಳಿಯು ಪ್ರಜಾ ಸತ್ತಾತ್ಮಕ ಸ್ವರೂಪದ್ದಿರಬೇಕೆಂದು ನಾವು ಪರಿಗಣಿಸಬಾರದು ಎಂದು ಅವರು ಹೇಳಿದ್ದರೆ ಮತ್ತು ಹಾಗೆ ಅವರು ಹೇಳಿರುವುದನ್ನು ನಾನು ಸರಿಯಾಗಿ ಕೇಳಿಕೊಂಡಿದ್ದರೆ ಅವರ ಹೇಳಿಕೆಯ ಈ ಅಂಶವನ್ನು ಒಪ್ಪುತ್ತೇನೆ. ಈ ಮಂಡಳಿಯು ತಜ್ಞರಿಂದ ಕೂಡಿದ ಒಂದು ಸಂಸ್ಥೆಯಾಗಬೇಕೆಂದು ಉದ್ದೇಶಿಸಲಾಗಿದೆ. ಪ್ರಾಂತೀಯ ಮಂಡಳಿಗಾಗಿ ಶಾಲಾ ಮಂಡಳಿಗಳಿಗೆ ಯಾವುದೇ ಆಧಾರವಿಲ್ಲದೆಯೇ ಆಯ್ಕೆಯಾಗಬೇಕಾಗಿರುವ ಸದಸ್ಯರು, ಕೇವಲ ಸಾರ್ವಜನಿಕರು ಸಾಮಾನ್ಯ ಅಭಿಪ್ರಾಯವನ್ನು ಮಾತ್ರ ವ್ಯಕ್ತಮಾಡಬಹುದು. ಅದರ ಹೊರತಾಗಿ ಅವರು ಈ ಮಂಡಳಿಗೆ ಅಗತ್ಯವಾದ ತಜ್ಞರಾಗಲಾರರು. ಅವರು ಸ್ವಭಾವತಃ ಹಾಗೆ ಮಾಡಲು ಸಮರ್ಥರಲ್ಲ ಅನ್ನುವುದೂ ಸ್ಪಷ್ಟ. ಉಳಿದ ಆರು ಜನ ಸದಸ್ಯರನ್ನು ಸರಕಾರವು ನೇಮಿಸುತ್ತದೆ. ಶಿಕ್ಷಣದಲ್ಲಿ ತಜ್ಞರಾದವರನ್ನು ಮಾತ್ರವೇ ನೇಮಿಸಬೇಕೆಂಬುದಕ್ಕೆ ಸರಕಾರವು ಬಾಧ್ಯವಾಗಿರುವಂತೆ ಸೂಚಿಸುವಂಥದು ಈ ಪರಿಚ್ಛೇದದಲ್ಲಿ ಏನೂ ಇಲ್ಲ. ಮೂರು ಜನರನ್ನು ಸರಕಾರವು ನೇಮಿಸತಕ್ಕುದು ಎಂದು ಮಾತ್ರ ಈ ವಾಕ್ಯಾವಳಿಯಲ್ಲಿ ಹೇಳಲಾಗಿದೆ. ಈ ಮೂರೂ ಜನರು ಶಿಕ್ಷಣದಲ್ಲಿ ತಜ್ಞರಿರತಕ್ಕುದು ಎಂಬುದನ್ನು ಈ ವಾಕ್ಯಾವಳಿ ಸೂಚಿಸುವುದಿಲ್ಲ. ಆದುದರಿಂದ ಪ್ರಾಂತೀಯ ಮಂಡಳಿಯ ರಚನೆಯನ್ನು ವಿವರವಾಗಿ ವಿಶ್ಲೇಷಿಸಿದಾಗ, ಮೂರು ಜನ ಸರಕಾರೀ ಅಧಿಕಾರಿಗಳನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರು ಇರುತ್ತಾರೆ, ಮಂಡಳಿಯಲ್ಲಿ ತಜ್ಞರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ ಅನ್ನುವ ಬಗ್ಗೆ ಯಾವುದೇ ಖಾತರಿ ಇಲ್ಲ. ಈ ಕಾರಣದಿಂದಾಗಿ ಗೌರವಾನ್ವಿತ ಸದಸ್ಯರಾದ ಶ್ರೀ ಬೋಲೆ ಅವರು ಸೂಚಿಸಿದ ಸಿದ್ಧಾಂತವನ್ನು ಅಂದರೆ ಇದನ್ನು ಪ್ರಜಾಸತ್ತಾತ್ಮಕ ಸಂಸ್ಥೆಯೆಂದು ಪರಿಗಣಿಸಬೇಕೆಂಬುದನ್ನು ನನ್ನ ಮಾನ್ಯ ಮಿತ್ರರು ಒಪ್ಪಬೇಕು. ಆ ದೃಷ್ಟಿಯಿಂದ ಗಮನಿಸಿದಾಗ ನಾಮನಿರ್ದೇಶನ ತತ್ವಕ್ಕಿಂತ ಆಯ್ಕೆಯ ತತ್ವಕ್ಕೆ ಪ್ರಾಶಸ್ತ್ಯ ಕೊಡಬೇಕು. ನನ್ನ ಗೌರವಾನ್ವಿತ ಸ್ನೇಹಿತರು ಅದನ್ನು ಪ್ರಜಾಸತ್ತಾತ್ಮಕ ಸಂಸ್ಥೆಯೆಂದು ಪರಿಗಣಿಸಬಾರದು. ಆದರೆ ಅದು ಕೇವಲ ಸಲಹೆಯನ್ನು ಕೊಡುವುದಕ್ಕೆಂದು ಉದ್ದೇಶಿಸಲಾಗಿದ್ದು, ಎಂದರೆ ಆಗ ಮಂಡಳಿಯು ಶಿಕ್ಷಣತಜ್ಞರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿರತಕ್ಕುದು ಎಂದು ಹೇಳಿ ಆ ಬಗ್ಗೆ ಅವಕಾಶ ಮಾಡಿಕೊಡಬೇಕು. ಅವರು ಆ ಬಗ್ಗೆ ತಿದ್ದುಪಡಿಯನ್ನು ಒಪ್ಪಿಕೊಳ್ಳತಕ್ಕುದು

---

* ಬಿ.ಎಲ್.ಎ. ಡಿಬೇಟ್ಸ್, ಸಂ.೩
ಪುಟಗಳು ೨೧೭೬–೭೭, ೨೧ನೇಯ ಏಪ್ರಿಲ್ ೧೯೩೮.

ಎಂದು ನಾನು ಸೂಚಿಸುತ್ತೇನೆ. ಆ ತಿದ್ದುಪಡಿಯು "ಪ್ರಾಂತೀಯ ಸರಕಾರದಿಂದ ನೇಮಿತರಾಗುವ ಸದಸ್ಯರನ್ನು ಶಿಕ್ಷಣದಲ್ಲಿ ತಜ್ಞರೆಂದು ಪ್ರಸಿದ್ಧರಾದ ಜನರೊಳಗೆ ನೇಮಕ ಮಾಡಬೇಕು?" ಆ ವಿಷಯವನ್ನು ಅದು ಈಗಿರುವಂತೆ ಅಸ್ಪಷ್ಟವಾಗಿ ಇರಲು ಬಿಡಬಾರದು. ಸರಕಾರವು ತನ್ನ ಕೆಟ್ಟ ಗಳಿಗೆಯಲ್ಲಿ– ಅದು ಸರಕಾರವಾಗಿರುವುದರಿಂದ ಅದಕ್ಕೆ ಕೆಟ್ಟ ಗಳಿಗೆಗಳೂ ಬರುತ್ತವೆ– ತಜ್ಞರಲ್ಲದವರನ್ನು ನೇಮಿಸಬಹುದು. ಅದು ಈ ವಾಕ್ಯಾವಳಿಯ ಆಧಾರವಾಗಿರುವ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ.

ಶ್ರೀ ಬಿ. ಜಿ. ಖೇರ್: ತಮ್ಮ ಪಕ್ಷದ ಸದಸ್ಯರೇ ಮುಂದಿಟ್ಟ ತಿದ್ದುಪಡಿಗೆ ಪರಿಣಾಮಕಾರಿಯಾದ ರೀತಿಯಲ್ಲಿ ಉತ್ತರಿಸಿದುದರಿಂದ ನಾನು ಗೌರವಾನ್ವಿತ ಡಾ. ಅಂಬೇಡಕರರಿಗೆ ತುಂಬಾ ಋಣಿಯಾಗಿದ್ದೇನೆ. ಈ ತಿದ್ದುಪಡಿಯ ವಿರುದ್ಧವಾಗಿ ನಾನೂ ಸಹ ಸ್ವತಃ ಅಷ್ಟು ಮನಗಾಣಿಸುವ ರೀತಿಯಲ್ಲಿ ವಾದಿಸಲಾಗುತ್ತಿರಲಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ.

# ೧೨

# ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮ ತಿದ್ದುಪಡಿ ಮಸೂದೆ: ೨*

(ಪ್ರತಿಯೊಂದು ವಾಕ್ಯಾವಳಿಯನ್ನು ಓದುವುದು)

ಅಧ್ಯಕ್ಷರು: ನಾವು ಈಗ ಮಸೂದೆ ನಂ. XV ಪ್ರಾಥಮಿಕ ಶಿಕ್ಷಣ ಅಧಿನಿಯಮ ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚೆಯನ್ನು ಮುಂದುವರಿಸೋಣ. ಕಳೆದ ಮಂಗಳವಾರದಂದು ಈ ಸದನವು ಆ ಮಸೂದೆಯನ್ನು ಚರ್ಚಿಸುತ್ತಿತ್ತು ಎಂದು ನನ್ನ ನಂಬಿಕೆ. ಅಂದು ಅದನ್ನು ಮುಂದೂಡಿದಾಗ ತಿದ್ದುಪಡಿ ೯೧ನ್ನು ಚರ್ಚಿಸಲಾಗುತ್ತಿತ್ತು. ಆ ತಿದ್ದುಪಡಿಯನ್ನು ಗೌರವಾನ್ವಿತ ಸದಸ್ಯರಾದ ಶ್ರೀ ಜಮುನಾದಾಸ ಮೆಹ್ತಾರವರು ಮಂಡಿಸಿದ್ದರು. ಅದು ಈ ಕೆಳಗಿನಂತೆ ಇರುತ್ತದೆ:

> "೧೨ನೇ ವಾಕ್ಯಾವಳಿಯ ೨ನೇ ಉಪವಾಕ್ಯಾವಳಿ ಮತ್ತು ......ದ ನೌಕರನಾಗಿರತಕ್ಕುದು ಎಂಬ ಪದಗಳನ್ನು ಬಿಟ್ಟುಬಿಡತಕ್ಕುದು." ತಿದ್ದುಪಡಿಯಾಗಲಿರುವ ವಾಕ್ಯಾವಳಿಯ ತಿದ್ದುಪಡಿಯ ಅನಂತರ ಈ ಕೆಳಗಿನಂತೆ ಇರುವುದು.
>
> "(೨) ಆಡಳಿತಾಧಿಕಾರಿಯು ಪ್ರಾಂತೀಯ ಸರಕಾರದಿಂದ ನೇಮಿಸಲ್ಪಡಬೇಕು. ಆತನ ಸಂಬಳ, ಅಧಿಕಾರಗಳು ಮತ್ತು ಕರ್ತವ್ಯಗಳು ಗೊತ್ತುಪಡಿಸಲಾಗುವಂತೆ ಇರತಕ್ಕುದು."

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ನಾನು ಕ್ರಿಯಾಲೋಪವನ್ನು ಎತ್ತಬಹುದೋ? ತಿದ್ದು ಪಡಿಯನ್ನು ಅದರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಅಸಮರ್ಥನಾಗಿರುತ್ತೇನೆ. ಆದುದರಿಂದ ಈ ಅಂಶದ ಮೇಲೆ ಇನ್ನೂ ಸ್ವಲ್ಪ ಮಾಹಿತಿಯನ್ನು ಬಯಸುತ್ತೇನೆ. ತಿದ್ದುಪಡಿಯು "ಮತ್ತು ಪ್ರಾಂತೀಯ ಸರಕಾರದ ನೌಕರನಾಗಿರತಕ್ಕದು" ಎಂಬ ಪದಗಳನ್ನು ಬಿಟ್ಟುಬಿಡುವುದಾಗಿರುತ್ತದೆ. ನಾನು ಹೇಳುವುದು ಸರಿಯಾಗಿದೆಯೆ? ಆದುದರಿಂದ ಈ ತಿದ್ದುಪಡಿಯ ಉದ್ದೇಶವು ಇರಬಹುದೆಂದು ಕಾಣುತ್ತದೆ.

ಅಧ್ಯಕ್ಷರು: ಬಿಟ್ಟುಬಿಡಬೇಕಾದ ಶಬ್ದಗಳು "ಮತ್ತು.....ದ ನೌಕರನಾಗಿರತಕ್ಕುದು" ಎಂದು ಹೇಳಲಾಗಿದೆ. "ಪ್ರಾಂತೀಯ ಸರಕಾರ" ಪದಗಳನ್ನು ಬಿಟ್ಟು ಬಿಡಬೇಕೆಂದು ಕೇಳಲಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆದುದರಿಂದ ಆತನನ್ನು ಪ್ರಾಂತೀಯ ಸರಕಾರವೇ ನೇಮಕ

---

* ಬಿ.ಎಲ್.ಎ. ಡಿಬೇಟ್ಸ್, ಸಂ.೩
ಪುಟಗಳು ೨೬೪೨–೪೯, ೩೦ನೆಯ ಏಪ್ರಿಲ್ ೧೯೩೮.

ಮಾಡ ಬೇಕು. ಆದರೆ ಆತನು ಪ್ರಾಂತೀಯ ಸರಕಾರದ ನೌಕರನಾಗಿರತಕ್ಕುದಲ್ಲ ಎಂಬ ಅರ್ಥದಲ್ಲಿ ನಾನು ತಿಳಿದುಕೊಂಡಿರುತ್ತೇನೆ. "ಮತ್ತು......ದ ನೌಕರನಾಗಿರತಕ್ಕದು" ಎಂಬ ಪದಗಳನ್ನು ಬಿಟ್ಟುಬಿಟ್ಟರೂ ಸಹ ಕಾನೂನಿನ ಮೇರೆಗೆ ಆತನು ಪ್ರಾಂತೀಯ ಸರಕಾರದ ನೌಕರನೇ ಆಗಿರುತ್ತಾನೆ. ಆದುದರಿಂದ ಈ ತಿದ್ದುಪಡಿಯ ಪರವಾಗಿ ಮತ ನೀಡಬೇಕೋ ಅಥವಾ ವಿರುದ್ಧವಾಗಿ ಮತ ನೀಡಬೇಕೋ ಎಂಬುದನ್ನು ನಿರ್ಣಯಿಸುವುದು ಕಠಿಣವಾಗಿದೆ. ಈ ತಿದ್ದುಪಡಿಯನ್ನು ಮಂಡಿಸಿದ ಗೌರವಾನ್ವಿತರು ಪ್ರಾಂತೀಯ ಸರಕಾರದಿಂದ ಆತನು ನೇಮಿಸಲ್ಪಟ್ಟಿರಬೇಕು ಎಂದು ಇಚ್ಛಿಸುತ್ತಿದ್ದರೆ, ಆಗ ಆತನು ಕಾನೂನಿನ ಪ್ರಕಾರ ಪ್ರಾಂತೀಯ ಸರಕಾರದ ನೌಕರನೇ ಆಗಿರುತ್ತಾನೆ ಮತ್ತು ಈ ಪದಗಳನ್ನು ಬಿಟ್ಟುಬಿಟ್ಟರೂ ಆತನನ್ನು ಪ್ರಾಂತೀಯ ಸರಕಾರದ ನೌಕರನೆಂದು ಪರಿಗಣಿಸುವಲ್ಲಿ ಯಾವುದೇ ಅಡ್ಡಿ ಇರುವುದಿಲ್ಲ. ಈ ಅಂಶದ ಮೇಲೆ ಇನ್ನೂ ಸ್ವಲ್ಪ ವಿವರ ಬೇಕಾಗಿದೆ.

ಅಧ್ಯಕ್ಷರು: ತಿದ್ದುಪಡಿಯನ್ನು ಚರ್ಚೆಗೆ ಎತ್ತಿಕೊಂಡಾಗ ಗೌರವಾನ್ವಿತ ಸದಸ್ಯರು ಹಾಜರಿದ್ದರೋ ಅನ್ನುವ ಬಗ್ಗೆ ನನಗೆ ಖಚಿತವಾಗಿ ಗೊತ್ತಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹಾಜರಿದ್ದೆನು.

ಅಧ್ಯಕ್ಷರು: ಕಾನೂನಿನ ಪರಿಣಾಮದ ಬಗ್ಗೆ ನಾನು ಒಪ್ಪಲು ಸಿದ್ಧನಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಗೌರವಾನ್ವಿತ ಗೃಹಮಂತ್ರಿಯವರು ನನ್ನ ಈ ಅಂಶವನ್ನು ಸ್ಪಷ್ಟಪಡಿಸ ಬಹುದು.

ಅಧ್ಯಕ್ಷರು: ಶಾಲಾ ಮಂಡಳಿಯವರು ಅಧಿಕಾರಿಗಳನ್ನು ಆಯ್ಕೆ ಮಾಡುವ ಅಥವಾ ನೇಮಕ ಮಾಡುವ ವಿಧಾನವು ಆದರ್ಶವಲ್ಲದಿದ್ದರೆ ಅಥವಾ ಉಚಿತವಲ್ಲದಿದ್ದರೆ, ಮುಂಬೈ ಮುನಿಸಿಪಲ್ ಆಯುಕ್ತರನ್ನು ನೇಮಕ ಮಾಡುವ ರೀತಿಯಲ್ಲಿಯೇ ನೇಮಕ ಮಾಡಲು ಸರಕಾರಕ್ಕೇನೆ ಬಿಟ್ಟುಕೊಡಬೇಕು. ಆದರೆ ಅವರು ಸೇವೆಯಲ್ಲಿ ಇರುವವರೆಗೂ ಅವರು ಶಾಲಾ ಮಂಡಳಿಯ ನೌಕರರಾಗಿರಬೇಕು ಮತ್ತು ಆ ಕಾರಣದಿಂದಾಗಿ ಅವರ ಅಧಿಕಾರ ವ್ಯಾಪ್ತಿಗೆ ಲಭ್ಯವಾಗತಕ್ಕುದು ಮತ್ತು ಅವರನ್ನು ಅಮಾನತ್ತು ಅಥವಾ ವಜಾ ಮಾಡಲು ಅಥವಾ ಇತರ ಯಾವನೇ ನೌಕರನನ್ನು ನಡೆಸಿಕೊಂಡಂತೆ ಅವರನ್ನು ನಡೆಸಿಕೊಳ್ಳಲು ಶಾಲಾ ಮಂಡಳಿಗೆ ಅಧಿಕಾರ ಇರತಕ್ಕುದೆಂಬುದು ವಾದವಾಗಿತ್ತೆಂದು ನಾನು ನಂಬುತ್ತೇನೆ. ಅದು ಅವರ ವಿಚಾರವಿರುವಂತೆ ಕಾಣುತ್ತದೆ. ಅಲ್ಲದೆ, ಸರಕಾರವು ಮಂಡಳಿಗೆ ಆಯ್ಕೆ ಮಾಡುವುದಕ್ಕಾಗಿ ಕೆಲವು ಹೆಸರುಗಳನ್ನು ಶಾಲಾ ಮಂಡಳಿಗೆ ಕಳಿಸಬೇಕು ಎಂಬ ಸೂಚನೆ ಮಾಡಲಾಗಿತ್ತೆಂದು ನಾನು ನಂಬುತ್ತೇನೆ. ಇದು ನೇಮಕಾತಿಯ ಕ್ರಮ. ಅದರಲ್ಲಿ ಯಾವುದೇ ಘರ್ಷಣೆ ಅಥವಾ ಅಸಂಗತತೆ ಏನೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆತನು ಶಾಲಾ ಮಂಡಳದ ನೌಕರನಾಗಿರತಕ್ಕುದು ಎಂಬುದು ಉದ್ದೇಶವಾಗಿದ್ದರೆ– ಆಗ "ಮತ್ತು.....ದ ನೌಕರನಾಗಿರತಕ್ಕುದು" ಎಂಬ ಪದಗಳನ್ನು ಬಿಟ್ಟು ಬಿಡುವುದರಿಂದ ಆ ಉದ್ದೇಶವನ್ನು ಸಾಧಿಸಿದಂತಾಗುವುದಿಲ್ಲ. ಏಕೆಂದರೆ ಕಾನೂನು ಮೇರೆಗೆ ಆತನು ಪ್ರಾಂತೀಯ ಸರಕಾರದ ನೌಕರನೇ ಆಗುತ್ತಾನೆ. ಅದಕ್ಕೆ ತುಂಬಾ ಸರಳವಾದ ಕಾರಣವೆಂದರೆ ಪ್ರಾಂತೀಯ ಸರಕಾರವು ಆತನನ್ನು ನೇಮಕ ಮಾಡಿರುತ್ತದೆ ಎಂಬುದೇ ಆಗಿರುತ್ತದೆ. ನೌಕರನಾಗಿರುವುದು ಒಂದು ವಿಷಯವಾದರೆ ನಿಯಂತ್ರಣದಲ್ಲಿರುವುದು ಇನ್ನೊಂದು ವಿಷಯವಾಗಿರುತ್ತದೆ. ಒಬ್ಬನು ಮತ್ತೊಬ್ಬನ ನೌಕರನಾಗಿರಬಹುದು. ಆದಾಗ್ಯೂ ಆತ ಮೂರನೆಯವನ ನಿಯಂತ್ರಣದಲ್ಲಿ ಇರಬಹುದು. ಈ ಎರಡರ ನಡುವೆ ತುಂಬಾ ವ್ಯತ್ಯಾಸವಿರುತ್ತದೆ.

ಅಧ್ಯಕ್ಷರು: ನೇಮಕವನ್ನು ಒಬ್ಬರು ಮಾಡಿರುತ್ತಾರೆಂಬ ಸಂಗತಿಯು ನೇಮಕಗೊಂಡವನು ಮತ್ತೊಬ್ಬನ ನೌಕರನಾಗಲಾರ ಎಂಬುದರ ಅವಶ್ಯ ಪರಿಣಾಮ ಎನ್ನಲುಬಾರದು. ಒಬ್ಬರು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು ಮತ್ತು ಆದಾಗ್ಯೂ ಆತ ಮತ್ತೊಬ್ಬರ ನೌಕರನಾಗಬಹುದು. ಗೌರವಾನ್ವಿತ ಸದಸ್ಯರು ಈ ಬಗ್ಗೆ ತಮ್ಮ ಉತ್ತರದಲ್ಲಿ ಸ್ಪಷ್ಟೀಕರಿಸುತ್ತಾರೆ ಎಂದು ನಾನು ಆಶಿಸುತ್ತೇನೆ.

ಶ್ರೀ ಜಮ್ನಾದಾಸ್ ಮೆಹ್ತಾ: ನನಗೆ ಹೇಳುವುದಾದರೆ ಅದನ್ನು ನಾನು ಕ್ರಿಯಾಲೋಪ ಎಂದು ಗಮನಿಸುವುದೇ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ಕ್ರಿಯಾಲೋಪ ಆಗದಿದ್ದರೆ ಅದು ಮಾಹಿತಿಗೆ ಸಂಬಂಧಪಟ್ಟದ್ದು ಆಗಿರುತ್ತದೆ. ನಾನು ಯಾವ ರೀತಿಯಲ್ಲಿ ಮತದಾನ ಮಾಡಬೇಕೆಂಬುದನ್ನು ನಿರ್ಣಯಿಸಲು ಪರಿಸ್ಥಿತಿ ಏನು ಅನ್ನುವುದನ್ನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ.

ಗೌರವಾನ್ವಿತ ಅಧ್ಯಕ್ಷರು: ಸೂಚನೆಯನ್ನು ಮಂಡಿಸಿದ ಗೌರವಾನ್ವಿತ ಸದಸ್ಯರಿಗೇನೇ ಈ ಬಗ್ಗೆ ಅಂದರೆ ಮಾಹಿತಿಗೆ ಸಂಬಂಧಪಟ್ಟ ಅಂಶದ ಬಗ್ಗೆ ಉತ್ತರ ಕೊಡಲು ಬಿಟ್ಟುಬಿಡುತ್ತೇನೆ.

# ೧೩

# ಮುಂಬಯಿ ಪ್ರಾಥಮಿಕ ಶಿಕ್ಷಣ ಅಧಿನಿಯಮ ತಿದ್ದುಪಡಿ ಮಸೂದೆ: ೩*

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ಈ ತಿದ್ದುಪಡಿಯ ಮೇಲೆ ಮಾತನಾಡುವ ಸದವಕಾಶವನ್ನು ನಾನು ಕಳೆದುಕೊಂಡೆನು. ಆದರೆ ನೀವು ಅನುಮತಿಸಿದರೆ ಪ್ರಧಾನ ಮಂತ್ರಿಗಳವರಿಗೆ ಕೇವಲ ಮಾಹಿತಿಗಾಗಿ ಒಂದು ಪ್ರಶ್ನೆಯನ್ನು ಕೇಳಲು ಇಚ್ಛಿಸುತ್ತೇನೆ.

ಗೌರವಾನ್ವಿತ ಅಧ್ಯಕ್ಷರು: ತುಂಬಾ ದೀರ್ಘ ಬೇಡ.

ಡಾ. ಬಿ. ಆರ್. ಅಂಬೇಡ್ಕರ್: ಆ ಅಂಶದ ಮೇಲೆಯೇ ಅವರು ಮಾತನಾಡುವವರಿದ್ದರು. ಆದರೆ ಅವರು ಅದನ್ನು ಮರೆತರೆಂದು ನಾನು ಭಾವಿಸುತ್ತೇನೆ. ಶಾಲಾ ಮಂಡಳದ ಆಡಳಿತಾಧಿಕಾರಿಯು ಶಿಸ್ತಿಗೆ ಸಂಬಂಧಿಸಿ ಶಾಲಾ ಮಂಡಳದ ನಿಯಂತ್ರಣದಲ್ಲಿರುತ್ತಾನೋ ಇಲ್ಲವೋ ಅನ್ನುವುದನ್ನು ಪ್ರಧಾನಮಂತ್ರಿಯವರಿಗೆ ಕೇಳಲು ನಾನು ಇಚ್ಛಿಸುತ್ತೇನೆ. ಈ ವಾಕ್ಯಾವಳಿಯ ಮೇರೆಗೆ ಆತನು ಪ್ರಾಂತೀಯ ಸರಕಾರದ ನೌಕರನಾಗಿರುತ್ತಾನೆಂದು ನಾನು ಸರಿಯಾಗಿಯೇ ತಿಳಿದುಕೊಳ್ಳಬಲ್ಲೆನು. ಆದರೆ ಆತನು ಶಾಲಾ ಮಂಡಳದಲ್ಲಿ ಇರುವಾಗ ಆತನು ಶಿಸ್ತಿಗೆ ಸಂಬಂಧಿಸಿದಂತೆ ಶಾಲಾ ಮಂಡಳದ ನಿಯಂತ್ರಣದಲ್ಲಿ ಇರುತ್ತಾನೋ ಅಥವಾ ಇಲ್ಲವೋ?

ಗೌರವಾನ್ವಿತ ಶ್ರೀ ಬಿ. ಜಿ. ಖೇರ್: ನೀವು ಹೇಗೆ ಅರ್ಥ ಮಾಡುತ್ತೀರಿ? ಆತನ ಸಂಬಳವನ್ನು ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿಯಮಗಳ ಮೂಲಕ ಗೊತ್ತುಪಡಿಸಲಾಗಿದೆ ಎಂದು ಹೇಳಿ ಈ ಬಗ್ಗೆ ನಿಯಮವನ್ನು ರೂಪಿಸಿದ್ದೇವೆ. ಶಾಲಾ ಮಂಡಳದ ಅಧಿಕಾರಗಳನ್ನು ಈಗಾಗಲೇ ನಿಶ್ಚಿತಪಡಿಸಲಾಗಿದೆ. ಅವುಗಳ ಬಗ್ಗೆ ನಾನು ವಿವರವಾಗಿ ಹೇಳುವಾಗ ಮತ್ತು ಶಾಲಾ ಮಂಡಳದ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಈ ಸದನದ ಮುಂದಿಡುವಾಗ ಗೌರವಾನ್ವಿತ ಸದಸ್ಯರು ಹಾಜರಿರಲಿಲ್ಲ. ಆಡಳಿತಾಧಿಕಾರಿಗಳ ಖಚಿತ ಅಧಿಕಾರಗಳು ಮತ್ತು ಕರ್ತವ್ಯಗಳು ಏನು ಎನ್ನುವ ಬಗ್ಗೆ ನಿಯಮಗಳ ಮೂಲಕ ಈಗ ಗೊತ್ತುಪಡಿಸಲಾಗಿದೆ. ಆದುದರಿಂದ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ ಶಾಲಾ ಮಂಡಳದ ಇಚ್ಛೆಗಳನ್ನು ಆಡಳಿತಾಧಿಕಾರಿಯು ತಳ್ಳಿಹಾಕುತ್ತಾರೆ ಎಂಬ ಅಪಾಯವೇನೂ ನನಗೆ ಕಂಡುಬರುವುದಿಲ್ಲ.

ಗೌರವಾನ್ವಿತ ಅಧ್ಯಕ್ಷರು: ಇದು ಅಪಾಯದ ಪ್ರಶ್ನೆ ಅಲ್ಲ. ಅವನು ಶಾಲಾ ಮಂಡಳಿಯ ಶಿಸ್ತಿನ ನಿಯಂತ್ರಣಕ್ಕೆ ಒಳಪಟ್ಟಿರುತ್ತಾನೆಯೇ ಎಂಬುದೇ ಪರಿಗಣಿಸಬೇಕಾದ ಅಂಶ.

---

* ಬಿ.ಎಲ್.ಎ. ಡಿಬೇಟ್ಸ್, ಸಂ.೩, ಪುಟಗಳು ೨೬೭೨–೭೩
೩೦ನೇ ಏಪ್ರಿಲ್ ೧೯೩೮.

ಗೌರವಾನ್ವಿತ ಶ್ರೀ. ಬಿ. ಜಿ. ಖೇರ್: ಸರಿ. ಆತನನ್ನು ಅವರು ತೆಗೆದು ಹಾಕಲಾರರು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಸೆಕ್ರೆಟರಿಯೇಟಿನಲ್ಲಿ ಕಾರ್ಯ ಮಾಡುತ್ತಿರುವ ಒಬ್ಬ ಅಧಿಕಾರಿಯು ಇರುತ್ತಾನೆ. ಮಂತ್ರಿಯವರು ಒಂದು ಆದೇಶವನ್ನು ಹೊರಡಿಸಿರುತ್ತಾರೆ ಮತ್ತು ಆ ಅಧಿಕಾರಿಯು ಮಂತ್ರಿಯ ಆದೇಶವನ್ನು ಪಾಲಿಸುವುದಿಲ್ಲ. ಸಿವಿಲ್ ಸೇವಾ ನಿಮಯಗಳಲ್ಲಿ ಹೇಳಿರುವಂತೆ ನಾಲ್ಕು ಅಥವಾ ಐದು ರೀತಿಯಲ್ಲಿ ಆ ಅಧಿಕಾರಿಯನ್ನು ದಂಡಿಸುವ ಹಕ್ಕನ್ನು ಮಂತ್ರಿಯು ಹೊಂದಿರುತ್ತಾನೆ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಆ ಅಧಿಕಾರಿಗೆ ಅದರ ವಿರುದ್ಧ ಅಪೀಲು ಮಾಡಲು ಅಧಿಕಾರವೂ ಇರುತ್ತದೆ. ಶಿಸ್ತು ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಆಡಳಿತಾಧಿಕಾರಿಯ ಮತ್ತು ಶಾಲಾ ಮಂಡಳದ ಸಂಬಂಧವು ಮಂತ್ರಿಯ ಮತ್ತು ಹಿರಿಯ ಆಡಳಿತಾಧಿಕಾರಿಯ ನಡುವಣ ಸಂಬಂಧದಂತೆಯೇ ಇರುತ್ತದೆಯೇ ಅನ್ನುವುದನ್ನು ನಾನು ತಿಳಿದುಕೊಳ್ಳಬೇಕಾಗಿದೆ.

ಗೌರವಾನ್ವಿತ ಶ್ರೀ ಬಿ. ಜಿ. ಖೇರ್: ಇಲ್ಲ. ಇಲ್ಲವೆಂದೇ ನನ್ನ ಭಾವನೆ.

## (ಚರ್ಚೆಯ ಪುನರಾರಂಭ)

ಡಾ. ಬಿ. ಆರ್. ಅಂಬೇಡ್ಕರ್ (ಮಂಬೈ ನಗರ): ಮಾನ್ಯರೇ, ಗೌರವಾನ್ವಿತ ಸದಸ್ಯರಾದ ಶ್ರೀ ಮೋರೆಯವರ ತಿದ್ದುಪಡಿಗೆ ನಾನು ಒಂದು ತಿದ್ದುಪಡಿಯನ್ನು ಸೂಚಿಸಲು ಇಚ್ಛಿಸುತ್ತೇನೆ.

ಗೌರವಾನ್ವಿತ ಅಧ್ಯಕ್ಷರು: ಅದು ಬೇರೆಯದೋ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಅದು ಬೇರೆಯದೇ. "ಅಂಥ ಆಡಳಿತಾಧಿಕಾರಿ ಎಂಬ ಪದದಿಂದ ಆತನನ್ನು ತೆಗೆದುಹಾಕಬಾರದು" ಎಂಬ ಪದಗಳಿಗೆ ಬದಲಿಯಾಗಿ ಈ ಕೆಳಗಿನದನ್ನು ಸೇರಿಸಬೇಕು. ನನ್ನ ತಿದ್ದುಪಡಿ ಹೀಗಿದೆ:

> "ಶಾಲಾ ಮಂಡಳದ ಶಿಸ್ತು ನಿಯಂತ್ರಣದ ಮೇರೆಗೆ ಮತ್ತು ಶಿಸ್ತಿನ ಉಲ್ಲಂಘನೆಗಾಗಿ ಆಡಳಿತಾಧಿಕಾರಿಯು ಅಪೀಲು ಮಾಡುವ ಆತನ ಹಕ್ಕಿಗೆ ಒಳಪಟ್ಟು ಶಾಲಾಮಂಡಳವು ನಿಯಮಗಳ ಮೇರೆಗೆ ರೂಪಿಸಬಹುದಾದ ರೀತಿಯಲ್ಲಿ ಠರಾವು ಪಾಸುಮಾಡುವ ಮೂಲಕ ಶಾಲಾ ಮಂಡಳದಿಂದ ಶಿಕ್ಷಿಸಲ್ಪಡಬಹುದು" ಅಂದರೆ ನನ್ನ ತಿದ್ದುಪಡಿಯೊಂದಿಗೆ ಇಡಿಯ ತಿದ್ದುಪಡಿಯು ಈ ರೀತಿ ಆಗುತ್ತದೆ."

> "ಆಡಳಿತಾಧಿಕಾರಿಯು ಶಾಲಾ ಮಂಡಳದ ಶಿಸ್ತು ನಿಯಂತ್ರಣದಲ್ಲಿ ಇರತಕ್ಕುದು ಮತ್ತು ಶಿಸ್ತಿನ ಉಲ್ಲಂಘನೆಗಾಗಿ ಆಡಳಿತಾಧಿಕಾರಿಯು ಅಪೀಲು ಮಾಡುವ ಆತನ ಹಕ್ಕಿಗೆ ಒಳಪಟ್ಟು ಶಾಲಾ ಮಂಡಳವು ನಿಯಮಗಳ ಮೇರೆಗೆ ರೂಪಿಸಬಹುದಾದ ರೀತಿಯಲ್ಲಿ ಠರಾವನ್ನು ಪಾಸು ಮಾಡುವ ಮೂಲಕ ಶಾಲಾ ಮಂಡಳದಿಂದ ದಂಡಿತನಾಗತಕ್ಕದ್ದು."

ಗೌರವಾನ್ವಿತ ಅಧ್ಯಕ್ಷರು: "ಪಾಸು ಮಾಡಿದೆ" ಎಂಬ ಪದದ ಅನಂತರ "ಶಾಲಾ ಮಂಡಳದಿಂದ" ಎಂಬ ಪದಗಳನ್ನು ಸೇರಿಸಬೇಕು ಮತ್ತು "ಉಪಬಂಧಿಸಲಾದ ಮೇರೆಗೆ" ಅನ್ನುವುದನ್ನು "ಗೊತ್ತುಪಡಿಸಲಾದ" ಎಂಬ ಬದಲಿಸಬೇಕು. ಆಗ ತಿದ್ದುಪಡಿಯು ಈ ರೀತಿ ಆಗುತ್ತದೆ.

"ತನ್ನ" ಪದದಿಂದ "ತೆಗೆದುಹಾಕಬಹುದಾದ" ಪದಗಳಿಂದ ಪ್ರಾರಂಭ ವಾಗುವ ಮತ್ತು "ಈ ಕೂಡಲೇ ಆಡಳಿತಾಧಿಕಾರಿಯನ್ನು ವಾಪಸ್ಸು ತೆಗೆದುಕೊಳ್ಳತಕ್ಕದು" ಎಂಬ ಪದಗಳಿಂದ ಮುಕ್ತಾಯಗೊಳ್ಳುವ ಪದಗಳನ್ನು ತೆಗೆದುಹಾಕತಕ್ಕುದು ಮತ್ತು ಅದರ ಬದಲಿಗೆ ಕೆಳಗೆ ಹೇಳಿದ್ದನ್ನು ಸೇರಿಸತಕ್ಕದ್ದು.

"ಶಾಲಾ ಮಂಡಳದ ಶಿಸ್ತು ನಿಯಂತ್ರಣದ ಮೇರೆಗೆ ಮತ್ತು ಶಿಸ್ತಿನ ಉಲ್ಲಂಘನೆಗಾಗಿ ಶಾಲಾ ಮಂಡಳವು ಯುಕ್ತವಾಗಿ ಪಾಸು ಮಾಡಿದ ಠರಾವಿನ ಮೂಲಕ, ಆಡಳಿತಾಧಿಕಾರಿಗೆ ಅಪೀಲು ಮಾಡಲು ಇರುವ ಹಕ್ಕಿಗೆ ಒಳಪಟ್ಟು, ನಿಯಮಗಳ ಮೂಲಕ ಗೊತ್ತುಪಡಿಸಿರಬಹುದಾದಂಥ ದಂಡನೆಗೆ ಗುರಿಯಾಗತಕ್ಕದ್ದು"

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೇ, ನಾನು ಮಂಡಿಸುತ್ತಿರುವ ತಿದ್ದುಪಡಿಯು ನಿಜವಾಗಿಯೂ ನನ್ನ ಗೌರವಾನ್ವಿತ ಸ್ನೇಹಿತರಾಗಿರುವ ಶ್ರೀ ಮೋರೆಯವರು ಮಂಡಿಸಿದ ತಿದ್ದುಪಡಿಗಿಂತ ಸಂಪೂರ್ಣವಾಗಿ ಭಿನ್ನವಾದುದು. ಸರಕಾರದಿಂದ ನೇಮಿತವಾದ ಆಡಳಿತಾಧಿಕಾರಿಯನ್ನು ಕೆಲವೊಂದು ಸಂದರ್ಭಗಳಲ್ಲಿ ತೆಗೆದುಹಾಕಲು ಶಾಲಾ ಮಂಡಳಿಗೆ ಹಕ್ಕು ಇರತಕ್ಕುದು ಎಂದು ಶ್ರೀ ಮೋರೆಯವರ ತಿದ್ದುಪಡಿ ಹೇಳುತ್ತದೆ. ನನ್ನ ತಿದ್ದುಪಡಿಯು ಶ್ರೀ ಮೋರೆಯವರ ತಿದ್ದುಪಡಿಗೆ ಮೂಲಭೂತವಾಗಿ ಭಿನ್ನವಾದುದೆ. ಆಡಳಿತಾಧಿಕಾರಿಯನ್ನು ತೆಗೆದುಹಾಕಲು ಅಥವಾ ವಜಾ ಮಾಡಲು ಶಾಲಾ ಮಂಡಳಕ್ಕೆ ನನ್ನ ತಿದ್ದುಪಡಿಯು ಯಾವ ಅಧಿಕಾರವನ್ನೂ ಕೊಡುವುದಿಲ್ಲ. ನನ್ನ ತಿದ್ದುಪಡಿಯ ಪರಿಣಾಮ ಇಷ್ಟು ಮಾತ್ರ. ಅಂದರೆ ಒಂದು ನಿರ್ದಿಷ್ಟ ಶಾಲಾ ಮಂಡಳದ ಕೆಳಗೆ ಆಡಳಿತಾಧಿಕಾರಿಯು ಕಾರ್ಯ ನಿರ್ವಹಿಸುತ್ತಿರುವಾಗ, ಆತನ ಮೇಲೆ ಆ ಶಾಲಾ ಮಂಡಳವು ಶಿಸ್ತು ನಿಯಂತ್ರಣವನ್ನು ಹೊಂದಿರತಕ್ಕುದು. ಮಾನ್ಯರೇ, ಮಸೂದೆಯಲ್ಲಿನ ೧೨ನೇ ವಾಕ್ಯಾವಳಿಯ 'ಕಾರ್ಯ ಮಾಡುತ್ತಿರುತ್ತಾರೋ ಆ ಪ್ರಾಧಿಕಾರಕ್ಕೆ ಆತನು ಅಧೀನನಾಗಿರತಕ್ಕುದು' ಎಂಬುದು ಒಪ್ಪಲಾಗಿರುವ ಸಿದ್ಧಾಂತವಾಗಿರುತ್ತದೆ. ಈ ೧೨ನೇ ವಾಕ್ಯಾವಳಿಯ ಮೇರೆಗೆ ಈ ಆಡಳಿತಾಧಿಕಾರಿಯನ್ನು ಪ್ರಾಂತೀಯ ಸರಕಾರ ನೇಮಿಸಬೇಕೆಂದೂ ಮತ್ತು ಆತನು ಪ್ರಾಂತೀಯ ಸರಕಾರದ ನೌಕರನಾಗಿರತಕ್ಕುದೆಂದೂ ನಾವು ಉಪಬಂಧಿಸಿರುತ್ತೇವೆ. ಈ ವಿಪರ್ಯಾಸದ ದುಷ್ಪರಿಣಾಮಗಳನ್ನು ಗೌರವಾನ್ವಿತ ಸದಸ್ಯರಾದ ಶ್ರೀ ಜಮ್ನಾದಾಸ್ ಮೆಹ್ತಾ ಅವರು ಮಂಡಿಸಿದ ತಿದ್ದುಪಡಿಯ ಮೇಲೆ ಮಾತನಾಡುವಾಗ ಹಲವಾರು ಸದಸ್ಯರು ಎತ್ತಿ ತೋರಿಸಿದ್ದಾರೆ. ಆದುದರಿಂದ ಅವರು ಹೇಳಿದ್ದನ್ನೇ ಪುನಃ ಹೇಳಿ ಈ ಸದನದ ವೇಳೆಯನ್ನು ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ೧೨ನೇ ವಾಕ್ಯಾವಳಿಯನ್ನು ಅಧಿನಿಯಮಿಸುವುದರ ಪರಿಣಾಮಗಳೇನು? ಗೌರವಾನ್ವಿತ ಪ್ರಧಾನ ಮಂತ್ರಿಗಳು ಅನುಸರಿಸಿದ ವಿಧಾನದ ಬಗ್ಗೆ ಅವರಿಗೆ ನನ್ನ ಸಹಾನುಭೂತಿ ಇದೆ. ಅಂದರೆ, ಆಡಳಿತಾವಧಿಯನ್ನು ಪ್ರಾಂತೀಯ ಸರಕಾರವು ನೇಮಿಸಬೇಕು ಮತ್ತು ಆತನು ಪ್ರಾಂತೀಯ ಸರಕಾರದ ನೌಕರನಾಗಬೇಕು? ಅನ್ನುವುದಕ್ಕೆ ಎರಡು ಕಾರಣಗಳು ಇವೆ. ಅವರು ತಳೆದ ಅಭಿಪ್ರಾಯದ ಬಗ್ಗೆ ನಾನು ತೋರಿಸಿರುವ ಸಹಾನುಭೂತಿಗೆ ಮೊದಲನೆಯ ಕಾರಣ ಇದು. ಅಂದರೆ ಸ್ಥಾನಿಕ ಮಂಡಳಿಗಳು ಅಥವಾ ಶಾಲಾ ಮಂಡಳಿಗಳು ಆಡಳಿತಾಧಿಕಾರಿಯನ್ನು ನೇಮಕ ಮಾಡುವುದನ್ನು ಮುಂದುವರೆಸಿದರ ಒಂದು ಪರಿಣಾಮವೆಂದರೆ ಆ ಆಡಳಿತಾಧಿಕಾರಿಯು ತನ್ನ ಜೀವನವೆಲ್ಲವನ್ನೂ ಒಂದೇ ಸ್ಥಳದಲ್ಲಿಯೇ ಕಳೆಯಬೇಕಾಗುತ್ತದೆ. ಇದು ತಾತ್ವಿಕವಾಗಿ ಕೆಟ್ಟದ್ದೇ ಆಗಿರುತ್ತದೆ. ಯಾಕೆಂದರೆ ತನ್ನ ಜೀವನದುದ್ದಕ್ಕೂ ಒಬ್ಬ ಅಧಿಕಾರಿಯು ಒಂದೇ ಸ್ಥಳದಲ್ಲಿ ಉಳಿದುಬಿಟ್ಟರೆ,

ಆತ ತನ್ನ ಪರವಾಗಿ ಒಂದು ಪಕ್ಷವನ್ನೇ ಕಟ್ಟಿಕೊಳ್ಳುತ್ತಾನೆ. ಸ್ನೇಹ ಬೆಳೆಸಿಕೊಳ್ಳುತ್ತಾನೆ ಮತ್ತು ಈ ರೀತಿಯಾಗಿ ತನ್ನ ಆಡಳಿತದ ಅಧಿಕಾರದ ಚಲಾವಣೆಯನ್ನು ಪಕ್ಷಪಾತ ವಹಿಸಿ ಮಾಡಲು ಅವಕಾಶಗಳನ್ನು ಮತ್ತು ಸಂದರ್ಭಗಳನ್ನೂ ಹುಟ್ಟುಹಾಕಿಕೊಳ್ಳುತ್ತಾನೆ. ಆದುದರಿಂದ ಕಲೆಕ್ಟರ್ ಮತ್ತು ಜಿಲ್ಲಾ ನ್ಯಾಯಾಧೀಶರಂಥ ಮಹತ್ವದ ಅಧಿಕಾರಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಳಿಸುತ್ತಿರುವ ರೀತಿಯಲ್ಲೇ ಈ ಆಡಳಿತಾಧಿಕಾರಿಗಳನ್ನೂ ಸಹ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಳುಹಿಸುವುದು ತುಂಬಾ ಅಪೇಕ್ಷಣೀಯ. ಗೌರವಾನ್ವಿತ ಪ್ರಧಾನ ಮಂತ್ರಿಗಳು ಅನುಸರಿಸಿದ ವಿಧಾನದ ಬಗ್ಗೆ ನನಗೆ ಸಹಾನುಭೂತಿ ಉಂಟಾಗಲು ಎರಡನೆಯ ಕಾರಣವೆಂದರೆ ಸರಕಾರವು ಆಡಳಿತಾಧಿಕಾರಿಯನ್ನು ನೇಮಿಸದ ಹೊರತು ಬಡತಿ ಮತ್ತು ಇತ್ಯಾದಿಗಳ ಅವಕಾಶವಿರುವ ನಿಯಮಿತ ಸೇವಾ ಕೇಡರಿನ ಬಗ್ಗೆ ಅವಕಾಶ ಕಲ್ಪಿಸುವುದು ಅಸಾಧ್ಯವಾಗುತ್ತದೆ. ಆ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಹಾನುಭೂತಿ ಇರುತ್ತದೆ. ಆದರೆ ಮಾನ್ಯರೇ, ಕೊನೆಯ ಪಕ್ಷ ಶಿಸ್ತು ನಿಯಂತ್ರಣದ ಮಟ್ಟಿಗಾದರೂ ಈ ಅಧಿಕಾರಿಗಳನ್ನು ಶಾಲಾ ಮಂಡಳಗಳ ಅಧೀನಕ್ಕೆ ಕೊಡುವಲ್ಲಿ ಸರಕಾರಕ್ಕೆ ಎಂಥ ತೊಂದರೆ ಇದೆ ಅನ್ನುವುದು ನನಗೆ ತಿಳಿಯದಾಗಿದೆ. ನಾನು ಸೂಚಿಸಿರುವ ತಿದ್ದುಪಡಿಗೆ ಮಂಜೂರಾತಿ ಕೊಡದೆಯೇ ಈ ಮಸೂದೆಯಲ್ಲಿ ಉದ್ದೇಶಿಸಿರುವಂತೆ ಸ್ಥಾನಿಕ ಮಂಡಳಗಳ ಕಾರ್ಯವನ್ನು ಸರಳವಾಗಿ ಹೇಗೆ ನಡೆಸಿಕೊಂಡು ಹೋಗಲು ಊಹಿಸಿರುತ್ತಾರೋ ನನಗೆ ತಿಳಿಯದು. ಭಾರತ ಸರಕಾರ ಅಧಿನಿಯಮದ (ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್) ಮೇರೆಗೆ ಏನು ನಡೆಯಿತು ಅನ್ನುವುದನ್ನು ಉಲ್ಲೇಖಿಸಿ ನಾನು ಏನು ಹೇಳಬೇಕೆಂಬುದನ್ನು ವಿವರಿಸುತ್ತೇನೆ. ಭಾರತ ಸಿವಿಲ್ ಸೇವೆಯ (ಇಂಡಿಯನ್ ಸಿವಿಲ್ ಸರ್ವೀಸ್) ಸದಸ್ಯರ ಸ್ಥಾನಮಾನವನ್ನು ನನ್ನ ವಿವರಣೆಗಾಗಿ ತೆಗೆದುಕೊಳ್ಳುತ್ತೇನೆ. ಭಾರತ ಸಿವಿಲ್ ಸೇವೆಯ ಸದಸ್ಯರನ್ನು ಸೆಕ್ರೆಟರಿ ಆಫ್ ಸ್ಟೇಟ್ ಅವರು ನೇಮಕ ಮಾಡುತ್ತಾರೆ.

ಮಾಂಟೆಗೋ ಚೆಲ್ಮ್ಸ್‌ಫರ್ಡ್‌ವರದಿಯನ್ನು ಮಾಡಿದ ಸಮಯದಲ್ಲಿ ಪರಿಣಾಮಕಾರಿಯಾಗಿ ನಿಯಂತ್ರಣವನ್ನು ಮಂತ್ರಿಗಳಿಗೆ ವರ್ಗಾಯಿಸುವ ವೇಳೆಯಲ್ಲಿ ಭಾರತ ಸಿವಿಲ್ ಸೇವೆಯ ಸದಸ್ಯರಿಂದ ಬಂದ ಆ ವಿರೋಧವು ಅತ್ಯಂತ ಹೆಚ್ಚಿನ ತೊಂದರೆಯಾಗಿತ್ತು ಅನ್ನುವುದನ್ನು ಆ ವರದಿಯನ್ನು ಓದಿದವರು ಅರ್ಥ ಮಾಡಿಕೊಳ್ಳಬಲ್ಲರು ಎಂದು ನಾನು ಭಾವಿಸುತ್ತೇನೆ. ಭಾರತ ಸಿವಿಲ್ ಸೇವೆಯ ಸದಸ್ಯರ ವಾದವೆಂದರೆ ತಮ್ಮನ್ನು ಸೆಕ್ರೆಟರಿ ಆಫ್ ಸ್ಟೇಟ್ ನೇಮಕ ಮಾಡಿರುವುದರಿಂದ ಮತ್ತು ತಮ್ಮನ್ನು ಆ ಸುಧಾರಣೆಗಳಲ್ಲಿ ಸೂಚಿಸಿದಂತೆ ಅಧಿಕಾರಕ್ಕೆ ಬರುವುದರಿಂದ ಮತ್ತು ತಮ್ಮನ್ನು ಆ ಸುಧಾರಣೆಗಳಲ್ಲಿ ಸೂಚಿಸಿದಂತೆ ಅಧಿಕಾರಕ್ಕೆ ಬರುವ ಮಂತ್ರಿಗಳು ನೇಮಕ ಮಾಡದೇ ಇರುವುದರಿಂದ, ತಮ್ಮನ್ನು ಮಂತ್ರಿಗಳ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಲು ಅವರು ವಿರೋಧ ವ್ಯಕ್ತಪಡಿಸಿದರು. ಅದಕ್ಕೆ ವ್ಯತಿರಿಕ್ತವಾಗಿ ಭಾರತದ ಮಂತ್ರಿಗಳಿಗೆ ಅಧಿಕಾರವನ್ನು ಪರಿಣಾಮಕಾರಿಯಾಗಿ ವರ್ಗಾಯಿಸುವುದನ್ನು ಎತ್ತಿ ಹಿಡಿಯುವವರು, ಆಡಳಿತದ ಸಾಧನ ವಾದ ಭಾರತ ಸಿವಿಲ್ ಸೇವೆಯ ಸದಸ್ಯರನ್ನು ನಿಯಂತ್ರಿಸುವ ಪರಿಣಾಮಕಾರಿಯಾದ ಅಧಿಕಾರವನ್ನು ಮಂತ್ರಿಗಳಿಗೆ ವಹಿಸಿದ ಹೊರತು ಪರಿಣಾಮಕಾರಿಯಾದ ಅಧಿಕಾರವನ್ನು ವರ್ಗಾವಣೆ ಆಗಲಾರದು ಎಂದೇ ನಿರ್ಣಯಿಸಿದರು. ಈ ವಿವಾದವು ದೀರ್ಘ ಸಮಯದವರೆಗೆ ನಡೆಯಿತು. ಮುಂದೆ ನನ್ನ ನೆನಪು ಸರಿ ಇದ್ದರೆ, ಲೀ ಆಯೋಗದವರು ವರದಿಯ ಪರಿಣಾಮವಾಗಿ ರಾಜೀ ರೀತಿಯಲ್ಲಿ ಆ ವಿಷಯವನ್ನು ನಿರ್ಧರಿಸಲಾಯಿತು. ಅಂದರೆ ಒಂದು ಮಧ್ಯ ಮಾರ್ಗವನ್ನು ಅನುಸರಿಸಲಾಯಿತು. ನನ್ನ ತಿದ್ದುಪಡಿಯಲ್ಲೂ ಅಂಥ ಮಧ್ಯ ಮಾರ್ಗವನ್ನೇ ನಾನು ಸೂಚಿಸುತ್ತಿದ್ದೇನೆ. ಭಾರತ ಸಿವಿಲ್ ಸೇವೆಯ ಸದಸ್ಯರು ಪಟ್ಟ ಅಭಿಪ್ರಾಯಕ್ಕೆ ಮಧ್ಯ ಮಾರ್ಗವಾಗಿ ತೆಗೆದುಕೊಂಡ ನಿರ್ಣಯವೆಂದರೆ ಆಯ್.ಸಿ.ಎಸ್.

ಅಧಿಕಾರಿಗಳು ಸಂಪೂರ್ಣವಾಗಿ ಮಂತ್ರಿಗಳ ನಿಯಂತ್ರಣದಲ್ಲಿ ಇರತಕ್ಕುದು ಮತ್ತು ದ್ವಿತ್ವ ಪದ್ಧತಿಯ ಮೇರೆಗೆ ವರ್ಗಾಯಿತ ಇಲಾಖೆಗಳಲ್ಲಿ ಕಾರ್ಯ ಮಾಡುತ್ತಿರುವ ಐ.ಸಿ.ಎಸ್. ಅಧಿಕಾರಿಗಳು ಮಂತ್ರಿಗಳ ಶಿಸ್ತು ನಿಯಂತ್ರಣದಲ್ಲಿರತಕ್ಕುದು ಮತ್ತು ನಿಯಮಗಳ ವರ್ಗೀಕರಣದ ಮೂಲಕ ಮಂತ್ರಿಗಳ ಆದೇಶಗಳನ್ನು ಪಾಲಿಸಲು ನಿರಾಕರಿಸಿ ತಪ್ಪಿತಸ್ಥರಾದ ಐ.ಸಿ.ಎಸ್. ಅಧಿಕಾರಿಗಳ ವಿರುದ್ಧ ಐದು ಪ್ರಕಾರದ ದಂಡನೆಗಳನ್ನು ವಿಧಿಸಲು ಅವಕಾಶ ಮಾಡಿಕೊಡಲಾಯಿತು. ಹೀಗೆ ಗೊತ್ತುಪಡಿಸಲಾದ, ಮತ್ತು ಭಾರತದ ಮಂತ್ರಿಗಳು ಆ ನಿಯಮಗಳ ಮೇರೆಗೆ ಚಲಾಯಿಸಬಹುದಾದ, ದಂಡನೆಗಳು ವಾಗ್ದಂಡನೆ, ಹಿಂಬಡ್ತಿ ಕೊಡುವುದು, ಬಡತಿಯನ್ನು ಬಂದು ಮಾಡುವುದು, ವರ್ಗಾವಣೆ ಮತ್ತು ವಜಾ ಮಾಡುವುದು ಆಗಿದ್ದವು. ಅದೇ ರೀತಿಯಲ್ಲಿ ಮಂತ್ರಿಯು ತನಗೆ ವಿಧಿಸಿದ ದಂಡನೆಯು ಯುಕ್ತವಾದುದು ಅಲ್ಲ. ಅದು ಅನ್ಯಾಯದ್ದು ಅಥವಾ ಜನಾಂಗ ದ್ವೇಷದಿಂದ ಮಾಡಿದ್ದು ಎಂದು ಭಾವಿಸಿದ ಸಿವಿಲ್ ನೌಕರನು ತನ್ನ ಅಪೀಲನ್ನು ಗವರ್ನರಿಗೆ ಮಾಡಬಹುದಾಗಿತ್ತು. ಮತ್ತು ಕೊನೆಯದಾಗಿ ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಸಲ್ಲಿಸಬಹುದಾಗಿತ್ತು ಮತ್ತು ಮಂತ್ರಿಯವರು ಮಾಡಿದ ದಂಡನೆಯ ಆದೇಶವನ್ನು ಪ್ರಶ್ನಿಸಬಹುದಾಗಿತ್ತು. ಈ ರೀತಿಯಲ್ಲಿ ವಿವಾದದಲ್ಲಿದ್ದ ಎರಡೂ ಅಂಶಗಳನ್ನು ಅಂದರೆ ನಿಯಂತ್ರಣ ಇಲ್ಲದಿರುವುದು ಮತ್ತು ಸಂಪೂರ್ಣ ನಿಯಂತ್ರಣ– ಇವೆರಡನ್ನೂ ಒಂದು ಹಂತದಲ್ಲಿ ಒಂದುಗೂಡಿಸಲಾಯಿತು. ಅದಕ್ಕಾಗಿ ಕಂಡುಹಿಡಿದ ಸೂತ್ರವೆಂದರೆ ಸಿವಿಲ್ ನೌಕರರು ಸೆಕ್ರೆಟರಿ ಆಫ್ ಸ್ಟೇಟ್ ಅವರ ನೌಕರರಾಗಿ ಮತ್ತು ತಮ್ಮನ್ನು ನೇಮಕ ಮಾಡಿದ ಪ್ರಾಧಿಕಾರದಿಂದ ಮಾತ್ರವೇ ವಜಾ ಮಾಡಬಹುದಾಗಿರುವವರಾಗಿ ಉಳಿಯತಕ್ಕುದು. ಆದರೆ, ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ ಆ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿಯ ಶಿಸ್ತು ನಿಯಂತ್ರಣಕ್ಕೊಳಪಟ್ಟಿರತಕ್ಕುದು. ಮಾನ್ಯರೇ, ನಾನು ಮಂಡಿಸಿದ ತಿದ್ದುಪಡಿಯು ಈ ಸೂತ್ರವನ್ನು ಕಾರ್ಯರೂಪಕ್ಕೆ ತರುವುದೇ ಆಗಿರುತ್ತದೆ. ಇದು ಮಂತ್ರಿಗೆ ಇರುವ ನೇಮಕಾತಿಯ ಹಕ್ಕನ್ನು ಕಿತ್ತುಕೊಳ್ಳುವುದಿಲ್ಲ, ಆಡಳಿತಾಧಿಕಾರಿಯನ್ನು ವಜಾ ಮಾಡಲು ಮಂತ್ರಿಗಳಿಗಿರುವ ಹಕ್ಕನ್ನು ಕಿತ್ತುಕೊಳ್ಳುವುದಿಲ್ಲ. ಅಲ್ಲದೆ, ಅದು ಆಡಳಿತಾಧಿಕಾರಿಯು ಶಾಲಾ ಮಂಡಳದ ಕೆಳಗೆ ಕಾರ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ ಆತನನ್ನು ಶಾಲಾ ಮಂಡಳದ ನೌಕರನೆಂದು ಪರಿಗಣಿಸಲಾಗುವುದೆಂದೂ ಸಹ ಈ ತಿದ್ದುಪಡಿಯು ಹೇಳುವುದಿಲ್ಲ. ಈ ತಿದ್ದುಪಡಿಯು ತುಂಬಾ ಪರಿಮಿತ ವ್ಯಾಪ್ತಿಯುಳ್ಳದಾಗಿರುತ್ತದೆ. ಆತನು ಶಾಲಾ ಮಂಡಳದ ಆಡಳಿತಾಧಿಕಾರಿಯೆಂದು ಕಾರ್ಯ ಮಾಡುತ್ತಿರುವ ಅವಧಿಯಲ್ಲಿ ಶಾಲಾ ಮಂಡಳವು ಶಿಸ್ತು ನಿಯಂತ್ರಣದ ಅಧಿಕಾರವನ್ನು ಹೊಂದಿರುತ್ತದೆ ಎಂದು ಮಾತ್ರವೇ ಹೇಳುತ್ತಿದೆ. ಶಾಲಾ ಮಂಡಳವು ಯಾವ ಪ್ರಕಾರದ ದಂಡನೆಯನ್ನು ವಿಧಿಸಬಹುದು ಮತ್ತು ಆಡಳಿತಾಧಿಕಾರಿಗೆ ಇರುವ ಅಪೀಲಿನ ಸ್ವರೂಪವೇನು ಎಂಬ ವಿಷಯಗಳನ್ನು ನನ್ನ ಈ ತಿದ್ದುಪಡಿಯು ನಿಯಮಗಳ ಮೂಲಕ ಗೊತ್ತುಪಡಿಸಲು ಸರಕಾರಕ್ಕೆ ಬಿಟ್ಟುಕೊಟ್ಟಿದೆ. ಶಾಲಾ ಮಂಡಳವು ಆಡಳಿತಾಧಿಕಾರಿಗೆ ಯಾವ ಪ್ರಕಾರದ ದಂಡನೆಯನ್ನು ವಿಧಿಸಬೇಕು ಎಂದು ನಾನು ಹೇಳುವುದಿಲ್ಲ. ಅಪೀಲು ಮಾಡುವ ಹಕ್ಕು ಸಹ ಇಂಥದೇ ಇರಬೇಕೆಂದು ನಾನು ಹೇಳುವುದಿಲ್ಲ. ದಂಡನೆಯ ಸ್ವರೂಪ ಅಪೀಲಿನ ವ್ಯಾಪ್ತಿ– ಈ ಎಲ್ಲವನ್ನೂ ನಿಯಮಗಳ ಮೂಲಕ ಉಪಬಂಧಿಸಲು ಸರಕಾರದ ವಿವೇಚನೆಗೇ ಬಿಟ್ಟುಕೊಡಲಾಗಿದೆ. ಆತನು ಕಾರ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ ತನ್ನ ಮೇಲೆ ಶಾಲಾ ಮಂಡಳದ ನಿಯಂತ್ರಣವಿದೆ ಎಂಬುದನ್ನು ಆತನು ತಿಳಿದುಕೊಂಡಿರಬೇಕೆಂಬುದನ್ನು ಖಚಿತಗೊಳಿಸುವುದನ್ನು ಮಾತ್ರ ಈ ತಿದ್ದುಪಡಿ ಮಾಡುತ್ತದೆ. ಇಷ್ಟು ಅಲ್ಪ ಅಧಿಕಾರವನ್ನು ಸಹ ನಾವು ಶಾಲಾ ಮಂಡಳಿಗೆ ಕೊಡದೇ ಹೋದರೆ, ಆಡಳಿತಾಧಿಕಾರಿಯು ಸಂದರ್ಭದ ಅವಶ್ಯಕತೆಗಳ ಮೂಲಕ

ತಾನು ನಿಜವಾಗಿಯೂ ಶಾಲಾ ಮಂಡಳದ ನೌಕರನೆಂದು ಹೇಗೆ ಭಾವಿಸಬಲ್ಲನು ಎಂಬುದು ನನಗೆ ತಿಳಿಯಲೊಲ್ಲದಾಗಿದೆ. ತನ್ನ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿವಿಲ್ ನೌಕರನ ಮೇಲೆ ತನಗೇ ಅಂಥ ಅಧಿಕಾರವಿಲ್ಲದಿದ್ದರೆ, ಆತನು ತನ್ನ ಆದೇಶವನ್ನು ಪಾಲಿಸದಿದ್ದರೆ ತನ್ನ ಇಲಾಖೆಯ ಪರಿಸ್ಥಿತಿ ಏನು ಆಗುತ್ತದೆ ಎಂಬ ಪ್ರಶ್ನೆಯನ್ನು ನಾನು ಗೌರವಾನ್ವಿತ ಪ್ರಧಾನ ಮಂತ್ರಿಯವರಿಗೆ ಕೇಳಬಯಸುತ್ತೇನೆ. ಸರಳ ರೀತಿಯಲ್ಲಿ ಕಾರ್ಯ ನಡೆಯುವುದರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು, ಆಡಳಿತಾಧಿಕಾರಿಯು ಶಾಲಾ ಮಂಡಳದವರ ನ್ಯಾಯಯುತ ಮತ್ತು ಕಾನೂನು ಸಮ್ಮತ ಆದೇಶವನ್ನು ಪಾಲಿಸಲು ತಾನು ಬದ್ಧರಾಗಿರುತ್ತೇನೆ ಎಂದು ಭಾವಿಸುವಷ್ಟರ ಮಟ್ಟಿಗೆ ಬೇಕಾಗುವಂಥ ಕನಿಷ್ಠ ಇಷ್ಟಾದರೂ ಅಧಿಕಾರವನ್ನು ಕೊಡಬೇಕೆಂದು ನಾನು ವಿನಂತಿಸುತ್ತೇನೆ. ಈ ಮಾತುಗಳೊಂದಿಗೆ ನನ್ನ ತಿದ್ದುಪಡಿಯನ್ನು ಈ ಸದನವು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

# ೧೪

# ಮುಂಬಯಿ ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿ ೧೯೨೮ರ ಮಸೂದೆ ನಂ.೩ XII*

೧೯ನೇ ಮಾರ್ಚ್ ೧೯೨೮ರಂದು ಮುಂಬೈ ಗವರ್ನರರು ಲೆಜಿಸ್ಲೇಟಿವ್ ಕೌನ್ಸಿಲ್ಲಿನ (ವಿಧಾನ ಪರಿಷತ್ತು) ಸಭೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಮಂಡಿಸಲು ಅನುಮತಿಸಲಾದ ಕೆಳಗೆ ಹೇಳಿದ ಮಸೂದೆಯನ್ನು ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ನಿಯಮಗಳ ೨೦ನೇ ನಿಯಮದ ಮೇರೆಗೆ ಪ್ರಕಟಿಸಲಾಗಿದೆ.

## ೧೯೨೮ರ ಮಸೂದೆ ನಂ. XII

೧೮೭೪ರ ಮುಂಬೈ ಆನುವಂಶಿಕ ಹುದ್ದೆಗಳ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮಸೂದೆ.

## (ಮುಂಬೈ ೧೮೭೪ರ III)

ಮುಂಬೈ ೧೮೭೪ರ ಆನುವಂಶಿಕ ಹುದ್ದೆಗಳ ಅಧಿನಿಯಮವನ್ನು ಈ ಕೆಳಕಂಡ ರೀತಿಯಲ್ಲಿ ತಿದ್ದುಪಡಿ ಮಾಡುವುದು ಅಗತ್ಯವಾಗಿರುವುದರಿಂದ ಮತ್ತು ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮದ ೮೦(ಸಿ) ಕಲಮಿನ ಮೇರೆಗೆ ಸನ್ಮಾನ್ಯ ಗವರ್ನರರ ಪೂರ್ವ ಮಂಜೂರಾತಿಯನ್ನು ಪಡೆದು ಕೊಂಡಿರುವುದರಿಂದ, ಈ ಕೆಳಗಿನಂತೆ ಅಧಿನಿಯಮಿಸಲಾಗಿದೆ.

(೧) ಈ ಅಧಿನಿಯಮವನ್ನು ಮುಂಬೈ ಆನುವಂಶಿಕ ಹುದ್ದೆಗಳ (ತಿದ್ದುಪಡಿ) ಅಧಿನಿಯಮ ೧೯೨೮ ಎಂದು ಕರೆಯತಕ್ಕುದು.

(೨) ೧೮೭೪ರ ಮುಂಬೈ IIIರ ೯ನೇ ಕಲಮಿನ ತಿದ್ದುಪಡಿ:– ೯ನೇ ಕಲಮಿನ (೧) ವಾಕ್ಯಾವಳಿಯಲ್ಲಿ "ಪದಾಧಿಕಾರಿಯ ಕಾರ್ಯ ಮಾಡುತ್ತಿರುವವನ ಸಂಭಾವನೆ ಎಂದು ನಿಗದಿಗೊಳಿಸಿರಲಿ ಅಥವಾ ಇಲ್ಲದಿರಲಿ" ಎಂಬ ಪದಗಳಿಗೆ ಬದಲಾಗಿ ಕೆಳಗಿನದನ್ನು ಸೇರಿಸತಕ್ಕುದು.
"ಪದಾಧಿಕಾರಿಯ ಕಾರ್ಯ ಮಾಡುತ್ತಿರುವವನ ಸಂಭಾವನೆಯಾಗಿ ನಿಗದಿಗೊಳಿಸಿರದ"

---

* ಬಿ.ಎಲ್.ಎ. ಡಿಬೇಟ್ಸ್, ಸಂ.೩, ಪುಟಗಳು ೨೬೭೨–೭೩
೩೦ನೇ ಏಪ್ರಿಲ್ ೧೯೩೮.

(೩) ೧೮೭೪ನೇ ಮುಂಬೈ IIIರ ೯(ಎ) ಹೊಸ ಕಲಮನ್ನು ಸೇರಿಸುವುದು: ೯ನೇ ಕಲಮಿನ ನಂತರ ಕೆಳಗಿನದನ್ನು ಸೇರಿಸತಕ್ಕುದು.

**೯(ಎ):** (೧)ಯಾವುದೇ ವತನವನ್ನು ಅಥವಾ ವತನದ ಯಾವುದೇ ಭಾಗವನ್ನು ಬದಲೀ ಕಾರ್ಯ ಮಾಡುವವನಿಗೆ ಪ್ರತಿಫಲವೆಂದು ಮುಂಬೈ ಅನುವಂಶಿಕ ಹುದ್ದೆಗಳ ಅಧಿನಿಯಮ ೧೮೭೪ (ಮುಂಬೈ ೧೮೭೪ರ III) ಜಾರಿಯಲ್ಲಿ ಬರುವುದಕ್ಕೆ ಪೂರ್ವದಲ್ಲಿ ವಹಿಸಿಕೊಟ್ಟಿರುವುದನ್ನು ಯಾವುದೇ ಬ್ರಿಟಿಷ್ ನ್ಯಾಯಾಲಯದ ಆದೇಶದ ಅಥವಾ ಡಿಕ್ರಿ ಜಾರಿಯ ಪರಿಣಾಮದಿಂದಾಗಿ ಮತ್ತು ಕಲೆಕ್ಟರರ ಸಮ್ಮತಿ ಇಲ್ಲದೆಯೇ ಮತ್ತು ಕಂದಾಯದ ಇಲಾಖೆಗಳಲ್ಲಿ ಒಡೆತನದ ವರ್ಗಾವಣೆಯು ಅದೇ ವತನದ ವತನದಾರನಲ್ಲದ ಮತ್ತೊಬ್ಬನ ಒಡೆತನದ್ದಾಗಿ ಅಥವಾ ಪ್ರಯೋಜನಕಾರಿ ಸ್ವಾಧೀನಕ್ಕೆ ಅನ್ಯಥಾ ವರ್ಗಾಯಿಸಲ್ಪಟ್ಟಿದ್ದಾಗ ಅಂಥ ಹಸ್ತಾಂತರವು ಅನೂರ್ಜಿತವಾದುದು ಮತ್ತು ಅಸಿಂಧುವಾದುದೂ ಎಂದು ಕಲೆಕ್ಟರನು ಘೋಷಿಸತಕ್ಕುದು. ಮತ್ತು ಅಂಥ ವತನವು ಅಥವಾ ಅದರ ಯಾವುದೇ ಭಾಗವು ಅಥವಾ ಅದರಿಂದ ಬಂದ ಯಾವುದೇ ಲಾಭಗಳು, ಅಂಥ ಆದೇಶದ ದಿನಾಂಕದಿಂದ ಪೂರ್ವದಲ್ಲಿ ಅದಕ್ಕೆ ಹಕ್ಕುಳ್ಳ ಮತದಾರನಿಗೆ ಸೇರತಕ್ಕುದು ಮತ್ತು ಅಂಥ ಯಾವುದೇ ಹಕ್ಕುಳ್ಳ ವತನದಾರನಿಗೆ ಸೇರಕ್ಕುದು ಮತ್ತು ಅಂಥ ಯಾವುದೇ ಲಾಭಗಳನ್ನು ಆ ರೀತಿಯಲ್ಲಿ ವಸೂಲು ಮಾಡಿ ಅಂಥ ವತನದಾರನಿಗೆ ಕೊಡತಕ್ಕುದು.

(೨) ವತನದ ಅಂಥ ಭಾಗವು ಜಾಮೀನು ಆಗಿರುವಾಗ ಕಲೆಕ್ಟರನು ಅದನ್ನು ವತನದಾರನಿಗೆ ವರ್ಗಾಯಿಸಿ ಆದೇಶ ಮಾಡತಕ್ಕದು."

(೪) ೧೯೭೪ರ ಮುಂಬೈ IIIರ ೧೫ನೇ ಕಲಮಿನ ತಿದ್ದುಪಡಿ ೧೫ನೇ ಕಲಮಿನ ೧ನೇ ವಾಕ್ಯಾವಳಿಗೆ ಕೆಳಗಿನ ನಿಬಂಧನೆಯನ್ನು ಸೇರಿಸಿರಿ.
"ಪರಂತು, ಈ ಅಧಿನಿಯಮದ ೬೩ನೇ ಕಲಮಿನ ಅರ್ಥದಲ್ಲಿ 'ಆ' ಪ್ರಾತಿನಿಧ್ಯದ ವತನದಾರರ ಇಡಿಯ ನಿಕಾಯವು ಅಥವಾ ಹೆಚ್ಚಿನ ಸಂಖ್ಯೆಯವರು.
ಪರಂತು ಈ ಅಧಿನಿಯಮದ ೬೩ನೇ ಕಲಮಿನ ಅರ್ಥದಲ್ಲಿ ಆನುವಂಶಿಕ ಹುದ್ದೆಯನ್ನು ಹೊಂದಿರುವ ಎಲ್ಲಾ ಪ್ರಾತಿನಿಧಿಕ ವತನದಾರರ ನಿಕಾಯುವು ಅಥವಾ ಅವರಲ್ಲಿ ಬಹುಸಂಖ್ಯೆಯವರು ವತನ ಜಮೀನುಗಳ ಸ್ವಾಧೀನವನ್ನು ಹೊಂದಿರುವಲ್ಲಿ, ಕಲೆಕ್ಟರರಿಗೆ ಲಿಖಿತ ಅರ್ಜಿಯ ಮೂಲಕ ಹಾಗೆ ವ್ಯಕ್ತಪಡಿಸಿದರೆ, ಅಂಥ ಸೇವೆಗಳನ್ನು ಮಾಡುವ ಹೊಣೆಯಿಂದ ತಮ್ಮನ್ನು ನಿರಂತರವಾಗಿ ಬಿಡುಗಡೆ ಮಾಡಬೇಕು ಎಂದೂ ಮತ್ತು ಅವರು ಅಂಥ ಜಮೀನುಗಳಿಗೆ ಇರುವ ಸಂಪೂರ್ಣ ಭೂ ಕಂದಾಯವನ್ನು ಕೊಡುತ್ತೇವೆ ಎಂದು ಒಪ್ಪಿದರೆ ಆ ಜಮೀನುಗಳ ಸ್ವಾಧೀನವನ್ನು ಇಟ್ಟುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ ಎಂಬ ಬಗ್ಗೆ ಆಯ್ಕೆಯು ಅವರದು ಇರುತ್ತದೆ."

(೫) ೧೮೭೪ರ ಮುಂಬೈ IIIರ ೧೯ನೇ ಕಲಮಿನ ತಿದ್ದುಪಡಿ: ೧೯ನೇ ಕಲಮಿನ ಕೆಳಗಿನದನ್ನು ತೆಗೆದುಹಾಕತಕ್ಕುದು. "ಮತ್ತು ಸಂದಾಯವನ್ನು ವಸ್ತುವಿನ ರೂಪದಲ್ಲಿ ಮಾಡಬೇಕೋ ಅಥವಾ ಹಣದ ರೂಪದಲ್ಲಿ ಮಾಡಬೇಕೋ ಅನ್ನುವುದನ್ನು ನಿರ್ಣಯಿಸಲು."

(೬) ೧೮೭೪ರ ಮುಂಬೈ IIIರಲ್ಲಿ ೧೯ಎ, ೧೯ಬಿ, ೧೯ಸಿ ಮತ್ತು ೧೯ಡಿ ಕಲಮುಗಳನ್ನು ಸೇರಿಸುವುದು; ೧೯ನೇ ಕಲಮಿನ ನಂತರ ಕೆಳಗಿನ ಕಲಮುಗಳನ್ನು ಸೇರಿಸತಕ್ಕದ್ದು.

**೧೯ಎ:** ವಸ್ತುವಿನ ರೂಪದಲ್ಲಿ ಕರಾಕರಣೆ ಮಾಡುವ ಹಕ್ಕಿದ್ದ ವತನ ಸ್ವತ್ತಿದ್ದ ಎಲ್ಲಾ ಪ್ರಾತಿನಿಧಿಕ ವತನದಾರರು ಅಥವಾ ಅವರಲ್ಲಿ ಬಹುಸಂಖ್ಯೆಯವರು ಹಣದ ರೂಪದಲ್ಲಿ ಕರಾಕರಣೆ ಮಾಡಲು ಬಯಸಿ ಕಲೆಕ್ಟರನಿಗೆ ಅರ್ಜಿಯನ್ನು ಕೊಟ್ಟರೆ ಕಲೆಕ್ಟರನು ವಸ್ತುವಿನ ರೂಪದ ಕರವನ್ನು ಅದಕ್ಕೆ ಅದನ್ನು ಸರಿಸಮವಾದ ಹಣದ ರೂಪದ ಕರವಾಗಿ ಪರಿವರ್ತಿಸತಕ್ಕದು.

**೧೯ಬಿ:** ವಸ್ತುವಿನ ರೂಪದಲ್ಲಿ ಕರಾಕರಣೆ ಮಾಡುವ ಹಕ್ಕನ್ನು ಅದಕ್ಕೆ ಸರಿಸಮವಾದ ಹಣದ ರೂಪದಲ್ಲಿ ಕರಾಕರಣೆ ಮಾಡುವ ಹಕ್ಕನ್ನಾಗಿ ಪರಿವರ್ತಿಸಿದಾಗ ಸಂಬಂಧಪಟ್ಟ ಎಲ್ಲಾ ಪ್ರಾತಿನಿಧಿಕ ವತನದಾರರು ಅಥವಾ ಅವರಲ್ಲಿ ಬಹುಸಂಖ್ಯೆಯವರು ಅದನ್ನು ಕೊಡಲು ಹೊಣೆಗಾರರಾದವರಿಂದ ಅದನ್ನು ವಸೂಲು ಮಾಡಿಕೊಡುವುದಕ್ಕಾಗಿ ಕಲೆಕ್ಟರನಿಗೆ ಅರ್ಜಿಯನ್ನು ಸಲ್ಲಿಸಬಹುದು. ನಂತರ ಕಲೆಕ್ಟರನು ಅದನ್ನು ಭೂಕಂದಾಯದೊಡನೆ ಮತ್ತು ಅದರ ಭಾಗವಾಗಿ ವಸೂಲು ಮಾಡತಕ್ಕುದು ಮತ್ತು ಅದನ್ನು ಪಡೆದುಕೊಳ್ಳಲು ಹಕ್ಕುಳ್ಳ ವತನದಾರರಿಗೆ ಸರಕಾರಿ ಟ್ರೆಝುರಿಯಿಂದ ಆ ಹಣವನ್ನು ಕೊಡಲು ನಿರ್ದೇಶಿಸತಕ್ಕುದು.

**೧೯ಸಿ:** ವಸ್ತುವಿನ ರೂಪದಲ್ಲಿ ಹಕ್ಕನ್ನು ರೈತನಿಗೆ ಮತ್ತು ಸರಕಾರಕ್ಕೆ ಮಾಡಿದ ಸೇವೆಯ ಜಂಟಿ ಪ್ರತಿಫಲವೆಂದು ಭಾವಿಸಿದ್ದಲ್ಲಿ, ಎಲ್ಲ ಪ್ರಾತಿನಿಧಿಕ ವತನದಾರರ ಅಥವಾ ಅವರಲ್ಲಿ ಬಹುಸಂಖ್ಯೆಯವರ ವಸ್ತುವಿನ ರೂಪದಲ್ಲಿ ಕರ ವಿಧಿಸುವ ಹಕ್ಕನ್ನು ಹಣದ ರೂಪದ ಕರದಲ್ಲಿ ಪರಿವರ್ತಿಸಲಾಗಿದೆಯೋ, ಅವರು ಸರಕಾರಕ್ಕೆ ಸಲ್ಲಿಸಿದ ಸೇವೆಗಾಗಿ ಎಷ್ಟು ಮತ್ತು ರೈತರ ಸೇವೆಗಾಗಿ ಎಷ್ಟು ಹಣದ ರೂಪದ ಕರವು ತಮಗೆ ಬರಬೇಕೆಂಬುದನ್ನು ನಿರ್ಣಯಿಸಲು ಅರ್ಜಿಯನ್ನು ಕೊಡಬಹುದು. ಆಗ ಕಲೆಕ್ಟರನು ತನ್ನ ನಿರ್ಣಯವನ್ನು ಕೊಡತಕ್ಕುದು. ಆ ನಿರ್ಣಯವೇ ಕೊನೆಯ ನಿರ್ಣಯವೆಂದು ಭಾವಿಸತಕ್ಕದ್ದು.

**೧೯ಡಿ:** ೧೯ಸಿ ಕಲಮಿನಲ್ಲಿ ಉಲ್ಲೇಖಿಸಲಾಗಿರುವಂಥ ನಿರ್ಣಯಕ್ಕಾಗಿ ಪ್ರಾರ್ಥಿಸಿದ ಎಲ್ಲಾ ಪ್ರಾತಿನಿಧಿಕ ವತನದಾರರು ಅಥವಾ ಅವರಲ್ಲಿ ಬಹುಸಂಖ್ಯೆಯವರು ರೈತರಿಗೆ ಯಾವುದೇ ಸೇವೆಯನ್ನು ಸಲ್ಲಿಸಲು ನಿರಾಕರಿಸಬಹುದು. ಆದರೆ ಈ ಬಗ್ಗೆ ಅವರು ತಮ್ಮ ನಿರ್ಣಯವನ್ನು ಲಿಖಿತ ರೂಪದಲ್ಲಿ ಕಲೆಕ್ಟರರಿಗೆ ತಿಳಿಸಿರತಕ್ಕುದು. ಅಂಥ ಆಯ್ಕೆಯನ್ನು ಮಾಡಿಕೊಂಡ ಸಂದರ್ಭದಲ್ಲಿ ಅಂಥ ಆಯ್ಕೆಯನ್ನು ಚಲಾಯಿಸುವ ವತನದಾರರು, ರೈತರಿಗೆ ಸೇವೆ ಮಾಡಿದ್ದಕ್ಕಾಗಿ ಅವರಿಗೆ ಬರಬೇಕಾಗಿದ್ದ ಹಣದ ರೂಪದ ಕರದ ಭಾಗವನ್ನು ಕಳೆದು ಕೊಳ್ಳುತ್ತಾರೆ.

(೭) ೧೮೭೪ರ ಮುಂಬೈ IIIರ ೨೧ನೇ ಕಲಮಿನ ತಿದ್ದುಪಡಿ:– ೨೧ನೇ ಕಲಮಿನಲ್ಲಿನ "ಅಂಥ ಅವಧಿಗಳು" ಎಂಬ ಪದಗಳಿಗೆ ಬದಲಿಯಾಗಿ ಕೆಳಗಿನದನ್ನು ಸೇರಿಸತಕ್ಕುದು.
"ಹತ್ತು ವರುಷಗಳಿಗೆ ಮೀರದ ಅವಧಿ"

(೮) ೧೮೭೪ರ ಮುಂಬೈ IIIರ ೮೩ನೇ ಕಲಮಿನ ತಿದ್ದುಪಡಿ:– ೩ನೇ ಕಲಮಿನ ಬದಲಿಗೆ ಈ ಕಲಮನ್ನು ಸೇರಿಸತಕ್ಕುದು. (೮೩) ಅಧಿನಿಯಮವನ್ನು ಪಾಸು ಮಾಡಿದ ಆನಂತರ, ೧೮ನೇ ಕಲಮಿನಲ್ಲಿ ಅನ್ಯಥಾ ನಮೂದಿಸಿರುವುದನ್ನು ಹೊರತುಪಡಿಸಿ ಸರ್ಕಾರವು ಯಾವುದೇ ಆನುವಂಶಿಕ ಹುದ್ದೆಗೆ ಸಂಬಂಧಿಸಿರುವ ಕರ್ತವ್ಯಗಳನ್ನು ಗೊತ್ತುಪಡಿಸಿ ನಿಯಮಗಳನ್ನು ರೂಪಿಸತಕ್ಕುದು.
ಪರಂತು, ಹಾಗೆ ರೂಪಿಸಿದ ನಿಯಮಗಳು ಮುಂಬೈ ಲೆಜೆಸ್ಲೇಟಿವ್ ಕೌನ್ಸಿಲ್ಲಿನ (ಮುಂಬೈ ವಿಧಾನ ಪರಿಷತ್ತು) ಮುಂದಿನ ಅಧಿವೇಶನಕ್ಕೆ ಒಂದು ತಿಂಗಳ ಮುಂಚೆಯೇ ಮುಂಬೈ ಸರಕಾರಿ ರಾಜ್ಯ ಪತ್ರದಲ್ಲಿ ಮೊದಲೇ ಪ್ರಕಟಪಡಿಸಿದ ಹೊರತು ಜಾರಿಯಲ್ಲಿ ಬರತಕ್ಕುದಲ್ಲ. ಮತ್ತು ಸದರೀ ಪರಿಷತ್ತಿನ ಠರಾವಿನ ಮೂಲಕ ಅವುಗಳು ರದ್ದು ಗೊಳಿಸಲಿಕ್ಕೆ ಅಥವಾ ಮಾರ್ಪಾಡು ಮಾಡಲಿಕ್ಕೆ ಒಳಪಡ ತಕ್ಕಂಥವುಗಳು ಆಗಿರ ತಕ್ಕುದು.

## ಉದ್ದೇಶ ಮತ್ತು ಕಾರಣಗಳ ವಿವರಣೆ:

**ಈ ಮಸೂದೆಯ ಉದ್ದೇಶಗಳು:**

(೧) ಕಾರ್ಯನಿರತ ವತನದಾರರ ವೇತನಗಳಿಗಾಗಿ ಉತ್ತಮ ನಿಬಂಧನೆಗಳನ್ನು ರಚಿಸು ವುದು.

(೨) ಗ್ರಾಮದ ಸೇವಕರ ಕೆಳವರ್ಗದ ಆನುವಂಶಿಕ ವತನಗಳ ಪರಿವರ್ತನೆಯನ್ನು ಅನುಮತಿ ಸುವುದು.

(೩) ಬಲೂಟಾವನ್ನು ಹಣದ ಕರದ ರೂಪಕ್ಕೆ ಪರಿವರ್ತಿಸಲು ಅವಕಾಶ ಕಲ್ಪಿಸುವುದು.

(೪) ಕೆಳವರ್ಗದ ವತನವನ್ನು ಹೊಂದಿರುವವನು ರೈತರ ಸೇವೆ ಮಾಡುವುದರಿಂದ ಮುಕ್ತನಾಗಲು ಅನುಮತಿಸುವುದು.

(೫) ಕಾರ್ಯನಿರತ ವತನದಾರರ ಕರ್ತವ್ಯಗಳನ್ನು ಗೊತ್ತುಪಡಿಸುವುದು.

(ಸಹಿ)
ಬಿ. ಆರ್. ಅಂಬೇಡ್ಕರ್,
ಜಿ. ಎಸ್. ರಾಜ್ಯಾಧ್ಯಕ್ಷ
ಮುಂಬೈ ಗವರ್ನರರ–ಲೆಜಿಸ್ಲೇಟಿವ್ ಕೌನ್ಸಿಲ್ಲಿನ
ಹಂಗಾಮಿ ಕಾರ್ಯದರ್ಶಿ.

ಮುಂಬಯಿ:
೧೩ನೇ ಏಪ್ರಿಲ್ ೧೯೨೮

## ೧೫

# ಆನುವಂಶಿಕ ಹುದ್ದೆಗಳ ಅಧಿನಿಯಮ ತಿದ್ದುಪಡಿ ಮಸೂದೆ: ೧*

ಡಾ. ಬಿ. ಆರ್. ಅಂಬೇಡ್ಕರ್: ೧೯೨೮ರ ಮಸೂದೆ ನಂ. XIIನ್ನು (ಮುಂಬೈ ಆನುವಂಶಿಕ ಹುದ್ದೆಗಳ ಅಧಿನಿಯಮ ೧೮೭೪ನ್ನು ತಿದ್ದುಪಡಿ ಮಾಡುವ ಮಸೂದೆ) ಮಂಡಿಸಲು ಇಚ್ಛಿಸುತ್ತೇನೆ. ಈ ಮಸೂದೆಯು ಪಟೇಲರು ಅಥವಾ ಕುಲಕರ್ಣಿಯವರಿಗೆ ಸಂಬಂಧಿಸಿದ್ದಲ್ಲ. ಈ ಮಸೂದೆಯಲ್ಲಿ ಉಲ್ಲೇಖಿಸಲಾಗಿರುವ ಆನುವಂಶಿಕ ಕಾರಣಗಳನ್ನು ಆನುವಂಶಿಕ ಹುದ್ದೆಗಳ ಅಧಿನಿಯಮದ ಮೇರೆಗೆ ಕೆಳದರ್ಜೆಯ ಅಧಿಕಾರಿಗಳು ಎಂದು ತಿಳಿದುಕೊಳ್ಳಲಾಗುತ್ತಿದೆ. ಸದ್ಯದ ವೇಳೆಯಲ್ಲಿ ಅಂಥ ಆನುವಂಶಿಕ ಕೆಳದರ್ಜೆಯ ಹುದ್ದೆಗಳು ಡೆಕ್ಕನದಲ್ಲಿ ಮಹರ್ ಅವರನ್ನು ಗುಜರಾತಿನಲ್ಲಿ ವೇಥಿಯಾಗಳು ಅಥವಾ ವರ್ಥನಿಯಾಗಳನ್ನು, ರಾಮೋಶಿಸ್ ಅಥವಾ ಜುಗ್ಲಿಯಾಸ್‌ಗಳನ್ನು ಮತ್ತು ಕರ್ನಾಟಕದಲ್ಲಿ ಹೊಲೆಯರನ್ನು ಒಳಗೊಳ್ಳುತ್ತವೆ. ಈ ಕೆಳಗಿನ ದರ್ಜೆಯ ಹುದ್ದೆಗಳನ್ನು ಹೊಂದಿರುವವರಲ್ಲಿ ಹೆಚ್ಚಿನ ಪ್ರಮಾಣದವರು ಮಹರರು ಇರುತ್ತಾರೆ ಮತ್ತು ಈ ಸದನಕ್ಕೆ ನಾನು ಹೇಳುವಾಗ ಈ ಕೆಳದರ್ಜೆಯ ಅಧಿಕಾರಿಗಳ ಪ್ರತಿನಿಧಿಗಳಾಗಿರುವ ಮಹರರ ಬಗ್ಗೆಯೇ ವಿಶೇಷವಾಗಿ ಮಾತನಾಡಲು ಉದ್ದೇಶಿಸಿರುತ್ತೇನೆ.

ಮಾನ್ಯರೇ, ಈ ಮಸೂದೆಯ ಉಪಬಂಧಗಳನ್ನು ತಿಳಿದುಕೊಳ್ಳಲು ಈ ಮಸೂದೆಯನ್ನು ಮಂಡಿಸಲು ಕಾರಣವಾದ ಅನ್ಯಾಯಗಳನ್ನು ಮತ್ತು ಕುಂದು ಕೊರತೆಗಳನ್ನು ಈ ಸದನವು ತಿಳಿದುಕೊಳ್ಳುವುದು ಅತ್ಯಂತ ಅವಶ್ಯವೆಂದು ನಾನು ಭಾವಿಸುತ್ತೇನೆ. ಅನ್ಯಾಯಗಳು ಹಲವಾರು. ಆದರೆ ವಾಸ್ತವವಾಗಿ ಏನು ನಡೆಯುತ್ತದೆ ಅನ್ನುವುದರ ವಿವರವಾದ ಚಿತ್ರಣವನ್ನು ಕೊಟ್ಟು ಈ ಸದನದ ಸಮಯವನ್ನು ಹಾಳು ಮಾಡಲು ನಾನು ಇಚ್ಛಿಸುವುದಿಲ್ಲ. ದಬ್ಬಾಳಿಕೆಯ ಪದ್ಧತಿಯ ಸ್ವರೂಪದ ಬಗ್ಗೆ ನಾನು ಸಾಮಾನ್ಯವಾಗಿ ಮಾತ ನಾಡುತ್ತೇನೆ. ಮಾನ್ಯರೇ, ವತನ ಅಧಿನಿಯಮದ ಮೇರೆಗೆ ಕೆಳಗಿನ ವತನಗಳನ್ನು ಹೊಂದಿರುವವರು ಸರಕಾರದ ನೌಕರರಾಗಿರುತ್ತಾರೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಮಾನ್ಯರೇ ಈ ಸರಕಾರೀ ನೌಕರರ ಕರ್ತವ್ಯಗಳನ್ನು ಎಲ್ಲಿಯೂ ಗೊತ್ತುಪಡಿಸಲಾಗಿಲ್ಲ. ನಿಜಸಂಗತಿ ಎಂದರೆ ವಾಸ್ತವವಾಗಿ ವತನದಾರರಾದ ಇವರು ಯಾವ ನಿರ್ದಿಷ್ಟ ಇಲಾಖೆಗೆ ಸಂಬಂಧಪಟ್ಟವರು ಎಂದು ಯಾರೂ ಹೇಳಲಾರರು. ಅದು ಯಾರಿಗೂ ತಿಳಿದಿಲ್ಲ. ನಿಜ ಸಂಗತಿ ಎಂದರೆ ಪ್ರತಿಯೊಂದು ಇಲಾಖೆಯೂ ಅವರ ಸೇವೆಯನ್ನು ತೆಗೆದುಕೊಳ್ಳುತ್ತದೆ. ನೀರಾವರಿ ಇಲಾಖೆಗೆ ಸೇವೆ ಸಲ್ಲಿಸಲು ಅವರನ್ನು ಕರೆಯಬಹುದು; ಮೈಲೀ ಚುಚ್ಚುವ

---

* ಬಿ.ಎಲ್.ಸಿ. ಡಿಬೇಟ್ಸ್, ಸಂ. XX III
ಪುಟಗಳು ೭೦೮–೨೧, ૩ನೇ ಆಗಸ್ಟ್ ೧೯೨೮

ಇಲಾಖೆಗೆ ಅವರನ್ನು ಕರೆಯಬಹುದು; ಶಿಕ್ಷಣ ಇಲಾಖೆಗೆ ಸೇವೆ ಸಲ್ಲಿಸಲು ಅವರನ್ನು ಕರೆಯಬಹುದು ಮತ್ತು ಪೊಲೀಸ್ ಇಲಾಖೆಗೂ ಸೇವೆ ಸಲ್ಲಿಸಲು ಕರೆಯಬಹುದು ಎಂದು ನಾನು ಭಾವಿಸುತ್ತೇನೆ. ಅಬಕಾರೀ ಇಲಾಖೆಗೂ ಸಹ ಸೇವೆ ಸಲ್ಲಿಸಲು ಅವರನ್ನು ಕರೆಯಬಹುದು. ಅದು ನಿಜವಾಗಿಯೂ ಅಸಾಧಾರಣವಾದ ಪದ್ಧತಿಯಾಗಿದೆ. ಪ್ರತಿಯೊಬ್ಬ ಸರಕಾರೀ ನೌಕರನು ತಾನು ಯಾವ ಇಲಾಖೆಗೆ ಸಂಬಂಧಪಟ್ಟವನು ಎನ್ನುವುದನ್ನು ಮತ್ತು ತಾನು ಯಾವ ಸೇವೆಗಳನ್ನು ಮಾಡಬೇಕೆಂದು ಅಪೇಕ್ಷಿಸ ಲಾಗುತ್ತಿದೆ ಎಂಬುದನ್ನು ಖಚಿತವಾಗಿ ತಿಳಿದುಕೊಂಡಿರುತ್ತಾನೆ. ಯಾವುದೇ ಇಲಾಖೆಯು ಯಾವುದೇ ವ್ಯಕ್ತಿಯನ್ನು ತಾನು ಹೇಳಿದಂತೆ ಎಲ್ಲ ಕೆಲಸಗಳನ್ನು ಮಾಡುವ ಆಳಿನಂತೆ ನೇಮಿಸಿಕೊಳ್ಳುವುದಿಲ್ಲ. ಆದರೆ ಮಹಾರರನ್ನು ಸರಕಾರದ ಎಲ್ಲ ಇಲಾಖೆಗಳವರ ಎಲ್ಲ ಕೆಲಸಗಳನ್ನು ಮಾಡಲು ಅಂಥ ದಾದಿಯಂತೆಯೇ ಸಾಮಾನ್ಯವಾಗಿ ಎಲ್ಲ ವ್ಯಾವಹಾರಿಕ ಉದ್ದೇಶಗಳಿಗೂ ಉಪಯೋಗಿಸಿಕೊಳ್ಳಲಾಗುತ್ತಿದೆ ಮತ್ತು ಹಾಗೆ ನಡೆಸಿಕೊಳ್ಳಲಾಗುತ್ತಿದೆ. ಅದೂ ಅಲ್ಲದೆ, ದಿನದ ಯಾವುದೇ ವೇಳೆಯಲ್ಲಿ ಅಂದರೆ ಹಗಲಿನಲ್ಲಿ ರಾತ್ರಿ ಯಲ್ಲಿ ಸಹ ಅತನನ್ನು ಸೇವೆ ಮಾಡಲು ಕರೆಯಬಹುದು. ಇತರ ಯಾವನೇ ಸರಕಾರಿ ನೌಕರನು ಆತನ ಹುದ್ದೆ ಎಷ್ಟೇ ಅಲ್ಪವಾದದ್ದಾಗಿದ್ದರೂ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಕೆಲಸ ಮಾಡುತ್ತಾನೆ. ಕಲೆಕ್ಟರನ ಕಚೇರಿಯಲ್ಲಿಯ ತನ್ನ ಕರ್ತವ್ಯ ಮಾಡುವುದಕ್ಕಾಗಿ ನಿರ್ದಿಷ್ಟ ಸಮಯಕ್ಕೆ ಕಚೇರಿಗೆ ಹೋಗಿ ನಿರ್ದಿಷ್ಟ ಸಮಯಕ್ಕೆ ಮನೆಗೆ ವಾಪಸು ಬರುತ್ತಾನೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಮಹಾರರಿಗೆ ಅದು ಅನ್ವಯವಿಲ್ಲ. ಅಷ್ಟೇ ಅಲ್ಲದೆ, ಅವರನ್ನು ರಾತ್ರಿಯಲ್ಲೂ ಸೇವೆ ಮಾಡಲು ಕರೆಯಬಹುದಾಗಿದೆ. ಒಬ್ಬ ಅಧಿಕಾರಿಯು ರಾತ್ರಿ ವೇಳೆಯಲ್ಲಿ ಆಗ ಮಳೆ ಇರಲಿ, ಗುಡುಗು ಸಿಡಿಲು ಇರಲಿ ಅಥವಾ ಇತರ ಯಾವುದೇ ತೊಂದರೆಗಳಿರಲಿ, ಸೇವೆ ಮಾಡಲು ಕರೆದರೆ ಅದನ್ನು ತಿರಸ್ಕರಿಸುವ ಧೈರ್ಯವನ್ನು ಮಹಾರನು ಮಾಡಲಾರ.

ಮೂರನೆಯ ದೂರು ಇದು. ಮಹಾರರಿಗೆ ಸಂಬಂಧಿಸಿದಂತೆ ಸರ್ವೀಸ್ ನೋಂದಣಿ ಪುಸ್ತಕದಲ್ಲಿ ಯಾರ ಹೆಸರನ್ನು ನಮೂದಿಸಲಾಗಿದೆಯೋ ಆ ವ್ಯಕ್ತಿಯು ಬದಲಿ ಕಾರ್ಯ ಮಾಡುವವನಾಗಿರುತ್ತಾನೆ ಮತ್ತು ಸರಕಾರಕ್ಕೆ ಸೇವೆ ಸಲ್ಲಿಸಲು ಆತನೊಬ್ಬನೇ ಹೊಣೆಗಾರನಲ್ಲ. ಆದರೆ ಆತನ ಇಡಿಯ ಕುಟುಂಬವೇ ಸರಕಾರಕ್ಕೆ ಸೇವೆ ಸಲ್ಲಿಸಲು ಹೊಣೆಯಾಗಿರುತ್ತದೆ. ಯಾರ ಹೆಸರನ್ನು ನಮೂದಿಸಲಾಗಿರುತ್ತದೆಯೋ ಆತನು ಸರಕಾರಿ ಸೇವೆಯ ನಿಮಿತ್ತ ಬಿಟ್ಟು ಹೊರ ಹೋಗಿದ್ದರೆ ಸೇವೆಯನ್ನು ಮಾಡಲು ಆತನ ತಂದೆ ಯನ್ನು ಕರೆಯಬಹುದು. ಆತನ ತಂದೆಯು ಸಿಗದಿರುವಲ್ಲಿ ಆತನ ಅಜ್ಜನನ್ನು ಕರೆಯಬಹುದು. ಅದರೆ ಆತನ ತಂದೆಯ ಅಥವಾ ಅಜ್ಜನ ಹೆಸರುಗಳು ನೋಂದಣಿ ಪುಸ್ತಕದಲ್ಲಿ ನಮೂದಾಗದೇ ಇರ ಬಹುದು. ಕೇವಲ ಪುರುಷ ಸದಸ್ಯರಲ್ಲದೇ, ಅವರು ಇಲ್ಲದಿರುವಾಗ ಮಹಿಳಾ ಸದಸ್ಯರನ್ನೂ ಸಹ ಸರಕಾರ ಸೇವೆಗೆ ಬಳಸಿಕೊಳ್ಳಲಾಗುತ್ತಿವೆ ಎಂದು ನಾನು ಹೇಳುತ್ತೇನೆ. ಬದಲಿ ಕಾರ್ಯ ಮಾಡುತ್ತಿರು ವವನು ಲಭ್ಯವಿರದಿರುವಾಗ ಆತನ ಹೆಂಡತಿಯನ್ನು ಕರೆಯಬಹುದು; ಹೆಂಡತಿ ಲಭ್ಯವಿರದಿದ್ದರೆ ಆತನ ತಾಯಿಯನ್ನು ಕರೆಯಬಹುದು ಮತ್ತು ತಾಯಿಯೂ ಲಭ್ಯವಿರದಿದ್ದರೆ ಎಳೆಯ ಮಹಿಳಾ ಸದಸ್ಯರು ಸೇವೆಯನ್ನು ಸಲ್ಲಿಸಲು ಬದ್ಧರಾಗಿರುತ್ತಾರೆ. ಒಂದು ಕ್ಷಣ ಇಂಥ ಒಂದು ಸಂದರ್ಭವನ್ನು ಕಲ್ಪಿಸಿಕೊಳ್ಳಿ, ಹದಿಹರೆಯದ ೧೮ ವರುಷದ ಮಹಾರ ಮಹಿಳೆಯನ್ನು ಹದಿನೆಂಟು ವರುಷದ ಪೊಲೀಸ್ ಅಧಿಕಾರಿಯ ತನ್ನ ಸಾಮಾನುಗಳನ್ನು ಹೊತ್ತುಕೊಂಡು ತನ್ನ ಹಿಂದೆ ೫–೬ ಮೈಲುಗಳಷ್ಟು ದೂರ ಹೋಗಲು ಕರೆದರೆ ಇಂಥ ಸಂದರ್ಭದಲ್ಲಿ ಆಕೆಯು ಎಂಥ ಅಪಾಯವನ್ನು ಎದುರಿಸಬೇಕಾಗಬಹುದು ಎಂಬುದನ್ನು ಊಹಿಸಿರಿ.

ಮಾನ್ಯರೇ, ಈಗಿರುವ ರೀತಿಯ ಪದ್ಧತಿಯ ಮೇರೆಗೆ ಇವರು ಸೇವೆ ಸಲ್ಲಿಸಬೇಕಲ್ಲದೆ ಇಡಿಯ ಕುಟುಂಬವೇ ಸೇವೆಯನ್ನು ಸಲ್ಲಿಸಲು ಹೊಣೆಯಾಗಿರುತ್ತದೆ. ಸರಕಾರದ ಇತರ ಯಾವುದೇ ಇಲಾಖೆಗಳಲ್ಲಿ ಇಂಥ ದಬ್ಬಾಳಿಕೆಯ ಪದ್ಧತಿ ಇಲ್ಲವೇ ಇಲ್ಲ ಎಂದು ನಾನು ವಿನಯಪೂರ್ವಕವಾಗಿ ಹೇಳುತ್ತೇನೆ. ಪ್ರತಿಫಲದ ಪ್ರಶ್ನೆಗೆ ಸಂಬಂಧಿಸಿದಂತೆ ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲೂ ಅವರು ಮಾಡುತ್ತಿರುವ ಕಠಿಣವಾದ ಮತ್ತು ಕಷ್ಟಕರವಾದ ಕೆಲಸಕ್ಕೆ ಈ ಬಡಜನರು ಪಡೆದುಕೊಳ್ಳುವ ಪ್ರತಿಫಲವೇನು? ಈ ಜನರಿಂದ ಸರಕಾರವು ತಾನು ಪಡೆದುಕೊಂಡ ಸೇವೆಗಾಗಿ ತನ್ನ ಟ್ರೆಝುರಿಯಿಂದ ಈ ಜನರಿಗೆ ನೇರವಾಗಿ ಏನನ್ನೂ ಕೊಡುವುದಿಲ್ಲ ಎಂದು ನಾನು ಹೇಳಿದರೆ ಈ ಸಭೆಗೆ ಸೋಜಿಗವಾಗಬಹುದು. ಸರಕಾರವು ತಾನೇ ಕೊಟ್ಟ ಅಂಕಿ ಅಂಶಗಳು ಈಗ ನನ್ನ ಎದುರಿನಲ್ಲೇ ಇರುತ್ತವೆ. ಥಾಣಾ ಜಿಲ್ಲೆಯಲ್ಲಿ ಬದಲೀ ಕಾರ್ಯ ಮಾಡುತ್ತಿರುವ ಮಹಾರನಿಗೆ ಸರಕಾರವು ಪ್ರತಿ ತಿಂಗಳಿಗೆ ನೇರವಾಗಿ ಕೊಡುತ್ತಿರುವುದು ರೂ. ೧–೮–೦ ಮಾತ್ರ. ಅಹಮದ್ ನಗರ ಜಿಲ್ಲೆಯಲ್ಲಿ ಕೊಡುತ್ತಿರುವುದು ರೂ. ೧–೮–೦ ಮಾತ್ರ. ಪೂರ್ವ ಖಾನ ದೇಶದಲ್ಲಿ ಪ್ರತಿ ತಿಂಗಳು ಕೊಡುತ್ತಿರುವ ಹಣ ರೂ. ೧–೧೨–೦ ಆಗುತ್ತದೆ. ಪಶ್ಚಿಮ ಖಾನ ದೇಶದಲ್ಲಿ ಪ್ರತಿ ತಿಂಗಳು ಕೊಡುತ್ತಿರುವ ಹಣ ರೂ. ೦–೯–೪ ಪೈಗಳು ಇರುತ್ತದೆ. ನಾಶೀಕ ಜಿಲ್ಲೆಯಲ್ಲಿ ಈ ಹಣವು ರೂ.೦–೧೩–೪ ಪೈಗಳು ಆಗುತ್ತವೆ. ಪೂನಾ ಜಿಲ್ಲೆಯಲ್ಲಿ ತಿಂಗಳಿಗೆ ಕೊಡುತ್ತಿರುವ ಹಣವು ರೂ. ೧–೧–೪ ಪೈಗಳಷ್ಟು ಇರುತ್ತದೆ. ಸಾತಾರಾ ಜಿಲ್ಲೆಯಲ್ಲಿ ಕೊಡಲಾಗುತ್ತಿರುವ ಈ ಹಣವು ರೂ. ೦–೨–೧ ಪೈ ಆಗುತ್ತದೆ. ಸೊಲ್ಲಾಪುರ ಜಿಲ್ಲೆಯಲ್ಲಿ ಕೊಡುವ ಈ ಹಣವು ತಿಂಗಳಿಗೆ ರೂ. ೦–೩–೩ ಪೈಗಳಷ್ಟು ಆಗುತ್ತದೆ. ಮುಂಬೈ ಗ್ರಾಮಾಂತರ ಜಿಲ್ಲೆಯಲ್ಲಿ ಈ ಮೊತ್ತವು ತಿಂಗಳಿಗೆ ರೂ. ೯–೮–೦ಗಳಿಂದ ೫ ಆಣೆಗಳವರೆಗೆ ಹೆಚ್ಚು ಕಡಿಮೆ ಆಗುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ಸರಕಾರವು ತನ್ನ ಟ್ರೆಝುರಿಯಿಂದ ನೇರವಾಗಿ ಯಾವುದೇ ಸಂಬಳವನ್ನು ಕೊಡುವುದಿಲ್ಲ. ರತ್ನಗಿರಿ ಮತ್ತು ಕೋಲಾಬಾ ಜಿಲ್ಲೆಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ೧೯೨೫ರ ಮಾರ್ಚ ಅಧಿವೇಶನದಲ್ಲಿ ಪ್ರಶ್ನೆ ಕೇಳಲಾಗಿದ್ದರೂ ಸರಕಾರವು ಕೊಟ್ಟಿಲ್ಲ. ಅವರಿಂದ ಪಡೆದುಕೊಂಡ ಸೇವೆಗಾಗಿ ಸರಕಾರವು ಎಷ್ಟು ಅಲ್ಪ ಮೊತ್ತವನ್ನು ಕೊಡುತ್ತದೆ ಅನ್ನುವುದನ್ನು ಈ ಸದನವು ನೋಡಬಲ್ಲದು. ಈ ಬಡ ಮಹಾರರುಗಳಿಂದ ತಾನು ತೆಗೆದುಕೊಳ್ಳುತ್ತಿರುವ ಸೇವೆಗಳಿಗಾಗಿ ಸರಕಾರವು ನಿಜವಾಗಿಯೂ ಯಾವುದೇ ಪ್ರತಿಫಲವನ್ನು ಕೊಡುತ್ತಿಲ್ಲ. ಈ ಜನರಿಗೆ ಅಂದರೆ ವತನದಾರ ಮಹಾರರಿಗೆ ಇರುವ ಉತ್ಪನ್ನದ ಮೂಲಗಳು ಎರಡು. ಮೊದಲನೆಯ ಮೂಲವೆಂದರೆ ಇನಾಮ ಜಮೀನು. ಎರಡನೆಯದು ಭಲೂತಾ ಅಥವಾ ಹಳ್ಳಿಗರಿಂದ ವತನದಾರ ಮಹಾರರುಗಳು ಸಂಗ್ರಹಿಸಿದ ಕಾಳುಕಡಿಗಳು. ಈ ಇನಾಮ ಜಮೀನುಗಳನ್ನು ವತನವೆಂದರೆ ಈ ಮಹಾರರ ವತನವೇ. ಮತ್ತು ಅವರಿಗೆ ಅವುಗಳನ್ನು ಪುರಾತನ ಕಾಲದಲ್ಲಿಯೇ ಕೊಡಲಾಗಿತ್ತು. ಈ ಜನರಿಗೆ ಪುರಾತನ ಕಾಲದಲ್ಲಿ ಕೊಡಲಾಗಿರುವ ಈ ಜಮೀನುಗಳ ವಿಸ್ತೀರ್ಣವನ್ನು ಬ್ರಿಟಿಷ್ ಸರಕಾರವು ಹೆಚ್ಚಿಸಿದ್ದು ನನಗೆ ತಿಳಿದಿಲ್ಲ. ಬೆಲೆಗಳು ಹೆಚ್ಚಿವೆ. ಜೀವನದ ವೆಚ್ಚವು ಹೆಚ್ಚಾಗಿದೆ ಮತ್ತು ಬ್ರಿಟಿಷ್ ಸರಕಾರ ಸ್ಥಾಪನೆಯಾದಾಗಿನಿಂದ ಪ್ರತಿಯೊಬ್ಬ ಸರಕಾರಿ ನೌಕರನ ಸಂಬಳವನ್ನೂ ಹೆಚ್ಚಿಸಲಾಗಿದೆ. ಎಷ್ಟು ಪಟ್ಟು ಹೆಚ್ಚಾಗಿದೆ ಅನ್ನುವುದು ನನಗೆ ತಿಳಿಯದು. ಆದರೆ ಬ್ರಿಟಿಷ್ ಸರಕಾರವು ಒಂದು ಕ್ಷಣವಾದರೂ ಈ ಜನರ ಪ್ರತಿಫಲದ ಬಗ್ಗೆ ಗಮನ ಹರಿಸಿಲ್ಲ. ಹಿಂದಿನ ಕಾಲದ ರಾಜರುಗಳು ಕರುಣೆಯಿಂದ ಇವರಿಗೆ ಕೊಟ್ಟ ಜಮೀನುಗಳೊಂದಿಗೆ ಅವರನ್ನು ಬಿಟ್ಟುಬಿಟ್ಟಿದ್ದಾರೆ. ಮಹಾರರ ಜನಸಂಖ್ಯೆ ತುಂಬಾ ಹೆಚ್ಚಾಗಿದೆ ಮತ್ತು ಮಹಾರರಿಗೆ ಕೊಡಲಾಗಿದ್ದ ಜಮೀನನ್ನು ವಿಭಾಗಿಸಲಾಗಿದೆ.

ಅಂದರೆ ಆ ವಿಭಜಿಸಲಾಗಿರುವ ಭಾಗಗಳಿಂದ ಅವರಿಗೆ ಬರುವ ಉತ್ಪನ್ನವು ಯಾವುದೇ ಲೆಕ್ಕಕ್ಕೆ ಬರುವಂಥದ್ದಲ್ಲ. ಈ ಜನರು ಪಡೆದುಕೊಳ್ಳುವ ಪ್ರತಿಫಲದ ಹೆಚ್ಚಿನ ಭಾಗವು ಎರಡನೆಯ ಮೂಲದಿಂದ ಮಾತ್ರವೇ ಬರುತ್ತದೆ. ಅದೆಂದರೆ ಭಲೂಟಾ. ಈಗ ಮಾನ್ಯರೇ, ಸಂದಾಯದ ಈ ವಿಧಾನದ ವೈಶಿಷ್ಟ್ಯವನ್ನು ಈ ಸದನದವರು ಗಮನಿಸುವುದು ಯುಕ್ತ ಎನಿಸುತ್ತದೆ. ನಾನು ಪುನಃ ಹೇಳುವುದೇನೆಂದರೆ ಮಹಾರರು ಸರಕಾರಿ ನೌಕರರಾಗಿದ್ದಾರೆ. ಆದರೆ ಸರಕಾರವು ತಾನು ನೇಮಿಸಿಕೊಂಡ ವ್ಯಕ್ತಿಗೆ ಪ್ರತಿಫಲವನ್ನು ಕೊಡುವ ಹೊಣೆಗಾರಿಕೆಯನ್ನು ತನ್ನ ಮೇಲೆ ತೆಗೆದುಕೊಳ್ಳುವುದಿಲ್ಲ. ಪ್ರತಿಯೊಂದು ಬೇರೆ ಸಂದರ್ಭದಲ್ಲಿ ಸರಕಾರವು ಸಿಪಾಯಿಗೆ, ಕಾರಕೂನನಿಗೆ, ಅಧಿಕಾರಿಗೆ ಮತ್ತು ನಿಯೋಜಕನಿಗೆ ಸಂದಾಯ ಮಾಡುವ ಹೊಣೆಯನ್ನು ತನ್ನ ಮೇಲೆ ತೆಗೆದುಕೊಳ್ಳುತ್ತದೆ. ಆದರೆ ಮಹಾರರಿಗೆ ಸಂಬಂಧಿಸಿದಂತೆ ಭಲೂಟಾಕ್ಕೆ ಸಂಬಂಧಿಸಿದಷ್ಟರ ಮಟ್ಟಿಗೆ, ಹೊಣೆಯನ್ನು ತಾನು ತೆಗೆದುಕೊಳ್ಳಲು ಸರಕಾರಕ್ಕೆ ಯಾವುದೇ ಅವಕಾಶವಿಲ್ಲ. ಅಂದರೆ, ಅವರಿಗೆ ಪ್ರತಿಫಲವನ್ನು ಕೊಡತಕ್ಕದೆಂದು ಹೇಳಲು ಯಾವುದೇ ಮಾರ್ಗವಿಲ್ಲ. ಅದಕ್ಕೆ ಕಾರಣವೆಂದರೆ ವತನ ಅಧಿನಿಯಮದ ಮೇರೆಗೆ ಭಲೂಟಾ ಕೊಡುವುದಕ್ಕೆ ಸಂಬಂಧಿಸಿದಂತೆ ಮಹಾರನನ್ನು ಸಂಪೂರ್ಣವಾಗಿ ರೈತರ ದಯೆಗೆ ಬಿಟ್ಟುಕೊಡಲಾಗಿದೆ. ರೈತರು ಮಹಾರನಿಗೆ ಕೊಡುವ ಮನಸ್ಸು ಮಾಡಿದರೆ ಅವನಿಗೆ ಸಿಗುತ್ತದೆ. ಹನ್ನೆರಡು ತಿಂಗಳವರೆಗೆ ಮಹಾರನಿಂದ ಸೇವೆಯನ್ನು ಪಡೆದುಕೊಂಡು ಕೊನೆಗೆ ರೈತರು ಅವನಿಗೆ ಕೊಡುವ ಮನಸ್ಸು ಮಾಡದಿದ್ದರೆ, ಆ ಮಹಾರನು ಯಾವುದೇ ಪ್ರತಿಫಲವಿಲ್ಲದೆ ಸೇವೆ ಮಾಡಿದ ಹಾಗಾಗುತ್ತದೆ.

ಮಾನ್ಯರೇ, ಇದು ಕ್ರೂರ ಪದ್ಧತಿಯಾಗಿದೆ ಎಂದು ನಾನು ವಿನಯಪೂರ್ವಕ ಹೇಳುತ್ತೇನೆ. ಈ ಪದ್ಧತಿಯಲ್ಲಿ ಎಳ್ಳಷ್ಟೂ ನ್ಯಾಯ ಇಲ್ಲ. ಈ ಜನರು ತನಗಾಗಿ ಕೆಲಸ ಮಾಡಬೇಕೆಂದು ಸರಕಾರವು ಇಚ್ಛೆಪಟ್ಟರೆ, ಈ ಮಹಾರರಿಗೆ ಸಂದಾಯ ಮಾಡುವ ಹೊಣೆಯನ್ನು ಹೊತ್ತುಕೊಳ್ಳಬೇಕು ಎಂಬುದು ಸಂಪೂರ್ಣವಾಗಿ ಅವಶ್ಯವೆನಿಸುವುದು. ಅದು ತನ್ನ ಈ ಹೊಣೆಯನ್ನು ತುಂಬಾ ಅಲಕ್ಷ್ಯದಿಂದ ಮೂರನೆಯ ಪಕ್ಷದವರ ಮೇಲೆ ಅಂದರೆ ರೈತರ ಮೇಲೆ ಹೊರಿಸಬಾರದು. ಆದರೆ ಸಧ್ಯದ ಪದ್ಧತಿಯಲ್ಲಿ ನಡೆಯುತ್ತಿರುವುದೇ ಅದು. ಮಾನ್ಯರೇ, ವತನವನ್ನು ಮುಂದುವರಿಸಲಾಗುತ್ತದೆ ಎಂಬ ಬಗ್ಗೆ ಏನಾದರೂ ಭರವಸೆ ಇದೆಯೇ? ಮಹಾರರ ವತನಗಳನ್ನು ರದ್ದುಪಡಿಸುವುದಿಲ್ಲ ಅಥವಾ ವಾಪಸ್ಸು ತೆಗೆದುಕೊಳ್ಳುವುದಿಲ್ಲ ಅನ್ನುವ ಬಗ್ಗೆ ಏನಾದರೂ ಭರವಸೆ ಇದೆಯೇ?

ಮಾನ್ಯರೇ, ಇಂಥ ಯಾವ ಭರವಸೆಯೂ ಇಲ್ಲ. ಇದಕ್ಕೆ ಕಾರಣ ಸ್ಪಷ್ಟವಾಗಿದೆ ಮತ್ತು ತುಂಬಾ ಸರಳವಾದುದೂ ಆಗಿರುತ್ತದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಇವರ ಸೇವಾವಧಿಯು ಇವರ ಮೇಲಿನ ಅಧಿಕಾರಿಗಳ ಕೃಪೆಯನ್ನು ಅವಲಂಬಿಸಿರುತ್ತದೆ. ಇಲ್ಲಿ ಮಹಾರನು ತನಗೆ ನಿಕಟ ಹಿರಿಯ ಅಧಿಕಾರಿಗಳಾದ ಪಾಟೀಲ, ಕುಲಕರ್ಣಿ ಮತ್ತು ತಹಸೀಲದಾರರ ಅಧೀನದಲ್ಲಿ ಕೆಲಸ ಮಾಡಬೇಕಾಗುತ್ತದೆ. ಸರಕಾರಕ್ಕೆ ಸೇವೆ ಸಲ್ಲಿಸುವುದಲ್ಲದೆ ಅರ್ಥಾತ್ ಸರಕಾರಿ ನೌಕರನಾಗಿ ಆತನು ಮಾಡಬೇಕೆಂದು ಅಪೇಕ್ಷಿಸಲಾಗುವ ಯುಕ್ತ ಸೇವೆಗಳನ್ನು– ಆ ಸೇವೆಗಳನ್ನು ಮುಕ್ತ ಮನಸ್ಸಿನಿಂದ ಆತ ಮಾಡುತ್ತಾನೆ– ಪ್ರತಿಫಲವಿಲ್ಲದೆ ಮಾಡುತ್ತಾನೆ. ತನ್ನ ನಿಕಟ ಹಿರಿಯ ಅಧಿಕಾರಿಗಳಿಗೆ ಅಂದರೆ ಪಾಟೀಲ, ಕುಲಕರ್ಣಿ ಮತ್ತು ಮಾಮಲೇದಾರರ ಸೇವೆಯ ಹೊರತು ಆತನ ವತನವು ಉಳಿಯುತ್ತದೆ ಎಂದು ಮಹಾರನು ಅಪೇಕ್ಷಿಸಲಾರನು. ಆತನು ಅವರ ಅನುಗ್ರಹವನ್ನು ಗಳಿಸದ ಹೊರತು– ಮತ್ತು ಅಂಥ ಅನುಗ್ರಹಗಳು ಅವರಿಗೆ ಸರಳವಾಗಿ ದೊರಕುವುದಿಲ್ಲ, ಯಾವುದೇ ಪ್ರತಿಫಲವಿಲ್ಲದೆಯೇ ಸೇವೆ ಮಾಡುವುದರಿಂದ

ಮಾತ್ರ ಅವು ದೊರಕುತ್ತವೆ– ಪಾಟೀಲನಾಗಲೀ, ಕುಲಕರ್ಣಿಯಾಗಲೀ ಮಹಾರನು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ವರದಿಯನ್ನು ಮಾಡುವುದಿಲ್ಲ ಎಂಬ ಬಗ್ಗೆ ಯಾವುದೇ ಭರವಸೆ ಇಲ್ಲ. ಪಾಟೀಲರು ಮತ್ತು ಕುಲಕರ್ಣಿಯವರು ಅಂಥ ವರದಿಗಳನ್ನು ಕಳಿಸಿದ ಮತ್ತು ತಹಸೀಲದಾರರು ಅವುಗಳನ್ನು ಆಧರಿಸಿ ಕ್ರಮ ಕೈಕೊಂಡ ಮಹಾರರ ವತನಗಳನ್ನು ಅಮಾನತ್ತಿನಲ್ಲಿಟ್ಟ ಅಥವಾ ವಾಪಸ್ಸು ಪಡೆದುಕೊಂಡ ಅಸಂಖ್ಯ ಉದಾಹರಣೆಗಳಿವೆ. ದೀರ್ಘ ಕಾಲದ್ದಲ್ಲವೆಂದು ನಾನು ಒಪ್ಪಿಕೊಳ್ಳುವ ನನ್ನ ಸ್ವಂತ ಅನುಭವದಲ್ಲಿ ಮಹಾರರ ವತನಗಳನ್ನು ಅಮಾನತ್ತಿನಲ್ಲಿಟ್ಟ ಅಥವಾ ವಾಪಸ್ಸು ಪಡೆದುಕೊಂಡ ಅಸಂಖ್ಯ ಉದಾಹರಣೆಗಳು ಉಂಟು. ಅಂಥ ಆದೇಶಗಳನ್ನು ರದ್ದುಪಡಿಸಲು ಜಿಲ್ಲೆಯ ಡೆಪ್ಯುಟಿ ಕಲೆಕ್ಟರರು, ಸಹಾಯಕ ಕಲೆಕ್ಟರರು, ಕಲೆಕ್ಟರರು ಮತ್ತು ಕಮೀಷನರುಗಳ ಮಟ್ಟದಲ್ಲಿ ನನ್ನ ಶಕ್ತಿ ಮೀರಿ ಪ್ರಯತ್ನಿಸಿರುತ್ತೇನೆ. ಆದರೆ ಮಾನ್ಯರೇ, ನಾನು ಯಾವ ಸಂದರ್ಭದಲ್ಲಿಯೂ ಸಹ ಜಯ ಗಳಿಸಲಿಲ್ಲ. ಇದರ ಪರಿಣಾಮವೆಂದರೆ ಅಧೀನ ಅಧಿಕಾರಿಗಳು, ತಮ್ಮ ಆದೇಶಗಳು ಸರಿ ಇರಲಿ, ಬಿಡಲಿ, ಅದು ಯುಕ್ತ ಆಧಾರಗಳನ್ನು ಆಧರಿಸಿರಲಿ ಅಥವಾ ಇಲ್ಲದಿರಲಿ, ಅದು ಸುಳ್ಳು ಸಾಕ್ಷ್ಯವನ್ನು ಆಧರಿಸಿರಲಿ, ಬಿಡಲಿ– ಅವುಗಳನ್ನು ಹಿರಿಯ ಅಧಿಕಾರಿಗಳು ಎತ್ತಿ ಹಿಡಿಯುತ್ತಾರೆ ಎಂದು ಖಚಿತವಾಗಿ ನಂಬಿರುತ್ತಾರೆ ಎಂಬುವಂತಹ ಪರಿಣಾಮವನ್ನು ಅದು ಉಂಟುಮಾಡಿದೆ. ಅಂಥ ಭದ್ರತೆಯ ಭಾವನೆಯನ್ನು ಬಲವಾಗಿ ನಂಬಿದ ಅವರು ಜನತೆಯ ಈ ದುರ್ದೈವೀ ವರ್ಗದವರ ಮೇಲೆ ನಡೆಸುತ್ತಿರುವ ದಬ್ಬಾಳಿಕೆಗೆ ಮತ್ತು ನಿರಂಕುಶ ಆಡಳಿತಕ್ಕೆ ಯಾವುದೇ ಪರಿಮಿತಿ ಇಲ್ಲ.

ಮಾನ್ಯರೇ, ಈಗ ಈ ಪದ್ಧತಿಯ ದುಷ್ಪರಿಣಾಮಗಳು ಬದಲೀ ಕಾರ್ಯ ಮಾಡುತ್ತಿರುವ ಮಹಾರರುಗಳನ್ನು ಮಾತ್ರ ಬಾಧಿಸುತ್ತಿದ್ದು, ಅದು ಇತರ ದಲಿತ ವರ್ಗದವರಿಗೆ ಬಾಧಿಸದಿದ್ದರೆ ಬಹುಶಃ ಈ ವಿಷಯದ ಬಗ್ಗೆ ನಾನು ಅಷ್ಟಾಗಿ ಹೇಳುತ್ತಿರಲಿಲ್ಲ. ಈ ಪದ್ಧತಿಯು ದುಷ್ಪರಿಣಾಮಗಳು ತಮ್ಮ ವ್ಯಾಪ್ತಿ ಮತ್ತು ವಿಸ್ತಾರದಲ್ಲಿ ಅವು ಕೇವಲ ಬದಲೀ ಕಾರ್ಯ ನಿರ್ವಹಿಸುತ್ತಿರುವ ಮಹಾರರಿಗಷ್ಟೇ ಅಲ್ಲದೆ ದಲಿತ ವರ್ಗದವರನ್ನೆಲ್ಲ ಬಾಧಿಸುವಷ್ಟು ವಿಸ್ತಾರವಾಗಿರುವುದರಿಂದ ಇಂಥ ತೊಂದರೆ ಉಂಟಾಗಿದೆ. ಮಾನ್ಯರೇ, ಮಹಾರರ ಮಕ್ಕಳು ಇತರ ವರ್ಗದವರ ಮಕ್ಕಳೊಡನೆ ಕುಳಿತುಕೊಳ್ಳಬೇಕೆಂಬ ಡಾ. ಪರಾಂಜಪೆ ಯವರ ಸುತ್ತೋಲೆಯ ಪ್ರಯೋಜನವು ಹಳ್ಳಿಯಲ್ಲಿರುವ ಮಹಾರರ ಜನತೆಗೆ ಈ ವತನ ಪದ್ಧತಿಯ ಪರಿಣಾಮವಾಗಿ ದೊರಕದು ಎಂದು ನಾನು ಹೇಳಿದರೆ ಈ ಸದನವು ಅಷ್ಟಾಗಿ ನಂಬಲಿಕ್ಕಿಲ್ಲ. ಧರ್ಮ ಶಾಲೆಗಳನ್ನು ಮತ್ತು ಇತರ ಸಾರ್ವಜನಿಕ ಸ್ಥಳಗಳನ್ನು ಉಪಯೋಗಿಸಲು ದಲಿತ ವರ್ಗದವರಿಗೂ ಅನುಮತಿಸಬೇಕು ಎಂದು ಈ ಪರಿಷತ್ತು ಠರಾವನ್ನು ಪಾಸು ಮಾಡಿದ್ದಾಗ್ಯೂ ಸಹ ಈ ಪರಿಷತ್ತು ಅವರಿಗೆ ಸಂತೋಷದಿಂದ ಕೊಡಮಾಡಿದ ಈ ಸವಲತ್ತುಗಳನ್ನು ಕೇಳಲು ಅವರಿಗೆ ಅವಕಾಶವಿಲ್ಲ. ನಾನು ಈ ಮೊದಲು ಹೇಳಿದಂತೆ ಈ ಪರಿಷತ್ತು ಇದನ್ನು ಅಂದರೆ ವತನ ಪದ್ಧತಿಯು ಇಂಥ ಪರಿಸ್ಥಿತಿಗೆ ಕಾರಣ ಎನ್ನುವುದನ್ನು ನಂಬುವುದಿಲ್ಲ. ಆದರೆ ಮಹಾರರ ಜನತೆ ಏಕೆ ಮುಂದುವರಿಯುವುದಿಲ್ಲ ಎನ್ನುವುದಕ್ಕೆ ನಾನು ಕೊಡುವ ವಿವರಣೆ ಅದೊಂದೇ ಆಗಿದೆ. ಕಾರಣ ಸರಳವಾಗಿದೆ. ಉದಾಹರಣೆಗೆ ಹೇಳಬೇಕೆಂದರೆ ಯಾವುದೇ ಒಂದು ನಿರ್ದಿಷ್ಟ ಗ್ರಾಮದಲ್ಲಿ ಮಹಾರ ಕೋಮಿನವರು ಒಂದು ನಿರ್ದಿಷ್ಟ ದಿಶೆಯಲ್ಲಿ ಮುಂದುವರೆಯಲು ಇಚ್ಛೆಪಟ್ಟಾಗಲೆಲ್ಲ ಮತ್ತು ಅದು ರೈತರಿಗೆ ಇಷ್ಟವಾಗದಿರುವಾಗ, ರೈತರು ಕೈಕೊಳ್ಳುವ ಮೊದಲನೆಯ ಕ್ರಮವೆಂದರೆ ಭಲೂಟಾ ಕೊಡುವುದನ್ನು ನಿಲ್ಲಿಸುವುದು ಮತ್ತು ಸಾಮಾಜಿಕ ಬಹಿಷ್ಕಾರ ವನ್ನು ಹಾಕುವುದು. ಮಹಾರನ ಸಂಬಂಧಿಯೊಬ್ಬನು ಕಾಲಚೀಲ ಮತ್ತು ಬೂಟುಗಳನ್ನು ಧರಿಸಿ ಗ್ರಾಮದಲ್ಲಿ

ಹೋದನೆಂಬ ಕಾರಣಕ್ಕಾಗಿ ಅದು ಗ್ರಾಮ ನಿವಾಸಿಗಳಿಗೆ ಇಷ್ಟವಾಗದ್ದರಿಂದ ಆ ಮಹಾರನಿಗೆ ಭಲೂಟಾ ಕೊಡುವುದನ್ನು ನಿಲ್ಲಿಸಿದರು ಮತ್ತು ಸಾಮಾಜಿಕ ಬಹಿಷ್ಕಾರವನ್ನು ಹಾಕಿದ ಉದಾಹರಣೆ ನನಗೆ ಗೊತ್ತಿದೆ. ಒಬ್ಬ ಮಹಾರನು ತನ್ನ ಮನೆಯ ಮಾಳಿಗೆಗೆ ಹಂಚುಗಳನ್ನು ಹಾಕಿಸಿದನೆಂಬ ಕಾರಣಕ್ಕಾಗಿ ಆ ಗ್ರಾಮದವರು ಆ ಗ್ರಾಮದ ಇಡಿಯ ಮಹಾರ ಜನತೆಗೇ ಭಲೂಟಾ ಕೊಡುವುದನ್ನು ನಿಲ್ಲಿಸಿದರು ಮತ್ತು ಸಾಮಾಜಿಕ ಬಹಿಷ್ಕಾರವನ್ನು ವಿಧಿಸಿದರು. ಮಾನ್ಯರೇ, ಇಡಿಯ ಜನತೆಯನ್ನೇ ಗುಲಾಮಗಿರಿಗೆ ತಳ್ಳುವಂಥ ಮತ್ತು ಅವರ ಉತ್ಕರ್ಷವನ್ನು ಕುಂಠಿತಗೊಳಿಸುವಂಥ ಈ ಪದ್ಧತಿಯನ್ನು ತಲೆ ಸರಿಯಿದ್ದ ಯಾವ ವ್ಯಕ್ತಿಯೂ, ಯಾವುದೇ ಭಾವನೆಗಳು ಇದ್ದ ವ್ಯಕ್ತಿಯೂ ತಡೆದುಕೊಳ್ಳಲಾರ ಅಥವಾ ಸಮರ್ಥಿಸಲಾರ ಎಂದು ನಾನು ಭಾವಿಸುತ್ತೇನೆ. ಮಾನ್ಯರೇ, ವತನ ಪದ್ಧತಿಯಿಂದಾಗಿ ಇಡಿಯ ಮಹಾರರ ಜನಾಂಗವೇ ಬೇಸರಗೊಂಡಿದ್ದರೆ ಆಶ್ಚರ್ಯವಲ್ಲ. ನನ್ನ ಗೌರವಾನ್ವಿತ ಸ್ನೇಹಿತರಾದ ಕಂದಾಯ ಮಂತ್ರಿಗಳಿಗೆ, ಇಡಿಯ ಮಹಾರ ಜನತೆಯು, –ಸವಾಲು ಮಾಡುತ್ತಿದ್ದೇವೆಂಬ ಭಯ ಇಲ್ಲದೆ ನಾನು ಹೇಳುತ್ತೇನೆ– ಸಂಪೂರ್ಣವಾಗಿ ಈ ಪದ್ಧತಿಯಿಂದ ಮುಕ್ತಿ ಪಡೆಯಲು ಇಚ್ಛಿಸುತ್ತದೆ ಎಂಬುದನ್ನು ನಾನು ತಿಳಿಸಬಯಸುತ್ತೇನೆ. ಈ ಅಲ್ಪ ಪ್ರಾರಂಭಿಕ ಮಾತುಗಳೊಂದಿಗೆ ಈ ಸದನದ ಮುಂದಿರುವ ಮಸೂದೆಯ ಉಪಬಂಧಗಳನ್ನು ವಿವರಿಸಲು ಮುಂದುವರೆಯುತ್ತೇನೆ.

ಮಾನ್ಯರೇ, ಈಗ ನನ್ನ ಈ ಮಸೂದೆಯ ಪರ್ಯಾಲೋಚನೆಗಾಗಿ ಮಹಾರ ವತನದಾರರನ್ನು ಎರಡು ಭಾಗಗಳಾಗಿ ವಿಂಗಡಿಸಲು ಉದ್ದೇಶಿಸಿರುತ್ತೇನೆ ಎನ್ನುವುದನ್ನು ನೆನಪಿನಲ್ಲಿಡುವುದು ಅವಶ್ಯವಾಗಿದೆ. ಮೊದಲನೆಯ ಭಾಗವೆಂದರೆ ಅದು ಸಂಪೂರ್ಣವಾಗಿ ಈ ಪದ್ಧತಿಯಿಂದ ರೋಸಿಹೋಗಿದೆ ಮತ್ತು ಈ ವತನಕ್ಕೂ ಅದಕ್ಕೂ ಯಾವುದೇ ಸಂಬಂಧವೂ ಉಳಿದಿಲ್ಲ ಮತ್ತು ಕೂಡಲೇ ಈ ಸೇವೆಯ ಹೊಣೆಯಿಂದ ಮುಕ್ತವಾಗಲು ಈ ವರ್ಗವು ಇಚ್ಛಿಸುತ್ತದೆ. ಅವರ ಒಂದೇ ಒಂದು ಷರತ್ತೆಂದರೆ, ಅವರು ತಮ್ಮ ವತನವನ್ನು ಬಿಟ್ಟುಬಿಡಲು ಆಯ್ಕೆ ಮಾಡಿಕೊಂಡರೆ ಅರ್ಥಾತ್ ವಂಶಪಾರಂಪರ್ಯ ಸೇವೆಯನ್ನು ಬಿಟ್ಟುಬಿಡುವುದನ್ನು ಆಯ್ಕೆ ಮಾಡಿಕೊಂಡರೆ, ಈಗ ಅವರ ಸ್ವಾಧೀನದಲ್ಲಿರುವ ಜಮೀನುಗಳನ್ನು ಅವರಿಂದ ಕಿತ್ತುಕೊಳ್ಳಬಾರದು. ಆ ಉದ್ದೇಶವನ್ನು ಸಾಧಿಸಲು ಈಗ ಜಾರಿಯಲ್ಲಿರುವ ವತನ ಅಧಿನಿಯಮದ ೧೫(೧)ನೇ ಕಲಮಿನ ೪ನೇ ವಾಕ್ಯಾವಳಿಗೆ ಒಂದು ನಿಯಮವನ್ನು ಸೇರಿಸಲು ಉದ್ದೇಶಿಸಿದ್ದೇನೆ. ಆ ನಿಯಮದ ಮೇರೆಗೆ ವತನದಾರ ಮಹಾರರ ಪ್ರತಿನಿಧಿಗಳ ನಿಕಾಯವು ಅಥವಾ ಅವರಲ್ಲಿ ಬಹುಸಂಖ್ಯಾತರು ಕಲೆಕ್ಟರರಿಗೆ ತಾವು ಸೇವೆ ಮಾಡುವುದು ಬೇಕಿಲ್ಲ ಮತ್ತು ತಾವು ತಮ್ಮ ಜಮೀನುಗಳ ಮೇಲೆ ವಿಧಿಸುವ ಪೂರ್ಣ ಕಂದಾಯವನ್ನು ಕೊಡಲು ಸಿದ್ಧರಿದ್ದೇವೆ ಎಂದು ಲಿಖಿತದಲ್ಲಿ ಮನವಿಯನ್ನು ಸಲ್ಲಿಸಿದರೆ, ಕಲೆಕ್ಟರನು ಅವರನ್ನು ಅವರ ಸೇವೆ ಮಾಡುವ ಹೊಣೆಯಿಂದ ಬಿಡುಗಡೆ ಮಾಡತಕ್ಕದು. ಈ ನಿಯಮದ ಅರ್ಥ ಇದಾಗಿರುತ್ತದೆ. ನಾನು ಮೊದಲನೆಯದಾಗಿ ಎತ್ತಿ ಹೇಳಬೇಕೆಂದಿರುವ ವಿಷಯವೆಂದರೆ ಈ ನಿಯಮದಲ್ಲಿನ ತತ್ವವು ಹೊಸದೇನೂ ಅಲ್ಲ. ಈ ನಿಯಮದಲ್ಲಿ ರೂಪಿಸಲಾಗಿರುವ ತತ್ವವು ಬಹಳ ಹಳೆಯ ತತ್ವವಾಗಿದೆ ಮತ್ತು ಅದನ್ನು ಸರಕಾರವು ಒಪ್ಪಿಕೊಂಡಿದೆ ಮತ್ತು ಹಲವಾರು ಸಂದರ್ಭಗಳಲ್ಲಿ ಅನುಕರಿಸಲಾಗಿದೆ. ಮಾನ್ಯರೇ, ಈ ಸದನವು ಅಥವಾ ಕೊನೆಯ ಪಕ್ಷ ಈ ಸದನದ ಬಹುಸಂಖ್ಯೆಯ ಸದಸ್ಯರು ಈ ದೇಶದಲ್ಲಿ ಬ್ರಿಟಿಷ್ ಸರಕಾರವು ಬರುವುದಕ್ಕಿಂತ ಮುಂಚೆ ಗ್ರಾಮದಲ್ಲಿ ಬಲುತೇದಾರರೆಂದು ಕರೆಯಲಾಗುತ್ತಿದ್ದ ಹನ್ನೆರಡು ಪ್ರಕಾರದ ಬೇರೆ ಬೇರೆ ಗ್ರಾಮ ಸೇವಕರು ಇದ್ದರು ಅನ್ನುವುದನ್ನು ತಿಳಿದುಕೊಳ್ಳಬೇಕು. ಬ್ರಿಟಿಷ್ ಸರಕಾರವು ಈ ದೇಶದ ಆಡಳಿತವನ್ನು ಪ್ರಾರಂಭಿಸಿದಾಗ ಈ ಹನ್ನೆರಡು

ಪ್ರಕಾರದ ಅಧಿಕಾರಿಗಳನ್ನು ಮೂರು ಗುಂಪುಗಳಲ್ಲಿ ವಿಭಜಿಸಿದರು. ಸರಕಾರದ ಕಾರ್ಯಗಳಿಗಾಗಿ ಅವಶ್ಯವಾಗಿರುವವರು, ರೈತರ ಕಾರ್ಯಗಳಿಗಾಗಿ ಅವಶ್ಯವಾಗಿರುವವರು ಮತ್ತು ಈ ಎರಡೂ ಕಾರ್ಯಗಳಿಗಾಗಿ ಅವಶ್ಯವಿರುವವರು ಎಂಬ ಮೂರು ಗುಂಪುಗಳಲ್ಲಿ ವಿಭಜಿಸಿದರು. ರೈತರ ಕಾರ್ಯಗಳಿಗಾಗಿ ಮಾತ್ರವೇ ಅವಶ್ಯವಾಗಿದ್ದರೋ ಅಂಥ ಗ್ರಾಮಸೇವಕರಿಗೆ ಸಂಬಂಧಿಸಿದಂತೆ, ಗೋಡನ್ ಕಂದಾಯ ನಿರ್ಣಯದ ಮೇರೆಗೆ ಸರಕಾರವು ಅವರ ವತನಗಳನ್ನು ಪರಿವರ್ತಿಸಿದರು. ಅಂದರೆ ಅವರು ನಿರ್ಧರಿಸಲಾದ ಸಂಪೂರ್ಣ ಕಂದಾಯವನ್ನು ಕೊಡಲು ಒಪ್ಪಿದರೆ ಆ ಜಮೀನುಗಳ ಪೂರ್ಣ ಸ್ವಾಧೀನವನ್ನು ಇಟ್ಟುಕೊಳ್ಳಲು ಅನುಮತಿಸಲಾಗುತ್ತಿತ್ತು. ಮಾನ್ಯರೇ ಗೋಡನ್ ಕರ ನಿರ್ಧರಣೆಯಲ್ಲಿ ಹೇಳಲಾಗಿರುವ ತತ್ವಕ್ಕಿಂತ ಬೇರೆ ಏನೂ ಈ ನಿಯಮದಲ್ಲಿ ಇಲ್ಲ.

ಈ ಮಸೂದೆಯ ತತ್ವವು ಹೊಸದೇನೂ ಅಲ್ಲ ಅನ್ನುವ ನನ್ನ ಪ್ರಸ್ತಾವವನ್ನು ಸಮರ್ಥಿಸಲು ನಾನು ಹೇಳಲಿರುವ ಎರಡನೆಯ ಉದಾಹರಣೆಯು ಹೀಗಿದೆ: ೧೯೨೩ರಲ್ಲಿ ಸರಕಾರವು ಶಿತನಸನದಿ ವತನಗಳಿಗೆ ಸಂಬಂಧಿಸಿದಂತೆ ಒಂದು ಠರಾವನ್ನು ಹೊರಡಿಸಿರುವುದು ಕಂಡುಬರುತ್ತದೆ. ೧೩ನೇ ಅಕ್ಟೋಬರ್ ದಿನಾಂಕದ ಆ ಠರಾವಿನ ನಂ. ೯೩೧೯ ಇದ್ದು, ಅದರಲ್ಲಿ ಸರಕಾರವು ಸೇವೆಯನ್ನು ಮಾಡದೇ ಇರುವ ಶಿತನಸನದಿಯವರು ಪೂರ್ಣ ಭೂ ಕಂದಾಯವನ್ನು ಕೊಡಲು ಇಚ್ಛೆಯುಳ್ಳವರಾಗಿದ್ದರೆ ಸೇವೆಯನ್ನು ಸಲ್ಲಿಸುವ ಹೊಣೆಯಿಂದ ಅವರನ್ನು ಮುಕ್ತಗೊಳಿಸಬಹುದು ಎಂದು ಹೇಳಲಾಗಿದೆ.

ಮಾನ್ಯರೇ, ಈಗ ನಾನು ಅತ್ಯಂತ ಇತ್ತೀಚಿನ ಇನ್ನೊಂದು ಉದಾಹರಣೆಯನ್ನು ನಿಮ್ಮ ನೆನಪಿಗೆ ತರಲು ಪ್ರಯತ್ನಿಸುತ್ತೇನೆ. ಅದು ಜೋಶಿ ಮಸೂದೆ. ಜೋಶಿ ಮಸೂದೆಯು ಈ ಸದನದಲ್ಲಿ ಚರ್ಚೆಗೆ ಬಂದಾಗ ಸೇವೆಯನ್ನು ಸಲ್ಲಿಸಲು ಬೇಡಾದ ಜೋಶಿಯವರು ಅವರ ಜಮೀನುಗಳನ್ನು ಇಟ್ಟುಕೊಳ್ಳಲು ಅನುಮತಿಸಬೇಕು ಎಂದು ಹೇಳಲಾಯಿತು. ಆ ಸಂದರ್ಭದಲ್ಲಿ ಸರಕಾರವು ನನಗೆ ತಿಳಿದಿರುವಂತೆ, ತಾನಾಗಿಯೇ ಮಸೂದೆಯಲ್ಲಿ ಒಂದು ನಿಯಮವನ್ನು ಮಂಡಿಸಿ ಆ ಮೂಲಕ ಪೂರ್ಣ ಭೂ ಕಂದಾಯವನ್ನು ಕೊಡಲು ಸಿದ್ಧರಿರುವ ಗ್ರಾಮದ ಜೋಶಿಗಳೆಲ್ಲರೂ ತಮ್ಮ ಜಮೀನುಗಳನ್ನು ಇಟ್ಟುಕೊಳ್ಳಲು ಅನುಕೂಲವಾಗುವಂತೆ ನಿಯಮವನ್ನು ರೂಪಿಸಲಾಯಿತು. ನನ್ನ ಮಸೂದೆಯ ಈ ನಿಯಮವೂ ಸಹ ಜೋಶಿ ಮಸೂದೆಯಲ್ಲಿ ತರಲಾದ ನಿಯಮಕ್ಕಿಂತ ಯಾವುದೇ ರೀತಿಯಲ್ಲಿ ಭಿನ್ನವಾಗಿಲ್ಲ.

ಮಾನ್ಯರೇ, ಈಗ ನಾನು ಈ ಅಂಶವನ್ನು ಕಾನೂನಿನ ದೃಷ್ಟಿಯಿಂದಲೂ ಸಮರ್ಥಿಸಲು ಇಚ್ಛಿಸುತ್ತೇನೆ. ಈ ನಿಯಮವು ಇಲ್ಲವೆಂದು ಭಾವಿಸಿಕೊಳ್ಳಿ. ವತನದಾರ ಮಹಾರನು ಸೇವೆ ಸಲ್ಲಿಸುವ ತನ್ನ ಹೊಣೆಯಿಂದ ಬಿಡುಗಡೆ ಹೊಂದಲು ಇಚ್ಛಿಸುತ್ತಾನೆ ಎಂದೂ ಭಾವಿಸಿಕೊಳ್ಳಿ, ಅಲ್ಲದೆ ಸರಕಾರವು ವತನವನ್ನು ವಾಪಸ್ಸು ತೆಗೆದುಕೊಳ್ಳಲು ಇರುವ ಅಧಿಕಾರವನ್ನು ಚಲಾಯಿಸಲು ಇಚ್ಛೆಯುಳ್ಳದ್ದಾಗಿರುತ್ತದೆ. ಆಗ ಸರಕಾರವು ಏನನ್ನು ಪಡೆದುಕೊಳ್ಳುತ್ತದೆ? ಮಾನ್ಯರೇ, ಇಲ್ಲಿ ನಾನು ವಿನಯಪೂರ್ವಕ ಹೇಳುವುದಿಷ್ಟೇ. ಸರಕಾರವು ಕೇವಲ ಭೂ ಕಂದಾಯವನ್ನು ಮಾತ್ರವೇ ತೆಗೆದುಕೊಳ್ಳಬಲ್ಲದೇ ಹೊರತು ಬೇರೆ ಏನನ್ನೂ ಅಲ್ಲ. ಮುಂಬೈ ಉಚ್ಚ ನ್ಯಾಯಾಲಯವು ತಾನು ಕೊಟ್ಟ ಹಲವಾರು ನಿರ್ಣಯಗಳಲ್ಲಿ ಇನಾಮುಗಳಿಗೆ ಸಂಬಂಧಿಸಿದಂತೆ ಈ ಪ್ರಾಂತದಲ್ಲಿ ಮಾಡಿದ ಅನುದಾನವು (ಗ್ರ್ಯಾಂಟ್) ಭೂ ಕಂದಾಯವೇ ಹೊರತು ಭೂಮಿಯಲ್ಲ ಎಂದೇ ತೀರ್ಪಿತ್ತಿದೆ. ಮುಂಬೈ ಉಚ್ಚನ್ಯಾಯಾಲಯದ ಅಭಿಪ್ರಾಯವು ಅದೇ ಆಗಿದೆ. ಮಾನ್ಯರೇ, ವಸ್ತುಸ್ಥಿತಿಯು ಹಾಗಿರುವಾಗ ನಾನು ವಿನಯಪೂರ್ವಕ ಹೇಳುವುದೇನೆಂದರೆ ಸಾಮಾನ್ಯವಾಗಿ ಮತ್ತು ಈ ನಿಯಮವನ್ನು ರೂಪಿಸದೇ ಇದ್ದಾಗ್ಯೂ ಸಹ ಸೇವೆಯನ್ನು ಮಾಡಲು ಸಿದ್ಧರಿರದ ಮಹಾರರಿಗೆ

ಸಂಬಂಧಿಸಿದಂತೆ ಸರಕಾರವು ಅತೀ ಹೆಚ್ಚೆನದೆಂದರೆ, ಅವರ ಜಮೀನಿಗೆ ಇರುವ ಪೂರ್ಣ ಭೂ ಕಂದಾಯವನ್ನು ಕೊಡುವಂತೆ ಕೇಳಬಲ್ಲದು. ಯಾಕೆಂದರೆ ಇನಾಮು ಭೂ ಕಂದಾಯವನ್ನು ಕೊಡುವುದರಿಂದ ಮುಕ್ತಿಯೇ ಹೊರತು ಬೇರೆ ಏನೂ ಅಲ್ಲ. ಅನುದಾನವು (ಗ್ರ್ಯಾಂಟ್) ಭೂಮಿಯನ್ನು ಒಳಗೊಳ್ಳುವುದಿಲ್ಲ. ನನಗೆ ಗೊತ್ತಿದೆ.......

ಸರ್ದಾರ ಜಿ. ಎನ್. ಮುಜಮದಾರ: ಮಹಾರರಿಗೆ ಸಂಬಂಧಿಸಿದಂತೆಯೂ ಸಹ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಮಹಾರರಿಗೆ ಸಂಬಂಧಿಸಿದಂತೆಯೂ ಸಹ ಈ ಬಗ್ಗೆ ಪ್ರಿವ್ಹಿ ಕೌನ್ಸಿಲ್ಲಿನವರ ಎರಡು ತೀರ್ಪುಗಳು ಇರುವುದು ನನಗೆ ಗೊತ್ತಿದೆ. ಆ ತೀರ್ಪುಗಳಲ್ಲಿ ಮಾನ್ಯ ನ್ಯಾಯಮೂರ್ತಿಗಳವರು ಈ ಸ್ವರೂಪದ ಪೂರ್ವಭಾವನೆ ಮಾಡಲು ಯಾವುದೇ ನ್ಯಾಯಯುತ ಆಧಾರವಿಲ್ಲ ಎಂದಿದ್ದಾರೆ. ಆದರೆ ಮಾನ್ಯರೇ, ಆ ತೀರ್ಪುಗಳನ್ನು ಕೊಟ್ಟ ನಂತರ ಮುಂಬೈ ಉಚ್ಚ ನ್ಯಾಯಾಲಯದವರು ಕೊಟ್ಟ ನಿರ್ಣಯವೊಂದಿದೆ. ಮುಂಬೈ ಲಾ ರಿಪೋರ್ಟ್‌ದ ೨೨ ಪುಟ ೨೭೫ನ್ನು ನಾನು ಉಲ್ಲೇಖಿಸುತ್ತೇನೆ. ಈ ಮೊಕದ್ದಮೆಯಲ್ಲಿ ಉಚ್ಚನ್ಯಾಯಾಲಯದವರು ಪ್ರಿವ್ಹಿ ಕೌನ್ಸಿಲ್ಲಿನವರ ತೀರ್ಪಿನ ನಂತರವೂ ಸಹ ಆ ಪೂರ್ವಭಾವನೆಯು ಸಿಂಧುವಾದುದೇ ಆಗಿರುತ್ತದೆ ಮತ್ತು ಆ ಬಗ್ಗೆ ಅವರು ಕೊಟ್ಟ ಕಾರಣವೂ ಸಹ ತುಂಬಾ ಮಹತ್ವದ್ದಾಗಿದೆ. ಆ ಕಾರಣವು ಹೀಗಿದೆ: ಭೂ ಕಂದಾಯದಿಂದ ಮುಕ್ತವಾದ ಆಸ್ತಿಗಳ (Estates) ಹಕ್ಕುಗಳ ಬಗ್ಗೆ ವಿಚಾರಣೆ ಮಾಡುವುದಕ್ಕಾಗಿ ೧೮೫೨ರಲ್ಲಿ "ವಾಪಸು ತೆಗೆದುಕೊಳ್ಳುವುದು" (Resume Pitons) ಪದದ ಅರ್ಥವನ್ನು ವ್ಯಾಖ್ಯೆಗೊಳಿಸಿ ಠರಾವನ್ನು ಪಾಸು ಮಾಡಿತು. ೧೮೫೨ರ ಠರಾವು ೨೪೪ನ್ನು ನಾನು ಉಲ್ಲೇಖಿಸುತ್ತೇನೆ. ವಾಪಸ್ಸು ತೆಗೆದುಕೊಳ್ಳುವುದೆಂದರೆ ಜಮೀನನ್ನು ತೆಗೆದುಕೊಳ್ಳುವುದು ಅಲ್ಲ. ಆದರೆ ಪೂರ್ಣ ಭೂ ಕಂದಾಯವನ್ನು ವಿಧಿಸುವುದು ಎಂದಷ್ಟೇ. ಈ ಠರಾವು ಮಾಡಿದ ಅನುದಾನಕ್ಕೆ ಸಂಬಂಧಿಸಿದಂತೆ ವಾಪಸ್ಸು ತೆಗೆದುಕೊಳ್ಳುವುದು ಭೂ ಕಂದಾಯ, ಅದು ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುವುದಲ್ಲ ಎಂದು ಮುಂಬೈ ಉಚ್ಚ ನ್ಯಾಯಾಲಯವು ಹೇಳುವುದು ಅನ್ಯಾಯವೆನಿಸುವುದಿಲ್ಲ. ಆದುದರಿಂದ, ಮಾನ್ಯರೇ, ಕಾನೂನು ಮೇರೆಗೆ ಮಹಾರ ವತನಕ್ಕೆ ಸಂಬಂಧಿಸಿದಂತೆ ಸರಕಾರವು ಭೂ ಕಂದಾಯವನ್ನು ಮಾತ್ರ ವಾಪಸ್ಸು ತೆಗೆದುಕೊಳ್ಳಬಹುದೇ ಹೊರತು ಜಮೀನನ್ನೇ ಅಲ್ಲ.

ಹಣಕಾಸಿನ ಆಧಾರದ ಮೇಲೆ ಸರಕಾರವು ಈ ನಿಯಮಕ್ಕೆ ಆಕ್ಷೇಪ ಎತ್ತಬಹುದು. ಈ ಮಸೂದೆಗೆ ಮುಂಚೆ ನಡೆದ ಚರ್ಚೆಯಲ್ಲಿ ವತನಗಳನ್ನು ಪರಿವರ್ತಿಸಿದರೆ ಅಂದರೆ ಭೂ ಕಂದಾಯವನ್ನು ಕೊಟ್ಟ ಮೇಲೆ ಮಹಾರರು ತಮ್ಮ ವತನೀ ಜಮೀನುಗಳನ್ನು ಇಟ್ಟುಕೊಳ್ಳಲು ಅನುಮತಿಸಿದರೆ, ಆಗ ಸರಕಾರವು ಸಂಬಳ ಕೊಟ್ಟು ಒಬ್ಬರನ್ನು ನೇಮಿಸಿಕೊಳ್ಳಬೇಕಾಗುತ್ತದೆ ಮತ್ತು ಅಂಥವರಿಗೆ ಪ್ರತಿಫಲವನ್ನು ಕೊಡಲು ಬೇಕಾಗುವ ವೆಚ್ಚದ ಭಾರವು ಸರಕಾರದ ಟ್ರೆಝುರಿಯ ಮೇಲೆ ಬೀಳುತ್ತದೆ. ಮಾನ್ಯರೇ, ಈಗ ನನ್ನ ಪ್ರಥಮ ವಿನಂತಿ ಹೀಗಿದೆ. ಟ್ರೆಝುರಿಯ ಮೇಲೆ ಯಾವುದೇ ಹೆಚ್ಚಿನ ಭಾರ ಬೀಳುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಅದಕ್ಕೆ ಕಾರಣಗಳೆಂದರೆ ಮಹಾರರ ವತನಗಳನ್ನು ಪರಿವರ್ತಿಸಿದ್ದಾಗ್ಯೂ ಮತ್ತು ಸೇವೆ ಸಲ್ಲಿಸುವುದರಿಂದ ಅವರನ್ನು ಮುಕ್ತಗೊಳಿಸಿದರೂ, ಸರಕಾರವು ಸಂಬಳ ಕೊಟ್ಟು ಯಾರನ್ನೇ ನೇಮಕ ಮಾಡಿಕೊಂಡರೂ ಹೊಸದಾಗಿ ನೇಮಿಸಿಕೊಂಡ ಏಜೆನ್ಸಿಗೆ ಸಂಬಳ ಕೊಡಲು ಸರಕಾರಕ್ಕೆ ಅದರದೇ ಹಣ ಇರುತ್ತದೆ. ಮೊದಲನೆಯದಾಗಿ ಮಹಾರರ ಜಮೀನುಗಳ ಮೇಲೆ ವಿಧಿಸಿದ ಭೂಕಂದಾಯ ರೂಪದಲ್ಲಿ ಅವರಿಗೆ ಹಣ ಬರುತ್ತದೆ. ಅದೂ ಅಲ್ಲದೆ, ಭಲೂಟಾವನ್ನು ವಿಧಿಸಲೂ ಸಹ ಸರಕಾರಕ್ಕೆ

ಅಧಿಕಾರವಿರುತ್ತದೆ. ಏಕೆಂದರೆ ಸರಕಾರದ ನಿಯಮದ ಮೇರೆಗೆ ಗ್ರಾಮದ ಜನತೆಯು ಹಳ್ಳಿಯನ್ನು ಕಾಯುವ ಮತ್ತು ರಕ್ಷಿಸುವ ವೆಚ್ಚವನ್ನು ತುಂಬಬೇಕಾಗುತ್ತದೆ. ಮಾನ್ಯರೇ ಈ ಎರಡೂ ರೀತಿಯಲ್ಲಿ ಬರುವ ಒಟ್ಟು ಹಣವು ಸಂಬಳ ಕೊಟ್ಟು ನೇಮಿಸಿಕೊಳ್ಳುವ ಹೊಸ ಏಜೆನ್ಸಿಯನ್ನು ಇಟ್ಟುಕೊಂಡು ಹೋಗಲು ಸಾಕಷ್ಟು ಆಗುತ್ತದೆ. ಮಹಾರ್ಕಿ ವತನವನ್ನು ಪರಿವರ್ತಿಸುವ ವಿಚಾರವು ಸರಕಾರಕ್ಕೆ ಭಯವನ್ನುಂಟುಮಾಡುವ ಕಾರಣವೆಂದರೆ ಈಗ ಇರುವಷ್ಟು ಸಂಖ್ಯೆಯ ಜನರನ್ನೇ ನೇಮಕ ಮಾಡಿಕೊಳ್ಳಬೇಕಾಗುತ್ತದೆಂಬುದು. ನನ್ನ ಹತ್ತಿರ ಸರಿಯಾದ ಅಂಕಿ ಸಂಖ್ಯೆ ಇಲ್ಲ. ಆದರೆ ಮುಂಬೈ ಪ್ರಾಂತದಲ್ಲಿ ಸರಕಾರವು ೬೪,೦೦೦ ಮಹಾರರನ್ನು ನೇಮಿಸಿಕೊಂಡಿರುತ್ತಾರೆಂದು ಕಂಡುಬರುತ್ತದೆ. ಮಾನ್ಯರೇ, ಹೊಸ ಪದ್ಧತಿಯ ಮೇರೆಗೆ ಅವರು ಅಷ್ಟು ದೊಡ್ಡ ಸಂಖ್ಯೆಯ ಜನರನ್ನು ನೇಮಿಸಿಕೊಳ್ಳಬೇಕಾಗಿಲ್ಲ ಎಂದು ನಾನು ಹೇಳುತ್ತೇನೆ. ಅವರನ್ನು ಈಗ ಸರಕಾರವು ಏಕೆ ನೇಮಿಸಿಕೊಂಡಿದೆ ಎಂದರೆ ಅವರು ರೈತರ ವೆಚ್ಚದಲ್ಲಿ ಹಾಗೆ ಮಾಡುತ್ತಿರುವುದು. ಹಲವು ಗ್ರಾಮಗಳಲ್ಲಿ ೧೬ ಜನ ಮಹಾರರನ್ನು ನೇಮಿಸಿಕೊಳ್ಳಲಾಗಿದೆ. ಇತರ ಹಳ್ಳಿಗಳಲ್ಲಿ ಉದಾಹರಣೆಗೆ ಹೇಳಬೇಕೆಂದರೆ ನಗರ ಜಿಲ್ಲೆಯಲ್ಲಿ ಒಂದು ಹಳ್ಳಿಯಲ್ಲಿ ೩೨ ಜನ ಮಹಾರರನ್ನು ನೇಮಿಸಿಕೊಳ್ಳಲಾಗಿದೆ. ಮಾನ್ಯರೇ, ಸಧ್ಯದ ಸಮಯದಲ್ಲಿ ನೇಮಕ ಮಾಡಿಕೊಳ್ಳಲಾಗಿರುವ ಮಹಾರರ ಸಂಖ್ಯೆಯು ತುಂಬಾ ದುಂದುವೆಚ್ಚದ್ದಾಗಿರುತ್ತದೆ ಮತ್ತು ನಿಜವಾಗಿಯೂ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ ಮಾಡಬಹುದಾಗಿದೆ. ಮತ್ತು ಅಂಥ ಕಡಿತವು ಸಾಧ್ಯವೆಂದು ನಾನು ಭಾವಿಸುತ್ತೇನೆ. ಆಗ ಈಗಿರುವ ಸಂಖ್ಯೆಯ ಮೂರನೆಯ ಒಂದು ಭಾಗವು ಸಾಕಾಗುತ್ತದೆ ಮತ್ತು ಭೂಕಂದಾಯ ಮತ್ತು ಭಲೂಟಾಗಳು ಟ್ರೆಝುರಿಯ ಮೇಲೆ ಹೆಚ್ಚಿನ ಭಾರವನ್ನು ಬೀಳದ ಹಾಗೆ ಪ್ರತಿಫಲವಾಗಿ ಕೊಡಲು ಸಾಕಷ್ಟಾಗುತ್ತದೆ ಎಂದು ನಾನು ವಿನಂತಿಸುತ್ತೇನೆ. ಈ ಭಾರವನ್ನು ಸರಕಾರವು ಏಕೆ ಹೊರಬಾರದು ಎಂದು ನಾನು ಗಂಭೀರವಾಗಿಯೇ ಕೇಳುತ್ತೇನೆ? ಸೇವೆಗಳ ವೆಚ್ಚವನ್ನು ಸರಕಾರವು ಏಕೆ ಕೊಡಬಾರದು. ಇತರ ಸರಕಾರಿ ನೌಕರರಿಗೆ ಸಂಬಂಧಿಸಿದಂತೆ ಅವರಿಗೆ ಕೊಡಲು ಸರಕಾರವು ಹೆಚ್ಚಿನ ಹಣ ಕೇಳುವ ಧೈರ್ಯದಿಂದ ಈ ಸದನದ ಮುಂದೆ ಬಂದಿದೆ. ಮಾನ್ಯರೇ, ೧೯೨೧ರಲ್ಲಿ ಗ್ರಾಮದ ಶಿಕ್ಷಕರ ಸಂಬಳವನ್ನು ಹೆಚ್ಚಿಸಲು ಸರಕಾರವು ಒಪ್ಪಿಕೊಂಡಿತು. ಅಧೀನ ಸೇವೆಗಳವರ ಸಂಬಳವನ್ನು ಹೆಚ್ಚಿಸಲೂ ಸರಕಾರವು ಪ್ರಸ್ತಾವವನ್ನು ಮುಂದಿಟ್ಟಿತು. ಇದಷ್ಟೇ ಅಲ್ಲದೆ, ಸರಕಾರವು ತಲಾಟಿಗಳ ಸಂಬಳವನ್ನು ಹೆಚ್ಚಿಸಲು ಸಹ ಪ್ರಸ್ತಾವವನ್ನು ಮುಂದಿಟ್ಟಿದೆ. ಮಾನ್ಯರೇ, ಈ ವರ್ಗದವರಿಗಾಗಿ ಹಣಕಾಸಿನ ವ್ಯವಸ್ಥೆಯನ್ನು ಇತರ ಸೇವೆಗಳಿಗೆ ಪ್ರತಿಫಲಕ್ಕಾಗಿ ಮಾಡಲು ಮುಂದೆ ಬರುವಷ್ಟು ಬಲವನ್ನು, ಧೈರ್ಯವನ್ನು ಮತ್ತು ಸಹಾನುಭೂತಿಯನ್ನು ಹೊಂದಿರುವಾಗ ಮಹಾರರ ಬಗ್ಗೆಯೂ ಸಹ ಅದೇ ಬಲವನ್ನು, ಅದೇ ಧೈರ್ಯವನ್ನು ಮತ್ತು ಅದೇ ಸಹಾನುಭೂತಿಯನ್ನು ಸರಕಾರವು ಏಕೆ ಹೊಂದಿರಬಾರದು? ಮಾನ್ಯರೇ, ಉದಾಹರಣೆಗೆ ಹೇಳಬೇಕೆಂದರೆ ರಾಜಮಹಾರಾಜರ ಒಂದು ವರ್ಗವನ್ನು ಮರುಳುಗೊಳಿಸುವ ಮತ್ತು ಗುಲಾಮಗಿರಿಗೆ ತಳ್ಳುವ ಪದ್ಧತಿಯನ್ನು ಸರಕಾರವು ಏಕೆ ಮುಂದುವರೆಸಬೇಕು ಅಥವಾ ಅದಕ್ಕೆ ಭಾಗಿಯಾಗಬೇಕು ಎಂಬುದು ನನಗೆ ತಿಳಿಯದಾಗಿದೆ. ಮಾನ್ಯರೇ, ಕಾನೂನು ಆಧಾರದ ಮೇಲೆ ಆಗಲಿ ಅಥವಾ ನೈತಿಕ ಆಧಾರದ ಮೇಲೆ ಆಗಲಿ ಮತ್ತು ಹಣಕಾಸಿನ ಆಧಾರದ ಮೇಲೆಯೇ ಆಗಲಿ ನನ್ನ ಮಸೂದೆಯ ೪ನೇ ಕಲಮಿನಲ್ಲಿ ನಾನು ಸೇರಿಸಿದ ಸಿದ್ಧಾಂತವು ಉಚಿತವಾದುದೂ ಮತ್ತು ನ್ಯಾಯಯುತವಾದುದೂ ಆಗಿರುತ್ತದೆ.

ಮಾನ್ಯರೇ, ನಾನು ಈಗ ಮಹಾರ್ ವತನದಾರರ ಇನ್ನೊಂದು ವರ್ಗದ ಬಗ್ಗೆ, ಅಂದರೆ ತಮ್ಮ ಕುಂದು ಕೊರತೆಗಳನ್ನು ಸರಿಪಡಿಸಿದರೆ ಯಾರು ತಮ್ಮ ವೇತನವನ್ನು ಮುಂದುವರೆಸಿಕೊಂಡು ಹೋಗಲು ಮತ್ತು ಸೇವೆಯನ್ನು ಮುಂದುವರೆಸಿಕೊಂಡು ಹೋಗಲು ಸಿದ್ಧರಿರುತ್ತಾರೆಯೋ ಅಂತಹ ವರ್ಗದ ಬಗ್ಗೆ ಹೇಳಲು ಬಯಸುತ್ತೇನೆ. ಈ ಮಹಾರರ ಬಗ್ಗೆ ನಾನು ನನ್ನ ಮಸೂದೆಯ ೬ನೇ ವಾಕ್ಯಾವಳಿಯಲ್ಲಿ ಹೇಳಿದ್ದೇನೆ. ಮಹಾರ ಜನತೆಯ ಈ ಭಾಗದವರ ಹಿತಾಸಕ್ತಿಗಾಗಿ ಮತ್ತು ಗ್ರಾಮದ ಕರ್ತವ್ಯಗಳು ಮುಂದುವರೆಯುವ ಬಗ್ಗೆಯೂ ಎಚ್ಚರವಹಿಸಿ ಅಧಿನಿಯಮಿಸಲಾಗಿರುವ ಈ ಕಲಮಿನಲ್ಲಿನ ಉಪಬಂಧವು ಮುಖ್ಯವಾಗಿ ಪುನಾರಚನೆಯನ್ನು ಒಳಗೊಂಡಿರುತ್ತದೆ. ಈ ಪದವನ್ನು ಅಂದರೆ "ಮುಖ್ಯವಾಗಿ ಭಲೂಟಾ ಪದ್ಧತಿಯು ಪುನಾರಚನೆಯನ್ನು ಒಳಗೊಂಡಿರುತ್ತದೆ" ಅನ್ನುವ ಪದವನ್ನು ನಾನು ತುಂಬಾ ಎಚ್ಚರಿಕೆಯಿಂದ ಉಪಯೋಗಿಸಿರುತ್ತೇನೆ. ಅಲ್ಲಿ ಅಧಿನಿಯಮಿಸಲಾಗಿರುವ ವಾಕ್ಯಾವಳಿಗಳನ್ನು ಗೌರವಾನ್ವಿತ ಸದಸ್ಯರು ಪರಿಶೀಲಿಸಿದರೆ ಭಲೂಟಾವನ್ನು ಹಣದ ರೂಪದಲ್ಲಿ ಬದಲಾಯಿಸಲು ರಚಿಸಲಾಗಿದೆ ಎಂಬುದನ್ನು ಮೊದಲು ಕಂಡುಕೊಳ್ಳುತ್ತಾರೆ. ಎರಡನೆಯದಾಗಿ ಹಣದ ರೂಪದ ಕರವನ್ನು ಭೂ ಕಂದಾಯದೊಡನೆಯೇ ವಸೂಲು ಮಾಡಿಕೊಳ್ಳಲು ನಿಯಮಿಸಲಾಗಿದೆ. ಮೂರನೆಯದಾಗಿ ಆ ಕರವನ್ನು ಎರಡು ಭಾಗಗಳಲ್ಲಿ ವಿಭಜಿಸಲು ನಿಯಮಿಸಲಾಗಿದೆ. ಅಂದರೆ ರೈತರಿಗೆ ಸಲ್ಲಿಸಿದ ಸೇವೆಗಾಗಿ ಒಂದು, ಸರಕಾರಕ್ಕೆ ಸಲ್ಲಿಸಿದ ಸೇವೆಗಾಗಿ ಇನ್ನೊಂದು. ಸರಕಾರದ ಸೇವೆಗಾಗಿ ತೆಗೆದಿಡುವ ಕರದ ಭಾಗವು ಪಾಲಿಸಲೇಬೇಕಾದು ದಾಗಿರುತ್ತದೆ. ಆದರೆ ರೈತರಿಗೆ ಅವರು ಮಾಡುತ್ತಿರುವ ಖಾಸಗಿ ಸೇವೆಗಳ ಬಗ್ಗೆ ತೆಗೆದಿಡುವುದು ಐಚ್ಛಿಕ ವಾದುದು. ತಮ್ಮ ಖಾಸಗಿ ಸೇವೆಗಾಗಿ ಮಹಾರರ ಸೇವೆಯನ್ನು ತೆಗೆದುಕೊಳ್ಳಲು ಇಚ್ಛಿಸುವ ರೈತರು ಖಾಸಗಿ ಸೇವೆಗಾಗಿ ತೆಗೆದಿಡಲಾಗಿರುವ ಕರದ ಅಷ್ಟು ಭಾಗವನ್ನು ಕೊಡಲು ಮಾತ್ರ ಹೊಣೆಗಾರರಾಗಿ ರುತ್ತಾರೆ. ಕೇವಲ ಸರಕಾರದ ಸೇವೆಯನ್ನು ಮಾಡಲು ಮಾತ್ರ ಇಚ್ಛಿಸುವ ಆದರೆ, ರೈತರ ಸೇವೆಯನ್ನು ಮಾಡಲು ಇಚ್ಛಿಸದಿರುವ ಮಹಾರರು, ಖಾಸಗಿ ಸೇವೆಗಾಗಿ ತೆಗೆದಿಡಲಾಗಿರುವ ಕರದ ಭಾಗವನ್ನು ಪಡೆದುಕೊಳ್ಳುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಮಾನ್ಯರೇ, ಈಗ ನಾನು ಕೆಲವು ವಿಶೇಷ ಪ್ರಸ್ತಾವಗಳನ್ನು ಮಾಡುತ್ತಿರುತ್ತೇನೆ ಎಂದು ಈ ಸದನವು ಭಾವಿಸುವ ಸಂಭವವಿದೆ. ಆದಾಗ್ಯೂ ಈ ಯಾವ ಉಪಬಂಧಗಳೂ ಹೊಸದಾದವುಗಳು ಅಲ್ಲ ಎಂದು ಒತ್ತಿಹೇಳಲು ಇಚ್ಛಿಸುತ್ತೇನೆ. ಅವೆಲ್ಲ ವತನದ ಅಧಿನಿಯಮದಲ್ಲಿ ಇರುತ್ತವೆ. ಆಗಿರುವ ಪದ್ಧತಿಯಲ್ಲಿನ ಬದಲಾವಣೆ ಮತ್ತು ಪುನಾರಚನೆ ಮಾತ್ರವೇ ಅದರಲ್ಲಿದೆ. ಭಲೂಟಾವನ್ನು ಹಣದ ರೂಪದ ದರದಲ್ಲಿ ಪರಿವರ್ತಿಸಬೇಕೆಂಬ ಮೊದಲನೆಯ ಉಪಬಂಧವು ವತನ ಅಧಿನಿಯಮದ ೧೯ನೇ ಕಲಮಿನಲ್ಲಿ ದೊರಕುತ್ತದೆ. ಆದಕಾರಣ ಅದು ಹೊಸ ವಿಷಯವಲ್ಲ. ಈಗಿರುವ ವತನ ಅಧಿನಿಯಮದ ಮೇರೆಗೆ ತನಗೆ ಯುಕ್ತವೆಂದು ಕಂಡಾಗಲೆಲ್ಲ ಕಲೆಕ್ಟರನು ಭಲೂಟಾವನ್ನು ಹಣದ ರೂಪದ ಕರವನ್ನಾಗಿ ಪರಿವರ್ತಿಸಲು ಅಧಿಕಾರವನ್ನು ಹೊಂದಿರುತ್ತಾನೆ. ಹಣದ ರೂಪದ ಕರವನ್ನು ಭೂ ಕಂದಾಯದೊಂದಿಗೆ ವಸೂಲು ಮಾಡತಕ್ಕುದೆಂಬ ಎರಡನೆಯ ಉಪಬಂಧವು ಸಹ ಹೊಸ ಪ್ರಸ್ತಾವವಲ್ಲವೆಂದು ಪುನಃ ಹೇಳಲು ಇಚ್ಛಿ ಸುತ್ತೇನೆ. ಅದೂ ಸಹ ಈಗಾಗಲೇ ವತನ ಅಧಿನಿಯಮದಲ್ಲಿ ಇರುತ್ತದೆ. ವತನ ಅಧಿನಿಯಮದ ೮೧ನೇ ಕಲಮಿನ ಉಲ್ಲೇಖವು ಈಗಿರುವ ಅಧಿನಿಯಮದ ಮೇರೆಗೆ ಎಲ್ಲ ಹಕ್ಕುಗಳನ್ನೂ, ಎಲ್ಲ ಪ್ರತಿಫಲವನ್ನೂ, ಎಲ್ಲ ವೇತನಗಳನ್ನೂ ಅವುಗಳು ಭೂಕಂದಾಯ ಬಾಕಿಯಾಗಿದ್ದರೆ ಹೇಗೆ ವಸೂಲು ಮಾಡಬಹುದಾಗಿತ್ತೋ ಹಾಗೆಯೇ ವಸೂಲು ಮಾಡಿಕೊಳ್ಳಲು ಕಲೆಕ್ಟರನು ಅಧಿಕಾರ ಹೊಂದಿರುತ್ತಾನೆ ಎಂಬುದನ್ನು ತೋರಿಸುತ್ತದೆ.

ಆದಕಾರಣ ಮಾನ್ಯರೇ, ನಾನು ಹೇಳುವುದೇನೆಂದರೆ, ಮಸೂದೆಯ ೬ನೇ ಕಲಮಿನಲ್ಲಿ ಹೊಸದೇನೂ ಇಲ್ಲ. ನನ್ನ ಮಸೂದೆಯ ೬ನೇ ಕಲಮಿನಲ್ಲಿರುವ ಹೊಸದೆಂದರೆ ಕಲೆಕ್ಟರನಿಗೆ ಕೊಟ್ಟಿರುವ ವಿವೇಚನೆಯನ್ನು ಸಂಬಂಧಪಟ್ಟವರಿಗೇ ಕೊಟ್ಟಿರುವುದು. ನನ್ನ ಮಸೂದೆಯ ೬ನೇ ಕಲಮಿನಲ್ಲಿ ಉದ್ದೇಶಿಸಲಾಗಿರುವಂಥ ಉಪಬಂಧಗಳು ಅವಶ್ಯವೆಂದು ಭಾವಿಸುವ ಸಂದರ್ಭಗಳು ಉಂಟಾಗುವವೆಂದು ಈಗಿರುವ ಕಾನೂನು ಗುರುತಿಸಿರುತ್ತದೆ. ಇಲ್ಲದೇ ಹೋದರೆ ಈಗಿರುವ ಕಾನೂನಿನಲ್ಲಿ ಆ ನಿಯಮಗಳಿಗೆ ಯಾವುದೇ ಸ್ಥಾನ ಇರಲಿಲ್ಲ. ಕಲೆಕ್ಟರನ ವಿವೇಚನೆ ಇರಬಹುದಾದಾಗ್ಯೂ ಆತನು ತನ್ನ ವಿವೇಚನೆಯನ್ನು ಉಪಯೋಗಿಸುವಂಥ ಸಂದರ್ಭಗಳು ಉಂಟಾಗಿವೆ ಎಂಬುದು ಆತನಿಗೆ ಗೊತ್ತಿರಲಿಕ್ಕಿಲ್ಲ. ಆತನು ತಿಳಿದುಕೊಂಡಿರಲಿಕ್ಕಿಲ್ಲ ಮತ್ತು ಅವು ಆತನ ಗಮನಕ್ಕೆ ಬಂದಿರಲಿಕ್ಕಿಲ್ಲ ಎಂದು ನನಗೆ ಅನ್ನಿಸುತ್ತದೆ. ನಾನು ಹೇಳಬೇಕೆಂದಿರುವುದು ಇಷ್ಟು ಮಾತ್ರ. ಅಂದರೆ ತನ್ನ ವಿವೇಚನೆಯನ್ನು ಚಲಾಯಿಸುವಲ್ಲಿ ಕಲೆಕ್ಟರನು ಸಂಬಂಧಪಟ್ಟವರಿಂದಲೆ ಮಾರ್ಗದರ್ಶನ ಪಡೆಯಬೇಕು. ಏಕೆಂದರೆ ಭಲೂಟಾವನ್ನು ಭೂ ಕಂದಾಯದೊಡನೆಯೇ ವಸೂಲು ಮಾಡಿಕೊಳ್ಳಬೇಕೆಂದು ಪಕ್ಷಕಾರರು ಇಚ್ಛಿಸಿದಲ್ಲಿ ತನ್ನ ವಿವೇಚನೆಯನ್ನು ಉಪಯೋಗಿಸುವಂಥ ಸಂದರ್ಭವು ಉಂಟಾಗಿದೆ ಎಂದು ಕಲೆಕ್ಟರನು ತಿಳಿದುಕೊಳ್ಳುವನು. ವಿವೇಚನೆಯನ್ನು ಕಲೆಕ್ಟರನಿಂದ ರೈತನಿಗೆ ಮತ್ತು ಮಹಾರರಿಗೆ ವರ್ಗಾಯಿಸುವುದನ್ನು ಹೊರತುಪಡಿಸಿ ಇದರಲ್ಲಿ ಬೇರೆ ಹೊಸದೇನೂ ಇಲ್ಲ.

ಮಾನ್ಯರೇ, ಭಲೂಟಾವನ್ನು ಖಾಸಗಿ ಸೇವೆಗಾಗಿ ಒಂದು, ಸರಕಾರಿ ಸೇವೆಗಾಗಿ ಇನ್ನೊಂದು ಎಂದು ಎರಡು ನಿರ್ದಿಷ್ಟ ಪಾಲುಗಳಲ್ಲಿ ಭಾಗ ಮಾಡುವುದಕ್ಕೆ ಸಂಬಂಧಿಸಿದ ಮೂರನೆಯ ಉಪಬಂಧವು ನಿಸ್ಸಂಶಯವಾಗಿಯೂ ಹೊಸದು. ಈಗಿನ ಪರಿಸ್ಥಿತಿಯಿಂದಾಗಿ ಈ ಅವಶ್ಯಕತೆ ಉಂಟಾಗಿದೆ. ಸರಕಾರದ ದೃಷ್ಟಿಯಲ್ಲಿ ಭಲೂಟಾವು ರೈತರಿಗೆ ಸಲ್ಲಿಸಿದ ಸೇವೆಗಳಿಗಾಗಿ ಮತ್ತು ಸರಕಾರದ ಸೇವೆಗಳಿಗಾಗಿ ಇರುವ ಜಂಟಿ ಸಂದಾಯವಾಗಿದೆ. ೧೮೯೯ರ ಮೇ ೩ರಂದು ಸರಕಾರವು ಠರಾವು ನಂ. ೩೦೭೪ನೆಯದ್ದನ್ನು ಪಾಸು ಮಾಡಿತು. ಅದರಲ್ಲಿ ಭಲೂಟಾವು ರೈತರಿಗೆ ಮತ್ತು ಸರಕಾರಕ್ಕೆ ಸಲ್ಲಿಸಿದ ಸೇವೆಗಾಗಿ ಜಂಟಿ ಪ್ರತಿಫಲವೆಂದೇ ಸ್ಪಷ್ಟವಾಗಿ ಹೇಳಲಾಗಿದೆ. ಈ ಅಭಿಪ್ರಾಯವನ್ನು ಸಮರ್ಥಿಸಲು ನಾನು ತೀರಾ ಹಿಂದಕ್ಕೆ ಹೋಗಬೇಕಾಗಿಲ್ಲ. ೧೯೧೯ರಲ್ಲಿಯೂ ಈ ಸದನದ ಮುಂದೆ ಸರಕಾರವು ಈ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಗೆ ಉತ್ತರವಾಗಿ (ಸರಕಾರದ ಸಹಾಯಕ ಕಾರ್ಯದರ್ಶಿಯವರು ಮಾಡಿದ ಆದೇಶವನ್ನು ಆಧರಿಸಿ) ಹಾಜರುಪಡಿಸಿದ ದಾಖಲೆಗಳಿದ್ದವು. ಆ ಆದೇಶದಲ್ಲಿ ಭಲೂಟಾವನ್ನು ಖಾಸಗೀ ಸೇವೆಗಾಗಿ ಮಾತ್ರವೇ ಕೊಡಲಾಗುತ್ತಿಲ್ಲ. ಸರಕಾರದ ಸೇವೆಗಾಗಿಯೂ ಸಹ ಕೊಡಲಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿತ್ತು. ಈಗ ಮಾನ್ಯರೇ, ಹಲವು ಮಹಾರರು ಸರಕಾರಕ್ಕೆ ಸೇವೆ ಸಲ್ಲಿಸಲು ಸಿದ್ಧರಿದ್ದಾರೆ. ಆದರೆ ಅವರು ರೈತರಿಗೆ ಸೇವೆ ಸಲ್ಲಿಸಲು ಸಿದ್ಧರಿಲ್ಲ ಎಂಬುದನ್ನು ಹೇಳಬಯಸುತ್ತೇನೆ. ಈಗಿರುವ ಕಾನೂನಿನಂತೆ ಮಹಾರರಂಥ ಏಜೆನ್ಸಿಯನ್ನು ತಮ್ಮ ಮೇಲೆ ಒತ್ತಾಯಪೂರ್ವಕವಾಗಿ ಹೇರುವುದು ನನಗೆ ಗೊತ್ತಿರುವಂತೆ ಹಲವು ರೈತರಿಗೆ ಬೇಕಾಗಿಲ್ಲ. ತಮ್ಮ ಇಷ್ಟದಂತೆ ತಮಗೆ ಬೇಕಾದವನೊಬ್ಬನನ್ನು ತಾವೇ ಸ್ವತಃ ನೇಮಿಸಿಕೊಳ್ಳಲು ಅವರು ಇಚ್ಛಿಸುತ್ತಾರೆ. ಅದೇ ರೀತಿಯಲ್ಲಿ ಹಲವು ಮಹಾರರಿಗೆ ರೈತರಿಗೆ ಸೇವೆ ಸಲ್ಲಿಸುವುದು ಬೇಕಾಗಿಲ್ಲ. ಸೇವೆ ಮಾಡಬೇಕೋ ಅಥವಾ ಮಾಡಬಾರದೋ ಅನ್ನುವ ನಿರ್ಧಾರ ತೆಗೆದುಕೊಳ್ಳಲು ಅವರಿಗೆ ತಮ್ಮದೇ ಆದ ಸ್ವಾತಂತ್ರ್ಯ ಬೇಕಾಗಿದೆ. ಆದರೆ ಈಗಿರುವ ಕಾನೂನು ಅವರಿಗೆ ಈ ಸ್ವಾತಂತ್ರ್ಯವನ್ನು ನಿರಾಕರಿಸಿದೆ. ಅವರು ಇಚ್ಛಿಸಲಿ ಅಥವಾ ಬಿಡಲಿ ಸೇವೆ

ಮಾಡಲು ಅವರನ್ನು ಒತ್ತಾಯಿಸಲಾಗುತ್ತಿದೆ. ಇದಕ್ಕೆ ಕಾರಣವೆಂದರೆ ಭಲೂಟಾವು ಜಂಟಿ ಪ್ರತಿಫಲ ವಾಗಿದೆ ಮತ್ತು ಭಲೂಟಾದ ಎಷ್ಟು ಭಾಗವನ್ನು ಸರಕಾರದ ಸೇವೆಗಾಗಿ ಕೊಡಬೇಕು ಹಾಗೂ ಖಾಸಗಿ ಸೇವೆಗಾಗಿ ಎಷ್ಟು ಕೊಡಬೇಕು ಎಂಬುದನ್ನು ಗೊತ್ತುಪಡಿಸಲು ಯಾವುದೇ ಮಾರ್ಗವಿಲ್ಲ. ಸಾಮಾಜಿಕ ಬೆಳವಣಿಗೆಯಲ್ಲಿ ಸ್ಪರ್ಧೆ ಇರುವ ಈ ದಿನಗಳಲ್ಲಿ ರೈತರ ಮತ್ತು ಮಹಾರರ ನಡುವಣ ಅಶಾಂತಿ ದೊಡ್ಡದಾಗಿ ಮತ್ತು ನೇಮಕ ಮಾಡಿಕೊಳ್ಳಲು ಮತ್ತು ಸೇವೆ ಮಾಡಲು ಸ್ವಾತಂತ್ರ್ಯವನ್ನು ಕೊಡದೆ ಇದ್ದರೆ ಅದು ತೀವ್ರ ಸ್ವರೂಪವನ್ನು ಹೊಂದುತ್ತದೆ. ಈ ಗುರಿಯನ್ನು ಸಾಧಿಸುವುದಕ್ಕಾಗಿ ರೈತರಿಗೆ ಮಾಡಿದ ಖಾಸಗಿ ಸೇವೆಗಾಗಿ ಮತ್ತು ಸರಕಾರಕ್ಕೆ ಸಲ್ಲಿಸಿದ ಸೇವೆಗಾಗಿ ಭಲೂಟಾದ ಪ್ರಮಾಣ ಎಷ್ಟು ಎಂದು ನಿರ್ಣಯಿಸುವುದು ಅವಶ್ಯವಾಗಿದೆ. ಈಗಿರುವ ಸಂದರ್ಭಗಳಲ್ಲಿ ನಡೆಯುತ್ತಿರುವುದು ಇದು. ಅಂದರೆ ಮಹಾರನು ರೈತನಿಗೆ ಸೇವೆಯನ್ನು ಸಲ್ಲಿಸದಿದ್ದರೆ, ಏನೇ ಆಗಲಿ, ಭಲೂಟಾವನ್ನು ಹೀಗೆ ಎರಡು ಭಾಗ ಮಾಡದೇ ಇರುವುದರಿಂದ ಎಲ್ಲ ಭಲೂಟಾವನ್ನು ರೈತನು ಕೊಡಲೇಬೇಕಾಗುತ್ತದೆ ಮತ್ತು ರೈತನ ಮೇಲೆ ಮಹಾರನ ಕೈಮೇಲಾಗುತ್ತದೆ.

ಆದರೆ ಮಹಾರನು ರೈತನಿಗೆ ಸೇವೆಯನ್ನು ಸಲ್ಲಿಸದಿದ್ದರೆ ಮತ್ತು ಆತನು ಕೇವಲ ಸರಕಾರಕ್ಕೆ ಸೇವೆ ಸಲ್ಲಿಸಿದರೆ ಆತನು ಎಲ್ಲ ಭಲೂಟಾವನ್ನು ಕಳೆದುಕೊಳ್ಳುತ್ತಾನೆ. ಯಾಕೆಂದರೆ ಸರಕಾರದ ಸೇವೆಗಾಗಿ ಭಲೂಟಾದ ಎಷ್ಟು ಭಾಗವನ್ನು ತಾನು ಹೊಂದಬೇಕೆಂಬ ಬಗ್ಗೆ ಯಾವ ಕಲ್ಪನೆಯೂ ಇರುವುದಿಲ್ಲ. ಹೀಗಾಗಿ ಆತ ಕೊಡುವುದೆಲ್ಲವನ್ನೂ ತಡೆಹಿಡಿದಿಟ್ಟುಕೊಳ್ಳುತ್ತಾನೆ ಮತ್ತು ಹಾಗೆ ಮಾಡಿ ಮಹಾರರಿಗೆ ಅನ್ಯಾಯವಾಗಿ ಹಾನಿಯನ್ನುಂಟುಮಾಡುತ್ತಾನೆ. ಆದಕಾರಣ ಉತ್ತಮ ಆಡಳಿತದ ಹಿತಾಸಕ್ತಿಯ ದೃಷ್ಟಿಯಿಂದ ಮತ್ತು ಗ್ರಾಮದಲ್ಲಿನ ಶಾಂತಿಪಾಲನೆಯ ದೃಷ್ಟಿಯಿಂದ ಭಲೂಟಾದಲ್ಲಿ ಇಂಥ ವಿಭಜನೆಯನ್ನು ಮಾಡು ವುದು ಅವಶ್ಯವಿದೆ ಎಂದು ನಾನು ಭಾವಿಸುತ್ತೇನೆ. ಒಂದು ವರ್ಗದ ಜನರ ಸೇವೆಯನ್ನು ಮತ್ತೊಂದು ವರ್ಗದ ಜನರ ಮೇಲೆ ಹೇರುವುದು ಕಾನೂನಿನ ಸಿದ್ಧಾಂತಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿರುತ್ತದೆ ಎಂದು ನಾನು ಹೇಳಬಯಸುತ್ತೇನೆ. ಇತರ ಎಲ್ಲ ಕ್ಷೌರದವರನ್ನು ಹೊರತುಪಡಿಸಿ ಒಬ್ಬ ನಿರ್ದಿಷ್ಟ ಕ್ಷೌರಿಕನು ಮಾತ್ರವೇ ನಮ್ಮ ಕ್ಷೌರ ಮಾಡತಕ್ಕುದು ಎಂಬ ಪದ್ಧತಿಯನ್ನು ಎತ್ತಿ ಹಿಡಿಯುವುದು ಕ್ರೂರವಾಗುತ್ತದೆ. ಆದರೆ ವತನ ಪದ್ಧತಿಯು ಅಂಥ ನಿರಂಕುಶ ಮತ್ತು ಕ್ರೂರವಾದ ಪದ್ಧತಿಯಾಗಿದೆ. ಒಬ್ಬ ಕ್ಷೌರಿಕನು ತಾನು ಕಾರ್ಯ ಮಾಡಲು ಸಮರ್ಥನಿರಲಿ ಅಥವಾ ಇಲ್ಲದಿರಲಿ, ಹೇಗೆ ಕ್ರಾಪ್ ಮಾಡಬೇಕು, ಹೇಗೆ ಗಡ್ಡ ಬೋಳಿಸಬೇಕು ಅನ್ನುವುದು ತಿಳಿದಿರಲಿ, ತಿಳಿಯದೆಯೇ ಇರಲಿ, ತಾನು ಮಾತ್ರ, ಯಜಮಾನರ (ರೈತರ) ವಿರುದ್ಧ ದಾವೆಯನ್ನು ಹೂಡಿ ತನ್ನನ್ನು ಬಿಟ್ಟು ಬೇರೆ ಕ್ಷೌರಿಕನನ್ನು ಅವರು ಊರಲ್ಲಿ ತರಲು ಹಕ್ಕುಳ್ಳವರಾಗಿಲ್ಲ, ತಾನು ಮಾತ್ರ ರೈತರಿಗೆ ಸೇವೆಯನ್ನು ಸಲ್ಲಿಸಲು ಹಕ್ಕುಳ್ಳವನಾಗಿರುತ್ತಾನೆ ಎಂದು ಕೇಳಿ ಮುಂಬೈ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಮಾಡಿದ್ದು ಈ ಸದನದಲ್ಲಿರುವ ನ್ಯಾಯವಾದಿ ಸದಸ್ಯ ರೆಲ್ಲರಿಗೂ ತಿಳಿದಿದೆ. ಮಹಾರರಿಗೆ ಸಂಬಂಧಿಸಿದಂತೆಯೂ ಸಹ ಹಾಗೆಯೇ ನಡೆಯುತ್ತಿದೆ. ನನ್ನ ಮಸೂದೆಯ ಗುರಿ ಎಂದರೆ ಇಂತಹ ಕರಾರಿನಿಂದ ವಿಮುಕ್ತಿ ರೈತರಿಗೆ ಮಹಾರನನ್ನು ನೇಮಿಸಿಕೊಳ್ಳುವುದು ಬೇಡವಾಗಿರು ವಾಗ, ಅವರನ್ನು ನೇಮಿಸಿಕೊಳ್ಳದಿರಲು ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು ಮತ್ತು ಸೇವೆ ಸಲ್ಲಿಸುವುದು ಮಹಾರರಿಗೆ ಬೇಡವಾಗಿದ್ದಲ್ಲಿ, ಸೇವೆ ಸಲ್ಲಿಸದಿರಲು ಮಹಾರರಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಆದರೆ ಸದ್ಯದ ಪದ್ಧತಿಯಲ್ಲಿ ಜಂಟೀ ಪ್ರತಿಫಲದ ಪದ್ಧತಿಯಲ್ಲಿ ಕರಾರಿನ ಈ ಸ್ವಾತಂತ್ರ್ಯವನ್ನು ಅಲ್ಲಗಳೆಯಲಾಗಿದೆ ಮತ್ತು ಅದು ಲಭ್ಯವೂ ಇಲ್ಲ. ನನ್ನ ಪ್ರಸ್ತಾಪವು ಕರಾರಿನ ಆ

ಸ್ವಾತಂತ್ರ್ಯವನ್ನು ನೀಡುತ್ತಿದೆ ಮತ್ತು ಕೊನೆಯ ಪಕ್ಷ ಈ ದೇಶದಲ್ಲಿ ಹಳೆಯ ಸಮಾಜವು ಹಳೆಯ ಸ್ಥಾನಮಾನದಿಂದ ಕರಾರು ಪ್ರಕಾರ ಸೇವೆ ಸಲ್ಲಿಸುವಷ್ಟು ಮುಂದುವರೆದಿರುವಾಗ ಮಹಾರರಿಗೆ ಮತ್ತು ರೈತರಿಗೆ ಕರಾರಿನ ಸ್ವಾತಂತ್ರ್ಯವನ್ನು ಅಲ್ಲಗಳೆದು ಸಮಾಜದ ಬೆಳವಣಿಗೆ ಅಡ್ಡಿಯನ್ನುಂಟುಮಾಡಬಾರದೆಂದು ನಾನು ಭಾವಿಸುತ್ತೇನೆ.

ಈ ಮಸೂದೆಯಲ್ಲಿ ನಾನು ರೂಪಿಸಿದ ಪದ್ಧತಿಯು ಸಂಪೂರ್ಣವಾಗಿ ನನ್ನದೇ ಅಲ್ಲ ಎಂದು ಹೇಳಲು ನಾನು ಇಚ್ಛಿಸುತ್ತೇನೆ. ಈ ಪದ್ಧತಿಯನ್ನು ನಾನು ಬಿಹಾರದಿಂದ ನಕಲು ಮಾಡಿರುತ್ತೇನೆ. ಮಧ್ಯ ಪ್ರಾಂತಗಳಲ್ಲಿ ಮತ್ತು ಬಿಹಾರಿನಲ್ಲಿ ಇಂಥವೇ ಕಾದಾಟಗಳು ಮಹಾರರ ಮತ್ತು ರೈತರ ನಡುವೆ ನಡೆಯುತ್ತಿದ್ದವು. ಎರಡೂ ಪಕ್ಷದವರು ದೊಡ್ಡ ಚಳವಳಿಯನ್ನೇ ನಡೆಸಿದರು ಮತ್ತು ಸರಕಾರವು ಈ ವಿಷಯದ ತನಿಖೆ ಮಾಡಿ ತನ್ನ ಶಿಫಾರಸುಗಳನ್ನು ಮುಂದಿಡಲು ಒಂದು ಸಮಿತಿಯನ್ನು ನೇಮಿಸಿತು. ೧೯೨೦ರಲ್ಲಿ ಈ ಸಮಿತಿಯು ತನ್ನ ಶಿಫಾರಸುಗಳನ್ನು ಕೊಟ್ಟಿತು. ಅದರಲ್ಲಿ ಹೇಳಿರುವ ಪದ್ಧತಿಯನ್ನೇ ನಾನು ಈ ಮಸೂದೆಯ ಉಪಬಂಧಗಳಲ್ಲಿ ಹೆಚ್ಚಾಗಿ ಸೇರಿಸಿದ್ದೇನೆ. ಬಿಹಾರ ಸಮಿತಿಯ ಶಿಫಾರಸುಗಳ ಪರಿಣಾಮವಾಗಿಯೇ ಇರುವ ಈ ಮಸೂದೆಯ ನಿಯಮಗಳು ಬಿಹಾರಿನವರಿಗೆ ಒಳ್ಳೆಯದೇ ಆಗಿದ್ದರೆ, ಅವುಗಳು ಮುಂಬೈ ಪ್ರಾಂತದವರಿಗೆ ಕೆಟ್ಟವುಗಳು ಆಗಲಾರವು. ಏಕೆಂದರೆ ಬಿಹಾರದ ಪದ್ಧತಿಯು ಮುಂಬೈ ಪದ್ಧತಿಯ ಯಥಾ ಪ್ರತಿಯೇ ಆಗಿರುತ್ತದೆ. ಹಾಗೆ ಹೇಳಬಹುದಾದರೆ, ಸಮಿತಿಯ ವರದಿಯು ಸಂಪೂರ್ಣವಾಗಿ ಮುಂಬೈ ಸರಕಾರದ ಠರಾವನ್ನೇ ಆಧರಿಸಿರುತ್ತದೆ.

ಆದಾಗ್ಯೂ, ಈ ಮಸೂದೆಯಲ್ಲಿ ಅಲ್ಪಸ್ವಲ್ಪ ವಿವರಿಸಬೇಕಾದ ನಿಯಮವೊಂದರ ಆ ಉಪಬಂಧವು ವತನ ಅಧಿನಿಯಮದ ೯ನೇ ಕಲಮಿನಲ್ಲಿ ಹಲವು ಬದಲಾವಣೆಗಳನ್ನು ತರುತ್ತಿದೆ. ಅವೆಂದರೆ ನನ್ನ ಮಸೂದೆಯ ೨ನೇ ಮತ್ತು ೩ನೇ ವಾಕ್ಯಾವಳಿಗಳು ವತನ ಅಧಿನಿಯಮದ ಉಪಬಂಧಗಳ ಮೇರೆಗೆ ವತನೀ ಜಮೀನನ್ನು ವತನಿ ಕುಟುಂಬದವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಸ್ತಾಂತರಿಸ ತಕ್ಕುದಲ್ಲ ಎಂದು ವಿಧಿಸಲಾಗಿದೆ. ೯ನೇ ಕಲಮಿನ ಮೇರೆಗೆ ವತನದಾರನಲ್ಲದವನಿಗೆ ವತನಿ ಜಮೀನನ್ನು ವರ್ಗಾಯಿಸಿದ್ದರೆ ಆ ಜಮೀನನ್ನು ವಾಪಸ್ಸು ತೆಗೆದುಕೊಳ್ಳಲು ಕಲೆಕ್ಟರನಿಗೆ ಅಧಿಕಾರ ಕೊಡುವ ನಿಯಮ ವಿದೆ. ಆದರೆ ೯ನೇ ಕಲಮಿನ ಮೇರೆಗೆ ಆ ಹಸ್ತಾಂತರವನ್ನು ಅಸಿಂಧುವಾದುದು ಮತ್ತು ಅನೂರ್ಜಿತ ವಾದುದು ಎಂದು ಘೋಷಿಸಲು ಅಥವಾ ಘೋಷಿಸದೆ ಇರಲು ಮತ್ತು ಆ ಜಮೀನನ್ನು ವಾಪಸ್ಸು ತೆಗೆದುಕೊಳ್ಳಲು ಅಥವಾ ತೆಗೆದುಕೊಳ್ಳದಿರಲು ಎಲ್ಲವನ್ನೂ ಸಂಪೂರ್ಣವಾಗಿ ಕಲೆಕ್ಟರನ ವಿವೇಚನೆಗೇ ಬಿಟ್ಟುಕೊಡಲಾಗಿದೆ. ೯ನೇ ಕಲಮಿನ ಮೇರೆಗೆ ತನ್ನಲ್ಲಿಟ್ಟಿರುವ ಈ ವಿವೇಚನಾಧಿಕಾರವನ್ನು ವತನದಾರನ ಪರವಾಗಿ ಚಲಾಯಿಸಲು ಕಲೆಕ್ಟರನು ಯಾವಾಗಲೂ ಆಯ್ಕೆ ಮಾಡಿಕೊಳ್ಳುವುದಿಲ್ಲ. ಇದು ಯಾವುದೇ ವಿಶಿಷ್ಟ ರೀತಿಯ ತೊಂದರೆಯನ್ನುಂಟುಮಾಡುವುದಿಲ್ಲ. ಏಕೆಂದರೆ ಹಾಗೆ ಹಸ್ತಾಂತರ ಮಾಡಲಾಗಿರುವ ಜಮೀನು ವತನಿ ಜಮೀನು ಆಗಿರುವಾಗ್ಯೂ ಬದಲಿ ಕಾರ್ಯ ನಿರ್ವಹಿಸುತ್ತಿರುವವನಿಗೆ ಪ್ರತಿಫಲವಾಗಿ ಆ ಜಮೀನನ್ನು ವಹಿಸಿಕೊಡಲಾಗುವುದಿಲ್ಲ. ಆದರೆ ಮಾನ್ಯರೇ, ತಾನು ಮಾಡುತ್ತಿರುವ ಕೆಲಸಕ್ಕಾಗಿ ಪ್ರತಿಫಲವೆಂದು ವತನೀ ಜಮೀನನ್ನು ಬದಲೀ ಕಾರ್ಯ ನಿರ್ವಹಿಸುತ್ತಿರುವವನಿಗೆ ಆತನು ಸರಕಾರಕ್ಕೆ ಸೇವೆ ಸಲ್ಲಿಸಬೇಕೆಂದು ಸ್ಪಷ್ಟ ತಿಳಿವಳಿಕೆಯ ಮೇಲೆ ವಹಿಸಿಕೊಟ್ಟಿದ್ದರೆ, ಬದಲೀ ಕಾರ್ಯ ನಿರ್ವಹಿಸುತ್ತಿರುವವನ ಕೈ ಬಿಟ್ಟು ಹೋದ ವತನೀ ಜಮೀನುಗಳನ್ನು ಸರಕಾರವು ವಾಪಸು ತೆಗೆದುಕೊಳ್ಳಬೇಕು ಎಂದು ನಾನು ಭಾವಿಸುತ್ತೇನೆ. ಬದಲೀ ಕಾರ್ಯ ನಿರ್ವಹಿಸುವವನಿಗೆ ಪ್ರತಿಫಲವೆಂದು ವಹಿಸಿಕೊಡಲಾಗಿರುವಂಥ

ಜಮೀನುಗಳಿಗೆ ಸಂಬಂಧಿಸಿದಂತೆ ಅಂಥ ಹಸ್ತಾಂತರಗಳನ್ನು ಅಸಿಂಧು ಮತ್ತು ಅನೂರ್ಜಿತವಾದವುಗಳು ಎಂದು ಘೋಷಿಸುವುದಕ್ಕೆ ನಾನು ಈಗ ಮಂಡಿಸುತ್ತಿರುವ ಕಲಮು ಕಲೆಕ್ಟರನನ್ನು ಹೊಣೆಗಾರನನ್ನಾಗಿ ಮಾಡುತ್ತದೆ. ಈ ಕಲಮುಗಳನ್ನು ಮಂಡಿಸುವಲ್ಲಿ ವತನೀ ಜಮೀನುಗಳ ಚಿರಪರಿಚಿತವಾದ ಎರಡು ಪ್ರಕಾರಗಳನ್ನು ಅಂದರೆ ಪ್ರತಿಫಲಕ್ಕಾಗಿ ವಹಿಸಿಕೊಡಲಾದವುಗಳು ಮತ್ತು ಪ್ರತಿಫಲಕ್ಕಾಗಿ ವಹಿಸಿಕೊಡಲಾಗದಿರುವಂಥವುಗಳು ಎಂಬ ವಿಭಜನೆಯನ್ನು ಅಳವಡಿಸಿಕೊಳ್ಳುತ್ತೇನೆ. ಪ್ರತಿಫಲವೆಂದು ವಹಿಸಿಕೊಡಲಾಗದಿರುವಂಥ ಜಮೀನುಗಳಿಗೆ ಸಂಬಂಧಿಸಿದ ಕಲೆಕ್ಟರನು ತನ್ನ ವಿವೇಚನೆಯನ್ನು ಉಪಯೋಗಿಸದೇ ಇರಬಹುದು. ಏಕೆಂದರೆ ಬದಲೀ ಕಾರ್ಯ ನಿರ್ವಹಿಸುವವನ ಪ್ರತಿಫಲಕ್ಕಾಗಿ ಆ ಜಮೀನು ಕೂಡಲೇ ಅವಶ್ಯವಾಗಿರುವುದಿಲ್ಲ. ಆ ಸಂದರ್ಭದಲ್ಲಿ ವತನದಾರನ ಪರವಾಗಿ ತನ್ನ ವಿವೇಚನೆಯನ್ನು ಕಲೆಕ್ಟರನು ಚಲಾಯಿಸದಿದ್ದರೆ ಮತ್ತು ಹಸ್ತಾಂತರವನ್ನು ಅಸಿಂಧುವಾದುದು ಮತ್ತು ಅನೂರ್ಜಿತವಾದುದು ಎಂದು ಘೋಷಿಸದಿದ್ದರೆ ತಕರಾರು ಮಾಡಲು ಅಲ್ಲಿ ಅಂಥ ಹೆಚ್ಚಿನದೇನೂ ಇರುವುದೇ ಇಲ್ಲ. ಆದರೆ ಜಮೀನನ್ನು ಸ್ಪಷ್ಟವಾಗಿ ಪ್ರತಿಫಲಕ್ಕಾಗಿಯೇ ಎಂದು ಕಾಯ್ದಿಡಲಾಗಿರುವಲ್ಲಿ ಮತ್ತು ವಹಿಸಿಕೊಡಲಾಗಿರುವಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಕಲೆಕ್ಟರನಿಗೆ ಯಾವುದೇ ವಿವೇಚನೆಯನ್ನು ಕೊಡಬಾರದು ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿಯೂ ಹಸ್ತಾಂತರವು ಅಸಿಂಧು ಮತ್ತು ಅನೂರ್ಜಿತವಾದುದು ಎಂದು ಘೋಷಣೆ ಮಾಡತಕ್ಕದೆಂದೇ ನಾನು ಭಾವಿಸುತ್ತೇನೆ.

ಮಾನ್ಯರೇ, ನಾನು ಸಿದ್ಧಪಡಿಸಿದ ಈ ಮಸೂದೆಯಲ್ಲಿ ಎರಡು ನ್ಯೂನತೆಗಳು ಇರುತ್ತವೆ ಎಂದು ನಾನು ಒಪ್ಪುತ್ತೇನೆ. ನಾನು ಇದನ್ನು ಒಪ್ಪಿಕೊಳ್ಳುತ್ತಿರುವುದು ನಾನು ತುಂಬಾ ನ್ಯಾಯಯುತನಾಗಿರಲು ಬಯಸುವ ಕಾರಣಕ್ಕಾಗಿ. ಮಹಾರರ ಹಿತರಕ್ಷಣೆಗಾಗಿ ರೈತರ ಮೇಲೆ ಹೆಚ್ಚಿನ ಭಾರವನ್ನು ಹೊರಿಸುವುದು ನನಗೆ ಬೇಕಾಗಿಲ್ಲ. ಅದರ ಕಾರಣ ತುಂಬಾ ಸರಳವಾಗಿದೆ. ಅಂದರೆ ನಾನು ವತನ ಪದ್ಧತಿಯ ವಿರುದ್ಧವಾಗಿದ್ದೇನೆ. ಅತ್ಯಂತ ನಿಕಟ ಭವಿಷ್ಯದಲ್ಲಿ ಮಹಾರರು ಅತ್ಯಂತ ಹೆಚ್ಚಿನ ಹಾನಿಯನ್ನು ಅನುಭವಿಸುತ್ತಾರೆಂಬುದು ನನಗೆ ಗೊತ್ತಿದ್ದಾಗ್ಯೂ ಸಹ ಮಹಾರರ ವತನ ಪದ್ಧತಿಯನ್ನು ಕೊನೆಗೊಳಿಸಲು ನಾನು ಮೊದಲಿನಿಂದಲೂ ಪ್ರಯತ್ನಿಸುತ್ತಲೇ ಬಂದಿದ್ದೇನೆ. ಈ ವತನ ಪದ್ಧತಿಯ ಬೇಡಿಕೆಗಳು ಅವರನ್ನು ಹಿಂದುಳಿದವರನ್ನಾಗಿ ಮಾಡಲು ಮುಖ್ಯ ಕಾರಣಗಳಾಗಿವೆ ಎಂಬ ಬಗ್ಗೆ ನನಗೆ ಮನದಟ್ಟಾಗಿದೆ. ವಿಷಯದ ಬಗ್ಗೆ ನಾನು ದೂರದೃಷ್ಟಿ ಹೊಂದಿದ್ದೇನೆ ಮತ್ತು ಮಹಾರರಿಗೆ ವತನದಿಂದ ಇರುವ ತುರ್ತು ಪ್ರಯೋಜನಗಳ ಬಗ್ಗೆ ನಾನು ಉದಾಸೀನ ಭಾವನೆ ಹೊಂದುವಂತೆ ಮಾಡಲು ಅದೇ ಕಾರಣವಾಗಿದೆ. ಅದರಲ್ಲಿಯೂ ರೈತರಿಗೆ ಹಾನಿಯನ್ನುಂಟುಮಾಡಿ ಮಹಾರರಿಗೆ ಅನುಕೂಲ ಮಾಡಿಕೊಡುವುದನ್ನಂತೂ ನಾನು ಮಾಡಲಾರೆ. ನನ್ನ ಮಸೂದೆಯಲ್ಲಿ ನಾನು ರೂಪಿಸಿದಂತೆ ಭಲೂಟಾ ಪದ್ಧತಿಯು ರೈತರ ಮೇಲೆ ಯಾವ ಹೆಚ್ಚಿನ ಭಾರವನ್ನೂ ಹೇರುವುದಿಲ್ಲ ಎಂಬುದನ್ನು ಈ ಸದನದ ಗೌರವಾನ್ವಿತ ಸದಸ್ಯರು ಕಂಡುಕೊಳ್ಳಬಲ್ಲರು. "ಸಮನಾದ" ಎಂಬ ಪದವನ್ನು ನಾನು ಸ್ಪಷ್ಟವಾಗಿ ಉಪಯೋಗಿಸಿರುತ್ತೇನೆ. ಮಹಾರರ ಪ್ರತಿಫಲಕ್ಕಾಗಿ ರೈತರ ಮೇಲೆ ಯಾವುದೇ ಹೆಚ್ಚಿನ ಭಾರವನ್ನು ವಿಧಿಸತಕ್ಕುದಲ್ಲ ಎಂಬುದೇ ಅದರ ಉದ್ದೇಶ. ನಾನು ಎಷ್ಟು ನ್ಯಾಯಯುತವಾಗಿದ್ದೇನೆ ಎಂದರೆ ಈ ಮಸೂದೆಯಲ್ಲಿ ಎರಡು ನ್ಯೂನತೆಗಳು ಇವೆ ಎಂಬುದನ್ನು ನಾನು ಒಪ್ಪುತ್ತೇನೆ. ಮೊದಲನೆಯದು (ಮಸೂದೆಯ ೨ನೇ ಮತ್ತು ೩ನೇ ವಾಕ್ಯಾವಳಿಯೊಂದಿಗೆ) ೯ನೇ ಕಲಮನ್ನು ಜಮೀನನ್ನು ವಾಪಸ್ಸು ಪಡೆದುಕೊಳ್ಳುವುದನ್ನು ಕಲೆಕ್ಟರನಿಗೆ ನಿರ್ಬಂಧಾತ್ಮಕವಾದುದನ್ನಾಗಿ ಮಾಡುವುದು ಮತ್ತು ಸ್ವತ್ತಿನಿಂದ ಹೊರಹಾಕಲ್ಪಟ್ಟಿರುವ ವತನದಾರನಲ್ಲದವನಿಗೆ ಪರಿಹಾರ

ಧನವನ್ನು ಕೊಡಲು ಕಲೆಕ್ಟರನಿಗೆ ಅನುಮತಿಸಿ ಉಪಬಂಧವನ್ನು ಸೇರಿಸುವುದು ಆಗಿರುತ್ತದೆ. ಜಮೀನುಗಳನ್ನು ಯಾರೊಬ್ಬನಿಗೂ ನಂಬಿಗೆಯಿಂದ ಮತ್ತು ಪೂರ್ಣ ಪ್ರತಿಫಲಕ್ಕಾಗಿ ವರ್ಗಾವಣೆ ಮಾಡಿರಬಹುದೆಂಬುದನ್ನೂ ನಾನು ಕೂಡಲೇ ಒಪ್ಪಿಕೊಳ್ಳುತ್ತೇನೆ. ಅಂಥ ವರ್ಗಾವಣೆ ಪಡೆದವನಿಂದ ಅದನ್ನು ಕಿತ್ತುಕೊಂಡಾಗ ಅವನಿಗೆ ಪರಿಹಾರ ಧನವನ್ನು ಕೊಡಬೇಕೆಂಬುದು ವಿವೇಕಯುತ ಮಾತಾಗಿರುತ್ತದೆ. ನಾನು ಮೊದಲು ಈ ಮಸೂದೆಯನ್ನು ಸಿದ್ಧಪಡಿಸಿದಾಗ ವತನದಾರನಲ್ಲದವನಿಗೆ ಯುಕ್ತ ಪರಿಹಾರ ಕೊಡಲು ಕಲೆಕ್ಟರನಿಗೆ ಅಧಿಕಾರವಿರಬೇಕೆಂಬ ನಿಯಮವನ್ನು ರೂಪಿಸಿದ್ದೆ. ಆದರೆ ಹಲವು ಅಧಿಕಾರಿಗಳು ಸದಸ್ಯರ ಸಲಹೆಯ ಮೇರೆಗೆ ಅದನ್ನು ನಾನು ವಾಪಸ್ಸು ತೆಗೆದುಕೊಂಡೆನು. ಆದರೆ ಸೆಲೆಕ್ಟ್ ಸಮಿತಿಯಲ್ಲಿ ನಾನು ಆ ತಿದ್ದುಪಡಿಯನ್ನು ತರಲು ಸಿದ್ಧನಿರುತ್ತೇನೆ. ಎರಡನೆಯದಾಗಿ ಸೇವೆ ಸಲ್ಲಿಸಲು ಅಥವಾ ಸಲ್ಲಿಸದಿರಲು ಮಹಾರರಿಗೆ ಐಚ್ಛಿಕವಾಗಿರುವಂತೆ, ಮಹಾರರನ್ನು ನೇಮಿಸಿ ಕೊಳ್ಳದಿರುವುದೂ ಸಹ ರೈತರಿಗೆ ಐಚ್ಛಿಕವಾದುದನ್ನಾಗಿ ಮಾಡಲು ನಾನು ಉಪಬಂಧಿಸಬೇಕಾಗಿತ್ತು. ಇದನ್ನು ಕಳಿಸುವ ಸೆಲೆಕ್ಟ್ ಸಮಿತಿಯ ಮುಂದೆ ಈ ತಿದ್ದುಪಡಿಯನ್ನು ಈ ಮಸೂದೆಯಲ್ಲಿ ಸೇರಿಸಲು ನಾನು ಸಿದ್ಧನಿರುತ್ತೇನೆ. ಮಸೂದೆಯಲ್ಲಿರುವ ಈ ಎಲ್ಲ ವಿಷಯಗಳಿಗೂ ವಿವರಣೆ ಬೇಕಾಗಬಹುದೆಂದು ನಾನು ಭಾವಿಸುತ್ತೇನೆ.

ನನ್ನ ಹೇಳಿಕೆಗಳನ್ನು ಮುಕ್ತಾಯಗೊಳಿಸುವ ಮುಂಚೆ ಈ ಮಸೂದೆಗೆ ಇಡಿಯ ಮಹಾರ ಜನತೆಯ ಅನುಮೋದನೆ ಇದೆ ಎಂದು ಗೌರವಾನ್ವಿತ ಕಂದಾಯ ಮಂತ್ರಿಯವರಿಗೆ ಸ್ಪಷ್ಟಪಡಿಸುವುದು ನನ್ನ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಈ ಅಂಶದ ಮೇಲೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ವಾಸ್ತವವಾಗಿ ಈ ಮಸೂದೆಯ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲ. ಅದಕ್ಕೆ ಉತ್ತಮ ಕಾರಣಗಳೂ ಇರುತ್ತವೆ. ಈ ಮಸೂದೆಯು ನಿರ್ಬಂಧಾತ್ಮಕವಾದ ಮಸೂದೆ ಅಲ್ಲ. ಅದು ಕೇವಲ ವಿವೇಚನಾತ್ಮಕವಾದುದು ಆಗಿರುತ್ತದೆ. ಈ ಮಸೂದೆಯ ಉಪಬಂಧಗಳನ್ನು ಜಾರಿಯಲ್ಲಿ ತರಬೇಕೆಂದು ವತನದಾರ ಮಹಾರರು ಇಷ್ಟಪಡದ ಹೊರತು, ಅವುಗಳನ್ನು ಜಾರಿಯಲ್ಲಿ ತರುವುದಿಲ್ಲ. ವಸ್ತುಸ್ಥಿತಿ ಈಗಿರುವಂತೆಯೇ ಮುಂದುವರೆಯುತ್ತದೆ. ಮಹಾರನಿಗೆ ಬದಲಾವಣೆಯ ಅವಶ್ಯಕತೆಯು ಎನ್ನಿಸಿದಾಗ ಮಾತ್ರವೇ ಬದಲಾವಣೆ ಬರುತ್ತದೆ. ಅವರ ಇಚ್ಛೆಯ ವಿರುದ್ಧವಾಗಿ ಇದನ್ನು ಅವರ ಮೇಲೆ ಹೇರಲಾಗುವುದಿಲ್ಲ.

ಶ್ರೀ ಪಿ. ಆರ್. ಚಿಕ್ಕೋಡಿ: ಇದು ಏಕಪಕ್ಷೀಯ ವ್ಯವಸ್ಥೆ ಆಗಿರುತ್ತದೆ. ಅದು ಉಭಯ ಪಕ್ಷದವರದೂ ಆಗಿರಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಬಿಟ್ಟುಹೋದ ಆ ತಿದ್ದುಪಡಿಯನ್ನು ನಾನು ಮಾಡಲೇಬೇಕು ಎಂಬುದು ನನಗೆ ತಿಳಿದಿದೆ. ಆದರೆ ಅದನ್ನು ಸೆಲೆಕ್ಟ್ ಸಮಿತಿಯಲ್ಲಿ ಮಾಡಲಾಗುವುದು.

ಈ ಮಸೂದೆಗೆ ಮಹಾರರಿಂದ ಯಾವುದೇ ವಿರೋಧ ಇರಲಾರದೆಂದು ನಾನು ಹೇಳುತ್ತೇನೆ. ಏಕೆಂದರೆ ಈ ಮಸೂದೆಯಿ ನಿರ್ಬಂಧಾತ್ಮಕವಾದುದಲ್ಲ. ಮತ್ತು ಇದರ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಅವರನ್ನು ಅದು ಒತ್ತಾಯಿಸುವುದಿಲ್ಲ. ಅವರು ಪಡೆದುಕೊಳ್ಳಬೇಕೆಂದು ಇಚ್ಛಿಸಿದರೆ ಅವರ ಹಿತಾಸಕ್ತಿಗಾಗಿ ಅವನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಕೆಲವು ನಿರ್ದಿಷ್ಟ ಉಪಬಂಧಗಳನ್ನು ಅದು ಒಳಗೊಂಡಿದೆ. ಆದಕಾರಣ ಮಹಾರರು ಈ ಮಸೂದೆಯನ್ನು ವಿರೋಧಿಸಿಲ್ಲ. ನಿಜವಾಗಿಯೂ ಅವರಿಂದ ಯಾವುದೇ ವಿರೋಧ ಇರಲೇಬಾರದು. ಅವರು ಈ ಮಸೂದೆಯನ್ನು ವಿರೋಧಿಸಿಲ್ಲ. ಅಷ್ಟೇ ಅಲ್ಲ, ಅವರು ಪೂರ್ಣ ಹೃದಯದಿಂದ ಅದನ್ನು ಸ್ವಾಗತಿಸಿದ್ದಾರೆ. ಈ ಮಸೂದೆಯನ್ನು ನಾನು

ಕೈಗೆತ್ತಿಕೊಂಡಾಗಿನಿಂದಲೂ ಮಹಾರ ಜನತೆಯಿಂದ ನಾನು ಏನನ್ನೂ ಬಚ್ಚಿಟ್ಟಿಲ್ಲ. ಈ ಮಸೂದೆಯ ಮೇಲೆ ತಮ್ಮ ಅಭಿಪ್ರಾಯವನ್ನು ಹೇಳಲು ಸಮರ್ಥರಾಗುವಂತೆ ಇದರ ತತ್ವಗಳನ್ನು ಮತ್ತು ಉಪಬಂಧಗಳನ್ನು ಅನೇಕ ಸಭೆಗಳಲ್ಲಿ ನಾನು ಮಹಾರ ಜನತೆಯ ಮುಂದೆ ಇಟ್ಟಿದ್ದೇನೆ. ಮತ್ತು ಈ ಇಡಿಯ ಮಸೂದೆಯನ್ನು ಮತ್ತು ಅದರಲ್ಲಿ ಒಳಗೊಂಡಿರುವ ತತ್ವಗಳನ್ನು ಅವರು ಒಮ್ಮತದಿಂದ ಒಪ್ಪಿಕೊಂಡಿರುತ್ತಾರೆ ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ಈ ಸಭೆಗಳನ್ನು ಅವರ ಅನುಮೋದನೆಯನ್ನು ಪಡೆದುಕೊಳ್ಳುವ ಉದ್ದೇಶದಿಂದ ನಾನೇ ವ್ಯವಸ್ಥೆಗೊಳಿಸಿದ್ದೇನೆ ಎಂದು ಹೇಳಲು ಸರಕಾರಕ್ಕೆ ಯಾವುದೇ ಅವಕಾಶ ಉಳಿಯಬಾರದೆಂದು, ಇತರ ಕೋಮಿನ ಸದಸ್ಯರು ಅಧ್ಯಕ್ಷರಾಗಿದ್ದ ಹಲವಾರು ಸಭೆಗಳಲ್ಲಿ ನಾನು ಹಾಜ ರಾಗದೇ ಉಳಿದಿರುತ್ತೇನೆ. ಮುಂಬೈ ನಗರದಲ್ಲಿ ಅವರ ಅಧ್ಯಕ್ಷತೆಯಲ್ಲಿ ಅಜಮಾಸು ೫೦೦೦ರಷ್ಟು ಮಹಾರ ವತನದಾರರ ಸಭೆಯನ್ನು ನಡೆಸಲಾಯಿತು ಎಂದು ನಾನು ಹೇಳಿದರೆ ನನ್ನ ಹತ್ತಿರವೇ ಕುಳಿತ ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಭೋಲೆಯವರು ನನ್ನ ಹೇಳಿಕೆಯನ್ನು ಪುಷ್ಟೀಕರಿಸುತ್ತಾರೆ. ಈ ಮಸೂದೆಯು ಮಹಾರರಿಗೆ ಹಾನಿಕರವಾಗಿದೆ ಎಂದು ಹೇಳಿ ಹಲವರು ಮಹಾರರನ್ನು ಮೂರ್ಖರನ್ನಾಗಿ ಮಾಡಲು ನಿಜವಾಗಿಯೂ ಪ್ರಯತ್ನಿಸಿದರು. ಆದರೆ ಒಂದೇ ಒಂದು ವಿರೋಧದ ಧ್ವನಿಯೂ ಇಲ್ಲದೆಯೇ ಮಹಾರರು ಒಮ್ಮತದಿಂದ ಅನುಮೋದಿಸಿದರೋ ಅಥವಾ ಇಲ್ಲವೋ ಅನ್ನುವ ಬಗ್ಗೆ ಗೌರವಾನ್ವಿತ ಸದಸ್ಯರು ನನ್ನ ಹೇಳಿಕೆಯನ್ನು ಸಮರ್ಥಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಅದೇ ರೀತಿಯಲ್ಲಿ ನಾನು ನನ್ನ ಗೌರವಾನ್ವಿತ ಸ್ನೇಹಿತರಾದ ರಾಜಾ ಲಿಖೀಚಂದ ಅವರನ್ನು ಉಲ್ಲೇಖಿಸುತ್ತೇನೆ.

ಅವರ ಅಧ್ಯಕ್ಷತೆಯಲ್ಲಿ ಖಾನಾ ದೇಶದದ ಮಹಾರ ವತನದಾರರ ಸಭೆಯು ಜಲಗಾಂವದಲ್ಲಿ ನಡೆಯಿತು. ಆ ಸಭೆಯಲ್ಲಿ ನಾನು ಈ ಮಸೂದೆಯ ಉಪಬಂಧಗಳ ಬಗ್ಗೆ ಮತ್ತು ತತ್ವಗಳ ಬಗ್ಗೆ ಮಾತನಾಡಿದೆ. ಸಾಮಾನ್ಯವಾಗಿ ಅಂದಾಜು ಮಾಡಿದರೆ ಆ ಸಭೆಗೆ ಅಜಮಾಸು ೩೦೦೦ ಮಹಾರರು ಹಾಜರಾಗಿದ್ದರು. ಥೇಟರು ಕಿಕ್ಕಿರಿದು ತುಂಬಿತ್ತು ಮತ್ತು ಈ ಬಗ್ಗೆ ಠರಾವನ್ನು ಮಂಡಿಸಿದಾಗ ಅದನ್ನು ಒಬ್ಬನೇ ಒಬ್ಬ ಮಹಾರನೂ ವಿರೋಧಿಸಲಿಲ್ಲ. ಅಹಮದನಗರ ಜಿಲ್ಲೆಯಲ್ಲೂ ಸಹ ಅಂಥದೇ ಸಭೆ ಯನ್ನು ನಡೆಸಲಾಯಿತು ಮತ್ತು ಆ ಸಭೆಯಲ್ಲಿ ಈ ಮಸೂದೆಯನ್ನು ಒಮ್ಮತದಿಂದ ಅನುಮೋದಿಸ ಲಾಯಿತು ಎಂದು ಹೇಳಿದರೆ ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಥೋರಾತ ಅವರು ಅದನ್ನು ಸಮರ್ಥಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಬೇರೆ ಬೇರೆ ಸ್ಥಳಗಳಲ್ಲಿ ನಡೆದ ಚಿಕ್ಕಪುಟ್ಟ ಸಭೆಗಳ ಬಗ್ಗೆ ಉಲ್ಲೇಖಿಸುವುದು ಅಷ್ಟು ಅವಶ್ಯವಾಗಿಲ್ಲ. ಮಹಾರ ಜನತೆಯು ಈ ಮಸೂದೆಯನ್ನು ಅನುಮೋದಿಸಲು ಸಂಪೂರ್ಣವಾಗಿ ದೃಢ ನಿಶ್ಚಯ ಹೊಂದಿದವರಾಗಿದ್ದಾರೆ ಎಂದು ನಾನು ಈ ಸದನಕ್ಕೆ ಭರವಸೆ ಕೊಡು ತ್ತೇನೆ ಮತ್ತು ಹಣಕಾಸಿನ ಕಾರಣಕ್ಕಾಗಿ, ಈ ಅನುಕೂಲತೆಯ ಕಾರಣಕ್ಕಾಗಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ಸರಕಾರವು ಈ ಜನತೆಯನ್ನು ಮುಕ್ತಗೊಳಿಸಲು ನಿರಾಕರಿಸಿದರೆ ಆಗ ಅದು ಕಂದಾಯ ಇಲಾಖೆ ಮತ್ತು ಮಹಾರರ ನಡುವಣ ಯುದ್ಧವೇ ಆಗುತ್ತದೆ ಎಂದು ನನಗೆ ಗೌರವಾನ್ವಿತ ಸ್ನೇಹಿತರಿಗೆ ನಾನು ಹೇಳಬಹುದು. ಈ ಮಸೂದೆ ಪಾಸು ಆಗದಿದ್ದರೆ ನಾನು ಈ ಪರಿಷತ್ತಿನಲ್ಲಿ ಉಳಿಯುವುದಿಲ್ಲ. ಮಹಾರರು ಒಟ್ಟು ಹರತಾಳವನ್ನು ಸಂಘಟಿಸುವಂತೆ ನೋಡಿಕೊಳ್ಳಲು ನನ್ನ ಉಳಿದ ಸಮಯವನ್ನು ವ್ಯಯಿಸುತ್ತೇನೆ ಮತ್ತು ಮಹಾರ ಜನತೆಯ ಕಲ್ಯಾಣಕ್ಕಾಗಿ ಈ ಮಸೂದೆಯ ತತ್ವಗಳು ಸಂಪೂರ್ಣವಾಗಿ ಅವಶ್ಯವಾಗಿದೆ ಎಂದು ಗೌರವಾನ್ವಿತ ಕಂದಾಯ ಮಂತ್ರಿಗಳು ತಿಳಿದುಕೊಳ್ಳುವಂತೆ ಮಾಡುತ್ತೇನೆ. ನಾನು ನನ್ನ ಹೃದಯದಾಳದಿಂದ ಮಾತನಾಡುತ್ತಿದ್ದೇನೆ. ಯಾವುದೇ ವಿಷಯವನ್ನು ಬಚ್ಚಿಡುವುದು ನನಗೆ

ಬೇಕಾಗಿಲ್ಲ. ಅದು ನಮ್ಮ ಗುರಿಯಾಗಿದೆ ಎಂದು ನಾನು ಎಲ್ಲ ಶ್ರದ್ಧೆಯಿಂದ ಹೇಳಲು ಇಚ್ಛಿಸುತ್ತೇನೆ. ಮಾನ್ಯರೇ ಕಳೆದ ಮೂರು ವರುಷಗಳಿಂದ ನನಗೆ ಸಾಧ್ಯವಿದ್ದಷ್ಟು ದಲಿತ ವರ್ಗದವರ ಕಲ್ಯಾಣಕ್ಕಾಗಿ ಕಷ್ಟಪಡುತ್ತಿದ್ದೇನೆ. ನನ್ನ ಮಾರ್ಗದಲ್ಲಿ ಅನೇಕ ತೊಂದರೆಗಳನ್ನು ಎದುರಿಸಿದ್ದೇನೆ ಮತ್ತು ಮಹಾರ ಜನತೆಯನ್ನು ಮುಂದೆ ಕೊಂಡೊಯ್ಯುವಲ್ಲಿ ನಾನು ಎದುರಿಸಬೇಕಾದ ಅತ್ಯಂತ ದೊಡ್ಡದಾದ ತೊಂದರೆಯು ವತನದ್ದಾಗಿರುತ್ತದೆ ಎಂಬುದನ್ನು ನಾನು ಖಚಿತವಾಗಿ ಕಂಡುಕೊಂಡಿದ್ದೇನೆ. ಮಹಾರರೂ ಸಹ ತಮ್ಮ ಬೆಳವಣಿಗೆಯ ಮಾರ್ಗದಲ್ಲಿ ವತನವು ಅಡ್ಡಿಯಾಗಿದೆ ಎಂದು ಸಂಪೂರ್ಣವಾಗಿ ಅರಿತುಕೊಂಡಿದ್ದಾರೆ ಎಂಬುದನ್ನು ಕಂಡು ನನಗೆ ಸಂತೋಷವಾಗಿದೆ. ಆದಕಾರಣ ಈ ಪರಿಷತ್ತು ಒಮ್ಮತದಿಂದ ಈ ಮಸೂದೆಯನ್ನು ಪಾಸುಮಾಡುತ್ತದೆ ಎಂದು ಆಶಿಸುತ್ತೇನೆ. ಇಷ್ಟು ಹೇಳಿ ಈ ಮಸೂದೆಯನ್ನು ಮಂಡಿಸುತ್ತೇನೆ.

# ೧೬
# ಆನುವಂಶಿಕ ಹುದ್ದೆಗಳ ಅಧಿನಿಯಮ ತಿದ್ದುಪಡಿ ಮಸೂದೆ: ೨*

(೧೯೨೮ರ X IIನೇ ಮುಂಬೈ ಅನುವಂಶಿಕ ಹುದ್ದೆಗಳ ಅಧಿನಿಯಮ ೧೮೭೪ನ್ನು ಮತ್ತು ತಿದ್ದುಪಡಿ ಮಾಡುವ ಮಸೂದೆಯ ಚರ್ಚೆಯ ಪುನರಾರಂಭ.)

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ಈ ಕ್ರಮಕ್ಕೆ ಸದನದ ಅಧಿಕೃತರಲ್ಲದ ಸದಸ್ಯರು ತೋರಿಸಿದ ಮನಃಪೂರ್ವಕ ಮತ್ತು ತುಂಬು ಹೃದಯದ ಸಮರ್ಥನೆಗಾಗಿ ನಾನು ಅವರಿಗೆ ತುಂಬಾ ಋಣಿಯಾಗಿದ್ದೇನೆ. ಈ ಮಸೂದೆಯ ವಿರೋಧಿಗಳು ಅದರ ವಿರುದ್ಧವಾಗಿ ಯಾವುದೇ ಆಧಾರವನ್ನು ತೋರಿಸಿರುತ್ತಾರೆ ಎಂಬುದನ್ನು ಈ ಚರ್ಚೆಯು ತೋರಿಸಿಕೊಟ್ಟಿಲ್ಲ. ಆದುದರಿಂದ ಈ ಹಂತದಲ್ಲಿ ಅವರು ಮಂಡಿಸಿದ ತಕರಾರುಗಳಿಗೆ ಉತ್ತರ ರೂಪವಾಗಿ ಹೆಚ್ಚಿನ ವಿವರಗಳ ಚರ್ಚೆ ಅವಶ್ಯವಾದುದೆಂದು ನಾನು ಭಾವಿಸುವುದಿಲ್ಲ. ಅವರು ಮಾಡಿದ್ದೇನೆಂದರೆ ಕೆಲವು ವಿಷಯಗಳನ್ನು ಈ ಸದನದ ಮುಂದೆ ಇಡುವುದು ಮಾತ್ರವಾಗಿದೆ. ಆ ವಿಷಯಗಳೆಂದರೆ "ಪೂರ್ವಗ್ರಹಪೀಡಿತ ವಿಷಯಗಳು" ಎಂದು ನಾವೆಲ್ಲ ಕರೆಯುವಂಥವುಗಳೇ ಆಗಿವೆ. ಇವುಗಳು ಮಸೂದೆಯ ಅಂತಸ್ಸತ್ವಕ್ಕೆ ಸಂಬಂಧಪಟ್ಟವುಗಳಲ್ಲ.

ಮಾನ್ಯರೇ, ವಿರೋಧಿಸುವ ಸದಸ್ಯರಲ್ಲಿ ಕೆಲವು ಎತ್ತಿತೋರಿಸಿರುವಂತೆ ನಿಃಸಂಶಯವಾಗಿಯೂ ಈ ಮಸೂದೆಯಲ್ಲಿ ಬಹುಶಃ ಕೆಲವು ನ್ಯೂನತೆಗಳಿವೆ ಎಂದು ನಾನು ನನ್ನ ಪ್ರಾರಂಭಿಕ ಭಾಷಣದಲ್ಲಿ ಒಪ್ಪಿಕೊಂಡಿರುತ್ತೇನೆ. ಮತ್ತು ಸೆಲೆಕ್ಟ್ ಸಮಿತಿಗೆ ಅವರು ಇಷ್ಟಪಡಬಹುದಾದ ತಿದ್ದುಪಡಿಗಳನ್ನು ಮಾಡಲು ಬಾಗಿಲನ್ನು ತೆರೆದೇ ಇಟ್ಟಿರುತ್ತೇನೆ ಎಂದು ನನ್ನ ಪ್ರಾರಂಭಿಕ ಭಾಷಣದಲ್ಲಿ ಸ್ಪಷ್ಟಪಡಿಸಿದ್ದೇನೆ. ಆ ಬಗ್ಗೆ ನನಗೆ ಯಾವ ತಕರಾರೂ ಇಲ್ಲ.

ಗೌರವಾನ್ವಿತ ಸದಸ್ಯರು: ತತ್ವದ ತಿದ್ದುಪಡಿಗಳೂ ಸಹಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಸೆಲೆಕ್ಟ್ ಸಮಿತಿಯು ಮಾಡಲು ಇಚ್ಛಿಸುವಂಥ ತಿದ್ದುಪಡಿಗಳು, ತತ್ವಕ್ಕೆ ಸಂಬಂಧಿಸಿದವುಗಳು ಸಹ. ನನ್ನದು ಯಾವ ತಕರಾರೂ ಇಲ್ಲ. ಸೆಲೆಕ್ಟ್ ಸಮಿತಿಯು ಮಾಡಲು ಇಚ್ಛಿಸಬಹುದಾದ ಯಾವುದೇ ತಿದ್ದುಪಡಿ.....

ಸರ್ದಾರ್ ಜಿ. ಎನ್. ಮುಜುಮದಾರ: ತತ್ವದ್ದೂ ಸಹ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

ಈ ಮಸೂದೆಯನ್ನು ನಾನು ಅಧಿಕಾರಿಗಳ ಪರಿಗಣನೆಗೆ ಒಪ್ಪಿಸುವುದಕ್ಕಿಂತ ಈ ಸದನದ ಅಧಿಕಾರಿಗಳಲ್ಲದ ಸದಸ್ಯರ ಸೆಲೆಕ್ಟ್ ಸಮಿತಿಯವರ ಕೈಯಲ್ಲಿ ಇಡಲು ಬಯಸುತ್ತೇನೆ. ಹಾಗೆ ಮಾಡಲು ನಾನು

*ಬಿ.ಎಲ್.ಸಿ. ಡಿಬೇಟ್ಸ್, ಸಂ. XX III
ಪುಟಗಳು ೭೯೧–೯೩, ೪ನೇ ಆಗಸ್ಟ್ ೧೯೨೮.

ಸಿದ್ಧನಿರುತ್ತೇನೆ. ಮಸೂದೆಯ ಹಣೆಯಬರಹ ಇದ್ದಂತೆ ಆಗಲಿ. ಆದರೆ ಈ ಸಭೆಯ ಅಧಿಕಾರಿಗಳಲ್ಲದ ಸದಸ್ಯರ ಸೆಲೆಕ್ಟ್ ಸಮಿತಿಗೆ ಅದನ್ನು ಬಿಟ್ಟುಕೊಡುತ್ತೇನೆ. ಮಾನ್ಯರೇ ಈ ಕ್ರಮವು ಗೌರವಾನ್ವಿತ ಕಂದಾಯ ಮಂತ್ರಿಗಳಿಗೆ ಕಸಿವಿಸಿಯನ್ನುಂಟುಮಾಡುತ್ತದೆ ಎಂದು ನಾನು ಭಾವಿಸುವುದಿಲ್ಲ. ಮಾನ್ಯರೇ, ಅಧಿಕಾರಿ ಸದಸ್ಯರ ವಿರುದ್ಧ ಯಾವುದೇ ತಕರಾರುಗಳನ್ನು ಅಥವಾ ಆರೋಪಗಳನ್ನು ಈ ಮಸೂದೆಯಲ್ಲಿ ಸೇರಿಸಲು ನಾನು ಇಚ್ಛಿಸುವುದಿಲ್ಲ. ಈ ಮಸೂದೆಯನ್ನು ದಲಿತರು ಕಂಡುಕೊಂಡ ರೀತಿಯಲ್ಲಿ ಈ ವಿಷಯವನ್ನು ಅದೇ ರೀತಿಯ ಅಗತ್ಯತೆ ಮತ್ತು ಅದೇ ರೀತಿಯ ಮಹತ್ವವನ್ನು ಅಥವಾ ಅದೇ ರೀತಿಯ ಚಿಂತನೆಯನ್ನು ಈ ಅಧಿಕಾರಿ ಸದಸ್ಯರು ಹೊಂದಿಲ್ಲ ಎಂದು ನಾನು ಮನಸ್ಸಿಲ್ಲದ ಮನಸ್ಸಿನಿಂದ ಹೇಳುತ್ತೇನೆ. ಈ ಮಸೂದೆಯ ಅದೇ ಭಾಗಕ್ಕೆ ಸಂಬಂಧಿಸಿ ವಿಶೇಷವಾಗಿ ಚರ್ಚಿಸುವ ಠರಾವನ್ನು ೧೯೨೩ರ ಫೆಬ್ರವರಿ ತಿಂಗಳಲ್ಲಿ ಈ ಸದನದ ಮುಂದೆ ಮಂಡಿಸಿದ್ದು ನನಗೆ ನೆನಪಿದೆ. ಸದನದ ಅಧಿಕಾರಿಗಳಲ್ಲದ ಸದಸ್ಯರು ಇಡಿಯ ಠರಾವನ್ನು ತುಂಬಾ ಮೆಚ್ಚುಗೆಯಿಂದಲೇ ಕಂಡರು. ಗೌರವಾನ್ವಿತ ಕಂದಾಯ ಮಂತ್ರಿಗಳೂ ಮೆಚ್ಚುಗೆಯಿಂದಲೇ ಕಂಡರು. ತಾವು ಈ ವಿಷಯಕ್ಕೆ ಸಂಬಂಧಿಸಿದಂತೆ ಕೂಡಲೇ ವಿಚಾರಣೆಯನ್ನು ಪ್ರಾರಂಭಿಸುತ್ತೇನೆ ಎಂಬ ಗೌರವಾನ್ವಿತ ಕಂದಾಯ ಮಂತ್ರಿಗಳ ಸ್ಪಷ್ಟ ಹೇಳಿಕೆಯ ಆಧಾರದ ಮೇಲಿಂದ ಈ ಠರಾವನ್ನು ಮಂಡಿಸಿದ ಸದಸ್ಯರು ಅದನ್ನು ವಾಪಸು ತೆಗೆದುಕೊಳ್ಳುವಂತೆ ಅವರ ಮನವೊಲಿಸಿದರು. ಈ ದಿನದಿಂದ ನಾಲ್ಕೈದು ವರುಷಗಳೇ ಕಳೆದುಹೋಗಿವೆ. ಆದರೆ ಯಾವುದೇ ವಿಚಾರಣೆ ನಡೆದೇ ಇಲ್ಲ. ನಾನೀಗ ಇರುವ ಸ್ಥಾನದಲ್ಲಿ ಈ ಹಿಂದೆ ಇದ್ದವರು ಈ ಮಸೂದೆಯು ಎತ್ತುವ ಅಂಶವನ್ನೇ ಎತ್ತಿ ೧೯೨೬ರಲ್ಲಿ ಪುನಃ ಠರಾವನ್ನು ಮಂಡಿಸಿದ್ದರು. ಸಂಬಂಧಿಸಿದ ವಿಷಯದ ಬಗ್ಗೆ ವಿಚಾರಣೆ ನಡೆಸಲಾಗುವುದೆಂಬ ಸರಕಾರದ ನಿರ್ದಿಷ್ಟ ಹೇಳಿಕೆಯಿಂದಾಗಿ ಅದನ್ನು ಮಂಡಿಸಿದ ಗೌರವಾನ್ವಿತ ಸದಸ್ಯರು ಅದನ್ನು ವಾಪಸ್ಸು ತೆಗೆದುಕೊಳ್ಳುವಂತೆ ಪುನಃ ಅವರ ಮನವೊಲಿಸಲಾಯಿತು. ಆದರೆ ಏನನ್ನೂ ಮಾಡಲಿಲ್ಲ. ಗೌರವಾನ್ವಿತ ಸ್ನೇಹಿತರಾದ ಕಂದಾಯ ಮಂತ್ರಿಗಳು ಈಗ ಈ ಮಸೂದೆಯು ತಮಗೆ ಒಮ್ಮೆಲೇ ಸೋಜಿಗವನ್ನುಂಟು ಮಾಡುವಂಥದಾಗಿದೆ ಎಂದು ಹೇಳಲಾರರು. ಈ ಮಸೂದೆಯ ನಿಯಮಗಳು ಅಂದರೆ ವತನಗಳಿಗೆ ಸಂಬಂಧಿಸಿದಂತೆ ದಲಿತ ವರ್ಗದವರು ಮಂಡಿಸುತ್ತಿರುವ ಬೇಡಿಕೆಗಳು ಅವರ ಮುಂದೆ ಬಹುಕಾಲದಿಂದ ಇವೆ. ಅಂಕಿ ಸಂಖ್ಯೆಗಳಿಂದ ಅವರು ನಿಜವಾಗಿಯೂ ಸಿದ್ಧರಾಗಿರಲು ಬಯಸಿದ್ದಿದ್ದರೆ ನಾನು ಮಾಡಿದ ಪ್ರಸ್ತಾವಗಳಿಗೆ ಬದಲಿಯಾಗಿ ತಮ್ಮದೇ ಆದ ಪ್ರಸ್ತಾವಗಳನ್ನು ನಿಜವಾಗಿಯೂ ಮಾಡಲು ಇಚ್ಛಿಸಿದ್ದಿದ್ದರೆ ಹಾಗೆ ಮಾಡಲು. ಮಾನ್ಯರೇ, ಅವರಿಗೆ ಸಾಕಷ್ಟು ಕಾಲಾವಕಾಶವಿತ್ತೆಂದು ನಾನು ವಿನಯಪೂರ್ವಕ ಹೇಳುತ್ತೇನೆ. ಅವರಿಗೆ ಲಭ್ಯವಿದ್ದ ಆ ಸದವಕಾಶವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲ. ಏನೇ ಆಗಲಿ, ಅವರಿಗೆ ಅಂಥ ಸದವಕಾಶವನ್ನು ಕೊಡಲು ನಾನು ಈಗಲೂ ಸಿದ್ಧ. ಮಸೂದೆಯು ಸೆಲೆಕ್ಟ್ ಸಮಿತಿಗೆ ಹೋದರೆ ಆ ಸಮಿತಿಯು ಮುಂದಿನ ಜೂನ್ ತಿಂಗಳೊಳಗಾಗಿ ಈ ಬಗ್ಗೆ ವರದಿಯನ್ನು ಕೊಡತಕ್ಕುದೆಂದು ನಾನು ಆ ಸಮಿತಿಗೆ ಕೇಳಿಕೊಳ್ಳುತ್ತೇನೆ. ಹಾಗಾದಾಗ ವಿಚಾರಣೆಯನ್ನು ಮಾಡಲು ನನ್ನ ಗೌರವಾನ್ವಿತ ಸ್ನೇಹಿತರಿಗೆ ಅವರು ತಜ್ಞರೆಂದು ಭಾವಿಸುವಂಥ ವ್ಯಕ್ತಿಗಳಿಂದ ಕೂಡಿದ ತಮಗೆ ಬೇಕಾದ ಬೇರೆ ಸಮಿತಿಯನ್ನು ನೇಮಿಸಲು ವಾಸ್ತವವಾಗಿ ಒಂಭತ್ತು ಅಥವಾ ಹತ್ತು ತಿಂಗಳುಗಳ ಕಾಲಾವಕಾಶ ಸಿಗುತ್ತದೆ. ಹಾಗೆ ಮಾಡುವುದರಿಂದ ಅವರು ತಮ್ಮದೇ ಆದ ಪ್ರಸ್ತಾವಗಳನ್ನು ರೂಪಿಸಲು ಸಮರ್ಥ ಸ್ಥಿತಿಯಲ್ಲಿರಬಹುದು ಮತ್ತು ಸೆಲೆಕ್ಟ್ ಸಮಿತಿಯ ಮುಂದೆ ಬಂದು ಅವುಗಳನ್ನು ತಿದ್ದುಪಡಿಯ ರೂಪದಲ್ಲಿ ಸಾದರಪಡಿಸಬಹುದು. ಅದಕ್ಕೆ ನನ್ನ ತಕರಾರು ಇಲ್ಲ. ನನ್ನ

ಗೌರವಾನ್ವಿತ ಸ್ನೇಹಿತರು ಅದಕ್ಕೆ ಒಪ್ಪಿಕೊಂಡರೆ, ಆ ಕ್ರಮವನ್ನು ಅನುಸರಿಸಲು ಸಂಪೂರ್ಣವಾಗಿ ಸಿದ್ಧನಿರುತ್ತೇನೆ. ಆದರೆ ನಾನು ಪ್ರಾರಂಭದಲ್ಲಿಯೇ ಹೇಳಿದಂತೆ ಈ ವಿಧಾನವನ್ನು ಈ ಸದನವು ರಚಿಸುವ ಸೆಲೆಕ್ಟ್ ಸಮಿತಿಯ ಕೈಗೆ ಮಾತ್ರ ಒಪ್ಪಿಸಲು ಸಿದ್ಧನಿದ್ದೇನೆ. ಅಧಿಕಾರಿಗಳ ಕೈಯಲ್ಲಿ ಈ ವಿಧಾನವನ್ನು ಒಪ್ಪಿಸಲು ನಾನು ಸಿದ್ಧನಿಲ್ಲ. ಮಾನ್ಯರೇ, ಉತ್ತರ ರೂಪವಾಗಿ ನಾನು ಹೇಳಬಯಸುವುದು ಇಷ್ಟು ಮಾತ್ರ.

# ೧೭

# ಮುಂಬೈ ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿ ೧೯೩೭ರ XXIIIನೇ ಮಸೂದೆ*

ಮುಂಬೈ ವಿಧಾನಸಭೆಯ ೧೭ನೇ ಸೆಪ್ಟೆಂಬರ್ ೧೯೩೭ರ ಸಭೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ವಿಧಾನಸಭಾ ಸದಸ್ಯರು ಅವರಿಗೆ ಮಂಡಿಸಲು ಅನುಮತಿಯನ್ನು ಕೊಡಲಾಗಿರುವ ಮಸೂದೆಯನ್ನು ಮುಂಬೈ ವಿಧಾನಸಭೆಯ ೨೦ನೇ ನಿಯಮದ ಮೇರೆಗೆ ಪ್ರಕಟಿಸಲಾಗಿದೆ.

**೧೯೩೭ರ XXIIIನೆಯ ಮಸೂದೆ**

**ಮುಂಬೈ ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿಗಾಗಿ ಮಂಡಿಸಿರುವ ೧೮೭೪ರ XXX ಮಸೂದೆ.**

೧೮೭೪ರ ಮುಂಬಯ ಆನುವಂಶಿಕ ಹುದ್ದೆಗಳ ಅಧಿನಿಯಮ (೧೮೭೮ರ III ಮುಂಬೈ)ವನ್ನು ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಇನ್ನೂ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ಅದನ್ನು ಈ ಕೆಳಗಿನಂತೆ ಅಧಿನಿಯಮಿಸಲಾಗಿದೆ.

ಸಂಕ್ಷಿಪ್ತ ಶೀರೋನಾಮೆ: ಈ ಅಧಿನಿಯಮವನ್ನು ಮುಂಬಯಿ ಆನುವಂಶಿಕ ಹುದ್ದೆಗಳ (ತಿದ್ದುಪಡಿ) ಅಧಿನಿಯಮ ೧೯೩೭ ಎಂದು ಕರೆಯತಕ್ಕುದು.

**(೨) ೧೮೭೪ಡಿ III ಮುಂಬೈದ ೧೫ನೇ ಕಲಮಿನ ತಿದ್ದುಪಡಿ:–**

೧೫ನೇ ಕಲಮಿನ ೧ನೇ ವಾಕ್ಯಾವಳಿಗೆ ಬದಲಾಗಿ ಕೆಳಗಿನದನ್ನು ಸೇರಿಸತಕ್ಕದು.

೧೫. ವಾಕ್ಯಾವಳಿ ೧. ವತನದಲ್ಲಿ ಹಿತಾಸಕ್ತಿಯುಳ್ಳ ಯಾವನೇ ವತನದಾರನು ಅಥವಾ ವತನ ಕುಟುಂಬದ ಯಾವನೇ ಸದಸ್ಯನು ಸೇವೆಯನ್ನು ಸಲ್ಲಿಸುವ ಹೊಣೆಯಿಂದ ತನ್ನನ್ನು ಶಾಶ್ವತವಾಗಿ ಬಿಡುಗಡೆ ಮಾಡಬೇಕೆಂದು ಲಿಖಿತದಲ್ಲಿ ಕಲೆಕ್ಟರನಿಗೆ ಅರ್ಜಿಯನ್ನು ಸಲ್ಲಿಸಿದಾಗ, ಆ ಅರ್ಜಿಯು ಪ್ರಾಮಾಣಿಕವಾದುದು ಎಂದು ಪರಿಶೀಲಿಸಿದ ನಂತರ ಅವನನ್ನು ಸೇವೆಯಿಂದ ಬಿಡುಗಡೆ ಮಾಡತಕ್ಕುದು.

ವಾಕ್ಯಾವಳಿ ೨. ಸೇವೆ ಸಲ್ಲಿಸುವ ಹೊಣೆಯಿಂದ ಬಿಡುಗಡೆಯಾದ ದಿನಾಂಕದಿಂದ ಆತನು ವತನದಾರ ನಾಗಿರುವುದು ನಿಂತುಹೋಗತಕ್ಕುದು ಮತ್ತು ಇಲ್ಲಿ ೩ನೇ ವಾಕ್ಯಾವಳಿಯಲ್ಲಿ ಸೂಚಿಸಲಾಗಿರುವುದರ ಹೊರತು ತನ್ನ ವತನದಿಂದಾಗಿ ಅವನಿಗೆ ಇರುವ ಯಾವ ಹಕ್ಕುಗಳಿಗೂ ಆತನು ಹಕ್ಕುದಾರನಾಗಿರುವುದಿಲ್ಲ.

---

*ಮುಂಬಯಿ ಸರಕಾರದ ರಾಜ್ಯ ಪತ್ರ, ಭಾಗ V,
ಪುಟಗಳು ೧೦೧–೧೦೫, ಅಕ್ಟೋಬರ್ ೨೧, ೧೯೩೭.

ವಾಕ್ಯಾವಳಿ ೩. ಈ ಕಲಮಿನ ೧ನೇ ಮತ್ತು ೨ನೇ ವಾಕ್ಯಾವಳಿಗಳ ಮೇರೆಗೆ ಸೇವೆ ಸಲ್ಲಿಸುವುದರಿಂದ ಬಿಡುಗಡೆ ಹೊಂದಿದ ವತನದಾರನು ಪೂರ್ಣ ತೆರಿಗೆಯನ್ನು ಕೊಡಲು ಒಪ್ಪಿದಾಗ ವತನದಾರನಾಗಿ ಹಕ್ಕುಳ್ಳ ಜಮೀನನ್ನು ಇಟ್ಟುಕೊಳ್ಳಲು ಆತನಿಗೆ ಅನುಮತಿಯನ್ನು ಕೊಡತಕ್ಕುದು ಮತ್ತು ಮುಂಬೈ ಭೂಕಂದಾಯ ಸಂಹಿತೆಯ ೩(೧೬)ನೇ ಕಲಮಿನ ಅರ್ಥದಲ್ಲಿ ಆತನನ್ನು ಹಿಡುವಳಿದಾರ ಎಂದು ಭಾವಿಸತಕ್ಕುದು.

ವಾಕ್ಯಾವಳಿ ೪. ಸೇವೆಯಿಂದ ಬಿಡುಗಡೆ ಹೊಂದಿದ ಅರ್ಜಿದಾರನಿಗೆ, ಸದರೀ ಜಮೀನನ್ನು ಒಬ್ಬನಿಗಿಂತ ಹೆಚ್ಚು ವತನದಾರರು ಅಥವಾ ವತನೀ ಕುಟುಂಬಗಳು ಜಂಟಿಯಾಗಿ ಹೊಂದಿದ್ದರೆ ಆ ಜಮೀನನ್ನು ಕಲೆಕ್ಟರನು ಪಾಲು ಮಾಡುವುದು ಕಾನೂನು ಸಮ್ಮತವಾಗಿರತಕ್ಕದು.

ವಾಕ್ಯಾವಳಿ ೫. ಸೇವೆಯಿಂದ ಬಿಡುಗಡೆಗೊಳಿಸಲಾಗಿರುವ ಅಂಥ ಅರ್ಜಿದಾರನು ಉಳಿಸಿಕೊಳ್ಳಲು ಅನುಮತಿಸಲಾದ ಜಮೀನು ಬದಲಿ ಕಾರ್ಯ ನಿರ್ವಹಿಸುವವನ ಪ್ರತಿಫಲಕ್ಕಾಗಿ ವತನೀ ಪರಿಗಣಿಸಲ್ಪಡುವುದು ನಿಂತುಹೋಗತಕ್ಕುದು.

೩. ೨ನೇ ವಾಕ್ಯಾವಳಿಯನ್ನು ೬ನೇ ವಾಕ್ಯಾವಳಿಯೆಂದು ಎಣಿಸತಕ್ಕುದು.

೪. ೩ನೇ ವಾಕ್ಯಾವಳಿಯನ್ನು ೭ನೇ ವಾಕ್ಯಾವಳಿಯೆಂದು ಎಣಿಸತಕ್ಕುದು

೫. ೪ನೇ ವಾಕ್ಯಾವಳಿಯಲ್ಲಿ "ಜಂಟಿ ಒಡೆಯರ ಒಟ್ಟು ಸಂಖ್ಯೆ"ಯ ನಂತರ:

"ಅಥವಾ ಅಂಥ ಜಂಟೀ ಒಡೆಯರಲ್ಲಿ ಒಬ್ಬ ಅಥವಾ ಹಲವಾರು" ಎಂಬ ಪದಗಳನ್ನು ಸೇರಿಸತಕ್ಕುದು. ೪ನೇ ವಾಕ್ಯಾವಳಿಯನ್ನು ೮ನೇ ವಾಕ್ಯಾವಳಿಯೆಂದು ಎಣಿಸತಕ್ಕುದು.

೬. ೧೮೭೪ರ ಮುಂಬೈ IIIರ ೧೬ನೇ ಕಲಮಿನ ತಿದ್ದುಪಡಿ: ೧೬ನೇ ಕಲಮಿನಲ್ಲಿ "ಮೂಲತಃ" ಎಂಬ ಪದಕ್ಕೆ ಬದಲಾಗಿ "ಮೊದಲನೆಯದಾಗಿ" ಎಂಬ ಪದವನ್ನು ಸೇರಿಸತಕ್ಕುದು.

೭. ೧೮೭೪ರ ಮುಂಬೈ IIIರ ೧೯ನೇ ಕಲಮಿನ ತಿದ್ದುಪಡಿ ೧೯ನೇ ಕಲಮಿನಲ್ಲಿ "ಮತ್ತು ಸಂದಾಯವನ್ನು ವಸ್ತುರೂಪದಲ್ಲಿ ಅಥವಾ ಹಣದ ರೂಪದಲ್ಲಿ ಮಾಡಬೇಕೋ ಎಂಬುದನ್ನು ನಿರ್ಣಯಿಸಲು" ಎಂಬ ಪದಗಳನ್ನು ತೆಗೆದುಹಾಕತಕ್ಕುದು.

೮. ೧೮೭೪ರ ಮುಂಬೈ IIIರ ೧೯ನೇ ಕಲಮಿನ ನಂತರ ೧೯ಎ, ೧೯ಬಿ, ೧೯ಸಿ ಮತ್ತು ೧೯ಡಿ ಕಲಮುಗಳನ್ನು ಸೇರಿಸುವುದು:– ೧೯ನೇ ಕಲಮಿನ ನಂತರ ಕೆಳಗಿನ ಕಲಮುಗಳನ್ನು ಸೇರಿಸತಕ್ಕುದು:–

"೧೯ಎ: ವಸ್ತುರೂಪದಲ್ಲಿ ಕರಾಕರಣೆಯ ಹಕ್ಕನ್ನು ಸಮಪ್ರಮಾಣದ ಹಣದ ರೂಪದ ಕರಾಕರಣೆಯಾಗಿ ಕಲೆಕ್ಟರನು ಪರಿವರ್ತಿಸುವುದು:– ಯಾರ ವತನೀ ಸ್ವತ್ತು ವಸ್ತುರೂಪದಲ್ಲಿ ಕರ ವಿಧಿಸುವ ಹಕ್ಕನ್ನು ಒಳಗೊಂಡಿರುತ್ತದೆಯೋ ಅಂಥ ಎಲ್ಲಾ ಪ್ರಾತಿನಿಧಿಕ ವತನದಾರರು ಅಥವಾ ಅವರಲ್ಲಿ ಬಹುಸಂಖ್ಯೆಯವರು ಅಂಥ ಹಕ್ಕನ್ನು ಹಣದ ರೂಪದ ಕರದಲ್ಲಿ ಪರಿವರ್ತಿಸಲು ಅರ್ಜಿಯನ್ನು ಸಲ್ಲಿಸಿದಾಗ ಕಲೆಕ್ಟರನು ಅದನ್ನು ಸರಿಸಮವಾದ ಹಣದ ರೂಪದ ಕರವನ್ನಾಗಿ ಪರಿವರ್ತಿಸತಕ್ಕುದು."

೧೯ಬಿ: ಕಲೆಕ್ಟರನಿಂದ ಹಣದ ರೂಪದಲ್ಲಿ ಕರದ ವಸೂಲಿ ಮತ್ತು ಸಂದಾಯ: ವಸ್ತು ರೂಪದಲ್ಲಿ ಕರ ವಿಧಿಸುವ ಹಕ್ಕನ್ನು ಸರಿಸಮನಾದ ಹಣದ ರೂಪದ ಕರವಾಗಿ ಪರಿವರ್ತಿಸಿದಾಗ, ಸಂಬಂಧಪಟ್ಟ ಎಲ್ಲ ಪ್ರಾತಿನಿಧಿಕ ವತನದಾರರು ಅಥವಾ ಅವರಲ್ಲಿ ಬಹುಸಂಖ್ಯೆಯವರು, ಅದನ್ನು ಕೊಡಲು ಹೊಣೆಗಾರರಿರುವವರಿಂದ ವಸೂಲು ಮಾಡಿಕೊಳ್ಳಲು ಅರ್ಜಿಯನ್ನು ಸಲ್ಲಿಸಬಹುದು. ನಂತರ ಕಲೆಕ್ಟರನು ಅದನ್ನು ಭೂಕಂದಾಯದ ಭಾಗವಾಗಿ ಮತ್ತು ಅದರೊಂದಿಗೇನೇ ವಸೂಲು ಮಾಡತಕ್ಕುದು ಮತ್ತು ಅದನ್ನು ಪಡೆದು

ಕೊಳ್ಳಲು ಹಕ್ಕುಳ್ಳ ವತನದಾರರಿಗೆ ಸರಕಾರಿ ಟ್ರೆಝರಿಯಿಂದ ಕೊಡತಕ್ಕುದೆಂದು ನಿರ್ದೇಶಿಸತಕ್ಕುದು.

೧೯ಸಿ: ಸರಕಾರಕ್ಕೆ ಸೇವೆ ಸಲ್ಲಿಸಿದ್ದಕ್ಕಾಗಿ ಎಷ್ಟು ಮತ್ತು ರೈತರಿಗೆ ಸೇವೆ ಸಲ್ಲಿಸಿದ್ದಕ್ಕಾಗಿ ಎಷ್ಟು, ಹಣದ ರೂಪದ ಕರವನ್ನು ಅವರಿಗೆ ಕೊಡಬೇಕು ಎನ್ನುವುದನ್ನು ವತನದಾರರು ಅರ್ಜಿಯನ್ನು ಸಲ್ಲಿಸಿದಾಗ ಕಲೆಕ್ಟರನು ನಿರ್ಣಯಿಸುವುದು: ವಸ್ತುರೂಪದಲ್ಲಿ ಕರವನ್ನು ವಿಧಿಸುವ ಹಕ್ಕು ರೈತರಿಗೆ ಮತ್ತು ಸರಕಾರಕ್ಕೆ ಸಲ್ಲಿಸಿದ ಸೇವೆಯ ಜಂಟಿ ಪ್ರತಿಫಲವೆಂದು ಭಾವಿಸುವ ಸಂದರ್ಭದಲ್ಲಿ ವಸ್ತುರೂಪದಲ್ಲಿ ಕರ ವಿಧಿಸಲ್ಪಡುವ ಪ್ರಾತಿನಿಧಿಕ ಎಲ್ಲಾ ವತನದಾರರು ಅಥವಾ ಅವರಲ್ಲಿ ಬಹುಸಂಖ್ಯೆಯವರು ಹಕ್ಕನ್ನು ಸರಕಾರಕ್ಕೆ ಸಲ್ಲಿಸಿದ ಸೇವೆಗಾಗಿ ಎಷ್ಟು ಮೊತ್ತ ರೈತರಿಗೆ ಸಲ್ಲಿಸಿದ ಸೇವೆಗಾಗಿ ಎಷ್ಟು ಹಣದ ರೂಪದ ಕರವಿರುತ್ತದೆ ಎಂಬುದನ್ನು ನಿರ್ಣಯಿಸಲು ಕಲೆಕ್ಟರನಿಗೆ ಅರ್ಜಿಯನ್ನು ಸಲ್ಲಿಸಬಹುದು. ಅದನ್ನು ಕಲೆಕ್ಟರನು ನಿರ್ಣಯಿಸತಕ್ಕುದು. ಆ ನಿರ್ಣಯವನ್ನೇ ಅಂತಿಮ ನಿರ್ಣಯ ಎಂದು ಭಾವಿಸತಕ್ಕುದು.

೧೯ಡಿ. ರೈತರಿಗೆ ಯಾವುದೇ ಸೇವೆ ಸಲ್ಲಿಸುವುದನ್ನು ನಿರಾಕರಿಸುವುದಕ್ಕೆ ವತನದಾರರಿಗೆ ಆಯ್ಕೆಯ ಅವಕಾಶವನ್ನು ೧೯ಸಿ ಕಲ್ಪಿಸಿ ಕಲಮಿನಲ್ಲಿ ಉಲ್ಲೇಖಿಸಲಾಗಿರುವಂಥ ನಿರ್ಣಯವನ್ನು ಕೇಳಿರುವ ಪ್ರಾತಿ ನಿಧಿಕ ವತನದಾರರು ಅಥವಾ ಅವರಲ್ಲಿನ ಬಹುಸಂಖ್ಯೆಯವರು ರೈತರಿಗೆ ಯಾವುದೇ ಸೇವೆ ಸಲ್ಲಿಸಲು ನಿರಾಕರಿಸುವ ಆಯ್ಕೆಯ ಅವಕಾಶವಿರತಕ್ಕುದು. ಅವರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಲಿಖಿತದಲ್ಲಿ ಕಲೆಕ್ಟರನಿಗೆ ತಿಳಿಸಿರತಕ್ಕುದು. ಅಂಥ ಆಯ್ಕೆಯನ್ನು ಚಲಾಯಿಸಿದಾಗ, ಅಂಥ ಆಯ್ಕೆಯನ್ನು ಚಲಾಯಿಸುವ ವತನದಾರರು ರೈತರಿಗೆ ಸಲ್ಲಿಸಿದ ಸೇವೆಗಾಗಿ ಅವರಿಗೆ ಬರುವ ಹಣದ ರೂಪದ ಕರದ ಭಾಗವನ್ನು ಕಳೆದುಕೊಳ್ಳತಕ್ಕುದು."

೯. ೧೮೭೪ರ ಮುಂಬೈ IIIರ ೨೧ನೇ ಕಲಮಿನ ತಿದ್ದುಪಡಿ: ೨೧ನೇ ಕಲಮಿನಲ್ಲಿ "ಅಂಥ ಅವಧಿಗಳು" ಎಂಬ ಪದಗಳಿಗೆ ಬದಲಾಗಿ "೧೦ ವರುಷಗಳ ಅವಧಿ" ಎಂಬ ಪದಗಳನ್ನು ಸೇರಿಸತಕ್ಕುದು.

೧೦. ೧೮೭೪ರ ಮುಂಬೈ IIIರ ೮೩ನೇ ಕಲಮಿನ ತಿದ್ದುಪಡಿ: ೮೩ನೇ ಕಲಮಿಗೆ ಕೆಳಗಿನದನ್ನು ಸೇರಿಸತಕ್ಕುದು:

> "೮೩. ೧೮ನೇ ಕಲಮಿನಲ್ಲಿ ಅನ್ಯಥಾ ನಿಯಮಿಸಿದಂತೆ ಹೊರತು ಯಾವುದೇ ಆನುವಂಶಿಕ ಹುದ್ದೆಗೆ ಸಂಬಂಧಿಸಿದ ಕರ್ತವ್ಯಗಳನ್ನು, ವಿಧಿನಿಯಮಗಳನ್ನು ರಚಿಸುವ ಅಧಿಕಾರವು ಸರಕಾರಕ್ಕೆ ಇರತಕ್ಕುದು. ಪರಂತು ಈ ಕಲಮಿನ ಮೇರೆಗೆ ರಚಿಸಲಾಗಿರುವ ನಿಯಮಗಳನ್ನು ಶಾಸನ ಸಭೆಯ ಬರುವ ಅಧಿವೇಶನಕ್ಕೆ ಒಂದು ತಿಂಗಳಿಗೆ ಕಡಿಮೆಯಿಲ್ಲದಂತೆ ಶಾಸನಸಭೆಯ ಮುಂದಿಡತಕ್ಕುದು ಮತ್ತು ಅವುಗಳನ್ನು ಶಾಸನ ಸಭೆಯು ಠರಾವು ಮೂಲಕ ರದ್ದುಪಡಿಸಬಹುದು ಅಥವಾ ಮಾರ್ಪಾಡುಮಾಡಬಹುದು. ಸರಕಾರವು ಅಂಥ ಮಾರ್ಪಾಡನ್ನು ಒಪ್ಪತಕ್ಕುದು ಮತ್ತು ಆ ಮೇರೆಗೆ ನಿಯಮವನ್ನು ಪ್ರಕಟಿಸತಕ್ಕುದು ಅಥವಾ ಹಾಲಿ ಇರುವ ನಿಯಮವನ್ನು ರದ್ದುಪಡಿಸತಕ್ಕುದು."

## ಉದ್ದೇಶ ಮತ್ತು ಕಾರಣಗಳ ವಿವರಣೆ:

ಮೂರು ಉದ್ದೇಶಗಳು ಈ ಮಸೂದೆಗೆ ಆಧಾರವಾಗಿವೆ. ವತನದಾರನ ಆಯ್ಕೆಯ ಮೇರೆಗೆ ವತನವನ್ನು ಪರಿವರ್ತಿಸಲು ಅನುಮತಿಸುವುದು ಮೊದಲನೆಯದು. ಎರಡನೆಯದು ಒಂದು ನಿರ್ದಿಷ್ಟ

ವರ್ಗದ ವತನದಾರರಿಗೆ ಪ್ರತಿಫಲದ ಸಂದಾಯದ ಉತ್ತಮ ಭದ್ರತೆಯನ್ನು ಒದಗಿಸುವುದು ಮತ್ತು ಮೂರನೆಯದೆಂದರೆ ವತನದಾರರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿಯಮಗಳ ಮೂಲಕ ನಿರ್ದಿಷ್ಟವಾಗಿ ಗೊತ್ತುಪಡಿಸಲು ಉಪಬಂಧಿಸುವುದು.

೨–೬ನೇ ಕಲಮುಗಳು ಈ ಉದ್ದೇಶಗಳಲ್ಲಿನ ಮೊದಲಿನದನ್ನು ಕಾರ್ಯಗತಗೊಳಿಸಲು ರೂಪಿಸಲಾಗಿದೆ. ೭–೯ನೇ ಕಲಮುಗಳು ಎರಡನೇ ಉದ್ದೇಶವನ್ನು ಕಾರ್ಯಾಚರಣೆಯಲ್ಲಿ ತರಲು ಉದ್ದೇಶಿಸದ್ದಾಗಿದೆ. ೧೦ನೇ ಕಲಮು ಈ ಮಸೂದೆಯ ಮೂರನೆಯ ಉದ್ದೇಶವನ್ನು ಪೂರೈಸುತ್ತದೆ.

(i) ತನ್ನ ವತನದ ಭಾಗವಾದ ಜಮೀನಿನಲ್ಲಿರುವ ತನ್ನ ಹಕ್ಕಿಗೆ ಹಾನಿಯಾಗದಂತೆ ವತನದಾರನಾಗಿ ತಾನು ಸಲ್ಲಿಸಬೇಕಾದ ಸೇವೆಯಿಂದ ತನ್ನನ್ನು ಮುಕ್ತನನ್ನಾಗಿಸಿಕೊಳ್ಳಲು ಇಚ್ಛಿಸುವ ವತನದಾರನಿಗೆ ಹಾಗೆ ಮಾಡಲು ೨ನೇ ಕಲಮು ಅನುಮತಿಸುತ್ತದೆ. ಅಂಥ ವತನದಾರನು ಜಮೀನನ್ನು ಇಟ್ಟುಕೊಳ್ಳಲು ಅದು ಅನುಮತಿಸುವಾಗ್ಯೂ ಅದು ಸರಕಾರಕ್ಕೆ ಯಾವುದೇ ಹಾನಿಯನ್ನುಂಟುಮಾಡುವುದಿಲ್ಲ. ಏಕೆಂದರೆ ಅವನಿಂದ ಪೂರ್ಣ ಭೂ ಕಂದಾಯವನ್ನು ವಸೂಲು ಮಾಡಿಕೊಳ್ಳಲು ಸರಕಾರಕ್ಕೆ ಹಕ್ಕಿರುತ್ತದೆ.

(ii) ೩ನೇ ಮತ್ತು ೪ನೇ ಕಲಮುಗಳು ಔಪಚಾರಿಕವಾದವುಗಳು.

(iii) ೫ನೇ ಕಲಮು ವತನದ ಜಂಟೀ ಒಡೆಯರಲ್ಲಿ ಒಬ್ಬ ಅಥವಾ ಹಲವರು ಸೇವೆಯಿಂದ ತಮ್ಮನ್ನು ಬಿಡುಗಡೆ ಮಾಡಲು ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗುವಂತೆ ಮಾಡುತ್ತದೆ.

(iv) ೬ನೇ ಕಲಮಿನಲ್ಲಿ ಸಮುದಾಯಕ್ಕೆ ಸೇವೆ ಸಲ್ಲಿಸಲು ಯಾರು ಹೊಣೆಗಾರರಾಗಿರತಕ್ಕುದು ಅನ್ನುವುದನ್ನು "ಮೊದಲನೆಯದಾಗಿ" ಎಂಬ ಪದವನ್ನು ಬಳಸುವುದರ ಮೂಲಕ ಹೆಚ್ಚು ಖಚಿತವಾಗಿ ವ್ಯಾಖ್ಯೆಗೊಳಿಸಲು ಉದ್ದೇಶಿಸಲಾಗಿದೆ.

(v) ೭ನೇ ಕಲಮು ವಸೂಲಿಯನ್ನು ವಸ್ತುವಿನ ರೂಪದಲ್ಲಿ ಮಾಡಬೇಕೋ ಅಥವಾ ಹಣದ ರೂಪದಲ್ಲಿ ಮಾಡಬೇಕೋ ಅನ್ನುವುದನ್ನು ನಿರ್ಣಯಿಸುವುದು ಕಲೆಕ್ಟರನ ವಿವೇಚನೆಯಲ್ಲಿ ಇತರಕ್ಕುದಲ್ಲ ಎಂಬುದನ್ನು ಉಪಬಂಧಿಸುತ್ತದೆ.

(vi) ೮ನೇ ಕಲಮು ಅಧಿನಿಯಮಕ್ಕೆ ನಾಲ್ಕು ಹೊಸ ಕಲಮುಗಳನ್ನು ಸೇರಿಸುತ್ತದೆ:– ವಸ್ತು ರೂಪದಲ್ಲಿರುವ ಸಂದಾಯವನ್ನು ಹಣದ ರೂಪದಲ್ಲಿ ಸಂದಾಯವನ್ನಾಗಿ ಪರಿವರ್ತಿಸಲು ಕಲೆಕ್ಟರನಿಗೆ ಅರ್ಜಿ ಸಲ್ಲಿಸಲು ವತನದಾರನಿಗೆ ೧೯ನೇ ಕಲಮು ಹಕ್ಕನ್ನು ಕೊಡುತ್ತದೆ ಮತ್ತು ಕಲೆಕ್ಟರನು ಅದನ್ನು ಸಮಪ್ರಮಾಣದ ಹಣದ ರೂಪಕ್ಕೆ ಪರಿವರ್ತಿಸುವುದನ್ನು ಅಗತ್ಯಪಡಿಸುತ್ತದೆ.

ವತನದಾರರು ಬಯಸಿದರೆ ಹಣದ ರೂಪದ ಕರವನ್ನು ಭೂ ಕಂದಾಯದೊಡನೆಯೇ ವಸೂಲು ಮಾಡಬೇಕೆಂಬ ಹೊಣೆಯನ್ನು ೧೯ಬಿ ಕಲಮು ಕಲೆಕ್ಟರನಿಗೆ ವಿಧಿಸುತ್ತದೆ.

ಸರಕಾರೀ ಸೇವೆಗಳಿಗಾಗಿ ಮತ್ತು ರೈತರ ಸೇವೆಗಾಗಿ ವತನದಾರರಿಗೆ ಕೊಡುವ ಪ್ರತಿಫಲವು ಜಂಟಿ ಸಂದಾಯವಾಗಿರುವಾಗ ಅದರಲ್ಲಿ ಎಷ್ಟು ಭಾಗ ಸರಕಾರದ ಸೇವೆಗಾಗಿ ಮತ್ತು ಎಷ್ಟು ಭಾಗ ರೈತರ ಸೇವೆಗಾಗಿ ಇರುತ್ತದೆ ಅನ್ನುವುದನ್ನು ನಿರ್ಣಯಿಸುವ ಅಧಿಕಾರವನ್ನು ೧೦ಸಿ ಕಲಮು ಕಲೆಕ್ಟರನಿಗೆ ಕೊಡುತ್ತದೆ.

ರೈತರಿಗೆ ಸೇವೆ ಸಲ್ಲಿಸುವುದಕ್ಕಾಗಿ ೧೯ಸಿ ಕಲಮಿನ ಮೇರೆಗೆ ಕಲೆಕ್ಟರನು ಗೊತ್ತುಪಡಿಸಿದ ಪ್ರತಿಫಲದ ಭಾಗಕ್ಕೆ ಇರುವ ಕ್ಲೇಮನ್ನು ಬಿಟ್ಟುಕೊಡುವುದಕ್ಕೊಳಪಟ್ಟು ರೈತರಿಗೆ ಸೇವೆ ಸಲ್ಲಿಸುವ

ಹೊಣೆಯಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳುವುದನ್ನು ೧೯ಡಿ ಕಲಮು ಆಯಾ ವತನದಾರನ ಆಯ್ಕೆಗೆ ಬಿಡುತ್ತದೆ.

(vii) ವತನದ ಲಾಭಗಳಿಗೆ ಸಂಬಂಧಿಸಿದಂತೆ ೨೧ನೇ ಕಲಮಿನ ಮೇರೆಗೆ ಕರ ನಿರ್ಧರಣೆ ಮಾಡಲು ಕಲೆಕ್ಟರನಿಗೆ ಹತ್ತು ವರುಷದ ಗರಿಷ್ಠ ಮಿತಿಯನ್ನು ೯ನೇ ಕಲಮು ಗೊತ್ತುಪಡಿಸುತ್ತದೆ.

(viii) ಮಾಡತಕ್ಕ ಕರ್ತವ್ಯಗಳನ್ನು ನಿಯಮಗಳ ಮೂಲಕ ಗೊತ್ತುಪಡಿಸಬೇಕೆನ್ನುವುದನ್ನು ಮಾತ್ರ ೧೦ನೇ ಕಲಮು ಅಗತ್ಯಪಡಿಸುತ್ತದೆ.

(ಸಹಿ)
ಬಿ. ಆರ್. ಅಂಬೇಡ್ಕರ್,

ಎಚ್. ಕೆ. ಚೈನಾನಿ
ಮುಂಬೈ ಶಾಸನ ಸಭೆಯ
ಕಾರ್ಯದರ್ಶಿ

ಪೂನಾ. ೧೮ನೇ ಅಕ್ಟೋಬರ್ ೧೯೩೭

# ೧೮

# ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿ ೧೯೩೭ರ XXIIIನೇ ಮಸೂದೆ*

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೇ, ೧೮೭೪ರ ಮುಂಬೈ ಆನುವಂಶಿಕ ಹುದ್ದೆಗಳ ಅಧಿನಿಯಮದ ತಿದ್ದುಪಡಿಗಾಗಿ ಮಸೂದೆಯನ್ನು ಮಂಡಿಸಲು ಅನುಮತಿಗಾಗಿ ಕೋರುತ್ತೇನೆ.

ಈ ಮಸೂದೆಯನ್ನು ಮಂಡಿಸುವುದಕ್ಕೆ ಮೂರು ಉದ್ದೇಶಗಳು ಇವೆ. ವತನದಾರನ ಆಯ್ಕೆಯಂತೆ ವತನವನ್ನು ಪರಿವರ್ತಿಸಲು ಅನುಮತಿಸುವುದು ಮೊದಲನೆಯದು. ಎರಡನೆಯದು, ಕೆಲವು ನಿರ್ದಿಷ್ಟ ವತನದಾರರ ವರ್ಗಗಳಿಗೆ ಪ್ರತಿಫಲದ ಸಂದಾಯದ ಬಗ್ಗೆ ಉತ್ತಮ ಭದ್ರತೆಯನ್ನು ಒದಗಿಸುವುದು ಮತ್ತು ಮೂರನೆಯದೆಂದರೆ ವತನದಾರರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ನಿಯಮಗಳ ಮೂಲಕ ನಿರ್ದಿಷ್ಟಪಡಿಸುವುದು.

೨–೬ನೇ ಕಲಮುಗಳು ಈ ಉದ್ದೇಶಗಳಲ್ಲಿನ ಮೊದಲಿನದನ್ನು ಕಾರ್ಯಗತಗೊಳಿಸಲು ರೂಪಿಸಲಾಗಿದೆ. ೭–೯ನೇ ಕಲಮುಗಳು ಎರಡನೆಯ ಉದ್ದೇಶವನ್ನು ಕಾರ್ಯಾಚರಣೆಯಲ್ಲಿ ತರಲು ಉದ್ದೇಶಿಸಿದ್ದಾಗಿದೆ. ೧೦ನೇ ಕಲಮು ಈ ಮಸೂದೆಯ ಮೂರನೆಯ ಉದ್ದೇಶವನ್ನು ಪೂರೈಸುತ್ತದೆ.

ತನ್ನ ವತನದ ಭಾಗವಾದ ಜಮೀನಿನಲ್ಲಿ ಮೇಲೆ ಇರುವ ಹಕ್ಕಿಗೆ ಹಾನಿಯಾಗದಂತೆ ವತನದಾರನಾಗಿ ತಾನು ಸಲ್ಲಿಸಬೇಕಾದ ಸೇವೆಯಿಂದ ತನ್ನನ್ನು ಮುಕ್ತಪಡಿಸಿಕೊಳ್ಳಲು ಇಚ್ಛಿಸುವ ವತನದಾರನಿಗೆ ಹಾಗೆ ಮಾಡಲು ೨ನೇ ಕಲಮು ಅನುಮತಿಸುತ್ತದೆ. ಅಂಥ ವತನದಾರನು ಜಮೀನನ್ನು ಇಟ್ಟುಕೊಳ್ಳಲು ಅದು ಅನುಮತಿಸುವಾಗ್ಯೂ ಅದು ಸರಕಾರಕ್ಕೆ ಯಾವುದೇ ಹಾನಿಯನ್ನುಂಟುಮಾಡುವುದಿಲ್ಲ. ಏಕೆಂದರೆ ಅವನಿಂದ ಪೂರ್ಣ ಭೂ ಕಂದಾಯವನ್ನು ವಸೂಲು ಮಾಡಿಕೊಳ್ಳಲು ಸರಕಾರವು ಹಕ್ಕುಳ್ಳದ್ದಾಗಿದೆ.

೩ನೇ ಮತ್ತು ೪ನೇ ಕಲಮುಗಳು ಔಪಚಾರಿಕವಾದವುಗಳು.

೫ನೇ ಕಲಮು ವತನದ ಜಂಟಿ ಒಡೆಯರಲ್ಲಿ ಒಬ್ಬ ಅಥವಾ ಹಲವರು ಸೇವೆಯಿಂದ ತಮ್ಮನ್ನು ಬಿಡುಗಡೆ ಮಾಡಲು ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗುವಂತೆ ಮಾಡುತ್ತದೆ.

೬ನೇ ಕಲಮಿನಲ್ಲಿ ಸಮುದಾಯಕ್ಕೆ ಸೇವೆ ಸಲ್ಲಿಸಲು ಯಾರು ಹೊಣೆಗಾರರಾಗಿರತಕ್ಕುದು ಅನ್ನುವುದನ್ನು

---

*ಬಿ.ಎಲ್.ಎ. ಚರ್ಚೆಗಳು, ಸಂಪುಟ–೧
ಪುಟಗಳು ೧೦೮೧–೯೨, ದಿನಾಂಕ ೧೨ನೇ ಸೆಪ್ಟೆಂಬರ್ ೧೯೩೭

ಡಾ. ಅಂಬೇಡ್ಕರ್ ಅವರು ಮಂಡಿಸಿದ ಮಸೂದೆಯನ್ನು ೯೧೯೩ನೇ
ಪುಟಗಳಲ್ಲಿ ಪುನಃ ಪ್ರಕಟಿಸಲಾಗಿದೆ.

"ಮೊದಲನೆಯದಾಗಿ" ಎಂಬ ಪದವನ್ನು ಬಳಸುವುದರ ಮೂಲಕ ಹೆಚ್ಚು ಖಚಿತವಾಗಿ ವ್ಯಾಖ್ಯೆಗೊಳಿಸಲು ಉದ್ದೇಶಿಸಲಾಗಿದೆ.

೭ನೇ ಕಲಮು ವಸೂಲಿಯನ್ನು ವಸ್ತುವಿನ ರೂಪದಲ್ಲಿ ಮಾಡಬೇಕೋ ಅಥವಾ ಹಣದ ರೂಪದಲ್ಲಿ ಮಾಡಬೇಕೋ ಅನ್ನುವುದನ್ನು ನಿರ್ಣಯಿಸುವುದು ಕಲೆಕ್ಟರನ ವಿವೇಚನೆಯಲ್ಲಿ ಇರತಕ್ಕುದಲ್ಲ ಎಂಬುದನ್ನು ಉಪಬಂಧಿಸುತ್ತದೆ.

೮ನೇ ಕಲಮು ಅಧಿನಿಯಮಕ್ಕೆ ನಾಲ್ಕು ಹೊಸ ಕಲಮುಗಳನ್ನು ಸೇರಿಸುತ್ತದೆ. ೧೯(ಎ) ಕಲಮು ವಸ್ತುರೂಪದಲ್ಲಿರುವ ಸಂದಾಯವನ್ನು ಹಣದ ರೂಪದ ಸಂದಾಯವನ್ನಾಗಿ ಪರಿವರ್ತಿಸಲು ಕಲೆಕ್ಟರನಿಗೆ ಅರ್ಜಿ ಸಲ್ಲಿಸಲು ವತನದಾರರಿಗೆ ಹಕ್ಕನ್ನು ಕೊಡುತ್ತದೆ ಮತ್ತು ಕಲೆಕ್ಟರನು ಅದನ್ನು ಸಮ ಪ್ರಮಾಣದ ಹಣದ ರೂಪಕ್ಕೆ ಪರಿವರ್ತಿಸುವುದನ್ನು ಅಗತ್ಯಪಡಿಸುತ್ತದೆ.

೧೯(ಬಿ) ಕಲಮು ವತನದಾರರು ಹಾಗೆ ಅಗತ್ಯಪಡಿಸಿದರೆ ಹಣದ ರೂಪದ ಕರವನ್ನು ಭೂ ಕಂದಾಯದೊಡನೆಯೇ ವಸೂಲು ಮಾಡಬೇಕೆಂಬ ಹೊಣೆಯನ್ನು ಕಲೆಕ್ಟರನಿಗೆ ವಿಧಿಸುತ್ತದೆ.

೧೯(ಸಿ) ಕಲಮು ಸರಕಾರೀ ಸೇವೆಗಳಿಗಾಗಿ ಮತ್ತು ರೈತರ ಸೇವೆಗಾಗಿ ವತನದಾರರಿಗೆ ಕೊಡುವ ಪ್ರತಿಫಲವು ಜಂಟೀ ಸಂದಾಯವಾಗಿರುವಾಗ ಅದರಲ್ಲಿ ಎಷ್ಟು ಭಾಗ ಸರಕಾರದ ಸೇವೆಗಾಗಿ ಮತ್ತು ಎಷ್ಟು ಭಾಗ ರೈತರ ಸೇವೆಗಾಗಿ ಇರುತ್ತದೆ ಅನ್ನುವುದನ್ನು ನಿರ್ಣಯಿಸುವ ಅಧಿಕಾರವನ್ನು ಕಲೆಕ್ಟರನಿಗೆ ಕೊಡುತ್ತದೆ.

೧೯(ಡಿ) ಕಲಮು ರೈತರಿಗೆ ಸೇವೆ ಸಲ್ಲಿಸುವುದಕ್ಕಾಗಿ ೧೯(ಸಿ) ಕಲಮಿನ ಮೇರೆಗೆ ಕಲೆಕ್ಟರನು ಗೊತ್ತುಪಡಿಸಿದ ಪ್ರತಿಫಲದ ಭಾಗಕ್ಕೆ ಇರುವ ಕ್ಲೇಮನ್ನು ಬಿಟ್ಟುಕೊಡುವುದಕ್ಕೊಳಪಟ್ಟು ರೈತರಿಗೆ ಸೇವೆ ಸಲ್ಲಿಸುವ ಹೊಣೆಯಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳುವುದನ್ನು ಆಯಾ ವತನದಾರನ ಆಯ್ಕೆಗೆ ಬಿಡುತ್ತದೆ.

ಪ್ರಶ್ನೋತ್ತರಗಳ ನಂತರ ಮತ್ತು ಅನುಮತಿಯನ್ನು ಮಂಜೂರು ಮಾಡಲಾಯಿತು.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ ನಾನು ಮಸೂದೆಯನ್ನು ಮಂಡಿಸುತ್ತೇನೆ.

ಗೌರವಾನ್ವಿತ ಅಧ್ಯಕ್ಷರು: ಮಸೂದೆಯನ್ನು ಮಂಡಿಸಲಾಯಿತು.

# ೧೯

# ಖೋತಿ ಪದ್ಧತಿಯ ರದ್ಧತಿ

# ಮಸೂದೆ ಸಂ.XX, ೧೯೩೭*

ಮುಂಬೈ ವಿಧಾನಸಭೆಯ ೧೭ನೇ ಸೆಪ್ಟೆಂಬರ್ ೧೯೩೭ರ ಸಭೆಯಲ್ಲಿ ವಿಧಾನಸಭಾ ಸದಸ್ಯರಾದ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಮಂಡಿಸಲು ಅನುಮತಿಯನ್ನು ಕೊಡಲಾಗಿರುವ ಕೆಳಗೆ ಕೊಟ್ಟಿರುವ ಮಸೂದೆಯನ್ನು ಮುಂಬೈ ವಿಧಾನಸಭೆಯ ೨೦ನೇ ನಿಯಮದ ಮೇರೆಗೆ ಪ್ರಕಟಿಸಲಾಗಿದೆ.

**೧೯೩೭ರ ಮಸೂದೆ ಸಂ. XX**

ಖೋತಿ ಪದ್ಧತಿಯನ್ನು ತೆಗೆದುಹಾಕುವ ಮಸೂದೆ.

ಖೋತಿ ಪದ್ಧತಿಯೆಂದು ಪರಿಚಿತವಾದ ಕಂದಾಯ ಸಾಗುವಳಿ ಪದ್ಧತಿಯನ್ನು ತೆಗೆದುಹಾಕುವುದು ಮತ್ತು ಖೋತಿ ಪದ್ಧತಿಯು ಜಾರಿಯಲ್ಲಿರುವ ಪ್ರದೇಶಕ್ಕೆ ಹೆಚ್ಚು ಪ್ರಯೋಜನಕಾರಿಯಾಗುವುದರಿಂದ ರೈತವಾರಿ ಪದ್ಧತಿಯ ತತ್ವಗಳನ್ನು ವಿಸ್ತರಿಸುವುದು ಅಪೇಕ್ಷಣೀಯವಾದುದು ಮತ್ತು ಅವಶ್ಯವಾದುದಾಗಿರುವುದರಿಂದ ಅದನ್ನು ಈ ಕೆಳಗಿನಂತೆ ಅಧಿನಿಯಮಿಸಲಾಗಿದೆ.

(೧) ಸಂಕ್ಷಿಪ್ತ ಶಿರೋನಾಮೆ ಮತ್ತು ವ್ಯಾಪ್ತಿ: ಈ ಅಧಿನಿಯಮವನ್ನು "ಖೋತಿ ತೆಗೆದುಹಾಕುವ ಅಧಿನಿಯಮ, ೧೯೩೭" ಎಂದು ಕರೆಯತಕ್ಕುದು. ಇದು ಇಡಿಯ ಮುಂಬೈ ಪ್ರಾಂತಕ್ಕೆ ಅನ್ವಯಿಸತಕ್ಕುದು.

(೨) ಖೋತಿ ಪದ್ಧತಿಯನ್ನು ತೆಗೆದುಹಾಕುವುದು: ಈ ಅಧಿನಿಯಮವನ್ನು ಅಂಗೀಕರಿಸಿದ ನಂತರ ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಖೋತನ ಅಥವಾ ಖೋತರ ಖೋಲೆ ಹಕ್ಕುಗಳನ್ನು ಹೇಳಲಾಗಿರುವ ಪ್ರಕಟಣೆಯಲ್ಲಿ ತಿಳಿಸಲಾಗಿರುವ ದಿನಾಂಕದಿಂದ ತೆಗೆದುಹಾಕಲಾಗಿದೆ ಎಂದು ಸರಕಾರೀ ರಾಜ್ಯಪತ್ರದಲ್ಲಿ ಪ್ರಕಟಣೆಯ ಮೂಲಕ ಸರಕಾರವು ಘೋಷಿಸಬಹುದು.

(೩) ಪ್ರಕಟಣೆಯ ನಂತರ ಖೋತನು ಖೋತನೆಂದು ನಡೆದುಕೊಳ್ಳಲು ಹಕ್ಕುಳ್ಳವನಲ್ಲ ಮತ್ತು ಸರಕಾರವು ಆತನನ್ನು ಖೋತನೆಂದು ನೇಮಿಸಲು ಅಥವಾ ಒಪ್ಪಲು ಬದ್ಧವಾಗಿರುವುದಿಲ್ಲ. ಅಂಥ ಯಾವುದೇ ಪ್ರಕಟಣೆಯ ದಿನಾಂಕದಿಂದ ಒಬ್ಬ ಖೋತನಿಗೆ ಖೋತನೆಂದು ಕಾರ್ಯ ನಿರ್ವಹಿಸಲು ಹಕ್ಕು ನೀಡುವ ಅಥವಾ ಖೋತನನ್ನು ನೇಮಿಸಲು ಅಥವಾ ಒಪ್ಪಲು

---

*ಮುಂಬಯಿ ಸರಕಾರದ ರಾಜ್ಯ ಪತ್ರ, ಭಾಗ–V,
ದಿನಾಂಕ ಅಕ್ಟೋಬರ್ ೨೧, ೧೯೩೭, ಪುಟಗಳು ೮೮–೯೪.

ಸರಕಾರವನ್ನು ಅಗತ್ಯಪಡಿಸುವ ಅಥವಾ ಖೋತನ ಹಕ್ಕುಗಳನ್ನು ಅವನಿಗೆ ನೀಡುವ ಸಧ್ಯದಲ್ಲಿ ಜಾರಿಯಲ್ಲಿರುವ ಕಾನೂನಿನ ಅಂಥ ಯಾವುದೇ ಭಾಗ, ಸಂಪ್ರದಾಯ ಅಥವಾ ರೂಢಿಯನ್ನು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಜಾರಿ ಮಾಡುವುದು ನಿಂತು ಹೋಗತಕ್ಕುದು.

(೪) ಪ್ರಕಟಣೆಯ ನಂತರ ಕಂದಾಯಕ್ಕೆ ಸಂಬಂಧಿಸಿದಂತೆ ತನ್ನ ಹೊಣೆಗಾರಿಕೆಯಿಂದ ಖೋತನು ಮುಕ್ತ: ಅಂಥ ಯಾವುದೇ ಪ್ರಕಟಣೆಯ ದಿನಾಂಕದಿಂದ ಖೋತನು ಅಂಥ ಪ್ರಕಟಣೆಯ ದಿನಾಂಕದ ಅನಂತರ ಅವಧಿಗೆ ಕೊಡಬೇಕಾದ ಕಂದಾಯಕ್ಕೆ ಸಂಬಂಧಿಸಿದಂತೆ ಸರಕಾರಕ್ಕೆ ಇರುವ ಯಾವುದೇ ಹೊಣೆಯಿಂದ ಮುಕ್ತನಾಗತಕ್ಕುದು.

(೫) ಖೋತರಿಗೆ ಪರಿಹಾರ: (೧) ಪ್ರಕಟಣೆಯ ಪರಿಣಾಮವಾಗಿ ತನ್ನ ಹಕ್ಕನ್ನು ಕಳೆದುಕೊಂಡಿದ್ದಾಗಿ ಖೋತನಿಗೆ ಸರ್ಕಾರವು ಯುಕ್ತ ಪರಿಹಾರವನ್ನು ಕೊಡುವುದು ಕಾನೂನು ಸಮ್ಮತವಾಗಿರತಕ್ಕುದು.

ಪರಂತು ಆತನು ತನ್ನ ವಶದಲ್ಲಿದ್ದ ಜಮೀನಿಗೆ ಕೊಡುವ ಪರಿಹಾರವು ಆ ಜಮೀನಿಗೆ ಸಂಬಂಧಿಸಿದಂತೆ ಭೂ ಕಂದಾಯ ಸಂಹಿತೆಯ ಮೇರೆಗೆ ವಿಧಿಸಬಹುದಾದ ಕರದ ಶೇಕಡಾ ಒಂದಕ್ಕಿಂತ ಹೆಚ್ಚಾಗತಕ್ಕುದಲ್ಲ.

(i) ಪರಿಹಾರದ ಮೊತ್ತಕ್ಕೆ ಸಂಬಂಧಿಸಿದಂತೆ ಸರಕಾರದ ನಿರ್ಣಯವು ಅಂತಿಮ ಮತ್ತು ನಿರ್ಣಯಾತ್ಮಕವಾಗಿರತಕ್ಕುದು.

(ii) ಖೋತನಿಗೆ ಕೊಡಬೇಕಾಗಿರುವ ಪರಿಹಾರವನ್ನು ಹಣದ, ಬಾಂಡ್ ಪತ್ರಗಳ ಅಥವಾ ವರ್ಷಾಶನದ ಅಥವಾ ಇತರ ಯಾವುದೇ ರೂಪದಲ್ಲಿ ನೀಡುವ ಸರಕಾರದ ತೀರ್ಮಾನವು ಕಾನೂನುಸಮ್ಮತವಾದುದಾಗಿರುತ್ತದೆ ಮತ್ತು ಸಂದಾಯದ ರೀತಿ ಮತ್ತು ವಿಧಾನಕ್ಕೆ ಸಂಬಂಧಿಸಿದಂತೆ ಸರಕಾರದ ನಿರ್ಣಯವು ಅಂತಿಮವಾದುದು ಮತ್ತು ನಿರ್ಣಾಯಕವಾದುದು.

(೬) ಗ್ರಾಮಗಳ ಕೆಳ ಖೋತಿದಾರರು ಹಿಡುವಳಿದಾರರಾಗತಕ್ಕುದು: ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಪ್ರದೇಶದಲ್ಲಿ ಖೋತಿ ಪದ್ಧತಿಯನ್ನು ತೆಗೆದುಹಾಕಲಾಗಿರುವಲ್ಲಿ ಖೋತನ ವ್ಯವಸ್ಥೆಯಲ್ಲಿರಲಿ ಅಥವಾ ಪ್ರಯೋಜನಕಾರಿ ಅನುಭೋಗದಲ್ಲಿರಲಿ ಆ ಪ್ರದೇಶದಲ್ಲಿನ ಜಮೀನುಗಳ ಸ್ವಾಧೀನದಲ್ಲಿರುವ ಎಲ್ಲ ವ್ಯಕ್ತಿಗಳೂ ೧೮೭೯ರ ಭೂ ಕಂದಾಯ ಸಂಹಿತೆಯ ೩(೧೬)ನೇ ಕಲಮಿನ ಅರ್ಥದಲ್ಲಿ ಅವರ ಸ್ವಾಧೀನದಲ್ಲಿರುವ ಎಲ್ಲ ಜಮೀನುಗಳ ಹಿಡುವಳಿದಾರರೆಂದು ಭಾವಿಸತಕ್ಕುದು ಮತ್ತು ಅದೇ ಹಕ್ಕುಗಳು ಇತರಕ್ಕುದು ಮತ್ತು ಆ ಸಂಹಿತೆಯ ಉಪಬಂಧಗಳ ಮೇರೆಗೆ ಅಥವಾ ಮೂಲಕ ಹಸ್ತಾಂತರಣವಾಗದ ಜಮೀನಿನ ಹಿಡುವಳಿದಾರರು ಬಾಧಿತರಾಗುವ ರೀತಿಯಲ್ಲೇ ತಮ್ಮ ಸ್ವಾಧೀನದಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ ಅದೇ ಹೊಣೆಯಿಂದ ಬಾಧ್ಯರಾಗತಕ್ಕುದು ಮತ್ತು ಸದರೀ ಸಂಹಿತೆಯ ಎಲ್ಲ ಉಪಬಂಧಗಳು ಅವರಿಗೆ ಅನ್ವಯಿಸತಕ್ಕುದು.

(೭) ಹಿಡುವಳಿ ಹಕ್ಕುಗಳ ಕ್ಲೇಮುಗಳಿಗೆ ಸಂಬಂಧಿಸಿದ ವಿವಾದಗಳನ್ನು ಇತ್ಯರ್ಥಗೊಳಿಸುವುದು: ಒಂದು ನಿರ್ದಿಷ್ಟ ಹಿಡುವಳಿಯ ಸ್ವಾಧೀನದಾರರು ಯಾರು ಆಗತಕ್ಕುದು ಎಂಬ ಬಗ್ಗೆ ವಿವಾದವಿರುವ ಸಂದರ್ಭದಲ್ಲಿ ಪ್ರಕಟಣೆಯ ಪೂರ್ವದಲ್ಲಿ ೧೨ ವರುಷದ ಅವಧಿಯಲ್ಲಿ ಆ ಜಮೀನು ಯಾರ ಸ್ವಾಧೀನತೆಯಲ್ಲಿ ಅತೀ ಹೆಚ್ಚಿನ ಅವಧಿಯಲ್ಲಿದ್ದಿತೋ ಅಂಥ ಕ್ಲೇಮು

ದಾರನಿಗೆ ಪ್ರಾಶಸ್ತ್ಯವನ್ನು ಕೊಡತಕ್ಕುದು.

(೮) ಅಡ್ಡಿಪಡಿಸುವುದರಿಂದಾಗಿ ಹಿಡುವಳಿಗೆ ಇರುವ ಹಕ್ಕುಗಳು ಕಳೆದು ಹೋಗುವುದಿಲ್ಲ. ಕೆಳಖೋತಿದಾರನ ಹಕ್ಕುಗಳಿಗೆ ಈ ಅಧಿನಿಯಮವನ್ನು ಪಾಸು ಮಾಡಿದ್ದರಿಂದ ಯಾವುದೇ ಅಡ್ಡಿಗಳು ಉಂಟಾದರೆ ಆ ಅಧಿನಿಯಮದ ೭ನೇ ಕಲಮಿನ ಮೇರೆಗೆ ಆತನಿಗೆ ಇರುವ ಹಕ್ಕುಗಳಿಗೆ ಯಾವುದೇ ಬಾಧೆಯನ್ನುಂಟುಮಾಡತಕ್ಕುದಲ್ಲ.

(೯) ಖೋತರ ಪರಿಹಾರದ ಹಕ್ಕುಗಳ ಮತ್ತು ಕೆಳ ಹಿಡುವಳಿದಾರರ ಹಿಡುವಳಿ ಹಕ್ಕುಗಳಿಗೆ ಸಂಬಂಧಿಸಿದ ವಿವಾದಗಳ ವಿಚಾರಣೆ: (i) ಈ ಅಧಿನಿಯಮದ ಮೇರೆಗೆ ಖೋತಿ ಪದ್ಧತಿಯು ನಿಂತು ಹೋಗಿರುವ ಪ್ರದೇಶದಲ್ಲಿನ ಜಮೀನುಗಳಲ್ಲಿ ಹಿಡುವಳಿದಾರರೆಂದು ಹಿತಾಸಕ್ತಿಯನ್ನು ಕ್ಲೇಮು ಮಾಡುವ ವ್ಯಕ್ತಿಗಳ ನಡುವೆ ಉಂಟಾಗುವ ವಿವಾದಗಳನ್ನು ಮತ್ತು ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಪರಿಹಾರಕ್ಕೆ ಕ್ಲೇಮು ಮಾಡುವ ವ್ಯಕ್ತಿಗಳ ನಡುವಣ ವಿವಾದಗಳನ್ನು ವಿಚಾರಣೆ ಮಾಡಲು ಮತ್ತು ನಿರ್ಣಯಿಸಲು ಒಬ್ಬ ಅಧಿಕಾರಿಯನ್ನು ಸರಕಾರವು ನೇಮಿಸುವುದು ಕಾನೂನುಸಮ್ಮತವಾಗಿರುತ್ತದೆ.

(ii) ಈ ಅಧಿನಿಯಮದ ಮೇರೆಗಿನ ವಿಚಾರಣೆಯ ಉದ್ದೇಶಗಳಿಗಾಗಿ ಹಿತಾಸಕ್ತಿಯುಳ್ಳ ಪಕ್ಷದವರೂ ಸಹಿತವಾಗಿ ಅಥವಾ ಅವರಲ್ಲಿ ಯಾರೊಬ್ಬರನ್ನಾಗಲೀ ಒಳಗೊಂಡಂತೆ ಸಾಕ್ಷಿದಾರರ ಹಾಜರಾತಿಗಾಗಿ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ಅದೇ ವಿಧಾನದ ಮೂಲಕ ಒತ್ತಾಯಪಡಿಸಲು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ ೧೯೦೮ರ ಮೇರೆಗೆ ಸಿವಿಲ್ ನ್ಯಾಯಾಲಯಗಳಿಗೆ ಸಂಬಂಧಿಸಿ ಉಪಬಂಧಿಸಿರುವಂತೆಯೇ ಸಾಧ್ಯವಿರುವಷ್ಟರ ಮಟ್ಟಿಗೆ ಸಮನ್ ಹೊರಡಿಸಲು ಮತ್ತು ಕ್ರಮ ಕೈಕೊಳ್ಳಲು ಆ ಅಧಿಕಾರಿಗೆ ಅಧಿಕಾರವಿರತಕ್ಕುದು.

(iii) ಭೂ ಸ್ವಾಧೀನ ಅಧಿನಿಯಮ ೧೮೯೪ರ ೯, ೧೦, ೧೧, ೧೨, ೧೩, ೧೪ ಮತ್ತು ೧೫ನೇ ಕಲಮುಗಳಲ್ಲಿ ಉಪಬಂಧಿಸಲಾದುದು ಸಾಧ್ಯವಿರುವಷ್ಟರ ಮಟ್ಟಿಗೆ ಸಂದಾಯ ಮಾಡಬೇಕಾದ ಪರಿಹಾರದ ಮೊತ್ತವನ್ನು ನಿರ್ಣಯಿಸಲು ಅಥವಾ ಹಿಡುವಳಿದಾರರೆಂಬ ಹಕ್ಕನ್ನು ನಿರ್ಣಯಿಸಲು ಈ ಅಧಿನಿಯಮದ ಮೇರೆಗೆ ನಡೆಸುವ ವಿಚಾರಣೆಗಳಿಗೆ ಅನ್ವಯವಾಗತಕ್ಕುದು.

(iv) ಖೋತನನ್ನು ಅಥವಾ ಕೆಳ ಹಿಡುವಳಿದಾರನನ್ನು ತಮ್ಮ ಸ್ವಾಧೀನದಲ್ಲಿರುವ ಅಥವಾ ತನ್ನ ಅಧಿಕಾರದಲ್ಲಿರುವ ಎಲ್ಲ ದಸ್ತಾವೇಜುಗಳನ್ನು ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ಪರಿಹಾರದ ಮೊತ್ತಕ್ಕೆ ಇರುವ ಹಕ್ಕುಗಳಿಗೆ ಸಂಬಂಧಿಸಿದಂತೆ ಅಥವಾ ಹಿಡುವಳಿಯ ಹಕ್ಕುಗಳಿಗೆ ಸಂಬಂಧಿಸಿದಂತೆ ಇರುವ ವಿವಾದಗಳನ್ನು ಬಗೆಹರಿಸುವುದಕ್ಕಾಗಿ ಅವಶ್ಯವಾಗಬಹುದಾದ ವಿಚಾರಣೆಯ ಉದ್ದೇಶಗಳಿಗಾಗಿ ಹಾಜರುಪಡಿಸಲು ಒತ್ತಾಯಿಸುವುದು ಈ ಅಧಿಕಾರಿಗೆ ಕಾನೂನುಸಮ್ಮತವಾಗಿರುತ್ತದೆ.

(v) ಈ ಅಧಿಕಾರಿಯು ತನ್ನ ನಿರ್ಣಯವನ್ನು ಕಲೆಕ್ಟರನಿಗೆ ಕೊಡತಕ್ಕುದು ಮತ್ತು ಜಮೀನನಲ್ಲಿಯ ಹಿಡುವಳಿ ಹಕ್ಕಿಗೆ ಸಂಬಂಧಿಸಿದ ಕ್ಲೇಮುಗಳ ಅಥವಾ ಅಂಥ ಕ್ಲೇಮುಗಳನ್ನು ಮಾಡುತ್ತಿರುವ ವ್ಯಕ್ತಿಗಳಿಗೆ ಪರಿಹಾರದ ಹಕ್ಕುಗಳ ಕ್ಲೇಮುಗಳ ಬಗ್ಗೆ ತನ್ನ ನಿರ್ಣಯವನ್ನು ತಿಳಿಸತಕ್ಕುದು.

(vi) ಬೇರೆ ಬೇರೆ ಕ್ಲೇಮುದಾರರಲ್ಲಿ ಪರಿಹಾರಕ್ಕಾಗಿ ಯಾರು ಹಕ್ಕುದಾರರು ಅನ್ನುವುದರ ಬಗ್ಗೆ ಅಧಿಕಾರಿಯು ಸಮಾಧಾನಪಡಿಸಿಕೊಳ್ಳಲು ಸಮರ್ಥನಾಗದಿದ್ದರೆ, ಪರಿಹಾರವನ್ನು ಕ್ಲೇಮು

ಮಾಡಿದ ವ್ಯಕ್ತಿಗಳ ಹಕ್ಕುಗಳನ್ನು ಸಕ್ಷಮ ಸಿವಿಲ್ ನ್ಯಾಯಾಲಯವು ನಿರ್ಣಯಿಸುವವರೆಗೆ ಪರಿಹಾರ ಸಂದಾಯಮಾಡುವುದನ್ನು ಅಮಾನತ್ತಿನಲ್ಲಿಡತಕ್ಕುದು.

(೧೦) ಕೆಳ ಹಿಡುವಳಿದಾರರ ಹಿಡುವಳಿ ಕ್ಲೇಮನ್ನು ತಿರಸ್ಕರಿಸಿದಾಗ ಅದನ್ನು ಅವರು ಉಲ್ಲೇಖಿಸುವುದು. ಹಿಡುವಳಿದಾರನೆಂದು ತನ್ನ ಹೆಸರನ್ನು ನೋಂದಣಿ ಮಾಡಬೇಕೆಂಬ ತನ್ನ ಕ್ಲೇಮನ್ನು ಈ ಬಗ್ಗೆ ವಿಶೇಷವಾಗಿ ತನ್ನ ಪರವಾಗಿ ಸರಕಾರದಿಂದ ನಿಯೋಜಿತನಾದ ಅಧಿಕಾರಿಯು ತಿರಸ್ಕರಿಸಿರುವನೆಂಬ ಸಂಗತಿಯಿಂದ ಬಾಧಿತನಾದ ಯಾವನೇ ವ್ಯಕ್ತಿಯು ಯಾವ ಜಿಲ್ಲಾ ನ್ಯಾಯಾಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯಲ್ಲಿ ಜಮೀನಿನ ಇಡಿಯ ಭಾಗವು ಇರುತ್ತದೆಯೋ ಆ ಜಿಲ್ಲಾ ನ್ಯಾಯಾಲಯದಿಂದ ಅಥವಾ ಈ ಬಗ್ಗೆ ಸರಕಾರವು ನೇಮಕ ಮಾಡಿದ ನ್ಯಾಯ ಮಂಡಳದಿಂದ ತನ್ನ ಕ್ಲೇಮಿನ ಪ್ರಶ್ನೆಯನ್ನು ನಿರ್ಣಯಿಸಲು ಕಲೆಕ್ಟರನು ಕಳಿಸುವುದನ್ನು ಲಿಖಿತ ಅರ್ಜಿ ಸಲ್ಲಿಸಿ ನಿರ್ಬಂಧಪಡಿಸಬಹುದು.

(ii) ಅಧಿಕಾರಿಯ ನಿರ್ಣಯದ ವಿರುದ್ಧವಿರುವ ತಕರಾರಿನ ಆಧಾರಗಳನ್ನು ಅರ್ಜಿಯಲ್ಲಿ ಹೇಳತಕ್ಕುದು ಮತ್ತು ತನ್ನ ಕ್ಲೇಮನ್ನು ತಿರಸ್ಕರಿಸಿದ ಆದೇಶವನ್ನು ಜಾರಿ ಮಾಡಿದ ೯೦ ದಿವಸಗಳಲ್ಲಿ ಅದನ್ನು ಸಲ್ಲಿಸತಕ್ಕುದು.

(iii) ಕಲೆಕ್ಟರನು ಆ ಅರ್ಜಿಯನ್ನು ಸಂದರ್ಭಾನುಸಾರ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ನ್ಯಾಯಮಂಡಳಕ್ಕೆ ಉಲ್ಲೇಖಿಸತಕ್ಕುದು ಮತ್ತು ಅರ್ಜಿಗೆ ಒಂದು ಕ್ರಮಸಂಖ್ಯೆಯನ್ನು ಕೊಡ ತಕ್ಕುದು ಮತ್ತು ಅರ್ಜಿದಾರನನ್ನು ವಾದಿಯಾಗಿಯೂ ಮತ್ತು ಹಿಡುವಳಿಗೆ ಹಕ್ಕುದಾರನೆಂದು ಅಧಿಕಾರಿಯು ಘೋಷಿಸಿದ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಪ್ರತಿವಾದಿಗಳನ್ನಾಗಿಯೂ ಮಾಡಿ ಅದನ್ನು ದಾವೆಯೆಂದು ನೋಂದಣಿ ಮಾಡತಕ್ಕುದು.

(iv) ಅಂಥ ಅರ್ಜಿಯನ್ನು ನೋಂದಣಿ ಮಾಡಿದ ಅನಂತರ ನ್ಯಾಯಾಲಯವು ಅಥವಾ ನ್ಯಾಯ ಮಂಡಳಿಯು ಪ್ರತಿವಾದಿ ಅಥವಾ ಪ್ರತಿವಾದಿಗಳಿಗೆ ಅದರಲ್ಲಿ ಹೇಳಲಾಗಿರುವ ದಿನಾಂಕದಂದು ಹಾಜರಾಗಲು ಮತ್ತು ಕ್ಲೇಮಿಗೆ ಉತ್ತರಿಸಲು ಹೇಳಿ ನೋಟೀಸನ್ನು ಕಳಿಸಲು ನಿರ್ದೇಶಿಸತಕ್ಕುದು.

(v) ಸಿವಿಲ್ ಪ್ರಕ್ರಿಯಾ ಸಂಹಿತೆ ೧೯೦೮ರ ಉಪಬಂಧಗಳ ಮೇರೆಗೆ ಸಾಮಾನ್ಯ ದಾವೆಯಂತೆ ವಿಚಾರಣೆಗೆ ಅದನ್ನು ಇಡತಕ್ಕುದು ಮತ್ತು ಅಂಥ ದಾವೆಗಳಿಗೆ ಸಾಧ್ಯವಿರುವಷ್ಟರ ಮಟ್ಟಿಗೆ ಇವೇ ಉಪಬಂಧಗಳನ್ನು ಅನ್ವಯಿಸತಕ್ಕದು.

(vi) ಅಂಥ ಯಾವುದೇ ದಾವೆಯಲ್ಲಿ ನ್ಯಾಯಾಲಯ ಅಥವಾ ನ್ಯಾಯ ಮಂಡಳವು ಕೊಟ್ಟ ನಿರ್ಣಯದ ಅಥವಾ ಮಾಡಿದ ಆದೇಶದ ವಿರುದ್ಧ ಯಾವುದೇ ಅಪೀಲು ಇರತಕ್ಕುದಲ್ಲ.

(೧೧)ಖೋತರು ಹೇಳಿಕೆಗಳನ್ನು ಹಾಜರು ಪಡಿಸತಕ್ಕುದು: ಈ ಅಧಿನಿಯಮವನ್ನು ಪಾಸು ಮಾಡಿದ ಮೂರು ತಿಂಗಳೊಳಗಾಗಿ ಕಲೆಕ್ಟರನು ಲಿಖಿತದಲ್ಲಿ ನೋಟೀಸನ್ನು ಕೊಡುವ ಮೂಲಕ ಆ ನೋಟೀಸಿನಲ್ಲಿ ಹೇಳಲಾದ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ (ಆ ದಿನಾಂಕವು ನೋಟೀಸಿನ ದಿನಾಂಕದಿಂದ ಮೂರು ತಿಂಗಳೊಳಗೆ ಇರತಕ್ಕುದು) ಪ್ರತಿಯೊಬ್ಬ ಖೋತನೂ.

(i) ಖೋತನಾಗಿ ಅಥವಾ ಅನ್ಯಥಾ ಮೇಲು ಹಿಡುವಳಿದಾರನಾಗಿ ತನ್ನ ವಶದಲ್ಲಿರುವ ಎಲ್ಲ ಜಮೀನುಗಳ ಸರ್ವೇ ನಂಬರುಗಳನ್ನು;

(ii) ೧೯೨೦ರಿಂದ ಆದೇಶವನ್ನು ಪಾಸು ಮಾಡಿದ ದಿನಾಂಕದವರೆಗೆ ಪ್ರತಿಯೊಂದು ವರುಷಕ್ಕೂ ಪ್ರತಿಯೊಂದು ಸರ್ವೆ ನಂಬರಿನ ಸ್ವಾಧೀನದಲ್ಲಿದ್ದ ವ್ಯಕ್ತಿಗಳನ್ನು ಮತ್ತು

(iii) ಅಂಥ ಪ್ರತಿಯೊಂದು ಸರ್ವೇ ನಂಬರಿನಲ್ಲಿ ಖೋತನು ಕ್ಲೇಮು ಮಾಡಿದ ಹಕ್ಕು ಮತ್ತು ಹಿತಾಸಕ್ತಿಯ ಸ್ವರೂಪ– ಇವುಗಳನ್ನು ತೋರಿಸಿ ಸಹಿ ಮಾಡಿ ಹೇಳಿಕೆಯನ್ನು ಹಾಜರು ಪಡಿಸತಕ್ಕುದು.

(೨) (i) ನೇ ಉಪಕಲಮಿನ ಮೇರೆಗೆ ಹಾಜರುಪಡಿಸಲಾಗಿರುವ ಹೇಳಿಕೆಯಲ್ಲಿ ಒಳಗೊಂಡಿರುವ ವಿವರಗಳಲ್ಲಿ ಅನಂತರ ಆದ ಯಾವುದೇ ಬದಲಾವಣೆಗಳನ್ನು ಕಾಲಕಾಲಕ್ಕೆ ಲಿಖಿತದಲ್ಲಿ ಖೋತನು ಕಲೆಕ್ಟರನಿಗೆ ವರದಿ ಮಾಡತಕ್ಕುದು.

(೩) ಹೇಳಿಕೆಯನ್ನು ಕೊಡುವ ಹೊಣೆಗಾರಿಕೆ: ಈ ಮುಂಚಿನ ಕಲಮಿನ ಮೇರೆಗೆ ಹೇಳಿಕೆಯನ್ನು ಮಾಡಬೇಕಾಗಿರುವ ಅಥವಾ ಕೊಡಬೇಕಾಗಿರುವ ಪ್ರತಿಯೊಬ್ಬ ಖೋತನೂ ಭಾರತ ದಂಡ ಸಂಹಿತೆಯ ೧೭೬ ಮತ್ತು ೧೭೭ನೇ ಕಲಮಿನ ಅರ್ಥದಲ್ಲಿ ಕಾನೂನುಸಮ್ಮತವಾಗಿ ಹಾಗೆ ಮಾಡಲು ಬದ್ಧನಾಗಿರುತ್ತಾನೆ ಎಂದು ಭಾವಿಸತಕ್ಕುದು.

(೧೨) ಈ ಹೇಳಿಕೆಯನ್ನು ಸಾಕ್ಷ್ಯವೆಂದು ಪರಿಗಣಿಸುವುದು ೧೧ನೇ ಕಲಮಿನ ಮೇರೆಗೆ ಖೋತನು ಕೊಟ್ಟ ಹೇಳಿಕೆಯಲ್ಲಿನ ನಮೂದನೆಗಳು ಅದರಲ್ಲಿ ಹೇಳಲಾಗಿರುವ ಸಂಗತಿಗಳ ಬಗ್ಗೆ ಖೋತನು ಅಥವಾ ಆತನ ಹಿತಾಸಕ್ತಿಯ ಪ್ರತಿನಿಧಿಯು ಪಕ್ಷಕಾರನಾಗಿರುವ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಖೋತನ ವಿರುದ್ಧ ನಿರ್ಣಯಾತ್ಮಕ ಸಾಕ್ಷ್ಯವಾಗಿರತಕ್ಕುದು.

(೧೩) ಹೇಳಿಕೆಯನ್ನು ಸಲ್ಲಿಸದಿರುವುದಕ್ಕೆ ದಂಡನೆ:

೧೧ನೇ ಕಲಮಿನ (೧)ನೇ ಮತ್ತು (೨)ನೇ ಉಪಕಲಮಿನಲ್ಲಿ ಹೇಳಿದ ಉಪಬಂಧಗಳಿಗೆ ವ್ಯತಿರಿಕ್ತವಾಗಿ ಹೇಳಿಕೆಗಳನ್ನು ಸಲ್ಲಿಸಲು ಹಾಗೆ ಮಾಡುವುದು ಅಗತ್ಯವಾದಾಗ ಮಾಡಲು ನಿರಾಕರಿಸಿದರೆ ಅಥವಾ ನಿರ್ಲಕ್ಷಿಸಿದರೆ ಅಥವಾ ಹೇಳಿಕೆಯ ವಿವರಗಳಲ್ಲಿನ ತದನಂತರದ ಬದಲಾವಣೆಯನ್ನು ವರದಿ ಮಾಡಲು ನಿರಾಕರಿಸಿದರೆ ಅಥವಾ ನಿರ್ಲಕ್ಷಿಸಿದರೆ, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ರೂ. ೧೦೦೦–೦೦ವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿತನಾಗತಕ್ಕುದು.

೧೧ನೇ ಕಲಮಿನ (೧)ನೇ ಉಪಕಲಮಿನ ಮೇರೆಗೆ ಅಗತ್ಯಪಡಿಸಲಾಗಿರುವ ಹೇಳಿಕೆಯನ್ನು ಗೊತ್ತುಪಡಿಸಲಾಗಿರುವ ಅವಧಿಯಲ್ಲಿ ಸಲ್ಲಿಸಲು ನಿರ್ಲಕ್ಷಿಸುವ ಯಾವುದೇ ಖೋತನು, ಕಲೆಕ್ಟರನ ವಿವೇಚನೆಯಲ್ಲಿ ವಿಳಂಬವಾದ ಪ್ರತಿಯೊಂದು ದಿನಕ್ಕೆ ಐದು ರೂಪಾಯಿಗಳಿಗೆ ಮೀರದಂತೆ ವಿಳಂಬ ಶುಲ್ಕವನ್ನು ವಿಧಿಸಬಹುದು ಮತ್ತು ಅದನ್ನು ಭೂಕಂದಾಯದ ಬಾಕಿಯಂತೆ ಆಕರಣೆ ಮಾಡತಕ್ಕುದು.

(೧೪) ಪ್ರಮಾಣಿತ ಪ್ರತಿಗಳನ್ನು ಪಡೆದುಕೊಳ್ಳುವುದಕ್ಕೆ ಉಪಬಂಧ:– ಖೋತನು ಹೇಳಿಕೆಗಳನ್ನು ಸಲ್ಲಿಸಿದ ಎಲ್ಲ ವ್ಯವಹರಣೆಗಳಲ್ಲಿ ಮತ್ತು ವಿಚಾರಣೆಯ ಕಾಲದಲ್ಲಿ ದಸ್ತಾವೇಜುಗಳನ್ನು ಹಾಜರುಪಡಿಸಲಾಗಿರುವ ಮತ್ತು ಹೇಳಿಕೆಗಳಲ್ಲಿನ ನಮೂದನೆಗಳ ಮತ್ತು ನಿರ್ಣಯಗಳ ಅಧಿಕೃತ ಪ್ರತಿಗಳನ್ನು ಪಕ್ಷಕಾರರಿಗೆ ಮತ್ತು ಅವರ ಮೂಲಕ ಕ್ಲೇಮು ಮಾಡುವವರಿಗೆ ಅದೇ ವಿಷಯಕ್ಕೆ ಸಂಬಂಧಿಸಿ ಯುಕ್ತ ಅರ್ಜಿಯನ್ನು ಸಲ್ಲಿಸಿದರೆ ಇಂತಹ ಪ್ರತಿಗಾಗಿ ಸರಕಾರವು

ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಶುಲ್ಕ ಇತ್ಯಾದಿಗಳಿಗೆ ಒಳಪಟ್ಟು ಆ ಪ್ರತಿಗಳನ್ನು ಅವರಿಗೂ ಕೊಡತಕ್ಕುದು.

(೧೫) ನಿಯಮಗಳನ್ನು ರಚಿಸಲು ಸರಕಾರಕ್ಕೆ ಅಧಿಕಾರ:

(೧) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಸರಕಾರವು ನಿಯಮಗಳನ್ನು ರಚಿಸುವುದು ಮತ್ತು ಅದರಲ್ಲಿಯೂ

(i) ನಮೂನೆ, ಒಳಾಂಶಗಳು, ಅಧಿಸೂಚನೆ ಮತ್ತು ಪ್ರಕಟಣೆಯ ಜಾರಿ.

(ii) ಪರಿಹಾರ ಮೊತ್ತವನ್ನು ನಿರ್ಣಯಿಸುವುದು ಮತ್ತು ಸಂದಾಯ ವಿಧಾನಗಳನ್ನು ರೂಪಿಸುವುದು.

(iii) ಉಲ್ಲೇಖಗಳ ವಿಚಾರಣೆಗೆ ಮತ್ತು ನಿರ್ಣಯಿಸಲು ನ್ಯಾಯಮಂಡಳಿಯ ನೇಮಕ ಮಾಡುವುದು.

(iv) ಅರ್ಜಿಗಳಿಗೆ, ಉಲ್ಲೇಖಗಳಿಗೆ ಮತ್ತು ದಸ್ತಾವೇಜುಫಲ, ನಮೂದನೆಗಳ ಮತ್ತು ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಬಂದ ನಿರ್ಣಯಗಳ ಅಧಿಕೃತ ಪ್ರತಿಗಳಿಗೆ ಅರ್ಜಿದಾರರು ನೀಡಬೇಕಾದ ಶುಲ್ಕಗಳು ಮತ್ತು ವೆಚ್ಚಗಳು ಇವುಗಳನ್ನು ನಿರ್ಧರಿಸುವುದು.

(v) ಪಕ್ಷಕಾರರು ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಹಾಜರುಪಡಿಸಲಾಗಿರುವ ಮತ್ತು ಸಲ್ಲಿಸಲಾಗಿರುವ ದಸ್ತಾವೇಜುಗಳನ್ನು ಸಂರಕ್ಷಿಸುವುದು.

–ಇವುಗಳ ಬಗ್ಗೆ ಉಪಬಂಧಿಸುವುದು ಸರಕಾರಕ್ಕೆ ಕಾನೂನು ಸಮ್ಮತವಾಗಿರುತ್ತದೆ.

(೨) ಈ ಕಲಮಿನ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವು ಮುಂಬಯಿ ಸರಕಾರದ ರಾಜ್ಯ ಪತ್ರದಲ್ಲಿ ಮೊದಲೇ ಪ್ರಕಟವಾಗುವ ಷರತ್ತಿಗೆ ಒಳಪಟ್ಟು ಇರತಕ್ಕುದು.

(೩) ಈ ಕಲಮಿನ ಮೇರೆಗೆ ರಚಿಸಲಾಗಿರುವ ನಿಯಮಗಳನ್ನು ವಿಧಾನಸಭೆಯ ಮುಂದೆ ಅದರ ಮುಂದಿನ ಅಧಿವೇಶನಕ್ಕಿಂತ ಒಂದು ತಿಂಗಳು ಕಳೆಯುವ ಮೊದಲೇ ಇಡತಕ್ಕುದು ಮತ್ತು ಸದರೀ ವಿಧಾನಸಭೆಯ ಠರಾವಿನ ಮೂಲಕ ರದ್ದುಪಡಿಸಲು ಅಥವಾ ಮಾರ್ಪಾಡು ಮಾಡಲು ಬದ್ಧವಾಗಿರತಕ್ಕಂಥವುಗಳು ಆಗಿರತಕ್ಕುದು. ಯಾವುದೇ ನಿಯಮವನ್ನು ರದ್ದು ಪಡಿಸಿದಾಗ ಅಥವಾ ಮಾರ್ಪಾಡು ಮಾಡಿದಾಗ ಸರಕಾರವು ಅಂಥ ಮಾರ್ಪಡನ್ನು ಒಪ್ಪ ತಕ್ಕುದು ಮತ್ತು ಆ ರೀತಿಯಲ್ಲಿ ನಿಯಮವನ್ನು ಪುನಃ ಪ್ರಕಟಿಸತಕ್ಕುದು ಅಥವಾ ನಿಯಮವನ್ನು ರದ್ದುಪಡಿಸತಕ್ಕುದು.

## ಉದ್ದೇಶಗಳ ಮತ್ತು ಕಾರಣಗಳ ವಿವರಣೆ:

೧. ಖೋತಿ ಪದ್ಧತಿಯು ಮುಂಬಯಿ ಪ್ರಾಂತದಲ್ಲಿನ ಒಂದು ಸಣ್ಣ ಪ್ರಮಾಣದ ಜಮೀನು ಗುತ್ತಿಗೆಯಾಗಿದೆ. ಅದು ಹೆಚ್ಚಾಗಿ ರತ್ನಗಿರಿ ಜಿಲ್ಲೆಯಲ್ಲಿರುತ್ತದೆ ಮತ್ತು ಕೊಲಾಬಾ ಮತ್ತು ಠಾಣಾ ಜಿಲ್ಲೆಯ ಕೆಲ ಭಾಗದಲ್ಲಿಯೂ ಇರುತ್ತದೆ.

೨. ಖೋತಿ ಜಮೀನು ಗುತ್ತಿಗೆಯ ಷರತ್ತುಗಳು ಹಲವು ಸಂದರ್ಭಗಳಲ್ಲಿ ಕಾನೂನಿಗೆ ಒಳಪಟ್ಟಿರುತ್ತವೆ. ಇತರ ಹಲವು ಸಂದರ್ಭಗಳಲ್ಲಿ ರೂಢಿ ಮತ್ತು ಸಂಪ್ರದಾಯಗಳಿಗೂ ಮತ್ತು ಉಳಿದಂತೆ ಅನುದಾನಕ್ಕೂ ಒಳಪಟ್ಟಿರುತ್ತವೆ. ರತ್ನಗಿರಿ ಜಿಲ್ಲೆಯಲ್ಲಿ ೧೮೮೦ರ ೧ನೇ ಮುಂಬೈ

ಅಧಿನಿಯಮದ ಮೂಲಕ ನಿಯಂತ್ರಿಸಲಾಗುತ್ತಿದೆ. ಕೋಲಾಬಾ ಜಿಲ್ಲೆಯಲ್ಲಿ ಮತ್ತು ಠಾಣಾ ಜಿಲ್ಲೆಯಲ್ಲಿ ರೂಢಿ ಮತ್ತು ಸಂಪ್ರದಾಯಕ್ಕೆ ಒಳಪಟ್ಟಿದೆ.

೩. ಖೋತಿ ಪದ್ಧತಿಯು ಸಾಮಾನ್ಯ ರೈತವಾರೀ ಭೂ ಗುತ್ತಿಗೆ ಪದ್ಧತಿಯಿಂದ ಕೆಲಮಟ್ಟಿಗೆ ಭಿನ್ನವಾಗಿದೆ ಅಂದರೆ ಎರಡನೆಯದರಲ್ಲಿ ಭೂಮಿಯ ಹಿಡುವಳಿದಾರರಿಂದಲೇ ಸರಕಾರವು ಭೂ ಕಂದಾಯವನ್ನು ನೇರವಾಗಿ ವಸೂಲು ಮಾಡುತ್ತದೆ. ಆದರೆ ಮೊದಲಿನದರಲ್ಲಿ ಭೂ ಕಂದಾಯವನ್ನು ಸಂಗ್ರಹಿಸಲು ಖೋತನ ಸೇವೆಗಳನ್ನು ತೆಗೆದುಕೊಳ್ಳುವುದನ್ನು ಅಗತ್ಯಪಡಿಸುತ್ತದೆ.

೪. ಖೋತಿ ಭೂ ಗುತ್ತಿಗೆಯ ಪದ್ಧತಿಯು ಸರಕಾರಕ್ಕೆ ಭೂ ಕಂದಾಯವನ್ನು ಕೊಡಲು ಬದ್ಧನನ್ನಾಗಿ ಮಾಡುತ್ತದೆ ಮತ್ತು ಕೆಳ ಹಿಡುವಳಿದಾರ ತನ್ನ ಇಚ್ಛೆಯಂತೆ ನಡೆಸಿಕೊಳ್ಳಲು ಸ್ವಾತಂತ್ರ್ಯವನ್ನು ನೀಡುತ್ತವೆ ಮತ್ತು ಈ ಸ್ವಾತಂತ್ರ್ಯವನ್ನು ಖೋತರು ತುಂಬಾ ದುರುಪಯೋಗಪಡಿಸಿ ಕೊಂಡಿರುತ್ತಾರೆ. ಕೆಳ ಹಿಡುವಳಿದಾರರನ್ನು ಎಲ್ಲ ಕ್ರೂರ ರೀತಿಯಲ್ಲಿ ಸುಲಿಗೆ ಮಾಡಿ ಅವರನ್ನು ವಾಸ್ತವವಾಗಿ ಗುಲಾಮರ ಸ್ಥಾನಕ್ಕೇನೇ ನೂಕಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೆಲ ಹಿಡುವಳಿದಾರರು ಖೋತರ ವಿರುದ್ಧ ದೊಡ್ಡ ಚಳುವಳಿಯನ್ನೇ ನಡೆಸುತ್ತಿದ್ದಾರೆ ಮತ್ತು ಖೋತಿ ಪದ್ಧತಿಯನ್ನು ತೆಗೆದುಹಾಕುವಂತೆ ಕೇಳುತ್ತಿದ್ದಾರೆ. ಖೋತರ ಮತ್ತು ಕೆಳ ಹಿಡುವಳಿದಾರರ ನಡುವಣ ಸಂಬಂಧವು ಎಷ್ಟರಮಟ್ಟಿಗೆ ಕೆಟ್ಟಿದೆಯೆಂದರೆ ಮೂವರು ಖೋತರು ಅವರಿಂದ ಕೊಲೆಯಾಗಿದ್ದಾರೆ.

೫. ಕಂದಾಯದ ವಸೂಲಿಯನ್ನು ಸುಲಭಗೊಳಿಸುವ ಅನುಕೂಲವು ಖೋತಿ ಭೂ ಗುತ್ತಿಗೆಯ ಪದ್ಧತಿಯಲ್ಲಿ ಇರಬಹುದಾದರೂ ಈ ಪ್ರಾಂತದ ಶಾಂತಿ ಮತ್ತು ಸಮಾಧಾನಕ್ಕೆ ತೀವ್ರತರವಾದ ಬಾಧೆಯನ್ನುಂಟುಮಾಡದೆ ಅದನ್ನು ಮುಂದುವರೆಯಲು ಬಿಡಲು ಬರುವುದಿಲ್ಲ. ಆದಕಾರಣ ಈ ಪದ್ಧತಿಯನ್ನು ತೆಗೆದು ಹಾಕುವುದು ಅತ್ಯವಶ್ಯವಾದುದಾಗಿರುತ್ತದೆ.

೬. ಈ ಮಸೂದೆಯ (೧) ಖೋತಿ ಪದ್ಧತಿಯನ್ನು ತೆಗೆದುಹಾಕಲು ಮತ್ತು ಖೋತರ ಆಡಳಿತದಲ್ಲಿರುವ ಅಥವಾ ಅವರ ಪ್ರಯೋಜನಕಾರಿ ಉಪಭೋಗದಲ್ಲಿರುವ ಜಮೀನುಗಳ ಸ್ವಾಧೀನದಾರರು ಮತ್ತು ಸರಕಾರದ ನಡುವೆ ನೇರ ಸಂಬಂಧವನ್ನು ಪ್ರತಿಷ್ಠಾಪಿಸುವುದು ಮತ್ತು (೨) ಭೂಮಿಯ ವಾಸ್ತವ ಸ್ವಾಧೀನತೆಯನ್ನು ಹೊಂದಿದ ಕೆಳ ಹಿಡುವಳಿದಾರರಿಗೆ ಅವರು ಸ್ವಾಧೀನವನ್ನು ಹೊಂದಿರುವ ಜಮೀನುಗಳಿಗೆ ಭೂಕಂದಾಯ ಅಧಿನಿಯಮದ ಅರ್ಥದಲ್ಲಿನ ಹಿಡುವಳಿದಾರನ ಸ್ಥಾನವನ್ನು ಕೊಡುವುದು– ಮತ್ತು (೩) ಇತರ ಆನುಷಂಗಿಕ ಉದ್ದೇಶಗಳಿಗಾಗಿ ಉಪಬಂಧಿಸುವುದು.

(ಸಹಿ)
ಬಿ. ಆರ್. ಅಂಬೇಡ್ಕರ್,

ಎಚ್. ಕೆ. ಚೈನಾನಿ
ಮುಂಬೈ ವಿಧಾನಸಭೆಯ ಕಾರ್ಯದರ್ಶಿ

ಪೂನಾ. ೧೮ನೇ ಅಕ್ಟೋಬರ್ ೧೯೩೭

# ೨೦

# *ಖೋತಿ ಪದ್ಧತಿಯ ರದ್ಧತಿ ಮಸೂದೆಯನ್ನು ಕುರಿತು ೧೭, ಸೆಪ್ಟೆಂಬರ್ ೧೯೩೭

ಡಾ. ಬಿ. ಆರ್. ಅಂಬೇಡ್ಕರ್ (ಮುಂಬಯಿ ನಗರ, ಬೈಕಲಾ ಮತ್ತು ಪರೇಳ): ಮಾನ್ಯರೇ, ಖೋತಿ ಪದ್ಧತಿಯನ್ನು ರದ್ದುಪಡಿಸುವ ಮಸೂದೆಯನ್ನು ಮಂಡಿಸಲು ತಮ್ಮ ಅಪ್ಪಣೆಯನ್ನು ಕೋರುತ್ತಿದ್ದೇನೆ. ಈ ಗೊತ್ತುವಳಿಯನ್ನು ಪುಷ್ಟೀಕರಿಸಲು ಮಾರ್ಗದರ್ಶನ ಮಾಡಿ ತಾವು ಕೊಟ್ಟಿರುವ ಸಂಕ್ಷಿಪ್ತ ವಿವರಣೆಯು ನಮ್ಮ 'ಉದ್ದೇಶಗಳು ಹಾಗೂ ಕಾರಣಗಳು' ಇವುಗಳ ಹೇಳಿಕೆಗೆ ಮಾತ್ರ ಸಂಬಂಧಿಸಿವೆ. ಮಾನ್ಯರೆ, ನಾನು ಅದರ ಬಗ್ಗೆ ತಮಗೆ ತಿಳಿಸುವ ಮೊದಲು, ಖೋತಿ ಪದ್ಧತಿಯನ್ನು ರದ್ದುಗೊಳಿಸುವ ಇಂಥ ಮಹತ್ವವಾದ ವಿಧೇಯಕಕ್ಕೆ 'ಉದ್ದೇಶಗಳು ಹಾಗೂ ಕಾರಣಗಳು' ಎಂಬ ಈ ಹೇಳಿಕೆಯಷ್ಟು ಸಂಕ್ಷಿಪ್ತವಾದ ಹೇಳಿಕೆಗಳು ಬೇರೆ ಯಾವುದೂ ಈವರೆಗೂ ಇರಲಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುವೆ.

ಮುಂಬೈ ಪ್ರಾಂತದಲ್ಲಿ ಖೋತಿ ಪದ್ಧತಿಯು ಸಣ್ಣ ಭೂ ಹಿಡುವಳಿಗಳಲ್ಲಿ ಒಂದಾಗಿದೆ. ಇದು ಹೆಚ್ಚಾಗಿ ರತ್ನಗಿರಿ ಜಿಲ್ಲೆಯಲ್ಲಿ, ಕೊಲಾಬಾ ಮತ್ತು ಠಾಣೆ ಜಿಲ್ಲೆಗಳ ಹಲವು ಭಾಗಗಳಲ್ಲಿ ಕಂಡುಬರುತ್ತದೆ.

ಖೋತಿ ಭೂ ಹಿಡುವಳಿ ಪದ್ಧತಿಯ ಕರಾರುಗಳು ಕೆಲವೆಡೆ ಕಾನೂನುಬದ್ಧವಾಗಿವೆ; ಹಲವೆಡೆ ರೂಢಿ ಹಾಗೂ ಆಚರಣೆಯಿಂದ ಬಂದಿವೆ; ಉಳಿದೆಡೆ ಅನುದಾನದ ಕರಾರಿಗೆ ಬದ್ಧವಾಗಿವೆ. ರತ್ನಗಿರಿ ಜಿಲ್ಲೆಯಲ್ಲಿ '೧೮೮೦ರ ಮುಂಬೈ ಕಾನೂನು I' ಇದರ ಪ್ರಕಾರ, ಕೊಲಾಬಾ ಜಿಲ್ಲೆಯಲ್ಲಿ ಆಚರಣೆ ಹಾಗೂ ರೂಢಿಗಳ ಪ್ರಕಾರ ಮತ್ತು ಠಾಣೆ ಜಿಲ್ಲೆಯಲ್ಲಿ ಅನುದಾನದ ಪ್ರಕಾರ ಕರಾರುಗಳನ್ನು ಕ್ರಮಬದ್ಧಗೊಳಿಸಲಾಗಿದೆ.

ಸಾಮಾನ್ಯವಾಗಿ ಇರುವ ರೈತವಾಗಿ ಭೂ ಹಿಡುವಳಿ ಪದ್ಧತಿಯಿಂದ ಖೋತಿ ಹಿಡುವಳಿ ಪದ್ಧತಿಯು ಬೇರೆಯೇ ಆಗಿದೆ. ರೈತವಾರಿ ಪದ್ಧತಿಯಲ್ಲಿ ಸರಕಾರವು ಭೂಮಿಯನ್ನು ಸಾಗುವಳಿ ಮಾಡುವವನಿಂದಲೇ ಕಂದಾಯವನ್ನು ವಸೂಲಿ ಮಾಡಿದರೆ, ಖೋತಿ ಪದ್ಧತಿಯಲ್ಲಿ ಕಂದಾಯವನ್ನು ಸಂಗ್ರಹಿಸಲೆಂದೇ ಒಬ್ಬ ಖೋತನನ್ನು ಸರಕಾರ ನಿಯಮಿಸಬೇಕಾಗುತ್ತದೆ.

ಖೋತಿ ಭೂ ಹಿಡುವಳಿ ಪದ್ಧತಿಯಲ್ಲಿ ಖೋತನು ಸರಕಾರಕ್ಕೆ ಕಂದಾಯದ ಹಣವನ್ನು ಕೊಡಲೇಬೇಕಾದರೂ, ಇನ್ನೊಂದೆಡೆಗೆ ತನ್ನ ಕೈಕೆಳಗಿನ ಹಿಡುವಳಿದಾರರಿಗೆ ಭೂಮಿಯನ್ನು ಸಾಗುವಳಿಗೆ ಯಾವುದೇ ರೀತಿಯಲ್ಲಿ ಕೊಡಲು ಅವನು ಸ್ವತಂತ್ರನಿರುತ್ತಾನೆ. ಖೋತರು ಇಂಥ ಸ್ವಾತಂತ್ರ್ಯವನ್ನು

---

*ಬಿ.ಎಲ್.ಎ. ಡಿಬೇಟ್ಸ್, ಸಂ.೧, ಪುಟ ೧೦೮೭–೮೯
ದಿನಾಂಕ ೧೭ನೇ ಸೆಪ್ಟೆಂಬರ್ ೧೯೩೭.
ಡಾ. ಅಂಬೇಡ್ಕರ್ ಅವರಿಂದ ಮಂಡಿಸಲಾದ ವಿಧೇಯಕವನ್ನು
೧೬೨–೧೩೧ ಪುಟಗಳಲ್ಲಿ ಕೊಡಲಾಗಿದೆ.

ಬಹಳ ದುರುಪಯೋಗಮಾಡಿಕೊಂಡಿದ್ದಾರೆ. ತಮ್ಮ ಕೈಕೆಳಗಿನ ಹಿಡುವಳಿದಾರರಿಂದ ಬಲಾತ್ಕಾರವಾಗಿ ವಿವಿಧ ರೀತಿಯಲ್ಲಿ ಅವರು ಹಣ ವಸೂಲು ಮಾಡುತ್ತಾರೆ; ಇದರಿಂದ ರೈತರು ಹೀನಾಯವಾದ ಗುಲಾಮಗಿರಿಯ ಪರಿಸ್ಥಿತಿಗೆ ಇಳಿದುಬಿಟ್ಟಿದ್ದಾರೆ. ಇತ್ತೀಚಿನ ವರುಷಗಳಲ್ಲಿ ಈ ಹಿಡುವಳಿದಾರರು ಖೋತರ ವಿರುದ್ಧ ದೊಡ್ಡ ಹೋರಾಟವನ್ನೇ ಹೂಡಿದ್ದು, ಖೋತಿ ಪದ್ಧತಿಯನ್ನು ರದ್ದುಪಡಿಸಬೇಕೆಂದು ಅವರು ಕೇಳಿಕೊಂಡಿದ್ದಾರೆ. ಖೋತರು ಹಾಗೂ ಅವರ ಕೈಕೆಳಗಿನ ಹಿಡುವಳಿದಾರರು ಇವರೀರ್ವರ ಸಂಬಂಧ ಹದಗೆಡುತ್ತಿದ್ದು, ಈಗಾಗಲೇ ಮೂವರು ಖೋತರ ಕೊಲೆಯಾಗಿದೆ.

ಕಂದಾಯದ ಹಣವನ್ನು ವಸೂಲು ಮಾಡಲು ಖೋತಿ ಭೂ ಹಿಡುವಳಿ ಪದ್ಧತಿಯು ಲಾಭದಾಯಕವಿರಬಹುದಾದರೂ ಅದರಿಂದ ಹಾನಿಗಳೂ ಸಾಕಷ್ಟಿವೆ; ಪ್ರಾಂತದಲ್ಲಿ ಶಾಂತಿ–ಸಮಾಧಾನಗಳಿಗೆ ಗಂಭೀರವಾದ ಧಕ್ಕೆ ತಗುಲದಂತೆ ಇನ್ನು ಮುಂದೆ ಈ ಭೂ ಹಿಡುವಳಿ ಪದ್ಧತಿಯನ್ನು ಮುಂದುವರೆಸಲು ಅನುಮತಿಯನ್ನೇ ಕೊಡಕೂಡದು. ಈ ಪದ್ಧತಿಯನ್ನು ರದ್ಧುಪಡಿಸಬೇಕೆಂಬುದು ಸ್ವಯಂವಿದಿತ.

ವಿಧೇಯಕನ ಉದ್ದೇಶಗಳು ಹೀಗಿವೆ: (೧) ಖೋತಿ ಪದ್ಧತಿಯನ್ನು ರದ್ದುಪಡಿಸುವುದು ಮತ್ತು ಖೋತರ ಲಾಭದಾಯಕ ಉಪಭೋಗದಲ್ಲಿರುವ ಅಥವಾ ಅವರ ವ್ಯವಸ್ಥೆಯಲ್ಲಿರುವ ಭೂಮಿಯ ಸಾಗುವಳಿದಾರರಿಗೂ ಇಲ್ಲವೇ ಒಡೆಯರಿಗೂ ಮತ್ತು ಸರಕಾರಕ್ಕೂ ನೇರವಾದ ಸಂಬಂಧವನ್ನು ಕಲ್ಪಿಸುವುದು; (೨) ತಮ್ಮ ಹಕ್ಕುಗಳನ್ನು ಕಳೆದುಕೊಂಡ ಖೋತರಿಗೆ ಯೋಗ್ಯ ಪರಿಹಾರಧನವನ್ನು ನೀಡುವಂತೆ ನಿಧಿ ಒದಗಿಸುವುದು; (೩) ನಿಜವಾಗಿಯೂ ಭೂಮಿಯನ್ನು ಸಾಗುವಳಿ ಮಾಡುವ ಕೆಳದರ್ಜೆಯ ಹಿಡುವಳಿದಾರರಿಗೆ ಭೂಕಂದಾಯ ಸಂಹಿತೆಯ ಅರ್ಥದಂತೆ ಭೂ ಮಾಲೀಕನ ದರ್ಜೆಯನ್ನು ಕೊಡುವುದು; ಮತ್ತು (೪) ಬೇರೆ ಚಿಕ್ಕಪುಟ್ಟ ಉದ್ದೇಶಗಳಿಗಾಗಿ ಹಣ ಒದಗಿಸುವುದು.

ಇದೀಗ ಮಾನ್ಯರೆ, ಈ ವಿಧೇಯಕವನ್ನು ಮಂಡಿಸಲು ಸದನದ ಅನುಮತಿಯನ್ನು ಯಾಚಿಸುವೆ.

ಪ್ರಶ್ನೆ ಕೇಳಬಹುದು.

ಶ್ರೀ ಎಸ್.ಎಲ್.ಕರಂದೀಕರ (ರತ್ನಗಿರಿ–ಉತ್ತರ ವಿಭಾಗ): ಮಾನ್ಯರೇ, ಈ ಮಸೂದೆಯ ಮಂಡನೆಯನ್ನು ನಾನು ವಿರೋಧಿಸುತ್ತೇನೆ (ಗಲಾಟೆ). ಸಾಮಾನ್ಯ ಪರಿಸ್ಥಿತಿಯಲ್ಲಿ ನಾನು ಮಂಡನೆಯನ್ನು ವಿರೋಧಿಸುವುದಿಲ್ಲ. ಏಕೆಂದರೆ ಈ ಸದನದಲ್ಲಿ ಮಂಡನೆಯನ್ನು ವಿರೋಧಿಸದೇ ಇರುವುದು ಪರಿಪಾಠವಾಗಿ ಪರಿಣಮಿಸಿದೆ. ಆದರೆ ವಿಧೇಯಕವನ್ನು ಮಂಡಿಸುವ ಮುನ್ನವೇ ನಾನು ಇದನ್ನು ವಿರೋಧಿಸುತ್ತಿರುವುದು ಒಂದೇ ಒಂದು ಕಾರಣಕ್ಕಾಗಿ.

ಅನುದಾನಗಳ ಬೇಡಿಕೆಯನ್ನು ಕುರಿತು ಈ ಸದನದಲ್ಲಿ ಚರ್ಚೆ ನಡೆದಾಗ ಭೂ ಕಂದಾಯದ ಪ್ರಶ್ನೆ ಪ್ರಾಂತದಲ್ಲಿಯ ಭೂ ಕಂದಾಯ ಧೋರಣೆಯ ಸಮಗ್ರ ಸಮಸ್ಯೆಯನ್ನು ಸುಮಾರು ಮುಂಬರುವ ಫೆಬ್ರವರಿ ತಿಂಗಳಲ್ಲಿ ಎತ್ತಿಕೊಳ್ಳಬಹುದೆಂಬ ಆಶ್ವಾಸನೆಯನ್ನು ನಮ್ಮ ಮಾನ್ಯ ಕಂದಾಯ ಮಂತ್ರಿಗಳು ನೀಡಿದ್ದರು; ಆದ್ದರಿಂದ ನಾವು ಏನೇ ನಿರ್ಣಯ ತೆಗೆದುಕೊಳ್ಳಬೇಕಾದರೂ ಅಲ್ಲಿಯವರೆಗೆ ತಡೆಯಬೇಕು. ಭೂ ಕಂದಾಯದ ಯಾವುದೇ ವಿಷಯದಲ್ಲಿ ತುಂಡುತುಂಡಾಗಿ ಬರುವ ಶಾಸನ ರಚನೆಯನ್ನು ನಾವು ಸ್ವೀಕರಿಸಬಾರದು. ಈ ಸದನದಲ್ಲಿ ಇದೀಗ ತಂದಿರುವ ಶಾಸನ ರಚನೆಗೆ ಅವಕಾಶ ಕೊಡಬಾರದೆಂಬ ನನ್ನ ಹೇಳಿಕೆಗೆ ಮಂತ್ರಿವರ್ಗದವರೂ ಸಹ ಒಪ್ಪಬಹುದು.

ಸದನಕ್ಕೆ ಈಗಾಗಲೇ ಪ್ರಾಸ್ತಾವಿಕ ಹೇಳಿಕೆಗಳನ್ನು ಓದಿ ತೋರಿಸಿರುವುದರಿಂದ ನಾನು ವಿರೋಧ ವ್ಯಕ್ತಮಾಡಬಹುದಾದ ಅಭಿಪ್ರಾಯಗಳು ಸಾಕಷ್ಟಿವೆ. ಆದರೆ ಇವೆಲ್ಲವುಗಳನ್ನು ಚರ್ಚೆ ಮಾಡಲು, ಹೋರಾಡಲು

ನಮಗೆ ಮುಂದೆ ಇನ್ನೂ ಸಾಕಷ್ಟು ಅವಕಾಶವಿದೆ. ಆದುದರಿಂದ ಸದನದ ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳಬಯಸುವುದಿಲ್ಲ. ಆದರೆ ಇದು ತತ್ವದ ವಿಷಯವೆಂದು ನನ್ನ ಭಾವನೆ. ನನ್ನ ಪ್ರಾಂತದಲ್ಲಿಯೇ ಭೂ ಕಂದಾಯದ ಸಮಸ್ತ ಸಮಸ್ಯೆಗಳನ್ನು ವಿಚಾರಣೆಗಾಗಿ ಕೈಗೆತ್ತಿಕೊಳ್ಳುವ ಹಾಗೂ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ವಿಶಾಲ ತಳಹದಿಯ ಮೇಲೆ ಶಾಸನ ರಚನೆಯನ್ನು ಮಂಡಿಸುವ ಆಶ್ವಾಸನೆಯನ್ನು ಸರಕಾರವು ಕೊಟ್ಟಿದೆ. ಕೊಲಾಬಾ, ರತ್ನಗಿರಿ ಜಿಲ್ಲೆಗಳನ್ನು ಕುರಿತು ಪ್ರತ್ಯೇಕವಾಗಿ ಹೀಗೆ ಇಂಥ ಶಾಸನ ರಚನೆ ಮಾಡುವ ಕಾರಣವಿಲ್ಲ. ನಾನು ಮಂಡನೆಯನ್ನು ವಿರೋಧಿಸುತ್ತೇನೆ.

ಮಾನ್ಯ ಸಭಾಪತಿಗಳು: ಇದು ಚರ್ಚೆಯ ಸಮಯ ಎಂದು ಭಾವಿಸಿ, ಇದರಲ್ಲಿ ಈಗ ಭಾಗವಹಿಸುವ ಹಕ್ಕು ಯಾವುದೇ ಸಭಾಸದನಿಗೆ ಇದೆಯೆಂದು ನನಗೆ ತೋರುವುದಿಲ್ಲ. ಈ ವಿಧೇಯಕವನ್ನು ಮಂಡಿಸ ಲಿಚ್ಛಿಸುವ ಮಾನ್ಯ ಸದಸ್ಯರಿಗೆ ಇದೀಗ ಉತ್ತರಿಸುವ ಹಕ್ಕು ಮಾತ್ರ ಇದೆ; ಅವರು ಉತ್ತರಿಸಲು ಬಯಸಿದರೆ, ಅವರಿಗೆ ನಾನು ಅವಕಾಶ ಕೊಡುವೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನನ್ನ ಸ್ನೇಹಿತರಾದ ಮಾನ್ಯ ಶ್ರೀ ಕರಂದೀಕರ ಅವರ ಅಭಿಪ್ರಾಯಗಳಿಗೆ ವಿವರವಾಗಿ ನಾನು ಉತ್ತರಿಸಬೇಕಾಗಿದೆಯೆಂದು ನನಗೆ ತೋರುವುದಿಲ್ಲ. ಮಾನ್ಯ ಕಂದಾಯ ಮಂತ್ರಿಗಳು ಸಮಗ್ರ ಭೂ ಕಂದಾಯ ಪದ್ಧತಿಯನ್ನು ಬದಲಿಸಲು ಶಾಸನ ರಚನೆಯನ್ನು ಸದನದಲ್ಲಿ ಮಂಡಿಸುವ ಆಶ್ವಾಸನೆ ಕೊಟ್ಟಿರುವುದಾಗಿ ಅವರು ಹೇಳಿದರು. ಇಂಥ ಆಶ್ವಾಸನೆ ಕೊಟ್ಟಾಗ, ದುರ್ದೈವದಿಂದ ನಾನು ಸದನದಲ್ಲಿರಲಿಲ್ಲ. ಮೇಲಾಗಿ ಈ ಸದನಕ್ಕೆ ಅವರಿತ್ತ ಆಶ್ವಾಸನೆಯ ಇತಿಮಿತಿ, ಅವಕಾಶ ಇವು ಯಾವೂ ನನಗೆ ಗೊತ್ತಿಲ್ಲ. ಆದರೆ ಮಾನ್ಯರೆ, ನಾನು ಸದನಕ್ಕೆ ತಿಳಿಸಬೇಕಾದುದು ಇಷ್ಟೇ. ಖೋತಿ ಪದ್ಧತಿಯು ತನ್ನದೇ ಆದ ಸ್ವತಂತ್ರ ಪದ್ಧತಿಯಾಗಿದೆ. ಅದು ಭೂ ಕಂದಾಯ ಸಂಹಿತೆಗೆ ಸಂಬಂಧಿಸಿದ ಪದ್ಧತಿಯಲ್ಲ. ಅದು ಈ ಪ್ರಾಂತದ ಸಾಮಾನ್ಯ ಭೂ ಹಿಡುವಳಿ ಪದ್ಧತಿಯ ಅಂಶ ಮಾತ್ರ ಇದು ಪ್ರತ್ಯೇಕವಾದ ವಿಷಯವೇ ಇದೆ. ಆದ್ದರಿಂದ ಸಾಮಾನ್ಯ ಪದ್ಧತಿಯಲ್ಲಿ ಇರದೇ ಇರುವ ಖೋತಿ ಪದ್ಧತಿಯನ್ನು ಪ್ರತ್ಯೇಕವಾಗಿ ವಿಚಾರಣೆಗೆ ತೆಗೆದೆಕೊಂಡಾಗ ಅದನ್ನು ವಿರೋಧಿಸಲು ಏನೂ ಕಾರಣವಿಲ್ಲವೆಂದು ನನಗೆ ತೋರುತ್ತದೆ.

ಇನ್ನೊಂದು ಮಾತನ್ನು ನಾನು ಸದನಕ್ಕೆ ತಿಳಿಸುವೆ: ಮಂತ್ರಿವರ್ಗದಲ್ಲಿರುವ ಮಾನ್ಯ ಸದಸ್ಯರು ತಮ್ಮ ಹೇಳಿಕೆಯಂತೆ ಶಾಸನ ರಚನೆಯನ್ನು ನಿಜವಾಗಿಯೂ ಕಾರ್ಯರೂಪಕ್ಕೆ ತರುವುದಾದರೆ ಇಂದಿನ ವಿಧೇಯಕಕ್ಕೆ ಸಂಬಂಧಿಸಿದಂತೆ ಅವರು ಸೂಚಿಸಬಯಸುವ ಕ್ರಮಗಳು ನನಗೆ ಸಮಾಧಾನ ಕೊಡುವಂತಿದ್ದರೆ ಅವರ ಶಾಸನ ರಚನೆ ನನ್ನದಕ್ಕಿಂತಲೂ ಚೆನ್ನಾಗಿದೆಯೆಂದು ನನಗೆ ತೋರಿದರೆ, ನನ್ನ ಈ ವಿಧೇಯಕ ವನ್ನು ಹಿಂದಕ್ಕೆ ತೆಗೆದುಕೊಳ್ಳುವೆನೆಂದು ಹೇಳಲು ನಾನು ಹಿಂಜರಿಯುವುದಿಲ್ಲ. ಈ ಸಂದರ್ಭಲ್ಲಿ ಇದಕ್ಕೂ ಹೆಚ್ಚಿಗೆ ನಾನೂ ಮಾತನಾಡುವ ಅವಶ್ಯವಿಲ್ಲ.

ಪ್ರಶ್ನೋತ್ತರಗಳ ನಂತರ ಅನುಮತಿ ನೀಡಲಾಯಿತು.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ವಿಧೇಯಕವನ್ನು ಮಂಡಿಸುವೆ.

ಮಾನ್ಯ ಸಭಾಪತಿಗಳು: ವಿಧೇಯಕವನ್ನು ಮಂಡಿಸಲಾಯಿತು.

# ೨೧

# *ಗ್ರಾಮ ಪಂಚಾಯಿತಿಗಳ ಮಸೂದೆ: ೧

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಸಭಾಪತಿಗಳೆ, ಈ ವಿಧೇಯಕಕ್ಕೆ ಸಂಬಂಧಿಸಿದ ಮಾನ್ಯ ಮಂತ್ರಿಗಳ ಭಾಷಣವನ್ನು ನಾನು ಅತ್ಯಂತ ಕುತೂಹಲದಿಂದ ಕೇಳಿರುವೆ. ಗಂಭೀರವಾಗಿ ಆಸಕ್ತಿಯಿಂದ ಕೇಳಿರುವೆನೆಂದೂ ಹೇಳಬಹುದು. ಈ ವಿಧೇಯಕ ಬಹಳ ಮಹತ್ವದ್ದಾಗಿದೆ ಎಂಬ ಸತ್ಯ ಸಂಗತಿಯಲ್ಲಿ ಎರಡು ಮಾತುಗಳಿಲ್ಲವೆಂಬುದೂ ನನಗೆ ಗೊತ್ತಿದೆ. ನಮ್ಮ ಪ್ರಾಂತದ ಗ್ರಾಮಾಂತರ ಜನತೆಯ ನಾಗರಿಕ ಸೌಲಭ್ಯಗಳ ಮೇಲೆ ಪರಿಣಾಮ ಬೀರುವಂತಹ ಸ್ವಾಯತ್ತ ಶಾಸನದ ವಿಷಯವನ್ನು ಈ ವಿಧೇಯಕವು ಒಳಗೊಂಡಿರುವುದಲ್ಲದೆ, ಗ್ರಾಮೀಣ ಜನತೆಯ ಜೀವನ, ಸ್ವಾತಂತ್ರ್ಯ ಹಾಗೂ ಆಸ್ತಿ ಇವುಗಳಿಗೂ ಇದು ಸಂಬಂಧಪಟ್ಟಿದೆ. ವಿಧೇಯಕದಲ್ಲಿರುವ ಇವೆಲ್ಲವುಗಳನ್ನು ನಾನು ಮಾನ್ಯ ಮಾಡುವೆ; ಆದರೆ ಇದರಲ್ಲಿರುವ ವಿಷಯಗಳಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ, ಈ ವಿಧೇಯಕದ ಪರಿಣಾಮಗಳನ್ನು ವಿವರವಾಗಿ ಚರ್ಚೆ ಮಾಡಲು ಮಾನ್ಯ ಮಂತ್ರಿಗಳು ಹೆಚ್ಚು ಕಾಲಾವಕಾಶ ಕೊಡಬೇಕಾಗಿತ್ತೆಂಬುದನ್ನು ನಾನು ಹೇಳದೇ ಇರಲಾರೆ. ವಿಧೇಯಕವನ್ನು ಮಂಡಿಸುವ ಮುನ್ನ ಏಳು ದಿನಗಳ ಅವಧಿ ಬೇಕಾಗುತ್ತದೆ ಎಂಬ ಕಾನೂನಿನ ಅವಶ್ಯಕತೆಯನ್ನು ಮಾತ್ರ ಮಾನ್ಯ ಮಂತ್ರಿಗಳು ಪೂರೈಸಿ, ತಮ್ಮಷ್ಟಕ್ಕೆ ತಾವೇ ತೃಪ್ತಿಪಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ವಿಧೇಯಕವನ್ನು ಕುರಿತು ಚಿಂತನೆ ಮಾಡಲು ಏಳು ದಿನಗಳೇಕೆ, ಏಳು ತಿಂಗಳುಗಳ ಅವಧಿ ಅವಶ್ಯ ಎಂದು ತಿಳಿಯಬಯಸುವೆ. ಈ ವಿಧೇಯಕದಲ್ಲಿರುವ ಅಂಶಗಳನ್ನು ಕುರಿತು ಸಾರ್ವಜನಿಕರ ಅಭಿಪ್ರಾಯವನ್ನು ಕೋರಿ ಒಂದು ಸುತ್ತೋಲೆಯನ್ನು ಈಗಲೂ ಸಹ ಮಾನ್ಯ ಮಂತ್ರಿಗಳು ಹೊರಡಿಸಬಹುದು. ಇದು ಅವರಲ್ಲಿ ನನ್ನ ಪ್ರಾರ್ಥನೆ. ಆದರೆ, ಅವರು ಈ ಬಿನ್ನಹವನ್ನು ಮನ್ನಿಸದಿದ್ದರೆ– ನನ್ನ ದೃಷ್ಟಿಯಲ್ಲಿ ವಿಚಾರಾರ್ಹವಾದ ಮಹತ್ವದ ಎರಡು ವಿಷಯ ತಿಳಿಯಬಯಸುವೆ. ಮಾನ್ಯರೆ, ಈ ಶಾಸನ ರಚನೆಯನ್ನು ಕೈಗೆತ್ತಿಕೊಳ್ಳುವ ಯೋಗ್ಯ ಅಧಿಕಾರ ಇಂದಿಗೂ ಸರಕಾರಕ್ಕಿಲ್ಲ ಎಂಬುದು ನನ್ನ ಮತ. ಇಂದಿನ ಆಡಳಿತ ಪದ್ಧತಿ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ ಎಂಬುದು ಸರಕಾರಕ್ಕೂ ತಿಳಿದ ವಿಷಯ. ದೋಷಾರೋಪಣೆಯ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ತಮ್ಮ ಮುಂದೆ ಇದ್ದ ಸತ್ಯ ಸಂಗತಿಗಳ ಚಿತ್ರಣವನ್ನು ನಾನು ಕೊಡುತ್ತಿರುವೆ. ಈ ಸರಕಾರದ ಆಡಳಿತದಿಂದಾಗಲಿ, ಕಾರ್ಯಗಳಿಂದಾಗಲಿ ಈ ದೇಶದ ಜನತೆಯ ಯಾವ ಪಂಗಡಕ್ಕೂ ಸಮಾಧಾನವಿಲ್ಲ. ಸತ್ಯಸಂಗತಿಯೆಂದರೆ– ಈ ದೇಶದಲ್ಲಿ ಶಕ್ತಿಯುತವಾದ ಪಕ್ಷವೊಂದಿದೆ; ಅದು ಇಂದಿನ ಸರಕಾರಕ್ಕೆ ರಾಜ್ಯವಾಳಲು ಇರುವ ನೈತಿಕ ಹಕ್ಕನ್ನು ಸಹ ಒಪ್ಪಿಕೊಳ್ಳಲು, ಮಾನ್ಯ ಮಾಡಲು ಸಿದ್ಧವಿಲ್ಲ. ಮಾನ್ಯರೆ, ನೂತನ ಸಂವಿಧಾನವನ್ನು ಸ್ವೀಕರಿಸುವ ಹೊಸದರಲ್ಲಿ ನಾವಿದ್ದೇವೆಯೆಂಬುದು ನಮಗೆ ಗೊತ್ತಿದೆ. ಜನತೆಯ,

---

*ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXXV,
ಪುಟಗಳು ೧೧೨೮–೩೬, ದಿನಾಂಕ ೬ ಅಕ್ಟೋಬರ್ ೧೯೩೨

ಜನತೆಯಿಂದ ಹಾಗೂ ಜನತೆಗಾಗಿ ಸರಕಾರವಿರಬೇಕೆಂದು ಭಾರತದ ಸಂವಿಧಾನದ ರಚನೆ ಯಾಗುತ್ತಿದೆಯೆಂಬುದೂ ನಮಗೆ ಗೊತ್ತಿದೆ. ಇದೆಲ್ಲದರ ಅರಿವು ನಮಗಿದ್ದುದರಿಂದ, ಒಂದೆರಡು ವರುಷಗಳಲ್ಲಿ ಹೊಸ ಸಂವಿಧಾನವು ಅಸ್ತಿತ್ವ ಪಡೆಯುವುದೆಂದೂ ಸಮುದಾಯದ ಎಲ್ಲ ವರ್ಗದವರಿಂದ ನಾವು ಬಯಸಿದರೆ ಅದು ನ್ಯಾಯಸಮ್ಮತವೇ ಸರಿ. ಮಾನ್ಯರೆ, ಈ ವಿಚಾರಕ್ಕೆ ಮನ್ನಣೆ ನೀಡಿ ಮಾನ್ಯ ಮಂತ್ರಿಗಳಿಗೆ ಮತ್ತು ಮಂತ್ರಿವರ್ಗದ ಮಾನ್ಯ ಸದಸ್ಯರಿಗೆ ಈಗಿನ ಪರಿಸ್ಥಿತಿಯಲ್ಲಿ ಈ ಸರಕಾರ ತಾತ್ಕಾಲಿಕ ಸರಕಾರಕ್ಕಿಂತ ಹೆಚ್ಚಿನದೇನೂ ಅಲ್ಲ ಎಂದು ನಾನು ತಿಳಿಯ ಬಯಸುವೆ. ಮಾನ್ಯರೆ, ತಮ್ಮ ಆಡಳಿತದ ಕ್ಷೇತ್ರಗಳಲ್ಲಿ ಸರ್ವರ ಸಮ್ಮತವಿದೆಯೆಂದು ಮಹತ್ವಪೂರ್ಣವಾದ ಬದಲಾವಣೆಗಳನ್ನು ಕೈಕೊಳ್ಳುವುದು ತಾತ್ಕಾಲಿಕ ಸರಕಾರಕ್ಕೆ ಶಕ್ಯವಿಲ್ಲ. ಬಹಳವೆಂದರೆ ಮನೆಯ ಯಜಮಾನರು ತನ್ನ ಮನೆಗೆ ಬಂದು ಇರುವವರೆಗೂ ಮಧ್ಯಂತರದಲ್ಲಿ ವಾಸಿಸಲು ಅನುಕೂಲವಾಗುವಂತೆ ಹಲವು ದುರಸ್ತಿಗಳನ್ನು ಮಾಡಿಸಬಹುದು.

ಸಂಸತ್ತಿನ ಜೀವನವನ್ನು ಕುರಿತು ಮಾನ್ಯ ಮಂತ್ರಿಗಳಿಗೆ ಒಂದು ಸಾಮ್ಯವನ್ನು ನೆನಪಿಸಿ ಕೊಡುವೆ. ಸಂಸತ್ತಿನ ಪದ್ಧತಿಯನ್ನು ನೂರಾರು ವರುಷಗಳಿಂದ ಅನುಸರಿಸುತ್ತಿರುವ ಇಂಗ್ಲೆಂಡಿನಲ್ಲಿ ಮಂತ್ರಿ ಮಂಡಲವು ಸೋತಾಗ, ಪ್ರತಿಪಕ್ಷಕ್ಕೆ ಅಧಿಕಾರದ ಸೂತ್ರ ವಹಿಸಿಕೊಡದೆ, ನೇರವಾಗಿ ರಾಜೀ ನಾಮೆಯನ್ನು ಸಹ ಕೊಡದೆ ಚುನಾವಣೆಯನ್ನು ಎದುರಿಸಲು ಮನಸ್ಸು ಮಾಡಿದರೆ– ಆಗ ಮಂತ್ರಿ ಮಂಡಲವು ಪರಿಣಾಮಕಾರಿಯಾದ ಹಾಗೂ ಮಹತ್ವದ ಯಾವುದೇ ಶಾಸನ ರಚನೆ ಕೈಗೊಳ್ಳಬಾರ ದೆಂಬುದು ಸಂವಿಧಾನಗ್ರಾಹ್ಯ ಸಂಪ್ರದಾಯವಾಗಿದೆ. ಚುನಾವಣೆ ಪರಿಣಾಮ ಹೊರಬೀಳುವರೆಗೂ, ಆ ಸರಕಾರವು ರಾಜ್ಯಾದ ಆಡಳಿತವನ್ನು ಮಾತ್ರ ನೋಡಿಕೊಳ್ಳಬಹುದಾಗಿದೆ; ಏಕೆಂದರೆ ಇಂಥ ಸರಕಾರವು ಸ್ವೀಕರಿಸಿದ ಯಾವುದೇ ನಿರ್ಣಯದಿಂದ ಹೊಸ ಸರಕಾರವು ಇಕ್ಕಟ್ಟಿಗೆ ಸಿಕ್ಕಿಕೊಳ್ಳಕೂಡದು. ಸಂಸತ್ತಿನ ಸಂವಿಧಾನದ ಇಂಥ ಸಂಪ್ರದಾಯಗಳನ್ನು ಮಾನ್ಯ ಮಂತ್ರಿಗಳು ಅನುಸರಿಸಬಹುದೇ? ನಿರ್ಣಯ ಅವರಿಗೇನೇ ಬಿಟ್ಟುಕೊಡುವೆ.

ಮಾನ್ಯರೆ, ಕೇವಲ ಏಳು ದಿನಗಳ ಅವಧಿಯನ್ನಿತ್ತು ಇಷ್ಟು ಆತುರದ ಕ್ರಮವನ್ನು ಮಾನ್ಯ ಮಂತ್ರಿಗಳು ಅನುಸರಿಸುವುದಕ್ಕೆ ಕಾರಣವೇನೆಂಬುದನ್ನು ನಾನು ತಿಳಿಯೆ. ಇಂಥ ಕ್ರಮ ಕೈಗೊಳ್ಳಬೇಕೆಂದು ಈ ಪ್ರಾಂತದ ಜನತೆಯಿಂದ ಇಷ್ಟು ಒತ್ತಾಯ ಬಂದಿದೆಯೇ? ಇದು ಅತಿ ಅವಶ್ಯವಾಗಿದೆಯೇ? ಇಲ್ಲವೇ ಇದು ಜರೂರಾದ ಬೇಡಿಕೆಯಾಗಿದೆಯೇ? ಇಂಥದು ಯಾವುದೂ ಇಲ್ಲವೆಂದು ನನಗೆ ತೋರುತ್ತದೆ. ನನಗೆ ತಿಳಿದ ಮಟ್ಟಿಗೆ ನಮ್ಮ ದೇಶದಲ್ಲಿ ಯಾವ ರಾಜಕೀಯ ಪಂಗಡವೂ ಇಂಥ ಕ್ರಮವು ತಮ್ಮ ಪಕ್ಷದ ಬೇಡಿಕೆಯಾಗಿದೆಯೆಂದು ಪ್ರಕಟಿಸಿಲ್ಲ. ಹಿಂದಿನ ವಿಧಾನ ಪರಿಷತ್ತಿನಲ್ಲಿದ್ದ ಲಿಬರಲ್ ಪಕ್ಷದವರು, ಬ್ರಾಹ್ಮಣೇತರ ಪ್ರತಿನಿಧಿಗಳು ಅಥವಾ ಕಾಂಗ್ರೆಸ್ ಸದಸ್ಯರು ಯಾರೂ ಗ್ರಾಮ ಪಂಚಾಯಿತಿಯನ್ನು ತರುವುದು ತಮ್ಮ ಮೂಲಭೂತ ಕಾರ್ಯಕ್ರಮಗಳಲ್ಲಿ ಒಂದಾಗಿದೆಯೆಂದು ಭಾವಿಸಿ ಎಂದೆಂದೂ ಇದನ್ನು ಒತ್ತಾಯಿಸಿಲ್ಲ. ಇಂತಹುದು ಇದ್ದರೆ, ನನ್ನ ಗಮನಕ್ಕಂತೂ ಇದು ಬಂದಿಲ್ಲ. ಇಂಥ ಕ್ರಮವನ್ನು ಕೈಗೊಳ್ಳಬೇಕೆಂದು ಜನತೆಯ ಆಕ್ರಂದನವಿದ್ದುದೂ ನನಗೆ ಕಂಡುಬಂದಿಲ್ಲ. ೧೯೨೦ರ ಗ್ರಾಮ ಪಂಚಾಯಿತಿ ಕಾನೂನಿನ ಕಾರ್ಯವನ್ನು ಪರಿಶೀಲಿಸಿ ವರದಿಯನ್ನು ಒಪ್ಪಿಸಬೇಕೆಂದು ನೇಮಕವಾದ ಸಮಿತಿಯು ೧೯೨೫ ರಲ್ಲಿ ಪ್ರಕಟಿಸಿದ ವರದಿಯನ್ನು ಓದಿ ನೋಡಿದರೆ ನಿಮಗೇನು ಕಂಡುಬರುವುದು? ಲೆಕ್ಕಹಾಕಿ ನೋಡಿದರೆ ನಮ್ಮ ಪ್ರಾಂತದಲ್ಲಿ ಸುಮಾರು ೩೦,೦೦೦ ಗ್ರಾಮಗಳಿವೆ. ಸ್ವಸಂತೋಷದಿಂದ ಜನತೆ ೧೯೨೦ರ ಕಾನೂನನ್ನು ಜಾರಿಗೆ ತರಬೇಕೆಂದು ಅದನ್ನು ಸ್ವೀಕರಿಸಲಾಯಿತು. ಆದರೆ ಪರಿಣಾಮವೇನಾಯಿತು? ಸಿಂಧಿ ಜನರು

ತಮ್ಮ ಭಾಗದಲ್ಲಿ ಗ್ರಾಮ ಪಂಚಾಯತಿಗಳನ್ನು ಸ್ಥಾಪಿಸಲು ಹಿಂದೇಟು ಹಾಕಿದರು; ಹೀಗಾದ್ದರಿಂದ ಸಿಂಧ್ ಪ್ರಾಂತದಲ್ಲಿ ಒಂದೂ ಗ್ರಾಮ ಪಂಚಾಯತಿ ಈಗ ಕಂಡುಬರುತ್ತಿಲ್ಲ. ನಮ್ಮದೇ ಪ್ರಾಂತದಲ್ಲಿ ಸುಮಾರು ೩೭೩ರಷ್ಟು ಅಲ್ಪಸಂಖ್ಯೆಯ ಗ್ರಾಮ ಪಂಚಾಯತಿಗಳು ಇವೆ. ಇಲ್ಲಿಯೂ ಸಹ ಜನರ ನಾಗರಿಕ ಜೀವನದ ಬಗ್ಗೆ ದುಃಖದಾಯಕವಾದ ಮಾತು ನಾನು ಹೇಳಬೇಕಾಗುತ್ತದೆ. ಇದೇನೇ ಇರಲಿ, ಗ್ರಾಮಪಂಚಾಯತಿ ಸ್ಥಾಪಿತವಾಗಬೇಕೆಂದು ಜನರು ಆತುರರಾಗಿಲ್ಲವೆಂಬುದು ಇದರಿಂದ ತಿಳಿದುಬರುವುದು. ಈ ಹಂತದಲ್ಲಿ ಇನ್ನೂ ಹಲವಾರು ಕಾರಣಗಳನ್ನು ಕೊಡಲು ನನಗೆ ಇಷ್ಟವಿಲ್ಲ. ಆದರೆ ಸ್ಥಳೀಯ ಪ್ರಜಾರಾಧಿಕಾರ ಖಾತೆಯನ್ನು ವಹಿಸಿಕೊಂಡಿರುವ ನನ್ನ ಮಾನ್ಯ ಮಿತ್ರರು ನಮ್ಮ ಸನ್ನಿವೇಶದ ನಿಜವಾದ ವಿವರಣೆಯನ್ನು ಅಂಗೀಕರಿಸುವರೆಂದು ನಾನು ಮನಸಾ ನಂಬಿರುವೆ. ಗ್ರಾಮಪಂಚಾಯತಿಗೆ ಅವರು ನ್ಯಾಯದಾನದ ಕಾರ್ಯಾಂಗವನ್ನು ಜೋಡಿಸಿರುವರು; ಗುಳಿಗೆಗೆ ಸಿಹಿ ಹಚ್ಚಿದರೆ ಅದನ್ನು ಕೂಡಲೇ ನುಂಗಲು ಸಾಧ್ಯವಾಗುತ್ತದೆಂಬುದೇ ಇದಕ್ಕೆ ಕಾರಣವೆಂದು ನಾನು ಭಾವಿಸಿರುವೆ. ಈ ವಿಚಾರಗಳ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡುವುದು ಹಿತಕರವೆಂದೂ ನನ್ನ ಅನಿಸಿಕೆ; ಹೀಗೆ ಮಾಡುವುದರಿಂದ ನಮ್ಮ ಪ್ರಾಂತದ ಎಲ್ಲ ಜನರ ಸಂಪೂರ್ಣ ಪ್ರಾತಿನಿಧ್ಯವಿರುವ ಸರಕಾರವು ಇದರ ಗುಣಗಳನ್ನೆಲ್ಲ ಸರ್ವರೀತಿಯಿಂದ ಪರಾಮರ್ಶಿಸಲು ಸಾಧ್ಯವಾಗುವುದು.

ಮಾನ್ಯರೆ, ವಿಧೇಯಕದ ಗುಣಗಳನ್ನು ಕುರಿತು ಹೇಳುವಾಗ, ಇದರಲ್ಲಿ ಎರಡು ಭಾಗ ಮಾಡ ಬೇಕೆಂದು ನನಗೆ ಅನಿಸುತ್ತದೆ. ಮೊದಲನೆಯ ಭಾಗ ಸ್ಥಳೀಯ ಪ್ರಜಾಧಿಕಾರದ ಅಂಗವಾಗಿ ಗ್ರಾಮಪಂಚಾಯತಿಗಳ ಕಾರ್ಯಗಳನ್ನು ಕುರಿತಾಗಿ ಇದ್ದುದು. ಈ ಆಡಳಿತದ ವಿಕೇಂದ್ರೀಕರಣ ನೀತಿ ಧೋರಣೆಗೆ ತತ್ವಶಃ ನನ್ನದೇನೂ ವಿರೋಧವಿಲ್ಲವೆಂದು ಮೊದಲಿಗೇ ಹೇಳಬಯಸುವೆ. ಈ ಪ್ರಾಂತದ ಸ್ಥಳೀಯ ಮಂಡಳಿಗಳಿಗೆ ಸ್ಥಳೀಯ ಮಂಡಳಿ ಕಾನೂನಿನ ಪ್ರಕಾರ ಕಾರ್ಯಭಾರ ಹೆಚ್ಚಾಗಿರುವವೆಂದು ತೋರಿದರೆ, ಈ ಕಾರಣದಿಂದ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸುವುದು ಅವುಗಳಿಗೆ ಸಾಧ್ಯವಿಲ್ಲವೆಂದು ಎನಿಸಿದರೆ, "ಸ್ಥಳೀಯ ಮಂಡಳಿಗಳ ಹೊರೆಯನ್ನಿಳಿಸುವಂತೆ ಗ್ರಾಮಪಂಚಾಯತಿಗಳನ್ನು ಕೂಡಲೇ ಸ್ಥಾಪಿಸಬೇಕು" ಎಂದು ನಾನೇ ಹೇಳುವೆ. ಹೆಸರಿಗೆ ಮಾತ್ರ ಗ್ರಾಮಪಂಚಾಯತಿ ಸ್ಥಾಪಿಸಬೇಕೆಂದು ಇಚ್ಛೆಪಟ್ಟರೆ– ಬಹಳಷ್ಟು ಘಾತುಕವಾದ ಪದ್ಧತಿಯತ್ತ ನಾವು ತಿರುಗಿದಂತಾಗುತ್ತದೆಂಬುದು ನನ್ನ ಭಾವನೆ. ನಮ್ಮ ಪ್ರಾಚೀನ ಗ್ರಾಮಪಂಚಾಯತಿಯನ್ನು ಅನೇಕರು ಪ್ರಶಂಸಿಸಿದ್ದಾರೆ. ಕೆಲವರಂತೂ ಅವುಗಳನ್ನು 'ಗ್ರಾಮ ಗಣರಾಜ್ಯ' ಎಂದೂ ಕರೆದಿದ್ದಾರೆ. ಆದರೆ ಅವು ಭಾರತದ ಸಾರ್ವಜನಿಕ ಜೀವನಕ್ಕೆ ವಿಷಕಾರಿಯಾಗಿವೆಯೆಂದು ಸ್ಪಷ್ಟವಾಗಿ ಹೇಳಲು ನಾನು ಎಳ್ಳಷ್ಟೂ ಹಿಂಜರಿಯುವುದಿಲ್ಲ.

ಶ್ರೀ ಪೆಸ್ತನ್‌ಶಹ ಎನ್. ವಕೀಲ: ಪ್ರಶ್ನೆ.

ಡಾ. ಬಿ. ಆರ್. ಅಂಬೇಡ್ಕರ್: ರಾಷ್ಟ್ರೀಯತೆಯನ್ನು ಚಿಗುರಿಸುವಲ್ಲಿ ಭಾರತವು ಸೋತಿದ್ದರೆ, ರಾಷ್ಟ್ರೀ ಯತೆಯ ಚೈತನ್ಯವನ್ನು ನಿರ್ಮಿಸುವಲ್ಲಿ ಭಾರತವು ವಿಫಲವಾಗಿದ್ದರೆ, ಅದಕ್ಕೆ ಪ್ರಮುಖ ಕಾರಣ ನಮ್ಮ ಗ್ರಾಮಪದ್ಧತಿಯೇ ಎಂಬುದು ನನ್ನ ಅಭಿಪ್ರಾಯ. ನಮ್ಮ ಗ್ರಾಮಪದ್ಧತಿಯು ಸ್ಥಾನೀಯ ವಿಶೇಷತೆಯಿಂದ, ಸ್ಥಾನೀಯ ದೇಶಾಭಿಮಾನದಿಂದ ತುಂಬಿಹೋಗಿದೆ. ಅದು ವಿಶಾಲವಾದ ನಾಗರಿಕ ಜೀವನಕ್ಕೆ ಆಸ್ಪದವನ್ನೇ ಮಾಡಿಕೊಡಲಿಲ್ಲ. ಏನೇನೂ ಇಲ್ಲ. ಪ್ರಾಚೀನ ಗ್ರಾಮಪಂಚಾಯತಿಯಲ್ಲಿ ಭಾರತವು ಏಕ ಜನಾಂಗದ ದೇಶವಾಗದೆಯೆ ಆಳುವ ಪ್ರಭುಗಳಿಗೆ ತೋರಿಸುವ ವಿಧೇಯತೆಯನ್ನುಳಿದು ಸರ್ವೇ ಸಾಮಾನ್ಯವಾದ ಯಾವ ಸಂಬಂಧವೂ ಇರದ ಈ ಗ್ರಾಮ ಸಮುದಾಯಗಳು ಬಿಡಿಬಿಡಿ ನಡುಗಡ್ಡೆಗಳಾಗಿವೆ. ಮಾನ್ಯರೆ,

ಇದು ನನ್ನೊಬ್ಬನದೇ ಅಭಿಪ್ರಾಯವಾಗಿಲ್ಲವೆಂಬುದು ನನಗೆ ಸಂತೋಷದ ಸಂಗತಿ. ೧೯೨೫ರಲ್ಲಿ ನೇಮಕಗೊಂಡ ಸಮಿತಿಯ ಸದಸ್ಯರೊಬ್ಬರು ಇದೇ ತೆರನಾಗಿ ಹೇಳಿರುವರು. ನನ್ನ ಮಿತ್ರರಾದ ಶ್ರೀ ಆರ್. ಜಿ. ಪ್ರಧಾನ ಅವರ ಟಿಪ್ಪಣಿ ಉಲ್ಲೇಖಿಸುವೆ. ಅದು ಹೀಗಿದೆ–

> "ಈ ಸಮುದಾಯಗಳು ಅತಿಶಯವಾದ ಗ್ರಾಮ ದೇಶಾಭಿಮಾನವನ್ನು ಮತ್ತು ಗ್ರಾಮ ಭಾವನೆಯನ್ನು ಪ್ರೋತ್ಸಾಹಿಸಿದವು: ಇದರಿಂದ ಭಾರತ ಒಟ್ಟಾರೆದಲ್ಲಿಯ ದೇಶದ ಏಕತೆ ಅಥವಾ ಸ್ವಾಭಾವಿಕ ಪ್ರಾದೇಶಿಕ ವಿಭಾಗಗಳಲ್ಲಿರುವ ಜನಾಂಗದ ಏಕತೆ ಇವುಗಳ ಗಟ್ಟಿಯಾದ ನೆಲಗಟ್ಟಿನ ಮೇಲೆ ರಚನೆಯಾಗಬೇಕಾಗಿದ್ದ ಶಕ್ತಿಯುತ ಭಾರತೀಯ ರಾಷ್ಟ್ರೀಯತೆಗೆ ಕುಂದು ಬಂದೊದಗಿದೆ."

ಶ್ರೀ ಪೆಸ್ತಾನಶಹ ಎನ್. ವಕೀಲ: ಶ್ರೀ ಆರ್. ಜಿ. ಪ್ರಧಾನರು ಇತಿಹಾಸಕಾರರೇ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲಿ ಇತಿಹಾಸಕಾರರನ್ನು ಮಧ್ಯೆ ತರುವುದು ಅವಶ್ಯವಾಗಿದೆಯೆಂದು ನನಗೆ ಅನಿಸುವುದಿಲ್ಲ. ಇತಿಹಾಸಕಾರರ ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು. ರಾಷ್ಟ್ರೀಯತೆಯ ಭಾವನೆಯನ್ನು ಮೂಡಿಸಲು ನೀವು ಪರಿಶ್ರಮಿಸುತ್ತಿರುವ ಇಂದಿನ ದಿನಗಳಲ್ಲಿ ಆ ಭಾವನೆಯು ಕರಗಿ ನೀರಾಗುವಂತೆ ಹಾಗೂ ನಾಶವಾಗುವಂತೆ ನಾವು ಏನನ್ನೂ ಮಾಡಕೂಡದು ಎಂಬುದು ನನ್ನ ಮತ. ನನಗೆ ಸಂಬಂಧಪಟ್ಟಷ್ಟು ಹೇಳಿರುವೆ; ಉಳಿದ ವಿಷಯ ಅವರಿಗೇ ಬಿಟ್ಟುಕೊಡಲು ಇಷ್ಟಪಡುವೆ.

ನನ್ನ ಮತ್ತೊಂದು ವಿರೋಧವೆಂದರೆ ಪಂಚಾಯತಿಗಳ ಸಂವಿಧಾನದ ಬಗೆಗಿನದು. ಮಾನ್ಯ ಸದಸ್ಯರು ತಿಳಿಸಿದಂತೆ, ಪುರುಷರ ಹಾಗೂ ಸ್ತ್ರೀಯರ ಪ್ರೌಢ ಮತಾಧಿಕಾರ ಅವಲಂಬಿಸಿ ಗ್ರಾಮಪಂಚಾಯತಿಗಳ ಚುನಾವಣೆ ನಡೆಯುವುದು ಎಂಬುದು ವಿಧೇಯಕದಲ್ಲಿದೆ. ನಾನೊಬ್ಬನೇ ಮಾತನಾಡುವುದಾದರೆ– "ಇದೆಲ್ಲ ಒಳ್ಳೆಯದೇ" ಎಂದು ನಾನು ತಕ್ಷಣ ಹೇಳಬಹುದು. ಆದರೆ ದಲಿತ ವರ್ಗದವರ ಪರವಾಗಿ ಮಾನ್ಯ ಮಂತ್ರಿಗಳಿಗೆ ನಾನು ಹೇಳುವುದಾದರೆ– ಪ್ರೌಢ ಮತಾಧಿಕಾರವೊಂದೇ ನಮಗೆ ಸಾಲದು ಎಂದು ನಾನು ನಿಃಸಂಶಯವಾಗಿ ತಿಳಿಸಬಯಸುವೆ. ಪ್ರತಿಯೊಂದು ಹಳ್ಳಿಯಲ್ಲಿ ದಲಿತರು ಅಲ್ಪಸಂಖ್ಯಾತರಾಗಿ, ತೀರ ಅಲ್ಪಸಂಖ್ಯಾತರಾಗಿ ಇರುವರೆಂಬುದನ್ನು ಮಾನ್ಯ ಮಂತ್ರಿಗಳು ಮರೆತಂತಿದೆ. ವಯಸ್ಕ ಮತಾಧಿಕಾರವು ಸ್ವೀಕೃತವಾಗಿದೆಯೆಂದು ಗ್ರಹಿಸಿದರೆ, ಆಗ ಅಲ್ಪಸಂಖ್ಯಾತರು ಬಹುಸಂಖ್ಯಾತರಾಗಲು ಶಕ್ಯವಿಲ್ಲ. ಆದ್ದರಿಂದ ಈ ಗ್ರಾಮಪಂಚಾಯತಿ ಬಂದರೆ, ಅಲ್ಪ ಸಂಖ್ಯಾತರಿಗೆ ವಿಶೇಷ ಪ್ರಾತಿನಿಧ್ಯ ದೊರೆಯಬೇಕೆಂಬುದನ್ನು ನಾನು ಒತ್ತಾಯಿಸಬೇಕಾಗುತ್ತದೆ. ಏನೇ ಇರಲಿ, ದಲಿತರಿಗಂತೂ ವಿಶೇಷ ಪ್ರಾತಿನಿಧ್ಯ ಇದ್ದೇ ಇದೆ. ಉಳಿದವರು ಅವರವರೇ ಹೇಳಬೇಕು.

ಮಾನ್ಯರೆ, ಇದು ಜಾತೀಯತೆಯೆಂದು ತಕ್ಷಣವೇ ಎದ್ದುನಿಂತು ಹೇಳುವ ಸದಸ್ಯರು ಈ ಸದನದಲ್ಲಿದ್ದಾರೆಂಬುದು ನನಗೆ ಗೊತ್ತಿದೆ. ಇದು ಜಾತೀಯತೆ ಎಂಬುದನ್ನು ನಾನು ಒಪ್ಪಿಕೊಳ್ಳುವೆ. ನನ್ನ ಧೋರಣೆಯೇ ಜಾತೀಯತೆಯದು ಆಗುವುದೆಂದೂ ನನಗೆ ಅನಿಸಿದೆ. ಹೀಗೆ ಹೇಳುವಲ್ಲಿ ನನಗೆ ನಾಚಿಕೆಯಿಲ್ಲ.

ಶ್ರೀ ಜೆ. ಬಿ. ಪೆಟಿಚ್: ರಾಷ್ಟ್ರೀಯತೆಗೆ ಇದು ಯೋಗ್ಯವೆ?

ಡಾ. ಬಿ. ಆರ್. ಅಂಬೇಡ್ಕರ್: ಓಹೋ! ಯಾಕಾಗಬಾರದು?

ಶ್ರೀ ಜೆ. ಬಿ. ಪೆಟಿಚ್: ಇದನ್ನು ಕೇಳಲು ನನಗೆ ಸಂತೋಷವೆನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಜಾತೀಯತೆ ಇರದೆ ಭಾರತವು ರಾಜಕೀಯ ಪ್ರಗತಿಪಥದಲ್ಲಿ

ಮುಂದುವರೆಯಲಾರದೆಂದು ಹೇಳಲೇಬೇಕಾಗಿದೆ. ಜಾತೀಯತೆ ಇರದೆ ಭಾರತಕ್ಕೆ ಸ್ವಾಯತ್ತ ಶಾಸನವಿಲ್ಲ. ಆಕ್ಷೇಪಣೆಯ ಯಾವ ಹೆದರಿಕೆಯಿಲ್ಲದೆ ಈ ಸೂಚನೆಯನ್ನು ನಾನು ಎತ್ತಿಹಿಡಿಯುವೆ.

ಆದ್ದರಿಂದ ದಲಿತ ವರ್ಗದವರ ಬಗ್ಗೆ ಹೇಳುವುದಾದರೆ ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಲು ದಲಿತರಿಗೆ ವಿಶೇಷ ಪ್ರಾತಿನಿಧ್ಯವು ಪ್ರತಿಯೊಂದು ಸ್ವಾಯತ್ತ ಸಂಸ್ಥೆಯಲ್ಲಿ ಇದೆಯೆಂಬುದು ನನಗೆ ಮನವರಿಕೆ ಯಾಗದ ಹೊರತು, ಭಾರತದ ಸ್ವಾಯತ್ತ ಶಾಸನದ ತತ್ವವನ್ನು ನಾನು ಎಂದೆಂದೂ ಒಪ್ಪಿಕೊಳ್ಳುವುದಿಲ್ಲ; ಇದು ಇಲ್ಲದಿರುವ ಈ ವಿಧೇಯಕದ ಪ್ರಥಮ ಭಾಗವನ್ನು ನಾನು ಒಪ್ಪಿಕೊಳ್ಳುವುದು ಸಾಧ್ಯವಾಗಲಾರದು.

ಮಾನ್ಯರೆ, ನಮ್ಮ ಸಮಸ್ಯೆಯ ಬಗ್ಗೆ ಯೋಚಿಸಲು ೧೯೨೫ರಲ್ಲಿ ಸ್ಥಾಪಿತವಾದ ಸಮಿತಿಯ ಇಬ್ಬರು ಸದಸ್ಯರು ದಲಿತ ವರ್ಗದವರಿಗೆ ವಿಶೇಷ ಪ್ರಾತಿನಿಧ್ಯವಿರಬೇಕೆಂಬ ಮನವಿಗೆ ಅನುಕೂಲರಾಗಿದ್ದಾರೆ. ಶ್ರೀ ಆರ್. ಜಿ. ಪ್ರಧಾನರ ಟಿಪ್ಪಣಿ ಉಲ್ಲೇಖಿಸುವೆ. ಅವರು ಹೇಳಿದುದು ಹೀಗಿದೆ–

> "ಗ್ರಾಮ ಪಂಚಾಯಿತಿಗಳಲ್ಲಿ ದಲಿತವರ್ಗದ ಪ್ರತಿನಿಧಿಗಳನ್ನು ನಾಮಕರಣ ಮಾಡಲು ಅವಕಾಶವಿರಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಜಿಲ್ಲಾಧಿಕಾರಿಯಾಗಲಿ ಅಥವಾ ಬಹುವಾಗಿ ಜಿಲ್ಲಾ ಸ್ಥಾನೀಯ ಮಂಡಳಿಯಾಗಲಿ ನಾಮಕರಣ ಮಾಡಬೇಕು. ದಲಿತರ ಪ್ರಾತಿನಿಧ್ಯವಿರ ಬೇಕೆಂಬ ದೃಷ್ಟಿಯಿಂದ. ಅದಕ್ಕೂ ಹೆಚ್ಚಾಗಿ ದಲಿತರ ಸಾಮಾನ್ಯ ಸ್ಥಿತಿಯ ಮಟ್ಟವನ್ನು ಏರಿಸುವ ಹಾಗೂ ಇನ್ನುಳಿದ ವರ್ಗದವರು ಅವರ ಜೊತೆಗೂಡಿ ಸಮುದಾಯ ಹೊಂದಾಣಿಕೆಯ ಅರಿವನ್ನು ಮೂಡಿಸಿಕೊಳ್ಳಬೇಕೆಂಬ ದೃಷ್ಟಿಯಿಂದ– ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ ಒಬ್ಬ ದಲಿತರಾದರೂ ಇರುವುದು ಅತ್ಯಂತ ಅವಶ್ಯವಾಗಿದೆ. ಆದ್ದರಿಂದ ದಲಿತ ವರ್ಗದವರೊಬ್ಬರೂ ಆಯ್ಕೆಯಾಗಿರದಿದ್ದ ಕಡೆಯಲ್ಲಿ ಅವರನ್ನು ನಾಮಕರಣ ಮಾಡಬೇಕು."

ಮಾನ್ಯರೆ, ನನ್ನ ಮಾನ್ಯ ಮಿತ್ರರಾದ ಶ್ರೀ ಪಿ. ಆರ್. ಚಿಕ್ಕೋಡಿಯವರ ಟಿಪ್ಪಣಿಯನ್ನು ಈಗ ಉಲ್ಲೇಖಿಸುವೆ. ಅವರೂ ಪ್ರತ್ಯೇಕ ಟಿಪ್ಪಣಿ ಬರೆದದ್ದು ಅದರಲ್ಲಿ ಅವರು ಹೇಳಿದುದು ಹೀಗಿದೆ–

> "ನಾಮಕರಣದಿಂದಾಗಲಿ ಅಥವಾ ಗ್ರಾಮಗಳಲ್ಲಿ ದಲಿತ ವರ್ಗದ ಕನಿಷ್ಠ ೫೦ ಪ್ರೌಢರಿದ್ದರೆ ಕಾಯ್ದಿರಿಸಲ್ಪಡುವ ಸ್ಥಳಗಳ ಪದ್ಧತಿಯಿಂದಾಗಲಿ ದಲಿತರ ಪ್ರತಿನಿಧಿಗಳಿಗೆ ಪಂಚಾಯತಿಯಲ್ಲಿ ಸ್ಥಳ ದೊರೆಯುವಂತೆ ಏನಾದರೂ ವ್ಯವಸ್ಥೆ ಮಾಡುವುದು ಅವಶ್ಯವೆಂದು ನನಗೆ ಅನಿಸಿದೆ. ಇಂದಿನ ಪರಿಸ್ಥಿತಿಯಲ್ಲಿ ಸರ್ವರಿಗೂ ಮುಕ್ತವಾದ ಚುನಾವಣೆಯಲ್ಲಿ ಇವರಾರೂ ಪ್ರತಿನಿಧಿಯಾಗಿ ಆಯ್ಕೆಯಾಗುವ ಸಂಭವ ತೀರ ಕಡಿಮೆ. ಇತ್ತೀಚೆಗೆ ಇಂಥದೊಂದು ಪ್ರಯತ್ನ ನಿಷ್ಫಲವಾದುದು ನನ್ನ ಗಮನಕ್ಕೆ ಬಂದಿದೆ..."

ಇದೇ ಸಂದರ್ಭದಲ್ಲಿ ಈ ಸದನದ ಸನ್ಮಾನ್ಯ ಹಿಂದೂ ಸದಸ್ಯರ ಗಮನವನ್ನು ಇತ್ತೀಚೆಗೆ ಘಟಿಸಿದ ಹಲವು ಘಟನೆಗಳ ಬಗ್ಗೆ ಸೆಳೆಯಬಯಸುವೆ. ಹೋದ ತಿಂಗಳ ೨೪ನೆಯ ದಿನಾಂಕದಂದು ರುಜು ಹಾಕಿದ ದಲಿತರೂ ಹಾಗೂ ಹಿಂದೂ ಜಾತಿಯವರ ಮಧ್ಯೆ ಉಂಟಾದ "ಪುಣೆ ಒಪ್ಪಂದ"ವನ್ನು ಕುರಿತು ನಾನು ಉಲ್ಲೇಖಿಸುತ್ತಿರುವೆ. ಇಲ್ಲಿರುವ ಅನೇಕ ಸದಸ್ಯರು ಆ ಒಪ್ಪಂದದ ಕರಾರುಗಳನ್ನು ಓದಿದ್ದಾರೆಂಬುದು

ನನ್ನ ತಿಳುವಳಿಕೆ. ಒಪ್ಪಂದದ ವಿಭಾಗವೊಂದರ ಬಗ್ಗೆ ತಾವು ಗಮನಿಸಬೇಕೆಂದು ನಾನು ಕೋರುವೆ. ಆ ವಿಭಾಗದಲ್ಲಿ ಎಲ್ಲ ಸ್ಥಾನಿಕ ಸಮಿತಿಗಳಲ್ಲಿ ದಲಿತ ವರ್ಗದವರಿಗೆ ಪ್ರಾತಿನಿಧ್ಯದ ಹಕ್ಕು ಇದೆಯೆಂಬುದು ಸ್ವೀಕರಿಸಲ್ಪಡಬೇಕು ಎಂದು ಒಪ್ಪಿಕೊಳ್ಳಲಾಗಿದೆ; ಆ ಒಪ್ಪಿಗೆಯನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಲಾಗುವುದು. ಮಾನ್ಯರೆ, ಒಪ್ಪಂದದಲ್ಲಿ ಬಂದಿರುವ ಈ ಅಂಶದ ಬಗ್ಗೆ ಹಿಂದೂ ಸದಸ್ಯರು ಗಮನಕೊಡುವರೆಂದು, ಹೋದ ೨೧ನೆಯ ದಿನಾಂಕದ ಮೊದಲು ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಒಪ್ಪಂದದ ಈ ಕರಾರುಗಳಿಗೆ ಹಿಂದೂ ಜನರು ನಿಷ್ಠೆಯಿಂದ ಬದ್ಧರಾಗುವರೆಂದು ನಾನು ನಿಶ್ಚಿತವಾಗಿ ನಂಬಿರುವೆ.

ಮಾನ್ಯರೆ, ವಿಧೇಯಕದ ಎರಡನೆಯ ಭಾಗವನ್ನು ಈಗ ನೋಡೋಣ. ಇದನ್ನು ಓದಿದ ಕೂಡಲೇ ಈ ವಿಧೇಯಕವು ಅತ್ತಿಯ ಹಣ್ಣಿನಂತೆ ಇದೆ ಎಂದು ಆರಂಭದಲ್ಲಿಯೇ ಹೇಳುವ ಮನಸ್ಸು ನನ್ನದಾಗಿತ್ತು. ಆದರೆ ವಿಧೇಯಕವನ್ನು ಸಂಪೂರ್ಣವಾಗಿ ಓದಿದ ಮೇಲೆ, ವಿಧೇಯಕದಲ್ಲಿ ಅಡಕವಾಗಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡ ಮೇಲೆ ನನ್ನ ಅಭಿಪ್ರಾಯವನ್ನು ಬದಲಿಸಬೇಕಾಯಿತು. ಈ ವಿಧೇಯಕವು ಅತ್ತಿಯ ಹಣ್ಣಿಗಿಂತಲೂ ಕೆಟ್ಟದಾಗಿದೆಯೆಂದು ನನ್ನ ಅನಿಸಿಕೆ. ಕೆಲವೆಡೆ ಕೆಟ್ಟಿದೆಯೆಂದರೆ ಇನ್ನು ಹಲವೆಡೆ ಕೊಳೆತುಹೋಗಿದೆ. ಗ್ರಾಮಪಂಚಾಯತಿ ವಿಧೇಯಕದಲ್ಲಿರುವ ನ್ಯಾಯಾಂಗದ ವ್ಯವಸ್ಥೆಗಳ ಬಗ್ಗೆ ನೋಡೋಣ. ದಿವಾಣಿ ಹಾಗೂ ಆಪರಾಧಿಕನ್ಯಾಯಗಳನ್ನು ನೋಡಿಕೊಳ್ಳುವಾಗ ವಿಶ್ವಾಸಕ್ಕೆ ಪಾತ್ರವಾಗಬಹುದಾದ ಯೋಗ್ಯ ನ್ಯಾಯಾಂಗದ ಅವಶ್ಯಕತೆಗಳು ಯಾವುವು ಎಂಬುದರ ಬಗ್ಗೆ ಸ್ಥಾನೀಯ ಸ್ವಾಯತ್ತ ಶಾಸನ ಖಾತೆಯನ್ನು ವಹಿಸಿಕೊಂಡ ಮಾನ್ಯ ಮಂತ್ರಿಗಳ ಅಭಿಪ್ರಾಯ ಏನಿದೆಯೋ ನನಗೆ ಗೊತ್ತಿಲ್ಲ. ಈ ಸದನವನ್ನು ಉದ್ದೇಶಿಸಿ ಮಾತನಾಡುವಾಗ ಆರಂಭದಲ್ಲಿಯೇ ಅವರು ಈ ತಮ್ಮ ವಿಚಾರಗಳನ್ನು ವ್ಯಕ್ತ ಮಾಡಬಹುದೆಂದು ನಾನು ಆಶಿಸಿದ್ದೆ; ಆದರೆ ಅವರು ಅದರ ಬಗ್ಗೆ ಮೌನವಾಗಿದ್ದಾರೆ. ದಿವಾಣಿ ಹಾಗೂ ಆಪರಾಧಿಕ ನ್ಯಾಯ ನಿರ್ವಹಣೆಯ ಕರ್ತವ್ಯಗಳನ್ನು ಕೈಗೊಳ್ಳುವ ಮುನ್ನ ನ್ಯಾಯಾಂಗಕ್ಕೆ ಮೂರು ಅವಶ್ಯಕತೆಗಳಿವೆಯೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುವರೆಂದು ನಾನು ತಿಳಿದಿರುವೆ. ನ್ಯಾಯಾಂಗದಲ್ಲಿರುವವರು ಕಾನೂನು ತರಬೇತಿ ಪಡೆದಿರಬೇಕು. ತಮ್ಮ ದೃಷ್ಟಿಯಲ್ಲಿ ಪಕ್ಷಾತೀತವಾಗಿರಬೇಕು ಹಾಗೂ ಅವರ ಸ್ಥಾನ ಸ್ವತಂತ್ರವಾಗಿರಬೇಕು. ಈ ಮೂರನ್ನು ಈ ವಿಧೇಯಕಕ್ಕೆ ಹೊಂದಿಸಿ ಪರಿಶೀಲಿಸೋಣ. ಇದರ ಬಗ್ಗೆ ವಿಧೇಯಕದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳಿರುವರು? ಅವರ ಹೇಳಿಕೆ ಇಂತಿದೆ– "ವಯಸ್ಕ ಮತಾಧಿಕಾರ ಆಧಾರದ ಮೇಲೆ ಐದು ಅಥವಾ ಏಳು ಸದಸ್ಯರಿರುವ ಪಂಚಾಯತಿಯನ್ನು ಆರಿಸಬೇಕು; ಆ ಸದಸ್ಯರ ಅವಧಿ ಮೂರು ವರುಷಗಳದ್ದು. ಈ ಮೂರು ವರುಷಗಳಲ್ಲಿ ಅವರು ಸ್ಥಾನೀಯ ಸ್ವಾಯತ್ತ ಶಾಸನದ ಕಾರ್ಯನಿರ್ವಹಿಸುವರಲ್ಲದೆ, ಇದರ ಜೊತೆ ಕೆಲವು ದಿವಾಣಿ ಮತ್ತು ಆಪರಾಧಿಕ ನ್ಯಾಯ ನಿರ್ವಹಣೆಯನ್ನೂ ಕೈಗೊಳ್ಳುವರು." ಇದಿಷ್ಟು ಈ ವಿಧೇಯಕದಲ್ಲಿ ಅಡಕವಾದ ಅಂಶವಾಗಿದೆ.

ಮಾನ್ಯ ಮಂತ್ರಿಗಳಿಗೆ ನಾನು ಕೇಳಬೇಕಾದ ಮೊದಲ ಪ್ರಶ್ನೆ ಇದು. ವಯಸ್ಕ ಮತಾಧಿಕಾರ ಆಧಾರದ ಮೇಲೆ ಚುನಾಯಿತರಾದ ಈ ಐವರಿಗೆ ನ್ಯಾಯಾಧೀಶರ ಕರ್ತವ್ಯಗಳನ್ನು ನಿರ್ವಹಿಸುವುದರ ಬಗ್ಗೆ ಸಾಕಷ್ಟು ನ್ಯಾಯಾಂಗದ ತರಬೇತಿ ಇರುವುದೆಂದು ಮಾನ್ಯ ಮಂತ್ರಿಗಳು ತಿಳಿದಿರುವರೇ? ನ್ಯಾಯ ನಿರ್ಣಯ ಮಾಡುವವರಿಗೆ ನ್ಯಾಯ ನೀಡುವುದರಲ್ಲಿ ಪ್ರಬುದ್ಧತೆ ಇರಬೇಕಾದ ಅವಶ್ಯವಿದೆ; ಅದಕ್ಕೆ ಬಹಳಷ್ಟು ಕಾನೂನು ಜ್ಞಾನವೂ ಬೇಕಾಗುತ್ತದೆ (ನಗೆ). ಇದಕ್ಕೆ ನಗಬೇಕಾಗಿಲ್ಲ. ಇದು ಗಂಭೀರ ವಿಷಯವಾಗಿದೆ. ದಯವಿಟ್ಟು ಇದನ್ನು ವಿಚಾರಿಸಬೇಕು. ಆಯ್.ಸಿ.ಎಸ್. (ಇಂಡಿಯನ್ ಸಿವಿಲ್ ಸರ್ವಿಸ್) ಆದವರು ಉಚ್ಚ ನ್ಯಾಯಾಲಯದಲ್ಲಿ ಅಥವಾ ನ್ಯಾಯಂಗದಲ್ಲಿ ತಮಗೆ ಕೆಲವು ಸ್ಥಳಗಳನ್ನು ಮೀಸಲಾಗಿಡ

ಬೇಕೆಂದು ಕೇಳಿಕೊಂಡಾಗ ನಾವೆಲ್ಲ ಕುತೂಹಲಿಗಳಾಗುತ್ತೇವೆ. ನಮ್ಮ ವಿರೋಧಕ್ಕೆ ಕಾರಣವಾದರೂ ಏನು? ಈ ವಿರೋಧವನ್ನು ನಾನು ಸರಿಯಾಗಿ ಅರ್ಥ ಮಾಡಿಕೊಂಡಿರುವೆನಾದರೆ ಅದರ ಕಾರಣ ಹೀಗಿದೆ: ಆಯ್.ಸಿ.ಎಸ್. ಪರೀಕ್ಷೆ ಪಾಸಾದ ಈ ಜನರಿಗೆ ನ್ಯಾಯಾಂಗದ ತರಬೇತಿ ಇರುವುದಿಲ್ಲ; ಅಂಥ ತರಬೇತಿ ಇಲ್ಲದಿದ್ದುದರಿಂದ ಅವರಿಗೆ ನ್ಯಾಯಾಂಗದ ಅಧಿಕಾರಗಳನ್ನು ಒಪ್ಪಿಸುವಂತಿಲ್ಲ. ಆಕ್ಷೇಪಣೆ ಯಲ್ಲಿಯ ದೂರು ಇದಾಗಿದೆ. ಕೇವಲ ನ್ಯಾಯದಾನ ಮಾತ್ರ ಬೇಕಾಗಿಲ್ಲ; ಆದರೆ ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಬಲ್ಲ ನ್ಯಾಯಾಧೀಶರ ಅವಶ್ಯಕತೆ ಇದೆ. ನಿರಕ್ಷರಿಗಳು, ಅಜ್ಞಾನಿಗಳು, ಮೂಢನಂಬಿಕೆಗಳಿಗೆ ಅಂಟಿಕೊಂಡವರು ಆಗಿರುವ ಇಂಥ ಜನಸಮುದಾಯದಲ್ಲಿ ನ್ಯಾಯಾಧೀಶರ ಕರ್ತವ್ಯಗಳನ್ನು ನಿರ್ವಹಿಸಬಲ್ಲರೆಂದು ನಾವು ನಂಬಬಹುದಾದ ಐವರಾದರೂ ದೊರೆಯಬಹುದೇ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸುವೆ.

ಶ್ರೀ ಎಂ. ಎಂ. ಕಾರಭಾರಿ: ನಾವು ಇಷ್ಟು ದಡ್ಡರಾಗಿದ್ದೇವೆಯೇ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಗೊತ್ತಿಲ್ಲ; ನಮ್ಮಲ್ಲಿ ಭಿನ್ನಾಭಿಪ್ರಾಯ ಇರಬಹುದು. ಆದರೆ ಇದು ನನ್ನ ಅಭಿಪ್ರಾಯ. ಈ ಜನರಿಗೆ ಅವಶ್ಯಕವಾದ ನ್ಯಾಯಾಂಗ ತರಬೇತಿ ಕೊಡುವುದು ಬೇಕಾಗಿಲ್ಲವೆಂದೂ ತಿಳಿಯೋಣ. ಆದರೆ ಅವರಲ್ಲಿ ಹಕ್ಕು, ಕರ್ತವ್ಯ, ನ್ಯಾಯ, ಒಳ್ಳೆಯ ಆತ್ಮಸಾಕ್ಷಿ ಇವುಗಳ ಯಥಾಯೋಗ್ಯ ಜ್ಞಾನವನ್ನಾದರೂ ಕನಿಷ್ಠ ಪಕ್ಷ ನಾವು ಅಪೇಕ್ಷಿಸಬಾರದೇ? ಜಾತೀಯತೆಯ ಸಂಪ್ರದಾಯಗಳಿಂದ ಬದ್ಧವಾದ ಒಂದು ಜನತೆ, ಪ್ರಾಚೀನ ಪೂರ್ವಗ್ರಹಗಳಿಂದ ಪೀಡಿತವಾದ ಒಂದು ಜನತೆ, ಜೀವನದಲ್ಲಿ ಸ್ಥಾನಮಾನದ ಸರಿಸಮಾನತೆಯನ್ನು ತಿರಸ್ಕರಿಸಿ ವಿವಿಧ ಮಟ್ಟಗಳ ವಿಚಾರಗಳಿಂದ ಪ್ರಬಲಗೊಂಡ ಒಂದು ಜನತೆ, ಮೇಲ್ದರ್ಜೆಯವರು ಕೆಲವರು ಕೀಳ್ದರ್ಜೆಯವರು ಹಲವರು ಎಂದು ಭಾವಿಸುವ ಒಂದು ಜನತೆ– ಇಂಥ ಜನತೆಯಲ್ಲಿ ನ್ಯಾಯದಾನ ನಿರ್ವಹಣೆ ಯೋಗ್ಯ ವಿಚಾರಣೆಯಿಂದ ಮಾಡಲ್ಪಡುವುದೆಂದು ನಾವು ಅಪೇಕ್ಷಿಸುವುದಾದರೂ ಹೇಗೆ? ಮಾನ್ಯರೆ, ಇಂದಿನ ಸೂಚನೆಗೆ ನನ್ನ ವಿರೋಧವಿದೆ. ನಮ್ಮ ಜೀವವನ್ನು, ನಮ್ಮ ಸ್ವಾತಂತ್ರ್ಯವನ್ನು, ನಮ್ಮ ಆಸ್ತಿಪಾಸ್ತಿಯನ್ನು ಇಂಥ ಪಂಚರ ಕೈಯಲ್ಲಿ ಕೊಡುವ ತಮ್ಮ ಅಪೇಕ್ಷೆ ಸೂಕ್ತವಾಗಿಲ್ಲ.

ಇದೀಗ ಸದನದಲ್ಲಿ ಇನ್ನೊಂದು ಸೂಚನೆಯನ್ನು ತಿಳಿಸಬಯಸುವೆ. ಪಂಚಾಯತಿಯ ನ್ಯಾಯಾಧೀಶ ಮಂಡಳಿಗೆ ನಿಷ್ಪಕ್ಷಪಾತ ನಿರ್ಣಯವನ್ನು ಕೊಡಲು ಶಕ್ಯವಾಗಿದೆಯೇ? ನಿಜವಾದುದನ್ನು ಇದ್ದ ಹಾಗೆಯೇ ವಿಚಾರಿಸೋಣ. ಪಕ್ಷಪಂಗಡಗಳ ಬದ್ಧ ದ್ವೇಷದಿಂದ ಕೂಡಿಕೊಂಡಿರದ ಯಾವ ಹಳ್ಳಿಯೂ ಇಲ್ಲವೆಂಬುದನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪುವರೆಂಬುದರಲ್ಲಿ ನನಗೆ ಸಂಶಯವಿಲ್ಲ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಇವರ ನಡುವೆ ಜಗಳಗಳಿವೆ...

ದಿವಾಣ ಬಹದ್ದೂರ ಡಿ.ಆರ್. ಪಾಟೀಲ: ಅವು ಕೊನೆಯವರೆಗೂ ಇರುವವು.

ಡಾ. ಬಿ. ಆರ್. ಅಂಬೇಡ್ಕರ್: ಹಾಗೆಯೇ ಉಳಿದರೆ ಅವು ನಿಮಗೇ ಬಹಳ ಹಾನಿಕರ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿಯೂ ಪಂಗಡಗಳಿವೆ. ಮಾನ್ಯ ಸದಸ್ಯರಾದ ರಾವಬಹದ್ದೂರ ಕಾಳೆಯವರು ನನ್ನ ಮಾತು ಕೇಳಿ ನಗುತ್ತಿರುವುದರಿಂದ ನನಗೆ ಗೊತ್ತಿದ್ದ ಅವರದೇ ಜಿಲ್ಲೆಯ– ಅಂದರೆ ಸಾತಾರಾ ಜಿಲ್ಲೆಯ– ಒಂದು ಉದಾಹರಣೆಯನ್ನು ಕೊಡಬಯಸುವೆ. ಸಾತಾರ ಜಿಲ್ಲೆಯಲ್ಲಿ ಒಮ್ಮೆ ಬ್ರಾಹ್ಮಣ, ಬ್ರಾಹ್ಮಣೇತರ ದ್ವೇಷ ವಿಕೋಪಕ್ಕೆ ಹೋಯಿತು; ಆಗ ಸಾತಾರಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಬ್ರಾಹ್ಮಣೇತರರು ಬ್ರಾಹ್ಮಣರನ್ನು ಸಂಪೂರ್ಣವಾಗಿ ಬಹಿಷ್ಕರಿಸಿದರು. ಅದರ ಪರಿಣಮವಾಗಿ ಬ್ರಾಹ್ಮಣರಿಗೆ ಕ್ಷೌರ ಮಾಡಿಸಿ

ಕೊಳ್ಳಲು ಕ್ಷೌರಿಕರಾರೂ ಸಿಗಲಿಲ್ಲ; ದಿನಸಿ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿ ಅವರಿಗೆ ಸಾಮಾನು ಕೊಡಲಿಲ್ಲ; ಅವರ ಸೇವೆಗೆಯ್ಯಲು ಹಳ್ಳಿಯಲ್ಲಿ ಯಾರೂ ದೊರೆಯುವುದಿಲ್ಲ. ಬ್ರಾಹ್ಮಣ ಗಡ್ಡವನ್ನಾದರೂ ಬೆಳೆಸಬೇಕಾಗಿತ್ತು ಇಲ್ಲವೇ ಏಳು ಮೈಲು ನಡೆದುಕೊಂಡು ಸಾತಾರಾಗೆ ಹೋಗಬೇಕಾಗಿತ್ತು. ಅದೇ ರೀತಿ ದಲಿತರಿಗೂ, ಬ್ರಾಹ್ಮಣೇತರರಿಗೂ ಕಲಹಗಳಿವೆ.

ಮಾನ್ಯ ಸದಸ್ಯರೊಬ್ಬರು: ಅವೆಲ್ಲಾ ಈಗ ಮುಗಿದಿದೆ.

ಡಾ. ಬಿ. ಆರ್. ಅಂಬೇಡ್ಕರ್: ಮುಗಿದಿವೆ ಎಂದು ಹೇಳುವುದಕ್ಕಿಂತಲೂ ಸದ್ಯದ ಸಮಾಜ ವ್ಯವಸ್ಥೆಯಲ್ಲಿಯೂ ಅವು ಉಳಿದುಕೊಂಡಿವೆಯೆಂದು ಅನ್ನಬೇಕು. ಒಳಜಗಳ ಹಿಂದೂ ಜನರಲ್ಲಿ ಮಾತ್ರವಲ್ಲ, ಹಿಂದೂ ಮತ್ತು ಮುಸ್ಲಿಮರ ನಡುವೆಯೂ ಜಗಳಗಳಿವೆ. ಈ ಜಗಳಗಳು ಸಾಮಾನ್ಯ ಮಹತ್ವದ್ದಾಗಿರದೆ, ಅವು ಗಂಭೀರವಾಗಿವೆ. ವಾತಾವರಣ ಹೀಗಿರುವಾಗ ಚುನಾಯಿತಗೊಂಡ ಪಂಚಾಯತಿಯ ಬೇರೆ ಬೇರೆ ಜಾತಿಗಳ ಹಾಗೂ ಪಂಗಡಗಳ ಜನರಿಗೆ ಸಾಕಷ್ಟು ನಿಷ್ಪಕ್ಷವಾಗಿ ನ್ಯಾಯದಾನ ಮಾಡುವುದು ಸಾಧ್ಯವೇ ಎಂಬುದನ್ನು ಮಾನ್ಯ ಮಂತ್ರಿಗಳೂ, ಈ ಸದನವೂ ವಿಚಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಕೊಟ್ಟ ಈ ಸೂಚನೆಯನ್ನು ಮಾನ್ಯ ಮಂತ್ರಿಗಳೂ ಹಾಗೂ ಸದನವೂ ಗಂಭೀರವಾಗಿ ಆಲೋಚಿಸುವರೆಂದು ನಾನು ತಿಳಿದಿರುವೆ.

ನನ್ನ ಮುಂದಿನ ಪ್ರಶ್ನೆ ಇದಾಗಿದೆ; ಮಾನ್ಯ ಮಂತ್ರಿಗಳು ಕಾರ್ಯ ರೂಪದಲ್ಲಿ ತರಬೇಕೆಂದಿರುವ ನ್ಯಾಯಾಂಗ ಸ್ವತಂತ್ರವಾದದ್ದೋ ಹೇಗೆ? ಇದರ ಬಗ್ಗೆ ಅವರ ಸೂಚನೆಯಾದರೂ ಏನಿದೆ? ಅವರ ಹೇಳಿಕೆಯಂತೆ ನ್ಯಾಯಾಂಗ ಚುನಾಯಿತವಾದದ್ದಾಗಿದೆ; ಏಕೆಂದರೆ ಇದೇ ಈ ಮಸೂದೆಯ ಅಭಿಪ್ರಾಯವಾಗಿದೆ. ನ್ಯಾಯದಾನವನ್ನು ನಿರ್ವಹಿಸುವ ಪಂಚಾಯತಿಯು ಗ್ರಾಮದ ವಯಸ್ಕ ಜನರಿಂದ ಆಯ್ಕೆಯಾದದ್ದು. ಜನತೆಯ ವಯಸ್ಕ ಮತದಾನಕ್ಕೆ ತಲೆಬಾಗಿದ ಆ ನ್ಯಾಯಾಧೀಶನು ನ್ಯಾಯ ನಿರ್ಣಯ ಕೊಡುವ ಮುನ್ನ ಎರಡು ಬಾರಿಯಾದರೂ ವಿಚಾರಿಸುವುದಿಲ್ಲವೇ? ಮತದಾರನ ಮನಸ್ಸಿಗೆ ನೋವಾಗುವುದೇ ಎಂದು ತನ್ನ ನಿರ್ಣಯ ಕೊಡುವಾಗ ಆಲೋಚಿಸುವುದಿಲ್ಲವೇ? ಮಾನ್ಯ ಮಂತ್ರಿಗಳಿಗೆ ಈ ಪ್ರಶ್ನೆ ಕೇಳಬಯಸುವೆ. ಹಿಂದೂ–ಮುಸ್ಲಿಮರ ದಂಗೆಯಾಗಿದೆಯೆಂದು ತಿಳಿಯೋಣ. ಇದು ಪಂಚಾಯತಿ ವಿಚಾ ರಿಸುವ ವಿಷಯವಾದುದರಿಂದ, ಒಬ್ಬ ಮುಸ್ಲಿಮ ಗುನ್ಹೇದಾರನನ್ನು ಪಂಚಾಯತಿಗೆ ಕರೆದುಕೊಂಡು ಬರುತ್ತಾರೆಂದೂ ಭಾವಿಸೋಣ. ಆಗ ಪಂಚಾಯತಿಯಲ್ಲಿಯ ಒಬ್ಬ ಹಿಂದೂವಿಗೆ ಮುಸ್ಲಿಮನ ಕಡೆಗೆ ನ್ಯಾಯವಿದೆಯೆಂದು ತೋರಿತೆಂದು ಕಲ್ಪಿಸೋಣ. ಕೆಲವೇ ತಿಂಗಳುಗಳಲ್ಲಿ ಅಥವಾ ಒಂದು ವರ್ಷದಲ್ಲಿ ಮತ್ತೆ ಚುನಾವಣೆಯನ್ನು ಎದುರಿಸಬೇಕಾದ ಆ ಹಿಂದೂ ತನ್ನ ಸ್ಥಾನ ಹೋದರೂ ಪರವಾಗಿಲ್ಲವೆಂದು ಮುಸ್ಲಿಮನು ನಿರ್ದೋಷಿಯೆಂದು ಸಾರಲು ಸಾಧ್ಯವೇ? ಇದನ್ನು ಮಾನ್ಯ ಮಂತ್ರಿಗಳೂ, ಈ ಸದನವೂ ಯೋಚಿಸಬಹುದೇ? ಆ ಹಿಂದೂ ಏನು ಮಾಡುವನು?

ದಿವಾಣ ಬಹದ್ದೂರ ಡಿ.ಆರ್. ಪಾಟೀಲ: ಗಲಭೆಯ ವಿಷಯವನ್ನು ವಿಚಾರಣೆಗೆ ತೆಗೆದುಕೊಳ್ಳುವ ಹಕ್ಕು ಪಂಚಾಯತಿಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಉದಾಹರಣೆಗೆಂದು ಇದನ್ನು ಹೇಳಿದೆ. ಇದರಂಥ ಬೇರೆ ಅಪರಾಧವಿರಬಹುದು.

ಮಾನ್ಯರೆ, ಚುನಾಯಿತನಾದ ನ್ಯಾಯಾಂಗವಿದ್ದುದನ್ನು ನಾನು ಎಲ್ಲಿಯೂ ನೋಡಿಲ್ಲ. ಹಾಗೆ ಚುನಾಯಿತವಾದ ನ್ಯಾಯಾಂಗವಿದ್ದುದು ಅಮೆರಿಕೆಯಲ್ಲಿ ಮಾತ್ರ; ಇದರಿಂದ ಅಮೆರಿಕೆಯ ಕಾಮನ್‌ವೆಲ್ತ್

ಗಳಲ್ಲಿ ನ್ಯಾಯಾಧೀಶರು ಅಗೌರವ ಪಡೆದಿದ್ದರು ಹಾಗೂ ಅಲ್ಲಿ ಭ್ರಷ್ಟಾಚಾರಕ್ಕೆ ಮತ್ತೊಂದು ಪದ ನ್ಯಾಯ ದಾನ ಎಂಬುದು ನಿಮಗೆಲ್ಲ ಗೊತ್ತಿದೆ. ನಮ್ಮ ಮಾನ್ಯ ಸ್ನೇಹಿತರು ನಾವು ಈ ಪ್ರಯೋಗವನ್ನು ನಮ್ಮಲ್ಲಿಯೂ ಮಾಡಬೇಕೆಂಬ ಇಚ್ಛೆಯುಳ್ಳವರಾಗಿಲ್ಲವೆಂದು ನಾನು ನಂಬಿರುವೆ. ಈ ದೃಷ್ಟಿಯಿಂದ ಸದನದ ಬಹಳ ವೇಳೆಯನ್ನು ನಾನು ತೆಗೆದುಕೊಳ್ಳದೆ, ನಾನು ಹೇಳಬಯಸುವುದಷ್ಟನ್ನೇ ತಿಳಿಸುವೆ. ವಿಧೇಯಕದ ಎರಡನೆಯ ಭಾಗದಲ್ಲಿರುವ ತತ್ವವನ್ನು ನಾನು ಒಪ್ಪಿಕೊಳ್ಳುವುದಿಲ್ಲ ಮತ್ತು ಚುನಾಯಿತ ನ್ಯಾಯಾಂಗದಿಂದ ಪಂಚಾಯತಿಗೆ ದಿವಾಣಿ ಹಾಗೂ ಆಪರಾಧಿಕ ನ್ಯಾಯದಾನ ಅಧಿಕಾರಗಳನ್ನು ಹಸ್ತಾಂತರಿಸುವುದಕ್ಕೂ ನನ್ನ ಅನುಮತಿಯಿಲ್ಲ. ಮಾನ್ಯರೆ, ನಮ್ಮ ಪ್ರಾಂತದಲ್ಲಿ ನಡೆದಿರುವ ವಿದ್ಯಮಾನಗಳನ್ನು– ವಿಶೇಷದಲ್ಲಿ ದಲಿತ ವರ್ಗದವರಿಗೆ ಏನಾಗುತ್ತಿದೆಯೆಂಬುದನ್ನು– ಅವಲೋಕಿಸಿದರೆ ನಮಗಷ್ಟೇ ಸಂಬಂಧಪಟ್ಟಂತೆ ಪಂಚಾಯತಿಗಳು ನ್ಯಾಯಾಂಗ ಖಾತೆ ನೋಡಿಕೊಳ್ಳುವುದಕ್ಕೆ ನಮ್ಮ ಸಮ್ಮತಿ ಎಂದೆಂದಿಗೂ ಇಲ್ಲ. ನಮ್ಮದು ತೀರ ವಿಚಿತ್ರವಾದ, ಬಹಳಷ್ಟು ಕರುಣಾಜನಕವಾದ ಸ್ಥಿತಿಯೆಂದೇ ಹೇಳಬೇಕು. ಹಳ್ಳಿಯ ಕೊಂಪೆ ಯೊಂದರಲ್ಲಿರುವ ಅತಿ ಅಲ್ಪ ಸಂಖ್ಯಾತರಾಗಿರುವ ಜನ ನಾವು. ಗ್ರಾಮ ಸಮುದಾಯದಲ್ಲಿ ನಾವೂ ಇದ್ದೇವೆ ಎಂಬ ದೃಷ್ಟಿಯಿಂದ ನಮ್ಮ ಕಡೆ ನೋಡುವುದಿಲ್ಲ. ನಾವು ಹಳ್ಳಿಯಲ್ಲಿ ವಾಸವಾಗಿದ್ದರೂ ನಮ್ಮನ್ನು ಪರಕೀಯರಂತೆ ಇನ್ನುಳಿದ ಸಮುದಾಯದವರು ಕಂಡು, ನಮ್ಮ ಪ್ರಗತಿಯನ್ನು ಅಸೂಯೆಯಿಂದ ನೋಡುವರು. ನನ್ನ ಮಾನ್ಯ ಮಿತ್ರರಾದ ಶ್ರೀ ಕಾಮತರು ತಲೆಯಲ್ಲಾಡಿಸುತ್ತಿದ್ದಾರೆ; ಆದ್ದರಿಂದ ನನ್ನಿಚ್ಛೆ ಇರದಿದ್ದರೂ ರಾಜ್ಯಸಮಿತಿ ವರದಿಯ ಕೆಲವು ಭಾಗವನ್ನು ನಾನೀಗ ಓದಿ ತೋರಿಸಬೇಕಾಗಿದೆ. ಆ ಸಮಿತಿ ವರದಿಯ ೧೦೨ನೆಯ ಪರಿಚ್ಛೇದಲ್ಲಿ ಗ್ರಾಮಗಳಲ್ಲಿರುವ ದಲಿತ ವರ್ಗದವರ ಪರಿಸ್ಥಿತಿಯನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಸಮಿತಿಯ ಅಭಿಪ್ರಾಯ ಹೀಗಿದೆ:

> ‘‘ಸಾರ್ವಜನಿಕ ಪ್ರಯೋಜನಗಳಲ್ಲಿ ದಲಿತ ವರ್ಗದವರಿಗಿರುವ ಹಕ್ಕುಗಳನ್ನು ಅವರಿಗೆ ದೊರಕಿಸಿಕೊಡಬೇಕೆಂದು ನಾವು ಅನೇಕ ಮಾರ್ಗಗಳನ್ನು ಶಿಫಾರಸು ಮಾಡಿದ್ದರೂ, ಕಾರ್ಯರೂಪಕ್ಕೆ ಅವುಗಳನ್ನು ತರುವಾಗ ಬಹಳಷ್ಟು ತೊಂದರೆ ಅನೇಕ ದಿನಗಳವರೆಗೆ ಉಳಿಯುತ್ತದೆ ಎಂಬ ಭಯ ನಮಗಿದೆ. ಸಾಂಪ್ರದಾಯಿಕ ವರ್ಗದವರು ಅದರ ವಿರೋಧವಾಗಿ ಬಹಿರಂಗವಾಗಿ ನಡೆಸುವ ಹಿಂಸಾಕೃತ್ಯಗಳ ಭಯ ಮೊದಲನೆಯದು. ಪ್ರತಿಯೊಂದು ಹಳ್ಳಿಯಲ್ಲಿ ದಲಿತ ವರ್ಗದವರು ತೀರ ಅಲ್ಪಸಂಖ್ಯಾತರು; ಆದರೆ ಸಾಂಪ್ರದಾಯಿಕ ವರ್ಗದವರು ಬಹುಸಂಖ್ಯಾತರಾಗಿದ್ದು, ದಲಿತ ವರ್ಗದವರಿಂದ ವಿರೋಧ ಬಂದಾಗ ಅವರು ಏನೇ ಆದರೂ ತಮ್ಮ ಸ್ಥಾನಮಾನವನ್ನು ತಮ್ಮ ಬೇಡಿಕೆಗಳನ್ನು ರಕ್ಷಿಸಿಕೊಂಡೇ ತೀರುವರೆಂಬುದನ್ನು ನಾವು ಗಮನಿಸಬೇಕು. ಪೊಲೀಸರ ಕಾರ್ಯಾಚರಣೆಯ ಭಯದಿಂದ ಹಿಂಸಾಚರಣೆಗೆ ಮಿತಿಯೊಂದು ಇದೆಯಾದರೂ, ಇಂಥ ಉದಾಹರಣೆ ತೀರ ಕಡಿಮೆ.
>
> ಎರಡನೆಯ ತೊಂದರೆ ಎಂದರೆ ಸಧ್ಯದ ದಲಿತ ವರ್ಗದವರ ಆರ್ಥಿಕ ಪರಿಸ್ಥಿತಿಯ ಸ್ಥಾನಮಾನದಿಂದ. ನಮ್ಮ ಪ್ರಾಂತದ ಅನೇಕ ದಲಿತ ವರ್ಗದವರಿಗೆ ಆರ್ಥಿಕವಾಗಿ ಸ್ವಾವಲಂಬನವಿಲ್ಲ. ಕೆಲವರು ಸಾಂಪ್ರದಾಯಿಕ ವರ್ಗ ಜನರ ಜಮೀನುಗಳ ರೈತರಾಗಿ ಒಡೆಯರ ಇಚ್ಛೆಯಂತೆ ದುಡಿಯುತ್ತಿದ್ದಾರೆ. ಹಲವರು ಸಾಂಪ್ರದಾಯಿಕ ವರ್ಗದವರಿಂದ ನೇಮಕಗೊಂಡ ಕೂಲಿಯಾಳುಗಳಾಗಿ ಹೊಲದಲ್ಲಿ ಕೆಲಸ ಮಾಡಿ ದೊರಕಿಸಿದ ಕೂಲಿ ಹಣದಲ್ಲಿ ಬದುಕುತ್ತಿದ್ದಾರೆ. ಇನ್ನುಳಿದವರು ಗ್ರಾಮದ ಸೇವೆ ಮಾಡುತ್ತ, ಸಂಪ್ರದಾಯ ವರ್ಗದವರು ಹಣದ ಬದಲಾಗಿ ನೀಡುವ ಕಾಳುಕಡಿಗಳನ್ನು ಸ್ವೀಕರಿಸಿ

ಜೀವಿಸುತ್ತಿದ್ದಾರೆ. ಹಳ್ಳಿಗಳಲ್ಲಿ ದಲಿತ ವರ್ಗದವರು ತಮ್ಮ ಹಕ್ಕುಗಳನ್ನು ಚಲಾಯಿಸಬೇಕೆಂದು ಧೈರ್ಯ ಮಾಡಿದಾಗ, ಸಾಂಪ್ರದಾಯಿಕ ವರ್ಗದವರು ತಮ್ಮ ಸಾಮರ್ಥ್ಯವನ್ನು ಉಪಯೋಗಿಸಿ ಹೊಲಗಳಿಂದ ದಲಿತರನ್ನು ಒಕ್ಕಲೆಬ್ಬಿಸಿದ, ಕೂಲಿ ಕೆಲಸದಿಂದ ಅವರನ್ನು ಕಿತ್ತುಹಾಕಿದ, ಗ್ರಾಮ ಸೇವೆಗಾಗಿ ಅವರಿಗೆ ನೀಡುತ್ತಿದ್ದ ನೆರವನ್ನು ನಿಲ್ಲಿಸಿದ ಅನೇಕ ಉದಾಹರಣೆಗಳ ಬಗ್ಗೆ ನಾವು ಕೇಳಿದ್ದೇವೆ. ದಲಿತ ವರ್ಗದವರಿಗೆ ಮೇಲಿಂದ ಮೇಲೆ ಹಾಕುವ ಬಹಿಷ್ಕಾರವೂ ದೊಡ್ಡ ಪ್ರಮಾಣ ದಲ್ಲಿಯೇ ಇರುತ್ತದೆ; ಈಗ ದಲಿತರಿಗೆ ಸಾರ್ವಜನಿಕ ರಸ್ತೆಗಳು ಬಂದಾಗಿರುತ್ತದೆ; ಹಳ್ಳಿಯಲ್ಲಿಯ ವ್ಯಾಪಾರಿ ಅವರಿಗೆ ಜೀವನಾವಶ್ಯಕವಾದ ದಿನಸಿಯನ್ನು ಕೊಡುವುದಿಲ್ಲ. ನಮಗೆ ಗೊತ್ತಿದ್ದಂತೆ– ದಲಿತ ವರ್ಗದವರನ್ನು ಸಾಮೂಹಿಕವಾಗಿ ಬಹಿಷ್ಕರಿಸಿದ ಪ್ರಕಟಣೆಗಳಿಗೆ ಹಲವು ಬಾರಿ ಕ್ಷುಲ್ಲಕ ಸಂಗತಿಗಳೂ ಕಾರಣವಾಗಿವೆ. ಸಾಮಾನ್ಯವಾಗಿ ಹೀಗೆ ಮೇಲಿಂದ ಮೇಲೆ ಸಂಭವಿಸುವುದು– ದಲಿತರು ಸಾರ್ವಜನಿಕರಿಗಾಗಿ ಇರುವ ಬಾವಿಯಿಂದ ನೀರು ತೆಗೆದುಕೊಳ್ಳುವ ಹಕ್ಕನ್ನು ಚಲಾಯಿಸಿದಾಗ! ಆದರೆ ದಲಿತ ವರ್ಗದವನೊಬ್ಬ ಜನಿವಾರವನ್ನು ಹಾಕಿಕೊಂಡು, ತುಂಡು ಭೂಮಿಯನ್ನು ಕೊಂಡು, ಒಳ್ಳೆ ಬಟ್ಟೆ ಅಥವಾ ಆಭರಣ ಧರಿಸಿಕೊಂಡು ಇರುವಾಗ ಅಥವಾ ವರನನ್ನು ಕುದುರೆಯ ಮೇಲೆ ಕೂಡಿಸಿ ಸಾರ್ವಜನಿಕ ರಸ್ತೆಯಲ್ಲಿ ಮದುವೆಯ ಮೆರವಣಿಗೆ ಒಯ್ದಾಗ ಅವನನ್ನು ಬಹಿಷ್ಕರಿಸಿದ ಉದಾಹರಣೆಗಳೂ ಇಲ್ಲದಿಲ್ಲ."

ಮಾನ್ಯರೇ, ನಮ್ಮ ಪರಿಸ್ಥಿತಿ ಇದು! ಹಾಗೆ ಹೇಳುವುದಾದರೆ ನಾವೆಲ್ಲ ತುಳಿಯಲ್ಪಟ್ಟ ಜನ, ನಮ್ಮ ಬೇಡಿಕೆ, ನಮ್ಮ ಉದ್ದೇಶ ಈಡೇರಬಾರದೆಂದು ವ್ಯವಸ್ಥಿತವಾಗಿರುವ ಸತತ ಒಳಸಂಚಿನ ಜನರ ಕೈಯಲ್ಲಿ ದಿವಾಣಿ ಹಾಗೂ ಆಪರಾಧಿಕ ನ್ಯಾಯದಾನದ ಅಧಿಕಾರ ಕೊಡಲು ನಾನು ಎಂದೆಂದೂ ಅವಕಾಶ ಕೊಡುವುದಿಲ್ಲ. ಇಂಥದಕ್ಕೆ ನನ್ನ ಒಪ್ಪಿಗೆಯಿಲ್ಲ.

ಮಾನ್ಯ ಸದಸ್ಯರೊಬ್ಬರು: ಇಲ್ಲ, ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇದರೊಳಗೆ ಅಡಕವಾಗಿರುವ ಮಾನ್ಯ ಮಂತ್ರಿಗಳ ಉದ್ದೇಶದ ಬಗ್ಗೆ ನನಗೆ ಸಂಪೂರ್ಣವಾಗಿ ಅನುಕಂಪವಿದೆ. ನಾನು ಸರಿಯಾಗಿ ತಿಳಿದುಕೊಂಡಂತೆ ಅವರ ಉದ್ದೇಶವು ಹಳ್ಳಿಗರಿಗೆ ನ್ಯಾಯದಾನವು ಕಡಿಮೆ ವೆಚ್ಚದಲ್ಲಿ ಆಗಬೇಕು ಮತ್ತು ಸುಲಭವಾಗಿ ಅವರಿಗೆ ನ್ಯಾಯಾಂಗದ ಸಂಪರ್ಕ ಬರಬೇಕು ಎಂಬುದಾಗಿದೆ. ನ್ಯಾಯಾಂಗವನ್ನು ಕೊಡುವಲ್ಲಿ ಅವರ ಆಂತರಿಕ ಉದ್ದೇಶ ಇದೇ ಆಗಿದೆಯೆಂದು ನಾನು ಭಾವಿಸಿರುವೆ. ಹಾಗಿದ್ದರೆ ಇದನ್ನು ಸಾಧಿಸಲು ಬೇರೆ ಒಳ್ಳೆಯ ಉಪಾಯಗಳಿವೆ ಯೆಂದು ನನ್ನ ಅನಿಸಿಕೆ. ಗ್ರಾಮ ಪಂಚಾಯತಿಗೆ ನ್ಯಾಯಾಂಗದ ಹಕ್ಕು ಕೊಡುವ ಆವಶ್ಯಕತೆಯಿಲ್ಲ. ನಮ್ಮಲ್ಲಿ ನಗರಗಳಲ್ಲಿ ಈಗಾಗಲೇ "ಗೌರವ ನ್ಯಾಯಪೀಠ ಮ್ಯಾಜಿಸ್ಟ್ರೇಟ್" ಇದು ಅಸ್ತಿತ್ವದಲ್ಲಿದೆ. ಇದೇ ಪದ್ಧತಿಯನ್ನು ಗ್ರಾಮಾಂತರಗಳಿಗೂ ವಿಸ್ತರಿಸಲು ಸಾಧ್ಯವಿದೆ. ನಾವು ಪ್ರತಿಯೊಂದು ಜಿಲ್ಲೆಯಲ್ಲಿ ಅನುಕೂಲಕರವಾಗು ವಂತೆ ೨–೩ ಮೈಲುಗಳ ಸುತ್ತಳತೆಯಷ್ಟು ಇರುವ ನ್ಯಾಯಾಂಗ ವಿಭಾಗಗಳನ್ನು ಮಾಡಬಹುದಾಗಿದೆ. ಸರಕಾರವು ಆ ವಿಭಾಗದಲ್ಲಿ ನ್ಯಾಯಾಂಗ ಕಾರ್ಯಗಳಿಗಾಗಿ ಮೂರು ಅಥವಾ ನಾಲ್ಕು ಜನರನ್ನು ನೇಮಿಸಬೇಕು. "ನೇಮಿಸುವುದು" ಎಂಬುದಕ್ಕೆ ನಾನು ಹೆಚ್ಚು ಒತ್ತುಕೊಟ್ಟು ಹೇಳುತ್ತಿರುವೆ. ಈ ಮೂರು ಜನ ಒಂದು ದಿನ ಆಪರಾಧಿಕ ದಾವೆಗಳನ್ನು ವಿಚಾರಿಸಲು ಮ್ಯಾಜಿಸ್ಟ್ರೇಟರಾಗಿ, ಮತ್ತೊಂದು ದಿನ ದಿವಾಣಿ ದಾವೆಗಳನ್ನು ವಿಚಾರಿಸುವ ನ್ಯಾಯಾಧೀಶರಾಗಿ ಕುಳಿತುಕೊಳ್ಳಬೇಕು. ಈ ಪದ್ಧತಿಯಿಂದ ನಿಮಗೆ ವಿಶೇಷ ವೆಚ್ಚವಿಲ್ಲದೆಯೆ ನ್ಯಾಯದಾನ–ಸರಳವಾದ ನ್ಯಾಯದಾನ ದೊರಕುತ್ತದೆ; ಅಲ್ಲದೆ ಸ್ಥಾನಿಕ ಪ್ರಭಾವವಿಲ್ಲದ ಸ್ವತಂತ್ರವಾದ ನ್ಯಾಯಾಂಗವು, ಚುನಾಯಿತ ಪದ್ಧತಿಯಲ್ಲಿರುವ ದ್ವೇಷಗಳಿಂದ ವಿಮುಕ್ತವಾದ

ನ್ಯಾಯಾಂಗವು ನಿಮಗೆ ಲಭಿಸುವುದು. ಮಾನ್ಯರೆ, ಈ ವ್ಯವಸ್ಥೆ ದಾವೆಯ ಅವಶ್ಯಕತೆಗಳನ್ನು ಸಮಾಧಾನಕರವಾಗಿ ಪೂರೈಸುವುದೆಂಬುದು ನನ್ನ ವಿಚಾರವಾಗಿದೆ. ಏನೇ ಇರಲಿ, ಸಧ್ಯ ಇದ್ದ ಎಲ್ಲ ಅಂಶಗಳನ್ನು ವಿಶೇಷವಾಗಿ ತಮ್ಮ ತತ್ವಗಳ ವಿಷಯಗಳೆಂದು ತಿಳಿದ ಅಂಶಗಳನ್ನು– ಅಳವಡಿಸಿಕೊಂಡು ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಒತ್ತಾಯಿಸಿದರೆ ನಾನು ಅದನ್ನು ವಿರೋಧಿಸಬೇಕಾಗುವುದೆಂದು ತಿಳಿಯಬಯಸುವೆ (ಚಪ್ಪಾಳೆ).

# ೨೨

# *ಗ್ರಾಮ ಪಂಚಾಯಿತಿಗಳ ಮಸೂದೆ: ೨

## ಪಂಚಾಯತಿಗಳಲ್ಲಿ ದಲಿತ ವರ್ಗದವರ ನಾಮಕರಣ

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಸಭಾಪತಿಗಳೆ, ನಮ್ಮ ಪ್ರಾಂತದ ಎರಡು ಬಹು ದೊಡ್ಡ ಅಲ್ಪಸಂಖ್ಯಾತರಿಗೆ ನ್ಯಾಯ ದೊರೆಯಬೇಕೆಂಬ ಉದ್ದೇಶದಿಂದ ಸ್ವಲ್ಪ ತಡವಾಗಿಯಾದರೂ ತಂದ ಈ ತಿದ್ದುಪಡಿಗಾಗಿ ಈ ವಿಧೇಯಕಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಮಾನ್ಯ ಮಂತ್ರಿಗಳಿಗೆ ನಾನು ಕೃತಜ್ಞತೆ ಸಲ್ಲಿಸುವೆನಲ್ಲದೆ, ನನ್ನ ಮಾನ್ಯ ಮಿತ್ರರಾದ ಶ್ರೀ ಮಿಥಾ ಅವರು ತಂದ ತಿದ್ದುಪಡಿಯನ್ನು ಅನುಮೋದಿಸುತ್ತೇನೆ. ನಾನು ಇಲ್ಲಿಗೆ ಬರುವ ಮೊದಲು ಸ್ಥಳೀಯ ಪ್ರಜಾಧಿಕಾರ ವಿಭಾಗದ ಮಾನ್ಯ ಮಂತ್ರಿ ಹಾಗೂ ಎದುರಿನ ವಿರೋಧಿ ಪಕ್ಷದ ಆಸನಗಳಲ್ಲಿ ಆಸೀನರಾದ ಮಾನ್ಯ ಮಿತ್ರರು ಇವರ ನಡುವೆ ಏನೇನು ಮಾತುಕತೆ ನಡೆಯಿತೆಂಬುದು ನನಗೆ ಗೊತ್ತಿಲ್ಲ. ಆದರೆ ಸ್ಥಳೀಯ ಪ್ರಜಾಧಿಕಾರ ವಿಭಾಗದ ಮಾನ್ಯ ಮಂತ್ರಿಗಳು ಬರೆದಂತೆಯೇ ಇದ್ದ ತಿದ್ದುಪಡಿಗೆ ತಮ್ಮ ವಿರೋಧವಿಲ್ಲ ವೆಂದೂ, ಅವರು ಸೂಚಿಸಿದ ಶಬ್ದಗಳಲ್ಲಿಯೇ ತಿದ್ದುಪಡಿ ತಂದರೆ ಯಾವ ಮಾತೂ ಇಲ್ಲದೆ ವಿರೋಧಿ ಪಕ್ಷದವರು ಸ್ವೀಕರಿಸುವರೆಂದೂ ನಾನು ಕೇಳಿರುವೆ.

ಹೀಗಿರುವಾಗ ನನ್ನ ಮಾನ್ಯ ಮಿತ್ರರಾದ ಶ್ರೀ ಮಿಥಾ ಸೂಚಿಸಿದ ತಿದ್ದುಪಡಿಯನ್ನು ಪ್ರತಿಪಕ್ಷದ ಮಾನ್ಯ ಸದಸ್ಯರು ಒಪ್ಪಿಕೊಳ್ಳುವಲ್ಲಿ ಯಾವ ಅಡಚಣೆಯಿದೆ ಎಂಬುದು ನನಗೆ ಅರ್ಥವಾಗದು. ಮಾನ್ಯರೆ, ನನಗನಿಸಿ ದಂತೆ ಮಾನ್ಯ ಮಂತ್ರಿ ಮತ್ತು ನನ್ನ ಸ್ನೇಹಿತ ಮಿಥಾ ಅವರ ಸೂಚನೆಗಳಲ್ಲಿ ಅಂಥ ಮಹತ್ವದ ಭೇದ ಕಂಡುಬರುವುದಿಲ್ಲ. ಸ್ಥಳೀಯ ಪ್ರಜಾಧಿಕಾರದ ಮಾನ್ಯ ಮಂತ್ರಿಗಳು ಸಾಮಾನ್ಯವಾದ ಮಾತು

---

* ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXXVII,
ಪುಟಗಳು ೩೨೩–೩೨೪, ದಿನಾಂಕ ೧೦ ಫೆಬ್ರವರಿ ೧೯೨೨.

ಮಾನ್ಯ ಸರ್ ರುಸ್ತುಂ ಜೆ ವಕೀಲ ಇವರು ಗ್ರಾಮಪಂಚಾಯತಿ ಕಾನೂನಿನ ೩೭(೨) ಈ ಅನುಚ್ಛೇದಕ್ಕೆ ಹಳ್ಳಿಯಲ್ಲಿಯ ಗ್ರಾಮಪಂಚಾಯತಿಯಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಅತ್ಯಂತ ಯೋಗ್ಯವಾದ ಪ್ರಾತಿನಿಧ್ಯ ದೊರೆಯಬೇಕೆಂಬ ತಿದ್ದುಪಡಿಯೊಂದನ್ನು ಮಂಡಿಸಿದರು.

ಈ ತಿದ್ದುಪಡಿಗೆ ಶ್ರೀ ಮಹಮ್ಮದ್ ಸುಲೇಮಾನ್ ಕಾಸಮ್ ಮಿಥಾ ಕೆಳಗಿನಂತಿರುವ ಮತ್ತೊಂದು ತಿದ್ದುಪಡಿ ತಂದರು:–

"ಮುಸ್ಲಿಮರು ಅಥವಾ ದಲಿತ ವರ್ಗದ ಸದಸ್ಯರು ಹೀಗೆ ಯಾವುದೇ ವರ್ಗದವರಿಗೆ ಸಂಬಂಧಿಸಿರಲಿ, ಜಿಲ್ಲಾಧಿಕಾರಿಯು ಗ್ರಾಮಪಂಚಾಯತಿಗೆ ಸಂದರ್ಭಕ್ಕೆ ಸರಿಯಾಗುವಂತೆ ಒಬ್ಬ ಮುಸ್ಲೀಮನನ್ನೋ ಅಥವಾ ಒಬ್ಬ ದಲಿತ ವರ್ಗದವರನ್ನೋ ನಾಮಕರಣ ಮಾಡಬೇಕು."

ಶ್ರೀ ಮಿಥಾ ಅವರ ಈ ತಿದ್ದುಪಡಿಯನ್ನು ಅನುಮೋದಿಸಲು ಡಾ. ಅಂಬೇಡ್ಕರ್ ಎದ್ದು ನಿಂತರು.

ಗಳಲ್ಲಿ ತಮ್ಮ ತಿದ್ದುಪಡಿ ತಿಳಿಸಿದ್ದಾರೆ. ಅಲ್ಪಸಂಖ್ಯಾತರ ಸಮುದಾಯಗಳಿಂದ ಗ್ರಾಮ ನ್ಯಾಯ ಪೀಠಕ್ಕೆ ಸದಸ್ಯರನ್ನು ನೇಮಕ ಮಾಡುವ ವಿಷಯದಲ್ಲಿ ಸ್ವ–ವಿವೇಚನೆಗೆ ಅವಕಾಶವನ್ನು ಕಲ್ಪಿಸಿ ಕೊಟ್ಟು ಜಿಲ್ಲಾಧಿಕಾರಿಗೆ ಹೊಣೆಗಾರಿಕೆಯೊಂದನ್ನು ಹೊರಿಸಬೇಕೆಂಬುದು ಮಾನ್ಯ ಮಂತ್ರಿಗಳ ಇಚ್ಛೆ ಯಾಗಿದೆ. ಅಲ್ಪಸಂಖ್ಯಾತರು ಯಾರೇ ಇರಲಿ ಎಂಬ ಸಾಮಾನ್ಯ ಮಾತುಗಳಲ್ಲಿ ಆ ಹೊಣೆಗಾರಿಕೆ ಯನ್ನು ವಿವರಿಸಲು ಅವರು ಬಯಸಿದರು. ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮಿಥಾ ಅವರು ಇದಕ್ಕೂ ಒಂದು ಅಡಿ ಮುಂದಿಟ್ಟು, ಜಿಲ್ಲಾಧಿಕಾರಿ ಹೀಗೆ ಮಾಡುವಾಗ ಮುಸ್ಲಿಮರನ್ನು, ದಲಿತ ವರ್ಗದವರನ್ನು ಅವರು ವಿಶೇಷತಃ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದಿದ್ದಾರೆ. ಮಾನ್ಯರೆ, ಸಾಮಾನ್ಯ ಮಾತುಗಳಲ್ಲಿದ್ದ ತಿದ್ದುಪಡಿಯನ್ನು ಸ್ವೀಕರಿಸಿದ ಮಾನ್ಯ ಸದಸ್ಯರು, ಈ ತಿದ್ದುಪಡಿಯಲ್ಲಿಯ ವಿಶೇಷ ಮಾತುಗಳಿಗೆ ಏಕೆ ಒಪ್ಪುತ್ತಿಲ್ಲವೆಂಬುದನ್ನು ನಾನು ತಿಳಿಯಲಾರೆ. ಈ ಪ್ರಾಂತದಲ್ಲಿ ಅಲ್ಪಸಂಖ್ಯಾತರಿಲ್ಲವೇ? ಆ ಅಲ್ಪ ಸಂಖ್ಯಾತರ ಹಿತರಕ್ಷಣೆಯ ಉದ್ದೇಶದಿಂದ ಮಾನ್ಯ ಮಂತ್ರಿಗಳು ಅವಕಾಶ ಕಲ್ಪಿಸಿಕೊಟ್ಟಿಲ್ಲವೇ? ಇವುಗಳ ಬಗ್ಗೆ ವಿರೋಧಿ ಪಕ್ಷದವರು ಏನಾದರೂ ವಿಚಾರಿಸುವರೋ ಇಲ್ಲವೋ? ಅಲ್ಪಸಂಖ್ಯಾತರು ಇದ್ದ ಮೇಲೆ, ಒಂದು ಅನುಚ್ಛೇದದಲ್ಲಿ ವಿಶೇಷವಾಗಿ ಅವರನ್ನು ಹೆಸರಿಸಿದರೆ ಏನು ತಪ್ಪಾಗುತ್ತದೆ? ಅಲ್ಪ ಸಂಖ್ಯಾತರ ರಕ್ಷಣೆಯಾಗಬೇಕೆಂಬ ಸಾಮಾನ್ಯ ತಿದ್ದುಪಡಿ ಸ್ವೀಕೃತವಾದರೆ, ನಮ್ಮ ಈ ಪ್ರಾಂತದಲ್ಲಿನ ವಿಷಯಗಳ ಬಗ್ಗೆ ಇರುವ ನಮ್ಮ ಸಾಮಾನ್ಯ ತಿಳುವಳಿಕೆಯಂತೆ, ಪ್ರತಿಯೊಂದು ಹಳ್ಳಿಯಲ್ಲಿ ಬೇರೆ ಅಲ್ಪಸಂಖ್ಯಾತರು ಯಾರೂ ಇಲ್ಲವೆಂದರೂ– ದಲಿತ ವರ್ಗದವರು ಹಾಗೂ ಮುಸ್ಲಿಮರಂತೂ ನಿಶ್ಚಿತ ವಾಗಿ ಇರುತ್ತಾರೆ. ಅನುಚ್ಛೇದದಲ್ಲಿ ವಿಶೇಷವಾಗಿ ಅಲ್ಪಸಂಖ್ಯಾತರ ಹೆಸರುಗಳನ್ನು ಕಾಣಿಸಿದರೆ ವಿರೋಧ ವೇಕೆ ಬರುತ್ತಿದೆಯೆಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು, ನಾವು ನಿಷ್ಠಾವಂತರಾಗಿರೋಣ ಮತ್ತು ವಿಶೇಷ ಹಕ್ಕುಗಳನ್ನು, ವಿಶೇಷ ರಕ್ಷಣೆ ನೀಡುವ ಅವಶ್ಯಕತೆಯನ್ನು ಅನುಚ್ಛೇದದಲ್ಲಿ ಕಾಣಿಸುವ ಕಾರಣವಿಲ್ಲ ವೆಂದು ಹೇಳೋಣ; ಇಲ್ಲವೆ ವಿಶೇಷ ರಕ್ಷಣೆಯ ಅವಶ್ಯವಿರುವ ಸಮುದಾಯಗಳಿವೆ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳೋಣ. ಮತ್ತು ವ್ಯಾವಹಾರಿಕವಾಗಿ ರಕ್ಷಣೆ ಬೇಕಾಗುವ ಅ ಸಮುದಾಯಗಳ ಹೆಸರುಗಳನ್ನು ಕಾಣಿಸೋಣ.

ರಾವಬಹದ್ದಾರ ಜಿ. ಕೆ. ಚಿತಳೆ: ಆ ರಕ್ಷಣೆ ಯಾವುದು?

ಡಾ. ಬಿ. ಆರ್. ಅಂಬೇಡ್ಕರ್: ಇದ್ದ ಪರಿಸ್ಥಿತಿಯನ್ನು ಎದುರಿಸುವಷ್ಟು ಪ್ರಾಮಾಣಿಕರಾಗಿದ್ದರೆ, ಅರ್ಧ ದಾರಿಯಲ್ಲಿಯೇ ನಿಲುಗಡೆಯ ಮನೆಯು ಬೇಡ.

ಮಾನ್ಯರೆ, ಈ ಹಿಂದೆ ಮಾತನಾಡಿದ ಮಾನ್ಯ ಸದಸ್ಯ ರಾವಬಹದ್ದೂರ ಚಿತಳೆಯವರು ಎರಡು ಸೂಚನೆಗಳಿಗೆ ಒತ್ತಾಯಪಡಿಸಿದ್ದಾರೆ. ನಮ್ಮ ಮಿತ್ರರಾದ ಶ್ರೀ ಮಿಥಾ ಅವರು ಸೂಚಿಸಿದ ತಿದ್ದುಪಡಿಯನ್ನು ಸ್ವೀಕರಿಸಿದರೆ, ನಾವು ನಮ್ಮ ಶಾಸನವನ್ನೇ ವಿರೂಪಗೊಳಿಸಿದಂತಾಗುತ್ತದೆ ಎಂಬುದು ಮೊದಲನೆಯದು. ಮಾನ್ಯರೆ, ಈ ಕೇಳಿಕೆ ಬಹಳ ತಡವಾಗಿ ಬಂದುದಾಗಿದೆಯೆಂದು ನಮ್ಮ ಮಿತ್ರರಿಗೆ ನೆನಪಿಸುವೆ. ಕೇವಲ ಈ ಪ್ರಾಂತಕ್ಕೆ ಅಷ್ಟೇ ಅಲ್ಲದೆ, ಪ್ರತಿಯೊಂದು ಪ್ರಾಂತಕ್ಕೂ, ಅಖಂಡ ಭಾರತಕ್ಕೂ ನಾವು ಸಂವಿಧಾನವನ್ನು ರಚಿಸೋಣ; ಆದುದರಿಂದ ಈ ತತ್ವವನ್ನು ಸಾಧ್ಯವಿದ್ದಷ್ಟೂ ಸ್ಪಷ್ಟವಾದ ಶಬ್ದಗಳಲ್ಲಿ ಸ್ವೀಕರಿಸೋಣ.

ಮಾನ್ಯ ಸದಸ್ಯರು: "ಕೇಳಿ!"

ಡಾ. ಬಿ. ಆರ್. ಅಂಬೇಡ್ಕರ್: ಇದು ಬಹಳೇ ತಡವಾಯಿತು. ನಮ್ಮ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಒತ್ತಾಯಿಸಿದ ಮನವಿಯು, ದುಂಡುಮೇಜಿನ ಪರಿಷತ್ತಿನಲ್ಲಿಯೂ ಅನೇಕ ಮಹಾ ಅತಿರಥರೂ

ಇದನ್ನು ಕೇಳಿದ್ದರು. ಮಾನ್ಯರೆ, ಅವರೆಲ್ಲ ವಿಷಾದಪಡಬೇಕಾಯಿತೆಂಬುದು ನಮಗೆ ಗೊತ್ತಿದೆ; ಅವರು ವಿಷಾದ ಮಾತ್ರ ಪಡಲಿಲ್ಲ. ಸಂವಿಧಾನವನ್ನು ನಾಶಮಾಡಬೇಕೆಂಬುವ ಮಟ್ಟಕ್ಕೂ ಮುಟ್ಟಿದರು. ನನ್ನ ವೈಯಕ್ತಿಕ ಅನುಭವದಿಂದ ಹೇಳುವುದಾದರೆ, ದುಂಡುಮೇಜಿನ ಪರಿಷತ್ತು ಮುರಿದುಬೀಳುವಂತಾದುದಕ್ಕೆ ಈ ಅತಿರಥರ ಪಾಂಡಿತ್ಯ ದೃಷ್ಟಿಯೆ ಮುಖ್ಯವಾಗಿದೆ.

ಮಾನ್ಯರೆ, ಭಾರತವು ಯುರೋಪಲ್ಲ. ಇಂಗ್ಲೆಂಡ್ ಭಾರತವಲ್ಲ. ಕೋಮು ಪದ್ಧತಿಯು ಇಂಗ್ಲೆಂಡಿಗೆ ಗೊತ್ತಿಲ್ಲ; ಅದು ನಮಗೆ ಗೊತ್ತಿದೆ. ಆದುದರಿಂದ ಇಂಗ್ಲೆಂಡಿಗೆ ಸರಿಹೊಂದಬಹುದಾದ ರಾಜಕೀಯ ವ್ಯವಸ್ಥೆ ನಮಗೆ ಸರಿಹೊಂದಲಾರದು. ಇದಕ್ಕೂ ಒಂದು ಹೆಜ್ಜೆ ಮುಂದಿಟ್ಟು ನಾನು ತಿಳಿಯಬಯಸುವೆ; ಭಾರತೀಯ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳು ಏನೇ ಅನ್ನಲಿ, ಇನ್ನುಮುಂದೆ ಬರಲಿರುವ ಭಾರತೀಯ ಸಂವಿಧಾನದಲ್ಲಿ ಯಾವುದಾದರೂ ಒಳ್ಳೇ ಅಂಶವಿದ್ದರೆ– ಅದು ಜಾತೀಯ ಪ್ರಾತಿನಿಧ್ಯ ತತ್ವವನ್ನು ಅಂಗೀಕರಿಸುವುದರಲ್ಲಿಯೇ ಇದೆಯೆಂಬುದನ್ನು ಸಾರಿ ಹೇಳುವೆ.

ಮಾನ್ಯ ಸದಸ್ಯರು: "ಸರಿ, ಸರಿಯಾದುದೇ!"

ಡಾ. ಬಿ. ಆರ್. ಅಂಬೇಡ್ಕರ್: ಹೀಗೆ ನಾನು ಹೇಳುವಲ್ಲಿ ನಾನು ನಾಚಿಕೆ ಪಡಬೇಕಾಗಿಲ್ಲ. ನನಗೆ ಗೊತ್ತಿದೆ; ನಾನು ಮತ್ತೂ ಹೇಳುತ್ತೇನೆ– ಭಾರತೀಯ ಸಂವಿಧಾನದಲ್ಲಿ ಇದು ಅತ್ಯುತ್ತಮ ಅಂಶ ಗಳಲ್ಲಿ ಒಂದಾಗುತ್ತದೆ. ನನ್ನ ಪ್ರತಿನಿಧಿ ಯಾರೆಂಬುದರ ಅರಿವು ಇರದೆ ಮತದಾನ ಪೆಟ್ಟಿಗೆಯಲ್ಲಿ ಮತ ಹಾಕುವ ಹಕ್ಕು ಮಾತ್ರ ನನಗೆ ಬೇಕಾಗಿಲ್ಲ, ನಮಗೆ ಬೇಕಾಗಿಲ್ಲ, ಅಥವಾ ನನ್ನನ್ನು ಪ್ರತಿನಿಧಿಸು ವವರು ಯಾರು ಇಲ್ಲವೇ? ಮತದಾನ ಪೆಟ್ಟಿಗೆಯಲ್ಲಿ ಮತ ಹಾಕುವ ಹಕ್ಕು ನನಗಿರಬೇಕಲ್ಲದೆ, ನಮ್ಮ ವರ್ಗಕ್ಕೆ ಸಂಬಂಧಿಸಿದ ಕೆಲವು ಸದಸ್ಯರ ಗುಂಪು ಸದನದಲ್ಲಿರಬೇಕು. ಅವರು ವಿಷಯಗಳ ಚರ್ಚೆ ಮಾಡಬೇಕು ಮತ್ತು ಕೆಲವೊಂದು ಸಮಸ್ಯೆ ಬಗೆಹರಿಸುವಲ್ಲಿ ಭಾಗವಹಿಸಬೇಕು; ಇಂಥದೊಂದು ಪದ್ಧತಿ ನನಗೆ ಬೇಕಾಗಿದೆ. ಜಾತೀಯ ಪ್ರಾತಿನಿಧ್ಯ ದುಷ್ಟಕರವಾದುದಲ್ಲವೆಂದು ನಾನು ಹೇಳುವೆ. ಅದೇನು ವಿಷವಲ್ಲ! ನಮ್ಮ ದೇಶದಲ್ಲಿರುವ ವಿವಿಧ ವರ್ಗದವರಿಗೆ ಸುರಕ್ಷತೆ, ಸಂರಕ್ಷಣೆ ದಯಪಾಲಿಸಲು ಇದೊಂದು ಉತ್ತಮ ವ್ಯವಸ್ಥೆಯಾಗಿದೆ. ಇದು ಸಂವಿಧಾನವನ್ನು ವಿರೂಪಗೊಳಿಸುವುದೆಂದು ನಾನು ಹೇಳಲಾರೆ. ನಾನು ಇದನ್ನು...

ಡಾ. ಎಂ. ಕೆ. ದೀಕ್ಷಿತ್: ಅಲಂಕಾರ.

ಡಾ. ಬಿ. ಆರ್. ಅಂಬೇಡ್ಕರ್: ಅಹುದು ಇದು ಸಂವಿಧಾನದ ಅಲಂಕಾರ. ನನ್ನ ಮಾನ್ಯ ಮಿತ್ರರು ನ್ಯಾಯಾಂಗಕ್ಕೂ ಈ ತತ್ವವನ್ನು ಸ್ವೀಕರಿಸಬೇಕೆ ಎಂದು ಕೇಳಿದ್ದಾರೆ. ಆಗಲಿ, ನನ್ನ ಮಾನ್ಯ ಸ್ನೇಹಿತರು ಈಗಿರುವ ನ್ಯಾಯಾಂಗ ಪದ್ಧತಿಯಲ್ಲಿ ಜಾತೀಯ ಪಕ್ಷಪಾತವಿಲ್ಲವೆಂಬುದನ್ನು ತೋರಿಸಿ ಕೊಡಬಹುದೇ? ಒಬ್ಬ ಬ್ರಾಹ್ಮಣವಾದಿಯಾಗಿ, ಇನ್ನೊಬ್ಬ ಬ್ರಾಹ್ಮಣ ಪ್ರತಿಪಾದಿಯಾಗಿರುವ ದಾವೆಯಲ್ಲಿ ಬ್ರಾಹ್ಮಣ ನ್ಯಾಯಾಧೀಶನೊಬ್ಬ ಸಮಸ್ಯೆಗಳನ್ನು ವಿಚಾರಿಸಿ ನ್ಯಾಯ ನಿರ್ಣಯ ಕೊಡುವಾಗ ನ್ಯಾಯಾಧೀಶನಾಗಿ ಮಾತ್ರ ನಿರ್ಣಯಿಸುತ್ತಾನೆ. ಬಹುಶಃ ಆ ನಿರ್ಣಯವನ್ನು ಅನುಕೂಲಕರ ವಾಗಿಯೆ ನಾನು ಯೋಚಿಸುವಂತಾಗುತ್ತದೆ. ಆದರೆ ನಮ್ಮಲ್ಲಿ ಅದೆಂಥ ನ್ಯಾಯನೀತಿಯಿದೆಯೆಂಬುದು ನನಗೆ ಗೊತ್ತಿದೆ. ನನ್ನ ಮಾನ್ಯ ಮಿತ್ರರಿಗೆ ಹಾಗೂ ಈ ಸದನಕ್ಕೆ ತಾಳ್ಮೆಯಿದ್ದರೆ– ನ್ಯಾಯಾಂಗವು ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿರುವ ಕಲಂಕಗೊಳಿಸಿರುವ ಅನೇಕ ಕತೆಗಳ ಸುರುಳಿಯನ್ನೇ ಬಿಚ್ಚಬಹುದು.

(ಮಾನ್ಯ ಸದಸ್ಯರು ಓಹೋ! ಓಹೋ!)

"ಹಳ್ಳಿಯ ಜನ" ಎಂದೇನೋ ಕರೆಯಿಸಿಕೊಳ್ಳುವ ಆ ಹಳ್ಳಿಯ ಜನ, ಬಳಗದ ಬಂಧನ, ಒಂದೇ ರಕ್ತದ ಬಂಧನ ಇವುಗಳಿಂದ ನಿಕಟವಾಗಿ ಕೂಡಿಕೊಂಡ ಆ ಹಳ್ಳಿಯ ಜನ ಇನ್ನುಳಿದ ವರ್ಗದವರನ್ನು ರಾಜಕೀಯ ಹಾಗೂ ನ್ಯಾಯಾಂಗಗಳ ಬಲವನ್ನು ಪಡೆದು ಒಳಸಂಚು ಮಾಡುವುದಿಲ್ಲವೆಂಬುದು ನಿಶ್ಚಿತ ವಿಲ್ಲದ ಕಾರಣ ಇತರ ಜಾತಿಗಳವರ ವಿರುದ್ಧ ತಿದ್ದುಪಡಿಯಲ್ಲಿ ಈ ಅಂಶವನ್ನು ನಾವು ಸೇರಿಸ ಬೇಕಾಗಿದೆ. ಸಂವಿಧಾನದಿಂದ ದೊರೆಯುವ ಈ ಅವಕಾಶವು ಅತ್ಯುತ್ತಮವೆಂಬುದರಲ್ಲಿ ನನಗೆ ಸಂಶಯ ವಿಲ್ಲ. ನಾನು ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮಿಥಾರ ತಿದ್ದುಪಡಿಯನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ..

* * *

* ರಾವಬಹದ್ದೂರ್ ಆರ್. ಆರ್. ಕಾಳೆ: ..... ಮಾನ್ಯರೆ, ನನ್ನ ಮಾನ್ಯ ಸ್ನೇಹಿತರಾದ ಡಾ. ಅಂಬೇಡ್ಕರ್ ಅವರು ನಮ್ಮ ಪ್ರಾಂತದ ನ್ಯಾಯಾಂಗದ ಬಗ್ಗೆ ನುಡಿದ ಟೀಕೆಗಳಿಗೆ ನನ್ನ ವಿರೋಧವಿದೆ. ನಮ್ಮ ನ್ಯಾಯಂಗದ ಪ್ರಾಮಾಣಿಕತೆ, ಯಥಾರ್ಥಗಳ ಬಗ್ಗೆ ಅವರು ಪ್ರಶ್ನಿಸಿರುವುದನ್ನು ಕೇಳಿದಾಗ, ನನ್ನ ಮನಸ್ಸಿಗೆ ತೀವ್ರ ವೇದನೆಯಾಯಿತು. ಪ್ರಿವಿ ಕೌನ್ಸಿಲ್‌ದಂತಹ ನ್ಯಾಯಾಧಿಕರಣಕ್ಕೆ ಹೋದಾಗಲೂ, ನಮ್ಮ ನ್ಯಾಯಾಂಗ ಪ್ರಥಮ ದರ್ಜೆಯದು ಎಂದು ಅಲ್ಲಿ ಘೋಷಿಸಲಾಗಿದೆ.... ನಮ್ಮ ದೇಶದಲ್ಲಿ ಅತ್ಯಂತ ಶ್ರೇಷ್ಠವಾದ ನ್ಯಾಯಾಧಿಕರಣದಲ್ಲಿ ಅಂದರೆ ಪ್ರಿವಿ ಕೌನ್ಸಿಲ್‌ದಲ್ಲಿ– ನ್ಯಾಯನಿರ್ಣಯ ನೀಡುವಾಗ, ಇಡೀ ಪ್ರಪಂಚದಲ್ಲಿಯೇ ನಮ್ಮ ನ್ಯಾಯಾಂಗ ಅತ್ಯುತ್ತಮವೆಂಬುದನ್ನು ತೋರಿಸಲಾಗಿದೆ.

ಮಾನ್ಯ ಸದಸ್ಯರು: ಇಡೀ ಪ್ರಪಂಚದಲ್ಲಿಯೇ?

ರಾವಬಹದ್ದೂರ ಆರ್. ಆರ್. ಕಾಳೆ: ಅಹುದು, ಇಡೀ ಪ್ರಪಂಚದಲ್ಲಿ ನ್ಯಾಯಾಂಗವು ಜಾತೀಯ ಪ್ರಭಾವಕ್ಕೆ ಒಳಗಾಗಿದೆಯೆಂದು ಹೇಳುವುದು ನಿಜವಾಗಿಯೂ ಗಂಭೀರವಾದ ಕಲಂಕವೆಂದು ನಾನು ತಿಳಿಯಬಯಸುತ್ತೇನೆ. "ನನಗೆ ಗೊತ್ತಿದೆ..... ನಮ್ಮ ನ್ಯಾಯಾಂಗ ಎಂಥದು ಎಂಬುದು! ಮೊಕದ್ದಮೆಗಳಲ್ಲಿ ನ್ಯಾಯ ನಿರ್ಣಯಿಸುವಾಗ ಜಾತೀಯತೆಯ ಭಾವನೆಗಳಿಗೇ ಪ್ರಮುಖ ಸ್ಥಾನ...." ಹೀಗೆಂದು ನನ್ನ ಮಾನ್ಯ ಸ್ನೇಹಿತ ಡಾ. ಅಂಬೇಡ್ಕರ್ ನುಡಿದಾಗ ನನಗೆ ತುಂಬಾ ನೋವಾಯಿತು.

ಮೌಲ್ವಿ ಸರ್ ರಫಿಯುದ್ದೀನ್ ಅಹಮ್ಮದ್: ಇದನ್ನು ಹೇಳಿದವರಾರು?

ರಾವಬಹದ್ದೂರ ಆರ್.ಆರ್. ಕಾಳೆ: ಮಾನ್ಯ ಸದಸ್ಯ ಡಾ. ಅಂಬೇಡ್ಕರ್.

ಮೌಲ್ವಿ ಸರ್ ರಫಿಯುದ್ದೀನ್ ಅಹಮ್ಮದ್: ಅವರು ನಿಮ್ಮ "ಭಾವ" ಮತ್ತು ಒಬ್ಬ ಹಿಂದೂ.

ರಾವಬಹದ್ದೂರ ಆರ್. ಆರ್. ಕಾಳೆ: ನಮ್ಮ "ಭಾವ" ಎಂದರೇನರ್ಥ? ಅವರು ನನ್ನ ತಂದೆ ಇರಬಹುದು ಅಥವಾ ಮಗನೂ ಇರಬಹುದು. ಈ ಸದನದಲ್ಲಿ ನನ್ನ ಮೇಲೆ ಇಂಥ ದೋಷಾ ರೋಪಣೆ ಮಾಡುವುದನ್ನು ನಾನು ತಿರಸ್ಕರಿಸುತ್ತೇನೆ. ನನ್ನ ಭಾವ ಇರಲಿ, ತಂದೆ ಅಥವಾ ಮಗನಿರಲಿ

---

*ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXXVII,
ಪುಟಗಳು ೩೨೬–೩೨೭, ದಿನಾಂಕ ೧೦ ಫೆಬ್ರವರಿ ೧೯೩೩.

ನಾನೇನು ಚಿಂತಿಸುವುದಿಲ್ಲ. ವಿಶೇಷಾಧಿಕಾರವುಳ್ಳ ಈ ಸದನದಲ್ಲಿ ತಮ್ಮ ರಕ್ಷಣೆ ಮಾಡಿಕೊಳ್ಳಬೇಕಾದ ನ್ಯಾಯಾಂಗದವರೇ ಇಲ್ಲಿ ಇರದಿರುವಾಗ, ಆ ಇಡೀ ನ್ಯಾಯಾಂಗದ ನಿಂದೆ ಇಲ್ಲಿ ನಡೆಯುತ್ತಿರುವಾಗ ನನಗೆ ಬಹಳ ಕೆಡುಕೆನಿಸುತ್ತದೆ. ನಮ್ಮ ಮಾನ್ಯ ಮಿತ್ರರಾದ ಡಾ. ಅಂಬೇಡಕರರಿಗೆ ನ್ಯಾಯಾಂಗದ ಅನುಭವವಾದರೂ ಏನಿದೆ? ಇದ್ದರೂ ಅದು ಸ್ವಲ್ಪ ಅನುಭವ; ಆದರೆ ನನಗೆ ೪೦ ವರುಷಗಳ ಅನುಭವವಿದೆ. ಕೆಳಗಿನ ನ್ಯಾಯಾಲಯ, ಉಚ್ಚ ನ್ಯಾಯಾಲಯಗಳಲ್ಲಿ– ಕೆಳಗಿನಿಂದ ಹಿಡಿದು ಮೇಲಿನ ಎಲ್ಲ ನ್ಯಾಯಾಲಯಗಳಲ್ಲಿ– ನ್ಯಾಯಾಧೀಶರು ವಿಚಾರಣೆ ನಡೆಸಿದ ಯಾವ ಮೊಕದ್ದಮೆಗಳಲ್ಲಿಯೂ ಜಾತೀಯ ಪಕ್ಷಪಾತವಾಗಿಲ್ಲವೆಂದು ನಾನು ಎದೆತಟ್ಟಿ ಹೇಳಬಲ್ಲೆ. ಆದ್ದರಿಂದ ನನ್ನ ಮಾನ್ಯ ಮಿತ್ರರ ಸೂಚನೆಯನ್ನು ವಿರೋಧಿಸುತ್ತೇನೆ. ಒತ್ತಾಯ ತರುತ್ತಿರುವ ಡಾ. ಅಂಬೇಡ್ಕರ್ ಅವರಂಥ ಜನರ ಮನಸ್ಸು, ಗ್ರಾಮ ನ್ಯಾಯಪೀಠಗಳಲ್ಲಿಯೂ ವಿಶೇಷವಾದ ಒಂದು ವರ್ಗದವರ ಪ್ರಾತಿನಿಧ್ಯವಿರಬೇಕೆಂಬ ಅವರ ಬೇಡಿಕೆಯ ಮನಸ್ಸು ನನಗೆ ಅರ್ಥವಾಗುತ್ತದೆ. ಅದು ಅವರ ಮನೋಭಾವನೆಯನ್ನು ವ್ಯಕ್ತ ಮಾಡುತ್ತದೆ.

ಶ್ರೀ ಎಲ್. ಆರ್. ಗೋಖಲೆ (ಪುಣೆ ನಗರ): ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಸದನದಲ್ಲಿದ್ದರು. ಈಗ ಅವರು ಹೊರಗೆ ಹೋಗಿದ್ದಾರೆ ಎಂದು ತಿಳಿದು ನನಗೆ ಖೇದವಾಗುತ್ತದೆ.... ವಿರೋಧಿ ಪಕ್ಷದ ಪೀಠಗಳಲ್ಲಿ ಕುಳಿತ ನ್ಯಾಯಾಂಗಕ್ಕೆ ಸಂಬಂಧಪಟ್ಟ ಮಾನ್ಯ ಸದಸ್ಯರು ಗೌರವಯುತವಾದ ಈ ಸದನದಲ್ಲಿ ಅವರ ಸಮ್ಮುಖದಲ್ಲಿಯೇ ನ್ಯಾಯಾಧೀಶರನ್ನು ಹೀಯಾಳಿಸಿದರೂ ಅವರು ಮೌನವ್ರತ ತಾಳಿದುದನ್ನು ಕಂಡು ನನಗೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ. ಎಸ್. ಕಾಮತ್: ಮಾನ್ಯ ಡಾ. ಅಂಬೇಡ್ಕರ್ ಅವರ ವಿಚಾರಕ್ಕೆ ಬರುವ ಮುನ್ನ, ನಾನು ಹೇಳಲೇಬೇಕಾದ ಒಂದು ವಿಷಯವಿದೆ. ಇಂದು ಮಧ್ಯಾಹ್ನ ಅವರು ಇಲ್ಲಿಂದ ಹೋದುದು ವಿಶೇಷವಾದ ಕೆಲಸವೊಂದರ ಉದ್ದೇಶದಿಂದಲೇ ಅಥವಾ ಅವರ ಸೇವೆ ಅವಶ್ಯವೆಂದು ಅಧಿಸೂಚನೆಯಾಗಿದೆಯೇ? ಅಥವಾ ಈ ಸದನದೊಳಗೆ ಇಂದು ಬಂದುದು ಕಾಕತಾಳೀಯವಾಗಿತ್ತೇ? ಸತ್ಯ ಯಾವುದು ಎಂಬುದರ ಬಗ್ಗೆ ನನ್ನ ಸಂಬಂಧವಿಲ್ಲ. ಸಂಸತ್ತಿನ ಸಂಪ್ರದಾಯವನ್ನು ನಾವು ಗಮನಿಸಿದರೆ, ಇನ್ನೊಂದು ಪಕ್ಷದವರ ಅಭಿಪ್ರಾಯವನ್ನು ಕೇಳಿಕೊಳ್ಳದೆಯೆ ಭಾಷಣಕಾರರು ಕ್ಷಿತಿಜದಲ್ಲಿ ಕಾಣಿಸಿಕೊಳ್ಳುವ ಧೂಮಕೇತುವಿನಂತೆ ಬಂದು, ಸದನದಿಂದ ಒಮ್ಮೆಲೇ ಅದೃಶ್ಯರಾಗುವುದು ಹಿತಕರವಲ್ಲವೆಂದು ನನಗೆ ಅನ್ನಿಸುತ್ತದೆ. ಇದು ಸಂಸತ್ತಿನ ಸಂಪ್ರದಾಯವನ್ನು ಸಂಪೂರ್ಣವಾಗಿ ಅಲ್ಲಗಳೆದಂತಾಗಿದೆ; ಇದು ರೀತಿ ರಿವಾಜುಗಳಿಲ್ಲದವರ ರೀತಿ.

* * *

**ಶನಿವಾರ, ೧೧ ಫೆಬ್ರವರಿ ೧೯೩೩.**

*ರಾವಬಹದ್ದೂರ ಜಿ. ಕೆ. ಚಿತಳೆ (ಅಹಮ್ಮದನಗರ ಜಿಲ್ಲೆ): (ಕ್ರಿಯಾಲೋಪವನ್ನೆತ್ತಿ ಮಾತನಾಡುವಾಗ) ಮಾನ್ಯರೆ... ನನ್ನ ಮಾನ್ಯ ಮಿತ್ರರಾದ ಡಾ. ಅಂಬೇಡಕರರು ನಿನ್ನೆ ಬ್ರಾಹ್ಮಣ ನ್ಯಾಯಾಂಗ ವರ್ಗ

---

*ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXXVII, ಪುಟಗಳು ೩೩೯–೪೦, ದಿನಾಂಕ ೧೧ ಫೆಬ್ರವರಿ ೧೯೩೩.

ವನ್ನು ಹೀಯಾಳಿಸಿ ಮಾಡಿದಂತಹ ಟೀಕೆಗಳನ್ನು, ೧೨ ವರುಷಗಳಿಂದಲೂ ಪದ್ಧತಿಯು ನಡೆದುಬರುತ್ತಿದ್ದರೂ ಯಾವುದೇ ಪರಿಷತ್ತುಗಳಲ್ಲಿ ಇಂಥ ಅಭಿಪ್ರಾಯ ವ್ಯಕ್ತವಾದ ಉದಾಹರಣೆಯನ್ನು ನಾನು ಕೇಳಿಲ್ಲ. ಪರಿಸ್ಥಿತಿ ಹೀಗಿರುವಾಗ ಒಂದು ವರ್ಗದ ಜನರನ್ನು ಮುಕ್ತವಾಗಿ ಇಲ್ಲಿ ಹೀಯಾಳಿಸುವುದಾದರೆ, ಈ ಕಡೆಯವರು –ಅಂದರೆ ಬೇರೆ ವರ್ಗದವರೂ– ಅಲ್ಪಸಂಖ್ಯಾತರ ಒಬ್ಬೊಬ್ಬ ಅಧಿಕಾರಿಯನ್ನು ಮುತ್ತಿಗೆ ಹಾಕುವ ಆಂದೋಲನವನ್ನು ಆರಂಭಿಸಬಹುದೆಂಬುದನ್ನು ಮರೆಯಕೂಡದು. ಆದ್ದರಿಂದ ಮಾನ್ಯರೆ, ಇದರ ಬಗ್ಗೆ ಅಧಿಕಾರಯುಕ್ತವಾದ ನಿರ್ಣಯ ಕೊಡುವುದು ಸಂಪೂರ್ಣವಾಗಿ ಅವಶ್ಯವಾಗಿದೆ; ಏಕೆಂದರೆ ಮಂತ್ರಿವರ್ಗದ ಪೀಠದಲ್ಲಿರುವವರು ಅಥವಾ ಸರಕಾರದ ಪೀಠದಲ್ಲಿರುವವರು, ಅವರ ಕೈಯಲ್ಲಿಯೇ ಸೇವಕರ ಗೌರವ ಕಾಯ್ದುಕೊಳ್ಳುವುದಿರುವಾಗ, ಸಂಪೂರ್ಣವಾಗಿ ಸ್ತಬ್ಧವಾಗಿ ಕುಳಿತುಕೊಂಡುದುದನ್ನು ಕಂಡು ನನಗೆ ನಿಜವಾಗಿಯೂ ನೋವಾಯಿತು.

ಮಾನ್ಯ ಶ್ರೀ ಆರ್. ಡಿ. ಬೆಲ್: ಮಾನ್ಯರೆ..... ಈ ಚರ್ಚೆಯನ್ನು ಇನ್ನು ಮುಂದುವರಿಸುವ ಮೊದಲೆ, ನಾವು ಚರ್ಚೆಯನ್ನೇ ಮಾಡುವುದಾದರೆ, ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಏನು ಹೇಳಿದ್ದಾರೋ ಅವೇ ಶಬ್ದಗಳನ್ನು ಸದನಕ್ಕೆ ತಿಳಿಸಬೇಕೆಂಬುದು ನನ್ನ ವಿಚಾರವಾಗಿದೆ.

ಮೌಲ್ವಿ ಸರ್ ರಫಿಯುದ್ದೀನ್ ಅಹಮ್ಮದ್: ಮಾನ್ಯರೆ, ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಉಪಸ್ಥಿತರಿರುವುದಕ್ಕೆ ಈ ಚರ್ಚೆ ಸಂಬಂಧಿಸಿದೆಯಾದ್ದರಿಂದ ಅವರು ಸದನದಲ್ಲಿದ್ದಾಗ ಈ ಚರ್ಚೆ ನಡೆಯುವುದು ಸೂಕ್ತವಾಗಿದೆ.

ಮಾನ್ಯ ಸಭಾಪತಿಗಳು: ..... ಮಾನ್ಯ ಸದಸ್ಯ ರಫಿಯುದ್ದೀನ್ ಅಹಮ್ಮದ್ ಅವರ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಿಲ್ಲ; ಡಾ. ಅಂಬೇಡ್ಕರ್ ಬರುವುದು ಅನಿಶ್ಚಿತವಿರುವಾಗ, ಅವರು ಬರುವರೆಗೆ ಸದನವು ಕಾಯಬೇಕಾಗಿಲ್ಲ. ಆದ್ದರಿಂದ ಅದು ಶಕ್ಯವಾಗುವುದಿಲ್ಲ. ತನ್ಮಧ್ಯೆ ಅವರು ತಮ್ಮ ಭಾಷಣದಲ್ಲಿ ಹೇಳಿದ ಮಾತುಗಳನ್ನು ತದ್ವತ್ತಾಗಿ ನೋಡಿ ಪರಿಶೀಲಿಸೋಣವೆಂದು ನನಗೆ ತೋರುತ್ತದೆ. ಹೀಗೆ ಮಾಡುವುದರಿಂದ ಸದನಕ್ಕೆ ಏನಾದರೂ ನಿರ್ಣಯಿಸಲು ಸಾಧ್ಯವಾಗುತ್ತದೆ.

ಓದುವುದು. "ನಿನ್ನೆ ಹೇಳಿದ್ದನ್ನು ವರದಿ ಮಾಡಿದಂತೆ."

ಮಾನ್ಯ ಶ್ರೀ ಆರ್. ಡಿ. ಬೆಲ್: ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರು ಬೆರಳಚ್ಚು ಪ್ರತಿ ನೋಡಿರಲಿಕ್ಕಿಲ್ಲ; ಆದ್ದರಿಂದ ಮಾನ್ಯ ಸದಸ್ಯ ಶ್ರೀ ಕಾಮತರಾಗಲಿ ಅಥವಾ ತಾವಾಗಲಿ ವ್ಯಕ್ತಪಡಿಸಿದ ಅಸಮಾಧಾನಕ್ಕೆ ಅವರು ಪೂರ್ಣವಾಗಿ ಭಾಗಿದಾರರು ಆಗಲಿಕ್ಕಿಲ್ಲ. ಮಾನ್ಯ ಡಾ. ಅಂಬೇಡಕರರು ನಿನ್ನೆಯೂ ಬಂದಿರಲಿಲ್ಲ, ಈ ದಿನ ಬೆಳಿಗ್ಗೆಯೂ ಬಂದಿರಲಿಲ್ಲ. ಇದರಿಂದ ಈ ಮಾತುಗಳನ್ನು ವಿವರಿಸುವ ಅವಕಾಶವವೂ ಅವರಿಗೆ ದೊರಕಿಲ್ಲ.

ಆಮೇಲೆ ಅವರು "ಸರಕಾರಕ್ಕೆ ನ್ಯಾಯಾಂಗದ ಮೇಲೆ ಸಂಪೂರ್ಣ ವಿಶ್ವಾಸವಿದೆ" ಎಂಬುದನ್ನು ಸಮರ್ಥಿಸಿಕೊಂಡರು.

ಮಾನ್ಯ ಸಭಾಪತಿಗಳು: ಮಾನ್ಯ ಗೃಹಶಾಖೆಯ ಸದಸ್ಯರು ಹೇಳಿಕೆ ಕೊಟ್ಟುದಕ್ಕೆ ನನಗೆ ಸಂತೋಷವೆನಿಸಿದೆ. ಮಾನ್ಯ ಗೃಹಶಾಖೆ ಸದಸ್ಯರೇ ಸಂಪೂರ್ಣವಾದ ಹೇಳಿಕೆ ಕೊಟ್ಟ ಮೇಲೆ, ಇದಕ್ಕೂ ಹೆಚ್ಚಿಗೆ ಈ ಸದನವು ವಿಚಾರಿಸಬೇಕಾಗಿಲ್ಲ.

ನಾನೀಗ ಹೇಳುವುದಿಷ್ಟೇ ಇದೆ; ಯಾವುದೇ ಇಲಾಖೆಗೆ ಅಥವಾ ಸೇವೆಗೆ ನಿಜವಾಗಿಯೂ ಇದು ಆಕ್ಷೇಪಣೀಯವಾದುದು, ಅಸಂದೀಯವಾದುದು, ಅನ್ಯಾಯವಾದುದು. ಭಾಷೆಯ ಮೇಲೆ ಪ್ರಭುತ್ವವಿದ್ದ

ಸದಸ್ಯರು ಅಥವಾ ಭಾಷಣದ ಕೌಶಲ್ಯ ತಮಗಿದೆಯೆಂಬ ವಿಶ್ವಾಸವುಳ್ಳ ಸದಸ್ಯರು ಆವೇಶದಲ್ಲಿ ತಾವು ಎಷ್ಟರಮಟ್ಟಿಗೆ ಮಾತನಾಡಬೇಕಿತ್ತೋ ಅದನ್ನು ಮೀರಿ ಮಾತನಾಡಬಹುದು; ಅನಂತರ ವೇಳೆ ದೊರೆತಾಗ ಅದನ್ನು ಸ್ಮರಿಸಿಕೊಂಡು ಅಸಮಾಧಾನಪಡಬಹುದು. ಮಾನ್ಯ ಗೃಹಶಾಖೆಯ ಸದಸ್ಯರು ತಿಳಿಸಿದಂತೆ, ಮಾನ್ಯ ಸದಸ್ಯ ಡಾ. ಅಂಬೇಡ್ಕರರು ತಮ್ಮ ಹೇಳಿಕೆಯ ಬೆರಳಚ್ಚು ಪ್ರತಿಯನ್ನು ಇನ್ನೂ ನೋಡಿಲ್ಲ. ಅವರು ಅದನ್ನು ಓದಿದಾಗ, ಈ ಸದನಕ್ಕೆ ಅನಿಸಿದಂತೆ ಅವರಿಗೂ ಅನಿಸಬಹುದು– ಅನಿಸಲೇಬೇಕು ಎಂಬುದು ನನಗೆ ಖಾತ್ರಿಯಾಗಿದೆ. ಅತ್ಯಂತ ಗೌರವಾನ್ವಿತ ನ್ಯಾಯಾಂಗದಂಥ ಇಲಾಖೆಯನ್ನು ಸಾರಾಸಗಟಾಗಿ ನಿಂದಿಸುವುದು ಬಹಳಷ್ಟು ಅಸಂಸದೀಯವಾಗಿದೆಯೆಂದು ಮಾನ್ಯ ಸದಸ್ಯರಿಗೆ ಎಚ್ಚರಿಕೆ ಕೊಡಬಯಸುವೆ. ಮಾನ್ಯ ಸದಸ್ಯರು ತಪ್ಪು ಮಾಡಿದ್ದಾರೆಂಬುದು ನನ್ನ ವಿಚಾರವಾಗಿದೆ. ಕ್ರಿಯಾಲೋಪ ಎತ್ತಿದ್ದರಿಂದ ಇದು ಭವಿಷ್ಯದಲ್ಲಿ ಈ ಸದನಕ್ಕೆ ಮಾರ್ಗದರ್ಶನವಾಗಿ ನೆರವಾಗಬಲ್ಲದು. ಸರಕಾರದ ಪರವಾಗಿ ಹಾಗೂ ವಿರುದ್ಧವಾಗಿ ಈ ಸದನದಲ್ಲಿ ವ್ಯಕ್ತವಾದ ಅಭಿಪ್ರಾಯಗಳಲ್ಲಿ ನಾನೂ ಸಮಭಾಗಿಯಾಗಿರುವೆ. (ಚಪ್ಪಾಳೆ)

# ೨೩

# *ಗ್ರಾಮ ಪಂಚಾಯಿತಿಗಳ ಮಸೂದೆ: ೩

## ಡಾ. ಅಂಬೇಡ್ಕರ್ ಅವರ ಹೇಳಿಕೆ. ಓದಿದ ಅವರ ಭಾಷಣ

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಸಭಾಪತಿಗಳೆ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮಿಥಾ ಅವರು ಮಂಡಿಸಿದ ತಿದ್ದುಪಡಿಯ ಸಂದರ್ಭದಲ್ಲಿ ಹೋದ ಶುಕ್ರವಾರ ನಾನು ಮಾತನಾಡುವಾಗ ನನ್ನ ಹೇಳಿಕೆಯಲ್ಲವೆಂದು ಆರೋಪಿಸಲಾದ ವಿಚಾರಗಳನ್ನು ಕುರಿತು ಹೋದ ಶನಿವಾರದಂದು ನನ್ನ ಮಾನ್ಯ ಮಿತ್ರರಾದ ರಾವಬಹದ್ದೂರ ಚಿತಳೆಯವರು ಕ್ರಿಯಾಲೋಪ ಎತ್ತಿದ್ದು, ಅದಕ್ಕಾಗಿ ಅರ್ಥ ವಿವರಣೆ ಕೊಡಲು ಈಗ ನನಗೆ ಅನುಮತಿ ಕೊಡಬೇಕಾಗಿ ತಮಗೆ ಪ್ರಾರ್ಥಿಸುತ್ತೇನೆ. ಮಾನ್ಯರೆ, ಈ ಕ್ರಿಯಾಲೋಪವನ್ನೆತ್ತಿದಾಗ ಹೋದ ಶನಿವಾರವೇ ನಾನು ಇಂಥ ವಿವರಣೆ ಕೊಡಲು ಉತ್ಸುಕನಾಗಿದ್ದೆ. ಆದರೆ ನನ್ನ ಭಾಷಣದ ನಕಲು ಪ್ರತಿ ಮತ್ತು ಕ್ರಿಯಾಲೋಪದ ಬಗ್ಗೆ ಮಾನ್ಯ ಸದಸ್ಯರಿಂದ ವ್ಯಕ್ತವಾದ ಹೇಳಿಕೆ ಇವು ನನಗೆ ಕಚೇರಿಯಿಂದ ದೊರೆಯಲಿಲ್ಲ. ಸಭೆಯು ಮುಗಿಯುವುದರೊಳಗಾಗಿ ನನಗೆ ನಕಲು ಪ್ರತಿ ಸಿಗುವುದು ಸಾಧ್ಯವಿಲ್ಲವೆಂದು ತಿಳಿಸಲಾಯಿತು. ಹೀಗಾಗಿ ಇಂದಿನವರೆಗೆ ನನ್ನ ವಿವರಣೆಯನ್ನು ಮುಂದೂಡಬೇಕಾಯಿತು.

ನಾನು ಮಾತನಾಡಿದಂತೆ ನಕಲು ಪ್ರತಿ ಸರಿಯಾಗಿದೆಯೆಂಬುದನ್ನು ನಾನು ಅಂಗೀಕರಿಸುವ ಮೊದಲೇ, ಕ್ರಿಯಾಲೋಪ ಎತ್ತಿದ್ದಕ್ಕೆ ನನಗೆ ಬಹಳ ಖೇದವಾಗುತ್ತದೆ. ನಿಜವಾದ ಸಂಗತಿಗಳ ಆಧಾರಗಳನ್ನು ಮೊಟ್ಟಮೊದಲು ನಿಶ್ಚಿತ ಮಾಡಿಕೊಳ್ಳದೆಯೆ ಯಾವ ನಿರ್ಣಯವನ್ನು ಕೈಕೊಳ್ಳಬಾರದು; ಇದು ನ್ಯಾಯನಿರ್ಣಯದ ತತ್ವಗಳಲ್ಲಿ ಮೊದಲನೆಯದಾಗಿದೆ ಎಂಬುದನ್ನು ಮಾನ್ಯರೆ, ನಾನು ಅತ್ಯಂತ ವಿನಮ್ರನಾಗಿ ತಿಳಿಸ ಬಯಸುತ್ತೇನೆ. ಇಂಥ ನಿಯಮದ ಲಾಭ ನನಗೆ ದೊರೆಯದಿದ್ದುದಕ್ಕೆ ದುಃಖವೆನಿಸುತ್ತದೆ. ಶುಕ್ರವಾರ ದಿನದಂದು ನನ್ನ ಭಾಷಣವನ್ನು ಮುಗಿಸಿದ ಕೂಡಲೆ ನಾನು ಹೊರಗೆ ಹೋದುದು ಸಂಸತ್ತಿನ ಸಂಪ್ರದಾಯ ವನ್ನು ಉಲ್ಲಂಘಿಸಿದಂತಾಗಿದೆ; ಆದ್ದರಿಂದ ಇಂಥ ಅವಕಾಶ ಕೇಳುವ ಹಕ್ಕು ನನಗಿಲ್ಲ ಎಂಬ ನನ್ನ ಮಾನ್ಯ ಮಿತ್ರ ಶ್ರೀ ಕಾಮತರ ವಾದವನ್ನು ಆಧರಿಸಿ ಈ ರೀತಿ ಹೇಳಿಕೆ ಕೊಡಲಾಗಿದೆ. ಸಂಪ್ರದಾಯ ನಿಯಮಗಳನ್ನು ತಿಳಿದುಕೊಳ್ಳಬೇಕಾದರೆ ಮಾನ್ಯ ಸದಸ್ಯ ಶ್ರೀ ಕಾಮತರಿಂದ ಹಿಡಿದು ಪ್ರತಿಯೊಬ್ಬರೂ ಸಿದ್ಧರಿರಬೇಕು; ನಮಗೆಲ್ಲರಿಗೂ ಗೊತ್ತಿದ್ದಂತೆ ಅವರು ಬಹು ಪ್ರಾಚೀನವಾದ, ಗೌರವಯುತವಾದ ರಾಜಕಾರಣಿಗಳ ವ್ಯವಸ್ಥೆಗೆ, ಲಿಬರಲ್ ಗುಂಪಿಗೆ ಸಂಬಂಧಿಸಿದವರು; ಇದಲ್ಲದೆ ಸಂಸದೀಯ ಜೀವನದಲ್ಲಿಯೇ ತಮ್ಮ ಆಯಸ್ಸನ್ನು ಕಳೆದಿರುವವರು. ಆದರೆ ವಿಶೇಷವಾದ ಈ ಸಂದರ್ಭದಲ್ಲಿ ಸಂಸತ್ತಿನ ಸಂಪ್ರದಾಯದ

---

*ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXXVII,
ಪುಟಗಳು ೪೦೦-೦೩, ದಿನಾಂಕ ೧೩ ಫೆಬ್ರವರಿ ೧೯೩೩.

ನಿಯಮವು ಸರಿಯಾಗುವುದಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ನನ್ನ ತಿಳುವಳಿಕೆಯಂತೆ, ತನ್ನ ಭಾಷಣವನ್ನು ಮುಗಿಸಿದ ಮೇಲೆ ಸದಸ್ಯರು ಸದನವನ್ನು ಬಿಟ್ಟುಹೋಗಬಾರದೆಂದೂ, ಆದರೆ ಉತ್ತರವನ್ನು ಕೇಳುವವರೆಗೆ ಸದನದಲ್ಲಿಯೇ ಇರಬೇಕೆಂದೂ ನಿಯಮವಿದೆ. ಇದು ಸದಸ್ಯರೊಬ್ಬರು ತಾವು ಮಾತನಾಡುತ್ತಿರುವಾಗ ಸದನದ ಮತ್ತೊಬ್ಬ ಸದಸ್ಯರನ್ನು ಕುರಿತು ವೈಯಕ್ತಿಕವಾಗಿ ಟೀಕೆ ಮಾಡಿದ್ದರೆ ಮಾತ್ರ ಅನ್ವಯಿಸುತ್ತದೆ. ಸಾಮಾನ್ಯವಾಗಿ ಗೊತ್ತಿದ್ದ ಸತ್ಯ ಸಂಗತಿಗಳನ್ನು ಆಧರಿಸಿ, ಸಾಮಾನ್ಯವಾದ ವಾದ ಮಾಡಿದಾಗ ಅಂಥವುಗಳಿಗೆ ಈ ನಿಯಮ ಅನ್ವಯಿಸುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಹಾಗೆ ಎಲ್ಲರಿಗೂ ಈ ನಿಯಮ ಹಚ್ಚಿದರೆ, ಚರ್ಚೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಸದಸ್ಯ ಪ್ರಶ್ನೆ ಕೇಳುವವರೆಗೆ ಸದಾ ಸದನದಲ್ಲಿರಬೇಕು. ಚರ್ಚೆಯ ಪ್ರತಿಯೊಂದು ಮಾತನ್ನು ಆಲಿಸಬೇಕು ಎಂಬರ್ಥ ಬರುತ್ತದೆ. ನಾನು ಮಾನ್ಯ ಸದಸ್ಯ ಶ್ರೀ ಕಾಮತರನ್ನಾಗಲಿ ಅಥವಾ ಈ ನಿಮಿತ್ತದಿಂದ ಸದನದಿಂದ ಇನ್ನುಳಿದ ಗೌರವ ಸದಸ್ಯರನ್ನಾಗಲಿ ಪ್ರಶ್ನಿಸುತ್ತಿಲ್ಲ. ಉತ್ತರ ರೂಪವಾಗಿ ನನಗೆ ಅಂದು ಕೇಳುವುದು ಏನೂ ಇದ್ದಿಲ್ಲವಾದ್ದರಿಂದ, ನಾನಿಲ್ಲಿ ಉಪಸ್ಥಿತನಾಗಿರುವ ಅವಶ್ಯಕತೆ ಇರಲಿಲ್ಲ; ಇದಲ್ಲದೆ ಅಂದು ನನಗೆ ಬೇರೆ ಕೆಲಸವೂ ಇದ್ದಿತು. ಅಭಿಪ್ರಾಯ ಕೇಳಿಕೊಳ್ಳದೆಯೆ ನಿಂದನೆ ಮಾಡಕೂಡದು ಎಂಬ ನಿಯಮದ ಲಾಭ ನನಗೆ ದೊರಕಿಲ್ಲ; ಇದಕ್ಕೆ ಕಾರಣ ನಾನು ಪೂರ್ಣಾವಧಿಯ ಸದಸ್ಯನಲ್ಲ ಹಾಗೂ ನಾನಿಲ್ಲಿ ಉಪಸ್ಥಿತನಿರುವುದರ ಬಗೆಗಿನ ಅನಿಶ್ಚತತೆ– ಸದನದಲ್ಲಿ ವ್ಯಕ್ತವಾದ ಈ ಅಭಿಪ್ರಾಯಕ್ಕೆ ನಾನು ತಲೆಬಾಗುವೆ. ಅನಿಯಮಿತತನವು ಬಹುಶಃ ನನ್ನಲ್ಲಿ ಸ್ವಲ್ಪಮಟ್ಟಿಗೆ ಜಾಸ್ತಿಯಾಗಿರಬಹುದು. ಉಪಯುಕ್ತತೆಯ ದೃಷ್ಟಿಯಿಂದ ತೂಗಿದಾಗ, ಈ ಸದನದಲ್ಲಿ ಅಥವಾ ಹೊರಗಡೆ ನಾನು ಸಾಧಿಸಲು ಸಾಧ್ಯವಾದ ಕಾರ್ಯಗಳು ಕಡಿಮೆ ಮಟ್ಟದವು ಆಗಿಲ್ಲವೆಂದು ಹೇಳಬೇಕಾಗುತ್ತದೆ. ನಾನು ನಿಯಮಿತವಾಗಿ ಇರುವೆನೋ ಅಥವಾ ಇಲ್ಲವೋ ಎಂಬುದು ಪ್ರಶ್ನೆಯಲ್ಲ. ಆದರೆ ನನ್ನ ಅಭಿಪ್ರಾಯದಂತೆ ನಾನು ಮಾತನಾಡುತ್ತಿರುವಾಗಲೇ ಮಾನ್ಯ ಸದಸ್ಯರು ಈ ವಿಷಯವನ್ನೇಕೆ ಕೇಳಬಾರದು? ವಿರೋಧಿಸಬೇಕೆಂದಿರುವ ಮಾನ್ಯ ಸದಸ್ಯರು ಪದ್ಧತಿಯ ಉಲ್ಲಂಘನೆಯಾದ ಕೂಡಲೇ ಸಭಾಪತಿಗಳ ಗಮನ ಸೆಳೆಯುವುದು– ನನಗೆ ಗೊತ್ತಿದ್ದಂತೆ– ಕ್ರಿಯಾಲೋಪ ಎತ್ತುವುದು ಸರಿಯಾದ ರೀತಿಯಾಗಿದೆ. ಇದೀಗ ಅಸಂತೋಷಗೊಂಡ ಪಂಗಡವು ಆ ಸಮಯದಲ್ಲಿ ಏನೂ ಮಾಡದೆ, ರಾತ್ರಿಯೆಲ್ಲ ನಿದ್ದೆ ಮಾಡಿ ಮರುದಿನ ಬೆಳಿಗ್ಗೆ ಯಾವ ನೋಟೀಸನ್ನೂ ಕೊಡದೆ ತನ್ನ ಅಳಲನ್ನು ತೋಡಿಕೊಂಡು, ಆಮೇಲೆ ಅಪರಾಧಿಯೇ ನ್ಯಾಯಾಲಯದ ಕಟಕಟೆಯಲ್ಲಿ ಇಲ್ಲವೆಂದು ಹೇಳುವುದು ಬಹಳ ಆಶ್ಚರ್ಯದ ಸಂಗತಿಯಾಗಿದೆ. ನಾನು ಮಾತನಾಡುತ್ತಿರುವಾಗ ತಕ್ಷಣ ಮಾನ್ಯ ಸದಸ್ಯರು ಕ್ರಿಯಾಲೋಪವನ್ನು ಎತ್ತಿದರೆ ಅದು ಯೋಗ್ಯವಾದ ಪದ್ಧತಿಯಾಗುತ್ತಿತ್ತು; ಅಥವಾ ನೋಟೀಸು ಕೊಡುವುದೂ ಉಚಿತವಾಗಿರುತ್ತಿತ್ತು.

ಕ್ರಿಯಾಲೋಪದ ಬಗ್ಗೆ ತಿಳಿಸುವುದಾದರೆ– ನಾನು ಮಾತನಾಡಿದಂತೆಯೇ ಸರಿಯಾಗಿ ನಕಲುಪ್ರತಿ ಇಲ್ಲವೆಂದು ಹೇಳಲೇಬೇಕು. ಸಂಪೂರ್ಣವಾಗಿ ನ್ಯಾಯಾಂಗವನ್ನೇ ನಾನು ನಿಂದಿಸಬೇಕು ಎಂಬರ್ಥದಲ್ಲಿ ಇದೀಗ ನಕಲು ಪ್ರತಿ ಬಂದಿದೆ; ಆದರೆ ನಿಜವಾಗಿ ಅದು ನನ್ನ ಇಚ್ಛೆಯೂ ಆಗಿಲ್ಲ, ಉದ್ದೇಶವೂ ಆಗಿಲ್ಲ. ನಕಲು ಪ್ರತಿ ಹೀಗಿದೆ:–

> "ಬ್ರಾಹ್ಮಣವಾದಿ ಮತ್ತು ಬ್ರಾಹ್ಮಣ ಪ್ರತಿವಾದಿ ಇದ್ದರೆ– ಬ್ರಾಹ್ಮಣ ನ್ಯಾಯಾಧೀಶರು ಸಮಸ್ಯೆಗಳನ್ನು ವಿಚಾರಿಸಿ ನ್ಯಾಯದಾನ ಮಾಡುವಾಗ, ನ್ಯಾಯಾಧೀಶನಾಗಿ ಮಾತ್ರ ನಿರ್ಣಯಿಸುತ್ತಾನೆ..." ಇತ್ಯಾದಿ.

ಇದು ತಪ್ಪು. ಮೊಕದ್ದಮೆಯಲ್ಲಿ ಬ್ರಾಹ್ಮಣರು ಪಕ್ಷಗಾರರಾಗಿ ಇರುವುದರ ಬಗ್ಗೆ ನಾನು ಹೇಳಿಲ್ಲ. ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರು ಪಕ್ಷಗಾರರಾಗಿ ಇರುವ ಮೊಕದ್ದಮೆಯ ಬಗ್ಗೆ ನಾನು ಮಾತನಾಡಿದ್ದೆ. ಇದಲ್ಲದೆ, "ನ್ಯಾಯಾಧೀಶನಾಗಿ ಮಾತ್ರ ನಿರ್ಣಯಿಸುತ್ತಾನೆ"... ಈ ಶಬ್ದಗಳಲ್ಲಿ ಮೊದಲು ಬರಬೇಕಾದ "ಜಾತೀಯತೆಯ ಪಕ್ಷಪಾತವಿಲ್ಲದೆ..." ಎಂಬ ಪದಗಳು ಲುಪ್ತವಾಗಿವೆ. ಎರಡನೆಯದಾಗಿ ಮಿತಿಯಿರಬೇಕಾದ ಮಹತ್ವವಾದ– "ನ್ಯಾಯಾಂಗವು ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದೆ, ಹೊಲಗೆಡಿಸಿದೆ"– ಎಂಬ ಪದಗಳು ವಾಕ್ಯದಲ್ಲಿ ಬಿಡಲ್ಪಟ್ಟಿವೆ.

ನಾನು ಹೇಳಿದ್ದು ಇಂಥ ವಿಷಯಗಳಲ್ಲಿ ನ್ಯಾಯಾಂಗವು ತನ್ನ ಸ್ಥಾನವನ್ನೇ ದುರುಪಯೋಗ ಪಡಿಸಿಕೊಂಡಿದೆ, ಹೊಲಗೆಡಿಸಿದೆ ಎಂಬುದಾಗಿದೆ. ನನ್ನ ಹೇಳಿಕೆಯಲ್ಲಿಯ ಈ ತಪ್ಪುಗಳನ್ನು ತಿದ್ದಿದರೆ, ಸಾರಾಸಗಟಾಗಿ ನ್ಯಾಯಾಂಗವನ್ನು ನಿಂದಿಸುವ ಉದ್ದೇಶವೂ ನನ್ನದಿರಲಿಲ್ಲವೆಂಬುದು, ಸಂಪೂರ್ಣ ವಾಗಿ ನ್ಯಾಯಾಂಗದ ನೀತಿಯ ಬಗ್ಗೆ ಯಾವುದೇ ನಿರ್ಣಯ ಕೊಡುವ ಇಚ್ಛೆ ನನ್ನದಾಗಿರಲಿಲ್ಲವೆಂಬುದು ತಾನಾಗಿಯೇ ತಿಳಿಯುವುದು. ಎರಡನೆಯದಾಗಿ ನ್ಯಾಯಾಂಗ ಖಾತೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬ್ರಾಹ್ಮಣರ ಬಗ್ಗೆ ವಿರೋಧಾಭಿಪ್ರಾಯವನ್ನು ವ್ಯಕ್ತ ಮಾಡುವ ಉದ್ದೇಶವೂ ನನಗಿರಲಿಲ್ಲ. ಇನ್ನು ಮುಂದುವರೆದು ಹೇಳುವುದಾದರೆ– ನಾನು ಬ್ರಾಹ್ಮಣ ನ್ಯಾಯಾಧೀಶರ ಬಗ್ಗೆ ಮಾತನಾಡಿದಾಗ, ಅವರನ್ನು ನಿಂದಿಸಬೇಕೆಂದೇ ವಿಶೇಷವಾಗಿ ಅವರನ್ನು ಪ್ರತ್ಯೇಕಿಸಿ ಹೇಳುವ ದೃಷ್ಟಿ ನನಗಿರಲಿಲ್ಲ. ವಿಷಯವನ್ನು ನಾನು ಸಾಮಾನ್ಯವಾಗಿ ಚರ್ಚೆ ಮಾಡುತ್ತಿರುವಾಗ ಉದಾಹರಣೆಗೆಂದು ಮಾತ್ರ ಬ್ರಾಹ್ಮಣರನ್ನು ತೆಗೆದುಕೊಂಡೆ. ನನ್ನ ಭಾಷಣದ ಕೊನೆಯ ಭಾಗವನ್ನು ಪರಿಶೀಲಿಸಿದಾಗ ನಿಜವಾದ ಈ ಸಂಗತಿಯು ನಿಮಗೆ ಸ್ಪಷ್ಟವಾಗುವುದು. ನನ್ನ ವಾಕ್ಯರಚನೆಯಲ್ಲಿ ಯಾವುದನ್ನು ವಿಶೇಷತಃ ಹೆಸರಿಸದೆ, ನ್ಯಾಯಾಂಗದಲ್ಲಿ ಸಾಮಾನ್ಯವಾದ ಸಂಗತಿಗಳ ಬಗ್ಗೆ ಹೇಳಿರುವೆ. ಆದುದರಿಂದ ಒಟ್ಟಾಗಿ ನ್ಯಾಯಾಂಗವನ್ನು ನಿಂದಿಸುವುದು ಅಥವಾ ವಿಶೇಷವಾಗಿ ಯಾರನ್ನಾದರೂ ದೂರುವುದು ನನ್ನ ವಾದದ ಉದ್ದೇಶಕ್ಕೆ ಸಂಪೂರ್ಣವಾಗಿ ಅನಾವಶ್ಯಕವಾಗಿದ್ದಿತೆಂಬುದು ಮಹತ್ವದ್ದಾಗಿದೆ. ನ್ಯಾಯಾಂಗದಲ್ಲಿ ಜಾತೀಯತೆಯ ಪಕ್ಷಪಾತ ಇದೆಯೋ ಇಲ್ಲವೋ ಎಂದು ಮಾನ್ಯ ಸದಸ್ಯರಾದ ರಾವಬಹದ್ದೂರ ಚಿತಳೆಯವರು ಎತ್ತಿದ ಪ್ರಶ್ನೆಗೆ ನಾನು ಅಂದು ಉತ್ತರಿಸುತ್ತಿದ್ದೆ. ನಮ್ಮ ಸಾಮಾಜಿಕ ಪದ್ಧತಿಯ ಪರಿಣಾಮವಾಗಿ ಜಾತೀಯತೆಯ ಪಕ್ಷಪಾತದಿಂದ ನಾವು ಬದುಕಬೇಕಾದುದು ಅವಶ್ಯವಾಗಿದೆಯೆಂಬುದು ಅವರಿಗೆ ನನ್ನ ಉತ್ತರವಾಗಿದೆ. ನಾನು ಬ್ರಾಹ್ಮಣ ನ್ಯಾಯಾಧೀಶನೆಂದು ಉದಾಹರಣೆ ಕೊಟ್ಟೆ; ಏಕೆಂದರೆ ಉತ್ತರ ಕೊಡಬೇಕಾಗಿದ್ದ ನನ್ನ ವಿರೋಧಿ ವ್ಯಕ್ತಿ ಬ್ರಾಹ್ಮಣರಿದ್ದರು. ಅದೇ ನನ್ನ ಎದುರಾಳಿ ಬ್ರಾಹ್ಮಣೇತರರಿದ್ದರೆ ಇಲ್ಲವೇ ಮುಸ್ಲಿಮರಿದ್ದರೆ ನಾನು ಅವರ ಜಾತಿಯನ್ನೇ ಹೆಸರಿಸಲು ಅನುಮಾನಿಸುತ್ತಿರಲಿಲ್ಲ. ಮಾನ್ಯರೇ, ಜಾತಿಯ ಮೊಕದ್ದಮೆಗಳಲ್ಲಿ ಜಾತಿಯ ಪಕ್ಷಪಾತವು ನ್ಯಾಯಾಂಗ ಕಾರ್ಯಗಳಲ್ಲಿ ಕಂಡುಬರುತ್ತಿದೆಯೆಂಬ ನನ್ನ ಆರೋಪವು ಅನುಚಿತ ಹೇಳಿಕೆಯೆಂದು ತಾವು ಭಾವಿಸುತ್ತೀರೋ ಹೇಗೆ ಎಂಬುದು ನನಗೆ ತಿಳಿಯದು. ಅದನ್ನು ತಮಗೂ ಹಾಗೂ ಸದನಕ್ಕೂ ಬಿಟ್ಟುಕೊಡುವೆ. ನಾನು ಹೇಳುವುದಿಷ್ಟೇ ಇದೆ; ದಂಡಪ್ರಕ್ರಿಯಾ ಸಂಹಿತೆಯೂ ಸಹ ಸ್ವೀಕರಿಸಿದ ಸಿದ್ಧಾಂತವು ಇದಾಗಿದೆ; ನ್ಯಾಯಾಧೀಶರ ಪಕ್ಷಪಾತ ಗಮನಿಸಿ, ಪಕ್ಷಗಳು ವರ್ಗಾವಣೆ ಕೇಳಿದರೆ ಪರವಾನಗಿ ಕೊಡಬಹುದೆಂದು ದಂಡಪ್ರಕ್ರಿಯಾ ಸಂಹಿತೆಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಲಾದ ವಿಭಾಗವೂ ಇದೆ. ಮೊಕದ್ದಮೆಯೊಂದರಲ್ಲಿ ಆಸಕ್ತಿಯ ಹೊಂದಿದ ನ್ಯಾಯಾಧೀಶನೊಬ್ಬ ಅಂಥ ಮೊಕದ್ದಮೆಯನ್ನು ವಿಚಾರಣೆಗೆ ತೆಗೆದುಕೊಳ್ಳಕೂಡದೆಂಬ ಅಂಶವೂ ದಂಡಪ್ರಕ್ರಿಯಾಸಂಹಿತೆಯಲ್ಲಿ ಇದೆ. ಎರಡನೆಯದಾಗಿ ಈ ಅಭಿಪ್ರಾಯವನ್ನು– ಅಂದರೆ

ನ್ಯಾಯಾಂಗದಲ್ಲಿ ಪಕ್ಷಪಾತವಿದೆ ಮತ್ತು ಜಾತೀಯ ಸಮಸ್ಯೆಗಳಿರುವಾಗ ಜಾತೀಯ ಪಕ್ಷಪಾತವನ್ನು ನ್ಯಾಯಾಂಗ ತೋರಿಸಬಹುದು ಎಂಬುದನ್ನು ವಿಧೇಯಕದಲ್ಲಿಯೇ ಅಂಗೀಕರಿಸಲಾಗಿದೆ. ಗ್ರಾಮ ರಾಜ್ಯವೆಲ್ಲಾ ಚುನಾಯಿಸಲ್ಪಟ್ಟ ಪಂಚಾಯತಿ ಆಗಿರಬೇಕೆಂಬ ತತ್ವವನ್ನು ಮೂಲತಃ ಆಧರಿಸಿಕೊಂಡು ಈ ವಿಧೇಯಕವನ್ನು ತಂದುದಾಗಿದೆಯೆಂಬುದು ಎಲ್ಲಾ ಮಾನ್ಯ ಸದಸ್ಯರಿಗೆ ಗೊತ್ತಿರಬೇಕು. ವಿಧೇಯಕದ ಪ್ರಥಮ ವಾಚನದಲ್ಲಿ ನ್ಯಾಯಾಂಗದ ರಚನೆಯಾಗುವುದು ಯೋಗ್ಯತತ್ವವಲ್ಲವೆಂದು ನಾನು ವಾದಿಸಿದ್ದೆ; ಅದರ ಪರಿಣಾಮವಾಗಿಯೇ ನ್ಯಾಯಾಂಗವು ನೇಮಿಸಲ್ಪಡಬೇಕು ಎಂಬ ಬದಲಾವಣೆ ಬಂದಿರಬೇಕೆಂದು ನನ್ನ ನಂಬಿಕೆ. ಮಾನ್ಯರೆ, ಈ ಸಂಗತಿಯೆ ಜಾತೀಯತೆಯ ಪಕ್ಷಪಾತವಿದೆಯೆಂಬುದನ್ನು ಸೂಚಿಸುತ್ತದೆಂದು ನನ್ನ ಭಾವನೆ. ಕೊನೆಯದಾಗಿ, ಕ್ರಿಯಾಲೋಪ ಎತ್ತಿದ ಮಾನ್ಯ ಸದಸ್ಯರು ಸಹ, ಅವರ ಭಾಷಣದಲ್ಲಿ ಬಂದ ಕ್ರಿಯಾಲೋಪದ ಬಗ್ಗೆ ನಾನು ಹೇಳುವುದನ್ನು ಗಮನಿಸಬೇಕು. ಅವರು ಮಾನ್ಯ ಗೃಹಮಂತ್ರಿಗಳನ್ನು "ಮಾನ್ಯ ಗೃಹಮಂತ್ರಿಗಳು ನನ್ನನ್ನು ತಿರಸ್ಕರಿಸದಿದ್ದರೆ..." ಎಂದು ಅಭದ್ರವಾದ ಶಬ್ದಗಳನ್ನು ನುಡಿದು ಬೆದರಿಕೆ ಹಾಕಿರುವರು; ಮಾನ್ಯ ಸದಸ್ಯರು ಅಲ್ಪಸಂಖ್ಯಾತ ಸಮುದಾಯದಿಂದ ಬಂದ ವೈಯಕ್ತಿಕ ಅಧಿಕಾರಿಗಳ ಮೇಲೆ ದಾಳಿ ಮಾಡಬಹುದೆಂಬ ಬೆದರಿಕೆಯೂ ಇದೆ; ನಾನು ಉಲ್ಲೇಖಿಸಿದ ನಿಜವಾದ ಸಂಗತಿಗಳ ಸತ್ಯಾಸತ್ಯತೆಗಳನ್ನು ಖಾತ್ರಿ ಮಾಡಿಕೊಳ್ಳದೆ ಅವರು ಕಾರ್ಯಾಚರಣೆಯ ಕಾರ್ಯಕ್ರಮ ಹಾಕಿಕೊಳ್ಳಲಾರರು. ನಾನು ಹೇಳಿದ ಮಾತುಗಳ ಬಗ್ಗೆ ಮಾನ್ಯ ಸದಸ್ಯರು ನೊಂದುಕೊಂಡಿರದೆ, ನಾನು ಉಲ್ಲೇಖಿಸಿದ ಉದಾಹರಣೆಯ ಬಗ್ಗೆ ಅವರ ಮನ ನೊಂದಿದೆ. ಮುಸ್ಲಿಮನೊಬ್ಬನ ಇಲ್ಲವೆ ಬ್ರಾಹ್ಮಣೇತರನೊಬ್ಬನ ಉದಾಹರಣೆ ಕೊಟ್ಟಿದ್ದಿದ್ದರೆ ಅವರು ಕ್ರಿಯಾಲೋಪವನ್ನು ಎತ್ತುತ್ತಲೇ ಇರಲಿಲ್ಲ. ಬಹುಶಃ ಆಗ ನನ್ನನ್ನು ವಿಪುಲವಾಗಿ ಪ್ರಶಂಸಿಸುತ್ತಿದ್ದರು. ನನ್ನ ಹೇಳಿಕೆ ಇದಿಷ್ಟೇ.

೧೩ ಫೆಬ್ರವರಿ ೧೯೩೩ರಂದು ಡಾ. ಅಂಬೇಡ್ಕರ್ ತಮ್ಮ ಹೇಳಿಕೆ ಕೊಟ್ಟಮೇಲೆ, ಮಾನ್ಯ ಸಭಾಪತಿಗಳು ಡಾ. ಅಂಬೇಡಕರರ ಟೀಕೆಯ ಮಾತುಗಳನ್ನು ಅರ್ಥವಿಸಿ ಹೇಳಿದರು. ಸದನದ ನಡುವಳಿಕೆಗಳನ್ನು, ಭಾಷಣದ ಗುಣಾವಗುಣಗಳನ್ನು ವಿವರಿಸಿದರು; ಅನಂತರ ಹೀಗೆ ಮುಕ್ತಾಯ ಮಾಡಿದರು.

"ಇದಕ್ಕೂ ಹೆಚ್ಚಿಗೆ ನಾನು ಹೇಳುವುದೇನೂ ಇಲ್ಲ. ಮಾನ್ಯ ಸದಸ್ಯರು ನೀಡಿದ ಸ್ಪಷ್ಟೀಕರಣವನ್ನು ನಾವು ಸ್ವೀಕರಿಸಬೇಕು; ಅಖಂಡ ನ್ಯಾಯಾಂಗವನ್ನು ಸಾಮಾನ್ಯವಾಗಿ ನಿಂದಿಸುವುದು ಅವರ ಮನಸ್ಸಿನಲ್ಲಿರದೆ, ನ್ಯಾಯಾಂಗದ ನ್ಯಾಯಾಲಯಗಳಲ್ಲಿಯೇ ಜಾತೀಯ ಪಕ್ಷಪಾತ ಕಂಡುಬಂದ ಹಲವು ಉದಾಹರಣೆಗಳಿವೆ ಎಂಬುದನ್ನು ಎತ್ತಿ ತೋರಿಸುವುದು ಅವರಿಗೆ ಉದ್ದೇಶವಾಗಿದ್ದಿತು..."

# ೨೪

# *ಗ್ರಾಮ ಪಂಚಾಯಿತಿಗಳ ಮಸೂದೆ: ೪

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಅರ್ಥ ವಿವರಣೆಗಾಗಿ ನಾನು ಒಂದು ಮಾತು ಹೇಳಬಹುದೇ? ತಾವು ಮಾತನಾಡಿದ್ದು ನನಗೆ ಸರಿಯಾಗಿ ಅರ್ಥವಾಗಿಲ್ಲ. ವಿಧೇಯಕದ ಪ್ರಥಮ ವಾಚನ ನಡೆದಾಗ ಪ್ರಶ್ನೆಯನ್ನು ಎತ್ತಿರದಿದ್ದರೆ ಅಥವಾ ದ್ವಿತೀಯ ವಾಚನದ ಸಮಯದಲ್ಲಿ ಆ ವಿಷಯ ಬಿದ್ದುಹೋಗಿದ್ದರೆ– ಅದೇ ವಿಷಯವನ್ನು ಕುರಿತು ವಿರೋಧಿಸಲು ಮಾನ್ಯ ಸದಸ್ಯರಿಗೆ ಅವಕಾಶವಿಲ್ಲ ಎಂದು ತಮ್ಮ ಹೇಳಿಕೆ ಇರಬೇಕಾಗಿ ನನ್ನ ನಂಬಿಕೆ. ಇದು ಸರಿಯೇ? ದ್ವಿತೀಯ ವಾಚನದಲ್ಲಿ ಆ ಸಮಸ್ಯೆಯನ್ನು ಎತ್ತಿರದಿದ್ದರೆ ಅಥವಾ ನಿರ್ದಿಷ್ಟ ವಿಷಯದ ಬಗ್ಗೆ ನಿರ್ದಿಷ್ಟ ವ್ಯಕ್ತಿಯೊಬ್ಬರು ಇಲ್ಲವೇ ಅಲ್ಪಸಂಖ್ಯಾತರೊಬ್ಬರು ಪ್ರಶ್ನಿಸಿ ಸೋತಿದ್ದರೆ– ಅದೇ ವಿಷಯದ ಸಲುವಾಗಿ ವಿಧೇಯಕದ ತೃತೀಯ ವಾಚನ ನಡೆದಾಗ ವಿಧೇಯಕವನ್ನು ವಿರೋಧಿಸಕೂಡದು... ಮಾನ್ಯರೆ, ನನ್ನ ವಿವರಣೆ ಸರಿಯಿದೆಯೇ?

ಮಾನ್ಯ ಸಭಾಪತಿ: ಇಲ್ಲ... ಇಲ್ಲ, ಕೆಲವು ದಿನಗಳ ಹಿಂದೆ ಅಧಿವೇಶನದಲ್ಲಿ ಮೊದಲ ಬಾರಿ ಇಂಥ ಪ್ರಸಂಗ ಒದಗಿದಾಗ ನಾನು ನಿರ್ಣಯವನ್ನು ಕೊಟ್ಟಿರುವೆ; ಆಗ ಮಾನ್ಯ ಸದಸ್ಯರು ಸದನದಲ್ಲಿ ಇರಲಿಲ್ಲ. ಮಾನ್ಯ ಸದಸ್ಯರ ಅನುಕೂಲಕ್ಕಾಗಿ ನಾನು ಪುನಃ ಅದನ್ನು ವಿವರಿಸುವೆ. ಒಂದು ವಿಧೇಯಕಕ್ಕೆ ಮೂರು ವಾಚನಗಳು ಇರುವವೆಂಬುದು ಮಾನ್ಯ ಸದಸ್ಯರೂ, ಸಂವಿಧಾನದ ನ್ಯಾಯವಾದಿಗಳೂ ಆಗಿದ್ದ ಅವರಿಗೆ ಚೆನ್ನಾಗಿ ಗೊತ್ತಿರಲು ಸಾಕು. ವಿಧೇಯಕದ ಮೊದಲ ಹಂತದಲ್ಲಿ– ಅಂದರೆ ಪ್ರಥಮ ವಾಚನದಲ್ಲಿ– ವಿಧೇಯಕದ ತತ್ವಗಳನ್ನು ಮಾತ್ರ ಕುರಿತು ಚರ್ಚೆಯಿರುತ್ತದೆ. ಅನಂತರ ಆಯ್ಕೆ ಸಮಿತಿಗೆ ವಿಧೇಯಕ ವನ್ನು ಒಪ್ಪಿಸಿದ್ದರೆ, ಆಯ್ಕೆ ಸಮಿತಿಯಿಂದ ಬಂದ ವಿಧೇಯಕವನ್ನು ಪರಿಶೀಲಿಸುವ ಅವಕಾಶ ಸದನಕ್ಕೆ ಇದೆ; ಅಥವಾ ವಿಧೇಯಕವನ್ನು ಆಯ್ಕೆ ಸಮಿತಿಗೆ ಕಳಿಸಿಕೊಡದಿದ್ದರೆ, ದ್ವಿತೀಯ ವಾಚನದಲ್ಲಿ ಖಂಡಾನು ಖಂಡವಾಗಿ ವಿಧೇಯಕವನ್ನು ಎತ್ತಿಕೊಂಡಾಗ ಬದಲಾವಣೆ ಮಾಡಬಹುದಾಗಿದೆ. ಮಾನ್ಯ ಸದಸ್ಯರು ಏನು ಬದಲಾವಣೆ ಮಾಡಬೇಕೆಂದಿರುವರೋ ಅವೆಲ್ಲವುಗಳನ್ನು ದ್ವಿತೀಯ ವಾಚನದಲ್ಲಿಯೇ ತೆಗೆದುಕೊಳ್ಳಬೇಕು. ಇದೀಗ ನಮ್ಮ ಮಾನ್ಯ ಸದಸ್ಯರಂತಹ ಇತರ ಹಲವು ಮಾನ್ಯ ಸದಸ್ಯರಿರಬಹುದು. ವಿಧೇಯಕದ ದ್ವಿತೀಯ ವಾಚನ ಕಾಲಕ್ಕೆ ಅವರು ಸಂಪೂರ್ಣವಾಗಿ ಉಪಸ್ಥಿತರಿರಲಿಕ್ಕಿಲ್ಲ. ತೃತೀಯ ವಾಚನದ ಹೊತ್ತಿಗೆ ಅವರು ಇರುವರು. ಪ್ರಥಮ ವಾಚನ ಮುಗಿದು, ದ್ವಿತೀಯ ವಾಚನದಲ್ಲಿ ಖಂಡಾನುಖಂಡವಾಗಿ ಪರಿಶೀಲಿಸುವ ಘಟ್ಟದಲ್ಲಿ ವಿಧೇಯಕದ ಸ್ವರೂಪವನ್ನು ಎಲ್ಲಿಯಾದರೂ ಬದಲಿಸಿದ್ದರೆ ಆಗ ಅವರು ವಿಧೇಯಕವನ್ನು ವಿರೋಧಿಸಬಹುದು ಹಾಗೂ ಅವರು ಆಕ್ಷೇಪಣೆಯನ್ನು ವ್ಯಕ್ತಮಾಡಬಹುದು. ತಮ್ಮ ಆಕ್ಷೇಪಣೆಯಿರುವ ಹಲವು ಅಂಶಗಳು ದ್ವಿತೀಯ ವಾಚನದಲ್ಲಿ ಸೇರ್ಪಡೆಯಾಗಿದ್ದರೆ ಅವುಗಳನ್ನು

---

* ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXXVII,
ಪುಟಗಳು ೨೧೯೭–೯೩, ದಿನಾಂಕ ೨೪ ಮಾರ್ಚ್ ೧೯೩೩.

ಎತ್ತಿ ತೋರಿಸಿ ಅವರು ಮೂರನೆಯ ಘಟ್ಟದ ತೃತೀಯ ವಾಚನದಲ್ಲಿ ವಿರೋಧಿಸಬಹುದು. ನಾನು ಹೇಳಿದುದು ಇಷ್ಟೇ. ಹೀಗಾಗದಿದ್ದರೆ ಮೂರು ಘಟ್ಟಗಳಿಗೆ ಯಾವ ಮಹತ್ವವೂ ಇಲ್ಲ. ಮಾನ್ಯ ಸದಸ್ಯರು ಪ್ರತಿಯೊಂದು ಘಟ್ಟದಲ್ಲಿ ಅದನ್ನೇ ವಿರೋಧಿಸುತ್ತ ಹೋಗಬಹುದು; ಆದ್ದರಿಂದ ಪ್ರಥಮ ವಾಚನದಲ್ಲಿ ತತ್ವಗಳಿಗೆ, ದ್ವಿತೀಯ ವಾಚನದಲ್ಲಿ ವಿವರಗಳಿಗೆ, ತೃತೀಯ ವಾಚನದಲ್ಲಿ ವಿಧೇಯಕದಲ್ಲಿ ಬಂದಿರುವ ಆಕ್ಷೇಪಣೆಯಿರುವ ವಿವಿಧ ಬದಲಾವಣೆಗಳಿಗೆ ಮಾನ್ಯ ಸದಸ್ಯರು ಸೀಮಿತವಾಗಿರಬೇಕು. ನಾನಿತ್ತ ನಿರ್ಣಯ ಇದಾಗಿದೆ. ತೃತೀಯ ವಾಚನವನ್ನು ವಿರೋಧಿಸುವುದಕ್ಕೆ ನಾನು ಯಾವ ಮಾನ್ಯ ಸದಸ್ಯರಿಗೂ ಅಡ್ಡಿಯಾಗುವುದಿಲ್ಲ. ಉದಾಹರಣೆಗಾಗಿ, ಮಾನ್ಯ ಸದಸ್ಯ ರಾವ್‌ಸಾಹೇಬ ಕುಲಕರ್ಣಿ ಅವರನ್ನೇ ತೆಗೆದುಕೊಳ್ಳೋಣ. ಅವರು ಅನೇಕ ತಿದ್ದುಪಡಿಗಳನ್ನು ಸೂಚಿಸಿದ್ದರು. ಆದರೆ ಅವೆಲ್ಲಾ ಬಿದ್ದುಹೋದವು. ಮತ್ತೆ ಅವರು ತಮ್ಮ ಸೂಚನೆಗಳ ಆಧಾರದ ಮೇಲೆಯೇ ತೃತೀಯ ಸೂಚನೆಗಳು ಸ್ವೀಕರಿಲ್ಪಡಲಿಲ್ಲ, ಇಲ್ಲವೇ ಗಮನಕ್ಕೆ ತೆಗೆದುಕೊಳ್ಳಲ್ಪಡಲಿಲ್ಲ ಎಂಬ ಕಾರಣಗಳಿಂದ ಅವರು ವಿಧೇಯಕವನ್ನು ವಿರೋಧಿಸಿರುವರು. ತಮ್ಮ ದೃಷ್ಟಿಯಿಂದ ವಿಧೇಯಕ ತೃಪ್ತಿಕರವಾಗಿಲ್ಲವೆಂಬುದೇ ತೃತೀಯ ವಾಚನವನ್ನು ಅವರು ವಿರೋಧಿಸುವುದರ ಕಾರಣವಾಗಿದೆ. ಇದೇ ರೀತಿಯಾಗಿ ಮಾನ್ಯ ಸದಸ್ಯರು ತಿದ್ದುಪಡಿ ಸೂಚಿಸಿರಲಿ, ಬಿಡಲಿ, ಮೂರನೆಯ ವಾಚನವನ್ನು ವಿರೋಧಿಸಬಹುದಾಗಿದೆ. ಆದರೆ ದ್ವಿತೀಯ ವಾಚನದಲ್ಲಿ ಆಗಿರುವ ಅಥವಾ ಆಗದಿರುವ ಬದಲಾವಣೆಗಳಿಗೆ ಮಾತ್ರ ಅವರು ಸೀಮಿತರಾಗಿರಬೇಕಾಗುತ್ತದೆ. ಮತ್ತು ಅವರು ಪ್ರಥಮ ವಾಚನಕ್ಕೆ ಸಂಬಂಧಪಟ್ಟಂತೆ ಮಾತ ನಾಡಕೂಡದು. ಪ್ರಥಮ ವಾಚನದ ಘಟ್ಟದಲ್ಲಿ ಸಮಯೋಚಿತ ವೇಳೆಯನ್ನು ಕೊಟ್ಟಿರುವಾಗ, ಸಾಮಾನ್ಯ ತತ್ವಗಳನ್ನು ಕುರಿತಾಗಿ ಪುನಃ ಪುನಃ ಅದೇ ಚರ್ಚೆ ಮಾಡಕೂಡದು.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ತಮ್ಮ ಹೇಳಿಕೆಗಳು ವಾದದ ಉಪಯುಕ್ತತೆ ಬಗ್ಗೆ ಇದ್ದು, ಅವು ವಿಷಯದ ಅಂಶಗಳಿಗೆ ಸಂಬಂಧಿಸಿಲ್ಲವೆಂಬುದು ನನ್ನ ಭಾವನೆ. ಇದನ್ನು ನಾನು ಬೇರೆ ರೀತಿಯಾಗಿ ಹೇಳುವೆ. ನಿದರ್ಶನವೆಂದು ನನ್ನ ವಿಷಯವನ್ನೇ ತೆಗೆದುಕೊಳ್ಳೋಣ. ಕೆಲವು ತತ್ವಗಳನ್ನು ಅನುಸರಿಸಿ ನಾನು ವಿಧೇಯಕವನ್ನು ವಿರೋಧಿಸುವೆ. ಯಾವ ತತ್ವಗಳನ್ನು ಈ ವಿಧೇಯಕ ಅವಲಂಬಿಸಿದೆಯೋ ಅವು ತಪ್ಪಾಗಿವೆಯೆಂದು ನನ್ನ ಹಾಗೂ ನನ್ನಂಥ ವಿಚಾರಗಳಿರುವ ಮಾನ್ಯ ಸದಸ್ಯರ ವಿರುದ್ಧವಾಗಿ ಸದನದಲ್ಲಿಯ ಬಹುಸಂಖ್ಯಾತರಿಂದ ಈ ವಿಧೇಯಕವು ಬಂದಿದೆಯೆಂದು ನಾನು ಹೇಳುತ್ತೇನೆ. ಪ್ರಥಮ ವಾಚನದಲ್ಲಿ ಈ ವಿಧೇಯಕವು ಬಂದಿದೆಯೆಂದು ನಾನು ಹೇಳುತ್ತೇನೆ. ಪ್ರಥಮ ವಾಚನದಲ್ಲಿ ನಾನು ಯಾವ ತತ್ವಗಳನ್ನು ವಿರೋಧಿಸಿದೆನೋ ಅವು ಹಾಗೆಯೇ ಉಳಿದುಕೊಂಡಾಗ ತೃತೀಯ ವಾಚನದಲ್ಲಿ ವಿರೋಧಿಸಲು ಬರುವುದಿಲ್ಲವೇ?

ಮಾನ್ಯ ಸಭಾಪತಿಗಳು: ಇಲ್ಲ. ನನ್ನ ನಿರ್ಣಯ ಆ ರೀತಿಯದಾಗಿದೆ. ಮಾನ್ಯ ಸದಸ್ಯರು ಹಾಗೆ ಮಾಡಲು ಸಾಧ್ಯವಿಲ್ಲ; ಅಂಥ ಹಕ್ಕು ಅವರಿಗಿಲ್ಲ. ಏಕೆಂದರೆ ತೃತೀಯ ವಾಚನಕ್ಕಿಂತ ಮೊದಲೇ ಅಂಥ ದೊಂದು ಅವಕಾಶವನ್ನು ಕಲ್ಪಿಸಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಇದಕ್ಕೂ ಸ್ವಲ್ಪ ಮುಂದೆ ಹೋಗೋಣ; ವಿಧೇಯಕದ ದ್ವಿತೀಯ ವಾಚನದಲ್ಲಿ ಪುನಃ ನನಗೆ ಸೋಲಾಯಿತು ಹಾಗೂ ಸದನವು ಮೂಲ ತತ್ವಗಳನ್ನುಳಿಸಿಕೊಂಡು ಮುಂದೆ ಸಾಗಿತು ಎಂದು ತಿಳಿಯೋಣ. ಆಗ ನಾನು ವಿರೋಧಿಸಿದ ಅಂಶಗಳು ವಿಧೇಯಕದಲ್ಲಿ ಇನ್ನು ಉಳಿದು ಕೊಂಡಿವೆ ಎಂಬ ಆಧಾರದಿಂದ ವಿಧೇಯಕದ ತೃತೀಯ ವಾಚನವನ್ನು ಆಕ್ಷೇಪಿಸಲು ನನಗೆ ಆಗುವು ದಿಲ್ಲವೇ?

ಮಾನ್ಯ ಸಭಾಪತಿಗಳು: ಇಲ್ಲ... ನನ್ನ ನಿರ್ಣಯಕ್ಕೆ ನಾನು ಬದ್ಧನಾಗಿರುವೆ. ಅವರಿಗೆ ಹಾಗೆ ಮಾಡಲು ಬರುವುದಿಲ್ಲ. ಏಕೆಂದರೆ ಸದನದಲ್ಲಿ ಅವರು ತಮ್ಮ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ಸದನದ ಬಹುಸಂಖ್ಯಾತರು ಅವುಗಳನ್ನು ತಿರಸ್ಕರಿಸಿದ್ದಾರೆ. ಈಗ ನಾವು ವಿಧೇಯಕದ ತೃತೀಯ ವಾಚನದ ಘಟ್ಟದಲ್ಲಿದ್ದೇವೆ. ಹೀಗೆ ಇಲ್ಲವಾದರೆ ಮೂರು ಘಟ್ಟಗಳಿಗೆ ಏನೂ ಮಹತ್ವವಿರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ತಮ್ಮ ನಿರ್ಣಯ ಇದೇ ಆಗಿದ್ದರೆ, ಎಲ್ಲ ಘಟ್ಟಗಳಲ್ಲಿಯೂ ವಿಧೇಯಕವನ್ನು ವಿರೋಧಿಸಿದ ಅಲ್ಪಸಂಖ್ಯಾತರಿಗೆ ವಿಧೇಯಕದ ವಿರುದ್ಧ ಮತ ನೀಡುವುದೊಂದೇ ಬಾಕಿಯಾಗಿ ಉಳಿಯುತ್ತದೆ. ಬಹುಸಂಖ್ಯಾತರು ವಿಧೇಯಕ ಒಳ್ಳೆಯದು ಎಂದು ನಿರ್ಣಯಿಸಿದರೆ ಹಾಗೂ ಅಲ್ಪಸಂಖ್ಯಾತರು ಅದನ್ನು ವಿರೋಧಿಸಿದರೆ ಅಲ್ಪಸಂಖ್ಯಾತರ ಆಕ್ಷೇಪಣೆ ನಮೂದಾಗದೆ ಉಳಿಯುವ ಪ್ರಸಂಗ ಒದಗಬಹುದು.

ಮಾನ್ಯ ಸಭಾಪತಿಗಳು: ಇದು ಸಂಪೂರ್ಣವಾಗಿ ಸತ್ಯ. ತೃತೀಯ ವಾಚನದ ವಿರುದ್ಧ ಮತ ಚಲಾಯಿಸುವ ಹಕ್ಕು ಅಲ್ಪಸಂಖ್ಯಾತರಿಗೆ ಇದ್ದೇ ಇದೆ. ಅವರು ಮತದಾನ ಪಡೆಯಬಹುದು ಹಾಗೂ ವಿಧೇಯಕದ ವಿರುದ್ಧ ಮತ ನೀಡಬಹುದು. ಆದರೆ ಪ್ರಥಮ ವಾಚನದಲ್ಲಿ ನಿರ್ಧರಿಸಲ್ಪಟ್ಟ ವಿಷಯಗಳ ಬಗ್ಗೆ ಪುನಃ ಚರ್ಚೆ ಮಾಡುವುದೆಂದರೆ ಅದು ತಪ್ಪಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ತಮ್ಮ ಸೂಚನೆಯು ನಿಜವಾಗಿಯೂ ನಮ್ಮ ಹಕ್ಕು ನಿರಾಕರಿಸಲ್ಪಟ್ಟಿವೆ ಎಂಬರ್ಥವನ್ನು ಕೊಡುವುದಿಲ್ಲ.

ಮಾನ್ಯ ಸಭಾಪತಿಗಳು: ಇಲ್ಲ. ಇದು ಸರಿಯಿದೆ.

# ೨೫

# *ಸ್ಥಳೀಯ ಮಂಡಳಿಗಳ ಕಾಯ್ದೆ ತಿದ್ದುಪಡಿ ಮಸೂದೆ

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಸಭಾಪತಿಗಳೆ, "ಪುಣೆ ಒಪ್ಪಂದ"ಕ್ಕೆ ರುಜು ಮಾಡಿದ ಮೇಲೆ, ಪ್ರತ್ಯೇಕ ಮತದಾನದ ಬಗ್ಗೆ ವಿಚಾರ ವಿನಿಮಯ ಮಾಡುವ ವಿಷಯದಲ್ಲಿ ನಾನು ಸಂಪೂರ್ಣವಾಗಿ ನ್ಯಾಯಾಲಯದ ಹೊರಗಡೆಯೇ ಇದ್ದೇನೆ. ಆದ್ದರಿಂದ ವಿಧೇಯಕದಲ್ಲಿ ಅವಕಾಶ ಮಾಡಿ ಕೊಟ್ಟಿರುವ, ವಿವಿಧ ಅಲ್ಪಸಂಖ್ಯಾತರಿಗೆ ಯೋಜಿಸಿರುವ ಪ್ರಾತಿನಿಧ್ಯ ರೀತಿಯನ್ನು ಕುರಿತು ವಿಧೇಯಕದಲ್ಲಿರುವ ಅಂಶಗಳ ಬಗ್ಗೆ ನಾನು ವಿವೇಚಿಸುವುದಿಲ್ಲ. ಸಂಯುಕ್ತ ಇಲ್ಲವೆ ಪ್ರತ್ಯೇಕ ಮತದಾನದಂಥ ಜಟಿಲ ಸಮಸ್ಯೆಯನ್ನು ನಾನು ಯಾವ ದೃಷ್ಟಿಯಿಂದ ನೋಡುವೆನೆಂದು ಹೇಳಿದರೆ ಬಹುಶಃ ಅದು ಯೋಗ್ಯವಾಗಬಹುದು. ಮಾನ್ಯರೆ, ನನ್ನ ಮನೋರೀತಿ ಈ ತೆರನಾಗಿದೆ. ವಿವಿಧ ಅಲ್ಪಸಂಖ್ಯಾತರ ಸಲುವಾಗಿ ಸಂಯುಕ್ತ ಮತ ದಾನವೇ ಇದ್ದರೆ, ಅದರ ಪರಿಣಾಮ ಏನಾಗಬಹುದು? ನನಗೆ ಹೀಗೆ ತೋರುವುದು: ಈ ಐದು ವರುಷಗಳಲ್ಲಿ ಚುನಾವಣೆ ಬಂದಾಗ, ಹಿಂದೂ ಹಾಗೂ ಮುಸ್ಲಿಮ್ ಇಬ್ಬರೂ ಕೂಡಿ ಒಂದೇ ಮತದಾನ ಸ್ಥಳಕ್ಕೆ ಹೋಗುವರು ಅಷ್ಟೇ. ಸಂಯುಕ್ತ ಮತದಾನ ಪದ್ಧತಿಯಿಂದ ಹೆಚ್ಚಿನ ಇತರೇ ಪರಿಣಾಮ ಏನಾಗ ಬೇಕು ಎಂಬುದು ನನಗೆ ತಿಳಿಯದು (ಅಡ್ಡಿ ಬರುವುದು). ಇನ್ನುಳಿದ ಐದು ವರುಷಗಳ ಬಗ್ಗೆ ಮಾತ ನಾಡಲು ದಯವಿಟ್ಟು ಪರವಾನಗಿ ಕೊಡಿ. ಚುನಾವಣೆಗಳಿಲ್ಲದಿರುವಾಗ ಮುಸ್ಲಿಮ ಸಮುದಾಯವು– ಕೇವಲ ಉದಾಹರಣೆಗಾಗಿ ಹೀಗೆ ಹೆಸರಿಸಿರುವೆ ಪ್ರತ್ಯೇಕವಾಗಿ– ತಮ್ಮದೇ ಸ್ಥಳಗಳಲ್ಲಿ ವಾಸಿಸುವಲ್ಲಿ ವಿಶ್ವಾಸವಿಡುವರು. ಸಂಯುಕ್ತ ಮತದಾನದ ಪರಿಣಾಮವಾಗಿ ಮುಸ್ಲಿಮ್ ಮತ್ತು ಹಿಂದುಗಳು ಒಂದೇ ಚಾಳದಲ್ಲಿ ವಾಸಿಸಲು ಬರುವರೆಂದು ನನಗನಿಸುವುದಿಲ್ಲ. ಸಂಯುಕ್ತ ಮತದಾನದ ಪರಿಣಾಮವಾಗಿ ಮುಸ್ಲಿಮರು ಮತ್ತು ಹಿಂದೂಗಳಲ್ಲಿ ಅಂತರ್‌ಜಾತೀಯ ವಿವಾಹಗಳಾಗುವವೆಂದೂ ನನಗೆ ತೋರುವುದಿಲ್ಲ. ಸಂಯುಕ್ತ ಮತದಾನದ ಪರಿಣಾಮವಾಗಿ ಹಿಂದೂ ಮತ್ತು ಮುಸ್ಲಿಮರು ಜೊತೆಗೂಡಿ ಊಟ ಮಾಡುವರೆಂದೂ ನನಗೆ ಅನಿಸುವುದಿಲ್ಲ. ಮಾನ್ಯರೆ, ಏಕತೆಯನ್ನು ಸಾಧಿಸಬೇಕೆಂಬ ಇಚ್ಛೆ ನಮಗಿದ್ದರೆ, ಹಿಂದೂ ಮತ್ತು ಮುಸ್ಲಿಮರು ಮತದಾನ ಪೆಟ್ಟಿಗೆಗೆ ಬರುವ ಅದೊಂದೇ ದಿನವನ್ನು– ಆ ದಿನವು ಎಷ್ಟೇ ಪವಿತ್ರವಾಗಿದ್ದರೂ– ಯೋಜಿಸಿದರೆ ಅದು ಸಾಧ್ಯವಿಲ್ಲವೆಂದು ಸಂದರ್ಭದಲ್ಲಿ ನಾನು ಬುದ್ಧಿಪೂರ್ವಕ ವಾಗಿ ತಿಳಿಸಬಯಸುವೆ. ಏಕತೆಯನ್ನು ತರಲು ಹಲವು ಉಪಾಯಗಳನ್ನು ಯೋಜಿಸುವುದು ನಿಜವಾಗಿಯೂ ನಮ್ಮ ಉದ್ದೇಶವಾಗಿದ್ದರೆ, ನಾವು ಮಾಡಬೇಕಾದುದು ಸಾಮಾಜಿಕ ಬಂಧನಗಳನ್ನು ಕಡಿದೊಗೆಯ ಬೇಕಾಗಿದೆ. ಈ ವಿಷಯದಲ್ಲಿ ಹಿಂದೂ ಸಮುದಾಯವೇ ಮುಂದಾಳುತನ ವಹಿಸಬೇಕು; ಏಕೆಂದರೆ ಅದು ಪ್ರತ್ಯೇಕವಾದ ಸಮುದಾಯವಾಗಿದೆ. ಇನ್ನುಳಿದ ಸಮುದಾಯಗಳು ಪ್ರತ್ಯೇಕ ಜೀವನ ಸಾಗಿಸುವುದಕ್ಕೆ ಮುಖ್ಯ ಕಾರಣ, ಹಿಂದೂಗಳು ಹೊಂದಿದ ಕೆಲವೊಂದು ಆಸಕ್ತಿಗಳು ತಮ್ಮದೇ ಎಂದು

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ–೨, ಪುಟಗಳು ೩೨೬–೨೯, ದಿನಾಂಕ ೧೮ ಜನವರಿ ೧೯೩೮.

ತಿಳಿದುಕೊಂಡಿರುವುದು; ಇದರಲ್ಲಿ ಹಿಂದೂ ಸಮುದಾಯದ್ದೇ ಸಂಪೂರ್ಣ ತಪ್ಪು ಇದೆ. ಆದುದರಿಂದ ಐದು ವರುಷಗಳಿಗೋ ಅಥವಾ ಮೂರು ವರುಷಗಳಿಗೋ ಕಾರ್ಯರೂಪದಲ್ಲಿ ಬರುವ ಒಂದೇ ಒಂದು ದಿನಕ್ಕಾಗಿ ಯೋಜನೆಯೊಂದನ್ನು ತಂದು, ಈ ಸಮಸ್ಯೆಯನ್ನು ಹಗುರಾಗಿ ಸ್ವೀಕರಿಸಿದರೆ ಏನೂ ಉಪಯೋಗವಿಲ್ಲವೆಂದು ನಾನು ಮನಸಾ ಹೇಳಬಯಸುವೆ. ಇದರಿಂದ ಏನೂ ಪ್ರಯೋಜನವಿಲ್ಲ. ಇದರಿಂದ ಯಾವ ಪರಿಣಾಮವೂ ಕಂಡುಬರುವುದಿಲ್ಲ. ನೀವು ಪ್ರಯೋಗಿಸಿ ನೋಡಬಹುದು. ನನ್ನ ಮುಸ್ಲಿಮ ಬಾಂಧವರಿಗೆ ಹಿಂದೂಗಳೊಡನೆ ಒಂದಾಗುವ ಇಂಥ ಸುಯೋಗ ದೊರೆಯಲಿ ಹಾಗೂ ವಿಶೇಷವಾದ ರಕ್ಷಣೆಯಿಂದ ಎರಡೂ ಸಮುದಾಯಗಳು ಪ್ರತ್ಯೇಕವಾಗಿ ಇರದಿರುವ ಅವಕಾಶ ದೊರೆಯಲಿ ಎಂದು ಪ್ರಾರ್ಥಿಸುವೆ. "ಪುಣೆ ಒಪ್ಪಂದ"ಕ್ಕೆ ನಾನು ರುಜು ಹಾಕಿರುವುದರಿಂದ ಪ್ರತ್ಯೇಕ ಮತದಾನ ಪದ್ಧತಿಗೆ ಈಗ ನಾನು ವಕಾಲತ್ತು ವಹಿಸಲಾರೆ.

ನಾನೀಗ ವಿಧೇಯಕದ ಬೇರೆ ಅಂಶಗಳನ್ನು ಕುರಿತು ಹೇಳುವೆ; ವಿಧೇಯಕವು ಈಗಿರುವುದಕ್ಕಿಂತಲೂ ಹೆಚ್ಚಿನ ಘಟ್ಟವನ್ನು ತಲುಪಿದೆಯೆಂದು ನಾನು ನಿಶ್ಚಿತವಾಗಿ ಪ್ರಪ್ರಥಮವಾಗಿ ಹೇಳಬಲ್ಲೆ. ಆದರೂ ವಿಧೇಯಕದಲ್ಲಿ ತಥ್ಯವಿದೆ ಎಂದು ನನಗೆ ತೋರುವುದಿಲ್ಲ. ಅದು ಖಾಲಿ ಚಿಪ್ಪಿನಂತೆ ಆಗಿದೆ. ಅದರೊಳಗೆ ಏನೂ ಇಲ್ಲ. ಸ್ಥಳೀಯ ಮಂಡಳಿಗಳ ಪುನರ್–ವ್ಯವಸ್ಥೆ ಬಗ್ಗೆ ಏನು ಮಾಡಬೇಕು ಎಂಬುದರ ಸೂಚನೆಗಳಿರುವ ಮಾನ್ಯ ಮಂತ್ರಿಗಳ ಭಾಷಣವೊಂದನ್ನು ಬಿಟ್ಟರೆ, ಈಗಿದ್ದಂತೆ ಈ ವಿಧೇಯಕದಿಂದ ನಮಗೆ ನಿಜವಾಗಿಯೂ ಏನೂ ತಿಳಿದುಬರುವುದಿಲ್ಲ. ಇದನ್ನು ಅಥವಾ ಅದನ್ನು ಕುರಿತು ನಿಯಮಗಳನ್ನು ಮಾಡಲು ಸರಕಾರಕ್ಕೆ ಅಧಿಕಾರ ಕೊಡಲಾಗುವುದು ಎಂಬುದು ಮಾತ್ರ ವಿಧೇಯಕದಿಂದ ತಿಳಿದುಬಂದಿದೆ. ಆಕ್ಷೇಪಣೆಗಳ ಹಾಗೂ ಕಾರಣಗಳ ಹೇಳಿಕೆಯನ್ನು ಈ ವಿಧೇಯಕಕ್ಕೆ ಜೋಡಿಸಿರದಿದ್ದರೆ, ವಿವಿಧ ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಅವಕಾಶದ ಬಗ್ಗೆ ಸರಕಾರವು ಯಾವ ತತ್ವ ಅನುಸರಿಸುವುದೆಂಬುದೂ ನಮಗೆ ಗೊತ್ತಾಗುತ್ತಿರಲಿಲ್ಲ. ಪ್ರಶ್ನೆಗಳು ಸಂವಿಧಾನಾತ್ಮಕ ಪ್ರಶ್ನೆಗಳೇ ಆಗಿವೆಯೆಂದು ನಾನು ಹೇಳಬಯಸುವೆ. ಸಾಮಾನ್ಯ ಶಾಸನವನ್ನು ಕಾರ್ಯರೂಪದಲ್ಲಿ ತರುವುದು ಇಲ್ಲಿನ ಪ್ರಶ್ನೆಯಲ್ಲ; ಏಕೆಂದರೆ ನಿಯಮಗಳನ್ನು ಮಾಡಿ ತನ್ನ ನೀತಿಯನ್ನು ಸರಕಾರವು ಪಾಲಿಸಬೇಕು ಎಂಬುದು ಇದೀಗ ರೂಢಿಯಾಗಿದೆ– ಅಷ್ಟೇಕೆ ಇದು ಸ್ವೀಕೃತವೂ ಆಗಿದೆ. ಸರಕಾರವು ಕಾರ್ಯ ಮಾಡಬೇಕೆಂದು ನಮಗಿರುವ ಅಧಿಕಾರಿಗಳ ಕೆಲ ಅಂಶವನ್ನು ಸರಕಾರಕ್ಕೆ ಕೊಟ್ಟಿರುತ್ತೇವೆ. ನಮಗಿರುವ ಕರ ಹೇರುವ ಅಧಿಕಾರದಲ್ಲಿ ಕೆಲವನ್ನು ಸರಕಾರಕ್ಕೆ ಕೊಟ್ಟಿದ್ದೇವೆ. ಚುನಾಯಿತ ಪ್ರಾತಿನಿಧ್ಯವನ್ನು ತರುವ ಅಧಿಕಾರವನ್ನು ಅವರಿಗೆ ಒಪ್ಪಿಸಿದ್ದೇವೆ. ಇದು ಸಂವಿಧಾನಾತ್ಮಕ ಪ್ರಶ್ನೆಯಾಗಿರುವುದರಿಂದ ಎಲ್ಲ ವಿವರಗಳು ಈ ಸದನದಲ್ಲಿ ನಿರ್ಣಯವಾಗಬೇಕು ಹಾಗೂ ಈ ವಿವರಗಳನ್ನು ಕಾರ್ಯಾಂಗದ ಸ್ವ–ಇಚ್ಛೆಗೆ ಬಿಡಕೂಡದು ಎಂದು ನಾನು ಅತ್ಯಂತ ವಿನಮ್ರತೆಯಿಂದ ಕೇಳಿಕೊಳ್ಳುವೆ. ಭಾರತ ಸರಕಾರದ ಕಾನೂನನ್ನೇ ಉದಾಹರಣೆಗೆಂದು ತೆಗೆದುಕೊಳ್ಳೋಣ. ಈ ನಮ್ಮ ವಿಧೇಯಕದಲ್ಲಿ ಏನು ಹೇಳಿದೆ? ನಮ್ಮ ವಿಧೇಯಕವು ಮತದಾನ ಪ್ರಾತಿನಿಧ್ಯ ದೊರಕಬೇಕಾದ ಸಮುದಾಯಗಳು, ಚುನಾವಣಾ ಕ್ಷೇತ್ರಗಳು, ಮತದಾನ ಮಾಡುವ ಪದ್ಧತಿ ಇವುಗಳನ್ನು ಕುರಿತು ಹೇಳುತ್ತದೆ. ಅದೇ ಭಾರತ ಸರಕಾರದ ಕಾನೂನನ್ನು ನೋಡಿರಿ. ಅದರಲ್ಲಿ ಏನಿದೆ? ಅಲ್ಪಸಂಖ್ಯಾತರ ಅಭ್ಯರ್ಥಿಗಳ ಸಂಖ್ಯೆಯನ್ನು ಕಾರ್ಯಾಂಗದ ಸ್ವ–ಇಚ್ಛೆಗೆ ಬಿಟ್ಟುಕೊಟ್ಟಿದೆಯೇ? ಚುನಾವಣಾ ಕ್ಷೇತ್ರಗಳ ವಿಭಜನೆಯನ್ನು ಕಾರ್ಯಾಂಗದ ಸ್ವ–ಇಚ್ಛೆಗೆ ಬಿಟ್ಟುಕೊಡಲಾಗಿದೆಯೇ? ಅಂಥದೇನೂ ಇಲ್ಲ. ಅದು ಮಾಡಿದ್ದಾದರೂ ಏನೆಂದರೆ, ಭಾರತ ಸರಕಾರದ ಕಾನೂನಿನ ಒಂದಂಶವೇ ಆದ ಭಾರತ ಮಂಡಲದ (ಕೌನ್ಸಿಲ್) ಆದೇಶಗಳಾದುದರಿಂದ ಅದು ಭಾರತ ಸರಕಾರದ ಕಾನೂನು ಆಗಿದೆ. ಸಂವಿಧಾನದ ಸಂಗತಿಗಳನ್ನು

ಯಾವ ರೀತಿಯಾಗಿ ಮಾಡಬೇಕೋ ಹಾಗೆಯೇ ಆ ಸಂಗತಿಗಳನ್ನೂ ನೋಡಿಕೊಳ್ಳುವುದು ಅವಶ್ಯವಿದೆ.

ಇತರೆ ವಿಷಯಗಳಲ್ಲಿ, ಈ ವಿಧೇಯಕಕ್ಕೆ ಸಂಬಂಧಿಸಿದ ಮಾನ್ಯ ಮಂತ್ರಿಗಳಿಂದ ಪ್ರಥಮವಾಗಿ ನಾನು ತಿಳಿದುಕೊಳ್ಳಬೇಕಾದುದು ಹೀಗಿದೆ. ಉದ್ದೇಶ ಹಾಗೂ ಕಾರಣಗಳನ್ನು ನೀಡುವ ಹೇಳಿಕೆಯಲ್ಲಿ, ಜನಸಂಖ್ಯೆಯ ಆಧಾರದ ಮೇಲೆ ವಿವಿಧ ಅಲಸ್ಪಂಖ್ಯಾತರಿಗೆ ಸ್ಥಾನಗಳನ್ನು ಹಂಚಲಾಗುವುದು ಎಂದು ಅವರು ಗೌರವಯುತವಾಗಿ ತಿಳಿಸಿರುವರು. ನಾನು ಅವರಿಗೆ ಕೃತಜ್ಞನಿರುವೆ. ವಿವಿಧ ಅಲ್ಪಸಂಖ್ಯಾತರಿಗೆ ಸ್ಥಾನಗಳನ್ನು ಹಂಚಿಕೊಡುವ ತತ್ವ ಅವರದ್ದಾಗಿದ್ದರೆ, ಆ ತತ್ವವನ್ನು ವಿಧೇಯಕ ಪರಿಚ್ಛೇದದ ವಿಭಾಗದಲ್ಲಿಯೇ ಏಕೆ ಒಡಗೂಡಿಸಬಾರದೆಂಬುದನ್ನು ನಾನವರಿಗೆ ಕೇಳಬೇಕಾಗಿದೆ. ಉದ್ದೇಶಗಳು ಹಾಗೂ ಕಾರಣಗಳು ಇವುಗಳ ಹೇಳಿಕೆಯಲ್ಲಿ ತಿಳಿಸಿದ ತತ್ವದ ಲಾಭ ನಮಗೆ ಸಿಕ್ಕೇ ಸಿಗುವುದೆಂಬ ಭರವಸೆ ಎಲ್ಲಿದೆ? ನಮಗೆ ದಾನವು ಬೇಕಾಗಿಲ್ಲ; ನಮಗೆ ನಮ್ಮ ಹಕ್ಕುಗಳು ಬೇಕಾಗಿವೆ. ಅವುಗಳನ್ನು ಕಾರ್ಯಾಂಗದ ಸ್ವ–ಇಚ್ಛೆಗೆ ನಾವು ಬಿಟ್ಟುಕೊಡಲಾರೆವು. ಕಾನೂನಿನಲ್ಲಿ ನಿಶ್ಚಿತವಾಗಿ ಅದನ್ನು ಕಾಣಿಸಬೇಕಾಗಿದೆ. ಚುನಾವಣಾ ಕ್ಷೇತ್ರದ ವಿಭಾಗದ ಪ್ರಶ್ನೆಯೂ ವಾಸ್ತವಿಕವಾಗಿ ನಮಗೆ ಸಂಬಂಧಪಟ್ಟ ಎರಡನೆಯ ವಿಷಯವಾಗಿದೆ. ನನ್ನ ಮಾನ್ಯ ಮಿತ್ರರು ಶಾಸಕರಾಗಿ ಬರದೇ ಇರುವುದರ ಬಗ್ಗೆ ನನಗೆ ಬಹಳ ಕಾಳಜಿಯಿದೆ. ಈ ಮಂಡಲಗಳ ಘಟನೆಯನ್ನು ಕುರಿತು ಚುನಾವಣಾ ಕ್ಷೇತ್ರದಲ್ಲಿ ಯಾವ ಪದ್ಧತಿಯನ್ನು ಅನುಸರಿಸಲಾಗುವುದು ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ. ಅದು ಏಕ ಸದಸ್ಯ ಚುನಾವಣಾ ಕ್ಷೇತ್ರವಾಗುವುದೋ ಅಥವಾ ಬಹುಸದಸ್ಯ ಚುನಾವಣಾ ಕ್ಷೇತ್ರವಾಗುವುದೋ? ಉದ್ದೇಶಗಳು ಹಾಗೂ ಕಾರಣಗಳು ಇವುಗಳ ಹೇಳಿಕೆಯಲ್ಲಿ ಇದರ ಬಗ್ಗೆ ಏನೇನೂ ತಿಳಿಸಿಲ್ಲ. ಹಾಗೇಕೆ? ಕಾರ್ಯಾಂಗವು ಇನ್ನು ಮುಂದೆ ಏಕ ಸದಸ್ಯ ಚುನಾವಣಾ ಕ್ಷೇತ್ರವನ್ನು ಅನುಸರಿಸುವುದಾದರೆ, ಅದು ನಮಗೆ ಗೊತ್ತಾಗಬೇಕು; ಏಕೆಂದರೆ ಈ ವಿಧೇಯಕಕ್ಕೆ ಪರವಾಗಿ ಮತ ನೀಡಬೇಕೋ ಅಥವಾ ವಿರೋಧಿಸಿ ಮತ ನೀಡಬೇಕೋ ಎಂಬುದನ್ನು ಅದರಿಂದ ನಿರ್ಣಯಿಸಬೇಕಾಗಿದೆ. ಅದಿನ್ನೂ ನಿರ್ಣಯವಾಗಿಲ್ಲ.

ನನಗೆ ಬಹಳ ಕಾಳಜಿಯಿರುವ ಮೂರನೆಯ ವಿಷಯವೆಂದರೆ ಮತದಾನ ಪದ್ಧತಿಯ ಪ್ರಶ್ನೆ. ಮತದಾನವು ಸಾಮುದಾಯಿಕ ಪದ್ಧತಿಯಿಂದಲೋ ಅಥವಾ ವರ್ಗೀಕೃತ ಪದ್ಧತಿಯಿಂದಲೋ? ಇದೂ ಸಹ ವಿಧೇಯಕದಲ್ಲಿ ಸ್ಪಷ್ಟವಾಗಿಲ್ಲ. ಈ ಎಲ್ಲಾ ಸಂಗತಿಗಳ ಬಗ್ಗೆ ಸದನದಲ್ಲಿ ಸ್ಪಷ್ಟವಾಗಿ ನಿರ್ದಿಷ್ಟವಾಗಿ ತಿಳಿಸಬೇಕು. ನಾನು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರಿಸುವರೆಂದೂ ನಮ್ಮ ಹಕ್ಕುಗಳು ನಮಗೆ ಗೊತ್ತಾಗಬೇಕೆಂದೂ, ನಾನು ಹೇಳಿದ ತತ್ವಗಳನ್ನು ವಿಧೇಯಕದಲ್ಲಿಯೇ ಅಳವಡಿಸುವರೆಂದೂ ಆಶಿಸುವೆ. ಈ ವಿಧೇಯಕದಲ್ಲಿ ಪ್ರತಿಯೊಂದೂ ನಿಯಮಗಳಿಂದಲೇ ಆಗಬೇಕೆಂದಿದೆ; ಆದರೆ ಕಾರ್ಯಾಂಗವು ನಿಶ್ಚಿತವಾಗಿ ಏನು ಮಾಡಬೇಕಾಗಿದೆ ಎಂಬುದು ಗೊತ್ತಾಗಲು ಮಾನ್ಯ ಮಂತ್ರಿಗಳು ಸದನದಲ್ಲಿ ಈ ನಿಯಮಗಳನ್ನು ಸಹ ಸೂಚಿಸಿಲ್ಲ. ಕೊನೆಗೆ ಇದಿಷ್ಟನ್ನಾದರೂ ಈ ವಿಧೇಯಕವನ್ನು ಕುರಿತು ಮಾಡಬಹುದಾಗಿದೆ. ನಾನು ಹೇಳಿದ್ದನ್ನೇ ಪುನರುಚ್ಚರಿಸುವ ಮನಸ್ಸಿಲ್ಲ. ನಾನು ಕೇಳಿದ ವಿಷಯ ಸಂಪೂರ್ಣವಾಗಿ ಸ್ಪಷ್ಟವಾಗಿ ಸಂವಿಧಾನಾತ್ಮಕ ಪ್ರಶ್ನೆಯಾಗಿದೆಯೆಂದೇ ನಾನು ತಿಳಿದಿರುವೆ. ಕೆಲವೊಂದು ವಿಷಯಗಳಲ್ಲಿ ಕಾನೂನು ರೀತ್ಯಾ ಅಧಿಕಾರ ಹೊಂದಿ, ಕರಗಳನ್ನು ಹೇರಿ ಶಿಕ್ಷಿಸುವ ಅಧಿಕಾರವನ್ನು ಸಹ ಪಡೆದ ಸ್ಥಳೀಯ ಪ್ರಾಧಿಕಾರಕ್ಕೆ ಸಂವಿಧಾನಾತ್ಮಕ ಮಂಜೂರಾತಿ ನೀಡುವ ಪ್ರಶ್ನೆ ಇದಾಗಿದೆ. ಕಾರ್ಯಾಂಗಕ್ಕೆ ಈ ಅಧಿಕಾರಗಳನ್ನು ಕೊಡುವ ಮೊದಲು, ಕಾರ್ಯಾಂಗದವರು ಕೇಳಿಕೊಂಡಂತೆ ನಾವು ವಹಿಸಿಕೊಟ್ಟ ಅಧಿಕಾರಗಳನ್ನು ಅವರು ಹೇಗೆ ಉಪಯೋಗಿಸಿಕೊಂಡಿರುವರೆಂಬುದನ್ನು ಈ ಸದನಕ್ಕೆ ತಿಳಿಸಬೇಕು; ಇದರ ಬಗ್ಗೆ ಕಾರ್ಯಾಂಗವು ಒಪ್ಪಿಕೊಳ್ಳಬೇಕು. ಈ ಘಟ್ಟದಲ್ಲಿ ನಾನು ಹೇಳುವ ಮಾತು ಇದಿಷ್ಟೇ ಆಗಿದೆ.

# ೨೬

# *ಸ್ಥಳೀಯ ಮಂಡಳಿಗಳ ಕಾಯ್ದೆ ತಿದ್ದುಪಡಿ ಮಸೂದೆ: ೨

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ತಮಗೆ ಸಲ್ಲಿಸಿರುವ ವರದಿಯ ಮೇಲಿಂದ, ತಿದ್ದುಪಡಿ ಸೂಚಿಸಿದವರು ಈ ವಿಭಜನೆಯನ್ನೇ ಮತದಾನ ಮಾಡಿರುವರೇ ಎಂಬುದನ್ನು ತಮಗೆ ಕೇಳ ಬಯಸುವೆ.

ಮಾನ್ಯ ಶ್ರೀ ಬಿ. ಜಿ. ಖೇರ್: ಒಬ್ಬರು ಯಾವ ವಿಶೇಷ ರೀತಿಯಲ್ಲಿ ಮತದಾನ ಮಾಡಿರುವರೆಂಬುದನ್ನು ತಿಳಿದುಕೊಳ್ಳಲು ಮಾನ್ಯ ಸದಸ್ಯರಿಗೆ ಅಧಿಕಾರವಿದೆಯೇ ಎಂಬುದನ್ನು ನಾನು ತಿಳಿಯಬಹುದೇ?

ಡಾ. ಬಿ. ಆರ್. ಅಂಬೇಡ್ಕರ್: ಸದಸ್ಯರು ಯಾವ ರೀತಿ ಮತದಾನ ಮಾಡಿದ್ದಾರೆ ಎಂಬುದು ಬರಿ ಸದನಕ್ಕೆ ಅಲ್ಲದೆ, ಸಾರ್ವಜನಿಕರಿಗೂ ಸಹ ಗೊತ್ತಾಗಬೇಕೆಂದೇ ಈ ಪ್ರಶ್ನೆಯನ್ನು ಕೇಳಿದ್ದೇನೆ.

ಮಾನ್ಯ ಸಭಾಪತಿ: ಒಬ್ಬ ಮಾನ್ಯ ಸದಸ್ಯರ ಮಾಹಿತಿಗಾಗಿ ಮತದಾನ ಮಾಡಿದವರ ಎಲ್ಲಾ ಹೆಸರುಗಳನ್ನು ನಾನು ಓದಬೇಕೆಂಬುದನ್ನು ಎಂದೂ ನಿರೀಕ್ಷಿಸಬಾರದು.

ಡಾ. ಬಿ. ಆರ್. ಅಂಬೇಡ್ಕರ್: ತಿದ್ದುಪಡಿ ಸೂಚಿಸಿದ ಮಾನ್ಯ ಸದಸ್ಯರು ಯಾವ ಕಡೆಗೆ ಮತದಾನ ಮಾಡಿದರೆಂಬುದನ್ನು ತಿಳಿದುಕೊಳ್ಳುವ ಹಕ್ಕು ಈ ಸದನಕ್ಕಿದೆ. ಏಕೆಂದರೆ ವಿಶೇಷತಃ ಸದಸ್ಯನೊಬ್ಬ ಸದನವನ್ನು ಹೀಯಾಳಿಸಿರುವನೋ ಹೇಗೆ ಎಂಬುದನ್ನು ಈ ಸದನಕ್ಕೆ ತಿಳಿದುಕೊಳ್ಳುವ ಹಕ್ಕು ಇದೆಯೆಂದು ನಾನು ಹೇಳಬಹುದಾಗಿದೆ.

ಮಾನ್ಯ ಸಭಾಪತಿಗಳು: ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರ ಹೇಳಿಕೆಯ ಹಿನ್ನೆಲೆಯಲ್ಲಿ ನಾನು ಹೆಸರನ್ನು ತಿಳಿಸುವ ಮೊದಲು, ಇದ್ದ ಪರಿಸ್ಥಿತಿಯನ್ನು ಸ್ಪಷ್ಟಪಡಿಸುವೆ. ತಿದ್ದುಪಡಿ ತೆಗೆದುಕೊಂಡು ಬಂದವರು ಮಾನ್ಯ ಸದಸ್ಯ ಶ್ರೀ ಫಡಕೆಯವರು; ಮುಸ್ಲಿಮ್ ಸಮುದಾಯಕ್ಕೆ ಪ್ರತ್ಯೇಕ ಚುನಾವಣೆ ಕ್ಷೇತ್ರ ಇರಕೂಡದೆಂದು ಅವರು ತಿದ್ದುಪಡಿ ತಂದರು. ಅಂಥದೇ ತಿದ್ದುಪಡಿಯನ್ನು ಮಾನ್ಯ ಸದಸ್ಯ ಶ್ರೀ ಚುಂದ್ರಿಗಾರ ಅವರೂ ತಂದರು; ಮುಸ್ಲಿಮ್ ಸಮುದಾಯಕ್ಕೆ ಕೊಡಬೇಕೆಂಬ ವಿಧೇಯಕದೊಳಗಿನ ಸೂಚನೆಯನ್ನು ತೆಗೆದುಹಾಕಬೇಕು ಹಾಗೂ ಅದೇ ಸಮಯಕ್ಕೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಹಾಗೆಯೇ ಉಳಿಸಿಕೊಳ್ಳಬೇಕು ಎಂಬುದು ಅವರ ಉದ್ದೇಶವಾಗಿದ್ದಿತು. ಆದ್ದರಿಂದ ವಿಶೇಷವಾಗಿ ಈ ಉದಾಹರಣೆಯಲ್ಲಿ ಏನಾಗಿತ್ತು ಎಂದರೆ– ಈ ಇಬ್ಬರು ಸದಸ್ಯರ ತಿದ್ದುಪಡಿಗಳು ರೂಪದಲ್ಲಿ, ಶಬ್ದಗಳಲ್ಲಿ ಒಂದೇ ಆಗಿದ್ದರೂ, ಇಬ್ಬರ ಉದ್ದೇಶವೂ ಬೇರೆಬೇರೆ ತೆರನಾಗಿದ್ದಿತು. ಮಾನ್ಯ ಸದಸ್ಯ ಶ್ರೀ ಫಡಕೆಯವರ ತಿದ್ದುಪಡಿ ಚರ್ಚೆಗಾಗಿ ಕೈಗೊಂಡುದು ಒಂದು ಆಕಸ್ಮಿಕ; ಇದರಿಂದ ಮಾನ್ಯ ಸದಸ್ಯ ಶ್ರೀ ಚುಂದ್ರಿಗಾರ ಅವರಿಗೆ ತಮ್ಮ ತಿದ್ದುಪಡಿಯನ್ನು ಮಂಡಿಸಲು ಶಕ್ಯವಾಗಲಿಲ್ಲ. ಮಾನ್ಯ ಸದಸ್ಯ ಶ್ರೀ ಚುಂದ್ರಿಗಾರರ ತಿದ್ದುಪಡಿ ಮಂಡಿತವಾಗಿದ್ದರೆ, ಮಾನ್ಯ

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೨
ಪುಟಗಳು ೫೦೧–೫೦೨, ದಿನಾಂಕ ೨೨ ಜನವರಿ ೧೯೩೮.

ಸದಸ್ಯ ಶ್ರೀ ಫಡಕೆಯವರ ತಿದ್ದುಪಡಿಯನ್ನು ಮಂಡಿಸಲು ಆಸ್ಪದವಿರಲಿಲ್ಲ. ಅಂದರೆ ಮಾನ್ಯ ಸದಸ್ಯ ಶ್ರೀ ಫಡಕೆಯವರಿಗೆ ಯಾವ ಕಠಿಣ ಪ್ರಸಂಗವು ಒದಗಿದೆಯೋ ಅದು ಮಾನ್ಯ ಸದಸ್ಯ ಶ್ರೀ ಚುಂದ್ರಿಗಾರ ಅವರಿಗೆ ಬರುತ್ತಿತ್ತು. ಈ ವಿವರಣೆಯನ್ನು ತಮಗೆ ಕೊಟ್ಟಮೇಲೆ, ಮಾನ್ಯ ಸದಸ್ಯ ಶ್ರೀ ಫಡಕೆಯವರು ಮತದಾನ ಮಾಡಿದ್ದಾರೋ ಹೇಗೆ, ಮತದಾನ ಮಾಡಿದ್ದರೆ ಅನುಕೂಲವಾಗಿಯೇ ಪ್ರತಿಕೂಲವಾಗಿಯೇ ಎಂಬುದನ್ನು ನಾನು ವಿಭಜನೆಯಲ್ಲಿಯ ಪಟ್ಟಿಯನ್ನು ಪರಿಶೀಲಿಸಿ ಹೇಳುವೆ.

ಶ್ರೀ ಇಸ್ಮಾಯಿಲ್ ಆಯ್ ಚುಂದ್ರಿಗಾರ: ಮಾನ್ಯರೆ, ತಪ್ಪು ಕಲ್ಪನೆಯನ್ನು ನಾನು ದೂರಮಾಡಬಹುದಷ್ಟೇ? ನನ್ನ ತಿದ್ದುಪಡಿಯನ್ನು ನಾನು ಮಂಡಿಸಲಿಲ್ಲವೆಂದು ಹೇಳುವುದು ತಪ್ಪು. ಮಾನ್ಯರೆ, ಮಾನ್ಯ ಸದಸ್ಯ ಶ್ರೀ ಫಡಕೆಯವರು ಅವೇ ಶಬ್ದಗಳಲ್ಲಿ ಒಂದು ತಿದ್ದುಪಡಿಯನ್ನು ಆಗಲೇ ಮಂಡಿಸಿರುವುದರಿಂದ ನನ್ನದು ಅನವಶ್ಯಕವೆಂದು ತಾವು ನಿರ್ಣಯ ನೀಡಿದಿರಿ.

ಮಾನ್ಯ ಸಭಾಪತಿಗಳು: ಮಾನ್ಯ ಸದಸ್ಯ ಶ್ರೀ ಚುಂದ್ರಿಗಾರರು ತಮ್ಮ ತಿದ್ದುಪಡಿಯನ್ನು ಮಂಡಿಸಲು ನಿರಾಕರಿಸಿದರು ಅಥವಾ ತಮ್ಮ ತಿದ್ದುಪಡಿ ಮಂಡಿಸಲು ಆಸಕ್ತರಿರಲಿಲ್ಲ ಎಂಬುದು ನನ್ನ ಅರ್ಥವಲ್ಲ. ಅವರು ಮಂಡಿಸಲು ಆಸಕ್ತರಿದ್ದರು. ಆದರೆ ಅನೇಕ ಸದಸ್ಯರಿಂದ ಒಂದೇ ರೀತಿಯ ತಿದ್ದುಪಡಿ ಮಂಡಿಸುವುದಾದರೆ, ಅವುಗಳಲ್ಲಿ ಅನುಕೂಲಕ್ಕಾಗಿ ಒಂದೇ ಒಂದು ತಿದ್ದುಪಡಿಯನ್ನು ತೆಗೆದುಕೊಳ್ಳುವುದು ಈ ಸದನದ ಪರಿಪಾಠವಾಗಿದೆ. ಮಾನ್ಯಶ್ರೀ ಚುಂದ್ರಿಗಾರರು ನಿರಾಕರಿಸಿದರು ಎನ್ನುವುದು ತಪ್ಪು.

ಈಗ ಮಾನ್ಯ ಸದಸ್ಯ ಶ್ರೀ ಫಡಕೆಯವರು, ತಿದ್ದುಪಡಿಯನ್ನು ಮಂಡಿಸಿದರು– ಪುನಃ ನಾನು ಹೇಳುವೆ– ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ತೊಡೆದುಹಾಕಬೇಕೆಂಬ ಉದ್ದೇಶದಿಂದ, ಅವರ ಮೊದಲ ತಿದ್ದುಪಡಿ ಬಿದ್ದುಹೋದುದರಿಂದ ಹಾಗೂ ಪ್ರತ್ಯೇಕ ಚುನಾವಣಾ ಕ್ಷೇತ್ರ ಮುಂದುವರೆದದ್ದರಿಂದ ವಿರುದ್ಧವಾಗಿ ಮತದಾನ ಮಾಡಿರುವರು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಮತ್ತೊಂದು ಪ್ರಶ್ನೆ ಕೇಳಲು ಬಯಸುವೆ. ತಿದ್ದುಪಡಿ ಸೂಚಿಸಿದ ಮಾನ್ಯ ಸದಸ್ಯರು ತಮ್ಮದೇ ತಿದ್ದುಪಡಿಯ ವಿರುದ್ಧವಾಗಿ ಮತದಾನ ಮಾಡುವ ಸ್ವಾತಂತ್ರ್ಯವಿದೆಯೇ ಎಂಬುದರ ಬಗ್ಗೆ ತಮ್ಮ ನಿರ್ಣಯ ಕೊಡಬೇಕಾಗಿ ಕೇಳಿಕೊಳ್ಳುವೆ.

ಮಾನ್ಯ ಸಭಾಪತಿಗಳು: ಇದು ತಾವಾಗಿಯೇ ತಿಳಿದುಕೊಳ್ಳಬೇಕಾದ ವಿಷಯವೆಂದು ನನಗೆ ತೋರುತ್ತದೆ. ಕೊನೆಯವರೆಗೂ ಒಬ್ಬರು ತಮ್ಮ ಮನಸ್ಸನ್ನು ಬದಲಿಸಲು ಸ್ವತಂತ್ರರು (ನಗೆ).

* * *

* ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ನನಗೆ ಬಹಳ ಅಸಮಾಧಾನವಾಗಿದೆ; ಆದರೂ ಈ ಗುಂಪಿನವರ ಆಶೆಗಳನ್ನು ಸರಕಾರದಲ್ಲಿ ಪ್ರಭಾವ ಬೀರುವಂತೆ ಮಾಡಲೇಬೇಕಾಗಿತ್ತೆಂಬುದನ್ನು ನಾನು ಹೇಳದೇ ಇರಲಾರೆ. ಮಾನ್ಯ ಮಿತ್ರ ಶ್ರೀ ಗಾಯಕವಾಡರು ಮಂಡಿಸಿದ ತಿದ್ದುಪಡಿಯನ್ನು ಸ್ವೀಕರಿಸಿದ್ದಿದ್ದರೆ ಯಾರಿಗೂ ನೋವಾಗುತ್ತಿರಲಿಲ್ಲ; ದೇಶದ ಹಿತಾಸಕ್ತಿಗಳಿಗೆ ಕುಂದು ಬರುತ್ತಿರಲಿಲ್ಲ. ಬಹುಸಂಖ್ಯಾತರ

---

*ಬಿ.ಎಲ್.ಜೆ. ಡಿಬೇಟ್ಸ್, ಸಂಪುಟ ೨
ಪುಟಗಳು ೫೧೦–೫೧೨, ದಿನಾಂಕ ೨೨ ಜನವರಿ ೧೯೩೮.

ಬೆಂಬಲದಿಂದ ಸರಕಾರವು ತನ್ನ ಅಧಿಕಾರವನ್ನು ದಬ್ಬಾಳಿಕೆಯ ರೀತಿಯಲ್ಲಿ ಉಪಯೋಗಿಸುತ್ತಿರುವ ಈ ಸಂಗತಿಯಿಂದ, ನಮಗುಂಟಾದ ಅಸಮಾಧಾನವನ್ನು ವ್ಯಕ್ತಮಾಡಲೇಬೇಕೆಂದು, ಒಂದು ಗುಂಪಾಗಿ ನಾವು ಹೊರಗೆ ಹೋಗಬೇಕೆಂದು ಹಾಗೂ ಇಂದಿನ, ಮುಂದಿನ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬಾರದೆಂದು ನಾವು ನಿರ್ಧರಿಸಬೇಕಾಗುತ್ತದೆ.

ಮಾನ್ಯ ಶ್ರೀ ಬಿ. ಜಿ. ಖೇರ್: ಮಾನ್ಯ ಸದಸ್ಯರು (ಡಾ. ಅಂಬೇಡ್ಕರ್) ನನಗೆ ಸ್ವಲ್ಪ ಮಾತನಾಡಲು ಅವಕಾಶ ಕೊಡುವರೆಂದು ಆಶಿಸುವೆ.

ಜಾತಿ ಅಥವಾ ಪಂಗಡಗಳ ಬಗ್ಗೆ ಯಾವುದೇ ಚಿಕ್ಕ ವಿಷಯವಿರಲಿ ಒಮ್ಮೆಲೇ ಜನ ಸಿಡಿದೇಳುವುದು ನಮ್ಮ ದೇಶದಲ್ಲಿಯ ಅನುಭವದ ಮಾತು. ಇದು ಅತಿ ದುಃಖದಾಯಕವಾದುದು. ನಮ್ಮ ಭಾಷೆಯಲ್ಲಿರುವ "ಅಸ್ಪೃಶ್ಯ" ಎಂಬ ಪದವನ್ನು ಚಾಲ್ತಿಯಿಂದ ತೆಗೆದುಹಾಕಬೇಕೆಂದು ಹಲವಾರು ವರ್ಷಗಳಿಂದ ಪ್ರಯತ್ನ ಮಾಡುತ್ತಲಿದೆ ಎಂಬುದು ಸ್ವತಂತ್ರ ಲೇಬರ್ ಪಂಗಡದ ನಾಯಕರಾದ ಮಾನ್ಯ ಸದಸ್ಯರಿಗೆ ಗೊತ್ತಿದೆ. "ಅಸ್ಪೃಶ್ಯ" ಎಂಬ ವಿಚಾರವೇ ಅತಿ ನೋವಾಗುವಂಥ ಸಂಬಂಧಗಳನ್ನು ನಿರ್ಮಿಸುವುದಲ್ಲದೆ, ಇದು ಹಿಂದುತ್ವಕ್ಕೆ ಒಂದು ಕಲಂಕವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಕೇವಲ ಹೆಸರನ್ನು ಬದಲಿಸುವುದರಿಂದ ನಮ್ಮ ಗುರಿಯನ್ನು ಸಾಧಿಸುವಂತಾಗುವುದಿಲ್ಲವೆಂಬ ಮಾನ್ಯ ಸದಸ್ಯ ಶ್ರೀ ಗಾಯಕವಾಡರ ಅಭಿಪ್ರಾಯಕ್ಕೆ ನನ್ನ ಒಪ್ಪಿಗೆಯಿದೆ. ನಮ್ಮ ಗುರಿಯ ಸಾಧನೆಯ ದಿಶೆಯಲ್ಲಿ ಇಂದಿನ ಪರಿಚ್ಛೇದ ಒಂದು ಪ್ರಯತ್ನವಾಗಿದೆ. ಅಸ್ಪೃಶ್ಯತೆ ಹೋಗಬೇಕೆಂದು ನಾವು ಮತ್ತೊಂದು ಪದವನ್ನು ಪ್ರಯೋಗಿಸಿದೆವು. "ಪರಿಶಿಷ್ಟ ವರ್ಗ" ಎಂದು ಕರೆಯಬೇಕೆಂದೆವು; ಆದರೆ ಅದು ಇಂಗ್ಲಿಷ್ ಪದ "ಶೆಡ್ಯೂಲ್ಡ್ ಕ್ಲಾಸ್" ಎಂಬುದರ ಅನುವಾದವಾಗುತ್ತದೆ. ಮರಾಠಿ ಭಾಷೆಯಲ್ಲಿ "ಪರಿಶಿಷ್ಟ ವರ್ಗ" ಎಂಬ ಪದಪ್ರಯೋಗ ಬಹಳ ಅನುಚಿತವಾಗುತ್ತದೆ. ಇಂಗ್ಲಿಷ್‌ನಲ್ಲಿದ್ದ "ಶೆಡ್ಯೂಲ್ಡ್ ಕ್ಲಾಸ್" ಎಂಬುದರ ಬದಲು ಸರಿಸಮಾನವಾದ ಪದವನ್ನೇ ಉಪಯೋಗಿಸಿದರೆ, "ಪರಿಶಿಷ್ಟ ವರ್ಗ" ಎಂಬುದನ್ನು ಸ್ವೀಕರಿಸಬೇಕು; ಏಕೆಂದರೆ ವರ್ಗ ಎಂಥದು ಎಂಬರ್ಥವನ್ನು ಸೂಚಿಸುವ ಬದಲಿ ಪದ ಇದೊಂದೇ ಆಗಿದೆ. ಇನ್ನುಳಿದ ಹಿಂದೂಗಳಿಂದ ಪ್ರತ್ಯೇಕಿಸುವ ಯಾವುದೇ ಪ್ರಯತ್ನ ಅವರ ಮನಸ್ಸಿಗೆ ಹಿಡಿಸುವುದಿಲ್ಲವೆಂಬುದು ನನಗೆ ಸಂಪೂರ್ಣವಾಗಿ ಗೊತ್ತಿದೆ; ಆದರೆ ಈ ವರ್ಗದವರ ಪರಿಸ್ಥಿತಿಯನ್ನು ಸುಧಾರಿಸಿ ಸಾಧನೆಯ ಫಲ ಕಾಣಲು ಶಾಸನ ರಚಿಸಬೇಕೆಂಬ ಉದ್ದೇಶದಲ್ಲಿಯೂ ಸಹ, ನಾವು ಈ ವರ್ಗದವರನ್ನು ಹಿಂದೂವಿನಿಂದ ಪ್ರತ್ಯೇಕವಾಗಿ ತೋರಿಸಬೇಕಾಗುತ್ತದೆ. ನಾವು ಅವರನ್ನು "ಅಸ್ಪೃಶ್ಯ" ಅಥವಾ ಬೇರೆ ಹೆಸರಿನಿಂದ ಕರೆಯಬಹುದು; ಇಷ್ಟು ದೊಡ್ಡ ಹಿಂದೂಗಳ ಗುಂಪನ್ನು ವರ್ಗೀಕರಿಸಬೇಕಾದರೆ, ಅಂತರವನ್ನು ತೋರಿಸಬೇಕಾದರೆ ನಾವು ಕಡಿಮೆ ಪದಗಳನ್ನು ಪ್ರಯೋಗಿಸಿದಷ್ಟು ಹಿತಕರವಾದುದು; ಆದರೆ ನಾಲ್ಕೈದು ವರ್ಷಗಳಿಂದ "ಹರಿಜನ" ಎಂಬ ಪದವು ದೇಶದ ಎಲ್ಲಾ ಭಾಗಗಳಲ್ಲಿ ಉಪಯೋಗವಾಗುತ್ತಿಲ್ಲವಾದರೂ, ಅನೇಕ ಭಾಗಗಳಲ್ಲಿ ರೂಢಿಯಲ್ಲಿ ಬಂದಿದೆ. "ಶೆಡ್ಯೂಲ್ಡ್ ಕ್ಲಾಸ್" ಶಬ್ದಕ್ಕೆ ಪರ್ಯಾಯ ಪದ ಸೂಚಿಸುವ ಪ್ರಯತ್ನ ಮಾತ್ರ ಇದಾಗಿದ್ದು ಇದನ್ನು ಮಾನ್ಯ ಸದಸ್ಯರಾದ ಸ್ವತಂತ್ರ ಲಿಬರಲ್ ಪಕ್ಷದ ನಾಯಕರು ಒಪ್ಪಿಕೊಳ್ಳಬೇಕಾಗಿತ್ತು. ಈ ದೃಷ್ಟಿಯಿಂದ ಈ ಸಮಸ್ಯೆಯನ್ನು ಅವರು ಪರಿಶೀಲಿಸದಿರುವುದು ಅತ್ಯಂತ ದುರ್ದೈವದ ಸಂಗತಿ; ಆದರೆ "ಶೆಡ್ಯೂಲ್ಡ್ ಕ್ಲಾಸ್" ಎಂಬ ಪದಕ್ಕೆ ಯೋಗ್ಯ ಪದವನ್ನು ಅವರು ಸೂಚಿಸುವುದಾದರೆ, ಅವರ ಅನಿಸಿಕೆಗಳನ್ನು ಸ್ವೀಕರಿಸಲು ಸಾಧ್ಯವೆಂದು ನಾನು ಆಶಿಸುವೆ. ಇಲ್ಲವಾದರೆ, ಏನೇ ಆಗಲಿ ಈ ಪರಿಚ್ಛೇದವನ್ನು ಅವರು ಓದಿನೋಡಬೇಕೆಂದು ನಾನು ಮನವಿ ಮಾಡುವೆ. ದುರ್ದೈವದಿಂದ

"ಅಸ್ಪೃಶ್ಯರು" ಎಂದು ಹೆಸರು ಪಡೆದ, ಇಷ್ಟು ಬಹುದೊಡ್ಡ ಜನತೆಯ ವರ್ಗದವರ ಭಾವನೆಗಳನ್ನು ನೋಯಿಸುವ ಇಚ್ಛೆ ಅದರಲ್ಲಿಲ್ಲವೆಂಬುದನ್ನು ಆದರೆ ಎಷ್ಟೋ ವರುಷಗಳವರೆಗೆ ರೂಢಿಯಲ್ಲಿ ಬಂದಿರುವ ಒಂದು ಪದಪ್ರಯೋಗವನ್ನು ಮನ್ನಿಸಬೇಕೆಂಬ ಇಚ್ಛೆ ಮಾತ್ರ ಅದರಲ್ಲಿದೆಯೆಂಬುದನ್ನು ಅವರು ಮನಗಾಣಬಹುದು. "ಹರಿಜನ" ಎಂಬ ಪದದಲ್ಲಿ ಹಾಗೂ ಅದರ ವ್ಯಾಖ್ಯೆಯಲ್ಲಿ ಅವರ ಸಮು ದಾಯದ ಬಗ್ಗೆ ಯಾವುದೇ ವಿಚಾರ ಮಾಡುವ ಪ್ರಯತ್ನ ಇರಕೂಡದು ಎಂಬುದನ್ನು ಅವರು ಕಾಣದೇ ಇರಲಾರರು.

ಡಾ. ಬಿ. ಆರ್. ಅಂಬೇಡ್ಕರ್: ಭಾಷಣ ಮಾಡುವ ಪ್ರಸಂಗ ಇದಲ್ಲವೆಂದು ತಾವು ಕೇಳಿದ್ದರಿಂದ ನಾನು ಯಾವ ಭಾಷಣವನ್ನೂ ಮಾಡುವುದಿಲ್ಲ. ನನಗೆ ತಿಳಿಸಬೇಕಾದುದು ಇಷ್ಟೇ; ಹೆಚ್ಚು ಚೆನ್ನಾದ ಪದವನ್ನು ಸೂಚಿಸುವ ಸ್ಥಿತಿಯಲ್ಲಿ ನಾನಿಲ್ಲ; ಆದರೆ ಈಗ "ಅಸ್ಪೃಶ್ಯ" ಎಂಬ ಪದಕ್ಕೆ "ಹರಿಜನ" ಎಂಬುದು ಸರಿಸಮಾನವಾಗಿ ರೂಢಿಯಲ್ಲಿ ಬಂದುಬಿಟ್ಟಿದೆ; ಇದಕ್ಕೂ ಹೆಚ್ಚಿಗೆ ಆ ಶಬ್ದದಲ್ಲಿ ಏನೂ ಅರ್ಥವಿಲ್ಲ. "ಶೆಡ್ಯೂಲ್ಡ್ ಕ್ಲಾಸ್" ಎಂಬ ಪದಕ್ಕೆ ಸರಿಸಮಾನವಾದ ಪದ "ಹರಿಜನ" ಎಂದು ನಮಗನಿಸಿದಂತೆ ಮಾನ್ಯ ಮುಖ್ಯ ಮಂತ್ರಿಗಳಿಗೂ ಹಾಗೆಯೇ ತೋರಿದ್ದರೆ, ಆಮೇಲೆ ಸಧ್ಯ ಆ ಪದವನ್ನು ಹಿಂತೆಗೆದುಕೊಂಡು, ಅನಂತರ ಮತ್ತೊಂದು ಪದದ ಅನ್ವೇಷಣೆಗಾಗಿ ಅವರು ನಮ್ಮ ಜೊತೆಗೆ ಈ ವಿಷಯವನ್ನು ಕುರಿತು ವಿಚಾರಿಸಬಹುದಾಗಿತ್ತು. ಏನೇ ಇರಲಿ, ಅವರ ವಾದಗಳು ನಮಗೆ ಏನನ್ನೂ ಮನವರಿಕೆ ಮಾಡಿಕೊಟ್ಟಿಲ್ಲ. ಆದ್ದರಿಂದ ನಾನು ಸದನದಿಂದ ಹೊರಗೆ ಹೋಗುವೆ.

(ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಇನ್ನುಳಿದ ಲಿಬರಲ್ ಪಂಗಡದ ಸದಸ್ಯರು ಸದನದಿಂದ ಹೊರಗೆ ಹೋದರು.)

# ೨೭

## *ಚಿಕ್ಕ ಹಿಡುವಳಿದಾರರ ಪರಿಹಾರ ಮಸೂದೆ ಕುರಿತು: ೧

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ತಾವು ನನಗೆ ದಯಪಾಲಿಸಿದ ಹತ್ತು ನಿಮಿಷಗಳಲ್ಲಿ ನಾನು ಹೇಳಬೇಕಾದೆಲ್ಲವನ್ನೂ ಮುಗಿಸಲು ಸಾಧ್ಯವೋ ಎಂಬುದರ ಬಗ್ಗೆ ನನಗೆ ಹೆದರಿಕೆಯಿದೆ. ಆದರೂ ಶಕ್ಯವಿದ್ದಷ್ಟು ನಾನು ಪ್ರಯತ್ನಿಸುವೆ ಹಾಗೂ ಸ್ವಲ್ಪದರಲ್ಲಿ ಹೇಳುವೆ.

ನಮ್ಮ ಪ್ರಾಂತದ ಕೃಷಿಕರ ಮೇಲೆ ಪ್ರಭಾವ ಬೀರುವ ಎರಡು ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಈ ವಿಧೇಯಕವು ಸೂಚಿಸುತ್ತಿದೆ. ಒಂದು ಸಮಸ್ಯೆ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡ ಕೃಷಿ ಕ್ಷೇತ್ರಗಳದ್ದು, ಇನ್ನೊಂದು ಸಮಸ್ಯೆ ಚಿಕ್ಕ ಕೃಷಿ ಕ್ಷೇತ್ರಗಳದ್ದು. ಮಾನ್ಯ ಮಿತ್ರರಾದ ಭೂಕಂದಾಯ ನಿರ್ಧಾರದ ಕಮೀಶನರ್ ಅವರ ಭಾಷಣವನ್ನು ಆಲಿಸಿದ ಯಾವುದೇ ಸದಸ್ಯರು, ಕೃಷಿ ಕ್ಷೇತ್ರಗಳು ಚೆಲ್ಲಾಪಿಲ್ಲಿಯಾಗಿ ಹರಡಿ ಕೊಂಡಿರುವುದು ಕೆಟ್ಟದ್ದು ಹಾಗೂ ಇದನ್ನು ಸಾಧ್ಯವಿದ್ದಷ್ಟು ತೆಗೆದುಹಾಕುವುದು ಯುಕ್ತ ಎಂಬುದನ್ನು ಅಲ್ಲಗಳೆಯಲಾರರು ಎಂದು ನಾನು ಭಾವಿಸುವೆ. ಚೆಲ್ಲಾಪಿಲ್ಲಿಯಾಗಿರುವ ಕೃಷಿ ಕ್ಷೇತ್ರಗಳಿಂದ ಬಹಳಷ್ಟು ಹಾನಿಗಳಿವೆಯೆಂಬುದನ್ನು ನಾನು ಒಪ್ಪಿಕೊಳ್ಳುವೆ; ವಿಧೇಯಕದಲ್ಲಿರುವ ಭಾಗದಲ್ಲಿಯಂತೆ ಕೃಷಿ ಕ್ಷೇತ್ರ ಸಂಚಯವಾಗಬೇಕೆಂಬುದಕ್ಕೆ ನನ್ನ ಅನುಮತಿಯೂ ಇದೆ. ಚಿಕ್ಕ ಕೃಷಿ ಕ್ಷೇತ್ರಗಳನ್ನು ಕುರಿತು ವಿಚಾರಿಸುವಾಗ, ಚಿಕ್ಕ ಕೃಷಿ ಕ್ಷೇತ್ರಗಳು ಲಾಭದಾಯಕವಲ್ಲವೆಂದು ಅವರು ಹೇಳುವಲ್ಲಿ ನಾನು ಈ ವಿಧೇಯಕದ ಮಾನ್ಯ ಮಂಡನಕಾರರ ಜೊತೆಗೆ ಭಿನ್ನಾಭಿಪ್ರಾಯ ತಾಳಿರುವೆ. ಮಾನ್ಯರೆ, ಈಗಿರುವ ಕೃಷಿ ಕ್ಷೇತ್ರಗಳು ಎಷ್ಟು ಚಿಕ್ಕವು ಎಂಬುದನ್ನು ತೋರಿಸಲು ಮಾನ್ಯ ಸದಸ್ಯ ಶ್ರೀ ಆಂಡರ್‌ಸನ್‌ರು ಅಂಕಿ ಸಂಖ್ಯೆಗಳ ಬಹುದೊಡ್ಡ ಗಂಟನ್ನೇ ಬಿಚ್ಚಿ ನಮಗೆ ತೋರಿಸಿದ್ದಾರೆ ಹಾಗೂ ಕೃಷಿ ಕೇಂದ್ರದ ಚಿಕ್ಕಗಾತ್ರದ ಮೇಲೆ ಅವಲಂಬಿಸಿಕೊಂಡ ತೊಂದರೆಗಳ ಬಗ್ಗೆಯೂ ವಿವರಿಸಿದ್ದಾರೆ. ಚಿಕ್ಕ ಕೃಷಿ ಕ್ಷೇತ್ರಗಳಿರುವಲ್ಲಿ ತೊಂದರೆಗಳಿವೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ; ಆದರೆ ಚಿಕ್ಕ ಕೃಷಿ ಕ್ಷೇತ್ರಗಳು ಅವಶ್ಯವಾಗಿ ಲಾಭದಾಯಕ ಅಥವಾ ಮಿತವ್ಯಯವು ಅಲ್ಲವೆಂಬುದನ್ನು ನಾನು ಸಮ್ಮತಿಸುವುದಿಲ್ಲ. ಈ ವಿಧೇಯಕವನ್ನು ಮಂಡಿಸಿದವರು ಅಥವಾ ಮಾನ್ಯ ಸದಸ್ಯ ಭೂಕಂದಾಯ ನಿರ್ಧಾರ ಕಮೀಶನರ್ ಅವರು ಉಪಯೋಗಿಸಿದಂತೆ "ಲಾಭದಾಯಕವಲ್ಲದ" ಎಂಬ ಪದದ ವ್ಯಾಖ್ಯೆ ಏನೆಂಬುದು ನನಗೆ ತಿಳಿಯಲೊಲ್ಲದು. ಮಾನ್ಯರೆ, ನನಗೆ ತಿಳಿದಂತೆ ಕೃಷಿ ಕ್ಷೇತ್ರವೊಂದು ಲಾಭದಾಯಕವೋ, ಲಾಭದಾಯಕವಲ್ಲವೋ ಎಂಬುದು ಅವಶ್ಯವಾಗಿ ಅದರ ಆಕಾರದ ಮೇಲೆ ಅವಲಂಬಿಸಿಲ್ಲ. ಅರ್ಥಶಾಸ್ತ್ರದಲ್ಲಿ ನಾವು ಹೇಳುವಂತೆ, ಅದು ಹುಟ್ಟುವಳಿಯ ಬೇರೆಬೇರೆ ಅಂಶಗಳನ್ನೇ ಅವಲಂಬಿಸಿ ಬದಲಾಗುತ್ತಿರುತ್ತದೆ. ಅದು ದುಡಿಮೆಯ ಮೇಲೆ ಅವಲಂಬಿತವಾಗಿರುತ್ತದೆ. ಬಂಡವಾಳದ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗಾಗಿ, ಒಬ್ಬ ಬೇಸಾಯಗಾರನಿಗೆ ಹೆಚ್ಚಿನ ದುಡಿಮೆಗಾರರನ್ನು

---

* ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXI,
ಪುಟಗಳು ೬೦೭–೬೧೦, ದಿನಾಂಕ ೧೦ ಅಕ್ಟೋಬರ್ ೧೯೨೭.

ನೇಮಕ ಮಾಡಿಕೊಳ್ಳಲು ಅನುಕೂಲತೆಯಿದ್ದರೆ, ಬಂಡವಾಳ ಹೂಡಲು ಅವನಲ್ಲಿ ಬಹಳಷ್ಟು ಬಂಡವಾಳ ಇರದಿದ್ದರೆ, ಅವನ ಕೃಷಿ ಕ್ಷೇತ್ರ ಚಿಕ್ಕದಾಗಿದ್ದಾಗ ಅದು ಲಾಭಕರವಲ್ಲ ಎಂದು ಹೇಳಿದರೆ ಯೋಗ್ಯವಾಗುವುದಿಲ್ಲ. ಮಾನ್ಯರೆ, ನಮ್ಮ ದೇಶದಲ್ಲಿ ಬಂಡವಾಳ ಬಹಳ ಇದೆ ಹಾಗೂ ಉತ್ಪಾದನೆಯ ರೀತಿಯಲ್ಲಿಯೂ ಉನ್ನತ ಕೌಶಲ್ಯ ಬರುವಂತೆ ಮಾಡಲು ಬಹುದೊಡ್ಡ ಪ್ರಮಾಣದಲ್ಲಿ ಕೃಷಿ ಸಾಧನ ಸಾಮಗ್ರಿಯೂ ಇದೆ; ವಿಧೇಯಕ ಮಂಡಿಸಿದವರಿಂದ ಮತ್ತು ಭೂಕಂದಾಯ ನಿರ್ಧಾರದ ಕಮೀಶನ್‌ರಿಂದ ಇವುಗಳ ಬಗ್ಗೆ ಇನ್ನು ಹೆಚ್ಚಿಗೆ ಕೇಳಬೇಕೆಂಬ ಇಚ್ಛೆಯೂ ನನ್ನದಾಗಿತ್ತು. ಅವರು ಈ ವಿಷಯ ಹೀಗಿದೆಯೆಂದು ತಿಳಿಸಿದ್ದರೆ ಚೆನ್ನಾಗಿತ್ತು. ಆಮೇಲೆ ನಮ್ಮ ಹತ್ತಿರವಿದ್ದ ಸಾಧನ ಸಾಮಗ್ರಿಗಳ ಸರಿಯಾದ ಉಪಯೋಗವಾಗಲಿಲ್ಲವಾದ್ದರಿಂದ ಚಿಕ್ಕ ಕೃಷಿಕ್ಷೇತ್ರಗಳ ಉತ್ಪಾದನೆ ಮಿತವ್ಯಯದ್ದಾಗಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಮಾನ್ಯರೆ, ಮಾನ್ಯ ಸದಸ್ಯರಾದ ಭೂ ಕಂದಾಯ ನಿರ್ಧಾರದ ಕಮೀಶನರ್ ಅವರು ಈ ವಿಚಾರ ಹೇಳುವುದನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದಾರೆ. ಬೇಸಾಯಗಾರರ ಹತ್ತಿರ ಬಹಳೇ ಬಂಡವಾಳದ ಮೊತ್ತವಿದೆ, ಅವರ ಹತ್ತಿರ ಲೆಕ್ಕವಿಲ್ಲದಷ್ಟು ನೇಗಿಲು ಹಾಗೂ ದನಕರುಗಳಿವೆ. ಆದರೆ ಅವರ ಕೃಷಿ ಕ್ಷೇತ್ರ ಚಿಕ್ಕದಿರುವುದರಿಂದ ಇವುಗಳನ್ನೆಲ್ಲ ಅವರು ಉಪಯೋಗಿಸಲಾರರು. ಹೀಗೆ ವಿಧೇಯಕ ಮಂಡನಕಾರರು ಹೇಳುವರೆಂದು ನಾನು ಭಾವಿಸಿದ್ದೆ. ಈ ಸಮಸ್ಯೆಯನ್ನು ನನಗೆ ಶಕ್ಯವಿದ್ದಷ್ಟು ತಿಳಿದುಕೊಳ್ಳಲು ಹೊರಟಾಗ, ನಾವು ಯಾವುದನ್ನು ವಾಸ್ತವವೆಂದು ನಂಬುತ್ತೇವೆಯೋ, ಸನ್ನಿವೇಶವು ಅದರ ತದ್ವಿರುದ್ಧವಾಗಿದೆ. ಬೇಸಾಯಗಾರನ ಹತ್ತಿರ ಲಭ್ಯವಿರುವ ಬಂಡವಾಳ ಬಹಳ ಹೆಚ್ಚಾಗಿರುವುದು ಮತ್ತು ಅವರ ಹಿಡುವಳಿ ಚಿಕ್ಕದಿರುವುದರಿಂದ ಆ ಬಂಡವಾಳ ವ್ಯರ್ಥವಾಗಿ ಹೋಗುವುದು ಇಂಥದು ಯಾವುದೂ ಇಲ್ಲ. ಮಾನ್ಯರೆ, ಉದಾಹರಣೆ ಪರಿಶೀಲಿಸಿದರೆ, ಮದ್ರಾಸ್ ಪ್ರಾಂತದಲ್ಲಿ ಮೂರು ಎಕರೆ ಜಮೀನಿಗೆ ಒಂದು ನೇಗಿಲಿನಂತೆ ಇದೆ; ನಮ್ಮ ಮುಂಬೈ ಪ್ರಾಂತದಲ್ಲಿ ೬ ಎಕರೆಗೆ ಒಂದು ನೇಗಿಲು ಇದೆ. ಪಂಜಾಬದಲ್ಲಿ ಪ್ರತಿ ಎರಡು ಎಕರೆಗೆ ಒಂದು ನೇಗಿಲು ಇದೆ. ಕಚೇರಿಯಿಂದ ದೊರೆತ ಅಂಕಿ ಸಂಖ್ಯೆಗಳನ್ನೇ ನಾನು ಓದುತ್ತಿರುವೆ. ಬೇಸಾಯಗಾರನ ಸಾಧನ ಸಾಮಗ್ರಿಯ ಬಂಡವಾಳದ ಬಗ್ಗೆ ಈ ಅಂಕಿ ಸಂಖ್ಯೆಗಳು; ಇದೀಗ ನಾನು ತಳೆದಿರುವ ನಿಲುವನ್ನೇ– ಅಂದರೆ ಕೃಷಿ ಕ್ಷೇತ್ರವೊಂದು ಲಾಭದಾಯಕವೋ, ಅಲ್ಲವೋ ಎಂಬುದನ್ನು ವಿಚಾರಿಸಿದರೆ, ಅದು ಕೃಷಿಕ್ಷೇತ್ರದ ಆಕಾರದ ಮೇಲೆ ಅವಲಂಬಿಸಿರದೆ, ಬೇಸಾಯಗಾರನಿಗೆ ಉಪಲಬ್ಧವಿದ್ದ ಬಂಡವಾಳದ ಪ್ರಮಾಣದ ಮೇಲೆ ಅವಲಂಬಿಸಿದೆ. ಇಂದಿನ ಪರಿಸ್ಥಿತಿಯಲ್ಲಿ ಕೃಷಿ ಕ್ಷೇತ್ರದ ಆಕಾರವನ್ನು ಇನ್ನು ಕಡಿಮೆ ಮಾಡಿದರೆ ಒಳಿತೆಂಬುದು ನನ್ನ ವಿಚಾರವಾಗಿದೆ. ಇದು ತರ್ಕಬದ್ಧವಾದುದು ಹಾಗೂ ಇದನ್ನು ಎದುರಿಸಲು ನನಗೇನೂ ಹೆದರಿಕೆಯಿಲ್ಲ. ಜಮೀನನ್ನು ಸಾಗುವಳಿ ಮಾಡಲು ಬೇಸಾಯಗಾರನ ಹತ್ತಿರ ಸಾಧನ ಸಾಮಗ್ರಿ ಇರದೇ ಇದ್ದಾಗ, ಹೆಚ್ಚಿನ ಕೃಷಿಕ್ಷೇತ್ರವನ್ನು ರೂಪಿಸುವಲ್ಲಿ ಉಪಯೋಗವೇನಿದೆಯೆಂಬುದು ನನಗೆ ಗೊತ್ತಾಗುವುದಿಲ್ಲ. ಬೇಸಾಯಗಾರನ ಹತ್ತಿರ ಜಮೀನನ್ನು ಸಾಗುವಳಿ ಮಾಡಲು ಅವಶ್ಯವಾಗಿರುವ ಮಾನವಶಕ್ತಿ ಬಂಡವಾಳ ಇರದಿದ್ದರೆ ಕೃಷಿ ಕ್ಷೇತ್ರ ಹೆಚ್ಚಿಸಿದ ಮಾತ್ರಕ್ಕೆ ಉತ್ಪಾದನೆ ಹೇಗೆ ಹೆಚ್ಚಾಗುವುದು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ನಮ್ಮದು ಕೃಷಿ ದೇಶವೆಂಬುದನ್ನು ನಮ್ಮ ಮಣ್ಣಿನ ಶಕ್ತಿ ಬರಡಾಗಿದೆಯೆಂಬುದನ್ನು ನಾವು ನೆನಪಿಡಬೇಕಾಗಿದೆ. ಸಾವಿರಾರು ವರುಷಗಳಿಂದ ನಾವು ಸಾಗುವಳಿ ಮಾಡುತ್ತ ಬಂದಿದ್ದೇವೆ ಮತ್ತು ನಾವೀಗ ಎಷ್ಟೇ ಪ್ರಯತ್ನಿಸಿದರೂ ಅಮೆರಿಕದ ಸುಕುಮಾರ ಮಣ್ಣಿನಲ್ಲಿ ಬೆಳೆದಷ್ಟು ಉತ್ಪನ್ನವನ್ನು ನಾವು ತೆಗೆಯಲಾರೆವು. ಈ ಸತ್ಯ ಸಂಗತಿಯನ್ನು ನಾವು ನೆನಪಿಡಬೇಕು. ಮಾನ್ಯರೆ, ಪರಿಸ್ಥಿತಿ ಹೀಗಿರುವುದರಿಂದ,

ಸಮಸ್ಯೆಯ ಪರಿಹಾರವು ಹಿಡುವಳಿಗಳ ವಿಸ್ತೀರ್ಣವನ್ನು ಹೆಚ್ಚಿಸುವುದರಲ್ಲಿ ಇಲ್ಲ– ಆದರೆ ಇಳುವರಿಯನ್ನು ಹೆಚ್ಚಿಸುವುದರಲ್ಲಿದೆ. ಇದರರ್ಥವೆಂದರೆ– ನಮ್ಮಲ್ಲಿರುವಂಥ ಹೆಚ್ಚು ಬಂಡವಾಳವನ್ನು, ಹೆಚ್ಚು ಮಾನವ ಶಕ್ತಿಯನ್ನು ಕೃಷಿ ಕ್ಷೇತ್ರದಲ್ಲಿ ತೊಡಗಿಸುವುದು. ಆದ್ದರಿಂದ ಮಾನ್ಯರೆ, ಕೃಷಿ ಕ್ಷೇತ್ರ ವಿಸ್ತರಿಸುವ ಅಂಶವಿದ್ದ ವಿಧೇಯಕದ ಭಾಗವು ಸಂಪೂರ್ಣ ಅನವಶ್ಯಕವೆಂದು ನನಗೆ ತೋರುತ್ತದೆ. ಆದರೆ ಈ ಎರಡು ಸಂಗತಿಗಳು– ಅಂದರೆ ನಮ್ಮ ಹಿಡುವಳಿಗಳನ್ನು ಸಂಚಯನ ಮಾಡುವುದು ಮತ್ತು ನಮ್ಮ ಕೃಷಿ ಕ್ಷೇತ್ರಗಳನ್ನು ವಿಸ್ತರಿಸುವುದು– ಅವಶ್ಯವೆಂದು ನಾವು ಗ್ರಹಿಸಿದರೆ, ಆಮೇಲೆ ಈ ವಿಧೇಯಕದಲ್ಲಿ ಕೈಕೊಳ್ಳಬೇಕೆಂದಿರುವ ಉಪಾಯಗಳ ರೀತಿಗಳನ್ನು ವಿಧೇಯಕವನ್ನು ಮಂಡಿಸಿದವರಿಗಿಂತಲೂ ಹೆಚ್ಚು ಕಾಳಜಿ ವಹಿಸಿಕೊಂಡು ನೋಡುವುದು ಅವಶ್ಯವಾಗಿದೆಯೆಂದು ನನಗೆ ಅನಿಸುತ್ತಿದೆ. ಮಾನ್ಯರೆ, ಈಗ ವಿಧೇಯಕದಲ್ಲಿ ಪ್ರಮುಖವಾಗಿ ಕೈಕೊಂಡ ಉಪಾಯಗಳು ಹೀಗಿವೆ– ಒಂದು ಸ್ಥಿರಾಸ್ತಿಯ ವಿಭಜನೆಯನ್ನು ನಿಗ್ರಹಿಸುವುದು; ಎರಡು ಹಿಡುವಳಿಗಳ ಸಂಚಯನವನ್ನು ಮಾರಾಟ ಮಾಡುವುದು. ಮಾನ್ಯರೆ, ಈಗ ಇವೆರಡನ್ನು ನಾವು ಸ್ವೀಕರಿಸಿದರೆ ಕೃಷಿ ಕ್ಷೇತ್ರಗಳಲ್ಲಿರುವ ಸುಮಾರು ಪಾಲು ಬೇಸಾಯಗಾರರು ಭೂಮಿ ಕಳೆದುಕೊಳ್ಳುವರು ಎಂಬುದರ ಬಗ್ಗೆ ಯಾವುದೇ ಸಂಶಯವಿಲ್ಲವೆಂದು ನಾನು ತಿಳಿದಿರುವೆ. ದೇಶದ ಹಿತದ ದೃಷ್ಟಿಯಿಂದ ಬಡವರನ್ನು ಮತ್ತಷ್ಟು ಬಡವರನ್ನಾಗಿ ಮಾಡುವ ಈ ಉಪಾಯವನ್ನು ಕೈಗೊಳ್ಳಬಾರದೆಂಬುದು ನನ್ನ ವಿಚಾರವಾಗಿದೆ. ಎಷ್ಟೋ ರೀತಿಗಳಲ್ಲಿ ಹಿಂದೂ ಕಾಯಿದೆಯು ದೋಷಪೂರಿತವಾಗಿದ್ದರೂ, ಮಾನ್ಯರೆ, ವಂಶಗತ ಹಿಂದೂ ಕಾಯಿದೆಯು ಜನರ ಸಂರಕ್ಷಕ ಎಂದೂ ನಾನು ಹೇಳಬಯಸುವೆ. ಮಾನ್ಯರೆ, ಹಿಂದೂ ಧರ್ಮದಿಂದ ಸ್ಥಾಪಿತವಾದ ಸಾಮಾಜಿಕ ಧಾರ್ಮಿಕ ನಿರಂಕುಶಾಧಿಕಾರವು ಬಹುದೊಡ್ಡ ಜನಸಮೂಹವನ್ನು ನಿರಂತರ ದಾಸತ್ವದಲ್ಲಿ ನೂಕಿದೆ. ವಂಶಗತ ಹಿಂದೂ ಕಾಯದೆಯು ಧನಿಕ ವರ್ಗದ ನಿರ್ಮಾಣವನ್ನು ನಿಷೇಧಿಸಿದೆಯಾದ್ದರಿಂದ, ಇಂಥ ದಾಸತ್ವವು ಬಹಳಷ್ಟು ಸಹನೀಯವಾಗಿದೆ. ಮಾನ್ಯರೆ, ಸಾಮಾಜಿಕ ದಾಸತ್ವಕ್ಕೆ ಆರ್ಥಿಕ ಗುಲಾಮಗಿರಿಯನ್ನು ಜೋಡಿಸುವುದು ನಮಗೆ ಬೇಕಾಗಿಲ್ಲ. ಸಾಮಾಜಿಕವಾಗಿ ಸ್ವತಂತ್ರವಿರದಿದ್ದರೂ, ಆರ್ಥಿಕವಾಗಿ ಜನ ಸ್ವತಂತ್ರವಿರಲಿ, ವಂಶಗತವಾಗಿ ಬಂದ ಯೋಗ್ಯ ಹಾಗೂ ಸರಿಸಮವಾದ ಪದ್ಧತಿಯ ರದ್ಧತಿಗೆ ತನ್ನ ಸಂಪೂರ್ಣವಾದ ವಿರೋಧವಿದೆ. ಈ ವಿಧೇಯಕ ಮಂಡಿಸಿದ ಮಾನ್ಯರಿಗೆ ಈ ಮಟ್ಟದಲ್ಲಿ ಒಂದು ನಮ್ರ ಸೂಚನೆಯನ್ನು ಮಾಡಬಯಸುವೆ. ವಿಧೇಯಕದಲ್ಲಿ ತೋರಿಸಿದಂತೆ ಹಿಡುವಳಿ ಸಂಚಯದ ರೀತಿ ಹಾಗೂ ಹಿಡುವಳಿಯ ವಿಸ್ತರಣೆ ಇವುಗಳಿಗೆ ಬದ್ಧರಾಗಿರದಿದ್ದರೆ, ಈ ವಿಧೇಯಕದ ಪ್ರಥಮ ವಾಚನವನ್ನು ಅನುಮೋದಿಸಲು ನಾನು ಸಿದ್ಧನಿರುವೆ. ಮಾನ್ಯರೆ, ಇದಕ್ಕಿಂತಲೂ ಒಳ್ಳೆಯ ಪದ್ಧತಿಯೆಂದರೆ– ಮಾನಕ ಕ್ಷೇತ್ರಗಳಲ್ಲಿ ಸಹಕಾರಿ ಬೇಸಾಯವನ್ನು ಆರಂಭಿಸುವುದು ಮತ್ತು ವೈಯಕ್ತಿಕ ಒಡೆತನವನ್ನು ರದ್ದುಪಡಿಸದೆ ಆ ಚಿಕ್ಕ ಹಿಡುವಳಿದಾರರಿಗೆ ಬೇಸಾಯದಲ್ಲಿ ಜೊತೆಗೂಡಲು ಒತ್ತಾಯಿಸುವುದು ಎಂದು ನನ್ನ ವಿಚಾರವಾಗಿದೆ. ಇದಾದರೆ, ವಿಧೇಯಕದಲ್ಲಿ ಇದು ಸ್ವಲ್ಪ ಅಡಕವಾಗುವಂತೆ ಮಾಡಿದರೆ, ನಾನು ನಿಶ್ಚಿತವಾಗಿಯೂ ವಿಧೇಯಕವನ್ನು ಅನುಮೋದಿಸುವೆ. (ಶ್ರೀ ಎಸ್. ಜಿ. ಎಚ್. ಆಂಡರ್‌ಸನ್ ವಿರೋಧ ಸೂಚಿಸಿದರು) ಮಾನ್ಯ ಸದಸ್ಯ ಶ್ರೀ ಆಂಡರ್‌ಸನ್, ಭೂಕಂದಾಯ ನಿರ್ಣಯದ ಕಮೀಷನರ್ ತಲೆಯಲ್ಲಾಡಿಸುತ್ತಾರೆ. ಆದರೆ ನಾನು ಸೂಚಿಸಿದ ಪದ್ಧತಿ ನನ್ನದಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುವೆ; ಅದು ಇಟಲಿಯಲ್ಲಿ, ಫ್ರಾನ್ಸ್‌ನಲ್ಲಿ ಊರ್ಜಿತವಾಗಿದೆ ಹಾಗೂ ಬಹಳಷ್ಟು ಲಾಭದಾಯಕವಾಗಿ ಇಂಗ್ಲೆಂಡಿನ ಹಲವು ಭಾಗಗಳಲ್ಲಿ ಅನುಸರಿಸಲಾಗುತ್ತಿದೆ. ಮಾನ್ಯ ಸಭಾನಾಯಕರು

ಶ್ರೀ ಒಟ್ಟಾ ರಾಥ್ ಫೆಲ್ಡರು ತಮ್ಮ ಗ್ರಂಥವಾದ "ಇಂಪ್ರೆಶನ್ಸ್ ಆಫ್ ದಿ ಕೋ–ಆಪರೇಟಿವ್ ಮೂವ್‌ಮೆಂಟ್ ಇನ್ ಫ್ರಾನ್ಸ್ ಅಂಡ್ ಇಟಲಿ" ಇದರಲ್ಲಿ ಹೇಳಿದುದನ್ನು ಲಕ್ಷ್ಯಪೂರ್ವಕವಾಗಿ ಓದಬೇಕೆಂದು ನಾನು ಸೂಚಿಸುವೆ. ಆ ಗ್ರಂಥದಲ್ಲಿಯ ಒಂದು ವಾಕ್ಯವೃಂದವನ್ನು ಇಲ್ಲಿ ಉಲ್ಲೇಖಿಸುವೆ:

> "ಒಟ್ಟಾರೆ ಈ ಚಳವಳಿಯ ಅನೇಕ ಸಾಧ್ಯತೆಗಳಿಂದ ಕೂಡಿಕೊಂಡದ್ದಾಗಿದೆ. ಯುದ್ಧದ ಆರಂಭದಿಂದ ಫ್ರಾನ್ಸಿನಲ್ಲಿ ಇದನ್ನು ಅನುಸರಿಸಲಾಗಿದ್ದು, ಒಳ್ಳೇ ಫಲಕಾರಿಯಾಗಿ ಪರಿಣಮಿಸಿದೆ; ಇದೇ ತೆರನಾಗಿ ಸಹಕಾರ ಬೇಸಾಯವಿರುವ ರುಮೇನಿಯಾದಲ್ಲಿ ಆ ದೇಶದ ಬೇಸಾಯವನ್ನು ಕ್ರಾಂತಿಕಾರಿಯಾಗಿ ಪಲ್ಲಟಿಸಿದೆ. "ಲಾಭದಾಯಕವಲ್ಲದ ಹಿಡುವಳಿ" ಹಾಗೂ "ಆಸ್ತಿಯೊಳಗಿನ ಅತಿಶಯ ಉಪ–ವಿಭಾಗಗಳು" ಇವುಗಳ ಸುತ್ತಮುತ್ತ ಕೇಂದ್ರೀಕೃತವಾದ ಸಮಸ್ಯಾತ್ಮಕ ವಿಷಯಗಳು ದಖ್ಖನ್ ದೇಶದಲ್ಲಿ ಬಡತನಕ್ಕೆ ಅಂಟಿಕೊಂಡ ಸುಧಾರಣೆ ಕಾಣದ ಬೇಸಾಯದಲ್ಲಿವೆ; ಸಾರ್ವಜನಿಕವಾಗಿ ಸಹಕಾರದ ಸಾಗುವಳಿಯಿಂದ ಆ ಸಮಸ್ಯೆಗಳಿಗೆ ಏನಾದರೂ ಪರಿಹಾರ ಕಂಡುಕೊಳ್ಳಲು ಶಕ್ಯವಾಗುವುದು."

ಏನೇ ಆಗಲಿ ಈ ಪರಿಹಾರವು, ಬೇಸಾಯ ವರ್ಗಕ್ಕೆ ಸೇರಿದ ಹಾಗೂ ವಿಷಯವನ್ನು ಲಘುವಾಗಿ ಪರಿಗಣಿಸುವ ಸುಧಾರಕರು ಶಿಫಾರಸು ಮಾಡುವ ವಂಶಗತ ಸಾಂಪ್ರದಾಯಿಕ ಹಕ್ಕುಗಳನ್ನು ತೀವ್ರವಾಗಿ ಅಡ್ಡಿ ಮಾಡುವುದನ್ನು ತಪ್ಪಿಸಬಹುದಾಗಿದೆ; ಮಕ್ಕಳು ವಾರಸುದಾರರಾಗಿ ಬರುವುದಿಲ್ಲವೆಂಬ ಶಾಸನ ರಚನೆ ಮಾಡಿದಾಗ, ಮುಂದೆ ಉದ್ಭವಿಸಬಹುದಾದ ಕುಟುಂಬಗಳ ಮಿತಿಯ ಮೇಲೂ ಪರಿಣಾಮ ಬೀರದಿರಬಹುದಾಗಿದೆ.

ಮಾನ್ಯರೆ, ಬೇರೆಡೆ ಈ ಪದ್ಧತಿಯನ್ನು ಯಶಸ್ವಿಯಾಗಿ ಅನುಸರಿಸುತ್ತಿದ್ದಾರೆಂಬುದು ಕಂಡುಬರುವುದು. ಸದನದ ಮಾನ್ಯ ನಾಯಕರು ಈ ಎಲ್ಲ ಸೂಚನೆಗಳನ್ನು ಕಾಳಜಿಪೂರ್ವಕವಾಗಿ ವಿಚಾರಿಸಲು ಸಿದ್ಧರಾಗಿದ್ದರೆ, ಆಯ್ಕೆ ಸಮಿತಿ ಸೂಚಿಸಬಹುದಾದ ತಿದ್ದುಪಡಿಗಳನ್ನು ತತ್ವದ ಆಧಾರದ ಮೇಲೆ ಒಪ್ಪಿದರೆ ವಿಧೇಯಕದಲ್ಲಿ ಸೂಚಿಸಿದಂತೆ– ಹಿಡುವಳಿ ಸಂಚಯನ ಹಾಗೂ ವಿಸ್ತೀರ್ಣತೆ– ಇವುಗಳ ಪದ್ಧತಿಗೆ ಅಂಟಿಕೊಳ್ಳದಿದ್ದರೆ ಈ ವಿಧೇಯಕದ ಪ್ರಥಮ ವಾಚನವನ್ನು ಅನುಮೋದಿಸಲು ನನ್ನ ವಿರೋಧವೇನೂ ಇಲ್ಲ.

## ೨೮

# *ಚಿಕ್ಕ ಹಿಡುವಳಿದಾರರ ಪರಿಹಾರ ಮಸೂದೆ: ೨

(ಮತಭೇದದ ಟಿಪ್ಪಣಿ)
ಮುಂಬೈ ರಾಜ್ಯಪಾಲರ ಕೌನ್ಸಿಲ್ಲಿನ ಕಾರ್ಯದರ್ಶಿ
ಮುಂಬೈ ರಾಜ್ಯಪಾಲರ ವಿಧಾನ ಪರಿಷತ್ತು ಕಚೇರಿ
ಕಾರ್ಯದರ್ಶಿ, ವಿಧಾನ ಪರಿಷತ್ತು, ಇವರಿಂದ
ಕೌನ್ಸಿಲ್ ಹಾಲ್, ಪುಣೆ, ೧೦ ಜುಲೈ ೧೯೨೮.

ನಂ. ೮೯೪– ೧೯೨೮ರ ಜೂನ್ ೨೦ನೇ ದಿನಾಂಕದ ಮುಂಬೈ ಸರಕಾರದ ಗೆಜೆಟ್ಟು ವಿಭಾಗ V, ೩೪–೪೯ನೇ ಪುಟಗಳಲ್ಲಿ ಪ್ರಕಟವಾದ, ೧೯೨೭ರ ವಿಧೇಯಕ ನಂ.XVI (ಕೃಷಿ ಭೂಮಿಯಲ್ಲಿ ಅತಿಶಯವಾದ ಉಪ–ವಿಭಾಗಗಳನ್ನು ಮಾಡುವುದನ್ನು ತಡೆಹಿಡಿಯಲು ಹಾಗೂ ಇಂಥ ಭೂಮಿಯ ಸಂಚಯನಕ್ಕೆ ಉತ್ತೇಜನ ಕೊಡಲು ಇರುವ ಕಾನೂನು) ಇದರ ಬಗ್ಗೆ ಆಯ್ಕೆ ಸಮಿತಿಯವರು ಕೊಟ್ಟ ವರದಿಯಲ್ಲಿಯ ಅಡಿಟಿಪ್ಪಣಿ ಉಲ್ಲೇಖವನ್ನು ಕುರಿತು– ಕೆಳಗೆ ಕಾಣಿಸಿದಂತೆ ಮತಭೇದದ ಟಿಪ್ಪಣಿಯನ್ನಿತ್ತು ಡಾ. ಬಿ. ಆರ್. ಅಂಬೇಡ್ಕರ್ ಎಮ್.ಎಲ್.ಸಿ. ಅವರು ಆಯ್ಕೆ ಸಮಿತಿ ವರದಿಗೆ ಸಹಿ ಹಾಕಿದ್ದಾರೆಂದು ಅಧಿಸೂಚಿಸಲಾಗಿದೆ.

(ಡಾ. ಬಿ. ಆರ್. ಅಂಬೇಡ್ಕರ್ ಎಂ.ಎಲ್.ಸಿ. ಅವರ ಮತಭೇದದ ಟಿಪ್ಪಣಿ)

೧. ಈ ವಿಧೇಯಕದಲ್ಲಿಯ ಮೊದಲ ಭಾಗದ ಆರಂಭದಲ್ಲಿ ಲಾಭದಾಯಕ ಸಾಗುವಳಿಗಾಗಿ ಈಗ ನಮಗಿರುವುದಕ್ಕಿಂತ ದೊಡ್ಡ ಕೃಷಿ ಕ್ಷೇತ್ರಗಳು ಹೆಚ್ಚು ಅವಶ್ಯವಿದೆ ಎಂದಿದೆ; ಈ ಭಾವನೆಯು ಸರಿಯಾದುದೆಂದು ನನಗೇನೂ ಅನಿಸುವುದಿಲ್ಲ. ಆದರೆ ಅದು ಸರಿಯಾಗಿದೆಯೆಂದು ಗ್ರಹಿಸಿದ್ದ ವಿಧೇಯಕದ ಈ ಭಾಗಕ್ಕೆ ಯಾರಾದರೂ ಒಪ್ಪಿಗೆ ಕೊಡುವ ಮೊದಲು ವಿಚಾರಿಸಿ ತಿಳಿದುಕೊಳ್ಳಬೇಕಾದ ಪ್ರಶ್ನೆ: "ಗಂಭೀರವಾದ ವಿರೋಧ ಬರದಂತಹ ರೀತಿಯಲ್ಲಿ, ಈಗಿರುವ ಚಿಕ್ಕ ಕೃಷಿಕ್ಷೇತ್ರಗಳನ್ನು ದೊಡ್ಡ ಕೃಷಿಕ್ಷೇತ್ರಗಳನ್ನಾಗಿ ಪುನಾರಚಿಸುವ ಸಮಸ್ಯೆಯನ್ನು ಈ ವಿಧೇಯಕ ಪರಿಹರಿಸುತ್ತದೆಯೇ?"

೨. ಒಮ್ಮೆ ಗೊತ್ತಾದ ಪ್ರಮಾಣಿತ ಘಟಕವನ್ನು ಉಳಿಸಿಕೊಂಡು ಬರಲು ವಿಧೇಯಕದಲ್ಲಿಯ ಸಂಯೋಜನೆ ಎರಡು ಬಗೆಯದಾಗಿದೆ. ಮೊದಲನೆಯದಾಗಿ, ಪ್ರಮಾಣಿತ ಘಟಕಕ್ಕಿಂತ ಕಡಿಮೆ ಕೃಷಿ ಕ್ಷೇತ್ರವಿದ್ದ ಮಾಲಕರನ್ನು ಅದು ಶಿಕ್ಷಿಸುತ್ತದೆ; ಇದರಿಂದ ಚಿಕ್ಕ ಕೃಷಿಕ್ಷೇತ್ರ ಲಾಭದಾಯಕ ಆಗುವುದರ ಬದಲು ಹೆಚ್ಚು ಅವರಿಗೆ ಭಾರವೇ ಆಗುತ್ತದೆ. ಎರಡನೆಯದಾಗಿ

---

*ಮುಂಬೈ ಸರಕಾರದ ಗೆಜೆಟ್ಟು, ಭಾಗ V,
ಪುಟಗಳು ೬೪–೬೫, ದಿನಾಂಕ ೧೨ ಜುಲೈ ೧೯೨೮.

ಇನ್ನು ಮುಂದೆ ಚಿಕ್ಕ ಕೃಷಿಕ್ಷೇತ್ರಗಳ ಅಸ್ತಿತ್ವ ಇರುವುದೇ ಇಲ್ಲವೆಂದು ಹೇಳಿದುದರಿಂದ, ವಿಧೇಯಕವು ಚಿಕ್ಕ ಕೃಷಿಕ್ಷೇತ್ರಗಳ ಒಡೆತನವನ್ನು ನಿಷೇಧಿಸುತ್ತದೆ. ಇದಕ್ಕೆ ಉದಾಹರಣೆಯೆಂದು ಆಸ್ತಿ ವಿಭಜನೆಯ ಮೇಲೆ ನಿರ್ಬಂಧಗಳನ್ನು ಹೇರುವುದು ಇವುಗಳಿಂದಾಗಿ ವಿಧೇಯಕದಲ್ಲಿ ಸ್ವೀಕೃತವಾದ ಸಂಯೋಜನೆಯಲ್ಲಿ ಜನರ ಒಡೆತನದ ಹಕ್ಕುಗಳು ಗಂಡಾಂತರ ಪರಿಸ್ಥಿತಿಯಲ್ಲಿವೆ.

೩. ಮೂರು ಕಾರಣಗಳಿಗಾಗಿ ನಾನು ಈ ಸಂಯೋಜನೆಯನ್ನು ವಿರೋಧಿಸುತ್ತೇನೆ. ಮೊದಲನೆಯದಾಗಿ ಅದು ಆಸ್ತಿಯ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತದೆ. ಜಮೀನುಗಳದ್ದು ರಾಜ್ಯದ ಒಡೆತನ, ರಾಜ್ಯದ ಆಡಳಿತದ್ದಾಗುತ್ತದೆ ಎಂಬ ವ್ಯವಸ್ಥೆಯಿದ್ದರೆ, ಆಸ್ತಿಯ ಹಕ್ಕುಗಳ ಮೇಲಿನ ಆಕ್ರಮಣ ಇಷ್ಟು ಆತಂಕಕಾರಿಯಾಗುತ್ತಿರಲಿಲ್ಲ. ಆದರೆ ಈ ವ್ಯವಸ್ಥೆ ಹೇಗಿದೆ ಎಂದರೆ– ಇನ್ನುಳಿದವರನ್ನು ಹತ್ತಿಕ್ಕಿ ಕೆಲವು ಭೂ ಒಡೆಯರು ಅಭಿವೃದ್ಧಿ ಹೊಂದುತ್ತಾರೆ. ವಿಧೇಯಕದಲ್ಲಿ ಸ್ವೀಕೃತವಾದ ಸಂಯೋಜನೆಯ ಪರಿಣಾಮವಾಗಿ, ಭೂ ಒಡೆಯರಾಗಿದ್ದ ಹಲವು ಕೃಷಿಕರು ಭೂರಹಿತ ಕೂಲಿಕಾರರಾಗುವರು ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಹೀಗೆ ಎಷ್ಟು ಜನ ಭೂಮಿಯನ್ನು ಕಳೆದುಕೊಂಡು ಕೂಲಿಕಾರರಾಗುತ್ತಾರೆ ಎಂಬುದು ಊಹಿಸಲೂ ಕಷ್ಟವಾಗುತ್ತದೆ. ಪ್ರಮಾಣಿತ ಕೃಷಿಕ್ಷೇತ್ರ ಎಷ್ಟು ದೊಡ್ಡದು ಎಂಬುದರ ಮೇಲೆಯೇ ಎಲ್ಲವೂ ಅವಲಂಬಿಸಿರುವುದು. ಈಗಿರುವಂತೆ ಅಂದಾಜು ಮಾಡಿದ ಪ್ರಮಾಣಿತ ಘಟಕವಿದ್ದಾಗ ಎಷ್ಟು ಜನರಿಗೆ ಪರಿಣಾಮವಾಗುತ್ತಿತ್ತೋ ಅದಕ್ಕೂ ಮಿಗಿಲಾಗಿ ಪ್ರಮಾಣಿತ ಘಟಕ ಈಗಿದ್ದುದಕಿಂತಲೂ ಹೆಚ್ಚಾದರೆ ಬಹಳ ಜನರ ಮೇಲೆ ಅದು ಪರಿಣಾಮ ಮಾಡುತ್ತದೆ. ಮುಂದೆ ಸಂಭವಿಸುವ ಭೂಮಾಲೀಕತ್ವವನ್ನು ಕಳೆದುಕೊಳ್ಳುವ ಜನರ ಪ್ರಮಾಣ ಸಧ್ಯಕ್ಕೆ ನಮಗೆ ಕಾಣಬರುವುದಿಲ್ಲ. ಪ್ರಮಾಣ ಘಟಕದ ಬಗ್ಗೆ ವ್ಯಾಖ್ಯೆ ಸಿದ್ಧವಾದ ಮೇಲಷ್ಟೇ ಅದು ತಿಳಿಯುವುದು. ಆದರೆ ಬಹಳಷ್ಟು ಬೇಸಾಯಗಾರರು ಚಿಕ್ಕ ಕೃಷಿಕ್ಷೇತ್ರಗಳ ಒಡೆಯರು ಇರುವುದರಿಂದ ಎಲ್ಲರಿಗೂ ಸಾಮಾನ್ಯವಾಗಿ ಹೆದರಿಕೆ ಇದೆ. ವಿಧೇಯಕದ ಬಗ್ಗೆ ವಿರೋಧವು ಮುಖ್ಯವಾಗಿ ಈ ಹೆದರಿಕೆಯಿಂದಲೇ ಉತ್ಪನ್ನವಾದುದು; ವಿರೋಧವು ನಿರಾಧಾರವಾದುದು ಎಂದು ನಾನು ಹೇಳಲು ಸಿದ್ಧನಿಲ್ಲ. ಸಮಾಜದ ಆರ್ಥಿಕ ತಳಹದಿಯ ಮೇಲೆ ಬರುತ್ತಿರುವ ಇಂಥ ಕ್ರಾಂತಿಕಾರಕ ಬದಲಾವಣೆಯ ಭರವಸೆಯನ್ನು ಸಮಚಿತ್ತ ದೃಷ್ಟಿಯಿಂದ ನೋಡಲಾರೆ.

೪. ಈ ವಿಧೇಯಕದ ನಿಷ್ಫಲತೆ ಹಾಗೂ ಅದು ಪರಿಸ್ಥಿತಿಯನ್ನು ಯಥಾಸ್ಥಿತಿ ಮುಂದುವರೆಸುತ್ತದೆ ಎಂಬುದು ನನ್ನ ಎರಡನೆಯ ಆಕ್ಷೇಪಣೆ. ಚಿಕ್ಕ ಕೃಷಿಕ್ಷೇತ್ರಗಳ ನೆರೆಹೊರೆಯ ಒಡೆಯರಿಗೆ ಕ್ರಯಾಧಿಕಾರದ ಮೊದಲ ಹಕ್ಕನ್ನು ಕೊಡಲಾಗಿದೆ; ಇದರ ಉದ್ದೇಶವು ಚಿಕ್ಕ ಕೃಷಿಕ್ಷೇತ್ರಗಳ ಹೊಂದಾಣಿಕೆಯ ಜೋಡಣೆ ಬೇಗ ಆಗುವುದು ಎಂಬುದಾಗಿದೆ. ಆದರೆ ಭೂ ಮಾಲೀಕರು ಮಾರಾಟ ಮಾಡಲು ಇಚ್ಛಿಸಿದಾಗ ಹಾಗೂ ನೆರೆಹೊರೆಯವರು ಭೂ ಮಾಲಿಕನ ಕರಾರುಗಳನ್ನು ಸ್ವೀಕರಿಸಲು ಸಿದ್ಧವಾದಾಗ ಮಾತ್ರ ಕ್ರಯಾಧಿಕಾರದ ಮೊದಲ ಹಕ್ಕು ಚಲಾವಣೆಯಲ್ಲಿ ಬರುತ್ತದೆ. ಬಹುಶಃ ಕ್ರಯಾಧಿಕಾರದಪ್ರಸಂಗವೇ ಬರಲಿಕ್ಕಿಲ್ಲ; ಏಕೆಂದರೆ ಚಿಕ್ಕ ಕೃಷಿಕ್ಷೇತ್ರದ (ನಾನು ಹಳೆಯ ತುಂಡು ಭೂಮಿ ಉಲ್ಲೇಖಿಸುತ್ತಿರುವೆ) ಮಾಲಿಕನು ಹಿಡುವಳಿದಾರನಾಗಿಯೇ ಉಳಿಯಬಹುದಾಗಿದೆ. ಇನ್ನೂ ಮೊದಲ ಕ್ರಯಾಧಿಕಾರದ ಪ್ರಸಂಗ ಬರಬಹುದಾದರೆ, ನೆರೆಹೊರೆಯವರು ಭೂ ಮಾಲಿಕನ ಕರಾರುಗಳನ್ನು ಒಪ್ಪಿಕೊಳ್ಳದಿರುವ ಕಾರಣ ವ್ಯವಹಾರ

ಬಿದ್ದುಹೋಗಬಹುದಾಗಿದೆ. ಹೇಗೇ ಆದರೂ, ಬಹುಬೇಗನೆ ಚಿಕ್ಕ ಕೃಷಿಕ್ಷೇತ್ರಗಳನ್ನು ಒಂದುಗೂಡಿಸಬೇಕೆಂಬ ಇಚ್ಛೆಯಿದ್ದರೂ ಸಹ, ಈಗಿರುವ ಚಿಕ್ಕ ಕೃಷಿಕ್ಷೇತ್ರಗಳು ನಿರಂತರವಾಗಿ ಉಳಿಯುವುವು.

೫. ಇದೆಲ್ಲದಕ್ಕೂ ಬೇರೆಯಾಗಿ ವಿಧೇಯಕದ ಭಾಗ–Iರ ಸಂಯೋಜನೆಯು ವಿಧೇಯಕದ ದೃಷ್ಟಿಯ ಉದ್ದೇಶವನ್ನೇ ಮೀರಿ ಹೋಗಿದೆ. ವಿಧೇಯಕದ ಉದ್ದೇಶವು ಸಧ್ಯ ಇರುವ ಸ್ಥಿತಿಯ ಬದಲಾಗಿ, ದೊಡ್ಡ ಹಿಡುವಳಿಯ ಕೃಷಿಕ್ಷೇತ್ರಗಳ ರಚನೆಯಾಗಬೇಕೆಂಬುದಾಗಿದೆ. ಬೇರೆ ಬೇರೆ ಮಾಲಿಕರ ಒಡೆತನದ ಸಾಗುವಳಿಗಾಗಿ ಇರುವ ಚಿಕ್ಕ ಕೃಷಿಕ್ಷೇತ್ರಗಳನ್ನು ಒಂದುಗೂಡಿಸಿ, ಅಷ್ಟಕ್ಕೇನೆ ನಾವು ನಿಲ್ಲಬೇಕೆಂದು ನನಗೆ ಈಗ ಅನ್ನಿಸುತ್ತದೆ; ಒಬ್ಬ ವ್ಯಕ್ತಿಯ ಒಡೆತನದ ಕೆಳಗೆ ಅವುಗಳನ್ನು ತರಲು ನಾವು ಪ್ರಯತ್ನಿಸಕೂಡದು; ಜೊತೆಗೂಡಿ ಮಾಡಬೇಕಾದ ಸಾಗುವಳಿಗೆ ಒಬ್ಬರೇ ಮಾಲಿಕನು ಇರುವುದು ಅವಶ್ಯವಾಗಿದೆಯೆಂದು ಸಿದ್ಧವಾದಾಗ ಮಾತ್ರ ನಾವು ಹಾಗೆ ಮಾಡಬಹುದು. ಪ್ರಮಾಣಿತ ವ್ಯಾಪ್ತಿಯ ಸಹಕಾರದ ಕೃಷಿಕ್ಷೇತ್ರಗಳನ್ನು ಸ್ಥಾಪಿಸಿದರೆ ಅವು ಈ ವಿಧೇಯಕದಲ್ಲಿರುವ ನಮ್ಮ ಎಲ್ಲಾ ಬೇಡಿಕೆಗಳನ್ನು ಪೂರೈಸುವವು ಮತ್ತು ಚಿಕ್ಕ ಕೃಷಿಕ್ಷೇತ್ರದ ಬೇಸಾಯಗಾರರ ವಿನಾಶವನ್ನು ನಿಲ್ಲಿಸುವವು. ಈ ಯೋಜನೆಯ ಅಡಿಯಲ್ಲಿ ಬೇಸಾಯಗಾರನ ಒಡೆತನವು ಭದ್ರವಾಗಿ ಉಳಿಯುವುದು; ಹೊಂದಾಣಿಕೆಯ ಕೃಷಿಕ್ಷೇತ್ರ ಅಥವಾ ಕೃಷಿಕ್ಷೇತ್ರಗಳ ಜೊತೆಗೆ ಕೂಡಿಕೊಳ್ಳಲು ಒಪ್ಪಿದರೆ ಮಾತ್ರ ಸಾಗುವಳಿ ಮಾಡಲು ಅವನಿಗೆ ಸ್ವಾತಂತ್ರ್ಯವಿರುವುದು, ಇಲ್ಲವಾದರೆ ಇಲ್ಲ; ಹೀಗೆ ಮಾಡುವುದರಿಂದ ಕೃಷಿಕ್ಷೇತ್ರದ ಘಟಕವು ಪ್ರಮಾಣಿತ ಘಟಕದಷ್ಟು ಅಥವಾ ಒಟ್ಟಾರೆಯಾಗಿ ಅದಕ್ಕಿಂತ ಹೆಚ್ಚಾಗಿರುತ್ತದೆ. ಒಟ್ಟಾರೆ ಕೃಷಿಕ್ಷೇತ್ರದಲ್ಲಿ ಇಂಥದೊಂದು ಒಪ್ಪಂದವು ರೂಢಿಯಲ್ಲಿ ಬಂದರೆ, ಅದು ವಿಭಜನೆ ಹಾಗೂ ವರ್ಗಾವಣೆಗಳ ಮೇಲೆ ವಿಧೇಯಕವು ಹೇರಬೇಕೆಂದಿರುವ ನಿರ್ಬಂಧಗಳ ಆವಶ್ಯಕತೆಯನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡುವುದು. ಏಕೆಂದರೆ ತುಂಡು ಭೂಮಿಯನ್ನು ಪಡೆದವನಿಗೆ ಸಹಕಾರದ ಕೃಷಿ ಕ್ಷೇತ್ರದಲ್ಲಿ ಸಾಗಿದ ಸಾಗುವಳಿಯ ವ್ಯವಸ್ಥೆಯನ್ನು ಭಂಗಗೊಳಿಸಲು ಶಕ್ಯವಾಗುವುದಿಲ್ಲ. ಒಪ್ಪಂದದ ಕಾರಣದಿಂದ ಹಸ್ತಾಂತರವಾಗಿ ಬಂದವನು ಸಾಮೂಹಿಕವಾಗಿಯೇ ಕೃಷಿ ಕ್ಷೇತ್ರವನ್ನು ಸಾಗುವಳಿ ಮಾಡಬೇಕಾಗಿರುವುದು. ಇದರಿಂದ ಕೃಷಿಕ್ಷೇತ್ರವು ಷೇರುದಾರರನ್ನುಳ್ಳ ಕಂಪನಿಯ ರೀತಿ ನಡೆಯುತ್ತದೆ. ಷೇರುದಾರರು ಬದಲಾದರೂ ಸಹ ಕಂಪನಿಯು ಮಾತ್ರ ಹಾಗೆಯೇ ನಡೆಯುತ್ತದೆ. ಯೋಜನೆಯ ಕಾರ್ಯರೂಪಕ್ಕೆ ತರುವಲ್ಲಿ ಸರಳವಾಗಿದೆ ಹಾಗೂ ಅದು ಈಗಿನ ವಿಧೇಯಕದಲ್ಲಿಯ ಕೆಡಕುಗಳನ್ನು ನಿವಾರಿಸುತ್ತದೆ.

೬. ಇಂಥದೊಂದು ಯೋಜನೆಗೆ ವಿರೋಧ ಏಕೆ ಬರಬೇಕೆಂಬುದು ನನಗೆ ಗೊತ್ತಾಗುವುದಿಲ್ಲ. ನಿಜವಾಗಿಯೂ ಇಂಥ ಪದ್ಧತಿಯು ಯುರೋಪಿನ ಬಹಳ ರಾಷ್ಟ್ರಗಳಲ್ಲಿ ವಿಶೇಷವಾಗಿ ಇಟಲಿಯಲ್ಲಿ ಕಾರ್ಯಗತವಾಗಿದೆ. ನಾನು ರೂಪುರೇಷೆ ಹಾಕಿಕೊಟ್ಟ ನನ್ನ ಯೋಜನೆಯ ಆಧಾರವನ್ನು ಅಷ್ಟು ಬಹುದೂರದ ದೇಶಗಳಲ್ಲಿ ಹುಡುಕುವುದೂ ಅನಾವಶ್ಯಕ. ನನ್ನ ಈ ಯೋಜನೆಯನ್ನು ವಿಧೇಯಕದಲ್ಲಿ ಸ್ವಲ್ಪಮಟ್ಟಿಗೆ ಅಂಗೀಕರಿಸಲಾಗಿದೆ. ಮೂಲ ವಿಧೇಯಕದ ಅನುಚ್ಛೇದ ೧೯ನ್ನು ಉಲ್ಲೇಖಿಸುವೆ; ಇದು ಆಯ್ಕೆ ಸಮಿತಿಯು ತಿದ್ದುಪಡಿ ಮಾಡಿದ ವಿಧೇಯಕದ ಅನುಚ್ಛೇದ ೨೧ಕ್ಕೆ ಅನುರೂಪವಾಗುತ್ತದೆ. ಇದನ್ನು ನೋಡಿದರೆ ಅದರಲ್ಲಿ

ಮತ್ತೊಂದು ಕೃಷಿಕ್ಷೇತ್ರದ ಜೊತೆಗೆ ಹೊಂದಾಣಿಕೆಯಾಗದ ಹೊರತು ತುಂಡು ಭೂಮಿಯನ್ನು ಸಾಗುವಳಿ ಮಾಡಲು ಬರುವುದಿಲ್ಲವೆಂದು ತಿಳಿಸಲಾಗಿದೆ. ನಾನು ಮೇಲೆ ಸೂಚಿಸಿದ ಸಹಕಾರಿ ಯೋಜನೆಯೂ ಇದೇ. ನನಗೂ ಹಾಗೂ ಆಯ್ಕೆ ಸಮಿತಿಗೂ ಇರುವ ಒಂದೇ ಒಂದು ಅಂತರವೆಂದರೆ ಅದು ಹೊಸ ತುಂಡುಭೂಮಿಗೆ ಸಹಕಾರಿ ಯೋಜನೆಯನ್ನು ಪರಿಮಿತಿಗೊಳಿಸುತ್ತದೆ. ಆದರೆ ನಾನು ಅದನ್ನು ಎಲ್ಲಾ ತುಂಡುಭೂಮಿಗಳಿಗೂ ಅನ್ವಯಿಸಬೇಕೆಂದು ಸೂಚಿಸುತ್ತೇನೆ. ನಾವು ನೀವೂ ವಿಚಾರಿಸುವುದಾದರೆ ನನ್ನದು ಸರಿಯಿದೆಯೆಂದು ಹೇಳುವೆ. ನಾನು ಹೀಗೆ ಹೇಳುವಾಗ, ಯೋಜನೆಯು ಕೆಲವರಿಗೆ ತೃಪ್ತಿಕರವಾಗಿದ್ದರೂ, ಮತ್ತೆ ಕೆಲವರಿಗೆ ಅಸಮಾಧಾನಕ್ಕೆ ಹೇಗೆ ಕಾರಣವಾಗಿದೆ ಎಂಬುದನ್ನು ಸಮರ್ಥಿಸುವುದು ಆಯ್ಕೆ ಸಮಿತಿಗೆ ಬಿಟ್ಟುಕೊಟ್ಟದ್ದು. ಹಳೆ ಮತ್ತು ಹೊಸ ತುಂಡುಭೂಮಿಗಳ ಮಧ್ಯೆ ಇರುವ ಅಂತರವನ್ನು ಸಮರ್ಥಿಸುವ ಅಂಶಗಳಾವುವೂ ನನಗೆ ಕಾಣದು.

೭. ಮೇಲೆ ಹೇಳಿರುವ ಕಾರಣಗಳಿಂದ, ವಿಧೇಯಕದ ಉದ್ದೇಶಗಳು ಹಾಗೂ ಗುರಿಗಳ ಬಗ್ಗೆ ನನ್ನದೇನೂ ವಿರೋಧವಿರದಿದ್ದರೂ, ಭಾಗ Iನ್ನು ಮಾತ್ರ ನಾನು ಅನುಮೋದಿಸಲಾರೆ. ಭಾಗ–IIರ ಬಗ್ಗೆ ಹೇಳಬೇಕಾದರೆ, ಅದು ಈಗ ಪೂರ್ಣವಾಗಿ ಸಂಚಯನಕ್ಕೆ ಮಾತ್ರ ಸಂಬಂಧಿಸಿರುವುದರಿಂದ ಅದಕ್ಕೆ ನನ್ನ ಯಾವ ವಿರೋಧವೂ ಇಲ್ಲ. ಏನಾದರೂ ನನ್ನ ಯೋಜನೆಯ ಪ್ರಕಾರ ಸಂಚಯನದ ಬಗ್ಗೆ ಪ್ರತ್ಯೇಕ ನಿಬಂಧನೆ ಅನವಶ್ಯಕವೆಂದು ನಾನು ಹೇಳಬಹುದು. ಹಾಗೆ ಮಾಡಿದ್ದರೆ ಸಹಕಾರಿ ಕೃಷಿಕ್ಷೇತ್ರ ದೊಡ್ಡದೂ ಆಗಿರುತ್ತಿತ್ತು ಮತ್ತು ಹಿಡುವಳಿಯೂ ಸಂಚಯನವಾಗುತ್ತಿತ್ತು.

# ೨೯

# *ಚಿಕ್ಕ ಹಿಡುವಳಿದಾರರ ಪರಿಹಾರ ಮಸೂದೆ: ೩

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೆ, ನಿಯಮ ೧೯ ತಿಳಿದುಕೊಳ್ಳ ಬೇಕಾದರೆ ಸ್ವಲ್ಪ ತೊಂದರೆಯಾಗುತ್ತಿದೆ; ಆದ್ದರಿಂದ ತಮಗೊಂದು ಪ್ರಶ್ನೆ ಕೇಳುತ್ತೇನೆ. ನಿರ್ದಿಷ್ಟ ವಾದ ಒಂದು ತಿದ್ದುಪಡಿ ಅಥವಾ ನಿರ್ದಿಷ್ಟವಾದ ಒಂದು ವಿಧೇಯಕ ತರಬೇಕಾದರೆ ಮೊದಲೇ ಒಪ್ಪಿಗೆ ಪಡೆದಿರಬೇಕೇ, ಬೇಡವೇ ಎಂಬುದನ್ನು ನಿರ್ಣಯಿಸುವುದು ಸಭಾಪತಿಗಳಿಗೇ ಸಂಬಂಧಿಸಿದವೆಂಬುದು ನಿಃಸಂಶಯವೆಂದು ಮೊದಲೇ ಹೇಳುವೆ. ಅನುಚ್ಛೇದ (೨)ರಲ್ಲಿ ಹೀಗೆ ತಿಳಿಸಲಾಗಿದೆ. ಸಭಾಪತಿಗಳ ಅಭಿಪ್ರಾಯದಲ್ಲಿ ಪೂರ್ವ ಸಮ್ಮತಿ ಅವಶ್ಯವಿರುವ ವಿಷಯವಿದೆಯೆಂದು ತೋರಿದರೆ ಆಗ ಸಭಾಪತಿಗಳು "ಸೂಚನಾಪತ್ರ ತಲುಪಿದ ಕೂಡಲೇ ಸಾಧ್ಯವಿದ್ದಷ್ಟು ಬೇಗನೆ ವಿಧೇಯಕವನ್ನು ಅಥವಾ ತಿದ್ದುಪಡಿಯನ್ನು ರಾಜ್ಯಪಾಲರ ಗಮನಕ್ಕೆ ತರಬೇಕು ಹಾಗೂ ರಾಜ್ಯಪಾಲರಿಂದ ಪೂರ್ವಸಮ್ಮತಿ ದಯಪಾಲಿಸಲಾಗಿದೆ ಎಂಬ ಸೂಚನೆಯು ಸಭಾಪತಿಗಳಿಗೆ ಬರದ ಹೊರತು ಆ ಸೂಚನಾಪತ್ರವನ್ನು ಕಾರ್ಯಕ್ರಮದ ಯಾದಿಯಲ್ಲಿ ಸೇರಿಸಲಾಗದು." ಅನುಚ್ಛೇದ (೩)ದಲ್ಲಿ ಉದ್ದೇಶಪೂರ್ವಕವಾಗಿ ಹೇಳಿದುದು ಹೀಗಿದೆ:

> "ಪೂರ್ವಸಮ್ಮತಿಯಿಲ್ಲದೆ ವಿಧೇಯಕ ಅಥವಾ ತಿದ್ದುಪಡಿಯೊಂದನ್ನು ಪರಿಚಯಿಸಲು ಅಥವಾ ಮಂಡಿಸಲು ಬರುವುದೋ ಅಥವಾ ಇಲ್ಲವೋ ಎಂಬ ಪ್ರಶ್ನೆ ವಿಧೇಯಕ ಅಥವಾ ತಿದ್ದುಪಡಿಯ ಬಗ್ಗೆ ಇರುವಾಗ, ಆಗ ಆ ಸಮಸ್ಯೆಯನ್ನು ಅವಶ್ಯವೆನಿಸಿದಾಗ ಪೂರ್ವ ಸಮ್ಮತಿಯನ್ನು ಕೊಡುವ ಅಧಿಕಾರಿಗಳಿಗೆ ಒಪ್ಪಿಸಬೇಕು; ಆ ಅಧಿಕಾರಿಗಳ ನಿರ್ಣಯವೇ ಅಂತಿಮವಾದುದು."

ಅನುಚ್ಛೇದ (೨)ರಿಂದ ಉದ್ಭವಿಸುವ ವಿಚಾರ ಮಾಡಬೇಕಾದ ಸಮಸ್ಯೆ ಸಭಾಪತಿಗಳು ಹಾಗೂ ತಿದ್ದುಪಡಿ ಅಥವಾ ವಿಧೇಯಕದ ಬಗ್ಗೆ ಸೂಚನಾಪತ್ರ ನೀಡಿದವರು ಇವರಿಬ್ಬರ ನಡುವೆ ಇದೆ. ತಿದ್ದುಪಡಿ ಅಥವಾ ವಿಧೇಯಕದ ಬಗ್ಗೆ ಸೂಚನಾಪತ್ರ ನೀಡಿದವರಿಗೆ ಪೂರ್ವಸಮ್ಮತಿ ಬೇಕು ಎಂದು ಅನಿಸದಿದ್ದರೆ, ನಂತರ ಅನುಚ್ಛೇದ (೩)ರ ಪ್ರಕಾರ ಅವರಿಗೆ ಆ ವಿಷಯವನ್ನು ಅಂತಿಮ ಅಧಿಕಾರಿ ಎಂದರೆ ರಾಜ್ಯಪಾಲ, ಅವರ ಕಡೆಗೆ ಒಯ್ಯಲು ಹಕ್ಕು ಇರುತ್ತದೆ. ಆದ್ದರಿಂದ ನಾನು ಸ್ಪಷ್ಟವಾಗಿ ಹೇಳುವೆ, ನಾನು ನನ್ನ ಯಾವ ತಿದ್ದುಪಡಿಯನ್ನು ಮಂಡಿಸಿಲ್ಲ. ಅದರಿಂದ ನನಗೆ ನೇರವಾಗಿ ಸಂಬಂಧವೂ ಇರುವುದಿಲ್ಲ– ಈ ವಿಷಯವು ಬಹಳ ಮಹತ್ವದ್ದಾದುದರಿಂದ ತಾವು ತಪ್ಪು ಭಾವಿಸದಿದ್ದರೆ, ಈ ಸದನದಲ್ಲಿಯೇ ಇದು ಚರ್ಚೆಯಾಗ ಬೇಕೆಂದು ನನಗೆ ತೋರುತ್ತದೆ. ಭಾರತ ಸರಕಾರದ ಕಾನೂನಿನ ಪ್ರಕಾರ ನಮ್ಮ ಹಕ್ಕುಗಳು ಬಹಳ

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೨, ಪುಟಗಳು ೬೧೭–೧೯
ದಿನಾಂಕ ೨೪ ಜನವರಿ ೧೯೩೮

ನಿರ್ಬಂಧಿಸಲ್ಪಟ್ಟಿವೆ; ನಮಗೆ ಅವಶ್ಯಕ ಅಧಿಕಾರವನ್ನು ಕೊಡುವ ಕೆಲವು ಕಲಮುಗಳಿದ್ದು ಅವುಗಳ ಲಾಭ ನಮಗೆ ದೊರಕದಿರುವಾಗ, ಮಹತ್ವದ ಶಾಸನ ರಚನೆ ಮಾಡುವ ವಿಷಯದಲ್ಲಿಯ ನಮ್ಮ ಅಲ್ಪ ಪ್ರಯತ್ನಕ್ಕೆ ಈ ಸದನದಲ್ಲಿ ನಮಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ನಿಯಮ ೧೯ರ ಪ್ರಕಾರ ಸಭಾಪತಿಗಳೇ ಅಂತಿಮ ಅಧಿಕಾರಿಗಳು ಹಾಗೂ ಪೂರ್ವಸಮ್ಮತಿ ಕೊಡದ ಅಧಿಕಾರವಿರುವ ಅಧಿಕಾರಿಗಳಿಗೆ ಮನವಿ ಕೊಳ್ಳುವ ಹಕ್ಕು ಇಲ್ಲ ಎಂಬುದು ತಮ್ಮ ಅಭಿಪ್ರಾಯವೋ ಹೇಗೆ ಎಂಬುದನ್ನು ನಾನು ತಿಳಿದುಕೊಳ್ಳ ಬಯಸುವೆ.

ತಾವು ಪರವಾನಗಿ ಕೊಟ್ಟರೆ, ನನ್ನ ವಿದ್ವಾಂಸ ಮಿತ್ರರ ಪರವಾನಗಿಯನ್ನು ಕೇಳಿಕೊಂಡು ವಿಧೇಯಕದ ಬಗ್ಗೆಯೇ ನಾನು ಭಾರತ ಸರ್ಕಾರದ ಕಾನೂನಿನ ಕಲಮು ೨೯, ಉಪ ಕಲಮು (೩) ಇದನ್ನು ಉಲ್ಲೇಖಿಸುವೆ. ಈ ವಿಧೇಯಕವನ್ನು ನಾನು ತಿಳಿದುಕೊಂಡಂತೆ, ಅದು ತಾಂತ್ರಿಕವಾಗಿ ಒಂದು ಉಪಾಯದ ದಾರಿಯನ್ನು ತೋರಿಸುತ್ತದೆಯೆಂದು ಹೇಳಬಹುದು.

ಮಾನ್ಯ ಸಭಾಪತಿಗಳು: ಇಲ್ಲಿ ಎರಡು ವಿಷಯಗಳನ್ನು ಸ್ಪಷ್ಟವಾಗಿ ನೆನಪಿನಲ್ಲಿಡೋಣ. ಒಂದು ವಿಷಯ ಮಾನ್ಯ ಸದಸ್ಯ ಶ್ರೀ ಪರೂಳೆಕರ ಕೇಳಿದುದು ಆಗಿದೆ; ಅವರದು ನಿಯಮ ೧೯ರ ಅರ್ಥ ವಿವರಣೆಗೆ ಸಂಬಂಧಪಟ್ಟುದು; ಒಬ್ಬ ಸದಸ್ಯ ಹಾಗೂ ಸಭಾಪತಿ ಇವರಿಬ್ಬರ ನಡುವೆ ಸಮಸ್ಯೆಯಿದ್ದಾಗ, ಸಭಾಪತಿಗಳದೇ ಅಂತಿಮ ಅಧಿಕಾರವೋ ಹೇಗೆ ಎಂಬುದು ಅವರದಾಗಿದೆ. ಇದು ಒಂದು ವಿಷಯ. ನಿಯಮ ೧೯ ಇದರ ಅರ್ಥ ವಿವರಣೆ ಏನಿದೆ ಎಂಬುದನ್ನು ನಾನು ಹೇಳಿದ್ದೇನೆ. ಇನ್ನು ಮಾನ್ಯ ಸದಸ್ಯ ಶ್ರೀ ಪರೂಳೆಕರ ಅವರು ಸೂಚಿಸಿದ ನಿರ್ದಿಷ್ಟ ತಿದ್ದುಪಡಿಗೆ ಕಲಮು ೨೯(೩) ಇದರ ಪ್ರಕಾರ ಅನುಮತಿ ಅವಶ್ಯವಿದೆಯೋ ಇಲ್ಲವೋ ಎಂಬ ಈ ಪ್ರಶ್ನೆ ಸ್ವತಂತ್ರವಾದುದು. ಅವರ ತಿದ್ದುಪಡಿಯ ಪ್ರಶ್ನೆಯನ್ನು ಕುರಿತು ಈ ಸದನದಲ್ಲಿ ಯಾವ ಚರ್ಚೆಯನ್ನು ಕೈಗೆತ್ತಕೊಳ್ಳಲು ನಾನು ಉದ್ದೇಶಿಸಿಲ್ಲ ಎಂಬುದನ್ನು ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿಸಿರುವೆನು. ಅದರ ಬಗ್ಗೆ ನಾನೊಂದು ನಿರ್ಣಯಕ್ಕೂ ಬಂದಿರುವೆ. ಮಾನ್ಯ ಸದಸ್ಯರು ನಿಯಮ ೧೯ರ ಉಪ ನಿಯಮ (೩) ಇದರ ಅರ್ಥ ವಿವರಣೆಯ ಬಗ್ಗೆ ವಾದಿಸಲು ಮುಂದಾದರೆ ಅದನ್ನು ಕೇಳಲು ಸಿದ್ಧನಿರುವೆ.

ಡಾ. ಬಿ. ಆರ್. ಅಂಬೇಡ್ಕರ್: ಭಾರತ ಸರಕಾರ ಕಾನೂನಿನ ಕಲಮು ೨೯ರ ಉಪ ಕಲಮು (೩) ಇದರ ವ್ಯಾಪ್ತಿಯಲ್ಲಿ ವಿಧೇಯಕವು ಬರುವುದಿಲ್ಲವೆಂಬುದನ್ನು ನನಗೆ ತೋರಿಸಲು ಅನುಮತಿ ಕೊಡ ದಿದ್ದರೆ, ಕಾನೂನು ೧೯(೩)ರ ಅರ್ಥವಿವರಣೆಯ ಬಗ್ಗೆ ನಾನು ವಾದಿಸುವುದು ವ್ಯರ್ಥವಾಗುತ್ತದೆ. ತನ್ನ ತಿದ್ದುಪಡಿಯು ತಿರಸ್ಕರಿಸಲ್ಪಟ್ಟಾಗ ಸಂಬಂಧಿಸಿದ ಸದಸ್ಯನಿಗೆ ನಿಯಮ ೧೯(೩)ರ ಪ್ರಕಾರ ರಾಜ್ಯಪಾಲರಿಗೆ ಮನವಿ ಮಾಡಿಕೊಳ್ಳಲು ಹಕ್ಕು ಇದೆಯೆಂಬುದನ್ನು ನಾನು ತಮಗೆ ಮನದಟ್ಟು ಮಾಡಿಕೊಟ್ಟರೆ, ಆಮೇಲೆ ಕಲಮು ೨೯(೩)ನ್ನು ವಿಚಾರಿಸಬೇಕಾಗುವುದೆಂಬುದು ನನ್ನ ಅನಿಸಿಕೆ. ಇಂತಹ ತೊಂದರೆಗಳನ್ನು ನಿವಾರಿಸಲೆಂದೇ ನಿಯಮ ೨೯ರ ಉಪ ನಿಯಮ (೩)ರ ಬಗ್ಗೆ ಚರ್ಚಿಸಲು ಅನುಮತಿ ನೀಡದಿದ್ದರೆ ನಾವು ವಾದಮಾಡುವುದೂ ನಿರುಪಯೋಗಿ ಆಗುತ್ತದೆ. ಭಾರತ ಸರಕಾರದ ಕಾನೂನು ಕಲಮು ೨೯ರ ಉಪ ಕಲಮು (೩) ಇದನ್ನು ಓದಿದಾಗ, ಸಂಬಂಧಪಟ್ಟ ಸದಸ್ಯನು ಅಂತಿಮ ಒಪ್ಪಿಗೆ ಪಡೆಯುವ ವರೆಗೂ ವಿಧೇಯಕವನ್ನು ಮುಂದೂಡಬೇಕಾಗುತ್ತದೆಂದು ನನಗೆ ತೋರುತ್ತದೆ; ಇದರಿಂದ ಈ ವಿಧೇಯಕದ ಮಹತ್ವವಾದ ಅಂಶಗಳನ್ನು ಚರ್ಚಿಸಲೂ ಆ ಸದಸ್ಯನನ್ನು ಹೊರಗಿಡಲಾಗುವುದು. ಅಖಂಡ ಸಮಸ್ಯೆಯನ್ನೇ ಇದರಿಂದ ಕೈಬಿಟ್ಟಂತಾಗುತ್ತದೆ. ನನಗೊಂದು ಅವಕಾಶವನ್ನು ಕೊಟ್ಟರೆ, ಈ ಸಮಸ್ಯೆಯಲ್ಲಿ

ತಲೆಹಾಕಿ ನಾನು ಹೇಗೆ ವಿಚಾರಿಸಿರುವೆನೆಂಬುದನ್ನು ವಿವರಿಸುವೆ. ಈ ವಿಧೇಯಕವಾಗಲಿ, ನನ್ನ ಮಾನ್ಯ ಮಿತ್ರ ಶ್ರೀ ಪರೂಳೆಕರ ಅಥವಾ ನನ್ನ ಪಕ್ಷದ ಸದಸ್ಯರು ಮಂಡಿಸಿದ ತಿದ್ದುಪಡಿಯಾಗಲಿ ಇವು ಯಾವುವೂ ಕಲಮು ೨೯೮ರ ಉಪ ಕಲಮು (೩) ಇದರ ಪರಂತುಕದಲ್ಲಿ ಬರುವುದಿಲ್ಲ. ಎರಡು ನಿಮಿಷಗಳಲ್ಲಿ ಮಾತನಾಡಿ ತೋರಿಸುವೆ.

ಮಾನ್ಯ ಸಭಾಪತಿ: ವೈಯಕ್ತಿಕವಾಗಿ ಬಂದ ತಿದ್ದುಪಡಿಗಳ ಸಂಬಂಧ ನಾನು ಈಗಾಗಲೇ ಒಂದು ರೀತಿಯಲ್ಲಿ ನಿರ್ಣಯ ಕೊಟ್ಟಿರುವೆ. ಈಗ ಯಾವುದೇ ನಿರ್ದಿಷ್ಟ ತಿದ್ದುಪಡಿಯನ್ನಾಗಲಿ ಅಥವಾ ಅದರ ಬಗ್ಗೆ ನಾನು ಕೊಟ್ಟ ನಿರ್ಣಯವನ್ನಾಗಲಿ ಉಲ್ಲೇಖಿಸದೆ ಮಾನ್ಯ ಸದಸ್ಯರು ಸಂಪೂರ್ಣ ವಿಧೇಯಕವು ಕಲಮು ೨೯೮ರ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಹೇಳಬಯಸಿದರೆ, ಅದೊಂದು ಬೇರೆಯೇ ಪ್ರಶ್ನೆ ಆಗುತ್ತದೆ; ಹಾಗಿದ್ದರೆ ಆ ಪ್ರಶ್ನೆಯ ಬಗ್ಗೆ ಅವರು ಮಾತನಾಡುವುದನ್ನು ಕೇಳಲು ಸಿದ್ಧನಿರುವೆ.

ಡಾ. ಬಿ. ಆರ್. ಅಂಬೇಡ್ಕರ್ ಮಾನ್ಯರೆ, ತಮಗೆ ನಾನು ಉಪಕೃತ.

ಮಾನ್ಯರೆ, ಈ ಮೊದಲು ನಾನು ಹೇಳಿದಂತೆಯೆ, ಈ ವಿಧೇಯಕವು ಕೇವಲ ನಿವಾರಣೋಪಾಯ ಕ್ರಮವೆಂದು ಕರೆಯಬಹುದಾದ ವಿಧೇಯಕವಾಗಿದೆ. ನ್ಯಾಯಾಲಯದಿಂದ ಒಬ್ಬರು ಡಿಕ್ರಿಯನ್ನು ಪಡೆಯಬಹುದು. ಆ ಡಿಕ್ರಿಯ ಅರ್ಥವೆಂದರೆ– ಮತ್ತೊಬ್ಬ ವ್ಯಕ್ತಿಯ ವಿರುದ್ಧ ಆತ ಕೆಲವೊಂದು ಅಧಿಕಾರ ಪಡೆದಿದ್ದಾನೆ ಎಂದಾಗುವುದು. ಒಬ್ಬ ಸಾಲಗಾರನ ವಿರುದ್ಧವಾದ ಅಥವಾ ಬೇರೆ ಯಾವುದೇ ವ್ಯಕ್ತಿಯ ವಿರುದ್ಧವಾಗಿ ಒಬ್ಬನು ಡಿಕ್ರಿಯ ಫಲವಾಗಿ ಹಲವಾರು ಹಕ್ಕುಗಳನ್ನು ಪಡೆದಿರಬಹುದಾದರೂ, ಅವನು ಒಂದು ದಿನಾಂಕದ ಅಂದರೆ ೩೧ ಮಾರ್ಚ್ ೧೯೩೯ವರೆಗೆ ಆ ಹಕ್ಕುಗಳನ್ನು ಚಲಾಯಿಸಲಾರನು ಎಂಬುದನ್ನು ಮಾತ್ರ ಈ ವಿಧೇಯಕ ತಿಳಿಸುತ್ತದೆ. ವಿಧೇಯಕದ ಸಾರಾಂಶ ಹೀಗಿದೆಯೆಂದು ನಾನು ತಿಳಿದಿರುವೆ. ಆದ್ದರಿಂದ ಈ ಕ್ರಮವು ಹಕ್ಕುಗಳನ್ನು ಚಲಾಯಿಸುವುದರ ಸಂಬಂಧವಾಗಿದೆ; ಹಕ್ಕುಗಳನ್ನು ತೊಡೆದುಹಾಕುವಿಕೆ ಅಥವಾ ಮಾರ್ಪಾಟು ಮಾಡುವಿಕೆಗೆ ಇದು ಯಾವ ರೀತಿಯಿಂದಲೂ ಸಂಬಂಧ ಪಟ್ಟಿಲ್ಲ. ಇದು ನನ್ನ ಮೊದಲನೆಯ ವಿನಮ್ರ ಹೇಳಿಕೆ. ಒಬ್ಬನು ದೊರಕಿಸಿಕೊಂಡ ಹಕ್ಕುಗಳನ್ನು ತೊಡೆದುಹಾಕುವುದು ಅಥವಾ ಮಾರ್ಪಾಡು ಮಾಡುವುದು ಹಾಗೂ ತನ್ನ ಹಕ್ಕುಗಳ ಚಲಾವಣೆಯನ್ನು ಮುಂದೂಡುವುದು ಅಥವಾ ಅಮಾನತ್ತಿನಲ್ಲಿಡುವುದು ಇವುಗಳ ಮಧ್ಯೆ ನಾನು ವ್ಯತ್ಯಾಸ ಮಾಡುತ್ತೇನೆ.

ಎರಡನೆಯದಾಗಿ, ಕಲಮು ೨೯೮ರ ಉಪ ಕಲಮು (೩) ಭೂ ಒಡೆತನದ ಹಕ್ಕುಗಳನ್ನು ತೊಡೆದುಹಾಕುವಿಕೆ ಅಥವಾ ಮಾರ್ಪಾಡು ಮಾಡುವಿಕೆ ಇಷ್ಟಕ್ಕೇ ಸೀಮಿತವಾಗಿದೆ. ಭೂಮಿಯ ಸಲುವಾಗಿ ಹಕ್ಕುಗಳನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಮಾತ್ರ ಈ ಕ್ರಮವು ಇದೀಗ ಸೀಮಿತಗೊಂಡಿಲ್ಲ; ಆದರೆ ಸಾಲಕ್ಕೂ ಮತ್ತು ಬಾಡಿಗೆ ರೈತರನ್ನು ಒಕ್ಕಲೆಬ್ಬಿಸುವುದಕ್ಕೂ ಈ ಕ್ರಮವು ವಿಸ್ತರಿಸಲ್ಪಟ್ಟಿದೆ.

ನಾನು ತೋರಿಸಬೇಕೆಂದಿರುವ ಅಂತರವು ಹೀಗಿದೆ: ಒಂದು ಹಕ್ಕಿನ ಚಲಾವಣೆಯನ್ನು ಅಮಾನತ್ತಾಗಿಡುವುದು, ಅದೇ ಹಕ್ಕನ್ನು ತೊಡೆದುಹಾಕುವಿಕೆ ಅಥವಾ ಮಾರ್ಪಾಡುಮಾಡುವಿಕೆ ಇದರಿಂದ ಬಹಳಷ್ಟು ಭಿನ್ನವಾಗಿದೆ. ನ್ಯಾಯಾಲಯಗಳು ತೀರ್ಪು ಕೊಟ್ಟ ಡಿಕ್ರಿಗಳ ಮುಖಾಂತರ ಪಕ್ಷಗಳು ಪಡೆಯಬಹುದಾದ ಹಕ್ಕುಗಳನ್ನು ಅಮಾನತ್ತಿನಲ್ಲಿಡುವುದು ಮಾತ್ರ ವಿಧೇಯಕದ ಉದ್ದೇಶವಾಗಿರು

ವುದರಿಂದ, ಭೂಮಿಯ ಮೇಲಿನ ಹಕ್ಕುಗಳನ್ನು ತೊಡೆದುಹಾಕಲು ಅಥವಾ ಮಾರ್ಪಾಡು ಮಾಡುವುದು ಇವರ ಉದ್ದೇಶವಲ್ಲ. ಹೀಗಿರುವುದರಿಂದ ಭೂಮಿಯ ಮೇಲಿನ ಹಕ್ಕುಗಳನ್ನು ತೊಡೆದುಹಾಕುವುದನ್ನಾಗಲಿ ಅಥವಾ ಮಾರ್ಪಾಡು ಮಾಡುವುದನ್ನಾಗಲಿ ಮಾಡದಿರುವುದರಿಂದ ಈ ವಿಧೇಯಕವಾಗಲಿ ಮತ್ತು ತಿದ್ದುಪಡಿಗಳಾಗಲಿ ಕಲಮು ೨೯೯(೩)ರ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ವಿನಮ್ರವಾಗಿ ಹೇಳ ಬಯಸುವೆ.

* * *

* ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ರಾಜ್ಯಪಾಲರು ತಮ್ಮ ಕಡೆಗೆ ಕಳುಹಿಸಿದಂತಹ ತಿದ್ದುಪಡಿಗಳಿಗೆ ಅನುಮತಿಯನ್ನು ದಯಪಾಲಿಸಿದರೆ, ತಾವು ವಿಧೇಯಕದ ಚರ್ಚೆಯನ್ನು ಮುಂದೂಡಬಹುದೇ? ವಿಧೇಯಕದ ವಿಷಯದಲ್ಲಿ ಮಾಡಿದಂತೆ, ಮಾನ್ಯ ರಾಜ್ಯಪಾಲರು ತಿದ್ದುಪಡಿಗಳಿಗೂ ಸಮ್ಮತಿ ದಯಪಾಲಿಸಬಹುದಾಗಿದೆ. ಹಾಗಾದರೆ ಮುಂದೇನಾಗುವುದು?

ಮಾನ್ಯ ಸಭಾಪತಿಗಳು: ನನಗೆ ಸಂತೋಷಕರವಾದುದು; ಮಂಡಿಸಲ್ಪಟ್ಟ ಪ್ರತಿಯೊಂದು ತಿದ್ದುಪಡಿಗೂ ಈ ಸದನದಲ್ಲಿ ಚರ್ಚೆ ಮಾಡಲು ನಾನು ಸಂಪೂರ್ಣ ಅವಕಾಶ ಕೊಡುವೆ; ಅನುಮತಿಯಿಲ್ಲವೆಂದು ಯಾವ ತಿದ್ದುಪಡಿಯನ್ನೂ ಹಾಗೆಯೇ ಬಿಡುವುದಿಲ್ಲ. ಸದಸ್ಯರ ಎದುರಿಗೆ ಈ ವಿಧೇಯಕ ಸಾಕಷ್ಟು ಸಮಯವಿದ್ದರೂ, ಈ ದಿನ ಸುಮಾರು ೧೨ ಅಥವಾ ೧ ಗಂಟೆಗೆ ಸದಸ್ಯರು ತಿದ್ದುಪಡಿಗಳನ್ನು ನನ್ನ ಕಡೆಗೆ ಕಳಿಸಿದಾಗ ನಾನು ಕಠಿಣ ಕ್ರಮವನ್ನು ಅನುಭವಿಸಬೇಕಾದುದನ್ನು ಅದಕ್ಕಾಗಿಯೇ ಉಲ್ಲೇಖಿಸಿದೆ. ಈ ತೊಂದರೆ ನನಗೆ ಅನುಭವವಾಗುತ್ತಿದೆ. ತಿದ್ದುಪಡಿಗಳನ್ನು ಶಕ್ಯವಿದ್ದಷ್ಟೂ ಬೇಗ ಕೊಡಬೇಕೆಂದು ನಾನು ಹೇಳಿದುದಕ್ಕೆ ಇದೇ ಕಾರಣ. ಈ ದಿನ ಮೂವರು ಮಾನ್ಯ ಸದಸ್ಯರು ತಿದ್ದುಪಡಿಗಳನ್ನು ಕಳಿಸಿಕೊಟ್ಟಿದ್ದಾರೆ. ಅವೆಲ್ಲವುಗಳನ್ನು ಪರಾಮರ್ಶಿಸಿ ನೋಡುವುದು ಹಾಗೂ ಅವುಗಳಲ್ಲಿ ಅನುಮತಿ ಯಾವುದಕ್ಕೆ ನೀಡಬೇಕಾಗುತ್ತದೆ ಎಂಬುದನ್ನು ನಿರ್ಣಯಿಸುವುದು ಕಠಿಣವಾಗಿರುತ್ತದೆ. ಅಭಿಪ್ರಾಯದಲ್ಲಿ ಪ್ರಾಮಾಣಿಕ ಮತ ಭೇದಗಳಾಗಲೂ ಅವಕಾಶವಿರುವುದು. ಇದೀಗ ನನ್ನ ಕಡೆಗೆ ಬಂದಿರುವ ಎಲ್ಲಾ ತಿದ್ದುಪಡಿಗಳ ಬಗ್ಗೆ, ಸೂಚನಾಪತ್ರ ಬಿಟ್ಟುಬಿಡಲು ಸಾಧ್ಯವೋ ಎಂಬುದು ನನಗಿನ್ನೂ ಗೊತ್ತಿಲ್ಲ. ಆದರೆ ಹಿಂದಿನ ತಿದ್ದುಪಡಿಗಳ ಬಗ್ಗೆ ಹೇಳುವುದಾದರೆ ಅವುಗಳನ್ನು ಮಂಡಿಸಲು ಸದಸ್ಯರಿಗೆ ಅವಕಾಶ ಸಿಕ್ಕೇ ಸಿಗುವಂತೆ ನಾನು ನಿಶ್ಚಿತವಾಗಿಯೂ ಪ್ರಯತ್ನಿಸುವೆ.

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ–೨, ಪುಟ ೬೨೧
ದಿನಾಂಕ ೨೪ ಜನವರಿ ೧೯೩೮.

## ೩೦

# *ಮುಂಬೈ ಪೊಲೀಸ್ ಕಾಯ್ದೆ ತಿದ್ದುಪಡಿ ಮಸೂದೆ: ೧

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೆ, ನಮ್ಮೆದುರು ತಂದಿದ್ದ ವಿಧೇಯಕಕ್ಕೆ ನಾನು ಕೆಳಗೆ ಕಾಣಿಸದಂತೆ ತಿದ್ದುಪಡಿ ಮಂಡಿಸಲು ಇಚ್ಛಿಸುವೆ.

(೨ಬಿ) ಕಲಮಿನ ನಂತರ ಕೆಳಗೆ ತೋರಿಸಿದಂತೆ ಸೇರಿಸಬೇಕು:–

"(೨ಸಿ) (i) ಬೇರೆ ಬೇರೆ ಸಮುದಾಯಗಳನ್ನು ಅಥವಾ ಅವರ ಪಂಗಡಗಳಲ್ಲಿ ಅಥವಾ ಜನರ ಗುಂಪುಗಳಲ್ಲಿ ಅಥವಾ ಪಕ್ಷಗಳಲ್ಲಿ ಉದ್ಭವಿಸುವ ದೊಂಬಿಯ ಫಲವಾಗಿ ಮುಂಬೈ ನಗರದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಸಾರ್ವಜನಿಕರ ಶಾಂತಿ ಅಥವಾ ನೆಮ್ಮದಿ ಭಂಗವಾಗುತ್ತದೆಂದು ಖಾತ್ರಿ ಯಾಗಿದ್ದರೆ, ರಾಜ್ಯ ಸರಕಾರವು ಸರಕಾರಿ ಗೆಜೆಟ್ಟಿನಲ್ಲಿ ತುರ್ತು ಪರಿಸ್ಥಿತಿ ಜಾರಿ ಮಾಡಲಾಗಿದೆ ಎಂಬ ಪ್ರಕಟಣೆಯನ್ನು (ಇನ್ನು ಮುಂದೆ ಇದನ್ನು "ತುರ್ತು ಪರಿಸ್ಥಿತಿ ಪ್ರಕಟಣೆ" ಎಂದು ಉಲ್ಲೇಖಿಸಲಾಗಿದೆ) ಘೋಷಿಸಬಹುದು.

(ii) ತುರ್ತು ಪರಿಸ್ಥಿತಿ ಪ್ರಕಟಣೆ–

(ಅ) ತರುವಾಯದ ಪ್ರಕಟಣೆಯಿಂದ ಯಾವುದೇ ಸಮಯದಲ್ಲಿ ಈ ಪತ್ರಿಕೆಯನ್ನು ರದ್ದು ಮಾಡಬಹುದು.

(ಬ) ಒಂದು ತಿಂಗಳ ಅವಧಿಯೊಳಗಾಗಿ ಅದನ್ನು ನವೀಕರಿಸದಿದ್ದರೆ, ಒಂದು ತಿಂಗಳ ಅವಧಿಯ ನಂತರ ಅದರ ಕಾರ್ಯಾಚರಣೆ ರದ್ದಾಗುವುದು.

(iii) ಪರಿಚ್ಛೇದ (೧) ಇದರ ಪ್ರಕಾರ ರಾಜ್ಯ ಸರಕಾರ ತುರ್ತು ಪರಿಸ್ಥಿತಿ ಪ್ರಕಟಣೆಯನ್ನು ಹೊರಡಿಸಿದ ನಂತರ, ಪೊಲೀಸ್ ಕಮೀಷನರಿಗೆ ಮುಂಬೈ ನಗರದಲ್ಲಿಯ ಯಾವುದೇ ವ್ಯಕ್ತಿಯ ಉಪಸ್ಥಿತಿ, ಚಲನವಲನ ಅಥವಾ ಕೃತಿ ಅಪಾಯಕ್ಕೆ ಅಥವಾ ಭಯಕ್ಕೆ ಕಾರಣವಾಗಿದೆ ಅಥವಾ ಕಾರಣವಾಗುತ್ತಿದೆ ಅಥವಾ ಕಾರಣವಾಗುವುದೆಂದು ತೋರುತ್ತಿದೆ ಎಂದೆನಿಸಿದರೆ, ಅಥವಾ ಶಾಂತಿ ಅಥವಾ ಸಾರ್ವಜನಿಕ ನೆಮ್ಮದಿ ಕದಡುವಂತೆ ತೋರುವ ಸಂಚು ಒಬ್ಬ ವ್ಯಕ್ತಿ ಮಾಡುತ್ತಿದ್ದಾನೆಂಬ ಸಕಾರಣ ಸಂಶಯ ಬಂದರೆ, ಆಗ ಪೊಲೀಸ್ ಕಮೀಷನರು ಡಂಗುರ ಹೊಡೆಸಿ ಅಥವಾ ತನಗೆ ಯೋಗ್ಯವೆಂದು ಎನಿಸಿದ ಬೇರೆ ರೀತಿಯನ್ನು ಅನುಸರಿಸಿ, ಆ ವ್ಯಕ್ತಿಯು ಶಾಂತಿಯ ಕದಡುವುದನ್ನು ನಿಲ್ಲಿಸಲು ಅವಶ್ಯವಾಗುವಂತೆ ಅವನನ್ನು ತಾನು ಗೊತ್ತುಪಡಿಸಿದ ಯಾವುದೇ ಸ್ಥಳಕ್ಕೆ ಅಥವಾ ಸ್ಥಳಗಳಿಗೆ, ಯಾವುದೇ ಮಾರ್ಗ ಅಥವಾ ಮಾರ್ಗಗಳಿಂದ ನಿಗದಿಪಡಿಸಿದ ವೇಳೆಯೊಳಗಾಗಿ ಹೊರಗೆ ಹೋಗುವಂತೆ ನಿರ್ದೇಶಿಸಬಹುದು.

---

* ಮುಂಬೈ ಸರಕಾರದ ಗೆಜೆಟ್ಟು, ಭಾಗ V,
ಪುಟಗಳು ೬೪–೬೫, ದಿನಾಂಕ ೧೨ ಜುಲೈ ೧೯೨೮.

(iv) ಪರಿಚ್ಛೇದ (iii)ರಂತೆ ಮನವಿಗೆ ಹೊರತಾದಂತೆ, ಪೊಲೀಸ್ ಕಮೀಷನರ ಆಜ್ಞೆಯಿಂದ ನೊಂದ ವ್ಯಕ್ತಿಯು ಈ ಆಜ್ಞೆಯು ಹೊರಟ ಹತ್ತು ದಿನಗಳಲ್ಲಿ ರಾಜ್ಯ ಸರಕಾರಕ್ಕೆ ಮನವಿ ಮಾಡಬಹುದು.

(v) ಪರಿಚ್ಛೇದ (iv)ರಂತೆ ಮನವಿಗೆ ಒಳಪಟ್ಟು, ಪೊಲೀಸ್ ಮನವಿಗೆ ಪರಿಚ್ಛೇದ (iii)ರಂತೆ ಹೊರಡಿಸಿದ ಆಜ್ಞೆಯು ಅಂತಿಮವಾದದ್ದು.

(vi) ಈ ಕಲಮಿನಲ್ಲಿ ಈಗಾಗಲೇ ಒಳಗೊಂಡಿರುವಂತೆ ಯಾವುದೇ ಪೊಲೀಸ್ ಅಧಿಕಾರಿಗೆ, ಪರಿಚ್ಛೇದ (iii)ರ ಪ್ರಕಾರ ಆಜ್ಞೆ ಮಾಡಿದ ವ್ಯಕ್ತಿಗಾಗಲಿ ಅಥವಾ ನ್ಯಾಯಾಲಯಕ್ಕಾಗಲಿ ವ್ಯಕ್ತಿಯ ಸಮಾಚಾರವನ್ನು ಅಥವಾ ಹೋಲಿಕೆ ಇಲ್ಲವೆ ಸಮಾಚಾರ ನೀಡಿದವನ ಹೆಸರು ಬಯಲಾಗಬಹುದು ಎಂಬ ಅಭಿಪ್ರಾಯ ಪೊಲೀಸ್ ಕಮೀಷನರನದು ಇದ್ದಾಗ ಅಂಥ ಸುದ್ದಿಯನ್ನು ಬಹಿರಂಗಪಡಿಸುವ ಅವಶ್ಯವಿರುವುದಿಲ್ಲ.

(vii)ಪರಿಚ್ಛೇದ (iii)ರ ಪ್ರಕಾರ ಪೊಲೀಸ್ ಕಮೀಷನರನು ಅಥವಾ ಪರಿಚ್ಛೇದ (iv)ರ ಪ್ರಕಾರ ರಾಜ್ಯ ಸರಕಾರವು ವಿಧಿಸಿದ ಆಜ್ಞೆಯು ತುರ್ತು ಪರಿಸ್ಥಿತಿಯ ಕಾರ್ಯಾಚರಣೆಯನ್ನು ನಿಲ್ಲಿಸಲಾಗಿದೆ ಎಂದು ಪ್ರಕಟಿಸಿದ ಕೂಡಲೇ ತುರ್ತುಪರಿಸ್ಥಿತಿಯು ನಿಷ್ಕ್ರಿಯವಾಗುವುದು.

ಉಪ ಪರಿಚ್ಛೇದ (೨)ರ ತರುವಾಯ ಕೆಳಗಿನ ಉಪ ಪರಿಚ್ಛೇದವನ್ನು ಜೋಡಿಸಲಾಗುವುದು:

(೩) ಉಪ ಕಲಮು (೩) ಇದರಲ್ಲಿ ಪದಗಳು, ಅವರಣಗಳು, ಅಂಕಿ ಹಾಗೂ ಅಕ್ಷರ "ಅಥವಾ ೨ಅ" ಇವುಗಳ ಬದಲಾಗಿ ಕೆಳಗಿನಂತೆ ಇರುವುದು–

(೨ಅ) ಅಥವಾ (೨ಕ)"

ಪ್ರಶ್ನೆ ಕೇಳುವುದು.

* * *

* ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ಸೂಚಿಸಿದ ತಿದ್ದುಪಡಿಯ ಬಗ್ಗೆ ಮಾತನಾಡುವ ಮೊದಲು, ಈ ತಿದ್ದುಪಡಿಯ ಅವಶ್ಯಕತೆಯು ಏನಿದೆ ಎಂಬುದನ್ನು ಸದನಕ್ಕೆ ತೋರಿಸಿಕೊಡುವುದು ಒಳ್ಳೆಯದು ಎಂಬುದು ನನ್ನ ವಿಚಾರ. ಮಾನ್ಯ ಗೃಹಮಂತ್ರಿಗಳು ಈ ವಿಧೇಯಕವನ್ನು ಮಂಡಿಸುವಾಗ ಸಮುದಾಯದ ಬಲಹೀನ ವರ್ಗದವರನ್ನು ಕ್ರೂರವಾಗಿ ನಡೆಸಿಕೊಳ್ಳುವ ಹಾಗೂ ಅವರಿಗೆ ಉಪದ್ರವ ಕೊಡುವ ಹಲವಾರು ಅನಪೇಕ್ಷಿತ ವ್ಯಕ್ತಿಗಳಿದ್ದು ಅವರಿಗೆ ಮುಂಬೈ ನಗರ ಹಾಗೂ ಅದರ ನಾಗರಿಕರು ಶಿಕಾರಿಯಾಗಿರುವರು, ಬಲಿಯಾಗುತ್ತಿರುವರು ಮತ್ತು ಸಮುದಾಯದ ಬಲಹೀನ ವರ್ಗದವರಿಗೆ ನ್ಯಾಯಾಲಯಕ್ಕೆ ಹೋಗಿ, ಇಂಥ ಅಪಾಯಕಾರಕ ಜನರ ವಿಷಯದಲ್ಲಿ ಅಪರಾಧ ನಿರ್ಣಯ ಮಾಡಿಸಬೇಕು ಮತ್ತು ಅವರಿಗೆ ಶಿಕ್ಷೆಯನ್ನು ಕೊಡಿಸಬೇಕು ಎಂಬ ನಿರ್ಧಾರವಾಗಲಿ, ಇಚ್ಛೆಯಾಗಲಿ ಇರುವುದಿಲ್ಲ ಎಂದು ಹೇಳಿರುವರು; ಆದ್ದರಿಂದ ಮಾನ್ಯ ಮಂತ್ರಿಗಳು, ಈ ಅಪಾಯಕಾರಕ ಜನರಿಂದ ಉಪದ್ರವಕ್ಕೆ ಒಳಗಾಗುವ ಜನರ ಹಿತಕ್ಕಾಗಿಯೇ ಪೊಲೀಸ್ ಕಮೀಶನರಿಗೆ ಹೆಚ್ಚು ರಕ್ಷಣೆ ಕೊಡಬೇಕೆಂಬ

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ–೩, ಪುಟ ೨೪೩೦–೩೩, ದಿನಾಂಕ ೨೭ ಏಪ್ರಿಲ್ ೧೯೩೮.

ವಿಚಾರದವರಾಗಿದ್ದಾರೆ; ಇದರಿಂದ ಪೊಲೀಸ್ ಕಮೀಶಷರ್ ಆ ವ್ಯಕ್ತಿಯ ವಿರುದ್ಧ ಕಾರ್ಯ ಕೈಗೊಳ್ಳುವನು. ಮಾನ್ಯರೆ, ಅವರ ಹೇಳಿಕೆಗೆ ನನ್ನ ಸಂಪೂರ್ಣ ಒಪ್ಪಿಗೆಯಿದೆ ಹಾಗೂ ಅವರು ಉಲ್ಲೇಖಿಸಿದ ಅಪಾಯವೂ ನಿಜವಾದುದಾಗಿದೆ.

ಸದನವು ನನಗೆ ಹೀಗೆ ಹೇಳಲು ಪರವಾನಗಿ ಕೊಡುವುದಾದರೆ, ಮಾನ್ಯ ಮಂತ್ರಿಗಳು ಉಲ್ಲೇಖಿಸಿದ ಸಮಾಜಘಾತುಕ ರೀತಿಗಳಿಗೆ ನಾನು ತುಂಬಾ ಪರಿಚಿತನು ಎಂದೂ ತಿಳಿಸಬೇಕಾಗಿದೆ. ಮುಂಬೈ ನಗರದ ಇನ್ನೊಂದು ಲೋಕ– ನಾನದನ್ನು ನರಕಲೋಕ ಎಂದೇ ಕರೆಯುವೆ– ಅದರಲ್ಲಿ ನನ್ನ ಜೀವನದ ಬಹುಭಾಗವನ್ನು ಕಳೆದಿದ್ದೇನೆ. ೧೯೧೧ರಿಂದ ೧೯೩೩ರವರೆಗೆ ಕೆಳಗಿನ ವರ್ಗದವರ ಕೂಡ ನಾನು ವಾಸವಾಗಿದ್ದೇನೆ. ನನಗೆ ಪೊಲೀಸ್ ಕಮೀಷನರ್‌ಗಿಂತಲೂ ಅಥವಾ ಮಾನ್ಯ ಗೃಹಮಂಡಳಿಗಿಂತಲೂ ಇದರ ಬಗ್ಗೆ ನನಗೆ ಹೆಚ್ಚು ಸ್ಪಷ್ಟವಾಗಿ ಗೊತ್ತಿದೆ; ಮವಾಲಿಗಳು, ದಾದಾಗಳು ಎಂದು ಕರೆಯಲ್ಪಡುವ ಈ ಜನರಿಂದ ಈ ಬಡಜನರು ಹೇಗೆ ಉಪದ್ರವಪಡುತ್ತಿದ್ದಾರೆ. ಹೀಗೆ ಬಲಿಯಾದವರಿಗೆ ಪರಿಹಾರ ಕಂಡುಕೊಳ್ಳಲು ಸಂಪೂರ್ಣವಾಗಿ ಅಶಕ್ಯವಿದೆ ಎಂಬುದು ನನಗೆ ಗೊತ್ತಿದೆ; ಮತ್ತು ಮುಂದೆ ತಮಗೆ ಉಪದ್ರವವಾಗಬಾರದೆಂಬ ಭಯದಿಂದ ಅವರು ನ್ಯಾಯಾಲಯಕ್ಕೆ ನ್ಯಾಯ ಪಡೆಯಲು ಹೋಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಈ ವಿಷಯದ ಬಗ್ಗೆ ತೆಗೆದುಕೊಂಡು ಬಂದ ಈ ವಿಧೇಯಕವು ನಿಃಸಂಶಯವಾಗಿ ನ್ಯಾಯಯುತವಾಗಿದೆ. ಆದರೆ, ಈ ನಗರದ ನಿವಾಸಿಗಳಿಗೆ ಮತ್ತೊಂದು ಅಪಾಯವಿದ್ದು, ಅದರ ಬಗ್ಗೆ ವಿಧೇಯಕದಲ್ಲಿ ಯಾವ ಅಂಶವೂ ಇಲ್ಲವೆಂದು ನನಗೆ ಅನಿಸಿದೆ. ಮಾನ್ಯರೆ, ನಾನು ಉಲ್ಲೇಖಿಸಿದ ಈ ಅವಶ್ಯಕತೆಯು ಜಾತೀಯ ಗಲಭೆಗಳಿಂದ ಉದ್ಭವಿಸಿದವು ಆಗಿದೆ. ಮುಂಬೈ ನಗರದಲ್ಲಿ ಸಂಭವಿಸಿದ ಕೆಲವು ಜಾತೀಯ ದಂಗೆಗಳ ಅಂಕಿ ಸಂಖ್ಯೆ ಹೀಗಿವೆ. ೧೮೫೧ರಿಂದ ೧೯೩೮ರವರೆಗೆ ಮುಂಬೈ ನಗರದಲ್ಲಿ ಒಟ್ಟು ೯ ಜಾತೀಯ ದಂಗೆಗಳಾಗಿವೆ. ಮೊದಲನೆಯ ಜಾತೀಯ ದಂಗೆ ೧೭ ಅಕ್ಟೋಬರ್ ೧೮೫೧ರಲ್ಲಿ ಸಂಭವಿಸಿತು. ಅದು ಪಾರ್ಸಿ ಹಾಗೂ ಮುಸ್ಲಿಮರ ನಡುವೆ ಇದ್ದಿತು. ೧೮೭೩ರಲ್ಲಿ ಎರಡನೆಯ ದಂಗೆಯಾಯಿತು. ಅದೂ ಸಹ ಮುಸ್ಲಿಮ ಮತ್ತು ಪಾರ್ಸಿಗಳ ಮಧ್ಯೆ ಉಂಟಾಗಿತ್ತು. ಮೂರನೇ ದಂಗೆ ೧೮೯೩ರಲ್ಲಿ ಸಂಭವಿಸಿತು. ಇದು ಹಿಂದೂ ಹಾಗೂ ಮುಸ್ಲಿಮರ ನಡುವೆ ಇದ್ದಿತು. ನಾಲ್ಕನೆಯದು ಸಂಭವಿಸಿದ್ದು ೧೯೨೯ರಲ್ಲಿ. ಅದೂ ಸಹ ಹಿಂದೂ ಹಾಗೂ ಮುಸ್ಲಿಮರ ಮಧ್ಯೆ. ಐದನೆಯದು ೧೯೩೨ರಲ್ಲಿ. ಆರನೆಯದು ೧೯೩೩ರಲ್ಲಿ, ಏಳನೆಯದು ೧೯೩೮ರಂದು ಸಂಭವಿಸಿದೆ. ಇವೆಲ್ಲ ದಂಗೆಗಳೂ ಹಿಂದೂ ಮತ್ತು ಮುಸ್ಲಿಮರ ನಡುವೆ ಇವೆ. ೧೮೯೩ರ ದಂಗೆಯಲ್ಲಿ ಸತ್ತವರ ಸಂಖ್ಯೆ ೮೦, ಹಾಳಾದ ದೇವಾಲಯಗಳ ಸಂಖ್ಯೆ ೬೦, ನಾಶವಾದ ಮಸೀದಿಗಳ ಸಂಖ್ಯೆ ೭, ನಾಶವಾದ ದರ್ಗಾಗಳ ಸಂಖ್ಯೆ ೨೭, ಉಳಿದವುಗಳ ಬಗ್ಗೆ ನನಗೆ ಅಂಕಿ ಸಂಖ್ಯೆ ಲಭ್ಯವಾಗಿಲ್ಲ. ೧೯೨೯ರ ಗಲಭೆಯಲ್ಲಿ ಕೊಲ್ಲಲ್ಪಟ್ಟವರ ಸಂಖ್ಯೆ ೫೧. ೧೯೩೨ರ ದಂಗೆಯಲ್ಲಿ ೩೦೦ ಜನ ಕೊಲ್ಲಲ್ಪಟ್ಟವರು ಹಾಗೂ ೩೦೦ಕ್ಕಿಂತಲೂ ಹೆಚ್ಚು ಜನ ಗಾಯಗೊಂಡರು. ೧೯೩೬ರಲ್ಲಿ ೬೧ ಜನರು ಕೊಲ್ಲಲ್ಪಟ್ಟರು ಹಾಗೂ ೫೫೦ಕ್ಕಿಂತಲೂ ಹೆಚ್ಚು ಜನರು ಗಾಯಗೊಂಡರು. ೧೯೩೮ರಲ್ಲಿ ನನ್ನ ಹತ್ತಿರ ಸರಿಯಾದ ಅಂಕಿ ಸಂಖ್ಯೆ ಇಲ್ಲ. ೧೨ ಜನರು ಕೊಲ್ಲಲ್ಪಟ್ಟರು ಹಾಗೂ ೧೨೦ಕ್ಕಿಂತಲೂ ಹೆಚ್ಚು ಗಾಯುಗೊಂಡರು. ಎಷ್ಟು ತ್ವರಿತ ಗತಿಯಲ್ಲಿ ಈ ಗಲಭೆಗಳು ಸಂಭವಿಸಿದೆ ಎಂಬುದೂ ಕುತೂಹಲಕಕಾರಿಯಾಗಿದೆ, ಮಹತ್ವದ್ದಾಗಿದೆ; ಸದನವು ಇದನ್ನು ಮನದಟ್ಟು ಮಾಡಿಕೊಳ್ಳಬೇಕು. ಮೊದಲನೆಯ ಗಲಭೆ ೧೮೫೨ರಲ್ಲಿ ಸಂಭವಿಸಿತು; ಎರಡನೆಯ ಗಲಭೆ ಕೇವಲ ೨೩ ವರುಷಗಳ ನಂತರ ಉಂಟಾಗಿದೆ; ಮೂರನೆಯದು ೧೯ ವರುಷಗಳ ನಂತರ ಸಂಭವಿಸಿದೆ. ೩೬ ವರುಷಗಳ ತರುವಾಯ ನಾಲ್ಕನೆಯ

ಗಲಭೆ ಸಂಭವಿಸಿದೆ. ನಾಲ್ಕನೆಯ ಗಲಭೆ ಆದನಂತರ ೩ ವರುಷಗಳಲ್ಲಿ ಐದನೆಯ ಗಲಭೆ ಉಂಟಾಗಿದೆ; ಒಂದೇ ಒಂದು ವರುಷದಲ್ಲಿ ಆರನೆಯ ಗಲಭೆ ಉಂಟಾಗಿದೆ; ಆರನೆಯ ಗಲಭೆಯಾದ ೩ ವರುಷಗಳಲ್ಲಿ ಮತ್ತೆ ಏಳನೆಯ ಗಲಭೆ ಇದೆ; ಏಳನೆಯ ಗಲಭೆಯ ನಂತರ ಒಂದು ವರ್ಷದಲ್ಲಿ ಎಂಟನೆಯ ಗಲಭೆ ಸಂಭವಿಸಿದೆ; ಎಂಟನೆಯದರ ನಂತರ ಇನ್ನೂ ಒಂದು ವರ್ಷ ಆಗುವುದರೊಳಗಾಗಿ ಒಂಬತ್ತನೆಯ ಗಲಭೆ ಸಂಭವಿಸಿದೆ. ಮಾನ್ಯರೆ, ಈಗ ಯಾರಿಗೆ ಈ ಸತ್ಯ ಸಂಗತಿಗಳ ಬಗ್ಗೆ ಎಚ್ಚರಿಕೆಯಿದೆಯೋ, ಯಾರಿಗೆ ಹೊಣೆಗಾರಿಕೆಯಿದೆಯೋ ಅವರು ನಾಗರಿಕತೆಯ ಸತತ ಅಮಾನತ್ತಿಗಾಗಿ, ಇವೆರಡು ಸಮುದಾಯಗಳು ಪ್ರತಿವರುಷ ರಕ್ತಸ್ನಾನದಲ್ಲಿ ತೊಡಗಿರುವುದಕ್ಕಾಗಿ ಏನಾದರೂ ನಿವಾರಣೆ ಹುಡುಕಬೇಕಾಗಿದೆಯೆಂಬುದನ್ನು ಒಪ್ಪಬೇಕು. ಈ ಗಲಭೆಗಳ ಕಾರಣಗಳೇನು ಎಂಬುದರ ಬಗ್ಗೆ ನನ್ನ ಆಸಕ್ತಿಯಿಲ್ಲ; ಅವು ರಾಜಕಾರಣದ್ದೋ, ಧರ್ಮಕ್ಕೆ ಸಂಬಂಧವಿಲ್ಲ. ಯಾವ ಪರಿಣಾಮದ ಚಿಂತೆಯೂ ಇಲ್ಲದೆ ಒಬ್ಬ ಮುಸ್ಲಿಮನು, ಒಬ್ಬ ಹಿಂದೂವನ್ನು ಚೂರಿಯಿಂದ ಇರಿಯುತ್ತಾನೆ; ಒಬ್ಬ ಹಿಂದೂ ಏನೂ ಕಾಳಜಿಯಿಲ್ಲದೆಯೆ ಹೋಗಿ ಒಬ್ಬ ಮುಸ್ಲಿಮನನ್ನು ಇರಿಯುತ್ತಾನೆ. ಇದು ಸಂಪೂರ್ಣ ಸತ್ಯವಾದ ಸಂಗತಿ; ಇಂಥ ವಿಪತ್ತನ್ನು ನಾವೆಂದೂ ಸಹಿಸಲಾರೆವು. ಯಾವುದಾದರೂ ಕ್ರಮ ಕೈಗೊಳ್ಳಬೇಕಾದ ಸಮಯವೊಂದು ಒದಗಿಬಂದಿದೆ ಎಂದು ನಾನು ತಿಳಿದಿರುವೆ; ಈ ಕ್ರಮದಿಂದ ಈ ದೇಶದಲ್ಲಿಯ ಅಧಿಕಾರಿಗಳು ಗಲಭೆಯ ಬೆದರಿಕೆಯನ್ನು ಪರಿಣಾಕಾರಿಯಾಗಿ ಹಾಗೂ ತೀವ್ರವಾಗಿ ನೋಡಿಕೊಳ್ಳಲು ಶಕ್ತರಾಗುವರು.

ತಿದ್ದುಪಡಿಯ ಮಹತ್ವದ ಬಗ್ಗೆ ಹೇಳುವಾಗ, ಮೊದಲನೆಯದಾಗಿ ನಾನು ನನ್ನ ತಿದ್ದುಪಡಿ ಪರಿಚ್ಛೇದ ೩ ಇದರ ಬಗ್ಗೆ ಸದನದ ಗಮನ ಸೆಳೆಯಬಯಸುತ್ತೇನೆ; ಯಾವುದೇ ವ್ಯಕ್ತಿಯ ಉಪಸ್ಥಿತಿ, ಅವನ ಚಲನವಲನ ಅಥವಾ ಅವನ ಕೃತಿಗಳು ಗಲಭೆಗೆ ಹೊಣೆಯಾಗಬಹುದೆಂಬ ರೀತಿಯಲ್ಲಿ ಇವೆಯೆಂದು ನಂಬುವಂತಹ ಕಾರಣಗಳು ಪೊಲೀಸ್ ಕಮೀಷನರಿಗೆ ತೋರಿಬಂದರೆ ಆಗ ಪರಿಚ್ಛೇದ–೩ ಪೊಲೀಸ್ ಕಮೀಶನರನಿಗೆ ಮುಂಬೈ ಪ್ರಾಂತದ ಮಿತಿಯಲ್ಲಿ ಇಂಥ ಯಾವುದೇ ವ್ಯಕ್ತಿಯನ್ನು ಎತ್ತಿಕೊಂಡು ಹೊಗುವ ಅಧಿಕಾರವನ್ನು ಕೊಡುತ್ತದೆ. ವಿಧೇಯಕದ ಮುಖ್ಯ ಉದ್ದೇಶವು ಇದಾಗಿದೆ. ಇದೀಗ, ಈ ವಿಧೇಯಕ ದಲ್ಲಿರುವ ಈ ಪರಿಚ್ಛೇದವು ನಿರ್ದಿಷ್ಟ ವ್ಯಕ್ತಿಯ ಮೇಲೆ ನಿರ್ಬಂಧ ಹೇರುತ್ತಿದೆ ಎಂಬುದನ್ನು ನಾನು ಪೂರ್ಣವಾಗಿ ಒಪ್ಪಿಕೊಳ್ಳುವೆ. ಆದರೆ ಮಾನ್ಯರೆ, ಇದನ್ನು ಹೀಗೂ ಹೀಗೆ ಹೇಳಬಹುದಾಗಿದೆ. ಸಮಾಜದಲ್ಲಿ ಯಾವುದೇ ಅನ್ಯವರ್ಗಕ್ಕೆ ಬೇಕಾಗುವ ಸ್ವಾತಂತ್ರ್ಯಕ್ಕಿಂತಲೂ ಹೆಚ್ಚು ಸ್ವಾತಂತ್ರ್ಯದ ಅವಶ್ಯಕತೆ ನಾನು ಬಂದಿರುವ ವರ್ಗದವರಿಗಿದೆ. ನನ್ನ ವೃತ್ತಿ ನ್ಯಾಯವಾದಿಯದು; ಸ್ವಾತಂತ್ರ್ಯದ ಮಹತ್ವದ ಅರಿವು ನನಗಿದೆ; ಆದರೆ ನಾನು ಸಂಬಂಧಪಟ್ಟ ವರ್ಗದವರ ಆಸಕ್ತಿಗಳಿಂದ ಕೂಡಿರುವ ಹಾಗೂ ವೃತ್ತಿಯಿಂದ ನ್ಯಾಯವಾದಿಯಾಗಿರುವ ನಾನು, ಬಹುಸಂಖ್ಯೆಯ ಜನತೆಯ ಸ್ವಾತಂತ್ರ್ಯವನ್ನು ರಕ್ಷಿಸಲೋಸುಗ ಸಮಾಜಘಾತುಕರ, ಗೂಂಡಾಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಅನಿವಾರ್ಯವೆಂದು ಅಭಿಪ್ರಾಯಪಡುತ್ತೇನೆ. ಇದರ ಬಗ್ಗೆ ನನಗೆ ಅನುಮಾನವೇ ಇಲ್ಲ. ಆದುದರಿಂದ ನನ್ನ ಚಿಂತೆಗೆ ಕಾರಣವಾದ ವಿಷಯಗಳು ಸದನದ ಇತರ ಸದಸ್ಯರಿಗೂ ಚಿಂತೆಗೆ ಕಾರಣವಾಗಿವೆ ಎಂದು ಭಾವಿಸಿದ್ದೇನೆ. ಈಗ ನಾವು ಪೊಲೀಸ್ ಕಮೀಶನರನಿಗೆ ಕೊಡುತ್ತಿರುವ ನಿರಂಕುಶ ಶಕ್ತಿಯನ್ನು ಅವನು ದುರುಪಯೋಗ ಮಾಡಿಕೊಳ್ಳದಂತೆ ನೋಡಿಕೊಳ್ಳಲು ಏನಾದರೂ ರಕ್ಷಣೋಪಾಯಗಳನ್ನು ಮಾಡಿದ್ದೇವೆಯೇ? ಇದೊಂದೇ ಪ್ರಶ್ನೆಯನ್ನು

ನಾವು ನಿವೇದಿಸುತ್ತಿರುವೆ; ಪ್ರಸಂಗದ ಅವಶ್ಯಕತೆಗೆ ಮನ್ನಣೆ ಕೊಡುವ ಈ ಸದನವು ಇದನ್ನು ಆಲೋಚಿಸಬೇಕು.

ಮಾನ್ಯರೆ, ಈ ತಿದ್ದುಪಡಿಯಲ್ಲಿ ರಕ್ಷಣೋಪಾಯಕ್ಕಾಗಿ ಸಾಕಷ್ಟು ಅವಕಾಶಗಳಿವೆಯೆಂಬುದನ್ನು ಸದನಕ್ಕೆ ನಿವೇದಿಸುವೆ. ಸಂಕ್ಷಿಪ್ತವಾಗಿ ಆ ರಕ್ಷಣೋಪಾಯಗಳನ್ನು ಉಲ್ಲೇಖಿಸುವೆ. ಮೊದಲನೆಯದು ಹೀಗಿದೆ. ಈ ತಿದ್ದುಪಡಿಯ ಪ್ರಕಾರ, ಪೊಲೀಸ್ ಕಮೀಷನರನು ವಿಧಾನ ಮಂಡಳಕ್ಕೆ ಅಥವಾ ಸಾರ್ವಜನಿಕರಿಗೆ ಗೊತ್ತಿಲ್ಲದೆಯೆ ರೂಢಿಯಲ್ಲಿ ಈ ನಿರಂಕುಶ ಅಧಿಕಾರವನ್ನು ಎಂದೆಂದೂ ಚಲಾಯಿಸಲು ಆರಂಭಿಸಕೂಡದು. ಅವನು ಹಾಗೆಂದೂ ಮಾಡಲು ಶಕ್ಯವೂ ಇಲ್ಲ; ಏಕೆಂದರೆ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ತುರ್ತು ಪರಿಸ್ಥಿತಿ ಪ್ರಕಟಣೆ ಹೊರಬಿದ್ದ ನಂತರವೇ ಪೊಲೀಸ್ ಕಮಿಶನರಿಗೆ ಈ ಅಧಿಕಾರವು ಪ್ರಾಪ್ತವಾಗುವುದು. ತುರ್ತು ಪರಿಸ್ಥಿತಿ ಪ್ರಕಟಣೆ ಹೊರಡುವ ಮೊದಲು ಅಥವಾ ತುರ್ತು ಪರಿಸ್ಥಿತಿಯನ್ನು ಘೋಷಿಸುವ ಮೊದಲು, ಪೊಲೀಸ್ ಕಮೀಷನರನು ಈ ಅಧಿಕಾರವನ್ನು ಚಲಾಯಿಸಲಾಗುವುದಿಲ್ಲ. ಈ ತಿದ್ದುಪಡಿಯು ಒಳಗೊಂಡಿರುವ ಈ ಅಂಶದ ಬಗ್ಗೆ ಇದೊಂದನ್ನು ನಾನು ನೆನಪಿನಲ್ಲಿಡಬೇಕಾಗಿದೆ. ತುರ್ತು ಪರಿಸ್ಥಿತಿಯ ಪ್ರಕಟಣೆ ಹೊರಟ ಮೇಲಷ್ಟೇ ಈ ಅಧಿಕಾರವು ಕಾರ್ಯಗತವಾಗುತ್ತದೆ ಹಾಗೂ ಅದಕ್ಕೆ ವಿಧಾನಮಂಡಲದ ದೃಷ್ಟಿಯಿಂದ ಕೆಲವೊಂದು ಲಾಭಗಳೂ ಇವೆ. ಆ ಲಾಭ ಹೀಗಿದೆ. ಯಾವ ಸಮರ್ಥನೆಯೂ ಇಲ್ಲದೆ ಸರಕಾರವು ತುರ್ತು ಪರಿಸ್ಥಿತಿಯ ಪ್ರಕಟಣೆಯನ್ನು ಹೊರಡಿಸಿದರೆ, ಆಗ ಈ ಸದನಕ್ಕೆ ಮುಂದೆ ಹಾಕುವ ಸೂಚನೆಯನ್ನು ಮಂಡಿಸಲು ಮತ್ತು ತುರ್ತು ಪರಿಸ್ಥಿತಿ ಪ್ರಕಟಣೆಯನ್ನು ತಪ್ಪಾಗಿ ಹೊರಡಿಸಿದ್ದಕ್ಕೆ ಸರಕಾರವನ್ನು ನಿಂದಿಸಲು ಒಂದು ಪ್ರಸಂಗವು ಈ ಸದನಕ್ಕೆ ದೊರೆಯುವುದು. ಈ ಅಧಿಕಾರವು ದುರುಪಯೋಗವಾಗದಂತೆ ವಿಧಾನ ಮಂಡಲ ನೋಡಿಕೊಳ್ಳಲು ತಿದ್ದುಪಡಿಯು ಅವಕಾಶ ಮಾಡಿಕೊಡುತ್ತದೆ. ಈ ತಿದ್ದುಪಡಿಯ ಎರಡನೆಯ ಭಾಗ ಹೀಗಿದೆ. ಸರಕಾರವು ತುರ್ತು ಪರಿಸ್ಥಿತಿ ಪ್ರಕಟಣೆಯನ್ನು ಹೊರಡಿಸಬಹುದು; ಮತ್ತೆ ಅದನ್ನು ರದ್ದುಮಾಡಲು ಅಥವಾ ಹಿಂದಕ್ಕೆ ತೆಗೆದುಕೊಳ್ಳಲು ನಿರಾಕರಿಸಬಹುದು; ಆಗ ಪೊಲೀಸ್ ಕಮೀಷನರನು ತುರ್ತು ಪರಿಸ್ಥಿತಿ ಉಳಿದಿಲ್ಲವೆಂಬುದು ಗೊತ್ತಾಗದೆಯೆ ತನ್ನ ಅಧಿಕಾರವನ್ನು ಉಪಯೋಗಿಸಲು ಆರಂಭಿಸಿದವನು ಹಾಗೆಯೇ ಅದನ್ನು ಉಪಯೋಗಿಸುತ್ತಲೇ ಸಾಗಬಹುದು. ಇದರ ವಿರುದ್ಧವಾಗಿ ತಿದ್ದುಪಡಿಯಲ್ಲಿ ಅವಕಾಶವನ್ನು ಒದಗಿಸಿದ್ದು, ಅದರ ಬಗ್ಗೆ ಈ ಸದನದ ಸದಸ್ಯರ ಗಮನ ಸೆಳೆಯಬೇಕೆನ್ನುತ್ತೇನೆ. ಈ ತಿದ್ದುಪಡಿಯಿಂದ, ಸರಕಾರವು ತುರ್ತು ಪರಿಸ್ಥಿತಿಯನ್ನು ನವೀಕರಿಸದಿದ್ದರೆ, ಪ್ರಕಟಣೆಯ ಅಧಿಕಾರ ಒಂದು ತಿಂಗಳ ನಂತರ ಅದು ರದ್ದಾಗುತ್ತದೆ; ತುರ್ತು ಪರಿಸ್ಥಿತಿಯು ಜಾರಿಯಲ್ಲಿ ಇಲ್ಲದಿರುವುದರಿಂದ ಅಧಿಕಾರದ ಚಲಾವಣೆಯೂ ನಿಂತುಹೋಗುತ್ತದೆ. ಇಲ್ಲಿ ಸಾಕಷ್ಟು ರಕ್ಷಣೋಪಾಯ ಕೊಡಲಾಗಿದೆ.

ಉಪ ಪರಿಚ್ಛೇದ (vi) ಇದು ಅತ್ಯಂತ ಮಹತ್ವದ್ದು, ಈ ರಕ್ಷಣೋಪಾಯದ ಬಗ್ಗೆಯೂ ಈ ಸದನದ ಗಮನ ಸೆಳೆಯಬಯಸುತ್ತೇನೆ. ಈ ತಿದ್ದುಪಡಿಯು ಪೊಲೀಸ್ ಕಮೀಷನರಿಗೆ ಜಾತೀಯ ಗಲಭೆ ಗಳಿಗೆ ಕಾರಣವೆಂದು ನಿರ್ಣಯಿಸಿ ಒಬ್ಬ ವ್ಯಕ್ತಿಯನ್ನು ಗಡೀಪಾರು ಮಾಡುವ ಅಧಿಕಾರ ದಯಪಾಲಿಸಿದ್ದರೂ, ಗಡೀಪಾರು ಮಾಡಿದ ಈ ಆಜ್ಞೆಗೂ ಒಂದು ಮಿತಿಯನ್ನು ಸೇರಿಸಬೇಕಾಗುತ್ತದೆ; ತುರ್ತು ಪರಿಸ್ಥಿತಿ ಪ್ರಕಟಣೆಯ ಕಾರ್ಯಾಚರಣೆ ನಿಂತಕೂಡಲೇ, ಆ ಆಜ್ಞೆಯೂ ತಾನಾಗಿಯೇ ರದ್ದಾಗುತ್ತದೆ ಎಂಬುದೇ ಆ ಮಿತಿ; ಇದರಿಂದ ಪೊಲೀಸ್ ಕಮಿಶನರನಿಂದ ಗಡೀಪಾರು ಮಾಡಲ್ಪಟ್ಟ ಆ ವ್ಯಕ್ತಿಯು ಪುನಃ ಮುಂಬಯಿಗೆ ಬರಬಹುದು. ಇದೂ ಸಹ ಮತ್ತೊಂದು ರಕ್ಷಣೋಪಾಯವಾಗಿದೆಯೆಂದು ಹೇಳುವೆ.

ಮತ್ತೊಂದು ರಕ್ಷಣೋಪಾಯದ ಬಗ್ಗೆಯೂ ನಾನು ಸದನದ ಗಮನ ಸೆಳೆಯಬಯಸುವೆ; ಪೊಲೀಸ್ ಕಮೀಶನರ್‌ನ ಆಜ್ಞೆಯ ವಿರುದ್ಧ ರಾಜ್ಯ ಸರಕಾರಕ್ಕೆ ಮನವಿ ಮಾಡಬಹುದೆಂಬ ಅಂಶವನ್ನು ತಿದ್ದುಪಡಿಯಲ್ಲಿ ಕಾಣಿಸಲಾಗಿದೆ. ಇದರಲ್ಲೇನು ಅಂತಹ ಮಹತ್ವದ್ದಿಲ್ಲ ಎಂಬುದನ್ನು ನಾನು ಒಪ್ಪುವೆ. ಆದರೂ ಅದರಲ್ಲಿ ಅಂಶವಿದೆ.

ಮಂಡಿತವಾದ ಇನ್ನುಳಿದ ತಿದ್ದುಪಡಿಗಳ ಬಗ್ಗೆ ಒಂದೆರಡು ಮಾತು ನಾನು ಹೇಳಬಯಸುವೆ. ಈ ತಿದ್ದುಪಡಿಯ ಪರಿಚ್ಛೇದ (i) ಇದನ್ನು ನಿನ್ನೆ ಬರೆಯುವಾಗಿನ ಸಂಗತಿಯನ್ನು ನಮ್ಮ ಮಾನ್ಯ ಗೃಹ ಮಂತ್ರಿಗಳೂ ಒಪ್ಪಿಕೊಂಡಿರುವರು; ಧಾರ್ಮಿಕ ಭಿನ್ನಾಭಿಪ್ರಾಯಗಳು ಅಥವಾ ಪಂಗಡಗಳು ಇರುವ ಈ ಪರಿಚ್ಛೇದವನ್ನು ಬೇರೆ ಬೇರೆ ಧರ್ಮಗಳವರ ನಡುವೆ ಅಥವಾ ಧರ್ಮದ ವಿವಿಧ ಪಂಗಡಗಳವರ ನಡುವೆ ಸಂಭವಿಸಬಹುದಾದ ಗಲಭೆಗಳಿಗೆ ಮಾತ್ರ ಉಪಯೋಗಿಸಬೇಕು. ಹಾಗಲ್ಲದೆ, ಕಾರ್ಮಿಕರ ತೊಂದರೆ ಅಥವಾ ಬೇರೆ ತೊಂದರೆಗಳನ್ನು ಹತ್ತಿಕ್ಕಲು ಇದನ್ನು ಉಪಯೋಗಿಸಕೂಡದೆಂದು ಎಲ್ಲ ರೀತಿಯಿಂದಲೂ ವಿಮರ್ಶಿಸಿ ಒಪ್ಪಿಕೊಳ್ಳಲಾಗಿದೆ. ಇದೆಲ್ಲವೂ ಸ್ಪಷ್ಟವಾಗಿ ಜಾತೀಯ ಗಲಭೆಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದು ನನ್ನ ನಿರ್ಣಯವಿದೆ. ಈ ಕಲಮನ್ನು ಬೇರೆ ಯಾವ [illegible]

*ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೆ, ವಿಧೇಯಕದ ಪ್ರಥಮ ವಾಚನದ ನಂತರ ಮಾತನಾಡಿದ ಸದನದ ಅನೇಕ ಸದಸ್ಯರು ನನ್ನ ತಿದ್ದುಪಡಿಯನ್ನು ಅನುಮೋದಿಸಿದುದನ್ನು ನೋಡಿದಾಗ ನನಗೆ ಬಹಳ ಸಂತೋಷವಾಗಿದೆ. ವಿಧೇಯಕದ ಬಗ್ಗೆಯೇ ಸಾಕಷ್ಟು ಹೇಳುವುದಿದ್ದರೂ, ಪ್ರತಿಪಕ್ಷದ ಮಾನ್ಯ ನಾಯಕರು ನನ್ನ ತಿದ್ದುಪಡಿಯನ್ನು ವಿರೋಧಿಸಿರುವರೆಂದು ನನಗೆ ತೋರುವುದಿಲ್ಲ. ನನ್ನ ಮಾನ್ಯ ಮಿತ್ರ ರಾವಬಹದ್ದೂರ ಚಿತಳೆ ನನ್ನ ತಿದ್ದುಪಡಿ ಅನುಮೋದಿಸಿದ್ದಾರೆ. ವಿರೋಧ ಪಕ್ಷದ ನನ್ನ ಮಾನ್ಯ ಸ್ನೇಹಿತ ಶ್ರೀ ಜಮ್ನಾದಾಸ್ ಮೆಹತಾ ಮೂಲಭೂತವಾಗಿ ವಿರೋಧಿಸಲಿಲ್ಲ. ಆದರೆ ಅವರದು ವಿಳಂಬ ತಂತ್ರವಾಗಿದ್ದಿತು. ಆದುದರಿಂದ ಈಗ ಬಂದಿರುವ ಟೀಕೆಗಳ ಬಗ್ಗೆ, ನಾನು ನಿಜವಾಗಿಯೂ ದೀರ್ಘವಾದ ಉತ್ತರ ಕೊಡಬೇಕಾಗಿಲ್ಲ; ಆದರೆ ನಾನು ಎರಡು ವಿಷಯಗಳ ಬಗ್ಗೆ ಉಲ್ಲೇಖಿಸಬೇಕಾಗಿದೆ. ಇದು ತುರ್ತು ಕ್ರಮವೆಂಬುದನ್ನು ಅಂಗೀಕರಿಸಬೇಕು ಹಾಗೂ ತುರ್ತು ಪರಿಸ್ಥಿತಿಯ ಕ್ರಮವಾಗಿರುವುದ ರಿಂದ ವ್ಯಕ್ತಿಯ ಸ್ವಾತಂತ್ರ್ಯವನ್ನು ಸಾಕಷ್ಟು ನಿಗ್ರಹಿಸಬೇಕಾಗುವುದು.

ಸರ್ ಅಲಿ ಮಹಮ್ಮದ್ ಖಾನ್ ದೆಹಲವಿ: ಮಾನ್ಯ ಸದಸ್ಯರ ಹೇಳಿಕೆಯಲ್ಲಿ ತಿದ್ದುಪಡಿಯಾಗಬೇಕೆಂದು ನಾನು ಬಯಸುವೆ. ಇದು ತುರ್ತು ಕ್ರಮ ಎಂದು ಮಾನ್ಯ ಸದಸ್ಯರು ಹೇಳಲು ಅವರಿಗೆ ಯಾವ ಅಧಿಕಾರವಿದೆ? ವಿಧೇಯಕವನ್ನು ಮಂಡಿಸಿದ ಮಾನ್ಯರೂ ಇದನ್ನು ಒಪ್ಪಿಕೊಂಡಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನನ್ನ ತಿದ್ದುಪಡಿಗೆ ಮಾತ್ರ ನಾನು ಉತ್ತರಿಸುತ್ತಿರುವೆ. ನನ್ನ ತಿದ್ದುಪಡಿಯ ತುರ್ತು ಪರಿಸ್ಥಿತಿಯ ತಿದ್ದುಪಡಿಯಾಗಿದೆ; ನನ್ನ ಭಾಷಣದಲ್ಲಿ ನಾನು ಒಪ್ಪಿಕೊಂಡಂತೆ ವ್ಯಕ್ತಿಗೆ ಇರ ಬೇಕಾದ ನಿಗ್ರಹವೂ ಇದರಲ್ಲಿ ಒಳಗೊಂಡಿದೆ. ಇಂಥ ನಿಗ್ರಹದ ಬಗ್ಗೆ ವಿಸ್ತಾರವಾಗಿ ಒತ್ತುಕೊಟ್ಟು ನನ್ನ ತಿದ್ದುಪಡಿಯನ್ನು ಕುರಿತು ಮಾತನಾಡಿದ ಆ ಸಾಮಾನ್ಯ ಜನರಿಗೆ, ಯುದ್ಧದ ಸಮಯದಲ್ಲಿ ಇಂಗ್ಲೆಂಡಿನಲ್ಲಿ ಸ್ವೀಕೃತವಾದ "ಸಂರಕ್ಷಣಾ ಕಾನೂನು" ಹಾಗೂ ಭಾರತದಲ್ಲಿ ಸ್ವೀಕೃತವಾದ "ಭಾರತ ಸಂರಕ್ಷಣಾ ಕಾನೂನು" ಇವುಗಳನ್ನು ಉಲ್ಲೇಖಿಸಿ ನೋಡಬೇಕಾಗಿ ಅವರ ಗಮನ ಸೆಳೆಯಬಯಸುವೆ. ಅವೆರಡೂ ತುರ್ತು ಕ್ರಮಗಳೇ ಆಗಿದ್ದವು; ಯಾರಾದರೂ ಕಾನೂನಿನಲ್ಲಿರುವ ಆ ಅಂಶಗಳನ್ನು ನೋಡಿದರೆ, ನನ್ನ ಈ ತಿದ್ದುಪಡಿ ಅವುಗಳಿಗಿಂತಲೂ ಬಹಳ ಸೌಮ್ಯವಾಗಿದೆಯೆಂದು ಅವರಿಗೆ ಕಂಡುಬರುವುದರಲ್ಲಿ ನನಗೆ ಸಂಶಯವಿಲ್ಲ. ಇದಲ್ಲದೆ ತುರ್ತು ಪರಿಸ್ಥಿತಿಯ ಈ ಶಾಸನ ರಚನೆಯು ಉದಾಹರಣೆಗಾಗಿ "ರಾಷ್ಟ್ರದ ಸಂರಕ್ಷಣಾ ಕಾನೂನು" ಹಾಗೂ "ಭಾರತದ ಸಂರಕ್ಷಣಾ ಕಾನೂನು" ಇವು ನಾಲ್ಕು ವರುಷಗಳವರೆಗೂ ಕಾರ್ಯಾಚರಣೆಯಲ್ಲಿದ್ದವು ಎಂಬುದನ್ನು ನೆನಪಿನಲ್ಲಿಡಬೇಕು. ಇಂಗ್ಲೆಂಡಿನಲ್ಲಿ "ರಾಷ್ಟ್ರದ ಸಂರಕ್ಷಣಾ ಕಾನೂನು" ೧೯೧೪ರಲ್ಲಿ ಸ್ವೀಕೃತವಾಗಿ ೧೯೧೯ರವರೆಗೂ ಅದನ್ನು ಹಿಂದೆಗೆದುಕೊಳ್ಳಲಿಲ್ಲ. ಪೊಲೀಸ್ ಅಧಿಕಾರಿಗಳಿಗೆ ಆಗ ಕೊಟ್ಟ ಅಧಿಕಾರಗಳು– ಆಗ ವಿದ್ಯಾರ್ಥಿಯಾಗಿ ನಾನು ಇಂಗ್ಲೆಂಡಿನಲ್ಲಿಯೇ ಇದ್ದೆ– ನನ್ನ ಈ ತಿದ್ದುಪಡಿಯಲ್ಲಿ ಕೊಟ್ಟ ಅಧಿಕಾರಗಳಿಗಿಂತಲೂ ನಿಜವಾಗಿ ಹೆಚ್ಚಾಗಿದ್ದವು. ಆದ್ದರಿಂದ, ತುರ್ತು ಪರಿಸ್ಥಿತಿಗೆ ಮನ್ನಣೆ ನೀಡಿ ಪೊಲೀಸ್ ಕಮೀಷನರರಿಗೆ ಕೊಟ್ಟ ಅಧಿಕಾರಗಳು ಅತಿಯಾಗಿ ವ್ಯಾಪ್ತವಾಗಿಲ್ಲ ಎಂದು ನಿವೇದಿಸುವೆ.

ಇನ್ನು ಇನ್ನುಳಿದ ವಿಷಯಗಳ ಬಗ್ಗೆ, ಅಂದರೆ ಇದು ಕಾಯಂ ಕ್ರಮ ಎಂಬುದರ ಬಗ್ಗೆ, ಭಾರತ

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ–೩, ಪುಟ ೨೪೭೧–೭೩,
ದಿನಾಂಕ ೨೭ ಏಪ್ರಿಲ್ ೧೯೩೮.

ಸರಕಾರದ ಕಾನೂನಿನ ಕಲಮು ೧೦೨ರಲ್ಲಿರುವ ಅಂಶಗಳ ಬಗ್ಗೆ ಸದನದ ಗಮನ ಸೆಳೆಯಲಿಚ್ಛಿಸುವೆ. ಈ ಪ್ರಸಂಗದಲ್ಲಿ ಆ ಅಂಶಗಳು ಬಹಳ ಸಮಂಜಸವಾಗಿದೆ ಹಾಗೂ ಅರ್ಥಪೂರ್ಣವಾಗಿದೆ. ಮಾನ್ಯರೆ, ಈ ತಿದ್ದುಪಡಿಯು ಸೂಚಿಸಿದುದನ್ನೇ ಸರಿಯಾಗಿ ಭಾರತ ಸರಕಾರದ ಕಾನೂನಿನ ಕಲಮು ೧೦೨ರಲ್ಲಿಯೂ ಹೇಳಲಾಗಿದೆ. ಅಲ್ಲಿಯೂ ಸಹ ಸ್ವಂತ ವಿವೇಚನೆಯಿಂದ ಗವರ್ನರ್ ಜನರಲ್‌ನಿಗೆ ತುರ್ತು ಪರಿಸ್ಥಿತಿಯ ಪ್ರಟಕಣೆ ಕೊಡಲಿಕ್ಕೆ ಅಧಿಕಾರವಿದೆ; ಹಾಗೂ ಶಾಂತಿ ಮತ್ತು ಸುವ್ಯವಸ್ಥೆ ಉಳಿಸಿಕೊಳ್ಳಲು ಅವಶ್ಯವಿರುವ ಯಾವುದೇ ಸುಗ್ರೀವಾಜ್ಞೆಗಳನ್ನು ಹೊರಡಿಸಲು ಅವನಿಗೆ ಅಧಿಕಾರವಿದೆ.....

ಸರ್ ಮಹಮ್ಮದ್ ಖಾನ್ ದೆಹಲವಿ: ದೇಶವು ಅದನ್ನು ಒಪ್ಪಿಕೊಳ್ಳದಿದ್ದರೆ....?

ಡಾ. ಬಿ. ಆರ್. ಅಂಬೇಡ್ಕರ್: ಅದರ ಬಗ್ಗೆ ಭಾರತ ಸರಕಾರ ಕಾನೂನದಲ್ಲಿಯೇ ಹೇಳಲಾಗಿದೆ. ಹಾಗೆಯೇ, ಅದು ಆ ಕಲಮಿನಲ್ಲಿ ತುರ್ತು ಪರಿಸ್ಥಿತಿ ಪ್ರಕಟಣೆಯ ಅವಧಿ ಆರು ತಿಂಗಳು ಮಾತ್ರ ಎಂದೂ ತಿಳಿಸಲಾಗಿದೆ. ಸಂದರ್ಭೋಚಿತ ಅಂಶಗಳನ್ನು ಓದಿತೋರಿಸುವೆ.

"ಈ ಅಧ್ಯಾಯಕ್ಕಿಂತ ಹಿಂದಿನ ಕಲಮುಗಳಲ್ಲಿ ಏನೇ ಇದ್ದರೂ, ಸ್ವಂತ ವಿವೇಚನೆಯಿಂದ ಗವರ್ನರ್ ಜನರಲ್‌ನು ಆಂತರಿಕ ಗಲಭೆ ಅಥವಾ ಯುದ್ಧದಿಂದ ಭಾರತದ ರಕ್ಷಣೆಗೆ ಭಾರಿ ಧಕ್ಕೆಯಿದೆಯೆಂದು ತುರ್ತು ಪರಿಸ್ಥಿತಿಯ ಸಲುವಾಗಿ ಪ್ರಕಟಣೆಯನ್ನು (ಈ ಕಾನೂನಿನಲ್ಲಿ "ತುರ್ತು ಪರಿಸ್ಥಿತಿ ಘೋಷಣೆ" ಎಂದು ಉಲ್ಲೇಖಿಸಲಾಗಿದೆ.) ಘೋಷಿಸಿದ್ದರೆ, ಆಗ ಸಂಯುಕ್ತ ವಿಧಾನ ಮಂಡಳಕ್ಕೆ (ಫೆಡರಲ್ ಲೆಜಿಸ್ಲೇಚರ್) ಒಂದು ಪ್ರಾಂತಕ್ಕಾಗಲಿ ಅಥವಾ ಪ್ರಾಂತಗಳ ವಿಧಾನ ಮಂಡಲಗಳ ಪಟ್ಟಿಯಲ್ಲಿ ಕೊಟ್ಟಿರುವ ಯಾವುದೇ ವಿಷಯಗಳ ಬಗ್ಗೆ ಯಾವುದೇ ಭಾಗವನ್ನು ಕುರಿತಾಗಲಿ ಕಾನೂನು ಮಾಡಲು ಅಧಿಕಾರವಿದೆ."

ಉಪ ಪರಿಚ್ಛೇದ (೪) ಹೀಗೆ ಹೇಳುತ್ತದೆ:

> "ತುರ್ತು ಪರಿಸ್ಥಿತಿ ಪ್ರಕಟಣೆ ಹೊರಟಾಗ ಮಾತ್ರ ಕಾನೂನು ರಚಿಸಲು ಸಮರ್ಥವಿದ್ದ ಸಂಯುಕ್ತ ವಿಧಾನಮಂಡಲವು ರಚಿಸಿದ ಕಾನೂನು, ಆರು ತಿಂಗಳ ಅವಧಿಯು ಮುಗಿದ ಕೂಡಲೇ ಪ್ರಕಟಣೆಯ ಕಾರ್ಯಾಚರಣೆಯು ನಿಂತಾಗ, ಅದೂ ಸಹ ಇಲ್ಲದಂತಾಗುವುದು; ಆದರೆ ಈ ಅವಧಿಯು ಮುಗಿಯುವ ಮುನ್ನವೇ ಕೆಲಸ ಸಾಗುತ್ತಿರುವ ಅಥವಾ ಆಗ ಬೇಕೆಂದು ಬಿಟ್ಟಿರುವ ಕೆಲಸಗಳಿದ್ದರೆ ಅವಕ್ಕೆ ಇದು ಅನ್ವಯಿಸುವುದಿಲ್ಲ."

ಆದ್ದರಿಂದ ರಾಷ್ಟ್ರದ ಸಂರಕ್ಷಣಾ ಕಾನೂನು, ಭಾರತ ಸಂರಕ್ಷಣಾ ಕಾನೂನು ಇವುಗಳಲ್ಲಿರುವುದನ್ನೇ ಕಲಮು ೧೦೨ರಲ್ಲಿ ಅಳವಡಿಸಿದ್ದೇವೆಯೇ ಹೊರತು, ಹೆಚ್ಚಿನದೇನನ್ನೂ ಮಾಡಿಲ್ಲವೆಂದು ಸದನಕ್ಕೆ ಭಿನ್ನವಿಸುತ್ತೇನೆ.

ನನ್ನ ಮಾನ್ಯ ಮಿತ್ರ ಶ್ರೀ ಜಮ್ನಾದಾಸ್ ಮೆಹತಾ ಅವರ ಹೇಳಿಕೆಯೂ ಬಂದಿದೆ; ಈ ತುರ್ತು ಪರಿಸ್ಥಿತಿಯ ಅಧಿಕಾರಗಳನ್ನು ಜಾತೀಯ ದೊಂಬಿಗಳಿಗೆ ಜಾತೀಯ ಗಲಭೆಗಳಿಗೆ ಮಾತ್ರ ಸೀಮಿತವಾಗಿಡಬೇಕೆಂಬ ನನ್ನ ಇಚ್ಛೆಯಿದ್ದರೂ ಈ ತಿದ್ದುಪಡಿಯಲ್ಲಿ ಉಪಯೋಗಿಸಿದ ಭಾಷೆಯು, ಕೊನೆಗೆ ತಿದ್ದುಪಡಿಯ ಕಾರ್ಯಾಚರಣೆಯ ಜಾತೀಯ ಗಲಭೆಗಳಿಗೆ ಮಾತ್ರ ಸೀಮಿತವಾಗಿರುತ್ತದೆಂಬು ವಂತೆ ಇರುವುದಿಲ್ಲ. "ಸಮುದಾಯ" ಪದವು ಅವಶ್ಯವಾಗಿ "ಧಾರ್ಮಿಕ ಸಮುದಾಯ" ಎಂಬರ್ಥ ಕೊಡುವುದಿಲ್ಲವೆಂದು ಅವರು ವಾದ ಮಾಡಿರುವರು; ಸಮುದಾಯವು ವ್ಯಾಪಾರಿ ಸಮುದಾಯ, ಔದ್ಯೋಗಿಕ

ಸಮುದಾಯ, ಕೂಲಿ ವ್ಯವಸಾಯದ ಸಮುದಾಯ ಹೀಗೆ ಉಪಯೋಗದಲ್ಲಿದೆ; ಎರಡನೆಯದಾಗಿ ಔದ್ಯೋಗಿಕ ಜಗಳಗಳಲ್ಲಿಯೂ ಸಹ ಸರಕಾರವು ತನ್ನ ಅಧಿಕಾರವನ್ನು ಈ ಶಾಸನ ರಚನೆಯಿಂದ ಉಪಯೋಗಿಸುವುದು.

ಈಗ ಈ ವಿಚಾರದ ಬಗ್ಗೆ ನಾನು ಮೊದಲು ನಿವೇದಿಸುವುದು ಇಷ್ಟೇ; ತಿದ್ದುಪಡಿಯ ಈ ಭಾಗವು ನಿಜವಾಗಿಯೂ ಅರ್ಥ ವಿವರಣೆಯ ವಿಷಯವಾಗುವುದಿಲ್ಲ. ಏಕೆಂದರೆ ಸರಕಾರವು ಸ್ವಂತ ವಿವೇಚನೆಯಿಂದ ಇದನ್ನು ನಿರ್ಣಯಿಸುವುದಾಗಿದೆ. ಅದನ್ನು ಯಾವ ನ್ಯಾಯಾಲಯಕ್ಕೆ ಒಯ್ಯಬೇಕಾಗಿಲ್ಲ; ತುರ್ತು ಪರಿಸ್ಥಿತಿ ಪ್ರಕಟಣೆಯು ಸರಿಯಾಗಿ ಇದೆಯೋ ಇಲ್ಲವೋ ಎಂಬುದು ನ್ಯಾಯಾಲಯದಲ್ಲಿ ಚರ್ಚಿಸಬೇಕಾದ ಸಮಸ್ಯೆಯಾಗಲಾರದು; ಪ್ರಕಟಣೆಯು ಹೊರಟಿದೆಯೋ ಇಲ್ಲವೋ ಎಂದು ನೋಡುವುದಷ್ಟೇ ನ್ಯಾಯಾಲಯಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಪ್ರಕಟಣೆಯು ಸರಿಯಾಗಿದೆಯೋ ಇಲ್ಲವೋ ಎಂಬುದು ಸರಕಾರಕ್ಕೆ ಸಂಬಂಧಿಸಿದುದಾಗಿದೆ. ಸರಕಾರವು ತನ್ನ ಅಧಿಕಾರವನ್ನು ಉದ್ದೇಶಗಳ ವಿರುದ್ಧ ಕಾರಣಗಳಿಗಾಗಿ, ಪ್ರಕಟಣೆಯ ಹೊರಡಿಸುವಲ್ಲಿ ಉಪಯೋಗಿಸಿದ್ದರೆ– ಆಗ ಈ ಸರಕಾರವು ಈ ಸದನಕ್ಕೆ ಉತ್ತರದಾಯಿ ಯಾಗಿರುತ್ತದೆ.

ಇನ್ನೊಂದು ಸಂಗತಿಯ ಬಗ್ಗೆಯೂ ನಿವೇದಿಸುವೆ. "ಸಮುದಾಯ" ಎಂಬ ಪದವು ವಿಶಾಲಾರ್ಥದಲ್ಲಿ ಬಳಕೆಯಲ್ಲಿದೆ ಎಂಬುದನ್ನು ನಾನು ಒಪ್ಪಿಕೊಳ್ಳುವೆ. ಆದರೆ, ನಾನು ಇಲ್ಲಿಗೆ ಬರುವ ಮೊದಲು ನನಗೇ ಸಮಾಧಾನವಾಗಬೇಕೆಂದು ನಾನು ಆಕ್ಸ್‌ಫರ್ಡ್ ನಿಘಂಟನ್ನು ತೆರೆದು ನೋಡಿದೆ; ಈ ಕ್ರಮವು ಕಾರ್ಮಿಕ ಸಮಸ್ಯೆಗಳಿಗೆ ಅನ್ವಯಿಸಬಾರದು ಎಂಬುದರಲ್ಲಿ ನಾನು ಸ್ವತಃ ಶ್ರೀ ಜಮ್ನಾದಾಸ್ ಮೆಹ್ತಾ ಅವರಿಗಿಂತಲೂ ಹೆಚ್ಚು ಆತುರನಾಗಿರುವೆ.

ಶ್ರೀ ಜಮ್ನಾದಾಸ್ ಮೆಹ್ತಾ: ನನ್ನಷ್ಟೇ ಆತುರ, ಅದಕ್ಕೂ ಹೆಚ್ಚಿಲ್ಲ...

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೆಚ್ಚು ಆತುರದವನು ಎಂದು ಹೇಳಬಯಸುವೆ. ಆದ್ದರಿಂದ ನೀವು ಇದಕ್ಕೂ ಹೆಚ್ಚು ಒಳ್ಳೆಯದಾದ ಪದವನ್ನು ಸೂಚಿಸುವುದಾದರೆ, ನೀವು ಸೂಚಿಸಿದ ಬದಲಾವಣೆಯನ್ನು ಸ್ವೀಕರಿಸಲು ನನ್ನ ಸಂಪೂರ್ಣ ಒಪ್ಪಿಗೆಯಿದೆ; ಆದರೆ ನನಗೆ ಈ ಪದದ ಅರ್ಥ ತಿಳಿದಮಟ್ಟಿಗೆ, ಒಳ್ಳೇ ಮಟ್ಟದ ನಿಘಂಟಿನ ನೆರವಿನಿಂದ ನನಗೆ ಗೊತ್ತಾದ ಮಟ್ಟಿಗೆ "ಸಮುದಾಯ" ಇದರ ಅರ್ಥವು ವಿಶಾಲಾರ್ಥದಲ್ಲಿ ಪ್ರತಿಯೊಂದು ಪದವು ಬಳಕೆಯಾಗುತ್ತದೆಂಬುದನ್ನು ಬಿಟ್ಟು– ಶಬ್ದೋತ್ಪತ್ತಿಯಿಂದಾಗಲಿ, ಮೂಲತಃ ಆಗಲಿ ಧಾರ್ಮಿಕ ಸಮುದಾಯ ಎಂಬರ್ಥದಲ್ಲಿಯೇ ಉಪಯೋಗಿಸಲಾಗಿದೆಯೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಈ ಪದದ ಅರ್ಥ ಧಾರ್ಮಿಕ ಶ್ರದ್ಧೆಯುಳ್ಳವರ ಪಂಗಡ. (ಇಲ್ಲಿ ಪಂಗಡ, ಸಮುದಾಯ ಎಂಬುದು ಧಾರ್ಮಿಕ ಪದ.) ಒಬ್ಬ ಧರ್ಮಾಧಿಕಾರಿ ಒಬ್ಬ ವ್ಯಕ್ತಿಯನ್ನು ಬಹಿಷ್ಕರಿಸಿದರೆ, ಆಗ ಆ ವ್ಯಕ್ತಿ ಸಮುದಾಯದ ಐಕ್ಯತೆಯಲ್ಲಿ ಇಲ್ಲದಂತಾಗುವನು; ಅವನು ಸಮುದಾಯದೊಳಗೆ ಬರುವುದಿಲ್ಲ. ಇದು ಆ ಪದದ ಮೂಲ ಅರ್ಥ. ದುಡಿಮೆ ಅಥವಾ ಸಂಘ ಅಥವಾ ಬೇರೆ ಪರಿಸ್ಥಿತಿ ಇಂಥವುಗಳನ್ನು ಒಳಗೊಳ್ಳುವಂತೆ ಉಪಯೋಗಿಸಬಹುದಾದ ಪದವು ಇದಲ್ಲ ಎಂಬುದರಲ್ಲಿ ನನಗೆ ಸಂಪೂರ್ಣ ತೃಪ್ತಿಯಿದೆ. ವಿದ್ವಾಂಸರೂ, ಮಾನ್ಯರೂ ಆದ ನನ್ನ ಸ್ನೇಹಿತರು ಇದು ಅಷ್ಟು ಸರಿಯಿಲ್ಲ, ಮತ್ತೊಂದು ಪದದ ಅವಶ್ಯಕತೆ ಇದೆ ಎಂದು ಯೋಚಿಸಿದರೆ, ಆ ವಿಷಯದಲ್ಲಿ ಅವರಿಗೆ ನೆರವಾಗಲು ನಾನು ಸದಾ ಸಿದ್ಧ.

ಇಷ್ಟು ಹೇಳಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

* * *

*ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಈಗ ಇರುವಂತೆ, ನಾನು ಮಂಡಿಸಿರುವ ನನ್ನ ತಿದ್ದುಪಡಿ ಯಲ್ಲಿ ಅಗತ್ಯವಾಗಿ ಬರಬೇಕಾಗಿದ್ದ ಭಾಗವೊಂದು ಕೈಬಿಟ್ಟುಹೋಗಿದೆ. ಏಕೆಂದರೆ ಸಮ್ಮೇಳನದ ಸಮಯ ದಲ್ಲಿ ನಮಗೆ ಕೊಟ್ಟ ಕರಡುಪ್ರತಿಯನ್ನು ಆಗ ನಾವು ತಯಾರಿಸುತ್ತಿದ್ದೆವು. ನನ್ನ ತಿದ್ದುಪಡಿಯಲ್ಲಿ ಪೂರಕ ವಾಗಿ ಇದನ್ನು ಜೋಡಿಸಲು ಅನುಮತಿ ಕೊಟ್ಟರೆ, ಆಗ ಅದು ಪೂರ್ಣಗೊಳ್ಳುವುದು. ತಿದ್ದುಪಡಿಯು ಹೀಗಿದೆ:

ಪರಿಚ್ಛೇದ ೨, ಇದರ ಉಪ ಪರಿಚ್ಛೇದ (೧) (ಅ) ಇದಕ್ಕೆ ಇರುವ ಉಪ ಪರಿಚ್ಛೇದ (ಆ) "ಉಪಸ್ಥಿತಿಯು..." ಇತ್ಯಾದಿ ಪದಗಳಿಂದ ಪ್ರಾರಂಭವಾಗುವುದು– ಇದರ ಬದಲಾಗಿ ಹೀಗೆ ಕಾಣಿಸ ಬೇಕು.

"(ಅ) ಮುಂಬೈ ನಗರದ ಹದ್ದಿನಲ್ಲಿರುವ ಯಾವುದೇ ವ್ಯಕ್ತಿಯು, ನಗರದ ನಿವಾಸಿಗಳಿಗೆ ಭಯವನ್ನು ಹುಟ್ಟಿಸುವ ಕೃತ್ಯಗಳಲ್ಲಿ ತೊಡಗಿದ್ದರೆ, ಭೀತಿದಾಯಕ ಹಾಗೂ ಅಪಾಯಕರವಾಗಿರುವ ಅವನ ಇರುವಿಕೆಯೇ ವಿಶಾಲ ನಗರಕ್ಕೆ ಅಪಾಯಕಾರಕವಾಗಿದ್ದರೆ, ಇಂಡಿಯನ್ ಪೀನಲ್ ಕೋಡಿನ ಅಧ್ಯಾಯ XII, XVI ಅಥವಾ XVII ಇವುಗಳ ಪ್ರಕಾರ ಶಿಕ್ಷೆಗೆ ಗುರಿಯಾಗುವಂತಹ ಅಪರಾಧ ಅಥವಾ ಹಿಂಸೆ ಅಥವಾ ಬೇರೆ ಇಂಥ ಗುನ್ಹೆಗಳನ್ನು ಒಳಗೊಂಡ ಕೆಲಸಗಳಲ್ಲಿ ಆ ವ್ಯಕ್ತಿ ಮೇಲಿಂದ ಮೇಲೆ ತೊಡಗಿದ್ದರೆ ಮತ್ತು ಅವನ ವಿರುದ್ಧವಾಗಿ ಸಾರ್ವಜನಿಕವಾಗಿ ಸಾಕ್ಷಿ ನೀಡಲು ಸಾಕ್ಷಿದಾರರು ಮುಂದೆ ಬರಲು ಮನಸ್ಸು ಮಾಡುತ್ತಿಲ್ಲವೆಂಬುದು ಪೋಲೀಸ್ ಕಮೀಷನರ್‌ನ ಅಭಿಪ್ರಾಯವಾಗಿದ್ದರೆ ಅಥವಾ....."

* * *

**ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ಮಂಡಿಸಿದ ನನ್ನ ತಿದ್ದುಪಡಿಯ ಬಗ್ಗೆ ನಾನು ಮೊದಲು ಪೂರ್ವಭಾವಿಯಾಗಿ ನಾನು ಎರಡು ಮಾತು ಹೇಳಬೇಕಾಗಿದೆ. ಮೊದಲನೆಯ ವಿಚಾರ ಹೀಗಿದೆ. ಈ ವಿಧೇಯಕದ ೨೭ನೇ ಪರಿಚ್ಛೇದವನ್ನು ತಿದ್ದಲು ನನ್ನ ಮಾನ್ಯ ಮಿತ್ರರಾದ ಗೃಹಮಂತ್ರಿಗಳು ತಂದ ವಿಧೇಯಕವನ್ನು ನಾನು ಅನುಮೋದಿಸುತ್ತಿರುವ ಕಾರಣ ಇಷ್ಟೆ. ಕಲಮು ೨೭ರಲ್ಲಿ ಇರುವುದಕ್ಕಿಂತಲೂ ಹೆಚ್ಚು ಅಧಿಕಾರಗಳನ್ನು ಪೋಲೀಸ್ ಕಮೀಷನರನಿಗೆ ತಿದ್ದುಪಡಿಯಲ್ಲಿ ಕೊಡಲಾಗಿದೆ ಎಂಬುದರ ಬಗ್ಗೆ ನಿನ್ನೆಯ ಚರ್ಚೆಯಲ್ಲಿ ಬಹಳಷ್ಟು ವಾದವಿವಾದವಾಗಿದೆ. ಈಗ ಇಡೀ ವಿಧೇಯಕವನ್ನು ತೆಗೆದುಕೊಂಡಾಗ, ಈ ದಿನ ಇರುವ ೨೭ನೇ ಕಲಮು ಇದಕ್ಕಿಂತಲೂ ತಿದ್ದುಪಡಿಯಾದ ೨೭ನೇ ಕಲಮು ಹೆಚ್ಚು ಮೃದುವಾಗಿದೆ ಎಂಬುದರಲ್ಲಿ ನನ್ನ ಮನಸ್ಸಿನಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಆದ್ದರಿಂದ ಆಜ್ಞೆಗಳನ್ನು ಅಮಾನತ್ತಾಗಿ ಇಡುವುದನ್ನು ನಾನು ಒಪ್ಪಿಕೊಂಡೆ; ಮತ್ತು ಈ ಶಾಸನ ರಚನೆ ಸ್ವೀಕೃತವಾಗಲು ಮಾನ್ಯ ಗೃಹಮಂತ್ರಿಗಳಿಗೆ ನೆರವಾದೆ.

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ–೩, ಪುಟ ೨೪೯೭
ದಿನಾಂಕ ೨೭ ಏಪ್ರಿಲ್ ೧೯೩೮.

**ಬಿ.ಎಲ್.ಎ. ಡಿಬೇಟ್ಸ್, ಸಂಪುಟ–೩, ಪುಟ ೨೪೯೯–೨೫೦೧,
ದಿನಾಂಕ ೨೭ ಏಪ್ರಿಲ್ ೧೯೩೮.

ನಾನು ಹೇಳಬೇಕಾದ ಎರಡನೆಯ ಮಾತು ಹೀಗಿದೆ. ಪಕ್ಷದ ಸಮ್ಮೇಳನದಲ್ಲಿ ಈ ತಿದ್ದುಪಡಿಯನ್ನು ಕುರಿತು ನಾವು ವಿಚಾರ ಮಾಡಿದೆವು; ಬೇರೆ ಬೇರೆ ಸೂಚನೆಗಳು ಬಂದಾಗ, ಇಂಥದೊಂದು ಮಾರ್ಗಕ್ಕೆ ನನ್ನ ಒಪ್ಪಿಗೆಯಿದ್ದು, ನಾನು ಅದನ್ನು ಅನುಮೋದಿಸುವುದಾಗಿ ಹೇಳಿದ್ದು ನಿಜ. ಸಮ್ಮೇಳನದಲ್ಲಿ ಆಗ ಅಂಥ ಅಭಿಪ್ರಾಯವನ್ನು ವ್ಯಕ್ತಮಾಡಿ ಈಗ ಇಂಥದೊಂದು ತಿದ್ದುಪಡಿಯನ್ನು ತೆಗೆದುಕೊಂಡು ಮುಂದೆ ಬರುವುದು ಒಳ್ಳೆಯದಲ್ಲವೆಂದು ನನ್ನ ಮಾನ್ಯ ಸ್ನೇಹಿತರಾದ ಗೃಹಮಂತ್ರಿಗಳು ಹೇಳಬಹುದು. ಈಗ ನಾನು ಇದರ ಅರ್ಥ ವಿವರಣೆ ಕೊಡಬೇಕಾಗಿದೆ. ಮಾನ್ಯರೆ, ನಾನು ಮಾನ್ಯ ಗೃಹಮಂತ್ರಿಗಳನ್ನು ಅನುಮೋದಿಸುವೆನೆಂದು ಹೇಳಿದಾಗ, ತಿದ್ದುಪಡಿಯು ವಿಧೇಯಕದ ತತ್ವವನ್ನು ಆಧರಿಸಿ ಸೀಮಿತವಾಗಿದ್ದಿತು. ನಾನು ಸರಿಯಾಗಿ ತಿಳಿದುಕೊಂಡಿದ್ದರೆ, ವಿಧೇಯಕದ ತತ್ವವು ಹೀಗೆ ಇದೆ. ಅಪರಾಧಗಳನ್ನು ಮೇಲಿಂದ ಮೇಲೆ ಮಾಡುವ ಕೆಲವು ಜನ ಮುಂಬೈನಲ್ಲಿ ಇದ್ದಾರೆ; ಅವರು ತಾವು ಯಾರನ್ನು ಗುರಿಯಾಗಿಟ್ಟುಕೊಂಡಿರುತ್ತಾರೋ ಅಂತಹವರ ಮೇಲೆ ಎಸಗುವ ಕ್ರೌರ್ಯದ ಕಾರಣದಿಂದಾಗಿ, ತೊಂದರೆಯನ್ನು ಅನುಭವಿಸಿದವರು ನ್ಯಾಯಾಲಯದಲ್ಲಿ ಸಾಕ್ಷಿ ಕೊಡಲು ಮುಂದಾಗುವುದಿಲ್ಲ. ಆದ್ದರಿಂದ ನಿಯಮಿತವಾದ ವಿಚಾರಣೆ ಏರ್ಪಡಿಸುವುದು ಶಕ್ಯವಿಲ್ಲ. ಇದು ವಿಧೇಯಕದ ಹಿಂದಿರುವ ತತ್ವ. ಈ ತತ್ವಕ್ಕೆ ನಾನು ಬದ್ಧನಿರುತ್ತೇನೆ. ಈ ತತ್ವದಿಂದ ನಾನು ದೂರ ಹೋಗುವುದಿಲ್ಲ. ಸಾಕ್ಷಿ ಹೇಳುವರು ತಿಳಿಸುವವರು ನ್ಯಾಯಾಲಯಕ್ಕೆ ಬರುವುದಿಲ್ಲವೆಂಬ ಸತ್ಯಸಂಗತಿಯ ಕಾರಣದಿಂದ, ನಿಯಮಿತ ವಿಚಾರಣೆಯನ್ನು ಮಾಡದೆಯೆ ಪೊಲೀಸ್ ಕಮೀಷನರು ಯಾರ ವಿರುದ್ಧ ಕಾರ್ಯಾಚರಣೆ ಮಾಡಲಿರುವನೋ ಆ ಜನರ ವರ್ಗವನ್ನು ಮಿತಿಗೊಳಿಸಬೇಕೆಂಬುದೇ ನನ್ನ ಈ ಎಲ್ಲಾ ಪ್ರಯತ್ನವಾಗಿದೆ. ಆದ್ದರಿಂದ ನನ್ನ ತಿದ್ದುಪಡಿಯು ವಿವರಗಳ ತಿದ್ದುಪಡಿಯಾಗಿದೆಯೇ ಹೊರತು ತತ್ವದ ಬಗ್ಗೆ ಇರುವ ತಿದ್ದುಪಡಿಯಲ್ಲ.

ಮಾನ್ಯರೆ, ಈಗ ತಿದ್ದುಪಡಿಯ ಬಗ್ಗೆ ಈ ಸದನದ ಗಮನವನ್ನು ಪ್ರಥಮವಾಗಿ ಸೆಳೆಯಬೇಕಾದುದು ಹೀಗಿದೆ. ಅದರ ವಾಕ್ಯರಚನೆ ಈಗಿದ್ದಂತೆ ಈ ರೀತಿಯಿದೆ:

> "ಮುಂಬೈ ನಗರದಲ್ಲಿ ಯಾವುದೇ ವ್ಯಕ್ತಿಯ ಉಪಸ್ಥಿತಿ, ಚಲನವಲನ ಅಥವಾ ಕೃತಿಗಳು ಅಪಾಯವನ್ನು ಅಥವಾ ಭಯವನ್ನು ಹುಟ್ಟಿಸಲು ಕಾರಣವಾಗಿವೆ ಅಥವಾ ಕಾರಣವಾಗಬಹುದೆಂದು ತೋರಿದರೆ, ಅಥವಾ ಆ ವ್ಯಕ್ತಿಯು ಬೇಕಾಯದೇಶೀರ ಯೋಜನೆಗಳನ್ನು ಮಾಡುತ್ತಿದ್ದಾರೆ ಎಂಬುದಕ್ಕೆ ಸಕಾರಣ ಸಂಶಯ ಬಂದರೆ...."

ಇದರಲ್ಲಿ ವಾಕ್ಯರಚನೆ ಬಹು ಸರಳವಾಗಿದೆಯೆಂಬುದು ತಿಳಿದುಬರುವುದು. ಭಯೋತ್ಪಾದನೆಯನ್ನು ಒಮ್ಮೆ ಮಾತ್ರ ಎಸಗಿರುವ ಅಥವಾ ಅಂತಹ ಅನುಮಾನಗಳಿಗೆ ಎಡೆಕೊಡುವ ವ್ಯಕ್ತಿಯನ್ನು ಪೊಲೀಸ್ ಕಮೀಶನರನು ಈ ನಿಯಮದನ್ವಯ ಬಂಧಿಸಿ ಗಡೀಪಾರು ಮಾಡಬಹುದು. ಮಾನ್ಯ ಗೃಹಮಂತ್ರಿಗಳ ಉದ್ದೇಶವಾಗಲಿ ಅಥವಾ ನನ್ನ ಉದ್ದೇಶವಾಗಲಿ ಹೀಗಿರಲಿಲ್ಲವೆಂಬುದು ನನಗೆ ಖಾತ್ರಿಯಿದೆ. ನನಗೆ ಸರಿಯಾಗಿ ಗೊತ್ತಿದ್ದಂತೆ ಮಾನ್ಯ ಗೃಹಮಂತ್ರಿಗಳ ಧೋರಣೆಯು ಅವರು ತಮ್ಮ ಪ್ರಾರಂಭದ ಭಾಷಣದಲ್ಲಿ ಹೇಳಿದಂತೆ ಅವರ ಪದಗಳನ್ನೇ ಉಪಯೋಗಿಸುವುದಾದರೆ "ಪಕ್ಕಾ ಮವಾಲಿ"ಗಳನ್ನು ಹಿಡಿಯುವುದಕ್ಕೆ ಅಧಿಕಾರ ಕೊಡುವುದೇ ಅವರ ಮುಖ್ಯ ಉದ್ದೇಶವಾಗಿದ್ದಿತು. "ಪಕ್ಕಾ ಮವಾಲಿ" ಈ ಶಬ್ದಗಳ

ಅರ್ಥವು ನಾನು ತಿಳಿದುಕೊಂಡಂತೆ, ಘಾತುಕ ಹಾಗು ಭೀತಿದಾಯಕ ಕೆಲಸಗಳಲ್ಲಿ ವಾಡಿಕೆಯಾಗಿ ತೊಡಗಿಕೊಂಡ ಮತ್ತು ಬೇಕಾಯದೇಶೀರ ಕೃತಿಗಳಲ್ಲಿ ವಾಡಿಕೆಯಾಗಿ ನಿರತನಾದ ವ್ಯಕ್ತಿ. ಮಾನ್ಯ ಗೃಹ ಮಂತ್ರಿಗಳ ಉದ್ದೇಶ ಇದೇ ಆಗಿದ್ದರೆ, ಈ ಸದನದಲ್ಲಿಯೇ ತಾವು ಹೇಳಿದ್ದ ಉದ್ದೇಶವು ಕಾನೂನಿನ ವಿಶಿಷ್ಟ ಪದಗಳಲ್ಲಿಯೇ ಅಡಕವಾಗಿದೆಯೆಂದು ತಿಳಿಸಿ, ಅದಕ್ಕೆ ಯಾವ ವಿರೋಧವೂ ಇರುವುದಿಲ್ಲ ಎಂದು ಹೇಳಬಯಸುತ್ತೇನೆ. ಆದ್ದರಿಂದ ಈ ದೃಷ್ಟಿಯಿಂದಲೇ ವ್ಯಕ್ತಿಯು ವಾಡಿಕೆಯಾಗಿ ಇವೆಲ್ಲವು ಗಳನ್ನು ಮಾಡುತ್ತಿರಬೇಕು ಎಂಬುದನ್ನು ಒತ್ತುಕೊಟ್ಟು ಅವರ ಭಾಷೆಯಲ್ಲಿ ತಿದ್ದುಪಡಿ ಮಾಡಲು ಪ್ರಯತ್ನಿಸಿರುವೆ:

> “ಮುಂಬೈ ನಗರದಲ್ಲಿಯ ಯಾವುದೇ ವ್ಯಕ್ತಿಯು ನಗರದ ನಿವಾಸಿಗಳನ್ನು ಭಯಭೀತರಾಗಿಸುವ ಬೇಕಾಯದೇಶೀರ ಕೃತಿಗಳಲ್ಲಿ ವಾಡಿಕೆಯಾಗಿ ತೊಡಗಿದ್ದರೆ, ಆ ವ್ಯಕ್ತಿಯು ಬಹಳ ಭೀತಿದಾಯಕವಾಗಿ, ಘಾತುಕರೀತಿಯಲ್ಲಿ ಇದ್ದು ಅವನ ಇರುವಿಕೆಯೇ ವಿಶಾಲವಾದ ನಗರದಲ್ಲಿ ಅಪಾಯದಿಂದ ಕೂಡಿದ್ದರೆ ಮತ್ತು ವಾಡಿಕೆಯಾಗಿ.....”

ಉಳಿದಂತೆ ಇದು ಮಾನ್ಯ ಸದಸ್ಯ ಶ್ರೀ ಪಾಟಸ್ಕರ್ ಅವರ ತಿದ್ದುಪಡಿಯಂತೆಯೇ ಇದೆ. ಈ ತಿದ್ದುಪಡಿಗೆ ಮಾನ್ಯ ಮಂತ್ರಿಗಳಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸಿದ್ದೇನೆ.

ನಾನು ಹೊಸದೇನನ್ನೂ ಹೇಳಲು ಹೊರಟಿಲ್ಲ. “ಕ್ರಿಮಿನಲ್ ಪ್ರೊಸೀಜರ್ ಕೋಡಿ”ನ ಕಲಮು ೧೧೦ರಿಂದ ನಾನು ಪದಗಳನ್ನು ತೆಗೆದುಕೊಂಡಿರುವೆ. ಕ್ರಿಮಿನಲ್ ಪ್ರೊಸೀಜರ್ ಕೋಡಿನ ಕಲಮು ೧೧೦, ಯಾವುದೇ ವ್ಯಕ್ತಿ ವಾಡಿಕೆಯಾಗಿ ಕಳ್ಳನಾಗಿದ್ದರೆ ಅವನನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರ ಎದುರಿಗೆ ಕಾನೂನುಕ್ರಮ ತೆಗೆದುಕೊಳ್ಳಲು ಪೊಲೀಸರಿಗೆ ಅಧಿಕಾರ ಕೊಟ್ಟಿದೆ. ನಾನು ಕಲಮು ೧೧೦ ಇದರ ಉಪ ಕಲಮು (ಅ) ಹಾಗೂ ಕಲಮು ೧೧೦ ಇದರ ಉಪ ಕಲಮು (ಫ) ಇವುಗಳಿಂದ ಪದಪ್ರಯೋಗ ತೆಗೆದುಕೊಂಡಿರುವೆನು. ಕ್ರಿಮಿನಲ್ ಪ್ರೊಸೀಜರ್ ಕೋಡಿನ ಕಲಮು ೧೧೦ರ ಪ್ರಕಾರ, ಒಬ್ಬ ವ್ಯಕ್ತಿ ವಾಡಿಕೆಯಾಗಿ ಕಳ್ಳನಾಗಿದ್ದರೆ, ಭೀತಿದಾಯಕ, ಅಪಾಯಕಾರಕನಾಗಿದ್ದರೆ ಅವನ ವಿರುದ್ಧ ವಿಚಾರಣೆ ಇರದೆ ಕ್ರಮ ತೆಗೆದುಕೊಳ್ಳಲು ಬರುವುದಿಲ್ಲವೆಂದು ವಾದಿಸಬಹುದಾಗಿದೆ. ಅವನ ವಿರುದ್ಧ ಕ್ರಮ ತೆಗೆದುಕೊಳ್ಳುವುದೇಕೆ? ಅವನು ಮುಂಬೈ ನಗರದಲ್ಲಿ ಇದ್ದಾನೆಂದೇ? ಇಂಥ ವಾದವೂ ಬರಬಹುದು. ಸಾಕ್ಷಿಯನ್ನು ಕೊಡಲು ನ್ಯಾಯಾಲಯಕ್ಕೆ ಬಾರದಿರುವ ವ್ಯಕ್ತಿಗಳ ವಿಷಯದ ಬಗ್ಗೆ ನಾವು ಪರಿಶೀಲಿಸುತ್ತಿದ್ದೇವೆ ಎಂಬುದು ನನ್ನ ಸಮರ್ಥನೆ; ಅದಕ್ಕಾಗಿಯೇ ನಾನು ಪೊಲೀಸ್ ಕಮೀಶನರಿಗೆ ಹೆಚ್ಚಿನ ನ್ಯಾಯಿಕ ಮತ್ತು ಹೆಚ್ಚಿನ–ಕಾನೂನುಬದ್ಧವಿರುವ ಅಧಿಕಾರಗಳನ್ನು ಕೊಡಬೇಕೆಂಬುದಕ್ಕೆ ಒಪ್ಪಿಕೊಂಡಿರುವೆ. ಇಂಥ ಅಧಿಕಾರಗಳನ್ನು ಕೊಡುವಾಗ, ಯಾರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದೆಯೋ ಆ ಜನರ ವರ್ಗದ ವ್ಯಾಖ್ಯೆ ಕೊಡುವುದು ಹಾಗೂ ಅವರನ್ನು ನಿಗ್ರಹಿಸುವುದು ಅವಶ್ಯವಾಗಿದೆ. ಈ ಸದನವು ಒಬ್ಬ ವ್ಯಕ್ತಿ ವಾಡಿಕೆಯಾಗಿ ಬೇಕಾಯದೇಶೀರ ಕೃತಿ ಮಾಡುತ್ತಿರಬೇಕು, ಪ್ರಾಸಂಗಿಕವಾಗಿ ಅಲ್ಲ ಎಂಬುದನ್ನು ತಿಳಿಸಿ ಆ ವರ್ಗದವರನ್ನು ವ್ಯಾಖ್ಯಾನಿಸುವುದು ಎಂದು ನಾನು ಭಾವಿಸಿರುವೆ. ಇಷ್ಟು ಹೇಳಿ ಸದನಕ್ಕೆ ನನ್ನ ತಿದ್ದುಪಡಿಯನ್ನು ಶಿಫಾರಸು ಮಾಡುತ್ತೇನೆ.

# ೩೧

# ಮುಂಬೈ ಪೊಲೀಸ್ ಕಾಯ್ದೆ ತಿದ್ದುಪಡಿ ಮಸೂದೆ: ೨

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ನನ್ನ ತಿದ್ದುಪಡಿಯು ನಾನು ಬರೆದಂತೆ, ತಪ್ಪು ಕಲ್ಪನೆಯನ್ನು– ನನ್ನ ತಿದ್ದುಪಡಿಯಿಂದ ಯಾವುದನ್ನು ಸಾಧಿಸಬಹುದೆಂದು ತಿಳಿದಿದ್ದೆನೋ ಅದಕ್ಕೂ ಸಂಪೂರ್ಣವಾಗಿ ಭಿನ್ನವಾದ ಬೇರೆ ಕಲ್ಪನೆಯನ್ನು– ಮಾಡಿಕೊಟ್ಟದ್ದಕ್ಕೆ ನನಗೆ ಅಸಂತೋಷವಾಗಿದೆ. ಈ ಘಟ್ಟದಲ್ಲಿ ನಾನೊಂದು ಮಾತು ಹೇಳಬಯಸುವೆ. ನಿಜವಾಗಿಯೂ ಈ ಒಂದು ಪ್ರಸಂಗದಲ್ಲಿ ನಾವು ಯಾರೇ ಒಬ್ಬನು ದೊಡ್ಡಸ್ತಿಕೆಗೆ ಅಂಟಿಕೊಳ್ಳುವುದು ವಿಹಿತವಲ್ಲವೆಂದು ನನ್ನ ತಿಳುವಳಿಕೆಯಾಗಿದೆ. ಇದನ್ನು ಪುನಃ ಉಚ್ಚರಿಸಲು ಬಯಸುವೆ; ಏಕೆಂದರೆ ಇದು ಅತ್ಯಂತ ಮಹತ್ವವಾದ ಪ್ರಸಂಗವಾಗಿದೆ. ಮಾನ್ಯರೆ, ಮಾನ್ಯ ಗೃಹಮಂತ್ರಿಗಳು ತಮ್ಮ ಉತ್ತರವನ್ನು ಕೊಡುವಾಗ ಇನ್ನೂ ನಮ್ಮ ವಿಚಾರವನ್ನು ಗಣನೆಗೆ ತೆಗೆದುಕೊಂಡಿರಲ್ಲವೆಂದು ನನಗೆ ತೋರುತ್ತಿದೆ; ತುರ್ತು ಪರಿಸ್ಥಿತಿಯ ವ್ಯವಹಾರಗಳನ್ನೆಲ್ಲ ನೋಡಿ ಕೊಳ್ಳಲು ನಾವು ಪೊಲೀಸ್ ಕಮೀಷನರಿಗೆ ಈಗಾಗಲೇ ಸಾಕಷ್ಟು ಅಧಿಕಾರ ಕೊಟ್ಟಿದ್ದೇವೆ; ನನ್ನ ತಿದ್ದುಪಡಿ ಯಿಂದ ಅವನಿಗೆ ಕೊಟ್ಟ ಅಧಿಕಾರಗಳಂತೂ ಎಷ್ಟು ವಿಶಾಲವಾಗಿವೆ ಎಂದರೆ– ಆ ವ್ಯಕ್ತಿಗಳು ಅಂತಹ ಕೃತ್ಯಗಳನ್ನು ಮನಸ್ಸಿನಲ್ಲಿ ಮಾತ್ರ ಯೋಚಿಸುತ್ತಿರುವರೆಂದು ಅನಿಸಿದರೂ ಅವರ ಬಗ್ಗೆ ಅವನು ಕ್ರಮ ತೆಗೆದುಕೊಳ್ಳಬಹುದಾಗಿದೆ; ನಾನು ಅದರ ಬಗ್ಗೆ ಮಾನ್ಯಮಂತ್ರಿಗಳಿಗೆ ನೆನಪು ಮಾಡಿಕೊಡು ತ್ತಿದ್ದೇನೆ. ಆದ್ದರಿಂದ ಮಾನ್ಯರೆ, ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಬಹಳಷ್ಟು ವಿಶಾಲವಾದ ಅಧಿಕಾರಗಳನ್ನು ಕೊಟ್ಟಿರುವಾಗ, ಸಾಮಾನ್ಯ ಪರಿಸ್ಥಿತಿಗಳಲ್ಲಿ ಅವನಿಗೆ ಅಧಿಕಾರಗಳನ್ನು ಕೊಡುವಾಗ, ಸ್ವಲ್ಪಮಟ್ಟಿಗಾದರೂ ದುರಾಕ್ಷೇಪಣೆಯ ಸ್ವಭಾವವನ್ನು ಈ ಬದಿಗೆ ಇರುವ ಸದಸ್ಯರು ಹೊಂದಿಸಿಕೊಳ್ಳುವುದು ಯೋಗ್ಯವಾಗಿದೆ. ನಾವೀಗ ವಿಚಾರಿಸುತ್ತಿರುವ ತಿದ್ದುಪಡಿಯ ಸಾಮಾನ್ಯ ಪರಿಸ್ಥಿತಿಗಳಲ್ಲಿ ಅಧಿಕಾರ ಕೊಡುವ ತಿದ್ದುಪಡಿಯಾಗಿದೆ ಎಂಬುದನ್ನು ಅವರು ಸಂಪೂರ್ಣವಾಗಿ ಮರೆತಿದ್ದಾರೆ. ಇದು ಅಸಾಮಾನ್ಯ ಪರಿಸ್ಥಿತಿಗಳನ್ನು ಕುರಿತು ಇರುವುದಿಲ್ಲವಾದ್ದರಿಂದ, ನನ್ನ ತಿದ್ದುಪಡಿಯಂತೆ ಬರುವ ಅಧಿಕಾರವನ್ನು ಉಪಯೋಗಿಸುವ ಪೊಲೀಸ್ ಕಮೀಷನರು ಪ್ರಸಂಗವನ್ನು ಎದುರಿಸಲು ಅಶಕ್ಯವೆಂದು ತೋರಿಸುವ ಯಾವ ಪ್ರಸಂಗವನ್ನೂ ನಾನು ಊಹಿಸಲಾರೆ. ಸಾರ್ವಜನಿಕರ ಆಸಕ್ತಿಯಿಂದ ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲ ವರ್ಗದವರ ಆಸಕ್ತಿಯಂದ, ನನ್ನ ತಿದ್ದುಪಡಿಯ ಅಂಗೀಕಾರವಾಗಬೇಕೆಂದು ನಿವೇದಿಸುವೆ. ಮಾನ್ಯರೆ, ಇದು ಅತ್ಯಂತ ಮಹತ್ವವಾದ ಪ್ರಸಂಗವಾಗಿದೆಯೆಂದು ನಾನು ಮತ್ತೊಮ್ಮೆ ಹೇಳುವೆ; ಈ ವಿಧೇಯಕವು ನಾಗರಿಕರ ಸ್ವಾತಂತ್ರ್ಯದಂತಹ ಪ್ರಸಂಗಗಳಲ್ಲಿ ಸಾಧ್ಯವಿದ್ದಷ್ಟೂ ಎಲ್ಲ ರೀತಿಯಿಂದಲೂ ಅವಿರೋಧವಾಗಿ ಸ್ವೀಕೃತವಾಗಬೇಕು. ಆದ್ದರಿಂದ ಮಾನ್ಯ ಗೃಹಮಂತ್ರಿಗಳು ದೊಡ್ಡಸ್ತಿಕೆಗೆ ಅಂಟಿಕೊಳ್ಳಬಾರದೆಂದೂ–

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೨೫೮೯–೦೨
ದಿನಾಂಕ ೨೮ ಏಪ್ರಿಲ್ ೧೯೩೮.

ನಾನಂತೂ ದೊಡ್ಡಸ್ತಿಕೆಗೆ ಎಂದೆಂದೂ ಅಂಟಿಕೊಳ್ಳುವುದಿಲ್ಲ– ವಿಧೇಯಕವನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳುವೆ.

ಮಾನ್ಯರೆ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ಚುಂದ್ರಿಗಾರರ ತಿದ್ದುಪಡಿಯನ್ನು ಹಾಗೂ ನನ್ನ ಮಾನ್ಯ ಮಿತ್ರರಾದ ಶ್ರೀ ಭೋಲೆ ಅವರ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುವೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ದೊಡ್ಡಸ್ತಿಕೆಯ ಮೇಲೆ ನಿಲ್ಲುವ ಪ್ರಶ್ನೆ ಇದಲ್ಲ. ನಾವು ಪ್ರತಿಯೊಂದು ಪದವನ್ನು ನೋಡಿದ್ದೇವೆ. ಪ್ರತಿಯೊಂದು ಸೂಚನೆಯಲ್ಲಿಯ ಇಂಗಿತಾರ್ಥವನ್ನು ವಿಚಾರಿಸಿದ್ದೇವೆ. ಆಗ ವಾಡಿಕೆಯಾಗಿ ಅಪಾಯಕಾರಿ ಚಟುವಟಿಕೆಯಲ್ಲಿ ತೊಡಗಿದ ವ್ಯಕ್ತಿಯ ಪ್ರಶ್ನೆ ಅದರಲ್ಲಿ ಬಂದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಕೆಲವೊಮ್ಮೆ ಒಳ್ಳೇ ವಿಚಾರಗಳು ಅನಂತರ ಬರುತ್ತವೆ.

ಮಾನ್ಯ ಶ್ರೀ ಕೆ.ಎಂ. ಮುನ್‌ಷಿ: ಮಾನ್ಯರೆ, ಈಗಾಗಲೇ ನಾನು ಹೇಳಿದಂತೆ ದೊಡ್ಡಸ್ತಿಕೆಯ ಮೇಲೆ ನಿಲ್ಲುವ ಪ್ರಶ್ನೆ ಇದರಲ್ಲಿಲ್ಲ. ಇಲ್ಲಿ ಭಿನ್ನಾಭಿಪ್ರಾಯದ ಪ್ರಶ್ನೆ ಇದೆ; ಏಕೆಂದರೆ ಪ್ರತಿಯೊಂದು ವ್ಯವಹಾರದಲ್ಲಿ ಒಬ್ಬ ವ್ಯಕ್ತಿ ವಾಡಿಕೆಯಾಗಿ ತೊಡಗಿದ್ದಾನೆಯೋ ಇಲ್ಲವೋ ಎಂಬುದನ್ನು ವಿಚಾರಿಸುತ್ತ ಹೋದರೆ, ಮೊದಲ ಬಾರಿ ಈ ಕಾರ್ಯದಲ್ಲಿ ತೊಡಗಿದವನು ಪಾರಾಗಿಹೋಗಬಹುದು. ಹೀಗಾಗಿ ಈ ಕಲಮು ಅರ್ಥಶೂನ್ಯವಾಗುವುದು ಹಾಗೂ ಪೊಲೀಸ್ ಕಮೀಶನರ್ ಅಥವಾ ಸರಕಾರವು ಈಗ ಇರುವ ಕಲಮಿನನ್ವಯಕ್ಕಿಂತಲೂ ಹೆಚ್ಚಾಗಿ ಅಧೋಗತಿ ಸ್ಥಾನಕ್ಕೆ ಇಳಿದುಬಿಡುವರು.

ಡಾ. ಬಿ. ಆರ್. ಅಂಬೇಡ್ಕರ್: ಈ ಬದಿಗೆ ಇದ್ದ ಸದಸ್ಯರಲ್ಲಿ ಯಾರೂ ಗೂಂಡಾ ಜನರ ವಿರುದ್ಧ ಅಧಿಕಾರ ಉಪಯೋಗಿಸುವಲ್ಲಿ ವಿರೋಧಿಯಾಗಿಲ್ಲವೆಂದು ನನ್ನ ಮಾನ್ಯ ಸ್ನೇಹಿತರಿಗೆ ತಿಳಿಸಬಯಸುತ್ತೇನೆ. ವಿರೋಧಿ ಪಕ್ಷವು ನಿಜವಾಗಿಯೂ 'ಗೂಂಡಾ ಜನರು ಇರಲಿ' ಎಂದೇ ಹೇಳುವುದು. ಗೂಂಡಾ ಜನರನ್ನು ನೋಡಿಕೊಳ್ಳಲು ಯಾವುದಾದರೂ ತಿದ್ದುಪಡಿ ನೀವು ಸೂಚಿಸಿದರೆ, ಅದನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿರುವೆ. ಅದಕ್ಕೆ ನನ್ನ ಎಳ್ಳಷ್ಟೂ ವಿರೋಧವಿಲ್ಲ. ಗೂಂಡಾ ಜನರನ್ನು ನಿಯಂತ್ರಿಸಲು ಅಧಿಕಾರವನ್ನು ಕೊಡಬೇಕೆಂದು ಪ್ರತಿ ಪಕ್ಷದ ನಾಯಕರು ಹೇಳಿದ ನೆನಪು ನನಗೆ. ಆದರೆ ವ್ಯಕ್ತಿಗಳನ್ನು ನೋಡಿಕೊಳ್ಳುವ ಅಧಿಕಾರದ ಕೊರತೆ ನಿಮಗಿದೆ; ಆದ್ದರಿಂದ ನಾವು ಈ ನಿರ್ಬಂಧಗಳನ್ನು ಹೇರುತ್ತಿದ್ದೇವೆ. ಗೂಂಡಾ ಜನರನ್ನು ನಾವು ನೋಡಿಕೊಳ್ಳುವುದಾದರೆ, ಯಾರಾದರೂ ಒಂದು ತಿದ್ದುಪಡಿಯನ್ನು ಅವಶ್ಯವಾಗಿ ತೆಗೆದುಕೊಂಡು ಬರಲಿ, ಅದು ಯೋಗ್ಯ ತಿದ್ದುಪಡಿಯಾಗಿದ್ದರೆ ನಾನು ಅದನ್ನು ಅನುಮೋದಿಸುವೆ. ಇಲ್ಲಿ ವ್ಯಕ್ತಿಗಳನ್ನು ಕುರಿತು ನೀವೀಗ ನೋಡುತ್ತಿರುವಿರಿ.

ಮಾನ್ಯರೆ, ತಾವು ಬಯಸಿದರೆ ಕೆಲವು ಸಮಯ ಸಭೆಯನ್ನು ಮುಂದೂಡೋಣ, ಅನಂತರ ವಿಚಾರಿಸೋಣ.

ಶ್ರೀ ಎಸ್. ಎಚ್. ಝುಬ್‌ವಾಲಾ: ಮಾನ್ಯರೆ, ನೋಡಿ... ನಾನು ಸೂಚಿಸಿದಂತೆ ಆಯ್ಕೆ ಸಮಿತಿ ಉಪಯುಕ್ತತೆ ಇದರಲ್ಲಿದೆ ಎಂಬುದು ಗೊತ್ತಾಗುವುದು.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಮಾನ್ಯರೆ, ನನ್ನ ಸಂಪೂರ್ಣ ಸಮ್ಮತಿ ಇದೆ; ಆದರೆ ಇಂಥ ವಿಷಯದ ಸಲುವಾಗಿ ಸಭೆ ಮುಂದೂಡುವುದರಲ್ಲಿ ಉಪಯೋಗವಿಲ್ಲ. ಈ ತಿದ್ದುಪಡಿಯನ್ನು ಮಂಡಿಸಿದ ಮಾನ್ಯ ಸದಸ್ಯರಿಗೆ, 'ವಾಡಿಕೆಯಾಗಿ' ಎಂಬ ಪದಪ್ರಯೋಗವು ಈ ಕಲಮಿನ ಕಾರ್ಯಾಚರಣೆಯನ್ನು ಶೂನ್ಯವಾಗಿಸಿದೆ ಎಂಬುದನ್ನು ಅವರಿಗೆ ಖಾತ್ರಿ ಮಾಡಿಕೊಡಲು ನಾನು ಪ್ರಯತ್ನಿಸುತ್ತಿರುವೆ. 'ವಾಡಿಕೆ' ಎಂಬ ಪದವನ್ನು ಅವರು ತೆಗೆದುಹಾಕದ ಹೊರತು, ಮುಂದಿನ ವಿಚಾರಮಾಡಲು ನನಗೆ

ಶಕ್ಯವಿಲ್ಲ. 'ವಾಡಿಕೆ' ಎಂಬ ಪದವನ್ನು ಈ ಕಲಮಿನಲ್ಲಿ ಹಾಗೆಯೇ ಇಡಬೇಕೆಂದು ಅವರಿಗನ್ನಿಸಿದರೆ, ಆಮೇಲೆ ಈ ಕಲಮು ಹೆಚ್ಚುಕಡಿಮೆ ವ್ಯರ್ಥವಾಗುತ್ತದೆ. ಈ ಕಾರಣದಿಂದ ಸಭೆ ಮುಂದೂಡುವುದರಿಂದ ಉಪಯೋಗವಿಲ್ಲವೆಂದು ನಾನು ಹೇಳುವೆ. ಇಬ್ಬರ ನಡುವೆ ಭಿನ್ನಾಭಿಪ್ರಾಯವಿದೆ.

ಸರ್ ಅಲಿ ಮಹಮ್ಮದ್ ಖಾನ್ ದೆಹಲವಿ: 'ಪಕ್ಕಾ ಮವಾಲಿ'ಯನ್ನು ವಾಡಿಕೆಯಾಗಿ ಎಂಬುದು ವರ್ಣಿಸುತ್ತದೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಕಾನೂನುಬಾಹಿರ ಕೃತಿಗಳನ್ನು ವಾಡಿಕೆಯಾಗಿ ಮಾಡುವ ವ್ಯಕ್ತಿಯೇ ಪಕ್ಕಾ ಮವಾಲಿ ಎಂದು ಅವಶ್ಯವಾಗಿ ಹೇಳುವಂತಿಲ್ಲ. ಜಗಳಗಂಟ ಅಥವಾ ದಾದಾ ಎಂಬರ್ಥದಲ್ಲಿ ಅವನು ಒಬ್ಬ ಮವಾಲಿ ಇರಬಹುದು. ನಾನು ಏನೂ ಹೇಳದಿರುವುದರ ಬಗ್ಗೆ ಸದಸ್ಯರು ನನಗೆ ಮಾತನಾಡಿಸಹೊರಟಿದ್ದಾರೆ. ನಾನು 'ಪಕ್ಕಾ ಮವಾಲಿ' ಅಂದಾಗ, ವಾಡಿಕೆಯಾಗಿ ಬೇಕಾಯದೇಶೀರ ಕೃತಿಯಲ್ಲಿರುವವ ಎಂದು ನಾನು ಹೇಳಿಲ್ಲ. ನೀವು ಈಗ ನಾನು ಹೇಳಿರುವೆನೆಂದು ಎನ್ನುತ್ತಿರುವಿರಿ.

ಸರ್ ಅಲಿ ಮಹಮ್ಮದ್ ಖಾನ್ ದೆಹಲವಿ: ಮಾನ್ಯರೆ, ಮಾನ್ಯ ಮಂತ್ರಿಗಳು 'ಪಕ್ಕಾ ಮವಾಲಿ' ಎಂದು ಅಂದಾಗ ಅವರ ಮನಸ್ಸಿನಲ್ಲಿ ಮವಾಲಿಗಳ ಅನೇಕ ವರ್ಗಗಳು ಇರಬೇಕೆಂದು ನಾವು ತಕ್ಷಣ ತಿಳಿದುಕೊಂಡಿದ್ದೆವು ಎಂದು ನಾನು ಹೇಳಬಯಸುವೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಅದಕ್ಕೆ ನನ್ನ ಒಪ್ಪಿಗೆಯಿದೆ. ಮವಾಲಿಗಳ ವರ್ಗವೇ ಇರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಮಂತ್ರಿಗಳು ಒಮ್ಮೆ ಯಾವುದಾದರೂ ಇಂತಹ ಕೃತ್ಯ ಎಸಗಿದ ವ್ಯಕ್ತಿಯ ವಿಷಯದಲ್ಲಿ ನಿಜವಾಗಿಯೂ ಏನೂ ಮಾಡಲು ಬಯಸುವುದಿಲ್ಲ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಮಾನ್ಯ ಸದಸ್ಯರಿಗೆ ನಾನು ಕಲಕತ್ತೆಯಿಂದ ಬಂದ ಗುಂಡಾ ಜನರ ಗುಂಪಿನ ಬಗ್ಗೆ ಉದಾಹರಣೆ ಕೊಟ್ಟಿರುವೆ. ಅದರಲ್ಲಿ ೧೧ ಜನರು ಯಾವ ಅಪರಾಧವನ್ನು ಮಾಡಿರಲಿಲ್ಲ; ಆದರೆ ಬೇಕಾಯದೇಶೀರ ಕೃತಿಗಳನ್ನು ಮಾಡುವವರಿದ್ದರು. ಪೊಲೀಸರ ಜಾಗೃತಿಯಿದ್ದರೂ ಸಹ ಕಲಕತ್ತೆಯಲ್ಲಿ ಅವರಲ್ಲಿ ಅಪರಾಧಿಗಳೆಂದು ನಿರ್ಣಯಿಸಲಾಗಿರಲಿಲ್ಲ. ಅವರಲ್ಲಿ ಕೆಲವರಂತೂ...

ಡಾ. ಬಿ. ಆರ್. ಅಂಬೇಡ್ಕರ್: ಕಲಕತ್ತೆಯಲ್ಲಿ ಅವರು ಅಪರಾಧಗಳನ್ನು ಮಾಡುತ್ತಿದ್ದರೆ, ಅವರು ವಾಡಿಕೆಯಾಗಿ ಹಾಗೆ ಇದ್ದರೆಂದು ಆಗುತ್ತದೆ. ಮುಂಬೈಯಲ್ಲಿ ವಾಡಿಕೆಯಾಗಿ ಅಪರಾಧ ಮಾಡುತ್ತಲೇ ಹೋಗಬೇಕೆಂಬುದು ನನ್ನ ಅರ್ಥವಲ್ಲ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಅಲ್ಲಿ ಬೇಕಾಯದೇಶೀರ ಕೃತಿ ಮಾಡಿದ್ದಕ್ಕೆ ಅವರನ್ನು ಅಪರಾಧಿಗಳಾಗಿ ನಿರ್ಣಯಿಸಿರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನನ್ನ ತಿದ್ದುಪಡಿಯಲ್ಲಿರುವ ಪದಜೋಡಣೆಯ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯಬಹುದೇ? ಅದು ಹೀಗಿದೆ.

'..... ಆ ವ್ಯಕ್ತಿಯು ಎಷ್ಟು ಭಯಾನಕವಾಗಿ ಹಾಗೂ ಅಪಾಯಕಾರಿಯಾಗಿ ಇರುತ್ತೇನೆ ಎಂದರೆ ವಿಶಾಲವಾದ ನಗರದಲ್ಲಿ ಅವನ ಉಪಸ್ಥಿತಿಯೇ ಅಪಾಯಕಾರಿಯಾಗಿರುತ್ತದೆ...' ಗುಂಡಾ ಗುಂಪಿನ ಒಬ್ಬ ವ್ಯಕ್ತಿ ಇದರಲ್ಲಿ ಬರುತ್ತಾನೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಮಾನ್ಯ ಸದಸ್ಯರು ತಾಳ್ಮೆ ತೋರಿಸಿದರೆ, ಅವರಿಗೆ ತಾನು ತಿಳಿಸುವೆ. ವ್ಯಕ್ತಿಯು ಭಯಾನಕವಾಗಿ ಇರುವುದಿಲ್ಲ; ನಾನು ಹೇಳಿದ ಆ ಗೆಳೆಯರ ತಂಡದ ಮುಂದಾಳಿನ ಉದಾಹರಣೆಯನ್ನು ಕೊಡುವೆ. ಅವನು ಕಲಕತ್ತೆಯಲ್ಲಿ ಬಹುಶಃ ಮೋಟಾರಿನಲ್ಲಿ ಓಡಾಡುತ್ತಿರ ಬಹುದು. ಅವನು ಯುರೋಪ್‌ದವನು; ಮುಂಬೈನಲ್ಲಿ ಸುಶಿಕ್ಷಿತರ ಸಮಾಜದಲ್ಲಿ ಮಾನ್ಯತೆ ಪಡೆದವನು. ಆದರೆ ಅವನು ಲಾಠಿಯನ್ನು ಹಿಡಿದುಕೊಂಡು ದಾರಿಯಲ್ಲಿ ಓಡಾಡುತ್ತಿರುವಂಥ ಭಯಾನಕ ವ್ಯಕ್ತಿಯಿರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅಪಾಯಕಾರಿ ಎಂಬ ಪದ ಅಲ್ಲಿ ಇದೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಮಾನ್ಯರೆ, "ಅಪಾಯಕಾರಿ" ಎಂಬುದರ ಅರ್ಥವಾದರೂ ಏನು?

ಡಾ. ಬಿ. ಆರ್. ಅಂಬೇಡ್ಕರ್: ಕಲಮಿನಲ್ಲಿ ಕೊಟ್ಟ ಪದವನ್ನೇ ನಾನು ಬಳಸಿಕೊಂಡಿರುವೆ; ಅವು ಸಂಪೂರ್ಣವಾಗಿ ಅರ್ಥವಾಗುವ ಪದಗಳು ಎಂಬುದರಲ್ಲಿ ನನಗೆ ಸಂಶಯವಿಲ್ಲ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಮಾನ್ಯರೆ "ಅಪಾಯಕಾರಿ ಮತ್ತು ಭಯಾನಕ" ಈ ಪದಗಳು ಜಗಳಗಂಟರಿಗೆ ಅನ್ವಯಿಸುತ್ತವೆ; ಪದದ ಈ ಅರ್ಥದಲ್ಲಿ ದೈಹಿಕವಾಗಿ ಆ ವ್ಯಕ್ತಿಗಳು ಬೇಕಾದ ಹಾಗೆ ಓಡಾಡುತ್ತಿರುತ್ತಾರೆ, ಜನರನ್ನು ಹೆದರಿಸುತ್ತಿರುತ್ತಾರೆ ಅಥವಾ ತಾವು ಅಪಾಯಕಾರಿ ಎಂಬುದನ್ನು ತೋರಿಸುತ್ತಿರುತ್ತಾರೆ. ಈ ಪದಗಳು ಖೋತಾ ತಂಡದ ನಾಯಕನಿಗೆ ಅನ್ವಯಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇಂಥದನ್ನು ನೋಡಿಕೊಳ್ಳಲು "ಇಂಡಿಯನ್ ಪೀನಲ್ ಕೋಡ್"ನಲ್ಲಿ ಪ್ರತ್ಯೇಕವಾದ ಅಧ್ಯಾಯ XVI ಇರುವುದು; ಅದನ್ನು ನಾನು ಬಿಟ್ಟಿರುವೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಆದರೆ ನೀವು "ವಾಡಿಕೆಯಾಗಿ ತೊಡಗಿದವರು" ಎಂದು ಹೇಳಿರುವಿರಿ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ಸೂಚಿಸಿದ ಪದಗಳು ಹಲವು ರೀತಿಯ ವ್ಯಕ್ತಿಗಳಿಗೆ ಮಾತ್ರ ಅನ್ವಯಿಸುವುದರಿಂದ ಈ ಕಲಮಿನ ಅವಕಾಶವನ್ನು ಮಿತಿಗೊಳಿಸಿದೆಯೆಂದು, ಈಗ ಇರುವಂತೆ ಸದ್ಯದ ಕಲಮಿನ ಪ್ರಕಾರ ಅಂತಹ ವ್ಯಕ್ತಿಗಳ ಅನೇಕ ವ್ಯವಹಾರಗಳು ಇದರಲ್ಲಿ ಒಳಗೊಳ್ಳುವುದಿಲ್ಲವೆಂದು ನಾನು ಸದನಕ್ಕೆ ತಿಳಿಸಬಹುದಾಗಿದೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಮಾನ್ಯರೆ, ಸ್ವತಃ ಮಾನ್ಯ ಸದಸ್ಯರೇ ಪದಗಳು ವಿಧೇಯಕದ ಅವಕಾಶವನ್ನು ನಿರ್ಬಂಧಿಸುತ್ತದೆ ಎಂದು ಒಪ್ಪಿಕೊಂಡಿರುವರು; ಹಾಗಾದರೆ ಈ ವಿಧೇಯಕಕ್ಕೆ ಏನೇನೂ ಅರ್ಥವಿಲ್ಲ. ಕಲಮನ್ನು ಅದು ಇಷ್ಟು ನಿರರ್ಥಕಮಾಡುತ್ತಿದ್ದರೆ, ಯಾವ ಉದ್ದೇಶದಿಂದ ಅದನ್ನು ಯೋಜಿಸಲಾಗಿದೆಯೋ ಆ ಉದ್ದೇಶವೇ ನಿರುಪಯೋಗಿ ಶಸ್ತ್ರವಾಗುವುದು, ಆದ್ದರಿಂದ ತಿದ್ದುಪಡಿಯನ್ನು ಸ್ವೀಕರಿಸಲು ನನಗೆ ಶಕ್ಯವಿಲ್ಲ.

ಮಾನ್ಯ ಸಭಾಪತಿಗಳು: ನಾನೀಗ ತಿದ್ದುಪಡಿಯನ್ನು ಮತ್ತು ತಿದ್ದುಪಡಿಗೆ ಬಂದಿರುವ ತಿದ್ದುಪಡಿಗಳನ್ನು ಸದನದಲ್ಲಿ ನಿರ್ಣಯಕ್ಕಾಗಿ ಇಡುವೆನು. ಮೊದಲು ನಾನು ತಿದ್ದುಪಡಿಗೆ ಇರುವ ತಿದ್ದುಪಡಿಗಳನ್ನು ತೆಗೆದುಕೊಳ್ಳುವೆನು. ಡಾ. ಅಂಬೇಡ್ಕರ್ ಅವರ ತಿದ್ದುಪಡಿಗೆ ಬಂದಿರುವ ಶ್ರೀ ಭೋಲೆ ಅವರ ತಿದ್ದುಪಡಿಯನ್ನು ಮೊದಲು ತೆಗೆದುಕೊಳ್ಳುವೆ. ಅದನ್ನು ಓದಬೇಕೆ? (ಮಾನ್ಯ ಸದಸ್ಯರು: ಬೇಡ) ಈಗ ನಾನು ಪ್ರಶ್ನೆ ಕೇಳುವೆ.

ಪ್ರಶ್ನೋತ್ತರಗಳು ನಡೆದವು.

ಮಾನ್ಯ ಸಭಾಪತಿಗಳು: ಬೇಡ ಎನ್ನುವವರೇ ಬಹುಮತ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಅದು ಉದ್ದೇಶವನ್ನು ಮಾತ್ರ ಕೇಳುವ ಪ್ರಶ್ನೆಯಾಗಿದ್ದಿತು. ವಿಷಯದ ತಿದ್ದುಪಡಿ ಅದು ಅಲ್ಲವೇ ಅಲ್ಲ.

ಮಾನ್ಯ ಸಭಾಪತಿಗಳು: ಅದು ಅಲ್ಲವೇ ಅಲ್ಲ. ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರ ತಿದ್ದುಪಡಿಯ ಮೇಲಿನ ತಿದ್ದುಪಡಿಯನ್ನು ಸದನದಲ್ಲಿ ಕೊನೆಗೆ ಕೇಳಲಾಗುವುದು. ಆದ್ದರಿಂದ ಅದರಲ್ಲಿ ಯಾವ ಅಂತರವೂ ಆಗುವುದಿಲ್ಲ. ನಾನು ಧ್ವನಿಮೂಲಕ ಸದನದ ಉತ್ತರ ಪಡೆಯುವೆ.

ತಿದ್ದುಪಡಿ ಕೇಳಲಾಯಿತು; ಒಪ್ಪಿಗೆಯೂ ದೊರಕಿತು.

* * *

* ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೆ, ನನ್ನ ಮಾನ್ಯ ಶ್ರೀ ಚುಂದ್ರಿಗಾರ ಅವರು ಸೂಚಿಸಿದ ತಿದ್ದುಪಡಿಯನ್ನು ನಾನು ಅನುಮೋದಿಸಲು ಬಯಸುತ್ತೇನೆ. ಪೊಲೀಸ್ ಕಮೀಷನರನು ತಾನು ಸ್ವಾಧೀನಕ್ಕೆ ತೆಗೆದುಕೊಂಡ ವಸ್ತುವಿನ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವ ಮೊದಲು, ತಾನು ಗಡಿಪಾರು ಮಾಡುವ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸಬೇಕು ಹಾಗೂ ವಸ್ತುವನ್ನು ಮ್ಯಾಜಿಸ್ಟ್ರೇಟರಿಗೆ ತೋರಿಸಬೇಕು ಮತ್ತು ಮ್ಯಾಜಿಸ್ಟ್ರೇಟರಿಗೆ ತೃಪ್ತಿಯಾಗದ ಹೊರತು ಅವನು ಯಾವ ಕ್ರಮವನ್ನು ತೆಗೆದುಕೊಳ್ಳಬಾರದೆಂದು ತಿದ್ದುಪಡಿಯಲ್ಲಿ ಹೇಳಲಾಗಿದೆ. ಪೊಲೀಸ್ ಕಮೀಷನರನು ಸ್ವೇಚ್ಛಾನುಸಾರವಾಗಿ ಕ್ರಮ ತೆಗೆದುಕೊಳ್ಳದಿರಲು ಇದೊಂದು ರಕ್ಷಣೋಪಾಯವಾಗ ಬೇಕೆಂಬ ಉದ್ದೇಶದಿಂದ ಸಹಜವಾಗಿ ಈ ತಿದ್ದುಪಡಿ ಇದೆ. ಮಾನ್ಯರೆ, ಈಗ ರಕ್ಷಣೋಪಾಯಕ್ಕೆಂದು ಇರುವ ಈ ತಿದ್ದುಪಡಿಯು, ಆ ಜನರಿಗೆ ಅಗತ್ಯವಾದುದಕ್ಕಿಂತ ತೀಕ್ಷ್ಣವಾಯಿತೋ ಅಥವಾ ಇದು ಅನವಶ್ಯಕವಾಗಿದೆಯೋ ಎಂಬುದು ಒಂದು ಹೋಲಿಕೆಯನ್ನು ನೋಡಿದರೆ ಹೆಚ್ಚು ಸ್ಪಷ್ಟವಾಗು ವುದು ಎಂದು ನನ್ನ ಅನಿಸಿಕೆ. ಈಗ ನಾನು ಕ್ರಾಂತಿಕಾರಿಗಳ, ಕ್ರಾಂತಿಕಾರಕ ಅಪರಾಧಗಳಲ್ಲಿ ತೊಡಗಿ ರುವವರ ವಿಷಯ ತೆಗೆದುಕೊಳ್ಳುವೆ. ಇಂತಹವರ ಮೇಲೆ ವಿಧೇಯಕದ ತಿದ್ದುಪಡಿಯಂತೆ ಕ್ರಮ ಕೈಗೊಳ್ಳಬೇಕಾಗಿದ್ದರೂ ಜನರು, ನಿಜವಾಗಿಯೂ ಕ್ರಾಂತಿಕಾರಿಗಳಷ್ಟು ಅಪಾಯಕಾರಕ ಮೂಲದವರಲ್ಲ. ಆದ್ದರಿಂದ ಅವರಿಗೆ ಕ್ರಾಂತಿಕಾರಿಗಳಿಗಿಂತಲೂ ಬಹಳ ಹೆಚ್ಚಿನ ರಕ್ಷಣೋಪಾಯದ, ಬಹಳ ಹೆಚ್ಚಿನ ರಕ್ಷಣೆಯ ಅವಶ್ಯಕತೆ ಇದೆ. ಒಂದು ಕ್ಷಣ ಇಲ್ಲಿಗೇ ನಿಲ್ಲೋಣ; ಕ್ರಾಂತಿಕಾರಕ ಅಪರಾಧಗಳ ವಿರುದ್ಧ ಭಾರತದ ಕಾನೂನಿನಲ್ಲಿ ಯಾವ ಸಂರಕ್ಷಣೋಪಾಯಗಳಿವೆ ಎಂಬುದನ್ನು ನೋಡೋಣ. ಹಳೆಯ ಇತಿಹಾಸದ ಬಗ್ಗೆ ಹೇಳುವುದು ನನಗೆ ಬೇಕಾಗಿಲ್ಲ; ಆದರೆ ನನ್ನ ಹತ್ತಿರ ೧೯೨೩ರಲ್ಲಿ ಭಾರತ ಸರ ಕಾರವು ನೇಮಿಸಿದ "ದೇಶದ್ರೋಹ ಸಮಿತಿ" ವರದಿಯು ಇದೆ. ಸಮತಿಯ ಉದ್ದೇಶಗಳ ಸಂದರ್ಭ ದಲ್ಲಿ ಹೇಳಿದುದು ಹೀಗಿದೆ: "ಭಾರತದಲ್ಲಿಯ ಕ್ರಾಂತಿಕಾರಕ ಚಳವಳಿಯ ಬಗ್ಗೆ ವರದಿ ಕೊಡುವುದು,

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ–೩, ಪುಟ ೨೫೩೩–೩೪,
ದಿನಾಂಕ ೨೮ ಏಪ್ರಿಲ್ ೧೯೩೮.

ಅಪರಾಧಿಕ ಒಳಸಂಚು ವ್ಯವಹಾರದಲ್ಲಿ ಉದ್ಭವವಾಗುವ ತೊಂದರೆಗಳನ್ನು ಪರೀಕ್ಷಿಸುವುದು, ಅಪರಾಧಿಗಳನ್ನು ಶಿಕ್ಷಿಸಬೇಕಾದ ಕ್ರಮಗಳನ್ನು ಸೂಚಿಸುವುದು." ಸಮಿತಿಯು ಒಂದೊಂದನ್ನೇ ಬಿಡದೆ ಎಲ್ಲವನ್ನೂ ತಿಳಿಸಿರುವುದದರಿಂದ ಭಾರತದಲ್ಲಿಯ ಕ್ರಾಂತಿಕಾರಕ ಅಪರಾಧಗಳ ಬಗ್ಗೆ ನಾನು ಮತ್ತೆ ಹೇಳುವುದು ಅನವಶ್ಯಕ. "ದೇಶದ್ರೋಹ ಸಮಿತಿಯು" ಸೂಚಿಸಿದ ರಕ್ಷಣೋಪಾಯವು ಮಾತ್ರ ನಮ್ಮ ಉದ್ದೇಶಕ್ಕೆ ಯೋಗ್ಯವಾಗಿದೆ.

ಈ ಸಮಿತಿಯಲ್ಲಿ ಯಾರು ಯಾರು ಇದ್ದರು ಎಂಬುದನ್ನು ತಿಳಿದುಕೊಳ್ಳಲು ಸದನಕ್ಕೆ ಕುತೂಹಲವಿರಬಹುದು. ಆದ್ದರಿಂದ ಈ ಸಮಿತಿಯಲ್ಲಿರುವ ಸದಸ್ಯರ ಹೆಸರುಗಳನ್ನು ತಿಳಿಸುವೆ: ಶ್ರೀ ಜಸ್ಟಿಸ್ ಕೌಲತ್, ಕಿಂಗ್ಸ್ ಬೆಂಚ್ ಡಿವಿಜನ್‌ದ ನ್ಯಾಯಾಧೀಶರು, ಸರ್ ಬಾಸಿರ್ ಸ್ಕಿಟ್, ಮುಂಬೈಯ ಮುಖ್ಯ ನ್ಯಾಯಾಧೀಶರು, ಮದ್ರಾಸ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ದಿವಾಣ ಬಹದ್ದೂರ ಸಿ.ವಿ. ಕುಮಾರಸ್ವಾಮಿ ಶಾಸ್ತ್ರಿ, ಸರ್ ವೆರ್ನಿ ಲೊವೆಚ್, ಕಂದಾಯ ಮಂಡಳಿಯ ಸದಸ್ಯರು, ಸಂಯುಕ್ತ ಪ್ರಾಂತ ಮತ್ತು ಶ್ರೀ ಸಿ. ಪಿ. ಮಿತ್ತರ್. ಈ ಸಮಿತಿಯಲ್ಲಿ ನ್ಯಾಯಾಂಗದ ಮನೋದೃಷ್ಟಿ ಇರುವವರೇ ಬಹಳ ಸದಸ್ಯರಿದ್ದರು. ಕ್ರಾಂತಿಕಾರಕ ಅಪರಾಧದ ವ್ಯವಹಾರವನ್ನು ಭಾರತದ ಸರಕಾರವು ನೋಡ ಬೇಕೆಂದಾಗಲೆಲ್ಲ ಕ್ರಾಂತಿಕಾರರಿಗೆ ಶಿಕ್ಷೆ ಕೊಡುವ ಮೊದಲು ನ್ಯಾಯಮಂಡಳಿಯಲ್ಲಿ ಅವರ ವಿಚಾರಣೆ ಯಾಗಬೇಕು ಎಂಬುದು ಎಲ್ಲ ಕಾಲಕ್ಕೂ ಸತ್ಯ ಸಂಗತಿಯಾಗಿದ್ದಿತು. ನ್ಯಾಯಾಂಗದ ಕ್ರಮವನ್ನು ಎಂದೆಂದೂ ತೆಗೆದುಕೊಳ್ಳುತ್ತಿರಲಿಲ್ಲ. ಇದಕ್ಕೆ ಕಾರಣವೆಂದರೆ, ನ್ಯಾಯಾಂಗ ಮಂಡಳಿಯು ಭಾರತ ಸರ ಕಾರದ ಆಡಳಿತದಲ್ಲಿದ್ದ ವ್ಯಕ್ತಿಗಳಿಂದ ಕೂಡಿದುದಾಗಿರುತ್ತಿತ್ತು. ಸಮಿತಿಯು ಪರಿಚ್ಛೇದ ೧೮೨ರಲ್ಲಿ ಹೀಗೆ ಹೇಳಿದೆ:

> "ಭಾರತದ ಸಂರಕ್ಷಣಾ ಕಾನೂನಿನಂತೆ ಸ್ಥಾಪಿತವಾದ ಕ್ರಮವನ್ನು ನಾವು, ಶಿಫಾರಸು ಮಾಡುವಾಗಲೂ, ಈ ಕಾನೂನುಗಳ ಪ್ರಕಾರ ಇರುವ ನ್ಯಾಯಮಂಡಳಿಗಳ ಘಟನೆಯನ್ನು ತಿದ್ದುಪಡಿ ಮಾಡಲೇಬೇಕು. ಈ ನ್ಯಾಯಮಂಡಳಿಗಳು ಈಗಾಗಲೇ ಇರುವ ನ್ಯಾಯಾಂಗದ ಸದಸ್ಯರ ಹೊರತು ಆಡಳಿತಾತ್ಮಕ ವಿಭಾಗದಿಂದ ಆಯ್ಕೆಯಾದ ಸದಸ್ಯರಿಂದ ನ್ಯಾಯ ಮಂಡಳಿಯ ರಚಿತವಾದದ್ದಿರಬೇಕು ಎಂಬುದು ಅಪೇಕ್ಷಣೀಯವಲ್ಲ. ಈವರೆಗೂ ನೇಮಕಗೊಂಡ ವಿಶೇಷ ನ್ಯಾಯಮಂಡಳಿಗಳು ಅಪರಾಧಿಗೆ ಅನ್ಯಾಯ ಮಾಡಿದ ಸೂಚನೆಗಳು ನಮಗೆ ಎಂದೂ ತೋರಿಬಂದಿಲ್ಲ; ಆದರೆ ತಾತ್ವಿಕವಾಗಿ ಇರುವ ವಿರೋಧಗಳನ್ನು ನಾವು ಮರೆಮಾಚಕೂಡದೆಂದು ನಮಗೆ ಅನಿಸುತ್ತದೆ. ಇದಲ್ಲದೆ ಮೇಲ್ಮನವಿಯು ಇಲ್ಲದ್ದರಿಂದ, ನ್ಯಾಯಮಂಡಳಿಗಳೇ ಸರ್ವೋಚ್ಚ ಸಾಮರ್ಥ್ಯ ಹಾಗೂ ಅಧಿಕಾರವುಳ್ಳವುಗಳಾಗಿವೆ."

ಕ್ರಾಂತಿಕಾರರಿಗೆ ಅತಿ ಹಾಗೂ ಅನ್ಯಾಯವಾದದ್ದು ಆಗಬಾರದೆಂಬ ಉದ್ದೇಶವಿದ್ದರೆ, ಈ ವಿಧೇ ಯಕದಲ್ಲಿ ಯೋಚಿಸಲಾದ ವ್ಯಕ್ತಿಗಳನ್ನು ವಿವೇಚಿಸುವಾಗ ಇನ್ನೂ ಹೆಚ್ಚಿನ ರಕ್ಷಣೋಪಾಯದ ಅವಶ್ಯಕತೆ ಇದೆಯೆಂದು ಯಾವ ಬುದ್ಧಿಜೀವಿಗೂ ಎನಿಸದೇ ಇರಲಾರದು. ಅದೇನೇ ಇರಲಿ, ತಿದ್ದುಪಡಿ ಯಾದರೂ ಏನು ಕೇಳುತ್ತಿದೆ? ನಗರದಿಂದ ಗಡಿಪಾರು ಮಾಡಬೇಕಾದ ವ್ಯಕ್ತಿಯ ವಿರುದ್ಧ ಪೊಲೀಸ್ ಕಮೀಶನರನು ಮಾಡಿದ ಆಪಾದನೆಗಳನ್ನು ಪರೀಕ್ಷಿಸಲು, ಮ್ಯಾಜಿಸ್ಟ್ರೇಟರು ಇರುವ ಒಂದು ನ್ಯಾಯ ಮಂಡಳಿಯನ್ನು ನೇಮಿಸಬೇಕು ಎಂದು ತಿದ್ದುಪಡಿಯು ಕೇಳುವುದಿಲ್ಲ. ಅಥವಾ ಮ್ಯಾಜಿಸ್ಟ್ರೇಟರ ಎದುರು

ವಸ್ತುಗಳನ್ನು ಒಪ್ಪಿಸಿದಾಗ, ನ್ಯಾಯ ವಿಚಾರಣೆಯಲ್ಲಿಯಂತೆ ಅವುಗಳ ಪರೀಕ್ಷೆಯಾಗಬೇಕೆಂದೂ ತಿದ್ದುಪಡಿಯು ಕೇಳುವುದಿಲ್ಲ. ಪೊಲೀಸ್ ಕಮೀಷನರನು ಮ್ಯಾಜಿಸ್ಟ್ರೇಟರ ಎದುರಿನಲ್ಲಿ ವಸ್ತುಗಳನ್ನು ಒಪ್ಪಿಸಿದಾಗ ಸುಳುವನ್ನು ನೀಡಿದವನ ಹೆಸರು ಪ್ರಕಟವಾಗಬೇಕೆಂದೂ ತಿದ್ದುಪಡಿಯು ತಿಳಿಸುವುದಿಲ್ಲ. ಇಂತಹದಾವುದನ್ನೂ ಕೇಳಿಲ್ಲ. ತಿದ್ದುಪಡಿಯು ಬಹಳಷ್ಟು ಮೃದುವಾಗಿದೆ. ಪೊಲೀಸ್ ಕಮೀಷನರನು ಕೊಟ್ಟ ವಸ್ತುವಿನ ಬಗ್ಗೆ ಮ್ಯಾಜಿಸ್ಟ್ರೇಟನೊಬ್ಬ ಕುಳಿತುಕೊಂಡು ನ್ಯಾಯನಿರ್ಣಯ ನೀಡುವ ಆ ಅವಶ್ಯಕತೆಯೂ ಇಲ್ಲ. ಮ್ಯಾಜಿಸ್ಟ್ರೇಟನು ಅದನ್ನೇ ಪರೀಕ್ಷಿಸಿ ನೋಡಬಹುದು ಹಾಗೂ ಪೊಲೀಸ್ ಕಮೀಷನರು ಇಚ್ಛಿಸಿದರೆ ಕ್ರಮ ತೆಗೆದುಕೊಳ್ಳಲು ತೃಪ್ತಿಕರವಾದ ವಿಷಯವಾಗಿದೆಯೆಂದು ಒಂದು ಪ್ರಮಾಣಪತ್ರ ಕೊಡಬಹುದು ಎಂಬಷ್ಟನ್ನೇ ಅದು ತಿಳಿಸುತ್ತದೆ. ಈಗ ಮಾನ್ಯರೆ, ಎಲ್ಲ ಆಧಾರಗಳಿಂದಲೂ ವಿಚಾರಿಸಿದಾಗ, ಅವಕಾಶ ಕೊಡಬಹುದಾಗ, ಅವಕಾಶ ಕೊಡಲೇಬೇಕಾದ ಅತ್ಯಂತ ಮೃದುವಾದ ರೀತಿಯ ರಕ್ಷಣೋಪಾಯ ಇದಾಗಿದೆಯೆಂದು ನಾನು ಹೇಳಬಯಸುವೆ. ಮಾನ್ಯರೆ, ಮಾನ್ಯ ಸದಸ್ಯ ಶ್ರೀ ಪಾಟಸಕರ್ ಅವರ ತಿದ್ದುಪಡಿಯು ಈಗ ಒಪ್ಪಿಗೆಯಾದ ಸತ್ಯ ಸಂಗತಿಯಿಂದ, ನನ್ನ ತಿದ್ದುಪಡಿ ಒಪ್ಪಿಗೆಯಾಗಿ ಪೊಲೀಸ್ ಕಮೀಷನರನ ಅಧಿಕಾರಗಳು ಹೇಗೆ ಇರುತ್ತಿದ್ದವೋ ಅದಕ್ಕೂ ಹೆಚ್ಚಿನ ಅಪರಿಮಿತ ಅಧಿಕಾರಗಳು ಇರುವುದರಿಂದ ಪೊಲೀಸ್ ಕಮೀಷನರು ಸ್ವೇಚ್ಛಾನುಸಾರ ರೀತಿಯಲ್ಲಿ ವರ್ತಿಸದಂತೆ ಈ ವಿಧೇಯಕದಲ್ಲಿ ಅಲ್ಪಪ್ರಮಾಣದ– ನಾನು ಅತ್ಯಲ್ಪ ಪ್ರಮಾಣದ ಎಂದೂ ಅನ್ನುವೆ– ರಕ್ಷಣೋಪಾಯವನ್ನು ಕಲ್ಪಿಸುವುದು ವಿರೋಧಪಕ್ಷದವರಿಗೂ, ಇಡೀ ಸದನಕ್ಕೂ ಇದೀಗ ಹೆಚ್ಚು ಅಗತ್ಯದ್ದಾಗಿದೆಯೆಂದು ನಾನು ನಿವೇದಿಸುವೆ.

# ೩೨

# ಮುಂಬೈ ಪೊಲೀಸ್ ಕಾಯ್ದೆ ತಿದ್ದುಪಡಿ ಮಸೂದೆ: ೩

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ನಾನು ನಿವೇದಿಸುವುದೇನೆಂದರೆ ಮಾನ್ಯ ಸದಸ್ಯ ಶ್ರೀ ಪಾಟಸಕರ್ ಅವರ ತಿದ್ದುಪಡಿಯನ್ನು ನಾವು ಸ್ವೀಕರಿಸಿರುವ ಮೂಲಕ ಪೊಲೀಸ್ ಕಮೀಷನರಿಗೆ ನಾವು ಕೊಟ್ಟ ಅಧಿಕಾರವನ್ನು ಅವನು ಯಾವ ವ್ಯವಹಾರಗಳಲ್ಲಿ ಉಪಯೋಗಿಸಬಹುದೆಂಬುದನ್ನು ನಿರ್ದೇಶಿಸಿದ್ದೇವೆ. ಒಬ್ಬ ವ್ಯಕ್ತಿಯ ವಿರುದ್ಧ ಸಾಕ್ಷಿದಾರರು ಸಾರ್ವಜನಿಕವಾಗಿ ಮುಂದೆ ಬರಲು ಒಪ್ಪುತ್ತಿಲ್ಲವೆಂದು ಪೊಲೀಸ್ ಕಮೀಷನರನ ಅಭಿಪ್ರಾಯವಾಗಿದೆ, ಆಗ ಅವನು ಇಂಥ ವ್ಯವಹಾರಗಳಲ್ಲಿ ತನ್ನ ಅಧಿಕಾರ ಉಪಯೋಗಿಸಬೇಕೆಂದು ನಿರ್ದೇಶಿಸಲಾಗಿದೆ. ಸಾಕ್ಷಿದಾರರು ತಮ್ಮ ಸುರಕ್ಷತೆಯ ಸಲುವಾಗಿ ಸಾಕ್ಷಿ ಕೊಡಲು ಮುಂದೆ ಬರುವುದಿಲ್ಲವೆಂಬ ಅಭಿಪ್ರಾಯ ಅವನಿಗೆ ಇದ್ದಾಗ ಇಂಥ ವ್ಯವಹಾರಗಳಲ್ಲಿ ಮಾತ್ರ ಪೊಲೀಸ್ ಕಮೀಷನರ್ ತನ್ನ ಅಧಿಕಾರ ಉಪಯೋಗಿಸಬೇಕೆಂದು ಅವನಿಗೆ ಹೇಳಲಾಗಿದೆ. ಉಪ ಪರಿಚ್ಛೇದ(೨)ರಲ್ಲಿ ವಿಧೇಯಕವು ಪೊಲೀಸ್ ಕಮೀಷನರ್ ಅನುಸರಿಸಬೆಕಾದ ಹಲವು ಕಾರ್ಯ ವಿಧಾನಗಳನ್ನು ತಿಳಿಸ ಲಾಗಿದೆ. ಮೊದಲನೆಯದಾಗಿ, ಪೊಲೀಸ್ ಕಮೀಷನರನು ಆಪಾದನೆಯ ವಿವರಗಳನ್ನು ಕೊಡಬೇಕು; ಎರಡನೆಯದಾಗಿ ಆಪಾದನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಲು ಪೊಲೀಸ್ ಕಮೀಷನರ್ ಆ ವ್ಯಕ್ತಿಗೆ ಅವಕಾಶ ಕೊಡಬೇಕು; ಮೂರನೆಯದಾಗಿ ಪರಿಚ್ಛೇದ (೬)ರಲ್ಲಿ ಪೊಲೀಸ್ ಕಮೀಷನರ್ ಅಂಗೀಕರಿಸಿದ ನಿರ್ಣಯವನ್ನು ಆಪರಾಧಿಕ ನ್ಯಾಯಾಲಯದಲ್ಲಿ ಪ್ರಶ್ನಿಸುವ ಹಕ್ಕಿನ ಬಗ್ಗೆ ಹೇಳಲಾಗಿದೆ. ಈ ಕಲಮು ಏನು ಹೇಳುತ್ತದೆ: ಎಂದರೆ ವಿಧೇಯಕದಲ್ಲಿರುವ ಕಾರ್ಯವಿಧಾನದಂತೆ ಎಲ್ಲವನ್ನೂ ಅನುಸರಿಸಿದೆಯೋ ಇಲ್ಲವೋ– ಇದನ್ನು ನಿಶ್ಚಯಾತ್ಮಕವಾಗಿ ನಾನು ಹೇಳುತ್ತಿರುವೆ– ಎಂಬುದನ್ನು ಮಾತ್ರ ಪರಿಶೀಲಿಸುವ ಹಕ್ಕು ನ್ಯಾಯಾಲಯಕ್ಕೆ ಇದೆ. ಕಾರ್ಯವಿಧಾನದಂತೆ ಪೊಲೀಸ್ ಕಮೀಷನರ್ ಅನುಸರಿಸುವ ವಿಧಾನಗಳಲ್ಲಿ ಮೊದಲನೆಯದು, ಆಪಾದನೆಯ ವಿವರಗಳನ್ನು ಕೊಡಬೇಕು; ಎರಡನೆಯದಾಗಿ ಆಪಾದನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಲು ವ್ಯಕ್ತಿಗೆ ಅವಕಾಶ ಕೊಡಬೇಕು; ಮೂರನೆಯ ದಾಗಿ– ಮೂಲದಲ್ಲಿ ಇದನ್ನು ಬಿಡಲಾಗಿದ್ದಿತು. ಆದರೆ ಉಚ್ಚ ನ್ಯಾಯಾಲಯದ ನ್ಯಾಯ ನಿರ್ಣಯದಲ್ಲಿ ಇದೊಂದು ಭಾಗವಾಗಿದ್ದಿತು– ಪೊಲೀಸ್ ಕಮೀಷನರ್ ಹತ್ತಿರ ಮಾಹಿತಿ ಇರಬೇಕು. ಮಾನ್ಯ ಸದಸ್ಯ ಶ್ರೀ ಪಾಟಸಕರ್ ಮಂಡಿಸಿದ ತಿದ್ದುಪಡಿಯಲ್ಲಿ ಈಗ ಇದನ್ನು ಸೇರಿಸಲಾಗಿದೆ. ತಮ್ಮ ಸುರಕ್ಷಿತೆಯ ಸಲುವಾಗಿ ಸಾಕ್ಷಿದಾರರು ಮುಂದೆ ಬಾರದಿದ್ದಾಗ ಅಂಥ ವ್ಯವಹಾರಗಳಲ್ಲಿ ಮಾತ್ರ ಪೊಲೀಸ್ ಕಮೀಷನರ್ ಈ ಅಧಿಕಾರವನ್ನು ಉಪಯೋಗಿಸಬೇಕೆಂದು ನಾವು ಸ್ವೀಕರಿಸಿದ ಪರಿಚ್ಛೇದದಲ್ಲಿ ಸೇರಿಸಿದ್ದೇವೆ. ಮಾನ್ಯ ಸದಸ್ಯ ಶ್ರೀ ಭೋಲೆಯವರ ತಿದ್ದುಪಡಿಯು, ಉಚ್ಚ ನ್ಯಾಯಾಲಯವು ಆಜ್ಞೆಯನ್ನು ರದ್ದುಗೊಳಿಸಲು

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೨೫೮೬–೮೭
ದಿನಾಂಕ ೨೯ ಏಪ್ರಿಲ್ ೧೯೩೮.

ಮತ್ತೊಂದು ಅವಕಾಶವನ್ನು ಕಲ್ಪಿಸುವುದಾಗಿದೆ. ಉಪ ಪರಿಚ್ಛೇದದಲ್ಲಿ ಈಗ ಹೇಳಿರುವುದು ಹೀಗಿದೆ: ಹಾಜರುಪಡಿಸಿದ ಆಪಾದಿತನಿಗೆ ಆಪಾದನೆಯ ವಿವರಗಳನ್ನು ಸಲ್ಲಿಸಲಿಲ್ಲವಾದರೆ, ಅವನ ವಿರುದ್ಧವಾಗಿರುವ ಆಪಾದನೆಗಳ ಬಗ್ಗೆ ಅರ್ಥ ವಿವರಣೆ ಕೊಡಲು ಆ ವ್ಯಕ್ತಿಗೆ ಅವಕಾಶ ಕೊಡದಿದ್ದರೆ ಅಥವಾ ಅವನ ಸಾಕ್ಷಿದಾರರನ್ನು ಪರೀಕ್ಷಿಸಿ ನೋಡಿರದಿದ್ದರೆ ಮತ್ತು ಕೊನೆಯದಾಗಿ– ಶ್ರೀ ಪಾಟಸಕರರ ತಿದ್ದುಪಡಿಯಂತೆ– ಪೊಲೀಸ್ ಕಮೀಷನರ್ ಆಜ್ಞೆ ಮಾಡುವಷ್ಟು ಆಧಾರ ಅವನ ಹತ್ತಿರ ಇರದಿದ್ದರೆ, ಉಚ್ಚ ನ್ಯಾಯಾಲಯವು ಆಜ್ಞೆಯನ್ನು ರದ್ದು ಮಾಡಬಹುದಾಗಿದೆ. ಮಾನ್ಯ ಸದಸ್ಯ ಶ್ರೀ ಭೋಲೆ ಅವರು ಮತ್ತೆ ಸೇರಿಸಬೇಕೆಂದಿರುವ ಕರಾರು ಮಾನ್ಯ ಸದಸ್ಯ ಶ್ರೀ ಪಾಟಸಕರ್ ಅವರ ತಿದ್ದುಪಡಿಯ ಭಾಗ Iರಲ್ಲಿ ಬಂದಿದೆ. ಅದು ಹೀಗಿದೆ: ಸಾಕ್ಷಿ ನೀಡಲು ಸಾಕ್ಷಿದಾರರು ಮುಂದೆ ಬರಲು ಒಪ್ಪದಿದ್ದರೆ ಎಂಬುದೂ ಆಜ್ಞೆಯನ್ನು ರದ್ದುಪಡಿಸಲು ದಂಡಾಧಿಕಾರಿ ನ್ಯಾಯಾಲಯಕ್ಕೆ ಆಧಾರಗಳಲ್ಲಿ ಒಂದಾಗಿ ಇರಬೇಕು ಎಂದಿದೆ. ಆದ್ದರಿಂದ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಅದು ಸೀಮಿತಗೊಳಿಸುವುದಿಲ್ಲ. ಅದಕ್ಕೆ ಗೊತ್ತುಮಾಡಿದ ಕಾರ್ಯ ಪದ್ಧತಿಯೂ ಇದೆ; ಆ ಪರಿಚ್ಛೇದದಲ್ಲಿ ಹೇಳಿದುದು ಇಷ್ಟೇ. ಉಚ್ಚ ನ್ಯಾಯಾಲಯವಾಗಲಿ ಅಥವಾ ದಂಡಾಧಿಕಾರಿ ನ್ಯಾಯಾಲಯವಾಗಲಿ ಪೊಲೀಸ್ ಕಮೀಷನರ್ ಈ ಎಲ್ಲ ಕಾರ್ಯ ಪದ್ಧತಿಯನ್ನು ಅನುಸರಿಸಿರುವನೋ ಇಲ್ಲವೋ ಎಂಬುದನ್ನು ನೋಡುವುದಾಗಿದೆ. ಉಚ್ಚ ನ್ಯಾಯಾಲಯವಾಗಲಿ ಅಥವಾ ದಂಡಾಧಿಕಾರಿ ನ್ಯಾಯಾಲಯವಾಗಲಿ ಪೊಲೀಸ್ ಕಮೀಷನರ್ ಕೊಟ್ಟ ವಸ್ತು ನಂಬಲರ್ಹವೇ ಎಂಬುದರ ನ್ಯಾಯ ನಿರ್ಣಯವನ್ನು ಕೊಡಬೇಕೆಂದು ಮಾನ್ಯ ಸದಸ್ಯ ಶ್ರೀ ಪಾಟಸಕರ್ ಅವರಾಗಲಿ ಅಥವಾ ಇಲ್ಲಿಯವರು ಯಾರೇ ಆಗಲಿ ಇಚ್ಛಿಸುವುದಿಲ್ಲ. ಪೊಲೀಸ್ ಕಮೀಷನರರ ಹತ್ತಿರ ಆಧಾರ ಇದ್ದುದನ್ನು ಮಾತ್ರ ನೋಡುವುದು ಅವಶ್ಯವಾಗಿದೆ. ಅದೇ ರೀತಿ, ಸಾಕ್ಷಿದಾರರು ಸಾಕ್ಷಿ ನೀಡಲು ಮುಂದೆ ಬಂದರೋ ಇಲ್ಲವೋ ಎಂಬುದರ ವಿಚಾರವನ್ನು ಪೊಲೀಸ್ ಕಮೀಷನರ್ ಮಾಡಿದ್ದರೋ ಹೇಗೆ ಎನ್ನುವುದನ್ನು ನ್ಯಾಯಾಲಯವು ನೋಡಬೇಕೆಂಬುದು ಮಾನ್ಯ ಸದಸ್ಯ ಶ್ರೀ ಭೋಲೆ ಅವರ ವಿಚಾರವಾಗಿದೆ. ಸಾಕ್ಷಿದಾರರು ಮುಂದೆ ಬರಲು ಏಕೆ ಸಿದ್ಧರಿಲ್ಲವೆಂಬುದರ ಪ್ರಶ್ನೆಯನ್ನು ವಿಚಾರಿಸಿ ಉಚ್ಚ ನ್ಯಾಯಾಲಯಕ್ಕಾಗಲಿ ಅಥವಾ ದಂಡಾಧಿಕಾರಿ ನ್ಯಾಯಾಲಯಕ್ಕಾಗಲಿ ನ್ಯಾಯನಿರ್ಣಯವನ್ನು ಕೊಡುವ ಅಧಿಕಾರವಿರಬೇಕೆಂದು, ಮಾನ್ಯ ಸದಸ್ಯ ಶ್ರೀ ಭೋಲೆ ಅವರ ತಿದ್ದುಪಡಿಯೂ ಬಯಸುವುದಿಲ್ಲ. ಆ ಪ್ರಶ್ನೆಯ ಬಗ್ಗೆ ಉಚ್ಚ ನ್ಯಾಯಾಲಯವಾಗಲಿ ಅಥವಾ ದಂಡಾಧಿಕಾರಿ ನ್ಯಾಯಾಲಯವಾಗಲಿ ಸೇರಬೇಕಾಗಿಲ್ಲ ಮತ್ತು "ಯಾರಿಗೂ ಸಮಾಧಾನಕೊಡದ ಆಧಾರಗಳು ಆಗಿದೆ" ಎಂದೂ ಹೇಳಬೇಕಾಗಿಲ್ಲ. ಪೊಲೀಸ್ ಕಮೀಷನರದೇ ಅಂತಿಮ ನಿರ್ಣಯವಾಗಿರುತ್ತದೆ. ಮಾನ್ಯ ಸದಸ್ಯ ಶ್ರೀ ಭೋಲೆ ಅವರ ತಿದ್ದುಪಡಿಯು ಈ ಪರಿಚ್ಛೇದದಲ್ಲಿ ಒಂದು ಕರಾರನ್ನು ಹಾಕಬೇಕೆಂದು ಬಯಸುತ್ತಿದೆ; ಈ ಕರಾರನ್ನು, ಮಾನ್ಯ ಸದಸ್ಯ ಶ್ರೀ ಪಾಟಸ್‌ಕರ್ ಅವರ ತಿದ್ದುಪಡಿಯನ್ನು ಸ್ವೀಕರಿಸುವ ಮೂಲಕ ನಾವು ಈಗಾಗಲೇ ಅಂಗೀಕರಿಸಿದ್ದೇವೆ. ನಾವು ಅಂಗೀಕರಿಸಿದ ತಿದ್ದುಪಡಿಗೂ, ಮಾನ್ಯ ಸದಸ್ಯ ಶ್ರೀ ಭೋಲೆ ಅವರ ತಿದ್ದುಪಡಿಗೂ ಏನೂ ತಾಕಲಾಟವಿಲ್ಲ. "ಕಮೀಷನರ್ ಅಭಿಪ್ರಾಯದಂತೆ" ಎಂಬ ಈ ಪದಗಳನ್ನು ಅಳವಡಿಸುವುದಷ್ಟೇ ಇಲ್ಲಿನ ಆವಶ್ಯಕತೆ. ನಾನು ಈ ಮಸೂದೆಯನ್ನು ಈಗ ಮಂಡಿಸುವೆ.

* * *

* ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ನಾನು ವಿಷಯವನ್ನು ವಿವರಿಸಬಹುದೇ? ಸಂಕ್ಷಿಪ್ತದಲ್ಲಿ ಪರಿಸ್ಥಿತಿ ಹೀಗಿದೆ. ನಾವು ಪುನಃ ನಂಬರು ಕೊಟ್ಟ ಉಪ ಕಲಮು (೭) ಇದರ ಪ್ರಕಾರ ಹಲವು ಅಧಿಕಾರಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ; ಪೋಲೀಸ್ ಕಮೀಷನರ್ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಒಬ್ಬ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಎದುರು ನಿಲ್ಲಿಸಿದಾಗ, ಯೋಗ್ಯ ಕಾರ್ಯ ವಿಧಾನಗಳು ನಡೆಯುವಂತೆ ನೋಡಿಕೊಳ್ಳುವ ಅಧಿಕಾರ ಮ್ಯಾಜಿಸ್ಟ್ರೇಟರಿಗೆ ಇದೆ. ಕಮೀಷನರನ ಹತ್ತಿರ ಸರಿಯಾದ ಆಧಾರ ಇದೆಯೋ ಇಲ್ಲವೋ ಎಂಬುದನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ನೋಡುವುದು ಒಂದು ಕೆಲಸವಾಗಿದೆ. ಇದೀಗ ಇದರ ಪರಿಚ್ಛೇದದಲ್ಲಿ ಹೀಗೆ ಹೇಳಲಾಗಿದೆ: ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಎದುರಿಗೆ ಬಂದಾಗ, ಪೋಲೀಸ್ ಕಮೀಷನರ್ ಅಥವಾ ಬೇರೆ ವ್ಯಕ್ತಿಗಳು ತಾವು ಕ್ರಮ ತೆಗೆದುಕೊಳ್ಳಲು ತಮ್ಮ ಹತ್ತಿರ ಕೆಲವು ಆಧಾರ ಇದೆಯೆಂಬುದನ್ನು ನ್ಯಾಯಾಲಯಕ್ಕೆ ತಿಳಿಸಲು ಕಟಕಟೆಯಲ್ಲಿ ನಿಲ್ಲಬೇಕಾಗುವುದು. ಇಂಥ ಸಾಕ್ಷಿಯನ್ನು ಕೊಡುವಾಗ, ಪೋಲೀಸ್ ಕಮೀಷನರನಾಗಲಿ ಅಥವಾ ಅವನು ಪ್ರತಿನಿಯೋಜಿಸಬಹುದಾದ ವ್ಯಕ್ತಿಯಾಗಲಿ ಆರೋಪಿಯ ಗುರುತನ್ನು ಅಥವಾ ಆಸ್ತಿಯ ಗುರುತನ್ನು ಹಿಡಿಯಬೇಕಾಗುವುದೆಂದು ಈ ಪರಿಚ್ಛೇದದಲ್ಲಿ ಹೇಳಲಾಗಿದೆ. ಉಪ ಪರಿಚ್ಛೇದ (೮) ಇದರ ಸ್ಥಾನವನ್ನು ನಾನೀಗ ವಿವರಿಸುತ್ತಿರುವೆ. ಮ್ಯಾಜಿಸ್ಟ್ರೇಟನು ಕಮೀಷನರ್ ಆಜ್ಞೆಯು ಕಾನೂನು ರೀತಿಯಾಗಿ ಸಮರ್ಪಕವಾಗಿದೆಯೋ, ಇಲ್ಲವೋ ಎಂಬುದನ್ನು ಪರಿಶೀಲಿಸುವಾಗ ಪರಿಚ್ಛೇದ (೮) ಉಪಯೋಗಕ್ಕೆ ಬರುತ್ತದೆ. ಪೋಲೀಸ್ ಕಮೀಷನರ್ ಹತ್ತಿರ ಮಾಹಿತಿ ಇದ್ದಿತೋ ಹೇಗೆ ಎಂಬುದು ಮ್ಯಾಜಿಸ್ಟ್ರೇಟ್ ನೋಡಬೇಕಾದ ಅಂಶಗಳಲ್ಲಿ ಒಂದು; ಏಕೆಂದರೆ ಹಾಗೆ ಮಾಡಬೇಕೆಂದು ಮಸೂದೆಯಲ್ಲಿ ನಮೂದಿಸಲಾಗಿದೆ. ಹೀಗೆ ಮಾಹಿತಿಯನ್ನು ಪರಿಶೀಲಿಸುವಾಗ ಪೋಲೀಸ್ ಕಮೀಷನರ್‌ಗೆ ಮಾಹಿತಿಯನ್ನು ಬಹಿರಂಗಗೊಳಿಸಲು– ವ್ಯಕ್ತಿಯ ಅಥವಾ ಆಸ್ತಿಯ ಗುರುತು ಸೂಚಿಸುವಂತಿರುವ ಎಲ್ಲ ಸಂಗತಿಗಳನ್ನು ಒಳಗೊಂಡು– ಒತ್ತಾಯಿಸಲು ಮ್ಯಾಜಿಸ್ಟ್ರೇಟನಿಗೆ ಅಧಿಕಾರವಿದೆಯೋ ಎಂಬ ಸಮಸ್ಯೆ ಉದ್ಭವವಾಗಬಹುದಾಗಿದೆ. ಪೋಲೀಸ್ ಕಮೀಷನರ್ ಸಾಕ್ಷಿಯನ್ನು ಕೊಡುತ್ತಿರುವಾಗ, ಸಂಬಂಧಪಟ್ಟ ವ್ಯಕ್ತಿಯನ್ನು ಅಥವಾ ಆಸ್ತಿಯನ್ನು ಗುರುತಿಸಲು ಅವಕಾಶವನ್ನು ಮಾಡಿಕೊಡುವಂತಹ ಮಾಹಿತಿಯನ್ನು ನೀಡದೆ ಇರಬಹುದಾದಂತಹ ವಿವೇಚನೆಯನ್ನು ಆತನಿಗೆ ಉಪಕಲಮು (೮)ರಲ್ಲಿ ಬಿಟ್ಟುಕೊಡಲಾಗಿದೆ.

* * *

** ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೇ, ನಾನು ಕೆಳಗೆ ಕಾಣಿಸಿದಂತೆ ತಿದ್ದುಪಡಿಯನ್ನು ಮಂಡಿಸಬೇಕೆನ್ನುವೆ.

"ಇನ್ನು ಮುಂದೆ ಬರುವ" ಇದರ ಬದಲಾಗಿ ಕೆಳಗಿನ ಪದಗಳು ಬರಬೇಕು–

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೨೫೫೮–೫೯
ದಿನಾಂಕ ೨೯ ಏಪ್ರಿಲ್ ೧೯೩೮.
**ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೨೬೩೦–೩೪
ದಿನಾಂಕ ೨೯ ಏಪ್ರಿಲ್ ೧೯೩೮.

"ವಾಡಿಕೆಯಾಗಿರುವ ಅಪಾಯಕಾರಿ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸುವ ಉದ್ದೇಶದಿಂದ ಮತ್ತು ಜಾತೀಯ ಗಲಭೆಗಳಲ್ಲಿ ಸಾರ್ವಜನಿಕ ಶಾಂತಿ ಹಾಗೂ ನೆಮ್ಮದಿಗಳನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ."

ಇದು ನಾನು ಮಂಡಿಸಲು ಉದ್ದೇಶಿಸಿರುವ ತಿದ್ದುಪಡಿ.

ಮಾನ್ಯ ಸಭಾಪತಿಗಳು: ನಾನು ಇದೀಗ ಡಾಕ್ಟರೇಟ್, ವಿದ್ವಾಂಸರೂ ಆದ ಮಾನ್ಯ ಸದಸ್ಯರ ತಿದ್ದುಪಡಿಯನ್ನು ಉಲ್ಲೇಖಿಸುತ್ತಿರುವೆ; ಅದರಲ್ಲಿ ಅವರು ಈ ಕಾನೂನನ್ನು ವಾಡಿಕೆಯಾಗಿರುವ ಅಪರಾಧಿಗಳಿಗೂ ಅನ್ವಯಿಸಬೇಕೆಂದು ಸೂಚಿಸಿರುವರು. ಈ ಹಿಂದೆ ಸದನವು ಕೈಕೊಂಡ ನಿರ್ಣಯಗಳ ಪ್ರಕಾರ, ಈ ತಿದ್ದುಪಡಿಯ ಭಾಗವೂ ಸಹ ಸೂಕ್ತವಾಗುವುದಿಲ್ಲವೆಂಬ ಅಭಿಪ್ರಾಯವು ನನ್ನದಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಸದನದ ಮುಂದಿದ್ದ ಈ ವಿಧೇಯಕದಲ್ಲಿ ಎರಡು ಬಗೆಯ ಉದ್ದೇಶಗಳಿವೆಯೆಂದು ನಾನು ನಿವೇದಿಸುವೆ: ಅವುಗಳಲ್ಲಿ ಒಂದು ಉದ್ದೇಶ ಜಾತೀಯ ಗಲಭೆ ವಿರುದ್ಧ ಕ್ರಮ ಜರುಗಿಸಲೆಂದೇ ಇದೆ. ಆದ್ದರಿಂದ ಜಾತೀಯ ಗಲಭೆಗಳನ್ನು ಕುರಿತಾದ ನನ್ನ ತಿದ್ದುಪಡಿಯು ಸಂಪೂರ್ಣವಾಗಿ ಸರಿಯಾಗಿದೆಯೆಂದು ತಿಳಿಯಬಯಸುವೆ. ಈ ವಿಧೇಯಕವು ಮಾನ್ಯ ಗೃಹಮಂತ್ರಿಗಳು 'ಮವಾಲಿ' ಎಂಬ ಪದದಿಂದ ನಿರ್ದೇಶಿಸಿದವರ ಹಾಗೂ ನಾನು ಸ್ವಭಾವತಃ 'ಅಪಾಯಕಾರಿ ವ್ಯಕ್ತಿಗಳು' ಎಂದು ನಿರ್ದೇಶಿಸಿದವರ ವಿರುದ್ಧ ಕ್ರಮ ಜರುಗಿಸುವ ಉದ್ದೇಶದಿಂದ ಕೂಡಿದೆ. ಶಾಸನರಚನೆಯಲ್ಲಿರುವ ಎರಡು ಉದ್ದೇಶಗಳನ್ನು ಸ್ಪಷ್ಟಪಡಿಸಲು ಮಾತ್ರ ನನ್ನ ತಿದ್ದುಪಡಿ ಬಂದಿದೆ ಒಂದು ಉದ್ದೇಶವು ಜಾತೀಯ ಗಲಭೆಯನ್ನು ನಿಯಂತ್ರಿಸುವುದು, ನೋಡಿಕೊಳ್ಳುವುದು; ಇನ್ನೊಂದು ಉದ್ದೇಶವು 'ಮವಾಲಿ' ಎಂದು ಕರೆಯಲ್ಪಡುವ ಜನರನ್ನು ನಿಯಂತ್ರಿಸುವುದು. ಆದ್ದರಿಂದ ನನ್ನ ತಿದ್ದುಪಡಿ ಸಂಪೂರ್ಣ ಸರಿಯಿದೆಯೆಂದು ನಾನು ನಿವೇದಿಸುವೆ. ಅದು ಆಕ್ಷೇಪಣೆಯಾಗಿದೆಯೆಂದು ತೋರಿದರೆ, ನಾನು 'ಮವಾಲಿ'ಗಳ ಚಟುವಟಿಕೆಗಳನ್ನು ನಿಗ್ರಹಿಸುವುದಕ್ಕಾಗಿ... ಎಂಬ ಪದಗಳನ್ನು ಉಪಯೋಗಿಸಲು ಸಿದ್ಧನಿರುವೆ.

ಮಾನ್ಯ ಸಭಾಪತಿಗಳು: 'ಮವಾಲಿ' ಎಂಬ ಈ ಪದದ ವ್ಯಾಖ್ಯೆಯನ್ನು ಕಾನೂನಿನಲ್ಲಿ ಕೊಟ್ಟಿಲ್ಲ ಎಂಬುದೇ ಇದಕ್ಕೆ ಇರುವ ಮುಖ್ಯ ತೊಂದರೆ. ಯಾವ ಕಾನೂನಿನಲ್ಲಿಯೂ ಈ ಪದದ ಪ್ರಯೋಗವಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಪೂರ್ವ ಪೀಠಿಕೆಯು ನ್ಯಾಯನೀತಿಯ ಅರ್ಥ ವಿವರಣೆಯ ವಿಷಯವಾಗುವುದಿಲ್ಲ. ಈ ಕಾನೂನನ್ನು ಯಾವ ಉದ್ದೇಶದಿಂದ ಉಪಯೋಗಿಸುತ್ತೇವೆ ಎಂಬುದರ ಮಾರ್ಗದರ್ಶನದ ನಿಯಮವು ಮಾತ್ರ ಪೂರ್ವ ಪೀಠಿಕೆಯಲ್ಲಿ ಇರುತ್ತದೆ. "ಮವಾಲಿ" ಎಂಬ ಪದವು ನ್ಯಾಯನೀತಿಯ ಅರ್ಥ ವಿವರಣೆಯನ್ನು ಇರದಿದ್ದರೂ, ಆ ಪದವು ಇಂದು ಮಾನ್ಯ ಗೃಹಮಂತ್ರಿಗಳಿಗೂ, ಪೊಲೀಸ್ ಕಮೀಷನರನಿಗೂ ಸಾಕಷ್ಟು ಸುಪರಿಚಿತ; ಆದ್ದರಿಂದ ಆ ಪದವು ಯಾವ ತೊಂದರೆಗೂ ಕಾರಣವಾಗುವುದಿಲ್ಲ.

ಮಾನ್ಯ ಸಭಾಪತಿಗಳು: ತಿದ್ದುಪಡಿಯಲ್ಲಿ ಎರಡು ಭಾಗಗಳು: ಒಂದು ವಾಡಿಕೆಯಾಗಿ ಇರುವ ಅಪರಾಧಿಗಳು; ಇದನ್ನು ಮಾನ್ಯ ಸದಸ್ಯರೇ ಹೇಳಿದಂತೆ ಬಿಟ್ಟುಕೊಡಲು ಸಿದ್ಧರಿರುವರೆಂದು ನಾನು ಭಾವಿಸಿರುವೆ.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ, ಒಂದೇ ರೀತಿಯ ವ್ಯವಹಾರದಲ್ಲಿ ಅಡಕವಾಗುವಂತೆ ನಾನು ಇಬ್ಭಾಗಮಾಡಲು ಸಿದ್ಧನಿರುವೆ; ಒಂದು– ಅಪಾಯಕಾರಿ ವ್ಯಕ್ತಿಗಳನ್ನು ಅಥವಾ ಮವಾಲಿಗಳನ್ನು ನಿಯಂತ್ರಿಸುವುದು, ಇನ್ನೊಂದು ತುರ್ತು ಅಧಿಕಾರ ಕೊಡುವ ತಿದ್ದುಪಡಿಯ ನೇರವಾದ ಉಲ್ಲೇಖ.

ಮಾನ್ಯ ಸಭಾಪತಿಗಳು: ಎರಡನೆಯದು ಅರ್ಥವಾಗುತ್ತದೆ. ಎರಡು ಭಾಗ ಮಾಡಿದರೆ– ಅದರಲ್ಲಿ ಮೊದಲನೆಯದು "ಮವಾಲಿಗಳು" ಎಂಬ ಪದಪ್ರಯೋಗವು ಆಗುವುದಿಲ್ಲ... ಎಂದು– ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ ನಾನು ನನ್ನ ತಿದ್ದುಪಡಿಯನ್ನು ಹೀಗೆ ಮಾಡುವೆ–

"ಅಪಾಯಕಾರಿ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಸಲುವಾಗಿ." "ಸ್ವಭಾವತಃ" ಎಂಬ ಪದ ವನ್ನು ಹೊಡೆದುಹಾಕಲು ನಾನು ಸಿದ್ಧನಿರುವೆ. ನಮ್ಮ ಉದ್ದೇಶಗಳನ್ನು ಸ್ಪಷ್ಟಮಾಡಲು ಪೂರ್ವ ಪೀಠಿಕೆ ಯಿದೆ.

ಶ್ರೀ ಜಮ್ನಾದಾಸ್ ಎಂ.ಮೆಹತಾ: ಮಾನ್ಯರೆ, ವಿದ್ವಾಂಸರಾದ ಡಾಕ್ಟರರ ತಿದ್ದುಪಡಿಯು ಸಂಪೂರ್ಣ ವಾಗಿ ಸರಿಯಾಗಿದೆಯೆಂದು ನಾನು ನಿವೇದಿಸುವೆ; ಏಕೆಂದರೆ ಸಂಪೂರ್ಣ ವಿಧೇಯಕದಲ್ಲಿ ಎರಡು ಉದ್ದೇಶಗಳಿರುವುದು ಇದೀಗ ಮನವರಿಕೆಯಾಗಿದೆ; ಒಂದು ತುರ್ತು ಪರಿಸ್ಥಿತಿಯನ್ನು ನೋಡಿ ಕೊಳ್ಳುವುದು, ಇನ್ನೊಂದು ಕಾನೂನಿನಲ್ಲಿ ವಿವರಿಸಿದಂತೆ ಇರುವ ವ್ಯಕ್ತಿಗಳನ್ನು ನೋಡಿಕೊಳ್ಳುವುದು. ಸದನವು ಕಾರ್ಯಗತ ಮಾಡುವುದನ್ನು ಪೂರ್ವ ಪೀಠಿಕೆ ವ್ಯಕ್ತಮಾಡಲೇಬೇಕು; ಇಲ್ಲವಾದರೆ ಪೂರ್ವ ಪೀಠಿಕೆ ಪರಿಪೂರ್ಣವಾಗಲಾರದು ಮತ್ತು ವಿಧೇಯಕದ ಉದ್ದೇಶವೂ ವ್ಯಕ್ತವಾಗಲಾರದು.

ಮಾನ್ಯ ಸಭಾಪತಿಗಳು: ತಾಂತ್ರಿಕ ವಿರೋಧವನ್ನು ನಾನು ವಿಚಾರಿಸುತ್ತಿರುವುದಿಲ್ಲ. ವಿಧೇಯಕ ದಲ್ಲಿಯ ಹೇಳಿಕೆಯನ್ನು ಹಾಗೂ ಸದನದಲ್ಲಿ ಸ್ವೀಕೃತವಾದುದನ್ನು ಈ ಪದಪ್ರಯೋಗ ಹೇಗೆ ವ್ಯಕ್ತ ಮಾಡುತ್ತಿದೆಯೆಂಬುದನ್ನು ಯೋಚಿಸುತ್ತಿರುವೆ.

ಮಾನ್ಯ ಶ್ರೀ ಬಿ. ಜೆ. ಖೇರ್: "ಅಪಾಯಕಾರಿ" ಎಂಬ ಪದವು ಅನಿರ್ದಿಷ್ಟವಾದುದು ಎಂಬುದನ್ನು ನಾನು ಮಾನ್ಯ ಸದಸ್ಯರಿಗೆ ಸೂಚಿಸಬಹುದೇ? "ಸಮಾಜಕ್ಕೆ ಅಪಾಯಕರವಾದುದು", "ನಗರಕ್ಕೆ ಅಪಾಯಕರ" ಅಥವಾ ಇದೇ ರೀತಿಯ ಪರಿಣಾಮವಿದ್ದದ್ದು ಅದಾಗಬೇಕಿತ್ತು. "ಇಂಥವರಿಗೆ ಅಪಾಯವಾಗಿದೆ. ಬೇಗನೇ ಹೊರಟು ಬರಬೇಕು" ಎಂಬ ತಂತಿ ಸಮಾಚಾರಗಳೂ ನಮಗೆ ಬರುತ್ತದೆ. "ಅಪಾಯಕಾರಿ" ಎಂಬ ಪದವೇ ಅನಿರ್ದಿಷ್ಟವಾದುದು.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ ನಾನು ಹೀಗೆ ಸೂಚಿಸುವೆ "ಗಲಭೆಗಳಲ್ಲಿ ಶಾಂತಿಯನ್ನು, ನೆಮ್ಮದಿಯನ್ನು ರಕ್ಷಿಸಬೇಕೆಂದು, ಮುಂಬೈ ನಗರದ ನಿವಾಸಿಗಳಿಗೆ ಅಪಾಯಕಾರಿಯಾದ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು...."

ಮಾನ್ಯ ಶ್ರೀ ಕೆ.ಎಂ. ಮುನ್‌ಷಿ: ಗಲಭೆಯಲ್ಲಿರುವ "ಪಂಗಡಗಳು ಹಾಗೂ ತಂಡಗಳು" ಎಂಬುದನ್ನು ನೀವು ಬಿಟ್ಟಿರುವಿರಿ. ಕಲಮಿನಲ್ಲಿಯ ಪದಗಳು "ಸಮುದಾಯಗಳು, ಪಂಗಡಗಳು ಹಾಗೂ ತಂಡಗಳು" ಎಂದಿವೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ ಹೀಗೆ ಹೇಳಬಹುದು: "ಸಮುದಾಯಗಳು ಹಾಗೂ ಅವುಗಳ ವರ್ಗಗಳು ಮತ್ತು ತಂಡಗಳು ಮತ್ತು ಪಂಗಡಗಳು ಇವರಲ್ಲಿ ಗಲಭೆಗಳಿರುವಾಗ ಸಾರ್ವಜನಿಕರ ಶಾಂತಿಯನ್ನು ಹಾಗೂ ನೆಮ್ಮದಿಯನ್ನು ಕದಡಿಸುವುದನ್ನು ತಡೆಯಲು."

ಮಾನ್ಯ ಸಭಾಪತಿಗಳು: ಇದನ್ನೇ ನಾನು ಬರೆದುಕೊಂಡಿರುವುದು: "ಮುಂಬೈ ನಗರಕ್ಕೆ ಅಪಾಯಕಾರಿ ಆದ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸುವ ಸಲುವಾಗಿ ಮತ್ತು ಸಮುದಾಯಗಳು ಹಾಗೂ ಅವುಗಳ ವರ್ಗಗಳು ಅಥವಾ ತಂಡಗಳು ಅಥವಾ ಪಂಗಡಗಳು ಇವುಗಳ ಗಲಭೆಗಳ ಕಾರಣದಿಂದ ಸಾರ್ವಜನಿಕ ಶಾಂತಿ ಹಾಗೂ ನೆಮ್ಮದಿ ಕದಡುವುದನ್ನು ತಡೆಯಲು."

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: "ಇದರ ನಂತರ ಹೆಸರಿಸಲಾದ ಅನ್ಯ ಉದ್ದೇಶಗಳಿಗಾಗಿ."

ಡಾ. ಬಿ. ಆರ್. ಅಂಬೇಡ್ಕರ್: ಬೇರೆ ಉದ್ದೇಶಗಳು ಯಾವುವು?

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: "ಮತ್ತು ಇದರ ನಂತರ ಹೆಸರಿಸಲಾದ ಅನ್ಯ ಉದ್ದೇಶಗಳು"

ಡಾ. ಬಿ. ಆರ್. ಅಂಬೇಡ್ಕರ್: ಅನ್ಯ ಉದ್ದೇಶಗಳು ಯಾವುವು?

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಅದರಲ್ಲಿ ವಿವಿಧ ಕಾರ್ಯವಿಧಾನದ ಉದ್ದೇಶಗಳು ಸಹ ಇವೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ ಅದನ್ನು ನಾನು ಸ್ಪಷ್ಟಪಡಿಸುವೆ: "ಇಂಥ ವ್ಯವಹಾರ ನೋಡಿಕೊಳ್ಳಲು ಕಾರ್ಯ ವಿಧಾನವನ್ನು ಗೊತ್ತುಮಾಡುವುದು" ಎಂದೆನ್ನುವೆ.

ಮಾನ್ಯ ಸಭಾಪತಿಗಳು: ಪೂರ್ವ ಪೀಠಿಕೆಯಲ್ಲಿ ಅದೆಲ್ಲವೂ ಅವಶ್ಯವೇ? ನಾವು ಅದನ್ನು ತ್ರಾಸದಾಯಕವಾಗಿ ಮಾಡಬಾರದು.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಕಾನೂನಿನಲ್ಲಿ ವಲಸೆ ಬಂದವರ ಸಮಸ್ಯೆಯೂ ಇದೆ. ಆದ್ದರಿಂದ "ಇದರ ನಂತರ ಹೆಸರಿಸಲಾದ ಉದ್ದೇಶಗಳು" ಎಂಬುದು ಅವಶ್ಯವಿದೆ.

ಶ್ರೀ ಜಮ್ನಾದಾಸ್ ಎಂ. ಮೆಹತಾ: "ಇದರ ನಂತರ" ಎನ್ನುವ ಪದಗಳ ಅವಶ್ಯವಿಲ್ಲ.

ಶ್ರೀ ಎಸ್. ವಿ. ಪರೂಳೇಕರ್: ನಾಳೆಗೆ ಸಭೆ ಮುಂದೂಡೋಣ; ಅಂದರೆ ನಾವು ಸರ್ವಸಮ್ಮತ ಪದ ಪ್ರಯೋಗ ಮಾಡಬಹುದಾಗಿದೆ.

ಮಾನ್ಯ ಸಭಾಪತಿಗಳು: ವಿಷಯದ ಬಗ್ಗೆ ಸಮ್ಮತಿ ಇರುವುದು ಕಂಡುಬರುತ್ತಿದೆ; ಇದೀಗ ಪದಪ್ರಯೋಗದ್ದೊಂದೇ ಸಮಸ್ಯೆಯಾಗಿದೆ. ವಿಷಯದ ಬಗ್ಗೆ ತಿದ್ದುಪಡಿಯು ಸ್ವೀಕೃತವಾಗಿರುವುದರಿಂದ, ಈ ಘಟ್ಟದಲ್ಲಿ ಅದನ್ನು ವಿಧೇಯಕದಲ್ಲಿ ಸೇರಿಸಿಕೊಳ್ಳಬಹುದಾಗಿದೆ; ಸಾವಧಾನವಾಗಿ ನಂತರ ತೃತೀಯ ವಾಚನ ನಡೆದಾಗ ಪದಪ್ರಯೊಗ ಕುರಿತು ಅವಶ್ಯವೆನಿಸಿದರೆ ಮಾಡಬಹುದಾಗಿದೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಮಾನ್ಯರೆ, ಅಂತಿಮ ಪದವನ್ನು ನಾನು ಹೇಳಬಹುದೇ? ಈ ವಲಸೆ ಬಂದವರನ್ನು ಕಳೆದುಕೊಳ್ಳುವುದು ನನಗೆ ಬೇಡವಾಗಿದೆ.

ಮಾನ್ಯ ಸಭಾಪತಿಗಳು: ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರಿಂದ ಇದು ಸೂಚಿತವಾಗಿದೆ.

"ಇದರ ನಂತರ ಹೆಸರಿಸಲಾದ" ಎಂಬ ಪದಗಳ ಬದಲಾಗಿ ಹೀಗೆ ಬರೆಯಬೇಕು:

"ಮುಂಬೈ ನಗರಕ್ಕೆ ಅಪಾಯಕಾರಿಯಾದ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸಲು ಮತ್ತು ಸಮು ದಾಯಗಳು ಹಾಗೂ ಅವುಗಳ ವರ್ಗಗಳು ಅಥವಾ ತಂಡಗಳು ಅಥವಾ ಪಂಗಡಗಳು ಇವುಗಳ ನಡುವೆ ಉಂಟಾಗುವ ಗಲಭೆಗಳ ಕಾರಣದಿಂದ ಸಾರ್ವಜನಿಕ ಹಾಗೂ ನೆಮ್ಮದಿ ಕದಡುವುದನ್ನು ತಡೆಯಲು ಮತ್ತು ಇದರ ನಂತರ ಹೆಸರಿಸಲಾದ ಹಲವು ಅನ್ಯ ಉದ್ದೇಶಗಳಿಗಾಗಿ"

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ತಿದ್ದುಪಡಿಯನ್ನು ನಾನು ಅಂಗೀಕರಿಸುವೆ.

ಡಾ. ಬಿ. ಆರ್. ಅಂಬೇಡ್ಕರ್: ಅನ್ಯ ಉದ್ದೇಶಗಳು ಯಾವುವು ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

ಮಾನ್ಯಶ್ರೀ ಕೆ. ಎಂ. ಮುನ್‌ಷಿ: ವಲಸೆ ಬಂದವರನ್ನು ನೋಡಿಕೊಳ್ಳುವುದು.

ಡಾ. ಬಿ. ಆರ್. ಅಂಬೇಡ್ಕರ್: ವಲಸೆ ಬಂದವರು ಒಂದು ಕಾರಣ, ಅದು ಉದ್ದೇಶವಾಗುವುದಿಲ್ಲ.

ಮಾನ್ಯ ಶ್ರೀ ಬಿ. ಜಿ. ಖೇರ: ಯಾವುದೋ ಬೇನೆಯನ್ನು ಗುಣಪಡಿಸಿಕೊಳ್ಳಲು ನಗರಕ್ಕೆ ವಲಸೆ ಬಂದಿರುವುದನ್ನು ನೋಡಿ ಕೊಳ್ಳುವ ಸಮಸ್ಯೆ ಇದೆ. ಪೂರ್ವ ಪೀಠಿಕೆಯಲ್ಲಿ ಸಾಲಾಗಿ ಎಲ್ಲಾ ಉದ್ದೇಶಗಳನ್ನು ವಿವರಿಸುವುದು ಧ್ಯೇಯವಾಗುವುದಿಲ್ಲ. "ಇದರ ನಂತರ ಹೆಸರಿಸಿದ ಹಲವು ಅನ್ಯ ಉದ್ದೇಶಗಳಿಗಾಗಿ" ಇದು ವಿಧೇಯಕವು ಒಳಗೊಂಡಿರುವ ಉದ್ದೇಶಗಳು ಎಂಬುದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಡುತ್ತದೆ.

ಮಾನ್ಯ ಸಭಾಪತಿಗಳು: "ಹಲವು ಅನ್ಯ ಉದ್ದೇಶಗಳಿಗಾಗಿ" ಎಂಬುದನ್ನು ತೆಗೆದುಹಾಕಬೇಕೆ?

ಸರ್ ಆಲಿ ಮಹಮ್ಮದಖಿನ್ ದೆಹಲವಿ: ಅವು ಹೋಗಲೇಬೇಕು; ಏಕೆಂದರೆ ನಾವು ಕಲಮು ೨೭ನ್ನು ವಿಚಾರಿಸುತ್ತಿದ್ದೇವೆ, ಇಡೀ ಕಾನೂನನ್ನು ಅಲ್ಲ.

ಮಾನ್ಯ ಶ್ರೀ ಬಿ. ಜೆ. ಖೇರ: ನಿಮಗೆ ಅದು ಬೇಡವಾದರೆ, ಅದನ್ನು ಹಿಂದೆಗೆದುಕೊಳ್ಳಲು ನಮ್ಮ ಒಪ್ಪಿಗೆಯಿದೆ.

ಮಾನ್ಯ ಸಭಾಪತಿಗಳು: "ಇದರ ನಂತರದ" ಎಂಬ ಪದವು ಉಳಿಯಬೇಕೆಂಬುದು ಒಟ್ಟಾಭಿಪ್ರಾಯ ವಾಗಿದೆಯೆಂದು ನನಗೆ ತೋರುತ್ತದೆ. ಹಾಗಿದ್ದರೆ ತಿದ್ದುಪಡಿ ಹೀಗಾಗುತ್ತದೆ: "ಇದರ ನಂತರ ಹೆಸರಿಸ ಲಾಗಿರುವ" ಎಂಬ ಪದಗಳ ಬದಲು ಕೆಳಗಿನಂತಿರಬೇಕು:

"ಮುಂಬೈ ನಗರಕ್ಕೆ ಅಪಾಯಕಾರಿಯಾದ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಮತ್ತು ಸಮುದಾಯಗಳ ನಡುವೆ ಉಂಟಾಗುವ ಗಲಭೆಗಳ ಕಾರಣದಿಂದ ಸಾರ್ವಜನಿಕ ಶಾಂತಿ ಹಾಗೂ ನೆಮ್ಮದಿ ಕದಡುವುದನ್ನು ತಡೆಯುವುದು..."

ಮಾನ್ಯ ಶ್ರೀ ಬಿ. ಜಿ. ಖೇರ: "ಸಾರ್ವಜನಿಕ ಶಾಂತಿ ಹಾಗೂ ನೆಮ್ಮದಿ" ಅಲ್ಲ, "ಸಾರ್ವಜನಿಕ ಶಾಂತಿ ಅಥವಾ ನೆಮ್ಮದಿ" ಎಂದಾಗಬೇಕು ಎಂಬುದನ್ನು ನಾನು ಸೂಚಿಸಬಹುದೇ? ಅದರಂತೆಯೇ, "ಸಮುದಾಯಗಳ ಅಥವಾ ವರ್ಗಗಳ ನಡುವೆ ಉಂಟಾಗಬಹುದಾದ ಸಂಘರ್ಷದ ಕಾರಣ" ಎಂದು ಆಗಬೇಕು.

ಮಾನ್ಯ ಸಭಾಪತಿಗಳು: "..... ಸಮುದಾಯಗಳು ಅಥವಾ ಅವುಗಳ ವರ್ಗಗಳು, ಅಥವಾ ತಂಡಗಳು ಅಥವಾ ಪಂಗಡಗಳು ಇವುಗಳ ನಡುವೆ ಗಲಭೆಗಳ ಕಾರಣದಿಂದ ಉಂಟಾಗುವ ಸಾರ್ವ ಜನಿಕ ಶಾಂತಿ ಅಥವಾ ನೆಮ್ಮದಿ ಕದಡುವುದನ್ನು ತಡೆಯಲು ಮತ್ತು ಇದರ ನಂತರ ಹಲವು ಅನ್ಯ ಉದ್ದೇಶಗಳಿಗಾಗಿ..."

ಸರ್ ಆಲಿ ಮಹಮ್ಮದಖಾನ: "ಅಥವಾ ಇದರ ನಂತರ ಹಲವು ಅನ್ಯ ಉದ್ದೇಶಗಳಿಗಾಗಿ..." ಇದಕ್ಕೆ ನಾವು ಒಪ್ಪಿದ್ದೇವಲ್ಲವೇ?

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಯಾವುದನ್ನಾದರೂ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್. ಎ. ಖೇಡಗೀಕರ: ಪದರಚನೆ ಪರಿಶೀಲಿಸಲು ನಮಗೂ ಒಂದು ಅವಕಾಶ ಸಿಗಬಹುದಲ್ಲವೇ? ನಮಗೆ ಸಂಪೂರ್ಣವಾಗಿ ಅರ್ಥವಾಗಿಲ್ಲ.

ಮಾನ್ಯ ಸಭಾಪತಿಗಳು: ನಾನು ಈಗ ಕೊನೆಯ ಕರಡು ಪ್ರತಿ ಓದುವೆ. ನಾನೇನಾದರೂ ತಪ್ಪು ಮಾಡಿದ್ದರೆ, ಅದರಲ್ಲಿ ತಿದ್ದುಪಡಿಗೆ ಅವಕಾಶವಿದೆ.

ಶ್ರೀ ಎಸ್. ವಿ. ಪರೂಳೇಕರ: ತಿದ್ದುಪಡಿಯ ಬಗ್ಗೆ ನಮ್ಮ ನಿಶ್ಚಿತ ಮನಸ್ಸು ಮಾಡುವ ಮೊದಲು, ಅದನ್ನು ಅಭ್ಯಸಿಸಲು ನಮಗೆ ಅವಕಾಶ ಕೊಡಬಹುದೇ? ತಿದ್ದುಪಡಿಯು ಬಹು ಉದ್ದವಾಗಿದೆ:

ಅದರ ಇಂಗಿತಾರ್ಥವೂ ಈಗ ನಮಗೆ ತಿಳಿದಿಲ್ಲ. ಆದ್ದರಿಂದ ಅದನ್ನು ಅಭ್ಯಾಸ ಮಾಡಲು ನಮಗೆ ಅವಕಾಶವನ್ನು ಕೊಡಬೇಕು. ಆಮೇಲೆ ಅದನ್ನು ಚರ್ಚೆ ಮಾಡಲು ತೆಗೆದುಕೊಳ್ಳಬಹುದಾಗಿದೆ.

ಮಾನ್ಯ ಸಭಾಪತಿಗಳು: ನಾನು ಈ ಮೊದಲೇ ಹೇಳಿರುವ ಹಾಗೆ ಪೂರ್ವ ಪೀಠಿಕೆಯು ಮಸೂದೆಯ ಬಗ್ಗೆ ಕೇವಲ ಸಾರಾಂಶವನ್ನು ಮತ್ತು ತೀರ ಸಾಮಾನ್ಯವಾದ ಸಾರಾಂಶವನ್ನು ಕೊಡಲು ಯತ್ನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಕಾರ್ಯಾಂಗದ ಅಧಿಕಾರಿಗಳಿಗೆ ಅದೊಂದು ನಿರ್ದೇಶನ.

ಮಾನ್ಯ ಶ್ರೀ ಬಿ. ಜಿ. ಖೇರ: ನೀವು ಏನೇ ಸೂಚಿಸಿದರೂ, ಅದನ್ನು ಅಂಗೀಕರಿಸಲು ನಾವು ಸಿದ್ಧರಿದ್ದೇವೆ.

ಶ್ರೀ ಜಮ್ನಾದಾಸ್ ಎಂ. ಮೆಹತಾ: ಚರ್ಚೆಯನ್ನು ಸಂಕ್ಷಿಪ್ತಗೊಳಿಸುವ ಯಾವುದೇ ಸಲಹೆಗೂ ಸ್ವಾಗತ! (ನಗೆ)

ಮಾನ್ಯ ಸಭಾಪತಿಗಳು: ಒಪ್ಪಿಗೆಯಾಗಿದೆಯೆಂದು ತೋರಿಬಂದಂತೆ ಅಂತಿಮ ಪದರಚನೆಯನ್ನು ನಾನೀಗ ಸೂಚಿಸುವೆ. ಅಖಂಡ ತಿದ್ದುಪಡಿಯನ್ನು ಮತ್ತೂ ಒಮ್ಮೆ ಓದುವೆ. ಮಾನ್ಯ ಸದಸ್ಯರು ತಾಳ್ಮೆಯಿಂದ ಕೇಳಬೇಕಾಗಿ ಬಿನ್ನಹ.

"ಇದರ ನಂತರ ಹೆಸರಿಸಲಾದ" ಎಂಬ ಪದಗಳ ಬದಲಾಗಿ ಕೆಳಗಿನಂತೆ ಕಾಣಿಸಬೇಕು:

"ಮುಂಬೈ ನಗರಕ್ಕೆ ಅಪಾಯಕಾರಿಯಾಗಿರುವ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಮತ್ತು ಸಮುದಾಯಗಳು ಅಥವಾ ಅವುಗಳ ವರ್ಗಗಳು, ಅಥವಾ ತಂಡಗಳು ಅಥವಾ ಪಂಗಡಗಳು ಇವುಗಳ ನಡುವೆ ಉಂಟಾಗುವ ಗಲಭೆಗಳ ಕಾರಣದಿಂದ ಸಾರ್ವಜನಿಕ ಶಾಂತಿ ಅಥವಾ ನೆಮ್ಮದಿ ಕದಡುವುದನ್ನು ತಡೆಯುವ ಮತ್ತು ಇದರ ನಂತರ ಹೆಸರಿಸಲಾದ ಉದ್ದೇಶಗಳಿಗಾಗಿ."

ಶ್ರೀ ಜಮ್ನಾದಾಸ್ ಎಂ. ಮೆಹತಾ: "ಅನ್ಯ" ಎಂಬುದೂ ಅಲ್ಲಿ ಇರಬೇಕು.

ಮಾನ್ಯ ಸಭಾಪತಿಗಳು: "ಅನ್ಯ ಉದ್ದೇಶಗಳಿಗಾಗಿ"

ಡಾ. ಬಿ. ಆರ್. ಅಂಬೇಡ್ಕರ್: "ವಲಸೆ ಬಂದವರು ಇಂಥವರನ್ನು ನೋಡಿಕೊಳ್ಳಲು."

ಮಾನ್ಯ ಸಭಾಪತಿಗಳು: ಅದೇನು, ಪೂರ್ವ ಪೀಠಿಕೆಯ ರಚನೆ ಹೇಗಿರುತ್ತದೆಂಬುದು ಮತ್ತು ಕಲಮುಗಳ ಸಂಬಂಧದಲ್ಲಿ ಇರುವ ರಚನೆಗೆ ಎಷ್ಟು ಮಹತ್ವವಿರುತ್ತದೆ ಎಂಬುದು ನ್ಯಾಯವಾದಿಗಳಿಗೆ ಗೊತ್ತೇ ಇರುತ್ತದೆ. ನನಗೆ ಹೇಳಲು ನೀವು ಅನುಮತಿ ಕೊಟ್ಟರೆ, ಅಷ್ಟು ಚರ್ಚೆ ಮಾಡುವಷ್ಟು ವಿಷಯ ಇದಲ್ಲವೆಂದು ನನಗೆ ತೋರುತ್ತದೆ.

ಶ್ರೀ ಜಮ್ನಾದಾಸ್ ಎಂ. ಮೆಹತಾ: 'ಅನ್ಯ' ಎಂಬುದು ಅಲ್ಲಿ ಇರಲೇಬೇಕು; ಏಕೆಂದರೆ ಇದಕ್ಕೂ ಮೊದಲು ಹೆಸರಿಸಿದವರೂ ಉದ್ದೇಶಗಳಲ್ಲಿ ಅಡಕವಾಗುತ್ತಾರೆ.

ಮಾನ್ಯ ಸಭಾಪತಿಗಳು: "ಮತ್ತು ಇದರ ಅನಂತರ ಹೆಸರಿಸಿದ ಅನ್ಯ ಉದ್ದೇಶಗಳಿಗಾಗಿ"

ಶ್ರೀ ಜಮ್ನಾದಾಸ್ ಎನ್. ಮೆಹತಾ: ಸರಿಯಿದೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ತಿದ್ದುಪಡಿಯನ್ನು ಅಂಗೀಕರಿಸುವೆ.

ಮಾನ್ಯ ಸಭಾಪತಿಗಳು: ಹಾಗಾದರೆ ಪದರಚನೆ ಇದೇ ಎಂದು ನಾನು ಅಂಗೀಕರಿಸುವೆ. (ಅಡ್ಡಿ) ಸ್ವತಃ ಕಲಮುಗಳಿಂದಲೇ ಪದರಚನೆಯನ್ನು ತೆಗೆದುಕೊಳ್ಳಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಇದನ್ನು ಸ್ವೀಕರಿಸುತ್ತೇನೆ.

# ೩೩

# *ಮುಂಬೈ ನಗರ ಪುರಸಭೆಯ ಕಾಯ್ದೆ ತಿದ್ದುಪಡಿ ಮಸೂದೆ

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ, ಬಾಯಕಳಾ ಮತ್ತು ಪರೇಲ್): ಮಾನ್ಯರೆ, ಮಾನ್ಯ ಸದಸ್ಯ ಶ್ರೀ ಎ. ವಿ. ಚಿತ್ರೆ ಅವರು ಸೂಚಿಸಿದ ತಿದ್ದುಪಡಿಯನ್ನು ಅನುಮೋದಿಸಲು ನಾನು ಎದ್ದುನಿಂತಿರುವೆ. ಮಾನ್ಯರೆ, ಕಾರ್ಮಿಕರ ಪ್ರತಿನಿಧಿಗಳಿಂದ ನಾಲ್ವರು ಪರಿಷತ್ ಸದಸ್ಯರು ಆಯ್ಕೆಯಾಗುವುದರ ಜೊತೆಗೆ, ಪೌರಸಭೆಯ ಕಾರ್ಮಿಕರ ವತಿಯಿಂದ ಇಬ್ಬರು ಪರಿಷತ್ ಸದಸ್ಯರು ಚುನಾಯಿತರಾಗಬೇಕು ಎಂಬುದು ಈಗಿನ ತಿದ್ದುಪಡಿಯಾಗಿದೆ. ಈ ತಿದ್ದುಪಡಿಯನ್ನು ಅನುಮೋದಿಸಲು ಕಾರಣ ಹೀಗಿದೆ. ಪೌರಸಭೆಯ ಕಾರ್ಮಿಕರು ಪೌರಸಭೆಯ ನಿಗಮದ ಆಡಳಿತದಲ್ಲಿ ನೇರವಾಗಿ ಆಸಕ್ತಿ ವಹಿಸುವರು ಎಂಬುವುದರಲ್ಲಿ ಯಾವ ಸಂದೇಹವೂ ಇಲ್ಲ. ಪೌರಸಭೆಯ ಆಯುಕ್ತರ ಅಧಿಕಾರದ ಕೆಳಗೆ ಅವರಿರುವರು. ಪೌರಸಭೆಯಿಂದ ನೇಮಕಗೊಂಡ ವಿವಿಧ ಅಧಿಕಾರಿಗಳ ಅಧೀನರಾಗಿ, ಅವರು ತಮ್ಮ ಕೆಲಸ ಮಾಡುವರು. ಈಗ ಮಾನ್ಯರೇ, ಪೌರಸಭೆಯ ಸಂವಿಧಾನಕ್ಕೆ ಮಾನ್ಯತೆ ಕೊಟ್ಟು ಹೇಳಬೇಕೆಂದಿರುವೆ; ಮೇಲಧಿಕಾರಿಗಳು ಜಾರಿ ಮಾಡಬಹುದಾದ ಆಜ್ಞೆಯ ವಿರುದ್ಧವಾಗಿ ಪರಿಹಾರವನ್ನು ಪಡೆಯಲು ಪೌರಸಭೆಯ ಕಾರ್ಮಿಕರಿಗೆ ಯಾವುದೇ ಹಕ್ಕುಗಳಿಲ್ಲ ವೆಂಬುದು ಸ್ಪಷ್ಟವಿದೆ. ಬಹಳ ಸ್ಪಷ್ಟವಿದೆ. ಮುಂಬೈ ಸರಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸಾಮಾನ್ಯ ಸರಕಾರಿ ನೌಕರನ ಸ್ಥಾನಕ್ಕೂ, ಇವರಿಗಿರುವ ಸ್ಥಾನಕ್ಕೂ ನಿಜವಾಗಿಯೂ ಮಹದಂತರವಿದೆ. ಉದಾಹರಣಾರ್ಥ ವಾಗಿ, ರಾಜ್ಯ ಅಧಿಕಾರದ ಸೇವೆಯಿರಲಿ ಇಲ್ಲವೆ ಅಧೀನ ಸೇವೆಯಿರಲಿ ಒಬ್ಬ ಸರಕಾರಿ ಸೇವಕನಿಗೆ, ಅವನ ಪ್ರತಿಕೂಲವಾಗಿ ಯಾವುದೇ ಆಜ್ಞೆ ಹೊರಟಿದ್ದರೆ, ಮೇಲ್ಮನವಿ ಮಾಡಿಕೊಳ್ಳಲು ಅವಕಾಶ ಮಾಡಿ ಕೊಟ್ಟಿದೆ. ಮುಂಬೈ ಪೌರಸಭೆಯ ನಿಗಮದಲ್ಲಿ ಕಾರ್ಮಿಕನ ವಿರುದ್ಧ ಆಜ್ಞೆಯನ್ನು ಹೊರಡಿಸಬಹುದು; ಆ ಕಾರ್ಮಿಕನಿಗೆ ಪರಿಹಾರ ಕಂಡುಕೊಳ್ಳುವ ಹಕ್ಕು ಇಲ್ಲವೇ ಇಲ್ಲ. ಪೌರಸಭೆಯ ಕಾರ್ಮಿಕರಿಗೆ ಈ ತಿದ್ದುಪಡಿಯಲ್ಲಿ ಲಾಭವೊಂದು ಇದೆ; ಮುಂಬೈ ಪೌರಸಭೆಯ ನಿಗಮದ ಯಾವುದೇ ಅಧಿಕಾರಿಯು ಜಾರಿ ಮಾಡಿದ ಆಜ್ಞೆಯನ್ನು, ಕಾರ್ಮಿಕರು ತಮ್ಮ ಪ್ರತಿನಿಧಿಗಳ ಮೂಲಕ ಪೌರಸಭೆಯ ನಿಗಮದ ಸಭೆಯಲ್ಲಿ ಪ್ರಕಟ ಮಾಡಬಹುದಾಗಿದೆ; ನಿಜವಾಗಿಯೂ ಈ ತಿದ್ದುಪಡಿಯಿಂದ ಅವನಿಗೆ ಸ್ವಲ್ಪ ಪರಿಹಾರ ದೊರಕಿಸಿ ಕೊಡಲು ಸಾಧ್ಯವಿದೆ. ಈಗಿರುವ ಸಂವಿಧಾನದಲ್ಲಿ ಅವರಿಗೆ ಇಂಥ ಅನುಕೂಲವಿಲ್ಲ.

ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ತಾವು ವಯಸ್ಕ ಮತದಾನ ಪದ್ಧತಿಯನ್ನು ತಂದಿರುವುದಾಗಿಯೂ ಮತ್ತು ವಯಸ್ಕ ಮತದಾನ ಪದ್ಧತಿ ಬಂದಿರುವುದರಿಂದ ಸಂಘಟಿತ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡುವ ಅವಶ್ಯಕತೆ ಉಳಿದಿಲ್ಲವೆಂದೂ ಹೇಳಿರುವರು. ಮಾನ್ಯ ಮಂತ್ರಿಗಳು ನಮ್ಮೆದುರಿಗೆ ಇರುವ ವಿಧೇಯಕದಲ್ಲಿ ಅವರು ಏನೇನು ಅವಕಾಶ ಮಾಡಿಕೊಟ್ಟಿರುವರೆಂಬುದನ್ನು ಸರಿಯಾಗಿ ಲಕ್ಷ್ಯಗೊಟ್ಟು

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೨೮೦೭–೦೮
ದಿನಾಂಕ ೩ ಮೇ ೧೯೨೮.

ನೋಡಿಲ್ಲವೆಂಬುದು ನನಗೆ ಖಾತ್ರಿಯಿದೆ. ಮಾನ್ಯ ಮಂತ್ರಿಗಳ ಅಭಿಪ್ರಾಯದಲ್ಲಿ ಪೌರಸಭೆಯ ಕಾರ್ಮಿಕರು ಸಾಕಷ್ಟು ಪ್ರಾತಿನಿಧ್ಯವನ್ನು ಪಡೆಯಲು ಅವಲಂಬಿಸಬಹುದಾದ ಉತ್ತಮ ಉಪಾಯವು ವಯಸ್ಕ ಮತದಾನವೊಂದೇ ಆಗಿದೆಯೇ ಎಂಬುದನ್ನು ನಾನು ಕೇಳಬಯಸುವೆ. ಹಾಗಿದ್ದರೆ, ಕಾರ್ಮಿಕರಿಗಾಗಿ ನಾಲ್ವರು ಪರಿಷತ್ ಸದಸ್ಯರ ಪ್ರಾತಿನಿಧ್ಯದ ಅವಶ್ಯಕತೆಯಿಲ್ಲ. ಮುಂಬೈ ವಾಣಿಜ್ಯ ಮಂಡಳಿ, ಭಾರತೀಯ ವ್ಯಾಪಾರಸ್ಥರ ಮಂಡಳಿ, ಗಿರವಿ ಮಾಲೀಕರ ಮಂಡಳಿ ಇವುಗಳ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡುವ ಅವಶ್ಯಕತೆಯಿಲ್ಲ; ಏಕೆಂದರೆ ಅವರು ಚುನಾವಣೆಯ ಸಾದಾ ಪದ್ಧತಿಯಲ್ಲಿ ತಮ್ಮ ಪ್ರಾತಿನಿಧ್ಯವನ್ನು ಪಡೆಯಬಹುದಾಗಿದೆ. ಕಾರ್ಮಿಕ ವರ್ಗದವರಿಗೆ ವಯಸ್ಕ ಮತದಾನವೊಂದೇ ಪ್ರಾತಿನಿಧ್ಯವನ್ನು ದೊರಕಿಸಲು ಸಾಕಾಗುತ್ತಿದ್ದರೆ, ಪ್ರತಿನಿಧಿಗಳು ನಾಲ್ವರು ಪರಿಷತ್ ಸದಸ್ಯರನ್ನು ಚುನಾಯಿಸಬೇಕು ಎಂಬ ಅವಕಾಶವು ಅನವಶ್ಯಕ. ಆದ್ದರಿಂದ ವಯಸ್ಕ ಮತದಾನ ಚುನಾವಣೆಯ ಸಾದಾ ಪದ್ಧಿತಿಗಳಿಂದ ಪ್ರಾತಿ ನಿಧ್ಯವು ದೊರೆಯುವುದಿಲ್ಲವೆಂಬ ಸತ್ಯ ಸಂಗತಿಯ ಅರಿವಿನಿಂದಲೇ ಕಾಮಿಕ ವರ್ಗವು ಎಲ್ಲರನ್ನು ಚುನಾಯಿಸಿ ಕಳಿಸಬೇಕೆಂಬ ಅವಕಾಶವನ್ನು ಕಲ್ಪಿಸಲಾಗಿದೆ; ಈ ಕಾರಣವನ್ನು ಚರ್ಚೆಗೆ ಮುಕ್ತವಾಗಿಡ ಬೇಕು. ಕಾರ್ಮಿಕ ಚುನಾವಣಾ ಕ್ಷೇತ್ರಗಳ ಮುಖಾಂತರವಾಗಿ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡುವುದು ಅವಶ್ಯವಿದ್ದರೆ, ಪೌರ ಸಭೆಯ ಕಾರ್ಮಿಕರಿಗೂ ವಿಶೇಷ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಇನ್ನೂ ಒಳ್ಳೆಯ ಕಾರಣಗಳಿವೆಯೆಂದು ನಾನು ನಿವೇದಿಸಬಯಸುವೆ; ಸಾಮಾನ್ಯ ಕಾರ್ಮಿಕರಿಗಿಂತಲೂ ಹೆಚ್ಚಾಗಿ ಅವರು ಪೌರಸಭೆಯ ಸಂವಿಧಾನ ಹಾಗೂ ಕಾರ್ಯದಲ್ಲಿ ಆಸಕ್ತರಿರುವರು. ಈ ಆಧಾರದ ಮೇಲೆ ಈ ತಿದ್ದುಪಡಿಯು ಈ ಸದನದಲ್ಲಿ ಸ್ವೀಕೃತವಾಗಬೇಕು ಎಂದು ನಿವೇದಿಸುವೆ.

# ೩೪

# *ಪಾನಪ್ರತಿಬಂಧವನ್ನು ಕುರಿತು

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಪಾನಪ್ರತಿಬಂಧದ ವಿಷಯದಲ್ಲಿ ಈ ಸದನದಲ್ಲಿ ಕಾವೇರಿದ ಭಾವನೆಗಳುಂಟಾಗಿವೆಯೆಂಬುದು ನನಗೆ ತೋರಿದೆ. ಆ ಭಾವನೆಗಳಲ್ಲಿ ನಾನು ಭಾಗಿಯಾಗಿಲ್ಲ ಎಂದು ಹೇಳಲಾರೆ. ಆದರೆ ಬೇರೆ ಕೆಲವೊಂದು ಕಾರಣಗಳಿಗಾಗಿ ಅಬಕಾರಿ ಖಾತೆಯ ಮಾನ್ಯ ಮಂತ್ರಿಗಳ ಬಗ್ಗೆ ಕಟುವಾಗಿ ಮಾತನಾಡಲು ನಾನು ಬಯಸುವುದಿಲ್ಲ. ಈ ಖಾತೆಗೆ ಅವರು ಹೊಸಬರು ಎಂಬುದೂ ನನಗೆ ಗೊತ್ತಿದೆ. ಯಾರಿಗೇ ಆದರೂ ಕಾಲಿಡಲು ಇದು ತಪ್ಪು ಸ್ಥಳವೆಂಬುದು ನನಗೆ ಅನಿಸಿದೆ. ಈ ಸದನದ ಇನ್ನೊಬ್ಬ ಮಾನ್ಯ ಸದಸ್ಯರು, ಈ ಖಾತೆಯನ್ನು ತಾವು ಬಿಡುವುದೇ ಹಿತಕರವೆಂದು ಯೋಚಿಸಿದಾಗ, ಮಾನ್ಯ ಮಂತ್ರಿಗಳು ಈ ಸ್ಥಾನವನ್ನು ಸ್ವೀಕರಿಸಿದ್ದಕ್ಕೆ ಅವರನ್ನು ನಾನು ಅಭಿನಂದಿಸುವೆ.

ಈಗ ಎರಡು ಮೂರು ದಿನಗಳಿಂದ ಮಾನ್ಯ ಅಬಕಾರಿ ಖಾತೆಯ ಮಂತ್ರಿಗಳು ಆಡಿದ ಮಾತುಗಳನ್ನು ವಿಮರ್ಶಿಸಿದರೆ, ಈ ಖಾತೆಯಲ್ಲಿ ಸ್ಥಾಪಿತವಾದ ಮಾರ್ಗಗಳನ್ನು ಆ ಹಳೆಯ ಕೆಟ್ಟ ಮಾರ್ಗಗಳನ್ನು– ಇವರೂ ತುಳಿಯುವರೆಂಬ ಅನಿಸಿಕೆ ನನ್ನದಾದ್ದರಿಂದ, ನಾನು ಈ ವಿಷಯವನ್ನು ಕುರಿತು ಮಾತನಾಡಲು ಉದ್ದೇಶಿಸಿರುವೆ. ಮೊನ್ನಿನ ದಿನ ಪ್ರಶ್ನೆ–ಪ್ರತಿಪ್ರಶ್ನೆಗಳು ನಡೆದಾಗ, ಸ್ವಲ್ಪ ಅಸಾಮಾನ್ಯ ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿರುವರೆಂದು ನನಗೆ ತೋರಿತು. ನಿಜಾಮರು ನಮ್ಮ ಪ್ರದೇಶದಲ್ಲಿ ಸೆರೆಯಂಗಡಿಯೊಂದನ್ನು ತೆಗೆದ ಕಾರಣದಿಂದ, ನಿಜಾಮರ ಪ್ರಾಂತದ ಗಡಿಭಾಗಗಳ ಸಮೀಪ ತಾವೂ ಒಂದು ಸೆರೆಯಂಗಡಿ ತೆರೆಯಿಸಿರುವುದಾಗಿ ಹೇಳಿಕೆ ಕೊಟ್ಟಿರುವರು. ಮಾನ್ಯರೆ, ಪಾನಪ್ರತಿಬಂಧದ ಧೋರಣೆಯನ್ನು ಅಂಗೀಕರಿಸಿದ ಒಬ್ಬ ಮಂತ್ರಿಗಳು ಈ ಸದನದಲ್ಲಿ ಇಂಥ ವಾದಮಾಡುವುದು ಸರಿಯಾದುದಲ್ಲವೆಂದು ನನಗೆ ಅನಿಸಿದೆ. ಅವರ ವಾದದ ಅರ್ಥ ಹೀಗೂ ಆಗುತ್ತದೆ; ಒಬ್ಬ ದರೋಡೆಕೋರನು ದರೋಡೆಯೊಂದನ್ನು ಮಾಡಿ ಸುಲಿಗೆ ಮಾಡಿಕೊಂಡು ಹೋಗಿರುವನೆಂದು, ಅಬಕಾರಿ ಖಾತೆಯ ಮಾನ್ಯ ಮಂತ್ರಿಗಳಿಗೂ ದರೋಡೆ ಮಾಡಲು ಹಕ್ಕು ಇದೆಯೆಂದು ಅವರೂ ಹೀಗೆಯೇ ಮಾಡಬಹುದೆಂದು ತೋರಿಸಿದಂತಾಗುತ್ತದೆ. ಮಾನ್ಯರೆ, ಯಾರೋ ಒಂದು ತಪ್ಪು ಮಾಡಿದರೆ, ಅದೇ ತಪ್ಪನ್ನು ನಾವು ಮಾಡುವುದು ನ್ಯಾಯಸಮ್ಮತವಲ್ಲ. ಸ್ನೇಹಿತರಾದ ಅಬಕಾರಿ ಖಾತೆಯ ನಮ್ಮ ಮಾನ್ಯ ಮಂತ್ರಿಗಳು ನಮ್ಮ ಪ್ರದೇಶದಲ್ಲಿ ಸೆರೆಯಂಗಡಿಗಳನ್ನು ತೆರೆದ ಶ್ರೀಮನ್ ಮಹಾರಾಜ ನಿಜಾಮರಿಗೆ ವಿನಯಪೂರ್ವಕ ಪ್ರತಿಭಟನೆಯನ್ನು ಕಳಿಸಿದ್ದಿದ್ದರೆ ಅತ್ಯುತ್ತಮ ಧೋರಣೆಯಾಗುತ್ತಿತ್ತು. ಹಾಗೆ ಮಾಡುವುದರ ಬದಲು, ಈ ಪ್ರಾಂತದ ಜನರ ಹಿತಾಸಕ್ತಿಯನ್ನು ಮೀರಿ, ಕೇವಲ ಆದಾಯದ ಬಗ್ಗೆ ಆಸಕ್ತಿಯನ್ನು ತೋರಿಸಲಾಗಿದೆ.

---

*ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XIX, ಪುಟ ೮೩೮–೪೦
ದಿನಾಂಕ ೧೦ ಮಾರ್ಚ್ ೧೯೨೭.

ಇನ್ನುಳಿದ ವಿಚಾರಗಳನ್ನು ಬಿಟ್ಟು ಅಬಕಾರಿ ಖಾತೆಯ ಮಂತ್ರಿಗಳಾದ ನಮ್ಮ ಮಾನ್ಯ ಮಿತ್ರರು ಆದಾಯವನ್ನಷ್ಟೇ ನೋಡುತ್ತಾರೆಂದು ನನಗೆ ಅನಿಸುತ್ತದೆ. ಮುಂಗಡಪತ್ರದ ಮೇಲೆ ಚರ್ಚೆ ನಡೆದಿರು ವಾಗಲೂ, ಅವರು ನೀಡಿದ ಹೇಳಿಕೆಯೊಂದು ಗಂಭೀರ ಯೋಚನೆಯ ಸ್ವರೂಪದ್ದಾಗಿದೆಯೆಂದು ನನಗೆ ತೋರುತ್ತದೆ. ನನ್ನ ಹಲವಾರು ಟೀಕೆಗಳಿಗೆ ಅವರು ಉತ್ತರಿಸುತ್ತ ಅಬಕಾರಿ ಖಾತೆಯ ಧೋರಣೆಯನ್ನು ನಿರ್ಣಯಿಸುವಾಗ, ಪ್ರಾಂತದಲ್ಲಿ ಎಷ್ಟು ಸೆರೆ ಬಳಕೆಯಾಗಿದೆಯೆಂಬುದನ್ನು ವಿಚಾರಿಸಬೇಕೇ ಹೊರತು ಅಬಕಾರಿ ಖಾತೆಯಿಂದ ಎಷ್ಟು ಹಣ ದೊರಕಿದೆ ಎಂಬುದನ್ನು ನೋಡಕೂಡದೆಂದು ತಿಳಿಸಿರುವರು. ಭಾರತದಲ್ಲಿ ಇನ್ನುಳಿದ ಪ್ರಾಂತಗಳಲ್ಲಿಯ ಜನರು ಕುಡಿಯುವಷ್ಟು ಮುಂಬೈ ಪ್ರಾಂತದ ಜನರು ಕುಡಿಯು ವುದಿಲ್ಲವೆಂದು ತೋರಿಸಲು ಅವರು ಅಂಕಿ ಸಂಖ್ಯೆ ಪೂರೈಸಿರುವರು. ಈ ಅಂಕಿ ಸಂಖ್ಯೆ ನೋಡಲು ನನಗೆ ವೇಳೆ ಇರಲಿಲ್ಲ. ಆದರೆ ಅಬಕಾರಿ ಖಾತೆಯ ಮಾನ್ಯ ಮಂತ್ರಿಗಳು ಕೊಟ್ಟ ಅಂಕಿ ಸಂಖ್ಯೆಗಳನ್ನು ನಾವು ಒಪ್ಪಿಕೊಳ್ಳಬಹುದು. ಆದರೆ ಮಾನ್ಯರೆ, ಕ್ರಮಬದ್ಧವಾಗಿ ಸೆರೆ ಕುಡಿಯುವುದು ಕಡಿಮೆಯಾದ್ದರಿಂದ, ಮುಂಬೈ ಪ್ರಾಂತದಲ್ಲಿ ಕಳ್ಳಬಟ್ಟಿ ಸೆರೆ ತಯಾರಿಸುವುದು ಹೆಚ್ಚಾಗಿದೆ ಎಂಬುದನ್ನು ನನ್ನ ಮಾನ್ಯ ಸ್ನೇಹಿತರು ಒಪ್ಪಿಕೊಳ್ಳುವರೆಂದು ನಾನು ತಿಳಿದಿರುವೆ. ಈ ಸತ್ಯಸಂಗತಿಯನ್ನು ನೋಡಿದರೆ, ಕ್ರಮಬದ್ಧ ಸೆರೆ ಕುಡಿ ಯುವುದು ಇಳಿಮುಖವಾಗಿದ್ದರೂ, ಕಳ್ಳಭಟ್ಟಿ ಸೆರೆ ಕುಡಿಯುವ ಪ್ರಮಾಣ ಹೆಚ್ಚಾಗಿದೆಯಾದ್ದರಿಂದ, ಬಳಕೆ ಕಡಿಮೆಯಾಗಿಲ್ಲವೆಂದೇ ಇದು ತೋರಿಸುತ್ತದೆ. ಕಳ್ಳಭಟ್ಟಿ ಸೆರೆಯ ತಯಾರಿಕೆಯ ನಿಜವಾದ ಅಂಕಿ ಸಂಖ್ಯೆ ನಮಗೆ ಗೊತ್ತಿಲ್ಲ. ಆದರೆ ಈ ಸತ್ಯಸಂಗತಿಯು ಒಪ್ಪಿತವಾಗಿದೆ. ಕಳ್ಳಭಟ್ಟಿ ಸಾರಾಯಿಯ ಪ್ರಮಾಣ ಹೆಚ್ಚಾಗುತ್ತಿದೆ ಎಂಬ ವಿಷಯವನ್ನು ಒಪ್ಪಿಕೊಳ್ಳುವುದರಲ್ಲಿ ಅಬಕಾರಿ ಖಾತೆಯ ಮಾನ್ಯ ಮಂತ್ರಿಗಳೇ ಮೊದಲಿಗರಾಗುತ್ತಾರೆ ಎಂದು ನಾನು ಭಾವಿಸುತ್ತೇನೆ. ಈ ವಿಷಯದಲ್ಲಿ ಸರಕಾರಕ್ಕೆ ಏನೂ ಲಾಭವಾಗಿಲ್ಲ. ಏಕೆಂದರೆ ಜನರು ಕ್ರಮಬದ್ಧ ಸೆರೆಯನ್ನು ಬಿಟ್ಟು ಅಕ್ರಮವಾದ ಸೆರೆಯನ್ನು ಹೆಚ್ಚಾಗಿ ಕುಡಿಯುತ್ತಿದ್ದಾರೆ. ಈಗ ಪ್ರಶ್ನೆಯೆಂದರೆ ಈ ಪ್ರಾಂತದಲ್ಲಿ ಈ ಕಳ್ಳಭಟ್ಟಿ ಸೆರೆಯ ತಯಾರಿಕೆ ಇಷ್ಟೇಕೆ ಹೆಚ್ಚಾಗುತ್ತಿದೆ? ನನಗೆ ಗೊತ್ತಿದ್ದಂತೆ, ಈ ಪ್ರಶ್ನೆಗೆ ಸರಕಾರದಿಂದ ಉತ್ತರವೇನೂ ದೊರಕಿಲ್ಲ. ಆದರೆ ಇದಕ್ಕೆ ಸಾಧ್ಯವಿರುವಷ್ಟರ ಮಟ್ಟಿಗೆ ನಾನು ಉತ್ತರಿಸುವ ಸಾಹಸ ಮಾಡುವೆ. ಮಾನ್ಯರೆ, ಈ ಪ್ರಾಂತದಲ್ಲಿ ಕಳ್ಳಭಟ್ಟಿ ಸೆರೆಯ ತಯಾರಿಕೆ ಹೆಚ್ಚಾಗಿರುವುದಕ್ಕೆ ದೇಶೀ ಸೆರೆಯ ಮೇಲೆ ಶುಲ್ಕ ಏರಿಸಿದ್ದೇ ಸಂಪೂರ್ಣವಾಗಿ ಕಾರಣವಾಗಿದೆ. ಒಂದು ಸರಕಿನ ಬೆಲೆ ಏರಿದರೆ ಆಗ ಅದರಷ್ಟೇ ಉಪಯುಕ್ತವಿರುವ ಹಾಗೂ ಕಡಿಮೆ ಬೆಲೆಯ ಸರಕನ್ನು ಅದರ ಪ್ರತಿಯಾಗಿ ಉಪಯೋಗಿಸುವುದರತ್ತ ಯಾವಾಗಲೂ ಜನರ ಮನಸ್ಸಿನ ಒಲವಿರುತ್ತದೆ ಎಂಬುದು ಒಪ್ಪಿತ ವಾಗಿರುವ ರಾಜಕೀಯ ಅರ್ಥನೀತಿಯ ತತ್ವವಾಗಿದೆ; ಇದು ಪಠ್ಯ ಪುಸ್ತಗಳಲ್ಲಿ ಮಾತ್ರ ಇಲ್ಲ. ಆದರೆ ಪ್ರತಿಯೊಬ್ಬ ಗೃಹಿಣಿಗೂ ತಿಳಿದಿರುವ ಹಾಗೂ ಕಾರ್ಯರೂಪದಲ್ಲಿ ಬಂದಿರುವ ತತ್ವವಾಗಿದೆ. ಸಕ್ಕರೆಯ ಧಾರಣೆಯು ಏರಿದರೆ, ಜನರು ಸಕ್ಕರೆಯ ಬದಲು ಬೆಲ್ಲವನ್ನು ಉಪಯೋಗಿಸುವರು; ಕಾಫಿಯ ದರ ಏರಿದರೆ ಆಗ ಜನರು ಹೆಚ್ಚಾಗಿ ಚಹವನ್ನು ಉಪಯೋಗಿಸುವರು; ಇದೆಲ್ಲ ನಮಗೆ ಗೊತ್ತಿದೆ. ಇದೇ ತತ್ವವನ್ನು ನಮ್ಮ ವಿಷಯಕ್ಕೂ ಹೊಂದಿಸಿ ನೋಡಬಹುದಾಗಿದೆ; ಮಾನ್ಯರೆ, ಈ ಪ್ರಾಂತದಲ್ಲಿ ಕಳ್ಳಭಟ್ಟಿ ಸೆರೆ ಹೆಚ್ಚಾದುದಕ್ಕೆ ದೇಶೀಸೆರೆಯ ಮೇಲೆ ಶುಲ್ಕವನ್ನು ಹೆಚ್ಚಿಸಿದ್ದೇ ಸಂಪೂರ್ಣವಾಗಿ ಕಾರಣವಾಗಿದೆಯೆಂದು ನಿವೇದಿಸುವೆ. ಸಮಸ್ಯೆಯ ಈ ಅಂಶಕ್ಕೆ ನನ್ನ ಮಾನ್ಯ ಸ್ನೇಹಿತರಾದ ಅಬಕಾರಿ ಖಾತೆಯ ಮಂತ್ರಿಗಳು ಹೆಚ್ಚು ಲಕ್ಷ್ಯ ಕೊಡಬೇಕು. ಅವರು ಪಾನಪ್ರತಿಬಂಧದಲ್ಲಿ ವಿಶ್ವಾಸವುಳ್ಳವರೇ ಆಗಿದ್ದರೆ, ಶುಲ್ಕವು ಕ್ರಮಬದ್ಧ ವಾಗುವಂತೆ ಮಾಡಬೇಕು. ಶುಲ್ಕವನ್ನು ಕ್ರಮಬದ್ಧಗೊಳಿಸದಿದ್ದರೆ, ಕ್ರಮಬದ್ಧ ಸೆರೆಯ ಬಳಕೆಯನ್ನು

ನಿಗ್ರಹಿಸುವಲ್ಲಿ ಅವರು ಯಶಸ್ವಿಯಾದರೂ, ಕಳ್ಳಭಟ್ಟಿ ಸೆರೆಯ ಹೆಚ್ಚಳಕ್ಕೆ ಅವರು ನೇರವಾಗಿ ಉತ್ತೇಜನ ಕೊಟ್ಟಂತಾಗುವುದು.

ನಾನು ಮಾತನಾಡಲು ಬಯಸಿದ ಮತ್ತೊಂದು ವಿಷಯ ಪಾನಪ್ರತಿಬಂಧ ನೀತಿಯದು. ನನ್ನ ಮಾನ್ಯ ಮಿತ್ರರಾದ ಶ್ರೀ ಮುರ್ಜಬಾನ್ ಅವರು ಮಾಡಿದ ಕೆಲವು ವಾದಗಳಿಗೆ ನನ್ನ ಮಾನ್ಯ ಸ್ನೇಹಿತರಾದ ಸದನದ ಸಭಾನಾಯಕರು ಉತ್ತರಿಸುತ್ತ ಪಾನಪ್ರತಿಬಂಧವು ಸರಕಾರದ ಅಂಗೀಕೃತ ನೀತಿಯಾಗಿದೆ ಯೆಂದೂ, ಯಾವುದೇ ಪರಿಸ್ಥಿತಿಯಲ್ಲಿ ಸರಕಾರವು ವಿಧಾನ ಪರಿಷತ್ತಿನಲ್ಲಿ ಸ್ವೀಕೃತವಾದ ಈ ನೀತಿಯ ವಿರುದ್ಧ ಹೋಗುವುದಿಲ್ಲವೆಂದು ಹೇಳಿದುದನ್ನು ಕೇಳಿ ನನಗೆ ಸಂತೋಷವಾಯಿತು. ಆದರೆ ಮಾನ್ಯರೆ, ನಮ್ಮೆದುರಿಗೆ ಇರುವ ನಿಜವಾದ ವಿಷಯವನ್ನು ಬಿಟ್ಟು ಸ್ವಲ್ಪ ಬೇರೆಯದನ್ನೇ ಹೇಳಿದಾಗ, ನನಗೆ ಸ್ವಲ್ಪ ನಿರಾಶೆಯಾಯಿತೆಂದೂ ತಿಳಿಯಬಯಸುವೆ. ಪಾನಪ್ರತಿಬಂಧಕ್ಕಾಗಿ ಯಾವ ನೀತಿ ಅನುಸರಿಸಬೇಕು ಎಂಬ ವಿಷಯ ಸದನದ ಮುಂದಿದೆ ಎಂದು ಅವರು ಹೇಳಿದರು: ಪಡಿತರ ಪದ್ಧತಿಯ ನೀತಿಯನ್ನು ನಾವು ಅನುಸರಿಸಬೇಕೋ ಅಥವಾ ಸ್ಥಳೀಯ ಆಯ್ಕೆಯ ನೀತಿಯನ್ನು ಅನುಸರಿಸಬೇಕೋ ಎಂಬುದು ಈಗಿನ ಪ್ರಶ್ನೆ ಎಂದು ಅವರು ತಿಳಿಸಿದರು. ಮಾನ್ಯರೆ, ಕೆಲವು ಸಣ್ಣಪುಟ್ಟ ವಿವರಗಳನ್ನು ಮಾಡಲು ಆಸ್ಪದ ಕೊಟ್ಟರೆ, ಇವೆರಡೂ ಪದ್ಧತಿಗಳು ಹೆಚ್ಚುಕಡಿಮೆ ವಿವರಗಳನ್ನು ಮಾಡಲು ಆಸ್ಪದ ಕೊಟ್ಟರೆ, ಇವೆರಡೂ ಪದ್ಧತಿಗಳು ಹೆಚ್ಚುಕಡಿಮೆ ಪರಿಪೂರ್ಣವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ನೀವು ಪಡಿತರ ಪದ್ಧತಿಯ ನೀತಿಯನ್ನು ಅನುಸರಿಸಿದರೂ ಅಷ್ಟೇ, ಸ್ಥಳೀಯ ಆಯ್ಕೆಯ ನೀತಿಯನ್ನು ಅನುಸರಿಸಿದರೂ ಅಷ್ಟೇ. ಈ ಪರಿಸ್ಥಿತಿಯಲ್ಲಿ ಅಂಥದೇನೂ ಬದಲಾವಣೆಯಾಗುವುದಿಲ್ಲ; ಏಕೆಂದರೆ ಮಾರ್ಕೆಟ್ಟಿಗೆ ಬಿಡುಗಡೆಮಾಡುವ ಸೆರೆಯ ಪೂರೈಕೆಯನ್ನು ನಿಗ್ರಹಿಸುವುದೇ ಉದ್ದೇಶವಾಗಿದೆ. ಅಂಗಡಿಕಾರರಿಗೆ ಹೆಚ್ಚಿಗೆ ಸೆರೆಯನ್ನು ಪೂರೈಸದಿರಬಹುದು ಅಥವಾ ಅಂಗಡಿಗಳನ್ನೇ ತೆರೆಯದೇ ಇರಬಹುದು; ನೀವೇನೇ ಮಾಡಿದರೂ ಪರಿಣಾಮ ಒಂದೇ ರೀತಿಯದು. ಆದರೆ ಮಾನ್ಯರೆ, ಪಾನಪ್ರತಿಬಂಧದ ನೀತಿಯನ್ನು ಅನುಸರಿಸುತ್ತ ನಾವು ಎಷ್ಟರಮಟ್ಟಿಗೆ ಮುಂದೆ ಸಾಗಬಹುದು? ಈ ಸಮಸ್ಯೆಯನ್ನು ನನ್ನ ಮಾನ್ಯ ಸ್ನೇಹಿತರಾದ ಸಭಾ ನಾಯಕರು ಲೆಕ್ಕ ಹಾಕಿಲ್ಲವೆಂದು ನನಗೆ ತೋರುತ್ತದೆ. ಮಾನ್ಯರೆ, ಪಾನಪ್ರತಿಬಂಧದ ಪ್ರಶ್ನೆಯು, ಪಾನಪ್ರತಿಬಂಧವನ್ನು ನೀವು ಯಶಸ್ವಿಯಾಗಿ ನಡೆಸುತ್ತೀರೋ ಇಲ್ಲವೋ ಎಂಬುದು, ನಮ್ಮ ಹೊಸ ಅಬಕಾರಿ ನೀತಿಯ ಪರಿಣಾಮವಾಗಿ ನಮಗೆ ಉಂಟಾಗುವ ಹಣದ ಕೊರತೆಯನ್ನು ಹೇಗೆ ತುಂಬಿಕೊಳ್ಳಲು ಯತ್ನಿಸುತ್ತೇವೆ ಎಂಬುದರ ಮೇಲೆ ಅವಲಂಬಿಸಿದೆ. ಸದನದಲ್ಲಿಯ ನಮ್ಮ ಪಕ್ಷದವರು, ಸಭಾ ನಾಯಕರು ತಮ್ಮ ಮನಸ್ಸಲ್ಲಿ ಯೋಚಿಸಿದ ಬೇರೆ ಬೇರೆ ಪ್ರಕಾರದ ಹಾಗು ರೀತಿಯ ಕರಾಕರಣೆ ಬಗ್ಗೆ ಬಹಳಷ್ಟು ಕೇಳಬೇಕೆಂದು ಹಾರೈಸಿದ್ದೆವು. ಮಾನ್ಯರೆ, ಈ ಸದನದಲ್ಲಿ ಇದರ ಬಗ್ಗೆ ಭಿನ್ನಾಭಿಪ್ರಾಯಗಳು ಇರಬಹುದು; ಆದರೆ ಕನಿಷ್ಠ ನಾವು ನಮ್ಮ ಪಕ್ಷದವರು ಅಧಿಕ ಕರಾಕರಣೆಯನ್ನು ವಿರೋಧಿಸುವುದಿಲ್ಲ; ಕರಾಕರಣೆಯ ಹಣವನ್ನು ರಾಷ್ಟ್ರನಿರ್ಮಾಣದ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸಬೇಕು ಎಂಬುದು ನಮ್ಮ ಕರಾರು. ಸರಕಾರವು ಕರಾಕರಣೆಯ ಹಣವನ್ನು ಸರಕಾರದ ರಕ್ಷಣೆಗಾಗಿ, ಆಡಳಿತಕ್ಕಾಗಿ ಉಪಯೋಗಿಸುವಂತಿದ್ದರೆ, ಅಧಿಕ ಕರಾಕರಣೆಗೆ ನಿಶ್ಚಿತವಾಗಿ ನಮ್ಮ ವಿರೋಧವಿದೆ. ಜೀವನವು ಸುಖವಾಗಿರುವಂತೆ ಮಾಡುತ್ತಿದ್ದರೆ ಹಾಗೂ ಜೀವಿತವು ಸಾಧ್ಯವಿದೆ ಎಂಬುದಕ್ಕೆ ಮಾತ್ರ ಪ್ರಯತ್ನಿಸಿದೇ ಇದ್ದರೆ, ಆಮೇಲೆ ನಮ್ಮ ಪಕ್ಷದವರೆಲ್ಲರೂ ಯಾವುದೇ ಕರವನ್ನು ಅನುಮೋದಿಸಲು ಸಿದ್ಧರಿದ್ದೇವೆ. ಮಾನ್ಯ ಸದಸ್ಯರಾದ ಸಭಾನಾಯಕರು ಸರಕಾರದ ವಿರುದ್ಧ ಆರೋಪಿಸಲಾದ ಅಪ್ರಾಮಾಣಿಕತನವನ್ನು

ನಿರಾಕರಿಸಲು ಪ್ರಯತ್ನಿಸಿದರು. ಮಾನ್ಯರೆ ಕಂದಾಯದ ನಷ್ಟವನ್ನು ಮತ್ತೆ ಹೇಗೆ ತುಂಬಿಕೊಳ್ಳಬೇಕು ಎಂಬುದರ ಬಗ್ಗೆ ನಿಶ್ಚಿತವಾಗಿರದಿದ್ದರೆ, ಯಾವುದೇ ಸರಕಾರವು ಪಾನಪ್ರತಿಬಂಧ ನೀತಿಯನ್ನು ಕಾರ್ಯಗತಗೊಳಿಸಬಾರದು ಎಂಬುದು ನನ್ನ ಅಭಿಪ್ರಾಯವಾಗಿದೆ. ಆದ್ದರಿಂದ ನನ್ನ ಮಾನ್ಯ ಮಿತ್ರರಿಗೆ ಧೈರ್ಯ, ಶ್ರದ್ಧೆಗಳಿಗಿಂತಲೂ ಇದು ಬಹಳ ಮಿಗಿಲಾದುದು– ಇರದಿದ್ದರೆ, ಈವರೆಗೂ ಕರ ಹಾಕದಿರುವ ಭಾರವನ್ನು ತಾಳಿಕೊಳ್ಳುವ ಹೆಚ್ಚು ಸಾಮರ್ಥ್ಯವಿದ್ದ ಜನರ ಮೇಲೆ ಕರಹೇರುವ ಧೈರ್ಯವಿರದಿದ್ದರೆ, ವಚನವನ್ನು ಕೊಟ್ಟು ಅದನ್ನು ನಡೆಸದೆ ದ್ವೇಷವನ್ನು ಕಟ್ಟಿಕೊಳ್ಳಲು ಅವರು ವ್ಯರ್ಥವಾಗಿ ಪ್ರಯತ್ನಿಸಿದಂತಾಗುವುದು ಎಂಬುದು ನನ್ನ ಅನಿಸಿಕೆ. ಮಾನ್ಯ ಸಭಾನಾಯಕರು ಕರಾಕರಣೆಯ ಒಂದು ಸೂಚನೆಯನ್ನು ತಂದು, ಸದನವು ಅವರನ್ನು ಒತ್ತಾಯಿಸುತ್ತಿರುವ ನೀತಿಯ ಬಗ್ಗೆ ಸದನದ ಪ್ರಾಮಾಣಿಕತೆಯನ್ನು ಪರೀಕ್ಷಿಸಿ ನೋಡಿದ್ದಿದ್ದರೆ ಅತ್ಯುತ್ತಮವಾಗುತ್ತಿತ್ತು. ನಮ್ಮ ಈ ನೀತಿಯು ಬಹಳ ವೆಚ್ಚದಾಯಕವಾದುದೆಂಬುದು ಈ ಸದನಕ್ಕಾಗಲಿ ಯಾರಿಗೇ ಆಗಲಿ ತಿಳಿದಿರುವ ಸಂಗತಿ; ನನ್ನ ಮಾನ್ಯ ಸ್ನೇಹಿತರಾದ ಸಭಾನಾಯಕರಿಗೆ ಬಹಳಷ್ಟು ಒತ್ತಾಯ ತರುತ್ತಿರುವ ನೀತಿಯಿಂದ ಉಂಟಾಗುವ ಕೊರತೆಯನ್ನು ತುಂಬಿಕೊಡಲು ಸಿದ್ಧವಿದೆಯೆಂಬ ಆಶ್ವಾಸನೆಯನ್ನು ಸದನದಿಂದ ಮಾನ್ಯ ಸಭಾನಾಯಕರು ಪಡೆಯುವುದು ಅವರ ಆಸಕ್ತಿಯದಾಗಿರಬೇಕಾಗಿತ್ತು ಮತ್ತು ಕರ್ತವ್ಯವೂ ಆಗಬೇಕಾಗಿತ್ತು. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

# ೩೫

# *ಪ್ರಸೂತಿ ಸೌಲಭ್ಯ ಮಸೂದೆಯನ್ನು ಕುರಿತು

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಈ ವಿಧೇಯಕದ ಪ್ರಥಮ ವಾಚನವನ್ನು ಅನುಮೋದಿಸಲು ನಾನು ನಿಂತಿರುವೆನು. ಹಾಗೆ ಮಾಡುವಾಗ, ಈ ವಿಧೇಯಕದ ವಿರುದ್ಧ ಚರ್ಚೆಯಲ್ಲಿ ಎತ್ತಲಾದ ಕೆಲವು ಪ್ರಶ್ನೆಗಳಿಗೆ ಉತ್ತರಿಸಬೇಕೆಂದಿದ್ದೇನೆ. ವಿಧೇಯಕದ ವಿರುದ್ಧ ಮಾತನಾಡುತ್ತ ಸನ್ಮಾನ್ಯ ಸದಸ್ಯರು ಮೊದಲು ಕಾರ್ಮಿಕರ ಪರಿಹಾರ ಕಾನೂನು ಪ್ರಕಾರ ನಾವು ತಿಳಿದುಕೊಳ್ಳುವಂತೆ ಇದೇನು ಒಂದು ಅಪಘಾತವಲ್ಲವೆಂಬುದನ್ನು ಎತ್ತಿ ತೋರಿಸಿದರು; ಆದ್ದರಿಂದ ಕಾರ್ಮಿಕ ಪುರುಷರ ಪರಿಹಾರ ಕಾನೂನಿನ ತತ್ವವನ್ನು ಪ್ರಸಕ್ತ ವಿಧೇಯಕದ ಲಾಭವನ್ನು ಪಡೆಯುವ ಮಹಿಳೆಯರಿಗೆ ಅನ್ವಯಿಸತಕ್ಕದ್ದಲ್ಲ ಎಂದೂ ನುಡಿದರು. ಮಾನ್ಯರೆ, ಇದು ಅಪಘಾತವಲ್ಲ ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಇದರಿಂದ ಸೂಚಿತವಾದ ವಿಧೇಯಕದಲ್ಲಿ ಮಹಿಳೆಯರಿಗೆ ದೊರಕಬೇಕೆಂದು ಬಯಸಿರುವ ಲಾಭವು ಅವರಿಗೆ ಪ್ರಾಪ್ತವಾಗಕೂಡದು ಎಂಬರ್ಥವೇನೂ ಆಗುವುದಿಲ್ಲ. ಈ ವಿಧೇಯಕದ ಹಿಂದಿನ ತತ್ತ್ವವು ಪಕ್ಷಪಾತದ್ದಾಗಿದೆ. ತಾಯಿಗೆ ಪ್ರಸೂತಿಗಿಂತ ಮೊದಲಿನ ಪರಿಸ್ಥಿತಿಯು, ಅನಂತರ ಮಗುವನ್ನು ಬೆಳೆಸುವುದು ಇವು ಈ ವಿಧೇಯಕದಲ್ಲಿ ಮಹತ್ವದ ಅಂಶವಾಗಿದೆಯೆಂಬ ಸೂಚನೆಯು ಸರ್ವಸಮ್ಮತವಿದೆಯೆಂದು ನಾನು ಸಂಪೂರ್ಣವಾಗಿ ನಂಬುವೆ. ಈ ಸೂಚನೆಯನ್ನು ಯಾರೂ ತಿರಸ್ಕರಿಸುವುದಿಲ್ಲವೆಂಬುದೂ ನನ್ನ ಅನಿಸಿಕೆ. ಆದ್ದರಿಂದ ಮಾನ್ಯರೆ, ರಾಷ್ಟ್ರದ ಹಿತದ ದೃಷ್ಟಿಯಿಂದ ತಾಯಿಯು ಪ್ರಸೂತಿಗಿಂತ ಮೊದಲು ಹಾಗೂ ಅನಂತರ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದು ಅವಶ್ಯವಿದೆ; ಇದೇ ತತ್ವದ ಮೇಲೆ ಈ ವಿಧೇಯಕದ ತತ್ವವೂ ನಿಂತಿದೆ. ಮಾನ್ಯರೆ, ಹೀಗಿರುವುದರಿಂದ ಇದರ ಭಾರವನ್ನು ಬಹಳಷ್ಟು ಸರಕಾರವೇ ವಹಿಸಿಕೊಳ್ಳಬೇಕೆಂಬುದನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ನಾನು ಈ ಸತ್ಯಸಂಗತಿಗೆ ಅನುಮತಿ ನೀಡುವೆ, ಏಕೆಂದರೆ ಜನತೆಯ ಕಲ್ಯಾಣವು ಪ್ರಾಥಮಿಕವಾಗಿ ಸರಕಾರಕ್ಕೆ ಸಂಬಂಧಿಸಿದೆ. ಪ್ರಸೂತಿಯ ಸೌಲಭ್ಯಕ್ಕಾಗಿ ಕೆಲವೊಂದು ವೆಚ್ಚವನ್ನು ಸಂಗ್ರಹಿಸಿದ್ದನ್ನು ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿ ನೀವು ಕಾಣಬಹುದು. ಹೀಗಿರುವಾಗ ಮಾನ್ಯರೆ, ಇಂಥ ಪರಿಸ್ಥಿತಿಗಳಲ್ಲಿ ಮಹಿಳೆಯರನ್ನು ಕೆಲಸಕ್ಕಾಗಿ ನೇಮಿಸಿಕೊಂಡ ಯಜಮಾನ ಇಂಥ ಸೌಲಭ್ಯಗಳನ್ನು ಮಾಡಿಕೊಡುವ ಹೊಣೆಗಾರಿಕೆಯಿಂದ ಸಂಪೂರ್ಣ ಮುಕ್ತನಾಗಿರುವನು ಎಂಬುದನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲ; ಇದಕ್ಕೆ ಕಾರಣವೂ ಇದೆ. ಕೆಲವೊಂದು ಉದ್ಯಮಗಳಲ್ಲಿ ಮಾಲಿಕನು ಹೆಣ್ಣಾಳುಗಳನ್ನು ನೇಮಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ; ಗಂಡಾಳು ನೇಮಿಸಿಕೊಂಡಾಗ ಸಿಗುವ ಲಾಭಕ್ಕಿಂತಲೂ ಹೆಚ್ಚು ಲಾಭವು ಹೆಣ್ಣಾಳು ನೇಮಿಸಿಕೊಂಡಾಗ ಮಾಲಿಕನಿಗೆ ದೊರೆಯುತ್ತದೆ. ಗಂಡಾಳುಗಳ ನೇಮಕಕ್ಕಿಂತಲೂ ಅದೇ ಪ್ರಮಾಣದಲ್ಲಿ ಹೆಣ್ಣಾಳು ಇರುವಾಗ

---

*ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXIII, ಪುಟ ೩೮೧–೮೨
ದಿನಾಂಕ ೨೮ ಜುಲೈ ೧೯೨೮.

ಬಹಳಷ್ಟು ಲಾಭವು ಮಾಲಿಕನಿಗೆ ಲಭಿಸುವುದು. ಹೀಗಿರುವಾಗ, ಗಂಡಾಳುಗಳ ಬದಲಾಗಿ ಹೆಣ್ಣಾಳುಗಳನ್ನು ನೇಮಿಸಿಕೊಂಡು ಮಾಲಿಕನು ವಿಶೇಷ ಲಾಭವನ್ನು ಪಡೆಯುತ್ತಿರುವಾಗ, ಕೆಲವು ಮಟ್ಟಿಗಾದರೂ ಮಹಿಳೆಯರಿಗೆ ಪ್ರಸೂತಿ ಸೌಕರ್ಯ ದೊರಕಿಸುವಲ್ಲಿ ಮಾಲಿಕನ ಹೊಣೆಗಾರಿಕೆಯಿದೆ ಎಂಬುದು ಸಂಪೂರ್ಣವಾಗಿ ಸಕಾರಣವಾಗಿದೆ. ಪ್ರಸೂತಿ ಸೌಲಭ್ಯದ ವಿಷಯದಲ್ಲಿ ಸರಕಾರಕ್ಕೂ ಸ್ವಲ್ಪ ಹೊಣೆಗಾರಿಕೆ ಇರಲೇಬೇಕೆಂದು ಹೇಳಿದರೂ ಸಹ, ಇಂದಿನ ಪರಿಸ್ಥಿತಿಗಳಲ್ಲಿ ಯಜಮಾನನಿಗೂ ಹೊಣೆಗಾರಿಕೆ ಇರಲಿ ಎಂದು ಆಶಿಸುವ ಈ ವಿಧೇಯಕವು ಸಂಪೂರ್ಣವಾಗಿ ತಪ್ಪಾಗಿದೆಯೆಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲವೆಂದು ತಿಳಿಯಬಯಸುವೆ. ಈ ದೃಷ್ಟಿಯಿಂದ ನಾನು ವಿಧೇಯಕವನ್ನು ಅನುಮೋದಿಸುವೆ.

ಈ ವಿಧೇಯಕವು ಕೇವಲ ಕಾರಖಾನೆಗಳಿಗೆ ಸಂಬಂಧಿಸಿರುವುದೆಂದೂ, ಬೇರೆ ಉದ್ಯಮಗಳಿಗಾಗಲಿ ಅಥವಾ ಕೃಷಿ ಉದ್ಯೋಗಕ್ಕಾಗಲಿ ಸಂಬಂಧವಿಲ್ಲವೆಂದೂ ಹೇಳಲಾಗಿದೆ. ಉತ್ತರ ಬಹಳ ಸರಳವಾಗಿದೆ. ಯಾವ ಉದ್ಯಮಗಳಲ್ಲಿ ವಿಶೇಷವಾಗಿ ಮಹಿಳೆಯರ ಆರೋಗ್ಯಕ್ಕೆ ಬಾಧಕವಾದ ಪರಿಸ್ಥಿತಿಗಳಿವೆಯೋ ಅಂಥವುಗಳಲ್ಲಿ ಈ ತತ್ವವನ್ನು ಅಳವಡಿಸಲಾಗಿದೆ. ಕಾರಖಾನೆಗಳಲ್ಲಿರುವಂತೆ ಕೃಷಿ ಹಾಗೂ ಇನ್ನಿತರ ಉದ್ಯೋಗಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಆರೋಗ್ಯಕ್ಕೆ ಬಾಧಕವಾಗುವ ಅಪಾಯಗಳಾಗಲಿ ಅಥವಾ ಇತರ ಅಂಶಗಳಾಗಲಿ ಇರುವುದಿಲ್ಲ. ಈ ಕಾರಣಕ್ಕಾಗಿಯೇ ಇಂಥ ಶಾಸನ ರಚನೆಯನ್ನು ಸಾಮಾನ್ಯವಾಗಿ ಕಾರಖಾನೆಗಳಿಗೆ ಮಾತ್ರ ಸೀಮಿತಗೊಳಿಸುವರು. ಪುರುಷ ಕಾರ್ಮಿಕರ ಪರಿಹಾರ ಕಾನೂನಿನ ಬಗ್ಗೆಯೂ ಇದೇ ಮಾತನ್ನು ಹೇಳಬಹುದು. ಇದೇ ಕಾರಣಕ್ಕಾಗಿ ಕಾರಖಾನೆಗಳಲ್ಲಿ ದುಡಿಯುತ್ತಿರುವಾಗ ಸಂಭವಿಸಬಹುದಾದ ಅಪಘಾತಗಳಿಗೆ ಈ ಕಾನೂನು ಅನ್ವಯಿಸುತ್ತದೆ; ಈಗ ಈ ಶಾಸನ ರಚನೆ ಕಾರಖಾನೆಗಳಿಗೆ ಮಾತ್ರ ಅನ್ವಯಿಸಿದ್ದು, ಇನ್ನುಳಿದ ಉದ್ಯಮಗಳಿಗೆ ಇದು ಸಂಬಂಧಿಸಿಲ್ಲ.

ಈಗ ಉದ್ಯಮಗಳ ಮೇಲೆ ಬೀಳುವ ಭಾರದ ಬಗ್ಗೆ ಮಾನ್ಯ ಸಾಮಾನ್ಯ ಸದಸ್ಯರು ಹೇಳುತ್ತ ಈ ವಿಧೇಯಕದಿಂದ ಮಜೂರಿ ಕಡಿಮೆಯಾಗುವ ಸಂಭವವಿದೆಯೆಂದು ನುಡಿದಿರುವರು. ಮಜೂರಿ ಕಡಿಮೆಯಾಗುವುದು ಎಂಬುದರ ಬಗ್ಗೆ ನನಗೆ ಖಾತ್ರಿ ಇಲ್ಲ. ಒಂದು ವೇಳೆ ಹಾಗೆ ಆದರೂ, ಉದ್ಯಮದ ಮೇಲಿನ ಭಾಗವು ಕೆಲವು ಮಟ್ಟಿಗೆ ಬೇರೆಡೆಗೆ ಹಸ್ತಾಂತರವಾಗುವುದು; ಆದ್ದರಿಂದ ಈ ಕಾರಣದಿಂದ ಮಾನ್ಯ ಸದಸ್ಯರು ವಿಧೇಯಕವನ್ನು ವಿರೋಧಿಸುವ ಕಾರಣವಿಲ್ಲ. ಈ ವಿಧೇಯಕವು ಸ್ವೀಕೃತವಾದರೆ, ಬಹುಶಃ ಆ ಭಾರವು ಗ್ರಾಹಕನ ಮೇಲೆ ಬೀಳುವುದು; ಉತ್ಪಾದನೆಯು ಉತ್ಪಾದಕರಿಗೆ ಲಾಭ ಬರುವಂತಿರುವುದರಿಂದ ಇಂಥ ಉತ್ಪಾದನೆಗೆ ಹೆಚ್ಚಿನ ಬೆಲೆ ಕೊಡಲು ಸಮಾಜವು ವಿರೋಧಿಸಕೂಡದೆಂದು ನನ್ನ ನಿವೇದನೆ.

ಈ ವಿಧೇಯಕವು ಮುಂಬೈ ಪ್ರಾಂತಕ್ಕೆ ಮಾತ್ರ ಸೀಮಿತವಾದುದು ಎಂಬ ಪ್ರಸ್ತಾಪವಿದೆ. ಹೀಗೆ ಮಾಡುವುದು ಅನ್ಯಾಯವಾದುದು; ಅಖಿಲ ಭಾರತಕ್ಕೇನೆ ಇದನ್ನು ಅನ್ವಯಿಸಬೇಕು; ಹೀಗೆ ಮಾಡುವುದರಿಂದ ಭಾರತದ ಇನ್ನುಳಿದ ಪ್ರದೇಶಗಳು ಹಾಗೂ ಪ್ರಾಂತಗಳು ಮುಂಬೈ ಪ್ರಾಂತಕ್ಕೆ ಸರಿಸಮಾನವಾಗುವುದೆಂದೂ ತಿಳಿಸಲಾಗಿದೆ. ಮಾನ್ಯರೆ, ಇದರ ಬಗ್ಗೆ ನಾನಿಷ್ಟೇ ಹೇಳಬಯಸುವೆ. ಬ್ರಿಟಿಷರು ಭಾರತಕ್ಕೆಲ್ಲಾ ಈ ವಿಧೇಯಕವನ್ನು ಅನ್ವಯಿಸಿದ್ದಾರೆಂದು ಭಾವಿಸೋಣ; ಆಗ ಯಾರಾದರೂ ಒಬ್ಬರು ಎದ್ದುನಿಂತು ಹೀಗೆಯೂ ಹೇಳಬಹುದು; "ಏಕೆ ಈ ವಿಧೇಯಕವು ಭಾರತಕ್ಕೆ ಮಾತ್ರ ಇರಬೇಕು?

ಉಳಿದ ದೇಶಗಳಿಗೆ ಏಕೆ ಬೇಡ: ಪ್ರಪಂಚದ ಇನ್ನುಳಿದ ದೇಶಗಳಿಗಿಂತ ಭಾರತವು ಹಾನಿ ಅನುಭವಿಸುವುದು. ಆದ್ದರಿಂದ ಪ್ರಪಂಚವೆಲ್ಲ ಈ ತತ್ವವನ್ನು ಸ್ವೀಕರಿಸುವವರೆಗೂ, ನಾವು ದಾರಿ ಕಾಯೋಣ. ಅಂದರೆ ಪ್ರತಿಯೊಬ್ಬರೂ ನಮ್ಮ ಜೊತೆ ಸರಿಸಮಾನಸ್ಕಂದರಾಗುವರು.'' ಆಗ ಅವರನ್ನು ತಡೆಯಲು ಶಕ್ಯವಿಲ್ಲ. ಇಂಥ ವಾದದಲ್ಲಿ ಏನೂ ಹುರುಳಿಲ್ಲವೆಂದು ನಾನು ನಿವೇದಿಸುವೆ. ಆದ್ದರಿಂದ ಈ ಪ್ರಾಂತದಲ್ಲಿ ನಮ್ಮ ಕಾರಖಾನೆಗಳಲ್ಲಿ ದುಡಿಯುತ್ತಿರುವ ಬಡ ಕಾರ್ಮಿಕ ಮಹಿಳೆಯರಿಗೆ ಈ ವಿಧೇಯಕದಲ್ಲಿ ಯೋಜಿಸಲಾದ ಸೌಲಭ್ಯಗಳು ಈ ವಿಧಾನ ಮಂಡಲದಿಂದ ದೊರೆಯಲೇಬೇಕೆಂಬುದು ನನ್ನ ವಿಚಾರವಾಗಿದೆ.

# ೩೬

# *ಛಡಿ ಏಟಿನ ಶಿಕ್ಷೆಯನ್ನು ಕುರಿತು

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಈ ವಿಧೇಯಕದ ಮೇಲೆ ನನ್ನ ಮಾನ್ಯ ಸ್ನೇಹಿತರಾದ ಮಾನ್ಯ ಶ್ರೀ ಬೆಲ್ ಮತ್ತು ಮಾನ್ಯ ಸದಸ್ಯ ಕಾನೂನು ಕಾರ್ಯಗಳ ವಿಧಿ ಪರಾಮರ್ಶಕರು ಇವರ ಮಾತುಗಳನ್ನು ಕೇಳಿದ ಮೇಲೆ, ಈ ಕ್ರಮವನ್ನು ಅನುಸರಿಸುವ ಅವಶ್ಯಕತೆಯನ್ನು ಕುರಿತು ವಾದಿಸಲು ಏನೂ ಅಗತ್ಯವಿಲ್ಲವೆಂದು ನನಗೆ ತೋರುತ್ತದೆ; ಇದಲ್ಲದೆ ನನ್ನ ಅಭಿಪ್ರಾಯದಂತೆ ಛಡಿ ಏಟಿನ ಶಿಕ್ಷೆ ಯೋಗ್ಯವೋ ಹೇಗೆ ಎಂಬ ಪ್ರಶ್ನೆಯನ್ನು ಚರ್ಚೆ ಮಾಡುವುದೂ ಅನಗತ್ಯವಾಗಿದೆ. ಮುಂಬೈ ನಗರ ದಲ್ಲಿ ಹಾಗೂ ಮೇಲಿಂದ ಮೇಲೆ ಗ್ರಾಮಾಂತರ ಪ್ರದೇಶದಲ್ಲಿ ಗಂಭೀರ ಸ್ವರೂಪದ ಗಲಭೆಗಳಾಗಿವೆ; ಅವು ಭಾರತೀಯ ಸಮಾಜಕ್ಕೆ ಮತ್ತು ಭಾರತೀಯ ನಾಗರಿಕತೆಗೆ ಕಳಂಕ ತಂದಿದೆಯೆಂಬುದನ್ನು ಯಾವ ಮಾನ್ಯ ಸದಸ್ಯರೂ ಅಲ್ಲಗಳೆಯಲಾರರು ಎಂಬುದು ನನಗೆ ನಿಶ್ಚಿತವಾಗಿದೆ. ಶಿಕ್ಷೆಯ ಒಂದು ವಿಧವಾಗಿ ಛಡಿ ಏಟು ಭಾರತೀಯ ಶಾಸನ ಗ್ರಂಥದಲ್ಲಿಯೇ ಇದ್ದು, ಇದು ನಾವು ಹೊಸ ಮಾರ್ಗ ಹಿಡಿಯು ತ್ತೇವೆ ಎಂದು ಹೇಳುವವರಿಗೆ ಸರಿಯಾದ ಪ್ರತ್ಯುತ್ತರವಾಗಿದೆ. ಆದುದರಿಂದ, ನನ್ನ ವಿನಮ್ರ ನಿರ್ಣಯದಂತೆ, ಪ್ರಸಂಗದ ಅವಶ್ಯಕತೆಗಳನ್ನು ಮೀರಿ ವಿಧೇಯಕದ ಅಂಶಗಳು ಇವೆಯೇ ಎಂಬುದೊಂದೇ ಈಗ ವಿಚಾರಿಸತಕ್ಕ ವಿಷಯವಾಗಿದೆ. ನಮ್ಮ ಚರ್ಚೆಗೆ ಉಳಿದಿರುವುದು ಇದೊಂದೇ ಸಮಸ್ಯೆ ಎಂದು ನನಗೆ ಅನಿಸುತ್ತದೆ.

ಮಾನ್ಯರೆ, ವಿಧೇಯಕವನ್ನು ಓದಿದ ಮೇಲೆ, ವಿಧೇಯಕದಲ್ಲಿಯ ಮಹತ್ವಪೂರ್ಣವಾದ ಪರಿಚ್ಛೇದ ೨ನ್ನು ವಿವರವಾಗಿ ನೋಡಿದ ಮೇಲೆ, ಅದರಲ್ಲಿನ ಪದರಚನೆ ಇದ್ದಂತೆಯೇ ಕೆಲವು ಅಂಶಗಳನ್ನು ಒಪ್ಪಿಕೊಳ್ಳಲು ನನಗೆ ಸ್ವಲ್ಪ ಕಠಿಣವಾಗುವುದು ಎಂದೆನಿಸುತ್ತಿದೆ. ಆ ಪರಿಚ್ಛೇದವು ಈಗಿದ್ದಂತೆ ಹೀಗಿದೆ: ಛಡಿ ಏಟಿನ ಶಿಕ್ಷೆಯ ಕಾನೂನಿನ ಕಲಮು ೪ರಲ್ಲಿಯ ಅಂಶಗಳು, ಇಂಡಿಯನ್ ಪೀನಲ್ ಕೋಡಿನ ಕಲಮು ೧೪೬ ಮತ್ತು ೧೪೮ರ ಪ್ರಕಾರ ಸಂಭವಿಸಬಹುದಾದ ಗಲಭೆಗಳಲ್ಲಿಯ ಪ್ರತಿಯೊಂದು ಅಪರಾಧಕ್ಕೂ ಅನ್ವಯಿಸುವುದು. ಮಾನ್ಯರೆ, ಜಾತೀಯ ಗಲಭೆಗಳನ್ನು ನೋಡಿಕೊಳ್ಳುವ ವಿಶೇಷ ಉದ್ದೇಶಕ್ಕಾಗಿ ಈ ಕ್ರಮವನ್ನು ಕಲ್ಪಿಸಲಾಗುತ್ತೆಂದೂ, ಯೋಜಿಸಲಾಗಿತ್ತೆಂದೂ ನನಗೆ ತಿಳುವಳಿಕೆಯಾಗಿದ್ದಿತು. ಮಾನ್ಯರೆ ಗಲಭೆಗಳು ಹಲವು ಪ್ರಕಾರದವು ಇರಬಹುದಾಗಿದೆ: ಕಾರಣ ಉದ್ದೇಶ ಪ್ರಸಂಗ ಬೇರೆ ಬೇರೆಯಾಗಿ ಇರಬಹುದಾಗಿದೆ. ಮುಂಬೈ ನಗರದಲ್ಲಿ ಔದ್ಯೋಗಿಕ ಸಂಪಿನಿಂದ ಗಲಭೆ ಸಂಭವಿಸಬಹುದು; ಯಾವುವೋ ಕೆಲವು ಆಸ್ತಿಗಳ ಮೇಲೆ ತಮ್ಮ ಹಕ್ಕುಗಳನ್ನು– ಅವು ಎಷ್ಟೆ ಕಾನೂನುಬಾಹಿರವಾಗಿದ್ದರೂ– ಅವು ತಮ್ಮ ವಾದವೇ ಕಾನೂನುಬದ್ಧ ಎಂಬ ವಿನಮ್ರವಾದ ನಂಬಿಕೆಯಿಂದ ಸಾಧಿಸುತ್ತಾರೆ; ಆಗ ಈ ಅಪರಾಧದಿಂದಲೇ

---

*ಬಿ.ಎಲ್.ಸಿ. ಡಿಬೇಟ್ಸ್, ಸಂಪುಟ XXXVIII,
ಪುಟ ೬೫೨–೬೫೩, ದಿನಾಂಕ ೧೮ ಫೆಬ್ರವರಿ ೧೯೩೩.

ಗಲಭೆಯ ಅಪರಾಧವು ನಿಜವಾಗಿಯೂ ಉದ್ಭವವಾಗುತ್ತದೆ ಎಂಬುದು ಈ ಸದನಕ್ಕೆ ಗೊತ್ತಿರಬೇಕು. ಅಕ್ರಮ ಕೂಟವು ತನ್ನ ಶಕ್ತಿಯನ್ನು ಉಪಯೋಗಿಸಿದ ಕೂಡಲೇ ಅದು ಗಲಭೆ ಎಂದಾಗುತ್ತದೆ. ಗಲಭೆಯಾಗುವುದರ ಸಂಬಂಧ ಇದ್ದ ಕಲಮು ೧೪೬ರಲ್ಲಿ ಗಲಭೆಯ ಈ ವ್ಯಾಖ್ಯೆ ಕೊಡಲಾಗಿದೆ. ಅಕ್ರಮ ಕೂಟವು, ನಾವು ಕಡೆಗಣಿಸಬಹುದಾದ ಅಪರಾಧವೇನು ಅಲ್ಲವಾದರೂ, ಛಡಿ ಏಟಿನಂಥ ಘೋರವಾದ ಶಿಕ್ಷೆಯನ್ನು ಕೊಡಬೇಕಾದಷ್ಟು ಗಂಭೀರವಾದ ಒಂದು ಅಪರಾಧವೇನಲ್ಲ. ಆದ್ದರಿಂದ ನಾವು ಛಡಿ ಏಟಿನ ಶಿಕ್ಷೆಯನ್ನು ತರುವುದಾದರೆ, ನನ್ನ ಅಭಿಪ್ರಾಯದಂತೆ, ಪರಿಚ್ಛೇದ ೨ನ್ನು ತಿದ್ದಲೇಬೇಕು: ಬೇರೆ ಗಲಭೆಗಳನ್ನುಳಿದು ಜಾತೀಯ ಗಲಭೆಗಳಿಂದ ಉದ್ಭವಿಸುವ ಗಲಭೆಗಳಿಗೆ ಮಾತ್ರ ಈ ಶಿಕ್ಷೆ ಅನ್ವಯವಾಗುವ ರೀತಿಯಲ್ಲಿ ಅದನ್ನು ರೂಪಿಸಬೇಕು. ಈಗ ಇದ್ದಂತೆ ಪರಿಚ್ಛೇದಲ್ಲಿ ಪದಯೋಜನೆ ವಿಶಾಲವಾದ ರೀತಿಯದಾಗಿದೆ: ಇದರಲ್ಲಿ ಗಲಭೆ ಯಾವುದೇ ರೀತಿಯದಾಗಿರಬಹುದು; ಕ್ಷಣಿಕವಾದ ರೀತಿಯದು ಆಗಿರಬಹುದು ಅಥವಾ ಮನುಷ್ಯನ ವ್ಯವಹಾರಗಳಲ್ಲಿ ಅತ್ಯಂತ ಸಹಜವಾದುದೂ ಇರಬಹುದು; ಇಂಥ ಪ್ರಸಂಗಗಳಿಗೆಲ್ಲ ನಾವು ಈ ಶಿಕ್ಷೆಯನ್ನು ಅನ್ವಯಿಸಕೂಡದು. ಇಂಡಿಯನ್ ಪೀನಲ್ ಕೋಡಿನ ಗಲಭೆಯ ಸಾದಾ ಅಪರಾಧಗಳಿಗೆ ಸಾದಾ ಶಿಕ್ಷೆ ಕೊಡುವ ವಿಧಾನಗಳನ್ನು ಬಹಳ ಜಾಣತನದಿಂದ ತೋರಿಸಲಾಗಿದೆ. ಈ ನಮ್ಮ ವಿಧೇಯಕವು, ಅದು ಯಾವ ಅನ್ಯ ಉದ್ದೇಶಕ್ಕೂ ಇರದೆ, ಜಾತೀಯ ಗಲಭೆಗಳನ್ನು ನಿಯಂತ್ರಿಸಲು ಮಾತ್ರ ಇರುವುದು ಅವಶ್ಯವಾದುದಾಗಿದೆ. ನನ್ನ ಮಾನ್ಯ ಸ್ನೇಹಿತರಾದ ಗೃಹಖಾತೆಯ ಮಂತ್ರಿಗಳು, ವಿಶೇಷವಾಗಿ ಜಾತೀಯ ಗಲಭೆಗಳಿಂದ ಉದ್ಭವಿಸಬಹುದಾದ ಅಪರಾಧಗಳಿಗೆ ಮಾತ್ರ ಈ ಶಿಕ್ಷೆ ಅನ್ವಯಿಸುವಂತೆ ಪರಿಚ್ಛೇದ ೨ರಲ್ಲಿಯ ಪದಯೋಜನೆಯನ್ನು ಮಾರ್ಪಾಟು ಮಾಡಿದರೆ, ಅವರಿಗೆ ನನ್ನ ಬೆಂಬಲವಿದೆ. ಈ ಸಂದರ್ಭದಲ್ಲಿ ನನಗಿಷ್ಟೇ ಹೇಳುವುದಿದೆ.

## ೩೭

# *ಮಂತ್ರಿಗಳ ವೇತನಗಳ ಮಸೂದೆಯನ್ನು ಕುರಿತು

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ, ಬೈಕಲಾ ಮತ್ತು ಪರೇಳ): ಮಾನ್ಯ ಸಭಾಪತಿಗಳೆ, ನಾನು ಒಂದು ಹೇಳಿಕೆಯನ್ನು ಕೊಡಲು ನಿಂತಿರುವೆ; "ಹೇಳಿಕೆ" ಎಂಬ ಪದದ ಪ್ರಯೋಗವನ್ನು ಬಹು ಯೋಚಿಸಿ ಮಾಡಿರುವೆ. ನನ್ನ ಮಾನ್ಯ ಮಿತ್ರರಾದ ಮುಖ್ಯಮಂತ್ರಿಗಳು ಮಂಡಿಸಿದ ವಿಧೇಯಕಕ್ಕೆ ತಿದ್ದುಪಡಿ ಸೂಚನೆ ಮಾಡುತ್ತಿಲ್ಲ; ಅಥವಾ ವಿಷಯವನ್ನು ವಿಭಜನೆಗೆ ಒಯ್ಯುವ ಸೂಚನೆಯನ್ನು ಮಾಡುತ್ತಿಲ್ಲ. ಪಕ್ಷದ ಮತಗಳಿವೆಯೆಂಬ ಮಾತ್ರಕ್ಕೆ, ಸ್ವೀಕೃತವಾಗಿ ತೆಗೆದುಕೊಳ್ಳುವುದು ಒಳ್ಳೆಯದಲ್ಲ; ಈ ವಿಧೇಯಕವು ಎಲ್ಲರಿಂದ ಒಪ್ಪಿತವಾದ ಕ್ರಮವಾಗಬೇಕಿತ್ತು ಎಂಬುದು ನನ್ನ ವಿಚಾರ. ಇಂಥ ಕ್ರಮವನ್ನು ಮಂತ್ರಿಮಂಡಳವು ಕೈಕೊಳ್ಳಲು ಬಯಸದ್ದರಿಂದ, ಇದೀಗ ನನಗೆ ವಿಧೇಯಕದ ತತ್ವದ ವಿರುದ್ಧವಾಗಿ ದೂರು ಕೊಡಬೇಕೆಂಬ ಸಾಮಾನ್ಯ ಉದ್ದೇಶದಿಂದ ಈ ಹೇಳಿಕೆ ನೀಡಬೇಕಾಗಿದೆ. ಈ ವಿಧೇಯಕವನ್ನು ಮಂಡಿಸುವಾಗ ಮಾನ್ಯ ಮುಖ್ಯಮಂತ್ರಿಗಳು ಏನೇ ಹೇಳಿರಲಿ– ಅವರು ಪ್ರಾಮಾಣಿಕವಾಗಿ ಮಾತನಾಡಿದುದಕ್ಕೆ ಹಾಗೂ ಅವರು ತಮ್ಮ ಉನ್ನತ ತತ್ವಗಳನ್ನು ಕುರಿತು ಪ್ರತಿಪಾದಿಸಿದುದಕ್ಕೆ ಈ ಸದನದ ಪ್ರತಿಯೊಬ್ಬ ಸದಸ್ಯರೂ ಅವರ ಬಗ್ಗೆ ಹೆಚ್ಚು ಗೌರವ ಹೊಂದಿದ್ದಾರೆ ಎಂಬುದರಲ್ಲಿ ಏನೂ ಸಂಶಯವಿಲ್ಲ– ಈ ಪರಿಸ್ಥಿತಿಯಲ್ಲಿ ಒಬ್ಬ ವ್ಯಾವಹಾರಿಕ ಮನುಷ್ಯನ ದೃಷ್ಟಿಯಿಂದ, ವ್ಯಾವಹಾರಿಕ ದೃಷ್ಟಿಯಿಂದ, ವ್ಯಾವಹಾರಿಕವಾಗಿ ಎಲ್ಲ ಸಂಗತಿಗಳನ್ನು ಪರಿಶೀಲಿಸಿ ನೋಡುವುದರಿಂದ, ಈ ವಿಧೇಯಕದಲ್ಲಿ ಕೊಟ್ಟಿರುವ ಮಂತ್ರಿಗಳ ಈ ಮಾಸಿಕ ಸಂಬಳವನ್ನು ಒಪ್ಪಿಕೊಳ್ಳಲಾರೆನೆಂದು ನಾನು ತಿಳಿಸಬಯಸುವೆ.

ಮಾನ್ಯರೆ, ಮಂತ್ರಿಗಳಿಗೆ ಇದು ಮಾನಕ ವೇತನವಾಗಬಾರದೆಂಬುದಕ್ಕೆ ನಾನು ಕಾರಣಗಳನ್ನು ಕೊಡುವುದರ ಮೊದಲು ಸದನಕ್ಕೆ, ಭಾರತವನ್ನು ಬಿಟ್ಟು ಹೊರಗಿನ ಮಂತ್ರಿಗಳಿಗೆ ಮತ್ತು ಭಾರತದಲ್ಲಿರುವ ಮಂತ್ರಿಗಳಿಗೆ ಕೊಡುತ್ತಿರುವ ವೇತನದ ಅಂಕಿ ಸಂಖ್ಯೆಗಳನ್ನು ಪೂರೈಸಲು ಇಚ್ಛಿಸುವೆ; ಇದರಿಂದ ಸದನಕ್ಕೆ ಆರಂಭದಲ್ಲಿಯೇ ಇಂದು ವಾಡಿಕೆಯಲ್ಲಿರುವ ಮಾನಕ ವೇತನಕ್ಕಿಂತ ನಮ್ಮ ವೇತನಗಳು ಬಹಳಷ್ಟು ಬೇರೆಯಾಗಿವೆಯೆಂಬುದು ತಿಳಿದುಬರುವುದು. ನಾನು ಸಂಗ್ರಹಿಸಿದ ಕೆಲವು ಅಂಕಿ ಸಂಖ್ಯೆ ಹೀಗಿವೆ: ಸ್ವತಂತ್ರ ಐರ್ಲೆಂಡ ದೇಶದಲ್ಲಿ ಮಂತ್ರಿಗಳ ಸಂಖ್ಯೆ ೧೧ ಪ್ರತಿಯೊಬ್ಬರ ಸಂಬಳ ವರ್ಷಕ್ಕೆ ೧,೭೦೦ ಪೌಂಡು; ಇದು ನನ್ನ ಎಣಿಕೆಯಂತೆ ತಿಂಗಳಿಗೆ ಸುಮಾರು ರೂ. ೨೦೦೦ ಆಗುತ್ತದೆ. ದಕ್ಷಿಣ ಆಫ್ರಿಕೆಯಲ್ಲಿ ಮಂತ್ರಿಗಳ ಸಂಖ್ಯೆ ೧೩, ಅವರಲ್ಲಿ ಇಬ್ಬರು ಖಾತೆಯಿಲ್ಲದವರು. ಪ್ರಧಾನಮಂತ್ರಿಗೆ ಅಲ್ಲಿ ವರ್ಷಕ್ಕೆ ೨,೫೦೦ ಪೌಂಡು ಸಿಗುತ್ತದೆ; ನನ್ನ ಲೆಖ್ಖದ ಪ್ರಕಾರ ಇದು ಕೆನಡಾದಲ್ಲಿ ಮಾತ್ರ ಹೀಗಿದೆ: ಪ್ರಧಾನಮಂತ್ರಿಯ ಸಂಬಳ ವರ್ಷಕ್ಕೆ ೧೯,೦೦೦ ಇದೆ; ಕೆನಡಾದಲ್ಲಿ ಮಂತ್ರಿಗಳ ಸಂಖ್ಯೆ ೧೬; ಅವರಿಗೆ

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ I, ಪುಟ ೨೪೭–೫೪
ದಿನಾಂಕ ೨೩ ಆಗಸ್ಟ್ ೧೯೩೭

ಅಧಿವೇಶನದ ಭತ್ತೆಯಾದ ೪,೦೦೦ ಡಾಲರನ್ನು ಒಳಗೊಂಡು ವರ್ಷಕ್ಕೆ ೧೪,೦೦೦ ಡಾಲರ್ ಬರುತ್ತದೆ. ನ್ಯೂಜಿಲೆಂಡ್‌ದಲ್ಲಿ ೧೨ ಜನ ಮಂತ್ರಿಗಳಿರುವರು. ಪ್ರಧಾನಮಂತ್ರಿಗೆ ವರ್ಷಕ್ಕೆ ಸಂಬಳ ೧,೮೦೦ ಪೌಂಡ್ ಹಾಗೂ ವಾಸಸ್ಥಳ ಇರುತ್ತದೆ; ಮಂತ್ರಿಗೆ ಮನೆಯ ಭತ್ತೆಯಾದ ೨೦೦ ಪೌಂಡು ಹಿಡಿದು ವರ್ಷಕ್ಕೆ ಸಂಬಳ ೧,೩೭೦ ಪೌಂಡು ದೊರೆಯುತ್ತದೆ. ಅಂದರೆ ಇದು ತಿಂಗಳಿಗೆ ೧,೫೦೦ ರೂಪಾಯಿ ಆಗುತ್ತದೆ.

ಇದೀಗ ಭಾರತದ್ದು ನೋಡೋಣ; ಹೊಸ ಭಾರತ ಸರಕಾರವು ಸಂಬಳವನ್ನು ಕೊಡುವ ಮೊದಲಿನ ಸಂಬಳಗಳನ್ನು ಸಧ್ಯ ಬಿಟ್ಟುಬಿಡೋಣ; ಹಂಗಾಮಿ ಮಂತ್ರಿಗಳ ವೇತನವನ್ನೇ ಪರಿಶೀಲಿಸೋಣ. ಹಂಗಾಮಿ ಮಂತ್ರಿಗಳನ್ನು ಮಂತ್ರಿಗಳೇ ಅಲ್ಲವೆಂದು ಯಾರೂ ಹೇಳಲಾರರು. ಅವರೂ ಸಾರ್ವಜನಿಕರಿಗೆ ಅಷ್ಟೇ ಜವಾಬ್ದಾರರಾಗಿದ್ದಾರೆ. ಸಂಸತ್ತಿಗೆ ಒಪ್ಪಿಸಿದ ಒಂದು ಅಂಕಿ ಅಂಶಗಳ ಪಟ್ಟಿ ನನ್ನ ಹತ್ತಿರ ಇವೆ. ಮದ್ರಾಸ್‌ನಲ್ಲಿ ಮುಖ್ಯಮಂತ್ರಿಗಳಿಗೆ ರೂ. ೩.೦೦೦ ಸಂಬಳ ಇದ್ದಿತು; ಮತ್ತು ಪ್ರತಿಯೊಬ್ಬ ಮಂತ್ರಿಯ ಸಂಬಳ ರೂ. ೨.೦೦೦ ಹಾಗೂ ಒಂದು ಮನೆ. ಮುಂಬೈನಲ್ಲಿ ಮುಖ್ಯ ಮಂತ್ರಿಗಳ ಸಂಬಳ ರೂ. ೨.೦೦೦ ಹಾಗೂ ಒಂದು ಮನೆ. ಮುಂಬೈನಲ್ಲಿ ಮುಖ್ಯಮಂತ್ರಿಗಳ ಸಂಬಳ ರೂ. ೪೦೦೦ ಹಾಗೂ ಮಂತ್ರಿಗಳ ಸಂಬಳ ರೂ. ೩.೫೦೦ ಇದ್ದಿತು. ಸಂಯುಕ್ತ ಪ್ರಾಂತದಲ್ಲಿ ಮುಖ್ಯಮಂತ್ರಿಗಳನ್ನೊಳಗೊಂಡು ಪ್ರತಿಯೊಬ್ಬ ಮಂತ್ರಿಯ ಸಂಬಳ ರೂ. ೩.೦೦೦ ಹಾಗೂ ಪ್ರತಿಯೊಬ್ಬ ಮಂತ್ರಿಗೆ ರೂ. ೨.೫೦೦ ಇದ್ದಿತು. ಬಿಹಾರದಲ್ಲಿ ಮುಖ್ಯಮಂತ್ರಿಗೆ ಸಂಬಳ ರೂ. ೨.೫೦೦ ಹಾಗೂ ಮಂತ್ರಿಗಳ ಸಂಬಳ ರೂ. ೨.೦೦೦ ಇದ್ದಿತು. ಒಡಿಸಾದಲ್ಲಿ ಮಂತ್ರಿಗಳ ಸಂಬಳ ರೂ. ೧.೦೦೦ ಇದ್ದಿತು.

ಈಗ ಮಾನ್ಯರೆ ಈ ಅಂಕಿ ಸಂಖ್ಯೆಗಳನ್ನು ಮಂತ್ರಿಗಳ ಸಂಬಳಗಳ ವಿಧೇಯಕದಲ್ಲಿ ಸೂಚಿತವಾದ ಅಂಕಿ ಸಂಖ್ಯೆಗಳ ಜೊತೆಗೆ ಹೋಲಿಸಿ ನೋಡಬೇಕು. ಈಗಿರುವ ಪ್ರಮಾಣಕ್ಕಿಂತಲೂ ಇದು ಬಹಳಷ್ಟು ಬೇರೆಯಾಗಿದೆ ಎಂಬುದು ತಿಳಿದುಬರುವಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಈ ಅಂತರವು ಮಟ್ಟಗಳಲ್ಲಿ ಮಾತ್ರ ಇರದೆ ರೀತಿಯಲ್ಲಿಯೂ ಇದೆ; ರೀತಿಯಲ್ಲಿರುವ ಅಂತರ ಎಂದರೆ ತತ್ವದ ಅಂತರವೂ ಸಹ ಆಗಿದೆಯೆಂಬುದು ನನ್ನ ನಿವೇದನೆಯಾಗಿದೆ. ಒಬ್ಬ ಮಂತ್ರಿಯ ಸಂಬಳವನ್ನು ನಿರ್ಣಯಿಸಬೇಕಾದರೆ ಮುಖ್ಯವಾಗಿ ಯಾವ ವಿಚಾರಗಳಿರಬೇಕು? ನನ್ನ ನಿರ್ಣಯದಂತೆ ಮಾನ್ಯರೆ, ಅದರಲ್ಲಿ ನಾಲ್ಕು ವಿಚಾರಗಳಿರಲೇಬೇಕು. ಮೊದಲನೆಯ ವಿಚಾರ ನಿಃಸಂಶಯವಾಗಿಯೂ ಸಮುದಾಯದ ಸಾಮಾಜಿಕ ನಾಯಕರಾಗಿರಬೇಕಾದ ಅವರ ಸಾಮಾಜಿಕ ಸ್ಥಾನಮಾನ; ಎರಡನೆಯ ವಿಚಾರ ಅವರ ದಕ್ಷತೆ; ಮೂರನೆಯ ವಿಚಾರ ಅವರ ಪ್ರಜಾಸತ್ತೆಯದು; ನಾಲ್ಕನೆಯ ವಿಚಾರ ಅವರ ನಿಷ್ಠೆ ಹಾಗೂ ಆಡಳಿತದಲ್ಲಿ ಪಾವಿತ್ರ್ಯ. ಮೊದಲನೆಯ ವಿಚಾರವನ್ನು ಮಿತಿಮೀರಿ ವಿವರಿಸುವುದಕ್ಕೆ ನಾನು ಸಿದ್ಧನಿಲ್ಲ. ವೈಯಕ್ತಿಕವಾಗಿ ನನ್ನ ವಿಚಾರ ಹೀಗಿದೆ. ದೇಶದ ಪ್ರಥಮ ನಾಗರಿಕರಾದ ನಮ್ಮ ದೇಶದ ಮಂತ್ರಿಗಳು, ಸುಸಂಸ್ಕೃತವಾದ, ಕಲಾ ಕಾಳಜಿಯುಳ್ಳ, ಕಲಿಯುವುದರಲ್ಲಿ ಆಸಕ್ತಿಯುಳ್ಳ ಜೀವನವನ್ನು ಸಾಗಿಸಬೇಕು. ಇವರ ಜೀವನ ಇತರರಿಗೆ ಮಾದರಿಯಾಗಬೇಕು. ಆದರೆ ನಮ್ಮ ಮಿತ್ರರು ಈ ಅಂಶವನ್ನು ವಿಚಾರ ಮಾಡದೇ ಹೋದರೆ, ಆಮೇಲೆ ಇದನ್ನೆಲ್ಲ ಸಂಪೂರ್ಣವಾಗಿ ಬಿಟ್ಟುಬಿಡಲು ನಾನು ಸಿದ್ಧನಿರುವೆ. ನಿಜವಾಗಿಯೂ ಮಂತ್ರಿಗಳ ಸಂಬಳಗಳನ್ನು ನಿರ್ಣಯಿಸುವಾಗ ಅವರ ದಕ್ಷತೆ, ಪ್ರಜಾಸತ್ತೆಯ ಪ್ರೇಮ ಹಾಗೂ ನಿಷ್ಠೆ ಇವುಗಳ ವಿಚಾರಗಳನ್ನು ಎಂದೂ ಕಡೆಗಣಿಸುವಂತಿಲ್ಲ. ಮಂತ್ರಿಗಳು ಯಾವ ದೃಷ್ಟಿ ತಾಳಿರುವರೆಂಬುದು ನನಗೆ ಗೊತ್ತಿಲ್ಲ. ಮಂತ್ರಿಗಳು

ಏನೂ ಮಾಡಬೇಕಾಗಿಲ್ಲ; ಅವರು ಓಡಾಡುತ್ತಿರಬೇಕು, ಧ್ವಜಾರೋಹಣ ಮಾಡಬೇಕು, ಗೌರವ ರಕ್ಷಣೆ ರಚಿತವಾದ ಕೆಂಪು ಬಣ್ಣದ ಬಟ್ಟೆಯುಳ್ಳ ಮಹಿಳೆಯರಿಂದ ವಂದನೆ ಸ್ವೀಕರಿಸಬೇಕು ಎಂಬ ವಿಚಾರಗಳು ಮುಖ್ಯಮಂತ್ರಿಯವರದು ಆಗಿದ್ದರೆ, ಅದರ ಪ್ರಸ್ತಾಪವೇ ಬೇರೆ. ನನಗೆ ಸಾಮರ್ಥ್ಯವಿದ್ದಷ್ಟೂ ಶಕ್ತಿಯನ್ನು ಪಯೋಗಿಸಿ ಒತ್ತು ಕೊಟ್ಟು ಹೇಳುವುದಾದರೆ ನನ್ನ ದೃಷ್ಟಿಯಲ್ಲಿ ಮಂತ್ರಿ ಮಂಡಳದಿಂದ ನಾವು ಏನಾದರೂ ನಿರೀಕ್ಷಿಸುತ್ತಿದ್ದರೆ ಅದು ಅವರ ದಕ್ಷತೆ. ರಾಜ್ಯದಾಡಳಿತೆಯ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಇವುಗಳಲ್ಲಿ ಕಾರ್ಯಾಂಗವೇ ಕಾರ್ಯಾಚರಣೆಗೆ ಮುಖ್ಯ ಸೆಲೆಯಾಗಿದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ. ದೇಶವನ್ನು ಎದುರಿಸುವ ಸಮಸ್ಯೆಯನ್ನು ಕಾರ್ಯಾಂಗವೇ ಅಭ್ಯಸಿಸಬೇಕಾಗುವುದು; ಆ ಸಮಸ್ಯೆಗಳನ್ನು ಬಿಡಿಸಲು ಯಾವ ಪರಿಹಾರಗಳನ್ನು ಸೂಚಿಸಬೇಕು ಎಂಬುದನ್ನು ಕಾರ್ಯಾಂಗವೇ ತೋರಿಸಬೇಕಾಗುವುದು; ಮಾನ್ಯರೇ ಸಂಕ್ಷಿಪ್ತವಾಗಿ ಹೇಳುವುದಾದರೆ, ನಮಗೆ ಎದುರಾಗುವ ವಿವಿಧ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕಾದರೆ ಕಾರ್ಯಾಂಗವೇ ವೈಚಾರಿಕ ನೆಲೆಯಾಗಿದೆ ಮತ್ತು ಈ ಸಂವಿಧಾನದಿಂದ ನಾವು ಅತ್ಯುತ್ತಮ ಲಾಭ ಪಡೆಯಬೇಕಾಗಿದೆ.

ನನ್ನ ಮನಸ್ಸಿನಲ್ಲಿರುವ ಸಂಶಯವೆಂದರೆ, ಈಗ ಸೂಚಿತವಾಗಿರುವ ವೇತನವು ಸಮಸ್ಯೆಗಳನ್ನು ಎದುರಿಸಿ, ಅವುಗಳಿಗೆ ಪರಿಹಾರೋಪಾಯವನ್ನು ಸೂಚಿಸಬಲ್ಲ ಸಮರ್ಥರನ್ನು ಸೆಳೆಯುವಷ್ಟು ಆಕರ್ಷಕವಾಗಿದೆಯೇ ಎಂಬುದು. ಈ ದೇಶದಲ್ಲಿ ಪ್ರಚಲಿತವಿರುವ ಪರಿಸ್ಥಿತಿಗಳ ಬೆಳಕಿನಲ್ಲಿ ನಿರ್ವಿಕಾರ ಮನಸ್ಸಿನಿಂದ ಈ ಸಮಸ್ಯೆಯನ್ನು ನೋಡುವುದಾದರೆ, ಮಾನ್ಯರೆ ನಾನು ಸಕಾರಾತ್ಮಕವಾದ ಉತ್ತರವನ್ನು ಕೊಡಲಾರೆನು. ಪ್ರಪ್ರಥಮವಾಗಿ ವಿಚಾರ ಮಾಡತಕ್ಕ ವಿಷಯ ಸಂಗತಿಯೆಂದರೆ, ಮಂತ್ರಿಗಳಿಗೆ ಕೊಡಬೇಕೆಂದಿರುವ ವೇತನಕ್ಕಿಂತಲೂ ಹೆಚ್ಚು ಫಲಕಾರಿಯಾಗಿರುವ ಬೇರೆ ದಾರಿಗಳು ಜೀವನದಲ್ಲಿವೆ ಎಂಬುದು. ದಕ್ಷತೆ ಹಾಗೂ ಮಹತ್ವಾಕಾಂಕ್ಷೆಯಿರುವ ಎಷ್ಟೋ ಜನರು, ಮಂತ್ರಿಯಾಗಿದ್ದುಕೊಂಡು ಮಂತ್ರಿಯ ಹೊಣೆಗಾರಿಕೆ ಹೊತ್ತುಕೊಂಡು ಇರುವುದಕ್ಕಿಂತ ಜೀವನದಲ್ಲಿ ಅನ್ಯ ಮಾರ್ಗಗಳನ್ನು ಹುಡುಕುತ್ತಾರೆ. ಯಾರಿಗೂ ಯಾವುದೇ ಕ್ಷೇತ್ರದಲ್ಲಿಯೂ ೫೦೦ ರೂ.ಗಳಿಗಿಂತ ಹೆಚ್ಚಿನ ಸಂಬಳ ಇರಬಾರದೆಂದು ಕಾನೂನನ್ನು ರೂಪಿಸಿದ್ದರೆ ಅದು ಅರ್ಥಯುತವಾಗಿರುತ್ತಿತ್ತು. ಹಾಗೆ ಮಾಡಿದ್ದಿದ್ದರೆ ಪರಿಸ್ಥಿತಿ ಬೇರೆಯ ರೀತಿ ಇರುತ್ತಿತ್ತು. ಆದರೆ, ಅವರು ಹಾಗೆ ಮಾಡುತ್ತಿಲ್ಲ. ವಿವಿಧ ಕ್ಷೇತ್ರಗಳಲ್ಲಿನ ಸಮರ್ಥರನ್ನು ಕಡೆಗಣಿಸುತ್ತಿದ್ದಾರೆ. ಇದು ವಿಷಯದ ಒಂದು ಮುಖ. ವಿಚಾರಮಾಡತಕ್ಕ ಇನ್ನೊಂದು ಅಂಶ ಹೀಗಿದೆ. ಭಾರತದ ಪರಿಸ್ಥಿತಿ ಪರಿಶೀಲಿಸುವಾಗ ಈ ಹೊಣೆಗಾರಿಕೆ ವಹಿಸಿಕೊಳ್ಳುವ ಸಾಕಷ್ಟು ಸಾಮರ್ಥ್ಯವಿದ್ದ ಜನರನ್ನು ಒದಗಿಸಬೇಕಾದ ಬುದ್ಧಿಜೀವಿಗಳ ವರ್ಗ ಬಹಳಷ್ಟು ಚಿಕ್ಕದಿದೆ ಎಂದು ಹೇಳದಿರಲಾರೆ. ಮಾನ್ಯರೆ, ಈ ದೇಶದಲ್ಲಿ ಉಳಿದುಕೊಂಡು ಸಾಮಾಜಿಕ ಪದ್ಧತಿಯಿಂದ, ಬ್ರಿಟಿಷರ ಆಳ್ವಿಕೆಯಲ್ಲಿಯೂ ಅದು ಅಷ್ಟೇನೂ ನಾಶವಾಗದೆ ಇರುವುದರಿಂದ ಶಿಕ್ಷಣವು ಕೆಲವೇ ಜನರಿಗೆ ಲಭಿಸುವಂತಾಯಿತು. ಶಿಕ್ಷಣವು ಎಂದೆಂದೂ ಬಹುಸಂಖ್ಯಾತರ ಹಕ್ಕು ಆಗಿಲ್ಲ; ಅವರಿಗೆ ಅವಕಾಶವೂ ದೊರಕಿಲ್ಲ. ನಿಜವಾಗಿಯೂ ಚಾತುರ್ವರ್ಣದ ಪ್ರಕಾರ ಒಂದೇ ವರ್ಗದವರು ಶಿಕ್ಷಣ ಪಡೆಯಬೇಕು. ಇನ್ನುಳಿದವರು ಶಿಕ್ಷಣ ಪಡೆಯುವುದರಿಂದ ಬಹಿಷ್ಕರಿಸಲ್ಪಡಬೇಕು. ಇದರ ಪರಿಣಾಮವಾಗಿ, ಆಡಳಿತವನ್ನು ನೋಡಿಕೊಳ್ಳಬೇಕಾದ ಮಂತ್ರಿಮಂಡಲದಲ್ಲಿ ತಮ್ಮ ವರ್ಗದಲ್ಲಿಯ ಸಮರ್ಥ ನಾಯಕರನ್ನು ಕಳಿಸಿಕೊಡಲಾರದಂತಹ ಸನ್ನಿವೇಶವೇ ಜನತೆಯ ಬಹುಸಂಖ್ಯಾತರಲ್ಲಿ ಸಂಪೂರ್ಣವಾಗಿ

ಉದ್ಭವಿಸಿದೆ. ಆದ್ದರಿಂದ ಈಗ ಉದ್ದೇಶಿಸಿರುವ ವೇತನವು ದಕ್ಷರನ್ನು ಆಕರ್ಷಿಸಲಾರದಾಗಿದೆ ಎಂದು ನಾನು ನಿವೇದಿಸುವೆ.

ಮಾನ್ಯರೆ, ಪ್ರಜಾಸತ್ತೆಯ ಪ್ರಶ್ನೆಯ ಬಗ್ಗೆ ವಿಚಾರಿಸುವಾಗ, ಸಂಬಳದ ಪರಿಣಾಮವೇನು? ನಾನು ಯಾವ ಅಂಶಗಳನ್ನೂ ಮುಚ್ಚಿಟ್ಟು ಮಾತನಾಡುವುದಿಲ್ಲ. ಸಂಬಳದ ಸಲುವಾಗಿ ಏನೂ ಕಾಳಜಿ ಮಾಡದ ಹಲವು ಜನರು ಇರುವರು; ಅವರಿಗೆ ತಮ್ಮದೇ ಆದ ಧನ ಸಂಪಾದನೆಯ ಮಾರ್ಗವಿದೆ; ಆದರೆ ಅವರಿಗೆ ತಮ್ಮ ವರ್ಗದವರ ಅಥವಾ ತಮ್ಮ ಸಮುದಾಯದ ಪ್ರಗತಿಗಾಗಿ ಉಪಯೋಗವಾಗುವಂತೆ ರಾಜಕೀಯ ಅಧಿಕಾರವನ್ನು ಹಿಡಿದುಕೊಳ್ಳುವುದು ಬೇಕಾಗುತ್ತದೆ. ಇದು ಒಂದು ಪರಿಣಾಮ. ಇನ್ನೊಂದು ಪರಿಣಾಮ ವೆಂದರೆ ಜೀವನದ ಉಳಿದ ದಾರಿಗಳಲ್ಲಿ ಧನ ಸಂಪಾದನೆಯ ದಾರಿ ಕಾಣದೆ ಅವರು ಮಂತ್ರಿಮಂಡಲದಲ್ಲಿ ಸೇರಿಕೊಳ್ಳಬಹುದು. ಇವೆರಡನ್ನು ಬಿಟ್ಟು ಬೇರೆ ಏನೂ ಆಗುವುದಿಲ್ಲ (ನಗೆ). ನನ್ನ ಸ್ನೇಹಿತರು ನಗಬಹುದು; ಆದರೆ ಈ ವಿಧೇಯಕದ ಪರಿಣಾಮ ಇಷ್ಟೇ ಆಗುತ್ತದೆಂದು ಹೇಳುವಲ್ಲಿ ನನಗೆ ಅನುಮಾನವಿಲ್ಲ. ನಾನು ತಿಳಿದದ್ದು ನಿಜವಾಗಿ ಸಂಭವಿಸಿದರೆ, ಇದಕ್ಕಿಂತ ದೊಡ್ಡ ಅನಾಹುತ ಬೇರಾವುದೂ ಇಲ್ಲ. ಭಾರತ ಸರ್ಕಾರದ ಕಾನೂನಿನನ್ವಯ ಲಭ್ಯವಾಗುವ ರಾಜಕೀಯ ಅಧಿಕಾರವನ್ನು ಧನಸಂಪದವಿದ್ದು ಹಾಗೂ ಸಂಬಳದ ಬಗ್ಗೆ ಕಾಳಜಿಯಿಲ್ಲದಿರುವ ಕೆಲವರು ಕೊಂಡುಕೊಳ್ಳಬಾರದು ಅಥವಾ ಗುತ್ತಿಗೆ ಹಿಡಿಯಬಾರದು. ಸಾರ್ವಜನಿಕ ಆಸಕ್ತಿಯ ಸಲುವಾಗಿ ಈ ರಾಜಕೀಯ ಅಧಿಕಾರವು ದಕ್ಷತೆಯಿಲ್ಲದ ಜನರ ಕೈಗೆ ಹೋಗುವುದೂ ನಮಗೆ ಬೇಡವಾಗಿದೆ.

ಮತ್ತೊಂದು ಪ್ರಶ್ನೆ: ಆಡಳಿತದಲ್ಲಿಯ ನಿಷ್ಠೆ ಹಾಗೂ ಪಾವಿತ್ರ್ಯ. ಇದರ ಬಗ್ಗೆ ಕಾಂಗ್ರೆಸ್ ಪರವಾಗಿದ್ದ ನನ್ನ ಸ್ನೇಹಿತರೊಬ್ಬರು ಹೇಳಿದ್ದನ್ನೇ ಈ ಸದನದಲ್ಲಿ ಪುನಃ ಹೇಳಬಯಸುವೆ. ರಾಜ್ಯಪಾಲರು ಮಂತ್ರಿಗಳ ಪೂರೈಕೆಯ ಒಂದು ಗುತ್ತಿಗೆಯನ್ನು ತಮಗೆ ಕೊಡುವುದಾದರೆ, ತಾವು ತಕ್ಷಣ ಅಂಥ ಗುತ್ತಿಗೆಯನ್ನು ಹಿಡಿಯುವುದಾಗಿಯೂ ಈ ಗುತ್ತಿಗೆ ಕೊಟ್ಟದ್ದಕ್ಕಾಗಿ ಮುಂಬೈ ಪ್ರಾಂತಕ್ಕೆ ತಾವು ಏನಾದರೂ ಕೊಡುವುದಾಗಿಯೂ ನುಡಿದಿರುವರು. ದಾರಿ ಕಾಯಲು ಅವಕಾಶ ಕೊಡಬೇಕೆಂದು ಮಾಲಿಕನಿಗೆ ಹಣ ಕೊಡುವ ಕೆಲವು ಹೋಟೆಲ್ಲುಗಳು ಯುರೋಪಿನಲ್ಲಿವೆ. ಸಂಬಳದಿಂದ ಸಿಗದೇ ಇದ್ದುದನ್ನು, ಬೇರೆ ತೆರನಾಗಿ ತೆಗೆದುಕೊಳ್ಳುವುದನ್ನು ನೋಡಿದರೆ, ಕೆಟ್ಟ ಪ್ರೇರಣೆಗೆ ಒಳಗಾದ ಜನರಿಗೆ ಮಾರ್ಗಗಳು ತೆರೆದಿವೆಯೆಂಬುದನ್ನು ಇದು ತೋರಿಸುತ್ತದೆ. ಈಗಿನ ಮಂತ್ರಿಮಂಡಳದ ಬಗ್ಗೆ ನಾನು ಏನನ್ನೂ ಹೇಳುತ್ತಿಲ್ಲ; ಏಕೆಂದರೆ ನಾವು ವಿಧೇಯಕದ ತತ್ವಗಳ ಬಗ್ಗೆ ಮಾತನಾಡುತ್ತಿದ್ದೇವೆಯೇ ಹೊರತು ವ್ಯಕ್ತಿಗಳ ಬಗ್ಗೆ ಅಲ್ಲ. ಬೇಕಾದಷ್ಟು ಸಂಬಳ ಕೊಟ್ಟರೂ ಅಪ್ರಾಮಾಣಿಕ ಮನುಷ್ಯನ ಅಪ್ರಾಮಾಣಿಕತೆಯನ್ನು ನೀವು ಕೊಂಡುಕೊಳ್ಳ ಲಾರಿರಿ. ನಿಮ್ಮ ಮನಸ್ಸಿಗೆ ಬಂದಷ್ಟು ಸಂಬಳವನ್ನು ಅವನಿಗೆ ಕೊಡಿ, ಅವನು ಅಪ್ರಾಮಾಣಿಕನಾಗಿದ್ದರೆ, ಅಪ್ರಾಮಾಣಿಕನಾಗಿಯೇ ಉಳಿಯುವನು. ಏನೇ ಇರಲಿ, ಅದು ಗಮನಿಸತಕ್ಕ ವಿಷಯವಲ್ಲ. ಮಂತ್ರಿ ಕೆಟ್ಟ ಪ್ರೇರಣೆಯನ್ನು ಮೀರಿ ಇರುವಂಥ ರೀತಿಯಲ್ಲಿ ನಿಮ್ಮ ಸಂಬಳವನ್ನು ನೀವು ನಿಗದಿಗೊಳಿಸಲಾರಿರಾ ಎಂಬುದನ್ನು ಗಮನಿಸಬೇಕಾದ ಅಂಶ. ಮಾನ್ಯರೆ, ನಮ್ಮ ಪ್ರಾಂತದಲ್ಲಿ ರೂ. ೪,೦೦೦ ಹಾಗೂ ರೂ. ೩,೦೦೦ ಸಂಬಳ ಕೊಡುತ್ತಿರುವಾಗಲೂ, ಆಡಳಿತದ ಬಗ್ಗೆ ಜಗಳಗಳು ಇದ್ದವು. ರೂ ೩,೦೦೦ ಹಾಗೂ ರೂ. ೪,೦೦೦ ಸಂಬಳ ಇದ್ದಾಗಲೂ ಜಗಳಗಳನ್ನು ತಪ್ಪಿಸುವುದು ನಮ್ಮಿಂದ ಆಗಿರುವುದಿಲ್ಲವಾದರೆ ರೂ. ೫೦೦ ಸಂಬಳವು ಹಿಂದೆ ಇದ್ದುದಕ್ಕಿಂತಲೂ ಹೆಚ್ಚು ಕಲಹಗಳನ್ನು ನಿರ್ಮಿಸಬಹುದೆಂಬ ಹೆದರಿಕೆ ನನಗಿದೆ. ಸಂಬಳವು ಬೇಕಾಗುವಷ್ಟಿದೆಯೇ ಎಂಬುದೊಂದೇ ವಿಚಾರಿಸತಕ್ಕ ಪ್ರಶ್ನೆ ಇದರಲ್ಲಿದೆಯೆಂದು

ಹೇಳುವಂತಿಲ್ಲ. ವಾದಕ್ಕೆ ಇಲ್ಲಿ ಕೊನೆಯೆಂಬುದೇ ಇಲ್ಲ. ಸಂಬಳದ ಪ್ರಶ್ನೆಯನ್ನು ಎರಡು ದೃಷ್ಟಿಯಿಂದ ನೋಡಬೇಕು. ಮೊದಲನೆಯ ವಿಚಾರವು ಒಬ್ಬ ವ್ಯಕ್ತಿಗೆ ಸಾಕಾಗುವಷ್ಟು ಸಂಬಳವಿದೆಯೇ ಎಂಬುದು. ಇದರಿಂದ ಸಾರ್ವಜನಿಕ ದೃಷ್ಟಿಯಲ್ಲಿ ಇದು ಸುರಕ್ಷಿತ ಸಂಬಳವೋ ಹೇಗೆ ಎಂಬುದನ್ನು ನೀವು ವಿಚಾರಿಸಬಾರದು ಎಂದು ಅರ್ಥವಾಗುವುದಿಲ್ಲ. ಅತ್ಯಂತ ಕಡಿಮೆ ಪ್ರಮಾಣದ ಸಂಬಳ ಎಂದೂ ಸುರಕ್ಷಿತ ಮಾನಕವಲ್ಲ. ಟೆಂಡರುಗಳು ಅತ್ಯಂತ ಕಡಿಮೆ ದರದವು ಇವೆಯೆಂಬ ಕಾರಣಕ್ಕಾಗಿ ಗುತ್ತಿಗೆ ಕೊಡಲೇಬೇಕೆಂಬುದು ಇಲ್ಲವೆಂಬ ಪರಿಚ್ಛೇದವನ್ನು ಒಪ್ಪಬೇಕೆಂಬುದು ನನ್ನ ವಿರೋಧಿ ಸದಸ್ಯರಿಗೆ ಗುತ್ತಿಗೆ ಕೊಡುವಾಗ ಗೊತ್ತಿರುವ ವಿಷಯವಾಗಿದೆ. ಅವರ ಮಾನಕವು ತೀರ ಕಡಿಮೆಯೆಂದ ಮಾತ್ರಕ್ಕೆ ನಾವು ಆ ಜನರಿಗೆ ಹೇಗೆ ಗುತ್ತಿಗೆ ಕೊಡುವುದಿಲ್ಲವೋ ಹಾಗೆಯೇ ಬಹಳ ಕಡಿಮೆ ಸಂಬಳವನ್ನು ಸ್ವೀಕರಿಸಲು ಸಿದ್ಧರಿರುವರೆಂಬ ಕಾರಣದಿಂದ ಮಂತ್ರಿಗಳೆಂದು ಸೇವೆ ಸಲ್ಲಿಸಲು ನಾವು ಜನರಿಗೆ ಒಪ್ಪಿಗೆ ಕೊಡಲಾರೆವು. ಸಮಸ್ಯೆಯ ಇನ್ನೊಂದು ಮುಖವನ್ನು ನಾವು ನೋಡಬೇಕಾಗುತ್ತದೆ. ಅತ್ಯಂತ ಕಡಿಮೆ ಟೆಂಡರು ಕೊಡುವ ಗುತ್ತಿಗೆದಾರನು ತನ್ನ ಕರ್ತವ್ಯಗಳನ್ನು ಸರಿಯಾಗಿ ಮಾಡಲು ಸಮರ್ಥನೋ ಹೇಗೆ ಎಂಬುದನ್ನು ವಿಚಾರಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ರೂ. ೫೦೦ ಸಂಬಳವು ಚೆನ್ನಾಗಿದೆಯೆಂದು ಹೇಳಬಹುದಾದರೂ, ವಾದವು ಇಲ್ಲಿಗೇ ಮುಗಿಯಲಿಲ್ಲವೆಂದು ನಾನು ಸೂಚಿಸುವೆ. ಇಷ್ಟೇ ಆಧಾರದ ಮೇಲೆ, ಭ್ರಷ್ಟಾಚಾರವಿಲ್ಲದೆ ಆಡಳಿತ ಶಕ್ಯವಿದೆಯೇ ಹೇಗೆ ಎಂಬುದನ್ನು ಸದನವು ವಿಚಾರಿಸಬೇಕಾಗಿದೆ.

ಮಾನ್ಯರೆ, ಮಂತ್ರಿಗಳ ಸಂಬಳಗಳನ್ನು ಯಾವ ತತ್ವಗಳನ್ನು ಆಧರಿಸಿ ನಿಶ್ಚಿತಗೊಳಿಸಬೇಕು ಎಂಬುದನ್ನು ಸೂಚಿಸಲು ಹೌಸ್ ಆಫ್ ಕಾಮನ್ಸ್‌ನವರು ನೇಮಿಸಿದ ಸಮಿತಿಯು ಪ್ರಕಟಿಸಿದ ವರದಿಯಲ್ಲಿನ ಒಂದು ಚಿಕ್ಕ ಅವತರಣಿಕೆಯನ್ನು ಈ ಸದನದಲ್ಲಿ ಓದಿ ತೋರಿಸಬೇಕಾಗಿದೆ. ಸಮಿತಿಯ ಹೇಳಿಕೆ ಹೀಗಿದೆ:

> "ಯಾವುದೇ ಸರಕಾರದ ಕಚೇರಿಗೆ ಅದಕ್ಕೆ ಯೋಗ್ಯವಾದ ವೇತನದ ಮೊತ್ತವನ್ನು ಗೊತ್ತುಮಾಡಿ ತಿಳಿಸಿದರೆ, ಆಗ ಅದರ ಬಗ್ಗೆ ಬರುವ ಬಹಳಷ್ಟು ಬೇರೆ ಬೇರೆ ಅಭಿಪ್ರಾಯಗಳು ಉಳಿದಾವ ವಿಷಯಗಳನ್ನು ಕುರಿತೂ ಬರಲಾರವು; ನಿಜವಾಗಿಯೂ ಸಾಕಷ್ಟು ಅನಿಶ್ಚಿತವಾಗಿರುವ ಇದರಂಥ ಸಮಸ್ಯೆಯಲ್ಲಿ ಪ್ರಮಾದಾತೀತವಾದ ನಿಯಮ ರಚಿಸುತ್ತೇವೆಂಬುದು ಬೂಟಾಟಿಕೆಯಾಗುತ್ತದೆ; ತಾನು ಸರ್ವ ವಿಧದಲ್ಲಿಯೂ ಸಮರ್ಪಕವಾಗಿರುವ ನಿಯಮವನ್ನು ರೂಪಿಸುತ್ತೇನೆ ಎಂಬ ಬೂಟಾಟಿಕೆಯನ್ನು ತೊರೆದು, ಈ ಸಮಿತಿಯು ಅಸಂತುಷ್ಟ ಕೆಲಸವನ್ನೂ ನಿಷ್ಠೆಯಿಂದ ನಿರ್ವಹಿಸಲು ಬೇಕಾದ ತತ್ತ್ವಗಳ ಮೇಲೆ ಪ್ರಾಥಮಿಕ ವರದಿಯನ್ನು ನೀಡುತ್ತದೆ.
>
> "ಸಾಧ್ಯವಿದ್ದಷ್ಟು ಕಡಿಮೆ ದರದಲ್ಲಿ, ಪರಿಪೂರ್ಣವಾದ ರೀತಿಯಲ್ಲಿ ತಮ್ಮ ಕೆಲಸವನ್ನು ಮಾಡಿ ತೋರಿಸಬೇಕು ಎಂದು ಕೇಳುವ ಹಕ್ಕು ಜನರಿಗೆ ಇದೆ; ಜನತೆಯ ಈ ತತ್ವವನ್ನು ಸಂಪೂರ್ಣವಾಗಿ ಯಾರೂ ಮಾನ್ಯ ಮಾಡದಿರುವುದು ಶಕ್ಯವಾಗುವುದಿಲ್ಲ. ಸಾರ್ವಜನಿಕ ಸೇವಕರು ಸಂಸತ್ತಿನಲ್ಲಿ ಇರಲಿ ಅಥವಾ ಇಲ್ಲದಿರಲಿ, ತತ್ವವು ಒಂದೇ. ಯಾವುದೇ ರೀತಿಯ ತೆರಿಗೆ ನ್ಯಾಯಯುತವಾಗಿರಬೇಕಾದರೆ ಅವಶ್ಯಕವಾಗಿ ಇರಬೇಕು ಅಥವಾ ಅದರಿಂದ ಪ್ರತ್ಯಕ್ಷವಾಗಿ ಸಾರ್ವಜನಿಕ ಉಪಯೋಗ ಆಗಬೇಕು. ಸಂಸತ್ತಿನ ಸದನದ ಬೇರೆ ಬೇರೆ ಸಮಿತಿಗಳ ವರದಿಗಳು ಏನೇ ಹೇಳಿದ್ದರೂ ಇನ್ನು

ಏನಾದರೂ ಕೆಲಸವಿಲ್ಲದ ನೌಕರಿಗಳಿದ್ದರೆ, ಎಳ್ಳಷ್ಟೂ ತಡಮಾಡದೆ ಅವುಗಳನ್ನು ನಿಲ್ಲಿಸಿಬಿಡಬೇಕು. ಈ ವರದಿಯನ್ನು ಓದಿದಂತೆ, ಈ ರೀತಿಯಾಗಿರುವ ಒಂದಲ್ಲ ಹಲವಾರು ಉದಾಹರಣೆ ತೋರಿಸಿ, ಸಮಿತಿಯು ತನ್ನ ಕರ್ತವ್ಯವನ್ನು ಸಮರ್ಪಕವಾಗಿ ಮಾಡಿರುವುದು ಕಂಡುಬರುತ್ತದೆ.

"ಯಾವುದೇ ಕಚೇರಿಯಲ್ಲಿ ಹೆಚ್ಚಿಗೆ ಸಂಬಳ ಪಾವತಿಯಾಗುತ್ತಿದ್ದರೆ, ಅವುಗಳನ್ನು ಸರಿಪಡಿಸಬೇಕು. ಸಾರ್ವಜನಿಕರಿಗೆ ಲಾಭವಾಗುವಂತೆ ಒಂದನ್ನು ಮತ್ತೊಂದರ ಜೊತೆಗೂಡಿಸುತ್ತಿದ್ದರೆ, ಉಪಯುಕ್ತವಾದ ಮಿತವ್ಯಯದ ಈ ಮಾದರಿಯನ್ನು ಎಂದೂ ಅಲ್ಲಗಳೆಯಬಾರದು; ಇಂಥ ಅನೇಕ ಸೂಚನೆಗಳನ್ನು ಸಾಕ್ಷಿಯಲ್ಲಿ ತೋರಿಸಲಾಗಿದೆ; ಇವು ಕಾರ್ಯಗತವಾಗುವಂತೆ ನೋಡಿಕೊಳ್ಳುವುದು ಸಮಿತಿಯ ಅಧಿಕಾರದಲ್ಲಿ ಬರುವುದಿಲ್ಲ. ಒಬ್ಬ ವ್ಯಕ್ತಿ ತನ್ನ ವ್ಯವಹಾರಗಳನ್ನು ಹೇಗೆ ನೋಡಿಕೊಳ್ಳುತ್ತಾನೋ ಹಾಗೆಯೇ, ಸರಕಾರದ ಎಲ್ಲ ವಿಭಾಗಗಳಲ್ಲಿ ಮಿತವ್ಯಯವನ್ನು ಅನುಸರಿಸುವ ದೃಷ್ಟಿ ಕಾಣಬೇಕು.

"ಕಡಿಮೆ ವೇತನಕ್ಕೆ ಒಪ್ಪಿಕೊಂಡು ಕೆಲಸ ಮಾಡುವುದು ಒಂದು ಅರ್ಹತೆ" ಎಂಬ ಅಸಂಬದ್ಧ ನಿರ್ಣಯಕ್ಕೆ, ಈ ಸಾಮಾನ್ಯ ತತ್ವಗಳು ಎಡೆಕೊಡುವುದಿಲ್ಲ ಎಂಬುದು ಬಹುತೇಕ ಅನಗತ್ಯವಾಗಿದೆ. ಮಿತವ್ಯಯವು, ವೈಚಾರಿಕವೂ ಆಗಿರಬೇಕು. ಉನ್ನತ ಮಟ್ಟದ ಬುದ್ಧಿಮತ್ತೆ ಹಾಗೂ ಪ್ರಾಮಾಣಿಕತೆ ಯಿದ್ದು ಬಹಳ ನಂಬಿಕೆಯನ್ನು, ವಿಶ್ವಾಸವನ್ನು ವ್ಯಕ್ತಮಾಡಬೇಕಾದ ಕಚೇರಿಗಳಲ್ಲಿಯ ನೌಕರಿ ಪಡೆಯಲು ಹೆಚ್ಚು ಹಣ ಪಡೆಯುವ ಹವ್ಯಾಸದ ಸ್ಪರ್ಧೆ ಸ್ಪಷ್ಟವಾಗಿ ಅವಶ್ಯವಾಗಿಲ್ಲ. ಹೀಗೂ ಮೇಲಿಂದ ಮೇಲೆ ಗಮನಿಸಲಾಗಿದೆ. ಸ್ವತಂತ್ರ ದೇಶದ ಕಚೇರಿಗಳು ಸಾಮಾನ್ಯ ಜನರ ಸಂಪರ್ಕಕ್ಕೆ ದೂರವಾಗಬಾರದು ಎಂಬುದೇ ಆ ಹೇಳಿಕೆ; ಇದು ವಾಸ್ತವತೆ ಹಾಗೂ ಕಾರಣಗಳನ್ನು ಆಧರಿಸಿ ಸ್ಥಾಪಿತವಾದುದರಿಂದ ಇದನ್ನು ಕಡೆಗಣಿಸುವಂತಿಲ್ಲ. ಬಹಳ ಕಡಿಮೆ ಸಂಬಳ ನಿರ್ಧರಿಸಿದರೆ, ಶ್ರೀಮಂತರ ಕೈಯಲ್ಲಿ ಅದು ಗುತ್ತಿಗೆಯಾಗುವುದು; ಸಾರ್ವಭೌಮ ಸರಕಾರದ ಆಯ್ಕೆ ಮಾಡುವ ಸಾಮರ್ಥ್ಯವನ್ನು ಬಹಳ ಅಪಾಯಕಾರಕವಾಗಿ ಸೀಮಿತಗೊಳಿಸುವುದು; ಸಾಧನೆಗಳು ಸೀಮಿತ ಆದಾಯದಿಂದ ಸ್ವತಂತ್ರ ಉದ್ಯೋಗ ಮಾಡಬೇಕೆಂಬ ದೃಷ್ಟಿಯಿಂದ ಶಿಕ್ಷಣ ಪಡೆದವರಿಗೆ ಹಾಗೂ ಉಳಿದವರೆಲ್ಲರಿಗಿಂತಲೂ ಹೆಚ್ಚು ಕಚೇರಿಯಲ್ಲಿಯ ಜೀವನಕ್ಕೆ ಅರ್ಹತೆ ಪಡೆದ ಬುದ್ಧಿಮತ್ತೆ ಹಾಗೂ ಉದ್ಯಮಶೀಲತೆ ಹೊಂದಿರುವ ವರ್ಗದವರಿಗೆ ಸಾರ್ವಜನಿಕ ಸ್ಥಾನಗಳು ಲಭಿಸದಂತೆ ಆಗುವುದು.

"ಮೇಲ್ಮಟ್ಟದ ಸರಕಾರಿ ಕಚೇರಿಗಳಲ್ಲಿ ನೇಮಕವಾಗುವವರು ತಮ್ಮ ಸಮಸ್ತ ಸಮಯವನ್ನು ಹಾಗೂ ಲಕ್ಷ್ಯವನ್ನು ಅತ್ಯಂತ ನಿಷ್ಠೆಯಿಂದ ಸೇವೆ ಸಲ್ಲಿಸಲು ಉಪಯೋಗಿಸುವುದು ಅವಶ್ಯವೆಂಬುದನ್ನೂ ವಿಚಾರಿಸಬೇಕು; ತಮ್ಮ ವೈಯಕ್ತಿಕ ವಿಷಯಗಳನ್ನು ಅವಶ್ಯವಾಗಿ ಅಲಕ್ಷಿಸಬೇಕು; ಒಂದೆಡೆಗೆ, ಸಾರ್ವಜನಿಕ ಜೀವನದ ಮೂಲಕ ದೊರಕಿಸಿಕೊಂಡ ವೈಯಕ್ತಿಕ ಸಂಪತ್ತಿನ ಬಗ್ಗೆ ಬರುವ ಕಳಂಕವನ್ನು ಹೊಡೆದುಹಾಕಲು ಕಾಳಜಿ ವಹಿಸಿದರೆ, ಅದು ದೇಶದ ಆಸಕ್ತಿಗಾಗಿಯಾಗಲಿ ಅಥವಾ ಗೌರವಕ್ಕಾಗಲಿ ಅಲ್ಲ; ಇನ್ನೊಂದೆಡೆಗೆ ತಮ್ಮ ಸೇವೆಯನ್ನು ತಾವು ನಾಶವಾಗದಂತೆಯೂ ನೋಡಿಕೊಳ್ಳಬೇಕು."

ಮಾನ್ಯರೆ, ದೇಶದ ಸೇವೆಗಾಗಿ ಹಾಗೂ ಆಡಳಿತದ ಪಾವಿತ್ರ್ಯಕ್ಕಾಗಿ ಕಾಳಜಿ ಮಾಡುವ ಮಂತ್ರಿಗಳು ಈ ತತ್ವಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಿವೇದಿಸುವೆ. ಈಗಿರುವ ಮಂತ್ರಿಮಂಡಳವು ರೂ. ೫೦೦ ಸಂಬಳವನ್ನು ನಿಗದಿ ಮಾಡುವಾಗ, ಇದೀಗ ನಾನು ಓದಿದ ತತ್ವಗಳಿಗೆ ಯಾವ ಮಾನ್ಯತೆಯನ್ನು ನೀಡಿಲ್ಲವೆಂಬುದು ನನ್ನ ವಿಚಾರವಾಗಿದೆ.

ಈಗ ಮಾನ್ಯರೆ, ವಿಧೇಯಕದಲ್ಲಿ ನಿಗದಿಪಡಿಸಿದ ಸಂಬಳದ ಬಗ್ಗೆ ಯಾವ ತತ್ವಗಳನ್ನು ಸೂಚಿಸಲಾಗಿದೆ; ಜನರ ವರಮಾನಕ್ಕೆ ತಕ್ಕಂತೆ ಸಂಬಳವು. ಹಾಗಿದ್ದರೆ ರೂ. ೫೦೦ ಸಂಬಳವು ಜನರ ವರಮಾನಕ್ಕೆ ಸರಿಯಿದೆಯೇ? ಜನರ ವರಮಾನ ಎಷ್ಟಿದೆ? ಎಂಬ ಪ್ರಶ್ನೆಯನ್ನು ನಾನು ಕೇಳುತ್ತೇನೆ. "ಹರಿಜನ" ಪತ್ರಿಕೆಯಲ್ಲಿ ಪ್ರಕಟವಾದ ಅಂಕಿ ಸಂಖ್ಯೆಗಳು ನನ್ನ ಹತ್ತಿರ ಇದ್ದು, ಅವುಗಳನ್ನು ಓದಿ ತೋರಿಸುವೆ.

ಮಾನ್ಯ ಶ್ರೀ ಬಿ. ಜಿ. ಖೇರ್: ನೀವು ಅದನ್ನು ಓದುತ್ತಿರುವುದು ಸಂತೋಷದಾಯಕ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಅದನ್ನು ಯಾವಾಗಲೂ ಓದುತ್ತೇನೆ. ಇಲ್ಲಿನ ಅಂಕಿ ಸಂಖ್ಯೆಗಳಲ್ಲಿ ಇದ್ದಂತೆ, ಯುನೈಟೆಡ್ ಕಿಂಗ್‌ಡಮ್‌ನಲ್ಲಿ ತಲಾ ವರಮಾನ ೫೦ ಪೌಂಡು, ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ೧೦೦ ಪೌಂಡು, ಫ್ರಾನ್ಸಿನಲ್ಲಿ ೪೦ ಪೌಂಡು, ಆಸ್ಟ್ರೇಲಿಯಾದಲ್ಲಿ ೭೦ ಪೌಂಡು, ಕೆನಡಾದಲ್ಲಿ ೭೫ ಪೌಂಡು, ಭಾರತದಲ್ಲಿ ೪ ಪೌಂಡು. (ಮಾನ್ಯ ಶ್ರೀ ಬಿ. ಜಿ. ಖೇರ್: ಸರಿ, ಸರಿ) ಮಾನ್ಯರೆ, ಇದೀಗ ಜನರ ವರಮಾನಕ್ಕೆ ತಕ್ಕಂತೆ ಸಂಬಳ ಇರಬೇಕೆಂಬ ತತ್ವವನ್ನು ತೆಗೆದುಕೊಂಡರೆ, ಈ ದೇಶದಲ್ಲಿ ತಲಾ ೪ ಪೌಂಡು ವರಮಾನವಿದ್ದಾಗ, ಅದಕ್ಕೆ ಸರಿಯಾಗುವಂತೆ ತಿಂಗಳಿಗೆ ರೂ. ೫೦೦ ಇರುವ ಸಂಬಳವು ಹೇಗೆ ಸೂಚಿತವಾಗಿರುವುದೋ ಎಂಬುದು ನನಗೆ ಅರ್ಥವಾಗುವುದಿಲ್ಲ. ನಿಜವಾಗಿಯೂ ನನ್ನ ಮಾನ್ಯ ಮಿತ್ರರು ಜನರ ವರಮಾನಕ್ಕೆ ತಕ್ಕಂತೆ ವೇತನವಿರಬೇಕೆಂಬ ತತ್ವದ ತಳಹದಿಯ ಮೇಲೆ ನಮ್ಮೆದುರಿಗೆ ತಂದ ವಿಧೇಯಕವನ್ನು ರಚಿಸಿದ್ದರೆ, ಮಂತ್ರಿಗಳು ರೂ. ೫೦೦ ಸಂಬಳ ತೆಗೆದುಕೊಳ್ಳುವುದು ಅತಿಶಯವಾಯಿ ತೆಂಬುದನ್ನು ನಾನು ನಿವೇದಿಸುವೆ; ಅದು ರೂ. ೧೦೦ಕ್ಕಿಂತಲೂ ಕಡಿಮೆಯದಾಗಬೇಕು; ಆಗಲೇ ಸೂಚಿಸಿದಂತೆ ಅದು ರೂ. ೭೫ ಆಗಬೇಕು. ಅವರಲ್ಲಿ ಮಾನಕವಿದ್ದರೆ, ಜನರನ್ನು ಸಮಾಧಾನಪಡಿಸಲು ನ್ಯಾಯಯುತವಾಗಿ ಈ ಮೊತ್ತವನ್ನು ನಿಶ್ಚಿತಗೊಳಿಸಬೇಕು ಎಂದಿದ್ದರೆ, ಆಗ ನಿಮ್ಮ ಪ್ರಾಮಾಣಿಕ ದೃಷ್ಟಿಯಲ್ಲಿ ಅದು ತರ್ಕಬದ್ಧ ಏಕೆ ಆಗಬಾರದು? ಜನರ ವರಮಾನಕ್ಕೆ ತಕ್ಕಂತೆ ಎಳ್ಳಷ್ಟೂ ಮಾನಕವಿರದ ಮೊತ್ತವನ್ನು ಏಕೆ ನಿಶ್ಚಿತಗೊಳಿಸುವಿರಿ?

ಎರಡನೆಯದಾಗಿ, ಕಡಿಮೆ ಸಂಬಳವು ನ್ಯಾಯಯುತವಾಗಿದೆಯೆಂದು ತಿಳಿಸಲು, ಮಂತ್ರಿಗಳೂ ಜನಸಾಮಾನ್ಯರಂತೆಯೇ ಇರುವರು ಹಾಗೂ ಮಂತ್ರಿಗಳು ಮತ್ತು ಸಾಮಾನ್ಯ ನಾಗರಿಕರ ನಡುವೆ ಭೇದಭಾವ ಬರಬಾರದು ಎಂಬ ರೀತಿಯಲ್ಲಿ ಮಂತ್ರಿಗಳ ಜೀವನವು ಇರಬೇಕೆಂಬುದನ್ನು ಸೂಚಿಸಲಾಗಿದೆ. ಮಾನ್ಯರೆ, ಎಲ್ಲ ಭೇದಭಾವ ಅಳಿಯಬೇಕು, ಅವರೂ ಜನರಿಂದಲೇ ಬಂದವರು ಎಂಬುದನ್ನು ತೋರಿಸಬೇಕು. ಜನತೆಗೇ ಅವರು ಸಂಬಂಧಪಟ್ಟವರು ಎನ್ನುವಂಥ ವಿಶ್ವಾಸ ಜನರಲ್ಲಿ ಉಳಿಯಬೇಕು. ಆದರೆ, ಜನತೆಯ ವಿಶ್ವಾಸ ಗೆಲ್ಲುವ ರೀತಿಯು ಹೀಗಲ್ಲವೆಂದು ನಾನು ನಿವೇದಿಸುವೆ. ಮಾನ್ಯರೆ, ಈ ದೇಶದಲ್ಲಿ ಜಗತ್ತಿನಲ್ಲಿ ಎಲ್ಲಿಯೂ ಇಲ್ಲದಷ್ಟು ಬಹಳಷ್ಟು ಭೇದಗಳು ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಇವೆ. ಸದ್ಯ ನಮ್ಮ ಪ್ರಾಂತದ್ದೆ ನಾನು ಹೇಳುವೆ; ಇಲ್ಲಿ ಬ್ರಾಹ್ಮಣ ಹಾಗು ಬ್ರಾಹ್ಮಣೇತರ ಎಂಬ ವಿಭಾಗವಿದೆ; ಸ್ಪೃಶ್ಯರು ಹಾಗೂ ಅಸ್ಪೃಶ್ಯರು ಎಂಬ ಭೇದವಿದೆ– ಹಿಂದೂಗಳನ್ನಷ್ಟೇ ಸಂಬಂಧಿಸಿ ನಾನು ಮಾತನಾಡುತ್ತಿರುವೆ– ನಮ್ಮಲ್ಲಿ ಮಹಾರಾಷ್ಟ್ರೀಯರು, ಗುಜರಾತಿಗಳು ಎಂಬ ಭೇದವೂ ಇದೆ; ಗುಜರಾತಿಗಳು ಹಾಗೂ ಕನ್ನಡಿಗರು ಈ ಭೇದಭಾವನೆಯೂ ನಮ್ಮಲ್ಲಿದೆ. ಇವೆಲ್ಲಕ್ಕೂ ಅಧಿಕವಾಗಿ ಹಿಂದೂಗಳು ಮತ್ತು ಮುಸ್ಲಿಮರು ಎಂಬ ಭೇದವೂ ಇದೆ. ರಾಜ್ಯಾಡಳಿತದಲ್ಲಿ ಜನರಿಗೆ ವಿಶ್ವಾಸ ಕುದುರುವಂತೆ ಮಾಡಬೇಕಾದರೆ, ತಮ್ಮ ಶರೀರಗಳನ್ನು ಪ್ರದರ್ಶಿಸುತ್ತ ಅರ್ಧಮರ್ಧ ಬಟ್ಟೆಗಳನ್ನುಟ್ಟುಕೊಂಡು ಮಂತ್ರಿಗಳು ದಾರಿಯಲ್ಲಿ ತಿರುಗಾಡಬೇಕಾಗಿಲ್ಲ;

ಅಥವಾ ಸಿಗರೇಟುಗಳ ಬದಲಾಗಿ ಬೀಡಿಗಳನ್ನು ಸೇದಬೇಕಾಗಿಲ್ಲ; ಅಥವಾ ಮೂರನೆಯ ವರ್ಗದಲ್ಲಿ ಇಲ್ಲವೆ ಎತ್ತಿನ ಬಂಡಿಗಳಲ್ಲಿ ಪ್ರವಾಸ ಮಾಡಬೇಕಾಗಿಲ್ಲ. ಇವುಗಳಿಂದ ಯಾರೂ ಮೋಸ ಹೋಗುವುದಿಲ್ಲ. ಜನರ ವಿಶ್ವಾಸವನ್ನು ದೊರಕಿಸಿಕೊಳ್ಳಬೇಕಾದರೆ, ನಿಮ್ಮ ಸರಕಾರವನ್ನು, ನಮ್ಮ ಮಂತ್ರಿಮಂಡಲವನ್ನು, ನಿಮ್ಮ ಸರಕಾರಿ ಸೇವೆಗಳಲ್ಲಿ, ಯಾವುದೇ ಒಂದು ಸಮುದಾಯದ ಅಥವಾ ಯಾವುದೇ ಒಂದು ವರ್ಗದ ಗುತ್ತಿಗೆಯದಾಗದ ಹಾಗೆ ಸಂಘಟನೆ ಮಾಡಿಕೊಳ್ಳುವುದೊಂದೇ ನಿಮಗಿರುವ ದಾರಿ ಎಂದು ನಿವೇದಿಸುವೆ. (ಸಂತೋಷದ ಕೂಗುಗಳು) ಇದರ ಬಗ್ಗೆ ಮಂತ್ರಿಮಂಡಲ ಏನು ಮಾಡುವುದೋ ಎಂಬುದನ್ನು ಕಾದುನೋಡೋಣ. ಆದರೆ ಇವೆಲ್ಲವುಗಳನ್ನು ಮಾಡುತ್ತ, ನನ್ನ ಹೇಳಿಕೆಯಂತೆ ಕ್ಷುಲ್ಲಕವಾದ ಸಂಗತಿಗಳನ್ನು ನೆರವೇರಿಸುತ್ತ, ತಾವು ಜನರ ವಿಶ್ವಾಸವನ್ನು ದೊರಕಿಸಿಕೊಳ್ಳುತ್ತೇವೆ ಎಂಬ ನಟನೆ ಮಾಡುವುದು ಅವರಿಗೆ ಬೇಕಾಗಿದ್ದರೆ, ಅದು ಕಡೆಯಲ್ಲಿ ನಿಷ್ಫಲವಾಗುತ್ತದೆ ಎಂಬುದು ನನ್ನ ವಿಚಾರವಾಗಿದೆ.

ಮಾನ್ಯರೆ, ಮಂತ್ರಿಮಂಡಳವು ತನ್ನದು ತ್ಯಾಗದ ರೀತಿಯೆಂದು ತೋರಿಸಿಕೊಳ್ಳುತ್ತಿದೆ. ಇದರಿಂದ ನನಗೆ ಮಧ್ಯಕಾಲೀನ ಸನ್ಯಾಸಿಗಳ ಸ್ವಭಾವ ಹಾಗೂ ಜೀವನದ ರೀತಿ ನೆನಪಾಗುತ್ತಿದೆ. ಮಧ್ಯಕಾಲೀನ ಸನ್ಯಾಸಿಗಳು, ಸನ್ಯಾಸಿ ಜೀವನ ಸಾಗಿಸುವ ಮೊದಲು ಮೂರು ಪ್ರತಿಜ್ಞೆಗಳನ್ನು–ಬ್ರಹ್ಮಚರ್ಯೆಯ ಪ್ರತಿಜ್ಞೆ ಪಾವಿತ್ರ್ಯದ ಪ್ರತಿಜ್ಞೆ ಹಾಗೂ ಬಡತನದ ಪ್ರತಿಜ್ಞೆ– ತೆಗೆದುಕೊಳ್ಳಬೇಕಾಗುತ್ತಿದ್ದಿತು.

ನನ್ನ ಮಾನ್ಯ ಸ್ನೇಹಿತರು ಬ್ರಹ್ಮಚರ್ಯೆಯ ವ್ರತವನ್ನು ಸ್ವೀಕರಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. (ನಗೆ) ಇಂಥ ವ್ರತ ಇವರಿಗೆ ಈಗ ತೆಗೆದುಕೊಳ್ಳಲು ಬಹಳ ತಡವಾಗಿದೆ. ಆದರೆ ಬ್ರಹ್ಮಚರ್ಯೆ ವ್ರತ ಅವರು ಸ್ವೀಕರಿಸದಿದ್ದರೆ, ಈಗ ಅವರು ಅದನ್ನು ಮುರಿದರೆ, ಈ ಸದನಕ್ಕೇನೂ ಅದು ಅಂಥ ದುಃಖದಾಯಕ ವಿಷಯವಲ್ಲ. ಆದರೆ ನಿಜವಾಗಿಯೂ ಅವರು ನಾನು ಈ ವಿಧೇಯಕವನ್ನು ನೋಡುತ್ತಿರುವಂತೆ, ಬಡತನದ ಪ್ರತಿಜ್ಞೆಯನ್ನು ಸ್ವೀಕರಿಸಿದ್ದಾರೆ. ಅವರು ಈ ಪ್ರತಿಜ್ಞೆಯನ್ನು ಉಳಿಸಿಕೊಳ್ಳುವರೆ? ಮಧ್ಯಕಾಲೀನ ಸನ್ಯಾಸಿಗಳು ಬ್ರಹ್ಮಚರ್ಯ ಪ್ರತಿಜ್ಞೆಯನ್ನು ಉಳಿಸಿಕೊಳ್ಳುವಲ್ಲಿ ಎಷ್ಟೋ ಸಲ ಯಶಸ್ವಿಯಾಗುತ್ತಿರಲಿಲ್ಲ; ಆದರೆ ಬಡತನದ ಪ್ರತಿಜ್ಞೆ ನಡೆಸಿಕೊಂಡು ಹೋಗುವಲ್ಲಿ ಅವರು ಯಶಸ್ವಿಯಾಗಿದ್ದರು. ಇದು ಹೀಗೆ ಏಕೆ? ಸನ್ಯಾಸಿಗಳಿಗೆ ಕುಟುಂಬ ಇದ್ದಿಲ್ಲವೆಂಬುದೇ ಇದಕ್ಕೆ ಕಾರಣ; ಅವರೊಬ್ಬರೇ ಇರುತ್ತಿದ್ದರು, ಏಕಾಕಿಯಾಗಿ ಇರುತ್ತಿದ್ದರು, ಯಾರ ಋಣದಲ್ಲಿಯೂ ಅವರು ಇರುತ್ತಿರಲಿಲ್ಲ. ಈ ದೃಷ್ಟಿಯಿಂದ ಮಂತ್ರಿಗಳು ಸಂಪೂರ್ಣವಾಗಿ ಪರಿಸ್ಥಿತಿಯಲ್ಲಿ ಭಿನ್ನವಾಗಿ ಇರುವರು. ಅವರ ಕುಟುಂಬಗಳು ಹಾಗೂ ಮಕ್ಕಳು ಇವರಿಂದ ಉಂಟಾದ ಬಹಳಷ್ಟು ಹೊಣೆಗಾರಿಕೆಗಳು ನಿಜವಾಗಿಯೂ ಅವರ ಮೇಲಿರುವವು. ಬಡತನದ ಪ್ರತಿಜ್ಞೆಯನ್ನು ಅವರು ಹೇಗೆ ನಡೆಸಿಕೊಂಡು ಹೋಗುವರೋ ಎಂಬುದು ನನಗೆ ತಿಳಿಯದು. ಅವರಿಗೆ ಯಶಸ್ಸು ದೊರೆಯಲಿ ಎಂದು ಇಚ್ಛಿಸುವೆ; ಆದರೆ ಅವರು ತಮ್ಮ ಪ್ರತಿಜ್ಞೆಯಂತೆ ಇರುವರೇ ಎಂಬುದಕ್ಕೆ ನನಗೆ ಬಹಳಷ್ಟು ಸಂಶಯವಿದೆ.

ಶ್ರೀ ಎ. ವಿ. ಚಿತ್ರೆ: ಅವರು ತಮ್ಮ ಪಾಲಿನ ಲಾಭಾಂಶ (ಡಿವಿಡೆಂಟ್) ತೆಗೆದುಕೊಳ್ಳುವರು?

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಇನ್ನೊಂದು ವಿಷಯದ ಬಗ್ಗೆ ನಾನು ಮಾತನಾಡಬೇಕಾಗಿದೆ. ಈ ವಿಧೇಯಕದ ಅವಶ್ಯಕತೆಯಾದರೂ ಇದೆಯೇ? ವೈಯಕ್ತಿಕವಾಗಿ ನನಗೆ ಈ ವಿಧೇಯಕವು, ಅವಶ್ಯವಾಗಿದೆ ಎಂದು ತೋರುವುದಿಲ್ಲ. ಅವರಿಗೆ ಬೇಕಾದುದಕ್ಕಿಂತಲೂ ಹೆಚ್ಚಿಗೆ ಮಾನ್ಯ ಮಂತ್ರಿಗಳು ತೆಗೆದುಕೊಳ್ಳಬೇಕೆಂದು ಯಾರೂ ಒತ್ತಾಯ ಮಾಡುವುದಿಲ್ಲ. ನಿಜವಾಗಿಯೂ ವಿಧೇಯಕವನ್ನು ತರದೆ, ರಾಜ್ಯಪಾಲರು ನಿಶ್ಚಿತಗೊಳಿಸಿದ್ದ ಅಂಕಿಯಷ್ಟೇ ವೇತನಗಳು ಉಳಿಯುವಂತೆ ಮಾಡಿ, ಅವರು ರೂ. ೫೦೦ ಸ್ವೀಕರಿಸಬಹುದಾಗಿದೆ; ಮತ್ತು

ಉಳಿದದ್ದನ್ನು ಅವರವರ ಇಚ್ಛೆಯಂತೆ ರಾಜ್ಯದ ಇಲ್ಲವೆ ತಮ್ಮ ಪಕ್ಷದ ಬೊಕ್ಕಸಕ್ಕೆ ಕೊಡಬಹುದಾಗಿದೆ. ಅವರು ಹಾಗೇಕೆ ಮಾಡುವುದಿಲ್ಲ? ಅವರ ಈ ವಿಧೇಯಕವನ್ನಾದರೂ ಏಕೆ ಮಂಡಿಸಿರುವರು? ಅದರ ಗುಟ್ಟು ಇಲ್ಲಿ ಇದೆ. ಯಾವ ಸದುದ್ದೇಶದಿಂದಲೂ ಅವರು ಈ ವಿಧೇಯಕವನ್ನು ತಂದಿಲ್ಲ; ಅದರ ಹಿನ್ನೆಲೆಯಲ್ಲಿ ಒಂದು ತಂತ್ರವಿದೆ. ಆ ತಂತ್ರ ಇಷ್ಟೇ; ಅವರೇ ಆಳುವ ಪಕ್ಷವಾಗಿ ಉಳಿಯಬೇಕು, ಆ ಸ್ಥಾನಗಳಲ್ಲಿ ಬೇರೆ ಯಾರೂ ಬರಕೂಡದು ಎಂಬುದಾಗಿದೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಈ ಸಂದರ್ಭದಲ್ಲಿ ನನಗೆ ದುಂಡುಮೇಜಿನ ಪರಿಷತ್ತಿನ ನೆನಪಾಗುತ್ತಿದೆ; ಆಗ ಕನ್ಸರ್ವೇಟಿವ್ ಪಾರ್ಟಿಯು ಭಾರತ ಸರಕಾರದ ವಿಧೇಯಕದಲ್ಲಿ ಕೆಲವೊಂದು ಪರಿಚ್ಛೇದಗಳನ್ನು ಸೇರಿಸಿ ತಮ್ಮ ಅಂಶಗಳನ್ನು ಶಕ್ತಿಯುತವಾಗಿ ಮಾಡಲು ಪ್ರಯತ್ನಿಸುತ್ತಿತ್ತು; ಇದರ ಉದ್ದೇಶ ಲೇಬರ್ ಪಾರ್ಟಿಯ ಸ್ವತಂತ್ರವಾದ ಕಾರ್ಯಚಟುವಟಿಕೆಗಳನ್ನು ನಿರ್ಬಂಧಿಸುವುದೇ ಹೊರತು ಬೇರೆ ಏನೂ ಆಗಿರಲಿಲ್ಲ. "ಭಾರತದ ಸರಕಾರದ ಕಾನೂನಿನ ಯಾವ ಸಮರ್ಥನೆಯೂ ಇಲ್ಲದೆ, ಹಲವು ಪರಿಚ್ಛೇದ ಗಳನ್ನು ಏತಕ್ಕಾಗಿ ಸೇರಿಸುತ್ತಿರುವಿರಿ?" ಎಂದು ನಾವು ಅನೇಕರು ಪ್ರಶ್ನಿಸುತ್ತಿದ್ದೆವು. ಅದಕ್ಕೆ ಅವರ ಉತ್ತರವೇ ಇರುತ್ತಿರಲಿಲ್ಲ; ಆದರೆ ಪ್ರತಿಯೊಬ್ಬರಿಗೂ ತಾವು ಮಾಡುತ್ತಿರುವುದು ಏನೆಂಬುದು ಗೊತ್ತಿತ್ತು; ಅವರ ಮುಂದಾಲೋಚನೆಯು, ಲೇಬರ್ ಪಾರ್ಟಿ ಸರಕಾರವು ಏನಾದರೂ ಅಧಿಕಾರಕ್ಕೆ ಬಂದರೆ, ಕನ್ಸರ್ವೇಟಿವ್ ಪಾರ್ಟಿಯು ಮಾಡಲೆಂದು ಬಯಸಿದ ಕೆಲಸಗಳು ಆಗದಂತೆ ನಿರ್ಬಂಧಿಸುವುದಾಗಿತ್ತು. ನಮ್ಮ ವಿದ್ವಾಂಸ ಸ್ನೇಹಿತರೂ ಇಂಥ ಧೋರಣೆ ಅನುಸರಿಸುವುದಾದರೆ, ಅವರಿಗೆ ಹಾಗೆ ಮಾಡಲು ಸುಸ್ವಾಗತ. ಅವರಿಗೆ ಮಾತ್ರ ಅಡ್ಡಿಯಾಗಲಾರೆವು. ಆದರೆ ಇದು ಅವರ ಅಧಿಕಾರದ ದುರುಪಯೋಗವಾಗಿದೆ ಎಂದಿಷ್ಟೇ ನಾನು ಹೇಳಬಯಸುವೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಘಟ್ಟದಲ್ಲಿ ನನ್ನ ಬಗ್ಗೆ ತಪ್ಪು ತಿಳುವಳಿಕೆಯಾಗುವ ಸಂಭವವಿರುವುದರಿಂದ ನಾನೊಂದು ಸ್ಪಷ್ಟೀಕರಣವನ್ನು ಕೊಡಬಯಸುವೆ; ನಾನು ರೂ. ೫೦೦ ವೇತನ ಬಹಳ ಕಡಿಮೆಯಾಯಿತೆಂದು ಹೇಳುವಾಗ, ಹಂಗಾಮಿ ಮಂತ್ರಿಗಳ ರೂ. ೪,೦೦೦ ಅಥವಾ ರೂ. ೩,೦೦೦ ವೇತನವು ಮಾನಕ ವೇತನವಾಗಿದೆಯೆಂದು ನಾನು ಎಂದೆಂದೂ ಸೂಚಿಸಲು ಬಯಸುವುದಿಲ್ಲ. ರೂ. ೪,೦೦೦ ಅಥವಾ ರೂ. ೩,೦೦೦ ಇದು ಒಬ್ಬ ಮಂತ್ರಿಗೆ ಯೋಗ್ಯ ವೇತನವಾಗಿದೆಯೆಂದು ನಾನು ಹೇಳದೇ ಇರುವುದರಿಂದ, ಯಾರೂ ತಪ್ಪಾಗಿ ನಿರ್ಣಯಿಸಬಾರದು. ನಾನು ಯಾವ ಅಂಕಿ ಸಂಖ್ಯೆಗೂ ಅಂಟಿಕೊಂಡಿಲ್ಲ. ರೂ. ೫೦೦ ಒಬ್ಬ ಮಂತ್ರಿಗೆ ಯೋಗ್ಯ ಸಂಬಳವಲ್ಲ ಎಂಬುದಷ್ಟೇ ನಾನು ಹೇಳುವೆ. ನಾನು ಕೊಟ್ಟ ಆ ಹೇಳಿಕೆಯು ದುಂದುವೆಚ್ಚದ ಸಂಬಳವನ್ನು ನಾನು ಸೂಚಿಸುತ್ತಿರಬಹುದು ಎಂಬ ಟೀಕೆಗೆ ನಿಸ್ಸಂಶಯವಾಗಿಯೂ ಗುರಿಯಾಗಬಹುದು. ಆದರೆ ವಿಧೇಯಕದಲ್ಲಿ ನಿಶ್ಚಿತಗೊಳಿಸಿರುವುದಕ್ಕಿಂತಲೂ ಹೆಚ್ಚಿಗೆ ವೇತನವು ಇರಬೇಕು ಎಂಬುದನ್ನು ಸೂಚಿಸುವಾಗ, ನಾನು ಯಾವ ಇಕ್ಕಟ್ಟಿಗೂ ಸಿಕ್ಕುವುದಿಲ್ಲವೆಂದು ನನಗೆ ಅನಿಸುತ್ತದೆ. ಸಂಬಳವು ಹೆಚ್ಚಾದರೆ, ಅದು ನನಗೇನೂ ನಿಜವಾಗಿ ದೊರಕುವುದಿಲ್ಲ. ಮುಂದಿನದನ್ನು ವಿಚಾರಿಸುವುದಾದರೆ, ನಾನು ಎಂದೂ ಇದನ್ನು ಪಡೆದುಕೊಳ್ಳುವವನಾಗಲಾರೆ ಎಂದೇ ಹೇಳಬೇಕು.

ಮಾನ್ಯ ಶ್ರೀ ಬಿ. ಜಿ. ಖೇರ್: ನಿರಾಶೆಪಡಬೇಡಿ.

ಡಾ. ಬಿ. ಆರ್. ಅಂಬೇಡ್ಕರ್: ನನ್ನ ವಿದ್ವಾಂಸ ಸ್ನೇಹಿತರಿಗೆ ಉತ್ತರಿಸುವುದು ಅವಶ್ಯವಿಲ್ಲ. ಆದರೆ, ಅವರ ಧೋರಣೆ ಏನೆಂಬುದು ನನಗೆ ಗೊತ್ತಿದೆ; ತಮ್ಮ ಮಂತ್ರಿಮಂಡಳದಿಂದ ಉದ್ದೇಶಪೂರ್ವಕವಾಗಿ ದಲಿತ ವರ್ಗದ ಸದಸ್ಯರನ್ನು ಅವರು ದೂರ ಸರಿಸಿದ್ದಾರೆ.

ಮಾನ್ಯ ಶ್ರೀ ಕೆ. ಎಂ. ಮುನ್‌ಷಿ: ಅವರಿಗೆ ರೂ. ೫೦೦೦ ಬೇಕಾಗಿರಲಿಕ್ಕಿಲ್ಲ!

ಮಾನ್ಯ ಸಭಾಪತಿಗಳು: ಶಿಸ್ತು! ಶಿಸ್ತು!

ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಸೂಚನೆಯನ್ನು ಮಾಡುವಾಗ ನನಗೆ ಯಾವ ಇಕ್ಕಟ್ಟೂ ಇಲ್ಲ; ಏಕೆಂದರೆ ನಾನು ಈ ವೇತನವನ್ನು ಪಡೆಯುವವನೇ ಅಲ್ಲ. ನನ್ನ ಉದ್ದೇಶಗಳು ಸ್ವಚ್ಛವಾಗಿ ಸಾರ್ವಜನಿಕ ಉದ್ದೇಶಗಳೇ ಆಗಿವೆ. ಡಾ. ಜಾನ್‌ಸನ್‌ನು ದೇಶಾಭಿಮಾನವು ಮೂರ್ಖರಿಗೆ, ಕೊನೆಯ ರಕ್ಷಣೆ (ವಾದ) ಎಂದು ಹೇಳಿದನು. ರಾಜಕಾರಣವೂ ಮೂರ್ಖರಿಗೆ ಕೊನೆಯ ರಕ್ಷಣೆಯೆಂದು ಅವನು ಹೇಳಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಭಾರತದಲ್ಲಿ ರಾಜಕಾರಣವು ಮೂರ್ಖರಿಗೆ ಕೊನೆಯ ರಕ್ಷಣೆಯಾಗ ಬಾರದೆಂಬುದೆಂದೇ ನಾನು ಮಾತನಾಡಲು ನಿಂತಿರುವೆ.

* * *

* ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೆ, ನಮ್ಮ ಸ್ನೇಹಿತರಾದ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತು ಹೇಳಬೇಕಾಗಿದೆ; ಮೊತ್ತವನ್ನು ವಿವಿಧ ಬಾಬುಗಳನ್ನು ಹಂಚಿ ಹಾಕುವುದಕ್ಕಿಂತ, ಒಟ್ಟಾರೆ ಒಂದೇ ಮೊತ್ತವನ್ನು ಕಾಣಿಸಿದರೆ, ಈಗಿರುವ ತೊಂದರೆ ಪರಿಹಾರವಾಗುತ್ತದೆಂಬುದು ನನ್ನ ವಿಚಾರವಾಗಿದೆ. ಒಬ್ಬ ಮಂತ್ರಿಗೆ ತಿಂಗಳಿಗೆ ರೂ. ೭೫೦ ಒಟ್ಟಾರೆ ಸಂಬಳವನ್ನು ಕೊಡಲಾಗುವುದು ಎಂದು ಹೇಳಬೇಕೆಂದು ಅವರಿಗೆ ನಾನು ಸೂಚಿಸುವೆ. ಇದು ಅವರ ಪರಿಶೀಲನೆಗಾಗಿ ನನ್ನ ಸೂಚನೆಯು ಮಾತ್ರ; ಇದರಿಂದ ತೊಂದರೆ ಪರಿಹಾರವಾಗುವಂತಿದ್ದರೆ ನೋಡ ಬೇಕು.

ಮಾನ್ಯ ಶ್ರೀ ಬಿ. ಜಿ. ಖೇರ್: ಮಾನ್ಯರೆ, ಪುಣೆಯಲ್ಲಿ ನಾಲ್ಕು ಸರಕಾರಿ ನಿವಾಸಗಳು ಲಭ್ಯವಿದ್ದಾಗ, ನಾವು ಏನು ಮಾಡಿದೆವೆಂಬುದಕ್ಕೆ ನಾನು ಸ್ಪಷ್ಟವಾಗಿ ಉತ್ತರಿಸಿರುವೆನೆಂಬುದು ನನ್ನ ತಿಳುವಳಿಕೆ. ಮುಂಬೈಯಲ್ಲಿಯೂ ಸಹ ಸರಕಾರಿ ನಿವಾಸಗಳು ಲಭ್ಯವಾಗುವುದು. ವಾಸಿಸಲು ಸರಕಾರಿ ಬಂಗಲೆಗಳು ದೊರೆಯುವ ಮಂತ್ರಿಗಳಿಗೆ, ಸಭಾಪತಿಗಳಿಗೆ, ಅಧ್ಯಕ್ಷರಿಗೆ ಯಾವುದೇ ಭತ್ತೆಯನ್ನು ಕೊಡುವಂತಿಲ್ಲ, ಕೊಡಕೂಡದು. ಭತ್ತೆಗಳನ್ನು ಒಟ್ಟಾರೆ ಸಂಬಳದ ಜೊತೆಗೆ ಕೂಡಿಸುವ ಪ್ರಶ್ನೆಯೇ ಇಲ್ಲ. ಸರಕಾರದಿಂದ ಲಭ್ಯವಾಗುವ ನಿವಾಸಗಳಿದ್ದರೆ, ಆ ನಿವಾಸಗಳಲ್ಲಿ ವಾಸವಾದವರಿಗೆ ಯಾವ ಭತ್ತೆಗಳೂ ಇಲ್ಲ. ಒಂದು ವೇಳೆ ಅವರದೇ ಮನೆಗಳಿದ್ದರೆ, ಸರಕಾರಿ ನಿವಾಸಗಳಲ್ಲಿ ವಾಸವಾಗುವುದು ಅಥವಾ ಬಿಡುವುದು, ಆ ಆಯ್ಕೆ ಅವರಿಗೆ ಬಿಟ್ಟುಕೊಟ್ಟದ್ದು. ಮನೆಯ ಭತ್ತೆ ಎಂದು ಪ್ರತಿ ತಿಂಗಳಿಗೆ ರೂ. ೧೦೦ ಕೊಟ್ಟರೆ, ಅದು ಸಮಂಜಸವಾದುದು ಎಂದು ನಮಗೆ ತೋರುತ್ತದೆ. ಈ ರೀತಿ ಪರಿಸ್ಥಿತಿಯಿರುವಾಗ, ವೇತನದ ಜೊತೆಗೆ ಭತ್ಯೆಯನ್ನು ಕೂಡಿಸುವುದು ಸಾಧ್ಯವಿಲ್ಲವೆಂದು ಅನಿಸುತ್ತದೆ. ಪುಣೆಯಲ್ಲಿ ನಾವು ಅನುಸರಿಸಿದ ವ್ಯವಸ್ಥೆಯು ಚೆನ್ನಾಗಿ ಕಾರ್ಯಗತವಾಗಿದೆಯೆಂದು ತೋರುತ್ತದೆ; ಲಭ್ಯವಿದ್ದ ಸರಕಾರಿ ನಿವಾಸಗಳಲ್ಲಿ ಬೇರೆ ಬೇರೆ ಭಾಗ ಮಾಡುವುದು ಪುಣೆಯಲ್ಲಿಯ ವ್ಯವಸ್ಥೆಯಾಗಿತ್ತು; ಹಿಂದಕ್ಕೆ ಹೊರಗಿನ ಚಿಕ್ಕಮನೆಗಳನ್ನು

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ I, ಪುಟ ೨೭೯–೮೦
ದಿನಾಂಕ ೨೩ ಆಗಸ್ಟ್ ೧೯೩೭.

ಒಳಗೊಂಡು ಒಬ್ಬನೇ ಒಬ್ಬ ಮಂತ್ರಿಯು ಏಕಾಕಿಯಾಗಿ ಘನತೆಯಿಂದ ಸರಕಾರಿ ಬಂಗ್ಲೆಯೊಂದರಲ್ಲಿ ವಾಸಿಸುತ್ತಿದ್ದರೆ, ಇದೀಗ ಅದೇ ಬಂಗ್ಲೆಯಲ್ಲಿ ಇಬ್ಬರು ಅಥವಾ ಮೂವರು ಮಂತ್ರಿಗಳು ವಾಸಿಸುವುದಕ್ಕೆ ಕೊಡುತ್ತಿದ್ದೇವೆ ಎಂದು ನಾನು ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರಿಗೆ ನಿಶ್ಚಿತವಾಗಿ ಹೇಳಬಲ್ಲೆ. ಇದೇ ರೀತಿಯನ್ನು ನಾವು ಮುಂಬೈನಲ್ಲಿಯೂ ಅನುಸರಿಸಿದರೆ, ಮಂತ್ರಿಗಳಿಗೆ, ಮಾನ್ಯ ಸಭಾಪತಿಗಳಿಗೆ, ಅಧ್ಯಕ್ಷರಿಗೆ ವಾಸಗಳನ್ನು ಒದಗಿಸಿದ ನಂತರವೂ, ಹಲವು ಸರಕಾರಿ ನಿವಾಸಗಳು ಬಹುಶಃ ಬಾಡಿಗೆಗಾಗಿ ಲಭ್ಯವಾಗಬಹುದು. ಆದ್ದರಿಂದ, ನಾವು ವಿಚಾರಿಸುತ್ತಿರುವ ವ್ಯವಸ್ಥೆಯ ಪರಿಣಾಮವಾಗಿ ಹೆಚ್ಚು ಉಳಿತಾಯವೂ ಆಗಬಹುದು.

ಡಾ. ಬಿ. ಆರ್. ಅಂಬೇಡ್ಕರ್: ತೊಂದರೆಯೊಂದು ಉದ್ಭವವಾದ್ದರಿಂದ ಅದರ ಪರಿಹಾರಕ್ಕೆ ಮಾರ್ಗವೊಂದನ್ನು ತೋರಿಸಲು ನಾನು ಪ್ರಯತ್ನಿಸುತ್ತಿರುವೆ; ಮಂತ್ರಿಗಳ ವೇತನಗಳಿಗೆ ಸಂಬಂಧಪಟ್ಟ ಭಾರತ ಸರಕಾರದ ಕಾನೂನಿನ ಕಲಮಿನಲ್ಲಿ "ಭತ್ತೆ" ಎಂಬ ಪದವು ಬಂದಿರುವುದಿಲ್ಲ. ಆದ್ದರಿಂದ ಕಾನೂನಿನ ರೀತ್ಯಾ ಪರವಾನಗಿಯಲ್ಲಿದ್ದ ಭತ್ತೆಯನ್ನು ವೇತನದ ಜೊತೆಗೆ ಕೂಡಿಸಿರುವುದರಿಂದ ವಿವಾದವುಂಟಾಗಬಾರದೆಂದು, ನನ್ನ ಮಾನ್ಯ ಸ್ನೇಹಿತರಿಗೆ ಸೂಚನೆ ಮಾಡುತ್ತಿರುವೆ; ಅವರು ಒಟ್ಟಾರೆ ಎಲ್ಲವನ್ನೂ ಕೂಡಿಸಬಹುದಾಗಿದೆ ಹಾಗೂ ಅವೆಲ್ಲಕ್ಕೂ ಕೂಡಿಸಿ ವೇತನ ಎಂದು ಅದನ್ನು ಕರೆದು "ಭತ್ತೆ" ಎಂಬ ಪದವನ್ನು ಬಿಟ್ಟುಬಿಡಬಹುದಾಗಿದೆ; ಇದರಿಂದ ತೊಂದರೆಯೂ ದೂರವಾಗುವುದು. ಅಹುದು, ನಾವು ಎತ್ತಿದ ಈ ಸಮಸ್ಯೆಯಲ್ಲಿ ಏನಾದರೂ ತಥ್ಯಾಂಶವಿದೆಯೇ ಎಂಬುದನ್ನು ರಾಜ್ಯ ಮಹಾ ನ್ಯಾಯವಾದಿಯವರಿಂದ ಇನ್ನು ತಿಳಿದುಕೊಳ್ಳಬೇಕಾಗಿದೆ.

# ೩೮

# *ಅಪರಾಧಿಗಳ ಪರಿವೀಕ್ಷಣಾ ಅವಧಿಯ ಮಸೂದೆ ಕುರಿತು

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯ ಸಭಾಪತಿಗಳೆ, ಈ ವಿಧೇಯಕದ ಬಗ್ಗೆ ಯಾರಿಗೂ ಅಷ್ಟು ಉತ್ಸಾಹವಿಲ್ಲವೆಂಬುದು ಕಂಡುಬರುತ್ತದೆ; ಏಕೆಂದರೆ ಬೇರೆ ವಿಧೇಯಕಗಳು ಸದನದಲ್ಲಿ ಚರ್ಚೆಗೆ ಬಂದಾಗ ಇರುವ ಸ್ಪರ್ಧೆಯ ಉತ್ಸಾಹ ಇದೀಗ ತೋರಿಬಂದಿಲ್ಲ; ಈಗ ನಾನಾದರೂ ನಿಂತಿರುವುದು ಒಂದು ಕಲಮಿನ ಸಂದರ್ಭವನ್ನು ತಿಳಿಸಬೇಕೆಂಬ ಅಪೇಕ್ಷೆಯಿಂದ; ನನಗೂ ಈ ವಿಧೇಯಕದ ಬಗ್ಗೆ ಬಹಳಷ್ಟು ಉತ್ಸಾಹವಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ನಾನು ನಿವೇದಿಸುವುದು ಬಹಳ ಸಹಜವಾದದ್ದಾಗಿದೆ. ಏಕೆಂದರೆ ವಿಧೇಯಕವು ಗಂಭೀರವಾದ ಇಲ್ಲವೆ ಜರೂರು ಸಮಸ್ಯೆಯನ್ನು ಎತ್ತುವುದೇ ಇಲ್ಲ. ಅದು ಸಣ್ಣ ಸಮಸ್ಯೆಯನ್ನು ಕುರಿತದ್ದಾಗಿದೆ. ಈ ವಿಧೇಯಕವು ಒಂದು ಇಂಗ್ಲಿಷ್ ಶಾಸನವನ್ನು ಚಾಚೂ ತಪ್ಪದೆ ಅನುಸರಿಸಿದೆ ಎಂದು ನನಗೆ ಹೇಳಲಾಗಿದೆ; ಈ ವಿಧೇಯಕಕ್ಕೆ ಮಾದರಿ ಎಂದು ಯಾವ ಇಂಗ್ಲಿಷ್ ಶಾಸನವನ್ನು ತೆಗೆದುಕೊಳ್ಳಲಾಗಿದೆಯೋ ಅದರಿಂದ ಆ ಇಂಗ್ಲಿಷ್ ಜನರಿಗೆ ಸಾಕಷ್ಟು ಲಾಭಗಳಾಗಿವೆಯೇ ಹೇಗೆ ಎಂಬುದು ನನಗೆ ಗೊತ್ತಿಲ್ಲ. ಆದರೆ ಮಾನ್ಯ ಗೃಹಮಂತ್ರಿಗಳು ಪರಿಸ್ಥಿತಿಯನ್ನು ಕಾಳಜಿಪೂರ್ವಕ ಪರೀಕ್ಷಿಸಿದ್ದಾರೆಂದು ನಾನು ನಂಬುವೆ; ಪರೀಕ್ಷೆಯ ನಂತರವೇ ಅವರು, ಯಾವ ದೇಶದಲ್ಲಿ ಈ ಕಾನೂನು ಪ್ರಚಲಿತವಿದೆಯೋ ಅಲ್ಲಿಯ ಲಾಭ ನಿಜವಾಗಿಯೂ ವಿಚಾರ ಮಾಡುವಂತಹದಿದೆ ಮತ್ತು ನಮ್ಮ ಪ್ರಾಂತದಲ್ಲಿಯೂ ಅಂತಹ ಶಾಸನ ರಚನೆ ಮಾಡಿ ನಾವು ಅನುಸರಿಸಬೇಕೆಂದು ತಾವಾಗಿಯೇ ನಿರ್ಣಯಕ್ಕೆ ಬಂದಿರುವರು.

ಮಾನ್ಯರೆ, ವಿಧೇಯಕದಲ್ಲಿರುವ ವಿವರವಾದ ಅಂಶಗಳನ್ನು ಕುರಿತು ಏನನ್ನೂ ಹೇಳಬೇಕಾಗಿಲ್ಲ; ಈಗಿದ್ದಂತೆಯೇ ವಿಧೇಯಕದ ವಾಚನದಲ್ಲಿ, ವಿಧೇಯಕ ಒಳಗೊಂಡಿರುವ ತತ್ವಗಳಿಗೆ ನನ್ನ ಬೆಂಬಲ ಸೂಚಿಸುವ ವಿಚಾರ ನನ್ನದಾಗಿದೆಯೆಂದು ಆರಂಭದಲ್ಲಿಯೇ ಹೇಳುವೆ. ಇದರಲ್ಲಿ ಒಂದೇ ಒಂದು ಪರಿಚ್ಛೇದದ ಬಗ್ಗೆ ನನಗೆ ಸ್ವಲ್ಪ ತೊಂದರೆ ಎನಿಸಿದ್ದು. ಅದನ್ನ ವಿಚಾರಿಸಬೇಕೆಂದು ಮಾನ್ಯ ಗೃಹಮಂತ್ರಿಗಳಿಗೆ ಕೇಳಿಕೊಳ್ಳುವೆ; ಅದು ಪರಿಚ್ಛೇದ ೬. ಅದರಲ್ಲಿ ನನಗೆ ಎನಿಸಿದಂತೆ ತತ್ವವೊಂದಿದ್ದು, ಅದನ್ನು ಕಾರ್ಯಾಚರಣೆಯಲ್ಲಿ ತರುವಾಗ ಅದು ಸ್ವಲ್ಪ ಬಲಾತ್ಕಾರವಾಗುತ್ತದೇನೋ– ಈ ಪದಪ್ರಯೋಗವೂ ಮೃದುವಾಗಿದೆ ಎಂದು ನನ್ನ ಅನಿಸಿಕೆ– ಎಂದು ನನಗೆ ತೋರುತ್ತದೆ. ಪರಿಚ್ಛೇದ ೬ ಇದರ ಕೊನೆಯ ವಾಕ್ಯ ಹೀಗಿದೆ:

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೨, ಪುಟ ೪೨೫–೨೬
ದಿನಾಂಕ ೨೦ ಜನವರಿ ೧೯೩೮.

"ಅಪರಾಧಿಯು ಹದಿನಾರು ವರುಷದೊಳಗಿದ್ದರೆ, ಅಪರಾಧಿಯ ತಂದೆ–ತಾಯಿಗಳು ಇಲ್ಲವೆ ಪಾಲಕರು ತಮ್ಮ ಅಲಕ್ಷ್ಯದಿಂದ ಅಥವಾ ಯಾವುದೇ ರೀತಿಯಿಂದ ಅಪರಾಧ ನಡೆಯುವುದಕ್ಕೆ ಅನುಕೂಲರಾಗಿರುವರೆಂದು ನ್ಯಾಯಾಲಯಕ್ಕೆ ತೋರಿದರೆ, ಆಗ ನ್ಯಾಯಾಲಯವು ನಷ್ಟಗಳನ್ನು ಅಥವಾ ಪರಿಹಾರವನ್ನು ಅಥವಾ ಬೆಲೆಯನ್ನು ಭರ್ತಿ ಮಾಡಿಕೊಡಲು ತಂದೆ–ತಾಯಿಗಳಿಗೆ ಇಲ್ಲವೇ ಪಾಲಕರಿಗೆ ಆಜ್ಞೆ ಮಾಡಬಹುದು."

ಇದು ತಂದೆ ತಾಯಿ ಅಥವಾ ಪಾಲಕರ ವಿರುದ್ಧ ನಿಜವಾಗಿಯೂ ಬಹಳ ಬಲಾತ್ಕಾರ ಮಾಡುವುದಾಗಿದೆ ಎಂದು ನನಗೆ ಅನಿಸುತ್ತದೆ. "ಉಪೇಕ್ಷಿಸು" ಹಾಗೂ "ಉಪೇಕ್ಷೆ" ಈ ಪದಗಳ ಅರ್ಥ ಅತ್ಯಂತ ಅನಿಶ್ಚಿತವಾಗಿದೆಯೆಂಬುದನ್ನು ನನ್ನ ವಿದ್ವಾಂಸ ಸ್ನೇಹಿತರಾದ ಮಾನ್ಯ ಗೃಹಮಂತ್ರಿಗಳೂ ಒಪ್ಪಿಕೊಳ್ಳುವರು; ಅಲಕ್ಷ್ಯ ಯಾವುದು, ಅಲಕ್ಷ್ಯ ಯಾವುದಲ್ಲ ಎಂಬುದರ ಬಗ್ಗೆ ನಿಶ್ಚಿತವಾದ ವ್ಯಾಖ್ಯೆಯನ್ನು ಕೊಡುವುದು ಕಠಿಣವಾದುದು. ಕಾನೂನುಭಂಗ ಚಳುವಳಿಯಲ್ಲಿ ಏನಾಯಿತು ಎಂಬುದನ್ನು ಉಲ್ಲೇಖಿಸಿದರೆ, ಅದೊಂದು ಸಾದೃಶ್ಯವಾಗುವುದೆಂದೂ ಅದರಿಂದ ನನ್ನ ಮಾನ್ಯ ಸ್ನೇಹಿತರಿಗೆ ನನಗೆ ಉಂಟಾಗುತ್ತಿರುವ ತೊಂದರೆಯ ಅರಿವಾಗುವುದೆಂದೂ ನನ್ನ ಅನಿಸಿಕೆ. ಇದು ಸತ್ಯವಾದುದೆಂದು ನನಗೆ ಕಂಡಿದೆ; ಇದರಲ್ಲಿ ನಾನು ಏನಾದರೂ ತಪ್ಪು ಮಾಡಿರುವೆನೆಂದು ಯಾರಾದರೂ ನನಗೆ ತೋರಿಸಿದರೆ, ಅದನ್ನು ತಿದ್ದಿಕೊಳ್ಳಲು ನಾನು ಸಿದ್ಧ. ಕಾನೂನುಭಂಗ ಚಳುವಳಿಯ ಕಾಲಕ್ಕೆ ರಾಜ್ಯ ಸರಕಾರದ ಸೇವೆಯಲ್ಲಿರುವವರ ಮಕ್ಕಳು ಕಾನೂನುಭಂಗ ಚಳುವಳಿಯಲ್ಲಿ ಭಾಗವಹಿಸಿದಾಗ, ಅನೇಕ ಸರಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಯಿತು; ಇದಕ್ಕೆ ಕಾರಣವೆಂದರೆ– ಅಂದಿನ ಸರಕಾರವನ್ನು ಉರುಳಿಸುವ ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ಅವರ ಮಕ್ಕಳಿಗೆ ಹಾಗೆ ಮಾಡಕೂಡದೆಂದು ಹೇಳದೇ ಇರುವುದರಿಂದ ಅವರು ರಾಜ್ಯ ಸರಕಾರಕ್ಕೆ ತಮಗಿರುವ ಕರ್ತವ್ಯವನ್ನು ಪಾಲಿಸಿರಲಿಲ್ಲವೆಂಬುದೇ ಆಗಿದ್ದಿತು. ಈಗ ನನ್ನೆದುರಾಗಿ ಕುಳಿತಿರುವ ಸದಸ್ಯರು ಆ ತತ್ವವನ್ನು ಅತಿಯಾಗಿ ವಿರೋಧಿಸಿದರೆಂದು ನಾನು ಹೇಳುವೆ; ಇದು ಸರಿಯೂ ಇದೆ. ವಿರೋಧಿಸಲು ಕಾರಣವೆಂದರೆ– ನನಗೆ ಅನಿಸಿದಂತೆ– ತಮ್ಮ ಮಕ್ಕಳ ಸ್ವಭಾವದ ಸಲುವಾಗಿ, ವಿಶೇಷವಾಗಿ ತಂದೆ–ತಾಯಂದಿರ ಅಭಿಪ್ರಾಯದಿಂದ ಬೇರೆ ಅಭಿಪ್ರಾಯವನ್ನು ಸಕಾರಣವಾಗಿ ತಾಳಿದ ಮಕ್ಕಳ ಸ್ವಭಾವದ ಸಲುವಾಗಿ ತಂದೆ ತಾಯಂದಿರು ಹೊಣೆಗಾರರಲ್ಲ ಎಂಬುದು ಅವರ ವಾದವಾಗಿದ್ದಿತು. ತಂದೆ ತಾಯಂದಿರು, ಸಾಮಾನ್ಯವಾಗಿ ಎಲ್ಲಾ ತಂದೆ ತಾಯಂದಿರಷ್ಟೇ ತಮ್ಮ ಮಕ್ಕಳ ಸಲುವಾಗಿ ನಿಜವಾಗಿಯೂ ಕಾಳಜಿವಹಿಸುತ್ತಿದ್ದರೂ, ತಮ್ಮ ಕರ್ತವ್ಯ ಮಾಡುತ್ತಿದ್ದರೂ ಗೊತ್ತಿಲ್ಲದಂತೆಯೆ ಬೆಳೆಯುತ್ತಿರುವ ಮಗು ಅಪರಾಧಿಯ ಒಲವುಗಳನ್ನು ಹೊಂದಬಹುದಾಗಿದೆ. "ಅಲಕ್ಷ್ಯ" ಅಥವಾ "ಉದಾಸೀನತೆ" ಅಥವಾ "ಸಹಾಯಕವಾಗುವುದು" ಈ ಪದಗಳ ಅರ್ಥವನ್ನು ಯೋಗ್ಯವಾಗಿ ವ್ಯಾಖ್ಯೆ ಮಾಡದಿದ್ದರೆ, ಸ್ವತಃ ಮಾನ್ಯ ಗೃಹಮಂತ್ರಿಗಳು ಉದ್ದೇಶಿಸದೇ ಇರುವ ಪರಿಣಾಮಗಳು ಈ ವಿಧೇಯಕದಿಂದ ಬಹುಶಃ ಆಗುತ್ತವೆಂದು ನನ್ನ ಅನಿಸಿಕೆಯಾಗಿದೆ.

ನನ್ನ ಮಾನ್ಯ ಸ್ನೇಹಿತರಾದ ಶ್ರೀ ಬ್ರ್ಯಾಂಬಲ್ ಅವರ ಭಾಷಣವನ್ನು ಕೇಳಿದವರು, ಬ್ರ್ಯಾಂಬಲ್‌ರು ನಿಃಸಂಶಯವಾಗಿಯೂ ಈ ಸಮಸ್ಯೆಯ ಅಭ್ಯಾಸಕ್ಕೆ ವಿಶೇಷ ಲಕ್ಷ್ಯ ಪೂರೈಸಿದವರೆಂಬುದನ್ನು ಅರಿಯಬಹುದು; ಅವರು ಇಂಗ್ಲಿಷ್ ಕಾನೂನಿನಲ್ಲಿ ಕೆಲವು ಅಪವಾದಗಳು ಇರುವವೆಂದು ಮತ್ತು ನಮ್ಮ ಮಾದರಿಗೆಂದು ಇಂಗ್ಲಿಷ್ ಕಾನೂನನ್ನೆ ಗ್ರಹಿಸುವುದಾದರೆ ಇಂಥ ಪ್ರಸಂಗದಲ್ಲಿ ಇಂಗ್ಲಿಷ್ ಕಾನೂನಿನಲ್ಲಿರುವ

ಅಪವಾದಗಳು ನಾವು ಸ್ವೀಕರಿಸುವ ಶಾಸನ ರಚನೆಯಲ್ಲಿ ಬರಬಾರದೆಂದು ಹೇಳಿರುವರು. ಅತ್ಯಂತ ಆಳವಾದ ಅಭ್ಯಾಸದ ಬಲದಿಂದ ಶ್ರೀ ಬ್ರ್ಯಾಂಬಲ್ ಅವರು ತಮ್ಮ ಹೇಳಿಕೆ ಕೊಟ್ಟಿರುವರೆಂಬುದರಲ್ಲಿ ನಾನು ವಿಶ್ವಾಸವಿಡಲು ಸಾಕಷ್ಟು ಕಾರಣಗಳಿವೆ. ಶ್ರೀ ಬ್ರ್ಯಾಂಬಲ್‌ರ ಅಭಿಪ್ರಾಯ ಹೀಗೆ ಇದ್ದರೆ, ಸರಕಾರದ ಆತ್ಮಾಭಿಮಾನಕ್ಕೆ ಏನೂ ಅಡ್ಡಿಯಿಲ್ಲವಾದರೆ, ಈ ವಿಧೇಯಕವನ್ನು ಆಯ್ಕೆ ಸಮಿತಿಗೆ ಪರಿಶೀಲನೆಗಾಗಿ ಕಳಿಸಿಕೊಡಬೇಕು ಎಂಬ ನಮ್ಮ ಮಾನ್ಯ ಸದಸ್ಯ ಶ್ರೀ ಬ್ರ್ಯಾಂಬಲ್‌ರ ಬಿನ್ನಹಕ್ಕೆ ನಾನು ದನಿಗೂಡಿಸುವೆ; ಆಯ್ಕೆ ಸಮಿತಿಯಲ್ಲಿ ಕೆಲವು ತತ್ವಗಳ ಪರವಾಗಿ ಇಲ್ಲವೆ ವಿರುದ್ಧವಾಗಿ ಬರುವ ಎಲ್ಲಾ ಅಂಶಗಳನ್ನೂ ಚಾಚೂ ಬಿಡದೆ ವಿಚಾರಿಸಲಾಗುವುದು; ಇದರಿಂದ ಈ ಸದನವು ತನಗೆ ಸಾಧ್ಯವಿದ್ದಷ್ಟೂ ಪರಿಪೂರ್ಣವಾಗಿ ಈ ವಿಧೇಯಕವನ್ನು ತಂದಂತಾಗುವುದು. ನನ್ನ ವಿಚಾರಗಳನ್ನು ಇಷ್ಟು ಹೇಳಿ, ವಿಧೇಯಕದ ಪ್ರಥಮ ವಾಚನವನ್ನು ನಾನು ಅನುಮೋದಿಸುತ್ತೇನೆ.

# ೩೯

# *ಹೊಗೆಸೊಪ್ಪು ಕರ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಕುರಿತು

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೆ, ಮಾನ್ಯ ಸಭಾನಾಯಕರು ಸೂಚಿಸಿರುವುದಕ್ಕೆ ನಾನು ಉತ್ತರ ಕೊಡಬಯಸುವೆ. "ಬಿಡುವುದು" ಅಥವಾ "ನಿಷೇಧ" ಇರುತ್ತದೆ ಎಂಬ ತತ್ವವನ್ನು ನೀವು ಎತ್ತಿಹಿಡಿಯದಿದ್ದರೆ, ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಜಮ್ನಾದಾಸ್ ಮೆಹತಾ ಅವರು ಎತ್ತಿದ ವಿಷಯದ ಚರ್ಚೆಯು ಸದನದ ನಿಯಮಗಳಂತೆ ಬಹಳ ಯೋಗ್ಯವಾಗುವುದೆಂದು ಮಾನ್ಯ ಸಭಾ ನಾಯಕರು ಸೂಚಿಸಿರುವರು. ಮಾನ್ಯ ಸಭಾನಾಯಕರು ಎತ್ತಿದ ಸಮಸ್ಯೆಗೆ ನಾನು ಈಗ ನಿವೇದಿಸ ಬಯಸುವೆ. ಸದನವು ಸಾಕಷ್ಟು ನಿಧಿಯನ್ನು ಒದಗಿಸಿದೆ ಹಾಗೂ ಇದಕ್ಕೂ ಹೆಚ್ಚು ಒದಗಿಸುವುದು ಸಾಧ್ಯವಿಲ್ಲ ಎಂಬ ಅಭಿಪ್ರಾಯವು ಸದನವು ಸಹಜವಾಗಿ ಸ್ವೀಕರಿಸಬಹುದಾಗಿದೆ. ಸಭಾನಾಯಕರು ಎತ್ತಿದ ಸಮಸ್ಯೆಗೆ ಇದು ಸಂಪೂರ್ಣವಾದ ಉತ್ತರ ಎಂಬುದು ನನ್ನ ಅನಿಸಿಕೆ. ಆದ್ದರಿಂದ "ಬಿಡುವುದು" ಇಲ್ಲವೆ "ನಿಷೇಧ" ಇವು ಯಾವೂ ಬರುವುದಿಲ್ಲ; ಏಕೆಂದರೆ "ಹಣಕಾಸು ವಿಧೇಯಕ"ದ ಕೆಳಗೆ ಈ ಮೊದಲೇ ಇದರ ಬಗ್ಗೆ ಚರ್ಚೆ ಮಾಡುತ್ತಿರುವಾಗ ಬೇರೆ ತೆರಿಗೆಗಳನ್ನು ಸ್ವೀಕಾರ ಮಾಡಿ ಸದನವು ಸರಬರಾಜುಗಳನ್ನು ಪೂರೈಸಿದೆ.

ಮಾನ್ಯರೆ, ಹಾಗಾದರೆ ನನ್ನ ಈಗಿನ ಪ್ರಶ್ನೆ ಇದಾಗಿದೆ. ಇದು ಹಣಕಾಸು ವಿಧೇಯಕವೋ ಅಥವಾ ತೆರಿಗೆಯ ಮೊತ್ತವನ್ನು ಸಂಗ್ರಹಿಸಲು ಆಡಳಿತದ ಯಂತ್ರವನ್ನು ನಿಯಮಿತವಾಗಿಸುವುದಕ್ಕಾಗಿ ಮಾತ್ರ ಇರುವ ವಿಧೇಯಕವೋ? ತೆರಿಗೆಯ ಮೊತ್ತವನ್ನು ವಸೂಲು ಮಾಡುವ ಆಡಳಿತ ಯಂತ್ರವನ್ನು ಹಾಗೂ ತೆರಿಗೆಯನ್ನು ವಸೂಲು ಮಾಡುವ ವಿಧಿ ವಿಧಾನವನ್ನು ಪೂರೈಸುವುದರ ಸಲುವಾಗಿ ಮಾತ್ರ ಈ ವಿಧೇಯಕವಿದ್ದರೆ, ನೀವು ಉಲ್ಲೇಖಿಸಿದ ನಿರ್ಣಯದ ಸುಸಂಬದ್ಧತೆಯ ಅರ್ಥ ನನಗಾಗುತ್ತದೆ. ಆದರೆ ಈ ವಿಧೇಯಕಕ್ಕೆ ಜೋಡಿಸಿದ ಉದ್ದೇಶಗಳು ಹಾಗೂ ಕಾರಣಗಳು ಇವುಗಳನ್ನು ನೋಡಿದಾಗ, ಸರಕಾರವು ಈ ವಿಧೇಯಕವನ್ನು ಮೊದಲಿನಿಂದ ಕೊನೆಯವರೆಗೂ ಹಣಕಾಸು ವಿಧೇಯಕದಂತೆಯೇ ರೂಪಿಸಿದೆ ಎಂದು ನನಗೆ ಎನಿಸುತ್ತದೆ. ವಿಧೇಯಕದ ಮುಖ್ಯ ಉದ್ದೇಶವು ಅಧಿಕ ಕಂದಾಯವನ್ನು ಎತ್ತುವುದಾಗಿದೆ. ಆಡಳಿತ ಯಂತ್ರದ ಬದಲಾವಣೆ ಕೇವಲ ಆನಂತರದ್ದು– ಅಧಿಕ ಕಂದಾಯವನ್ನು ತೆಗೆದುಕೊಳ್ಳಲು ಒಂದು ಸಾಧನವನ್ನು ಪೂರೈಸುವಂತಹದು. ಸರಕಾರದ ಪಾನಪ್ರತಿಬಂಧದ ನೀತಿಯಿಂದ ಉಂಟಾದ ಕೊರತೆಯನ್ನು ತುಂಬುವ ಉದ್ದೇಶದಿಂದ ಅಧಿಕ ಕಂದಾಯವನ್ನು ಹೇರುವುದು ಈ ವಿಧೇಯಕದ

---

* ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೩೩೬–೩೭
ದಿನಾಂಕ ೫ ಮಾರ್ಚ್ ೧೯೩೮.

ಮುಖ್ಯ ಉದ್ದೇಶವಾಗಿದೆ. ಉದ್ದೇಶಗಳ ಹಾಗೂ ಕಾರಣಗಳ ವಿವರಣೆಯಲ್ಲಿರುವ ಒಂದೆರಡು ಅವತರಣಿಕೆಗಳನ್ನು ಇಲ್ಲಿ ಉಲ್ಲೇಖಿಸುವೆ:

> "ಹೊಗೆಸೊಪ್ಪು ಬಹಳ ದೇಶಗಳಲ್ಲಿ ಗಮನಾರ್ಹ ಕರ ಹೇರಿಕೆಗೆ ಗುರಿಯಾಗಿದೆ. ಹೊಸದಾಗಿ ಬಂದ ಪಾನಪ್ರತಿಬಂಧ ಅಥವಾ ಪಾನನಿರೋಧ ನೀತಿಯಿಂದ ಉಂಟಾದ ಕೊರತೆಯಲ್ಲಿ ಸ್ವಲ್ಪವನ್ನಾದರೂ ತುಂಬಿಕೊಳ್ಳಲು ಕಂದಾಯದ ಈ ಮೂಲವನ್ನು ಬಳಸಿಕೊಳ್ಳುವುದು ಸಂಪೂರ್ಣವಾಗಿ ಅತ್ಯವಶ್ಯವಾಗಿದೆ. ೧೮೫೭ರಲ್ಲಿ ಹೊಗೆಸೊಪ್ಪಿನ ಕರ (ಮುಂಬೈ ಪಟ್ಟಣ) ಇದರಂತೆ ಮುಂಬೈ ನಗರದಲ್ಲಿ ಹೊಗೆಸೊಪ್ಪಿನ ಮೇಲೆ ತೆರಿಗೆ ಹಾಕಲಾಗಿದೆ. ಈ ಕಾನೂನಿನಂತೆ ಒಂದು ಮಣಕ್ಕೆ ಗಮನಾರ್ಹ ಶುಲ್ಕವನ್ನು ಕೊಡಬೇಕಾಗುತ್ತದೆ. ಆದರೆ ಲೈಸೆನ್ಸಿನ ಶುಲ್ಕ ಬಹಳ ಕಡಿಮೆಯಿದೆ;. ಲೈಸೆನ್ಸುಗಳಿಗಾಗಿ ಬಹಳ ಬೇಡಿಕೆಯಿದ್ದು, ಎಷ್ಟೋ ಬಾರಿ ಈ ಲೈಸೆನ್ಸುಗಳನ್ನು ಒಳಗುತ್ತಿಗೆಯಾಗಿ ಇತರರಿಗೆ ಕೊಡುತ್ತಾರೆ. ವಿಧೇಯಕದಲ್ಲಿ ಮುಂಬೈನಲ್ಲಿ ಲೈಸೆನ್ಸಿನ ಶುಲ್ಕವನ್ನು ರೂಪಾಯಿ ೧ರಿಂದ ರೂ. ೨೫ ಅಥವಾ ರೂ. ೫೦ರವರೆಗೆ ಏರಿಸಲು ಅವಕಾಶ ಮಾಡಿಕೊಟ್ಟಿದೆ..."

ವಿಧೇಯಕವು ಹಣಕಾಸು ವಿಧೇಯಕವಾಗಿದೆಯೆಂದೂ ಹಾಗೂ ತೆರಿಗೆಯನ್ನು ವಸೂಲು ಮಾಡಲು ಒಂದು ಆಡಳಿತ ಯಂತ್ರವನ್ನು ಸ್ಥಾಪಿಸುವ ಉದ್ದೇಶ ಈ ವಿಧೇಯಕಕ್ಕಿಲ್ಲವೆಂದೂ ನಿಃಸಂಶಯವಾಗಿ ತಿಳಿದುಬರುವುದು. ಇದು ನನ್ನ ನಿವೇದನೆ. ಇದು ಹಣಕಾಸು ವಿಧೇಯಕವಾಗಿದ್ದರೆ, ಆಮೇಲೆ ಸರಕಾರಕ್ಕೆ ಇಂಥ ಪೂರೈಕೆ ಸಲುವಾಗಿ ಒಪ್ಪಬೇಕೋ ಹೇಗೆ ಎಂಬ ಚರ್ಚೆಯನ್ನು ಮಾಡಲು ಸದನಕ್ಕೆ ಹಕ್ಕು ಇದೆ. ಬಿಟ್ಟುಕೊಡುವುದರ ಸಂಬಂಧ ಮಾನ್ಯ ಸಭಾನಾಯಕರು ಎತ್ತಿದ ಪ್ರಶ್ನೆಗೆ, ನನ್ನ ಉತ್ತರವಿದ್ದೇ ಇದೆ: "ಪೂರೈಕೆಯ ಕೆಲವು ಅಂಶಗಳಿಗೆ ನಮ್ಮ ಒಪ್ಪಿಗೆಯಿದೆ; ಉಳಿದವುಗಳಿಗೆ ನಮ್ಮ ಒಪ್ಪಿಗೆಯಿಲ್ಲ" ಎಂದು ಹೇಳಲು ಸದನಕ್ಕೆ ಮುಕ್ತ ಅವಕಾಶವಿದೆ.

# ೪೦

# *ನ್ಯಾಯಾಂಗದ ಸ್ವಾತಂತ್ರ್ಯವನ್ನು ಕುರಿತು

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯ ಸಭಾಪತಿಗಳೇ, ಗೊತ್ತುವಳಿಯನ್ನು ಅನುಮೋದಿಸಲು ನಾನು ಎದ್ದುನಿಂತಿರುವೆ. ಚರ್ಚೆ ಮುಕ್ತಾಯದ ಹಂತದಲ್ಲಿರುವಾಗ ಈ ಗೊತ್ತುವಳಿಯನ್ನು ಕುರಿತು ನಾನು ಮಾತನಾಡಲಿರುವುದರಿಂದ ಮತ್ತು ಮಾನ್ಯ ಗೃಹಮಂತ್ರಿಗಳಿಗೆ ಉತ್ತರ ಕೊಡಲು ಸಾಕಷ್ಟು ಸಮಯ ಬೇಕಾಗುವುದೆಂಬ ಸತ್ಯಸಂಗತಿಯ ಅರಿವು ನನಗೆ ಇರುವುದರಿಂದ, ಈ ಸದನದಲ್ಲಿ ನಾನು ಹೇಳಿಕೆ ಕೊಡುವಾಗ ತೀರ ಸಂಕ್ಷಿಪ್ತವಾಗಿ ನಿವೇದಿಸುವೆ.

ಮಾನ್ಯರೆ, ವೈಯಕ್ತಿಕವಾಗಿ ನಾನು ಹೇಳುವುದಾದರೆ, ವಾಗ್ದಂಡನೆಯ ಗೊತ್ತುವಳಿಗೆ ಆಧಾರವಾದ ಈ ಕೃತಿಯು ನಿಜವಾಗಿಯೂ ನನಗೆ ಆಶ್ಚರ್ಯವನ್ನುಂಟುಮಾಡಿಲ್ಲವೆಂದು ತಿಳಿಸುವೆ. ಚಟುವಟಿಕೆಯ ಸರಣಿಗಳಲ್ಲಿ ಇದು ಪರಾಕಾಷ್ಠೆಯಾಗಿದೆ ಎಂದು ನನಗೆ ತೋರಿದೆ; ಈ ಚಟುವಟಿಕೆಗಳು ಕಾನೂನನ್ನು ಮುರಿಯುವಷ್ಟರ ಮಟ್ಟಿಗೆ ಇವೆ ಎಂದು ನಿಃಸಂಶಯವಾಗಿ ಹೇಳಬೇಕು; ಅಧಿಕಾರವನ್ನು ವಹಿಸಿ ಕೊಂಡಿರುವ ಸರಕಾರವೇ ಇದರಲ್ಲಿ ದೋಷಿಯಾಗಿದೆ. ಈ ಕೃತಿಯು ಒಂದು ಭಾಗ ಮಾತ್ರ, ಇನ್ನು ಮುಂದೆ ನಡೆಯಬೇಕಾದ ನಾಟಕದಲ್ಲಿ ಒಂದು ಅಂಕ ಮಾತ್ರ; ಅದು ಯಾವಾಗ ಕೊನೆಗೊಳ್ಳುವುದೋ ಗೊತ್ತಿಲ್ಲ. ನಾನು ಉಲ್ಲೇಖಿಸ ಬಯಸುವ ಮೊದಲನೆಯ ಕೃತಿಯೆಂದರೆ– ಬಾರ್ಡೋಲಿ ಬೇಸಾಯಗಾರರಿಂದ ವಶಪಡಿಸಿಕೊಂಡ ಜಮೀನುಗಳನ್ನು ಪೂರ್ವ ಸ್ಥಿತಿಗೆ ತಂದಿರುವುದು. (ಅಡ್ಡಿ) ನನಗೆ ಅಲ್ಪ ಸಮಯವಿದೆ, ನನ್ನ ಮಾತು ಕೇಳುವಿರೆಂದು ನಾನು ತಿಳಿದಿರುವೆ.

ಮಾನ್ಯ ಸಭಾಪತಿಗಳು: ಶಿಸ್ತು, ಶಿಸ್ತು... ಮಾನ್ಯ ಸದಸ್ಯರು ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳ ಬಹುದೇ?

ಚರ್ಚೆಯು ಈ ರೀತಿಗಳಲ್ಲಿ ನಡೆಯುವುದಾದರೆ, ಇದು ಕೊನೆಯಿಲ್ಲದ ಕ್ಷೇತ್ರಕ್ಕೆ ಆಸ್ಪದ ಮಾಡಿಕೊಡುತ್ತದೆ. ಚರ್ಚೆ ಮಾಡಬೇಕಾದ ಅಂಶವೆಂದರೆ– ಹಿಂದಿನ ಯಾವುದೇ ಕೃತಿಗಳಿಗಾಗಿ ಸರಕಾರವು ನಿಂದನೆಗೆ ಅರ್ಹವಾಗಿದೆಯೋ ಇಲ್ಲವೋ ಎಂಬುದಾಗಿಲ್ಲ; ಆದರೆ ಇಂದಿನ ಗೊತ್ತುವಳಿಯ ವಿಷಯವಾದ ನಿರ್ದಿಷ್ಟ ಕೃತಿಯ ಸಲುವಾಗಿ ಸರಕಾರದ ನಿಂದನೆ ಮಾಡುವುದು ಯೋಗ್ಯವೇ ಹೇಗೆ ಎಂಬುದಾಗಿದೆ. ಜರೂರಾದ

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೪೨೦–೨೪
ದಿನಾಂಕ ೭ ಮಾರ್ಚ್ ೧೮೩೮

ರೈಲ್ವೆ ಸಂಘಟನೆಗಳ ಶ್ರೀ ಜಮುದಾದಾಸ್ ಎಂ. ಮೆಹತಾ ಅವರು ಮುಂಬೈ ಶ್ರೇಷ್ಠ ನ್ಯಾಯಾಲಯದ ಸ್ವಾತಂತ್ರ್ಯದಲ್ಲಿ ಸರಕಾರವು ಹಸ್ತಕ್ಷೇಪ ಮಾಡುವುದರ ಸಂಬಂಧ ಸಾರ್ವಜನಿಕರ ಗಮನ ಸೆಳೆಯಬೇಕೆಂದು ಸದನವನ್ನು ಮುಂದೂಡಲು ಕೇಳಿಕೊಂಡು; ಒಂದು ಮುಂದೂಡುವ ಗೊತ್ತುವಳಿಯನ್ನು ತಂದರು. ಜಾಧವಜಿ ಮತ್ತು ಧೀರಜಲಾಲ್ ಈ ಇಬ್ಬರು ಕೈದಿಗಳ ಮನವಿಯನ್ನು ಶ್ರೇಷ್ಠ ನ್ಯಾಯಾಲಯವು ತಿರಸ್ಕರಿಸಿದ ಮೇಲೆ ಸರಕಾರವು ಅವರ ಶಿಕ್ಷೆಯನ್ನು ಅಮಾನತುಗೊಳಿಸಿದ್ದಿತು.

ಸಾರ್ವಜನಿಕ ಮಹತ್ವದ ನಿಶ್ಚಿತ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಈ ಗೊತ್ತುವಳಿಯನ್ನು ವಿಚಾರಣೆಗೆ ತೆಗೆದುಕೊಳ್ಳಲಾಗಿದೆ; ನಿಶ್ಚಿತತೆಯ ಸಲುವಾಗಿ ಈ ಗೊತ್ತುವಳಿಗೆ ಒಪ್ಪಿಗೆ ಕೊಟ್ಟಿರುವುದರಿಂದ, ಚರ್ಚೆಯ ಸಮಯದಲ್ಲಿಯೂ ಅದನ್ನೇ ಅನುಸರಿಸಬೇಕಾಗುವುದು. ಇಲ್ಲವಾದರೆ ಚರ್ಚೆಯ ಮುಖ್ಯ ಉದ್ದೇಶವೇ ವಿಫಲವಾಗುತ್ತದೆ. ಆದ್ದರಿಂದ ಸದನದ ಮುಂದಿರುವ ನಿಶ್ಚಿತ ಕೃತಿಯ ಬಗ್ಗೆ ತಮ್ಮ ವಾದವನ್ನು ಸೀಮಿತಗೊಳಿಸಿ ಮಾನ್ಯ ಸದಸ್ಯರು ಮಾತನಾಡಬೇಕಾಗಿ ಬಿನ್ನಹ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೀಗೆ ನಿವೇದಿಸಬಯಸುವೆ. ಮಾನ್ಯರೆ, ಸಾದೃಶ್ಯವನ್ನು ಉಲ್ಲೇಖಿಸುವುದು, ವಾದಮಾಡುವುದು ಹಾಗೂ ಗುಣಗಳ ಬಗ್ಗೆ ಮಾತನಾಡುವುದು ಇವುಗಳಲ್ಲಿ ಅಂತರವಿದೆ. ಬಾರ್ಡೋಲಿ ಜಮೀನುಗಳನ್ನು ಪೂರ್ವಸ್ಥಿತಿಗೆ ತರುವುದರಲ್ಲಿರುವ ಗುಣಗಳ ಬಗ್ಗೆ ನಾನು ಮಾತನಾಡುತ್ತಿದ್ದರೆ, ಆಮೇಲೆ ತಾವು ತೆಗೆದುಕೊಂಡ ಆಕ್ಷೇಪಣೆಗೆ ನಾನು ನಿಜವಾಗಿಯೂ ಗುರಿಯಾಗುತ್ತಿದ್ದೆ. ಆದರೆ, ತಮ್ಮ ನಿರ್ಣಯಕ್ಕೆ ಒಳಪಟ್ಟಂತೆ ಈ ಕೃತಿಯು ಸರಕಾರದ ಚಟುವಟಿಕೆಗಳ ಸರಣಿಯಲ್ಲಿ ಪರಾಕಾಷ್ಠೆ ಯದಾಗಿದೆ ಎಂದು ಹೇಳುವಲ್ಲಿ ಹಾಗೂ ಪರ ಮತ್ತು ವಿರುದ್ಧ ಯಾವ ವಿವರಗಳನ್ನು ಕೊಡದೆ ಸರಕಾರದ ಹಿಂದಿನ ಕೃತಿಗಳಲ್ಲಿ ಒಂದನ್ನು ಉಲ್ಲೇಖಿಸುವುದಕ್ಕೆ ಆಜ್ಞೆಯನ್ನು ಮೀರಿ ಹೋಗಿಲ್ಲವೆಂದು ನಾನು ಹೇಳುವೆ. ೫–೩೦ಕ್ಕೆ ನನ್ನ ಮಾತು ಮುಗಿಸುವುದಕ್ಕೆ ನನ್ನ ಒಪ್ಪಿಗೆ ಇದೆ.

ಮಾನ್ಯ ಸಭಾಪತಿಗಳು: ನಿರ್ದಿಷ್ಟ ವೇಳೆಯಲ್ಲಿ ಮುಗಿಸಲು ಮಾನ್ಯ ಸದಸ್ಯರು ಒಪ್ಪಿಗೆ ಕೊಡುವುದು ಮುಖ್ಯವಲ್ಲ. ನಿಶ್ಚಿತವಾದ ವಿಷಯವಿದೆ; ನಿಶ್ಚಿತವಾದ ವಿಷಯದ ಬಗ್ಗೆ ವಾದಿಸಲು ಮಾನ್ಯ ಸದಸ್ಯರಿಗೆ ಸದನವು ಒಪ್ಪಿಗೆ ಕೊಟ್ಟಿದೆ; ಹೀಗಿರುವಾಗ ಬೇರೆ ವಿಷಯ ಉಲ್ಲೇಖಿಸಿದರೆ, ಅದು ಬೇರೆ ವಿಷಯಗಳನ್ನು ಸೂಚಿಸಿದಂತಾಗುವುದು. ಆದ್ದರಿಂದ ಸಾಮಾನ್ಯ ಶಬ್ದಗಳಲ್ಲಿಯೂ ಸಹ ಬೇರೆ ವಿಷಯಗಳನ್ನು ಉಲ್ಲೇಖಿಸುವುದಕ್ಕೆ ಪರವಾನಗಿ ಕೊಡುವುದು ಸರಿಯಲ್ಲವೆಂದು ನನಗೆ ಅನ್ನಿಸುತ್ತದೆ. ಯಾವುದೇ ಸದಸ್ಯರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಇಚ್ಛೆ ನನಗಿಲ್ಲ; ಈ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಅಂಶಗಳು ಬಯಲಿಗೆ ಬರಬೇಕು ಎಂಬುದು ನನ್ನ ಮನಸ್ಸಾಗಿದೆ; ಆದರೆ ಬೇರಾವ ವಿಷಯಗಳನ್ನೇ ಉಲ್ಲೇಖಿಸಲು ನಾನು ಒಪ್ಪಿಗೆ ಕೊಡುವುದಿಲ್ಲ; ಇವು ಕೆಲವು ಒಪ್ಪಿಗೆಕೊಡುವ ಅಥವಾ ಬಿಟ್ಟುಕೊಡುವ ಅಪರಾಧಗಳಿಗಾಗಿ ಪರಿಣಮಿಸಬಹುದಾಗಿದೆ. ಇದನ್ನು ಬೇಗ ಮುಗಿಸಬೇಕೆಂಬ ತವಕ ನನ್ನಲ್ಲೇನೂ ಇಲ್ಲ. ಬೇರೆ ವಿಷಯಗಳ ಉಲ್ಲೇಖ ಬೇಡವೆಂಬುದನ್ನು ಮಾತ್ರ ಬಯಸುವೆ. ಮಾನ್ಯ ಸದಸ್ಯರು ಈ ಸದನದ ಮುಂದಿರುವ ವಿಷಯದ ಬಗ್ಗೆ ಸಂಪೂರ್ಣವಾಗಿ ಮಾತನಾಡಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಈ ದೃಷ್ಟಿಯಿಂದ ನಾನು ಸದನದ ಮುಂದಿರುವ ವಿಷಯಕ್ಕೆ ಸೀಮಿತಗೊಳಿಸಿ ನನ್ನ ಅನಿಸಿಕೆಗಳನ್ನು ವ್ಯಕ್ತ ಮಾಡಬೇಕಾಗಿದೆ.

ಮಾನ್ಯರೆ, ಸದನದ ಮುಂದಿರುವ ವಿಷಯದ ಬಗ್ಗೆ ನನಗೆ ಹೇಳಬೇಕಾದುದು ಹೀಗಿದೆ: ಪತ್ರಿಕೆಗಳಲ್ಲಿ ಓದಿದ್ದನ್ನು ಬಿಟ್ಟರೆ, ನಮಗೆ ಈ ವಿಷಯದ ಬಗ್ಗೆ ನಿಜವಾದ ಮಾಹಿತಿ ದೊರಕಿಲ್ಲ ಎಂಬುದನ್ನು ನಾನು ಮೊದಲು ಹೇಳಬೇಕಾಗಿದೆ. ನಮ್ಮ ಹತ್ತಿರ ನಿಶ್ಚಿತ ಆಧಾರ ಸಾಮಗ್ರಿಯಿಲ್ಲ. ಇದರ ಬಗ್ಗೆ ಸತ್ಯ ಸಂಗತಿ ಗಳನ್ನು ಸದನಕ್ಕೆ ತಿಳಿಸಬೇಕೆಂದು ಮಾನ್ಯ ಗೃಹಮಂತ್ರಿಗಳಿಗೆ ವಿನಂತಿಸಿಕೊಂಡಿದ್ದರೂ, ಅವರು ಹಾಗೆ ಮಾಡಿಲ್ಲವೆಂದು ನನಗೆ ಸಮಾಚಾರ ಬಂದಿದೆ. ಆದ್ದರಿಂದ ನಾನು, ನನ್ನ ಜೊತೆಯ ಇನ್ನುಳಿದ ಸದನದ ಸದಸ್ಯರು ಈ ಕೊರತೆಯಿಂದ ನಿಜವಾಗಿಯೂ ತೊಂದರೆಗೀಡಾಗಿದ್ದೇವೆ. ಕೊನೆಗೆ, ಸತ್ಯಸಂಗತಿಗಳು ಬಹಿರಂಗವಾದ ಮೇಲೆ, ನಮ್ಮ ಈ ಚರ್ಚೆಯು ಅನವಶ್ಯಕವಾಗಿದ್ದಿತು ಅಥವಾ ಅಕಾಲಿಕವಾಗಿದ್ದಿತು

ಎಂದೂ ತೋರಬಹುದಾಗಿದೆ. ಆದರೆ ಈ ಚರ್ಚೆಯು ವ್ಯರ್ಥವಾಗಿದ್ದಿತು, ಅನವಶ್ಯಕವಾಗಿದ್ದಿತು ಎಂದು ಅನಿಸಿದರೆ, ಆಮೇಲೆ ಆ ದೂಷಣೆಯ ಹೊಣೆಗಾರಿಕೆಯನ್ನು ಅವಶ್ಯವಾಗಿ ಮಾನ್ಯ ಗೃಹಮಂತ್ರಿಗಳೇ ಹೊರಬೇಕಾಗುತ್ತದೆ; ಏಕೆಂದರೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಮತ್ತು ನಿಜವಾಗಿ ಏನಾಗಿದೆ ಯೆಂಬುದರ ಬಗ್ಗೆ ಹೇಳಿಕೆ ಕೊಡಲು ನಿರಾಕರಿಸಿದವರು ಅವರೇ. ಅವರು ಒಂದು ವೇಳೆ ಹಾಗೆ ಮಾಡಿದ್ದಿದ್ದರೆ, ಗೊತ್ತುವಳಿಯ ಮಾನ್ಯ ಸೂಚಕರು ಬಹುಶಃ ಅದನ್ನು ಹಿಂತೆಗೆದುಕೊಳ್ಳಬಹುದಾಗಿತ್ತು. ಇನ್ನುಳಿದ ಸದಸ್ಯರೂ ಸಹ ಚರ್ಚೆಯಲ್ಲಿ ಭಾಗವಹಿಸುವ ಇಚ್ಛೆ ನಮಗಿಲ್ಲವೆಂದು ಹೇಳಬಹುದಾಗಿತ್ತು. ಆದರೆ ಈ ಮೊದಲೇ ನಾನು ಹೇಳಿದಂತೆ ಈ ಚರ್ಚೆ ಕೊನೆಗೆ ವ್ಯರ್ಥವಾಯಿತೆಂದು ಕಂಡುಬಂದರೆ, ಅದರ ತಪ್ಪು ಅವರದೇ.

ಪತ್ರಿಕೆಗಳ ವರದಿಗಳಲ್ಲಿ ಬಂದಿರುವ ಸತ್ಯಸಂಗತಿಗಳನ್ನು ನಾವು ನಂಬಿಕೊಂಡರೆ, ವಿಚಾರ ಮಾಡತಕ್ಕ ಅಂಶ ಇದರಲ್ಲಿ ಯಾವುದಿದೆ? ಶ್ರೇಷ್ಠ ನ್ಯಾಯಾಲಯವು ಇವರ ಅರ್ಜಿಯನ್ನು ತಿರಸ್ಕರಿಸಿದೆ ಎಂದು ವರದಿ ಮಾಡಲಾಗಿದೆ. ಹಾಗಿದ್ದರೆ, ಮಂತ್ರಿಗಳು ಏಕೆ ಒಪ್ಪಬೇಕು ಎಂಬುದೇ ಪ್ರಶ್ನೆಯಾಗಿದೆ. ಇದರಲ್ಲಿ ಒಂದು ಸೂಕ್ಷ್ಮ ಅಂಶವಿದೆ ಎಂದು ನನಗೆ ತೋರುತ್ತದೆ; ಇಬ್ಬರು ಅಪರಾಧಿಗಳಿಗೆ ವಿಧಿಸಿದ್ದ ಶಿಕ್ಷೆಯನ್ನು ಅಮಾನತುಗೊಳಿಸಲು ಸದನವು ಒಪ್ಪಿಕೊಳ್ಳುವಂತಹ ಯಾವುದಾದರೂ ಸಮರ್ಥನೆ ಅದರಲ್ಲಿ ಇದ್ದಿತೇ? ಶ್ರೇಷ್ಠ ನ್ಯಾಯಾಲಯಕ್ಕೆ ಅಮಾನತ್ತುಗೊಳಿಸಲು ಅಧಿಕಾರವಿಲ್ಲವೆಂದೂ, ಆದುದರಿಂದ ಶಿಕ್ಷೆಯನ್ನು ಅಮಾನತುಗೊಳಿಸಲು ಶ್ರೇಷ್ಠ ನ್ಯಾಯಾಲಯವು ವಿವೇಕಯುಕ್ತವಾಗಿ ಅಥವಾ ವಿವೇಕರಹಿತವಾಗಿಯೋ ಏಕೆ ಅಲ್ಲಗಳೆಯಿತು ಎಂಬುದನ್ನು ಒತ್ತಾಯಿಸುವುದು ಬಹಳ ಅಸಮಂಜಸವೆಂದೂ ಮಾನ್ಯ ಗೃಹಮಂತ್ರಿಗಳು ಹೇಳಬಹುದಾಗಿದೆ. ಈಗ ಆ ಪ್ರಶ್ನೆಯಿಲ್ಲ. ಸರಕಾರಕ್ಕೆ ಕೊಟ್ಟ ಅಧಿಕಾರವನ್ನು, ವಿಶಿಷ್ಟಾಧಿಕಾರವನ್ನು ಸರಕಾರವು, ಕಾನೂನು ರೀತ್ಯಾ ಕೈದಿಗಳಿಗೆ ವಿಧಿಸಿದ ಶಿಕ್ಷೆಯನ್ನು ಅಮಾನತುಗೊಳಿಸುವಲ್ಲಿ, ಪರಿವರ್ತನೆಗೊಳಿಸುವಲ್ಲಿ ಅಥವಾ ಕಡಿಮೆ ಮಾಡುವಲ್ಲಿ ಯಥಾಯೋಗ್ಯವಾಗಿ ಉಪಯೋಗಿಸಿದೆಯೇ ಎಂಬುದು ಇಲ್ಲಿರುವ ಪ್ರಶ್ನೆಯಾಗಿದೆ. ಸ್ವಂತ ವಿವೇಚನೆಯ ಅಧಿಕಾರವು ಸರಿಯಾಗಿ ಉಪಯೋಗವಾಗಿದೆಯೇ ಎಂಬ ಪ್ರಶ್ನೆಯೂ ಇದೆ. ಮಾನ್ಯರೆ, ಈ ವಿಶಿಷ್ಟಾಧಿಕಾರದಂತೆ ಮಾನ್ಯ ಗೃಹಮಂತ್ರಿಗಳು ಅದನ್ನು ಯೋಗ್ಯ ವಾಗಿ ಉಪಯೋಗಿಸಿದ್ದಾರೋ ಇಲ್ಲವೋ ಎಂಬುದನ್ನು ನೋಡಲು, ಹಲವು ಸಂಭವನೀಯತೆಗಳನ್ನು ಕಡಿಮೆ ಮಾಡುವುದು ಅವಶ್ಯವಿದೆ. ಮೊದಲನೆಯ ಮಾತೆಂದರೆ, ಪತ್ರಿಕೆಗಳ ವರದಿಗಳಲ್ಲಿ ಪ್ರಕಟವಾದಂತೆ, ಬಹುವಾಗಿ, ಬೃಹತ್ ಪ್ರಮಾಣದಲ್ಲಿ ಜೂಜಾಡುವ ಕೆಲಸದಲ್ಲಿ ತೊಡಗಿದ ಈ ಜನರು, ತಮ್ಮ ಹೊಟ್ಟೆ ಪಾಡಿಗಾಗಿ ಜೂಜು ಆಡುವಂಥ ಕೆಟ್ಟ ಕೆಲಸಗಳಿಗೆ ಬಲಿಯಾಗಿರುವ ಬಡತನ ಅಂಟಿಕೊಂಡಿರುವ ಜನರು ನಿಶ್ಚಿತವಾಗಿಯೂ ಅಲ್ಲವೆಂಬುದು ಸ್ಪಷ್ಟವಿದೆ. ಇದು ನಿಜವಾಗಿ ಈ ವಿಷಯವೇ ಅಲ್ಲ. ವರದಿಗಳಲ್ಲಿ ಕಂಡುಬಂದಂತೆ ಸತ್ಯ ಸಂಗತಿಯೆಂದರೆ ಇವರು ಶ್ರೀಮಂತ ಬನಿಯಾಗಳು ಅವರಿಗೆ ಅಪಾರವಾದ ಬಂಡವಾಳ ಇದ್ದಿತು; ಅವರಿಗೆ ಮುಂಬೈಯ ವಿವಿಧ ಸ್ಥಳಗಳಲ್ಲಿ, ಭಾರತದ ವಿವಿಧ ಭಾಗಗಳಲ್ಲಿ ಅನೇಕ ಕಂಪೆನಿಗಳು ಹಾಗೂ ಮುಖ್ಯ ಕಚೇರಿಗಳು ಇದ್ದವು. ಹಾಗೂ ಅವರು ಬೃಹತ್ ಪ್ರಮಾಣದಲ್ಲಿ ವ್ಯವಹಾರವನ್ನು ನಡೆಸುತ್ತಿದ್ದರು. ಆದ್ದರಿಂದ ತಮ್ಮ ಬಡತನದ ಕಾರಣದಿಂದ, ತಮ್ಮ ಪ್ರತಿಕೂಲ ಪರಿಸ್ಥಿತಿಗಳ ಕಾರಣದಿಂದ ಜೂಜಾಟಕ್ಕೆ ಮಾರುಹೋದ ದುರ್ವ್ಯಸನಿ ಜನರು ಇವರು ಎಂಬ ಸಮರ್ಥನೆಯು ನಿರ್ದಿಷ್ಟವಾದ ಈ ವ್ಯವಹಾರಕ್ಕೆ ಹೊಂದುವುದಿಲ್ಲ. ಈ ನೆಪವನ್ನೇ ಯಾರೂ ವ್ಯಕ್ತಮಾಡಲಾರರು; ಏಕೆಂದರೆ ಸತ್ಯಸಂಗತಿಗಳು ಸಂಪೂರ್ಣವಾಗಿ ಈ ತರ್ಕದ ವಿರುದ್ಧವಾಗಿಯೇ ಇವೆ. ಎರಡನೆಯದಾಗಿ, ಈ ಅಮಾನತ್ತಿಗಾಗಿ ಬೇರೆ

ಯಾವ ಆಧಾರವೂ ಪ್ರಕಟವಾದ ವರದಿಗಳಲ್ಲಿ ಹಾಗೂ ಶ್ರೇಷ್ಠ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಸೂಚಿತವಾದುದು ಕಂಡುಬರುವುದಿಲ್ಲ. ಈ ಇಬ್ಬರು ಅಪರಾಧಿಗಳಿಗೆ ಅನಾರೋಗ್ಯವಿದ್ದಿತು ಅಥವಾ ಯಾವುದೋ ಬೇನೆಯಿಂದ ಬಳಲುತ್ತಿದ್ದರು ಎಂಬುದನ್ನೂ ತೋರಿಸಿಲ್ಲ; ಅವರ ಕುಟುಂಬದಲ್ಲಿ ಕೌಟುಂಬಿಕ ಅಸೌಖ್ಯವುಂಟಾಗಿರುವುದೆಂದೂ, ಅದಕ್ಕಾಗಿ ಅವರ ಬಿಡುಗಡೆ ಅವಶ್ಯವಾಗಿದೆಯೆಂದೂ ಸಿದ್ಧಪಡಿಸಲು ಏನೂ ಆಧಾರ ಇಲ್ಲ. ನಮ್ಮೆದುರಿಗೆ ಇರುವ ನಿಜಸಂಗತಿಗಳಲ್ಲಿ ಇವು ಯಾವುವೂ ಇಲ್ಲ; ಆದ್ದರಿಂದ ನಾವು ಈ ತರ್ಕವನ್ನು ಬಿಟ್ಟುಬಿಡಬೇಕಾಗುತ್ತದೆ. ಮೂರನೆಯದಾಗಿ, ಮೇಲಿನ ನ್ಯಾಯಮಂಡಳಿಗೆ (ಟ್ರಿಬ್ಯೂನಲ್) ಅವರಿಗೆ ಮನವಿ ಮಾಡಿಕೊಳ್ಳಬೇಕಾಗಿಲ್ಲ ಎಂಬ ಸೂಚನೆ ಬರುವುದು ಸಾಧ್ಯವಿದೆ. ಆ ಊಹೆಗೆ ವಿರುದ್ಧವಾಗಿ, ಭಾರತದ ದಂಡಾಧಿಕಾರಿ ನ್ಯಾಯಾಲಯದಿಂದ ಯಾವ ಮನವಿಯನ್ನೂ ಸ್ವೀಕರಿಸಬಾರದೆಂದು ಪ್ರೈವಿ ಕೌನ್ಸಿಲ್ ಸಹಸ್ರಾರು ವ್ಯವಹಾರಗಳಲ್ಲಿ ತನ್ನ ಅಭಿಪ್ರಾಯ ವ್ಯಕ್ತಮಾಡಿದರೆಂಬುದು ನನಗಿಂತಲೂ ಹೆಚ್ಚಾಗಿ ಮಾನ್ಯ ಗೃಹಮಂತ್ರಿಗಳಿಗೆ– ನಾನು ತೋರಿಕೆಗಾಗಿ ಇರುವ ನ್ಯಾಯವಾದಿ; ಅವರು ನನಗಿಂತಲೂ ಶ್ರೇಷ್ಠ ನ್ಯಾಯವಾದಿಗಳು– ಸ್ಪಷ್ಟವಾಗಿ ಗೊತ್ತಿದೆ; ವಿಚಾರಣೆಯ ಸಮಯದಲ್ಲಿ ದಂಡ ಪ್ರಕ್ರಿಯೆ ನೀತಿಯಲ್ಲಿಯ ಸಾಮಾನ್ಯ ಅಂಶಗಳನ್ನು ಹೊರತುಪಡಿಸಿ, ಸಹಜವಾದ ನ್ಯಾಯದ ತತ್ವಗಳನ್ನೇ ಉಲ್ಲಂಘಿಸಿದ್ದರೆ ಮಾತ್ರ ಅಂಥ ಕೇಸುಗಳನ್ನು ಅದು ಸ್ವೀಕರಿಸಬಹುದಾಗಿದೆ. ಪ್ರಿವಿ ಕೌನ್ಸಿಲ್‌ನವರು ತಮ್ಮದೇ ಆದ ನ್ಯಾಯದಾನದ ರೀತಿಯಲ್ಲಿ ಕ್ರಿಮಿನಲ್ ಮನವಿಗಳನ್ನು ಸ್ವೀಕರಿಸುವ ಅಧಿಕಾರವನ್ನು ಹಾಗೂ ಅವಕಾಶವನ್ನು ಸಂಪೂರ್ಣ ವಾಗಿಸೀಮಿತಗೊಳಿಸಿದ್ದಾರೆ. ಈ ಕೇಸಿನ ವಿಚಾರಣೆ ಪ್ರಧಾನ ಪ್ರಾಂತೀಯ ಮ್ಯಾಜಿಸ್ಟ್ರೇಟರಲ್ಲಿ ನಡೆದಾಗ, ಮನವಿ ವಿಚಾರಣೆಗೆ ಶ್ರೇಷ್ಠ ನ್ಯಾಯಾಲಯದಲ್ಲಿ ನಡೆದಾಗ, ದಂಡಪ್ರಕ್ರಿಯೆ ನೀತಿಯಲ್ಲಾಗಲಿ ಅಥವಾ ಸಹಜವಾದ ನ್ಯಾಯದ ತತ್ವಗಳಲ್ಲಿಯಾಗಲಿ ಯಾವುದಾದರೂ ಉಲ್ಲಂಘನೆಯ ಬಗ್ಗೆ ಯಾವ ಸೂಚನೆಯ ನೆರಳೂ ಸಹ ಕಂಡುಬಂದಿಲ್ಲ. ಈ ಜನರಿಗೆ ವಿಧಿಸಿದ ಶಿಕ್ಷೆಯನ್ನು ಗೃಹಮಂತ್ರಿಗಳು ಅಮಾನತುಗೊಳಿಸುವಂತೆ ಮನವೊಲಿಸುವ ಯೋಗ್ಯ ಕಾರಣ ಯಾವುದೂ ಮೊದಲ ನೋಟದ ಮನಸ್ಥಿತಿಯಲ್ಲಿ ಕಂಡುಬರುವುದಿಲ್ಲ.

ಮಾನ್ಯರೆ, ಸಾಮಾನ್ಯ ಅಪರಾಧಿಗಳು ಈಗಿನ ಗೃಹಮಂತ್ರಿಗಳಿಗಿಂತ ಹಿಂದಿನ ಗೃಹಮಂತ್ರಿಗಳಿಂದ ಯಾವುದೇ ಕಾರಣದಿಂದ ತಮ್ಮ ಶಿಕ್ಷೆಗಳನ್ನು ಅಮಾನತುಗೊಳಿಸಿಕೊಂಡಿರುವ ಪೂರ್ವ ನಿದರ್ಶನಗಳು ಇದೆಯೆ? ನನಗೆ ಗೊತ್ತಿದ್ದಂತೆ ಇಲ್ಲವೇ ಇಲ್ಲವೆಂದು ಹೇಳಬೇಕಾಗಿದೆ. ಪ್ರಾಂತದಲ್ಲಿ ಅತ್ಯುನ್ನತವಾದ ನ್ಯಾಯಮಂಡಳಿಯಲ್ಲಿ ನ್ಯಾಯಯುತವಾಗಿ ವಿಧಿಸಿದ ಶಿಕ್ಷೆಗಳನ್ನು ಅಮಾನತುಗೊಳಿಸಲು ಸರಕಾರವು ಅನಾರೋಗ್ಯವನ್ನಾಗಲಿ ಇಲ್ಲವೆ ವೈಯಕ್ತಿಕ ತೊಂದರೆಯನ್ನಾಗಲಿ ಯೋಗ್ಯ ಕಾರಣವೆಂದು ನಿಜವಾಗಿಯೂ ಎಂದೆಂದೂ ಸ್ವೀಕರಿಸುವುದಿಲ್ಲ. ಆದ್ದರಿಂದ ಇದಕ್ಕೆ ಸಮರ್ಥನೀಯ ಕಾರಣಗಳು ಬಾರದಿದ್ದರೆ, ಒಬ್ಬ ಗೃಹ ಮಂತ್ರಿಯು ಶ್ರೇಷ್ಠ ನ್ಯಾಯಾಲಯದ ತೀರ್ಮಾನವನ್ನು ಮೀರುವುದು ಹಾಗೂ ಶಿಕ್ಷೆಯನ್ನು ಅಮಾನತು ಗೊಳಿಸುವುದು ಬಹಳಷ್ಟು ಕಲಂಕದ ಕೆಲಸವಾಗಿದೆ ಎಂದು ನಾನು ನಿವೇದಿಸುವೆ. ಶ್ರೇಷ್ಠ ನ್ಯಾಯಾಲಯ ದಲ್ಲಿ ಅಪರಾಧಿಗಳ ಪರವಾಗಿ ಹಾಜರಾಗಿದ್ದ ನ್ಯಾಯವಾದಿಯು ಒಂದು ಮನವಿ ಅರ್ಜಿ ಸಲ್ಲಿಸಿದ್ದನು ಎಂಬುದು ಗೃಹಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ– ನಮಗಂತೂ ಪತ್ರಿಕೆಗಳಲ್ಲಿ ಪ್ರಕಟಗೊಂಡ ಸತ್ಯಸಂಗತಿ ಓದಿ ಗೊತ್ತಿದೆ. ಈ ಜನರು ಸೆರೆಮನೆಯಲ್ಲಿರುವಾಗ, ಅವರನ್ನು "ಬಿ" ವರ್ಗದ ಕೈದಿಗಳಂತೆ ನೋಡಿ ಕೊಳ್ಳಬೇಕೆಂದು ವಿಶೇಷವಾಗಿ ವಿಚಾರಿಸಲು ನ್ಯಾಯವಾದಿ ಅರ್ಜಿಯೊಂದನ್ನು ಸಲ್ಲಿಸಿದ್ದನು. ಈ ವಾದಿಗಳ ಪರವಾಗಿ ಹಾಜರಾಗಿದ್ದ ನ್ಯಾಯವಾದಿಯು ಸದ್ಯ ಅವರ ಶಿಕ್ಷೆಯನ್ನು ಅಮಾನತುಗೊಳಿಸಬೇಕೆಂದೂ

ಅರ್ಜಿಯೊಂದನ್ನು ಕೊಟ್ಟಿದ್ದನು. ಇವೆರಡೂ ಅರ್ಜಿಗಳು ತಿರಸ್ಕೃತವಾದವು. ಅವೇ ಅರ್ಜಿಗಳು– ಅವುಗಳಲ್ಲಿ ಒಂದು ಅರ್ಜಿಯನ್ನಾದರೂ ಗೃಹಮಂತ್ರಿಗಳು ಪರಿಶೀಲಿಸಿದ್ದಾರೆ. ಮಾನ್ಯರೆ, ಕಾನೂನು ಹಾಗೂ ವ್ಯವಸ್ಥೆ ಇವುಗಳನ್ನು ಅವ್ಯವಸ್ಥಿತ ಮಟ್ಟಕ್ಕೆ ತರಲು, ಗೃಹಮಂತ್ರಿಗಳ ಈ ಕಾರ್ಯದಷ್ಟು ದೋಷಯುಕ್ತವಾದ ಕಾರ್ಯ ಬೇರೆ ಯಾವುದೂ ಇಲ್ಲ. ಈ ಅಭಿಪ್ರಾಯವನ್ನು ಪ್ರಕಟಿಸಲು ನನಗೆ ಅನುಮಾನವೇನೂ ಇಲ್ಲ. ನಾನು ಮಾನ್ಯ ಗೃಹಮಂತ್ರಿಗಳಿಗೆ ಕೇಳಬೇಕೆನ್ನುವೆ; ಅಪರಾಧ ನಿರ್ಣಯವು ಸರಿಯಿದೆ ಎಂದು ಜನರ ಮನಸ್ಸಿನಲ್ಲಿ ಬಿಂಬಿಸಲು ಮೊದಲ ನೋಟದಲ್ಲಿಯೆ ಸಮಾಧಾನಕರವಾದ ಅರ್ಥವಿವರಣೆಯೂ ಇರದ ಕೃತಿ ಗೃಹಮಂತ್ರಿಗಳದಾಗಿದೆ; ಇಂಥ ಕೃತಿಯು ಈ ಪ್ರಾಂತದ ರಾಜ್ಯ ಆಡಳಿತದ ನಿಷ್ಠೆ ಹಾಗೂ ಪ್ರಾಮಾಣಿಕತೆ ಬಗ್ಗೆ ಸಂಶಯ ಹುಟ್ಟಿಸುವುದಿಲ್ಲವೇ? ಮಾನ್ಯರೆ, ಈ ವಿಷಯದ ಸಂಬಂಧ ಇನ್ನೂ ಒಂದು ಪ್ರಶ್ನೆ ಕೇಳಬೇಕೆನ್ನುವೆ; ಆ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಬೇಕೆನ್ನುವೆ. ಮುಖ್ಯಮಂತ್ರಿಗಳ ಗಮನಕ್ಕೆ ತಂದ ಮೇಲೆ ಈ ಆಜ್ಞೆಯನ್ನು ಸ್ವೀಕರಿಸಲಾಗಿದೆಯೇ? ಸಚಿವ ಸಂಪುಟವು ಈ ಆಜ್ಞೆಯನ್ನು ಸ್ವೀಕರಿಸಿದೆಯೇ? ಅಥವಾ ಮಾನ್ಯ ಗೃಹಮಂತ್ರಿಗಳೊಬ್ಬರೇ ಇದನ್ನು ಅಂಗೀಕರಿಸಿರುವರೇ? ಮಾನ್ಯರೆ, ಬಹು ಮಹತ್ವದ ಕಾರಣಕ್ಕಾಗಿ ನಾನು ಈ ಪ್ರಶ್ನೆಗಳನ್ನೆಲ್ಲ ಕೇಳುತ್ತಿರುವೆ. ಹೊಸ ಕಾನೂನು ಪ್ರಕಾರ ಕಾಂಗ್ರೆಸ್ ಸಚಿವ ಸಂಪುಟವು ಒಂದುಗೂಡಿಕೊಂಡು, ಒಂದಾಗಿ ಹೊಣೆಗಾರಿಕೆಯನ್ನು ಗ್ರಹಿಸಿಕೊಂಡು ಕಾರ್ಯ ಮಾಡುತ್ತಿದೆಯೆಂದು– ಈ ಅಂಶದ ಬಗ್ಗೆ ನಿಶ್ಚಿತವಾದ ಸಾಕ್ಷ್ಯ ನಮ್ಮ ಹತ್ತಿರ ಇರದಿದ್ದರೂ– ನಾವು ಕಲ್ಪಿಸುವಂತಿದೆ; ಆದ್ದರಿಂದ ಈ ವಿಷಯವನ್ನು ಸಂಪೂರ್ಣ ಸಚಿವ ಸಂಪುಟದ ಮುಂದೆ ಇಟ್ಟಿರಬೇಕೆಂಬುದು ನನ್ನ ತಿಳುವಳಿಕೆಯಾಗಿದೆ; ಒಂದು ವೇಳೆ ಸಂಪೂರ್ಣ ಸಂಪುಟದ ಮುಂದೆ ಮಂಡಿಸದಿದ್ದರೂ ಜನರು ಸಾಮಾನ್ಯವಾಗಿ ತಿಳಿದುಕೊಂಡಿರುವಂತೆ ಈ ಪ್ರಾಂತದ ಆಡಳಿತದ ಹೊಣೆಗಾರಿಕೆ ಮುಖ್ಯಮಂತ್ರಿಯದೇ ಆಗಿರುವುದರಿಂದ ಮುಖ್ಯಮಂತ್ರಿಗಳ ಮುಂದಾದರೂ ಇಟ್ಟಿರಬೇಕು. ಇಂಥ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳಲ್ಲಿ ಪ್ರಶ್ನೆಗಳನ್ನು ಕೇಳಬೇಕಾಗಿದೆ; ಏಕೆಂದರೆ ಇದು ಅತ್ಯಂತ ಗಂಭೀರವಾದ ವಿಷಯವೆಂದು ನಾನು ಪರಿಗಣಿಸುವೆ. ಅಪರಾಧಿಯಾದ ಒಬ್ಬ ವ್ಯಕ್ತಿಗೆ ಕೊಟ್ಟಂಥ ಶಿಕ್ಷೆಯನ್ನು ಅಮಾನತ್ತು ಮಾಡುವುದು ನಿಜವಾಗಿಯೂ ಕಾನೂನು ಉಲ್ಲಂಘನೆಯಾಗಿದೆ; ನ್ಯಾಯಯುತವಾದ ಆಡಳಿತದಲ್ಲಿ, ಈ ಪ್ರಾಂತದ ಜನರ ಕಲ್ಯಾಣದಲ್ಲಿ ಇಂಥ ಗಂಭೀರ ಪರಿಣಾಮವನ್ನು ಬೀರುವ ಈ ಕೃತಿಯು ಮುಖ್ಯಮಂತ್ರಿಗಳ ಗಮನಕ್ಕೆ ಬಾರದೆ ಆಗಿರುವುದು ಸಾಧ್ಯವಿಲ್ಲವೆಂದು ನನ್ನ ನಿವೇದನೆಯಾಗಿದೆ. ಇದು ನನ್ನ ಗ್ರಹಿಕೆ; ನನ್ನ ಗ್ರಹಿಕೆ ಸರಿಯಿದೆಯೇ ಹೇಗೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನನ್ನ ಪ್ರಶ್ನೆಗಳಿಗೆ ಉತ್ತರ ದೊರಕುವುದೆಂಬುದು ನನ್ನ ಆಶೆಯಾಗಿದೆ. (ಚಪ್ಪಾಳೆ)

ಶ್ರೀ ಡಬ್ಲ್ಯು. ಎಸ್. ಮುಕಾದಮ್: ಮಾನ್ಯರೆ, ಏನಾದರೂ ಕುಡಿಯುವುದಕ್ಕೆ ಸದನದಲ್ಲಿ ಒಪ್ಪಿಗೆ ಯಿದೆಯೇ? ತಮ್ಮ ಲಕ್ಷ್ಯಕ್ಕೆ ಒಂದು ಸತ್ಯಸಂಗತಿಯನ್ನು ತರಬಯಸುತ್ತೇನೆ; ನಗರ ಯೋಜನೆಯ ಕಾನೂನನ್ನು ಇಲ್ಲಿ ಚರ್ಚೆ ಮಾಡುತ್ತಿರುವಾಗ, ಶ್ರೀ ಮೀರಾಮ್ಸ್ ಮಾತನಾಡುತ್ತಿರುವಾಗ ನಾನು ಇಂಥ ಕ್ರಿಯಾಲೋಪವನ್ನು ಎತ್ತಿದ್ದೆ; ಆಗ ಸರ್ ಇಬ್ರಾಹಿಮ್ ರಹಿಮತ್ತುಲ್ಲಾ ಅವರು ಸದನದಲ್ಲಿ ಏನನ್ನೂ ಕುಡಿ ಯಲು ಪರವಾನಗಿಯಿಲ್ಲ ಎಂಬ ನಿರ್ಣಯ ಕೊಟ್ಟಿದ್ದರು. ಆಮೇಲೆ ಶ್ರೀ ಮೀರಾಮ್ಸ್ ಅವರು ನೀರು ಕುಡಿಯಲು ಪರವಾನಗಿ ಇದೆಯೋ ಹೇಗೆ ಎಂದು ಹೇಳಿದರು; ಆಗ ಸಭಾಪತಿಗಳು ಅದಕ್ಕೂ ಒಪ್ಪಿಗೆಯಿಲ್ಲ ಎಂದಿದ್ದರು.

ಮಾನ್ಯ ಸಭಾಪತಿಗಳು: ಕುಡಿಯುವುದು ಎಂಬ ಹೆಸರಿನಲ್ಲಿ ಸದನದಲ್ಲಿ ಏನನ್ನೂ ಕುಡಿ

ಯುವುದು ಬೇಡ ಎಂಬ ವಹಿವಾಟನ್ನು ನಾವು ಹಾಕಿಕೊಳ್ಳುವುದು ಒಳ್ಳೆಯದು ಎಂದು ನನಗೆ ತೋರುತ್ತದೆ; ಕುಡಿಯುವುದು ಎಂದರೆ ಸ್ವಚ್ಛ ನೀರು ಕುಡಿಯುವುದು, ಮತ್ತೇನೂ ಅಲ್ಲ ಎಂಬುದು ನನ್ನ ಅರ್ಥ. (ನಗೆ)

ಶ್ರೀ ಡಬ್ಲ್ಯು. ಎಸ್. ಮುಕಾದಮ್: ಶ್ರೀ ಮೀರಾಮ್ಸ್ ಅವರು ಸದನದಲ್ಲಿ ನೀರು ಕುಡಿಯುವುದಾದರೂ ಒಪ್ಪಿಗೆಯಿದೆಯೇ ಎಂದು ಪ್ರಶ್ನಿಸಿದ್ದರು. ಆದರೆ ನೀರಿಗೂ ಸಹ ಪರವಾನಗಿ ಇಲ್ಲ ಎಂದು ಅಧ್ಯಕ್ಷರು ಅಂದಿದ್ದರು.

ಮಾನ್ಯ ಸಭಾಪತಿಗಳು: ಮಾನ್ಯ ಸದಸ್ಯರು (ಶ್ರೀ ಮುಕಾದಮ್) "ಕುಡಿಯುವುದು" ಇದರ ಬಗ್ಗೆ ಕ್ರಿಯಾಲೋಪವನ್ನು ಎತ್ತಿದ್ದಾರೆ; "ಕುಡಿಯುವುದು" ಇದಕ್ಕೆ ಬಹಳ ಅರ್ಥಗಳಿವೆಯಾದ್ದರಿಂದ, ನಾನು ಈ ಪದವನ್ನು ನೀರನ್ನು ಕುಡಿಯುವುದು ಎಂಬ ಅರ್ಥಕ್ಕಷ್ಟೇ ಸೀಮಿತಗೊಳಿಸುತ್ತೇನೆ. ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರು ತಮ್ಮ ಭಾಷಣಕ್ಕಿಂತ ಮೊದಲು ಚೈತನ್ಯವನ್ನು ಪಡೆಯಲು ಒಂದು ಗುಟುಕು ನೀರನ್ನು ಕುಡಿದಿರುವರು; ಇದಕ್ಕೆ ಸಂಬಂಧಿಸಿದಂತೆಯೇ ಮಾನ್ಯ ಸದಸ್ಯರು (ಶ್ರೀ ಮುಕಾದಮ್) ಈ ಕ್ರಿಯಾಲೋಪ ಎತ್ತಿರಬೇಕೆಂದು ನನ್ನ ನಂಬಿಕೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ವಿವರಿಸಿ ಹೇಳಬಹುದೇ? ನಾನು ಅಪಚನದಿಂದ ಬಳಲುತ್ತಿರುವೆ. ಡಾಕ್ಟರರ ಸಲಹೆಯಂತೆ ನಾನು ಎರಡು ದಿನ ಊಟ ಮಾಡುವುದಿಲ್ಲ– ಶನಿವಾರ ಮತ್ತು ಭಾನುವಾರ; ಈ ದಿನಗಳಲ್ಲಿ ನೀರು ಕುಡಿಯಲೂ ನನಗೆ ಪರವಾನಗಿಯಿಲ್ಲ. ಆದ್ದರಿಂದ ಸೋಮವಾರದ ದಿನ ನಾನು ಬಹಳ ದಣಿದಿರುತ್ತೇನೆ. ನಾನು ಒಂದು ಗುಟುಕು ನೀರು ಕುಡಿಯದಿದ್ದರೆ, ನನಗೆ ಭಾಷಣವನ್ನು ಮಾಡಲೂ ಆಗುತ್ತಿರಲಿಲ್ಲ. ಸದನದ ಸಂಪ್ರದಾಯದ ನಿಯಮಗಳ ವಿರುದ್ಧವಾಗಿ, ಸೌಜನ್ಯದ ವಿರುದ್ಧವಾಗಿ ನಡೆದುಕೊಂಡಿದ್ದರೆ, ನಾನು ಸದನದ ಕ್ಷಮೆಯನ್ನು ಕೋರುವೆ.

ಮಾನ್ಯ ಸಭಾಪತಿಗಳು: ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರು ಅರ್ಥ ವಿವರಣೆ ಕೊಟ್ಟಿರುವುದರಿಂದ, ಈ ವಿಷಯದಲ್ಲಿ ಟೇಬಲ್ ಮೇಲಿನ ಗ್ಲಾಸುಗಳನ್ನು ತೆಗೆದಿಡುವುದನ್ನುಳಿದು, ಬೇರೆ ಏನನ್ನು ಮಾಡಬೇಕಾಗಿಲ್ಲವೆಂಬುದು ನನ್ನ ಅನಿಸಿಕೆ (ನಗೆ).

# ೪೧

# *ಪ್ರತ್ಯೇಕ ಕರ್ನಾಟಕ ಪ್ರಾಂತದ ರಚನೆಯನ್ನು ಕುರಿತು:

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ, ಬೈಕಲಾ ಹಾಗೂ ಪರೇಳ): ಮಾನ್ಯರೆ, ನನ್ನ ಮಾನ್ಯ ಮಿತ್ರ ಸರ್ ಅಲಿ ಮೊಹಮ್ಮದ್ ಖಾನ ದೆಹಲವಿ ಅವರು ಕೊಟ್ಟ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಒಪ್ಪುವೆ; ಮತ್ತು ಈ ವಿಷಯದ ಬಗ್ಗೆ ತಮಗಿರುವ ಅಭಿಪ್ರಾಯವು, ತಮಗೆ ಗೌರವವನ್ನಿತ್ತು ನಾನು ಹೇಳುವುದಾದರೆ, ಅತ್ಯಂತ ಸರಿಯಾಗಿದೆ. ನಿಯಮ ೨೨, ಉಪ ನಿಯಮ (೨) ಇದಕ್ಕೂ ತಮ್ಮ ಗಮನ ಸೆಳೆಯಲು ಬಯಸುವೆ. ಅದು ಹೀಗಿದೆ:

> "ಸಭಾಪತಿಯು ಪ್ರಾಥಮಿಕವಾಗಿ ಪ್ರಾಂತೀಯ ಸರಕಾರಕ್ಕೆ ಸಂಬಂಧಿಸಿದ ವಿಷಯವಾಗಿದೆ ಎಂಬ ಆಧಾರದಿಂದ ಯಾವುದೇ ನಿರ್ಣಯವನ್ನು ಅಥವಾ ನಿರ್ಣಯದ ಒಂದು ಭಾಗವನ್ನು ತಿರಸ್ಕರಿಸಬಹುದಾಗಿದೆ; ಸಭಾಪತಿಯು ಹೀಗೆ ಮಾಡಿದರೆ, ಆ ನಿರ್ಣಯವನ್ನಾಗಲಿ ಅಥವಾ ನಿರ್ಣಯದ ಒಂದು ಭಾಗವನ್ನಾಗಲಿ ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿಸಲು ಬರುವುದಿಲ್ಲ."

ಪ್ರಾಥಮಿಕವಾಗಿ ಪ್ರಾಂತೀಯ ಸರಕಾರಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಈ ನಿರ್ಣಯವು ಬಂದಿರುವುದು; ಈಗ ಮದ್ರಾಸ್ ಪ್ರಾಂತದಲ್ಲಿರುವ ಕೆಲವು ಭಾಗಗಳನ್ನು ಅಲ್ಲಿಂದ ಪ್ರತ್ಯೇಕಿಸಬೇಕೆಂದು ನಿರ್ಣಯದಲ್ಲಿ ಹೇಳಿರುವುದರಿಂದ ಇದು ಪ್ರಾಂತೀಯ ಸರಕಾರದ ಅಧಿಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬುದು ನನ್ನ ನಿವೇದನೆ. ಮಾನ್ಯರೆ, ನನ್ನ ಮಾನ್ಯ ಮಿತ್ರ ಶ್ರೀ ಜೋಗ್ ಅವರು ಉಲ್ಲೇಖಿಸಿದ ಕಲಮು ೨೯೦ರ ಬಗ್ಗೆ ಹೇಳುವುದಾದರೆ, ಈಗಿನ ಭಾರತ ಸರಕಾರದ ಕಲಮು ೨೯೦, ೧೯೧೯ರ ಭಾರತ ಸರಕಾರದ ಕಾನೂನಿನ ಕಲಮು ೫೨ಎ ಇದಕ್ಕೆ ಸಾಮ್ಯವಾಗಿದೆ. ೧೯೧೯ರ ಭಾರತ ಸರಕಾರದ ಕಾನೂನಿನ ೫೨ಎ ಇದನ್ನು ಕಲಮು ೨೯೦ರೊಡನೆ ಹೋಲಿಸಿ ನೋಡಿದರೆ, ಬಹಳ ಅಮೂಲಾಗ್ರವಾದ ಹಾಗೂ ಬಹಳ ಉದ್ದೇಶಪೂರ್ವಕವಾಗಿ ಇರುವ ಬದಲಾವಣೆಯಾಗಿದೆ ಎಂಬುದು ಎಲ್ಲರಿಗೂ ಕಂಡುಬರುವುದು. ಹಳೆಯ ಕಾನೂನಿನ ಪ್ರಕಾರ, ಕಲಮು ೫೧(ಎ)ನಲ್ಲಿ, ಯಾವುದಾದರೂ ಹೊಸ ಪ್ರಾಂತ ರಚನೆಯಾಗ ಬೇಕಾಗಿದ್ದರೆ ಹಾಗೆ ಸ್ಥಾನಿಕ ವಿಧಾನಮಂಡಲದಲ್ಲಿ ಒಂದು ನಿರ್ಣಯವನ್ನು ಸ್ವೀಕರಿಸಿ ಅನಂತರ ಅದನ್ನೇ ಗವರ್ನರ್–ಜನರಲ್ ಅವರ ಕಡೆಗೆ ಕಳಿಸಿಕೊಡಲು ಪರವಾನಗಿ ಇದೆಯೆಂದು ಕಾಣಿಸಲಾಗಿದೆ. ಏಕೆಂದರೆ ಮಾನ್ಯರೆ, ಹಳೆಯ ೧೯೧೯ರ ಕಾನೂನು ಪ್ರಕಾರ, ಹೊಸ ಪ್ರಾಂತ ರಚನೆ ಮಾಡುವ ಅಧಿಕಾರವು ಗವರ್ನರ್–ಜನರಲ್ ಅವರ ಕಡೆಗೆ ಇದ್ದಿತು. ಕಲಮು ೫೨ಎ ಪ್ರಕಾರ ಗವರ್ನರ್–ಜನರಲ್ ಅವರು

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೧೬೭೨–೯೩
ದಿನಾಂಕ ೪ ಏಪ್ರಿಲ್ ೧೯೩೮.

ಕಾರ್ಯಪ್ರವೃತ್ತರಾಗುವ ಮೊದಲೇ, ಈ ವಿಷಯದಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿ ನಿರ್ಣಯಗಳನ್ನು ಸ್ವೀಕರಿಸಿ ಗವರ್ನರ್–ಜನರಲ್ ಅವರಿಗೆ ಕಳಿಸಿಕೊಡಲು ಪ್ರಾಂತದ ವಿಧಾನ ಮಂಡಲಗಳಿಗೆ ಮುಕ್ತಾವಕಾಶವಿದ್ದಿತು ಎಂಬುದನ್ನು ತಾವು ಸ್ಮರಿಸಿಕೊಳ್ಳಬೇಕು. ನಾನು ಈ ಮೊದಲೇ ಹೇಳಿದಂತೆ ಕಲಮು ೨೯೦ರಲ್ಲಿ ಉದ್ದೇಶಪೂರ್ವಕವಾಗಿ ಬದಲಾವಣೆ ಮಾಡಲಾಗಿದೆ. ಹಳೆಯದನ್ನು ಬದಲಿಸಿ ಹೊಸ ಪ್ರಾಂತಗಳನ್ನು ನಿರ್ಮಿಸುವ ಅಧಿಕಾರವನ್ನು ಗವರ್ನರ್–ಜನರಲ್ ಅವರಿಂದ ಕಸಿದುಕೊಳ್ಳಲಾಗಿದೆ. ಆ ಅಧಿಕಾರವನ್ನು ಭಾರತ ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಕೊಡಲಾಗಿದೆ. ಎರಡನೆಯದಾಗಿ, ಸ್ಥಾನಿಕ ವಿಧಾನ ಮಂಡಲಗಳ ಕರ್ತೃತ್ವ ಶಕ್ತಿಯ ಅಧಿಕಾರವನ್ನು ಕಸಿದುಕೊಳ್ಳಲಾಗಿದೆ. ಕಲಮು ೨೯೦ನ್ನು ನಾನು ತಿಳಿದುಕೊಂಡಂತೆ, ಮೊದಲು ಉಪಕ್ರಮಿಸುವ ಅಧಿಕಾರವನ್ನು ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಅವರಿಗೆ ಕೊಡಲಾಗಿದೆ. ಭಾರತ ಮಂತ್ರಿಯು ಹೊಸ ಪ್ರಾಂತಗಳನ್ನು ನಿರ್ಮಿಸಬೇಕೆಂದು ನಿರ್ಣಯಿಸಿದ ಮೇಲೆ, ಅವನು ಭಾರತ ಮಂಡಲದಲ್ಲಿ ಆಜ್ಞೆಯನ್ನು ಮಂಡಿಸುವ ಪೂರ್ವದಲ್ಲಿ, ಕಲಮು ೨೯೦ರ ಪ್ರಕಾರ ಆಜ್ಞೆಯ ಪರಿಣಾಮವಾಗುವ ವಿಧಾನ ಮಂಡಲಗಳೊಡನೆ ವಿಚಾರ ವಿನಿಮಯ ಮಾಡಿಕೊಳ್ಳಬೇಕೆಂಬುದಾಗಿ ವಿಧಿಸಲಾಗಿದ್ದಿತು. ಇದಾದನಂತರವೇ ಇಂಥದೊಂದು ನಿರ್ಣಯದ ಬಗ್ಗೆ ಚರ್ಚೆ ಮಾಡಲು ಯಾವುದೇ ಪ್ರಾಂತೀಯ ವಿಧಾನ ಮಂಡಲಕ್ಕೆ ಪರವಾನಗಿಯಿತ್ತು; ಆ ಪ್ರಾಂತದಲ್ಲಿ ಇರದೇ ಇರುವ ಪ್ರದೇಶಗಳಿಗೂ ಈ ನಿರ್ಣಯವು ಬಾಧಕವಾಗಿದ್ದರೂ, ಆಗ ಅದರ ಬಗ್ಗೆ ಚಿಂತಿಸುವಂತಿರಲಿಲ್ಲ. ಈಗ ಈ ನಿರ್ಣಯವು ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಅವರಿಂದ ಈ ಸದನಕ್ಕೆ ಬಂದಿದ್ದರೆ– ಕರ್ನಾಟಕವು ಪ್ರತ್ಯೇಕವಾಗಬೇಕೆ, ಈ ಪ್ರಾಂತದಲ್ಲಿ ಇರದೇ ಇರುವ ಕೆಲವು ಪ್ರದೇಶಗಳನ್ನು ಕರ್ನಾಟಕದಲ್ಲಿ ಕೂಡಿಸಬೇಕೋ, ಬೇಡವೋ ಎಂಬುದನ್ನು ಚರ್ಚೆ ಮಾಡಲು ಈ ವಿಧಾನ ಮಂಡಲಕ್ಕೆ ಪರವಾನಗಿಯಿದೆಯೆಂದು ನಾನು ಆಗಿಂದಾಗಲೇ ಹೇಳಿಬಿಡುತ್ತಿದ್ದೆ. ಆ ತೆರವಾಗಿ ಆಗಿರದಿದ್ದರೆ ಸೆಕ್ರೆಟರಿ ಆಫ್ ಸ್ಟೇಟ್ ಈ ವಿಷಯದ ಬಗ್ಗೆ ತಿಳಿಸದೇ ಇದ್ದರೆ, ಈ ಪ್ರಾಂತೀಯ ಸರಕಾರವು, ಪ್ರಾಂತೀಯ ವಿಧಾನ ಮಂಡಲವು, ಈ ವಿಧಾನ ಮಂಡಲದ ಹಾಗೂ ಈ ಸರಕಾರದ ವ್ಯಾಪ್ತಿ ಹಾಗೂ ಅಧಿಕಾರಕ್ಕೆ ದೂರವಾದ, ಒಂದು ಸಮಸ್ಯೆಯನ್ನು ಕುರಿತು ಇರುವ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕಾಗದು ಎಂದು ನಿವೇದಿಸುವೆ. ಭಾರತ ಸರಕಾರದ ಕಾನೂನಿನ ಕಲಮು ೨೯೦ರ ಪ್ರಕಾರ ಹಾಗೂ ನಿಯಮಗಳ ಪ್ರಕಾರ ತಾವು ಸ್ವೀಕರಿಸಿದ ಅಭಿಪ್ರಾಯವು ಸಂಪೂರ್ಣವಾಗಿ ಯುಕ್ತವಾಗಿದೆ ಎಂದು ನಾನು ನಿವೇದಿಸುವೆ.

ಮಾನ್ಯ ಸಭಾಪತಿಗಳು: ಒಂದು ಅಂಶವನ್ನು ಸ್ಪಷ್ಟಮಾಡಲು ನಾನು ಬಯಸುವೆ. "ಮದ್ರಾಸ್ ಮತ್ತು ಕೊಡಗು" ಈ ಪದಗಳನ್ನು ಸೇರಿಸಬೇಕು ಎಂಬ ಸೂಚನೆಯನ್ನು ನಾನು ಬಿಟ್ಟಿರುವೆ. ಮಾನ್ಯ ಸದಸ್ಯ ಡಾ. ಅಂಬೇಡ್ಕರ್ ಅವರು ಮಾಡಿದ ವಾದವು ಇನ್ನೂ ಮುಂದೆ ಹೋಗಿರುವಂತೆ ತೋರುತ್ತದೆ. ಹೊಸ ಪ್ರಾಂತವನ್ನು ನಿರ್ಮಿಸುವ ಅಥವಾ ಯಾವುದೇ ಪ್ರಾಂತದ ಮೇರೆಗಳನ್ನು ಬದಲಿಸುವ ವಿಷಯಗಳನ್ನು ಕುರಿತಾದ ಯಾವುದೇ ನಿರ್ಣಯವನ್ನು ಯಾವುದೇ ಪ್ರಾಂತೀಯ ವಿಧಾನ ಮಂಡಳದಲ್ಲಿ ತೆಗೆದುಕೊಳ್ಳಲಿಕ್ಕಾಗದು ಎಂಬುದು ಅವರ ಹೇಳಿಕೆಯಾಗಿದೆ; ಏಕೆಂದರೆ ಇದರ ಸಂಬಂಧವಾಗಿ ಮೊದಲು ಉಪಕ್ರಮಿಸುವ ಅಧಿಕಾರವು ವಿಧಾನ ಮಂಡಲಕ್ಕೆ ಇರುವುದಿಲ್ಲ. ಅವರ ವಾದವು ಹೀಗಿದೆಯೆಂದು ನಾನು ತಿಳಿದಿರುವೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಅಹುದು.

ಮಾನ್ಯ ಸಭಾಪತಿಗಳು: ಅವರು ಎತ್ತಿದ ಕ್ರಿಯಾಲೋಪದಿಂದ, ಮದ್ರಾಸ್ ಮತ್ತು ಕೊಡಗು ಪದಗಳನ್ನು

ಸೇರಿಸಿದರೂ ಅಷ್ಟೇ... ಬಿಟ್ಟರೂ ಅಷ್ಟೇ. ಯಾವುದೂ ಚರ್ಚೆ ಮಾಡುವಂತೆ ಇರದಿದ್ದರೆ, ಅನಂತರ ಮದ್ರಾಸ್ ಅಥವಾ ಕೊಡಗು ಎಂಬ ಪದಗಳನ್ನು ಸೇರಿಸುವುದರಲ್ಲಿ ಅರ್ಥವಿಲ್ಲ. ಅವರ ವಿಚಾರ ಮೂಲ ಬೇರನ್ನೇ ತಟ್ಟಿದೆ. ಇದರ ಸಂಬಂಧ ತೊಂದರೆಯೊಂದು ಇದೆ. ಮೊದಲು ಉಪಕ್ರಮಿಸುವ ಅಧಿಕಾರವನ್ನು ಹಲವು ರೀತಿಯಿಂದ ಸೀಮಿತಗೊಳಿಸಿಕೊಡಲಾಗಿದೆ ಅಥವಾ ಹಲವು ಮಿತಿಗಳಿಗೆ ಒಳಗಾಗಿ ಅದನ್ನು ಉಪಯೋಗಿಸಬೇಕಾಗಿದೆ. ಆದರೆ ನಡವಳಿಕೆಗಳನ್ನು ಮೊದಲು ಉಪಕ್ರಮಿಸುವ ಅಧಿಕಾರವುಳ್ಳ ಸರಕಾರವು ಇದನ್ನು ಮಂಡಿಸಬೇಕು ಎಂಬ ದೃಷ್ಟಿಯಿಂದ ವಿಧಾನ ಮಂಡಲವು ತನ್ನ ಅಭಿಪ್ರಾಯವನ್ನು ವ್ಯಕ್ತಮಾಡುತ್ತದೆ. ಆಗ ಮೊದಲು ಉಪಕ್ರಮಿಸಬೇಕೆಂದು ಬಿನ್ನಹ ಮಾಡಿಕೊಳ್ಳುವ ವಿಧಾನ ಮಂಡಲವನ್ನು ತಡೆಯುವಂತೆ ಕಲಮು ೨೯೦ರಲ್ಲಿ ಏನಾದರೂ ಇದೆಯೇ? ಈ ವಿಧಾನ ಮಂಡಲವು ತನ್ನ ನಿರ್ಣಯದಿಂದ ಅಥವಾ ಕೃತಿಯಿಂದ ನಿಜವಾಗಿ ಪ್ರತ್ಯೇಕವಾಗಬೇಕೆಂಬ ಭಾವನೆಯನ್ನು ತನ್ನ ನಡೆವಳಿಯಲ್ಲಿ ಮೊದಲು ಉಪಕ್ರಮಿಸುತ್ತಿರುವುದಿಲ್ಲ. "ಕರ್ತೃತ್ವ ಶಕ್ತಿ" ಎಂಬುದನ್ನು, ಇನ್ನೊಂದು ಅರ್ಥದಲ್ಲಿ ಉಪಯೋಗಿಸಿದರೆ– ಬಿನ್ನಹವನ್ನು ಮಾಡಿ ಇದು ಮೊದಲು ಉಪಕ್ರಮಿಸುತ್ತದೆ ಎಂದಾಗುವುದು. ಕಲಮು ೨೯೦ರಲ್ಲಿಯ ಕರಾರುಗಳ ಪ್ರಕಾರ, ಮನವಿಯನ್ನು ಮಾಡಲೂ ಸಹ ತಡೆಯಿರುವುದೇ? ಈ ಅಂಶದ ಬಗ್ಗೆ ವಿದ್ವಾಂಸರಾದ ಡಾಕ್ಟರರ ಜೊತೆಗೆ ಒಮ್ಮತವಿಲ್ಲವೆಂದು ನಾನು ಹೇಳಬಯಸುವೆ.

ಡಾ. ಬಿ. ಆರ್. ಅಂಬೇಡ್ಕರ್: ಇಂಥ ನಿರ್ಣಯವನ್ನು ಈ ಸದನವು ತೆಗೆದುಕೊಳ್ಳದಂತೆ ನಿಷೇಧಿಸ ಲಾಗಿದೆ ಎಂಬುದೇ ನನ್ನ ಅಭಿಪ್ರಾಯವಾಗಿದೆ. ಮೊದಲು ಉಪಕ್ರಮಿಸುವ ಅಧಿಕಾರವನ್ನು ಸ್ಪಷ್ಟವಾಗಿಯೋ, ಸೂಚ್ಯವಾಗಿಯೋ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಕೊಟ್ಟಿರುವ ಸತ್ಯ ಸಂಗತಿಯನ್ನು ನೋಡಿದರೆ, ವಿಧಾನ ಮಂಡಲಕ್ಕೆ ಮೊದಲು ಉಪಕ್ರಮಿಸುವ ಅಧಿಕಾರವಿಲ್ಲ ಎಂಬುದು ಕಂಡುಬರುವುದು; ಹಳೆಯ ಕಾನೂನಿನ ಕಲಮು ೫೨ಎ ಅದನ್ನು ಈಗಿನ ಕಾನೂನಿನ ಕಲಮು ೨೯೦ ಇದರ ಜೊತೆ ಹೋಲಿಸಿ ನೋಡಿದರೆ, ಪರಿಸ್ಥಿತಿಯು ಸಂಪೂರ್ಣವಾಗಿ ಸ್ಪಷ್ಟವಾಗುವುದು. ಸೈಮನ್ ಆಯೋಗ ಹಾಗೂ ದುಂಡುಮೇಜಿನ ಪರಿಷತ್ತು ಇವೂ ಸಹ ಈ ವಿಷಯಯನ್ನು ವಿಮರ್ಶಿಸಿದ್ದವು; ಅವರು ಒರಿಸ್ಸಾ, ಸಿಂಧ್ ಹಾಗೂ ವಾಯುವ್ಯ ಸರಹದ್ದು ಇವುಗಳನ್ನು ಪ್ರತ್ಯೇಕ ಪ್ರಾಂತಗಳಾಗಿ ಇರಲು ಅವಶ್ಯವಿರುವ ಕರಾರುಗಳನ್ನು ತೃಪ್ತಿಕರವಾಗಿ ಪೂರೈಸುತ್ತವೆ ಎಂಬ ನಿರ್ಣಯಕ್ಕೆ ಬಂದಿದ್ದರು. ಅವರು ಮೊದಲು ಉಪಕ್ರಮಿಸುವುದಕ್ಕೆ ಪ್ರಾಂತೀಯ ಮಂಡಲಗಳಿಗೆ ಅವಕಾಶವನ್ನು ಕೊಡಲಿಲ್ಲ.

* * *

* ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯ ಸಭಾಪತಿಗಳೆ, ನನ್ನ ಮಾನ್ಯ ಸ್ನೇಹಿತ ರಾದ ಶ್ರೀ ಜೋಗ್ ಅವರು ಮಂಡಿಸಿದ ಗೊತ್ತುವಳಿಯನ್ನು ವಿರೋಧಿಸಲು ನಿಂತಿರುವೆನು. ಈ ಗೊತ್ತು ವಳಿಯ ವಿಷಯವು ನಿಃಸಂಶಯವಾಗಿಯೂ ಅತ್ಯಂತ ಮಹತ್ವದ ವಿಷಯದ್ದಾಗಿದೆ. ಎಂಥ ತೀಕ್ಷ್ಣತೆ ಯಾಗಲೀ, ಅರಿವಾಗಲೀ, ಭಾವನೆಯಾಗಲಿ ಇಲ್ಲದೆಯೆ ಈ ಸದನದ ಸದಸ್ಯರು ಈ ಗೊತ್ತುವಳಿಯ

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೩, ಪುಟ ೧೭೧೭–೨೩
ದಿನಾಂಕ ೪ ಏಪ್ರಿಲ್ ೧೯೩೮.

ಬಗ್ಗೆ ವಿಮರ್ಶಿಸಲು ಸಿದ್ಧರಿದ್ದಾರೆ ಎಂಬುದು ನನಗೆ ಅಚ್ಚರಿಯನ್ನುಂಟುಮಾಡುತ್ತದೆ. ದಲಿತ ವರ್ಗದವರನ್ನು ಪ್ರತಿನಿಧಿಸುವ ನನಗೆ ಬಹುಶಃ ಸದನದ ಇತರ ಸದಸ್ಯರಿಗಿಂತಲೂ ಹೆಚ್ಚಿನ ಲಾಭವಿದೆಯೆಂದು ತೋರುತ್ತದೆ. ನಾನು ಹೇಳಬಹುದಾದದ್ದೂ ಆಲಂಕಾರಿಕವಾಗಿ ಏನೂ ಇಲ್ಲ; ಆದರೆ ಇದು ನನ್ನ ನಿಜವಾದ ಭಾವನೆಯಾಗಿದೆ; ದಲಿತ ವರ್ಗದ ಪ್ರತಿನಿಧಿಗಳಾದ ನಾವು ಮಹಾರಾಷ್ಟ್ರೀಯರು ಅಥವಾ ಗುಜರಾತಿಗಳು ಅಥವಾ ಕನ್ನಡಿಗರು ಎಂದು ಹೇಳುವಲ್ಲಿ ಯಾವ ಅಭಿಮಾನವನ್ನು ತಾಳುವುದಿಲ್ಲ. ಈ ನಿರ್ದಿಷ್ಟವಾದ ಪ್ರಸಂಗದಲ್ಲಿ ನಾನು ಕಾರಣಗಳನ್ನು ವಿವರಿಸುವುದಕ್ಕೆ ಹೋಗಬಾರದು; ಆದರೂ ಈ ಭೂಮಿಯು ನಮ್ಮದಲ್ಲ ಎಂದು ತಿಳಿಸುವಲ್ಲಿ ನಮಗೆ ಬೇಕಾದಷ್ಟು ಕಾರಣಗಳಿವೆ. ಏನೇ ಇರಲಿ, ಈ ನಿರ್ಣಯದಿಂದ ನಮಗುಂಟಾದ ಪರಿಸ್ಥಿತಿಯಲ್ಲಿ ನಾನು ವಾದಿಸುತ್ತಿರುವಾಗ ನಿಷ್ಪಕ್ಷಪಾತ ಅಭಿಪ್ರಾಯವನ್ನು– ಬಹಳ ಗಂಭೀರವಾದ ಪ್ರಯತ್ನದಿಂದಾದರೂ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು– ಕೊಡಲು ನಾನು ಸಮರ್ಥನಿರುವೆನು ಎಂಬುದನ್ನು ಈ ಸದನಕ್ಕೆ ತೋರಿಸಬೇಕಾಗಿದೆ. ಮಾನ್ಯರೆ, ನಾನು ಅತ್ಯಂತ ಮಹತ್ವದ್ದೆಂದು ತಿಳಿದುಕೊಂಡಿರುವ ಒಂದು ನೈಜ ಸಂಗತಿಯನ್ನು ಈ ಸದನದ ಸದಸ್ಯರು ಮನವರಿಕೆ ಮಾಡಿಕೊಳ್ಳುವುದು ಅವಶ್ಯವೂ ಆಗಿದೆ, ಅಪೇಕ್ಷಿತವೂ ಆಗಿದೆ. ಈ ಮುಂಬೈ ಪ್ರಾಂತವು ಕಾನೂನು ಕಾರ್ಯಾಚರಣೆಯಲ್ಲಿ ಬರುವ ಮೊದಲು– ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಹಾಗೂ ಸಿಂಧ್ ಹೀಗೆ ನಾಲ್ಕು ಪಂಗಡಗಳಿಂದ ಕೂಡಿಕೊಂಡದ್ದು ಆಗಿದ್ದಿತು. ಈ ಏಕತ್ರ ಕುಟುಂಬವು ಮೂಲತಃ ಇಂದಿನದಲ್ಲ; ೧೧೫ ವರುಷಗಳಿಂದಲೂ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಕೂಡಿಕೊಂಡೇ ಬಾಳುತ್ತ ಬಂದಿವೆ. ಸಿಂಧ್ ನಮ್ಮ ಜೊತೆಗೆ ೯೦ ವರುಷಗಳವರೆಗೆ ಇದ್ದಿತು. ಸಿಂಧ್ ಈಗ ಪ್ರತ್ಯೇಕವಾಗಿದೆ. ಅದು ಮುಗಿದುಹೋದ ಕತೆಯಾಗಿದ್ದು, ಹಳೆಯದನ್ನು ಮತ್ತೆ ಈಗ ಕೆದಕಬೇಕಾಗಿಲ್ಲ. ನಾವು ೧೧೫ ವರುಷಗಳಿಂದ ಕೂಡಿಕೊಂಡು ಇದ್ದೇವೆ ಎಂಬ ಸತ್ಯಸಂಗತಿಗಳನ್ನು ಹೇಳಲು ಕಾರಣವಿದೆ; ಇಂಥ ಏಕತೆಯನ್ನು ಒಡೆಯಬೇಕು ಎನ್ನುವವರು, ಒಂದಾಗಿ ಇದ್ದ ಮೂರು ಪಂಗಡಗಳನ್ನು ಪ್ರತ್ಯೇಕಿಸಬೇಕು ಎನ್ನುವವರು, ಈ ವಿಷಯವನ್ನು ಇನ್ನಷ್ಟು ಗಂಭೀರವಾಗಿ ಯೋಚಿಸಬೇಕೆಂದು, ಬರಿ ಭಾವಾವೇಶವನ್ನು ಆಧಾರವಾಗಿ ಇಟ್ಟುಕೊಳ್ಳಕೂಡದೆಂದು ನಾನು ಈ ವಿಷಯಕ್ಕೆ ಒತ್ತುಕೊಟ್ಟು ಹೇಳುತ್ತೇನೆ.

ಮೊದಲನೆಯದಾಗಿ ನಾನು ವಿಚಾರ ಮಾಡಬೇಕೆಂದು ಹೇಳುವುದು ಹೀಗಿದೆ: ಈ ಗೊತ್ತುವಳಿಯನ್ನು ಮಂಡಿಸಿದ ಮಾನ್ಯ ಮಿತ್ರರು ದೊಡ್ಡದಾದ ಅಖಂಡತ್ವದಲ್ಲಿಯ ಒಂದು ಭಾಗವು ಮಾತ್ರ ತಮ್ಮ ಸೂಚನೆಯಾಗಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಮಾಡಿರುವರು; ಅವರ ಆದರ್ಶವು ಅಖಿಲ ಕರ್ನಾಟಕದ ಜನರನ್ನು ಒಂದುಗೂಡಿಸುವುದಾಗಿದ್ದು, ಇದು ಆ ದಾರಿಯಲ್ಲಿ ಹೆಜ್ಜೆಯೊಂದಾಗಿದೆಯೆಂಬುದನ್ನು ನುಡಿದಿರುವರು. ಈಗ ಮಾನ್ಯರೆ, ಈ ಅಂಶದ ಬಗ್ಗೆ ನಾನು ಕೇಳಬೇಕೆಂದಿರುವ ಪ್ರಶ್ನೆ ಹೀಗಿದೆ. ಕನ್ನಡ ಮಾತನಾಡುವ ಎಲ್ಲ ಜನರನ್ನು ಒಂದುಗೂಡಿಸುವ ಈ ಆದರ್ಶವು, ನನ್ನ ಮಾನ್ಯ ಮಿತ್ರರು ನನಗೆ ಹೇಳಲು ಅನುಮತಿ ನೀಡಿದರೆ– ಈ ಕನಸು, ಎಂದಾದರೂ ಸತ್ಯವಾಗುವುದೇ? ಇದೊಂದು ಕನಸಾಗಿದ್ದು ಎಂದೆಂದೂ ನನಸಾಗುವುದಿಲ್ಲ ಎಂದು ನಾನು ತಿಳಿಸುವಲ್ಲಿ ನನಗೆ ಏನೇನೂ ಸಂಶಯವಿಲ್ಲ. ಎಲ್ಲರಿಗೂ ಹಂಚಿದ ಒಂದು ಪುಸ್ತಕದಲ್ಲಿ– ಅದರದೊಂದು ಪ್ರತಿ ನನಗೆ ಲಭ್ಯವಾದುದರಿಂದ ನಾನು ಸುದೈವಿಯಾಗಿರುವೆ; ಅದರ ಹೆಸರು "ಎ ಕೇಸ್ ಫಾರ್ ದಿ ಯುನಿಫಿಕೇಶನ್ ಆಫ್ ಕರ್ನಾಟಕ" ಎಂದಿರುವುದು; ಅದು ಒಂದು ಸಂಸ್ಥೆಯ ಪ್ರಕಾಶನ ವಾಗಿದ್ದು, ಅವರೇ ಈ ಗೊತ್ತುವಳಿಗೆ ಕಾರಣರಿರಬೇಕು– ಅದರ ೨೨ನೆಯ ಪುಟದಲ್ಲಿ ಒಂದು ಹೇಳಿಕೆಯನ್ನು ನೋಡಿರುವೆನು; ಅದರಲ್ಲಿ ಕನ್ನಡ ಮಾತನಾಡುವ ಜನರಲ್ಲಿ ಹಲವರು

ಭಾರತೀಯ ಸಂಸ್ಥಾನದೊಳಗೆ ಇರುವವರು ಎಂದು ತಿಳಿಸಲಾಗಿದೆ. ಈ ಸತ್ಯ ಸಂಗತಿಯನ್ನು ಗೌರವಿಸುತ್ತ, ಈ ಗೊತ್ತುವಳಿಯನ್ನು ಅನುಮೋದಿಸುತ್ತಿರುವ ನನ್ನ ಮಾನ್ಯ ಮಿತ್ರರಿಗೆ ಪ್ರಶ್ನೆ ಕೇಳಬಯಸುವೆ. ಭಾರತೀಯ ಸಂಸ್ಥಾನಗಳ ಸಾರ್ವಭೌಮತ್ವಕ್ಕೆ ಹಾಗೂ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಕನ್ನಡ ಮಾತನಾಡುವ ಜನರನ್ನು ಅದರಿಂದ ಪ್ರತ್ಯೇಕಿಸಲು ಮತ್ತು ಸ್ವಯಂ ಅಧಿಕಾರವುಳ್ಳ ಕನ್ನಡ ಮಾತನಾಡುವವರ ಪ್ರಾಂತವನ್ನು ನಿರ್ಮಿಸಲು ಸಾಧ್ಯವೇ? ಬ್ರಿಟಿಷ್ ಭಾರತದ ರಾಜ್ಯಾಡಳಿತಕ್ಕೆ ಹೊಣೆಗಾರರಿರುವ ಅಧಿಕಾರಿಗಳು, ಮದ್ರಾಸ್ ಪ್ರಾಂತವನ್ನಾಗಲಿ ಅಥವಾ ಬ್ರಿಟಿಷ್ ಕಾನೂನಿನ ಮೇರೆಗೆ ಆಡಳಿತ ನಡೆಸುತ್ತಿರುವವರಿಗಾಗಲಿ ಕನ್ನಡ ಮಾತನಾಡುವ ಜನರಿರುವ ಪ್ರದೇಶಗಳನ್ನು ಬಿಟ್ಟುಕೊಡಬೇಕೆಂದು, ಇದರಿಂದ ಆ ಪ್ರದೇಶವನ್ನು ಒಂದುಗೂಡಿಸಿ ಒಂದೇ ಆಡಳಿತದಲ್ಲಿ ಬರುವಂತೆ ಮಾಡಲು ಸಾಧ್ಯವೆಂಬುದನ್ನು ನಾನು ಒಪ್ಪಿಕೊಳ್ಳುವೆ ಹಾಗೂ ಇದಕ್ಕೆ ನನ್ನ ಅನುಮತಿಯೂ ಇದೆ. ಆದರೆ ಆಗಿದ್ದಂತೆ ಭಾರತೀಯ ಸಂಸ್ಥಾನಗಳಲ್ಲಿರುವ ಕನ್ನಡ ಮಾತನಾಡುವವರ ನಿಷ್ಠೆಯನ್ನು, ಸಂಸ್ಥಾನಗಳಿಂದ ಯಾವುದೇ ಬ್ರಿಟಿಷ್ ಭಾರತೀಯ ಪ್ರಾಂತಕ್ಕೆ ವರ್ಗಾಯಿಸುವ ಕಾರ್ಯವನ್ನು ಮಾಡಲು ಯಾರಿಂದಾದರೂ ಸಾಧ್ಯವೇ ಎಂಬುದು ನನಗೆ ತಿಳಿಯದಂತಾಗಿದೆ. ಈ ಸಮಸ್ಯೆಯನ್ನು ಯಶಸ್ವಿಯಾಗಿ ಪರಿಹರಿಸಬಹುದಾದ ವಿಚಾರದಲ್ಲಿ ನಾನು ಕಲ್ಪಿಸಬಹುದಾದ ಒಂದೇ ಒಂದು ಪರಿಸ್ಥಿತಿಯೆಂದರೆ– ಕನ್ನಡ ಮಾತನಾಡುವ ಜನರುಳ್ಳ ಪ್ರದೇಶವನ್ನು ಸಂಸ್ಥಾನಗಳು ಒಪ್ಪಿಸಿದಾಗ, ಅದರ ಪ್ರತಿಯೊಂದು ಬ್ರಿಟಿಷ್ ಭಾರತವು ಸ್ವಲ್ಪ ಪ್ರದೇಶವನ್ನು ಸಂಸ್ಥಾನಗಳಿಗೆ ವರ್ಗಾಯಿಸಬಹುದಾಗಿದೆ. ಈಗ ಭಾರತೀಯ ಸಂಸ್ಥಾನಗಳು ಕನ್ನಡ ಮಾತನಾಡುವ ಜನರನ್ನು ತಮ್ಮ ಪ್ರದೇಶದಿಂದ ವರ್ಗಾಯಿಸಲು ಅನುಕೂಲವಾಗಬೇಕೆಂದು, ಭಾರತ ಸರಕಾರದ ಕಾನೂನಿನ ಪ್ರಕಾರ ಇರುವ ಸಂವಿಧಾನಕ್ಕೆ ಬದ್ಧರಾಗಿ ವಾಸಿಸುವ ಯಾವ ಜನ ಭಾರತೀಯ ಸಂಸ್ಥಾನಗಳ ಅಧಿಕಾರ ವ್ಯಾಪ್ತಿಯ ಪ್ರದೇಶಕ್ಕೆ ಹೋಗಲು ಒಪ್ಪಬಹುದಾಗಿದೆ? ನನಗೆ ಇದು ಸಂಭವನೀಯವೆಂದು ತೋರುವುದಿಲ್ಲ; ಆದ್ದರಿಂದ ಈ ಗೊತ್ತುವಳಿಯನ್ನು ತಂದ ನನ್ನ ಮಾನ್ಯ ಸದಸ್ಯರಿಗೆ ನನ್ನ ನಿವೇದನೆ ಎಂದರೆ ಕನ್ನಡ ಮಾತನಾಡುವವರೆಲ್ಲರೂ ಒಂದೇ ಒಂದು ಸ್ವಯಂ ಅಧಿಕಾರವುಳ್ಳ ಸರಕಾರದ ಆಧಿಪತ್ಯದಲ್ಲಿ ಬರುವುದು– ಸರಿಯಿದೆಯೋ ಇಲ್ಲವೋ ಎಂಬುದನ್ನು ವಿಚಾರಿಸಬೇಕೆಂದು ಕೇಳಿಕೊಳ್ಳುವೆ; ಬ್ರಿಟಿಷ್ ಭಾರತದ ಕೆಲವು ಜಿಲ್ಲೆಗಳಲ್ಲಿರುವ ಕನ್ನಡ ಮಾತನಾಡುವ ಕೆಲವು ಜನರನ್ನು ಪ್ರತ್ಯೇಕಿಸಿ, ಸ್ವಯಂ ಅಧಿಕಾರವುಳ್ಳ ಪ್ರಾಂತವನ್ನಾಗಿ ರಚಿಸುವುದು ಯೋಗ್ಯವಾಗಿದೆಯೇ? ಕೊನೆಯ ಗುರಿಯನ್ನು ಇದು ಮುಟ್ಟುವುದಾಗಿಲ್ಲವೆಂದು ನಮಗೆ ಮೊದಲೇ ತಿಳಿದಾಗ, ಒಂದು ಹೆಜ್ಜೆಯಾದರೂ ಮುಂದೆ ಸಾಗುವಲ್ಲಿ ಏನು ಪ್ರಯೋಜನವಿದೆಯೆಂದು ನಾನು ಕೇಳಬಹುದೆ?

ಆದ್ದರಿಂದ ಈಗ ಎರಡನೆಯ ವಿಚಾರವನ್ನು ನಾನು ಹೇಳುವೆ. ಕನ್ನಡ ಮಾತನಾಡುವ ಎಲ್ಲ ಜನರನ್ನು ಒಂದೇ ಸ್ವಯಂ ಅಧಿಕಾರವುಳ್ಳ ಆಡಳಿತದಲ್ಲಿ ತರುವ ಆದರ್ಶವು ಸಾಧ್ಯವಿಲ್ಲದಿರುವಾಗ, ನನ್ನ ಅಭಿಪ್ರಾಯದಲ್ಲಿ ಮತ್ತೊಂದು ಸಮಸ್ಯೆ ಉದ್ಭವವಾಗುತ್ತಿದೆ; ನಾನು ಕರೆಯಬಹುದಾದ ಈ ಬಹು ಭಾಷಾ ರಾಜ್ಯಾಡಳಿತದಲ್ಲಿ ಕನ್ನಡ ಮಾತನಾಡುವ ಜನರ ವಿಷಯದಲ್ಲಿ ಅವರಿಗೆ ನ್ಯಾಯಯುತವಾಗಿ ಎಷ್ಟು ದೊರೆಯಲು ಸಾಧ್ಯವೋ ಅಷ್ಟು ಎಲ್ಲಾ ಲಾಭಗಳು ಸಿಗುವಲ್ಲಿ ಅಥವಾ ಸೇವೆಯಲ್ಲಿ ಭರ್ತಿ ಮಾಡುವಲ್ಲಿ ಕನ್ನಡ ಮಾತನಾಡುವ ಜನರಿಗೆ ಏನಾದರೂ ಅಡಚಣೆಯಾಗಿದೆಯೇ? ಏನಾದರೂ ತೊಂದರೆ ಯಾಗಿದೆಯೆ? ನಮ್ಮ ಈ ಬಹುಭಾಷಾ ಪ್ರಾಂತದಲ್ಲಿಯ ರಾಜ್ಯಾಡಳಿತದ ವಿಷಯದಲ್ಲಿ ಕನ್ನಡ

ಮಾತನಾಡುವ ಜನರಿಗೆ ಏನಾದರೂ ಅಡಚಣೆಯಾಗಿ ತ್ರಾಸವಾಗಿದೆಯೆಂದು ವೈಯಕ್ತಿಕವಾಗಿ ನನಗೇನೂ ಅನಿಸುವುದಿಲ್ಲ.

ಈಗ ಮಾನ್ಯರೆ, ನಾನು ಈ ಸಮಸ್ಯೆಯನ್ನು ಎರಡು ದೃಷ್ಟಿಗಳಿಂದ ನೋಡಿರುವೆ. ಹೊಸ ಸರಕಾರದ ಆಡಳಿತದಲ್ಲಿ ವಿತರಣೆಯಾಗಿರುವ ಕಚೇರಿಗಳ ಪ್ರಶ್ನೆಯನ್ನು ಮೊದಲಿಗೆ ತೆಗೆದುಕೊಳ್ಳುವೆ. ಅವರಿಗೆ ಏನಾದರೂ ತೊಂದರೆಯಾಗಿದೆಯೇ? ಅವರಿಗೆ ದೊರೆಯಬೇಕಾದ ಸ್ಥಾನಗಳಿಗಿಂತಲೂ ಕಡಿಮೆ ಸ್ಥಾನಗಳೂ ಸಿಕ್ಕಿದೆಯೆ? ಇದನ್ನು ಪರೀಕ್ಷಿಸಿ ನೋಡಲು ಇನ್ನೊಂದನ್ನು ತೆಗೆದುಕೊಳ್ಳೋಣ. ಅವರಿಗೆ ಲಭ್ಯವಾಗಬೇಕಾಗಿದ್ದ ಪ್ರಾತಿನಿಧ್ಯಕ್ಕಿಂತಲೂ ಕಡಿಮೆ ಪ್ರಾತಿನಿಧ್ಯ ಈ ಸದನದಲ್ಲಿ ದೊರೆತಿದೆಯೇ? ಈಗ ಅಂಕಿ ಸಂಖ್ಯೆಗಳನ್ನು ಕೊಟ್ಟು ಹೇಳುವೆ; ಈ ಸಂಖ್ಯೆಗಳನ್ನು ಕೊಡುವಾಗ ಸಂಯುಕ್ತ ಪ್ರದೇಶಗಳನ್ನು ಉದಾಹರಣೆಯಾಗಿ ಮುಂಬೈ ನಗರ, ಸಂಪೂರ್ಣವಾಗಿ ಗುಜರಾತಿ ಮಾತನಾಡುವವರಿಂದಾಗಲಿ, ಸಂಪೂರ್ಣವಾಗಿ ಕನ್ನಡ ಮಾತನಾಡುವವರಿಂದಾಗಲಿ ಕೂಡಿಕೊಂಡಿರುವುದಿಲ್ಲ- ಎಂಬುದನ್ನು ವಿಚಾರಿಸಿರುವುದಿಲ್ಲ; ವಿಶೇಷ ಆಸಕ್ತಿಗಳಿಗಾಗಿ ನಿರ್ದಿಷ್ಟವಾದ ಸ್ಥಳಗಳ ವಿಚಾರವನ್ನೂ ನಾನು ಬಿಟ್ಟಿರುವೆ; ಇದರಿಂದ ನನಗೆ ದೊರೆತ ಅಂಕಿ ಸಂಖ್ಯೆ ಹೀಗಿವೆ. ಜನಸಂಖ್ಯೆಯ ದೃಷ್ಟಿಯಿಂದ ನೋಡಿದಾಗ, ಮರಾಠಿ ಮಾತನಾಡುವ ಪ್ರದೇಶದಲ್ಲಿ- ಇದರಲ್ಲಿ ನಾನು ಹಿಂದುಗಳು, ಮುಸ್ಲಿಮರು ಹಾಗೂ ದಲಿತ ವರ್ಗದವರು ಎಲ್ಲರನ್ನೂ ಕೂಡಿಸಿರುವೆ- ೯,೮೬೮,೭೯೫ ಜನರು ಮರಾಠಿ ಮಾತನಾಡುವವರು ಇರುವರು; ಭಾಷೆ ಮಾತನಾಡುವವರ ಆಧಾರವನ್ನಿಷ್ಟೇ ನಾನು ತೆಗೆದುಕೊಂಡಿರುವೆ: ಗುಜರಾತಿ ಮಾತನಾಡುವ ಜನರ ಸಂಖ್ಯೆ ೩,೪೨೨,೧೫೯ ಹಾಗೂ ಕನ್ನಡ ಮಾತನಾಡುವವರ ಜನರ ಸಂಖ್ಯೆ ೩,೨೬೬,೨೨೩ ಇರುವುದು. ಇದೀಗ ಈ ಸದನದಲ್ಲಿಯ ಸ್ಥಿತಿ ಹೀಗಿದೆ. ಜನಸಂಖ್ಯೆಯ ಆಧಾರದಿಂದ ಮಾತ್ರ, ಮರಾಠಿ ಮಾತನಾಡುವ ಜನರಿಗೆ ೮೧ ಸ್ಥಾನಗಳು ದೊರೆತಿರುವುದನ್ನು ನಮ್ಮ ನಿರ್ಣಯಕ್ಕೆ ಮಾದರಿ ಎಂದು ಪ್ರಮಾಣವಾಗಿ ನಾವು ಸ್ವೀಕರಿಸಿದರೆ, ಗುಜರಾತಿ ಮಾತನಾಡುವ ಜನರಿಗೆ ೨೭ ಸ್ಥಾನಗಳು ಸಿಗಬೇಕು. ಈಗ ಹಂಚಿದ ಪುಸ್ತಕದಲ್ಲಿಯಂತೆ, ಕನ್ನಡ ಮಾತನಾಡುವರ ಜನಸಂಖ್ಯೆ ಈ ಪ್ರಾಂತದಲ್ಲಿಯ ಒಟ್ಟು ಜನಸಂಖ್ಯೆಯ ಶೇಕಡಾ ೧೨ರಷ್ಟು ಇದೆ. ಇದರ ಆಧಾರದ ಮೇಲೆ ಅವರಿಗೆ ೨೧ ಸ್ಥಾನಗಳು ದೊರೆಯಬೇಕು. ನಿಜವಾಗಿಯೂ ಅವರಿಗೆ ಈಗ ಎಷ್ಟು ಸ್ಥಾನಗಳು ದೊರಕಿವೆ? ಗುಜರಾತಿ ಮಾತನಾಡುವ ಜನರಿಗೆ ೨೭ ಸ್ಥಾನ ಸಿಗಬೇಕಾಗಿದ್ದರೂ, ಅವರಿಗೆ ೩೧ ಸ್ಥಾನಗಳು ಲಭ್ಯವಾಗಿವೆ. ಕನ್ನಡ ಮಾತನಾಡುವ ಜನರಿಗೆ ಬರಿ ೨೧ ಸ್ಥಾನಗಳು ಸಿಗಬೇಕಾಗಿದ್ದರೂ, ನಿಜವಾಗಿ ಅವರಿಗೆ ಲಭ್ಯವಾಗಿರುವ ಸ್ಥಾನಗಳು ೨೮.

ಈಗ ಕಚೇರಿಗಳ ಬಗ್ಗೆ ವಿಚಾರಿಸೋಣ. ಎರಡೂ ಸದನಗಳನ್ನು ಕೂಡಿಸಿದರೆ ಒಟ್ಟು ೧೬ ಸ್ಥಾನಗಳಿವೆ. ಜನಸಂಖ್ಯೆ ಇದ್ದಷ್ಟೇ ಆಧಾರವನ್ನು ತೆಗೆದುಕೊಂಡರೆ, ಸ್ಥಾನಗಳ ಮಾದರಿ ಸಂಖ್ಯೆಯ ಆಧಾರವು ಹೀಗಿದೆ: ಮರಾಠಿ ಮಾತನಾಡುವವರಿಗೆ ಪ್ರಮಾಣ ೧೯.೬, ಗುಜರಾತಿ ಮಾತನಾಡುವ ಜನರಿಗೆ ೩.೩, ಕನ್ನಡ ಮಾತನಾಡುವ ಜನರಿಗೆ ೩.೧ ಎಂದಾಗುತ್ತಿತ್ತು. ಸ್ಥಾನ ಹಂಚಿಕೆ ಸರಿಯಿದೆಯೋ ಇಲ್ಲವೋ ಎಂಬ ಪ್ರಶ್ನೆಯನ್ನು ಬಿಟ್ಟುಬಿಡೋಣ; ಆದರೆ ಕಚೇರಿಗಳ ಸ್ಥಾನಗಳ ವಿತರಣೆಯನ್ನು, ಲಭ್ಯವಾಗಿರುವ ಸ್ಥಾನಗಳ ನಿಜ ಅಂಕಿ-ಸಂಖ್ಯೆಗಳ ಆಧಾರದ ಮೇಲೆ ಪರಿಶೀಲಿಸಿದರೆ- ಮರಾಠಿ ಮಾತನಾಡುವ ಜನರ ಪಾಲು ೯.೩, ಗುಜರಾತಿ ಮಾತನಾಡುವವರ ಜನರ ಪಾಲು ೩.೬ ಮತ್ತು ಕನ್ನಡ ಮಾತನಾಡುವವರ ಜನರ ಪಾಲು ೩.೧ ಆಗುತ್ತಿತ್ತು. ನಿಜವಾಗಿ ನೋಡಿದರೆ ಕಚೇರಿಗಳ ಸ್ಥಾನಗಳು ವಿತರಣೆ ಯಾವ ರೀತಿ

ಆಗಿದೆ? ಮರಾಠಿ ಮಾತನಾಡುವ ಜನರಿಗೆ ೬ ಸ್ಥಾನಗಳು, ಗುಜರಾತಿ ಮಾತನಾಡುವ ಜನರಿಗೆ ೬ ಸ್ಥಾನಗಳು ಮತ್ತು ಕನ್ನಡ ಮಾತನಾಡುವ ಜನರಿಗೆ ೪ ಸ್ಥಾನಗಳು ದೊರಕಿರುತ್ತವೆ.

ಮಾನ್ಯರೆ, ಈ ಮಾಹಿತಿ ನಾನು ತಿಳಿಸಿದಂತೆ, ನಾನು ಮಹಾರಾಷ್ಟ್ರೀಯನು ಎಂದು ಹೇಳುವಲ್ಲಿ ನನಗೆ ಅಭಿಮಾನವಿಲ್ಲ. ಆದರೆ ಒಂದು ಸತ್ಯಸಂಗತಿಯನ್ನು ನೆನಪಿಸಬೇಕು; ಸದನಕ್ಕೂ ನಾನು ಈ ಎಚ್ಚರಿಕೆ ಕೊಡುತ್ತಿರುವೆ. ಈ ಪದವನ್ನು ನಾನು ಉಪಯೋಗಿಸುತ್ತಿರುವುದು ತಕರಾರು ಮಾಡುವುದಕ್ಕಾಗಿ ಅಲ್ಲ. ಅಂಥ ಉದ್ದೇಶವೂ ನನ್ನದಾಗಿಲ್ಲ. ಒಂದು ಸತ್ಯ ಸಂಗತಿಯನ್ನು ಸ್ಪಷ್ಟವಾಗಿ ತೋರಿಸಲು ಮಾತ್ರ ನಾನು ಹೀಗೆ ಹೇಳುತ್ತಿರುವೆ. ಅಲ್ಪಸಂಖ್ಯಾತ ಜನರಿಗೆ– ಅಂದರೆ ಗುಜರಾತಿ ಮಾತನಾಡುವ ಹಾಗೂ ಕನ್ನಡ ಮಾತನಾಡುವ ಜನರಿಗೆ ಸದನದ ಸ್ಥಳಗಳ ವಿಷಯದಲ್ಲಿ, ಕಚೇರಿಗಳ ಸ್ಥಾನಗಳ ವಿಷಯದಲ್ಲಿ ಏನೇನೂ ಅನ್ಯಾಯವಾಗಿಲ್ಲವೆಂಬುದು ಸತ್ಯವಾದುದು. ಈ ಸದನದಲ್ಲಿ ಕೂಡ ಈ ವಿಷಯದಲ್ಲಿ ಅನ್ಯಾಯವಾಗಿಲ್ಲವೆಂಬುದು ಸತ್ಯವಾದುದು. ಈ ಸದನದಲ್ಲಿ ಈ ವಿಷಯ ಚರ್ಚೆಯಾಗುವ ಮೊದಲೆ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಜೋಗ್ ಅವರಿಗೆ ಬಹು ಸ್ಪಷ್ಟವಾಗಿ ತಿಳಿಸಿರುವೆ; ಕರ್ನಾಟಕದ ಜನರಿಗೆ ಸರಿಯಾದ ಯೋಗ್ಯವಾದ ಪ್ರಾತಿನಿಧ್ಯ ಸದನದಲ್ಲಿ ದೊರಕಿಲ್ಲವೆಂಬುದು ಅಥವಾ ಸಚಿವ ಸಂಪುಟದಲ್ಲಿ ಅವರಿಗೆ ಯೋಗ್ಯ ಪ್ರಾತಿನಿಧ್ಯ ದೊರಕಿಲ್ಲವೆಂದು– ಹೀಗೆ ಯಾವುದಾದರೂ ರೀತಿಯಿಂದ ಕರ್ನಾಟಕದ ಜನರಿಗೆ ತೊಂದರೆಯಾಗಿದೆಯೆಂದು ಅವರು ನನ್ನ ಬುದ್ಧಿಗೆ ಹಾಗೂ ನನ್ನ ಅಭಿಪ್ರಾಯಕ್ಕೆ ಮನದಟ್ಟಾಗುವಂತೆ ಮಾಡಿದರೆ, ಅವರು ನನ್ನ ಬೆಂಬಲವನ್ನು ಪಡೆಯುತ್ತಾರೆ. ನಾನು ಹೀಗೆ ಮಾಡಲು ಯಾವಾಗಲೂ ಸಿದ್ಧನಿದ್ದೇನೆ. ಮಾನ್ಯರೆ, ಈ ಅಂಕಿ ಸಂಖ್ಯೆಗಳನ್ನು ಕೊಡುವಾಗ, ನಾನು ಈ ವಿಷಯವನ್ನು ಅಭ್ಯಸಿಸಲು ಸಾಕಷ್ಟು ಕಾಳಜಿ ವಹಿಸಿರುವೆನು; ಈ ಅಂಕಿ ಸಂಖ್ಯೆಗಳನ್ನು ಕಚೇರಿಯ ಮಾಹಿತಿಯಿಂದ ಉಲ್ಲೇಖಿಸಲಾಗಿದೆ; ಮುಂಬೈ ಪ್ರಾಂತದಲ್ಲಿ ಉಳಿಯುವುದರಿಂದ ಕರ್ನಾಟಕದ ಜನರಿಗೆ ಯಾವ ರೀತಿಯಿಂದಲೂ ತೊಂದರೆಯಾಗಿಲ್ಲವೆಂಬುದು ನನ್ನ ಸ್ವಂತ ಅಭಿಪ್ರಾಯವಾಗಿದೆ.

ಮಾನ್ಯರೆ, ಈಗ ನನ್ನ ವಾದದಲ್ಲಿ ಮತ್ತೊಂದು ಪ್ರಶ್ನೆಯಿದೆ, ಅದು ಮಹತ್ವದ್ದು ಇದೆ ಎಂಬುದು ನನ್ನ ವಿಚಾರವಾಗಿದೆ; ಈ ಬದಿಗೆ ಇರುವ ನನಗೊಬ್ಬನಿಗೇ ಅಲ್ಲ, ಆದರೆ ಈ ಗೊತ್ತುವಳಿಯನ್ನು ತರಲು ಹೊಣೆಗಾರರಾದ ಆ ಸ್ನೇಹಿತರೂ ಇದನ್ನು ವಿಚಾರ ಮಾಡುವಷ್ಟು ಮಹತ್ವದ್ದಾಗಿದೆ; ನನ್ನ ಪ್ರಶ್ನೆ ಹಣ ಕಾಸಿನದು. ಹೊಸದಾಗಿ ರಚಿತವಾದ ಕನ್ನಡ ಮಾತನಾಡುವವರ ಪ್ರಾಂತಕ್ಕೆ, ಆಧುನಿಕ ಕಾಲದಲ್ಲಿ ಪ್ರತಿ ಯೊಂದು ಸುಧಾರಿತ ಸರಕಾರವು ಸ್ವೀಕರಿಸಿದ ವೆಚ್ಚದ ಪ್ರಮಾಣವನ್ನು ಹಣಕಾಸಿನಲ್ಲಿ ಉಳಿಸಿಕೊಳ್ಳಲು ಸಾಧ್ಯವೇ? ಇದು, ಅತ್ಯಂತ ಮಹತ್ವವಾದ ಪ್ರಶ್ನೆ ಎಂದು ನಾನು ತಿಳಿಯುವೆ. ಗೊತ್ತುವಳಿಯ ಪರವಾಗಿ ಮಾತನಾಡಿದ ನನ್ನ ಎದುರಿಗಿದ್ದ ಸ್ನೇಹಿತರು, ಈ ಪ್ರಾಂತದ ಸರಕಾರದ ಅಲಕ್ಷ್ಯದ ಕಾರಣವಾಗಿ ಹಳೆಯ ಕರ್ನಾಟಕವು ವಿಪರೀತವಾಗಿ ಕಷ್ಟ ಅನುಭವಿಸಿದೆಯೆಂಬ ತಕರಾರಿನ ಕಡೆಗೆ, ಸದನದ ಗಮನವನ್ನು ಸೆಳೆದಿದ್ದಾರೆ.

ಮಾನ್ಯ ಸಭಾಪತಿಗಳು: ಸೀಮಿತವಾದ ವೇಳೆಯ ನೆನಪನ್ನು ಮಾನ್ಯ ಸದಸ್ಯರಿಗೆ ಮಾಡಿಕೊಡಬೇಕಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ತಾವು ನನ್ನನ್ನು ಕೇಳಿದರೆ...

ಮಾನ್ಯ ಸಭಾಪತಿಗಳು: ಮಾನ್ಯ ಸದಸ್ಯರು ವಾದಿಸುತ್ತಿರುವಾಗ, ಮಧ್ಯೆಯೇ ಅಡ್ಡಬರುವುದು ನನ್ನ ಇಚ್ಛೆಯಾಗಿಲ್ಲ; ಆದರೆ ಭಾಷಣಗಳಿಗೆ ನಿಶ್ಚಿತಗೊಳಿಸಿದ ವೇಳೆಯ ಅವಧಿಯನ್ನು ಮಾತ್ರ ಅವರಿಗೆ ನೆನಪಿಸುವೆ; ಇದರಿಂದ ಸಂಕ್ಷಿಪ್ತವಾಗಿ ಅವರು ವಾದ ಮಾಡಬಹುದಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಹಣಕಾಸಿನ ಸಮಸ್ಯೆಯ ಬಗ್ಗೆ, ನಾನು ಹೀಗೆ ಹೇಳಬಯಸುವೆ. ಹಂಚಿದ ಪುಸ್ತಕದಲ್ಲಿ, ನಮಗೆ ಕೆಲವು ಅಂಕಿ ಸಂಖ್ಯೆಗಳನ್ನು ಕೊಡಲಾಗಿದೆ. ಪರಿಶಿಷ್ಟ "ಬಿ" ಇದರಲ್ಲಿ ಕನ್ನಡ ಮಾತನಾಡುವವರ ಪ್ರಾಂತದ ಒಟ್ಟು ವೆಚ್ಚವು ೨ ಕೋಟಿ ರೂಪಾಯಿ ಮತ್ತು ಒಟ್ಟು ಅದಾಯ ೨.೫೭ ಲಕ್ಷ ಆಗುವುದೆಂದು ನಮಗೆ ಹೇಳಲಾಗಿದೆ. ಒಂದು ಪ್ರಾಂತದ ಆಡಳಿತವನ್ನು ಸಾಗಿಸಲು ಬರುವ ಮೀರಿದ ವೆಚ್ಚ ಎಂದು ಕರೆಯಲ್ಪಡುವ ಮೊತ್ತ ಈ ಅಂಕಿ ಸಂಖ್ಯೆಯಲ್ಲಿ ಎಷ್ಟರಮಟ್ಟಿಗೆ ಇದೆಯೆಂಬುದು ನನಗೆ ಗೊತ್ತಿಲ್ಲ. ಆದಾಯ ಹಾಗೂ ವೆಚ್ಚದ ಕೆಲವೊಂದು ಶೀರ್ಷಿಕೆಗಳ ಕೆಳಗೆ ಮೊತ್ತವನ್ನು ಮಾತ್ರ ತೋರಿಸಲಾಗಿದೆಯೆಂದು ನನಗೆ ಕಾಣುತ್ತಿದೆ. ವೆಚ್ಚದ ಬಾಬಿನಲ್ಲಿ ಅವಶ್ಯವಾಗಿ ಕೊಡಲೇಬೇಕಾದ ಕೆಲವು ವೇತನಗಳನ್ನು ಕಾಣಿಸಿಲ್ಲ; ರಾಜ್ಯಪಾಲ ಅವರ ಆಪ್ತ ಕಚೇರಿಯಲ್ಲಿಯ ಸಿಬ್ಬಂದಿ, ಕಾರ್ಯದರ್ಶಿಗಳು, ಮಂತ್ರಿಗಳು, ಅತ್ಯಂತ ಅವಶ್ಯವಿರುವ ಸಾರ್ವಜನಿಕ ಇಲಾಖೆಯ ನಿರ್ದೇಶಕರು, ಪೊಲೀಸ್ ಮಹಾನಿರೀಕ್ಷಕರು, ಆರೋಗ್ಯಾಧಿಕಾರಿಗಳು... ಹೀಗೆ ರಾಜ್ಯದಾಡಳಿತವನ್ನು ಸಾಗಿಸಲು ಅವಶ್ಯವಿರುವ ಎಲ್ಲ ಅತ್ಯುನ್ನತ ಅಧಿಕಾರಿಗಳ ವೇತನಗಳ ವೆಚ್ಚವು ಎಲ್ಲಿಯೂ ಕಂಡುಬರುವುದಿಲ್ಲ.

ಶ್ರೀ ವಿ. ಎನ್. ಜೋಗ್: ಇನ್ನೊಂದು ಪುಸ್ತಕದಲ್ಲಿಯ ಪರಿಶಿಷ್ಟ "ಬಿ" ಇದರಲ್ಲಿ ಈ ಅಂಕಿ ಸಂಖ್ಯೆಗಳನ್ನು ನೀವು ನೋಡುವಿರಿ.

ಡಾ. ಬಿ. ಆರ್. ಅಂಬೇಡ್ಕರ್: ಇರಬಹುದು. ಆದರೆ ಮಾನ್ಯರೆ, ಇದೇ ಆಯವ್ಯಯ ಪತ್ರಿಕೆಯಾಗುವುದೆಂದು ಒಂದು ಕ್ಷಣ ಗ್ರಹೀತವಾಗಿಟ್ಟುಕೊಳ್ಳೋಣ. ಇದರಲ್ಲಿ ನಿರೂಪಿಸಿದಂತೆ ರೂಪಾಯಿ ೫೭ ಲಕ್ಷ ಅಥವಾ ಸ್ವಲ್ಪ ಹೆಚ್ಚಿಗೆ ಅಧಿಕ ಆದಾಯವೆಂದೂ ಹಿಡಿಯೋಣ. ಇದೀಗ ನನ್ನ ಪ್ರಶ್ನೆ ಇಷ್ಟೇ ಇದೆ; ಆಧುನಿಕ ರಾಜ್ಯದಾಡಳಿತದಲ್ಲಿ ಏನೇನು ಅವಶ್ಯವೋ ಅವನ್ನೆಲ್ಲ ಇಷ್ಟೇ ಆದಾಯದಲ್ಲಿ ಪೂರೈಸಲು ಸಾಧ್ಯವೇ? ಮುಂಬೈ ನಗರಪಾಲಿಕೆಯ ಆದಾಯದ ಪರಿಚಯವನ್ನು ನನ್ನ ಮಾನ್ಯ ಮಿತ್ರರು ಮಾಡಿಕೊಂಡರೆ, ಹೊಸ ಪ್ರಾಂತದ ಆದಾಯವು ಮುಂಬೈ ನಗರಪಾಲಿಕೆಯ ಆದಾಯದ ಅರ್ಧದಷ್ಟೂ ಸಹ ಆಗುವುದಿಲ್ಲವೆಂದು ಅವರಿಗೆ ತಿಳಿದುಬರುವುದು. ಮುಂಬೈ ನಗರಪಾಲಿಕೆಯ ಆದಾಯವು ರೂಪಾಯಿ ೪ ಕೋಟಿಯಷ್ಟು ಇದೆ; ರೂಪಾಯಿ ೪ ಕೋಟಿಯಿಂದಲೂ ಸಹ, ಆಧುನಿಕ ಸರಕಾರವು ಮಾಡಬೇಕಾದಷ್ಟು ಕೆಲಸವನ್ನು ಪೂರೈಸಲು ಅದಕ್ಕೆ ಆಗುತ್ತಿಲ್ಲ. ಅದಕ್ಕೇನೆ ನಾನು ಕೇಳಬೇಕಾಗಿದೆ, ಬಹಳ ಗಂಭೀರವಾಗಿಯೂ ಕೇಳಬೇಕಾಗಿದೆ– ಈ ಸಮಸ್ಯೆಯ ವಿಚಾರವು ಪ್ರಬಲವಾಗಿರಬೇಕಲ್ಲವೇ ಎಂದು. ಈ ಚರ್ಚೆಯ ತಮ್ಮ ವಾದದಲ್ಲಿ ನನ್ನ ವಿದ್ವಾಂಸ ಸ್ನೇಹಿತರು ಒರಿಸ್ಸಾದ ಮುಖ್ಯಮಂತ್ರಿಗಳ ಭಾಷಣದಲ್ಲಿಯ ಅವತರಣಿಕೆಯೊಂದನ್ನು ಕೊಟ್ಟಿದ್ದಾರೆ: ಈ ಅವತರಣಿಕೆಯಲ್ಲಿ ಎಲ್ಲ ಅವಯವಗಳೂ ಒಂದುಗೂಡಿರುವುದಕ್ಕೆ ನನಗೆ ಸಂತೋಷವಾಗಿದೆ ಎಂದು ಅವರು ನುಡಿದಿದ್ದಾರೆ. ಅವಯವಗಳನ್ನು ಒಂದುಗೂಡಿಸುವುದು ಮಹತ್ವದ್ದಲ್ಲ, ಆದರೆ ಅವರ ಹೊಟ್ಟೆಗೆ ಹಾಕುವುದು ಮುಖ್ಯ ಎಂದು ನಾನು ನನ್ನ ಮಾನ್ಯ ಮಿತ್ರರಿಗೆ ಹೇಳಿದರೆ, ಅವರೇನನ್ನುವರೋ! ಇದು ವಿಚಾರ ಮಾಡತಕ್ಕ ಸಮಸ್ಯೆಯಾಗಿದೆ. ಮಾನ್ಯರೆ, ಸಾಮಾನ್ಯ ಸ್ಥಳೀಯ ಮಂಡಲಿಗೂ ಇರುವಷ್ಟು ಆದಾಯವಿರದ ಸಣ್ಣಸಣ್ಣ ಪ್ರದೇಶಗಳಲ್ಲಿ ನಮ್ಮ ಜನರನ್ನು ಪ್ರತ್ಯೇಕಿಸುವುದನ್ನು ನೋಡುವಾಗ, ನಮ್ಮ ದೇಶದಲ್ಲಿ ಇದು ಅತ್ಯಂತ ಹೃದಯದ್ರಾವಕವಾದುದು ಎಂದು ನಾನು ಹೇಳುತ್ತೇನೆ, ಬಹುವಾಗಿ ಒತ್ತುಕೊಟ್ಟು ಹೇಳುತ್ತೇನೆ. ಪ್ರಾಂತದಲ್ಲಿಯ ಪ್ರತ್ಯೇಕತೆಯು, ತಮ್ಮ ಪ್ರಾಂತದಲ್ಲಿ ನಾಯಕರಾಗಿ ರೂಪುಗೊಳ್ಳಬೇಕೆಂಬ ಹಲವರ ಮಹತ್ವಾಕಾಂಕ್ಷೆಯನ್ನು ಪೂರೈಸಬಹುದು; ಆದರೆ ಇನ್ನುಳಿದ ಜನಸಂಖ್ಯೆಯ ಗತಿಯೇನು? ಅವರಿಗೆ ಆಹಾರದ ಅವಶ್ಯಕತೆಯಿದೆ, ಬಟ್ಟೆಯ ಅವಶ್ಯಕತೆಯಿದೆ, ವಸತಿಯ ಅವಶ್ಯಕತೆಯಿದೆ. ಇಂಥ

ಪರಿಸ್ಥಿತಿಯನ್ನು ನಾವು ಯಾರೂ ಸಹಿಸಿಕೊಳ್ಳಲಾರೆವು. ನಾನು ಇದನ್ನು ಮತ್ತೆ ಬಹಳಷ್ಟು ಒತ್ತುಕೊಟ್ಟು ಹೇಳುವೆ. ಮಾನ್ಯರೆ, ಈ ಜಿಲ್ಲೆಗಳು ಸಹ ಹೇಗಿವೆ? ಇವುಗಳಲ್ಲಿ ಎರಡು ಜಿಲ್ಲೆಗಳು ಬರಗಾಲದಿಂದ ಪೀಡಿತವಾಗಿವೆ. ಇಡೀ ಬಿಜಾಪುರ ಜಿಲ್ಲೆಯು ಬರಗಾಲಪೀಡಿತ ಜಿಲ್ಲೆಯಾಗಿದೆ. ಇಡೀ ಬಳ್ಳಾರಿ ಜಿಲ್ಲೆಯೂ ಸಹ ಬರಗಾಲ ಪೀಡಿತವೆಂದು ನಾನು ಕೇಳಿರುವೆ. ಬರಗಾಲ ಪೀಡಿತ ಪ್ರದೇಶಗಳಿಂದ ಅವರು ಆದಾಯವನ್ನಾದರೂ ಹೇಗೆ ನಿರೀಕ್ಷಿಸುವರು? ಮುಂಬೈ ಪ್ರಾಂತದಿಂದ ಪ್ರತ್ಯೇಕವಾದ ಕೂಡಲೇ, ಅದು ಹಾಲು ಕೊಡುವ ಹಸುವಾಗುವುದೆಂದು ತಿಳಿಯಬೇಕೆ?

ಆಮೇಲೆ ಇನ್ನೊಂದು ಸಮಸ್ಯೆಯೂ ಇದೆ; ಅದರ ಕಡೆಗೆ ತಮ್ಮ ಗಮನ ಸೆಳೆಯುವೆ. ನಾನು ಅಲ್ಪಸಂಖ್ಯಾತರ ಸದಸ್ಯನಾಗಿರುವೆ. ಆದುದರಿಂದ ಅಲ್ಪಸಂಖ್ಯಾತರ ದೃಷ್ಟಿಯಿಂದ ಎಲ್ಲ ಸಂಗತಿಗಳನ್ನು ನೋಡಲೇಬೇಕಾಗುತ್ತದೆ. ಗೊತ್ತುವಳಿಯ ಪರವಾಗಿ ಮಾತನಾಡಿದ ಅನೇಕ ಸದಸ್ಯರು ಮುಸ್ಲಿಮರ ಹಾಗೂ ಹರಿಜನರ ಆಸಕ್ತಿಗಳನ್ನು ಕಾಯ್ದುಕೊಂಡು ಬರುವುದಾಗಿ ಆಶ್ವಾಸನೆ ಕೊಟ್ಟದ್ದನ್ನು ಕೇಳಿ ನನಗೆ ಬಹಳ ಆನಂದವಾಗಿದೆ. ಪ್ರಾಂತೀಯ ಕ್ಷೇತ್ರಗಳಿಂದ ಇವರು ಪ್ರತ್ಯೇಕಿಸಿದ ಮೇಲೆ, ಅಲ್ಪಸಂಖ್ಯಾತರು ಇನ್ನೂ ಹರಿದು ಹಂಚಿಹೋಗುವರೆಂದು ನಾನು ಹೇಳಲೇಬೇಕಾಗಿದೆ. ಕರ್ನಾಟಕದಲ್ಲಿ ನಮಗೆ ಎರಡೇ ಸ್ಥಳಗಳಿವೆ ಎಂಬುದನ್ನು ನಾನು ಮರೆಯಲಾರೆ. ಕರ್ನಾಟಕದಿಂದ ಪ್ರಾತಿನಿಧ್ಯ ಪಡೆದ ಇಬ್ಬರು ದಲಿತ ವರ್ಗದವರು, ಈ ಪ್ರಾಂತದ ಉಳಿದ ಕ್ಷೇತ್ರಗಳಿಂದ ಪ್ರತಿನಿಧಿಸಲ್ಪಟ್ಟ ೧೩ ಸದಸ್ಯರು ತಮ್ಮವರು ಇರುವರೆಂದೂ, ಅವರು ತಮ್ಮ ಯೋಗಕ್ಷೇಮ ನೋಡಿಕೊಳ್ಳುವರೆಂದೂ ಅವರು ಭಾವಿಸಿರಬೇಕೆಂಬುದು ನನಗೆ ಖಾತ್ರಿಯಿದೆ. ಅವರ ಗತಿ ಏನಾಗುವುದು? ಕರ್ನಾಟಕದಿಂದ ಮುಸ್ಲಿಮ್ ಸಮುದಾಯಕ್ಕೆ ೮ ಸ್ಥಳಗಳಿವೆ.

ಸರ್ ಅಲಿ ಮಹಮ್ಮದ್ ಖಾನ್ ದೆಹಲವಿ: ಬರಿ ನಾಲ್ಕು.

ಡಾ. ಬಿ. ಆರ್. ಅಂಬೇಡ್ಕರ್: ಒಳ್ಳೇದು. ನನಗೆ ವೇಳೆ ಬಹಳ ಕಡಿಮೆ ಇರುವುದರಿಂದ ನಾನು ಹೆಚ್ಚಿಗೆ ವಾದಿಸಲು ಹೋಗುವುದಿಲ್ಲ. ಬಹುಸಂಖ್ಯಾತರಾಗಿರುವ ಸಮುದಾಯಗಳ ಸದಸ್ಯರಿಗೆ ತಾವು ಉದಾರರಾಗಿಯೂ, ದಯಮಯಿಯಾಗಿಯೂ ಇರುವೆವೆಂದು ಹೇಳುವುದು ಚೆನ್ನಾದುದೇ. ಆದರೆ ಅವರ ಉದಾರತೆಯನ್ನು, ದಯೆಯನ್ನು ನಾವು ಅವಲಂಬಿಸಬೇಕಾಗಿಲ್ಲ. ನಮಗೆ ಹಕ್ಕುಗಳು ಬೇಕು; ಹಕ್ಕುಗಳನ್ನು ಯಾರೂ ಉದಾರರಾಗಿ ಕೊಡುವುದಿಲ್ಲ. ಬರಿ ಜನಸಂಖ್ಯೆಯ ಆಧಾರದಿಂದ ನೋಡಿದರೆ ತೀರ ಅಲ್ಪಸಂಖ್ಯಾತರಾಗಿರುವ ಈ ಸಮುದಾಯಕ್ಕೆ ಒಂದು ವೇಳೆ ಹೆಚ್ಚಿನ ಸೌಲಭ್ಯ ಒದಗಿಸಲು ಅವರು ಬದ್ಧರಾದರೂ, ಕೆಲವೇ ಲಕ್ಷ ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಜನಸಂಖ್ಯೆ ಇರುವಾಗ, ಅದೆಂಥ ಹೆಚ್ಚಿನ ಸೌಲಭ್ಯ ಕೊಡಬಲ್ಲರು? ನಾನು ಗೊತ್ತುವಳಿಯನ್ನು ವಿರೋಧಿಸುವ ಕಾರಣಗಳಲ್ಲಿ ಇದೂ ಒಂದು. ಇಂಥ ಪ್ರತ್ಯೇಕತೆಯನ್ನು ಸ್ವೀಕರಿಸಲು ನಾನು ಸಿದ್ಧನಿಲ್ಲ. ನಮ್ಮ ಶಕ್ತಿ ಬಹುಭಾಷಾ ರಾಜ್ಯಾಡಳಿತದಲ್ಲಿಯೇ ಇದೆ. ನಾನು ಹೇಳಬೇಕೆಂದು ಬಯಸುವುದಿಲ್ಲವಾದರೂ ಆದರೆ ನನ್ನದೇ ಹೆದರಿಕೆ ನನಗಿವೆ; ಕರ್ನಾಟಕ ಪ್ರಾಂತವು ರಚನೆಯಾದರೆ, ಅದು ಉಳಿದೆಲ್ಲರ ವಿರುದ್ಧವಾದ ಲಿಂಗಾಯತರ ಪ್ರಾಂತವಾಗುವುದು. ಸಂಗತಿಗಳನ್ನು ಬಚ್ಚಿಟ್ಟು ನಾನು ಮಾತನಾಡುತ್ತಿಲ್ಲ; ಉದಾಹರಣೆಗಾಗಿ ಪ್ರತ್ಯೇಕ ಪ್ರಾಂತವಾದರೆ, ಮರಾಠಿಗರು ಕನ್ನಡಿಗರ ವಿರುದ್ಧ ಒಂದುಗೂಡುವುದು. ಇಂಥ ಪರಿಸ್ಥಿತಿ ನಮಗೆ ಬೇಕಾಗಿಲ್ಲ. ಸದ್ಯ ನಾವೆಲ್ಲ ಒಂದುಗೂಡಿಕೊಂಡು ಪಡುತ್ತಿರುವ ಸಂತೋಷವು ಅನಂತರ ಉಳಿಯುವುದಿಲ್ಲ.

ಇನ್ನು ಒಂದು ಸಂಗತಿಯ ಕಡೆಗೆ ಸದನದ ಲಕ್ಷ್ಯವನ್ನು ಸೆಳೆಯಬಯಸುವೆ; ಅನಂತರ ನನ್ನ ವಾದ ಮುಗಿಸುವೆ. ನಾನು ಹೇಳುವ ಸಂಗತಿಗೆ ಬಹುಶಃ ಹಲವು ಸದಸ್ಯರು ಒಪ್ಪಲಿಕ್ಕಿಲ್ಲವೆಂಬುದೂ

ನನಗೆ ಗೊತ್ತಿದೆ; ಆದರೆ ಅದು ನನ್ನ ನಂಬಿಕೆಯಾಗಿದೆ. ಬ್ರಿಟಿಷರು ತಮ್ಮ ಇತಿಹಾಸದಲ್ಲಿ ಏನೋ ಮಾಡಿರಬಹುದು. ಎಷ್ಟೋ ಕಾರ್ಯಗಳನ್ನು ಮಾಡದೆಯೆ ಇರಬಹುದು. ಎಷ್ಟೋ ಕಾರ್ಯಗಳನ್ನು ಅವರು ಮಾಡಿಯೇ ಇಲ್ಲ; ಬಹುಶಃ ಅವುಗಳನ್ನು ಮಾಡಲು ಅವರ ಇಚ್ಚೆಗೆ ಅವು ಒಪ್ಪಿತವಾಗಿರಲಿಕ್ಕಿಲ್ಲ– ಬ್ರಿಟಿಷರು ಎರಡು ಕಾರ್ಯಗಳನ್ನು ಮಾಡಿದ್ದಾರೆ. ಬ್ರಿಟಿಷರು ಭಾರತದಿಂದ ಹೋದಮೇಲೆಯೂ, ಈ ದೇಶದಲ್ಲಿಯ ಅವರ ಆಡಳಿತದ ಎರಡು ಸ್ಮಾರಕಗಳಾಗಿ ಅವು ಬದುಕಿ ಉಳಿಯುತ್ತವೆಯೆಂದು ನಾನು ಉದಾರಮನಸ್ಕನಾಗಿ ಒಪ್ಪಿಕೊಳ್ಳುತ್ತೇನೆ. ಅವುಗಳಲ್ಲಿ ಮೊದಲನೆಯ ಸಂಗತಿಯೆಂದರೆ, ಸರ್ವರಿಗೂ ಒಂದೇ ಆದ ಕಾನೂನಿನ ನೀತಿ. ನೀವು ಕಾಶ್ಮೀರದಿಂದ ದಕ್ಷಿಣ ಭಾರತಕ್ಕೆ ಪ್ರವಾಸ ಮಾಡಬಹುದು; ಆಗ ಕಾಶ್ಮೀರ, ಪಂಜಾಬ್, ವಾಯುವ್ಯ ಸರಹದ್ದು ಪ್ರಾಂತ ಅಥವಾ ಮದ್ರಾಸ್‌ನಲ್ಲಿ ರಾಜಮಹೇಂದ್ರಿಯದಲ್ಲಿ ನೀವು ಕೊಲೆಮಾಡಿರ ಬಹುದು; ಆದರೆ ಕಾನೂನು ಎಲ್ಲರಿಗೂ ಒಂದೇ. ಆಸ್ತಿಯ ಹಸ್ತಾಂತರ ಅಂದರೆ ಏನು? ಸಾಕ್ಷಿ ಎಂದರೆ ಏನು? ಇವೆಲ್ಲ ಎಲ್ಲಿ ಹೋದರೂ ನಿಮಗೆ ತಿಳಿಯುವುದು. ಮಾನ್ಯರೆ, ಇಂಥದು ನಮ್ಮಲ್ಲಿ ಮೊದಲು ಇರಲಿಲ್ಲವೆಂದು ಹೇಳುವೆ. ಬ್ರಿಟಿಷರು ನಮಗೆ ದಯಪಾಲಿಸಿದ ಇನ್ನೊಂದು ಸಂಗತಿಯೆಂದರೆ ಎಲ್ಲರಿಗೂ ಸಂಬಂಧವಿರುವ ಕೇಂದ್ರ ಸರಕಾರವು. ಇದೂ ಸಹ ನಮ್ಮಲ್ಲಿ ಮೊದಲು ಇರಲಿಲ್ಲ. ಸರ್ವರಿಗೂ ಒಂದೇ ಆದ ಕೇಂದ್ರ ಸರಕಾರವಿರುವ ನೈಜ ಸಂಗತಿಯ ಮಹತ್ವವು ಬಹುಶಃ ಅನೇಕರಿಗೆ ಪರಿಚಿತವಾಗಿರಲಿಕ್ಕಿಲ್ಲ. ಆದರೆ ಇದು ಬಹಳ ಮಹತ್ವದ ಸತ್ಯಸಂಗತಿಯೆಂದು ನಾನು ಬಗೆಯುತ್ತೇನೆ. ಇಂದು ನಾವೆಲ್ಲರೂ ಕೂಡಿ ರಾಷ್ಟ್ರವನ್ನು ಕಟ್ಟುವ ಮಾರ್ಗದಲ್ಲಿದ್ದೇವೆ ಎಂದರೆ, ನಮ್ಮಲ್ಲಿ ನಾವೆಲ್ಲ ಒಂದು ಎಂಬ ಭಾವನೆಯ ರಾಷ್ಟ್ರೀಯತೆಯ ಉತ್ಸಾಹ ಚಿಮ್ಮುತ್ತಿದ್ದರೆ, ಅದೆಲ್ಲವೂ ಕೇಂದ್ರ ಸರಕಾರವಿರುವ ಸತ್ಯ ಸಂಗತಿಯಿಂದಲೇ ಬಂದಿರುವುದು; ಈ ಸತ್ಯ ಸಂಗತಿಯಿಂದಲೇ ನಾವೆಲ್ಲ ಒಂದೇ ಸರಕಾರದ ನಾಗರಿಕರು ಎಂಬುದು ನಮಗೆ ಅರಿವಾಗಿದೆ.

ಮಾನ್ಯರೆ, ಸದನದ ಸದಸ್ಯರು ನಾವು ದೊರಕಿಸಿಕೊಂಡ ಈ ಎರಡು ಲಾಭಗಳನ್ನು ಕೆಡಿಸುವಂತೆ ಏನೂ ಮಾಡಬಾರದೆಂದು ಬಿನ್ನವಿಸಿಕೊಳ್ಳುತ್ತೇನೆ. ವೈಯಕ್ತಿಕವಾಗಿ ನನಗೆ, ನಿರ್ದಿಷ್ಟವಾದ ಸಂಸ್ಕೃತಿಗೆ– ಅದು ಹಿಂದೂ ಸಂಸ್ಕೃತಿ ಇರಬಹುದು, ಮುಸ್ಲಿಮ್ ಸಂಸ್ಕೃತಿ ಇರಬಹುದು– ಕನ್ನಡ ಸಂಸ್ಕೃತಿ ಇರಬಹುದು ಅಥವಾ ಗುಜರಾತಿ ಸಂಸ್ಕೃತಿ ಇರಬಹುದು. ಈ ದೇಶದಲ್ಲಿ ಯಾವುದೇ ಸ್ಥಾನವಿಲ್ಲವೆಂದು ನನ್ನ ನಂಬಿಕೆಯಾಗಿದೆ. ಅದನ್ನು ಮುಕ್ತವಾಗಿ ನಾನು ಹೇಳುತ್ತೇನೆ. ಇವುಗಳನ್ನು ನಾವು ಅಲ್ಲಗಳೆಯಲು ಆಗುವುದಿಲ್ಲ; ಆದರೆ ಅವು ನಮಗೆ ಲಾಭದಾಯಕವೆಂದು ಅವುಗಳನ್ನು ಬೆಳೆಸಬಾರದು; ಅವು ನಮಗೆ ಹಾನಿಕಾರಕವೆಂದೇ ಗಣಿಸಬೇಕು; ಅವು ನಮ್ಮ ವಿಧೇಯಕವನ್ನು ಇಬ್ಬಾಗಿಸುತ್ತವೆ. ನಮಗಿರುವ ಗುರಿಯನ್ನು ನಾಶ ಮಾಡುತ್ತೇವೆ. ನಾವೆಲ್ಲ ಭಾರತೀಯರು ಎಂಬ ಭಾವನೆಯನ್ನು ನಿರ್ಮಿಸುವುದು ನಮ್ಮ ಗುರಿಯಾಗಿರಬೇಕು. ಕೆಲವು ಜನರು ನಾವು ಮೊದಲು ಭಾರತೀಯರು, ಅನಂತರ ಹಿಂದೂಗಳು ಅಥವಾ ಮುಸ್ಲಿಮರು ಎಂದು ಹೇಳುವುದೂ ನನಗೆ ಸರಿಕಾಣುವುದಿಲ್ಲ. ಅದರಿಂದ ನನಗೆ ಸಮಾಧಾನವಿಲ್ಲ; ಅದರಿಂದ ನನಗೆ ಸಮಾಧಾನವಿಲ್ಲವೆಂದು ಸ್ಪಷ್ಟವಾಗಿ ಹೇಳುವೆ. ಭಾರತೀಯರು ಎಂದು ನಮಗಿರುವ ನಿಷ್ಠೆಯು; ಸ್ಪರ್ಧಾತ್ಮಕ ನಿಷ್ಠೆಗಳಾದ– ಅದು ಧರ್ಮದ ಅಭಿಮಾನದಿಂದ ಬಂದಿರಲಿ, ನಮ್ಮ ಸಂಸ್ಕೃತಿಯಿಂದ ಬಂದಿರಲಿ ಅಥವಾ ಭಾಷಾಭಿಮಾನದಿಂದ ಬಂದಿರಲಿ– ಯಾವುದೇ ನಿಷ್ಠೆಗಿಂತ ಅದು ಕಡಿಮೆಯಾಗಕೂಡದು. ನಮ್ಮ ಎಲ್ಲಾ ಜನರು ಮೊದಲು ಭಾರತೀಯರು, ಕೊನೆಗೆ ಭಾರತೀಯರು, ಭಾರತೀಯತೆಯನ್ನುಳಿದು ಬೇರೆ ಏನೂ ಇಲ್ಲ ಎನ್ನುವಂತಾಗಬೇಕೆಂದು ನಾನು ಬಯಸುವೆ. ಇಂದಿನ ಗೊತ್ತುವಳಿಯು ನೇರವಾಗಿ

ಈ ಆದರ್ಶದ ವಿರುದ್ಧವೇ ಆಗಿದೆ. ಮಾನ್ಯರೆ, ಈ ಆದರ್ಶವನ್ನು ನಾವು ಉತ್ಸಾಹದಿಂದ ಯಾವಾಗಲೂ ಹಸಿರಾಗಿರುವಂತೆ ನೋಡಿಕೊಳ್ಳಬೇಕು. ಅಮೆರಿಕೆಯಂಥ ರಾಷ್ಟ್ರದಲ್ಲಿ, ಜರ್ಮನಿಯಂಥ ರಾಷ್ಟ್ರದಲ್ಲಿ, ಯುರೋಪ್‌ದಂಥ ರಾಷ್ಟ್ರದಲ್ಲಿ ನಾವೆಲ್ಲ ಒಂದು ಎಂಬ ಭಾವನೆಯು ಘನೀಭೂತಗೊಂಡಿದೆ; ಅಲ್ಲಿ ನೀನು ಜರ್ಮನ್ ಅಲ್ಲ ಎಂಬ ಭಾವನೆ ಮೂಡುವಂತೆ ಮಾಡುವ ಅವಶ್ಯಕತೆಯೇ ಇಲ್ಲ; ಪ್ರತ್ಯೇಕತೆಯು ಬಂದಾಗ ಅವರು ಅದನ್ನು ಸಹಿಸಿಕೊಳ್ಳುವುದೇ ಇಲ್ಲ. ಆದರೆ ನಾವು ಭಾರತೀಯರೆಂಬ ಭಾವನೆ ಇನ್ನು ಗರ್ಭಕೋಶದಲ್ಲಿದೆ; ಅದೀಗ ಪಕ್ವವಾಗಲು ಪ್ರಾರಂಭಿಸುತ್ತಲಿದೆ; ಬೇರೆ ನಿಷ್ಠೆಗಳು– ಸಂಸ್ಕೃತಿಯ ಭಾವನೆಯಂತಹುದು– ರಾಷ್ಟ್ರೀಯತೆಗೆ ಜೊತೆ ಜೊತೆಯಾಗಿ ಬೆಳೆಯುವಂತೆ ಒಪ್ಪಿಗೆ ಕೊಡುವುದು ನಾವು ಮಾಡುತ್ತಿರುವ ಅತ್ಯಂತ ದೊಡ್ಡ ಅಪರಾಧವಾಗಿದೆಯೆಂದು ನಾನು ಉದ್ದೇಶಪೂರ್ವಕವಾಗಿ ಹೇಳುವೆ. ಈ ಗೊತ್ತುವಳಿಯಲ್ಲಿ ನನ್ನ ಪಾಲು ಇಲ್ಲ, ನಾನು ಅನುಕೂಲವಾಗಿಯೂ ಇಲ್ಲ. ಈ ಗೊತ್ತುವಳಿಯನ್ನು ನಾನು ವಿರೋಧಿಸುತ್ತೇನೆ, ಬಲವಾಗಿ ವಿರೋಧಿಸುತ್ತೇನೆ (ಚಪ್ಪಾಳೆ).

# ೪೨

# *ವಿಧಾನಸಭೆಯ ಕಾರ್ಯವಿಧಾನವನ್ನು ಕುರಿತು:

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯರೆ, ಈ ತಿದ್ದುಪಡಿಯನ್ನು ಕುರಿತು, ಮೊದಲಿಗೆ ತಮ್ಮ ಗಮನವನ್ನು ಭಾರತ ಸರಕಾರದ ಕಾನೂನಿನ ಕಲಮು ೭೩, ಉಪಪ್ರಕರಣ (೩) ಇದರ ಕಡೆಗೆ ಸೆಳೆಯಬಯಸುವೆ; ಕಲಮು ೭೩, ಉಪ ಪ್ರಕರಣ (೩) ಇದರ ಪ್ರಕಾರ ಈ ನಿಯಮವು ಈ ಸದನದಲ್ಲಿ ಅಧಿಕಾರಾತೀತವಾಗುತ್ತಿದೆ ಎಂಬುದು ನನ್ನ ಮೊದಲ ನಿವೇದನೆ. ಕಲಮು ೭೩ರಲ್ಲಿ ಹೀಗೆ ಹೇಳಿದೆ:

> "(೧) ಹಣಕಾಸು ಮಸೂದೆಗಳನ್ನು ಕುರಿತಾದ ಈ ಕಾನೂನಿನ ಈ ಭಾಗದಲ್ಲಿರುವ ವಿಶೇಷ ಅಂಶಗಳ ಅಧೀನಕ್ಕೆ ಒಳಗಾಗಿ, ವಿಧಾನಪರಿಷತ್ತು ಇದ್ದ ಪ್ರಾಂತೀಯ ವಿಧಾನ ಮಂಡಲದಲ್ಲಿ ಯಾವುದೇ ಒಂದು ಸದನದಲ್ಲಿ ಮಸೂದೆಯೆಂದು ಮೊದಲು ಬರಬಹುದಾಗಿದೆ.
> (೨) ಪ್ರಾಂತದ ವಿಧಾನ ಮಂಡಲದಲ್ಲಿ ಇನ್ನೂ ಇತ್ಯರ್ಥವಾಗದೆ ಉಳಿದಿರುವ ಮಸೂದೆ ಸದನ ಅಥವಾ ಸದನಗಳ ಅಧಿವೇಶನವನ್ನು ಮುಂದೂಡಿದ ಕಾರಣಕ್ಕಾಗಿ ರದ್ದಾಗಿ ಹೋಗುವುದಿಲ್ಲ."

ಆದ್ದರಿಂದ ಕಲಮು ೭೩, ಉಪ ಪ್ರಕರಣ (೩) ಇದರಲ್ಲಿ ಕಾಣಿಸಿರುವ ಅಂಶಗಳಿಂದ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ಗುಪ್ತೆ ಅವರು ತಂದ ತಿದ್ದುಪಡಿಯಲ್ಲಿಯ ಸೂಚನೆಯಂತೆ, ಎರಡು ಅಧಿವೇಶನಗಳ ನಂತರ ಇಲ್ಲವೆ ಒಂದು ವರುಷದ ತರುವಾಯ ಮಸೂದೆ ರದ್ದಾಗಬೇಕೆಂಬ ನಿಯಮವನ್ನು ಮಾಡಲು ಈ ಸದನಕ್ಕೆ ಅಧಿಕಾರವಿಲ್ಲವೆಂದು ನಾನು ನಿವೇದಿಸುವೆ. ಈ ನಿಯಮದ ಬಗ್ಗೆ ಇದು ನನ್ನ ಮೊದಲ ನಿವೇದನೆ.

ಈ ನಿಯಮದ ಬಗ್ಗೆ ನನ್ನ ಇನ್ನೊಂದು ನಿವೇದನೆಯೆಂದರೆ, ಈ ಸದನವು ಸ್ವೀಕರಿಸಿರುವ ನಿಯಮ ೧೯. ಪ್ರಸಕ್ತ ಪರಿಶೀಲಿಸಲ್ಪಡುತ್ತಿರುವ ಈ ನಿಯಮವು ಅಸಮಂಜಸವಾಗಿದೆ. ನಿಯಮ ೧೯ ಹೀಗೆ ಹೇಳುತ್ತದೆ:

> "ಅಧಿವೇಶನವು ಮುಂದೂಡಲ್ಪಟ್ಟಾಗ, ಇತ್ಯರ್ಥವಾಗದೇ ಇರುವ ಪ್ರಶ್ನೆಗಳ ಸೂಚನಾ ಪತ್ರಗಳು, ಶಾಸನಬದ್ಧ ಗೊತ್ತುಗಳಿವಳು, ನಿಯಮಗಳ ತಿದ್ದುಪಡಿಗಳಿಗಾಗಿರುವ ಗೊತ್ತುವಳಿಗಳು, ವಿಚಾರಣೆಯಲ್ಲಿ ನಿಯಮ ೩೪ರ ಪ್ರಕಾರ ಮುಂದಿನ ಅಧಿವೇಶನಕ್ಕೆ ಮುಂದೂಡಲ್ಪಟ್ಟ ಗೊತ್ತುವಳಿಗಳು ಮತ್ತು ಮಂಡಿಸಲ್ಪಟ್ಟ ಮಸೂದೆಗಳು ಇವುಗಳ ಹೊರತಾಗಿ ಉಳಿದೆಲ್ಲ ಸೂಚನಾಪತ್ರಗಳು ರದ್ದಾಗುವುವು."

---

*ಬಿ.ಎಲ್.ಎ. ಡಿಬೇಟ್ಸ್, ಸಂಪುಟ ೪, ಪುಟ ೧೧೬೨–೬೫
ದಿನಾಂಕ ೧೦ ಸೆಪ್ಟೆಂಬರ್ ೧೯೩೮.

ಆದ್ದರಿಂದ ಮಸೂದೆಗಳ ಬಗ್ಗೆ ಇರುವ ಗೊತ್ತುವಳಿಗಳು ೧೯ನೆಯ ನಿಯಮದ ಪ್ರಕಾರ ರಕ್ಷಿಸಲ್ಪಟ್ಟಿವೆ. ನಿಯಮ ಈಗಾಗಲೇ ಈ ಸದನವು ನಿಯಮ ೧೯ನ್ನು ಸ್ವೀಕರಿಸಿರುವುದರಿಂದ ಸದನವು ನಿಯಮ ೧೦೩ನ್ನಾಗಲೀ ಅಥವಾ ಸೂಚಿತವಾದ ತಿದ್ದುಪಡಿಯನ್ನಾಗಲೀ ಸ್ವೀಕರಿಸಲು ಮುಂದುವರಿಯುವುದು ಶಕ್ಯವಿಲ್ಲವೆಂಬುದು ನನ್ನ ನಿವೇದನೆ.

ನನ್ನ ಮೂರನೆಯ ನಿವೇದನೆ ಇದಾಗಿದೆ: ಭಾರತ ಸರ್ಕಾರದ ವಿಧೇಯಕದಲ್ಲಿನ ೭ನೇ ಕಲಮಿನ ೨ನೇ ಉಪಪ್ರಕರಣವನ್ನು ಅನುಲಕ್ಷಿಸದೆ, ಈ ಸದನಕ್ಕೆ ಈ ನಿಯಮವನ್ನು ಮತ್ತು ಉದ್ದೇಶಿತ ತಿದ್ದುಪಡಿಯನ್ನು ಅಂಗೀಕರಿಸಲು ಅಧಿಕಾರವಿದೆಯೆಂದು ಭಾವಿಸಿದರೂ, ಮತ್ತು ಈ ಸದನವು ೧೯ನೇ ನಿಯಮವನ್ನು ಅಂಗೀಕರಿಸಿದುದನ್ನು ಸಧ್ಯಕ್ಕೆ ಒತ್ತಟ್ಟಿಗಿಟ್ಟರೂ, ಈಗ ಸದನದ ಮುಂದಿಟ್ಟಿರುವ ಈ ನಿಯಮವು ಅನಗತ್ಯವೆಂದೇ ನನಗೆ ತೋರುತ್ತಿದೆ. ಈ ನಿಯಮವು "ಯಾವ ಗೊತ್ತುವಳಿಯೂ ಬರದಿದ್ದರೆ" ಎಂದು ಹೇಳುತ್ತದೆ. "ಗೊತ್ತುವಳಿ" ಎಂಬ ಪದದ ವ್ಯಾಖ್ಯೆಯನ್ನು ನಾನು ಎಲ್ಲಿಯೂ ಕಂಡಿಲ್ಲ. ಕಾರ್ಯದರ್ಶಿಯು ವಿಧೇಯಕವನ್ನು ಆಹ್ವಾನಿಸದಿದ್ದರೆ, ಬೇರೆಯವರು ಯಾರೂ ಮತ್ತೊಂದು ಗೊತ್ತುವಳಿಯನ್ನು ಮಂಡಿಸುವ ಪರಿಸ್ಥಿತಿಯಲ್ಲಿ ಇರುವುದಿಲ್ಲ ಎಂಬುದು ನನ್ನ ವಿಚಾರವಾಗಿದೆ. ಅದರ ಅರ್ಥವೆಂದರೆ ವಿಧೇಯಕವು ಕಾರ್ಯಕ್ರಮ ಪಟ್ಟಿಯಲ್ಲಿ ಇರಬೇಕು ಎಂಬುದು. ಎರಡನೆಯದಾಗಿ, ಅದು ಆಯಾ ದಿನದ ಕಾರ್ಯಕ್ರಮದ ಪಟ್ಟಿಯಲ್ಲಿ ನಿಯಮಬದ್ಧವಾಗಿ ಸೇರಿಸಿರಬೇಕು. ಮೂರನೆಯದಾಗಿ ಅದು ಕಾರ್ಯದರ್ಶಿಯಿಂದ ಆಹ್ವಾನಿಸಲ್ಪಡಬೇಕು. ವಿಧೇಯಕವು ಕಾರ್ಯದರ್ಶಿಯಿಂದ ಆಹ್ವಾನಿಸಲ್ಪಡದೆಯೆ, ನಮ್ಮ ಈ ಗೊತ್ತುವಳಿಯಿಂದ ವಿಧೇಯಕವನ್ನು ಮಂಡಿಸಿದ ಯಾವನೇ ಒಬ್ಬ ಸದಸ್ಯನೂ ದಂಡಿಸಲ್ಪಡಬಾರದೆಂಬುದೇ ನನ್ನ ನಿವೇದನೆಯಾಗಿದೆ; ಇಲ್ಲವಾದರೆ, ಅದರಲ್ಲಿ ಏನೂ ತಪ್ಪು ಇರುವುದಿಲ್ಲವೆಂಬುದೇ ಸರಿ.

ಮಾನ್ಯ ಸಭಾಪತಿ: ಇದು ಸ್ವಲ್ಪ ಹೆಚ್ಚು ಕಡಿಮೆ ನಿಯಮದ ಬಗ್ಗೆ ವಾದ ಮಾಡಿದಂತಾಯಿತು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೇಳಿದ್ದು ಅದೇ. ಇದು ನನ್ನ ಮೂರನೆಯ ವಿಚಾರವಾಗಿದ್ದಿತು. ಮೊದಲಿನ ಎರಡು...

ಮಾನ್ಯ ಸಭಾಪತಿ: ಮೊದಲು ಮೊದಲಿನ ಎರಡನ್ನು ಮುಗಿಸಿಬಿಡುವುದು ನನ್ನ ವಿಚಾರವಾಗಿದೆ; ಅನಂತರ ಮಾನ್ಯ ಸದಸ್ಯರು ಗುಣಗಳ ಕುರಿತಾದ ತಮ್ಮ ವಾದಕ್ಕೆ ಎದುರಾದ ತೊಂದರೆಗಳನ್ನು ಕುರಿತು ಚರ್ಚೆ ಮಾಡುತ್ತ ತಮ್ಮ ವಿಚಾರಗಳನ್ನು ಹೇಳಬಹುದಾಗಿದೆ.

ಇಲ್ಲಿ ಎರಡು ಪ್ರಶ್ನೆಗಳನ್ನು ಎತ್ತಲಾಗಿದೆ. ಮೊದಲನೆಯದು ಭಾರತ ಸರಕಾರದ ಕಾನೂನಿನ ಕಲಮು ೭೩ರಲ್ಲಿ ಕಾಣಿಸಿದ ಅಂಶಗಳಂತೆ ಈ ರೀತಿಯ ನಿಯಮವೊಂದನ್ನು ರಚಿಸಲು ಈ ಸದನಕ್ಕೆ ಅಧಿಕಾರವಿಲ್ಲ. ನಾನು ಈ ದೃಷ್ಟಿಯಿಂದ ಇದನ್ನು ವಿಚಾರಿಸಿದ್ದೆ; ಏಕೆಂದರೆ ಹೋದ ಸಲ, ನಿಯಮ ೧೦೩ನ್ನು ವಿಚಾರಣೆಗೆ ತೆಗೆದುಕೊಂಡಾಗ, ಮಾನ್ಯ ಮುಖ್ಯಮಂತ್ರಿಗಳು ಇಂಥ ಆಕ್ಷೇಪಣೆಯನ್ನು ಮುಂದಿಟ್ಟಿದ್ದರು. ಕಲಮು ೭೩ರ ಇದರ ಉಪ ಪ್ರಕರಣ (೨)ರಲ್ಲಿ ವಿಧಾನಮಂಡಲದಲ್ಲಿ ಇತ್ಯರ್ಥವಾಗದಿರುವ ಒಂದು ವಿಧೇಯಕವು, ಸದನದ ಅಥವಾ ಸದನಗಳ ಅಧಿವೇಶನದ ಮುಂದೂಡಿಕೆಯ ಕಾರಣಕ್ಕಾಗಿ ರದ್ದು ಆಗುವುದಿಲ್ಲವೆಂದು ಕಾಣಿಸಲಾಗಿದೆ. ಅಧಿವೇಶನ ಮುಂದೂಡಿಕೆಯ ಕಾರಣದಿಂದ ಅದು ರದ್ದಾಗುವುದಿಲ್ಲವೆಂದು ನಿಃಸಂಶಯವಾಗಿ ಹೇಳಲಾಗಿದೆ. ಆದರೆ, ಇದರ ಅರ್ಥ ಅಧಿವೇಶನದ ಮುಂದೂಡಿಕೆಯನ್ನು ಬಿಟ್ಟು ಬೇರೆ ಕಾರಣಗಳಿಗಾಗಿ ವಿಧೇಯಕವೊಂದು ಎಂದೆಂದೂ ರದ್ದಾಗುವುದಿಲ್ಲ.

ಅಧಿವೇಶನವು ಮುಂದೂಡಲ್ಪಡಲಿ, ಬಿಡಲಿ ಅಥವಾ ಬೇರೆ ಏನೇ ಆಗಲಿ, ಇವು ಯಾವನ್ನೂ ಲಕ್ಷಕ್ಕೆ ತಾರದೆ, ಕೆಲವೊಂದು ಅವಧಿಯ ನಂತರ ಒಂದು ವಿಧೇಯಕ ರದ್ದು ಆಗಿಯೇ ತೀರುತ್ತದೆಂಬುದನ್ನು ತೋರಿಸುವುದೇ ಈ ನಿಯಮದ ಉದ್ದೇಶವಾಗಿದೆ ಪದಯೋಜನೆಯಲ್ಲಿ "ಎರಡು ಪೂರ್ಣಾವಧಿ ಅಧಿವೇಶನಗಳು" ಎಂದಿದ್ದರೆ, ಬಹುಶಃ ಸಂಶಯಪಡಲು ಸ್ವಲ್ಪ ಅವಕಾಶವಿದ್ದಿತು. ಆದರೆ ನಿರ್ದಿಷ್ಟ ಅವಧಿಯನ್ನು ತೋರಿಸಬೇಕಾದಾಗ, ಇದೀಗ ಈ ನಿಯಮದಲ್ಲಿ ಸೂಚಿಸಿದಂತೆ ಒಂದು ವರುಷದ ಅವಧಿ ಇರುವಾಗ, ಒಂದು ವಿಧೇಯಕ ಅಧಿವೇಶನ ನಡೆದಿರುವಾಗಲೂ ರದ್ದಾಗಬಹುದಾಗಿದೆ. ಆದ್ದರಿಂದ ಅಧಿವೇಶನದ ಮುಂದೂಡಿಕೆಯು ನಿಯಮದಲ್ಲಿ ಸೂಚಿತವಾದಂತೆ, ಒಂದು ವಿಧೇಯಕವು ರದ್ದಾಗುವುದಕ್ಕೆ ಕಾರಣವಾಗುವುದಿಲ್ಲ.

ಗುಣಗಳನ್ನು ಕುರಿತು ನಾನು ವಿಚಾರಿಸುತ್ತಿಲ್ಲ. ಸಂವಿಧಾನದ ದೃಷ್ಟಿಯಿಂದ ಯೋಚಿಸಿ ಹೇಳುತ್ತಿರುವೆ. ವಿಧೇಯಕವು ಕಾರ್ಯಸೂಚಿ ಪಟ್ಟಿಯಲ್ಲಿರಬಹುದು, ಸದನದಲ್ಲಿ ಅಧಿವೇಶನವೂ ನಡೆಯುತ್ತಿರಬಹುದು; ಆದರೂ ಈಗ ಸೂಚಿತವಾದ ನಿಯಮದಂತೆ ಒಂದು ವರುಷದ ಅವಧಿ ಮುಗಿದ ಕೂಡಲೇ ಅಧಿವೇಶನ ಸಮಾಪನವಾಗದಿದ್ದರೂ, ವಿಧೇಯಕವು ರದ್ದಾಗಿಬಿಡುತ್ತದೆ. ಆದ್ದರಿಂದ ಭಾರತ ಸರಕಾರದ ಕಾನೂನಿನ ಕಲಮು ೭೩ರ ಉಪ ಪ್ರಕರಣ (೨) ಇದು ತಿದ್ದುಪಡಿಯಲ್ಲಿ ಸೂಚಿಸಿದಂತಹ ನಿಯಮವನ್ನು ರಚಿಸಲು ಅಡ್ಡಿಯಾಗುವುದಿಲ್ಲವೆಂದು ನನಗೆ ತೋರುತ್ತದೆ.

ಆಮೇಲೆ ಎರಡನೆಯ ಆಕ್ಷೇಪಣೆಯೂ ಇದೆ, ಆ ವಿಷಯ–

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಒಂದು ವಾಸ್ತವ ಸಂಗತಿಯ ಬಗ್ಗೆ ತಮ್ಮ ಗಮನವನ್ನು ಸೆಳೆಯಬಹುದೇ? "ಕೇವಲ" ಎಂಬ ಪದ ಪ್ರಯೋಗವು ಅಲ್ಲಿ ಇದ್ದರೆ, ಆಮೇಲೆ ಅದು ತಾವು ಸೂಚಿಸುತ್ತಿರುವ ರಚನೆಗೆ ಯೋಗ್ಯವಾಗುತ್ತಿತ್ತು ಎಂದು ನಿವೇದನೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಸೂಚಿತವಾದ ತಿದ್ದುಪಡಿಯ ಬಗ್ಗೆ ನಾನು ಹೀಗೆ ನಿವೇದಿಸಬಯಸುವೆ. ಈ ನಿಯಮ ೧೦೩ರ ಹಿಂದಿರುವ ಅವಶ್ಯಕತೆಯ ವಿಶಿಷ್ಟ ಕಾರಣಗಳು ನನಗೆ ಕೇಳಬಂದಿಲ್ಲ. ಅದರ ಚರ್ಚೆಯನ್ನು ಮಾಡದೆಯೆ ವಿಧೇಯಕವನ್ನು ಕಾರ್ಯಸೂಚಿಯಲ್ಲಿ ಉಳಿಸಿಕೊಂಡರೆ ಏನು ನಷ್ಟವಾಗುತ್ತದೆ? ಚರ್ಚೆಯಾಗದೆ ಸದನದ ಗ್ರಂಥಗಳಲ್ಲಿಯೆ ಉಳಿದುಕೊಂಡ ವಿಧೇಯಕದಿಂದ ಏನಾದರೂ ನಷ್ಟಕ್ಕೆ ಅಥವಾ ಅನನುಕೂಲತೆಗೆ ಕಾರಣವಾಗುವುದು ಎಂಬುದನ್ನು ತೋರಿಸಿಕೊಡಬಹುದಾದರೆ, ಆಮೇಲೆ ನಿಯಮ ೧೦೩ನ್ನು ಒಳಗೊಂಡಿರುವಂಥ ಅಂಶವು ಸ್ವಲ್ಪಮಟ್ಟಿಗೆ ಅವಶ್ಯವಾಗಿದೆ ಯೆಂಬುದನ್ನು ನಾನು ಸಂಪೂರ್ಣವಾಗಿ ತಿಳಿದುಕೊಳ್ಳಬಲ್ಲೆ; ಆದರೆ ಯಾವ ರೀತಿಯ ನಷ್ಟವಾಗಲಿ, ಅನನುಕೂಲತೆಯಾಗಲಿ ಉಂಟಾದುದನ್ನು ನಾನಿನ್ನೂ ಕೇಳಿಲ್ಲ. ಎರಡನೆಯ ಮಾತೆಂದರೆ, ಈ ನಿಯಮವು ಹಾಗೂ ತಿದ್ದುಪಡಿಯು, ಈಗ ಇರುವ ಹಾಗೆಯೇ ಅಂಗೀಕೃತವಾದರೆ, ತಮ್ಮ ತಪ್ಪು ಏನಿಲ್ಲದಿದ್ದರೂ ವಿಧೇಯಕವನ್ನು ಮುಂದುವರೆಸಬೇಕೆಂದಿರುವ ಸದಸ್ಯರ ಹಕ್ಕನ್ನೇ ಕಸಿದುಕೊಳ್ಳುತ್ತದೆ. ಪದರಚನೆಯು "ಗೊತ್ತುವಳಿಯ ಮಂಡಿಸಲ್ಪಡದಿದ್ದರೆ" ಎಂದಿದೆ. ಆ ಪದರಚನೆ ಹೀಗೆಯೇ ಇದೆ. ಆದರೆ, ವಿಧೇಯಕವು ತಲುಪದೇ ಇದ್ದ ಕಾರಣದಿಂದ, ಕಾರ್ಯಸೂಚಿಯಲ್ಲಿ ವಿಧೇಯಕವು ಇಲ್ಲದಿರುವ ಕಾರಣದಿಂದ, ವಿಧೇಯಕವು ಆಹ್ವಾನಿಸಲ್ಪಡದೇ ಇರುವುದರಿಂದ ಅಥವಾ ಬೇರೆ ಯಾವುದಾದರೂ ಕಾರಣಗಳಿಂದ ಸದಸ್ಯರೊಬ್ಬರು ಗೊತ್ತುವಳಿ ಮಂಡಿಸುವ ಪರಿಸ್ಥಿತಿಯಲ್ಲಿರುವುದಿಲ್ಲ ಎಂಬುದು ನನ್ನ ನಿವೇದನೆಯಾಗಿದೆ; ಬೇರೆ ಅವಶ್ಯಕತೆಗಳ ಕಾರಣದಿಂದ ಹಾಗೂ ಇನ್ನಿತರ ಕಾರಣಗಳಿಂದ ವಿಧೇಯಕಕ್ಕೆ ಸಂಬಂಧಪಟ್ಟ

ತಿದ್ದುಪಡಿಯನ್ನು ಮಂಡಿಸಲು ಅಸಮರ್ಥನಾದರೆ, ಕೇವಲ ಇಂಥದೊಂದು ಕಾರಣಕ್ಕಾಗಿ ನಿರ್ದಿಷ್ಟವಾಗಿ ಶಾಸನ ರಚನೆಯೊಂದನ್ನು ಮಂಡಿಸುವ ಸದಸ್ಯರ ಹಕ್ಕನ್ನು ತೊಡೆದುಹಾಕಬಾರದು; ಇದರಿಂದ ಬಹಳ ತೊಂದರೆಯಾಗುವುದು ಎಂಬುದು ನನ್ನ ಮತ. ಆದ್ದರಿಂದ, ಇದರಲ್ಲಿ ಮುಂದೆ "ಕಾರ್ಯದರ್ಶಿಗಳು ಆಹ್ವಾನಿಸಿದ್ದರೂ" ಎಂಬ ತಿದ್ದುಪಡಿ ಜೋಡಿಸದಿದ್ದರೆ, ಈ ನಿಯಮವನ್ನು ಬಹಳಷ್ಟು ತೊಂದರೆ ತುಂಬಿಕೊಳ್ಳುವವು ಎಂಬುದು ನನ್ನ ವಿಚಾರವಾಗಿದೆ. ಇವೆಲ್ಲ ಕಾರಣಗಳಿಂದ ಮಂಡಿಸಲಾದ ತಿದ್ದುಪಡಿಯನ್ನು ಈಗ ಇರುವ ಸ್ಥಿತಿಯಲ್ಲಿ ವಿರೋಧಿಸುತ್ತೇನೆ.

ಮಾನ್ಯ ಶ್ರೀ ಬಿ. ಜಿ. ಖೇರ್: ಮಾನ್ಯರೆ, ಪರಿಸ್ಥಿತಿಯು ಸ್ವಲ್ಪ ಜಟಿಲವಾಗುತ್ತಿದೆ; ಏಕೆಂದರೆ ಮಾನ್ಯ ಸದಸ್ಯರು ನಿಯಮವನ್ನು ಮಂಡಿಸಿದಾಗಲಾಗಲೀ ಇಲ್ಲವೆ ತಿದ್ದುಪಡಿಗಳು– ಯಾವ ತಿದ್ದುಪಡಿಯನ್ನು ಸ್ವೀಕರಿಸಬೇಕೆಂದು ಅವರು ಇಚ್ಛಿಸಿರುವರೋ ಅದನ್ನೂ ಒಳಗೊಂಡು– ಸಮಿತಿಯಲ್ಲಿ ಸಂಪೂರ್ಣವಾಗಿ ಚರ್ಚೆಯಾದಾಗಲಾಗಲಿ ಇಲ್ಲಿ ಇರಲಿಲ್ಲ. ಆದ್ದರಿಂದ ಅವರ ಆಕ್ಷೇಪಣೆಗಳಿಗೆ ಉತ್ತರಿಸುವ ಮೊದಲು, ನನ್ನ ಜೊತೆಗಿದ್ದು ಈ ನಿಯಮದ ಬಗ್ಗೆ ಚರ್ಚೆ ಮಾಡಿದವರು ಏನು ಅಭಿಪ್ರಾಯ ಪಡುವರು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ; ಏಕೆಂದರೆ ನಿನ್ನೆ ರಾತ್ರಿಯೇ ಈ ತಿದ್ದುಪಡಿಯು ಎಲ್ಲರಿಂದಲೂ ಒಪ್ಪಿತವಾಗಿದೆ. ಮಾನ್ಯ ಸದಸ್ಯ ಅಲಿ ಬಹದ್ದೂರ ಖಾನ ಅವರೂ ನಿನ್ನೆ ಇದ್ದರು. ಅವರು ಸದನದಲ್ಲಿ ಇದೇ ರೀತಿಯಾಗಿರುವ ಒಂದು ತಿದ್ದುಪಡಿಯನ್ನು– ಅಂದರೆ "ಹೀಗೆ ಮಾಡಬೇಕೆಂದು ಆಹ್ವಾನಿಸಿದಾಗ" ಎಂಬ ಪದಗಳನ್ನು ಜೋಡಿಸಬೇಕು ಎಂಬುದನ್ನು– ಸೂಚಿಸಿದ್ದರು. ಇದು ಮಾನ್ಯ ಸದಸ್ಯ ಅಲಿ ಬಹದ್ದೂರ ಖಾನರ ತಿದ್ದುಪಡಿ. ನಾವೆಲ್ಲರೂ ಕೂಡಿ ಅನೇಕ ಸೂಚನೆಗಳ ಗುಣಗಳನ್ನು ಚರ್ಚೆ ಮಾಡಿ, ಕೊನೆಗೆ ಇದೇ ಅತ್ಯುತ್ತಮ ಪರಿಹಾರವೆಂಬ ನಿರ್ಣಯಕ್ಕೆ ಬಂದೆವು. ಮಾನ್ಯ ಸದಸ್ಯರು ಎತ್ತಿ ತೋರಿಸಿದ ಸಂವಿಧಾನದ ಆಕ್ಷೇಪಣೆಯೂ ಆಗ ನಮ್ಮ ವಿಚಾರಗಳಲ್ಲಿ ಸುಳಿದಿತ್ತು. ನಮ್ಮ ದುರ್ದೈವವೆಂದರೆ– ಮಾನ್ಯ ಸದಸ್ಯರು ಸದನಕ್ಕೆ ಯಾವಾಗಾದರೊಮ್ಮೆ ಬರುತ್ತಾರೆ. ಅದರಿಂದಾಗಿ ಪರಿಸ್ಥಿತಿಯ ಜ್ಞಾನವಿರದೆ ಹಿಂದೆ ನಡೆದುಹೋದ ಘಟನೆಗಳ ಸೂತ್ರವನ್ನು ಹಿಡಿದುಕೊಳ್ಳುವ ಸ್ಥಿತಿಯಲ್ಲಿ ಅವರಿರುವುದಿಲ್ಲ. ಈಗ ಮಂಡಿಸಲಾದ ತಿದ್ದುಪಡಿಯ ಬಗ್ಗೆ ಹೆಚ್ಚಿನ ಮಾತುಗಳನ್ನು ಹೇಳುತ್ತ ಅವರು ಸೂಚಿಸಿದ ಗುಣಗಳನ್ನು ಕುರಿತು ನಾನು ಮಾತನಾಡಲು ಬಯಸುವುದಿಲ್ಲ. ಈಗಿನ ನಿಯಮಗಳಲ್ಲಿ ಈ ನಿಯಮ ಒಳಗೊಂಡಿರಬೇಕಾದ ಅವಶ್ಯಕತೆ ಹೇಗೆ ಉಂಟಾಯಿತು ಎಂಬ ತತ್ವವನ್ನು ಮಾತ್ರ ಅವರಿಗೆ ಹೇಳುವೆ; ಹಾಗೂ ಸದ್ಯಕ್ಕೆ ಆ ಹಳೆಯ ನಿಯಮಗಳಲ್ಲಿ ಇದೇ ತೆರನಾಗಿರುವ ಅಂಶವೂ ನಮಗೆ ಕಂಡುಬಂದಿದೆ ಎಂಬುದನ್ನು ಅವರಿಗೆ ತೋರಿಸುವೆ. ಆ ನಿಯಮದಲ್ಲಿ ಹೀಗಿದೆ:

> "ಸಂಬಂಧಿಸಿದ ಸದಸ್ಯರು ತಾವು ಮಂಡಿಸಿದ ವಿಧೇಯಕವನ್ನು ಕುರಿತು ಎರಡು ಸಂಪೂರ್ಣ ಅಧಿವೇಶನಗಳಲ್ಲಿ ಯಾವ ಗೊತ್ತುವಳಿಯನ್ನೂ ತರದಿದ್ದರೆ, ಅನಂತರದ ಅಧಿವೇಶನದಲ್ಲಿ ಅದೇ ಸದಸ್ಯರ ಗೊತ್ತುವಳಿಯೊಂದರ ಮೇಲೆ ವಿಧೇಯಕವನ್ನು ಮುಂದುವರೆಸಬಹುದು ಎಂಬ ವಿಶೇಷ ಆಜ್ಞೆಯನ್ನು ಸದನವು ಪ್ರಕಟಿಸದಿದ್ದರೆ ಆ ವಿಧೇಯಕವು ರದ್ದಾಗುವುದು."

ಡಾ. ಬಿ. ಆರ್. ಅಂಬೇಡ್ಕರ್: ಆ ಕಾಲಕ್ಕೆ ಅದು ಯೋಗ್ಯವಾಗಿತ್ತು ಎಂಬುದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಷ್ಟೇ? ಏಕೆಂದರೆ, ಆಗ ನಾನು ತೋರಿಸಿದಂತೆ ಭಾರತ ಸರಕಾರದ ಹಳೆಯ ಕಾನೂನಿನಲ್ಲೇ ಇಂಥ ಅವಕಾಶ ಇರಲಿಲ್ಲ.

# ೪೩
# ಔದ್ಯಮಿಕ ವಿವಾದ ಮಸೂದೆಯನ್ನು ಕುರಿತು*

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಸನ್ಮಾನ್ಯ ಸಭಾಧ್ಯಕ್ಷರೆ, ಈ ಮಸೂದೆಯ ಮೊದಲ ವಾಚನವನ್ನು ವಿರೋಧಿಸುವುದಕ್ಕಾಗಿ ನಾನು ಎದ್ದುನಿಲ್ಲುತ್ತಿದ್ದೇನೆ. ಮಾತನಾಡಲು ಎದ್ದುನಿಲ್ಲುವ ಈ ಸಂದರ್ಭದಲ್ಲಿ ಯಾವ ಅನನುಕೂಲಗಳಿಗೆ ಒಳಗಾಗಿ ನಾನಿಲ್ಲಿ ಶ್ರಮಿಸಬೇಕಾಗಿ ಬಂದಿದೆ ಎಂಬುದು ನನಗೆ ಚೆನ್ನಾಗಿಯೇ ಅರಿವಾಗಿದೆ. ನನಗಿಂತಲೂ ಮೊದಲು ಈ ಮಸೂದೆಯ ಬಗ್ಗೆ ಮಾತನಾಡಿದ ಮಹನೀಯರ ಭಾಷಣಗಳನ್ನು ಕೇಳಲು ನಾನಿಲ್ಲಿರದಿದ್ದಕ್ಕಾಗಿ ವಿಷಾದಿಸುತ್ತೇನೆ. ಅದೊಂದು ದೌರ್ಭಾಗ್ಯವೇ ಸರಿ. ದೌರ್ಭಾಗ್ಯವನ್ನು ತಪ್ಪಿಸಿಕೊಳ್ಳಲು ದುರದೃಷ್ಟವಶಾತ್ ನನಗೆ ಸಾಧ್ಯವಾಗದೆ ಹೋಗಿದೆ. ಇತರ ಕಡೆಗಳಲ್ಲಿನ ನನ್ನ ಕೆಲಸ ಕಾರ್ಯಗಳು ಇಲ್ಲಿರಲು ಹಾಗೂ ನನಗಿಂತಲೂ ಮೊದಲು ಮಹನೀಯರು ಎತ್ತಿದ ಅಂಶಗಳನ್ನು ಕಿವಿಗೊಟ್ಟು ಕೇಳಿ, ಅವುಗಳಿಂದ ಪ್ರಯೋಜನವನ್ನು ಪಡೆದುಕೊಳ್ಳಲು ಅವಕಾಶ ಮಾಡಿಕೊಡಲಿಲ್ಲ. ಇನ್ನೊಂದು ಅನನುಕೂಲಕ್ಕೂ ನಾನು ಒಳಗಾಗಿದ್ದೇನೆ. ನನಗಿಂತಲೂ ಮೊದಲು ಅನೇಕ ಮಹನೀಯರು ಮಾತನಾಡಿದ್ದಾರೆ ಹಾಗೂ ಈ ಚರ್ಚೆ ತುಂಬಾ ದೀರ್ಘಾಕಾಲದವರೆಗೆ ಸಾಗಿದೆ. ಈ ಕೊಟ್ಟ ಕೊನೆಯ ಹಂತದಲ್ಲಿ ಹೇಳಲು ನನಗೆ ಏನಾದರೂ ಉಳಿದಿದೆಯೇ ಎಂದೂ ನಾನು ಆಶ್ಚರ್ಯಪಡುತ್ತಿದ್ದೇನೆ. ಆದರೆ ನಾನು ಈ ಮಾತನ್ನು ಹೇಳುವ ಸಾಹಸ ಮಾಡುತ್ತಿದ್ದೇನೆ. "ಸಾಹಸ" ಎಂಬ ಮಾತನ್ನು ನಾನು ಬಳಸಬಹುದಾದರೆ: ೮೪ ಕಲಮುಗಳನ್ನು ಹೊಂದಿ ಸಾಕಷ್ಟು ದೀರ್ಘವಾಗಿರುವ ಹಾಗೂ ವ್ಯಾಪಕವಾಗಿರುವ ಈ ಮಸೂದೆಯ ವಿಷಯದಲ್ಲಿ ಕೊಟ್ಟಕೊನೆಗೆ ಮಾತನಾಡಲು ಎದ್ದುನಿಲ್ಲುವಂಥ ವ್ಯಕ್ತಿ ಹೇಳಬಹುದಾಗಿರುವಂಥದೂ ಸಾಕಷ್ಟು ಇರುತ್ತದೆ. ಮಸೂದೆ ಎಂಥ ವ್ಯಾಪಕ ಸ್ವರೂಪದ್ದಾಗಿದೆಯೆಂದರೆ ಶೇಷಶಾಯಿಯೆ ಅದರ ಬಗ್ಗೆ ಬರೆಯಲು ಹೊರಟರೂ, ಸಮುದ್ರವೇ ಶಾಯಿಯಾಗಿ ದೊರೆತರೂ, ಭೂಮಿಯೇ ಬರೆಯಲು ಬಳಸಬಹುದಾದ ಕಾಗದವಾಗಿ ದೊರೆತರೂ, ಇಡೀ ಮಸೂದೆಯ ಬಗ್ಗೆ ಬರೆಯಲು ಅವು ಅವನಿಗೆ ಸಾಕಾಗದೆ ಹೋಗಬಹುದು ಎಂಬುದಾಗಿ ನನ್ನ ಗೌರವಾನ್ವಿತ ಗೆಳೆಯರಾದ ಶ್ರೀ ಜಮ್ನಾದಾಸ್ ಮೆಹ್ತಾ ಅವರು ಮಸೂದೆಯನ್ನು ಸರಿಯಾಗಿಯೇ ವರ್ಣಿಸಿದ್ದಾರೆ. ಸೀಮಿತತೆಗಳನ್ನು ಅರಿತು, ನಾನು ತುಂಬಾ ಸಂಕ್ಷೇಪವಾಗಿ ನನ್ನ ಮಾತುಗಳನ್ನು ಹೇಳಬಯಸಿದ್ದೇನೆ.

ಈ ಮಸೂದೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಹಿಂದಿನ ಶಾಸನದ ಬೆಳಕಿನಲ್ಲಿ ಈ ಮಸೂದೆಯ ಉಪಬಂಧಗಳನ್ನು ಓದಿಕೊಳ್ಳುವುದು ಅಗತ್ಯವಾಗುತ್ತದೆಂದು ನಾನು ಭಾವಿಸಿದ್ದೇನೆ. ಈ ಮಸೂದೆಯ ಉಪಬಂಧಗಳನ್ನು ಹಿಂದಿನ ಶಾಸನದ ಉಪಬಂಧಗಳೊಡನೆ ಹೋಲಿಸಿ ನೋಡಿ ಅವುಗಳಲ್ಲಿನ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಕಂಡುಕೊಂಡ ಹೊರತು, ಈ ಮಸೂದೆಯ ಖಂಡಗಳ ಪ್ರಾಮುಖ್ಯ ನಮಗೆ

---

*ಬಿ.ಎಲ್.ಎ. ಚರ್ಚೆಗಳು ಸಂಪುಟ ೪,
ಪುಟಗಳು ೧೩೩೦೦–೫೯, ದಿನಾಂಕ ೧೫ ಸೆಪ್ಟೆಂಬರ್, ೧೯೩೮.

ಎದ್ದುಕಾಣುವುದಿಲ್ಲವೆಂದು ನಾನು ನಂಬಿದ್ದೇನೆ ಹಾಗೂ ಎಲ್ಲರೂ ಈ ಮಾತನ್ನು ಮನಪೂರ್ವಕವಾಗಿ ಒಪ್ಪುತ್ತಾರೆಂದೂ ಭಾವಿಸಿದ್ದೇನೆ. ೧೯೩೪ರ ಮುಂಬಯಿ ವ್ಯಾಪಾರ ವಿವಾದ ಸಂಧಾನ ಕಾಯ್ದೆಗೆ ಬದಲಾಗಿ ಈ ಮಸೂದೆಯನ್ನು ತರಲಾಗುತ್ತಿದೆ ಎಂಬುದನ್ನು ಈ ಮಸೂದೆಯ ಕೊನೆಯ ಖಂಡ ಸಾಕಷ್ಟು ನಿಚ್ಚಳವಾಗಿ ಸಾರಿಹೇಳುತ್ತದೆ. ಹೀಗಾಗಿ, ಈ ಕ್ರಮದ ಮೇಲ್ವಿಚಾರಣೆಯನ್ನು ನೋಡಿಕೊಳ್ಳು ತ್ತಿರುವ ಪ್ರಧಾನ ಮಂತ್ರಿಗಳು ಈ ಮಸೂದೆಯ ಮೂಲಕ ತಾವು ಸಾದರಪಡಿಸುತ್ತಿರುವಂಥ ಬದಲಾ ವಣೆಯ ಪರವಾಗಿ ಸಮರ್ಥನೀಯವಾಗಿರುವಂಥ ವಾದಗಳನ್ನು ಮಂಡಿಸುತ್ತಿದ್ದಾರೆಯೇ ಎಂಬುದು ನಮ್ಮ ಪರಿಗಣನೆಯ ದೃಷ್ಟಿಯಿಂದ ಮೂಲತಃ ಉದ್ಭವಿಸುವ ಪ್ರಶ್ನೆಯಾಗುತ್ತದೆ. ಸಂಧಾನಕ್ಕೆ ಒಂದು ಸಾಧನವನ್ನು ಒದಗಿಸುವುದೇ ೧೯೩೪ರ ಈ ಕಾಯ್ದೆಯ ಉದ್ದೇಶವಾಗಿತ್ತು. ಸ್ವೈಚ್ಛಿಕ ಸಂಧಾನವೇ ೧೯೩೪ರ ಈ ಕಾಯ್ದೆಯ ಮೂಲತತ್ವವಾಗಿತ್ತು. ಈಗ ಈ ಮಸೂದೆ ಬದಲಾವಣೆಯೊಂದನ್ನು ಅಂದರೆ, ಸಂಧಾನ ಕಡ್ಡಾಯವಾಗಿರತಕ್ಕದ್ದು ಎಂಬ ಬದಲಾವಣೆಯನ್ನು ಸಾದರಪಡಿಸುತ್ತಿದೆ. ೧೯೩೪ರ ಕಾಯ್ದೆ ಯಲ್ಲಿನ ಸ್ವೈಚ್ಛಿಕ ಉಪಬಂಧವನ್ನು ಬದಲಾಯಿಸಿ, ಅದಕ್ಕೆ ಕಡ್ಡಾಯದ ಸ್ವರೂಪವನ್ನು ತಂದುಕೊಡುವ ಬಗ್ಗೆ ಸಮರ್ಥನೀಯವಾಗಿರುವಂಥ ವಾದಗಳನ್ನೂ ಮಂಡಿಸಲಾಗಿದೆಯೇ ಎಂಬುದೇ ಈ ಸದನದ ಪರಿಗಣನೆಯ ದೃಷ್ಟಿಯಿಂದ ಉದ್ಭವಿಸಿರುವ ಪ್ರಶ್ನೆ ಎಂಬುದನ್ನೂ ತಮ್ಮ ಮುಂದಿರಿಸಬಯಸುತ್ತೇನೆ. ಕಡ್ಡಾಯತ್ವವನ್ನು ಜಾರಿಗೊಳಿಸುವುದರ ಅಗತ್ಯವನ್ನೂ ಅಳೆಯಲು ಬಳಸಲಾಗಿರುವ ೧೯೩೪ನೆಯ ಆ ವರ್ಷವನ್ನು ಮತ್ತು ಆ ವರ್ಷದಲ್ಲಿ ಇದ್ದಂಥ ಪರಿಸ್ಥಿತಿಗಳನ್ನು ಮಾನಕವಾಗಿ ಪರಿಗಣಿಸುತ್ತ ಸುಸಂಗತವೂ ಮುಖ್ಯವೂ ಆಗಿರುವಂಥ ಕೆಲವೊಂದು ಸಂಗತಿಗಳನ್ನು ಉಲ್ಲೇಖಿಸಬಯಸುತ್ತೇನೆ. ಈ ಸದನದ ಗಮನಕ್ಕೆ ನಾನು ತರಬಯಸುವ ಮೊಟ್ಟಮೊದಲ ಸಂಗತಿ ಇದು: ೧೯೩೪ರಲ್ಲಿ ಮಾನ್ಯ ಸರ್ ರಾಬರ್ಟ್ ಬೆಲ್ ಅವರು ಮಂಡಿಸಿದ ಹಾಗೂ ಮುಂದೆ ಕಾಯ್ದೆಯಾಗಿ ಪರಿಣಮಿಸಿದ ಮೂಲ ಮಸೂದೆಯಲ್ಲಿ ಕಡ್ಡಾಯ ಸಂಧಾನಕ್ಕೆ ಸಂಬಂಧಿಸಿದ ಉಪಬಂಧಗಳಿದ್ದವು. ಆದರೆ, ಮಸೂದೆಯನ್ನು ಮಂಡಿಸುವಾಗ ೧೯೩೪ರಲ್ಲಿ ಇದ್ದಂಥ ಪರಿಸ್ಥಿತಿಗಳು ಸಂಧಾನಕ್ಕೆ ಸಂಬಂಧಿಸಿದಂತೆ ಕಡ್ಡಾಯವನ್ನು ಹೇರುವುದನ್ನು ಅಗತ್ಯವಾಗಿಸು ವಂತಿಲ್ಲವೆಂಬ ಸಂಗತಿ ಚೆನ್ನಾಗಿ ಮನವರಿಕೆಯಾಯಿತು. ಇದರ ಪರಿಣಾಮವಾಗಿ ಅವರು ತಾವಾಗಿಯೇ ಪ್ರಾರಂಭದಲ್ಲಿಯೇ ಮಸೂದೆಯ ಮೊದಲ ವಾಚನದ ಸಂದರ್ಭದಲ್ಲಿಯೇ ತಮ್ಮ ಆರಂಭ ಭಾಷಣದಲ್ಲಿಯೇ "ತಕ್ಕದ್ದು" (shall) ಎಂಬ ಪದಕ್ಕೆ ಬದಲಾಗಿ "ಬಹುದು" ಎಂಬ ಪದವನ್ನು ಬಳಸುವ ಉದ್ದೇಶದಿಂದ ತಿದ್ದುಪಡಿಯೊಂದನ್ನು ತರಬಯಸಿರುವ ಬಗೆಗೆ ಪ್ರಸ್ತಾಪ ಮಾಡಿದರು. ಸಂಧಾನಕ್ಕೆ ಸಂಬಂಧಿಸಿದಂತೆ ಕಡ್ಡಾಯ ಹೇರುವ ಯಾವುದೇ ಅಗತ್ಯವೂ ೧೯೩೪ರಲ್ಲಿ ಮಾನ್ಯ ಸರ್ ರಾಬರ್ಟ್ ಬೆಲ್ ಅವರಿಗೆ ಕಂಡುಬರಲಿಲ್ಲ ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂಬುದನ್ನು ತಮ್ಮ ಮುಂದಿಡಬಯಸುತ್ತೇನೆ. ಮಸೂದೆಯನ್ನು ಸಾದರಪಡಿಸಿದಾಗ ಸದನದಲ್ಲಿ ನನ್ನ ಸನ್ಮಾನ ಗೆಳೆಯರಾದ ಶ್ರೀ ಸಕಲತ್‌ವಾಲಾ ಅವರಿದ್ದರು. ಅವರು ಮುಂಬಯಿಯ ಗಿರಣಿ ಮಾಲೀಕರನ್ನು ಪ್ರತಿನಿಧಿಸಿದ್ದರು. ೧೯೩೪ರಲ್ಲಿ ಅವರೂ ಸಂಧಾನಕ್ಕೆ ಸಂಬಂಧಿಸಿದಂತೆ ಕಡ್ಡಾಯತ್ವವನ್ನು ಒತ್ತಾಯಿಸಿರಲಿಲ್ಲ. ಇದಕ್ಕೆ ಬದಲಾಗಿ ಮಸೂದೆಯ ಮೊದಲ ವಾಚನದ ಸಂದರ್ಭದಲ್ಲಿ ತಾವು ಮಾಡಿದ ಭಾಷಣದಲ್ಲಿ ಅವರು ಮಸೂದೆಗೆ ನೀಡಿದ ಬೆಂಬಲ ಉತ್ಸಾಹಪೂರ್ವಕವಾದುದೇನೂ ಆಗಿರಲಿಲ್ಲ. ಏಕೆಂದರೆ ಸಾಮಾನ್ಯ ಸ್ಥಿತಿಯಲ್ಲಿ ಇಂಥ ಮಸೂದೆ ಅನಗತ್ಯವಾಗಿತ್ತು ಎಂದು ಹೇಳುವವರೆಗೂ ಹೋಗಿದ್ದರು. ಸಂಧಾನಕ್ಕೆ ಸಂಬಂಧಿಸಿದಂತೆ ಅವರು ಯಾವುದೇ ಕಡ್ಡಾಯತ್ವವನ್ನೂ ಒತ್ತಿಹೇಳಲಿಲ್ಲ ಅಥವಾ ಒತ್ತಾಯಪಡಿಸಲಿಲ್ಲ. ೧೯೩೪ ಮತ್ತು ೧೯೩೮ರ ನಡುವೆ ಈ

ಕಡ್ಡಾಯದ ಉಪಬಂಧಗಳನ್ನು ಬದಲಾಯಿಸುವಂತೆ– ಅಂದರೆ ಸ್ವೈಚ್ಛಿಕ ಸಂಧಾನಕ್ಕೆ ಬದಲಾಗಿ ಕಡ್ಡಾಯ ಸಂಧಾನವನ್ನು ಗೊತ್ತುಪಡಿಸು ವಂತೆ– ಸದನವನ್ನು ಒತ್ತಾಯಿಸುವಂಥದು ಏನು ತಾನೇ ಆಗಿದೆ?

ಕಡ್ಡಾಯವನ್ನೂ ಸಮರ್ಥಿಸುವ ಸಲುವಾಗಿ, ಈ ಶತಮಾನದಲ್ಲಿ ನಡೆದಿರುವ ಮುಷ್ಕರಗಳ ಬಗೆಗಿ ಅಂಕಿ–ಅಂಶಗಳನ್ನು ಕೊಡಲು ಪ್ರಧಾನ ಮಂತ್ರಿಗಳು ಆರಂಭಿಸಿದ್ದಾರೆ. ಈ ನಾಡಿನಲ್ಲಿ ನಡೆದಿರುವ ಮುಷ್ಕರಗಳು ಹೇಗೆ ಮೇಲಿಂದ ಮೇಲೆ ನಡೆದಿವೆ ಹಾಗೂ ಎಂಥ ಗಂಭೀರ ಸ್ವರೂಪದಾಗಿವೆ ಎಂದರೆ ಕಾಯ್ದೆಯ ಸ್ವೈಚ್ಛಿಕ ಉಪಬಂಧವನ್ನು ಕಡ್ಡಾಯ ಉಪಬಂಧವಾಗಿಸಬೇಕಾಗಿರುವ ಅಗತ್ಯ ಉಂಟಾಗಿದೆ ಎಂಬುದನ್ನು ಸಮರ್ಥಿಸುವ ಸಲುವಾಗಿ ಅವರು ಹಾಗೆ ಮಾಡುತ್ತಿದ್ದಾರೆ. ಮುಷ್ಕರಗಳ ಬಗೆಗಿನ ಅಂಕಿ–ಅಂಶಗಳನ್ನು ಅದರಲ್ಲಿ ತೊಡಗಿದ್ದಂಥ ಕಾರ್ಮಿಕರ ಸಂಖ್ಯೆಯನ್ನು ಹಾಗೂ ನಷ್ಟವಾಗಿರುವ ಕೆಲಸದ ದಿನಗಳನ್ನು ಸಂಖ್ಯೆಯನ್ನು ನಾನು ಪರಿಶೀಲಿಸಿದ್ದೇನೆ. ಮುಷ್ಕರಗಳ ಬಗೆಗಿನ ಅಂಕಿ–ಅಂಶಗಳನ್ನು ಫಲಿತಾಂಶದ ಆಧಾರದ ಮೇಲೆ ಮಾನ್ಯ ಪ್ರಧಾನ ಮಂತ್ರಿಗಳು ಹೇಳಬಯಸಿರುವ ವಿಷಯ ನನಗೆ ಮನವರಿಕೆಯಾಗುತ್ತಿಲ್ಲ ಎಂದು ಹೇಳಲು ನಾನೇನೂ ಹಿಂದೆಮುಂದೆ ನೋಡಬೇಕಾಗಿಲ್ಲ. ಮುಂಬಯಿ ನಗರದಲ್ಲಿ ನಡೆದಿರುವ ಮುಷ್ಕರಗಳತ್ತ ಗಮನಹರಿಸುವುದಾದರೆ ಕಾರ್ಮಿಕ ಕಛೇರಿಯ ವತಿಯಿಂದ ಪ್ರಕಟಿಸಲಾಗಿರುವ ಕಾರ್ಮಿಕ ಗೆಜೆಟ್ಟಿನ (Labour Gazette) ಮಾರ್ಚ್ ತಿಂಗಳ ಸಂಚಿಕೆ ನನ್ನ ಬಳಿ ಇದೆ. ಈ ಸಂಚಿಕೆ ತನ್ನ ೫೪೧ನೆಯ ಪುಟದಲ್ಲಿ ಮುಂಬಯಿ ಪ್ರಾಂತದಲ್ಲಿ ೧೯೨೧ರಿಂದ ೧೯೩೭ರ ನಡುವಣ ಅವಧಿಯಲ್ಲಿ ನಡೆದ ಮುಷ್ಕರಗಳ ಬಗೆಗಿನ ಅಂಕಿ–ಅಂಶಗಳನ್ನು ಕೊಟ್ಟಿದೆ. ಮೊದಲನೆಯ ಅಂಕಣದಲ್ಲಿ ಅದು ಕಾರ್ಮಿಕ ವಿವಾದಗಳ ಸಂಖ್ಯೆಯನ್ನೂ, ಎರಡನೆಯದಾಗಿ ಅದರಲ್ಲಿ ತೊಡಗಿದ್ದ ಕಾರ್ಮಿಕರ ಸಂಖ್ಯೆಯನ್ನೂ, ಮೂರನೆಯದಾಗಿ ನಷ್ಟವಾದ ಕೆಲಸದ ದಿವಸಗಳ ಸಂಖ್ಯೆಯನ್ನೂ ಅದು ಕೊಟ್ಟಿದೆ. ಈ ಅಂಕಿ–ಅಂಶಗಳ ಮೇಲೆ ಕಣ್ಣಾಡಿಸಿದರೆ ವರ್ಷದಿಂದ ವರ್ಷಕ್ಕೆ ಕಾರ್ಮಿಕ ವಿವಾದಗಳ ಸಂಖ್ಯೆ ಹೆಚ್ಚುತ್ತಾ ಹೋಗುವುದಕ್ಕೆ ಬದಲಾಗಿ ಕಡಿಮೆಯಾಗುತ್ತಾ ಬಂದಿವೆ ಎಂಬುದನ್ನು ಯಾರು ಬೇಕಾದರೂ ಕಂಡುಕೊಳ್ಳಬಹುದೆಂದೂ ನಾನು ಖಂಡಿತವಾಗಿಯೂ ನಂಬಿದ್ದೇನೆ. ಉದಾಹರಣೆಗೆ, ೧೯೨೧ರಲ್ಲಿ ಮುಂಬಯಿಯಲ್ಲಿನ ಕಾರ್ಮಿಕ ವಿವಾದಗಳ ಸಂಖ್ಯೆ ೧೦೩ ಆಗಿತ್ತು. ೧೯೨೨ರಲ್ಲಿ ೧೪೩ ವಿವಾದಗಳಿದ್ದವು. ೧೯೨೩ರಲ್ಲಿ ಅವುಗಳ ಸಂಖ್ಯೆ ೧೧೯ ಆಗಿತ್ತು. ಹಾಗೂ ೧೯೨೪ರಿಂದ ೧೯೨೭ರ ನಡುವಣ ಅವಧಿಯಲ್ಲಿ ಅವುಗಳ ಸಂಖ್ಯೆ ೫೦ಕ್ಕೆ ಇಳಿದಿತ್ತು. ಇದು ಶೇ. ೫೦ರಷ್ಟಿನ ಇಳಿಕೆಯೇ ಆಗಿತ್ತು. ಆ ಬಳಿಕ ೧೯೨೮ನೆಯ ವರ್ಷದ ಅಂಕಿಸಂಖ್ಯೆ ದೊರೆಯುತ್ತದೆ. ಈ ಸಂಖ್ಯೆ ಆ ವರ್ಷ ೧೪೪ಕ್ಕೆ ಏರುತ್ತದೆ. ೧೯೨೯ರಿಂದ ೧೯೩೭ರವರೆಗೆ ವಾಸ್ತವಿಕವಾಗಿ ಈ ಸಂಖ್ಯೆ ೮೮ ಮತ್ತು ೫೩ರ ನಡುವೆ ಬದಲಾಗುತ್ತ ನಡೆಯುತ್ತದೆ. ಮುಷ್ಕರಗಳು ಉಂಟುಮಾಡಿದ ಅಶಾಂತಿಯನ್ನು ಮತ್ತು ಉದ್ಯಮದಲ್ಲಿ ಉಂಟಾಗಿರುವ ಏರುಪೇರುಗಳನ್ನು ಅಳೆದು ನೋಡುವುದಕ್ಕೆ ಮುಷ್ಕರಗಳ ಸಂಖ್ಯೆ ಯಾವುದೇ ರೀತಿಯಲ್ಲೂ ಒರೆಗಲ್ಲಾಗದು ಎಂಬುದನ್ನೂ ನಾನು ಒಪ್ಪುತ್ತೇನೆ. ಈ ಸರಣಿಯಲ್ಲಿ ಕೊಟ್ಟಿರುವ ಅಂಕಿ–ಅಂಶಗಳಿಂದ, ಮುಷ್ಕರಗಳ ಸಂಖ್ಯೆ ಕಡಿಮೆಯಾಗಿದ್ದರೂ ಅವುಗಳಲ್ಲಿ ಪಾಲ್ಗೊಂಡಿದ್ದ ವ್ಯಕ್ತಿಗಳ ಸಂಖ್ಯೆ ತೌಲನಿಕವಾಗಿ ಹೆಚ್ಚಾಗಿತ್ತೆಂಬುದನ್ನೂ, ನಷ್ಟವಾದ ಕೆಲಸಗಳ ಗಂಟೆಗಳ ಸಂಖ್ಯೆಯೂ ತೌಲನಿಕವಾಗಿ ಹೆಚ್ಚಾಗಿತ್ತೆಂಬುದನ್ನೂ ನಾನು ಗಮನಿಸಿದ್ದೇನೆ. ಹೀಗಿರುವಾಗ, ಸರಿಯಾದ ಆಧಾರವಾದ ನಷ್ಟವಾದ ಕೆಲಸಗಳ ದಿನಗಳನ್ನು ಆಧಾರವಾಗಿ ಪರಿಗಣಿಸಿದರೆ, ೧೯೨೮ನೆಯ ವರ್ಷ ತೀರಾ ಕೆಟ್ಟ ವರ್ಷವಾಗಿತ್ತು ಎಂಬುದನ್ನೂ ನಾನು ಗುರುತಿಸಿದ್ದೇನೆ. ಆ ವರ್ಷ ೨೪ ದಶಲಕ್ಷದಷ್ಟು ಕೆಲಸದ ದಿನಗಳ ನಷ್ಟ ಸಂಭವಿಸಿತ್ತು. ಎರಡನೆಯ ಕೆಟ್ಟ ವರ್ಷವೆಂದರೆ ೧೯೨೫.

ಆಗ ೧೧ ದಶಲಕ್ಷದಷ್ಟು ಕೆಲಸದ ದಿನಗಳ ನಷ್ಟ ಸಂಭವಿಸಿತ್ತು. ಮೂರನೆಯ ಕೆಟ್ಟ ವರ್ಷವೆಂದರೆ ೧೯೨೯. ಆಗ ಎಂಟು ದಶಲಕ್ಷದಷ್ಟು ಕೆಲಸದ ದಿನಗಳ ನಷ್ಟ ಸಂಭವಿಸಿತ್ತು. ಆದರೆ ಒಮ್ಮೆ ಅಲ್ಲಿಂದ ಮುಂದಕ್ಕೆ ಬಂದರೆ ೧೯೨೯ನೆಯ ವರ್ಷದಿಂದ ಮುಂದಕ್ಕೆ ಮುಷ್ಕರಗಳಲ್ಲಿ ಪಾಲ್ಗೊಂಡಿದ್ದ ಕಾರ್ಮಿಕರ ಸಂಖ್ಯೆ ನಷ್ಟವಾದ ಕೆಲಸಗಳ ದಿನಗಳ ಸಂಖ್ಯೆ ಹಾಗೂ ೧೯೩೪ರ ಬಳಿಕ ನಡೆದಿರುವ ಮುಷ್ಕರಗಳ ಸಂಖ್ಯೆ– ಇವು ಯಾವುವೂ ನನಗ ತೋರುವಷ್ಟರ ಮಟ್ಟಿಗೆ ಸರ್ಕಾರದ ಯಾವುದೇ ಸದಸ್ಯನಿಗೆ ಆತಂಕವನ್ನುಂಟುಮಾಡುವಂಥ ಸ್ಥಿತಿಯನ್ನು ಸೃಷ್ಟಿಸಬಲ್ಲಂಥದ್ದವೆಂದು ಹೇಳಲು ಬರುವುದಿಲ್ಲ. ಒಂದೇ ಒಂದು ಕೆಟ್ಟ ವರ್ಷವೆಂದರೆ ೧೯೩೭, ಆ ವರ್ಷ ೮೯೭ ಕೆಲಸದ ದಿನಗಳು ನಷ್ಟವಾಗಿದ್ದುವು. ಹಿಂದಿನ ವರ್ಷದೊಂದಿಗೆ ಹೋಲಿಸಿ ನೋಡಿದರೆ ಇದು ಏನೇನೂ ಅಲ್ಲ. ಅಹಮದಾಬಾದ್ ನಗರದಲ್ಲಿ ನಡೆದ ಹಾಗೂ ೧೫ ದಿವಸಗಳವರೆಗೆ ಮುಂದುವರೆದ ಸಾರ್ವತ್ರಿಕ ಮುಷ್ಕರದಿಂದಾಗಿ ಈ ನಷ್ಟ ಸಂಭವಿಸಿತು ಎಂದು ನನಗೆ ತಿಳಿಸಲಾಗಿದೆ. ಆದ್ದರಿಂದ ನನ್ನ ಮೊದಲ ಮನವಿ ಇದು: ೧೯೩೪ರ ಕಾಯ್ದೆಯ ಉಪಬಂಧಗಳಲ್ಲಿ ಇಂಥ ಮೂಲಭೂತ ಬದಲಾವಣೆಯನ್ನೂ ಮಾಡುವುದಕ್ಕೆ ಒಪ್ಪಿಗೆಯನ್ನೂ ನೀಡುವಂತೆ ಸದನದ ಈ ಭಾಗವನ್ನೂ ಕನಿಷ್ಠಪಕ್ಷ ನನ್ನನ್ನು ಒತ್ತಾಯಿಸುವಂಥ ಸಮರ್ಥನೆಯನ್ನೇನೂ ಸರ್ಕಾರ ಮತ್ತು ಸನ್ಮಾನ್ಯ ಪ್ರಧಾನ ಮಂತ್ರಿಗಳು ಮುಂದಿರಿಸಿಲ್ಲ. ಕಡ್ಡಾಯ ಸಂಧಾನದ ಅಂಶವನ್ನೂ ಜಾರಿಗೆ ಕೊಡುವುದರ ಅಗತ್ಯದ ಬಗ್ಗೆ ಇಷ್ಟು ಹೇಳಿದರೆ ಸಾಕು.

ಈ ಮಸೂದೆಯ ಇತರ ಉಪಬಂಧಗಳತ್ತ ಗಮನಹರಿಸಿದಾಗ ನಾನು ಎತ್ತಿಕೊಳ್ಳಬಯಸುವ ಉಪಬಂಧವೆಂದರೆ ಮುಷ್ಕರಗಳಿಗೆ ಸಂಬಂಧಿಸಿದ ಉಪಬಂಧಗಳು. ಇವು ನಿಸ್ಸಂದೇಹವಾಗಿ ಅತ್ಯಂತ ಮುಖ್ಯವಾದ ಉಪಬಂಧಗಳು. ಇವನ್ನು ಸದನವು ಈ ಭಾಗ, ಕನಿಷ್ಠಪಕ್ಷ ನಾನು ಪ್ರತಿನಿಧಿಸುತ್ತಿರುವ ಪಕ್ಷ, ಪ್ರಬಲವಾಗಿ ವಿರೋಧಿಸುತ್ತದೆ. ಈ ಮಸೂದೆ ಕೆಲವೊಂದು ಪರಿಸ್ಥಿತಿಗಳಲ್ಲಿ ಮುಷ್ಕರವನ್ನು ಕಾನೂನುಬಾಹಿರವಾಗಿಸುತ್ತದೆ. ಮಸೂದೆಯ ೭೨ನೆಯ ಖಂಡ ಮುಷ್ಕರಗಳನ್ನು ಕಾನೂನುಬಾಹಿರವೆಂದು ಸಾರುವ ಉಪಬಂಧಗಳನ್ನು ಒಳಗೊಂಡಿದೆ. ಅದರಲ್ಲಿನ ಅತ್ಯಂತ ಮುಖ್ಯವಾದ ಭಾಗ ಇದು. ಅದು ಹೀಗೆ ಹೇಳುತ್ತದೆ:

> "೭೨.(೧) ಈ ಕೆಳಕಂಡ ಸಂದರ್ಭಗಳಲ್ಲಿ ಆರಂಭಿಸಿದಂಥ ಅಥವಾ ಮುಂದುವರಿಸಿದಂಥ ಮುಷ್ಕರ ಕಾನೂನುಬಾಹಿರವಾಗತಕ್ಕದು:
>
> (ಎ) ಅನುಬಂಧ Iರಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಔದ್ಯಮಿಕ ವಿಷಯಕ್ಕೆ ಸಂಬಂಧಿಸಿದ್ದಲ್ಲಿ, ಅಂಥ ವಿಷಯಕ್ಕೆ ಸಂಬಂಧಿಸಿದ ಹಾಗೂ ೨೬ನೆಯ ಪ್ರಕರಣದ ಮೇರೆಗೆ ಕಾರ್ಮಿಕ ಆಯುಕ್ತರಿಗೆ ಒಪ್ಪಿಸಲಾಗಿರುವ ಸ್ಥಾಯಿ ಆದೇಶಗಳ ವಿಷಯದಲ್ಲಿ ಪ್ರಸಂಗಾನುಗುಣವಾಗಿ ಅವರು ಅಥವಾ ಔದ್ಯಮಿಕ ನ್ಯಾಯಾಲಯ ಇತ್ಯರ್ಥವನ್ನು ಕೊಡುವುದಕ್ಕೆ ಮುನ್ನ ಅಥವಾ ೨೬ನೆಯ ಪ್ರಕರಣದ ಮೇರೆಗೆ ಅಂಥ ಸ್ಥಾಯೀ ಆದೇಶ ಕಾರ್ಯಾ ಚರಣೆಗೆ ಬಂದ ತಾರೀಖಿನಿಂದ ಒಂದು ವರ್ಷದ ಅವಧಿ ಮುಗಿಯುವುದಕ್ಕೆ ಮುನ್ನ;
>
> (ಬಿ) ೨೮ನೆಯ ಪ್ರಕರಣದ ಉಪಬಂಧಗಳಿಗೆ ಅನುಗುಣವಾಗಿ ಮುನ್ಸೂಚನೆಯನ್ನು ಕೊಡದೆ;
>
> (ಸಿ) ೨೮ನೆಯ ಪ್ರಕರಣದ ಮೇರೆಗೆ ಬದಲಾವಣೆಯ ಬಗ್ಗೆ ಮುನ್ಸೂಚನೆಯನ್ನು ಕೊಟ್ಟಿದ್ದು, ಅಂಥ

ಬದಲಾವಣೆಯ ಬಗ್ಗೆ ಯಾವುದೇ ಒಪ್ಪಂದಕ್ಕೆ ಬರಲಾಗದೆ ಇದ್ದಲ್ಲಿ, ೩೪ನೆಯ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ವಿಷಯದ ಬಗೆಗಿನ ಹೇಳಿಕೆ ನಿಬಂಧಕರಿಂದ ಸ್ವೀಕರಿಸಲ್ಪಡುವುದಕ್ಕೆ ಮುನ್ನ;
(ಇ) ಮುಷ್ಕರಕ್ಕೆ ಸಂಬಂಧಿಸಿದ್ದ ಔದ್ಯೋಗಿಕ ವಿವಾದಕ್ಕೆ ಸಂಧಾನದ ನಡೆವಳಿಕೆಗಳು ಪ್ರಾರಂಭವಾಗಿದ್ದ ಸಂದರ್ಭಗಳಲ್ಲಿ, ಅಂಥ ನಡೆವಳಿಕೆಗಳು ಪೂರ್ಣಗೊಳ್ಳುವುದಕ್ಕೆ ಮುನ್ನ;
(ಎಫ್) ೪೩ನೆಯ ಪ್ರಕರಣದ ಮೇರೆಗೆ ಅಂಥ ವಿವಾದಕ್ಕೆ ಅಥವಾ ಆ ಬಗೆಯ ವಿವಾದಗಳಿಗೆ ಸಂಬಂಧಿಸಿದ ನಿವೇದನೆಯನ್ನು ಕಾನೂನುಬದ್ಧವಾಗಿ ರದ್ದುಗೊಳಿಸಿದ್ದಲ್ಲಿ; ಅಥವಾ
(ಜಿ) ನೋಂದಾಯಿತ ಒಪ್ಪಂದ ಇತ್ಯರ್ಥ ಅಥವಾ ಐತೀರ್ಪಿನ ನಿಬಂಧನೆಗಳನ್ನು ಉಲ್ಲಂಘಿಸಿದ್ದಲ್ಲಿ,
(೨) ಯಾವುದೇ ಔದ್ಯಮಿಕ ವಿವಾದಕ್ಕೆ ಸಂಬಂಧಿಸಿದ ಸಂಧಾನದ ನಡೆವಳಿಕೆಗಳು ಪೂರ್ಣಗೊಂಡ ಅನಂತರದ ಎರಡು ತಿಂಗಳ ಅವಧಿ ಕಳೆದ ಬಳಿಕ ಯಾವುದೇ ಕಾಲದಲ್ಲಿ ಆರಂಭಿಸಿದ್ದಲ್ಲಿ ಅಂಥ ವಿವಾದಕ್ಕೆ ಸಂಬಂಧಿಸಿದ ಮುಷ್ಕರ ಕಾನೂನುಬಾಹಿರವಾಗಿರತಕ್ಕದ್ದು."

ಆ ಬಳಿಕ ಈ ಖಂಡವನ್ನು ಪರಿಣಾಮಕಾರಿಯಾಗಿಸುವ ಉದ್ದೇಶದಿಂದ, ಕಾನೂನುಬಾಹಿರ ಮುಷ್ಕರಗಳಲ್ಲಿ ತೊಡಗುವುದಕ್ಕೆ ಸಂಬಂಧಿಸಿದಂತೆ ಈ ಮಸೂದೆ ಕೆಲವೊಂದು ದಂಡನೆಗಳನ್ನು ಗೊತ್ತುಪಡಿಸಿವೆ. ಇವು ೬೬ ಮತ್ತು ೬೭ನೆಯ ಖಂಡಗಳು.

೬೬ನೆಯ ಖಂಡ ಹೀಗೆ ಹೇಳುತ್ತದೆ:
"ಔದ್ಯಮಿಕ ನ್ಯಾಯಾಲಯವು ಕಾನೂನುಬಾಹಿರವಾದುದೆಂದು ಪರಿಗಣಿದಂಥ ಮುಷ್ಕರವನ್ನು ಹೂಡಿದ ಅಥವಾ ಮುಷ್ಕರವನ್ನು ಸೇರಿದ ಯಾವನೇ ಉದ್ಯೋಗಿ, ಅಪರಾಧ ನಿರ್ಣಯಾ ನಂತರದಲ್ಲಿ, ಆರು ತಿಂಗಳವರೆಗೆ ವಿಸ್ತರಿಸಬಹುದಾಗಿರುವ ಅವಧಿಯ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸಲ್ಪಡುತ್ತಾನೆ"

೬೭ನೆಯ ಖಂಡ ಹೀಗೆ ಹೇಳುತ್ತದೆ:
"ಔದ್ಯಮಿಕ ನ್ಯಾಯಾಲಯ ಕಾನೂನುಬಾಹಿರವಾದುದೆಂದು ಪರಿಗಣಿಸಿದಂಥ ಮುಷ್ಕರ ಅಥವಾ ಬೀಗಮುದ್ರೆಯಲ್ಲಿ ಪಾಲ್ಗೊಳ್ಳುವಂತೆ ಯಾವನೇ ವ್ಯಕ್ತಿ ಪ್ರಚೋದಿಸಿದರೆ ಅಥವಾ ಚಿತಾವಣೆ ಮಾಡಿದರೆ ಅಥವಾ ಬೇರಾವುದೇ ರೀತಿಯಲ್ಲಿ ಅದರ ಮುಂದುವರಿಕೆ ಕಾರ್ಯವನ್ನೆಸಗಿದರೆ ಅಂಥ ಮುಷ್ಕರ ಅಥವಾ ಬೀಗಮುದ್ರೆ ಜಾರಿಗೆ ಬಂದಿರಲಿ ಅಥವಾ ಇಲ್ಲದಿರಲಿ ಅಪರಾಧ ನಿರ್ಣಯಾನಂತರದಲ್ಲಿ ಆರು ತಿಂಗಳವರೆಗೆ ವಿಸ್ತರಿಸಬಹುದಾಗಿರುವ ಅವಧಿಯ ಸೆರೆವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿಸಲ್ಪಡುತ್ತಾನೆ."
ವಿವರಣೆ: ಈ ಪ್ರಕರಣದ ಉದ್ದೇಶಗಳಿಗಾಗಿ ಯಾವುದೇ ಮುಷ್ಕರ ಅಥವಾ ಬೀಗಮುದ್ರೆಯ ಉದ್ದೇಶಕ್ಕಾಗಿ ಚಂದಾ ನೀಡುವ ಅಥವಾ ಸಂಗ್ರಹಿಸುವ ಅಥವಾ ನಿಧಿಯನ್ನು ಯಾಚಿಸುವ ವ್ಯಕ್ತಿಯನ್ನು ಅಂಥ ಮುಷ್ಕರ ಅಥವಾ ಬೀಗಮುದ್ರೆಯ ಮುಂದುವರಿಕೆಯ ಕಾರ್ಯವನ್ನೆಸ ಗಿದ್ದಾನೆಂದು ಪರಿಗಣಿಸತಕ್ಕದ್ದು."

ಮಾನ್ಯರೆ, ಮುಷ್ಕರ ಹೂಡುವಂಥ ಯಾವ ಹಕ್ಕೂ ಇಲ್ಲದಿರುವುದರಿಂದ ಈ ಖಂಡಗಳು ಸಮರ್ಥನೀಯವಾಗಿವೆಯೆಂದೂ, ಹೀಗಾಗಿ ಕಾರ್ಮಿಕರು ಯಾವುದನ್ನು ಮುಷ್ಕರ ಹೂಡುವ ಹಕ್ಕು

ಎಂದು ಕರೆಯುತ್ತಾರೋ ಅದಕ್ಕಾಗಿ ಅವರನ್ನು ದಂಡಿಸುವುದು ನೀತಿಶಾಸ್ತ್ರದ ಯಾವುದೇ ನಿಯಮವನ್ನು ಅಥವಾ ನ್ಯಾಯಶಾಸ್ತ್ರದ ಯಾವುದೇ ನಿಯಮವನ್ನು ಉಲ್ಲಂಘಿಸುವುದಿಲ್ಲವೆಂದು ಹೇಳಲಾಗಿದೆ. ಆ ವಾದವನ್ನು ಖಂಡಿಸುವುದು ಮತ್ತು ಆ ನಿಲುವನ್ನು ನಿರಾಕರಿಸುವುದು ಈ ಭಾಷಣದಲ್ಲಿನ ನನ್ನ ಮೊದಲ ಕಾಳಜಿಯಾಗಿರುತ್ತದೆ. ನನ್ನ ನಿಲುವನ್ನು ಸ್ಪಷ್ಟಪಡಿಸುವ ಸಲುವಾಗಿ, ಕೆಲವೊಂದು ಅತ್ಯಂತ ಪ್ರಾಥಮಿಕವಾದ ಆಧಾರ ವಾಕ್ಯಗಳೊಂದಿಗೆ ನನ್ನ ಈ ಭಾಷಣವನ್ನು ಆರಂಭಿಸುತ್ತೇನೆ. ಮೊಟ್ಟಮೊದಲು "ಮುಷ್ಕರ" ಎಂಬ ಮಾತನ್ನು ಕೇಳಿದಾಗ ಯಾವ ಅರ್ಥ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ ಎಂಬುದನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ಈ ಮಾತಿಗೆ ಇರುವ ಅರ್ಥವಾದರೂ ಏನು? "ಮುಷ್ಕರ" ಎಂಬ ಮಾತಿಗೆ ಏನು ಅರ್ಥವಿದೆ ಎಂಬುದನ್ನು ತಿಳಿದುಕೊಳ್ಳುವುದು ಉತ್ತಮವೆಂದು ನಾನು ಭಾವಿಸಿದ್ದೇನೆ. ಸರಳ ಜನಪ್ರಿಯ ಭಾಷೆಯಲ್ಲಿ ಮುಷ್ಕರ ಎಂಬುದಕ್ಕೆ ಸೇವಾ ಒಪ್ಪಂದದ ಉಲ್ಲಂಘನೆ ಎಂಬುದಕ್ಕಿಂತ ಹೆಚ್ಚಿನ ಅರ್ಥವೇನೂ ಇಲ್ಲ. ಕೆಲಸಗಾರನೊಬ್ಬ ಮುಷ್ಕರ ಹೂಡಿದ್ದಾನೆ ಎಂದಾಗ, ಅವನು ಸೇವಾ ಒಪ್ಪಂದವನ್ನು ಉಲ್ಲಂಘಿಸಿದ್ದಾನೆ ಎಂದಷ್ಟೇ ಅದಕ್ಕೆ ಅರ್ಥ: ಅದರಲ್ಲಿ ಅದಕ್ಕಿಂತ ಹೆಚ್ಚಿನದೇನೂ ಇಲ್ಲ, ಅದಕ್ಕಿಂತ ಕಡಿಮೆಯದೇನೂ ಇಲ್ಲ. ನಾನು ಎತ್ತಲು ಉದ್ದೇಶಿಸಿರುವ ಮುಂದಿನ ಪ್ರಶ್ನೆ ಇದು: ಭಾರತೀಯ ಶಾಸನ ಗ್ರಂಥದಲ್ಲಿ ಉಲ್ಲೇಖಿತವಾಗಿರುವ ರೂಪದಲ್ಲಿ ಇಂದಿನ ಕಾನೂನು ಸೇವಾ ಒಪ್ಪಂದದ ಉಲ್ಲಂಘನೆಯ ವಿಚಾರದಲ್ಲಿ ಯಾವ ರೀತಿಯಲ್ಲಿ ವ್ಯವಹರಿಸುತ್ತದೆ? ಮುಷ್ಕರ ಹೂಡುವ ಈ ಹಕ್ಕನ್ನು ಭಾರತೀಯ ಕಾನೂನು ಮಾನ್ಯ ಮಾಡುತ್ತದೆಯೇ ಅಥವಾ ಇಲ್ಲವೆ? ಹೌದು ಎಂದಲ್ಲಿ ಯಾವ ರೀತಿಯಲ್ಲಿ? ಅದು ಶಿಕ್ಷಿಸುತ್ತದೆ ಎಂದಲ್ಲಿ, ಯಾವ ರೀತಿಯಲ್ಲಿ ಆ ಶಿಕ್ಷೆಯನ್ನು ವಿಧಿಸುತ್ತದೆ? ಮಾನ್ಯರೆ, ಇಲ್ಲಿ ಮತ್ತೊಮ್ಮೆ ನಾನೊಂದು ಪ್ರಾಥಮಿಕ ಪ್ರಸ್ತಾಪವನ್ನು ಮುಂದಿಡುತ್ತಿದ್ದೇನೆ– ಇದು ಕೃತ್ಯ ಅಥವಾ ಲೋಪ ಸಿವಿಲ್ ಅಕ್ರಮವಾಗಿರಬಹುದು ಅಥವಾ ಅಪರಾಧವೂ ಆಗಿರಬಹುದು. ನಾನು ಎತ್ತಲು ಉದ್ದೇಶಿಸಿರುವ ಮೊದಲ ಪ್ರಶ್ನೆ ಎಂದರೆ ಸೇವಾ ಒಪ್ಪಂದದ ಉಲ್ಲಂಘನೆ ಸಿವಿಲ್ ಅಕ್ರಮವೆ? ವಾಸ್ತವವಾಗಿ ನಾನು ಈ ವಿಷಯವನ್ನು ಸಮಗ್ರವಾಗಿ ಚರ್ಚಿಸಬಯಸುತ್ತೇನೆ. ಏಕೆಂದರೆ ಈ ವಿಷಯಕ್ಕೆ ಸಂಬಂಧಿಸಿದ ನನ್ನ ನಿಲುವಿನ ಬಗ್ಗೆ ನಾನು ಯಾವುದೇ ಸಂದೇಹವನ್ನೂ ಉಳಿಸಬಯಸುವುದಿಲ್ಲ. ಸೇವಾ ಒಪ್ಪಂದದ ಉಲ್ಲಂಘನೆ ಸಿವಿಲ್ ಅಕ್ರಮವೆ ಎಂಬ ನನ್ನ ಪ್ರಶ್ನೆಗೆ ಕಾನೂನು ಕೊಡುವ ಉತ್ತರ ಇದು: ಹೌದು, ಅದೊಂದು ಸಿವಿಲ್ ಅಕ್ರಮ. ಈ ಸಿವಿಲ್ ಅಕ್ರಮದಿಂದ ಬಾಧಿತನಾದ ವ್ಯಕ್ತಿಯ ದೊರೆಯಬಹುದಾದ ಪರಿಹಾರೋಪಾಯಗಳು ಯಾವುವು? ಇದು ಮೊದಲ ಪ್ರಶ್ನೆಯನ್ನು ಹಿಂಬಾಲಿಸಿಕೊಂಡು ಬರುವ ಮುಂದಿನ ಪ್ರಶ್ನೆ. ಇಲ್ಲಿಯೂ ನಮಗೆ ದೊರೆಯುವ ಉತ್ತರ ಮತ್ತೆ ಅದೇ: ಕಾರ್ಮಿಕನು ಸೇವಾ ಒಪ್ಪಂದವನ್ನು ಉಲ್ಲಂಘಿಸಿದ್ದರಿಂದ ಬಾಧಿತನಾದ ವ್ಯಕ್ತಿಗೆ ಇಂದಿನ ಕಾನೂನು ಎರಡು ಪರಿಹಾರೋಪಾಯಗಳನ್ನು ಕಲ್ಪಿಸುತ್ತದೆ. ಹಾನಿ ಪರಿಹಾರ ಮತ್ತು ನಿರ್ದಿಷ್ಟ ಪರಿಹಾರ. ಸಿವಿಲ್ ಅಕ್ರಮದ ಸಂದರ್ಭದಲ್ಲಿ ಕಾನೂನು ಈ ಎರಡು ಪರಿಹಾರೋಪಾಯಗಳಿಗೆ ಅಂದರೆ ಹಾನಿ ಪರಿಹಾರ ಮತ್ತು ನಿರ್ದಿಷ್ಟ ಪರಿಹಾರಗಳಿಗೆ ಅವಕಾಶವನ್ನೂ ಕಲ್ಪಿಸಿದೆಯಾದರೂ, ವಿಶೇಷವಾಗಿ ಸೇವಾ ಒಪ್ಪಂದಗಳಿಗೇ ಅನ್ವಯವಾಗುವಂಥ ಒಂದು ಉಪಬಂಧವಿದೆ. ಸೇವಾ ಒಪ್ಪಂದದ ಉಲ್ಲಂಘನೆಯಾದ ಸಂದರ್ಭಗಳಲ್ಲಿ ಬಾಧಿತನಾದಂಥ ವ್ಯಕ್ತಿಗೆ ಹಕ್ಕಿರುವುದು ನಷ್ಟ ಪರಿಹಾರಕ್ಕೆ ಮಾತ್ರ; ನಿರ್ದಿಷ್ಟ ಪರಿಹಾರವನ್ನು ಅವನೆಂದೂ ಕೋರುವಂತಿಲ್ಲ. ತಾನು ಏರ್ಪಡಿಸಿಕೊಂಡಿರುವ ಸೇವಾ ಒಪ್ಪಂದವನ್ನು ಪಾಲಿಸುವಂತೆ ವ್ಯಕ್ತಿಯನ್ನು ಒತ್ತಾಯಿಸಲು ಸಾಧ್ಯವಾಗುವಂಥ ಪರಿಹಾರವನ್ನೆಂದೂ ನ್ಯಾಯಾಲಯ ಕೊಡಲಾರದು. ಬಾಧಿತನಾದಂಥ ವ್ಯಕ್ತಿಗೆ ಇರುವುದು ನಷ್ಟ ಪರಿಹಾರದ

ಹಕ್ಕು ಮಾತ್ರ. ಮಾನ್ಯರೆ, ಸಿವಿಲ್ ಅಕ್ರಮವಾದ ಸೇವಾ ಒಪ್ಪಂದದ ಉಲ್ಲಂಘನೆಯ ಸಂದರ್ಭದಲ್ಲಿನ ಸ್ಥಿತಿಗತಿ ಇದು. ಈ ಸಿವಿಲ್ ಅಕ್ರಮಕ್ಕೆ ಪ್ರತಿಯಾಗಿ ಉದ್ಯೋಗದಾತ ನಷ್ಟ ಪರಿಹಾರಕ್ಕಿಂತ ಹೆಚ್ಚಿನದೇನನ್ನೂ ಪಡೆಯಲಾರ.

ಸೇವಾ ಒಪ್ಪಂದದ ಉಲ್ಲಂಘನೆಯನ್ನು ಅಪರಾಧ ಎಂಬ ದೃಷ್ಟಿಯಿಂದ ನೋಡುವುದಾದರೆ, ಆಗ ಏಳುವ ಪ್ರಶ್ನೆ ಇದು: ಇದು ಅಪರಾಧವೆ? ಸೇವಾ ಒಪ್ಪಂದದ ಉಲ್ಲಂಘನೆಗೆ ಸಂಬಂಧಿಸಿದಂತೆ ಭಾರತೀಯ ಕಾನೂನಿನಲ್ಲಿ ಯಾವ ಉಪಬಂಧವನ್ನು ಕಲ್ಪಿಸಲಾಗಿದೆ? ಮಾನ್ಯರೆ, ಸ್ಪಷ್ಟೀಕರಣದ ದೃಷ್ಟಿಯಿಂದ ನಮ್ಮ ಭಾರತೀಯ ಕಾನೂನಿನಲ್ಲಿ ಈ ವಿಚಾರವನ್ನು ಹೇಗೆ ಪರಿಗಣಿಸಲಾಗಿದೆ ಎಂಬುದರ ಸಂಕ್ಷಿಪ್ತ ಇತಿಹಾಸ ವನ್ನು ಈ ಸದನಕ್ಕೆ ಒದಗಿಸುವುದು ಅಗತ್ಯವಾಗಿದೆ. ಸೇವಾ ಒಪ್ಪಂದದ ಉಲ್ಲಂಘನೆಯ ವಿಚಾರವನ್ನು ಮೊದಲಿಗೆ ಪರಿಗಣಿಸಿದ ಭಾರತೀಯ ಕಾನೂನೆಂದರೆ ೧೮೫೯ರ XIIIನೆಯ ಅಧಿನಿಯಮ; ಅದನ್ನು ಕಾರ್ಮಿಕರ ಒಪ್ಪಂದ ಉಲ್ಲಂಘನೆ ಅಧಿನಿಯಮವೆಂದು ಕರೆಯಲಾಗಿತ್ತು. ಸಿಪಾಯಿ ದಂಗೆಯ ಅನಂತರ ಬಹು ಶೀಘ್ರದಲ್ಲಿ ಅಥವಾ ದಂಗೆ ನಡೆಯುತ್ತಿದ್ದ ಅವಧಿಯಲ್ಲಿ, ೧೮೫೯ರಲ್ಲಿ ಇದನ್ನು ಅಂಗೀಕರಿಸಲಾಯಿತು. ಈ ಶಾಸನವನ್ನು ಏಕೆ ಅಂಗೀಕರಿಸಲಾಯಿತು ಎಂಬುದನ್ನೂ ನಾನೀಗ ಸದನಕ್ಕೆ ತಿಳಿಸುತ್ತೇನೆ. ಮೇಲಾಗಿ ಭಾರತೀಯ ದಂಡಸಂಹಿತೆಯಲ್ಲೂ ಕೆಲವೊಂದು ಉಪಬಂಧಗಳಿದ್ದು, ಅವೂ ಈ ವಿಷಯವನ್ನು– ಅಂದರೆ ಸೇವಾ ಒಪ್ಪಂದದ ಉಲ್ಲಂಘನೆಯನ್ನು ಅಪರಾಧವೆಂದು ಪರಿಗಣಿಸುತ್ತವೆ. ೪೯೦, ೪೯೧ ಮತ್ತು ೪೯೨– ಇದೇ ಆ ಪ್ರಕರಣಗಳು. ೧೮೫೯ರ XIIIನೆಯ ಅಧಿನಿಯಮ ಅನ್ವಯಿಕತೆ ಸೀಮಿತವಾಗಿತ್ತು. ಅದು ಪರಿಣಿತರಿಗೆ ಮತ್ತು ಕುಶಲಕರ್ಮಿಗಳಿಗೆ ಅನ್ವಯವಾಗುವಂಥದಾಗಿತ್ತು. ತಮ್ಮ ಉದ್ಯೋಗದಾತರಿಂದ ಮುಂಗಡಗಳನ್ನು ಪಡೆದುಕೊಂಡು ಅನಂತರದಲ್ಲಿ ತಾವು ಒಪ್ಪಿಕೊಂಡಿದ್ದಂಥ ಬಾಧ್ಯತೆಗಳನ್ನು ನಿರ್ವಹಿಸಲು ನಿರಾಕರಿಸಿದಂಥ ಪರಿಣಿತರಿಗೆ ಮತ್ತು ಕುಶಲಕರ್ಮಿಗಳಿಗೆ ಅದು ಅನ್ವಯವಾಗುವಂಥದಾಗಿತ್ತು. ಅಂದಿನ ಪರಿಸ್ಥಿತಿಗಳ ಅಗತ್ಯದಿಂದಾಗಿ ಅದನ್ನು ರೂಪಿಸಲಾಗಿತ್ತು. ಬ್ರಿಟಿಷ್ ಸರ್ಕಾರ ದಂಗೆಯನ್ನು ಎದುರಿಸುತ್ತಿತ್ತು. ದಂಗೆ ಮುಂದುವರಿದಿದ್ದ ಅವಧಿಯಲ್ಲಿ ಸೈನ್ಯ ಅನೇಕ ಪರಿಣಿತರನ್ನು ಮತ್ತು ಕುಶಲಕರ್ಮಿಗಳನ್ನು ಗೊತ್ತುಪಡಿಸಿಕೊಂಡಿತ್ತು. ಅವರು ಒಪ್ಪಿಕೊಂಡಿದ್ದ ಸೇವೆಯನ್ನು ಸಲ್ಲಿಸುವರೆಂಬ ನಿರೀಕ್ಷೆಯಲ್ಲಿ ಅವರಿಗೆ ಮುಂಗಡಗಳನ್ನು ಕೊಡಲಾಗಿತ್ತು. ಆದರೆ ಭಯದಿಂದಾಗಿಯೋ, ಇತರ ಪರಿಸ್ಥಿತಿಗಳಿಂದಾಗಿಯೋ ಅವರು ತಮ್ಮ ಸ್ವಗ್ರಾಮಗಳಿಗೆ ಹಿಂದಿರುಗಿದ್ದರು. ಹೀಗಾಗಿ, ಮುಂಗಡವನ್ನು ಪಡೆದುಕೊಂಡಿದ್ದರೂ, ಅವರು ತಾವು ಒಪ್ಪಿಕೊಂಡಿದ್ದ ಬಾಧ್ಯತೆಗಳನ್ನು ನಿರ್ವಹಿಸುವಂಥ ಸ್ಥಿತಿಯಲ್ಲಿ ಇರಲಿಲ್ಲ. ಇಂಥ ಪ್ರಸಂಗಗಳನ್ನು ಒಳಗೊಳ್ಳುವ ಸಲುವಾಗಿ ೧೮೫೯ರ ಅಧಿನಿಯಮವನ್ನು ಅಂಗೀಕರಿಸಲಾಗಿತ್ತು. ಈ ಅಧಿನಿಯಮವನ್ನು ಅಂಗೀಕರಿಸಿದ್ದರೂ ಸೇವಾ ಒಪ್ಪಂದದ ಉಲ್ಲಂಘನೆಯನ್ನು ಅದು ಅಪರಾಧವಾಗಿಸಿದ್ದರೂ ಅದನ್ನು ತೀರಾ ವಿರಳವಾಗಿ ಕಾರ್ಯರೂಪಕ್ಕೆ ತರಲಾಯಿತೆಂಬುದನ್ನು ಅದರ ದಾಖಲೆಗಳೇ ಸಾರಿಹೇಳುತ್ತವೆ; ವಾಸ್ತವವಾಗಿ ಅದು ಜನರನ್ನು ದಂಡನೆಗೆ ಒಳಪಡಿಸಲು ಬಳಸಲಾದಂಥ ಕಾನೂನೇನೂ ಆಗಿರಲಿಲ್ಲ. ಮಾನ್ಯರೆ, ಈ ಅಧಿ ನಿಯಮದ ಅನಂತರದ ಇತಿಹಾಸವೂ ಸ್ವಾರಸ್ಯಕರವಾಗಿದೆ. ೧೮೫೯ರಿಂದ ವಿಧಿವತ್ತಾದ ಶಾಸನವೆಂಬಂತೆ ಉಳಿದುಕೊಂಡಿದ್ದ, ಆದರೆ ನಾನಾಗಲೇ ಹೇಳಿದಂತೆ ಎಂದೂ ಕಾರ್ಯರೂಪಕ್ಕೆ ತರದೆ ಇದ್ದ ಈ ಅಧಿನಿಯಮಕ್ಕೆ ೧೯೨೦ರಲ್ಲಿ ಭಾರತ ಸರ್ಕಾರದ XIIನೆಯ ಅಧಿನಿಯಮದ ಮೂಲಕ ತಿದ್ದುಪಡಿಯನ್ನು ತರಲಾಯಿತು. ತಿದ್ದುಪಡಿ ಅಧಿನಿಯಮ ಈ ಅಧಿನಿಯಮಕ್ಕೆ ಅತ್ಯಂತ ಪ್ರಶಂಸನೀಯವಾದ ಎರಡು ತತ್ವಗಳನ್ನು ಸೇರಿಸಿತು. ಈ ಅಧಿನಿಯಮಕ್ಕೆ ಸೇರಿಸಲಾದ ಒಂದು ಪ್ರಶಂಸನೀಯವಾದ ತತ್ವ

ಇದು: ಸೇವಾ ಒಪ್ಪಂದವನ್ನು ಉಲ್ಲಂಘಿಸಿದಂಥ ಕುಶಲಕರ್ಮಿಗೆ ಶಿಕ್ಷೆಯನ್ನು ವಿಧಿಸುವುದಕ್ಕೆ ಮೊದಲು, ಒಪ್ಪಂದದ ನ್ಯಾಯಸಮ್ಮತತೆಯನ್ನು ಪರಿಶೀಲಿಸುವ ಅಧಿಕಾರವನ್ನು ಮ್ಯಾಜಿಸ್ಟ್ರೇಟರಿಗೆ ಕೊಡಲಾಯಿತು. ಹೀಗಾಗಿ ಒಪ್ಪಂದ ನ್ಯಾಯಸಮ್ಮತವಾಗಿಲ್ಲವೆಂದು ತೀರ್ಮಾನಕ್ಕೆ ಬಂದಲ್ಲಿ, ತನ್ನ ಉದ್ಯೋಗದಾತನಿಂದ ಮುಂಗಡವನ್ನು ಪಡೆದಿದ್ದರೂ ಅವಿಧೇಯನಾದ ಕಾರ್ಮಿಕನನ್ನು ಶಿಕ್ಷೆಗೆ ಒಳಪಡಿಸಲು ಮ್ಯಾಜಿಸ್ಟ್ರೇಟರಿಗೆ ಅಧಿಕಾರವಿರುತ್ತಿರಲಿಲ್ಲ. ೧೯೨೦ರ ಅಧಿನಿಯಮದ ಮೂಲಕ ಜಾರಿಗೆ ತರಲಾದ ಮೊದಲ ಬದಲಾವಣೆ ಅದಾಗಿತ್ತು. ೧೯೨೦ರ ಅಧಿನಿಯಮದ ಮೂಲಕ ಜಾರಿಗೆ ತರಲಾದ ಎರಡನೆಯ ಪ್ರಶಂಸನೀಯ ಬದಲಾವಣೆಯೆಂದರೆ ಕ್ಷುಲ್ಲಕವಾದ ದೂರನ್ನು ತಂದಂಥ ಉದ್ಯೋಗದಾತನಿಗೆ ಶಿಕ್ಷೆಯನ್ನು ವಿಧಿಸುವ ಅಧಿಕಾರವನ್ನು ಮ್ಯಾಜಿಸ್ಟ್ರೇಟರಿಗೆ ಕೊಡಲಾಯಿತು. ಮೂಲ ಅಧಿನಿಯಮದಲ್ಲಿ ಈ ಅವಕಾಶವಿರಲಿಲ್ಲ.

ಭಾರತೀಯ ದಂಡಸಂಹಿತೆಯ ಪ್ರಕರಣಗಳ ವಿಚಾರಕ್ಕೆ ಬಂದರೆ ನಾನು ಉಲ್ಲೇಖಿಸಿದ ಆ ಮೂರು ಪ್ರಕರಣಗಳು ಸ್ವಾರಸ್ಯಕರವಾದ ಇತಿಹಾಸವನ್ನು ಹೊಂದಿವೆ. ೪೯೦ನೆಯ ಪ್ರಕರಣ ಸಮುದ್ರಯಾನದ ಅಥವಾ ಪ್ರಯಾಣದ ಅವಧಿಯಲ್ಲಿ ಎಸಗಲಾದಂಥ ಸೇವಾ ಒಪ್ಪಂದದ ಉಲ್ಲಂಘನೆಗೆ ಸಂಬಂಧಿಸಿತ್ತು. ಅದರ ಅನ್ವಯಿಕತೆ ಬಹಳ ಸೀಮಿತವಾಗಿತ್ತು. ಸೇವಾ ಒಪ್ಪಂದದ ಎಲ್ಲ ಉಲ್ಲಂಘನೆಗಳಿಗೆ ಅದು ಅನ್ವಯವಾಗುವಂಥದಾಗಿರಲಿಲ್ಲ. ಅದು ಸಮುದ್ರಯಾನಕ್ಕೆ ಅಥವಾ ಪ್ರಯಾಣಕ್ಕೆ ಹೊರಟ ನಾವಿಕರಿಗೆ ಮಾತ್ರವೇ ಅನ್ವಯಿಸುವಂತದಾಗಿತ್ತು. ಸ್ಪಷ್ಟವಾಗಿಯೇ ನಾವಿಕರ ಸೇವೆಯ ಪ್ರಕರಣದಲ್ಲಿ ಇಂಥ ಒಂದು ಅಪವಾದವನ್ನು ಕಲ್ಪಿಸುವುದು ಅತ್ಯಗತ್ಯವೇ ಆಗಿತ್ತು. ಏಕೆಂದರೆ ಅವರ ನಿರಂತರ ಸೇವೆಯ ಆಧಾರ ಮೇಲೆಯೇ ಸಮುದ್ರಯಾನದ ಯಶಸ್ಸು ಮತ್ತು ಸುರಕ್ಷತೆ ಅವಲಂಬಿಸಿರುತ್ತಿದ್ದವು. ಇನ್ನೊಂದು ಪ್ರಕರಣ ಅಂದರೆ ೪೯೧ ನೆಯ ಪ್ರಕರಣ– ಅಸಹಾಯಕ ವ್ಯಕ್ತಿಗಳ ಅಗತ್ಯವನ್ನು ಪೂರೈಸುವುದಕ್ಕಾಗಿ ಗೊತ್ತುಪಡಿಸಿದ್ದಂಥ ಪರಿಚಾರಕನಿಂದ ಆಗುವ ಒಪ್ಪಂದದ ಉಲ್ಲಂಘನೆಗೆ ಸಂಬಂಧಿಸಿತ್ತು. ಉದಾಹರಣೆಗೆ ಅಸಹಾಯಕ ಶಿಶುವಿನ ಮೇಲ್ವಿಚಾರಣೆಗೆ ಕಾರ್ಯದ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದಂಥ ದಾದಿಗೆ ಅದು ಅನ್ವಯವಾಗುತ್ತಿತ್ತು; ಕುಂಟನಾಗಿದ್ದು ತನ್ನ ಅಗತ್ಯಗಳನ್ನು ತಾನೇ ಪೂರೈಸಿಕೊಳ್ಳಲಾಗದೆ ಇದ್ದಂಥ ವ್ಯಕ್ತಿಯ ಅಗತ್ಯಗಳನ್ನು ಪೂರೈಸುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲ್ಪಟ್ಟಿದ್ದ ಸೇವಕನಿಗೆ ಅದು ಅನ್ವಯವಾಗುತ್ತಿತ್ತು. ಒಡೆಯನ ವೆಚ್ಚದಲ್ಲಿ ದೂರದ ಜಾಗಕ್ಕೆ ಕರೆದೊಯ್ಯಲಾದಂಥ ಸೇವಕ ಆ ದೂರದ ಜಾಗದಲ್ಲಿ ಎಸಗುವ ಸೇವಾ ಒಪ್ಪಂದದ ಉಲ್ಲಂಘನೆಯ ಪ್ರಕರಣವನ್ನು ೪೯೨ನೆಯ ಪ್ರಕರಣ ಒಳಗೊಳ್ಳುತ್ತಿತ್ತು. ಇವು ಭಾರತೀಯ ದಂಡಸಂಹಿತೆ ಜಾರಿಗೆ ಬಂದಾಗ ಅಧಿನಿಯಮವಾದ ಉಪಬಂಧಗಳಾಗಿದ್ದುವು. ಮಾನ್ಯರೆ, ಇವುಗಳನ್ನು ಅಧಿನಿಯಮವಾಗಿಸಿದಂದಿನಿಂದ ಈಚೆಗಿನ ಇವುಗಳ ಇತಿಹಾಸ ಏನಾಗಿದೆ? ಆ ಇತಿಹಾಸ ಹೀಗಿದೆ: ೧೯೨೫ರ ಕೇಂದ್ರೀಯ ಶಾಸಕಾಂಗದ IIIನೆಯ ಅಧಿನಿಯಮದ ಮೂಲಕ ೪೯೦ನೆಯ ಪ್ರಕರಣವನ್ನು ಮತ್ತು ೪೯೨ನೆಯ ಪ್ರಕರಣವನ್ನು ನಿರಸನಗೊಳಿಸಲಾಯಿತು. ಈ ಪ್ರಕರಣಗಳು ಈಗ ಅನ್ವಯವಾಗುವಂತೆಯೇ ಇಲ್ಲ. ಇವುಗಳ ಅಧೀನ ಅಪರಾಧಗಳಾಗುತ್ತಿದ್ದ ಸೇವಾ ಉಲ್ಲಂಘನೆಗಳು ಈಗ ಅಪರಾಧಗಳಾಗಿ ಉಳಿದೇ ಇಲ್ಲ. ಹೀಗಾಗಿ ಉಳಿದಿರುವ ಒಂದೇ ಒಂದು ಪ್ರಕರಣವೆಂದರೆ ಭಾರತೀಯ ದಂಡಸಂಹಿತೆಯ ೪೯೧ನೆಯ ಪ್ರಕರಣ. ಆದ್ದರಿಂದ ಭಾರತದಲ್ಲಿ ಇಂದು ಪ್ರಚಲಿತವಾಗಿರುವ ಕಾನೂನಿನಂತೆ, ದಂಡನಾರ್ಹ ಪರಿಣಾಮಗಳನ್ನು ಒಳಗೊಳ್ಳಬಹುದಾಗಿರುವ, ನಷ್ಟ ಪರಿಹಾರಕ್ಕಿಂತ ಭಿನ್ನವಾಗಿರುವ ಸೇವಾ ಒಪ್ಪಂದದ ಉಲ್ಲಂಘನೆಯ ಪ್ರಕರಣವೆಂದರೆ ೪೯೧ನೆಯ ಪ್ರಕರಣ ಮಾತ್ರವೆ. ಅಸಹಾಯಕನಾಗಿರುವಂಥ ಹಾಗೂ ತನ್ನನ್ನು ತಾನೇ ನೋಡಿಕೊಳ್ಳಲಾರದಂಥ ವ್ಯಕ್ತಿಗೆ ಸಂಬಂಧಿಸಿದ ಪ್ರಕರಣಗಳನ್ನು

ಒಳಗೊಳ್ಳಬೇಕೆಂದು ನಿಜವಾಗಿಯೂ ಉದ್ದೇಶಿಸಲಾದ ಈ ಉಪಬಂಧದ ಬಗ್ಗೆ ಈ ಸದನದ ಸದಸ್ಯರಾರೂ ಆಕ್ಷೇಪವನ್ನೆತ್ತಲಾರರೆಂದು ನಾನು ನಂಬಿದ್ದೇನೆ.

ಮಾನ್ಯರೆ, ಶ್ರೀಸಾಮಾನ್ಯನ ಪರಿಭಾಷೆಯಲ್ಲಷ್ಟೇ ನಿಷೇಧಿತವಾಗಿರುವ "ಮುಷ್ಕರ" ಎಂಬ ಶಬ್ದದ ಬಗ್ಗೆ ನಾನು ನೀಡಿರುವ ಕಾನೂನಿನ ವ್ಯಾಖ್ಯೆಯನ್ನು ಗಮನಿಸಿದಾಗ ಸೇವಾ ಉಲ್ಲಂಘನೆಯಿಂದ ಉದ್ಭವಿಸುವ ಪರಿಸ್ಥಿತಿ ಏನಾಗುತ್ತದೆ ಎಂದರೆ, ಸೇವಾ ಒಪ್ಪಂದದ ಉಲ್ಲಂಘನೆ ಅಪರಾಧವಲ್ಲ ಹಾಗೂ ೪೯೧ನೆಯ ಪ್ರಕರಣದ ಅಧೀನ ಬರದ ಹೊರತು, ಭಾರತೀಯ ಕಾನೂನಿನ ಅಧೀನ ಶಿಕ್ಷಾರ್ಹ ಅಪರಾಧವೂ ಆಗುವುದಿಲ್ಲ. ಅಂದರೆ ಅದು ಸಿವಿಲ್ ಅಕ್ರಮ ಮಾತ್ರವಾಗುತ್ತದೆ; ಅದು ಅಪರಾಧವಾಗುವುದಿಲ್ಲ. ಜೊತೆಗೆ ಅದು ಸಿವಿಲ್ ಅಕ್ರಮವಾಗಿದ್ದು, ನಷ್ಟ–ಪರಿಹಾರ ಮಾತ್ರವೇ ಅದಕ್ಕೆ ಪರಿಹಾರೋಪಾಯವಾಗಬಲ್ಲದೇ ಹೊರತು, ಯಾವುದೇ ನಿರ್ದಿಷ್ಟ ನೆರವೇರಿಕೆಯಲ್ಲ. ನಾನು ಈ ಅಂಶವನ್ನೆ ಒತ್ತಿ ಹೇಳಬಯಸುತ್ತೇನೆ. ಈಗ ಈ ಸದನ ತನ್ನೆಲ್ಲ ಗಾಂಭೀರ್ಯದಿಂದ ಪರಿಗಣಿಸ ಬಯಸುವ ಪ್ರಶ್ನೆ ಇದೆಂದು ನಾನು ನಂಬಿದ್ದೇನೆ: ಸೇವಾ ಒಪ್ಪಂದದ ಉಲ್ಲಂಘನೆಯನ್ನು ಭಾರತೀಯ ಕಾನೂನು ಏಕೆ ಅಪರಾಧವಾಗಿಸಿಲ್ಲ? ಎಂಬುದೇ ಆ ಪ್ರಶ್ನೆ. ನಿರ್ದಿಷ್ಟ ನೆರವೇರಿಕೆಗೆ ಭಾರತೀಯ ಕಾನೂನು ಏಕೆ ಅವಕಾಶವನ್ನು ಕಲ್ಪಿಸಿಲ್ಲ? ಇದಕ್ಕೆ ಸದನದ ಇತರ ಸದಸ್ಯರು ಯಾವ ಉತ್ತರವನ್ನಾದರೂ ಕೊಡಬಯಸಲಿ. ಇದಕ್ಕೆ ನನ್ನ ಉತ್ತರ ತುಂಬ ಸರಳವಾಗಿದೆ. ನನ್ನ ಉತ್ತರ ಇದು: ಸೇವಾ ಒಪ್ಪಂದದ ಉಲ್ಲಂಘನೆಯನ್ನು ಭಾರತೀಯ ಶಾಸಕಾಂಗ ಅಪರಾಧವೆಂದು ಪರಿಗಣಿಸದೆ ಇರುವುದಕ್ಕೆ ಕಾರಣವೇನೆಂದರೆ ಅದನ್ನು ಅಪರಾಧವಾಗಿ ಪರಿಗಣಿಸಿದರೆ, ತನ್ನ ಮನಸ್ಸಿಗೆ ವಿರುದ್ಧವಾಗಿ ಸೇವೆ ಸಲ್ಲಿಸುವಂತೆ ವ್ಯಕ್ತಿಯನ್ನು ಒತ್ತಾಯಪಡಿಸಿದಂತಾಗುತ್ತದೆ ಎಂದು ಅದು ಭಾವಿಸಿರುವುದು; ಅವನನ್ನು ಗುಲಾಮನಾಗಿಸಿದಂತಾಗುತ್ತದೆ (ಒಂದು ಭಾವಿಸಿರುವುದು). (ಕೇಳಿ, ಕೇಳಿ). ಹೀಗಾಗಿ, ಮುಷ್ಕರವನ್ನು ದಂಡನಾರ್ಹವಾಗಿಸುವುದು ಕಾರ್ಮಿಕನನ್ನು ಗುಲಾಮಮನನ್ನಾಗಿಸುವುದಕ್ಕಿಂತ ಭಿನ್ನವಾದುದೇನೂ ಅಲ್ಲವೆಂದು ನಾನು ವಾದಿಸುತ್ತೇನೆ. ಏಕೆಂದರೆ ಗುಲಾಮತನವಾದರೂ ಏನು? ಅಮೇರಿಕಾ ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿ ವಿವರಿಸಿರುವಂತೆ, ಗುಲಾಮತನವೆಂಬುದು ಅನೈಚ್ಛಿಕ ದಾಸ್ಯವಲ್ಲದೆ ಬೇರೇನೂ ಅಲ್ಲ. ಅಂತೆಯೇ, ಇದು ನ್ಯಾಯಶಾಸ್ತ್ರಕ್ಕೆ ವಿರುದ್ಧವಾಗಿರುವಂಥದು. ಮಾನ್ಯರೆ, ಇಲ್ಲಿನ ಶೀರ್ಷ–ಟಿಪ್ಪಣಿಯಿಂದ ನಾನು ಗಮನಿಸಿರುವಂತೆ, ನಾನು ಈಗಷ್ಟೇ ಉಲ್ಲೇಖಿಸಿರುವ ಉಪಬಂಧಗಳ ವಿಷಯದಲ್ಲಿ ಭಾರತೀಯ ದಂಡಸಂಹಿತೆಯ ರಚನಾಕಾರರು ಬಹಳಷ್ಟು ಕಾಳಜಿ ವಹಿಸಿದ್ದರು. ೪೯೦, ೪೯೧ ಮತ್ತು ೪೯೨ನೆಯ ಪ್ರಕರಣಗಳಲ್ಲಿನ ತೀರ ಸಣ್ಣಪುಟ್ಟ ಉಪಬಂಧಗಳನ್ನು ನಾವು ಅಧಿನಿಯಮಿಸುವುದು ಸರಿಯೇ ಇಲ್ಲವೇ ಎಂಬ ಬಗ್ಗೆ ಅವರು ತೀವ್ರವಾಗಿ ಚರ್ಚಿಸಿದ್ದರು. ಭಾರತೀಯ ದಂಡಸಂಹಿತೆಯ ರಚನೆಕಾರರು XIXನೆಯ ಅಧ್ಯಾಯದ ಬಗ್ಗೆ ಈ ಮಾತನ್ನು ಹೇಳಿದ್ದಾರೆ, ಆ ಅಧ್ಯಾಯಕ್ಕೆ "ಸೇವಾ ಒಪ್ಪಂದದ ಆಪರಾಧಿಕ ಉಲ್ಲಂಘನೆಯನ್ನು ಕುರಿತು" ಎಂಬ ಶೀರ್ಷಿಕೆಯನ್ನು ಕೊಡಲಾಗಿದೆ. ಅಲ್ಲಿ ಹೀಗೆನ್ನಲಾಗಿದೆ:

> "ಕೇವಲ ಒಪ್ಪಂದದ ಉಲ್ಲಂಘನೆ ಅಪರಾಧವಾಗಬೇಕಾದ್ದಿಲ್ಲ, ಅದು ಸಿವಿಲ್ ಕ್ರಮದ ವಸ್ತುವಾಗತಕ್ಕದು ಎಂಬ ಆಲೋಚನೆಯ ವಿಷಯದಲ್ಲಿ ನಾವು ಸಾಮಾನ್ಯವಾಗಿ ನ್ಯಾಯವೇತ್ತರ ಬೃಹತ್ ನಿಕಾಯದೊಂದಿಗೆ ಸಹಮತವನ್ನುಳ್ಳವರಾಗಿದ್ದೇವೆ. ಇಷ್ಟಾಗಿಯೂ, ಈ ಸಾಮಾನ್ಯ ನಿಯಮಕ್ಕೆ ಕೆಲವೊಂದು ಅಪವಾದಗಳಿವೆ. ಯಾವುದೇ ನಷ್ಟ–ಪರಿಹಾರ ಮಾತ್ರವೇ ಸರಿಪಡಿಸಬಹುದಾದಂಥ ಕೆಡುಕನ್ನು ಒಪ್ಪಂದದ ಕೆಲವು

ಉಲ್ಲಂಘನೆಗಳು ಉಂಟುಮಾಡುವ ಸಂಭವವಿರುತ್ತದೆ. ಹಾಗೂ ನಷ್ಟ–ಪರಿಹಾರವನ್ನು ವಸೂಲು ಮಾಡುವುದು ಬಹುತೇಕವಾಗಿ ಅಸಂಭವವೇ ಆಗಿರುವಂಥ ವ್ಯಕ್ತಿಗಳಿಂದಲೇ ಅಂಥ ಉಲ್ಲಂಘನೆಗಳು ಆಗುವ ಸಂಭವವಿರುತ್ತದೆ. ಅಂಥ ಒಪ್ಪಂದದ ಉಲ್ಲಂಘನೆಗಳು ಮಾತ್ರವೇ ದಂಡನಾತ್ಮಕ ಶಾಸನಕ್ಕೆ ಸೂಕ್ತ ವಸ್ತುಗಳಾಗುತ್ತವೆಂದು ನಾವು ಭಾವಿಸಿದ್ದೇವೆ."

ದಂಡನಾರ್ಹವಾಗಬಹುದಂಥ ವಿವಿಧ ಬಗೆಗಿನ ಲೋಪಕ್ಕೆ ಕಾರಣವಾಗುವ ಕೃತ್ಯಗಳ ಬಗ್ಗೆ ತಾವು ನಡೆಸಿದ ಬೃಹತ್ ಸರ್ವೇಕ್ಷಣೆಯಿಂದ ಈ ಮೂರು ಉಪಬಂಧಗಳ ಅಡಿಯಲ್ಲಿ ಬರುವಂಥ ಲೋಪದ ಕೃತ್ಯಗಳು ಮಾತ್ರವೇ ದಂಡನಾರ್ಹವಾಗುತ್ತವೆಯೇ ಹೊರತು ಬೇರೆಯವಲ್ಲ ಎಂದೂ ನೀತಿಶಾಸ್ತ್ರ ಮತ್ತು ನ್ಯಾಯಶಾಸ್ತ್ರದ ಉಪಬಂಧಗಳಿಗೆ ಅವು ಮಾತ್ರವೇ ಸಂಗತವಾಗಿರುವಂಥವು ಎಂದೂ ಅವರು ಕಂಡು ಕೊಂಡಿದ್ದರು.

ಮಾನ್ಯರೆ, ಮುಷ್ಕರ ಹೂಡುವ ಯಾವ ಹಕ್ಕೂ ಇಲ್ಲವೆಂದು ಹೇಳಲಾಗಿದೆ. ಮುಷ್ಕರ ಎಂದರೇನು ಎಂಬುದನ್ನು ನಿಜವಾಗಿಯೂ ಅರಿತುಕೊಂಡಿಲ್ಲದಂಥ ವ್ಯಕ್ತಿಯಿಂದ ಮಾತ್ರವೇ ಈ ಹೇಳಿಕೆ ಬರ ಬಹುದು ಎಂಬುದೇ ಇದಕ್ಕೆ ನನ್ನ ಉತ್ತರ. "ಮುಷ್ಕರ" ಎಂದರೆ ಒಪ್ಪಂದದ ಉಲ್ಲಂಘನೆಗಿಂತ ಹೆಚ್ಚಿನ ದೇನೂ ಅಲ್ಲವೆಂಬ ನನ್ನ ಅರ್ಥವನ್ನು ಒಪ್ಪಿಕೊಳ್ಳಲು ಸದಸ್ಯರು ಸಿದ್ಧರಾಗಿದ್ದರೆ, ಸ್ವಾತಂತ್ರ್ಯದ ಹಕ್ಕು ಎಂಬುದಕ್ಕೆ ಮುಷ್ಕರ ಎಂಬುದು ಇನ್ನೊಂದು ಹೆಸರು ಮಾತ್ರವಾಗುತ್ತದೆ ಎಂದು ನಾನು ನಿವೇದಿಸ ಬಯಸುತ್ತೇನೆ. ವ್ಯಕ್ತಿ ತಾನು ಪಡೆದುಕೊಳ್ಳಬಯಸುವ ಯಾವುದೇ ಷರತ್ತುಗಳ ಮೇಲೆ ತನ್ನ ಸೇವೆ ಯನ್ನು ಒದಗಿಸುವ ಸ್ವಾತಂತ್ರ್ಯದ ಹಕ್ಕಲ್ಲದೆ ಅದು ಬೇರೇನೂ ಅಲ್ಲ. ಸ್ವಾತಂತ್ರ್ಯದ ಹಕ್ಕನ್ನು ನೀವು ಒಪ್ಪುವುದಾದರೆ ಮುಷ್ಕರ ಹೂಡುವ ಹಕ್ಕನ್ನು ನೀವು ಅಗತ್ಯವಾಗಿ ಒಪ್ಪುತ್ತೀರಿ. ಏಕೆಂದರೆ ನಾನು ಈಗಾಗಲೇ ಹೇಳಿರುವಂತೆ ಮುಷ್ಕರ ಹೂಡುವ ಹಕ್ಕು ಸ್ವಾತಂತ್ರ್ಯದ ಹಕ್ಕು ಎಂಬುದಕ್ಕೆ ಇರುವ ಇನ್ನೊಂದು ಹೆಸರು ಅಷ್ಟೆ. ಇದು ಒಟ್ಟಿನಲ್ಲಿ ರಾಜರ ದೈವದತ್ತ ಹಕ್ಕಿನಂತಿದೆ ಎಂದು ಹೇಳುವುದರ ಮೂಲಕ ಇದರ ಮೇಲೆಯೂ ಅಪಹಾಸ್ಯದ ಹೊಳೆಯನ್ನೇ ಹರಿಸಲಾಗಿದೆ. ಮಾನ್ಯರೆ, ಕಾವ್ಯಮಯವಾಗಿರುವ ಒಂದು ಶಬ್ದಪುಂಜ ಅಥವಾ ಕಣ್ಣಿಗೆ ಕಟ್ಟುವಂಥ ವರ್ಣನೆ ವಾದವೊಂದರ ನೆಲೆತಪ್ಪಿಸಲಾರದು ಎಂದು ನಾನು ಇದಕ್ಕೆ ಉತ್ತರರೂಪವಾಗಿ ಹೇಳಬಯಸುತ್ತೇನೆ. ಅಂಥ ಪರಿಣಾಮವನ್ನು ನಾನೆಲ್ಲಿಯೂ ಕಂಡಿಲ್ಲ– ಖಂಡಿತವಾಗಿಯೂ ನ್ಯಾಯಾಲಯಗಳಲ್ಲಿ ಅಂಥವನ್ನು ನಾನು ಕಂಡಿಲ್ಲ. ಸ್ವಾತಂತ್ರ್ಯದ ಹಕ್ಕು ದೈವದತ್ತವಾದ ಹಕ್ಕು ಎಂಬುದನ್ನು ನೀವು ಒಪ್ಪಿಕೊಳ್ಳುವಿರಾದರೆ, ಮುಷ್ಕರ ಹೂಡುವ ಹಕ್ಕು ಕೂಡಾ ದೈವದತ್ತ ವಾದ ಹಕ್ಕು ಎಂದು ನಾನು ವಾದಿಸುತ್ತೇನೆ (ಹೌದು, ಹೌದು). ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಹತ್ತು ಮಂದಿ ಅಥವಾ ಇಪ್ಪತ್ತು ಮಂದಿ ಅಥವಾ ಇನ್ನೂರು ಮಂದಿ ಏಕಕಾಲದಲ್ಲಿ ಮುಷ್ಕರ ಹೂಡುವ ಘೋಷಣೆ ಮಾಡುತ್ತಾರೆಂಬ ಕಾರಣದಿಂದಾಗಿಯೇ ಕಾನೂನಿಗೆ ಸಂಬಂಧಿಸಿದ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ಅದು ಉಂಟುಮಾಡಲಾರದು ಎಂದು ಹೇಳಬಯಸು ತ್ತೇನೆ.

ಮಾನ್ಯರೆ, ಕೆಲವರು ಭಾರತೀಯ ದಂಡಸಂಹಿತೆಯ ೧೨೦–ಎ ಪ್ರಕರಣದತ್ತ ಬೆರಳು ತೋರುತ್ತಾರೆ ಎಂಬುದನ್ನು ನಾನು ಬಲ್ಲೆ. ಈ ವಿಷಯವನ್ನು ಕೈಬಿಡುವುದಕ್ಕೆ ಮುನ್ನ ಅದರ ಬಗ್ಗೆ ನಾನು ಚರ್ಚಿಸಲಿದ್ದೇನೆ. ಮಾನ್ಯರೆ, ಭಾರತೀಯ ದಂಡಸಂಹಿತೆಯ ೧೨೦–ಎ ಪ್ರಕರಣ ಒಳಸಂಚಿಕೆಗೆ ಸಂಬಂಧಿಸಿದ

ಪ್ರಕರಣವಾಗಿದೆ. ಇದರ ಆಧಾರದ ಮೇಲೆ ಕಾರ್ಮಿಕರ ಒಂದು ಗುಂಪು ಮುಷ್ಕರವನ್ನು ಹೂಡು ವುದು ಒಳಸಂಚೇ ಆಗುವುದರಿಂದ ಕಾರ್ಮಿಕರಿಗೆ ಮುಷ್ಕರ ಹೂಡುವ ಹಕ್ಕು ಇಲ್ಲವೆಂದು ನನ್ನ ಎದುರು ಬದಿಯಲ್ಲಿರುವ ಸದಸ್ಯರು ವಾದಿಸುವುದಾದರೆ ಅದು ನನಗೆ ಆಶ್ಚರ್ಯವನ್ನೇ ಉಂಟು ಮಾಡುತ್ತದೆ. ಅವರು ಹಾಗೆ ಮಾಡಿದ್ದೇ ಆದರೆ ಕಾರ್ಮಿಕರ ಗುಂಪಿಗೆ ಮುಷ್ಕರವನ್ನು ಹೂಡುವ ಹಕ್ಕಿಲ್ಲ ವೆಂದು ವಾದಿಸುವುದಕ್ಕೆ ೧೨೦–ಎ ಪ್ರಕರಣವನ್ನು ಆಧಾರವಾಗಿಟ್ಟುಕೊಳ್ಳುವ ಆ ಎದುರುಬದಿಯ ಸಭ್ಯರು ಮುಷ್ಕರ ಹೂಡಿಕೆ ಒಳಸಂಚಾಗುತ್ತದೆ ಎಂಬುದನ್ನು ಸಾಧಿಸಿತೋರಿಸಬೇಕೆಂದು ಸೂಚಿಸಬಯಸು ತ್ತೇನೆ.

ಗೌರವಾನ್ವಿತ ಒಬ್ಬ ಸದಸ್ಯರು: ಅದು ಅನ್ವಯವಾಗುತ್ತದೆ ಎಂದು ಯಾರು ಹೇಳಿದ್ದಾರೆ? ಅದು ಸಾರ್ವಜನಿಕ ಉಪಯುಕ್ತತೆ ವಿಚಾರ.

ಡಾ. ಬಿ. ಆರ್. ಅಂಬೇಡ್ಕರ್: ಮುಂದೆ ನಾನು ಸಾರ್ವಜನಿಕ ಉಪಯುಕ್ತತೆಯ ವಿಚಾರಕ್ಕೆ ಬರಲಿದ್ದೇನೆ.

ಮಾನ್ಯರೆ, ದುರದೃಷ್ಟವಶಾತ್ ಭಾರತದಲ್ಲಿ ತೀರ್ಮಾನವಾದಂತಹ ಇಂತಹ ಪ್ರಕರಣಗಳಿಲ್ಲ. ಒಳಸಂಚು ಎಂಬ ಆಧಾರದ ಮೇಲೆ ೧೨೦–ಎ ಪ್ರಕರಣದ ಅಧೀನ, ಮುಷ್ಕರನಿರತ ವ್ಯಕ್ತಿಗಳನ್ನು ಬಂಧಿಸಿದ ಯಾವುದೇ ಒಂದು ಪ್ರಕರಣವನ್ನು ನನ್ನ ಸಂಶೋಧನೆ ನನಗೆ ತೋರಿಸಿಕೊಟ್ಟಿಲ್ಲ. ಆದರೆ ಈ ವಿಷಯದ ಬಗೆಗಿನ ಇಂಗ್ಲೀಷ್ ಕಾನೂನಿನಲ್ಲಿ ಸ್ವಲ್ಪಮಟ್ಟಿನ ಸಮರ್ಥನೆ ನನಗೆ ಕಾಣದೊರೆಯುತ್ತದೆ. ಅದು ಕೂಡಾ ಒಳಸಂಚಿನ ಒಂದು ಮುಖವಾಗಿ ಮುಷ್ಕರದ ಬಗ್ಗೆ ಚರ್ಚಿಸುತ್ತದೆ. ಸ್ಕೊಲೋಸ್ಸೇರ್ (Schlosser) ಅವರ 'ಕಾರ್ಮಿಕ ಸಂಘಗಳ ಕಾನೂನಿನ ಸ್ಥಿತಿ' (The Legal Position of Trade Unions) ಎಂಬ ಹೆಸರಿನ ಪುಸ್ತಕದಿಂದ ಒಂದು ಸಣ್ಣ ಭಾಗವನ್ನು ಈ ಸದನದ ಮಾಹಿತಿಗಾಗಿ ನಾನೀಗ ಓದಿಹೇಳುತ್ತೇನೆ. ೭೬ನೆಯ ಪುಟದಲ್ಲಿರುವ ಆ ಭಾಗವನ್ನು ಓದಿಹೇಳುತ್ತೇನೆ.

> "ಕೆಲಸದ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವ ಉದ್ದೇಶವನ್ನುಳ್ಳ ಮುಷ್ಕರಗಳು ಮತ್ತು ತತ್ಸದೃಶ ಘಟನೆಗಳು ಸಾಮಾನ್ಯ ಕಾನೂನಿನ ದೃಷ್ಟಿಯಿಂದ ತಮ್ಮಿಂದ ತಾವೇ ಕಾನೂನುಬಾಹಿರವಾದವುಗಳಲ್ಲ ಅಥವಾ ಅಕ್ರಮವಾದವುಗಳಲ್ಲ. ಕಾರ್ಮಿಕರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಉದ್ದೇಶದಿಂದ ರೂಪುಗೊಂಡಂಥ ಸಂಘಟನೆಗಳು ಸಾಮಾನ್ಯ ಕಾನೂನಿನ ದೃಷ್ಟಿಯಲ್ಲಿ ಕಾನೂನುಬಾಹಿರವಾದುವು ಎಂಬ ಅರ್ಥದ ನ್ಯಾಯಾಧಿಪತಿಗಳ ಸೂಕ್ತಿಗಳು ಅಲ್ಲೊಮ್ಮೆ ಇಲ್ಲೊಮ್ಮೆ ಕಂಡುಬರುತ್ತವೆಂಬುದು ನಿಜವಾದರೂ ಹಾಗೆಂದು ಗೊತ್ತುಪಡಿಸಿರುವ ಕಾನೂನನ್ನು ನ್ಯಾಯಾಲಯಗಳು ಎಂದೂ ಒಪ್ಪಿಕೊಂಡಿಲ್ಲ. ಅಷ್ಟೇ ಅಲ್ಲ, ಪ್ರಖ್ಯಾತರಾದ ನ್ಯಾಯಾಧೀಶರುಗಳು ಇದಕ್ಕೆ ತದ್ವಿರುದ್ಧವಾದ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದ್ದಾರೆ. ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳುದ್ದಕ್ಕೂ ಕಾರ್ಮಿಕರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಉದ್ದೇಶದಿಂದ ರೂಪುಗೊಂಡಂಥ ಸಂಘಟನೆಗಳು ಸಾಮಾನ್ಯ ಕಾನೂನಿಗೆ ವಿರುದ್ಧವಾದುವೆಂದು ಯಾವ ನ್ಯಾಯಾಲಯವೂ ಪರಿಗಣಿಸಿಲ್ಲ. ದುಡಿಮೆಯ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವ ಕಾರ್ಮಿಕರ ಪ್ರಯತ್ನಗಳಿಗೆ ಅಡೆ–ತಡೆಗಳನ್ನೊಡ್ಡುವ ಉದ್ದೇಶದಿಂದ ರೂಪಿಸಲಾದ ಯಾವ ಶಾಸನಾತ್ಮಕ ಅಧಿನಿಯಮವೂ ಸಾಮಾನ್ಯ ಕಾನೂನಿನ ಅಂಗವಾಗಿದೆಯೆಂದು ಘೋಷಿಸುವ ಅಥವಾ ಅದನ್ನು ಆಶ್ರಯಿಸುವ ಉದ್ದೇಶವನ್ನು ಹೊಂದಿರಲಿಲ್ಲ. ರೆಕ್ಸ್.ವಿ.ಮಾಚೀ

ಪ್ರಕರಣದಲ್ಲಿನ ಗ್ರೋಸ್. ಜೆ. ಅವರ ಪ್ರಾಸಂಗಿಕ ಅಭಿಪ್ರಾಯವನ್ನು ನಾವು ಒಪ್ಪುವುದಾದರೆ ೧೯೨೫ರ ಸಂಯೋಜಿತ ಕಾಯ್ದೆಯ ಮೂಲಕ ಶಾಸಕಾಂಗ ಆ ಎಲ್ಲ ಶಾಸನಗಳನ್ನೂ ತೊಡೆದುಹಾಕುವವರೆಗೆ ಆ ಸೂಚಿತ ಹೇಳಿಕೆ ಅಥವಾ ಪ್ರಸ್ತಾವವನ್ನು ಸಮರ್ಥಿಸುವಂಥ ಯಾವುದೇ ನ್ಯಾಯಾಧಿಪತಿಗಳ ಅಭಿಪ್ರಾಯಗಳೂ ಇರಲಿಲ್ಲ. ಈಚಿನ ದಿನಗಳಲ್ಲಿ ಕಾಣಿಸಿಕೊಂಡಿರುವ ಹಾಗೂ ಹಿಂದಿನ ಕಾಲದ ಯಾವುದೋ ಒಂದು ಅಂಗೀಕೃತ ತತ್ವವನ್ನು ಆಧರಿಸಿ ರೂಪಿಸಿಕೊಂಡಿರುವ ಸಾಮಾನ್ಯ ಕಾನೂನು ಆಧಾರಿತ ತೀರ್ಮಾನಗಳನ್ನು ನಾವು ತುಂಬಾ ಸಂದೇಹದ ದೃಷ್ಟಿಯಿಂದ ನೋಡಬೇಕಾಗಿದೆ. ೧೮೨೪ರಿಂದ ಈಚೆಗಿನ ಒತ್ತು ಈ ತತ್ವಕ್ಕೆ ವಿರುದ್ಧವಾಗಿಯೇ ಇದೆ."–

**ತೀರ್ಪಿನ ಒಂದು ಪ್ರಮುಖ ಭಾಗ ಇದು:**

"ಮುಷ್ಕರಗಳು ತಮ್ಮಿಂದ ತಾವೇ ಕಾನೂನುಬಾಹಿರವಾದ ಉದ್ದೇಶವೊಂದನ್ನು ಈಡೇರಿಸುವ ಅಥವಾ ಕಾನೂನುಬಾಹಿರವಾದ ವಿಧಾನಗಳ ಮೂಲಕ ಕಾನೂನು ಸಮ್ಮತವಾದ ಉದ್ದೇಶವೊಂದನ್ನು ಈಡೇರಿಸುವ ಸಂಘಟನೆಗಳೇನೂ ಅಲ್ಲ. ಕಾನೂನಿನ ಮೂಲಕ ತಮ್ಮ ಹಕ್ಕುಸಾಧನೆ ಮಾಡಬಹುದಾದಂಥ ಲಾಭವನ್ನು ಪಡೆದುಕೊಳ್ಳುವುದು ಎಲ್ಲಿಯವರೆಗೆ ಸಂಘಟನೆಯ ಉದ್ದೇಶವಾಗಿರುತ್ತದೆಯೋ ಅಲ್ಲಿಯವರೆಗೆ ತಮ್ಮ ಸ್ವಂತ ರಕ್ಷಣೆಗಾಗಿ ಒಂದುಗೂಡಲು ಕಾರ್ಮಿಕರಿಗೆ ಹಕ್ಕಿರುತ್ತದೆ ಎಂಬ ವಿಷಯದಲ್ಲಿ ಕಾನೂನು ಸ್ಪಷ್ಟವಾಗಿದೆ."

**ನಾನು ಒತ್ತಿ ಹೇಳಬಯಸುತ್ತಿದ್ದ ಅಂಶ ಇದು:**

"ದುಡಿಮೆ ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿ ಚಲಾಯಿಸಬಹುದಾದ ಹಾಗೂ ಒಂಟಿಯಾಗಿಯೇ ಘೋಷಿಸಬಹುದಾಗಿರುವ ಹಾಗೂ ಏಕಕಾಲದಲ್ಲಿ ಅವರು ಘೋಷಿಸಬಹುದಾಗಿರುವ ಆಯ್ಕೆಯ ಅಧಿಕಾರ, ಅಗತ್ಯವಾಗಿರುವ ನಿಬಂಧನೆಗಳನ್ನು ಪಡೆದುಕೊಳ್ಳುವ ಸಧ್ಯದ ಉದ್ದೇಶಕ್ಕೆ ಸಂಬಂಧಿಸಿದಂತೆ ಕಾನೂನುಬದ್ಧವಾಗಿ ವರ್ತಿಸುತ್ತದೆ.

"ಮುಷ್ಕರವನ್ನು ನಡೆಸುವುದು ಅವಶ್ಯವಾಗಿ ಕಾನೂನುಬಾಹಿರವಾಗಿರಬೇಕಾಗಿಲ್ಲ; ಒಪ್ಪಂದವೊಂದನ್ನು ಉಲ್ಲಂಘಿಸಿ ಮುಷ್ಕರ ನಡೆಸದಿದ್ದಲ್ಲಿ ಹಾಗೂ ಹಾಗೆ ಉಲ್ಲಂಘಿಸಲಾದ ಒಪ್ಪಂದಗಳ ಅವಧಿ ಮುಕ್ತಾಯಗೊಂಡಿದ್ದಲ್ಲಿ, ಸಧ್ಯದ ಒಪ್ಪಂದದ ಅವಧಿ ಮುಕ್ತಾಯಗೊಂಡಿದ್ದು, ಹೊಸ ನಿಬಂಧನೆಗಳ ಮೇಲೆ ಹೊಸ ಸೇವಾ ಒಪ್ಪಂದಗಳಿಗೆ ಒಳಪಡಲು ನಿರಾಕರಿಸುವಂಥ ಕಾರ್ಮಿಕರನ್ನು ಬೆಂಬಲಿಸುವ ಮೂಲಕ ಮುಷ್ಕರವನ್ನು ನಡೆಸಿಕೊಂಡು ಬರಲು ನೆರವಾಗುವಂಥವರು ಕಾನೂನುಬಾಹಿರವಾದಂಥ ಕೃತ್ಯಗಳನ್ನು ನಡೆಸಿದಂತಾಗುವುದಿಲ್ಲ."

ಈ ಅಂಶದತ್ತ ನಾನು ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಏಕೆಂದರೆ ಇದು ಭಾರತೀಯ ದಂಡಸಂಹಿತೆಯ ೧೨೦–ಎ ಪ್ರಕರಣಕ್ಕೆ ನೇರವಾಗಿ ಸಂಬಂಧಿಸಿದೆ: "ಸಂಘಟನೆಯ ಉದ್ದೇಶ ಹಾನಿಯನ್ನುಂಟು ಮಾಡುವುದೇ ಆಗಿದ್ದಲ್ಲಿ ಬೇರೊಬ್ಬನಿಗೆ ಹಾನಿಯನ್ನುಂಟು ಮಾಡುವುದರಲ್ಲಿ ಪರ್ಯಾವಸಾನಗೊಳ್ಳುವಂಥ ಸಂಘಟನೆಗಳು ಕಾನೂನುಬಾಹಿರವಾಗಬಹುದು." "ಹಾನಿಯನ್ನುಂಟುಮಾಡುವುದೇ ಸಂಘಟನೆಯ ಉದ್ದೇಶವಾಗಿದ್ದಲ್ಲಿ" ಎಂಬುದು ಅಲ್ಲಿಯ ಮಾತುಗಳು.

"ಜೊತೆಗೆ ಹಿಂಸೆ ಕಾರ್ಯರೂಪಕ್ಕೆ ಬಂದಲ್ಲಿ ಸಂಚುಹೂಡಿಕೆಗೆ ವಿರುದ್ಧವಾಗಿ ಕ್ರಮವನ್ನು ತೆಗೆದುಕೊಳ್ಳಬಹುದು. ಪ್ರತಿಯೊಂದು ಸಂದರ್ಭದಲ್ಲಿಯೂ ನಿರ್ಧರಿಸಬೇಕಾಗಿರುವ ಪ್ರಶ್ನೆ ಇದು: ಕಾರ್ಯರೂಪಕ್ಕೆ ಬಂದ ಹಿಂಸೆ ಎಷ್ಟರಮಟ್ಟಿಗೆ ಕಾನೂನುಸಮ್ಮತವಾದ ಸಂಘಟನೆಗೆ ಆನುಷಂಗಿಕವಾಗಿದೆ, ಹಾಗೆಯೆ ಹಿಂಸೆಯ ಉದ್ದೇಶಕ್ಕಾಗಿಯೇ ಆ ಸಂಘಟನೆ ಎಷ್ಟರಮಟ್ಟಿಗೆ ಅಸ್ತಿತ್ವದಲ್ಲಿದೆ?"

ಹೀಗಾಗಿ ೧೨೦–ಎ ಪ್ರಕರಣದ ಅಡಿಯಲ್ಲಿ ಮುಷ್ಕರಗಳನ್ನು ತರಬೇಕಾದರೆ ಹಿಂಸೆಯನ್ನುಂಟು ಮಾಡುವುದು ಮುಷ್ಕರದ ಉದ್ದೇಶವಾಗಿತ್ತು ಎಂಬುದನ್ನು ಪ್ರಾಸಿಕ್ಯೂಶನ್ ಕ್ರಮ ಜರುಗಿಸುವವರು ಸಿದ್ಧಪಡಿಸುವುದು ಅಗತ್ಯವಾಗಿರುತ್ತದೆ ಎಂಬುದು ನನ್ನ ನಿವೇದನೆ. ಮುಷ್ಕರದಿಂದಾಗಿ ಅನುದ್ದಿಷ್ಟವಾಗಿ ಹಿಂಸೆ ಉಂಟಾದಲ್ಲಿ ೧೨೦–ಎ ಪ್ರಕರಣದ ಅರ್ಥದ ವ್ಯಾಪ್ತಿಯಲ್ಲಿ ಅದು ಮುಷ್ಕರವನ್ನು ಕಾನೂನುಬಾಹಿರವಾದ ಸಂಘಟನೆಯನ್ನಾಗಿಸುವುದಿಲ್ಲ. ಹೀಗಾಗಿ ಮುಷ್ಕರವನ್ನು ದಂಡನಾರ್ಹವಾಗಿಸುವುದರ ಮೂಲಕ ಈ ಮಸೂದೆ ಕಾರ್ಮಿಕರನ್ನು ಗುಲಾಮತನದ ನೆಲೆಗೆ ಇಳಿಸುತ್ತಿದೆಯೇ ಹೊರತು ಬೇರೇನೂ ಅಲ್ಲ ಎಂಬುದೇ ನನ್ನ ಮೊದಲನೆಯ ವಾದವಾಗಿದೆ.

ನನ್ನ ತೀರ್ಮಾನುಕ್ಕನುಗುಣವಾಗಿ ಈ ಮಸೂದೆಯನ್ನು ವಾಸ್ತವವಾಗಿ "ಕಾರ್ಮಿಕರ ಪ್ರಜಾಸ್ವಾತಂತ್ರ್ಯ ಅಮಾನತ್ತು ಕಾಯ್ದೆ" ಎಂದೇ ಕರೆಯಬೇಕು. ಇದಕ್ಕೆ ಅದೇ ಸೂಕ್ತವಾದ ಶೀರ್ಷಿಕೆಯಾಗುತ್ತದೆ. ಅಮಾನತ್ತಿನ ಅವಧಿ ಸಂಧಾನ ವ್ಯವಹರಣೆಗಳು ಕೊನೆಗೊಳ್ಳುವವರೆಗೆ ಕೇವಲ ಎರಡು ತಿಂಗಳಾಗಿರುತ್ತದೆ. ಆ ಅವಧಿ ಕಳೆದ ಬಳಿಕ ತಮಗೆ ಇಚ್ಛೆಯಿದ್ದರೆ ಕಾರ್ಮಿಕರಿಗೆ ಮುಷ್ಕರ ಹೂಡುವ ಸ್ವಾತಂತ್ರ್ಯವಿರುತ್ತದೆ ಎಂಬ ಭಾವನೆ ಕೆಲವರಲ್ಲಿ ಮೂಡಿದೆ. ಮಾನ್ಯರೆ, ಇಂದು ತುಂಬಾ ತಪ್ಪು ಎಂದು ನಾನು ಹೇಳಬಯಸುತ್ತೇನೆ. ಈ ಮಸೂದೆಯ ಉಪಬಂಧಗಳನ್ನು ಕಾರ್ಯರೂಪಕ್ಕೆ ತಂದಾಗ, ಅವು ಶಾಶ್ವತವಾದ ಗುಲಾಮತನವನ್ನು ಉಂಟುಮಾಡುತ್ತವೆ ಹಾಗೂ ಕಾರ್ಮಿಕರಿಗೆ ಮುಷ್ಕರ ಹೂಡಲು ಸಾಧ್ಯವಾಗುವುದೇ ಇಲ್ಲ ಎಂಬುದು ನನ್ನ ವಾದ. ಆ ಉಪಬಂಧಗಳತ್ತ ನಾವೀಗ ಕಣ್ಣು ಹಾಯಿಸೋಣ. ಮೊದಲನೆಯದಾಗಿ ಕಾಯ್ದೆ ಜಾರಿಗೆ ಬಂದ ಬಳಿಕ ಒಂದು ವರ್ಷದವರೆಗೆ ಯಾವುದೇ ಮುಷ್ಕರವನ್ನು ನಡೆಸುವಂತಿಲ್ಲ ಎಂದು ಈ ಮಸೂದೆಯಲ್ಲಿ ಹೇಳಲಾಗಿದೆ. ವಿವೇಚನಾಯುಕ್ತ ಕಾರ್ಮಿಕ ಒಪ್ಪಿಕೊಳ್ಳಬಹುದಾದಂಥ ಅಥವಾ ಒಪ್ಪಿಕೊಳ್ಳಲಾಗದಂಥ ಪರಿಸ್ಥಿತಿ ಇರಲಿ, ಒಂದು ವರ್ಷದವರೆಗೆ ಸಂಪೂರ್ಣ ಗುಲಾಮತನವಿರುತ್ತದೆ. ಎರಡನೆಯ ಅನುಸೂಚಿಯಲ್ಲಿ ಉಲ್ಲೇಖಿಸಲಾಗಿರುವ ನಿಬಂಧನೆಗಳಿಗೆ ಕಾರ್ಮಿಕರು ಬದ್ಧರಾಗಿರಬೇಕಾಗುತ್ತದೆ. ಆ ಸ್ಥಿತಿಯಿಂದ ಪಾರಾಗಲು ಅದರಿಂದ ದೂರವಾಗಿರಲು ಬೇರೆ ಯಾವುದೇ ಮಾರ್ಗವೂ ಇರುವುದಿಲ್ಲ. ಒಂದು ವರ್ಷದ ಅವಧಿ ಕಳೆದ ಬಳಿಕ ಏನಾಗುತ್ತದೆ? ಆಗುವುದು ಇಷ್ಟೆ: ನೀವು ಮುನ್ಸೂಚನೆ ಕೊಡಬೇಕಾಗುತ್ತದೆ. ಅದು ಒಂದಿಷ್ಟು ಕಾಲವನ್ನು ಕಬಳಿಸಿಬಿಡುತ್ತದೆ. ಆ ಅವಧಿಯಲ್ಲಿ ನೀವು ಮುಷ್ಕರವನ್ನು ಹೂಡುವಂತಿಲ್ಲ. ಆ ಬಳಿಕ ಸಂಧಾನದ ವ್ಯವಹರಣೆಗಳು ಆರಂಭಗೊಳ್ಳುತ್ತವೆ. ಪಕ್ಷಗಳು ಸಕಾರಣವಾಗಿರುವಂಥವಾಗಿದ್ದರೆ ಈ ಸಂಧಾನ ವ್ಯವಹರಣೆಗಳು ಎರಡು ತಿಂಗಳವರೆಗೆ ನಡೆಯಬಹುದು. ಆದರೆ ಈ ಅವಧಿ ನಾಲ್ಕು ತಿಂಗಳವರೆಗೆ ಮುಂದುವರಿಯಲು ಈ ಮಸೂದೆ ಅವಕಾಶ ಮಾಡಿಕೊಡುತ್ತದೆ. ಹೀಗಾಗಿ ಕಾರ್ಮಿಕರ ಕುಂದುಕೊರತೆಗಳು ಆರಂಭಗೊಂಡ ದಿನಾಂಕದಿಂದ ಹಿಡಿದು ವಾಸ್ತವವಾಗಿ ನಾಲ್ಕು ತಿಂಗಳು ಮತ್ತು ಇಪ್ಪತ್ತೈದು ದಿವಸಗಳವರೆಗೆ (ನಾನು ವಿವರಗಳಿಗೆ ಹೋಗಿಲ್ಲವಾದ್ದರಿಂದ ನನ್ನ ಲೆಕ್ಕಾಚಾರ ತಪ್ಪಾಗಿದ್ದರೆ ಅದನ್ನು ತಿದ್ದಿಕೊಳ್ಳಲು ನಾನು ಸಿದ್ಧನಾಗಿದ್ದೇನೆ.) ಕಾರ್ಮಿಕರು ಏನೂ ಮಾಡುವಂತಿಲ್ಲ. ಅವನು ಮಾತನಾಡುವಂತಿಲ್ಲ. ಸಹ ಕಾರ್ಮಿಕರನ್ನು ಸಂಘಟಿಸುವಂತಿಲ್ಲ. ಈ ಅವಧಿಯಲ್ಲಿನ ಒಂದು

ಭಾಷಣ ಅಥವಾ ಒಂದು ಚಟುವಟಿಕೆ ಸೇರಿದಂತೆ ಯಾವುದೇ ಚಲನವಲನವೂ ದಂಡನಾರ್ಹವಾಗುತ್ತದೆ. ನಾಲ್ಕು ತಿಂಗಳು ಮತ್ತು ಇಪ್ಪತ್ತೈದು ದಿವಸಗಳಾದ ಈ ಸುದೀರ್ಘ ಅವಧಿಯಲ್ಲಿ ಯಾವುದೇ ಸಂಧಾನ ಏರ್ಪಡದಿದ್ದರೆ ಇದನ್ನು ನಾನು ಸುದೀರ್ಘ ಗರ್ಭಾವಸ್ಥೆಯ ಅವಧಿಯೆಂದು ಕರೆಯಬಯಸುತ್ತೇನೆ. ಆಗ ಏನು ಮಾಡಬೇಕು? ಸಂಧಾನದ ಅವಧಿ ಮುಗಿದ ಬಳಿಕ ಮುಷ್ಕರ ಹೂಡಲು ಕಾರ್ಮಿಕರಿಗೆ ಎರಡು ತಿಂಗಳ ಅವಧಿಯನ್ನು ಮಾತ್ರ ಕೊಡಲಾಗಿದೆ. ಈ ಮಸೂದೆಯನ್ನು ಮಂಡಿಸಿದ ನನ್ನ ಮಾನ್ಯ ಗೆಳೆಯರು, ಕಾರ್ಮಿಕರ ಅಸಂಘಟಿತ ಶಕ್ತಿಗಳನ್ನು ಕ್ರಿಯಾಶೀಲವಾಗಿಸುವುದಕ್ಕೆ ಎರಡು ತಿಂಗಳ ಅವಧಿ ಸಾಕಷ್ಟು ದೀರ್ಘವಾದ ಅವಧಿಯೆಂದು ಭಾವಿಸುತ್ತಾರೋ ಏನೋ ನನಗೆ ಗೊತ್ತಿಲ್ಲ. ಕಾರ್ಮಿಕ ಕ್ಷೇತ್ರದಲ್ಲಿ ನಾನೊಬ್ಬ ಸಕ್ರಿಯ ಕಾರ್ಯಕರ್ತನಾಗಿದ್ದೇನೆ. ಆದರೆ ನಾನೊಬ್ಬ ಕ್ಷೇತ್ರ ಕಾರ್ಯಕರ್ತನೆಂದು ಹೇಳಿಕೊಳ್ಳಲಾರೆ. ಆದ್ದರಿಂದ ಕಾರ್ಮಿಕರನ್ನು ಮುಷ್ಕರಕ್ಕಾಗಿ ಸಂಘಟಿಸುವ ವ್ಯಕ್ತಿ ಎದುರಿಸಬೇಕಾಗಿ ಬರುವ ಕಷ್ಟಗಳೇನೆಂಬುದು ನನಗೆ ಗೊತ್ತಿಲ್ಲ. ಆದರೆ ಮುಂಬಯಿ ನಗರದ ವೀಕ್ಷಕನಾಗಿ ನಾನು ಗಳಿಸಿರುವ ಅನುಭವದ ದೃಷ್ಟಿಯಿಂದ ಇಂಥ ಸನ್ನಿವೇಶವನ್ನು ಪರಿಶೀಲಿಸಿದ್ದೇ ಆದರೆ, ನಾಲ್ಕು ತಿಂಗಳು ಮತ್ತು ಇಪ್ಪತ್ತೈದು ದಿವಸಗಳಷ್ಟು ಕಾಲ ಸಕ್ರಿಯ ಚಟುವಟಿಕೆಗಳಿಂದ ದೂರವಾಗಿರಿಸಲಾಗಿದ್ದಂಥ ಕಾರ್ಮಿಕ ನಿಕಾಯವನ್ನು ಮುಷ್ಕರ ಹೂಡುವ ಉದ್ದೇಶದಿಂದ ಸಂಚಾಲನೆಗೊಳಿಸಲು ಎರಡು ತಿಂಗಳ ಅವಧಿ ಅತ್ಯಂತ ಕಡಿಮೆ ಅವಧಿಯೆಂದು ಹೇಳಲು ನಾನು ಹಿಂದೆ-ಮುಂದೆ ನೋಡಬೇಕಾಗಿಯೇ ಇಲ್ಲ. ಎರಡು ತಿಂಗಳ ಒಳಗಾಗಿ ಅವರು ಮುಷ್ಕರ ಹೂಡದಿದ್ದರೆ ಅವರು ಪರಿಸ್ಥಿತಿಯನ್ನು ಒಪ್ಪಿಕೊಂಡಿದ್ದಾರೆ ಎಂದಾಗುತ್ತದೆ ಮತ್ತು ಅದನ್ನು ಕಾನೂನಿನ ದೃಷ್ಟಿಯಿಂದ, ಪರಿಗಣಿಸಲಾಗುತ್ತದೆ. ಅವರು ಮತ್ತೆ ತಲೆಯೆತ್ತಿ, ಹೊಸ ಕುಂದುಕೊರತೆಗಳನ್ನು ಹುಡುಕಿ ತೆಗೆಯುವುದಾದರೆ, ಮತ್ತೆ ನೀವು ನಾಲ್ಕು ತಿಂಗಳು ಮತ್ತು ಇಪ್ಪತ್ತೈದು ದಿವಸಗಳ ಕಾಲ ಕಾಯಬೇಕೆಂದೂ, ಸಂಧಾನ ವ್ಯವಹರಣೆಗಳು ನಡೆಯಲು ಅವಕಾಶ ಕೊಡಬೇಕೆಂದೂ ಕಾನೂನು ಹೇಳುತ್ತದೆ. ನಾವೇನು ಮಾಡುತ್ತೇವೆ ಎಂಬುದನ್ನು ಕಾದುನೋಡಿ. ನಾಲ್ಕು ತಿಂಗಳು ಮತ್ತು ಇಪ್ಪತ್ತೈದು ದಿವಸಗಳವರೆಗೆ ಕಾದುನೋಡಿ. ಆಗದಿದ್ದರೆ, ಮುಷ್ಕರ ಹೂಡಬಹುದೆಂದು ನೀವು ಭಾವಿಸಿದ್ದಲ್ಲಿ, ಎರಡು ತಿಂಗಳ ಬಳಿಕ ಇನ್ನೊಂದು ಕುಂದುಕೊರತೆಯನ್ನು ನೀವು ಹುಡುಕಿ ತೆಗೆಯುವುದಾದರೆ, ನೀವು ಮತ್ತೆ ನಾಲ್ಕು ತಿಂಗಳು ಮತ್ತು ಇಪ್ಪತ್ತೈದು ದಿವಸಗಳ ಕಾಲ ಕಾಯಬೇಕಾಗುತ್ತದೆ. ಮಾನ್ಯರೆ, ಕೊನೆಯೇ ಇಲ್ಲದ ಈ ನಿಷೇಧಗಳ ಚಕ್ರ ಎಲ್ಲ ಕಾಲಕ್ಕೂ ಕಾರ್ಮಿಕರ ಸಂಪೂರ್ಣ ಮತ್ತು ಶಾಶ್ವತ ಗುಲಾಮಗಿರಿವನ್ನು ಉಂಟುಮಾಡುತ್ತದೆಯೇ ಇಲ್ಲವೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಮುಷ್ಕರ ಸಂಬಂಧಿಸಿದ ಈ ಮಸೂದೆಯ ಉಪಬಂಧಗಳ ಬಗ್ಗೆ ನಾನು ಇಷ್ಟೆ ಮಾತ್ರ ಹೇಳಬಯಸುತ್ತೇನೆ.

ಮಾನ್ಯರೆ, ಮುಷ್ಕರಕ್ಕೆ ಸಂಬಂಧಪಟ್ಟ ಹಾಗೆ ಈ ಮಸೂದೆಯಲ್ಲಿನ ಉಪಬಂಧಗಳೊಂದಿಗೆ ಹೋಲಿಸಿ ನೋಡುವುದು ಅಗತ್ಯವೂ, ಬೋಧಪ್ರದವೂ ಆಗುತ್ತದೆಂದು ನಾನು ಹೇಳಬಯಸುತ್ತೇನೆ. ಅದು ಕೂಡ ಮುಷ್ಕರ ಹೂಡುವ ಹಕ್ಕಿನ ಮೇಲೆ ಕೆಲವೊಂದು ಮಿತಿಗಳನ್ನು ಹೇರುವ ಕಾಯ್ದೆಯಾಗಿದೆ. ಹೀಗಾಗಿ, ಈ ಕಾಯ್ದೆಯಲ್ಲಿನ ಉಪಬಂಧಗಳನ್ನು ಈ ಮಸೂದೆಯಲ್ಲಿನ ಉಪಬಂಧಗಳೊಡನೆ ಹೋಲಿಸಿ ನೋಡುವುದು ತುಂಬ ಬೋಧಪ್ರದವಾಗಬಲ್ಲದು. ಹಾಗೆ ಮಾಡಿದರೆ, ನಾವು ಯಾವ ದಿಕ್ಕಿನತ್ತ ಸಾಗುತ್ತಿದ್ದೇವೆ, ನಾವು ಗುಲಾಮಗಿರಿಯತ್ತ ಸಾಗುತ್ತಿದ್ದೇವೆಯೇ ಇಲ್ಲವೇ ಎಂಬುದನ್ನು ಕಂಡುಕೊಳ್ಳಲು ಈ ಸದನಕ್ಕೆ ಸಾಧ್ಯವಾಗುತ್ತದೆ. ಮಾನ್ಯರೆ, ಮುಷ್ಕರ ಹೂಡುವ ಕಾರ್ಮಿಕರ ಹಕ್ಕಿನ ಮೇಲೆ ೧೯೨೯ರ ಕಾಯ್ದೆ ಕೆಲವೊಂದು ಮಿತಿಗಳನ್ನು ಹೇರುತ್ತದೆ. ನಾನು ಅದರ ಎರಡು ಪ್ರಕರಣಗಳನ್ನು ಉಲ್ಲೇಖಿಸಿದರೆ ಸಾಕಾಗುತ್ತದೆ. ೧೯೨೯ರ

ಆ ಕಾಯ್ದೆ ರಾಜಕೀಯ ಉದ್ದೇಶದಿಂದ ನಡೆಸಲಾಗುವ ಸಾರ್ವತ್ರಿಕ ಮುಷ್ಕರವನ್ನು ದಂಡನಾರ್ಹವಾಗಿಸುತ್ತದೆ. ಇದು ಆ ಕಾಯ್ದೆಯ ೧೬ನೆಯ ಪ್ರಕರಣದಲ್ಲಿದೆ. ನನ್ನ ಚರ್ಚೆಯ ಉದ್ದೇಶಕ್ಕೆ ಹೆಚ್ಚು ಸಂಗತವಾಗಿರುವ ಇನ್ನೊಂದು ಪ್ರಕರಣವೆಂದರೆ ೧೫ನೆಯ ಪ್ರಕರಣ. ಇದು ಮುನ್ಸೂಚನೆ ಕೊಡದೆ ನಡೆಸಲಾಗುವ ಮುಷ್ಕರವನ್ನು ದಂಡನಾರ್ಹವಾಗಿಸುತ್ತದೆ. ಈ ಮಸೂದೆಯೂ ಮುನ್ಸೂಚನೆ ಕೊಡದೆ ನಡೆಸಲಾಗುವ ಮುಷ್ಕರ ಮತ್ತು ಈ ಮಸೂದೆಗಳ ನಡುವೆ ಯಾವುದೋ ಒಂದು ಬಗೆಯ ಸಾದೃಶ್ಯ ಇರುವಂತೆ ತೋರುತ್ತದೆ. ಮಾನ್ಯರೆ, ಇಲ್ಲಿಂದಾಚೆಗೆ ಆ ಕಾಯ್ದೆ ಮತ್ತು ಈ ಮಸೂದೆ; ಬೆಣ್ಣೆ ಮತ್ತು ಸುಣ್ಣ ಪರಸ್ಪರ ಭಿನ್ನವಾಗಿರುವಂತೆ, ಪರಸ್ಪರ ತುಂಬ ಭಿನ್ನವೇ ಆಗಿವೆ. ಅದಕ್ಕೂ ಇದಕ್ಕೂ ಯಾವುದೇ ಸಂಬಂಧವೂ ಇಲ್ಲ. ಅಷ್ಟೇ ಅಲ್ಲ, ತೌಲನಿಕವಾಗಿ ಹೇಳಬೇಕೆಂದರೆ, ಈ ಮಸೂದೆ ಪ್ರತಿಕ್ರಿಯವಾದಿಯೂ, ಪ್ರತಿಗಾಮಿಯಾಗಿಯೂ ಇದೆ; ಹಾಗೂ ಈ ಮಸೂದೆಯ ಕರ್ತೃ ೧೯೨೯ರ ಆ ಕಾಯ್ದೆಯ ಕರ್ತೃವಿಗಿಂತಲೂ ಹೆಚ್ಚಿನ ಸಂಪ್ರದಾಯ ವಾದಿಯಾಗಿದ್ದಾನೆ.

ಮಾನ್ಯರೆ ೧೯೨೯ರ ಕಾಯ್ದೆಯ ೧೫ನೆಯ ಪ್ರಕರಣದ ಉಪಬಂಧಗಳನ್ನು ನಾವೀಗ ಹೋಲಿಸಿ ನೋಡೋಣ. ಈ ವಿಷಯದ ಪರಿಚಯವನ್ನು ಹೊಂದಿರುವ ವಕೀಲರಿಗೂ ತಿಳಿದಿರುವಂತೆ, ೧೯೨೯ರ ಕಾಯ್ದೆಯ ೧೫ನೆಯ ಪ್ರಕರಣ ಸಾರ್ವಜನಿಕ ಉಪಯುಕ್ತತೆಗಳಿಗೆ ಸಂಬಂಧಿಸಲ್ಪಟ್ಟಿದೆ. ಆ ಕಾಯ್ದೆ ಎಲ್ಲ ಮುಷ್ಕರಗಳನ್ನು ದಂಡನಾರ್ಹವಾಗಿಸದೆ, ಸಾರ್ವಜನಿಕ ಉಪಯುಕ್ತತಾ ಸೇವೆಗಳೆಂದು ಹೆಸರಿಸ ಲಾಗಿರುವ ಇಲಾಖೆಗಳಲ್ಲಿನ ಮುಷ್ಕರಗಳನ್ನು ಮಾತ್ರ ದಂಡನಾರ್ಹವಾಗಿಸುತ್ತದೆ. ಈ ಮಸೂದೆಗೂ ೧೯೨೯ರ ಕಾಯ್ದೆಗೂ ಇರುವ ಮೂಲಭೂತ ವ್ಯತ್ಯಾಸ ಇದೆಂಬುದಾಗಿ ನಾನು ನಿವೇದಿಸಬಯಸು ತ್ತೇನೆ. ಮಾನ್ಯರೆ, ಈಗ ನಾನು ಕೇಳಬಯಸುವ ಪ್ರಶ್ನೆ ಇದು: ೧೯೨೯ರಲ್ಲಿ ತಳೆದ ನಿಲುವಿಗಿಂತಲೂ ಭಿನ್ನವಾಗಿರುವ ಈ ನಿಲುವು ಯಾವುದೇ ರೀತಿಯಲ್ಲಾದರೂ ಸಮರ್ಥನೀಯವಾಗಿದೆಯೆ? ೧೯೨೯ರಲ್ಲಿ ಈ ಮಸೂದೆಯನ್ನು ಕೇಂದ್ರ ಶಾಸಕಾಂಗ ಸಭೆಯ ಮುಂದಿರಿಸಿದಾಗ ಕಾಂಗ್ರೆಸ್ ಪಕ್ಷ ತಳೆದ ನಿಲುವು ಏನಾಗಿತ್ತೆಂಬುದನ್ನು ವಿವರಿಸುವುದರ ಮೂಲಕ ಈ ಚರ್ಚೆಯನ್ನು ಆರಂಭಗೊಳಿಸುವುದು ಅಪೇಕ್ಷಣೀಯವೆಂದು ನಾನು ಭಾವಿಸಿದ್ದೇನೆ. ಮಾನ್ಯರೆ, ಅಂತಿಮವಾಗಿ ೧೯೨೯ರ ಕಾಯ್ದೆಯಾಗಿ ಪರಿಣಮಿಸಿದ ಆ ಮಸೂದೆಯ ಉಪಬಂಧಗಳನ್ನು ಪರಿಗಣಿಸುವ ಸಲುವಾಗಿ ಕೇಂದ್ರ ಶಾಸಕಾಂಗ ಸಭೆಯಿಂದ ನೇಮಕಗೊಂಡಿದ್ದಂಥ ಪರಿಶೀಲನಾ ಸಮಿತಿಯ ವರದಿಯನ್ನು ಅರಸಿ ತೆಗೆಯಲು ಹಾಗೂ ಅಭ್ಯಾಸ ಮಾಡಲು ನಾನು ತುಂಬಾ ಕಷ್ಟಪಟ್ಟಿದ್ದೇನೆ. ಪ್ರತಿಸ್ಪರ್ಧಿಗಳು ಎಂಬ ಶಬ್ದವನ್ನು ನಾನು ಬಳಸಬಹು ದಾದರೆ ಈ ಇಬ್ಬರು ಪ್ರತಿಸ್ಪರ್ಧಿಗಳಿಗೆ– ಅಂದರೆ ಇನ್ನೊಂದು ಪಕ್ಷಕ್ಕೆ ಚಿರಪರಿಚಿತವಾಗಿರುವ ಶಬ್ದವನ್ನು ಬಳಸಿ ಹೇಳುವದಾದರೆ, ಒಂದೆಡೆ ಅಧಿಕಾರಶಾಹಿಗೆ ಮತ್ತು ಇನ್ನೊಂದೆಡೆ ಕಾಂಗ್ರೆಸ್ ಪಕ್ಷಕ್ಕೆ ನನ್ನ ಗಮನವನ್ನು ಸೀಮಿತಗೊಳಿಸುವುದಾದರೆ, ೧೯೨೯ರ ಈ ಕಾಯ್ದೆ ಪರಿಶೀಲನೆಯಲ್ಲಿದ್ದ ಸಂದರ್ಭದಲ್ಲಿ ಯಾವ ಸಂಗತಿಗಳು ವಿವಾದಾಂಶಗಳಾಗಿ ಪರಿಣಮಿಸಿದ್ದುವು. ಈ ಎರಡು ಸಂಗತಿಗಳು ಮಾತ್ರವೇ ವಿವಾದಾಸ್ಪದವಾಗಿದ್ದುವು. ಸಾರ್ವಜನಿಕ ಉಪಯುಕ್ತತಾ ಸೇವೆಗಳು ಯಾವುವು ಎಂಬುದನ್ನು ವಿವರಿಸಿದ ವಿವೇಚನಾಧಿಕಾರವನ್ನು ತನಗೆ ಬಿಡಬೇಕು ಎಂದು ಸರ್ಕಾರ ಬಯಸಿತ್ತು. ಸಾರ್ವಜನಿಕ ಉಪಯುಕ್ತತೆ ಎಂದರೆ ಏನೆಂಬುದನ್ನು ಕಾಯ್ದೆಯಲ್ಲಿಯೇ ವಿವರಿಸಲಾಗಲೀ, ತನ್ನ ದೃಷ್ಟಿಯಲ್ಲಿ ಯಾವುವು ಸಾರ್ವಜನಿಕ ಉಪಯುಕ್ತತಾ ಸೇವೆಗಳು ಎಂಬುದನ್ನು ಪಟ್ಟಿಮಾಡಿಕೊಡಲಾಗಲೀ ಅದು ಸಿದ್ಧವಿರಲಿಲ್ಲ. ಸಾರ್ವಜನಿಕ ಉಪಯುಕ್ತತೆ ಮತ್ತು ಅದರ ಮಹತ್ವವು ಪ್ರಸಂಗದ ಪರಿಸ್ಥಿತಿಗಳನ್ನು ಆಧರಿಸುತ್ತದೆ ಎಂಬುದಾಗಿ ಅದು

ಹೇಳುತ್ತಿತ್ತು. ಕಾಲ ಮತ್ತು ಪರಿಸ್ಥಿತಿಗಳಿಗೆ ಅನುಗುಣವಾಗಿ ಅದು ಬದಲಾಗಬಹುದು. ಒಂದು ಕಾಲದಲ್ಲಿ ಸಾರ್ವಜನಿಕ ಉಪಯುಕ್ತ ಎಂದು ಪರಿಗಣಿಸದೆ ಇರಬಹುದಾದ ಸೇವೆ ಇನ್ನೊಂದು ಕಾಲದಲ್ಲಿ ಸಾರ್ವಜನಿಕ ಉಪಯುಕ್ತ ಸೇವೆಯಾಗಬಹುದು ಹಾಗೂ ತಾನು ಅರ್ಥವಿಸಿಕೊಂಡ ಹಾಗೂ ಪರಿಕಲ್ಪಿಸಿಕೊಂಡ ರೀತಿಯಲ್ಲಿ ಸಮಾಜದ ಹಿತದೃಷ್ಟಿಯಿಂದ ಸರ್ಕಾರದ ವಿವೇಚನೆಯ ಮೇರೆಗೆ ವಿವರಿಸಲಾಗುವಂತೆ ಆ ಸನ್ನಿವೇಶವನ್ನು ವಿವರಿಸದೆಯೇ ಅಗತ್ಯಾನುಗುಣವಾಗಿ ಸ್ಪಂದಿಸುವ ರೀತಿಯಲ್ಲಿ ಬಿಟ್ಟಿರಬೇಕು ಎಂಬುದಾಗಿ ಅದು ಭಾವಿಸಿತ್ತು. ಇತ್ತ ಆ ಕಾಲದಲ್ಲಿ ಕಾಂಗ್ರೆಸ್ ಪಕ್ಷ ಎರಡು ಸಂಗತಿಗಳನ್ನು ಎತ್ತಿಹಿಡಿದಿತ್ತು. ಅದೆಂದರೆ ಯಾವುದನ್ನೂ ಅಧಿಕಾರಷಾಹಿಯ ವಿವೇಚನೆಗೆ ಬಿಡಕೂಡದು, ಅಧಿಕಾರಷಾಹಿಯ ಉದ್ದೇಶಗಳ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಅದನ್ನು ಒತ್ತಾಯಿಸಕೂಡದು. ಹೀಗಾಗಿ ಸರ್ಕಾರಕ್ಕೆ ಯಾವುದೇ ವಿವೇಚನಾಧಿಕಾರವೂ ಇರಕೂಡದೆಂಬ ನಿಲುವನ್ನು ಕಾಂಗ್ರೆಸ್ ಪಕ್ಷ ತೆಗೆದುಕೊಂಡಿತು. ೧೫ನೆಯ ಪ್ರಕರಣದ ವ್ಯಾಪ್ತಿಯಲ್ಲಿ ಯಾವ ಯಾವ ಸಾರ್ವಜನಿಕ ಉಪಯುಕ್ತ ಸೇವೆಗಳನ್ನು ತರಬೇಕೆಂದು ಉದ್ದೇಶಿಸಲಾಗಿದೆಯೋ ಅವೆಲ್ಲವನ್ನು ಕಾಯ್ದೆಯಲ್ಲಿಯೇ ಸ್ಪಷ್ಟವಾಗಿ ವಿವರಿಸಬೇಕೆಂದು ಅದು ಹೇಳಿತು. ೧೯೨೯ರಲ್ಲಿ ಆ ಮಸೂದೆ ಪರಿಶೀಲನೆಗೆ ಬಂದಾಗ ಕಾಂಗ್ರೆಸ್ ಪಕ್ಷ ತೆಗೆದುಕೊಂಡ ಎರಡನೆಯ ನಿಲುವು ಇದಾಗಿತ್ತು. ಸಾರ್ವಜನಿಕ ಉಪಯುಕ್ತತೆ ಎಂಬ ಪ್ರವರ್ಗ ತುಂಬಾ ವ್ಯಾಪಕವಾಗಿದ್ದು ಯಾವುದೋ ಒಂದು ಸಾರ್ವಜನಿಕ ಉಪಯುಕ್ತತಾ ಸೇವೆಗೆ ಸಂಬಂಧಿಸಿದ್ದೆಂಬ ಕಾರಣವಾಗಿಯೇ ಮುಷ್ಕರವನ್ನು ಕಾನೂನುಬಾಹಿರವಾದುದೆಂದಾಗಿಸಬಾರದು ಎಂದು ಆ ಪಕ್ಷ ಹೇಳಿತು. ಸಾಮಾಜಿಕ ಭದ್ರತಾ ಸೇವೆಗಳು ಎಂಬುದಕ್ಕೆ ಮಾತ್ರವೆ ಅದು ಸೀಮಿತವಾಗಿರಬೇಕು ಎಂಬ ನಿಲುವನ್ನು ಅದು ತೆಗೆದುಕೊಂಡಿತು. ಇದು ೧೯೨೯ರಲ್ಲಿ ಅದು ತೆಗೆದುಕೊಂಡಿದ್ದ ನಿಲುವು. ಈ ಸ್ಪರ್ಧೆಯಲ್ಲಿ ಸರ್ಕಾರ ಒಂದು ಸಂಗತಿಯನ್ನು ಬಿಟ್ಟುಕೊಟ್ಟಿತು. ಸಾರ್ವಜನಿಕ ಉಪಯುಕ್ತತೆ ಎಂದರೇನು ಎಂಬುದನ್ನು ಕಾಯ್ದೆಯಲ್ಲಿಯೇ ವಿವರಿಸಬೇಕು ಎಂಬುದನ್ನು ಅದು ಒಪ್ಪಿಕೊಂಡಿತು. ಮಾನ್ಯರೆ, ಇದರಿಂದಾಗಿಯೇ ವ್ಯಾಖ್ಯಾನಾತ್ಮಕ ಖಂಡವಾಗಿರುವ ಆ ಕಾಯ್ದೆಯ ೨ನೆಯ ಪ್ರಕರಣ ಸಾರ್ವಜನಿಕ ಉಪಯುಕ್ತತೆ ಎಂದರೇನು ಎಂಬುದರ ವಿವರಣೆಯನ್ನು ಒಳಗೊಂಡಿದೆ ಎಂಬುದನ್ನು ನೀವು ಕಾಣಬಹುದಾಗಿದೆ. ಅಲ್ಲಿ ಸಾರ್ವಜನಿಕ ಉಪಯುಕ್ತ ಸೇವೆಗಳು ಯಾವುವು ಎಂಬುದನ್ನೂ ಪಟ್ಟಿ ಮಾಡಲಾಗಿದೆ. ಹಾಗೂ ಅದಕ್ಕೆ ಇನ್ನೇನನ್ನಾದರೂ ಸೇರಿಸುವ ಅಥವಾ ಅದರಿಂದ ಏನನ್ನಾದರೂ ತೆಗೆದುಹಾಕುವ ವಿವೇಚನಾಧಿಕಾರ ಸರ್ಕಾರಕ್ಕೆ ಇಲ್ಲ. ಇನ್ನೊಂದು ಸಂಗತಿಗೆ ಸಂಬಂಧಿಸಿದಂತೆ– ಅಂದರೆ, ಮುಷ್ಕರದ ಕಾನೂನುಬಾಹಿರತೆ ಯಾವ ಸೇವಾ ಪ್ರವರ್ಗಕ್ಕೆ ಸೀಮಿತಗೊಳ್ಳುತ್ತದೆ ಎಂಬುದನ್ನು ಸಂಕುಚಿತಗೊಳಿಸಿ ಹೇಳುವ ಅಥವಾ ನಿರ್ದಿಷ್ಟಪಡಿಸುವ ವಿಚಾರಕ್ಕೆ ಸಂಬಂಧಿಸಿದಂತೆ– ಸರ್ಕಾರ ಮಣಿಯಲಿಲ್ಲ. ಅದನ್ನು ಸಾರ್ವಜನಿಕ ಉಪಯುಕ್ತತಾ ಸೇವೆಗಳಿಗೆ ವಿಸ್ತರಿಸಬೇಕೆಂಬ ತನ್ನ ಸೂತ್ರವನ್ನು ಬಿಟ್ಟುಕೊಡಲಾಗುವುದಿಲ್ಲವೆಂದು ಸರ್ಕಾರ ಹೇಳಿತು. ಈ ಅಂಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಯಶಸ್ಸು ದೊರೆಯಲಿಲ್ಲ. ಆದರೆ, ನನ್ನ ವಾದಕ್ಕೆ ಅದರಿಂದ ವಾಸ್ತವವಾಗಿ ಏನೂ ತೊಂದರೆಯಾಗುವುದಿಲ್ಲ. ಏಕೆಂದರೆ ನನ್ನ ವಾದ ಇದು: ೧೯೨೯ರಲ್ಲಿ ಕಾಂಗ್ರೆಸ್ ಪಕ್ಷ, ಮುಷ್ಕರದ ಕಾನೂನುಬಾಹಿರತೆಯನ್ನು, ಸಾಮಾಜಿಕ ಭದ್ರತಾ ಸೇವೆಗಳಿಗೆ ಸಂಬಂಧಿಸಿದ ತತ್ವವನ್ನು ಎತ್ತಿ ಹಿಡಿದಿತ್ತು. ಮಾನ್ಯರೆ, ಪರಿಶೀಲನಾ ಸಮಿತಿಯ ವರದಿಯಿಂದ ಕಾಂಗ್ರೆಸ್ ಪಕ್ಷದ ಸದಸ್ಯರ ಕೆಲವು ಟಿಪ್ಪಣಿಗಳನ್ನು ಓದಬಯಸುತ್ತೇನೆ. ಸನ್ಮಾನ್ಯ ಸದಸ್ಯರಾದ ಶ್ರೀಜಮ್ನಾದಾಸ್ ಮೆಹ್ತಾ ಅವರು ಆಗ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದರೆಂದು ನಾನು ಭಾವಿಸಿದ್ದೇನೆ. ಆದರೆ, ಆ ವಿಚಾರ ನನಗೆ ಖಚಿತವಾಗಿ ಗೊತ್ತಿಲ್ಲ.

ಶ್ರೀ ಜಮ್ನಾದಾಸ್ ಮೆಹ್ತಾ: ಇಂದಿಗೂ ನಾನು ಅದೇ ನಿಲುವನ್ನು ಉಳಿಸಿಕೊಂಡಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಶ್ರೀ ಜಮ್ನಾದಾಸ್ ಮೆಹ್ತಾ, ಶ್ರೀ ಎಸ್. ಶೇಷ ಅಯ್ಯಂಗಾರ್, ಶ್ರೀ ಎಸ್. ಸಿ. ಮಿತ್ರ ಮತ್ತು ವಿ. ವಿ. ಜೋಗಯ್ಯ ಅವರು ಬರೆದಿರುವ ಟಿಪ್ಪಣಿಯಿಂದ ಈ ಭಾಗವನ್ನು ಓದುತ್ತಿದ್ದೇನೆ:

> "ಈ ಮಸೂದೆಯ ಬಗೆಗಿನ ಮೂಲಭೂತ ಆಕ್ಷೇಪಗಳು, ಅದು ಪರಿಶೀಲನಾ ಸಮಿತಿಯಿಂದ ಹೊರಬಂದಿರುವ ರೂಪದಲ್ಲಿಯೂ ಅಭಾದಿತವಾಗಿಯೇ ಉಳಿದುಕೊಳ್ಳುತ್ತದೆ. ೧೫ನೆಯ ಮತ್ತು ಅದರ ಮುಂದಿನ ಖಂಡಗಳು ಕಾರ್ಮಿಕ ವಿವಾದಗಳನ್ನು ಪರಿಹರಿಸುವುದಕ್ಕೆ ಬದಲಾಗಿ ಅವುಗಳನ್ನು ಹಲವು ಮಡಿಯಾಗಿ ಹೆಚ್ಚಿಸುತ್ತವೆ; ಉದ್ಯೋಗದಾತರು ಮತ್ತು ಉದ್ಯೋಗಿಗಳ ನಡುವಣ ಸಂಬಂಧಗಳನ್ನು ಮತ್ತಷ್ಟು ಕಹಿಯಾಗಿಸುತ್ತವೆ. ಹಾಗೂ ಈ ಬಗೆಯ ಶಾಸನ ಕ್ರಮಗಳ ಬಗೆಗಿನ ನಮ್ಮ ಹಿಂದಿನ ಎಲ್ಲಾ ಅನುಭವಗಳೂ ಪ್ರಮಾಣಿಸಿ ತೋರಿಸಿರುವಂತೆ, ಅಧಿಕಾರಷಾಹಿಗೆ ಅಪ್ರಿಯವಾದ ರಾಜಕೀಯ ಪ್ರಚಾರವನ್ನು ಹತ್ತಿಕ್ಕಲು ಅಧಿಕಾರಿಗಳು ಇವುಗಳನ್ನೂ ಬಳಸಿಕೊಳ್ಳುತ್ತಾರೆ ಎಂಬುದಾಗಿ ನಾವು ಭಾವಿಸಿದ್ದೇವೆ. ನಾಡಿನಲ್ಲಿ ಕಾರ್ಮಿಕ ಸಂಘಗಳ ಚಳವಳಿಯನ್ನು ವಿಕಾಸಗೊಳಿಸುವುದು ಹಾಗೂ ಪೋಷಿಸಿಕೊಂಡು ಬರುವುದು ಈ ಮಸೂದೆಯ ಉದ್ದೇಶವಾಗಿದ್ದಲ್ಲಿ, ೧೫ನೆಯ ಮತ್ತು ಅದರ ಮುಂದಿನ ಖಂಡಗಳು ಆ ಉದ್ದೇಶಕ್ಕೆ ಖಂಡಿತವಾಗಿಯೂ ವಿರುದ್ಧವಾಗಿವೆ."

ಅವರು ತೆಗೆದುಕೊಂಡಿದ್ದ ನಿಲುವು ಇದು: ಸಾರ್ವಜನಿಕ ಉಪಯುಕ್ತತಾ ಸೇವೆಗಳಿಗೆ ಸಂಬಂಧಿಸಿದ್ದೇ ಆಗಿದ್ದರೂ ಯಾವುದೇ ಮುಷ್ಕರವನ್ನೂ ದಂಡನಾರ್ಹವಾಗಿಸಕೂಡದು. ಭಿನ್ನಾಭಿಪ್ರಾಯದ ಆ ಟಿಪ್ಪಣಿ ಹೀಗೆ ಸಾಗುತ್ತದೆ:

> "…..ಆ ಉದ್ದೇಶದಲ್ಲಿ ವಿಫಲವಾಗಿರುವುದರಿಂದ ಭಿನ್ನಾಭಿಪ್ರಾಯದ ಈ ಟಿಪ್ಪಣಿಗಳನ್ನು ನಾವು ಸೇರಿಸಬೇಕಾಗಿಬಂದಿದೆ. ೧೪ನೆಯ ಖಂಡದವರೆಗೆ ಈ ಮಸೂದೆ ವಿಚಾರಣಾ ನ್ಯಾಯಾಲಯಗಳ ಹಾಗೂ ಸಂಧಾನ ಮಂಡಳಿಗಳ ಮೂಲಕ ಕಾರ್ಮಿಕ ವಿವಾದಗಳನ್ನು ಇತ್ಯರ್ಥಪಡಿಸುವ ದಿಕ್ಕಿನಲ್ಲಿ ನಡೆಸಿರುವ ಒಂದು ಪ್ರಾಮಾಣಿಕ ಪ್ರಯತ್ನವೇ ಆಗಿದೆ. ಮಸೂದೆಯ ಆ ಭಾಗಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಅದು ಸಾಕಷ್ಟು ಸುಧಾರಿತವೂ, ಆ ಖಂಡದವರೆಗೆ ಆ ಮಸೂದೆಯಲ್ಲಿ ಮಾಡಲಾಗಿರುವ ಬಹುಮಟ್ಟಿನ ಎಲ್ಲ ಬದಲಾವಣೆಗಳೂ ಅದನ್ನು ಮತ್ತಷ್ಟು ನ್ಯಾಯೋಚಿತವೂ ನ್ಯಾಯಸಮ್ಮತವೂ ಆಗಿಸಿದೆ. ಖಂಡ ೨(ಜಿ)ರಲ್ಲಿನ ಸಾರ್ವಜನಿಕ ಉಪಯುಕ್ತತಾ ಸೇವೆಗಳು ಎಂಬುದರ ಬಗೆಗಿನ ಪರಿಭಾಷೆಯನ್ನು ನಾವಿಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಆ ಪರಿಭಾಷೆ ೧೪ನೆಯ ಖಂಡದ ಪರಿಣಾಮವೇ ಆಗಿದ್ದು ಅದರ ಜೊತೆಯಲ್ಲಿಯೇ ಅದನ್ನು ಪರಿಗಣಿಸಬೇಕಾಗಿದೆ. ಉದ್ಯೋಗದಾತರು ಮತ್ತು ಉದ್ಯೋಗಿಗಳ ನಡುವಣ ಸ್ನೇಹಪೂರ್ವ ಸಂಬಂಧಗಳಿಗೆ ಈ ಖಂಡ ಮಹಾ ಅಪಾಯವನ್ನುಂಟುಮಾಡುತ್ತದೆ ಎಂದು ನಾವು ಭಾವಿಸಿದ್ದೇವೆ. ಸಾರ್ವಜನಿಕ ಸೇವೆಯೊಂದು ಉಪಯುಕ್ತತಾ ಸೇವೆಯಾಗಿರಬಹುದು, ಆದರೆ ಆ ಕಾರಣದಿಂದಾಗಿಯೇ ಅಂಥ ಸೇವೆಗಳಲ್ಲಿ ಮುನ್ಸೂಚನೆ ಕೊಡದೆ ನಡೆಸಲಾಗುವ ಮುಷ್ಕರದ ವಿಷಯದಲ್ಲಿ ಕ್ರಿಮಿನಲ್ ಪ್ರಾಸಿಕ್ಯೂಷನ್ ಕ್ರಮಗಳನ್ನು

ಕೈಗೊಳ್ಳಬೇಕಾಗಿಲ್ಲ. ಅಂಥ ಸೇವೆಗಳಲ್ಲಿನ ಬೀಗಮುದ್ರೆಯನ್ನು ಅಪರಾಧವಾಗಿಸಲಾಗಿದೆ ಎಂಬುದೂ ನಿಜ. ಆದರೆ ಇದು ಮುಷ್ಕರ ಹೂಡುವುದನ್ನು ದಂಡನಾರ್ಹ ಅಪರಾಧವಾಗಿಸುವುದಕ್ಕೆ ವಿರುದ್ಧವಾದ ವಾದಕ್ಕೆ ಅಡ್ಡಿಯನ್ನೇನೂ ಒಡ್ಡುವುದಿಲ್ಲ. ಅಂಚೆ, ತಂತಿ, ದೂರವಾಣಿ, ಅಷ್ಟೇ ಏಕೆ, ಯಾವುದೇ ರೈಲ್ವೆ ಸೇವೆಯಲ್ಲಿನ ಮುಷ್ಕರವನ್ನು ಏಕೆ ಅಪರಾಧವನ್ನಾಗಿಸಬೇಕು ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಅಂಥ ಮುಷ್ಕರ ಅನನುಕೂಲಕರವಾದದ್ದು ಹಾಗೂ ನಮ್ಮ ಸಾಮಾನ್ಯ ಸೌಕರ್ಯಗಳಿಗೆ ಅಡ್ಡಿಯನ್ನುಂಟು ಮಾಡುತ್ತದೆ ಎಂಬುದರಲ್ಲಿ ಅನು ಮಾನವೇನೂ ಇಲ್ಲ. ಯಾವುದಾದರೂ ಒಂದು ಗುಂಪು ನಮಗೆ ಸೌಕರ್ಯಗಳನ್ನು ಒದಗಿಸಲು ನಿರಾಕರಿಸುವ ಮಾತ್ರಕ್ಕೇ ಅದರಲ್ಲಿಯೂ ತಾವು ಸ್ವತಃ ಹೀನಾಯ ಸ್ಥಿತಿ ಮತ್ತು ಕ್ಲೇಶ ಸಂಕಟಗಳನ್ನು ಅನುಭವಿಸುತ್ತಲೇ ಆ ಸೌಕರ್ಯ ಮತ್ತು ಅನುಕೂಲಗಳನ್ನು ಒದಗಿಸಬೇಕಾಗಿ ಬಂದಿದೆ ಎಂದು ಆ ಮುಷ್ಕರಕಾರರು ಭಾವಿಸುತ್ತಿರುವ ಸಂದರ್ಭದಲ್ಲಿ ಆ ಗುಂಪಿಗೆ ಸೇರಿದವರನ್ನೂ ಅಪರಾಧಿಗಳೆಂದು ಭಾವಿಸುವುದು ಘೋರಕೃತ್ಯವೇ ಆಗುತ್ತದೆ. "ಫ್ರಾಂಟಿಯರ್ ಮೇಲ್" ಮತ್ತು ಅದೇ ಬಗೆಯ ವೈಭವೋಪೇತ ಸೇವೆಗಳು ಸಮಾಜಕ್ಕೆ ಅತ್ಯಂತ ಅಗತ್ಯವಾಗಿರುವುದರಿಂದ ಅಂಥಲ್ಲಿನ ಮುಷ್ಕರಗಳನ್ನು ಕಾನೂನುಬಾಹಿರವಾಗಿಸಬೇಕೆಂದು ನಾವು ಗಂಭೀರವಾಗಿ ವಾದಿಸಲು ಸಾಧ್ಯವೆ?"

ಎದುರು ಬಂದಿರುವ ನನ್ನ ಸನ್ಮಾನ್ಯ ಮಿತ್ರರು ಈ ಕೊನೆಯ ಕೆಲವು ಸಾಲುಗಳನ್ನು ಗಮನಿಸಬೇಕೆಂದು ಕೋರುತ್ತೇನೆ. ಆ ಉದ್ಧರಣ ಹೀಗೆ ಮುಂದುವರಿಯುತ್ತದೆ.

"೧೫ನೆಯ ಖಂಡದಲ್ಲಿ ಅಡಕವಾಗಿರುವ ಇಷ್ಟೊಂದು ಅನ್ಯಾಯ ಪೂರ್ಣವಾಗಿರುವ ಸಿದ್ಧಾಂತಕ್ಕೆ ಶಾಸಕಾಂಗ ಒಪ್ಪಿಗೆಯನ್ನು ನೀಡುವುದೇ ಆದಲ್ಲಿ, ಮಾನವ ಜನಾಂಗದ ಒಂದು ಬೃಹತ್ ಭಾಗ ಕೂಲಿಗಾಗಿ ಗುಲಾಮರಾಗಿಯೇ ಉಳಿಯಬೇಕು ಹಾಗೂ ತಮ್ಮನ್ನು ಸೆರೆಮನೆಗೆ ದೂಡಲಾಗುತ್ತದೆಂಬ ಭಯದ ನೆರಳಿನಲ್ಲಿಯೇ ಅವರು ಮುಷ್ಕರ ಹೂಡಬೇಕು ಎಂದು ಜಗತ್ತಿಗೇ ನಾವು ಘೋಷಿಸಿ ದಂತಾಗುತ್ತದೆ. ನಮ್ಮ ನಾಡಿನ ಔದ್ಯಮಿಕ ಮುನ್ನಡೆಯನ್ನು ಸಾಧಿಸುವ ವಿಚಾರದಲ್ಲಿ ನಾವು ತುಂಬಾ ಕಾತರದಿಂದ ಇದ್ದೇವೆ ಎಂಬುದು ನಿಜ. ಆದರೆ ಈ ಖಂಡದಲ್ಲಿ ಪ್ರಸ್ತಾವಿಸಲಾಗಿರುವಂಥ ಬಲಾತ್ಕಾರದ ಕ್ರಮಗಳಿಂದಲ್ಲ. ನೀರು, ದೀಪ ಮತ್ತು ನೈರ್ಮಲ್ಯ ವ್ಯವಸ್ಥೆಯಂಥ ಸೇವೆಗಳು ಸಮಾಜದ ಅಸ್ತಿತ್ವಕ್ಕೆ ಅತ್ಯಗತ್ಯವಾಗಿದೆ ಹಾಗೂ ಎಲ್ಲಾ ಕಾನೂನುಸಮ್ಮತ ವಿಧಾನಗಳಿಂದ ಅಂಥ ಸೇವೆಗಳಲ್ಲಿನ ಯಾವುದೇ ಮುಷ್ಕರಕ್ಕೆ ನಿರುತ್ತೇಜನವನ್ನುಂಟು ಮಾಡಬೇಕು ಎಂಬುದನ್ನು ನಾವು ಒಪ್ಪುತ್ತೇವೆ. ಇದಕ್ಕೆ ಕಾರಣ ಅವು ಸಾರ್ವಜನಿಕ ಭದ್ರತಾ ಸೇವೆಗಳು ಎಂಬುದು. ಸಮಾಜದ ಅಸ್ತಿತ್ವಕ್ಕೇ ವಿರುದ್ಧವಾದ ಹಿತಾಸಕ್ತಿಗಳನ್ನು ಹೊಂದಲು ಯಾವುದೇ ವ್ಯಕ್ತಿಗೂ ಅನುಮತಿ ನೀಡಲಾಗುವುದಿಲ್ಲ. ಸಾಮಾಜಿಕ ಭದ್ರತಾ ಸೇವೆಗಳಲ್ಲಿನ ಮುಷ್ಕರಗಳನ್ನು ಕಾನೂನು ವಿರುದ್ಧವಾಗಿಸುವ ಯಾವುದೇ ಶಾಸನಕ್ರಮವನ್ನೂ ನಾವು ವಿರೋಧಿಸುವುದಿಲ್ಲ..."

ಮಾನ್ಯರೆ, ಕಾಂಗ್ರೆಸ್ ಪಕ್ಷದ ಸದಸ್ಯರು ಅಂದು ತಳೆದ ನಿಲುವು ಇದು. ಶ್ರೀ ಕುಂಜ್ರು ಅವರು ಸೇರಿಸಿದ ಭಿನ್ನಾಭಿಪ್ರಾಯದ ಟಿಪ್ಪಣಿಯಿಂದಲೂ ನಾನೊಂದು ಉದ್ಧರಣವನ್ನು ಓದಬಯಸುತ್ತೇನೆ.

ಅವರು ಉದಾರವಾದಿಗಳು. ನಾನು ಈ ಅಂಶವನ್ನು ಒತ್ತಿಹೇಳುತ್ತೇನೆ. ಏಕೆಂದರೆ ಕಾಂಗ್ರೆಸ್ ಪಕ್ಷದ ತತ್ವಗಳನ್ನು, ನೀತಿಗಳನ್ನು ಒಪ್ಪದಿದ್ದಂಥ ಸೌಮ್ಯ ಸ್ವಭಾವದ ವ್ಯಕ್ತಿಗಳು ಕೂಡಾ ೧೯೨೯ರಲ್ಲಿ ಏನು ಹೇಳಿದ್ದರೆಂಬುದನ್ನು ತಿಳಿಯಲು ಇದರಿಂದ ನಿಮಗೆ ಸಾಧ್ಯವಾಗುತ್ತದೆ. ಅವರು ಹೇಳಿದ್ದ ಮಾತುಗಳು ಇವು:

"ಮುನ್ಸೂಚನೆಯನ್ನು ಕೊಡದೆ, ಸೇವಾ ಒಪ್ಪಂದಗಳನ್ನು ಉಲ್ಲಂಘಿಸಿ ನಡೆಸಲಾಗುವ ಮುಷ್ಕರವನ್ನು ಕಾನೂನುಬಾಹಿರವಾಗಿಸುವುದಕ್ಕೆ ಸಂಬಂಧಿಸಿದ ವಿಚಾರವನ್ನು ೧೫ನೆಯ ಖಂಡ ಒಳಗೊಂಡಿದೆ. ಇದು ಸಾರ್ವಜನಿಕ ಉಪಯುಕ್ತತಾ ಸೇವೆಗಳಲ್ಲಿನ ಮುಷ್ಕರಕ್ಕೆ ಸಂಬಂಧಿಸಿದೆ. ಸಾಕಷ್ಟು ಮುನ್ಸೂಚನೆಯನ್ನು ಕೊಡದೆ ಕಾರ್ಯ ನಿಲುಗಡೆ ಮಾನವರ ಆರೋಗ್ಯಕ್ಕೆ ಅಥವಾ ಜೀವಕ್ಕೆ ಅಪಾಯವನ್ನುಂಟುಮಾಡಬಹುದಾದಂಥ ಸೇವೆಗಳಲ್ಲಿ ಮಾತ್ರವೇ, ಮಿಂಚಿನ ಮುಷ್ಕರ ನಡೆಸುವ ಪ್ರಯತ್ನ ಮಾಡುವುದನ್ನು ದಂಡನಾರ್ಹವಾಗಿಸುವುದಾದರೆ, ಅಂಥ ಕ್ರಮವನ್ನು ಕೈಗೊಳ್ಳುವ ವಿಚಾರ ಕಾರ್ಯತಃ ಆ ಕಾನೂನನ್ನು ಜಾರಿಗೆ ಕೊಡುವುದು ಎಷ್ಟೇ ಕಷ್ಟ ಸಾಧ್ಯವಾದರೂ ಸೈದ್ಧಾಂತಿಕವಾಗಿ ನಿರ್ದಿಷ್ಟವಾಗಿರುತ್ತದೆ. ಆದರೆ ಯಾವುದೇ ಸೇವೆಯನ್ನು ಸಾರ್ವಜನಿಕ ಉಪಯುಕ್ತತಾ ಸೇವೆ ಎಂಬುದಾಗಿ ಘೋಷಿಸುವ ವಿವೇಚನಾಧಿಕಾರವನ್ನು ಸರ್ಕಾರಕ್ಕೆ ಕೊಡುವ ಆ ಉಪಬಂಧವನ್ನು ಪರಿಶೀಲನಾ ಸಮಿತಿ ಕೈಬಿಟ್ಟಿದ್ದರೂ ತಾವು ಕೈಗೊಳ್ಳುವ ಮಿಂಚಿನ ಮುಷ್ಕರಗಳಿಂದಾಗಿ, ಏನೇ ಅನನುಕೂಲವನ್ನುಂಟುಮಾಡಿದರೂ ಜೀವಕ್ಕೆ ಅಪಾಯವನ್ನುಂಟು ಮಾಡಲಾಗದಿರುವಂತೆ ಕೆಲವೊಂದು ಸೇವೆಗಳನ್ನು ಸಾರ್ವಜನಿಕ ಉಪಯುಕ್ತತಾ ಸೇವೆಯ ಬಗೆಗಿನ ಪರಿ ಭಾಷೆ ಈಗಲೂ ಅದು ಒಳಗೊಂಡಿದೆ. ಯಾವುದೇ ಸಂಸ್ಥೆಯಲ್ಲಿ ಮಿಂಚಿನ ಮುಷ್ಕರಗಳು ಎಷ್ಟೇ ಅನಪೇಕ್ಷಣೀಯವಾಗಿದ್ದರೂ ಅವು ಸಮುದಾಯದ ರಕ್ಷಣೆಗೆ ಬಾಧೆಯನ್ನುಂಟು ಮಾಡದೆ ಇದ್ದಲ್ಲಿ ಅವುಗಳನ್ನು ದಂಡನಾರ್ಹವಾಗಿರುವುದಕ್ಕೆ ಯಾವುದೇ ಆಧಾರವೂ ಇಲ್ಲ. ಸಮುದಾಯದ ಅಸ್ತಿತ್ವಕ್ಕೆ ಬಾಧೆಯನ್ನುಂಟುಮಾಡುವಂಥ ಸೇವೆಗಳಲ್ಲಿನ ಮಿಂಚಿನ ಮುಷ್ಕರದ ವಿಷಯದಲ್ಲಿ ವಿವಿಧ ಪ್ರಾಂತ್ಯಗಳು ಪರಿಹಾರವನ್ನು ಕಲ್ಪಿಸಿವೆ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು. ಮೇಲಾಗಿ, ಒಪ್ಪಂದದ ಉಲ್ಲಂಘನೆಯಾಗಿ ಮುಷ್ಕರಗಳನ್ನು ನಡೆಸಿದಲ್ಲಿ, ಭಾರತೀಯ ದಂಡ ಸಂಹಿತೆಯ ಮೇರೆಗೇ ಅವುಗಳ ವಿಷಯದಲ್ಲಿ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬಹುದು..."

ಇದು ಕುಂಜ್ರು ಅವರ ಮನೋವೃತ್ತಿಯಾಗಿತ್ತು. ಮುನ್ಸೂಚನೆಯನ್ನು ಕೊಡದೆ ಮುಷ್ಕರ ನಡೆಸುವುದನ್ನು ನಿರ್ಬಂಧಿಸಬೇಕೆಂಬ ವಿಚಾರವನ್ನು ನಾನೂ ತತ್ವಶಃ ಒಪ್ಪುತ್ತೇನೆ. ಆದರೆ ಸಾರ್ವಜನಿಕ ಉಪಯುಕ್ತತಾ ಸೇವೆಗಳ ವಿಷಯವಲ್ಲದೆ, ಸಾಮಾಜಿಕ ಭದ್ರತಾ ಸೇವೆಗಳ ವಿಷಯದಲ್ಲಿ ಮಾತ್ರವೇ ಈ ಮುಷ್ಕರಗಳನ್ನು ನಿರ್ಬಂಧಿಸಬೇಕು. ಮಾನ್ಯರೆ, ಇದು ಆಂಗ್ಲ ಶಾಸನಕ್ರಮಕ್ಕೆ ಸಂಪೂರ್ಣವಾಗಿ ಅನುಗುಣವಾಗಿದೆ. ಈ ಸಂದರ್ಭದಲ್ಲಿ ೧೯೨೦ ತುರ್ತು ಅಧಿಕಾರ ಕಾಯ್ದೆ ಎಂದು ಕರೆಯಲಾಗಿರುವ ಒಂದು ಕಾಯ್ದೆಯತ್ತ ನಾನು ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಯುದ್ಧಾನಂತರದ ಒಂದೆರಡು ವರ್ಷಗಳ ಬಳಿಕ ಬ್ರಿಟಿಷ್ ಸಂಸತ್ತು ಈ ಕಾಯ್ದೆಯನ್ನು ಅಂಗೀಕರಿಸಿತು. ಅಲ್ಲಿಯೂ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ವ್ಯವಹರಿಸಲು ಅನುಕೂಲವಾಗುವಂತೆ, ವಿನಿಮಯಗಳನ್ನು ರೂಪಿಸುವ ಅಧಿಕಾರವನ್ನೂ ಸರ್ಕಾರಕ್ಕೆ

ಕೊಡಲಾಗಿತ್ತು. ನಾನು ಆ ಕಾಯ್ದೆಯ ಒಂದೆರಡು ಪ್ರಕರಣಗಳನ್ನಷ್ಟೇ ಓದುತ್ತೇನೆ. ೧ನೆಯ ಪ್ರಕರಣ ಹೀಗೆಂದು ಹೇಳುತ್ತದೆ:

"ಯಾವುದೇ ಕಾಲದಲ್ಲಿ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಆಹಾರ, ನೀರು, ಇಂಧನ ಅಥವಾ ವಿದ್ಯುತ್ ಶಕ್ತಿಯ ಸರಬರಾಜು ಮತ್ತು ವಿತರಣೆಯ ವಿಷಯದಲ್ಲಿ ಅಥವಾ ಪ್ರಯಾಣ ಸಾಧನಗಳ ವಿಷಯದಲ್ಲಿ ಇಡೀ ಸಮುದಾಯವನ್ನು ಅಥವಾ ಸಮುದಾಯದ ಯಾವುದೇ ಒಂದು ಭಾಗವನ್ನು ಅಗತ್ಯ ಸೇವೆಗಳಿಂದ ವಂಚಿತವಾಗಿಸುವಂಥ ರೀತಿಯಲ್ಲಿ ಹಸ್ತಕ್ಷೇಪವೆಂದು ಪರಿಗಣಿಸಬಹುದಾದಂಥ ಸ್ವರೂಪದ ಹಾಗೂ ವ್ಯಾಪಕ ಪ್ರಮಾಣದ ಯಾವುದೇ ಕಾರ್ಯವನ್ನು ಕೈಗೊಂಡಿದ್ದಾನೆ ಅಥವಾ ತತ್‌ಕ್ಷಣದಲ್ಲಿ ಅಂಥ ಬೆದರಿಕೆಯನ್ನೊಡ್ಡಿದ್ದಾನೆಂದು ಘನತೆವೆತ್ತ ಪ್ರಭುಗಳಿಗೆ ತೋರಿದಲ್ಲಿ ಘನತೆವೆತ್ತ ಪ್ರಭುಗಳು ಉದ್ಘೋಷಣೆಯ ಮೂಲಕ ತುರ್ತು ಪರಿಸ್ಥಿತಿ ಇದೆಯೆಂದು ಘೋಷಿಸಬಹುದು."

ನಾನು ಸದನದ ಗಮನವನ್ನು ಈ ನಿರ್ದಿಷ್ಟ ಶಬ್ದಗಳತ್ತ– "ಆಹಾರ, ನೀರು, ಇಂಧನ, ವಿದ್ಯುತ್ ಶಕ್ತಿ ಅಥವಾ ಪ್ರಯಾಣ ಸಾಧನಗಳ ವಿಷಯದಲ್ಲಿ ಇಡೀ ಸಮುದಾಯವನ್ನು ಅಥವಾ ಸಮುದಾಯದ ಯಾವುದೇ ಒಂದು ಭಾಗವನ್ನು ವಂಚಿತವಾಗಿಸುವಂಥ ರೀತಿಯಲ್ಲಿ... ಕಾರ್ಯವನ್ನು ಕೈಗೊಂಡಿದ್ದಾನೆ..." ಎಂಬ ಶಬ್ದಗಳತ್ತ ಸೆಳೆಯಬಯಸುತ್ತೇನೆ.

೨ನೆಯ ಪ್ರಕರಣ ಹೀಗೆಂದು ಹೇಳುತ್ತದೆ:

"ತುರ್ತು ಪರಿಸ್ಥಿತಿಯ ಘೋಷಣೆ ಮಾಡಿರುವಲ್ಲಿ ಹಾಗೂ ಆ ಘೋಷಣೆ ಜಾರಿಯಲ್ಲಿರುವಷ್ಟು ಕಾಲ, ಸಮುದಾಯದ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ದೊರಕಿಸಲು ವಿನಿಮಯಗಳನ್ನು ರೂಪಿಸುವುದು ಘನತೆವೆತ್ತ ಪ್ರಭುಗಳ ಆಸ್ಥಾನದ ಮಟ್ಟಿಗೆ ಕಾನೂನುಬದ್ಧವಾಗಿರತಕ್ಕದ್ದು ಹಾಗೂ ಘನತೆವೆತ್ತ ಪ್ರಭುಗಳು ಅಗತ್ಯವೆಂದು ಪರಿಗಣಿಸಿದಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಈ ವಿನಿಮಯಗಳು... ಸರ್ಕಾರಕ್ಕೆ ಪ್ರಧಾನ ಮಾಡಬಹುದು ಅಥವಾ ವಿಧಿಸಬಹುದು..."

ಮನಸ್ಸಿನಲ್ಲಿ ಇರಿಸಿಕೊಳ್ಳಬೇಕಾದ ಸಂಗತಿ ಎಂದರೆ ಇದೆಲ್ಲವೂ ಅತ್ಯಗತ್ಯವಾದ ಸಾರ್ವಜನಿಕ ಸುರಕ್ಷತೆಗೆ ಹಾಗೂ ಸಮುದಾಯದ ಜೀವನಕ್ಕೆ ಸಂಬಂಧಿಸಿದೆ ಎಂಬುದು. ಸದಾಕಾಲವೂ ಇದೇ ದೃಷ್ಟಿಕೋನವನ್ನು ಇರಿಸಿಕೊಳ್ಳಲಾಗಿದೆ: ಮುಷ್ಕರ ಹೂಡುವ ಹಕ್ಕನ್ನು ನಿರ್ಬಂಧಿಸುವುದು ನಿಮ್ಮ ಇಚ್ಛೆಯಾಗಿದ್ದರೆ ಸಮುದಾಯದ ಜೀವನದ ಆಧಾರತತ್ವ ಯಾವುದನ್ನು ಆಶ್ರಯಿಸಿರುತ್ತದೆಯೋ ಅದಕ್ಕೆ ಸಂಬಂಧಪಟ್ಟಂತೆ ಮಾತ್ರವೇ ನಾವು ಅಂತಹ ಕ್ರಮವನ್ನು ಕೈಗೊಳ್ಳಬೇಕು. ಈ ಮಸೂದೆಯಾದರೋ ಪ್ರತಿಯೊಂದು ವ್ಯಕ್ತಿಗೆ ಮತ್ತು ಪ್ರತಿಯೊಂದು ಉದ್ಯಮಕ್ಕೆ ಅನ್ವಯಿಸುವಂತಿದೆ ಎಂಬುದು ಈಗ ಸ್ಪಷ್ಟವೇ ಆಗಿದೆ. ತಮಾಷೆಗಾಗಿ ನಾನು ಏನನ್ನೂ ಹೇಳಬಯಸುವುದಿಲ್ಲ. ಆದರೆ ಒಂದು ಮಾತನ್ನು ಹೇಳುವ ಮೂಲಕ ಒಂದು ಅಂಶವನ್ನು ನಾನು ವಿಶದಪಡಿಸಬಯಸುತ್ತೇನೆ. ನಾಳೆ ಭಾರತೀಯ ಮಹಿಳೆಯರು ತುಟಿಗಳಿಗೆ ರಂಗು ಹಚ್ಚುವ ಫ್ಯಾಶನನ್ನು ಅಂಗೀಕರಿಸಿದಲ್ಲಿ– ಅವರು ಹಾಗೆ ಮಾಡುವುದಿಲ್ಲವೆಂದು

ನಾನು ನಂಬಿದ್ದೇನೆ– ಹಣ ಗಳಿಕೆಯ ಮೂಲಗಳ ವಾಸನೆ ಹಿಡಿದು ಮುನ್ನುಗ್ಗುವಂಥ ಯಾವನಾದರೊಬ್ಬ ಉತ್ಪಾದಕ, ಅವರ ಅಗತ್ಯಗಳನ್ನು ಸರಬರಾಜು ಮಾಡಲು ತುಟಿ ರಂಗುಗಳನ್ನು ಉತ್ಪಾದಿಸುವ ಕಾರ್ಖಾನೆಯನ್ನು ಆರಂಭಿಸಿದಲ್ಲಿ, ಈ ಕಾಯ್ದೆಯ ಅಧೀನ ಕಾರ್ಮಿಕರು ಮುಷ್ಕರವನ್ನು ಹೂಡಿದರೆ ಅದರ ಉಪಬಂಧಗಳು ಡೆಮೊಕ್ಲೆಸನ ಕತ್ತಿಯಂತೆ ಅವರ ತಲೆಯ ಮೇಲೆ ತೂಗಾಡುತ್ತಲೇ ಇರುತ್ತವೆ. ತುಟಿ ರಂಗುಗಳ ಉದ್ಯಮ ಜೀವನಕ್ಕೆ ಅಗತ್ಯವಾದುದೆಂದು ಯಾರಾದರೂ ಗಂಭೀರವಾಗಿ ವಾದಿಸಬಹುದೆ? ತಮ್ಮ ತುಟಿಗಳ ರಂಗು ಲೇಪಿಸಿಕೊಳ್ಳುವ ಕೆಲವು ಮಹಿಳೆಯರನ್ನು ಆ ಸಂತೋಷದಿಂದ ವಂಚಿಸಿದಂತಾಗುವುದರಿಂದ, ಮುಷ್ಕರ ಹೂಡುವ ಹಕ್ಕನ್ನು ಮೊಟಕುಗೊಳಿಸಬೇಕೆಂದು ವಾದಿಸಬಹುದೆ? ಮಾನ್ಯರೆ, ಈ ಸರ್ಕಾರ ೧೯೨೯ರಲ್ಲಿ ತಾನು ತಳೆದ ನಿಲುವನ್ನು– ಅಂದರೆ ಸಾಮಾಜಿಕ ಭದ್ರತಾ ಸೇವೆಗಳಲ್ಲಿನ ಮುಷ್ಕರಗಳಿಗೆ ಮಾತ್ರವೇ ದಂಡನೆಯನ್ನು ನಿರ್ಬಂಧಿಸುವ ತನ್ನ ನಿಲುವನ್ನು ಕೈಬಿಟ್ಟಿರುವುದಲ್ಲದೆ ೧೯೨೯ರ ಕಾಯ್ದೆಯ ಉಪಬಂಧಗಳಿಗಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದರ ಮೂಲಕ ಅಧಿಕಾರಷಾಹಿಯನ್ನೂ ಮೀರಿಸಿಬಿಟ್ಟಿದೆ. ಮುಷ್ಕರ ಹೂಡುವ ಹಕ್ಕು ಎಷ್ಟು ಮುಖ್ಯವಾದುದೆಂದರೆ ಕನಿಷ್ಠಪಕ್ಷ ಸಾರ್ವಜನಿಕ ಭದ್ರತೆಯ ಚೌಕಟ್ಟಿನಿಂದ ಹೊರಗೆ ಉಳಿಯುವಂಥ ಉದ್ಯಮಗಳಲ್ಲಿನ ಮುಷ್ಕರಗಳನ್ನು ದಂಡನಾರ್ಹವಾಗಿಸಬಾರದೆಂಬ ತತ್ವವನ್ನು ಮನಗಾಣುವ ಪ್ರಜ್ಞೆಯನ್ನು– ಈ ಮಾತನ್ನು ನಾನು ಬಳಸಬಹುದಾದರೆ– ಜವಾಬ್ದಾರಿಯನ್ನು ಅಧಿಕಾರಷಾಹಿ ಹೊಂದಿತ್ತು. ಆದರೆ ಇಲ್ಲಿ ನಮ್ಮ ಮುಂದಿರುವ ಮಸೂದೆ ತುಟಿರಂಗು ಉದ್ಯಮದಲ್ಲಿನ ಮುಷ್ಕರವನ್ನು ದಂಡನಾರ್ಹವಾಗಿಸುವಂಥ ಮಸೂದೆಯಾಗಿದೆ. ಈ ಮಾತನ್ನು ನಾನು ಮತ್ತೆ ಒತ್ತಿ ಹೇಳಬಯಸುತ್ತೇನೆ.

ಇದೆಲ್ಲ ಏತಕ್ಕಾಗಿ? ಆ ಬಡ ಕಾರ್ಮಿಕರ ಮೇಲೆ ಹೊರಿಸಲು ಯತ್ನಿಸಲಾಗುತ್ತಿರುವ ಈ ಎಲ್ಲ ಕಷ್ಟ ಸಂಕಟಗಳಿಂದ ದಮನಕಾರಿ ಕ್ರಮಗಳಿಂದ ನಮಗಾಗುವ ಲಾಭವಾದರೂ ಏನು? ನನಗೆ ತೋರುವಂತೆ ಇದರ ಪರಿಣಾಮ ಇಷ್ಟು ಮಾತ್ರ; ಸಂಧಾನಕರ್ತರು ಎಂದು ಈ ಮಸೂದೆ ಹೆಸರಿಸಿರುವ ಕೆಲವು ಮಂದಿ ಸಭ್ಯರ ಮೇಜಿನ ಮುಂದೆ ೪ ತಿಂಗಳು ಮತ್ತು ೨೫ ದಿವಸಗಳು ಕಾದಿರುವುದು. ಇದಕ್ಕಿಂತ ಮಿಗಿಲಾದ ಬೇರಾವ ಲಾಭವೂ ನನಗೆ ಕಾಣುವುದಿಲ್ಲ. ರಾಜ್ಯ ಸಾಮೂಹಿಕವಾಗಿ ಚೌಕಾಸಿ ಮಾಡುವ ಹೊಣೆಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಳ್ಳುತ್ತಿರುವುದೇ ಈ ಮಸೂದೆಯನ್ನು ಮಂಡಿಸುತ್ತಿರುವುದಕ್ಕೆ ಕಾರಣ ಎಂಬುದಾಗಿ ಸನ್ಮಾನ್ಯ ಗೃಹಸಚಿವರು ಹೇಳಿದ್ದಾರೆ. ಈ ಅರ್ಥದ ಕೆಲವು ಮಾತುಗಳನ್ನು ಅವರು ಆಡಿದ್ದಾರೆ ಎಂದು ಭಾವಿಸಿದ್ದೇನೆ. ನನ್ನಿಂದ ಏನಾದರೂ ತಪ್ಪಾಗಿದ್ದರೆ ಅವರು ಅದನ್ನು ತಿದ್ದುತ್ತಾರೆ ಎಂದು ನಂಬಿದ್ದೇನೆ.

ಸನ್ಮಾನ್ಯರಾದ ಕೆ. ಎಂ. ಮುನ್ಷಿ: ಇಲ್ಲ, ಸಾಮೂಹಿಕ ಚೌಕಾಸಿಯ ಹೊಣೆಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಳ್ಳುತ್ತದೆ ಎಂದಲ್ಲ; ಸಾಮೂಹಿಕ ಚೌಕಾಸಿಯನ್ನು ನಿಯಂತ್ರಿಸುವ ಹೊಣೆಯನ್ನು ಹೊತ್ತು ಕೊಳ್ಳುತ್ತದೆ ಎಂದು ಹೇಳಿದೆ.

ಡಾ. ಬಿ. ಆರ್. ಅಂಬೇಡ್ಕರ್: ಸಾಮೂಹಿಕ ಚೌಕಾಸಿಯನ್ನು ನಿಯಂತ್ರಿಸುವುದು ಎಂದು ಹೇಳಿದಿರೇನು? ನಾನು ತುಂಬಾ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ವಿನಿಮಯಗಳಿಂದ ಏನು ಪ್ರಯೋಜನ? ಸಿವಿಲ್ ಪ್ರಕ್ರಿಯಾಸಂಹಿತೆಯಲ್ಲಿ ರಾಶಿರಾಶಿ ವಿನಿಮಯಗಳಿವೆ. ವಾದಿಗೆ ಅವುಗಳಲ್ಲಿ ಆಸಕ್ತಿ ಏನಾದರೂ ಇದೆಯೆ? ವಾದಿಗೆ ತನ್ನ ದಾವೆಯ ಫಲಿತಾಂಶದಲ್ಲಿ ಆಸಕ್ತಿ ಇರುತ್ತದೆ. ಈ ಎಲ್ಲ ಔಪಚಾರಿಕತೆಗಳನ್ನು ಈ ಎಲ್ಲಾ ಉಪಬಂಧಗಳನ್ನು ಮತ್ತು ಪ್ರಕ್ರಿಯೆಗಳನ್ನು ಕಟ್ಟಿಕೊಂಡು ಮುನ್ಸೂಚನೆಯನ್ನು ಕೊಡುವವರು ಯಾರು? ಮುನ್ಸೂಚನೆ ಕೊಟ್ಟ ಬಳಿಕ ಮುಂದೆ ಏನಾಗಬೇಕು? ಲಿಖಿತ ಹೇಳಿಕೆಯ ಕರಡನ್ನು ಮತ್ತು ಇತರ

ವ್ಯವಹಾರಗಳ ಕರಡನ್ನು ಸಿದ್ಧಪಡಿಸುವವರು ಯಾರು? ಹಸಿದಿರುವ ಕಾರ್ಮಿಕನಿಗೆ ಇವುಗಳಲ್ಲಿ ಒಂದಿಷ್ಟೂ ಆಸಕ್ತಿ ಇಲ್ಲ.

ಸನ್ಮಾನ್ಯರಾದ ಕೆ. ಎಂ. ಮುನ್ಷಿ: ಅಂದರೆ ಸಿವಿಲ್ ಪ್ರಕ್ರಿಯಾಸಂಹಿತೆಯನ್ನು ನಿರಸನಗೊಳಿಸಬೇಕೆಂದೇನು?

ಡಾ. ಬಿ. ಆರ್. ಅಂಬೇಡ್ಕರ್: ನಾನು ಅಂಥದ್ದೇನೂ ಹೇಳುವುದಿಲ್ಲ. ನಾನು ಹೇಳಬಯಸುವುದು ಇಷ್ಟೇ: ಇಷ್ಟೆಲ್ಲ ಉಪಬಂಧಗಳು ಇರುವಾಗ, ಸರ್ಕಾರ ದೃಢವಾಗಿ ಮುಂದುವರಿಯಬೇಕಿತ್ತು. "ನೀವು ಒಪ್ಪಿಗೆ ಇರಲಿ ಅಥವಾ ಇಲ್ಲದಿರಲಿ, ನಾವು ಕಡ್ಡಾಯವಾಗಿ ಸಂಧಾನ ವ್ಯವಹರಣೆಗಳನ್ನು ನಡೆಸುತ್ತೇವೆ" ಎಂದು ಹೇಳುವ ಎದೆಗಾರಿಕೆಯನ್ನು ತೋರಬೇಕಾಗಿತ್ತು (ಅಡ್ಡಿ). ನಾನು ಒಪ್ಪುತ್ತೇನೆಯೆ, ಇಲ್ಲವೆ ಎಂಬುದು ಬೇರೊಂದು ವಿಚಾರ. ನೀವು ಅಂಥ ನಿಲುವನ್ನು ತಳೆದಿದ್ದರೆ ಅದನ್ನು ನಾನು ಖಂಡಿತವಾಗಿಯೂ ಅರ್ಥ ಮಾಡಿಕೊಳ್ಳಬಹುದಾಗಿತ್ತು. ಏಕೆಂದರೆ ಆಗ ಪರಿಸ್ಥಿತಿ ಹೀಗಿರುತ್ತಿತ್ತು. ಅಂದರೆ ೪ ತಿಂಗಳು ಮತ್ತು ೨೫ ದಿವಸಗಳ ಬಳಿಕ ಯಾವುದಾದರೂ ಒಂದು ನಿರ್ದಿಷ್ಟವಾದ ಪರಿಣಾಮದ ವಿಷಯ ನಿಮಗೆ ಖಚಿತವಾಗಿ ತಿಳಿದಿರುತ್ತಿತ್ತು.

ಸನ್ಮಾನ್ಯ ಸದಸ್ಯರೊಬ್ಬರು: ಅದು ಕೂಲಿಕಾರರ ಮಟ್ಟಿಗೆ ಗುಲಾಮಗಿರಿಯೇ ಆಗುತ್ತಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ಗುಲಾಮಗಿರಿಯ ಸಾಕಷ್ಟು ಅಧಿಕಾರಗಳನ್ನು ನೀವು ಈಗಾಗಲೇ ಹೊಂದಿದ್ದೀರಿ. ಈ ಮಸೂದೆಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಲು ನೀವು ನಾಚಿಕೊಳ್ಳಬೇಕಾದ ಅಗತ್ಯವೇನೂ ಇರಲಿಲ್ಲ (ಅಡ್ಡಿ).

ಸನ್ಮಾನ್ಯ ಸಭಾಧ್ಯಕ್ಷರು: ಶಿಸ್ತು, ಶಿಸ್ತು.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಆದ್ದರಿಂದಲೇ ನಾನು ಕೇಳುತ್ತಿದ್ದೇನೆ. ಇದೆಲ್ಲ ಏತಕ್ಕಾಗಿ? ನೀವು ಅನೇಕ ಹಂತಗಳ ಮೂಲಕ ಹಾದುಹೋಗಬೇಕು. ಒಬ್ಬ ರಿಜಿಸ್ಟ್ರಾರ್, ಒಬ್ಬ ಸಂಧಾನಕರ್ತ, ಎರಡೂ ಪಕ್ಷಗಳು ಒಪ್ಪಿದರೆ ಸಂಧಾನಕರ್ತರ ಒಂದು ಮಂಡಳಿ. ಅದು ಸ್ನೇಹಪರನಾದ ಸಭ್ಯ ವ್ಯಕ್ತಿಯೊಬ್ಬನ ಮುಂದೆ ಕೆಲವು ಹಾಜರಾತಿ ಅಥವಾ ಸುಧಾರಣೆಗಳನ್ನು ಪಡೆದುಕೊಳ್ಳುವ ಪ್ರಸಂಗ ಮಾತ್ರವಾಗಿರುತ್ತದೆ. ಆತ ವಿಭಿನ್ನ ವ್ಯಕ್ತಿಗಳೊಡನೆ ಸಿಹಿಯಾಗಿ ಮಾತನಾಡುತ್ತಾನೆ ಹಾಗೂ ಉಭಯ ಪಕ್ಷಗಳ ನಡುವೆ ಒಳ್ಳೆಯ ಮನೋಧರ್ಮವನ್ನು ಅವನು ಮೂಡಿಸಬಹುದು. ಅದರಲ್ಲಿ ನನಗೆ ಯಾವ ಪ್ರಯೋಜನವೂ ಕಾಣುತ್ತಿಲ್ಲ. ನನ್ನ ತೀರ್ಮಾನದಂತೆ ಇದೊಂದು ಸಂಪೂರ್ಣ ವೈಫಲ್ಯ– ಖಚಿತವಾದ ಪರಿಣಾಮವನ್ನೇನೂ ತಾರದಿರುವಂಥ ಸಂಪೂರ್ಣ ವೈಫಲ್ಯ. ಇದರ ಏಕೈಕ ನಿರ್ದಿಷ್ಟ ಪರಿಣಾಮವೆಂದರೆ ೪ ತಿಂಗಳು ಮತ್ತು ೨೫ ದಿವಸಗಳ ಈ ವಿಳಂಬಕಾರಕ ಪ್ರಕ್ರಿಯೆ ಅಂತಿಮವಾಗಿ ಮುಷ್ಕರ ಹೂಡಲಾಗದಂತೆ ಕಾರ್ಮಿಕರನ್ನು ಅಸಮರ್ಥನನ್ನಾಗಿಸಿಬಿಡುತ್ತದೆ. ಮತ್ತೆ ಇಲ್ಲಿಯೂ ೧೯೩೪ರ ಮುಂಬಯಿ ಕಾಯ್ದೆ ಮತ್ತು ಈ ಮಸೂದೆಗಳ ನಡುವಣ ವೈಷಮ್ಯದತ್ತ ನಾನು ಸದನದ ಗಮನವನ್ನು ಸೆಳೆಯ ಬಯಸುತ್ತೇನೆ. ಮಾನ್ಯರೆ, ೧೯೩೪ರ ಮಸೂದೆಯ ಮಂಡನೆಯ ಹಂತದಲ್ಲಿ ಸಂಧಾನ ವ್ಯವಹರಣೆಯ ಅವಧಿಯಲ್ಲಿ ಮುಷ್ಕರವನ್ನು ನಿಷೇಧಿಸಬೇಕೆಂದು ಸೂಚನೆಯನ್ನು ಮುಂದಿರಿಸಲಾಗಿತ್ತು. ಈ ಅರ್ಥದ ಪ್ರಸ್ತಾವವೊಂದನ್ನು ಮುಂದಿರಿಸಲಾಗಿತ್ತು. ಆದರೆ, ಸನ್ಮಾನ್ಯರಾದ ಸರ್ ರಾಬರ್ಟ್ ಬೆಲ್ ಅವರು ಆ ಪ್ರಸ್ತಾವವನ್ನು ತಿರಸ್ಕರಿಸಿಬಿಟ್ಟರು. ಮುಷ್ಕರವನ್ನು ನಿಷೇಧಿಸದಿದ್ದರೆ ಕನಿಷ್ಠಪಕ್ಷ ಪಿಕೆಟಿಂಗನ್ನಾದರೂ ನಿಷೇಧಿಸಬೇಕೆಂದು ಅವರ ಮೇಲೆ ಒತ್ತಾಯವನ್ನು ತರಲಾಯಿತು. ಆದರೆ ಅದಕ್ಕೂ ಒಪ್ಪಲಿಲ್ಲ (ಸನ್ಮಾನ್ಯ

ಸದಸ್ಯರೊಬ್ಬರು; ಇಲ್ಲ, ಇಲ್ಲ). ನನ್ನ ಹೇಳಿಕೆಗೆ ಸವಾಲು ಹಾಕಿರುವುದರಿಂದ ಅವರ ಭಾಷಣದ ಒಂದು ಭಾಗವನ್ನು ನಾನು ಓದಿಹೇಳುತ್ತೇನೆ. "ಮುಂಬಯಿಯ ವಿಧಾನ ಪರಿಷತ್ತಿನ ಚರ್ಚೆಗಳು", ಸಂ. ೪೦ನೆಯ ಪುಟದಲ್ಲಿ ಉಲ್ಲೇಖಿತವಾಗಿರುವಂತೆ ಅವರು ಹೀಗೆಂದು ಹೇಳಿದ್ದಾರೆ:

> "ಪಿಕೆಟಿಂಗ್‌ನ ವಿಷಯಕ್ಕೆ ಸಂಬಂಧಿಸಿದ ಒಂದು ಸಂಗತಿಯನ್ನು ನಾನಿಲ್ಲಿ ಉಲ್ಲೇಖಿಸಬಯಸುತ್ತೇನೆ. 'ಒಂದು ಕೆಲಸ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಸಂಧಾನ ವ್ಯವಹರಣೆಯ ಪ್ರಕ್ರಿಯೆಯ ಅವಧಿಯಲ್ಲಿ ತಮ್ಮ ಸಾಮಾನ್ಯ ಕೆಲಸ ಅಥವಾ ವ್ಯವಹಾರವನ್ನು ನಡೆಸದಂತೆ' ಅವರನ್ನು ತಡೆಯುವ ಸಲುವಾಗಿ ಸಂಧಾನ ವ್ಯವಹರಣೆಗಳಿಗೆ ತಡೆಯೊಡ್ಡುವ ಹಾಗೂ ಯಾವನೇ ವ್ಯಕ್ತಿಯನ್ನು ದೈಹಿಕವಾಗಿ ಪೀಡಿಸುವ ಉದ್ದೇಶದಿಂದ ನಡೆಸಲಾಗುವಂಥ ಪಿಕೆಂಟಿಗನ್ನು ನಿಷೇಧಿಸಲು ೧೫ನೆಯ ಖಂಡದಲ್ಲಿ ಉಪಬಂಧವೊಂದನ್ನು ಕಲ್ಪಿಸಲಾಗಿದೆ ಎಂಬುದನ್ನು ನೀವು ಕಾಣುತ್ತೀರಿ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಸಂಧಾನದ ನಡವಳಿಕೆಗಳು ಆರಂಭಗೊಂಡ ಬಳಿಕ, ಗಿರಣಿಯಲ್ಲಿ ಪಿಕೆಟಿಂಗಿಗೆ ಅವಕಾಶಕೊಡಬಾರದು ಎಂಬುದು ಸರ್ಕಾರದ ಉದ್ದೇಶವಾಗಿತ್ತು. ಮುಷ್ಕರ ಆಗಲೇ ಮುನ್ನಡೆದಿದ್ದರೂ, ಗಿರಣಿಯ ಆವರಣದಲ್ಲಿ ಪಿಕೆಟಿಂಗ್ ನಡೆಸುವುದನ್ನು ನಿಲ್ಲಿಸಬೇಕೆಂದು ಉದ್ದೇಶಿಸಿದ್ದರೆ, ಇದು ಅಪೇಕ್ಷಣೀಯವಾದ ಕ್ರಮವಾಗುತ್ತದೆಂದು ಪರಿಗಣಿಸಲಾಗಿತ್ತು. ಇನ್ನೊಂದು ಕಡೆ ಗಿರಣಿಯ ಅಧಿಕಾರಿಗಳು ಒಳಗೆ ಹೋಗಲು ಸಾಧ್ಯವಾಗದಂತೆ ಉದ್ಯೋಗಿಗಳು ಹೊರಗಿನಿಂದ ಬೀಗಮುದ್ರೆ ಹಾಕುವುದಕ್ಕೆ ನಾವು ನಿಷೇಧವನ್ನೇನೂ ವಿಧಿಸಿಲ್ಲ. ಪಿಕೆಟಿಂಗ್ ಕೂಡಾ ಪವಿತ್ರವಾದ ಹಕ್ಕಿನಂಥ ವಸ್ತು ಎಂದು ಕೆಲವು ವಲಯಗಳಲ್ಲಿ ಪರಿಗಣಿಸಲಾಗಿದೆ. ಹೀಗಾಗಿ ಪೂರ್ಣವಾದ ಹಾಗೂ ಎಚ್ಚರಿಕೆಯಿಂದ ಕೂಡಿದ ಪರಿಶೀಲನೆಯ ತರುವಾಯ ಗಿರಣಿಯ ಬಾಗಿಲ ಬಳಿ ಪಿಕೆಟಿಂಗ್ ಮಾಡುವುದನ್ನು ನಿಷೇಧಿಸುವ ೧೫ನೆಯ ಖಂಡದಲ್ಲಿನ ಮಾತುಗಳನ್ನು ಕೈಬಿಡುವುದಕ್ಕಾಗಿ ಒಂದು ತಿದ್ದುಪಡಿಯನ್ನು ತರಬೇಕೆಂದು ನಾವು ತೀರ್ಮಾನಿಸಿದ್ದೇವೆ."

ಇದು ಅವರು ತೆಗೆದುಕೊಂಡ ನಿಲುವಾಗಿತ್ತು. ಮಾನ್ಯರೆ, ಮುಷ್ಕರ ಹೂಡಲು ಅವಕಾಶ ಕೊಟ್ಟರೆ, ಸಂಧಾನ ವ್ಯವಹರಣೆ ಹೆಚ್ಚು ಸಂಭವನೀಯವಾಗುತ್ತದೆಂದು ನಾನು ಗಂಭೀರವಾಗಿ ವಾದಿಸುತ್ತೇನೆ. ಇದು ಇನ್ನೂ ಪರಿಗಣಿಸದೆ ಇರುವಂಥ ಒಂದು ಮುಖ ಎಂದು ನಾನು ಭಾವಿಸಿದ್ದೇನೆ. ತನ್ನ ಶಕ್ತಿಗಳನ್ನು ಸಂಚಾಲನೆಗೊಳಿಸಲು ತನಗೆ ೪ ತಿಂಗಳು ಮತ್ತು ೨೫ ದಿವಸಗಳ ಕಾಲಾವಕಾಶ ಇದೆ ಎಂಬುದು ಗೊತ್ತಿರುವಾಗ ೪ ತಿಂಗಳು ಮತ್ತು ೨೫ ದಿವಸಗಳ ಒಳಗಾಗಿ ಯಾವ ಕಾರ್ಮಿಕನೂ ತಮ್ಮ ಶಕ್ತಿಗಳನ್ನು ಸಂಚಾಲನೆಗೊಳಿಸುವಂತಿಲ್ಲ. ಯಾವನೇ ಕಾರ್ಮಿಕನೂ ಮುಷ್ಕರದ ಸಿದ್ಧತೆಗಳನ್ನು ನಡೆಸುವಂತಿಲ್ಲ ಎಂಬುದನ್ನೂ ತಿಳಿದಿರುವಾಗ ಹಾಗೂ ಮುಷ್ಕರ ಹೂಡಬಹುದಾಗಿರುವ ಅವಧಿಯನ್ನು ಎರಡು ತಿಂಗಳಿಗೆ ಮಾತ್ರವೇ ಸೀಮಿತಗೊಳಿಸಲಾಗಿದೆ ಎಂಬುದನ್ನು ಅರಿತಿರುವಾಗ, ಉದ್ಯೋಗದಾತ ಏಕಾಂಗಿ ಸಂಧಾನ ವ್ಯವಹರಣೆಗಳನ್ನು ನಡೆಸಲು ಏಕೆ ಸಿದ್ಧನಾಗಬೇಕು? ಈ ಬಗೆಯ ಪರಿಸ್ಥಿತಿಗಳಲ್ಲಿ ಒಪ್ಪಂದವನ್ನೇರ್ಪಡಿಸಿ ಕೊಳ್ಳುವುದಕ್ಕೆ ಉದ್ಯೋಗದಾತನಿಗೆ ಯಾವುದೇ ಉತ್ಸಾಹವೂ ಇರುವುದಿಲ್ಲ, ಒತ್ತಡವೂ ಇರುವುದಿಲ್ಲ, ಅಭೀಪ್ಸೆಯೂ ಇರುವುದಿಲ್ಲ. ಈ ಸಂಧಾನಯಂತ್ರ ಫಲದಾಯಕವಾಗಬೇಕು, ಎರಡೂ ಪಕ್ಷಗಳಿಗೆ ಒಪ್ಪಿಗೆಯಾಗಬಹುದಂಥ ನಿರ್ದಿಷ್ಟವಾದ ಯಾವುದಾದರೂ ಒಂದು ಬಗೆಯ ಹಿತದಲ್ಲಿ ಪರ್ಯವಸಾನ

ಗೊಳ್ಳಬೇಕು ಎಂಬುದು ಈ ಮಸೂದೆಯನ್ನು ಮಂಡಿಸಿದವರ ಅಭಿಪ್ರಾಯವಾಗಿದ್ದಲ್ಲಿ, ಅವರ ಗುರಿಯಾಗಿದ್ದಲ್ಲಿ, ಅವರು ಅಳವಡಿಸಿಕೊಳ್ಳಬಹುದಾಗಿರುವ ಸೂಕ್ತವಾದ ಕ್ರಮ ವಿಧಾನವೆಂದರೆ ಸರ್ ರಾಬರ್ಟ್ ಬೆಲ್ ಅವರು ಅಳವಡಿಸಿಕೊಂಡಂಥ ಕ್ರಮ ವಿಧಾನವೇ. ಅಂದರೆ, ಮುಷ್ಕರ ನಡೆಸಲು ಅನುಮತಿಯನ್ನು ಕೊಡುವುದೇ ಸೂಕ್ತವಾದ ಕ್ರಮ ವಿಧಾನವಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಸದ್ಯದ ಕಾಯ್ದೆಯ ಉಪಬಂಧಗಳನ್ನು ಮುಂದುವರಿಸಿಕೊಂಡು ಬರುವುದೇ ಸೂಕ್ತವಾದ ಕ್ರಮ ವಿಧಾನವಾಗುತ್ತದೆ. ಆದರೆ ಮಾನ್ಯರೆ, ಈ ಸರ್ಕಾರವು ಅಧಿಕಾರಶಾಹಿಯು ತೆಗೆದುಕೊಂಡ ನಿಲುವನ್ನೂ ತೆಗೆದುಕೊಳ್ಳುತ್ತಿಲ್ಲ. ಅದು ಯಾವುದು ಎಂದರೆ ಮುಷ್ಕರವನ್ನು ತಡೆಗಟ್ಟಬಾರದು ಎಂಬುದು. ಆದರೆ, ಕಾರ್ಮಿಕರ ಮತಗಳಿಂದ ಆಯ್ಕೆಗೊಂಡಿರುವುದಾಗಿ ಹೇಳಿಕೊಳ್ಳುವಂಥ ಈ ಜನಪ್ರಿಯ ಸರ್ಕಾರ ಯಾವಾಗಲೂ ಅಧಿಕಾರ ಷಾಹಿಯ ಪ್ರತೀಕವೆಂದು ಭಾವಿಸಲಾಗಿರುವಂಥ ವ್ಯಕ್ತಿ, ಕಾರ್ಮಿಕರ ವಿಷಯದಲ್ಲಿ ಆಸಕ್ತಿಯನ್ನಾಗಲೀ, ನಾಡಿನ ಕಲ್ಯಾಣದ ವಿಷಯದಲ್ಲಿ ಆಸಕ್ತಿಯನ್ನಾಗಲೀ ಹೊಂದಿಲ್ಲದೆ ಇರುವಂಥ ಅಧಿಕಾರಷಾಹಿ ತೆಗೆದುಕೊಂಡಂಥ ನಿಲುವಿಗೆ ಅಂಟಿಕೊಳ್ಳದಿರುವಂಥ ಈ ಜನಪ್ರಿಯ ಸರ್ಕಾರ ತದ್ವಿರುದ್ಧವಾದ ನಿಲುವನ್ನು ತಳೆಯುತ್ತಿದೆ. ಇದನ್ನು ಗಣತಂತ್ರ ವ್ಯವಸ್ಥೆ ಎನ್ನುವುದಾದರೆ– ಹಾಗೆಂದು ನಾನಂತೂ ಹೇಳುವುದಿಲ್ಲ– ದುಡಿಯುವ ವರ್ಗವನ್ನು ಗುಲಾಮತನಕ್ಕೆ ಒಳಪಡಿಸುವಂಥ ಗಣತಂತ್ರ ವ್ಯವಸ್ಥೆ, ಶಿಕ್ಷಣದಿಂದ ವಂಚಿತವಾಗಿರುವಂಥ, ಬಾಳಿನ ಸಾಧನಗಳಿಂದ ವಂಚಿತವಾಗಿರುವಂಥ, ಯಾವುದೇ ಸಂಘಟನಾ ಶಕ್ತಿಯಿಂದ ವಂಚಿತವಾಗಿರುವಂಥ, ಬುದ್ಧಿಚಾತುರ್ಯಗಳಿಂದ ವಂಚಿತವಾಗಿರುವಂಥ, ವರ್ಗವನ್ನು ಗುಲಾಮತನಕ್ಕೆ ಒಳಪಡಿಸುವಂಥ ಗಣತಂತ್ರ ವ್ಯವಸ್ಥೆ ನಿಜಕ್ಕೂ ಗಣತಂತ್ರ ವ್ಯವಸ್ಥೆಯಾಗಿರದೆ, ಗಣತಂತ್ರ ವ್ಯವಸ್ಥೆಯ ಅಣಕ ಮಾತ್ರವಾಗಿರುತ್ತದೆಂದು ಹೇಳಬಯಸುತ್ತೇನೆ. ಈ ಮಸೂದೆಯ ಮುಖ್ಯ ಉಪಬಂಧಗಳ ಬಗ್ಗೆ ಇಷ್ಟು ಮಾತುಗಳು ಸಾಕು.

ಮಾನ್ಯರೆ, ಈ ಮಸೂದೆಯ ಇನ್ನೂ ಕೆಲವೊಂದು ಉಪಬಂಧಗಳಿವೆ. ಅವುಗಳತ್ತ ನಾನೀಗ ಗಮನ ಹರಿಸಬಯಸುತ್ತೇನೆ. ೪ರಿಂದ ೨೦ನೆಯವರೆಗಿನ ಖಂಡಗಳಲ್ಲಿ ಈ ಉಪಬಂಧಗಳು ಕಾಣದೊರೆಯುತ್ತವೆ. ಈ ಖಂಡಗಳನ್ನು ನೋಡಿದರೆ ಅವು ನಾಲ್ಕು ವಿವಿಧ ವಿಷಯಗಳಿಗೆ ಸಂಬಂಧಪಟ್ಟಿರುವಂತೆ ತೋರುತ್ತದೆ. ಅವು ಸಂಘಗಳ ಬಗೆಗಿನ ವಿವಿಧ ಖಂಡಗಳಿಗೆ ಸಂಬಂಧಿಸಿವೆ– ಅರ್ಹತೆಯನ್ನು ಹೊಂದಿರುವಂಥ ಸಂಘಗಳು, ನೋಂದಾಯಿಸಲಾಗಿರುವಂಥ ಸಂಘಗಳು, ಪ್ರಾತಿನಿಧಿಕವಾಗಿರುವಂಥ ಸಂಘಗಳು ಮೊದಲಾದವುಗಳಿಗೆ ಅವು ಸಂಬಂಧಿಸಿವೆ. ಮಾನ್ಯರೆ, ಈ ಮಸೂದೆಯ ಹಿಂದಿನ ಕರಡನ್ನು ಓದುವ ಅವಕಾಶ ನನಗೆ ದೊರೆತಿತ್ತು. ಆ ಹಿಂದಿನ ಕರಡಿನ ನುಡಿಗಟ್ಟುಗಳೇ ಬೇರೆಯಾಗಿದ್ದುವು. ಸಮತಲ ಸಂಘಗಳು, ನೇರ ಆಧಾರದ ಸಂಘಗಳು, ಕರ್ಣ– ಸಂಘಗಳು, ಲಂಬ ಸಂಘಗಳು ಇವೇ ಮೊದಲಾದ ಪದಪುಂಜಗಳು ಅದರಲ್ಲಿದ್ದುವು. ಆ ಪದಪುಂಜಗಳನ್ನು ಕೈಬಿಡಲಾಗಿದೆ ಎಂಬುದು ನನಗೆ ಸಂತೋಷವನ್ನುಂಟುಮಾಡಿದೆ. ಗಣಿತ ಶಾಸ್ತ್ರದಲ್ಲಿ ನಾನೆಂದೂ ಬಲವಾಗಿರಲಿಲ್ಲ, ರೇಖಾ ಗಣಿತದ ಬಗ್ಗೆಯಂತೂ ನನ್ನ ಅರಿವು ಅತ್ಯಲ್ಪವೇ ಇತ್ತು. ಈ ಪದಪುಂಜಗಳನ್ನು ಬದಲಾಯಿಸುವ ಮೂಲಕ ನಮ್ಮ ಮೇಲೆ ತೋರಿಸುವ ಅಲ್ಪ ಕರುಣೆಗಾಗಿ ಈ ಮಸೂದೆಯನ್ನು ಮಂಡಿಸಿರುವವರಿಗೆ ಹಾಗೂ ಈ ಮಸೂದೆಯನ್ನು ಸಿದ್ಧಪಡಿಸಿರುವಂಥ ವ್ಯಕ್ತಿಗಳಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಖಂಡಗಳು ಒಳಗೊಂಡಿರುವ ಇನ್ನೊಂದು ಸಂಗತಿ ಎಂದರೆ ವಿವಿಧ ವರ್ಗದ ಸಂಘಗಳ ನೋಂದಣಿಗೆ ಸಂಬಂಧಿಸಿದ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಕ್ರಮ ವಿಧಾನಗಳು. ಮೂರನೆಯದಾಗಿ

ಪ್ರಾತಿನಿಧಿಕ ಸಂಘಗಳು ಎಂಬುದಾಗಿ ಘೋಷಿತವಾಗಬೇಕಾದರೆ ಈ ಮಾನ್ಯತೆ ಪಡೆದ ಸಂಘಗಳು ಅಥವಾ ನೋಂದಾಯಿತ ಸಂಘಗಳು ಪಾಲಿಸಬೇಕಾದ ನಿಬಂಧನೆಗಳ ಮತ್ತು ಷರತ್ತುಗಳು ಹಾಗೂ ಕ್ರಮ ವಿಧಾನಗಳನ್ನು ಹೇಳಲಾಗಿದೆ. ನಾಲ್ಕನೆಯದಾಗಿ, ಸಂಘವೊಂದರ ನೋಂದಣಿಗೆ ಸಂಬಂಧಿಸಿದ ಷರತ್ತುಗಳು ಹಾಗೂ ಪ್ರಾತಿನಿಧಿಕ ಸಂಘವೆಂಬ ಘೋಷಣೆಯನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದ ಷರತ್ತುಗಳು ಅಲ್ಲಿವೆ. ಮಾನ್ಯರೆ, ಈ ಮಸೂದೆಯ ಮುಖ್ಯ ಉಪಬಂಧಗಳಿಗೂ ಈ ಖಂಡಗಳಿಗೂ ಯಾವ ವ್ಯಾವಹಾರಿಕ ಸಂಬಂಧವಿದೆ ಎಂಬುದನ್ನು ನಾನು ಅರ್ಥ ಮಾಡಿಕೊಳ್ಳಲಾರದೆ ಹೋಗಿದ್ದೇನೆ. ಈ ಮಸೂದೆಯ ಮುಖ್ಯ ಉಪಬಂಧಗಳೆಂದರೆ ಮೊದಲನೆಯದಾಗಿ ಕಡ್ಡಯವಾದ ಸಂಧಾನ ವ್ಯವಹರಣೆಗಳು ಹಾಗೂ ಎರಡನೆಯದಾಗಿ ಸಂಧಾನ ವ್ಯವಹರಣೆಗಳು ನಡೆಯುತ್ತಿರುವ ಅವಧಿಯಲ್ಲಿ ನಡೆಸಲಾಗುವ ಮುಷ್ಕರಗಳಿಗೆ ವಿಧಿಸಲಾಗುವ ದಂಡನೆ. ಈ ಮಸೂದೆಯ ಮುಖ್ಯ ಉದ್ದೇಶಗಳಾಗಿರುವ ಈ ಎರಡು ವಿಷಯಗಳಿಗೆ ಸಂಬಂಧಿಸುವಂತೆ ವ್ಯವಹರಿಸುವಲ್ಲಿ ಈ ಖಂಡಗಳಿಗೂ ಇತರ ಖಂಡಗಳಿಗೂ ಯಾವುದೇ ಸಾವಯವ ಸಂಬಂಧ ಇರುವುದು ನನಗಂತೂ ಕಾಣಿಸುತ್ತಿಲ್ಲ. ಮಸೂದೆಯ ಶೀರ್ಷಿಕೆಗೆ ಸಂಬಂಧಿಸಿದಂತೆ ಹೇಳುವುದಾದರೆ ಅದು ಮಸೂದೆಯ ಉದ್ದೇಶವನ್ನು ಹೊರಗೆಡಹುವುದಕ್ಕೆ ಬದಲಾಗಿ ಅದನ್ನು ಬಚ್ಚಿಡಲು ಪ್ರಯತ್ನಿಸುತ್ತಿರುವಂತೆ ನನಗೆ ತೋರುತ್ತಿದೆ. ಈ ಮಸೂದೆಯ ಶೀರ್ಷಿಕೆ ಹೀಗೆಂದು ಹೇಳುತ್ತದೆ:

> "ಸಂಧಾನ ಮತ್ತು ಮಧ್ಯಸ್ಥಿಕೆಗಳ ಮೂಲಕ ಕೈಗಾರಿಕೆ ವಿವಾದಗಳಿಗೆ ಶಾಂತಿಯುತವಾದ ಮತ್ತು ಸೌಹಾರ್ದಯುತವಾದ ಒಪ್ಪಂದವನ್ನು ಸಂವರ್ಧಿಸುವ ಸಲುವಾಗಿ ಹಾಗೂ ಇತರ ಕೆಲವೊಂದು ನಿರ್ದಿಷ್ಟ ಉದ್ದೇಶಗಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ ರೂಪಿಸಿದ ಮಸೂದೆ."

ಮಾನ್ಯರೇ, ಆ ಇತರ ಉದ್ದೇಶಗಳು ಯಾವುವು? ಅವುಗಳನ್ನು ಮಸೂದೆಯ ಶೀರ್ಷಿಕೆಯಲ್ಲಿ ಏಕಾಗಿ ನಿರ್ದಿಷ್ಟಪಡಿಸಿಲ್ಲ? ಅವು ನಾವು ನಾಚಿಕೆಪಟ್ಟುಕೊಳ್ಳಬೇಕಾಗಿರುವಂಥ ಸಂಗತಿಗಳೇನು? ನನಗಂತೂ ಗೊತ್ತಿಲ್ಲ. ಮಸೂದೆಯ ಎರಡು ಭಾಗಗಳ ನಡುವೆ ಯಾವುದಾದರೂ ಒಂದು ವ್ಯಾವಹಾರಿಕ ಸಂಬಂಧವೂ ಇರು ವಂತಿಲ್ಲ; ಅಂಥದೇನಾದರೂ ಇದ್ದರೆ, ಅದನ್ನು ಬಹಿರಂಗಗೊಳಿಸಬೇಕಾಗಿತ್ತು. ಅಂಥ ಸಾವಯವ ಸಂಬಂಧವೇನೂ ಇರದಿದ್ದರೆ, ಈ ಪ್ರಕರಣಗಳನ್ನು ಮಸೂದೆಯಿಂದ ತೆಗೆದುಹಾಕಬೇಕು ಎಂಬುದೇ ತಾರ್ಕಿಕವಾದ ತೀರ್ಮಾನವಾಗುತ್ತದೆ. ಮಾನ್ಯರೇ, ಇವೆರಡರ ನಡುವೆ ಸಾವಯವ ಸಂಬಂಧವಿದೆ ಎಂಬುದನ್ನು ನನ್ನ ಶೋಧನೆ ತೋರಿಸಿಕೊಟ್ಟಿದೆ. ಆ ಸಾವಯವ ಸಂಬಂಧ ಎಂಥದು ಎಂಬುದು ೭೫ನೆಯ ಖಂಡವನ್ನು ನೋಡಿದರೆ ತಾನಾಗಿಯೇ ಗೊತ್ತಾಗುತ್ತದೆ. ಮಸೂದೆಯ ೭೫ನೆಯ ಖಂಡ ಹೀಗೆಂದು ಹೇಳುತ್ತದೆ:

> "ಈ ಕಾಯ್ದೆಯ ಮೇರೆಗೆ, ಉದ್ಯೋಗಿಗಳ ಪ್ರತಿನಿಧಿಯ ಮೂಲಕವಲ್ಲದೆ, ಯಾವನೇ ಉದ್ಯೋಗಿಗೆ ಯಾವುದೇ ನಡೆವಳಿಗಳಲ್ಲಿ ಭಾವಹಿಸಲು ಅಧಿಕಾರವಿತರಕ್ಕದ್ದಲ್ಲ."

ಮಾನ್ಯರೆ, ಇದು ಅತ್ಯಂತ ಮೂಲಭೂತವಾದ ಖಂಡ ಹಾಗೂ ಭಾರತದಲ್ಲಿನ ಕಾರ್ಮಿಕ ಸಂಘಗಳ ಚಳವಳಿಗೆ ಅತ್ಯಂತ ವಿನಾಶಕಾರಿಯಾಗಿರುವಂಥ ಖಂಡ ಎಂದು ನಾನು ಹೇಳಬಯಸುತ್ತೇನೆ. ಸಂಧಾನ

ವ್ಯವಹರಣೆಗಳಲ್ಲಿ ಕಾರ್ಮಿಕರನ್ನು ಪ್ರತಿನಿಧಿಸಲು ಅರ್ಹನಾಗಿರುವ ಕಾರ್ಮಿಕ ಪ್ರತಿನಿಧಿ ಯಾರು? ಅರ್ಹತೆಗಳು ಏನೇ ಆಗಿರಲಿ, ಉದ್ಯೋಗಿಗಳ ಪ್ರತಿನಿಧಿ ಎಂಬುದಾಗಿ ಈ ಮಸೂದೆಯಲ್ಲಿ ಕೊಡಲಾಗಿರುವ ವಿವರಣೆಯ ಪರಿಧಿಯ ಒಳಗೆ ಬರದ ಹೊರತು, ಯಾರಿಗೂ ಕೈಗಾರಿಕೆ ವಿವಾದದ ಒಪ್ಪಂದದ ಬಗೆಗಿನ ಮಾತುಕತೆಗಳಲ್ಲಿ ಭಾಗವಹಿಸುವ ವಿಚಾರಣೀಯ ಹಕ್ಕು ಇರುವುದಿಲ್ಲ ಹಾಗೂ ಕಾರ್ಮಿಕರ ಪ್ರತಿನಿಧಿ ಯಾರೆಂಬುದನ್ನು ವಿವರಿಸುವ ಈ ಉದ್ದೇಶಕ್ಕಾಗಿಯೇ ನನ್ನ ಸನ್ಮಾನ್ಯ ಗೆಳೆಯರು ಈ ಮಸೂದೆಯಲ್ಲಿನ ೪ರಿಂದ ೨೦ರವರೆಗಿನ ಖಂಡಗಳನ್ನು ಸೇರಿಸಿದ್ದಾರೆ. ಅವೆಲ್ಲ ಈ ಪ್ರಕರಣವನ್ನು ಆಧರಿಸಿವೆ. ಹೀಗಾಗಿ, ಇಲ್ಲಿನ ಪ್ರಮುಖ ಪ್ರಶ್ನೆ ಎಂದರೆ– ಈ ಮಸೂದೆಯ ಮೇರೆಗೆ, ಯಾರು ಉದ್ಯೋಗಿಗಳ ಪ್ರತಿನಿಧಿಯಾಗಿರುತ್ತಾನೆ?

ಮಾನ್ಯರೆ, ಈ ಮಸೂದೆಯ ಮೇರೆಗೆ ಕಾರ್ಮಿಕರನ್ನು ಪ್ರತಿನಿಧಿಸುವ ಹಕ್ಕು ಇರುವುದು ಎರಡು ವರ್ಗಗಳಿಗೆ ಸೇರಿದ ಸಂಘಗಳಿಗೆ. ಮೊದಲನೆಯದು ಶೇ. ೨೦ಕ್ಕಿಂತ ಕಡಿಮೆ ಇಲ್ಲದಷ್ಟು ಕಾರ್ಮಿಕರನ್ನು ಸದಸ್ಯರಾಗಿ ಹೊಂದಿರುವಂಥ ಹಾಗೂ ಉದ್ಯೋಗದಾತನಿಂದ ಮಾನ್ಯ ಮಾಡಲಾಗಿರುವಂಥ ಸಂಘ. ಎರಡನೆಯದಾಗಿ, ಶೇ. ೫೦ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವಂಥ ಸಂಘ ಸಂಧಾನ ಪ್ರಕ್ರಿಯೆಗಳಲ್ಲಿ ಕಾರ್ಮಿಕರನ್ನು ಪ್ರತಿನಿಧಿಸಬಹುದು. ಹೀಗಾಗಿ, ಈ ಎರಡು ಪ್ರವರ್ಗಗಳಿಗೆ ಸೇರಿದ ಸಂಘಗಳಿಗೆ ಮಾತ್ರವೇ ಕಾರ್ಮಿಕರನ್ನು ಪ್ರತಿನಿಧಿಸುವ ಹಕ್ಕು ಇರುತ್ತದೆ. ಮಾನ್ಯರೆ, ಸಚಿವರಾಗಿರುವ ನನ್ನ ಗೌರವಾನ್ವಿತ ಸ್ನೇಹಿತರು ಅವೆರಡನ್ನೂ "ಪ್ರಾತಿನಿಧಿಕ ಸಂಘಗಳು" ಎಂದು ಕರೆಯಬಯಸುತ್ತಾರೆ. ಅವರ ಈ ಪರಿಭಾಷೆಯನ್ನು ನಾನು ಒಪ್ಪುವುದಿಲ್ಲ. ವಾಸ್ತವತೆಯನ್ನು ನಾವು ವಸ್ತುನಿಷ್ಠವಾಗಿ ಒಪ್ಪಿಕೊಳ್ಳಬೇಕು ಎಂದು ನಾನು ಭಾವಿಸುತ್ತೇನೆ. ನಾನು ಹೀಗೆ ಹೇಳುವಾಗ ನಾನು ಮಂಡಿಸಬಯಸುವ ವಾದ ಇದು: ಈ ಮಸೂದೆಯ ಮೇರೆಗೆ, ಎರಡು ಬಗೆಯ ಪ್ರಾತಿನಿಧಿಕ ಸಂಘಗಳಿವೆ ಎಂಬುದರಲ್ಲಿ ಅನುಮಾನವೇನೂ ಇಲ್ಲ: ಅದರಲ್ಲಿ ನಾವು ಗಮನಿಸಬೇಕಾಗಿರುವ ಮುಖ್ಯ ಅಂಶವೆಂದರೆ ಇವುಗಳಲ್ಲಿ ಒಂದು ಗುಲಾಮ ಸಂಘವಾಗಿದ್ದರೆ, ಇನ್ನೊಂದು ಮುಕ್ತ ಸಂಘವಾಗಿದೆ. ಮಾನ್ಯರೆ, ಅಹವಾಲನ್ನು ಹೇಳಿಕೊಳ್ಳುವ ಹಕ್ಕನ್ನು ಹೊಂದಿರುವಂಥ, ಕಾನೂನುಬದ್ಧವಾದ ಅಸ್ತಿತ್ವವನ್ನು ಹೊಂದಿರುವಂಥ, ಪ್ರತಿನಿಧಿಸುವ ಹಕ್ಕನ್ನು ಹೊಂದಿರುವಂಥ ಮಾತನಾಡುವ ಹಕ್ಕನ್ನು ಹೊಂದಿರುವ ಒಂದು ಸಂಘ ಇದೆಲ್ಲಕ್ಕೂ ಉದ್ಯೋಗದಾತನ ಪೂರ್ವಾನುಮತಿಯನ್ನು ಪಡೆದುಕೊಂಡಿರಬೇಕು ಎನ್ನುವುದಾದಲ್ಲಿ ಅಂಥ ಸಂಘ ಗುಲಾಮ ಸಂಘವಾಗುತ್ತದೆಯೇ ಹೊರತು, ಮುಕ್ತ ವ್ಯಕ್ತಿಗಳ ಸಂಘವಾಗಿರುವುದಿಲ್ಲ ಎಂದು ನಾನು ಹೇಳಿದಲ್ಲಿ ಅದು ಅತಿಶಯೋಕ್ತಿಯೂ ಆಗುವುದಿಲ್ಲ. ಭಾಷೆಯ ಬಗೆಗಿನ ಅತ್ಯಾಚಾರವೂ ಆಗುವುದಿಲ್ಲ. ಅವರು "ಅನುಮೋದನೆ" ಎಂಬ ಮಾತನ್ನು ಬಳಸಿದ್ದರೆ ಚೆನ್ನಾಗಿರುತ್ತಿತ್ತು. "ಮಾನ್ಯತೆಯನ್ನು ಪಡೆದ" ಎಂಬ ಶಬ್ದ ಅತ್ಯಂತ ಅಸಮರ್ಪಕವಾಗಿದೆ. ಸೂಕ್ತವಾದ ವಿವರಣೆ ಹೀಗಿರಬೇಕಿತ್ತು! "ಉದ್ಯೋಗದಾತನಿಂದ ಅನುಮೋದಿತವಾದ ಸಂಘ" ಹಾಗೆ ಮಾಡಿದ್ದಲ್ಲಿ ನಾವು ಯಾವುದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಕೇಳಲಾಗುತ್ತಿದೆ ಎಂಬುದನ್ನು ಸರಳವಾದ ಶಬ್ದಗಳಲ್ಲಿ ಕಂಡುಕೊಳ್ಳಬಹುದಾಗಿತ್ತು.

ಮಾನ್ಯರೆ, ಸಂಘವೊಂದು ಪ್ರಾತಿನಿಧಿಕ ಸ್ವರೂಪವನ್ನು ಪಡೆದುಕೊಳ್ಳುವುದಕ್ಕೆ ಈ ಮಸೂದೆಯ ಮೇರೆಗೆ, ನೋಂದಣಿಯನ್ನು ಏಕೆ ಪೂರ್ವಭಾವಿ ಷರತ್ತನ್ನಾಗಿಸಲಾಗಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನನ್ನ ಗೌರವಾನ್ವಿತ ಗೆಳೆಯರು ಇದನ್ನು ನನಗೆ ವಿವರಿಸಿ ಹೇಳಬೇಕು. ಈ ಮಸೂದೆಯಲ್ಲಿನ ಈ ಉಪಬಂಧಗಳನ್ನು ಅರ್ಥ ಮಾಡಿಕೊಳ್ಳುವುದು ನನಗೆ ತುಂಬ ಕಷ್ಟವಾಗಿದೆ. ಮಾನ್ಯರೆ, ಈಗ ಇರುವಂತೆ

ಅದು ಹೀಗಿದೆ: ೧೯೨೬ರಲ್ಲಿ ಭಾರತ ಸರ್ಕಾರ ಅಂಗೀಕರಿಸುವ ಕಾರ್ಮಿಕ ಸಂಘಗಳ ಕಾಯ್ದೆಯೊಂದಿದೆ. ಅದನ್ನು ಕಾರ್ಮಿಕ ಸಂಘಗಳ ಕಾಯ್ದೆ ಎಂದು ಕರೆಯಲಾಗಿದೆ. ಈ ಮಸೂದೆ ಆ ಕಾಯ್ದೆಯನ್ನು ನಿರಸನಗೊಳಿಸುವುದಿಲ್ಲ. ವಾಸ್ತವವಾಗಿ, ಕಾಯ್ದೆ ಉಳಿದುಕೊಂಡೇ ಇದೆ. ಮೇಲಾಗಿ ಯಾವುದೇ ಸಂಘವನ್ನು ನೋಂದಾಯಿಸುವುದಕ್ಕೆ ಮೊದಲು, ಈ ಮಸೂದೆಯ ಉಪಬಂಧಗಳ ಮೇರೆಗೆ, ಆ ಸಂಘ ಆ ಕಾಯ್ದೆಯ ಮೇರೆಗೆ ನೋಂದಣಿಗೊಂಡಿರಬೇಕೆಂದು ಈ ಮಸೂದೆ ಒತ್ತಾಯಿಸುತ್ತದೆ. ಸಂಘದ ಬಗೆಗೆ ಈ ಮಸೂದೆಯಲ್ಲಿ ಕೊಡಲಾಗಿರುವ ವಿವರಣೆಯಿಂದ ಅದು ಸ್ಪಷ್ಟವಾಗುತ್ತದೆ. ಏಕೆ ಇದನ್ನು ಮಾಡಿದ್ದಾರೆ ಎಂಬುದನ್ನು ನಾನು ಸದ್ಯದಲ್ಲಿಯೇ ಈ ಸದನಕ್ಕೆ ತಿಳಿಸುತ್ತೇನೆ. ಅದರ ಹಿಂದೆ ಯಾವುದೋ ಒಂದು ಸಂಚು ಇರುವಂತೆ ನನಗೆ ತೋರುತ್ತದೆ. ಹೀಗಾಗಿ ಸ್ಥಿತಿಗತಿ ಹೀಗಾಗುತ್ತದೆ. ಸಂಘ ಇಮ್ಮಡಿ ನೋಂದಣಿಯನ್ನು ಹೊಂದಿರಬೇಕಾಗುತ್ತದೆ. ೧೯೨೬ರ ಕಾಯ್ದೆಯ ಮೇರೆಗೆ ಒಂದು ನೋಂದಣಿ ಮತ್ತು ಹೊಸ ಕಾಯ್ದೆಯ ಮೇರೆಗೆ ಇನ್ನೊಂದು ನೋಂದಣಿ. ೧೯೨೬ರ ಕಾಯ್ದೆಯ ಮೇರೆಗೆ ನೋಂದಣಿಗೊಂಡ ಸಂಘಕ್ಕೆ, ಅಂಥ ನೋಂದಣಿಯಿಂದ ಲಭಿಸಲಿರುವ ಅನುಕೂಲಗಳು ಯಾವುವು ಎಂಬುದರತ್ತ ಗಮನ ಸೆಳೆಯುವುದು ಉತ್ತಮವೆಂದು ನನಗೆ ತೋರುತ್ತದೆ. ಹಾಗೆ ಮಾಡಿದರೆ ಈ ಮಸೂದೆ ಹೆಚ್ಚಿನ ಯಾವ ಅನುಕೂಲವನ್ನು ಒದಗಿಸಿಕೊಡುತ್ತದೆ ಅಥವಾ ಈ ಮಸೂದೆ ಏನನ್ನಾದರೂ ಕಸಿದುಕೊಳ್ಳುತ್ತದೆಯೇ ಎಂಬುದು ನಮಗೆ ಗೊತ್ತಾಗಬಹುದು. ೧೯೨೬ರ ಕಾಯ್ದೆಯ ಮೇರೆಗೆ ಸಂಘವನ್ನು ನೋಂದಾಯಿಸುವುದರಿಂದ ಆಗುವ ಪರಿಣಾಮದ ಕಡೆಗೆ ನನ್ನ ಮನಸ್ಸನ್ನು ಹರಿಸುವುದಾದರೆ ಅದರಿಂದ ದೊರೆಯುವ ಫಲಿತಾಂಶಗಳು ಇವು. ಮೊಕದ್ದಮೆಯನ್ನು ಹೂಡುವ ಮತ್ತು ಮೊಕದ್ದಮೆಗೆ ಒಳಪಡುವ ಹಕ್ಕನ್ನುಳ್ಳ ನಿಗಮವಾಗುತ್ತದೆ ಆ ಸಂಘ. ನಿಗಮವಾಗಿ ಅದಕ್ಕೆ ತನ್ನ ಸದಸ್ಯರನ್ನು ಪ್ರತಿನಿಧಿಸುವ ಹಕ್ಕು ಖಂಡಿತವಾಗಿಯೂ ಇರುತ್ತದೆ. ಇಲ್ಲವಾದಲ್ಲಿ, ನಿಗಮ ಎಂಬ ಮಾತಿಗೆ ಅರ್ಥವೇ ಇರುವುದಿಲ್ಲ. ಎರಡನೆಯದಾಗಿ, ಈ ಸದನ ಮನಗಾಣಲಿರುವಂತೆ, ೧೯೩೫ರ ಭಾರತ ಸರ್ಕಾರ ಕಾಯ್ದೆಯ ಮೇರೆಗೆ ನೋಂದಣಿಗೊಂಡಂಥ ಸಂಘಕ್ಕೆ ರಾಜಕೀಯ ಪ್ರಾತಿನಿಧ್ಯದ ಹಕ್ಕು ದೊರೆಯುತ್ತದೆ. ಅಂದರೆ, ೧೯೨೬ರ ಕಾಯ್ದೆಯ ಮೇರೆಗೆ ನೋಂದಣಿಗೊಂಡಂಥ ಸಂಘ ಈ ಸದನಕ್ಕೆ ಸದಸ್ಯರನ್ನು ಆರಿಸಿ ಕಳಿಸಿಕೊಡಬಹುದು. ಈ ಸಂಗತಿಗೆ ಸಾಕ್ಷಿಯಾಗಿರುವಂಥ ಸನ್ಮಾನ್ಯ ಸದಸ್ಯರು ಈ ಸದನದಲ್ಲಿದ್ದಾರೆ. ಅಂತೆಯೇ ೧೯೨೬ರ ಕಾಯ್ದೆಯ ಮೇರೆಗೆ ನೋಂದಣಿಗೊಂಡಂಥ ಸಂಘಗಳ ಸದಸ್ಯರು ಮುಂಬಯಿಯ ಪೌರನಿಗಮಕ್ಕೆ ತಮ್ಮ ಪ್ರತಿನಿಧಿಗಳನ್ನು ಆಯ್ದು ಕಳಿಸುವ ಹಕ್ಕನ್ನೂ ಹೊಂದಿರುತ್ತಾರೆ. ಮಾನ್ಯರೆ, ಈಗ ಏಳುವ ಪ್ರಶ್ನೆ ಇದು. ೧೯೨೬ರ ಕಾಯ್ದೆಯ ಮೇರೆಗೆ ಮಾಡಿದ ನೋಂದಣಿ ಸಂಘಗಳಿಗೆ ಪ್ರಾತಿನಿಧ್ಯದ ಹಕ್ಕನ್ನು ಕೊಡುತ್ತದೆ ಎಂದಲ್ಲಿ, ಈ ಮಸೂದೆಯ ಮೇರೆಗೆ ಮತ್ತೆ ನೋಂದಾಯಿಸಿಕೊಳ್ಳಬೇಕೆಂದು ಹೇಳುವ ಅಗತ್ಯವಾದರೂ ಏನಿದೆ? ೧೯೨೬ರ ಕಾಯ್ದೆಯ ಮೇರೆಗೆ ನೋಂದಾಯಿಸಲಾದ ಸಂಘ ಈ ಸದನದಲ್ಲಿ ಮಾತನಾಡಲು ಹಾಗೂ ಈ ಸದನದಲ್ಲಿ ಮತದಾನ ಮಾಡಲು ಇಡೀ ಕಾರ್ಮಿಕ ವರ್ಗ ಪ್ರತಿನಿಧಿಗಳಾಗಿ ತನ್ನ ಸದಸ್ಯರನ್ನು ಆಯ್ದು ಕಳಿಸಲು ಸಮರ್ಥವಾಗಿದ್ದಲ್ಲಿ, ಈ ಮಸೂದೆಯ ಮೇರೆಗೆ ಮತ್ತೆ ನೋಂದಾಯಿಸಿಕೊಳ್ಳಬೇಕೆಂದು ಹೇಳುವ ಅಗತ್ಯವಾದರೂ ಏನಿದೆ? ಈ ಪ್ರಶ್ನೆಗೆ ಉತ್ತರವನ್ನು ನಾನು ಸ್ವಲ್ಪ ಸಮಯದ ನಂತರ ಪಡೆಯಬಯಸುತ್ತೇನೆ. ಈ ಮಸೂದೆ ಏನು ಮಾಡುತ್ತದೆ ಎಂಬುದು ಅತ್ಯಂತ ವಿಲಕ್ಷಣವಾದ ಸಂಗತಿಯೇ ಆಗಿದೆ. ಇದನ್ನು ನಾನು ಅರ್ಥ ಮಾಡಿಕೊಳ್ಳಲಾರದವನಾಗಿದ್ದೇನೆ. ೧೯೨೬ರ ಕಾಯ್ದೆಯ ಮೇರೆಗೆ ನೋಂದಣಿಗೊಂಡಿರುವ ಸಂಘಕ್ಕೆ ಸಂಧಾನಕಾರರ ಮುಂದೆ ಕಾರ್ಮಿಕರನ್ನು ಪ್ರತಿನಿಧಿಸುವ

ಹಕ್ಕಿರುವುದಿಲ್ಲ ಎಂದು ಈ ಮಸೂದೆ ಹೇಳುವುದಾದರೆ ಈ ನಿಲುವಿನ ಅಸಾಂಗತ್ಯವನ್ನು ಮನಗಾಣಲು ಈ ಸದನ ವಿಶೇಷವಾಗಿ ಶ್ರಮಪಡಬೇಕಾದ ಅಗತ್ಯವೇನೂ ಇಲ್ಲ. ೧೯೨೬ರ ಕಾಯ್ದೆಯ ಮೇರೆಗೆ ನೋಂದಣಿಗೊಂಡ ಸಂಘ ಶಾಸಕಾಂಗದಲ್ಲಿ ಕಾರ್ಮಿಕರನ್ನು ಪ್ರತಿನಿಧಿಸಲು ಸಮರ್ಥವಾಗಿದ್ದರೂ ಈ ಮಸೂದೆಯ ಮೇರೆಗೆ ಸಂಧಾನಕಾರರ ಮುಂದೆ ಕಾರ್ಮಿಕರನ್ನು ಪ್ರತಿನಿಧಿಸಲು ಸಮರ್ಥವಾಗಿರುವುದಿಲ್ಲ. ಏಕೆ ಈ ಅಸಾಂಗತ್ಯ ಕಾಣಿಸಿಕೊಂಡಿದೆ? ಈ ಮಸೂದೆ ಅಸಾಂಗತ್ಯವೊಂದನ್ನು ಸೃಷ್ಟಿಸಿರುವುದು ಮಾತ್ರವಲ್ಲ, ೧೯೨೬ರ ಕಾಯ್ದೆಯ ಮೇರೆಗೆ ನೋಂದಣಿಗೊಂಡಿರುವಂಥ ಸಂಘಗಳ ವಿಶೇಷಾಧಿಕಾರವೊಂದನ್ನು ಕಸಿದುಕೊಳ್ಳುತ್ತದೆ ಎಂದು ನಾನು ಹೇಳಬಯಸುತ್ತೇನೆ.

೧೯೩೪ರ ಮುಂಬಯಿ ಕಾಯ್ದೆಯ ಉಪಬಂಧಗಳ ಮೇರೆಗೆ ಏನಾಗುತ್ತಿತ್ತು ಎಂಬದರತ್ತ ಈ ಸಂದರ್ಭದಲ್ಲಿ ನಾನು ಈ ಸದನದ ಗಮನ ಸೆಳೆಯಬಯಸುತ್ತೇನೆ. ಸಂಧಾನದ ನಡೆವಳಿಕೆಗಳು ಆರಂಭ ವಾದಾಗ ೯ನೆಯ ಪ್ರಕರಣದ ಮೇರೆಗೆ ಕಾರ್ಮಿಕರ ಪ್ರತಿನಿಧಿಗಳು ಕಾರ್ಮಿಕರನ್ನು ಪ್ರತಿನಿಧಿಸುತ್ತಿದ್ದರು ಎಂಬುದು ಆ ಕಾಯ್ದೆಯ ಉಪಬಂಧಗಳನ್ನು ಬಲ್ಲ ಸದಸ್ಯರಿಗೆ ನೆನಪಿಗೆ ಬಂದೇ ತೀರುತ್ತದೆ. ಅದು ಆ ಕಾಯ್ದೆಯಲ್ಲಿದ್ದ ಉಪಬಂಧ ೯ನೆಯ ಪ್ರಕರಣದಲ್ಲಿ ಹೇಳಿರುವ ಮಾತುಗಳು ಹೀಗಿವೆ:

> "೮ನೆಯ ಪ್ರಕರಣದ ಮೇರೆಗೆ ಮುನ್ಸೂಚನೆ ಬಂದ ತರುವಾಯ, ಕಾರ್ಮಿಕ ವಿವಾದಕ್ಕೆ ಸಂಬಂಧಿಸಿರುವ ಪಕ್ಷಗಳು ಮುನ್ಸೂಚನೆಯಲ್ಲಿ ನಿಗದಿಪಡಿಸಲಾಗಿರುವ ಕಾಲಾವಧಿಯಲ್ಲಿ ಅಥವಾ ಈ ಸಂಬಂಧವಾಗಿ ಸಂಧಾನಕಾರರು ಗೊತ್ತುಪಡಿಸಬಹುದಾಗಿರುವಂಥ ಕಾಲಾವಧಿಯಲ್ಲಿ ಸಂಧಾನಕಾರರು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರತಿನಿಧಿಗಳನ್ನು ನೇಮಿಸತಕ್ಕದ್ದು."

ಹೀಗಾಗಿ ೧೯೩೪ರ ಕಾಯ್ದೆಯ ಮೇರೆಗೆ ಸಂಧಾನ ನಡೆವಳಿಕೆಗಳಲ್ಲಿ ಕಾರ್ಮಿಕರ ಪ್ರತಿನಿಧಿಗಳು ಕಾರ್ಮಿಕರನ್ನು ಪ್ರತಿನಿಧಿಸುತ್ತಿದ್ದರು. ಈ ಪ್ರತಿನಿಧಿಗಳನ್ನು ಆಯುತ್ತಿದ್ದುದು ಹೇಗೆ? ೧೯೩೪ರ ಕಾಯ್ದೆಯ ಮೇರೆಗೆ ಸಂಧಾನಕಾರರ ಮುಂದೆ ಕಾರ್ಮಿಕರನ್ನು ಪ್ರತಿನಿಧಿಸುವಂಥ ವ್ಯಕ್ತಿಗಳನ್ನು ಆಯುವ ಅಧಿಕಾರ ಯಾವ ಪಕ್ಷಗಳಿಗೆ ಇರುತ್ತಿತ್ತು? ಮಾನ್ಯರೆ, ಈ ಕಾಯ್ದೆಯ ಅಧೀನ ರೂಪಿಸಲಾಗಿರುವ ನಿಯಮಗಳನ್ನು ನೋಡಿದರೆ ಪ್ರತಿನಿಧಿಗಳನ್ನು ಆಯುವ ಅಧಿಕಾರವನ್ನು ಹೊಂದಿದ್ದ ಪಕ್ಷಗಳು ಎಂದರೆ ನೋಂದಣಿ ಗೊಂಡಿದ್ದಂಥ ಕಾರ್ಮಿಕ ಸಂಘಗಳು, ೧೯೨೬ರ ಕಾರ್ಮಿಕ ವಿವಾದಗಳ ಕಾಯ್ದೆಯ ಮೇರೆಗೆ ನೋಂದಣಿಗೊಂಡಿದ್ದಂಥ ಸಂಘಗಳು. ೧೯೩೪ರ ಮುಂಬಯಿ ಕಾಯ್ದೆಯ ಅಧೀನ ರೂಪಿಸಲಾಗಿರುವ ನಿಯಮಗಳಲ್ಲಿನ ೩ನೆಯ ನಿಯಮ ಇದಕ್ಕೆ ಅವಕಾಶವನ್ನು ಕಲ್ಪಿಸಿದೆ. ಕೇಂದ್ರ ಶಾಸಕಾಂಗದ ೧೯೨೬ರ ಕಾಯ್ದೆಯ ಮೇರೆಗೆ ನೋಂದಣಿಗೊಂಡಿದ್ದಂಥ ಸಂಘ, ಅದು ನಿಗಮವಾಗಿ ಪರಿಣಮಿಸಿದ್ದರಿಂದಾಗಿ, ಎಲ್ಲ ಸ್ಥಳಗಳಲ್ಲಿ ಮತ್ತು ಎಲ್ಲ ಸಂದರ್ಭಗಳಲ್ಲಿ ಕಾರ್ಮಿಕರನ್ನು ಪ್ರತಿನಿಧಿಸುವ ಹಕ್ಕನ್ನು ಹೊಂದಿರುತ್ತಿತ್ತು ಎಂಬುದು ಇದರಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಸಂವಿಧಾನಾತ್ಮಕವಾಗಿ ೧೯೩೫ರ ಭಾರತ ಸರ್ಕಾರದ ಕಾಯ್ದೆಯ ಮೂಲಕ ಅವರಿಗೆ ಶಾಸಕಾಂಗಗಳಲ್ಲಿ ಕಾರ್ಮಿಕರನ್ನು ಪ್ರತಿನಿಧಿಸುವ ಹಕ್ಕನ್ನು ಕೊಡಲಾಗಿದೆ ಹಾಗೂ ೧೯೩೪ರ ಮುಂಬಯಿ ಕಾಯ್ದೆ, ಆ ಕಾಯ್ದೆಯ ಅಂದರೆ ೧೯೩೪ರ ಮುಂಬಯಿ ಕಾಯ್ದೆಯ ಮೇರೆಗೆ ನೋಂದಣಿಗೊಂಡ ಕಾರ್ಮಿಕ ಸಂಘಗಳಿಗೆ ಮಾತ್ರವೇ ಸಂಧನಕಾರರ ಮುಂದೆ ಪ್ರತಿನಿಧಿಗಳನ್ನು ಕಳಿಸುವ ಅಧಿಕಾರ ಇರುತ್ತದೆ ಎಂದು ನಿರ್ದಿಷ್ಟವಾಗಿ ಮಾನ್ಯ ಮಾಡಿತ್ತು. ಮಾನ್ಯರೆ, ಈ ಮಸೂದೆ

ಸಂಘಗಳಿಗಿದ್ದ ಅಮೂಲ್ಯವಾದ ಹಕ್ಕೊಂದನ್ನು ಕಸಿದುಕೊಳ್ಳುತ್ತದೆ ಎಂಬುದು ನನ್ನ ಮೊದಲನೆಯ ದೂರು. ಆ ಹಕ್ಕನ್ನು ಅದು ಕೊಡುವುದಾದರೂ ಯಾರಿಗೆ? ನಾನು ಸದ್ಯದಲ್ಲಿಯೇ ತೋರಿಸಿಕೊಡಲಿರುವಂತೆ ಗುಲಾಮ ಸಂಘಗಳಿಗೆ ಅದು ಈ ಹಕ್ಕನ್ನು ಕೊಡುತ್ತದೆ. ಅದನ್ನು ಮುಕ್ತ ಸಂಘಗಳಿಗೆ ಕೊಟ್ಟಿದ್ದರೆ, ಅದರ ಬಗ್ಗೆ ನಾನು ಚಿಂತಿಸುತ್ತಲೇ ಇರಲಿಲ್ಲ. ಮಾನ್ಯರೆ, ಹೀಗಿರುವಾಗ ಈ ಮಸೂದೆಯ ಮೇರೆಗೆ ನೋಂದಣಿಗೊಂಡಂಥ ಸಂಘಗಳು ೧೯೨೬ರ ಕೇಂದ್ರದ ಕಾಯ್ದೆಯ ಮೇರೆಗೂ ನೋಂದಾಯಿಸಿಕೊಳ್ಳಬೇಕೆಂದು ಏಕಾಗಿ ವಿಧಿಸಲಾಗಿದೆ? ಇದು ನಾವು ಅರ್ಥ ಮಾಡಿಕೊಳ್ಳಬೇಕಾಗಿರುವ ಒಂದು ಮುಖ್ಯ ವಿಷಯ. ಮಾನ್ಯರೆ, ಇದು ಅಮೆರಿಕನ್ನರು ಹೇಳುವಂತೆ ಅಧಿಕಾರ ವಿವೇಚನೆಯ ಒಂದು ನಿದರ್ಶನವಲ್ಲದೆ ಬೇರೇನೂ ಅಲ್ಲ. ಈ ಮಸೂದೆಯ ಮೇರೆಗೆ ರೂಪಿಸಲಾಗುವ ಸಂಘಗಳಿಗೆ ಸಂಧಾನಕಾರರ ಮುಂದೆ ಕಾರ್ಮಿಕರನ್ನು ಪ್ರತಿನಿಧಿ ಸುವ ಹಕ್ಕು ದೊರೆಯಬೇಕೆಂದು ಅಪೇಕ್ಷಿಸುವುದರ ಜೊತೆಗೆ ೧೯೨೬ರ ಕಾಯ್ದೆಯ ಮೇರೆಗೆ ನೋಂದಾಯಿಸಲಾದ ಸಂಘಗಳಿಗೆ ಇಂದು ಲಭ್ಯವಾಗಿರುವ ರಾಜಕೀಯ ಪ್ರಾತಿನಿಧ್ಯದ ಹಕ್ಕನ್ನು ದಾನ ಮಾಡಿಬಿಡಬೇಕೆಂದು ನನ್ನ ಗೌರವಾನ್ವಿತ ಸದಸ್ಯರು ಇಚ್ಛಿಸುತ್ತಾರೆ. ಇದು ಕಸಿದುಕೊಳ್ಳುವ ನೀತಿಯೇ ಆಗಿದೆ.

ಯಾರ ಲಾಭಕ್ಕಾಗಿ ಈ ಎಲ್ಲ ರಾಜಕೀಯ ಮತ್ತ ಆರ್ಥಿಕ ಅಧಿಕಾರವನ್ನು ಉಂಬಳಿಯಾಗಿ ಕೊಡ ಲಾಗುತ್ತಿದೆ? ನಾನು ಈ ಮಾತನ್ನು ಮತ್ತೆ ಪುನರಾವರ್ತಿಸಬಯಸುತ್ತೇನೆ. ಆ ಗುಲಾಮ ಸಂಘಗಳ ಲಾಭಕ್ಕಾಗಿ ಹೀಗೆ ಮಾಡಲಾಗುತ್ತಿದೆ. ಇಷ್ಟಾಗಿಯೂ ಕಾರ್ಮಿಕ ಚಳವಳಿ ಒಡೆಯನ ಅನುಮೋದನೆಯನ್ನು ಆಧರಿಸಿಕೊಂಡು ಮುನ್ನಡೆಯಬೇಕೆಂಬ ತತ್ವದಲ್ಲಿ ತಪ್ಪೇನೂ ಇಲ್ಲವೆಂದೂ ನನ್ನ ಸನ್ಮಾನ್ಯ ಸ್ನೇಹಿತರು ಭಾವಿಸುವುದಾದರೆ ಅವರೊಡನೆ ನನಗೆ ಜಗಳವೇ ಇರುವುದಿಲ್ಲ. ಅದು ಅವರ ಬಾಳಿನ ತತ್ವವಾಗಿರುತ್ತದೆ. ನನ್ನ ಬಾಳಿನ ತತ್ವವಾಗಿರುವುದಿಲ್ಲ. ಗುಲಾಮಗಿರಿಗೆ ಒಳಗಾಗಿರುವ ವ್ಯಕ್ತಿಯೇ ಮುಕ್ತ ವ್ಯಕ್ತಿ ಎಂದು ಅವರು ಭಾವಿಸುವುದಾದರೆ ಅದು ಅವರ ದೃಷ್ಟಿಯಾಗುತ್ತದೆ. ಔದ್ಯಮಿಕ ವಲಯದಲ್ಲಿ ಶಾಂತಿಯನ್ನು ಕಾಪಾಡಿ ಕೊಂಡು ಬರುವ ದೃಷ್ಟಿಯಿಂದ ಕಾರ್ಮಿಕನನ್ನು ಒಡೆಯನಿಗೆ ಕಟ್ಟಿಹಾಕಿರಬೇಕೆಂದು ಅವರು ಭಾವಿಸುವು ದಾದರೆ ಹಾಗೆ ಖಂಡಿತವಾಗಿಯೂ ಆಗುತ್ತದೆ. ಅದು ಅವರಿಗೆ ಬಿಟ್ಟ ವಿಚಾರ. ಅದರ ಬಗ್ಗೆ ನಾನು ಜಗಳವಾಡಲು ಹೋಗುವುದೇ ಇಲ್ಲ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಆ ನಿಲುವನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ. ನಮಗೆ ಶಾಂತಿ ಮಾತ್ರವೇ ಬೇಕಾಗಿಲ್ಲ. ಆ ಬಗೆಯ ಶಾಂತಿಯನ್ನು– ನಾವು ಪಡೆದುಕೊಳ್ಳ ಬೇಕೆಂದು ಅವರು ಹೇಳುತ್ತಿರುವ ಬಗೆಯ ಶಾಂತಿಯನ್ನು ನಾನು ನಿರಾಕರಿಸುತ್ತೇನೆ (ಶ್ರೀ ಎಸ್. ವಿ. ಪಾರುಳೇಕರ್: ಹೌದು, ಹೌದು). ಅದು ಹೊಟ್ಟೆ ತುಂಬಿದ ವ್ಯಕ್ತಿ ಬಯಸಬಹುದಾದಂಥ ಶಾಂತಿ, ಷರಾಯಿಯ ಗುಂಡಿಗಳನ್ನು ಸ್ಪರ್ಶಿಸುತ್ತಿರುವಂಥ ಬೊಜ್ಜು ಹೊಟ್ಟೆಯ ವ್ಯಕ್ತಿ ಬಯಸಬಹುದಾದಂಥ ಶಾಂತಿ. ನನಗೆ ಆ ಬಗೆಯ ಶಾಂತಿ ಬೇಕಾಗಿಲ್ಲ.

ನನಗೆ ಆಸಕ್ತಿಯಿರುವ ಪ್ರಶ್ನೆ ಇದು: ನಾನು ಈ ವಿಷಯದಲ್ಲಿ ಉದಾರವಾದ ನಿಲುವನ್ನು ತಳೆಯಲು ಸಿದ್ಧನಾಗಿದ್ದೇನೆ. ಆದರೆ ಈ ಉದಾರವಾದ ನಿಲುವು ಫಲದಾಯಕವಾಗುತ್ತದೆಯೋ, ಏನನ್ನಾದರೂ ಉತ್ಪಾದಿಸುತ್ತದೆಯೋ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ನನ್ನ ಸನ್ಮಾನ್ಯ ಸ್ನೇಹಿತರು ಹೇಳುವಂತೆ ಭಾರತದಲ್ಲಿ ಕಾರ್ಮಿಕ ಚಳವಳಿ ಎಂಬುದು ಇಲ್ಲದಿರಬಹುದು. ಸಂಘಗಳ ಬೆಳವಣಿಗೆಯನ್ನು ಹಾಳುಗೆಡುವುತ್ತಿರುವಂಥ ವ್ಯಕ್ತಿಗಳೂ ಇರಬಹುದು. ಕಾಂಗ್ರೆಸ್ ಪಕ್ಷದ ಪಕ್ಕೆಯಲ್ಲಿನ ಚಿಟುಕುಮುಳ್ಳಾಗಿದ್ದ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಬಗ್ಗೆ ಅವರು ಈಗಲೂ ಭಯಪಡುತ್ತಿರುವುದು ನನಗೆ ಆಶ್ಚರ್ಯ

ವನ್ನುಂಟುಮಾಡುತ್ತಿದೆ. ಆದರೆ ಅವರು ಈಗ ಕಾಂಗ್ರೆಸ್ ಪಕ್ಷದ ಪಾಳೆಯಕ್ಕೆ ನಡೆದುಬಿಟ್ಟಿದ್ದಾರೆ. ಅವರೀಗ ಶಾಂತಿಯನ್ನು ಒಪ್ಪಿಕೊಳ್ಳುತ್ತಿದ್ದಾರೆ. ಅವರೀಗ ಸತ್ಯವನ್ನು ಒಪ್ಪಿಕೊಳ್ಳುತ್ತಿದ್ದಾರೆ. ಅವರೀಗ ಅಹಿಂಸಾ ತತ್ವವನ್ನು ಒಪ್ಪಿಕೊಳ್ಳುತ್ತಿದ್ದಾರೆ. ಅವರಿಗೆ ನಾಲ್ಕಾಣೆ (ಸದಸ್ಯತ್ವದ ಶುಲ್ಕವನ್ನು) ಕೊಟ್ಟಿದ್ದಾರೆಂದೂ ನಾನು ಕೇಳಿದ್ದೇನೆ. ಕಾರ್ಮಿಕ ಚಳವಳಿಯ ಶಾಂತಿಯುತ ವಿಕಾಸದ ಪ್ರಯತ್ನವನ್ನು ಯಾರಾದರೂ ಭಂಗಗೊಳಿಸಬಹುದೆಂಬ ಭಯ ಅವರನ್ನೇಕೆ ಕಾಡಬೇಕು? ಅದು ಹಾಗಿದೆಯೆಂದು ಭಾವಿಸಿಕೊಂಡು ಇದೆಲ್ಲ ಹೇಗೆ ಕೊನೆಗಾಣುತ್ತದೆ ಎಂಬುದನ್ನು ನೋಡೋಣ. ನಾನು ಯಾವುದನ್ನು ಗುಲಾಮ ಸಂಘಗಳು ಎಂದು ಕರೆದಿದ್ದೇನೋ ಅವು ಮಾಗಿ ಮುಕ್ತ ಸಂಘಗಳಾಗುವಂಥ ಕಾಲ ಬರುತ್ತದೆ ಎಂದು ನನ್ನ ಸನ್ಮಾನ್ಯ ಸ್ನೇಹಿತರು ನನಗೆ ಮನವರಿಕೆ ಮಾಡಿಕೊಡುವುದಾದರೆ ಬಹುಶಃ ನನ್ನ ಮನೋಧರ್ಮವನ್ನು ನಾನು ಮರುಪರಿಶೀಲಿಸಬಹುದು. ಆದರೆ ಮುಕ್ತ ಸಂಘಗಳು ಎಂದೂ ಇರುವುದಿಲ್ಲ ಎಂಬ ಬಗ್ಗೆ ನನಗೆ ಕಿಂಚಿತ್ತೂ ಸಂದೇಹವಿಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಅವರು ಮುಕ್ತ ಸಂಘಗಳ ಮೇಲೆ ವಿಧಿಸಿರುವ ಷರತ್ತುಗಳು ಎಂದಿಗೂ ಪಾಲಿಸಲು ಸಾಧ್ಯವೇ ಆಗದಿರುವಷ್ಟು ಕ್ಲಿಷ್ಟಕರವಾಗಿದೆ. ಮುಕ್ತ ಸಂಘಕ್ಕೆ ಇರುವ ಷರತ್ತಾದರೂ ಯಾವುದು? ಎಲ್ಲ ಕಾಲದಲ್ಲೂ ನಿಮ್ಮ ಸದಸ್ಯತ್ವದ ಸಂಖ್ಯೆ ೫೦.೧ರಷ್ಟಿದೆ ಎಂಬುದನ್ನು ತೋರಿಸಿಕೊಡಬೇಕೆಂಬುದೇ ಆ ಷರತ್ತು. ಶೇ. ೨೦ರಷ್ಟಿದ್ದರೆ ಸಾಲದು, ಶೇ. ೨೫ರಷ್ಟಿದ್ದರೆ ಸಾಲದು, ನೀವು ಮುಕ್ತರಾಗಿರಬೇಕಾದರೆ ನಿಮ್ಮ ಗಣಿತದ ಪ್ರಮಾಣ ಶೇ. ೫೦.೧ರಷ್ಟಿದೆ ಎಂಬುದನ್ನು ಯಾವಾಗಲೂ ತೋರಿಸಿಕೊಡುತ್ತಿರಬೇಕು. ಮಾನ್ಯರೆ, ನಾನು ಕೇಳಬಯಸುವ ಪ್ರಶ್ನೆ ಇದು: ಇದು ನ್ಯಾಯೋಚಿತವಾದ ಷರತ್ತೆ? ನಾನೊಂದು ಸಾದೃಶ್ಯವನ್ನು ಬಳಸಿಕೊಳ್ಳಬಹುದಾದರೆ ರೋಮನ್ನರ ಕಾನೂನುಗಳು ಗುಲಾಮಗಿರಿದಿಂದಲೇ ಆರಂಭಗೊಂಡವು. ನಾವು ತಾಂತ್ರಿಕವಾಗಿ ಹೇಳುವಂತೆ, ದಾಸ್ಯಮುಕ್ತಿಗೆ ಸಂಬಂಧಿಸಿದಂತೆ ಅದರಲ್ಲಿ ಒಂದು ಉಪಬಂಧವನ್ನು ಕಲ್ಪಿಸಲಾಗಿತ್ತು. ಅಂತಿಮವಾಗಿ ಗುಲಾಮನಿಗೆ ವಿಮೋಚನೆ ದೊರೆತು, ಅವನು ಮುಕ್ತ ವ್ಯಕ್ತಿಯಾಗುತ್ತಿದ್ದ, ನಾಗರಿಕನಾಗುತ್ತಿದ್ದ. ಇದೇ ಸಾದೃಶ್ಯವನ್ನು ಅನ್ವಯಿಸಿ, ನಾನು ಹೀಗೆಂದು ಹೇಳಬಯಸುತ್ತೇನೆ. ನಾವೂ ಗುಲಾಮಗಿರಿಯೊಂದಿಗೆ ಆರಂಭಿಸುತ್ತಿದ್ದೇವೆ. ಏಕೆಂದರೆ ಅನುಮೋದನೆ ಮತ್ತು ಮಾನ್ಯತೆಗಳು ಗುಲಾಮಗಿರಿಗಿಂತ ಕಡಿಮೆಯಾದುವೇನೂ ಅಲ್ಲ. ಆದರೆ ದಾಸ್ಯ ವಿಮೋಚನೆಗೆ ಏನಾದರೂ ಅವಕಾಶವಿದೆಯೆ? ಅಂಥ ಅವಕಾಶವೇನಾದರೂ ಇದ್ದರೆ ಅದು ನ್ಯಾಯೋಚಿತವಾಗಿದೆಯೆ ಮತ್ತು ಕಾರ್ಮಿಕರು ಪಾಲಿಸಲು ಸಾಧ್ಯವಾಗಬಹುದೆಂದು ನಿರೀಕ್ಷಿಸಬಹುದಾದಂಥ ಷರತ್ತು ಅದಾಗಿದೆಯೆ? ಕಾರ್ಮಿಕರ ಒಟ್ಟಾರೆ ಸಂಖ್ಯೆಯ ಶೇ. ೫೦.೧ರಷ್ಟು ಸದಸ್ಯತ್ವ ನಿಮಗಿದೆಯೆಂದು ನೀವು ತೋರಿಸಿಕೊಡಲೇಬೇಕು ಎಂಬುದೇ ಆ ಷರತ್ತು. ಆಗ ಮತ್ತು ಆಗ ಮಾತ್ರವೇ ನೀವು ನಿಮ್ಮ ಒಡೆಯನ ಸರಪಳಿಗಳಿಂದ, ಮಾರಣಾಂತಿಕ ವೇದನೆಯಿಂದ ಹಾಗೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಲ್ಲಿರಿ. ಇದು ಪಾಲಿಸಲು ಸಾಧ್ಯವಾಗಬಹುದಾದಂಥ ಷರತ್ತೆ?

ಮಾನ್ಯರೆ, ಸನ್ಮಾನ್ಯ ಸ್ನೇಹಿತರು ನಮ್ಮನ್ನು ಕರೆಯಬಯಸುವಂತೆ ನಾವೆಲ್ಲ ತಪ್ಪು ಮಾರ್ಗದರ್ಶನ ಪಡೆದಿರುವಂಥ ಅಥವಾ ತಪ್ಪು ಹಾದಿಯಲ್ಲಿರುವಂಥ ವ್ಯಕ್ತಿಗಳು, ಅಹಮದಾಬಾದಿನಲ್ಲಿರುವ ಆದರ್ಶ ಸ್ಥಿತಿಯತ್ತ ನಮ್ಮ ದೃಷ್ಟಿಯನ್ನು ಹರಿಸಬೇಕೆಂದು ನಮಗೆ ಹೇಳಲಾಗಿದೆ. ಅಹಮದಾಬಾದೆಂಬ ಆ ಪುಸ್ತಕದಲ್ಲಿನ ಒಂದು ಪುಟವನ್ನು ತೆಗೆದುಕೊಂಡು ಆ ಆದರ್ಶವನ್ನು ಅನುಸರಿಸಬೇಕೆಂದು ನಮಗೆ ಹೇಳಲಾಗಿದೆ. ನಾನು ಆ ಕೆಲಸವನ್ನು ಮಾಡಲು ಸಿದ್ಧನಾಗಿದ್ದೇನೆ. ಆ ಉದಾಹರಣೆಯನ್ನು ಅಧ್ಯಯನ ಮಾಡತೊಡಗಿದಾಗ, ಈ ಪ್ರಶ್ನೆಯನ್ನು ಕೇಳುವುದು ಅನಿವಾರ್ಯವಾಗುತ್ತದೆ; ಈ ಮಸೂದೆಯ ಮೇರೆಗೆ,

ಅಹಮದಾಬಾದಿನ ಕಾರ್ಮಿಕ ಒಕ್ಕೂಟ (ಮಜ್ದೂರ್ ಮಹಾಜನ) ಮುಕ್ತ ಸಂಘವಾಗುವ ಯಾವುದೇ ಭರವಸೆಯೂ ನನಗೆ ಕಾಣುತ್ತಿಲ್ಲ. ಅಹಮದಾಬಾದ್ ಖಂಡಿತವಾಗಿಯೂ ಒಂದು ಆದರ್ಶ ಸ್ಥಳವೇ ಆಗಿದೆ. "ರಾಯಲ್ ಕಮೀಷನ್" ಎತ್ತಿ ಹೇಳಿರುವಂತೆ, ಭಾರತದಲ್ಲಿ ಬೇರೆಲ್ಲಿಯೂ ಅಂಥ ಆದರ್ಶ ಸಂಸ್ಥೆ ಅಸ್ತಿತ್ವದಲ್ಲಿಲ್ಲ. ಕಾರ್ಮಿಕ ಸಂಘಗಳ ಚಟುವಟಿಕೆಗಳಿಂದ ದೂರವಾಗಿರುವ ಕೆಲವು ಮಂದಿ ಮುಸ್ಲಿಂ ನೇಕಾರರನ್ನು ಬಿಟ್ಟರೆ ಅಲ್ಲಿನ ಉದ್ಯೋಗದಾತರು ಮತ್ತು ಉದ್ಯೋಗಿಗಳೆಲ್ಲ ಒಂದೇ ಧರ್ಮಕ್ಕೆ ಸೇರಿದವರಾಗಿದ್ದಾರೆ. ಅಲ್ಲಿನ ಕಾರ್ಮಿಕ ಮತ್ತು ಒಡೆಯರ ಭಾಷೆಯೂ ಒಂದೇ ಆಗಿದೆ. ಅಲ್ಲಿ ಸಾಂಸ್ಕೃತಿಕ ಏಕತೆಯೂ ಸಮೃದ್ಧ ಪ್ರಮಾಣದಲ್ಲಿದೆ. ಹೀಗಾಗಿ ಇತರ ಸನ್ನಿವೇಶಗಳಲ್ಲಿ ಯಾವ ವಿಚ್ಛೇದಕಾರಕ ಪ್ರವೃತ್ತಿಗಳನ್ನು ಹಾಗೂ ಅವಿಧೇಯತೆಯ ಪ್ರವೃತ್ತಿಗಳನ್ನು ನಾವು ನಿರೀಕ್ಷಿಸಬಹುದೋ, ಅವು ಯಾವುವೂ ಅಲ್ಲಿ ಕಾಣದೊರೆಯುವುದಿಲ್ಲ. ಇವೆಲ್ಲಕ್ಕಿಂತ ಮಿಗಿಲಾಗಿ ಮಹಾತ್ಮ ಗಾಂಧೀಜಿಯವರ ಮಹಾನ್ ವ್ಯಕ್ತಿತ್ವ ಅಲ್ಲಿದೆ. ಯಾವನೇ ಅವಿಧೇಯ ವ್ಯಕ್ತಿಯೂ ಅವರತ್ತ ನೋಡಿ ತಲೆಬಾಗದಿರನು, ತನ್ನ ವೈಯಕ್ತಿಕ ವಾದ ಕುಂದು ಕೊರತೆಗಳೇನೇ ಇರಲಿ, ಅವನು ಇತರರೊಂದಿಗೆ ತಾನೂ ಒಂದಾಗಿಬಿಡುತ್ತಾನೆ. ಅಂಥ ಪ್ರಭಾವವಲಯದಲ್ಲಿ ಅಹಮದಾಬಾದಿನ ಕಾರ್ಮಿಕ ಒಕ್ಕೂಟ ಬೆಳೆದುಬಂದಿದೆ. ಅದು ಎರಡು ದಶಕಗಳಿಗಿಂತಲೂ ಹೆಚ್ಚಿನ ಇತಿಹಾಸವನ್ನು ಹೊಂದಿದೆ. ಅದು ಕಳೆದ ಹದಿನೆಂಟು ವರ್ಷಗಳಿಂದಲೂ ಅಸ್ತಿತ್ವದಲ್ಲಿದೆ ಎಂದು ನನಗೆ ಹೇಳಲಾಗಿದೆ. ಆ ಸಂಘದ ಸ್ಥಿತಿ ಹೇಗಿದೆ? ೧೯೩೮ರ ಮೇ ತಿಂಗಳ ಗಜೆಟ್ಟು (ಟೇಬಲ್ ಗೆಜೆಟ್) ಎಂದು ಕರೆಯಲಾಗಿರುವ ಪುಸ್ತಕದಲ್ಲಿನ ಅಂಕಿ–ಅಂಶಗಳು ನನ್ನ ಬಳಿ ಇವೆ. ವಿಶ್ಲೇಷಿಸಿ ನೋಡಿದಾಗ ಅಹಮದಾಬಾದಿನ ಸ್ಥಿತಿ ಹೀಗಿದೆಯೆಂದು ನನಗೆ ತೋರುತ್ತದೆ. ನಾನು ಜವಳಿ ಉದ್ಯಮವನ್ನು ಮಾತ್ರವೇ ಇಲ್ಲಿ ಪರಿಗಣನೆಗೆ ತೆಗೆದುಕೊಳ್ಳುತ್ತಿದ್ದೇನೆ. ಅಹಮದಾಬಾದಿನ ಜವಳಿ ಉದ್ಯಮ ದಲ್ಲಿ ನೇಮಕಗೊಂಡಿರುವವರ ಒಟ್ಟು ಸಂಖ್ಯೆ ೯೦,೦೦೦ ಆಗಿದೆ. ಈ ಸಂಘದಲ್ಲಿ ಸದಸ್ಯರಾಗಿರುವ ಕಾರ್ಮಿಕರ ಒಟ್ಟಾರೆ ಸಂಖ್ಯೆಯಾದರೂ ಎಷ್ಟು? ಈ ಕಾರ್ಮಿಕ ಒಕ್ಕೂಟ, ಎಲ್ಲರಿಗೂ ತಿಳಿದಿರುವಂತೆ ಐದು ವಿವಿಧ ಕಾರ್ಮಿಕ ಸಂಘಗಳ ಒಕ್ಕೂಟವೇ ಆಗಿದೆ. ಒಟ್ಟಾರೆ ಸದಸ್ಯರ ಸಂಖ್ಯೆ: ೨೨,೦೦೦. ೧೯೩೮ರ ಮೇ ಒಂದನೇ ತಾರೀಖಿನಂದು ಇದ್ದ ಸ್ಥಿತಿ ಇದು. ಮಾನ್ಯರೆ, ನನ್ನ ಪ್ರಕಾರ ನಾನೊಬ್ಬ ದುರ್ಬಲ ಗಣಿತಶಾಸ್ತ್ರಜ್ಞ, ನನ್ನ ಲೆಕ್ಕಾಚಾರ ತಪ್ಪಾಗಿದ್ದರೆ ನನ್ನನ್ನು ತಿದ್ದಬಹುದು. ಇದರ ಶೇಕಡಾ ವಾರು ಪ್ರಮಾಣ ಒಟ್ಟಾರೆ ಕಾರ್ಮಿಕ ಸಂಖ್ಯೆಯ ಶೇ.೨೧ರಷ್ಟು ಮಾತ್ರವಾಗಿದೆ. ಅಂದರೆ, ಆ ಒಕ್ಕೂಟದ ಸದಸ್ಯರ ಪ್ರಮಾಣ ಜವಳಿ ಉದ್ಯಮದಲ್ಲಿನ ಒಟ್ಟಾರೆ ಕಾರ್ಮಿಕ ಸಂಖ್ಯೆಯ ಶೇ.೨೧ ಮಾತ್ರ. ನಾನಾಗಲೇ ಹೇಳಿದಂತೆ ಅಹಮದಾಬಾದಿಗೂ ಈ ಒರೆಗಲ್ಲನ್ನು ಅನ್ವಯಿಸಿದರೆ, ಅಹಮದಾಬಾದಿನ ಕಾರ್ಮಿಕ ಒಕ್ಕೂಟ ಇಂದು ನೋಂದಣಿಯನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಯಾರಾದರೂ ಹೇಳಬಹುದೇನು? ಇಲ್ಲ.

(ಬಿಡುವಿನ ಅನಂತರ ಮಧ್ಯಾಹ್ನ ೨.೩೦ಕ್ಕೆ ಸದನ ಮತ್ತೆ ಸಮಾವೇಶಗೊಂಡಿತು.)

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಸಭಾಧ್ಯಕ್ಷರೆ, ಈ ಮಸೂದೆಯಲ್ಲಿ ನಿಗದಿಪಡಿಸಲಾಗಿರುವ ಪರಿಸ್ಥಿತಿಗಳಲ್ಲಿ ಈ ನಾಡಿನಲ್ಲಿ ಯಾವುದೇ ಮುಕ್ತ ಸಂಘವೂ ಬೆಳೆದು ನಿಲ್ಲುವ ಸಾಧ್ಯತೆಯಿಲ್ಲವೆಂಬು ದನ್ನು ಒತ್ತಿ ಹೇಳಲು ಬಿಡುವಿಗೆ ಮುನ್ನಿನ ಅವಧಿಯಲ್ಲಿ ನಾನು ಪ್ರಯತ್ನಿಸುತ್ತಿದ್ದೆ. ಅಹಮದಾಬಾದಿನ ಗಿರಣಿ ಕಾರ್ಮಿಕರ ಸಂಘದ ಸ್ಥಿತಿಯನ್ನು ಉಲ್ಲೇಖಿಸಿ ನಾನು ಹೇಳಬೇಕೆಂದಿದ್ದುದನ್ನು ನಿರೂಪಿಸಿದ್ದೆ. ಅಹಮದಾಬಾದಿನಲ್ಲಿರುವಂಥ ಅತ್ಯಂತ ಅನುಕೂಲಕರವಾದ ಪರಿಸ್ಥಿತಿಗಳಲ್ಲಿ ಕೂಡಾ ಉದ್ಯೋಗದಾತನ

ಅನುಮತಿಯನ್ನು ಪಡೆಯದೆ ಸದರಿ ಕಾಯ್ದೆಯ ಅಧೀನ ಮಾನ್ಯತೆಯನ್ನು ಪಡೆದುಕೊಳ್ಳುವ ಅಧಿಕಾರ ಕಾರ್ಮಿಕರ ಒಕ್ಕೂಟಕ್ಕೆ ಲಭಿಸುವುದು ಸಾಧ್ಯವಾಗುವುದಿಲ್ಲವೆಂಬುದನ್ನು ನಾನು ತೋರಿಸಿಕೊಟ್ಟಿದ್ದೆ. ಮಾನ್ಯರೆ, ಇದೆಂಥ ಅಸಾಧ್ಯವಾದ ಷರತ್ತೆಂದರೆ ಇಂಗ್ಲೆಂಡಿನಂಥ ಔದ್ಯಮಿಕವಾಗಿ ಸಂಘಟಿತವಾಗಿರುವ ರಾಷ್ಟ್ರದಲ್ಲಿಯೂ ಅದನ್ನು ಕಾರ್ಯರೂಪಕ್ಕೆ ತರುವುದು ಅಸಾಧ್ಯವೇ ಆಗುತ್ತದೆ. ದುರದೃಷ್ಟವಶಾತ್ ನನಗೆ ಸಿಕ್ಕಿರುವ ಎಲ್ಲ ಪುಸ್ತಕಗಳಲ್ಲಿಯೂ ನಾಡಿನ ವಿವಿಧ ಸಂಘಗಳ ಒಟ್ಟಾರೆ ಸದಸ್ಯತ್ವವನ್ನು ತೋರಿಸುವ ಅಂಕಿ–ಅಂಶಗಳು ಮಾತ್ರವೇ ದೊರೆಯುತ್ತವೆ. ಆದರೆ, ಅವುಗಳ ಜೊತೆಗೆ ನಾಡಿನ ವಿವಿಧ ಉದ್ಯಮಗಳಲ್ಲಿ ನೇಮಕಗೊಂಡಿರುವ ಒಟ್ಟಾರೆ ಕಾರ್ಮಿಕರ ಸಂಖ್ಯೆಯ ಬಗೆಗಿನ ಮಾಹಿತಿ ನಮಗೆ ಎಲ್ಲಿಯೂ ದೊರೆಯುವುದಿಲ್ಲ. ಇದರ ಪರಿಣಾಮವಾಗಿ ಇಂಗ್ಲೆಂಡಿನ ವಿವಿಧ ಕಾರ್ಮಿಕ ಸಂಘಗಳ ಸದಸ್ಯರಾಗಿರುವಂಥ ಕಾರ್ಮಿಕ ಶೇಕಡಾವಾರು ಪ್ರಮಾಣವೆಷ್ಟೆಂಬುದನ್ನು ಕಂಡುಕೊಳ್ಳುವುದು ಸುಲಭದ ಕಾರ್ಯವೇನೂ ಆಗಿಲ್ಲ. ಆದರೆ ೧೯೨೬ರಲ್ಲಿ ಪ್ರಕಟವಾದ ವಾಲ್ಟರ್ ಸಿಟ್ರಿನ್ ಅವರ ಒಂದು ಪುಟ್ಟ ಪುಸ್ತಕ ಇಲ್ಲಿ ನನ್ನ ಬಳಿ ಇದೆ. ಇಂಗ್ಲೆಂಡಿನ ಕಾರ್ಮಿಕ ಸಂಘಗಳ ಚಳವಳಿಯ ಪರಿಚಯವನ್ನು ಹೊಂದಿರುವ ಪ್ರತಿಯೊಬ್ಬರಿಗೂ ಕಾರ್ಮಿಕ ಸಂಘಗಳ ಚಳವಳಿಯ ಇತಿಹಾಸದಲ್ಲಿ ಅವರು ತುಂಬಾ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ ಎಂಬುದು ಗೊತ್ತಿರುತ್ತದೆ. ಹೀಗಾಗಿ ನಮಗೆ ಸಂಬಂಧಪಟ್ಟಿರುವ ಈ ವಿಷಯದ ಬಗ್ಗೆ ಅವರ ಪುಸ್ತಕವನ್ನು ಆಧಾರಪೂರ್ವಕವಾದ ಹೇಳಿಕೆಯೆಂದು ಪರಿಗಣಿಸಬಹುದಾಗಿದೆ. ೧೯೨೪ರ ಕೊನೆಯ ಹೊತ್ತಿಗೆ (ದುರದೃಷ್ಟವಶಾತ್ ಈ ಅಂಕಿ–ಅಂಶಗಳು ತೀರಾ ಇತ್ತೀಚಿನವೇನೂ ಆಗಿಲ್ಲ.) ಇಂಗ್ಲೆಂಡಿನಲ್ಲಿನ ಪರಿಸ್ಥಿತಿ ಹೀಗಿತ್ತು: ವಿವಿಧ ಉದ್ಯಮಗಳಲ್ಲಿ ನೇಮಕಗೊಂಡಿದ್ದಂಥ ವ್ಯಕ್ತಿಗಳ ಒಟ್ಟು ಸಂಖ್ಯೆ ೧೮ ದಶಲಕ್ಷವಾಗಿದ್ದರೆ, ಪುರುಷರು ಮತ್ತು ಮಹಿಳೆಯರು ಸೇರಿದಂತೆ ವಿವಿಧ ಕಾರ್ಮಿಕ ಸಂಘಗಳ ಸದಸ್ಯರಾಗಿದ್ದಂಥವರ ಸಂಖ್ಯೆ ಕೇವಲ ೫,೫೩೧,೦೦೦ ಮಾತ್ರವಾಗಿತ್ತು. ಅಂದರೆ, ಈ ಶೇಕಡಾವಾರು ಪ್ರಮಾಣ ೩೦ಕ್ಕಿಂತಲೂ ಖಂಡಿತವಾಗಿಯೂ ಹೆಚ್ಚಾಗಿರಲಿಲ್ಲ. ಈಗ ಕಾರ್ಮಿಕರು ತುಂಬಾ ಸುಸಂಘಟಿತವಾಗಿರುವ ಉದ್ಯಮಗಳು ತುಂಬಾ ವ್ಯಾಪಕವಾಗಿ ಹರಡಿಕೊಂಡಿರುವ ಇಂಗ್ಲೆಂಡಿನಂಥ ದೇಶದಲ್ಲಿನ ಸ್ಥಿತಿಯೇ ಹೀಗಿರುವಾಗ, ಭಾರತದಂಥ ದೇಶದಲ್ಲಿ ನಾವು ಏನನ್ನು ತಾನೇ ನಿರೀಕ್ಷಿಸಬಹುದು? ಮಾನ್ಯರೆ, ಹೀಗಾಗಿ ಈ ಮಸೂದೆ ವಿಧಿಸುವ ಈ ಷರತ್ತು ಅಸಾಧ್ಯವಾದ ಷರತ್ತಾಗಿದೆ ಹಾಗೂ ನಾನೂ ಕಲ್ಪಿಸಿಕೊಳ್ಳಬಹುದಾಗಿರುವ ಮುಂದಿನ ೧೦ ಅಥವಾ ೨೦ ವರ್ಷಗಳಲ್ಲಿ ಯಾವುದೇ ಬಗೆಯ ಕಾರ್ಮಿಕ ಸಂಘ ಯಾವ ಕಾಲದಲ್ಲಿಯೇ ಆಗಲಿ, ಶೇ. ೫೧ರಷ್ಟು ಹೆಚ್ಚಿನ ಸದಸ್ಯ ಬಲವನ್ನು ತನ್ನ ದಾಖಲೆಗಳಲ್ಲಿ ಹೊಂದಿರುವಷ್ಟರ ಮಟ್ಟಿಗೆ ಸಂಖ್ಯಾಬಲವನ್ನು ಒಗ್ಗೂಡಿಸಿಕೊಳ್ಳಲಾರದು. ಇದರ ಪರಿಣಾಮವಾಗಿ ಮಾಲೀಕರಿಂದ ಮಾನ್ಯ ಮಾಡಲಾಗಿರುವ ಗುಲಾಮ ಸಂಘಗಳ ಹೊರತು ಬೇರಾವ ಬಗೆಯ ಕಾರ್ಮಿಕ ಸಂಘವೂ ಮುಷ್ಕರದ ಸಂದರ್ಭದಲ್ಲಿನ ಸಂಧಾನದ ನಡೆವಳಿಕೆಯಲ್ಲಿ ಕಾರ್ಮಿಕರನ್ನು ಪ್ರತಿನಿಧಿಸುವಂತಿರುವುದಿಲ್ಲ ಎಂಬ ಅನಿವಾರ್ಯವಾದ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಮಾನ್ಯರೆ, ಇನ್ನೆರಡು ಪ್ರಶ್ನೆಗಳತ್ತ ನಾನು ಸದನದ ಗಮನವನ್ನು ಸೆಳೆಯಬಯಸುತ್ತೇನೆ. ಅವು ತುಂಬಾ ಮುಖ್ಯವಾದ ಪ್ರಶ್ನೆಗಳೂ ಹೌದು. ಮೊದಲನೆಯ ಪ್ರಶ್ನೆ ಇದು: ಭಾರತದಲ್ಲಿನ ಕಾರ್ಮಿಕ ಸಂಘಗಳ ಚಳವಳಿಯ ಬೆಳವಣಿಗೆಯ ಮೇಲೆ ಈ ಮಸೂದೆ ಬೀರುವ ಪರಿಣಾಮವೇನು? ಈ ದೃಷ್ಟಿಯಿಂದ ಈ ಮಸೂದೆಯಲ್ಲಿನ ತುಂಬಾ ಪ್ರಮುಖವಾದ ಪ್ರಕರಣವೆಂದರೆ ೮ನೆಯ ಖಂಡದ (ಎ) ಉಪಖಂಡ. ಆ ಖಂಡ ಒಂದು ತತ್ವವನ್ನು ಮುಂದಿರಿಸುತ್ತದೆ. ಅದು ಅತ್ಯಂತ ಅಸಾಮಾನ್ಯ ಸ್ವರೂಪದ್ದಾಗಿದೆ

ಎಂಬುದನ್ನು ತೋರಿಸಿಕೊಡಲು ನಾನು ಪ್ರಯತ್ನಿಸುತ್ತೇನೆ. ಆ ಖಂಡ ಹೀಗೆಂದು ಹೇಳುತ್ತದೆ: "ಸಂದರ್ಭಾನುಗುಣವಾಗಿ ಯಾವುದೇ ಉದ್ಯಮ ಅಥವಾ ವೃತ್ತಿಗೆ ಸಂಬಂಧಿಸಿದಂತೆ, ಯಾವುದೇ ಒಂದು ಸ್ಥಳೀಯ ಪ್ರದೇಶದಲ್ಲಿ ರಿಜಿಸ್ಟ್ರಾರ್ (ನಿಬಂಧಕ) ಅವರು ಒಂದಕ್ಕಿಂತ ಹೆಚ್ಚು ಕಾರ್ಮಿಕ ಸಂಘಗಳನ್ನು ನೋಂದಾಯಿಸುವಂತಿಲ್ಲ." ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಮಸೂದೆಯಲ್ಲಿ ಹೇಳಿರುವುದು ಇದು: ಕಾರ್ಮಿಕ ಸಂಘವಾಗಿ ಸಂಘಟಿತರಾಗಬಯಸಿದರೆ ಪ್ರಸಂಗಾನುಗುಣವಾಗಿ ಯಾವುದೇ ಒಂದು ಉದ್ಯಮ ಅಥವಾ ವೃತ್ತಿಗೆ ಸಂಬಂಧಿಸಿದಂತೆ ಅವರು ಒಂದೇ ಒಂದು ಕಾರ್ಮಿಕ ಸಂಘವನ್ನು ಹೊಂದಿರಬಹುದು ಎಂದು ಅದು ಕಾರ್ಮಿಕರಿಗೆ ಹೇಳುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಮಸೂದೆಯಲ್ಲಿ ಹೇಳಿರುವುದು ಇಷ್ಟು ಮಾತ್ರ: ಕಾರ್ಮಿಕ ಸಂಘವಾಗಿ ಸಂಘಟಿತರಾಗಬಯಸಿದ್ದೇ ಆದರೆ ಒಂದು ಉದ್ಯಮ ಅಥವಾ ಒಂದು ವೃತ್ತಿಯಲ್ಲಿ ನಿರ್ದಿಷ್ಟಪಡಿಸಲಾದ ಸ್ಥಳೀಯ ಪ್ರದೇಶವೊಂದರಲ್ಲಿ ಅವರು ಒಂದೇ ಒಂದು ಕಾರ್ಮಿಕ ಸಂಘವನ್ನು ಹೊಂದಿರಬಹುದು ಎಂದು ಅದು ಕಾರ್ಮಿಕರಿಗೆ ಹೇಳುತ್ತದೆ. ಮಾನ್ಯರೆ, ಮಸೂದೆಯಲ್ಲಿನ ಈ ಒಂದು ಉಪಬಂಧ ಈ ನಾಡಿನಲ್ಲಿ ಕಾರ್ಮಿಕ ಸಂಘಗಳ ಬೆಳವಣಿಗೆಯನ್ನು ತಡೆಗಟ್ಟುತ್ತದೆ ಎಂದು ನಾನು ನಂಬಿದ್ದೇನೆ. ಮೊದಲನೆಯದಾಗಿ ಈ ಮಸೂದೆಯನ್ನು ಮಂಡಿಸಿದ ಸನ್ಮಾನ್ಯ ಸದಸ್ಯರಿಂದ ನಾನು ತಿಳಿಯಬಯಸುವುದು ಇದನ್ನು. ಜಗತ್ತಿನ ಬೇರಾವುದೇ ಭಾಗದಲ್ಲಿ ಎಲ್ಲಿಯಾದರೂ ಈ ತತ್ವವನ್ನು ಅನ್ವಯಿಸಲಾಗಿದೆಯೇ? ಮಾನ್ಯರೆ, ಗ್ರೇಟ್ ಬ್ರಿಟನ್ನಿಗೆ ಸಂಬಂಧಿಸಿದಂತೆ ಕಾರ್ಮಿಕ ಸಂಘಗಳ ಸ್ಥಿತಿಗತಿಗಳ ಬಗ್ಗೆ ನಾನು ಅಧ್ಯಯನ ಮಾಡಿದ್ದೇನೆ. ಗ್ರೇಟ್ ಬ್ರಿಟನ್ನಿನಲ್ಲಿ ಕಾನೂನು ಖಂಡಿತವಾಗಿಯೂ ಇಂಥ ಉಪಬಂಧವನ್ನು ಕಲ್ಪಿಸಿಲ್ಲ ಎಂಬುದನ್ನು ಸಿದ್ಧಪಡಿಸಲು ಈ ಕ್ಷೇತ್ರದಲ್ಲಿ ಆಳವಾದ ಪರಿಜ್ಞಾನವನ್ನು ಹೊಂದಿರುವಂಥ ವ್ಯಕ್ತಿಯೊಬ್ಬರ ಆಧಾರಪೂರ್ವಕ ಹೇಳಿಕೆಯನ್ನು ಉಲ್ಲೇಖಿಸಲು ನಾನು ಸಿದ್ಧನಾಗಿದ್ದೇನೆ. ವಾಸ್ತವವಾಗಿ ತಾವು ಅಳವಡಿಸಿಕೊಳ್ಳಬಯಸಿದ ಯಾವುದೇ ಹಾದಿಯಲ್ಲಿ ತಮ್ಮನ್ನು ಸಂಘಟಿತರನ್ನಾಗಿಸಿಕೊಳ್ಳುವ ಸ್ವಾತಂತ್ರ್ಯವನ್ನು ಆಂಗ್ಲ ಕಾನೂನು ಅವರಿಗೆ ಬಿಟ್ಟುಕೊಟ್ಟಿದೆ. ಕಾರ್ಮಿಕ ಸಂಘ ಒಂದು ಉದ್ಯಮಕ್ಕೆ ಸೀಮಿತವಾಗಿರಬೇಕು ಎಂದು ಅವರನ್ನು ಕಡ್ಡಾಯಪಡಿಸುವಂಥ ಯಾವುದೇ ನಿಯಮವೂ ಅಲ್ಲಿಲ್ಲ. ಒಂದು ಕಾರ್ಮಿಕ ಸಂಘ ಒಂದು ನಿರ್ದಿಷ್ಟ ಪ್ರದೇಶವನ್ನು ಮಾತ್ರ ಒಳಗೊಳ್ಳಬೇಕು ಎಂಬ ಯಾವುದೇ ನಿಯಮವೂ ಅಲ್ಲಿಲ್ಲ. ಈ ವಿಷಯದ ಬಗ್ಗೆ ಸದನದ ಗಮನವನ್ನು ಇತ್ತೀಚೆಗಷ್ಟೇ ಹೊರಬಂದಿರುವ "ಗ್ರೇಟ್ ಬ್ರಿಟನ್ನಿನ ಉದ್ಯೋಗ ವಿನಿಮಯ ಸೇವೆ" (The Employment Exchange Service of Great Britain) ಎಂಬ ಚೆಗ್‌ವಿಡ್ಡನ್ ಮತ್ತು ಮಿರ್ಡಿನ್ ಇವಾನ್ಸ್ ಅವರ ಗ್ರಂಥದ ಒಂದು ಪ್ರಕರಣದತ್ತ ಸೆಳೆಯಬಯಸುತ್ತೇನೆ. ಅವರ ತೀರ್ಮಾನ ಇದು. ನಾನು ೩೦ನೆಯ ಪುಟದಿಂದ ಓದಿ ಹೇಳುತ್ತಿದ್ದೇನೆ:

> "ನಿರ್ದಿಷ್ಟ ಉದ್ಯಮವೊಂದರಲ್ಲಿನ ಎಲ್ಲ ಕಾರ್ಮಿಕರೂ ಒಂದೇ ಕಾರ್ಮಿಕ ಸಂಘದ ಅಡಿಯಲ್ಲಿ ಸಂಘಟಿತರಾಗಬೇಕೆಂದೇನೂ ಇಲ್ಲ. ಅವರು ಬೇರೆ ಬೇರೆ ಕಾರ್ಮಿಕ ಸಂಘಗಳಿಗೆ ಸೇರಿದವರಾಗಿರಬಹುದು. ಕೆಲವು ಪ್ರಕರಣಗಳಲ್ಲಿ ಈ ಸಂಘಟನೆಗೆ ಜಿಲ್ಲೆಯೇ ಆಧಾರವಾಗಿರಬಹುದು. ಬೇರೆಯವುಗಳಲ್ಲಿ ವೃತ್ತಿಯೇ ಆಧಾರವಾಗಿರಬಹುದು. ನಿರ್ದಿಷ್ಟ ಉದ್ಯಮವೊಂದರಲ್ಲಿ ಕೆಲವು ಕಾರ್ಮಿಕರ ಒಂದು ಇನ್ನೊಂದು ಉದ್ಯಮದಲ್ಲಿನ ಕಾರ್ಮಿಕರಿಗೆ ಸಾಮಾನ್ಯವಾಗಿ ಮೀಸಲಾಗಿರುವಂಥ ಕಾರ್ಮಿಕ ಸಂಘಕ್ಕೆ ಅಥವಾ ಸಾಮಾನ್ಯ ಕಾರ್ಮಿಕ ಸಂಘಕ್ಕೆ ಕೂಡಾ ಸೇರಿದವರಾಗಿರ

ಬಹುದು. ಅನೇಕ ಪ್ರಸಂಗಗಳಲ್ಲಿ ಹಲವು ಸಂಘಗಳು ಮಹಾಸಂಘವೊಂದರಲ್ಲಿ ಸೇರ್ಪಡೆಗೊಂಡಿರ ಬಹುದು ಅಥವಾ ನಿರ್ದಿಷ್ಟ ಉದ್ಯಮವನ್ನು ಇಡಿಯಾಗಿ ಅಥವಾ ಅದರ ಹೆಚ್ಚಿನ ಭಾಗವನ್ನು ಒಳಗೊಂಡಿರುವಂಥ ಕಾರ್ಮಿಕ ಸಂಘದಲ್ಲಿ ಸೇರ್ಪಡೆಗೊಂಡಿರಬಹುದು ಅಥವಾ ಒಂದೇ ವೃತ್ತಿಯ ಅಥವಾ ವಿಭಿನ್ನ ಉದ್ಯಮಗಳಲ್ಲಿನ ಸದೃಶ ವೃತ್ತಿಯ ಸದಸ್ಯರನ್ನೊಳಗೊಂಡಿರುವ ಮಹಾ ಸಂಘಗಳಲ್ಲಿ ಅಥವಾ ಕಾರ್ಮಿಕ ಸಂಘಗಳಲ್ಲಿ ಅಥವಾ ಸಾಮಾನ್ಯ ಕಾರ್ಮಿಕ ಸಂಘಗಳ ಯಾವುದೇ ಮಹಾ ಸಂಘಗಳಲ್ಲಿ ಸೇರ್ಪಡೆಗೊಂಡಿರಬಹುದು."

ಇಂಗ್ಲೆಂಡಿನಲ್ಲಿ ಸಾಮಾನ್ಯ ಕಾರ್ಮಿಕ ಸಂಘಗಳು ಇರಬಹುದೆಂಬುದನ್ನು ಇದು ತೋರಿಸುತ್ತದೆ. ಅಂದರೆ, ವಿವಿಧ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಒಂದುಗೂಡಿ ಕಾರ್ಮಿಕ ಸಂಘ ವನ್ನು ರೂಪಿಸಿಕೊಳ್ಳಬಹುದು. ಸಾಮಾನ್ಯ ಕಾರ್ಮಿಕ ಸಂಘ ಎಂದರೆ ಇದೇ. ಉದ್ಯಮ ಅಥವಾ ವೃತ್ತಿಗೆ ಸಂಬಂಧಿಸಿದಂತೆ ಒಬ್ಬ ಕಾರ್ಮಿಕನಿಗೂ ಇನ್ನೊಬ್ಬ ಕಾರ್ಮಿಕನಿಗೂ ಯಾವುದೇ ಸಂಬಂಧ ಇಲ್ಲದೆ ಇರಬಹುದು. ಅಲ್ಲಿ ಸಾಮಾನ್ಯ ಕಾರ್ಮಿಕ ಸಂಘವೊಂದು ಇರಬಹುದು. ವಿವಿಧ ಉದ್ಯಮಗಳಿಗೆ ಸೇರಿದ ವ್ಯಕ್ತಿಗಳು ಇಂಗ್ಲೆಂಡಿನಲ್ಲಿ ಕಾರ್ಮಿಕ ಸಂಘವೊಂದನ್ನು ರೂಪಿಸಿಕೊಳ್ಳಬಹುದೆಂದೂ ಈ ಲೇಖಕ ಹೇಳುತ್ತಾನೆ. ಉದಾಹರಣೆಗೆ ಒಬ್ಬ ವ್ಯಕ್ತಿ ಗಣಿಗಾರನಾಗಿರಬಹುದು. ಗಣಿಗಾರಿಕೆಗೆ ಯಾವುದೇ ಸಂಬಂಧವೂ ಇರದ ಬೇರೊಂದು ಕಾರ್ಮಿಕ ಸ್ಥಳಕ್ಕೆ ಅವನು ಸದಸ್ಯನಾಗಬಹುದು. ಹೀಗಾಗಿ, ಯಾವ ರೀತಿಯಲ್ಲಿ ಯಾವ ಪರಿಸ್ಥಿತಿಗಳಲ್ಲಿ ತಾವು ಸಂಘಟಿತರಾಗಬಹುದೆಂಬುದನ್ನು ತೀರ್ಮಾನಿಸಿರುವುದನ್ನು ಇಂಗ್ಲೆಂಡಿನಲ್ಲಿ ಸಂಪೂರ್ಣ ವಾಗಿ ಕಾರ್ಮಿಕರಿಗೇ ಬಿಡಲಾಗಿದೆ. ಕಾನೂನು ಎಚ್ಚರವಹಿಸಿರುವುದು ಆ ಕಾರ್ಮಿಕ ಸಂಘ ಕಾನೂನು ಬಾಹಿರ ಸಂಸ್ಥೆಯಾಗದಂತೆ ನೋಡಿಕೊಳ್ಳುವಷ್ಟರಮಟ್ಟಿಗೆ ಮಾತ್ರ. ಕಾನೂನು ಎಚ್ಚರ ವಹಿಸುವುದು ಆ ಕಾರ್ಮಿಕ ಸಂಘ ನೋಂದಣಿಗೊಳ್ಳುವುದಕ್ಕೆ ಮುಂಚೆ, ಕಾನೂನುಬಾಹಿರವೆಂದು ಕಾನೂನು ಪರಿಗಣಿಸದಿರುವಂಥ ಕೆಲವೊಂದು ಧ್ಯೇಯೋದ್ದೇಶಗಳನ್ನು ಹೊಂದಿದೆ ಎಂಬುದನ್ನು ದೃಢಪಡಿಸಿಕೊಳ್ಳು ವಷ್ಟರ ಮಟ್ಟಿಗೆ ಮಾತ್ರವೇ. ಕಾರ್ಮಿಕ ಸಂಘಗಳ ಧ್ಯೇಯೋದ್ದೇಶಗಳನ್ನು ಪರೀಕ್ಷಿಸುವುದಕ್ಕಿಂತ ಮಿಗಿಲಾಗಿ, ಒಂದು ನಿರ್ದಿಷ್ಟ ರೀತಿಯಲ್ಲಿ ಆ ಕಾರ್ಮಿಕ ಸಂಘ ಸಂಘಟಿತವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಆಂಗ್ಲ ಕಾನೂನು ಖಂಡಿತವಾಗಿಯೂ ಪರಿಶೀಲಿಸುವುದಿಲ್ಲ. ಈ ತತ್ವವನ್ನು ನಮ್ಮ ನಾಡಿಗೆ ಏಕೆ ಆಮದು ಮಾಡಿಕೊಳ್ಳಬಾರದೆಂಬುದು ನನಗೆ ಅರ್ಥವಾಗುವುದಿಲ್ಲ. ಈಗ ಈ ಮಸೂದೆಯ ಮೂಲಕ ಮಂಡಿಸಲಾಗುತ್ತಿರುವ ತತ್ವಕ್ಕೆ ಕಾರಣವೇನು ಎಂಬುದು ನನಗೆ ಗೊತ್ತಿಲ್ಲ. ಆ ತತ್ವಕ್ಕೆ ನಾನು ಸಮರ್ಥನೆಯನ್ನು ಕಾಣಲಾರದೆ ಇದ್ದೇನೆ.

ಮಾನ್ಯರೆ, ಒಂದು ಉದ್ಯಮದಲ್ಲಿ ಅಥವಾ ಒಂದು ವೃತ್ತಿಯಲ್ಲಿ ಇರುವ ಎಲ್ಲ ಕಾರ್ಮಿಕರಿಗಾಗಿ ಒಂದೇ ಒಂದು ಕಾರ್ಮಿಕ ಸಂಘವನ್ನು ಹೊಂದಿರಲು ಸಾಧ್ಯವೆ? ಇದು ಸಾಧ್ಯವಿಲ್ಲವೆಂಬುದು ನನಗೀಗ ಖಚಿತವಾಗಿದೆ ಹಾಗೂ ಈ ಕಾರಣದಿಂದಾಗಿ ಎಲ್ಲರಿಗೂ ತಿಳಿದಿರುವಂತೆ ಕಾರ್ಮಿಕ ಸಂಘವೊಂದು ಮೂರು ವಿಭಿನ್ನ ಉದ್ದೇಶಗಳನ್ನು ಅಥವಾ ಮೂರು ವಿಭಿನ್ನ ಧ್ಯೇಯಗಳನ್ನು ಹೊಂದಿರಬಹುದು. ಕಾರ್ಮಿಕ ಸಂಘವೊಂದು ಶುದ್ಧಾಂಗವಾಗಿ ಕಾರ್ಮಿಕ ಸಂಘದ ಉದ್ದೇಶಗಳೆಂದು ಕರೆಯಲಾಗಿರುವಂಥ ಉದ್ದೇಶಗಳನ್ನು ಹೊಂದಿರಬಹುದು, ಅಂದರೆ ಕಾರ್ಮಿಕರಿಗಾಗಿ ಅವರ ವಿಶಿಷ್ಟ ಹಿತಾಸಕ್ತಿಗಳನ್ನು– ವೇತನಾದಿಗಳು ಕೆಲಸದ ಘಂಟೆಗಳು, ಉದ್ಯಮದಲ್ಲಿನ ಬಡ್ತಿಗಳು ಇವೇ ಮೊದಲಾದವನ್ನು

ಸಂವರ್ಧಿಸಿಕೊಂಡು ಬರುವ ಉದ್ದೇಶಗಳನ್ನು ಹೊಂದಿರಬಹುದು. ಇವುಗಳನ್ನು ಶುದ್ಧಾಂಗವಾಗಿ ಕಾರ್ಮಿಕ ಸಂಘದ ಧ್ಯೇಯಗಳೆಂದು ಕರೆಯಲಾಗಿದೆ. ಇವುಗಳೇ ಅಲ್ಲದೆ, ಕಾರ್ಮಿಕ ಸಂಘ ಸಾಮಾಜಿಕ ಧ್ಯೇಯಗಳೆಂದು ಕರೆಯಲಾಗಿರುವ ಕೆಲವೊಂದು ಲಾಭಗಳನ್ನು– ಉದಾಹರಣೆಗೆ ವೃದ್ಧಾಪ್ಯವೇತನ ನೀಡಿಕೆ, ತನ್ನ ಸದಸ್ಯರಿಗೆ ನಿರುದ್ಯೋಗ ಭತ್ಯೆ ನೀಡಿಕೆ, ಅವರ ವಿಧವೆಯರಿಗೆ ಕೌಟುಂಬಿಕ ನಿವೃತ್ತಿ ವೇತನ ನೀಡಿಕೆ ಇವೇ ಮೊದಲಾದುವನ್ನು ಒದಗಿಸಿಕೊಡುವ ಧ್ಯೇಯವನ್ನು ಹೊಂದಿರಬಹುದು. ಇಂಗ್ಲೆಂಡಿನಲ್ಲಿ ಇವುಗಳನ್ನು ಸಾಮಾಜಿಕ ಉದ್ದೇಶಗಳೆಂದು ಮಾನ್ಯ ಮಾಡಲಾಗಿದೆ. ಇದರ ಜೊತೆಗೆ ಕಾರ್ಮಿಕ ಸಂಘ ರಾಜಕೀಯ ಉದ್ದೇಶಗಳೆಂದು ಮಾನ್ಯ ಮಾಡಲಾಗಿದೆ. ಇದರ ಜೊತೆಗೆ ಕಾರ್ಮಿಕ ಸಂಘ ರಾಜಕೀಯ ಉದ್ದೇಶವನ್ನು ಹೊಂದಿರಬಹುದು. ತನ್ನ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳ ರಕ್ಷಣೆಗೆ ಯಾವುದು ಅತ್ಯುತ್ತಮವಾಗಿ ಹೊಂದಿಕೊಳ್ಳುತ್ತದೆ ಎಂದು ಕಾರ್ಮಿಕ ಸಂಘ ಭಾವಿಸುತ್ತದೆಯೋ ಆ ನಿರ್ದಿಷ್ಟ ರಾಜಕೀಯ ಧಾರೆಯನ್ನು ಬೆಂಬಲಿಸುವ ಧ್ಯೇಯವೇ ರಾಜಕೀಯ ಉದ್ದೇಶವೆನ್ನಿಸಿಕೊಳ್ಳುತ್ತದೆ. ಮಾನ್ಯರೆ, ಈಗ ನಾನು ಕೇಳಬಯಸುವ ಪ್ರಶ್ನೆ ಇದು. ನಿರ್ದಿಷ್ಟ ಉದ್ಯಮವೊಂದರಲ್ಲಿ ನೇಮಕಗೊಂಡಿರುವ ಎಲ್ಲ ವ್ಯಕ್ತಿಗಳೂ ಈ ಮೂರೂ ಉದ್ದೇಶಗಳ ವಿಷಯದಲ್ಲೂ ಏಕಾಭಿಪ್ರಾಯವನ್ನು ಹೊಂದಿರುವುದು ಸಾಧ್ಯವೆ? ಎಲ್ಲ ಸಂದರ್ಭಗಳಲ್ಲೂ ಇತ್ಯಾತ್ಮಕ ವಾದ ಉತ್ತರವನ್ನು ಕೊಡಲು ಸಾಧ್ಯವಾಗುತ್ತದೆಂದು ನಾನು ಭಾವಿಸಲಾರೆ. ಏಕೆ ನಾವು ಇತ್ಯಾತ್ಮಕವಾದ ಉತ್ತರವನ್ನು ಪಡೆಯಲಾಗುವುದಿಲ್ಲ ಎಂಬುದನ್ನು ತೋರಿಸಿಕೊಡುವ ಸಲುವಾಗಿ, ಈ ವಿಚಾರವನ್ನು ನಾನು ಸ್ವಲ್ಪ ವಿವರವಾಗಿ ಚರ್ಚಿಸಲು ಉದ್ದೇಶಿಸಿದ್ದೇನೆ. ಇಂಥ ಒಂದು ಪ್ರಸಂಗವನ್ನು ತೆಗೆದುಕೊಳ್ಳೋಣ. ಉದಾಹರಣೆಗೆ ಮುಂಬಯಿಯಲ್ಲಿನ ಜವಳಿ ಉದ್ಯಮವೊಂದರಲ್ಲಿ ಒಂದು ನಿರ್ದಿಷ್ಟ ಸಂಖ್ಯೆಯ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆಂದು ಇಟ್ಟುಕೊಳ್ಳೋಣ. ನನ್ನ ವಾದಾಂಶವನ್ನು ನಾನು ಒತ್ತಿ ಹೇಳಬಯಸುವುದರಿಂದ ಈ ವಿಷಯದಲ್ಲಿ ನಾನು ತುಂಬಾ ನಿರ್ದಿಷ್ಟವಾಗಿರುತ್ತೇನೆ. ಕೆಲವೊಂದು ಮಂದಿ ಮುಸ್ಲಿಂ ಸದಸ್ಯರಿದ್ದಾರೆ. ಅವರೆಲ್ಲ ಗಿರಣಿ ಉದ್ಯಮದಲ್ಲಿ ಕಾರ್ಮಿಕರಾಗಿದ್ದಾರೆ. ಅವರು ಕಾರ್ಮಿಕ ಸಂಘವೊಂದರ ಸದಸ್ಯರಾಗಲು ಕಾತರದಿಂದ ಇದ್ದಾರೆ. ಆದರೆ ಮುಸ್ಲಿಮೇತರರಾಗಿರುವ ಇತರ ವ್ಯಕ್ತಿಗಳು ತಮ್ಮ ಕಾರ್ಮಿಕ ಸಂಘ ಕಾಂಗ್ರೆಸ್ ಪಕ್ಷದ ರಾಜಕೀಯ ಧೋರಣೆಗಳನ್ನು ಅನುಸರಿಸಬೇಕೆಂದು ಇಚ್ಛಿಸುತ್ತಾರೆ. ಕಾರ್ಮಿಕ ಸಂಘಕ್ಕೆ ಸೇರಲು ಸಿದ್ಧರಾಗಿರುವ, ಆದರೆ ಮುಸ್ಲಿಂ ಲೀಗಿನ ರಾಜಕೀಯ ಧೋರಣೆಗಳನ್ನು ಅನುಸರಿಸಬಯಸುವ ಮುಸ್ಲಿಂ ಸದಸ್ಯರೂ ಇದ್ದಾರೆ. ಎರಡು ಪಕ್ಷಗಳಲ್ಲಿ ಯಾವುದಾದರೂ ಒಂದು ಪಕ್ಷ ತನ್ನ ರಾಜಕೀಯ ಕಾರ್ಯಕ್ರಮವನ್ನು ಕೈಬಿಡಲು ಸಿದ್ಧವಾಗುವವರೆಗೆ ಅವರು ಅಂದರೆ ಈ ಎರಡು ಗುಂಪುಗಳು ಅಥವಾ ಬಣಗಳು ಒಂದುಗೂಡುವುದು ಹೇಗೆ ಸಾಧ್ಯ? ಇನ್ನೊಂದು ನಿದರ್ಶನವನ್ನು ತೆಗೆದುಕೊಳ್ಳಿ. ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ಕೆಲವು ಮಂದಿ ಕಾರ್ಮಿಕರಿದ್ದಾರೆ ಎಂದಿಟ್ಟುಕೊಳ್ಳಿ. ಅವರು ಕಾರ್ಮಿಕ ಸಂಘಕ್ಕೆ ಸೇರಲು ಸಿದ್ಧರಾಗಿದ್ದಾರೆ. ಆದರೆ ತಾವು ಬಂದಿರುವ ಸಮುದಾಯದ ಕೆಲವೊಂದು ಸಾಮಾಜಿಕ ಧ್ಯೇಯಗಳಿಗೆ ಮತ್ತು ಸಾಮಾಜಿಕ ಉದ್ದೇಶಗಳಿಗೆ ಆ ಕಾರ್ಮಿಕ ಸಂಘಗಳು ಬೆಂಬಲ ನೀಡಬೇಕೆಂದೂ ಅವರು ಇಚ್ಛಿಸುತ್ತಾರೆ. ಇನ್ನೂ ಕೆಲವು ಸೌಲಭ್ಯಗಳನ್ನು ತಮಗೆ ಒದಗಿಸಬೇಕೆಂದೂ ಅವರು ಇಚ್ಛಿಸುತ್ತಾರೆ. ಆದರೆ ಇತರ ವರ್ಗಗಳಿಗೆ ಸೇರಿದ ಕಾರ್ಮಿಕರು ಇದನ್ನು ಒಪ್ಪುವುದಿಲ್ಲ. ಹೀಗಿರುವಾಗ ಕಾರ್ಮಿಕ ಸಂಘವನ್ನು ರೂಪಿಸುವುದು ಹೇಗೆ ಸಾಧ್ಯ ಎಂಬುದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಇದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ. ಒಂದು ಬಗೆಯ ಮನೆಯನ್ನು ನೀವು ಕಟ್ಟಬೇಕು, ದಕ್ಷಿಣ ದಿಕ್ಕಿನಲ್ಲಿ ಮಾತ್ರವೇ ನೀವು ಬಾಗಿಲನ್ನಿರಿಸಬೇಕು, ಉತ್ತರ ದಿಕ್ಕಿನಲ್ಲಿ ಯಾವುದೇ ಬಾಗಿಲನ್ನು

ಇಡಕೂಡದು. ಒಂದು ಬಗೆಯ ಕಿಟಕಿಯನ್ನು ಮಾತ್ರವೇ ಇರಿಸಬೇಕು, ನಿರ್ದಿಷ್ಟ ಎತ್ತರವನ್ನು ಮೀರುವಂಥ ಮನೆಯನ್ನೇ ಕಟ್ಟಬೇಕು. ಒಂದು ನಿರ್ದಿಷ್ಟ ಬಗೆಯ ಉನ್ನತಿಯನ್ನು ಮಾತ್ರವೇ ಅದು ಹೊಂದಿರಬೇಕು ಎಂದು ಆರೋಗ್ಯಾಧಿಕಾರಿ ಒತ್ತಾಯಪಡಿಸುವಂತೆ ಈ ಮಸೂದೆಯಲ್ಲಿನ ಪ್ರಸ್ತಾಪವೂ ತತ್ವನಿಷ್ಠವಾಗಿ ಇದ್ದಿದ್ದರೆ ಅದನ್ನು ನಾನು ಬುದ್ಧಿವಂತಿಕೆಯ ಅಥವಾ ವಿವೇಕದ ಕ್ರಮವೆಂದು ಭಾವಿಸುತ್ತಿದ್ದೆ. ಈ ನಿಯಮಗಳಿಗೆ ಅನುರೂಪವಾಗಿರುವಂತೆ ಮನೆಯನ್ನು ಕಟ್ಟಬೇಕು. ಇಲ್ಲದಿದ್ದರೆ, ನೀವು ಬೀದಿಯಲ್ಲಿಯೇ ವಾಸವಾಗಿರಬೇಕು ಎಂದು ಅವರು ಹೇಳುವಂತೆ ಈ ಮಸೂದೆಯೂ ಕಾರ್ಮಿಕರಿಗೆ ಇದೇ ಬಗೆಯ ಪರ್ಯಾಯಗಳನ್ನು ಮುಂದಿರಿಸುತ್ತದೆ. ಕಾರ್ಮಿಕರ ಸಂಘಟನೆಯ ವಿಚಾರವನ್ನು ಕಾರ್ಮಿಕರ ಇಚ್ಛೆಗೇ ಬಿಡುವುದರಿಂದ ಉಂಟಾಗುವ ಕೇಡಾದರೂ ಏನು? ಅದರ ವಿಚಾರದಲ್ಲಿ ನಿಮಗೇಕೆ ಈ ಆತಂಕ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಒಂದು ಉದ್ಯಮದಲ್ಲಿ ಕೆಲಸ ಮಾಡುತ್ತಿರುವ ಎಲ್ಲ ವ್ಯಕ್ತಿಗಳನ್ನು ಒಂದೇ ಕಾರ್ಮಿಕ ಸಂಘದ ಕೆಳಗೆ ತರುವುದರಿಂದ ನಿಮಗೆ ದೊರೆಯುವ ಲಾಭವಾದರೂ ಏನು? ಏಕಾಗಿ ಹಾಗೆ ಮಾಡಬೇಕು? ಇದು ಯಾವುದೂ ನನಗೆ ಅರ್ಥವಾಗುತ್ತಿಲ್ಲ. ಇತ್ತ ಈಗಾಗಲೇ ನಾನು ನಿವೇದಿಸಿರುವಂತೆ ಅಸಾಧ್ಯವಾಗಿರುವ ಷರತ್ತುಗಳನ್ನು ಹಾಕಿದರೆ, ನನ್ನ ದೃಷ್ಟಿಯಲ್ಲಿ ಕಾರ್ಮಿಕರು ಸಂಘಗಳನ್ನು ರಚಿಸುವ ಗೋಜಿಗೇ ಹೋಗುವುದಿಲ್ಲ. ಮುಸ್ಲಿಮರು ಇಚ್ಛಿಸುವುದಾದರೆ ತಮ್ಮ ರಾಜಕೀಯ ಒಲವಿನ ಪಕ್ಷವನ್ನು ಆಯ್ದುಕೊಳ್ಳುವ ಅವಕಾಶವನ್ನು ಅವರಿಗೆ ನೀಡಲು ನಾವೆಲ್ಲರೂ ಒಪ್ಪಬೇಕೆಂದು ನನ್ನ ಭಾವನೆ. ಮುಸ್ಲಿಂ ಲೀಗ್ ಹಾಕಿಕೊಟ್ಟಿರುವ ನೀತಿಯನ್ನು ತಮ್ಮ ಕಾರ್ಮಿಕ ಸಂಘ ಅನುಸರಿಸಲು ಸಾಧ್ಯವಾಗದಿದ್ದರೆ, ಕಾರ್ಮಿಕ ಸಂಘವನ್ನು ಹೊಂದುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಅವರು ಭಾವಿಸಿದರೆ ಅವರು ಕಾರ್ಮಿಕ ಸಂಘವನ್ನೇ ರಚಿಸಿಕೊಳ್ಳದೆ ಹೋಗಬಹುದು. ಇದೇ ರೀತಿಯಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಏನಾದರೊಂದು ಬಗೆಯ ಅವಕಾಶವನ್ನು ಮಾಡಿಕೊಡಲು ಹಾಗೂ ತಮ್ಮ ವರ್ಗದವರಿಗೆ ಸಂಬಂಧಿಸಿದ ಕೆಲವೊಂದು ಅನುಕೂಲಗಳನ್ನು ಮಾಡಿ ಕೊಡಲು ಅವರಿಗೆ ಸ್ವಾತಂತ್ರ್ಯವಿಲ್ಲವೆಂದಾದರೆ ಅಸ್ಪೃಶ್ಯರು ಅಂಥ ಸಂಘವನ್ನು ರಚಿಸಿಕೊಳ್ಳದೆಯೇ ಹೋಗಬಹುದು. ಹಾಗೆ ಒತ್ತಾಯ ಮಾಡುವ ಮೂಲಕ ನೀವು ಸೃಷ್ಟಿಸುತ್ತಿರುವ ಪರಿಸ್ಥಿತಿಯಾದರೂ ಎಂಥದು? ನೀವು ಸೃಷ್ಟಿಸುತ್ತಿರುವ ಪರಿಸ್ಥಿತಿ ಎಂಥದು ಎಂದರೆ ಯಾವುದೇ ಕಾರ್ಮಿಕ ಸಂಘವನ್ನು ಕಾರ್ಮಿಕರು ರಚಿಸಿಕೊಳ್ಳದಂತೆ ಮಾಡುತ್ತಿದ್ದೀರಿ. ಹೀಗಾಗಿ ಈ ಉಪಬಂಧ ತುಂಬಾ ಕಿಡಿಗೇಡಿತನದಿಂದ ಕೂಡಿರುವಂಥದು ಎಂದು ನಾನು ನಿವೇದಿಸಬಯಸುತ್ತೇನೆ.

ಮಾನ್ಯರೆ, ೪ರಿಂದ ೨೦ರವರೆಗಿನ ಉಪಬಂಧಗಳಿಂದ ಮೂಡುವ ಎರಡನೆಯ ಸಂಗತಿ ಎಂದರೆ ಇದು: ಕಾರ್ಮಿಕ ಸಂಘಗಳ ಚಳವಳಿಯ ಸ್ಥಿರತೆಯ ಮೇಲೆ ಈ ಮಸೂದೆಯಿಂದ ಉಂಟಾಗಬಯಸುವ ಪರಿಣಾಮವಾದರೂ ಏನು? ಮಾಲೀಕರ ನಿಯಂತ್ರಣದಿಂದ ಮುಕ್ತವಾಗಲು ಕೊನೆಗಾದರೂ ಹಾತೊರೆಯುವಂಥ ಒಂದು ಬಗೆಯ ಕಾರ್ಮಿಕ ಸಂಘ ಬೆಳೆದು ನಿಲ್ಲುತ್ತದೆ ಎಂದಾದಲ್ಲಿ, ಈ ಮಸೂದೆಯಲ್ಲಿನ ಉಪಬಂಧಗಳ ಅಡಿಯಲ್ಲಿ ಆ ಕಾರ್ಮಿಕ ಸಂಘ ಕಾರ್ಯಶೀಲವಾಗಿರುವಂಥ ಕಾರ್ಮಿಕ ಸಂಘವಾಗಿ ಉಳಿದುಕೊಂಡಿರುತ್ತದೆ ಎಂಬ ಭರವಸೆ ಏನಾದರೂ ಇದೆಯೇ? ಈ ಮಸೂದೆಯ ಉಪಬಂಧಗಳನ್ನು ಕುರಿತಂತೆ ನಾನು ಅಧ್ಯಯನ ಮಾಡಿರುವಷ್ಟರ ಮಟ್ಟಿಗೆ ಹೇಳುವುದಾದರೆ ಕಾರ್ಮಿಕ ಸಂಘವೊಂದು ಒಮ್ಮೆ ನೋಂದಣಿಗೊಂಡಿತೆಂದರೆ ಅದರ ನೋಂದಣಿ ಮುಂದುವರಿದುಕೊಂಡೇ ಬರುತ್ತದೆ. ೧೧ನೆಯ ಖಂಡ ಅತ್ಯಂತ ಅಪಾಯಕಾರಿಯಾಗಿರುವಂಥ ಖಂಡ. ಅದು ಕತ್ತಿಯಂತೆ ಕಾರ್ಮಿಕ

ಸಂಘದ ಮೇಲೆ ಸದಾಕಾಲವೂ ತೂಗಾಡುತ್ತಿರುತ್ತದೆ. ನೋಂದಣಿಗೊಂಡರೂ ಅದರ ಬಾಳು ಯಾವಾಗಲೂ ಸಂದಿಗ್ಧವಾಗಿಯೇ ಇರುತ್ತದೆ. ಇಂದು ಅದಕ್ಕೆ ಕಾನೂನುಬದ್ಧವಾದ ಅಸ್ತಿತ್ವ ಇದ್ದರೂ ನಾಳೆಯ ದಿವಸ ಅದಕ್ಕೆ ಕಾನೂನುಬದ್ಧವಾದ ಅಸ್ತಿತ್ವ ಇರದೆ ಹೋಗಬಹುದು. ಏಕೆಂದರೆ, ಈ ಖಂಡದ ಉಪಬಂಧಗಳ ಮೇರೆಗೆ ಕೆಲವೊಂದು ಪರಿಸ್ಥಿತಿಗಳು ಏರ್ಪಟ್ಟಲ್ಲಿ ಯಾವುದೇ ಸಮಯದಲ್ಲಿ ಅದರ ನೋಂದಣಿಯನ್ನು ರದ್ದುಪಡಿಸಬಹುದಾಗಿದೆ. ಒಮ್ಮೆ ನೋಂದಣಿ ರದ್ದಾಯಿತೆಂದರೆ, ಅಗಾಧವಾದ ಪ್ರಯತ್ನ, ಅಗಾಧವಾದ ಶಕ್ತಿ–ಸಾಮರ್ಥ್ಯಗಳನ್ನು ವ್ಯಯಮಾಡಿ ಕಟ್ಟಿದಂಥ ಸಂಘ ಕೊಚ್ಚಿಕೊಂಡು ಹೋಗಿಬಿಡುತ್ತದೆ. ಮಾನ್ಯರೆ, ಈ ಮಾತನ್ನು ನಾನು ಬಳಸಬಹುದು ಎಂದಾದಲ್ಲಿ ಕಾರ್ಮಿಕ ಸಂಘವೊಂದರ ನೋಂದಣಿಯ ರದ್ಧತಿಯ ವಿಷಯ ಪ್ರತಿಸ್ಪರ್ಧಿಯಾದ ಕಾರ್ಮಿಕ ಸಂಘದ ಅಥವಾ ಉದ್ಯೋಗದಾತನ ಇಷ್ಟಾನಿಷ್ಟಗಳನ್ನು ಅವಲಂಬಿಸಿರುತ್ತದೆ ಎಂಬ ಈ ಕಿಡಿಗೇಡಿತನವೂ ಮಸೂದೆಯಲ್ಲಿದೆ. ಇದರ ಅರ್ಥ ಇಷ್ಟೇ: ವಿಭಿನ್ನ ಕಾರ್ಮಿಕ ಸಂಘಗಳಿಗೆ ಸೇರಿದ ವ್ಯಕ್ತಿಗಳ ನಡುವೆ ಪ್ರತಿಸ್ಪರ್ಧಿ ಕಾರ್ಮಿಕ ಸಂಘಗಳನ್ನು ನಾಶ ಮಾಡಿಬಿಡುವ ಉದ್ದೇಶದಿಂದ ಕೂಡಿದ ಪರಸ್ಪರ ದ್ವೇಷ, ಪರಸ್ಪರ ಅಸೂಯೆ ಹಾಗೂ ತೀವ್ರವೂ ಹಾನಿಕಾರಕವೂ ಆದ ಸ್ಪರ್ಧೆ ಏರ್ಪಡುತ್ತದೆ. ಹೀಗಾಗಿ ಈ ಮಸೂದೆಯ ಮೇರೆಗೆ ನೋಂದಣಿಗೊಂಡಂಥ ಕಾರ್ಮಿಕ ಸಂಘ ಒಮ್ಮೆ ತಾನು ಪಡೆದುಕೊಂಡಿರುವ ನೋಂದಣಿಯನ್ನು ಸತತವಾಗಿ ಉಳಿಸಿಕೊಂಡು ಬರಬೇಕಾದರೆ ಅದು ಕಾರ್ಮಿಕರ ಒಟ್ಟಾರೆ ಸಂಖ್ಯೆಯ ಶೇ. ೫೧ರಷ್ಟು ಮಂದಿಯನ್ನು ಸದಸ್ಯರನ್ನಾಗಿ ಎಲ್ಲ ಕಾಲದಲ್ಲೂ ಹೊಂದಿರುತ್ತದೆ ಎಂಬುದನ್ನು ತೋರಿಸಿಕೊಡಬೇಕಾಗುತ್ತದೆ. ಮಾನ್ಯರೆ, ನಾನು ಮತ್ತೆ ಅದೇ ಪ್ರಶ್ನೆಯನ್ನು ಕೇಳುತ್ತೇನೆ: ನೇಮಕಗೊಂಡಿರುವ ಒಟ್ಟಾರೆ ಕಾರ್ಮಿಕರ ಸಂಖ್ಯೆಯಲ್ಲಿ ಶೇ. ೫೧ರಷ್ಟು ಮಂದಿಯನ್ನು ತಾನು ಸದಸ್ಯರನ್ನಾಗಿ ಹೊಂದಿರುವುದಾಗಿ ತೋರಿಸಿಕೊಡಲು ಯಾವುದೇ ಕಾರ್ಮಿಕ ಸಂಘಕ್ಕೆ ಸಾಧ್ಯ ವಾಗುತ್ತದೆಯೇ? ವರ್ಷದಿಂದ ವರ್ಷಕ್ಕೆ ಕಾರ್ಮಿಕ ಸಂಘಗಳ ಸದಸ್ಯತ್ವದ ಸಂಖ್ಯೆ ಹೇಗೆ ಡೋಲಾಯಮಾನ ವಾಗಿರುತ್ತದೆ ಎಂಬುದನ್ನು ಈ ಸದನಕ್ಕೆ ನಾನು ತೋರಿಸಿಕೊಟ್ಟರೆ, ಅದೊಂದು ಸ್ವಾರಸ್ಯಕರವಾದ ಸಂಗತಿಯೇ ಆಗುತ್ತದೆಂದು ನಂಬಿದ್ದೇನೆ. ಗ್ರೇಟ್ ಬ್ರಿಟನ್ನಿಗೆ ಸಂಬಂಧಿಸಿದ ಅಂಕಿ–ಅಂಶಗಳಿಂದ ನಾನು ಈ ಅಂಕಿ–ಅಂಶಗಳನ್ನು ಕೊಡುತ್ತಿದ್ದೇನೆ. ೧೮೯೨ ರಲ್ಲಿ ಕಾರ್ಮಿಕ ಸಂಘಗಳ ಒಟ್ಟಾರೆ ಸದಸ್ಯತ್ವ ೧,೫೭೬,೦೦೦ವಾಗಿತ್ತು. ೧೯೧೧೦ರಲ್ಲಿ ಅದು ೨,೫೬೫,೦೦೦ವಾಗಿತ್ತು. ೧೯೨೦ರಲ್ಲಿ ಅದು ೮,೩೪೬,೦೦೦ ಆಗಿತ್ತು. ಆದರೆ ೧೯೩೪ರಲ್ಲಿ ಅದು ೪,೪೪೧,೦೦ಕ್ಕೆ ಇಳಿಯಿತು. ಕಾರ್ಮಿಕ ಸಂಘಗಳ ಸದಸ್ಯತ್ವದ ಇಳಿತ ಹತ್ತು ವರ್ಷಗಳ ಅವಧಿಯಲ್ಲಿ ಶೇ.೫೦ರಷ್ಟಾಗಿತ್ತು. ನಿರ್ದಿಷ್ಟ ಉದ್ಯಮವೊಂದರಲ್ಲಿನ ಅಂಕಿ–ಅಂಶಗಳನ್ನೇ ತೆಗೆದುಕೊಳ್ಳಿ. ಕೃಷಿ ಉದ್ಯಮದಲ್ಲಿ ೧೯೨೦ರಲ್ಲಿ ಒಟ್ಟಾರೆ ಸದಸ್ಯತ್ವ ೨,೧೦,೦೦೦ ವಾಗಿದ್ದರೆ, ೧೯೩೨ರಲ್ಲಿ ಅದು ೩೩,೦೦೦ ಮಾತ್ರವಾಗಿತ್ತು. ಅದು ೨೧೦,೦೦೦ದಿಂದ ೩೩,೦೦೦ಕ್ಕೆ ಇಳಿದಿತ್ತು. ಕಲ್ಲಿದ್ದಲಿನ ಗಣಿಗಾರಿಕೆ ಉದ್ಯಮದಲ್ಲಿ ೧೯೨೦ರಲ್ಲಿ ಸದಸ್ಯತ್ವದ ಸಂಖ್ಯೆ ೧,೧೧೫,೦೦೦ ಆಗಿದ್ದರೆ, ೧೯೨೦ರಲ್ಲಿನ ಅಂಕಿ–ಅಂಶಗಳು ೧,೧೭೨,೦೦೦ ಆಗಿದ್ದರೆ, ೧೯೩೨ರಲ್ಲಿ ೫೫೪,೦೦೦ಕ್ಕೆ ಇಳಿದಿತ್ತು. ಲೋಹದ ಉದ್ಯಮದಲ್ಲಿ ೧೯೩೨ರಲ್ಲಿ ಅದು ೫೨೭,೦೦೦ವಾಗಿತ್ತು. ಕಟ್ಟಡ ನಿರ್ಮಾಣದ ಉದ್ಯೋಗದಲ್ಲಿ ೧೯೨೦ರಲ್ಲಿ ಸದಸ್ಯತ್ವದ ಸಂಖ್ಯೆ ೫೬೩,೦೦೦ ಆಗಿದ್ದರೆ ೧೯೩೨ರಲ್ಲಿ ಅದು ೨೭೫,೦೦೦ಕ್ಕೆ ಇಳಿದಿತ್ತು. ಸಾರಿಗೆ ಮತ್ತು ಸಾಮಾನ್ಯ ಕಾರ್ಮಿಕ ವಲಯದಲ್ಲಿ ಒಟ್ಟಾರೆ ಸದಸ್ಯತ್ವದ ಸಂಖ್ಯೆ ೧೯೨೦ರಲ್ಲಿ ೧,೬೮೫,೦೦೦ ಆಗಿದ್ದರೆ, ೧೯೩೨ರಲ್ಲಿ ಅದು ೬೬೦,೦೦೦ಕ್ಕೆ ಇಳಿದಿತ್ತು. ಕಾರ್ಮಿಕ ಸಂಘಗಳ ಕಾಂಗ್ರೆಸಿನ ಅಂಕಿ–ಅಂಶಗಳನ್ನು ಗಣನೆಗೆ ತಂದುಕೊಳ್ಳುವುದಾದರೆ, ೧೯೨೦ರಲ್ಲಿ ಅದರ ಸದಸ್ಯತ್ವದ ಸಂಖ್ಯೆ ೬,೫೦೫,೦೦೦

ಆಗಿದ್ದರೆ, ೧೯೩೨ರಲ್ಲಿ ಒಟ್ಟಾರೆ ಸದಸ್ಯತ್ವ ೩,೬೧೩,೦೦೦ ಮಾತ್ರವಾಗಿತ್ತು. ಮಾನ್ಯರೆ, ಕಾರ್ಮಿಕನ ಪಾಲಿಗೆ ಕಾರ್ಮಿಕ ಚಳವಳಿಯೆಂಬುದು ಹೊಳ್ಳೆಗಳ ಉಸಿರಾಟದಂತಿದೆ ಎಂದು ಭಾವಿಸಲಾಗಿರುವ ಇಂಗ್ಲೆಂಡಿನಂಥ ದೇಶದಲ್ಲಿಯೇ ಒಂದು ದಶಕದ ಅವಧಿಯಲ್ಲಿ ಕಾರ್ಮಿಕ ಸಂಘಗಳ ಸದಸ್ಯತ್ವ ಶೇ.೫೦ರಷ್ಟು ಡೋಲಾಯಮಾನವಾಗಿದ್ದರೆ, ಈ ನಮ್ಮ ನಾಡಿನಲ್ಲಿ ಕಾರ್ಮಿಕ ಸಂಘಗಳ ಯಾವುದೇ ಸಂಘಟಕ ನಿಕಾಯ ಎಲ್ಲ ಕಾಲಗಳಲ್ಲಿ ಶೇ.೫೧ರಷ್ಟು ಸದಸ್ಯಬಲವನ್ನು ಉಳಿಸಿಕೊಂಡು ಬರಬೇಕೆಂದು ಯಾರಾದರೂ ಹೇಗೆ ತಾನೇ ನಿರೀಕ್ಷಿಸಬಹುದೆಂಬುದು ನನಗೆ ಅರ್ಥವಾದ ಸಂಗತಿಯಾಗಿದೆ. ಸದಸ್ಯತ್ವದ ಪ್ರಮಾಣ ಶೇ. ೧ರಷ್ಟು ಕಮ್ಮಿಯಾದರೂ ಕಾರ್ಮಿಕ ಸಂಘದ ನೋಂದಣಿಯೇ ರದ್ದಾಗುವ ಅಪಾಯವಿರುತ್ತದೆ. ಇಡೀ ಕಚೇರಿಯನ್ನೇ ಮುಚ್ಚಬೇಕಾಗುತ್ತದೆ. ಇದು ನ್ಯಾಯೋಚಿತವಾದ ಷರತ್ತೇ? ಇದು ಕಾರ್ಮಿಕ ಸಂಘಗಳ ಚಳವಳಿಯ ಬೆಳವಣಿಗೆಯನ್ನು ದೃಢಪಡಿಸಬಹುದಾಗಿರುವಂಥ ಷರತ್ತೆ? ಎಂದು ನಾನು ಪ್ರಶ್ನಿಸಬಯಸುತ್ತೇನೆ. ನೋಂದಣಿಗೊಂಡಿರುವ ಪ್ರತಿಯೊಂದು ಕಾರ್ಮಿಕ ಸಂಘವೂ ತನ್ನ ನೋಂದಣಿಯನ್ನು ಕಳೆದುಕೊಳ್ಳುವುದಾದರೆ, ಕಳೆದುಕೊಳ್ಳುವ ಭಯದಲ್ಲಿಯೇ ಅನುದಿನವೂ ಇರುವುದಾದರೆ ಈ ನಾಡಿನಲ್ಲಿ ಕಾರ್ಮಿಕ ಸಂಘಗಳ ಚಳವಳಿಯ ಬೆಳವಣಿಗೆಗೆ ಯಾವ ಭವಿಷ್ಯ ತಾನೇ ಇದೆ?

ಮಾನ್ಯರೆ, ಇನ್ನೊಂದು ವಿಷಾದಕರ ಲಕ್ಷಣವೂ ಇದೆ. ಇದು ಗಂಭೀರವಾದ ಪರಿಗಣನೆಗೆ ಅರ್ಹವಾಗಿರುವಂಥ ವಿಚಾರವಾಗಿದೆ. ಈ ಮಸೂದೆಯ ಮೇರೆಗೆ ಕಾರ್ಮಿಕ ಸಂಘವೊಂದರ ನೋಂದಣಿ ರದ್ಧತಿಯ ಅಧಿಕಾರವನ್ನು ಕೊಡಲಾಗಿರುವಂಥ ವ್ಯಕ್ತಿ ತನ್ನದೇ ಆದ ಕಾರ್ಮಿಕ ಸಂಘವೊಂದರ ನೋಂದಣಿಗೆ ಅರ್ಜಿಯನ್ನು ಸಲ್ಲಿಸಬೇಕಾದಂಥ ಅಗತ್ಯವೇನೂ ಇಲ್ಲ. ಹೆಚ್ಚಿನ ಸದಸ್ಯತ್ವ ಪ್ರಮಾಣದ ಆಧಾರದ ಮೇಲೆ ತಮ್ಮ ಸಂಘವನ್ನು ನೋಂದಣಿಗೊಳಿಸಬಹುದಾದಂಥ ಸ್ಥಿತಿಯಲ್ಲಿರುವ ಕಾರ್ಮಿಕ ಸಂಘದ ಸದಸ್ಯರಿಗೆ ನೋಂದಣಿ ರದ್ಧತಿಗಾಗಿ ಕೋರುವ ಅಧಿಕಾರವನ್ನೇನಾದರೂ ಕೊಟ್ಟಿದ್ದರೆ ಪ್ರಸ್ತಾವದ ನ್ಯಾಯಸಮ್ಮತತೆಯನ್ನು ಮತ್ತು ಆ ನಿಲುವನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದಾಗಿತ್ತು. ಆದರೆ ಅಂಥ ವ್ಯಕ್ತಿ ತನ್ನದೇ ಆದ ಸಂಘವನ್ನು ನೋಂದಾಯಿಸಿಕೊಳ್ಳಬಹುದಂಥ ಸ್ಥಿತಿಯಲ್ಲಿ ಇರಬೇಕಾದ ಅಗತ್ಯವೇನೂ ಇಲ್ಲವೆಂಬುದನ್ನೇ ಅಂದರೆ ಉದ್ಯಮದಲ್ಲಿ ನೇಮಕಗೊಂಡಿರುವ ಕಾರ್ಮಿಕರ ಸಂಖ್ಯೆಯಲ್ಲಿ ಶೇ.೫೧ರಷ್ಟು ಸದಸ್ಯ ಬಲದ ಸಮರ್ಥನೆ ತನಗೆ ಲಭಿಸಿದೆ ಎಂಬುದನ್ನು ತೋರಿಸಿಕೊಡಬೇಕಾದ ಅಗತ್ಯವೇನೂ ಇಲ್ಲವೆಂಬುದನ್ನು ೧೦ನೆಯ ಖಂಡದ ಅವಲೋಕನ ನಮಗೆ ತೋರಿಸಿಕೊಡುತ್ತದೆ. ಉದ್ಯೋಗದಾತನ ಪಟ್ಟಿ ಮತ್ತು ಕಾರ್ಮಿಕ ಸಂಘದ ಸದಸ್ಯರ ಪಟ್ಟಿಗಳನ್ನು ಗಣನೆಗೆ ತೆಗೆದುಕೊಂಡರೆ ಸದಸ್ಯತ್ವದ ಪ್ರಮಾಣ ಶೇ.೫೦ಕ್ಕಿಂತ ಕೆಳಕ್ಕೆ ಇಳಿದಿದೆ ಎಂಬುದನ್ನು ಆ ಕಿಡಿಗೇಡಿ ಸಿದ್ಧಪಡಿಸಿ ತೋರಿಸಿದರೆ ಸಾಕಾಗುತ್ತದೆ. ಕೆಲಸ ಡೋಲಾಯಮಾನವಾಗಿರುವ ಹಾಗೂ ಕಾರ್ಮಿಕರ ಸಂಖ್ಯೆ ಡೋಲಾಯಮಾನವಾಗಿರುವ ಉದ್ಯಮದ ಪರಿಸ್ಥಿತಿಗಳಲ್ಲಿ ನಾನಾಗಲೇ ಹೇಳಿರುವಂತೆ ಈ ಷರತ್ತನ್ನು ಪೂರೈಸುವುದು ಅಸಾಧ್ಯ ವಾಗುತ್ತದೆ.

ಮಾನ್ಯರೆ, ಇನ್ನೂ ಒಂದು ಉಪಬಂಧವಿದೆ. ಅದರತ್ತ ಈ ಸದನದ ಗಮನವನ್ನು ಸೆಳೆಯುವುದು ಅಗತ್ಯವೆಂದು ನಾನು ಭಾವಿಸಿದ್ದೇನೆ. ನೋಂದಣಿ ರದ್ದುಪಡಿಸಲಾದಂಥ ಕಾರ್ಮಿಕ ಸಂಘದ ಗತಿಯೇನು? ಅದು ಮತ್ತೆ ನೋಂದಣಿಗೆ ಅರ್ಜಿಯನ್ನು ಸಲ್ಲಿಸಬಹುದೆ? ಇಲ್ಲ ಎಂಬುದೇ ಇದಕ್ಕಿರುವ ಉತ್ತರ. ಕೆಲವೊಂದು ಪರಿಸ್ಥಿತಿಗಳಲ್ಲಿ ಕಾರ್ಮಿಕ ಸಂಘ ತನ್ನ ನೋಂದಣಿಯನ್ನು ಕಳೆದುಕೊಂಡಿದೆ ಎಂಬುದಾಗಿ

ಘೋಷಿಸುವ ಅಧಿಕಾರವನ್ನು ಈ ಮಸೂದೆಯ ೫೪ನೆಯ ಖಂಡ ಔದ್ಯಮಿಕ ನ್ಯಾಯಾಲಯಗಳಿಗೆ ಕೊಟ್ಟಿದೆ. ಅದು ಹೀಗೆಂದು ಹೇಳುತ್ತದೆ:

"ಈ ಕಾಯ್ದೆಯ ಮೇರೆಗೆ, ತಪ್ಪಾಗಿ ಅಥವಾ ತಪ್ಪು ನಿರೂಪಣೆಯಿಂದಾಗಿ ಅಥವಾ ಮೋಸದಿಂದಾಗಿ ಯಾವುದೇ ಕಾರ್ಮಿಕ ಸಂಘ ನೋಂದಣಿಯನ್ನು ಪಡೆದುಕೊಂಡಿರುವುದು ಅಥವಾ ಅರ್ಹ ಕಾರ್ಮಿಕ ಸಂಘವೆಂಬ ಅಥವಾ ಪ್ರಾತಿನಿಧಿಕ ಕಾರ್ಮಿಕ ಸಂಘವೆಂಬ ಘೋಷಣೆಯನ್ನು ಪಡೆದುಕೊಂಡಿರುವುದು ಯಾವುದೇ ನಡವಳಿಯಲ್ಲಿ ಔದ್ಯಮಿಕ ನ್ಯಾಯಾಲಯದ ಗಮನಕ್ಕೆ ಬಂದಲ್ಲಿ ಅಥವಾ ಅಂಥ ಕಾರ್ಮಿಕ ಸಂಘ ಈ ಕಾಯ್ದೆಯ ಯಾವುದೇ ಉಪಬಂಧವನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ಅಂಥ ಕಾರ್ಮಿಕ ಸಂಘದ ನೋಂದಣಿ ಅಥವಾ ಅರ್ಹ ಕಾರ್ಮಿಕ ಸಂಘ ಅಥವಾ ಪ್ರಾತಿನಿಧಿಕ ಕಾರ್ಮಿಕ ಸಂಘವೆಂಬುದಾಗಿ ಮಾಡಲಾಗಿರುವ ಘೋಷಣೆ ರದ್ದಾಗತಕ್ಕದ್ದೆಂದು ಔದ್ಯಮಿಕ ನ್ಯಾಯಾಲಯ ನಿರ್ದೇಶನವನ್ನು ನೀಡಬಹುದು."

ಈಗ ೮ನೆಯ ಖಂಡದತ್ತ ತಿರುಗೋಣ. ನೋಂದಣಿಗೆ ಸಂಬಂಧಿಸಿದಂತೆ ರಿಜಿಸ್ಟ್ರಾರ್ ಅವರು (ನಿಬಂಧಕರು) ಯಾವ ನಿಯಮವನ್ನು ಪಾಲಿಸಬೇಕೆಂಬುದರ ಬಗೆಗಿನ ನಿರ್ದೇಶನ ಅದರಲ್ಲಿದೆ. ನಾನು ಹೇಳುತ್ತಿರುವುದು ಚಾಚುತಪ್ಪದಂತೆ ಸರಿಯಾಗಿದೆ ಎಂಬುದನ್ನು ಈ ಸದನ ಮನಗಾಣುತ್ತದೆ. ೮ನೆಯ ಖಂಡ ಹೀಗೆಂದು ಹೇಳುತ್ತದೆ:

"೭ನೆಯ ಪ್ರಕರಣದ ಮೇರೆಗೆ ಕಾರ್ಮಿಕ ಸಂಘ ನೋಂದಣಿಗಾಗಿ ಸಲ್ಲಿಸಿದ ಅರ್ಜಿ ತಮಗೆ ತಲುಪಿದ ಬಳಿಕ ಹಾಗೂ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡಿದ ಬಳಿಕ ರಿಜಿಸ್ಟಾರ್ ಅವರು (ನಿಬಂಧಕರು) ತಮಗೆ ಉಚಿತವೆಂದು ತೋರಿದಂಥ ವಿಚಾರಣೆಯನ್ನು ನಡೆಸತಕ್ಕದ್ದು ಹಾಗೂ ಅಂಥ ಸಂಘ ೭ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ನೋಂದಣಿಗೆ ಅಗತ್ಯವಾಗಿರುವ ಷರತ್ತುಗಳನ್ನು ಪೂರೈಸುತ್ತದೆಂದು ಅವರಿಗೆ ತೃಪ್ತಿಯಾದಲ್ಲಿ ಹಾಗೂ ಕಾಯ್ದೆಯ ಮೇರೆಗೆ ಅದು ನೋಂದಣಿಗೆ ಅನರ್ಹವಾಗಿಲ್ಲದೆ ಇದ್ದಲ್ಲಿ (ಸದರಿ ಸಂಘ ನೋಂದಾಯಿತವಾಗಿದೆ ಎಂದು ಘೋಷಿಸತಕ್ಕದ್ದು)"

೫೪ನೆಯ ಖಂಡದ ಮೇರೆಗೆ ಕಾರ್ಮಿಕ ಸಂಘವನ್ನು ಅನರ್ಹಗೊಳಿಸಿರಬಾರದು ಎಂಬುದು ಕೂಡ ೮ನೆಯ ಖಂಡ ನಿಗದಿಪಡಿಸಿರುವ ಷರತ್ತುಗಳಲ್ಲಿ ಒಂದಾಗಿದೆ. ನಾನು ಈಗ ಕೇಳಬಯಸುವ ಪ್ರಶ್ನೆ ಇದು: ಈ ಶಾಶ್ವತ ಅನರ್ಹತೆಯ ವಿಚಾರ ಏಕಾಗಿ ಇರಬೇಕು? ತಾತ್ಕಾಲಿಕ ಅವಧಿಗೆ ಅನರ್ಹತೆ ಇರಬಹುದು ಎಂಬುದನ್ನು ನಾನು ಖಂಡಿತವಾಗಿಯೂ ಒಪ್ಪಬಲ್ಲೆ. ಮೋಸದಿಂದಾಗಿ ಅಥವಾ ತಪ್ಪು ಮಾಹಿತಿ ನೀಡಿ ನೋಂದಣಿಯನ್ನು ಪಡೆದುಕೊಂಡಿರುವಂಥ ವ್ಯಕ್ತಿಗಳು ಸ್ವಲ್ಪ ಕಾಲದವರೆಗೆ ಪರೀಕ್ಷಾರ್ಥ ಅವಧಿಯಲ್ಲಿರಬೇಕೆಂದು ವಾದಿಸಲು ಸಾಧ್ಯವಾಗಬಹುದು. ಆ ಬಗೆಯ ಪ್ರಸ್ತಾವದ ನ್ಯಾಯಸಮ್ಮತತೆಯನ್ನು ನಾನು ಚೆನ್ನಾಗಿಯೇ ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ವ್ಯಕ್ತಿಯೊಬ್ಬ ಮೋಸದ ಅಥವಾ ತಪ್ಪು ನಿರೂಪಣೆಯ ದೋಷವನ್ನು ಎಸಗಿದ್ದಲ್ಲಿ ರಿಜಿಸ್ಟ್ರಾರ್ ಅವರ ಮುಂದೆ ಹಾಜರಾಗದಂತೆ ಹಾಗೂ ತನ್ನ

ಕಾರ್ಮಿಕ ಸಂಘಕ್ಕೆ ನೋಂದಣಿಯನ್ನು ಪಡೆದುಕೊಳ್ಳದಂತೆ ಅವನನ್ನು ಶಾಶ್ವತವಾಗಿ ಅನರ್ಹಗೊಳಿಸಬೇಕೆಂದು ಹೇಳುವ ಉಪಬಂಧದ ನ್ಯಾಯ ಸಮ್ಮತೆಯನ್ನು ನಾನು ಅರ್ಥಮಾಡಿಕೊಳ್ಳಲಾರೆ. ಮಾನ್ಯರೆ, ಈ ಸಂದರ್ಭದಲ್ಲಿ ೧೯೩೫ರ ಭಾರತ ಸರ್ಕಾರದ ಕಾಯ್ದೆಯಲ್ಲಿ ನಮಗೆ ಕಾಣದೊರೆಯುವ ಉಪಬಂಧಗಳನ್ನು ನಾನಿಲ್ಲಿ ಉಲ್ಲೇಖಿಸಬಯಸುತ್ತೇನೆ. ಈ ಸದನದ ಸದಸ್ಯರಾಗಿರುವ ನಮಗೆ ಕೆಲವೊಂದು ಅನರ್ಹತೆಗಳನ್ನು ಅಧಿನಿಯಮಿಸಲಾಗಿದೆ. ಅನರ್ಹತೆಯನ್ನು ಅನುಭವಿಸುತ್ತಿದ್ದಲ್ಲಿ ನಾವು ಚುನಾವಣೆಗೆ ನಿಲ್ಲುವಂತಿಲ್ಲ. ಕೆಲವು ವ್ಯಕ್ತಿಗಳು ಆಯ್ಕೆಗೊಂಡರೂ, ಅನರ್ಹರನ್ನಾಗಿಸಲಾಗಿರುವವದರಿಂದಾಗಿ, ಶಾಸಕಾಂಗದ ಸದಸ್ಯರಾಗುವಂತಿಲ್ಲ ಎಂಬುದು ನಮಗೆ ಗೊತ್ತಿದೆ. ಅನರ್ಹಗೊಳಿಸಬಹುದಾಗಿದ್ದಂಥವರಲ್ಲಿ ನಾನೂ ಒಬ್ಬನಾಗಿದ್ದೆ. ಆದರೆ ಸರ್ಕಾರ ನನ್ನ ನೆರವಿಗೆ ಬಂದು ನನ್ನ ಸ್ಥಾನವನ್ನು ನನಗೆ ಉಳಿಸಿಕೊಟ್ಟಿತೆಂದೂ ಹೇಳಲಾಗಿದೆ. ಇಲ್ಲವಾಗಿದ್ದಲ್ಲಿ, ನನ್ನನ್ನು ಅನರ್ಹಗೊಳಿಸಲಾಗುತ್ತಿತ್ತು. ಆದರೆ ನಾನು ಎತ್ತಬಯಸಿರುವ ಅಂಶ ಇದು: ಭಾರತ ಸರ್ಕಾರದ ಕಾಯ್ದೆಯಲ್ಲಿರುವ ಅನರ್ಹತೆಗಳು ಖಂಡಿತವಾಗಿಯೂ ಶಾಶ್ವತವಾದುವಲ್ಲ. ಆ ಅನರ್ಹತೆಗಳು ತಾತ್ಕಾಲಿಕವಾದವು. ಕಾಲ ಕಳೆದುಹೋದ ಬಳಿಕ ಅನರ್ಹತೆ ಒಮ್ಮೆ ನಿವಾರಣೆಯಾಯಿತೆಂದರೆ ಆ ಸದಸ್ಯ ಚುನಾವಣೆಗೆ ನಿಲ್ಲಲು ಹಾಗೂ ಈ ಸದನದ ಸದಸ್ಯನಾಗಲು ಮತ್ತೆ ಅರ್ಹನಾಗಿ ಪರಿಣಮಿಸುತ್ತಾನೆ. ಭಾರತ ಸರ್ಕಾರದ ಕಾಯ್ದೆಯಲ್ಲಿ ಅಡಕವಾಗಿರುವ ತತ್ವ ಇದಾಗಿದ್ದರೆ ಯಾವುದೇ ಬಗೆಯ ನೈತಿಕ ಕಳಂಕದಿಂದ ಮುಕ್ತರಾಗಿದ್ದಾರೆಂದು ಭಾವಿಸಲಾಗಿರುವ ತಮ್ಮ ಹಕ್ಕುಗಳನ್ನು ವಿಶೇಷಾಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಪ್ರಾಮಾಣಿಕ ರೀತಿಯಲ್ಲಿ ಈ ಸದನದಲ್ಲಿ ಚಲಾಯಿಸಲು ಸಾಧ್ಯವಾಗುವಂತೆ ಯಾವುದೇ ಬಗೆಯ ನೈತಿಕ ಪತನದಿಂದ ಮುಕ್ತರಾಗಿದ್ದಾರೆಂದು ಭಾವಿಸಲಾಗಿರುವ ಸದಸ್ಯರ ಅನರ್ಹತೆಗಳು ಶಾಶ್ವತ ಸ್ವರೂಪದವಾಗಿಲ್ಲದೆ ಇದ್ದರೆ, ಕಾರ್ಮಿಕರನ್ನು ಸಂಘಟಿಸುವಂಥ ವ್ಯಕ್ತಿಗಳ ಅನರ್ಹತೆ ಏಕಾಗಿ ಶಾಶ್ವತ ಸ್ವರೂಪದ್ದಾಗಿರಬೇಕೆಂದು ನಾನು ಪ್ರಶ್ನಿಸುತ್ತೇನೆ. ಇದಕ್ಕೆ ನನಗೆ ಯಾವ ಉತ್ತರವೂ ಕಾಣದೊರೆಯುವುದಿಲ್ಲ. ವಾಸ್ತವವಾಗಿ ಕಲ್ಕತ್ತ ನ್ಯಾಯಾಲಯದ ಪೂರ್ಣಪೀಠದ ತೀರ್ಮಾನವನ್ನು ಈ ಉಪಬಂಧ ನಿಜವಾಗಿಯೂ ವಿಕೃತಗೊಳಿಸುತ್ತದೆಂದು ನಾನು ಹೇಳಬಯಸುತ್ತೇನೆ. ನನ್ನನ್ನು ಕ್ಷಮಿಸಿ, ನಾನು ತುಂಬ ಗಡಿಬಿಡಿಯಲ್ಲಿ ಬಂದೆ. ನಾನು ಆ ವರದಿಯನ್ನು ಹೆಕ್ಕಿ ಎತ್ತಿಕೊಡುವ ಸ್ಥಿತಿಯಲ್ಲಿಲ್ಲ. ಆದರೆ ಅಂಥ ಪ್ರಕರಣವೊಂದಿದೆ. ಅದು ಅನೇಕ ಸದಸ್ಯರ– ಕನಿಷ್ಠಪಕ್ಷ ಕಾರ್ಮಿಕ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವಂಥ ಸದಸ್ಯರ– ಅರಿವಿಗೆ ಅಂದು ಬಂದಿರಬೇಕು. ಆ ಪ್ರಕರಣ ಹೀಗಿದೆ. ಕಲ್ಕತ್ತೆಯಲ್ಲಿ ತುರ್ತುಸ್ಥಿತಿ ಅಧಿಕಾರಗಳ ಕಾಯ್ದೆಯನ್ನು ತಂದಾಗ ರಿಜಿಸ್ಟ್ರಾರ್ ಅವರು ಒಂದು ಕಾರ್ಮಿಕ ಸಂಘವನ್ನು ಕಾನೂನುಬಾಹಿರವಾದುದೆಂದು ಘೋಷಿಸಿದರು. ಕಮ್ಯೂನಿಸ್ಟರು (ಸಾಮ್ಯವಾದಿಗಳು) ಆ ಸಂಘವನ್ನು ನಡೆಸುತ್ತಿದ್ದುದೇ ಅದಕ್ಕೆ ಕಾರಣವಾಗಿತ್ತು. ತುರ್ತು ಸ್ಥಿತಿ ಅಧಿಕಾರಗಳ ಕಾಯ್ದೆಯ ಮಟ್ಟಿಗೆ ಹೇಳುವುದಾದರೆ, ಅಕ್ರಮ ಯಥಾವತ್ತಾಗಿ ಕಾನೂನುಬದ್ಧವಾಗಿತ್ತು. ಆದರೆ ಆ ಸಂಘದ ಹೊಣೆಯನ್ನು ನಿರ್ವಹಿಸುತ್ತಿದ್ದ ಆ ಸಭ್ಯರು– ಆ ಸಾಮ್ಯವಾದಿಗಳು– ಆ ರೀತಿಯಲ್ಲಿ ಸೋಲನ್ನು ಒಪ್ಪಲು ಸಿದ್ಧರಾಗಿರಲಿಲ್ಲ. ಅವರು ಇನ್ನೊಂದು ಯೋಜನೆಯನ್ನು ರೂಪಿಸಿದರು. ಹೊಸ ಹೆಸರಿನಲ್ಲಿ ನೋಂದಣಿಗಾಗಿ ಇನ್ನೊಂದು ಅರ್ಜಿಯನ್ನು ಸಲ್ಲಿಸುವುದೇ ಆ ಯೋಜನೆಯಾಗಿತ್ತು. ರಿಜಿಸ್ಟ್ರಾರ್ ಅವರಿಗೆ ಏನೋ ಸಂದೇಹ ಉಂಟಾಯಿತು. ಏಕೆಂದರೆ ಯಾರ ನೋಂದಣಿಯನ್ನು ರದ್ದುಪಡಿಸಲಾಗಿತ್ತೋ ಆ ವ್ಯಕ್ತಿಯೇ ಆ ಹೊಸ ಅರ್ಜಿಯನ್ನು ತಂದಿದ್ದ ಎಂಬುದನ್ನು ಅವರು ಕಂಡುಕೊಂಡರು. ಅವರು ಹೀಗೆಂದರು: "ನಾನು ಸ್ವಲ್ಪ ಕಾಯಬೇಕು ಮತ್ತು ವಿಚಾರಣೆಯನ್ನು ನಡೆಸಬೇಕು." ಹೀಗಾಗಿ ಅವರು ನೋಂದಣಿಗಾಗಿ ಅರ್ಜಿಯನ್ನು

ಸಾದರಪಡಿಸಿದ್ದಂಥ ಆ ಹೊಸ ಸಂಘದ ನಿರ್ವಾಹಕ ಮಂಡಳಿಯ ರಚನೆ ಮತ್ತು ಪದಾಧಿಕಾರಿಗಳ ಬಗ್ಗೆ ವಿಚಾರಣೆ ನಡೆಸಿದರು. ತಾನು ಯಾರ ನೋಂದಣಿಯನ್ನು ರದ್ದುಪಡಿಸಿದ್ದೆನೋ ಆ ಸಜ್ಜನರೇ ನೋಂದಣಿಗಾಗಿ ಈ ಅರ್ಜಿಯನ್ನು ತಂದಿದ್ದಾರೆಂಬುದನ್ನು ಅವರು ಕಂಡುಕೊಂಡರು. ಅವರೆಂದರು: "ನೀವು ಅದೇ ಸಜ್ಜನರು. ನಾನು ನಿಮಗೆ ನೋಂದಣಿಯನ್ನು ಮಂಜೂರು ಮಾಡುವುದಿಲ್ಲ." ಅವರು ಕಲ್ಕತ್ತೆಯ ಉಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿದರು. ಕಾರ್ಯನಿರ್ವಾಹಕ ಮಂಡಳಿಯ ಪದಾಧಿಕಾರಿಗಳ ಪೂರ್ವೋತ್ತರಗಳನ್ನು ವಿಚಾರಿಸುವುದು ರಿಜಿಸ್ಟ್ರಾರ್ ಅವರು ಮಾಡಬೇಕಾದ ಕಾರ್ಯವೇನೂ ಅಲ್ಲ ಎಂಬುದಾಗಿ ಕಲ್ಕತ್ತೆಯ ಉಚ್ಚ ನ್ಯಾಯಾಲಯ ತೀರ್ಮಾನಿಸಿತು. ಯಾವ ಉದ್ದೇಶಕ್ಕಾಗಿ ಸಂಘವನ್ನು ರೂಪಿಸಲಾಗಿದೆ ಎಂಬುದನ್ನು ಹಾಗೂ ಏಳು ಮಂದಿ ಅರ್ಜಿಗೆ ಸಹಿ ಹಾಕಿದ್ದಾರೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸುವ ಅಧಿಕಾರವಷ್ಟೇ ರಿಜಿಸ್ಟ್ರಾರ್ ಅವರಿಗೆ ಇರುವುದು; ಅಲ್ಲಿಂದಾಚೆಗೆ ಅವರಿಗೆ ಬೇರೇನೂ ಸಂಬಂಧವಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿತ್ತು. ಹಳೆಯ ಕಾನೂನಿನ ಪ್ರಕಾರ ಇದ್ದ ಸ್ಥಿತಿ ಅದು– ಅಂದರೆ ಒಮ್ಮೆ ಅನರ್ಹಗೊಳಿಸಲಾದಂಥ ವ್ಯಕ್ತಿಗಳು, ಕಾನೂನಿನ ಯಾವ ತೊಡಕೂ ತಮ್ಮ ಹಾದಿಗೆ ಅಡ್ಡ ಬರದಂತೆ ಮತ್ತೆ ಹೋಗಿ ನೋಂದಣಿಯನ್ನು ಪಡೆದುಕೊಳ್ಳಬಹುದಾಗಿತ್ತು. ಕಾರ್ಮಿಕರನ್ನು ಸಂಘಟಿಸ ಬಯಸುವಂಥ ವ್ಯಕ್ತಿಗಳ ಹಾದಿಯಲ್ಲಿ ಈ ಮಸೂದೆ ಶಾಶ್ವತವಾದ ಅಡೆತಡೆಗಳನ್ನೊಡ್ಡುತ್ತದೆ. ಅವರು ಯಾವುದೋ ಒಂದು ಬಗೆಯ ತಪ್ಪು ನಿರೂಪಣೆ ಅಥವಾ ಮೋಸವನ್ನೆಸಗಿದ್ದಾರೆಂಬ ಕಾರಣಕ್ಕಾಗಿಯೇ ಹೀಗೆ ಮಾಡಲಾಗುತ್ತದೆ. ಈ ಮಸೂದೆಯ ಉಪಬಂಧಗಳ ಬಗ್ಗೆ ನಾನು ನಿಜವಾಗಿಯೂ ಹೇಳಬೇಕೆಂದಿದ್ದುದು ಇಷ್ಟು ಮಾತ್ರವೇ.

ಇಷ್ಟಾಗಿಯೂ, ಈ ಮಸೂದೆ ಕಾರ್ಮಿಕರನ್ನೂ ಉದ್ಯೋಗದಾತರನ್ನು ಸಮಾನತೆಯ ನೆಲೆಯಲ್ಲಿ ನೋಡುತ್ತದೆ ಎಂಬುದನ್ನು ಎತ್ತಿಹೇಳಬೇಕು. ಏಕೆಂದರೆ, ಈ ಮಸೂದೆ ಕಾರ್ಮಿಕರ ಮುಷ್ಕರವನ್ನು ದಂಡನಾರ್ಹವಾಗಿಸುವಂತೆಯೇ ಉದ್ಯೋಗದಾತರು ಬೀಗಮುದ್ರೆಯನ್ನು ಘೋಷಿಸುವುದನ್ನೂ ದಂಡನಾರ್ಹ ವಾಗಿಸುತ್ತದೆ. ಈ ನಿಲುವನ್ನು ರುಜುವಾತು ಮಾಡಿ ತೋರಿಸಲು ಸಾಧ್ಯವಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಏಕೆಂದರೆ ಉದ್ಯೋಗದಾತರು ಮತ್ತು ಉದ್ಯೋಗಿಗಳ ನಡುವೆ ತಾರತಮ್ಯವನ್ನೆಸಗಿರುವಂಥ ಒಂದೆರಡು ನಿದರ್ಶನಗಳು ಖಂಡಿತವಾಗಿಯೂ ನನ್ನ ಗಮನಕ್ಕೆ ಬಂದಿವೆ. ಉದಾಹರಣೆಗೆ, ೨೮ನೆಯ ಖಂಡದ ಮೇರೆಗೆ ಕೊಡಬೇಕಾಗಿರುವ ಮುನ್ಸೂಚನೆಯ ವಿಚಾರವನ್ನು ನಾನು ಎತ್ತಿಕೊಳ್ಳುತ್ತೇನೆ. (೧) ಸ್ಥಾಯಿ ಆದೇಶಗಳಲ್ಲಿನ ಹಾಗೂ (೨) ಅನುಸೂಚಿ–IIರಲ್ಲಿ ಉಲ್ಲೇಖಿಸಲಾಗಿರುವ ಔದ್ಯಮಿಕ ವಿಷಯಗಳ ಬಗೆಗಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಉದ್ಯೋಗದಾತರು ಮುನ್ಸೂಚನೆಯನ್ನು ಕೊಡಬೇಕಾಗಿದೆ. ಉದ್ಯೋಗಿಯ ವಿಷಯಕ್ಕೆ ಬಂದರೆ ಸ್ಥಾಯಿ ಆದೇಶಗಳಲ್ಲಿನ ಯಾವುದೇ ಬದಲಾವಣೆಯ ವಿಷಯದಲ್ಲಿ ಹಾಗೂ ಅನುಸೂಚಿ–IIಕ್ಕೆ ಮಾತ್ರವೇ ಸೀಮಿತವಾಗಿರದ ಯಾವುದೇ ಔದ್ಯಮಿಕ ವಿಷಯ ಗಳ ಬಗೆಗಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ, ಉದ್ಯೋಗಿಯಾದವನು ಮುನ್ಸೂಚನೆಯನ್ನು ಕೊಡಬೇಕಾಗಿದೆ. ಇದು ಖಂಡಿತವಾಗಿಯೂ ಸಮಾನತೆಯ ನೆಲೆಯಲ್ಲ. ಹಾಜರಾತಿಯ ವಿಷಯಕ್ಕೆ ಬಂದರೆ ಉದ್ಯೋಗದಾತ ಹಾಜರಾಗದೆ ಇದ್ದರೆ ಅವನಿಗೆ ಖಂಡಿತವಾಗಿಯೂ ದಂಡವನ್ನು ವಿಧಿಸುವುದಿಲ್ಲ. ಆದರೆ ಕಾರ್ಮಿಕ ಸಂಘ ಹಾಜರಾಗದೆ ಇದ್ದರೆ, ಉದ್ಯೋಗಿಯಾದವನು ಕಡ್ಡಾಯವಾಗಿ ಹಾಜರಿರ ಬೇಕಾಗುತ್ತದೆ. ಯಾರೂ ಇಲ್ಲದಿದ್ದರೆ ಕಾರ್ಮಿಕ ಅಧಿಕಾರಿ ಇರುತ್ತಾನೆ. ಅವನು ಕಾರ್ಮಿಕರನ್ನು ಪ್ರತಿನಿಧಿಸ

ಬಹುದು. ಸಂಧಾನದ ಬಳಿಕ ಏರ್ಪಡುವ ಒಪ್ಪಂದಕ್ಕೆ ಕಾರ್ಮಿಕರೂ ಬದ್ಧರಾಗಿರಬೇಕಾಗುತ್ತದೆ. ಕಾರ್ಮಿಕರು ಸಂಧಾನ–ವ್ಯವಹರಣೆಗಳನ್ನು ನಿರಾಕರಿಸಿದ್ದರೂ ಆ ಅಧಿಕಾರಿಯ ಮೂಲಕ ತಮ್ಮ ಹಿತಾಸಕ್ತಿಗಳು ಪ್ರತಿನಿಧಿತವಾಗುವುದನ್ನು ಒಪ್ಪಲು ಸಿದ್ಧವಿರದೇ ಇದ್ದರೂ ಅವರು ಒಪ್ಪಂದಕ್ಕೆ ಬದ್ಧರಾಗಿರಬೇಕಾಗುತ್ತದೆ. ಇವೆಲ್ಲ ಸಣ್ಣಪುಟ್ಟ ವಿಚಾರಗಳು. ಇದಲ್ಲದೆ, ನಾನು ಒತ್ತಾಯಪೂರ್ವಕವಾಗಿ ಹೇಳಬಯಸುವುದು ಇದನ್ನು: ಮಾನ್ಯರೆ, ನಮಗೆ ಬೇಕಾಗಿರುವುದು ಸಮಾನ ನ್ಯಾಯದ ಹಕ್ಕೇ ಹೊರತು, ಸಮಾನತೆಯಲ್ಲ. ಈ ಸದನದ ಮುಂದೆ ನಾನು ಒತ್ತಿ ಹೇಳಬಯಸುವುದು ಇದನ್ನೇ. ಸಮಾನತೆ ಎಂದರೆ ಸಮಾನ ನ್ಯಾಯದ ಹಕ್ಕು ಎಂದೇನೂ ಆಗುವುದಿಲ್ಲ (ಅಡ್ಡಿ). ನಾನು ಅದನ್ನು ಸಿದ್ಧಪಡಿಸಿ ತೋರಿಸುತ್ತೇನೆ. ಸಮಾಜದಲ್ಲಿ ಸಮಾನ ನ್ಯಾಯದ ಹಕ್ಕು ಉಂಟಾಗಬೇಕಾದರೆ, ಸಮಾಜದಲ್ಲಿ ನ್ಯಾಯ ಉಂಟಾಗಬೇಕಾದರೆ ವಿವಿಧ ಜನವರ್ಗಗಳನ್ನು ಅಸಮಾನ ರೂಪದಲ್ಲಿ ನಡೆಸಿಕೊಳ್ಳಬೇಕಾಗುತ್ತದೆ. ಅಷ್ಟು ದೂರ ಏಕೆ ಹೋಗಬೇಕು? ಆದಾಯ ತೆರಿಗೆಯ ವಿಚಾರವನ್ನೇ ತೆಗೆದುಕೊಳ್ಳಿ. ನಾನು ಹಣಕಾಸು ವಿಷಯದ ವಿದ್ಯಾರ್ಥಿ. ಆದ್ದರಿಂದ ಈ ನಿದರ್ಶನ ಕೂಡಲೇ ನನ್ನ ಮನಸ್ಸಿಗೆ ಬಂದಿತು. ಪುರೋಗಾಮೀ ಆದಾಯ ತೆರಿಗೆ ವ್ಯವಸ್ಥೆಯನ್ನು ನಾವೇಕೆ ಹೊಂದಿದ್ದೇವೆ? ಎಲ್ಲರಿಗೂ ನಾವೇಕೆ ಒಂದೇ ಬಗೆಯಲ್ಲಿ ತೆರಿಗೆಯನ್ನು ವಿಧಿಸುವುದಿಲ್ಲ. ಶ್ರೀಮಂತರಿಗೆ ಹೆಚ್ಚಿನ ದರದಲ್ಲಿ ತೆರಿಗೆಯನ್ನು ವಿಧಿಸುವುದಕ್ಕೂ, ಬಡವರಿಗೆ ಕಡಿಮೆ ದರದಲ್ಲಿ ತೆರಿಗೆಯನ್ನು ವಿಧಿಸುವುದಕ್ಕೂ ಕಾರಣವೇನೆಂದರೆ ಈ ಇಬ್ಬರ ತೆರಿಗೆ ಹೊರುವ ಸಾಮರ್ಥ್ಯ ಭಿನ್ನವಾಗಿರುತ್ತದೆ. ಅಂಥ ಪ್ರಸಂಗದಲ್ಲಿ ಸಮಾನತೆ ಎಂಬುದು ಅತ್ಯಂತ ಹೆಚ್ಚಿನ ಅಸಮಾನ ನ್ಯಾಯವನ್ನುಂಟುಮಾಡುತ್ತದೆ. ಸಾಮಾನ್ಯವಾದ ಒಂದು ನಿದರ್ಶನವನ್ನು ತೆಗೆದುಕೊಳ್ಳಿ. ಅನೇಕ ಮಂದಿ ಇರುವ ಒಂದು ಕುಟುಂಬದಲ್ಲಿ ಒಬ್ಬ ಅನಾರೋಗ್ಯದಿಂದಿದ್ದಾನೆ ಎಂದಿಟ್ಟುಕೊಳ್ಳಿ. ಅನಾರೋಗ್ಯದಿಂದಿರುವ ವ್ಯಕ್ತಿ ರೋಗಮುಕ್ತನಾಗಲೆಂದು ಹಾಗೂ ಅವನ ಆರೋಗ್ಯ ಉತ್ತಮವಾಗಲೆಂದು ಅವನಿಗೆ ಕೋಳಿಸಾರಿನ ರಸವನ್ನು ಕೊಡುತ್ತೇವೆ. ಇತರರಿಗೆ ನಾವು ಕೋಳಿಸಾರಿನ ರಸವನ್ನೇನೂ ಕೊಡುವುದಿಲ್ಲ. ಅನಾರೋಗ್ಯದಿಂದಿರುವ ಕುಟುಂಬದ ಇತರ ಸದಸ್ಯರಿಗೆ ಅದನ್ನು ನಿರಾಕರಿಸಿದ್ದಕ್ಕಾಗಿ ಯಾರೂ ಆ ಕುಟುಂಬದ ತಾಯಿಯನ್ನು ನಿಂದಿಸುವುದಿಲ್ಲ. ನಮಗೆ ಬೇಕಾಗಿರುವುದು ಸಮಾನ ನ್ಯಾಯದ ಹಕ್ಕು. ಪ್ರಬಲರನ್ನು ಮತ್ತು ದುರ್ಬಲರನ್ನು, ಶ್ರೀಮಂತರನ್ನು ಮತ್ತು ಬಡವರನ್ನು, ಅಜ್ಞಾನಿಗಳನ್ನು ಮತ್ತು ಬುದ್ಧಿವಂತರನ್ನು ಒಂದೇ ನೆಲೆಯಲ್ಲಿ ನಡೆಸಿಕೊಳ್ಳುವುದರಿಂದ ಈ ಸಮಾನನ್ಯಾಯದ ಹಕ್ಕನ್ನು ಉಂಟುಮಾಡಲು ಸಾಧ್ಯವಾಗುವುದಿಲ್ಲ. ನನ್ನ ಸನ್ಮಾನ್ಯ ಗೆಳೆಯರು ಈ ಎರಡು ವರ್ಗಗಳನ್ನು ನ್ಯಾಯಸಮ್ಮತವಾಗಿ ನಡೆಸಿಕೊಳ್ಳಬಯಸುವುದಾದರೆ ಅದಕ್ಕೆ ಈ ಮಸೂದೆ ಸಾಕಾಗುವುದಿಲ್ಲ. ಅವರು ಈ ಮಸೂದೆಗೆ ಇನ್ನೂ ಕೆಲವು ಉಪಬಂಧಗಳನ್ನು ಸೇರಿಸಬೇಕಾಗುತ್ತದೆ. ಈ ಮಸೂದೆಗೆ ಅಂಥ ಉಪಬಂಧಗಳನ್ನೇ ಸೇರಿಸಲು ಅವರು ಸಿದ್ಧರಿದ್ದಾರೆಯೇ ಎಂದು ನಾನು ಕೇಳಬಯಸುತ್ತೇನೆ.

ನಮ್ಮ ಉದ್ಯಮದ ಕ್ಷೇತ್ರದಲ್ಲಿ ಇಂದು ಏನಾಗುತ್ತಿದೆ? ಈ ಸಂದರ್ಭದಲ್ಲಿ ಮುಚ್ಚುಮರೆಯಿಲ್ಲದಂತೆ ನನ್ನ ಅನಿಸಿಕೆಗಳನ್ನು ಬಹಿರಂಗಪಡಿಸಬೇಕಾಗಿ ಬಂದಿರುವುದಕ್ಕಾಗಿ ನಾನು ವಿಷಾದಿಸುತ್ತೇನೆ. ನಾವು ಮುಂಬಯಿ ನಗರದಲ್ಲಿ ಪಾರ್ಸಿಗಳ ಒಡೆತನದಲ್ಲಿರುವ ಗಿರಣಿಗಳನ್ನು ಕಾಣುತ್ತೇವೆ. ಗುಜರಾತಿಗಳ ಒಡೆತನದಲ್ಲಿರುವ ಗಿರಣಿಗಳು ಇಲ್ಲಿವೆ. ಯಹೂದ್ಯರ ಅಥವಾ ಐರೋಪ್ಯರ ಒಡೆತನದಲ್ಲಿರುವ ಗಿರಣಿಗಳೂ ಮುಂಬಯಿಯಲ್ಲಿವೆ. ನನ್ನ ಕುಟುಂಬದ ಕೆಲವು ಸದಸ್ಯರು ಈ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದಾಗ ಈ

ಎಲ್ಲ ಗಿರಣಿಗಳಿಗೂ ನಾನು ಭೇಟಿಕೊಟ್ಟಿದ್ದೇನೆ. ಅವರು ಕೆಲಸ ಮಾಡುತ್ತಿದ್ದ ಆ ಗಿರಣಿಗಳಿಗೆ ಅವರ ಬುತ್ತಿಯನ್ನು ನಾನು ತೆಗೆದುಕೊಂಡು ಹೋಗುತ್ತಿದ್ದೆ. ಮತ್ತೆ ಮತ್ತೆ ಅಲ್ಲದಿದ್ದರೂ ಇತ್ತೀಚೆಗೂ ನಾನು ಕೆಲವು ಗಿರಣಿಗಳಿಗೆ ಭೇಟಿ ಕೊಟ್ಟಿದ್ದೆ. ಈ ಗಿರಣಿಗಳಲ್ಲಿನ ಅತ್ಯಂತ ಆಶ್ಚರ್ಯಕರವಾದ ಸಂಗತಿ ಎಂದರೆ ಅವುಗಳನ್ನು ವ್ಯವಸ್ಥಾಪಕರ ಬಂಧು–ಬಾಂಧವರಿಗೆ ಸ್ವರ್ಗವನ್ನಾಗಿಸಲಾಗಿದೆ. ವ್ಯವಸ್ಥಾಪಕರಿಗೆ ಒಂದಲ್ಲ ಒಂದು ರೀತಿಯಲ್ಲಿ ನಂಟರಾಗಿದ್ದಾರೆಂಬ ಏಕೈಕ ಕಾರಣದಿಂದಾಗಿಯೇ ನೂರಾರು ಮಂದಿ ಅಯೋಗ್ಯ ವ್ಯಕ್ತಿಗಳನ್ನು ಉನ್ನತ ವೇತನ ಶ್ರೇಣಿಗಳಲ್ಲಿ ನೇಮಿಸಲಾಗಿದೆ. ನೀವು ಯಾವುದಾದರೂ ಒಂದು ಪಾರ್ಸಿ ಗಿರಣಿಗೆ ಹೋಗಿ, ಅಗತ್ಯವಿರಲಿ ಅಥವಾ ಇಲ್ಲದಿರಲಿ, ನೂರಾರು ಮಂದಿ ಪಾರ್ಸಿಗಳನ್ನು ಅಲ್ಲಿ ನೇಮಿಸಿರುವುದನ್ನು ಕಾಣುತ್ತೀರಿ. ಗುಜರಾತಿಗಳ ಒಡೆತನದಲ್ಲಿರುವ ಯಾವುದಾದರೂ ಒಂದು ಗಿರಣಿಗೆ ಹೋಗಿ ಅದಕ್ಕೆ ಅಗತ್ಯವಿರಲಿ ಅಥವಾ ಇಲ್ಲದಿರಲಿ, ನೂರಾರು ಮಂದಿ ಗುಜರಾತಿಗಳನ್ನು ಅಲ್ಲಿ ನೇಮಿಸಿರುವುದನ್ನು ಕಾಣುತ್ತೀರಿ. ಈ ಗಿರಣಿಗಳಲ್ಲಿ ನೇಮಿಸಲಾಗಿರುವ ಇಂಥ ವ್ಯಕ್ತಿಗಳನ್ನು– ಅವರು ಸಮರ್ಥರಾಗಿರಲಿ ಅಥವಾ ಇಲ್ಲದಿರಲಿ; ಅವರ ಅಗತ್ಯ ಇರಲಿ ಅಥವಾ ಇಲ್ಲದಿರಲಿ– ಪೋಷಿಸುವುದಕ್ಕಾಗಿ ಕಾರ್ಮಿಕರ ದುಡಿಮೆಯ ಅತ್ಯುತ್ತಮ ಭಾಗವನ್ನು ಸೂರೆಗೊಡಲಾಗುತ್ತಿದೆ. ಉದ್ಯಮಗಳನ್ನು ನಿಯಂತ್ರಿಸುತ್ತಿರುವ ಈ ಎಲ್ಲ ವ್ಯಕ್ತಿಗಳೂ ಬಂಡವಾಳವನ್ನು ಎತ್ತಿ ಎಲ್ಲ ಬಗೆಯ ಕಾಗದದ ವ್ಯವಹಾರಗಳ ಮೂಲಕ ಅದನ್ನು ಬೃಹದೀಕರಿಸುತ್ತಾರೆ. ತನಗೆ ಕೊಡಲಾಗುತ್ತಿರುವ ವೇತನಾದಿಗಳು ತೀರ ಕಡಿಮೆಯಾಗಿವೆ ಎಂದು ಕಾರ್ಮಿಕ ಹೇಳಿದರೆ, ಉದ್ಯಮವನ್ನು ನಿಯಂತ್ರಿಸುತ್ತಿರುವ ವ್ಯಕ್ತಿ "ಅದು ನನ್ನ ಬಂಡವಾಳ" ಎಂದು ಹೇಳುತ್ತಾನೆ. ಇದೆಲ್ಲವೂ ಖೊಟ್ಟಿ ಬಂಡವಾಳ, ಉದ್ಯಮದ ಗಳಿಕೆಯ ಭಾಗವನ್ನು ಈ ಜನಗಳೇ ಕಬಳಿಸಿಬಿಡುತ್ತಾರೆ. ಅಳಿದುಳಿದ ಮೊತ್ತದ ಆಧಾರದ ಮೇಲೆ ನಿಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಅಗತ್ಯವಾದ ಜೀವಿಕೆಯನ್ನು ಸಂಪಾದಿಸಿಕೊಳ್ಳಿ ಎಂದು ಕಾರ್ಮಿಕರಿಗೆ ಹೇಳಲಾಗುತ್ತದೆ. ಸಮಾನ ನ್ಯಾಯದ ಹಕ್ಕನ್ನು ಜಾರಿಗೆ ಕೊಡುವ ಅಪೇಕ್ಷೆ ನಮ್ಮ ಸನ್ಮಾನ್ಯ ಪ್ರಧಾನಮಂತ್ರಿಗಳಿಗೆ ಇದ್ದಲ್ಲಿ, ಅವರು ಕಾರ್ಮಿಕರ ವೇತನವನ್ನು ಉದ್ಯಮದ ಲಾಭದ ಮೇಲಿನ ಮೊದಲ ಋಣಭಾರವಾಗಿಸಲಿ. ಗಿರಣಿ–ಮಾಲೀಕರುಗಳು, ಅಷ್ಟೇ ಏಕೆ ಎಲ್ಲಾ ಉದ್ಯಮದ ಒಡೆಯರೂ ತಮ್ಮ ವಾರ್ಷಿಕ ಆಯವ್ಯಯವನ್ನು ಪ್ರಕಟಿಸುವಂತೆ ಕಾನೂನಿನ ಮೂಲಕ ಅದೇಕೆ ಒತ್ತಾಯಪಡಿಸಬಾರದು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪ್ರತಿ ವರ್ಷವೂ ಸರ್ಕಾರ ತನ್ನ ಆಯವ್ಯಯವನ್ನು ಮಂಡಿಸಬೇಕಾಗಿದೆ; ಪ್ರತಿ ವರ್ಷವೂ ನಾವು ಸರ್ಕಾರದ ಆಯವ್ಯಯವನ್ನು ಪಡೆದುಕೊಳ್ಳುತ್ತೇವೆ. ಎಷ್ಟು ಜನ ಮಂತ್ರಿಗಳನ್ನು ನೇಮಿಸಲಾಗಿದೆ. ಮಂತ್ರಿಗಳಿಗೆ ಎಷ್ಟು ಮಂದಿ ಚಪರಾಸಿಗಳನ್ನೆ ಕೊಡಲಾಗಿದೆ. ಇಲಾಖೆಗಳಲ್ಲಿ ಎಷ್ಟು ಮಂದಿ ಅಧೀಕ್ಷಕರಿದ್ದಾರೆ, ಎಷ್ಟು ಮಂದಿ ಕರಣಿಕರಿದ್ದಾರೆ. ಇವೇ ಮೊದಲಾದ ವಿಚಾರಗಳನ್ನೆಲ್ಲ ಸರ್ಕಾರ ಅದರಲ್ಲಿ ಹೇಳಿಕೊಳ್ಳುತ್ತದೆ. ಸಿಬ್ಬಂದಿ ಹೆಚ್ಚಾಗಿದೆಯೇ ಇಲ್ಲವೇ ಎಂಬುದನ್ನು ಈ ಸದನ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿರುತ್ತದೆ. ಹಣವನ್ನು ಸೂಕ್ತ ರೀತಿಯಲ್ಲಿ ಖರ್ಚು ಮಾಡಲಾಗುತ್ತಿದೆಯೇ ಇಲ್ಲವೇ ಎಂಬುದು ಈ ಸದನಕ್ಕೆ ಗೊತ್ತಾಗುತ್ತದೆ. ಸಂಪೂರ್ಣವಾಗಿ ತನ್ನ ಬಂಡವಾಳದಿಂದಲೇ ಅಲ್ಲದೆ, ಬೇರೊಬ್ಬ ವ್ಯಕ್ತಿಯ ಬೆವರಿನ ದುಡಿಮೆಯಿಂದಲೂ ತನ್ನ ಗಳಿಕೆಯನ್ನು ಪಡೆದುಕೊಳ್ಳುವ ಗಿರಣಿಯ ಮಾಲೀಕನನ್ನು ಅಷ್ಟೇ ಏಕೆ, ಯಾವುದೇ ಉದ್ಯಮದ ಒಡೆಯನನ್ನು ತನ್ನ ವ್ಯವಸ್ಥಾಪನೆಯ ಬಗೆಗಿನ ವಿವರಗಳನ್ನು ಕೊಡುವಂತೆ ಏಕೆ ಒತ್ತಾಯಿಸಬಾರದು? ಇದು ನಾವು ಮಾಡಬಹುದಾದ ಅತ್ಯಂತ ನ್ಯಾಯೋಚಿತವಾದ ಬೇಡಿಕೆಯಾಗಿದೆ. ಇದರಿಂದ ಆಗುವ ಅನುಕೂಲ

ಇದು: ಮಾಲೀಕ ಒಮ್ಮೆ ಆ ಬಗೆಯ ಆಯವ್ಯಯವನ್ನು ಮುಂದಿರಿಸಿದನೆಂದರೆ ಕಾರ್ಮಿಕರ ನಡುವೆ ಹಂಚಿಕೆಗಾಗಿ ಉಳಿದಿರುವ ಶೇಷ ನ್ಯಾಯೋಚಿತವಾಗಿದೆಯೇ ಅಥವಾ ಇಲ್ಲವೇ ಒಟ್ಟಾರೆ ಲಾಭದ ಅನುಚಿತ ಭಾಗಾಂಶವನ್ನು ಉದ್ಯೋಗದಾತ ಕಬಳಿಸಿಬಿಟ್ಟಿದ್ದಾನೆಯೇ ಇಲ್ಲವೇ ಎಂಬುದನ್ನು ಮನಗಾಣುವ ಮತ್ತು ಪರೀಕ್ಷಿಸಿ ನೋಡುವ ಸ್ಥಿತಿಯಲ್ಲಿ ಕಾರ್ಮಿಕರು ಇರುತ್ತಾರೆ. ಸ್ಥಿತಿಗತಿಗಳ ನಿಜವಾದ ಸ್ಥಿತಿ ಏನೆಂಬುದನ್ನು ಪರೀಕ್ಷಿಸಿ ನೋಡಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಉದ್ಯೋಗಿ ಇರುವಾಗ, ಸಂಧಾನಕಾರರ ಮಂಡಳಿಯನ್ನು ರಚಿಸುವುದರಿಂದಲಾಗಲೀ ತಮ್ಮ ಲೆಕ್ಕದ ಪುಸ್ತಕಗಳನ್ನು ಹಾಜರುಪಡಿಸುವಂತೆ ಉದ್ಯೋಗದಾತರಿಗೆ ಹೇಳುವುದರಿಂದಾಗಲೀ ಲಭಿಸುವ ಪ್ರಯೋಜನವೇನು? ನಾನು ಸೂಚಿಸಿರುವ ಕ್ರಮವಿಧಾನವನ್ನು ಅಂಗೀಕರಿಸಿದರೆ, ಕಾರ್ಮಿಕರ ವತಿಯಿಂದಾಗುವ ತೊಂದರೆಗಳೂ ಕಡಿಮೆಯಾಗುತ್ತವೆ. ಸಂಧಾನ ವ್ಯವಹರಣೆಗಳು ಮತ್ತಷ್ಟು ಪರಿಣಾಮಕಾರಿಯಾಗುತ್ತವೆ. ಹಾಗೂ ಔದ್ಯಮಿಕ ಶಾಂತಿಯೂ ಹೆಚ್ಚಿನ ಪ್ರಮಾಣದಲ್ಲಿರುತ್ತದೆ ಎಂದು ನಾನು ದೃಢವಾಗಿ ನಂಬಿದ್ದೇನೆ. ಸನ್ಮಾನ್ಯ ಪ್ರಧಾನ ಮಂತ್ರಿಗಳು ನಾನು ಸೂಚಿಸಿರುವ ಅರ್ಥದಲ್ಲಿ ಶ್ರಮ ಮತ್ತು ಬಂಡವಾಳವನ್ನು ಸಮಾನತೆಯ ನೆಲೆಯಲ್ಲಿ ಪರಿಗಣಿಸುವು ದಾದರೆ– ಅಂದರೆ ಸಮಾನ ನ್ಯಾಯದ ಹಕ್ಕು ಲಭಿಸುವಂತೆ ಮಾಡುವುದಾದಲ್ಲಿ– ಈ ಮಸೂದೆಯ ಉಪಬಂಧಗಳಲ್ಲಿ ಸಮಾನ ನ್ಯಾಯ ಹಕ್ಕಿಗೆ ಯಾವುದೇ ಆಧಾರವೂ ಇಲ್ಲದಂತಾಗಿಬಿಟ್ಟಿದೆ ಎಂದು ಹೇಳಬೇಕಾಗುತ್ತದೆ. ಎರಡನೆಯದಾಗಿ, ಬಂಡವಾಳ ಮತ್ತು ಶ್ರಮಗಳ ನಡುವೆ ಸಮಾನತೆಗೂ ಯಾವುದೇ ಆಧಾರ ಇಲ್ಲದಂತಾಗಿದೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಯಾವುದೇ ವಿವಾದದ ಸಂದರ್ಭದಲ್ಲಿ ಸರ್ಕಾರ ಉದ್ಯೋಗದಾತರ ಪರವಾಗಿಯೇ ಇರುತ್ತದೆ. ಮುಷ್ಕರಗಳ ಸಂದರ್ಭದಲ್ಲಿ ಸರ್ಕಾರ ಪೊಲೀಸ್ ದಳವನ್ನು ಬಳಸುವ ರೀತಿಯಿಂದಲೇ ಇದು ಸ್ಪಷ್ಟವಾಗುತ್ತದೆ. ಸಾರ್ವಜನಿಕ ನಿಧಿಯಿಂದ ನಾವೆಲ್ಲರೂ ಹೊರುವ ತೆರಿಗೆಗಳಿಂದ ಪೊಲೀಸ್ ದಳವನ್ನು ನಿರ್ವಹಿಸಿಕೊಂಡು ಬರಲಾಗುತ್ತಿದೆ. ಅದಿರುವುದು ನಮ್ಮೆಲ್ಲರ ಲಾಭಕ್ಕಾಗಿಯೇ. ಕಾರ್ಮಿಕರ ಮುಷ್ಕರ ಶಾಂತಿಭಂಗದಲ್ಲಿ ಪರ್ಯವಸಾನಗೊಳ್ಳುತ್ತದೆಂಬ ಕಾರಣದಿಂದಾಗಿಯೇ ಮುಷ್ಕರವನ್ನು ಹತ್ತಿಕ್ಕಲು ಈ ಪೊಲೀಸ್ ದಳವನ್ನು ಬಳಸುವ ಅಧಿಕಾರ ಯಾವುದೇ ಸರ್ಕಾರಕ್ಕೂ ಇರುವುದಿಲ್ಲ. ಉದ್ಯಮದ ಒಂದು ಗುಂಪಿನಿಂದಾಗಿಯೇ ಶಾಂತಿಭಂಗ ಉಂಟಾಗಿದೆ ಎಂಬುದನ್ನು ತೋರಿಸಿಕೊಡುವುದೂ ಮತ್ತಷ್ಟು ಅಗತ್ಯವಾಗಿದೆ. ಕಾರ್ಮಿಕರ ಅನುಚಿತವಾದ ಬೇಡಿಕೆ ಯಿಂದಾಗಿಯೇ ಶಾಂತಿಭಂಗ ಉಂಟಾಗಿದ್ದಲ್ಲಿ ಅವರಿಗೆ ವಿರುದ್ಧವಾಗಿ ಪೊಲೀಸ್ ದಳವನ್ನು ಬಳಸುವುದು ಸಮರ್ಥನೀಯವಾಗಬಹುದು. ಇತ್ತ ಉದ್ಯೋಗದಾತ ಎಸಗಿದ ಯಾವುದೇ ಒಂದು ವಿವೇಕ ಸಮ್ಮತವಾಗ ದಂಥ ಹಾಗೂ ನ್ಯಾಯ ಮತ್ತು ಸಮಾನ ನ್ಯಾಯದ ಹಕ್ಕಿಗೆ ವಿರುದ್ಧವಾಗಿರುವಂಥ ಕಾರ್ಯದಿಂದಾಗಿ ಶಾಂತಿಭಂಗ ಉಂಟಾಗಿದೆ ಎಂದಾದಲ್ಲಿ ಕಾರ್ಮಿಕರಿಗೆ ವಿರುದ್ಧವಾಗಿ ಪೊಲೀಸ್ ದಳವನ್ನು ಬಳಸಲು ಸರ್ಕಾರಕ್ಕೆ ಯಾವುದೇ ಹಕ್ಕು ಇರುವುದಿಲ್ಲ. ಈ ಎರಡು ಉಪಬಂಧಗಳನ್ನು ಅಳವಡಿಸಿಕೊಳ್ಳುವುದರಿಂದ ಮಾತ್ರವೇ ಉದ್ಯೋಗದಾತರ ಮತ್ತು ಉದ್ಯೋಗಿಗಳ ನಡುವೆ ನಿಜವಾದ ಸಮಾನತೆಯನ್ನು ತರಬಹುದಾಗಿದೆ. ತನ್ನ ಆಯವ್ಯಯವನ್ನು ಬಹಿರಂಗಗೊಳಿಸುವಂತೆ ಉದ್ಯೋಗದಾತನನ್ನು ಒತ್ತಾಯಿಸಬೇಕು ಹಾಗೂ ಶಾಂತಿಭಂಗ ಉಂಟಾಗಿದೆಯೆಂಬ ಕಾರಣಕ್ಕಾಗಿಯೇ ಕಾರ್ಮಿಕರ ವಿರುದ್ಧವಾಗಿ ಪೊಲೀಸ್ ದಳವನ್ನು ಬಳಸುವುದನ್ನು ಸರ್ಕಾರ ನಿಲ್ಲಿಸಬೇಕು. ಇದರ ಹೊರತು ಚೌಕಾಸಿ ಮಾಡುವ ಶಕ್ತಿಗೆ ಸಂಬಂಧಿಸಿದಂತೆ ಬಂಡವಾಳ ಮತ್ತು ಶ್ರಮದ ನಡುವೆ ಯಾವುದೇ ಸಮಾನತೆ ಇರುವುದು ಸಾಧ್ಯವಿಲ್ಲ. ನೀವು ಇದನ್ನು

ಮಾಡುವಿರೇನು? ನೀವು ಇದನ್ನು ಮಾಡದಿದ್ದರೆ, ಕಾರ್ಮಿಕರ ಗೆಳೆಯರಾಗಲಾರಿರಿ. ಈಗ ಇರುವಂತೆ ಈ ಮಸೂದೆಯನ್ನು ಅಂಗೀಕರಿಸಬಾರದು ಎಂಬುದು ನನ್ನ ದೃಢವಾದ ಅಭಿಪ್ರಾಯ. ಅದು ಕಾರ್ಮಿಕರಿಗೆ ಅನನುಕೂಲವನ್ನುಂಟುಮಾಡುತ್ತದೆ. ಈ ಮಸೂದೆ ಎಂಥದು ಎಂಬುದು ಕಾರ್ಮಿಕರಿಗೆ ಗೊತ್ತಿಲ್ಲದೆ ಇರಬಹುದು. ಆದರೆ ಈ ಮಸೂದೆ ಕಾರ್ಯರೂಪಕ್ಕೆ ಬಂದಾಗ ಕಾರ್ಮಿಕರು ಈ ಮಸೂದೆಗೆ ಮುಖಾಮುಖಿಯಾಗಿ ನಿಂತಾಗ, ಅವರು ಈ ಮಸೂದೆ ಕೆಟ್ಟದಾಗಿದೆ, ಕ್ರೂರವಾಗಿದೆ, ಹಾಗೂ ಅಮಾನವೀಯ ಎನ್ನುತ್ತಾರೆ. ಮಾನ್ಯರೆ, ನಾನು ಇದಕ್ಕೆ ಭಾಗಿಯಾಗಲಾರೆ (ಚಪ್ಪಾಳೆ).

## ೪೪

# ಗಲಭೆ ವಿಚಾರಣಾ ಸಮಿತಿಯ ವರದಿಯನ್ನು ಕುರಿತು*

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ನಾನು ಹೆಚ್ಚೇನೂ ಹೇಳಬೇಕಾಗಿಲ್ಲದಿರುವುದರಿಂದ ಐದು ನಿಮಿಷಗಳ ಒಳಗಾಗಿ ನನ್ನ ಮಾತನ್ನು ಮುಗಿಸಲು ಪ್ರಯತ್ನಿಸುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ಈ ಖೋತಾ ಪ್ರಸ್ತಾವದ ಬಗ್ಗೆ ಹೇಳಿರುವ ಮಾತುಗಳಿಗೆ ಪ್ರತಿಯಾಗಿ ನಾನೇನಾದರೂ ಹೇಳುವುದಿದ್ದರೆ ಹೇಳಬೇಕೆಂದು ನನಗೆ ತಿಳಿಸಲಾಗಿದೆ. ಇಲ್ಲಿ ಈ ಮುಷ್ಕರದ ವಿಷಯದಲ್ಲಿ ನಾನು ತೆಗೆದುಕೊಂಡ ನಿಲುವಿನ ವಿಚಾರವಾಗಿ ಯಾವುದೇ ವಾದ ಅಥವಾ ಸಮರ್ಥನೆಯನ್ನು ಮುಂದಿರಿಸುವ ಅಗತ್ಯವೇನೂ ಇಲ್ಲ ಎಂದು ನಾನು ಭಾವಿಸಿದ್ದೇನೆ. ಅದಕ್ಕೆ ಸಮಯವೂ ಇಲ್ಲ. ಹೀಗಾಗಿ ನಾನು ಆ ವಿಚಾರವನ್ನು ಬದಿಗಿರಿಸಿಬಿಡುತ್ತೇನೆ. ನನಗೆ ಮುಂಚೆ ಈ ಸದನದ ಇಬ್ಬರು ಸನ್ಮಾನ್ಯ ಸದಸ್ಯರು ಮಾಡಿದ ಭಾಷಣಗಳು ಯಾವ ಪ್ರಮುಖ ಸಮಸ್ಯೆಗಳು ಈ ವರದಿಯ ಪರಿಣಾಮವಾಗಿ ನಮ್ಮ ತೀವ್ರ ಕಾಳಜಿಯ ಸಮಸ್ಯೆಗಳಾಗಿ ಪರಿಣಮಿಸಿವೆ, ಅವುಗಳಿಂದ ನಮ್ಮ ದೃಷ್ಟಿಯನ್ನು ಬದಿಗೆ ಸರಿಸಿಬಿಡುತ್ತವೆಂಬ ಅಭಿಪ್ರಾಯವನ್ನು ನನ್ನಲ್ಲಿ ಮೂಡಿಸಿದುವು. ಈ ವಿವೇಚನೆಯ ಪ್ರಕಾರ ನಾವು ಪರಿಗಣಿಸಬೇಕಾಗಿರುವ ಪ್ರಶ್ನೆಗಳು ಮೂರು. ಎರಡನ್ನಾದರೂ ತಪ್ಪದೇ ಪರಿಗಣಿಸಬೇಕು. ನಾನು ಮಾತನಾಡಲು ಎದ್ದು ನಿಂತಿರುವುದು ಈ ಮೂರು ಪ್ರಶ್ನೆಗಳನ್ನು ಗೃಹ ಸಚಿವರಿಗೆ ಹಾಕುವುದಕ್ಕಾಗಿಯೇ ಗಲಭೆಗಳು ನಡೆದಿದ್ದವು ಎಂಬ ಸಮಿತಿಯ ನಿರ್ಣಯವನ್ನು ಅದರ ಅರ್ಹತೆಗೆ ಅನುಗುಣವಾಗಿ ವಾದಕ್ಕಾಗಿಯಾದರೂ ಒಪ್ಪಿಕೊಳ್ಳುತ್ತೇನೆ.

ಜಮ್ನಾದಾಸ್ ಎಮ್. ಮೆಹ್ತಾ: ಅವು ನಿರ್ಣಯಗಳೇನೂ ಅಲ್ಲ. ಆದರೆ, ಅವು ಸಮಿತಿಗಾಗಿ ಕಂಡುಕೊಳ್ಳಲಾದ ಸಂಗತಿಗಳು.

ಡಾ. ಬಿ. ಆರ್. ಅಂಬೇಡ್ಕರ್: ಅದು ಏನಾದರೂ ಆಗಿರಲಿ, ಸಮಿತಿಯ ವರದಿ ಮಾಡಿರುವುದು ಇದನ್ನು ಹಾಗೂ ಅತ್ಯಂತ ಖಚಿತವಾದ ಮಾತುಗಳಲ್ಲಿ ಇದನ್ನು ವರದಿ ಮಾಡಲಾಗಿದೆ. ೮೪ನೆಯ ಪ್ಯಾರಾದಲ್ಲಿ ಹೀಗೆಂದು ಹೇಳಿದೆ:

> "ಗುಂಪಿನ ನಿಲುವು ಮತ್ತು ವರ್ತನೆಗಳೇ ಗೋಲಿಬಾರಿಗೆ ಕಾರಣವಾಗಿದ್ದುವು. ಗೋಲಿಬಾರಿನಲ್ಲಿ ಹಾಗೂ ಅದರ ಪರಿಣಾಮವಾದ ಸಾವು-ನೋವುಗಳಲ್ಲಿ ಪರ್ಯವಸಾನಗೊಂಡ ಎಲ್ಫಿನೋನ್ ಗಿರಣಿಯಲ್ಲಿನ ಗಲಭೆಗಳ ಬಗೆಗಿನ ಜವಾಬ್ದಾರಿ ಅಂತಿಮವಾಗಿ "ಕ್ರಿಯಾ ಸಮಿತಿ"ಯ ಸದಸ್ಯರದ್ದೇ ಆಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಏಕೆಂದರೆ ಮುಷ್ಕರವನ್ನು ಯಶಸ್ವಿಯಾಗಿಸುವ ಸಲುವಾಗಿ

---

* ಮುಂಬಯಿ ವಿಧಾನ ಸಭೆಯ ಚರ್ಚೆಗಳು ಸಂ. ೫
ಪು. ೧೭೨೪-೭೭ ದಿನಾಂಕ ೧೭ ಮಾರ್ಚ್ ೧೯೩೯

ಹಿಂಸೆಗೆ ಇಳಿಯಬೇಕೆಂದು ತಮ್ಮ ತೀವ್ರ ಪ್ರಚಾರದ ಮೂಲಕ, ಅವರು ಅನಕ್ಷರಸ್ಥ ಕಾರ್ಮಿಕರನ್ನು ಪ್ರಚೋದಿಸಿದರು."

ನಾನಾಗಲೇ ಹೇಳಿರುವಂತೆ ಈ ನಿರ್ಣಯದ ಯಥಾರ್ಥತೆಯನ್ನು ಪರೀಕ್ಷಿಸುವ ಗೊಡವೆಗೆ ನಾನು ಹೋಗುತ್ತಿಲ್ಲ. ಈ ನಿರ್ಣಯದ ಯಥಾರ್ಥತೆಯನ್ನು ಪರೀಕ್ಷಿಸುವುದೇ ನಮ್ಮ ಇಚ್ಛೆ ಯಾಗಿದ್ದಲ್ಲಿ, ನಾವು ಬೇಕಾದಷ್ಟು ಮಾತುಗಳನ್ನು ಹೇಳಬಹುದಾಗಿದೆ. ಏಕೆಂದರೆ ನನ್ನ ಮಟ್ಟಿಗೆ ಹೇಳುವುದೇ ಆದರೆ ಯಾವ ಸಾಕ್ಷ್ಯದ ಆಧಾರದ ಮೇಲೆ ಈ ನಿರ್ಣಯಕ್ಕೆ ಬರಲಾಗಿದೆಯೋ ಆ ಸಾಕ್ಷ್ಯ ಹಾಗೂ ಕ್ರಿಯಾ ಸಮಿತಿಯ ಸದಸ್ಯರಾಗಿದ್ದಂಥ ವ್ಯಕ್ತಿಗಳು ಮಾಡಿದ್ದಾರೆಂದು ಹೇಳಲಾಗಿರುವ ಭಾಷಣ ಗಳು ಇವೆಲ್ಲವನ್ನೂ ವಾಸ್ತವವಾಗಿ ೧೧ನೆಯ ಪುಟದಿಂದ ಮುಂದಕ್ಕೆ ವರದಿಯಲ್ಲಿಯೇ ಕೊಡ ಲಾಗಿದೆ– ನನ್ನ ವಿವೇಚನೆಯಲ್ಲಿ ಈ ನಿರ್ಣಯವು ಬೆಂಬಲ ನೀಡುವಂಥವಾಗಿಲ್ಲ. ನಾನಾಗಲೇ ಹೇಳಿ ದಂತೆ ವಾದಕ್ಕಾಗಿ ಮಾತ್ರವೇ ನಾನಿದನ್ನು ವಸ್ತುಸ್ಥಿತಿಯ ಬಗೆಗಿನ ನಿರ್ಣಯವೆಂದು ಪರಿಗಣಿಸು ತ್ತಿದ್ದೇನೆ. ಸನ್ಮಾನ್ಯ ಗೃಹಸಚಿವರಿಗೆ ನಾನು ಹಾಕಲಿರುವ ಪ್ರಶ್ನೆ ಇದು: ಈ ವರದಿ ನಿಜವಾದುದೆಂದು ನೀವು ನಂಬುತ್ತೀರಾ? ಈ ವರದಿ ನಿಜವಾದುದೆಂದು ನೀವು ಹೇಳುವುದಾದಲ್ಲಿ, ಈ ಹಿಂಸಾಕಾಂಡಕ್ಕೆ ನೆರವು ನೀಡಿದ್ದಕ್ಕಾಗಿ ಹಾಗೂ ದುಷ್ಪ್ರೇರಣೆ ನೀಡಿದ್ದಕ್ಕಾಗಿ "ಕ್ರಿಯಾ ಸಮಿತಿ"ಯ ಸದಸ್ಯರ ಮೇಲೆ ಮೊಕದ್ದಮೆ ಹೂಡಲು ನೀವು ಸಿದ್ಧರಾಗಿದ್ದೀರಾ? ನನ್ನ ಮಟ್ಟಿಗೆ ಹೇಳುವುದಾದರೆ ಈ "ಕ್ರಿಯಾ ಸಮಿತಿ" ಯೊಂದಿಗೆ ನನಗೆ ಎಷ್ಟರಮಟ್ಟಿಗೆ ಸಂಬಂಧವಿದೆಯೋ ಅಷ್ಟರಮಟ್ಟಿಗೆ ನಾನು ವಿಚಾರಣೆಗೆ ಒಳ ಗಾಗಲೂ ಸಿದ್ಧನಾಗಿದ್ದೇನೆ. ಧೈರ್ಯವಿರುವ, ವಿಶ್ವಾಸವಿರುವ ಹಾಗೂ ಈ ಸಾಕ್ಷ್ಯದಲ್ಲಿ ನಂಬಿಕೆಯನ್ನಿರಿಸಿ ಕೊಂಡಿರುವ ಯಾವುದೇ ವ್ಯಕ್ತಿ ಮುಂದೆ ಬಂದು ನನ್ನ ಮೇಲೆ ಮೊಕದ್ದಮೆಯನ್ನು ಹೂಡಲಿ. ನಾನು ವಿಚಾರಣೆಗೆ ಒಳಗಾಗಲು ಹಾಗೂ ಕಾನೂನು ನನಗೆ ವಿಧಿಸಬಹುದಾದ ಶಿಕ್ಷೆಯನ್ನು ಅನುಭವಿಸಲು ನಾನು ಸಿದ್ಧನಾಗಿದ್ದೇನೆ. ಇದೇ ನನ್ನ ಮೊದಲ ಪ್ರಶ್ನೆ. ಸನ್ಮಾನ್ಯ ಗೃಹ ಸಚಿವರಿಗೆ ನಾನು ಹಾಕಲಿರುವ ಎರಡನೆಯ ಪ್ರಶ್ನೆ ಇದು. ಈ ಪ್ರಶ್ನೆಯೂ ಮತ್ತೆ ವಿಚಾರಣಾ ಸಮಿತಿಯ ನಿರ್ಣಯವನ್ನೇ ಆಧರಿಸಿದೆ. ಇದನ್ನು ನಾನಾಗಲೇ ಹೇಳಿದಂತೆ ವಾದಕ್ಕಾಗಿ ಮಾತ್ರವೇ ಅಂಗೀಕರಿಸುತ್ತಿದ್ದೇನೆ. "ಗೋಲಿಬಾರು ಮಾಡಿದ್ದು ಸಮರ್ಥನೀಯವಾಗಿತ್ತೆ?" ಎಂಬುದು ಸಮಿತಿಗೆ ಸಂಬಂಧಿಸಿದ ಮುಖ್ಯ ಪ್ರಶ್ನೆಯಾಗಿತ್ತು ಎಂಬುದಾಗಿ ನಾನು ಭಾವಿಸಿದ್ದೆ. ಗೋಲಿಬಾರು ಮಾಡಿದ್ದು ಸಮರ್ಥನೀಯವಾಗಿತ್ತು. ಗೋಲಿಬಾರು ಮಾಡು ವುದಕ್ಕೆ ಕಾರಣಗಳಿದ್ದುವು ಎಂದು ಸಮಿತಿ ಹೇಳಿದೆ. ಗೋಲಿಬಾರು ಮಾಡದೆ ಇದ್ದಲ್ಲಿ ಹಿಂಸೆಯನ್ನು ಹತ್ತಿಕ್ಕಲು ಸಾಧ್ಯವಾಗುತ್ತಿರಲಿಲ್ಲವೆಂದೂ ಸಮಿತಿ ವರದಿ ಮಾಡಿದೆಯೆಂದು ನಂಬಿದ್ದೇನೆ. ಬೇರೆ ಮಾತು ಗಳಲ್ಲಿ ಹೇಳಬೇಕೆಂದರೆ ಉದ್ದೇಶಕ್ಕೆ ಅಗತ್ಯವಾಗಿದ್ದಷ್ಟು ಪ್ರಮಾಣದಲ್ಲಿ ಮಾತ್ರವೇ ಗೋಲಿಬಾರು ಮಾಡ ಲಾಗಿದೆ ಎಂದು ಆ ಸಮಿತಿ ಭಾವಿಸಿದೆ. ನಾನಾಗಲೇ ಹೇಳಿದಂತೆ ನನ್ನ ವಾದದ ಉದ್ದೇಶಕ್ಕಾಗಿ ನಾನು ಆ ನಿರ್ಣಯವನ್ನು ನಿಜವೆಂದು ಪರಿಗಣಿಸುತ್ತಿದ್ದೇನೆ. ಆದ್ದರಿಂದಲೇ ಗೃಹಸಚಿವರಿಗೆ ನಾನು ಇನ್ನೊಂದು ಪ್ರಶ್ನೆಯನ್ನೂ ಹಾಕುತ್ತಿದ್ದೇನೆ: ಈ ಗೋಲಿಬಾರಿನಲ್ಲಿ ಭಾಗಿಗಳಾಗಿದ್ದ ಪೊಲೀಸು ಅಧಿಕಾರಿಗಳ ಮೇಲೆ ಸಾಮಾನ್ಯ ನ್ಯಾಯಾಲಯವೊಂದರಲ್ಲಿ ಮೊಕದ್ದಮೆಯನ್ನು ಹೂಡಲು ನೀವು ಸಿದ್ಧರಾಗಿದ್ದೀರಾ? ನ್ಯಾಯಾಧೀಶರೊಬ್ಬರ ಮತ್ತು ಜ್ಯೂರಿಯೊಬ್ಬರ ಮೂಲಕ ಈ ಸಮಿತಿಯ ನಿರ್ಣಯಕ್ಕೆ ಸಮರ್ಥನೆ ಯನ್ನು ಸಾಮಾನ್ಯ ನಾಗರಿಕ ಮತ್ತು ಪೊಲೀಸ್ ಅಧಿಕಾರಿ ಅಥವಾ ಸೈನಿಕ ಅಧಿಕಾರಿಯ ನಡುವೆ

ಯಾವುದೇ ವ್ಯತ್ಯಾಸವೂ ಇಲ್ಲ ಎಂಬುದನ್ನು ಈ ಸದನದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ಸದನದ ಪ್ರಯೋಜನಕ್ಕಾಗಿ ಅತ್ಯಂತ ಶ್ರೇಷ್ಠವಾದ ದಸ್ತಾವೇಜೊಂದರಿಂದ– ಅಂದರೆ ಫೆದರ್ ಸ್ಟೋನ್ ದೊಂಬಿ ಸಮಿತಿಯ ವರದಿಯಿಂದ ಒಂದು ಪ್ಯಾರಾವನ್ನು ಓದಿ ಹೇಳಬಯಸುತ್ತೇನೆ. ನನ್ನ ಸನ್ಮಾನ್ಯ ಸ್ನೇಹಿತರಾಗಿರುವ ಗೃಹಸಚಿವರಿಗೆ ಇದು ಗೊತ್ತಿದೆಯೆಂದು ನಾನು ನಂಬಿದ್ದೇನೆ. ಅದರಲ್ಲಿನ ಒಂದು ಪ್ಯಾರಾದಲ್ಲಿ ಹೀಗೆಂದು ಹೇಳಿದೆ:

> "ಕಾನೂನಿನ ತತ್ವದ ಮಟ್ಟಿಗೆ ಹೇಳುವುದಾದರೆ, ಅಧಿಕಾರಿಗಳು ಮತ್ತು ಸೈನಿಕರು ವಿಶಿಷ್ಟವಾದ ವಿಶೇಷಾಧಿಕಾರಗಳನ್ನೇನೂ ಹೊಂದಿರುವುದಿಲ್ಲ ಹಾಗೂ ಅವರು ವಿಶಿಷ್ಟವಾದ ಹೊಣೆಗಾರಿಕೆಗೇನೂ ಒಳಪಟ್ಟಿರುವುದಿಲ್ಲ. ನಾಗರಿಕ ಸುವ್ಯವಸ್ಥೆಯ ಸ್ಥಾಪನೆಯ ಉದ್ದೇಶಕ್ಕಾಗಿ ನೇಮಿಸಲಾಗಿರುವಂಥ ಸೈನಿಕನೂ ನಿರ್ದಿಷ್ಟ ರೀತಿಯಲ್ಲಿ ಸನ್ನದ್ಧನಾಗಿರುವಂಥ ನಾಗರಿಕನೇ ಆಗಿರುತ್ತಾನೆ. ತಾನು ಸೈನಿಕನಾಗಿದ್ದೇನೆಂಬ ಕಾರಣಕ್ಕಾಗಿಯೇ ಅಗತ್ಯವಿಲ್ಲದೇ ಅವನು ಮಾನವ ಜೀವಿಯನ್ನೇ ಬಲಿ ತೆಗೆದುಕೊಂಡರೆ ಅವನು ತನ್ನನ್ನು ತಾನೇ ಕ್ಷಮಾರ್ಹನನ್ನಾಗಿಸಿಕೊಳ್ಳಲಾರ. ಸೈನಿಕ ಪಡೆಯ ಸಹಾಯವನ್ನು ಪಡೆದುಕೊಳ್ಳುವ ಅಥವಾ ಪಡೆದುಕೊಳ್ಳದಿರುವ ದಂಡಾಧಿಕಾರಿಗಳ ಮತ್ತು ಪೊಲೀಸ್ ಅಧಿಕಾರಿಗಳ ಕರ್ತವ್ಯಾಧಿಕಾರವೂ ಈ ಪ್ರಕರಣದಲ್ಲಿ ಇದೇ ರೀತಿಯಲ್ಲಿ ಔಚಿತ್ಯದ ಆಧಾರವನ್ನು ಅವಲಂಬಿಸಿಕೊಂಡಿರುತ್ತದೆ. ಸೈನಿಕ ತನ್ನ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವ ಮೂಲಕವೇ ಕಾರ್ಯಶೀಲನಾಗಬಲ್ಲ. ಅವನ ಕೈಯಲ್ಲಿರುವ ಶಸ್ತ್ರಾಸ್ತ್ರಗಳು ಮಾರಕವಾಗಿರುತ್ತವೆ. ಜೀವಕ್ಕೆ ಮತ್ತು ಅಂಗಾಂಗಗಳಿಗೆ ಅಪಾಯವಾಗದಂತೆ ಸುಧಾರಿಸಿದ ಕಾರ್ಯವಿಧಾನಗಳನ್ನುಳ್ಳ ಹಾಗೂ ಪರಿಷ್ಕಾರಗೊಳಿಸಲಾಗಿರುವ ಮದ್ದು–ಗುಂಡುಗಳನ್ನೇ ಹೊಂದಿರುವ ಈ ದಿನಗಳಲ್ಲಿ ಸ್ವಲ್ಪಮಟ್ಟಿನ ಹಾನಿ ಸಂಭವವಿರದಂತೆ ಹಾಗೂ ದೂರದಲ್ಲಿ ನಿಂತಿರುವ ಮತ್ತು ಮುಗ್ಧರಾಗಿರುವ ವ್ಯಕ್ತಿಗಳಿಗೆ ಅಪಾಯವನ್ನುಂಟುಮಾಡದಂತೆ ಅವುಗಳನ್ನು ಬಳಸಲಾಗುವುದಿಲ್ಲ. ಅಂಥ ಗಂಭೀರ ಪರಿಸ್ಥಿತಿಗಳಲ್ಲಿ ಮಾತ್ರವೇ ಮಧ್ಯಪ್ರವೇಶ ಮಾಡಬಹುದಾಗಿರುವಂಥ ವ್ಯಕ್ತಿಗಳ ನೆರವಿಗೆ ಕರೆ ಕೊಡುವುದು ನಾಗರಿಕ ಅಧಿಕಾರ ವ್ಯವಸ್ಥೆಯ ಅಂತಿಮ ಅನಿವಾರ್ಯ ಕ್ರಮವೇ ಆಗಿರಬೇಕು."

ಇದು ಈ ನಾಡಿನ ಕಾನೂನು. ತುಂಬ ಸಂಕ್ಷೇಪವಾಗಿ ಹೇಳಬೇಕೆಂದರೆ ಸಂವಿಧಾನಾತ್ಮಕ ಕಾನೂನಿನ ಬಗೆಗಿನ ಮಹಾ ಲೇಖಕರಾದ ಪ್ರೊ. ಡೈಸಿಯವರ ಭಾಷೆಯಲ್ಲಿ ಹೇಳಬೇಕೆಂದರೆ ಕಾನೂನು ಹೀಗಿದೆ: ಒಬ್ಬ ಪೊಲೀಸ್ ಅಧಿಕಾರಿ ಅಥವಾ ಸೈನಿಕ ಅಧಿಕಾರಿ ಗೋಲಿಬಾರ್ ಮಾಡಬೇಕೆಂಬ ತನ್ನ ಮೇಲಧಿಕಾರಿಯ ಆದೇಶವನ್ನು ಪಾಲಿಸದಿದ್ದರೆ ಸೈನಿಕ ನ್ಯಾಯಾಲಯದ ಮೂಲಕ ಅವನನ್ನು ನೇಣು ಹಾಕಬಹುದು; ಅವನು ಆ ಆದೇಶವನ್ನು ಪಾಲಿಸಿ, ಮುಗ್ಧ ವ್ಯಕ್ತಿಯೊಬ್ಬನನ್ನು ಕೊಂದರೆ, ಒಬ್ಬ ನ್ಯಾಯಾಧೀಶ ಅಥವಾ ಜ್ಯೂರಿ ಅವನನ್ನು ನೇಣು ಹಾಕುತ್ತಾನೆ. ಅವನ ಪ್ರಕರಣ ಪರಿಸ್ಥಿತಿಗಳ ಅಗತ್ಯದ ಸಮರ್ಥನೆಯ ಆಧಾರದ ಮೇಲೆ ನಿಲ್ಲಬೇಕು. ಅವನು ಬಲವನ್ನು ಅತಿಯಾಗಿ ಉಪಯೋಗಿಸಿದನೇ ಇಲ್ಲವೇ ಎಂಬುದರ ಆಧಾರದ ಮೇಲೆ ಅವನ ಪ್ರಕರಣ ನಿಲ್ಲಬೇಕು. ನಾನು ವಾದ ಮಾಡಬಯಸುವುದು ಇಷ್ಟು. ಪೊಲೀಸರ ವರ್ತನೆಯನ್ನು ಸಮರ್ಥಿಸಿರುವಂಥ ಸಮಿತಿಯ ವರದಿಯೊಂದು ಇಲ್ಲಿದೆ. ನನ್ನ ಸನ್ಮಾನ್ಯ ಸದಸ್ಯರನ್ನು ನಾನು ಕೇಳುತ್ತಿರುವುದು ಇದೊಂದನ್ನು ಮಾತ್ರವೇ: ಮೂವರು ಸಮರ್ಥ ಹಾಗೂ ಗೌರವಾನ್ವಿತ ವ್ಯಕ್ತಿಗಳು

ಸಿದ್ಧಪಡಿಸಿರುವ ಈ ದಸ್ತಾವೇಜನ್ನು ನೀವು ನಂಬುವುದಾದಲ್ಲಿ, ನಿಮಗೆ ಅದರಲ್ಲಿ ನಂಬಿಕೆ ಇರುವುದಾದಲ್ಲಿ, ಅದು ನಿಜವಾಗಿದ್ದಲ್ಲಿ, ಮೊಕದ್ದಮೆಯನ್ನು ಹೂಡುವಂತೆ ಅವರಿಗೆ ನೀವೇಕೆ ಆಧಿಕಾರಕ ಅನುಮತಿಯನ್ನು ಕೊಡುತ್ತಿಲ್ಲ? ಗೋಲಿಬಾರು ಮಾಡುವ ಅಗತ್ಯವಿತ್ತು ಎಂಬುದನ್ನು ಒಪ್ಪಬಹುದಾದಂಥ ಜ್ಯೂರಿ ಇರುವುದಾದರೆ ಸಂತೋಷ. ನ್ಯಾಯಾಧೀಶರ ಮತ್ತು ಜ್ಯೂರಿಯ ತೀರ್ಮಾನವನ್ನು ಪಡೆದುಕೊಳ್ಳೋಣ. ಈ ವಿಚಾರದಲ್ಲಿನ ನನ್ನ ಅಭಿಪ್ರಾಯವನ್ನೇ ಈ ರೀತಿ ಮುಂದಿರಿಸುತ್ತೇನೆ. ಅವರು ಇದನ್ನು ಮಾಡದಿದ್ದರೆ ಅವರು ಕ್ರಿಯಾಸಮಿತಿಯ ಸದಸ್ಯರನ್ನು ದೋಷಿಯಾಗಿಸದಿದ್ದರೆ ಅವರು ಪೊಲೀಸ್ ಅಧಿಕಾರಿಗಳನ್ನು ದೋಷಿಯಾಗಿಸದಿದ್ದರೆ, ಈ ವರದಿಗೆ ಟೂಲೇ ಬೀದಿಯ ಮೂವರು ದರ್ಜಿಗಳು ಸೇರಿ ಬರೆದ ಕಥೆ ಅಥವಾ ಕಾದಂಬರಿಗಿಂತಲೂ ಹೆಚ್ಚಿನ ಬೆಲೆಯೇನೂ ಇರುವುದಿಲ್ಲ (ನಗು).

ಮಾನ್ಯರೆ, ನಾನು ಕೇಳಬಯಸಿರುವ ಮೂರನೆಯ ಪ್ರಶ್ನೆಯೊಂದಿದೆ. ಇದು ಮಾಹಿತಿಗಾಗಿ ಮಾತ್ರ. ಅತ್ಯಂತ ವಿಶ್ವಸನೀಯವಾದ ಮಾಹಿತಿ ದೊರೆತಿದೆ. ಸನ್ಮಾನ್ಯ ಗೃಹ ಸಚಿವರಿಗೆ ನಾನು ಈ ಮಾಹಿತಿಯನ್ನು ಕೊಡುತ್ತಿದ್ದೇನೆ. ಅಂದು ೬.೩೦ರ ಹೊತ್ತಿಗೆ ಗೋಲಿಬಾರು ನಡೆದ ಸ್ಥಳದ ಹತ್ತಿರದಲ್ಲಿದ್ದ ಸ್ಪ್ರಿಂಗ್ ಗಿರಣಿಯ ವ್ಯವಸ್ಥಾಪಕ ಆ ಗೋಲಿಬಾರಿನಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳಿಗೆ ಬಹುಮಾನವಾಗಿ ಹಂಚುವ ಸಲುವಾಗಿ ೨೦೦ ರೂ.ಗಳನ್ನು ಕಳಿಸಿದ್ದ ಎಂಬುದೇ ಆ ಮಾಹಿತಿ. ಸನ್ಮಾನ್ಯ ಗೃಹ ಸಚಿವರಿಗೆ ಈ ಸಂಗತಿ ತಿಳಿದಿದೆಯೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಇದು ವಾಸ್ತವ ಸಂಗತಿ ಎಂಬುದು ನನಗೆ ಗೊತ್ತು. ತಮ್ಮ ಇಲಾಖೆಯಿಂದ ಅವರು ಮಾಹಿತಿಯನ್ನು ಕೋರಿದ್ದೇ ಆದರೆ ಇದು ವಾಸ್ತವ ಸಂಗತಿ ಎಂಬುದು ಅವರಿಗೂ ಗೊತ್ತಾಗುತ್ತದೆಂದು ನಾನು ದೃಢವಾಗಿ ನಂಬಿದ್ದೇನೆ. ಗಿರಣಿಯ ಸನಿಹದಲ್ಲಿ ನಡೆದ ಆ ದೊಂಬಿಯಲ್ಲಿ ಅಥವಾ ಅಂದಿನ ಗೋಲಿಬಾರಿನಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳಿಗೆ ಬಹುಮಾನವಾಗಿ ಹಂಚಬೇಕೆಂದು ನಿರ್ದಿಷ್ಟ ಸೂಚನೆಯೊಂದಿಗೆ ಸ್ಪ್ರಿಂಗ್ ಗಿರಣಿಯ ವ್ಯವಸ್ಥಾಪಕ ಸರ್ಕಾರಕ್ಕೆ ೨೦೦ ರೂ.ಗಳ ಮೊತ್ತವನ್ನು ಕಳಿಸಿದ್ದ ಎಂಬುದು ವಾಸ್ತವ ಸಂಗತಿಯೇ ಆಗಿದ್ದರೆ, ಹಿಂಸೆಗೆ ಕೈ ಹಾಕಿದರು ಎಂಬ ಕಾರಣಕ್ಕಾಗಿಯಲ್ಲದೆ ಪೊಲೀಸ್ ಅಧಿಕಾರಿಗಳು ತಮ್ಮ ಕೆಲಸವನ್ನು ಚೊಕ್ಕವಾಗಿ ನಿರ್ವಹಿಸಬೇಕೆಂದು ಆ ವ್ಯವಸ್ಥಾಪಕ ಹೇಳಿದ್ದುದರಿಂದಲೇ ಗೋಲಿಬಾರನ್ನು ನಡೆಸಲಾಯಿತು ಎಂದು ಹೇಳುವುದು ಸಮರ್ಥನೀಯವಾಗುವುದಿಲ್ಲವೆ ಎಂದು ನಾನು ಕೇಳಬಯಸುತ್ತೇನೆ. ಇದು ಅತ್ಯಂತ ನಿಂದನೀಯವಾದ ಸ್ಥಿತಿಯಾಗಿದೆ ಹಾಗೂ ಇದು ವಾಸ್ತವಿಕ ಸಂಗತಿಯಾಗಿರುವುದರಿಂದ ಇದನ್ನು ಸನ್ಮಾನ್ಯ ಗೃಹಸಚಿವರು ತುಂಬಾ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನಾನು ಸೂಚಿಸಬಯಸುತ್ತೇನೆ. ಇದು ವಾಸ್ತವ ಸಂಗತಿಯೇ ಆಗಿದ್ದಲ್ಲಿ, ಈ ಪೊಲೀಸ್ ಪಡೆ ವಿವಿಧ ವರ್ಗಗಳಿಗೆ ನ್ಯಾಯವನ್ನು ಸಲ್ಲಿಸುವ ಸಲುವಾಗಿ ರಾಜ್ಯ ಇರಿಸಿಕೊಂಡಿರುವಂಥ ಪೊಲೀಸ್ ಪಡೆಯಾಗದೆ ಕಾರ್ಮಿಕರ ಆಂದೋಳನವನ್ನು ಹತ್ತಿಕ್ಕುವ ಸಲುವಾಗಿ ಬಂಡವಾಳವಾದಿ ವರ್ಗ ಬಳಸಿಕೊಳ್ಳಬಹುದಾಗಿರುವಂಥ ಲಂಚಗುಳಿಗಳ ಪಕ್ಷ ಪ್ರವಹಿಸುವಂಥ ಕೊಲೆಗಡುಕರ ಪಕ್ಷ ವಹಿಸುವಂಥ ಪೊಲೀಸ್ ಪಡೆ ಎಂದಾಗುತ್ತದೆ.

ಈ ಪ್ರಕರಣ ನನಗೆ ದಿಗ್ಭ್ರಮೆಯನ್ನುಂಟುಮಾಡುತ್ತಿದೆ; ಇದು ಸಂಯುಕ್ತ ಸಂಸದೀಯ ಸಮಿತಿಯ ಮುಂದೆ ಸಾಕ್ಷ್ಯ ನೀಡುವ ಸಂದರ್ಭದಲ್ಲಿ ಅತ್ಯಂತ ಸಮರ್ಥರಾದ ಸೈನಿಕ ವ್ಯಕ್ತಿಯೊಬ್ಬರು ಆಡಿದ ಮಾತುಗಳನ್ನು ನೆನಪು ಮಾಡುತ್ತಿದೆ. ನಾನು ಉಲ್ಲೇಖಿಸುತ್ತಿರುವುದು ದಿವಂಗತ ಎಡ್ವರ್ಡ್ ಥಾಂಸನ್ ಅವರ ಸಾಕ್ಷ್ಯವನ್ನು. ಅವರು ಸ್ವಲ್ಪ ಕಾಲದವರೆಗೆ ಪಂಜಾಬಿನ ಗವರ್ನರ್ ಆಗಿದ್ದರು; ಸ್ವಲ್ಪ ಕಾಲದವರೆಗೆ ವೈಸ್‌ರಾಯ್ ಅವರ ಕಾರ್ಯಕಾರಿ ಪರಿಷತ್ತಿನ ಸದಸ್ಯರಾಗಿದ್ದರು. ನಿವೃತ್ತರಾದ ಮೇಲೆ ಭಾರತದ ಸ್ವಯ

ಮಾಡಳಿತದ ಧ್ಯೇಯವನ್ನು ಬೆಂಬಲಿಸುವ ಸಲುವಾಗಿ ಅವರು ಇಂಗ್ಲೆಂಡಿನಲ್ಲಿ ಒಂದು ಸಂಸ್ಥೆಯನ್ನು ಆರಂಭಿಸಿದ್ದರು. ಈ ಸದನದಲ್ಲಿರುವ ಎಲ್ಲರಿಗೂ ತಿಳಿದಿರುವಂತೆ ದುಂಡು ಮೇಜಿನ ಪರಿಷತ್ತು ಸಭೆ ನಡೆಸುವ ಕಾಲಕ್ಕೆ ಇಲ್ಲಿಂದ ತಮ್ಮ ನಾಡಿಗೆ ಹಿಂದಿರುಗಿಹೋಗಿದ್ದ ಆ ಸೈನಿಕ ಅಧಿಕಾರಿಗಳು ಎರಡು ಗುಂಪುಗಳಾಗಿ ಹಂಚಿಹೋಗಿದ್ದರು– ಒಂದು ಗುಂಪು ಭಾರತದ ಸ್ವಯಮಾಡಳಿತಕ್ಕೆ ವಿರುದ್ಧವಾಗಿತ್ತು; ಇನ್ನೊಂದು ಗುಂಪು ಭಾರತದ ಸ್ವಯಮಾಡಳಿತಕ್ಕೆ ಬೆಂಬಲ ನೀಡುತ್ತಿತ್ತು. ಭಾರತೀಯರ ಬೇಡಿಕೆಯನ್ನು ಬೆಂಬಲಿಸಿ ಪ್ರದರ್ಶನ ನಡೆಸಿದ ಗುಂಪಿನ ನೇತಾರರಾಗಿದ್ದಂಥ ವ್ಯಕ್ತಿಗಳಲ್ಲಿ ಸರ್ ಎಡ್ವರ್ಡ್ ಥಾಂಸನ್ ಅವರೂ ಒಬ್ಬರಾಗಿದ್ದರು. ಆ ಗುಂಪಿನ ಸದಸ್ಯರಾಗಿ, ಸಾಕ್ಷ್ಯ ನೀಡಲು ಭಾರತಕ್ಕೆ ಸ್ವಯಮಾಡಳಿತದ ಅಧಿಕಾರವನ್ನು ಕೊಡಬೇಕೆಂಬುದನ್ನು ಸಮರ್ಥಿಸಲು– ಅವರು ಸಂಯುಕ್ತ ಸಂಸದೀಯ ಸಮಿತಿಯ ಮುಂದೆ ಹಾಜರಾಗಿದ್ದರು. ಭಾರತದಲ್ಲಿನ ಅಸೈನಿಕ ಅಧಿಕಾರಿಗಳ ಒಂದು ವರ್ಗ ಮುಂದೆ ಬಂದು ಪ್ರಾಮಾಣಿಕವಾಗಿ ಹಾಗೂ ಮನಃಪೂರ್ವಕವಾದ ಭಾರತೀಯರ ಆಶೋತ್ತರಗಳನ್ನು ಬೆಂಬಲಿಸಿತಲ್ಲ ಎಂದು ನಮಗೆಲ್ಲ ತುಂಬ ಸಂತೋಷವಾಗಿತ್ತು. ಆದರೆ ಅವರು ಮುಂದಿರಿಸಿದ ವಾದ ನನ್ನನ್ನು ದಿಗ್ಭ್ರಮೆಗೊಳಿಸಿತು ಎಂದು ನಾನು ಮುಚ್ಚುಮರೆಯಿಲ್ಲದೆ ಹೇಳಬಯಸುತ್ತೇನೆ. ಅವರು ಮುಂದಿರಿಸಿದ ವಾದ ಹೀಗಿತ್ತು: "ನಾನೊಬ್ಬ ಐರ್ಲೆಂಡಿನ ಪ್ರಜೆ. ನಾನು ದಕ್ಷಿಣ ಐರ್ಲೆಂಡಿನಲ್ಲಿ ವಾಸಿಸುತ್ತಿದ್ದೇನೆ. ೧೯೧೬ರಲ್ಲಿ ಹಾಗೂ ಅಲ್ಲಿಂದ ಮುಂದೆ ದಕ್ಷಿಣ ಐರ್ಲೆಂಡಿನಲ್ಲಿ ನಡೆದ ದಂಗೆಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ." ಐರ್ಲೆಂಡಿನ ಸ್ವಯಮಾಡಳಿತದ ವಿಷಯದಲ್ಲಿ ತಮಗೆ ಮನವರಿಕೆಯಾದ ಒಂದು ಸಂಗತಿಯೆಂದರೆ ಇದು: ಎಲ್ಲಿಯವರೆಗೆ ದಂಗೆ ನಡೆದುಕೊಂಡು ಬಂದಿತೋ ಅಲ್ಲಿಯವರೆಗೆ ಯಾವನೇ ಆಂಗ್ಲ ಐರಿಷ್ ಸಂಜಾತರ ಕಾರ್ಯಾಚರಣೆಗಳು ಎಷ್ಟೇ ಹಿಂಸಾತ್ಮಕವಾಗಿದ್ದರೂ ಅವರ ವಿರುದ್ಧ ಗುಂಡು ಹಾರಿಸುವಂತಿರಲಿಲ್ಲ. ಏಕೆಂದರೆ, ಒಬ್ಬ ಆಂಗ್ಲ ಯಾರಾದರೊಬ್ಬ ಐರಿಷ್ ಸಂಜಾತನ ಮೇಲೆ ಗುಂಡು ಹಾರಿಸಿದ್ದರೆ, ಇಡೀ ಐರ್ಲೆಂಡ್ ದೇಶವೇ ಸಶಸ್ತ್ರ ಆಕ್ರಮಣಕ್ಕೆ ಸಿದ್ಧವಾಗಿಬಿಡುತ್ತಿತ್ತು. ಸ್ವಯಮಾಡಳಿತವನ್ನು ನೀಡಿದ ಕೂಡಲೇ ಐರಿಷ್ ಸಂಜಾತರನ್ನು ಗುಂಡಿಟ್ಟು ಕೊಲ್ಲುವುದು ಕಾಸ್‌ಗ್ರೇವ್ ಅವರಿಗೆ ಸಾಧ್ಯವಾಯಿತು. ಇದಕ್ಕೆ ವಿರುದ್ಧವಾಗಿ ಯಾರೂ ದಂಗೆಯೇಳಲಿಲ್ಲ. ಭಾರತಕ್ಕೆ ಸ್ವಯಮಾಡಳಿತ ಅಧಿಕಾರವನ್ನು ಕೊಡುವುದರಿಂದ ಆಂಗ್ಲರಿಗೆ ದೊರೆಯುವ ಒಂದು ಅನುಕೂಲವೆಂದರೆ ಭಾರತೀಯರನ್ನು ಗುಂಡಿಟ್ಟು ಕೊಲ್ಲುವುದು ಸಾಧ್ಯವಾಗುತ್ತದೆ ಎಂಬುದಾಗಿ ಅವರು ಹೇಳಿದರು. ಈಗ ಆಗುತ್ತಿರುವುದು ಖಂಡಿತವಾಗಿಯೂ ಅದೇ. ಈ ಪ್ರಸಂಗ ಗಲಭೆಗಳು ಸಂಭವಿಸಿರುವ ಏಕೈಕ ಪ್ರಕರಣವೇನೂ ಅಲ್ಲ.

ಸನ್ಮಾನ್ಯ ಸಭಾಧ್ಯಕ್ಷರು: ಸನ್ಮಾನ್ಯ ಸದಸ್ಯರಿಗೆ ಕಾಲಮಿತಿಯ ಅಂಶವನ್ನು ನೆನಪಿಸಿಕೊಡಬಯಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ತಮಗೆ ತುಂಬ ಋಣಿಯಾಗಿದ್ದೇನೆ. ಇನ್ನೊಂದು ನಿಮಿಷದಲ್ಲಿ ಮಾತನ್ನು ಮುಗಿಸುತ್ತೇನೆ.

ನಾನಾಗಲೇ ಹೇಳಿದಂತೆ, ಇದು ಗಲಭೆಗಳು ಸಂಭವಿಸಿರುವ ಏಕೈಕ ಪ್ರಕರಣವೇನೂ ಅಲ್ಲ. ನನ್ನ ಸನ್ಮಾನ್ಯ ಗೆಳೆಯರು ಅಧಿಕೃತ ಕಡತಗಳನ್ನು ಹುಡುಕಿ ನೋಡಿದರೆ ಇದಕ್ಕೆ ಮೊದಲು, ಇದಕ್ಕಿಂತಲೂ ಎಷ್ಟೋ ಪಟ್ಟು ದೊಡ್ಡದಾದ ಗಲಭೆಗಳು ಸಂಭವಿಸಿರುವ ಸಾಕಷ್ಟು ಸಂದರ್ಭಗಳಿವೆ ಎಂಬುದು ಅವರಿಗೆ ಗೊತ್ತಾಗುತ್ತದೆ. ಒಂದೇ ಒಂದು ನಿದರ್ಶನವನ್ನು ತೆಗೆದುಕೊಳ್ಳಿ– ವೇಲ್ಸ್‌ನ ರಾಜಕುಮಾರರು ಈ ನಾಡಿಗೆ ಭೇಟಿ ಕೊಟ್ಟ ಈ ಸಂದರ್ಭವನ್ನು ತೆಗೆದುಕೊಳ್ಳಿ. ಆಗ ನಡೆದ ಗಲಭೆಗಳ ಪ್ರಮಾಣ ಎಷ್ಟಿತ್ತು? ೧೯೨೮–

೨೯ರಲ್ಲಿ ನಡೆದ ದೊಂಬಿಗಳ ವಿಚಾರಗಳನ್ನು ತೆಗೆದುಕೊಳ್ಳಿ. ಆಗ ನಡೆದ ಗಲಭೆಗಳ ಪ್ರಮಾಣ ಎಷ್ಟಿತ್ತು? ಗಲಭೆ–ಗೊಂದಲಗಳು ಅತ್ಯಂತ ದುರದೃಷ್ಟಕರವಾದವುಗಳು ಎಂಬುದರಲ್ಲಿ ಅನುಮಾನವೇನೂ ಇಲ್ಲ. ಇಲ್ಲಿ ಏಳುವ ಏಕೈಕ ಪ್ರಶ್ನೆ ಇದು: ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವ ವಿಷಯದಲ್ಲಿ ಸ್ವಾತಂತ್ರ್ಯ ಮತ್ತು ವಿಮೋಚನೆಗಳಿಗೆ ನಾವು ಯಾವುದೇ ಪರಿಗಣನೆಯನ್ನು ತೋರುವುದಿಲ್ಲವೇನು? ಸ್ವಯಮಾಡಳಿತ ಎಂಬ ಮಾತಿಗೆ ನಮ್ಮ ಸಚಿವರುಗಳು ನಮ್ಮ ಜನರನ್ನೇ ಗುಂಡಿಟ್ಟು ಕೊಲ್ಲಬಹುದು ಹಾಗೂ ಉಳಿದ ನಾವೆಲ್ಲ ಆ ಪ್ರಕರಣವನ್ನು ಕಂಡು ನಗಬಹುದು ಅಥವಾ ಆತ ನಿರ್ದಿಷ್ಟ ಪಕ್ಷವೊಂದಕ್ಕೆ ಸೇರಿದವನೆಂಬ ಕಾರಣಕ್ಕಾಗಿಯೇ ಆತನನ್ನು ಸಮರ್ಥಿಸಲು ಎದ್ದು ನಿಲ್ಲಬಹುದು ಎಂಬುದರ ಹೊರತು ಬೇರೇನೂ ಅರ್ಥವಿಲ್ಲ ಎಂದಾದರೆ– ನಾನು ಯೋಚಿಸುತ್ತಿರುವಂತೆ ಅದಕ್ಕೆ ಬೇರಾವುದೇ ಅರ್ಥವೂ ಇಲ್ಲ– ಸ್ವಯಮಾಡಳಿತ ಎಂಬುದು ಇಡೀ ಭಾರತಕ್ಕೆ ಅಭಿಶಾಪವೇ ಹೊರತು ವರವಲ್ಲ ಎಂದು ಹೇಳಬಯಸುತ್ತೇನೆ (ಚಪ್ಪಾಳೆ).

# ೪೫

# *ಯುದ್ಧದಲ್ಲಿ ಭಾಗವಹಿಸುವ ಬಗ್ಗೆ: ೧

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನೊಂದು ಕ್ರಿಯಾಲೋಪದ ವಿಚಾರವಾಗಿ ಮಾತನಾಡಲು ಎದ್ದು ನಿಂತಿದ್ದೇನೆ. ನನ್ನ ಕ್ರಿಯಾಲೋಪ ಗೊತ್ತುವಳಿಯ ಕೊನೆಯ ಭಾಗಕ್ಕೆ ಸಂಬಂಧಿಸಿದೆ. ಅದರಲ್ಲಿ ಹೀಗೆಂದು ಹೇಳಲಾಗಿದೆ:

> "ಭಾರತಕ್ಕೆ ಸಂಬಂಧಿಸಿದಂತೆ ತನ್ನ ಪರವಾಗಿ ಹೊರಡಿಸಲಾಗಿರುವ ಹೇಳಿಕೆಯನ್ನು ಕೊಡಲು ಅಧಿಕಾರ ನೀಡಿದ ಸಂದರ್ಭದಲ್ಲಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಭಾರತದಲ್ಲಿನ ಸನ್ನಿವೇಶವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ತಿಳಿಸಲು ಈ ಶಾಸನಸಭೆ ವಿಷಾದಿಸುತ್ತದೆ."

ಮಾನ್ಯರೆ, ಗೊತ್ತುವಳಿಗಳ ಸ್ವರೂಪ ಮತ್ತು ವಿಷಯಗಳನ್ನು ನಿರೂಪಿಸುವ ಮುಂಬಯಿ ವಿಧಾನ ಸಭೆ ನಿಯಮಗಳ ೭೫ನೆಯ ನಿಯಮವನ್ನು ನಾನು ಆಶ್ರಯಿಸಿದ್ದೇನೆ. ಈ ನಿಯಮದಲ್ಲಿ ಹೀಗೆಂದು ಹೇಳಿದೆ:

> "ಈ ನಿಯಮಗಳಲ್ಲಿರುವ ನಿರ್ಬಂಧಗಳಿಗೆ ಒಳಪಟ್ಟು, ಸಾಮಾನ್ಯ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಚಾರದ ಬಗ್ಗೆ ಗೊತ್ತುವಳಿಯನ್ನು ಮಂಡಿಸಬಹುದು: ಆದರೆ, ಈ ಕೆಳಗಿನ ಷರತ್ತುಗಳನ್ನು ಪಾಲಿಸದೆ ಇರುವಲ್ಲಿ ಯಾವುದೇ ಗೊತ್ತುವಳಿ ಅಂಗೀಕಾರಾರ್ಹವಾಗತಕ್ಕದಲ್ಲ:–
> (ಎ) ಅದು ಸ್ಪಷ್ಟವಾಗಿ ಮತ್ತು ಖಚಿತವಾಗಿ ಅಭಿವ್ಯಕ್ತಗೊಂಡಿರತಕ್ಕದ್ದು ಹಾಗೂ ನಿರ್ದಿಷ್ಟವಾದ ಒಂದು ವಿವಾದಾಂಶವನ್ನು ಎತ್ತಿರತಕ್ಕದ್ದು..."

ಗೊತ್ತುವಳಿಯ ಕೊನೆಯ ಭಾಗ ನಿರ್ದಿಷ್ಟವಾಗಿಲ್ಲದಿರುವುದು ಮಾತ್ರವಲ್ಲ, ಖಂಡಿತವಾಗಿಯೂ ಅತ್ಯಂತ ಸಂದಿಗ್ಧಮಯವಾಗಿದೆ ಎಂಬುದು ನನ್ನ ನಿವೇದನೆ. ನಾನು ಉಲ್ಲೇಖಿಸಬಯಸುತ್ತಿರುವ ಗೊತ್ತು ವಳಿಯ ಭಾಗದಲ್ಲಿ ಹೀಗೆಂದು ಹೇಳಿದೆ: "ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಭಾರತದಲ್ಲಿನ ಸನ್ನಿವೇಶ ವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ." ಯಾವ ರೀತಿಯಲ್ಲಿ ಭಾರತದಲ್ಲಿನ ಸನ್ನಿವೇಶವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂಬುದನ್ನು ತಿಳಿದುಕೊಳ್ಳುವ ಅಧಿಕಾರ ಈ ಸದನಕ್ಕಿದೆ ಎಂಬುದೇ ನನ್ನ ನಿವೇದನೆ. ಈ ವಿಷಯದಲ್ಲಿ ಗೊತ್ತುವಳಿಯ ಈ ಭಾಗ ಸಂದಿಗ್ಧವಾಗಿದೆ. ಈ ಸದನದ ಎಲ್ಲ

---

*ಮುಂಬಯಿ ವಿಧಾನ ಸಭೆ ಚರ್ಚೆಗಳು
ಬಿ.ಎಲ್.ಎ. ಸಂ.೭. ಪು.೧೯೬೮–೬೯, ದಿನಾಂಕ ೨೫ ಅಕ್ಟೋಬರ್ ೧೯೩೯.

ತೀರ್ಮಾನಗಳನ್ನು ನಿಯಂತ್ರಿಸುವ ಮೂಲಭೂತ ತತ್ವಗಳಲ್ಲಿ ಒಂದು ಯಾವುದೆಂದರೆ ತಾನು ತೆಗೆದುಕೊಳ್ಳುವ ತೀರ್ಮಾನದ ಯಾವುದೇ ಭಾಗದ ವ್ಯಾಖ್ಯಾನವನ್ನು ಅದು ಸದನದ ಹೊರಗಿನ ವ್ಯಕ್ತಿಗಳಿಗೆ ಬಿಡಕೂಡದು ಎಂಬುದು ತಾನು ಏನು ತೀರ್ಮಾನಿಸುತ್ತದೆ ಎಂಬುದನ್ನು ಈ ಸದನ ನಿರ್ದಿಷ್ಟವಾಗಿ ಹೇಳಬೇಕು ಈ ಅಂಶಕ್ಕೆ ಸಂಬಂಧಿಸಿದಂತೆ ನಾನು ಪೂರ್ವನಿದರ್ಶನವೊಂದನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಮುಂಬಯಿ ವಿಧಾನಪರಿಷತ್ತಿನ ಸಭಾಪತಿಗಳ ತೀರ್ಪುಗಳ ಸಾರಸಂಗ್ರಹದಲ್ಲಿನ ೧೪೮ನೆಯ ಪುಟದಲ್ಲಿ ಇದನ್ನು ಉಲ್ಲೇಖಿಸಲಾಗಿದೆ. ೨೪ನೆಯ ತೀರ್ಪಿನಲ್ಲಿ ಹೀಗೆಂದು ಹೇಳಿದೆ:

> "ಗೊತ್ತುವಳಿ ನಿರ್ದಿಷ್ಟವಾಗಿರಬೇಕು ಹಾಗೂ ಅಸಂದಿಗ್ಧವಾಗಿರಬೇಕು. ಅರ್ಥವನ್ನು ಅತ್ಯಂತ ಸ್ಪಷ್ಟವಾಗಿಸದೆ ಇರುವಂಥ ಯಾವುದೇ ಸಂದಿಗ್ಧ ಗೊತ್ತುವಳಿಗೆ ಪರಿಷತ್ತಾಗಲೀ, ಸರ್ಕಾರವಾಗಲೀ ಭಾಗಿಯಾಗಿರ ಕೂಡದು"

ಈ ತೀರ್ಪಿಗೆ ಸಂಬಂಧಿಸಿದಂತೆ, ನಾಲ್ಕನೆಯ ಸಂಪುಟದ (೧೯೨೧) ೭೭೨ನೆಯ ಪುಟವನ್ನು ನಾನು ಪರಾಮರ್ಶಿಸಿದೆ. ನೀರಾವರಿಯ ನೀರಿನ ವಿತರಣೆಗೆ ಸಂಬಂಧಿಸಿದ ಗೊತ್ತುವಳಿಯೊಂದಕ್ಕೆ ಸನ್ಮಾನ್ಯ ಸದಸ್ಯರಾದ ಸರ್ ಧನ್‌ಜೀಷಾ ಕೂಪರ್ ಅವರು ತಂದಿದ್ದ ತಿದ್ದುಪಡಿಯೊಂದರ ಸಂದರ್ಭದಲ್ಲಿ ಈ ತೀರ್ಪು ಹೊರಬಂದಿತ್ತು ಎಂಬುದನ್ನು ನಾನು ಕಂಡುಕೊಂಡೆ. ಅವರ ತಿದ್ದುಪಡಿ ಕೆಲವೊಂದು ಪರಿಹಾರೋಪಾಯಗಳನ್ನು ಸೂಚಿಸಿದ್ದು "ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ" ಅವುಗಳನ್ನು ಕಾರ್ಯಾನ್ವಯ ಗೊಳಿಸಬೇಕೆಂದು ಹೇಳಿತ್ತು. ಇದು ಸಂದಿಗ್ಧವಾದ ತಿದ್ದುಪಡಿ ಎಂಬ ಕ್ರಿಯಾಲೋಪವನ್ನು ಎತ್ತಲಾಯಿತು ಹಾಗೂ ಅದನ್ನು ತಳ್ಳಿಹಾಕಲಾಯಿತು. ಈ ಗೊತ್ತುವಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ನಾನು ಉಲ್ಲೇಖಿಸುತ್ತಿರುವ ಪ್ರಕರಣ ಈ ತೀರ್ಪಿನಿಂದ ನಿಯಂತ್ರಿತವಾಗುತ್ತದೆ ಹಾಗೂ ಕ್ರಮಬದ್ಧವಾಗಿಲ್ಲವೆಂದು ಅವನ್ನು ಘೋಷಿಸಬೇಕಾಗುತ್ತದೆ.

ಸನ್ಮಾನ್ಯ ಶ್ರೀ ಬಿ. ಜಿ. ಖೇರ್: ನನ್ನ ಸನ್ಮಾನ್ಯ ಗೆಳೆಯರು ಯಾವ ನಿಯಮವನ್ನು ಉಲ್ಲೇಖಿ ಸುತ್ತಿದ್ದಾರೋ ಅದು ಇಲ್ಲಿಗೆ ಸುತಾರಾಂ ಅನ್ವಯವಾಗುವುದಿಲ್ಲವೆಂದು ನಾನು ನಿವೇದಿಸಬಯ ಸುತ್ತೇನೆ. ಗೊತ್ತುವಳಿ ಸ್ಪಷ್ಟವಾಗಿ ಹಾಗೂ ಖಚಿತವಾಗಿ ಅಭಿವ್ಯಕ್ತಗೊಂಡಿರಬೇಕೆಂದಷ್ಟೇ ಆ ನಿಯಮ ಹೇಳುವುದು. ನನ್ನ ಗೊತ್ತುವಳಿಯಲ್ಲಿ ಹೀಗೆಂದು ಹೇಳಲಾಗಿದೆ: "ಭಾರತಕ್ಕೆ ಸಂಬಂಧಿಸಿದಂತೆ ತನ್ನ ಪರವಾಗಿ ಹೊರಡಿಸಲಾಗಿರುವ ಹೇಳಿಕೆಯನ್ನು ಕೊಡಲು ಅಧಿಕಾರ ನೀಡಿದ ಸಂದರ್ಭದಲ್ಲಿ ಘನತೆವೆತ್ತ ಮಹಾಪ್ರಭುಗಳ ಸರ್ಕಾರ ಭಾರತದಲ್ಲಿನ ಸನ್ನಿವೇಶವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಪ್ರಭುಗಳ ಸರ್ಕಾರ ಭಾರತದಲ್ಲಿನ ಸನ್ನಿವೇಶವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ತಿಳಿಸಲು ಈ ಶಾಸನಸಭೆ ವಿಷಾದಿಸುತ್ತದೆ." ಹೀಗಾಗಿ ಘನತೆವೆತ್ತ ಮಹಾಪ್ರಭುಗಳ ಪರವಾಗಿ ಮಾಡಲಾಗಿರುವ ಹೇಳಿಕೆ ಭಾರತದಲ್ಲಿನ ಸನ್ನಿವೇಶವನ್ನು ಸರಿಯಾಗಿ ಪ್ರತಿನಿಧಿಸುತ್ತದೆಯೇ ಎಂಬುದೇ ಆ ಪ್ರಶ್ನೆಯಾಗಿದೆ ಹಾಗೂ ನಿರ್ದಿಷ್ಟವಾದ ವಿವಾದಾಂಶವಾಗಿದೆ. ಅದು ನಿರ್ದಿಷ್ಟವಾದ ಹಾಗೂ ಖಚಿತವಾದ ವಿವಾದಾಂಶ ವಾಗಿದೆ ಹಾಗೂ ಅದರಲ್ಲಿ ಅಸ್ಪಷ್ಟವಾಗಿರುವುದೇನೂ ಇಲ್ಲ. ೭೫(ಎ)ನೆಯ ನಿಯಮದಲ್ಲಿ ಉದ್ದೇಶಿಸ ಲಾಗಿರುವ ನಿರ್ದಿಷ್ಟವಾದ ಒಂದು ವಾದಾಂಶ ಅದಾಗಿದೆ ಎಂಬುದಾಗಿ ನಾನು ಮತ್ತೊಮ್ಮೆ ನಿವೇದಿಸ ಬಯಸುತ್ತೇನೆ. ಹೀಗಾಗಿ ಸನ್ಮಾನ್ಯ ಸದಸ್ಯರು ಎತ್ತಿರುವ ಆಕ್ಷೇಪ ಇಲ್ಲಿಗೆ ಅನ್ವಯವಾಗುವುದೇ ಇಲ್ಲ.

"ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ" ಎಂಬುದರ ಬಗೆಗಿನ ತೀರ್ಪನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಳ್ಳ ಬಲ್ಲೆ. ಏಕೆಂದರೆ ಅದಕ್ಕೆ ಏನು ಬೇಕಾದರೂ ಅರ್ಥ ಮಾಡಬಹುದಾಗಿದೆ. ಇಲ್ಲಿ ನಾವು ಒಂದು ಹೇಳಿಕೆಯನ್ನು ಉಲ್ಲೇಖಿಸುತ್ತಿದ್ದೇವೆ– ಆ ಹೇಳಿಕೆ ಗೊತ್ತಿರದ ವಿಚಾರವೇನೂ ಅಲ್ಲ; ಆ ಹೇಳಿಕೆ ಈ ಸದನದ ಮುಂದೆ; ಹಾಗೂ–

ಡಾ. ಬಿ. ಆರ್. ಅಂಬೇಡ್ಕರ್: ಗೊತ್ತುವಳಿಯಲ್ಲಿ ಬಳಸಲಾಗಿರುವ ಮಾತು "ಭಾರತದಲ್ಲಿನ ಸನ್ನಿವೇಶವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ" ಎಂಬುದಾಗಿದೆ ಎಂಬ ಸಂಗತಿಯತ್ತ ನಾನು ಸನ್ಮಾನ್ಯ ಪ್ರಧಾನ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ. ಯಾವ ರೀತಿಯಲ್ಲಿ ಭಾರತ ಸರ್ಕಾರ ಸನ್ನಿವೇಶವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂಬುದನ್ನು ತಿಳಿಯುವ ಅಧಿಕಾರ ಈ ಸದನಕ್ಕೆ ಇದೆ ಎಂಬುದೇ ನನ್ನ ನಿವೇದನೆ.

* * *

*ಡಾ. ಬಿ. ಆರ್. ಅಂಬೇಡ್ಕರ್ (ಮುಂಬಯಿ ನಗರ): ಮಾನ್ಯರೆ, ಈ ಕೆಳಗಿನ ನಾಲ್ಕು ತಿದ್ದುಪಡಿಗಳನ್ನು ಮಂಡಿಸಲು ನಮ್ಮ ಅನುಮತಿಯನ್ನು ಕೋರುತ್ತೇನೆ. ನನ್ನ ಮೊದಲನೆಯ ತಿದ್ದುಪಡಿ ಇದು:

ಸನ್ಮಾನ್ಯ ಸಭಾಧ್ಯಕ್ಷರು: ನಾನು ಅವೆಲ್ಲವನ್ನೂ ಒಂದೇ ತಿದ್ದುಪಡಿ ಎಂಬುದಾಗಿ ತೆಗೆದು ಕೊಳ್ಳುತ್ತೇನೆ.

"ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ಇದನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ–

> ಈ ಶಬ್ದಗಳನ್ನು ಕೈಬಿಡತಕ್ಕದ್ದು:
> "ಮತ್ತು ಭಾರತೀಯ ಅಭಿಪ್ರಾಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಪ್ರಾದೇಶಿಕ ಸರ್ಕಾರಗಳ ಅಧಿಕಾರ ಮತ್ತು ಕಾರ್ಯಚಟುವಟಿಕೆಗಳನ್ನು ಮೊಟಕುಗೊಳಿಸುವಂಥ ಕಾನೂನುಗಳನ್ನು ಅಂಗೀಕರಿಸಲಾಗಿದೆ. ಹಾಗೂ ಕ್ರಮಗಳನ್ನು ಅಳವಡಿಸಲಾಗಿದೆ"

ಸನ್ಮಾನ್ಯ ಶ್ರೀ ಕೆ. ಎಂ. ಮುನ್ಷಿ: ಡಾ. ಅಂಬೇಡ್ಕರ್ ಅವರ ನಾಲ್ಕು ತಿದ್ದುಪಡಿಗಳನ್ನು ಒಂದೇ ತಿದ್ದು ಪಡಿ ಎಂಬುದಾಗಿ ಪರಿಗಣಿಸತಕ್ಕದ್ದೆಂಬ ತಮ್ಮ ಈ ಹಿಂದಿನ ತೀರ್ಪಿಗೆ ಸಂಬಂಧಿಸಿದಂತೆ ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ತಿದ್ದುಪಡಿಯ ಒಂದು ಭಾಗವನ್ನು ಒಪ್ಪಿಕೊಳ್ಳಲು ಈ ಸದನಕ್ಕೆ ಸಾಧ್ಯವಾಗಬಹುದು. ಆದರೆ ಉಳಿದ ಭಾಗಗಳು ಒಪ್ಪಿಕೊಳ್ಳಲು ಸಾಧ್ಯವಾಗದೆ ಹೋಗ ಬಹುದು. ಹೀಗಾಗಿ ಅವೆಲ್ಲವನ್ನು ಒಂದೇ ತಿದ್ದುಪಡಿ ಎಂಬುದಾಗಿ ತೆಗೆದುಕೊಂಡರೆ ತೊಂದರೆ ಉಂಟಾ ಗುತ್ತದೆ.

---

*ಮುಂಬಯಿ ವಿಧಾನಸಭೆ ಚರ್ಚೆಗಳು
ಬಿ.ಎಲ್.ಎ. ಸಂ.೭. ಪು.೧೯೭೨–೬೯, ದಿನಾಂಕ ೨೫ ಅಕ್ಟೋಬರ್ ೧೯೩೯.

ಸನ್ಮಾನ್ಯ ಸಭಾಧ್ಯಕ್ಷರು: ಅವನ್ನು ಒಂದೇ ಒಂದು ತಿದ್ದುಪಡಿ ಎಂಬುದಾಗಿ ತೆಗೆದುಕೊಂಡಿದ್ದರೂ, ಮತದಾನಕ್ಕೆ ಹಾಕಿದಾಗ ಅದನ್ನು ಎರಡು ಭಾಗಗಳಾಗಿ ವಿಭಜಿಸಬಹುದು. ಸದನದ ಅಪೇಕ್ಷೆ ಅದೇ ಆಗಿದ್ದಲ್ಲಿ, ನಾನು ಖಂಡಿತವಾಗಿಯೂ ಹಾಗೆಯೇ ಮಾಡುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಮತ್ತೆ–

"ತನ್ನದೇ ಆದ ಸಂವಿಧಾನವನ್ನು ರೂಪಿಸಿಕೊಳ್ಳಲು ಅಧಿಕಾರವಿರತಕ್ಕದ್ದು" ಎಂಬ ಮಾತುಗಳ ತರುವಾಯ, ಈ ಮಾತುಗಳನ್ನು ಸೇರಿಸಿ:

> "ಹಾಗೆ ರೂಪಿಸಲಾದ ಸಂವಿಧಾನ ಅಲ್ಪಸಂಖ್ಯಾತ ಸಮುದಾಯಗಳ ಜೀವ ಮತ್ತು ಸ್ವಾತಂತ್ರ್ಯಗಳನ್ನು ಸಂರಕ್ಷಿಸುತ್ತದೆಂದು ಆ ಸಮುದಾಯಗಳಿಂದ ನೇಮಿತರಾದ ಪ್ರತಿನಿಧಿಗಳ ಮೂಲಕ ತನಗೆ ತೃಪ್ತಿಯಾದ ಬಳಿಕ ಅಂಥ ಸಂವಿಧಾನವನ್ನು ಜಾರಿಗೆ ಕೊಡಲು ಬ್ರಿಟಿಷ್ ಸರ್ಕಾರ ಒಪ್ಪತಕ್ಕದ್ದು"

"ಭಾರತದ ಆಡಳಿತ" ಎಂಬ ಮಾತುಗಳ ತರುವಾಯ, ಈ ಮಾತುಗಳನ್ನು ಸೇರಿಸಿ:

"ಅಂಥ ಕ್ರಮ ನಾಡಿನ ಆಡಳಿತಕ್ಕಾಗಿ ಸ್ಥಾಪಿಸಲಾದ ಯಂತ್ರದಲ್ಲಿ ತಮ್ಮಿಂದ ಅಧಿಕೃತವಾಗಿ ಮಾನ್ಯರಾದಂಥ ಪ್ರತಿನಿಧಿಗಳ ಮೂಲಕ ಪ್ರತಿನಿಧಿಸಲ್ಪಡುವ ಈ ಸಮುದಾಯಗಳ ಮೂಲಭೂತ ಹಕ್ಕಿಗೆ ಚ್ಯುತಿಯನ್ನುಂಟು ಮಾಡತಕ್ಕುದಲ್ಲವೆಂದು ಪ್ರಸ್ತಾವನಾರೂಪದಲ್ಲಿ ಹೇಳಿರತಕ್ಕದು"

"ಏರ್ಪಾಟುಗಳೂ ಸೇರಿದಂತೆ" ಎಂಬುದರಿಂದ ಆರಂಭಗೊಂಡು "ಭಾರತಕ್ಕೆ ಸಂಬಂಧಿಸಿದಂತೆ" ಎಂಬಲ್ಲಿಯವರೆಗಿನ ಇಡೀ ಭಾಗವನ್ನು ಕೈಬಿಡಿ.

ಪ್ರಶ್ನೆಯನ್ನು ಪ್ರಸ್ತಾವಿಸಲಾಗಿದೆ.

ಸನ್ಮಾನ್ಯ ಸಭಾಧ್ಯಕ್ಷರು: ಉದ್ದೇಶಿತವಾದ ತಿದ್ದುಪಡಿಗಳನ್ನು ಅಳವಡಿಸಿಕೊಂಡರೆ ಗೊತ್ತುವಳಿ ಹೀಗಾಗುತ್ತದೆ:

> "ಭಾರತದ ಜನತೆಯ ಒಪ್ಪಿಗೆ ಇಲ್ಲದೆ ಗ್ರೇಟ್ ಬ್ರಿಟನ್ ಮತ್ತು ಜರ್ಮನಿಗಳ ನಡುವಣ ಯುದ್ಧದಲ್ಲಿ ಭಾರತವನ್ನು ಬ್ರಿಟಿಷ್ ಸರ್ಕಾರ ಭಾಗಿಯನ್ನಾಗಿಸಿರುವುದಕ್ಕಾಗಿ ಈ ವಿಧಾನಸಭೆ ವಿಷಾದವನ್ನು ವ್ಯಕ್ತಪಡಿಸುತ್ತದೆ. ಭಾರತ ಸರ್ಕಾರಕ್ಕೆ ಹಾಗೂ ಅದರ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ತಿಳಿಸುವ ಸಲುವಾಗಿ ಆ ಸರ್ಕಾರಕ್ಕೆ ಈ ವಿಧಾನಸಭೆ ಹೀಗೆಂದು ಶಿಫಾರಸು ಮಾಡುತ್ತದೆ. ಸದ್ಯದ ಯುದ್ಧದ ಘೋಷಿತ ಧ್ಯೇಯಗಳಿಗೆ ಅನುರೂಪವಾಗಿ, ಭಾರತದ ಜನತೆಯ ಸಹಕಾರವನ್ನು ಪಡೆದುಕೊಳ್ಳುವ ಸಲುವಾಗಿ ಪ್ರಜಾತಂತ್ರದ ತತ್ವಗಳನ್ನು ಭಾರತಕ್ಕೆ ಅನ್ವಯಿಸುವುದು ಅಗತ್ಯ. ಹಾಗೂ ಅದರ ನೀತಿಗೆ ಅದರ ಜನರೇ ಮಾರ್ಗದರ್ಶಿಗಳಾಗಿರಬೇಕಾದುದೂ ಅಗತ್ಯ; ಹಾಗೂ ತನ್ನದೇ ಆದ ಸಂವಿಧಾನವನ್ನು ರೂಪಿಸಿಕೊಳ್ಳುವ ಅಧಿಕಾರವನ್ನು ಹೊಂದಿರುವಂಥ ಸ್ವತಂತ್ರ ರಾಷ್ಟ್ರವೆಂದು ಭಾರತವನ್ನು ಪರಿಗಣಿಸತಕ್ಕದ್ದು ಮತ್ತು ಹಾಗೆ ರೂಪಿಸಲಾದ ಸಂವಿಧಾನ ಅಲ್ಪಸಂಖ್ಯಾತ ಸಮುದಾಯಗಳ ಜೀವ ಮತ್ತು ಸ್ವಾತಂತ್ರ್ಯಗಳನ್ನು ಸಂರಕ್ಷಿಸುತ್ತದೆಂದು ಆ ಸಮುದಾಯಗಳಿಂದ ನೇಮಿತರಾದ ಪ್ರತಿನಿಧಿಗಳ ಮೂಲಕ ತನಗೆ ತೃಪ್ತಿಯಾದ ಬಳಿಕ ಅಂಥ ಸಂವಿಧಾನವನ್ನು ಜಾರಿಗೆ ಕೊಡಲು ಬ್ರಿಟಿಷ್ ಸರ್ಕಾರ ಒಪ್ಪತಕ್ಕದ್ದು; ಮತ್ತು ಇದರ ಜೊತೆಗೆ, ನಿಕಟ ವರ್ತಮಾನದಲ್ಲಿ ಸಾಧ್ಯವಿರುವಷ್ಟರ ಮಟ್ಟಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

ಈ ಸಂಬಂಧವಾಗಿ ಅಂಥ ಕ್ರಮ ನಾಡಿನ ಆಡಳಿತಕ್ಕಾಗಿ ಸ್ಥಾಪಿಸಲಾದ ಯಂತ್ರದಲ್ಲಿ ತಮ್ಮಿಂದ ಅಧಿಕೃತವಾಗಿ ಮಾನ್ಯರಾದಂಥ ಪ್ರತಿನಿಧಿಗಳ ಮೂಲಕ ಪ್ರತಿನಿಧಿಸಲ್ಪಡುವ ಈ ಸಮುದಾಯಗಳ ಮೂಲಭೂತ ಹಕ್ಕಿಗೆ ಚ್ಯುತಿಯನ್ನುಂಟು ಮಾಡತಕ್ಕದ್ದಲ್ಲವೆಂದು ಪ್ರಸ್ತಾವನಾ ರೂಪದಲ್ಲಿ ಹೇಳಿರತಕ್ಕದ್ದು."

* * *

*ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಕ್ರಿಯಾಲೋಪಕ್ಕಾಗಿ ನಾನು ಎದ್ದು ನಿಲ್ಲುತ್ತಿದ್ದೇನೆ. ಈ ತಿದ್ದುಪಡಿ ಕ್ರಮಬದ್ಧವಾಗಿಲ್ಲವೆಂಬುದು ನನ್ನ ನಿವೇದನೆ. ಮತ್ತೆ ನಾನು ೨೦ನೆಯ ಪುಟದಲ್ಲಿ ೭೫ನೆಯ ನಿಯಮದ ಉಪಖಂಡ(ಎ)ಯನ್ನು ಆಧಾರವಾಗಿ ತೆಗೆದುಕೊಂಡಿದ್ದೇನೆ. ಗೊತ್ತುವಳಿ ಸ್ಪಷ್ಟವಾಗಿ ಹಾಗೂ ಖಚಿತವಾಗಿ ಅಭಿವ್ಯಕ್ತವಾಗಿರಬೇಕು. ಹಾಗೂ ಒಂದು ನಿರ್ದಿಷ್ಟ ವಿವಾದಾಂಶ ವನ್ನು ಮಾತ್ರ ಎತ್ತಬೇಕು ಎಂಬುದಾಗಿ ಉಪಖಂಡ (ಎ)ನಲ್ಲಿ ಹೇಳಲಾಗಿದೆ. ಒಂದು ನಿರ್ದಿಷ್ಟ ವಿವಾದಾಂಶ ಎಂಬ ಮಾತುಗಳನ್ನು ನಾನು ಒತ್ತಿ ಹೇಳುತ್ತೇನೆ. ಈ ತಿದ್ದುಪಡಿ ಆ ಗೊತ್ತುವಳಿಯ ಭಾಗವಾಗಿ ಪರಿಣಮಿಸಿದರೆ, ಆ ಇಡೀ ಗೊತ್ತುವಳಿ ೭೫ನೆಯ ನಿಯಮದ ಉಪಖಂಡ(ಎ)ಗೆ ವಿರುದ್ಧವಾಗಿಬಿಡುತ್ತದೆ. ಏಕೆಂದರೆ ಆ ಸಂದರ್ಭದಲ್ಲಿ ಆ ಗೊತ್ತುವಳಿ ಒಂದಕ್ಕಿಂತಲೂ ಹೆಚ್ಚು ವಿವಾದಾಂಶ ಗಳನ್ನು ಒಳಗೊಂಡಿರುತ್ತದೆ. ನನಗಿಂತಲೂ ಮೊದಲು ಭಾಷಣ ಮಾಡಿದ ಸದಸ್ಯರು ಎತ್ತಿ ತೋರಿಸಿರು ವಂತೆ ಈ ಗೊತ್ತುವಳಿ ನಾಲ್ಕು ಅಥವಾ ಐದು ವಿಭಿನ್ನ ವಿಷಯಗಳನ್ನು ಒಳಗೊಂಡಿದೆಯಾದರೂ ಈ ನಾಲ್ಕು ಅಥವಾ ಐದು ವಿಭಿನ್ನ ವಿಷಯಗಳು ಒಂದೇ ವಿವಾದಾಂಶದಿಂದ ಮೂಡಿಬರುತ್ತವೆಂದೂ ಆ ವಿವಾದಾಂಶ ಯುದ್ಧ–ನೀತಿಗೆ ಹಾಗೂ ಈ ದೇಶ ಮಾಡಬೇಕೆಂದು ಹೇಳಲಾಗಿರುವ ಘೋಷಣೆಗೆ ಸಂಬಂಧಿಸಿರುವಂಥದೆಂದೂ ಒಪ್ಪಬಹುದಾಗಿದೆ. ಆದರೆ ಸಚಿವ ಸಂಪುಟದಲ್ಲಿ ವಿಶ್ವಾಸ ವ್ಯಕ್ತ ಪಡಿಸುವ ವಿಚಾರಕ್ಕೆ ಸಂಬಂಧಿಸಿರುವ ಈ ತಿದ್ದುಪಡಿ ಎತ್ತಿರುವ ಪ್ರಶ್ನೆ ನಿರ್ದಿಷ್ಟವಾದ ವಿಶಿಷ್ಟವಾದ ಮತ್ತು ಪ್ರತ್ಯೇಕವಾದ ವಿವಾದಾಂಶವಾಗಿದೆ. ಹಾಗೂ ಎರಡನೆಯ ನಿಯಮದ ಉಪಖಂಡ(ಎ)ದ ಉಪಬಂಧಗಳಿಗೆ ಅನುರೂಪವಾಗಿರುವಷ್ಟರ ಮಟ್ಟಿಗೆ ಗೊತ್ತುವಳಿಯ ಭಾಗವೆಂದು ಸಿಂಧುವಾಗಿ ಅಥವಾ ಕಾನೂನುಬದ್ಧವಾಗಿ ಅದನ್ನು ಭಾವಿಸಲಾಗುವುದಿಲ್ಲ. ಮಾನ್ಯರೆ, ಈ ಅಂಶದ ಬಗ್ಗೆ ಕೊಡ ಲಾಗಿರುವ ತೀರ್ಪಿನತ್ತಲೂ ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ೧೪೮ನೆಯ ಪುಟದಲ್ಲಿ ಅದನ್ನು ವರದಿ ಮಾಡಲಾಗಿದೆ. ಹಾಗೂ ಅದಕ್ಕೆ ೨೩ನೆಯ ಕ್ರಮಾಂಕವನ್ನು ಕೊಡಲಾಗಿದೆ. ಅದು ಹೀಗಿದೆ:

"ಸಂಪೂರ್ಣವಾಗಿ ಭಿನ್ನವಾಗಿರುವ ಹಾಗೂ ಪರಸ್ಪರ ಪ್ರತ್ಯೇಕವಾಗಿರುವ ಎರಡು ನಿರ್ದಿಷ್ಟ ವಿವಾದಾಂಶಗಳನ್ನು ಒಳಗೊಂಡಿರುವ ದೋಷಕ್ಕೆ ಗೊತ್ತುವಳಿ ಪಕ್ಕಾಗಿರಕೂಡದು"

ಈ ತೀರ್ಪನ್ನು ೧೯೨೧ರ ಎರಡನೆಯ ಸಂಪುಟದ ೧೪೨೫ನೆಯ ಪುಟದಿಂದ (ಉದ್ಧರಿಸಿ)

---

*ಬಿ.ಎಲ್.ಎ. ಸಂ.೭, ಪು.೧೯೭೭;
ದಿನಾಂಕ ೨೫ ಅಕ್ಟೋಬರ್ ೧೯೩೯.

ವರದಿ ಮಾಡಲಾಗಿದೆ. ಆ ಪ್ರಕರಣದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ನೀಡುವುದಕ್ಕೆ ಸಂಬಂಧಿಸಿದಂತೆ ಗೊತ್ತುವಳಿಯೊಂದನ್ನು ಮಂಡಿಸಲಾಗಿತ್ತು. ಗೊತ್ತುವಳಿ ಒಂದೇ ಆಗಿದ್ದರೂ ಅದು ನಿರ್ದಿಷ್ಟವಾದ ಎರಡು ವಿವಾದಾಂಶಗಳನ್ನು ಎತ್ತಿದೆಯೆಂದು ವಾದಿಸಿ ಕ್ರಿಯಾಲೋಪವನ್ನು ಎತ್ತಲಾಗಿತ್ತು. ಒಬ್ಬ ಮಹಿಳೆಯ ಮತದಾನದ ಹಕ್ಕಿಗೆ ಸಂಬಂಧಿಸಿತ್ತು. ಗೊತ್ತುವಳಿ ಎರಡು ನಿರ್ದಿಷ್ಟ ವಿವಾದಾಂಶಗಳನ್ನೇ ಒಳಗೊಂಡಿದ್ದುದರಿಂದ ಅದು ಕ್ರಮಬದ್ಧವಾಗಿಲ್ಲವೆಂದು ಅಂದಿನ ಅಧ್ಯಕ್ಷರು ತೀರ್ಪು ನೀಡಿದರು. ಅದೇ ಕಾರಣಕ್ಕಾಗಿ ಈ ತಿದ್ದುಪಡಿ, ಅಂಗೀಕೃತವಾದಲ್ಲಿ ಈ ಗೊತ್ತುವಳಿಯನ್ನು ಕ್ರಮವಿರುದ್ಧವಾಗಿಸಿಬಿಡುತ್ತದೆಂದು ನಾನು ನಿವೇದಿಸಬಯಸುತ್ತೇನೆ.

* * *

* ಬಿ. ಆರ್. ಅಂಬೇಡ್ಕರ್: ಇಲ್ಲ, ಸಚಿವ ಸಂಪುಟ ರಾಜೀನಾಮೆ ಕೊಡುವ ಪ್ರಶ್ನೆ ಆ ಪಕ್ಷಕ್ಕೆ ಸಂಬಂಧಿಸಿದ ವಿಚಾರ. ಅದು ಈ ಸದನಕ್ಕೆ ಸಂಬಂಧಿಸಿದ ವಿಚಾರವಲ್ಲ. ಅಧಿಕಾರಕ್ಕೆ ಅಂಟಿಕೊಂಡಿರಬೇಕೇ ಇಲ್ಲವೇ ಎಂಬುದು ಪಕ್ಷಕ್ಕೇ ಮಾತ್ರವೇ ಸಂಬಂಧಿಸಿದ ವಿಚಾರ. ಈ ನಾಡಿನ ಜನತೆ ಯುದ್ಧದಲ್ಲಿ ಭಾಗವಹಿಸಕೂಡದೆಂದು ಸಚಿವ ಸಂಪುಟ ಹೇಳುವುದಾದರೆ ಅದು ಬೇರೊಂದು ವಿಚಾರವೇ ಆಗುತ್ತದೆ. ಆ ವಿಚಾರದ ಬಗ್ಗೆ ಈ ಸದನ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ನನ್ನ ಸನ್ಮಾನ್ಯ ಸದಸ್ಯರು ಕೊಟ್ಟ ಸೂಚನೆ ಈ ಸದನದ ಮುಂದೆ ಇಲ್ಲವೆಂದು ನಾನು ನಿವೇದಿಸಬಯಸುತ್ತೇನೆ. "ಸಚಿವ ಸಂಪುಟದಲ್ಲಿ ಸಂಪೂರ್ಣ ವಿಶ್ವಾಸವನ್ನು ದಾಖಲಿಸುವ ಸಂದರ್ಭದಲ್ಲಿ" ಎಂಬ ಮಾತನ್ನು ಕೈಬಿಡುವ ಬಗ್ಗೆ ಅಂಥ ಒಂದು ತಿದ್ದುಪಡಿ ಈ ಸದನದ ಮುಂದೆ ಬರಲಿದೆಯೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಈಗಿರುವಂತೆ ಈ ತಿದ್ದುಪಡಿಯ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಈಗಿರುವಂತೆ, ತಿದ್ದುಪಡಿಯಲ್ಲಿರುವ ಮಾತುಗಳು ೭೫ನೆಯ ನಿಯಮದ ಉಪಖಂಡ(ಎ)ಗೆ ವಿರುದ್ಧವಾಗಿದೆಯೆಂದು ನಾನು ನಿವೇದಿಸಬಯಸುತ್ತೇನೆ. ಇನ್ನೊಂದು ತಿದ್ದುಪಡಿ ಸದನದ ಮುಂದೆ ಬಂದಾಗ ಅದರ ಬಗ್ಗೆ ನಾನು ನಿವೇದಿಸುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರು: ಈಗಿರುವಂತೆ ಈ ಗೊತ್ತುವಳಿಯಲ್ಲಿ ಈ ತಿದ್ದುಪಡಿಯ ಮೂಲಕ ಒಂದಕ್ಕಿಂತಲೂ ಹೆಚ್ಚು ವಿವಾದಾಂಶಗಳನ್ನು ಎತ್ತಬೇಕೆಂದು ಉದ್ದೇಶಿಸಲಾಗಿದೆ ಎಂಬುದು ಕ್ರಿಯಾಲೋಪವಾಗಿತ್ತು. ಹೀಗಾಗಿ "ಸಚಿವ ಸಂಪುಟದಲ್ಲಿ ಸಂಪೂರ್ಣ ವಿಶ್ವಾಸವನ್ನು ದಾಖಲಿಸುವ ಸಂದರ್ಭದಲ್ಲಿ" ಎಂಬ ಆ ಮಾತುಗಳಿಗಷ್ಟೇ ಸನ್ಮಾನ್ಯ ಸದಸ್ಯರ ಆಕ್ಷೇಪ ಸೀಮಿತವಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೇಳಿದ್ದು ಅದನ್ನೇ. ಆ ಇಡೀ ಗೊತ್ತುವಳಿಗೇ ನನ್ನ ಆಕ್ಷೇಪ ಇದೆ.

---

*ಮುಂಬಯಿ ವಿಧಾನಸಭೆ ಚರ್ಚೆಗಳು
ಬಿ.ಎಲ್.ಎ. ಸಂ. ೭. ಪು. ೧೯೭೨–೬೯, ದಿನಾಂಕ ೨೫ ಅಕ್ಟೋಬರ್ ೧೯೩೯.

## ೪೬

# *ಯುದ್ಧದಲ್ಲಿ ಭಾಗವಹಿಸುವ ಬಗ್ಗೆ: ೨

ಡಾ. ಬಿ. ಆರ್. ಅಂಬೇಡ್ಕರ್ (ಮುಂಬೈ ನಗರ): ಮಾನ್ಯ ಸಭಾಧ್ಯಕ್ಷರೆ, ನಾಯಕನ ಸ್ಥಾನದಲ್ಲಿರುವಂಥ ಯಾವುದೇ ಸದಸ್ಯರಿಗೂ ೪೫ ನಿಮಿಷಗಳಿಗಿಂತಲೂ ಹೆಚ್ಚು ಕಾಲಾವಕಾಶವನ್ನು ಕೊಡುವುದಿಲ್ಲವೆಂದು ನೀವು ಕೈಗೊಂಡಿರುವ ತೀರ್ಮಾನದಿಂದ ನಾನು ಸ್ವಲ್ಪ ಮಟ್ಟಿಗೆ ಉತ್ಸಾಹಹೀನನಾಗಿಬಿಟ್ಟಿದ್ದೇನೆ ಎಂಬುದನ್ನು ನಾನು ಮೊದಲಿಗೆ ಹೇಳಿಬಿಡಬೇಕು. ಅದೇ ಮಾತನ್ನು ಈಗಲೂ ನೀವು ಪುನರಾವರ್ತಿಸಿದ್ದೀರಿ. ನನ್ನ ಮುಂದಿರುವ ಟಿಪ್ಪಣಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕಾಲಾವಕಾಶ ಸ್ವಲ್ಪ ಮಟ್ಟಿಗಾದರೂ ವಿಸ್ತರಿಸಬೇಕೆಂಬ ಕೋರಿಕೆಯೊಡನೆ ನನ್ನ ಮಾತುಗಳನ್ನು ಆರಂಭಿಸಬೇಕಾಗಿ ಬಂದಿದೆ. ತಮ್ಮ ಸಹನೆಯನ್ನು ನಾನು ಕೋರುತ್ತೇನೆ. ನನ್ನ ಕೋರಿಕೆ ಅಸಾಧಾರಣ ಸ್ವರೂಪದ್ದೇನೂ ಅಲ್ಲವೆಂದು ನಾನು ತಮಗೆ ತಿಳಿಸಬಯಸುತ್ತೇನೆ. ಇದಕ್ಕೊಂದು ಪೂರ್ವನಿದರ್ಶನವೂ ಇದೆ. ರಾಜ ಯಯಾತಿಯ ಬಗ್ಗೆ "ಮಹಾಭಾರತ"ದಲ್ಲಿ ಬರುವ ಕಥೆ ನಮಗೆಲ್ಲರಿಗೂ ಗೊತ್ತೇ ಇದೆ. ಅವನು ತನ್ನ ಇಳಿವಯಸ್ಸಿನಲ್ಲಿ ದೇವಯಾನಿ ಎಂಬ ತರುಣಿಯನ್ನು ಮದುವೆಯಾದ, ತಮ್ಮಿಬ್ಬರ ನಡುವೆ ಅಪಾರವಾದ ವಯಸ್ಸಿನ ಅಂತರ ಇದ್ದುದರಿಂದ ತನ್ನ ಯೌವನದ ಬಾಳ್ವೆಗೆ ಒಂದಿಷ್ಟು ಅವಧಿಯನ್ನು ಸೇರಿಸಿಕೊಡದೆ ಇದ್ದರೆ ಆ ಮದುವೆಯಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬುದು ಮದುವೆಯ ಬಳಿಕ ಅವನಿಗೆ ಗೊತ್ತಾಯಿತು. ತನ್ನ ಬಾಳಿನ ಒಂದು ಭಾಗವನ್ನು ತ್ಯಾಗ ಮಾಡಿ, ಅದನ್ನು ನನ್ನ ಬಾಳಿಗೆ ಸೇರಿಸಿಕೊಡುವಂಥ ಉದಾರಚೇತನ ಎಲ್ಲಿಯಾದರೂ ಇದೆಯೋ ಎಂದು ಅವನು ಸುತ್ತಲೂ ಅರಸತೊಡಗಿದ. ಅಂಥವರು ಯಾರೂ ಅವನಿಗೆ ಸಿಕ್ಕಲಿಲ್ಲ. ಅದೃಷ್ಟವಶಾತ್, ಅತ್ಯಂತ ಕರ್ತವ್ಯಪರನೂ, ತುಂಬ ಕಿರಿಯನೂ, ತನ್ನ ಯೌವನವೆಲ್ಲ ತನಗೇ ಬೇಕಾಗಿದ್ದವನೂ ಆಗಿದ್ದ ಪುರೂರವನೆಂಬ ಅವನ ಮಗ ತನ್ನ ಬಾಳಿನ ಒಂದು ಭಾಗವನ್ನು ತನ್ನ ತಂದೆಗೆ ಧಾರೆಯೆರೆದು ಕೊಡಲು ಮುಂದೆ ಬಂದ. ಮಾನ್ಯರೆ, ನನ್ನ ಹಿಂದೆ ಕುಳಿತಿರುವ ಸದಸ್ಯರೆಲ್ಲರೂ–ಅವರೊಂದಿಗಿನ ನನ್ನ ಸಂಬಂಧ ತಂದೆ–ಮಕ್ಕಳ ಸಂಬಂಧದಂತೆಯೇ ಇದೆ ಎಂದು ನಾನು ಹೇಳಬಹುದಾಗಿದೆ. ನನಗೆ ಕೊಟ್ಟಿರುವ ಅವಧಿಗೆ ಸೇರಿಸಿಕೊಳ್ಳುವಂತೆ ತಮ್ಮ ಅವಧಿಯ ಸ್ವಲ್ಪಭಾಗವನ್ನು ಕಡಿತಗೊಳಿಸಿಕೊಳ್ಳಲು ಒಪ್ಪಿದ್ದಾರೆ. ಆದರೆ, ಈ ಚೌಕಾಸಿ ವ್ಯವಹಾರಕ್ಕೆ ನಿಮ್ಮ ಆಶೀರ್ವಾದ ದೊರೆಯದೆ ಹೋದರೆ ನೀವು ಅದನ್ನು ಮಂಜೂರು ಮಾಡದೆ ಇದ್ದರೆ, ಆ ಹೆಚ್ಚಳವನ್ನು ಉಪಯೋಗಿಸಿಕೊಳ್ಳುವುದು ಸಾಧ್ಯವಾಗದು. ಇಂತಹ ಮಂಜೂರಾತಿ ಸಧ್ಯಕ್ಕೆ ಅಗತ್ಯವಿಲ್ಲ. ಆದರೆ ಪರಿಸ್ಥಿತಿಗಳ ಒತ್ತಡದಿಂದಾಗಿ ಆ ಹೆಚ್ಚಳ ಅಗತ್ಯವಾದರೆ ಅಂತಿಮವಾಗಿ ನೀವು ಅದನ್ನು ಮಂಜೂರು ಮಾಡುತ್ತೀರಿ ಎಂಬ ನಂಬಿಕೆಯೊಂದಿಗೆ ನಾನು ಮುಂದುವರಿಯುತ್ತೇನೆ.

---

*ಮುಂಬಯಿ ವಿಧಾನ ಸಭೆ ಚರ್ಚೆಗಳು
ಸಂ. ೭, ಪು. ೨೦೧೮–೩೫; ದಿನಾಂಕ ೨೬ ಅಕ್ಟೋಬರ್ ೧೯೩೯.

ಮಾನ್ಯರೆ, ಸನ್ಮಾನ್ಯ ಪ್ರಧಾನ ಮಂತ್ರಿಗಳು ಮಂಡಿಸಿರುವ ಠರಾವಿನತ್ತ ದೃಷ್ಟಿ ಹರಿಸಿದ್ದೇ ಆದರೆ, ಈ ಠರಾವು ಅಯುಕ್ತವೂ, ಅಕಾಲಿಕವೂ ಆಗಿದೆಯೆಂದು ನನ್ನ ಮನಸ್ಸಿಗೆ ತೋರುತ್ತಿದೆ ಎಂದು ಹೇಳದೆ ವಿಧಿಯಿಲ್ಲ. ಒಂದು ನಿರ್ದಿಷ್ಟ ಘೋಷಣೆಗಾಗಿ ಈ ಸದನವು ಒತ್ತಾಯಿಸಬೇಕೆಂದು ಈ ಠರಾವು ಹೇಳುತ್ತದೆ. ಆ ಬೇಡಿಕೆಗಳು ಈಡೇರದೇ ಇದ್ದಲ್ಲಿ ಒಂದು ನಿರ್ದಿಷ್ಟ ಕ್ರಮವಿಧಾನವನ್ನು ಮಂಜೂರು ಮಾಡುವಂತೆ ಈ ಸದನವನ್ನು ಅದು ಕೋರುತ್ತದೆ. ಮೊದಲನೆಯದಾಗಿ, ಈ ಬೇಡಿಕೆಗಳನ್ನು ಮಂಡಿಸಿದವರು ಯಾರು ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಸ್ಪಷ್ಟವಾಗಿಯೇ ಘನತೆವೆತ್ತ ವೈಸರಾಯ್ ಅವರಿಗೆ ಸಲ್ಲಿಸಿರುವ ಬೇಡಿಕೆಗಳು ಈ ಸದನದಿಂದ ಕಳುಹಿಸಿದವಲ್ಲ. ನಾಡಿನ ಹೆಸರಿನಲ್ಲಿ ಈ ಬೇಡಿಕೆಗಳನ್ನು ಮುಂದಿರಿಸು ವುದಕ್ಕೆ ಹಾಗೂ ಅವುಗಳನ್ನು ಘನತೆವೆತ್ತ ವೈಸ್‌ರಾಯ್ ಅವರಿಗೆ ಕಳಿಸಿಕೊಡುವುದಕ್ಕೆ ಮುನ್ನ ಈ ಸದನದ ಬೆಂಬಲವನ್ನು ಪಡೆದುಕೊಳ್ಳುವುದಕ್ಕೆ ಈ ಸದನ ಯೋಗ್ಯವಾದ ಸ್ಥಳವೆಂದು ಸನ್ಮಾನ್ಯರಾದ ಪ್ರಧಾನಮಂತ್ರಿಗಳಿಗೆ ಅನ್ನಿಸಲಿಲ್ಲ. ಈಗ ನಮಗೆ ತಿಳಿದುಬಂದಿರುವಂತೆ, ಸನ್ಮಾನ್ಯರಾದ ಪ್ರಧಾನ ಮಂತ್ರಿಗಳು ಯಾವುದನ್ನು ವರಿಷ್ಠ ಮಂಡಳಿ ಎಂದು ಕರೆಯುತ್ತಾರೋ, ಆ ವರಿಷ್ಠ ಮಂಡಳಿ ಈ ಬೇಡಿಕೆಗಳನ್ನು ಮಂಡಿಸಿದೆ. ಅದು ಸಚಿವರ ದಿಟ್ಟ ಕ್ರಮಗಳಿಗೆ ತಡೆಯೊಡ್ಡಲು ನೇಮಿಸಲಾಗಿರುವ ಜಾಗೃತ ಸಮಿತಿಯಲ್ಲದೆ ಬೇರೇನೂ ಅಲ್ಲವೆಂದು ನಾನು ಹೇಳಬಯಸುತ್ತೇನೆ (ನಗು). ಬೇಡಿಕೆಗಳನ್ನು ಮಂಡಿಸಬೇಕಾಗಿದ್ದ ಸೂಕ್ತ ಸ್ಥಳ ಇದೇ ಎಂದು ನಾನು ನಿವೇದಿಸಬಯಸುತ್ತೇನೆ. ಆದರೆ, ಅವರು ಹಾಗೆ ಮಾಡಲು ಇಚ್ಛಿಸಲಿಲ್ಲ. ಅವನನ್ನೇನಾದರೂ ಮುಂದಿರಿಸಿದ್ದರೆ, ಸಂವಿಧಾನಕ್ಕೆ ಅಜ್ಞಾತರಾಗಿರುವ ಹಾಗೂ ಈ ಸದನದಿಂದ ಮಾನ್ಯ ಮಾಡಲಾಗದಿರುವ ಬೇರೆ ಯಾರಿಂದಲೋ ಈ ಸದನದ ಹಿಂಬದಿಯಲ್ಲಿ ಅವನ್ನು ಅಂಗೀಕರಿಸಲಾಗಿದೆ; ಹಾಗೆ ಮಾಡಿಬಿಟ್ಟು, ಈಗ ಈ ಸದನಕ್ಕೆ ಸದ್ದಿಲ್ಲದೆ ಬಂದು, "ಏನೋ ಒಂದು ಪ್ರಮಾದವಾಗಿಬಿಟ್ಟಿದೆ; ನಮ್ಮನ್ನು ಕಾಪಾಡಿ" ಎಂದು ಹೇಳುತ್ತಿದ್ದಾರೆ. ಇದು ಅತ್ಯಂತ ಅಪಮಾನಕಾರಿಯಾದ ಕ್ರಮ ವಿಧಾನ ಎಂಬುದನ್ನು ನಿವೇದಿಸ ಬಯಸುತ್ತೇನೆ.

ಕೆಲವೊಂದು ನಿರ್ದಿಷ್ಟ ಶಬ್ದಗಳಲ್ಲಿ ಘೋಷಣೆಯೊಂದನ್ನು ಅಂಗೀಕರಿಸಬೇಕೆಂದು ಈ ಠರಾವು ನಮಗೆ ಹೇಳುತ್ತಿದೆ ಎಂಬುದೇ ಈ ಠರಾವಿನ ಬಗ್ಗೆ ನಾನು ಹೇಳಬೇಕಾಗಿರುವ ಎರಡನೆಯ ಸಂಗತಿ. ಘನತೆವೆತ್ತ ವೈಸ್‌ರಾಯ್ ಅವರು ಯಾವುದೋ ಒಂದು ಬಗೆಯ ಘೋಷಣೆಯನ್ನು ಈಗಾಗಲೇ ಮಾಡಿರುವಂತೆ ನನಗೆ ತೋರುತ್ತಿದೆ. ಈ ತಿಂಗಳ ೧೮ರಂದು ಆ ಘೋಷಣೆ ಭಾರತದ ಜನತೆಗೆ ಗೊತ್ತಾಯಿತು. ಆ ಬಳಿಕ ಏಳು ದಿನಗಳು ಸ್ಪಷ್ಟವಾಗಿಯೇ ಕಳೆದಿವೆ. ಔಚಿತ್ಯಪೂರ್ಣವಾಗಿ, ಈ ಸದನ ಈಗ ಮಾಡಬಹುದಾಗಿರುವುದು ಏನೆಂದರೆ ಆ ಘೋಷಣೆ ತೃಪ್ತಿಕರವಾದ ಘೋಷಣೆಯಾಗಿಲ್ಲ ಎಂಬ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು. ಆದರೆ, ಈ ಠರಾವು ಆ ಕಾರ್ಯವನ್ನು ಮಾಡುತ್ತಿಲ್ಲ. ಒಂದು ಘೋಷಣೆ ನಮ್ಮ ಮುಂದೆ ಇದೆಯಾದರೂ, ಆ ಘೋಷಣೆ ಈ ಸದನಕ್ಕೆ ಅಂಗೀಕಾರ್ಹವಾಗಿದೆಯೇ ಅಥವಾ ಇಲ್ಲವೇ, ಅಥವಾ ಬೇರಾವುದಾದರೂ ಘೋಷಣೆಯನ್ನು ಮಾಡಬೇಕಾಗಿದೆಯೇ ಇಲ್ಲವೇ ಎಂಬುದೇನನ್ನೂ ಯಾವುದೇ ರೀತಿಯಲ್ಲಿ ವ್ಯಕ್ತಪಡಿಸದ ರೀತಿಯಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳು ಈ ಠರಾವಿನ ಶಬ್ದಗಳನ್ನು ಹೆಣೆದಿದ್ದಾರೆ. ಈ ಇಡೀ ಸಂಗತಿಯೇ ಕ್ಷುಲ್ಲಕವಾಗಿರುವಂತೆ ತೋರುತ್ತದೆ. ಮಾನ್ಯರೆ, ನಾನು ಈ ಧಾಟಿಯಲ್ಲಿ ಮುಂದುವರಿಯಬಯಸುವುದಿಲ್ಲ. ಏಕೆಂದರೆ, ವಿವಾದಾಸ್ಪದವಾದ ವಿಷಯವೇ ಅಲ್ಲವೆಂಬಂತೆ ಈ ಠರಾವನ್ನು ಪರಿಗಣಿಸಬೇಕೆಂದು ಸನ್ಮಾನ್ಯ ಪ್ರಧಾನ ಮಂತ್ರಿಗಳು ಪ್ರತಿಪಕ್ಷದ ಸದಸ್ಯರನ್ನು ಕೇಳಿಕೊಂಡಿದ್ದರು. ಆದರೆ, ಒಂದು ನಾಯಿಗೆ ಇನ್ನೊಂದು ನಾಯಿಯನ್ನು ತಿನ್ನುವ ಅವಕಾಶ ದೊರೆಯು

ವುದು ತುಂಬ ಅಪೂರ್ವವೇ. ಇಂಥ ಠರಾವು ಒಂದು ನಾಯಿ ಇನ್ನೊಂದು ನಾಯಿಯನ್ನು ತಿನ್ನಬಹುದು ಎಂಬುದನ್ನು ತೋರಿಸಿಕೊಡುತ್ತದೆ. ಇಷ್ಟಾಗಿಯೂ, ನಾನು ಸನ್ಮಾನ್ಯ ಪ್ರಧಾನ ಮಂತ್ರಿಗಳ ಆಹ್ವಾನಕ್ಕೆ ಪ್ರತಿಕ್ರಿಯಿಸಲು ಹಾಗೂ ಇಲ್ಲಿ ಮಂಡಿಸಲಾಗಿರುವ ಈ ಠರಾವನ್ನು ಮತ್ತು ತಿದ್ದುಪಡಿಗಳನ್ನು ವಿವಾದಾಸ್ಪದವಲ್ಲದಂಥ ರೀತಿಯಲ್ಲಿಯೇ ಪರಿಗಣಿಸಲು ಸಿದ್ಧನಾಗಿದ್ದೇನೆ.

ಮಾನ್ಯರೆ, ನಾನು ಈ ಠರಾವಿನ ಬಗ್ಗೆ ಹಾಗೂ ತಿದ್ದುಪಡಿಗಳ ಬಗ್ಗೆ ಕೆಲವು ಟೀಕೆ–ಟಿಪ್ಪಣಿಗಳನ್ನು ಮಾಡಲಿರುವುದರಿಂದ, ಯಾವ ರೀತಿಯಲ್ಲಿ ನಾನು ಈ ಠರಾವನ್ನು ಒಪ್ಪುತ್ತೇನೆ ಎಂಬುದನ್ನು ಮೊದಲಿಗೆ ಈ ಸದನಕ್ಕೆ ತಿಳಿಯಪಡಿಸಬಯಸುತ್ತೇನೆ. ಭಾರತದ ಜನತೆಯ ಒಪ್ಪಿಗೆ ಇಲ್ಲದೆಯೇ, ಗ್ರೇಟ್ ಬ್ರಿಟನ್ ಮತ್ತು ಜರ್ಮನಿಯ ನಡುವಣ ಯುದ್ಧದಲ್ಲಿ ಭಾರತವನ್ನೂ ಭಾಗಿಯಾಗಿ ಮಾಡಲಾಗಿದೆ ಎಂದು ಹೇಳುವಷ್ಟರ ಮಟ್ಟಿಗೆ ನಾನು ಹೃತ್ಪೂರ್ವಕವಾಗಿ ಈ ಠರಾವಿನ ವಿಷಯದಲ್ಲಿ ಒಪ್ಪಿಗೆಯನ್ನು ಸೂಚಿಸುತ್ತೇನೆ. ವಾಸ್ತವವಾಗಿ, ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಿದ್ದೆ; ಏಕೆಂದರೆ, ಸ್ಥಿತಿ ನಿಜವಾಗಿಯೂ ತುಂಬಾ ಅಸಂಬದ್ಧವಾಗಿದೆ. ಇಲ್ಲಿ ನಾವು ಬ್ರಿಟಿಷ್ ಸಚಿವ ಸಂಪುಟದ ರಥದ ಚಕ್ರಕ್ಕೆ ಕಟ್ಟುಬಿದ್ದಿದ್ದೇವೆ. ಬ್ರಿಟಿಷ್ ಸಚಿವ ಸಂಪುಟ ಸಾಮ್ರಾಜ್ಯದ ವಿದೇಶಾಂಗ ನೀತಿಯನ್ನು ನಿಯಂತ್ರಿಸುತ್ತದೆ. ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ನಮ್ಮ ಈ ನಾಡಿನ ದನಿಗೆ ಯಾವುದೇ ಸ್ಥಾನವೂ ಇಲ್ಲ. ಯುದ್ಧದ ಘೋಷಣೆಯ ವಿಚಾರದಲ್ಲೂ ನಮ್ಮ ಮಾತಿಗೆ ಯಾವುದೇ ಮಹತ್ವವೂ ಇಲ್ಲ. ಶಾಂತಿಯ ಕಟ್ಟುಪಾಡುಗಳನ್ನು ಇತ್ಯರ್ಥಪಡಿಸುವಲ್ಲಿಯೂ ನಮ್ಮ ನಾಡಿಗೆ ಯಾವುದೇ ಸ್ಥಾನವಿಲ್ಲ. ಶಾಂತಿಯ ಒಪ್ಪಂದಕ್ಕೆ ಸಹಿ ಹಾಕಲಾಗುವ ವರ್ಸೇಲ್ಸ್‌ಗೆ ಅಥವಾ ಬೇರೆ ಯಾವುದಾದರೂ ಜಾಗಕ್ಕೆ ಹೋಗಿಬರುವಂತೆ ಸಾರ್ವಜನಿಕರಲ್ಲಿ ಕೆಲವರಿಗೆ ಬಹುಶಃ ಆಹ್ವಾನವನ್ನು ಕೊಡಬಹುದು. ಆ ದಾಖಲೆ ಪತ್ರದ ಮೇಲೆ ಅವರು ತಮ್ಮ ಸಹಿ ಹಾಕಲೆಂದಷ್ಟೇ ಈ ಆಹ್ವಾನ. ಇದಕ್ಕಿಂತ ಹೆಚ್ಚಾಗಿ ಈ ನಾಡಿಗೆ ಬೇರಾವುದೇ ಸ್ಥಾನವೂ ಇಲ್ಲ ಎಂಬುದು ನನಗೆ ಖಚಿತವಾಗಿ ಗೊತ್ತಿದೆ. ಇದು ಖಂಡಿತವಾಗಿಯೂ ಅತ್ಯಂತ ಅಸಂಬದ್ಧವಾದ ಸ್ಥಿತಿ. ಗ್ರೇಟ್ ಬ್ರಿಟನ್ನಿನ ವಿದೇಶಾಂಗ ನೀತಿಯಲ್ಲಿ ಇತರ ಅಧಿಪತ್ಯಗಳಿಗೆ ಇರುವುದಕ್ಕಿಂತಲೂ ಹೆಚ್ಚಿನ ಪಾಲ್ಗೊಳ್ಳುವಿಕೆಯ ಹಕ್ಕು ಭಾರತಕ್ಕೆ ಇದೆಯೆಂದು ನಾನು ಹೇಳುತ್ತೇನೆ. ತಮ್ಮ ಭಾಷಣದಲ್ಲಿ ಸನ್ಮಾನ್ಯ ಪ್ರಧಾನಮಂತ್ರಿಗಳು ಉಲ್ಲೇಖಿಸಿದಂತೆ, ವೆಸ್ಟ್ ಮಿನಿಸ್ಟರ್ ಶಾಸನದ ಮೇರೆಗೆ, ಯಾವ ಯುದ್ಧ ಆರಂಭವಾಗುವುದಕ್ಕೆ ತಾನು ಕಾರಣವಲ್ಲವೋ ಅಂಥ ಯುದ್ಧದ ಪರಿಣಾಮಗಳಿಂದ ತನ್ನನ್ನು ಹೊರತುಪಡಿಸಿಕೊಳ್ಳುವುದಕ್ಕೆ ಅಥವಾ ತಾನು ತಟಸ್ಥವಾಗಿರುವುದಾಗಿ ಘೋಷಿಸಿಕೊಳ್ಳುವುದಕ್ಕೆ ಅಧಿಪತ್ಯಕ್ಕೆ ತೆರೆದ ಅವಕಾಶವಿರುತ್ತದೆ. ದುರದೃಷ್ಟವಶಾತ್ ನಮಗಿಂದು ಅಧಿಪತ್ಯದ ಸ್ಥಾನಮಾನ ಲಭಿಸಿಲ್ಲ. ನಾವು ತಟಸ್ಥವಾಗಿರುತ್ತೇವೆಂದು ಘೋಷಿಸಿಕೊಳ್ಳುವ ಹಕ್ಕೂ ನಮಗೆ ಇಲ್ಲ. ನಮ್ಮ ಇಚ್ಛೆ ಇಲ್ಲದೆ, ನಮ್ಮ ಸಮ್ಮತಿ ಇಲ್ಲದೆ ಈ ಹತ್ಯಾಕಾಂಡಕ್ಕೆ ನಮ್ಮನ್ನು ಎಳೆಯಲಾಗಿದೆ; ಸ್ಥಿತಿ ಇದೇ ಆಗಿದ್ದಲ್ಲಿ, ಉದ್ದಕ್ಕೂ ನಮ್ಮೊಡನೆ ಸಮಾಲೋಚಿಸಲೇಬೇಕೆಂದು ಒತ್ತಾಯಿಸಲು ಯಾವುದೇ ಅಧಿಪತ್ಯಕ್ಕಿಂತಲೂ ಹೆಚ್ಚಿನ ಹಕ್ಕು ನಮಗಿದೆ. ಆದ್ದರಿಂದ, ಠರಾವಿನ ಆ ಭಾಗಕ್ಕೆ ಸಂಬಂಧಿಸಿದ ಮಟ್ಟಿಗೆ, ನಾನು ಸಂಪೂರ್ಣ ಬೆಂಬಲ ನೀಡುತ್ತೇನೆ.

ಇನ್ನೂ ಒಂದು ವಿಚಾರ ಇದೆ. ಅದರ ಬಗ್ಗೆ ನಾನು ಸಂಕ್ಷೇಪವಾಗಿ ಉಲ್ಲೇಖಿಸಬಯಸುತ್ತೇನೆ. ನಮ್ಮ ಒಪ್ಪಿಗೆ ಇಲ್ಲದೆಯೇ ಈ ದೇಶವನ್ನು ಯುದ್ಧಕ್ಕೆ ಸಿಲುಕಿಸಿರುವುದರಿಂದ, ಠರಾವಿನಲ್ಲಿ ಸರಿಯಾಗಿಯೇ ಹೇಳಲಾಗಿರುವಂತೆ, ರಕ್ಷಣೆಯ ದೃಷ್ಟಿಯಿಂದ ನೋಡಿದರೆ, ನಮ್ಮ ಈ ದೇಶ ಅತ್ಯಂತ ರಕ್ಷಣಾವಿಹೀನ ಸ್ಥಿತಿಯಲ್ಲಿದೆ. ಈ ನಾಡಿನ ರಕ್ಷಣೆಯ ಪ್ರಶ್ನೆ ಬಂದಿತು ಎಂದಿಟ್ಟುಕೊಳ್ಳಿ, ಸೈನ್ಯವಾದರೂ ಎಲ್ಲಿದೆ? ನೌಕಾದಳ

ಎಲ್ಲಿದೆ? ಈ ನಾಡನ್ನು ರಕ್ಷಿಸಬಹುದಾದಂಥ ವಿಮಾನಗಳು ಎಲ್ಲಿವೆ? ದುಂಡು ಮೇಜಿನ ಸಮ್ಮೇಳನದ ಸದಸ್ಯನಾಗಿ ನನಗೆ ಈ ವಿಚಾರ ನೆನಪಿದೆ: ನಾವು ಒಂದು ತತ್ವಕ್ಕಾಗಿ ಹೋರಾಡಿದೆವು. ಭಾರತದ ರಕ್ಷಣೆಯ ಹೊಣೆ ಗ್ರೇಟ್ ಬ್ರಿಟನ್ನಿನದಾಗಿರತಕ್ಕದ್ದು ಎಂಬುದನ್ನು ಮಾನ್ಯ ಮಾಡಬೇಕು ಹಾಗೂ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದನ್ನು ಭಾರತೀಯರಿಗೆ ಕಲಿಸಿಕೊಡಬೇಕು ಎಂಬುದೇ ಆ ತತ್ವವಾಗಿತ್ತು. ಭಾರತ ಸರ್ಕಾರದ ರಕ್ಷಣಾ ನೀತಿಯನ್ನು ನಾನು ಪರಿಶೀಲಿಸಿರುವಷ್ಟರ ಮಟ್ಟಿಗೆ, ಈ ದಿಕ್ಕಿನಲ್ಲಿ ಅವರು ಯಾವುದೇ ತೃಪ್ತಿಕರವಾದ ಕ್ರಮಗಳನ್ನು ಕೈಗೊಂಡಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಆ ತತ್ವದ ಪಾಲನೆಗೆ ಸಂಬಂಧಿಸಿದುದೇನನ್ನೂ ಅವರ ನೀತಿಯಲ್ಲಿ ನಾನು ಕಂಡಿಲ್ಲ. ಹೀಗಾಗಿ, ಭಾರತ ಎತ್ತಬಹುದಾಗಿರುವ ದೂರಿನಲ್ಲಿ ಅದು ಕೂಡ ನ್ಯಾಯವಾದ ಭಾಗವೇ ಆಗಿರುತ್ತದೆಂದು ನಾನು ಭಾವಿಸಿದ್ದೇನೆ. ಸರ್ಕಾರದೊಂದಿಗೆ ಸಹಮತವನ್ನು ವ್ಯಕ್ತಪಡಿಸಬಹುದಾದ ಅಂಶಗಳು ಇವು; ಆದರೆ ಇಲ್ಲಿಗೇ ನನ್ನ ಸಹಮತ ಕೊನೆಗಾಣುತ್ತದೆಂದು ನಾನು ವಿಷಾದದಿಂದ ಹೇಳಬೇಕಾಗಿದೆ.

ಮಾನ್ಯರೆ, ತಮಗೆ ತಿಳಿದಿರುವಂತೆ, ನಾನು ನಾಲ್ಕು ತಿದ್ದುಪಡಿಗಳನ್ನು ಮಾಡಿಸಿದ್ದೇನೆ. ಅವುಗಳ ಸಂಖ್ಯೆಯೇನೋ ಮೂರೇ; ಆದರೆ, ವಾಸ್ತವವಾಗಿ ಅವು ನಾಲ್ಕು. ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿರುವ ಎರಡು ತಿದ್ದುಪಡಿಗಳನ್ನು ನಾನು ಒಟ್ಟಿಗೆ ತೆಗೆದುಕೊಳ್ಳುತ್ತೇನೆ. ಉಳಿದ ಎರಡು ತಿದ್ದುಪಡಿಗಳನ್ನು ನಾನು ಪ್ರತ್ಯೇಕವಾಗಿ ತೆಗೆದುಕೊಳ್ಳುತ್ತೇನೆ. ನಾನು ಕಾಲದಲ್ಲಿ ಮಿತವ್ಯಯವನ್ನು ಸಾಧಿಸಬಯಸುವುದರಿಂದ, ಈ ಸದನಕ್ಕೆ ತಿದ್ದುಪಡಿಗಳನ್ನು ಮತ್ತೆ ಓದಿ ಹೇಳಲು ಉದ್ದೇಶಿಸಿಲ್ಲ. ತಿದ್ದುಪಡಿಗಳೇನು ಎಂಬುದು ಈ ಸದನಕ್ಕೆ ಸಂಪೂರ್ಣವಾಗಿ ತಿಳಿದಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನ ಅಡಕಗೊಂಡಿರುವ ತತ್ವದತ್ತ ಈ ಸದನದ ಗಮನವನ್ನು ಸೆಳೆಯುವುದರೊಂದಿಗೆ ಪ್ರಧಾನಮಂತ್ರಿಗಳು ತಮ್ಮ ಮಾತನ್ನು ಮುಗಿಸಿದ್ದಾರೆ. ಪ್ರಜಾಸತ್ತೆಗೆ, ಜೀವನಕ್ಕೆ, ಸ್ವಾತಂತ್ರ್ಯಕ್ಕೆ ಹಾಗೂ ಸುಖದ ಅನ್ವೇಷಣೆಗೆ ಸಂಬಂಧಿಸಿದ ಒಂದು ಭಾಗವನ್ನು ಅವರು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸಂವಿಧಾನದಿಂದ ಓದಿ ಹೇಳಿದರು. ಪ್ರಜಾಸತ್ತೆಯ ತತ್ವಗಳನ್ನು ಮೈಗೂಡಿಸಿಕೊಂಡಿರುವ ಆ ಪ್ರಾಚೀನ ಮತ್ತು ಅತ್ಯಂತ ಮಾನವೀಯ ದಾಖಲೆಯ ವಿಷಯದಲ್ಲಿ ವಿರೋಧಪಕ್ಷಗಳ ಸಾಲಿನಲ್ಲಿ ಕುಳಿತಿರುವ ನಾವು ಗೌರವವನ್ನು ಇರಿಸಿಕೊಳ್ಳಬೇಕೆಂದು ಅವರು ನಮಗೆ ನೆನಪಿಸಿಕೊಟ್ಟಿದ್ದಾರೆ. ಮಾನ್ಯರೆ, ದಕ್ಷಿಣ ಅಮೇರಿಕಾಕ್ಕೆ ಸಂಬಂಧಿಸಿದ ವ್ಯವಹಾರಗಳ ಸ್ಥಿತಿ ಏನಾಗಿದೆ ಎಂಬುದನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ನೆನಪು ಮಾಡಿಕೊಡುವ ಸ್ವಾತಂತ್ರ್ಯವನ್ನು ವಹಿಸುತ್ತೇನೆ. ಅವರು ಉತ್ತರ ಅಮೇರಿಕಾದ ವಿಚಾರವನ್ನು ಉಲ್ಲೇಖಿಸಿದವರು. ನಾನು ದಕ್ಷಿಣ ಅಮೇರಿಕಾದ ವಿಚಾರವನ್ನು ಉಲ್ಲೇಖಿಸುತ್ತೇನೆ. ಅವು ಪರಸ್ಪರ ತುಂಬ ಹತ್ತಿರದಲ್ಲಿರುವ ದೇಶಗಳು. ಬ್ರೆಜಿಲ್‌ನಂಥ ಸ್ಪ್ಯಾನಿಷ್ ಅಮೇರಿಕನ್ ವಸಾಹತುಗಳು ಸ್ಪೇನಿನ ಸಾಮ್ರಾಜ್ಯದಿಂದ ಬೇರೆಯಾದಾಗ, ಅವು ಕೂಡ ತಮ್ಮದೇ ಆದ ಸಂವಿಧಾನಗಳನ್ನು ರೂಪಿಸಿಕೊಳ್ಳಬಯಸಿದವು ಎಂಬುದನ್ನು ನನ್ನ ಸನ್ಮಾನ್ಯ ಸ್ನೇಹಿತರಾದ ಪ್ರಧಾನ ಮಂತ್ರಿಗಳು ನೆನಪು ಮಾಡಿಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ. ತಮ್ಮದೇ ಆದ ಸಂವಿಧಾನಗಳನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದು ಅವುಗಳಿಗೆ ಗೊತ್ತಿರಲಿಲ್ಲ. ಹೀಗಾಗಿ, ಅವುಗಳು ವ್ಯಕ್ತಿಯೊಬ್ಬನ ನೆರವನ್ನು ಕೋರಿದವು. ಆತನ ಬಗ್ಗೆ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ ಎಂದು ನಾನು ನಂಬಿದ್ದೇನೆ. ಅವುಗಳು ಮಾಡಿದ್ದು ಇಷ್ಟೇ: ಅವು ಜೆರೆಮಿ ಬೆಂಥಮ್ ಅವರಿಗೆ ಈ ವಿಷಯವನ್ನು ಒಪ್ಪಿಸಿದವು. ಹೊರಗಿನ ಜಗತ್ತಿಗೆ ಗೊತ್ತಿಲ್ಲದೆ ಇದ್ದರೂ, ಪ್ರತಿಯೊಬ್ಬ ವಕೀಲನಿಗೂ ಜೆರೆಮಿ ಬೆಂಥಮ್ ಅವರ ಪರಿಚಯ ಇದ್ದೇ ಇರಬೇಕು. ಜೆರೆಮಿ ಬೆಂಥಮ್ ಅವರು ಮಹಾ

ಶಾಸನಕರ್ತರಾಗಿದ್ದರು. ಅವರು ಸೂತ್ರ ಸಂಹಿತೆಗಳಲ್ಲಿ ಮತ್ತು ಅವರ ವಸ್ತುಗಳ ಸುಸಂಗತ ವರ್ಗೀಕರಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಂಥ ವ್ಯಕ್ತಿಯಾಗಿದ್ದರು. ಶುದ್ಧ ತರ್ಕಬುದ್ಧ–ವಾದದ ಆಧಾರದ ಮೇಲೆ ಅವರು ಆಂಗ್ಲ ಕಾನೂನನ್ನು ಸುಧಾರಿಸಬಯಸುತ್ತಿದ್ದರು. ತರ್ಕಬುದ್ಧಿ ಅಥವಾ ವಿವೇಚನೆಯನ್ನು ಅನ್ವಯಿಸುವುದರ ಹೊರತು, ಬೇರೆ ಯಾವುದರಲ್ಲೂ ನಂಬಿಕೆಯನ್ನಿರಿಸಿಕೊಳ್ಳದೆ ಇದ್ದಂಥ ಹಾಗೂ ಕಾರ್ಯಕಾರಣ–ತರ್ಕದ ಆಧಾರದ ಮೇಲೆ ಮಾತ್ರವೇ ಕೆಲಸ ಮಾಡುವ ವಿಚಾರದಲ್ಲಿ ನಂಬಿಕೆಯನ್ನಿರಿಸಿ ಕೊಂಡಿದ್ದಂಥ ವ್ಯಕ್ತಿಯೇ ತಮಗಾಗಿ ಸಂವಿಧಾನವನ್ನು ರೂಪಿಸಲು ಸೂಕ್ತ ವ್ಯಕ್ತಿ ಎಂದು ದಕ್ಷಿಣ ಅಮೇರಿಕಾದ ವಸಾಹತುಗಳು ಭಾವಿಸಿದವು. ಸಂವಿಧಾನವನ್ನು ರೂಪಿಸುವಂತೆ ಕೋರಿ, ಮೊಹರು ಮಾಡಿದ ಟಿಪ್ಪಣಿಗಳೊಂದಿಗೆ– ಸಾಮಾನ್ಯವಾಗಿ ಸಲಹೆಗಾರರಿಗೆ ಕಳಿಸುವಾಗ ಹೀಗೆ ಮೊಹರು ಮಾಡಿ ಕಳಿಸಲಾಗುತ್ತದೆ– ಅವು ತಮ್ಮ ದೂತರನ್ನು ಕಳಿಸಿಕೊಟ್ಟವು. ದಕ್ಷಿಣ ಅಮೇರಿಕಾದಲ್ಲಿ ಅಸಂಖ್ಯಾತವಾದ ವಸಾಹತುಗಳಿದ್ದವು. ಅವೆಲ್ಲ ಹಳೆಯ ಸ್ಪೇನಿನ ಸಾಮ್ರಾಜ್ಯದಿಂದ ಸಿಡಿದು ಹೊರಬಂದಿದ್ದವು. ದಕ್ಷಿಣ ಅಮೇರಿಕಾದಲ್ಲಿನ ಈ ಹೊಸ ದೇಶಗಳಿಗಾಗಿ ಸಂವಿಧಾನಗಳನ್ನು ರೂಪಿಸುವ ಈ ಅವಕಾಶವನ್ನು ಜೆರೆಮಿ ಬೆಂಥಮ್ ಉತ್ಸಾಹದಿಂದಲೇ ಸ್ವೀಕರಿಸಿದರು. ಅವರು ತುಂಬ ಶ್ರಮವಹಿಸಿ, ಅತ್ಯಂತ ವ್ಯಾಪಕವಾದ ದಸ್ತಾವೇಜುಗಳನ್ನು ರಚಿಸಿದರು. ಪ್ರಧಾನಮಂತ್ರಿಗಳು ನಗುತ್ತಿರುವುದು ಕಾಣುತ್ತಿದೆ. ಈ ವಿಷಯ ಅವರಿಗೆ ಗೊತ್ತು. ಆ ಸಂವಿಧಾನದ ದಸ್ತಾವೇಜುಗಳನ್ನು ಜೆರೆಮಿ ಬೆಂಥಮ್ ಅವರು ಹಡಗಿನ ಮೂಲಕ ದಕ್ಷಿಣ ಅಮೇರಿಕಾಕ್ಕೆ ಕಳಿಸಿಕೊಟ್ಟರು. ಜನರ ಜೀವನ ಮತ್ತು ಸ್ವಾತಂತ್ರ್ಯಗಳ ರಕ್ಷಣೆಗಾಗಿ ಹಾಗೂ, ಈ ಮಾತನ್ನು ನಾನು ಬಳಸಬಹುದಾದರೆ, ಪ್ರಜಾಸತ್ತಾತ್ಮಕ ತತ್ವಗಳನ್ನು ಅವರು ಜಪಿಸುವಂತೆ ಮಾಡುವುದಕ್ಕಾಗಿ. ಅವು ಅಲ್ಲಿಗೆ ತಲುಪಿದ ಬಳಿಕ, ದಕ್ಷಿಣ ಅಮೇರಿಕಾದ ಜನಸಮುದಾಯಗಳು ಕೆಲವು ವರ್ಷಗಳವರೆಗೆ ಅವನ್ನು ಪ್ರಯೋಗಿಸಿ ನೋಡಿದವು. ಆ ಬಳಿಕ, ಜೆರೆಮಿ ಬೆಂಥಮ್ ಅವರು ರೂಪಿಸಿದ್ದ ಪ್ರತಿಯೊಂದು ಸಂವಿಧಾನವೂ ನುಚ್ಚು ನೂರಾಗಿಬಿಟ್ಟಿತು. ತಮಗೆ ಬಂದು ಸೇರಿದ ಆ ಸಂವಿಧಾನಗಳ ಸಾವಿರಾರು ಪ್ರತಿಗಳನ್ನು ಏನು ಮಾಡಬೇಕೆಂಬುದು ಅವರಿಗೆ ಗೊತ್ತಾಗಲಿಲ್ಲ. ಅವುಗಳೆಲ್ಲವನ್ನೂ ಸಾರ್ವಜನಿಕವಾಗಿ ಸುಟ್ಟು ಹಾಕಬೇಕೆಂದು ದಕ್ಷಿಣ ಅಮೇರಿಕಾದ ಎಲ್ಲ ಜನ–ಸಮುದಾಯಗಳೂ ತೀರ್ಮಾನಿಸಿದವು.

ಮಾನ್ಯರೆ, ನಾನು ಒತ್ತಿ ಹೇಳಬಯಸುವ ಅಂಶ ಇದು: ಸೂಟಿನಂತೆ ಸಂವಿಧಾನವು ನಮಗೆ ಸರಿಯಾಗಿ ಹೊಂದಿಕೊಳ್ಳಬೇಕು. ಹೊಂದಿಕೊಳ್ಳದ ಸಂವಿಧಾನ ಖಂಡಿತವಾಗಿಯೂ ಸಂವಿಧಾನವೇ ಅಲ್ಲ; ಅದು ಸಂವಿಧಾನವಾಗಲಾರದು. ಉದಾಹರಣೆಗೆ ತೆಳುವಾದ ಮೈಕಟ್ಟಿನ ಸನ್ಮಾನ್ಯ ಗೃಹಸಚಿವರು ಧರಿಸಿರುವ ಕೋಟು ನನ್ನ ಈ ದಢೂತಿ ಶರೀರಿಕ್ಕೆ ಹೊಂದಲಾರದು (ನಗು). ಸರಿಯಾಗಿರಲು ಸಾಧ್ಯವೆ? ಗೂನುಬೆನ್ನಿನ ವ್ಯಕ್ತಿಗಾಗಿ ಸಿದ್ಧಪಡಿಸಲಾದ ಸೂಟು ನೆಟ್ಟಗಿರುವ ಬೆನ್ನಿನ ಸಾಮಾನ್ಯ ವ್ಯಕ್ತಿಗೆ ಹೊಂದುತ್ತದೆಯೇ? (ನಗು). ತನ್ನ ಹೆಜ್ಜೆಯನ್ನು ದೃಢವಾಗಿ ಹಾಗೂ ನೇರವಾಗಿ ನೆಲದ ಮೇಲೆ ಇರಿಸಬಲ್ಲಂಥ ವ್ಯಕ್ತಿಗೆ ಸರಿಹೊಂದುವಂಥ ಬೂಟು ಸೊಟ್ಟಕಾಲಿನ ವ್ಯಕ್ತಿಗೆ ಹೊಂದಿಕೆಯಾಗಲು ಸಾಧ್ಯವೆ? ಹಾಗಾಗುವುದು ಸಾಧ್ಯವಿಲ್ಲ. ಆದ್ದರಿಂದ ಪ್ರಜಾಸತ್ತೆಯ ಬಗ್ಗೆ ಮಾತನಾಡುವಾಗ, ವಸ್ತುಸ್ಥಿತಿಗಳಿಗೆ ಸಿದ್ಧಾಂತಗಳನ್ನು ಸರಿ ಹೊಂದುವ ಬಗ್ಗೆ ಮಾತನಾಡಬೇಕಾಗುತ್ತದೆ. ಈಗ ನಾನು ವಿಸ್ತರಿಸಬಯಸುವ ಅಂಶ ಇದು. ಪ್ರಜಾ ಸತ್ತೆಯ ತತ್ವ ಭಾರತದ ಜನತೆಗೆ ಹೊಂದಿಕೆಯಾಗುತ್ತದೆಯೆ? ತಾವು ಯಾವುದನ್ನು ಪ್ರಜಾಸತ್ತೆಯ ತತ್ವ ಎಂದು ಪರಿಗಣಿಸಿದ್ದಾರೋ ಆ ತತ್ವದ ಸ್ವರೂಪ ವರ್ಣನೆಯ ಮೂಲಕ ನನ್ನ ಸನ್ಮಾನ್ಯ ಗೆಳೆಯರಾದ ಪ್ರಧಾನ ಮಂತ್ರಿಗಳು ನಮಗೆ ಬೆಳಕನ್ನೇನೂ ಚೆಲ್ಲಿಲ್ಲ. ಆದರೆ ಪ್ರಜಾಸತ್ತೆ ಎಂದರೆ ಅವರ ಅಭಿಪ್ರಾಯದಲ್ಲಿ

ಬಹುಸಂಖ್ಯಾತರ ಆಡಳಿತ ಎಂದು ನಾನು ತೆಗೆದುಕೊಳ್ಳುತ್ತೇನೆ. ಏಕೆಂದರೆ ಎಲ್ಲಿಯವರೆಗೆ ಬಹುಸಂಖ್ಯಾತರ ಆಡಳಿತವನ್ನು ಮೂಲಭೂತ ಕಾರ್ಯಶೀಲ ತತ್ವವೆಂದು ನಾವು ಒಪ್ಪುವುದಿಲ್ಲವೋ ಅಲ್ಲಿಯವರೆಗೆ ರಾಜಕೀಯ ಪ್ರಜಾಸತ್ತೆ ಇರಲು ಸಾಧ್ಯವಾಗುವುದಿಲ್ಲ. ಸ್ಪಷ್ಟವಾಗಿ ಅದೇ ಬೇರು, ಅದೇ ಆಧಾರ, ಅದೇ ದಿಕ್ಕು. ಅಲ್ಲಿಂದಲೇ ನಾವು ಈ ಪ್ರಶ್ನೆಯನ್ನು ಚರ್ಚಿಸಲು ಮುಂದಾಗಬೇಕು.

ಮಾನ್ಯರೆ, ವಿರೋಧಪಕ್ಷದ ನಾಯಕರು ಹೇಳಿದ ಒಂದು ಅಭಿಪ್ರಾಯೋಕ್ತಿಯನ್ನು ಅಂದರೆ ವಸ್ತುಸ್ಥಿತಿ ಹೀಗಿರುವಾಗ, ಬದಲಾಯಿಸಲು ಸಾಧ್ಯವಿಲ್ಲದಂಥ ಒಂದು ಸಂಗತಿ ಇದು; ಬದಲಾಯಿಸಲು ಸಾಧ್ಯವಿಲ್ಲದ ಆ ಒಂದು ಸಂಗತಿ ಯಾವುದೆಂದರೆ ಈ ನಾಡಿನಲ್ಲಿ ಹಿಂದೂಗಳು ಯಾವಾಗಲೂ ಬಹುಸಂಖ್ಯಾತರಾಗಿಯೇ ಉಳಿದಿರುತ್ತಾರೆ; ಮುಸ್ಲಿಮರು ಮತ್ತು ಅನುಸೂಚಿತ (ಪರಿಶಿಷ್ಟ) ಜಾತಿಗಳು ಯಾವಾಗಲೂ ಅಲ್ಪಸಂಖ್ಯಾತರಾಗಿಯೇ ಉಳಿದಿರುತ್ತಾರೆ ಎಂಬ ಮಾತನ್ನು ಪ್ರತಿಯೊಬ್ಬರೂ ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ. ಅದೊಂದು ವಿವಾದಾತೀತರಾಗಿರುವ ಸಂಗತಿ; ನಾವು ಬೇರೆ ಯಾವುದೇ ಒಂದು ವಿಚಾರವನ್ನು ಒಪ್ಪಲಿ ಅಥವಾ ಬಿಡಲಿ, ಇದು ಮಾತ್ರ ನಾವೆಲ್ಲರೂ ಒಪ್ಪಲೆಬೇಕಾಗಿರುವ ಸಂಗತಿ ಎಂದು ನಿವೇದಿಸಬಯಸುತ್ತೇನೆ. ನಾನು ಈಗ ಎತ್ತಲಿರುವ ಪ್ರಶ್ನೆ ನನ್ನ ಮನಸ್ಸಿಗೆ ತೋರುವಂತೆ, ತುಂಬ ಸರಳವಾಗಿರುವ ಪ್ರಶ್ನೆ. ಈ ನಾಡಿನಲ್ಲಿ ಅಸ್ಪೃಶ್ಯರು ಎಂದು ಕರೆಯಲಾಗಿರುವ ಆ ಜನಸಮುದಾಯದ ದೃಷ್ಟಿಕೋನದಿಂದ ಮಾತ್ರವೇ ನಾನು ಅದರ ಬಗ್ಗೆ ಚರ್ಚಿಸಲಿದ್ದೇನೆ. ಮೊದಲಿಗೆ ಈ ಪ್ರಜಾಸತ್ತೆಯಲ್ಲಿನ ನಮ್ಮ ಸಾಪೇಕ್ಷ ಸ್ಥಾನವನ್ನು ಈ ಸದನ ಗಮನಿಸಬೇಕೆಂದು ಕೋರುತ್ತೇನೆ. ಈ ನಾಡಿನಲ್ಲಿ ಯಾವ ಪ್ರಜಾಸತ್ತೆ ನೆಲೆಗೊಳ್ಳಬೇಕೆಂದು ಪ್ರಧಾನ ಮಂತ್ರಿಗಳು ಇಚ್ಛಿಸುತ್ತಿದ್ದಾರೋ ಆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಾನಾಗಲೇ ಹೇಳಿದಂತೆ, ಒಂದು ಸಂಗತಿ ಬದಲಾಗದೆ ಇರುತ್ತದೆ. ಅಂದರೆ, ಹಿಂದೂಗಳು ಬಹುಸಂಖ್ಯಾತರಾಗಿರುತ್ತಾರೆ; ಈ ನಾಡಿನಲ್ಲಿ ಉದ್ದಗಲಕ್ಕೂ ಹರಿಹಂಚಿಹೋದಂತೆ, ಪ್ರತಿಯೊಂದು ಹಳ್ಳಿಯಲ್ಲೂ ಹರಿಹಂಚಿ ಹೋದಂತೆ ಒಂದು ಸಣ್ಣ ಬಾಲ– ಈ ಮಾತನ್ನು ನಾನು ಬಳಸಬಹುದಾದರೆ– ಗುಡಿಸಲುಗಳ ಕೆಲವು ಗುಂಪುಗಳು, ಕೆಲವು ಮಣ್ಣಿನ ಮನೆಗಳು ಉಳಿದುಕೊಂಡಿರುತ್ತವೆ. ಅಲ್ಲಿರುವ ಜನರನ್ನು ಅಸ್ಪೃಶ್ಯರು ಎಂದು ಕರೆಯುತ್ತಾರೆ. ಮನೆಯೊಂದು ಹಳ್ಳಿಯಲ್ಲಿಯೂ ಪಕ್ಕಪಕ್ಕದಲ್ಲಿಯೇ ಹಿಂದೂಗಳ ಕಾಲನಿಗಳು ಮತ್ತು ಮಹರ್ ವಾಡಾಗಳು ಅಥವಾ ಛಂಬರ್ ವಾಡಾಗಳು ಅಥವಾ ಭಂಗಾವಾಡಾಗಳು ಅಥವಾ ನೀವು ಬೇರಾವುದೇ ಹೆಸರಿನಿಂದ ಕರೆಯುವ ಬಸ್ತಿಗಳು, ಆ ಕಾಲನಿಗೆ ಸೇರಿದಂತೆಯೇ ಅಸ್ತಿತ್ವದಲ್ಲಿರುತ್ತವೆ. ಇದೇ ಬದಲಾಗದ ಆ ಸಂಗತಿ.

ನನ್ನನ್ನು ನಾನು ಪ್ರಜಾಸತ್ತೆಗೆ ಒಪ್ಪಿಸಿಕೊಳ್ಳಬೇಕೆಂದು ನನ್ನ ಸನ್ಮಾನ್ಯ ಮಿತ್ರರು ಹೇಳುತ್ತಾರೆ. ಈ ಬಹುಸಂಖ್ಯಾತ ಜನಸಮುದಾಯ ನನ್ನನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದನ್ನು (ಈ ಪ್ರಶ್ನೆಯ ಬಗೆಗಿನ ನನ್ನ ಉತ್ತರ) ಅವಲಂಬಿಸಿರುತ್ತದೆ ಎಂದು ಹೇಳಲು ಅವರು ಅವಕಾಶ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ಈ ಬಹುಸಂಖ್ಯಾತ ಜನಸಮುದಾಯ ಸಹನಶೀಲ ಜನಸಮುದಾಯವಾಗಿದೆಯೇನು? ಈ ಬಹುಸಂಖ್ಯಾತ ಜನಸಮುದಾಯ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ತತ್ವಗಳನ್ನು ಮಾನ್ಯ ಮಾಡುತ್ತಿದೆಯೆ? ಈ ಬಹುಸಂಖ್ಯಾತ ಜನಸಮುದಾಯ ಬದುಕಲು, ಉಸಿರಾಡಲು ಮತ್ತು ಬೆಳೆಯಲು ನನಗೆ ಅವಕಾಶ ಕೊಡುತ್ತದೆಯೇ?

ಸನ್ಮಾನ್ಯರಾದ ಶ್ರೀ ಬಿ. ಜಿ. ಖೇರ್: ಖಂಡಿತವಾಗಿಯೂ ಅದು ಅವಕಾಶ ಕೊಡುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಬಹುಸಂಖ್ಯಾತರ ಮನೋಧರ್ಮ ಎಂಥದು? ಪರಿಗಣಿಸಬೇಕಾಗಿರುವ

ಪ್ರಶ್ನೆ ಅದೊಂದೇ. ನನ್ನ ಸನ್ಮಾನ್ಯ ಗೆಳೆಯರು "ಹೌದು" ಎಂದು ಹೇಳಿದ್ದಾರೆ. ಆದರೆ ನಾವು ವಸ್ತುಸ್ಥಿತಿಯತ್ತ ನೋಡೋಣ. ನಾನು ಗತಕಾಲಕ್ಕೆ ಹಾಗೂ ಪ್ರಾಚೀನ ಇತಿಹಾಸಕ್ಕೆ ಪಯಣಿಸುವುದಿಲ್ಲ. ನಾನು ೧೯೨೯ ನೆಯ ವರ್ಷದಿಂದ ಆರಂಭಿಸಬಯಸುತ್ತೇನೆ. ೧೯೨೯ರಲ್ಲಿ ಮುಂಬಯಿ ವಿಧಾನ ಪರಿಷತ್ತು, ದಲಿತ ವರ್ಗಗಳು ಮತ್ತು ಆದಿವಾಸಿ ಬುಡಕಟ್ಟುಗಳೆಂದು ಕರೆಯಲಾಗುತ್ತಿರುವ ಜಮಸಮುದಾಯಗಳ ಕುಂದುಕೊರತೆಗಳ ಬಗ್ಗೆ ವಿಚಾರಣೆ ನಡೆಸುವ ಸಲುವಾಗಿ, ತನ್ನ ಠರಾವೊಂದರ ಮೂಲಕ ಒಂದು ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಗೆ ಸ್ಟಾರ್ಟ್ ಎಂಬುವವರು ಅಧ್ಯಕ್ಷರಾಗಿದ್ದರು. ಅವರು ಅಪರಾಧಿಕ ಬುಡಕಟ್ಟುಗಳ ಬಗೆಗಿನ ಕಾರ್ಯಭಾರದಲ್ಲಿದ್ದಂಥ ಅಧಿಕಾರಿಯಾಗಿದ್ದರು. ನಾನು ಆ ಸಮಿತಿಯ ಸದಸ್ಯನಾಗಿದ್ದೆ. ನನ್ನ ಸಹೋದ್ಯೋಗಿ ಡಾ. ಸೋಲಂಕಿ ಅವರೂ ಸದಸ್ಯರಾಗಿದ್ದರು. ಉಳಿದವರು ಹಿಂದೂಗಳಾಗಿದ್ದರು. ಒಬ್ಬ ವ್ಯಕ್ತಿಯ ವಿಚಾರವನ್ನು ನಾನು ವಿಶೇಷವಾಗಿ ಉಲ್ಲೇಖಿಸಬೇಕು. ಅವರು ಈ ಸಮಿತಿಯ ಸದಸ್ಯರಾಗಿದ್ದರು. ಠಕ್ಕರ್ ಅವರೇ ಆ ಸದಸ್ಯರು. ಅವರ ಹೆಸರನ್ನು ಹೇಳುತ್ತಿರುವುದಕ್ಕೆ ಕಾರಣವೇನೆಂದರೆ, ನನ್ನ ಸನ್ಮಾನ್ಯ ಸ್ನೇಹಿತರಾದ ಪ್ರಧಾನ ಮಂತ್ರಿಗಳು ನನ್ನದಕ್ಕಿಂತ ಹೆಚ್ಚಾಗಿ ಡಾ. ಠಕ್ಕರ್ ಅವರ ಸಾಕ್ಷ್ಯವನ್ನು ಸುಲಭವಾಗಿ ಒಪ್ಪುತ್ತಾರೆ ಎಂಬುದು ನನಗೆ ಗೊತ್ತು. ಮಾನ್ಯರೆ ೧೯೨೮ರಲ್ಲಿ ದಲಿತ ವರ್ಗಗಳ ವಿಷಯದಲ್ಲಿ ಬಹುಸಂಖ್ಯಾತ ಹಿಂದೂಗಳ ವರ್ತನೆ ಹೇಗಿತ್ತು? ಆ ವರದಿಯಿಂದ ಒಂದು ಭಾಗವನ್ನು ಓದಿ ಹೇಳಲು ತಮ್ಮ ಅನುಮತಿಯನ್ನು ಕೋರುತ್ತೇನೆ. ವರದಿಯ ೧೦೨ನೆಯ ಪ್ಯಾರಾದಲ್ಲಿ ಹೀಗೆಂದು ಹೇಳಲಾಗಿದೆ.

"ಸಾರ್ವಜನಿಕ ಉಪಯುಕ್ತತಾ ಸೇವೆಗಳ ಬಗೆಗಿನ ದಲಿತ ವರ್ಗಗಳ ಹಕ್ಕುಗಳನ್ನು ಅವರಿಗೆ ತಂದುಕೊಡುವ ಸಲುವಾಗಿ ನಾವು ವಿವಿಧ ಪರಿಹಾರೋಪಾಯಗಳನ್ನು ಶಿಫಾರಸು ಮಾಡಿದ್ದೇವಾದರೂ, ಇನ್ನು ದೀರ್ಘ ಕಾಲದವರೆಗೆ, ಅವುಗಳನ್ನು ಜಾರಿಗೆ ಕೊಡುವ ಹಾದಿಯಲ್ಲಿ ಕಷ್ಟಗಳಿರುತ್ತದೆ. ಮೊದಲನೆಯ ಕಷ್ಟವೆಂದರೆ ಅವರಿಗೆ ವಿರುದ್ಧವಾಗಿ ಸಂಪ್ರದಾಯ ಶೀಲ ವರ್ಗಗಳು ನಡೆಸಬಹುದಾದ ಬಹಿರಂಗ ಹಿಂಸೆಯ ಭಯ. ಪ್ರತಿಯೊಂದು ಹಳ್ಳಿಯಲ್ಲಿಯೂ ದಲಿತ ವರ್ಗಗಳು ತೀರ ಅಲ್ಪಸಂಖ್ಯಾತವಾಗಿರುತ್ತವೆ. ಅವುಗಳಿಗೆ ವಿರುದ್ಧವಾಗಿ ಸಂಪ್ರದಾಯಶೀಲ ವರ್ಗಗಳು ಭಾರಿ ಸಂಖ್ಯೆಯಲ್ಲಿರುತ್ತವೆ; ಯಾವುದೇ ಬೆಲೆಯನ್ನು ತೆತ್ತಾದರೂ, ದಲಿತ ವರ್ಗಗಳ ಕಲ್ಪಿತ ಆಕ್ರಮಣದಿಂದ ತಮ್ಮ ಹಿತಾಸಕ್ತಿಗಳನ್ನು ಮತ್ತು ಘನತೆ, ಗೌರವಗಳನ್ನು ರಕ್ಷಿಸಿಕೊಳ್ಳಲು ಅವು ಕಟಿಬದ್ಧವಾಗಿರುತ್ತವೆ ಎಂಬುದನ್ನು ಗಮನಿಸಬೇಕು. ಸಂಪ್ರದಾಯಶೀಲ ವರ್ಗಗಳು ಹಿಂಸೆಯನ್ನು ಬಳಸುವುದಕ್ಕೆ ಮಿತಿಯನ್ನೊಡ್ಡಿರುವುದು ಪೊಲೀಸಿನವರು ಮೊಕದ್ದಮೆಯನ್ನು ಹೂಡಬಹುದೆಂಬ ಭಯ; ಇದರಿಂದಾಗಿ ಅಂಥ ಪ್ರಕರಣಗಳು ವಿರಳವಾಗಿವೆ.

"ಇಂದು ದಲಿತರ ವರ್ಗಗಳು ಇರುವ ಆರ್ಥಿಕ ಸ್ಥಿತಿಯಿಂದಲೇ, ಎರಡನೆಯ ಕಷ್ಟ ಉದ್ಭವಿಸುತ್ತದೆ. ಸಂಸ್ಥಾನದ ಬಹುತೇಕ ಭಾಗಗಳಲ್ಲಿ ದಲಿತ ವರ್ಗಗಳಿಗೆ ಆರ್ಥಿಕ ಸ್ವಾತಂತ್ರ್ಯವೇ ಇಲ್ಲ. ಕೆಲವು ಮಂದಿ ಸಂಪ್ರದಾಯಶೀಲರ ಜಮೀನುಗಳಲ್ಲಿ ಅವರ ಇಚ್ಛೆಯಂತೆ ಗೇಣಿದಾರರಾಗಿ ಉಳುಮೆ ಮಾಡುತ್ತಾರೆ. ಸಂಪ್ರದಾಯಶೀಲ ವರ್ಗಗಳು ನೇಮಿಸಿಕೊಂಡ ಕೃಷಿ ಕಾರ್ಮಿಕರಿಗಾಗಿ ತಮಗೆ ದೊರೆಯುವ ಕೂಲಿಯ ಆಧಾರದ ಮೇಲೆ ಕೆಲವರು ಬದುಕಿರುತ್ತಾರೆ. ತಾವು ಗ್ರಾಮ ಸೇವಕರಾಗಿ

ಸಲ್ಲಿಸಿದ ಸೇವೆಗೆ ಬದಲಾಗಿ ಸಂಪ್ರದಾಯಶೀಲ ವರ್ಗಗಳು ತಮಗೆ ನೀಡುವ ಆಹಾರ ಅಥವಾ ದವಸ–ಧಾನ್ಯಗಳೇ ಉಳಿದವರಿಗೆ ಜೀವನಾಧಾರವಾಗಿತ್ತವೆ. ಸಂಪ್ರದಾಯಶೀಲ ವರ್ಗಗಳು ತಮ್ಮ ಆರ್ಥಿಕ ಶಕ್ತಿಯನ್ನು ತಮ್ಮ ಗ್ರಾಮಗಳಲ್ಲಿನ ದಲಿತ ವರ್ಗಗಳಿಗೆ ವಿರುದ್ಧವಾಗಿ ಅಸ್ತ್ರವೆಂಬಂತೆ ಬಳಸಿರುವ ಅನೇಕ ಉದಾಹರಣೆಗಳನ್ನು ನಾವು ಕೇಳಿದ್ದೇವೆ; ದಲಿತ ವರ್ಗಗಳು ತಮ್ಮ ಹಕ್ಕನ್ನು ಚಲಾಯಿಸುವ ಧೈರ್ಯವನ್ನು ತೋರಿದಾಗ, ತಮ್ಮ ಜಮೀನುಗಳಿಂದಲೇ ಅವರನ್ನು ಹೊರ ಹಾಕಲಾಗಿದೆ; ಎಲ್ಲರೂ ಬಳಸುವ ದಾರಿಗಳನ್ನು ದಲಿತ ವರ್ಗದವರು ಬಳಸದಂತೆ ತಡೆಯೊಡ್ಡುವುದು ಮತ್ತು ಹಳ್ಳಿಯ ವ್ಯಾಪಾರಿ ಜೀವನಾವಶ್ಯಕ ವಸ್ತುಗಳನ್ನು ಅವರಿಗೆ ಮಾರದಂತೆ ತಡೆಯೊಡ್ಡುವುದು ಸೇರಿದಂತೆ ತುಂಬ ವ್ಯಾಪಕವಾದ ಪ್ರಮಾಣದಲ್ಲಿ ಅನೇಕ ವೇಳೆ ಬಹಿಷ್ಕಾರದ ಕ್ರಮಗಳನ್ನು ಯೋಜಿಸಲಾಗುತ್ತದೆ. ಸಾಕ್ಷ್ಯದ ಪ್ರಕಾರ, ದಲಿತ ವರ್ಗಗಳಿಗೆ ವಿರುದ್ಧವಾಗಿ ಸಾಮಾಜಿಕ ಬಹಿಷ್ಕಾರವನ್ನು ಘೋಷಿಸುವುದಕ್ಕೆ ಅನೇಕ ವೇಳೆ ಸಣ್ಣಪುಟ್ಟ ಕಾರಣಗಳೇ ಸಾಕಾಗುತ್ತವೆ. ಎಲ್ಲರೂ ಬಳಸುವ ಬಾವಿಯನ್ನು ಬಳಸುವ ತಮ್ಮ ಹಕ್ಕನ್ನು ದಲಿತ ವರ್ಗದವರು ಚಲಾಯಿಸಿದ ಕಾರಣದಿಂದಾಗಿ ಪದೇಪದೇ ಇಂಥ ಬಹಿಷ್ಕಾರಗಳನ್ನು ವಿಧಿಸಲಾಗುತ್ತದೆ; ದಲಿತ ವರ್ಗಕ್ಕೆ ಸೇರಿದ ವ್ಯಕ್ತಿ ಜನಿವಾರವನ್ನು ಹಾಕಿಕೊಂಡನೆಂಬ, ಒಂದು ಚೂರುಪಾರು ಜಮೀನನ್ನು ಕೊಂಡುಕೊಂಡನೆಂಬ, ಒಳ್ಳೆಯ ಬಟ್ಟೆ ಅಥವಾ ಒಡವೆಗಳನ್ನು ಹಾಕಿಕೊಂಡನೆಂಬ ಅಥವಾ ಸಾರ್ವಜನಿಕ ಬೀದಿಯ ಮೂಲಕ ಕುದುರೆಯ ಮೇಲೆ ಗಂಡಿನ ಮೆರವಣಿಗೆಯನ್ನು ಕೊಂಡೊಯ್ದನೆಂಬ ಕಾರಣಗಳಿಗಾಗಿ ಕಠಿಣತರವಾದಂಥ ಬಹಿಷ್ಕಾರವನ್ನು ಘೋಷಿಸಿರುವಂಥ ಸಂದರ್ಭಗಳೂ ವಿರಳವಾಗಿಯೇನೂ ಇಲ್ಲ."

ಇದು ೧೯೨೮ರಲ್ಲಿ ಇದ್ದ ಪರಿಸ್ಥಿತಿ. ನಾನು ಕೇಳಬಯಸುವ ಪ್ರಶ್ನೆ ಇದು: ೧೯೨೮ರಿಂದ ಈಚೆಗೆ ಏನಾದರೂ ಬದಲಾವಣೆ ಆಗಿದೆಯೆ? ಮಾನ್ಯರೆ, ನನಗೆ ದೊರೆತಿರುವ ಸಾಕ್ಷ್ಯಾಧಾರಗಳ ಪ್ರಕಾರ, ಪರಿಸ್ಥಿತಿ ಬದಲಾಗದೆ ಇರುವುದು ಮಾತ್ರವಲ್ಲ, ಇನ್ನಷ್ಟು ಹೀನಾಯಕರವಾಗಿ ಪರಿಣಮಿಸಿದೆ ಎಂದು ಹೇಳಲು ನಾನು ಹಿಂದೆಮುಂದೆ ನೋಡಬೇಕಾಗಿಯೇನೂ ಇಲ್ಲ. ನನ್ನ ವಾದವನ್ನು ಸಮರ್ಥಿಸುವ ಸಲುವಾಗಿ ನಾನು ಕೆಲವು ನಿದರ್ಶನಗಳನ್ನು ಕೊಡಬಯಸುತ್ತೇನೆ.

ನಾನು ಉಲ್ಲೇಖಿಸುವ ಮೊದಲ ನಿದರ್ಶನ ವಿಧಾನ ಪರಿಷತ್ತಿಗೆ ೧೯೩೨ರಲ್ಲಿ ನಡೆದ ಚುನಾವಣೆಗೆ ಸಂಬಂಧಿಸಿದ್ದು, ನನ್ನ ಸನ್ಮಾನ್ಯ ಸ್ನೇಹಿತರಾದ ಪ್ರಧಾನಮಂತ್ರಿಗಳು ನೆನಪು ಮಾಡಿಕೊಳ್ಳಬಹುದಾಗಿರುವಂತೆ, ೧೯೩೨ರಲ್ಲಿ ಪಕ್ಷ ಶಾಸಕಾಂಗವನ್ನು ಬಹಿಷ್ಕರಿಸಿತು. ಅವರು ಚುನಾವಣೆಯಲ್ಲಿ ಸೆಣಸಲು ನಿರಾಕರಿಸಿದರು. ಮಾನ್ಯರೆ, ಕಾಂಗ್ರೆಸ್ ಪಕ್ಷ ೧೯೩೨ರಲ್ಲಿ ಹೀಗೆ ಮಾಡಿತು; ನಾನು ನನ್ನ ನೆನಪಿನಿಂದ ಹೇಳುತ್ತಿದ್ದೇನೆ. ವರ್ಷ ತಪ್ಪಾಗಿದ್ದರೆ, ನಾನು ತಿದ್ದಿಕೊಳ್ಳಲು ಸಿದ್ಧನಾಗಿದ್ದೇನೆ.

ಸನ್ಮಾನ್ಯ ಸದಸ್ಯರೊಬ್ಬರು: ೧೯೩೦ರಲ್ಲಿ.

ಡಾ. ಬಿ. ಆರ್. ಅಂಬೇಡ್ಕರ್: ೧೯೩೦. ಜನರನ್ನು ಬೆದರಿಸಲು, ಚುನಾವಣೆಗಳಲ್ಲಿ ಭಾಗವಹಿಸದಂತೆ ಜನರ ಮನಸ್ಸನ್ನು ಒಲಿಸಲು ಕಾಂಗ್ರೆಸ್ ಪಕ್ಷ ೧೯೩೦ರಲ್ಲಿ ವಿವಿಧ ತಂತ್ರಗಳನ್ನು ಅಳವಡಿಸಿಕೊಂಡಿತು. ಮಾನ್ಯರೆ, ನಾಗರಿಕ ಅಸಹಕಾರ ಚಳವಳಿಯನ್ನು ಆರಂಭಿಸಿದ್ದೂ ಆ ವರ್ಷದಲ್ಲಿಯೇ ಎಂಬುದನ್ನು "ಈ ಸದನಕ್ಕೆ ನಾನು ನೆನಪಿಸಿಕೊಡಬಯಸುತ್ತೇನೆ. ನಾನು ತಪ್ಪಾಗಿ ತಿಳಿಯದೆ ಇದ್ದರೆ, ಕಾಂಗ್ರೆಸ್ಸಿಗರ ಪ್ರಕಾರ ಅದೊಂದು ಮಹತ್ವಪೂರ್ಣವಾದ ವರ್ಷ; ಏಕೆಂದರೆ ದಂಡಿ ಸತ್ಯಾಗ್ರಹ ನಡೆದದ್ದು

ಆ ವರ್ಷ ದಲ್ಲಿಯೇ. ಮಾನ್ಯರೆ, ಶಾಸಕಾಂಗವನ್ನು ಪ್ರವೇಶಿಸದಂತೆ ಜನರನ್ನು ತಡೆಯುವ ಸಲುವಾಗಿ ೧೯೩೦ರಲ್ಲಿ ಕಾಂಗ್ರೆಸ್ಸಿಗರು ಕೂಗಿದ ಘೋಷಣೆಗಳಾದರೂ ಯಾವುವು? ನನಗೆ ನೆನಪಿರುವಂತೆ, ಈ ಜನ ಕೂಗಿದ ಘೋಷಣೆಗಳಲ್ಲಿ ಒಂದು ಹೀಗಿತ್ತು: "ಕೌನ್ಸಿಲ್ ಮೇಂ ಜಾನಾ ಹರಾಮ್ ಹೈ" (ಪರಿಷತ್ತಿಗೆ ಚುನಾಯಿತ ರಾಗಿ ಹೋಗುವುದು ಅಧರ್ಮದ ಕಾರ್ಯ). ಅಷ್ಟು ಮಾತ್ರವೇ ಅಲ್ಲ, ಘೋಷಣೆಯ ಮುಂದುವರಿದ ಭಾಗ ಹೀಗಿತ್ತು: "ಕೌನ್ಸಿಲ್ ಮೇಂ ಕೌನ್ ಜಾಯೇಗಾ? ಢೇಡ್ ಜಾಯೇಗಾ! ಚಮಾರ್ ಜಾಯೇಗಾ!" (ಪರಿಷತ್ತಿಗೆ ಹೋಗುವವರು ಎಂಥವರು? ಢೇಡ್ ಹೋಗುತ್ತಾನೆ! ಚಮ್ಮಾರ ಹೋಗುತ್ತಾನೆ) ಕಾಂಗ್ರೆಸ್ಸಿಗರು ಉಪಯೋಗಿಸಿದ ಘೋಷಣೆಗಳು ಇವು (ಅಡ್ಡಿ). ನನ್ನ ಸನ್ಮಾನ್ಯ ಗೆಳೆಯರೆ, ಸಾಕ್ಷ್ಯ ಬೇಕಾಗಿದ್ದರೆ, ಆಕ್ಷೇಪಕ್ಕೆಡೆಗೊಡದಿರುವಂಥ ಸಾಕ್ಷ್ಯವನ್ನೇ ನಾನು ಮುಂದಿರಿಸುತ್ತೇನೆ. ಆ ಘೋಷಣೆ ಅದೆಷ್ಟು ಅಪಮಾನಕಾರಿಯಾಗಿತ್ತೆಂದರೆ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಗೆ ಕೂಡ ಇದರ ಬಗ್ಗೆ ಸಂಪಾದಕೀಯವನ್ನು ಬರೆಯುವುದು ಅಗತ್ಯವೆಂದು ತೋರಿತು ಎಂಬುದನ್ನು ನಾನು ಈ ಸದನದಲ್ಲಿ ಹೇಳಬಯಸುತ್ತೇನೆ. ಮಾನ್ಯರೆ, ನಾನು ನಿದರ್ಶಿಸುತ್ತಿದ್ದ ಅಂಶ ಇದು. ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಹಿಂದೂಗಳು ಕೂಡ ಜಾತಿಯ ವಿಚಾರವನ್ನು ಮರೆತುಬಿಟ್ಟಿದ್ದೇವೆ ಎಂದು ಹೇಳುವ, ಧರ್ಮದ ವಿಚಾರವನ್ನು ಮರೆತುಬಿಟ್ಟಿದ್ದೇನೆ ಎಂದು ಹೇಳುವ, ಅಸ್ಪೃಶ್ಯತೆಯ ವಿಚಾರವನ್ನು ಮರೆತುಬಿಟ್ಟಿದ್ದೇವೆ ಎಂದು ಹೇಳುವ, ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಹಿಂದೂಗಳು ಕೂಡ– ಆ ಘೋಷಣೆಯನ್ನು ಕೂಗಿದರು. ಮಾನ್ಯರೆ, ನಾನಿಲ್ಲಿ ಕಾಣುತ್ತಿರುವ, ನಾಡಿನ ಆಯ್ದ ವ್ಯಕ್ತಿಗಳು, ಅತ್ಯಂತ ಪ್ರಾಜ್ಞರಾಗಿರುವಂಥವರು. ಹಿಂದೂ ಸಮುದಾಯದ ಅತ್ಯಂತ ಪ್ರಬುದ್ಧ ಭಾಗವಾಗಿರುವಂಥವರು ಅಷ್ಟೊಂದು ಅಸಹಾಯಕವಾಗಿರುವಂಥ, ಅಷ್ಟೊಂದು ಪದದಲಿತವಾಗಿರುವಂಥ ಸಮುದಾಯವೊಂದರ ವಿರುದ್ಧವಾಗಿ ಈ ಬಗೆಯ ನಿಂದ್ಯವಾಗಿರುವ ಮಾತುಗಳನ್ನು ಬಳಸಬಹುದಾದರೆ, ನನ್ನ ಸನ್ಮಾನ್ಯ ಸ್ನೇಹಿತರಾದ ಪ್ರಧಾನ ಮಂತ್ರಿಗಳು ಅಂಗೀಕರಿಸುವಂಥ ಕಾನೂನಿಗಿಂತಲೂ ಮನುವಿನ ಧರ್ಮಶಾಸ್ತ್ರವೇ ಹಿರಿದಾದುದೆಂದು ಭಾವಿಸುವ ಸಂಪ್ರದಾಯಶೀಲರಿಂದ ನೀವು ಏನನ್ನು ತಾನೆ ನಿರೀಕ್ಷಿಸಬಹುದು?

ಮಾನ್ಯರೆ, ಇನ್ನೊಂದು ಪ್ರಸಂಗವನ್ನು ತೆಗೆದುಕೊಳ್ಳೋಣ. ನಾನು ಬಹುಮಟ್ಟಿಗೆ ಗುಜರಾತಿ ಪ್ರಕರಣ ಗಳನ್ನೇ ತೆಗೆದುಕೊಳ್ಳುತ್ತಿದ್ದೇನೆ. ಇದಕ್ಕೆ ಕಾರಣವೇನೆಂದರೆ ಅದು ನಮ್ಮ ಸಂಸ್ಥಾನದ ಅತ್ಯಂತ ಪ್ರಬುದ್ಧ ಭಾಗವಾಗಿದೆ. ನಾನು ಮಾತನಾಡಲಿರುವ ಪ್ರಸಂಗವು ನಡೆದಿರುವುದು ಅಹಮದಾಬಾದ್ ಜಿಲ್ಲೆಯ ಢೋಲ್ಕಾ ತಾಲ್ಲೂಕಿನ ಕವಿತಾ ಎಂಬ ಗ್ರಾಮದಲ್ಲಿ. ನಾವೆಲ್ಲ ಅದರ ಕಡೆ ವಿಶೇಷ ಗಮನ ಹರಿಸಬೇಕಾಗಿದೆ. ಈ ಪ್ರಸಂಗದಲ್ಲಿನ ವಾಸ್ತವಾಂಶಗಳು ಇವು; ಒಂದು ದಿವಸ ಹಳ್ಳಿಯ ಬ್ರಾಹ್ಮಣನೊಬ್ಬ ಕವಿತಾ ಗ್ರಾಮದ ನಿವಾಸಿಗಳಾಗಿರುವ ಅಸ್ಪೃಶ್ಯ ಸಮುದಾಯದ ಕೆಲವು ಸದಸ್ಯರ ಮೇಲೆ ಕೈಮಾಡಿದ. ಈ ಸಂಗತಿಗಳನ್ನು "ಹರಿಜನ" ಪತ್ರಿಕೆಯಿಂದ ತಿಳಿದುಕೊಳ್ಳಲಾಗಿದೆ ಎಂಬುದನ್ನು ನನ್ನ ಸನ್ಮಾನ್ಯ ಮಿತ್ರರು ದಯವಿಟ್ಟು ಗಮನಿಸಬೇಕು.

ಸನ್ಮಾನ್ಯ ಶ್ರೀ ಬಿ. ಜಿ. ಖೇರ್: ನಾನು ಆ ಊರಿಗೆ ಹೋಗಿದ್ದೆ. ಆ ಘಟನೆ ನನಗೆ ಗೊತ್ತಿದೆ. ಸನ್ಮಾನ್ಯ ಸದಸ್ಯರು ಅದನ್ನೇನೂ ಉದ್ಧರಿಸಬೇಕಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ವಾಸ್ತವಾಂಶಗಳು ಇವು. ಆ ಗ್ರಾಮದಲ್ಲಿನ ಅಸ್ಪೃಶ್ಯ ಸಮುದಾಯದ ಕೆಲವು ಸದಸ್ಯರ ಮೇಲೆ ಬ್ರಾಹ್ಮಣನೊಬ್ಬ ಕೈಮಾಡಿದ. ಬ್ರಾಹ್ಮಣನೊಬ್ಬನನ್ನು ಅಭಿಯೋಜಿಸಲು ಹಾಗೂ ದಂಡಿಸಲು ಅಸ್ಪೃಶ್ಯರಿಗೆ ಸಾಧ್ಯವಾಗಬಹುದೆಂಬ ತಮ್ಮ ಅವಿವೇಕದ ಆಲೋಚನೆಯಲ್ಲಿ– ನಾನು ಹಾಗೆಂದು

ಹೇಳಬಹುದಾದರೆ– ಅವರು ಜಿಲ್ಲೆಯ ಪೊಲೀಸ್ ಅಧಿಕಾರಿಗಳ ಬಳಿಗೆ ಹೋಗಿ ಆಕ್ರಮಣ ಕಾರಿಯ ವಿರುದ್ಧವಾಗಿ ದೂರು ಕೊಡಬೇಕೆಂದು ತೀರ್ಮಾನಿಸಿದ್ದರು. ಈ ಮಧ್ಯೆ ನಡೆದ ಘಟನೆ ಇದು. ಆ ದಿನ ಅಸ್ಪೃಶ್ಯರ ನಿವಾಸಗಳಿಂದ ಗಂಡಸರೆಲ್ಲರೂ ಹೊರಗೆ ಹೋಗಿದ್ದ ಅವಧಿಯಲ್ಲಿ ಆ ಹಳ್ಳಿಯ ಸವರ್ಣೀಯ ಹಿಂದೂಗಳು ಅಸ್ಪೃಶ್ಯರ ನಿವಾಸಗಳ ಮೇಲೆ ಆಕ್ರಮಣವನ್ನೆಸಗಿದರು. ಅವರ ಮನೆಗಳನ್ನು ನಾಶ ಮಾಡಲಾಯಿತು; ಅವರ ಮನೆಯ ಮೇಲ್ಛಾವಣಿಗಳನ್ನು ಕಿತ್ತೆಸೆಯಲಾಯಿತು. ಅವರ ಪೆಟ್ಟಿಗೆಗಳನ್ನು ತಿನ್ನಲು ಗಂಡಸರು ಯಾರೂ ಇಲ್ಲದಿದ್ದುದನ್ನು ಕಂಡು, ಅವರೆಲ್ಲ ರಾತ್ರಿಯ ಹೊತ್ತಿಗೆ ಹಿಂದಿರುಗಬಹುದೆಂಬ ಆಲೋಚನೆಯಲ್ಲಿ, ಆ ವ್ಯಕ್ತಿಗಳೆಲ್ಲ ಸಂಜೆಯ ತನಕ ಅವರಿಗಾಗಿ ಕಾದು ಕುಳಿತಿದ್ದರು. ಅವರ ಯೋಜನೆಯ ಸುಳಿವನ್ನು ಕಂಡುಕೊಂಡ ಕೆಲವು ಮಹಿಳೆಯರು ಹಳ್ಳಿಯಿಂದ ಹೊರನುಸುಳಿ ಬಂದು, ಆ ರಾತ್ರಿಯೇ ನಡುಹಾದಿಯಲ್ಲಿ ಆ ಗಂಡಸರನ್ನು ಭೇಟಿ ಮಾಡಿ, ಅವರ ಪ್ರಾಣಕ್ಕೆ ರಕ್ಷಣೆಯಿಲ್ಲದೆ ಇರುವುದರಿಂದ ಹಳ್ಳಿಗೆ ಹಿಂದಿರುಗುವುದು ಅತ್ಯಂತ ಅಪಾಯಕಾರಿಯೆಂಬ ಸಂಗತಿಯನ್ನು ತಿಳಿಸಿದರು. ಆ ಜನರು ಆ ರಾತ್ರಿಯನ್ನು ಊರಿನ ಹೊರಗೇ ಕಳೆದರು; ಅವರು ಹಳ್ಳಿಗೆ ಹಿಂದಿರುಗಲಿಲ್ಲ. ಮೂರನೆಯ ದಿವಸ ಯಾರಿಗೂ ಗೊತ್ತಾಗದಂತೆ, ಚದುರಿದ ರೀತಿಯಲ್ಲಿ ಒಬ್ಬೊಬ್ಬರಾಗಿ ಅವರು ಹಳ್ಳಿಗೆ ಹಿಂದಿರುಗಿದರು.

ತಮ್ಮ ಗುಡಿಸಲುಗಳು ನಾಶವಾಗಿದ್ದುದನ್ನು ಅವರು ಕಂಡರು. ಆ ಬಳಿಕ ತಮ್ಮ ವಿರುದ್ಧ ಆ ಹಳ್ಳಿ ಬಹಿಷ್ಕಾರವನ್ನು ಘೋಷಿಸಿದೆ ಎಂಬುದೂ ಅವರಿಗೆ ತಿಳಿದುಬಂದಿತು. ಹಳ್ಳಿಯ ವ್ಯಾಪಾರಿಯಿಂದ ಏನನ್ನು ಕೊಳ್ಳಲೂ ಅವರಿಗೆ ಅವಕಾಶ ಕೊಡಲಿಲ್ಲ. ಅಷ್ಟೇ ಅಲ್ಲ, ಆ ಹಳ್ಳಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಡಬ್ಬಗಟ್ಟಲೆ ಸೀಮೆಎಣ್ಣೆಯನ್ನು ಖರೀದಿ ಮಾಡಿ, ಆ ಜನರಿಗೆ ನೀರಿನ ಆಸರೆಯಾಗಿದ್ದಂಥ ಹೊಂಡಕ್ಕೆ ಆ ಸೀಮೆಎಣ್ಣೆಯನ್ನು ಸುರಿದರು. ಆಗ ಅವರು ಏನಾದರೂ ಮಾಡಲೇಬೇಕೆಂದು ಯೋಚಿಸಿದರು. ಸರಿಯಾದ ಸಲಹೆ–ಸೂಚನೆಗಳು ದೊರೆಯದೆ ಇದ್ದ ಅವರು, ಕಾನೂನನ್ನು ಆಶ್ರಯಿಸಬೇಕೆಂದು ಆಲೋಚಿಸಿದರು. ಅವರು ಮತ್ತೆ ಪೊಲೀಸರಲ್ಲಿಗೆ ಹೋಗಿ ದೂರು ಕೊಟ್ಟರು. ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದ ಅವರ ಕೆಲವು ಸ್ನೇಹಿತರು ಮಧ್ಯಪ್ರವೇಶ ಮಾಡಿದರು. ಅವರು ಮಾಡಿದ್ದಾದರೂ ಏನು? ತಮ್ಮ ಹಕ್ಕುಗಳನ್ನು ಸಮರ್ಥಿಸಿಕೊಳ್ಳಲು ಆ ಬಡ ಅಸ್ಪೃಶ್ಯರಿಗೆ ಅವರು ನೆರವಾದರೆ? ಇಲ್ಲ. ತಮ್ಮ ದೂರನ್ನು ಹಿಂದೆಗೆದುಕೊಳ್ಳುವಂತೆ ಹಾಗೂ ಸದ್ದುಗದ್ದಲವಿಲ್ಲದೆ ಶರಣಾಗುವಂತೆ ಅವರನ್ನು ಅವರು ಒತ್ತಾಯಿಸಿದರು. ಇಡೀ ವ್ಯವಹಾರದ ದುಃಖದಾಯಕವಾದ ಭಾಗ ಇಲ್ಲಿದೆ. ಕವಿತಾ ಗ್ರಾಮದ ಈ ಅಸ್ಪೃಶ್ಯರು ಮಾಡಿದ್ದ ತಪ್ಪಾದರೂ ಏನು? ಅವರನ್ನು ಹೀಗೆ ಹಿಂಸಿಸಿದ್ದಾದರೂ ಏಕೆ? ಬೇರಾವ ಕಾರಣಕ್ಕೂ ಅಲ್ಲ. ಸರ್ಕಾರದ ಆದೇಶದಂತೆ ತಮ್ಮ ಮಕ್ಕಳಿಗೆ ಪ್ರವೇಶಾವಕಾಶವನ್ನು ಕೊಡಬೇಕಾಗಿದ್ದ ಶಾಲೆಗೆ ತಮ್ಮ ನಾಲ್ಕು ಮಕ್ಕಳನ್ನು ಕಳಿಸುವುದಾಗಿ ಆ ಕವಿತಾ ಗ್ರಾಮದ ಅಸ್ಪೃಶ್ಯರು ಹಟ ಹಿಡಿದದ್ದೆ ಇದಕ್ಕೆ ಕಾರಣ.

ನಾನು ಪ್ರಸ್ತಾವಿಸಲಿರುವ ಮುಂದಿನ ಪ್ರಕರಣ ಜಲಗಾರರ ಹುಡುಗನೊಬ್ಬನಿಗೆ ಸಂಬಂಧಿಸಿದ್ದು. ತಲಾಟಿಯಾಗಿ ನೇಮಕಗೊಂಡಿದ್ದೇ ಅವನ ದುರ್ಭಾಗ್ಯವಾಗಿತ್ತು. ಪರ್ಮಾರ್ ಕಾಳಿದಾಸ್ ಶಿವರಾಮ್ ಎಂಬುದು ಅವನ ಹೆಸರು. ಶ್ರೀ ಇಂದೂಲಾಲ್ ಯಾಜ್ಞಿಕ್ ಅವರ ಅಧ್ಯಕ್ಷತೆಯಲ್ಲಿ ಮುಂಬಯಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪರ್ಮಾರ್ ಕಾಳಿದಾಸ್ ಶಿವರಾಮ್ ಏನು ಹೇಳಿದ ಎಂಬುದನ್ನು ನಾನು ಓದಿ ಹೇಳಬಯಸುತ್ತೇನೆ. ಆ ಸಭೆಯಲ್ಲಿ ನಾನೂ ಇದ್ದೆ. ಅವನ ಕಥೆಯನ್ನು ಕೇಳಿ ನನ್ನ

ಹೃದಯ ಮಮ್ಮಲ ಮರುಗಿತು. ಇಡೀ ಪ್ರಕರಣವನ್ನು ಲಿಖಿತ ರೂಪದಲ್ಲಿ ಬರೆದುಕೊಡುವಂತೆ ನಾನು ಅವನಿಗೆ ಹೇಳಿದೆ. ಅವನು ನನಗೆ ಬರೆದುಕೊಟ್ಟಿದ್ದನ್ನು ನಾನಿಲ್ಲಿ ಭಾಷಾಂತರಿಸಿದ್ದೇನೆ ಅಷ್ಟೆ. ಆ ಕಥೆ ಹೀಗಿದೆ:

"ನಾನು ೧೯೩೩ರಲ್ಲಿ ಅಂತಿಮ ವರ್ನಾಕ್ಯುಲರ್ ಪರೀಕ್ಷೆಯಲ್ಲಿ ಉತ್ತೀರ್ಣನಾದೆ. ನಾನು ೪ನೆಯ ತರಗತಿಯವರೆಗೆ ಇಂಗ್ಲಿಷ್ ಭಾಷೆಯನ್ನು ಅಭ್ಯಾಸ ಮಾಡಿದ್ದೇನೆ. ಅಧ್ಯಾಪಕನ ಕೆಲಸಕ್ಕಾಗಿ ಮುಂಬಯಿ ಪುರಸಭೆಯ ಶಾಲಾ ಸಮಿತಿಗೆ ಅರ್ಜಿಯನ್ನು ಸಲ್ಲಿಸಿದೆ. ಹುದ್ದೆ ಇಲ್ಲದೆ ಇದ್ದುದರಿಂದ ಆ ಪ್ರಯತ್ನದಲ್ಲಿ ನಾನು ವಿಫಲನಾದೆ. ಆ ಬಳಿಕ ತಲಾಟಿಯ ಹುದ್ದೆಗಾಗಿ ಅಹಮದಾಬಾದಿನ ಹಿಂದುಳಿದ ವರ್ಗಗಳ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿದೆ. ಈ ಬಾರಿ ನಾನು ಯಶಸ್ವಿಯಾದೆ. ಕೈರಾ ಜಿಲ್ಲೆಯ ಬೋರ್ಸಾದ್ ತಾಲ್ಲೂಕಿನ ಮಾಮ್ಲತ್‌ದಾರ್ ಅವರ ಕಚೇರಿಲ್ಲಿ ೧೯ ಫೆಬ್ರುವರಿ ೧೯೩೬ರಲ್ಲಿ ನನ್ನನ್ನು ತಲಾಟಿಯಾಗಿ ನೇಮಿಸಲಾಯಿತು.

"ನನ್ನ ಕುಟುಂಬದವರು ಮೂಲತಃ ಗುಜರಾತಿನಿಂದಲೇ ಬಂದವರಾಗಿದ್ದರೂ, ಹಿಂದೆಂದೂ ನಾನು ಗುಜರಾತ್‌ನಲ್ಲಿ ವಾಸಮಾಡಿರಲಿಲ್ಲ. ಇದೇ ಅಲ್ಲಿಗೆ ಹೋಗುವ ಮೊದಲ ಸಂದರ್ಭವಾಗಿತ್ತು. ಅಂತೆಯೇ, ಸರ್ಕಾರಿ ಕಚೇರಿಗಳಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿದೆ ಎಂಬುದೂ ನನಗೆ ಗೊತ್ತಿರಲಿಲ್ಲ. ಮೇಲಾಗಿ ನಾನು ಹರಿಜನ ಸಮುದಾಯಕ್ಕೆ ಸೇರಿದವನೆಂಬುದನ್ನು ನನ್ನ ಅರ್ಜಿಯಲ್ಲಿಯೇ ಉಲ್ಲೇಖಿಸಲಾಗಿತ್ತು. ಹೀಗಾಗಿ ನಾನು ಯಾರೆಂಬುದು ನಾನು ಅಲ್ಲಿಗೆ ಹೋಗುವ ಮೊದಲೇ ಕಚೇರಿಯಲ್ಲಿನ ನನ್ನ ಸಹೋದ್ಯೋಗಿಗಳಿಗೆ ಗೊತ್ತಿರುತ್ತದೆಂದು ನಾನು ನಿರೀಕ್ಷಿಸಿದ್ದೆ. ಆದ್ದರಿಂದ ತಲಾಟಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಳ್ಳಲು ನಾನು ಖುದ್ದಾಗಿ ಹಾಜರಾದಾಗ, ಮಾಮ್ಲತ್‌ದಾರ್ ಕಚೇರಿಯಲ್ಲಿ ಕರಣಿಕನೊಬ್ಬನ ವರ್ತನೆ ನನಗೆ ಆಶ್ಚರ್ಯವನ್ನುಂಟುಮಾಡಿತು.

"ಆ ಕರಣಿಕ ತಿರಸ್ಕಾರದಿಂದ ನನ್ನನ್ನು ಪ್ರಶ್ನಿಸಿದ: "ಯಾರು ನೀನು?" ನಾನೆಂದೆ: "ಸ್ವಾಮಿ, ನಾನೊಬ್ಬ ಹರಿಜನ." ಅವನೆಂದ: "ಹೋಗು ಇಲ್ಲಿಂದ. ದೂರದಲ್ಲಿ ನಿಂತುಕೊ. ನನಗೆ ಇಷ್ಟು ಹತ್ತಿರವಾಗಿ ಬಂದು ನಿಲ್ಲಲು ನಿನಗೆ ಅದೆಷ್ಟು ಧೈರ್ಯ? ನೀನು ಕಛೇರಿಯಲ್ಲಿದ್ದೀಯೆ. ಹೊರಗೆಲ್ಲಾದರೂ ಆಗಿದ್ದರೆ, ನಿನ್ನನ್ನು ಆರು ಸಲ ಒದ್ದು ಹಾಕುತ್ತಿದ್ದೆ. ಇಲ್ಲಿಗೆ ಸೇವೆ ಸಲ್ಲಿಸಲು ಬರಬೇಕಾದರೆ ಅದೆಂಥ ದಾರ್ಷ್ಟ್ಯ ನಿನಗೆ?" ಆ ಬಳಿಕ, ನನ್ನ ಪ್ರಮಾಣ ಪತ್ರಗಳನ್ನು ಮತ್ತು ತಲಾಟಿಯಾಗಿ ನನ್ನ ನೇಮಕಾತಿಯ ಆದೇಶವನ್ನು ನೆಲದ ಮೇಲೆ ಹಾಕುವಂತೆ ಹೇಳಿದ. ಆಮೇಲೆ ಅವನು ಅವುಗಳನ್ನೆತ್ತಿಕೊಂಡ.

"ಬೋರ್ಸಾದ್‌ನಲ್ಲಿನ ಮಾಮ್ಲತ್‌ದಾರ್ ಅವರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಕುಡಿಯುವ ನೀರಿಗಾಗಿ ನಾನು ತುಂಬ ಪರದಾಡಬೇಕಾಗಿ ಬಂತು. ಕಛೇರಿಯ ವರಾಂಡಾದಲ್ಲಿ ಕುಡಿಯುವ ನೀರಿನ ಡಬ್ಬಾಗಳನ್ನು ಇರಿಸಲಾಗಿತ್ತು. ಆ ನೀರಿನ ಡಬ್ಬಾಗಳ ಮೇಲ್ವಿಚಾರಣೆಗಾಗಿ ಒಬ್ಬ ನೀರು ಸರಬರಾಜುಗಾರನಿದ್ದ. ಕರಣಿಕರಿಗೆ ಬೇಕೆನಿಸಿದಾಗಲೆಲ್ಲ ನೀರನ್ನು ತಂದು ಹಾಕುವುದು ಅವನ ಕರ್ತವ್ಯವಾಗಿತ್ತು. ನೀರು ಸರಬರಾಜುಗಾರ ಇಲ್ಲದೆ ಇದ್ದಾಗ, ಡಬ್ಬದಿಂದ ನೀರನ್ನು ಬಗ್ಗಿಸಿಕೊಂಡು ಅವರು ಕುಡಿಯಬಹುದಾಗಿತ್ತು. ನನಗೆ ಇದು ಸಾಧ್ಯವೇ ಇರಲಿಲ್ಲ. ನಾನು ಆ ಡಬ್ಬಗಳನ್ನು ಮುಟ್ಟುವಂತಿರಲಿಲ್ಲ. ಏಕೆಂದರೆ, ನಾನು ಮುಟ್ಟಿದರೆ ನೀರಿಗೆ ಮೈಲಿಗೆಯಾಗಿಬಿಡುತ್ತಿತ್ತು. ಹೀಗಾಗಿ, ನಾನು ನೀರು ಸರಬರಾಜುಗಾರನ ಕೃಪೆಗಾಗಿ ಕಾದಿರಬೇಕಾಗುತ್ತಿತ್ತು. ನನ್ನ ಉಪಯೋಗಕ್ಕೆಂದು

ತುಕ್ಕು ಹಿಡಿದ ಲೋಟವೊಂದನ್ನಿರಿಸಲಾಗಿತ್ತು. ನನ್ನನ್ನು ಬಿಟ್ಟು ಬೇರೆ ಯಾರೂ ಅದನ್ನು ಮುಟ್ಟುವಂತೆಯೂ ಇರಲಿಲ್ಲ, ತೊಳೆಯುವಂತೆಯೂ ಇರಲಿಲ್ಲ. ಆ ನೀರು ಸರಬರಾಜು ಮಾಡುವ ಆಲೋಚನೆ ಆ ನೀರು ಸರಬರಾಜುಗಾರನಿಗೆ ಇಷ್ಟವಾಗುತ್ತಿರಲಿಲ್ಲ. ನಾನು ನೀರಿಗಾಗಿ ಬರುತ್ತಿದ್ದೇನೆಂಬುದನ್ನು ಕಂಡೊಡನೆಯೇ ಅವನು ಅಲ್ಲಿಂದ ತಪ್ಪಿಸಿಕೊಂಡು ಹೋಗುತ್ತಿದ್ದ. ಇದರ ಪರಿಣಾಮವಾಗಿ ನಾನು ನೀರಿಲ್ಲದೆಯೇ ಇರಬೇಕಾಗುತ್ತಿತ್ತು. ನನಗೆ ಕುಡಿಯಲು ಏನೂ ಇರದಿದ್ದಂಥ ದಿನಗಳ ಸಂಖ್ಯೆಯೂ ಕಡಿಮೆಯಾಗಿರುತ್ತಿರಲಿಲ್ಲ. ನಾನು ಗುಜರಾತ್‌ನಲ್ಲಿ ವಾಸ ಮಾಡಿರಲಿಲ್ಲ.

"ನನ್ನ ನಿವಾಸದ ಬಗ್ಗೆಯೂ ನನಗೆ ಇಂಥವೇ ಕಷ್ಟಗಳಿದ್ದವು. ಬೋರ್ಸಾದ್‌ನಲ್ಲಿ ನಾನು ಅಪರಿಚಿತನಾಗಿದ್ದೆ. ಸವರ್ಣೀಯ ಹಿಂದೂಗಳು ಯಾರೂ ನನಗೆ ಮನೆಯನ್ನು ಬಾಡಿಗೆಗೆ ಕೊಡಲು ಸಿದ್ಧರಿರಲಿಲ್ಲ. ಕರಣಿಕನಂತೆ ಬಾಳುವ ನನ್ನ ಪ್ರಯತ್ನ ಇಷ್ಟವಾಗದೆ ಇದ್ದಂಥ ಹಿಂದೂಗಳನ್ನು ಅಸಂತುಷ್ಟಗೊಳಿಸಬೇಕಾಗುತ್ತದಲ್ಲ ಎಂಬ ಭಯದಿಂದಾಗಿ, ಬೋರ್ಸಾದ್‌ನಲ್ಲಿನ ಅಸ್ಪೃಶ್ಯರೂ ನನಗೆ ನಿವಾಸ–ಸೌಕರ್ಯವನ್ನು ಒದಗಿಸಲು ಸಿದ್ಧರಾಗಿರಲಿಲ್ಲ. ಊಟ–ತಿಂಡಿಗಳಿಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಕಷ್ಟಗಳು ನನಗೆ ಎದುರಾಗಿದ್ದವು. ನಾನು ಊಟ–ತಿಂಡಿಗಳನ್ನು ಪಡೆದುಕೊಳ್ಳಬಹುದಾಗಿದ್ದಂಥ ಸ್ಥಳವಾಗಲೀ ವ್ಯಕ್ತಿಯಾಗಲೀ ಇರಲಿಲ್ಲ. ಬೆಳಿಗ್ಗೆ ಮತ್ತು ಸಂಜೆ "ಭಜಿಯಾ"ಗಳನ್ನು (ಒಂದು ಬಗೆಯ ಕಲಸನ್ನ) ಕೊಂಡು, ಊರಿನ ಹೊರಗಿನ ಯಾವುದಾದರೂ ಏಕಾಂತದಲ್ಲಿ ಅದನ್ನು ತಿಂದು, ಮಾಮ್ಲತ್‌ದಾರ್ ಅವರ ಕಛೇರಿಯ ವರಾಂಡದ ಜಗಲಿಯ ಮೇಲೆ ರಾತ್ರಿ ನಿದ್ದೆ ಹೋಗುತ್ತಿದ್ದೆ. ಈ ರೀತಿ ನಾಲ್ಕು ದಿನಗಳನ್ನು ಕಳೆದೆ. ಇದೆಲ್ಲ ನನಗೆ ಅಸಹನೀಯವಾಗಿ ಪರಿಣಮಿಸಿತು. ಆಮೇಲೆ ನಾನು ನನ್ನ ಪೂರ್ವಿಕರ ಊರಾದ ಜೆಂತ್ರಾಲ್‌ನಲ್ಲಿ ವಾಸಮಾಡತೊಡಗಿದೆ. ಅದು ಬೋರ್ಸಾದ್‌ಗೆ ಆರು ಮೈಲಿ ದೂರದಲ್ಲಿತ್ತು. ಪ್ರತಿದಿನ ನಾನು ಹನ್ನೆರಡು ಮೈಲಿ ನಡೆಯಬೇಕಾಗುತ್ತಿತ್ತು. ಒಂದೂವರೆ ತಿಂಗಳ ಕಾಲ ಹೀಗೆ ನಾನು ಕಾಲ ಹಾಕಿದೆ.

"ಆ ಬಳಿಕ, ಕೆಲಸವನ್ನು ಕಲಿಸುವ ಸಲುವಾಗಿ ಮಾಮ್ಲತ್‌ದಾರ್ ಅವರು ನನ್ನನ್ನು ತಲಾಟಿಯೊಬ್ಬನ ಬಳಿಗೆ ಕಳಿಸಿದರು. ಆ ತಲಾಟಿ ಜೆಂತ್ರಾಲ್, ಕಾನ್ಪುರ್ ಮತ್ತು ಸಾಯಿಜ್‌ಪುರ್ ಎಂಬ ಮೂರು ಊರುಗಳಲ್ಲಿನ ಕೆಲಸವನ್ನು ನೋಡಿಕೊಳ್ಳುತ್ತಿದ್ದ. ಜೆಂತ್ರಾಲ್ ಅವನ ಕೇಂದ್ರ ಕಛೇರಿಯಾಗಿತ್ತು ನಾನು ಆ ತಲಾಟಿಯೊಂದಿಗೆ ಜೆಂತ್ರಾಲ್‌ನಲ್ಲಿ ಎರಡು ತಿಂಗಳ ಕಾಲ ಇದ್ದೆ. ಆ ಹಳ್ಳಿಯ ಪಟೇಲ ತುಂಬ ದ್ವೇಷ ಪ್ರವೃತ್ತಿಯವನೂ, ಅಪಮಾನಕಾರಿ ಸ್ವಭಾವದವನೂ ಆಗಿದ್ದ. ಒಮ್ಮೆ ಅವನು ಹೇಳಿದ: "ಲೋ ಹೀನ ಮನುಷ್ಯನೆ, ನಿಮ್ಮಪ್ಪ, ನಿಮ್ಮಣ್ಣ ಎಲ್ಲ ಭಂಗಿಗಳು. ಅವರು ಈ ಹಳ್ಳಿಯ ಕಛೇರಿ ಕಸಗುಡಿಸಿಕೊಂಡು ಬಿದ್ದಿದ್ದರು. ನೀನು ನಮಗೆ ಸರಿಸಮಾನ ಅನ್ನುವ ಹಾಗೆ ಕಛೇರಿಯಲ್ಲಿ ಕುಳಿತುಕೊಳ್ಳಬಯಸುತ್ತಿಯೇನೋ? ಎಚ್ಚರವಾಗಿ ಈ ಕೆಲಸ ಬಿಟ್ಟುಬಿಡುವುದೇ ವಾಸಿ."

"ಹಳ್ಳಿಯ ಜನಸಂಖ್ಯಾ ಸಾರಣಿಯನ್ನು ಸಿದ್ಧಪಡಿಸುವ ಸಲುವಾಗಿ, ಒಂದು ದಿವಸ ತಲಾಟಿ ನನ್ನನ್ನು ಸಾಯಿಜ್‌ಪುರಕ್ಕೆ ಬರಹೇಳಿದ. ನಾನು ಜೆಂತ್ರಾಲ್‌ನಿಂದ ಸಾಯಿಜ್‌ಪುರಕ್ಕೆ ಹೋದೆ. ಹಳ್ಳಿಯ ಕಛೇರಿಯಲ್ಲಿ ಆ ಪಟೇಲ ಮತ್ತು ತಲಾಟಿ ಏನೋ ಕೆಲಸ ಮಾಡುತ್ತಿದ್ದರು. ನಾನು ಹೋಗಿ ಕಛೇರಿಯ ಬಾಗಿಲ ಬಳಿಯಲ್ಲಿ ನಿಂತುಕೊಂಡು ಅವರಿಗೆ ನಮಸ್ಕಾರ ಹೇಳಿದೆ. ಆದರೆ ಅವರು ನನ್ನನ್ನು ಗಮನಿಸಲೇ ಇಲ್ಲ. ನಾನು ಸುಮಾರು ೧೫ ನಿಮಿಷದವರೆಗೆ ಹೊರಗೆ ನಿಂತಿದ್ದೆ. ನನಗಾಗಲೇ ಬಾಳಿನ ಬಗ್ಗೆ ಬೇಸರ ಬಂದುಬಿಟ್ಟಿತ್ತು. ಹಾಗೆ ನನ್ನನ್ನು ನಿರ್ಲಕ್ಷಿಸಿದ್ದು ಹಾಗೂ ಅಪಮಾನಿಸಿದ್ದು ನನಗೆ ಕೋಪವನ್ನು

ತಂದಿತ್ತು. ನಾನು ಅಲ್ಲಿದ್ದ ಕುರ್ಚಿಯೊಂದರ ಮೇಲೆ ಹೋಗಿ ಕುಳಿತೆ. ನಾನು ಕುರ್ಚಿಯ ಮೇಲೆ ಕುಳಿತದ್ದನ್ನು ಕಂಡು, ಆ ಪಟೇಲ ಮತ್ತು ತಲಾಟಿ ನನಗೆ ಏನೊಂದು ಮಾತನ್ನೂ ಹೇಳದೆ, ಸದ್ದಿಲ್ಲದೆ ಅಲ್ಲಿಂದ ಎದ್ದುಹೋದರು. ಸ್ವಲ್ಪ ಹೊತ್ತಿನ ಬಳಿಕ, ಕೆಲವು ಮಂದಿ ಹಳ್ಳಿಯ ಗ್ರಂಥಾಲಯಕ್ಕೆ ಬರತೊಡಗಿದರು. ವಿದ್ಯಾವಂತನಾದ ವ್ಯಕ್ತಿಯೊಬ್ಬ ಆ ಗುಂಪಿನ ಮುಖಂಡನೆಂಬಂತೆ ಏಕೆ ಬಂದ ಎಂಬುದು ನನಗೆ ಅರ್ಥವಾಗಲಿಲ್ಲ. ಆ ಕುರ್ಚಿ ಅವನಿಗೆ ಸೇರಿತ್ತು ಎಂಬುದು ಅನಂತರದಲ್ಲಿ ನನಗೆ ಗೊತ್ತಾಯಿತು. ಅವನು ಬಾಯಿಗೆ ಬಂದಂತೆ ನನ್ನನ್ನು ಬೈಯತೊಡಗಿದ. ಹಳ್ಳಿಯ ಸೇವಕನಾಗಿದ್ದ ರವನಿಯಾನನ್ನು ಉದ್ದೇಶಿಸಿ ಅವನೆಂದ: "ಆ ಭಂಗಿ ಕೊಳಕುನಾಯಿಯನ್ನು ಆ ಕುರ್ಚಿಯಲ್ಲಿ ಕುಳಿತುಕೊಳ್ಳಲು ಬಿಟ್ಟವರು ಯಾರು?" ರವನಿಯಾ ನನ್ನನ್ನು ಕುರ್ಚಿಯಿಂದ ಎಬ್ಬಿಸಿ, ಆ ಕುರ್ಚಿಯನ್ನು ಹೊರಗೆ ಕೊಂಡೊಯ್ದ. ನಾನು ನೆಲದ ಮೇಲೆ ಕುಳಿತುಕೊಂಡೆ. ಆಮೇಲೆ ಆ ಗುಂಪು ಹಳ್ಳಿಯ ಕಛೇರಿಯ ಒಳಗೆ ನುಗ್ಗಿ ನನ್ನನ್ನು ಸುತ್ತುವರಿಯಿತು. ಅದು ಕೋಪದಿಂದ ಕುದಿ ಯುತ್ತಿದ್ದ ಭಯಂಕರವಾದ ಗುಂಪಾಗಿತ್ತು. ಕೆಲವರು ನನ್ನನ್ನು ಬೈಯುತ್ತಿದ್ದರು. ಕೆಲವರು ಕತ್ತಿಯಿಂದ ನನ್ನನ್ನು ತುಂಡರಿಸುವುದಾಗಿ ಬೆದರಿಕೆ ಹಾಕಿದರು. ನನ್ನನ್ನು ಕ್ಷಮಿಸಬೇಕೆಂದೂ, ನನ್ನ ಮೇಲೆ ಕರುಣೆಯನ್ನು ತೋರಬೇಕೆಂದು ಅವರನ್ನು ಬಗೆಬಗೆಯಾಗಿ ಬೇಡಿದೆ. ಅದು ಗುಂಪಿನ ಮೇಲೆ ಯಾವುದೇ ಪ್ರಭಾವವನ್ನೂ ಬೀರಲಿಲ್ಲ. ನನ್ನ ಪ್ರಾಣವನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದೇ ನನಗೆ ಗೊತ್ತಾಗಲಿಲ್ಲ. ನನಗೆದುರಾಗಿದ್ದ ದುರ್ವಿಧಿಯನ್ನು ಕುರಿತು ಹಾಗೂ ಆ ಗುಂಪೇನಾದರೂ ನನ್ನನ್ನು ಕೊಂದುಹಾಕಿದರೆ ನನ್ನ ಹಣವನ್ನು ಹೇಗೆ ವಿಲೇವಾರಿ ಮಾಡಬೇಕೆಂಬುದನ್ನು ಕುರಿತು ಮಾಮ್ಲತ್‌ತಾರ್ ಅವರಿಗೆ ಕಾಗದದೊಂದನ್ನು ಬರೆದಿಡಬೇಕೆಂಬ ಆಲೋಚನೆ ನನಗೆ ಹೊಳೆಯಿತು. ತಮಗೆ ವಿರುದ್ಧವಾಗಿ ಮಾಮ್ಲತ್‌ದಾರ್ ಅವರಿಗೆ ವರದಿ ಮಾಡುತ್ತಿದ್ದೇನೆಂಬುದು ಆ ಗುಂಪಿಗೆ ಗೊತ್ತಾದರೆ, ಅವರು ಹಿಂದೆಗೆಯಬಹುದೆಂಬುದು ನನ್ನ ಅಳಿಯಾಸೆಯಾಗಿತ್ತು. ನನಗೆ ಒಂದು ಹಾಳೆ ಕಾಗದವನ್ನು ಕೊಡುವಂತೆ ನಾನು ರವನಿಯಾನನ್ನು ಕೇಳಿದೆ. ಅವನು ಅದನ್ನು ಕೊಟ್ಟ. ಆಮೇಲೆ ದಪ್ಪ ಅಕ್ಷರಗಳಲ್ಲಿ ಆ ಕಾಗದದ ಮೇಲೆ ಹೀಗೆಂದು ಬರೆದೆ:

"ಮಾಮ್ಲತ್‌ದಾರ್,
ಬೋರ್ಸಾದ್ ತಾಲ್ಲೂಕ್
–ಅವರಿಗೆ.

ಮಾನ್ಯರೆ:

ಪರ್ಮಾರ್ ಕಾಳಿದಾಸ್ ಶಿವರಾಮನ ವಿನಯಪೂರ್ವಕ ವಂದನೆಗಳನ್ನು ದಯವಿಟ್ಟು ಸ್ವೀಕರಿಸಿ. ಕ್ಷುದ್ರ ಮೃತ್ಯುವಿನ ಕೈ ಇಂದು ನನ್ನ ಮೇಲೆ ಎರಗಲಿದೆ ಎಂಬುದನ್ನು ವಿನಯಪೂರ್ವಕವಾಗಿ ತಮ್ಮ ಅವಗಾಹನೆಗೆ ತರಲಷ್ಟೇ ಈ ಪತ್ರ. ನನ್ನ ತಂದೆ–ತಾಯಿಗಳ ಮಾತುಗಳನ್ನು ಕೇಳಿದ್ದಿದ್ದರೆ ಹೀಗೆ ಆಗುತ್ತಿರಲಿಲ್ಲ. ನನ್ನ ತಂದೆ–ತಾಯಿಗಳಿಗೆ ನನ್ನ ಸಾವಿನ ಬಗ್ಗೆ ದಯವಿಟ್ಟು ತಿಳಿಸುವ ಕೃಪೆ ಮಾಡಿ."

ಈಗ ನಾನು ಅನುಸೂಚಿತ ಜಾತಿಗಳ ವಿಷಯದಲ್ಲಿ ಬಹುಸಂಖ್ಯಾತ ಸಮುದಾಯದ ವರ್ತನೆಯನ್ನು ತೆರೆದುತೋರುವಂಥ ಕೆಲವು ನಿದರ್ಶನಗಳನ್ನು ಉಲ್ಲೇಖಿಸುತ್ತೇನೆ. ಒಂದು ಜಾಮ್ನೇರ್ ತಾಲ್ಲೂಕಿನ ಕೇಕತ್ನೀಮ್‌ಭೋರ್ ಗ್ರಾಮದಲ್ಲಿ ನಡೆದ ಪ್ರಸಂಗ. ಅದು ಹೀಗಿದೆ:

> "ಈ ಹಳ್ಳಿಯ ದಲಿತವರ್ಗದ ಜನಗಳು ಯಾವುದೇ ಹಿಂದೂ ಹಬ್ಬವನ್ನಾ ಚರಿಸುವುದನ್ನು ಕೈ ಬಿಟ್ಟಿದ್ದಾರೆ. ಹಾಗೂ ಸ್ವಚ್ಛ ಜೀವನ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ. ಒಂದು ರಜೆಯ ದಿನ ತಮ್ಮ ಹೋಳಿಹಬ್ಬಕ್ಕೆ ಜಮೀನಿನಿಂದ ಬೆರಣಿಯನ್ನು ತಂದು ಒದಗಿಸುವಂತೆ ಸವರ್ಣೀಯ ಹಿಂದೂಗಳು ಅವರಿಗೆ ಹೇಳಿದರು. ದಲಿತ ವರ್ಗದ ಜನಗಳು ಆ ಕೆಲಸವನ್ನು ಮಾಡಿ ಮುಗಿಸಿದರು. ಆದರೆ, ಅವರು ಹೋಳಿ ಹಬ್ಬವನ್ನು ಆಚರಿಸಲಿಲ್ಲ. ಹೀಗಾಗಿ ಅವರು ಸವರ್ಣೀಯ ಹಿಂದೂಗಳಿಗೆ ಬೆಂಕಿಯನ್ನು ಒದಗಿಸಲಿಲ್ಲ. ಆದ್ದರಿಂದ ಹಿಂದೂಗಳು ಅವರ ಕಾಲನಿಗೆ ನುಗ್ಗಿ ಅವರನ್ನು ಅವರ ಮನೆಗಳಲ್ಲಿಯೇ ಹೊಡೆದು–ಬಡಿದು ಮಾಡಿದ್ದರು. ಅವರ ಮೇಲೆ ತೀವ್ರವಾದ ನಿಷೇಧವನ್ನು ವಿಧಿಸಿ ಅವರ ಬಾಳುವೆಯನ್ನು ಚಿಂತಾಜನಕವಾಗಿಸಿದರು.

ಇನ್ನೊಂದು ಪ್ರಕರಣ ಜಾಮ್ನೇರ್ ತಾಲ್ಲೂಕಿನ ವದಲಿ ಗ್ರಾಮದಲ್ಲಿ ನಡೆದದ್ದು. ಆ ಹಳ್ಳಿಯಲ್ಲಿ ಎಲ್ಲರ ಬಳಕೆಯ ಹೆಬ್ಬಾಗಿಲಿನ ಮೂಲಕ ಹಾದುಹೋಗಲು ದಲಿತ ವರ್ಗದ ಜನರಿಗೆ ಸೇರಿದ ಮದುವೆಯ ಮೆರಣಿಗೆಯೊಂದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಈ ಮೆರವಣಿಗೆಯನ್ನು ಭಂಗಪಡಿಸಿದ್ದೇ ಅಲ್ಲದೆ, ವಿವಾಹ ಸಂಸ್ಕಾರ ಅಂದು ನಡೆಯಲು ಸವರ್ಣೀಯ ಹಿಂದೂಗಳು ಅವಕಾಶಕೊಡಲೇ ಇಲ್ಲ. ದಲಿತ ವರ್ಗದ ಜನರನ್ನು ಸಾಮಾಜಿಕವಾಗಿ ಬಹಿಷ್ಕರಿಸಲಾಯಿತು.

ಮತ್ತೊಂದು ಪ್ರಕರಣ ಆಲಮ್ನೇರ್ ತಾಲ್ಲೂಕಿನ ಮಾಂದೇಡ್ ಗ್ರಾಮದಲ್ಲಿ ನಡೆದದ್ದು. ಮಾಂದೇಡ್‌ನಲ್ಲಿ ದಲಿತ ವರ್ಗದ ಜನಗಳು ಸಮ್ಮೇಳನವೊಂದನ್ನು ನಡೆಸಿ ದುರಭ್ಯಾಸಗಳನ್ನು ತ್ಯಜಿಸುವ ಹಾಗೂ ಪರಿಶುದ್ಧವಾದ ಜೀವನ ವಿಧಾನವನ್ನು ಅಂಗೀಕರಿಸುವ ನಿಲುವಿಗೆ ಸಮರ್ಥನೆಯನ್ನು ಕೊಡುವಂಥ ಠರಾವನ್ನು ಅಂಗೀಕರಿಸಿದರು. ಕೆಲವು ಮಂದಿ ಸವರ್ಣೀಯ ಹಿಂದೂಗಳಿಗೆ ಈ ಆಲೋಚನೆ ಹಿಡಿಸಲಿಲ್ಲ. ಅವರು ಸಣ್ಣ ಹಂದಿಯೊಂದನ್ನು ಕೊಂದು ಅದನ್ನು ದಲಿತ ವರ್ಗದ ಜನಗಳು ಬಳಸುತ್ತಿದ್ದ ಕುಡಿಯುವ ನೀರಿನ ಜಲಾಶಯಕ್ಕೆ ಹಾಕಿದರು. ಇದೇ ಕ್ರಮವನ್ನು ಎರಡು ಬಾರಿ ಪುನರಾವರ್ತಿಸಿದರು. ದಲಿತ ವರ್ಗದ ಜನರನ್ನು ಈಗ ಸಾಮಾಜಿಕವಾಗಿ ಬಹಿಷ್ಕರಿಸಲಾಗಿದೆ. ಹಾಗೂ ಪೀಡಿಸಲಾಗುತ್ತಿದೆ. ಈ ಕಾಟಗಳಿಂದಾಗಿಯೇ ದಲಿತ ವರ್ಗದ ಅನೇಕ ಮಂದಿ ತಮ್ಮ ಊರನ್ನೇ ಖಾಲಿ ಮಾಡಿದ್ದಾರೆ.

ಅಸ್ಪೃಶ್ಯರ ವಿಚಾರದಲ್ಲಿ ಬಹುಸಂಖ್ಯಾತರಾಗಿರುವ ಹಿಂದೂಗಳ ಅಸಹನೆ ಎಷ್ಟರ ಮಟ್ಟಿಗಿದೆ ಎಂಬುದನ್ನು ತೋರಿಸಿಕೊಡಲು ನಾನು ಅನಂತ ಸಂಖ್ಯೆಯ ಇಂಥ ಪ್ರಕರಣಗಳನ್ನು ಪುನರಾವರ್ತಿಸಿಕೊಡುತ್ತಾ ಹೋಗುವ ಇಚ್ಛೆ ನನಗಿಲ್ಲ.

ನಾನು ಈಗ ಕೇಳುವ ಮುಂದಿನ ಪ್ರಶ್ನೆ ಇದು: ಈ ಬಗೆಯ ಪೀಡನೆಗೆ ವಿರುದ್ಧವಾಗಿ ಅನುಸೂಚಿತ ಜಾತಿಗಳಿಗೆ ದೊರೆಯಲಿರುವ ರಕ್ಷಣೆಯಾದರೂ ಏನು? ಈ ವಿಷಯದ ಬಗ್ಗೆ ಈ ಸದನಕ್ಕೆ ನಿವೇದಿಸುವುದಕ್ಕೆ ಮೊದಲು ಈ ನಾಡಿನಲ್ಲಿ ಆಡಳಿತದ ಸಂಯೋಜನೆಯತ್ತ ನಾನು ಈ ಸದನದ ಗಮನವನ್ನು

ಸೆಳೆಯಬಯಸುತ್ತೇನೆ. ನನ್ನ ಬಳಿ ಮುಂಬಯಿ ಪ್ರಾಂತಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಮಾತ್ರ ಇವೆ. ಆದರೆ ನನ್ನ ತೀರ್ಮಾನದಲ್ಲಿ ಈ ಅಂಕಿ–ಅಂಶಗಳು ಪ್ರಾತಿನಿಧಿಕ ಸ್ವರೂಪದ್ದೇ ಆಗಿವೆ: ಅವು ಈ ಪ್ರಾಂತದ ಮಟ್ಟಿಗಲ್ಲದೆ, ಭಾರತದ ಯಾವುದೇ ಭಾಗದ ವಿಷಯದಲ್ಲಿಯಾದರೂ ಸತ್ಯವೇ ಆಗಿರುತ್ತವೆ. ಈ ಪ್ರಾಂತದ ಆಡಳಿತವನ್ನು ಹೇಗೆ ಸಿಬ್ಬಂದೀಕರಿಸಲಾಗುತ್ತದೆ? ಅದನ್ನು ಸಿಬ್ಬಂದೀಕರಿಸುವ ರೀತಿ ಇದು: ಸರ್ಕಾರವೇ ಕೊಟ್ಟಿರುವ ಅಂಕಿ–ಅಂಶಗಳನ್ನು ನಾನು ಪರಿಗಣಿಸುತ್ತಿದ್ದೇನೆ. ಅವು ನನ್ನ ಕಲ್ಪನೆಯ ಅಂಕಿ–ಅಂಶಗಳೇನೂ ಅಲ್ಲ. ಮೊದಲಿಗೆ ನಾನು ಅನುಸೂಚಿತ ಜಾತಿಗಳನ್ನು ಮತ್ತು ಕಂದಾಯ ಇಲಾಖೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಜಿಲ್ಲೆಯ ಉಪ–ಸಂಗ್ರಹಣಾಧಿಕಾರಿಗಳನ್ನು ತೆಗೆದುಕೊಂಡರೆ ಅವರ ಸಂಖ್ಯೆ ೩೩; ಅವರಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿದವರೊಬ್ಬರೂ ಅಲ್ಲ. ಈ ಸಂಸ್ಥಾನದಲ್ಲಿ ಒಂದು ನೂರು ಮಂದಿ ಮಾಮ್ಲತ್‌ದಾರರಿದ್ದಾರೆ. ಅವರಲ್ಲಿ ಅನುಸೂಚಿತ ಜಾತಿಗಳಿಗೆ ಸೇರಿದವನು ಒಬ್ಬ ಮಾತ್ರ. ೩೪ ಮಂದಿ ಮಹಾಲ್‌ಕಾರಿಗಳಿದ್ದಾರೆ. ಅವರಲ್ಲಿ ಯಾರೊಬ್ಬರೂ ಅನುಸೂಚಿತ ಜಾತಿಗಳಿಗೆ ಸೇರಿದವರಲ್ಲ. ೨೪೬ ಮಂದಿ ಮುಖ್ಯ ಕಾರಖೂನ (ಕರಣಿಕ)ರಿದ್ದಾರೆ. ಅವರಲ್ಲಿ ಯಾರೂ ಅನುಸೂಚಿತಜಾತಿಗಳಿಗೆ ಸೇರಿದವರಲ್ಲ. ಕಂದಾಯ ಇಲಾಖೆಯಲ್ಲಿನ ಗುಮಾಸ್ತರ ವಿಷಯಕ್ಕೆ ಬಂದರೆ ಅವರ ಒಟ್ಟು ಸಂಖ್ಯೆ ೨,೪೪೪ ಆಗುತ್ತದೆ. ಅವರಲ್ಲಿ ೩೦ ಮಂದಿ ಮಾತ್ರ ಅನುಸೂಚಿತ ಜಾತಿಗಳಿಗೆ ಸೇರಿದವರಾಗಿದ್ದಾರೆ.

ಈಗ ನಾವು ಲೋಕೋಪಯೋಗಿ ಇಲಾಖೆಯನ್ನು ತೆಗೆದುಕೊಳ್ಳೋಣ. ಈ ಲೋಕೋಪಯೋಗಿ ಇಲಾಖೆಯಲ್ಲಿ ೮೨೯ ಮಂದಿ ಗುಮಾಸ್ತರಿದ್ದಾರೆ. ಈ ೮೨೯ ಮಂದಿಯಲ್ಲಿ ಅನುಸೂಚಿತ ಜಾತಿಗೆ ಸೇರಿದವರು ಏಳು ಮಂದಿ ಮಾತ್ರ.

ಅಬಕಾರಿ ಇಲಾಖೆಯಲ್ಲಿ ೧೮೯ ಮಂದಿ ಗುಮಾಸ್ತರಿದ್ದಾರೆ. ಅವರಲ್ಲಿ ಮೂರಕ್ಕಿಂತ ಹೆಚ್ಚು ಮಂದಿ ಅನುಸೂಚಿತ ಜಾತಿಗಳಿಗೆ ಸೇರಿದವರೆಂದು ಹೇಳಲು ಬರುವುದಿಲ್ಲ.

ಪೊಲೀಸ್ ಇಲಾಖೆಗೆ ಬಂದರೆ, ಕೊಟ್ಟಿರುವ ಅಂಕಿ–ಅಂಶಗಳ ಪ್ರಕಾರ ಸಬ್ ಇನ್ಸ್‌ಪೆಕ್ಟರುಗಳ ಸಂಖ್ಯೆ ೫೩೮ ಮಂದಿಯಲ್ಲಿ ಅಸ್ಪೃಶ್ಯರ ಸಂಖ್ಯೆ ಎರಡು ಮಾತ್ರ. ಹೀಗಾಗಿ, ಆಡಳಿತದ ರಚನೆ ಸಂಪೂರ್ಣವಾಗಿ ಹಿಂದೂಮಯವಾಗಿದೆ. ಆ ಅಂಶದ ಯಾವುದೇ ಪ್ರಶ್ನೆಯನ್ನು ಎತ್ತುವಂತಿಲ್ಲ.

ಈ ಸಂಸ್ಥಾನದಲ್ಲಿರುವ ಇತರ ಅಲ್ಪಸಂಖ್ಯಾತ ಸಮುದಾಯಗಳೊಂದಿಗೆ ಹೋಲಿಸಿ ನೋಡಿದರೆ, ಅನುಸೂಚಿತ ಜಾತಿಗಳ ಸ್ಥಿತಿ ಹೇಗಿದೆ ಎಂಬುದರತ್ತಲೂ ನಾನು ಈ ಸದನದ ಗಮನವನ್ನು ಸೆಳೆಯ ಬಯಸುತ್ತೇನೆ. ಜಿಲ್ಲೆಯ ಉಪ–ಸಂಗ್ರಹಣಾಧಿಕಾರಿಗಳ ವಿಷಯಕ್ಕೆ ಬಂದರೆ ರೆವಿನ್ಯೂ ಇಲಾಖೆಯಲ್ಲಿನ ೩೩ ಮಂದಿ ಉಪ ಸಂಗ್ರಹಾಧಿಕಾರಿಗಳಲ್ಲಿ ೮ ಮಂದಿ ಮುಸ್ಲಿಮರು, ೩ ಮಂದಿ ಕ್ರಿಶ್ಚಿಯನ್ನರು ಹಾಗೂ ಒಬ್ಬ ಮಾತ್ರ ಅನುಸೂಚಿತ ಜಾತಿಗೆ ಸೇರಿದವನು. ೧೦೦ ಮಂದಿ ಮಾಮ್ಲತ್‌ದಾರರುಗಳಲ್ಲಿ ೩೦ ಮಂದಿ ಮುಸ್ಲಿಮರು, ೩ ಮಂದಿ ಕ್ರಿಶ್ಚಿಯನ್ನರು ಹಾಗೂ ಒಬ್ಬ ಮಾತ್ರ ಅನುಸೂಚಿತ ಜಾತಿಗೆ ಸೇರಿದವನು. ೩೪ ಮಂದಿ ಮಹಲ್‌ಕಾರಿಗಳಲ್ಲಿ ೪ ಮಂದಿ ಮುಸ್ಲಿಮರು, ೩ ಮಂದಿ ಕ್ರಿಶ್ಚಿಯನ್ನರು; ಆದರೆ ಅನುಸೂಚಿತ ಜಾತಿಗೆ ಸೇರಿದವರು ಒಬ್ಬರೂ ಇಲ್ಲ. ೨೪೬ ಮಂದಿ ಕರಣಿಕರಲ್ಲಿ ೧೭ ಮಂದಿ ಮುಸ್ಲಿಮರು, ೭ ಮಂದಿ ಕ್ರಿಶ್ಚಿಯನ್ನರು. ಆದರೆ ಅನುಸೂಚಿತ ಜಾತಿಗೆ ಸೇರಿದವರು ಒಬ್ಬರೂ ಇಲ್ಲ. ಒಟ್ಟು ೨,೪೪೪ ಮಂದಿ ಗುಮಾಸ್ತರಲ್ಲಿ ೨೮೩ ಮಂದಿ ಮುಸ್ಲಿಮರು, ೬೧ ಮಂದಿ ಕ್ರಿಶ್ಚಿಯನ್ನರು, ೫೮ ಮಂದಿ ಹಿಂದುಳಿದ ವರ್ಗಗಳಿಗೆ ಸೇರಿದವರು ಮತ್ತು ೩೦ ಮಂದಿ ಅನುಸೂಚಿತ ಜಾತಿಗಳಿಗೆ ಸೇರಿದವರು. ಪೊಲೀಸ್

ಇಲಾಖೆಯಲ್ಲಿನ ೫೩೮ ಮಂದಿ ಸಬ್–ಇನ್ಸ್‌ಪೆಕ್ಟರುಗಳಲ್ಲಿ ವರ್ಗಗಳವರು ಹಾಗೂ ಇಬ್ಬರು ಮಾತ್ರ ಅಸ್ಪೃಶ್ಯರು. ಅಬಕಾರಿ ಇಲಾಖೆಯಲ್ಲಿನ ೧೮೯ ಮಂದಿಯಲ್ಲಿ ೧೩ ಮಂದಿ ಮುಸ್ಲಿಮರು, ೧೯ ಮಂದಿ ಕ್ರಿಶ್ಚಿಯನ್ನರು ಹಾಗೂ ೩ ಮಂದಿ ಅಸ್ಪೃಶ್ಯರು.

ಮಾನ್ಯರೆ, ಹೀಗಾಗಿ, ಜನಸಂಖ್ಯೆಯ ದೃಷ್ಟಿಯಿಂದ ಹಿಂದೂಗಳು ಬಹುಸಂಖ್ಯಾತರಾಗಿರುವುದು ಮಾತ್ರವಲ್ಲದೆ ಆಡಳಿತ ಕ್ಷೇತ್ರವನ್ನು ತೆಗೆದುಕೊಂಡರೂ ಅಲ್ಲಿಯೂ ಅವರು ಬಹುಸಂಖ್ಯೆಯಲ್ಲಿದ್ದಾರೆ ಎಂಬ ಪೂರ್ವಪಕ್ಷದೊಂದಿಗೇ ನಾವು ಮೊದಲಿಗೆ ಈ ಚರ್ಚೆಯನ್ನು ಆರಂಭಿಸಬೇಕು. ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ನಾನು ಕೇಳಬಯಸುವ ಪ್ರಶ್ನೆ ಇದು. ಅವರಿಗೆ ತೃಪ್ತಿಯನ್ನುಂಟುಮಾಡುವಂತೆ ಬಹುಸಂಖ್ಯಾತ ಹಿಂದೂಗಳನ್ನು ನಿಸ್ಸಂದೇಹವಾಗಿ ಪ್ರತಿಕೂಲ ಅಥವಾ ಶತ್ರುತ್ವ ಭಾವನೆಯ ಬಹುಸಂಖ್ಯಾತರೆಂದು ಪರಿಗಣಿಸಬೇಕೆಂಬುದಾಗಿ ನಾನು ತೋರಿಸಿಕೊಟ್ಟಿದ್ದೇನೆಂದು ಭಾವಿಸಿದ್ದೇನೆ. ಅವರು ತಲೆದೂಗುತ್ತಿದ್ದಾರೆ. ಅವರು ತಮ್ಮದೇ ಆದ ತೀರ್ಮಾನಕ್ಕೆ ಬರಬಹುದಾಗಿದೆ. ನಾನು ಅವರೊಂದಿಗೆ ಜಗಳವನ್ನೇನೂ ಆಡುವುದಿಲ್ಲ. ಆದರೆ, ವಸ್ತುಸ್ಥಿತಿ ಅದು. ಆ ಬಗೆಯ ಪೀಡನೆಗಳಿಗೆ ವಿರುದ್ಧವಾಗಿ ರಕ್ಷಣೆ ದೊರೆಯುವ ವಿಚಾರದಲ್ಲಿ ಅಸ್ಪೃಶ್ಯರ ಸ್ಥಿತಿ ಏನಾಗಿದೆ? ಸವರ್ಣೀಯ ಹಿಂದೂಗಳೇ ತುಂಬಿಕೊಂಡಿರುವ ಇಡೀ ಆಡಳಿತ ವ್ಯವಸ್ಥೆಯೇ ಅಸ್ಪೃಶ್ಯರಿಗೆ ವಿರುದ್ಧವಾಗಿದೆ; ಜಗಳಗಳ ಸಂದರ್ಭದಲ್ಲಿ ಒಂದೆಡೆ ಸವರ್ಣೀಯ ಹಿಂದೂಗಳು ಇನ್ನೊಂದೆಡೆ ಅಸ್ಪೃಶ್ಯರೂ ಇರುವಾಗ ನೊಂದವರಿಗೆ ನ್ಯಾಯ ದೊರೆಯಬೇಕೆಂದು ಅವರು ಹಾರೈಸುವುದಿಲ್ಲ, ಅಪೇಕ್ಷಿಸುವುದಿಲ್ಲ. ಅಷ್ಟೇ ಅಲ್ಲ, ಆ ವಿಚಾರವನ್ನು ಲೆಕ್ಕಿಸುವುದೂ ಇಲ್ಲ ಎಂಬುದನ್ನು ತೋರಿಸಿಕೊಡಲು ಮತ್ತೆ ನಾನು ಕೆಲವು ಪ್ರಸಂಗಗಳನ್ನು ಎತ್ತಿಕೊಳ್ಳುತ್ತೇನೆ.

ಈಗ ನಾನು ಉಲ್ಲೇಖಿಸಬಯಸುವ ಮೊದಲ ಪ್ರಸಂಗ ಇದು. ನನ್ನ ಸನ್ಮಾನ್ಯ ಸದಸ್ಯರಿಗೆ ವಿಚಾರಣೆ ಮಾಡಲು ಸಾಧ್ಯವಾಗಲಿ ಎಂಬ ದೃಷ್ಟಿಯಿಂದ ನಾನು ಮೊಕದ್ದಮೆಯ ಸಂಖ್ಯೆಯನ್ನು ಕೊಡುತ್ತಿದ್ದೇನೆ. ಅದು ಸಂಗಮ್ನೇರಿನ ಪ್ರಥಮ ದರ್ಜೆ ದಂಡಾಧಿಕಾರಿಗಳ ಕಡತದಲ್ಲಿನ ೧೯೩೮ನೇ ಸಾಲಿನ ಅಪರಾಧಿಕ ಮೊಕದ್ದಮೆಯಲ್ಲಿ ಕೊಡಲಾಗಿರುವ ತೀರ್ಪು. ಈ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆಯ ೧೪೭ನೆಯ ಪ್ರಕರಣದ ಅಧೀನ ಬರುವ ಅಪರಾಧಗಳ ಅಡಿಯಲ್ಲಿ ಅಂದರೆ ದೊಂಬಿ ನಡೆಸುವುದು ಹಾಗೂ ೩೨೩, ೩೪೧, ೪೫೨, ೪೫೪ ಮತ್ತು ೧೪೯ನೆಯ ಪ್ರಕರಣಗಳ ಮೇರೆಗೆ ೭ ಮಂದಿ ಹಿಂದೂಗಳ ಮೇಲೆ ದೋಷಾರೋಪಣೆ ಮಾಡಲಾಗಿತ್ತು. ಆ ಪ್ರಕರಣದ ವಿವರಗಳು ಸಂಕ್ಷಿಪ್ತವಾಗಿ ಹೀಗಿವೆ. ದೂರು ನೀಡಿದ ವ್ಯಕ್ತಿ ವಡಗಾಂವ್ ಲಾಂಗ್ಡ ಎಂಬ ಹೆಸರಿನ ಹಳ್ಳಿಯವನಾದ ಒಬ್ಬ ಅಸ್ಪೃಶ್ಯ. ಒಂದು ದಿವಸ ಕೋಲು ಲಾಠಿ ಮತ್ತು ಇತರೆ ಆಯುಧಗಳಿಂದ ಸುಸಜ್ಜಿತರಾಗಿದ್ದ ಆ ಹಳ್ಳಿಯ ೨೦೦ ಮಂದಿಯ ಒಂದು ಗುಂಪು ಮಹಾರ್‌ಗಳ ಬಸ್ತಿಯ ಮೇಲೆ ಆಕ್ರಮಣವನ್ನೆಸಗಿ ಗಂಡಸರ ಮೇಲೆ ಮಾತ್ರವಲ್ಲದೆ, ಹೆಂಗಸರ ಮೇಲೂ ಕೈಮಾಡಿತು ಎಂಬುದು ಆತನ ದೂರಾಗಿತ್ತು. ಗಾಯಗಳು ಘೋರವಾಗಿದ್ದವು. ಏಳು ದಿವಸಗಳವರೆಗೆ ಅವರು ಆಸ್ಪತ್ರೆಯಲ್ಲಿಯೇ ಇದ್ದರು. ಅದೃಷ್ಟವಶಾತ್ ಪೊಲೀಸ್ಟರು ಅದನ್ನು ವಿಚಾರಣಾರ್ಹ ಮೊಕದ್ದಮೆ ಎಂಬುದಾಗಿ ಪರಿಗಣಿಸಿದ್ದರು. ಗಾಯಗಳು ತುಂಬ ಘೋರ ಸ್ವರೂಪದವಾಗಿದ್ದುದರಿಂದ ಅವರು ಹಾಗೆ ಮಾಡದೆ ವಿಧಿಯೇ ಇರಲಿಲ್ಲ. ಸಂಗಮ್ನೇರಿನ ಪ್ರಥಮ ದರ್ಜೆ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಒಂಭತ್ತು ಮಂದಿ ವಿರುದ್ಧ ಮೊಕದ್ದಮೆಯನ್ನು ಹೂಡಲಾಯಿತು. ಪೊಲೀಸರೇ ಸಾಕ್ಷ್ಯವನ್ನು ಮುಂದಿರಿಸಿದರು. ಗಾಯಗೊಳಿಸಲಾಗಿತ್ತು ಎಂಬುದಕ್ಕೆ ಸಾಕು ಬೇಕೆನ್ನಿಸುವಷ್ಟು ವೈದ್ಯಕೀಯ ಸಾಕ್ಷ್ಯವೇ ಇತ್ತು. ಇಷ್ಟಾಗಿಯೂ ಆದದ್ದಾದರೂ ಏನು? ಆ

ಒಂಭತ್ತು ಮಂದಿ ಆರೋಪಿಗಳಿಗೆ ತಾವು ಅಪರಾಧವನ್ನೆಸಗಿದ್ದೇವೆಂಬುದು ಎಷ್ಟರ ಮಟ್ಟಿಗೆ ಮನವರಿಕೆಯಾಗಿತ್ತೆಂದರೆ (ಈ ಮಾತನ್ನು ನಾನು ಹೇಳಬಹುದಾದರೆ) ಗಾಯಗೊಂಡಿದ್ದ ಮಹಾರ್ ಗಂಡಸರು ಮತ್ತು ಹೆಂಗಸರಿಗೆ ಮುನ್ನೂರು ರೂಪಾಯಿಗಳ ಪರಿಹಾರವನ್ನು ಕೊಟ್ಟು ಆ ಪ್ರಕರಣದಲ್ಲಿ ತಾವು ರಾಜಿ ಮಾಡಿಕೊಳ್ಳಲು ಸಿದ್ಧರಾಗಿದ್ದೇವೆಂದು ನನಗೆ ಹೇಳಿ ಕಳಿಸಿದ್ದರು. ನನ್ನ ಅಲ್ಪಮತಿಯ ಮೇರೆಗೆ, ರಾಜಿ ಮಾಡಿಕೊಳ್ಳಲಾರೆನೆಂದೂ ಕಾನೂನಿಗೆ ತನ್ನ ಹಾದಿಯಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಡಬೇಕೆಂದೂ ನಾನು ಆ ಮಹಾರರಿಗೆ ಸಲಹೆ ನೀಡಿದೆ. ಕಾನೂನು ಅವರಿಗೆ ಮಾಡಿದ್ದಾದರೂ ಏನು? ದಂಡಾಧಿಕಾರಿಗಳೂ ಮಾಡಿದ್ದಾದರೂ ಏನು? ಎಲ್ಲರಿಗೂ ಆಶ್ಚರ್ಯ ಉಂಟಾಗುವಂತೆ, ದಂಡಾಧಿಕಾರಿಗಳು ಎಲ್ಲ ಆರೋಪಿಗಳನ್ನು ದೋಷಮುಕ್ತ ರನ್ನಾಗಿಸಿದರು.

ಡಾ. ಕೆ. ಬಿ. ಅಂತ್ರೋಳೀಕರ್: ಮಾನ್ಯರೆ, ದಂಡಾಧಿಕಾರಿಗಳ ತೀರ್ಪಿನ ಬಗ್ಗೆ ಟೀಕೆ ಟಿಪ್ಪಣಿ ಮಾಡಲು ಸನ್ಮಾನ್ಯ ಸದಸ್ಯರಿಗೆ ಅಧಿಕಾರವಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಖಂಡಿತವಾಗಿಯೂ ನಾನು ವಸ್ತುಸ್ಥಿತಿಯನ್ನಷ್ಟೇ ಹೇಳು ತ್ತಿದ್ದೇನೆ.

ಸನ್ಮಾನ್ಯ ಸಭಾಧ್ಯಕ್ಷರು: ನಾನು ಆ ಅಂಶವನ್ನೇ ಪರಿಗಣಿಸುತ್ತಿದ್ದೆ. ಆದರೆ ಸನ್ಮಾನ್ಯ ಸದಸ್ಯರು ಹೇಳುತ್ತಿದ್ದ ವಸ್ತುಸ್ಥಿತಿಯ ವಿವರಗಳನ್ನು ನಾನು ಕೇಳಲು ಇಚ್ಛಿಸುತ್ತಿದ್ದೆ. ಅವರು ದಂಡಾಧಿಕಾರಿಗಳ ತೀರ್ಪಿನ ಬಗ್ಗೆ ಟೀಕೆ ಮಾಡುವುದು ಉಚಿತವೆಂದೇನೂ ನಾನು ಭಾವಿಸಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನೇನೂ ಟೀಕೆ ಟಿಪ್ಪಣಿ ಮಾಡುತ್ತಿಲ್ಲ, ನಾನು ವಸ್ತುಸ್ಥಿತಿ ಯನ್ನಷ್ಟೇ ಹೇಳುತ್ತಿದ್ದೇನೆ. ನಮಗೆ ಎಷ್ಟರಮಟ್ಟಿನ ರಕ್ಷಣೆ ದೊರೆಯುತ್ತದೆ ಎಂಬುದನ್ನು ಹೇಳುತ್ತಿದ್ದೇನೆ. ನಾನು ಈ ಸದನಕ್ಕೆ ಈ ಸಂಗತಿಗಳನ್ನು ನಿವೇದಿಸುತ್ತಿರುವುದು ಅಸ್ಪೃಶ್ಯರಿಗೆ ಎಂಥ ರಕ್ಷಣೆ ದೊರೆಯುತ್ತದೆ ಎಂಬುದರ ಬಗ್ಗೆ ನಿಮ್ಮಲ್ಲಿ ಒಂದು ಕಲ್ಪನೆಯನ್ನು ಮೂಡಿಸುವುದಕ್ಕಾಗಿ. ನಾನು ಆ ತೀರ್ಪಿಗೆ ಯಾವ ರೀತಿಯಲ್ಲಿಯೂ ಸವಾಲು ಹಾಕುತ್ತಿಲ್ಲ. ನಾನು ಹೇಳುತ್ತಿರುವುದು ಇಷ್ಟು: ತಾವು ತಪ್ಪನ್ನೆಸಗಿದ್ದೇವೆ ಎಂಬುದಾಗಿ ಹೃದಯಾಂತರಾಳದಿಂದ ಒಪ್ಪಿಕೊಂಡಿದ್ದ ಹಾಗೂ ಪರಿಹಾರದ ರೂಪದಲ್ಲಿ ೩೦೦ ರೂ.ಗಳನ್ನು ಕೊಟ್ಟು ರಾಜಿ ಮಾಡಿಕೊಳ್ಳಲು ಸಿದ್ಧವಾಗಿದ್ದ ಆ ಜನರು ಅಂತಿಮವಾಗಿ ದಂಡಾಧಿಕಾರಿಗಳಿಂದಲೇ ದೋಷ ಮುಕ್ತರಾದರು. ನಾನು ಒತ್ತಿ ಹೇಳಬಯಸುವ ಅಂಶ ಇದು: ಈ ರೀತಿ ಕೈಮಾಡಲು ಕಾರಣವೇನು? ಏಕಾಗಿ ಹಾಗೆ ಮಾಡಿದರು? ಅವರ ಮೇಲೆ ಕೈಮಾಡಿದ್ದಕ್ಕೆ ಇದ್ದ ಸರಳವಾದ ಕಾರಣ ಇದಾಗಿತ್ತು: ಕಾಡಿನ ಒಂದಿಷ್ಟು ಭೂಭಾಗವನ್ನು ತಮಗೆ ಕೊಡಿಸಿಕೊಡಬೇಕೆಂದು ದಂಡಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸುವ ದಾರ್ಷ್ಟ್ಯವನ್ನು ಆ ಅಸ್ಪೃಶ್ಯರು ತೋರಿದ್ದರು. ಆ ಬಡಪಾಯಿಗಳು ಎಸಗಿದ್ದ ಅಪರಾಧ ಇಷ್ಟೇ. ಇನ್ನೊಂದು ಪ್ರಕರಣದತ್ತ...

ಸನ್ಮಾನ್ಯ ಸಭಾಧ್ಯಕ್ಷರು: ಸನ್ಮಾನ್ಯ ಸದಸ್ಯರ ಮಾತುಗಳನ್ನೇ ಬಳಸಿಕೊಂಡು ಹೇಳುವುದಾದರೆ ಸನ್ಮಾನ್ಯ ಸದಸ್ಯರ "ಉತ್ಸಾಹವನ್ನು ಭಂಗಗೊಳಿಸಲು" ನಾನು ಇಚ್ಛಿಸುವುದಿಲ್ಲ. ಆದರೆ ಅವರು ಈಗಾಗಲೇ ಒಂದು ಘಂಟೆ ಕಾಲವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ನಾನು ಅವರಿಗೆ ನೆನಪು ಮಾಡಿ ಕೊಡಬಹುದಾಗಿದೆ. ಅವರು ಇನ್ನೂ ಸ್ವಲ್ಪ ಕಾಲವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ. ತಾವು ಉಲ್ಲೇಖಿಸುತ್ತಿರುವ ಪ್ರಸಂಗಗಳ ಸಣ್ಣ-ಪುಟ್ಟ ವಿವರಗಳಿಗೂ ಹೋಗುತ್ತಾ ನಡೆದರೆ ಇನ್ನೊಂದು

ಘಂಟೆಯಷ್ಟು ಕಾಲವೂ ಅವರಿಗೆ ಸಾಕಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಇನ್ನೂ ಬೇಗ ಈ ಚರ್ಚೆಯನ್ನು ಮುಗಿಸುವುದರಲ್ಲಿ ನಾನು ಕಾತರನಾಗಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನನ್ನ ವಾದವನ್ನು ಪೂರ್ಣಗೊಳಿಸುವ ದೃಷ್ಟಿಯಿಂದ ನಾನು ಇನ್ನು ಎರಡು ಸಂಗತಿಗಳತ್ತ ಮಾತ್ರ ಗಮನ ಸೆಳೆಯಬಯಸುತ್ತೇನೆ. ಇನ್ನೊಂದು ಪ್ರಕರಣ ಅಕುಶಿ ಎಂಬ ಹೆಸರಿನ ಹಳ್ಳಿಯಲ್ಲಿ ನಡೆದದ್ದು. ರಾಜ್ಯದ ಅಧಿಕಾರಿಗಳು ಅಸ್ಪೃಶ್ಯರಿಗೆ ಕಾನೂನುಬದ್ಧವಾಗಿ ಲಭಿಸಿರುವ ರಕ್ಷಣೆಯನ್ನು ಕೊಡುವಲ್ಲಿ ವಿಫಲರಾಗಿರುವ ಪ್ರಕರಣ ಇದು. ಆ ಹಳ್ಳಿಯಲ್ಲಿ ನಡೆದದ್ದು ಇದು. ಆ ಹಳ್ಳಿ ಸಾತಾರಾ ಜಿಲ್ಲೆಯ ವಾಯಿ ತಾಲ್ಲೂಕಿನಲ್ಲಿದೆ. ಸಂಗತಿಗಳು ತುಂಬ ಸರಳವಾಗಿವೆ. ಆ ಹಳ್ಳಿಯಲ್ಲಿ ಅಸ್ಪೃಶ್ಯರ ಮತ್ತು ಸ್ಪೃಶ್ಯ ಹಿಂದೂಗಳ ನಡುವೆ ಏನೋ ಕಿರಿಕಿರಿ ಏರ್ಪಟ್ಟಿತ್ತು. ಅಸ್ಪೃಶ್ಯರು ಮತ್ತು ಸವರ್ಣೀಯ ಹಿಂದೂಗಳು ಭಿನ್ನಾಭಿಪ್ರಾಯ ಹೊಂದಿದ್ದರು. ಏಕಾದಶಿಯ ದಿವಸ ತಾವು ದೇವರ ದರ್ಶನ ಮಾಡ ಬೇಕೆಂದು ಅಸ್ಪೃಶ್ಯರು ತೀರ್ಮಾನಿಸಿದ್ದರು. ಅವರಿಗೆ ಬಹಿಷ್ಕಾರವನ್ನು ಘೋಷಿಸಿದ್ದ ಸವರ್ಣೀಯ ಹಿಂದೂ ಗಳಿಗೆ ಅವರು ದೇವರ ದರ್ಶನಕ್ಕೆ ಬರುವುದು ಇಷ್ಟವಿರಲಿಲ್ಲ. ಇದನ್ನು ಲೆಕ್ಕಿಸದೆ ಅಸ್ಪೃಶ್ಯರು ದೇವರ ದರ್ಶನಕ್ಕೆಂದು ಬಂದರು. ಅದರ ಪರಿಣಾಮವೇನಾಯಿತು ಎಂದರೆ ಗ್ರಾಮಸ್ಥರನ್ನು ಕೂಡಿಸಿಕೊಂಡು ಬಂದ ಆ ಹಳ್ಳಿಯ ಪಟೇಲ, ದೇವರ ದರ್ಶನಕ್ಕೆಂದು ಬಂದ ಅಸ್ಪೃಶ್ಯರನ್ನು ಥಳಿಸಿದ. ಎಂದಿನಂತೆ, ಹಳ್ಳಿಯ ಅಸ್ಪೃಶ್ಯರು ಹಳ್ಳಿಯ ಪಟೇಲನ ಮೇಲೆ ದೂರು ಕೊಟ್ಟರು. ಪರಿಸ್ಥಿತಿ ಹಿಗಿತ್ತು. ತಾನು ತಪ್ಪು ಮಾಡಿದ್ದೇನೆ ಎಂಬುದು ಪಟೇಲನಿಗೆ ಗೊತ್ತಿತ್ತು. ಸಮನ್ಸನ್ನು ಹೊರಡಿಸಲಾಯಿತು. ಅವನು ಆ ಹಳ್ಳಿಯಿಂದ ಹೊರಗೆ ಹೋಗಿಬಿಟ್ಟ ಹಾಗೂ ಸಮನ್ಸನ್ನು ಸ್ವೀಕರಿಸಲೇ ಇಲ್ಲ. ಸಮನ್ಸನ್ನು ಅವನ ಮನೆಯ ಬಾಗಿಲಿಗೆ ಅಂಟಿಸಲಾಯಿತು. ಮೂರು ತಿಂಗಳವರೆಗೆ ಅವನು ತಲೆಮರೆಸಿಕೊಂಡಿದ್ದ. ಅಂತಿಮವಾಗಿ ಅವನು ಹಳ್ಳಿಗೆ ಹಿಂದಿರುಗಿದ ಹಾಗೂ ಕಾನೂನು ತನ್ನ ಕ್ರಮವನ್ನು ಜರುಗಿಸಿತು. ಈ ಪ್ರಕರಣದಲ್ಲಿಯೂ, ಈ ಮೊಕದ್ದಮೆಯ ವಿಚಾರಣೆಯನ್ನು ನಡೆಸಿದ ಪ್ರಾಜ್ಞ ದಂಡಾಧಿಕಾರಿಗಳು ಮೂರು ತಿಂಗಳ ಕಾಲ ತಲೆ ತಪ್ಪಿಸಿಕೊಂಡು ಹೋಗಿದ್ದ ಹಾಗೂ ತಾನು ಅಪರಾಧಿಯೆಂದು ಚೆನ್ನಾಗಿ ತಿಳಿದಿದ್ದ ಆ ವ್ಯಕ್ತಿಯನ್ನು ದೋಷಮುಕ್ತನನ್ನಾಗಿಸುವುದೇ ಯೋಗ್ಯವೆಂದು ಭಾವಿಸಿದರು.

ಇನ್ನೊಂದು ಪ್ರಕರಣದ ಬಗ್ಗೆ ನಾನು ಸಂಕ್ಷಿಪ್ತ ಉಲ್ಲೇಖ ಮಾಡಬಯಸುತ್ತೇನೆ. ಇದು ಪುಣೆ ಜಿಲ್ಲೆಯ ಮುನ್ಸಿಪೇಟಾ ತಾಲ್ಲೂಕಿನಲ್ಲಿನ ಥಟ್‌ವಾಡಿ ಗ್ರಾಮದಲ್ಲಿ ನಡೆದ ಪ್ರಕರಣ. ಆ ಪ್ರಕರಣದಲ್ಲಿ ನಡೆದಿದ್ದ ಸಂಗತಿ ಇದು. ಅದೊಂದು ಇನಾಮು ಗ್ರಾಮಾಗಿತ್ತು. ಇನಾಮ್‌ದಾರನಿಗೆ ಸೇರಿದ್ದ ಎರಡು–ಮೂರು ಮರಗಳನ್ನು ಯಾರೋ ಕಡಿದುಹಾಕಿದ್ದರು. ಆ ಇನಾಮ್‌ದಾರ ಯಾರ ಹೆಸರನ್ನೂ ಹೇಳದೆ, ಕೆಲವು ಮಹಾರರು ತನಗೆ ಸೇರಿದ್ದ ಮರಗಳನ್ನು ಕಡಿದು, ಸೌದೆಯನ್ನು ಕದ್ದೊಯ್ದಿದ್ದಾರೆಂದು ಪೊಲೀಸಿನವರಿಗೆ ದೂರು ಕೊಟ್ಟ. ಮುಂದೆ ಏನಾಯಿತೆಂದರೆ ಪ್ರಾಸಿಕ್ಯೂಷನ್ನಿನ ಪ್ರಕ್ರಿಯೆಯಲ್ಲಿ ಆರೋಪಿಗಳ ಪರವಾಗಿ ಹಾಜರಾದ ವಕೀಲರು ಆ ಹೊತ್ತಿಗಾಗಲೇ ಸೃಷ್ಟಿಸಲಾಗಿದ್ದ ಪ್ರಥಮ ಮಾಹಿತಿ ವರದಿಯನ್ನು ಹಾಜರುಪಡಿಸುವಂತೆ ಸರ್ಕಾರಿ ಪ್ರಾಸಿಕ್ಯೂಟರ್ ಅವರನ್ನು ಕೋರಿದರು. ಮೂಲತಃ ಆ ವರದಿಯಲ್ಲಿ ಯಾವುದೇ ಹೆಸರುಗಳು ಇಲ್ಲದಿದ್ದರೂ, ಆರೋಪಿಗಳು ಎಂಬುದಾಗಿ ನಾಲ್ಕು ಮಂದಿ ಮಹಾರರ ಹೆಸರುಗಳನ್ನು ಸೇರಿಸಿಬಿಡಲಾಗಿತ್ತು. ಅದೃಷ್ಟವಶಾತ್ ಮಹಾರರನ್ನು ದೋಷಯುಕ್ತರನ್ನಾಗಿಸಲಾಯಿತು. ಆದರೆ, ಅಸ್ಪೃಶ್ಯರಿಗೆ ರಕ್ಷಣೆಯನ್ನು ಒದಗಿಸಬೇಕೆಂದು ನಿರೀಕ್ಷಿಸಲಾಗಿರುವ ಪೊಲೀಸ್ ಅಧಿಕಾರಿಗಳು

ಕೂಡಾ ಅಸ್ಪೃಶ್ಯರನ್ನು ಅಂಥ ಪ್ರಕರಣಗಳಲ್ಲಿ ಸಿಕ್ಕಿಸುವ ಸಲುವಾಗಿ ಸಾಕ್ಷ್ಯಗಳನ್ನು ಸೃಷ್ಟಿಸುವ ಮಟ್ಟಕ್ಕೂ ಹೋಗುತ್ತಾರೆ ಎಂಬ ಸಂಗತಿ ಉಳಿದುಕೊಂಡೇ ಇರುತ್ತದೆ.

ಮಾನ್ಯರೆ, ನಾನು ಇನ್ನು ಯಾವ ಪ್ರಸಂಗಗಳನ್ನು ಉಲ್ಲೇಖಿಸುವುದಿಲ್ಲ. ಈ ಕಥೆ ಅಸಹ್ಯಕರವಾಗಿದೆ. ನನಗಂತೂ ಅಸಹ್ಯವನ್ನುಂಟುಮಾಡುತ್ತದೆ. ಒಂದು ಇಡೀ ಸಮುದಾಯವಾಗಿ ಹಿಂದೂಗಳು ಗಮನ ಹರಿಸುವುದೇ ಇಲ್ಲವೆಂಬುದು ನನಗೆ ಗೊತ್ತು. ಇದನ್ನು ಅವರು ಲೇವಡಿ ಮಾಡುತ್ತಾರೆ. ಈ ನಾಡಿನ ಸಮಸ್ಯೆ ಎಂದರೆ ಹಿಂದೂ ಮತ್ತು ಮುಸ್ಲಿಮರ ಸಮಸ್ಯೆ ಮಾತ್ರವೇ ಎಂದು ಅವರು ಭಾವಿಸುತ್ತಾರೆ. ಇದು ಅದಕ್ಕಿಂತಲೂ ಹೆಚ್ಚು ಗಂಭೀರವಾದ ಸಮಸ್ಯೆ; ಹಿಂದೂಗಳು ಮಾತ್ರವಲ್ಲ, "ರಾಜ್ಯ"ವೂ ಇವರ ಬಗ್ಗೆ ಸಾಕಷ್ಟು ಗಮನಹರಿಸಿಲ್ಲ ಎಂದು ನಾನು ಅವರಿಗೆ ಹೇಳಬಯಸುತ್ತೇನೆ. ನಾನು ಮಂಡಿಸಿರುವ ಎರಡು ತಿದ್ದುಪಡಿಗಳಿಗೆ– ಅಂದರೆ, ರೂಪಿಸಲಾಗುವ ಯಾವುದೇ ಸಂವಿಧಾನ ಅಸ್ಪೃಶ್ಯರಿಗೆ ಸಾಕಷ್ಟು ರಕ್ಷಣೆಯನ್ನು ಒದಗಿಸಬೇಕು ಎಂಬುದಕ್ಕೆ ಬೆಂಬಲವಾಗಿ ಯಾವುದೇ ವಾದ ಅಗತ್ಯವಾಗಿದ್ದಲ್ಲಿ, ನಾನು ಈಗ ಸದನದ ಮುಂದೆ ಮಂಡಿಸಿರುವ ವಾದಗಳು ಅಗತ್ಯವಾಗಿದ್ದುದಕ್ಕಿಂತಲೂ ಹೆಚ್ಚೇ ಆಗಿದೆ ಎಂದು ನಾನು ಭಾವಿಸಿದ್ದೇನೆ. ಇನ್ನೊಂದು ಬದಿಯಲ್ಲಿ ಒಂದಿಷ್ಟು ಪ್ರತಿಕ್ರಿಯೆ ಉಂಟಾಗಿದೆ ಎಂಬುದನ್ನು ನಾನು ಬಲ್ಲೆ. ಸನ್ಮಾನ್ಯ ಗೃಹ ಸಚಿವರು ಎರಡು ತಿದ್ದುಪಡಿಗಳನ್ನು ಮಂಡಿಸಿದ್ದಾರೆ. ನಾನು ಮುಚ್ಚುಮರೆ ಇಲ್ಲದೆ ಹೇಳಬಯಸುತ್ತೇನೆ. ನನ್ನ ತಿದ್ದುಪಡಿಗಳಿಗೆ ಬದಲಾಗಿ ಅವರ ತಿದ್ದುಪಡಿಗಳನ್ನು ನಾನೇಕೆ ಒಪ್ಪಿಕೊಳ್ಳಲಾರೆ ಎಂಬುದನ್ನು ನಾನೀಗ ಸದನಕ್ಕೆ ತಿಳಿಸುತ್ತೇನೆ. ಅಲ್ಪಸಂಖ್ಯಾತರ ರಕ್ಷಣೆಗಾಗಿ ಸಂವಿಧಾನ ಅಗತ್ಯವಾದಷ್ಟು ರಕ್ಷಣೆಗಳನ್ನು ಒದಗಿಸುತ್ತದೆ ಎಂಬುದು ಸನ್ಮಾನ್ಯ ಗೃಹ ಸಚಿವರು ಮಂಡಿಸಿರುವ ಮೊದಲನೆಯ ತಿದ್ದುಪಡಿ. ನಾನು ತೆಗೆದುಕೊಂಡಿರುವ ನಿಲುವು ತುಂಬ ಸರಳವಾಗಿದೆ; ಅದೆಂದರೆ ರಕ್ಷಣೆಗಳನ್ನು ಹೊಂದುವುದು ಮಾತ್ರವಲ್ಲ, ಆ ರಕ್ಷಣೆಗಳು ನಮಗೆ ತೃಪ್ತಿಯನ್ನುಂಟುಮಾಡುವಂತಿರಬೇಕು. ಇದೇ ಮೂಲಭೂತವಾದ ಅಂಶ. ಸನ್ಮಾನ್ಯ ಗೃಹ ಸಚಿವರು ತಮ್ಮನ್ನು ಅಸ್ಪೃಶ್ಯರ ಧರ್ಮದರ್ಶಿಗಳೆಂದು ಸ್ಪಷ್ಟವಾಗಿಯೇ ಭಾವಿಸಿಕೊಂಡಿದ್ದಾರೆ ಹಾಗೂ ಧರ್ಮದರ್ಶಿಯಾಗಿ ಸಂವಿಧಾನದಲ್ಲಿನ ಕೆಲವೊಂದು ಉಪಬಂಧಗಳನ್ನು ಕಾಯ್ದೆಗಳಾಗಿಸಬಹುದೆಂದೂ ಭಾವಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಅವು ಸಾಕು. ನಾನು ಈ ಕ್ಷಣವೇ ಆ ನಿಲುವನ್ನು ನಿರಾಕರಿಸುತ್ತೇನೆ. ಯಾರೂ ತನ್ನ ಧರ್ಮದರ್ಶಿಯಲ್ಲ, ನನಗೆ ನಾನೇ ಧರ್ಮದರ್ಶಿ. ಅವರು ತಮ್ಮ ಸಂವಿಧಾನವನ್ನು ರೂಪಿಸಿಕೊಳ್ಳಬಹುದು. ನಾವು ನಮ್ಮ ಹಕ್ಕುಗಳಿಗಾಗಿ ಒತ್ತಾಯಿಸುತ್ತೇವೆ. ನಮ್ಮ ರಕ್ಷಣೆಯ ಬಗ್ಗೆ ಅವರು ಏನೆಲ್ಲ ಉಪಬಂಧಗಳನ್ನು ಕಲ್ಪಿಸುತ್ತಾರೋ ಅವು ಸಾಕಾಗುವಂತಿವೆ ಎಂಬುದಾಗಿ ದಲಿತ ವರ್ಗಗಳ ವಿಶ್ವಾಸಪಾತ್ರ ಪ್ರತಿನಿಧಿಗಳಿಂದ ಪ್ರಮಾಣೀಕೃತವಾಗಬೇಕು. "ಸಾಕಾಗುವಂತಿರುವುದು" ಎನ್ನುವುದರ ಬಗೆಗಿನ ಅವರ ಪರಿಭಾಷೆ ನನಗೆ ತೃಪ್ತಿಯನ್ನುಂಟುಮಾಡುವುದಿಲ್ಲ. ಈ ಕಾರಣದಿಂದಾಗಿಯೇ ನನ್ನ ಪ್ರಾಜ್ಞ ಸ್ನೇಹಿತರು ಮಂಡಿಸಿದ ಮೊದಲನೆಯ ತಿದ್ದುಪಡಿಯನ್ನು ಒಪ್ಪುವ ಸ್ಥಿತಿಯಲ್ಲಿ ನಾನಿಲ್ಲ.

ಇನ್ನೊಂದು ತಿದ್ದುಪಡಿಗೆ ಸಂಬಂಧಿಸಿದಂತೆ ಸನ್ಮಾನ್ಯ ಗೃಹ ಸಚಿವರು ನಮ್ಮತ್ತ ಅರ್ಧ ದೂರ ಬರಲು ಸಿದ್ಧವಾಗಿದ್ದಾರೆ ಎಂಬುದರಲ್ಲಿ ಸಂದೇಹವೇನೂ ಇಲ್ಲ. ನಾಡಿನ ಆಡಳಿತದಲ್ಲಿ ಅಲ್ಪಸಂಖ್ಯಾತರಿಗೂ ದನಿಯೆತ್ತುವ ಅವಕಾಶವಿರಬೇಕೆಂಬುದನ್ನು ಮಾನ್ಯ ಮಾಡಲು ಅವರು ಸಿದ್ಧರಾಗಿದ್ದಾರೆ. ಆ ವಿಚಾರದಲ್ಲಿಯೂ ನನ್ನ ಮತ್ತು ಅವರ ನಡುವೆ ಸ್ವಲ್ಪಮಟ್ಟಿನ ಭಿನ್ನಾಭಿಪ್ರಾಯವಿರುವುದು ನನಗೆ ಕಾಣುತ್ತಿದೆ.

ನನ್ನ ಎರಡನೆಯ ತಿದ್ದುಪಡಿಯಲ್ಲಿನ ಮಾತುಗಳನ್ನು ತುಂಬಾ ಎಚ್ಚರಿಕೆಯಿಂದ ಬಳಸಲಾಗಿದೆ. "ಮೂಲ ಭೂತ ಹಕ್ಕು" ಎಂಬ ಮಾತುಗಳನ್ನು ಬಳಸುವಲ್ಲಿ ನಾನು ವಿಶೇಷ ಎಚ್ಚರ ವಹಿಸಿದ್ದೇನೆ. "ಮೂಲಭೂತ ಹಕ್ಕು" ಎಂಬ ಮಾತನ್ನು ನಾನೇಕೆ ಬಳಸಿದ್ದೇನೆ ಎಂಬುದರ ಬಗ್ಗೆ ನನ್ನ ನಿಲುವನ್ನು ಸ್ವಲ್ಪಮಟ್ಟಿಗೆ ವಿವರಿಸ ಬಯಸುತ್ತೇನೆ. ಸಂವಿಧಾನದ ಕಾರ್ಯಶೀಲತೆಯ ವಿಷಯದಲ್ಲಿ ನನಗೆ ಮನವರಿಕೆಯಾಗಿರುವ ಒಂದು ಸಂಗತಿ ಇದು: ನಾವು ಒಪ್ಪಲಿ, ಬಿಡಲಿ, ನಾಡಿನ ರಾಜಕೀಯ ವ್ಯವಸ್ಥೆ "ಚಾತುರ್ವರ್ಣ್ಯ"ದ ಪ್ರತಿಫಲವೇ ಆಗಿರುತ್ತದೆ. ಆ ವ್ಯವಸ್ಥೆಯಲ್ಲಿನ ಸಿದ್ಧಾಂತ ಇದಾಗಿತ್ತು. ಕ್ಷತ್ರಿಯರು ಆಳಬೇಕು, ಬ್ರಾಹ್ಮಣರು ಸಲಹೆ ನೀಡಬೇಕು, ವೈಶ್ಯರು ವ್ಯಾಪಾರ ಮಾಡಬೇಕು, ಶೂದ್ರರು ಅಥವಾ ಆದಿಶೂದ್ರರು ಸೇವೆ ಸಲ್ಲಿಸಬೇಕು. ಅದು ಹಿಂದಿನ ಕಾಲದಲ್ಲಿದ್ದ ಸ್ಥಿತಿಗತಿಯಾಗಿತ್ತು. ರಾಜಕೀಯದಲ್ಲಿ ಈ ಸ್ಥಿತಿ ಸ್ವಲ್ಪಮಟ್ಟಿಗೆ ಬದಲಾಗಿದೆ ಎಂಬುದನ್ನು ನಾನು ಕಂಡಿದ್ದೇನೆ. ವೈಶ್ಯರು ವ್ಯಾಪಾರದಲ್ಲಿ ಈಗೇನೂ ತೊಡಗುತ್ತಿಲ್ಲ. ಅವರೇನಾದರೂ ವ್ಯಾಪಾರ ಮಾಡುತ್ತಿದ್ದರೆ, ಅದು ರಾಜಕೀಯ ಕ್ಷೇತ್ರದಲ್ಲಿ ಮಾತ್ರ (ನಗು). ಒಂದು ಸಂಗತಿ ಮಾತ್ರ ಬದಲಾಗದೆ ಉಳಿದುಕೊಂಡುಬಂದಿದೆ. ಈ ನಾಡಿನ ಆಡಳಿತದಲ್ಲಿ ಶೂದ್ರರಿಗೆ ಯಾವುದೇ ಪಾಲೂ ದೊರೆತಿಲ್ಲ. ಈ ನಾಡಿನಲ್ಲಿ ಸ್ಥಿತಿಗತಿಗಳನ್ನು ನಾನು ಕಂಡಿರುವ ಮಟ್ಟಿಗೆ, ಭಾರತಾದ್ಯಂತ ರಚಿತವಾಗಿರುವ ಸಚಿವ ಸಂಪುಟಗಳ ರಾಜಕೀಯ ಸಂರಚನೆಯನ್ನು ಕಂಡಿರುವ ಮಟ್ಟಿಗೆ, ಅಸ್ಪೃಶ್ಯರಾಗಿರುವ ನಾವು ಸಾಮಾಜಿಕವಾಗಿ ಶೂದ್ರರು ಅಥವಾ ಆದಿಶೂದ್ರರೇ ಆಗಿದ್ದೇವೆ. ಇತ್ತ ಕಾಂಗ್ರೆಸ್ ಸರ್ಕಾರ– ಕಾಂಗ್ರೆಸ್ ಸರ್ಕಾರವಿಲ್ಲದಿದ್ದರೆ, ಪರಿಸ್ಥಿತಿಯ ಜರೂರು ಅಗತ್ಯಗಳಿಂದಾಗಿ ಅಧಿಕಾರಕ್ಕೆ ಬಂದಿರುವ ಬೇರಾವುದೇ ಸರ್ಕಾರ– ಹೇಗಿದೆಯೆಂದರೆ ಅದು ಅಂತಿಮವಾಗಿ ನಮ್ಮನ್ನು ರಾಜಕೀಯ ಶೂದ್ರವನ್ನಾಗಿಸಿಬಿಡುತ್ತದೆ. ಇದನ್ನು ನಾನು ಸಹಿಸಲಾರೆ. ಅಂಥ ಪರಿಸ್ಥಿತಿಯನ್ನು ಬುಡಮೇಲು ಮಾಡಲು ನನ್ನ ರಕ್ತದ ಕೊನೆಯ ಹನಿಯನ್ನು ಸುರಿಸಲೂ ನಾನು ಸಿದ್ಧನಾಗಿದ್ದೇನೆ. ("ಕೇಳಿ", "ಕೇಳಿ" ಎಂಬ ಜೋರಾದ ಕೂಗು). ಹಿಂದೂಗಳು ನನ್ನ ಮೇಲೆ ಚಲಾಯಿಸುತ್ತಿರುವ ಸಾಮಾಜಿಕ ಪ್ರಾಬಲ್ಯ, ಆರ್ಥಿಕ ಪ್ರಾಬಲ್ಯ ಮತ್ತು ಧಾರ್ಮಿಕ ಪ್ರಾಬಲ್ಯಗಳ ಜೊತೆಗೆ ರಾಜಕೀಯ ಪ್ರಾಬಲ್ಯವನ್ನು ಸೇರಿಸುವುದಾದರೆ, ಅದನ್ನು ನಾನು ಸಹಿಸಲಾರೆ. ನಾನು ಖಂಡಿತವಾಗಿಯೂ ಅದನ್ನು ಸಹಿಸುವುದಿಲ್ಲ. ಹಾಗಾಗಲು ನಾನು ಎಂದಿಗೂ ಅವಕಾಶ ಕೊಡುವುದಿಲ್ಲವೆಂಬ ಮಾತನ್ನು ಮತ್ತೆ ನಾನು ಪುನರಾವರ್ತಿಸುತ್ತೇನೆ. ಆಳುವ ವರ್ಗವೊಂದರ ಅಲ್ಪಜನಾಧಿಪತ್ಯವನ್ನು ಸ್ಥಾಪಿಸುವ ಸಲುವಾಗಿ ರಾಜಕೀಯವನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ವಿರುದ್ಧವಾಗಿ ನಮ್ಮೆಲ್ಲ ಶಕ್ತಿಯನ್ನೂ ಬಳಸಿ ಹೋರಾಡುತ್ತೇವೆ. ಹಾಗಾಗಲೂ ನಾನು ಅವಕಾಶ ಕೊಡುವುದಿಲ್ಲ. ಈ ಮಾತನ್ನು ನಾನು ಪುನರಾವರ್ತಿಸುತ್ತೇನೆ. ಅವರಿಗೆ ವಿಮೋಚನೆಯನ್ನು ತಂದುಕೊಡುವಂಥ ಹಾಗೂ ನನ್ನ ಮೇಲೆ ಅಧಿಪತ್ಯ ವನ್ನು ಹೊರಿಸುವಂಥ ಸಂವಿಧಾನ ಅಂಗೀಕೃತವಾಗಲು ನಾನು ಅವಕಾಶ ಕೊಡಲಾರೆ. ನಾನು ಸ್ವತಂತ್ರನೂ, ಸಮಾನಭಾಗಿಯೂ ಆಗಿರಲು ಅವಕಾಶವಿಲ್ಲದಿರುವಂಥ ಸಂವಿಧಾನ ಅಂಗೀಕೃತವಾಗಲು ಅವಕಾಶ ಕೊಡುವುದಿಲ್ಲ. ಅದಕ್ಕೆ ನಾನು ಎಂದಿಗೂ ಅವಕಾಶ ಕೊಡುವುದಿಲ್ಲ. ಮಾನ್ಯರೆ, ನನ್ನ ಈ ಮಾತುಗಳು ತುಂಬಾ ಕಟುವಾಗಿವೆ ಎಂಬುದು ನನಗೆ ಗೊತ್ತು. ಆದರೆ ಐರ್ಲೆಂಡಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್‌ಸ್ಟರ್ ಪ್ರತಿನಿಧಿಗಳು ಬಳಸಿದ್ದ ಮಾತುಗಳಿಗಿಂತ ನನ್ನ ಈ ಮಾತುಗಳು ಹೆಚ್ಚು ಕಟುವಾಗಿಲ್ಲ ಎಂಬುದನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ನೆನಪು ಮಾಡಿಕೊಡಬಯಸುತ್ತೇನೆ. ತನ್ನ ಸಮುದಾಯದ ಹಕ್ಕುಗಳಿಗಾಗಿ ಹೋರಾಡಲು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬ ಈನಾಡಿನಲ್ಲಿ ಕಟಿಬದ್ಧನಾಗಿ ನಿಂತಾಗ ಇಡೀ ಜನಜಂಗುಳಿಯೇ ಅವನ ವಿರುದ್ಧವಾಗಿ ಬೊಬ್ಬೆಹಾಕುತ್ತದೆ.

ಅವನನ್ನು ಜಾತೀಯವಾದಿಯೆಂದು ಬಣ್ಣಿಸುತ್ತದೆ. ಭಾರತವಿರೋಧಿಯೆಂದು ಬಣ್ಣಿಸಲಾಗುತ್ತದೆ. ಈ ನಾಡಿನ ವಿನಾಶಕ್ಕಾಗಿ ದುಡಿಯುತ್ತಿರುವ ಅಧಿಕಾರಷಾಹಿಯೊಂದರ ಕೈಗೊಂಬೆ ಎಂಬುದಾಗಿ ಅವನನ್ನು ಬಣ್ಣಿಸುತ್ತದೆ ಎಂಬುದನ್ನು ನಾನು ಬಲ್ಲೆ. ಮಾನ್ಯರೆ, ಈ ಮನೋವೃತ್ತಿಯನ್ನು ತಳೆಯುತ್ತಿರುವ ಜನ ಜಂಗುಳಿಗೆ ನಾನು ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಮಾನ್ಯರೆ, ಉಲ್‌ಸ್ಟರ್ ಪ್ರತಿನಿಧಿಗಳು ತಳೆದಿದ್ದ ನಿಲುವಾದರೂ ಯಾವುದು? ದಕ್ಷಿಣ ಐರ್ಲೆಂಡಿನ ರಾಷ್ಟ್ರೀಯವಾದಿಗಳನ್ನು ಉಲ್‌ಸ್ಟರ್ ಸಮುದಾಯವನ್ನು ಒಂದುಗೂಡಿಸುವ ಸಲುವಾಗಿ ದಿವಂಗತ ಏಳನೆಯ ಎಡ್ವರ್ಡ್ ದೊರೆಯ ಸೂಚನೆ ಮೇರೆಗೆ ಬಕಿಂಗ್ ಹ್ಯಾಮ್ ಅರಮನೆಯಲ್ಲಿ ನಡೆಸಿದ ಸಮ್ಮೇಳನದ ನಡೆವಳಿಗಳನ್ನು ಓದಿದ ನೆನಪು ನನಗಿದೆ. ದಕ್ಷಿಣ ಐರಿಷ್ ಸಮುದಾಯದ ಬಹುಸಂಖ್ಯಾತರ ಆಧಿಪತ್ಯಕ್ಕೆ ಉಲ್‌ಸ್ಟರ್ ಸಮುದಾಯವನ್ನು ಒಳಪಡಿಸಬೇಕೆ ಎಂಬುದು ಆಗಿನ ಪ್ರಶ್ನೆಯಾಗಿತ್ತು. ದಕ್ಷಿಣ ಐರ್ಲೆಂಡಿನ ರಾಷ್ಟ್ರೀಯವಾದಿಗಳು ಉಲ್‌ಸ್ಟರ್ ಸಮುದಾಯದ ಮುಂದಿರಿಸಿದ ಪ್ರಸ್ತಾವಗಳಾದರೂ ಯಾವುವು? ಅನೇಕರಿಗೆ ಬಹುಶಃ ಆ ಇತಿಹಾಸದ ಅರಿವಿಲ್ಲದಿರಬಹುದು. ಆ ಇತಿಹಾಸವನ್ನು ಬಲ್ಲವರಿಗೆ ಅದು ಗೊತ್ತು, ಸಂವಿಧಾನದ ವ್ಯಾಪ್ತಿಗೆ ಒಳಪಡುವಂತೆ ಕಾರ್ಸೊನೈಟರ ಮನವೊಲಿಸುವ ಸಲುವಾಗಿ ಐರ್ಲೆಂಡಿನ ರಾಷ್ಟ್ರೀಯತಾವಾದಿ ಪಕ್ಷದ ನಾಯಕರಾಗಿದ್ದ ಜಾನ್ ರೆಡ್ಮಂಡ್ ಅವರು ತಮ್ಮಿಂದಾದ ಎಲ್ಲ ಪ್ರಯತ್ನವನ್ನೂ ಮಾಡಿದರು ಎಂಬುದು ಆ ಇತಿಹಾಸ ಬಲ್ಲವರಿಗೆಲ್ಲ ಗೊತ್ತು. ಆಗ ಅವರು ಹೀಗೆಂದಿದ್ದರು: "ನಿಮಗೆ ಇಷ್ಟ ಬಂದಷ್ಟು ಆದ್ಯತೆಯನ್ನು (Weightage) ನೀವು ಕೊಡಬಹುದು. ಅದನ್ನು ನಾನು ತಪ್ಪಾಗಿ ತಿಳಿಯುವುದಿಲ್ಲ." ಭಾರತದಲ್ಲಿ ಮಾತ್ರವೇ ಆದ್ಯತೆಯ ಬಗ್ಗೆ ಮಾತನಾಡಲಾಗುತ್ತದೆ ಎಂಬ ಭ್ರಮೆಯಲ್ಲಿ ನಾವು ಬಾಳುವುದು ಬೇಡ, ಐರ್ಲೆಂಡಿನಲ್ಲಿಯೂ ಆದ್ಯತೆಯ ಬಗ್ಗೆ ವ್ಯಾಪಕವಾಗಿ ಮಾತನಾಡಲಾಗುತ್ತಿತ್ತು. ಉಲ್‌ಸ್ಟರ್ ಸಮುದಾಯದವರಿಗೆ ಆದ್ಯತೆಯನ್ನು ಕೊಡಲು ರೆಡ್‌ಮಂಡ್ ಅವರು ಸಿದ್ಧರಾಗಿದ್ದರು. ಉಲ್‌ಸ್ಟರ್ ಸಮುದಾಯಕ್ಕೆ ವಿರುದ್ಧವಾಗಿ ಯಾವುದೇ ಬಗೆಯ ಪಕ್ಷಪಾತ ನಡೆಯುವುದನ್ನು ತಡೆಗಟ್ಟಲು ಅಧಿಕಾರಿಯೊಬ್ಬನಿಗೆ ಸಂವಿಧಾನಾತ್ಮಕವಾದ ಅಧಿಕಾರವನ್ನು ಕೊಡಲೂ ಅವರು ಸಿದ್ಧರಾಗಿದ್ದರು. ಐರ್ಲೆಂಡಿನ ರಾಷ್ಟ್ರೀಯತಾವಾದಿಗಳು ಉಲ್‌ಸ್ಟರ್ ಸಮುದಾಯದವರಿಗೆ ಇನ್ನೊಂದು ಉಪಬಂಧವನ್ನು ಕಲ್ಪಿಸಿಕೊಡಲೂ ಸಿದ್ಧರಾಗಿದ್ದರು. ಅದೇನೆಂದರೆ ಹತ್ತು ವರ್ಷಗಳ ತರುವಾಯವೂ, ನಿಸ್ಸಂದೇಹವಾಗಿ ಬಹುಸಂಖ್ಯಾತರೇ ಆಗಿ ಉಳಿಯುವ ದಕ್ಷಿಣ ಐರಿಷ್ ಸಮುದಾಯ ತಮ್ಮ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡಿದೆ, ಉಲ್‌ಸ್ಟರ್ ಪ್ರಾಂತ್ಯದ ಪ್ರಾಟೆಸ್ಟಂಟರನ್ನು ಅನುಚಿತ ರೀತಿಯಲ್ಲಿ ನಡೆಸಿಕೊಂಡಿದೆ ಮತ್ತು ಹಿಂಸೆಗೊಳಪಡಿಸಿದೆ ಎಂದೇನಾದರೂ ಕಂಡುಬಂದಲ್ಲಿ, ಉಲ್‌ಸ್ಟರ್ ಸಮುದಾಯದವರಿಗೆ ಸಂವಿಧಾನದ ವ್ಯಾಪ್ತಿಯಿಂದ ತಮ್ಮನ್ನು ಹೊರತಾಗಿಸಿಕೊಳ್ಳುವ ಹಕ್ಕು ಇರುತ್ತದೆ. ಮಾನ್ಯರೆ, ಅವೆಲ್ಲ ಅದ್ಭುತವಾದ ಉಪಬಂಧಗಳೇ ಆಗಿದ್ದವು. ಈ ಪ್ರಸ್ತಾಪಗಳಿಗೆ ಉಲ್‌ಸ್ಟರ್ ಸಮುದಾಯದವರು ಕೊಟ್ಟ ಉತ್ತರ ಏನು? ಉಲ್‌ಸ್ಟರ್ ಸಮುದಾಯದವರು ರೆಡ್‌ಮಂಡ್ ಅವರಿಗೆ ಕೊಟ್ಟ ಉತ್ತರ ಇದು: "ನಿಮ್ಮ ರಕ್ಷಣೆಗಳನ್ನು ನೀವೇ ಇಟ್ಟುಕೊಳ್ಳಿ. ನೀವು ನಮ್ಮನ್ನಾಳುವುದು ನಮಗೆ ಬೇಕಿಲ್ಲ." ನಾವು ಹಾಗೆಂದು ಹೇಳುತ್ತಿದ್ದೇವೆಯೇ? ನಾನಿಲ್ಲಿ ಹೇಳಿದ ಕಥೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು, "ನಿಮ್ಮ ರಕ್ಷಣೆಗಳನ್ನು ನೀವೇ ಇಟ್ಟುಕೊಳ್ಳಿ, ನೀವು ನಮ್ಮನ್ನಾಳುವುದು ಬೇಕಿಲ್ಲ" ಎಂದು ಹೇಳಲು ನನಗೆ ಅಧಿಕಾರವಿರಲಾರದೆ? ನಾನು ಹಾಗೇನೂ ಹೇಳು ತ್ತಿಲ್ಲ. ನಾನು ಹೇಳುತ್ತಿರುವುದು ಇಷ್ಟು: ನಾನು ಅಗತ್ಯವೆಂದು ಭಾವಿಸಿರುವ ನನ್ನ ರಕ್ಷಣೆಗಳನ್ನು ನನಗೆ ಕೊಡಿ, ನೀವು ನಿಮ್ಮ ಪ್ರಜಾತಂತ್ರವನ್ನು ಇಟ್ಟುಕೊಳ್ಳಿ", ಈ ನಿಲುವಿನ ಬಗ್ಗೆ ಯಾರೂ ಜಗಳವಾಡಲಾರರು ಎಂದು ನಾನು ನಂಬಿದ್ದೇನೆ.

ಕೊನೆಯದಾಗಿ, ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಈ ನಾಡಿನಲ್ಲಿ ನನ್ನ ನಿಲುವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂಬುದು ನನಗೆ ಗೊತ್ತು. ಆದ್ದರಿಂದ ನನ್ನ ವೈಯಕ್ತಿಕ ಹಿತಾಸಕ್ತಿಗಳು ಮತ್ತು ಒಟ್ಟಾರೆ ನಾಡಿನ ಹಿತಾಸಕ್ತಿಗಳ ನಡುವೆ ಸಂಘರ್ಷ ಉಂಟಾದಾಗಲೆಲ್ಲ ನಾಡಿನ ಹಿತಾಸಕ್ತಿಗಳನ್ನು ನನ್ನವೇ ಆದ ವೈಯಕ್ತಿಕ ಹಿತಾಸಕ್ತಿಗಳಿಗಿಂತಲೂ ಮೇಲೆ ಇರಿಸಿಕೊಂಡು ಬಂದಿದ್ದೇನೆಂದು ಹೇಳಬಯಸುತ್ತೇನೆ (ಕೇಳಿ, ಕೇಳಿ). ಖಾಸಗಿ ಲಾಭದ ಹಾದಿಯನ್ನು ನಾನೆಂದೂ ಅರಸಿಕೊಂಡು ಹೋಗಿಲ್ಲ. ಇತರರು ಮಾಡುವಂತೆ ನಾನೂ ಮಾಡಿದ್ದರೆ, ನಾನು ಬೇರಾವುದೋ ಎಡೆಯಲ್ಲಿ ಇರುತ್ತಿದ್ದೆ. ಅದರ ಬಗ್ಗೆ ನಾನೇನೂ ಹೇಳಬಯಸುವುದಿಲ್ಲ. ಆದರೆ, ನಾನು ಹಾಗೆ ಮಾಡಲಿಲ್ಲವೆಂದಷ್ಟೇ ಹೇಳಬಯಸುತ್ತೇನೆ. ದುಂಡು ಮೇಜಿನ ಸಮ್ಮೇಳನದಲ್ಲಿ ನನ್ನ ಜೊತೆಯಲ್ಲಿದ್ದ ನನ್ನ ಸಹೋದ್ಯೋಗಿಗಳು ನನ್ನ ಈ ಮಾತನ್ನು– ನಾಡಿನ ಹಿತಾಸಕ್ತಿಗಳ ವಿಷಯ ಬಂದಾಗ, ನಾನೆಂದು ಹಿಂದೆ ಬಿದ್ದಿಲ್ಲವೆಂಬುದನ್ನು ಬೆಂಬಲಿಸುತ್ತಾರೆಂದು ನಂಬಿದ್ದೇನೆ. ಸಮ್ಮೇಳನದಲ್ಲಿ ನಾನೊಬ್ಬ ಪೇಚಿನ ಪ್ರಶ್ನೆಗಳನ್ನು ಕೇಳುವ ವ್ಯಕ್ತಿಯಾಗಿದ್ದೇನೆಂದು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದ ಅನೇಕ ಐರೋಪ್ಯ ಸದಸ್ಯರು ಕಿರಿಕಿರಿಗೊಂಡಿದ್ದರು. ನಾನು ಇನ್ನೊಂದು ವಿಚಾರಕ್ಕೆ ನಿಷ್ಠನಾಗಿದ್ದೇನೆಂಬ ವಿಷಯದಲ್ಲಿ ಈ ನಾಡಿನ ಜನರ ಮನಸ್ಸಿನಲ್ಲಿ ಯಾವುದೇ ಸಂದೇಹವನ್ನು ಉಳಿಸಬಯಸುವುದಿಲ್ಲ. ನಾನು ಆ ವಿಚಾರಕ್ಕೆ ಬದ್ಧನಾಗಿದ್ದೇನೆ. ಅದನ್ನು ನಾನೆಂದೂ ಕೈಬಿಡಲಾರೆ. ನಾನು ಹುಟ್ಟಿ ಬಂದಿರುವ ಸಮುದಾಯವನ್ನು, ನಾನು ಸೇರಿರುವ ಎಂದೂ ಪರಿತ್ಯಜಿಸದಿರುವ ಆ ಅಸ್ಪೃಶ್ಯ ಸಮುದಾಯಕ್ಕೆ ನಾನು ನಿಷ್ಠನಾಗಿದ್ದೇನೆ. ಈ ನಾಡಿನ ಮತ್ತು ಅಸ್ಪೃಶ್ಯರ ಹಿತಾಸಕ್ತಿಗಳ ನಡುವೆ ಯಾವಾಗಲಾದರೂ ಸಂಘರ್ಷ ಉಂಟಾದಲ್ಲಿ, ನನ್ನ ಮಟ್ಟಿಗೆ ಅಸ್ಪೃಶ್ಯರ ಹಿತಾಸಕ್ತಿಗಳೇ ನಾಡಿನ ಹಿತಾಸಕ್ತಿಗಳನ್ನು ಮೀರಿ ನಿಲ್ಲುತ್ತವೆ ಎಂದು ಈ ಸದನಕ್ಕೆ ಸಾಧ್ಯವಿದ್ದಷ್ಟು ಪ್ರಬಲವಾದ ಮಾತುಗಳಲ್ಲಿ ಹೇಳಬಯಸುತ್ತೇನೆ. ನಾಡಿನ ಹೆಸರಿನಲ್ಲಿ ಮಾತನಾಡುತ್ತಿದ್ದ ಎಂಬ ಏಕೈಕ ಕಾರಣಕ್ಕಾಗಿಯೇ ದಬ್ಬಾಳಿಕೆಯನ್ನು ನಡೆಸುತ್ತಿರುವ ಬಹುಸಂಖ್ಯಾತರನ್ನು ನಾನು ಬೆಂಬಲಿಸಹೋಗುವುದಿಲ್ಲ. ನಾನು ಹಾಗೆಂದೂ ಮಾಡುವುದಿಲ್ಲ. ಇದೇ ನನ್ನ ನಿಲುವು ಎಂಬುದನ್ನು ಇಲ್ಲಿರುವ ಹಾಗೂ ಬೇರೆಡೆಗಳಲ್ಲಿರುವ ಎಲ್ಲರೂ ಅರ್ಥ ಮಾಡಿಕೊಳ್ಳಲಿ, ನನ್ನ ಮತ್ತು ನಾಡಿನ ಪ್ರಶ್ನೆ ಬಂದಾಗ, ನಾಡಿನ ಹಿತಾಸಕ್ತಿಗೆ ಅಗ್ರಮಾನ್ಯತೆ ದೊರೆಯುತ್ತದೆ. ನಾಡಿನ ಮತ್ತು ದಲಿತ ವರ್ಗಗಳ ಪ್ರಶ್ನೆ ಬಂದಾಗ, ದಲಿತ ವರ್ಗಗಳ ಹಿತಾಸಕ್ತಿಗೆ ಅಗ್ರಮಾನ್ಯತೆ ದೊರೆಯುತ್ತದೆ– ನಾಡಿನ ಹಿತಾಸಕ್ತಿಗೆ ಅಗ್ರಮಾನ್ಯತೆ ಖಂಡಿತವಾಗಿಯೂ ಪ್ರಾಶಸ್ತ್ಯ ದೊರೆಯುವುದಿಲ್ಲ. ನನ್ನ ಈ ಎರಡು ತಿದ್ದುಪಡಿಗಳ ಬಗ್ಗೆ ನಾನು ಹೇಳಬೇಕೆಂದಿದ್ದುದೆಲ್ಲ ಇಷ್ಟೇ.

ಈಗ ಇತರ ತಿದ್ದುಪಡಿಗಳ ಬಗ್ಗೆ ಒಂದೆರಡು ಮಾತುಗಳು. ಕಾಲಮೀರಿ ಸದನವನ್ನು ಇಲ್ಲಿ ಕಟ್ಟಿಹಾಕಬೇಕೆಂದೇನೂ ನಾನು ಉದ್ದೇಶಿಸಿಲ್ಲ. ಏನೇ ಏರ್ಪಾಡುಗಳನ್ನು ಮಾಡಬೇಕಾದರೂ ಪ್ರಾಂತೀಯ ಸರ್ಕಾರಗಳ ಸಮ್ಮತಿಯೊಂದಿಗೆ ಮಾಡಬೇಕೆಂದು ಹೇಳುವ ಒಂದು ಗೊತ್ತುವಳಿಯ ಒಂದು ಭಾಗಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಪ್ರಧಾನ ಮಂತ್ರಿಗಳು ಮಾಡಿದ ಟೀಕೆ–ಟಿಪ್ಪಣಿಗಳು ನನಗೆ ಆಶ್ಚರ್ಯವನ್ನು ಉಂಟುಮಾಡಿದವು. ನನ್ನ ಸನ್ಮಾನ್ಯ ಸ್ನೇಹಿತರಾದ ಶ್ರೀ ಮುಕದಮ್ ಅವರು ಮಂಡಿಸಲಿರುವ ತಿದ್ದುಪಡಿಯ ವಿಚಾರ ಅವರಿಗೆ ಗೊತ್ತಿರಲಿಲ್ಲ ಎಂಬುದು ನನಗೆ ಗೊತ್ತಿದೆ. ಆದ್ದರಿಂದ ಗೊತ್ತುವಳಿಯ ಆ ಭಾಗಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಟೀಕೆ–ಟಿಪ್ಪಣಿಗಳನ್ನು ಮಾಡುವುದಿಲ್ಲ. ಇಷ್ಟಾಗಿಯೂ ಗೊತ್ತುವಳಿಯ ಆ ಭಾಗವನ್ನು ನಾನು ತತ್ವಶಃ ಒಪ್ಪುವುದಿಲ್ಲವೆಂದು ಹೇಳಲೇಬೇಕು.

ಮಾನ್ಯರೆ, ಕುಳಿತುಕೊಳ್ಳುವುದಕ್ಕೆ ಮೊದಲು ಈ ಸದನದ ಮುಂದಿರುವ ಇನ್ನೂ ಕೆಲವು ತಿದ್ದುಪಡಿಗಳ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸನ್ಮಾನ್ಯ ಸದಸ್ಯರೂ, ವಿರೋಧಪಕ್ಷದ ನಾಯಕರೂ ಆಗಿರುವ ನನ್ನ ಸ್ನೇಹಿತರು ಮಂಡಿಸಲಿರುವ ತಿದ್ದುಪಡಿಯತ್ತ ಮೊದಲಿಗೆ ನನ್ನ ಗಮನಹರಿಸಬಯಸುತ್ತೇನೆ. ಆ ತಿದ್ದುಪಡಿಗೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿಗಳು ಒಂದು ಸಂಗತಿಯನ್ನು ಗಮನಿಸಬೇಕೆಂದು ಪ್ರಾರ್ಥಿಸುತ್ತೇನೆ. ಅವರು ಆ ಅಂಶವನ್ನು ಗಮನಿಸಿಲ್ಲವೆಂದು ನಾನು ಭಾವಿಸಿದ್ದೇನೆ. ಪ್ರಜಾತಂತ್ರ ವಿಫಲವಾಗಿದೆ ಎಂದು ವಿರೋಧಪಕ್ಷದ ನಾಯಕರು ತಮ್ಮ ತಿದ್ದುಪಡಿಯಲ್ಲಿ ಹೇಳಿದ್ದಾರೆ ಎಂಬುದು ನಿಜ. ಮಾನ್ಯರೆ, ವಿರೋಧಪಕ್ಷದ ನಾಯಕರ ತಿದ್ದುಪಡಿಯ ವಿಷಯದಲ್ಲಿ ತಮ್ಮ ಟೀಕೆ–ಟಿಪ್ಪಣಿಗಳನ್ನು ಮಾಡುವ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಗಮನಿಸಬೇಕೆಂದು ನಾನು ಬಯಸುವ ಸಂಗತಿ ಇದು: ಈಗ ಅವರು ಪ್ರಜಾತಂತ್ರಕ್ಕೆ ವಿರುದ್ಧವಾಗಿದ್ದಾರೆ ಎಂಬುದನ್ನು ಕಂಡಿದ್ದೇವೆ. ಮಾನ್ಯರೆ, ಆದರೆ ಅವರು ಸ್ವಯಮಾಡಳಿತಕ್ಕೆ ವಿರುದ್ಧವಾಗಿಲ್ಲದಿರಬಹುದು. ಎಷ್ಟೆಂದರೂ ಪ್ರಜಾತಂತ್ರ, ಏಕ ವ್ಯಕ್ತಿ ಪ್ರಭುತ್ವ, ಗಣತಂತ್ರವಾದ– ಇವೆಲ್ಲ ಸರ್ಕಾರದ ಬೇರೆ ಬೇರೆ ಬಗೆಗಳು. ಅವೆಲ್ಲ ಸ್ವಯಮಾಡಳಿತದ ಅಡಿಯಲ್ಲೇ ಬರುತ್ತದೆ. ವಿರೋಧಪಕ್ಷದ ನಾಯಕರಾದ ಸನ್ಮಾನ್ಯ ಸದಸ್ಯರು ಈ ನಾಡು ಸ್ವಯಮಾಡಳಿತಕ್ಕೆ ಅರ್ಹವಾಗಿಲ್ಲವೆಂಬ ದೃಷ್ಟಿಕೋನವನ್ನು ಎಲ್ಲಿಯವರೆಗೆ ತಳೆಯುವುದಿಲ್ಲವೋ ಅಲ್ಲಿಯವರೆಗೆ ಆ ತಿದ್ದುಪಡಿಯಲ್ಲಿ ಬಳಸಲಾಗಿರುವ ದುರದೃಷ್ಟಕರವಾದ ಭಾಷೆಗೆ ಅತಿಯಾದ ಅಪವಾದವನ್ನು ಹೊರಿಸಬಾರದೆಂದು ನಾನಾದರೂ ಭಾವಿಸಿದ್ದೇನೆ. ಎಷ್ಟೆಂದರೂ ಅವರು ನಮ್ಮೊಡನಿದ್ದಾರೆ.

ಪ್ರಜಾತಂತ್ರವೇ ಏಕೈಕ ಪರಿಹಾರವೆಂದು ನನ್ನ ಸನ್ಮಾನ್ಯ ಸ್ನೇಹಿತರಾದ ಪ್ರಧಾನಮಂತ್ರಿಗಳು ಒತ್ತಿ ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಸನ್ಮಾನ್ಯ ಪ್ರಧಾನ ಮಂತ್ರಿಗಳ ಪಕ್ಷಕ್ಕೆ ಸೇರಿದ ನಾಯಕರು ತ್ರಿಪುರ ಕಾಂಗ್ರೆಸ್‌ನಲ್ಲಿ (ಮಹಾಧಿವೇಶನದಲ್ಲಿ) ಮಾಡಿದ ಭಾಷಣಗಳನ್ನು ಓದಿದ್ದು ನನಗೆ ನೆನಪಿದೆ. ದುರದೃಷ್ಟವಶಾತ್ ನನ್ನ ಬಳಿ ಇದ್ದ ಆ ಸಂಪುಟವನ್ನು ಇಂದು ತರಲು ನಾನು ಮರೆತೆ. ಒಳ್ಳೆಯದೇ ಆಯಿತು. ಅದರಿಂದ ಕಾಲವನ್ನುಳಿಸಲು ನನಗೆ ಸಾಧ್ಯವಾಯಿತು. ತ್ರಿಪುರ ಮಹಾಧಿವೇಶನದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳ ಸ್ನೇಹಿತರಾದ ಪಂಡಿತ್ ಗೋವಿಂದ ವಲ್ಲಭ್ ಪಂತ್, ಶ್ರೀ ರಾಜಗೋಪಾಲಾಚಾರಿ ಪಂಡಿತ್ ಜವಾಹರಲಾಲ್ ನೆಹರೂ ಮೊದಲಾದವರೆಲ್ಲ ಮುಸಲೋನಿ ಮತ್ತು ಹಿಟ್ಲರ್ ಅವರ ಗುಣಗಾನ ಮಾಡುತ್ತಿದ್ದಾರೆಂದು ನಂಬಿದ್ದೇನೆ.

ಸನ್ಮಾನ್ಯರಾದ ಶ್ರೀ ಬಿ. ಮೊರಾರ್ಜಿ ಆರ್. ದೇಸಾಯಿ: ಯಾವಾಗ?

ಡಾ. ಬಿ. ಆರ್. ಅಂಬೇಡ್ಕರ್: ಬೇಕೆಂದರೆ ನಾನು ಅಧ್ಯಾಯಗಳನ್ನು ಮತ್ತು ಪದಗಳನ್ನು ಉದ್ಧರಿಸುತ್ತೇನೆ. ವಾಸ್ತವವಾಗಿ ನಾನು ಆ ಪುಸ್ತಕವನ್ನು ತರಬೇಕೆಂದಿದ್ದೆ. ಆದರೆ ಮರೆತುಬಿಟ್ಟೆ.

ಸನ್ಮಾನ್ಯರಾದ ಶ್ರೀ ಬಿ. ಜಿ. ಖೇರ್: ನಾನು ಅಲ್ಲಿದ್ದೆ ಹಾಗೂ ಆ ಭಾಷಣಗಳನ್ನು ಕೇಳಿದ್ದೇನೆ. ಸನ್ಮಾನ್ಯ ಸದಸ್ಯರು ಹೇಳುತ್ತಿರುವದು ಸರಿಯಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನನ್ನನ್ನು ಕ್ಷಮಿಸಿ, ಈಗ ನನ್ನ ಬಳಿ ಆ ಸಂಪುಟವಿಲ್ಲ. ಅದು ಇದ್ದಿದ್ದರೆ ಈ ವಿವಾದವನ್ನು ನಾವು ಈಗಲೇ ಇತ್ಯರ್ಥಪಡಿಸಿಬಿಡಬಹುದಾಗಿತ್ತು.

ಸನ್ಮಾನ್ಯ ಸಭಾಧ್ಯಕ್ಷರು: ಅದಕ್ಕೀಗ ಸಮಯವಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೇಳಬಯಸಿರುವುದೆಲ್ಲ ಇಷ್ಟೆ: ಭಾರತದಲ್ಲಿನ ಜನತೆ ಎಲ್ಲಿಯವರೆಗೆ ಸ್ವಯಮಾಡಳಿತವನ್ನು ಹೊಂದಿರುತ್ತಾರೋ ಅಲ್ಲಿಯವರೆಗೆ– ಆ ಸ್ವಯಮಾಡಳಿತ ಪ್ರಜಾತಂತ್ರದ ರೂಪವನ್ನು ಪಡೆದುಕೊಳ್ಳುತ್ತದೆಯೋ, ಏಕವ್ಯಕ್ತಿ ಪ್ರಭುತ್ವದ ರೂಪವನ್ನು ಪಡೆದುಕೊಳ್ಳುತ್ತದೆಯೋ ಅಥವಾ ಬೇರೆ ಯಾವುದಾದರೂ ರೂಪವನ್ನು ಪಡೆದುಕೊಳ್ಳುತ್ತದೆಯೋ ಎಂಬುದು ವಿವರಗಳಿಗೆ ಸಂಬಂಧಿಸಿದ ವಿಚಾರವಾಗಬೇಕಾಗಿದೆ. ನಾವು ಅದರ ಬಗ್ಗೆ ಜಗಳವಾಡಬೇಕಾದ್ದಿಲ್ಲ. ಹೀಗಾಗಿ ನಾನಾಗಲೇ ಹೇಳಿದಂತೆ, ಸ್ವಲ್ಪಮಟ್ಟಿನ ದುರದೃಷ್ಟಕರವಾದ ಭಾಷೆಯನ್ನುಳ್ಳ, ಆ ಗೊತ್ತುವಳಿಯ ಬಗ್ಗೆ ತೀರ್ಮಾನಕ್ಕೆ ಬರುವಲ್ಲಿ ಅವರ ಉದ್ದೇಶವನ್ನು ತಪ್ಪಾಗಿ ಅರ್ಥೈಸಬಾರದು.

ಪ್ರಗತಿಶೀಲ ಪಕ್ಷ ಮಂಡಿಸಿರುವ ತಿದ್ದುಪಡಿಗೆ ಸಂಬಂಧಿಸಿದಂತೆ ಅವರು ಮಂಡಿಸಿರುವ ತಿದ್ದುಪಡಿಯ ಬಗ್ಗೆ ಅವರನ್ನು ಅಭಿನಂದಿಸಬೇಕಾಗಿದೆಯೆಂದು ಹೇಳುವಲ್ಲಿ ನಾನು ಪ್ರಧಾನ ಮಂತ್ರಿಗಳೊಡನೆ ಒಂದುಗೂಡುತ್ತೇನೆ. ಅವರ ಗೊತ್ತುವಳಿಯ ಮುಖ್ಯ ಆಧಾರದ ವಿಷಯದಲ್ಲಿ ನಾನು ಒಮ್ಮತವನ್ನುಳ್ಳವನಾಗಿದ್ದೇನೆ. ಆದರೆ, ಒಂದು ತಿದ್ದುಪಡಿಗೆ ನಾನು ಬೆಂಬಲವನ್ನು ಕೊಡಲಾರೆ. ಅದು ಸಚಿವ ಸಂಪುಟ ರಾಜೀನಾಮೆ ಕೊಡುವ– ಅಥವಾ– ಇಂಥ ಯಾವುದಾದರೂ ಕ್ರಮವನ್ನು ಕೈಗೊಳ್ಳುವ ಉದ್ದೇಶವನ್ನು ಈ ಸದನ ಅನುಮೋದಿಸುತ್ತದೆ ಎಂಬ ಆಶಯವನ್ನುಳ್ಳ ತಿದ್ದುಪಡಿ. ಮಾನ್ಯರೆ, ನಾನು ಹೇಳಬಯಸುವುದು ಇಷ್ಟು: ಇದು ನಿಜವಾಗಿಯೂ ತಮ್ಮ ಪಕ್ಷದ ವರಿಷ್ಠ ಸಮಿತಿಯ ಪರಿಗಣನೆಗೆ ಅರ್ಹವಾದ ವಿಷಯವೆಂದು ನನ್ನ ಸನ್ಮಾನ್ಯ ಗೆಳೆಯರಾದ ಪ್ರಧಾನ ಮಂತ್ರಿಗಳು ಒಪ್ಪಬಹುದು. ಯಾವನೇ ರಾಜಕಾರಣಿ ಆಗಬಹುದಾಗಿರುವಂತೆ, ಅವರು ನಿಜಕ್ಕೂ ಒಬ್ಬ ಒಳ್ಳೆಯ ರಾಜಕಾರಣಿಯೇ ಆಗಿದ್ದಾರೆ. ಅದು ಈ ಸದನ ತೀರ್ಮಾನಿಸಬೇಕಾದ ವಿಷಯವಲ್ಲ. ಸಚಿವ ಸಂಪುಟ ಹೊರಹೋಗಬೇಕೇ ಅಥವಾ ಇಲ್ಲವೇ ಎಂಬುದು ಸಂಪೂರ್ಣವಾಗಿ ಪಕ್ಷದ ತೀರ್ಮಾನಕ್ಕೆ ಬಿಟ್ಟ ವಿಚಾರ. ಹೊರಹೋಗುವುದಕ್ಕೆ ಅವರಿಗೆ ನನ್ನ ಅನುಮತಿಯಾದರೂ ಏಕೆ ಬೇಕು.

ಸನ್ಮಾನ್ಯ ಶ್ರೀ ಬಿ. ಜಿ. ಖೇರ್: ನನಗೇನೂ ಬೇಕಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅವರಿಗೇಕೆ ಬೇಕು? ಅವರ ಮುಂದೆ ನಾನು ಇನ್ನೊಂದು ಒಗಟನ್ನಿರಿಸುತ್ತೇನೆ. ನಾನು ಆಹ್ವಾನಿಸದ ಹೊರತು ಸಚಿವ ಸಂಪುಟ ಮತ್ತೆ ಅಧಿಕಾರಕ್ಕೆ ಬರುವಂತಿಲ್ಲ ಎಂಬ ಅರ್ಥದ ತಿದ್ದುಪಡಿಯೊಂದನ್ನು ನಾವು ತರುವುದಾದರೆ, ಅವರು ಅದನ್ನು ಒಪ್ಪಿಕೊಳ್ಳುತ್ತಾರೆಯೆ? ಈ ರೀತಿಯಲ್ಲಿ ಅವರು ಬದ್ಧರಾಗಬಯಸುವುದಿಲ್ಲವೆಂದು ನಾನು ನಂಬಿದ್ದೇನೆ. ಹೊರಹೋಗಲು ನನ್ನ ಅನುಮತಿ ನಿಮಗೆ ಬೇಕಾಗುವುದಾದರೆ, ನನ್ನ ಅನುಮತಿಯನ್ನು ಅವಲಂಬಿಸಿ ನೀವು ಮರುಪ್ರವೇಶ ಮಾಡುವುದಾದರೆ ನನಗೆ ಒಂದಿಷ್ಟು ಗೌರವ ತೋರಿದಂತಾಗುತ್ತದೆ. ಆದರೆ, ನೀವು ಅದನ್ನು ಮಾಡುವುದಿಲ್ಲ. ಹೀಗಾಗಿ ಆ ತಿದ್ದುಪಡಿಯನ್ನು ವಿರೋಧಿಸಲು ನಾನು ನನ್ನ ಮನಃಸಾಕ್ಷಿಯಿಂದ ಬದ್ಧನಾಗಿದ್ದೇನೆಂದು ಭಾವಿಸುತ್ತೇನೆ.

ಮಾನ್ಯರೆ, ನೀವು ನನ್ನ ವಿಷಯದಲ್ಲಿ ತೋರಿರುವ ಅನುಗ್ರಹಕ್ಕಾಗಿ ನಾನು ನಿಮಗೆ ವಂದಿಸುತ್ತೇನೆ (ಚಪ್ಪಾಳೆ).

ಸನ್ಮಾನ್ಯ ಸಭಾಧ್ಯಕ್ಷರು: ಕಾಲಾವಕಾಶವನ್ನು ಕಡಿಮೆ ಮಾಡಿಕೊಳ್ಳಬೇಕೆಂಬ ನನ್ನ ವಿನಂತಿಯನ್ನು ನಾನು ಮತ್ತೆ ಪುನರಾವರ್ತಿಸುತ್ತೇನೆ. ಸನ್ಮಾನ್ಯ ಸದಸ್ಯರಾದ ಡಾ. ಅಂಬೇಡ್ಕರ್ ಅವರು ಒಂದೂವರೆ

ಘಂಟೆ ಕಾಲ ತೆಗೆದುಕೊಂಡಿದ್ದಾರೆ. ಇತರ ಸದಸ್ಯರು ತಮ್ಮ ಕಾಲಾವಕಾಶವನ್ನು ಈಗ ಕಡಿಮೆ ಮಾಡಿ ಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ನಾನು ಕ್ಷಮೆ ಕೋರುತ್ತೇನೆ.

# ೪೭

# *ಯುದ್ಧದಲ್ಲಿ ಭಾಗವಹಿಸುವ ಬಗ್ಗೆ: ೩

ಸನ್ಮಾನ್ಯ ಶ್ರೀ ಬಿ. ಜಿ. ಖೇರ್: ನೀವು ಎಷ್ಟು ಬೇಗ ಮುಗಿಸಬೇಕೆಂದು ಇಷ್ಟಪಟ್ಟರೆ ಅಷ್ಟು ಬೇಗ ಇದನ್ನು ಮುಗಿಸಲು ನಾನು ಪ್ರಯತ್ನಿಸುತ್ತೇನೆ.

ಮಾನ್ಯರೆ, ಸನ್ಮಾನ್ಯರಾದ ಡಾಕ್ಟರ್ (ಅಂಬೇಡ್ಕರ್) ಅವರು ವ್ಯಾಪಕವಾಗಿ ಚರ್ಚಿಸಿರುವ ಇಡೀ ವಿಚಾರವನ್ನು ನಾನು ಮತ್ತೆ ಚರ್ಚಿಸುವುದಿಲ್ಲ. ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಹರಿಜನರ ವಿಷಯದಲ್ಲಿ ಎಸಗಲಾಗಿರುವ ಅಕ್ರಮ ಕೃತ್ಯಗಳ ಬಗ್ಗೆ ಅವರು ಹೇಳಿರುವ ಮಾತುಗಳ ನಿರ್ದುಷ್ಟತೆಯನ್ನೂ ನಾನು ಒಪ್ಪುತ್ತೇನೆ. ಏಕೆಂದರೆ ಈ ನಾಡಿನಲ್ಲಿ ಅವರ ಸಮುದಾಯಕ್ಕೆ ಸೇರಿದ ಸದಸ್ಯರ ವಿಷಯ ದಲ್ಲಿ ಎಸಗಲಾಗಿರುವ ಅಕ್ರಮ ಕೃತ್ಯಗಳ ಆ ಎಲ್ಲ ಪ್ರಸಂಗಗಳನ್ನು ನಿರಾಕರಿಸುವುದು ನನ್ನ ಪ್ರಕೃತ ಉದ್ದೇಶಕ್ಕೆ ಅಗತ್ಯವೇನೂ ಆಗಿಲ್ಲ. ಅವು ವಾಸ್ತವವಾಗಿ ಸುದೀರ್ಘ ಕಾಲದಿಂದಲೂ ನಮ್ಮ ಅತ್ಯುತ್ತಮ ಸಾಮರ್ಥ್ಯಕ್ಕೆ ತಕ್ಕಂತೆ ಪರಿಹಾರೋಪಾಯವನ್ನು ಕಲ್ಪಿಸುವುದಕ್ಕೆ ನಾವು ಪ್ರಯತ್ನಿಸಿರುವಂಥ ಅಕ್ರಮ ಕೃತ್ಯಗಳೇ ಆಗಿವೆ.

ಇದಕ್ಕಿರುವ ಪರಿಹಾರೋಪಾಯವೇನು ಎಂಬುದನ್ನು ಸನ್ಮಾನ್ಯ ಸದಸ್ಯರು ಹೇಳಲಿಲ್ಲ; ಅವರ ಸುದೀರ್ಘ ಭಾಷಣದಲ್ಲಿ ಇದ್ದ ಕೊರತೆ ಅದು. ಇತರ ಭಾಷಣಕಾರರು ಎತ್ತಿ ತೋರಿಸಿರುವಂತೆ, ಅದು ಸಂಗಮ್ನೇರ್ ಪ್ರಕರಣದಲ್ಲಿನ ತೀರ್ಪಾಗಿರಲಿ ಅಥವಾ ಅವರು ಓದಿ ಹೇಳಿದ ನೂರಾರು ಪ್ರಕರಣದಲ್ಲಿನ ತೀರ್ಪಾಗಿರಲಿ ಅದಕ್ಕಿರುವ ಏಕೈಕ ಪರಿಹಾರವೆಂದರೆ ನಾವು ಸರಿಯಾದ ಸ್ವರೂಪದ ಸರ್ಕಾರವನ್ನು ಹೊಂದುವುದು, ಈ ನಾಡಿನಲ್ಲಿ ಆ ಸ್ವರೂಪದ ಸರ್ಕಾರ ಪ್ರಜಾತಂತ್ರ ಮಾತ್ರವೇ ಆಗಿರಬಲ್ಲದು. ಅದರಲ್ಲಿ ಅಲ್ಪಸಂಖ್ಯಾತರಿಗೆ ಸೂಕ್ತ ರಕ್ಷಣೆಗಳನ್ನು ಒದಗಿಸಿರಬೇಕೆಂಬ ಅಂಶವನ್ನು ನಾವು ಒಪ್ಪುತ್ತೇವೆ. ಮಾನ್ಯರೆ, ಉಲ್‌ಸ್ಟರ್ ಸಮುದಾಯದವರಂತೆ, "ನಿಮ್ಮ ರಕ್ಷಣೆಗಳನ್ನು ನೀವೇ ಇಟ್ಟುಕೊಳ್ಳಿ, ನೀವು ನಮ್ಮನ್ನಾಳುವುದು ನಮಗೆ ಬೇಕಿಲ್ಲ" ಎಂದು ಹೇಳಲಿಲ್ಲವೆಂದು ಎತ್ತಿ ತೋರಿಸಿದ್ದಕ್ಕಾಗಿ ಸನ್ಮಾನ್ಯ ಸದಸ್ಯರಿಗೆ ನಾವು ಕೃತಜ್ಞ ರಾಗಿದ್ದೇವೆ. ಅವರು ಹಾಗೆಂದು ಹೇಳಲು ಹೋಗಲಿಲ್ಲ. ಅದನ್ನು ನಾನು ಮೆಚ್ಚುತ್ತೇನೆ. ಆದರೆ ಅವರು ಪೂರ್ಣ ಪ್ರಾಮಾಣಿಕತೆಯಿಂದ ಕೊಟ್ಟ ಹಾಗೂ ಅವರು ನಂಬಿರುವ ಆ ಹೇಳಿಕೆಯನ್ನು ನಾನು ಮೆಚ್ಚ ಲಾರೆ. ಅವರು ಹೀಗೆಂದರು: "ನನ್ನ ಮತ್ತು ನಾಡಿನ ಪ್ರಶ್ನೆ ಬಂದಾಗ, ನಾಡಿನ ಹಿತಾಸಕ್ತಿಗೆ ಅಗ್ರಮಾನ್ಯತೆ ದೊರೆಯುತ್ತದೆ." ಈ ನಿಲುವಿನಲ್ಲಿ ಅವರನ್ನು ನಾನು ಬೆಂಬಲಿಸುತ್ತೇನೆ ಮತ್ತು ಅವರು ಹೇಳಿರುವ ಪ್ರತಿಯೊಂದು ಮಾತನ್ನು ನಾನು ಉದ್ಧರಿಸುತ್ತೇನೆ. ಸನ್ಮಾನ್ಯ ಸದಸ್ಯರ ಜೀವನ ಮತ್ತು ಪುರೋಭಿವೃದ್ಧಿಯನ್ನು ನಾನು ಆತ್ಮೀಯವಾಗಿ ಬಲ್ಲವನಾಗಿದ್ದೇನೆ ಹಾಗೂ ಇದು ಶುದ್ಧಾಂಗವಾಗಿ ಸರಿಯಾದ ನಿಲುವು ಎಂದು

---

*ಮುಂಬಯಿ ವಿಧಾನಸಭೆ ಚರ್ಚೆಗಳು (BLA Debates)
ಸಂ. ೭, ಪು. ೨೧೩೦; ದಿನಾಂಕ ೨೭ ಅಕ್ಟೋಬರ್ ೧೯೩೯.

ಹೇಳಬಲ್ಲೆ. ನಾಡಿನ ಹಿತಕ್ಕಾಗಿ ತಮ್ಮ ವೈಯಕ್ತಿಕ ಮುನ್ನಡೆಯನ್ನು ಅಧೀನವಾಗಿಸಲು ಅವರು ಸದಾ ಕಾಲವೂ ಇಷ್ಟಪಟ್ಟಿದ್ದಾರೆ. ಅವರು ಮುಂದುವರಿದು ಹೀಗೆಂದು ಹೇಳುತ್ತಾರೆ: "ನಾಡಿನ ಮತ್ತು ದಲಿತ ವರ್ಗಗಳ ಪ್ರಶ್ನೆ ಬಂದಾಗ, ದಲಿತ ವರ್ಗಗಳ ಹಿತಾಸಕ್ತಿಗೆ ಅಗ್ರಮಾನ್ಯತೆ ದೊರೆಯುತ್ತದೆ."

ಡಾ. ಬಿ. ಆರ್. ಅಂಬೇಡ್ಕರ್: ಖಂಡಿತವಾಗಿಯೂ.

ಸನ್ಮಾನ್ಯ ಶ್ರೀ ಬಿ. ಜಿ. ಖೇರ್: ಅವರು ಆ ಮಾತನ್ನಾಡಿದರು. ಅವರು ಅದನ್ನೇನೂ ನಿರಾಕರಿಸುವುದಿಲ್ಲ. ನನ್ನ ಜಗಳ ಇರುವುದು ಅವರ ಆ ಹೇಳಿಕೆಯ ವಿಷಯದಲ್ಲಿಯೇ. ಏಕೆಂದರೆ ಒಂದು ಭಾಗ ಎಂದೂ ಇಡಿಯದಕ್ಕಿಂತ ದೊಡ್ಡದಾಗಿರಲಾರದು. ಇಡಿಯಾದುದೇ ಬಿಡಿಭಾಗವನ್ನು ಒಳಗೊಳ್ಳಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಇಡಿಯಾದುದರ ಒಂದು ಬಿಡಿಭಾಗವಲ್ಲ; ನಾನು ಪ್ರತ್ಯೇಕವೇ ಆದ ಒಂದು ಭಾಗ.

# ಅನುಬಂಧ–೧

## *ಜನನ ನಿಯಂತ್ರಣದ ಕ್ರಮಗಳ ಬಗ್ಗೆ

ಶ್ರೀ ಪಿ. ಜೆ. ರೋಹಮ್ (ಅಹ್ಮದ್ ನಗರ ದಕ್ಷಿಣ): ಮಾನ್ಯರೆ, ಈ ಗೊತ್ತುವಳಿಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ–

> "ಕುಟುಂಬದ ಘಟಕಗಳನ್ನು ಸೀಮಿತಗೊಳಿಸುವ ತುರ್ತು ಅಗತ್ಯದ ದೃಷ್ಟಿಯಿಂದ, ಈ ಪ್ರಾಂತ್ಯದ ಜನ ಸಮುದಾಯಗಳ ನಡುವೆ ಜನನ ನಿಯಂತ್ರಣದ ಪರವಾಗಿ ಸರ್ಕಾರ ತೀವ್ರ ಪ್ರಚಾರ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಬೇಕೆಂದೂ, ಜನನ ನಿಯಂತ್ರಣ ಆಚರಣೆಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದೂ ಈ ವಿಧಾನಸಭೆ ಸರ್ಕಾರಕ್ಕೆ ಶಿಫಾರಸು ಮಾಡುತ್ತದೆ."

ಪ್ರಶ್ನೆಯನ್ನು ಪ್ರಸ್ತಾಪಿಸಲಾಗಿದೆ.

ಶ್ರೀ ಪಿ. ಜೆ. ರೋಹಮ್** (ಸದನವನ್ನುದ್ದೇಶಿಸಿ ಅವರು ಮರಾಠಿಯಲ್ಲಿ ಮಾತನಾಡಿದರು): ಈ ಹೊತ್ತಿಗೆ ಶಿಕ್ಷಿತ ವರ್ಗ ಜನನ ನಿಯಂತ್ರಣದ ಅಗತ್ಯವನ್ನು ಸಂಪೂರ್ಣವಾಗಿ ಮನಗಂಡಿದೆ ಹಾಗೂ ಅದೃಷ್ಟವಶಾತ್ ಈ ವಿಷಯದ ಬಗ್ಗೆ ನಮ್ಮ ನಾಡಿನ ನಾಯಕರು ಏಕಾಭಿಪ್ರಾಯವನ್ನು ಹೊಂದಿದ್ದಾರೆ. ಪಂಡಿತ್ ಜವಾಹರಲಾಲ ನೆಹರೂ, ಸರ್ ರವೀಂದ್ರನಾಥ ಠಾಕೂರ್ ಮತ್ತು ಶ್ರೀಮತಿ ಸರೋಜಿನಿ ನಾಯ್ಡು ಅವರಿಗೆಲ್ಲ ಜನನ ನಿಯಂತ್ರಣದ ಪ್ರಾಮುಖ್ಯ ಮತ್ತು ಜನನ ನಿಯಂತ್ರಣ ಆಂದೋಳನದ ತುರ್ತು ಅಗತ್ಯ ಚೆನ್ನಾಗಿ ತಿಳಿದಿದೆ ಹಾಗೂ ಅವರೆಲ್ಲ ಗರ್ಭನಿರೋಧಕಗಳ ಪರವಾಗಿದ್ದಾರೆ. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ಸುಭಾಷ್‌ಚಂದ್ರ ಬೋಸ್ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೀಗೆಂದು ಹೇಳಿದ್ದಾರೆ:

> "ಇತ್ತೀಚಿನ ಕಳೆದ ಕೆಲವು ವರ್ಷಗಳಲ್ಲಿ ಆಗಿರುವಂತೆ, ಇತಿಮಿತಿ ಇಲ್ಲದೆ ಜನಸಂಖ್ಯೆ ಹೆಚ್ಚುತ್ತ ಹೋಗುವುದಾದರೆ, ನಮ್ಮ ಯೋಜನೆಗಳು ವ್ಯರ್ಥವಾಗಿ ಪರಿಣಮಿಸುವ ಸಂಭವವಿದೆ."

---

*ಮುಂಬಯಿ ವಿಧಾನಸಭೆ ಚರ್ಚೆಗಳು, ಸಂ. ೪, ನವೆಂಬರ್ ೧೯೩೮; ಪು. ೪೦೨೪–೨೮.

**ಇದು ಶ್ರೀ ಪಿ. ಜೆ. ರೋಹಮ್ ಅವರು ಮಾಡಿದ ಭಾಷಣ. ತಮ್ಮ ಭಾಷಣಕ್ಕಾಗಿ ಡಾ. ಅಂಬೇಡ್ಕರ್ ಅವರು ಸಿದ್ಧಪಡಿಸಿಕೊಂಡಿದ್ದ ಅಂಶಗಳನ್ನೇ ತಮ್ಮ ಈ ಭಾಷಣ ಎಲ್ಲ ವಿಧದಲ್ಲಿಯೂ ಆಧರಿಸಿದೆ ಎಂಬುದಾಗಿಯೂ ಅವರು ಸ್ಪಷ್ಟವಾಗಿಯೇ ಹೇಳಿದ್ದಾರೆ. ತಾವು ವಿಧಾನಸಭೆಯಲ್ಲಿ ಮಾಡಬೇಕೆಂದು ಉದ್ದೇಶಿಸಿದ್ದು, ಆದರೆ ಆ ದಿವಸ– ಅಂದರೆ, ೧೦ ನವೆಂಬರ್ ೧೯೩೮ರಂದು– ವಿಧಾನಸಭೆಗೆ ಹಾಜರಾಗಲು ಅಸಮರ್ಥರಾದುದರಿಂದಾಗಿ ಮಾಡಲಾಗದೆ ಹೋದ ಭಾಷಣವನ್ನು ಬಹುಮಟ್ಟಿಗೆ ಪುನರುತ್ಪಾದಿಸಿದ್ದಕ್ಕಾಗಿ ಡಾ. ಅಂಬೇಡ್ಕರ್ ಅವರು ತಮ್ಮನ್ನು ಅಭಿನಂದಿಸಿದರೆಂದೂ ಶ್ರೀ ರೋಹಮ್ ಅವರು ಹೇಳಿದ್ದಾರೆ.

ಬಹಳ ಹಿಂದೆಯೇ ಮಹಾತ್ಮ ಗಾಂಧಿಯವರೂ ಹೀಗೆಂದು ಬರೆದಿದ್ದಾರೆ:

"ಈ ನಾಡಿನಲ್ಲಿನ ಜನನಗಳ ಬಗ್ಗೆ ಕೇಳಿದಾಗ ನನಗೆ ವಿಷಾದವಾಗುತ್ತದೆ ಎಂಬುದನ್ನು ಓದುಗರಿಂದ ನಾನು ಮುಚ್ಚಿಡಕೂಡದು."

ದೈಹಿಕವಾಗಿ, ಬೌದ್ಧಿಕವಾಗಿ ಅಥವಾ ಆರ್ಥಿಕವಾಗಿ ವಿಕಲಾಂಗರಾಗಿರುವಂಥ ವ್ಯಕ್ತಿಗಳಿಗೆ ಹುಟ್ಟಿದ ಮಕ್ಕಳು ಅನುಭವಿಸುತ್ತಿರುವ ಅಗಾಧ ನಷ್ಟ ಎಷ್ಟೆಂಬುದರ ಬಗ್ಗೆ ಕೆಲವೇ ಕೆಲವು ಮಂದಿಗೆ ಮಾತ್ರವೇ ಸರಿಯಾದ ಕಲ್ಪನೆ ಇದೆ. ತಂದೆ–ತಾಯಿಗಳಿಗೆ ಮಾತ್ರವಲ್ಲದೆ, ಸಮಾಜಕ್ಕೂ ಇದರಿಂದ ತುಂಬಾ ಕಷ್ಟವಾಗುತ್ತದೆ. ಅಂಥ ಮಕ್ಕಳ ಜನನವನ್ನು ತಡೆಗಟ್ಟಿದರೆ, ಅದು ಶಿಶು ಜನನದ ಸಂದರ್ಭದಲ್ಲಿ ಹಾಗೂ ಅದರೊಡನೆ ಆನುಷಂಗಿಕವಾಗಿ ಬರುವ ರೋಗಗಳಿಂದ ಸಾವನ್ನಪ್ಪುವ ತಾಯಂದಿರ ಸಂಖ್ಯಾ ಪ್ರಮಾಣವನ್ನು ಗಣನೀಯವಾಗಿ ಕಡಿಮೆಯಾಗಿಸುತ್ತದೆ, ಶಿಶುಗಳ ಸಾವಿನ ಸಂಖ್ಯಾ ಪ್ರಮಾಣವನ್ನು ಮತ್ತಷ್ಟು ಕಡಿಮೆಯಾಗಿಸುತ್ತದೆ. ಅನೇಕ ವ್ಯಕ್ತಿಗಳು ಜೀವನದ ಮೂಲಭೂತ ಅಗತ್ಯಗಳ ಕೊರತೆಯಿಂದಾಗಿ ಅನೇಕ ರೋಗ–ರುಜಿನಗಳಿಗೆ ತುತ್ತಾಗುವುದನ್ನು ತೊಡೆದುಹಾಕುವ ಮೂಲಕ ಸಾರ್ವಜನಿಕ ಆರೋಗ್ಯವನ್ನು ಉತ್ತಮಪಡಿಸುತ್ತದೆ. ಕಡುಬಡತನದಿಂದ ನರಳುತ್ತಿರುವ ವ್ಯಕ್ತಿಗಳು ಎಸಗುವ ಅಪರಾಧಗಳಿಗೆ ತಡೆಯನ್ನೊಡ್ಡುತ್ತವೆ ಹಾಗೂ ಸಮಾಜದ ಆಧ್ಯಾತ್ಮಿಕ ಮುನ್ನಡೆಗೆ ಪೂರ್ಣ ಅವಕಾಶವನ್ನು ಒದಗಿಸಿಕೊಡುವ ಮೂಲಕ ಅದರ ಸರ್ವತೋಮುಖ ಉದ್ಧಾರವನ್ನು ಸಾಧ್ಯವಾಗಿಸುತ್ತದೆ. ಬಾಳುವೆಗಾಗಿ ನಡೆಸಲಾಗುತ್ತಿರುವ ಇಂದಿನ ತೀವ್ರವಾದ ಹೋರಾಟ ಸಕಾಲಿಕ ವಿವಾಹವನ್ನು ಅನೇಕರಿಗೆ ಅಸಾಧ್ಯವಾಗಿಸುತ್ತದೆ ಹಾಗೂ ಅವರನ್ನು ಅನೇಕ ರೋಗಗಳಿಗೆ ಮತ್ತು ದುರಭ್ಯಾಸಗಳಿಗೆ ಗುರಿಯಾಗಿಸುತ್ತದೆ. ಅನೇಕ ಮಹಿಳೆಯರು ಆಜೀವಪರ್ಯಂತ ವಿಕಲಾಂಗರಾಗಿಬಿಡುತ್ತಾರೆ. ತಮ್ಮ ಅನಾರೋಗ್ಯದ ಸ್ಥಿತಿಯಲ್ಲಿ ಮಕ್ಕಳನ್ನು ಹೆರಬೇಕಾಗಿ ಬರುವುದರಿಂದ ಅಥವಾ ಬಹುಸಂಖ್ಯೆಯಲ್ಲಿ ಅಥವಾ ಬಹುಬೇಗ ಒಂದಾದ ಮೇಲೆ ಒಂದರಂತೆ ಮಕ್ಕಳನ್ನು ಹೆರಬೇಕಾಗಿ ಬರುವುದರಿಂದ ಅನೇಕ ಮಹಿಳೆಯರು ಸತ್ತುಹೋಗುತ್ತಾರೆ. ಅನಪೇಕ್ಷಿತವಾದ ಸಂತಾನವನ್ನು ತಡೆಗಟ್ಟುವ ಸಲುವಾಗಿ ಆಶ್ರಯಿಸಲಾಗುವ ಗರ್ಭಪಾತದ ಪ್ರಯತ್ನಗಳು ಬೃಹತ್ ಪ್ರಮಾಣದಲ್ಲಿ ಮಹಿಳೆಯರ ಜೀವವನ್ನು ಬಲಿ ತೆಗೆದುಕೊಳ್ಳುತ್ತವೆ. ಬೇಕಿಲ್ಲದ ಮಕ್ಕಳು ಬಹುತೇಕವಾಗಿ ತಾಯಂದಿರ ನಿರ್ಲಕ್ಷ್ಯಕ್ಕೆ ಒಳಗಾಗುತ್ತವೆ. ಹೀಗಾಗಿ ಅವು ಸಮಾಜಕ್ಕೆ ಹೊರೆಯಲ್ಲದೆ ಬೇರೇನೂ ಆಗುವುದಿಲ್ಲ. ರೋಗಗ್ರಸ್ತ ವ್ಯಕ್ತಿಗಳಿಂದ ಹುಟ್ಟಿದ ಈ ದೋಷಪೂರ್ಣ ಸಂತಾನದ ಸೇರ್ಪಡೆಯಿಂದ ಸಮಾಜ ಮತ್ತಷ್ಟು ಅಧೋಗತಿಗೆ ಇಳಿಯುತ್ತದೆ. ಈ ಎಲ್ಲ ಆಪತ್ತುಗಳನ್ನು ತೊಡೆದುಹಾಕಬಹುದಾದ ಏಕೈಕ ಪರಮ ಪರಿಹಾರವೆಂದರೆ ಜನನ ನಿಯಂತ್ರಣವೇ. ಯಾವುದೇ ಕಾರಣದಿಂದಲಾದರೂ ಆಗಲಿ, ಮಕ್ಕಳನ್ನು ಹೆರಲು ಮಹಿಳೆಗೆ ಮನಸ್ಸಿಲ್ಲವಾದರೆ, ಗರ್ಭಧಾರಣೆಯನ್ನು ತಡೆಗಟ್ಟುವ ಸ್ಥಿತಿಯಲ್ಲಿ ಅವಳಿರಬೇಕು. ಮಕ್ಕಳನ್ನು ಹೆರುವುದು ಸಂಪೂರ್ಣವಾಗಿ ಮಹಿಳೆಯರ ಇಚ್ಛೆಗೆ ಬಿಟ್ಟ ವಿಚಾರವೇ ಆಗಿರಬೇಕು. ಬೇಡದ ಮಕ್ಕಳ ಸೇರ್ಪಡೆಯಿಂದ ಸಮಾಜಕ್ಕೆ ಯಾವ ರೀತಿಯಿಂದಲೂ ಲಾಭವಾಗುವುದಿಲ್ಲ. ತಂದೆ–ತಾಯಿಗಳು ಬಯಸಿ ಪಡೆದ ಮಕ್ಕಳಿಂದ ಮಾತ್ರವೇ ಸಮಾಜಕ್ಕೆ ಲಾಭವಾಗುತ್ತದೆ. ಆದ್ದರಿಂದ ತುಂಬಾ ಸುಲಭವಾಗಿ ಗರ್ಭಧಾರಣೆಯನ್ನು ತಡೆಗಟ್ಟುವ ವಿಧಾನವನ್ನು ಆಶ್ರಯಿಸಲು ಪ್ರತಿಯೊಬ್ಬ ಮಹಿಳೆಗೂ ಸಾಧ್ಯವಾಗುವಂತಿರಬೇಕು.

ಬಡತನವೇ ಅನೈತಿಕತೆಗೆ ಮೂಲ ಕಾರಣವಾಗಿರುತ್ತದೆ. ೧೯೩೩ರಲ್ಲಿ ವಿಯೆನ್ನಾದಲ್ಲಿ ನಡೆದ ಮಹಾಧಿವೇಶನದಲ್ಲಿ ಪ್ರೊ. ಡಾ. ತೊಂಡ್ಲೆರ್ ಅವರು ಮಂಡಿಸಿದ ಪ್ರಬಂಧದಿಂದ ತೆಗೆದುಕೊಂಡಿರುವ ಈ ಕೆಳಕಂಡ ಭಾಗ ವಸತಿಯ ಕೊರತೆಯಿಂದಾಗುವ ದುಷ್ಪರಿಣಾಮಗಳೇನೆಂಬುದನ್ನು ತೋರಿಸಿಕೊಡುತ್ತದೆ. ಆ ಪ್ರಾಧ್ಯಾಪಕರು ಹೀಗೆಂದಿದ್ದಾರೆ:

> "ಸರಾಸರಿ ಆಧಾರದ ಮೇಲೆ ಪ್ರತಿಯೊಂದು ಕುಟುಂಬಕ್ಕೂ ಜರ್ಮನಿಯಲ್ಲಿ ಒಂದು ಕೋಣೆ ದೊರೆತರೆ, ಫ್ರಾನ್ಸಿನಲ್ಲಿ ಎರಡೂವರೆ ಕೋಣೆಗಳೂ, ಇಂಗ್ಲೆಂಡಿನಲ್ಲಿ ಮೂರು ಕೋಣೆಗಳೂ ದೊರೆಯುತ್ತವೆ. ೧೯೨೫ರಲ್ಲಿ ಬರ್ಲಿನ್ನಿನಲ್ಲಿ ೭೫,೦೦೦ ಕುಟುಂಬಗಳಿಗೆ ತಮ್ಮದೇ ಆದ ವಾಸ ಗೃಹಗಳಿರಲಿಲ್ಲ. ಅದರ ಪರಿಣಾಮವಾಗಿ, ಮಕ್ಕಳು ವಯಸ್ಕರೊಂದಿಗೆ ಒಂದೇ ಕೋಣೆಯಲ್ಲಿ ಮಾತ್ರವಲ್ಲ, ಒಂದೇ ಹಾಸಿಗೆಯಲ್ಲಿ ಮಲಗುತ್ತಾರೆ. ಅನಾರೋಗ್ಯಕರವಾದ ವಾಸಸ್ಥಳಗಳಲ್ಲಿನ ಅತಿಯಾದ ದಟ್ಟಣೆಯಿಂದಾಗಿ ಅನೇಕ ಮಕ್ಕಳು ಸಾವಿಗೆ ತುತ್ತಾಗುತ್ತಾರೆ. ಇಡೀ ಕುಟುಂಬಗಳೇ ಗುಹ್ಯ ರೋಗಗಳಿಗೆ ಗುರಿಯಾಗುತ್ತವೆ. ಮೈನೆರೆಯುವುದಕ್ಕೂ ಮೊದಲೇ ಹೆಣ್ಣು ಮಕ್ಕಳು ಲೈಂಗಿಕ ಸಂಬಂಧಕ್ಕೆ ಬಲಿಯಾಗುತ್ತವೆ. ಅನೇಕ ವೇಳೆ ತಂದೆ ಮತ್ತು ಮಕ್ಕಳ ನಡುವೆ ಹಾಗೂ ಸೋದರ–ಸೋದರಿಯರ ನಡುವೆ ಲೈಂಗಿಕ ಸಂಬಂಧಗಳು ಏರ್ಪಡುತ್ತವೆ. ಗಂಡುಮಕ್ಕಳು ಕಳ್ಳತನವನ್ನು ಕಲಿತರೆ, ಹೆಣ್ಣು ಮಕ್ಕಳು ಸೂಳೆಯರಾಗುತ್ತಾರೆ. ವಿಯೆನ್ನಾದಲ್ಲಿಯೂ ಇದೇ ಪರಿಸ್ಥಿತಿ ಇದೆ. ೧೯೧೯ರಲ್ಲಿ ಬಾಡಿಗೆಗೆ ಕೊಡಲಾಗಿದ್ದ ವಾಸಗೃಹಗಳಲ್ಲಿ ಶೇ.೧೧೦ರಷ್ಟು ಕೇವಲ ಒಂದು ಸಣ್ಣ ಕೋಣೆಯನ್ನೂ, ೩೭ರಷ್ಟು ಒಂದು ದೊಡ್ಡ ಕೋಣೆಯನ್ನೂ, ೨೩ರಷ್ಟು ಒಂದು ದೊಡ್ಡ ಮತ್ತು ಒಂದು ಸಣ್ಣ ಕೋಣೆಯನ್ನು ಹೊಂದಿದ್ದುವು. ತಮ್ಮ ಹೊಟ್ಟೆಯ ಪಾಡನ್ನು ತಾವೇ ನೋಡಿಕೊಳ್ಳುತ್ತಿದ್ದ ೧೮ರವರೆಗಿನ ವಯೋಮಾನದ ಮಕ್ಕಳಲ್ಲಿ ಶೇ. ೨೦ರಷ್ಟು ಮಂದಿಗೆ ತಮ್ಮದೇ ಆದ ಹಾಸಿಗೆಗಳಿರಲಿಲ್ಲ. ಪಟ್ಟಣಗಳ ಮತ್ತು ಹಳ್ಳಿಗಳ ಸ್ಥಿತಿ ಇನ್ನೂ ಕೆಟ್ಟದಾಗಿದೆ."

ನಮ್ಮ ನಾಡಿನಲ್ಲಿ ಮುಂಬಯಿಯಂಥ ನಗರಗಳಲ್ಲಿಯೂ ಇದೇ ಪರಿಸ್ಥಿತಿ ಬೀಡುಬಿಟ್ಟಿದೆ. ಒಂದೆರಡು ಅಪವಾದಗಳಿರಬಹುದಾದರೂ, ದಾರಿದ್ರ್ಯ ತಾಂಡವವಾಡುತ್ತಿರುವಲ್ಲಿ ಸದ್ಗುಣಗಳಿಗೆ ಲಕ್ಷ್ಯ ಹೊಡೆದಿರುವುದನ್ನು ಕಾಣುತ್ತೇವೆ. ಜನನ ನಿಯಂತ್ರಣದ ನೆರವಿಲ್ಲದೆ ಬಡತನವನ್ನು ತೊಡೆದುಹಾಕುವುದು ಸಾಧ್ಯವೇ ಇಲ್ಲವೆಂಬುದನ್ನು ಮುಂದೆ ತೋರಿಸಿಕೊಡಲಾಗುತ್ತದೆ. "ಬುಭಕ್ಷಿತಃ ಕಿಂ ನ ಕರೋತಿ ಪಾಪಮ್" (ಹಸಿದಿರುವವನು ಯಾವ ಪಾಪವನ್ನು ತಾನೇ ಮಾಡುವುದಿಲ್ಲ) ಎಂಬುದು ಸುಪ್ರಸಿದ್ಧವಾಗಿರುವ ಸೂಕ್ತಿಯೇ ಆಗಿದೆ.

ಎಲ್ಲ ಪ್ರಗತಿಗೂ ಜನನ ನಿಯಂತ್ರಣ ಅತ್ಯಗತ್ಯವೆಂಬ ಸಂಗತಿಯನ್ನು ಹೀಗೆ ಮನದಟ್ಟು ಮಾಡಿಕೊಂಡ ಬಳಿಕ ಆ ಗುರಿಯನ್ನು ಸಾಧಿಸಲು ಅಗತ್ಯವಾದ ಉಪಾಯಗಳು ಯಾವುವು ಎಂಬುದನ್ನು ಪರಿಗಣಿಸಬೇಕು. ಅಪೇಕ್ಷಿಸಿದಷ್ಟು ಸಂಖ್ಯೆಯ ಮಕ್ಕಳನ್ನು ಪಡೆಯುವುದಕ್ಕೆ ಅಗತ್ಯವಾದಷ್ಟು ಲೈಂಗಿಕ ಸುಖದಿಂದ ಮಾತ್ರವೇ ತೃಪ್ತರಾಗಿರುವುದು ಹಾಗೂ ಮಕ್ಕಳು ಬೇಕಿಲ್ಲದಿರುವಾಗ ನಮ್ಮ ಮನಸ್ಸಿನಿಂದ ಲೈಂಗಿಕ ಆಲೋಚನೆಗಳನ್ನು ಹೊರದೂಡಿಬಿಡಬಹುದು. ಇವುಗಳಲ್ಲಿ ಒಂದು ಮಾರ್ಗ. ಆಧುನಿಕ ಗರ್ಭ ನಿರೋಧಕಗಳ ಬಳಕೆ ಇನ್ನೊಂದು ಮಾರ್ಗ. ಮೊದಲನೆಯ ಮಾರ್ಗಕ್ಕೆ ಸಂಬಂಧಿಸಿದಂತೆ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುವ ಸಂಗತಿ ಇದು: ಅವಿವಾಹಿತ ಸ್ಥಿತಿಯಲ್ಲಿ ಸಂಯಮ ಸಾಧ್ಯವಾಗ

ಬಹುದು. ಆದರೆ, ತರುಣರೂ ಆರೋಗ್ಯವಂತರೂ ಆಗಿರುವ ಒಟ್ಟಾಗಿ ಬಾಳುತ್ತಿರುವ ಹಾಗೂ ಪರಸ್ಪರ ಪ್ರೀತಿಸುತ್ತಿರುವ ದಂಪತಿಗಳು ವರ್ಷಗಟ್ಟಲೆ ಸಂಯಮವನ್ನು ಪಾಲಿಸಬಹುದೆಂದು ನಿರೀಕ್ಷಿಸುವುದು ಮಾನವ ಸ್ವಭಾವದ ಬಗೆಗಿನ ನಮ್ಮ ಅಜ್ಞಾನವನ್ನೆ ತೋರುತ್ತದೆ. ಇಂದ್ರಿಯೋಪಭೋಗ ಸಾಮಗ್ರಿಗಳ ಎದುರಿನಲ್ಲಿಯೂ ಅವಿಚಲಿತಚಿತ್ತರಾಗಿರಬಲ್ಲಂಥ ದೃಢಮನಸ್ಕರ ವಿಚಾರವನ್ನು ಹೊರತುಪಡಿಸಿದರೆ, ಸಾಮಾನ್ಯ ಮಾನವರು ಆಕರ್ಷಣೆಯ ಪ್ರಭಾವಕ್ಕೆ ಒಳಗಾಗಿಯೇ ತೀರುತ್ತಾರೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಆದ್ದರಿಂದ ಸೂರ್ಯನ ಪ್ರಕಾಶದಂತೆ ಸ್ಪಷ್ಟವಾಗಿರುವ ಈ ಸಂಗತಿಯನ್ನು ಕೆಲವರು ನಿರಾಕರಿಸುವುದು ಆಶ್ಚರ್ಯಕರ ವಾಗಿಯೇನೂ ತೋರುವುದಿಲ್ಲ.

ಹಲವಾರು ದೇಶಗಳ ಮತ್ತು ಯುಗಗಳ ಅನುಭವದ ಆಧಾರದ ಮೇಲೆ ಹೇಳುವು ದಾದರೆ ಜನನ ನಿಯಂತ್ರಣದ ದೃಷ್ಟಿಯಿಂದ ಆತ್ಮಸಂಯಮ ಸಂಪೂರ್ಣವಾಗಿ ನಿರುಪಯುಕ್ತವೆಂದು ಸಿದ್ಧಗೊಂಡಿದೆ. ತಮ್ಮ ಜೀವಮಾನದಾದ್ಯಂತ ಲೈಂಗಿಕ ಸಂಪರ್ಕವನ್ನು ತ್ಯಜಿಸುವುದು ಸಾಮಾನ್ಯ ವ್ಯಕ್ತಿಗಳಿಗೆ ಸಾಧ್ಯವಾಗುತ್ತದೆಂದು ಸಂಯಮವಿಧಾನದ ಪ್ರಚಾರಕರು ಕೂಡಾ ಹೇಳಿಕೊಳ್ಳಲಾರರು. ಪ್ರತಿ ವರ್ಷವೂ ಒಂದೇ ಬಗೆಯ ದಿವಸದ ಮಟ್ಟಿಗೆ ಸಂಯಮವನ್ನು ತ್ಯಜಿಸಿದರೂ ಅದು ವಾರ್ಷಿಕ ಗರ್ಭ ಧಾರಣೆಗೆ ಎಡೆಮಾಡಿಕೊಡಬಹುದು. ಕೆಲವು ವ್ಯಕ್ತಿಗಳು ಆತ್ಮ ಸಂಯಮದ ಮೂಲಕ ಜನನ ನಿಯಂತ್ರಣವನ್ನು ಜಾರಿಗೆ ತರಲು ಸಮರ್ಥರಾಗಬಯಸಿದರೂ ಇತರರಿಗೂ ಅದನ್ನು ಅನುಸರಿಸಲು ಸಾಧ್ಯವಾಗುತ್ತದೆಂಬ ಸಾಮಾನ್ಯ ತೀರ್ಮಾನಕ್ಕೆ ಬರಲು ನಮಗೆ ಸಾಧ್ಯವಾಗುವುದಿಲ್ಲ. ಬೇರೆ ಬೇರೆ ವ್ಯಕ್ತಿಗಳಲ್ಲಿ ಆಹಾರದ ಬಗೆಗಿನ ಹಸಿವು ಅಥವಾ ಅಭಿಲಾಷೆ ಬೇರೆ ಬೇರೆಯಾಗಿರುವಂತೆ, ವ್ಯಕ್ತಿಯಿಂದ ವ್ಯಕ್ತಿಗೆ ಲೈಂಗಿಕ ಅಭಿಲಾಷೆಯೂ ಭಿನ್ನವಾಗಿರುತ್ತದೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಗತ್ಯವಾಗುತ್ತದೆ.

ಹಿಂದೂ ಧಾರ್ಮಿಕ ಗ್ರಂಥಗಳಲ್ಲಿ ನಿಗದಿಪಡಿಸಲಾಗಿರುವ ಕೆಲವೊಂದು ನಿಯಮಗಳ ಕಟ್ಟುನಿಟ್ಟಾದ ಪಾಲನೆ ಕುಟುಂಬ ಮಿತಿಯ ಆದರ್ಶದ ನಿರಾಕರಣೆಯನ್ನು ಅಗತ್ಯವಾಗಿಸುತ್ತದೆ. ಉದಾಹರಣೆಗೆ, "ವಿಷ್ಣುಸ್ಮೃತಿ"ಯ ೫೪ನೆಯ ಅಧ್ಯಾಯದ ೩ನೆಯ ಶ್ಲೋಕ ನಿರ್ದಿಷ್ಟ ದಿನಗಳಂದು ಮಾತ್ರವೇ ಸಂಭೋಗ ಮಾಡಬೇಕೆಂದು ಹೇಳುತ್ತದೆ.

ಮಾನ್ಯರೆ, ಶ್ರೀಮತಿ ಸರೋಜಿನಿ ಮೆಹತಾ ಎಂ.ಎ., ಅವರು ಬರೆದಿರುವ ಕರಪತ್ರವೊಂದು ಸನ್ಮಾನ್ಯ ಸದಸ್ಯರುಗಳಿಗೆ ತಲುಪಿದೆ. ನಾನು ಆ ಇಡೀ ಕರಪತ್ರವನ್ನು ಓದಲು ಹೋಗುವುದಿಲ್ಲ. ಅದರಿಂದ ಕೆಲವು ಭಾಗಗಳನ್ನಷ್ಟೇ ಉದ್ಧರಿಸುತ್ತೇನೆ:

> "ಜನನ ನಿಯಂತ್ರಣದ ವಿಚಾರವನ್ನು ಎತ್ತಿದಾಗಲೆಲ್ಲ ಸಂಯಮ ಅಥವಾ ಬ್ರಹ್ಮಚರ್ಯವೇ ನಮ್ಮ ನಾಡಿನಲ್ಲಿ ಇದಕ್ಕಿರುವ ಪರಮ ಪರಿಹಾರ ಅಥವಾ ರಾಮಬಾಣ ಎಂಬುದು ಜನನ ನಿಯಂತ್ರಣ ವಿರೋಧಿಗಳ ವಾದದ ಮುಖ್ಯಾಂಶವಾಗಿರುತ್ತದೆ. ತಮ್ಮ ಕೃತಕ ಪರಿಹಾರೋಪಾಯಗಳ ಅನು ಗ್ರಹಕ್ಕೆ ಪಾತ್ರರಾಗುವ ಸೌಭಾಗ್ಯವನ್ನು ಪಾಶ್ಚಾತ್ಯರಿಗೇ ಬಿಟ್ಟುಬಿಡುವುದು ಉತ್ತಮವೆಂದೂ ವಾದಿಸಲಾಗುತ್ತದೆ. ಈ ಅಭಿಪ್ರಾಯವನ್ನು ಹೊಂದಿರುವುದಕ್ಕೆ ಆಧಾರವೇನೆಂಬುದನ್ನು ಸ್ಪಷ್ಟಪಡಿಸಬೇಕೆಂದು ನಾನು ಆ ಸನ್ಮಾನ್ಯ ವ್ಯಕ್ತಿಗಳನ್ನು ವಿನಯಪೂರ್ವಕವಾಗಿ ಕೋರುತ್ತೇನೆ. ಪಾಶ್ಚಾತ್ಯರು ಭೌತವಾದಿಗಳಾಗಿದ್ದರೆ, ನಮ್ಮ ಜನರು ಅಧ್ಯಾತ್ಮವಾದಿಗಳಾಗಿದ್ದಾರೆಂದು ಹೇಳಲಾಗಿದೆ. ಈ ಗಿಣಿಯ ಮಾತಿನ ಪುನರಾವರ್ತನೆಯನ್ನು ಕೇಳುವುದು ಇಂದು ಅತ್ಯಂತ ಅಸಹ್ಯಕರವಾಗಿ ಪರಿಣಮಿಸಿದೆ. ಯಾವ

ರೀತಿಯಲ್ಲಿ ನಮ್ಮ ಜನರು ಅಧ್ಯಾತ್ಮವಾದಿಗಳಾಗಿದ್ದಾರೆ? ನಮ್ಮ ಜನರು ಲೋಕವನ್ನೇ ತ್ಯಜಿಸಿ ಸರ್ವಸಂಘ ಪರಿತ್ಯಾಗಿಗಳಾದ ಋಷಿಗಳಾಗಿಬಿಟ್ಟಿದ್ದಾರೇನು? "ಇದೆಲ್ಲವೂ ಮಾಯೆ" ಎಂಬಂಥ "ನಾವು ಇಹಜೀವನದ ಆಕರ್ಷಣೆಗಳನ್ನು ಪರಿತ್ಯಜಿಸಬೇಕು" ಎಂಬಂಥ ಕೆಲವೊಂದು ಅತಿ–ಪರಿಚಯದ ನುಡಿಗಟ್ಟುಗಳನ್ನು ಪುನರಾವರ್ತಿಸುವುದರಿಂದ ಮಾತ್ರವೇ ನಮ್ಮ ಜನ ಅಧ್ಯಾತ್ಮವಾದಿಗಳಾಗಿಬಿಡುತ್ತಾರೆಯೇ? ಬಡ ಹಾಗೂ ಮುಗ್ಧ ಸಾಲಗಾರರ ರಕ್ತವನ್ನು ಹೀರಲು ಸಿದ್ಧವಾಗಿರುವಂಥ ರಣಹದ್ದುಗಳು ನಮ್ಮಲ್ಲಿ ಒಂದೊಂದು ಹಳ್ಳಿಯಲ್ಲಿಯೂ ಇಲ್ಲವೆ? ವಿಧವೆಯರ ಇಡುಗಂಟುಗಳನ್ನು ನುಂಗಿ ನೀರು ಕುಡಿಯುವಷ್ಟು ಕೀಳಾಗಿರುವಂಥ ಲೇವಾದೇವಿಗಾರರು ನಮ್ಮಲ್ಲಿ ಇಲ್ಲವೆ? ತಾವೇ ದಾರಿ ತಪ್ಪಿಸಿದಂಥ ವಿಧವೆಯರನ್ನು ನಡುನೀರಿನಲ್ಲಿ ಕೈಬಿಡಲೂ ಹೇಸದಿರುವಂಥ ನೀಚರು ನಮ್ಮಲ್ಲಿಲ್ಲವೆ? ಪರಿಶುದ್ಧ ಚರಿತ್ರರೂ, ಪತಿಪರಾಯಣರೂ ಆದಂಥ ತಮ್ಮ ಪತ್ನಿಯರನ್ನು ತ್ಯಜಿಸಿ, ಸೂಳೆಯರ ಪದತಲದಲ್ಲಿ ಬಿದ್ದು ಹೊರಳಾಡುವಂಥ ವ್ಯಕ್ತಿಗಳು ನಮ್ಮ ಸಮಾಜದಲ್ಲಿಲ್ಲವೆಂದು ನಾವು ಹೇಳಿಕೊಳ್ಳಬಲ್ಲೆವೆ? ಯಾವ ಸಮಾಜದಲ್ಲಿ ಗಂಡು–ಹೆಣ್ಣುಗಳ ಮಾರಾಟವೆನ್ನಬಹುದಾದಂಥ ವೈವಾಹಿಕ ವ್ಯವಹಾರಗಳಿಂದ ಅನೇಕರ ಬಾಳುವೆಯೇ ಹಾಳಾಗುತ್ತಿದೆಯೋ, ತನ್ನ ಜಾತಿ ಬಾಂಧವರಿಗೆ ದಂಡದ ಊಟವನ್ನು ಹಾಕಲು ನಿರಾಕರಿಸುವಂಥ ವ್ಯಕ್ತಿಯನ್ನು ಜಾತಿಯಿಂದ ಹೊರಹಾಕಲಾಗುತ್ತದೆಯೋ, ಚಿತೆಗಳ ಮೇಲೆ ತಮ್ಮ ಮೊದಲ ಪತ್ನಿಯರ ಶವಗಳು ಬೆಂದು ಬೂದಿಯಾಗುತ್ತಿರುವಾಗಲೇ ತಮ್ಮ ಎರಡನೆಯ ಮದುವೆಯ ಏರ್ಪಾಟುಗಳನ್ನು ನಡೆಸುತ್ತಿರುತ್ತಾರೋ ಅರವತ್ತು ವರ್ಷದ ಮುದಿಗೊಡ್ಡುಗಳು ಹಣಕಾಸಿನ ಆಮಿಷದ ಬಲದ ಮೇಲೆ ಹನ್ನೆರಡು ವರ್ಷದ ಕನ್ಯೆಯರನ್ನು ಮದುವೆಯಾಗಬಹುದಾಗಿದೆಯೋ, ವಿಧವೆಯರನ್ನು ನಡೆಸಿಕೊಳ್ಳುವ ರೀತಿ ದನಕರುಗಳನ್ನು ನಡೆಸಿಕೊಳ್ಳುವಂಥ ರೀತಿಗಿಂತಲೂ ಹೀನಾಯವಾಗಿದೆಯೋ ಅಂಥ ಸಮಾಜವನ್ನು ಅಧ್ಯಾತ್ಮವಾದಿಯೆಂದು ಹೇಗೆ ಕರೆಯಬಹುದು ಎಂಬುದು ನನಗೆ ಸುತಾರಾಂ ಅರ್ಥವಾಗುತ್ತಿಲ್ಲ. ಮೇಲೆ ವಿವರಿಸಿದ ನಮ್ಮ ಸಮಾಜದ ಕೊಳೆತು ನಾರುತ್ತಿರುವ ಸ್ಥಿತಿಗೆ ಪಾಶ್ಚಾತ್ಯ ಭೌತವಾದ ಕಾರಣವೆಂದೇನೂ ಹೇಳಲಾಗುವುದಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಈ ಕೇಡುಗಳಿಗೆ ಪರಿಹಾರವನ್ನು ಕಲ್ಪಿಸಲು ತಮ್ಮಿಂದಾದ ಎಲ್ಲ ಪ್ರಯತ್ನವನ್ನು ಮಾಡುತ್ತಿರುವವರು ಪಾಶ್ಚಾತ್ಯ ಭೌತವಾದದೊಂದಿಗೆ ಸಂಪರ್ಕ ಏರ್ಪಟ್ಟಂಥ ವ್ಯಕ್ತಿಗಳೇ. ಇಷ್ಟಾಗಿಯೂ ಅವರ ಪ್ರಯತ್ನಗಳು ಅರಣ್ಯರೋದನಕ್ಕಿಂತ ಹೆಚ್ಚೇನೂ ಸಿದ್ಧವಾಗಲಾರದೆ ಹೋಗುತ್ತಿದೆ."

ಮುಂದುವರಿದು ಇನ್ನೊಂದು ಪ್ಯಾರಾದಲ್ಲಿ ಆಕೆ ಹೀಗೆನ್ನುತ್ತಾರೆ:

"ಅಹಲ್ಯೆಯ ವಿಷಯದಲ್ಲಿ ದೇವತೆಗಳ ಒಡೆಯನಾದ ಇಂದ್ರ, ಸತ್ಯವತಿಯ ವಿಷಯದಲ್ಲಿ ಪರಾಶರ ಋಷಿ ಹಾಗೂ ಕುಂತಿಯ ವಿಷಯದಲ್ಲಿ ಸೂರ್ಯದೇವ ನಡೆದುಕೊಂಡ ರೀತಿ ಆ ಅಪರಾಧಿಗಳನ್ನು ಈ ಕಲಿಯುಗದಲ್ಲಿ ಕಠಿಣ ಕಾರಾಗೃಹವಾಸದ ಶಿಕ್ಷೆಗೆ ಅರ್ಹರನ್ನಾಗಿಸುತ್ತದೆ. ಆದರೆ ಆ ಕಾಲವೂ ಸತ್ಯಯುಗವೆಂದು ಪರಿಗಣಿಸಿದ್ದು, ನಾವು ಈ ಅಪರಾಧಿಗಳ ವಿಷಯದಲ್ಲಿ ಪರೋಕ್ಷ ಸಮ್ಮತಿಯನ್ನು ನೀಡುವುದಲ್ಲದೆ ಅಂಥ ವಿವರಣೆಗಳನ್ನೊಳಗೊಂಡಿರುವ ಪುಸ್ತಕಗಳನ್ನು ಪವಿತ್ರ ಗ್ರಂಥಗಳ ನೆಲೆಗೇರಿಸುತ್ತೇವೆ ಹಾಗೂ ಮಕ್ಕಳಿಗಾಗಿ ರೂಪಿಸಿರುವ ಪಠ್ಯಕ್ರಮದಲ್ಲಿ ಅವುಗಳನ್ನು ಪಠ್ಯಪುಸ್ತಕಗಳಾಗಿ ಗೊತ್ತುಪಡಿಸಬೇಕೆಂದೂ ಒತ್ತಾಯಿಸುತ್ತೇವೆ. "ಮಹಾಭಾರತ", "ಭಾಗವತ" ಮತ್ತು ಪುರಾಣಗಳಲ್ಲಿ

ವಿದ್ಯಾರ್ಥಿಗಳು ಸಂಯಮ ಅಥವಾ ಬ್ರಹ್ಮಚರ್ಯದ ಬಗೆಗಿನ ಅದೆಷ್ಟು ನೀತಿಪಾಠಗಳನ್ನು ತಾನೇ ಕಾಣಬಹುದಾಗಿದೆ? ಸಂಯಮವೆಂದರೇನು ಎಂಬುದೇ ಗೊತ್ತಿಲ್ಲದೆ ಇದ್ದಂಥ ಆ ಯುಗ ಆ ಸದ್ಗುಣವನ್ನು ಆಚರಿಸುವಂತೆ ನಮಗೆ ಹೇಗೆ ತಾನೇ ಪ್ರೇರಣೆ ನೀಡಬಲ್ಲದು? ಋಷ್ಯಾಶ್ರಮದಲ್ಲಿ ವಾಸವಾಗಿದ್ದ ಮುಗ್ಧ ಮತ್ತು ಕುತಂತ್ರಗಳನ್ನರಿಯದ ಹುಡುಗಿಯನ್ನು ದಾರಿ ತಪ್ಪಿಸಿ, ಆ ಬಳಿಕ ಗರ್ಭಿಣಿಯಾಗಿದ್ದ ಅವಳನ್ನು ಪರಿತ್ಯಜಿಸಿದ ರಾಜ ದುಷ್ಯಂತನಂಥವನ ಕಥೆಯನ್ನು ಹೋಲುವಂಥ ಪ್ರಸಂಗಗಳು ನಡೆದಿದ್ದ ಆ ಯುಗ ಬ್ರಹ್ಮಚರ್ಯವನ್ನು ಆಚರಿಸುತ್ತಿತ್ತು ಎಂದು ಪರಿಗಣಿಸಲಾದರೂ ಹೇಗೆ ಸಾಧ್ಯವಾದೀತು? ಅಂಥ ವ್ಯಕ್ತಿಗಳಿಗೆ ಹುಟ್ಟಿದ ಅನೇಕ ಮಕ್ಕಳ ವಿಚಾರ ತುಂಬ ಪ್ರಾಚೀನವಾದ ಕಥನ–ಕಾವ್ಯಗಳಲ್ಲಿ ಉಲ್ಲೇಖಿತವಾಗಿರುವುದನ್ನು ಪರಿಗಣಿಸಿದಾಗ, ಆ ದಿನಗಳಲ್ಲಿ ಬದುಕಿ ಬಾಳಿದ ಜನರಿಗೆ ಬ್ರಹ್ಮಚರ್ಯವೆಂದರೇನೆಂಬ ಕಲ್ಪನೆ ಕನಸಿನಲ್ಲಾದರೂ ಮೂಡಿತ್ತೇ ಎಂಬ ಸಂದೇಹ ಸಹಜವಾಗಿಯೇ ನಮ್ಮ ಮನಸ್ಸಿನಲ್ಲಿ ಏಳುತ್ತದೆ. ಸಗರನಿಗೆ ಅರವತ್ತು ಸಾವಿರ ಮಕ್ಕಳಿದ್ದರು. ಕೌರವರು ನೂರು ಮಂದಿ ಇದ್ದರು. ದಕ್ಷ ಪ್ರಜಾಪತಿಗೆ ಇಪ್ಪತ್ತೇಳು ಮಂದಿ ಹೆಣ್ಣು ಮಕ್ಕಳಿದ್ದರು ಎಂಬಂಥ ಹಾಗೂ ಇಂಥ ಇನ್ನೂ ಹಲವು ಪ್ರಸಂಗಗಳನ್ನು ಪರಿಗಣಿಸಿದಾಗ, ಆ ಕಾಲದಲ್ಲಿ ಸಂಯಮ ಅಥವಾ ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದರು ಎಂದು ನಾವು ಹೇಗೆ ತಾನೆ ನಂಬಲು ಸಾಧ್ಯವಾದೀತು? ಆ ಹಿಂದಿನ ದಿನಗಳಲ್ಲಿ ಸಂಯಮಕ್ಕೆ ಯಾವ ಗೌರವವೂ ಇರಲಿಲ್ಲ. ಈಗಿನ ಕಾಲದಲ್ಲಿಯೂ ಎಲ್ಲೆಡೆಗಳಲ್ಲಿಯೂ ಅದನ್ನು ಬಹು ದೂರದಲ್ಲಿ ಇರಿಸಲಾಗಿದೆ ಎಂಬುದನ್ನು ನಾವು ವಾಸ್ತವವಾಗಿ ಕಾಣಬಹುದಾಗಿದೆ. ಯಾವುದೇ "ಭೌತವಾದಿ" ರಾಷ್ಟ್ರದಲ್ಲಿನ ಜನನ ದರಕ್ಕಿಂತ ನಮ್ಮ ನಾಡಿನ ಜನನ ದರ ಕಡಿಮೆಯೇನೂ ಆಗುತ್ತಿಲ್ಲ. ಈಗಾಗಲೇ ಅನೇಕ ಮಕ್ಕಳ ತಾಯಿಯಾಗಿರುವಂಥ ಹೆಣ್ಣಿನ ಜೀವನ ಮತ್ತೊಂದು ಹೆರಿಗೆಯಿಂದ ಗಂಡಾಂತರಕ್ಕೊಳಗಾಗುವಂಥ ಸಂದರ್ಭಗಳಲ್ಲಿಯೂ ಬ್ರಹ್ಮಚರ್ಯವನ್ನು ಪಾಲಿಸಲಾಗುತ್ತಿಲ್ಲ. ಪಾಪರ್ ಆಗಿಬಿಟ್ಟಿರುವಂಥ, ಹಸಿವಿನಿಂದ ಸಾಯುತ್ತಿರುವಂಥ, ಮತ್ತೊಂದು ಜೀವ ಆಪತ್ತನ್ನಲ್ಲದೆ ಬೇರೇನನ್ನೂ ತರಲಾರದು ಎಂಬಂತಿರುವಂಥ ಕುಟುಂಬಗಳಲ್ಲಿಯೂ ಅದನ್ನು ನಿರ್ಲಕ್ಷಿಸಲಾಗುತ್ತಿದೆ. ನಿರುದ್ಯೋಗದ ಈ ದಿನಗಳಲ್ಲಿಯೂ, ಮಕ್ಕಳಿಗೆ ಜೀವನಾವಕಾಶಗಳನ್ನು ಕಂಡುಕೊಳ್ಳುವುದು ವ್ಯಾವಹಾರಿಕವಾಗಿ ಅಸಾಧ್ಯವೇ ಆಗಿರುವಾಗಲೂ, ಮಧ್ಯಮ ವರ್ಗದ ಕುಟುಂಬಗಳಲ್ಲಿಯೂ ಪ್ರತಿ ವರ್ಷ ಅಥವಾ ಒಂದೂವರೆ ವರ್ಷಕ್ಕೆ ಒಂದರಂತೆ ಹೆಚ್ಚಿನ ಮಕ್ಕಳು ಹುಟ್ಟುತ್ತಲೇ ಇವೆ. ವರದಕ್ಷಿಣೆಯ ಪದ್ಧತಿ ರೂಢಿಯಲ್ಲಿರುವಂಥ ಜಾತಿಗಳಲ್ಲಿ, ಹೆಣ್ಣು ಮಗು ಹುಟ್ಟಿದರೆ ತಂದೆ–ತಾಯಿಗಳು ದುಃಖವನ್ನು ವ್ಯಕ್ತಪಡಿಸುತ್ತಾರೆ. ಹುಟ್ಟಿದೊಡನೆಯೇ ಅದನ್ನು ಕೊಂದುಹಾಕುತ್ತಾರೆ ಅಥವಾ ಅದು ಸ್ವಾಭಾವಿಕವಾದ ಸಾವನ್ನಪ್ಪುವಂತೆ ಮಾಡಲು ತೀವ್ರ ನಿರ್ಲಕ್ಷ್ಯದಿಂದ ಅದನ್ನು ಬೆಳೆಸುತ್ತಾರೆ. ಆದರೆ, ಹೆಣ್ಣು ಮಗು ಹುಟ್ಟುವ ಸಂಭವವನ್ನು ನಿವಾರಿಸುವ ಸಲುವಾಗಿ ಅವರೆಂದೂ ಸಂಯಮವನ್ನು ಆಶ್ರಯಿಸುವುದಿಲ್ಲ. ಇಂಥ ಎಲ್ಲ ನಿದರ್ಶನಗಳು ಇದ್ದರೂ, ನಮ್ಮ ನಾಡಿಗೆ ಸಂಯಮ ಅಥವಾ ಬ್ರಹ್ಮಚರ್ಯ ಮಾತ್ರವೇ ಆದರ್ಶ ಪ್ರಾಯವಾದುದೆಂದು ನಾವು ಹೇಳಿಕೊಳ್ಳುತ್ತ ಹೋಗುತ್ತೇವೆ. ಇಂಥ ನಡವಳಿಕೆಯಿಂದ ಲಭಿಸುವ ಪ್ರಯೋಜನವಾದರೂ ಏನು? ನಮ್ಮ ಕಣ್ಣುಗಳ ಮುಂದೆ ಇರುವ ವಾಸ್ತವ ಪರಿಸ್ಥಿತಿಯನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಆದರ್ಶಗಳ ಬಗ್ಗೆ ಮಾತನಾಡುವುದರಿಂದ ಮಾತ್ರವೇ ನಮ್ಮ ಪರಿಸ್ಥಿತಿಯಲ್ಲಿ ಯಾವುದೇ ಸುಧಾರಣೆಯನ್ನುಂಟುಮಾಡುವುದು ಸಾಧ್ಯವಾಗುವುದಿಲ್ಲ."

ಡಾ. ಕೆ. ಬಿ. ಅಂತ್ರೋಳೀಕರ್: ಮಾನ್ಯರೆ, ಪ್ರತಿಯೊಬ್ಬ ಸದಸ್ಯನಿಗೂ ಅದು ತಲುಪಿರುವುದರಿಂದ ಅದನ್ನೆಲ್ಲ ಓದಲಾಗಿದೆ ಎಂದು ಭಾವಿಸಿಕೊಳ್ಳಬಹುದು.

ಶ್ರೀ ಪಿ. ಜೆ. ರೋಹಮ್: ಮಾನ್ಯರೆ, ಅದನ್ನು ಪೂರ್ಣವಾಗಿ ಓದುವುದಿಲ್ಲವೆಂದು ನಾನಾಗಲೇ ಸ್ಪಷ್ಟಪಡಿಸಿದ್ದೇನೆ. ನನ್ನ ಸನ್ಮಾನ್ಯ ಸ್ನೇಹಿತರಾದ ಡಾ. ಅಂತ್ರೋಳೀಕರ್ ಅವರು ತಾಳ್ಮೆಯಿಂದಿರಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಪಿ. ಜೆ. ರೋಹಮ್: ಆಕೆ ಮುಂದುವರಿದು ಹೀಗೆಂದಿದ್ದಾರೆ:

> "ಆದ್ದರಿಂದ ನಾಡಿನ ಕಲ್ಯಾಣದ ವಿಚಾರ ಅವರ ಮನಸ್ಸಿನಲ್ಲಿರುವುದೇ ಆದಲ್ಲಿ, ಈ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರುವ ಉದ್ದೇಶಕ್ಕಾಗಿ ಸಂಯಮದ ಅಥವಾ ಬ್ರಹ್ಮಚರ್ಯೆಯನ್ನು ಜನಪ್ರಿಯಗೊಳಿಸುವ ಸಲುವಾಗಿ ತಮ್ಮೆಲ್ಲ ಪ್ರಯತ್ನಗಳನ್ನೂ ನಡೆಸಬೇಕು. ಗರ್ಭನಿರೋಧಕ ಗಳನ್ನು ಜನಪ್ರಿಯಗೊಳಿಸಲು ಜನನ–ನಿಯಂತ್ರಕರು ಮಾಡುತ್ತಿರುವಂತೆ, ಸಂಘಗಳನ್ನು ಸ್ಥಾಪಿಸುವ ಮೂಲಕ ಅವೂ ತಮ್ಮ ಪ್ರಯತ್ನಗಳನ್ನು ನಡೆಸಬೇಕು. ಅವರಿಗೆ ಹಾಗೆ ಮಾಡಲು ಇಷ್ಟವಿಲ್ಲದಿದ್ದಲ್ಲಿ ಅಥವಾ ಈ ವಿಚಾರದಲ್ಲಿ ಏನನ್ನಾದರೂ ಮಾಡಲು ಅವರು ಅಸಮರ್ಥರಾಗಿದ್ದಲ್ಲಿ, ಗರ್ಭ ನಿರೋಧಕಗಳ ಪ್ರಚಾರಕರ ಕೈಗಳನ್ನು ಬಲಪಡಿಸಿದಂತಾಗುತ್ತದೆ."

ವೈದ್ಯರೊಬ್ಬರು ವಿವೇಚನೆಯಿಂದ ಹೇಳಿರುವಂತೆ, ಮಗುವನ್ನು ಹೆರುವ ಸಂದರ್ಭದಲ್ಲಿ ಮಹಿಳೆಯರು ಅನುಭವಿಸುವ ನೋವನ್ನು ಗಂಡಸರೇನಾದರೂ ಅನುಭವಿಸಬೇಕಾಗಿ ಬಂದಿದ್ದಲ್ಲಿ ತಮ್ಮ ಜೀವಮಾನದಲ್ಲಿ ಅವರೆಂದೂ ಒಂದಕ್ಕಿಂತ ಹೆಚ್ಚು ಮಗುವನ್ನು ಪಡೆಯಲು ಒಪ್ಪುತ್ತಿರಲಿಲ್ಲ.

ಈ ಕಾಲದವರೆಗೂ ಸಮಾಜದ ಮುಂದೆ ದೊಡ್ಡ ಕುಟುಂಬಗಳನ್ನು ಹೊಂದಿರಬೇಕೆಂಬ ಆದರ್ಶವೇ ಉಳಿದುಕೊಂಡು ಬಂದಿರುವುದರಿಂದ, ತಮ್ಮ ಕುಟುಂಬವನ್ನು ಮಿತಗೊಳಿಸಲು ಯಾರೂ ಇಚ್ಛಿಸುವು ದಿಲ್ಲವೆಂದು ಭಾವಿಸುವುದು ತಪ್ಪಾಗುತ್ತದೆ. ದೊಡ್ಡ ಕುಟುಂಬಗಳ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಮನಃಪೂರ್ವಕವಾಗಿ ಬಯಸುವಂಥ ವ್ಯಕ್ತಿಗಳ ಸಂಖ್ಯೆ ವಿರಳವಾಗಿಯೇ ಇರುತ್ತದೆ. ಸಾಮಾನ್ಯ ವ್ಯಕ್ತಿಗಳು ತಮ್ಮ ಕುಟುಂಬಗಳನ್ನು ಮಿತಗೊಳಿಸಲು ಖಂಡಿತವಾಗಿಯೂ ಇಚ್ಛಿಸುತ್ತಾರೆ ಹಾಗೂ ಗರ್ಭಪಾತ ಮತ್ತು ಶಿಶುಹತ್ಯೆಗಳಂಥ ಪೈಶಾಚಿಕ ವಿಧಾನಗಳನ್ನು ಆಶ್ರಯಿಸಲೂ ಅವರು ಹಿಂದೆ–ಮುಂದೆ ನೋಡುವುದಿಲ್ಲ. ಅಂಥ ಪ್ರಯತ್ನಗಳನ್ನು ಎಲ್ಲೆಡೆಗಳಲ್ಲಿಯೂ ಕಾಣುತ್ತೇವೆ. ೧೯೩೪ರಲ್ಲಿ 'ದಿ ಪೀಪಲ್ಸ್ ಟ್ರಿಬ್ಯೂನ್' ಪತ್ರಿಕೆ ಪ್ರಕಟಿಸಿದ ವರದಿಯಿಂದ, ೧೯೩೩ರಲ್ಲಿ ಶಾಂಘಾಯ್ ನಗರವೊಂದರಲ್ಲಿಯೇ ೨೪,೦೦೦ಕ್ಕೂ ಹೆಚ್ಚು ಮೃತ ಶಿಶುಗಳ ಹೆಣಗಳನ್ನು ಬೀದಿಗಳಿಂದ ಎತ್ತಲಾಯಿತು ಎಂದು ತಿಳಿದುಬಂದಿದೆ. ಚೀನಾದಲ್ಲಿ ಎಲ್ಲೆಡೆಗಳಲ್ಲಿಯೂ ಬಹುಮಟ್ಟಿಗೆ ಇದೇ ಪರಿಸ್ಥಿತಿ ಬೀಡುಬಿಟ್ಟಿದೆ. ತಮ್ಮ ಮಕ್ಕಳನ್ನು ಹೀಗೆ ಬೀದಿಗೆ ಬಿಸಾಡುವುದಕ್ಕೆ ಅವರ ಕ್ರೂರವಾದ ಹಾಗೂ ತೀವ್ರವಾದ ಬಡತನವೇ ಕಾರಣವಾಗಿದೆ. ಇಂಥ ನಿದರ್ಶನ ಗಳ ಬೆಳಕಿನಲ್ಲಿ ಸಂಯಮ ಅಥವಾ ಬ್ರಹ್ಮಚರ್ಯದ ಮೂಲಕವೇ ಸಾಮಾನ್ಯ ವ್ಯಕ್ತಿಗಳಿಗೆ ಮಕ್ಕಳ ಸಂತಾನವನ್ನು ನಿವಾರಿಸಲು ಸಾಧ್ಯವಾಗುತ್ತದೆಂದು ಭಾವಿಸುವುದು ವ್ಯರ್ಥಪ್ರಯತ್ನವಾಗುತ್ತದೆ. ಆದ್ದರಿಂದ ಆಧುನಿಕ ಗರ್ಭನಿರೋಧಕಗಳಿಗೆ ಮೊರೆಹೋಗದೆ ಬೇರೆ ದಾರಿಯೇ ಇಲ್ಲ. ಆ ಪರಿಹಾರೋಪಾಯಗಳ

ಅಗತ್ಯವನ್ನು ನಿರಾಕರಿಸುವುದು ಗರ್ಭಪಾತ, ಶಿಶುಹತ್ಯೆ ಮುಂತಾದವುಗಳ ಬಗೆಗಿನ ನಮ್ಮ ಒಲವನ್ನು ತೋರುವಂಥ ಕ್ರಮವೇ ಆಗಿರುತ್ತದೆ.

ತಮ್ಮ ನಿರ್ದಿಷ್ಟ ಜನಾಂಗ, ಧರ್ಮ ಅಥವಾ ಪ್ರದೇಶಗಳಲ್ಲಿನ ಜನಸಂಖ್ಯೆ ಕಡಿಮೆಯಾದರೆ ಅದರಿಂದ ತಮಗೇ ನಷ್ಟವಾಗುತ್ತದೆ ಎಂಬುದಾಗಿ ಕೆಲವರು ಭಾವಿಸಿದ್ದಾರೆ. ಮಾಡಿದರೆ ಹಾಗೆ ತಮ್ಮ ವಿರೋಧಿಗಳ ಪ್ರಾಬಲ್ಯ ಹೆಚ್ಚುತ್ತದೆಂಬ ಭಯವೂ ಅವರಿಗಿದೆ. ಕುಟುಂಬವನ್ನು ಮಿತಗೊಳಿಸುವ ಕ್ರಮವನ್ನು ಕೈಗೊಂಡ ಕೂಡಲೇ ಜನಸಂಖ್ಯೆಯ ಹೆಚ್ಚಳದ ದರ ಇಳಿಮುಖವಾಗಿಬಿಡುತ್ತದೆಂದು ಭಾವಿಸುವ ಅಗತ್ಯವೇನೂ ಇಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಈ ಸಂದರ್ಭದಲ್ಲಿ ಅಗತ್ಯವಾಗುತ್ತದೆ. ಆದರೆ ಅವಲಂಬಿಸಿರುವುದು ಜನನದ ದರವನ್ನು ಮಾತ್ರವಲ್ಲ, ಅದು ಮುಖ್ಯವಾಗಿ ಬದುಕಿ ಉಳಿಯುವ ದರವನ್ನೂ ಅವಲಂಬಿಸಿರುತ್ತದೆ. ಜನನದ ದರ ಎಷ್ಟೆಷ್ಟು ಹೆಚ್ಚಾಗಿರುತ್ತದೆಯೋ ಸಾವಿನ ದರವೂ ಅಷ್ಟಷ್ಟೇ ಹೆಚ್ಚಾಗಿರುತ್ತದೆ. ಜನನದ ದರ ಕಡಿಮೆಯಾದ ಕೂಡಲೇ ಸಾವಿನ ದರವೂ ಇಳಿಮುಖವಾಗುತ್ತದೆ ಎಂಬುದು ವಿಭಿನ್ನ ಸ್ಥಳಗಳಲ್ಲಿನ ಹಲವಾರು ವಿಜ್ಞಾನಿಗಳ ಅನುಭವವೇ ಆಗಿದೆ. ಇದರ ಪರಿಣಾಮವಾಗಿ ಬದುಕಿ–ಉಳಿಯುವ ದರದ ಮೇಲೆ ವಿರುದ್ಧವಾದ ಪರಿಣಾಮವೇನೂ ಆಗದೆ ಅದಕ್ಕೆ ಬದಲಾಗಿ ಬಹುತೇಕ ಸಂದರ್ಭಗಳಲ್ಲಿ ಆ ದರ ಹೆಚ್ಚುತ್ತದೆ. "ದಿ ಮದರ್ಸ್" ಕ್ಲಿನಿಕ್‌ನಲ್ಲಿನ ತಮ್ಮ ಅನುಭವದಿಂದ ಡಾ. ಮರಿಯಾ ಸ್ಟೋಪ್ಸ್ ಅವರು ಕಂಡುಕೊಂಡಿರುವ ಸಂಗತಿ ಏನೆಂದರೆ ಗರ್ಭಧಾರಣೆಯ ಸಂಖ್ಯೆ ಹೆಚ್ಚುತ್ತ ಬಂದಂತೆ ಹೆರಿಗೆ ಸಾವಿನ ಮತ್ತು ಶಿಶುಗಳ ಸಾವಿನ ದರವೂ ಹೆಚ್ಚಾಗಿಯೇ ಇರುತ್ತದೆ. ಇತರ ವಿಜ್ಞಾನಿಗಳ ಅನುಭವವೂ ಇದೇ ಬಗೆಯದಾಗಿದೆ. "ಮೆಟರ್ನಲ್ ಮಾರ್ಟಾಲಿಟಿ ಅಂಡ್ ಮಾರ್ಬಿಡಿಟಿ" (ಹೆರಿಗೆ ಸಾವು ಮತ್ತು ವಿಕೃತಿ) ಎಂಬ ತಮ್ಮ ಗ್ರಂಥದಲ್ಲಿ ಡಾ. ಜೆ. ಎಮ್. ಮನ್ರೋ ಎಂ.ಡಿ., ಎ.ಆರ್.ಎಫ್.ಪಿ.ಎಸ್. ಅವರು ಹೀಗೆಂದು ಹೇಳಿದ್ದಾರೆ:

> "ಕುಟುಂಬವನ್ನು ಮಿತಗೊಳಿಸುವುದರ ಪರವಾಗಿ ಇರುವ ಅತ್ಯಂತ ಪ್ರಬಲವಾದ ವಾದ ಇದು: ನಾಲ್ಕನೆಯ ಪ್ರಸವದ ಹೊತ್ತಿಗೆ ಹೆರಿಗೆ ಸಾವಿನ ದರ ಬಹುಮಟ್ಟಿಗೆ ಮೊದಲನೆಯ ಪ್ರಸವದ ಹೆರಿಗೆ ಸಾವಿನ ದರಕ್ಕೆ ಬಹಳ ಹತ್ತಿರವಾಗಿಬಿಟ್ಟಿರುತ್ತದೆ. ಇದನ್ನು ಸಾಮಾನ್ಯವಾಗಿ ಅತ್ಯಂತ ಗಂಭೀರವಾದುದು ಹಾಗೂ ಅಪಾಯಕಾರಿಯಾದುದು ಎಂದು ಪರಿಗಣಿಸಲಾಗಿದೆ. ನಾಲ್ಕನೆಯ ಪ್ರಸವದ ಅನಂತರ ಒಂದೊಂದು ಗರ್ಭಧಾರಣೆ ಮತ್ತು ಪ್ರಸವದೊಂದಿಗೂ ಹೆರಿಗೆ ಸಾವಿನ ದರ ಸ್ಥಿರವಾಗಿ ಹಾಗೂ ಗಮನಾರ್ಹವಾಗಿ ಏರುತ್ತ ಹೋಗುತ್ತದೆ. ಮೃತ ಶಿಶುಗಳ ಜನನ ಹಾಗೂ ಸಧ್ಯ ಪ್ರಸವ–ಮರಣಗಳ ವಿಚಾರಕ್ಕೂ ಇದೇ ಮಾತು ಅನ್ವಯಿಸುತ್ತದೆ."

ಅತಿಯಾದಿ ಶಿಶು–ಮರಣದಿಂದಾಗಿ ಭಾರತದಂಥ ರಾಷ್ಟ್ರಗಳಲ್ಲಿನ ಜನನ–ದರ ಇಂಗ್ಲೆಂಡಿನಂಥ ರಾಷ್ಟ್ರಗಳಲ್ಲಿನ ಜನನ–ದರಕ್ಕಿಂತ ಹೆಚ್ಚಾಗಿದ್ದರೂ ಭಾರತದಂಥ ರಾಷ್ಟ್ರಗಳಲ್ಲಿನ ಜನಸಂಖ್ಯಾದರದ ಬೆಳವಣಿಗೆ ಇಂಗ್ಲೆಂಡಿನಂಥ ರಾಷ್ಟ್ರದ ಜನಸಂಖ್ಯಾದರದ ಬೆಳವಣಿಗೆಗೆ ಸಮನಾಗಿಲ್ಲ. ಇಂಗ್ಲೆಂಡಿನಲ್ಲಿ ಜನನ–ದರ ಭಾರತದಲ್ಲಿನ ಜನನ–ದರದ ಸುಮಾರು ಅರ್ಧದಷ್ಟು ಮಾತ್ರವಾಗಿದೆ. ಇಷ್ಟಾಗಿಯೂ ೧೯೦೧ರಿಂದ ೧೯೩೧ರ ನಡುವಣ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಜನಸಂಖ್ಯಾದರದ ಬೆಳವಣಿಗೆ ಶೇ. ೨೩ರಷ್ಟಾಗಿದ್ದರೆ, ಇದೇ ಅವಧಿಯಲ್ಲಿ ಭಾರತದಲ್ಲಿ ಜನಸಂಖ್ಯೆಯ ಹೆಚ್ಚಳದ ದರ ಕೇವಲ ಶೇ. ೧೭ರಷ್ಟು ಮಾತ್ರವಾಗಿತ್ತು.

ಜನಸಂಖ್ಯೆಯ ತೀವ್ರ ಬೆಳವಣಿಗೆಗೂ ಜನನ–ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಆ ಮೂಲಕ ಶಿಶು ಮರಣದ ಪ್ರಮಾಣವನ್ನು ಇಳಿಸುವುದು ಉತ್ತಮತರವಾದ ಮಾರ್ಗವೆಂಬುದನ್ನು ಇದು ತೋರಿಸಿಕೊಡುತ್ತದೆ.

ಆಧುನಿಕ ಯುದ್ಧಗಳಿಗೆ ತೌಲನಿಕವಾಗಿ ಕಡಿಮೆ ಸಂಖ್ಯೆಯ ಯೋಧರ ಅಗತ್ಯವಿರುತ್ತದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಯುದ್ಧದ ಆಧುನಿಕ ಸಾಮಗ್ರಿಗಳೊಂದಿಗೆ ಸನ್ನದ್ಧವಾಗಿರುವ ಸೈನ್ಯ ತನ್ನಷ್ಟು ಚೆನ್ನಾಗಿ ಸನ್ನದ್ಧವಾಗಿಲ್ಲದೆ ಇದ್ದಲ್ಲಿ ಸಂಖ್ಯಾ ಪ್ರಮಾಣವನ್ನು ತನಗಿಂತಲೂ ಮಿಗಿಲಾಗಿರುವ ಶತ್ರುಸೈನ್ಯವನ್ನು ಸದೆಬಡಿಸಬಹುದು. ಹಿಂದಿನ ವಿಶ್ವಯುದ್ಧದಲ್ಲಿ ಕಡಿಮೆ ಜನನ ದರವನ್ನು ಹೊಂದಿದ್ದಂಥ ರಾಷ್ಟ್ರಗಳು ಹೆಚ್ಚಿನ ಜನಸಂಖ್ಯಾದರವನ್ನು ಹೊಂದಿದ್ದಂಥ ರಾಷ್ಟ್ರಗಳನ್ನು ಸದೆಬಡಿದು ಬಿಟ್ಟವು.

ಸಂಖ್ಯೆಯಲ್ಲಿ ಕಡಿಮೆಯಾಗಿರುವ ಆದರೆ ಐಶ್ವರ್ಯ, ಸಂಸ್ಕೃತಿ ಮೊದಲಾದ ದೃಷ್ಟಿಗಳಿಂದ ವಿಶಿಷ್ಟವಾಗಿರುವಂಥ ಅನೇಕ ಸಮಾಜಗಳನ್ನು ನಾವು ಜಗತ್ತಿನಲ್ಲಿ ಕಾಣುತ್ತೇವೆ. ನಮ್ಮ ನಾಡಿನಲ್ಲಿರುವ ಪಾರ್ಸಿ ಸಮುದಾಯವೇ ಇದಕ್ಕೊಂದು ನಿದರ್ಶನ. ಆದ್ದರಿಂದ ಸಂಖ್ಯಾಪ್ರಮಾಣಕ್ಕಾಗಿ ಹಾತೊರೆಯುವುದು ತುಂಬ ಲಾಭದಾಯಕವಾದ ಆದರ್ಶವೇನೂ ಅಲ್ಲ.

ಇದಾದ ತರುವಾಯ ನಾವು ಮನಸ್ಸಿನಲ್ಲಿಟ್ಟುಕೊಳ್ಳಲು ಅರ್ಹವಾಗಿರುವ ಸಂಗತಿಯೆಂದರೆ ವಿಭಿನ್ನ ಜನಾಂಗಗಳು, ಸಮಾಜಗಳು ಮತ್ತು ರಾಷ್ಟ್ರಗಳ ನಡುವಣ ವಿದ್ವೇಷಕ್ಕೆ ಮೂಲ ಕಾರಣ ಮುಖ್ಯವಾಗಿ ಬಡತನವೇ. ಬಡತನವನ್ನು ಬೇರುಸಹಿತ ಕಿತ್ತೊಗೆದರೆ, ಅಂಥ ವಿದ್ವೇಷದ ಮೂಲಕಾರಣವೂ ನಿರ್ನಾಮವಾಗಿಬಿಡುತ್ತದೆ. ಆಗ ಯಾರೂ ಇನ್ನೊಬ್ಬರಿಂದ ಉಪದ್ರವ ಉಂಟಾಗಬಹುದೆಂದು ಭಯಪಡುವ ಅಗತ್ಯವಿರುವುದಿಲ್ಲ.

ಆಧುನಿಕ ಗರ್ಭನಿರೋಧಕ ವಿಧಾನಗಳು ಎಲ್ಲ ಜನಾಂಗಗಳ, ಧರ್ಮಗಳ ಮತ್ತು ಸ್ತರಗಳ ವ್ಯಕ್ತಿಗಳು ಬಳಸುತ್ತಾರೆಂಬುದನ್ನು ಪಾಶ್ಚಾತ್ಯ ರಾಷ್ಟ್ರಗಳ ಉದಾಹರಣೆಗಳು ತೋರಿಸಿಕೊಡುತ್ತದೆ. ಉದಾಹರಣೆಗೆ ರೋಮನ್ ಕ್ಯಾಥೋಲಿಕ್ಕರು ಜನನ–ನಿಯಂತ್ರಣಕ್ಕೆ ವಿರುದ್ಧವಾಗಿದ್ದಾರೆಂಬ ಭಾವನೆ ನಿರಾಧಾರವಾದುದು ಎಂಬುದಾಗಿ ಕಂಡುಬರುತ್ತದೆ. ಫ್ರಾನ್ಸ್ ಒಂದು ರೋಮನ್ ಕ್ಯಾಥೊಲಿಕ್ ರಾಷ್ಟ್ರ. ಇಷ್ಟಾಗಿಯೂ ಈ ರಾಷ್ಟ್ರದಲ್ಲಿನ ಜನನ–ದರ ತುಂಬ ಕಡಿಮೆಯಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ೧೯೩೨ರಲ್ಲಿ ಈ ಕೆಳಗೆ ಕಾಣಿಸಿರುವ ಹತ್ತು ರಾಷ್ಟ್ರಗಳು ಅತ್ಯಂತ ಕಡಿಮೆ ಜನನ–ದರವನ್ನು ಹೊಂದಿದ್ದವು:

| | |
|---|---|
| ಸ್ವೀಡನ್ | ೧೪.೫ |
| ಜರ್ಮನಿ | ೧೫.೧ |
| ಆಸ್ಟ್ರಿಯಾ | ೧೫.೨ |
| ಇಂಗ್ಲೆಂಡ್ ಮತ್ತು ವೇಲ್ಸ್ | ೧೫.೩ |
| ನಾರ್ವೆ | ೧೬.೩ |
| ಆಸ್ಟ್ರೇಲಿಯಾ | ೧೬.೪ |
| ಸ್ವಿಜರ್ಲೆಂಡ್ | ೧೬.೭ |

| | |
|---|---|
| ನ್ಯೂಜಿಲೆಂಡ್ | ೧೭.೧ |
| ಅಮೆರಿಕಾ ಸಂಯುಕ್ತ ಸಂಸ್ಥಾನಗಳು | ೧೭.೩ |
| ಫ್ರಾನ್ಸ್ | ೧೭.೩ |

ಅತ್ಯಂತ ಕನಿಷ್ಠ ಜನರ ದರವನ್ನು ಹೊಂದಿರುವ ರಾಷ್ಟ್ರಗಳಲ್ಲಿ ಒಂದಾದ ಆಸ್ಟ್ರಿಯಾ ಸಂಪೂರ್ಣವಾಗಿ ಕ್ಯಾಥೊಲಿಕ್ಕರನ್ನು ಒಳಗೊಂಡಿದ್ದರೆ, ಜರ್ಮನಿಯಲ್ಲಿ ಮೂರನೆಯ ಒಂದು ಭಾಗದಷ್ಟು ಮಂದಿ ಕ್ಯಾಥೊಲಿಕ್ಕರಿದ್ದಾರೆ.

ಪ್ರಮುಖ ನಗರಗಳ ಜನನ–ದರಗಳನ್ನು ಒಳಗೊಂಡಿರುವ ಈ ಕೆಳಗಿನ ಅಂಕಿ ಅಂಶಗಳೂ ಇದೇ ಅಂಶವನ್ನು ನಿದರ್ಶಿಸುತ್ತದೆ. ಈ ಅಂಕಿ ಅಂಶಗಳೆಲ್ಲ ೧೯೨೭ ಅಥವಾ ೧೯೨೮ಕ್ಕೆ ಸಂಬಂಧಿಸಿವೆ:

| | |
|---|---|
| ಲಂಡನ್ | ೧೬..೧ |
| ಕಲೋನ್ | ೧೬.೦ |
| ಜಿನೀವಾ | ೧೪.೬ |
| ಮಿಲಾನ್ | ೧೪.೫ |
| ತ್ಯೂರಿನ್ | ೧೩.೨ |
| ಪ್ರೇಗ್ | ೧೨.೫ |
| ಮ್ಯೂನಿಕ್ | ೧೨.೦ |
| ವಿಯೆನ್ನಾ | ೧೦.೬ |

ಲಂಡನ್ ನಗರ ಒಂದನ್ನು ಹೊರತುಪಡಿಸಿದರೆ, ಉಳಿದ ಎಲ್ಲ ನಗರಗಳೂ ಸಂಪೂರ್ಣವಾಗಿ ರೋಮನ್ ಕ್ಯಾಥೊಲಿಕ್ಕರನ್ನೇ ಒಳಗೊಂಡಿರುವಂಥವು. ಇಷ್ಟಾಗಿಯೂ, ಅವೆಲ್ಲವೂ ಲಂಡನ್ನಿಗಿಂತಲೂ ಕಡಿಮೆ ಜನನ–ದರವನ್ನು ಹೊಂದಿವೆ. ಅವುಗಳಲ್ಲಿ ಮೂರಂತೂ ಮುಸ್ಸೋಲಿನಿಯ ಇಟಲಿಯಲ್ಲೇ ಇವೆ.

ಹೀಗಾಗಿ ಇತರ ಸಮುದಾಯಗಳು ಜನನ–ನಿಯಂತ್ರಣವನ್ನು ನಿರ್ಲಕ್ಷಿಸುತ್ತವೆ ಹಾಗೂ ಸಂಖ್ಯಾ ಪ್ರಮಾಣದ ದೃಷ್ಟಿಯಿಂದ ಪ್ರಬಲತರವಾಗಿ ಪರಿಣಮಿಸುತ್ತವೆ ಎಂಬ ಭಯ ಸಂಪೂರ್ಣವಾಗಿ ನಿರಾಧಾರವಾದುದು ಎಂಬುದು ಗೊತ್ತಾಗುತ್ತದೆ.

ಯುದ್ಧಗಳಿಗೆ ಕಾರಣಕರ್ತರಾಗಿರುವ ರಾಷ್ಟ್ರನಾಯಕರ ಭಾಷಣಗಳು ಒಂದು ಅಂಶವನ್ನು ಸ್ಪಷ್ಟ ವಾಗಿ ಸಾರಿ ಹೇಳುತ್ತವೆ. ಈಚಿನ ಬಹುತೇಕ ಯುದ್ಧಗಳಿಗೆಲ್ಲ ಜನಸಂಖ್ಯೆಯ ಒತ್ತಡದಿಂದಾಗಿ ಆರ್ಥಿಕ ಸಂಕಷ್ಟಗಳೇ ಮೂಲ ಕಾರಣ ಎಂಬುದೇ ಆ ಅಂಶ. ಜರ್ಮನ್ ಚಕ್ರವರ್ತಿ ಬರ್ನ್‌ಹಾರ್ಟ್ (ದಿ ಕೈಸರ್) ಹಿಟ್ಲರ್, ಮುಸ್ಸೋಲಿನಿ ಮತ್ತು ಗೂರಿಂಗ್ ಅವರೆಲ್ಲ ಅನೇಕ ವೇಳೆ ನಿಸ್ಸಂದಿಗ್ಧವಾದ ಮಾತುಗಳಲ್ಲಿ ಈ ಅಂಶವನ್ನು ಒತ್ತಿ ಹೇಳಿದ್ದಾರೆ. ಉದಾಹರಣೆಗೆ ಮೈನ್ ಕ್ಯಾಂಪ್ (ನನ್ನ ಹೋರಾಟ) ಎಂಬ ತನ್ನ ಪುಸ್ತಕದಲ್ಲಿ ಅಡೋಲ್ಫ್ ಹಿಟ್ಲರ್ ಹೀಗೆಂದಿದ್ದಾರೆ:

"ಯುದ್ಧಕ್ಕೆ ಮೊದಲು ಜರ್ಮನ್ ಜನಸಮುದಾಯದಲ್ಲಿ ಜನಸಂಖ್ಯೆಯ ಯಾವ ಹುಚ್ಚು, ಹೆಚ್ಚಳ ಕಂಡುಬಂದಿತೋ ಅದರಿಂದಾಗಿ ಅತ್ಯಗತ್ಯವಾದ ನಿತ್ಯದ ರೊಟ್ಟಿಯನ್ನು ಒದಗಿಸುವ ಸಮಸ್ಯೆ ಹಿಂದೆಂದೂ ಇಲ್ಲದಿದ್ದಷ್ಟು ತೀಕ್ಷ್ಣ ರೂಪದಲ್ಲಿ ಎಲ್ಲ ರಾಜಕೀಯ ಹಾಗೂ ಆರ್ಥಿಕ ಚಿಂತನೆ ಮತ್ತು ಕ್ರಮಗಳ ಮುಂಚೂಣಿಯಲ್ಲಿ ಕಾಣಿಸಿಕೊಂಡಿತು."

ಮುಂದುವರಿದು ಆತ ಹೀಗೆ ಹೇಳಿದ್ದಾರೆ:

"ಈ ಭೂಮಿಯ ಮೇಲೆ ಸಾಕಷ್ಟು ಪ್ರಮಾಣದ ಸ್ಥಳಾವಕಾಶ ದೊರೆಯುವ ಸಂಗತಿಯಷ್ಟೇ ರಾಷ್ಟ್ರಕ್ಕೆ ಅದರ ಅಸ್ತಿತ್ವದ ಸ್ವಾತಂತ್ರ್ಯವನ್ನು ತಂದುಕೊಡುತ್ತದೆ. ನಮ್ಮ ಜನಸಂಖ್ಯೆ ಮತ್ತು ನಮ್ಮ ಭೂಪ್ರದೇಶಗಳ ನಡುವಣ ಪ್ರಮಾಣ ವೈಪರೀತ್ಯವನ್ನು ತೊಡೆದು ಹಾಕುವುದೇ ರಾಷ್ಟ್ರೀಯ ಸಮಾಜವಾದಿ ಆಂದೋಳನದ ಪ್ರಯತ್ನವಾಗಬೇಕು... ನೆಲ ಮತ್ತು ರಾಜ್ಯಕ್ಷೇತ್ರ– ಇವೇ ನಮ್ಮ ವಿದೇಶಿ ನೀತಿಯ ಗುರಿಯಾಗಿರಬೇಕು" (ಪು. ೭೨೮–೩೫).

ಸೆಪ್ಟೆಂಬರ್ ೧೨, ೧೯೩೮ರಂದು ಮಾಡಿದ ತಮ್ಮ ಐತಿಹಾಸಿಕ ಭಾಷಣದಲ್ಲಿ ಹಿಟ್ಲರ್ ಹೀಗೆಂದಿದ್ದಾರೆ:

"ಒಂದು ಚದರ ಕಿಲೋಮೀಟರ್ ಪ್ರದೇಶದಲ್ಲಿ ೧೪೦ ಮಂದಿ ಇಡಿಕಿರಿದಿರುವಂಥ ಜರ್ಮನಿ ತನ್ನ ಯಹೂದ್ಯರನ್ನು ಇರಿಸಿಕೊಳ್ಳಬೇಕೆಂದು ಆ ರಾಷ್ಟ್ರಗಳು ನಿರೀಕ್ಷಿಸುತ್ತವೆ. ಆದರೆ ಒಂದು ಚದರ ಕಿಲೋಮೀಟರ್ ಪ್ರದೇಶದಲ್ಲಿ ಕೆಲವೇ ಕೆಲವು ಮಂದಿಯನ್ನು ಹೊಂದಿರುವಂಥ ಆ ಶಕ್ತ ರಾಷ್ಟ್ರಗಳಿಗೆ ಅವರು ಬೇಕಾಗಿಲ್ಲ..."

ಅಂತೆಯೇ ಮುಸ್ಸೋಲಿನಿ ಹೀಗೆಂದು ಹೇಳಿದ್ದಾರೆ:

"ನಾವು ಬಹುಸಂಖ್ಯೆಯಲ್ಲಿರುವುದರಿಂದ ಹಾಗೂ ಹಾಗೆಯೇ ಇರಬಯಸುವುದರಿಂದ ನಾವು ಭೂಮಿಗಾಗಿ ಹಸಿದಿದ್ದೇವೆ" ("ಫಾರಿನ್ ಅಫೇರ್ಸ್" ಪತ್ರಿಕೆ ಅಕ್ಟೋಬರ್ ೧೯೨೬ರ ಸಂಚಿಕೆಯಿಂದ).
"ಸೂರ್ಯ ಮತ್ತು ಭೂಮಿಯ ಬಗೆಗಿನ ಇಟಲಿಯ ವಿವಾದಾತೀತ ಅಗತ್ಯಗಳನ್ನು ಇತರ ಎಲ್ಲ ರಾಷ್ಟ್ರಗಳೂ ಮಾನ್ಯ ಮಾಡಬೇಕೆಂದು ಇಟಲಿ ಒತ್ತಾಯಿಸುತ್ತದೆ. ಹಾಗೆ ಮಾನ್ಯ ಮಾಡಲು ಅವು ವಿಫಲವಾದಲ್ಲಿ ಇಟಲಿ ಈ ವಿಚಾರವನ್ನು ತನ್ನ ಕೈಗೆತ್ತಿಕೊಳ್ಳದೆ ವಿಧಿಯೇ ಇರುವುದಿಲ್ಲ"

(ಸಂಡೇ ಟಾಯಮ್ಸ್ ಪತ್ರಿಕೆಯ ೧ ನವೆಂಬರ್ ೧೯೨೬ರ ಸಂಚಿಕೆಯಿಂದ)

ಉಪ ಸಭಾಧ್ಯಕ್ಷರು: ಸನ್ಮಾನ್ಯ ಸದಸ್ಯರು ಕಾಲದ ಮಿತಿಯನ್ನು ಮೀರಿದ್ದಾರೆ.
ಶ್ರೀ ಬಿ. ಕೆ. ಗಾಯಕ್‌ವಾಡ್: ಮಾನ್ಯರೆ, ಕಾಲಮಿತಿ ಏನೆಂಬುದನ್ನು ನಾನು ತಿಳಿದುಕೊಳ್ಳಬಹುದೇ?
ಉಪ ಸಭಾಧ್ಯಕ್ಷರು: ಅರ್ಧ ಘಂಟೆ.

ಶ್ರೀ ಬಿ. ಕೆ. ಗಾಯಕ್‌ವಾಡ್: ಮಾನ್ಯರೆ, ಮಾಹಿತಿಯ ಒಂದು ಅಂಶವನ್ನು ಕುರಿತಂತೆ ಈ ಹಿಂದಿನ ಗೊತ್ತುವಳಿಯನ್ನು ಮಂಡಿಸಿದ ಸನ್ಮಾನ್ಯ ಸದಸ್ಯರು (ಶ್ರೀ ಶ್ರೀಕಾಂತ್ ಅವರು) ಒಂದು ಗಂಟೆಗೂ ಹೆಚ್ಚು ಕಾಲ ಮಾತನಾಡಿದರೆಂದು ನಾನು ಭಾವಿಸಿದ್ದೇನೆ.

ಉಪಸಭಾಧ್ಯಕ್ಷರು; ಕಾಲಾವಕಾಶದ ವಿಸ್ತರಣೆ ಸಭಾಧ್ಯಕ್ಷರ ವಿವೇಚನೆಗೆ ಒಳಪಟ್ಟಿರುವ ವಿಚಾರ.

ಶ್ರೀ ಬಿ. ಕೆ. ಗಾಯಕ್‌ವಾಡ್: ಇತರ ಗೊತ್ತುವಳಿಗಳ ವಿಷಯದಲ್ಲಿಯೂ ಇದೇ ಅನುಗ್ರಹವನ್ನು ತೋರಲು ಸಾಧ್ಯವಿಲ್ಲವೇ?

ಶ್ರೀ ಪಿ. ಜೆ. ರೋಹಮ್: ಮಾನ್ಯರೆ, ನಾನು ಈ ಸದನದ ಹೆಚ್ಚು ಕಾಲವನ್ನು ತೆಗೆದುಕೊಳ್ಳಬಯಸುವುದಿಲ್ಲ. ಆದರೆ ನಾನು ಇನ್ನೂ ಕೆಲವು ಅಂಶಗಳನ್ನು ಮುಂದಿರಿಸಬೇಕಾಗಿದೆ. ನನಗೆ ಇನ್ನೂ ಕೆಲವು ನಿಮಿಷಗಳಷ್ಟು ಕಾಲಾವಕಾಶವನ್ನು ಕೊಡಬೇಕೆಂದು ಕೋರುತ್ತೇನೆ. ಹೀಗಾಗಿ ಶಾಶ್ವತವಾದ ವಿಶ್ವಭ್ರಾತೃತ್ವವನ್ನು ಬೆಂಬಲಿಸುವಂಥವರೆಲ್ಲರೂ ಜನಸಂಖ್ಯೆಯನ್ನು ಹೆಚ್ಚಿಸುವ ಪ್ರತಿಯೊಂದು ಪ್ರಯತ್ನವನ್ನೂ ಖಂಡಿಸಬೇಕು. ಹಾಗೂ ಜನನ–ನಿಯಂತ್ರಣ ವಿಧಾನಗಳ ಮೂಲಕ ಜನಸಂಖ್ಯೆಯನ್ನು ಮಿತಗೊಳಿಸಲು ತಮ್ಮಿಂದಾದ ಎಲ್ಲ ಪ್ರಯತ್ನಗಳನ್ನೂ ಮಾಡಬೇಕು ಎಂಬುದು ಸ್ಪಷ್ಟವೇ ಆಗಿದೆ.

ಜನನ–ನಿಯಂತ್ರಣದ ಬಗೆಗಿನ ಪ್ರಚಾರ ಜನಸಾಮಾನ್ಯರವರೆಗೆ ತಲುಪಲು ವಿಫಲವಾಗುತ್ತದೆ ಹಾಗೂ ಈ ಚಳವಳಿಯ ಫಲಿತಾಂಶ ಜನಸ್ವಭಾವೋತ್ಕರ್ಷಕವಾಗುವುದಕ್ಕೆ ಬದಲಾಗಿ ಜನ ಸ್ವಭಾವಾಪಕರ್ಷಕವಾಗುತ್ತದೆ ಎಂಬ ಭಯವೂ ನಿರಾಧಾರವಾದುದು. ಗರ್ಭ ನಿರೋಧಕಗಳ ಬಗೆಗೆ ಅರಿವನ್ನುಂಟು ಮಾಡಿದ ಕೂಡಲೇ ಕೆಳವರ್ಗದವರು ಅವುಗಳ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ ಎಂಬುದನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿನ ಅನುಭವ ಸಿದ್ಧಪಡಿಸಿದೆ; ಅಷ್ಟೇ ಅಲ್ಲ, ಅವರ ಮಟ್ಟಿಗೆ ಇವುಗಳ ಅಗತ್ಯ ಇತರರಿಗಿಂತಲೂ ಹೆಚ್ಚಾಗಿಯೇ ಇರುತ್ತದೆ. ಅನಕ್ಷರಸ್ಥರಾಗಿದ್ದರೂ ನಮ್ಮ ನಾಡಿನಲ್ಲಿನ ಸಾಮಾನ್ಯ ಜನಸಮುದಾಯ ತಮ್ಮ ಹಿತ ಯಾವುದರಲ್ಲಿ ಅಡಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವಷ್ಟು ಬುದ್ಧಿವಂತರಾಗಿದ್ದಾರೆ.. ಹೀಗಾಗಿ ಈ ಉಪಾಯ ಲಭ್ಯವಿದೆ ಎಂದು ಅರಿವಾದೊಡನೆಯೇ ಅವರು ಈ ಉಪಜ್ಞೆ ಅಥವಾ ಹೊಸ ಶೋಧವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಾರೆ ಎಂಬುದರಲ್ಲಿ ಸಂದೇಹವೇನೂ ಇಲ್ಲ. ಅಂಥ ವ್ಯಕ್ತಿಗಳ ವಿಷಯದಲ್ಲಿ ಸಂತಾನ ಶಕ್ತಿಹರಣ (ನಸಬಂದಿ) ಉಪಯುಕ್ತವೆಂದು ಕಂಡುಬರುತ್ತದೆ. ಹೀಗಾಗಿ ಸರ್ಕಾರ ಮತ್ತು ಪುರಸಭೆಗಳು ತಮ್ಮ ಆಸ್ಪತ್ರೆಗಳಲ್ಲಿ ಈ ಸಂಬಂಧವಾದ ಸೌಲಭ್ಯಗಳನ್ನು ಒದಗಿಸಬೇಕು.

ಹಳ್ಳಿಗರಲ್ಲಿಯೂ ಅನೇಕ ಸದ್ಗುಣಗಳಿರುತ್ತವೆ ಹಾಗು ನಿಜವಾಗಿಯೂ ಅವರೇ ಒಳ್ಳೆಯ ನಾಗರಿಕರ ಕೊರತೆಯನ್ನು ತುಂಬಿಕೊಡುವಂಥವರಾಗಿರುತ್ತಾರೆ ಎಂಬುದನ್ನು ದಿವಂಗತ ಪ್ರಿನ್ಸಿಪಾಲ್ ಗೋಳೆಯವರು "ಹಿಂದೂ ಧರ್ಮ ಆಣಿ ಸುಧಾರಣ" (ಹಿಂದೂ ಧರ್ಮ ಮತ್ತು ಸುಧಾರಣೆ) ಎಂಬ ತಮ್ಮ ಪುಸ್ತಕದಲ್ಲಿ ತೋರಿಸಿಕೊಟ್ಟಿದ್ದಾರೆ.

ಈ ಚಳವಳಿಯ ವಿರೋಧಿಗಳು ಫ್ರಾನ್ಸ್, ಜರ್ಮನಿ ಮತ್ತು ಇಟಲಿಗಳ ಉದಾಹರಣೆಯನ್ನು ಎತ್ತಿಹಿಡಿದು, ಅದರ ವ್ಯರ್ಥತೆಯನ್ನು ತೋರಿಸಿಕೊಡಲು ಪ್ರಯತ್ನಿಸುತ್ತಾರೆ. ಆದರೆ ಎಲ್ಲಿಯವರೆಗೆ ತಮ್ಮ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಆ ರಾಷ್ಟ್ರಗಳ ಪ್ರಯತ್ನಗಳು ಸಮರ್ಥನೀಯವಾಗಿವೆಯೆಂದು ಸಿದ್ಧವಾಗುವುದಿಲ್ಲವೋ ಅಲ್ಲಿಯವರೆಗೆ ಆ ರಾಷ್ಟ್ರಗಳನ್ನು ನಾವು ಅನುಸರಿಸಲು ಸಾಧ್ಯವಿಲ್ಲವೆಂಬುದನ್ನು ಅವರು ಮರೆತುಬಿಡುತ್ತಾರೆ. ಮೊದಲನೆಯದಾಗಿ ಆ ರಾಷ್ಟ್ರಗಳಲ್ಲಿನ ಜನನ–ಪ್ರಮಾಣ ನಮ್ಮ

ರಾಷ್ಟ್ರದ ಜನನ–ಪ್ರಮಾಣಕ್ಕಿಂತ ತುಂಬ ಕಡಿಮೆಯಾಗಿದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಮ್ಮ ನಾಡಿನ ಜನನ–ಪ್ರಮಾಣ ೧೯೩೬ರಲ್ಲಿ ೩೫ ಆಗಿದ್ದರೆ ಇಟಲಿ, ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿನ ಜನನ–ಪ್ರಮಾಣ ಕ್ರಮಶಃ ೨೨.೨, ೧೫ ಮತ್ತು ೧೯ ಆಗಿತ್ತು. ೧೯೦೦ರಲ್ಲಿ ಜರ್ಮನಿಯಲ್ಲಿನ ಜನನ–ಪ್ರಮಾಣ ೩೫.೬ ಆಗಿತ್ತು. ಆದರೆ ೧೯೩೩ರಲ್ಲಿ ಅದು ೧೪.೭ಕ್ಕೆ ಇಳಿದಿತ್ತು. ಅಲ್ಲಿಂದೀಚೆಗೆ ಇಟಲಿ ಮತ್ತು ಫ್ರಾನ್ಸ್ ದೇಶಗಳು ಕೂಡ ತಮ್ಮ ಜನನ–ಪ್ರಮಾಣವನ್ನು ತುಂಬ ಇಳಿಸಿಕೊಂಡಿವೆ. ೧೮೫೧–೫೫ರ ಅವಧಿಯಲ್ಲಿ ಇಂಗ್ಲೆಂಡಿನಲ್ಲಿನ ಜನನ–ಪ್ರಮಾಣ ೩೩.೯ ಆಗಿತ್ತು. ಆದರೆ ೧೯೩೧ರಲ್ಲಿ ಅದು ೧೫.೩ಕ್ಕೆ ಇಳಿಸಲಾಗಿತ್ತು. ನಮ್ಮಲ್ಲಿನ ಜನನ–ಪ್ರಮಾಣ ಕಳೆದ ಐವತ್ತು ವರ್ಷಗಳಲ್ಲಿ ವಾಸ್ತವವಾಗಿ ಸ್ಥಿರವಾಗಿಯೇ ಉಳಿದುಬಿಟ್ಟಿದೆ. ಆದ್ದರಿಂದ ಆ ಪ್ರಮಾಣವನ್ನು ಏರಿಸಲು ಇತರ ರಾಷ್ಟ್ರಗಳು ನಡೆಸುತ್ತಿರುವ ಪ್ರಯತ್ನಗಳನ್ನು ಅನುಕರಿಸುವುದು ಅವಿವೇಕದ ಕ್ರಮವೇ ಆಗುತ್ತದೆ.

ತಮ್ಮ ಜನಾಂಗದ ಜನರ ಹೆಚ್ಚಳದ ದರ ಮಂದಗೊಳ್ಳುತ್ತಿರುವ ವಿಚಾರದಲ್ಲಿ ವಿಷಾದವನ್ನು ತೋರುವುದು ಸಾಮ್ರಾಜ್ಯಷಾಹಿಗಳ ಮಟ್ಟಿಗೆ ತುಂಬ ಸಹಜವಾದ ಸಂಗತಿಯೇ ಆಗಿದೆ. ಅವರು "ಪುನರುಜ್ಜೀವಿಸಿ ಇಲ್ಲವೇ ಮಡಿಯಿರಿ" ಎಂಬಂಥ ಕೂಗನ್ನೆಬ್ಬಿಸುವುದೂ ಆಶ್ಚರ್ಯದ ಸಂಗತಿಯೇನೂ ಅಲ್ಲ. ಆದರೆ ಅಂಥ ಬೊಬ್ಬೆಗಳು ಕೆಲವು ಮಂದಿ ಸುಶಿಕ್ಷಿತ ವ್ಯಕ್ತಿಗಳನ್ನು ಜನನ–ನಿಯಂತ್ರಣದ ಲಾಭಗಳ ವಿಷಯದಲ್ಲಿ ಸಂದೇಹಿತರಾಗುವಂತೆ ಮಾಡುತ್ತಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿದೆ (The Nineteenth Century and After) ಹತ್ತೊಂಬತ್ತನೆಯ ಶತಮಾನ ಮತ್ತು ಅಲ್ಲಿಂದ ಮುಂದಕ್ಕೆ ಎಂಬ ಪತ್ರಿಕೆಯ ಫೆಬ್ರುವರಿ ೧೯೩೮ರ ಸಂಚಿಕೆಯಲ್ಲಿನ ಸರ್ ಲಿಯೋ ಲಿಯೋಜ್ಜಮನಿಯವರ "ಪುನರುಜ್ಜೀವಿಸಿ ಇಲ್ಲವೇ ಮಡಿಯಿರಿ" ಎಂಬ ಲೇಖನವನ್ನು ಇದಕ್ಕೆ ನಿದರ್ಶನವಾಗಿ ಹೆಸರಿಸಬಹುದು. ಸಮಸ್ತ ಮಾನವ ಸಮುದಾಯದ ಹಿತಕ್ಕೆ ಬಿಳಿಯರ ನಾಯಕತ್ವ ಅಗತ್ಯವೆಂದು ಆ ಲೇಖಕರು ಭಾವಿಸಿದ್ದಾರೆ ಹಾಗೂ ಬಿಳಿಯ ಜನರ ಸಂಖ್ಯೆ ಇಳಿಮುಖವಾಗುವುದನ್ನು ತಡೆಗಟ್ಟಲು ಈ ಬೊಬ್ಬೆಯನ್ನೆಬ್ಬಿಸಿದ್ದಾರೆ. ಇತ್ತ ಮೊದಲನೆಯದಾಗಿ ಬಿಳಿಯರ ಪ್ರಾಧಾನ್ಯದಿಂದ ಜಗತ್ತಿಗೆ ಲಾಭವಾಗಿದೆ ಎಂಬುದನ್ನು ಒಪ್ಪಲು ಅನೇಕರು ನಿರಾಕರಿಸುತ್ತಾರೆ. ಎರಡನೆಯದಾಗಿ ಬಿಳಿಯರ ಸಂಖ್ಯೆ ಇಳಿಮುಖವಾದರೆ ಅದರಿಂದ ಮಾನವ ಜನಾಂಗದ ಮೇಲೆ ಯಾವುದೋ ಅನಾಹುತ ಎರಗುತ್ತದೆ ಎನ್ನುವ ಮಟ್ಟಕ್ಕೆ ಹೋಗಲು ಬೆರಳೆಣಿಕೆಯಷ್ಟು ಮಂದಿ ವಿದ್ಯಾವಂತರೂ ಸಿದ್ಧರಾಗಿಲ್ಲ. ಮೇಲಾಗಿ ಈ ಲೇಖನದ ಎಲ್ಲ ನಿಲುವುಗಳೂ– ತಪ್ಪಾಗಿವೆ. ಇಂಗ್ಲೆಂಡಿನ ಜನನ–ಪ್ರಮಾಣ ಕ್ರಮೇಣ ಮತ್ತಷ್ಟು ಇನ್ನಷ್ಟು ಕಡಿಮೆಯಾಗುತ್ತ ಹೋಗಿ ೨೦೩೫ನೆಯ ವರ್ಷದಲ್ಲಿ ಇಂಗ್ಲೆಂಡಿನ ಜನಸಂಖ್ಯೆ ೪೪.೦೦,೦೦೦ (೪೪ ಲಕ್ಷ)ಕ್ಕೆ ಇಳಿದು ಹೋಗುತ್ತದೆ ಎಂದು ಅವರು ತೀರ್ಮಾನಿಸಿಬಿಟ್ಟಿದ್ದಾರೆ. ಆದರೆ ವಾಸ್ತವ ಸಂಗತಿ ಏನೆಂದರೆ ಇಂಗ್ಲೆಂಡಿನ ಜನನ–ಪ್ರಮಾಣ ಇಳಿಮುಖವಾಗುವುದಕ್ಕೆ ಬದಲಾಗಿ ಏರುಮುಖವಾಗಿದೆ. ೧೯೩೩ರಲ್ಲಿ ಈ ಜನನ–ದರ ೧೪.೪ ಆಗಿದ್ದರೆ, ಜುಲೈ ೧೯೩೮ ರಲ್ಲಿ ಅದು ೧೫.೩ ಆಗಿತ್ತು. ೧೯೪೦ರಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್‌ಗಳ ಒಟ್ಟಾರೆ ಜನಸಂಖ್ಯೆ ೪೦,೭೦೦,೦೦೦ ಮಾತ್ರವಾಗಿರುತ್ತದೆಂದು ಅವರು ಅಂದಾಜು ಮಾಡಿದ್ದರೆ, ೧೯೩೭ರಲ್ಲಿಯೇ ವಾಸ್ತವಿಕ ಅಂಕಿ ಅಂಶಗಳ ಪ್ರಕಾರ ಈ ಸಂಖ್ಯೆ ೪೧,೦೩೧,೦೦೦ ಆಗಿತ್ತು ಹಾಗೂ ಇದು ಪ್ರತಿವರ್ಷ ೧೯೦,೦೦೦ರ ಪ್ರಮಾಣದಲ್ಲಿ ಹೆಚ್ಚುತ್ತಾ ಇದೆ. ಇಂಥ ಲೇಖನಗಳಿಂದ ದಾರಿ ತಪ್ಪಿ ಹೋಗದಂತೆ ನಾವು ಎಚ್ಚರ ವಹಿಸಬೇಕೆಂಬುದನ್ನು ಈ ಸಂಗತಿಗಳು ತೋರಿಸಿಕೊಡುತ್ತದೆ.

ಅತಿಯಾದ ಜನಸಂಖ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ವಲಸೆ ಹೋಗುವುದು ಒಂದು ಉಪಾಯವೆಂಬುದಾಗಿ ಕೆಲವೊಮ್ಮೆ ಸೂಚಿಸಲಾಗಿದೆ. ಆದರೆ, ಈ ಪರಿಹಾರೋಪಾಯ ಅಷ್ಟೇನೂ ಆಶಾದಾಯಕವಾಗಿಲ್ಲ. ತಮ್ಮ ತಾಯ್ನಾಡನ್ನು ಬಿಟ್ಟು ಹೊರಹೋಗುವ ಮನೋಧರ್ಮ ಮತ್ತು ಧೈರ್ಯ ಕೆಲವೇ ಕೆಲವು ವ್ಯಕ್ತಿಗಳಲ್ಲಿರುತ್ತದೆ. ಏಕೆಂದರೆ ಬಾಲ್ಯದ ನೆನಪುಗಳಿಂದ ಮತ್ತು ಬಂಧು ಮಿತ್ರರ ಇರುವಿಕೆಯಿಂದ ನಮ್ಮ ಹೃದಯಕ್ಕೆ ಪ್ರಿಯವಾಗಿರುವ ಹಾಗೂ ಹೊಂದಿಕೆಯಾಗಿರುವ ವಾತಾವರಣ ಮತ್ತು ಇತರ ಸಂಗತಿ ಗಳಿಂದ ನಮಗೆ ಸುಖದಾಯಕವಾಗಿರುವ ನಾಡನ್ನು ಬಿಟ್ಟು, ವಾತಾವರಣ ಹೊಂದಿಕೆಯಾಗದಿರುವ, ಅಪಾಯವಿರುವಂಥ ಹಾಗೂ ಭಾಷೆ, ಆಚಾರ-ವಿಚಾರಗಳು ಮತ್ತು ರೀತಿನೀತಿಗಳಲ್ಲಿ ನಮ್ಮದಕ್ಕಿಂತ ಭಿನ್ನವಾಗಿರುವಂಥ ಜನರು ಇರುವ ದೂರದ ನಾಡಿಗೆ ವಲಸೆ ಹೋಗಲು ಹೆಚ್ಚು ಮಂದಿ ಇಷ್ಟ ಪಡುವುದಿಲ್ಲ. ಉತ್ತಮ ನಾಗರಿಕರಾಗಲು ಅರ್ಹವಾಗಿರುವಂಥವರು ಹಾಗೂ ಸಮರ್ಥರು ಮತ್ತು ಸತ್ವಶಾಲಿಗಳಾಗಿರುವಂಥವರು ಸಾಮಾನ್ಯವಾಗಿ ವಲಸೆ ಹೋಗುವುದನ್ನು ಇಷ್ಟಪಡುವಂಥ ವ್ಯಕ್ತಿಗಳಾಗಿರುತ್ತಾರೆ. ಅಂಥ ವ್ಯಕ್ತಿಗಳು ವಲಸೆ ಹೋಗುವುದು ತಾಯ್ನಾಡಿಗೆ ನಿಜವಾಗಿಯೂ ನಷ್ಟದ ವಿಚಾರ. ಈ ವ್ಯಕ್ತಿಗಳು ತಮ್ಮ ನಾಡಿನಲ್ಲಿಯೇ ಸುಲಭವಾಗಿ ಜೀವನೋಪಾಯವನ್ನು ಕಂಡುಕೊಳ್ಳಬಲ್ಲಂಥವರು. ಆದರೆ ದೂರದ ನಾಡುಗಳಿಗೆ ವಲಸೆ ಹೋಗುವ ಮೂಲಕ ತಮ್ಮ ಸ್ಥಿತಿಗತಿಗಳನ್ನು ಮತ್ತಷ್ಟು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುವಂತೆ ಅವರ ಮಹದಾಸೆ ಅವರನ್ನು ಪ್ರೇರಿಸುತ್ತದೆ. ದೈಹಿಕವಾಗಿ ವಿಕಲಾಂಗರಾಗಿರುವಂಥ ಅಥವಾ ಮಾನಸಿಕವಾಗಿ ಅಥವಾ ಆರ್ಥಿಕವಾಗಿ ಬಾಧಿತರಾಗಿರುವಂಥ ವ್ಯಕ್ತಿಗಳ ವಿಷಯದಲ್ಲಿಯಂತೂ ವಲಸೆ ಹೋಗುವುದು ವ್ಯಾವಹಾರಿಕವಾಗಿ ನಿರುಪಯುಕ್ತವೇ ಆಗುತ್ತದೆ. ವಾಸ್ತವವಾಗಿ ಇಂಥ ವ್ಯಕ್ತಿಗಳಿಗೆ ನೆರವಿನ ಅಗತ್ಯ ಇರುತ್ತದೆ. ಅಗತ್ಯವಾಗಿರುವ ಬಂಡವಾಳದ ದೃಷ್ಟಿಯಿಂದಲೇ ಪರಿಗಣಿಸಿದರೂ ಈ ಉಪಾಯ ಅನೇಕ ವ್ಯಕ್ತಿಗಳಿಗೆ ಪರಿಹಾರವನ್ನು ಕಲ್ಪಿಸಲಾರದೆ ಹೋಗುತ್ತದೆ.

ಇದಲ್ಲದೆ ವಿರಳವಾದ ಜನಸಂಖ್ಯೆಯನ್ನು ಹೊಂದಿರುವಂಥ ರಾಷ್ಟ್ರಗಳು ಇತರರನ್ನು ಬರಮಾಡಿಕೊಳ್ಳಲು ಉತ್ಸುಕರಾಗಿಯೇನೂ ಇರುವುದಿಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳ ಬೇಕು. ಏಕೆಂದರೆ ಹೆಚ್ಚುತ್ತಿರುವ ತಮ್ಮ ನಾಡಿನ ಸಂತಾನಕ್ಕೆ ಸಾಕಷ್ಟು ಸ್ಥಳಾವಕಾಶ ಅವರಿಗೇ ಬೇಕಾ ಗುತ್ತದೆ. ಕೆನಡಾ, ಬ್ರಿಟೀಷ್ ಸಾಮ್ರಾಜ್ಯದ ಒಂದು ವಸಾಹತು ರಾಷ್ಟ್ರವಾಗಿದ್ದು ಅಲ್ಲಿ ಪ್ರಮುಖ ವಾಗಿ ಆಂಗ್ಲರೇ ವಾಸವಾಗಿದ್ದಾರೆ. ಶ್ರಮದಾಯಕ ಕೆಲಸಗಳಿಗಾಗಿ ಅಲ್ಲಿಗೆ ಬಂದಿದ್ದ ಆಂಗ್ಲ ಕಾರ್ಮಿಕರಿಗೆ ಅಲ್ಲಿ ನೆಲೆಗೊಳ್ಳುವ ಅವಕಾಶ ಮಾಡಿಕೊಡಲು ಅವರು ನಿರಾಕರಿಸಿದರು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ವಿರಳ ಜನಸಂಖ್ಯೆಯ ಪ್ರದೇಶಗಳಿಗೆ ಬಲಾತ್ಕಾರಪೂರ್ವಕ ವಾಗಿ ನುಗ್ಗಲು ಜನನಿಬಿಡ ರಾಷ್ಟ್ರಗಳು ನಡೆಸಿದ ಪ್ರಯತ್ನಗಳು ಯುದ್ಧಕ್ಕೆ ಎಡೆಮಾಡಿಕೊಟ್ಟಿದೆ. ಈ ಅಂಶಕ್ಕೆ ಸಂಬಂಧಿಸಿದ ಇತ್ತೀಚಿನ ಹಾಗೂ ನಮಗೆ ಹತ್ತಿರದ್ದಾಗಿರುವ ಒಂದು ನಿದರ್ಶನ ವೆಂದರೆ ಬರ್ಮಾ. ತಮ್ಮ ಭೌತಿಕ ಪ್ರಗತಿಗೆ ಭಾರತೀಯರು ಹಾನಿಯನ್ನುಂಟುಮಾಡಿದರು ಎಂಬ ಸಂದೇಶವೇ ಅಲ್ಲಿನ ಈಚಿನ ಮತೀಯ ದಂಗೆಗಳ ಹಿಂದೆ ಅಡಗಿದ್ದ ಮುಖ್ಯ ಕಾರಣವಾಗಿತ್ತು. ಅತಿಯಾದ ಜನ ಸಂಖ್ಯೆಯನ್ನು ಹೊಂದಿರುವ ರಾಷ್ಟ್ರಗಳಿಗೆ ಹೋಲಿಸಿದರೆ, ವಿರಳವಾದ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶಗಳ ಸಂಖ್ಯೆ ತುಂಬ ಕಡಿಮೆಯಾಗಿದೆ. ಜಪಾನ್, ಇಟಲಿ, ಜರ್ಮನಿ, ಚೀಣಾ, ಭಾರತ ಮತ್ತು ಇತರ ಅನೇಕ ರಾಷ್ಟ್ರಗಳು ಅತಿಯಾದ ಜನಸಂಖ್ಯೆಯನ್ನು ಹೊಂದಿವೆ. ಈ ಎಲ್ಲ ರಾಷ್ಟ್ರಗಳಿಂದ ಬರುವ ವಲಸೆಗಾರರಿಗೆ ಸಾಕಷ್ಟು ಸ್ಥಳಾವಕಾಶವನ್ನು ದೊರಕಿಸಿ ಕೊಡುವುದು ಸಾಧ್ಯವಾಗದ ಸಂಗತಿ.

ಈ ಸಂಬಂಧವಾಗಿ ಇನ್ನೊಂದು ವಿಚಾರ ಉಲ್ಲೇಖಾರ್ಹವಾಗಿದೆ. ರಾಷ್ಟ್ರದ ಜನಸಂಖ್ಯೆಯ ಸಮಸ್ಯೆಯನ್ನು ವಲಸೆಯು ಶಾಶ್ವತವಾಗಿ ಪರಿಹರಿಸಲಾರದು. ಗಾಳಿಯಂತೆಯೇ ವಿಸ್ತರಿಸಿಕೊಳ್ಳುತ್ತಿರುವ ಜನಸಂಖ್ಯೆಯೂ ಬಹುಬೇಗ ಶೂನ್ಯವನ್ನು ತುಂಬಿನಿಲ್ಲುವ ಪ್ರವೃತ್ತಿಯನ್ನು ಹೊಂದಿದೆ. ಇದು ಮೊದಲಿನ ಸ್ಥಿತಿಗತಿಯ– ಅಂದರೆ, ಸಾಂದ್ರತೆಯ ಸನ್ನಿವೇಶದ ಪುನರಾವರ್ತನೆಯತ್ತಲೇ ನಮ್ಮನ್ನು ಕೊಂಡೊಯ್ಯುತ್ತದೆ. ಹೀಗಾಗಿ ಜನನ–ನಿಯಂತ್ರಣವನ್ನು ಆಶ್ರಯಿಸದೆ ಬೇರೆ ವಿಧಿಯೇ ಇಲ್ಲ.

ಬಾಲ್ಯ–ವಿವಾಹಗಳನ್ನು ಕೈಬಿಟ್ಟು ವಿಳಂಬಿತ ವಿವಾಹಗಳನ್ನು ಜಾರಿಗೆ ತಂದ ಕೂಡಲೇ ಜನ ಸಂಖ್ಯೆಯ ಹೆಚ್ಚಳಕ್ಕೆ ತಡೆಯೊಡ್ಡಿದಂತಾಗುತ್ತದೆ ಎಂದು ಕೆಲವು ಭಾವಿಸಿದ್ದಾರೆ. ಆದರೆ ಈ ನಂಬಿಕೆಯೂ ನಿರಾಧಾರವಾದುದು. ಮೊದಲನೆಯದಾಗಿ ನಮ್ಮ ನಾಡಿನಲ್ಲಿ ಹೆಣ್ಣುಮಕ್ಕಳ ಮದುವೆಯ ವಯಸ್ಸನ್ನು ಏರಿಸುವುದಕ್ಕೆ ಹಲವು ವರ್ಷಗಳೇ ಹಿಡಿಯುತ್ತವೆ. ಹೆಣ್ಣುಮಕ್ಕಳ ವಿಷಯದಲ್ಲಿ ಸಂತಾ ನೋತ್ಪತ್ತಿಯ ಶಕ್ತಿ ವರ್ಷಗಳೆಂದರೆ ೧೮ರಿಂದ ೨೨ನೆಯ ವರ್ಷ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಹಿಳೆಯರು ಈ ಅವಧಿಯ ಅನಂತರವೇ ಮದುವೆಯಾಗುತ್ತಾರೆ. ಅಂದರೆ ತಮ್ಮ ಅತ್ಯಂತ ಫಲವತ್ತತೆಯ ಅವಧಿ ಕಳೆದುಹೋದ ಬಳಿಕವೇ ಅವರು ಮದುವೆಯಾಗುತ್ತಾರೆ. ಹೆಣ್ಣಿನ ಮದುವೆಯ ಕನಿಷ್ಠ ವಯಸ್ಸನ್ನು ೧೪ ವರ್ಷ ಎಂದು ಗೊತ್ತುಪಡಿಸಿರುವ ಶಾರದಾ ಕಾಯ್ದೆಯನ್ನು ಜಾರಿಗೆ ಕೊಡುವಲ್ಲಿ ಎದುರಾಗುತ್ತಿರುವ ಕಷ್ಟಗಳನ್ನು ಗಮನಿಸಿದಾಗ ನಿಕಟ ಭವಿಷ್ಯದಲ್ಲಿ ನಮ್ಮ ನಾಡಿನಲ್ಲಿ ಮಹಿಳೆಯರು ತಮ್ಮ ಮದುವೆಗಳನ್ನು ೨೨ನೆಯ ವರ್ಷದವರೆಗೆ ಮುಂದೂಡುತ್ತಾರೆಂದು ನಿರೀಕ್ಷಿಸುವುದು ಹಾಗೂ ಆ ಮೂಲಕ ಜನಸಂಖ್ಯೆಯ ಹೆಚ್ಚಳಕ್ಕೆ ತಡೆಯನ್ನೊಡ್ಡಬಹುದೆಂದು ನಿರೀಕ್ಷಿಸುವುದು ಬಹುಮಟ್ಟಿಗೆ ನಿರರ್ಥಕವಾದುದು ಎಂಬುದನ್ನು ನಾವು ಸುಲಭವಾಗಿಯೇ ಕಂಡುಕೊಳ್ಳಬಹುದು. ೧೯೩೧ರ ಜನಗಣತಿಯ ಸಂದರ್ಭದಲ್ಲಿ ವಿಶೇಷವಾಗಿ ನಡೆಸಲಾದ ಸಂತಾನೋತ್ಪತ್ತಿಯ ಶಕ್ತಿಯ ವಿಚಾರಣೆಯಿಂದ ಶ್ರೀ ಪಿ. ಕೆ. ವಾಟ್ಟಲ್ ಅವರು ಈ ಕೆಳಗಿನ ತೀರ್ಮಾನಗಳಿಗೆ ಬಂದಿದ್ದಾರೆ.

(೧) ಇಪ್ಪತ್ತು ವರ್ಷಕ್ಕಿಂತ ಮೊದಲು ಮದುವೆಯಾದ ಹೆಣ್ಣುಮಕ್ಕಳು ಇಪ್ಪತ್ತು ವರ್ಷವಾದ ಮೇಲೆ ಮದುವೆಯಾದ ಹೆಣ್ಣುಮಕ್ಕಳಿಗಿಂತ ಕಡಿಮೆ ಸಂಖ್ಯೆಯ ಮಕ್ಕಳನ್ನು ಹೆರುತ್ತಾರೆ.

(೨) ಇಪ್ಪತ್ತು ವರ್ಷಕ್ಕಿಂತ ಮೊದಲು ಮದುವೆಯಾದ ಹೆಣ್ಣುಮಕ್ಕಳಿಗೆ ಹುಟ್ಟಿದ ಮಕ್ಕಳ ಬದುಕಿ–ಉಳಿಯುವ ಪ್ರಮಾಣ ಇಪ್ಪತ್ತು ವರ್ಷಕ್ಕಿಂತಲೂ ಹೆಚ್ಚಿನ ವಯಸ್ಸಿನಲ್ಲಿ ಮದುವೆಯಾದ ಹೆಣ್ಣುಮಕ್ಕಳಿಗೆ ಹುಟ್ಟಿದ ಮಕ್ಕಳ ಬದುಕಿ–ಉಳಿಯುವ ಪ್ರಮಾಣಕ್ಕಿಂತ ತುಂಬ ಕಡಿಮೆಯಾಗಿರುತ್ತದೆ.

ವಿಳಂಬಿತ ವಿವಾಹಗಳು ಸಾಮಾನ್ಯವಾಗಿ ಪ್ರಚುರಗೊಂಡ ಬಳಿಕವೂ ಜನಸಂಖ್ಯೆಯನ್ನು ಆ ಮೂಲಕ ಗಮನಾರ್ಹವಾಗಿ ತಡೆಯುಂಟಾಗುವ ಸಂಭವವಿಲ್ಲ ಎಂಬುದನ್ನು ಈ ತೀರ್ಮಾನಗಳು ನಮಗೆ ತೋರಿಸಿಕೊಡುತ್ತವೆ. ಹೆಚ್ಚು ಹೆಚ್ಚು ಮಕ್ಕಳು ಪ್ರೌಢ ವಯಸ್ಸಿನವರೆಗೂ ಬದುಕಿ ಉಳಿಯುತ್ತವೆ; ಹೀಗಾಗಿ ನಮ್ಮ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ಹೆಚ್ಚುವ ಸಂಭವ ಇದೆಯೇ ಹೊರತು ಕಡಿಮೆಯಾಗುವ ಸಂಭವವೇನೂ ಇಲ್ಲ.

ಮುಂಬಯಿ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಡಾ. ಜಿ. ಎಸ್. ಘುರ್ಯೆ ಅವರು "೧೯೩೧ರ ಭಾರತೀಯ ಜನಗಣತಿಯ ಫಲವತ್ತತೆ ಅಂಕಿ ಅಂಶಗಳು" ಎಂಬ ಲೇಖನದಲ್ಲಿ (ಜರ್ನಲ್ ಆಫ್ ದಿ ಯೂನಿವರ್ಸಿಟಿ ಆಫ್ ಬಾಂಬೇ" ಸಂ III; ಮೇ ೧೯೩೪) ಹೀಗೆಂದಿದ್ದಾರೆ.

"ಸಂತಾನೋತ್ಪತ್ತಿಯ ಶಕ್ತಿ ಮತ್ತು ವಿವಾಹ ಸಮಯದಲ್ಲಿನ ಹೆಣ್ಣಿನ ವಯಸ್ಸುಗಳ ನಡುವಣ ಸಹಸಂಬಂಧದ ಬಗೆಗಿನ ತಾತ್ಕಾಲಿಕ ತೀರ್ಮಾನ ಸರಿ ಎಂಬುದಾಗಿ ಸಿದ್ಧವಾಗುವುದಾದರೆ, ವಿವಾಹ ಸಮಯದಲ್ಲಿನ ಹೆಣ್ಣಿನ ವಯಸ್ಸಿನ ಹೆಚ್ಚಳದೊಂದಿಗೆ (ಇದು ತುಂಬ ಅಗತ್ಯವೂ ಹೌದು) ವಿವಾಹದ ಸಂತಾನೋತ್ಪತ್ತಿ ಶಕ್ತಿಯಲ್ಲಿಯೂ ಹೆಚ್ಚಳ ಉಂಟಾಗುತ್ತದೆ. ಈಗಿರುವಂತೆಯೇ ನಮ್ಮ ಜನಸಂಖ್ಯೆ ತುಂಬ ಅಗಾಧವಾಗಿದೆ. ಹಾಗೂ ನಮ್ಮ ಹೆಚ್ಚಳ ಅನಪೇಕ್ಷಣೀಯವಾಗಿದೆ. ಮತ್ತಷ್ಟು ಹೆಚ್ಚಿನ ಪ್ರಮಾಣ ದರದಲ್ಲಿ ಅದರ ಹೆಚ್ಚಳಕ್ಕೆ ನೆರವಾಗುವುದು ಆತ್ಮಘಾತಕವೇ ಆಗುತ್ತದೆ. ಹೀಗಾಗಿ ವಿವಾಹ ಸಮಯದಲ್ಲಿನ ಹೆಣ್ಣಿನ ವಯಸ್ಸನ್ನು ಹೆಚ್ಚಿಸುವ ನಮ್ಮ ಪ್ರಯತ್ನಗಳೊಂದಿಗೆ ಜನನ–ನಿಯಂತ್ರಣದ ಬಗ್ಗೆ ತೀವ್ರ ಚಳವಳಿಯನ್ನು ನಡೆಸಬೇಕು."

ಮೇಲಾಗಿ ಸೂಕ್ತ ವಯಸ್ಸಿನಲ್ಲಿ ಮದುವೆಯಾಗಲು ಸಾಧ್ಯವಾಗದೆ ಹೋಗುವಂಥ ವ್ಯಕ್ತಿಗಳಿಂದ ವ್ಯಭಿಚಾರಕ್ಕೆ ಪ್ರೋತ್ಸಾಹ ದೊರೆಯುತ್ತದೆ ಹಾಗೂ ಇದರ ಮೂಲಕ ಇತರ ದುಷ್ಪರಿಣಾಮಗಳೂ ಉಂಟಾಗುತ್ತವೆ ಎಂಬುದನ್ನು ಮರೆಯಕೂಡದು. ಹೀಗಾಗಿ ಸೂಕ್ತ ಕಾಲದಲ್ಲಿನ ಮದುವೆ ನಮ್ಮ ಗುರಿಯಾಗಿದ್ದರೆ, ಜನನ–ನಿಯಂತ್ರಣವನ್ನು ಆಶ್ರಯಿಸುವುದು ಅಗತ್ಯವಾಗುತ್ತದೆ.

ಮಹಿಳೆಗೆ ಆರ್ಥಿಕ ಸ್ವಾವಲಂಬನೆ ದೊರೆತರೆ ಅದು ಜನಸಂಖ್ಯೆಯ ಬೆಳವಣಿಗೆಯನ್ನು ಕಡಿಮೆಯಾಗಿಸುತ್ತದೆ ಎಂಬ ಅಭಿಪ್ರಾಯವನ್ನು ಕೆಲವರು ಇರಿಸಿಕೊಂಡಿದ್ದಾರೆ. ಆದರೆ ಇದೂ ನಿರಾಧಾರವಾಗಿರುವಂಥ ಹೇಳಿಕೆ. ವ್ಯಕ್ತಿಯನ್ನು ಕಾಮದ ಕಪಿಮುಷ್ಠಿಯಿಂದ ಬಿಡಿಸುವಂಥ ಯಾವ ಶಕ್ತಿಯೂ ಆರ್ಥಿಕ ಸ್ವಾವಲಂಬನೆಯಲ್ಲಿಲ್ಲ. ತಮ್ಮ ಜೀವನಾದ್ಯಂತ ಎಲ್ಲಾ ಮಹಿಳೆಯರೂ ಸಂಪೂರ್ಣ ಬ್ರಹ್ಮಚರ್ಯೆಯನ್ನು ಆಚರಿಸಲಾರರು ಅಥವಾ ಕೆಲವೇ ಕೆಲವರು ಮಾತ್ರ ಹಾಗೆ ಮಾಡಬಲ್ಲರು. ಹೀಗಾಗಿ ಈ ಪರಿಹಾರೋಪಾಯವೂ ನಿಷ್ಫಲವಾಗಿ ಪರಿಣಮಿಸುತ್ತದೆ. ಈಗಲೂ ಕೆಳವರ್ಗದ ಮಹಿಳೆಯರು ತಮ್ಮ ಗಳಿಕೆಯ ಮೂಲಕ ವಾಸ್ತವವಾಗಿ ತಮ್ಮ ಕುಟುಂಬಗಳಿಗೆ ನೆರವಾಗುತ್ತಿದ್ದಾರೆ. ಆದರೆ ಆ ಸಂಗತಿ ಕುಟುಂಬವನ್ನು ಮಿತಗೊಳಿಸುವುದಕ್ಕೆ ಸ್ವಲ್ಪಮಟ್ಟಿಗೂ ನೆರವಾಗುತ್ತಿರುವಂತೆ ತೋರುವುದಿಲ್ಲ.

ವೈದ್ಯಕೀಯ ಮತ್ತು ಆರೋಗ್ಯ ಸಂಬಂಧವಾದ ಕಾರಣಗಳಿಂದಾಗಿ ಜನನ–ನಿಯಂತ್ರಣ ಅಗತ್ಯವಾಗಬಹುದಾದರೂ, ಆರ್ಥಿಕ ಸಂಕಷ್ಟಗಳನ್ನು ಬಗೆಹರಿಸುವುದಕ್ಕೆ ಅದರ ಅಗತ್ಯವೇನೂ ಇಲ್ಲ ಎಂಬುದು ಕೆಲವರ ಅಭಿಪ್ರಾಯವಾಗಿದೆ. ಆರ್ಥಿಕ ಮತ್ತು ಕೃಷಿ ಸಂಬಂಧವಾದ ವಿಕಾಸಕ್ಕೆ ನಮ್ಮ ನಾಡಿನಲ್ಲಿ ತುಂಬ ಅವಕಾಶವಿದೆಯೆಂದೂ ಈ ದಿಕ್ಕುಗಳಲ್ಲಿ ಕೈಗೊಳ್ಳಲಾಗುವ ಪ್ರಯತ್ನಗಳು ನಮ್ಮ ಜನರ ಜೀವನಮಟ್ಟವನ್ನು ಗಮನಾರ್ಹವಾಗಿ ಹೆಚ್ಚಿಸಬಲ್ಲವೆಂದೂ ಅವರು ವಾದಿಸುತ್ತಾರೆ. ಇಷ್ಟಾಗಿಯೂ ನಿಕಟವಾದ ಪರಿಶೀಲನೆಯಿಂದ ಈ ಅಭಿಪ್ರಾಯವೂ ನಿಲ್ಲುವಂಥದಲ್ಲವೆಂದು ಕಂಡುಬಂದಿದೆ. ಅಗತ್ಯವಾಗಿರುವಷ್ಟು ಬಂಡವಾಳದ ಮತ್ತು ಶ್ರೀಮಂತ ಗ್ರಾಹಕರ ಕೊರತೆ ನಮ್ಮ ಉದ್ಯಮಗಳ ಯಾವುದೇ ಭೌತಿಕ ವಿಕಾಸಕ್ಕೆ ಅಡ್ಡಿಯನ್ನುಂಟುಮಾಡುತ್ತದೆ. ಅಂತೆಯೇ ಫಲವತ್ತಾದ ಭೂಮಿ, ಮಳೆ ಮತ್ತು ಗೊಬ್ಬರದ ಕೊರತೆಯೂ ನಮ್ಮ ಕೃಷಿ–ಉತ್ಪಾದನೆಯಲ್ಲಿನ ಯಾವುದೇ ಗಮನಾರ್ಹ ಹೆಚ್ಚಳಕ್ಕೆ ಅಡ್ಡಿಯಾಗಿ ನಿಲ್ಲುತ್ತದೆ. ಅಸ್ಸಾಂ ರಾಜ್ಯವನ್ನು ಬಿಟ್ಟರೆ, ಇನ್ನೂ ಕೃಷಿಗೆ ಒಳಪಡಿಸದೆ ಇರುವಂಥ ಫಲವತ್ತಾದ ಭೂಮಿ ಅಷ್ಟಾಗಿಯೇನೂ ಉಳಿದೇ ಇಲ್ಲ. ಬರ್ಮಾದಲ್ಲಿ ಇಂದಿಗೂ ಕೃಷಿಗೆ ಒಳಪಡಿಸಬಲ್ಲಂತಹ ಯೋಗ್ಯವಾದ ಭೂಮಿ ಸಾಕಷ್ಟು ಪ್ರಮಾಣದಲ್ಲಿದೆ. ಆ ಸಂಸ್ಥಾನದಲ್ಲಿ ಲಭ್ಯವಾಗಿರುವ ಕೃಷಿ ಯೋಗ್ಯ ಭೂಮಿಯ ಬಗೆಗಿನ ಅಂಕಿ ಅಂಶಗಳು

ಭಾರತದಲ್ಲಿಯೂ ಇಂದು ಸಾಕಷ್ಟು ಪ್ರಮಾಣದಲ್ಲಿ ಸಾಗುವಳಿಯೋಗ್ಯ ಎಂದು ಕೃಷಿ ಮಾಡದೇ ಇರುವಂಥ ಭೂಮಿ ಲಭ್ಯವಿದೆಯೆಂಬ ತಪ್ಪು ಕಲ್ಪನೆ ಮೂಡುವುದಕ್ಕೆ ಕಾರಣವಾದುದು ನಮ್ಮ ನಾಡಿನಲ್ಲಿ ಶೇ. ೮೬.೪ರಷ್ಟು ಕೃಷಿ ಯೋಗ್ಯ ಭೂಮಿಯನ್ನು ಈಗಾಗಲೇ ಉಳುಮೆಗೆ ಒಳಪಡಿಸಲಾಗಿದೆ. ಉಳಿದಿರುವ ಭೂಮಿಯ ಒಂದಿಷ್ಟು ಅಂಶವಾದರೂ ಕೃಷಿಗೆ ಯಾವುದಾದರೂ ರೂಪದಲ್ಲಿ ಅರ್ಹವಾಗಿದೆಯೇ ಎಂಬುದೇ ಸಂಶಯಾಸ್ಪದವಾಗಿದೆ. ಭಾರತೀಯ ಕೃಷಿಯ ಬಗೆಗಿನ ರಾಯಲ್ ಕಮೀಷನ್ನಿನ್ ವರದಿಯ ಪ್ರಕಾರ ಉಳಿದಿರುವ ಅಂಥ ಭೂಮಿಯ ಬಹುಭಾಗ ಕೆಲಸಕ್ಕೆ ಬಾರದಿರುವಂಥದೇ ಆಗಿದೆ. ಸತತವಾಗಿ ಬೆಳೆಯನ್ನು ತೆಗೆಯುತ್ತಿರುವುದರಿಂದ ಹಾಗೂ ಸಾಕಷ್ಟು ಪ್ರಮಾಣದಲ್ಲಿ ಗೊಬ್ಬರ ಲಭಿಸದೆ ಇರುವುದರಿಂದ ನಮ್ಮ ನಾಡಿನ ಕೃಷಿ ಭೂಮಿಯನ್ನು ಬಹುಭಾಗ ಬಂಜರಾಗಿ ಪರಿಣಮಿಸಿದೆ.

ಜನಸಂಖ್ಯೆಯ ಅತಿಯಾದ ವೃದ್ಧಿಯ ಪರಿಣಾಮವಾಗಿ ನಮ್ಮ ದೇಶ ಅರಣ್ಯಭೂಮಿ ಮತ್ತು ಹುಲ್ಲುಗಾವಲುಗಳ ಕೊರತೆಯನ್ನು ಎದುರಿಸುತ್ತಿದೆ. ಕೆನಡಾದಲ್ಲಿ ಕೃಷಿ ಯೋಗ್ಯವಾಗಿರುವ ಭೂಮಿಯಲ್ಲಿ ಶೇ. ೩೪.೩ರಷ್ಟು ಭೂಮಿಯನ್ನು ಹುಲ್ಲುಗಾವಲಿನ ಉದ್ದೇಶಗಳಿಗಾಗಿ ಮೀಸಲಾಗಿ ಇಡಲಾಗಿದೆ. ಈ ಶೇಕಡಾವಾರು ಪ್ರಮಾಣ ಫ್ರಾನ್ಸ್‌ನಲ್ಲಿ ೨೧.೫, ಇಟಲಿಯಲ್ಲಿ ೧೮.೩, ಜರ್ಮನಿಯಲ್ಲಿ ೧೪.೩ ಆಗಿದ್ದರೆ, ನಮ್ಮ ನಾಡಿನಲ್ಲಿ ಇದು ಕೇವಲ ೧.೬ ಆಗಿದೆ. ಈ ಅಂಕಿಅಂಶಗಳು ನಮ್ಮ ದನಕರುಗಳು ಎಂಥ ದುಃಸ್ತಿತಿಗೆ ಒಳಗಾಗಿವೆ ಎಂಬುದನ್ನು ತೋರಿಸಿಕೊಡುತ್ತವೆ. ಯಾವ ದಿಕ್ಕಿನಲ್ಲಿ ನಾವು ಕಣ್ಣುಹಾಯಿಸಿದರೂ ದನಕರುಗಳ ಅಸ್ಥಿಪಂಜರಗಳು ಮಾತ್ರವೇ ನಮಗೆ ಎದುರಾಗುತ್ತವೆ. ನಮ್ಮ ಜೀವಕಾರುಣ್ಯದ ಬಗ್ಗೆ ನಮ್ಮ ಜನ ಹೆಮ್ಮೆಪಟ್ಟುಕೊಳ್ಳುತ್ತಾರೆ. ಆದರೆ, ಕೃಷಿ ಭೂಮಿಯ ಬಗೆಗಿನ ತಮ್ಮ ಹೋರಾಟದಲ್ಲಿ ಆ ಮೂಕ ಪ್ರಾಣಿಗಳನ್ನು ಅವುಗಳ ಬಹುಮಟ್ಟಿನ ಗೋಮಾಳಗಳಿಂದ ಅನ್ಯಾಯವಾಗಿ ವಂಚಿತರಾಗಿಸಿ ಆ ಎಲ್ಲ ಭೂಮಿಯನ್ನು ಬೇಸಾಯಕ್ಕೆ ಒಳಪಡಿಸಿಬಿಟ್ಟಿದ್ದಾರೆ. ಹೀಗಾಗಿ ನಮ್ಮ ಕೃಷಿ ವ್ಯವಸ್ಥೆ ಉಪಯುಕ್ತ ದನ ಕರುಗಳ ಕೊರತೆ ಮತ್ತು ಸಗಣಿಯಂಥ ಜೈವಿಕ ಗೊಬ್ಬರಗಳ ಕೊರತೆಯನ್ನು ಅನುಭವಿಸುತ್ತಿದೆ. ಇದರಿಂದಾಗಿ ಕೃಷಿಕ್ಷೇತ್ರದಲ್ಲಿ ಯಾವುದೇ ಗಮನಾರ್ಹ ಸುಧಾರಣೆಯನ್ನು ತರುವುದು ತುಂಬ ಕಷ್ಟದ ಕೆಲಸವಾಗಿದೆ. ಕೆಲವರು ಜಪಾನ್ ಮತ್ತು ಚೀನಾ ದೇಶಗಳಲ್ಲಿನ ಬೃಹತ್ ಪ್ರಮಾಣದ ಎಕರೆವಾರು ಅಕ್ಕಿಯ ಇಳುವರಿಯತ್ತ ಕೈದೋರುತ್ತಾರೆ. ಹಾಗೂ ಆ ಬೆಳೆಯ ಉತ್ಪಾದನೆಯನ್ನು ಗಮನಾರ್ಹವಾಗಿ ಹೆಚ್ಚಿಸುವ ಅವಕಾಶವಿದೆ ಎಂಬ ಭರವಸೆಯನ್ನು ನಮ್ಮ ಮುಂದಿರಿಸುತ್ತಿದ್ದಾರೆ. ಇಷ್ಟಾಗಿಯೂ ಆ ರಾಷ್ಟ್ರಗಳಲ್ಲಿನ ಅಕ್ಕಿಯ ಉತ್ಪಾದನೆಯ ಬಗೆಗಿನ ಅಂಕಿ ಅಂಶಗಳ ನಿರ್ದಿಷ್ಟತೆಯನ್ನು ಸಂದೇಹಿಸಲು ಕೆಲವು ಕಾರಣಗಳಿವೆ. ನ್ಯೂಯಾರ್ಕ್‌ನಿಂದ ಪ್ರಕಟವಾಗುವ "International Conciliation" ಎಂಬ ಮಾಸ ಪತ್ರಿಕೆಯ ಇತ್ತೀಚಿನ ಸಂಚಿಕೆಗೆ ಇಟಲಿಯ ಮಾಜಿ ವಿದೇಶಾಂಗ ವ್ಯವಹಾರಗಳ ಸಚಿವರಾದ ಕೌಂಟ್ ಸ್ಫೋರ ಅವರು ಚೀಣಾ ಮತ್ತು ಜಪಾನ್‌ಗಳ ನಡುವಣ ಸಂಘರ್ಷ (The Conflict between China and Japan) ಎಂಬ ಲೇಖನವನ್ನು ಬರೆದಿದ್ದಾರೆ. ಜಪಾನಿನಲ್ಲಿ ೧೯೦೦ರಿಂದ ಆಚೆಗೆ ಅಕ್ಕಿಯ ಎಕರೆವಾರು ಉತ್ಪಾದನೆಯಲ್ಲಿ ಗಮನಾರ್ಹ ಇಳಿತ ಕಂಡುಬಂದಿದೆ ಎಂಬುದಾಗಿ ಅದರಲ್ಲಿ ಹೇಳಲಾಗಿದೆ. ಜಪಾನಿನಲ್ಲಿ ಕೃಷಿಯ ಬಗೆಗಿನ ಅಂಕಿ ಅಂಶಗಳು ವಿಶ್ವಾಸನೀಯವಾಗಿಲ್ಲವೆಂಬುದನ್ನು ತೋರಿಸಿಕೊಡಲು ಸಾಕಷ್ಟು ಸಾಕ್ಷ್ಯ ಲಭ್ಯವಾಗಿದೆ. ಇದೇ ಅಲ್ಲದೆ ಸಕಾಲಿಕವಾದ ಹಾಗೂ ವರ್ಷಾದ್ಯಂತ ಬೀಳುವ ಸಮೃದ್ಧವಾದ ಮಳೆಯ ಹಾಗೂ ಅದರ ವ್ಯಾಪಕವಾದ ಅರಣ್ಯ ಪ್ರದೇಶಗಳಿಂದಾಗಿ ಗೊಬ್ಬರದ ಸಮೃದ್ಧಿಯ ಮತ್ತು ಅದರ ಅಕ್ಕಿಯ ಬೆಳೆಗೆ ಆದರ್ಶಪ್ರಾಯವಾಗಿರುವಂಥ ವಾತಾವರಣ ವರದಾನ

ಜಪಾನಿಗೆ ಲಭಿಸಿದೆ ಎಂಬುದನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು. ಈ ಬಗೆಯ ಅನುಕೂಲಗಳ ಒಕ್ಕೂಟ ಬೇರೆಲ್ಲಿಯೂ ವಿರಳವಾಗಿಯೂ ಕಂಡುಬರುವುದಿಲ್ಲ. ಆತ್ಮಾನುಶಾಸನ ಅಥವಾ ಸಂಯಮ ನಮ್ಮ ಜನಸಾಮಾನ್ಯರ ಅದೃಷ್ಟವನ್ನು ಸ್ವಲ್ಪಮಟ್ಟಿಗಾದರೂ ಸುಧಾರಿಸಬಹುದೆಂಬ ಮಾತನ್ನು ಒಪ್ಪಿಕೊಳ್ಳಬಹುದಾದರೂ ಜನಸಂಖ್ಯಾಭಿವೃದ್ಧಿಯನ್ನು ಎಲ್ಲಿಯವರೆಗೆ ನಾವು ಬುದ್ಧಿಪೂರ್ವಕವಾಗಿ ತಡೆಗಟ್ಟುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಜನತೆಯ ಆರ್ಥಿಕ ಸ್ಥಿತಿಗತಿಗಳಲ್ಲಿ ದೀರ್ಘ ಕಾಲ ಉಳಿದುಬರುವಂಥ ಯಾವುದೇ ಗಮನಾರ್ಹವಾದ ಸುಧಾರಣೆ ಸಾಧ್ಯವಾಗುವ ನಂಬಿಕೆಯನ್ನು ಇರಿಸಿಕೊಳ್ಳುವಂತಿಲ್ಲ. ಈಗಾಗಲೇ ವಿವರಿಸಿರುವಂತೆ ವಿಸ್ತರಣೆಗೆ ಒದಗಿಸಲಾದ ಪ್ರತಿಯೊಂದು ಅವಕಾಶದಿಂದಲೂ ಜನಸಂಖ್ಯೆ ತೀವ್ರಗತಿಯಲ್ಲಿ ಬೆಳೆಯತೊಡಗುತ್ತದೆ ಹಾಗೂ ಮಹಾ ಪ್ರಯತ್ನಗಳಿಂದ ಸಾಧಿಸಲಾದ ಎಲ್ಲ ಅನುಕೂಲಗಳನ್ನು ಇಲ್ಲವಾಗಿಸಿಬಿಡುತ್ತದೆ. ಹೀಗಾಗಿ ಜನತೆಯ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಪ್ರಯತ್ನಗಳೊಂದಿಗೆ ಜನನ–ನಿಯಂತ್ರಣದ ಮೂಲಕ ಜನಸಂಖ್ಯೆಯನ್ನು ಹಿಡಿತದಲ್ಲಿರಿಸಿಕೊಳ್ಳುವ ಬಗ್ಗೆ ಎಚ್ಚರ ವಹಿಸದೆ ಹೋದರೆ, ಜನಸಾಮಾನ್ಯರ ಜೀವನ ಮಟ್ಟದಲ್ಲಿ ಯಾವುದೇ ಗಮನಾರ್ಹವಾದ ಹಾಗೂ ದೀರ್ಘ ಕಾಲಿಕವಾದ ಏರಿಕೆ ಕಂಡುಬರುವುದು ಸಾಧ್ಯವಿಲ್ಲವೆಂದು ಅನೇಕ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಅವರ ಅನುಭವವೇ ಕಾರಣವಾಗಿದೆ.

ಜನಸಮುದಾಯವೊಂದರ ಸ್ಥಿತಿಗತಿಗಳಲ್ಲಿನ ಸರ್ವತೋಮುಖವಾದ ಸುಧಾರಣೆಯನ್ನು ಸಾಧಿಸುವಲ್ಲಿ ಆತ್ಮಾನುಶಾಸನ ಅಸಮರ್ಥವಾದುದು ಎಂಬುದನ್ನು ಅನೇಕ ಸ್ವತಂತ್ರ ರಾಷ್ಟ್ರಗಳು ಉದಾಹರಣೆಯನ್ನೊದಗಿಸಿವೆ. ಜನನ–ನಿಯಂತ್ರಣವೂ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಇಂಗ್ಲೆಂಡ್ ಮತ್ತು ಅಮೆರಿಕಾದಂಥ ರಾಷ್ಟ್ರಗಳಲ್ಲಿನ ನಿವಾಸಿಗಳ ಆರ್ಥಿಕ ಸ್ಥಿತಿಗತಿಗಳು ನಮ್ಮ ನಾಡಿನಲ್ಲಿನ ಸ್ಥಿತಿಗತಿಗಳಿಗಿಂತ ಉತ್ಕೃಷ್ಟವಾಗಿದೆಯಾದರೂ ಅಲ್ಲಿನ ಪರಿಸ್ಥಿತಿ ಇನ್ನೂ ತೃಪ್ತಿಕರವಾಗಿಯೇನೂ ಇಲ್ಲ. ನಮ್ಮ ನಾಡಿನಲ್ಲಿ ಪೌಷ್ಟಿಕ ಆಹಾರವನ್ನು ಪಡೆದುಕೊಳ್ಳುವುದಕ್ಕೆ ಅನೇಕರಿಗೆ ಅವರ ಬಡತನವೇ ಅಡ್ಡಿಯಾಗಿದೆ. ಅಲ್ಲಿಯೂ ಪರಿಪೂರ್ಣ ಆರೋಗ್ಯಕ್ಕೆ ಅಗತ್ಯವಾದ ಜೀವನ ಮಟ್ಟವನ್ನು ಕಾಪಾಡಿಕೊಳ್ಳುವುದು ಅನೇಕರಿಗೆ ಕಷ್ಟಕರವಾಗಿ ತೋರುತ್ತಿದೆ. ಅಧ್ಯಕ್ಷರಾದ ರೋಸ್‌ವೆಲ್ಟ್ ಅವರ ಪ್ರಕಾರ ಅಮೇರಿಕಾದ ನಿವಾಸಿಗಳಲ್ಲಿ ಮೂರನೆಯ ಒಂದು ಭಾಗದಷ್ಟು ಜನರಿಗೆ ಸಾಕಷ್ಟು ಪೌಷ್ಟಿಕ ಆಹಾರ ದೊರೆಯುತ್ತಿಲ್ಲ. ಅಗತ್ಯವಾಗಿರುವಷ್ಟು ಪ್ರಮಾಣದಲ್ಲಿ ಅಲ್ಲಿಯೂ ಜನನ ನಿಯಂತ್ರಣವನ್ನು ಆಚರಣೆಗೆ ತರದೆ ಇರುವುದೇ ಇದಕ್ಕೆ ಒಂದು ಕಾರಣವಾಗಿದೆ. ಹೊಸದಾಗಿ ಹೋಗಿ ನೆಲೆಸಿರುವಂಥ ರಾಷ್ಟ್ರಗಳಲ್ಲಿ ತಲಾವಾರು ಫಲವತ್ತಾದ ಭೂಮಿಯ ಪ್ರಮಾಣ ಸಮೃದ್ಧವಾಗಿದೆ. ಹೀಗಾಗಿ ದಟ್ಟವಾದ ಜನಸಾಂದ್ರತೆಯುಳ್ಳ ರಾಷ್ಟ್ರಗಳಲ್ಲಿನ ಜನರಿಗೆ ದೊರೆಯುವುದಕ್ಕಿಂತಲೂ ಅಲ್ಲಿನ ಜನರಿಗೆ ಹೆಚ್ಚು ಪೌಷ್ಟಿಕವಾದ ಆಹಾರ ದೊರೆಯುತ್ತದೆ. ಆಸ್ಟ್ರೇಲಿಯಾ ಮತ್ತು ಇಟಲಿ ದೇಶಗಳಲ್ಲಿನ ತಲಾವಾರು ವಾರ್ಷಿಕ ಆಹಾರ ಬಳಕೆಯ ಬಗೆಗಿನ ಅಂಕಿ ಅಂಶಗಳು ಇಲ್ಲಿವೆ.

| | **ಆಸ್ಟ್ರೇಲಿಯಾ** | **ಇಟಲಿ** |
|---|---|---|
| ಹಾಲು ಮತ್ತು ಅದರ ಉತ್ಪನ್ನಗಳು (ಗ್ಯಾಲನ್ನುಗಳಲ್ಲಿ) | ೧೦೨ | ೨೩ |
| ಮಾಂಸ (ಪೌಂಡುಗಳಲ್ಲಿ) | ೨೦೨ | ೩೫ |
| ಹಣ್ಣುಗಳು | ೧೦೪ | ೪೦ |
| ಸಕ್ಕರೆ (ಪೌಂಡುಗಳಲ್ಲಿ) | ೧೦೭ | ೧೮ |
| ಗೋಧಿ (ಪೌಂಡುಗಳಲ್ಲಿ) | ೨೯೭ | ೩೫೧ |

ಗೋಧಿಯನ್ನು ಬಿಟ್ಟು ಉಳಿದ ಆಹಾರ ಪದಾರ್ಥಗಳನ್ನೂ ಆಸ್ಟ್ರೇಲಿಯದಲ್ಲಿ ಇಟಲಿಗಿಂತ ಹೆಚ್ಚಾಗಿ ಬಳಸಲಾಗುತ್ತಿದೆ. ಹಳೆಯ ಜಗತ್ತಿನ ರಾಷ್ಟ್ರಗಳಲ್ಲಿ ಜನನ–ನಿಯಂತ್ರಣದ ಮೂಲಕ ಜನನ–ಪ್ರಮಾಣವನ್ನು ತುಂಬ ಕಡಿಮೆಯಾಗಿಸಿಕೊಂಡಿರುವ ಹಾಲೆಂಡ್‌ನಂಥ ದೇಶಗಳು ಉಳಿದ ದೇಶಗಳಿಗಿಂತಲೂ ಹೆಚ್ಚು ಸುಖಿಯಾಗಿವೆ.

ಮುಂಬಯಿ ಸಂಸ್ಥಾನದಲ್ಲಿ ಪ್ರತಿ ವ್ಯಕ್ತಿಗೆ ಪ್ರತಿದಿನ ಲಭಿಸುವ ಹಾಲಿನ ಪ್ರಮಾಣ ಒಂದೂಕಾಲು "ತೊಲ" ಮಾತ್ರ. ಪೋಷಣೆಯ ಬಗೆಗಿನ ತಜ್ಞರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿದಿನ ಸರಾಸರಿ ಆಧಾರದ ಮೇಲೆ ಕನಿಷ್ಠ ಪಕ್ಷ ಒಂದು ಪಿಂಟ್ ಅಷ್ಟಾದರೂ ಹಾಲು ದೊರೆಯಬೇಕು.

ತನ್ನ ಉತ್ಪಾದನೆಯ ನೆರವಿನಿಂದ ತನ್ನ ನಾಡಿನ ಜನಸಮುದಾಯವನ್ನು ಚೆನ್ನಾಗಿ ಇರಿಸಿಕೊಳ್ಳಲು ಸಾಧ್ಯವಾಗುವಂತೆ ಪ್ರತಿಯೊಂದು ರಾಷ್ಟ್ರವೂ ತನ್ನ ಜನನ–ಪ್ರಮಾಣವನ್ನು ಸೂಕ್ತ ಪ್ರಮಾಣದಲ್ಲಿ ಕಡಿಮೆಯಾಗಿಸಿಕೊಳ್ಳುವಂಥ ಪರಿಸ್ಥಿತಿಯನ್ನುಂಟುಮಾಡುವುದೇ ಜನನ–ನಿಯಂತ್ರಣ ಚಳವಳಿಯ ಮುಖ್ಯೋದ್ದೇಶವಾಗಿದೆ.

ಆಧುನಿಕ ವೈಜ್ಞಾನಿಕ ಅನ್ವೇಷಣೆಗಳು ಮಾನವ ಜನಾಂಗದ ಆಹಾರದ ಸಮಸ್ಯೆಗಳನ್ನು ಬಗೆಹರಿಸಿ ಬಿಟ್ಟಿವೆ ಹಾಗೂ ಇಂದಿನ ಆರ್ಥಿಕ ಸಂಕಷ್ಟಗಳಿಗೆ ಅಪ–ವಿತರಣೆಯೊಂದೇ ಮೂಲ ಕಾರಣವಾಗಿದೆ ಎಂಬ ಭಾವನೆ ಕೆಲವರಲ್ಲಿದೆ. ಅವರ ಅಭಿಪ್ರಾಯದಲ್ಲಿ ಆಸ್ತಿಯ ನ್ಯಾಯೋಚಿತ ವಿತರಣೆ ಎಲ್ಲೆಡೆಗಳಲ್ಲಿಯೂ ಸಮೃದ್ಧಿಯನ್ನುಂಟುಮಾಡಬಲ್ಲದಾಗಿದೆ. ಆಸ್ತಿಯ ವಿಭಜನೆಯ ವಿಷಯದಲ್ಲಿ ಅನೇಕ ಕಡೆಗಳಲ್ಲಿ ಅನ್ಯಾಯ ಮುಂದುವರಿದುಕೊಂಡು ಬಂದಿದೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಈ ದಿಕ್ಕಿನಲ್ಲಿ ಅನ್ಯಾಯ ಕ್ಕೊಳಗಾಗಿರುವಂಥ ವ್ಯಕ್ತಿಗಳಿಗೆ ನ್ಯಾಯವನ್ನು ದೊರಕಿಸಿಕೊಡಲು ಪ್ರತಿಯೊಬ್ಬ ನಿಷ್ಪಾಕ್ಷಿಕ ಸಾರ್ವಜನಿಕ ಕಾರ್ಯಕರ್ತನೂ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಎಲ್ಲಿಯವರೆಗೆ ಕುಟುಂಬಗಳನ್ನು ಮಿತಗೊಳಿಸುವ ಮೂಲಕ ಜನಸಂಖ್ಯೆಯ ಅಭಿವೃದ್ಧಿಯನ್ನು ನಿಯಂತ್ರಿಸುವುದಿಲ್ಲವೋ ಅಲ್ಲಿಯವರೆಗೆ ಸಮಾನ ವಿತರಣೆ ಮಾತ್ರವೇ ಜನಸಾಮಾನ್ಯರ ಸ್ಥಿತಿಗತಿಗಳಲ್ಲಿ ದೀರ್ಘಕಾಲಿಕವಾದ ಹಾಗೂ ಭೌತಿಕವಾದ ಸುಧಾರಣೆಯನ್ನು ತರಲಾರದು ಎಂಬುದನ್ನು ನಾವು ಅಗತ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು.

ಭೂಮಿಯೇ ಐಶ್ವರ್ಯದ ಪ್ರಮುಖ ಆಕರವಾಗಿರುವುದರಿಂದ ಪ್ರತಿಯೊಬ್ಬ ವ್ಯಕ್ತಿಯ ಪಾಲಿಗೂ ಸಮೃದ್ಧ ಪ್ರಮಾಣದಲ್ಲಿ ಫಲವತ್ತಾದ ಭೂಮಿ ದೊರೆಯದೆ ಹೋದಲ್ಲಿ ಎಲ್ಲರಿಗೂ ಸಮೃದ್ಧಿ ಲಭಿಸಲಾರದು. ಪಶ್ಚಿಮ ಯೂರೋಪಿನ ಮಟ್ಟದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಎರಡೂವರೆ ಎಕರೆಯಷ್ಟು ಕೃಷಿ ಯೋಗ್ಯ ಭೂಮಿಯ ಆಸರೆ ಅಗತ್ಯವಾಗುತ್ತದೆ ಎಂಬುದಾಗಿ ಸರ್ ಡೇನಿಯಲ್ ಹಾಲ್ ಮತ್ತು ಪ್ರೊ. ಈಸ್ಟ್ ಅವರಂಥ ಕೃಷಿ ತಜ್ಞರು ಎತ್ತಿ ತೋರಿಸಿದ್ದಾರೆ. ಆದರೆ, ಎಲ್ಲ ಹಳೆಯ ರಾಷ್ಟ್ರಗಳಲ್ಲಿಯೂ ಇದಕ್ಕಿಂತಲೂ ತುಂಬ ಕಡಿಮೆ ಪ್ರಮಾಣದ ಭೂಮಿಯನ್ನು ಆಧರಿಸಿಕೊಂಡು ಜನರು ತಮ್ಮ ಬಾಳುವೆಯನ್ನು ನಡೆಸಬೇಕಾಗಿದೆ. ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಮುಕ್ಕಾಲು ಎಕ್ಕರೆಯಷ್ಟು ಕೃಷಿ ಯೋಗ್ಯ ಭೂಮಿ ಮಾತ್ರವೇ ಲಭ್ಯವಿದೆ. ಈಗಾಗಲೇ ಹೇಳಿರುವಂತೆ ಕೃಷಿಯ ಬಗೆಗಿನ ರಾಯಲ್ ಕಮೀಷನ್ನಿನ ಅಭಿಪ್ರಾಯದ ಮೇರೆಗೆ ಕೃಷಿಗೆ ಒಳಪಡಿಸದೆ ಇರುವ ಈ ನಾಡಿನ ಭೂಮಿಯಲ್ಲಿನ ಬಹುಭಾಗ ಕಾರ್ಯತಃ ನಿರುಪಯುಕ್ತವಾದುದೇ ಆಗಿದೆ.

ರಾಸಾಯನಿಕ ಗೊಬ್ಬರಗಳು ಬಳಕೆಗೆ ಬಂದಿರುವುದು ಗೊಬ್ಬರಗಳ ಸಮಸ್ಯೆಯನ್ನು ಬಗೆಹರಿಸಿದೆ ಎಂದು ಕೆಲವರು ಭಾವಿಸಿರುವುದೂ ಸರಿಯಲ್ಲ. ಎಲ್ಲೆಡೆಗಳಲ್ಲಿಯೂ ಎಲ್ಲ ಸಂದರ್ಭಗಳಲ್ಲಿಯೂ ಕೃತಕ

ಗೊಬ್ಬರಗಳನ್ನು ಬಳಸುವುದು ಸಾಧ್ಯವಾಗುವುದಿಲ್ಲ. ಸಹ್ಯಾದ್ರಿ ಪತ್ರಿಕೆಯ ಅಕ್ಟೋಬರ್ ೧೯೩೬ರ ಸಂಚಿಕೆಯಲ್ಲಿ ಪ್ರಕಟವಾಗಿರುವ ತಮ್ಮ ಲೇಖನದಲ್ಲಿ ಮುಂಬಯಿ ಸರ್ಕಾರದ ನಿವೃತ್ತ ಕೃಷಿ ರಸಾಯನತಜ್ಞರಾದ ರಾವ್ ಬಹಾದುರ್ ಡಿ. ಎಲ್. ಸಹಸ್ರಬುದ್ಧೆ ಎಂ. ಅಗ್ರಿ, ಎಂ.ಎಸ್‌ಸಿ. ಅವರು ಹೀಗೆ ಹೇಳಿದ್ದಾರೆ:

"ಎಲ್ಲ ಕಡೆಗಳಲ್ಲಿಯೂ ಕೃತಕ ಗೊಬ್ಬರಗಳನ್ನು ಬಳಸಲು ಸಾಧ್ಯವಿಲ್ಲ ಎಂಬುದನ್ನು ಅನುಭವ ತೋರಿಸಿಕೊಟ್ಟಿದೆ. ರಾಸಾಯನಿಕ ಗೊಬ್ಬರಗಳ ಜೊತೆಗೆ ಸಗಣಿಯಂಥ ಜೈವಿಕ ಗೊಬ್ಬರಗಳನ್ನೂ ಬಳಸಲೇಬೇಕಾಗಿದೆ. ಇಲ್ಲವಾದಲ್ಲಿ ಕೃತಕ ಗೊಬ್ಬರಗಳು ಬೆಳೆಗಳಿಗೆ ಹಿತಕರವಾಗಿ ಪರಿಣಮಿಸುವುದಿಲ್ಲ. ಅಂತೆಯೇ ರಾಸಾಯನಿಕ ಗೊಬ್ಬರಗಳನ್ನು ಬಳಸಿ ತೆಗೆಯಲಿರುವ ಬೆಳೆಗೆ ಹಾನಿ ತಟ್ಟದಿರಬೇಕಾದರೆ ಸಮೃದ್ಧವಾದ ನೀರಿನ ಸರಬರಾಜು ಇರಬೇಕಾಗುತ್ತದೆ.

ಇದೇ ಅಲ್ಲದೆ, ನೈಟ್ರೇಟುಗಳು ಮತ್ತು ಫಾಸ್ಫೇಟುಗಳು (ಸಾರಜನಕಗಳು ಮತ್ತು ರಂಜಕಗಳು) ಎರಡು ಪ್ರಮುಖ ರಸಗೊಬ್ಬರಗಳಾಗಿದ್ದು, ಅವುಗಳಲ್ಲಿ ಒಂದಿಲ್ಲದೆ ಇನ್ನೊಂದು ಹೆಚ್ಚು ಉಪಯುಕ್ತವಾಗುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ಆದರೆ ಫಾಸ್ಫೇಟುಗಳ (ರಂಜಕಗಳ) ಸರಬರಾಜು ತುಂಬ ಸೀಮಿತವಾಗಿದೆ. ಸರ್ ಫೆಡೆರಿಕ್ ಕೀಬಲ್ ಅವರು ಹೀಗೆಂದಿದ್ದಾರೆ: ಬಹುತೇಕವಾಗಿ ಜಗತ್ತಿನ ಎಲ್ಲ ಭೂಮಿಯೂ ಫಾಸ್ಫೇಟು (ರಂಜಕ)ಗಳಿಗಾಗಿ ಹಸಿದು ಕುಳಿತಿದೆ. [ರಸಗೊಬ್ಬರಗಳು ಮತ್ತು ಆಹಾರೋತ್ಪಾದನೆ (Fertilisers and Food Production), ೧೯೩೨; ಪು.೨೨೧.]

ಪ್ರೊ. ಆರ್ಮಸ್ಟ್ರಾಂಗ್ ಹೀಗೆಂದಿದ್ದಾರೆ: "ನೈಟ್ರೋಜನ್ (ಸಾರಜನಕ) ಸಮಸ್ಯೆಗೆ ಕ್ರೂಕ್ಸ್ ಅವರು ಸೂಚಿಸಿರುವ ಪರಿಹಾರ ತುಂಬಿಕೊಡಲಾಗದಿರುವ ಫಾಸ್ಪರಸ್ಸಿನ (ರಂಜಕದ) ದಾಸ್ತಾನಿನ ಕರಗುವಿಕೆಯನ್ನು ತೀವ್ರಗೊಳಿಸುವುದರ ಮೂಲಕ, ನಮ್ಮನ್ನು ರಕ್ಷಿಸುವುದಕ್ಕೆ ಬದಲಾಗಿ ವಿನಾಶದ ಅಂಚಿಗೆ ತಂದು ಬಿಟ್ಟಿದೆ."

ಬಹುಮಟ್ಟಿಗೆ ಎಲ್ಲ ಸ್ಥಳಗಳೂ ಅರಣ್ಯಗಳ ಕೊರತೆಯಿಂದ ನರಳುತ್ತಿವೆ. ಇದರ ಪರಿಣಾಮವಾಗಿ ನೀರು ಮತ್ತು ಗೊಬ್ಬರಗಳ ಕೊರತೆಯೂ ಉಂಟಾಗಿದೆ.

ಸಧ್ಯದ ಕಾಂಗ್ರೆಸ್ ಸರ್ಕಾರ ಈ ಮುಂಬಯಿ ಸಂಸ್ಥಾನದ ಜನಸಾಮಾನ್ಯರನ್ನು ಉದ್ಧರಿಸಲು ಪ್ರಯತ್ನಿಸುತ್ತಿದೆ. (ಕೇಳಿ ಕೇಳಿ) ಆದರೆ ಜನನ–ನಿಯಂತ್ರಣದ ಮೂಲಕ ಜನಸಂಖ್ಯೆಯ ಸಮಸ್ಯೆಯನ್ನು ಎದುರಿಸದೆ ಹೋದರೆ ಅದರ ಎಲ್ಲ ಪ್ರಯತ್ನಗಳೂ ವ್ಯರ್ಥವಾಗಿಬಿಡುತ್ತವೆ.

ಉಪ ಸಭಾಧ್ಯಕ್ಷರು: ಸನ್ಮಾನ್ಯ ಸದಸ್ಯರು ಈಗ ತಮ್ಮ ಹೇಳಿಕೆಯನ್ನು ಸಮಾಪನಗೊಳಿಸಬಹುದು.

ಶ್ರೀ ಪಿ. ಜೆ. ರೋಹಮ್: ಆಗಲಿ ಸ್ವಾಮಿ ೪೦೦ ದಶಲಕ್ಷ ಮಂದಿಗೆ ಆಹಾರ–ಯೋಜನೆ (Food Planning for 400 Millions) ಎಂಬ ಪುಸ್ತಕದಲ್ಲಿ ರಾಧಾಕಮಲ್ ಮುಖರ್ಜಿ ಅವರು ಹೀಗೆಂದಿದ್ದಾರೆ:

> "ಜನಸಂಖ್ಯಾವೃದ್ಧಿಗೆ ಒಂದಿಷ್ಟಾದರೂ ತಡೆಯನ್ನು ಒಡ್ಡದೆ ಹೋದರೆ ಆ ಇನ್ನೊಂದು ನಾಡಿನಲ್ಲಿ (ಚೀಣಾದಲ್ಲಿ) ಆದಂತೆ ಬೇರೆ ಯಾವುದೇ ಪರಿಹಾರೋಪಾಯ ಕೇವಲ ತಾತ್ಕಾಲಿಕವಾಗಿ ಪರಿಣಮಿಸುತ್ತದೆ. ಏಕೆಂದರೆ ನಾಡು ಆಶ್ರಯ ನೀಡಬಹುದಾಗಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣಕ್ಕೆ ಜನಸಂಖ್ಯೆ ಮತ್ತೆ ತೀವ್ರವಾಗಿ ಏರಿಬಿಡುತ್ತದೆ. ತೆರಿಗೆ ವಿಧಿಸಬಹುದಾದ ಸಾಮರ್ಥ್ಯ ಏನೇನೂ

ಹೆಚ್ಚಾಗದೆ ಇದ್ದರೂ ಒದಗಿಸಬಹುದಾಗಿರುವ ಶೈಕ್ಷಣಿಕ ಸೌಕರ್ಯಗಳನ್ನು ಜನಸಂಖ್ಯೆ ಶೀಘ್ರಗತಿಯಲ್ಲಿ ಮೀರಿ ನಿಲ್ಲುವುದರಿಂದ ಆಹಾರದ ಸರಬರಾಜಿಗೆ ಸಂಬಂಧಪಟ್ಟಂತೆ ಮಾತ್ರವೇ ಜನಸಂಖ್ಯೆಯ ಸಮಸ್ಯೆಯ ಒತ್ತಡವನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ. ಹೆಚ್ಚುತ್ತಿರುವ ಜನಸಂಖ್ಯೆ ಮರು ಹೊಂದಾಣಿಕೆಗಳನ್ನು ಇನ್ನಷ್ಟು ಮತ್ತಷ್ಟು ಕಷ್ಟತರವಾಗಿಸುತ್ತದೆ. ಜನಸಂಖ್ಯೆಯ ಹೆಚ್ಚಳವನ್ನು ಎದುರಿಸುವ ಅತ್ಯಂತ ಪರಿಣಾಮಕಾರಿ ಮಾರ್ಗೋಪಾಯವಾಗಿ ವಿವೇಚನಾಪೂರ್ವಕವಾದ ಕುಟುಂಬ ನಿಯೋಜನೆಯನ್ನು ಜನನ–ನಿಯಂತ್ರಣದ ಬಗೆಗಿನ ಜನಸಾಮಾನ್ಯರ ಶಿಕ್ಷಣವನ್ನೂ ನಾವು ಅಂಗೀಕರಿಸಬೇಕು."

ಮುಂಬಯಿ ಭಾರತದ ಮಹಾದ್ವಾರವಾಗಿದೆ. ಈ ಆಂದೋಳನವೂ ಆ ಮಹಾದ್ವಾರದ ಮೂಲಕವೇ ಈ ನಾಡನ್ನು ಪ್ರವೇಶಿಸಿದೆ. ಆದ್ದರಿಂದ ಈ ಪ್ರಾಂತ್ಯದಲ್ಲಿಯೇ ಅದನ್ನು ಘೋಷಿಸಿ–ಬಲಪಡಿಸುವುದು ಅತ್ಯಂತ ಉಚಿತವೇ ಆಗಿದೆ. ತಮ್ಮ ಹೆಸರುಗಳನ್ನು ಅಮರವಾಗಿಸುವಂಥ ಕಾರ್ಯಗಳನ್ನು ನಿರ್ವಹಿಸುವ ಅವಕಾಶ ಅನೇಕರಿಗೆ ದೊರೆಯುವುದಿಲ್ಲ. ಜನನ–ನಿಯಂತ್ರಣ ಆಂದೋಳನ ನಮ್ಮ ಸರ್ಕಾರಕ್ಕೆ ಅಂಥ ಒಂದು ಅವಕಾಶವನ್ನು ಒದಗಿಸಿದೆ. ಅದು ಕೈತಪ್ಪಿಹೋಗಲು ಅವಕಾಶಮಾಡಿಕೊಡದೆ ತನ್ನ ಮತ್ತು ಜನತೆಯ ಲಾಭಕ್ಕೆ ಅದನ್ನು ಪೂರ್ಣವಾಗಿ ಬಳಸಿಕೊಳ್ಳಲಿ ಎಂದು ಆಶಿಸುತ್ತೇನೆ.

# ಅನುಬಂಧ-೨

## ಡಾ. ಬಿ. ಆರ್. ಅಂಬೇಡ್ಕರ್ ಅವರು ಕೇಳಿದ ಪ್ರಶ್ನೆಗಳು ಮತ್ತು ಸರ್ಕಾರ ನೀಡಿದ ಉತ್ತರಗಳು.

## *ಸರ್ಕಾರಿ ಸೇವೆ: ಆಯ್ಕೆ ಮಂಡಳಿ

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ಈ ಕೆಳಕಂಡ ವಿಚಾರಗಳ ಬಗ್ಗೆ ದಯವಿಟ್ಟು ತಿಳಿಸುತ್ತದೆಯೆ?

(ಅ) ಮುಂಬಯಿ ಸರ್ಕಾರದ ಪ್ರಾಂತೀಯ ಹಾಗೂ ಅಧೀನ ಸೇವೆಗಳಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳನ್ನು ಆಯುವ ಸಲುವಾಗಿ ಆಯ್ಕೆ ಮಂಡಳಿಯನ್ನೇನಾದರೂ ರಚಿಸಲಾಗಿದೆಯೆ?

(ಆ) ಹಾಗಿದ್ದಲ್ಲಿ, ಆ ಮಂಡಳಿಯ ಸದಸ್ಯರ ಹೆಸರುಗಳು ಏನು?

ಸನ್ಮಾನ್ಯ ಸರ್ ಚುನಿಲಾಲ ಮೆಹತಾ: ಮುಂಬಯಿ ಸರ್ಕಾರದ ಪ್ರಾಂತೀಯ ಮತ್ತು ಅಧೀನ ಸೇವೆಗಳಿಗೆ ಅಭ್ಯರ್ಥಿಗಳನ್ನು ಆಯಲು ಒಂದೇ ಒಂದು ಮಂಡಳಿ ಇಲ್ಲ. ಕೆಲವೊಂದು ಪ್ರಾಂತೀಯ ಸೇವೆಗಳಿಗೆ ಅಭ್ಯರ್ಥಿಗಳನ್ನು ಆಯಲು ಕೆಲವು ಸಮಿತಿಗಳನ್ನು ರಚಿಸಲಾಗಿದೆ. ತಮಗೆ ನೀಡಲಾದ ಅಧಿಕಾರಗಳ ಮೇರೆಗೆ ಕಚೇರಿಗಳ ಮುಖ್ಯಸ್ಥರು ಮಾಡುತ್ತಾರೆ. ಅಥವಾ ಸ್ಥಳೀಯ ಸರ್ಕಾರ ಅಧೀನ ಸೇವೆಗಳಿಗೆ ನೇಮಕಾತಿಗಳನ್ನು ಮಾಡುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತೀಯ ಸೇವೆಗಳಿಗೆ ಅಭ್ಯರ್ಥಿಗಳಿಗೆ ಆಯುವ ಸಲುವಾಗಿ ರಚಿಸಲಾಗಿರುವ ಸಮಿತಿಗಳ ಸದಸ್ಯರ ಹೆಸರುಗಳನ್ನು ಸನ್ಮಾನ್ಯ ಸದಸ್ಯರಾದ ತಾವು ತಿಳಿಸಲು ಸಾಧ್ಯವೆ? ಕೆಲವೊಂದು ಪ್ರಾಂತೀಯ ಸೇವೆಗಳಿಗಾಗಿ ಆಯ್ಕೆ ಸಮಿತಿಗಳನ್ನು ರಚಿಸಲಾಗಿದೆ ಎಂದು ತಾವು ಹೇಳಿದ್ದೀರಿ.

ಸನ್ಮಾನ್ಯ ಸರ್ ಚುನಿಲಾಲ್ ಮೆಹತಾ: ಸದಸ್ಯರ ಹೆಸರುಗಳನ್ನು ನನ್ನ ತಲೆಯಲ್ಲಿಟ್ಟುಕೊಂಡಿರಲು ಸಾಧ್ಯವಿಲ್ಲವೆಂದು ನಿವೇದಿಸಬಯಸುತ್ತೇನೆ. ಸನ್ಮಾನ್ಯ ಸದಸ್ಯರು ಮುನ್‌ಸೂಚನೆಯನ್ನು ಕೊಟ್ಟರೆ ನಾನು ಹೆಸರುಗಳನ್ನು ಒದಗಿಸುತ್ತೇನೆ. ಆದರೆ ಈ ಸಮಿತಿಗಳ ಸದಸ್ಯರ ಒಂದು ನಿಗದಿತ ಪಟ್ಟಿಯೇನೂ ಇಲ್ಲವೆಂದು ಭಾವಿಸಿದ್ದೇನೆ. ಅವು ಪ್ರತಿ ವರ್ಷವೂ ಅಥವ ಕಾಲಕಾಲಕ್ಕೆ ಬದಲಾಗುತ್ತವೆಂದು ನಂಬಿದ್ದೇನೆ.

## **ಹಳ್ಳಿಯ ನಿವೇಶನಗಳಿಗಾಗಿ ಭೂಮಿಯ ಸ್ವಾಧೀನ ಮತ್ತು ಸುಧಾರಣೆ

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಒಂದು ಮಾಹಿತಿಗಾಗಿ ನಾನು ಎದ್ದು ನಿಲ್ಲುತ್ತಿದ್ದೇನೆ. ಪ್ರಸ್ತುತ ಆಯವ್ಯಯದಲ್ಲಿ ಯಾವ ಉದ್ದೇಶಕ್ಕಾಗಿ ಇಷ್ಟು ಹಣವನ್ನು ಒದಗಿಸಲಾಗಿದೆ ಎಂಬುದು ನನಗೆ

---

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. ೧೯, ಪು. ೩೨೫; ದಿನಾಂಕ ೨೮ ಫೆಬ್ರವರಿ ೧೯೨೭)

**(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XXX, ಪು. ೪೨೧, ದಿನಾಂಕ ಮಾರ್ಚ್ ೧೯೨೭)

ಸರಿಯಾಗಿ ಅರ್ಥವಾಗುತ್ತಿಲ್ಲ. ತಮ್ಮ ಹಳ್ಳಿಯ ನಿವೇಶನಗಳಿಂದ ಅತೃಪ್ತರಾಗಿರುವಂಥ ಹಳ್ಳಿಗರಿಗಾಗಿ ಹೊಸ ಅಧಿವಸತಿಯನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಈ ಹಣವನ್ನು ವೆಚ್ಚ ಮಾಡಲಾಗಿದೆಯೆ ಅಥವಾ ಹಳ್ಳಿಗರಿಗೆ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಈ ಹಣವನ್ನೇ ವೆಚ್ಚ ಮಾಡಲಾಗಿದೆಯೆ ಅಥವಾ ಯಾವ ಉದ್ದೇಶಕ್ಕಾಗಿ ಇದನ್ನು ಖರ್ಚು ಮಾಡಲಾಗಿದೆ ಎಂಬುದನ್ನು ಸನ್ಮಾನ್ಯ ಕಾರ್ಯಭಾರಿ ಸದಸ್ಯರಿಂದ ತಿಳಿಯಬಯಸುತ್ತೇನೆ. ಈ ಹಣವನ್ನು ಯಾವ ಖಚಿತ ಉದ್ದೇಶವಾಗಿ ಮೀಸಲಾಗಿರಿಸಿದೆ ಎಂಬುದನ್ನು ಸನ್ಮಾನ್ಯ ಕಾರ್ಯಭಾರಿ ಸದಸ್ಯರಿಂದ ತಿಳಿಯಬಯಸುತ್ತೇನೆ. ಈ ಹಣವನ್ನು ಯಾವ ಖಚಿತ ಉದ್ದೇಶಕ್ಕಾಗಿ ಮೀಸಲಾಗಿರಿಸಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನನ್ನಂಥ ಹೊಸ ಸದಸ್ಯರಿಗೆ ನೆರವಾಗುವಂಥ ಯಾವುದೇ ಮಾಹಿತಿಯನ್ನು ನೀಲಿ ಪುಸ್ತಕದಲ್ಲಾಗಲೀ ಶ್ವೇತ ಪುಸ್ತಕದಲ್ಲಾಗಲೀ ಖಂಡಿತವಾಗಿಯೂ ಕೊಟ್ಟಿಲ್ಲ. ಆದ್ದರಿಂದ ಈ ವಿಷಯದ ಮೇಲೆ ಸ್ವಲ್ಪ ಬೆಳಕು ಚೆಲ್ಲಬಹುದು ಎಂದು ನಾನು ಆಶಿಸಿದ್ದೇನೆ.

## *ಭೂ–ದಾಖಲೆಗಳ ಅಧೀಕ್ಷಕರು

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯರೆ, ಈ ಸೂಚನೆಯ ಬಗ್ಗೆ ಹೆಚ್ಚಿನ ವಾದ ವಿವಾದ ನಡೆಸ ಬೇಕಾದ ಅಗತ್ಯವಿದೆ ಎಂದು ನಾನು ಭಾವಿಸುವುದಿಲ್ಲ. ಸಾಮಾನ್ಯವಾಗಿ ದೈನಂದಿನ ವ್ಯವಹಾರಗಳ ಕ್ರಮ ದಲ್ಲಿ ಉಪಸಂಗ್ರಹಣಾಧಿಕಾರಿಗಳು ಯಾವ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರೋ ಅಥವಾ ನಿರ್ವಹಿಸುತ್ತಿದ್ದರೋ ಆ ಕೆಲಸ–ಕಾರ್ಯಗಳನ್ನು ಆಯವ್ಯಯದಲ್ಲಿ ೩೫,೮೦೦ ರೂ.ಗಳ ವೆಚ್ಚದಲ್ಲಿ ಯಾವ ಅಧೀಕ್ಷಕರ ಹುದ್ದೆಗಳನ್ನು ಕಲ್ಪಿಸಲಾಗಿದೆಯೋ ಆ ಅಧೀಕ್ಷಕರು ಮಾಡುತ್ತಿದ್ದಾರೆ ಅಥವಾ ನಿರ್ವಹಿ ಸುತ್ತಿದ್ದಾರೆ ಎಂಬುದು ಈ ಸೂಚನೆಗೆ ಆಧಾರವಾಗಿದೆ. ಉಪಸಂಗ್ರಹಣಾಧಿಕಾರಿಗಳು ಈ ಕೆಲಸವನ್ನು ಮಾಡುವ ಸ್ಥಿತಿಯಲ್ಲಿಲ್ಲ ಎಂಬುದೇ ಈ ವಾದಕ್ಕೆ ಕೊಡಲಾಗಿರುವ ಏಕೈಕ ಉತ್ತರ. ಸನ್ಮಾನ್ಯ ಸದಸ್ಯರಾದ ವಸತಿ ಅವಧಿಯ ಆಯುಕ್ತರು ಕೊಟ್ಟಿರುವ ಉತ್ತರ ಪ್ರಶ್ನೆಯ ಆ ಸಂಗತಿಗೆ ಸಂಬಂಧಿಸಿದೆ ಎಂದು ನನಗೆ ತೋರುವುದಿಲ್ಲ. ಅವರು ಮಾಡುತ್ತಿರುವ ಕೆಲಸ ಸಮಾಜದ ಹಿತದೃಷ್ಟಿಯಿಂದ ಅಗತ್ಯವಾಗಿರುವಂಥ ಉಪಯುಕ್ತವಾದ ಕೆಲಸ ಎಂಬುದನ್ನು ಈ ಸದನದಲ್ಲಿರುವ ಯಾವ ಸದಸ್ಯರೂ ಪ್ರಶ್ನಿಸುತ್ತಿಲ್ಲ. ಆದರೆ, ಉಪ ಸಂಗ್ರಹಾಣಾಧಿಕಾರಿಗಳು ಅಂಥ ಕೆಲಸಗಳನ್ನು ಮಾಡಲಾರರೇ ಎಂಬುದೇ ಇಲ್ಲಿಯ ಪ್ರಶ್ನೆ, ಮುಖ್ಯವಾದ ಪ್ರಶ್ನೆ ಇದಕ್ಕೆ ಕೊಡಲಾದ ಉತ್ತರ ಇತ್ಯರ್ಥವಾಗಿದ್ದಲ್ಲಿ ಸರ್ಕಾರದ ವಾದಕ್ಕೆ ಆಧಾರವೇ ಇರುವುದಿಲ್ಲ. ನನ್ನಂಥ ಹೊಸ ಸದಸ್ಯರು ಒಂದಲ್ಲ ಒಂದು ರೀತಿಯಲ್ಲಿ ತೀರ್ಮಾನಿಸಲು ಸಾಧ್ಯವಾಗುವಂತೆ ಸರ್ಕಾರ ಈ ಅಂಶವನ್ನು ಸ್ಪಷ್ಟಪಡಿಸಬೇಕೆಂದು ಇಚ್ಛಿಸುತ್ತೇನೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XIX ; ಪು. ೪೫೩, ದಿನಾಂಕ ೩ ಮಾರ್ಚ್ ೧೯೨೭)

## *ಉಪ–ಸಂಗ್ರಹಣಾಧಿಕಾರಿಗಳ ಹುದ್ದೆ: ಶ್ರೀ ಎಂ. ಕೆ. ಜಾಧವ್ ಅವರ ಅರ್ಜಿ

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ಈ ವಿಚಾರವನ್ನು ದಯವಿಟ್ಟು ತಿಳಿಸುತ್ತದೆಯೇ?

(i) ಮುಂಬಯಿ ಸರ್ಕಾರದ ಕಂದಾಯ ಇಲಾಖೆ ಈ ವಿಚಾರವನ್ನು ದಯವಿಟ್ಟು ತಿಳಿಸುತ್ತದೆಯೆ? ಸಂಗ್ರಹಣಾಧಿಕಾರಿಗಳ ಮೂರು ಹುದ್ದೆಗಳಲ್ಲಿ ಒಂದಕ್ಕೆ ಮುಂಬಯಿಯ ಶ್ರೀ ಎಂ. ಎ. ಜಾಧವ್, ಬಿ.ಎ. (ಆನರ್ಸ) ಅವರು ಸಲ್ಲಿಸಿದ್ದರೆ?

(ii) ಅವರು ದಲಿತ ವರ್ಗಕ್ಕೆ ಸೇರಿದವರೆಂಬುದು ಸರ್ಕಾರಕ್ಕೆ ಗೊತ್ತಿತ್ತೆ?

(iii) ಅವರ ಅರ್ಜಿಯನ್ನು ಯಾವ ಕಾರಣಕ್ಕಾಗಿ ತಿರಸ್ಕರಿಸಲಾಯಿತು?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು:

(i) ಹೌದು.

(ii) ಹೌದು.

(iii) ಜಾಧವ್ ಅವರನ್ನು ಅಥವಾ ಬೇರಾವುದೇ ಅಭ್ಯರ್ಥಿಯನ್ನು ಯಾವ ಕಾರಣಕ್ಕಾಗಿ ಆಯಲಾಗಲಿಲ್ಲ ಎಂಬುದನ್ನು ವಿವರಿಸಲು ಸರ್ಕಾರ ಸಿದ್ಧವಿಲ್ಲ ಎಂಬುದನ್ನು ತಿಳಿಸಲು ಸರ್ಕಾರ ವಿಷಾದಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಹುದ್ದೆಗಳನ್ನು ಭರ್ತಿ ಮಾಡುವಾಗ ಸರ್ಕಾರಿ ಸೇವೆಯಲ್ಲಿನ ಶೇ. ೫೦ರಷ್ಟು ಹುದ್ದೆಗಳನ್ನು ದಲಿತ ವರ್ಗಗಳಿಗೆ ಮೀಸಲಾಗಿಡಬೇಕೆಂಬ ನಿಯಮವನ್ನು ಸರ್ಕಾರ ಅನ್ವಯಿಸಿತೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಆ ನಿಯಮ ಅನ್ವಯಿಸುವುದೇ ಇಲ್ಲ. ಅದು ಕರಣಿಕರ ಹುದ್ದೆಗಳಿಗೆ ಮಾತ್ರ ಅನ್ವಯಿಸುತ್ತದೆ.

ಶ್ರೀ ಡಬ್ಲ್ಯು. ಎಸ್. ಮುಕದಮ್: ಆಯ್ಕೆ ಮಾಡಲಾದ ಅಭ್ಯರ್ಥಿಗಳ ಹೆಸರನ್ನು ಸರ್ಕಾರ ದಯವಿಟ್ಟು ತಿಳಿಸುತ್ತದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಸನ್ಮಾನ್ಯ ಸದಸ್ಯರು ಅದನ್ನು ದಾಖಲೆಗಳಲ್ಲಿ ನೋಡಬಹುದಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀ ಜಾಧವ್ ಅವರನ್ನು ಕೈಬಿಟ್ಟಿರುವುದು ದಲಿತ ವರ್ಗಗಳಿಗೆ ಪ್ರೋತ್ಸಾಹ ನೀಡುವ ಸರ್ಕಾರದ ನೀತಿಗೆ ಸಂಗತವಾಗಿದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಅದು ಸರ್ಕಾರದ ನೀತಿಗೆ ಅಸಂಗತವಾಗಿಯೇನೂ ಇಲ್ಲ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XIX ; ಪು. ೫೪೫, ದಿನಾಂಕ ೫ ಮಾರ್ಚ್ ೧೯೨೭)

## *ಸಾರ್ವಜನಿಕ ಸ್ಥಳಗಳಿಗೆ ದಲಿತ ವರ್ಗದವರ ಪ್ರವೇಶ

ಡಾ. ಬಿ. ಆರ್. ಅಂಬೇಡ್ಕರ್: ಈ ಪ್ರಾಂತ್ಯದಲ್ಲಿನ ಎಲ್ಲ ಸಾರ್ವಜನಿಕ ಸ್ಥಳಗಳನ್ನು ದಲಿತ ವರ್ಗಗಳಿಗೆ ತೆರೆದಿಡಬೇಕೆಂಬ ಶ್ರೀ ಬೋಳೆ ಅವರ ಗೊತ್ತುವಳಿಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ತಿಳಿಸುತ್ತೀರಾ?

ಸನ್ಮಾನ್ಯ ಸರ್ ಗುಲಾಮ್ ಹುಸೇನ್: ವಾರ್ತಾ ವಿಭಾಗದ ನಿರ್ದೇಶಕರು ಹೊರಡಿಸಿರುವ ಕ್ರಮಾಂಕ ಪಿ೧೧೭ ದಿನಾಂಕ ೨೯ ಸೆಪ್ಟೆಂಬರ್ ೧೯೨೩ರ ಪತ್ರಿಕಾ ಪ್ರಕಟಣೆಯತ್ತ (ತುರ್ತು ಪರಿಶೀಲನೆಗಾಗಿ ಅದರ ಪ್ರತಿಯನ್ನು ಇದರೊಡನೆ ಇರಿಸಿದೆ) ಗಮನ ಸೆಳೆಯ ಬಯಸುತ್ತೇನೆ.

ಪತ್ರಿಕಾ ಪ್ರಕಟಣೆ ಕ್ರಮಾಂಕ ಪಿ೧೧೭ ದಿನಾಂಕ ೨೯ ಸೆಪ್ಟೆಂಬರ್ ೧೯೨೩

(ವಾರ್ತಾ ವಿಭಾಗದ ನಿರ್ದೇಶಕರು ಮುಂಬಯಿ ಅವರ ವಂದನೆಗಳೊಡನೆ)

* * *

## *ಅಸ್ಪೃಶ್ಯ ವರ್ಗಗಳು
## ಸರ್ಕಾರದ ಮತ್ತು ಪರಿಷತ್ತಿನ ಗೊತ್ತುವಳಿಗಳು

ಮುಂಬಯಿ ವಿಧಾನಪರಿಷತ್ತಿನ ಕಳೆದ ಅಧಿವೇಶನದಲ್ಲಿ ಶ್ರೀ ಎಸ್. ಕೆ. ಬೋಳೆ ಅವರ ಸೂಚನೆಯ ಮೇಲೆ "ಸಾರ್ವಜನಿಕ ನಿಧಿಗಳಿಂದ ನಿರ್ಮಿಸಲಾಗಿರುವ ಅಥವಾ ಸರ್ಕಾರದಿಂದ ನೇಮಿಸಲಾಗಿರುವ ಸಂಸ್ಥೆ ನಿಕಾಯಗಳ ಆಡಳಿತಕ್ಕೆ ಒಳಪಟ್ಟಿರುವ ಅಥವಾ ಅಧಿನಿಯಮಗಳಿಂದ ಸ್ಥಾಪಿಸಲಾಗಿರುವ ಎಲ್ಲ ಸಾರ್ವಜನಿಕ ಜಲಾಶಯಗಳು, ಬಾವಿಗಳು ಮತ್ತು ಧರ್ಮಶಾಲೆಗಳನ್ನು ಹಾಗೂ ಸಾರ್ವಜನಿಕ ಶಾಲೆಗಳು ನ್ಯಾಯಾಲಯಗಳು, ಕಛೇರಿಗಳು ಮತ್ತು ಔಷಧಾಲಯಗಳನ್ನು ಬಳಸಲು ಅಸ್ಪೃಶ್ಯ ವರ್ಗಗಳಿಗೆ ಅವಕಾಶ ಕೊಡಬೇಕೆಂದು ಶಿಫಾರಸು ಮಾಡಿ ಗೊತ್ತುವಳಿಯೊಂದನ್ನು ಅಂಗೀಕರಿಸಲಾಗಿತ್ತು."

ಈ ಗೊತ್ತುವಳಿಯ ಅನುಸರಣೆಯಾಗಿ ಸಾರ್ವಜನಿಕ ಸ್ಥಳಗಳಿಗೆ ಮತ್ತು ಸರ್ಕಾರಕ್ಕೆ ಸೇರಿದ ಹಾಗೂ ಸರ್ಕಾರದ ಉಸ್ತುವಾರಿಗೆ ಒಳಪಟ್ಟಿರುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಆ ಗೊತ್ತುವಳಿಯನ್ನು ಜಾರಿಗೆ ಕೊಡಬೇಕೆಂದು ಸರ್ಕಾರ ತನ್ನ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಸದರಿ ಗೊತ್ತುವಳಿಯಲ್ಲಿ ಮಾಡಲಾಗಿರುವ ಶಿಫಾರಸುಗಳನ್ನು ಅಂಗೀಕರಿಸುವ ಅಪೇಕ್ಷಣೀಯತೆಯನ್ನು ಪರಿಗಣಿಸುವಂತೆ ಸ್ಥಳೀಯ ಸಾರ್ವಜನಿಕ ಸಂಸ್ಥೆಗಳಿಗೆ ಸಲಹೆ ಮಾಡಬೇಕೆಂದು ಸಂಗ್ರಹಣಾಧಿಕಾರಿಗಳನ್ನು ಕೋರಲಾಗಿದೆ. ತಮ್ಮ ನಿಯಂತ್ರಣದಲ್ಲಿರುವ ಸ್ಥಳಗಳಲ್ಲಿ ಸಂಬಂಧಿಸಿದಂತೆ ಸದರಿ ಗೊತ್ತುವಳಿಯನ್ನು ಜಾರಿಗೆ ಕೊಡುವಂತೆ ಮುಂಬಯಿ ಮತ್ತು ಕರಾಚಿ ಬಂದರು ವಿಶ್ವಸ್ಥಮಂಡಳಿಗಳು ಮುಂಬಯಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಮತ್ತು ಮುಂಬಯಿ ಪೌರ ನಿಗಮಗಳನ್ನು ಕೋರಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಸಾರ್ವಜನಿಕ ನಿಕಾಯಗಳು ಒದಗಿಸಿರುವ ಸಾರ್ವಜನಿಕ ಸ್ಥಳಗಳ ಅನುಕೂಲಗಳನ್ನು ಪಡೆದುಕೊಳ್ಳುವಂತೆ ಅನೇಕ ಕಡೆಗಳಲ್ಲಿ ಹಳ್ಳಿಯ ಸಾಮಾನ್ಯ ನಿವಾಸಿಗಳು ದಲಿತ ವರ್ಗಗಳಿಗೆ ಅಡ್ಡಿಪಡಿಸುತ್ತಿದ್ದಾರೆ ಎಂಬುದು ಸನ್ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆಯೆ?

ಸನ್ಮಾನ್ಯ ಸರ್ ಗುಲಾಮ್ ಹುಸೇನ್: ನನ್ನ ಗಮನಕ್ಕೆ ಬಂದಿಲ್ಲ.

---

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XIX, ಪು. ೫೪೫, ದಿನಾಂಕ ೫ ಮಾರ್ಚ್ ೧೯೨೭)

## *ದಲಿತ ವರ್ಗಗಳಿಗಾಗಿ ಸಹಾಯಕ ಶಿಕ್ಷಣ ಪರಿಶೀಲಕರು

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ಈ ವಿಚಾರಗಳನ್ನು ದಯವಿಟ್ಟು ತಿಳಿಸಿಸುತ್ತದೆಯೆ?

(i) ಶ್ರೀ ಬಿ. ಜಿ. ಕಂಬ್ಳೆ ಅವರನ್ನು ದಲಿತವರ್ಗಗಳ ಹೆಚ್ಚುವರಿ ಸಹಾಯಕ ಶಿಕ್ಷಣ ಪರಿಶೀಲಕರ ಹುದ್ದೆಯಿಂದ ಏಕೆ ಹಿಂಬಡ್ತಿಗೊಳಿಸಲಾಯಿತು?

(ii) ಸದರಿ ಹುದ್ದೆಯನ್ನು ರದ್ದುಗೊಳಿಸಲಾಗಿದೆಯೆ?

(iii) ಹಾಗಿದ್ದರೆ ಏತಕ್ಕಾಗಿ?

ಸನ್ಮಾನ್ಯ ದಿವಾನ್ ಬಹಾದುರ್ ಹರಿಲಾಲ್ ಡಿ. ದೇಸಾಯಿ: ಶ್ರೀ ಕಂಬ್ಳೆಯವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲ. ಅವರ ಅಡಿಯಲ್ಲಿದ್ದ ಶಾಲೆಗಳಲ್ಲಿ ಯಾವ ಅಭಿವೃದ್ಧಿಯೂ ಆಗಲಿಲ್ಲ.

(i) ಹೌದು

(ii) ಮುಂಬೈ ಪ್ರಾಥಮಿಕ ಶಾಲೆಗಳ ೧೯೨೩ರ ಅಧಿನಿಯಮದ ಪ್ರಕಾರ ಪ್ರಾಥಮಿಕ ಶಾಲೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟಿದ್ದರಿಂದ, ಆ ಸ್ಥಾನವನ್ನು ಮುಂದುವರಿಸುವುದು ಅಗತ್ಯವಿರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ವಿಶೇಷ ಸಹಾಯಕ ಶಿಕ್ಷಣ ಪರಿವೀಕ್ಷಕ ಹುದ್ದೆಯ ಲಾಭವನ್ನು ದಲಿತ ವರ್ಗಗಳವರ ಶಾಲೆಗೆ ಅಗತ್ಯವಿದೆಯೆಂದು ಸರಕಾರವು ಯೋಚಿಸುವುದಿಲ್ಲವೇ?

ಸನ್ಮಾನ್ಯರಾದ ದಿವಾನ್ ಬಹಾದುರ್ ಹರಿಲಾಲ್ ಡಿ. ದೇಸಾಯಿ ಅವರು: ಮೊದಲನೆಯದಾಗಿ ಸರ್ಕಾರ ವಿಶೇಷ ಹುದ್ದೆಯನ್ನು ಸೃಷ್ಟಿಸಿತು. ಈಗ ಶಾಲೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. ಅಂಥ ನೇಮಕಾತಿಯನ್ನು ಮಾಡುವುದು ಅಗತ್ಯವೆಂದು ಸರ್ಕಾರಕ್ಕೆ ತೋರಿದರೆ ಸರ್ಕಾರ ಆ ವಿಚಾರವನ್ನು ಪರಿಶೀಲಿಸುತ್ತದೆ.

## *ನಗರ ದಂಡಾಧಿಕಾರಿಗಳಾದ ಶ್ರೀ ಫ್ಲೆಮಿಂಗ್ ಅವರ ತೀರ್ಪುಗಳು

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ಈ ವಿಚಾರವನ್ನು ದಯವಿಟ್ಟು ತಿಳಿಸುತ್ತದೆಯೆ–

(ಅ) ಈಚಿನ ಎರಡು ಕ್ರಿಮಿನಲ್ ಮೊಕದ್ದಮೆಗಳಲ್ಲಿ– ಅಂದರೆ (i) ಚಕ್ರವರ್ತಿಗಳು ವಿ. ಬಾಬುರಾವ್ ಘುಳೆ ಮತ್ತು ಚಕ್ರವರ್ತಿಗಳು ವಿ. ಜಾವಳಕರ್ ಮತ್ತು ಇತರರು ಈ ಪ್ರಕರಣಗಳಲ್ಲಿ ಪುಣೆಯ ನಗರದ ದಂಡಾಧಿಕಾರಿಗಳಾದ ಶ್ರೀ ಫ್ಲೆಮಿಂಗ್ ಅವರು ನೀಡಿರುವ ತೀರ್ಪುಗಳತ್ತ ಸರ್ಕಾರದ ಗಮನ ಹರಿದಿದೆಯೆ? ಈ ಎರಡೂ ಪ್ರಕರಣಗಳಲ್ಲಿ ಆರೋಪಿಗಳ ಮೇಲೆ ಭಾರತೀಯ ದಂಡ ಸಂಹಿತೆಯ ೫೦೦ನೆಯ ಪ್ರಕರಣದ ಮೇರೆಗೆ ಆರೋಪವನ್ನು ಹೊರಡಿಸಲಾಗಿತ್ತು.

---

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XIX ; ಪು.೪೦೪, ದಿನಾಂಕ ೭, ಮಾರ್ಚ್ ೧೯೨೭)

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XIX ; ಪು.೧೧೪೭, ದಿನಾಂಕ ೧೬ ಮಾರ್ಚ್ ೧೯೨೭)

(ಆ) ಈ ಎರಡೂ ಪ್ರಕರಣಗಳಲ್ಲಿ ಒಳಗೊಂಡಿದ್ದ ಕಾನೂನಿನ ಸಾಮಾನ್ಯ ಅಂಶವೊಂದರ ಬಗ್ಗೆ– ಅಂದರೆ, ದಂಡಸಂಹಿತೆಯ ೧೯೮ನೆಯ ಪ್ರಕರಣದ ಅರ್ಥ ವ್ಯಾಪ್ತಿಗೆ ಒಳಪಟ್ಟಂತೆ ಫಿರ್ಯಾದಿ ಬಾಧಿತನಾದ ವ್ಯಕ್ತಿಯಾಗಿದ್ದಾನೆಯೇ ಎಂಬ ಅಂಶದ ಬಗ್ಗೆ– ಶ್ರೀ ಫ್ಲೆಮಿಂಗ್ ಅವರು ತದ್ವಿರುದ್ಧವಾದ ತೀರ್ಪುಗಳನ್ನು ನೀಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಇ) ಅಂಥ ತದ್ವಿರುದ್ಧವಾದ ತೀರ್ಪುಗಳನ್ನು ಕೊಟ್ಟಿರುವುದಕ್ಕೆ ಕಾರಣವೇನು ಎಂಬುದರ ಬಗ್ಗೆ ಸರ್ಕಾರ ಶ್ರೀ ಫ್ಲೆಮಿಂಗ್ ಅವರಿಂದ ವಿವರಣೆಯನ್ನು ಕೇಳಿದೆಯೇ?

(ಈ) ಈ ಸಂಬಂಧವಾಗಿ ಶ್ರೀ ಫ್ಲೆಮಿಂಗ್ ಅವರ ವಿರುದ್ಧ ಸರ್ಕಾರ ಯಾವುದಾದರೂ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಿದೆಯೇ?

ಸನ್ಮಾನ್ಯರಾದ ಶ್ರೀ ಜೆ. ಇ. ಬಿ. ಹಾಟ್ಸನ್ ಅವರು: (ಅ) ಇಂದ (ಈ)ವರೆಗೆ ದಂಡಾಧಿಕಾರಿಗಳ ತೀರ್ಪಿನಿಂದ ಬಾಧಿತನಾಗಿದ್ದೇನೆಂದು ಪರಿಗಣಿಸುವ ಯಾವನೇ ವ್ಯಕ್ತಿಗೆ ಕಾನೂನಿನ ಮೂಲಕ ಒದಗಿಸಲಾಗಿರುವ ಪರಿಹಾರೋಪಾಯಗಳು ತೆರೆದಿವೆ. ಈ ಪ್ರಶ್ನೆ ಯಾವ ಅಂಶಗಳಿಗೆ ಸಂಬಂಧಿಸಿದೆಯೋ ಆ ಅಂಶಗಳ ವಿಷಯದಲ್ಲಿ ಅತಿಯಾದ ಅನೌಚಿತ್ಯ ಸಂಭವಿಸದ ಹೊರತು ಸರ್ಕಾರ ಈ ಸದನದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗುವುದಿಲ್ಲ.

ಶ್ರೀ ಎಸ್. ಕೆ. ಬೋಳೆ: (ಆ)ಗೆ ಮಾತ್ರವೇ ಉತ್ತರಿಸಲಾಗಿದೆಯೇ ಹೊರತು (ಅ), (ಇ) ಅಥವಾ (ಈ)ಗೆ ಅಲ್ಲ.

ಸನ್ಮಾನ್ಯರಾದ ಶ್ರೀ ಜೆ. ಇ. ಬಿ. ಹಾಟ್ಸನ್ ಅವರು: ಪ್ರಶ್ನೆಯ ನಾಲ್ಕು ಭಾಗಗಳಿಗೆ ಉತ್ತರ ಕೊಡಲಾಗಿದೆ.

ಶ್ರೀ ಎಸ್. ಕೆ. ಬೋಳೆ: (ಅ)ನಲ್ಲಿನ ಪ್ರಶ್ನೆ ಇದು: "ಶ್ರೀ ಫ್ಲೆಮಿಂಗ್ ಅವರು ನೀಡಿದ ತೀರ್ಪುಗಳತ್ತ ಸರ್ಕಾರದ ಗಮನ ಹರಿದಿದೆಯೆ?" ಆದರೆ ಆ ಅಂಶಕ್ಕೆ ಉತ್ತರವನ್ನು ಕೊಟ್ಟಿಲ್ಲ.

ಸನ್ಮಾನ್ಯರಾದ ಶ್ರೀ ಜೆ. ಇ. ಬಿ. ಹಾಟ್ಸನ್ ಅವರು: ಅದು ಇಂಗಿತವಾಗಿದೆ ಎಂದು ಭಾವಿಸಿದ್ದೇನೆ. ಸರ್ಕರದ ಗಮನ ಅವುಗಳತ್ತ ಹರಿದಿದೆ.

ಶ್ರೀ ಎಸ್. ಕೆ. ಬೋಳೆ: ಮತ್ತೆ (ಆ)ನಲ್ಲಿನ ಪ್ರಶ್ನೆ ಇದು: "ಶ್ರೀ ಫ್ಲೆಮಿಂಗ್ ಅವರು ತದ್ವಿರುದ್ಧವಾದ ತೀರ್ಪುಗಳನ್ನು ನೀಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?" ಆದರೆ ಆ ಅಂಶಕ್ಕೆ ಉತ್ತರವನ್ನು ಕೊಟ್ಟಿಲ್ಲ.

ಸನ್ಮಾನ್ಯರಾದ ಶ್ರೀ ಜೆ. ಇ. ಬಿ. ಹಾಟ್ಸನ್ ಅವರು: ಹೌದು, ಅಲ್ಲಿ ಉತ್ತರವನ್ನು ಕೊಡಲಾಗಿದೆ. "ಅತಿಯಾದ ಅನೌಚಿತ್ಯ ಸಂಭವಿಸಿದ ಹೊರತು ಸರ್ಕಾರ ಈ ವಿಷಯದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗುವುದಿಲ್ಲ" ಇತ್ಯಾದಿ ಮಾತುಗಳಲ್ಲಿ.

ಶ್ರೀ ಎಸ್. ಕೆ. ಬೋಳೆ: ಪ್ರಶ್ನೆ ಕೇಳಿರುವುದು– ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬುದು.

ಸನ್ಮಾನ್ಯ ಸಭಾಧ್ಯಕ್ಷರು: "ತದ್ವಿರುದ್ಧ" ಎಂಬ ಮಾತು ಇಂಗಿತಾರ್ಥವುಳ್ಳದ್ದಾಗಿದ್ದು ಅಭಿಪ್ರಾಯವನ್ನು ಕೋರುತ್ತದೆ. ಹೀಗಾಗಿ ಆ ಉತ್ತರವನ್ನು ಕೊಡಲಾಗಿದೆ.

## *ಮಹಾರನೊಬ್ಬನ ಮೇಲೆ ಮುಲ್ಕಿ ಪಾಟೀಲನಿಂದ ಹಲ್ಲೆ (ಚಿಖರ್ಡಿ)

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ಈ ವಿಚಾರವನ್ನು ದಯವಿಟ್ಟು ತಿಳಿಸುತ್ತದೆಯೆ–

(ಅ) ಶೋಲಾಪುರ ಜಿಲ್ಲೆಯ ಚಿಖರ್ಡಿಗ್ರಾಮದ ಮುಲ್ಕಿ ಪಾಟೀಲನೊಬ್ಬನು ತನ್ನ ಖಾಸಗಿ ಕೆಲಸವನ್ನು ಮಾಡಲು ನಿರಾಕರಿಸಿದನೆಂಬ ಕಾರಣಕ್ಕಾಗಿ ಅರ್ಜುನ ಲಾಲ ಮಹರ್ ಎಂಬಾತನ ಮೇಲೆ ಹಲ್ಲೆಯನ್ನೆಸಗಿ, ಅವನ ತಲೆ ಒಡೆದಿದ್ದಾನೆ ಎಂಬುದು ವಾಸ್ತವ ಸಂಗತಿಯೆ?

(ಆ) ಈಗ ಅರ್ಜುನನಿಗೆ ಬಾರ್ಸಿ ಸಿವಿಲ್ ಆಸ್ಪತ್ರೆಯಲ್ಲಿ ಗಾಯಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂಬುದು ವಾಸ್ತವ ಸಂಗತಿಯೆ?

(ಇ) ಹಾಗಿದ್ದಲ್ಲಿ ಪಾಟೀಲರ ವಿರುದ್ಧವಾಗಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಮಾಹಿತಿಯನ್ನು ತರಿಸಿಕೊಳ್ಳಲಾಗುತ್ತಿದೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XIX; ಪು. ೧೧೪೭, ದಿನಾಂಕ ೧೬ ಮಾರ್ಚ್ ೧೯೨೭)

## *ಮಹಾರರಿಗೆ ಪೀಡನೆ (ಸೊಲ್ಲಾಪುರ)

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ಈ ವಿಚಾರವನ್ನು ದಯವಿಟ್ಟು ತಿಳಿಸುತ್ತದೆಯೆ–

ಸೊಲ್ಲಾಪುರ ಜಿಲ್ಲೆಯಲ್ಲಿನ (ಅ) (i) ರಾಳೇರಾಸ್, (ii) ಪಣ್‌ಗಾಂವ್, (iii) ಪಂಗ್ರಿ (iv) ಉಪ್ಪೆ ದುಮಾಳ (v) ಅಂಬೆಗಾಂವ್ ಮತ್ತು (vi) ಸುರ್ದಿ ಗ್ರಾಮಗಳಲ್ಲಿನ ಜನರು ತಮ್ಮ ತಮ್ಮ ಗ್ರಾಮಗಳಲ್ಲಿನ ಮಹಾರರೊಂದಿಗೆ ಯಾವುದೇ ವ್ಯವಹಾರವನ್ನಿರಿಸಿಕೊಳ್ಳದಂತೆ ರೈತರನ್ನು ಮತ್ತು ವರ್ತಕರನ್ನು ತಡೆಯುವ ಸಂಚು ಹೂಡಿದ್ದಾರೆ. ತಮ್ಮ ಗ್ರಾಮಗಳಲ್ಲಿ ಮಹಾರರ ಮೇಲೆ ಹಲ್ಲೆಯನ್ನೆಸಗಿದ್ದಾರೆ. ಕೆಲವು ಪ್ರಸಂಗಗಳಲ್ಲಿ ಮಹಾರ್ ಮಹಿಳೆಯರ ಮಾನಭಂಗಕ್ಕೆ ಕೈಹಾಕಿದ್ದಾರೆ ಹಾಗೂ ಮಹಾರರು ಬಳಸುವ ನೀರಿನ ಕಾಲುವೆಗಳಿಗೆ ಹೊಲಸನ್ನು ಎಸೆಯುವ ಹಂತಕ್ಕೂ ಹೋಗಿದ್ದಾರೆ ಎಂಬುದು ವಾಸ್ತವ ಸಂಗತಿಯೆ? ಸ್ವಸುಧಾರಣೆಯ ತಮ್ಮ ಪ್ರಯತ್ನಗಳ ಅಂಗವಾಗಿ ಈ ಗ್ರಾಮಗಳಲ್ಲಿನ ಮಹಾರರು ಸತ್ತ ಪ್ರಾಣಿಗಳ ಹೆಣವನ್ನು ಹೊತ್ತು ಸಾಗಿಸುವುದನ್ನು ನಿಲ್ಲಿಸಿದ್ದಾರೆ ಎಂಬುದೇ ಇದಕ್ಕೆ ಕಾರಣವಾಗಿದೆಯಲ್ಲವೆ?

ಇಂತಹ ಪೀಡನೆಗಳಿಂದ ಮಹಾರರನ್ನು ರಕ್ಷಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ?

ಸನ್ಮಾನ್ಯರಾದ ಶ್ರೀ ಜೆ. ಇ. ಬಿ. ಹಾಟ್ಸನ್: ಮಾಹಿತಿಯನ್ನು ತರಿಸಿಕೊಳ್ಳಲಾಗುತ್ತಿದೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XIX; ಪು. ೧೨೯೮, ದಿನಾಂಕ ೧೭ ಮಾರ್ಚ್ ೧೯೨೭)

## *ಉಲ್ಹಾಸ್ ನದಿಯಲ್ಲಿ ಸಂಭವಿಸಿದ ದುರ್ಘಟನೆ

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ಈ ವಿಚಾರವನ್ನು ದಯವಿಟ್ಟು ತಿಳಿಸುತ್ತದೆಯೆ–

(ಅ) "ಪ್ರತಿಯೋಗಿ" ಪತ್ರಿಕೆಯ ೧೩ ಫೆಬ್ರವರಿ ೧೯೨೬ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಂಪಾದಕೀಯದತ್ತ ಹಾಗೂ "ಪ್ರತಿಯೋಗಿ"ಯ ೧೨ನೆಯ ೧೯೨೬ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಬದ್ಲಾಪುರದ ಜನರ ಹೇಳಿಕೆಗಳು ಮತ್ತು ಉದ್ಧರಣಗಳತ್ತ ಸರ್ಕಾರದ ಗಮನಹರಿದಿದೆಯೆ?

(ಆ) ಹಾಗಿದ್ದರೆ ಕೋರಿರುವಂತೆ ಪ್ರಾಸಿಕ್ಯುಷನ್ ಮೊಕದ್ದಮೆಯನ್ನು ಹೂಡಲು ಸರ್ಕಾರ ಅನುಮತಿಯನ್ನು ಇನ್ನೂ ತಡೆಹಿಡಿಯುತ್ತಿದೆಯೆ?

ಸನ್ಮಾನ್ಯ ಸರ್ ಕೋವಾಸ್ ಜಿ. ಜಹಾಂಗೀರ್ ಅವರು:

(ಅ) "ಪ್ರತಿಯೋಗಿ" ಪತ್ರಿಕೆಯ ೧೩ ಫೆಬ್ರವರಿ ೧೯೨೬ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನದ ಸಾರಾಂಶವನ್ನು ಸರ್ಕಾರ ಗಮನಿಸಿದೆ; ಆದರೆ ಆ ಪತ್ರಿಕೆಯಲ್ಲಿ ೧೨ ಜೂನ್ ೧೯೨೬ರ ಸಂಚಿಕೆಯ ಪ್ರಕಟವಾಗಿರುವ ಬದ್ಲಾಪುರದ ಜನರ ಹೇಳಿಕೆಗಳ ಉದ್ಧರಣಗಳನ್ನು ಗಮನಿಸಿಲ್ಲ.

(ಆ) ಹೌದು.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XX; ಪು. ೭೪೯, ದಿನಾಂಕ ೨೭ ಜುಲೈ ೧೯೨೭)

## *ಸಾರ್ವಜನಿಕ ಸೇವೆ: ದಲಿತ ವರ್ಗಗಳು

ಡಾ. ಬಿ. ಆರ್. ಅಂಬೇಡ್ಕರ್: ಸಾರ್ವಜನಿಕ (ಸರ್ಕಾರಿ) ಸೇವೆಯಲ್ಲಿರುವ ದಲಿತ ವರ್ಗಗಳ ಸಂಖ್ಯೆಯ ಬಗ್ಗೆ ಸರ್ಕಾರ ದಯವಿಟ್ಟು ಈ ಕೆಳಗೆ ಕಾಣಿಸಿರುವ ಮಾಹಿತಿಯನ್ನು ಕೊಡುತ್ತದೆಯೆ?

| ಜಿಲ್ಲೆ | ಇಲಾಖೆ | ನೇಮಕಗೊಂಡಿರುವ ದಲಿತ ವರ್ಗಗಳ ಅಭ್ಯರ್ಥಿಗಳ ಸಂಖ್ಯೆ |
|---|---|---|
| | | ಜವಾನರಾಗಿ ಸಿಬ್ಬಂದಿ ವರ್ಗದಲ್ಲಿ |

ಸನ್ಮಾನ್ಯರಾದ ಸರ್ ಚುನಿಲಾಲ್ ಮೆಹತಾ: ಮಾಹಿತಿಯನ್ನು ತರಿಸಿಕೊಳ್ಳಲಾಗುತ್ತಿದೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XX; ಪು. ೮೪೭, ದಿನಾಂಕ ೨೭ ಮಾರ್ಚ್ ೧೯೨೭)

## *ವತನದಾರ ಮಹಾರರು: ಸಂಭಾವನೆ

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತ್ಯದಲ್ಲಿನ ಪ್ರತಿಯೊಂದು ಹಳ್ಳಿಗೆ ಸಂಬಂಧಿಸಿದಂತೆ ಸರ್ಕಾರ ದಯವಿಟ್ಟು ಈ ಕೆಳಗೆ ಕಾಣಿಸಿರುವ ಮಾಹಿತಿಯನ್ನು ಕೊಡುತ್ತದೆಯೆ?

| ಗ್ರಾಮ | ಒಟ್ಟು ಜನಸಂಖ್ಯೆ | ಕಾರ್ಯನಿರತ ರಾಗಿರುವ ಮಹಾರರ ಸಂಖ್ಯೆ | ಎಲ್ಲ ಮೂಲಗಳಿಂದ ಅಂದಾಜು ಮಾಡಲಾಗಿರುವ ಕಾರ್ಯ ನಿರತ ಮಹಾರರಿಗೆ ನೀಡಲಾಗುತ್ತಿರುವ ಸಂಭಾವನೆ (ರೂಪಾಯಿಗಳಲ್ಲಿ) | | ಸಂಭಾವನೆ ಒಟ್ಟು |
|---|---|---|---|---|---|
| | | | ಇನಾಮು ಭೂಮಿಯಿಂದ | ಬಲೂತಾ ದಿಂದ | ಸರ್ಕಾರಿ ಸಂಬಳದಿಂದ |

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಈ ಮಾಹಿತಿಯನ್ನು ಪಡೆದುಕೊಳ್ಳಲು ವಿನಿಯೋಗಿಸ ಬೇಕಾದ ಕಾಲ ಮತ್ತು ಶ್ರಮ ಸಾರ್ವಜನಿಕರ ದೃಷ್ಟಿಯಿಂದ ಉಪಯುಕ್ತತೆಗೆ ಹೋಲಿಸಿದರೆ ತಾಳಮೇಳ ಗಳಿಲ್ಲದಂತಿರುವುದರಿಂದ ಈ ಮಾಹಿತಿಯನ್ನು ಸಂಗ್ರಹಿಸಲು ತಾನು ಸಿದ್ಧವಿಲ್ಲದ್ದಕ್ಕಾಗಿ ಸರ್ಕಾರ ವಿಷಾದಿಸುತ್ತದೆ. ಇಂತಹುದೇ ಮಾಹಿತಿಯನ್ನು ಆಯ್ದ ಕೆಲವು ಹಳ್ಳಿಗಳಿಗಾಗಿ ಬಯಸಿದರೆ, ಅದನ್ನು ನೀಡಬಹುದಾದ ಸಾಧ್ಯತೆಗಳ ಬಗ್ಗೆ ಸರಕಾರವು ಪರಿಶೀಲಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಪ್ರಶ್ನೆಯಲ್ಲಿ ಕೇಳಲಾಗಿರುವ ಮಾಹಿತಿ ಪ್ರತಿಯೊಂದು ಗ್ರಾಮದ ವತನ–ನಡುವಳಿಗಳಿಂದ ಪಡೆಯಬಹುದಾಗಿರುವಂಥದು ಎಂಬುದು ವಾಸ್ತವ ಸಂಗತಿಯಲ್ಲವೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಹೇಗೆ ಆದರೂ ಮುಂಬಯಿ ಪ್ರಾಂತ್ಯದಲ್ಲಿನ ಪ್ರತಿಯೊಂದು ಹಳ್ಳಿಗೂ ಈ ಪ್ರಶ್ನೆಯನ್ನು ಕಳಿಸಬೇಕಾಗುತ್ತದೆ ಎಂಬ ಸಂಗತಿಯತ್ತ ನಾನು ಸನ್ಮಾನ್ಯ ಸದಸ್ಯರ ಗಮನವನ್ನು ಸೆಳೆಯಬಯಸುತ್ತೇನೆ. ಈ ಮಾಹಿತಿಯನ್ನು ಸಂಗ್ರಹಿಸಲು ವಿನಿಯೋಗಿಸಬೇಕಾದ ಕಾಲ ಮತ್ತು ಶ್ರಮ ಅಗಾಧವಾದುದು.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XX; ಪು. ೧೦೬೫, ದಿನಾಂಕ ೨೭ ಜುಲೈ ೧೯೨೭)

## *ಕಾರ್ಯನಿರತ ವತನದಾರ ಮಹಾರರು

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ–

(ಅ) ಈ ಸಂಸ್ಥಾನದ ವಿವಿಧ ಭಾಗಗಳಲ್ಲಿನ ಹಳ್ಳಿಗಳಲ್ಲಿ ಕಾರ್ಯನಿರತ ವತನದಾರ ಮಹಾರರಾಗಿರುವವರ ಸಂಖ್ಯೆಯನ್ನು ನಿಯಂತ್ರಿಸುವ ನಿಯಮಗಳೇನಾದರೂ ಇದೆಯೆ?

(ಆ) ಹಾಗಿದ್ದರೆ ಸರ್ಕಾರ ಅವುಗಳನ್ನು ಪ್ರಕಟಿಸುತ್ತದೆಯೆ ಅಥವಾ ಉಲ್ಲೇಖಿಸುತ್ತದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: (ಅ) ಮತ್ತು (ಆ) ಆ ವಿಷಯಕ್ಕೆ ಸಂಬಂಧಿಸಿದಂತೆ

ಯಾವುದೇ ನಿಯಮಗಳೂ ಇಲ್ಲ. ಕಾರ್ಯನಿರತ ವತನದಾರ ಮಹಾರರ ನೇಮಕಾತಿ ಮುಂಬಯಿ ಆನುವಂಶಿಕ ಹುದ್ದೆಗಳು ಕಾಯ್ದೆಯ ೬೪ನೆಯ ಪ್ರಕರಣದ ಉಪಬಂಧಗಳ ನಿಯಂತ್ರಣಕ್ಕೆ ಒಳಪಟ್ಟಿವೆ.

ಡಾ. ಬಿ. ಆರ್. ಅಂಬೇಡ್ಕರ್: ೬೪ನೆಯ ಪ್ರಕರಣದ ಮೇರೆಗೆ ಸಂಗ್ರಹಣಾಧಿಕಾರಿಗಳಿಗೆ ವಿವೇಚನಾಧಿಕಾರವನ್ನು ಕೊಡಲಾಗಿದೆ. ಹಾಗೂ ಅದನ್ನು ಚಲಾಯಿಸಿ ಅವರು ಕಾರ್ಯನಿರತ ವತನದಾರ ಮಹಾರರ ಬಗ್ಗೆ ನಿಯಮಗಳನ್ನು ರೂಪಿಸಬಹುದು ಎಂಬುದು ಸನ್ಮಾನ್ಯ ಸದಸ್ಯರಿಗೆ ತಿಳಿದಿದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಅದು ನನಗೆ ತಿಳಿದಿದೆ.

ಡಾ. ಬಿ. ಆರ್. ಅಂಬೇಡ್ಕರ್: ಕೆಲವೊಂದು ಹಳ್ಳಿಗಳಲ್ಲಿ ೧೬ ಮಂದಿ ಮಹಾರರು ಕಾರ್ಯನಿರತ ವತನದಾರರಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದು ಸನ್ಮಾನ್ಯ ಸದಸ್ಯರಿಗೆ ತಿಳಿದಿದೆಯೇ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಸನ್ಮಾನ್ಯ ಸದಸ್ಯರು ಸೂಚನೆ ನೀಡಿದರೆ ನಾನು ವಿಚಾರಣೆ ಮಾಡಿಸುತ್ತೇನೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XX; ಪು. ೧೨೦೬, ದಿನಾಂಕ ೨೭ ಜುಲೈ ೧೯೨೭)

## *ಬದ್ಲಾಪುರದಲ್ಲಿ ಉಲ್ಹಾಸ್ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ?

(ಅ) ಥಾಣಾ ಜಿಲ್ಲೆಯ ಬದ್ಲಾಪುರದಲ್ಲಿ ಉಲ್ಹಾಸ್ ನದಿಗೆ ಅಡ್ಡಲಾಗಿ ಕೆಳಮಟ್ಟದ ಒಡ್ಡು ದಾರಿಯನ್ನು ನಿರ್ಮಿಸುವ ಪ್ರಶ್ನೆಯ ಪರಿಗಣನೆ ಮುಗಿದಿದೆಯೆ?

(ಆ) ಆಯುಕ್ತರ ಮತ್ತು ಸಂಗ್ರಹಣಾಧಿಕಾರಿಗಳ ವರದಿಗಳೂ ಸೇರಿದಂತೆ ಇಡೀ ವ್ಯವಹಾರವನ್ನು ಪರಿಷತ್ತಿನ ಮುಂದೆ ಇರಿಸಲಾಗುತ್ತದೆಯೆ?

(ಇ) ಕೆಳಮಟ್ಟದ ಒಡ್ಡುದಾರಿಗಿಂತ ಉನ್ನತ ಮಟ್ಟದ ಸೇತುವೆ ತೀರ ಅಗತ್ಯವಾಗಿದೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: (ಅ) ಇಲ್ಲ. ಆದರೆ ಬೇಗನೆ ತೀರ್ಮಾನಕ್ಕೆ ಬರಲಾಗುತ್ತದೆ ಎಂದು ಆಶಿಸುತ್ತೇನೆ.

(ಆ) ವ್ಯವಹಾರವನ್ನು ಸದನದ ಮುಂದೆ ಇಡಲು ಸರ್ಕಾರ ಸಿದ್ಧವಾಗಿಲ್ಲ.

(ಇ) ಇಲ್ಲ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು, ಸಂ. XX; ಪು. ೧೪೭೨, ದಿನಾಂಕ ೨೭ ಜುಲೈ ೧೯೨೭)

## ಕೃಷಿಗಾಗಿ ಅರಣ್ಯಭೂಮಿ: ದಲಿತ ವರ್ಗಗಳಿಗೆ ನೀಡಿಕೆ

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ?

(ಅ) ಈ ಸಂಸ್ಥಾನದ ಪ್ರತಿಯೊಂದು ಜಿಲ್ಲೆಯಲ್ಲಿ ೧೯೨೩, ೧೯೨೪, ೧೯೨೫ ಮತ್ತು ೧೯೨೬ ನೆಯ ವರ್ಷಗಳಲ್ಲಿ ಕೃಷಿಗಾಗಿ ಬಿಟ್ಟುಕೊಡಲಾದ ಅರಣ್ಯಭೂಮಿಯ ಒಟ್ಟಾರೆ ಪ್ರಮಾಣ ವೆಷ್ಟು?

(ಆ) ಉಲ್ಲೇಖಿಸಲಾಗಿರುವ ವರ್ಷಗಳಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಇದರಲ್ಲಿ ಎಷ್ಟು ಪ್ರಮಾಣದ ಅರಣ್ಯಭೂಮಿಯನ್ನು ದಲಿತ ವರ್ಗಗಳಿಗೆ ಕೊಡಲಾಗಿದೆ?

ಸನ್ಮಾನ್ಯ ಶ್ರೀ ಜಿ. ಬಿ. ಪ್ರಧಾನ್ ಅವರು: (ಅ) ಮತ್ತು (ಆ) ಅಗತ್ಯವಾದ ಮಾಹಿತಿಯನ್ನು ಒದಗಿಸುವ ವಿವರಣಾ ಪತ್ರವನ್ನು ಪರಿಷತ್ತಿನ ಮುಂದೆ ಇರಿಸಲಾಗಿದೆ. ವಿವರಣಾ ಪತ್ರದಲ್ಲಿ ತೋರಿಸಲಾಗಿರುವ ಪ್ರದೇಶ ಈ ಸಂಸ್ಥಾನದ ಪ್ರತಿಯೊಂದು ಅರಣ್ಯ ವಿಭಾಗಕ್ಕೆ ಸಂಬಂಧಿಸಿದೆ.

**೧೯೨೩, ೧೯೨೪, ೧೯೨೫ ಮತ್ತು ೧೯೨೬ರಲ್ಲಿ ಕೃಷಿಗಾಗಿ ಬಿಟ್ಟು ಕೊಡಲಾದ ಅರಣ್ಯಭೂಮಿಯ ಬಗೆಗಿನ ವಿವರಣ ಪತ್ರ:**

| ಅರಣ್ಯ ವಿಭಾಗ | ಕೃಷಿಗಾಗಿ ಬಿಟ್ಟುಕೊಡಲಾದ ಅರಣ್ಯ ಭೂಮಿಯ ಒಟ್ಟು ಪ್ರಮಾಣ | | | |
|---|---|---|---|---|
| | ೧೯೨೩ | ೧೯೨೪ | ೧೯೨೫ | ೧೯೨೬ |
| **ಉತ್ತರ ವೃತ್ತ** | ಎಕರೆಗಳು | ಎಕರೆಗಳು | ಎಕರೆಗಳು | ಎಕರೆಗಳು |
| ೧. ಪಂಚಮಹಲ್‌ಗಳು | ೬೬೦ | ೭೫೩೬ | ... | ೯ |
| ೨. ಸೂರತ್ | ೧,೧೭೫ | ೧,೧೫೨ | ೩,೫೩೮ | ... |
| ೩. ಉತ್ತರ ಥಾಣಾ | ೧೯೧ | ೧೭೧ | ... | ೫ |
| ೪. ಪಶ್ಚಿಮ ಥಾಣಾ | ೩೩೯ | ೩೩೦ | ೨೯೫ | ... |
| ೫. ಪೂರ್ವ ಥಾಣಾ | ೨೧,೪೬೩ | ೨,೨೪೭ | ೨,೮೧೦ | ೩,೭೩೩ |
| ೬. ಪಶ್ಚಿಮ ನಾಸಿಕ್ | ೩,೦೮೦ | ೪೩.೨ | ೧,೮೧೭ | ೨೫೬ |
| ೭. ಪೂರ್ವ ನಾಸಿಕ್ | ೮,೪೯೩ | ೨,೭೧೪ | ೨,೧೦೦ | ೨,೪೮೨ |

| | | | | |
|---|---|---|---|---|
| **ಮಧ್ಯ ವೃತ್ತ** | | | | |
| ೧. ಪೂರ್ವ ಖಾನ್‌ದೇಶ | ೧೮೬ | ೪೦೧ | ೧,೭೫೬ | ೧೮೭೨ |
| ೨. ಉತ್ತರ ಖಾನ್‌ದೇಶ | ... | ೧,೩೨೫ | ೧,೬೬೦ | ೧,೮೧೫ |
| ೩. ಪಶ್ಚಿಮ ಖಾನ್‌ದೇಶ | ೯೦ | ೫೧ | ೨೩೫ | ೫೬೦ |
| ೪. ಪುಣೆ | ೧ | ೧ | ೭೦ | ೩೬ |
| ೫. ಅಹಮದ್‌ನಗರ | ೪,೨೫೪ | ೫೫ | ೮೬ | ೮೮ |
| ೬. ಸತಾರಾ | ೩,೫೧೬ | ೨೫೨ | ೪೭೩ | ೨೮೫ |
| **ದಕ್ಷಿಣ ವೃತ್ತ** | | | | |
| ೧. ಉತ್ತರ ವಿಭಾಗ, ಕನ್ನಡ | ೨೨ | ... | ... | ೭ |
| ೨. ಪೂರ್ವ ವಿಭಾಗ, ಕನ್ನಡ | ೧೦೫ | ೧೩೭ | ೩೩ | ೭ |
| ೩. ದಕ್ಷಿಣ ವಿಭಾಗ, ಕನ್ನಡ | ೨೬ | ೪೦ | ೩೧ | ೩೭ |
| ೪. ಪಶ್ಚಿಮ ವಿಭಾಗ, ಕನ್ನಡ | ೧೩೩ | ೭೦ | ೫೯ | ೫ |
| ೫. ಕೇಂದ್ರ ವಿಭಾಗ, ಕನ್ನಡ | ೧೩ | ೬ | ೧ | ... |
| ೬. ಬೆಳಗಾಮ್ | ೬೬೮ | ೭೧೯ | ೨,೦೦೬ | ೨,೭೧೭ |
| ೭. ಧಾರವಾಡ | ೩೪೬ | ೨೫ | ೧೫೪ | ೧೩೨ |
| **ಸಿಂದ್ ವೃತ್ತ** | | | | |
| ೧. ಸುಕ್ಕೂರ್ | ೧,೮೪೧ | ೨,೫೭೭ | ೧,೩೩೦ | ೧,೮೮೮ |
| ೨. ಶೀಕಾಪುರ್ | ೧,೩೯೯ | ೧,೨೫೬ | ೧,೦೬೬ | ೯೨೮ |
| ೩. ಲರ್ಕಾನಾ | ೪,೩೨೧ | ೩,೧೪೩ | ೪೮೩೮ | ೫,೩೦೦ |
| ೪. ಹೈದರಾಬಾದ್ | ೫೪೯ | ೧,೭೮೨ | ೨,೦೭೧ | ೨,೩೯೬ |
| ೫. ಕರಾಚಿ | ೯೨ | ೧,೦೯೩ | ೧,೭೮೯ | ೩,೦೮೪ |

## ೧೯೨೩, ೧೯೨೪, ೧೯೨೫ ಮತ್ತು ೧೯೨೬ರಲ್ಲಿ ಕೃಷಿಗಾಗಿ ಬಿಟ್ಟು ಕೊಡಲಾದ ಅರಣ್ಯಭೂಮಿಯ ಬಗೆಗಿನ ವಿವರಣ ಪತ್ರ

| ಅರಣ್ಯ ವಿಭಾಗ | ದಲಿತ ವರ್ಗಗಳಿಗೆ ಕೊಡಲಾಗಿರುವ ಭೂಮಿ | | | | ಷರಾ |
|---|---|---|---|---|---|
| | ೧೯೨೩ | ೧೯೨೪ | ೧೯೨೫ | ೧೯೨೬ | |
| **ಉತ್ತರ ವೃತ್ತ** | ಎಕರೆಗಳು | ಎಕರೆಗಳು | ಎಕರೆಗಳು | ಎಕರೆಗಳು | |
| ೧. ಪಂಚಮಹಲ್‌ಗಳು | ೨೨೭ | ೧,೪೪೬ | ... | ೯ | |
| ೨. ಸೂರತ್ | ೧,೧೭೫ | ೧,೧೫೨ | ೩,೫೩೮ | ... | |
| ೩. ಉತ್ತರ ಥಾಣಾ | ೧೯ | ೧೭೧ | ... | ೫ | |
| ೪. ಪಶ್ಚಿಮ ಥಾಣಾ | ೩೬೯ | ೩೩೦ | ೨೯೫ | ... | |
| ೫. ಪೂರ್ವ ಥಾಣಾ | ೨೧,೪೬೩ | ೨,೨೩೭ | ೨,೮೧೦ | ೩,೭೩೩ | |
| ೬. ಪಶ್ಚಿಮ ನಾಸಿಕ್ | ೨,೯೨೭ | ೪೧೧ | ೧,೭೨೭ | ೨೪೩ | |
| ೭. ಪೂರ್ವ ನಾಸಿಕ್ | ೮,೪೯೨ | ೨,೭೧೪ | ೨,೧೦೦ | ೨,೪೮೨ | |
| **ಮಧ್ಯ ವೃತ್ತ** | | | | | |
| ೧. ಪೂರ್ವ ಖಾನ್‌ದೇಶ | ... | ೩೦ | ೯೧ | ೧೦೧ | |
| ೨. ಉತ್ತರ ಖಾನ್‌ದೇಶ | ... | ೧,೩೨೫ | ೧,೬೬೦ | ೧,೮೧೫ | |
| ೩. ಪಶ್ಚಿಮ ಖಾನ್‌ದೇಶ | ೪೦ | ೩೭ | ೯೦ | ೩೪೦ | |
| ೪. ಪುಣೆ | ... | ... | ... | ... | |
| ೫. ಅಹಮದ್‌ನಗರ | ೫೫ | ... | ... | ... | |
| ೬. ಸತಾರಾ | ... | ... | ... | ... | |

| | | | | | ಷರಾ |
|---|---|---|---|---|---|
| **ದಕ್ಷಿಣ ವೃತ್ತ** | | | | | ಈ ವರ್ಷಗಳಲ್ಲಿ ದಲಿತ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಂದ ಯಾವುದೇ ಅರ್ಜಿ ಬಂದಿರಲಿಲ್ಲ |
| ೧. ಉತ್ತರ ವಿಭಾಗ, ಕನ್ನಡ | ... | ... | ... | ... | |
| ೨. ಪೂರ್ವ ವಿಭಾಗ, ಕನ್ನಡ | ... | ... | ... | ... | |
| ೩. ದಕ್ಷಿಣ ವಿಭಾಗ, ಕನ್ನಡ | ೨೦ | ೩೮ | ೨೮ | ೩೬ | |
| ೪. ಪಶ್ಚಿಮ ವಿಭಾಗ, ಕನ್ನಡ | ... | ... | ... | ... | |
| ೫. ಕೇಂದ್ರ ವಿಭಾಗ, ಕನ್ನಡ | ... | ... | ... | ... | |
| ೬. ಬೆಳಗಾಮ್ | ೪೫ | ೧೦೪ | ೨೩ | ೬೬೪ | |
| ೭. ಧಾರವಾಡ | ... | ... | ... | ... | |
| **ಸಿಂದ್ ವೃತ್ತ** | | | | | |
| ೧. ಸುಕ್ಕೂರ್ | ... | ... | ... | ... | |
| ೨. ಶೀಕಾಪುರ್ | ... | ... | ... | ... | –ಅದೇ– |
| ೩. ಲರ್ಕಾನಾ | ... | ... | ... | ... | |
| ೪. ಹೈದರಾಬಾದ್ | ... | ... | ... | ... | |
| ೫. ಕರಾಚಿ | ... | ... | ... | ... | |

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XX, ಪು. ೧೪೭೨–೭೪; ದಿನಾಂಕ ೨೭ ಜುಲೈ ೧೯೨೭)

# ತಂಬಾಕು ಲೈಸೆನ್ಸ್

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ–

(೧) ತಂಬಾಕು ಮಾರಲು ಲೈಸೆನ್ಸ್‌ಗಾಗಿ ನಾರಾಯಣ ಸಖಾರಾಮ್ ಎಂಬಾತ ಅಬಕಾರಿ ಅಧೀಕ್ಷಕರು, ತಂಬಾಕು ಇಲಾಖೆ ಅವರಿಗೆ ಅರ್ಜಿ ಸಲ್ಲಿಸಿದ್ದರೆ?

(ಆ) ಅರ್ಜಿದಾರರು ಸೈನಿಕ ಪಿಂಚಣಿದಾರರಾಗಿದ್ದು ೧೧೭ನೆಯ ರಜಪೂತ ಪಡೆಯ ಕಮಾಂಡಿಂಗ್ ಆಫೀಸರ್ ಅವರು ಶಿಫಾರಸು ಮಾಡಿದ್ದರೂ ಅವರ ಅರ್ಜಿಯನ್ನು ತಿರಸ್ಕರಿಸಲಾಯಿತೆ?

(ಇ) ಅವರ ಅರ್ಜಿಯನ್ನು ಯಾವ ಕಾರಣಗಳಿಗಾಗಿ ತಿರಸ್ಕರಿಸಲಾಯಿತು?

(ಈ) ಅರ್ಜಿದಾರರು ದಲಿತ ವರ್ಗಕ್ಕೆ ಸೇರಿದವರಾಗಿದ್ದರು ಎಂಬ ಕಾರಣಕ್ಕಾಗಿಯೇ ಅವರು ಅರ್ಜಿಯನ್ನು ತಿರಸ್ಕರಿಸಲಾಯಿತೆ?

(ಉ) ಲೈಸೆನ್ಸ್ ನೀಡಿಕೆಯ ವಿಷಯದಲ್ಲಿ ಜಾತಿಯ ಆಧಾರದ ಮೇಲೆ ಸರ್ಕಾರ ಪಕ್ಷಪಾತವನ್ನೇನಾದರೂ ಮಾಡುತ್ತದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: (ಅ) ಹೌದು,

(ಇ) ಬೇರಾವುದೇ ಮಾರ್ಗಗಳಿಂದ ಜೀವಿಕೆಯನ್ನು ಸಂಪಾದಿಸಲು ಸಾಧ್ಯವಾಗದಿರುವಂಥ ಹಾಗೂ ನಿಜವಾಗಿಯೂ ನಿರ್ಧನಿಕ ಪರಿಸ್ಥಿತಿಗಳಲ್ಲಿರುವಂಥ ವ್ಯಕ್ತಿಗಳಿಗೆ ಮಾತ್ರವೇ ತಂಬಾಕು ಲೈಸೆನ್ಸ್‌ಗಳನ್ನು ಕೊಡಲಾಗುತ್ತದೆ. ಸನ್ಮಾನ್ಯ ಸದಸ್ಯರು ಉಲ್ಲೇಖಿಸಿರುವ ವ್ಯಕ್ತಿ ಇತರ ಮಾರ್ಗಗಳ ಮೂಲಕ ಜೀವಿಕೆಯನ್ನು ಸಂಪಾದಿಸಲು ಸಾಕಷ್ಟು ಸಮರ್ಥರಾಗಿದ್ದಾರೆಂದು ವರದಿಯಾಗಿದೆ. ಹೀಗಾಗಿ ಅವರಿಗೆ ಲೈಸೆನ್ಸನ್ನು ತಿರಸ್ಕರಿಸಲಾಯಿತು.

(ಈ) ಇಲ್ಲ.

(ಉ) ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ತಂಬಾಕು ಲೈಸೆನ್ಸ್ ನೀಡಿಕೆಯ ವಿಷಯದಲ್ಲಿ ಇಲಾಖೆ ಗೊತ್ತುಪಡಿಸಿರುವ ನಿಯಮಗಳಿಗೆ ಇದು ಅನುಸಾರವಾಗಿದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಈ ವಿಷಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ನಿಯಮಗಳೇನಾದರೂ ಇವೆ ಎಂದು ನಾನು ಭಾವಿಸಿಲ್ಲ. ಆದರೆ ಇದು ನಡೆದುಕೊಂಡು ಬಂದಿರುವ ಪದ್ಧತಿ.

---

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXI, ಪು. ೫೭, ದಿನಾಂಕ ೨೯ ಸೆಪ್ಟಂಬರ್ ೧೯೨೭)

ಡಾ. ಬಿ. ಆರ್. ಅಂಬೇಡ್ಕರ್: ಈ ನಿರ್ದಿಷ್ಟ ಪ್ರಶ್ನೆ ಸನ್ಮಾನ್ಯ ಸದಸ್ಯರ ಇಲಾಖೆಗೆ ಸಂಬಂಧಪಟ್ಟಿರುವಂಥದೇ ಅಥವಾ ಅಬಕಾರಿ ಸಚಿವರ ಕೈಕೆಳಗೆ ಬರುವಂಥ ಇಲಾಖೆಗೆ ಸಂಬಂಧಪಟ್ಟಿರುವಂಥದೇ ಎಂಬುದನ್ನು ನಾನು ತಿಳಿಯಬಹುದೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: ಇದು ಕಂದಾಯ ಇಲಾಖೆಗೆ ಸಂಬಂಧಿಸಿರುವಂಥದು. ಮುಂಬಯಿಯ ಸಂಗ್ರಹಣಾಧಿಕಾರಿಗಳು ಈ ಲೈಸೆನ್ಸನ್ನು ಕೊಡುತ್ತಾರೆ.

## *ನಾಸಿಕ್ ವಿಭಾಗದ ಅರಣ್ಯಭೂಮಿಗಳು – ಮಹಾರರ ಅರ್ಜಿಗಳು

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ–

(ಅ) ನಾಸಿಕ್ ತಾಲ್ಲೂಕಿನ ಪಿಂಪ್ಲಾದ್ ಗ್ರಾಮದ ಮಹಾರರು ಅರಣ್ಯಭೂಮಿ ನೀಡಿಕೆಗಾಗಿ ಸಂಗ್ರಹಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು ಎಂಬುದು ಸರ್ಕಾರಕ್ಕೆ ತಿಳಿದಿದೆಯೆ?

(ಆ) ಅವರು ಪಿಂಪ್ಲಾದ್ ಗ್ರಾಮದಲ್ಲಿನ ೨೨೦ನೆಯ ಸರ್ವೆ ನಂಬರಿನ ಭೂಮಿಯನ್ನು ಕೇಳಿದ್ದರೇ?

(ಇ) ಅದನ್ನು ನಿರಾಕರಿಸಿದಾಗ ಅವರು ರಾಜೂರ್–ಬಬೂಲಾ ಗ್ರಾಮದಲ್ಲಿನ ೨೦೨ನೆಯ ಸರ್ವೆ ನಂಬರಿನ ಭೂಮಿಯನ್ನು ಕೇಳಿದ್ದರೇ?

(ಉ) ಈ ಅರ್ಜಿಯನ್ನೂ ತಿರಸ್ಕರಿಸಲಾಯಿತು ಎಂಬುದು ವಾಸ್ತವ ಸಂಗತಿಯೇ?

(ಊ) ಈ ಮಹಾರರ ಅರ್ಜಿಗಳನ್ನು ಅನುಕೂಲಕರವಾಗಿ ಪರಿಗಣಿಸಲು ಸತತವಾಗಿ ನಿರಾಕರಿಸಿ ಕೊಂಡು ಬಂದಿರುವುದಕ್ಕೆ ಕಾರಣಗಳೇನು?

ಸನ್ಮಾನ್ಯರಾದ ಶ್ರೀ ಜೆ. ಬಿ. ಪ್ರಧಾನ್ ಅವರು: (೧) (ಅ), (ಆ), (ಇ), (ಈ) ಮತ್ತು (ಉ) ಹೌದು. ಮತ್ತೊಬ್ಬ ವ್ಯಕ್ತಿಗೆ ಅದಕ್ಕೂ ಮೊದಲೇ ಅದನ್ನು ಮಂಜೂರು ಮಾಡಲಾಗಿದ್ದುದರಿಂದ.

(೨) ರಾಜೂರ್ ಗ್ರಾಮದ ೨೦೨ನೆಯ ಸರ್ವೇ ನಂಬರಿನ ಭೂಮಿ ಹುಲ್ಲುಗಾವಲಿನ ಅರಣ್ಯವಾಗಿದ್ದು ಕಂದಾಯ ಇಲಾಖೆಯ ವಶದಲ್ಲಿದೆ. ಹುಲ್ಲು ಮೇಯಿಸುವ ಸಲುವಾಗಿ ಪ್ರತಿವರ್ಷವೂ ಅದನ್ನು ಹಳ್ಳಿಗರಿಗೆ ಮಾರಲಾಗುತ್ತದೆ; ಅದನ್ನು ಬೇರೆ ಯಾವುದೇ ಉದ್ದೇಶಕ್ಕೂ ಮಂಜೂರು ಮಾಡುವಂತಿಲ್ಲ. ಏಕೆಂದರೆ ಹಳ್ಳಿಯಲ್ಲಿನ ಉಳಿದ ಗೋಮಾಳದ ಪ್ರದೇಶ ಅವರ ಅಗತ್ಯಗಳಿಗೆ ಸಾಕಾಗುವಷ್ಟು ಇಲ್ಲ.

ಜೊತೆಗೆ ನಾನು ಈ ಮಾತನ್ನೂ ಹೇಳಬಹುದು: ಪಿಂಪ್ಲಾದ್ ಮತ್ತು ರಾಜೂರ್–ಬಬೂಲಾ ಗ್ರಾಮಗಳಲ್ಲಿನ ಸುಮಾರು ೨೦೦ ಎಕರೆಗಳಷ್ಟು ಪ್ರದೇಶವನ್ನೊಳಗೊಂಡಿರುವ ೧೧ ಸರ್ವೇ ನಂಬರುಗಳು ಮಾತ್ರವೇ ಕೃಷಿಗಾಗಿ ಬಿಟ್ಟುಕೊಡಲು ಲಭ್ಯವಾಗಿದ್ದುವು. ಹೀಗಾಗಿ ಅವುಗಳ ನಿರ್ಧಾರಿತ ಮೌಲ್ಯದ ೧೨ ಪಟ್ಟಿನಷ್ಟು ಮೌಲ್ಯವನ್ನು ಕನಿಷ್ಠ ಬೆಲೆಯೆಂದು ನಿರ್ಧರಿಸಿ ಅದನ್ನು ಮಾರಾಟಕ್ಕೆ ಇಡಲಾಯಿತು. ಮಹಾರರು, ಭಿಲ್ಲರು ಮತ್ತು ಕೋಳಿಗಳನ್ನು ಹೊರತುಪಡಿಸಿ ಬೇರೆ ಯಾರೂ ಹರಾಜಿನಲ್ಲಿ ಭಾಗವಹಿಸಕೂಡದೆಂದು ಆದೇಶವನ್ನು ಹೊರಡಿಸಲಾಯಿತು. ಹಣವುಳ್ಳ ಜನರಿಂದ ಅನುಚಿತ ಸ್ಪರ್ಧೆ ಏರ್ಪಡುವುದನ್ನು ನಿವಾರಿಸುವ ಸಲುವಾಗಿ ಈ ಷರತ್ತನ್ನು ವಿಧಿಸಲಾಯಿತು. ಈಚೆಗಷ್ಟೇ ಅನುಮೋದಿಸಲಾದ ಮಾರಾಟದ ಕಾಗದ–ಪತ್ರಗಳು ಪಿಂಪ್ಲಾದ್ ಗ್ರಾಮದ ಇಬ್ಬರು ಕೋಳಿಗಳು ಮತ್ತು ಮೂವರು ಮಹಾರರು ಹಾಗೂ ರಾಜೂರ್–

ಬಬೂಲಾ ಗ್ರಾಮದ ಒಬ್ಬ ಕೋಳಿ ಮತ್ತು ಮೂವರು ಮಹಾರರು ಈ ಭೂಮಿಗಳ ಖರೀದಿಸಿದ್ದಾರೆ ಎಂಬುದನ್ನು ತೋರಿಸಿಕೊಡುತ್ತವೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXI ; ಪು. ೨೧೯, ದಿನಾಂಕ ೧ ಅಕ್ಟೋಬರ್ ೧೯೨೭)

## ಗೋಮಾಳಗಳು: ಥಾಣಾ ಜಿಲ್ಲೆ

ಡಾ. ಬಿ. ಆರ್. ಅಂಬೇಡ್ಕರ್ ಅವರ ಪರವಾಗಿ ಡಾ. ಪಿ. ಜಿ. ಸೋಳಂಕಿ: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ–

(ಅ) ೧೯೨೬ರ ವಿವಿಧ ಜ್ಞಾನ ವಿಸ್ತಾರದ ೩೭೨ ಮತ್ತು ೪೧೭ನೆಯ ಸಂಪುಟದಲ್ಲಿ ಪ್ರಕಟವಾಗಿರುವ ಮಾಹಿತಿಯತ್ತ ಸರ್ಕರದ ಗಮನ ಹರಿದಿದೆಯೆ?

(ಆ) ಹಾಗಿದ್ದಲ್ಲಿ ಇಂಥ ವರ್ಕಾಗಳನ್ನು ಅಥವಾ ಗೋಮಾಳಗಳನ್ನು ಕಂದಾಯ ನಿರ್ಧಾರಣೆಯಿಂದ ಮುಕ್ತವಾಗಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂದು ಉದ್ದೇಶಿಸಿದೆ?

(ಇ) ಥಾಣಾ ಜಿಲ್ಲೆಯ ಬದ್ಲಾಪುರ ಗ್ರಾಮದಲ್ಲಿನ ಅರಣ್ಯಭೂಮಿಗಳಿಂದ ದೊರೆಯುತ್ತಿರುವ ಆದಾಯ ಹೋಲಿಕೆಯಲ್ಲಿ ತೀರಾ ಕಡಿಮೆಯಾಗಿರುವುದರಿಂದ ಆ ಅರಣ್ಯ ಭೂಮಿಗಳನ್ನು ಕೃಷಿ ಮತ್ತು ಗೋಮಾಳದ ಉದ್ದೇಶಗಳಿಗಾಗಿ ಬಿಟ್ಟುಕೊಡಲು ಸರ್ಕಾರ ಉದ್ದೇಶಿಸಿದೆಯೇ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು:

(ಅ) ಸನ್ಮಾನ್ಯ ಸದಸ್ಯರು ಈ ಪ್ರಶ್ನೆಯ ಬಗ್ಗೆ ಮುನ್ಸೂಚನೆಯನ್ನು ಕೊಟ್ಟಾಗ ಮಾತ್ರವೆ.

(ಬಿ) ಇಲ್ಲ.

(ಸಿ) ಇಲ್ಲ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXI ; ಪು. ೨೬೯–೭೦, ದಿನಾಂಕ ೧ ಅಕ್ಟೋಬರ್ ೧೯೨೭)

## ದಲಿತ ವರ್ಗಗಳಿಗಾಗಿ ಅರಣ್ಯ ಭೂಮಿಗಳು

ಡಾ. ಬಿ. ಆರ್. ಅಂಬೇಡ್ಕರ್: ಅವರ ಪರವಾಗಿ ಡಾ. ಪಿ. ಜಿ. ಸೋಳಂಕಿ: ಸರಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ–

(ಅ) ದಲಿತ ವರ್ಗಗಳಲ್ಲಿ ನಿರುದ್ಯೋಗ ಅಗಾಧ ಪ್ರಮಾಣದಲ್ಲಿದೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೆ?

(ಆ) ಅಸ್ಪೃಶ್ಯತೆಯ ಪದ್ಧತಿಯಿಂದಾಗಿ ದಲಿತ ವರ್ಗಗಳಿಗೆ ಅನೇಕ ವೃತ್ತಿಗಳು ಮುಚ್ಚಿಹೋಗಿರುವುದರಿಂದ, ಮೈಸೂರು ಸರ್ಕಾರ ಮಾಡಿರುವಂತೆ ಅರಣ್ಯಭೂಮಿಯ ಪ್ರದೇಶಗಳು ಲಭ್ಯವಿರುವಲ್ಲೆಲ್ಲ ದಲಿತ ವರ್ಗಗಳ ಅಧಿವಸತಿಯನ್ನು ರೂಪಿಸುವ ಪ್ರಶ್ನೆಯನ್ನು ಸರ್ಕಾರ ಪರಿಗಣಿಸಲು ಉದ್ದೇಶಿಸಿವೆಯೆ?

(ಇ) ಅರಣ್ಯ ಭೂಮಿ ನೀಡಿಕೆಯಲ್ಲಿ ದಲಿತ ವರ್ಗಗಳ ಅರ್ಜಿದಾರರಿಗೆ ಪ್ರಾಶಸ್ತ್ಯವನ್ನು ಕೊಡಬೇಕೆಂದು ಸರ್ಕಾರ ಉದ್ದೇಶಿಸಿದೆಯೆ?

ಸನ್ಮಾನ್ಯರಾದ ಶ್ರೀ ಬಿ. ಜಿ. ಪ್ರಧಾನ್ ಅವರು: (ಅ) ಇಲ್ಲ.

(ಆ) ಮೂರು ಖಾನ್ ದೇಶ ವಿಭಾಗಗಳಲ್ಲಿ ಈಗಾಗಲೇ ಅಂಥ ಅಧಿವಸತಿಯನ್ನು ರೂಪಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಿದಲ್ಲಿ ಹಾಗೂ ಅರಣ್ಯಗಳಲ್ಲಿ ಸೂಕ್ತ ಭೂ–ಪ್ರದೇಶಗಳು ಲಭ್ಯವಿದ್ದಲ್ಲಿ ಹೆಚ್ಚಿನ ಅಧಿವಸತಿಗಳನ್ನು ರೂಪಿಸುವ ಸಾಧ್ಯತೆಗಳನ್ನು ಪರಿಗಣಿಸಲಾಗುವುದು.

(ಇ) ಅರಣ್ಯ ಭೂಮಿಗಾಗಿ ದಲಿತ ವರ್ಗಗಳವರು ಸಲ್ಲಿಸುವ ಅರ್ಜಿಗಳನ್ನು ಅನುಕೂಲಕರವಾಗಿ ಪರಿಗಣಿಸಲಾಗುತ್ತದೆ; ಆದರೆ, ಪ್ರಾಶಸ್ತ್ಯ ನೀಡಿಕೆಯ ಯಾವುದೇ ಭರವಸೆಯನ್ನು ಕೊಡಲಾಗುವುದಿಲ್ಲ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXIV; ಪು. ೨೮೭, ದಿನಾಂಕ ೨೯ ಸೆಪ್ಟಂಬರ್ ೧೯೨೮)

## ಸರ್ಕಾರಿ ನೌಕರರು: ವೇತನಗಳು ಮತ್ತು ಪಿಂಚಣಿಗಳು

ಡಾ. ಬಿ. ಆರ್. ಅಂಬೇಡ್ಕರ್: ೧೯೨೭–೨೮ರಲ್ಲಿ (ಅಥವಾ ಅಂಕಿ–ಅಂಶಗಳು ಲಭ್ಯವಿರುವ ಅದಕ್ಕಿಂಥ ಹಿಂದಿನ ಯಾವುದೇ ವರ್ಷ) ಸರ್ಕಾರ (ಸರ್ಕಾರಿ ನೌಕರರ ವೇತನಾದಿಗಳು ಮತ್ತು ಪಿಂಚಣಿಗಳಿಗೆ) ಸಂದಾಯ ಮಾಡಿರುವ ಒಟ್ಟು ಮೊತ್ತ ಎಷ್ಟು ಎಂಬುದನ್ನು ಸರ್ಕಾರ ದಯವಿಟ್ಟು ತಿಳಿಸುತ್ತದೆಯೆ?

(i) ಅಧೀನ ಮತ್ತು ಕರಣಿಕ ಸೇವೆಗಳಲ್ಲಿನ ತನ್ನ ಖಾಯಂ ನೌಕರರ ವೇತನಾದಿಗಳಿಗೆ.
(ii) ತನ್ನ ಅಧೀನ ಮತ್ತು ಕರಣಿಕ ಸೇವೆಗಳಲ್ಲಿದ್ದ ನೌಕರರ ಪಿಂಚಣಿಗಳಿಗೆ.

ಸನ್ಮಾನ್ಯರಾದ ಶ್ರೀ ಜೆ. ಬಿ. ಪ್ರಧಾನ್ ಅವರು: (i) ಖಾಯಂ ಮತ್ತು ಹಂಗಾಮಿ ಸಿಬ್ಬಂದಿಗಳಿಗೆ ಮಾಡಲಾದ ವೆಚ್ಚದ ಬಗೆಗಿನ ವಿವರಗಳು ಪ್ರತ್ಯೇಕವಾಗಿ ಲಭ್ಯವಿಲ್ಲ. (ಸುಮಾರು ೨೫ ಲಕ್ಷ ರೂ.ಗಳ ವೆಚ್ಚದ) ಸೇವಕ ಸಿಬ್ಬಂದಿಯ ಬಗೆಗಿನ ವೆಚ್ಚವನ್ನು ಹೊರತುಪಡಿಸಿ, ತನ್ನ ಅಧೀನ ಸಿಬ್ಬಂದಿಯ ವೇತನಾದಿಗಳಿಗೆ ೧೯೨೫–೨೬ರಲ್ಲಿ ಈ ಪ್ರಾಂತ್ಯದ ಸರ್ಕರ ವೆಚ್ಚ ಮಾಡಿರುವ ಒಟ್ಟು ಮೊತ್ತ ೨೯೬ ಲಕ್ಷ ರೂ.ಗಳು.

(ii) ವಿವಿಧ ವರ್ಗಗಳ ಸಿಬ್ಬಂದಿಗಳಿಗೆ ಮಾಡಲಾದ ವೆಚ್ಚದ ಬಗೆಗಿನ ಅಂಕಿ–ಅಂಶಗಳು ಪ್ರತ್ಯೇಕವಾಗಿ ಸುಲಭ–ಲಭ್ಯವಾಗಿಲ್ಲದೆ ಇರುವುದರಿಂದ, ಕೋರಿರುವ ಮಾಹಿತಿಯನ್ನು ಒದಗಿಸಲು ಸಾಧ್ಯವಿಲ್ಲದೆ ಇರುವುದಕ್ಕಾಗಿ ಸರ್ಕಾರ ವಿಷಾದಿಸುತ್ತದೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXIV; ಪು. ೨೮೭, ದಿನಾಂಕ ೨೯ ಸೆಪ್ಟೆಂಬರ್ ೧೯೨೮)

## ಸರ್ಕಾರಿ ನೌಕರರು: ಪದವೀಧರರ ಆರಂಭ ವೇತನ

ಡಾ. ಬಿ. ಆರ್. ಅಂಬೇಡ್ಕರ್: ಅವರ ಪರವಾಗಿ ಡಾ. ಪಿ. ಜಿ. ಸೋಳಂಕಿ:
ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ.

(ಅ) ಮುಂಬಯಿ ನಗರದಲ್ಲಿ ಪದವೀಧರರ ಆರಂಭ ವೇತನದ ಬಗ್ಗೆ ಮಾಹಿತಿಯನ್ನು ಕೋರಿ ಶ್ರೀ ಎಸ್. ಕೆ. ಬೋಳೆ ಅವರು ಪರಿಷತ್ತಿನಲ್ಲಿ ಪ್ರಶ್ನೆಯೊಂದನ್ನು ಕೇಳಿದ್ದರು ಎಂಬುದು ವಾಸ್ತವ ಸಂಗತಿಯೆ?

(ಆ) ಯಾವ ಕಛೇರಿಗಳಲ್ಲಿ ಸಿಬ್ಬಂದಿಯನ್ನು "ಮೇಲಿನ ಮತ್ತು ಕೆಳಗಿನ ಶ್ರೇಣಿಗಳು" ಎಂದು ವಿಭಜಿಸಲಾಗಿದೆಯೋ ಅಂಥ ಕಛೇರಿಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಪದವೀಧರರ ಆರಂಭವೇತನ ೯೦ ರೂ.ಗಳೆಂದು ಸರ್ಕಾರ ಗೊತ್ತುಪಡಿಸಿತ್ತೆಂಬುದು, ಸರ್ಕಾರದ ಗೊತ್ತುವಳಿ ಹಣಕಾಸು ಇಲಾಖೆ ಕ್ರಮಾಂಕ ೧೧೪೦, ದಿನಾಂಕ ೨೫ ಮಾರ್ಚ್ ೧೯೨೫ರ ಆದೇಶವನ್ನು ಸರ್ಕಾರ ಹೊರಡಿಸಿ ಅದರಂತೆ ಇಲಾಖಾ ಮುಖ್ಯಸ್ಥರಿಗೆ ನಿರ್ದೇಶನ ನೀಡಿತ್ತೆಂಬುದು ವಾಸ್ತವ ಸಂಗತಿಯೆ?

(ಇ) ಮೇಲೆ ಉಲ್ಲೇಖಿಸಿದ ಸರ್ಕಾರದ ಗೊತ್ತುವಳಿಯ ಮೂಲಕ ಮುಂಬಯಿ ನಗರದಲ್ಲಿ ಪದವೀಧರರಿಗೆ ೯೦ ರೂ.ಗಳ ಆರಂಭವೇತನವನ್ನು ಕೊಡಬೇಕೆಂದು ಇಲಾಖಾ ಮುಖ್ಯಸ್ಥರಿಗೆ ನಿರ್ದೇಶನ ನೀಡಲಾಗಿದ್ದರೂ ತಮ್ಮ ಅಧೀನದಲ್ಲಿರುವ ಇಲಾಖೆಗಳಲ್ಲಿ ಮೇಲಿನ ಮತ್ತು ಕೆಳಗಿನ ಶ್ರೇಣಿಗಳು ಇಲ್ಲದಿದ್ದರೂ ಕೇವಲ ೬೦ ರೂ.ಗಳ ವೇತನವನ್ನು ಮಾತ್ರ ಕೊಡುತ್ತಿದ್ದಾರೆಂಬುದು ವಾಸ್ತವ ಸಂಗತಿಯೆ?

(ಈ) ಗ್ರಾಮಾಂತರ ಪ್ರದೇಶಗಳಲ್ಲಿ ಪದವೀಧರರಿಗೆ ೭೦ ರೂ.ಗಳ ಆರಂಭ ವೇತನ ದೊರೆಯುತ್ತಿದೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೆ?

ಸನ್ಮಾನ್ಯ ಶ್ರೀ ಜಿ. ಬಿ. ಅವರು: (ಅ) ಹೌದು.

(ಆ) ಯಾವ ಕಛೇರಿಗಳಲ್ಲಿ ಸಿಬ್ಬಂದಿಯನ್ನು ಮೇಲಿನ ಮತ್ತು ಕೆಳಗಿನ ಶ್ರೇಣಿಗಳು ಎಂದು ವಿಭಜಿಸಲಾಗಿದೆಯೋ ಅಂಥ ಕಚೇರಿಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಎಲ್ಲ

ಪದವೀಧರರಿಗೂ ೯೦ ರೂ.ಗಳ ಆರಂಭ ವೇತನವನ್ನು ಪಾವತಿ ಮಾಡುವಂತೆ ಮುಂಬಯಿಯಲ್ಲಿನ ಎಲ್ಲ ಕಛೇರಿ ಮುಖ್ಯಸ್ಥರಿಗೆ ಅಧಿಕಾರವನ್ನು ಕೊಡಲಾಗಿದೆ ಎಂದು ಸರ್ಕಾರ ಉತ್ತರಿಸಿತ್ತು. ಸರ್ಕಾರದ ಗೊತ್ತುವಳಿ ಹಣಕಾಸು ಇಲಾಖೆ ಕ್ರಮಾಂಕ ೧೧೪೦ ದಿನಾಂಕ ೨೫ ಮಾರ್ಚ್ ೧೯೨೫ರ ಮೂಲಕ ಹಾಗೆಂದು ಆದೇಶವನ್ನು ಹೊರಡಿಸಲಾಗಿತ್ತು.

(ಇ) ಯಾವ ಕಛೇರಿಗಳಲ್ಲಿ ಸಿಬ್ಬಂದಿಯನ್ನು ಮೇಲಿನ ಮತ್ತು ಕೆಳಗಿನ ಶ್ರೇಣಿಗಳು ಎಂದು ವಿಭಜಿಸಲಾಗಿದೆಯೋ ಅಂಥ ಕಛೇರಿಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಪದವೀಧರರಿಗೆ ೯೦ ರೂ.ಗಳ ಮಾಹೆಯಾನ ಆರಂಭ ವೇತನವನ್ನು ಪರಿಷ್ಕೃತ ಕಾಲವೇತನ ಪ್ರಮಾಣದಲ್ಲಿ ಪಾವತಿ ಮಾಡಬೇಕೆಂದು ಸನ್ಮಾನ್ಯ ಸದಸ್ಯರು ಉಲ್ಲೇಖಿಸಿದ ಆದೇಶದಲ್ಲಿ ಕಛೇರಿಯ ಮುಖ್ಯಸ್ಥರುಗಳಿಗೆ ಸರ್ಕಾರ ಅಧಿಕಾರವನ್ನು ಕೊಟ್ಟಿದೆ. ಮೇಲೆ ಕಾಣಿಸಿರುವ ಆದೇಶದ ಅನುಸಾರ ಪದವೀಧರ ಗುಮಾಸ್ತರು ಅತ್ಯಾವಶ್ಯಕವೆಂದು ಮುಂಬಯಿಯ ಸಂಗ್ರಹಣಾಧಿಕಾರಿಗಳು ಭಾವಿಸಿದ ಸಂದರ್ಭಗಳಲ್ಲಿ ೯೦ ರೂ.ಗಳನ್ನು ಆರಂಭ ವೇತನವನ್ನು ಕೊಡುತ್ತಿದ್ದಾರೆ; ಇತರ ಪ್ರಕರಣಗಳಲ್ಲಿ ಅವರಿಗೆ ವಹಿಸಲಾಗಿರುವ ಕೆಲಸದ ಮಹತ್ವವನ್ನು ಅನುಸರಿಸಿ ೬೦ ರೂ.ಗಳಿಂದ ೯೦ ರೂ. ವೇತನವನ್ನು ಕೊಡಲಾಗುತ್ತಿದೆ.

(ಈ) ಹೌದು.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXV; ಪು. ೬೮೫, ದಿನಾಂಕ ೨೮ ಮಾರ್ಚ್ ೧೯೨೬)

## ಭೂಸ್ವಾಧೀನ: ಮೂಲ್‌ಶೀ ಅಣೆಕಟ್ಟು

ಡಾ. ಬಿ. ಆರ್. ಅಂಬೇಡ್ಕರ್ ಅವರ ಪರವಾಗಿ ಡಾ. ಪಿ. ಜಿ. ಸೋಳಂಕಿ: ಸರ್ಕಾರ ದಯವಿಟ್ಟು ಈ ವಿಚಾರಗಳನ್ನು ತಿಳಿಸುತ್ತದೆಯೆ–

(ಅ) ಮೂಲ್‌ಶೀ ಅಣೆಕಟ್ಟಿಗಾಗಿ ಸರ್ಕಾರ ಪುಣೆ ಜಿಲ್ಲೆಯ ಹವೇಲಿ ತಾಲ್ಲೂಕಿನ ಮೋಹರಿ ಮತ್ತು ವಡಗಾಂವ್ ಗ್ರಾಮಗಳ ಮಹಾರರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆಯೆ?

(ಆ) ಯಾವ ದರದ ಪ್ರಕಾರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ?

(ಇ) ಈ ಹಳ್ಳಿಗಳ ಮಹಾರರಿಗೆ ಭೂಮಿಯ ಬೆಲೆಯನ್ನು ಪಾವತಿ ಮಾಡಲಾಗಿದೆಯೆ?

ಸನ್ಮಾನ್ಯರಾದ ಶ್ರೀ ಜೆ. ಎಲ್. ರೀವ್ ಅವರು: (ಅ) ಹೌದು.

(ಅ) ಜಿರಾಯತು ಭೂಮಿಗೆ ಎಕರೆಗೆ ೫೦ ರೂ.ಗಳಂತೆ ಹಾಗೂ ತರಿ (ಬತ್ತ ಬೆಳೆಯುವ) ಭೂಮಿಗೆ ಎಕರೆಗೆ ೫೫೦ ರೂ.ಗಳಂತೆ.

(ಇ) ಅವು ಸೇವಾ–ಇನಾಮು ಭೂಮಿಗಳಾಗಿದ್ದುದರಿಂದ, ಕೊಡಮಾಡಿದ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಲಾಯಿತು. ಹಾಗೂ ಪರಿಹಾರದ ಒಟ್ಟಾರೆ ಮೊತ್ತದ ಶೇ. ೫೦ರಷ್ಟು ಮೊಬಲಗನ್ನು ವಾರ್ಷಿಕ ನಗದು ಭತ್ಯದ ರೂಪದಲ್ಲಿ ವತನದಾರ ಮಹಾರರಿಗೆ ಮಂಜೂರು ಮಾಡಲಾಯಿತು.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXV; ಪು. ೭೬೭, ದಿನಾಂಕ ೧ ಮಾರ್ಚ್ ೧೯೨೭)

## ಸ್ಥಳೀಯ ಮಂಡಳಿಗಳಿಗೆ ಸಹಾಯಾನುದಾನ

ಡಾ. ಬಿ. ಆರ್. ಅಂಬೇಡ್ಕರ್: ಅವರ ಪರವಾಗಿ ಡಾ. ಪಿ. ಜಿ. ಸೋಳಂಕಿ: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ?

(ಅ) ಸ್ಥಳೀಯ ಮಂಡಳಿಗಳಿಗೆ ಸಹಾಯಧನವನ್ನು ನೀಡುವ ಪ್ರಶ್ನೆಯನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶಕರು ಸುಮಾರು ३ ವರ್ಷಗಳಿಂದ ತಡೆದಿರಿಸಿದ್ದಾರೆ ಎಂಬುದು ವಾಸ್ತವ ಸಂಗತಿಯೆ?

(ಆ) ಹಾಗಿದ್ದರೆ ಈ ವಿಳಂಬಕ್ಕೆ ಯಾರು ಜವಾಬುದಾರರು?

(ಇ) ಈ ವಿಷಯದಲ್ಲಿ ಸರ್ಕಾರ ಯಾವ ಕ್ರಮಗಳನ್ನು (ಅಂಥದೇನಾದರೂ ಇದ್ದಲ್ಲಿ) ಉದ್ದೇಶಿಸಿದೆ?

ಸನ್ಮಾನ್ಯ ಮೌಲ್ವಿ ರಫಿಯುದ್ದೀನ್ ಅಹಮದ್ ಅವರು: (ಅ) ಪ್ರಾಥಮಿಕ ಶಿಕ್ಷಣಕ್ಕಾಗಿ ಸರ್ಕಾರ (ಜಿಲ್ಲೆಯ ಸ್ಥಳೀಯ ಮಂಡಳಿಗಳಿಗೆ ಅಥವಾ ಸ್ಥಳೀಯ ಪ್ರಾಧಿಕಾರಗಳಿಗೆ ವಾರ್ಷಿಕವಾಗಿ) ನೀಡುವ ಸಹಾಯಧನದ ವಿಚಾರವನ್ನು ಸನ್ಮಾನ್ಯ ಸದಸ್ಯರು ಉಲ್ಲೇಖಿಸುತ್ತಿದ್ದರೆ ನೀಡಲಾಗುವ ತಾತ್ಕಾಲಿಕ ಸಹಾಯ ಧನದ ಮೊತ್ತ ಲೆಕ್ಕ ಪರಿಶೀಲನೆಯ ತರುವಾಯ ಬಾಕಿ ಇದೆಯೆಂದು ಕಾಣಿಸಲಾಗುವ ವಾಸ್ತವಿಕ ಮೊತ್ತಕ್ಕಿಂತ ಬಹುತೇಕವಾಗಿ ಹೆಚ್ಚಾಗಿಯೇ ಇರುತ್ತದೆ. ಲೆಕ್ಕ ಪರಿಶೀಲನೆಯ ಆಕ್ಷೇಪಗಳನ್ನು ಮುಂದೆ ಪರಿಗಣನೆಗೆ ತೆಗೆದುಕೊಂಡಾಗ ಈ ವಾರ್ಷಿಕ ಸಹಾಯಧನದ ಬಗ್ಗೆ ಅಂತಿಮ ಹೊಂದಾಣಿಕೆಗಳನ್ನು ಮಾಡಲಾಗುತ್ತದೆ.

(ಆ) ಪ್ರಶ್ನೆ ಏಳುವುದೇ ಇಲ್ಲ.

(ಇ) ಪ್ರಚಲಿತ ಕ್ರಮದಲ್ಲಿ ಯಾವುದೇ ಬದಲಾವಣೆಯನ್ನು ಆಲೋಚಿಸಿಲ್ಲ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXV; ಪು. ೧೦೯೨, ದಿನಾಂಕ ೭ ಮಾರ್ಚ್ ೧೯೨೯)

## ಮುಂಬಯಿ ಪೌರನಿಗಮ–ಮೋರ್ ಲ್ಯಾಂಡ್ ರಸ್ತೆ

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ–

(ಅ) ಕಳೆದ ೧೫ ವರ್ಷಗಳ ಅವಧಿಯಲ್ಲಿ ಮೋರ್‌ಲ್ಯಾಂಡ್ ರಸ್ತೆಯನ್ನು ಮುಂಬಯಿ ಪೌರನಿಗಮ ಒಮ್ಮೆಯೂ ಸಂಪೂರ್ಣವಾಗಿ ಪುನರ್ ನಿರ್ಮಿಸಿಲ್ಲ ಎಂಬುದು ವಾಸ್ತವ ಸಂಗತಿಯೆ? ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

(ಆ) ಈ ವಿಷಯದಲ್ಲಿ ಸರ್ಕಾರ ಯಾವುದಾದರೂ ಕ್ರಮವನ್ನು ಕೈಗೊಳ್ಳಬೇಕೆಂದು ಉದ್ದೇಶಿಸಿದೆಯೆ?

(ಇ) ಈ ವಿಷಯದ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ಮತ್ತು ಪೌರನಿಗಮಕ್ಕೆ ಮನವಿಗಳ ಮೂಲಕ ಹಾಗೂ ಪತ್ರಿಕೆಗಳ ಮೂಲಕ ಮನವಿ ಸಲ್ಲಿಸಲಾಗಿದೆ ಎಂಬುದು ವಾಸ್ತವ ಸಂಗತಿಯೆ?

ಸನ್ಮಾನ್ಯರಾದ ದಿವಾನ್ ಬಹಾದುರ್ ಹರಿಲಾಲ್ ಡಿ. ದೇಸಾಯಿ ಅವರು: ಕಳೆದ ೧೫ ವರ್ಷಗಳ ಅವಧಿಯಲ್ಲಿ ಆ ರಸ್ತೆಯನ್ನು ರಿಪೇರಿ ಮಾಡಿಯೇ ಇಲ್ಲ ಎಂಬುದು ವಾಸ್ತವ ಸಂಗತಿಯಲ್ಲ. ೧೯೧೪ರಿಂದ ೧೯೨೧ರ ನಡುವಣ ಅವಧಿಯಲ್ಲಿ ಈ ರಸ್ತೆಯನ್ನು ನಿಯತವಾಗಿ ರಿಪೇರಿ ಮಾಡಲಾಗಿದೆ. ೧೯೨೦–೨೧ರಲ್ಲಿ ಇಡೀ ರಸ್ತೆಯನ್ನು ರಿಪೇರಿ ಮಾಡಲಾಯಿತು. ರೂ. ೧೧,೬೪೦–೧೫–೩ಗಳ ವೆಚ್ಚದಲ್ಲಿ ಅದರ ಮೇಲ್ಮೈಗೆ ಟಾರಿನ ಪದರವನ್ನು ಹಚ್ಚಲಾಯಿತು. ೧೯೨೨ರಿಂದ ಈಚೆಗೆ ಗಣನೀಯ ಪ್ರಮಾಣದ ರಿಪೇರಿಗಳನ್ನು ಮಾಡಲಾಗಿಲ್ಲ. ಆದರೆ ರಸ್ತೆಯ ಮೇಲ್ಮೈಗೆ ವ್ಯಾಪಕವಾಗಿ ಖಂಡಶಃ ರಿಪೇರಿ ಅಥವಾ ತುಂಡು–ತುಂಡು ರಿಪೇರಿ ಕೆಲಸ ಮಾಡಲಾಗಿದೆ. ಸೀಮೆಂಟ್ ಕಾಂಕ್ರೀಟ್ ಬುನಾದಿಯ ಮೇಲೆ ಅಸ್ಫಾಲ್ಟ್ ಪದರಗಳನ್ನು ಹಾಕಿ ರಸ್ತೆಯನ್ನು ಪುನರ್–ನಿರ್ಮಿಸುವುದಕ್ಕೆ ನಿಗಮ ಒಪ್ಪಿಗೆಯನ್ನು ಕೊಟ್ಟಿದೆ ಹಾಗೂ ಕಾಲಾನುಕ್ರಮದಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

(ಆ) ಇಲ್ಲ

(ಇ) ನಿಗಮಕ್ಕೆ ದೂರುಗಳನ್ನು ಕೊಡಲಾಗಿದೆ.

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXV; ಪು. ೧೦೯೨, ದಿನಾಂಕ ೭ ಮಾರ್ಚ್ ೧೯೨೯)

## ಮಾಧ್ಯಮಿಕ ಶಾಲೆಗಳು: ಸಹಾಯಾನುದಾನ

ಡಾ. ಬಿ. ಆರ್. ಅಂಬೇಡ್ಕರ್ ಅವರ ಪರವಾಗಿ ಡಾ. ಪಿ. ಜಿ. ಸೋಳಂಕಿ: ಸರ್ಕಾರ ದಯವಿಟ್ಟು ಈ ವಿಚಾರವನ್ನು ತಿಳಿಸುತ್ತದೆಯೆ–

(ಅ) ಮಾಧ್ಯಮಿಕ ಶಾಲೆಗಳಲ್ಲಿ ವಾರ್ಷಿಕ ಅನುದಾನ ನೀಡಿಕೆಯನ್ನು ನಿರ್ಧರಿಸುವ ಆಧಾರವನ್ನು ಪುನರ್‌–ವ್ಯವಸ್ಥೆಗೊಳಿಸುವ ಪ್ರಶ್ನೆಯನ್ನು ಕಳೆದ ವರ್ಷ ಏಕೆ ಪರಿಗಣಿಸಿಲ್ಲ?

(ಆ) ನಿಯತವಾಗಿ ಸಹಾಯಧನವನ್ನು ಪಡೆಯುವ ದೃಷ್ಟಿಯಿಂದ ಸರ್ಕಾರದ ವಿಶೇಷ ಪರಿಗಣನೆಗೆ ಅರ್ಹರಾಗಿರುವಂಥ ಯಾವುದಾದರೂ ಶಾಲೆಗಳು ಈ ಪ್ರಾಂತ್ಯದಲ್ಲಿವೆಯೆ?

(ಇ) ಮಾಧ್ಯಮಿಕ ಶಾಲೆಗಳಿಗೆ ಸಹಾಯಧನ ನೀಡುವ ವಿಚಾರವನ್ನು ನಿರ್ಧರಿಸುವಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಅನಿವಾರ್ಯವಾಗಿ ಶೈಕ್ಷಣಿಕ ಪರಿಶೀಲಕರ ಪರಿಶೀಲನಾ ವರದಿಗಳನ್ನು ಮಾರ್ಗದರ್ಶಿಗಳನ್ನಾಗಿಸಿಕೊಳ್ಳುತ್ತಾರೆಯೆ? ಇಲ್ಲವಾದಲ್ಲಿ ಮಾಧ್ಯಮಿಕ ಶಾಲೆಗಳಿಗೆ ವಾರ್ಷಿಕ ಸಹಾಯಧನವನ್ನು ವಿತರಿಸಲು ಅವರು ಇರಿಸಿಕೊಂಡಿರುವ ಸಾಮಾನ್ಯ ಮಾನದಂಡ ಯಾವುದು?

(ಈ) ಇಲಾಖೆಯ ಮಾನದಂಡಗಳಿಗೆ ಅನುಗುಣವಾದ ದಕ್ಷತೆಯನ್ನು ಉಳಿಸಿಕೊಂಡು ಬರುವ ದೃಷ್ಟಿಯಿಂದ ಸಹಾಯಧನ ಪಡೆಯುವ ಅಥವಾ ಅನುದಾನಿತ ಶಾಲೆಗಳು ವಾರ್ಷಿಕವಾಗಿ ಯಾವುದಾದರೂ ಮಾನದಂಡ ಅಥವಾ ಆಧಾರವನ್ನು ಇರಿಸಿಕೊಂಡಿದೆಯೆ? ಇತ್ತ ಸಂವಾದಿ ವೆಚ್ಚವನ್ನು ಸರ್ಕಾರ ಯಾವ ಆಧಾರದ ಮೇಲೆ ಹಂಚಿಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ? ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಯಾವ ಕನಿಷ್ಠ ಅನುಪಾತದಲ್ಲಿ ಸರ್ಕಾರ ಮತ್ತು ಸಂಸ್ಥೆಗಳು ವೆಚ್ಚವನ್ನು ಹಂಚಿಕೊಳ್ಳುತ್ತವೆ?

(ಉ) ಕನಿಷ್ಠ ಎಷ್ಟು ವರ್ಷಗಳ ಅನಂತರ ಶಿಕ್ಷಣ ಇಲಾಖೆ ಮಾಧ್ಯಮಿಕ ಶಾಲೆಗಳಿಗೆ ನೋಂದಣಿಯನ್ನು ನೀಡುತ್ತದೆ.

(ಊ) ಐದು ವರ್ಷಗಳಿಗೂ ಹೆಚ್ಚು ಕಾಲದಿಂದ ಕೆಲಸ ಮಾಡುತ್ತ ಬಂದಿರುವ ಹಾಗೂ ಸಹಾಯಾನುದಾನಕ್ಕಾಗಿ ಖಾಯಂ ನೋಂದಣಿಯನ್ನು ಇನ್ನೂ ನೀಡಲಾಗದಿರುವ ಮಾಧ್ಯಮಿಕ ಶಾಲೆಗಳ ಸಂಖ್ಯೆ ಎಷ್ಟು?

ಸನ್ಮಾನ್ಯರಾದ ಮೌಲ್ವಿ ರಫಿಯುದ್ದೀನ್ ಅಹಮದ್ ಅವರು: (ಅ) ಯಾವ ಆಧಾರದ ಮೇಲೆ ಮಾಧ್ಯಮಿಕ ಶಾಲೆಗಳಿಗೆ ಸಹಾಯಧನ ನೀಡಬೇಕೆಂದು ನಿರ್ಧರಿಸಲಾಗುತ್ತಿದೆಯೋ ಆ ಆಧಾರ ಸಮರ್ಪಕವಾಗಿಯೆಂದು ಸರ್ಕಾರಕ್ಕೆ ಸಾಮಾನ್ಯವಾಗಿ ತೃಪ್ತಿಯಾಗಿತ್ತು.

(ಆ) ಹೌದು.

(ಇ) ಸಹಾಯಾನುದಾನ ಸಂಹಿತೆಯಲ್ಲಿ ನಿಗದಿಪಡಿಸಲಾಗಿರುವ ತತ್ವಗಳಿಗನುಸಾರವಾಗಿ ಸಹಾಯಧನವನ್ನು ನಿರ್ಧರಿಸಲಾಗುತ್ತದೆ. ಸಹಾಯಾನುದಾನ ಸಂಹಿತೆಯ ಅಗತ್ಯಗಳನ್ನು ನಿರ್ದಿಷ್ಟ ಶಾಲೆಯೊಂದು ಎಷ್ಟರಮಟ್ಟಿಗೆ ಪೂರೈಸುತ್ತದೆ ಎಂಬುದರ ಬಗ್ಗೆ ತಮ್ಮ ಅಂದಾಜನ್ನು ನಿರೂಪಿಸಿದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಪರಿಶೀಲಕ ಸಿಬ್ಬಂದಿಯ ವರದಿಗಳೇ ಅನಿವಾರ್ಯ ಮಾರ್ಗದರ್ಶಿಗಳಾಗಿರುತ್ತವೆ. ಹೀಗಾಗಿ ಉತ್ತರ ಭಾಗದಲ್ಲಿನ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಸಹಾಯಧನಕ್ಕಾಗಿ ವೆಚ್ಚವನ್ನು ನಿರ್ಧರಿಸುವಲ್ಲಿ ತಲಾವಾರು ವೆಚ್ಚದ ನಿರ್ದಿಷ್ಟ ಮಾನದಂಡವಾಗುವುದನ್ನು ಅನುಸರಿಸಲಾಗುತ್ತಿಲ್ಲ. ಈ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿರುವ ನಿಧಿ ಅವಕಾಶ ಮಾಡಿಕೊಡುವ ಷರತ್ತಿಗೆ ಒಳಪಟ್ಟು ಅಗತ್ಯಗಳನ್ನು ಪೂರೈಸುವ ಎಲ್ಲ ಶಾಲೆಗಳಿಗೆ ಸಹಾಯಧನ ನೀಡಲು ಮೂರನೆಯ–ಒಂದು ಭಾಗದ ದರದಲ್ಲಿ ಸಹಾಯಧನ ನೀಡಲು ಸಹಾಯಾನುದಾನ ಸಂಹಿತೆಯಲ್ಲಿ ನಿಗದಿಪಡಿಸಲಾಗಿರುವ ವ್ಯವಸ್ಥೆ ಅವಕಾಶ ಮಾಡಿಕೊಡುತ್ತದೆ.

(ಉ) ಕನಿಷ್ಠ ವರ್ಷಗಳ ಪ್ರಮಾಣವನ್ನೇನೂ ನಿಗದಿಪಡಿಸಿಲ್ಲ. ನಿಧಿಯ ಕೊರತೆಯಿಂದಾಗಿ ಹೆಚ್ಚಿನ ಶಾಲೆಗಳ ನೋಂದಣಿಯನ್ನು ತಡೆಹಿಡಿಯಲಾಗಿದೆ.

(ಊ) ಸುಮಾರು ೧೧೦ ಶಾಲೆಗಳಿಗೆ,

*(ಮುಂಬಯಿ ವಿಧಾನ ಪರಿಷತ್ ಚರ್ಚೆಗಳು
ಸಂ. XXV III ; ಪು. ೫೮೫–೮೬, ದಿನಾಂಕ ೨೭ ಫೆಬ್ರುವರಿ ೧೯೩೦)

## ಅನುಬಂಧ–೩

## ವಿಶ್ವವಿದ್ಯಾನಿಲಯ ಸುಧಾರಣೆಗಳ ಸಮಿತಿ

### *ಪ್ರಶ್ನಾವಳಿ
### ಮುಂಬೈ ಪ್ರಾಂತ್ಯದಲ್ಲಿ ವಿಶ್ವವಿದ್ಯಾನಿಲಯ ಸುಧಾರಣೆ ಬಗ್ಗೆ

(ಮುಂಬಯಿ ವಿಶ್ವವಿದ್ಯಾನಿಲಯದ ಸುಧಾರಣೆಯ ಸಮಸ್ಯೆಯನ್ನು ಆಮೂಲಾಗ್ರವಾಗಿ ನೋಡುವ ಸಲುವಾಗಿ ಮುಂಬಯಿ ಸರ್ಕಾರ ಸಮಿತಿಯೊಂದನ್ನು ನೇಮಿಸಿತ್ತು. ೧೩ ಮಂದಿ ಸದಸ್ಯರನ್ನೊಳಗೊಂಡಿದ್ದ ಆ ಸಮಿತಿಗೆ ಸರ್ ಚಿಮಣ್ ಲಾಲ್ ಎಚ್. ಸೆಟಲ್ವಾಡ್ ಅವರು ಅಧ್ಯಕ್ಷರಾಗಿದ್ದರು. ಡಾ. ಅಂಬೇಡ್ಕರ್ ಅವರು ಈ ಸಮಿತಿಯ ಸದಸ್ಯರಾಗಿರಲಿಲ್ಲ. ಆದರೆ ೫೪ ಪ್ರಶ್ನೆಗಳ ಒಂದು ಪ್ರಶ್ನಾವಳಿಯನ್ನು ಸಮಿತಿ ಯಾವ ೧೨೧ ಮಂದಿಗೆ ಕಳಿಸಿಕೊಟ್ಟಿತ್ತೋ ಅವರಲ್ಲಿ ಅವರೂ ಒಬ್ಬರಾಗಿದ್ದರು. ಉತ್ತರಿಸಲು ಅರ್ಹವಾಗಿದ್ದಂಥವೆಂದು ತಾವು ಭಾವಿಸಿದ್ದ ಕೆಲವು ಪ್ರಶ್ನೆಗಳಿಗೆ ಮಾತ್ರವೇ ಡಾ. ಅಂಬೇಡ್ಕರ್ ಅವರು ಉತ್ತರಿಸಿದ್ದರು. ಡಾ. ಅಂಬೇಡ್ಕರ್ ಅವರು ಉತ್ತರಿಸಿದ್ದಂಥ ಪ್ರಶ್ನೆಗಳನ್ನು ಮಾತ್ರವೇ ಇಲ್ಲಿ ಕೊಡಲಾಗಿದೆ. ಇದರ ಅನಂತರ ಅವರ ಉತ್ತರ ಬರುತ್ತದೆ. –ಸಂಪಾದಕ)

೧. ನಿಮ್ಮ ಅಭಿಪ್ರಾಯದಲ್ಲಿ, ಮುಂಬಯಿ ಪ್ರಾಂತ್ಯದಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣದ ಧ್ಯೇಯ ಮತ್ತು ಕಾರ್ಯಗಳು ಏನಾಗಿರಬೇಕು? ಈ ಪ್ರಾಂತ್ಯದಲ್ಲಿನ ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಚಲಿತ ವ್ಯವಸ್ಥೆ ಈ ಪ್ರಾಂತ್ಯದಲ್ಲಿನ ತರುಣ ಭಾರತೀಯರಿಗೆ ಆ ಧ್ಯೇಯವನ್ನು ಸಾಧಿಸಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ ಎಂಬುದಾಗಿ ನೀವು ಪರಿಗಣಿಸಿದ್ದೀರಾ? ಇಲ್ಲವಾದಲ್ಲಿ ಯಾವ ಪ್ರಮುಖ ರೀತಿಗಳಲ್ಲಿ ಪ್ರಚಲಿತ ವ್ಯವಸ್ಥೆ ನ್ಯೂನತೆಗಳನ್ನೊಳಗೊಂಡಿದೆ ಎಂಬುದಾಗಿ ನೀವು ಪರಿಗಣಿಸಿದ್ದೀರಿ?

೨. ನೀವು ಎತ್ತಿ ತೋರಿಸುವ ದೋಷಗಳು ಮುಖ್ಯವಾಗಿ (ಅ) ಬೋಧಕರ ಅಥವಾ ವಿದ್ಯಾರ್ಥಿಗಳ ಮನೋಧರ್ಮ ಮತ್ತು ವಿಧಾನಗಳಲ್ಲಿಯೆ ಅಡಗಿವೆಯೇ ಅಥವಾ ಅವುಗಳಿಂದ ಮೂಡಿಬಂದಿವೆಯೇ?

(ಆ) ವಿದ್ಯಾರ್ಥಿಯು ವಿಶ್ವವಿದ್ಯಾಲಯವನ್ನು ಪ್ರವೇಶಿಸುವುದಕ್ಕೆ ಮೊದಲಿನ ಶಿಕ್ಷಣದ ಪರಿಸ್ಥಿತಿಗಳಲ್ಲಿ ಅಡಗಿದೆಯೇ ಅಥವಾ ಅವುಗಳಿಂದ ಮೂಡಿಬಂದಿವೆಯೇ ಅಥವಾ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಅಥವಾ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಡಗಿದೆ ಅಥವಾ ಅದರಿಂದ ಮೂಡಿಬಂದಿದೆ ಎಂಬುದಾಗಿ ನೀವು ಪರಿಗಣಿಸಿದ್ದೀರಾ?

---

*(ವಿಶ್ವವಿದ್ಯಾನಿಲಯದ ಸುಧಾರಣೆಗಾಗಿ ಸರ್ಕಾರ ನೇಮಿಸಿದ ಸಮಿತಿಯ ವರದಿ
೧೯೨೫–೨೬; ಪು.೨.............

೩. ನಿಮ್ಮ ಅಭಿಪ್ರಾಯದಲ್ಲಿ ಈ ಪ್ರಾಂತ್ಯದ ಅಭಿಪ್ರಾಯದಲ್ಲಿ ವಿವಿಧ ಸಮುದಾಯಗಳ ಇತಿಹಾಸ ಮತ್ತು ಸಂಸ್ಕೃತಿಯ ಜ್ಞಾನವನ್ನು ಪರಸ್ಪರ ಆಸಕ್ತಿಯನ್ನು ಮತ್ತು ಸಹಾನುಭೂತಿಯನ್ನು ವಿಶ್ವವಿದ್ಯಾನಿಲಯ ಎಷ್ಟರಮಟ್ಟಿಗೆ ಅಭಿವೃದ್ಧಿಪಡಿಸಿದೆ? ಇವನ್ನು ಹೇಗೆ ಮತ್ತಷ್ಟು ಅಭಿವೃದ್ಧಿಪಡಿಸಬಹುದು ಎಂಬುದಕ್ಕೆ ನೀವು ಮಾರ್ಗೋಪಾಯಗಳನ್ನು ಸೂಚಿಸಬಲ್ಲಿರಾ?

## II. ಮಾಧ್ಯಮಿಕ ಮತ್ತು ಪದವಿಪೂರ್ವ (ಇಂಟರ್‌ಮೀಡಿಯೆಟ್) ಶಿಕ್ಷಣ (ಪ್ರಶ್ನೆಗಳು–೪–೭)

೪. ನಮ್ಮ ಪ್ರೌಢಶಾಲೆಗಳಿಂದ ಹೊರಬರುವ ವಿದ್ಯಾರ್ಥಿಗಳ ತರಬೇತಿ ಮತ್ತು ಸಾಧನೆಗಳು ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಪ್ರವೇಶಿಸುವುದಕ್ಕೆ ಸಾಕಾಗಿದೆಯೆಂದು ನೀವು ಪರಿಗಣಿಸಿದ್ದೀರಾ? ಈ ಸಿದ್ಧತೆ ಅಪೂರ್ಣವಾಗಿದೆ ಎಂದು ಪರಿಗಣಿಸುವುದಾದರೆ ಸಧ್ಯದ ಸ್ಥಿತಿಗತಿಗಳನ್ನು ಸುಧಾರಿಸಲು ನೀವು ಯಾವುದಾದರೂ ಸೂಚನೆಗಳನ್ನು ಕೊಡಬಯಸುತ್ತೀರಾ?

೫. ಈ ಪ್ರಾಂತ್ಯದಲ್ಲಿ (ಅ) ಪ್ರೌಢಶಾಲೆಗಳ ಮತ್ತು ವಿಶ್ವವಿದ್ಯಾನಿಲಯ ನಡುವೆ ಮಧ್ಯವರ್ತಿಯಾಗಿ ಶಿಕ್ಷಣ ಸಂಸ್ಥೆಗಳ ಒಂದು ಹೊಸ ಸರಣಿಯನ್ನೂ (ಆ) ಕಲ್ಕತ್ತ ವಿಶ್ವವಿದ್ಯಾನಿಲಯ ಆಯೋಗ ಪ್ರಸ್ತಾವಿಸಿರುವಂಥ ಮಾಧ್ಯಮಿಕ ಮತ್ತು ಪದವಿಪೂರ್ವ (ಇಂಟರ್‌ಮೀಡಿಯೆಟ್) ಶಿಕ್ಷಣದ ಒಂದು ಹೊಸ ಮಂಡಳಿಯನ್ನು ಸೃಷ್ಟಿಸುವುದು ಅಗತ್ಯ ಅಥವಾ ಅಪೇಕ್ಷಣೀಯವೆಂದು ನೀವು ಪರಿಗಣಿಸುತ್ತೀರಾ? ಹಾಗಿದ್ದಲ್ಲಿ ಅಂಥ ಸಂಸ್ಥೆಗಳನ್ನು ಮತ್ತು ಅಂಥ ಮಂಡಳಿಯನ್ನು ಯಾವ ರೀತಿಯಲ್ಲಿ ರಚಿಸಬೇಕು ಹಾಗೂ ಹಣಕಾಸನ್ನು ಒದಗಿಸಬೇಕು?

೬. ಪದವಿಪೂರ್ವ (ಇಂಟರ್‌ಮೀಡಿಯೆಟ್) ಮಂಡಳಿಯೊಡನೆ ಅಥವಾ ಅದಿಲ್ಲದೆಯೇ ಪದವಿಪೂರ್ವ (ಇಂಟರ್‌ಮೀಡಿಯೆಟ್) ಶಿಕ್ಷಣ ಸಂಸ್ಥೆಗಳು ಅನಗತ್ಯ ಅಥವಾ ಅನಪೇಕ್ಷಣೀಯವೆಂದು ನೀವು ಪರಿಗಣಿಸುವುದಾದರೆ ಅವುಗಳು ಇಲ್ಲದೆಯೇ ಈ ಪ್ರಾಂತ್ಯದಲ್ಲಿನ ಈಗಿರುವ ಪ್ರೌಢಶಾಲಾ ಶಿಕ್ಷಣದ ಮಟ್ಟ, ವ್ಯಾಪ್ತಿ ಮತ್ತು ಗುಣಮಟ್ಟವನ್ನು ಸುಧಾರಿಸಲು ಹೇಗೆ ಸಾಧ್ಯ?

೭. ತನ್ನ ಬಳಿಗೆ ಪ್ರವೇಶಕ್ಕಾಗಿ ವಿದ್ಯಾರ್ಥಿಗಳನ್ನು ಕಳಿಸುವ ಸಂಸ್ಥೆಗಳ ಗುಣಮಟ್ಟವನ್ನು ಅತ್ಯುತ್ತಮ ರೀತಿಯಲ್ಲಿ ಕಾಪಾಡಿಕೊಂಡು ಬರಲು ವಿಶ್ವವಿದ್ಯಾನಿಲಯಕ್ಕೆ ಹೇಗೆ ಸಾಧ್ಯವಾದೀತು?

## III. ಮುಂಬಯಿ ವಿಶ್ವವಿದ್ಯಾನಿಲಯದ ಕೆಲಸ–ಕಾರ್ಯಗಳು (ಪ್ರಶ್ನೆಗಳು: ೮–೧೩)

(ಅ) ಬೋಧನೆ (ಪ್ರಶ್ನೆಗಳು ೮–೧೩)

೮. ಮುಂಬಯಿ ವಿಶ್ವವಿದ್ಯಾನಿಲಯವನ್ನು ಬೋಧನ–ಪ್ರಧಾನ ವಿಶ್ವವಿದ್ಯಾನಿಲಯವನ್ನಾಗಿಸುವ ದೃಷ್ಟಿಯಿಂದ ಮುಂಬಯಿ ವಿಶ್ವವಿದ್ಯಾನಿಲಯದ ಕೆಲಸ–ಕಾರ್ಯಗಳನ್ನು ಯಾವ ದಿಕ್ಕುಗಳಲ್ಲಿ ವಿಸ್ತರಿಸುವುದು ನಿಮ್ಮ ವಿವೇಚನೆಯ ಪ್ರಕಾರ ಅಗತ್ಯ, ಕಾರ್ಯಸಾಧ್ಯ ಮತ್ತು ಸೂಕ್ತ?

೯. ಸ್ನಾತಕೋತ್ತರ ಬೋಧನೆಯ ಜೊತೆಗೆ ಪದವಿಪೂರ್ವ ಶಿಕ್ಷಣದಲ್ಲಿಯೂ ವಿಶ್ವವಿದ್ಯಾನಿಲಯದ

ಮತ್ತು ಇತರ ಪ್ರಚಲಿತ ಶಿಕ್ಷಣ ಸಂಸ್ಥೆಗಳ ಬೋಧನ ಕಾರ್ಯಗಳನ್ನು ನೀವು ಯಾವ ರೀತಿಯಲ್ಲಿ ಸಮನ್ವಯಗೊಳಿಸುತ್ತೀರಿ ಹಾಗೂ ಸಂಘಟಿಸುತ್ತೀರಿ?

೧೦. ಸ್ನಾತಕಪೂರ್ವ ಶಿಕ್ಷಣದಲ್ಲಿ ವಿಶ್ವವಿದ್ಯಾನಿಲಯವು ಯಾವುದೇ ನೇರವಾದ ಪಾತ್ರ ವಹಿಸಬಾರದೆಂದು ನೀವು ಭಾವಿಸಿದಲ್ಲಿ ಯಾವ ರೀತಿಯಲ್ಲಿ ಸೂಕ್ತ ಸಂಘಟನೆಯ ಮೂಲಕ ಸ್ನಾತಕಪೂರ್ವ ಅಧ್ಯಯನದ ಪ್ರಚಲಿತ ಸೌಕರ್ಯಗಳನ್ನು ಅತ್ಯುತ್ತಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ?

## IV. ಪ್ರಾಂತ್ಯದಲ್ಲಿ ಹೆಚ್ಚಿನ ವಿಶ್ವವಿದ್ಯಾನಿಲಯಗಳು
## (ಪ್ರಶ್ನೆಗಳು: ೨೫–೩೦)

೨೫. ಮುಂಬಯಿ ಪ್ರಾಂತ್ಯದಲ್ಲಿ ಯಾವುದೇ ಹೆಚ್ಚಿನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು ಅಪೇಕ್ಷಣೀಯವೆ? ಈ ಪ್ರಾಂತದಲ್ಲಿ ಉನ್ನತ ಶಿಕ್ಷಣದ ಯಾವ ಕೇಂದ್ರಗಳು

(ಅ) ವಿಶ್ವವಿದ್ಯಾನಿಲಯಗಳಾಗಿ ತುರ್ತು ವಿಸ್ತರಣೆಯನ್ನು ಪಡೆಯಲು ಪಕ್ವವಾಗಿವೆ?

(ಆ) ನಿಕಟ ಭವಿಷ್ಯದಲ್ಲಿ ಪಕ್ವವಾಗುವ ಸಂಭವವಿದೆ ಮತ್ತು ಯಾವ ಆಧಾರದ ಮೇಲೆ?

೨೮. ಇದು ಹೆಚ್ಚಿನ ವಿಶ್ವವಿದ್ಯಾನಿಲಯದ ಮೇಲೆ ಯಾವ ಪರಿಣಾಮವನ್ನುಂಟುಮಾಡಬಹುದು? ಮುಂಬಯಿ ವಿಶ್ವವಿದ್ಯಾನಿಲಯದ ಮತ್ತು ಹೊಸ ವಿಶ್ವವಿದ್ಯಾನಿಲಯದ ನಡುವೆ ಯಾವ ರೀತಿಯಲ್ಲಿ ನೀವು ಸಹಕಾರ ಸಮನ್ವಯ ಮತ್ತು ವಿನಿಮಯಗಳನ್ನು ಸಾಧಿಸುತ್ತೀರಿ? ಸ್ಥಿತ್ಯಂತರದ ಅವಧಿಗೆ ನೀವು ಯಾವ ವ್ಯವಸ್ಥೆಯನ್ನು ಸೂಚಿಸುತ್ತೀರಿ?

## VII. ಸಂವಿಧಾನ
## (ಪ್ರಶ್ನೆಗಳು: ೩೬–೪೦)

೩೬. ಮುಂಬಯಿ ವಿಶ್ವವಿದ್ಯಾನಿಲಯದ ಸಂವಿಧಾನಾತ್ಮಕ ವ್ಯವಸ್ಥೆಯಲ್ಲಿ ನಿಮಗೆ ಯಾವ ದೋಷಗಳು ಕಾಣಿಸುತ್ತವೆ?

೩೭. ಸೆನೆಟ್ ಸಭೆಯ ಸಂಖ್ಯಾಬಲ, ರಚನೆ ಅಧಿಕಾರಾವಧಿ, ರಚನಾ ವಿಧಾನ ಅಧಿಕಾರ ಮತ್ತು ಕೆಲಸ–ಕಾರ್ಯಗಳು ಎಂತಿರಬೇಕು? ಅಂಥದೇನಾದರೂ ಇದ್ದಲ್ಲಿ ಯಾರು ಸೆನೆಟ್ ಸಭೆಯ "ಪದನಿಮಿತ್ತ" ಸದಸ್ಯರು, ಆಜೀವ ಸದಸ್ಯರು ಮತ್ತು ನಾಮಾಂಕಿತ ಸದಸ್ಯರಾಗಿರಬೇಕು? ಸೆನೆಟ್ ಸಭೆಯ ರಚನೆಯ ನಿಮ್ಮ ವಿಧಾನ ಯಾವ ರೀತಿಯಲ್ಲಿ ಎಲ್ಲ ಹಿತಾಸಕ್ತಿಗಳ ಮತ್ತು ಸಮುದಾಯಗಳ ಪ್ರಾತಿನಿಧ್ಯವನ್ನು ಸಾಧಿಸುತ್ತದೆ?

೩೮. ಇದುವರೆಗೆ ಮುಂಬಯಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಚಲಾಯಿಸುತ್ತಿದ್ದ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ವಿಕೇಂದ್ರೀಕರಿಸುವುದು ಅಗತ್ಯ ಅಥವಾ ಅಪೇಕ್ಷಣೀಯವೆಂದು ನೀವು ಭಾವಿಸುತ್ತೀರಾ? ಹಾಗಿದ್ದಲ್ಲಿ ಸಿಂಡಿಕೇಟಿನಿಂದ ಯಾವ ಅಧಿಕಾರಗಳನ್ನು ಅಥವಾ ಕೆಲಸ ಕಾರ್ಯಗಳನ್ನು ಬೇರ್ಪಡಿಸಬೇಕೆಂದು ಬಯಸುತ್ತೀರಿ ಹಾಗೂ ಅವುಗಳನ್ನು ವಿಶ್ವವಿದ್ಯಾನಿಲಯದ ಯಾವ ಹೊಸ ಅಥವಾ ಅಸ್ತಿತ್ವದಲ್ಲಿರುವ ನಿಕಾಯಗಳಿಗೆ ಹಸ್ತಾಂತರಿಸಬಯಸುತ್ತೀರಿ? ಹಾಗೆ ಪುನಸ್ಸಂಘಟಿಸಿ ಸಿಂಡಿಕೇಟ್ ಮತ್ತು ನೀವು ಪ್ರಸ್ತಾವಿಸಿದ ಯಾವುದೇ ಹೊಸ ಸಂಸ್ಥೆಗಳು ಯಾವ ರೀತಿಯಲ್ಲಿ ರಚಿತವಾಗಬೇಕು?

೩೯. ವ್ಯಾಸಂಗ ಮಂಡಳಿಗಳಿಗೆ ಮತ್ತು ಅಧ್ಯಯನ ಮಂಡಳಿಗೆ ನೀವು ಯಾವ ಕರ್ತವ್ಯಗಳನ್ನು ಮತ್ತು ಅಧಿಕಾರಗಳನ್ನು ವಹಿಸಬಯಸುತ್ತೀರಿ? ಈ ನಿಕಾಯಗಳನ್ನು ಹೇಗೆ ರಚಿಸಬೇಕು ಮತ್ತು ನೇಮಿಸಬೇಕು?

## III. ಮುಂಬಯಿ ವಿಶ್ವವಿದ್ಯಾನಿಲಯದ ಕಾರ್ಯಗಳು (ಪ್ರಶ್ನೆಗಳು: ೮–೨೪)

(ಇ) ಶಿಕ್ಷಣಗಳನ್ನು ನಿಗದಿಪಡಿಸುವುದು ಹಾಗೂ ಪರೀಕ್ಷೆಗಳನ್ನು ನಡೆಸುವುದು (ಪ್ರಶ್ನೆಗಳು ೧೬–೧೯)

೧೬. ನಿಮ್ಮ ಅಭಿಪ್ರಾಯದಲ್ಲಿ ವಿಶ್ವವಿದ್ಯಾನಿಲಯ (ಅ) ಪರೀಕ್ಷೆಗಳನ್ನು ನಡೆಸುವುದು (ಆ) ಶಿಕ್ಷಣ ನಿಗದಿಪಡಿಸುವುದು ಹಾಗೂ (ಇ) ಪಠ್ಯ ಪುಸ್ತಕಗಳನ್ನು ಗೊತ್ತುಪಡಿಸುವುದು– ಈ ಕರ್ತವ್ಯಗಳನ್ನು ಹೇಗೆ ನಿರ್ವಹಿಸುತ್ತ ಬಂದಿದೆ? ಈ ಕರ್ತವ್ಯಗಳ ನಿರ್ವಹಣೆಯನ್ನು ಏನಾದರೂ ಬದಲಾವಣೆಗಳನ್ನು ನೀವು ಸೂಚಿಸಬಯಸುತ್ತೀರಾ?

೧೭. ಪ್ರಾವೀಣ್ಯ, ಬುದ್ಧಿಶಕ್ತಿ ಮತ್ತು ಸಾಮರ್ಥ್ಯಗಳನ್ನು ಒರೆಹಚ್ಚಿ ನೋಡುವ ಇತರೆ ಮಾರ್ಗೋಪಾಯಗಳ ಮೂಲಕ ಲಾಭದಾಯಕವಾದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ಎಷ್ಟರ ಮಟ್ಟಿಗೆ ಪ್ರತಿಸ್ಥಾಪಿಸಬಹುದು ಅಥವಾ ಅನುಬಂಧಿಸಬಹುದು?

೧೮. ಮುಂಬಯಿ ವಿಶ್ವವಿದ್ಯಾನಿಲಯ ಯಾವ ಅಧ್ಯಯನ ಶಾಖೆಗಳಲ್ಲಿ ಈ ಕೂಡಲೇ ಹಾಗೂ ನಿಕಟ ಭವಿಷ್ಯದಲ್ಲಿ ಬೋಧನೆಯನ್ನು ಕೈಗೊಳ್ಳಬೇಕು.

೧೯. ಮುಂಬಯಿ ವಿಶ್ವವಿದ್ಯಾನಿಲಯದ ಬೋಧನಾ ಕರ್ತವ್ಯಗಳನ್ನು ವಿಸ್ತರಿಸುವ ವಿಚಾರವನ್ನು ಪರಿಗಣಿಸುವಲ್ಲಿ ಮುಂಬಯಿಯ ಜನತೆಯ ವಿಶೇಷ ಅಗತ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಹೆಚ್ಚಿನ ಯಾವುದಾದರೂ ಅಧ್ಯಯನ ವಿಷಯಗಳನ್ನು– ಉದಾಹರಣೆಗೆ ಲಲಿತ ಕಲೆಗಳು ಅಥವಾ ತಂತ್ರ ವಿಜ್ಞಾನ– ಸ್ಥಾಪಿಸಬೇಕೆಂದು ಸೂಚಿಸಬಯಸುತ್ತೀರಾ?

(ಈ) ಸ್ನಾತಕೋತ್ತರ ಶಿಕ್ಷಣಗಳು ಮತ್ತು ಪದವಿಗಳು (ಪ್ರಶ್ನೆಗಳು ೨೦–೨೧)

೨೦. ಮುಂಬಯಿ ವಿಶ್ವವಿದ್ಯಾನಿಲಯ ತನ್ನ ಬೋಧನ ಕರ್ತವ್ಯಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದಾಗ ಸ್ನಾತಕೋತ್ತರ ಪದವಿಗಳ ಅಧ್ಯಯನಾವಧಿ ಎಷ್ಟಾಗಿರಬೇಕು? ಆ ಪದವಿಗಳನ್ನು ಯಾವ ರೀತಿಯಲ್ಲಿ– ಅಂದರೆ ಪರೀಕ್ಷೆಗಳ ಮೂಲಕವೆ ಅಥವಾ ನಿಬಂಧಗಳು ಅಥವಾ ಮೌಲಿಕ ಸಂಶೋಧನೆಯ ಮೂಲಕವೆ ಅಥವಾ ಇವುಗಳಲ್ಲಿ ಒಂದು ಅಥವಾ ಹೆಚ್ಚಿನವುಗಳ ಸಂಯೋಜನೆಯ ಮೂಲಕವೆ ನೀಡಬಯಸುತ್ತೀರಿ?

೨೧. ಯಾವುದಾದರೂ ಹೊಸ ಗೌರವ–ಪದವಿಗಳನ್ನು ಸ್ಥಾಪಿಸಬಯಸುತ್ತೀರಾ? ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಅವುಗಳನ್ನು ನೀಡಬಯಸುತ್ತೀರಿ?

(ಉ) ಸಂಶೋಧನೆಯನ್ನು ವೃದ್ಧಿಪಡಿಸುವುದು (ಪ್ರಶ್ನೆಗಳು ೨೨–೨೩)

೨೨. ವಿಶ್ವವಿದ್ಯಾನಿಲಯ ಹೇಗೆ ಮತ್ತು ಯಾವ ಅತ್ಯುತ್ತಮ ರೀತಿಯಲ್ಲಿ ಭಾರತದ ಹಾಗೂ ವಿಶೇಷವಾಗಿ ಮುಂಬಯಿಯ ಸಮಸ್ಯೆಗಳ ಬಗ್ಗೆ ಸ್ವತಂತ್ರ ಪರಿಶೋಧನೆಗೆ– ಅದು ಐತಿಹಾಸಿಕ, ಆರ್ಥಿಕ ಸಮಾಜ

ಶಾಸ್ತ್ರೀಯ, ಔದ್ಯಮಿಕ ಅಥವಾ ಬೇರೆ ಯಾವುದೇ ಬಗೆಯ ಪರಿಶೋಧನೆಯಾದರೂ ಆಗಿರಲಿ– ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡಬಹುದು?

೨೩. ವಿಶ್ವವಿದ್ಯಾನಿಲಯ ಮುದ್ರಣಾಲಯ ಮತ್ತು ಪ್ರಕಟಣ ವಿಭಾಗವನ್ನು ಸೃಷ್ಟಿಸುವ ಅಗತ್ಯವೇನಾದರೂ ಇದೆಯೆ? ಅಂಥ ವಿಭಾಗವನ್ನು ಹೇಗೆ ಸಂಘಟಿಸಬಹುದು ಹಾಗೂ ಅದಕ್ಕೆ ಹಣಕಾಸನ್ನು ಒದಗಿಸಬಹುದು?

(ಊ) ವಿಶ್ವವಿದ್ಯಾನಿಲಯದ ಅಧ್ಯಾಪಕರ ನೇಮಕ (ಪ್ರಶ್ನೆ ೨೪)

೨೪. ಮುಂಬಯಿಯ ಬೋಧಕ ವಿಶ್ವವಿದ್ಯಾನಿಲಯವೊಂದರಲ್ಲಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ರೀಡರುಗಳು, ಅಧ್ಯಾಪಕರು ಮತ್ತಿತರರನ್ನು ಆಯ್ಕೆ ಮಾಡುವ ಮತ್ತು ನೇಮಿಸುವ ವಿಧಾನ ಯಾವ ಬಗೆಯದಾಗಿರಬೇಕು? ಅವುಗಳಿಗೆ ಅಗತ್ಯವಾದ ಅರ್ಹತೆಗಳಾವುವು? ಅವರಿಗೆ ಯಾವ ಶ್ರೇಣಿಯ ವೇತನಾದಿಗಳು ಅಗತ್ಯವಾಗಿವೆ? ಅವರ ನೇಮಕ ಮತ್ತು ಅಧಿಕಾರಾವಧಿಗಳನ್ನು ನಿಯಂತ್ರಿಸುವ ಷರತ್ತುಗಳು ಯಾವುವಾಗಿರಬೇಕು.

## IV. ಮುಂಬಯಿ ಪ್ರಾಂತದಲ್ಲಿ ಹೆಚ್ಚಿನ ವಿಶ್ವವಿದ್ಯಾನಿಲಯಗಳು (ಪ್ರಶ್ನೆಗಳು: ೨೫–೩೦)

೩೦. ಯಾವುದೇ ಹೊಸ ಕಾಲೇಜನ್ನು ಅಥವಾ ಸಂಸ್ಥೆಯನ್ನು (ಘಟಕ ರೂಪದ್ದು ಅಥವಾ ಮಾನ್ಯತೆ ಪಡೆದದ್ದು) ತೆರೆಯಲು ಅನುಮತಿಯನ್ನು ನೀಡುವ ಸಂದರ್ಭದಲ್ಲಿ ಯಾವ ತತ್ವಗಳನ್ನು ಅಥವಾ ನೀತಿಯನ್ನು

(ಅ) ಮುಂಬಯಿ ವಿಶ್ವವಿದ್ಯಾನಿಲಯ.

(ಆ) ಪ್ರಾಂತ್ಯದಲ್ಲಿನ ಯಾವುದೇ ಹೊಸ ವಿಶ್ವವಿದ್ಯಾನಿಲಯವು

–ಅನುಸರಿಸಬೇಕು?

## V. ವಿಶ್ವವಿದ್ಯಾನಿಲಯ ಮತ್ತು ಸಾರ್ವಜನಿಕರ ನಡುವಣ ಸಂಬಂಧ (ಪ್ರಶ್ನೆಗಳು: ೩೧–೩೪)

೩೧. ಮುಂಬಯಿ ವಿಶ್ವವಿದ್ಯಾನಿಲಯದ ಪಠ್ಯ ವಿಷಯಗಳು ಎಷ್ಟರಮಟ್ಟಿಗೆ ಈ ಪ್ರಾಂತ್ಯದಲ್ಲಿನ ವಿಶೇಷವಾಗಿ ಮುಂಬಯಿ ನಗರದಲ್ಲಿ ಕೃಷಿ, ಔದ್ಯಮಿಕ ವೃತ್ತಿಪರ ಹಾಗೂ ಸಾರ್ವಜನಿಕ ಜೀವನದ ಅಗತ್ಯಗಳನ್ನು ಈಡೇರಿಸುತ್ತಿವೆ ಎಂಬುದಾಗಿ ನೀವು ಭಾವಿಸಿದ್ದೀರಿ?

೩೨. ವಿಶ್ವವಿದ್ಯಾನಿಲಯ ಮತ್ತು ಇತರ ಔದ್ಯಮಿಕ ಇಲ್ಲವೇ ವಾಣಿಜ್ಯಾತ್ಮಕ, ವೃತ್ತಿಪರ, ಪುರ ಸಭೆಯ ಅಥವಾ ಸರ್ಕಾರದ ಸಂಸ್ಥೆಗಳಾಗಿರಲಿ– ಇವುಗಳ ನಡುವೆ ಹಾರ್ದಿಕ ಸಂಬಂಧ ಮತ್ತು ಸಹಕಾರಗಳನ್ನು ಅಭಿವರ್ಧಿಸಲು ನೀವು ಯಾವುದಾದರೂ ವಿಧಾನಗಳನ್ನು ಸೂಚಿಸಬಲ್ಲಿರಾ?

೩೩. ವಿಶ್ವವಿದ್ಯಾನಿಲಯವನ್ನು ಮತ್ತು ಅದರ ಕಾರ್ಯಗಳನ್ನು ನಗರದ ಔದ್ಯಮಿಕ ಮತ್ತು ವಾಣಿಜ್ಯಾತ್ಮಕ ಜೀವನದೊಂದಿಗೆ ಹಾಗೂ ಹಿತಾಸಕ್ತಿಗಳೊಂದಿಗೆ ಮತ್ತಷ್ಟು ನಿಕಟವಾಗಿಸಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು?

೩೪. ಕಾಲೇಜು ಮೆಟ್ಟಿಲನ್ನು ತುಳಿಯದಿರುವ ಜನಸಮುದಾಯದ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಕೊಡುಗೆಯ ವ್ಯಾಪ್ತಿ ಮತ್ತು ಉದ್ದೇಶಗಳು ಏನಾಗಿರಬೇಕು? ಈ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯ ಯಾವ ರೀತಿಯಲ್ಲಿ ಪ್ರಜಾರೋಪನ್ಯಾಸಗಳು, ರಜಾ ಕಾಲದ ಅಧ್ಯಯನಗಳು ಮತ್ತು ಇತರ ಕ್ರಮಗಳನ್ನು ಸಂಘಟಿಸಬೇಕು?

## VI. ವಿಶ್ವವಿದ್ಯಾನಿಲಯ ಮತ್ತು ಸರ್ಕಾರದ ನಡುವಣ ಸಂಬಂಧ
## (ಪ್ರಶ್ನೆ ೩೫)

೩೫. ಮುಂಬಯಿ ವಿಶ್ವವಿದ್ಯಾನಿಲಯ ಹಾಗೂ ಹೊಸದಾಗಿ ಸ್ಥಾಪಿಸಬಹುದಾಗಿರುವ ಯಾವುದೇ ಹೊಸ ವಿಶ್ವವಿದ್ಯಾನಿಲಯಗಳು ಮತ್ತು ಭಾರತ ಸರ್ಕಾರ ಹಾಗೂ ಮುಂಬಯಿ ಸರ್ಕಾರಗಳ ನಡುವಣ ಸಂಬಂಧ ಯಾವ ಬಗೆಯದಾಗಿರಬೇಕು? ಕುಲಾಧಿಪತಿಗಳ ಪ್ರಚಲಿತ ಅಧಿಕಾರಗಳು ವಿಶ್ವವಿದ್ಯಾನಿಲಯದ ಹಣಕಾಸು, ಶಾಸನ, ವಿಶ್ವವಿದ್ಯಾನಿಲಯದ ಅಂಗಸಂಸ್ಥೆಗಳ ಮತ್ತು ಅಧ್ಯಾಪಕರ ನೇಮಕಗಳು ಮತ್ತು ವಿಶ್ವವಿದ್ಯಾನಿಲಯ ನಿಕಾಯಗಳ ಸದಸ್ಯತ್ವ ಮುಂತಾದವುಗಳನ್ನು ನಿಯಂತ್ರಿಸುವ ಸರ್ಕಾರದ ಅಧಿಕಾರಗಳು–ಇವುಗಳ ವಿಷಯದಲ್ಲಿ ಯಾವ ಮಾರ್ಪಾಟುಗಳು, ಅಂಥವೇನಾದರೂ ಇದ್ದಲ್ಲಿ, ಅಗತ್ಯವಾಗಿವೆ? ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರೊಂದಿಗೆ ಹಾಗೂ ವಿಶ್ವವಿದ್ಯಾನಿಲಯ ಶಿಕ್ಷಣದ ಕಾರ್ಯಭಾರದಲ್ಲಿರುವ ಸಚಿವ ರೊಂದಿಗೆ ವಿಶ್ವವಿದ್ಯಾನಿಲಯದ ಸಂಬಂಧ (ಅಂಥದೇನಾದರೂ ಇದ್ದಲ್ಲಿ) ಯಾವ ಬಗೆಯದಾಗಿರ ಬೇಕು?

## VIII. ಪಠ್ಯ ವಿಷಯಗಳು
## (ಪ್ರಶ್ನೆಗಳು ೪೧–೪೪)

೪೧. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಿಗೆ ಈಗ ನಿಗದಿಪಡಿಸಲಾಗಿರುವ ವಿಷಯಗಳ ಮತ್ತು ಪಠ್ಯ ವಿಷಯಗಳ ವಿಷಯದಲ್ಲಿ ನಿಮಗೆ ಸಾಮಾನ್ಯವಾಗಿ ತೃಪ್ತಿಯಿದೆಯೆ? ಇಲ್ಲವಾದಲ್ಲಿ ನೀವು ಬಯಸುವ ಬದಲಾವಣೆಗಳಾವುವು ಎಂಬುದನ್ನು ಸೂಚಿಸಬಲ್ಲಿರಾ?

೪೨. ಸಾಮಾನ್ಯ ಉತ್ತೀರ್ಣತೆಯ ಹಾಗೂ ಆನರ್ಸ್ ಶಿಕ್ಷಣಗಳ ನಡುವೆ (ಅ) ನಿರಪೇಕ್ಷ ಅಥವಾ (ಆ) ಮತ್ತಷ್ಟು ಹೆಚ್ಚಿನ ಭೇದವಿರಬೇಕೆಂಬ ವಿಚಾರದತ್ತ ನಿಮ್ಮ ಒಲವು ಹರಿದಿದೆಯೆ? ಅಂಥ ತಾರತಮ್ಯ ಕಾಲೇಜುಗಳ ಮೇಲೆ ಮತ್ತು ವಿದ್ಯಾರ್ಥಿಗಳ ಮೇಲೆ ಯಾವ ರೀತಿಯಲ್ಲಿ ಪರಿಣಾಮವನ್ನುಂಟು ಮಾಡ ಬಹುದು?

೪೩. ಮಾನವಿಕ ಶಿಕ್ಷಣಗಳಿಂದ ವಿಜ್ಞಾನವನ್ನು ಸಂಪೂರ್ಣವಾಗಿ ಹೊರತಾಗಿಸುವುದನ್ನು ನೀವು ಅನುಮೋದಿಸುತ್ತೀರಾ? ವಿಜ್ಞಾನದ ಅಧ್ಯಯನದಿಂದ ಸಾಹಿತ್ಯ ಮತ್ತು ಕಲೆಗಳನ್ನು ಈಗ ಪ್ರತ್ಯೇಕಿಸಿರುವುದನ್ನು ನೀವು ಅನುಮೋದಿಸುತ್ತೀರಾ?

೪೪. ಈಗಿರುವ ಪದವಿ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣಗಳು ಸಾಕಷ್ಟು ವೈವಿಧ್ಯಮಯವಾದ ಅಧ್ಯಯನಗಳ ಆಯ್ಕೆಯನ್ನು ತೃಪ್ತಿಕರವಾದ ಸಂಯೋಜನೆಗಳನ್ನು ಮತ್ತು ಸಹ–ಸಂಬಂಧಗಳನ್ನು ಒದಗಿ ಸುತ್ತವೆ ಎಂಬುದಾಗಿ ನೀವು ಭಾವಿಸಿದ್ದೀರಾ?

## IX. ದೇಶ ಭಾಷೆಯ ಬಳಕೆ
## (ಪ್ರಶ್ನೆಗಳು ೪೫–೪೬)

೪೫. (ಅ) ಮುಂಬಯಿಯಲ್ಲಿ ಮತ್ತು (ಆ) ಹೊಸದಾಗಿ ಸ್ಥಾಪಿತವಾಗಬಹುದಾದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಯಾವ ಹಂತದವರೆಗೆ ಮತ್ತು ಯಾವ ಪ್ರಮಾಣದಲ್ಲಿ ಶಿಕ್ಷಣ ಮತ್ತು ಪರೀಕ್ಷೆಯ ಮಾಧ್ಯಮವಾಗಿ ಇಂಗ್ಲಿಷ್‌ಗೆ ಬದಲಾಗಿ ದೇಶಭಾಷೆಯನ್ನು ಬಳಸಬಹುದು ಹಾಗೂ ಬಳಸಬೇಕು ಎಂಬುದಾಗಿ ನೀವು ಭಾವಿಸುತ್ತೀರಿ?

೪೬. ಈ ಪ್ರಾಂತ್ಯದ ದೇಶಭಾಷೆಗಳ ವೈಜ್ಞಾನಿಕ ಅಧ್ಯಯನವನ್ನು ಅಭಿವೃದ್ಧಿಸಲು ಹಾಗೂ ಎಲ್ಲ ಬಗೆಯ ಉತ್ತಮ ದೇಶಭಾಷಾ ಸಾಹಿತ್ಯ ಸೃಷ್ಟಿಯನ್ನು ಪ್ರೋತ್ಸಾಹಿಸಲು ಅತ್ಯುತ್ತಮವಾದ ವಿಧಾನ ಯಾವುದು ಎಂದು ನೀವು ಭಾವಿಸುತ್ತೀರಿ?

## XIII. ವಿಶಿಷ್ಟ ಸಮುದಾಯಗಳು
## (ಪ್ರಶ್ನೆ ೫೨)

೫೨. ಯಾವುದಾದರೂ ವಿಶಿಷ್ಟ ಸಮುದಾಯದಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಅಭಿವೃದ್ಧಿಸಲು ವಿಶೇಷ ಕ್ರಮಗಳು ಅಗತ್ಯವೆಂದು ಭಾವಿಸುತ್ತೀರಾ?

* * * * *

***ಡಾ. ಬಿ. ಆರ್. ಅಂಬೇಡ್ಕರ್ ಅವರ ಲಿಖಿತ ಉತ್ತರ**

ಪ್ರಶ್ನೆ ೧: ವಿಶ್ವವಿದ್ಯಾನಿಲಯದಲ್ಲಿ ಕೈಗೊಳ್ಳಲಾಗುವ ಶಿಕ್ಷಣ ವಯಸ್ಕರಿಗೆ ಹೊಂದುವಂತಿರ ಬೇಕೆಂಬುದು ವಿಶ್ವವಿದ್ಯಾನಿಲಯ ಶಿಕ್ಷಣದ ಧ್ಯೇಯ ಮತ್ತು ಕರ್ತವ್ಯವಾಗಿರಬೇಕು; ಅದು ವೈಜ್ಞಾನಿಕವೂ ನಿರ್ಲಿಪ್ತವೂ ನಿಷ್ಪಕ್ಷಪಾತ ಸ್ವಭಾವದ್ದೂ ಆಗಿರಬೇಕು; ವಾಸ್ತವಾಂಶಗಳನ್ನು ಅಥವಾ ಸಿದ್ಧಾಂತಗಳನ್ನು ವಿದ್ಯಾರ್ಥಿಯ ತಲೆಯಲ್ಲಿ ತುಂಬುವುದಕ್ಕಿಂತಲೂ ಹೆಚ್ಚಾಗಿ ಅವನ ಸ್ವಂತಿಕೆಯನ್ನು ಹೊರಸೆಳೆಯುವ ಹಾಗೂ ಅವನ ಬೌದ್ಧಿಕ ಶಕ್ತಿಯನ್ನು ಪ್ರಚೋದಿಸುವ ಧ್ಯೇಯವನ್ನು ಹೊಂದಿರಬೇಕು. ಸುಪ್ರಸಿದ್ಧ ಪ್ರಮಾಣಭೂತ ಕೃತಿಗಳ ಅಥವಾ ವಿದ್ವಾಂಸರ ಕೊಡುಗೆಗಳ ವಿಮರ್ಶಾತ್ಮಕ ಅಧ್ಯಯನವನ್ನು ಕೈಗೊಳ್ಳುವ ಅಭ್ಯಾಸವನ್ನು ಅವನಲ್ಲಿ ಮೂಡಿಸಬೇಕು ಹಾಗೂ ಮಾಹಿತಿಯ ಪ್ರಥಮ ಆಕರಗಳನ್ನು ಪ್ರಸಂಗಾನುಗುಣವಾಗಿ ಪರಿಶೀಲಿಸುವ ಅಭ್ಯಾಸವನ್ನು ಬೆಳೆಸಬೇಕು; ಅವನ ಮನಸ್ಸಿನಲ್ಲಿ ಸಮಗ್ರತೆಯ ಮಾನದಂಡವನ್ನು ಬೇರೂರಿಸಬೇಕು ಹಾಗೂ ಸತ್ಯವನ್ನು ತಲುಪುವ ಕಷ್ಟ ಮತ್ತು ಮಹತ್ವದ ಬಗೆಗಿನ ಪ್ರಜ್ಞೆಯನ್ನು ಅವನಲ್ಲಿ ಮೂಡಿಸಬೇಕು ಎಂದು ಹೇಳುವ ಇಂಗ್ಲೆಂಡಿನಲ್ಲಿನ ಶಿಕ್ಷಣ ಮಂಡಳಿಯ ಪರಿಶೀಲಕರ ಅಭಿಪ್ರಾಯವನ್ನು

---

*ವಿಶ್ವವಿದ್ಯಾನಿಲಯ ಸುಧಾರಣಾ ಸಮಿತಿ–ಲಿಖಿತ ಸಾಕ್ಷ್ಯ ಸಂಖ್ಯೆ ಕ್ರಮಾಂಕ ೧೦೩
ಪು. ೧–೧೭; ದಿನಾಂಕ ಆಗಸ್ಟ್ ೧೯೨೪.

ನಾನು ಒಪ್ಪುತ್ತೇನೆ. ಅಂಥ ತರಬೇತಿಯನ್ನು ಪಡೆದು ವಿದ್ಯಾರ್ಥಿ ನ್ಯಾಯೋಚಿತವಾಗಿ ವಾಸ್ತವ ವಿಷಯವೆಂದು ಕರೆಯಬಹುದಾಗಿರುವಂಥದರಿಂದ ಬೇರ್ಪಡಿಸಿ ನೋಡುವುದನ್ನು ಕಲಿತುಕೊಳ್ಳಬೇಕು. ವಿವಾದಾಂಶವನ್ನು ಪ್ರತ್ಯೇಕಿಸಿ ನೋಡುವ ಪ್ರತಿಯೊಂದು ಪ್ರಶ್ನೆಯನ್ನು ಅದರ ಅರ್ಹತೆಯ ಆಧಾರದ ಮೇಲೆ ಪರಿಗಣಿಸುವ ಹಾಗೂ ತನಗೆ ಪ್ರಿಯವಾದ ಯಾವುದೋ ಸಿದ್ಧಾಂತಕ್ಕೂ ಅದಕ್ಕೂ ಇರುವ ಸಂಬಂಧದ ದೃಷ್ಟಿಯಿಂದ ಅದನ್ನು ನೋಡದಿರುವಂಥ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಯಾರ ವ್ಯಾವಹಾರಿಕ ತೀರ್ಮಾನಗಳನ್ನು ತಾನು ಪ್ರಬಲವಾಗಿ ವಿರೋಧಿಸಬಹುದೋ ಅಂಥವರ ನಿಲುವನ್ನು ಕೂಡ ನ್ಯಾಯೋಚಿತ ರೀತಿಯಲ್ಲಿ ಅಷ್ಟೇ ಅಲ್ಲ, ಸಹಾನುಭೂತಿ ಪೂರ್ವಕವಾಗಿ ಸಾದರಪಡಿಸುವುದನ್ನು ಅವನು ಕಲಿತುಕೊಳ್ಳಬೇಕು. ಯಾವುದೇ ಆಲೋಚನೆಯನ್ನು ಅಂಗೀಕರಿಸುವುದಕ್ಕೆ ಅಥವಾ ತಿರಸ್ಕರಿಸುವುದಕ್ಕೆ ಮೊದಲು ಹಾಗೆ ಸೂಚಿತವಾದ ಆಲೋಚನೆಯನ್ನು ಪರೀಕ್ಷಿಸಲು ಮತ್ತು ಅದರ ಪರಿಣಾಮ ಏನಾಗುತ್ತದೆಂಬುದನ್ನು ಕಂಡುಕೊಳ್ಳಲು ಅವನು ಸಮರ್ಥನಾಗಿರಬೇಕು. ಅನಿವಾರ್ಯವಾಗಿ ತಾನೇ ಮೌಲಿಕ ವಿದ್ಯಾರ್ಥಿಯಾಗುವುದಕ್ಕೆ ಬದಲಾಗಿ, ಯಾವ ಪರಿಸ್ಥಿತಿಗಳಲ್ಲಿ ಮೌಲಿಕ ಸಂಶೋಧನೆಯನ್ನು ನಡೆಸಲಾಗಿದೆ ಎಂಬುದರ ಬಗೆಗಿನ ಒಳನೋಟವನ್ನು ಪಡೆದುಕೊಳ್ಳಬಲ್ಲಂಥನಾಗಿರಬೇಕು. ಸಾಕ್ಷ್ಯವನ್ನು ತೂಗಿ ನೋಡಲು ವಾದವಿವಾದಗಳನ್ನು ಸೂಕ್ಷ್ಮವಾಗಿ ಗಮನಿಸಲು ಮತ್ತು ಟೀಕಿಸಲು ಹಾಗೂ ಅಧಿಕಾರಯುತ ಅಭಿಪ್ರಾಯಗಳ ಮೇಲೆ ತನ್ನದೇ ಆದ ಪ್ರಭಾವ ಮುದ್ರೆಯನ್ನೊತ್ತಲು ಅವನು ಸಮರ್ಥನಾಗಿರಬೇಕು.

ಮುಂಬಯಿ ಪ್ರಾಂತ್ಯದಲ್ಲಿನ ವಿಶ್ವವಿದ್ಯಾನಿಲಯ ಶಿಕ್ಷಣದ ಧ್ಯೇಯ ಮತ್ತು ಕಾರ್ಯಗಳು ಏಕೆ ಭಿನ್ನವಾಗಿರಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ. ವಿಶ್ವವಿದ್ಯಾನಿಲಯದಿಂದ ಹೊರಬರುತ್ತಿರುವ ವಿದ್ಯಾರ್ಥಿಗಳ ಗುಣಮಟ್ಟದ ಆಧಾರದ ಮೇಲೆ ತೀರ್ಮಾನಿಸುವುದಾದರೆ ಈ ಪ್ರಾಂತ್ಯದಲ್ಲಿನ ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಚಲಿತ ವ್ಯವಸ್ಥೆ ವಿಶ್ವವಿದ್ಯಾನಿಲಯ ಶಿಕ್ಷಣದ ಧ್ಯೇಯ ಮತ್ತು ಕಾರ್ಯಗಳನ್ನು ಸಾಧಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ.

ಪ್ರಶ್ನೆ ೨: ಆಂಶಿಕವಾಗಿ ಬೋಧಕರ ಮನೋಧರ್ಮ ಮತ್ತು ವಿಧಾನಗಳಿಂದ ಕೆಲಮಟ್ಟಿಗೆ, ವಿದ್ಯಾರ್ಥಿಗಳ ಮನೋಧರ್ಮ ಮತ್ತು ವಿಧಾನಗಳಿಂದ ಮತ್ತು ಕೆಲಮಟ್ಟಿಗೆ ವಿಶ್ವವಿದ್ಯಾನಿಲಯಕ್ಕೆ ಪ್ರವೇಶಿಸುವುದಕ್ಕೆ ಮೊದಲಿನ ಶಿಕ್ಷಣದ ಸ್ಥಿತಿಗತಿಗಳಿಂದ ಈ ವೈಫಲ್ಯ ಉಂಟಾಗಿರುವುದು ಸಾಧ್ಯ. ನನ್ನ ಅಭಿಪ್ರಾಯದಲ್ಲಿ ಈ ವೈಫಲ್ಯ ಮುಖ್ಯವಾಗಿ ಉಂಟಾಗಿರುವುದು ವಿಶ್ವವಿದ್ಯಾನಿಲಯ ಶಿಕ್ಷಣದ ಧ್ಯೇಯ ಮತ್ತು ಪ್ರಕಾರ್ಯಗಳನ್ನು ಈಡೇರಿಸುವ ಸ್ಥಿತಿಗೆ ವಿಶ್ವವಿದ್ಯಾನಿಲಯ ಬರಬೇಕಾದರೆ ಅದಕ್ಕೆ ಮುನ್ನ ಅದು ಮೂಲತಃ ವಿದ್ವತ್ತಿನ ಕೇಂದ್ರವಾಗುವಂತೆ ವ್ಯಕ್ತಿಗತ ತರಬೇತಿಗೆ ಮತ್ತು ಜ್ಞಾನದ ಪುರೋಭಿವೃದ್ಧಿ ಮತ್ತು ಪ್ರಸರಣಕ್ಕೆ ವಿದ್ವಾಂಸರ ಒಂದು ಸಮುದಾಯು ಸ್ನೇಹಭಾವದಿಂದ ದುಡಿಸುವಂಥ ನೆಲೆಯಾಗುವಂತೆ ಅದು ಸುವ್ಯವಸ್ಥಿತವಾಗಿರಬೇಕಾಗುತ್ತದೆ. ಈ ಟೀಕೆ ಟಿಪ್ಪಣಿಗಳ ಬೆಳಕಿನಲ್ಲಿ ನೋಡಿದರೆ (ಮೊದಲಿಗೆ) ಮುಂಬಯಿ ವಿಶ್ವವಿದ್ಯಾನಿಲಯ ನಿಜವಾದ ವಿಶ್ವವಿದ್ಯಾನಿಲಯವೇ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅದು ವಿದ್ವಾಂಸರ ಸಮುದಾಯವೇ ಆಗಿಲ್ಲ. ಅದು ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವ ಹೊಣೆಯನ್ನೂ ಹೊತ್ತುಕೊಂಡಿಲ್ಲ ಹಾಗೂ ಜ್ಞಾನದ ಪುರೋಭಿವೃದ್ಧಿ ಮತ್ತು ಪ್ರಸರಣದಲ್ಲಿಯೂ ಪ್ರತ್ಯಕ್ಷವಾದ ಆಸಕ್ತಿಯನ್ನು ತೋರಿಲ್ಲ. ಇತ್ತ ಅದರ ಆಡಳಿತಾತ್ಮಕ ಮತ್ತು ಶೈಕ್ಷಣಿಕ ವ್ಯವಸ್ಥೆಯ ದೃಷ್ಟಿಯಿಂದ ನೋಡಿದರೆ ವಿಶ್ವವಿದ್ಯಾನಿಲಯ ಹೇಗಿರಬಾರದು ಎಂಬುದಕ್ಕೆ ಮುಂಬಯಿ ವಿಶ್ವವಿದ್ಯಾನಿಲಯ ಸಾಕ್ಷಿಯಾಗಿದೆ. ಅದು ಆಡಳಿತಗಾರರ

ಒಂದು ಒಕ್ಕೂಟವಾಗಿಬಿಟ್ಟಿದೆ. ಅದು ವಿದ್ಯಾರ್ಥಿಗಳ ಪರೀಕ್ಷೆ ನಡೆಸುವ ವಿಷಯಕ್ಕಷ್ಟೇ ಗಮನ ಹರಿಸಿದೆ; ಜ್ಞಾನದ ಪುರೋಭಿವೃದ್ಧಿ ಮತ್ತು ಪ್ರಸರಣ ಆಸಕ್ತಿಯ ಪರಿಧಿಗೆ ಹೊರತಾಗಿಬಿಟ್ಟಿದೆ.

ಪ್ರಶ್ನೆ ೩: ಮುಂಬಯಿ ವಿಶ್ವವಿದ್ಯಾನಿಲಯ ಈ ಸಂಸ್ಥಾನದ ವಿಭಿನ್ನ ಸಮುದಾಯಗಳ ನಡುವಣ ಪರಸ್ಪರ ಆಸಕ್ತಿ ಮತ್ತು ಅರಿವನ್ನು ಅಭಿವೃದ್ಧಿಪಡಿಸಿಲ್ಲ; ಅವುಗಳ ಇತಿಹಾಸ ಮತ್ತು ಸಂಸ್ಕೃತಿಯ ವಿಷಯದಲ್ಲಿ ಸಹಾನುಭೂತಿಯನ್ನು ಮೂಡಿಸಿಲ್ಲ. ವಿದ್ವತ್–ಪ್ರೇಮವನ್ನು ಬೆಳೆಸುವ ವಿಶ್ವವಿದ್ಯಾನಿಲಯ ಮಾತ್ರವಾಗಿರುವಂಥ ಯಾವುದೇ ವಿಶ್ವವಿದ್ಯಾನಿಲಯ ಈ ಧ್ಯೇಯೋದ್ದೇಶವನ್ನು ಸಾಧಿಸಲಾರದು. ಈ ವಿಶ್ವವಿದ್ಯಾನಿಲಯವನ್ನು ಮೊದಲಿಗೆ ಬೋಧಕ ವಿಶ್ವವಿದ್ಯಾನಿಲಯವಾಗಿ ಪರಿವರ್ತಿಸುವುದೇ ಈ ದಿಕ್ಕಿನಲ್ಲಿನ ಯಶಸ್ಸಿನ ಏಕೈಕ ಮಾರ್ಗವೆಂಬುದಾಗಿ ನನಗೆ ತೋರುತ್ತದೆ.

ಪ್ರಶ್ನೆಗಳು ೪–೭: ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಕೊಡಲು ನಾನು ಸಮರ್ಥನೆಂದು ನಾನೇನೂ ಭಾವಿಸಿಲ್ಲ. ಪ್ರೌಢಶಾಲೆಗಳಿಂದ ವಿಶ್ವವಿದ್ಯಾನಿಲಯಕ್ಕೆ ಯಾವ ಬಗೆಯ "ಸರಕು" ಲಭಿಸುತ್ತದೆ ಎಂಬುದನ್ನು ಇದು ಬಹುಮಟ್ಟಿಗೆ ಅವಲಂಬಿಸಿರುತ್ತದೆ ಎಂಬುದನ್ನು ನಾನು ಒಪ್ಪುತ್ತೇನೆ. ಸರಿಯಾದ ಬಗೆಯ "ಸರಕ"ನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದು ಪ್ರತಿಯೊಂದು ವಿಶ್ವವಿದ್ಯಾನಿಲಯಕ್ಕೂ ಸಮಸ್ಯೆಯಾಗಿದೆ. ಆದರೆ ಅಗತ್ಯವಾಗಿರುವ ಬಗೆಯ "ಸರಕ"ನ್ನು ಉತ್ಪಾದಿಸುವಂತೆ ಪ್ರೌಢಶಾಲೆಗಳನ್ನು ಒತ್ತಾಯಪಡಿಸುವ ಸಲುವಾಗಿ ವಿಶ್ವವಿದ್ಯಾನಿಲಯವೇಕೆ ಅವುಗಳನ್ನು ನಿಯಂತ್ರಿಸಲು ಹೋಗಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ಜವಾಬ್ದಾರಿಯನ್ನು ವಹಿಸಿಕೊಂಡಿರುವಂಥ ಯಾವೊಂದು ವಿಶ್ವವಿದ್ಯಾನಿಲಯದ ಪರಿಚಯವೂ ನನಗಿಲ್ಲ. ವಿಶ್ವವಿದ್ಯಾನಿಲಯಗಳು ಮಾಡುವುದೆಲ್ಲ ಇಷ್ಟು ಮಾತ್ರ. ಅವು ತಮ್ಮದೇ ಆದ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತದೆ. ತಮ್ಮ ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಮೂಲಕ ಈ ರೀತಿ ಅವು ತಮಗೆ ಬೇಕಾಗಿರುವಂಥ "ಸರಕ"ನ್ನು ಆಯ್ದುಕೊಳ್ಳುತ್ತವೆ. ಇದಕ್ಕಿಂತ ಹೆಚ್ಚಿನದನ್ನೂ ಮಾಡುವಂತೆ ಮುಂಬಯಿ ವಿಶ್ವವಿದ್ಯಾನಿಲಯವನ್ನು ಏಕೆ ಒತ್ತಾಯಿಸಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಪ್ರಶ್ನೆಗಳು ೮–೧೦: ಮುಂಬಯಿ ವಿಶ್ವವಿದ್ಯಾನಿಲಯವನ್ನು ಬೋಧಕ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸಲು ಎರಡು ವಿಶಿಷ್ಟ ಸಮಸ್ಯೆಗಳು ಉದ್ಭವಿಸುತ್ತವೆಂಬುದು ನನ್ನ ಅಭಿಪ್ರಾಯ. ಅವು ಯಾವುವೆಂದರೆ: (i) ಅದನ್ನು ಹೇಗೆ ವ್ಯವಸ್ಥೆಗೊಳಿಸಬೇಕು? ೩೬–೪೦ರವರೆಗಿನ ಪ್ರಶ್ನೆಗಳಿಗೆ ಉತ್ತರಿಸುವಾಗ ಮೊದಲನೆಯ ಪ್ರಶ್ನೆಯ ಬಗ್ಗೆ ಚರ್ಚಿಸುತ್ತೇನೆ. ಇಲ್ಲಿ ನಾನು ಎರಡನೆಯ ಪ್ರಶ್ನೆಯ ಬಗ್ಗೆ ಚರ್ಚಿಸುತ್ತೇನೆ. ಬೋಧನ ಪ್ರಕಾರ್ಯಗಳನ್ನು ಕೈಗೊಳ್ಳಲು ವಿಶ್ವವಿದ್ಯಾನಿಲಯಕ್ಕೆ ಅವಕಾಶ ಮಾಡಿಕೊಡುವ ಬಗ್ಗೆ ೧೮೫೭ರ ನಿಗಮನ (ಸೇರ್ಪಡೆ) ಕಾಯ್ದೆಯಲ್ಲಿ ಯಾವುದೇ ಉಪಬಂಧವನ್ನು ಕಲ್ಪಿಸಿರಲಿಲ್ಲ. (ಇತರ ವಿಷಯಗಳ ಜೊತೆಗೆ) "ವಿದ್ಯಾರ್ಥಿಗಳ ಬೋಧನೆಗೆ ಅವಕಾಶ ಮಾಡಿಕೊಡುವ" ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯವನ್ನು ನಿಗಮನಗೊಳಿಸಲಾಗುತ್ತಿದೆ ಎಂಬುದಾಗಿ ೧೯೦೪ರ ಕಾಯ್ದೆ ಮೊಟ್ಟ ಮೊದಲ ಬಾರಿಗೆ ವಿಶ್ವವಿದ್ಯಾನಿಲಯವನ್ನು ವರ್ಣಿಸಿದೆ. ಸ್ನಾತಕಪೂರ್ವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಉದ್ದೇಶದಿಂದಾಗಿ ಈ ಶಬ್ದಪುಂಜವನ್ನು ಬಳಸಲಾಗಿರುವಂತೆ ತೋರುತ್ತದೆ. ಈ ಖಂಡವನ್ನು ಕಾರ್ಯರೂಪಕ್ಕೆ ತರುವಲ್ಲಿ ಎಲ್ಲ ಹಿರಿಯ ವಿಶ್ವವಿದ್ಯಾನಿಲಯಗಳೂ ವಿಶ್ವವಿದ್ಯಾನಿಲಯ ಆಯೋಗದ ಶಿಫಾರಸನ್ನು ಅನುಸರಿಸಿವೆ. ಪ್ರೌಢ ಅಧ್ಯಯನ ಕ್ರಮಗಳಿಗೆ ಹೆಚ್ಚಿನ ಅವಕಾಶವನ್ನು ಮಾಡಿಕೊಡುವ ಮೂಲಕ ಬೋಧಕ ಸಂಸ್ಥೆಗಳಾಗಿ ವಿಶ್ವವಿದ್ಯಾನಿಲಯಗಳು ತಮ್ಮ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಬಹುದೆಂದು ಆ ಆಯೋಗ ಶಿಫಾರಸು ಮಾಡಿತ್ತು. ಇದರ ಪರಿಣಾಮವಾಗಿ ಇಂದು ಪದವಿಪೂರ್ವ ಶಿಕ್ಷಣವನ್ನು ಸ್ನಾತಕೋತ್ತರ ಶಿಕ್ಷಣದಿಂದ

ಬೇರ್ಪಡಿಸಿರುವುದನ್ನು ನಾವು ಕಾಣುತ್ತೇವೆ. ಇವುಗಳಲ್ಲಿ ಮೊದಲನೆಯದನ್ನು ವಿಶ್ವವಿದ್ಯಾನಿಲಯ ಕೈಗೆತ್ತಿಕೊಂಡಿದೆ ಹಾಗೂ ಎರಡನೆಯದನ್ನು ಕಾಲೇಜುಗಳಿಗೆ ಬಿಟ್ಟುಕೊಟ್ಟಿದೆ.

ಸ್ನಾತಕೋತ್ತರ ಮತ್ತು ಪದವಿಪೂರ್ವ ತರಬೇತಿಗಳ ನಡುವೆ ಇಂಥ ಯಾವುದೇ ಸೂಕ್ಷ್ಮ ವಿಭಜನೆ ಮಾಡುವುದಕ್ಕೆ ನಾನು ಸಂಪೂರ್ಣವಾಗಿ ವಿರೋಧವಾಗಿದ್ದೇನೆ. ಇದಕ್ಕೆ ನಾನು ಕೊಡುವ ಕಾರಣಗಳು ಹೀಗಿವೆ;

(೧) ಸ್ನಾತಕೋತ್ತರ ಕಾರ್ಯವನ್ನು ಪದವಿಪೂರ್ವ ಕಾರ್ಯದಿಂದ ಪ್ರತ್ಯೇಕಿಸುವುದೆಂದರೆ ಬೋಧನೆ ಮತ್ತು ಸಂಶೋಧನೆಯನ್ನು ಪ್ರತ್ಯೇಕಿಸುವುದು ಎಂದೇ ಅರ್ಥವಾಗುತ್ತದೆ. ಆದರೆ ಎಲ್ಲಿ ಸಂಶೋಧನೆ ಬೋಧನೆಯಿಂದ ಬೇರೆಯಾಗಿಬಿಟ್ಟಿರುತ್ತದೆಯೋ ಅಲ್ಲಿ ಸಂಶೋಧನೆ ಹಾನಿಗೊಳಗಾಗಿಯೇ ತೀರುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ. ಲಂಡನ್ನಿನಲ್ಲಿನ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಕುರಿತಂತೆ ೧೯೧೧ರ ವಿಶ್ವವಿದ್ಯಾನಿಲಯ ಶಿಕ್ಷಣದ ಆಯೋಗದ ಸದಸ್ಯರು ಸರಿಯಾಗಿಯೇ ಗಮನಿಸಿರುವಂತೆ–

> "೬೯. ಹಾಗೆ ನೋಡಿದರೆ ಪದವಿ ಪೂರ್ವ ಶಿಕ್ಷಣದಲ್ಲಿ ಬೋಧನೆಗೆ ಹೆಚ್ಚಿನ ಪ್ರಾಧಾನ್ಯವಿರುತ್ತದೆ; ಮುಂದುವರಿದ ಕಾರ್ಯದಲ್ಲಿ ಸಂಶೋಧನೆಗೆ ಹೆಚ್ಚಿನ ಪ್ರಾಧಾನ್ಯವಿರುತ್ತದೆ. ಆದರೆ, ವಿಶ್ವವಿದ್ಯಾನಿಲಯದ ಅತ್ಯಂತ ಸುವಿಖ್ಯಾತ ಪ್ರಾಧ್ಯಾಪಕರು ಸ್ನಾತಕಪೂರ್ವ ಸಂಬಂಧಿಸಿದ ಬೋಧನಾ ಕಾರ್ಯದಲ್ಲಿ ವಿದ್ಯಾರ್ಥಿಗಳಿಗೆ ಆ ವಿದ್ಯಾರ್ಥಿಗಳ ವಿಶ್ವವಿದ್ಯಾನಿಲಯದಲ್ಲಿನ ಶಿಕ್ಷಣದ ಆರಂಭದಿಂದಲೇ ಪಾಲ್ಗೊಳ್ಳುವುದು ವಿಶ್ವವಿದ್ಯಾನಿಲಯದ ಹಿತ ದೃಷ್ಟಿಯಿಂದಲೇ ಒಳ್ಳೆಯದು. ಕಿರಿಯ ವಿದ್ಯಾರ್ಥಿಗಳೊಂದಿಗೆ ಸಂಪರ್ಕವನ್ನು ಏರ್ಪಡಿಸಿಕೊಳ್ಳುವುದರಿಂದ ಮಾತ್ರವೇ ಅಧ್ಯಾಪಕನಾದವನು ತನ್ನ ವಿಷಯದ ಬಗೆಗಿನ ತನ್ನದೇ ಆದ ಪರಿಕಲ್ಪನೆಗಳತ್ತ ಅವರ ಮನಸ್ಸು ಹರಿಯುವಂತೆ ಮಾಡಬಲ್ಲ. ಇದರಿಂದ ಹಾಗೂ ತನ್ನದೆ ಆದ ವಿಧಾನಗಳಿಂದ ಅವರನ್ನು ತರಬೇತಿಗೊಳಿಸಬಲ್ಲ. ಇದರಿಂದ ಸಂಶೋಧನೆಗೆ ಅತ್ಯುತ್ತಮ ವ್ಯಕ್ತಿಗಳನ್ನು ಆಯ್ದುಕೊಳ್ಳುವ ಮತ್ತು ಅವರಿಂದ ಅತ್ಯುತ್ತಮ ಕಾರ್ಯವನ್ನು ಸಾಧಿಸುವ ಇಮ್ಮಡಿ ಅನುಕೂಲವನ್ನು ಮಾಡುತ್ತಿರುವಂಥ ವ್ಯಕ್ತಿಯ ವೈಯಕ್ತಿಕ ಪ್ರಭಾವವೇ ಅದರ ವಿಷಯದಲ್ಲಿ ನಂಬಿಕೆಯನ್ನು ಮೂಡಿಸುತ್ತದೆ. ಅವನ ವ್ಯಕ್ತಿತ್ವವೇ ಆಯ್ಕೆಯ ಶಕ್ತಿಯಾಗಿರುತ್ತದೆ. ಅದರಿಂದ ಅವನ ವಿಶೇಷ ಕಾರ್ಯಕ್ಕೆ ಅತ್ಯಂತ ಅರ್ಹರಾದಂಥ ವ್ಯಕ್ತಿಗಳು ತಾವಾಗಿಯೇ ಬಂದು ಆ ಕಾರ್ಯಕ್ಕೆ ಸೇರಿಕೊಳ್ಳುತ್ತಾರೆ. ಅವನ ಸಿಬ್ಬಂದಿಯನ್ನು ಕ್ರಿಯಾಶೀಲರಾಗಿಸುವಂಥ ಆ ಚೈತನ್ಯದಿಂದ ಅವನ ವೈಯಕ್ತಿಕ ಪ್ರಭಾವ ಪುನರುಜ್ಜೀವನಗೊಳ್ಳುತ್ತಾ ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ಆದ್ದರಿಂದ ಲಾಭವಾಗುವುದು ಆ ಕೆಲವರಿಗೆ ಮಾತ್ರವಲ್ಲ; ಸ್ವತಂತ್ರ ಹಾಗೂ ಮೌಲಿಕ ಮನಸ್ಸುಗಳ ಆಲೋಚನೆ ಕಾರ್ಯರೂಪಕ್ಕೆ ಬರುವ ಬಗೆಯನ್ನು ತೋರಿಸಿಕೊಡುವಂಥ ಅಧ್ಯಾಪಕರ ಸಾಹಚರ್ಯದಿಂದ ಎಲ್ಲ ಪ್ರಾಮಾಣಿಕ ವಿದ್ಯಾರ್ಥಿಗಳಿಗೂ ಎಣೆಯಿಲ್ಲದ ಲಾಭ ದೊರೆಯುತ್ತದೆ. "ಪ್ರಥಮ ಶ್ರೇಣಿಯ ಒಬ್ಬ ಅಥವಾ ಹಲವು ವ್ಯಕ್ತಿಗಳ ಸಂಪರ್ಕಕ್ಕೆ ಬಂದಂಥ ಯಾವನೇ ವ್ಯಕ್ತಿಯ ಇಡೀ ಬೌದ್ಧಿಕ ಗುಣಮಟ್ಟ ಬದಲಾಗಿಬಿಡುತ್ತದೆ. ಈ ಬದಲಾವಣೆ ಅವನ ಉಳಿದ ಜೀವಮಾನದ ಉದ್ದಕ್ಕೂ ಉಳಿದುಕೊಂಡುಬರುತ್ತದೆ" ಎಂಬುದಾಗಿ ಹೆಲ್ಮ್ ಹೋಲಟ್ಜ್ ಹೇಳಿದ್ದಾರೆ. ಉಪನ್ಯಾಸಗಳು ತಮ್ಮ ಪ್ರಯೋಜನವನ್ನೇನೂ ಕಳೆದುಕೊಂಡಿಲ್ಲ; ಜೀವಂತ ಆಡುಮಾತಿನ ಸ್ಥಾನವನ್ನು ಪುಸ್ತಕಗಳೆಂದೂ ಸಂಪೂರ್ಣವಾಗಿ ಆಕ್ರಮಿಸಿಕೊಳ್ಳಲಾರವು; ಪ್ರಯೋಗಶಾಲೆಯಲ್ಲಿನ ಮತ್ತು ವಿಚಾರಗೋಷ್ಠಿಗಳಲ್ಲಿನ ಮತ್ತಷ್ಟು ಆತ್ಮೀಯವಾದ ಬೋಧನೆಯ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಸಂಭವ ಇನ್ನೂ ಕಡಿಮೆಯಾಗುತ್ತದೆ. ಇದು ವಿಶ್ವವಿದ್ಯಾನಿಲಯ ಶಿಕ್ಷಣದ ಸಾಮಾನ್ಯ ಕ್ರಮದ ವ್ಯಾಪ್ತಿಯಿಂದ

ಹೊರಗಿರಬಾರದು. ಇದರಲ್ಲಿ ವಿದ್ಯಾರ್ಥಿ (ತಾನು ಪುಸ್ತಕಗಳಿಂದ ಪಡೆಯಬಹುದಾಗಿರುವ) ತೀರ್ಮಾನಗಳನ್ನು ಮತ್ತು ಅವುಗಳನ್ನು ಸಮರ್ಥಿಸುವ ಕಾರಣಗಳನ್ನು ಅರಿತುಕೊಳ್ಳುವುದು ಮಾತ್ರವಲ್ಲದೆ, ಆಲೋಚನೆಯನ್ನು ವಿಕಾಸಗೊಳಿಸುವ ವಾಸ್ತವಿಕ ಪ್ರಕ್ರಿಯೆಯನ್ನು ಅತ್ಯುತ್ಕೃಷ್ಟ ತರಬೇತಿಯನ್ನು ಪಡೆದ ಹಾಗೂ ಮೌಲಿಕವಾದ ಮನಸ್ಸಿನ ಕಾರ್ಯವಿಧಾನವನ್ನು ಅರಿತುಕೊಳ್ಳುತ್ತಾನೆ."

"೭೦. ಹೀಗಾಗಿ ವಿಶ್ವವಿದ್ಯಾನಿಲಯದ ಅತ್ಯುತ್ಕೃಷ್ಟ ಅಧ್ಯಾಪಕರು ಪದವಿಪೂರ್ವಬೋಧನ ಕಾರ್ಯದಲ್ಲಿ ತಮ್ಮ ಪಾಲಿನ ಕಾರ್ಯವನ್ನು ನಿರ್ವಹಿಸುವುದು. ಹಾಗೂ ಅವರ ಚೈತನ್ಯ ಅದೆಲ್ಲವನ್ನೂ ಆಧರಿಸಿ ನಿಲ್ಲುವುದು ಅಪೇಕ್ಷಣೀಯವೆಂದಾದಲ್ಲಿ ಅದೇ ಕಾರಣಗಳಿಗಾಗಿ ಸ್ನಾತಕೋತ್ತರ ಹಂತದ ನೆಲೆಯಲ್ಲಿ ತಮ್ಮ ಅತ್ಯುತ್ತಮ ವಿದ್ಯಾರ್ಥಿಗಳಿಂದ ಅವರು ವಂಚಿತರಾಗುವಂತಾಗಬಾರದು. ವಿಶ್ವವಿದ್ಯಾನಿಲಯದ ಉಳಿದ ಕೆಲಸ ಕಾರ್ಯಗಳಿಂದ ಈ ಕೆಲಸ ಬೇರೆಯಾಗಿ ನಿಲ್ಲಬಾರದು. ಹಾಗೂ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ಬೇರೆ ಅಧ್ಯಾಪಕರಿಂದ ನಡೆಯುವಂತಾಗಬಾರದು. ಅಧ್ಯಾಪಕನ ಮಟ್ಟಿಗೆ ಹೇಳುವುದಾದರೆ ಅವನ ಕೈಕೆಳಗೆ ಸ್ನಾತಕೋತ್ತರ ವಿದ್ಯಾರ್ಥಿಗಳು ಇರಬೇಕು. ಅವನು ಸ್ವತಃ ಮೌಲಿಕ ಕಾರ್ಯವನ್ನು ಮಾಡುತ್ತಿರಬೇಕು. ಈ ಪ್ರೌಢ ವಿದ್ಯಾರ್ಥಿಗಳ ಸಹಕಾರದಿಂದ ಅವನಿಗೆ ಗಣನೀಯವಾದ ನೆರವು ದೊರೆಯುತ್ತದೆ. ಅವರು ವ್ಯಕ್ತಪಡಿಸುವ ಕಷ್ಟಗಳೇ ಅನೇಕ ಸೂಚನೆಗಳಿಂದ ತುಂಬಿ ತುಳುಕುತ್ತಿರುತ್ತವೆ; ಅವರ ನಂಬಿಕೆ ಮತ್ತು ಉತ್ಸಾಹಗಳೇ ನವೋಲ್ಲಾಸ ಮತ್ತು ಶಕ್ತಿಗಳ ಸ್ಫೂರ್ತಿ ಕೇಂದ್ರಗಳಾಗಿರುತ್ತವೆ. ಒಂಟಿ ಕಾರ್ಯಕರ್ತರನ್ನು ಆಕ್ರಮಿಸಿ ನಿಲ್ಲುವ ಸಂಭವವಿರುವ ಉತ್ಸಾಹಭಂಗದ ಪ್ರವೃತ್ತಿ ಮತ್ತು ಸೋಮಾರಿತನದ ಮನೋಧರ್ಮದ ಹಿಡಿತಗಳಿಂದ ಅವನು ಪಾರಾಗುತ್ತಾನೆ. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಿಗಿಂತ ಉನ್ನತ ವರ್ಗದ ಅಧ್ಯಾಪಕರು ಇರುವ ಪ್ರಶ್ನೆಯೇ ಇಲ್ಲ. ಇಲ್ಲವಾದಲ್ಲಿ, ಇಡೀ ವಿಶ್ವವಿದ್ಯಾನಿಲಯದ ಸ್ಥಾನ ಮಾನವೇ ಅಧೋಗತಿಗೆ ಪಕ್ಕಾಗುತ್ತದೆ. ಇತ್ತ ಅತ್ಯುತ್ಕೃಷ್ಟ ಶ್ರೇಣಿಯ ವಿಶ್ವವಿದ್ಯಾನಿಲಯದ ಅಧ್ಯಾಪಕ ತನ್ನದೇ ಆದ ವಿಧಾನಗಳಲ್ಲಿ ತಾನು ಈಗಾಗಲೇ ತರಬೇತಿ ನೀಡಲು ಆರಂಭಿಸಿರುವಂಥ ವಿದ್ಯಾರ್ಥಿಗಳನ್ನೇ ತನ್ನ ಸ್ನಾತಕೋತ್ತರ ವಿದ್ಯಾರ್ಥಿಗಳನ್ನಾಗಿ ಹೊಂದಲು ಅಪೇಕ್ಷಿಸುವುದು ಸಹಜವೇ ಆಗಿದೆ. ಇಷ್ಟಾಗಿಯೂ ಅವನ ಪ್ರಯೋಗಶಾಲೆ ಅಥವಾ ವಿಚಾರಗೋಷ್ಠಿ ಇತರ ವಿಶ್ವವಿದ್ಯಾನಿಲಯಗಳಿಂದ ಬರುವ ಯಾವುದೇ ವಿಶ್ವವಿದ್ಯಾನಿಲಯಕ್ಕೂ ಸೇರದಿರುವ ವಿದ್ಯಾರ್ಥಿಗಳಿಗೂ, ಅಂತೆಯೇ ಲಂಡನ್ ವಿಶ್ವವಿದ್ಯಾನಿಲಯದ ಇತರ ಅಧ್ಯಾಪಕರಿಗೂ ತೆರೆದಿರುತ್ತದೆ. ಕೊಳು–ಕೊಡೆ ಬೃಹತ್ ಪ್ರಮಾಣದಲ್ಲಿಯೇ ನಡೆಯಬೇಕು. ಅನೇಕ ವೇಳೆ ಒಂದೇ ವಿಷಯದಲ್ಲಿನ ಒಬ್ಬರಿಗಿಂತಲೂ ಹೆಚ್ಚು ಅಧ್ಯಾಪಕರ ಕೈಕೆಳಗೆ ಅಭ್ಯಾಸ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಲಾಭವಾಗಬಹುದು. ಆದರೆ ಇದು ಉನ್ನತಸ್ತರದ ಕಾರ್ಯವನ್ನು ಕೆಳಸ್ತರದ ಕಾರ್ಯದಿಂದ ಪ್ರತ್ಯೇಕಿಸುವುದಕ್ಕಿಂತಲೂ ಸಂಪೂರ್ಣವಾಗಿ ಭಿನ್ನವಾಗಿರುವ ವಿಚಾರ. ಅತ್ಯುತ್ಕೃಷ್ಟ ಕಾರ್ಯವನ್ನು ಕೈಗೊಳ್ಳದಂತೆ ಯಾವುದೇ ರೀತಿಯಲ್ಲಿ ನಿರ್ಬಂಧಗಳನ್ನು ಒಡ್ಡಿದ್ದೇ ಆದರೆ ಅಥವಾ ಅತ್ಯುತ್ತಮ ವಿದ್ಯಾರ್ಥಿಗಳನ್ನು ಸೆಳೆದುಕೊಳ್ಳಲು ಸಾಧ್ಯವಾಗುವಂತೆ ತಮ್ಮ ಬಲೆಯುನ್ನು ವಿಸ್ತಾರವಾಗಿ ಹರಡಲು ಅಡ್ಡಿಯನ್ನುಂಟುಮಾಡಿದ್ದೇ ಆದರೆ, ವಿಶ್ವವಿದ್ಯಾನಿಲಯದ, ಪ್ರಾಧ್ಯಾಪಕ ಹುದ್ದೆಗಳಿಗೆ ಅತ್ಯುತ್ತಮ ವ್ಯಕ್ತಿಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆಂದು ನಾವು ಭಾವಿಸಲಾಗುವುದಿಲ್ಲ."

"೭೧. ಸ್ನಾತಕೋತ್ತರ ವಿದ್ಯಾರ್ಥಿಗಳು ಬೇರೆ ಬೇರೆ ಸಂಸ್ಥೆಗಳಿಗೆ ಸ್ಥಳಾಂತರಗೊಳ್ಳಬೇಕಾಗುವಂಥ ವ್ಯವಸ್ಥೆ ಸ್ನಾತಕಪೂರ್ವ ವಿದ್ಯಾರ್ಥಿಗಳಿಗೆ ತುಂಬ ಅನಾನುಕೂಲವನ್ನು ಉಂಟುಮಾಡುತ್ತದೆ.

ತಮಗಿಂತಲೂ ಹೆಚ್ಚು ಪ್ರೌಢ ಕಾರ್ಯದಲ್ಲಿ ತೊಡಗಿರುವಂಥ ಹಾಗೂ ತಮಗಿಂತಲೂ ಬಹಳ ದೂರದಲ್ಲಿ ಇಲ್ಲದಿರುವಂಥ, ಆದರೆ ಸಾಧಿಸಬಹುದಾದಂಥ ಆದರ್ಶದ ಆತ್ಮೀಯ ಸಾನ್ನಿಧ್ಯದ ಮೂಲಕ ತಮ್ಮನ್ನು ಪ್ರಚೋದಿಸಬಲ್ಲಂಥ ಹಾಗೂ ಪ್ರೋತ್ಸಾಹಿಸಬಲ್ಲಂಥ ವ್ಯಕ್ತಿಗಳ ಸತತ ಸಂಪರ್ಕದಲ್ಲಿ ಅವರು ಇರಬೇಕು."

ಬೋಧನೆಯಿಂದ ಬೇರ್ಪಟ್ಟಿರುವಂಥ ಪ್ರೌಢಸಂಶೋಧನ ಕಾರ್ಯದ ಅನರ್ಥಕಾರಿ ಪರಿಣಾಮಗಳು ಕನಿಷ್ಠಪಕ್ಷ ನನಗಾದರೂ ಸುವ್ಯಕ್ತವಾಗಿವೆ. ಲಂಡನ್ ವಿಶ್ವವಿದ್ಯಾನಿಲಯ ಮತ್ತು ಇತರ ವಿಶ್ವವಿದ್ಯಾನಿಲಯಗಳಿಂದ ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಂಡು ಬಂದಿರುವ ಅನೇಕ ಭಾರತೀಯ ವಿದ್ಯಾರ್ಥಿಗಳು ಇವರಲ್ಲಿ ಕೆಲವರು ಶೈಕ್ಷಣಿಕ ಕ್ಷೇತ್ರದಲ್ಲಿನ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದರೂ– ತಮ್ಮ ವಿಷಯದ ಮೇಲೆ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುವಲ್ಲಿ ಸೋತುಹೋಗಿದ್ದಾರೆ ಎಂಬ ಅರ್ಥದಲ್ಲಿ ವಿಫಲರೇ ಆಗಿದ್ದಾರೆ. ಅವರ ಪದವಿಪೂರ್ವ ತರಬೇತಿ ಅವರು ಕೈಗೊಂಡ ಪ್ರೌಢ ಸಂಶೋಧನ ಕಾರ್ಯಕ್ಕೆ ಸಂಪೂರ್ಣವಾಗಿ ಸಾಲದಾಗಿತ್ತು ಎಂಬುದರಲ್ಲಿ ಅವರ ಈ ವೈಫಲ್ಯದ ಕಾರಣವನ್ನು ಅರಸಬಹುದಾಗಿದೆ. ಸ್ನಾತಕೋತ್ತರ ತರಬೇತಿಯ ಮೂಲ ಮತ್ತು ಪರಿಕಲ್ಪನೆಗಳು ತೀರ ಈಚಿನವು ಎಂಬುದನ್ನು ಸಮಿತಿ ನೆನಪಿನಲ್ಲಿಟ್ಟುಕೊಳ್ಳಬೇಕು. ಕೇಂಬ್ರಿಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಗಳು ಸ್ನಾತಕೋತ್ತರ ವಿಭಾಗಗಳನ್ನು ಹೊಂದಿರದಿದ್ದರೂ, ಅಲ್ಲಿನ ಅನೇಕ ವ್ಯಕ್ತಿಗಳು ಅನೇಕ ಉತ್ಕೃಷ್ಟ ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಈಗಲೂ ಆಕ್ಸ್‌ಫರ್ಡ್, ಕೇಂಬ್ರಿಜ್ ಮತ್ತು ಲಂಡನ್ನಲ್ಲಿನ ಸ್ನಾತಕೋತ್ತರ ಸಂಶೋಧನ ಕಾರ್ಯವನ್ನು ನಿರ್ದೇಶಿಸುವ ಕೆಲಸವನ್ನು ಅವರು ಅದೆಷ್ಟು ಪ್ರಶಂಸನೀಯವಾಗಿ ಮಾಡುತ್ತಿದ್ದಾರೆಂದರೆ ಜಗತ್ತಿನ ಎಲ್ಲ ಭಾಗಗಳಿಂದಲೂ ಅವರು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದಾರೆ. ಇದಕ್ಕೆ ಕಾರಣವೇನೆಂದರೆ ಅವರ ಸ್ನಾತಕಪೂರ್ವ ತರಬೇತಿ ತುಂಬ ಉತ್ಕೃಷ್ಟ ದರ್ಜೆಯದಾಗಿತ್ತು. ಸ್ನಾತಕೋತ್ತರ ಸಂಶೋಧನ ಕಾರ್ಯದ ನಿರ್ದಿಷ್ಟ ವ್ಯವಸ್ಥೆಯೊಂದನ್ನು ಬೆಳೆಸಿಕೊಂಡು ಸಂಶೋಧನ ಕಾರ್ಯದ ನಿರ್ದಿಷ್ಟ ವ್ಯವಸ್ಥೆಯೊಂದನ್ನು ಬೆಳೆಸಿಕೊಂಡು ಬರುವುದು ವಿಶ್ವವಿದ್ಯಾನಿಲಯದ ಉದ್ದೇಶವಾಗಿದ್ದರೆ, ಸ್ನಾತಕರನ್ನು ಚೆನ್ನಾಗಿ ತರಬೇತುಗೊಳಿಸುವ ಕಾರ್ಯವನ್ನು ಅದು ಕೈಗೆತ್ತಿಕೊಳ್ಳಬೇಕು.

(೨) ಎರಡನೆಯದಾಗಿ, ತನ್ನದೇ ಆದ ಸಿಬ್ಬಂದಿಯಿಂದ ಸ್ನಾತಕೋತ್ತರ ವಲಯದಲ್ಲಿನ ಬೋಧನೆಯನ್ನು ನಿರ್ವಹಿಸುವ ನೇರವಾದ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯವೇ ವಹಿಸಿಕೊಳ್ಳುವುದು. ಇದನ್ನು ಮಹತ್ತರವಾದ ಒಂದು ಸುಧಾರಣೆ ಎಂಬುದಾಗಿ ಪರಿಗಣಿಸಲಾಗಿದೆ. ಆದರೆ ಇದು ವಿಶ್ವವಿದ್ಯಾನಿಲಯ ಸಿಬ್ಬಂದಿಯನ್ನು ಪ್ರತಿಪಕ್ಷದಲ್ಲಿರಿಸುವ ಹಾಗೂ ಕಾಲೇಜು ಸಿಬ್ಬಂದಿಗೆ ವಿರುದ್ಧವಾದ ನೆಲೆಯಲ್ಲಿರಿಸುವ ಅಸಂತೋಷಕರ ಪರಿಣಾಮವನ್ನುಂಟುಮಾಡುವ ಪ್ರವೃತ್ತಿಗೆ ಎಡೆಮಾಡಿಕೊಡುತ್ತದೆ. ಔಪಚಾರಿಕವಾದ ಮತ್ತು ಕಾರ್ಯತಃ ಶಾಶ್ವತವಾದ ಕೆಳಸ್ತರದ ಕಾರ್ಯಕ್ಕೆ ಕಾಲೇಜುಗಳನ್ನು ಸೀಮಿತಗೊಳಿಸಿಬಿಡುವುದರ ಮೂಲಕ ಅಕಾರಣವಾಗಿ ತಮ್ಮ ಸ್ಥಾನಮಾನಗಳನ್ನು ಇಳಿಕೆಗೈಯಲಾಗಿದೆ ಎಂದು ಕಾಲೇಜಿನ ಸಿಬ್ಬಂದಿ ಭಾವಿಸುವಂತಾಗುತ್ತದೆ.

(೩) ಮೂರನೆಯದಾಗಿ, ಸ್ನಾತಕೋತ್ತರ ಕಾರ್ಯಗಳಿಗಾಗಿ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರ ಒಂದು ವಿಶಿಷ್ಟ ವರ್ಗವನ್ನು ಸ್ಥಾಪಿಸುವುದು ವಿಶ್ವವಿದ್ಯಾನಿಲಯದ ಸಂಪನ್ಮೂಲಗಳ ಅಪವ್ಯಯ ಮಾತ್ರವಾಗಿದ್ದು, ಕಾಲೇಜುಗಳ ಸಂಪನ್ಮೂಲಗಳನ್ನು ಮಿತವ್ಯಯದಿಂದ ಬಳಸುವ ಮೂಲಕ ಇದನ್ನು ಸುಲಭ

ವಾಗಿಯೇ ನಿವಾರಿಸಬಹುದು. ನಮ್ಮ ವಿಶ್ವವಿದ್ಯಾನಿಲಯ ಶಿಕ್ಷಣದ ವ್ಯವಸ್ಥೆಯಲ್ಲಿ ಕಾಲೇಜುಗಳು ಮಾತ್ರವೇ ಕಲಿಕೆಯ ತಾಣಗಳಾಗಿವೆ. ಆದರೆ ಈಗ ಅವು ಪ್ರತ್ಯೇಕ ಸಂಸ್ಥೆಗಳ ಆಸ್ತಿಗಳಾಗಿಬಿಟ್ಟಿವೆ. ಪ್ರತಿಯೊಂದು ಕಾಲೇಜಿನ ಆಡಳಿತವೂ ಪ್ರತ್ಯೇಕ ಆಡಳಿತ ಮಂಡಳಿಯ ಸುಪರ್ದಿಗೆ ಒಳಪಟ್ಟಿರುತ್ತದೆ. ಕಾಲೇಜು ಗಳಿಸಿದ ಆದಾಯ ಅದರ ನಿಧಿಗೇ ಹೋಗುತ್ತದೆ. ಅಗತ್ಯವಾದ ವೆಚ್ಚಗಳನ್ನು ಭರಿಸಿದ ತರುವಾಯ ಹೆಚ್ಚುವರಿ ಹಣವೇನಾದರೂ ಉಳಿದಿದ್ದರೆ, ಅದು ಈ ನಿಧಿಯನ್ನು ಉಬ್ಬಿಸುವ ಉದ್ದೇಶವನ್ನಷ್ಟೇ ಈಡೇರಿಸುತ್ತದೆ. ಪ್ರತಿಯೊಂದು ಕಾಲೇಜೂ, ಉಳಿದ ಕಾಲೇಜುಗಳಂತೆ, ಅವೇ ವಿಷಯಗಳನ್ನು ಬೋಧಿಸುತ್ತವೆ. ಹೀಗಾಗಿ ಅದು ಪ್ರತ್ಯೇಕ ಗ್ರಂಥಾಲಯಗಳನ್ನು, ಪ್ರಯೋಗಾಲಯಗಳನ್ನು ಒದಗಿಸಲು ಬದ್ಧವಾಗಿರುವಂಥ "ಕಿರು" ವಿಶ್ವವಿದ್ಯಾನಿಲಯವೇ ಆಗಿರುತ್ತದೆ. ಈ ಕಾಲೇಜುಗಳು ಸ್ವಾಯತ್ತ ಸಂಸ್ಥೆಗಳೇ ಆಗಿದ್ದರೂ ಅವುಗಳಲ್ಲಿ ಯಾವುದೂ ಪ್ರಥಮ ದರ್ಜೆಯ ಹಾಗೂ ಅಗತ್ಯವಾಗಿರುವಷ್ಟು ಪ್ರಮಾಣದ ಸಿಬ್ಬಂದಿಯನ್ನು ನೇಮಿಸಿ ಕೊಳ್ಳುವಷ್ಟರ ಮಟ್ಟಿಗೆ ಮತ್ತು ಗ್ರಂಥಾಲಯಗಳ ಹಾಗೂ ಪ್ರಯೋಗಾಲಯಗಳ ರೂಪದಲ್ಲಿ ಪ್ರಥಮ ದರ್ಜೆಯ ಮತ್ತು ಅಗತ್ಯವಾಗಿರುವಷ್ಟು ಪ್ರಮಾಣದ ಉಪಕರಣಗಳನ್ನು ಒದಗಿಸುವಷ್ಟರ ಮಟ್ಟಿಗೆ ಆರ್ಥಿಕ ವಾಗಿ ಶ್ರೀಮಂತವಾಗಿರುವಂಥ ಸಂಸ್ಥೆಯಾಗಿರುವುದಿಲ್ಲ. ಅವುಗಳ ಸೂಕ್ಷ್ಮ ಸಂಪನ್ಮೂಲ ಸ್ಥಿತಿಯಿಂದಾಗಿ ಕಾಲೇಜಿನ ಸಿಬ್ಬಂದಿ ಪರಿಪೂರ್ಣವಾಗಿರುವುದಿಲ್ಲ ಹಾಗೂ ಅತಿಯಾದ ಹೊರೆಯನ್ನು ಹೊತ್ತಿರುತ್ತದೆ. ಅನೇಕ ವಿಷಯಗಳನ್ನು ಬೋಧಿಸಬೇಕಾಗಿ ಬರುವುದರಿಂದ ಅವನು ಪರಿಣತಿ ಪಡೆಯುವುದು ಅಸಾಧ್ಯವೇ ಆಗುತ್ತದೆ. ಇದರಿಂದಾಗಿ ಈ ಪರಿಸ್ಥಿತಿಗಳಲ್ಲಿ ಕಾಲೇಜಿನ ಪ್ರಾಧ್ಯಾಪಕನಿಗೆ ಬೃಹತ್ ವಿಷಯವೊಂದರ ಸಣ್ಣ ಶಾಖೆಯ ಪರಿಣತನಾಗಲು ಪ್ರಚೋದನೆಯಾಗಲೀ, ಅವಕಾಶವಾಗಲೀ ಇಲ್ಲದಂತಾಗಿಬಿಡುತ್ತದೆ. ಸ್ವಾಯತ್ತ ಸ್ವಯಂ ನಿರ್ಭರ ಕಾಲೇಜುಗಳ ಈ ವ್ಯವಸ್ಥೆಯಿಂದ ಅನಿವಾರ್ಯವಾಗಿ ಬಡ ಪ್ರಾಧ್ಯಾಪಕ ವರ್ಗ, ಬಡ ಗ್ರಂಥಾಲಯಗಳು ಮತ್ತು ಬಡ ಪ್ರಯೋಗಾಲಯಗಳು ಅಲ್ಲಲ್ಲಿ ಚೆದುರಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ವಿವಿಧ ಕಾಲೇಜುಗಳಿಗೆ ಸೇರಿರುವ ಅಥವಾ ಅವುಗಳ ನಡುವೆ ಹಂಚಿಹೋಗಿರುವ ದೃಷ್ಟಿಯಿಂದ ನೋಡಿದಾಗ ಈಗಿರುವ ಸಂಪನ್ಮೂಲಗಳು ಸಾಲವು ಎಂದು ತೋರುವುವು. ಇದರಿಂದ ಈ ಕಾಲೇಜುಗಳ ಒಟ್ಟಾರೆ ಸಂಪನ್ಮೂಲಗಳು ಮುಂಬಯಿ ವಿಶ್ವವಿದ್ಯಾನಿಲಯದ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಬೋಧನಾಕಾರ್ಯದ ಹೊಣೆಯನ್ನು ಭರಿಸುವಷ್ಟು ಬೃಹತ್ ಪ್ರಮಾಣದಲ್ಲೇನೂ ಇಲ್ಲವೆಂಬ ತೀರ್ಮಾನಕ್ಕೇನೂ ಬರಲಾಗುವುದಿಲ್ಲ. ಉದಾಹರಣೆಗೆ ಮುಂಬಯಿ ನಗರದಲ್ಲಿ ನೆಲೆಗೊಂಡಿರುವ ಕಾಲೇಜುಗಳಲ್ಲಿ ಅರ್ಥಶಾಸ್ತ್ರದ ಬೋಧನೆಗಾಗಿ ಇರುವ ಸಂಪನ್ಮೂಲಗಳನ್ನು ಪರಿಶೀಲಿಸಬಹುದು.

ಮುಂಬಯಿ ನಗರದಲ್ಲಿರುವ ಈ ಕೆಳಗೆ ಕಾಣಿಸಿರುವ ಕಾಲೇಜುಗಳು ಮುಂಬಯಿ ವಿಶ್ವವಿದ್ಯಾನಿಲಯ ಬಿ.ಎ. ಪದವಿ ಶಿಕ್ಷಣದಲ್ಲಿ ಅರ್ಥಶಾಸ್ತ್ರದಲ್ಲಿ ತರಬೇತಿ ಅವಕಾಶವನ್ನು ಒದಗಿಸಿವೆ: (೧) ಎಲ್‌ಫಿನ್‌ಸ್ಟನ್ ಕಾಲೇಜು. (೨) ವಿಲ್ಸನ್ ಕಾಲೇಜು. (೩) ಸಂತ ಕ್ಸೇವಿಯರ್ ಕಾಲೇಜು ಮತ್ತು (೪) ಸೈಡೆನ್‌ಹ್ಯಾಮ್ ಕಾಲೇಜು. ಸಂತ ಕ್ಸೇವಿಯರ್ ಕಾಲೇಜಿನಲ್ಲಿ ಇಬ್ಬರೂ, ಸೈಡೆನ್‌ಹ್ಯಾಮ್ ಕಾಲೇಜಿನಲ್ಲಿ ಆರು ಮಂದಿಯೋ ಅಥವಾ ಅದಕ್ಕಿಂತಲೂ ಹೆಚ್ಚು ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಇಬ್ಬರು ಅರ್ಥಶಾಸ್ತ್ರವನ್ನು ಬೋಧಿಸುತ್ತಿದ್ದಾರೆ. ಒಟ್ಟಿನಲ್ಲಿ ಮುಂಬಯಿ ನಗರದಲ್ಲಿ ಅರ್ಥಶಾಸ್ತ್ರ ಬೋಧನೆಯಲ್ಲಿ ಸುಮಾರು ೧೨ ಮಂದಿ ಅಧ್ಯಾಪಕರು ನಿರತರಾಗಿದ್ದಾರೆ. ಒಂದು ವಿಷಯದ ಬೋಧನೆಯಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯ ಅಧ್ಯಾಪಕರು ನಿರತರಾಗಿರುವಂಥ ಬೇರಾವುದೇ ವಿಶ್ವವಿದ್ಯಾನಿಲಯದ ನಿದರ್ಶನವನ್ನು ನಾನು ಈ ಜಗತ್ತಿನಲ್ಲಿ ಕಂಡಿಲ್ಲ. ಇಷ್ಟಾಗಿಯೂ ಮತ್ತಷ್ಟು ಉತ್ತಮವಾದ ವ್ಯವಸ್ಥೆಯ ಅಭಾವದಿಂದಾಗಿಯೇ ಪ್ರಾಧ್ಯಾಪಕರ ಬಾಹುಳ್ಯ

ವ್ಯರ್ಥವಾಗಿ ಪರಿಣಮಿಸುತ್ತಿದೆ. ಈ ವ್ಯರ್ಥತೆಯನ್ನು ತಡೆಗಟ್ಟಲು ಪ್ರಯತ್ನಿಸುವುದಕ್ಕೆ ಬದಲಾಗಿ ಈ ದಂಡಿಗೆ ತನ್ನವರೇ ಆದ ಇನ್ನಿತರ ಪ್ರಾಧ್ಯಾಪಕರನ್ನು ಸೇರಿಸುವ ಮೂಲಕ ವಿಶ್ವವಿದ್ಯಾನಿಲಯವು ಈ ವ್ಯರ್ಥತೆಯನ್ನು ಇನ್ನಷ್ಟು ಹೆಚ್ಚಿಸಿದೆ.

ತಮ್ಮ ಬೋಧನ ಮತ್ತು ಗ್ರಂಥಾಲಯ ಸಂಪನ್ಮೂಲಗಳನ್ನು ಒಂದುಗೂಡಿಸುವಂತೆ ಈ ಕಾಲೇಜುಗಳನ್ನು ಪ್ರೋತ್ಸಾಹಿಸಲು ಸಾಧ್ಯವಾದಲ್ಲಿ ಅದು ವಿಶೇಷ ಪರಿಣತಿ ಹೊಂದಿದ ಪ್ರಾಧ್ಯಾಪಕ ವರ್ಗವೊಂದನ್ನು ರೂಪಿಸುತ್ತದೆ ಎಂಬುದು ಸ್ಪಷ್ಟವಾಗಿಯೇ ಇದೆ. ಅಷ್ಟೇ ಅಲ್ಲ, ಅರ್ಥಶಾಸ್ತ್ರದ ಬಗ್ಗೆ ವಿಶ್ವವಿದ್ಯಾನಿಲಯದ ಎರಡು ಪ್ರಾಧ್ಯಾಪಕ ಪೀಠಗಳ ಬಗೆಗಿನ ವಿಶ್ವವಿದ್ಯಾನಿಲಯ ಸಂಪನ್ಮೂಲಗಳ ವ್ಯರ್ಥತೆಯನ್ನು ನಿವಾರಿಸಬಲ್ಲದು. ಇದನ್ನು ಸಾಧ್ಯವಾಗಿಸಬೇಕಾದರೆ ಈ ಹನ್ನೆರಡು ಮಂದಿಯೂ ಒಂದುಗೂಡಿ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಪಠ್ಯಕ್ರಮವನ್ನು ನಿರ್ವಹಿಸುವ ಹೊಣೆಯನ್ನು ತಮ್ಮಲ್ಲಿ ಹಂಚಿಕೊಳ್ಳುವಂಥ ಹಾಗೂ ಯಾವುದೇ ಕಾಲೇಜಿನಲ್ಲಿ ಸೇರ್ಪಡೆಗೊಂಡಿದ್ದರೂ ಅದನ್ನು ಲೆಕ್ಕಿಸದೆ ಆ ಶಿಕ್ಷಣವನ್ನು ಪಡೆಯ ಬಯಸುವ ಎಲ್ಲ ವಿದ್ಯಾರ್ಥಿಗಳಿಗೂ ಉಪನ್ಯಾಸ ಮಾಡಲು ಒಪ್ಪುವಂಥ ವ್ಯವಸ್ಥೆಯನ್ನು ನಾವು ಏರ್ಪಡಿಸಬೇಕು. ಮುಂಬಯಿ ನಗರದಲ್ಲಿನ ಕಾಲೇಜುಗಳಲ್ಲಿನ ಇತರ ವಿಷಯಗಳ ಬೋಧನೆಗೂ ಇದೇ ಯೋಜನೆಯನ್ನು ಅಳವಡಿಸಿಕೊಳ್ಳಬಹುದು. ಈ ಉಪನ್ಯಾಸಗಳಿಗೆ ಹಾಜರಾಗಲು ವಿದ್ಯಾರ್ಥಿಗಳು ಒಂದು ಕಾಲೇಜಿನಿಂದ ಇನ್ನೊಂದು ಕಾಲೇಜಿಗೆ ಅಲೆದಾಡಬೇಕಾಗಿ ಬರುತ್ತದೆಂಬುದೇ ಬಹುಶಃ ಇಲ್ಲಿ ಎದುರಾಗುವ ಏಕೈಕ ತೊಂದರೆ. ಈ ತೊಂದರೆಯನ್ನು ಸುಲಭವಾಗಿಯೇ ನಿವಾರಿಸಬಹುದು. ರಾಜ್ಯಶಾಸ್ತ್ರದ ಬಗೆಗಿನ ಎಲ್ಲ ಉಪನ್ಯಾಸಗಳನ್ನು ಸೈಡೆನ್ ಹ್ಯಾಮ್ ಕಾಲೇಜಿನಲ್ಲಿ ನೀಡತಕ್ಕದ್ದು, ತತ್ವಶಾಸ್ತ್ರ ಮತ್ತು ಮನಃಶಾಸ್ತ್ರದ ಎಲ್ಲ ಉಪನ್ಯಾಸಗಳನ್ನು ವಿಲ್ಸನ್ ಕಾಲೇಜಿನಲ್ಲಿ ನೀಡತಕ್ಕದ್ದು ಹಾಗೂ ಸಾಹಿತ್ಯ ಮತ್ತು ಭಾಷೆಗಳನ್ನು ಕುರಿತ ಎಲ್ಲ ಉಪನ್ಯಾಸಗಳನ್ನು ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ನೀಡತಕ್ಕದ್ದು ಎಂದು ಏರ್ಪಾಡು ಮಾಡಬಹುದೆಂದು ನಾನು ಸೂಚಿಸಬಯಸುತ್ತೇನೆ. ವಿದ್ಯಾರ್ಥಿಗಳು ಪದೇಪದೇ ಕಾಲೇಜಿನಿಂದ ಕಾಲೇಜಿಗೆ ಅಲೆದಾಡುವುದನ್ನು ಈ ವ್ಯವಸ್ಥೆಯಿಂದ ಸಂಪೂರ್ಣವಾಗಿ ನಿವಾರಿಸಬಹುದು. ಕಾಲೇಜುಗಳನ್ನು ನಿರ್ದಿಷ್ಟ ವಿಷಯಗಳಲ್ಲಿನ ಉಪನ್ಯಾಸ ಭವನಗಳೆಂದು ಘೋಷಿಸಬೇಕು. ಅಧ್ಯಾಪಕರು ತಮ್ಮ ತಮ್ಮ ಕಾಲೇಜಿನ ಆಡಳಿತ ವ್ಯವಸ್ಥೆಯ ಅಧೀನದಲ್ಲೇ ಇದ್ದುಕೊಂಡು ಏಕರೂಪದ ಸಮೂಹವಾಗಿ ಸಂಮಿಲನಗೊಂಡಿರತಕ್ಕದ್ದು ಹಾಗೂ ಅವರುಗಳು ಯಾವ ವಿಷಯವನ್ನು ಬೋಧಿಸುತ್ತಾರೋ ಆ ವಿಷಯಕ್ಕೆ ನಿಗದಿಪಡಿಸಲಾದ ಕಾಲೇಜಿನಲ್ಲಿ ಅವರಿಗೆ ಕೋಣೆಗಳು ಒದಗಿಸಿರತಕ್ಕದ್ದು. ಅವು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಎಲ್ಲ ಕಾಲೇಜುಗಳ ಗ್ರಂಥಾಲಯ ಭಾಗಗಳನ್ನು ಒಳಗೊಂಡಿರತಕ್ಕದ್ದು.

ವಿಶ್ವವಿದ್ಯಾನಿಲಯ ಒಂದು ಕೇಂದ್ರೀಕೃತ ಸಂಸ್ಥೆಯಾಗಿರಬೇಕು ಎಂಬ ಮಾತನ್ನು ನಾನು ಒಪ್ಪುತ್ತೇನೆ. ಸಮಗ್ರ ರೂಪದಲ್ಲಿ ಹೊಸ ವಿಶ್ವವಿದ್ಯಾನಿಲಯದ ಯೋಜನೆಯನ್ನು ಹಾಕಿಕೊಳ್ಳುವುದಾದರೆ ಮಾನ್ಯತೆ ನೀಡಲಾಗುವ ಕಾಲೇಜುಗಳನ್ನು ಒಳಗೊಂಡಿರುವಂಥ ಮಾದರಿಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ವಿಚಾರವನ್ನು ಹೊರತುಪಡಿಸುವುದೇ ಉತ್ತಮ. ಮುಕ್ತವಾಗಿ ಹರಡಿಕೊಂಡಿರುವಂತೆ ವಿಶ್ವವಿದ್ಯಾನಿಲಯಗಳನ್ನು ಬಿತ್ತಿ ಬೆಳೆಸಲಾಗುವುದಿಲ್ಲವೆಂಬುದನ್ನು ಕಾಲೇಜಿನ ಸ್ಥಾನಮಾನದ ಅನೇಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿರುವಾಗ ಕೇಂದ್ರೀಕೃತ ಸಂಸ್ಥೆಯೊಂದರ ಯಶಸ್ಸನ್ನು ಸಾಧಿಸುವ ಸಲುವಾಗಿ ಅವುಗಳನ್ನೆಲ್ಲ ಲಘುವಾಗಿ ಪರಿಗಣಿಸಿ ರದ್ದುಪಡಿಸಲಾಗುವುದಿಲ್ಲವೆಂಬುದನ್ನು ನಾವು ಮಾನ್ಯ ಮಾಡಲೇಬೇಕಾಗುತ್ತದೆ. ನಾನು ಮುಂದಿರಿಸಿರುವ ಯೋಜನೆಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣದ ಗುಣಮಟ್ಟವನ್ನಾಗಲೀ ಕಾಲೇಜುಗಳ

ಸ್ವಾತಂತ್ರ್ಯವನ್ನಾಗಲೀ ಬಲಿಗೊಟ್ಟಿಲ್ಲ. ಆಡಳಿತಾತ್ಮಕವಾಗಿ ಕಾಲೇಜುಗಳು ಸ್ವತಂತ್ರವಾಗಿಯೇ ಉಳಿದಿರುತ್ತವೆ. ಶೈಕ್ಷಣಿಕವಾಗಿ ಅವು ವಿಶ್ವವಿದ್ಯಾನಿಲಯದ ಅಭಿನ್ನ ಅಂಗಗಳಾಗಿ ಪರಿಣಮಿಸುತ್ತವೆ. ಸಂಕ್ಷೇಪವಾಗಿ ಹೇಳಬೇಕೆಂದರೆ, ವಿಶ್ವವಿದ್ಯಾನಿಲಯವೇ ಕಾಲೇಜುಗಳ ರೂಪವನ್ನು ತಳೆದಿರುವ ಹಾಗೂ ಕಾಲೇಜುಗಳು ಒಂದುಗೂಡಿ ವಿಶ್ವವಿದ್ಯಾನಿಲಯವನ್ನು ರೂಪಿಸಿರುವ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳ ಸ್ಥಿತಿಯನ್ನು ಇದು ಹೋಲುತ್ತದೆ. ಅಂಥ ವ್ಯವಸ್ಥೆ ಈಗ ಅಸ್ತಿತ್ವದಲ್ಲಿರುವ ಕಾಲೇಜುಗಳ ಗರಿಷ್ಠ ಪ್ರಯೋಜನವನ್ನು ಪಡೆದುಕೊಳ್ಳುತ್ತದೆ ಹಾಗೂ ಅಪವ್ಯಯ ಅಥವಾ ವ್ಯರ್ಥತೆಯನ್ನು ನಿವಾರಿಸುತ್ತದೆ.

ಪ್ರಶ್ನೆ ೨೫: ವಿಶ್ವವಿದ್ಯಾನಿಲಯ ಶಿಕ್ಷಣವನ್ನು ವ್ಯವಸ್ಥೆಗೊಳಿಸುವ ನನ್ನ ಯೋಜನೆ ಕಾಲೇಜುಗಳ ಪರಸ್ಪರ ತುಂಬಾ ಹತ್ತಿರದಲ್ಲಿರುವಂಥ ಕೇಂದ್ರಗಳಿಗೆ ಮಾತ್ರವೇ ಅನ್ವಯಿಸುತ್ತದೆ. ವ್ಯಾಪಕ ಪ್ರಮಾಣದಲ್ಲಿ ಈ ಯೋಜನೆಯನ್ನು ಬಳಸಿಕೊಳ್ಳಬೇಕಾದರೆ ನಾವು ಮಾಡಬೇಕಾದ ಮೊದಲ ಕೆಲಸ, ಕಾಲೇಜುಗಳು ತುಂಬಾ ಹತ್ತಿರದಲ್ಲಿ ಸ್ಥಾಪಿತವಾಗುವಂತೆ ಅವುಗಳ ನಿವೇಶನವನ್ನು ನಿಯಂತ್ರಿಸುವುದು. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಎಲ್ಲ ಬಗೆಯ ಅನುಚಿತವಾದ ಹಾಗೂ ಬೆಳೆದುನಿಲ್ಲುವ ಭರವಸೆಯಿಲ್ಲದಿರುವಂಥ ಪಟ್ಟಣಗಳಲ್ಲಿ ಪ್ರತ್ಯೇಕ ಸ್ವಾಯತ್ತ ಕಾಲೇಜುಗಳನ್ನು ತೆರೆಯದಂತೆ ಉತ್ಸಾಹಿ ಶಿಕ್ಷಣವೇತ್ತರನ್ನು ತಡೆಗಟ್ಟುವುದು ಅಗತ್ಯವಾಗುತ್ತದೆ. ಇಂಥ ಪ್ರತ್ಯೇಕವಾದ ಹಾಗೂ ಚದುರಿಹೋಗಿರುವ ಕಾಲೇಜುಗಳ ಅಸ್ತಿತ್ವಕ್ಕಾಗಿ ಆಗುತ್ತಿರುವ ಅಪವ್ಯಯ, ಪುನರಾವರ್ತನೆ ಮತ್ತು ಸಂಪನ್ಮೂಲಗಳು ಹರಿದು ಹಂಚಿಹೋಗುವಿಕೆಗಳನ್ನು ನೆನೆದಾಗ, ಇಂಥ ಅನಾಯಕ ಸ್ಥಿತಿಯನ್ನು ಇದುವರೆಗೆ ಸಹಿಸಿಕೊಂಡು ಬಂದಿರುವ ಸಂಗತಿ ಯಾರಿಗಾದರೂ ಆಶ್ಚರ್ಯವನ್ನುಂಟುಮಾಡುತ್ತದೆ. ದೂರದೂರ ಹರಡಿಹೋಗಿರುವ ಕಾಲೇಜುಗಳು ಬಂಗಾಳದಲ್ಲಿ ಅತಿಯಾದ ಸಂಖ್ಯೆಯಲ್ಲಿ ಹಾಗೂ ಎಲ್ಲೆಂದರಲ್ಲಿ ತಲೆಯೆತ್ತಿರುವಂತೆ ಮುಂಬಯಿ ಪ್ರಾಂತ್ಯದಲ್ಲಿ ಆಗದೆ ಇರುವುದು ಅಷ್ಟರಮಟ್ಟಿಗೆ ನಮ್ಮ ಸೌಭಾಗ್ಯವೆಂದೇ ನಾನು ಪರಿಗಣಿಸಿದ್ದೇನೆ. ವಿಶ್ವವಿದ್ಯಾನಿಲಯ ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಂಡು ಬರಬೇಕಾದರೆ ಬೇರೆ ಬೇರೆ ಕಡೆ ಕಾಲೇಜುಗಳು ಸ್ವೇಚ್ಛೆಯಾಗಿ ಸ್ಥಾಪಿತವಾಗುವುದನ್ನು ಪ್ರತಿಬಂಧಿಸುವುದಕ್ಕೆ ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕು. ಈ ಉದ್ದೇಶಕ್ಕಾಗಿ ಮುಂಬಯಿ ಪ್ರಾಂತ್ಯ ವಿಶ್ವವಿದ್ಯಾನಿಲಯ ಶಿಕ್ಷಣದ ಕೇಂದ್ರಗಳನ್ನು ಈ ಸ್ಥಳಗಳಿಗೆ ನಿಗದಿಪಡಿಸಬೇಕೆಂದೂ ಬೇರಾವುದೇ ಸ್ಥಳದಲ್ಲಿ ಯಾವುದೇ ಕಾಲೇಜನ್ನು ತೆರೆಯಲು ಅವಕಾಶ ಕೊಡಕೂಡದೆಂದೂ ನಾನು ಸೂಚಿಸಬಯಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಈ ಕೆಳಗೆ ಕಾಣಿಸಿರುವ ಸ್ಥಳಗಳನ್ನು ವಿಶ್ವವಿದ್ಯಾನಿಲಯ ಶಿಕ್ಷಣದ ವಾಸ್ತವಿಕ ಅಥವಾ ಸಂಭಾವ್ಯ ಕೇಂದ್ರಗಳೆಂದು ಗೊತ್ತುಪಡಿಸಬಹುದು.

| | |
|---|---|
| I. ಮುಂಬಯಿ | VI. ಹೈದರಾಬಾದ್ (ಸಂಭಾವ್ಯ) |
| II. ಪುಣೆ | VII. ಧಾರವಾಡ (ಸಂಭಾವ್ಯ) |
| III. ಅಹಮದಾಬಾದ್ | VIII. ಸಾಂಗ್ಲಿ (ಸಂಭಾವ್ಯ) |
| IV. ಸೂರತ್ (ಸಂಭಾವ್ಯ) | IX. ನಾಸಿಕ್ (ಸಂಭಾವ್ಯ) |
| V. ಕರಾಚಿ | X. ಅಮಲ್‌ನೇರ್ (ಸಂಭಾವ್ಯ) |

ವಿಶ್ವವಿದ್ಯಾನಿಲಯ ಶಿಕ್ಷಣದ ಕೇಂದ್ರಗಳನ್ನು ಹೀಗೆ ಗೊತ್ತುಪಡಿಸಿದ ಬಳಿಕ ನಾವು ಮಾಡಬೇಕಾಗಿರುವ ಮುಂದಿನ ಕಾರ್ಯವೆಂದರೆ ಆ ಸ್ಥಳಗಳಲ್ಲಿನ ಬೋಧನೆಯನ್ನು ಸುವ್ಯವಸ್ಥಿತವಾಗಿಸುವುದು. ಮೇಲಿನ

ಬಹುತೇಕ ವಿಶ್ವವಿದ್ಯಾನಿಲಯ ಶಿಕ್ಷಣ ಕೇಂದ್ರಗಳಲ್ಲಿ ಸದ್ಯಕ್ಕೆ ಮಾನವಿಕ ವಿಷಯಗಳಲ್ಲಿ ಬೋಧನೆಯನ್ನು ಒದಗಿಸುತ್ತಿರುವ ಒಂದೊಂದು ಕಾಲೇಜು ಮಾತ್ರವೇ ಇದೆ. ಮುಂಬಯಿ ಮತ್ತು ಪುಣೆಯಲ್ಲಿ ಮಾತ್ರವೇ ಪರಸ್ಪರ ಬಹಳ ಹತ್ತಿರದಲ್ಲಿರುವ ಕಾಲೇಜುಗಳ ಸಮೂಹವೇ ಇದೆ. ವಿವಿಧ ಕಾಲೇಜುಗಳ ಸಿಬ್ಬಂದಿಯನ್ನು ಇಲಾಖೆಗಳಿಗಾಗಿ ಸಂಯೋಜಿಸುವ ಮತ್ತು ವಿನಿಮಯಗೊಳಿಸುವ ಮೂಲಕ ಈ ನಗರಗಳಲ್ಲಿರುವ ವಿಶ್ವವಿದ್ಯಾನಿಲಯ ಶಿಕ್ಷಣದ ಸಮಸ್ಯೆಯನ್ನು ಸುಲಭವಾಗಿಯೇ ಪರಿಹರಿಸಬಹುದು. ಸದ್ಯಕ್ಕೆ ಒಂದೇ ಒಂದು ಪ್ರತ್ಯೇಕ ಕಾಲೇಜು ಇರುವಂಥ ಸ್ಥಳಗಳಲ್ಲಿ ವಿಶ್ವವಿದ್ಯಾನಿಲಯ ಮಾದರಿಯ ಶಿಕ್ಷಣವನ್ನು ಒದಗಿಸುವ ಸಮಸ್ಯೆಯನ್ನು ಎರಡು ರೀತಿಗಳಲ್ಲಿ ಪರಿಹರಿಸಬಹುದು. (೧) ಈಗ ಇರುವ ಕಾಲೇಜುಗಳಿಗೆ ಬಹಳ ಹತ್ತಿರದಲ್ಲಿ ನಿರ್ದಿಷ್ಟವಾದ ಒಂದು ವಿಷಯದ ಬೋಧನೆಗಾಗಿ ಹೊಸ ಕಾಲೇಜುಗಳು ಸ್ಥಾಪಿತವಾಗುವಂತೆ ಮಾಡುವುದರ ಮೂಲಕ ಅಥವಾ (೨) ಈಗ ಇರುವ ಕಾಲೇಜನ್ನೇ ವಿಶ್ವವಿದ್ಯಾನಿಲಯವೆಂದು ಮಾನ್ಯ ಮಾಡಿ ಹೊಸ ಅಧ್ಯಯನ ವಿಭಾಗಗಳನ್ನು ಆರಂಭಿಸಿ ಅದರ ವಿಸ್ತರಣೆಗೆ ಅವಕಾಶ ಮಾಡಿಕೊಡುವುದರ ಮೂಲಕ, ಮೊದಲಿನ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಬಹುದೆಂದು ತೋರುತ್ತದೆ. ದಕ್ಷತೆಯ ದೃಷ್ಟಿಯಿಂದ ನೋಡಿದಾಗ ಎರಡನೆಯ ಯೋಜನೆಯೇ ಹೆಚ್ಚು ಉತ್ತಮವಾದುದೆಂದು ತೋರುತ್ತದೆ.

ಈ ನೀತಿಯನ್ನು ಅಳವಡಿಸಿಕೊಂಡರೆ, ಪ್ರಾಂತ್ಯದ ವಿವಿಧ ಭಾಗಗಳಲ್ಲಿನ ಶೈಕ್ಷಣಿಕ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಪ್ರಾಂತ್ಯದ ಆ ಭಾಗಗಳಲ್ಲಿ ಚೆದುರಿದಂತೆ ಹಲವು ಕಾಲೇಜುಗಳನ್ನು ಹೊಂದಿರುವುದಕ್ಕೆ ಬದಲಾಗಿ ಪ್ರಾಂತ್ಯದ ಆ ಭಾಗಗಳಲ್ಲಿನ ಶೈಕ್ಷಣಿಕ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಆ ಭಾಗಗಳಲ್ಲಿ ಇತರ ವಿಶ್ವವಿದ್ಯಾನಿಲಯಗಳನ್ನು ಹೊಂದುವುದು ನಮಗೆ ಸಾಧ್ಯವಾಗುತ್ತದೆ. ಹಾಗೆ ಮಾಡಿದಲ್ಲಿ ಕೇಂದ್ರೀಕೃತ ವಿಶ್ವವಿದ್ಯಾನಿಲಯದ ಆದರ್ಶವನ್ನು ನಾವು ಸಾಧಿಸದೆ ಹೋಗಬಹುದು. ಆದರೆ ವಿಶ್ವವಿದ್ಯಾನಿಲಯದ ಅಂಗಸಂಸ್ಥೆಗಳಾಗಿರುವ ಎಲ್ಲ ಕಾಲೇಜುಗಳೂ ಪರಸ್ಪರ ತುಂಬಾ ಹತ್ತಿರವಾಗಿ ವಿಶ್ವವಿದ್ಯಾನಿಲಯ ಆವರಣದಲ್ಲಿ ನೆಲೆಗೊಂಡಿದ್ದು ಬೌದ್ಧಿಕ ಸಹಕಾರದ ಪ್ರಯತ್ನದಲ್ಲಿ ಒಂದುಗೂಡುವ ಹಾಗೂ ವಿಶ್ವವಿದ್ಯಾನಿಲಯವನ್ನು ಜೀವಂತ ವ್ಯಕ್ತಿತ್ವವನ್ನುಳ್ಳ ಸಂಸ್ಥೆಯನ್ನಾಗಿಸುವ ಅತ್ಯುತ್ತಮವಾದುದಲ್ಲದಿದ್ದರೂ ಅಂತಹ ಆದರ್ಶವನ್ನಾದರೂ ಸಾಧಿಸಲು ನಮಗೆ ಸಾಧ್ಯವಾಗಬಹುದು.

ಪ್ರಶ್ನೆ ೨೮: ತತ್‌ಕ್ಷಣದಲ್ಲಿಯೇ ವಿಶ್ವವಿದ್ಯಾನಿಲಯಗಳಾಗಿ ವಿಸ್ತರಣೆಯನ್ನು ಪಡೆಯಲು ಮುಂಬಯಿ ಮತ್ತು ಪುಣೆ ನಗರಗಳು ಮಾತ್ರವೇ ಪರಿಪಕ್ವವಾಗಿವೆ. ಈ ಕೂಡಲೇ ಅವುಗಳನ್ನು ಪ್ರತ್ಯೇಕ ವಿಶ್ವವಿದ್ಯಾನಿಲಯಗಳಾಗಿ ನಿಗಮಿತಗೊಳಿಸಬೇಕೆಂದು ನಾನು ಸೂಚಿಸಬಯಸುತ್ತೇನೆ. ನಿಕಟ ಭವಿಷ್ಯದಲ್ಲಿ ಅಹಮದಾಬಾದ್ ಇದಕ್ಕೆ ಪರಿಪಕ್ವವಾಗುವ ಸಂಭವವಿದೆ. ಈಗಾಗಲೇ ಅದು ಒಂದು ಮಾನವಿಕ ಕಾಲೇಜನ್ನು, ವಿಜ್ಞಾನ ಸಂಸ್ಥೆಯನ್ನು ಹೊಂದಿದ್ದು, ಅದನ್ನು ವಿಶ್ವವಿದ್ಯಾನಿಲಯವಾಗಿ ಪರಿವರ್ತಿಸಬಹುದಾಗಿದೆ.

ಮೇಲೆ ಗುರುತಿಸಲಾಗಿರುವ ಕೇಂದ್ರಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಗುವವರೆಗೆ ಲಂಡನ್ ವಿಶ್ವವಿದ್ಯಾನಿಲಯದಂತೆ ತಮ್ಮ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಇತರ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪದವಿಗಳನ್ನು ನೀಡಲು ಅಗತ್ಯವಾದ ಏರ್ಪಾಟುಗಳನ್ನು ಮಾಡಲು ಸಾಧ್ಯವಾಗುವಂತೆ ಮುಂಬಯಿ, ಪುಣೆ ಮತ್ತು ಅಹಮದಾಬಾದಿನಲ್ಲಿನ ಮೂರೂ ವಿಶ್ವವಿದ್ಯಾನಿಲಯಗಳು ಬಾಹ್ಯ ವಿಭಾಗಗಳನ್ನು ಹೊಂದಿರಬೇಕು.

ಈ ಪ್ರಾಂತ್ಯದಲ್ಲಿ ಸ್ಥಾಪಿತವಾಗಲಿರುವ ವಿಶ್ವವಿದ್ಯಾನಿಲಯಗಳು ಕೇಂದ್ರೀಕೃತ ಸಂಸ್ಥೆಗಳಾಗಿ

ರೂಪುದಳೆಯುವುದಾದಲ್ಲಿ ಈ ಪ್ರಶ್ನೆಗಳಲ್ಲಿ ಎತ್ತಲಾಗಿರುವ ಸಮಸ್ಯೆಗಳು ಉದ್ಭವಿಸುವುದೇ ಇಲ್ಲ. ಏಕೆಂದರೆ ಆಗ ವಿಶ್ವವಿದ್ಯಾನಿಲಯ ತನ್ನ ಸಿಬ್ಬಂದಿಯ ಮೇಲೆ ಮತ್ತು ಬೋಧನ ವ್ಯವಸ್ಥೆಗಳ ಮೇಲೆ ಪೂರ್ಣ ನಿಯಂತ್ರಣವನ್ನಿರಿಸಿಕೊಂಡಿರುತ್ತದೆ. ಆದರೆ ಭವಿಷ್ಯದ ನಮ್ಮ ವಿಶ್ವವಿದ್ಯಾನಿಲಯಗಳು ಅಂಗಸಂಸ್ಥೆಗಳ ಅಥವಾ ಘಟಕಗಳ ರೂಪದಲ್ಲಿರುವ ಕಾಲೇಜುಗಳ ಸಮೂಹವಾಗಿದ್ದು, ಆ ಎಲ್ಲ ಕಾಲೇಜುಗಳು ತಮ್ಮ ವ್ಯವಸ್ಥೆಯ ದೃಷ್ಟಿಯಿಂದ ಸ್ವತಂತ್ರವಾಗಿರುತ್ತದೆ. ಕನಿಷ್ಠಪಕ್ಷ ಮುಂಬಯಿ ಮತ್ತು ಪುಣೆಗಳಲ್ಲಿನ ಹೊಸ ವಿಶ್ವವಿದ್ಯಾನಿಲಯಗಳನ್ನು ಹೊಂದಿರುವ ಯೋಜನೆಯ ಮೇರೆಗೆ ಈ ಕಾಲೇಜುಗಳು ಆಗಲೂ ವಿಶ್ವವಿದ್ಯಾನಿಲಯ ಶಿಕ್ಷಣವನ್ನೊದಗಿಸಲು ವಿಶ್ವವಿದ್ಯಾನಿಲಯದಿಂದ ಪರವಾನಗಿಯನ್ನು ಪಡೆದಿರುವಂಥ ಕೇಂದ್ರಗಳಾಗಿಯೇ ಮುಂದುವರಿಯುತ್ತವೆ. ಅಂತರ ಕಾಲೇಜು ಬೋಧನೆಯ ಯೋಜನೆ ಅಂಗಸಂಸ್ಥೆ ಕಾಲೇಜುಗಳ ವತಿಯಿಂದ ಅಪವ್ಯಯ ಪುನರಾವರ್ತನೆ ಮತ್ತು ಸಂಪನ್ಮೂಲಗಳು ಹರಿದುಹಂಚಿಹೋಗುವುದನ್ನು ನಿವಾರಿಸಬಹುದು. ಆದರೆ ವಿಶ್ವವಿದ್ಯಾನಿಲಯ ಶಿಕ್ಷಣದ ಗುಣಮಟ್ಟವನ್ನು ಉನ್ನತ ಸ್ತರದಲ್ಲಿ ಉಳಿಸಿಕೊಂಡು ಬರಲು ಆ ಏರ್ಪಾಟು ಸಾಕಾಗುತ್ತದೆಯೆ? ಅದು ವಿಶ್ವವಿದ್ಯಾನಿಲಯ ಶಿಕ್ಷಣವನ್ನು ನೀಡಲು ನೇಮಿಸಿಕೊಳ್ಳಲಾಗುವ ಬೋಧಕ ಸಿಬ್ಬಂದಿಯ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಈಗಲಾದರೋ ಬೋಧಕರನ್ನು ಕಾಲೇಜುಗಳಿಗೆ ಲಗತ್ತಿಸಲಾಗಿದ್ದು, ಆಯಾ ಕಾಲೇಜುಗಳ ಆಡಳಿತ ಮಂಡಳಿಗಳ ಅಧಿಕಾರಿಗಳು ಅವರ ಸಂಬಳ–ಸಾರಿಗೆಗಳನ್ನು ಮತ್ತು ಸ್ಥಾನಮಾನಗಳನ್ನು ನಿಯಂತ್ರಿಸುತ್ತಿದ್ದಾರೆ. ಕಾಲೇಜುಗಳು ಅತ್ಯಂತ ಅರ್ಹ ವ್ಯಕ್ತಿಗಳ ಸೇವೆಯನ್ನು ಪಡೆದುಕೊಳ್ಳುವ ಏಕೈಕ ಉದ್ದೇಶದಿಂದ ನೇಮಕಾತಿಗಳನ್ನು ಮಾಡುತ್ತಿರುವಂತೆಯಾಗಲೀ, ಅಧ್ಯಾಪಕ ಸಿಬ್ಬಂದಿಯಲ್ಲಿನ ಅತ್ಯುತ್ತಮ ಹಾಗೂ ಅತ್ಯಂತ ಅರ್ಹ ವ್ಯಕ್ತಿಗೆ ಆಕರ್ಷಕವಾಗಿರುವಂಥ ವೃತ್ತಿಪಥವನ್ನು ತೆರೆಯುವಂಥ ರೀತಿಯಲ್ಲಿ ಅವರ ಶ್ರೇಣಿಗಳು, ಸೇವಾವಧಿ, ವೇತನ ಮತ್ತು ಪದೋನ್ನತಿಗಳನ್ನು ನಿಯಂತ್ರಿಸುತ್ತಿರುವಂತೆಯಾಗಲೀ ತೋರುತ್ತಿಲ್ಲ. ಸರ್ಕಾರ ನಡೆದುಕೊಂಡು ಬರುತ್ತಿರುವ ಇಡೀ ಶೈಕ್ಷಣಿಕ ಕಾರ್ಯವನ್ನು ಶೈಕ್ಷಣಿಕ ಸೇವಾ ವಿಭಾಗಕ್ಕೆ ವಹಿಸಲಾಗಿದೆ. ಅದರ ಮೂರು ಶ್ರೇಣಿಗಳಲ್ಲಿ ಎಲ್ಲ ಆಡಳಿತಾತ್ಮಕ ಮತ್ತು ಪರಿಶೀಲನಾ ಅಧಿಕಾರಿಗಳನ್ನೂ, ಅತ್ಯಂತ ಜವಾಬ್ದಾರಿಯಿಂದ ಕೂಡಿದವರಿಂದ ಹಿಡಿದು ತೀರಾ ಕಿರಿಯ ಸರ್ಕಾರಿ ಕಾಲೇಜುಗಳಲ್ಲಿನ ಮತ್ತು ಶಾಲೆಗಳಲ್ಲಿನ ಎಲ್ಲ ಅಧ್ಯಾಪಕರನ್ನೂ ಸೇರಿಸಿಬಿಡಲಾಗಿದೆ. ಎಲ್ಲ ಸೇವಾ ವಿಭಾಗಗಳಲ್ಲಿರುವಂತೆ ಇಲ್ಲಿಯೂ ಜ್ಯೇಷ್ಠತೆ ಅಥವಾ ವರಿಷ್ಠತೆಯ ತತ್ವ ಎಷ್ಟು ಆಳವಾಗಿ ಬೇರುಬಿಟ್ಟಿದೆ ಎಂದರೆ ಎಲ್ಲ ವರಿಷ್ಠ ಹುದ್ದೆಗಳನ್ನೂ ವರಿಷ್ಠತೆಯ ಆಧಾರದ ಮೇಲೆ ತುಂಬುವುದು ಒಂದು ಪವಿತ್ರ ಸಂಪ್ರದಾಯವೇ ಆಗಿಬಿಟ್ಟಿದೆ. ವಿಶ್ವವಿದ್ಯಾನಿಲಯ ಶಿಕ್ಷಣದ ಕಾರ್ಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ವಿದ್ವತ್ತಿನ ಆಧಾರದ ಮೇಲಲ್ಲದೆ ಸೇವಾವಧಿಯ ಆಧಾರದ ಮೇಲೆ ಪಾರಿತೋಷಕಗಳನ್ನು ತೀರ್ಮಾನಿಸಲಾಗುತ್ತಿದೆ ಎಂಬುದು ಈ ವ್ಯವಸ್ಥೆಯ ಪ್ರಮುಖ ದೋಷವಾಗಿದೆ. ಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿಗಳ ವಿಷಯದಲ್ಲಾಗುವಂತೆ ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾವಣೆಗೆ ಒಳಪಡುವಂಥ ಕಾಲೇಜು ಅಧ್ಯಾಪಕರು ತಮ್ಮ ನಿಷ್ಠೆ ಮತ್ತು ವಿಧೇಯತೆಗಳನ್ನು ಕೋರುವಂಥ ನಿಗಮಿತ ನಿಕಾಯ ಸೇವಾವಧಿಯೇ ಹೊರತು ಕಾಲೇಜಿನಲ್ಲಿನ ತಮ್ಮ ಕಾರ್ಯದ ಗುಣಮಟ್ಟವಲ್ಲ ಎಂದು ಅನಿವಾರ್ಯವಾಗಿ ಭಾವಿಸಬೇಕಾಗುತ್ತದೆ. ಹೀಗಾಗಿ ಸೇವಾಬದ್ಧ ಪದೋನ್ನತಿಗಳನ್ನು ಪಡೆದುಕೊಳ್ಳುವತ್ತಲೇ ಅವರ ಮಹದಾಸೆಯೆಲ್ಲ ಕೇಂದ್ರೀಕೃತವಾಗಿರುತ್ತದೆಯೇ ಹೊರತು, ತಮ್ಮ ಹೆಸರು ಅಭಿನ್ನವಾಗಿಬಿಟ್ಟಿರುವಂಥ ವಿದ್ವತ್ತಿನ ಪಂಥವನ್ನು ಸೃಷ್ಟಿಸುವತ್ತ ಅವರ ಗಮನ ಹರಿಯುವುದೇ ಇಲ್ಲ. "ಪಿ.ಇ.ಎಸ್" ಮತ್ತು "ಐ.ಇ.ಎಸ್" ವರ್ಗಗಳ ನಡುವಣ ಅನ್ಯಾಯಪೂರ್ಣ ಭೇದದೃಷ್ಟಿ ಈ ಸೇವಾ

ವ್ಯವಸ್ಥೆಯಲ್ಲಿನ ಇನ್ನೊಂದು ದೌರ್ಬಲ್ಯವೇ ಆಗಿದೆ. ಏಕೆಂದರೆ ಅದು ಮೊದಲನೆಯ ವರ್ಗದ ತುಂಬಾ ಕಿರಿಯ ಸದಸ್ಯರು ತಮ್ಮನ್ನು ಇನ್ನೊಂದು ವರ್ಗದ ಅತ್ಯಂತ ಹಿರಿಯ ಹಾಗೂ ಸುವಿಖ್ಯಾತ ಸದಸ್ಯರಿಗಿಂತಲೂ ಶ್ರೇಷ್ಠರೆಂದು ಭಾವಿಸಲು ಪ್ರಚೋದನೆಯನ್ನು ಕೊಡುತ್ತದೆ. ಕಾಲೇಜಿನ ಅಧ್ಯಾಪಕ ಸಿಬ್ಬಂದಿಯ ನಡುವೆ ಇದು ಘರ್ಷಣೆಯ ಅಂಶಕ್ಕೆ ಎಡೆಮಾಡಿಕೊಡುತ್ತದೆ. ಯಾವುದೇ ಶೈಕ್ಷಣಿಕ ಸಂಸ್ಥೆಯ ಬೌದ್ಧಿಕ ಬಾಳ್ವೆಯ ಅಭಿವರ್ಧನೆಗೆ ಅತ್ಯಂತ ಅನಿವಾರ್ಯವಾಗಿರುವ ಮುಕ್ತ ಹಾಗೂ ಸ್ನೇಹಪೂರ್ವ ಸಹಕಾರವನ್ನು ಇದು ಕಷ್ಟಸಾಧ್ಯವಾಗಿಸುತ್ತದೆ. ಕೊನೆಯದಾದರೂ ಮಹತ್ವದಲ್ಲಿ ಕಡಿಮೆಯದಲ್ಲದ ಸಂಗತಿಯೆಂದರೆ, ತಾವು ಸರ್ಕಾರಿ ನೌಕರರಾಗಿದ್ದೇವೆಂಬ ಕಾರಣದಿಂದಾಗಿ ಸಧ್ಯದ ಪರಿಸ್ಥಿತಿಗಳಲ್ಲಿ ಸರ್ಕಾರಿ ಕಾಲೇಜುಗಳಲ್ಲಿನ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳ ವಿಶ್ವಾಸವನ್ನು ಕಳೆದುಕೊಂಡುಬಿಟ್ಟಿದ್ದಾರೆ. ಇತ್ತ ವಿದ್ಯಾರ್ಥಿಗಳು ಪ್ರಾಧ್ಯಾಪಕರುಗಳನ್ನು ತಮ್ಮ ಬೌದ್ಧಿಕ ನೇತಾರರೆಂದು ಪರಿಗಣಿಸುವುದಕ್ಕೆ ಬದಲಾಗಿ, ಅವರನ್ನು ಸರ್ಕಾರದ ಏಜೆಂಟರುಗಳೆಂದು ಪರಿಗಣಿಸುತ್ತಾರೆ. ತಮ್ಮ ವಿದ್ಯಾರ್ಥಿಗಳಿಂದ ಯಾವುದೇ ಪ್ರತಿಕ್ರಿಯೆ ದೊರೆಯದೆ ಇರುವುದರಿಂದ ತಮ್ಮ ವೃತ್ತಿಯನ್ನು ಅನುಭವಿಸಲೇಬೇಕಾದ ಒಂದು ನಿತ್ಯಕ್ಲೇಶವೆಂದು ಭಾವಿಸುವ ಈ ಪ್ರಾಧ್ಯಾಪಕರು ವಿದ್ಯಾರ್ಥಿಗಳ ಆಸಕ್ತಿಯನ್ನು ಕೆರಳಿಸದೆ ಹಾಗೂ ನಿಷ್ಠೆಯನ್ನು ಗೆಲ್ಲದೆ ಹಾಗೂ ಹೀಗೂ ಕಾಲ ತಳ್ಳುತ್ತಾರೆ. ಮಿಶನರಿ ಸಂಸ್ಥೆಗಳು ನಡೆಸಿಕೊಂಡು ಬರುತ್ತಿರುವ ಕಾಲೇಜುಗಳಲ್ಲಿ ಐರೋಪ್ಯ ಮಿಶನರಿಗಳು ಅಥವಾ ಧರ್ಮಪ್ರಚಾರಕರು ಅಧ್ಯಾಪಕ ವರ್ಗದ ಪ್ರಮುಖ ಸದಸ್ಯರಾಗಿರುತ್ತಾರೆ. ಉಳಿದ ಸಿಬ್ಬಂದಿಯಲ್ಲಿ ಭಾರತೀಯ ಅಧ್ಯಾಪಕರುಗಳಿರುತ್ತಾರೆ. ಐ.ಇ.ಎಸ್. ಮತ್ತು ಪಿ.ಇ.ಎಸ್. ವರ್ಗಗಳ ನಡುವಣ ವ್ಯತ್ಯಾಸ ಅಲ್ಪಪ್ರಮಾಣದಲ್ಲಿ ಇಲ್ಲಿಯೂ ಕಾಣಿಸಿಕೊಳ್ಳುತ್ತದೆಯಾದರೂ ಅದು ಬಹಿರಂಗ ಘರ್ಷಣೆಯನ್ನುಂಟು ಮಾಡುವಷ್ಟು ಪ್ರಮಾಣದಲ್ಲಿ ಎದ್ದುಕಾಣುವಂಥದಾಗಿರುವುದಿಲ್ಲ. "ಡೆಕ್ಕನ್ ಎಜುಕೇಷನ್ ಸೊಸೈಟಿ"ಯಂಥ ಸಂಘ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿರುವವರು ಖಾಸಗಿ ಸದಸ್ಯರೇ ಆಗಿರುತ್ತಾರೆ. ಹೀಗಾಗಿ ಅಲ್ಲಿನ ಸಿಬ್ಬಂದಿ ಹೆಚ್ಚು ಒಮ್ಮತ ಸ್ವರೂಪದ್ದಾಗಿರುತ್ತದೆ ಹಾಗೂ ಯಾವುದೇ ಭಿನ್ನಾಭಿಪ್ರಾಯಕ್ಕೆ ಎಡೆಗೊಡುವಂಥದೇನೂ ಆ ಸಂಘಟನೆಯಲ್ಲಿರುವುದಿಲ್ಲ. ಆದರೆ ಕಾಲೇಜುಗಳನ್ನು ನಿಯಂತ್ರಿಸುವಂಥ ಸಂಘಸಂಸ್ಥೆಗಳ ಆಜೀವ ಸದಸ್ಯರಾಗಬಯಸುವಂಥ ವ್ಯಕ್ತಿಗಳನ್ನು ನೇಮಿಸದಂತೆ ಆ ಕಾಲೇಜುಗಳ ನಿಯಮಾವಳಿಗಳು ನಿರ್ಬಂಧಿಸುತ್ತವೆ. ಈ ಖಾಸಗಿ ಕಾಲೇಜುಗಳು ಮುಂದಿರಿಸುವ ವೃತ್ತಿ ಭವಿಷ್ಯದ ಬಗೆಗಿನ ಭರವಸೆಗಳ ಬಗ್ಗೆ ನಾನು ಖಚಿತವಾಗಿ ಏನನ್ನೂ ಹೇಳಲಾರೆ. ಆದರೆ ತೀರ ಕೆಳ ದರ್ಜೆಯ ಸರ್ಕಾರಿ ಕಾಲೇಜುಗಳಿಗೆ ಹೋಲಿಸಿದರೂ ಅವು ತುಂಬಾ ಹೀನಾಯ ಸ್ಥಿತಿಯಲ್ಲಿರುತ್ತವೆಂಬುದಂತೂ ನಿಶ್ಚಯ. ಅವು ವಾಸ್ತವವಾಗಿ ಅದೆಷ್ಟು ಹೀನಾಯ ಸ್ಥಿತಿಯಲ್ಲಿವೆ ಎಂದರೆ ಸಾಕಷ್ಟು ಅಂತರದ ಅನಾಸಕ್ತಿಯನ್ನು ಉಳಿಸಿಕೊಂಡುಬರದ ಹೊರತು, ಮಧ್ಯಮ ಪ್ರಮಾಣದ ಸಾಧನೆಯನ್ನು ತಮ್ಮದಾಗಿಸಿಕೊಂಡಿರುವಂಥ ವ್ಯಕ್ತಿಗಳನ್ನು ಅವು ಆಕರ್ಷಿಸಲಾರವು. ಆದರೆ ತಮ್ಮಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ಸೂಕ್ತ ವ್ಯಕ್ತಿಗಳನ್ನು ಪಡೆದುಕೊಳ್ಳುವಲ್ಲಿ ಖಾಸಗಿ ಕಾಲೇಜುಗಳು ಮಾತ್ರವೇ ವಿಫಲವಾಗುತ್ತಿಲ್ಲ. ಅತ್ಯುತ್ತಮವಾದ ವೃತ್ತಿ ಭವಿಷ್ಯದ ಭರವಸೆಗಳನ್ನು ಕೊಡುವ ಸರ್ಕಾರಿ ಕಾಲೇಜುಗಳು ಕೂಡಾ ಸೂಕ್ತ ವ್ಯಕ್ತಿಗಳನ್ನು ಪಡೆದುಕೊಳ್ಳುವಲ್ಲಿ ತೀರಾ ವಿರಳವಾಗಿಯಷ್ಟೇ ಯಶಸ್ವಿಯಾಗುತ್ತಿವೆ. ಇದಕ್ಕೆ ಕಾರಣವೇನೆಂದರೆ ಇವುಗಳಲ್ಲಿ ಯಾವುದಕ್ಕೂ ವಿವೇಕಯುತವಾದ ಆಯ್ಕೆಯನ್ನು ಮಾಡಿಕೊಳ್ಳಲು ಸೂಕ್ತ ವ್ಯವಸ್ಥೆಯೇ ಇಲ್ಲ. ಸರ್ಕಾರಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಅಥವಾ ಸರ್ಕಾರದ ಕಾರ್ಯದರ್ಶಿ ಈ ಆಯ್ಕೆಯನ್ನು ಮಾಡುತ್ತಾರೆ. ಆದರೆ ವಾಸ್ತವವಾಗಿ ಈ ಕೆಲಸಕ್ಕೆ ಅವರು ಅತ್ಯಂತ ಅನರ್ಹ ತಜ್ಞರೇ

ಸರಿ. ಅಂತೆಯೇ ಖಾಸಗಿ ಕಾಲೇಜುಗಳಲ್ಲಿನ ನೇಮಕಾತಿಗಳು ಬಹುತೇಕವಾಗಿ ಕಾಲೇಜಿನ ಮುಖ್ಯಸ್ಥರ ಕೈಯಲ್ಲಿರುತ್ತವೆ. ಅವರೂ ಸೂಕ್ತ ಆಯ್ಕೆಗಳನ್ನು ಮಾಡಲು ಅಸಮರ್ಥರಾಗಿರುತ್ತಾರೆ. ಒಬ್ಬ ವ್ಯಕ್ತಿಯ ಅರ್ಹತೆಯನ್ನು ಪರೀಕ್ಷಿಸಿ ನೋಡಬೇಕಾದರೆ ನಾವು ಆ ವರ್ಗಕ್ಕೆ ಸೇರಿದವರಾಗಿರಬೇಕು ಎಂಬ ಸತ್ಯವನ್ನು ಮಾನ್ಯಮಾಡದೆ ಇರುವುದರಲ್ಲಿಯೇ ನಮ್ಮ ತಪ್ಪು ಅಡಗಿದೆ. ಅರ್ಥಶಾಸ್ತ್ರಕ್ಕೆ ಸೇರಿದ ವ್ಯಕ್ತಿಯ ಬಗ್ಗೆ ತೀರ್ಮಾನಿಸಲು ಅದು ಅರ್ಥಶಾಸ್ತ್ರಜ್ಞನನ್ನೇ ಇರಿಸಿಕೊಳ್ಳಬೇಕು.

ಈ ಕಷ್ಟಗಳು ಮತ್ತು ನ್ಯೂನತೆಗಳನ್ನು ಒಂದು ಬದಿಗಿರಿಸಿದರೂ ವಿವಿಧ ಕಾಲೇಜುಗಳು ನೇಮಿಸಿಕೊಂಡಂಥ ವಿಶ್ವವಿದ್ಯಾನಿಲಯದ (ಅಧ್ಯಾಪಕ) ಸಿಬ್ಬಂದಿಯನ್ನು ವಿಶ್ವವಿದ್ಯಾನಿಲಯದ ಅಗತ್ಯಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಒಂದೆಡೆ ತರುವ ಅಥವಾ ವಿತರಿಸುವ ಯಾವುದೇ ಕಾರ್ಯಸಾಧ್ಯವಾದ ಮಾರ್ಗೋಪಾಯವೂ ಇಲ್ಲ. ಯಾವುದೋ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಆರು ಮಂದಿ ಪ್ರಾಧ್ಯಾಪಕರಿರುವ ಹಾಗೂ ಅಷ್ಟೇ ಮಹತ್ವದ ಇನ್ನೊಂದು ಜ್ಞಾನಶಾಖೆಗೆ ಸಂಬಂಧಿಸಿದಂತೆ ಒಬ್ಬನೇ ಒಬ್ಬ ಪ್ರಾಧ್ಯಾಪಕನೂ ಇಲ್ಲದಿರುವಂಥ ಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯ ಸಿಲುಕಿಕೊಂಡುಬಿಡಬಹುದು. ವಿಶ್ವವಿದ್ಯಾನಿಲಯದ ವ್ಯವಸ್ಥೆ ಈ ರೀತಿಯಲ್ಲಿ ಮುಂದುವರಿಯಲಾರದು. ಶಿಕ್ಷಣ ಮಂಡಳಿಯ ಮುಖಾಂತರ ವಿಶ್ವವಿದ್ಯಾನಿಲಯದ ಎಲ್ಲ ಅಧ್ಯಾಪಕರ ನೇಮಕಾತಿಯ ಅಧಿಕಾರವನ್ನು ವಿಶ್ವವಿದ್ಯಾನಿಲಯದ ಕೈಯಲ್ಲೇ ಇರಿಸುವ (ನೋಡಿ: ಹೊಸ ವಿಶ್ವವಿದ್ಯಾನಿಲಯ ರಚನೆಯ ನಿಯಮಾವಳಿ) ಅಥವಾ ಕನಿಷ್ಠಪಕ್ಷ ನೇಮಕಾತಿಯ ವಿಷಯದಲ್ಲಿ ವಿಶ್ವವಿದ್ಯಾನಿಲಯಕ್ಕೆ ಪರಿಣಮಕಾರಿಯಾದ ಉಸ್ತುವಾರಿ ಇರುವಂತೆ ಮಾಡುವ ಮೂಲಕವಷ್ಟೇ ಮೇಲೆ ಹೇಳಿದ ತೊಂದರೆಗಳನ್ನು ನಿವಾರಿಸಬಹುದು.

ಹೀಗಾಗಿ ಶೈಕ್ಷಣಿಕ ಸೇವಾ ವಿಭಾಗದ ಕಾಲೇಜು ಶಿಕ್ಷಣದ ಶಾಖೆಯನ್ನು ಆಡಳಿತ ಶಾಖೆಯಿಂದ ಬೇರ್ಪಡಿಸಿ, ಸೂಕ್ತ ಉಪಬಂಧಾತ್ಮಕ ರಕ್ಷಣೆಗಳೊಡನೆ ಅದನ್ನು ವಿಶ್ವವಿದ್ಯಾನಿಲಯದ ಕೈಕೆಳಗೆ ಇರಿಸಬೇಕೆಂದು ನಾನು ಸೂಚಿಸ ಬಯಸುತ್ತೇನೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ವಿವಿಧ ಕಾಲೇಜುಗಳಲ್ಲಿನ ಅಧ್ಯಾಪಕ ಹುದ್ದೆಗಳನ್ನು ಕೆಲವೊಂದು ಪ್ರತಿಷ್ಠಾನಗಳಿಗೆ ಸೇರಿದ ಅಥವಾ ಅವುಗಳಿಂದ ಬೆಂಬಲಿತವಾದ– ಈ ಪ್ರಸಂಗದಲ್ಲಿ ಖಾಸಗಿ ಕಾಲೇಜುಗಳಿಂದ ಮತ್ತು ವಿಶ್ವವಿದ್ಯಾನಿಲಯದಿಂದ ಬೆಂಬಲಿತವಾದ–ಪೀಠಗಳನ್ನಾಗಿ ಪರಿವರ್ತಿಸಬೇಕು.

ತನ್ನ ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿಯ ವಿಷಯದಲ್ಲಿ ವಿಶ್ವವಿದ್ಯಾನಿಲಯಕ್ಕೆ ನಿಯಂತ್ರಣಾಧಿಕಾರ ವಿರಬೇಕೆಂಬ ವಿಚಾರಕ್ಕೆ ನಾನು ಅತ್ಯಂತ ಹೆಚ್ಚಿನ ಮಹತ್ವ ಕೊಡುತ್ತೇನೆ. ಕಠಿಣವಾದ ಪರೀಕ್ಷಾ ವ್ಯವಸ್ಥೆಯ ಮೂಲಕ ಗುಣಮಟ್ಟವನ್ನು ಪರೀಕ್ಷಿಸುವುದಕ್ಕೆ ತನಗಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಮುಂಬಯಿಯ ವಿಶ್ವವಿದ್ಯಾನಿಲಯ ಇದುವರೆಗೂ ಪ್ರಯತ್ನಿಸುತ್ತಾ ಬಂದಿದೆ. ವಿಶ್ವವಿದ್ಯಾನಿಲಯದ ಪದವೀಧರರ ಯೋಗ್ಯತೆ ಕ್ರಮೇಣ ಕಡಿಮೆಯಾಗುತ್ತ ಬಂದಿದೆ. ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಅನರ್ಹರಾಗಿರುವಂಥ ವಿದ್ಯಾರ್ಥಿಗಳನ್ನು ನಿರ್ದಯವಾಗಿ ಹೊರಗಿಡುವ ಹಾಗೂ ಸಾಕಷ್ಟು ಸನ್ನದ್ಧವಾಗಿರುವ ವಿಭಾಗಗಳಲ್ಲಿ ವ್ಯವಸ್ಥಿತರಾಗಿರುವ ಅತ್ಯಂತ ಅರ್ಹರೂ ಉತ್ಪಾದನಾಶೀಲರೂ ಆಗಿರುವಂಥ ಅಧ್ಯಾಪಕರ ಸಮುದಾಯ ಲಭ್ಯವಾಗಿರುವಂತೆ ಮಾಡುವುದು– ಇವೇ ವಿಶ್ವವಿದ್ಯಾನಿಲಯ ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಂಡು ಬರುವುದಕ್ಕೆ ನಮಗೆ ಇರುವ ಮಾರ್ಗೋಪಾಯಗಳು ಎಂಬುದನ್ನು ನಮ್ಮ ವಿಶ್ವವಿದ್ಯಾನಿಲಯ ಶಿಕ್ಷಣದ ಜನಕರು ಮಾನ್ಯ ಮಾಡದೆಯೇ ಹೋದರು. ಇದೇ ಅವರು ಮಾಡಿದ ದೊಡ್ಡ ತಪ್ಪು; ಪದವೀಧರರ ಯೋಗ್ಯತೆ ಇಳಿಮುಖವಾಗುತ್ತ ಬರುವುದುದಕ್ಕೂ ಇದೇ ಪ್ರಮುಖ ಕಾರಣವೆಂದು

ಹೇಳಬೇಕಾಗಿದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಗುಣಮಟ್ಟ ವನ್ನು ಕಾಯ್ದುಕೊಳ್ಳಲು ಪ್ರಯತ್ನಿಸದೆಯೇ ಅವರು ವಿಶ್ವವಿದ್ಯಾನಿಲಯದ ಪದವಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿದರು. ಮುಂಬಯಿ ವಿಶ್ವವಿದ್ಯಾನಿಲಯವನ್ನು ಬೋಧಕ ವಿಶ್ವವಿದ್ಯಾನಿಲಯ ದಲ್ಲಿ "ಪದವಿಗಳನ್ನು ನೀಡುವ ಮೂಲಕ ಬೋಧನೆಯನ್ನು ಒರೆಹಚ್ಚಿ ನೋಡುವ ಅಧಿಕಾರಕ್ಕಿಂತ ಬೋಧನೆಯನ್ನು ನಿಯಂತ್ರಿಸುವ ಅಧಿಕಾರಕ್ಕೆ ಹೆಚ್ಚಿನ ಮಹತ್ವವಿದೆ" ಎಂಬುದನ್ನು ನಾವು ಸ್ಪಷ್ಟವಾಗಿ ಮನಗಾಣಬೇಕು. ಎಲ್ಲಿಯವರೆಗೆ ಬೋಧನೆಯಲ್ಲಿ ತೊಡಗಿರುವ ವ್ಯಕ್ತಿಗಳ ಅನಿಯಂತ್ರಿತ ವಿವೇಚನೆಗೆ ಶೈಕ್ಷಣಿಕ ವ್ಯವಹಾರಗಳನ್ನು ಅಂದರೆ ಬೋಧನೆ ಮತ್ತು ಪರೀಕ್ಷೆಗಳನ್ನು– ಬಿಟ್ಟಿರುತ್ತೇವೆಯೋ ಅಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾನಿಲಯವೂ ಬೋಧಕ ವಿಶ್ವವಿದ್ಯಾನಿಲಯವಾಗಲಾರದು. ಯಾರ ಯೋಗ್ಯತೆಯ ವಿಚಾರದಲ್ಲಿ ತನಗೆ ನಂಬಿಕೆಯೇ ಇಲ್ಲವೋ ಅಂಥ ಅಧ್ಯಾಪಕರ ನಿಕಾಯವನ್ನು ಅಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ವಿಶ್ವವಿದ್ಯಾನಿಲಯವು ಅವಲಂಬಿಸುವುದು ವಿಶ್ವವಿದ್ಯಾನಿಲಯದ ಪದವಿಯ ಗುಣಮಟ್ಟಕ್ಕೆ ಮಾರಕವೇ ಆಗುತ್ತದೆ. ಆದ್ದರಿಂದ ಕಾಲೇಜುಗಳ ವಿಷಯದಲ್ಲಿ ವಿಶ್ವವಿದ್ಯಾನಿಲಯ ಆರ್ಥಿಕ ಅಧಿಕಾರವನ್ನು ಹೊಂದಿರಬೇಕೆಂದು ನಾನು ಸೂಚಿಸಬಯಸುತ್ತೇನೆ. ಅಧ್ಯಾಪಕ ವರ್ಗದ ನೇಮಕಾತಿಯ ವಿಷಯದಲ್ಲಿ ಹಾಗೂ ಗ್ರಂಥಾಲಯ ಮತ್ತು ಪ್ರಯೋಗಾಲಯಗಳನ್ನು ಸಜ್ಜುಗೊಳಿಸುವ ವಿಷಯದಲ್ಲಿ ವಿಶ್ವವಿದ್ಯಾನಿಲಯದಲ್ಲಿ ವಿಶ್ವವಿದ್ಯಾನಿಲಯದ ಮಾತಿಗೆ ಬೆಲೆ ಬರುವಂತಿರಬೇಕಾದರೆ ಕಾಲೇಜುಗಳಿಗೆ ನೀಡಲಾಗಿರುವ ಎಲ್ಲ ಸಹಾಯಧನವನ್ನೂ ವಿಶ್ವವಿದ್ಯಾನಿಲಯದ ಮೂಲಕವೇ ಪಾವತಿ ಮಾಡುವಂತಾಗಬೇಕು.

ಪ್ರಶ್ನೆಗಳು ೩೬–೩೯: ಜ್ಞಾನದ ನಿಗಮವಾಗಿ ವಿಶ್ವವಿದ್ಯಾನಿಲಯ ತನ್ನ ಸಮುದಾಯಕ್ಕೆ ಸೇವೆಯನ್ನು ಸಲ್ಲಿಸಬೇಕಾದರೆ, ಅದರ ಅಂಗರಚನೆಯಲ್ಲಿ (ಅ) ಸಮುದಾಯದ ವಿಭಿನ್ನ ಅಗತ್ಯಗಳ ಸಂಪರ್ಕವಿರುವ ಒಂದು ನಿಕಾಯಕ್ಕೆ (ಆ) ಸಂಭವನೀಯವಾಗಿರುವ ಸಾರ್ವಜನಿಕರ ತಪ್ಪು ಕಲ್ಪನೆಗಳ ಮತ್ತು ವಿದ್ವಾಂಸರ ಅತಿ ಸಂಕುಚಿತ ದೃಷ್ಟಿಕೋನಗಳ ನಡುವೆ ಕಾರ್ಯಸಾಧ್ಯವಾದಂಥ ಒಡಂಬಡಿಕೆ ಏರ್ಪಡುವಂತೆ ವಿಶ್ವ ವಿದ್ಯಾನಿಲಯಕ್ಕೆ ಸಾಧನೋಪಾಯಗಳನ್ನು ದೊರಕಿಸಿಕೊಡುವ ಹಾಗೂ ಧ್ಯೇಯ ಸಾಧನೆಗೆ ಅನುಕೂಲ ವಾಗುವಂತೆ ಆ ಸಾಧನೋಪಾಯಗಳನ್ನು ಅಳವಡಿಸಿಕೊಳ್ಳುವ ವಿಷಯದಲ್ಲಿ ವಿಶ್ವವಿದ್ಯಾನಿಲಯಕ್ಕೆ ನೀತಿ ವಿಶಾರದ–ಸದೃಶವಾದ ಮಾರ್ಗದರ್ಶನವನ್ನು ನೀಡುವಂಥ ಒಂದು ನಿಕಾಯಕ್ಕೆ ಹಾಗೂ (ಇ) ವಿಶ್ವವಿದ್ಯಾ ನಿಲಯದ ಶೈಕ್ಷಣಿಕ ವ್ಯವಹಾರಕ್ಕೆ ಆ ಆಧಿಕಾರಿಕವಾದ ಮಾರ್ಗದರ್ಶನವನ್ನು ಒದಗಿಸುವ ಸಲುವಾಗಿ ಬೋಧನಕಾರ್ಯದಲ್ಲಿ ತೊಡಗಿರುವಂಥ ವಿದ್ವಾಂಸರ ಒಂದು ನಿಕಾಯಕ್ಕೆ– ಅವಕಾಶವನ್ನು ಕಲ್ಪಿಸಬೇಕಾಗುತ್ತದೆ.

ತನ್ನದೇ ಆದ ಅಧ್ಯಾಪಕ ಸಿಬ್ಬಂದಿಯ ಮೂಲಕ ಬೋಧನ ಕಾರ್ಯದಲ್ಲಿ ತನ್ನನ್ನೂ ತೊಡಗಿಸಿಕೊಳ್ಳು ವಷ್ಟರಿಂದಲೇ ವಿಶ್ವವಿದ್ಯಾನಿಲಯ ಬೋಧಕ ವಿಶ್ವವಿದ್ಯಾನಿಲಯವಾಗಿ ಪರಿಣಮಿಸುವುದಿಲ್ಲವೆಂಬ ವಿಚಾರವನ್ನು ನಾನು ಈ ಸಮಿತಿಗೆ ಒತ್ತಿ ಹೇಳಬಯಸುತ್ತೇನೆ. ಬೋಧಕ ವಿಶ್ವವಿದ್ಯಾನಿಲಯಕ್ಕೆ ಅದು ಒರೆಗಲ್ಲೇನೂ ಆಗಿರುವುದಿಲ್ಲ. ವಿಶ್ವವಿದ್ಯಾನಿಲಯ ಬೋಧನ ಕಾರ್ಯವನ್ನು ಕೈಗೊಳ್ಳಬಹುದು. ಆದರೂ ಅದು ಬೋಧಕ ವಿಶ್ವವಿದ್ಯಾನಿಲಯವಾಗಿರದೆ ಇರಬಹುದು. ಬೋಧನ ಕಾರ್ಯದಲ್ಲಿ ತೊಡಗಿರುವಂಥ ವಿದ್ವಾಂಸರಿಗೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವ್ಯವಹಾರಗಳಿಗೆ ಆ ಆಧಿಕಾರಕ ಮಾರ್ಗದರ್ಶನವನ್ನು ನೀಡುವಂಥ ಅಧಿಕಾರ ಲಭಿಸಿದೆಯೋ ಇಲ್ಲವೇ ಎಂಬುದರ ಮೇಲೆ ವಿಶ್ವವಿದ್ಯಾನಿಲಯ ಬೋಧಕ ವಿಶ್ವವಿದ್ಯಾನಿಲಯವಾಗಿದೆಯೇ ಇಲ್ಲವೇ ಎಂಬ ಸಂಗತಿ ಅವಲಂಬಿಸಿಕೊಂಡಿರುತ್ತದೆ. ಆ ಅಧಿಕಾರ

ಅವರ ಕೈಗಳಲ್ಲಿ ಇದ್ದರೆ, ಆ ವಿಶ್ವವಿದ್ಯಾನಿಲಯ ನಿಜಕ್ಕೂ ಬೋಧಕ ವಿಶ್ವವಿದ್ಯಾನಿಲಯವಾಗಿರುತ್ತದೆ. ಇಲ್ಲವಾದಲ್ಲಿ ಆ ವಿಶ್ವವಿದ್ಯಾನಿಲಯ ಬೋಧಕ ವಿಶ್ವವಿದ್ಯಾನಿಲಯವಾಗಿರುವುದಿಲ್ಲ. ಬೋಧಕ ವಿಶ್ವವಿದ್ಯಾನಿಲಯ ಬೋಧಕರ ವಿಶ್ವವಿದ್ಯಾನಿಲಯವೇ ಆಗಿರುತ್ತದೆ.

ವಿಶ್ವವಿದ್ಯಾನಿಲಯದ ಅಂಗರಚನೆಯ ಬಗೆಗಿನ ತನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದುಕೊಳ್ಳುವಲ್ಲಿ ಮುಂಬಯಿ ವಿಶ್ವವಿದ್ಯಾನಿಲಯವನ್ನು ಬೋಧಕ ವಿಶ್ವವಿದ್ಯಾನಿಲಯವನ್ನಾಗಿಸಲು ನೆರವಾಗುವಂಥ ಸಲಹೆಗಳನ್ನು ಪಡೆದುಕೊಳ್ಳಬೇಕೆಂಬ ಅಭಿಲಾಷೆ ಈ ಸಮಿತಿಗೆ ಇರುವುದರಿಂದ ನಾನು ಈ ಪೂರ್ವಭಾವಿ ಟೀಕೆ ಟಿಪ್ಪಣಿಗಳನ್ನು ಮಾಡುವಂತಾಗಿದೆ. ವಿಶ್ವವಿದ್ಯಾನಿಲಯ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕಾದರೆ ಯಾವ ಮೂರು ನಿಕಾಯಗಳು ಅಗತ್ಯವೆಂದು ನಾನು ಹೇಳಿದ್ದೇನೆಯೋ ಅವುಗಳ ರಚನೆಗೆ ಮುಂಬಯಿ ವಿಶ್ವವಿದ್ಯಾನಿಲಯದ ಪ್ರಚಲಿತ ಅಂಗರಚನೆ ಪರ್ಯಾಪ್ತ ಅಥವಾ ಅತ್ಯಂತ ಸ್ಪಷ್ಟವಾದ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿಲ್ಲ. ಮುಂಬಯಿಯ ಜನ ಜೀವನ ಮತ್ತು ಹಿತಾಸಕ್ತಿಗಳಿಗೆ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಸಾಕಷ್ಟು ಪ್ರಮಾಣದ ಪ್ರಾತಿನಿಧ್ಯ ದೊರೆತಿಲ್ಲ. ದೊಡ್ಡ ವಿಶ್ವವಿದ್ಯಾನಿಲಯವೊಂದರ ಕಾರ್ಯಕಾರಿ ಸಮಿತಿಗೆ ಪ್ರಾಪ್ತವಾಗಿರಬೇಕಾದಂಥ ಹೊಣೆಗಾರಿಕೆ ಮತ್ತು ಅಧಿಕಾರಗಳು ಸಿಂಡಿಕೇಟ್ ಸಭೆಗೆ ಲಭಿಸಿಲ್ಲ. ಆದರೆ ತಾನು ನಿರ್ವಹಿಸಲು ಸಂಪೂರ್ಣವಾಗಿ ಅನರ್ಹವಾಗಿರುವಂಥ ಅನೇಕ ಕರ್ತವ್ಯಗಳು ಬಹುತೇಕವಾಗಿ ಅದಕ್ಕೆ ಅಂಟಿಕೊಂಡುಬಿಟ್ಟಿದೆ. ವಾಸ್ತವವಾಗಿ ವಿಶ್ವವಿದ್ಯಾನಿಲಯದ ಹೃದಯವಾಗಿರುವಂಥ ಅಧ್ಯಾಪಕ ಸಿಬ್ಬಂದಿಗೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವ್ಯವಹಾರಗಳಲ್ಲಿ ಅಧಿಕಾರ ಮಾರ್ಗದರ್ಶನ ಮಾಡುವಂಥ ಅಧಿಕಾರ ದೊರೆಯುವ ವಿಚಾರ ಹಾಗಿರಲಿ ಅದರ ಅಭಿಪ್ರಾಯಕ್ಕೆ ವಾಸ್ತವವಾಗಿ ಯಾವುದೇ ಮನ್ನಣೆಯೂ ಇಲ್ಲದಂತಾಗಿಬಿಟ್ಟಿದೆ.

ಮುಂಬಯಿ ವಿಶ್ವವಿದ್ಯಾನಿಲಯವನ್ನು ಬೋಧಕ ವಿಶ್ವವಿದ್ಯಾನಿಲಯವನ್ನಾಗಿಸುವ ಸಲುವಾಗಿ ಈ ನಿಕಾಯಗಳನ್ನು ರಚಿಸುವತ್ತ ನಾನು ಮೊದಲಿಗೆ ಗಮನಹರಿಸುತ್ತೇನೆ. ಈ ದೃಷ್ಟಿಯಿಂದ ಮುಂಬಯಿ ನಗರದಲ್ಲಿ ನೆಲೆಗೊಂಡಿರುವ ಕಾಲೇಜುಗಳ ನಡುವೆ ಅಂತರ ಕಾಲೇಜು–ಬೋಧನೆಯ ಬಗೆಗಿನ ನನ್ನ ಯೋಜನೆಯನ್ನು ಅಂಗೀಕರಿಸಲಾಗಿದೆ ಎಂದು ಭಾವಿಸಿಕೊಳ್ಳುತ್ತೇನೆ. ಈ ಯೋಜನೆಯ ಮೇರೆಗೆ ಕಾಲೇಜುಗಳಲ್ಲಿ ನಡೆಸಿಕೊಂಡು ಬರಲಾಗುತ್ತಿರುವ ವಿವಿಧ ಶಿಕ್ಷಣಗಳನ್ನು ವಿಭಾಗಗಳಾಗಿ ಅಂದರೆ ಅರ್ಥಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ ಇತ್ಯಾದಿ ವಿಭಾಗಗಳಾಗಿ ಒಂದುಗೂಡಿಸುತ್ತದೆ ಎಂಬುದನ್ನು ನಾನು ಒಪ್ಪುತ್ತೇನೆ. ಇದಕ್ಕೆ ವಿಶ್ವವಿದ್ಯಾನಿಲಯ ಶಿಕ್ಷಣ ಅಗತ್ಯವಾದ ಅಥವಾ ಕನಿಷ್ಠಪಕ್ಷ ಅತ್ಯಂತ ಅನುಕೂಲಕರವಾದ ಪೂರ್ವಭಾವಿ ಸಿದ್ಧತೆಯಾಗಿರುತ್ತದೆ.

ಇದರಲ್ಲಿ ಯಶಸ್ವಿಯಾಗಬೇಕಾದರೆ ವಿದ್ಯಾರ್ಥಿಗಳು ಅಭ್ಯಸಿಸಬಯಸುವ ಕೆಲವೊಂದು ಜ್ಞಾನ ಶಾಖೆಗಳನ್ನು ಒಂದುಗೂಡಿಸುವುದು ಅಗತ್ಯವಾಗುತ್ತದೆ. ವಿದ್ಯಾರ್ಥಿಗಳ ಅಗತ್ಯಗಳು ಅಂಥ ಒಂದುಗೂಡಿಸುವಿಕೆಯನ್ನು ಅಗತ್ಯವಾಗಿಸುವುದಲ್ಲದೆ ಅಧ್ಯಾಪಕರ ಅಗತ್ಯಗಳೂ ಅದೇ ದಿಕ್ಕಿನತ್ತ ಕೈದೋರುತ್ತವೆ. ಏಕೆಂದರೆ ಕೆಲವು ಅಧ್ಯಯನ ವಿಷಯಗಳ ನಡುವೆ ನಿಕಟ ಸಂಬಂಧವಿದೆ ಹಾಗೂ ಅವುಗಳನ್ನು ಅಭ್ಯಸಿಸುವ ದೃಷ್ಟಿಕೋನದಲ್ಲಿಯೂ ಹೆಚ್ಚಿನ ಸಾಮ್ಯವಿದೆ ಎಂಬುದು ಸ್ಪಷ್ಟವಾಗಿಯೇ ಇದೆ. ವಿದ್ಯಾರ್ಥಿಗಳಿಂದ ಮತ್ತು ಅಧ್ಯಾಪಕರಿಂದ ಮೂಡಿಬರುವ ಈ ಶಕ್ತಿಗಳು ಎಲ್ಲೆಡೆಗಳಲ್ಲಿಯೂ ಹಲವು ಅಧ್ಯಯನ ವಿಭಾಗಗಳನ್ನು ನಿಕಾಯಗಳಾಗಿ ಒಂದುಗೂಡಿಸುವಂತೆ ಮಾಡಿವೆ. ಹೀಗಾಗಿ ನಮ್ಮ ವಿಶ್ವವಿದ್ಯಾನಿಲಯ ಬೋಧಕ ವಿಶ್ವವಿದ್ಯಾನಿಲಯವಾಗಬೇಕಾದರೆ ಮುಂಬಯಿಯ ನೂತನ ವಿಶ್ವವಿದ್ಯಾನಿಲಯದಲ್ಲಿನ ಹಲವು ಅಧ್ಯಯನ

ವಿಭಾಗಗಳನ್ನು ನಿಕಾಯಗಳಾಗಿ ಒಂದುಗೂಡಿಸಬೇಕು ಹಾಗೂ ನಿಕಾಯಗಳನ್ನು ವಿಶ್ವವಿದ್ಯಾನಿಲಯದ ಸಂಘಟನೆಗೆ ಆಧಾರವಾಗಿಸಬೇಕು ಎಂಬುದಾಗಿ ನಾನು ಸೂಚಿಸಬಯಸುತ್ತೇನೆ. ನಿಕಾಯದ ಪ್ರಾಧ್ಯಾಪಕರುಗಳನ್ನು ಮತ್ತು ಸಹಾಯಕ ಪ್ರಾಧ್ಯಾಪಕರುಗಳನ್ನು ಆ ನಿಕಾಯ ಸಂಪೂರ್ಣವಾಗಿ ಅಥವಾ ಮುಖ್ಯವಾಗಿ ಒಳಗೊಂಡಿರಬೇಕು; ಅಂತೆಯೇ ಅದು ಆ ನಿಕಾಯ ಸಹಯೋಜಿಸಿಕೊಳ್ಳಬಹುದಾದ ವಿಶ್ವವಿದ್ಯಾನಿಲಯದಿಂದ ನೇಮಿತರಾದ ಅಧ್ಯಾಪಕರನ್ನು ಮತ್ತು ಅಧಿಕಾರಿಗಳನ್ನು ಒಳಗೊಂಡಿರಬೇಕು. ಕುಲಪತಿಗಳು ಈ ಎಲ್ಲ ನಿಕಾಯಗಳ ಪದನಿಮಿತ್ತ ಸದಸ್ಯರಾಗಿರಬೇಕು. ಈ ಕೆಳಗೆ ಕಾಣಿಸಿರುವ ವಿಷಯಗಳ ಬಗ್ಗೆ ನಿಯಮಗಳನ್ನು ರೂಪಿಸುವ ಅಧಿಕಾರ ನಿಕಾಯಕ್ಕೆ ಇರಬೇಕು:

(i) ಅಧ್ಯಯನ ಮಂಡಳಿಯಾಗಿ ಹಾಗೂ ಇತರ ಉದ್ದೇಶಗಳಿಗಾಗಿ ಕಾರ್ಯ ನಿರ್ವಹಿಸುವಂತೆ ನಿಕಾಯದ ಸದಸ್ಯರನ್ನು ಮತ್ತು ಇತರ ವ್ಯಕ್ತಿಗಳನ್ನು ಒಳಗೊಂಡ ಸಮಿತಿಗಳನ್ನು ನೇಮಿಸುವುದು;

(ii) ನಿಕಾಯದ ವ್ಯಾಪ್ತಿಗೆ ಒಳಪಡುವ ಪದವಿಗಳು ಡಿಪ್ಲೋಮಾಗಳ ಮತ್ತು ಇತರ ಪ್ರಶಸ್ತಿಗಳ ನೀಡಿಕೆಗೆ ಸಂಬಂಧಿಸಿದ ಷರತ್ತುಗಳನ್ನು ಸಾಮಾನ್ಯವಾಗಿ ಗೊತ್ತುಪಡಿಸುವುದು;

(iii) ನಿಕಾಯದ ವ್ಯಾಪ್ತಿಗೆ ಒಳಪಡುವ ವಿಷಯಗಳಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅಭ್ಯಸಿಸಬೇಕಾದ ಶಿಕ್ಷಣ ಕ್ರಮವನ್ನು ಸಾಮಾನ್ಯವಾಗಿ ಗೊತ್ತುಪಡಿಸುವುದು;

(vi) ನಿಕಾಯದ ವ್ಯಾಪ್ತಿಗೆ ಒಳಪಡುವ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಪರೀಕ್ಷೆಯ ಬೋಧನೆಯ ವಿಧಾನ ಮತ್ತು ರೀತಿ–ನೀತಿಗಳನ್ನು ಸಾಮಾನ್ಯವಾಗಿ ಗೊತ್ತುಪಡಿ–ಸುವುದು.

ಮೇಲೆ ನಿರೂಪಿಸಿರುವ ಅಧಿಕಾರಗಳನ್ನು ನಿಕಾಯಗಳಿಗೆ ವಹಿಸುವುದಾದರೆ ಹಾಗೂ ಸಾಮಾನ್ಯ ಪಠ್ಯಕ್ರಮ ಹಾಗೂ ಅರೆ ಬಾಹ್ಯ ಪರೀಕ್ಷಾ ವಿಧಾನಗಳು ವಿಧಿಸುವ ನಿರ್ಬಂಧಗಳಿಂದ ಅಧ್ಯಾಪಕರನ್ನು ಮುಕ್ತರನ್ನಾಗಿಸುವುದಾದರೆ ಅಧ್ಯಾಪಕರು ತಮ್ಮಲ್ಲಿ ಇರಿಸಲಾಗಿರುವ ನಂಬಿಕೆಗೆ ತಾವು ಅರ್ಹರಾಗಿದ್ದೇವೆ ಎಂಬುದನ್ನು ಖಚಿತಪಡಿಸುವುದು ಅಗತ್ಯವಾಗುತ್ತದೆ ಎಂದು ನಾನು ಮತ್ತೆ ಹೇಳಬೇಕಾಗಿದೆ.

ನಿಕಾಯಗಳು ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಗಳಾಗಿರಬೇಕು. ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಮತ್ತು ಶೈಕ್ಷಣಿಕ ಕಾರ್ಯಗಳ ಹೊಣೆಗಾರಿಕೆಯನ್ನು ನಿರ್ವಹಿಸಲು ಹೀಗೆ ನಿಕಾಯಗಳನ್ನು ರಚಿಸಿದ ಮೇಲೆ, ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯೊಂದನ್ನು ರಚಿಸಬೇಕಾಗುತ್ತದೆ. ಆ ಮಂಡಳಿ ಮುಂಬಯಿ ವಿಶ್ವವಿದ್ಯಾನಿಲಯದ ಈಗಿನ ಸೆನೆಟ್ ಸಭೆಗೆ ಸಂವಾದಿಯಾಗಿರಬೇಕು. ಆದರೆ ಅದರ ರಚನೆ ಮತ್ತು ಸ್ವರೂಪಗಳು ಸಂಪೂರ್ಣವಾಗಿ ಭಿನ್ನವಾಗಿರಬೇಕು. ನನ್ನ ಅಭಿಪ್ರಾಯದಲ್ಲಿ ವರಿಷ್ಠ ಆಡಳಿತ ಮಂಡಳಿಯಾಗಿ ಸೆನೆಟ್ ಸಭೆ ತೌಲನಿಕವಾಗಿ ವಿಶಾಲವಾದ ಸಭೆಯೆ ಆಗಿರಬೇಕು. ಅದು ಪ್ರಮುಖವಾಗಿ ಆವೃತ್ತಿಪರ ಸ್ವರೂಪದ್ದಾಗಿರಬೇಕು. ಆದರೆ ಸ್ನಾತಕರ ಮತ್ತು ಅಧ್ಯಾಪಕರ ಪ್ರತಿನಿಧಿಗಳನ್ನೊಳಗೊಂಡಿರಬೇಕು. ಆ ಬಗೆಯ ಆಡಳಿತ ಅನುಕೂಲಗಳು ಸ್ಪಷ್ಟವಾಗಿಯೇ ಇವೆ. ವಿಶಾಲವಾದ ಸೆನೆಟ್ ಸಭೆಯಿಂದಾಗಿ ಸ್ವಸಾಮರ್ಥ್ಯದಿಂದ ಆರಿಸಲಾಗಿರುವಂಥ ಪ್ರಭಾವಶಾಲಿ ನಾಗರಿಕರು, ಸಮಾಜದ ಹಿರಿಯ ಹಿತಾಸಕ್ತಿಗಳ ಪ್ರತಿನಿಧಿಗಳಾಗಿರುವಂಥವರು ನಗರದ ಪುರಸಭೆಯ ಆಡಳಿತಾತ್ಮಕ, ವಾಣಿಜ್ಯಾತ್ಮಕ, ನ್ಯಾಯಿಕ, ವೈಜ್ಞಾನಿಕ ಇತ್ಯಾದಿ ವಲಯಗಳ ಪ್ರತಿನಿಧಿಗಳು ಹಾಗೂ ವಿಧಾನ ಪರಿಷತ್ತು, ವಿಧಾನ ಸಭೆ ಮತ್ತು ರಾಜ್ಯ ಮಂಡಳಿಗಳ ಸದಸ್ಯರು ವಿಶ್ವವಿದ್ಯಾನಿಲಯದ ಮತ್ತು ಒಟ್ಟಾರೆ ಸಮುದಾಯದ ನಡುವೆ ಸಂಪರ್ಕ ಮಾಧ್ಯಮವಾಗಿ

ಪರಿಣಮಿಸುತ್ತಾರೆ. ವಿಶ್ವವಿದ್ಯಾನಿಲಯಕ್ಕೆ ಬೆಂಬಲವಾಗಿ ನಿಲ್ಲಬೇಕೆಂದು ಸಮುದಾಯವನ್ನು ಹೆಚ್ಚಿನ ಅಧಿಕಾರವಾಣಿಯಿಂದ ಹಾಗೂ ಯಶಸ್ವಿಯಾಗಿ ಕೇಳಬಲ್ಲುದಾಗಿರುತ್ತದೆ. ವಿಶ್ವವಿದ್ಯಾನಿಲಯದ ಯಶಸ್ಸಿನಲ್ಲಿ ಇಡೀ ನಗರವೇ ಆಸಕ್ತಿಯನ್ನು ತಳೆಯುತ್ತದೆ.

ಆದರೆ, ೧೯೦೨ರ ವಿಶ್ವವಿದ್ಯಾನಿಲಯ ಆಯೋಗ ಇದನ್ನು ತಪ್ಪು ಎಂಬುದಾಗಿ ಭಾವಿಸಿತು ಹಾಗೂ ವಿಶ್ವವಿದ್ಯಾನಿಲಯಗಳ ಸೆನೆಟ್ ಸಭೆಗಳ ಸದಸ್ಯ ಬಲದ ದೃಷ್ಟಿಯಿಂದ ತುಂಬ ಭಾರಿಯಾಗಿದೆ ಹಾಗೂ ಶೈಕ್ಷಣಿಕ ವಿಚಾರಗಳಲ್ಲಿ ಸೂಕ್ತ ನಿಯಂತ್ರಣವನ್ನು ಸಾಧಿಸಲು ಅಸಮರ್ಥವಾಗಿವೆ ಎಂಬುದಾಗಿ ವರದಿ ಮಾಡಿತು (೧೯೦೦ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯ ಸೆನೆಟ್ ಸಭೆ ೩೦೫ ಮಂದಿ ಸದಸ್ಯರನ್ನು ಹೊಂದಿತ್ತು). ಶಿಕ್ಷಣವನ್ನು ನಿಯಂತ್ರಿಸುವುದಲ್ಲ, ಸಮುದಾಯದ ವಿಭಿನ್ನ ಅಗತ್ಯಗಳೆಲ್ಲದರ ಸಂಪರ್ಕ ವಿಶ್ವವಿದ್ಯಾನಿಲಯಕ್ಕೆ ಇರುವಂತೆ ನೋಡಿಕೊಳ್ಳುವುದು ಸೆನೆಟ್ ಸಭೆಯ ಕರ್ತವ್ಯವಾಗಿರುವುದರಿಂದ, ಅದು ಅನಿವಾರ್ಯವಾಗಿ ದೊಡ್ಡದಾಗಿರಲೇಬೇಕು ಹಾಗೂ ಅದರ ರಚನೆ ವೈವಿಧ್ಯಮಯವಾಗಿರಲೇಬೇಕು. ಮುಂಬಯಿ ವಿಶ್ವವಿದ್ಯಾನಿಲಯದ ಸೆನೆಟ್ ಸಭೆ ೧೫೦ ಮಂದಿ ಸದಸ್ಯರನ್ನೊಳಗೊಂಡಿರಬೇಕೆಂದು ನಾನು ಸೂಚಿಸಬಯಸುತ್ತೇನೆ. ಸಾಮಾನ್ಯ ಅಧಿ ಸದಸ್ಯರಲ್ಲಿ (ಫೆಲೋಗಳಲ್ಲಿ) ಐದನೆಯ ಎರಡರಷ್ಟು ಮಂದಿ ಅಧಿ ಸದಸ್ಯರು (ಫೆಲೋಗಳು) ಬೋಧನ ವೃತ್ತಿಗೆ ಸಂಬಂಧಿಸಿದವರಾಗಿರಬೇಕೆಂಬುದು ೧೯೦೪ರ ವಿಶ್ವವಿದ್ಯಾನಿಲಯ ಕಾಯ್ದೆಯ ಅಧೀನ ಜಾರಿಗೆ ತರಲಾದ ಅತ್ಯಂತ ಪ್ರಮುಖ ಬದಲಾವಣೆಗಳಲ್ಲಿ ಒಂದಾಗಿತ್ತು. ಸ್ವೀಕರ್ತರ ಅರ್ಹತೆಗಳಿಗೆ ಸಾಕಷ್ಟು ಗಮನ ಕೊಡದೆ, ಔದಾರ್ಯದ ರೂಪದಲ್ಲಿ ಶಿಷ್ಯವೇತನಗಳನ್ನು ಅನುಗ್ರಹಿಸುತ್ತಿದ್ದ ವ್ಯವಸ್ಥೆಗೆ ತಡೆಯೊಡ್ಡಿತೆಂಬ ರೂಪದಲ್ಲಿ ಈ ಉಪಬಂಧ ಅಭಿವಂದನೀಯವಾದುದೇ ಆಗಿತ್ತು. ಆದರೆ, ಈ ನಿಕಾಯಗಳಿಗೆ ಹೆಚ್ಚಿನ ಶಾಸನಬದ್ಧ ಅಧಿಕಾರಗಳನ್ನು ಕೊಡಬೇಕೆಂದು ನಾನು ಯಾವ ಪ್ರಸ್ತಾವವನ್ನು ಮುಂದಿರಿಸುತ್ತಿದ್ದೇನೋ, ಅದನ್ನು ದೃಷ್ಟಿಯಲ್ಲಿರಿಸಿಕೊಂಡಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೆ ಸೆನೆಟ್ ಸಭೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡುವ ಅಗತ್ಯವಿದೆಯೆಂದೇನೂ ನನಗೆ ತೋರುವುದಿಲ್ಲ; ಪ್ರತಿಯೊಂದು ನಿಕಾಯಕ್ಕೂ ಒಬ್ಬೊಬ್ಬ ವಕ್ತಾರನಿರಬೇಕೆಂಬ ಈಗಿನ ಪ್ರಾತಿನಿಧ್ಯಾವಕಾಶ ಅವರಿಗೆ ಸಾಕಾಗುತ್ತದೆ. ಹೀಗಾಗಿ ನಿಕಾಯಗಳ ಡೀನರುಗಳ ರೂಪದಲ್ಲಿ ಅಧ್ಯಾಪಕರುಗಳಿಗೆ ನೀಡಲಾಗಿರುವ ಪ್ರಾತಿನಿಧ್ಯಕ್ಕಷ್ಟೇ ಅವರ ಪ್ರಾತಿನಿಧ್ಯಾವಕಾಶವನ್ನು ನಿರ್ಬಂಧಿಸಬೇಕೆಂದು ನಾನು ಸೂಚಿಸಬಯಸುತ್ತೇನೆ. ಸೆನೆಟ್ ಸಭೆಯ ಉಳಿದ ಸದಸ್ಯರು ರಾಜಕೀಯ ಅಥವಾ ವಾಣಿಜ್ಯ ವಲಯಗಳಿಂದ ಬಂದವರಾಗಿರಬೇಕು. ಶಿಕ್ಷಣದ ವಿಷಯದಲ್ಲಿ ಅವರ ಆಸಕ್ತಿ ವಿಶ್ವವಿದ್ಯಾನಿಯಕ್ಕೆ ಗಣನೀಯ ಸೇವೆಯನ್ನು ಸಲ್ಲಿಸಬಹುದು.

ಸೆನೆಟ್ ಸಭೆಯ ಮುಖ್ಯ ಕಾರ್ಯವೆಂದರೆ ಈ ಕೆಳಗೆ ಕಾಣಿಸಿರುವ ವಿಷಯಗಳ ಬಗ್ಗೆ ಶಾಸನಗಳನ್ನು ರಚಿಸುವುದು;

(೧) ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಿಸಿದ ಶಾಸನಗಳನ್ನು ರೂಪಿಸುವುದು ಮತ್ತು ಗೊತ್ತುವಳಿಗಳನ್ನು ಅಂಗೀಕರಿಸುವುದು;

(೨) ಗೌರವ ಪದವಿಗಳನ್ನು ನೀಡುವುದು;

(೩) ಅಂಗ ಸಂಸ್ಥೆಗಳಾಗಿರುವ ಕಾಲೇಜುಗಳಲ್ಲಿನ ಅಥವಾ ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿನ ಪ್ರವೇಶಗಳನ್ನು ಅನುಮೋದಿಸುವುದು;

(೪) ಯಾವುದೇ ಪದವಿ, ಡಿಪ್ಲೊಮಾ ಅಥವಾ ಸರ್ಟಿಫಿಕೇಟ್ ಶಿಕ್ಷಣವನ್ನು ಆರಂಭಿಸುವುದು.

(೫) ನಿಕಾಯಗಳ ನಡುವಣ ವಿವಾದವನ್ನು ಇತ್ಯರ್ಥಪಡಿಸುವುದು.

ವಿಶ್ವವಿದ್ಯಾನಿಲಯದ ಆಡಳಿತದ ಹೊಣೆಗಾರಿಕೆಯನ್ನು ನಿರ್ವಹಿಸುವ ಸಲುವಾಗಿ ಒಂದು ನಿಕಾಯಕ್ಕೂ ವಿಶ್ವವಿದ್ಯಾನಿಲಯ ಶೈಕ್ಷಣಿಕ ವ್ಯವಹಾರಗಳ ಬಗೆಗಿನ ಹೊಣೆಗಾರಿಕೆಯನ್ನು ನಿರ್ವಹಿಸುವ ಸಲುವಾಗಿ ಇನ್ನೊಂದು ನಿಕಾಯಕ್ಕೆ ಅವಕಾಶವನ್ನು ಕಲ್ಪಿಸಿದ ಬಳಿಕ ಧ್ಯೇಯೋದ್ದೇಶಗಳ ಈಡೇರಿಕೆಗೆ ನೆರವಾಗುವ ಸಾಧನೋಪಾಯಗಳನ್ನು ರೂಢಿಸುವ ಮತ್ತು ಅಳವಡಿಸಿಕೊಳ್ಳುವ ಹೊಣೆಗಾರಿಕೆಯನ್ನು ನಿರ್ವಹಿಸುವ ಸಲುವಾಗಿ ಮೂರನೆಯ ನಿಕಾಯವೊಂದು, ಕೇಂದ್ರೀಯ ಕಾರ್ಯಕಾರಿ ಮಂಡಳಿಯೊಂದು ಇರಬೇಕಾಗುತ್ತದೆ. ಈ ನಿಕಾಯ ಮುಂಬಯಿ ವಿಶ್ವವಿದ್ಯಾನಿಲಯದ ಈಗಿನ ಸಿಂಡಿಕೇಟ್ ಸಭೆಗೆ ಸಂವಾದಿಯಾಗಿರುತ್ತದೆ ಯಾದರೂ ಅದರ ಸ್ವರೂಪ ಮತ್ತು ರಚನೆಯಲ್ಲಿ ಅದು ಸಂಪೂರ್ಣವಾಗಿ ಭಿನ್ನವೇ ಆಗಿರಬೇಕು. ರಚನೆ ಮತ್ತು ಕಾರ್ಯದ ಸ್ಥಿತಿಗತಿಗಳ ದೃಷ್ಟಿಯಿಂದ ನೋಡಿದರೆ ವಿಶ್ವವಿದ್ಯಾನಿಲಯದ ಎಲ್ಲ ನಿಕಾಯಗಳಲ್ಲಿ ಸಿಂಡಿಕೇಟ್ ಸಭೆಯ ಅತ್ಯಂತ ಕನಿಷ್ಠ ತೃಪ್ತಿದಾಯಕ ಸಂಸ್ಥೆಯಾಗಿರುವಂತೆ ತೋರುತ್ತದೆ. ವರಿಷ್ಠ ಕಾರ್ಯ ಪಾಲಕ ನಿಕಾಯವಾಗಿ ಸಿಂಡಿಕೇಟ್ ಸಾಮಾನ್ಯ ಮೊಹರಿನ ಅಭಿರಕ್ಷೆಯ ಮತ್ತು ಬಳಕೆಯ ಅಧಿಕಾರವನ್ನು ಹೊಂದಿರಬೇಕು. ವಿಶ್ವವಿದ್ಯಾನಿಲಯದ ಆಸ್ತಿಪಾಸ್ತಿಗಳ ಮತ್ತು ಒಟ್ಟಾರೆ ಆದಾಯದ ನಿರ್ವಹಣೆಯ ಅಧಿಕಾರಗಳನ್ನು ಹೊಂದಿರಬೇಕು. ಹಾಗೂ (ಅನ್ಯಥಾ ಅವಕಾಶವನ್ನು ಕಲ್ಪಿಸಿರುವುದನ್ನು ಹೊರತುಪಡಿಸಿ) ವಿಶ್ವವಿದ್ಯಾನಿಲಯದ ಎಲ್ಲ ವ್ಯವಹಾರಗಳನ್ನು ನಿರ್ವಹಿಸುವ ಅಧಿಕಾರವನ್ನು ಹೊಂದಿರಬೇಕು. ಅದರ ಈ ಕಾರ್ಯಗಳಿಗೆ ಬದಲಾಗಿ ಸಿಂಡಿಕೇಟ್ ಸಭೆಯ ಕಾರ್ಯವ್ಯಾಪ್ತಿ ಸುವಿಶಾಲ ಕಾರ್ಯಕ್ಷೇತ್ರದವರೆಗೆ ವ್ಯಾಪಿಸಿಕೊಂಡಿದೆ. ಇದನ್ನು ಅನುಕೂಲಕರವಾಗಿ ಇತರ ಹಾಗೂ ಹೆಚ್ಚು ಸೂಕ್ತವಾಗಿರುವಂಥ ನಿಕಾಯಗಳಿಗೆ ವಹಿಸಿಕೊಡಬಹುದಾಗಿದೆ. ಕಾರ್ಯಕಾರಿ ಸಮಿತಿಯೆಂದು ಭಾವಿಸಲಾಗಿರುವ ಒಂದು ನಿಕಾಯದಲ್ಲಿ ಪ್ರಚಲಿತ ವ್ಯವಸ್ಥೆ ವಿವೇಚನಾಪೂರ್ವಕವಾದ ನಿರ್ಣಯದ ಬಗೆಗೆ ದೃಷ್ಟಿಯನ್ನು ಕೇಂದ್ರೀಕರಿಸುವುದಕ್ಕೆ ಬದಲಾಗಿ ಚರ್ಚೆಯ ಬಗ್ಗೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸುತ್ತದೆ. ಹೀಗಾಗಿ ಲೆಕ್ಕಪತ್ರಗಳ ಮಂಡಳಿಯನ್ನು ರದ್ದುಪಡಿಸಿ ಅದರ ಪ್ರಕಾರ್ಯಗಳನ್ನು ಸಿಂಡಿಕೇಟ್ ಸಭೆಗೆ ವರ್ಗಾಯಿಸಬಹುದೆಂದು ಸೂಚಿಸಬಯಸುತ್ತೇನೆ. ಈ ಕೆಳಗೆ ಕಾಣಿಸಿರುವ ವಿಚಾರಗಳ ಬಗ್ಗೆ ನಿರ್ಧರಿಸುವ ಅಧಿಕಾರ ಸಿಂಡಿಕೇಟ್ ಸಭೆಗೆ ಇರತಕ್ಕದ್ದು:

(೧) ವಿಶ್ವವಿದ್ಯಾನಿಲಯದ ಹಣಕಾಸು ಹೂಡಿಕೆ ಮತ್ತು ಲೆಕ್ಕಪತ್ರಗಳು.

(೨) ವಿಶ್ವವಿದ್ಯಾನಿಲಯದಲ್ಲಿ ವಸೂಲು ಮಾಡಬೇಕಾಗಿರುವ ಶುಲ್ಕಗಳು ಮತ್ತು ಅವುಗಳ ಪ್ರಮಾಣದಲ್ಲಿ ಅಥವಾ ವಿಶ್ವವಿದ್ಯಾನಿಲಯದಿಂದ ವಿಶೇಷಾಧಿಕಾರಗಳನ್ನು ಅನುಭೋಗಿಸುವುದಕ್ಕೆ ಸಂಬಂಧಿಸಿದ ಪಾವತಿಗಳು.

(೩) ಪ್ರಾಧ್ಯಾಪಕರು, ಅಧ್ಯಾಪಕರು, ಕುಲಸಚಿವರು, ಗ್ರಂಥಪಾಲರು ಮತ್ತು ಖಾಯಂ ನೌಕರರೂ ಸೇರಿದಂತೆ ವಿಶ್ವವಿದ್ಯಾನಿಲಯದ ಸಿಬ್ಬಂದಿಯ ನೇಮಕಾತಿ ವಿಧಾನಗಳು ಮತ್ತು ಷರತ್ತುಗಳು, ಸೇವಾವಧಿ ಮತ್ತು ಹುದ್ದೆಯಿಂದ ತೆಗೆದುಹಾಕುವುದು, ಕರ್ತವ್ಯಗಳು, ಉಪಲಬ್ಧಿಗಳು, ಭತ್ಯೆಗಳು ವೇತನಾದಿಗಳು ಮತ್ತು ಸೇವಾನಿವೃತ್ತಿ ಭತ್ಯೆಗಳು.

(೪) ನಿರ್ಧಾರಕರು, ಪರೀಕ್ಷಕರು ಮತ್ತು ಪರೀಕ್ಷಾ ಮಂಡಳಿಗಳು ಅಧಿಕಾರಾವಧಿ ಷರತ್ತುಗಳು ಮತ್ತು ನೇಮಕಾತಿ ವಿಧಾನಗಳು ಮತ್ತು ಕರ್ತವ್ಯಗಳು.

(೫) ಶಿಷ್ಯವೃತ್ತಿಗಳು, ವಿದ್ಯಾರ್ಥಿಗಳು, ಬಹುಮಾನಗಳು, ಪ್ರಶಸ್ತಿಗಳು, ಹಾಗೂ ಹಣಕಾಸು ನೆರವು ಮತ್ತು ಇತರ ನೆರವುಗಳನ್ನು ನಿರ್ಣಯಿಸುವುದು.

(೬) ಸಭಾಭವನಗಳು, ವಿದ್ಯಾರ್ಥಿನಿಲಯಗಳು ಅಥವಾ ವಿದ್ಯಾರ್ಥಿಗಳ ವಸತಿಗಾಗಿ ನಿರ್ಮಿಸುವ ಇತರ ಕಟ್ಟಡಗಳ ವ್ಯವಸ್ಥೆ, ಸುಸ್ಥಿತಿ ಮತ್ತು ಮೇಲ್ವಿಚಾರಣೆ.

(೭) ವಿಶ್ವವಿದ್ಯಾನಿಲಯದ ಸ್ನಾತಕಪೂರ್ವ ವಿದ್ಯಾರ್ಥಿಗಳಾಗಿ ವಿದ್ಯಾರ್ಥಿಗಳ ಸೇರ್ಪಡೆ.

(೮) ವಿಶ್ವವಿದ್ಯಾನಿಲಯದ ನೈಜ ಮತ್ತು ಖಾಸಗಿ ಆಸ್ತಿ–ಪಾಸ್ತಿಗಳ ವ್ಯವಹರಣೆ.

(೯) ವಿಶ್ವವಿದ್ಯಾನಿಲಯದ ಕೆಲಸ–ಕಾರ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅಗತ್ಯವಾಗಿರುವ ಭವನಗಳು, ಸ್ಥಳಗಳು, ಪೀಠೋಪಕರಣಗಳು ಮತ್ತು ಸಲಕರಣೆಗಳನ್ನು ಒದಗಿಸುವುದು.

(೧೦) ವಿಶ್ವವಿದ್ಯಾನಿಲಯಕ್ಕಾಗಿ ಹಣವನ್ನು ಎರವಲು ಪಡೆಯುವುದು ಹಾಗೂ ಅಗತ್ಯವಿದ್ದಲ್ಲಿ ವಿಶ್ವವಿದ್ಯಾನಿಲಯದ ಆಸ್ತಿಯನ್ನು ಒತ್ತೆಯಿಡುವುದು.

(೧೧) ವಿಶ್ವವಿದ್ಯಾನಿಲಯದ ಪರವಾಗಿ ಒಪ್ಪಂದಗಳನ್ನು ಏರ್ಪಡಿಸಿಕೊಳ್ಳುವುದು, ಬದಲಾಯಿಸುವುದು, ಕಾರ್ಯರೂಪಕ್ಕೆ ತರುವುದು ಮತ್ತು ರದ್ದುಪಡಿಸುವುದು.

(೧೨) ಸೆನೆಟ್ ಸಭೆಯ ಕಾರ್ಯದಿಂದಲ್ಲದೇ ಬೇರಾವುದೇ ಬಗೆಯಲ್ಲಿ ಬಾಧಿತರಾಗಿರುವುದಾಗಿ ಭಾವಿಸುವ ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಪ್ರಾಧ್ಯಾಪಕರು, ಅಧ್ಯಾಪಕ ಸಿಬ್ಬಂದಿ, ಸ್ನಾತಕರು, ಸ್ನಾತಕಪೂರ್ವ ವಿದ್ಯಾರ್ಥಿಗಳು ಮತ್ತು ನೌಕರರ ಕುಂದುಕೊರತೆಗಳನ್ನು ಪುರಸ್ಕರಿಸುವುದು, ನ್ಯಾಯ ನಿರ್ಣಯ ಮಾಡುವುದು ಹಾಗೂ ಅರ್ಹವೆಂದು ಭಾವಿಸಿದ ಪ್ರಸಂಗಗಳಲ್ಲಿ ಆ ಕುಂದುಕೊರತೆಗಳನ್ನು ನಿವಾರಿಸುವುದು.

(೧೩) ಅಂಗ ಸಂಸ್ಥೆಗಳಾಗಿರುವ ಸರ್ಕಾರದ ಸಹಾಯಧನ ನೀಡಿಕೆಯನ್ನು ನಿಯಂತ್ರಿಸುವುದು.

ನಿಗಮನ ಕಾಯ್ದೆಯ ಮೂಲಕ ಈ ಮೂರು ನಿಕಾಯಗಳನ್ನು– ಸೆನೆಟ್, ಸಿಂಡಿಕೇಟ್ ಮತ್ತು ವ್ಯಾಸಂಗವಿಭಾಗ (ನಿಕಾಯ)ಗಳನ್ನು ರಚಿಸಬೇಕು. ಒಟ್ಟಾಗಿ ಅವು ಮಹಾನ್ ಬೋಧಕ ವಿಶ್ವವಿದ್ಯಾನಿಲಯದ ಅಗತ್ಯವಾದ ಎಲ್ಲ ಕಾರ್ಯಶಾಖೆಗಳನ್ನು ಒದಗಿಸಲು ಸಾಕಾಗುತ್ತವೆ. ಆದರೆ ಮುಂಬಯಿಯ ಹೊಸ ವಿಶ್ವವಿದ್ಯಾನಿಲಯಕ್ಕೆ ಇನ್ನೊಂದು ಕಾರ್ಯಶಾಖೆಯ ಅಗತ್ಯವಿರುವಂತೆ ತೋರುತ್ತದೆ– ಅದರಲ್ಲಿಯೂ ವಿಶ್ವವಿದ್ಯಾನಿಲಯ– ಶಿಕ್ಷಣ ಕೇಂದ್ರದಲ್ಲಿನ ಮಾತೃಸ್ವರೂಪದ ಕಾಲೇಜುಗಳು ವಿಶ್ವವಿದ್ಯಾನಿಲಯಗಳಾಗಿ ಬೆಳೆದು ನಿಲ್ಲುವುದಕ್ಕೆ ಮೊದಲಿನ, ಸುದೀರ್ಘವಾಗಿ ಇರಲೇಬೇಕಾದ ಸ್ಥಿತ್ಯಂತರದ ಅವಧಿಯಲ್ಲಿ. ಅಲ್ಲಿಯವರೆಗಂತೂ ಅದು ಈ ಪ್ರಾಂತ್ಯದಲ್ಲಿನ ಹೊಸದಾಗಿ ಸಂಘಟಿತವಾದ ಒಂದಲ್ಲ ಒಂದು ಬೋಧಕ ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಗಳಾಗಿಯೇ ಉಳಿದುಕೊಳ್ಳಬೇಕಾಗುತ್ತದೆ. ಆದರೆ ಸ್ಥಿತ್ಯಂತರ ಅವಧಿಗೆ ಸಂಬಂಧಿಸಿದಂತೆ ಯಾವುದಾದರೊಂದು ವ್ಯವಸ್ಥೆಯನ್ನು ಮಾಡುವ ಸಮಸ್ಯೆ ಇಲ್ಲದೆ ಹೋಗಿದ್ದರೂ, ಮಹಾನ್ ಬೋಧಕ ವಿಶ್ವವಿದ್ಯಾನಿಲಯವೊಂದರ ನಿರ್ವಹಣೆಗೆ ನಾಲ್ಕನೆಯ ನಿಕಾಯವೊಂದರ ಅಗತ್ಯ ಉಂಟಾಗಿಯೇ ತೀರುತ್ತಿತ್ತು.

ನಾನು ಸೂಚಿಸಿರುವ ಸಂಘಟನಾ–ಯೋಜನೆ ಹೆಚ್ಚು ಕಡಿಮೆ ಅಧಿಕಾರಿಗಳ ಪ್ರತ್ಯೇಕತೆಯ (ಬೇರ್ಪಡೆಯ) ತತ್ತ್ವವನ್ನು ಆಧರಿಸಿದೆ. ಸೆನೆಟ್ ಸಭೆಯೇ ವಿಧಾಯೀ ಅಧಿಕಾರದ ಕೇಂದ್ರವಾಗಿರುತ್ತದೆ. ಸಿಂಡಿಕೇಟ್ ಸಭೆ ಕಾರ್ಯಪಾಲಕ ಅಧಿಕಾರದ ಕೇಂದ್ರವಾಗಿರುತ್ತದೆ. ವ್ಯಾಸಂಗ ವಿಭಾಗಗಳು ಶೈಕ್ಷಣಿಕ ಅಧಿಕಾರದ ಕೇಂದ್ರಗಳಾಗಿರುತ್ತದೆ. ಆದರೆ, ಈ ಪ್ರತ್ಯೇಕ ಅಧಿಕಾರಗಳನ್ನು ಸ್ವತಂತ್ರವಾಗಿ ಹಾಗೂ ಸಮನ್ವಯ ವಿಲ್ಲದೆ ಚಲಾಯಿಸಿದರೆ, ಅದರ ಫಲ ವಿಶ್ವವಿದ್ಯಾನಿಲಯದ ಅತ್ಯುತ್ತಮ ಹಿತಾಸಕ್ತಿಗೆ ಖಂಡಿತವಾಗಿಯೂ ಹಾನಿಕಾರಕವಾಗುತ್ತದೆ. ವ್ಯಾಸಂಗ ವಿಭಾಗವನ್ನು ಇಲ್ಲಿ ವಿಶ್ವವಿದ್ಯಾನಿಲಯದ ಸಂಘಟನೆಯ ಆಧಾರವೆಂದು

ಪರಿಗಣಿಸಲಾಗಿದೆ. ಶಿಕ್ಷಣ ಕ್ರಮಗಳನ್ನು ಗೊತ್ತುಪಡಿಸುವ ಬೋಧನಕಾರ್ಯವನ್ನು ವ್ಯವಸ್ಥೆಗೊಳಿಸುವ ಹಾಗೂ ಪರೀಕ್ಷೆಗಳನ್ನು ನಡೆಸುವ ವಿಚಾರದಲ್ಲಿ ವ್ಯಾಸಂಗ ವಿಭಾಗಕ್ಕೆ ಪೂರ್ಣ ಸ್ವಾಯತ್ತತೆಯನ್ನು ಕೊಡಲಾಗಿದೆ. ಆದರೆ ವ್ಯಾಸಂಗ ವಿಭಾಗಗಳಿಗೆ ಸ್ಪಷ್ಟವಾಗಿ ವಹಿಸಿಕೊಡಲಾಗದೆ ಇರುವಂಥ ಎಲ್ಲ ವಿಚಾರಗಳನ್ನು ನಿಯಂತ್ರಿಸುವುದಕ್ಕೆ ಒಂದಕ್ಕಿಂತ ಹೆಚ್ಚು ವ್ಯಾಸಂಗ ವಿಭಾಗಗಳಿಗೆ ಸಂಬಂಧಿಸಿದಂಥ ವಿಚಾರಗಳನ್ನು ಇತ್ಯರ್ಥಪಡಿಸುವುದಕ್ಕೆ ಹಾಗೂ ಎರಡು ವ್ಯಾಸಂಗ ವಿಭಾಗಗಳ ನಡುವೆ ಭಿನ್ನಾಭಿಪ್ರಾಯ ಉಂಟಾದಾಗ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಬೇಕಾಗುತ್ತದೆ. ವ್ಯಾಸಂಗ ವಿಭಾಗಗಳ ನಡುವೆ ಸಮನ್ವಯವನ್ನು ಏರ್ಪಡಿಸುವುದಕ್ಕೆ ಮಾತ್ರವಲ್ಲದೆ, ವ್ಯಾಸಂಗ ವಿಭಾಗಗಳ ಮತ್ತು ಸಿಂಡಿಕೇಟ್ ಸಭೆಯ ನಡುವೆ ಸಮನ್ವಯವನ್ನು ಏರ್ಪಡಿಸುವುದಕ್ಕಾಗಿಯೂ ಇನ್ನೊಂದು ನಿಕಾಯದ ಅಗತ್ಯ ಇದ್ದೇ ಇದೆ. ಇಲ್ಲವಾದಲ್ಲಿ ತನ್ನ ಕಾರ್ಯಪಾಲಕ ಅಧಿಕಾರಗಳನ್ನು ಚಲಾಯಿಸುವ ಮೂಲಕ ವ್ಯಾಸಂಗ ವಿಭಾಗಗಳ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಸಿಂಡಿಕೇಟ್ ಸಭೆ ತೀವ್ರವಾದ ಹಸ್ತಕ್ಷೇಪವನ್ನೆಸಗಬಹುದು. ಹಣಕಾಸಿನ ನಿಯಂತ್ರಣ ಅಂತಿಮವಾಗಿ ಉಳಿದೆಲ್ಲ ಸಂಗತಿಗಳ ನಿಯಂತ್ರಣವೇ ಆಗಿರುತ್ತದೆ. ಹೀಗಾಗಿ, ಒಟ್ಟಾರೆ ಶೈಕ್ಷಣಿಕ ಸಿಬ್ಬಂದಿಯ ಪ್ರತಿನಿಧಿಗಳನ್ನೊಳಗೊಂಡಿರುವ ನಿಕಾಯದೊಂದಿಗೆ ಸಮಾಲೋಚಿಸದೆ ಇಡಿಯಾಗಿ ವಿಶ್ವವಿದ್ಯಾನಿಲಯದ ಮೇಲೆ ನೇರವಾದ ಶೈಕ್ಷಣಿಕ ಪರಿಣಾಮ ಬೀರುವಂಥ ಯಾವುದೇ ಕ್ರಮವನ್ನು ಸಿಂಡಿಕೇಟ್ ತೆಗೆದುಕೊಳ್ಳತಕ್ಕದ್ದಲ್ಲ. ಹೀಗೆ ಸ್ಥಿತ್ಯಂತರ ಅವಧಿಯ ಒಂದು ಲಕ್ಷಣವಾಗಿ ಅಥವಾ ವಿಶ್ವವಿದ್ಯಾನಿಲಯ ಸಂಘಟನೆಯ ಒಂದು ಶಾಶ್ವತ ಲಕ್ಷಣವಾಗಿ ನಿಗಮನ ಕಾಯ್ದೆಯಲ್ಲಿ ನಾಲ್ಕನೆಯ ನಿಕಾಯದ ಸ್ಥಾಪನೆಯ ಸ್ಪಷ್ಟ ಅಗತ್ಯವಿದೆ. ಈ ನಿಕಾಯವನ್ನು ನಾನು ಶಿಕ್ಷಣ ಮಂಡಳಿ ಎಂದು ಕರೆಯಬಯಸುತ್ತೇನೆ. ಅದರ ಪ್ರಕಾರ್ಯಗಳು ಆಂಶಿಕವಾಗಿ ಸಲಹಾತ್ಮಕವಾಗಿರುತ್ತವೆ ಹಾಗೂ ಆಂಶಿಕವಾಗಿ ಕಾರ್ಯಪಾಲಕವಾಗಿರುತ್ತವೆ.

ವಿನಿಮಯದ ಮೂಲಕ ಅಥವಾ ಬೇರೆ ವಿಧಾನದ ಮೂಲಕ ಈ ಕೆಳಗೆ ಕಾಣಿಸಿರುವ ಎಲ್ಲ ವಿಷಯಗಳನ್ನು ಇತ್ಯರ್ಥಪಡಿಸುವುದು ಅದರ ಕಾರ್ಯಪಾಲಕ ಪ್ರಕಾರ್ಯಗಳಲ್ಲಿ ಸೇರಿರುತ್ತದೆ:

(೧) ವ್ಯಾಸಂಗ ವಿಭಾಗಗಳ ಅಥವಾ ವ್ಯಾಸಂಗ ವಿಭಾಗಗಳಿಂದ ನೇಮಿಸಲಾದ ಸಮಿತಿಗಳ ಸಭೆಗಳಲ್ಲಿನ ಕನಿಷ್ಠ ಹಾಜರಾತಿ (ಕೋರಂ).

(೨) ವಿಶ್ವವಿದ್ಯಾನಿಲಯ ಸಂಯುಕ್ತವಾಗಿ ಬೇರೆ ಯಾವುದೇ ವಿಶ್ವವಿದ್ಯಾನಿಲಯ ಅಥವಾ ನಿಕಾಯದೊಂದಿಗೆ ಯಾವುದೇ ಶೈಕ್ಷಣಿಕ ವಿಷಯಕ್ಕೆ ಸಂಬಂಧಿಸಿದಂತೆ ನೇಮಿಸಿದ ಮಂಡಳಿ ಅಥವಾ ಸಮಿತಿಗಳೂ ಸೇರಿದಂತೆ ಸಲಹಾ ಮಂಡಳಿಗಳ ಅಥವಾ ಇತರ ಮಂಡಳಿಗಳ ಕರ್ತವ್ಯ ಮತ್ತು ಅಧಿಕಾರಗಳು.

(೩) ವಿಶ್ವವಿದ್ಯಾನಿಲಯ ಕೊಡಮಾಡುವ ಗೌರವ ಪದವಿಗಳು ಮತ್ತು ಪ್ರಶಸ್ತಿಗಳಿಗೆ ಸಂಬಂಧಿಸಿದ ಅರ್ಹತೆಗಳು ಮತ್ತು ಇಂಥ ಪದವಿ–ಪ್ರಶಸ್ತಿಗಳ ನೀಡಿಕೆಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ವಿಧಾನಗಳು ಮತ್ತು ಕ್ರಮಗಳು.

(೪) ಅಂಗಸಂಸ್ಥೆಗಳಾಗಿರುವ ಕಾಲೇಜುಗಳ ಸಂದರ್ಶನ.

(೫) ಅಂಗಸಂಸ್ಥೆಗಳಾಗಿ ಕಾಲೇಜುಗಳಿಗೆ ಮಾನ್ಯತೆ ನೀಡುವುದು ಹಾಗೂ ರದ್ದುಪಡಿಸುವುದು.

(೬) ಶಿಷ್ಯವೇತನಗಳು, ವಿದ್ಯಾರ್ಥಿ ವೇತನಗಳು, ನಿಧಿ–ವೇತನಗಳು ಹಾಗೂ ಆರ್ಥಿಕ ಮತ್ತು ಇತರ ಬಗೆಯ ನೆರವುಗಳು– ಇವುಗಳ ಅವಧಿ.

(೭) ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವವರ ಮಟ್ಟಿಗೆ ಸ್ನಾತಕರ ಮತ್ತು ಸ್ನಾತಕಪೂರ್ವ ವಿದ್ಯಾರ್ಥಿಗಳ ವಿಷಯದಲ್ಲಿ ಜಾರಿಗೊಳಿಸಲಾಗುವ ಶಿಸ್ತುಕ್ರಮಗಳು.

(೮) ಸೆನೆಟ್ ಸಭೆಗೆ ಮೇಲ್ಮನವಿ ಮಾಡಿಕೊಳ್ಳುವುದಕ್ಕೆ ಒಳಪಟ್ಟು, ಸ್ನಾತಕರನ್ನು ಮತ್ತು ಸ್ನಾತಕ ಪೂರ್ವ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯದ ಸದಸ್ಯತ್ವದಿಂದ ಹೊರಹಾಕುವುದು ಮತ್ತು ಪದವಿಗಳು, ಡಿಪ್ಲೊಮಾಗಳು, ಪ್ರಮಾಣ ಪತ್ರಗಳು (ಸರ್ಟಿಫಿಕೇಟುಗಳು) ಮತ್ತು ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು.

ಶಿಕ್ಷಣ ಮಂಡಳಿಯ (ಪರಿಷತ್ತಿನ) ಸಲಹಾತ್ಮಕ ಪ್ರಕಾರ್ಯಗಳು ಈ ಕೆಳಗೆ ಕಾಣಿಸಿರುವಂತೆ ಇರತಕ್ಕದ್ದು:

(i) ಮೊಟ್ಟಮೊದಲ ಶಿಕ್ಷಣ ಮಂಡಳಿಯ ಗಮನವನ್ನು ಸೆಳೆಯದೆ ಹಾಗೂ ಅದರಿಂದ ವರದಿಯನ್ನು ತರಿಸಿಕೊಳ್ಳದೆ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಹಂತಗಳೆರಡರಲ್ಲಿಯೂ ವಿಶ್ವವಿದ್ಯಾನಿಲಯ ಶಿಕ್ಷಣದ ಸಂಘಟನೆ, ಸುಧಾರಣೆ ಮತ್ತು ವಿಸ್ತರಣೆಗಳಿಗೆ ಸಂಬಂಧಿಸಿದ ಯಾವುದೇ ವಿಚಾರಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳತಕ್ಕದಲ್ಲ.

(ii) ಮೊಟ್ಟಮೊದಲು ಶಿಕ್ಷಣ ಮಂಡಳಿಯ ಗಮನವನ್ನು ಸೆಳೆಯದೆ ಹಾಗೂ ಅದರಿಂದ ವರದಿಯನ್ನು ತರಿಸಿಕೊಳ್ಳದೆ, ವ್ಯಾಸಂಗ ವಿಭಾಗಗಳಿಗೆ ಸಿಂಡಿಕೇಟ್ ಸಭೆ ಸಾಮಾನ್ಯ ಸೂಚನೆಗಳನ್ನು ಹೊರಡಿಸತಕ್ಕದ್ದಲ್ಲ ಅಥವಾ ಯಾವುದೇ ವ್ಯಾಸಂಗ ವಿಭಾಗದ ಯಾವುದೇ ಸಮಿತಿಯ ಅಥವಾ ಮಂಡಳಿಯ ಯಾವುದೇ ಕಾರ್ಯದ ಬಗ್ಗೆ ಬೇರೆ ಯಾವುದೇ ವ್ಯಾಸಂಗ ವಿಭಾಗ ಮೇಲ್ಮನವಿಯನ್ನು ಸಲ್ಲಿಸಿದಾಗ ಅಂಥ ಯಾವುದೇ ಕಾರ್ಯವನ್ನು ಪುನರವಲೋಕನ ಮಾಡತಕ್ಕದ್ದಲ್ಲ ಅಥವಾ ಅವುಗಳ ಭವಿಷ್ಯದಲ್ಲಿನ ಕ್ರಮಗಳ ಬಗ್ಗೆ ನಿರ್ದೇಶನಗಳನ್ನು ಕೊಡತಕ್ಕದ್ದಲ್ಲ. ಈ ನಿಕಾಯಗಳ ಯಾವುದೇ ಅಧಿಕಾರಿಯ ಅಥವಾ ಪ್ರತಿನಿಧಿಯ ಆಯ್ಕೆ ಇದಕ್ಕೆ ಹೊರತಾಗಿರುತ್ತದೆ.

(iii) ಮೊಟ್ಟಮೊದಲ ಶಿಕ್ಷಣ ಮಂಡಳಿಯ ಗಮನವನ್ನು ಸೆಳೆಯದೆ ಹಾಗೂ ಅದರಿಂದ ವರದಿಯನ್ನು ತರಿಸಿಕೊಳ್ಳದೆ, ಬೋಧಕ ಸಿಬ್ಬಂದಿಗೆ ಸಿಂಡಿಕೇಟ್ ಸಭೆ ಯಾವುದೇ ನೇಮಕಾತಿಯನ್ನು ಮಾಡತಕ್ಕದ್ದಲ್ಲ.

ಕಲ್ಕತ್ತ ವಿಶ್ವವಿದ್ಯಾನಿಲಯ ಆಯೋಗ ನೂತನ ಕಲ್ಕತ್ತ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಸೆನೆಟ್, ಸಿಂಡಿಕೇಟ್ ಮತ್ತು ಶಿಕ್ಷಣ ಮಂಡಳಿಗಳ ರಚನೆ ಮತ್ತು ಸದಸ್ಯ ಸಂಖ್ಯೆಯ ಬಗ್ಗೆ ಯಾವ ಸೂಚನೆಗಳನ್ನು ಕೊಟ್ಟಿದೆಯೋ ಅವೇ ಸೂಚನೆಗಳು ಇಲ್ಲಿಗೂ ಅನ್ವಯವಾಗತಕ್ಕದ್ದು. ಹೆಸರುಗಳನ್ನು ಬದಲಾಯಿಸಿ, ಸೆನೆಟ್ ಅನ್ನು 'ಕೋರ್ಟ್' ಎಂದೂ ಸಿಂಡಿಕೇಟ್ ಅನ್ನು 'ಸ್ಟೇಟ್' ಎಂದೂ ಕರೆಯುವುದು ಉತ್ತಮವೆಂದು ನಾನು ಭಾವಿಸಿದ್ದೇನೆ. ವೈಸ್‌ರಾಯ್ ಅವರೇ ವಿಶ್ವವಿದ್ಯಾನಿಲಯದ ಕುಲಾಧಿಪತಿ (ವಿಸಿಟರ್) ಆಗಿರಬೇಕೆಂದೂ ನಾನು ಸೂಚಿಸಬಯಸುತ್ತೇನೆ.

ಪ್ರಶ್ನೆ ೧೬: ಮುಂಬಯಿ ವಿಶ್ವವಿದ್ಯಾನಿಲಯ (ಅ) ಪರೀಕ್ಷೆಗಳನ್ನು ನಡೆಸುವ (ಆ) ಶಿಕ್ಷಣ ಕ್ರಮಗಳನ್ನು ಗೊತ್ತುಪಡಿಸುವ ಹಾಗೂ (ಇ) ಪಠ್ಯ ಪುಸ್ತಕಗಳನ್ನು ನಿಗದಿಪಡಿಸುವ ಹೊಣೆಗಾರಿಕೆಗಳನ್ನು ಚೆನ್ನಾಗಿಯೇ

ನಿರ್ವಹಿಸುತ್ತಿರಬಹುದು. ಆದರೆ ಇವೆಲ್ಲ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಮೇಲೆ ಯಾವ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿವೆ ಎಂಬ ವಿಚಾರದತ್ತ ವಿಶ್ವವಿದ್ಯಾನಿಲಯ ಗಮನ ಕೊಟ್ಟಿರುವಂತೆಯೇ ಕಾಣುತ್ತಿಲ್ಲ. ಕಟ್ಟುನಿಟ್ಟಾಗಿ ಪಠ್ಯಕ್ರಮಕ್ಕೆ ಬದ್ಧನಾಗದೆ ತನಗೆ ಅತ್ಯುತ್ತಮವೆಂದು ತೋರಿದ ರೀತಿಯಲ್ಲಿ ಬೋಧಿಸಲು ವಿಶ್ವವಿದ್ಯಾನಿಲಯ ಅಧ್ಯಾಪಕನಿಗೆ ಸ್ವಾತಂತ್ರ್ಯವನ್ನು ಹೇಗೆ ಒದಗಿಸಿಕೊಡಬೇಕು ಎಂಬುದು ಈ ಸಮಿತಿ ಬಗೆಹರಿಸಬೇಕಾಗಿರುವ ಸಮಸ್ಯೆಗಳಲ್ಲಿ ಅಗ್ರಪ್ರಾಶಸ್ತ್ಯದ ಸಮಸ್ಯೆಯಾಗಬೇಕು. ಅಧ್ಯಾಪಕನಿಗೆ ಸ್ವಾತಂತ್ರ್ಯವನ್ನು ತಂದುಕೊಡಬಹುದಾದರೆ, ವಿದ್ಯಾರ್ಥಿಗೂ ಆ ಬಳಿಕ ಸ್ವಾತಂತ್ರ್ಯ ತಾನಾಗಿಯೇ ಲಭಿಸುತ್ತದೆ. ಈ ಉದ್ದೇಶ ಸಾಧಿತವಾಗಬೇಕಾಗಿದ್ದರೆ, ಸೂಕ್ತ ರಕ್ಷಣಾ ಕ್ರಮಗಳೊಂದಿಗೆ ತಮ್ಮ ವಿದ್ಯಾರ್ಥಿಗಳ ಶಿಕ್ಷಣ ಮತ್ತು ಪರೀಕ್ಷೆಯ ಸಂಪೂರ್ಣ ನಿಯಂತ್ರಣವನ್ನು ವಿಶ್ವವಿದ್ಯಾನಿಲಯದ ಅಧ್ಯಾಪಕರು ತಮ್ಮ ಕೈಗೇ ತೆಗೆದುಕೊಳ್ಳಬೇಕು. ಹಾಗೂ ಇದು ಸಾಧ್ಯವಾಗುವಂತೆ ವಿಶ್ವವಿದ್ಯಾನಿಲಯದ ಅಂಗರಚನೆಯಾಗಬೇಕು.

ಪ್ರಶ್ನೆ ೧೭: ಪರೀಕ್ಷೆಯ ಜೊತೆಗೆ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಮಾಡುವ ಕೆಲಸವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಉನ್ನತ ಪದವಿಗಳಿಗೆ ಸಂಬಂಧಿಸಿದಂತೆ ನಿಬಂಧ ಸಲ್ಲಿಕೆ ಮತ್ತು ವಾಚಿಕ ಪರೀಕ್ಷೆಗಳು ಇರಬೇಕು.

ಪ್ರಶ್ನೆ ೧೮ ಮತ್ತು ೧೯: ಪೂರ್ಣ ವಿಶ್ವವಿದ್ಯಾನಿಲಯವನ್ನಾಗಿಸುವ ದೃಷ್ಟಿಯಿಂದ ಮುಂಬಯಿ ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ಕೃಷಿ, ಲಲಿತ ಕಲೆಗಳು, ತಂತ್ರವಿದ್ಯೆ ಮತ್ತು ಸಂಗೀತ ನಿಕಾಯಗಳನ್ನೂ ಹೊಂದಬೇಕು.

ಪ್ರಶ್ನೆ ೨೦: ಸ್ನಾತಕೋತ್ತರ ಪದವಿಗಳ ಅಧ್ಯಯನಾವಧಿ ನಾಲ್ಕು ವರ್ಷಗಳಾಗಿರಬೇಕು. (ನಾನು ಸಮಾಜ ವಿಜ್ಞಾನಗಳ ಬಗ್ಗೆ ಮಾತ್ರವೇ ಮಾತನಾಡುತ್ತಿದ್ದೇನೆ.) ತಲಾ ಎರಡು ವರ್ಷಗಳ ಅವಧಿಯ ಎರಡು ಸ್ತರಗಳಿರಬೇಕು. ಮೊದಲ ಸ್ತರದ ಕೊನೆಯಲ್ಲಿ ವಿದ್ಯಾರ್ಥಿ ಎಂ.ಎ. ಪದವಿಗೆ ಅರ್ಹನಾಗಬೇಕು. ಅವನು ಒಂದು ವಿಷಯದಲ್ಲಿ ಮಾತ್ರವೇ ವಿಶೇಷ ಅಧ್ಯಯನ ಮಾಡಬೇಕು; ಆ ವಿಷಯ ಅವನ ಪ್ರಮುಖ ಆಸಕ್ತಿಯ ವಿಷಯವಾಗಿರಬೇಕು. ಲಿಖಿತ ಪರೀಕ್ಷೆಯ ಜೊತೆಗೆ ಸುಮಾರು ೭೫ ಪುಟಗಳಷ್ಟು (ಬೆರಳಚ್ಚಿನಲ್ಲಿ) ಪ್ರಬಂಧ ಇದಕ್ಕೆ ಒರೆಗಲ್ಲಾಗಿರಬೇಕು. ಈ ಪ್ರಬಂಧ ಮೂಲ ಆಕರಗಳನ್ನು ಬಳಸಿಕೊಳ್ಳುವ ಹಾಗೂ ಅವುಗಳನ್ನು ವಿಮರ್ಶಿಸುವ ಕಲೆಯಲ್ಲಿ ಅವನಿಗೆ ಇರುವ ಪರಿಶ್ರಮವನ್ನು ಸಾಬೀತುಪಡಿಸುವಂತಿರಬೇಕು. ಎರಡನೆಯ ಸ್ತರದ ಕೊನೆಯಲ್ಲಿ ವಿದ್ಯಾರ್ಥಿ ಪಿಎಚ್.ಡಿ. ಪದವಿಗೆ ಅರ್ಹನಾಗಬೇಕು. ವಾಚಿಕ ಪರೀಕ್ಷೆಯ ಜೊತೆಗೆ ಪ್ರಕಟಣೆಗೆ ಅರ್ಹವಾಗಿರುವ ಗಣನೀಯ ಗಾತ್ರದ ನಿಬಂಧ ಇದಕ್ಕೆ ಒರೆಗಲ್ಲಾಗಿರಬೇಕು. ಆ ನಿಬಂಧ ಪ್ರಮುಖ ಆಸಕ್ತಿಯ ವಿಷಯವಾಗಿ ಎಂ.ಎ. ಪದವಿಗೆ ಆಯ್ದುಕೊಂಡಿದ್ದ ವಿಷಯದ ವ್ಯಾಪ್ತಿಯೊಳಗೆ ಬರುವಂಥ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ವಿದ್ಯಾರ್ಥಿ ನಡೆಸಿದ ಸಂಶೋಧನೆಗಳಲ್ಲಿ ಅವನು ವಾಚಿಕ ಪರೀಕ್ಷೆಗೆ ಹಾಜರಾಗಬೇಕು. ಅವು ಅವನ ಪ್ರಧಾನ ಆಸಕ್ತಿಯ ವಿಷಯಗಳಿಗೆ ಸಂಬಂಧಿಸಿದಂಥವಾಗಿರಬೇಕು. ಈ ವ್ಯವಸ್ಥೆ ವಿಶಾಲ ಅಡಿಪಾಯದ ವಿಶೇಷೀಕರಣಕ್ಕೆ ಅವಕಾಶ ಮಾಡಿಕೊಡುತ್ತದೆ.

ಪ್ರಶ್ನೆ ೨೧: ಅಂಥ ಕೆಲವು ಪದವಿಗಳನ್ನು ಹೊಂದಿರುವುದು ಒಳ್ಳೆಯದು.

ಪ್ರಶ್ನೆ ೨೨: ಧನ–ಸಹಾಯ, ವಿದ್ಯಾರ್ಥಿ–ವೇತನ ಮತ್ತು ಶಿಷ್ಯವೇತನಗಳ ಮೂಲಕ.

ಪ್ರಶ್ನೆ ೨೩: ವಿಶ್ವವಿದ್ಯಾನಿಲಯ ಮುದ್ರಣಾಲಯ ಮತ್ತು ಪ್ರಕಟಣಾ ವಿಭಾಗವನ್ನು ಹೊಂದಿ–

ರುವುದು ಅತ್ಯಂತ ಅಗತ್ಯ. ಇದು ಇಲ್ಲವಾದರೆ ಸ್ನಾತಕೋತ್ತರ ಕಾರ್ಯಕ್ಕೆ ಗಣನೀಯವಾಗಿ ವಿಘ್ನ ವುಂಟಾಗುತ್ತದೆ.

ಪ್ರಶ್ನೆ ೨೪: ೧೧ರಿಂದ ೧೩ರವರೆಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರವನ್ನು ನೋಡಿ.

ಪ್ರಶ್ನೆ ೩೦: ಮುಂಬಯಿ ವಿಶ್ವವಿದ್ಯಾನಿಲಯ ಮುಂಬಯಿಗೆ ಮಾತ್ರವೇ ಸೀಮಿತವಾಗಿರಬೇಕು. ಹೊಸ ವಿಶ್ವವಿದ್ಯಾನಿಲಯ ಕಾಲೇಜುಗಳನ್ನು ಒಳಗೊಳ್ಳುವುದಾದರೆ, ಪ್ರತಿಯೊಂದು ಕಾಲೇಜೂ ಒಂದೊಂದು ವಿಷಯವನ್ನು ಮಾತ್ರವೇ ಬೋಧಿಸುವುದಕ್ಕೆ ತನ್ನನ್ನು ಸೀಮಿತಗೊಳಿಸಿಕೊಳ್ಳಬೇಕು.

ಪ್ರಶ್ನೆ ೩೧-೩೩: ೩೬ರಿಂದ ೩೯ರವರೆಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರವನ್ನು ನೋಡಿ.

ಪ್ರಶ್ನೆ ೩೪: ಶಿಕ್ಷಣದ ಪ್ರಸಾರ ವಿಶ್ವವಿದ್ಯಾನಿಲಯದ ಸಮುಚಿತ ಪ್ರಕಾರ್ಯವೇ ಆಗಬೇಕು. ದೇಶ ಭಾಷೆಯನ್ನು ವಿಶ್ವವಿದ್ಯಾನಿಲಯ ಶಿಕ್ಷಣ ಮಾಧ್ಯಮವಾಗಿ ಅಳವಡಿಸಿಕೊಳ್ಳದ ಹೊರತು, ಇದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಸಧ್ಯದ ಪರಿಸ್ಥಿತಿಗಳಲ್ಲಿ ಇದು ಅರಣ್ಯರೋದನವಾಗಿದೆ.

ಪ್ರಶ್ನೆ ೩೫: ವಿಶ್ವವಿದ್ಯಾನಿಲಯದ ಶೈಕ್ಷಣಿಕ ವ್ಯವಹಾರಗಳ ಮೇಲೆ ಸರ್ಕಾರಕ್ಕೆ ಯಾವುದೇ ನಿಯಂತ್ರಣವೂ ಇರಬಾರದು. ಇದನ್ನು ಸಂಪೂರ್ಣವಾಗಿ ವ್ಯಾಸಂಗ ವಿಭಾಗಗಳಿಗೇ ವಹಿಸಬೇಕು. ಆದರೆ, ವಿಶ್ವವಿದ್ಯಾನಿಲಯದ ವಿಧಾಯೀ ಮತ್ತು ಆಡಳಿತಾತ್ಮಕ ವ್ಯವಹಾರಗಳ ಮೇಲೆ ಸರ್ಕಾರಕ್ಕೆ ಸ್ವಲ್ಪ ನಿಯಂತ್ರಣ ಇರಬೇಕು. ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್ ಸಭೆಗಳಿಗೆ ನಾಮಕರಣಗಳನ್ನು ಮಾಡುವ ಮೂಲಕ ಸರ್ಕಾರ ಈ ನಿಯಂತ್ರಣವನ್ನು ಇಟ್ಟುಕೊಳ್ಳಬೇಕು.

ಪ್ರಶ್ನೆಗಳು ೪೧-೪೪: ಹೊಸದಾಗಿ ರಚಿತವಾಗಲಿರುವ ವ್ಯಾಸಂಗ ವಿಭಾಗಗಳಿಗೆ ನಾನು ಈ ಪ್ರಶ್ನೆಗಳನ್ನು ಬಿಡಬೇಕು. ಆನರ್ಸ್ ಶಿಕ್ಷಣದ ಪಠ್ಯಕ್ರಮವೂ ವಿದ್ಯಾರ್ಥಿಗಳ ದೃಷ್ಟಿಯಿಂದ ತುಂಬ ನಿರಾಶಾದಾಯಕವಾಗಿದೆ ಎಂಬುದು ನನ್ನ ಅಭಿಪ್ರಾಯ.

ಪ್ರಶ್ನೆಗಳು ೪೫-೪೬: ದೇಶಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಬಳಸುವ ವಿಷಯದಲ್ಲಿ ನಾನು ತುಂಬ ಪ್ರಬಲವಾದ ಇತ್ಯಾತ್ಮಕ ದೃಷ್ಟಿಕೋನವನ್ನಿರಿಕೊಂಡಿದ್ದೇನೆ. ಆದರೆ, ಸಾಮಾನ್ಯ ಸಂವಾದಕ್ಕೆ ಭಾರತೀಯ ಜನಸಮುದಾಯ ಯಾವ ದೇಶಭಾಷೆಯನ್ನು ಆಯ್ದುಕೊಳ್ಳುತ್ತದೆ ಎಂಬುದನ್ನು ಭಾರತೀಯ ಸಾರ್ವಜನಿಕ ಅಭಿಪ್ರಾಯ ತೀರ್ಮಾನಿಸದ ಹೊರತು, ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುವುದಿಲ್ಲ ವೆಂದು ನಾನು ಭಾವಿಸಿದ್ದೇನೆ.

ಪ್ರಶ್ನೆ ೫೨: ಹಿಂದುಳಿದ ವರ್ಗಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ದಲಿತ ವರ್ಗಗಳಲ್ಲಿ ವಿಶ್ವ ವಿದ್ಯಾನಿಲಯ ಶಿಕ್ಷಣದ ಅಭಿವರ್ಧನೆಗೆ ವಿಶೇಷ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆಯೆಂದು ನಾನು ಭಾವಿಸಿದ್ದೇನೆ.

ಈ ಪ್ರಶ್ನಾವಳಿಗೆ ನನ್ನ ಉತ್ತರಗಳನ್ನು ಮುಗಿಸುವ ಮುನ್ನ, ಒಳ್ಳೆಯ ಗ್ರಂಥಾಲಯವನ್ನು ವ್ಯವಸ್ಥೆ ಗೊಳಿಸುವ ವಿಷಯದಲ್ಲಿ ಈ ಸಮಿತಿ ತೋರಿರುವ ತೀವ್ರ ನಿರ್ಲಕ್ಷ್ಯದ ವಿಷಯದಲ್ಲಿ ನನ್ನ ದಿಗ್ಭ್ರಮೆಯನ್ನು ವ್ಯಕ್ತಪಡಿಸಬಯಸುತ್ತೇನೆ. ಪ್ರಥಮ ದರ್ಜೆಯ ಗ್ರಂಥಾಲಯವಿಲ್ಲದೆ, ವಿಶ್ವವಿದ್ಯಾನಿಲಯ ಹೇಗೆ ಕಾರ್ಯ ಪ್ರವೃತ್ತವಾಗಿರಬಲ್ಲದು ಎಂಬುದು ನನಗೆ ಅರ್ಥವಾಗುತ್ತಿಲ್ಲ.

---

೧೫ ಆಗಸ್ಟ್ ೧೯೩೪.

ಭಾಗ – ಎರಡು

# ಸೈಮನ್ ಕಮೀಷನ್ನಿನೊಂದಿಗೆ
# (ಭಾರತೀಯ ಶಾಸನಬದ್ಧ ಆಯೋಗ)
# ಡಾ. ಅಂಬೇಡ್ಕರ್

# ಮುಂಬೈ ಪ್ರಾಂತ್ಯ ಸರ್ಕಾರದ ರಚನೆಯನ್ನು ಕುರಿತ ವರದಿ

## ಮುನ್ನುಡಿ

ಸಮಿತಿಯ ನನ್ನ ಸಹೋದ್ಯೋಗಿಗಳು ಸಿದ್ಧಪಡಿಸಿರುವ ವರದಿಯ ಧೋರಣೆಗೆ ಹೊಂದಿಕೊಳ್ಳಲು ಅಥವಾ ನಮ್ಮ ವಿಚಾರಣೆಯ ವ್ಯಾಪ್ತಿಯೊಳಗೆ ಬರುವ ವಿಷಯಗಳನ್ನು ಕುರಿತ ತೀರ್ಮಾನಗಳಲ್ಲಿ ಹೆಚ್ಚು ಮುಖ್ಯವಾದುದನ್ನು ಒಪ್ಪಿಕೊಳ್ಳಲು ನನಗೆ ಸಾಧ್ಯವಾಗಿಲ್ಲವೆಂದು ವಿಷಾದಿಸುತ್ತೇನೆ. ಆದ್ದರಿಂದ ನನ್ನ ಸ್ವಂತ ಅಭಿಪ್ರಾಯಗಳನ್ನೂ, ಶಿಫಾರಸ್ಸುಗಳನ್ನೂ ಒಳಗೊಂಡಿರುವ ಈ ಪ್ರತ್ಯೇಕ ವರದಿಯನ್ನು ಸಲ್ಲಿಸಿದ್ದೇನೆ. ನನ್ನ ವರದಿಯ ಗಾತ್ರ ನನ್ನ ಸಹೋದ್ಯೋಗಿಗಳದನ್ನು ಮೀರಿದೆ. ಎತ್ತಿದ ಪ್ರಶ್ನೆಗಳಿಗೆ ಔಪಚಾರಿಕ ಉತ್ತರಗಳನ್ನಷ್ಟೇ ಸೇರಿಸಿದ್ದರೆ, ನನ್ನ ವರದಿಯ ಗಾತ್ರ ಪ್ರಾಯಶಃ ಕುಗ್ಗುತ್ತಿತ್ತು. ಆದರೆ, ಉತ್ತರಕ್ಕೆ ಆಧಾರವಾದ ತತ್ತ್ವಗಳ ಸ್ವಲ್ಪಮಟ್ಟಿನ ಸಾಮಾನ್ಯ ವಿವರಣೆಯಲ್ಲದೆ ಉತ್ತರಿಸಬಹುದಾದ ಪ್ರಶ್ನೆಯೊಂದುಂಟು ಅಥವಾ ವರದಿ ಸರಿಯಾಗಿ ಅರ್ಥವಾಗದೆಯೂ ಹೋಗಬಹುದು ಎಂದು ನನಗನಿಸಿದೆ. ಆದ್ದರಿಂದ ವರದಿಯ ಶಿಫಾರಸುಗಳಿಗೆ ಕಾರಣಗಳ ಮತ್ತು ವಾದಗಳ ಸಾಕಷ್ಟು ಬೆಂಬಲವಿಲ್ಲವೆಂಬ ಟೀಕೆಗೆ ನನ್ನನ್ನು ಗುರಿಮಾಡುತ್ತಿದ್ದ ಸಂಕ್ಷಿಪ್ತತೆಯ ಪರಿಗಣನೆಗಳನ್ನೆಲ್ಲ ನಾನು ಬದಿಗಿರಿಸಿದ್ದೇನೆ. ಮತ್ತು ವರದಿ ಈಗಿರುವ ಗಾತ್ರಕ್ಕೆ ಬೆಳೆಯಲು ಆಸ್ಪದವಿತ್ತಿದ್ದೇನೆ.

## ವಿಭಾಗ–I

# ಪ್ರಾಂತ ಪ್ರದೇಶದ ಮರುಹಂಚಿಕೆ

(೧) ೧,೨೨೩,೫೪೧ ಚದರ ಮೈಲಿಯಷ್ಟಿರುವ ಮುಂಬಯಿ ಸರಕಾರದ ಪ್ರದೇಶವನ್ನು ನಾಲ್ಕು ಸುಸ್ಪಷ್ಟ ಭಾಷಾ ವಿಭಾಗಗಳನ್ನಾಗಿ ವಿಂಗಡಿಸಬಹುದು: (೧) ಮಹಾರಾಷ್ಟ್ರ (೨) ಗುಜರಾತ್ (೩) ಕರ್ನಾಟಕ ಮತ್ತು (೪) ಸಿಂಧ್. ಈ ವಿಭಾಗಗಳ ಜನ ದೀರ್ಘಾವಧಿಯವರೆಗೆ ಒಂದು ಆಡಳಿತದಲ್ಲಿ ಒಟ್ಟುಗೂಡಿದ್ದಾರೆ. ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕ ಕಳೆದ ೧೧೦ ವರ್ಷಗಳಲ್ಲಿ ಬಾಂಬೆ ಸರಕಾರದ ಭಾಗಗಳಾಗಿದ್ದರೆ ಸಿಂಧ್ ಅನ್ನು ಅದಕ್ಕೆ ೮೫ ವರ್ಷಗಳ ಹಿಂದೆ ಸೇರಿಸಲಾಯಿತು. ಈಗ ಈ ಒಕ್ಕೂಟದಿಂದ ತಮ್ಮನ್ನು ಬೇರ್ಪಡಿಸಬೇಕೆಂದು ಕರ್ನಾಟಕ ಮತ್ತು ಸಿಂಧ್ ಒತ್ತಾಯಿಸುತ್ತಿವೆ. ಪ್ರತ್ಯೇಕತೆಯ ಪರವಾಗಿ ಮುಂದಿಟ್ಟ ವಾದ ಹೀಗೆ ಹೇಳುತ್ತದೆ: ಸಹಜ ಘಟಕವೊಂದು ಜನಾಂಗದ ಅಥವಾ ಭಾಷೆಯ ಐಕ್ಯದ ಪರೀಕ್ಷೆಯನ್ನು ಎದುರಿಸಿ ನಿಲ್ಲುವುದಿಲ್ಲ; ಮಾತ್ರವಲ್ಲ, ಅದು ವಾಸ್ತವವಾಗಿ ಸಜಾತೀಯ ಗುಂಪುಗಳ ಉದ್ದೇಶಪೂರ್ವಕ ಛಿದ್ರೀಕರಣದಿಂದ ಮತ್ತು ಇತರ ವಿಜಾತೀಯ ಗುಂಪುಗಳಲ್ಲಿ ಅವುಗಳ ವಿಲೀನದಿಂದ ನಿರ್ಮಿತವಾಗಿದೆ ಎಂಬುದಾಗಿ ಪ್ರಾಂತ ಬಿಂಬಿಸುವುದಿಲ್ಲ. ಇದೊಂದು ಅನಿಷ್ಟವೆಂದು ಹೇಳಲಾಗಿದೆ. ಏಕೆಂದರೆ ಛಿದ್ರೀಕರಣ ಅವುಗಳ ವೈಶಿಷ್ಟ್ಯ ಸೂಚಕ ಸಂಸ್ಕೃತಿಯನ್ನು ಉಸಿರುಕಟ್ಟಿಸುತ್ತದೆ. ಇತರ ದೊಡ್ಡ ಗುಂಪುಗಳೊಡನೆ ಅವುಗಳ ವಿಲೀನವಾದರೂ ಅವುಗಳನ್ನು ರಾಜಕೀಯವಾಗಿ ನಿಸ್ಸಹಾಯಕಗೊಳಿಸುತ್ತದೆ.

(೨) ಕರ್ನಾಟಕದ ವಿಷಯದಲ್ಲಿ ಈ ವಾದಕ್ಕೆ ಸ್ವಲ್ಪ ಬಲವಿರುವುದರಲ್ಲಿ ಸಂಶಯವಿಲ್ಲ. ಕರ್ನಾಟಕವನ್ನು ಹಲವು ಸಣ್ಣ ಭಾಗಗಳಾಗಿ ತುಂಡರಿಸಿ ಆಡಳಿತದ ಉದ್ದೇಶಗಳಿಗಾಗಿ ಅವುಗಳನ್ನು ಇತರ ಕರ್ನಾಟಕೇತರ ಪ್ರದೇಶಗಳೊಡನೆ ಕೂಡಿಸಿರುವುದು ಅದರಿಂದ ಪ್ರತ್ಯೇಕತೆಯುಂಟಾಗಿರುವುದು ನಿಜ. ಮುಂಬೈ ಸರಕಾರಕ್ಕೆ ಸೇರಿಸಲಾಗಿರುವ ಭಾಗ ಮುಂಬೈ ವಿಧಾನಪರಿಷತ್ತಿನಲ್ಲಿ ನ್ಯೂನ ಪ್ರಾತಿನಿಧ್ಯಗೊಂಡು ರಾಜಕೀಯವಾಗಿ ನಷ್ಟಕ್ಕೀಡಾಗಿರುವುದನ್ನು ನಿರಾಕರಿಸುವುದು ಸಾಧ್ಯವಿಲ್ಲ. ಇಷ್ಟೆಲ್ಲಾ ಆಗಿಯೂ ಬಾಂಬೆ ಸರಕಾರದಿಂದ ಕರ್ನಾಟಕ ಬೇರ್ಪಡುವುದಕ್ಕೆ ನನ್ನ ವಿರೋಧವಿದೆ. ಒಂದು ಭಾಷೆ ಒಂದು ಪ್ರಾಂತ ಎಂಬ ತತ್ತ್ವ ವ್ಯಾವಹಾರಿಕವಾಗಿ ಜಾರಿಗೆ ಕೊಡಲಾಗದಷ್ಟು ವಿಶಾಲವಾಗಿದೆ. ತತ್ತ್ವವನ್ನು ಅದರ ತಾರ್ಕಿಕ ಮುಕ್ತಾಯಕ್ಕೆ ಒಯ್ಯಬೇಕಾಗಿದೆ. ಕೂಡಿಸಬೇಕಾದ ಪ್ರಾಂತಗಳ ಸಂಖ್ಯೆ ನನ್ನ ಅಭಿಪ್ರಾಯದ ಪ್ರಕಾರ, ಅದರ ಕಾರ್ಯಸಾಧ್ಯತೆಯ ಅಭಾವವನ್ನು ತೋರುತ್ತದೆ. ಅಥವಾ ಭಾಷೆಯ ಭೂತ ಭವಿಷ್ಯಗಳನ್ನುಳ್ಳ ಒಂದು ಸ್ಪಷ್ಟ ಸಾಂಸ್ಕೃತಿಕ ಭಾಷೆಯಾಗಿರುವ "ಮತ್ತು" ಪ್ರಬಲ ಭಾಷಿಕ ಪ್ರಜ್ಞೆಯೊಂದಿರುವ ಪ್ರಕರಣಗಳಿಗೆ ಅದನ್ನು ಸೀಮಿತಗೊಳಿಸಿ ಕಾರ್ಯ ಸಾಧ್ಯವಾಗಿಸುವುದು ಅಶಕ್ಯ. ಕಾರಣವಿಷ್ಟೆ: ಪ್ರತಿಯೊಂದು ಭಾಷೆಗೂ ಒಂದು ಚರಿತ್ರೆಯುಂಟು. ಅವಕಾಶವಿತ್ತರೆ ಅದಕ್ಕೊಂದು ಭವಿಷ್ಯವೂ ಇರುತ್ತದೆ. ಜನರ ಪ್ರತಿಯೊಂದು ಭಾಷಿಕ ಗುಂಪು ಕೂಡ, ಅದಕ್ಕೆ ಸರ್ಕಾರದ ಅಧಿಕಾರಗಳನ್ನು ವಹಿಸಿದ ಪಕ್ಷದಲ್ಲಿ, ಭಾಷಿಕ ಪ್ರಜ್ಞೆಯನ್ನು ಪಡೆಯುತ್ತದೆ. ಇದು ಕನ್ನಡ ಸಂಸ್ಕೃತಿಯ ತ್ಯಾಗವನ್ನೊಳಗೊಳ್ಳಬಹುದೆಂದು ನನಗೆ ತಿಳಿದಿದೆ. ಅದು ಪ್ರಕೃತ ವ್ಯವಸ್ಥೆ ಮುಂದುವರಿಕೆಯ ಅನಿವಾರ್ಯ ಪರಿಣಾಮವಾಗುವುದೆಂಬುದು ನನಗೆ ಖಚಿತವಲ್ಲದಿದ್ದರೂ,

ಅದು ಅಂಥ ಪರಿಣಾಮ ವಾದರೂ ವಿಷಾದದ ವಿಷಯವೆಂದು ನಾನು ತಿಳಿಯುವುದಿಲ್ಲ. ಏಕೆಂದರೆ ಜನಸಮುದಾಯದಲ್ಲಿ ಸಮಾನ ರಾಷ್ಟ್ರೀಯತೆಯ ಪ್ರಜ್ಞೆಯನ್ನು, ತಾವು ಮೊದಲು ಭಾರತೀಯರು, ಅನಂತರ ಹಿಂದೂಗಳು, ಮಹಮದೀಯರು ಅಥವಾ ಸಿಂಧಿಗಳು ಎಂಬ ಭಾವನೆ ಬರಬೇಕು. ತಾವು ಮೊದಲಿಂದ ಕಡೆಯವರೆಗೆ ಕನ್ನಡಿಗ ಎಂಬ ಭಾವನೆಯನ್ನು ಸೃಜಿಸುವುದು ಇಂದಿನ ಮುಖ್ಯತಮ ಅವಶ್ಯಕತೆಯಲ್ಲ ಎಂಬುದು ನನ್ನ ಅಭಿಪ್ರಾಯ. ಅದು ಆದರ್ಶವಾದ ಪಕ್ಷದಲ್ಲಿ ಸ್ಥಳೀಯ ದೇಶಭಕ್ತಿಯನ್ನು ಮತ್ತು ಸಮೂಹಪ್ರಜ್ಞೆಯನ್ನು ಗಟ್ಟಿಗೊಳಿಸುವಂಥದೇನನ್ನೂ ಮಾಡಕೂಡದು. ಪ್ರಾಂತದ ಪ್ರಕೃತ ವಿಜಾತೀಯ ಸ್ವರೂಪಕ್ಕೆ ಇದಿಷ್ಟು ದೂರ ಹೋಗಬೇಕಾದ ಭಾಗವಹಿಸುವಿಕೆಯ ಚಕ್ರವನ್ನು ಬಹುಭಾಷಾ ಜನಾಂಗಕ್ಕೆ ಒದಗಿಸುತ್ತದೆ. ಇಂಥ ಪ್ರಯೋಜನದಲ್ಲಿ ಪರಿಣಮಿಸುವ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕೆಂದು ನನಗನಿಸುತ್ತದೆ. ಆದ್ದರಿಂದ ಪ್ರತ್ಯೇಕತೆಗಾಗಿ ಕರ್ನಾಟಕದ ಒತ್ತಾಯವನ್ನು ನಾನು ವಿರೋಧಿಸುತ್ತೇನೆ.

(೩) ಕರ್ನಾಟಕದ ಹಕ್ಕು ಮಂಡನೆಯನ್ನು ಸಮರ್ಥಿಸಲು ಸಮ್ಮೇಳನದ ಮುಂದೆ ಯಾವ ಸಾಕ್ಷಿಯೂ ಬರಲಿಲ್ಲವೆಂಬ ಆಧಾರದ ಮೇಲೆ ಅದನ್ನು ನನ್ನ ಸಹೋದ್ಯೋಗಿಗಳು ಅವಸರದಿಂದ ತಳ್ಳಿಹಾಕಿದ್ದಾರೆ. ಅದನ್ನು ಕುರಿತ ಶಿಫಾರಸುಗಳ ಬಗೆಗೆ ನನಗೂ ನನ್ನ ಸಹೋದ್ಯೋಗಿಗಳಿಗೂ ಸಹಮತವಿರುವುದರಿಂದ, ಅದಕ್ಕಾಗಿ ನಾನು ವಿಷಾದಿಸುವುದಿಲ್ಲ. ಆದರೆ ಸಿಂಧ್ ಪ್ರಕರಣದಲ್ಲಿ ನನ್ನ ಸಹೋದ್ಯೋಗಿಗಳು ವಿಭಿನ್ನ ತೀರ್ಮಾನಕ್ಕೆ ಬಂದಿರುವುದು ನನಗೆ ಆಶ್ಚರ್ಯಕರ. ಏಕೆಂದರೆ ಕರ್ನಾಟಕಕ್ಕೆ ಹೋಲಿಸಿದರೆ, ಸಿಂಧ್ ಪಾಲಿಗೆ ವಾದವಿಲ್ಲ. ಅದು ಸರಕಾರದಲ್ಲಿ ಸೇರಿಹೋಗಿರುವುದರಿಂದ ಅದಕ್ಕೆ ಸಾಕಷ್ಟು ಲಾಭವಾಗಿದೆ ಯೆಂಬುದರ ಬಗೆಗೆ ಎರಡು ಅಭಿಪ್ರಾಯಗಳಿರುವುದು ಸಾಧ್ಯವಿಲ್ಲ. ಬಹುದೂರವಾಗಿ ಬೇರ್ಪಟ್ಟಿರುವುದರಿಂದ ಕುಟುಂಬದ ಒಬ್ಬ ಅಧೀನ ಸದಸ್ಯನಾಗಿರುವುದರ ಬದಲು ಸಿಂಧ್ ಅತ್ಯಂತ ಗೌರವಾರ್ಹ ಷರತ್ತುಗಳ ಸಹಚರ ಸಂಗಡಿಗನೊಬ್ಬನ ಮೇಲಂತಸ್ತನ್ನು ಪಡೆದುಕೊಂಡಿದೆ. ರಾಜ್ಯಪಾಲರಿಗೆ ಎರಡನೆಯವನಾಗಿ ಕಮೀಷನರ್ ಒಬ್ಬ, ಸಿಂಧ್‌ನ ಆಡಳಿತವನ್ನು ನೋಡಿಕೊಳ್ಳುತ್ತಾನೆ ಎಂಬಷ್ಟರ ಮಟ್ಟಿಗೆ ಅದು ತನ್ನ ಸ್ವಾತಂತ್ರ್ಯದ ಘನತೆಯನ್ನುಳಿಸಿಕೊಂಡಿದೆ ಎನ್ನಬೇಕು. ಅದು ತನ್ನ ಪ್ರಾಚೀನ ಮತ್ತು ರೂಢಿಗತ ಕಾನೂನು ಸಂಹಿತೆಯನ್ನು ಉಳಿಸಿಕೊಳ್ಳಲು ಅವಕಾಶ ಮಾಡಲಾಗಿದೆ. ಸರಕಾರವು ಜಾರಿಗೊಳಿಸಲಾದ ಯಾವುದೇ ಹೊಸ ಕಾನೂನಿನ ಅಡಿಯಲ್ಲಿ ಅದನ್ನು ತಂದಿರುವುದು ವಿರಳ. ಅಂಥ ಹೊಸ ಕಾನೂನು ಸಿಂಧ್‌ಗೆ ವಿಶೇಷ ಪ್ರಯೋಜನದಾಯಕವೆಂದು ಪರಿಗಣಿತವಾದ ಪಕ್ಷದಲ್ಲಿ ಮಾತ್ರ ಆ ಕಾನೂನು ಅಲ್ಲಿಗೆ ಅನ್ವಯ ವಾಗುತ್ತದೆ. ಅವರ ನ್ಯಾಯಮಂಡಳಿಗಳು ಮುಂಬೈ ಪ್ರಾಂತದ ನ್ಯಾಯಮಂಡಳಿಗಳಿಂದ ಸಂಪೂರ್ಣ ಸ್ವತಂತ್ರವಾಗಿದೆ. ಅದರ ಸಾರ್ವಜನಿಕ ಸೇವೆ ಮುಂಬೈ ಪ್ರಾಂತದ ಸರಕಾರದ ಸಾರ್ವಜನಿಕ ಸೇವೆಯಿಂದ ಕಾರ್ಯತಃ ಪ್ರತ್ಯೇಕವಾಗಿದೆ. ಅದು ಅದರ ಸ್ವಂತ ಜನರಿಂದ ನಡೆಯುತ್ತದೆ. ಅದು ಸರಕಾರಕ್ಕೆ ಲಗತ್ತಾಗಿ ರುವುದು ಆರ್ಥಿಕವಾಗಿ ಅದಕ್ಕೆ ಬಾಧಕವೆಂದು ಹೇಳುವಂತಿಲ್ಲ. ಪ್ರತಿಯಾಗಿ ತನ್ನ ಸ್ವಂತ ಸಾಮರ್ಥ್ಯವನ್ನು ಮೀರಬಹುದಾಗಿದ್ದ ವೇಗದಲ್ಲಿ ಅದು ಸರಕಾರದ ಬಲದ ಮೇಲೆ ಅವಲಂಬಿಸಿದೆ. ಈ ಸರಕಾರದ ಮಹಾ ಸಂಪನ್ಮೂಲಗಳನ್ನು ಇಷ್ಟೊಂದು ವಿಪುಲವಾಗಿ ಬಳಸಿಕೊಳ್ಳಲು ಅದಕ್ಕೆ ನೆರವಾಗಿರುವುದು ಈ ಸೇರ್ಪಡೆ. ಸಿಂಧ್ ಕೂಡ ತನಗೆ ಸಲ್ಲಬೇಕಾದ ಪರಿಗಣನೆ ಲಕ್ಷ್ಯಗಳನ್ನು ಸರ್ಕಾರದಿಂದ ಪಡೆಯಲು ವಿಫಲವಾಗಿದೆಯೆಂದು ಹೇಳಲಾಗದು. ಅದು ತನ್ನ ಗಾತ್ರ ಮೀರಿ ಮುಂಬೈ ಮೇಲೆ ಪ್ರಭಾವ ಬೀರಿದೆ. ಈ ಸಂಗತಿಗಳು ವಾಸ್ತವವಾಗಿರುವಾಗ, ಸೇರ್ಪಡೆಯ ಅನುಕೂಲಗಳಿಲ್ಲದೆ, ಪ್ರತ್ಯೇಕತೆಯ ಎಲ್ಲ

ಅನುಕೂಲಗಳನ್ನುಳ್ಳ ಸಿಂಧ್‌ಗೆ ಪ್ರತ್ಯೇಕತೆಯಿಂದ ಮತ್ತೇನು ಲಾಭವಾಗಬೇಕೆಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ.

(೪) ಈ ಬೇಡಿಕೆಯನ್ನು ಮಂಡಿಸುವಲ್ಲಿ, ಸಿಂಧ್‌ನ ಎಲ್ಲ ಕೋಮುಗಳೂ ಒಗ್ಗೂಡಿಲ್ಲವೆಂಬುದು ಸ್ಪಷ್ಟ. ಆಯೋಗದ ಮತ್ತು ಸಮಿತಿಯ ಸಂಯುಕ್ತ ಸಮ್ಮೇಳನದ ಮುಂದಿರಿಸಲಾದ ಸಾಕ್ಷ್ಯ ಸಿಂಧ್‌ನ ಹಿಂದೂಗಳು ಮತ್ತು ಮುಸ್ಲಿಮರ ನಡುವಣ ತೀವ್ರವಾದ ಬಿರುಕನ್ನು ಎತ್ತಿತೋರಿಸಿದೆ. ಹಿಂದೂಗಳು ಪ್ರತ್ಯೇಕತೆಯನ್ನು ಬೆಂಬಲಿಸಿದ್ದರೆ, ಮುಸ್ಲಿಮರು ಅದಕ್ಕೆ ವಿರುದ್ಧವಾಗಿ ಸಂಘಟಿತವಾಗಿದ್ದಾರೆ. ಈ ಪ್ರಶ್ನೆಯನ್ನು ಕುರಿತು ಸಿಂಧ್ ಸಾರ್ವಜನಿಕ ಅಭಿಪ್ರಾಯವನ್ನು ಪರೀಕ್ಷಿಸಿದಾಗ ಸಿಂಧ್‌ನ ರಾಜಕೀಯಮನಸ್ಕ ಜನತೆ ಒಟ್ಟಾಗಿ ಸಿಂಧ್‌ನ ಅಂತಸ್ತಿನ ಪ್ರಶ್ನೆಯನ್ನು ಎತ್ತಿಕೊಂಡದ್ದು ೧೯೧೭ರಲ್ಲಿ ಮಾತ್ರ ಎಂದು ನನಗೆ ಕಂಡುಬಂದಿದೆ. ಆಗಸ್ಟ್ ೧೯೧೭ರ ಪ್ರಕಟನೆಯ ನಂತರ ಸಿಂಧಿಗಳು ಬರಲಿರುವ ಸುಧಾರಣೆಗಳ ಯೋಜನೆಯಲ್ಲಿ ಸಿಂಧ್‌ನ ಸ್ಥಾನವನ್ನು ಪರಿಗಣಿಸಲು ವಿಶೇಷ ಸಮ್ಮೇಳನವೊಂದನ್ನು ನವೆಂಬರ್ ೧೯೧೭ರಲ್ಲಿ ನಡೆಸಿದರು. ಸಿಂಧ್‌ನ ಪ್ರಮುಖ ಮಹಮದೀಯ ಸನ್ಮಾನ್ಯ ಪೌರ ಶ್ರೀ ಜಿ.ಎಂ. ಭುರ್ಗಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಸಮ್ಮೇಳನದ ಮುಂದೆ ನಾಲ್ಕು ಪರ್ಯಾಯಗಳಿದ್ದವು: (೧) ಪ್ರತ್ಯೇಕ ಪ್ರಾಂತವಾಗಿ ಸಿಂಧ್ ನಿರ್ಮಾಣ, (೨) ಸಿಂಧ್ ಮತ್ತು ಬಲೂಚಿಸ್ತಾನ್ ಸೇರಿ ಒಂದು ಪ್ರಾಂತವಾಗುವುದು, (೩) ಸಿಂಧ್ ಪಂಜಾಬಿನೊಡಗೂಡುವುದು ಮತ್ತು (೪) ಸಿಂಧ್ ಬಾಂಬೆಯೊಡನೆ ಉಳಿಯುವುದು. ಈ ನಾಲ್ಕು ಪರ್ಯಾಯಗಳಲ್ಲಿ ಸಿಂಧ್ ಅನ್ನು ಒಂದು ಪ್ರತ್ಯೇಕ ಪ್ರಾಂತವಾಗಿ ರೂಪಿಸುವ ಸಲಹೆಯೂ ಸೇರಿದಂತೆ ಮೂರನ್ನು ತಿರಸ್ಕರಿಸದ್ದು ಮಾತ್ರವಲ್ಲದೆ, ಹಿಂದೂಗಳ ಮತ್ತು ಮಹಮದೀಯರ ಬೆಂಬಲ ಪಡೆದ ತನ್ನ ಕಮೀಷನರ್ ಸ್ಥಾನವನ್ನು ಸರಕಾರದ ವಿಭಾಗೀಯ ಕಮೀಷನರ್ ಸ್ಥಾನಕ್ಕಿಳಿಸುವುದರ ಮೂಲಕ ಸಿಂಧ್ ಹಾಗೂ ಸರಕಾರದ ನಡುವಣ ನಿಕಟತರ ಏಕೀಕರಣಕ್ಕೆ ಒತ್ತಾಯಿಸಿತು. ಸೆಕ್ರೆಟರಿ ಆಫ್ ಸ್ಟೇಟ್ ಮಿ. ಮಾಂಟೆಗು ಮತ್ತು ವೈಸರಾಯ್ ಲಾರ್ಡ್ ರೀಡಿಂಗ್‌ರನ್ನು ಭೇಟಿ ಮಾಡಿದ ಹಿಂದೂ–ಮುಸ್ಲಿಮರನ್ನೊಳಗೊಂಡ ನಿಯೋಗ ಪ್ರತ್ಯೇಕ ಪ್ರಾಂತವಾಗಿ ಉಳಿಯುವ ಇಷ್ಟ ಸಿಂಧ್‌ಗೆ ಇಲ್ಲವೆಂಬ ತನ್ನ ಘೋಷಣೆಯಲ್ಲಿ ದೃಢವಾಗಿತ್ತೆಂದು ಹೇಳಲಾಗಿದೆ. ಈ ಪ್ರಶ್ನೆಯ ಬಗೆಗಿನ ಇದೇ ದೃಷ್ಟಿಯನ್ನು ಎರಡೂ ಕೋಮುಗಳ ಸದಸ್ಯರು ಆಮೇಲೆ ೧೯೧೮, ೧೯೧೯, ಮತ್ತು ೧೯೨೦ರಲ್ಲಿ ನಡೆದ ಸಮ್ಮೇಳನಗಳ ಅಧಿವೇಶನಗಳಲ್ಲಿ ಏಕರೀತಿಯಾಗಿ ಉಳಿಸಿಕೊಂಡರು. ೧೯೨೦ರಿಂದ ಅಸಹಕಾರ ಚಳವಳಿಯ ತುಯ್ತದಿಂದಾಗಿ ಆ ಪ್ರಶ್ನೆ ಪರಿಗಣಿತವಾಗಿಲ್ಲ. ದಿಕ್ಕು ಬದಲಿಸಿದವರು ಮಹಮದೀಯರು. ಒಪ್ಪಿಗೆಯಾಗದೆ ದೂರ ಸರಿದವರು ಅವರು. ಬೇಡಿಕೆ ಪ್ರತ್ಯೇಕತೆಯ ಈ ಮಹಮದೀಯ ಕೋಮಿನಿಂದ ಮಾತ್ರ ಹುಟ್ಟಿದ ಪಕ್ಷೀಯ ಬೇಡಿಕೆಯಾಗಿದೆ ಎಂಬುದು ಸ್ಪಷ್ಟ.

(೫) ಒಂದು ಪಂಗಡದ ಬೇಡಿಕೆಗೆ ಯಾವುದೇ ಸಹಾನುಭೂತಿ ತೋರುವುದಕ್ಕೆ ಮುನ್ನ ಪ್ರತ್ಯೇಕತೆಯನ್ನು ಬಯಸುವ ಉದ್ದೇಶ ಸರಿಯಾಗಿದೆಯೇ ಎಂಬುದನ್ನು ಕಂಡುಕೊಳ್ಳಬೇಕು. ಈಗ ಈ ಬೇಡಿಕೆಯನ್ನು ಮುಂದಿರಿಸಿದ ಮಹಮದೀಯ ಆಯೋಗ ಅದನ್ನು ವಿರೋಧಿಸಿದ ಹಿಂದೂ ಆಯೋಗ ಎರಡು ಆ ಬೇಡಿಕೆಯ ನಿಜವಾದ ಗುರಿಯನ್ನು ಮತ್ತು ಅದರ ಈಡೇರಿಕೆಗಿರುವ ತಮ್ಮ ನಿಜವಾದ ಆಕ್ಷೇಪಣೆಗಳನ್ನು ಪ್ರಕಟಿಸದಿರಲು ಕೈಲಾದುದನ್ನೆಲ್ಲ ಮಾಡಿದವು. ಆದರೂ ಪರಸ್ಪರ ವಿರುದ್ಧವಾಗಿರುವ ಈ ಪಕ್ಷಗಳು ತಮ್ಮ ರಹಸ್ಯಗಳನ್ನೆಲ್ಲ ಬಹಿರಂಗಗೊಳಿಸಿಲ್ಲ ಎಂದು ವಾಸ್ತವತೆಯನ್ನು ಬಲ್ಲವರಿಗೆಲ್ಲ ಅನಿಸಿರಬೇಕು. ಆದರೆ ಈ ಉದ್ದೇಶವನ್ನು ಅದರ ನಿಜವಾದ ಯೋಗ್ಯತೆಯ ಮೇಲೆ ಪರಿಗಣಿಸಲಾಗುವಂತೆ

ಅದನ್ನು ಸ್ಪಷ್ಟಗೊಳಿಸಬೇಕು. ನನಗೆ ತಿಳಿದಿರುವ ಮಾಹಿತಿಯಮಟ್ಟಿಗೆ ಹೀಗೆ ಮಾಡಬಯಸುತ್ತೇನೆ. ೧೯೨೭ರ ಮಾರ್ಚ್ ೨೦ರಂದು "ದೆಹಲಿ ಮುಸ್ಲಿಮ್ ಸಲಹೆಗಳು" ಎಂದು ಕರೆಯಲಾಗುವ ಸಲಹೆಗಳನ್ನು ಮುಸ್ಲಿಂ ಸಮಾಜದ ಪ್ರಮುಖ ಸದಸ್ಯರು ಹಿಂದೂಗಳು ಮತ್ತು ಮುಸ್ಲಿಮ್ ನಡುವೆ ಸೌಹಾರ್ದಯುತ ಒಪ್ಪಂದದ ಷರತ್ತುಗಳಾಗಿ ಮಂಡಿಸಲಾಯಿತು. ಈ ಸಲಹೆಗಳಿಗನುಸಾರವಾದ ಬೇಡಿಕೆಗಳು ಇವು. (೧) ಸಿಂಧನ್ನು ಪ್ರತ್ಯೇಕ ಪ್ರಾಂತವಾಗಿಸಬೇಕು. (೨) ವಾಯವ್ಯ ಸರಹದ್ದು ಪ್ರಾಂತವನ್ನು ಇತರ ಪ್ರಾಂತಗಳಿಗೆ ಸಮಾನವಾಗಿ ಪರಿಗಣಿಸಬೇಕು. (೩) ಪಂಜಾಬು ಬಂಗಾಳಗಳಲ್ಲಿ ಮುಸ್ಲಿಂ ಪ್ರಾತಿನಿಧ್ಯದ ಪರಿಮಾಣ ಅವರ ಜನಸಂಖ್ಯೆಗೆ ಅನುಗುಣವಾಗಿರಬೇಕು. ಮೇಲಿನ ಸಲಹೆಗಳತ್ತ ಸ್ಥೂಲನೋಟ ಬೀರಿದರೂ ಸಾಕು. ಮಹಮದೀಯ ಬಹುಸಂಖ್ಯೆಯನ್ನುಳ್ಳ ಎಷ್ಟು ಸಾಧ್ಯವೋ ಅಷ್ಟು ಪ್ರಾಂತಗಳನ್ನು ಪ್ರಕೃತ ವ್ಯವಸ್ಥೆಯಿಂದ ಕೂಡಿಸುವುದು ಯೋಜನೆಯ ಗುರಿಯೆಂಬುದು ಸೂಚಿತವಾಗುತ್ತದೆ. ಸಧ್ಯಕ್ಕೆ ಕೇವಲ ಮುಸ್ಲಿಂ ಬಹುಸಂಖ್ಯೆಯನ್ನುಳ್ಳ ಎರಡು ಪ್ರಾಂತಗಳು ಪಂಜಾಬ್ ಮತ್ತು ಬಂಗಾಳ. ಆ ಪ್ರಾಂತಗಳಲ್ಲಿ ಪ್ರಾತಿನಿಧ್ಯದ ಪರಿಮಾಣ ಜನಸಂಖ್ಯೆಗೆ ಅನುಗುಣವಾಗಿರಬೇಕೆಂದು ಒತ್ತಾಯಿಸುವುದರ ಮೂಲಕ ಈ ಸಲಹೆಗಳು ಮುಸ್ಲಿಮರ ಕೋಮು ಬಹುಸಂಖ್ಯೆಯನ್ನು ರಾಜಕೀಯವಾಗಿ ಬಹುಸಂಖ್ಯೆಯನ್ನಾಗಿಸಲು ಹವಣಿಸುತ್ತವೆ. ಆ ಪ್ರಾಂತಗಳಲ್ಲಿ ಮಹಮದೀಯ ಸರಕಾರ ಬರುವುದು ಖಚಿತವಾಗುವಂತೆ ಬಲೂಚಿಸ್ತಾನ ಮತ್ತು ವಾಯುವ್ಯ ಸರಹದ್ದು ಪ್ರಾಂತದಲ್ಲಿ ಮುಸ್ಲಿಂ ಬಹುಸಂಖ್ಯೆ ಅಗಾಧವಾಗಿದೆ. ಆದರೆ, ಅವಿನ್ನೂ ಜವಾಬ್ದಾರಿ ಸರ್ಕಾರದ ಎಲ್ಲೆಯಾಚೆಗಿವೆ. ಫಲಿತಾಂಶವೆಂದರೆ, ಮಹಮದೀಯರ ಸಂಖ್ಯೆ ಆಳುವ ಬಹುಸಂಖ್ಯೆಯಾಗಿಲ್ಲ. ಸಲಹೆಗಳ ಗುರಿಯೇನೆಂದರೆ ಸರಕಾರ ರಚನೆಯ ಈ ಪ್ರಸ್ತಾವದ ಉದ್ದೇಶವೆಂದರೆ ಈ ಕೊರತೆಯನ್ನು ನಿವಾರಿಸಿ ಮುಸ್ಲಿಮರ ಸಂಖ್ಯೆ ಅಧಿಕವಾಗಿರುವ ನಾಲ್ಕು ಪ್ರಾಂತಗಳನ್ನು ರಚಿಸುವುದು. ಸಂಖ್ಯೆಯಲ್ಲಿ ಪ್ರಧಾನವಾಗಿ ಮುಸ್ಲಿಂ ಆಗಿರುವ ಸಿಂಧನ್ನು ಪ್ರತ್ಯೇಕ ಪ್ರಾಂತವಾಗಿ ರೂಪಿಸಬೇಕೆಂಬ ಬೇಡಿಕೆ ಯೋಜನೆಯಲ್ಲಿ ಉದ್ದಿಷ್ಟವಾದ ಮುಸ್ಲಿಂ ಪ್ರಾಂತಗಳ ಪಟ್ಟಿಗೆ ಐದನೆಯದೊಂದನ್ನು ಸೇರಿಸಿದಂತೆ, ಈಗ ಈ ಮಹಮದೀಯರ ದೃಷ್ಟಿಯಲ್ಲಿ ಕೋಮುವಾದೀ ಮತದಾರ ಸಮುದಾಯಗಳ ಉದ್ದೇಶವೇ ಅದಕ್ಕಿರತಕ್ಕದು. ಮಹಮದೀಯ ಪ್ರಾಂತಗಳ ಬಗೆಗಿನ ತಮ್ಮ ಸಲಹೆ ಸಮ್ಮತವಾದ ಪಕ್ಷದಲ್ಲಿ ತಾವು ಕೋಮುವಾದೀ ಮತದಾರ ಸಮುದಾಯವನ್ನು ತ್ಯಜಿಸಿ ಎಲ್ಲ ಪ್ರಾಂತೀಯ ಶಾಸನ ಸಭೆಗಳಲ್ಲಿ ಮತ್ತು ಕೇಂದ್ರ ಶಾಸನ ಸಭೆಯಲ್ಲಿ ಸಂಯುಕ್ತ ಮತದಾರ ಸಮುದಾಯವನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧವೆಂದು ಯೋಜನೆಯ ಕರ್ತರು ಹೇಳುತ್ತಾರೆ. ಮಹಮದೀಯ ಪ್ರಾಂತಗಳನ್ನು ರೂಪಿಸುವುದರ ಗುರಿ ಮುಸ್ಲಿಂ ಅಲ್ಪಸಂಖ್ಯಾತರನ್ನು ರಕ್ಷಿಸುವುದು. ಏಕೆಂದರೆ ಅದು ಕೋಮುವಾದೀ ಮತದಾರ ಸಮುದಾಯಗಳ ಗುರಿಯಾಗಿತ್ತು ಎಂಬುದು ತರ್ಕಸಾದೃಶ್ಯದಿಂದ ಸಿದ್ಧವಾಗುತ್ತದೆ. ಮುಸ್ಲಿಂ ಪ್ರಾಂತಗಳ ರಚನೆಯು ಹಿಂದೂಗಳು ಪ್ರಬಲವಾಗಿರುವ ಪ್ರಾಂತಗಳಲ್ಲಿ ಹಿಂದೂ ಬಹುಸಂಖ್ಯಾತರ ವಿರುದ್ಧ ಮುಸ್ಲಿಂ ಅಲ್ಪಸಂಖ್ಯಾತರನ್ನು ಹೇಗೆ ರಕ್ಷಿಸಲಿದೆ ಎಂಬುದನ್ನು ಯೋಜನೆ ಮೇಲ್ನೋಟಕ್ಕೆ ತೋರಿಸುವುದಿಲ್ಲ. ಯೋಜನೆ ವಾಸ್ತವವಾಗಿ ಮುಸ್ಲಿಂ ಅಲ್ಪಸಂಖ್ಯಾತರು ಕೋಮುವಾರು ಮತದಾರ ಸಮುದಾಯದಿಂದ ಪಡೆಯುವ ಅಥವಾ ಪಡೆಯುತ್ತಾರೆಂದು ನಂಬಲಾದ ರಕ್ಷಣೆಯನ್ನು ನಿವಾರಿಸಿ ಅವರ ಸ್ಥಾನಮಾನಗಳನ್ನು ದುರ್ಬಲಗೊಳಿಸುವಂತೆ ತೋರುತ್ತದೆ. ಆದರೆ ನಾವದನ್ನು ಒಳಹೊಕ್ಕು ಪರೀಕ್ಷಿಸಿದರೆ ಯೋಜನೆಯು ಮೇಲೆ ಕಾಣುವಷ್ಟು ಮುಗ್ಧ ಅಥವಾ ಅಪ್ರಯೋಜಕವಲ್ಲ ಎಂಬುದನ್ನು ಕಂಡುಕೊಳ್ಳಬಲ್ಲೆವು. ತಳದಲ್ಲಿ ಅದು ಮುಸ್ಲಿಂ ಅಲ್ಪಸಂಖ್ಯಾತರನ್ನು ರಕ್ಷಿಸುವ ಕುಶಲತಂತ್ರ. ಏಕೆಂದರೆ ಹಿಂದೂ ಪ್ರಾಂತಗಳಲ್ಲಿ ಹಿಂದೂ ಬಹುಸಂಖ್ಯಾತರು ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ

ದಬ್ಬಾಳಿಕೆ ನಡೆಸಿದ್ದರೆ ಮಹಮದೀಯ ಬಹುಸಂಖ್ಯಾತರು ಐದು ಮಹಮದೀಯ ಪ್ರಾಂತಗಳಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಸಲು ಕ್ಷೇತ್ರವೊಂದನ್ನು ಗಳಿಸುವಂಥ ಉಪಾಯವನ್ನು ಈ ಯೋಜನೆ ಒದಗಿಸುತ್ತದೆ. ಅದು ಸಿಡಿತದ ವಿರುದ್ಧ ಪ್ರತಿಸಿಡಿತದ, ಭೀತಿಯ ವಿರುದ್ಧ ಪ್ರತಿಭೀತಿಯ ಮತ್ತು ಅಂತಿಮವಾಗಿ ದಬ್ಬಾಳಿಕೆಯ ವಿರುದ್ಧ ದಬ್ಬಾಳಿಕೆಯ ಮೂಲಕ ರಕ್ಷಣೆ ಪಡೆಯಲು ಉದ್ದೇಶಿಸಿರುವ ಒಂದು ವ್ಯವಸ್ಥೆ. ಇಡೀ ಯೋಜನೆಯ ಹಿಂದಿರುವ ಮತ್ತು ಸಿಂಧ್ ಪ್ರತ್ಯೇಕತೆಯ ಬೇಡಿಕೆಯ ಹಿಂದೆ ಇರುವ ಉದ್ದೇಶ ಕೂಡ ಇದೇ. ಈ ಅಂಶದ ಬಗೆಗೆ ಯಾವುದೇ ಸಂದೇಹವಿರದ ಹಾಗೆ, ಅದನ್ನು ಹೀಗೆ ನೆಹರೂ ಸಮಿತಿಯ ವರದಿಯಲ್ಲಿ ಹೇಳಲಾಗಿದೆ: "ಸಿಂಧ್ ಪ್ರತ್ಯೇಕತೆಗಾಗಿ ಮುಸ್ಲಿಂ ಬೇಡಿಕೆ ಅತ್ಯಂತ ಹಿತಕರವಾದ ರೀತಿಯಲ್ಲಿ ಪ್ರತಿಪಾದಿತವಾಗಲಿಲ್ಲವೆಂದು ನಾವು ಒಪ್ಪುತ್ತೇವೆ. ಅದು ಕೋಮುವಾದವನ್ನು ಆಧರಿಸಿತ್ತು ಮತ್ತು ತನಗೆ ಏನೇನೂ ಸಂಬಂಧವಿಲ್ಲದ ಇತರ ಕೆಲವು ವಿಷಯಗಳೊಡನೆ ಅಪ್ರಸ್ತುತವಾಗಿ ಬದ್ಧವಾಗಿತ್ತು." ನೆಹ್ರೂ ಸಮಿತಿ ಪ್ರತ್ಯೇಕತೆಯ ನಿಜವಾದ ಆಧಾರಗಳನ್ನು ವಾಸ್ತವ ಕಾರಣಗಳನ್ನು ಪ್ರಕಟಿಸಿರುವುದರಿಂದ ಈ ಉದ್ದೇಶವು ಅಂತಹ ಒಳ್ಳೆಯದಾಗಿಲ್ಲವೆಂಬುದನ್ನು ತೋರಿಸುತ್ತದೆ. ಆದರೆ, ನಾವದನ್ನು ಒಪ್ಪಬೇಕಾದರೆ ಅದರ ಬಗ್ಗೆ ಅತ್ಯಂತ ಕೆಟ್ಟದನ್ನು ತಿಳಿದುಕೊಳ್ಳುವುದು ಉತ್ತಮ. ಆದ್ದರಿಂದ ಅದನ್ನು ನಾನು ಬಹಿರಂಗಪಡಿಸುತ್ತೇನೆ. ಅದನ್ನು ಮೌಲಾನಾ ಅಬುಲ್ ಕಲಮ್ ಅಜಾದ್ ಹೊರಗೆಡಹಲಿ; ಕಲ್ಕತ್ತದಲ್ಲಿ ನಡೆದ ಮುಸ್ಲಿಂ ಲೀಗಿನ ಇತ್ತೀಚಿನ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಬಿಗಿ ಮತ್ತು ಸ್ಪಷ್ಟತೆಗಾಗಿ ಹೊಗಳಬೇಕಾದ ಭಾಷಣವೊಂದರಲ್ಲಿ ಅವರು ಹೇಳಿದರು. "ಲಕ್ನೋ ಒಪ್ಪಂದದಿಂದ ಅವರು ತಮ್ಮ ಹಿತಾಸಕ್ತಿಗಳನ್ನು ಮಾರಿಬಿಟ್ಟಿದ್ದಾರೆ. ಕಳೆದ ಮಾರ್ಚ್ ತಿಂಗಳ ಸಲಹೆಗಳು ಮೊದಲ ಬಾರಿಗೆ ಭಾರತದ ಮುಸಲ್ಮಾನರ ನಿಜವಾದ ಹಕ್ಕುಗಳ ಮಾನ್ಯತೆಗೆ ಬಾಗಿಲು ತೆರೆದಿವೆ. ೧೯೧೬ರ ಒಪ್ಪಂದದ ಪ್ರಕಾರ ಪ್ರತ್ಯೇಕ ಮತದಾರ ಸಮುದಾಯಗಳು ಅವರಿಗೆ ಮುಸ್ಲಿಂ ಪ್ರಾತಿನಿಧ್ಯವನ್ನು ಖಚಿತಪಡಿಸಿರುವುವಷ್ಟೆ; ಆದರೆ ಆ ಸಮಾಜದ ಅಸ್ತಿತ್ವಕ್ಕೆ ಅತ್ಯಗತ್ಯವಾಗಿದ್ದುದು ಅದರ ಸಂಖ್ಯಾಬಲದ ಮಾನ್ಯತೆ, ಅವರಿಗೆ ಭಾರತದ ಭವಿಷ್ಯದಲ್ಲಿ ತಕ್ಕ ಪಾಲೊಂದರ ಭರವಸೆ ಕೊಡುವಂಥ ವಸ್ತುಸ್ಥಿತಿಯ ಸೃಷ್ಟಿಗೆ ದೆಹಲಿ ದಾರಿ ತೆರೆಯಿತು. ಬಂಗಾಳ ಮತ್ತು ಪಂಜಾಬಿನಲ್ಲಿ ಈಗಿರುವ ಅವರ ಅಲ್ಪ ಬಹುಮತ ಮತ್ತು ಜನಗಣತಿಯ ಅಂಕಿಯಷ್ಟೇ! ದೆಹಲಿ ಸಲಹೆಗಳು ಅವರಿಗೆ ಮೊದಲ ಬಾರಿಗೆ ಐದು ಪ್ರಾಂತಗಳನ್ನಿತ್ತವು. ಅವುಗಳಲ್ಲಿ ಮೂರು (ಸಿಂಧ್, ವಾಯುವ್ಯ ಗಡಿಪ್ರಾಂತ ಮತ್ತು ಬಲೂಚಿಸ್ತಾನ್) ನಿಜವಾದ ಬಹುಸಂಖ್ಯೆಯ ಮುಸ್ಲಿಮರನ್ನೊಳಗೊಂಡಿದ್ದುವು. ಈ ದೊಡ್ಡ ಕ್ರಮವನ್ನು ಮುಸ್ಲಿಮರು ಅರಿತುಕೊಳ್ಳದಿದ್ದರೆ, ಅವರು ಬದುಕಲು ಅರ್ಹರಾಗಿರುವುದಿಲ್ಲ (ಚಪ್ಪಾಳೆ). ಈಗ ಐದು ಮುಸ್ಲಿಂ ಪ್ರಾಂತಗಳಿಗೆ ಪ್ರತಿಯಾಗಿ ಒಂಬತ್ತು ಹಿಂದೂ ಪ್ರಾಂತಗಳಿದ್ದುವು. ಮತ್ತು ಹಿಂದೂಗಳು ಒಂಬತ್ತು ಪ್ರಾಂತಗಳಲ್ಲಿ ಮುಸ್ಲಿಮರನ್ನು ನಡೆಸಿಕೊಳ್ಳುವಂತೆಯೆ ಮುಸ್ಲಿಮರು ಐದು ಪ್ರಾಂತಗಳಲ್ಲಿ ಹಿಂದೂಗಳನ್ನು ನಡೆಸಿಕೊಳ್ಳುವರು. ಇದು ಒಂದು ದೊಡ್ಡ ಲಾಭವಲ್ಲವೇನು? ('ಹಿಂದೂಸ್ತಾನ್ ಟೈಮ್ಸ್', ಜನವರಿ ೩,೧೯೨೮) ಸರಳ ಇಂಗ್ಲಿಷಿನ ಸರಳಾರ್ಥವನ್ನು ತಪ್ಪಾಗಿ ಗ್ರಹಿಸುವುದರಲ್ಲಿ ಆಸಕ್ತರಲ್ಲದವರಾರೂ ಸಿಂಧ್ ಪ್ರತ್ಯೇಕತೆಯ ಬೇಡಿಕೆಯ ನಿಜವಾದ ಉದ್ದೇಶವನ್ನು ತಪ್ಪು ತಿಳಿಯಲಾರರು. ನಿಜವಾದ ಉದ್ದೇಶಕ್ಕೂ ಸಿಂಧ್ ಭವಿಷ್ಯಕ್ಕೂ ಏನೇನೂ ಸಂಬಂಧವಿಲ್ಲವೆಂಬುದು ಸ್ಪಷ್ಟ. ಅದು ಮುಸ್ಲಿಂ ಅಲ್ಪಸಂಖ್ಯಾತರ ರಕ್ಷಣೆಗಾಗಿ ಬದ್ಧವಾದ ವಿಶಾಲವಾದ ಯೋಜನೆಯೊಂದರ ಅಂಗವಾಗಿದ್ದು ಶಾಂತಿಯನ್ನು ಕಾಪಾಡುವುದರ ಅತ್ಯುತ್ತಮ ವಿಧಾನವೆಂದರೆ, ಯುದ್ಧಕ್ಕೆ ಸಿದ್ಧವಾಗಿರುವುದು ಎಂಬ ತತ್ವವನ್ನು ಆಧರಿಸಿದೆ.

(೬) ಬೇಡಿಕೆಯ ನಿಜವಾದ ಉದ್ದೇಶವನ್ನು ಅರಿತಿದ್ದು ಅದಕ್ಕೆ ಸಹಾನುಭೂತಿ ತೋರಬೇಕೇ ಎಂಬುದು ಪ್ರಶ್ನೆ. ನನ್ನ ಮಟ್ಟಿಗೆ ಹೇಳುವುದಾದರೆ, ಅದರ ಬಗ್ಗೆ ನನಗೆ ಸಹಾನುಭೂತಿಯಿಲ್ಲ. ಒಳ್ಳೆಯ ಆಡಳಿತದ ಹಿತಾಸಕ್ತಿಗಳನ್ನು ಮನಸ್ಸಿನಲ್ಲಿ ಉಳ್ಳ ಯಾರೂ ಅದಕ್ಕೆ ಸಮ್ಮತಿಸುವುದಿಲ್ಲವೆಂದು ಹೇಳುವ ಧೈರ್ಯ ಮಾಡುತ್ತೇನೆ. "ಪ್ರತಿಪಾದಿಸುವ ರೀತಿ ಸಲಹೆಯೊಂದರ ಯೋಗ್ಯತೆಯನ್ನು ಅವಶ್ಯವಾಗಿ ದುರ್ಬಲಗೊಳಿಸುವುದಿಲ್ಲ" ಎಂದು ನಿಸ್ಸಂದೇಹವಾಗಿ ಹೇಳಲಾಗುವುದು. ಪ್ರತ್ಯೇಕತೆಯ ಪರವಾಗಿ ತನ್ನ ಅಭಿಪ್ರಾಯ ವ್ಯಕ್ತಗೊಳಿಸಿರುವ ನೆಹ್ರೂ ಸಮಿತಿ ಹೇಳಿರುವುದು ಹಾಗೆಯೇ. ಈ ನಿಲುವಿಗೆ ನನ್ನ ಆಕ್ಷೇಪ ವಿದೆ. ರೀತಿ ಉದ್ದೇಶವನ್ನು ಹೊರಗೆಡಹುತ್ತದೆ. ಮತ್ತು ಆ ಉದ್ದೇಶ, ಸಣ್ಣ ಉದ್ದೇಶವಾಗಿರದೆ, ಸನ್ನಿವೇಶದ ಮುಖವನ್ನು ಬದಲಿಸುವಷ್ಟು ಮುಖ್ಯವಾಗಿದೆ ಎಂಬುದು ನನ್ನ ಅಭಿಮತ. ಏಕೆಂದರೆ, ಸಂಸ್ಥೆಯೊಂದನ್ನು ಚಾಲನೆಗೊಳಿಸುವ ಮತ್ತು ಅದರ ದಿಕ್ಕನ್ನು ಗೊತ್ತುಪಡಿಸುವ ಮುಖ್ಯ ಶಕ್ತಿ ಆ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರುವ ಉದ್ದೇಶದ ಸುತ್ತ ಕೇಂದ್ರೀಕೃತವಾಗಿರುತ್ತದೆ ಎಂಬುದನ್ನು ನಿರಾಕರಿಸುವಂತಿಲ್ಲ. ಈ ಯೋಜನೆಯ ಹಿಂದಿರುವ ಉದ್ದೇಶ ಅಲ್ಪಸಂಖ್ಯಾತರನ್ನು– ಮಹಮದೀಯ ಪ್ರಾಂತಗಳಲ್ಲಿ ಹಿಂದೂಗಳನ್ನು ಮತ್ತು ಹಿಂದೂ ಪ್ರಾಂತಗಳಲ್ಲಿ ಮಹಮದೀಯರನ್ನು ಇತರ ಪ್ರಾಂತಗಳಲ್ಲಿ ಅವರ ಸಹಧರ್ಮೀಯರು ಮಾಡಿದ ಪಾಪಗಳಿಗಾಗಿ ಶಿಕ್ಷಿಸುವ ಅವಕಾಶಗಳನ್ನು ಒದಗಿಸುವುದರ ಮೂಲಕ ನ್ಯಾಯ–ಶಾಂತಿಗಳ ರಕ್ಷಣೆಯನ್ನೊದಗಿಸುವ ಭಯಾನಕ ಪದ್ಧತಿಯನ್ನು ಒಳಗೊಂಡಿದೆ. ಅಲ್ಪಸಂಖ್ಯಾತರನ್ನು ಅವರ ಸ್ವಂತ ಪ್ರಾಂತಗಳಲ್ಲಿ ಪ್ರಜೆಗಳಂತಲ್ಲದೆ ಒತ್ತೆಯಾಳುಗಳಂತೆ ನಡೆಸಿಕೊಳ್ಳಲು, ಅವರ ಹಕ್ಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು– ಅದು ಅವರ ಮೇಲಿನ ಬಂಧುಗಳ ದುರ್ವರ್ತನೆಗೆ ಪ್ರತೀಕಾರ ಮಾಡಲು ಅವಕಾಶ ಕೊಡುವ ಪದ್ಧತಿ ಸ್ವನಿಂದೆಗೆ ಗುರಿಯಾಗಬೇಕು. ಇಂಥ ಮುಟ್ಟುಗೋಲಿಗೆ ಒಯ್ಯುವ ಕಷ್ಟನಿಷ್ಠುರಗಳು ಯಾವಾಗಲೂ ನ್ಯಾಯವಾಗಿರುತ್ತದೆ. ಮತ್ತು ಹುರುಳುಳ್ಳವಾಗಿರುತ್ತವೆ ಎಂದು ಯಾರು ತಾನೇ ಹೇಳಬಲ್ಲರು? ಬಹುತೇಕ ಪ್ರಕರಣಗಳಲ್ಲಿ ತೊಂದರೆ ಎಂಥದೆಂದರೆ, ಅಲ್ಪಸಂಖ್ಯಾತರ ವಿರುದ್ಧ ಯಾವುದೇ ಕ್ರಿಯೆ– ದೊಡ್ಡದಾಗಿರಲಿ ಅಥವಾ ಸಣ್ಣದಾಗಿರಲಿ– ಪ್ರಾಂತಗಳ ನಡುವೆ ಕಾಳಗಕ್ಕೆ ಕಾರಣವಾಗುವಂತೆ ಕೇವಲ ಕ್ಲೇಶಗಳನ್ನು ತಂದೊಡ್ಡುತ್ತದೆ. ಇಂಥ ಯೋಜನೆಯ ಪರಿಣಾಮಗಳು, ಸಮಚಿತ್ತದಿಂದ ಪರಿಭಾವಿಸಲಾಗದಷ್ಟು ಭಯಂಕರ ಹಿಂದೂ ಪ್ರಾಂತಗಳಲ್ಲಿ ಮುಸ್ಲಿಮರ ಮೇಲೆ ದಬ್ಬಾಳಿಕೆ ನಡೆಯಲು ಹಿಂದೂಗಳಿಗೆ ಅದೇ ಅವಕಾಶ ಒದಗುತ್ತದೆಂಬುದು, ವಿರಸ–ಒಡಕುಗಳು ಬೀಜಗಳನ್ನು ಒಳಗೊಂಡಿರುವ ಯೋಜನೆಯ ಸ್ವರೂಪವನ್ನು ಒಳಿತಿಗಾಗಿ ಬದಲಿಸುವುದಿಲ್ಲ. ಯೋಜನೆ ಎಷ್ಟು ಆಘಾತಕಾರಿಯಾಗಿದೆಯೆಂದರೆ, ಮಹಮದೀಯರಿಗೆ ಅದರ ವಿನಾ ಸುರಕ್ಷತೆಯ ಭಾವನೆ ಇಲ್ಲವೆನಿಸಿದ ಪಕ್ಷದಲ್ಲಿ, ಅದಿಲ್ಲದೆ ಅವರು ಬದುಕಬಲ್ಲರೆಂಬ ಭರವಸೆಯನ್ನು ಪರಸ್ಪರ ನಂಬಿಕೆ ಅವರಿಗೆ ಕೊಡುವ ತನಕ ಸ್ವರಾಜ್ಯವನ್ನು ಮುಂದೆ ಹಾಕಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. "ಚರಿತ್ರೆಯಲ್ಲಿನ ದೀರ್ಘ ಘಟನಾಪರಂಪರೆಯೊಂದು ಈಗಿರುವಂತೆ ಭಾರತದ ಜನಸಂಖ್ಯಾ ವಿತರಣೆಗೆ ಕಾರಣವಾಗಿದೆ" ಎಂದೂ ಕೋಮುವಾರು ಪ್ರಾಂತಗಳನ್ನು ರಚಿಸುವಲ್ಲಿ "ವಾಸ್ತವಾಂಶಗಳನ್ನು ಯಥಾವತ್ತಾಗಿ ಗುರುತಿಸಬೇಕಷ್ಟೆ" ಎಂದೂ ನೆಹ್ರೂ ಸಮಿತಿ ವಾದಿಸುತ್ತದೆ. ಇದು ನಿಸ್ಸಂದೇಹವಾಗಿ ನಿಜ. ಆದರೆ ಕೋಮುವಾರು ಭಾವನೆ, ಪೂರ್ಣ ಉಬ್ಬರದ ಸ್ಥಿತಿಯಲ್ಲಿರುವಾಗ ಮತ್ತು ರಾಷ್ಟ್ರೀಯ ಭಾವನೆ ಇಳಿತದ ಸ್ಥಿತಿಯಲ್ಲಿರುವಾಗ ಇಂಥ ಪ್ರಾಂತಗಳನ್ನು ನಾವು ರಚಿಸಬೇಕೇ ಎಂಬ ಪ್ರಶ್ನೆ ಉಳಿಯುತ್ತದೆ. ಹಿಂದೂಗಳೂ, ಮಹಮದೀಯರೂ ತಮ್ಮ ಕೋಮುಪ್ರಜ್ಞೆಯನ್ನು ಕಳಚಿಕೊಂಡು ತಾವು ಮೊದಲಿಂದ ಕಡೆಯವರೆಗೆ ಭಾರತೀಯರೆಂದು ಭಾವಿಸತೊಡಗಿದಾಗ, ಇಂಥ ಪ್ರಾಂತಗಳ ರಚನೆಗೆ

ಸಕಾಲವೊದಗುತ್ತದೆ. ಅಂತೂ ತಾವು ಮೊದಲು ಭಾರತೀಯರು, ಅನಂತರ ಹಿಂದೂಗಳು ಮತ್ತು ಮಹಮದೀಯರು ಎಂದು ಎರಡು ಗುಂಪಿನವರೂ ಭಾವಿಸುವ ತನಕ ಈ ಪ್ರಶ್ನೆ ಕಾಯಬೇಕು. ಸಿಂಧ್‌ನ ಪ್ರತ್ಯೇಕತೆಯ ಪ್ರಶ್ನೆಯ ಬಗ್ಗೆ ನನ್ನ ಸಹೋದ್ಯೋಗಿಗಳು ತೋರಿದ ಸಹಾನುಭೂತಿಯಿಂದ ನನ್ನನ್ನು ನಾನು ಈ ಆಧಾರಗಳ ಮೇಲೇ ಬೇರ್ಪಡಿಸಿಕೊಳ್ಳುತ್ತೇನೆ.

(೬) ಸಿಂಧ್‌ನ್ನು ಸರಕಾರದಿಂದ ಪ್ರತ್ಯೇಕಿಸುವ ಹಾದಿಯಲ್ಲಿರುವ ಆರ್ಥಿಕ ತೊಂದರೆಗಳ ಬಗೆಗೆ ನಾನೇನೂ ಹೇಳುವುದಿಲ್ಲವೆಂಬುದು ಗಮನಾರ್ಹ. ಅದಕ್ಕೆ ನಾನು ಪ್ರಾಮುಖ್ಯ ಕೊಡುವುದಿಲ್ಲವೆಂಬುದು ಕಾರಣವಲ್ಲ; ಕೊಡುತ್ತೇನೆ. ಆದರೆ ಅವಷ್ಟೇ ನಿರ್ಣಾಯಕವಲ್ಲವೆಂಬುದು ನನ್ನ ನಿಲುವು. ಅವುಗಳನ್ನು ನಾನು ಉಲ್ಲೇಖಿಸದಿರುವುದೇಕೆಂದರೆ, ಆರ್ಥಿಕ ಆಕ್ಷೇಪಗಳು ಪರಿಹರಿಸಲ್ಪಟ್ಟರೂ ಅಥವಾ ಹಿಂತೆಗೆದು ಕೊಳ್ಳಲ್ಪಟ್ಟರೂ ಕೂಡ, ಸಿಂಧ್‌ನ ಪ್ರತ್ಯೇಕತೆಯ ಬಗ್ಗೆ ನಾನು ಎತ್ತಿರುವ ಆಕ್ಷೇಪಣೆಗಳು ಹಾಗೆಯೇ ನಿಲ್ಲುತ್ತವೆ.

## ವಿಭಾಗ–II

# ಪ್ರಾಂತೀಯ ಕಾರ್ಯಾಂಗ

## ಅಧ್ಯಾಯ–೧

### ದ್ವಿಸರ್ಕಾರ ಮತ್ತು ಏಕೀಕೃತ ಸರ್ಕಾರ

(೮) ಹೊಸ ಆಡಳಿತ ಪದ್ಧತಿ ಜಾರಿಗೆ ಬಂದ ನಂತರ, ಐದು ವರ್ಷಕಾಲ, ಕಾನೂನು ಹಾಗೂ ಸುವ್ಯವಸ್ಥೆಗಳ ಪರಿಪಾಲನೆ, ಕಾಯ್ದಿರಿಸಿದ ವಿಷಯವಾಗಿಯೇ ಮುಂದುವರಿಯತಕ್ಕದ್ದೆಂದು ನನ್ನ ಸಹೋದ್ಯೋಗಿಗಳು ಶಿಫಾರಸ್ ಮಾಡಿದ್ದಾರೆ. ತನ್ನ ಕಾರ್ಯವೇನೆಂದು ತೀರ್ಮಾನಿಸುವ ಅವಕಾಶವನ್ನು ಸಮಿತಿಗೆ ನೀಡಲು ಕೆಲಕಾಲ ಕಾಯುವುದಕ್ಕಿಂತ ಹೆಚ್ಚಾಗಿ ಇನ್ನೇನನ್ನೂ ಇವರ ಶಿಫಾರಸುಗಳು ಒಳಗೊಂಡಿರದೆ ಇದ್ದಿದ್ದರೆ ನಾನು ಭಿನ್ನಾಭಿಪ್ರಾಯ ತಾಳುತ್ತಿರಲಿಲ್ಲ. ಆದರೆ ದುರದೃಷ್ಟವಶಾತ್ ಇವರ ಶಿಫಾರಸು ಇದಕ್ಕಿಂತ ಹೆಚ್ಚು ವಿಷಯಗಳಿಂದ ಮತ್ತು "ಆ ಅವಧಿಯ ಅನಂತರ, ಮೇಲ್ಮನೆಯ ಮತ್ತು ರಾಜ್ಯಪಾಲರ ಅಂಗೀಕಾರಕ್ಕನುಸಾರವಾಗಿ, ವಿಷಯವನ್ನು ವರ್ಗಾಯಿಸಬೇಕೇ ಎಂದು ನಿರ್ಧರಿಸುವ ಅಧಿಕಾರವನ್ನು ವಿಧಾನ ಪರಿಷತ್ತಿನ ತೀರ್ಮಾನಕ್ಕೇ ಬಿಟ್ಟುಬಿಡತಕ್ಕದ್ದು" ಎಂಬ ಷರತ್ತಿನಿಂದ ಕೂಡಿದೆ. ದ್ವಂದ್ವ ಸರಕಾರವು (dyarchy) ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿಯಬಹುದೆಂಬ ಈ ಶಿಫಾರಸನ್ನು ನಾನು ಒಪ್ಪಲಾರೆ. ದ್ವಂದ್ವ ಸರ್ಕಾರ ಕಾರ್ಯ ಸಮರ್ಥವಾದ ಆಡಳಿತ ಪದ್ಧತಿ, ಇದು ಹಿಂದೆ ಯಶಸ್ವಿಯಾದದ್ದರಿಂದ ಮುಂದೆಯು ಯಶಸ್ವಿಯಾಗುತ್ತದೆ ಎಂದು ನಿರೀಕ್ಷಿಸಬಹುದು ಎಂಬ ಭಾವನೆಯನ್ನು ಬಿಟ್ಟರೆ ಇಂಥದೊಂದು ಶಿಫಾರಸಿಗೆ ಬೇರೆ ಯಾವುದೇ ಬೆಂಬಲವಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ಭಾವನೆ ಸರ್ವಥಾ ಸಮರ್ಥನೀಯವಲ್ಲ.

(೯) ಒಂದು ಆಡಳಿತ ಪದ್ಧತಿಯಾಗಿ ದ್ವಂದ್ವ ಸರ್ಕಾರ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಲಾರದೆಂಬುದಕ್ಕೆ ಅನೇಕ ಕಾರಣಗಳನ್ನು ಕೊಡಲಾಗಿದೆ. ಸರ್ಕಾರದ ಸುರಕ್ಷತೆಯ ದೃಷ್ಟಿಯಿಂದ, ಜಾರಿಗೆ ತಂದ ಕೆಲವು ನಿರ್ಬಂಧಗಳಿಂದ, ಸರ್ಕಾರದ ವರ್ಗಾಯಿಸಲ್ಪಟ್ಟ ವಿಭಾಗದ ಕೆಲಸಗಳಿಗೆ ಅಡ್ಡಿಯುಂಟಾಗಿರುವುದು ನಿಜ. ಸಚಿವರುಗಳ ನಿಯಂತ್ರಣಕ್ಕೆ ವರ್ಗಾಯಿಸಲಾದ ಎಲ್ಲ ವಿಷಯಗಳೂ ಜನರ ಯೋಗಕ್ಷೇಮಕ್ಕೆ ಸಂಬಂಧಪಟ್ಟಿದೆ. ಕಾನೂನು ಮತ್ತು ಸುವ್ಯವಸ್ಥೆಗಳ ಪರಿಪಾಲನೆಗೆ ಸಂಬಂಧಿಸಿದ ವಿಷಯಗಳಿಂದಲೇ ಈ ಅಂಶವನ್ನು ತಿಳಿದುಕೊಳ್ಳಲಾಗಿದೆ. ಬಹುಮಟ್ಟಿಗೆ ಈ ವಿಷಯಗಳು ಹೀಗಿರುವುದರಿಂದಾಗಿಯೇ ಇವನ್ನು ವರ್ಗಾಯಿಸಲಾಗಿದೆ ಎಂಬುದು ನಿಜ. ಆದ್ದರಿಂದ ಒಂದು ಕಾರ್ಯನೀತಿಯಾಗಿ (policy) ಸರಕಾರದ ಹಣಕಾಸು ವ್ಯವಹಾರಗಳು ಸಚಿವನೊಬ್ಬನ ಅಧೀನದಲ್ಲಿಯೇ ಇರತಕ್ಕದ್ದು. ಏಕೆಂದರೆ ಹಣಕಾಸು ವಿಭಾಗವು ಅವಶ್ಯಕ ಸಾಧನ ಸಂಪತ್ತನ್ನು ಒದಗಿಸಿಕೊಡದ ಹೊರತು, ಯಾವುದೇ ಕಾರ್ಯನೀತಿಯೂ ಸಫಲವಾಗುವ ಅವಕಾಶವಿಲ್ಲವೆಂಬುದು ಸ್ಪಷ್ಟ.. ಹಣಕಾಸು ವಿಭಾಗದ ಸರ್ಕಾರದ ಅಧೀನ ನೌಕರರ ಸುಪರ್ದಿನಲ್ಲಿದ್ದಾಗ ಮಾತ್ರ, ಅದರಿಂದ ಫಲಸಿದ್ಧಿ ನಿರೀಕ್ಷಿಸುವುದು ಸಾಧ್ಯ.

ಆದರೆ ಹೀಗೆ ಇರಲಿಲ್ಲ. ಹಣಕಾಸು ವಿಭಾಗದ ಶಾಸನದ ಅನ್ವಯ, ನಿಯಮಗಳ ರಚನೆಗೆ ಹಾಗೂ ಈ ವಿಭಾಗದ ಕಾರ್ಯನಿರ್ವಹಣೆಗಳ ನಿಯಂತ್ರಣಕ್ಕೆ ೪೫ಎ (೩)ನೇ ಪ್ರಕರಣದಲ್ಲಿ ಅವಕಾಶವಿದೆ. ರಚನೆಯಾಗಿರುವಂತೆ ವಿಭಾಗ ವರ್ಗಾವಣೆಗೊಂಡದ್ದೂ ಆಗಿಲ್ಲ. ಕಾಯ್ದಿರಿಸಲ್ಪಟ್ಟಿದ್ದೂ ಆಗಿಲ್ಲ. ಇದು ಸರ್ಕಾರದ ಎರಡೂ ಅಂಗಗಳಿಗೆ ಸಾಮಾನ್ಯವಾಗಿರುತ್ತದೆ. ಆದರೂ ಕರ್ತವ್ಯ ಹಸ್ತಾಂತರ ನಿಯಮಗಳ ೩೬ (೧)ನೇ ನಿಯಮದಲ್ಲಿ ಗೊತ್ತುಪಡಿಸಲಾದಂತೆ ಹಣಕಾಸು ವಿಭಾಗವು ಕಾರ್ಯಕಾರೀ ಸಮಿತಿಯ (Executive Council) ಒಬ್ಬ ಸದಸ್ಯನ ನಿಯಂತ್ರಣದಲ್ಲಿ ಇರತಕ್ಕದು. ಮತ್ತು ಆ ವಿಭಾಗವನ್ನು ಕಾಯ್ದಿರಿಸಿದ ವಿಭಾಗವನ್ನಾಗಿ (Reserved department) ಪರಿವರ್ತಿಸತಕ್ಕದ್ದು. ಶಾಸಕಾಂಗಕ್ಕೆ (Legislature) ಹೊಣೆಗಾರನಾಗಿರದಂಥ, ಕಾರ್ಯಕಾರಿ ಸಮಿತಿಯ ಒಬ್ಬ ಸದಸ್ಯನ ಕೈಯಲ್ಲಿರಿಸಿದಾಗ, ಸಹಜವಾಗಿಯೇ ಈ ವಿಭಾಗವು ಕಾಯ್ದಿರಿಸಿದ ವಿಭಾಗದಲ್ಲಿರಬೇಕು. ಮತ್ತು ಈ ವಿಭಾಗದ ಮುಖ್ಯಸ್ಥನೇ ಬಹುಮಟ್ಟಿಗೆ ಕಾಯ್ದಿರಿಸಿದ ವಿಭಾಗಗಳ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಇದರಿಂದಾಗಿ ಸಚಿವರುಗಳಿಗೆ ಅನುಕೂಲ ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ವರ್ಗಾಯಿತ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ನಿಗದಿಪಡಿಸಲಾದ ಅಧಿಕಾರವು, ಸರ್ಕಾರದ ವರ್ಗಾಯಿಸಲ್ಪಟ್ಟ ವಿಷಯಗಳ ಅಂಗಕ್ಕೆ ಕೆಡಕುಂಟುಮಾಡುವಂಥ ಇನ್ನೊಂದು ಅಂಶವಾಗಿತ್ತು. ೫೨(೩)ನೇ ಪ್ರಕರಣದ ಅನ್ವಯ ವರ್ಗಾಯಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ, ರಾಜ್ಯಪಾಲರಿಗೆ, ಅವರ ಸಚಿವರುಗಳಿಂದ ಸಲಹಾರೂಪದ ಮಾರ್ಗದರ್ಶನ ದೊರೆಯಬೇಕು. ಸಚಿವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ನಡೆಯಬೇಕಾದರೆ, ರಾಜ್ಯಪಾಲರಿಗೆ ಸಾಕಷ್ಟು ಕಾರಣಗಳಿರಬೇಕು. ಆದರೆ, ಮೂಲಭೂತ ವ್ಯತ್ಯಾಸಗಳಿರುವ ಅಪವಾದಾತ್ಮಕ ಸಂದರ್ಭಗಳಲ್ಲಿ ರಾಜ್ಯಪಾಲರುಗಳು ನಡುವೆ ಪ್ರವೇಶಿಸುವುದನ್ನು ಕಡಿಮೆ ಮಾಡುವುದಕ್ಕೆ ಬದಲಾಗಿ ಕಾನೂನು ವಿಷಯದಲ್ಲಿ ತಮಗೆ ಸಲಹೆ ನೀಡುವುದಷ್ಟೇ ಸಚಿವರುಗಳ ಕೆಲಸ. ಅವರ ಸಲಹೆಗಳನ್ನು ನಿರಾಕರಿಸುವುದು ಸಮಂಜಸವೆನಿಸಿದಲ್ಲಿ, ಹಾಗೆ ಮಾಡಲು ತಾವು ಸ್ವತಂತ್ರರು ಎಂದು ವಾದಿಸಿದ್ದರೆಂಬುದು ಸಾಮಾನ್ಯವಾದ ಆಕ್ಷೇಪ. ಈ ವ್ಯತಿರಿಕ್ತ ವ್ಯಾಖ್ಯೆಯಿಂದಾಗಿ ಸಚಿವರುಗಳ ಸ್ಥಾನಮಾನಗಳು ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಸ್ಥಾನಮಾನಗಳಿಗಿಂತಲೂ ನಿಕೃಷ್ಟವಾಗಿವೆ. ಏಕೆಂದರೆ ಸಾಮಾನ್ಯ ಸಂದರ್ಭಗಳಲ್ಲಿ ಬಹುಮತ ಆಗದ ಹೊರತು, ಕಾರ್ಯಕಾರಿ ಸಮಿತಿಯ ಸದಸ್ಯರ ಸಲಹೆಗಳನ್ನು ತಳ್ಳಿಹಾಕುವುದು ಸಾಧ್ಯವಿಲ್ಲ. ರಾಜ್ಯಪಾಲರುಗಳ ೫೨(೩)ನೇ ಪ್ರಕರಣಕ್ಕೆ ನೀಡಿದ ವ್ಯಾಖ್ಯೆಯಂತೆ ಸಚಿವರುಗಳು ಸಂಪೂರ್ಣವಾಗಿ ರಾಜ್ಯಪಾಲರ ಅಧೀನದಲ್ಲಿದ್ದರು ಹಾಗೂ ಅವರಿಗೆ ಕಾರ್ಯಕಾರಿ ಸಮಿತಿಯ ಸದಸ್ಯರಿಗಿದ್ದಂಥ ರಕ್ಷಣೆ ಇರಲಿಲ್ಲ. ಸಚಿವರುಗಳ ವಿರುದ್ಧ ರಾಜ್ಯಪಾಲರುಗಳ ಅಧಿಕಾರಗಳನ್ನು ಹೆಚ್ಚಿಸಲು ನೆರವಾಗುವ ಇನ್ನೊಂದು ಅಂಶವೂ ಇತ್ತು. ಇದು ಸಚಿವರುಗಳ ಕಾರ್ಯ ಚಟುವಟಿಕೆಗಳನ್ನು ಶಕ್ತಿಗುಂದಿಸಿತ್ತು. ತನಗೆ ನೀಡಲಾಗುವ ಸಲಹೆಗಳಿಂದಾಗಿ ನೌಕರರು ಶಾಸನಬದ್ಧವಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸುವಲ್ಲಿ ಹಾಗೂ ತಮ್ಮೆಲ್ಲ ಅಧಿಕೃತ ಹಕ್ಕುಗಳನ್ನು ವಿಶೇಷಾಧಿಕಾರಗಳನ್ನೂ ಅನುಭವಿಸುವಲ್ಲಿ ಸರಕಾರದ ವಿವಿಧ ಸೇವೆಗಳಲ್ಲಿ ನೇಮಕಗೊಂಡ ಎಲ್ಲರ ಹಿತಾಸಕ್ತಿಗಳನ್ನು ರಾಜ್ಯಪಾಲರು ರಕ್ಷಿಸಲೇಬೇಕಾಗಿ ಬಂದಿತ್ತು. ಹೀಗಾಗಿ ರಾಜ್ಯಪಾಲರ ಕರ್ತವ್ಯ, ಸೇವಾಹಿತಾಸಕ್ತಿಗಳನ್ನು ರಕ್ಷಿಸುವುದಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ, ರಾಜ್ಯಪಾಲರುಗಳು ಈ ಸಲಹೆಗೆ ವಿಸ್ತೃತ ವ್ಯಾಖ್ಯೆ ನೀಡಿದರು ಹಾಗೂ ಉದ್ಯೋಗ ನೀಡಿಕೆ, ನೇಮಕಾತಿ ಮತ್ತು ಆಡಳಿತ ವಿಭಾಗದಲ್ಲಿನ ಬಡ್ತಿಗಳ ಪ್ರಶ್ನೆಗಳೂ ಸೇರಿದಂತೆ ಸೇವೆಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳೂ ತಮ್ಮ ಅಧೀನದಲ್ಲಿಯೇ ಇರಬೇಕೆಂದು ಒತ್ತಾಯಿಸಿದರು. ಬಾಂಬೆಯಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರ

ಕೈಕೆಳಗೆ ಕೆಲಸ ಮಾಡುವವರ ಸೇವೆಗಳಿಗೆ ಸಂಬಂಧಿಸಿದಂತೆ ಕೂಡ ತಮಗೆ ಈ ಹಕ್ಕಿರುವುದಾಗಿ ರಾಜ್ಯಪಾಲರು ವಾದಿಸಿದರು ಹಾಗೂ ಈ ಹಕ್ಕು ಇರುವುದನ್ನು ಸಾಬೀತುಪಡಿಸಿದರು. "ಕೌನ್ಸಿಲಿನಲ್ಲಿರುವ ರಾಜ್ಯಪಾಲರು– ನೇಮಿಸಲು ಸಂತೋಷ ಪಡುತ್ತಾರೆ" ಎಂಬ ಸಾಮಾನ್ಯ ವಾಕ್ಯರೂಪ "ರಾಜ್ಯಪಾಲರು– ನೇಮಿಸಲು ಸಂತೋಷಪಡುತ್ತಾರೆ" ಎಂದು ಪರಿವರ್ತನೆಗೊಂಡಿತು. ಆಡಳಿತ ವಿಭಾಗದ ಕಾರ್ಯದರ್ಶಿಗೆ ವಹಿಸಲಾದ ಅಧಿಕಾರ ಕೂಡ ಸಚಿವರ ಅಧಿಕಾರವನ್ನು ಕಡಿಮೆಗೊಳಿಸುವಲ್ಲಿ ಹಾಗೂ ರಾಜ್ಯಪಾಲರ ನಿರಂಕುಶಾಧಿಕಾರವನ್ನು ಹೆಚ್ಚಿಸುವಲ್ಲಿ ಸಹಾಯಕವಾಯಿತು. ಏಕೆಂದರೆ ಸಚಿವರುಗಳ ನಿರ್ಣಯಗಳು ತನಗೆ ಒಪ್ಪಿಗೆಯಾಗದೆ ಹೋದಾಗ, ರಾಜಕೀಯ ಮುಖಂಡರ ಸಲಹೆಯನ್ನು ಕೇಳದೆಯೇ, ನೇರವಾಗಿ ರಾಜ್ಯಪಾಲರಲ್ಲಿಗೆ ಹೋಗಲು ಮತ್ತು ಅವರಿಂದ ನಿರ್ದೇಶನ ಪಡೆದು ತನ್ನ ತೀರ್ಮಾನದಂತೆ ನಡೆಯಲು, ಕಾರ್ಯದರ್ಶಿಗೆ ಎಲ್ಲ ಸಂದರ್ಭಗಳಲ್ಲೂ ಅವಕಾಶವಿದ್ದಿತ್ತು.

(೧೦) ದ್ವಂದ್ವ ಸರ್ಕಾರದ ತೃಪ್ತಿಕರ ಕಾರ್ಯ ನಿರ್ವಹಣೆಯ ಮೇಲೆ ಇವೆಲ್ಲವೂ ವ್ಯತಿರಿಕ್ತ ಪ್ರಭಾವ ಬೀರಿದುದರಲ್ಲಿ ಸಂದೇಹವಿಲ್ಲ. ಆದರೆ ನಾನು ಮುಂಜಾಗ್ರತೆ ವಹಿಸಲು ಬಯಸುವುದಿಷ್ಟೆ. ಈ ಅಂಶಗಳಿಲ್ಲದಿದ್ದಲ್ಲಿ ದ್ವಂದ್ವ ಸರ್ಕಾರ, ಕಾರ್ಯಸಮರ್ಥವಾದ ಒಂದು ಆಡಳಿತ ಪದ್ಧತಿಯಾಗುತ್ತಿತ್ತೇ ಎಂದು ಕೆಲವು ಸಲ ನನಗೆ ಅನುಮಾನ ಉಂಟಾಗಿದೆ. ಆದರೂ ದ್ವಂದ್ವ ಸರ್ಕಾರವು ವಸ್ತುತಃ ಕಾರ್ಯಸಮರ್ಥವಲ್ಲದ ಒಂದು ಆಡಳಿತ ಪದ್ಧತಿ ಎಂದು ನಾನು ಭಾವಿಸುತ್ತೇನೆ. ಅದೃಷ್ಟವಶಾತ್ ಈ ಅಭಿಪ್ರಾಯ ವ್ಯಕ್ತಪಡಿಸುವವನು ನಾನೊಬ್ಬನೇ ಅಲ್ಲ, ದ್ವಯಾಡಳಿತ ಪದ್ಧತಿ ಮುಂದುವರಿಯುವುದನ್ನು ವ್ಯಕ್ತಿಶಃ ಬೆಂಬಲಿಸುತ್ತಿದ್ದ ಬಾಂಬೆ ಸರ್ಕಾರದ ಕೆಲವು ಸದಸ್ಯರೂ ೧೯೧೯ರಲ್ಲಿ ಅದು ಕಾರ್ಯ ಸಮರ್ಥವಲ್ಲದ ಪದ್ಧತಿಯೆಂದು ಖಂಡಿಸಿದರು. ಉದ್ಧರಿಸಲು ಯೋಗ್ಯವಾದ ಅವರ ಮಾತುಗಳು ಹೀಗಿವೆ: "ಸರ್ಕಾರದ ಇನ್ನೊಂದು ವಿಭಾಗವನ್ನು ರೂಪಿಸುವ ಪರಿಗಣನೆಗಳ ಬೆಳಕಿನಲ್ಲಿ ಹೆಚ್ಚಿನ ಮಹತ್ವ ನೀಡಬೇಕಾದ ಅಗತ್ಯವೇನೂ ಇಲ್ಲದ ಸರ್ಕಾರದ ಯಾವುದೇ ಒಂದು ವಿಭಾಗದಲ್ಲಿ ಚರ್ಚೆ ಮತ್ತು ನಿರ್ಣಯಗಳಿಗೆ ಪ್ರಾಮುಖ್ಯ ನೀಡುವ ಪ್ರಶ್ನೆಯೇ ಇಲ್ಲವೆಂದು ಸರ್ಕಾರದ ದಾಖಲೆಗಳ ಒಂದು ಉಲ್ಲೇಖ ತೋರಿಸುತ್ತದೆ. ಒಟ್ಟಿನಲ್ಲಿ ಶಾಂತಿ–ಸುವ್ಯವಸ್ಥೆಗಳನ್ನು ಕಾಪಾಡುವುದು ಬಲಿಷ್ಠರಿಂದ ದುರ್ಬಲರನ್ನು ರಕ್ಷಿಸುವುದು ಮತ್ತು ತನ್ನ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವಲ್ಲಿ ತೊಂದರೆಗೊಳಗಾದ ಹಲವು ಬೇರೆ ಬೇರೆ ವರ್ಗಗಳವರ ಹಿತಾಸಕ್ತಿಗಳತ್ತ ಯುಕ್ತ ಗಮನಹರಿಸುವುದು ಇವೇ ಸರ್ಕಾರದ ಮುಖ್ಯ ಕರ್ತವ್ಯ. ಇದರಿಂದ ತಿಳಿದುಬರುವುದೇನೆಂದರೆ, ವರ್ಗಾಯಿಸುವಂತೆ ಸೂಚನೆ ನೀಡಲಾದ ಯಾವುದೇ ವಿಭಾಗದ ಉಸ್ತುವಾರಿ ಹೊಂದಿರುವ ಸಚಿವನು ಮುಂದಿರಿಸುವ ಮಹತ್ವದ ಎಲ್ಲ ಪ್ರಸ್ತಾವಗಳೂ ಕಾರ್ಯತಃ ಕಾಯ್ದಿರಿಸಿದ ವಿಭಾಗಗಳ ಉಸ್ತುವಾರಿ ಹೊಂದಿರುವ ಪ್ರಾಧಿಕಾರದ ಸಂಬಂಧವನ್ನು ಹೊಂದಿರುತ್ತವೆ. (ಸರ್ಕಾರದ ಎರಡೂ ಭಾಗಗಳ ಕಾರ್ಯ ಚಟುವಟಿಕೆಗಳು) ಒಂದರ ಮೇಲಿನ್ನೊಂದು ವ್ಯಾಪಿಸುವಂಥ ವಿಷಯಗಳಿದ್ದರೂ ಅವುಗಳ ಸಂಖ್ಯೆ ಬಹಳ ಕಡಿಮೆ. ಆದ್ದರಿಂದ ಸಚಿವನೊಬ್ಬನ ಅಧೀನದಲ್ಲಿರುವ ವರ್ಗಾಯಿಸಲ್ಪಟ್ಟ ಒಂದು ವಿಷಯದ (transferred subject) ಸಂದರ್ಭದಲ್ಲಿ, ಕಾಯ್ದಿರಿಸಲಾದ ವಿಷಯಗಳ (reserved subjects) ಮೇಲೆ ನಿಯಂತ್ರಣ ಹೊಂದಿರುವಂಥ ಸರ್ಕಾರದ ವಿಭಾಗಗಳ ಗಮನಕ್ಕೆ ತರದೆ, ಯಾವುದೇ ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದು ಸಾಧ್ಯವೆಂಬ ವಾದ ಬಹುಮಟ್ಟಿಗೆ ನಿರಾಧಾರವಾದುದು."

(೧೧) ವಿಷಯಗಳನ್ನು ವಿಭಾಗಿಸಿದುದರಿಂದ ಉಂಟಾದ ದ್ವಯಾಡಳಿತವೊಂದೇ ದ್ವಂದ್ವ ಸರ್ಕಾರ

ವನ್ನು ಕಾರ್ಯಸಮರ್ಥವಲ್ಲದಂತೆ ಮಾಡಿಲ್ಲ. ಇನ್ನೊಂದು ಕಾರಣವೂ ಇದೆ. ದ್ವಯಾಡಳಿತ ಪದ್ಧತಿಯಲ್ಲಿ ಸಾಮಾನ್ಯ ಕಾರ್ಯನೀತಿಯನ್ನು ಹೊಂದಿದ ಒಂದು ಏಕೀಕೃತ ಅಂಗವಾಗಿ ಕಾರ್ಯ ನಿರ್ವಹಿಸುವುದು ಕಾರ್ಯಾಂಗಕ್ಕೆ ಸಾಧ್ಯವಾಗುವುದಿಲ್ಲ. ಮೇಲಧಿಕಾರಿಗಳು ನೀಡುವ ಸಾಮಾನ್ಯ ಆದೇಶಾನುಸಾರ, ನಿಷ್ಠೆಯಿಂದ ಕೆಲಸ ಮಾಡಬೇಕಾಗಿ ಬಂದಾಗ ಮಾತ್ರ, ಒಗ್ಗಟ್ಟು ಉಂಟಾಗುವುದು ಸಾಧ್ಯ. ಶಾಸನ ಸಭೆಯಿಂದಲೇ ನೇಮಕಗೊಂಡ ಸಚಿವರುಗಳು ಶಾಸಕಾಂಗಕ್ಕೆ ನಿಷ್ಠೆ ತೋರಿಸುವುದು ಅಗತ್ಯವೆಂದು ನಿಜವಾಗಿಯೂ ಭಾವಿಸಬೇಕಾಗಿ ಬರುತ್ತದೆ. ಅಂಥ ಮನೋಭಾವ ಹೊಂದಿಲ್ಲದೆ ಇದ್ದರೆ, ತಾವು ಇರಿಸಿಕೊಂಡ ಉದ್ದೇಶಗಳನ್ನು ಪೂರೈಸುವುದು ಅವರಿಗೆ ಸಾಧ್ಯವಾಗುವುದಿಲ್ಲ. ಆದರೆ, ಅವರನ್ನು ಶಾಸಕಾಂಗಕ್ಕೆ ಬಂಧಿಸುವ ಪ್ರತಿಯೊಂದು ಕೊಂಡಿ ಅವರನ್ನು ಅವರ ಕಛೇರಿಯ ಸಹೋದ್ಯೋಗಿಗಳಿಂದ ಪ್ರತ್ಯೇಕಿಸುವ ಕೆಲಸವಷ್ಟನ್ನೇ ಮಾಡುತ್ತದೆ. ಫಲಿತಾಂಶವಾಗಿ ದ್ವಂದ್ವ ಸರ್ಕಾರದಲ್ಲಿ ಅಂತರ್ಗತವಾಗಿರುವ ದ್ವಯಾಡಳಿತ ಪದ್ಧತಿಯೊಂದು ಕೇವಲ ಮೇಲ್ತೋರ್ಕೆಯದಾಗಿರುತ್ತದೆ. ಸರ್ಕಾರದ ಎರಡು ಅರ್ಥಭಾಗಗಳ ನಡುವೆ ಒಮ್ಮೆ ಈ ದ್ವಯಾಡಳಿತ ಪದ್ಧತಿ ಸ್ಥಾಪಿತವಾಯಿತೆಂದರೆ ಸರ್ಕಾರ ನಡೆಸುವುದು ಅಸಾಧ್ಯವಾಗುತ್ತದೆ. ಸಚಿವರುಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಮಾತಿನ ಮೂಲಕ ಹಾಗೂ ಸಮಿತಿಯ ಮುಕ್ತ ಸಭೆಯಲ್ಲಿ ಮತ ನೀಡುವ ಮೂಲಕ ಪರಸ್ಪರ ವಿರೋಧ ಸೂಚಿಸಿದ ಅನೇಕ ಸಂದರ್ಭಗಳು ಇಂಥ ಸಾಧ್ಯತೆಯನ್ನು ಸಮರ್ಥಿಸಿವೆ. ತಾತ್ಕಾಲಿಕವಾಗಿ ಒಗ್ಗೂಡುವ ಮೂಲಕ ದ್ವಂದ್ವ ಸರ್ಕಾರದಲ್ಲಿನ ದ್ವಯಾಡಳಿತವನ್ನು ನಿಯಂತ್ರಣದಲ್ಲಿರಿಸಲಾಗಿದೆ. ಆದರೆ ಈ ತಾತ್ಕಾಲಿಕ ಒಗ್ಗೂಡುವಿಕೆಯೇನಿದ್ದರೂ ಅದು ಎರಡು ಪಕ್ಷಗಳ ನಡುವೆ ಬಲವಂತದಿಂದ ಆದಂಥ ಒಂದು ಕೃತಕ ಒಗ್ಗೂಡುವಿಕೆ ಮಾತ್ರ. ಈ ಎರಡೂ ಅಂಗಗಳ ಮೇಲಧಿಕಾರಿಗಳ ಆದೇಶಗಳು ಒಟ್ಟಿನಲ್ಲಿ ಭಿನ್ನಭಿನ್ನವಾಗಿರುವುದರಿಂದ ಬಿಕ್ಕಟ್ಟು ಉದ್ಭವಿಸುವುದು ಸುಲಭವಾಗುತ್ತದೆ. ಬಾಂಬೆ ಸರಕಾರದಲ್ಲಿ ಇಂಥ ಬಿಕ್ಕಟ್ಟು ಉಂಟಾಗಿಲ್ಲವೆಂಬ ವಿಷಯ ದ್ವಂದ್ವ ಸರ್ಕಾರದಲ್ಲಿ ಅಂತರ್ಗತವಾಗಿರುವ ದೋಷವನ್ನೇನೂ ಅಲ್ಲಗಳೆಯುವುದಿಲ್ಲ. ಈ ತಾತ್ಕಾಲಿಕ ಒಗ್ಗೂಡುವಿಕೆಯಲ್ಲಿ ಸಚಿವರುಗಳು ಕಾರ್ಯಕಾರಿ ಸಮಿತಿಯ ಸದಸ್ಯರುಗಳಿಗೆ ತಾವಾಗಿಯೇ ಅಧಿಕಾರ ಬಿಟ್ಟುಕೊಟ್ಟಿದ್ದರು ಎಂಬುದನ್ನಷ್ಟೇ ಇದು ಸ್ಪಷ್ಟಪಡಿಸುತ್ತದೆ.

(೧೨) ದ್ವಯಾಡಳಿತ ಪದ್ಧತಿಯಲ್ಲಿ ಈ ದೋಷಗಳಿದ್ದಾಗ್ಯೂ ಈ ಆಧಿಪತ್ಯದಲ್ಲಿ ದ್ವಂದ್ವ ಸರ್ಕಾರ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತ ಬಂದಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುವವರಿದ್ದಾರೆ. ಸಂವಿಧಾನವನ್ನು ತಾತ್ಕಾಲಿಕವಾಗಿ ರದ್ದುಪಡಿಸುವುದಕ್ಕಾಗಲಿ, ಅಥವಾ ಭಾರತ ಸರ್ಕಾರದ ಶಾಸನದ ಅನ್ವಯ ನೀಡಲಾಗಿರುವ ತುರ್ತು ಅಧಿಕಾರಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಲಿ ರಾಜ್ಯಪಾಲರು ಬದ್ಧರಾಗಿರಲಿಲ್ಲವೆಂದು ಇದರ ಅರ್ಥವಾಗಿದ್ದರೆ ಮಾತ್ರ, ಈ ಅಭಿಪ್ರಾಯವನ್ನು ಒಪ್ಪಬಹುದು. ಇದು ನಿಜ. ಆದರೆ, ದ್ವಂದ್ವ ಸರ್ಕಾರ ಕೆಲಸ ನಿರ್ವಹಿಸಿದೆಯೇ ಎಂಬುದು ಇಲ್ಲಿನ ಪ್ರಶ್ನೆಯಲ್ಲ. ಜವಾಬ್ದಾರಿ ಸರ್ಕಾರದ ರೂಪದಲ್ಲಿ ಅದು ಕೆಲಸ ನಿರ್ವಹಿಸಿದೆಯೇ ಎಂಬುದೇ ಇಲ್ಲಿ ಪ್ರಶ್ನೆ. ಏಕೆಂದರೆ ೧೯೧೯ರಲ್ಲಿ ಮನ್ನಣೆ ಪಡೆಯಲಿಕ್ಕಾಗಿ ದ್ವಂದ್ವ ಸರ್ಕಾರದೊಡನೆ ಸ್ಪರ್ಧಿಸುತ್ತಿದ್ದ ಸರ್ಕಾರದ ಇತರ ಅನೇಕ ಪರ್ಯಾಯ ರೂಪಗಳಿದ್ದುವೆಂಬುದನ್ನು ನಿರ್ಲಕ್ಷಿಸುವಂತಿಲ್ಲ. ಉದಾಹರಣೆಗೆ ಕಾಂಗ್ರೆಸ್ ಲೀಗ್ ಯೋಜನೆ ಮತ್ತು ಸರಕಾರ ಮುಖ್ಯಸ್ಥರು ರೂಪಿಸುವ ಯೋಜನೆ ಉಳಿದವನ್ನು ಉಲ್ಲೇಖಿಸಬೇಕಾಗಿಲ್ಲ. ಆದರೆ ದ್ವಂದ್ವ ಸರ್ಕಾರಕ್ಕೇ ಆದ್ಯತೆ ನೀಡಿ ಈ ಎಲ್ಲಾ ಯೋಜನೆಗಳನ್ನು ನಿರಾಕರಿಸಲಾಯಿತು. ಜವಾಬ್ದಾರಿ ಸರ್ಕಾರಕ್ಕಿರಬೇಕಾದ ಪರೀಕ್ಷಾ ಪ್ರಮಾಣಗಳನ್ನು ತೃಪ್ತಿಕರವಾಗಿ ಪೂರೈಸುವಲ್ಲಿ ಇವು ವಿಫಲವಾದದ್ದೇ ಇದಕ್ಕೆ ಕಾರಣ

| ವರ್ಷ | ವಿಭಾಗಗಳ ಒಟ್ಟು ಸಂಖ್ಯೆ | ಸರ್ಕಾರ ತಟಸ್ಥವಾಗಿದ್ದಂಥ ವಿಭಾಗಗಳ ಸಂಖ್ಯೆ | ಸರ್ಕಾರದ ಸೋಲುಗಳ ಸಂಖ್ಯೆ | ಕಛೇರಿಯ ಅಡಚಣೆಗಳನ್ನು ತೊಡೆದುಹಾಕಿದ್ದ ಪಕ್ಷದಲ್ಲಿ ಸರ್ಕಾರದ ಸೋಲುಗಳ ಸಂಖ್ಯೆ | ಸರ್ಕಾರದ ಗೆಲುವುಗಳ ಸಂಖ್ಯೆ | ಜೋಡಿಗಳ ಸಂಖ್ಯೆ |
|---|---|---|---|---|---|---|
| ೧೯೨೧ | ೩ | ..... | ೨ | ೨ | ೧ | ..... |
| ೧೯೨೨ | ೧೭ | ..... | ೪ | ೮ | ೯ | ..... |
| ೧೯೨೩ | ೪ | ೧ | ೧ | ೨ | ೧ | ..... |
| ೧೯೨೪ | ೧೯ | ..... | ೧೦ | ೧೪ | ೫ | ೧ |
| ೧೯೨೫ | ೩೦ | ೧ | ..... | ೧೧ | ೧೮ | ..... |
| ೧೯೨೬ | ೩ | ..... | ..... | ೧ | ೨ | ೧ |
| ೧೯೨೭ | ೨೬ | ..... | ೩ | ೧೦ | ೧೬ | ..... |
| ೧೯೨೮ | ೨ | ..... | ೧ | ೧ | ೧ | ..... |

ವಾಗಿತ್ತು. ಆದ್ದರಿಂದ ದ್ವಯಾಡಳಿತ ಪದ್ಧತಿಯ ಸರ್ಕಾರದ ಕಾರ್ಯ ನಿರ್ವಹಣೆಯನ್ನು ಕುರಿತ ಯಾವುದೇ ಸ್ಥೂಲ ಅಭಿಪ್ರಾಯವೂ ಈ ಪ್ರಮುಖ ಪರಿಗಣನೆಯೊಂದನ್ನೇ ಆಧರಿಸಿರತಕ್ಕದ್ದು. ಈ ಅಂಶವನ್ನು ಮನಸ್ಸಿನಲ್ಲಿರಿಸಿಕೊಂಡು ದ್ವಂದ್ವ ಸರ್ಕಾರದ ಕಾರ್ಯದ ಮೌಲ್ಯಮಾಪನ ಮಾಡಲು ನಾವು ಪ್ರಯತ್ನಿಸಿದ ಪಕ್ಷದಲ್ಲಿ ಈ ಸರಕಾರದಲ್ಲಿ ದ್ವಂದ್ವ ಸರ್ಕಾರ ವಿಫಲವಾಗಿದೆಯೆಂಬ ತೀರ್ಮಾನ ವಿವಾದಾತೀತವಾಗಿ ರುತ್ತದೆ. ಜವಾಬ್ದಾರಿ ಸರ್ಕಾರವೆಂದರೆ, ಸದನದಲ್ಲಿ ಬಹುಮತ ಹೊಂದಿರುವಷ್ಟು ಕಾಲ ಮಾತ್ರ ಕಾರ್ಯಾಂಗ ಅಧಿಕಾರದಲ್ಲಿ ಮುಂದುವರಿಯುವುದು. ಸಚಿವ ಸಂಪುಟದ ಜವಾಬ್ದಾರಿ ತತ್ವದ ಸಾರವೇ ಇದು. ಈಗ ಇದೇ ಪರೀಕ್ಷೆಗಳನ್ನು ನಾವು ಬಾಂಬೆ ಸರಕಾರದ ದ್ವಂದ್ವ ಸರ್ಕಾರದ ಕಾರ್ಯನಿರ್ವಹಣೆಗೆ ಅನ್ವಯಿಸಿದರೆ ಮತ್ತು ವರ್ಗಾಯಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದ ಅಭಿಪ್ರಾಯಗಳ ಮೇಲೆ ಸಮಿತಿ ವಿಭಜನೆಗೊಂಡ ಸನ್ನಿವೇಶಗಳನ್ನು ಗಮನಕ್ಕೆ ತೆಗೆದುಕೊಂಡರೆ ಸಚಿವರು ಸದನದಲ್ಲಿ ಮತ್ತೆ ಮತ್ತೆ ಪರಾಭವಗೊಂಡದ್ದು ನಮಗೆ ತಿಳಿದುಬರುತ್ತದೆ. ಆದರೆ, ಏನೂ ಸಂಭವಿಸಿಲ್ಲವೇನೋ ಎಂಬಂತೆ ಅವರು ಅಧಿಕಾರದಲ್ಲಿ ಮುಂದುವರಿದಿರುವುದು ಲಜ್ಜಾಸ್ಪದವೇ ಸರಿ! ಈ ಶೋಚನೀಯ ಕಥೆಯನ್ನು ಪುಟ ೪೩೭ರಲ್ಲಿ ಕೊಟ್ಟಿರುವ ತಃಖ್ತೆಯೇ ನಿರೂಪಿಸುತ್ತದೆ.

೧೯೨೧ರಲ್ಲಿ ಮೂರು ವಿಭಾಗಗಳಲ್ಲಿ ಎರಡರಲ್ಲಿ ಸಚಿವರು ಪರಾಭವಗೊಂಡರು. ೧೯೨೨ರಲ್ಲಿ ೧೭ರಲ್ಲಿ ೮, ೧೯೨೩ರಲ್ಲಿ ೧೯ರಲ್ಲಿ ೧೪, ೧೯೨೫ರ ೩೦ರಲ್ಲಿ ೧೧, ೧೯೨೬ರಲ್ಲಿ ೩ರಲ್ಲಿ ೧, ೧೯೨೭ರಲ್ಲಿ ೨೬ರಲ್ಲಿ ೧೦, ೧೯೨೮ರಲ್ಲಿ ೨ರಲ್ಲಿ ೧ ಎಂದು ಈ ಅಂಕಿ ಅಂಶಗಳನ್ನು ತೋರಿಸುತ್ತವೆ. ಹಾಗಿದ್ದರೂ ಈ ಸರಕಾರದಲ್ಲಿ ಸಚಿವರು ರಾಜೀನಾಮೆ ನೀಡಿದ ಒಂದೇ ಒಂದು ಪ್ರಸಂಗವೂ ಇಲ್ಲ. ಈ ವಾಸ್ತವಾಂಶಗಳು ನಮ್ಮ ಮುಂದಿರುವಾಗ ದ್ವಂದ್ವ ಸರ್ಕಾರವು ಜವಾಬ್ದಾರಿ ಸರ್ಕಾರದ ರೂಪದಲ್ಲಿ ಕಾರ್ಯ ನಿರ್ವಹಿಸಿದೆ ಎಂದು ಸೂಚಿಸುವ ಯಾವುದೇ ತೀರ್ಮಾನಕ್ಕೂ ಬರಲು ಸಾಧ್ಯವಿಲ್ಲ.

೧೩. ಆದರೂ ಸಚಿವರುಗಳು ರಾಜೀನಾಮೆ ಕೊಡದೆ ಇದ್ದುದಕ್ಕೆ ಸಮಿತಿ ಈ ವಿಭಾಗಗಳಿಂದ ವಿಶ್ವಾಸಮತವನ್ನು ಅಪೇಕ್ಷಿಸಲು ಉದ್ದೇಶಿಸದಿದ್ದುದೇ ಕಾರಣವೆಂಬುದು ಚರ್ಚಾವಿಷಯವಾಗಿರುತ್ತದೆ. ಹಾಗಿಲ್ಲದಿದ್ದ ಪಕ್ಷದಲ್ಲಿ ತನ್ನ ಸಂಕಲ್ಪವನ್ನು ಪರಿಣಾಮಕಾರಿಯಾಗಿ ಹೇರಲಾರದಷ್ಟು ಬಲಹೀನವಾಗಿತ್ತು ಎಂಬ ಅಂಶ ಉಲ್ಲೇಖನಾರ್ಹವೂ ಜನಜನಿತವೂ ಆದ ವಾಸ್ತವ ಸಂಗತಿ. ಸಂಚುಕೂಟಗಳು ಮತ್ತು ಪಕ್ಷಗಳಾಗಿ ಅದು ವಿಭಜನೆಗೊಂಡದ್ದು ಹಾಗೂ ತತ್ತ್ವಗಳಿಗಿಂತ ಮಿಗಿಲಾಗಿ ವ್ಯಕ್ತಿಗಳನ್ನು ಅನುಸರಿಸುವ ಅದರ ಕೆಟ್ಟ ರೀತಿ– ಇವು ಶಾಸನ ಸಭೆಯನ್ನು ಎಷ್ಟರಮಟ್ಟಿಗೆ ಕಾರ್ಯಾಂಗದ ಕೈಗೊಂಬೆಯನ್ನಾಗಿ ಮಾಡಿದವೆಂದರೆ ಒಟ್ಟಿನಲ್ಲಿ ಅಧಿಕಾರವನ್ನು ಜನಪ್ರಿಯವಾಗಿರುವ ಯಾವುದೇ ಸದನ ನಿರ್ವಹಿಸಬೇಕೆಂದು ತಾವು ನಿರೀಕ್ಷಿಸುವಂಥ ಆಯ್ದ ಕೆಲವು ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ಕೂಡ ಸದನ ವಿಫಲಗೊಂಡಿತು. ಯಾವುದೇ ಜನಪ್ರಿಯ ಸದನದ ವಿಷಯದೊಂದಿಗೆ ವ್ಯವಹರಿಸುವಲ್ಲಿ ಸಾಕಷ್ಟು ಜಾಣ್ಮೆ, ತತ್‌ಕ್ಷಣ ಉತ್ತರಿಸುವ ಶಕ್ತಿ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಸಾಮಾಜಿಕ ಹಾಗೂ ಆರ್ಥಿಕ ಪುರೋಭಿವೃದ್ಧಿಯ ಯುಕ್ತ ಕಾರ್ಯನೀತಿಯ ಆಧಾರವನ್ನು ರೂಪಿಸಲು ಅಗತ್ಯವಾಗಿರುವ ನಿಶ್ಚಿತದೃಷ್ಟಿ– ಇವುಗಳನ್ನು ಯಾವುದೇ ಸದಸ್ಯ ತೋರಿಸದ ಹೊರತು ಅವನು ಅಧಿಕಾರಕ್ಕಾಗಿ ಉಮೇದುವಾರನಾಗುವುದನ್ನು ಸದನವು ಸಹಿಸುವುದಿಲ್ಲ. ಸಚಿವ ಸಂಪುಟದ ಅಧಿಕಾರವು ಸಾಧ್ಯವಿರುವಷ್ಟೂ ಸಂಪೂರ್ಣವಾಗಿರುವ ಇಂಗ್ಲೆಂಡಿನಲ್ಲಿ ಕೂಡ, ಸರ್ಕಾರದ ಅಧೀನ ಕಛೇರಿಗಳಿಗೆ ನೌಕರರನ್ನು ಭರ್ತಿಮಾಡಿಕೊಳ್ಳುವಲ್ಲಿ ಯಾವುದೇ ಪ್ರಧಾನ ಮಂತ್ರಿಯೂ ಪ್ರಜಾಪ್ರತಿನಿಧಿ ಸಭೆಯ (House of Commons) ಮೆಚ್ಚುಗೆಗೆ ಅರ್ಹನೆಂದು

ತೋರಿಸಿಕೊಳ್ಳದ ಮಂದಿಯನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ. ಬಾಂಬೆಯ ವಿಧಾನಪರಿಷತ್ತು ಈ ವಿಷಯದಲ್ಲಿ ಅಶಕ್ತವಾಯಿತು. ಫಲಿತಾಂಶವಾಗಿ ರಾಜಕೀಯ ಕಛೇರಿಗಳಿಗಾಗಿ ಯಾವಾಗಲೂ ಲಭ್ಯವಿರುವ ಶ್ರೇಷ್ಠ ಜನರು ಆಯ್ಕೆಯಾಗುತ್ತಿರಲಿಲ್ಲ. ಆದರೆ ಸುವ್ಯವಸ್ಥಿತವಾದ ಸಮಿತಿ ಕಾರ್ಯಾಂಗದ ಮೇಲೆ ತನ್ನ ಸಂಕಲ್ಪ ವನ್ನು ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಹೇರಿದೆ ಎಂದು ಭಾವಿಸುವುದಾದಲ್ಲಿ ಫಲಿತಾಂಶವಾಗಿ, ರಾಜಕೀಯ ಕಛೇರಿಗಳಿಗಾಗಿ ಮಾಡುವ ಆಯ್ಕೆಯಲ್ಲಿ ಯಾವಾಗಲೂ ಲಭ್ಯವಿರುವ ಶ್ರೇಷ್ಠ ಜನರು ಇರುತ್ತಿರಲಿಲ್ಲ. ಆದರೆ ಸುವ್ಯವಸ್ಥಿತವಾದ ಸಮಿತಿ, ಕಾರ್ಯಾಂಗದ ಮೇಲೆ ತನ್ನ ಸಂಕಲ್ಪವನ್ನು ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಹೇರಿದೆ ಎಂದು ಭಾವಿಸುವುದಾದಲ್ಲಿ ಫಲಿತಾಂಶವೇನಾಗುತ್ತದೆ? ಅದು ದ್ವಂದ್ವ ಸರ್ಕಾರವನ್ನು ಜವಾಬ್ದಾರಿ ರೂಪಕ್ಕೆ ತರುತ್ತದೆಯೆ? ಪ್ರಶ್ನೆಗೆ ನನ್ನ ಉತ್ತರ ಸ್ಪಷ್ಟವಾಗಿ ನಕಾರಾತ್ಮಕವಾಗಿರುತ್ತದೆ. ಏಕೆಂದರೆ ಕಾರ್ಯಾಂಗಕ್ಕೆ ವಿರೋಧವಾಗಿ ಶಾಸಕಾಂಗ ಕೈಗೊಳ್ಳುವ ಯಾವುದೇ ಪರಿಣಾಮಕಾರಿ ಕ್ರಿಯೆಯಿಂದ ಒಂದೇ ಒಂದು ಫಲಿತಾಂಶ ಉಂಟಾಗುವುದು ಸಾಧ್ಯ. ಇಂಥ ಸಂದರ್ಭ ಗಳಲ್ಲಿ ಶಾಸನದ ಅನ್ವಯ ತನಗೆ ನೀಡಲಾಗಿರುವ ರದ್ದುಪಡಿಸುವ ಅಥವಾ ಪ್ರಮಾಣೀಕರಿಸುವ ತುರ್ತು ಅಧಿಕಾರಗಳನ್ನು ಬಳಸಿಕೊಳ್ಳಲು ರಾಜ್ಯಪಾಲರಿಗೆ ಸಾಧ್ಯವಾಗುತ್ತದೆ ಅಷ್ಟೆ. ಶಾಸಕಾಂಗ ಕೈಗೊಂಡ ಸಶಕ್ತ ಕಾರ್ಯಾಚರಣೆಯ ಅನಿವಾರ್ಯ ಫಲವಿದು ಎಂಬ ಅಂಶ ಸಂವಿಧಾನವನ್ನು ರದ್ದುಪಡಿಸಲಾದಂಥ ಎಲ್ಲ ಸರಕಾರಗಳ ಸಂದರ್ಭದಲ್ಲಿಯೂ ಒಂದು ಪುರಾವೆಯಾಗಿರುತ್ತದೆ. ಆದರೆ ಇದನ್ನೊಪ್ಪುವುದೂ ಸಮಿತಿ ಸಂಪೂರ್ಣ ವ್ಯಾಪ್ತಿಯವರೆಗೆ ತನ್ನ ಅಧಿಕಾರವನ್ನು ಬಳಸದೆ ಇದ್ದ ಪಕ್ಷದಲ್ಲಿ ದ್ವಂದ್ವ ಸರ್ಕಾರವು ಭಿನ್ನ ಭಿನ್ನವಾಗಬೇಕು ಎಂದು ಒಪ್ಪುವುದೂ ಒಂದೇ ಆಗಿದೆ. ಆದ್ದರಿಂದ, ಯಾವುದೇ ಸಂದರ್ಭವಿರಲಿ, ದ್ವಂದ್ವ ಸರ್ಕಾರ ಸೋಲುವುದು ಸ್ಪಷ್ಟ. ಬಾಂಬೆ ಸರಕಾರದಲ್ಲಿಯಂತೆ ಇದು, ಶಾಸಕಾಂಗದ ನಿಷ್ಕ್ರಿಯತೆಯಿಂದಾಗಿ ಸೋಲುತ್ತದೆ. ಮಧ್ಯ ಪ್ರಾಂತಗಳಲ್ಲಿಯಂತೆ ಶಾಸಕಾಂಗದ ಕ್ರಿಯಾಶೀಲತೆಯಿಂದಾಗಿ ಕೂಡ ಇದು ಅಷ್ಟೇಮಟ್ಟಿಗೆ ಸೋಲುತ್ತದೆ. ಮೊದಲನೆಯ ಸಂದರ್ಭದಲ್ಲಿ, ಶಾಸಕಾಂಗದ ದೌರ್ಬಲ್ಯದ ಕಾರಣದಿಂದಾಗಿ ಕಾರ್ಯಾಂಗಕ್ಕೆ ಬೇಜವಾಬ್ದಾರಿಯಾಗಿ ವರ್ತಿಸುವ ಸ್ವಾತಂತ್ರ್ಯ ಸಿಗುತ್ತದೆ. ಎರಡನೆಯ ಸಂದರ್ಭದಲ್ಲಿ, ರಾಜ್ಯಪಾಲರು ಕಾರ್ಯಾಂಗವನ್ನು ಬೇಜವಾಬ್ದಾರಿಯಾಗಿ ಬಳಸುವ ಹಾಗೆ ಶಾಸಕಾಂಗವೇ ಬಲವಂತ ಮಾಡುತ್ತದೆ.

(೧೪) ೫೨(೩)ನೇ ಪ್ರಕರಣದ ಅವಕಾಶಗಳಿಗನುಗುಣವಾಗಿ, ಹಾಗೂ ಸಂಯುಕ್ತ ಸಂಸತ್ ಸಮಿತಿಯ ಸೂಚನೆಯಂತೆ ರಾಜ್ಯಪಾಲರು ತಮ್ಮನ್ನೇ ಸಂವಿಧಾನಾತ್ಮಕ ಮುಖ್ಯಸ್ಥರನ್ನಾಗಿ (Constitutional Head) ಆರಿಸಿಕೊಂಡ ಪಕ್ಷದಲ್ಲಿ ದ್ವಂದ್ವ ಸರ್ಕಾರವು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಬಹುದಾಗಿತ್ತು ಎಂದು ಅನೇಕರು ಸೂಚಿಸಿದ್ದಾರೆ. ನಾನು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಮೊತ್ತ ಮೊದಲನೆಯದಾಗಿ ರಾಜ್ಯಪಾಲರು ಸಂವಿಧಾನಾತ್ಮಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸತಕ್ಕದ್ದು ಎಂಬ ವಾದಾಂಶವನ್ನು ಬೆಂಬಲಿಸುವಂತಹ ವಾಸ್ತವಾಂಶಗಳಿಗೆ ಯಾವುದೇ ಆಧಾರವಿಲ್ಲ. ದ್ವಂದ್ವ ಸರ್ಕಾರವನ್ನು ಜವಾಬ್ದಾರಿ ಸರ್ಕಾರವೆಂದೇ ಆಯ್ಕೆ ಮಾಡಲಾಗಿದ್ದರೂ ಸಚಿವರೊಂದಿಗೆ ಇರುವ ಸಂಬಂಧದಲ್ಲಿ ರಾಜ್ಯಪಾಲರು ಸಂವಿಧಾನಾತ್ಮಕ ಮುಖ್ಯಸ್ಥರಾಗಬೇಕಾಗಿತ್ತು ಎಂಬ ಸೂಚನೆಯನ್ನು ಕೆಲವು ಸಲ ಮರೆತುಬಿಡಲಾಗಿದೆ. ರಾಜ್ಯಪಾಲರ ಸ್ಥಾನವನ್ನು ಆ ಮಟ್ಟಕ್ಕೆ ಇಳಿಸಬಾರದಾಗಿತ್ತು ಎಂಬುದನ್ನು ಸಂಯುಕ್ತ ವರದಿಯೂ ಸ್ಪಷ್ಟ ಪಡಿಸಿದೆ. ಸದರಿ ವರದಿಯಲ್ಲೆ ಹೇಳಲಾದಂತೆ "ತನ್ನ ಸಚಿವರುಗಳ ತೀರ್ಮಾನಗಳನ್ನು ಒಪ್ಪಲೇಬೇಕಾದ ಸಂಪೂರ್ಣವಾಗಿ ಸಂವಿಧಾನಾತ್ಮಕವಾದ, ರಾಜ್ಯಪಾಲರ ಸ್ಥಾನವನ್ನು ರಾಜ್ಯಪಾಲರು ಪ್ರಾರಂಭದಿಂದಲೇ

ಆಕ್ರಮಿಸಬೇಕು ಎಂದೇನೂ ನಾವು ಭಾವಿಸುವುದಿಲ್ಲ. ತಮ್ಮ ಆಡಳಿತದ ವಿಚಾರದಲ್ಲಿ ಅವರು ಸಾಮಾನ್ಯ ಜವಾಬ್ದಾರಿ ಹೊಂದಿರುತ್ತಾರೆಂದು ಭಾವಿಸುವುದರಿಂದ ಅಧಿಕಾರ ನಡೆಸುವ ಹಕ್ಕನ್ನು ಅವರಿಗಾಗಿ ನಾವು ಕಾಯ್ದಿರಿಸಿದ್ದೇವೆ." ಅವರು ಸಂವಿಧಾನಾತ್ಮಕ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸತಕ್ಕದ್ದೆಂದು ಕೂಡ ಸಂಯುಕ್ತ ಸಂಸತ್ ಸಮಿತಿ ಶಿಫಾರಸ್ ಮಾಡಿಲ್ಲ. ತನ್ನ ವರದಿಯ ಐದನೆಯ ಪ್ಯಾರಾದಲ್ಲಿ ರಾಜ್ಯಪಾಲರು ಸಚಿವರುಗಳಿಗೆ ಸಹಾಯ–ಮಾರ್ಗದರ್ಶನಗಳನ್ನು ಮಾಡುವವರೆಂದೂ ಸಚಿವರುಗಳ ಸಲಹೆ–ಸೂಚನೆಗಳನ್ನು ಅಂಗೀಕರಿಸಿ ರಾಜ್ಯಪಾಲರು ಸಾಧ್ಯವಾದಾಗಲೆಲ್ಲ ಅವರ ಕಾರ್ಯನೀತಿಯನ್ನು ಬೆಂಬಲಿಸುವವರೆಂದು ಸಮಿತಿ ಸ್ಪಷ್ಟವಾಗಿ ನಿರೂಪಿಸಿದೆ. ರಾಜ್ಯಪಾಲರು ಸಂವಿಧಾನಾತ್ಮಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಬೇಕೆಂದು ಸಮಿತಿ ಬಯಸುತ್ತದೆ ಎಂಬ ಅಭಿಪ್ರಾಯಕ್ಕಿಂತ ಇದು ತೀರಾ ಭಿನ್ನವಾಗಿದೆ. ನಿಜವಾಗಿಯೂ ಇಂಥದೊಂದು ಉದ್ದೇಶ, ಶಾಸನದ ಅವಕಾಶಗಳಿಗೆ ಹೊಂದುವುದಿಲ್ಲ. ಈ ಶಾಸನದ ಅಡಿ ರಾಜ್ಯಪಾಲರ ನಿರಂಕುಶಾಧಿಕಾರಗಳನ್ನು ಸ್ಪಷ್ಟವಾಗಿ ಕಾಯ್ದಿರಿಸಲಾಗಿದೆ. ಹಾಗೂ ಸಂಯುಕ್ತ ವರದಿಯಲ್ಲಾಗಲಿ, ಸಮಿತಿಯ ವರದಿಯಲ್ಲಾಗಲಿ, ಹೇಳಲಾದ ಯಾವುದೇ ಅಂಶವೂ ಶಾಸನದ ಅವಕಾಶಗಳ ಬಳಕೆಯನ್ನು ತಳ್ಳಿಹಾಕುವುದಿಲ್ಲ. ಏಕೆಂದರೆ ರಾಜ್ಯಪಾಲರು ಸ್ವತಃ ಆಡಳಿತ ನಡೆಸಿದರೆ ಮತ್ತು ತನ್ನ ಮುಖಾಂತರ ಆಡಳಿತ ನಡೆಸುವ ಅವಕಾಶವನ್ನು ಸಚಿವರುಗಳಿಗೆ ನೀಡದೆ ಇದ್ದರೆ, ಅದು ಅವರ ತಪ್ಪಲ್ಲ. ಆದರೆ, ರಾಜ್ಯಪಾಲರು ಸಂವಿಧಾನಾತ್ಮಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಬೇಕಾಗಿತ್ತು ಎಂದು ಒಪ್ಪಿಕೊಂಡ ಪಕ್ಷದಲ್ಲಿ ಇದು, ದ್ವಂದ್ವ ಸರ್ಕಾರವನ್ನು ಬೇಜವಾಬ್ದಾರಿ ಸರ್ಕಾರದಂತೆ ಕಾರ್ಯ ನಿರ್ವಹಿಸುವ ಹಾಗೆ ಮಾಡುತ್ತದೆಯೆ ಎಂಬ ಪ್ರಶ್ನೆ ಮತ್ತೆ ಏಳುತ್ತದೆ. ಈ ಪ್ರಶ್ನೆಗೂ ನನ್ನ ಉತ್ತರ ನಕಾರಾತ್ಮಕವಾಗಿದೆ. ಏಕೆಂದರೆ ಇಂಥದೊಂದು ಸನ್ನಿವೇಶವನ್ನು ಕುರಿತ ನನ್ನ ಅನಿಸಿಕೆಯಂತೆ, ನೀವು ರಾಜ್ಯಪಾಲರ ಅಧಿಕಾರವನ್ನು ಕಸಿದುಕೊಂಡರೆ, ಮತ್ತು ಅವರನ್ನು ಸಂವಿಧಾನಾತ್ಮಕ ಮುಖ್ಯಸ್ಥರನ್ನಾಗಿ ಮಾಡಿದರೆ, ಪರಿಣಾಮವಾಗಿ ಸರ್ಕಾರದ ಕಾಯ್ದಿರಿಸಿದ ಅಂಗವನ್ನು ನೀವು ಜನಪ್ರಿಯ ಚುನಾಯಿತ ಶಾಸನಸಭೆಯ ಆಕ್ರಮಣಕ್ಕೆ ಒಡ್ಡಿದಂತಾಗುತ್ತದೆ. ರಕ್ಷಣೆಯೇ ಇಲ್ಲವಾದ ಕಾಯ್ದಿರಿಸಿದ ಈ ಅಂಗವು ಅಪಾಯದಿಂದ ತಪ್ಪಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಸಮಿತಿಯ ಇಷ್ಟಕ್ಕೆ ಅನುಸಾರವಾದ ಆಳ್ವಿಕೆಗೆ ಒಳಪಡಲು ಒಪ್ಪುವುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ರಾಜ್ಯಪಾಲರು ದುಡುಕಿ ಕಾರ್ಯ ನಿರ್ವಹಿಸುವುದರ ವಿರುದ್ಧವಾಗಿ, ಸಚಿವರುಗಳಿಗೆ ನೀವು ರಕ್ಷಣೆ ಕೊಡುವುದಾದರೆ ಆಗ ಕಾಯ್ದಿರಿಸಿದ ಅಂಗದಲ್ಲಿಯೇ ಅವರನ್ನು ಕುಳ್ಳಿರಿಸುವುದರ ಹೊರತಾಗಿ ನಿಮಗೆ ಇನ್ನಾವುದೇ ಬದಲಿ ಮಾರ್ಗವಿರುವುದಿಲ್ಲ. ಆದರೆ ರಾಜ್ಯಪಾಲರ ಸ್ಥಾನಮಾನಗಳನ್ನು ಸಂವಿಧಾನಾತ್ಮಕ ಮುಖ್ಯಸ್ಥನ ಸ್ಥಾನಮಾನಗಳಿಗೆ ಇಳಿಸುವುದೇ ಅಪೇಕ್ಷೆಯಾಗಿದ್ದರೆ, ಇದು ನೀವು ಮೊದಲು ದ್ವಂದ್ವ ಸರ್ಕಾರವನ್ನು ಕೊನೆಗೊಳಿಸಬೇಕೆಂದು ಹೇಳುವ ಇನ್ನೊಂದು ರೀತಿಯಷ್ಟೇ ಆಗಿದೆ.

(೧೫) ಕೆಲವು ನಿರ್ದಿಷ್ಟ ಅಂಶಗಳಿಂದಾಗಿ, ದ್ವಂದ್ವ ಸರ್ಕಾರ ಕಾರ್ಯ ಸಮರ್ಥವಲ್ಲದ ಒಂದು ಪದ್ಧತಿಯಾಗಿಲ್ಲ ಎಂಬ ಅಭಿಪ್ರಾಯದ ವಿರುದ್ಧವಾಗಿ ಹಾಗೂ ಅದರಲ್ಲಿ ಅಂತರ್ಗತವಾಗಿರುವ ಕೆಲವು ನ್ಯೂನತೆಗಳಿಂದಾಗಿ, ಅದು ಕಾರ್ಯ ಸಮರ್ಥವಾಗಿಲ್ಲವಷ್ಟೇ ಅಲ್ಲ. ಜವಾಬ್ದಾರಿ ಸರ್ಕಾರವಾಗಿ ಕಾರ್ಯ ನಿರ್ವಹಿಸಲು ಕೂಡ ಅದು ಅಸಮರ್ಥವಾಗಿರುತ್ತದೆ ಎಂಬ ಅಭಿಪ್ರಾಯಕ್ಕೆ ಬೆಂಬಲವಾಗಿ ನಾನು ಈವರೆಗೂ ವಾದ ಮಾಡಿದ್ದೇನೆ. ಸಂಪೂರ್ಣವಾಗಿ ದ್ವಯಾಡಳಿತ ಪದ್ಧತಿಯಿಂದ ಕೂಡಿದ ಈ ದ್ವಂದ್ವ ಸರ್ಕಾರ, ವಾಸ್ತವವಾಗಿ ಪ್ರತ್ಯೇಕವಾದ ಎರಡು ಸರ್ಕಾರಗಳು ಮತ್ತು ಶಾಸಕಾಂಗಗಳ ಕಾರ್ಯಗಳನ್ನು ಹೊಂದಿದೆ. ಒಂದನೆಯದರಲ್ಲಿ ಶಾಸಕಾಂಗವು, ಕಾರ್ಯಾಂಗಕ್ಕೆ ಅಧೀನವಾಗಿದ್ದರೆ, ಎರಡನೆಯದರಲ್ಲಿ

ಕಾರ್ಯಾಂಗವೇ ಶಾಸಕಾಂಗದ ಅಧೀನದಲ್ಲಿರುತ್ತದೆ. ಹೀಗೆ ಹೇಳುವಲ್ಲಿ, ಸದ್ಯ ಜಾರಿಯಲ್ಲಿರುವಂಥ ದ್ವಯಾಡಳಿತ ಪದ್ಧತಿಯಿಂದ ಕೂಡಿದ ದ್ವಂದ್ವ ಸರ್ಕಾರಕ್ಕೊಂದು ಬದಲಿಯಿರುವುದೆಂಬ ಅಭಿಪ್ರಾಯವನ್ನು ಭಾರತ ಸರ್ಕಾರ ೧೯೧೯ರಲ್ಲಿ ತಳ್ಳಿಹಾಕಿದೆ. ಮಾರ್ಲೆಮಿಂಟೊ ಸುಧಾರಣೆಗಳನ್ವಯ ಸ್ಥಾಪಿತವಾದ ಹಾಗೂ ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ್ ವರದಿಯಲ್ಲಿದ್ದಂತೆ ಎಂದೂ ದನಿಯೆತ್ತಿ ಒತ್ತಾಯ ಮಾಡದೆ ಇರುವ, ಸರ್ಕಾರದ ಪದ್ಧತಿಯ ಸಂದರ್ಭದಲ್ಲಿ ಮಾಡುವಂಥ ಆಕ್ಷೇಪಣೆಗಳನ್ನು ಈ ಸರ್ಕಾರಕ್ಕೆ ಸಂಬಂಧಿಸಿದಂತೆಯೂ ಮಾಡಬಹುದಾಗಿದೆ. ಭಾರತದಲ್ಲಿ ರಾಜಕೀಯ ಜೀವನ ವಿಕಾಸಗೊಳ್ಳುತ್ತಿರುವ ಈ ಹಂತದಲ್ಲಿ ಇಂಥದೊಂದು ಪದ್ಧತಿಗೆ ಆಧಾರ ನೀಡುವ ಬಗ್ಗೆ ನಾನೇನೂ ಹೇಳಹೋಗುವುದಿಲ್ಲ. ದ್ವಂದ್ವ ಸರ್ಕಾರವನ್ನು ಮುಂದುವರಿಸದೆ ಇರುವುದು ಮತ್ತು ಎಲ್ಲ ವಿಷಯಗಳನ್ನು ಸಚಿವರುಗಳ ನಿಯಂತ್ರಣಕ್ಕೆ ಒಳಪಡಿಸುವುದು. ಇದೊಂದೇ ಉಳಿದಿರುವ ಏಕೈಕ ಮಾರ್ಗ.

(೧೬) ದ್ವಂದ್ವ ಸರ್ಕಾರ ಮುಂದುವರಿಯುವುದಕ್ಕೆ ತಮ್ಮ ಒಪ್ಪಿಗೆ ನೀಡಿದ ನನ್ನ ಸಹೋದ್ಯೋಗಿಗಳ ಶಿಫಾರಸುಗಳನ್ನು ವಿರೋಧಿಸಲು ಇರುವ ಸಾಮಾನ್ಯ ಕಾರಣಗಳನ್ನು ಈವರೆಗೆ ನಾನು ತಿಳಿಸಿದ್ದೇನೆ. ಕಾನೂನು ಮತ್ತು ಸುವ್ಯವಸ್ಥೆ ಎಂಬ ಈ ನಿರ್ದಿಷ್ಟ ವಿಷಯವನ್ನು, ಕಾಯ್ದಿರಿಸಿದ ವಿಷಯವಾಗಿಯೇ ಮುಂದುವರಿಸುವುದನ್ನು ವಿರೋಧಿಸಲು ನನಗಿರುವ ಕಾರಣಗಳನ್ನು ಈಗ ಹೇಳುತ್ತೇನೆ. ಕಾನೂನು–ಸುವ್ಯವಸ್ಥೆಗಳನ್ನು ಸಚಿವರ ಉಸ್ತುವಾರಿಗೆ ವರ್ಗಾಯಿಸುವುದನ್ನು ವಿರೋಧಿಸಲು ಇರುವ ಮುಖ್ಯ ಕಾರಣ ಇದು. ಮತದಾರ ಸಮುದಾಯಗಳ ಅಪೇಕ್ಷೆಗಳಿಗೆ ಬದ್ಧನಾಗಿರುವುದರಿಂದ ಹಾಗೂ ಸಮಿತಿಯ ಒಂದೇ ಒಂದು ವಿರೋಧಮತದಿಂದ ಸ್ಥಾನ ಕಳೆದುಕೊಳ್ಳುವ ಸಾಧ್ಯತೆಯಿರುವುದರಿಂದ ವಿಭಾಗದ ಆಡಳಿತವನ್ನು ನಿಷ್ಪಕ್ಷಪಾತವಾಗಿ ನಡೆಸಲು ಸಚಿವನಿಗೆ ಸಾಧ್ಯವಾಗುವುದಿಲ್ಲ. ವಿಭಾಗದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸ್ಥಾನಮಾನಗಳು ತೋರ್ಕೆಯವಾಗಿರುತ್ತವೆ ಎಂಬುದು ಇಂಥ ಸನ್ನಿವೇಶದ ಅನಿವಾರ್ಯ ಪರಿಣಾಮವೆಂದೂ ಭಯಪಡಲಾಗಿದೆ. ತಮ್ಮನ್ನು ಯಾವಾಗ ಬೆಂಬಲಿಸುತ್ತಾರೆ ಮತ್ತು ಯಾವಾಗ ಆಕ್ಷೇಪಿಸುತ್ತಾರೆ ಎಂದು ತಿಳಿಯಲು ಸಾಧ್ಯವಾಗದ ಅನಿಶ್ಚಿತತೆಯಿಂದಾಗಿ ನೌಕರರ ಕಾರ್ಯ ನಿರ್ವಹಣೆ ಕುಂಟುತ್ತದೆ. ಪರಿಣಾಮವಾಗಿ, ಶಾಂತಿ ಹಾಗೂ ಒಳ್ಳೆಯ ಆಡಳಿತ ಪದ್ಧತಿಗಳ ಮೇಲೆ ಗಂಭೀರ ದುಷ್ಪರಿಣಾಮಗಳುಂಟಾಗುತ್ತವೆ. ಈಚೆಗೆ ತುಂಬ ಸಾಮಾನ್ಯವಾಗಿರುವ ಹಿಂದೂ–ಮುಸ್ಲಿಮ್ ಗಲಭೆಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಅಭಿಪ್ರಾಯದ ಸ್ವೇಚ್ಛಾವರ್ತನೆಗೆ ಒಳಪಟ್ಟಂತಹ ಹಾಗೂ ಹಿಂದೂ ಅಥವಾ ಮುಸ್ಲಿಮ್ ಕೋಮುವಾರು ಪೂರ್ವಾಗ್ರಹಗಳಿಗೆ ಈಡಾಗಿ ಗೊಂದಲಕ್ಕೆ ಒಳಪಡಬಹುದಾದಂಥ ಸಚಿವರ ನಿಯಂತ್ರಣಕ್ಕೆ ಕಾನೂನು ಮತ್ತು ಸುವ್ಯವಸ್ಥೆಗಳ ವಿಷಯವನ್ನು ನಾವು ವರ್ಗಾಯಿಸಲೇಬಾರದು.

(೧೭) ಯಥಾರ್ಥವಾಗಿ ಹೇಳುವುದೇ ಆದಲ್ಲಿ ನನ್ನ ಸಹೋದ್ಯೋಗಿಗಳು ಈ ವಾದದಿಂದ ಸಾಕಷ್ಟು ಪ್ರಭಾವಗೊಂಡಂತೆ ಕಾಣುವರಾದರೂ ನನ್ನ ಮೇಲೆ ಇದರಿಂದ ಯಾವುದೇ ಪ್ರಭಾವವೂ ಉಂಟಾಗಿಲ್ಲ. ಇದು ಪರವಾದ ಒಂದು ಪ್ರಬಲ ವಾದವಾಗಿರುತ್ತದೆ. ಈ ವಾದದ ಮಹತ್ವವನ್ನು ಒಪ್ಪುವುದೆಂದರೆ ಸರ್ಕಾರವು ಉತ್ಕೃಷ್ಟ ಸರ್ಕಾರವೆಂದು ಒಪ್ಪುವುದೇ ಆಗಿರುತ್ತದೆ. ದುರದೃಷ್ಟವಶಾತ್ ಭಾರತದಲ್ಲಿ ಜನರು ಎಷ್ಟು ಸಮಯದಿಂದ ನೌಕರಶಾಹಿ ಸರ್ಕಾರದ ಬಗ್ಗೆ ತಿಳಿದಿದ್ದಾರೆಂದರೆ ಇಂಥ ಯಾವುದೇ ವಾದದಿಂದ ಅವರನ್ನು ವಂಚಿಸುವುದು ಸಾಧ್ಯವಿಲ್ಲ. ಈ ವಾದವನ್ನು ಒಪ್ಪುವುದೆಂದರೆ ಎಲ್ಲ ರೀತಿಯ ಜವಾಬ್ದಾರಿ ಸರ್ಕಾರಗಳನ್ನು ನಿರಾಕರಿಸಿದಂತೆ ಎಂದರೆ ಅದೇನೂ ಅಸಂಬದ್ಧ ಹೇಳಿಕೆಯಾಗದು. ಇದರ ಪೂರ್ವ ನಿದರ್ಶನಗಳೇನೇ ಇರಲಿ, ಭಾರತದಲ್ಲಿ ಜವಾಬ್ದಾರಿ ಸರ್ಕಾರ ಅನುಷ್ಠಾನಕ್ಕೆ

ಬಂದಿದೆಯೆಂಬುದನ್ನು ಗುರುತಿಸಲೇಬೇಕು. ಕಾಲವು ತನ್ನೊಂದಿಗೆ ತರುವ ಯಾವುದೇ ಬದಲಾವಣೆಯೂ ಈ ಸಿದ್ಧಾಂತವನ್ನು ವಿಸ್ತರಿಸುವ ದಿಸೆಯಲ್ಲಿಯೇ ಇರಬೇಕಾಗಿದೆ. ಆದ್ದರಿಂದ ಈ ಮೂಲ ಸಿದ್ಧಾಂತವನ್ನು ವಿಸ್ತರಿಸುವಲ್ಲಿ ಅಡಚಣೆಯೊಡ್ಡುವ ಯಾವುದೇ ಯೋಜನೆಯಿರಲಿ, ಅದು ಸರ್ಕಾರ ಹಾಗೂ ಪ್ರಜೆಗಳ ನಡುವಣ ತೀವ್ರ ಘರ್ಷಣೆಗೆ ಕಾರಣವಾಗುತ್ತದೆ. ನೌಕರಶಾಹಿ ಸರ್ಕಾರದ ಪರವಾಗಿ ಬೆಂಬಲ ನೀಡುವುದರ ಮೂಲಕ ಇಂಥದೊಂದು ಘರ್ಷಣೆಗೆ ನಾವು ಏಕೆ ಅವಕಾಶ ಮಾಡಿಕೊಡಬೇಕೆಂಬುದಕ್ಕೆ ಯಾವುದೇ ಆಧಾರವಿಲ್ಲವೆಂದು ನನಗೆ ತೋರುತ್ತದೆ. ಏಕೆಂದರೆ ನನ್ನ ಅಭಿಪ್ರಾಯದಲ್ಲಿ, ಸಚಿವರುಗಳು ಸದನದಲ್ಲಿ ತಮ್ಮ ಅನುಯಾಯಿಗಳ ತಗಾದೆಗೆ ತುತ್ತಾಗುತ್ತಾರೆ ಅಥವಾ ಅವರ ಅನುಯಾಯಿಯಾಗಲು ಕೇಡೆಣಿಸುವ ಮನೋಭಾವನೆಯನ್ನು ಹೊಂದಿರುತ್ತಾರೆ ಎಂಬ ಭಯಕ್ಕೆ ಯಾವುದೇ ಅನುಭವದ ಆಧಾರವಿಲ್ಲ. ಈಗಿರುವಮಟ್ಟಿಗೆ ಸಚಿವರುಗಳಿಗೆ ತುಂಬ ಅನ್ಯಾಯವಾಗಿದೆ.

೧೯೨೨ರಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಾಬಲ್ಯ ಉಚ್ಚಾವಸ್ಥೆಯಲ್ಲಿದ್ದಾಗ ಅಸಹಕಾರ ಚಳವಳಿ ನಡೆಸುತ್ತಿರುವವರು ಸ್ವಾಧೀನಪಡಿಸಿಕೊಂಡಂಥ ಸ್ಥಳೀಯ ಮಂಡಳಿಗಳು ಹಾಗೂ ಪುರಸಭೆಗಳನ್ನು ವಜಾ ಮಾಡಿದ ಘಟನೆಯಿಂದ ಅಗತ್ಯವೆನಿಸಿದಾಗ ಸಚಿವರುಗಳು ಮತದಾರ ಸಮುದಾಯಗಳ ಅಪೇಕ್ಷೆಗಳನ್ನು ಪರಿಗಣಿಸದೆ, ಕಾರ್ಯ ನಿರ್ವಹಿಸುವರೆಂದು ನಂಬಿಕೆ ನಮ್ಮಲ್ಲಿ ಮೂಡಿತು. ಬಾಂಬೆ ವಿಧಾನ ಪರಿಷತ್ತು, ಜವಾಬ್ದಾರಿ ಪ್ರಜ್ಞೆಯೊಂದಿಗೆ ಮೂಡುವ ಅಗತ್ಯವಾದ ನಿಯಂತ್ರಣ ಬಳಸಿ ದೃಢವಾಗಿ ಕಾರ್ಯ ನಿರ್ವಹಿಸಿದ್ದನ್ನು ಸರ್ಕಾರದ ಸದಸ್ಯರು ದೃಢಪಡಿಸಿರುವುದು ನನಗೆ ಖಚಿತವಾಗಿದೆ. ಆದರೆ ಕೋಮುವಾರು ಭಾವನೆ ಹಾಗೂ ಕೋಮು ಘರ್ಷಣೆಗಳ ಸನ್ನಿವೇಶದಲ್ಲಿ ಸದನ ಕ್ಷೋಭೆಗೊಳ್ಳದೆ ಉಳಿಯಲಾರದು ಎಂದು ಒಪ್ಪುವಂತೆ ಒಬ್ಬನನ್ನು ನಿರ್ಬಂಧಪಡಿಸಿದ ಪಕ್ಷದಲ್ಲಿ ಕೂಡ, ಇದು ವರ್ಗಾವಣೆಯ ವಿರುದ್ಧವಾದ ವಾದವಾಗುವುದಿಲ್ಲ. ಏಕೆಂದರೆ ಇತರರನ್ನು ಕುರಿತು ತನ್ನ ಮನೋಭಾವನೆಯೇನೇ ಇರಲಿ, ಶಾಂತಿ ಮತ್ತು ಸದ್ಭಾವನೆಗಳ ಪಾಲನೆಗೆ ಧಕ್ಕೆಯೊದಗುವಂತೆ ಮಾಡುವ ಬೇಜವಾಬ್ದಾರಿ ನಡತೆಗಳಲ್ಲಿ ತೊಡಗುವಂತೆ ವಿಶ್ವಾಸಾರ್ಹ ಪ್ರತಿನಿಧಿಗಳನ್ನು ಪ್ರಚೋದಿಸುತ್ತಿರುವ ದೊಂಬಿಯ ಕಾಲದಲ್ಲಿ, ಯಾವುದೇ ಸಮುದಾಯವೂ ಯಾವುದೇ ಪಟ್ಟಭದ್ರ ಹಿತಾಸಕ್ತಿಗಳನ್ನು ಹೊಂದಿರುವುದಿಲ್ಲ ಎಂದು ಉತ್ತರಿಸಬಹುದು. ಆದ್ದರಿಂದ ಕಾನೂನು ಮತ್ತು ಸುವ್ಯವಸ್ಥೆಗಳನ್ನು ಕಾಯ್ದಿರಿಸಿದ ವಿಷಯವನ್ನಾಗಿ ಇರಿಸಬೇಕೆಂಬ ಅಭಿಪ್ರಾಯವನ್ನು ಬೆಂಬಲಿಸುವವರ ಮನಸ್ಸಿನಲ್ಲಿರುವ ಭಯಕ್ಕೆ ಯಾವುದೇ ಕಾರಣವೂ ಇಲ್ಲ. ವರ್ಗಾವಣೆಗೆ ಶಿಫಾರಸ್ ಮಾಡದೆ ಇರುವ ನನ್ನ ಸಹೋದ್ಯೋಗಿಗಳು ತುಂಬಾ ಮುಂಜಾಗರೂಕತೆಯಿಂದ ಕೂಡಿದ ಮಾರ್ಗವನ್ನು ಅನುಸರಿಸಿರುವುದರಲ್ಲಿ ಸಂದೇಹವಿಲ್ಲ. ಆದರೆ, ಈ ಕಾರಣವಾಗಿ ಅವರು ತುಂಬ ಜಾಣತನದ ಹಾದಿ ಹಿಡಿದಿದ್ದಾರೆ ಎಂದು ನನಗನಿಸುವುದಿಲ್ಲ. ಏಕೆಂದರೆ ಭಯವೂ ನಿಜವಾದದ್ದೇ ಅಲ್ಲವೇ ಎಂಬುದನ್ನು ಕಂಡುಹಿಡಿಯಲು ಕೈಗೊಳ್ಳಬೇಕೆಂದು ಜಾಣರು ಒತ್ತಾಯಿಸುವ ಪ್ರಯೋಗ ಮಾಡಲು ಇರುವ ಸ್ವಾತಂತ್ರ್ಯಕ್ಕೆ ಅಡಚಣೆಯನ್ನುಂಟುಮಾಡುವ ಸಂಗತಿಯೂ ಒಂದುಂಟು. ಕಾನೂನು ಮತ್ತು ಸುವ್ಯವಸ್ಥೆ ವಿಷಯವನ್ನು ವರ್ಗಾಯಿಸುವುದರ ವಿರುದ್ಧವಾಗಿ ಈಗ ಉಂಟಾದ ನಿರಾಧಾರವಾದ ಭಯವೇ ೧೯೧೯ರಲ್ಲಿ ಸಚಿವರುಗಳ ಹತೋಟಿಗೆ ಈಗ ಕೊಡಲಾದ ವಿಷಯಗಳನ್ನು ವರ್ಗಾಯಿಸುವ ವಿರೋಧವಾಗಿಯೂ ಉಂಟಾಗಿತ್ತು. ಆದರೆ, ಅಪಾಯಕರ ಕೆಲಸದಲ್ಲಿ ದಿಢೀರನೆ ಪ್ರವೇಶಿಸಲು ಪರಸ್ಪರ ಒಪ್ಪಿದ್ದ ಸೆಕ್ರೆಟರಿ ಆಫ್ ಸ್ಟೇಟ್ಸ್ ಹಾಗೂ ಭಾರತ ಸರ್ಕಾರಗಳು

ಈ ಭೀತಿಗಳೆಲ್ಲವನ್ನು ಕಡೆಗಣಿಸಿದರು. ಕಾನೂನು–ಸುವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ನಾನು ಅದೇ ದಾರಿಯನ್ನು ಅನುಸರಿಸಲು ಇಷ್ಟಪಡುತ್ತೇನೆ.

(೧೮) ಆದರೆ ಈ ಪ್ರಯೋಗವನ್ನು ನಾವು ಮಾಡುವುದೇ ಆದ ಪಕ್ಷದಲ್ಲಿ ಇದನ್ನು ವಿಳಂಬವಿಲ್ಲದೆ ಮಾಡಬೇಕಾದ್ದು ಏಕೆ ಜಾಣತನವೆನಿಸುತ್ತದೆ ಎಂಬುದಕ್ಕೆ ಇನ್ನೊಂದು ಕಾರಣವಿದೆ. ವಿಷಯವೊಂದನ್ನು ವರ್ಗಾಯಿಸುವುದರ ಪರಿಣಾಮವಾಗಿ ಆ ವಿಷಯಕ್ಕೆ ಸಂಬಂಧಿಸಿದ ಸೇವೆಗಳಲ್ಲಿ ನೇಮಕಗೊಂಡ ಭಾರತೀಯರ ಸಂಖ್ಯೆ ಹೆಚ್ಚುವುದು ಸ್ಪಷ್ಟ. ಭಾರತೀಯರು ಐರೋಪ್ಯ ಸಿಬ್ಬಂದಿ ಸದಸ್ಯರಿಗಿಂತ, ಸಾಮರ್ಥ್ಯ ಹಾಗೂ ಅನುಭವಗಳಲ್ಲಿ ಹಿಂದಿರಬಹುದಾದ ಸಾಧ್ಯತೆಯುಂಟು. ಆದ್ದರಿಂದ ಕಾನೂನು ಹಾಗೂ ಸುವ್ಯವಸ್ಥೆಗಳ ವಿಷಯದ ವರ್ಗಾವಣೆ ಮುಂದುವರಿಸುವುದೆಂದರೆ ಸಂಧಿಕಾಲದ ಪ್ರತಿಯೊಂದು ಹಂತದ ಮೇಲೆಯೂ ಪರಿಣಾಮ ಬೀರುವ ಅಪಾಯಗಳನ್ನು ಹೆಚ್ಚಿಸುವುದೇ ಆಗಿರುತ್ತದೆ. ಆದ್ದರಿಂದ ಒಮ್ಮೆಲೇ ಹೆಜ್ಜೆಯನ್ನು ಮುಂದಿಡುವುದು ಮತ್ತು ಸಾಧ್ಯವಾದಷ್ಟೂ ಕಡಿಮೆ ಸ್ಥಾನಪಲ್ಲಟ ಮಾಡಿ, ಹೊಸ ಸಂವಿಧಾನವನ್ನು ರೂಪಿಸುವಲ್ಲಿ ನಿಷ್ಠೆಯಿಂದ ಸಹಾಯ ಮಾಡುತ್ತಾರೆಂದು ನಾವು ಭರವಸೆಯಿಡಬಹುದಾದ ಮತ್ತು ಅನುಭವಿಗಳೂ, ತರಬೇತಿಪಡೆದವರೂ ಆದ ಸರ್ಕಾರಿ ಅಧಿಕಾರಿಗಳು ನಮ್ಮೊಂದಿಗೆ ಇರುವಾಗಲೇ ಕಾರ್ಯಾರಂಭ ಮಾಡುವುದು ಸುರಕ್ಷಿತ. ಅದೃಷ್ಟವಶಾತ್ ತುಂಬ ಪ್ರಮುಖವಾಗಿರುವ ಅಧಿಕಾರದಿಂದಲೇ ನನಗೆ ಈ ಸೂಚನೆ ಬಂದಿದೆ. ಇವರು ಮಿ. ಬೆಕರ್ ಅವರಿಗೆ ಬರೆಯಲಾದ ಟಿಪ್ಪಣಿಯೊಂದರಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಬೆಕರ್ ಅವರು 'ಫ್ಯೂಚರ್ ಆಫ್ ಗವರ್ನಮೆಂಟ್ ಆಫ್ ಇಂಡಿಯ ಅಂಡ್ ದಿ ಐ.ಸಿ.ಎಸ್.' ಎಂಬ ಗ್ರಂಥದಲ್ಲಿ ಈ ಅಭಿಪ್ರಾಯಗಳನ್ನು ಹೀಗೆ ಪುನರುಚ್ಚರಿಸುತ್ತಾರೆ.

"ಒಬ್ಬ ಅನುಭವಿ ಸರ್ಕಾರಿ ಅಧಿಕಾರಿ ಬರೆದ ಟಿಪ್ಪಣಿಯಲ್ಲಿ ಈ ಅಭಿಪ್ರಾಯವನ್ನು ಮುಂದುವರಿಸಲಾದ್ದರಿಂದ, ಇಂಥ ವಿಮರ್ಶೆಯನ್ನು ನಾನು ಪರ್ಯಾಲೋಚನೆಗಾಗಿ ಇಡಬಯಸುತ್ತೇನೆ... ಮೊದಲನೆಯದಾಗಿ, ಶಾಂತಿ ಸುವ್ಯವಸ್ಥೆಗಳ ಪರಿಪಾಲನೆ ಹಾಗೂ ಭೂಕಂದಾಯ ಮತ್ತು ಗೇಣಿ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳನ್ನು ವರ್ಗಾಯಿಸತಕ್ಕದ್ದೆಂದು ಈ ಟಿಪ್ಪಣಿ ಬರೆದವರು ಒತ್ತಾಯಿಸಿದ್ದಾರೆ... ಈ ವಿಭಾಗಗಳ ಆಡಳಿತವನ್ನು ಸರ್ಕಾರದ ಅಧೀನದಲ್ಲಿರುವ ಮತ್ತು ಭಾರತದಲ್ಲಿನ ಎಲ್ಲ ಸೇವೆಗಳಲ್ಲಿ ಅತ್ಯಂತ ಬಲಿಷ್ಠವೂ ಅತ್ಯಂತ ಸಮರ್ಥವೂ ಆಗಿರುವ ಇಂಡಿಯನ್ ಸಿವಿಲ್ ಸರ್ವೀಸ್ ನಡೆಸುತ್ತಿದೆ... ಚೆನ್ನಾಗಿ ಆಡಳಿತದ ತತ್ವಗಳನ್ನು ಕುರಿತು ಆಗಲೇ ಹೇಳಲಾಗಿದೆ. ಮತ್ತು ಇದು ಚೆನ್ನಾಗಿ ತಿಳಿದ ವಿಚಾರವಾಗಿದೆ. ಇಂಡಿಯನ್ ಸಿವಿಲ್ ಸರ್ವಿಸ್‌ಗೆ ಮಹಾನ್ ಪರಂಪರೆಯಿದೆ. ಇದರಿಂದ ಆಡಳಿತಕ್ಕೆ ಉತ್ತಮ ನೆರವೂ, ಖಚಿತ ಸಲಹೆ ಸೂಚನೆಗಳೂ ಸಿಗುವ ಭರವಸೆಯಿದೆ... ಕೆಲವು ಸಂದರ್ಭಗಳಲ್ಲಿ ಮಾತ್ರ ತಮ್ಮ ಜಾತಿ ಅಥವಾ ಧರ್ಮಗಳ ಮೇಲೆ ಪರಿಣಾಮ ಬೀರುವಂಥ ವಿಷಯಗಳ ಬಗ್ಗೆ ಭಾವೋದ್ವೇಗ ಹೊಂದುವುದಾದರೂ, ಒಟ್ಟಿನಲ್ಲಿ ಭಾರತೀಯರು ಶಾಂತ ಸ್ವಭಾವದವರು ಹಾಗೂ ಇವರನ್ನು ಸುಲಭವಾಗಿ ಆಳಬಹುದು ಎಂದು ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡುವುದು ತುಂಬ ಕಷ್ಟದ ಕೆಲಸವೇನೂ ಅಲ್ಲ. .....ಭೂಕಂದಾಯ ಹಾಗೂ ಗೇಣಿಗೆ ಸಂಬಂಧಿಸಿದ ಪ್ರಶ್ನೆಗಳು, ಶಾಸಕಾಂಗವನ್ನು ಪ್ರತಿನಿಧಿಸುವ ವರ್ಗಗಳವರಿಗಿಂತ ಹೆಚ್ಚಾಗಿ ಜನಸಮುದಾಯದ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರುತ್ತದೆ. (ಆದ್ದರಿಂದ ಮೇಲೆ ಉಲ್ಲೇಖಿಸಲಾದ ಸಿದ್ಧಾಂತಗಳಲ್ಲಿ ಐದನೆಯದರಂತೆ, ಈ ವಿಷಯಗಳನ್ನು ವರ್ಗಾಯಿಸಕೂಡದು) ಎಂಬ ವಾದವು ಸ್ಪಷ್ಟವಾಗಿಯೂ, ಸರಕಾರಗಳ ಆಡಳಿತಕ್ಕಾಗಿ ಮುಂದುವರಿಸಲಾದ ಮತದಾನ ಹಾಗೂ ಮತದಾರ ಸಮುದಾಯಗಳ ವ್ಯವಸ್ಥೆಯಲ್ಲಿ, ಅಸಂಗತವಾದುದು. ಹೇಗೆಯೇ ಇದ್ದರೂ, ಕಾನೂನು

ಮತ್ತು ಸುವ್ಯವಸ್ಥೆ ಹಾಗು ರೆವಿನ್ಯೂ ಆಡಳಿತಗಳೊಂದಿಗೆ ಸಂಬಂಧ ಹೊಂದಿರುವ ಕೆಲವು ವಿಭಾಗಗಳನ್ನು ವರ್ಗಾಯಿಸುವುದನ್ನು ಕುರಿತಂತೆ, ಭಯಪಡುವ ಹಾಗೂ ವಿಭಾಗೀಯ ಪದ್ಧತಿಯನ್ನು ಮನದಟ್ಟಾಗುವಂತೆ ಸಮರ್ಥಿಸುವ ವ್ಯಕ್ತಿ ಸ್ವತಃ ತನ್ನ ಯೋಜನೆಯ ಬಗ್ಗೆಯೇ ಭಯವಿರುವುದನ್ನು ಒಪ್ಪಿಕೊಳ್ಳುತ್ತಾನೆ. ನಾನು ದ್ವಂದ್ವ ಸರ್ಕಾರವನ್ನು ಸಮರ್ಥಿಸುವವನಲ್ಲವಾದರೂ, ಈ ಪ್ರಯೋಗ ಮಾಡಲು ಹೆದರಬೇಕಾಗಿಲ್ಲ. ಏಕೆಂದರೆ ದ್ವಂದ್ವ ಸರ್ಕಾರವಾಗಿರಲಿ, ಇಲ್ಲದಿರಲಿ, ಯಾವುದೇ ಯೋಜನೆಯ ಯಶಸ್ಸಿಗೆ ಅವಶ್ಯಕವಾಗಿರುವ ವ್ಯವಹಾರ ಪ್ರಜ್ಞೆ, ಸೌಹಾರ್ದ ಭಾವನೆ ಹಾಗೂ ಸಹನೆ– ಈ ಗುಣಗಳು ಸಚಿವರಲ್ಲಿರಬೇಕೆಂದು ನಾನು ಬಯಸುತ್ತೇನೆ.

(೧೯) ಕಾನೂನು–ಸುವ್ಯವಸ್ಥೆಗಳ ವಿಷಯವನ್ನು ವರ್ಗಾಯಿಸುವುದಕ್ಕೆ ಸಂಬಂಧಪಟ್ಟಂತೆ ಅಲ್ಪಸಂಖ್ಯಾತರ ಕಾತರವೇನೆಂದು ನನಗೆ ಚೆನ್ನಾಗಿ ತಿಳಿದಿದೆ. ಆದರೆ ಈ ವಿಷಯವನ್ನು ಕಾಯ್ದಿರಿಸುವುದರಿಂದ ಅವರಿಗೆ ಯಾವ ಲಾಭ ಎಂದು ಅರ್ಥ ಮಾಡಿಕೊಳ್ಳುವುದು ಮಾತ್ರ ನನಗೆ ಕೊಂಚ ಕಷ್ಟವಾಗಿದೆ. ದಬ್ಬಾಳಿಕೆ ನಡೆಸುವ ಇಲಾಖಾಧಿಕಾರಿ ಭಾರತೀಯನೇ ಆಗಿರಬೇಕಾಗಿದ್ದ ಪಕ್ಷದಲ್ಲಿ ಉಸ್ತುವಾರಿ ನೋಡಿಕೊಳ್ಳುವ ಇಲಾಖಾಧಿಕಾರಿ ಹಾಗೂ ಸಚಿವರ ನಡುವೆ ಯಾವುದೇ ವ್ಯತ್ಯಾಸವೂ ಇರುವುದಿಲ್ಲ. ಅವನು ಯುರೋಪಿನವನಾಗಿರಬೇಕಾದ್ದ ಪಕ್ಷದಲ್ಲಿ ಆಗ ಅವನು ತಟಸ್ಥನಾಗಿರುತ್ತಾನೆ ಎಂಬುದಷ್ಟೇ ಅವನ ಬಗ್ಗೆ ಹೆಚ್ಚೆಂದರೆ ಹೇಳಬಹುದಾದ ವಿಚಾರ. ಆದರೆ, ಇದೇನೂ ಅಂಥ ಉಪಯುಕ್ತ ಸಂಗತಿಯಲ್ಲ. ಏಕೆಂದರೆ ತಟಸ್ಥ ವ್ಯಕ್ತಿ, ನಿಷ್ಪಕ್ಷಪಾತ ಸ್ವಭಾವವನ್ನು ಹೊಂದಿರುತ್ತಾನೆಂದು ನಂಬುವ ಹಾಗಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ತಟಸ್ಥನಾಗಿರುವ ವ್ಯಕ್ತಿಗೂ ತನ್ನದೇ ಆದ ಹಿತಾಸಕ್ತಿಗಳು, ಪೂರ್ವಾಗ್ರಹಗಳೂ ಇರುತ್ತವೆ. ಅವನಿಗೆ ಅಂಥ ಹಿತಾಸಕ್ತಿ ಇಲ್ಲದಿರುವಾಗ ಅವನು ಯಾವುದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ನಿರ್ಲಿಪ್ತ ಸ್ವಭಾವದವನಾಗಿರಬಹುದು. ಆದ್ದರಿಂದ ದಬ್ಬಾಳಿಕೆಯ ಅಧಿಕಾರ ನಡೆಸುವ ಯುರೋಪಿನ ಅಧಿಕಾರಿಗಳಿಂದ ಕಾನೂನು ಮತ್ತು ಸುವ್ಯವಸ್ಥೆಗಳ ವಿಷಯವನ್ನು ಕಾಯ್ದಿರಿಸುವುದರ ಬಗ್ಗೆ ಕಾತರರಾಗಿರುವ ಅಲ್ಪಸಂಖ್ಯಾತರಿಗೆ ಏನಾದರೂ ಪ್ರಯೋಜನವಾದೀತೇ ಎಂಬುದೂ ಸಂದೇಹಾಸ್ಪದವೇ. ದಬ್ಬಾಳಿಕೆಯ ಆಡಳಿತಕ್ಕೆ ವ್ಯತಿರಿಕ್ತವಾಗಿ ಸಚಿವರ ಆಡಳಿತದಿಂದ ತಮಗುಂಟಾಗುವ ಭಾರೀ ಪ್ರಯೋಜನವನ್ನು ಅರಿತುಕೊಳ್ಳುವಲ್ಲಿ ಅಲ್ಪಸಂಖ್ಯಾತ ವರ್ಗದ ಕೆಲವು ಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಕಾರ್ಯಾಂಗದ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸುವ ಹಕ್ಕು ಹೊಂದಿರುವುದೊಂದೇ ತಮ್ಮ ಸ್ವಂತ ರಕ್ಷಣೆಗಾಗಿ ಅವರಿಗಿರುವ ಏಕೈಕ ಮಾರ್ಗ. ಇಂಥ ನಿಯಂತ್ರಣ ಹೊಂದಲು ನೌಕರಶಾಹಿ ಪದ್ಧತಿಯ ಆಡಳಿತದಲ್ಲಿ ಅವಕಾಶವಿರುವುದಿಲ್ಲ. ಅದು ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವುದೇ ಆದಲ್ಲಿ ಹಾಗೆ ಮಾಡಬೇಕೆಂಬ ಇಚ್ಛೆ ಇರುವುದೇ ಕಾರಣ. ಅಷ್ಟೇ ಆದರೆ, ಯಾವುದೇ ಸನ್ನಿವೇಶದಲ್ಲಿ ಸರ್ಕಾರ ಹೀಗೆ ಮಾಡಲು ಇಚ್ಛಿಸದಿದ್ದಲ್ಲಿ ಆಗ ಅಲ್ಪಸಂಖ್ಯಾತರಿಗೆ ಯಾವುದೇ ಪರಿಹಾರವಿರುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಚಿವನಿಗೆ ನಿರ್ದೇಶನ ನೀಡಬಹುದು; ಆದರೆ ದಬ್ಬಾಳಿಕೆ ನಡೆಸುವ ಇಲಾಖಾಧಿಕಾರಿಗೆ, ಸಲಹೆ ನೀಡುವುದು ಕೂಡ ಅಸಾಧ್ಯ. ಇದೇ ದಬ್ಬಾಳಿಕೆಯ ಪ್ರಭುತ್ವ ಮತ್ತು ಸಚಿವರ ಆಡಳಿತ– ಇವುಗಳ ನಡುವಣ ಮುಖ್ಯ ವ್ಯತ್ಯಾಸವಾಗಿ ನನಗೆ ಕಾಣುತ್ತದೆ. ನನ್ನ ಸ್ವಂತ ದೃಷ್ಟಿಯಿಂದ ಹೇಳುವುದಾದರೆ ಕಾನೂನು ಸುವ್ಯವಸ್ಥೆಗಳ ವಿಷಯವನ್ನು ವರ್ಗಾಯಿಸುವುದರಿಂದ ಅಲ್ಪಸಂಖ್ಯಾತರಿಗೆ ಏನು ಹಾನಿಯೆಂಬುದು ನನಗೆ ತಿಳಿಯದಾಗಿದೆ. ಮನುಷ್ಯರೊಡನೆ ವ್ಯವಹರಿಸುವುದಕ್ಕಿಂತ ಅತ್ಯಂತ ಕೆಟ್ಟದಾಗಿ ನಡೆಸಿಕೊಳ್ಳಲ್ಪಡುತ್ತಿರುವ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನಾದರೂ ನಾನು ಈ ಮಾತು ಹೇಳಲು ಹಿಂಜರಿಯುತ್ತಿಲ್ಲ. ಸಾಕಷ್ಟು

ಸಂಖ್ಯೆಯ ಅಲ್ಪಸಂಖ್ಯಾತ ಪ್ರತಿನಿಧಿಗಳಿರುವ ಶಾಸಕಾಂಗದಲ್ಲಿ ಅವರ ಪ್ರಯೋಜನಕ್ಕಾಗಿಯೇ ಕಾನೂನು–ಸುವ್ಯವಸ್ಥೆಗಳ ವಿಷಯವನ್ನು ವರ್ಗಾಯಿಸಬೇಕು ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಇಂಥ ವರ್ಗಾವಣೆಯಿಂದಾಗಿ ಕಾಯ್ದಿರಿಸುವಿಕೆಯಲ್ಲಿ ಇಲ್ಲವಾಗಿದ್ದ ವಿಷಯದ ಆಡಳಿತವನ್ನು ನಿಯಂತ್ರಿಸುವ ಹಕ್ಕು ಅಲ್ಪಸಂಖ್ಯಾತರಿಗೆ ಸಿಗುತ್ತದೆ. ಕೆಲಸದ ಮೇಲೆ ಕಣ್ಣಿಡದಾಗ ಒಬ್ಬ ಪ್ರಾಮಾಣಿಕ ವ್ಯಕ್ತಿ ಮಾಡುವುದಕ್ಕಿಂತ ಉತ್ತಮವಾದ ರೀತಿಯಲ್ಲಿ ಧಣಿಯು ಕಣ್ಣಿಟ್ಟಿರುವಾಗ ಕೇಡಿಯೂ ಕೆಲಸ ನಿರ್ವಹಿಸುತ್ತಾನೆ ಎಂಬ ಹೇಳಿಕೆಯಲ್ಲಿ ಸಾಕಷ್ಟು ಸತ್ಯಾಂಶವಿಲ್ಲವೇ ಎಂಬ ಬಗ್ಗೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು ಗಂಭೀರವಾಗಿ ಪರ್ಯಾಲೋಚಿಸಬೇಕು ಎಂದು ನನಗೆ ಅನಿಸುತ್ತದೆ. ಹೀಗೆ ಪರ್ಯಾಲೋಚಿಸಿದಲ್ಲಿ ಕೆಳಮಟ್ಟದ ಅಧಿಕಾರಿಗಳು ಆಡಳಿತದತ್ತಲೇ ಒಲವು ತೋರಲು ಸಮಂಜಸ ಕಾರಣಗಳಿರುವುದನ್ನು ಅವರು ತಿಳಿಸುತ್ತಾರೆ. ಅಂಥ ಅಧಿಕಾರಿಗಳ ಮೇಲೆ ಅಲ್ಪಸಂಖ್ಯಾತರು ಪ್ರಭಾವ ಬೀರುವುದು ಸಾಧ್ಯ.

(೨೦) ಕಾನೂನು–ಸುವ್ಯವಸ್ಥೆಗಳ ವಿಷಯದ ವರ್ಗಾವಣೆಗಿಂತ ಅದರ ಕಾಯ್ದಿರಿಸುವಿಕೆಯನ್ನೇ ಅಲ್ಪಸಂಖ್ಯಾತರು ಏಕೆ ಹೆಚ್ಚು ಇಷ್ಟಪಡುತ್ತಾರೆ ಎಂಬುದಕ್ಕೆ ಅತಿಮುಖ್ಯವಾದ ಇನ್ನೊಂದು ಕಾರಣವಿದೆ. ಶಾಸಕಾಂಗದಲ್ಲಿ ಅವರ ಪ್ರಾತಿನಿಧ್ಯ ಗಮನಕ್ಕೆ ಬಾರದಿರುವಷ್ಟು ಅತ್ಯಲ್ಪವಾಗಿರುವುದೇ ಇದಕ್ಕೆ ಕಾರಣ. ಅಲ್ಪಸಂಖ್ಯಾತರು ದೃಷ್ಟಿಯಿಂದ ಸ್ಪಷ್ಟವಾಗಿಯೂ ಆಯ್ಕೆ ಇರುವುದು ಒಂದೆಡೆ ಕಾಯ್ದಿರಿಸುವಿಕೆ, ಮತ್ತೊಂದೆಡೆ ವರ್ಗಾವಣೆ ಮತ್ತು ಸಾಕಷ್ಟು ಪ್ರಾತಿನಿಧ್ಯ ಇವೆರಡರ ನಡುವೆ ಮತ್ತೆ ಇಲ್ಲಿ ಕೂಡ ಎರಡನೆಯ ಪರ್ಯಾಯವನ್ನೇ ಮೊದಲನೆಯದಕ್ಕಿಂತ ಹೆಚ್ಚು ಉಪಯುಕ್ತವೆಂದು ಭಾವಿಸಬೇಕಾಗಿದೆ. ಆದ್ದರಿಂದ ಕಾನೂನು–ಸುವ್ಯವಸ್ಥೆ ವಿಷಯದ ವರ್ಗಾವಣೆಯನ್ನು ವಿರೋಧಿಸುವುದಕ್ಕಿಂತ ಸಾಕಷ್ಟು ಪ್ರಾತಿನಿಧ್ಯಕ್ಕಾಗಿ ಹೆಚ್ಚು ಹೆಚ್ಚು ಒತ್ತಾಯಿಸುವುದೇ ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ಹೆಚ್ಚು ಪ್ರಯೋಜನಕರ. ಆದರೆ ಅಲ್ಪಸಂಖ್ಯಾತರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡುವುದರ ಮೂಲಕ ಕಾನೂನು ಸುವ್ಯವಸ್ಥೆಗಳ ವಿಭಾಗದಲ್ಲಿ ದುರಾಡಳಿತ ನಡೆಸಬಹುದೆಂಬ ಅವರ ಕಾಲ್ಪನಿಕ ಭಯವನ್ನು ನಿವಾರಿಸಲು ಸಾಧ್ಯವಾಗದೆ ಇದ್ದರೆ, ನನ್ನ ಶಿಫಾರಸಿಗೆ ಇನ್ನೊಂದು ಷರತ್ತನ್ನು ಇಲ್ಲಿ ಸೇರಿಸಲು ಇಷ್ಟಪಡುತ್ತೇನೆ. ಅಲ್ಪಸಂಖ್ಯಾತರ ಒಳಿತಿನ ದೃಷ್ಟಿಯಿಂದಲೇ ಈ ಪ್ರಸ್ತಾಪವನ್ನು ನಾನು ಮಾಡುತ್ತಿದ್ದೇನೆ. ಏಕೆಂದರೆ ೨೦ನೆಯ ಆಗಸ್ಟ್ ೧೯೧೭ರ ವಿಧ್ಯುಕ್ತ ಘೋಷಣೆಯಲ್ಲಿ ಮುಂದಿಡಲಾದ ಜವಾಬ್ದಾರಿ ಸರ್ಕಾರದ ಸಿದ್ಧಾಂತ, ಸಮಂಜಸವೆನಿಸಬೇಕಾದರೆ ಈ ವಿಷಯವನ್ನು ಯಾವತ್ತೋ ಒಂದು ದಿನ ವರ್ಗಾಯಿಸಲೇಬೇಕಾಗಿ ಬರುತ್ತದೆ ಎಂದು ನಾನು ವಾದಿಸಿದ್ದೆ. ಅಷ್ಟೇ ಅಲ್ಲ, ಈ ಸಂಬಂಧದಲ್ಲಿನ ಭಯಕ್ಕೆ ಆಧಾರವಿದೆ ಎಂದು ಅನುಭವ ತೋರಿಸುವುದಾದಲ್ಲಿ ಈ ಪ್ರಸ್ತಾಪ ತತ್‌ಕ್ಷಣ ಪರಿಣಾಮ ಉಂಟುಮಾಡುವುದಿಲ್ಲವಾದರೂ ವಿಷಯದ ವರ್ಗಾವಣೆಯನ್ನು ರದ್ದುಗೊಳಿಸುವ ಸಾಧ್ಯತೆಯನ್ನು ಅಲ್ಲಗಳೆಯುವುದಿಲ್ಲ.

# ಅಧ್ಯಾಯ–೨

# ಕಾರ್ಯನಿರತ ಕಾರ್ಯಾಂಗ

(೨೧) ಸಚಿವರುಗಳ ಜವಾಬ್ದಾರಿಯನ್ನಾಧರಿಸಿದ ಏಕೀಕೃತ ಸರ್ಕಾರವನ್ನು ಅನುಷ್ಠಾನಕ್ಕೆ (Unified Government) ತರುವುದರಿಂದ ನಾಲ್ಕು ಮುಖ್ಯ ಪ್ರಶ್ನೆಗಳು ಉದ್ಭವಿಸುತ್ತವೆ. ಇವುಗಳಲ್ಲಿ ಮೊದಲನೆಯದು ಕಾರ್ಯಾಂಗದ ಸ್ಥಿರತೆಗೂ, ಎರಡನೆಯದು ಕಾರ್ಯಾಂಗದಲ್ಲಿನ ಕೋಮುವಾರು ಪ್ರಾತಿನಿಧ್ಯಕ್ಕೂ ಮೂರನೆಯದು ಕಾರ್ಯಾಂಗದ ಜವಾಬ್ದಾರಿಯನ್ನು ಕುರಿತು ಒತ್ತಿ ಹೇಳುವುದಕ್ಕೂ ಹಾಗೂ ನಾಲ್ಕನೆಯದು ಕಾರ್ಯಾಂಗದ ಸದಸ್ಯರ ನಡುವಿರುವ ಪರಸ್ಪರ ಸಂಬಂಧಕ್ಕೂ ಸಂಬಂಧಪಟ್ಟಿದೆ.

(೨೨) ಮೊದಲನೆಯ ಪ್ರಶ್ನೆಗೆ ಸಂಬಂಧಿಸಿದಂತೆ ಶಾಸಕಾಂಗದ ಸದಸ್ಯರು ಹೊಂದಿರುವ ಕೋಮುವಾರು ಭಾವನೆಯ ಕಾರಣದಿಂದ ಶಾಸಕಾಂಗವನ್ನು ಕೆಲವು ಸಮುದಾಯಗಳಿಂದ ಕೂಡಿರುವಂತೆ ಶಾಸಕಾಂಗವನ್ನು ರಚಿಸಬೇಕಾಗುತ್ತದೆ ಎಂದು ಹೇಳಲಾಗಿದೆ. ಸಿದ್ಧಾಂತಗಳಿಗೆ ತೋರಿಸಬೇಕಾಗಿರುವ ನಿಷ್ಠೆಗಿಂತ ಹೆಚ್ಚಾಗಿ, ಸಚಿವ ಸಂಪುಟಕ್ಕೆ ಸಮುದಾಯದೊಂದಿಗೆ ಇರುವ ಒಲವೇ ಹೆಚ್ಚು ಎದ್ದು ಕಾಣುತ್ತದೆ. ಹೀಗಾಗಿ ಕೋಮುವಾರು ಲಾಭದ ಅನುಪಾತಕ್ಕೆ ಅನುಗುಣವಾಗಿ ಮಾಪನ ಮಾಡಲಾದ ಕೋಮುವಾರು ನಿಷ್ಠೆಯ ಅನಿಶ್ಚಿತ ತಳಪಾಯದ ಮೇಲೆ, ಸಚಿವ ಸಂಪುಟ ನಿಂತಿರುವಂತೆ ಕಾಣುತ್ತದೆ. ಏಕೆಂದರೆ ಸಮುದಾಯಗಳು ತಮ್ಮ ಇಚ್ಛೆಗನುಸಾರವಾಗಿ ಹಾಗೂ ಸಿದ್ಧಾಂತಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ತಮ್ಮ ನಿಷ್ಠೆಯನ್ನು ವರ್ಗಾಯಿಸುವುದನ್ನು ಆಯ್ದುಕೊಂಡ ಪಕ್ಷದಲ್ಲಿ ಸಚಿವ ಸಂಪುಟಗಳು ರಚನೆಯಾದ ತತ್‌ಕ್ಷಣವೇ ಬಿದ್ದುಹೋಗಬಹುದು. ಇಂಥ ಕೆಡಕು ಉಂಟಾಗದಂತೆ ತಡೆಯಲು, ಸಮಿತಿಯಲ್ಲಿರುವ ವಿವಿಧ ಗುಂಪುಗಳು ಆಯ್ಕೆ ಮಾಡಿದ ಸಮುದಾಯದಿಂದ ಸಚಿವ ಸಂಪುಟವನ್ನು ರಚಿಸಬಹುದು ಎಂಬ ಪ್ರಸ್ತಾವವನ್ನು ಮುಂದಿಡಲಾಗಿದೆ. ಒಮ್ಮೆ ಇದು ರಚನೆಯಲ್ಲಿ, ಮತ್ತೆ ಸಮಿತಿ ಅಸ್ತಿತ್ವದಲ್ಲಿ ಇರುವಷ್ಟೂ ಕಾಲ ಇದನ್ನು ವಜಾ ಮಾಡುವುದು ಸಾಧ್ಯವಾಗದು. ಕಾರ್ಯಾಂಗ ಅಸ್ಥಿರವಾಗಬಹುದೆಂಬ ಭಯ ಸತ್ಯವಾಗಲೂಬಹುದು ಎಂಬ ಅರಿವು ನನಗಿದೆ. ಆದರೆ ಇದಕ್ಕೂ ಒಂದು ಪರಿಹಾರವಿದೆ ಅಥವಾ ಒಂದು ಬಗೆಯ ಪರಿಹಾರವನ್ನು ಸೂಚಿಸಲಾಗಿದೆಯೆಂದು ನನಗಿಸುವುದಿಲ್ಲ. ಶಾಸಕಾಂಗದಲ್ಲಿ ಸ್ವಯಂ ಎದ್ದುಕಾಣುವಂಥ ಗುಂಪುಗಾರಿಕೆಯಿರುವುದು ಭಾರತದಲ್ಲಿ ಮಾತ್ರವಲ್ಲ, ಗುಂಪುಗಾರಿಕೆಗೆ ಅತ್ಯುಚ್ಚ ನಿದರ್ಶನವಾಗಿ "ಫ್ರೆಂಚ್ ಛೇಂಬರ್ ಆಫ್ ಡೆಪ್ಯುಟೀಸ್" ಇದೆ. ಇದು ಸಚಿವ ಸಂಪುಟಗಳಲ್ಲಿ ಆಗಾಗ ಒಡಕ್ಕನ್ನುಂಟುಮಾಡುತ್ತದೆ. ಇಂಥದೊಂದು ಸನ್ನಿವೇಶ ಕೆಟ್ಟುದೇ ಆಗಿದ್ದರೂ, ಪರಿಹಾರವನ್ನು ಅಪೇಕ್ಷಿಸುವಷ್ಟು ಅಸಹನೀಯವಾದುದೇನೂ ಅಲ್ಲ ಎಂದು ಫ್ರೆಂಚರು ಭಾವಿಸಿರುತ್ತಾರೆ. ಆದರೆ, ನಿರೀಕ್ಷಿಸಿದ್ದೇ ನಿಜವಾಗುತ್ತದೆ ಹಾಗೂ ಸನ್ನಿವೇಶ ಅಸಹನೀಯವಾಗುತ್ತದೆ ಎಂದು ಭಾವಿಸಿಕೊಂಡಲ್ಲಿ ಈ ಪರಿಹಾರ ಸೂಕ್ತವಾದುದಲ್ಲ ಎಂದು ನನಗೆ ಮನದಟ್ಟಾಗಿದೆ. ಸಚಿವರುಗಳ ಜವಾಬ್ದಾರಿಯನ್ನು ಇದು ತೀವ್ರವಾಗಿ ದುರ್ಬಲಗೊಳಿಸುತ್ತದೆ ಎಂಬುದರಲ್ಲಿ ಅಭಿಪ್ರಾಯ ಭೇದವಿಲ್ಲ. ಆದರೂ ಪಂಗಡಗಳನ್ನು ಒಂದುಗೂಡಿಸುವುದಕ್ಕೆ ಬದಲಾಗಿ ಪಕ್ಷಗಳನ್ನು ಇನ್ನಷ್ಟು ದೃಢವಾಗಿ ಹಾಗೂ ಶಾಶ್ವತವಾಗಿ ಪರಿವರ್ತಿಸುವ ಕೆಲಸವಷ್ಟನ್ನೇ ಈ ಯೋಜನೆ

ಮಾಡುತ್ತದೆ ಎಂಬ ಭೀತಿ ನನಗಿದೆ. ಏಕೆಂದರೆ ಈ ಪರಿಹಾರ, ರೋಗವನ್ನು ಗುಣಪಡಿಸುವುದರ ಬದಲಾಗಿ, ಅದನ್ನು ಹೆಚ್ಚಿಸುತ್ತದೆ ಮಾತ್ರ. ಈಗಿರುವ ಮತದಾರ ಸಮುದಾಯಗಳ ಸಭೆಗಳನ್ನು ಪುನಾರಚಿಸುವುದರಲ್ಲಿ ಮಾತ್ರ ನಿಜವಾದ ಪರಿಹಾರವಿದೆ ಎಂದು ನನಗನಿಸುತ್ತದೆ.

(೨೩) ದೇಶದ ಕಾರ್ಯಾಂಗದಲ್ಲಿ ಕೋಮುವಾರು ಪ್ರಾತಿನಿಧ್ಯವನ್ನು ಗುರುತಿಸುವುದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಇಂಥ ವ್ಯವಸ್ಥೆಯಲ್ಲಿ ಸರ್ಕಾರಿ ಯಂತ್ರದ ಅತ್ಯಂತ ಮುಖ್ಯವಾದ ಭಾಗದಲ್ಲಿ ಹೆಚ್ಚು ಕೇಡನ್ನು ಉಂಟುಮಾಡುವ ಪರಿಸ್ಥಿತಿಗೆ ರೋಗ ತಲುಪುತ್ತದೆ. ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯದ ಹಕ್ಕು ಹೊಂದಿದವರೆಂದು ಗುರುತಿಸಬೇಕಾದ ಸಮುದಾಯಗಳ ಸಂಖ್ಯೆಯನ್ನು ಅವಲಂಬಿಸಿ, ಅದು ದ್ವಯಾಡಳಿತ ಪದ್ಧತಿಯ ಸರ್ಕಾರವಾಗುತ್ತದೆ (dyarchy) ಅಥವಾ ತ್ರಯಾಡಳಿತ ಪದ್ಧತಿಯ ಸರ್ಕಾರವಾಗುತ್ತದೆ (triarchy). ಅದು ಇಂದು ನಾವು ಹೊಂದಿರುವ ರಾಜಕೀಯ ದ್ವಯಾಡಳಿತಕ್ಕಿಂತ ಕೆಲಮಟ್ಟಿಗೆ ಭಿನ್ನವಾದ ಕೋಮುವಾರು ದ್ವಯಾಡಳಿತ ಪದ್ಧತಿಯಾಗುವುದರಲ್ಲಿ ಸಂದೇಹವಿಲ್ಲ. ಆದರೆ ಅದು ರಾಜಕೀಯ ದ್ವಯಾಡಳಿತಕ್ಕಿಂತ ಹೆಚ್ಚೇನೂ ಉತ್ಕೃಷ್ಟವಾಗಿರುವುದಿಲ್ಲ. ಒಂದನೆಯದರಲ್ಲಿ ಅಂಗರ್ತತವಾಗಿರುವ ದೋಷಗಳೇ ಎರಡನೆಯದರಲ್ಲಿ ಇರುತ್ತದೆ. ಸಂವಿಧಾನದ ಪುನಾನರಚನೆಯ ಉದ್ದೇಶ ಏಕೀಕೃತ ಸರ್ಕಾರವೇ ಆಗಿದ್ದರೆ, ಕೋಮುವಾರು ಸ್ವರೂಪದಲ್ಲಿರುವ ದ್ವಂದ್ವಸರ್ಕಾರವನ್ನು ರಾಜಕೀಯ ಸ್ವರೂಪದಲ್ಲಿರುವ ದ್ವಯಾಡಳಿತ ಪದ್ಧತಿಯಂತೆಯೇ ಸಂಪೂರ್ಣವಾಗಿ ನಿರಾಕರಿಸಬೇಕು. ರಾಜಕೀಯ ದ್ವಯಾಡಳಿತ ಪದ್ಧತಿಯನ್ನು ನಿರಾಕರಿಸುವುದಕ್ಕಿರುವ ಕಾರಣಗಳಿಗಿಂತ ಹೆಚ್ಚು ಕಾರಣಗಳು ಕೋಮುವಾರು ದ್ವಯಾಡಳಿತ ಪದ್ಧತಿಯನ್ನು ನಿರಾಕರಿಸುವುದಕ್ಕೆ ಇವೆ ಎಂಬುದು ನಿಜ. ರಾಜಕೀಯ ದ್ವಯಾಡಳಿತ ಪದ್ಧತಿಯಲ್ಲಿ ಸಿದ್ಧಾಂತವನ್ನಾಧರಿಸಿದ ಸರ್ಕಾರದ ರಚನೆಯ ಸಾಧ್ಯತೆಯಿದೆ. ಆದರೆ ಕೋಮುವಾದಿ ದ್ವಯಾಡಳಿತ ಪದ್ಧತಿಯ ಪರಿಣಾಮವಾಗಿ ವರ್ಗ ಭಾವನೆಯನ್ನಾಧರಿಸಿದ ಸರ್ಕಾರದ ರಚನೆಯಾಗುವುದು ಖಚಿತ.

(೨೪) ಪ್ರತಿಯೊಬ್ಬ ಸಚಿವನೂ ನ್ಯಾಯಾಲಯಗಳಿಗೆ ತಲೆಬಾಗಬೇಕು ಎಂಬುದು ಗ್ರೇಟ್ ಬ್ರಿಟನ್ ಸ್ವಯಮಾಡಳಿತದ ಪದ್ಧತಿಯಿರುವ ರಾಷ್ಟ್ರಗಳ (Self governing Dominions) ಸಂವಿಧಾನಾತ್ಮಕ ಕಾನೂನಿನ ಮುಖ್ಯ ಸಿದ್ಧಾಂತ. ಈ ಜಾಣ ಸಿದ್ಧಾಂತದಿಂದಾಗಿಯೇ ಬ್ರಿಟನ್ನಿನ ಪ್ರಜೆಗಳು ಸ್ವದೇಶದಲ್ಲಿ ಹಾಗೂ ಬ್ರಿಟನ್ ಅಧಿಪತ್ಯಕ್ಕೆ ಸೇರಿರುವಂಥ ಒಳರಾಷ್ಟ್ರಗಳಲ್ಲಿ (Dominion) ಸಚಿವರುಗಳು ತಪ್ಪು ರೀತಿಯಲ್ಲಿ ವರ್ತಿಸಿದಾಗ ಕೂಡ ವೈಯಕ್ತಿಕವಾಗಿ ಮತ್ತು ತಮ್ಮ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ ಸುರಕ್ಷಿತರು ಎಂಬುದು ನಿಜ. ಶಾಸನ ವಿರುದ್ಧವಾದ ಕಾರ್ಯಗಳಿಗಾಗಿ ಕಾರ್ಯಾಂಗವನ್ನು ಶಾಸನಬದ್ಧ ಹೊಣೆಯನ್ನಾಗಿ ಮಾಡುವ ವಿಷಯದಲ್ಲಿ ಗ್ರೇಟ್ ಬ್ರಿಟನ್ ಮತ್ತು ಡೊಮಿನಿಯನ್‌ಗಳಿಗೆ ವ್ಯತಿರಿಕ್ತವಾಗಿ ಭಾರತವೊಂದೇ ವಿಲಕ್ಷಣ ಬಗೆಯ ರಾಷ್ಟ್ರವಾಗಿರುತ್ತದೆ. ಸರ್ ಇಲಿಯಾಜಡ್ ಇಂಪೇ ಅವರು ಮುಖ್ಯಸ್ಥರಾಗಿದ್ದ ನ್ಯಾಯಾಂಗ ಹಾಗೂ ವಾರನ್ ಹೇಸ್ಟಿಂಗ್ಸನು ಬೆಂಬಲ ಪಡೆದಿದ್ದ ಕಾರ್ಯಾಂಗ– ಇವುಗಳ ನಡುವೆ ತೀವ್ರ ಘರ್ಷಣೆಯುಂಟಾದಾಗ ೧೭೮೦ರರಷ್ಟು ಹಿಂದೆಯೇ ಭಾರತದಲ್ಲಿನ ಕಾರ್ಯಾಂಗವು ನ್ಯಾಯಾಲಯಗಳ ನಿಯಂತ್ರಣದಿಂದ ಬಿಡುಗಡೆ ಪಡೆಯುವ ಸ್ವಯಂ ಸಾಮರ್ಥ್ಯವನ್ನು ಗಳಿಸಿಕೊಂಡಿತ್ತು. ಇಂಥದೊಂದು ರಕ್ಷಣಾಶಕ್ತಿ ಮುಂದುವರಿಯುತ್ತ ಬಂದಿತು ಹಾಗೂ ಮುಂದೆ ಭಾರತ ಸರ್ಕಾರದ ಶಾಸನದ ೧೧೦ ಮತ್ತು ೧೧೧ನೇ ಪರಿಚ್ಛೇದಗಳಲ್ಲಿ ಒಂದು ಸ್ಥಾನವನ್ನೂ ಪಡೆಯಿತು. ಇಂಥ ರಕ್ಷಣಾಶಕ್ತಿ ಸ್ಥಳೀಯವಾಗಿದ್ದುದರಿಂದ ಹಾಗೂ ಸಾಮಾನ್ಯವಲ್ಲವಾದ್ದರಿಂದ ಇದು ಸಹನೀಯವಾಗಿತ್ತು. ಏಕೆಂದರೆ ಭಾರತದಲ್ಲಿ ಕಾನೂನು

ಕ್ರಮ ತೆಗೆದುಕೊಳ್ಳಲಾಗದಂಥ ಕಾರ್ಯಾಂಗದ ಸದಸ್ಯರ ಮೇಲೆ ಇಂಗ್ಲೆಂಡಿನಲ್ಲಿ ಕ್ರಮ ಕೈಗೊಳ್ಳಲು ಈ ಶಾಸನದಲ್ಲಿ ಅವಕಾಶಗಳಿದ್ದವು. ಈ ಉತ್ತರದಾಯಿತ್ವದ ವ್ಯವಸ್ಥೆ ಅತ್ಯಲ್ಪವಾಗಿದ್ದಲ್ಲಿ ಅದು ಪರಿಣಾಮ ಕಾರಿಯಾಗುತ್ತಿದ್ದಿಲ್ಲ. ಏಕೆಂದರೆ ಹಳೆಯ ರಾಜ್ಯಭಾರ ಕ್ರಮದಲ್ಲಿ ತಾನು ಯುರೋಪಿನವನೆಂಬ ವಾಸ್ತವಾಂಶದ ಕಾರಣವಾಗಿ ಕಾರ್ಯಾಂಗದ ಬಹುತೇಕ ಎಲ್ಲ ಸದಸ್ಯರೂ ಇಂಗ್ಲೆಂಡಿಗೆ ಮರಳುತ್ತಿದ್ದರು. ಈಗ ಕಾರ್ಯಾಂಗದ ರಚನೆಯಲ್ಲಿ ಬದಲಾವಣೆಯುಂಟಾಗಿದೆ. ಅಲ್ಲಿರುವ ಸಿಬ್ಬಂದಿಗಳ ಸಂಖ್ಯೆಯ ದೃಷ್ಟಿಯಿಂದ ಅದು ಬಹುಮಟ್ಟಿಗೆ ಭಾರತೀಯವೇ ಆಗಿದೆ ಹಾಗೂ ಅದರಲ್ಲಿ ಯಾರಾದರೂ ಇಂಗ್ಲೆಂಡಿಗೆ ಹೋಗುವ ಅವಕಾಶಗಳು ಎಷ್ಟು ವಿರಳವಾಗಿವೆಯೆಂದರೆ, ವಾಸ್ತವವಾಗಿ ಜವಾಬ್ದಾರಿ ಹೊರುವಂತೆ ಅವರನ್ನು ಎಂದೂ ಬಲವಂತಪಡಿಸುವಂತಿಲ್ಲ. ಈಗ ಇರುವಂತೆ ಸನ್ನಿವೇಶವು ಸಚಿವರ ತಪ್ಪಿನಿಂದ ಕೂಡಿದ ಕಾರ್ಯಚಟುವಟಿಕೆಗಳ ವಿರುದ್ಧವಾಗಿ ತತ್‌ಕ್ಷಣವಾಗಿಯಾಗಲಿ, ವಿಳಂಬವಾಗಿಯಾಗಲಿ, ಯಾವುದೇ ಪರಿಹಾರಕ್ರಮವನ್ನು ಒದಗಿಸುವುದಿಲ್ಲ. ಈ ಸನ್ನಿವೇಶವೇ ಮುಂದುವರಿಯಲು ಅವಕಾಶ ಮಾಡಿಕೊಡುವುದೆಂದರೆ ಸಂವಿಧಾನಾತ್ಮಕ ಸರ್ಕಾರದ ಮೂಲ ಆಧಾರವನ್ನು ನಾಶಪಡಿಸಿದಂತೆ. ಆದ್ದರಿಂದ ಭಾರತ ಸರ್ಕಾರದ ಶಾಸನದ ೧೧೦ ಮತ್ತು ೧೧೧ನೇ ಪ್ರಕರಣಗಳನ್ನು ಎಲ್ಲ ಬ್ರಿಟಿಷ್ ಪ್ರಜೆಗಳಿಗೂ– ಅವರು ಭಾರತೀಯರಾಗಿರಲಿ, ಯುರೋಪಿನವರಾಗಿರಲಿ, ಸಚಿವರುಗಳ ಆದೇಶಾನುಸಾರ ಶಾಸನವಿರುದ್ಧ ಕಾರ್ಯಚಟುವಟಿಕೆಗಳು ನಡೆದ ಸಂದರ್ಭದಲ್ಲಿ ನ್ಯಾಯಾಲಯಗಳಿಗೆ ಮೊರೆಹೋಗುವ ಹಕ್ಕು ಸಿಗುವಂತೆ ತಿದ್ದುಪಡಿ ಮಾಡತಕ್ಕದು ಎಂದು ನಾನು ಶಿಫಾರಸ್ ಮಾಡುತ್ತೇನೆ. ಸಚಿವರುಗಳಿಗೆ ಸಂಬಂಧಿಸಿದಂತೆ ಇಂಥದೊಂದು ಮಾರ್ಪಾಟು ಮಾಡುವಂತೆ ೧೯೧೯ರಲ್ಲಿಯೇ ಆಗ್ರಹಪಡಿಸಲಾಗಿತ್ತು. ಆದರೆ, ಈ ಸೂಚನೆ ಅಂಗೀಕೃತವಾಗಲಿಲ್ಲ. ಹೀಗೆ ಮಾಡುವುದರಿಂದ ಸಚಿವರುಗಳು ಮತ್ತು ಕಾರ್ಯಾಂಗದ ಕೌನ್ಸಿಲರುಗಳ ನಡುವೆ ದ್ವೇಷದಿಂದ ಕೂಡಿದ ಪ್ರತ್ಯೇಕತಾ ಭಾವನೆ ಬೆಳೆಯುತ್ತದೆ ಎಂಬುದೇ ಇದಕ್ಕೆ ಕಾರಣವಾಗಿತ್ತು. ಸರಕಾರಗಳಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಅನುಷ್ಠಾನಕ್ಕೆ ತಂದಾಗ, ಈ ವಿರೋಧ ಇಲ್ಲವಾಯಿತು.

(೨೫) ಶಾಸನವಿರುದ್ಧ ಚಟುವಟಿಕೆಗಳಿಗಾಗಿ ಸಚಿವರುಗಳನ್ನು ಶಾಸನಬದ್ಧ ಹೊಣೆಗಾರರನ್ನಾಗಿ ಮಾಡಬೇಕೆಂಬ ಅಭಿಪ್ರಾಯವನ್ನು ನಾನು ಎಷ್ಟು ಪ್ರಬಲವಾಗಿ ಸಮರ್ಥಿಸುತ್ತೇನೆಂದರೆ, ಸಂವಿಧಾನವೂ ಪ್ರತ್ಯೇಕವಾದ ನ್ಯಾಯಮಂಡಳಿಯೊಂದರ ರಚನೆಗೆ ಅವಕಾಶ ಮಾಡಿಕೊಡತಕ್ಕದ್ದು ಎಂದೂ ನಾನು ಸಲಹೆ ಮಾಡುತ್ತೇನೆ. ಈ ನ್ಯಾಯಮಂಡಳಿ ಶಾಸಕಾಂಗ ಅಥವಾ ಶಾಸಕಾಂಗದ ಒಂದು ಭಾಗ ಮತ್ತು ನ್ಯಾಯಾಂಗದ ಒಂದು ಭಾಗ– ಇವುಗಳಿಂದ ಕೂಡಿರಬೇಕು. ಈ ನ್ಯಾಯಮಂಡಳಿಯಲ್ಲಿ ತಮ್ಮಷ್ಟಕ್ಕೇ ಶಾಸನವಿರುದ್ಧ ವೆನಿಸುವಂಥ ಅಥವಾ ರಾಷ್ಟ್ರ ಕಲ್ಯಾಣದ ದೃಷ್ಟಿಯಿಂದ ಹಾನಿಕರವೆನಿಸುವಂಥ ಚಟುವಟಿಕೆ ನಡೆಸಿದ ಸಚಿವರುಗಳನ್ನು ಶಿಕ್ಷೆಗೆ ಗುರಿಪಡಿಸಲು ಸಾಧ್ಯವಾಗಬೇಕು. ಸಚಿವರುಗಳೇ ಜವಾಬ್ದಾರಿ ಹೊತ್ತು ಸರ್ಕಾರವನ್ನು ಅನುಷ್ಠಾನಕ್ಕೆ ತರುವುದರಿಂದಾಗಿ ಅವರಿಗೆ ಶಿಕ್ಷೆ ವಿಧಿಸುವುದು ಸಾಧ್ಯವಾಗುವುದಿಲ್ಲ ಎಂಬ ಅರಿವು ನನಗಿದೆ. ಆದರೆ ಭಾರತದಲ್ಲಿ ಸಚಿವರುಗಳು ಜವಾಬ್ದಾರಿ ಹೊತ್ತಿರುವ ಆಡಳಿತ ಪದ್ಧತಿ, ಪ್ರಗತಿಯ ಹಂತದಲ್ಲಷ್ಟೇ ಇದೆ ಎಂದು ನನಗನಿಸುತ್ತದೆ. ಆದ್ದರಿಂದ ಶಾಸಕಾಂಗ ಮತ್ತು ಕಾರ್ಯಾಂಗಗಳು ಸಚಿವರುಗಳ ಜವಾಬ್ದಾರಿಯ ಬಗೆಗಿನ ಅರಿವು ಹೊಂದುವವರೆಗೆ ಅನುಭವ ಸಾಲದಿರುವವರ ಕೈಯಲ್ಲಿರುವ ಅಧಿಕಾರದ ದುರುಪಯೋಗವನ್ನು ನಿಯಂತ್ರಿಸುವುದು ಅಗತ್ಯ. ಇಲ್ಲದಿದ್ದರೆ

ಅವರು ತಮ್ಮ ಅತಿಯಾದ ಜಾತಿನಿಷ್ಠೆಯಿಂದ ಕೆಡಕನ್ನುಂಟುಮಾಡುತ್ತಾರೆ. ಸುರಕ್ಷತೆಯನ್ನು ಆಗಾಗ ತೋರದೆ ಇರುವುದರಿಂದ, ಸುರಕ್ಷತೆ ಎಂದಿಗೂ ಅತಿಯೆನಿಸಲಾರದು.

(೨೬) ಕಾರ್ಯಾಂಗದ ಪ್ರತಿಯೊಬ್ಬ ಸದಸ್ಯರೂ ತನ್ನ ಚಟುವಟಿಕೆಗಳಿಗೆ ಮಾತ್ರ ಹೊಣೆಗಾರ ನಾಗಿರಲಿ ಅಥವಾ ಎಲ್ಲರ ಚಟುವಟಿಕೆಗಳಿಗೂ ಹೊಣೆಯಾಗಬೇಕಾಗಿ ಬರಲಿ– ಬೇರೆ ಮಾತುಗಳಲ್ಲಿ ಹೇಳುವುದಾದರೆ, ಹೊಣೆಗಾರಿಕೆ ವ್ಯಕ್ತಿಶಃ ಆಗಿರಲಿ ಅಥವಾ ಸಂಯುಕ್ತವಾಗಿರಲಿ– ಕಾರ್ಯಂಗದ ಸದಸ್ಯರ ನಡುವಣ ಸಂಬಂಧವನ್ನು ನಿರ್ಧರಿಸುವ ಪ್ರಶ್ನೆಯ ಬಗ್ಗೆ ಯಾರೂ ಅಧಿಕಾರವಾಣಿಯಿಂದ ಮಾತನಾಡು ವಂತಿಲ್ಲ. ಹಾಗಿದ್ದರೂ ನಾನು ಸಂಯುಕ್ತ ಹೊಣೆಗಾರಿಕೆಯನ್ನೇ ಬೆಂಬಲಿಸುತ್ತೇನೆ. ಇಂಥ ಪದ್ಧತಿಯಲ್ಲಿ ಕರ್ತವ್ಯಚ್ಯುತನಾದ ಸಚಿವನಿಗೆ ಶಿಕ್ಷೆ ವಿಧಿಸುವ ಸಂದರ್ಭದಲ್ಲಿ, ಶಾಸಕಾಂಗ ಕಾರ್ಯತಃ ಅಸಹಾಯಕ ವಾಗಿರುತ್ತದೆಂಬುದು ನನಗೆ ತಿಳಿದಿದೆ. ಸಂಯುಕ್ತ ಹೊಣೆಗಾರಿಕೆಯಿರುವಲ್ಲಿ, ಶಾಸಕಾಂಗಕ್ಕೆ ತಾನು ವಿರೋಧಿಸುವಂತಹ ಅಂಥ ಸಚಿವನ ಸಹೋದ್ಯೋಗಿಗಳನ್ನು ತೊಲಗಿಸಲು ಸಿದ್ಧತೆ ನಡೆಸದ ಹೊರತು, ಔಪಚಾರಿಕವಾಗಿ ಖಂಡಿಸುವ ಪರಿಸ್ಥಿತಿಯಲ್ಲಿಯೂ ಶಾಸಕಾಂಗ ಇರುವುದಿಲ್ಲ. ಸಂಸತ್ತಿನ ಕಾರ್ಯಾಂಗ ದೊಂದಿಗೆ ಕೆಲಸ ಮಾಡುವ ಯಾವುದೇ ಶಾಸಕಾಂಗವೂ ಹೀಗೆ ಮಾಡುವ ಧೈರ್ಯ ತೋರಿಸುವುದಿಲ್ಲ. ಏಕೆಂದರೆ, ಅದು ಹೀಗೆ ಮಾಡಿದರೆ, ಎಂದರೆ ಕಾರ್ಯಾಂಗವನ್ನು ಕೆಡವಿದರೆ, ಕಾರ್ಯಾಂಗ ಕೂಡ ಶಾಸಕಾಂಗದ ವಿಸರ್ಜನೆಗಾಗಿ ಒತ್ತಾಯಿಸುವ ಮೂಲಕ ಅದನ್ನು ಕೆಡವುತ್ತದೆ. ಅಂಥ ನ್ಯೂನತೆಯಿದ್ದಾಗ್ಯೂ ನಾನು ಎರಡು ಕಾರಣಗಳಿಗಾಗಿ ಸಂಯುಕ್ತ ಹೊಣೆಗಾರಿಕೆಯ ಪರವಾಗಿಯೇ ಇದ್ದೇನೆ. ಆಧುನಿಕ ರಾಷ್ಟ್ರದಲ್ಲಿ, ಶಾಸನವನ್ನು ಪ್ರಯೋಗಿಸುವ ಒಂದು ಆಡಳಿತಾಂಗವಾಗಿ ಕಾರ್ಯಾಂಗದ ಚಟುವಟಿಕೆ ಗಳೇನಿದ್ದರೂ ಅವು ಆನುಷಂಗಿಕ. ಕಾರ್ಯನೀತಿಗಳನ್ನು ನಿರ್ಧರಿಸಿ, ಶಾಸಕಾಂಗಕ್ಕೆ ಪ್ರಸ್ತಾವಗಳನ್ನು ಕಳುಹಿಸುವುದೇ ಅದರ ಮುಖ್ಯ ಕಾರ್ಯ. ನಿಜವಾಗಿ ಇದಕ್ಕೆ ಅಗತ್ಯವಾಗಿರುವ ಕೆಲಸವೆಂದರೆ, ಇದನ್ನು ನಿರ್ವಹಿಸುವಲ್ಲಿ ಕಾರ್ಯಾಂಗ ವಿಫಲವಾದುದೇ ಆದರೆ, ಕಾರ್ಯನೀತಿಗಳನ್ನು ರೂಪಿಸುವ ಕೆಲಸವನ್ನು ಕಾರ್ಯಾಂಗ ನಿರ್ವಹಿಸಬೇಕಾದರೆ, ಅದರ ಸದಸ್ಯರು ಒಮ್ಮತ ಹೊಂದಿರಬೇಕು. ಕಾರ್ಯಾಂಗದಲ್ಲಿ ಸಂಪೂರ್ಣ ಸಾಮರಸ್ಯವಿಲ್ಲದ ಹೊರತು, ಇಂಥ ಒಮ್ಮತವಿರುವುದು ಸಾಧ್ಯವಿಲ್ಲ. ಕಾರ್ಯಾಂಗದಲ್ಲಿ ಇಂಥ ಸಾಮಂಜಸ್ಯವನ್ನು ಸಂಯುಕ್ತ ಹೊಣೆಗಾರಿಕೆಯೊಂದೇ ಉಂಟುಮಾಡಬಲ್ಲದು ಎಂದು ನನಗ ನಿಸುತ್ತಿದೆ. ಸಂಯುಕ್ತ ಹೊಣೆಗಾರಿಕೆಯಿರಬೇಕೆಂದು ನಾನು ಶಿಫಾರಸ್ ಮಾಡಲು ಇನ್ನೊಂದು ಕಾರಣವೂ ಇದೆ. ಜಾತಿಮತಗಳ ಸೀಮೆಯನ್ನು ಮೀರಿ ಹೋಗುವ ಒಂದು ಸಾಮಾನ್ಯ ರಾಜಕೀಯ ವೇದಿಕೆಯ ಬೆಳವಣಿಗೆಗೆ ವ್ಯಷ್ಟಿ ಜವಾಬ್ದಾರಿ ಸಿದ್ಧಾಂತ ಎಂದೂ ಅವಕಾಶ ಮಾಡಿಕೊಡುವುದಿಲ್ಲ ಎಂಬ ಭಯ ನನಗಿದೆ. ವ್ಯಷ್ಟಿ ಜವಾಬ್ದಾರಿ ಸಿದ್ಧಾಂತವು ಶಾಶ್ವತ ಪಂಗಡಗಳನ್ನು ಸೃಷ್ಟಿಸುತ್ತದೆ. ಹಾಗೂ ಸರಕಾರದ ಆಡಳಿತವನ್ನು ಖಂಡಿಸುವುದು ಅಸಾಧ್ಯವಾಗುತ್ತದೆ. ಏಕೆಂದರೆ ಪಕ್ಷಗಳ ಸಂಮಿಳನದಿಂದ ರಚಿತವಾದ ಸರ್ಕಾರದ ಆಡಳಿತ ಯಾವಾಗಲೂ ಅಸ್ತಿರವೇ. ಅಲ್ಲದೆ, ಆಡಳಿತ ಕಾರ್ಯದ ಋಜುತ್ವದ ಮೇಲೆಯೂ ಮಾರಕ ಪರಿಣಾಮ ಉಂಟಾಗುತ್ತದೆ. ಸಮಷ್ಟಿ (ಸಂಯುಕ್ತ) ಹೊಣೆಗಾರಿಕೆಯಲ್ಲಿ ಪಕ್ಷವು ವಿಭಿನ್ನ ಅಭಿಪ್ರಾಯಗಳ ಘಟಕಗಳ ಕೂಟವಾಗಿದ್ದರೂ, ಪ್ರತಿ ಘಟಕದ ಸದಸ್ಯರನ್ನೂ, ಒಂದು ಸಮಗ್ರ ಕಾರ್ಯನೀತಿಯನ್ನು ಸೂತ್ರರೂಪಕ್ಕೆ, ಸಾಧ್ಯವಾದಷ್ಟೂ ಅತ್ಯುತ್ತಮ ರೀತಿಯಲ್ಲಿ ಕೆಲಸ ಮಾಡುವಂತೆ ಒತ್ತಾಯ ಮಾಡಲಾಗುತ್ತದೆ. ಹಾಗೆ ಮಾಡದೆ ಅವರಿಗೆ ಅನ್ಯಮಾರ್ಗವೇ ಇರುವುದಿಲ್ಲ. ಗುಂಪುಗಳ ಕಾರ್ಯಕ್ರಮಕ್ಕಿಂತ ವಿಸ್ತೃತವಾಗಿರುವ ಪಕ್ಷಗಳ ಕಾರ್ಯಕ್ರಮವನ್ನು ಮುಂದಿರಿಸುವ ಅಭ್ಯಾಸ ಒಂದು

ಬಗೆಯ ಶಿಕ್ಷಣವನ್ನು ನೀಡುತ್ತದೆ. ಭಾರತದ ಸ್ಥಿತಿಗತಿಗಳನ್ನು ತಿಳಿದಿರುವ ಎಲ್ಲರೂ ಇಂಥ ಶಿಕ್ಷಣದ ಅಗತ್ಯವನ್ನು ಮನಗಂಡವರೇ ಆಗಿರುತ್ತಾರೆ.

(೨೭) ಸಂಯುಕ್ತ ಹೊಣೆಗಾರಿಕೆಯನ್ನು ಪ್ರಬಲಗೊಳಿಸುವುದು ಹೇಗೆ ಎಂಬುದು ಸಾಕಷ್ಟು ಮುಖ್ಯವಾಗಿರುವ ವಿಷಯ ಕಾನೂನು ಪರಿಭಾಷೆಗಳನ್ನು ಬಳಸಿ, ಇದನ್ನು ಮಾಡಹೋದರೆ ಆಗ ಆಡಳಿತಾಂಗದ ಮುಖ್ಯಸ್ಥರಿಗಾಗಲಿ, ಶಾಸಕಾಂಗದ ಮುಖ್ಯಸ್ಥರಿಗಾಗಲಿ, ಇಡೀ ಕಾರ್ಯಾಂಗವನ್ನು ವಜಾ ಮಾಡದೆ ಒಬ್ಬ ಸಚಿವರನ್ನು ಮಾತ್ರ ವಜಾಮಾಡುವ ಸ್ವಾತಂತ್ರ್ಯ ಇರುವುದಿಲ್ಲ. ಆದ್ದರಿಂದ ಈ ವಿಚಾರವನ್ನು ವಿಧ್ಯುಕ್ತ ಸಭೆಗೆ ಬಿಟ್ಟುಬಿಡುವುದೇ ಲೇಸು. ವಿಧ್ಯುಕ್ತ ಸಭೆಯನ್ನು ಹೇಗೆ ರಚಿಸುವುದೆಂಬ ಪ್ರಶ್ನೆ ಇನ್ನೂ ಹಾಗೆಯೇ ಉಳಿದಿದೆ. ಸಚಿವರುಗಳನ್ನು ರಾಜ್ಯಪಾಲರು ಆಯ್ಕೆ ಮಾಡುವ ಬದಲು ತನ್ನ ಸಹೋದ್ಯೋಗಿಗಳನ್ನು ಆಯ್ಕೆ ಮಾಡುವ ಕೆಲಸವನ್ನು ಸಚಿವರಲ್ಲಿ ಒಬ್ಬನಿಗೇ ವಹಿಸಿದರೆ, ಹೀಗೆ ರೂಪುಗೊಂಡ ಮಂತ್ರಿಮಂಡಲವು ಸಂಯುಕ್ತ ಜವಾಬ್ದಾರಿಯ ಅಡಿಪಾಯದ ಮೇಲೆಯೇ ಕಾರ್ಯ ನಿರ್ವಹಿಸಬೇಕಾಗುತ್ತದೆ ಎಂದು ನನಗನಿಸುತ್ತದೆ. ಯಾರೋ ಒಬ್ಬ ಸಚಿವನನ್ನು ಮಾತ್ರ ಹೊರದೂಡುವ ಅವಕಾಶವಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ಸಚಿವರನ್ನೂ ಆಯ್ಕೆ ಮಾಡುವ ಕಾರ್ಯವನ್ನು ನೇರವಾಗಿ ಕೈಗೊಳ್ಳದಂತೆ, ಬದಲಾಗಿ ಮೊದಲು ಮುಖ್ಯಮಂತ್ರಿಯನ್ನು ಆರಿಸಿ ಸರ್ಕಾರವನ್ನು ರಚಿಸುವ ಕೆಲಸವನ್ನು ಅವನಿಗೇ ವಹಿಸುವಂತೆ, ರಾಜ್ಯಪಾಲರಿಗೆ ಸೂಚನೆ ನೀಡಬೇಕೆಂದು ನಾನು ಶಿಫಾರಸ್ ಮಾಡುತ್ತೇನೆ.

(೨೮) ಸರಕಾರದ ಆಡಳಿತದ ಉಸ್ತುವಾರಿ ನೋಡಿಕೊಳ್ಳಲು ಏಳು ಮಂದಿ ಸಚಿವರುಗಳು ಇರಬೇಕೆಂದು ನನ್ನ ಸಹೋದ್ಯೋಗಿಗಳು ಶಿಫಾರಸು ಮಾಡುತ್ತಾರೆ. ಈ ಶಿಫಾರಸು ಸಚಿವರುಗಳ ಸಂಖ್ಯೆ ಇಂತಿಷ್ಟೇ ಇರಬೇಕೆಂದು ನಿರ್ಣಯಿಸಿರುವುದರಿಂದ, ಆ ಮಟ್ಟಿಗೆ ಇದನ್ನೊಪ್ಪಲು ನನಗೆ ಸಾಧ್ಯವಿಲ್ಲ. ಭಾವೀ ಸರ್ಕಾರವು ಏಳಕ್ಕಿಂತಲೂ ಕಮ್ಮಿ ಸಂಖ್ಯೆಯ ಸಚಿವರೊಂದಿಗೆ ಆಡಳಿತ ನಡೆಸಲು ಸಮರ್ಥವಾಗಬಹುದು ಅಥವಾ ಏಳಕ್ಕಿಂತಲೂ ಹೆಚ್ಚು ಮಂದಿ ಅಗತ್ಯವೆಂದು ಭಾವಿಸಬಹುದು. ಸರಕಾರದ ಆಡಳಿತವನ್ನು ಶಾಸಕಾಂಗದ ಸದಸ್ಯರ ಬೆಂಬಲವಿಲ್ಲದೆ ನಡೆಸುವುದು ಅಸಾಧ್ಯವಾಗಬಹುದಾದ್ದರಿಂದ, ಅವರ ವೈಯುಕ್ತಿಕ ಹಂಬಲಗಳನ್ನು ಪೂರೈಸುವ ಸಲುವಾಗಿ ಖಾತಾರಹಿತ ಸಚಿವರನ್ನೂ ನೇಮಿಸಬೇಕಾಗಬಹುದೆಂದು ಬೇರೆ ಹೇಳುವ ಅಗತ್ಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಚಿವರ ಸಂಖ್ಯೆಗೆ ಸಂಬಂಧಪಟ್ಟ ಪ್ರಶ್ನೆಯನ್ನು ಶಾಸಕಾಂಗದ ತೀರ್ಮಾನಕ್ಕೇ ಬಿಟ್ಟುಬಿಡುವುದು ಅತ್ಯಂತ ವಿವೇಕಯುತವಾಗಿ ನನಗೆ ಕಾಣುತ್ತದೆ.

# ಅಧ್ಯಾಯ-೩

## ರಾಜ್ಯಪಾಲರ ಸ್ಥಾನ ಮತ್ತು ಅಧಿಕಾರಗಳು

(೨೯) ಈಗಿರುವ ಸಂವಿಧಾನದ ಮೇರೆಗೆ ರಾಜ್ಯದ ರಾಜ್ಯಪಾಲರಿಗೆ, ಹೀಗೆಯೇ ಎಂದು ಖಚಿತವಾಗಿ ಹೇಳಬಹುದಾದ ಸ್ಥಾನವೇನೂ ಇಲ್ಲ. ಸರಕಾರದ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಹೊಣೆಯೂ ಇಲ್ಲದೆಯೇ ಸರಕಾರದ ಮುಖ್ಯಾಧಿಕಾರಿಯಾಗಿ ಪ್ರಾತಿನಿಧ್ಯ ಪಡೆಯುವಂಥ ಸಂವಿಧಾನಾತ್ಮಕ ಮುಖಂಡನ ಸ್ಥಾನಮಾನಗಳೂ ಅವರಿಗಿಲ್ಲ. ಸರಕಾರದ ಆಗುಹೋಗುಗಳಿಗೆ ಸಂಬಂಧಿಸಿದಂತೆ ಪರಿಪೂರ್ಣ ನಿರ್ದೇಶನ ನೀಡುವ ಪರಿಸ್ಥಿತಿಯಲ್ಲಿಯೂ ಅವರಿಲ್ಲ. ಆದರೆ ಇವೆರಡು ಕಾರ್ಯಗಳಲ್ಲಿಯೂ ಅವರ ಪಾಲು ಇದೆ. ನಿರಂಕುಶ ಪ್ರಭು ಮತ್ತು ಸಂವಿಧಾನಾತ್ಮಕ ಮುಖ್ಯಸ್ಥ- ಹೀಗೆ ರಾಜ್ಯಪಾಲರು ದ್ವಿಪಾತ್ರವನ್ನು ನಿರ್ವಹಿಸುವಂತೆ ಮಾಡಿದ ಪರಿಸ್ಥಿತಿ, ರಾಜ್ಯಪಾಲರ ಹಿತದೃಷ್ಟಿಯಿಂದಾಗಲಿ, ಅಥವಾ ಸರ್ಕಾರೀ ಯಂತ್ರವು ಸರಾಗವಾಗಿ ಕಾರ್ಯ ನಿರ್ವಹಿಸುವ ದೃಷ್ಟಿಯಿಂದಾಗಲಿ ಸಂತೋಷಕರವಾದುದೇನೂ ಅಲ್ಲ. ರಾಜ್ಯಪಾಲರ ಸ್ಥಾನಕ್ಕೆ ಸಂಬಂಧಿಸಿದ ಇಂಥ ಪರಿಸ್ಥಿತಿಗೆ ಕಾರಣವಾಗಿರುವ ಸಮಸ್ಯೆಗಳ ಸ್ವರೂಪವೇನೇ ಇರಲಿ, ಇದು ೧೯೧೯ರಲ್ಲಿ ಅನುಷ್ಠಾನಕ್ಕೆ ಬಂದ ರೀತಿಯ ಸಂವಿಧಾನಕ್ಕೆ ಅನುಗುಣವಾಗಿಯೇ ಇದೆ. ಸಂವಿಧಾನವು ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಮಾನ್ಯ ಮಾಡದೆ ಇದ್ದುದರಿಂದಾಗಿ, ರಾಜ್ಯಪಾಲರ ಸ್ಥಾನವು ಸಂವಿಧಾನಾತ್ಮಕ ಮುಖ್ಯಸ್ಥನ ಸ್ಥಾನಕ್ಕೆ ಇಳಿಯಲಿಲ್ಲ. ಇನ್ನೊಂದೆಡೆ ಸರಕಾರದ ಆಗುಹೋಗುಗಳಿಗೆ ಸಂಬಂಧಿಸಿದ ನಿರ್ದೇಶನವನ್ನು ಕೆಲವು ವಿಭಾಗಗಳಲ್ಲಿ ಜವಾಬ್ದಾರೀ ಸಚಿವರಿಗೆ ವಹಿಸಿದುದರಿಂದಾಗಿ ಏನೂ ಜವಾಬ್ದಾರಿಯಿಲ್ಲದ ಒಬ್ಬ ಮುಖಂಡನಾಗಿ ತನ್ನ ಹಿಂದಿನ ಸ್ಥಾನವನ್ನು ಉಳಿಸಿಕೊಳ್ಳುವ ಅವಕಾಶ ರಾಜ್ಯಪಾಲರಿಗೆ ಇಲ್ಲ. ಹೀಗೆ ರಾಜ್ಯಪಾಲರ ಸ್ಥಾನದಲ್ಲಿ ಉಂಟಾದ ಬದಲಾವಣೆಯು ಜವಾಬ್ದಾರೀ ಸರ್ಕಾರದ ರಚನೆಯ ದಿಸೆಯಲ್ಲಿ ಉಂಟಾದ ಪ್ರಗತಿಯ ದಾಮಾಷಕ್ಕೆ ಅನುಗುಣವಾಗಿ, ಕಾರ್ಯಾಂಗಕ್ಕೆ ಸಂಬಂಧಿಸಿದ ರಾಜ್ಯಪಾಲರ ಅಧಿಕಾರಗಳನ್ನು ಮಿತಿಗೊಳಿಸುವ ಬೌದ್ಧಿಕ ಸಿದ್ಧಾಂತವನ್ನು ನಿರ್ಣಯಿಸಬೇಕೆಂದು ೧೯೧೯ರಲ್ಲಿ ಮುಂದಿರಿಸಲಾದ ತತ್ತ್ವದ ತರ್ಕವನ್ನು ಅನುಸರಿಸಿ, ರಾಜ್ಯದ ರಾಜ್ಯಪಾಲರ ಸ್ಥಾನವನ್ನು ಸಂವಿಧಾನಾತ್ಮಕ ಮುಖ್ಯಸ್ಥನ ಸ್ಥಾನಕ್ಕೆ ಇಳಿಸತಕ್ಕದ್ದು ಎಂದು ನಾನು ಶಿಫಾರಸು ಮಾಡುತ್ತೇನೆ. ನಿಜವಾಗಿಯೂ ಹೇಳುವುದಾದರೆ, ಸಂಪೂರ್ಣ ಜವಾಬ್ದಾರಿ ಸರ್ಕಾರದ ಪದ್ಧತಿಗೆ ಅನುಸಾರವಾದಂಥ, ಬೇರಾವುದೇ ಸ್ಥಾನ ರಾಜ್ಯಪಾಲರದು ಎಂದು ಆಲೋಚಿಸುವುದು ಕೂಡಾ ಅಸಾಧ್ಯ.

(೩೦) ಅಧಿಕಾರಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಸರಕಾರದ ಕಾರ್ಯಾಂಗದಲ್ಲಿ ಪ್ರಭುವನ್ನು ಪ್ರತಿನಿಧಿಸುವವನಾಗಿ ರಾಜ್ಯಪಾಲರಿಗೆ, ಮಂತ್ರಿ ಮಂಡಳಕ್ಕೆ ನೇಮಕಾತಿ ಮಾಡುವ ಅಧಿಕಾರವಿರಬೇಕು. ಇದೇ ರೀತಿ, ಆಡಳಿತದ ಯಾವುದೇ ಶಾಖೆಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಸಚಿವರು ಪ್ರಸ್ತಾಪಿಸುವ ಯಾವುದೇ ಆಶಯವನ್ನು ಅಂಗೀಕರಿಸುವ, ಇಲ್ಲವೇ ನಿರಾಕರಿಸುವ ಅಂತಿಮ ಅಧಿಕಾರವೂ ಅವರಿಗಿರಬೇಕು. ಶಾಸಕಾಂಗದಲ್ಲಿ ಪ್ರಭುವನ್ನು ಪ್ರತಿನಿಧಿಸುವವನಾಗಿ, ಸಮಿತಿ

ಅಂಗೀಕರಿಸಿದ ಮಸೂದೆಗಳಿಗೆ ಸಂಬಂಧಿಸಿದಂತೆ, ಅವರು ಈ ಕೆಳಗೆ ಕಾಣಿಸಿದ ಅಧಿಕಾರಗಳನ್ನು ಹೊಂದಿರುತ್ತಾರೆ: (೧) ಒಪ್ಪಿಗೆ ನೀಡುವುದು, (೨) ಮಹಾಪ್ರಭುಗಳ ಅಭಿಪ್ರಾಯಗಳನ್ನು ಕಾದು, ಒಪ್ಪಿಗೆ ನೀಡುವುದನ್ನು ಕಾಯ್ದಿರಿಸುವುದು (೩) ಮತ್ತು ಒಪ್ಪಿಗೆ ನೀಡದೆ ಇರುವುದು.

(೩೧) ಹಾಗಿದ್ದರೂ, ರಾಜ್ಯಪಾಲರಿಗೆ ನೀಡಲಾದ ಈ ಅಧಿಕಾರಗಳ ಚಲಾವಣೆಯನ್ನು ಶಾಸಕಾಂಗಕ್ಕೆ ಜವಾಬ್ದಾರರಾಗಿರುವ ಸಚಿವರುಗಳ ಸಲಹೆಗಳನ್ನು ಪಡೆದೇ ಮಾಡಬೇಕೆಂಬ ಷರತ್ತಿಗೊಳಪಡಿಸಲಾಗಿದೆ. ಹೀಗೆ ಹೇಳಿದ ಮಾತ್ರಕ್ಕೆ, ತನ್ನ ಸಚಿವರುಗಳಿಗೆ ಒಪ್ಪಿಗೆಯಾಗದ ರೀತಿಯಲ್ಲಿ ರಾಜ್ಯಪಾಲರಿಗೆ ಕಾರ್ಯ ನಿರ್ವಹಿಸುವ ಅವಕಾಶವಿಲ್ಲ ಎಂದೇನೂ ಇದರರ್ಥವಲ್ಲ. ಇದಕ್ಕೆ ಪ್ರತಿಯಾಗಿ ಸಚಿವರುಗಳ ಕಾರ್ಯನೀತಿಯನ್ನು ತಾನು ಒಪ್ಪುತ್ತಿಲ್ಲ ಎಂದು ಅವರಿಗೆ ತಿಳಿಸುವ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ಬದಲಾಗಿ ತಾನು ವಿರೋಧಿಸುವ ಕಾರ್ಯನೀತಿಯನ್ನೇ ಅನುಸರಿಸಬೇಕೆಂದು ಒತ್ತಾಯಿಸುವಂಥ ಸಚಿವರುಗಳನ್ನು ವಾಸ್ತವವಾಗಿ ವಜಾ ಮಾಡುವ ಸ್ವಾತಂತ್ರ್ಯವನ್ನು ರಾಜ್ಯಪಾಲರು ಉಳಿಸಿಕೊಂಡಿರುತ್ತಾರೆ. ಏಕೆಂದರೆ ಶಾಸಕಾಂಗಕ್ಕೆ ಜವಾಬ್ದಾರನಾಗಿರುವಂಥ ಸಚಿವನೊಬ್ಬನ ಅಭಿಪ್ರಾಯವನ್ನು ಸಂವಿಧಾನಾತ್ಮಕವಾಗಿ ಅನುಸರಿಸಲೇಬೇಕೆಂದು ಒತ್ತಾಯಪಡಿಸುವ ಅಗತ್ಯವೇನೂ ಇರುವುದಿಲ್ಲ. ಮತದಾರರ ಸಾಮಾನ್ಯ ಅಪೇಕ್ಷೆಗೆ ಅನುಸಾರವಾಗಿ ನಡೆಯುವುದಷ್ಟೇ ಅವನ ಅವಶ್ಯ ಕರ್ತವ್ಯವಾಗಿರುತ್ತದೆ. ಅವನು ಸಚಿವ ಸಮುದಾಯದ ಅಪೇಕ್ಷೆಯನ್ನು ಪ್ರತಿನಿಧಿಸುತ್ತಾನೆಂಬ ಭಾವನೆಯೇ ಅದಕ್ಕೆ ಕಾರಣ. ಆದರೆ ಸಾಮಾನ್ಯ ಮತದಾರರ ಅಪೇಕ್ಷೆಯನ್ನು ಸಚಿವನು ಸರಿಯಾಗಿ ಪ್ರತಿನಿಧಿಸುತ್ತಿದ್ದಾನೆಯೆ ಎಂದು ಸಂದೇಹಪಡಲು ಅವನಿಗೆ ಸಾಕಷ್ಟು ಕಾರಣಗಳಿರುವ ಸನ್ನಿವೇಶಗಳೂ ಇರಬಹುದು. ಪರಿಣಾಮವಾಗಿ ಎಲ್ಲ ಜವಾಬ್ದಾರಿ ಸರ್ಕಾರಗಳ ಸಂವಿಧಾನಗಳೂ ಇಂಥದೊಂದು ಸಾಧ್ಯತೆಯನ್ನು ಗುರುತಿಸುತ್ತವೆಯಷ್ಟೇ ಅಲ್ಲ. ವಾಸ್ತವವಾಗಿ ಅವು, ಮತದಾರ ಸಮುದಾಯದ ಅಪೇಕ್ಷೆಯೇನಿದೆಯೊ ಅದನ್ನು ಸ್ಪಷ್ಟವಾಗಿ ಗೊತ್ತುಪಡಿಸುವ ಎಲ್ಲ ಸಾಧ್ಯ ಮಾರ್ಗೋಪಾಯಗಳನ್ನು ಅವನಿಗೆ ಒದಗಿಸುತ್ತವೆ. ಈ ಉದ್ದೇಶಕ್ಕಾಗಿಯೇ ಪ್ರತಿಯೊಂದು ಜವಾಬ್ದಾರಿ ಸರ್ಕಾರದ ಸಂವಿಧಾನವೂ, ಸಚಿವರುಗಳನ್ನು ವಜಾ ಮಾಡಲು ಹಾಗೂ ಶಾಸಕಾಂಗ ತಮಗೆ ಬೆಂಬಲ ನೀಡುತ್ತದೆಂಬ ಭರವಸೆಯಿಂದ ತನ್ನೊಂದಿಗೆ ಸಹಮತಕ್ಕೆ ಬರುವ ಇತರರನ್ನು ಸಚಿವರಾಗಿ ನೇಮಿಸಲು ರಾಜ್ಯಪಾಲರಿಗೆ ಅನುಮತಿ ನೀಡುತ್ತದೆ. ಹೊಸ ಸಚಿವರಿಗೆ ಬೆಂಬಲ ನೀಡಲು ಶಾಸಕಾಂಗ ನಿರಾಕರಿಸಿದರೆ, ಎಲ್ಲ ಜವಾಬ್ದಾರಿ ಸರ್ಕಾರಗಳ ಸಂವಿಧಾನಗಳೂ ರಾಜ್ಯಪಾಲರಿಗೆ ಇನ್ನೊಂದು ಮಾರ್ಗೋಪಾಯವನ್ನು ಒದಗಿಸುತ್ತವೆ. ಆಗ ರಾಜ್ಯಪಾಲರು, ಮತದಾರ ಸಮುದಾಯಗಳು ತಮಗೆ ಬೆಂಬಲ ನೀಡಬಹುದೆಂಬ ಆಶಯದಿಂದ ಅವಕ್ಕೇ ಮನವಿ ಮಾಡಿಕೊಳ್ಳಬಹುದು. ಇಂಥ ಮಾರ್ಗೋಪಾಯಗಳು ಸರಕಾರದ ರಾಜ್ಯಪಾಲರಿಗಂತೂ ತೆರವಾಗಿರಲೇಬೇಕು. ಆದರೆ ಇವುಗಳಿಗಿಂತ ಮಿಗಿಲಾದ ಯಾವುದೇ ಅಧಿಕಾರವನ್ನು ಯಾವುದೇ ಸಂವಿಧಾನ ಅವರಿಗೆ ನೀಡುವುದಿಲ್ಲ ಎಂಬುದನ್ನು ಮನಸ್ಸಿನಲ್ಲಿ ಇರಿಸಿಕೊಳ್ಳಬೇಕಾದ್ದೂ ಅಗತ್ಯ. ಮತದಾರ ಸಮುದಾಯದ ಅಪೇಕ್ಷೆಯನ್ನು ಗೊತ್ತುಪಡಿಸಿಕೊಂಡ ಅನಂತರ ತೀರ್ಮಾನವು ತನಗೆ ವಿರುದ್ಧವಾದುದೆಂದು ಕಂಡುಬಂದರೆ, ಆಗ ಪ್ರತಿಯೊಂದು ಜವಾಬ್ದಾರಿ ಸರ್ಕಾರದ ಸಮುದಾಯವೂ, ಸೋಲುವುದನ್ನು, ಅಧಿಕಾರ ತ್ಯಜಿಸುವುದನ್ನು ಅಥವಾ ಹೋರಾಡುವುದನ್ನು ಬಿಟ್ಟುಳಿದಂತೆ ಇನ್ನಾವುದೇ ಮಾರ್ಗವನ್ನು ರಾಜ್ಯಪಾಲರಿಗೆ ಒದಗಿಸುವುದಿಲ್ಲ. ರಾಜ್ಯದ ರಾಜ್ಯಪಾಲರು ಇಷ್ಟಕ್ಕೆ ತೃಪ್ತಿಪಡಬೇಕು. ಪ್ರಸ್ತುತ ಸಂವಿಧಾನದ ಅನ್ವಯ ಇರುವಂಥ ಶಾಸಕಾಂಗದ ಅಂಗೀಕಾರ ಪಡೆಯದ ಕಾರ್ಯಗಳನ್ನು ಪ್ರಮಾಣೀಕರಿಸುವುದು, ಶಾಸಕಾಂಗ ಅನುಮೋದಿಸದ ವೆಚ್ಚ

ಗಳನ್ನು ಮಂಜೂರು ಮಾಡುವುದು ಅಥವಾ ಸಚಿವರನ್ನು ವಜಾ ಮಾಡುವ ಹಾಗೂ ಸ್ವತಃ ತಾನೇ ವ್ಯವಹಾರಗಳನ್ನು ನಿರ್ವಹಿಸುವ ಮೂಲಕ ಸಂವಿಧಾನವನ್ನೇ ತಾತ್ಕಾಲಿಕವಾಗಿ ರದ್ದುಪಡಿಸುವುದೇ ಮೊದಲಾದ ಸ್ವತಂತ್ರ ಕಾರ್ಯನಿರ್ವಾಹಣಾಧಿಕಾರ, ಯಾವುದೇ ಸನ್ನಿವೇಶಗಳಲ್ಲಿಯೂ ರಾಜ್ಯಪಾಲರಿಗಿರುವುದಿಲ್ಲ. ಆದ್ದರಿಂದ ರಾಜ್ಯಪಾಲರನ್ನು ಸಂವಿಧಾನಾತ್ಮಕ ಮುಖ್ಯಸ್ಥರನ್ನಾಗಿ ಮಾಡುವುದಕ್ಕೆ ಒಪ್ಪಿಗೆ ನೀಡುವ ಹಾಗೂ ತಾತ್ಕಾಲಿಕವಾಗಿ ರದ್ದುಪಡಿಸುವುದು, ಅವರ ಅಧಿಕಾರಗಳನ್ನು ಕಿತ್ತುಕೊಳ್ಳುವುದು ಮತ್ತು ಈ ರೀತಿ ಶಾಸಕಾಂಗಕ್ಕೆ ಜವಾಬ್ದಾರರಾಗಿರುವ ಸಚಿವರುಗಳ ಅಭಿಪ್ರಾಯವನ್ನು ಪಡೆಯದೇ ಸ್ವತಂತ್ರವಾಗಿ ಅವರು ಕಾರ್ಯ ನಿರ್ವಹಿಸುವುದು ಸಾಧ್ಯವಿಲ್ಲದಂತೆ ಮಾಡುವುದು ಅಗತ್ಯವಾಗಿರುತ್ತದೆ.

(೩೨) ಸಚಿವರ ಸಲಹೆಯ ಮೇರೆಗೆ ಕಾರ್ಯ ನಿರ್ವಹಿಸುವುದು ರಾಜ್ಯಪಾಲರ ಅವಶ್ಯ ಕರ್ತವ್ಯವೆಂದು ತಿಳಿಸುವ ಪ್ರಕರಣದ ಖಚಿತವಾದ ಭಾಷೆ ತಕ್ಕಮಟ್ಟಿಗೆ ಮುಖ್ಯವಾದುದಾಗಿದೆ. ಈ ವಿಚಾರವನ್ನು ಕುರಿತ ೫೨(೩)ನೇ ಪ್ರಕರಣವನ್ನು ತುಂಬ ಸಂದಿಗ್ಧ ಭಾಷೆಯಲ್ಲಿ ನಿರೂಪಿಸಲಾಗಿರುವಂತೆ ಕಾಣುತ್ತದೆ. ಅಪೇಕ್ಷಿತ ಗುರಿಯನ್ನು ತಲುಪಲು ಸಾಧ್ಯವಾಗುವಂಥ ಖಚಿತ ಭಾಷೆಯನ್ನು ಈ ಪ್ರಕರಣ ಹೊಂದಿಲ್ಲ. ರಾಜ್ಯಪಾಲರು ಸಚಿವರ ಸಲಹೆಯಂತೆ ಕಾರ್ಯ ನಿರ್ವಹಿಸಬೇಕು ಎನ್ನುವುದರ ಬದಲಾಗಿ, ರಾಜ್ಯಪಾಲರ ಯಾವುದೇ ಆದೇಶ, ಅದಕ್ಕೆ ಸಚಿವರುಗಳ ಮೇಲು ರುಜು ಆಗದ ಹೊರತು, ಊರ್ಜಿತವಾಗಲಾರದು ಎಂದು ಪ್ರಕರಣ ತಿಳಿಸಿದ್ದರೆ ಒಳ್ಳೆಯದಿತ್ತು. ಹೀಗೆ ಅವಶ್ಯ ಕರ್ತವ್ಯವೇನೆಂಬುದನ್ನು ಸೂಚಿಸುವಂಥ ಖಚಿತವಾದ ಭಾಷೆ ಅವಶ್ಯಕ. ಆದ್ದರಿಂದ ಪ್ರಕರಣದ ಭಾಷೆಯಲ್ಲಿ ಇಂಥದೊಂದು ಬದಲಾವಣೆಯಾಗಬೇಕೆಂದು ನಾನು ಶಿಫಾರಸ್ ಮಾಡುತ್ತೇನೆ.

(೩೩) ರಾಜ್ಯಪಾಲರ ಅಧಿಕಾರಗಳನ್ನು ಖಚಿತವಾಗಿ ತಿಳಿಯಪಡಿಸುವುದರೊಂದಿಗೆ, ಕಾರ್ಯಾಂಗದಲ್ಲಿ ಅವರ ಸ್ಥಾನಮಾನಗಳೇನೆಂಬುದನ್ನೂ ನಿಷ್ಕೃಷ್ಟವಾಗಿ ನಿರೂಪಿಸಬೇಕು. ವಿದ್ಯಮಾನಗಳಿಗೆ ಸಂಬಂಧಿಸಿದಂತೆ ನಿರ್ದೇಶನ ನೀಡುವ ಜವಾಬ್ದಾರಿಯಿಂದ ಬಿಡುಗಡೆ ಹೊಂದಿದ ರಾಜ್ಯಪಾಲರ ಕಾರ್ಯಭಾರವು ಕಾರ್ಯ ನಿರ್ವಹಿಸುವುದಕ್ಕಿಂತ ಹೆಚ್ಚಾಗಿ ಕಾರ್ಯಗಳ ಮೇಲ್ವಿಚಾರಣೆ ನಡೆಸುವುದಾಗಿರುತ್ತದೆ. ಯಾರ ಮೇಲೆ ಜವಾಬ್ದಾರಿ ಬೀಳುತ್ತದೆಯೋ ಅವರು ತಮ್ಮ ಮಾರ್ಗದರ್ಶನಕ್ಕಾಗಿ ಸಂವಿಧಾನದಲ್ಲಿ ಸ್ಪಷ್ಟವಾಗಿ ನಿರೂಪಿಸಲಾದ ತತ್ತ್ವಗಳನ್ನು ಉಲ್ಲಂಘಿಸದಂತೆ ನೋಡಿಕೊಳ್ಳುವುದೇ ರಾಜ್ಯಪಾಲರ ಅತಿಮುಖ್ಯ ಕೆಲಸ. ಈ ಕಾರ್ಯವನ್ನು ನಿರ್ವಹಿಸಬೇಕಾದರೆ, ಸ್ಥಳೀಯ ರಾಜಕಾರಣದೊಂದಿಗೆ, ಅವರು ಸಂಬಂಧ ಹೊಂದಿರಕೂಡದು. ನಿಷ್ಪಕ್ಷಪಾತವಾದ ಮೇಲ್ವಿಚಾರಣೆಗೆ ಇಂಥ ಸ್ವಾತಂತ್ರ್ಯ ಅವರಿಗೆ ಅಗತ್ಯವೆಂಬುದು ಸ್ಪಷ್ಟ. ಅವರನ್ನು ಕಾರ್ಯಾಂಗದಿಂದ ದೂರವಿರಿಸುವುದೇ, ಸ್ವತಂತ್ರರನ್ನಾಗಿ ಇರಿಸುವ ಉತ್ತಮ ವಿಧಾನ. ರಾಜ್ಯಪಾಲರು ರಾಜಕೀಯ ವಿವಾದಗಳಲ್ಲಿ ನೇರವಾಗಿ ಭಾಗವಹಿಸಿದಾಗ, ಸಾರ್ವಜನಿಕರಿಗೆ ಅವರ ನಿಷ್ಪಕ್ಷಪಾತ ತೀರ್ಮಾನಕ್ಕೆ ಸಂಬಂಧಿಸಿದಂತೆ ಭರವಸೆ ಕಡಿಮೆಯಾಗುವುದು ಸಹಜವೇ. ಶಾಸಕಾಂಗ, ಕಾರ್ಯಾಂಗಗಳ ನಡುವಣ ವಿವಾದಗಳಲ್ಲಿ ರಾಜ್ಯಪಾಲರ ಸಂಬಂಧವಿದೆ ಎಂಬ ಭಾವನೆ ಸಾರ್ವಜನಿಕರ ಮನಸ್ಸಿನಲ್ಲಿ ಮೂಡುವುದರಿಂದ, ಎಂಥ ಪರಿಣಾಮಗಳುಂಟಾಗಬಹುದೆಂದು ಸಂದೇಹಿಸುವುದೂ ಸಾಧ್ಯವಾಗುವುದಿಲ್ಲ. ನ್ಯಾಯಯುತವಾದುದೆಂದು ಭಾವಿಸಬಹುದಾದ ರೀತಿಯಲ್ಲಿ ತನ್ನ ಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದರೆ, ರಾಜ್ಯಪಾಲರಿಗೆ ಪಕ್ಷಕ್ಕಿಂತ ಮಿಗಿಲಾದ ಸ್ಥಾನವಿರಬೇಕಾದುದು ಮುಖ್ಯ. ಈ ಉದ್ದೇಶದಿಂದ ಅವರು ಶಾಸಕಾಂಗ, ಕಾರ್ಯಾಂಗಗಳೆರಡರಿಂದಲೂ ಸ್ವತಂತ್ರರಾಗಿರಬೇಕಾದ ಅಗತ್ಯವಿದೆ.

ಆದಕಾರಣ ರಾಜ್ಯಪಾಲರು ಕಾರ್ಯಾಂಗದ ಒಂದು ಭಾಗವೂ ಆಗಿರಬಾರದು, ಅದರ ಅಧ್ಯಕ್ಷತೆ ವಹಿಸುವ ಹಕ್ಕೂ ಅವರಿಗಿರಕೂಡದು. ಕಾರ್ಯಾಂಗದ ಸಭೆಗಳನ್ನು ಪ್ರಧಾನ ಮಂತ್ರಿಯೇ ಕರೆಯತಕ್ಕದ್ದು ಹಾಗೂ ಸಭೆಗಳ ಅಧ್ಯಕ್ಷತೆಯನ್ನೂ ಅವರೇ ವಹಿಸತಕ್ಕದ್ದು. ಇದರಲ್ಲಿ ರಾಜ್ಯಪಾಲರ ಮಧ್ಯಪ್ರವೇಶವಿರಲೇ ಕೂಡದು.

# ವಿಭಾಗ–III

# ಪ್ರಾಂತೀಯ ಶಾಸಕಾಂಗ

## ಅಧ್ಯಾಯ–೧

ಮತದಾನದ ಹಕ್ಕು

(೩೪) ನಗರ ಪ್ರದೇಶಗಳಲ್ಲಿ ಮತದಾನ ಪದ್ಧತಿ ಈಗಿರುವಂತೆಯೇ ಇರಬೇಕು ಹಾಗೂ ಗ್ರಾಮೀಣ ಪ್ರದೇಶದಲ್ಲಿನ ಭೂಕಂದಾಯವನ್ನು ಅರ್ಧದಷ್ಟು ಕಡಮೆ ಮಾಡಬೇಕು ಎಂದು ನನ್ನ ಸಹೋದ್ಯೋಗಿಗಳು ಶಿಫಾರಸ್ ಮಾಡಿದ್ದಾರೆ. ಇದನ್ನು ನಾನು ಒಪ್ಪಲಾರೆ. ಮತದಾನ ಒಂದು ಹಕ್ಕು ಎನ್ನುವುದಕ್ಕಿಂತ ಹೆಚ್ಚಾಗಿ ಅದೊಂದು ಅನುಗ್ರಹವೆಂಬ ಹಾಗೆ ನನ್ನ ಸಹೋದ್ಯೋಗಿಗಳು ಆ ಬಗ್ಗೆ ವಿವೇಚನೆ ನಡೆಸಿದ್ದಾರೆ. ಯಾವುದೇ ರಾಷ್ಟ್ರದಲ್ಲಿ ರಾಜಕೀಯ ಸಮಾಜದ ಅಡಿಪಾಯವಾಗಿ ಇಂಥ ಅಭಿಪ್ರಾಯವನ್ನು ಒಪ್ಪುವುದು ತೀರಾ ಅಪಾಯಕರವೆಂದು ನನಗೆನಿಸುತ್ತದೆ. ಏಕೆಂದರೆ ಪ್ರತಿನಿಧಿಸುವ ಹಕ್ಕಿನ ಪರಿಕಲ್ಪನೆಯನ್ನು ಅಸಂಗತವೆಂದು ದೂರ ಮಾಡಬೇಕಾದ ಪಕ್ಷದಲ್ಲಿ, ಪ್ರತಿನಿಧಿಸುವ ನೈತಿಕ ಹಕ್ಕನ್ನು ಮನಃಕಲ್ಪಿತವಾದ ಅಥವಾ ಭಾವನಾತ್ಮಕವಾದ ನಿರೋಧವಷ್ಟೇ ಅಲ್ಲದೆ, ಇನ್ನೇನೂ ಅಲ್ಲವೆಂದು ಪರಿಗಣಿಸಬೇಕಾದ ಪಕ್ಷದಲ್ಲಿ ಮತದಾನದ ಹಕ್ಕನ್ನು ರಾಜಕೀಯವಾಗಿ ಅಧಿಕಾರದಲ್ಲಿರುವ ವ್ಯಕ್ತಿಗಳು ತಮ್ಮ ಅಭಿಪ್ರಾಯಕ್ಕನುಸಾರವಾಗಿ ನೀಡುವ ಇಲ್ಲವೇ ತಡೆಹಿಡಿಯುವ ಒಂದು ವಿಶೇಷಾಧಿಕಾರವೆಂದು ಪರಿಗಣಿಸುವುದಾದ ಪಕ್ಷದಲ್ಲಿ, ಚುನಾವಣೆಯ ಹಕ್ಕನ್ನು ಪಡೆಯದವರ ರಾಜಕೀಯ ಸ್ವಾತಂತ್ರ್ಯವೆಂಬುದು ಸಂಪೂರ್ಣವಾಗಿ, ಚುನಾವಣೆಯ ಹಕ್ಕು ಪಡೆದಿರುವವರ ಅಧೀನದಲ್ಲಿ ಇರುತ್ತದೆಂದು ತಿಳಿದುಬರುತ್ತದೆ. ಇಂಥದೊಂದು ಅಭಿಪ್ರಾಯವನ್ನೊಪ್ಪುವುದೆಂದರೆ ಗುಲಾಮಗಿರಿಯನ್ನೊಪ್ಪಿದಂತೆಯೇ ಎಂದರೆ ತಪ್ಪೇನೂ ಅಲ್ಲ. ಏಕೆಂದರೆ ಗುಲಾಮಗಿರಿ ಕೂಡ ಅಧಿಕಾರದಲ್ಲಿರುವವರು ನೀಡಲು ಆಯ್ದುಕೊಳ್ಳುವ ಹಕ್ಕುಗಳನ್ನು ಬಿಟ್ಟುಳಿದಂತೆ ಇನ್ನಾವ ಹಕ್ಕೂ ಜನರಿಗಿಲ್ಲ ಎಂಬ ಆಧಾರಕಲ್ಪನೆಯನ್ನು ಒಳಗೊಂಡಿರುತ್ತದೆ. ಇಂಥದೊಂದು ತೀರ್ಮಾನಕ್ಕೆ ಬರುವಂತೆ ಮಾಡುವ ಸಿದ್ಧಾಂತ ಯಾವುದೇ ಸ್ವರೂಪದ ಜನಪ್ರಿಯ ಸರ್ಕಾರಕ್ಕೆ ಮಾರಕವೆಂದು ಭಾವಿಸಬೇಕು. ಆದ್ದರಿಂದ ಒಟ್ಟಿನಲ್ಲಿ ನಾನು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ.

(೩೫) ಮತದಾನವೆಂದರೆ, ಕೆಲವು ಹೆಸರುಗಳನ್ನು ಬರೆದಿರುವ ಕಾಗದದ ತುಂಡೊಂದನ್ನು ಮತಪೆಟ್ಟಿಗೆಯೊಳಗೆ ತುರುಕುವ ಅರ್ಹತೆಯ ಪ್ರಶ್ನೆಯಲ್ಲದೆ, ಇನ್ನೇನೂ ಅಲ್ಲವೆಂಬಂತೆ ನನ್ನ ಸಹೋದ್ಯೋಗಿಗಳು ಈ ಪ್ರಶ್ನೆಯನ್ನು ಪರಿಗಣಿಸಿದ್ದಾರೆ. ಸಾಮಾನ್ಯ ಜನರಿಗೆ ಮತದಾನದ ಹಕ್ಕನ್ನು ವಿಸ್ತರಿಸುವುದಕ್ಕೆ ನಿರ್ಣಾಯಕವೆನಿಸಿರುವ ಸಾಕ್ಷರತೆಯ ಬಗ್ಗೆ ಅವರು ಒತ್ತಾಯಿಸುತ್ತಾ ಇಲ್ಲ. ಮತದಾನದ ಬಗೆಗಿನ ಇಂಥದೊಂದು ಅಭಿಪ್ರಾಯವು ನಿಸ್ಸಂದೇಹವಾಗಿಯೂ ತೋರಿಕೆಯಾಗಿದೆ ಹಾಗೂ ಸಂಪೂರ್ಣವಾಗಿ ತಪ್ಪು ತಿಳಿವಳಿಕೆಯಿಂದ ಕೂಡಿದೆ. ಮತದಾನವೆಂದರೇನೆಂಬ ಬಗ್ಗೆ ನಿಜವಾದ ಕಲ್ಪನೆ ಬಹು ಜನರ ಮನಸ್ಸಿನಲ್ಲಿದ್ದಿದ್ದರೆ, ಮತಪತ್ರದಲ್ಲಿ ಗುರುತು ಮಾಡುವುದಕ್ಕಷ್ಟೇ ಸಂಬಂಧಿಸಿದ ಒಂದು ವ್ಯವಹಾರವಾಗಿರು

ವುದಕ್ಕಿಂತ ಹೆಚ್ಚಾಗಿ "ಯಾವ ಮಿತಿಯೊಳಗೆ ಸಂಘಟಿತ ಬದುಕು ಉಳಿಯಬೇಕೋ ಮತ್ತು ಆ ಸಮಿತಿಗಳನ್ನು ನಿಯಂತ್ರಿಸುವ ಕಾರ್ಯದಲ್ಲಿ ನೇರವಾಗಿ ಮತ್ತು ಸಕ್ರಿಯವಾಗಿ ಭಾಗವಹಿಸುವುದು" ಎಂದು ಅರಿಯುತ್ತಿದ್ದರು. ಮತದಾನಕ್ಕೆ ಸಂಬಂಧಿಸಿದ ಈ ಪರಿಕಲ್ಪನೆಯನ್ನು ಒಪ್ಪಿಕೊಂಡೆವೆಂದರೆ ಆಗ ಹುಚ್ಚನಲ್ಲದ ಪ್ರತಿಯೊಬ್ಬ ವ್ಯಕ್ತಿಗೂ ಮತದಾನದ ಹಕ್ಕು ನೀಡುವುದು ಅನಿವಾರ್ಯವೆನಿಸುತ್ತದೆ. ಏಕೆಂದರೆ ಸಂಘಟಿತ ಜೀವನದಲ್ಲಿ ಎಲ್ಲ ವಯಸ್ಕರೂ ಪಾಲ್ಗೊಂಡಿರುತ್ತಾರೆ. ಅಂಥ ಸಂಘಟಿತ ಜೀವನದ ಪ್ರಭಾವ ಪ್ರತಿ ವ್ಯಕ್ತಿಯ ಮೇಲೆಯೂ ಪರಿಣಾಮ ಬೀರುವುದರಿಂದ ಪ್ರತಿಯೊಬ್ಬನಿಗೂ ಮಿತಿಗಳನ್ನು ಗೊತ್ತುಪಡಿಸುವ ಹಕ್ಕು ಇರಬೇಕು. ಈ ಪೂರ್ವ ಹೇಳಿಕೆಗಳಿಂದ ವ್ಯಕ್ತಿ ಬಡವನಾದಷ್ಟೂ ಅವನಿಗೆ ಮತದಾನದ ಹಕ್ಕಿನ ಅವಶ್ಯಕತೆ ಹೆಚ್ಚು ಎಂದು ತಿಳಿಯುತ್ತದೆ. ಖಾಸಗಿ ಆಸ್ತಿಪಾಸ್ತಿಗಳನ್ನು ಆದರಿಸಿರುವ ಪ್ರತಿಯೊಂದು ಸಮಾಜದಲ್ಲಿಯೂ ಮಾಲಿಕರು ಹಾಗೂ ಕೆಲಸಗಾರರ ನಡುವೆ ಇರುವಂಥ ಸಂಘಟಿತ ಜೀವನದ ಇತಿಮಿತಿಗಳು ಮೊದಲಿನಿಂದಲೇ, ಕೆಲಸಗಾರರಿಗೆ ವಿರುದ್ಧವಾದ ರೀತಿಯಲ್ಲಿ ನಿರ್ಧರಿಸಲ್ಪಟ್ಟಿರುತ್ತವೆ. ಕೆಲಸಗಾರನ ಯೋಗಕ್ಷೇಮಕ್ಕೆ, ಮಾಲಿಕರಿಂದ ಉಂಟಾಗಬಹುದಾದ ಕೆಡುಕಿನಿಂದ ರಕ್ಷಣೆ ನೀಡಬೇಕಾಗಿದ್ದರೆ, ಸಂಘಟಿತ ಜೀವನದ ಮಿತಿಗಳನ್ನು ನಿಯತವಾಗಿ (ಆಗಾಗ) ಮರು ನಿಗದಿಪಡಿಸುವುದು ಅಗತ್ಯ. ಆದರೆ, ಮತದಾನದ ಹಕ್ಕನ್ನು ಸಂಪತ್ತಿನಿಂದ ಬೇರ್ಪಡಿಸಿ ಎಲ್ಲ ವಯಸ್ಕ ಬಡವರಿಗೂ ವಿಸ್ತರಿಸದ ಹೊರತು, ಹೀಗೆ ಮಾಡುವುದು ಕಷ್ಟಸಾಧ್ಯ. ಆದ್ದರಿಂದ ಯಾವುದೇ ದೃಷ್ಟಿಯಿಂದ ತೀರ್ಮಾನಿಸಿದರೂ ವಯಸ್ಕ ಮತದಾನದ ಪರವಾಗಿರುವ ನಿರ್ಧಾರವನ್ನು ವಿರೋಧಿಸುವುದು ಅಸಾಧ್ಯವೆಂಬುದು ಸ್ಪಷ್ಟವಾಗುತ್ತದೆ. ನಾನು ಈ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ಮತ್ತು ಸ್ತ್ರೀಪುರುಷರೆಂಬ ಭೇದವಿಲ್ಲದೆ ೨೧ ವರ್ಷ ಮೇಲ್ಪಟ್ಟ ಎಲ್ಲ ವಯಸ್ಕರಿಗೂ ಮತದಾನದ ಹಕ್ಕನ್ನು ವಿಸ್ತರಿಸಬೇಕೆಂದು ಶಿಫಾರಸ್ ಮಾಡುತ್ತೇನೆ.

(೩೬) ವಯಸ್ಕ ಮತದಾನ ಪದ್ಧತಿಯನ್ನು ಪ್ರಾರಂಭಿಸುವುದಕ್ಕಿರುವ ಏಕೈಕ ಆಧಾರವೆಂದರೆ, ರಾಜಕೀಯ ನ್ಯಾಯ. ರಾಜಕೀಯ ಔಚಿತ್ಯವೂ ವಯಸ್ಕ ಮತದಾನ ಪದ್ಧತಿಯನ್ನು ಪ್ರಾರಂಭಿಸುವುದರ ಪರವಾಗಿರುತ್ತದೆ. ಮಹಮದೀಯರಂಥ ಅಲ್ಪಸಂಖ್ಯಾತ ವರ್ಗದವರು ಕೋಮುವಾರು ಮತದಾರ ಸಮುದಾಯಕ್ಕಾಗಿ ಒತ್ತಾಯಿಸಲು ಇರುವ ಕಾರಣಗಳಲ್ಲಿ ಒಂದೆಂದರೆ, ಸಂಯುಕ್ತ ಮತದಾರ ಸಮುದಾಯದ ಪದ್ಧತಿಯಲ್ಲಿ, ಅಲ್ಪಸಂಖ್ಯಾತ ವರ್ಗದವರ ದೃಷ್ಟಿಯಲ್ಲಿ ಅನಪೇಕ್ಷಣೀಯರೆನಿಸಿದ ವ್ಯಕ್ತಿಗಳಿಗೇ ಸ್ಥಾನಗಳು ಸಿಗುತ್ತವೆಯೇನೋ ಎಂದು ಭಯಪಡುವಷ್ಟರ ಮಟ್ಟಿಗೆ, ಚುನಾವಣೆಯ ಮೇಲೆ ಬಹುಸಂಖ್ಯಾತ ವರ್ಗಕ್ಕೆ ಸೇರಿದ ಮತದಾರರು ಪ್ರಭಾವ ಬೀರುತ್ತಾರೆ. ವಯಸ್ಕ ಮತದಾನ ಪದ್ಧತಿಯನ್ನು ಪ್ರಾರಂಭಿಸುವುದರ ಮೂಲಕ ಇಂಥದೊಂದು ಸ್ಪರ್ಧೆಯನ್ನು ಪರಿಣಾಮಕಾರಿಯಾಗಿ ಬಗೆಹರಿಸಲು ಸಾಧ್ಯವೆಂದು ವರದಿಯ ಮುಂದಿನ ಒಂದು ಭಾಗದಲ್ಲಿ ನಾನು ಸೂಚಿಸಿದ್ದೇನೆ. ಕೋಮುವಾರು ಮತದಾರ ಸಮುದಾಯಕ್ಕೊಂದು ಪರ್ಯಾಯವಾಗಿ ವಯಸ್ಕ ಮತದಾನ ಪದ್ಧತಿಯ ಮಹತ್ವವನ್ನು ಕುರಿತಂತೆ ಬಹುಸಂಖ್ಯಾತ ವರ್ಗಗಳ ಜನರು ಆಲೋಚಿಸಿಲ್ಲ. ಕೋಮುವಾರು ಮತದಾರ ಸಮುದಾಯವನ್ನು ಉಳಿಸಿಕೊಳ್ಳುವುದು ಒಳ್ಳೆಯದು ಎಂಬಂತೆ, ಬಹುಸಂಖ್ಯಾತ ವರ್ಗದವರು ಮುನ್ನಡೆದಿದ್ದಾರೆ ಹಾಗೂ ವಯಸ್ಕ ಮತದಾನ ಪದ್ಧತಿಯನ್ನು ಕಟ್ಟುಪಾಡಿನಲ್ಲಿ ಇರಿಸಬೇಕಾದ ಒಂದು ಕೆಡುಕು ಎಂಬಂತೆ ಪರಿಗಣಿಸಿದ್ದಾರೆ. ಈ ಬಗೆಗಿನ ನನ್ನ ಅಭಿಪ್ರಾಯ ವ್ಯತಿರಿಕ್ತವಾಗಿದೆ. ಕೋಮುವಾರು ಮತದಾರ ಸಮುದಾಯ ಒಳ್ಳೆಯದಲ್ಲವೆಂದೂ, ವಯಸ್ಕ ಮತದಾನ ಪದ್ಧತಿ ಒಳ್ಳೆಯದೆಂದೂ ನಾನು ವಾದಿಸುತ್ತೇನೆ. ನನ್ನ ಅಭಿ

ಪ್ರಾಯ ಒಪ್ಪುವವರು, ವಯಸ್ಕ ಮತದಾನ ಪದ್ಧತಿಯನ್ನು, ಅದರಲ್ಲಿ ಅಂತರ್ಗತವಾಗಿರುವ ಒಳ್ಳೆಯ ಅಂಶಗಳಿಗಾಗಿ ಮಾತ್ರವಲ್ಲ; ಬದಲಾಗಿ ಅದು ಕೋಮುವಾರು ಮತದಾರ ಸಮುದಾಯದಿಂದ ಉಂಟಾಗುವ ಕೆಡುಕನ್ನು ತೊಡೆದುಹಾಕಲೂ ಶಕ್ತವಾಗಿದೆ ಎಂಬ ಕಾರಣಕ್ಕಾಗಿ ಕೂಡ ಒಪ್ಪುತ್ತಾರೆ. ಆದರೆ ವಯಸ್ಕ ಮತದಾನ ಪದ್ಧತಿಯಲ್ಲಿ ನಂಬಿಕೆಯಿರದ ರಾಜಕಾರಣಿಗಳು ಕೂಡ ಸುಲಭವಾಗಿ ಈ ಅಭಿಪ್ರಾಯವನ್ನು ಒಪ್ಪುತ್ತಾರೆಂಬ ಭರವಸೆ ನನಗಿದೆ. ಏಕೆಂದರೆ ಹೆಚ್ಚು ಕೆಡುಕಿಗಿಂತ ಕಡಿಮೆ ಕೆಡುಕೇ ಆಯ್ಕೆ ಮಾಡಬಹು ದಾದುದು ಹಾಗೂ ಒಂದೊಮ್ಮೆ ವಯಸ್ಕ ಮತದಾನ ಪದ್ಧತಿ ಒಂದು ಕೆಡುಕೇ ಆಗಿದ್ದರೂ, ಅದು ಕೋಮುವಾರು ಮತದಾರ ಸಮುದಾಯಕ್ಕಿಂತ ಕಡಿಮೆ ಕೆಡುಕಿನದು ಎಂದು ಹೇಳುವುದು ವ್ಯವಹಾರ ಜ್ಞಾನವಷ್ಟೇ ಆಗಿರುತ್ತದೆ. ರಾಜಕೀಯ ನ್ಯಾಯದ ಬೆಂಬಲ ಪಡೆದ, ಹಾಗೂ ರಾಜಕೀಯ ಒತ್ತಾಸೆಯಿಂದ ಕೂಡಿದ ವಯಸ್ಕ ಮತದಾನ ಪದ್ಧತಿಗಾಗಿಯೂ ಗಣನೀಯ ಪ್ರಮಾಣದ ಸಾರ್ವಜನಿಕ ಅಭಿಪ್ರಾಯ ಒತ್ತಾಯಿಸುತ್ತದೆಂದು ನನಗನಿಸುತ್ತದೆ. ಬ್ರಾಹ್ಮಣೇತರರು ಮತ್ತು ಅಸ್ಪೃಶ್ಯರನ್ನು ಬಿಟ್ಟುಳಿದಂತೆ, ಭಾರತದಲ್ಲಿನ ಎಲ್ಲ ರಾಜಕೀಯ ಪಕ್ಷಗಳ ಅಭಿಪ್ರಾಯಗಳನ್ನು ಒಳಗೊಂಡ ನೆಹ್ರೂ ಸಮಿತಿಯ ವರದಿಯೂ ವಯಸ್ಕ ಮತದಾನ ಪದ್ಧತಿಯನ್ನು ಪ್ರಾರಂಭಿಸುವುದರ ಪರವಾಗಿಯೇ ಇದೆ. ದುರ್ಬಲ ವರ್ಗಗಳವರೂ ವಯಸ್ಕ ಮತದಾನ ಪ್ರಾರಂಭವಾಗಬೇಕೆಂದು ಒತ್ತಾಯಿಸಿದ್ದಾರೆ. ಸಿಂಧ್ ಮಹಮದೀಯ ಸಂಘ, ಬಾಂಬೆ ಸರ್ಕಾರದ ಒಬ್ಬ ಮಹಮದೀಯ ಸದಸ್ಯ ಹಾಗೂ ಒಬ್ಬ ಬ್ರಾಹ್ಮಣೇತರ ಸದಸ್ಯ ಕೂಡ ವಯಸ್ಕ ಮತದಾನದ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗೆ ವಯಸ್ಕ ಮತದಾನ ಪದ್ಧತಿಗೆ ಗಣನೀಯ ಪ್ರಮಾಣದ ಸಾರ್ವಜನಿಕ ಅಭಿಪ್ರಾಯದ ಬೆಂಬಲವಿದೆ. ಈ ಪ್ರಮಾಣದ ಸಾರ್ವಜನಿಕ ಅಭಿಪ್ರಾಯವನ್ನು ತಾವೇಕೆ ನಿರ್ಲಕ್ಷಿಸಿದ್ದೇವೆಂಬುದಕ್ಕೆ ನನ್ನ ಸಹೋದ್ಯೋಗಿಗಳು ಕಾರಣ ಕೊಡುತ್ತಾ ಇಲ್ಲ.

(೩೭) ವಯಸ್ಕ ಮತದಾನ ಪದ್ಧತಿ ಪ್ರಾರಂಭಿಸುವುದಕ್ಕೆ ವಿರುದ್ಧವಾಗಿರುವ ನನ್ನ ಸಹೋದ್ಯೋಗಿಗಳ ತೀರ್ಮಾನಕ್ಕೆ ಸಂಬಂಧಿಸಿದಂತೆ ಸಾಕಷ್ಟು ಮಹತ್ವದ ಎರಡು ವಿಚಾರಗಳಿರುವಂತೆ ಕಾಣುತ್ತದೆ. ಮೊದಲನೆ ಯದು, ರಾಷ್ಟ್ರದಲ್ಲಿರುವ ಅನಕ್ಷರತೆಯ ವ್ಯಾಪ್ತಿ. ರಾಷ್ಟ್ರದ ಜನಸಮುದಾಯದಲ್ಲಿ ನಿರಕ್ಷರತೆ ಇರುವು ದನ್ನು ಯಾರೂ ಅಲ್ಲಗಳೆಯಲಾರರು. ಆದರೆ, ಮತದಾನದ ಪ್ರಶ್ನೆಯ ಮೇಲೆ ಈ ಅಂಶದ ಪ್ರಭಾವ ವೇನಾದರೂ ಇರಲೇಬೇಕು ಎಂಬ ಅಭಿಪ್ರಾಯ ಸರಿ ಎಂದು ಒಪ್ಪಲು ನಾನು ಸಿದ್ಧನಿಲ್ಲ. ಮೊತ್ತಮೊದ ಲನೆಯದಾಗಿ ಅನಕ್ಷರಸ್ಥರ ಅನಕ್ಷರತೆ ಅವರ ತಪ್ಪಲ್ಲ. ಜನರಿಗೆ ಶಿಕ್ಷಣ ನೀಡುವ ಅತಿಪ್ರಮುಖವಾಗಿರುವ ಕಾರ್ಯವನ್ನು ಸ್ವತಃ ವಹಿಸಿಕೊಳ್ಳಲು ಬಾಂಬೆ ಸರ್ಕಾರ ಬಹುಕಾಲ ಒಪ್ಪಿರಲಿಲ್ಲ ಹಾಗೂ ಅದು ಈ ಕಾರ್ಯವನ್ನು ಕೈಗೆತ್ತಿಕೊಂಡಾಗ ಶಿಕ್ಷಣ ಪಡೆಯುವ ಅವಕಾಶವನ್ನು ಉದ್ದೇಶಪೂರ್ವಕವಾಗಿ ಕೆಲವು ವರ್ಗಗಳವರಿಗೆ ಮಾತ್ರ ಸೀಮಿತಗೊಳಿಸಿತು. ಎಂದರೆ, ಶಿಕ್ಷಣಾವಕಾಶವನ್ನು ಎಲ್ಲರಿಗೂ ವಿಸ್ತರಿಸಲು ಅದು ನಿರಾಕರಿಸಿತು. ಈ ವಾಸ್ತವಾಂಶವನ್ನು ಒಂದು ಕಟ್ಟುಕಥೆ ಎಂದು ಭಾವಿಸದಿರಲೆಂದು, ೧೯೫೦– ೫೧ರ ಬಾಂಬೆ ಸರಕಾರದ ಶಿಕ್ಷಣ ಮಂಡಳಿಯ ವರದಿಯ ಕೆಲವು ಉಧೃತ ಭಾಗಗಳತ್ತ ಗಮನ ಸೆಳೆಯ ಬಯಸುತ್ತೇನೆ. (ಈ ಸಾರಾಂಶಗಳು ವರದಿಯ ಕೊನೆಯಲ್ಲಿ ಅನುಬಂಧದ ರೂಪದಲ್ಲಿ ಈ ಪುಸ್ತಕದ ೫೩೧–೫೩೭ನೆಯ ಪುಟಗಳಲ್ಲಿ ಮುದ್ರಿತವಾಗಿವೆ–ಸಂ.)

(೩೮) ೧೮೫೪ರವರೆಗೂ ವರ್ಗ ಶಿಕ್ಷಣಕ್ಕೆ ಪ್ರತಿಯಾಗಿ ಸಮೂಹ ಶಿಕ್ಷಣದತ್ತಲೇ ತನ್ನ ಒಲವು ಎಂದು ಸರ್ಕಾರ ಸ್ವತಃ ಪ್ರಕಟಿಸಿರಲಿಲ್ಲ. ಆದರೆ ಜನರಲ್ಲಿ ಶಿಕ್ಷಣ ಪ್ರಸಾರ ಮಾಡಬೇಕೆಂಬ ಬಗೆಗಿನ ಸರ್ಕಾರದ ಕಾತರ, ಕೆಲವು ಠರಾವುಗಳನ್ನು ಅಂಗೀಕರಿಸುವುದಕ್ಕಿಂತ ಬಹಳ ದೂರವೇನೂ ಹೋಗಿರಲಿಲ್ಲ.

ಆರ್ಥಿಕ ನೆರವು ನೀಡುವ ವಿಷಯದಲ್ಲಿ, ಸರ್ಕಾರ ಯಾವಾಗಲೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅತ್ಯಂತ ಜಿಪುಣತನದಿಂದ ವರ್ತಿಸಿತ್ತು. ಯಾವಾಗಲೂ ತೆರಿಗೆ ವಿಧಿಸುವುದರತ್ತಲೇ ಒಲವು ತೋರಿಸುವ ಸರ್ಕಾರ, ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಕುರಿತ, ಮಾನ್ಯ ಶ್ರೀ ಗೋಖಲೆಯವರ ಪ್ರಸ್ತಾಪ– ಸಾಕಷ್ಟು ಲಾಭದ ತೆರಿಗೆಗಳಿಂದ ಕೂಡಿದ್ದರೂ– ಅದನ್ನೊಪ್ಪಲು ಹೇಗೆ ನಿರಾಕರಿಸಿತು ಎಂಬುದು ಗಮನಾರ್ಹವಾಗಿರುತ್ತದೆ. ಸುಧಾರಣೆಯನ್ನು ಪ್ರಾರಂಭಿಸಿದುದರಿಂದ, ಅಭಿವೃದ್ಧಿಯೇನೂ ಆಗಲಿಲ್ಲ. ಸರ್ಕಾರದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಮಸೂದೆಯನ್ನು ಅಂಗೀಕರಿಸುವುದನ್ನು ಬಿಟ್ಟುಳಿದಂತೆ ಸಮೂಹ ಶಿಕ್ಷಣದ ದಿಸೆಯಲ್ಲಿ ಮೆಚ್ಚಬಹುದಾದಂಥ ಪ್ರಗತಿಯೇನೂ ಆಗಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ತೌಲನಿಕವಾಗಿ ಹೇಳುವುದಾದರೆ, ಶಿಕ್ಷಣದ ಪ್ರಗತಿಯ ಬಗ್ಗೆ ಎಂದೂ ಆಸಕ್ತಿ ತೋರಿಸದ ಉದಾಸೀನ ಮನೋಭಾವದ ಅಥವಾ ತಿಳಿವಳಿಕೆಯಿಲ್ಲದ ಸಿಬ್ಬಂದಿಗಳಿಂದ ಕೂಡಿದ ಸ್ಥಳೀಯ ಪ್ರಾಧಿಕಾರಗಳಿಗೆ ಶಿಕ್ಷಣ ವಿಷಯವನ್ನು ವರ್ಗಾಯಿಸಿದ ಪರಿಣಾಮವಾಗಿ, ಶಿಕ್ಷಣ ಇನ್ನಷ್ಟು ಅವನತಿ ಹೊಂದಿತು.

(೩೯) ಅಸ್ಪೃಶ್ಯರಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಶಿಕ್ಷಣ ಪಡೆಯುವ ಅವಕಾಶವನ್ನು ವಾಸ್ತವವಾಗಿಯೇ ಅವರಿಗೆ ನೀಡಿರಲಿಲ್ಲ. ಶಿಕ್ಷಣ ಪಡೆಯುವ ಮಾರ್ಗದಲ್ಲಿ, ಅಸ್ಪೃಶ್ಯತೆಯೇ ಅವರಿಗೆ ದುಸ್ತರ ತಡೆಯಾಗಿತ್ತು. ಸರ್ಕಾರ ಕೂಡ ಅಸ್ಪೃಶ್ಯತೆಗೆ ತಲೆಬಾಗಿತ್ತು. ಭಾರತದಲ್ಲಿ ಪ್ರಚಲಿತವಾಗಿರುವಂಥ ಸಾಮಾಜಿಕ ವ್ಯವಸ್ಥೆಗೆ ಅವಶ್ಯಕವಾದುದೆಂದು ಭಾವಿಸಿದ ಸರ್ಕಾರ, ಅಸ್ಪೃಶ್ಯರಿಗೆ ಸಾರ್ವಜನಿಕ ಶಾಲೆಗಳಲ್ಲಿ ಪ್ರವೇಶ ಪಡೆಯುವ ಹಕ್ಕನ್ನು ನಿರಾಕರಿಸಿತ್ತು. ೧೮೫೬ರ ಒಂದು ನಿರ್ಣಯದಲ್ಲಿ ಬಾಂಬೆ ಸರಕಾರವು, ಧಾರವಾಡದ ಒಂದು ಶಾಲೆಯಲ್ಲಿ ಮಹಾರ್ ಬಾಲಕನೊಬ್ಬನ ಮನವಿಯನ್ನು ನಿರಾಕರಿಸುತ್ತ ಹೀಗೆ ಹೇಳಿದೆ:

"ಪತ್ರವ್ಯವಹಾರಗಳಲ್ಲಿ ಈ ಪ್ರಶ್ನೆ ಕಾರ್ಯಶಃ ಭಾರೀ ಕ್ಲಿಷ್ಟವಾದ ಸಮಸ್ಯೆಯಾಗಿರುತ್ತದೆ..."

"೧. ಅರ್ಜಿ ಸಲ್ಲಿಸದ ಮಹಾರ್ ಬಾಲಕನಿಗೆ ನ್ಯಾಯ ಸಿಗಬೇಕೆಂಬ ಭಾವನೆಯುಂಟಾಗುವುದರಲ್ಲಿ ಸಂದೇಹಪಡುವುದು ಸಾಧ್ಯವಿಲ್ಲ. ಧಾರವಾಡದಲ್ಲಿ ಸದ್ಯ ಇರುವ ಶಿಕ್ಷಣಾವಕಾಶಗಳನ್ನು ಪಡೆಯದಂತೆ ಅವನನ್ನು ತಡೆಯುವಲ್ಲಿ ವ್ಯಕ್ತವಾಗಿರುವ ಪೂರ್ವಾಗ್ರಹಗಳನ್ನು ದೂರ ಮಾಡಬೇಕೆಂಬುದರಲ್ಲಿ ಸರ್ಕಾರಕ್ಕೆ ವಿಶ್ವಾಸವಿದೆ."

"೨. ಆದರೆ ಒಬ್ಬನ ಅಥವಾ ಕೆಲವೇ ವ್ಯಕ್ತಿಗಳ ಒಳಿತಿಗಾಗಿ, ಪರಂಪರಾಗತವಾಗಿ ಬಂದ ಭಾವನೆಗಳ ನಡುವೆ ಅನಾವಶ್ಯಕ ಪ್ರವೇಶ ಮಾಡುವುದರಿಂದ ಬಹುಶಃ ಶಿಕ್ಷಣದ ಮುಖ್ಯ ಉದ್ದೇಶಕ್ಕೆ ಅಪಾರ ಹಾನಿಯುಂಟಾಗುತ್ತದೆ ಎಂಬುದನ್ನು ಸರ್ಕಾರ ತನ್ನ ಮನಸ್ಸಿನಲ್ಲಿರಿಸಿಕೊಳ್ಳಬೇಕಾಗಿದೆ. ಮನವಿದಾರನಿಗೆ ಉಂಟಾಗಿರುವ ನಷ್ಟಕ್ಕೆ ಮೂಲತಃ ಪ್ರಸ್ತುತ ಸರ್ಕಾರ ಕಾರಣವಲ್ಲ. ಅಲ್ಲದೆ, ಮಹಾರ್ ಬಾಲಕನ ಕೋರಿಕೆಯಂತೆ, ಅವನ ಪರವಾಗಿ ಮಧ್ಯಪ್ರವೇಶ ಮಾಡುವುದರ ಮೂಲಕ ಸರ್ಕಾರ ಸಂಪೂರ್ಣ ತೊಡೆದುಹಾಕಲಾರದ ಅಡ್ಡಿಯೇ ಮನವಿದಾರನ ತೊಂದರೆಗೆ ಕಾರಣ."

೩೬ ವರ್ಷಗಳ ಅನಂತರ ನೇಮಕಗೊಂಡ ಹಂಟರ್ ಆಯೋಗ ಕೂಡ, ಕೇವಲ ಜಾತಿಯ ಆಧಾರದ ಮೇಲೆ, ಸರಕಾರಿ ಶಾಲೆ ಅಥವಾ ಕಾಲೇಜುಗಳಿಗೆ ಯಾರಿಗೂ ಪ್ರವೇಶ ನಿರಾಕರಿಸ ಕೂಡದು ಎಂಬ ತತ್ವವನ್ನು ಸರ್ಕಾರ ಒಪ್ಪಬೇಕು ಎಂದು ಸ್ಪಷ್ಟವಾಗಿ ತಿಳಿಸಿದೆ. ಆದರೆ ಈ ತತ್ವವನ್ನು

"ಸಾಕಷ್ಟು ಎಚ್ಚರಿಕೆಯಿಂದ ಅನ್ವಯಿಸಬೇಕಾದ್ದು ಅಗತ್ಯ"ವೆಂದೂ ಅದು ಅಭಿಪ್ರಾಯಪಟ್ಟಿದೆ. ಈ ತತ್ವವನ್ನು ಎಂದೂ ಅನುಷ್ಠಾನಕ್ಕೆ ತಾರದೆ ಇದ್ದುದೇ ಇಂಥ ಎಚ್ಚರಿಕೆಗೆ ಕಾರಣವಾಯಿತು. ೧೯೨೧ರಲ್ಲಿ ಡಾ. ಪರಾಂಜಪೆಯವರು ಶಿಕ್ಷಣ ಸಚಿವರಾಗಿದ್ದಾಗ, ಒಂದು ಧೈರ್ಯದ ಪ್ರಯತ್ನ ಮಾಡಿದರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅವರ ಕಾರ್ಯಕ್ಕೆ ಬೆಂಬಲ ನೀಡುವ ಯಾವುದೇ ಮಸೂದೆಯೂ ಇಲ್ಲದೆ ಇದ್ದುದರಿಂದ, ಶಾಲೆಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶ ನೀಡುವುದನ್ನು ಕುರಿತ ಅವರ ಸುತ್ತೋಲೆ ಕೈಗೆ ಸಿಕ್ಕದೆ ನುಣುಚಿಕೊಂಡಿತು. ಫಲಿತಾಂಶವಾಗಿ ಅಸ್ಪೃಶ್ಯರ ಜೀವನದ ವಿಷಾದಕರ ಲಕ್ಷಣವೇ ಆಗಿ ಅವರ ಅನಕ್ಷರತೆ ಮುಂದುವರಿಯಿತು.

(೪೦) ಇಂಥ ಅನಕ್ಷರಸ್ಥ ಜನರಿಗೆ ಮತದಾನದ ಹಕ್ಕನ್ನಾದರೂ ಹೇಗೆ ನೀಡುವುದು ಎಂಬ ಪ್ರಶ್ನೆಯನ್ನು ಆಗಾಗ ಕೇಳಲಾಗಿದೆ. ಅವರ ಅನಕ್ಷರತೆಗೆ ಹೊಣೆ ಯಾರು ಎಂಬುದೇ ಈ ಪ್ರಶ್ನೆಗೆ ನನ್ನ ಉತ್ತರವಾಗಿರುತ್ತದೆ. ಅನಕ್ಷರತೆಗೆ ಸರ್ಕಾರವೇ ಹೊಣೆಯಾಗಿದ್ದ ಪಕ್ಷದಲ್ಲಿ, ಆಗ ಮತದಾನದ ಹಕ್ಕು ಪಡೆಯಲು ಜನರಿಗಿರಲೇಬೇಕಾದ ಅರ್ಹತೆಯೆಂದು ಸಾಕ್ಷರತೆಯನ್ನು ಪರಿಗಣಿಸುವುದೂ ತಮ್ಮ ಯಾವುದೇ ಸ್ವಂತ ತಪ್ಪು ಇಲ್ಲದೆಯೇ, ಶಿಕ್ಷಣಾವಕಾಶದಿಂದ ಎಂದೆಂದಿಗೂ ವಂಚಿತರಾಗಿರುವ ಬಹುಸಂಖ್ಯೆಯ ಅಸ್ಪೃಶ್ಯರಿಗೆ ಮತದಾನದ ಹಕ್ಕನ್ನು ನಿರಾಕರಿಸುವುದೂ ಒಂದೇ ಆಗಿರುತ್ತದೆ. ಅನಕ್ಷರತೆಯನ್ನು ಪೂರ್ಣವಾಗಿ ತೊಡೆದುಹಾಕಿದ ನಂತರವೇ ಮತದಾನದ ಹಕ್ಕನ್ನು ವಿಸ್ತರಿಸಬೇಕು ಎಂಬುದನ್ನು ಒಪ್ಪುವುದೇ ಆದಲ್ಲಿ, ಸಾಧ್ಯವಾದಷ್ಟೂ ಬೇಗ ಅನಕ್ಷರತೆಯನ್ನು ತೊಡೆದುಹಾಕುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಂಬ ಬಗ್ಗೆ ಭರವಸೆಯಾದರೂ ಎಲ್ಲಿದೆ? ರಾಷ್ಟ್ರನಿರ್ಮಾಣಕ್ಕೆ ಸಂಬಂಧಪಟ್ಟ ಇತರ ಪ್ರಶ್ನೆಗಳಂತೆ, ಶಿಕ್ಷಣದ ಪ್ರಶ್ನೆ ಕೂಡ, ಅಂತಿಮವಾಗಿ ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಯೇ ಆಗಿರುತ್ತದೆ. ಸಾಕಷ್ಟು ಮೊತ್ತದ ಹಣ ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೂ ಶಿಕ್ಷಣದ ಕ್ಷೇತ್ರದಲ್ಲಿ ಪ್ರಗತಿಯುಂಟಾಗುವುದಿಲ್ಲ. ಆದ್ದರಿಂದ ಈ ಹಣವನ್ನೊದಗಿಸುವುದು ಹೇಗೆ ಎಂಂಬುದೇ ಪರಿಹರಿಸಬೇಕಾದ ಸಮಸ್ಯೆಯಾಗಿರುತ್ತದೆ. ಪ್ರಸ್ತುತ ಮತದಾನ ಪದ್ಧತಿಯ ಅನ್ವಯ, ಚುನಾಯಿತವಾದ ಸಮಿತಿ, ಈ ಸಮಸ್ಯೆ ಪರಿಹರಿಸುವ ಸ್ಥಿತಿಯಲ್ಲಿ ಎಂದೂ ಇರುವುದಿಲ್ಲ ಎಂಬುದು ವಿವಾದಾತೀತ ವಿಚಾರವಾಗಿದೆ. ಶ್ರೀಮಂತರಿಗೆ ತೆರಿಗೆ ವಿಧಿಸುವ ಮೂಲಕವಾಗಿ ಮಾತ್ರ ಶಿಕ್ಷಣಕ್ಕೆ ಹಣ ಒದಗಿಸಬಹುದಾದರೂ, ಈಗ ಸಮಿತಿಯ ಮೇಲೆ ನಿಯಂತ್ರಣ ಹೊಂದಿದವರು ಶ್ರೀಮಂತರೇ ಆಗಿರುತ್ತಾರೆ. ನಿಜವಾಗಿ ಹೇಳುವುದಾದರೆ, ಬಡವರ ಉದ್ಧಾರಕ್ಕಾಗಿ ತಮ್ಮ ಮೇಲೆ ತೆರಿಗೆ ವಿಧಿಸುವುದನ್ನು, ಶ್ರೀಮಂತರು ಸರ್ವಥಾ ಒಪ್ಪಲಾರರು– ಹಾಗೆ ತೆರಿಗೆ ಪಾವತಿ ಮಾಡುವಂತೆ ಅವರನ್ನು ಬಲವಂತಪಡಿಸದ ವಿನಾಃ ಬಡವರಿಗೂ, ಅನಕ್ಷರಸ್ಥರಿಗೂ ಸಾಕಷ್ಟು ದನಿಯೆತ್ತುವ ಅವಕಾಶ ವನ್ನು ನೀಡುವಂತಹ ಸಮಿತಿಯ ರಚನೆಯಲ್ಲಿ, ಮೂಲ ಸ್ವರೂಪದ ಬದಲಾವಣೆ ಉಂಟಾದಾಗ ಮಾತ್ರ, ತೆರಿಗೆ ನೀಡುವಂತೆ ಶ್ರೀಮಂತರನ್ನು ಒತ್ತಾಯಿಸುವುದು ಸಾಧ್ಯ. ಇದು ಸಂಭವಿಸದ ಹೊರತು, ಅನಕ್ಷರತೆಯ ಸಮಸ್ಯೆ ಪರಿಹಾರವಾಗುವುದು ಸಾಧ್ಯವಿಲ್ಲ. ಅಸ್ಪೃಶ್ಯರಿಗೆ ಸಾಕ್ಷರತೆಯ ಹಕ್ಕನ್ನು ನಿರಾಕರಿಸುವುದೆಂದರೆ, ಅನ್ಯಾಯದಿಂದ ಕೂಡಿದ ಪರಿಸ್ಥಿತಿಯನ್ನು ಉಂಟುಮಾಡುವುದೇ ಆಗಿರುತ್ತದೆ. ಜನರನ್ನು ಅನಕ್ಷರಸ್ಥರನ್ನಾಗಿ ಉಳಿಸುವುದು, ಹಾಗೂ ಮತದಾನದ ಹಕ್ಕು ನೀಡದೇ ಇರುವುದಕ್ಕೆ ಅವರ ಅನಕ್ಷರತೆಯನ್ನು ಕಾರಣವನ್ನಾಗಿ ಮಾಡುವುದು ಎಂದರೆ, ಗಾಯದ ಮೇಲೆ ಬರೆ ಎಳೆದಂತೆಯೇ ಸರಿ. ಆದರೆ, ಈ ಪರಿಸ್ಥಿತಿ ನಿಜವಾಗಿಯೂ ಇದಕ್ಕಿಂತ ಹೆಚ್ಚಿನದನ್ನು ಒಳಗೊಂಡಿದೆ. ಅಸ್ಪೃಶ್ಯರಿಗೆ ಉಂಟಾದ ನಷ್ಟದಿಂದ ಅವರು ಇನ್ನಷ್ಟು ಕೆರಳುತ್ತಾರೆ. ಏಕೆಂದರೆ ಜನರನ್ನು ಅನಕ್ಷರಸ್ಥರನ್ನಾಗಿಯೇ ಇರಿಸಿ, ತಮ್ಮ ಅನಕ್ಷರತೆಯ

ತೊಡೆದುಹಾಕುವಿಕೆಗೆ ಪರಿಣಾಮಕಾರಿಯಾದ ರೀತಿಯಲ್ಲಿ ಹೋರಾಡಲು ಏಕೈಕ ಮಾರ್ಗವಾದ ಅವರ ಮತದಾನದ ಹಕ್ಕನ್ನು ನಿರಾಕರಿಸುವುದು ಎಂದರೆ ಅವರ ಅನಕ್ಷರತೆಯನ್ನು ಶಾಶ್ವತವಾಗಿ ಉಳಿಸಿದಂತೆ ಹಾಗೂ ಮತದಾನದಲ್ಲಿ ಭಾಗವಹಿಸಲು ಅವರಿಗೆ ಅವಕಾಶ ನೀಡುವುದನ್ನು ಇನ್ನಷ್ಟು ಮುಂದುವರಿಸಿದಂತೆ.

(೪೧) ಅನಕ್ಷರತೆಗೆ ಹೊಣೆ ಯಾರು ಎಂಬುದು ಪ್ರಶ್ನೆಯಲ್ಲ. ಬದಲಾಗಿ ಅನಕ್ಷರಸ್ಥರಿಗೆ ಮತ ದಾನದ ಹಕ್ಕು ನೀಡಬೇಕೇ ಎಂಬುದೇ ಪ್ರಶ್ನೆ ಎಂದು ಕೆಲವರು ಹೇಳಬಹುದು. ಮತದಾನದ ಹಕ್ಕಿಗೆ ಸಂಬಂಧಪಟ್ಟ ಈ ಪ್ರಶ್ನೆ, ಸಾಕ್ಷರತೆ ಅಥವಾ ನಿರಕ್ಷರತೆಗೆ ಸಂಬಂಧಪಟ್ಟ ಪ್ರಶ್ನೆಯಲ್ಲ ಎಂಬುದೇ ನನ್ನ ಉತ್ತರವಾಗಿದೆ. ಇದು ಕೇವಲ ಬುದ್ಧಿವಂತಿಕೆಯ ಪ್ರಶ್ನೆ. ಒಂದು ಒರೆಗಲ್ಲಾಗಿ ಸಾಕ್ಷರತೆಯನ್ನು ಒತ್ತಾಯಿಸುವವರು ಹಾಗೂ ಮತದಾನದ ಹಕ್ಕು ಪಡೆಯಲು ಪೂರ್ವಭಾವಿಯಾಗಿರಬೇಕಾದ ಅರ್ಹತೆಯನ್ನಾಗಿ ಜನರು ಸಾಕ್ಷರತೆ ಹೊಂದಿರಬೇಕೆನ್ನುವವರು, ನನ್ನ ಅಭಿಪ್ರಾಯದಲ್ಲಿ ಎರಡು ತಪ್ಪುಗಳನ್ನು ಮಾಡುತ್ತಾರೆ. ಅನಕ್ಷರಸ್ಥ ವ್ಯಕ್ತಿ ನಿಜವಾಗಿ ಬುದ್ಧಿವಂತನಲ್ಲ ಎಂಬ ನಂಬಿಕೆಯೇ ಅವರ ಮೊದಲ ತಪ್ಪು. ಆದರೆ ಅನಕ್ಷರಸ್ಥ ವ್ಯಕ್ತಿ ತುಂಬ ಬುದ್ಧಿವಂತನಾಗಿರುವುದೂ ಸಾಧ್ಯ ಎಂದು ಸಮರ್ಥಿಸುವುದೆಂದರೆ ವಿರೋಧೋಕ್ತಿಯನ್ನು ಪುನರುಚ್ಚರಿಸಿದಂತೆಯೂ ಅಲ್ಲ ಎಂಬುದನ್ನು ಎಲ್ಲರೂ ಬಲ್ಲರು. ಭಾರತವೂ ಸೇರಿದಂತೆ ಪ್ರಪಂಚದಾದ್ಯಂತ ಇರುವ ಅನಕ್ಷರಸ್ಥ ಜನರು ತಮ್ಮ ಸ್ವಂತ ವ್ಯವಹಾರಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಯಶಸ್ವಿಯಾಗಿ ನಡೆಸಲು ಅಗತ್ಯವಾಗಿರುವಷ್ಟು ಬುದ್ಧಿವಂತಿಕೆಯನ್ನು ಹೊಂದಿರುತ್ತಾರೆಂಬ ತೀರ್ಮಾನವನ್ನು ಅವರ ಹಿಂದಿನ ಅನುಭವಗಳೇ ಬಲಪಡಿಸುತ್ತವೆ. ಹೇಗಿದ್ದರೂ ಒಂದು ನಿರ್ದಿಷ್ಟ ವಯಸ್ಸಾದ ಅನಂತರ, ತಮ್ಮ ಸ್ವಂತ ವ್ಯವಹಾರಗಳನ್ನು ನಡೆಸುವ ಹೊಣೆಯನ್ನು ಹೊರಲು ಅಗತ್ಯವಾಗಿರುವಷ್ಟು ಬುದ್ಧಿವಂತಿಕೆ ಪ್ರತಿಯೊಬ್ಬನಿಗೂ ಇರುತ್ತದೆ ಎಂದು ಭಾವಿಸಬಹುದು. ಮತದಾನದ ಹಕ್ಕನ್ನು ಚಲಾಯಿಸುವಲ್ಲಿ ಅನಕ್ಷರಸ್ಥ ಸುಲಭವಾಗಿ ತಪ್ಪು ಮಾಡಬಹುದು. ನಿಜ, ಆದರೆ ಬಾಂಬೆಯ ಅಭಿವೃದ್ಧಿ ವಿಭಾಗ ಕೂಡ ತೀರ್ಮಾನ ಕೈಗೊಳ್ಳುವಲ್ಲಿ ಇಷ್ಟೇ ಮಹತ್ತರವಾದ ತಪ್ಪುಗಳನ್ನು ಮಾಡಿದೆ. ಇವುಗಳನ್ನು ಖಂಡಿಸಲಾಗಿದೆ ಹಾಗೂ ಅದೇ ಕಾಲದಲ್ಲಿ ಸಹಿಸಿಕೊಳ್ಳಲಾಗಿದೆ. ಜನರು ಭಾರೀ ತಪ್ಪುಗಳನ್ನು ಮಾಡಬಹುದಾದರೂ, ಅವರು ಮತದಾನದ ಹಕ್ಕು ಹೊಂದಿರಬೇಕು ಎಂಬುದರಿಂದ ಇನ್ನೂ ಒಳ್ಳೆಯದಾಗಬಹುದು. ಏಕೆಂದರೆ, ಸ್ವತಂತ್ರ ಹಾಗೂ ಜನಪ್ರಿಯ ಸರ್ಕಾರದ ಮೇಲಿರುವ ಎಲ್ಲ ಭರವಸೆಯೂ ಅಂತಿಮವಾಗಿ ಜನರು ಸ್ವತಂತ್ರವಾಗಿರುವಾಗ ಮಾಡುವ ತಪ್ಪುಗಳಿಂದ ನಷ್ಟ ಹೊಂದುವುದಕ್ಕಿಂತ ಹೆಚ್ಚಾಗಿ, ಅನುಭವಗಳಿಂದ ಲಾಭ ಪಡೆಯುತ್ತಾರೆ ಎಂಬ ನಿರ್ಣಯದ ಮೇಲೆ ನಿಂತಿದೆ. ರಾಜಕೀಯ ಕ್ಷೇತ್ರದಲ್ಲಿ ಇಲ್ಲದ ವ್ಯಕ್ತಿಯ ವಿಚಾರದಲ್ಲಿ ಒಳ್ಳೆಯದೆನಿಸುವ ಸತ್ಯವು ರಾಜಕೀಯ ಕ್ಷೇತ್ರದಲ್ಲಿ ಏಕೆ ಒಳ್ಳೆಯದೆನಿಸುವುದಿಲ್ಲ ಎಂದು ತಿಳಿಯುವುದು ಕಷ್ಟ. ನಿಜವಾಗಿಯೂ, ವ್ಯಕ್ತಿ ಸಾಕ್ಷರತೆಯಿಂದ, ಅನಕ್ಷರಸ್ಥ ವ್ಯಕ್ತಿ ಹೊಂದುವುದಕ್ಕಿಂತ ಹೆಚ್ಚಿನ ಮಟ್ಟದ ಬುದ್ಧಿವಂತಿಕೆಯನ್ನು ಜ್ಞಾನವನ್ನೂ ಗಳಿಸುತ್ತಾನೆಂದು ಊಹಿಸುವುದರಲ್ಲಿ ಎರಡನೆಯ ತಪ್ಪು ಇದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಬ್ರೈಸ್‌ನ ಮಾತುಗಳನ್ನು ಇಲ್ಲಿ ಉದ್ಧರಿಸಬಹುದು. "ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳ ಬಗೆಗೆ ನಡೆಸಿದ ಸರ್ವೇಕ್ಷಣೆಯಲ್ಲಿ, ಓದುವ ಹಾಗೂ ಬರೆಯುವ ಸಾಮರ್ಥ್ಯ ಹಾಗೂ ವ್ಯವಹಾರಜ್ಞಾನ– ಇವುಗಳನ್ನು ಕುರಿತಂತೆ ಅವನು ಹೀಗೆನ್ನುತ್ತಾನೆ: "ಓದುವ ಹಾಗೂ ಬರೆಯುವ ಸಾಮರ್ಥ್ಯವೊಂದೇ ಕಾರ್ಯತಃ ಪರೀಕ್ಷೆ ಮಾಡಬಹು ದಾದಂಥ ಅಂಶವಾಗಿರುವುದರಿಂದ, ಇದೇ ತಕ್ಕ ಪರೀಕ್ಷೆಯೆಂದು ನಾವು ಭಾವಿಸಿದ್ದೇವೆ. ಆದರೆ ಇದು ನಿಜವೇ? ೬೦ ವರ್ಷಗಳ ಹಿಂದಿನ ಇಂಗ್ಲೆಂಡಿನ ವ್ಯವಹಾರ ನಿಪುಣರಾದ ಜನರು ಓದಲು ತಿಳಿದಿರಲಿಲ್ಲ.

ಆದರೂ ಅವರು ತುಂಬ ವ್ಯವಹಾರಜ್ಞಾನ, ತಿಳಿವಳಿಕೆ ಮತ್ತು ದೃಢತೀರ್ಮಾನ ತೆಗೆದುಕೊಳ್ಳುವ ಶಕ್ತಿಗಳಿಂದಾಗಿ ಈಗಿನ, ವಾರ್ತಾಪತ್ರಿಕೆಯನ್ನೋದುವ ಹಾಗೂ ಸಿನಿಮಾಮಗ್ನರಾಗಿರುವ ಅವರ ಮೊಮ್ಮಕ್ಕಳಿಗಿಂತ, ಮತದಾನ ಮಾಡುವ ವಿಷಯದಲ್ಲಿ ಹೆಚ್ಚಿನ ಅರ್ಹತೆ ಹೊಂದಿದ್ದರು ಎಂಬುದು ನಮ್ಮಲ್ಲಿ ಕೆಲವರ ನೆನಪಿನಲ್ಲಿದೆ... ಅಥೆನ್ಸಿನ ಮತದಾರರೂ... ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿನ ಬಹುತೇಕ ಮತದಾರರಿಗಿಂತ... ಪೌರ ಮತದಾನಕ್ಕೆ ಸಂಬಂಧಿಸಿದಂತೆ... ಹೆಚ್ಚು ಅರ್ಹತೆ ಹೊಂದಿದ್ದರು... ಗ್ರೀಸಿನ ಈ ಮತದಾರರು ಮುದ್ರಿತ ಪುಟಗಳಿಂದಾಗಲಿ, ಲಿಖಿತ ಪುಟಗಳಿಂದಾಗಲಿ, ರಾಜಕೀಯ ಶಿಕ್ಷಣ ಪಡೆದಿಲ್ಲ. ಸುಶಿಕ್ಷಿತ ವ್ಯಕ್ತಿಗಳ ಉಪನ್ಯಾಸಗಳನ್ನು ಕೇಳಿ ಹಾಗೂ ಪರಸ್ಪರ ಸಂವಾದ ನಡೆಸಿಯೇ ಅವರು ರಾಜಕೀಯ ಶಿಕ್ಷಣ ಪಡೆದಿದ್ದರು. ಪರಸ್ಪರ ಮಾತನಾಡುವುದರಿಂದ, ಓದುವುದಕ್ಕಿಂತ ಹೆಚ್ಚು ಜ್ಞಾನ ಪಡೆಯಬಹುದು. ಮಾತನಾಡುವಾಗ ಮನಸ್ಸು ಹೆಚ್ಚು ಕ್ರಿಯಾಶೀಲವಾಗಿರುತ್ತದೆ. ಓದುವುದಕ್ಕಿಂತ ಆಲೋಚಿಸುವುದೇ ಹೆಚ್ಚು ಮುಖ್ಯವಾದುದು. ಎಂದರೆ ನನ್ನ ಅಭಿಪ್ರಾಯದಲ್ಲಿ, ಆಲೋಚಿಸುವುದರ ಮೂಲಕ ವಾಸ್ತವಾಂಶಗಳನ್ನು ಅರಿತುಕೊಳ್ಳಬಹುದು ಹಾಗೂ ಪರಿಣಾಮಕಾರಿ ರೀತಿಯಲ್ಲಿ ವಾದವಿವಾದ ನಡೆಸಬಹುದು. ಸಂಭಾಷಣೆ ನಡೆಸುವಾಗ, ಜಾಣ್ನುಡಿಗಳ ಸಂಘರ್ಷ ಉಂಟಾಗುತ್ತದೆ; ಇಲ್ಲಿ ಸಂಭಾಷಣೆಗಾಗಿಯೇ ಕೊಂಚ ಬೌದ್ಧಿಕ ಪರಿಶ್ರಮ ವ್ಯಯವಾಗುತ್ತದೆ... ಆದರೆ ನಾವಿರುವ ಈ ದಿನಗಳಲ್ಲಿ ಓದುವುದು ಆಲೋಚನೆಗೊಂದು ಪರ್ಯಾಯವಾಗಿ ಪರಿಣಮಿಸಿಬಿಟ್ಟಿದೆ. ತನ್ನ ಪಕ್ಷದ ಸುದ್ದಿಪತ್ರಿಕೆಯನ್ನು ಮಾತ್ರ ಓದುವ, ಹಾಗೂ ಇತರ ಸುದ್ದಿ ಸರಕುಗಳು, ಅಪರಾಧ ನಿರೂಪಣೆಗಳು ಮತ್ತು ಫುಟ್‌ಬಾಲ್ ಪಂದ್ಯಗಳ ವಿವರಣೆಗಳ ಕಲಬೆರಕೆಗಳ ಜೊತೆಗೆ, ತನ್ನ ಪಕ್ಷದ ರಾಜಕೀಯ ವಿಶ್ಲೇಷಣೆಗಳನ್ನು ಓದುವ ವ್ಯಕ್ತಿಗೆ ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಸಂಖ್ಯೆಯ ಮುಖಗಳಿರುತ್ತವೆ ಎಂದು ತಿಳಿಯುವ ಅಗತ್ಯವೇ ಇರುವುದಿಲ್ಲ. ಪತ್ರಿಕೆಗಳ ಸುದ್ದಿಗೆ ಪುರಾವೆಯೇನೆಂದೂ ಅವನು ತಿಳಿಯಬಯಸುವುದಿಲ್ಲ. ಮುದ್ರಿತ ಪುಟವು ಯಾವುದೋ ಅಜ್ಞಾತ ಶಕ್ತಿಯನ್ನು ಪ್ರತಿನಿಧಿಸುವಂತೆ ಕಾಣುವುದರಿಂದ, ಸಂಭಾಷಣೆಯಲ್ಲಿ ಕೇಳುವುದಕ್ಕಿಂತಲೂ ಬೇಗನೆ, ವ್ಯಕ್ತಿ ಅದನ್ನು ನಂಬಲು ಸಿದ್ಧನಾಗಿರುತ್ತಾನೆ. ಮುದ್ರಿತ ಪುಟಗಳಿಂದ ಅವನು, ಪ್ರಾಯಃ ನಿರಾಧಾರವಾದ ಹಾಗೂ ಪ್ರಾಯಃ ಕಾಲ್ಪನಿಕವಾದಂಥ ಹೇಳಿಕೆಗಳನ್ನು ಪಡೆದುಕೊಳ್ಳುತ್ತಾನೆ. ಇಂಥ ಹೇಳಿಕೆಗಳನ್ನು ಅವನು ಕಾರ್ಯಾಗಾರಗಳಲ್ಲಾಗಲಿ, ಕಛೇರಿಗಳಲ್ಲಾಗಲೀ, ತನ್ನ ಜೊತೆ ಕೆಲಸ ಮಾಡುವವರಿಂದಲಾಗಲೀ ಪಡೆಯುವುದಿಲ್ಲ. ಅಲ್ಲದೆ ಜ್ಞಾನ ವೃಕ್ಷವೆಂಬುದು ಒಳಿತಿನ ಜ್ಞಾನವೃಕ್ಷವಾಗಿರುವಂತೆ ಕೆಡುಕಿನ ಜ್ಞಾನವೃಕ್ಷವೂ ಆಗಿರಬಹುದು. ಮುದ್ರಿತ ಪುಟದಲ್ಲಿ ಸತ್ಯಕ್ಕೆ ಸುಳ್ಳಿಗಿಂತ ಉತ್ತಮವಾದ ಅವಕಾಶವೇನೂ ಇರುವುದಿಲ್ಲ. ವ್ಯಾಪಕವಾಗಿ ಓದುವವರಿಗೆ ಮಾತ್ರ ಸೂಕ್ಷ್ಮಗ್ರಹಣ ಸಾಮರ್ಥ್ಯವಿರುತ್ತದೆ. ಕೆಲವು ವಾಸ್ತವಾಂಶಗಳನ್ನು ತಿರುಚಿ ಹೇಳುವ, ಹಾಗೂ ಇನ್ನು ಕೆಲವನ್ನು ತಪ್ಪುತಪ್ಪಾಗಿ ಪ್ರತಿನಿಧಿಸುವ ಪಕ್ಷವೊಂದರ ಪ್ರಚಾರ ಪುಸ್ತಕವು ಮಾರ್ಗದರ್ಶಿ ಕೃತಿಗಳಲ್ಲಿಯೇ ಅತ್ಯಂತ ಕೆಟ್ಟದಾಗಿರುತ್ತದೆ. ಮತ್ತೆ ಮತ್ತೆ ಅಸತ್ಯವನ್ನೇ ಹೇಳುವುದರ ಮೂಲಕ ಯಾವನೇ ವ್ಯಕ್ತಿ ಅಥವಾ ಸಂಘಕ್ಕಿಂತ ಗಂಭೀರವಾದ ಭಾವನೆಯನ್ನು ಜನರಲ್ಲಿ ಮೂಡಿಸುವ ಅಂತಹ ಪ್ರಚಾರ ಪುಸ್ತಕ ಧಾರ್ಮಿಕ ಮುಖವಾಡ ಧರಿಸಿದ್ದು, ಪಾದ್ರಿಯ ಕೆಲಸವನ್ನು ಮಾಡಲು ಸಮರ್ಥವಾಗಿರುವುದೇ ಇದಕ್ಕೆ ಕಾರಣ. ತನ್ನ ಪಕ್ಷದ ಸುದ್ದಿಪತ್ರಿಕೆಗಳಿಂದ ಮಾರ್ಗದರ್ಶನ ಪಡೆದಂತಹ ಆಧುನಿಕ ಮತದಾರ, ೮೦ ವರ್ಷಗಳ ಹಿಂದೆ ತನ್ನ ಭೂಮಾಲಿಕ ಅಥವಾ ಮೇಲಧಿಕಾರಿ ಅಥವಾ (ಐರ್‌ಲ್ಯಾಂಡಿನಲ್ಲಿ) ತನ್ನ ಪುರೋಹಿತ ನಡೆಸಿದ ಹರಾಜಿನಲ್ಲಿ ಮತ ನೀಡಿದ ಅಜ್ಜನಿಗಿಂತ ಹೆಚ್ಚೇನೂ ಶ್ರೇಷ್ಠನಾಗಿರುವುದಿಲ್ಲ. ಆದರೆ ಮುದ್ರಿತ ಪುಟಗಳನ್ನೋದಿ ವಿವಾದಾಸ್ಪದ ವಿಷಯದ ಒಂದು ಮುಖವನ್ನಷ್ಟೆ ತಿಳಿಯುವ ಅವನ ಮೊಮ್ಮಗ

ಸ್ವಾರ್ಥಪರ ಹಿತಾಸಕ್ತಿಗಳಿಗೆ ಬಲಿಪಶುವಾಗುತ್ತಾನೆ. ಏಕೆಂದರೆ ಸಾರ್ವಜನಿಕ ಅಭಿಪ್ರಾಯಗಳನ್ನು ತನ್ನ ಪುಸ್ತಕ ಪ್ರಕಟಿಸುತ್ತದೆ ಹಾಗೂ ತನಗೆ ಸಾರ್ವಜನಿಕರ ಹಿತದ ಬಗ್ಗೆಯೇ ಆಸಕ್ತಿ ಎಂದು ಜನರಿಗೆ ಸುಲಭವಾಗಿ ತಿಳಿಯಪಡಿಸುವ ಮಾಧ್ಯಮವಾಗಿದೆ ಪಕ್ಷದ ಪ್ರಚಾರ ಪುಸ್ತಕ. ಹೀಗಾಗಿ ಓದಲು ಮಾತ್ರ ಕಲಿಸುವ ಆದರೆ ಪ್ರತಿಕ್ರಿಯಿಸಲು ಮತ್ತು ತೀರ್ಪು ನೀಡಲು ಕಲಿಸದ, ಪ್ರಜಾಪ್ರಭುತ್ವ ಓದುವ ಶಕ್ತಿಗಿಂತ ಶ್ರೇಷ್ಠವೇನೂ ಅಲ್ಲ."

(೪೨) ಭಾರತದಲ್ಲಿ ಜನಸಮುದಾಯದ ಅನಕ್ಷರತೆಯ ಪರಿಣಾಮ ಅತಿಯಾದುದು ಎಂದು ನನಗನಿಸುತ್ತದೆ. ಇಂಗ್ಲೆಂಡಿನ ಮತದಾರನನ್ನು ತೆಗೆದುಕೊಳ್ಳಿ. ಒಬ್ಬ ಮತದಾರನಾಗಿ ಅವನ ಗುಣಲಕ್ಷಣಗಳೇನೆಂದು ತಿಳಿದುಕೊಳ್ಳಲು ಪ್ರಯತ್ನ ಮಾಡಿ. ಆಗ ಏನು ತಿಳಿಯುತ್ತದೆ? ಅವನನ್ನು ಕುರಿತಂತೆ ೧೯೨೪ರ ಆಗಸ್ಟ್ ೨೧ರ "ಟೈಮ್ಸ್ ಲಿಟರರಿ ಸಪ್ಲಿಮೆಂಟ್" ಹೀಗೆಂದಿದೆ:

> "ಜನ ಸಮುದಾಯಕ್ಕೆ ಯಾವುದೇ ಗಂಭೀರ ಆಸಕ್ತಿಯಿಲ್ಲ. ಅದರ ಮತಗಳು ಎಲ್ಲ ರಾಜಕೀಯ ವಿಚಾರಗಳನ್ನೂ ನಿರ್ಣಯಿಸುತ್ತವೆ. ಆದರೂ ರಾಜಕೀಯದ ಬಗ್ಗೆ ಅವರಿಗೆ ಏನೇನೂ ತಿಳಿದಿರುವುದಿಲ್ಲ. ಕರ ಸುಧಾರಣೆ ಅಥವಾ ತೆರಿಗೆ ಅಥವಾ ವಿದೇಶೀ ನೀತಿಗಳ ಬಗೆಗಿನ ನಿರ್ಣಯವನ್ನು ಈಗ ತಮ್ಮ ಜೀವನದಲ್ಲಿ ಗಂಭೀರ ರಾಜಕೀಯ ಕುರಿತ ಕನಿಷ್ಠ ಹನ್ನೆರಡು ಅಂಕಣಗಳನ್ನು ಓದದ ಸ್ತ್ರೀಪುರುಷರು ಮಾಡುತ್ತಾರೆಂಬ ಸಂಗತಿ ಅಶಾಂತಗೊಳಿಸುವ ಆದರೆ, ಸತ್ಯವಾದ ವಿಚಾರವಾಗಿದೆ. ಎಂಟು ವರ್ಷಗಳ ಹಿಂದಿನ ಹಳೆಯ ಪರಿಮಿತ ಮತದಾರ ಸಮುದಾಯದಲ್ಲಿ ಪ್ರಾಯಃ ಕನಿಷ್ಠ ೨೩ರಷ್ಟು ಮಂದಿ, ಪ್ರಸ್ತುತ ಕಾಲದ ಪ್ರಶ್ನೆಯನ್ನು ಕುರಿತ ರಾಜಕೀಯ ಉಪನ್ಯಾಸಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಿದ್ದರು. ಇಂದು ಶೇ.೫ರಷ್ಟು ಮತದಾರರೂ ಉಪನ್ಯಾಸಗಳನ್ನು ಅಥವಾ ಪ್ರಮುಖ ಲೇಖನಗಳನ್ನು ಓದುವುದಿಲ್ಲ. ಪ್ರಾಯಃ ಗಮನಾರ್ಹವೆನಿಸುವ ಮಿಕ್ಕವರ ಸಂಖ್ಯೆಯೂ ಕಡಮೆಯೇ. ಒಟ್ಟಿನಲ್ಲಿ ಬಾಟಲ್ಸ್‌ನ ಬರವಣಿಗೆ ಅಶ್ಲೀಲತೆಯಿಂದ ಕೂಡಿರುವಂತೆ ಪ್ರಜಾಪ್ರಭುತ್ವವೂ ಎದ್ದು ಕಾಣುವ ಗಂಭೀರ ವಿಡಂಬನೆಯಿಂದ ಕೂಡಿರುತ್ತದೆ. ಪ್ರಜಾಪ್ರಭುತ್ವದಲ್ಲಿ ಮತದಾರನ ಮನಸ್ಸು ಸುದ್ದಿ ಪತ್ರಿಕೆಗಳ ಅಧೀನದಲ್ಲಿರುವುದರಿಂದ, ಅವನ ಭಾನುವಾರಗಳು, ಬಾಪ್ಟಿಸ್ಟ್ ಸಚಿವರ ಜೊತೆ ಕಳೆಯುವ ಭಾನುವಾರಗಳಿಗಿಂತ ಹೆಚ್ಚು ಬೇಗನೆ ಕಳೆದುಹೋಗುತ್ತವೆ. ಇದು ವಿಷಾದಕರ ವಾತಾವರಣವಾಗಿದ್ದು, ಇದರ ವಿರುದ್ಧ ಶಾಲೆಗಳು ವ್ಯರ್ಥವಾಗಿ ತಮ್ಮ ಸಾಂಸ್ಕೃತಿಕ ಉನ್ನತಿಯನ್ನು ಪ್ರದರ್ಶಿಸುತ್ತಿವೆ."

(೪೩) ನಿಜವಾಗಿಯೂ ಬ್ರಿಟಿಷ್ ಪ್ರಜಾಪ್ರಭುತ್ವ– ಉದಾಹರಣೆಗೆ, ಬ್ರಿಟಿಷ್ ಸಾಮ್ರಾಜ್ಯ ಮೇಲೆ ಹೇಳಲಾದಂತಹ ಮತದಾರರಿಂದಲೇ ಆಳಲ್ಪಡುವಂತಿದ್ದರೆ, ವಯಸ್ಕ ಮತದಾನವನ್ನು ವಿರೋಧಿಸುವ ಭಾರತೀಯ ಅನ್ಯಾಯವಂತರೂ ಮತ್ತು ಕನಸಿಗರು. ಅಷ್ಟೇ ಅಲ್ಲದೆ, ಅವರು ತೀವ್ರವಾಗಿ ಪ್ರತಿಭಟಿಸುತ್ತಾರೆ ಹಾಗೂ ರಾಜಕೀಯ ಅಧಿಕಾರ ಕಬಳಿಸುವುದಕ್ಕೆ ಜನಸಮುದಾಯದ ಅನಕ್ಷರತೆಯನ್ನೊಂದು ನೆವವನ್ನಾಗಿ ಮಾಡಿಕೊಳ್ಳುತ್ತಾರೆಂಬ ಆಪಾದನೆಗೆ ಗುರಿಯಾಗಿದ್ದಾರೆ ಎಂದೂ ಚರ್ಚಿಸಬಹುದು. ಏಕೆಂದರೆ ರಾಜಕೀಯ ಅಭಿಪ್ರಾಯಗಳ ಸೂಕ್ಷ್ಮಾಂಶಗಳ ಸಂಪೂರ್ಣ ಅರ್ಥಗ್ರಹಣ ಹಾಗು ಅವುಗಳ ನಡುವಣ ಭಿನ್ನತೆಗಳನ್ನು ಗುರುತಿಸುವ ಶಕ್ತಿ– ಇವು ರಾಜಕೀಯ ಬುದ್ಧಿಶಕ್ತಿಯ ಅವಶ್ಯಕ ಒರೆಗಲ್ಲಾಗಿದೆ ಎಂದು ಪ್ರತಿಪಾದಿಸುವುದು ಕಟುವಿಮರ್ಶೆಯೆನಿಸುತ್ತದೆ. ಚಿಕ್ಕಪುಟ್ಟ ರಾಜಕೀಯ ಪ್ರಶ್ನೆಗಳನ್ನು ಕುರಿತಂತೆ ಮತದಾರನಿಗೆ ಅವನು

ಯಾವ ರಾಷ್ಟ್ರದವನೇ ಆಗಿರಲಿ, ಸ್ಪಷ್ಟ ತಿಳಿವಳಿಕೆಯನ್ನು ಎಂದೂ ನೀಡಲಾಗಿರುವುದಿಲ್ಲ. ಅಂಥ ಸೂಕ್ಷ್ಮ ಜ್ಞಾನ ಅವನಿಗೆ ಅವಶ್ಯಕವೂ ಅಲ್ಲ. ಮತದಾರನಿಂದ ಹೆಚ್ಚು ನಿರೀಕ್ಷಿಸಬಹುದಾದುದೆಂದರೆ ಮಹತ್ವದ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹಾಗೂ ಉತ್ತಮ ಸೇವೆ ಸಲ್ಲಿಸಬಹುದೆಂದು ತಾನು ಅಭಿಪ್ರಾಯಪಡುವಂತಹ ಅಭ್ಯರ್ಥಿಯನ್ನು ಚುನಾಯಿಸುವ ಶಕ್ತಿ. ಸಾಮಾನ್ಯ ಭಾರತೀಯನಿಗೂ ಈ ಸಾಮರ್ಥ್ಯಗಳಿವೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

(೪೪) ವಯಸ್ಕ ಮತದಾನ ಪದ್ಧತಿಯನ್ನು ಒಪ್ಪಲು ನಿರಾಕರಿಸುವಲ್ಲಿ ನನ್ನ ಸಹೋದ್ಯೋಗಿಗಳ ಅಭಿಪ್ರಾಯಕ್ಕೆ ಸರಿದೂಗುವಂತೆ ಕಾಣುವ ಇನ್ನೊಂದು ವಿಚಾರವೇ ಇಂಗ್ಲೆಂಡಿನಂತಹ ರಾಷ್ಟ್ರಗಳ ನಡುವೆ ಇರುವ ಸಾಮ್ಯ. ೧೪೨೯ರಲ್ಲಿ ೪೦ ಷಿಲ್ಲಿಂಗ್ ಆದಾಯವಿರುವವರಿಗೆ ಮಾತ್ರ ಇಂಗ್ಲೆಂಡಿನಲ್ಲಿ ಮತದಾನದ ಅಧಿಕಾರವಿದ್ದಿತು. ಆದರೆ ೧೮೩೨ರಲ್ಲಿ ಆ ಹಕ್ಕನ್ನು ಎಲ್ಲ ವಯಸ್ಕರಿಗೂ ವಿಸ್ತರಿಸಲಾಯಿತು. ಆ ವರ್ಷ ಸಂಸತ್ ಸದಸ್ಯರ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಮತದಾನದ ಹಕ್ಕು ೫೦೦,೦೦೦ಕ್ಕಿಂತ ಕಡಮೆ ಜನರಿಗೆ ಮಾತ್ರ ಇದ್ದಿತ್ತು. ಸುಧಾರಣಾಶಾಸನ ಜಾರಿಗೆ ಬರುವವರೆಗೆ ಮತದಾರ ಸಂಖ್ಯೆ ಹತ್ತಿರ ಹತ್ತಿರ ೧,೦೦೦,೦೦೦ದವರೆಗೆ ಏರಲಿಲ್ಲ. ೧೮೬೭ರ ಶಾಸನವನ್ನು ಅಂಗೀಕರಿಸುವವರೆಗೆ ಮತದಾನದ ಹಕ್ಕು ಪಡೆಯಲು ಇರಬೇಕಾದ ಅರ್ಹತೆಯನ್ನು ಕಡಿಮೆಗೊಳಿಸಲು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಈ ಶಾಸನ ಜಾರಿಗೆ ಬಂದೊಡನೆ ಮತದಾರರ ಸಂಖ್ಯೆ ೨,೫೦೦,೦೦೦ಕ್ಕೆ ಏರಿತು. ೧೭ ವರ್ಷಗಳ ಅನಂತರ ಮುಂದಿನ ಕ್ರಮವಾಗಿ ೧೮೮೪ರ ಶಾಸನ ಜಾರಿಗೆ ಬಂದಾಗ, ಈ ಸಂಖ್ಯೆಯು ೫,೫೦೦,೦೦೦ಕ್ಕೆ ಏರಿತು. ೧೯೧೮ರ ಜನತಾ ಪ್ರಾತಿನಿಧ್ಯ ಶಾಸನ ಚಲಾವಣೆಗೆ ಬರುವವರೆಗೆ ಎಂದರೆ ೩೪ ವರ್ಷಗಳು ಕಳೆದುಹೋಗುವ ತನಕ, ವಯಸ್ಕ ಮತದಾನ ಪದ್ಧತಿ ಜಾರಿಗೆ ಬರಲಿಲ್ಲ. ಈ ವಾಸ್ತವಾಂಶವನ್ನು ಬೇರೆ ಬೇರೆ ಪಂಗಡಗಳ ಜನರು ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾರೆ. ಸಾಮಾಜಿಕವಾಗಿ ಸಂಪ್ರದಾಯವಾದಿಗಳೂ ರಾಜಕೀಯವಾಗಿ ಸುಧಾರಣಾವಾದಿಗಳೂ ಆಗಿರುವ ರಾಜಕಾರಣಿಗಳ ಒಂದು ಪಂಗಡ ಈ ವಾಸ್ತವಾಂಶವನ್ನು ಶಾಸಕಾಂಗ ಸಂಪೂರ್ಣವಾಗಿ ಪ್ರಾತಿನಿಧಿಕವಲ್ಲದಿರಬಹುದಾದರೂ, ಅದಕ್ಕೆ ಸಂಪೂರ್ಣ ಅಧಿಕಾರ ನೀಡುವುದು ಸಾಧ್ಯವೆಂಬ ತಮ್ಮ ವಾದಕ್ಕೆ ಸಮರ್ಥನೆಯನ್ನಾಗಿಯೂ ಮಾಡುವುದೆಂದರೆ, ಸ್ವಲ್ಪ ಜನಾಧಿಪತ್ಯಕ್ಕೆ ಅದನ್ನು ವರ್ಗಾಯಿಸಿದಂತೆಯೇ ಎಂಬ ತಮ್ಮ ವಿರೋಧಿಗಳ ವಾದಕ್ಕೆ ಉತ್ತರವಾಗಿಯೂ ಬಳಸಿಕೊಂಡಿತು. ಮತದಾನದ ವಿಚಾರದಲ್ಲಿ ನಾವು ನಿಧಾನವಾಗಿ ಮುಂದುವರಿಯಬೇಕು. ಹಾಗೂ ಇತರ ರಾಷ್ಟ್ರಗಳು ಮಾಡಿದಂತೆ ಎಚ್ಚರಿಕೆಯಿಂದ ಸಾಗಬೇಕು ಎಂಬುದಕ್ಕೆ ಬೆಂಬಲವಾಗಿಯೂ ಇತರರು ಈ ಅಂಶವನ್ನು ಬಳಸಿಕೊಂಡಿದ್ದಾರೆ. ವಿಮರ್ಶಕರ ಈ ಎರಡನೆಯ ಗುಂಪಿಗೆ ನನ್ನ ಉತ್ತರ ಇದು: ಈ ನಿರ್ದಿಷ್ಟ ವಿಷಯದಲ್ಲಿ ಇಂಗ್ಲೆಂಡಿನ ಹೆಜ್ಜೆಗಳನ್ನು ನಾವೇಕೆ ಅನುಸರಿಸಬೇಕು ಎಂಬುದಕ್ಕೆ ಯಾವ ಕಾರಣವೂ ಇಲ್ಲ. ಖಚಿತವಾಗಿ ಹೇಳುವುದಾದರೆ, ಮತದಾನಕ್ಕೆ ಸಂಬಂಧಿಸಿದಂತೆ, ಇಂಗ್ಲಿಷರು ಯಾವುದೇ ಸಿದ್ಧಾಂತವನ್ನೂ ರೂಪಿಸಿಲ್ಲ. ಅಲ್ಲದೆ, ಮತದಾನದ ಹಕ್ಕನ್ನು ವಿಸ್ತರಿಸಲು ಇಷ್ಟೊಂದು ದೀರ್ಘಾವಧಿಯನ್ನು ತೆಗೆದುಕೊಳ್ಳುತ್ತಿರುವುದು ಇಂಗ್ಲೆಂಡಿನ ಆಳುವ ಜನರ ಸ್ವಾರ್ಥ ಸೂಚಿಸುತ್ತದೆ. ಪ್ರತಿಯೊಂದು ರಾಷ್ಟ್ರವೂ ಅವೇ ಹಂತಗಳನ್ನು ಹಾದು ಮುಂದೆ ಸಾಗಬೇಕು ಮತ್ತು ಇತರ ರಾಷ್ಟ್ರಗಳು ಅಭಿನಯಿಸಿದ ದೃಶ್ಯಗಳನ್ನು ಅಭಿನಯಿಸಬೇಕು ಎಂಬುದಕ್ಕೆ ಯಾವುದೇ ಕಾರಣವಿಲ್ಲ. ಹೀಗೆ ಮಾಡುವುದೆಂದರೆ, ಮುಂದಿನ ತಲೆಮಾರಿನವರಿಗೆ ಯಾವಾಗಲೂ ತೆರವಾಗಿರುವಂತಹ ಪ್ರಯೋಜನಗಳನ್ನು ಈಗಿನವರು ಪಡೆಯದಂತೆ ಮಾಡುವುದೇ ಆಗಿದೆ. ಇನ್ನೊಂದು ಗುಂಪಿನ ವಿಮರ್ಶಕರಿಗೆ ನನ್ನ ಉತ್ತರ

ಇದು: ವಾಸ್ತವಾಂಶವಾಗಿ ಅವರ ವಾದದಲ್ಲಿ ಹುರುಳಿದೆ. ಕಡಮೆ ಶೇಕಡಾವಾರು ಜನರನ್ನು ಮಾತ್ರ ಪ್ರತಿನಿಧಿಸುವಾಗ ಕೂಡ ಸಂಸತ್ತು ಸಾರ್ವಭೌಮ ರಾಷ್ಟ್ರದ ಸಂಪೂರ್ಣ ಅಧಿಕಾರಗಳನ್ನು ಸ್ಪಷ್ಟವಾಗಿಯೇ ಚಲಾಯಿಸುತ್ತದೆ. ಆದರೆ ರಾಷ್ಟ್ರದ ದೃಷ್ಟಿಯಿಂದ ಇದರ ಫಲಿತಾಂಶವೇನು ಎಂಬುದೇ ಪ್ರಶ್ನೆಯಾಗಿದೆ. ಲಾರ್ಡ್ ಶಾಫ್ಟ್ಸ್ ಬರಿ ಹೇಳಿದಂತೆ, ಸುಧಾರಣೆಯಿಲ್ಲದ ಸಂಸತ್ತಿನಿಂದ ರೂಪಿಸಲಾದ ಸಾಮಾಜಿಕ ಶಾಸನದ ಇತಿಹಾಸವನ್ನು ಅರಿತ ಯಾವನೇ ವ್ಯಕ್ತಿಯೂ ಈ ದೇಶದಲ್ಲಿ ಅದೇ ಪ್ರಯೋಗದ ಪುನರಾವರ್ತನೆಯಾಗುವುದನ್ನು ನಿಶ್ಚಯವಾಗಿಯೂ ಬಯಸುವುದಿಲ್ಲ. ಈ ಫಲಿತಾಂಶವು ಇಂಗ್ಲೆಂಡಿನಲ್ಲಿ ಜಾರಿಯಲ್ಲಿರುವ ನಿಯಂತ್ರಿತ ಮತದಾನ ಪದ್ಧತಿಯ ಅನಿವಾರ್ಯ ಫಲಿತಾಂಶವೇ ಆಗಿದೆ. ಈ ವಿಮರ್ಶಕರು ನಂಬಿರುವಂಥ ವಾಸ್ತವಾಂಶಗಳು, ನಿಯಂತ್ರಿತ ಮತದಾನ ಪದ್ಧತಿಯನ್ನಾಧರಿಸಿದ ಸರ್ಕಾರವನ್ನು ಬೆಂಬಲಿಸುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಇದು ಕೆಟ್ಟ ಸ್ವರೂಪದ ಸರ್ಕಾರವಾಗಿದ್ದು, ಅಲ್ಪ ಜನಾಧಿಪತ್ಯಕ್ಕೆ ಎಡೆ ಮಾಡಿಕೊಡುತ್ತದೆ. ಇಂಥದೊಂದು ಫಲಿತಾಂಶವನ್ನು ಕುರಿತು ಸಂಯುಕ್ತ ವರದಿಯ ಲೇಖಕರು ಎಂದೂ ಚಿಂತನ ನಡೆಸಿಲ್ಲ. ನಿಜವಾಗಿಯೂ ಅವರು ಕೆಡುಕಿನ ಬಗ್ಗೆ ಎಷ್ಟು ಜಾಗ್ರತರಾಗಿದ್ದರೆಂದರೆ, ತಮ್ಮ ವರದಿಯ ೨೬೨ನೆಯ ಪರಿಚ್ಛೇದದಲ್ಲಿ, ಪರಿಶೀಲನೆಗಾಗಿ ಇರಿಸಿದ ವಿಷಯಗಳಲ್ಲಿ ಶಾಸನಬದ್ಧ ಆಯೋಗವು ಕೋಮುವಾರು ಪ್ರಾತಿನಿಧ್ಯವನ್ನು ಉಳಿಸಿಕೊಳ್ಳುವ ಮಹತ್ವದ ವಿಷಯ ಕೂಡ ಸೇರಿದಂತೆ, ಮತದಾನದ ಕಾರ್ಯವಿಧಾನ ಹಾಗೂ ಮತದಾನ ಸಮುದಾಯಗಳ ರಚನೆ– ಇವುಗಳನ್ನು ಪರಿಗಣಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸಿದ್ದರು. "ಸ್ವಸರ್ಕಾರದ ಕಟ್ಟಡವನ್ನು ಯಾವುದರ ಮೇಲೆ ನಿರ್ಮಿಸಬೇಕೋ ಆ ಪ್ರಮುಖ ಕಮಾನಾಗಿ ವಿಸ್ತೃತ ಮತದಾನ ಪದ್ಧತಿ ಅಭಿವೃದ್ಧಿಗೊಳ್ಳಬೇಕೆಂದು ನಿಜವಾಗಿಯೂ ನಾವು ಭಾವಿಸುತ್ತೇವೆ. ಏಕೆಂದರೆ ನೌಕರಶಾಹಿಯಿಂದ ಅಲ್ಪ ಜನಾಧಿಪತ್ಯಕ್ಕೆ ಅಧಿಕಾರಗಳನ್ನು ವರ್ಗಾಯಿಸುವಷ್ಟು ಫಲಿತಾಂಶ ಮಾತ್ರ ನಮ್ಮ ಸುಧಾರಣೆಗಳಿಂದ ಕೈಗೂಡಬೇಕೆಂಬುದು ನಮ್ಮ ಉದ್ದೇಶವಲ್ಲ."

(೪೬) ಹಾಗಿದ್ದರೆ, ಸ್ವಲ್ಪ ಜನಾಧಿಪತ್ಯವನ್ನು ತಡೆಯಲು ಯಾವ ಪರಿಹಾರ ಮಾರ್ಗವಿದೆ? ವಯಸ್ಕರಿಗೆ ಮತದಾನದ ಹಕ್ಕು ನೀಡುವುದೊಂದೇ ಇದಕ್ಕೆ ನಾವು ಆಲೋಚಿಸಬಲ್ಲ ಏಕೈಕ ಪರಿಹಾರ. ಸಂಯುಕ್ತ ವರದಿಯ ಲೇಖಕರಂತೆಯೇ ೧೯೨೮ರ ಸಿಲೋನ ಆಯೋಗದ ಸದಸ್ಯರೂ "ಈ ಅಲ್ಪ ಪ್ರಮಾಣದ ಒಂದು ಮತದಾರ ಸಮುದಾಯಕ್ಕೆ ಜವಾಬ್ದಾರಿ ಸರ್ಕಾರವನ್ನು ನೀಡುವುದೂ, ಉಳಿದ ಜನರ ಹಿತಾಸಕ್ತಿಗಳ ಬಗ್ಗೆ ಅಲ್ಪ ಜನಾಧಿಪತ್ಯಕ್ಕೆ ಅಧಿಕಾರ ನೀಡುವುದೂ ಒಂದೇ" ಎಂದು ತಿಳಿದಿದ್ದರು. "ಮಹಾ ಪ್ರಭುಗಳ ಸರ್ಕಾರವು ಸಿಲೋನಿನಲ್ಲಿರುವ ಅತಿ ಶ್ರೀಮಂತರು ಮತ್ತು ಅತ್ಯುನ್ನತ ಶಿಕ್ಷಣ ಪಡೆದವರ ಮೇಲೆ ಮಾತ್ರವಲ್ಲದೆ, ಅಷ್ಟೇ ಮಟ್ಟಿಗೆ, ರೈತಾಪಿಜನರು, ಕೂಲಿಗಳು ಹಾಗೂ ಬಹುಸಂಖ್ಯೆಯಲ್ಲಿರುವ ಎಲ್ಲ ಬಡವರ್ಗದ ಜನರ ಮೇಲೆಯೂ ಆಡಳಿತ ನಡೆಸುತ್ತದೆ" ಎಂದು ಭಾವಿಸಿದ್ದರು. ಎರಡನೆಯ ವರ್ಗದ ಎಂದರೆ ರೈತಾಪಿ ಮತ್ತಿತರ ಜನರ ಹಿತಾಸಕ್ತಿಗಳನ್ನು ಮೊದಲನೆಯ ವರ್ಗದ ಎಂದರೆ ಶ್ರೀಮಂತರು ಮತ್ತು ಸುಶಿಕ್ಷಿತರ ಕೈಯಲ್ಲಿ ಇರಿಸುವುದು ವಿಶ್ವಾಸ ದ್ರೋಹ ಎಂಬುದು ಅವರ ಅಭಿಪ್ರಾಯವಾಗಿತ್ತು. ಹೀಗಾಗಿ ಅವರು "ರಾಜ್ಯ ಸಮಿತಿಗೆ ನಡೆಯುವ ಚುನಾವಣೆಯಲ್ಲಿ ಸಾಕ್ಷರತೆ ಮತದಾರರಿಗಿರಬೇಕಾದ ಅರ್ಹತೆಗಳಲ್ಲಿ ಒಂದಾಗಿ ಉಳಿಯಬಾರದು" ಎಂಬ ತೀರ್ಮಾನಕ್ಕೆ ಬಂದಿದ್ದರು. "ನಮ್ಮ ಅಭಿಪ್ರಾಯದಲ್ಲಿ ಜವಾಬ್ದಾರಿ ಸರ್ಕಾರದ ಅಭಿವೃದ್ಧಿಗೆ ಅಗತ್ಯವಾಗಿರುವುವೆಂದರೆ ಸರ್ಕಾರದ ಮೇಲೆ ಪ್ರಭಾವ ಬೀರಲು ಕೆಳದರ್ಜೆಯ ಜನರಿಗಿರುವ ಅವಕಾಶ ಹೆಚ್ಚಬೇಕು ಮತ್ತು ಮತದಾನದ ಹಕ್ಕನ್ನು ಸುಶಿಕ್ಷಿತ ವರ್ಗದವರಿಗೆ ಮಾತ್ರ ವಿಸ್ತರಿಸಕೂಡದು" ಎಂದು ಅವರು ಹೇಳಿದ್ದರು. ಸಿಲೋನ್ ಆಯೋಗದ ಸದಸ್ಯರ ಈ ಅಭಿಪ್ರಾಯ

ಸಮಂಜಸವಾಗಿದೆ. ಸಿಲೋನಿಗೆ ವಯಸ್ಕ ಮತದಾನವನ್ನು ಗೊತ್ತುಪಡಿಸಬಹುದಾದ ಪಕ್ಷದಲ್ಲಿ ಆಗ ಭಾರತಕ್ಕೆ ಆ ಪದ್ಧತಿಯನ್ನು ಏಕೆ ನಿಗದಿಪಡಿಸಬಾರದು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಇದೇ ರೀತಿ ಇವೆರಡೂ ದೇಶಗಳ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪರಿಸ್ಥಿತಿಗಳು ಸರ್ವ ಸಮಾನವಾಗಿದೆ. ಮತದಾನದ ವಿಚಾರದಲ್ಲಿ ಮಾತ್ರ ಈ ಎರಡು ದೇಶಗಳನ್ನು ಭಿನ್ನವೆಂದು ಪರಿಗಣಿಸುವುದೆಂದರೆ ಇದನ್ನು ಸಮರ್ಥಿಸುವ ಯಾವುದೇ ನಿಜವಾದ ವ್ಯತ್ಯಾಸವಿಲ್ಲದಾಗ ವ್ಯತ್ಯಾಸವನ್ನು ಸೃಷ್ಟಿ ಮಾಡುವ ಪ್ರಯತ್ನವಾಗಿರುತ್ತದೆ. ಇತರರಿಗೆ ಹೋಲಿಸುವುದನ್ನು ಬಿಟ್ಟು ನೋಡಿದರೂ ಭಾರತವು, ಅದರಲ್ಲೂ ಮುಂಬೈ ಪ್ರಾಂತದವರು. (ಈಗಾಗಲೇ ಗ್ರಾಮ ಪಂಚಾಯಿತಿಗಳಲ್ಲಿ ಜಾರಿಯಲ್ಲಿರುವುದರಿಂದ) ವಯಸ್ಕ ಮತದಾನಕ್ಕೆ ಬೇರೆಯವರಿಗಿಂಥ ಹೆಚ್ಚಿನ ಅರ್ಹತೆಯನ್ನು ಹೊಂದಿದ್ದಾರೆ.

# ಅಧ್ಯಾಯ–೨

# ಮತದಾರ ಸಮುದಾಯಗಳು

(೪೬) ಪ್ರಸ್ತುತ ವಿಧಾನಪರಿಷತ್ತಿನಲ್ಲಿ ೧೧೪ ಸದಸ್ಯರಿದ್ದಾರೆ. ಇವರಲ್ಲಿ ೨೬ ಮಂದಿ ನಾಮಕರಣ ಗೊಂಡವರು ಮತ್ತು ೮೬ ಮಂದಿ ಚುನಾಯಿತರು. ನಾಮಕರಣಗೊಂಡ ಸದಸ್ಯರಲ್ಲಿ ಎರಡು ಗುಂಪು ಗಳಿವೆ: (ಅ) ಸರ್ಕಾರದಲ್ಲಿ ಮೀಸಲಾತಿ ಪಡೆದ ಅರ್ಧ ಭಾಗದಷ್ಟನ್ನು ಪ್ರತಿನಿಧಿಸುವ ಅಧಿಕಾರಿಗಳು ಹಾಗೂ (ಆ) ಆ ಮುಂದಿನವರನ್ನು ಪ್ರತಿನಿಧಿಸುವ ಅಧಿಕಾರೇತರರು: (೧) ದುರ್ಬಲ ವರ್ಗಗಳವರು, (೨) ಕಾರ್ಮಿಕ ವರ್ಗದವರು, (೩) ಆಂಗ್ಲೋ–ಇಂಡಿಯನರು, (೪) ಭಾರತೀಯ ಕ್ರೈಸ್ತರು ಮತ್ತು (೫) ಹತ್ತಿ ವ್ಯಾಪಾರಿಗಳು. ಚುನಾಯಿತ ಸದಸ್ಯರಲ್ಲಿ (೧) ವರ್ಗ ಮತದಾರ ಸಮುದಾಯಗಳಿಂದ ಚುನಾಯಿಸಲ್ಪಟ್ಟ ಕೆಲವರು. ಇವರು ಭೂಮಾಲಿಕರು. ವಾಣಿಜ್ಯ ಹಾಗೂ ಉದ್ಯಮಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಾರೆ. (೨) ಮರಾಠರು ಮತ್ತು ಆ ಜಾತಿ ಸಮುದಾಯದಿಂದ ಚುನಾಯಿಸಲ್ಪಟ್ಟ ಕೆಲವರು (೩) ಮುಹಮದೀಯರು ಹಾಗೂ ಯುರೋಪಿನವರಿಗಾಗಿಯೇ ರೂಪಿಸಲಾದ ಮತದಾರ ಸಮುದಾಯಗಳಿಂದ ಚುನಾಯಿತರಾದವರು. ಇಂಥ ಮತದಾರ ಸಮುದಾಯದ ರಚನೆಯನ್ನು ಯಾವುದೇ ಬದಲಾವಣೆ ಯಿಲ್ಲದೆ ಉಳಿಸಿಕೊಳ್ಳಬೇಕೇ ಎಂಬುದು ಸದ್ಯದ ಪ್ರಶ್ನೆ. ಯಾವುದೇ ತೀರ್ಮಾನಕ್ಕೆ ಬರುವ ಮೊದಲು, ಸೈದ್ಧಾಂತಿಕ ಹಾಗೂ ಕಾರ್ಯಾತ್ಮಕ– ಇವೆರಡೂ ಪರಿಗಣನೆಗಳ ಬೆಳಕಿನಲ್ಲಿ ಇದರ ಮೌಲ್ಯಮಾಪನ ಮಾಡ ಬೇಕಾದ ಅಗತ್ಯವಿದೆ.

**ನಾಮಕರಣಗೊಂಡ ಸದಸ್ಯರು:**

(೪೭) ವಿಧಾನಪರಿಷತ್ತಿನಲ್ಲಿ ಅವರು ಹಾಜರಿರುವುದರಿಂದ ಅವರ ಪ್ರಾತಿನಿಧಿಕ ಸ್ವರೂಪಕ್ಕೆ ಇರುವ ಗೌರವ ತಗ್ಗುತ್ತದೆ ಎಂದು ನಾಮಕರಣಗೊಂಡ ಸದಸ್ಯರ ವಿರುದ್ಧವಾಗಿ ವಾದಿಸಲಾಗಿದೆ. ಜವಾಬ್ದಾರಿ ಸರ್ಕಾರದ ಮೂಲತತ್ತ್ವ, ಶಾಸಕಾಂಗದ ಬಗ್ಗೆ ಕಾರ್ಯಾಂಗ ಹೊಂದಿರುವ ಜವಾಬ್ದಾರಿಯಾಗಿರುವಂತೆಯೇ ಪ್ರಾತಿನಿಧಿಕ ಸರ್ಕಾರದ ಮೂಲತತ್ತ್ವವು ಶಾಸಕಾಂಗಕ್ಕೆ ಜನರ ಬಗ್ಗೆ ಇರುವ ಜವಾಬ್ದಾರಿಯಲ್ಲಿ ಅಡಗಿದೆ. ಶಾಸಕಾಂಗವನ್ನು ಜನರೇ ಚುನಾಯಿಸಿದಾಗ ಮಾತ್ರ ಇಂಥ ಜವಾಬ್ದಾರಿಯನ್ನು ಸುರಕ್ಷಿತಗೊಳಿಸುವುದು ಸಾಧ್ಯ. ಸದಸ್ಯರನ್ನು ನಾಮಕರಣ ಮಾಡುವ ಪದ್ಧತಿ ಕೇವಲ ಸದನವನ್ನು ಪ್ರಾತಿನಿಧಿಕವಲ್ಲವಾಗಿ ಮಾಡು ವುದಷ್ಟೇ ಅಲ್ಲದೇ, ಕಾರ್ಯಾಂಗವನ್ನು ಜವಾಬ್ದಾರವಲ್ಲದಂತೆ ಮಾಡುವ ಪ್ರವೃತ್ತಿಯನ್ನು ಹೊಂದಿದೆ. ಏಕೆಂದರೆ ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರವಿರುವುದರಿಂದ ಯಾರ ಸಲಹೆಯಂತೆ ಆ ಅಧಿಕಾರವನ್ನು ಚಲಾಯಿಸಲಾಗುತ್ತದೆಯೋ ಆ ಕಾರ್ಯಾಂಗದ ಸದಸ್ಯರೇ, ಶಾಸಕಾಂಗದ ಸು. ಶೇ.೨೫ರಷ್ಟು ಸದಸ್ಯರನ್ನು ನೇಮಿಸುತ್ತಾರೆ. ಇದರ ಫಲಿತಾಂಶವಾಗಿ, ಸದನದಲ್ಲಿ ಇನ್ನೊಂದು ಸಂಖ್ಯೆಯಲ್ಲಿ ಇರುವ ಸದಸ್ಯರು ಕಾರ್ಯಾಂಗದ ವಿಮರ್ಶಕರಾಗಿರುವುದಕ್ಕಿಂತ ಹೆಚ್ಚಾಗಿ ಅದರ ಸೇವಕರಷ್ಟೇ ಆಗಿರುತ್ತಾರೆ. ನಾಮಕರಣ ಗೊಂಡ ಅಧಿಕಾರೇತರರು ಸರ್ಕಾರಿ ನೌಕರರಲ್ಲವೆಂಬ ಅಂಶವು ಈ ಅಭಿಪ್ರಾಯದ ತೀವ್ರತೆಯನ್ನು

ಕಡಿಮೆ ಮಾಡುವುದಿಲ್ಲ. ಏಕೆಂದರೆ ನಾಮಕರಣಗೊಂಡ ಅಧಿಕಾರೇತರರನ್ನು ಯಾವಾಗಲೂ ಖರೀದಿಸುವುದು ಸಾಧ್ಯ. ಚುನಾಯಿತ ಸದಸ್ಯನ ಸ್ವಾತಂತ್ರ್ಯವನ್ನು ಖರೀದಿಸುವ ದೃಷ್ಟಿಯಿಂದ ಅವನ ಮೇಲೆ ಪ್ರಭಾವ ಬೀರಲು ಕೂಡ ಕಾರ್ಯಾಂಗಕ್ಕೆ ಅನೇಕ ಮಾರ್ಗಗಳು ಯುಕ್ತವಿರುತ್ತವೆ. ಸದಸ್ಯನಿಗೆ ಪ್ರಶಸ್ತಿಗಳನ್ನು, ಗೌರವಗಳನ್ನು ನೀಡುವ ನೇರ ಪ್ರಸ್ತಾಪ ಮಾಡುವುದು, ಅವನ ಸ್ನೇಹಿತರಿಗೂ ಸಂಬಂಧಿಕರಿಗೂ ಸಹಾಯ ಮಾಡುವುದು– ಇವು ಇಂಥ ಕೆಲವು ವಿಧಾನಗಳಾಗಿರುತ್ತವೆ. ಆದರೆ ನಾಮಕರಣಗೊಂಡ ಅಧಿಕಾರೇತರ ಸದಸ್ಯರು ಆಗಲೇ ಪರಾವಲಂಬನದ ಎಂಥ ಹೀನ ಪರಿಸ್ಥಿತಿಯಲ್ಲಿ ಇರುತ್ತಾರೆಂದರೆ ಕಾರ್ಯಾಂಗ ಅವರ ಸ್ವಾತಂತ್ರ್ಯವನ್ನು ಖರೀದಿಸುವ ಅನಿವಾರ್ಯತೆಯೇ ಇರುವುದಿಲ್ಲ. ಅಂದರೆ ಅವರಿಗೆ ಮಾರಲು ಸ್ವಾತಂತ್ರ್ಯವೆಂಬುದೇ ಇರುವುದಿಲ್ಲ. ಅವರು ಕಾರ್ಯಾಂಗದಿಂದಲೇ ಸೃಷ್ಟಿಸಲ್ಪಟ್ಟವರು. ಅವರಿಗೆ ಸದಸ್ಯತ್ವ ಲಭಿಸಿದ್ದೇ ಪರಸ್ಪರ ತಿಳಿವಳಿಕೆಯ ಪರಿಣಾಮವಾಗಿ. ಪರಿಸ್ಥಿತಿ ಹೇಗಿದ್ದರೂ ಅವರು ಕಾರ್ಯಾಂಗದ ಸದಸ್ಯರ ಸ್ನೇಹಿತರಂತೆಯೇ ವರ್ತಿಸಬೇಕು. ಇಂಥ ಪರಸ್ಪರ ತಿಳಿವಳಿಕೆಯನ್ನು ಮುರಿಯುವ ಸಾಹಸ ತೋರಿಸುವ, ನಾಮಕರಣಗೊಂಡ ಸದಸ್ಯನ ವಿರುದ್ಧವಾಗಿಯೂ ಕಾರ್ಯಾಂಗ ತೀವ್ರದಂಡವನ್ನು ವಿಧಿಸಬಹುದು. ಅಂಥ ಶಿಕ್ಷೆ ವಿಧಿಸಿದುದಕ್ಕೆ ಅನೇಕ ಉದಾಹರಣೆಗಳಿವೆ. ಪ್ರಭುವಿಗಿರುವ 'ವೀಟೋ' ಅಧಿಕಾರದಂತೆ ಪುನರ್ನಾಮಕರಣ ಮಾಡುವ ಅಧಿಕಾರವಿರುವುದೆಂಬ ಅರಿವಿನಿಂದಾಗಿ ನಾಮಕರಣಗೊಂಡ ಪ್ರತಿಯೊಬ್ಬ ಸದಸ್ಯನೂ ಕಾರ್ಯಾಂಗದ ಆಜ್ಞಾನುವರ್ತಿಯಾಗಿರುತ್ತಾನೆ.

(೪೮) ನಾಮಕರಣ ಮಾಡುವ ಪದ್ಧತಿಯಿಂದ ಉದ್ಭವಿಸುವ ಇನ್ನೊಂದು ಕೆಡುಕನ್ನು ಇಲ್ಲಿ ಎತ್ತಿ ಹೇಳಬೇಕಾಗಿದೆ. ನಾಮಕರಣಗೊಂಡ ಅಧಿಕಾರೇತರ ಸದಸ್ಯರು ಕೆಲವು ನಿರ್ದಿಷ್ಟ ಸಮುದಾಯಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸಬೇಕಾಗುತ್ತದೆ. ಈ ಸಮುದಾಯಗಳ ಪ್ರಾತಿನಿಧ್ಯಕ್ಕಾಗಿಯೇ ಮತದಾರ ಸಮುದಾಯ ಪದ್ಧತಿ ರೂಪುಗೊಂಡಿರುವುದು ಇದಕ್ಕೆ ಕಾರಣ. ನಾಮಕರಣಗೊಂಡ ಅಧಿಕಾರಿ ವರ್ಗದ ಸದಸ್ಯರನ್ನು, ಸರ್ಕಾರದ ಹಿತಾಸಕ್ತಿಗಳನ್ನು ಬೆಂಬಲಿಸಲು ನೇಮಿಸಲಾಗಿರುತ್ತದೆ. ನಾಮಕರಣಗೊಂಡ ಅಧಿಕಾರಿ ವರ್ಗಕ್ಕೆ ಸೇರಿದ ಸದಸ್ಯರು, ಒಟ್ಟಿನಲ್ಲಿ ಸರ್ಕಾರದ ಹಿತಾಸಕ್ತಿಗಳನ್ನು ಕಾಪಾಡಲು ಸೇವೆ ಸಲ್ಲಿಸಬೇಕಾಗಿರುವಾಗ, ನಾಮಕರಣಗೊಂಡ ಅಧಿಕಾರೇತರ ಸದಸ್ಯರು ತಮ್ಮ ಮತದಾನ ಕ್ಷೇತ್ರಗಳ ಹಿತಾಸಕ್ತಿಗಳನ್ನು ಕಾಪಾಡಲು ಅಗತ್ಯವಾಗಿರುವ ಸೇವೆ ಸಲ್ಲಿಸುವಲ್ಲಿ ವಿಫಲರಾಗಿರುವುದು ವಿಷಾದಕರ ವಿಚಾರ. ನಿಜವಾಗಿಯೂ ನಾಮಕರಣಗೊಂಡ ಅಧಿಕಾರೇತರ ಸದಸ್ಯ ತನ್ನ ಸಮುದಾಯಕ್ಕೆ ಸೇವೆ ಸಲ್ಲಿಸಲಾರ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಸರ್ಕಾರಿ ಕಾರ್ಯ ನಿರ್ವಹಣೆಯ ಮೇಲೆ ಪ್ರಭಾವ ಬೀರುವುದರ ಮೂಲಕವಾಗಿ ಮಾತ್ರ ಸಮುದಾಯಗಳ ಹಿತಾಸಕ್ತಿಗಳ ಸಂರಕ್ಷಣೆ ಸಾಧ್ಯವಾಗುವುದಿಲ್ಲ. ಕಾರ್ಯಾಂಗವನ್ನು ನಿಯಂತ್ರಣದಲ್ಲಿಟ್ಟಾಗ ಹಾಗೂ ಅದಕ್ಕೆ ವಿರುದ್ಧ ಮತದ ಪರಿಣಾಮಗಳನ್ನು ಮನದಟ್ಟು ಮಾಡಿಕೊಟ್ಟಾಗ ಮಾತ್ರ ಇದು ಸಾಧ್ಯವಾಗುತ್ತದೆ. ಆದರೆ, ಈ ಮಾರ್ಗೋಪಾಯವನ್ನು ನಾಮಕರಣಗೊಂಡ ಸದಸ್ಯನಿಗೆ ಸ್ವಾಭಾವಿಕವಾಗಿಯೆ ನಿರಾಕರಿಸಲಾಗಿದೆ. ಫಲಿತಾಂಶವಾಗಿ ಅವನ ಬೆಂಬಲದ ಭರವಸೆಯಿಂದ ಕಾರ್ಯಾಂಗ ಅವನ ಉದ್ದೇಶದತ್ತ ಔದಾಸೀನ್ಯ ಮನೋಭಾವನೆಯನ್ನು ತಾಳುತ್ತದೆ. ನಾಮಕರಣಗೊಂಡ ಸದಸ್ಯನಿಗೆ ಸ್ವಾತಂತ್ರ್ಯ ನಿರಾಕರಿಸಲ್ಪಟ್ಟಿರುವುದರಿಂದ, ಅವನು ಕೂಡ ತಾನು ಯಾವ ಸಮುದಾಯವನ್ನು ಪ್ರತಿನಿಧಿಸಲು ನಾಮಕರಣಗೊಂಡಿದ್ದಾನೋ ಈ ಸಮುದಾಯದ ಪರಿಸ್ಥಿತಿಯಲ್ಲಾಗುವ ಯಾವುದೇ ಬದಲಾವಣೆಯ ಮೇಲೆ ಪ್ರಭಾವ ಬೀರಲು ಅಸಮರ್ಥವಾಗಿರುತ್ತಾನೆ.

(೪೯) ನಾಮಕರಣಗೊಂಡ ಅಧಿಕಾರೇತರರು ಸಚಿವರಾಗಲು ಅರ್ಹರಲ್ಲ ಎಂದು ಘೋಷಿಸ

ಲಾಗಿರುವುದು ನಾಮಕರಣ ಪದ್ಧತಿಯ ಇನ್ನೊಂದು ಗಂಭೀರ ಸ್ವರೂಪದ ನ್ಯೂನತೆಯಾಗಿರುತ್ತದೆ. ಸೈದ್ಧಾಂತಿಕವಾಗಿ, ಶಾಸಕಾಂಗದ ಸದಸ್ಯನಿಗೆ ಆಡಳಿತದಲ್ಲಿ ಸಚಿವನಾಗಿ ಆಯ್ಕೆಯಾಗಲು ಇರುವ ಹಕ್ಕಿನ ವಿಷಯದಲ್ಲಿ ಯಾವುದೇ ನಿರ್ಬಂಧವಿರಬೇಕಾಗಿಲ್ಲ. ಒಂದೊಮ್ಮೆ ಅಂಥ ಹಕ್ಕನ್ನು ಸೀಮಿತಗೊಳಿಸಬೇಕೆಂದೇ ಭಾವಿಸುವುದಾದರೂ, ಒಳ್ಳೆಯ ಹಾಗೂ ಸಮರ್ಥ ಆಡಳಿತ ಪದ್ಧತಿಯನ್ನು ರೂಪಿಸುವುದು ಅಂಥ ಸೀಮಿತತೆಯ ಉದ್ದೇಶವಾಗಬೇಕು. ಈ ಸೀಮಿತತೆಯ ಉದ್ದೇಶ ಇದೊಂದೇ ಅಲ್ಲ, ಇದು ಪ್ರಾತಿನಿಧ್ಯದ ವಿಷಯದಲ್ಲಿ ವ್ಯತ್ಯಾಸ ಹೊಂದಿರುವ ವಿವಿಧ ಸಮುದಾಯಗಳ ಮೇಲೆ ಸಮಾನವಲ್ಲದ ರೀತಿಯಲ್ಲಿ ಪ್ರಭಾವ ಬೀರುತ್ತದೆ. ಹಾಗೂ ತಮ್ಮ ನ್ಯೂನತೆಗಳನ್ನು ಪರಿಹರಿಸಿಕೊಳ್ಳಬೇಕಾದ ಕೆಲವು ನಿರ್ದಿಷ್ಟ ಸಮುದಾಯಗಳು ತಮ್ಮ ಅಭಿವೃದ್ಧಿಗಾಗಿ ಸರ್ಕಾರದ ನೇರ ಕಾರ್ಯಾಚರಣೆಗಳ ಅಗತ್ಯವನ್ನು ಹೊಂದಿರುತ್ತವೆ. ಯಾವುದೇ ಮಟ್ಟದ ಸರ್ಕಾರಿ ಕಾರ್ಯಾಚರಣೆಯೂ ಸನ್ನಿವೇಶವನ್ನು ಸಂಪೂರ್ಣವಾಗಿ ಅಥವಾ ಶೀಘ್ರವಾಗಿ ಪರಿವರ್ತಿಸಲಾರದೆಂಬುದು ಸತ್ಯ. ಆದರೆ ಇದಕ್ಕಾಗಿ ಎಲ್ಲ ಅವಕಾಶಗಳನ್ನು ಕಲ್ಪಿಸಿಕೊಡುವುದರಿಂದ ಪ್ರಜಾವರ್ಗಕ್ಕೆ ಅಧಿಕ ಪ್ರಯೋಜನಗಳು ವಿವೇಕಯುತ ಶಾಸಕಾಂಗದಿಂದ ದೊರೆತಂತಾಗುತ್ತದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಈ ಎಲ್ಲ ವರ್ಗಗಳವರೂ ವಾಸ್ತವವಾಗಿ ತಲತಲಾಂತರದಿಂದ ಬಂದ ಸಾಮಾಜಿಕ ವ್ಯಸನಗಳು ಹಾಗೂ ಕಷ್ಟಗಳ ಪ್ರಭಾವಕ್ಕೆ ಸಿಲುಕಿಯೇ ತಮ್ಮ ಜೀವನ ಪ್ರಾರಂಭಿಸುತ್ತಾರೆ. ಹಾಗೂ ಕೆಲವು ಸಲ ಕೊನೆಗೊಳಿಸುತ್ತಾರೆ ಕೂಡ. ಅವರ ಇಂಥ ಸಂಕಷ್ಟಗಳಿಗೆ ಸಮಾಜವೇ ಹೊಣೆ ಯಾಗಿರುತ್ತದೆ. ಅವರ ಕಷ್ಟಗಳನ್ನು ತೊಡೆದುಹಾಕುವುದಕ್ಕೆ ಶಾಸನಗಳು ಬಹಳಷ್ಟು ಕೆಲಸ ಮಾಡಬಹು ದಾಗಿದೆ. ಜನರ ಜೀವನ ಪರಿಸ್ಥಿತಿಗಳಲ್ಲಿ ಬದಲಾವಣೆಗಳನ್ನು ಉಂಟುಮಾಡುವಲ್ಲಿ ಶಾಸನಗಳು ಎಷ್ಟು ಪರಿಣಾಮಕಾರಿಯೆಂಬುದನ್ನು ಪ್ರಪಂಚದ ಎಲ್ಲೆಡೆ ಗುರುತಿಸಲಾಗಿದೆ. ಆದರೆ ರಾಷ್ಟ್ರದ ಸಚಿವ ಸಂಪುಟದಲ್ಲಿ ಅಸ್ಪೃಶ್ಯರಂಥ ವರ್ಗಗಳವರಿಗೆ ಸ್ಥಾನ ಸಿಗದ ಹೊರತು ಸಾಮಾಜಿಕ ಪ್ರಗತಿಗೆ ಅವಶ್ಯಕವಾಗಿರುವ ಈ ಮುಖ್ಯ ಕರ್ತವ್ಯ ಯಾರ ಗಮನಕ್ಕೂ ಬರಲಾರದು. ಆದ್ದರಿಂದ ನಾಮಕರಣ ವ್ಯವಸ್ಥೆಯನ್ನು ಖಂಡಿಸಬೇಕಾದ ಅಗತ್ಯವಿದೆ.

**ಚುನಾಯಿತ ಸದಸ್ಯರು:**

(೫೦) ವರ್ಗ–ಮತದಾರ ಸಮುದಾಯ:– ಈ ವರ್ಗ–ಮತದಾರ ಸಮುದಾಯಗಳು ಮಾರ್ಲೆ–ಮಿಂಟೋ ಯೋಜನೆ ಸೋಗಿನ ಒಂದು ಪ್ರಯತ್ನವಾಗಿತ್ತು. ಏಕೆಂದರೆ ಇದರ ಅನ್ವಯ ಆಳಬೇಕೆಂಬ ಯೋಚನೆಯನ್ನು ಬಿಟ್ಟುಬಿಡದೆಯೇ ನೌಕರಶಾಹಿಯ ಯೋಜನೆಗೆ ವಾಸ್ತವವಲ್ಲದ, ಕೇವಲ ಕಲ್ಪಿತವಾದ ಜನಪ್ರಿಯ ಆಡಳಿತದ ತೋರ್ಕೆಯನ್ನು ನೀಡುವಂಥ ರೀತಿಯಲ್ಲಿ ಮತದಾನ ಪದ್ಧತಿ ಹಾಗೂ ಮತದಾರ ಸಮುದಾಯಗಳನ್ನು ವ್ಯವಸ್ಥೆಗೊಳಿಸುವುದರ ಮೂಲಕ ಶಾಸಕಾಂಗಗಳನ್ನು ರಚಿಸುತ್ತದೆ. ಇಂಥದೊಂದು ಯೋಜನೆಗೆ ಈ ವರ್ಗ ಮತದಾರ ಸಮುದಾಯಗಳು ತುಂಬ ಸೂಕ್ತವಾಗಿವೆ. ಆದರೆ, ಮಾಂಟೆಗ್ಯೂ–ಚೆಲಮ್ಸ್ ಫರ್ಡ್ ಯೋಜನೆ ನಂಬುವಂತೆ ಸೋಗಿನ ಪ್ರಯತ್ನವಾಗಿರಲಿಲ್ಲ. ಅದು ಜನರ ಆಳ್ವಿಕೆಯನ್ನೇ ಉದ್ದೇಶವಾಗಿಸಿಕೊಂಡಿತ್ತು. ಪರಿಣಾಮವಾಗಿ ಇಂಥ ವರ್ಗ–ಮತದಾರ ಸಮುದಾಯಗಳನ್ನು ರದ್ದು ಮಾಡಲು ಅದು ಸಲಹೆ ನೀಡುತ್ತದೆಂದು ನಿರೀಕ್ಷಿಸಲಾಗಿತ್ತು. ಆದರೂ ಈ ವರ್ಗಗಳು ಯಾವಾಗಲೂ ಬೀರುತ್ತಿದ್ದ ಅಧಿಕ ಪ್ರಭಾವದಿಂದಾಗಿ, ವರ್ಗ–ಮತದಾರ ಸಮುದಾಯಗಳು ಮುಂದುವರಿಯುವಂತೆ ಶಿಫಾರಸ್ ಮಾಡಬೇಕೆಂದು ಮಾಂಟೆಗ್ಯೂ–ಚೆಲಮ್ಸ್ ಫರ್ಡ್ ವರದಿಯ ಲೇಖಕರನ್ನು ಒತ್ತಾಯಿಸಲಾಯಿತು.

ಮುಂದೆ ಸೌತ್–ಬರೋ ಸಮಿತಿಯ ಈ ಶಿಫಾರಸ್‌ಗಳನ್ನು ಜಾರಿಗೆ ತಂದಿತು. ಈ ವರ್ಗ–ಮತದಾರ ಸಮುದಾಯಗಳನ್ನು ಉಳಿಸಿಕೊಳ್ಳಲು ಯಾವುದೇ ಕಾರಣವಿರಲಿ, ಜನಪ್ರಿಯ ಸರ್ಕಾರಕ್ಕೆ ಮೂಲಭೂತ ಆಧಾರವಾಗಿರುವ ಸ್ಫೂರ್ತಿಯಿಂದಾಗಿ, ಅವುಗಳ ಅಸ್ತಿತ್ವವನ್ನು ಒಪ್ಪಿಕೊಳ್ಳಲು ಸಾಧ್ಯವಾಗದು ಎಂಬುದರಲ್ಲಿ ಯಾವುದೇ ಸಂದೇಹವೂ ಇಲ್ಲ. ಈ ಮತದಾರ ಸಮುದಾಯಗಳ ವರ್ಗ–ಸ್ವಭಾವವೇ ಅವುಗಳನ್ನು ಖಂಡಿಸಲು ತಕ್ಕ ಕಾರಣವಾಗಿರುತ್ತದೆ. ಸಾರ್ವಜನಿಕ ಹಿತಾಸಕ್ತಿಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಅಭಿಪ್ರಾಯಾನುಸಾರ ತೀರ್ಮಾನವಾಗುವಂಥ ಪರ್ಯಾಲೋಚನಾ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವಲ್ಲಿ ಪಾತ್ರವಹಿಸುವ ಸಮಿತಿಯ ಪ್ರತಿಯೊಬ್ಬ ಸದಸ್ಯನೂ ಆ ಅಭಿಪ್ರಾಯವನ್ನು ಪ್ರತಿನಿಧಿಸಬೇಕಾದ್ದು ಅವಶ್ಯಕ. ನಿಜವಾಗಿ ಹೇಳುವುದಾದರೆ ಸದನದ ಸಭಾಂಗಣದಲ್ಲಿ ಚರ್ಚಿತವಾಗುವ ವಿಷಯಗಳನ್ನು ಕುರಿತು ನಿರ್ಣಾಯಕ ಮತವನ್ನು ನೀಡಲು ಇತರ ಯಾವನೇ ವ್ಯಕ್ತಿ ಅರ್ಹನೆಂದು ಭಾವಿಸಲು ಸಾಧ್ಯವಿಲ್ಲ. ಆದರೆ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುವವರು, ಒಬ್ಬ ವ್ಯಕ್ತಿ ಹೇಳಿದ್ದಿರಬಹುದಾದ ಅಭಿಪ್ರಾಯಗಳನ್ನು, ಎಂದರೆ ಅವರ ವರ್ಗಕ್ಕೆ ಸಂಬಂಧಿಸಿದ ಪೂರ್ವಗ್ರಹಿಕೆಗಳನ್ನಷ್ಟೇ ಪ್ರತಿನಿಧಿಸುತ್ತಾನೆ. ಶಾಸಕಾಂಗದ ಸದಸ್ಯರಾಗಿ ಅವರ ವರ್ಗ–ಸ್ವಭಾವ ಹೇಗೆಯೇ ಇರಲಿ– ಅವರ ಕಾಳಜಿ ತಮ್ಮ ಸ್ವಂತ ವರ್ಗಕ್ಕೆ ಮಾತ್ರ ಸಂಬಂಧಿಸಿರಲಿ ಅಥವಾ ಅದರಾಚೆಗೂ ವಿಸ್ತರಿಸಲಿ– ಎಲ್ಲ ವಿಷಯಗಳ ಬಗೆಗೂ ಮತ ನೀಡುವ ಅರ್ಹತೆಯನ್ನು ಅವರು ಪಡೆದಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಇದು ಜನಪ್ರಿಯ ಸರ್ಕಾರದ ತತ್ವವನ್ನೇ ಬುಡಮೇಲು ಮಾಡುತ್ತದೆ. ಇಂಥವರ್ಗ– ಹಿತಾಸಕ್ತಿಗಳನ್ನು ಪ್ರತಿನಿಧಿಸುವವರು, ತಮ್ಮ ವರ್ಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತಜ್ಞ, ಸಲಹೆಯನ್ನು ನೀಡಬೇಕಾದ ಅಗತ್ಯವಿದೆ ಎಂದೂ ವಾದಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ಪ್ರಜಾ ಪ್ರಭುತ್ವದಲ್ಲಿ ಒಟ್ಟಿನಲ್ಲಿ ಸ್ವಯಂ ಸರ್ಕಾರದ ರಚನೆಯೇ ಅಂತಿಮ ಸಿದ್ಧಾಂತ ಹಾಗೂ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಅಂತಿಮ ನಿರ್ಧಾರಗಳನ್ನು, ಜನತೆಯಿಂದ ಚುನಾಯಿಸಲ್ಪಟ್ಟ ವ್ಯಕ್ತಿಗಳೇ ಮಾಡಬೇಕಲ್ಲದೆ, ತಜ್ಞರಲ್ಲ ಎಂಬುದನ್ನು ನೆನಪಿನಲ್ಲಿರಿಸಿಕೊಳ್ಳಬೇಕಾದ ಅಗತ್ಯವಿದೆ. ಇಂಥ ವ್ಯಕ್ತಿಗಳು ನೀಡುವ ಸಲಹೆಗಳು ಯಾವಾಗಲೂ ಸದನಕ್ಕೆ ಉಪಯುಕ್ತವಾಗಿರುವುದಿಲ್ಲ ಎಂಬುದು ಹೆಚ್ಚು ಅಮೂಲ್ಯವಾದ ವಿಚಾರವೇನೂ ಅಲ್ಲ. ಏಕೆಂದರೆ ಅವರ ಸಲಹೆ, ಪ್ರತಿಪಾದನೆಯಾಗುತ್ತದೆಯೇ ವಿನಾ, ಚರ್ಚಿಸಲ್ಪಡುತ್ತಿರುವ ಜಾಗರೂಕ ಪ್ರತಿಪಾದನೆಯಾಗುವುದಿಲ್ಲ.

(೫೧) ಆದರೂ, ಈ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವುದಾಗಲಿ ಅಥವಾ ಅವರ ಪರವಾಗಿ ಸದನಕ್ಕೆ ಸಲಹೆ ನೀಡುವುದಾಗಲಿ ಅವಶ್ಯಕವೆಂದು ಭಾವಿಸುವುದಾದರೆ, ಈ ಹಿತಾಸಕ್ತಿಗಳಿಗೆ ಸಾಮಾನ್ಯ ಮತದಾರ ಸಮುದಾಯಗಳ ದ್ವಾರಾ ಸಾಕಷ್ಟು ಪ್ರಾತಿನಿಧ್ಯ ಸಿಗುವುದಿಲ್ಲ ಎಂಬುದನ್ನು ಇನ್ನೂ ಸಾಬೀತು ಪಡಿಸಬೇಕಾಗಿದೆ. ಅಷ್ಟೇ. ನಾವು ಹೊಂದಿರುವಂಥ ವಾಸ್ತವಾಂಶಗಳು ಇದು ಸಾಧ್ಯ ಎಂದು ತೋರಿಸುತ್ತದೆ. ಇನಾಮ್‌ದಾರರ ವಿಷಯವನ್ನೇ ತೆಗೆದುಕೊಂಡರೆ, ಅವರದೇ ಆದ ವಿಶೇಷ ಮತದಾರ ಸಮುದಾಯಗಳ ಮುಖಾಂತರ ಅವರಿಗೆ ೩ ಸ್ಥಾನಗಳನ್ನು ನೀಡಲಾಗಿದ್ದರೂ ಸಾಮಾನ್ಯ ಮತದಾರ ಸಮುದಾಯಗಳ ಮೂಲಕ ೧೨ ಸ್ಥಾನಗಳನ್ನು ಗಳಿಸಲು ಅವರು ಸಮರ್ಥರಾಗಿರುತ್ತಾರೆ. ಜಮೀನ್ದಾರರಿಗೆ ಸಮಿತಿಯ ಇತರ ಸದಸ್ಯರೊಂದಿಗಿರುವ ಒಗ್ಗಟ್ಟಿನ ಕಾರಣದಿಂದಾಗಿ ತಾವು ಸಂಖ್ಯೆಯಲ್ಲಿ ಎಷ್ಟು ಪ್ರಬಲರೆಂದು ಅವರು ಭಾವಿಸಿದ್ದಾರೆಂದರೆ, ಕೇವಲ ಕೆಲವು ತಿಂಗಳ ಹಿಂದೆಯಷ್ಟೇ, ತಮ್ಮ ವರ್ಗದ ಮುಖಂಡನಿಗಾಗಿ ಅವರು ಗುಮಾಸ್ತೆ ಹುದ್ದೆಯೊಂದಕ್ಕಾಗಿ ಒತ್ತಾಯಿಸಿದ್ದರು. ಅಲ್ಲದೆ, ವರ್ಗ–ಮತದಾರ ಸಮುದಾಯಗಳಿಲ್ಲದೆ ಹೋದರೆ, ಸಮಿತಿಯಲ್ಲಿ ಈ ವರ್ಗಗಳ ಹಿತಾಸಕ್ತಿಗಳ ಪ್ರಾತಿನಿಧ್ಯಕ್ಕೆ ಅವಕಾಶವಿರುವುದಿಲ್ಲ ಎಂಬುವೂ

ನಿಜವಲ್ಲ. ಆ ವರ್ಗಕ್ಕೆ ಸೇರಿದ ಒಬ್ಬ ಸದಸ್ಯನೇ, ಅವನು ಸಾಮಾನ್ಯ ಮತದಾರ ಸಮುದಾಯದಿಂದಲೇ ಚುನಾಯಿತನಾಗಿದ್ದರೂ, ವರ್ಗದ ಹಿತಾಸಕ್ತಿಗಳನ್ನು ಚೆನ್ನಾಗಿ ಕಾಪಾಡಲು ಸಮರ್ಥನಾಗಿರುತ್ತಾನೆ. ಶಾಸಕಾಂಗದಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡ ಸದಸ್ಯನು ತನ್ನ ಮತದಾನ ಕ್ಷೇತ್ರವನ್ನೇ ನೇರವಾಗಿ ಪ್ರತಿನಿಧಿಸುವನಾದರೂ, ಪರೋಕ್ಷವಾಗಿ ಸ್ವತಃ ತನ್ನನ್ನೂ ಮತ್ತು ಅಷ್ಟೇ ಮಟ್ಟಿಗೆ ತನ್ನ ವರ್ಗವನ್ನೂ ಸ್ಪಷ್ಟವಾಗಿ ಪ್ರತಿನಿಧಿಸುತ್ತಾನೆ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ, ಮೇಲಿನ ಅಂಶ ಸ್ಪಷ್ಟವಾಗುತ್ತದೆ. ನಿಜವಾಗಿ ಹೇಳುವುದಾದರೆ ಸದಸ್ಯನಿಗಿರುವ ಇಂಥ ಮನೋಭಾವ ವಸ್ತು ಸ್ಥಿತಿಯಿಂದಲೇ ಸ್ಪಷ್ಟವಾಗುತ್ತದೆ. ಅವನು ಪರೋಕ್ಷವಾಗಿ ತನ್ನನ್ನೇ ಪ್ರತಿನಿಧಿಸಿಕೊಳ್ಳುತ್ತಾನೆ. ಅವನ ಈ ಸ್ವಭಾವವನ್ನು ನಿಯಂತ್ರಿಸಬಹುದಾದರೂ, ಹಿನ್ನೆಲೆಯಲ್ಲಿ ಅವನ ನೇರ ಪ್ರಾತಿನಿಧ್ಯವಿದ್ದೇ ಇರುತ್ತದೆ. ಉದಾಹರಣೆಗೆ "ಛೇಂಬರ್ ಆಫ್ ಕಾಮರ್ಸ್" ಅನ್ನು ಪ್ರತಿನಿಧಿಸುವ ಒಬ್ಬ ಐರೋಪ್ಯ ಸಭ್ಯವ್ಯಕ್ತಿಯು ಕೇವಲ ವಾಣಿಜ್ಯ ಹಿತಾಸಕ್ತಿಗಳನ್ನಷ್ಟೇ ಕಾಪಾಡುವನು, ಇಡೀ ಐರೋಪ್ಯ ಸಮುದಾಯದ ಹಿತಾಸಕ್ತಿಗಳನ್ನಲ್ಲವೆಂದು ಯಾರೂ ನಂಬಲಾರರು. ಏಕೆಂದರೆ ಅವನು "ಛೇಂಬರ್ ಆಫ್ ಕಾಮರ್ಸ್"ನಿಂದ ಚುನಾಯಿತನಾಗಿರುತ್ತಾನೆಯೇ ವಿನಾ ಸಾಮಾನ್ಯ ಐರೋಪ್ಯ ಸಮುದಾಯದಿಂದ ಅಲ್ಲ. ವಸ್ತುತಃ ವ್ಯಕ್ತಿಯೊಬ್ಬನ ಆತ್ಮವು ಅವನ ಮತದಾರರ ಕ್ಷೇತ್ರಕ್ಕಿಂತ ಅವನಿಗೇ ಹೆಚ್ಚು ಹತ್ತಿರವಾಗಿರುತ್ತದೆ. ಮನುಷ್ಯನ ಚರ್ಮ ಅವನ ಅಂಗಿಗಿಂತ ಹತ್ತಿರವಾಗಿರುತ್ತದೆ ಎಂಬ ಮಾತೊಂದು ರೂಢಿಯಲ್ಲಿದೆ. ಯಾವುದೇ ದೋಷಾರೋಪಣೆಯಂತೆ ಅಲ್ಲದೆ, ಈ ಮಾತನ್ನು ಶಾಸಕಾಂಗದ ಸದಸ್ಯರಿಗೂ ಅನ್ವಯಿಸಬಹುದು. "ಹೌಸ್ ಆಫ್ ಕಾಮನ್ಸ್"ನಲ್ಲಿ ನೌಕೋದ್ಯಮ, ಉಣ್ಣೆ ಉದ್ಯಮ ಹಾಗೂ ನಾರು ಬಟ್ಟೆ ಉದ್ಯಮಗಳಲ್ಲಿ ಪ್ರತಿಯೊಂದು ಉದ್ಯಮವೂ ತನ್ನ ಪ್ರತಿನಿಧಿಯನ್ನು ಹೊಂದಿರಬೇಕೆಂದು ಒಂದು ಕಾಲದಲ್ಲಿ ಬಯಸಿದ್ದ ಇಂಗ್ಲೆಂಡಿನ ಜನರು ಅಂಥ ವರ್ಗ–ಮತದಾರ ಸಮುದಾಯಗಳ ಭಾವನೆಯನ್ನು ತೊರೆದು ಬಿಡುವಂತೆ ಮಾಡಿದ್ದ ಈ ವಾಸ್ತವಾಂಶದ ಅರಿವೇ ಆಗಿರುತ್ತದೆ. ಬೇರೆ ಕಡೆ ರದ್ದಾದ ಒಂದು ಪದ್ಧತಿ ಭಾರತದಲ್ಲಿ ಏಕೆ ಮುಂದುವರಿಯಬೇಕೆಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೇ ಸರಿ. ಈ ವರ್ಗಗಳವರ ಹಿತಾಸಕ್ತಿಗಳ ಸಂಬಂಧದಲ್ಲಿ ಇತರ ಅಗತ್ಯವಿಲ್ಲ. ಇದು ರಾಷ್ಟ್ರದ ರಾಜಕೀಯಕ್ಕೆ ಅಪಾಯಕರವೂ ಹೌದು. ವಾಣಿಜ್ಯ ವರ್ಗಗಳಿಗೆ ಹಾಗೂ ವ್ಯಷ್ಟಿ ವರ್ಗಗಳಿಗೆ ಸೇರಿದ ವ್ಯಕ್ತಿಗಳು ಸಾಮಾನ್ಯ ಮತದಾರ ಕ್ಷೇತ್ರಗಳ ಮೂಲಕ ಚುನಾವಣೆಯ ಭರವಸೆ ಪಡೆಯುವವರೇ ಇಲ್ಲವೆ ಎಂಬುದೊಂದೇ ಇಲ್ಲಿನ ಪ್ರಶ್ನೆ. ಚುನಾವಣಾ ಪಂದ್ಯದಲ್ಲಿ ಈ ವರ್ಗಗಳವರಿಗೆ ಪ್ರತಿಬಂಧವನ್ನುಂಟುಮಾಡುತ್ತದೆಂದು ಹೇಳಲಾಗಿರುವ ಯಾವುದೇ ವಿಚಾರದ ಬಗ್ಗೆ ನನಗೆ ತಿಳಿದಿಲ್ಲ. ಮಹಾ ಚುನಾವಣೆಯಲ್ಲಿ ಸರ್ದಾರರು ಇನಾಮ್‌ದಾರರೂ ಜಯ ಗಳಿಸಿದುದರಿಂದಲೇ, ಇದರ ವಿರುದ್ಧ ಪ್ರತಿಬಂಧಗಳಿವೆ ಎಂಬುದು ಸಾಬೀತಾಗಿದೆ. ಇನಾಮ್‌ದಾರರೂ, ಸರ್ದಾರರೂ ಗೆದ್ದಿರುವಾಗ, ವಾಣಿಜ್ಯ ಹಾಗೂ ಉದ್ಯಮಗಳ ಪ್ರತಿನಿಧಿಗಳಿಗೆ ಇದೇಕೆ ಸಾಧ್ಯವಾಗದು ಎಂಬುದಕ್ಕೆ ಯಾವುದೇ ಕಾರಣವಿಲ್ಲ.

(೫೨) ಮೀಸಲು ಮತದಾರ ಸಮುದಾಯಗಳು ಮೀಸಲು ಮತದಾರ ಸಮುದಾಯಗಳ ಪದ್ಧತಿಯ ವಿರೋಧವಾಗಿ ಮೂರು ಆಕ್ಷೇಪಗಳನ್ನು ಎತ್ತಬಹುದಾಗಿದೆ. ಬಹುಸಂಖ್ಯಾತ ಜನರಿಗೆ ಮಾತ್ರ ಪ್ರಯೋಜನಗಳನ್ನು ಖಚಿತಪಡಿಸಲು ಅದು ಪ್ರಯತ್ನಿಸುತ್ತದೆ ಎಂಬುದು ಮೊದಲ ವಿರೋಧ. ರಾಜ್ಯದ ಮರಾಠಿ ಮಾತನಾಡುವ ಪ್ರದೇಶಗಳಲ್ಲಿನ ಮರಾಠರು ಹಾಗೂ ಅವರಲ್ಲಿ ಮತದಾರರ ಸಂಖ್ಯೆಯೂ ಅಧಿಕ. ಈ ಕಾರಣದಿಂದಾಗಿ ಅವರಿಗೆ ಯಾವುದೇ ರಾಜಕೀಯ ರಕ್ಷಣೆಯ ಅಗತ್ಯವಿಲ್ಲವೆಂಬುದೂ ನಿಜ. ಆದರೆ, ಹಕ್ಕು ಮತ್ತು ಅದರ ಮಹತ್ವದ ಬಗ್ಗೆ ತಿಳಿದಿರುವ ಜನರು ಹಾಗೂ ಹಕ್ಕು ಮತ್ತು ತಾವದನ್ನು

ಚಲಾಯಿಸಬಹುದೆಂಬ ಬಗ್ಗೆ ಏನೂ ತಿಳಿದಿರದ ಜನರು– ಇವರ ಜಗತ್ತುಗಳ ನಡುವೆಯೇ ಎಲ್ಲ ವ್ಯತ್ಯಾಸವಿದೆ. ಮರಾಠರು ಹಾಗೂ ಸಂಬಂಧಪಟ್ಟ ಇತರ ಜಾತಿಗಳವರು ತಮ್ಮ ಹಕ್ಕಿನ ಬಗ್ಗೆ ತಿಳಿದಿಲ್ಲವೆಂಬ ಸಂಗತಿ, ಅವರ ಮತದಾನ ಕ್ಷೇತ್ರಗಳಲ್ಲಿರುವ ಆ ಜಾತಿಗಳ ಮತದಾರರ ಸಂಖ್ಯಾಬಲವನ್ನು ನಾವು ಹೋಲಿಸಿದರೆ, ಸಾಕಷ್ಟು ಸ್ಪಷ್ಟವಾಗುತ್ತದೆ. ಈ ಕ್ಷೇತ್ರಗಳಲ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಬೇರೆ ಬೇರೆ ಅಭ್ಯರ್ಥಿಗಳಲ್ಲಿ ಅವರ ಪ್ರತಿನಿಧಿಗಳೊಂದಿಗೆ, ಅವರಿಗೂ ಸ್ಥಾನಗಳನ್ನು ಕಾದಿರಿಸಲಾಗುತ್ತದೆ. ಅಂಥ ಪ್ರತಿಯೊಂದು ಮತದಾನ ಕ್ಷೇತ್ರದಲ್ಲಿಯೂ ಮರಾಠಾ ಮತದಾರರು ಇತರ ಸಮುದಾಯಗಳಿಗೆ ಸೇರಿದ ಮತದಾರರಿಗಿಂತ ಹೆಚ್ಚಿನ ಮಹತ್ವ ಹೊಂದಿರುತ್ತಾರೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಆದರೂ ೧೯೨೩ರ ಹಾಗೂ ೧೯೨೬ರ ಚುನಾವಣೆಗಳಲ್ಲಿ ಅವರಿಗೆ ವಿತರಿಸಲಾದ ೭ ಸ್ಥಾನಗಳಲ್ಲಿ ೩ರಲ್ಲಿ ಅವರು ಆಯ್ಕೆಯಾಗಲಿಲ್ಲ. ಮತದಾರರ ಪಟ್ಟಿಯಲ್ಲಿ, ಮೇಲಿರುವ ಸಮುದಾಯಗಳ ಅಭ್ಯರ್ಥಿಗಳು, ತಮ್ಮನ್ನು ಕೆಳಗೆ ಕಂಡುಕೊಳ್ಳಬೇಕಾಗಿರುವ ಸಂಗತಿ ನಿಜವಾಗಿಯೂ ಸೋಜಿಗದ ವಿಚಾರವಾಗಿದೆ. ಈ ವಿಸ್ಮಯಕರ ವಾಸ್ತವಾಂಶವು, ಈ ದೊಡ್ಡ ಸಮುದಾಯವು ತನಗಿರುವ ಹಕ್ಕುಗಳನ್ನು ಕುರಿತು ಏನೇನೂ ತಿಳಿದಿಲ್ಲ ಹಾಗೂ ಹೊರಗಿನಿಂದ ತನ್ನ ಮೇಲೆ ಪ್ರಭಾವ ಬೀರುತ್ತಿರುವ ಕೆಲವು ಪ್ರಭಾವಗಳಿಗೆ ಒಳಪಟ್ಟಿದೆ ಎಂಬುದರ ಸೂಚನೆ ಮಾತ್ರ ಆಗಿರುತ್ತದೆ.

(೫೩) ಮೀಸಲು ಸ್ಥಾನಗಳ ಪದ್ಧತಿಯಿಂದ ವಿಶಿಷ್ಟ ರೀತಿಯ ಪರಿಣಾಮಕ್ಕೊಳಗಾದ ಮೇಲ್ವರ್ಗದ ಸದಸ್ಯರು ಒತ್ತಿ ಹೇಳಿದ ವಿರೋಧದ ಎರಡನೆಯ ಆಧಾರವೆಂದರೆ ಈ ಪದ್ಧತಿಯಿಂದ ಅವರಿಗೆ ಅನ್ಯಾಯವುಂಟಾಗಿದೆ. ಚುನಾವಣಾ ಹೋರಾಟದಲ್ಲಿ ನೇರವಾಗಿ ಭಾಗವಹಿಸಿ ಗೆಲ್ಲಲು ಈ ಪದ್ಧತಿ ಅವರಿಗೆ ಅವಕಾಶ ನೀಡುವುದಿಲ್ಲ. ಕೆಳವರ್ಗದವರನ್ನು ಪ್ರತಿನಿಧಿಸುವ ಮೇಲ್ವರ್ಗದವರ ಹಕ್ಕಿನ ಮೇಲೆ ಈ ಪದ್ಧತಿ ನಿರ್ಬಂಧವೊಂದನ್ನು ವಿಧಿಸುತ್ತದೆಂಬುದು ನಿಜ. ಆದರೆ "ಪ್ರಾತಿನಿಧ್ಯದ ಹಕ್ಕಿ"ನಿಂದ ವ್ಯತ್ಯಾಸ ಹೊಂದಿರುವ "ಪ್ರತಿನಿಧಿಸುವ ಹಕ್ಕು" ಏಕೆ ಒಂದು ಅನಿರ್ಬಂಧಿತ ಹಕ್ಕಾಗಬೇಕು ಎಂಬುದಕ್ಕೆ ಕಾರಣವೇನಾದರೂ ಇದೆಯೇ? ಮತದಾನದ ಹಕ್ಕನ್ನು ಸೀಮಿತಗೊಳಿಸುವುದಕ್ಕೆ ಕಾರಣ ಕಂಡುಹಿಡಿಯಲು ಪ್ರಯತ್ನಿಸುವುದರಲ್ಲಿಯೇ ಆಧುನಿಕ ರಾಜಕಾರಣಿಗಳು ತಮ್ಮೆಲ್ಲ ಕೌಶಲಗಳನ್ನು ವ್ಯಯಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇತರರನ್ನು ಪ್ರತಿನಿಧಿಸಲು ಒಬ್ಬ ಅಭ್ಯರ್ಥಿಗಿರುವ ಹಕ್ಕನ್ನು ನಿರ್ಬಂಧಿಸಲು ನಾವು ಏಕೆ ಪ್ರಯತ್ನಿಸಬೇಕು ಎಂಬುದಕ್ಕೆ ಉತ್ತಮ ಕಾರಣವೇ ಇದೆ. ನಿಜವಾಗಿ ಹೇಳುವುದಾದರೆ ಪ್ರತಿನಿಧಿ ಸ್ವರೂಪವಾದ ಕಾರ್ಯನಿರ್ವಹಣೆಯ ಅನುಮಿತಿ ಅರ್ಥಗಳು ಅದನ್ನು ಅಂಗೀಕರಿಸಬೇಕಾದ ಪರಿಸ್ಥಿತಿ ಯಾವುದೆಂಬುದನ್ನು ಏಕೆ ಸ್ಪಷ್ಟಪಡಿಸುವುದಿಲ್ಲ ಎಂಬುದಕ್ಕೆ ಕಾರಣವಿಲ್ಲ. ಸ್ಥಳೀಯ ಆಡಳಿತಾಂಗದಲ್ಲಿ ಸೇವೆ ಸಲ್ಲಿಸಿದ ವರ್ಷಗಳ ಸಂಖ್ಯೆಯನ್ನಾಧರಿಸಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದು ಹಾಗೂ ಆ ಷರತ್ತನ್ನು ಪೂರೈಸದ ಅಭ್ಯರ್ಥಿಗಳ ಹಕ್ಕನ್ನು ತಳ್ಳಿಹಾಕುವುದರಿಂದ, ಶಾಸಕಾಂಗಕ್ಕೆ ಚುನಾಯಿಸಲ್ಪಡುವ ಹಕ್ಕನ್ನು ಅತಿಕ್ರಮಿಸಿದಂತಾಗುವುದಿಲ್ಲ. ಶಾಸನ ಸಭೆಯಲ್ಲಿ ಸಲ್ಲಿಸಿದ ಸೇವೆ ಪರಿಣಾಮತಃ ಎಷ್ಟು ಮಹತ್ವವಾದುದೆಂದರೆ, ಆ ಅವಧಿಯ ಸಾಮರ್ಥ್ಯ–ಅನುಭವಗಳ ಪುರಾವೆಯನ್ನು, ಪ್ರತಿನಿಧಿಸುವ ಹಕ್ಕನ್ನು ಸಾಧಿಸುವ ಮೊದಲು, ಬಳಸಿಕೊಳ್ಳಬಹುದೆಂದು ನ್ಯಾಯವಾಗಿಯೇ ವಾದಿಸಲಾಗಿದೆ. ಕೆಳವರ್ಗದವರನ್ನು ಪ್ರತಿನಿಧಿಸುವ ಮೇಲ್ವರ್ಗದವರ ಹಕ್ಕನ್ನು ಸೀಮಿತಗೊಳಿಸಬೇಕೆಂಬ ವಾದವೂ ಇದೇ ದಿಕ್ಕನ್ನು ಅನುಸರಿಸುತ್ತದೆ. ಪ್ರತಿನಿಧಿಸುವ ಹಕ್ಕನ್ನು ಗುರುತಿಸಲು ಪೂರ್ವಭಾವಿಯಾಗಿರಬೇಕಾದ ಪರಿಸ್ಥಿತಿಯಾಗಿ ಇರಬೇಕಾದ ಒಂದು ನಿರ್ದಿಷ್ಟ ಸಾಮಾಜಿಕ ಮನೋಭಾವವನ್ನಷ್ಟೇ ಇದು ರೂಪಿಸುತ್ತದೆ. ಅಂಥದೊಂದು ಪರಿಸ್ಥಿತಿ ಅನಾವಶ್ಯಕವೆಂದೂ

ಹೇಳುವಂತಿಲ್ಲ. ಏಕೆಂದರೆ ಅಭ್ಯರ್ಥಿಯ ಯೋಗ್ಯತೆ ಮತ್ತು ಅನುಭವಗಳು, ತಾನು ಯಾರನ್ನು ಪ್ರತಿನಿಧಿಸಲು ಬಯಸುತ್ತಾನೋ ಆ ಜನರತ್ತ ಅವನಿಗಿರುವ ಸಾಮಾಜಿಕ ಮನೋಭಾವಕ್ಕಿಂತ ಹೆಚ್ಚು ಮುಖ್ಯವಾಗಿರುವುದಿಲ್ಲ. ನಿಜವಾಗಿಯೂ ಬರಿಯ ಯೋಗ್ಯತೆ ಹಾಗೂ ಅನುಭವಗಳೇ ಜೊತೆಗೂಡಿರದೆ, ಯುಕ್ತ ರೀತಿಯ ಸಾಮಾಜಿಕ ಮನೋಭಾವದಿಂದ ನಿಯಂತ್ರಣಗೊಂಡಿರದೆ ಇದ್ದರೆ, ವಿನಾಶಕ್ಕೆ ಕಾರಣವಾಗಬಹುದು. ಕೆಳವರ್ಗದವರ ಬಗೆಗೆ ಮೇಲ್ವರ್ಗದವರು ಹೊಂದಿರುವ ಸಾಮಾಜಿಕ ಮನೋಭಾವವು ಯುಕ್ತ ರೀತಿಯದಾಗಿಲ್ಲ ಎಂಬುದರಲ್ಲಿ ಸಂಶಯವಿಲ್ಲ. ಮೇಲ್ವರ್ಗದ ಸಮುದಾಯಗಳು ಬೌದ್ಧಿಕವಾಗಿ ಭಾರತ ದಲ್ಲಿಯೇ ಅತ್ಯಂತ ಪ್ರಬಲವಾದ ಸಮುದಾಯಗಳಾಗಿವೆ ಎಂದು ಯಾವಾಗಲೂ ಹೇಳಲಾಗಿರುವುದರಲ್ಲಿ ಸಂದೇಹವಿಲ್ಲ. ಆದರೆ, ಈ ಮೇಲ್ವರ್ಗಗಳ ಜನರು ಕೆಳವರ್ಗದವರ ಸೇವೆಗಾಗಿ ತಮ್ಮ ಬೌದ್ಧಿಕ ಸಾಮರ್ಥ್ಯ ವನ್ನು ಎಂದೂ ಬಳಸಿಲ್ಲವೆಂದು ಅಷ್ಟೇ ಸತ್ಯವಾಗಿ ಹೇಳಬಹುದಾಗಿದೆ. ಇನ್ನೊಂದೆಡೆ ಈ ಜನರು ಯಾವಾಗಲೂ ಬೇರೆ ಬೇರೆ ಸ್ತರಗಳಿಗೆ ಸೇರಿದ ಜನಸಮುದಾಯಗಳನ್ನು ಉಪೇಕ್ಷಿಸುತ್ತ ಅಸಡ್ಡೆ ಮಾಡುತ್ತ ತಮ್ಮದಲ್ಲವೆಂದು ಭಾವಿಸುತ್ತ ಬಂದಿದ್ದಾರೆ. ಯಾವುದೇ ವರ್ಗಕ್ಕೆ ಸೇರಿದ ಜನರಿಗೂ ಇತರರನ್ನು ಆಳುವ ಹಕ್ಕು, ಅದರಲ್ಲಿಯೂ ಮೇಲ್ವರ್ಗದವರಿಗೆ ಕೆಳವರ್ಗವನ್ನು ಆಳುವ ಹಕ್ಕು ಇಲ್ಲ. ಮೇಲ್ವರ್ಗದವರು ಬೇರಾವ ವರ್ಗದವರನ್ನು ತಮ್ಮ ಜೊತೆ ಸೇರಿಸಿಕೊಳ್ಳದೆ ನಡೆದುಕೊಳ್ಳುತ್ತಿದ್ದಾರೆ. ಅವರು ತಮ್ಮದೇ ಪೂರ್ವಾಗ್ರಹಗಳನ್ನು ಹೊಂದಿದ್ದಾರೆ ಹಾಗು ತಮ್ಮೊಡನೆ ವ್ಯವಹಾರವಿರಿಸಿಕೊಳ್ಳದ ಹಾಗೂ ತಮ್ಮ ಹಿತಾ ಸಕ್ತಿಗಳಿಗೆ ವಿರುದ್ಧವಾದ ಹಿತಾಸಕ್ತಿಗಳನ್ನು ಹೊಂದಿರುವ ಕೆಳವರ್ಗದ ಜನ ಸಮುದಾಯದ ಆಶಯ ಗಳನ್ನು ಹಂಚಿಕೊಳ್ಳುವುದಿಲ್ಲ. ಆದ್ದರಿಂದ, ಇತರರನ್ನು ಪ್ರತಿನಿಧಿಸಲು ನಿಂತಿರುವ ಅಭ್ಯರ್ಥಿಯೊಬ್ಬ, ತಾನು ಪ್ರತಿನಿಧಿಸುವ ಜನರ ಧ್ಯೇಯೋದ್ದೇಶಗಳು ಹಾಗೂ ಆಶಯಗಳನ್ನು ಹಂಚಿಕೊಳ್ಳುವಂಥವನಾಗಿರ ಬೇಕೆಂದು ಅಪೇಕ್ಷಿಸುವುದು ತಪ್ಪೇನೂ ಅಲ್ಲ.

(೫೪) ಶ್ರೇಣಿಯಲ್ಲಿ ಕೆಳಗಿರುವ ಅಭ್ಯರ್ಥಿಯೊಬ್ಬ ಮೇಲಿರುವ ಅಭ್ಯರ್ಥಿಯ ಸ್ಥಾನದಲ್ಲಿ ಬಂದು ಕುಳಿತುಕೊಳ್ಳುವುದು ಅಸಾಮರ್ಥ್ಯಕ್ಕೆ ಎಡೆಮಾಡಿಕೊಡುತ್ತದೆ ಎಂಬುದು ಮೀಸಲು ಮತದಾರ ಸಮುದಾಯಗಳ ಬಗೆಗಿರುವ ಇನ್ನೊಂದು ವಿರೋಧವಾಗಿದೆ. ಈ ಟೀಕೆಯು ನಿಜವೇ ಆಗಿದೆ. ಆದರೆ, ಇಲ್ಲಿ ಪರಿಗಣಿಸಬೇಕಾದ ಇತರ ಕೆಲವು ಅಂಶಗಳೂ ಇವೆ. ಮೊದಲನೆಯದಾಗಿ ಪ್ರೊ.ಡೈಸಿ ಅವರು ಯುಕ್ತವಾಗಿಯೇ ವಾದಿಸಿದಂತೆ "ಒಟ್ಟಿನಲ್ಲಿ ಬೌದ್ಧಿಕ ಸಾಮರ್ಥ್ಯದಲ್ಲಿ ಸಾಧ್ಯವಿರುವಷ್ಟು ಮಟ್ಟಿಗೆ ಉತ್ಕೃಷ್ಟವಾಗಿರುವ ಸಂಸತ್ತನ್ನು ರೂಪಿಸುವುದು ಸಂವಿಧಾನಾತ್ಮಕ ವ್ಯವಸ್ಥೆಯ ಪ್ರಧಾನ ಉದ್ದೇಶವಾಗಿದ್ದಲ್ಲ. ನಿಜವಾಗಿ ಹೇಳುವುದಾದರೆ, ರಾಷ್ಟ್ರದ ಜನತೆಗಿಂತ ಬುದ್ಧಿಶಕ್ತಿಯಲ್ಲಿ ಉತ್ಕೃಷ್ಟವಾಗಿರುವ ಸಂಸತ್ತನ್ನು ರೂಪಿಸುವ ಪ್ರಯತ್ನಕ್ಕೆ ಪ್ರಾತಿನಿಧಿಕ ಸಂಸತ್ತಿನ ಆಲೋಚನೆಯೇ ಅಸಂಗತವಾಗದುದು. "ಆದರೆ ಬೌದ್ಧಿಕ ವರ್ಗದವರ ಸ್ಥಾನದಲ್ಲಿ ಬೌದ್ಧಿಕವಲ್ಲದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳನ್ನು ಕುಳ್ಳಿರಿಸುವುದರಿಂದ ಪ್ರತಿಕೂಲ ಉಂಟಾಗುತ್ತದೆ. ಹಿಂದುಳಿದ ಸಮುದಾಯಗಳ ಬಗೆಗಿರುವ ಸ್ವಾಭಾವಿಕ ಭಾವನಾವಾದದಿಂದ ನಷ್ಟ ಭರ್ತಿ ಮಾಡುವುದು ಸಾಧ್ಯವಾಗುವುದಿಲ್ಲ. ಮೇಲ್ವರ್ಗದ ಪ್ರತಿನಿಧಿಗಳು ರಾಷ್ಟ್ರದ ಆಗುಹೋಗುಗಳಿಗಿಂತ ಹೆಚ್ಚಾಗಿ ತಮ್ಮ ಸ್ವಂತ ವ್ಯವಹಾರಗಳಿಗೇ ಕೆಲವು ಸಲ ಹೆಚ್ಚು ಲಕ್ಷ್ಯ ಹರಿಸುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ. ಅವರ ಬದುಕು ಅವಿಶ್ರಾಂತ ಚಟುವಟಿಕೆಯಿಂದ ಕೂಡಿರುತ್ತದೆ. ಅಭಿವೃದ್ಧಿಶೀಲವಾಗಿರುತ್ತದೆ. ಅವರ ವ್ಯಕ್ತಿತ್ವ ಸ್ವಕೇಂದ್ರೀಕೃತವಾಗಿಯೂ ಸ್ವಾರ್ಥಪರವಾಗಿಯೂ ಇರುತ್ತದೆ. ಸಾಮಾಜಿಕ ಪ್ರಗತಿಯನ್ನು ಕುರಿತ ಅವರ ಕಾಳಜಿ ಅವರಲ್ಲಿ ಅಪರೂಪವಾಗಿ ಒಂದು ಕ್ಷಣ ಹಾದುಹೋಗುವ ಆಲೋಚನೆಯಷ್ಟೇ ಆಗಿರುತ್ತದೆ.

ಆದರೆ ಕೆಳವರ್ಗದ ಪ್ರತಿನಿಧಿಗಳಿಗೆ ಯಾವಾಗಲೂ ಸಾಮಾಜಿಕ ಪರಿವರ್ತನೆಯಿಂದ ಮಾತ್ರ ಪರಿಹರಿಸಬಹುದಾದ ವಿಪತ್ತುಗಳ ಅರಿವಿರುತ್ತದೆ. ಸಾಮೂಹಿಕ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಾಗಿರುವ ಪರಸ್ಪರ ಅವಲಂಬನದ ಅರಿವಿನಿಂದ ಜನರಲ್ಲಿ ಭ್ರಾತೃತ್ವ ಬೆಳೆಯಲು ಸಾಧ್ಯ. ತರಬೇತಿ ಪಡೆಯದ ಯೋಗ್ಯತೆ ಹಾಗೂ ಅಭಿವೃದ್ಧಿ ಹೊಂದದ ಸಾಮರ್ಥ್ಯಗಳು ತಮ್ಮವು ಎಂಬ ಪ್ರಜ್ಞೆಯಿರುವುದರಿಂದಾಗಿ, ಕೆಳವರ್ಗದವರಲ್ಲಿ ಆಕಾಂಕ್ಷೆಗಳು ಮೂಡುತ್ತವೆ. ಅಭಿವೃದ್ಧಿಗೆ ಕಾರಣವಾಗುವ ಪ್ರೇರಕ ಶಕ್ತಿಗಾಗಿ ಕೆಳವರ್ಗದವರತ್ತಲೇ ನಾವೀಗ ಲಕ್ಷ್ಯಹರಿಸಬೇಕಾದ ಅಗತ್ಯವಿದೆ. ಹಿಂದುಳಿದ ಹಿಂದೂ ಸಮುದಾಯಗಳಿಗೆ ಸ್ಥಾನಗಳನ್ನು ಮೀಸಲಾಗಿಡುವುದರಿಂದ ರಾಷ್ಟ್ರಸೇವೆಗೆ ಬಲಿಷ್ಠ ಸಾಮಾಜಿಕ ದಳಗಳು ಲಭ್ಯವಾಗುತ್ತವೆ. ಕೆಳವರ್ಗದ ಜನರ ಇಂಥ ಮಾನವ ಸಂಪನ್ಮೂಲವಿಲ್ಲದೆ ಹೋದಲ್ಲಿ, ಯಾವುದೇ ಪಾರ್ಲಿಮೆಂಟರಿ ಸರ್ಕಾರವಾದರೂ ದುರ್ಬಲವಾಗುತ್ತ ಹೋಗುತ್ತದೆ.

(೫೫) ಕೋಮುವಾರು ಮತದಾರ ಸಮುದಾಯಗಳು: ಯಾರ ಹಿತಾಸಕ್ತಿಗಳ ದೃಷ್ಟಿಯಿಂದ ಕೋಮುವಾರು ಮತದಾರ ಸಮುದಾಯಗಳು ಸ್ಥಾಪನೆಯಾದುವೋ ಆ ಸಮುದಾಯಗಳಿಗೆ ನಿರ್ದಿಷ್ಟ ಪ್ರಾತಿನಿಧ್ಯದ ಭರವಸೆ ನೀಡಬೇಕಾದ್ದು ಅಗತ್ಯವಷ್ಟೇ ಅಲ್ಲ, ಅನಿವಾರ್ಯ ಕೂಡ ಎಂಬುದು ವಿವಾದಾತೀತ ವಾಗಿರುವ ವಿಚಾರ. ಹೇಗೆಯೇ ಇರಲಿ, ಅಂಥ ಕೋಮುವಾರು ಪ್ರಾತಿನಿಧ್ಯವು ಕೋಮುವಾರು ಮತದಾರ ಸಮುದಾಯಗಳ ಮೂಲಕವೇ ದೊರೆಯಬೇಕೆ ಎಂಬುದು ಸಧ್ಯದ ಪ್ರಶ್ನೆ. ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಅನಂತರ ನಡೆದ ಕೋಮುಗಲಭೆಗಳಿಗೆ ಕೋಮುವಾರು ಮತದಾರ ಸಮುದಾಯಗಳೇ ಕಾರಣವೆಂದು ವಿರೋಧಿಗಳು ವಾದಿಸುತ್ತಾರೆ. ಕೋಮುಗಲಭೆಗಳು ಮತ್ತು ಕೋಮುವಾದ ಮತದಾರ ಸಮುದಾಯಗಳ ನಡುವೆ ಸಾಧ್ಯವಿರಬಹುದಾದ ನೇರ ಸಂಬಂಧವನ್ನು ಕೂಡಲೇ ತಿಳಿಯುವುದು ಸಾಧ್ಯವಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮಹಮದೀಯರ ಕೋರಿಕೆಯನ್ನು ಈಡೇರಿಸುವುದರ ಮೂಲಕ ಅವರ ಅತೃಪ್ತಿ ಹಾಗೂ ಅಸಮಾಧಾನಗಳಿಗಿರಬಹುದಾದ ಒಂದು ಕಾರಣವನ್ನು ಕೋಮುವಾರು ಮತದಾರ ಸಮುದಾಯಗಳು ತೊಡೆದುಹಾಕಿದೆ ಎಂದೂ ವಾದಿಸಲಾಗಿದೆ. ಆದರೆ ಕೋಮುವಾರು ಮತದಾರ ಸಮುದಾಯಗಳು ಕೋಮು ಗಲಭೆಗಳನ್ನು ಕಮ್ಮಿ ಮಾಡುವಲ್ಲಿ ಸಹಾಯಕವಾಗಲಾರವು ಮತ್ತು ಅವು ವಾಸ್ತವವಾಗಿ ಕೋಮುಗಲಭೆಗಳನ್ನು ಹೆಚ್ಚಿಸುತ್ತವೆ ಎಂಬುದೂ ಅಷ್ಟೇ ಸತ್ಯ. ಏಕೆಂದರೆ ಅವು ಸ್ಪಷ್ಟವಾಗಿಯೇ ಎರಡೂ ಸಮುದಾಯಗಳ ಮುಖಂಡರು ತಮಗೆ ಪರಸ್ಪರವಾಗಿ ಯಾವುದೇ ಹೊಣೆಯಿಲ್ಲವೆಂದು ಭಾವಿಸುವಂತೆ ಮಾಡುತ್ತದೆ. ಇದರ ಫಲಿತಾಂಶವಾಗಿ ತಮ್ಮ ಜನರನ್ನು ಶಾಂತಿಯತ್ತ ಕೊಂಡೊಯ್ಯುವುದರ ಬದಲಾಗಿ ತಮ್ಮ ಜನರ ಆಯಾ ಕ್ಷಣದ ಭಾವೋದ್ವೇಗವನ್ನು ಅವರು ಅನುಸರಿಸುವಂತಾಗುತ್ತದೆ.

(೫೬) ಕೋಮುವಾರು ಮತದಾರ ಸಮುದಾಯಗಳು ಉಳಿಯಬೇಕೆಂದು ಒತ್ತಾಯಿಸುವ ಮಹಮದೀಯರು ತಮ್ಮ ನಿಲುವಿಗೆ ಮೂರು ಆಧಾರಗಳನ್ನು ನೀಡುತ್ತಾರೆ.

(೫೭) ಮೊದಲನೆಯದಾಗಿ, ತಮ್ಮ ಸಮುದಾಯದ ಹಿತಾಸಕ್ತಿಗಳು ಇತರ ಸಮುದಾಯಗಳ ಹಿತಾಸಕ್ತಿಗಳಿಗಿಂತ ಬೇರೆಯೇ ಆಗಿವೆ. ಹಾಗು ಆ ಹಿತಾಸಕ್ತಿಗಳನ್ನು ಕಾಪಾಡಲು ತಮಗೆ ಬೇರೆಯೇ ಮತದಾರ ಸಮುದಾಯಗಳಿರಬೇಕು ಎಂದು ಮಹಮದೀಯರು ಹೇಳುತ್ತಾರೆ. ಬೇರೆ ಬೇರೆ ಪಂಗಡಗಳವರ ಹಿತಾಸಕ್ತಿಯನ್ನು ರಕ್ಷಿಸಲು ಈ ಪ್ರತ್ಯೇಕ ಮತದಾರ ಸಮೂಹದ ಪ್ರಶ್ನೆಯನ್ನು ಬಿಟ್ಟು ಬೇರೆ ಪಂಗಡಗಳವರ ಹಿತಾಸಕ್ತಿಗೆ ವಿರುದ್ಧವಾದ ಯಾವುದಾದರೂ ಆಸಕ್ತಿಗಳು ಇಲ್ಲಿ ಅಡಗಿವೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳುವುದು ಅಗತ್ಯ. ಧಾರ್ಮಿಕ ಕ್ಷೇತ್ರಕ್ಕಿಂತ ಪ್ರತ್ಯೇಕವೆಂದು ಭಾವಿಸಲಾದ ಲೌಕಿಕ ಕ್ಷೇತ್ರದಲ್ಲಿ ಪ್ರತಿ

ಯೊಂದು ವಿಷಯವೂ ಎಲ್ಲರಿಗೂ ಸಂಬಂಧಿಸಿರುವಂತಹ ಸಾಮಾನ್ಯ ವಿಷಯವೇ ಆಗಿರುತ್ತದೆ. ಉದಾಹರಣೆಗೆ, ತೆರಿಗೆಗಳನ್ನು ಪಾವತಿ ಮಾಡಬೇಕೇ ಬೇಡವೇ? ಮಾಡಬೇಕಾಗಿದ್ದರೆ ಯಾವ ತೆರಿಗೆಗಳನ್ನು ಮತ್ತು ಯಾವ ದರದಲ್ಲಿ? ರಾಷ್ಟ್ರೀಯ ವೆಚ್ಚವನ್ನು ಇತರ ಯಾವುದೇ ಒಂದಕ್ಕಿಂತ ಮಿಗಿಲೆನಿಸಿದ ಒಂದು ನಿರ್ದಿಷ್ಟ ಮಾರ್ಗದಲ್ಲಿ ನಿರ್ದೇಶಿಸಬೇಕೇ? ಶಿಕ್ಷಣವು ಉಚಿತ ಮತ್ತು ಕಡ್ಡಾಯವಾಗಿರಬೇಕೇ? ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ನಿರ್ಬಂಧಿತ ಕಂದಾಯದ ಆಧಾರದ ಮೇಲೆ ಇತ್ಯರ್ಥಗೊಳಿಸಬೇಕೇ ಅಥವಾ ಸ್ವಾಧೀನತೆಯ ಆಧಾರದ ಮೇಲೆ ಇತ್ಯರ್ಥಗೊಳಿಸಬೇಕೇ? ಉದ್ಯಮಗಳಿಗೆ ರಾಜ್ಯದ ನೆರವನ್ನು ನೀಡಬೇಕೇ? ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಹೆಚ್ಚು ಸಂಖ್ಯೆಯ ಪೊಲೀಸರಿರಬೇಕೇ? ಅನಾರೋಗ್ಯ, ನಿರುದ್ಯೋಗ ಅಥವಾ ಸಾವುಗಳ ವಿರುದ್ಧವಾಗಿ ಸಾಮಾಜಿಕ ವಿಮಾ ಯೋಜನೆ ಮೂಲಕ ದುಡಿಯುವ ವರ್ಗಗಳವರ ದಾರಿದ್ರ್ಯದ ನಿರ್ಮೂಲನಕ್ಕಾಗಿ ರಾಜ್ಯ ನೆರವು ನೀಡಬೇಕೇ? ಗೌರವ ಮ್ಯಾಜಿಸ್ಟ್ರೇಟರ ನೇಮಕಾತಿಯಿಂದ ನ್ಯಾಯಾಡಳಿತವು ಸರಿಯಾಗಿ ನಡೆಯುತ್ತಿದೆಯೇ? ವೈದ್ಯಕೀಯ ಅಥವಾ ನ್ಯಾಯಿಕ ನೀತಿ ಸಂಹಿತೆಗಳನ್ನು ಉತ್ತಮ ಫಲಿತಾಂಶ ನೀಡಲು ತಪ್ಪದಾದ ರೀತಿಯಲ್ಲಿ ಬದಲಾಯಿಸಬೇಕೇ? ಇವು ಸಮಿತಿಯ ಮುಂದೆ ಸಾಮಾನ್ಯವಾಗಿ ಬರುವ ಕೆಲವು ಪ್ರಶ್ನೆಗಳಾಗಿವೆ. ಪ್ರಶ್ನೆಗಳ ಈ ಪಟ್ಟಿಯಲ್ಲಿ ಮಹಮದೀಯ ಸಮುದಾಯಕ್ಕೆ ಮಾತ್ರ ಸಂಬಂಧಿಸಿದ್ದೆಂದು ಎತ್ತಿ ಹೇಳಬಹುದಾದ ಯಾವುದಾದರೊಂದು ಪ್ರಶ್ನೆಯಿದೆಯೆ? ಮಹಮದೀಯ ಸಮುದಾಯ, ಶಿಕ್ಷಣ ಮತ್ತು ಜನಸೇವೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಆಸಕ್ತಿ ಹೊಂದಿರುವುದು ನಿಜ. ಆದರೆ ಮತ್ತೆ ಇಲ್ಲಿ ಪ್ರಶ್ನೆಗಳ ನಿರ್ದಿಷ್ಟ ಮಹತ್ವಕ್ಕೆ ಸಂಬಂಧ ಕಲ್ಪಿಸಬಹುದಾದ ಸಮುದಾಯವು ಮಹಮ್ಮದೀಯ ಸಮುದಾಯವೊಂದೇ ಅಲ್ಲ ಎಂದೂ ಒತ್ತಿಹೇಳಬಹುದು. ಬ್ರಾಹ್ಮಣೇತರರು ಮತ್ತು ದುರ್ಬಲ ವರ್ಗಗಳವರು ಈ ಪ್ರಶ್ನೆಗೆ ಸಂಬಂಧಿಸಿದಂತೆ ಮಹಮದೀಯರಷ್ಟೇ ಗಾಢವಾದ ಆಸಕ್ತಿ ಹೊಂದಿರುವರೆಂಬುದು, ಮುಂಬಯಿ ವಿಧಾನಪರಿಷತ್ತಿನಲ್ಲಿನ ಸುಧಾರಣಾ ಮಸೂದೆ ಸಂಬಂಧದಲ್ಲಿ ಈ ಮೂರು ವರ್ಗಗಳ ಜನರು ಒಟ್ಟುಗೂಡಿ ನಡೆಸಿದ ಪ್ರಯತ್ನದಿಂದ ಸಾಬೀತಾಗಿದೆ. ಈ ಕಾರಣದಿಂದಾಗಿ, ಮಹಮದೀಯ ಸಮುದಾಯಕ್ಕೇ ಪ್ರತ್ಯೇಕ ಹಿತಾಸಕ್ತಿಗಳಿವೆ ಎಂಬುದು ಮಿಥ್ಯೆ ಮಾತ್ರವಾಗಿದೆ. ಇರುವುದು ಪ್ರತ್ಯೇಕ ಹಿತಾಸಕ್ತಿಗಳಲ್ಲ, ಬದಲಾಗಿ ಕೆಲವು ನಿರ್ದಿಷ್ಟ ವಿಷಯಗಳಲ್ಲಿ ವಿಶೇಷವಾದ ಕಾಳಜಿ ಮಾತ್ರ.

(೫೮) ಪ್ರತ್ಯೇಕ ಹಿತಾಸಕ್ತಿಗಳಿವೆಯೆಂದೇ ಭಾವಿಸಿಕೊಂಡರೂ, ಇನ್ನೊಂದು ಪ್ರಶ್ನೆ ಏಳುತ್ತದೆ. ಸಾಮಾನ್ಯ ಮತದಾರ ಸಮುದಾಯಗಳು ಹಾಗೂ ಮೀಸಲು ಸ್ಥಾನಗಳ ವ್ಯವಸ್ಥೆಗಿಂತ ಹೆಚ್ಚು ಮಟ್ಟಿಗೆ ಅವರು ಪ್ರತ್ಯೇಕ ಮತದಾರ ಸಮುದಾಯಗಳಿಂದ ಪ್ರಗತಿ ಹೊಂದುತ್ತಾರೆಯೇ? ಯಾವುದೇ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರ ಪ್ರತ್ಯೇಕ ಅಥವಾ ವಿಶೇಷ ಹಿತಾಸಕ್ತಿಗಳನ್ನು ಪ್ರತ್ಯೇಕ ಮತದಾರ ಸಮುದಾಯಗಳಿಗಿಂಥ ಹೆಚ್ಚಿನ ಮಟ್ಟಿಗೆ ಸಾಮಾನ್ಯ ಮತದಾರ ಸಮುದಾಯಗಳು ಹಾಗೂ ಮೀಸಲು ಸ್ಥಾನಗಳ ಪದ್ಧತಿಯಿಂದಲೇ ಅಭಿವೃದ್ಧಿಗೊಳಿಸಬಹುದೆಂಬುದೇ ಇದಕ್ಕೆ ನನ್ನ ಸ್ಪಷ್ಟ ಉತ್ತರ. ಯಾವುದೇ ಹಿತಾಸಕ್ತಿಗಳಿಗೆ ಧಕ್ಕೆಯುಂಟಾಗಲು ಮುಖ್ಯವಾಗಿ ಬೇಜವಾಬ್ದಾರಿ ಅತಿರೇಕವಾದಿಗಳಿರುವುದೇ ಕಾರಣವೆಂದು ಒಪ್ಪಿಕೊಳ್ಳಬಹುದು. ಆದ್ದರಿಂದ ರಾಷ್ಟ್ರದ ಸಮಿತಿಗಳಿಂದ ಅಂಥ ಅನರ್ಹ ವ್ಯಕ್ತಿಗಳನ್ನು ಹೊರದೂಡುವುದೇ ಧ್ಯೇಯವಾಗಿರಬೇಕು. ಎರಡೂ ಸಮುದಾಯಗಳಿಗೆ ಸೇರಿರುವ ಇಂಥ ಬೇಜವಾಬ್ದಾರಿ ವ್ಯಕ್ತಿಗಳನ್ನು ರಾಷ್ಟ್ರದ ಸಮಿತಿಗಳಿಂದ ಹೊರದೂಡಬೇಕಾದರೆ ಮುಂದೆ ಹೇಳಲಾಗುವಂತಹ ಪದ್ಧತಿಯೇ ಉತ್ತಮವೆನ್ನಬಹುದು. ಈ ಪದ್ಧತಿಯಲ್ಲಿ ಮಹಮದೀಯ ಅಭ್ಯರ್ಥಿಗಳನ್ನು ಹಿಂದೂ ಮತದಾರರೂ

ಹಿಂದೂ ಅಭ್ಯರ್ಥಿಗಳನ್ನು ಮಹಮದೀಯ ಮತದಾರರೂ ಚುನಾಯಿಸಬೇಕು. ಇಂಥ ಸಂಯುಕ್ತ ಮತದಾರ ಸಮುದಾಯಗಳ ಪದ್ಧತಿ ಕೋಮುವಾರು ಮತದಾರ ಸಮುದಾಯಗಳ ಪದ್ಧತಿಗಿಂತ ಒಳ್ಳೆಯದೆಂದು ಭಾವಿಸಬಹುದು. ಪ್ರತ್ಯೇಕ ಮತದಾರ ಸಮುದಾಯಗಳ ಪದ್ಧತಿಗಿಂತ ಹೆಚ್ಚು ಉತ್ತಮ ರೀತಿಯ ಫಲಿತಾಂಶ ಗಳನ್ನು ಈ ಪದ್ಧತಿಯಿಂದ ನಿರೀಕ್ಷಿಸಬಹುದೆಂಬುದೇ ಇದಕ್ಕೆ ಕಾರಣ. ಹಾಗಿದ್ದರೂ ಸಂಯುಕ್ತ ಮತದಾರ ಸಮುದಾಯದಲ್ಲಿ ಅಲ್ಪಸಂಖ್ಯಾತರು ವಿಶೇಷ ಮತದಾರ ಸಮುದಾಯದ ಪದ್ಧತಿಗಿಂತ ಹೆಚ್ಚು ಪ್ರಯೋಜನ ಪಡೆಯುತ್ತಾರೆ ಎಂಬುದನ್ನು ಇಲ್ಲಿ ಖಚಿತವಾಗಿ ಹೇಳಬೇಕಾಗಿದೆ. ವಿಶೇಷ ಮತದಾರ ಸಮುದಾಯ ಗಳೊಂದಿಗೆ ಅಲ್ಪಸಂಖ್ಯಾತರು ತಮ್ಮದೇ ಆದ ಪ್ರಾತಿನಿಧ್ಯದ ಪಾಲನ್ನು ಪಡೆಯುವರಲ್ಲದೆ ಹೆಚ್ಚನ್ನೇನೂ ಪಡೆಯುವುದಿಲ್ಲ. ಸದನದ ಉಳಿದ ಸದಸ್ಯರು ಆ ಪ್ರಾತಿನಿಧ್ಯದಲ್ಲಿ ನಿಷ್ಠೆ ಹೊಂದಿರುವುದಿಲ್ಲ. ಆದ್ದರಿಂದ ಅಲ್ಪಸಂಖ್ಯಾತರ ಅಪೇಕ್ಷೆಗಳನ್ನು ಪೂರೈಸುವ ಪ್ರಯತ್ನಗಳು ಅವರ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಹೀಗಾಗಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅವರದೇ ಆದ ಸಂಪನ್ಮೂಲಗಳು ಉಳಿಯುತ್ತವೆ. ಪ್ರಾತಿನಿಧ್ಯದ ಯಾವುದೇ ಪದ್ಧತಿಯೂ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರನ್ನಾಗಿ ಪರಿವರ್ತಿಸಲಾರದು. ಆದ್ದರಿಂದ ಈ ಪದ್ಧತಿಯನ್ನು ನಿರ್ಮೂಲಗೊಳಿಸಲೇಬೇಕು. ಇನ್ನೊಂದೆಡೆ ಸಂಯುಕ್ತ ಮತದಾರ ಸಮು ದಾಯಗಳೂ ಹಾಗೂ ಮೀಸಲು ಸ್ಥಾನಗಳ ಪದ್ಧತಿಯಲ್ಲಿ ಬಹುಸಂಖ್ಯಾತರು ತಮ್ಮ ಪಾಲಿನ ಪ್ರಾತಿನಿಧ್ಯ ವಷ್ಟನ್ನೇ ಅಲ್ಲ, ಬದಲಾಗಿ ಇನ್ನೂ ಹೆಚ್ಚಿನ ಪಾಲನ್ನು ಪಡೆಯುತ್ತಾರೆ. ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದವರ ಮತಗಳ ಬಲದ ಮೇಲೆಯೇ ಆಂಶಿಕ ಗೆಲುವು ಪಡೆದ ಬಹುಸಂಖ್ಯಾತ ವರ್ಗದ ಪ್ರತಿಯೊಬ್ಬ ಸದಸ್ಯನೂ, ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರದಿದ್ದರೂ ಖಚಿತವಾಗಿ ಆ ವರ್ಗದವರನ್ನು ಪ್ರತಿನಿಧಿಸುವ ಸದಸ್ಯನಾಗಿರುವುದೇ ಇದಕ್ಕೆ ಕಾರಣ. ನನ್ನ ಅಭಿಪ್ರಾಯದಲ್ಲಿ ಇದರಿಂದ ಭಾರೀ ಪ್ರಯೋಜನವಾಗುತ್ತದೆ. ಇದರಿಂದಾಗಿ ಅಲ್ಪಸಂಖ್ಯಾತರ ರಕ್ಷಣೆಯ ಸಾಧನವಾಗಿ, ಸಂಮಿಶ್ರ ಮತದಾರ ಸಮುದಾಯಗಳ ಪದ್ಧತಿಯೇ ಪ್ರತ್ಯೇಕ ಮತದಾರ ಸಮುದಾಯಗಳ ಪದ್ಧತಿಗಿಂತ ಹೆಚ್ಚು ಉತ್ತಮವಾಗಿರುತ್ತದೆ. ಪೋಪರ ಚುನಾವಣೆಗಾಗಿ ಆಮಂತ್ರಿಸಲಾದ ಕಾರ್ಡಿನಲ್‌ಗಳ ಗುಪ್ತ ಸಮಾಲೋಚನಾ ಸಭೆಯಂತೆ, ಸಮಿತಿಯು, ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ಕೈಗೊಳ್ಳಲು ಕರೆಯಲಾದ ಕ್ರೈಸ್ತವಾದಿಗಳ ಸಭೆಯಾಗಿರುತ್ತದೆಂದು ಮಹಮದೀಯ ಅಲ್ಪಸಂಖ್ಯಾತರು ಭಾವಿಸಿದಂತೆ ಕಾಣುತ್ತದೆ. ಇದು ನಿಜವೇ ಆಗಿದ್ದ ಪಕ್ಷದಲ್ಲಿ, ಆಗ ಕೆಲವೇ ವ್ಯಕ್ತಿಗಳನ್ನು, ಆದರೆ ಬಲಿಷ್ಠರಾದವರನ್ನು, ಸಮಿತಿಯ ಸದಸ್ಯರನ್ನಾಗಿ ಹೊಂದಿರಬೇಕೆಂದು ಅವರು ಒತ್ತಾಯಿಸುವುದು ವಿವೇಕದ ಮಾರ್ಗವೆನಿಸುತ್ತದೆ. ಆದರೆ, ಧಾರ್ಮಿಕ ಗುಪ್ತಸಭೆಯಾಗಿರುವುದಕ್ಕೆ ಪ್ರತಿಯಾಗಿ, ಸಮಿತಿಯು, ಲೌಕಿಕ ವಿಚಾರಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ಕೈಗೊಳ್ಳುವ ಉದ್ದೇಶ ಹೊಂದಿದ ಒಂದು ಲೌಕಿಕ ವ್ಯವಸ್ಥೆಯಾಗಿರುತ್ತದೆ ಎಂಬುದನ್ನು ಈ ಸಮುದಾಯ ಮನದಟ್ಟು ಮಾಡಿಕೊಳ್ಳಲು ಇದೀಗ ಸುಸಮಯವಾಗಿದೆ. ಇಂಥ ವಿಷಯಗಳ ಬಗ್ಗೆ ತೀರ್ಮಾನಿಸುವಲ್ಲಿ ಯಾವಾಗಲೂ ಬಹು ಸಂಖ್ಯಾತರ ಪರವಾಗಿಯೇ ಲಕ್ಷ್ಯವಿರುತ್ತದೆ. ಇದು ಹೀಗೆಯೇ ಇದ್ದ ಪಕ್ಷದಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿಗಳ ಪೂರೈಕೆಗಾಗಿ ಬೆಂಬಲ ನೀಡಲು ತನ್ನ ಸಮುದಾಯದ ಸದಸ್ಯರನ್ನಷ್ಟೇ ಅಲ್ಲದೆ, ಇತರರನ್ನು ಕೂಡ ಒಳಗೊಳ್ಳುವಂಥ ಒಂದು ಪದ್ಧತಿಯನ್ನು ಸಮರ್ಥಿಸುವುದಿಲ್ಲವೇ?

(೫೯) ಪ್ರತ್ಯೇಕ ಮತದಾರ ಸಮುದಾಯಗಳಿರಬೇಕೆಂದು ಒತ್ತಾಯಿಸಲು ಇರುವ ಎರಡನೆಯ ಆಧಾರವೆಂದರೆ, ಮಹಮದೀಯರು ತಮ್ಮಷ್ಟಕ್ಕೇ ಒಂದು ಸಮುದಾಯವಾಗಿರುವುದು. ಧರ್ಮಕ್ಕೆ ಸಂಬಂಧಿಸಿದಂತೆ ಮಾತ್ರವಲ್ಲದೆ, ಅವರ ಇತಿಹಾಸ ಸಂಪ್ರದಾಯಗಳು, ಸಂಸ್ಕೃತಿ ಖಾಸಗಿ ನೀತಿ ನಿಯಮಗಳು,

ಸಾಮಾಜಿಕ ಪದ್ಧತಿಗಳು– ಇವುಗಳಲ್ಲಿ ಕೂಡ ಇತರ ಸಮುದಾಯಗಳಿಗಿಂತ ಬೇರೆಯೇ ಆಗಿರುತ್ತಾರೆ. ಅಲ್ಲದೆ, ರೂಢಿಯಲ್ಲಿರುವ ನಡೆವಳಿಕೆಗಳೇ ಜೀವನಕ್ಕೆ ಸಂಬಂಧಿಸಿದಂತೆ, ಅವರಲ್ಲಿ ಎಂಥ ಭಿನ್ನ ದೃಷ್ಟಿಕೋನ ವನ್ನು ಮೂಡಿಸಿವೆಯೆಂದರೆ, ಯಾವುದೇ ಸಾಮಾನ್ಯ ಸಾಮಾಜಿಕ ಕಟ್ಟುಪಾಡುಗಳು, ಸಹಾನುಭೂತಿ, ಅಥವಾ ಸೌಕರ್ಯಗಳು ಅವರ ಮೇಲೆ ಪ್ರಭಾವ ಬೀರಲಾರವು. ವಾಸ್ತವವಾಗಿಯೂ ಅವರು ಬೇರೆಯೇ ಆದ ಜನರಾಗಿರುತ್ತಾರೆ. ಅನೇಕ ಶತಮಾನಗಳ ಕಾಲದಿಂದ ಈ ದೇಶದಲ್ಲಿಯೇ ಜೀವಿಸಿದ್ದರೂ ಅವರು ತಾವು ಬೇರೆಯೇ ಆದ ಜನರೆಂದು ಭಾವಿಸಿರುತ್ತಾರೆ. ಈ ಭಾವನೆಯ ಮೇರೆಗೆ ಇತರ ಮತದಾರ ಸಮುದಾಯ ಹೊಂದಬೇಕೆಂದು ಒತ್ತಾಯಿಸಿದರೆ, ಅದರ ಪರಿಣಾಮವಾಗಿ ಉಂಟಾಗುವ ರಾಜಕೀಯ ಸಂಮಿಳನ, ಅವರ ಸಮುದಾಯದ ವಿಶಿಷ್ಟತೆಯನ್ನು ದುರ್ಬಲಗೊಳಿಸುತ್ತದೆಂದು ವಾದಿಸಲಾಗಿದೆ. ಈ ಭಾವನೆ ಎಷ್ಟರಮಟ್ಟಿಗೆ ವಾಸ್ತವ ಚಿತ್ರವೊಂದನ್ನು ನಮ್ಮ ಮುಂದಿರಿಸುತ್ತದೆ ಎಂಬುದನ್ನು ಕುರಿತು ಆಲೋಚಿಸಲು ನಾನಿಲ್ಲಿ ನಿಲ್ಲುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಅದನ್ನು ವಾಸ್ತವ ಜೀವನವೆನ್ನುವಂತಿಲ್ಲ ಎಂದಷ್ಟೇ ಹೇಳಿದರೆ ಸಾಕು. ಆದರೂ ಇದು ವಾಸ್ತವವೆಂದು ಮಹಮದೀಯ ಸಮುದಾಯಗಳ ವಿಶಿಷ್ಟತೆಯ ಸಂರಕ್ಷಣೆಯು ಆ ಸಮುದಾಯದ ಸಂದರ್ಭದಲ್ಲಿ ಒಪ್ಪಬಹುದಾದಂಥ ಒಂದು ಆದರ್ಶವೆಂದೂ ಭಾವಿಸುವುದಾದರೆ, ಈ ಉದ್ದೇಶ ಪೂರೈಕೆಗೆ ಕೋಮುವಾರು ಮತದಾರ ಸಮುದಾಯಗಳು ಅವಶ್ಯಕವೆಂದು ಏಕೆ ಭಾವಿಸಬೇಕು ಎಂಬುದಕ್ಕೆ ಉತ್ತರ ಸಿಗಲಾರದು. ಒಂದು ಸಾಮಾನ್ಯ ಸರ್ಕಾರದ ಕೆಳಗೆ ಬೇರೆ ಬೇರೆ ಜನಾಂಗಗಳನ್ನು ತರುವ ಪ್ರಯತ್ನ ಮಾಡಬೇಕೆಂದು ನಿರೀಕ್ಷಿಸುವ ದೇಶ ಭಾರತ ಒಂದೇ ಅಲ್ಲ, ಕೆನಡಾ ಮತ್ತು ದಕ್ಷಿಣ ಆಫ್ರಿಕಗಳು, ಸರ್ಕಾರದ ಒಂದು ಸಾಮಾನ್ಯ ಪದ್ಧತಿಗಾಗಿ ಎರಡು ವಿಭಿನ್ನ ಜನಾಂಗಗಳು ಕೆಲಸ ಮಾಡುತ್ತಿರುವ ಬ್ರಿಟಿಷ್ ಸಾಮ್ರಾಜ್ಯದೊಳಗಿರುವ ಎರಡು ದೇಶಗಳಾಗಿವೆ. ಭಾರತದೊಳಗಿರುವ ಹಿಂದೂಗಳು ಮತ್ತು ಮಹಮದೀಯರಂತೆ, ದಕ್ಷಿಣ ಆಫ್ರಿಕದಲ್ಲಿರುವ ಬ್ರಿಟಿಷರು ಮತ್ತು ಡಚ್ಚರದೂ, ಕೆನಡಾದಲ್ಲಿರುವ ಬ್ರಿಟಿಷರು ಮತ್ತು ಫ್ರೆಂಚರದೂ, ತಮ್ಮದೇ ಆದ ವಿಭಿನ್ನ ಸಂಸ್ಕೃತಿಗಳನ್ನು ಹೊಂದಿದ ಎರಡು ಪ್ರತ್ಯೇಕ ಸಮುದಾಯಗಳಿರುತ್ತವೆ. ಆದರೆ ಚುನಾವಣಾ ಉದ್ದೇಶಗಳಿಗಾಗಿ, ಎರಡು ಸಮುದಾಯಗಳು ಒಟ್ಟಾಗಿ ಭಾಗವಹಿಸುವುದರಿಂದ ಅವುಗಳು ತಮ್ಮ ವೈಶಿಷ್ಟ್ಯಗಳನ್ನುಳಿಸಿಕೊಂಡು ಬರಲು ಸಾಧ್ಯವಿಲ್ಲ ಎಂಬ ಆಧಾರದ ಮೇಲೆ ಸಾಮಾನ್ಯ ಮತದಾರ ಸಮುದಾಯಗಳನ್ನು ಅಲ್ಲಿ ಯಾರೂ ಎಂದೂ ವಿರೋಧಿಸಿದಂತೆ ಕಾಣುವುದಿಲ್ಲ. ಸಾಮಾನ್ಯ ಮತದಾರ ಸಮುದಾಯದಲ್ಲಿ ಪಾಲ್ಗೊಳ್ಳುವ ವಿಭಿನ್ನ ಸಮುದಾಯಗಳ ಉದಾಹರಣೆಗಳು ಸಾಮ್ರಾಜ್ಯದ ಹೊರಗೆ ಖಂಡಿತವಾಗಿಯೂ ಕಮ್ಮಿಯೇ. ಪೋಲೆಂಡಿನಲ್ಲಿ ಪೋಲರೂ, ರುಥೇನಿಯನರೂ, ಯೆಹೂದ್ಯರೂ, ಬಿಳಿ ರಷ್ಯನರೂ, ಜರ್ಮನರೂ, ಲಿಥಿಯೇನಿಯನರೂ ಇದ್ದಾರೆ. ಲ್ಯಾಟ್ವಿಯದಲ್ಲಿ ಲಿಥಿಯೇನಿಯನರೂ, ಎಸ್ಥೋನಿಯವರೂ ಇದ್ದರೆ. ಎಸ್ಥೋನಿಯಾದಲ್ಲಿ ಜರ್ಮನರೂ, ಯೆಹೂದ್ಯರೂ, ಸ್ವೀಡಿಷರೂ, ರಷ್ಯನರೂ, ಲ್ಯಾಟ್ವಿಯನರೂ, ಟಾರ್ಟನರೂ ಇದ್ದಾರೆ. ಜೆಕೋಸ್ಲೊವೇಕಿಯದಲ್ಲಿ ಜೆಕ್ಕರೂ, ಸ್ಲೋವಾಕರೂ, ಜರ್ಮನರೂ, ಮ್ಯಾಗ್ಯಾರರೂ, ರುಥೇನಿಯನರೂ, ಯೆಹೂದ್ಯರೂ, ಪೋಲರೂ ಇದ್ದಾರೆ. ಆಸ್ಟ್ರಿಯಾದಲ್ಲಿ ಜರ್ಮನರೂ, ಜೆಕ್ಕರೂ, ಸ್ಲೋವೀನಿಯರೂ ಇದ್ದಾರೆ. ಹಾಗೆಯೇ ಹಂಗೇರಿಯಲ್ಲಿ ಹಂಗೇರಿಯನರೂ, ಜರ್ಮನರೂ, ಸ್ಲೋವಾಕರೂ, ರುಮೇನಿಯನರೂ, ರುಥೇನಿಯನರೂ, ಕ್ರೋಷಿಯನರೂ, ಸರ್ಬಿಯನರೂ ಇದ್ದಾರೆ. ಈ ಎಲ್ಲ ಗುಂಪುಗಳೂ ಬರಿಯ ಸಮುದಾಯಗಳಷ್ಟೇ ಆಗಿರುವುದಿಲ್ಲ. ಅವುಗಳಲ್ಲಿ ಪ್ರತಿಯೊಂದೂ ತನ್ನದೇ ಆದ ಪ್ರಮುಖವೂ, ಸ್ಥಿರವೂ, ವಿಶಿಷ್ಟವೂ ಆದ ವ್ಯಕ್ತಿತ್ವಗಳಿರುವ ಗುಂಪುಗಳಾಗಿದ್ದು, ಪರಸ್ಪರ ಸಾಮೀಪ್ಯದಲ್ಲಿ ಹಾಗೂ ಸಾಮಾನ್ಯ ಸರ್ಕಾರದಡಿ ಇರುತ್ತವೆ. ಆದರೂ

ಅವುಗಳಲ್ಲಿ ಯಾವುದೇ ಒಂದು ಗುಂಪೂ ಸಾಮಾನ್ಯ ಮತದಾರ ಸಮುದಾಯದಲ್ಲಿ ಭಾಗವಹಿಸುವುದರಿಂದ, ತನ್ನ ವಿಶಿಷ್ಟ ವ್ಯಕ್ತಿತ್ವಕ್ಕೆ ಹಾನಿಯುಂಟಾಗುತ್ತದೆ ಎಂಬ ಕಾರಣವನ್ನೊಡ್ಡಿ ಸಾಮಾನ್ಯ ಮತದಾರ ಸಮುದಾಯವನ್ನು ಆಕ್ಷೇಪಿಸಿಲ್ಲ.

(೬೦) ಆದರೆ ಈ ವಾದದಲ್ಲಿ ಹುರುಳಿಲ್ಲವೆಂದು ತೋರಿಸಲು ಮುಸ್ಲಿಮೇತರ ಸಮುದಾಯಗಳ ವಿಷಯವನ್ನು ಉಲ್ಲೇಖಿಸುವ ಅಲ್ಪಸಂಖ್ಯಾತರು ಇತರ ಸಮುದಾಯಗಳೊಂದಿಗಿನ ರಾಜಕೀಯ ಸಂಪರ್ಕದ ಸೋಂಕು ಜಾಡ್ಯವೆಂದು ಹೆಸರಿಸಬಹುದಾದುದರ ವಿರುದ್ಧವಾಗಿ ತಮ್ಮ ಸ್ವಂತ ವ್ಯಕ್ತಿತ್ವದ ರಕ್ಷಣೆಗಾಗಿ, ಕೋಮುವಾರು ಮತದಾರ ಸಮುದಾಯಗಳಿರಬೇಕಾದ್ದು ಅವಶ್ಯಕವಲ್ಲವೆಂದು ಎಂದೂ ಭಾವಿಸಿಲ್ಲದಿರುವುದಕ್ಕೆ ವಿಪುಲ ನಿದರ್ಶನಗಳಿವೆ. ಭಾರತವು, ಮಹಮದೀಯರು ಅಲ್ಪಸಂಖ್ಯಾತರಾಗಿರುವ ಏಕೈಕ ರಾಷ್ಟ್ರವೇನೂ ಅಲ್ಲವೆಂಬ ವಿಚಾರವನ್ನು ಸಾಕಷ್ಟು ಮಟ್ಟಿಗೆ ತಿಳಿದಿರುವಂತೆ ಕಾಣುವುದಿಲ್ಲ. ಅವರು ಇದೇ ಸ್ಥಿತಿಯಲ್ಲಿರುವಂಥ ಇತರ ರಾಷ್ಟ್ರಗಳೂ ಇವೆ. ಆಲ್ಬೇನಿಯದಲ್ಲಿ ಮಹಮದೀಯರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಬಲ್ಗೇರಿಯ, ಗ್ರೀಸ್ ಹಾಗೂ ರುಮೇನಿಯಗಳಲ್ಲಿ ಅವರ ಸಂಖ್ಯೆ ಕಡಮೆ. ಯುಗೊಸ್ಲಾವಿಯ ಮತ್ತು ರಷ್ಯಗಳಲ್ಲಂತೂ ಅವರ ಸಂಖ್ಯೆ ಇನ್ನೂ ಕಮ್ಮಿ. ಅಲ್ಲಿ ನೆಲಸಿರುವ ಮಹಮದೀಯ ಸಮುದಾಯಗಳು ಪ್ರತ್ಯೇಕ ಕೋಮುವಾರು ಮತದಾರ ಸಮುದಾಯಗಳು ಅವಶ್ಯಕವೆಂದು ಎಂದಾದರೂ ಒತ್ತಾಯಿಸಿವೆಯೆ? ರಾಜಕೀಯ ಇತಿಹಾಸದ ಎಲ್ಲ ವಿದ್ಯಾರ್ಥಿಗಳೂ ಈ ರಾಷ್ಟ್ರಗಳಲ್ಲಿ ಮಹಮದೀಯರು ಪ್ರತ್ಯೇಕ ಮತದಾರ ಸಮುದಾಯಗಳ ಅಗತ್ಯವಿಲ್ಲದೆಯೇ, ಅಷ್ಟೇ ಅಲ್ಲ, ತಮಗೆ ಭರವಸೆ ನೀಡಲಾದ ಪ್ರಾತಿನಿಧ್ಯದ ಯಾವುದೇ ನಿಷ್ಕೃಷ್ಟ ಶೇಕಡಾವಾರು ಇಲ್ಲದೆಯೇ ತಮ್ಮ ಉದ್ದೇಶವನ್ನು ಸಾಧಿಸಿದ್ದಾರೆ ಎಂದು ತಿಳಿದಿರುತ್ತಾರೆ. ಹೀಗಿದ್ದರೂ ರಾಜಕೀಯದ ಸಂಪೂರ್ಣ ಲೌಕಿಕೀಕರಣದ ಒಂದು ಹಂತವನ್ನು ಭಾರತ ಇನ್ನೂ ತಲುಪಿಲ್ಲವಾದ್ದರಿಂದ ಭಾರತದಲ್ಲಿ ಮಹಮದೀಯ ಸಮುದಾಯಕ್ಕೆ ಸಾಕಷ್ಟು ಪ್ರಾತಿನಿಧ್ಯದ ಭರವಸೆ ನೀಡಬೇಕು. ಇಲ್ಲವಾದರೆ ಬಹುಸಂಖ್ಯಾತರಲ್ಲಿ ಸ್ವಭಾವಸಿದ್ಧವಾಗಿರುವ ಧಾರ್ಮಿಕ ವೈರದ ಮನೋಭಾವದಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಅವರು ಸಂಪೂರ್ಣವಾಗಿ ಕಳೆಗುಂದುತ್ತಾರೆ ಎಂಬ ಒಟ್ಟಭಿಪ್ರಾಯವೂ ಇದೆ. ಜಗತ್ತಿನ ಇತರ ಭಾಗಗಳಲ್ಲಿರುವ ಮಹಮದೀಯ ಅಲ್ಪಸಂಖ್ಯಾತರು ತಮಗೆ ಭರವಸೆ ನೀಡಲಾದ ಪ್ರಾತಿನಿಧ್ಯದ ಪಾಲು ಇಲ್ಲದೆಯೇ ತಮ್ಮ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಭಾರತದಲ್ಲಿರುವ ಮಹಮದೀಯರ ವಿಚಾರವನ್ನು ಕುರಿತು ಉತ್ಪ್ರೇಕ್ಷಿಸಲಾಗಿದೆ ಹಾಗೂ ನನ್ನ ಅಭಿಪ್ರಾಯದಲ್ಲಿ ಸಮರ್ಥನೀಯ ಅಂಶಗಳಿಲ್ಲ.

(೬೧) ಮಹಮದೀಯರಿಗಾಗಿ ಪ್ರತ್ಯೇಕವಾದ ಕೋಮುವಾರು ಮತದಾರ ಸಮುದಾಯಗಳನ್ನೂ ಉಳಿಸಿಕೊಳ್ಳಬೇಕೆಂಬುದಕ್ಕೆ ಸಮರ್ಥನೆಯಾಗಿ ಇರುವ ಮೂರನೆಯ ಆಧಾರ ಹೀಗಿದೆ: ಸಂಮಿಶ್ರ ಮತದಾರ ಸಮುದಾಯದಲ್ಲಿನ ಮಹಮದೀಯ ಮತದಾರ ಬಲವನ್ನು ಮಹಮದೀಯರ ಮತವು ಎಷ್ಟು ಮಟ್ಟಿಗೆ ದುರ್ಬಲಗೊಳಿಸಬಹುದೆಂದರೆ ಅಂಥದೊಂದು ಸಂಮಿಶ್ರ ಮತದಾರ ಸಮುದಾಯದಿಂದ ಆರಿಸಿಬಂದ ಮಹಮದೀಯ ಅಭ್ಯರ್ಥಿಯೂ ದುರ್ಬಲನಾಗಿರುತ್ತಾನೆ. ಹಾಗೂ ಮಹಮದೀಯರ ನಿಜವಾದ ಪ್ರತಿನಿಧಿಯಾಗುವುದರ ಬದಲಾಗಿ ಅವನು ಮಹಮದೀಯೇತರ ಸಮುದಾಯಗಳ ಕೈಗೊಂಬೆಯಾಗುತ್ತಾನೆ. ಈ ಭಯಕ್ಕೆ ನಿಸ್ಸಂಶಯವಾಗಿಯೂ ಯಾವುದೇ ಯಥಾರ್ಥ ಕಾರಣವಿಲ್ಲ. ಸ್ವಲ್ಪ ಯೋಚಿಸಿದರೇ ಸಾಕು. ಇದು ನಿರಾಧಾರವಾದುದೆಂದು ತಿಳಿದುಬರುತ್ತದೆ. ಅನೇಕ ಮಂದಿ ಮುಸ್ಲಿಮೇತರ ಮತದಾರರು ಮಹಮದೀಯ ಅಭ್ಯರ್ಥಿಯೊಬ್ಬನನ್ನು ಚುನಾಯಿಸುವಲ್ಲಿ ಪ್ರವೃತ್ತರಾದರೆ, ಮಹಮದೀಯ

ಅಭ್ಯರ್ಥಿಯೊಬ್ಬನನ್ನು ಚುನಾಯಿಸಿ ಮುಸ್ಲಿಮೇತರರು ತಂಟೆಕೋರತನದ ದಾರಿಯನ್ನು ಹಿಡಿದಾಗ ಈ ಸಂಶಯ ನಿಜವಾಗುತ್ತದೆ. ಆದರೆ, ಮಹಾಚುನಾವಣೆಯ ಸಮಯದಲ್ಲಿ ಚುನಾವಣೆಗೆ ನಿಲ್ಲುವ ಅನೇಕ ಮಹಮದೀಯೇತರ ಅಭ್ಯರ್ಥಿಗಳು ಇರುತ್ತಾರೆಂಬುದು ವಾಸ್ತವ ಸಂಗತಿಯಾಗಿರುತ್ತದೆ. ವಿಷಯ ಹೀಗಿರುವಾಗ ಎಲ್ಲ ಮುಸ್ಲಿಮೇತರ ಮತದಾರರು ಮಹಮದೀಯ ಅಭ್ಯರ್ಥಿಯ ವಿರುದ್ಧವಾಗಿರುವುದಿಲ್ಲ. ಮುಸ್ಲಿಮೇತರ ಅಭ್ಯರ್ಥಿಗಳು ಕೂಡ, ತಮ್ಮ ಗಮನವನ್ನು ಮುಸ್ಲಿಂ ಅಭ್ಯರ್ಥಿಯ ಕೇಂದ್ರೀಕರಿಸುವುದರ ಮೂಲಕ ಮುಸ್ಲಿಮೇತರ ಮತದಾರರಿಗೆ ಮತಗಳನ್ನು ನಿರರ್ಥಕಗೊಳಿಸುವ ಅವಕಾಶ ಮಾಡಿಕೊಡುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅವರು ತಮಗಾಗಿ ಎಲ್ಲ ಮತದಾರರನ್ನಲ್ಲವಾದರೂ ಕೆಲವರನ್ನಾದರೂ ತಮ್ಮ ಪರ ಮಾಡಿಕೊಳ್ಳುತ್ತಾರೆ. ಈ ವಿಶ್ಲೇಷಣೆ ನಿಜವೇ ಆಗಿದ್ದ ಪಕ್ಷದಲ್ಲಿ ಆಗ ಕೆಲವೇ ಕೆಲವು ಮುಸ್ಲಿಮೇತರ ಮತದಾರರು ಮಾತ್ರ, ಮುಸ್ಲಿಂ ಅಭ್ಯರ್ಥಿಗಳ ಚುನಾವಣೆಯಲ್ಲಿ ಭಾಗವಹಿಸಲು ಉಳಿಯುತ್ತಾರೆ. ಹಾಗೂ ಮುಸ್ಲಿಮ್ ಅಭ್ಯರ್ಥಿಗಳ ವಿರುದ್ಧವಾಗಿ ಮುಸ್ಲಿಮೇತರ ಮತದಾರರು ಒಟ್ಟುಗೂಡಿ ಏನಾದರೂ ಮಾಡಬಹುದೆಂಬ ಮಹಮದೀಯರ ಭಯ ಕೇವಲ ಭ್ರಮೆ. ಸ್ವತಃ ಮಹಮದೀಯರಿಗೇ ಇದರಲ್ಲಿ ನಂಬಿಕೆಯಿಲ್ಲದಿರುವುದು "ದೆಹಲಿ" ಪ್ರಸ್ತಾವಗಳೆನಿಸಿಕೊಂಡ ಅಂಶದಿಂದ ಸ್ಪಷ್ಟವಾಗುತ್ತದೆ. ಈ ವರದಿಯ ಮೊದಲ ಭಾಗದಲ್ಲಿ ಆಗಲೇ ಉಲ್ಲೇಖಿಸಲಾದ ಈ ಪ್ರಸ್ತಾವಗಳ ಅನುಸಾರವಾಗಿ, ಮಹಮದೀಯರು ಪಂಜಾಬ್ ಮತ್ತು ಬಂಗಾಳದಲ್ಲಿರುವ ಮುಸ್ಲಿಮರ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಕೆಲವು ನಿರ್ದಿಷ್ಟ ಸವಲತ್ತುಗಳನ್ನು ತಮಗೆ ನೀಡಬೇಕೆಂಬ ಹಾಗೂ ಕೋಮುವಾರು ಆಧಿಪತ್ಯಗಳಿಗಾಗಿ ಒತ್ತಾಯಿಸುವ ಷರತ್ತಿಗೆ ಒಳಪಟ್ಟ ಸಂಯುಕ್ತ ಮತದಾರ ಸಮುದಾಯಗಳ ಪರವಾಗಿ ಕೋಮುವಾರು ಮತದಾರ ಸಮುದಾಯಗಳನ್ನು ಬಿಟ್ಟುಕೊಡಲು ತಮಗೆ ಇಷ್ಟವಿರುವುದನ್ನು ತೋರಿಸಿದ್ದಾರೆ. ಈಗ ಈ ಕೋಮುವಾರು ಆಧಿಪತ್ಯಗಳಿಗೆ ತಮ್ಮ ಸ್ವಂತಕ್ಕಿಂತ ಹೊರಗಿನದಾದ ಬೇರೆ ಉದ್ದೇಶಗಳಿರುವುದಿಲ್ಲ ಎಂದು ಭಾವಿಸಿಕೊಂಡು ಮತ್ತು ನಾವು ಭಾವಿಸಿಕೊಳ್ಳಬೇಕಾದ್ದೇ ಹೀಗೆ– ಯಾವುದೇ ಪ್ರಾಂತ್ಯದಲ್ಲಿರುವ ಮಹಮದೀಯ ಅಲ್ಪಸಂಖ್ಯಾತರ, ಸಂಯುಕ್ತ ಮತದಾರ ಸಮುದಾಯಗಳಿಂದ ಪಡೆಯಲು ಸಾಧ್ಯವಿರುವಂಥ ರಕ್ಷಣೆಯಷ್ಟಕ್ಕೇ ತೃಪ್ತರಾಗಬೇಕೆಂಬುದು ಸ್ಪಷ್ಟ. ಆದ್ದರಿಂದ ಇದು ಕೋಮುವಾರು ಸರಕಾರಗಳ ಸೇರ್ಪಡೆ ಹೊಂದದ ಸಂಯುಕ್ತ ಮತದಾರ ಸಮುದಾಯಗಳು ಏಕೆ ಸಮಂಜಸವೆನಿಸುವುದಿಲ್ಲ ಎಂಬುದಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿರುತ್ತದೆ. ಆದರೆ ಈ ಪರಿಗಣನೆಯನ್ನು ಬಿಟ್ಟುಬಿದಂತೆ, ಮತಗಳ ಸಂಖ್ಯೆ ಕಡಮೆ ಮಾಡುವುದು ಸಂಯುಕ್ತ ಮತದಾರ ಸಮುದಾಯಗಳ ಪದ್ಧತಿಯೊಂದಿಗೆ ಸ್ವಯಂ ಅಂಟಿಕೊಂಡಿರುವಂಥ ಒಂದು ಕೆಡುಕಾಗಿದೆ ಎಂಬ ಮುಸ್ಲಿಮರ ಅಭಿಪ್ರಾಯದಲ್ಲಿ ಏನಾದರೂ ಸಾರ ಇದ್ದುದೇ ಆದ ಪಕ್ಷದಲ್ಲಿ, ಆಗ ನನ್ನ ಅಭಿಪ್ರಾಯದಲ್ಲಿ ಕೋಮುವಾರು ಮತದಾರ ಸಮುದಾಯಗಳನ್ನು ಉಳಿಸಿಕೊಳ್ಳುವಲ್ಲಿ ಪರಿಹಾರ ಇರುವುದಿಲ್ಲ. ವಯಸ್ಕ ಮತದಾನ ಪದ್ಧತಿಯನ್ನು ಪ್ರಾರಂಭಿಸುವುದರ ಮೂಲಕ, ಸಾಧ್ಯವಿರುವ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು, ಮಹಮದೀಯ ಮತದಾರರ ಸಂಖ್ಯೆಯನ್ನು ಹೆಚ್ಚಿಸುವುದರಲ್ಲಿ ನಿಜವಾದ ಪರಿಹಾರವಿರುತ್ತದೆ. ಏಕೆಂದರೆ ಆಗ ಮಹಮದೀಯ ಸಮುದಾಯವು ಮುಸ್ಲಿಮೇತರ ಮತಗಳ ಕಲಬೆರಕೆಯಿಂದ ಏನೂ ಪರಿಣಾಮಗಳು ಉಂಟಾಗದಂತೆ ಮಾಡಲು ಅಗತ್ಯವಾದಲ್ಲಿ ಹೆಚ್ಚಿನ ಮತ ಪ್ರಾಬಲ್ಯವನ್ನು ಪಡೆಯಬಹುದು.

(೬೨) ಸಮಂಜಸವೆಂದು ಪರಿಗಣಿಸಬಹುದಾದ ಯಾವುದೇ ಆಧಾರದ ಮೇಲೆ ಕೋಮುವಾರು ಮತದಾರ ಸಮುದಾಯಗಳ ವಿಚಾರವನ್ನು ಸಮರ್ಥಿಸುವುದು ಸಾಧ್ಯವಿಲ್ಲವೆಂದು ಇವೆಲ್ಲ ತೋರಿಸುತ್ತವೆ.

ಇವುಗಳ ಪರವಾಗಿರುವುದೆಂದರೆ, ಸಹಾನುಭೂತಿ ಮತ್ತು ಭಾವಾವೇಶಗಳು ಮಾತ್ರ. ಸಹಾನುಭೂತಿ ಮತ್ತು ಭಾವಾವೇಶಗಳಿಗೆ ರಾಜಕೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಾವುದೇ ಸ್ಥಾನವಿಲ್ಲ ಎಂದೇನೂ ನಾನು ಹೇಳುವುದಿಲ್ಲ. ಸರ್ಕಾರಕ್ಕೆ ನಿಷ್ಠೆ ತೋರಿಸುವುದು ಶ್ರದ್ಧೆಗೆ ಸಂಬಂಧಿಸಿದ ವಿಷಯ ಹಾಗೂ ಶ್ರದ್ಧೆ ಮನೋಭಾವನೆಗೆ ಸಂಬಂಧಪಟ್ಟ ವಿಚಾರ ಎಂದು ನನಗೆ ಸಂಪೂರ್ಣ ತಿಳಿದಿದೆ. ರಾಜಕೀಯ ರಂಗಕ್ಕೆ ಏನೂ ಕೆಡಕುಂಟಾಗದಂತೆ ಕೆಲಸ ಮಾಡಲು ಸಾಧ್ಯವಾದರೆ, ಆಗ ಜನರ ಶ್ರದ್ಧೆ ಗಳಿಸಬಹುದು. ಆದರೆ ಕೋಮುವಾರು ಪ್ರಾತಿನಿಧ್ಯವೆಂಬುದು ಮೂಲಭೂತವಾಗಿಯೇ ಎಷ್ಟರಮಟ್ಟಿಗೆ ದೋಷಪೂರ್ಣವಾಗಿದೆ ಯೆಂದರೆ ಆ ಸಂಬಂಧವಾಗಿ ಭಾವಾವೇಶ ತಾಳುವುದರಿಂದ, ಕೆಡುಕು ಶಾಶ್ವತವಾಗಿ ಮುಂದುವರಿಯುತ್ತದೆ. ಈ ಪದ್ಧತಿಯ ಮೂಲಭೂತ ದೋಷವೇನೆಂಬುದನ್ನು ಅದರ ವಿರೋಧಿಗಳೂ ಅರಿತುಕೊಂಡಿಲ್ಲ. ಆದರೆ ಕಾರ್ಯಾಚರಣೆಯತ್ತ ಗಮನ ಹರಿಸುವ ಮುಸ್ಲಿಮೇತರರಿಗೆ ನ್ಯಾಯ ದೊರಕಿಸಿಕೊಡುವುದು ಸ್ಪಷ್ಟ. ಅವರು ಮುಸ್ಲಿಮೇತರರಿಂದ ಸಂಗ್ರಹಿಸಿದ ಆದಾಯವನ್ನು ಯುಕ್ತವಾಗಿಯೇ ವಿನಿಯೋಗಿಸಿದ್ದಾರೆ. ಮುಸ್ಲಿಮೇತರ ಶಿಕ್ಷಣದ ಬಗ್ಗೆ ಯೋಗ್ಯ ತೀರ್ಮಾನಕ್ಕೆ ಬಂದಿದ್ದಾರೆ. ಮುಸ್ಲಿಮೇತರರು ಯಾವ ಕಂದಾಯ ಗಳನ್ನು ಕೊಡಬೇಕು. ಎಷ್ಟು ಕೊಡಬೇಕು ಎಂದು ನಿರ್ಧರಿಸಿದ್ದಾರೆ. ಇವು ಶಾಸಕಾಂಗದ ಸದಸ್ಯರಾಗಿ ಮುಸ್ಲಿಮೇತರ ಕಲ್ಯಾಣಕ್ಕಾಗಿ ಮುಸ್ಲಿಮರು ಕೈಗೊಂಡ ಅತ್ಯಂತ ಮಹತ್ವದ ಕೆಲವು ವಿಷಯ ಗಳಾಗಿವೆ. ಮುಸ್ಲಿಮರಿಗೆ ಹೀಗೆ ವರ್ತಿಸುವ ಹಕ್ಕು ಎಲ್ಲಿದೆ ಎಂದು ಪ್ರಶ್ನಿಸಬಹುದು. ಮುಸ್ಲಿಮೇತರ ಪ್ರತಿನಿಧಿಗಳಾಗಿ ಚುನಾಯಿತರಾದ್ದರಿಂದಲೇ ಅವರಿಗೆ ಈ ಹಕ್ಕು ಎಂಬುದು ಈ ಪ್ರಶ್ನೆಗೆ ಉತ್ತರವಲ್ಲ. ಬದಲಾಗಿ ಮುಸ್ಲಿಮರ ಪ್ರತಿನಿಧಿಗಳಾಗಿ ಚುನಾಯಿತರಾದ್ದರಿಂದಲೇ ಅವರಿಗೆ ಹಕ್ಕು. ಈಗ ಆಳಲ್ಪಡು ವವರ ಒಪ್ಪಿಗೆಗನುಗುಣವಾದ ಸರ್ಕಾರವಿರಬೇಕೆಂಬುದು ವಿಶ್ವಾದ್ಯಂತ ಗುರುತಿಸಲಾದ ಸೂತ್ರವಾಗಿ ರುತ್ತದೆ. ನಾನು ಮೇಲೆ ಹೇಳಿದ ವಿಷಯಗಳಿಂದ, ಕೋಮುವಾರು ಮತದಾರ ಸಮುದಾಯಗಳು ಈ ಸೂತ್ರದ ವಿರುದ್ಧವಾಗಿವೆ. ಏಕೆಂದರೆ ಇದು ಒಪ್ಪಿಗೆ ಪಡೆಯದ ಸರ್ಕಾರ. ಒಂದು ಸಮುದಾಯದ ಸದಸ್ಯರಿಗೆ, ಇತರ ಸಮುದಾಯಗಳನ್ನು ಆ ಸಮುದಾಯಕ್ಕೆ ಸಂಬಂಧಿಸಿದ ಮತದಾನದಲ್ಲಿ ಸ್ವತಃ ಭಾಗವಹಿಸದೆಯೇ, ಆಳಲು ಅನುಮತಿ ನೀಡುವ ಪದ್ಧತಿಯೊಂದನ್ನು ಮಾನ್ಯ ಮಾಡುವುದು ರಾಜಕೀಯ ನ್ಯಾಯ ಕುರಿತ ಎಲ್ಲ ತಿಳಿವಳಿಕೆಗೂ ವ್ಯತಿರಿಕ್ತವಾಗಿದೆ. ತಾವು ಇತರ ಸಮುದಾಯಗಳ ಜನರ ಜೀವನ ದೃಷ್ಟಿಗಿಂತ ಬೇರೆಯೇ ಆಗಿರುವ ಜೀವನದೃಷ್ಟಿ ಹೊಂದಿರುವಂಥ ವಿಭಿನ್ನ ಸಮುದಾಯಗಳವರು ಎಂಬ ನೆಪವನ್ನು ಮಹಮದೀಯರು ಹೇಳುವುದರಿಂದ ಸಮುದಾಯಗಳವರು ಮತದಾರ ಸಮುದಾಯಗಳ ಪದ್ಧತಿಯಲ್ಲಿ ಅಂತರ್ಗತವಾಗಿರುವ ಅಪಾಯ, ಕಡೆಗಣಿಸಲು ಸಾಧ್ಯವಾಗಲಾರದಷ್ಟು ಮಟ್ಟಿಗೆ ಭಯಾನಕವಾಗಿರುತ್ತದೆ.

(೬೩) ಪರಿಷತ್ತಿನ ಸದ್ಯದ ರಚನೆಯಲ್ಲಿರುವ ದೋಷಗಳು ಇಂಥವಾಗಿವೆ. ಈ ಪರಿಷತ್ತನ್ನು ರೂಪಿಸಿದ್ದು ಸೌತ್–ಬರೋ ಸಮಿತಿ ೧೯೧೯ರಲ್ಲಿ. ಆ ಸಮಿತಿ ಸಿದ್ಧಪಡಿಸಿದ ರೂಪರೇಷೆಯ ಗುಣಲಕ್ಷಣಗಳನ್ನು ಸಚಿವರಿಗೆ ಬರೆಯಲಾದ ತನ್ನ ದಿನಾಂಕ ೨೩–೪–೧೯೧೯ರ ೪೯೧೯ನೇ ಸಂಖ್ಯೆಯ ಪತ್ರದಲ್ಲಿ ಭಾರತ ಸರ್ಕಾರವು ಸ್ಪಷ್ಟವಾಗಿ ತಿಳಿಸಿದೆ. ಇದರಲ್ಲಿ ಗಮನಿಸಲಾದುದೆಂದರೆ:

> "೨. ಸೌತ್‌ಬರೊ ಸಮಿತಿಯ ವರದಿಯ ಬಗ್ಗೆ ವಿವರ ಪರಿಶೀಲನೆ ನಡೆಸುವ ಮೊದಲು ಕೆಳಮಟ್ಟಿನ ಮಹತ್ವವುಳ್ಳ ಒಂದು ಪ್ರಾರಂಭಿಕ ಪ್ರಶ್ನೆ ಏಳುತ್ತದೆ. ಸಮಿತಿಯ ಕೆಲಸಗಳು ಬಹುಮಟ್ಟಿಗೆ ಸಿದ್ಧಾಂತಗಳ

ಸ್ಥಾಪನೆಯತ್ತ ನಿರ್ದೇಶಿತವಾಗಿಲ್ಲವೆಂದು ನೀವೇ ನೋಡುತ್ತೀರಿ. ತಮ್ಮ ಮುಂದೆ ಬರುವ ವಿವಿಧ ಸಮಸ್ಯೆಗಳೊಂದಿಗೆ ವ್ಯವಹರಿಸುವಲ್ಲಿ ವರದಿಯ ಲೇಖಕರು ಸಾಮಾನ್ಯವಾಗಿ ಸಾಧಾರಣ ವಿವೇಚನೆಯ ಆಧಾರದ ಮೇಲೆ ಪರಿಹಾರ ಸೂಚಿಸುವುದಕ್ಕಿಂತ ಹೆಚ್ಚಾಗಿ, ಒಂದು ಒಪ್ಪಂದಕ್ಕೆ ಬರುವ ಪ್ರಯತ್ನವನ್ನೇ ನಡೆಸಿದ್ದಾರೆ."

(೬೪) ಈಗಿರುವ ಹಾಗೆ ರೂಪುರೇಖೆಯು ನೈಜಮೌಲ್ಯವನ್ನು ಕುರಿತು ಪರಿಶೀಲಿಸುವತ್ತ ನನ್ನ ಸಹೋದ್ಯೋಗಿಗಳು ಗಮನಹರಿಸಿಲ್ಲ. ನಾಮಕರಣ ಮಾಡುವ ಪದ್ಧತಿಯನ್ನು ರದ್ದು ಮಾಡತಕ್ಕದೆಂದು ಅವರು ಶಿಫಾರಸ್ ಮಾಡಿದುದರಲ್ಲಿ ಸಂದೇಹವೇನೂ ಇಲ್ಲ. ಈ ವಿಷಯದಲ್ಲಿ ನಾನೂ ಅವರ ಅಭಿಪ್ರಾಯ ವನ್ನು ಒಪ್ಪುತ್ತೇನೆ. ಆದರೆ ಅವರು ಮತದಾರ ಸಮುದಾಯದ ಸಮಗ್ರ ರಚನೆಯನ್ನು ಸುಭದ್ರವಾಗಿ ಇರಿಸಿದ್ದಾರೆಂಬುದನ್ನು ಬಿಟ್ಟರೆ, ಈ ಕುರಿತಂತೆ ಯಾವ ವಿರೋಧವನ್ನು ಎತ್ತುವಂತಿಲ್ಲ. ನಾನು ಆಗಲೇ ಒತ್ತಿ ಹೇಳಿದಂತೆ ಈ ಇಡೀ ರಚನೆಯೇ ದೋಷಪೂರ್ಣವಾಗಿದೆ. ಇದರ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಬೇಕಾದ ಅಗತ್ಯವಿದೆ. ಸುಧಾರಣೆಗಳ ಉದ್ದೇಶವು ಸ್ವಯಂ ಸರ್ಕಾರಿ ಸಂಸ್ಥೆಗಳ ಸ್ಥಾಪನೆಯೆಂದು ೧೯೧೭ರ ಆಗಸ್ಟ್ ತಿಂಗಳ ವಿಧ್ಯುಕ್ತ ಘೋಷಣೆಯಲ್ಲಿ ಹೇಳಲಾಗಿದೆ. ಅನಂತರ ಜಾರಿಗೆ ತಂದ ಮತದಾರ ಸಮುದಾಯದ ರಚನೆಯೇನಿದ್ದರೂ ಆ ಗುರಿಯತ್ತ ಸಾಗಿದ ಅರ್ಧದಷ್ಟು ದಾರಿ ಮಾತ್ರ. ನೌಕರಶಾಹಿ ವಿಧಾನದ ಆಡಳಿತ ಪದ್ಧತಿ ಜನರೇ ಆಳುವ ಪದ್ಧತಿಯಾಗಿ ಪರಿವರ್ತನೆ ಹೊಂದಲು ಸಂಧಿ ಕಾಲದ ನಿರ್ದಿಷ್ಟ ಅವಧಿ ಅವಶ್ಯಕವೆಂಬುದನ್ನು ಒಪ್ಪಿಕೊಂಡ ಕಾರಣಕ್ಕಾಗಿ ಮಾತ್ರ ಇದನ್ನು ಸಮರ್ಥಿಸಲಾಗಿತ್ತು. ಸಧ್ಯ ಇರುವ ಈ ಮತದಾರ ಸಮುದಾಯದ ರಚನಾ ವಿಧಾನವನ್ನು ವಿಭಾಗೀಕೃತ ಸರ್ಕಾರದ ಪ್ರಸ್ತುತ ಪರಿಸ್ಥಿತಿ ಮುಂದುವರಿಸಲು ಸಾಧ್ಯ. ಸದ್ಯದ ಪ್ರಾತಿನಿಧ್ಯದ ಪದ್ಧತಿ ಸರ್ಕಾರಕ್ಕೆ ಸಂಪೂರ್ಣವಾಗಿ ಸರಿ–ಹೊಂದುವುದಿಲ್ಲವಾದ್ದರಿಂದ ಅದನ್ನು ರದ್ದುಪಡಿಸತಕ್ಕದ್ದು.

(೬೫) ಸದ್ಯದ ಪ್ರಾತಿನಿಧ್ಯದ ಪದ್ಧತಿಯನ್ನು ಕೂಲಂಕಷ ಪರೀಕ್ಷೆಗೆ ಏಕೆ ಒಳಪಡಿಸಬೇಕೆಂಬುದಕ್ಕೆ ಇನ್ನೊಂದು ಕಾರಣವೂ ಇದೆ. ಪ್ರಾತಿನಿಧಿಕ ಸರ್ಕಾರವೆಂಬುದು ಎಲ್ಲೆಡೆಯೂ ಪಕ್ಷ ಸರ್ಕಾರವೇ ಆಗಿರುತ್ತದೆ. ನಿಜವಾಗಿ ಹೇಳುವುದಾದರೆ, ಪಕ್ಷ ಸರ್ಕಾರವು ಪ್ರಾತಿನಿಧಿಕ ಸರ್ಕಾರದ ಎಂಥ ಒಂದು ಸಾರ್ವತ್ರಿಕ ಅಧೀನ ಅಂಗವಾಗಿರುತ್ತದೆಂದರೆ, ಪ್ರಾತಿನಿಧಿಕ ಸರ್ಕಾರ, ಪಕ್ಷ ಸರ್ಕಾರದ ಮೂಲಕವಲ್ಲದೆ, ಕಾರ್ಯ ನಿರ್ವಹಿಸಲಾರದು. ಪಕ್ಷ ಸರ್ಕಾರದ ಅತ್ಯುತ್ಕೃಷ್ಟ ಸ್ವರೂಪವೆಂದರೆ ಇದು ಉಭಯ ಪಕ್ಷ ಪದ್ಧತಿಯ ಅಡಿಯಲ್ಲಿ ನಿಶ್ಚಿತ ಸ್ಥಿರತೆ ಹಾಗು ಅಂತೆಯೇ ಜವಾಬ್ದಾರಿ ಸರ್ಕಾರ– ಇವೆರಡನ್ನೂ ಹೊಂದಿರುತ್ತದೆ. ಕಾರ್ಯಾಂಗವನ್ನು ಎಷ್ಟು ಜವಾಬ್ದಾರಿಯುತವಾಗಿ ಮಾಡಬಹುದೆಂದರೆ ಶಾಸನಗಳ ಮೂಲಕವೇ ಅದನ್ನು ಶಾಸಕಾಂಗಕ್ಕೆ ಜವಾಬ್ದಾರಿಯನ್ನಾಗಿ ಮಾಡುವುದು ಸಾಧ್ಯ. ಆದರೆ ಕಾರ್ಯಾಂಗದ ಮೇಲೆ ತನ್ನ ಸಂಕಲ್ಪವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಹೇರಲಾರದಂಥ ರೀತಿಯಲ್ಲಿ ಶಾಸಕಾಂಗದ ರಚನೆಯಾಗಿದ್ದ ಪಕ್ಷದಲ್ಲಿ ಹೊಣೆಯು ನಾಮ ಮಾತ್ರವಷ್ಟೇ ಆಗಿರುತ್ತದೆ. ಸ್ಥಿರ ಸರ್ಕಾರಕ್ಕೆ ಅನಿಶ್ಚಿತತೆಗಳಿಲ್ಲದಿರುವುದು ಅಗತ್ಯ. ಕಾರ್ಯಾಂಗವು ಕಾರ್ಯನೀತಿಯ ಕ್ರಮಬದ್ಧವಾದ ಒಂದು ಯೋಜನೆಯಂತೆ ತನ್ನ ಚಟುವಟಿಕೆಗಳನ್ನು ಅವಿಚ್ಛಿನ್ನವಾಗಿ ಯೋಜಿಸಲು ಸಮರ್ಥವಾಗಿರಬೇಕು. ಆದರೆ ಇದಕ್ಕೆ ಬಹುಸಂಖ್ಯಾತರ ಸ್ಥಿರವಾದ ಬೆಂಬಲ ಆವಶ್ಯಕ. ಉಭಯ–ಪಕ್ಷ–ಪದ್ಧತಿಯಿಂದ ಮಾತ್ರ ಇದನ್ನು ಪಡೆಯಲು ಸಾಧ್ಯ. ಪಂಗಡ ಪದ್ಧತಿಯಲ್ಲಿ ಕಾರ್ಯಾಂಗವು ಜನರ ಸಾಮಾನ್ಯ ಅಭಿಪ್ರಾಯಗಳನ್ನು ಪ್ರತಿನಿಧಿಸುವುದರ ಬದಲಾಗಿ

ಅಧಿಕಾರದ ಹಂಬಲದಿಂದ ರಾಜಿ ಮಾಡಿಕೊಳ್ಳಲು ಒಪ್ಪಿದ ವಿವಿಧ ಪಂಗಡಗಳ ಮುಖಂಡರುಗಳು ಸಮರ್ಥಿಸುವ ಸಿದ್ಧಾಂತಗಳ ತೇಪೆ ಕೆಲಸವನ್ನು ಮಾತ್ರ ಪ್ರತಿನಿಧಿಸುತ್ತದೆ. ಇಂಥದೊಂದು ಪದ್ಧತಿಯು, ಸ್ಥಿರ ಸರ್ಕಾರಕ್ಕೆ ಆವಶ್ಯಕವಾಗಿರುವ ನಿರಂತರ ಬೆಂಬಲವನ್ನು ಎಂದೂ ನಿಶ್ಚಿತಗೊಳಿಸಲಾರದು. ವೈಯಕ್ತಿಕ ಲಾಭಕ್ಕಾಗಿ ಪಂಗಡಗಳನ್ನು ಮತ್ತೆ ಮತ್ತೆ ಕಲಸುಮೇಲೋಗರ ಮಾಡುವ ಆಕರ್ಷಣೆ ಯಾವಾಗಲೂ ಇರುವುದೇ ಇದಕ್ಕೆ ಕಾರಣ. ಪ್ರಾತಿನಿಧ್ಯ ಪದ್ಧತಿಯಿಂದಾಗಿ ಸದ್ಯದ ಪರಿಷತ್ತು ಹೇಗಿರುತ್ತದೆಂಬುದನ್ನು ಬರ್ಕ್‌ನ ಮಾತುಗಳಲ್ಲಿ ಹೇಳುವುದಾದರೆ, "ಇದೊಂದು ಜೋಡಣೆ ಕೆಲಸದ ತುಣುಕಿನಂತೆ; ಇದೆಷ್ಟು ಪ್ರತಿಕೂಲ ಉದ್ದೇಶ ಹೊಂದಿದೆ ಮತ್ತು ವಿಲಕ್ಷಣ ಜೋಡಣೆಯಿಂದ ಕೂಡಿದೆ ಎಂದರೆ, ಇದು ನಾನಾ ರೂಪಗಳಿಂದ ಕೂಡಿದ ಒಂದು ಶಬಲರೇಖೆಯ ತುಣುಕಿನಂತಿದೆ. ಸಿಮೆಂಟ್ ಬಳಸದೆ ಕಟ್ಟಿದ ಚೌಕಳಿ ಆಕಾರದ ನೆಲೆಗಟ್ಟಾಗಿದೆ. ಇಲ್ಲಿ ದೇಶಭಕ್ತರು, ಆಸ್ಥಾನಿಕರು, ಸರ್ಕಾರದ ಸ್ನೇಹಿತರು ಹಾಗೂ ಬಹಿರಂಗ ಶತ್ರುಗಳು ಹೀಗೆ ಎಲ್ಲರೂ ಒಟ್ಟು ಸೇರಿರುತ್ತಾರೆ. ಶಾಸಕಾಂಗದ ಈ ವಿಲಕ್ಷಣ ಪ್ರದರ್ಶನ" ಸುಭದ್ರವಾಗಿ ಹಾಗೂ ಸ್ಥಿರವಾಗಿ ಉಳಿಯುವುದಿಲ್ಲವೆಂಬುದು ಸ್ಪಷ್ಟ. ಇದರ ಫಲಿತಾಂಶವಾಗಿ ಉಭಯ–ಪಕ್ಷ–ಪದ್ಧತಿಯ ಸರ್ಕಾರ ರಚನೆಯಾಗುವುದಿಲ್ಲ. ಪಕ್ಷ ಪದ್ಧತಿಯಿಲ್ಲದೆ ಹೋದಲ್ಲಿ ಪದ್ಧತಿಯ ಮೂಲವನ್ನು ಮತದಾರ ಸಮುದಾಯಗಳ ರಚನಾಕ್ರಮದಲ್ಲಿ ಹುಡುಕಬೇಕಾಗಿದೆ. ಏಕೆಂದರೆ, ಎಷ್ಟಾದರೂ ಮತದಾರ ಸಮುದಾಯಗಳು, ಪರಿಷತ್ತನ್ನೇ ಎರಕವಾಗಿ ಹೊಂದಿವೆ. ಸಮರ್ಥವಾಗಿ ಕಾರ್ಯ ನಿರ್ವಹಿಸುವಂತೆ, ಪರಿಷತ್ತನ್ನು ಪುನಃ ರೂಪಿಸಬೇಕಾದರೆ ಅಚ್ಚುಗಳನ್ನು ಮತ್ತೆ ಎರಕಹೊಯ್ಯಬೇಕೆಂಬುದು ಸ್ಪಷ್ಟ.

(೬೬) ಮತದಾರ ಸಮುದಾಯಗಳ ಪದ್ಧತಿಯನ್ನು ಪುನಃ ರೂಪಿಸುವ ಸಲಹೆ ನೀಡುವಲ್ಲಿ, ಮೂರು ವಿಧಾನಗಳಿಂದ ಮಾರ್ಗದರ್ಶನವನ್ನು ಇರಿಸಿಕೊಂಡಿದ್ದೇನೆ: (೧) ಮತದಾರ ಸಮುದಾಯಗಳ ಪದ್ಧತಿ, ಶುದ್ಧಾಂಗವಾಗಿ ಪ್ರಾಂತೀಯವಾಗಿರತಕ್ಕದ್ದು ಹಾಗೂ ಇದಕ್ಕೆ ರಾಷ್ಟ್ರದ ಸಾಮಾಜಿಕ ಪರಿಸ್ಥಿತಿಗಳೊಂದಿಗೆ ಯಾವುದೇ ಸಂಬಂಧವಿರಕೂಡದು ಎಂಬ ಅಭಿಪ್ರಾಯ ಹೊಂದಿದ ಭಾರತದ ಅನೇಕ ರಾಜಕಾರಣಿಗಳ ವಿನಾಶಕರವಾದ ಸರಳತನದಿಂದ ಪ್ರಭಾವಿತನಾಗದಿರುವುದು, (೨) ಪ್ರಾಂತೀಯ ಮತದಾರ ಸಮುದಾಯಗಳ ಮೂಲಕ ಪ್ರಾತಿನಿಧ್ಯ ಪಡೆಯಲು ಸಾಧ್ಯವಿರುವ ವಿಶೇಷ ಪ್ರಾತಿನಿಧ್ಯಕ್ಕಾಗಿ, ಸಾಮಾಜಿಕವಾದ ಅಥವಾ ಆರ್ಥಿಕವಾದ ಯಾವುದೇ ಹಿತಾಸಕ್ತಿಗಳನ್ನು ಮಾನ್ಯ ಮಾಡದೆ ಸಾಮಾಜಿಕವಾದ ಮತ್ತು (೩) ವಿಶೇಷ ಪ್ರಾತಿನಿಧ್ಯಕ್ಕಾಗಿ ಅಗತ್ಯವೆನಿಸಿದ ಯಾವುದಾದರೂ ಹಿತಾಸಕ್ತಿಗಳನ್ನು ಗುರುತಿಸಿದಾಗ ಅದರ ಪ್ರಾತಿನಿಧ್ಯ ವಿಧಾನ ಹೇಗಿರಬೇಕೆಂದರೆ ಅದು ಅಂಥ ಹಿತಾಸಕ್ತಿಗಳನ್ನು ಹೊಂದಿರುವ ಪ್ರತಿನಿಧಿಗಳಿಗೆ ಪ್ರತ್ಯೇಕ ಪಂಗಡ ರಚಿಸುವ ಸ್ವಾತಂತ್ರ್ಯವನ್ನು ನೀಡಬಾರದು.

(೬೭) ಈ ಮೂರರಲ್ಲಿ ಎರಡನೆಯ ಪರಿಗಣನೆ, ಸ್ಪಷ್ಟವಾಗಿ ಮತದಾನದ ಹಕ್ಕಿನ ಮಹತ್ವವನ್ನು ಅವಲಂಬಿಸಿರುತ್ತದೆ. ಈ ವರದಿಯ ಇನ್ನೊಂದು ಭಾಗದಲ್ಲಿ ವಯಸ್ಕ ಮತದಾನ ಪದ್ಧತಿ ಪ್ರಾರಂಭವಾಗ ಬೇಕೆಂದು ನಾನು ಶಿಫಾರಸ್ ಮಾಡಿದ್ದೇನೆ. ಈ ಶಿಫಾರಸ್ ಅಂಗೀಕೃತವಾಗುತ್ತದೆಂಬ ಭರವಸೆ ನನಗಿದೆ. ಆದ್ದರಿಂದ ಈ ಆಧಾರದ ಮೇಲೆಯೇ ನಾನು ನನ್ನ ಮುಂದಿನ ಶಿಫಾರಸ್‌ಗಳನ್ನು ಮಾಡುತ್ತೇನೆ. ಆದರೆ ಅದು ಅಂಗೀಕೃತವಾಗದೆ ಸೀಮಿತ ಮತದಾನ ಪದ್ಧತಿ ಮುಂದುವರಿದ ಪಕ್ಷದಲ್ಲಿ ಆಗ ನಾನು ಬೇರೆ ಶಿಫಾರಸ್‌ಗಳನ್ನು ಮಾಡಬೇಕಾಗುತ್ತದೆ. ಇಂಥ ಕೆಲವನ್ನು ನಾನಿಲ್ಲಿ ಪ್ರಸ್ತಾವಿಸುತ್ತೇನೆ. ಮೇಲೆ ಹೇಳಲಾದ ಕಾರಣಗಳಿಂದಾಗಿ ಹಾಗೂ ಹಿಂದೆ ಮಾಡಲಾದ ಪರಿಗಣನೆಗಳನ್ನು ಅನುಸರಿಸಿ, ನಾನು ಕೆಳಗಿನಂತೆ ಸಲಹೆ ಮಾಡುತ್ತೇನೆ:

I. ವಯಸ್ಕ ಮತದಾನ ಪದ್ಧತಿಯನ್ನು ಮಾನ್ಯ ಮಾಡಿದಲ್ಲಿ ಮಹಮದೀಯರು, ದುರ್ಬಲ ವರ್ಗಗಳವರು ಹಾಗೂ ಆಂಗ್ಲೋ–ಇಂಡಿಯನರ ಸಂದರ್ಭಗಳನ್ನು ಬಿಟ್ಟುಳಿದಂತೆ ಪ್ರಾಂತೀಯ ಪ್ರಾತಿನಿಧ್ಯವಿರುತ್ತದೆ.

II. ಸೀಮಿತ ಮತದಾನವನ್ನು ಮುಂದುವರಿಸಿದಲ್ಲಿ ಮಹಮದೀಯರು, ದುರ್ಬಲ ವರ್ಗಗಳವರು, ಆಂಗ್ಲೋ–ಇಂಡಿಯನರು, ಮರಾಠರು ಮತ್ತು ಅವರಂಥ ಎಲ್ಲ ಜಾತಿಗಳವರು ಮತ್ತು ಕಾರ್ಮಿಕರ ಸಂದರ್ಭಗಳನ್ನು ಬಿಟ್ಟುಳಿದಂತೆ ಎಲ್ಲ ಪ್ರಾತಿನಿಧ್ಯವೂ ಪ್ರಾಂತೀಯವಾಗಿರುತ್ತದೆ.

III. ಅಂಥ ವಿಶೇಷ ಪ್ರಾತಿನಿಧ್ಯವು ಸಾಮಾನ್ಯ ಮತದಾರ ಸಮುದಾಯಗಳಿಂದ ಸಿಗತಕ್ಕದ್ದು. ಮೀಸಲು ಸ್ಥಾನಗಳು ಮತ್ತು ಮತದಾರ ಸಮುದಾಯಗಳ ಮೂಲಕ ಕಾರ್ಮಿಕರು ಹೊಂದುವ ಸ್ಥಾನಗಳು ಕ್ರಮೇಣ ನೋಂದಾಯಿತ ಟ್ರೇಡ್ ಯೂನಿಯನ್‌ಗಳಿಗೆ ದಾರಿ ಮಾಡಿಕೊಡುತ್ತದೆ.

(೬೮) ಈ ಸಲಹೆಗಳಿಂದ ನಾನು (೧) ಇನಾಮ್‌ದಾರರು ಹಾಗೂ ಸರ್ದಾರರು (೨) ಭಾರತೀಯರಾಗಿರಲಿ ಅಥವಾ ಯುರೋಪಿಯನರಾಗಿರಲಿ– ಅಂಥ ವ್ಯಾಪಾರ ವಾಣಿಜ್ಯನಿರತರು (೩) ಭಾರತೀಯ ಕ್ರೈಸ್ತರು ಮತ್ತು (೪) ಉದ್ಯಮಿಗಳು– ಇವರಿಗಿರುವಂಥ ಎಲ್ಲ ವರ್ಗ ಮತದಾರ ಸಮುದಾಯಗಳ ಪದ್ಧತಿ ಹಾಗೂ ಸಾಮಾನ್ಯ ಮತದಾರ ಸಮುದಾಯದಲ್ಲಿ ಅವುಗಳನ್ನು ಸೇರ್ಪಡೆ– ಇವುಗಳ ಪರವಾಗಿದ್ದೇನೆ ಎಂದು ಕಾಣಬಹುದು. ಪರಿಷತ್ತಿನಲ್ಲಿ ತಮ್ಮ ಧ್ವನಿಯೆತ್ತದಂತೆ ಅವರನ್ನು ತಡೆಯುವುದು ಸಾಮಾನ್ಯ ಮಾರ್ಗದ ಮೂಲಕ ಸಾಧ್ಯವಿಲ್ಲ. ಎರಡನೆಯದಾಗಿ ಕೆಲವು ನಿರ್ದಿಷ್ಟ ವರ್ಗಗಳವರಿಗಾಗಿ ವಿಶೇಷ ಪ್ರಾತಿನಿಧ್ಯವನ್ನು ಖಚಿತಗೊಳಿಸುವುದರ ಪರವಾಗಿ ನಾನಿದ್ದಾಗ್ಯೂ, ಪ್ರತ್ಯೇಕ ಮತದಾರ ಸಮುದಾಯಗಳ ದ್ವಾರಾ ಅವರಿಗೆ ಪ್ರಾತಿನಿಧ್ಯ ನೀಡುವುದಕ್ಕೆ ನನ್ನ ವಿರೋಧವಿದೆ. ಪ್ರಾಂತೀಯ ಮತದಾರ ಸಮುದಾಯಗಳು ಮತ್ತು ಪ್ರತ್ಯೇಕ ಮತದಾರ ಸಮುದಾಯಗಳು– ಇವು ನಿಜವಾಗಿಯೂ ಪ್ರಜಾಪ್ರಭುತ್ವವಿರದ ಈ ದೇಶದಲ್ಲಿ ಪ್ರಜಾಪ್ರಭುತ್ವ ಸ್ವರೂಪದ ಸರ್ಕಾರವನ್ನು ಪರಿಚಯ ಮಾಡಿಕೊಡಲು ಕೈಗೊಳ್ಳಬಹುದಾದ ಪ್ರಾತಿನಿಧ್ಯದ ಯಾವುದೇ ಯೋಜನೆಯಲ್ಲಿ ದೂರ ಮಾಡಬೇಕಾದ ಎರಡು ಅತಿರೇಕಗಳಾಗಿವೆ. ಮೀಸಲು ಸ್ಥಾನಗಳಿರುವಂಥ ಸಮಗ್ರ ಮತದಾರ ಸಮುದಾಯ ಪದ್ಧತಿಯೇ ಸುವರ್ಣ ಮಾಧ್ಯಮವಾಗಿರುತ್ತದೆ. ಅದಕ್ಕಿಂತ ಕೆಳಮಟ್ಟದ್ದು ಅನರ್ಹವಾಗಿಯೂ ಮೇಲ್ಮಟ್ಟದ್ದು ಉತ್ತಮ ಸರ್ಕಾರದ ಉದ್ದೇಶಗಳನ್ನು ವಿಫಲಗೊಳಿಸುವಂಥದ್ದೂ ಆಗಿರುತ್ತದೆ. ಕೆಲವು ಸ್ಪಷ್ಟ ಕಾರಣಗಳಿಂದಾಗಿ ಯುರೋಪಿಯನ್ ಸಮುದಾಯದ ಸಂದರ್ಭದಲ್ಲಿ ನಾನೊಂದು ವಿನಾಯಿತಿ ನೀಡುತ್ತೇನೆ. ವಿಶೇಷ ಮತದಾರ ಸಮುದಾಯಗಳನ್ನು ಹೊಂದಲು ಅವರಿಗೆ ಅವಕಾಶ ನೀಡಬಹುದು. ಆದರೆ ಅವೂ ಸಾಮಾನ್ಯ ಮತದಾರ ಸಮುದಾಯಗಳೇ ಆಗಿರಬೇಕಲ್ಲದೆ ವರ್ಗ–ಮತದಾರ ಸಮುದಾಯಗಳಾಗಿರಕೂಡದು.

# ಅಧ್ಯಾಯ–೩

# ಸ್ಥಾನಗಳ ವಿತರಣೆ

## ೧. ಅಲ್ಪಸಂಖ್ಯಾತರಲ್ಲಿ ಸ್ಥಾನಗಳ ವಿತರಣೆ

(೬೯) ವಿವಿಧ ಅಲ್ಪಸಂಖ್ಯಾತ ವರ್ಗಗಳಿಗಾಗಿ ನನ್ನ ಸಹೋದ್ಯೋಗಿಗಳು ಗೊತ್ತುಪಡಿಸಿರುವ ಸ್ಥಾನಗಳ ಅಂಕಿಅಂಶಗಳನ್ನು ಈ ಕೆಳಗೆ ತಃಖ್ತೆಯಲ್ಲಿ ಕೊಡಲಾಗಿದೆ.

| | ಅಲ್ಪಸಂಖ್ಯಾತ ವರ್ಗ | ೧೪೦ರಲ್ಲಿ ಸ್ಥಾನಗಳ ಸಂಖ್ಯೆ | |
|---|---|---|---|
| | | ಸಾಮಾನ್ಯ | ವಿಶೇಷ |
| I | ಯೂರೋಪಿಯನ್ನರು | ೨ | ೫ |
| II | ಆಂಗ್ಲೋ–ಇಂಡಿಯನರು | ೨ | ಇಲ್ಲ |
| III | ಭಾರತೀಯ ಕ್ರೈಸ್ತರು | ೧ | ಇಲ್ಲ |
| IV | ದುರ್ಬಲ ವರ್ಗಗಳವರು | ೧೦ | ಇಲ್ಲ |
| V | ಮಹಮದೀಯರು | ೪೩ | ೨ |

(೭೦) ವಿವಿಧ ವರ್ಗಗಳ ಅಲ್ಪಸಂಖ್ಯಾತರಿಗೆ ಸ್ಥಾನಗಳ ವಿತರಣೆ ಮಾಡುವಲ್ಲಿ ನನ್ನ ಸಹೋದ್ಯೋಗಿಗಳು ಏಕರೂಪದ ಯಾವುದೇ ಒಂದು ಸಿದ್ಧಾಂತವನ್ನು ಅನುಸರಿಸಿಲ್ಲವೆಂದು ಈ ತಃಖ್ತೆಯಿಂದ ತಿಳಿದುಬರುತ್ತದೆ. ಸಂಬಂಧಪಟ್ಟ ಅಲ್ಪಸಂಖ್ಯಾತ ವರ್ಗಗಳಿಗೆ ಅವರು ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸಿದಂತೆಯೂ ತೋರುವುದಿಲ್ಲ. ಮಹಮದೀಯರೊಂದಿಗೆ ನನ್ನ ಸಹೋದ್ಯೋಗಿಗಳು ವ್ಯವಹರಿಸಿದ ರೀತಿಯನ್ನು ದುರ್ಬಲ ವರ್ಗಗಳವರೊಂದಿಗೆ ಅವರು ವ್ಯವಹರಿಸಿದ ರೀತಿಯೊಂದಿಗೆ ಹೋಲಿಸಿದಾಗಲೇ ಇದು ಸ್ಪಷ್ಟವಾಗುತ್ತದೆ. ಪ್ರಾಂತ್ಯದ ಜನಸಂಖ್ಯೆಯಲ್ಲಿ ಶೇ. ೧೯ರಷ್ಟು ಮಹಮದೀಯರಿದ್ದಾರೆ. ವಿಧಾನ ಪರಿಷತ್ತಿಗಾಗಿ ಒದಗಿಸಲಾದ ಶೇ. ೩೧ಕ್ಕಿಂತಲೂ ಹೆಚ್ಚು ಪ್ರಾತಿನಿಧ್ಯವನ್ನು ಅವರಿಗೆ ನೀಡುವ ಪ್ರಸ್ತಾಪವನ್ನು ನನ್ನ ಸಹೋದ್ಯೋಗಿಗಳು ಮಾಡಿದ್ದಾರೆ. ಇನ್ನೊಂದೆಡೆ ಪ್ರಾಂತ್ಯದ ಒಟ್ಟು ಜನಸಂಖ್ಯೆಯಲ್ಲಿ ಅತ್ಯಂತ ಮಿತವಾದ ಅಂದಾಜಿನ ಅನುಸಾರ ಶೇ. ೮ರಷ್ಟು ಇರುವ ದುರ್ಬಲ ವರ್ಗಗಳವರಿಗೆ ಶೇ. ೭ರಷ್ಟು ಮಾತ್ರ ಪ್ರಾತಿನಿಧ್ಯ ನೀಡಲಾಗಿದೆ. ಈ ವ್ಯತ್ಯಾಸಕ್ಕೆ ಕಾರಣವೇನೆಂದು ಅರ್ಥ ಮಾಡಿಕೊಳ್ಳುವುದು ಕಷ್ಟವೇ. ಈ ಎರಡು ಅಲ್ಪಸಂಖ್ಯಾತ ವರ್ಗಗಳಲ್ಲಿ ಮಹಮದೀಯ ಅಲ್ಪಸಂಖ್ಯಾತರು, ನಿಸ್ಸಂದೇಹವಾಗಿಯೂ ಸಂಖ್ಯೆ, ಶ್ರೀಮಂತಿಕೆ ಹಾಗು ಶಿಕ್ಷಣದಲ್ಲಿ ಪ್ರಬಲರಾಗಿರುತ್ತಾರೆ. ದುರ್ಬಲ ವರ್ಗಗಳವರು, ಸಂಖ್ಯೆ, ಶ್ರೀಮಂತಿಕೆ ಹಾಗೂ ಶಿಕ್ಷಣದಲ್ಲಿ ದುರ್ಬಲರಾಗಿರುವುದಷ್ಟೇ ಅಲ್ಲದೆ, ಮಹಮದೀಯರಿಗೆ ಇಲ್ಲದ ಕೆಲವು ಅಡಚಣೆಗಳಿಂದಲೂ ತೊಂದರೆಗೀಡಾಗಿದ್ದಾರೆ. ದುರ್ಬಲ ವರ್ಗಗಳವರು,

ಉದಾಹರಣೆಗೆ ಅಸ್ಪೃಶ್ಯರು ಸಾರ್ವಜನಿಕ ನಿಧಿಗಳಿಂದಲೇ ನಿರ್ಮಿಸಲ್ಪಟ್ಟ ಬಾವಿಗಳಿಂದ ನೀರನ್ನೂ ಸೇದುವಂತಿಲ್ಲ. ಆದರೆ ಮಹಮದೀಯರಿಗೆ ಈ ನಿರ್ಬಂಧವಿಲ್ಲ. ಭಾರತ ಸರ್ಕಾರದ ಶಾಸನದನ್ವಯ ಜಾತಿ, ಕುಲ, ಬಣ್ಣ ಮುಂತಾದ ಯಾವುದೇ ಕಾರಣದಿಂದಾಗಿ ಭಾರತದ ಯಾವನೇ ವ್ಯಕ್ತಿಗೂ ಯಾವುದೇ ಕಛೇರಿಗೆ ಪ್ರವೇಶ ನಿಷೇಧಿಸುವಂತಿಲ್ಲವಾದರೂ, ದುರ್ಬಲ ವರ್ಗಗಳವರು ತಮ್ಮ ಅಸ್ಪೃಶ್ಯತೆಯಿಂದಾಗಿ, ಪೊಲೀಸ್, ಭೂಸೈನ್ಯ ಹಾಗೂ ನೌಕಾ ಸೈನ್ಯ ಈ ವಿಭಾಗಗಳಲ್ಲಿ ನೌಕರಿ ಪಡೆಯುವಂತಿಲ್ಲ. ಆದರೆ, ಮಹಮದೀಯರಿಗೆ ಸಾರ್ವಜನಿಕ ಸೇವಾ ವಿಚಾರಗಳಲ್ಲಿ ಮುಕ್ತದ್ವಾರವಿರುವುದಷ್ಟೇ ಅಲ್ಲ. ಕೆಲವು ವಿಭಾಗಗಳಲ್ಲಿ ಅವರು ಅಧಿಕ ಪಾಲನ್ನು ಪಡೆದಿದ್ದಾರೆ. ದುರ್ಬಲ ವರ್ಗಗಳವರಿಗೆ ಸಾರ್ವಜನಿಕ ಶಾಲೆಗಳಲ್ಲಿ– ಅವು ಸಾರ್ವಜನಿಕ ನಿಧಿಯಿಂದಲೇ ನಿರ್ವಹಿಸಲ್ಪಡುತ್ತವೆಯಾದರೂ– ಪ್ರವೇಶವಿಲ್ಲ. ಮಹಮದೀಯರಿಗಾದರೋ ಇಂಥ ನಿರ್ಬಂಧವಿಲ್ಲ. ದುರ್ಬಲ ವರ್ಗಕ್ಕೆ ಸೇರಿದ ವ್ಯಕ್ತಿಯ ಸ್ಪರ್ಶದಿಂದ ಮೈಲಿಗೆಯುಂಟಾಗುತ್ತದೆ. ಆದರೆ ಮಹಮದೀಯರ ಸ್ಪರ್ಶದಿಂದ ಮೈಲಿಗೆಯುಂಟಾಗುವುದಿಲ್ಲ. ವ್ಯಾಪಾರ ಉದ್ಯಮಗಳಲ್ಲಿ ಮಹಮದೀಯರಿಗೆ ಮುಕ್ತ ಅವಕಾಶಗಳಿವೆ. ಆದರೆ, ಈ ಕ್ಷೇತ್ರಗಳಲ್ಲಿ ದುರ್ಬಲವರ್ಗಗಳಿಗೆ ಸೇರಿದ ಜನರಿಗೆ ಅವಕಾಶವಿಲ್ಲ. ಹೀಗೆ ದುರ್ಬಲ ವರ್ಗಕ್ಕೆ ಸೇರಿದ ಅಸ್ಪೃಶ್ಯರಿಗಿರುವಂಥ ಯಾವ ಅಡಚಣೆಗಳೂ ಮಹಮದೀಯರಿಗೆ ಇಲ್ಲ. ಇದರ ಫಲಿತಾಂಶವಾಗಿ ಮಹಮದೀಯರಿಗೆ ತಮಗೆ ಇಷ್ಟ ಬಂದ ಉಡುಪು ಧರಿಸುವ, ಇಷ್ಟ ಬಂದ ರೀತಿಯಲ್ಲಿ ಜೀವನ ಸಾಗಿಸುವ ಹಾಗೂ ಇಷ್ಟಬಂದಂತೆ ಕೆಲಸ ಮಾಡುವ ಸ್ವಾತಂತ್ರ್ಯವುಂಟು. ಆದರೆ ದುರ್ಬಲ ವರ್ಗದ ವ್ಯಕ್ತಿಗೆ ಉತ್ತಮ ಉಡುಪು ಖರೀದಿಸುವಂತಹ ಆರ್ಥಿಕ ಶಕ್ತಿಯಿದ್ದಾಗ್ಯೂ ಇತರ ಗ್ರಾಮಸ್ಥರಿಗಿಂತ ಉತ್ತಮ ಉಡುಪು ಧರಿಸುವ ಅವಕಾಶವಿಲ್ಲ. ಅವನು ಗುಡಿಸಲಿನಲ್ಲಿಯೇ ಜೀವಿಸಬೇಕು. ಸಮಾರಂಭದ ಸಂದರ್ಭಗಳಲ್ಲಿ ಕೂಡ ಅವನು ವೈಭವ–ಶ್ರೀಮಂತಿಕೆಗಳನ್ನು ಪ್ರದರ್ಶಿಸುಂತಿಲ್ಲ. ಮುಖ್ಯ ರಸ್ತೆಗಳಲ್ಲಿ ಕುದುರೆಯ ಮೇಲೆ ಮದುಮಗನ ಮೆರವಣಿಗೆ ನಡೆಸುವಂತಿಲ್ಲ. ಸಾಂಪ್ರದಾಯಿಕ ನೀತಿಗೆ ವಿರುದ್ಧವಾಗಿ ಅಥವಾ ತನ್ನ ಅಂತಸ್ತಿಗೆ ಮೀರಿದ ಯಾವುದೇ ಕೆಲಸವನ್ನು ಅವನು ಮಾಡಿದ್ದಾನೆಂದಾದರೆ, ಆಗ ಆ ಹಳ್ಳಿಯ ಇಡೀ ಜನಸಮುದಾಯವೇ ಅವನ ಮೇಲೆ ತಿರುಗಿ ಬೀಳುವುದು ನಿಶ್ಚಯ. ದುರ್ಬಲ ವರ್ಗಗಳವರು ಮಹಮದೀಯರಿಗಿಂತ ಹೆಚ್ಚಾಗಿ, ಆಗಾಗ ಬಹುಜನರ ದಬ್ಬಾಳಿಕೆಗೆ ಬಲಿಯಾಗುತ್ತಾರೆ. ಮಾನವರಿಗೆ ದಯಪಾಲಿಸಲಾದ ಎಲ್ಲ ಪ್ರಾಥಮಿಕ ಹಕ್ಕುಗಳನ್ನು ಹೊಂದಿದ ಮಹಮದೀಯರಿಗೆ, ಬಹುಸಂಖ್ಯಾತ ವರ್ಗಗಳವರೊಂದಿಗೆ ಜಗಳ ಮಾಡಲು ಧಾರ್ಮಿಕ ಸಮಸ್ಯೆ ಉದ್ಭವಿಸಿದ ಕಾಲವನ್ನು ಬಿಟ್ಟು ಉಳಿದಂತೆ, ಯಾವುದೇ ಕಾರಣ ಎಂದೂ ಸಿಗದಿರುವುದೇ ಇದಕ್ಕೆ ಕಾರಣ. ಆದರೆ ದುರ್ಬಲ ವರ್ಗಗಳವರ ಪರಿಸ್ಥಿತಿ ಸಂಪೂರ್ಣವಾಗಿ ಬೇರೆಯೇ ಆಗಿರುತ್ತದೆ. ಮಾನವ ಹಕ್ಕುಗಳನ್ನು ಗಳಿಸುವುದಕ್ಕಾಗಿ ನಿರಂತರ ಹೋರಾಟ ನಡೆಸುವ ಅವರ ಜೀವನ, ಆ ಹಕ್ಕುಗಳನ್ನು ಅವರಿಗೆ ನೀಡಲು ನಿರಾಕರಿಸುವ ಬಹುಸಂಖ್ಯಾತರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಎಡೆಬಿಡದ ಒಂದು ಸವಾಲಾಗಿದೆ. ಫಲಿತಾಂಶವಾಗಿ ದುರ್ಬಲ ವರ್ಗದ ವ್ಯಕ್ತಿ ಯಾವಾಗಲೂ ಬಹುಸಂಖ್ಯಾತ ವರ್ಗಗಳವರ ಶತ್ರುವಾಗಿರುತ್ತಾನೆ. ಅಷ್ಟೇ ಅಲ್ಲ, ಯಾವುದಾದರೂ ಸನ್ನಿವೇಶದಲ್ಲಿ ಮಹಮದೀಯರಿಗೆ ಬಹುಸಂಖ್ಯಾತರಿಂದ ತೊಂದರೆಯುಂಟಾದರೆ, ಅವನ ಪರವಾಗಿ ಪೊಲೀಸರ ಹಾಗು ನ್ಯಾಯವಾದಿಗಳ ದಂಡೇ ಇರುತ್ತದೆ. ಅದರೆ ದುರ್ಬಲ ವರ್ಗದ ವ್ಯಕ್ತಿ ಬಹುಸಂಖ್ಯಾತರ ಪೀಡೆಗೆ ಬಲಿಯಾದಾಗ, ಪೊಲೀಸರಾಗಲಿ, ನ್ಯಾಯವಾದಿಗಳಾಗಲಿ ಎಂದೂ ಅವನ ರಕ್ಷಣೆಗೆ ಬರುವುದಿಲ್ಲ. ವ್ಯತಿರಿಕ್ತವಾಗಿ ಅವರ ಸೈನ್ಯ, ಅವನಿಗೆ ಕೇಡಕನ್ನುಂಟುಮಾಡಲು ಬಹುಸಂಖ್ಯಾತರ ಜೊತೆಗೇ ಸೇರುತ್ತದೆ. ಸರಕಾರದ ಪೊಲೀಸ್

ಹಾಗೂ ನ್ಯಾಯಾಂಗ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಅನೇಕರ ಜೊತೆ ಮಹಮದೀಯರು ಸಂಬಂಧ ಹೊಂದಿರುವುದೇ ಇದಕ್ಕೆ ಕಾರಣ. ಈ ವಿಭಾಗಗಳಲ್ಲಿ ದುರ್ಬಲ ವರ್ಗದವರು ಯಾವುದೇ ಸಂಬಂಧ ಹೊಂದಿರುವುದಿಲ್ಲ. ದುರ್ಬಲ ವರ್ಗಗಳವರು ಸಂಪ್ರದಾಯವಾದಿ ಹಿಂದೂ ಜನತೆಯ ಕಠೋರ ವರ್ತನೆಯನ್ನು ಸಹಿಸಬೇಕಷ್ಟೇ ಅಲ್ಲ, ಮಹಮದೀಯರ ಅಂಥದೇ ನಡವಳಿಕೆಯನ್ನೂ ಸಹಿಸಬೇಕಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ದುರ್ಬಲ ವರ್ಗದವರ ಬಗ್ಗೆ ಹಿಂದೂಗಳು ಹೊಂದಿರುವಂಥ ಸಾಮಾಜಿಕ ಪೂರ್ವಗ್ರಹಿಕೆಗಳನ್ನು ಮಹಮದೀಯರು ಹೊಂದಿಲ್ಲವೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಇದಕ್ಕಿಂತ ಹೆಚ್ಚಿನ ತಪ್ಪು ಇನ್ನೊಂದಿರಲಾರದು. ನಗರ ಪ್ರದೇಶವನ್ನು ಬದಿಗಿರಿಸಿದರೂ ಗ್ರಾಮೀಣ ಪ್ರದೇಶಗಳಲ್ಲಿರುವ ಮಹಮದೀಯರು ಹಿಂದೂಗಳ ನಂಜಿನ ಸಂಪೂರ್ಣ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಕೊಲಬಾ ಜಿಲ್ಲೆಯ ಮುಂಗಾಓನ್ ತಾಲ್ಲೂಕಿನ ಹರ್ಕುಲ ಗ್ರಾಮದಲ್ಲಿ ಘಟಿಸಿದ ದೊಂಬಿಯ ಪ್ರಕರಣ ಇದಕ್ಕೆ ಸಂಗತವಾದ ಒಂದು ನಿದರ್ಶನವಾಗಿರುತ್ತದೆ. ಈ ಜಿಲ್ಲೆಯಲ್ಲಿ ದುರ್ಬಲ ವರ್ಗಗಳವರು ಸಾಮಾಜಿಕ ಪ್ರಗತಿಯ ಚಳವಳಿಯನ್ನು ಪ್ರಾರಂಭಿಸಿದರು. ಹಾಗೂ ತಮ್ಮನ್ನು ಕೆಳ ಅಂತಸ್ತಿನವರನ್ನಾಗಿ ಗುರುತಿಸಲು ಕಾರಣವಾಗಿರುವಂಥ ಕೆಲವು ಕೊಳಕು ಆಚರಣೆಗಳನ್ನು ಬಿಟ್ಟುಬಿಡಲು ತೀರ್ಮಾನಿಸಿದರು. ದುರ್ಬಲ ವರ್ಗಗಳವರ ಉದ್ಧಾರಕ್ಕೆ ಕಾರ್ಯಕ್ರಮ ಕೈಗೊಳ್ಳುವುದಕ್ಕೆ, ಆ ಕೊಳಕು ಆಚರಣೆಗಳನ್ನು ಅವರು ಬಿಟ್ಟುಬಿಡಬೇಕೆಂದೂ ಮೊದಲು ಉಪದೇಶ ಮಾಡುತ್ತಿದ್ದ ಆ ಜಿಲ್ಲೆಯ ಹಿಂದೂಗಳೇ ಆಮೇಲೆ ಆರ್ಥಿಕ ಹಾಗೂ ಸಾಮಾಜಿಕ ಬಹಿಷ್ಕಾರಗಳನ್ನು ವಿಧಿಸಿದರು. ಆದರೆ, ಜಿಲ್ಲೆಯ ಮಹಮದೀಯರು, ಅವರ ನೆರೆಹೊರೆಯ ಹಿಂದೂಗಳನ್ನು ಅನುಸರಿಸಬೇಕೆಂದು ಎಂದೂ ನಿರೀಕ್ಷಿಸಿರಲಿಲ್ಲ. ವ್ಯತಿರಿಕ್ತವಾಗಿ ಸ್ಪೃಶ್ಯರೆನಿಸಿದ ಹಿಂದೂಗಳ ವಿರುದ್ಧ ನಡೆಸುವ ಹೋರಾಟದಲ್ಲಿ ಮಹಮದೀಯರು ತಮ್ಮ ಸ್ನೇಹಿತರಂತೆ ವರ್ತಿಸಬೇಕೆಂದು ಅಸ್ಪೃಶ್ಯರ ಇಚ್ಛೆಯಾಗಿತ್ತು. ಆದರೆ ಅವರ ಈ ಆಸೆಗಳು ನುಚ್ಚುನೂರಾದುವು. ಏಕೆಂದರೆ ತಾವು ಅಸ್ಪೃಶ್ಯತೆಯನ್ನು ಆಚರಿಸದಿದ್ದರೂ ಅಸ್ಪೃಶ್ಯರು ಕೆಳ ಸಾಮಜಿಕ ಸ್ತರದಲ್ಲಿ ಹುಟ್ಟಿದವರು ಹಾಗೂ ಕೊಳಕು ಆಚರಣೆಗಳನ್ನು ತೊರೆಯುವುದರ ಮೂಲಕ ತಮ್ಮನ್ನು ಮೇಲ್‌ಸ್ತರಕ್ಕೆ ಏರಿಸಿಕೊಳ್ಳಲು ಅವರು ಮಾಡುವ ಪ್ರಯತ್ನ ಒಂದು ಪ್ರತಿಭಟನೆಯಷ್ಟೇ ಅಲ್ಲ, ಅವನ್ನು ತಾವು ಅಡಗಿಸಬೇಕಾದ್ದು ಅಗತ್ಯವೆಂಬ ಅನಾರೋಗ್ಯಕರ ಭಾವನೆಯನ್ನು ಹಿಂದೂಗಳಂತೆಯೇ ಮಹಮದೀಯರೂ ಹೊಂದಿದ್ದರು ಎಂಬುದು ಕೂಡಲೇ ಬೆಳಕಿಗೆ ಬಂತು. ಫಲಿತಾಂಶವಾಗಿ ಆ ಜಿಲ್ಲೆಯ ಮಹಮದೀಯರು ಹಾಗೂ ಅಸ್ಪೃಶ್ಯರ ನಡುವೆ ಅನೇಕ ಹೋರಾಟಗಳು ನಡೆದುವು. ಅವುಗಳಲ್ಲೊಂದರಲ್ಲಿ, ಹರ್ಕುದಲ್ಲಿ ಅಸ್ಪೃಶ್ಯನೊಬ್ಬ ವಾಸ್ತವಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡ.

(೭೧) ಆದ್ದರಿಂದ ದುರ್ಬಲ ವರ್ಗಗಳವರ (ಅಸ್ಪೃಶ್ಯರ) ಸಮಸ್ಯೆ ಮಹಮದೀಯರ ಸಮಸ್ಯೆಗಿಂತಲೂ ಹೆಚ್ಚು ಗಂಭೀರವೆಂಬುದು ಸ್ಪಷ್ಟ. ಜನಾಂಗದ ಆಧಾರದ ಮೇಲೆ ಮಹಮದೀಯರು ಹಿಂದುಳಿದವರಾಗಿರಬಹುದು. ಆದರೆ, ಕನಿಷ್ಠಪಕ್ಷ ಅವರು ಶಿಕ್ಷಣರಂಗದಲ್ಲಿ ಎಷ್ಟು ಮುಂದುವರಿದಿರುವರೆಂದರೆ, ಪ್ರಗತಿ ಹೊಂದಿದ ಹಿಂದೂಗಳನ್ನು ಬಿಟ್ಟುಳಿದಂತೆ ಅವರೇ ಪ್ರಥಮ ಸ್ಥಾನ ಪಡೆಯುತ್ತಾರೆ. ಆದರೆ ನಿಶ್ಚಯವಾಗಿಯೂ ಅವರ ಕಾರ್ಯಸಾಧನೆಗೆ ಅಡ್ಡಿ ಆತಂಕಗಳೇನೂ ಇಲ್ಲ. ಪ್ರಯತ್ನಗಳಿಂದ ಹಾಗೂ ಪ್ರೋತ್ಸಾಹಗಳಿಂದ ಅವರು ಮೇಲೇರುವ ಆಶಯ ಹೊಂದಿದ್ದಾರೆ. ಆದರೆ ಅಸ್ಪೃಶ್ಯರು ಹಿಂದುಳಿದಿರುವವರಷ್ಟೇ ಅಲ್ಲ, ಕಾರ್ಯ ಸಾಧಿಸಲು ಅಡೆತಡೆಯನ್ನೂ ಹೊಂದಿರುತ್ತಾರೆ. ಮೊದಲು ಈ ಅಡೆತಡೆಗಳು ದೂರವಾಗದ ಹೊರತು, ಯಾವುದೇ ಪ್ರಯತ್ನ ಪ್ರೋತ್ಸಾಹಗಳಿಂದಲೂ ಅವರು ಮೇಲೇರುವುದು ಸಾಧ್ಯವಿಲ್ಲ. ಇದೇ

ಈ ಎರಡು ವರ್ಗಗಳ ನಡುವಣ ವ್ಯತ್ಯಾಸವಾಗಿರುವುದರಿಂದ, ಮಹಮದೀಯರ ಹಿಂದುಳಿದಿರುವಿಕೆಯನ್ನು ಪರಿವರ್ತಿಸಲು ಅಗತ್ಯವಾಗಿರಬಹುದಾದ ಮಟ್ಟದ ರಾಜಕೀಯ ಅಧಿಕಾರದ ಕನಿಷ್ಠ ಎರಡರಷ್ಟು ರಾಜಕೀಯ ಅಧಿಕಾರವಾದರೂ, ಅಸ್ಪೃಶ್ಯರನ್ನು ಮೇಲೆತ್ತಲು ಅಗತ್ಯವಾಗಿರುತ್ತದೆ. ಆದರೂ ನನ್ನ ಸಹೋದ್ಯೋಗಿಗಳು, ಅವರ ಪ್ರಾತಿನಿಧ್ಯದ ದಾಮಾಷೆಯನ್ನು ವಿಪರ್ಯಾಸಗೊಳಿಸಿದ್ದಾರೆ. ಸಂಖ್ಯೆಯಲ್ಲಿ ಶೇ.೧೯ರಷ್ಟು ಇರುವ ಹಾಗೂ ಪ್ರಬಲ ಅಲ್ಪಸಂಖ್ಯಾತ ವರ್ಗ ರಚಿಸಿರುವ ಮಹಮದೀಯರಿಗೆ ಪರಿಷತ್ತಿನಲ್ಲಿ ಶೇ. ೩೧ರಷ್ಟು ಸ್ಥಾನ ನೀಡಲಾಗಿದೆ. ಆದರೆ ಅತ್ಯಂತ ಮಿತವಾದ ಅಂದಾಜಿನ ಪ್ರಕಾರ, ಸಂಖ್ಯೆಯಲ್ಲಿ ಶೇ. ೮ರಷ್ಟು ಇರುವ ದುರ್ಬಲ ವರ್ಗಗಳವರಿಗೆ, ಪರಿಷತ್ತಿನಲ್ಲಿ ಶೇ. ೭ರಷ್ಟು ಸ್ಥಾನ ನೀಡಲಾಗಿದೆ. ವಾಸ್ತವವಾಗಿ ಇದು ಅವರ ಜನಸಂಖ್ಯಾ ದಾಮಾಷೆಗಿಂತಲೂ ಶೇ.೧ರಷ್ಟು ಕಮ್ಮಿಯಾಗಿದೆ.

(೭೨) ಕೆಳವರ್ಗದವರ ಸಮಸ್ಯೆ ಒಂದು ಸಾಮಾಜಿಕ ಸಮಸ್ಯೆ ಹಾಗೂ ಅದಕ್ಕೆ ಸಾಮಾಜಿಕ ಕ್ಷೇತ್ರದಲ್ಲಿಯೇ ಪರಿಹಾರ ಕಂಡುಕೊಳ್ಳಬೇಕು ಎಂಬೊಂದು ಅಭಿಪ್ರಾಯವೂ ಇದೆ. ಉನ್ನತ ವಲಯಗಳಲ್ಲಿಯೂ ಈ ಅಭಿಪ್ರಾಯವಿರುವುದು ನನಗೆ ಅಚ್ಚರಿಯುಂಟುಮಾಡಿದೆ. ಈ ಅಭಿಪ್ರಾವನ್ನು ಎತ್ತಿ ಹಿಡಿಯುವವರು, ಮಾನವ ಸಮಾಜದಲ್ಲಿನ ಪ್ರತಿಯೊಂದು ಸಮಸ್ಯೆಯೂ ಒಂದು ಸಾಮಾಜಿಕ ಸಮಸ್ಯೆಯೇ ಎಂಬುದನ್ನು ಮರೆತಿದ್ದಾರೇನೋ ಎಂದು ನನಗೆ ಭಯವಾಗುತ್ತಿದೆ. ಕುಡಿತದ ಸಮಸ್ಯೆ– ಮಜೂರಿ ಸಮಸ್ಯೆ, ಕೆಲಸದ ಅವಧಿ, ವಸತಿ ಹಾಗೂ ನಿರುದ್ಯೋಗ ವಿಮೆಗಳ ಸಮಸ್ಯೆ– ಇವೆಲ್ಲವೂ ಸಾಮಾಜಿಕ ಸಮಸ್ಯೆಗಳೇ. ಆದರೆ ಈ ಸಮಸ್ಯೆ ಸಾಮಾಜಿಕ ಸಮಸ್ಯೆಯೇ ಅಲ್ಲವೇ ಎಂಬುದು ಮುಖ್ಯ ಪ್ರಶ್ನೆಯಲ್ಲ. ಈ ಸಮಸ್ಯೆಯನ್ನು ರಾಜಕೀಯ ಅಧಿಕಾರ ಬಳಸಿ ಪರಿಹರಿಸಲು ಸಾಧ್ಯವೇ ಎಂಬುದು ಸದ್ಯದ ಪ್ರಶ್ನೆ. ಈ ಪ್ರಶ್ನೆಗೆ ನಾನು ನೀಡುವ ಉತ್ತರ ಸ್ಪಷ್ಟವಾಗಿ ಸಕಾರಾತ್ಮಕವಾಗಿದೆ. ಭಾರತ ಸರ್ಕಾರವು ಸ್ಪೃಶ್ಯರು ಮತ್ತು ಅಸ್ಪೃಶ್ಯರನ್ನು ಅವರು ಇಷ್ಟಪಡಲಿ ಅಥವಾ ಇಷ್ಟಪಡದೆ ಇರಲಿ– ಒಂದು ಕುಟುಂಬದ ಸದಸ್ಯರಂತೆ ಇರಬೇಕೆಂದು ನಿರ್ಬಂಧಿಸಲು ಸಮರ್ಥವಾಗಿಲ್ಲವೆಂಬುದು ಸಾಕಷ್ಟು ನಿಜವಾಗಿದೆ. ಶಾಸಕಾಂಗದ ಕಾನೂನಿನ ಮೂಲಕ ಅವರು ಪರಸ್ಪರ ಪ್ರೇಮಿಸುವಂತೆ ಮಾಡಲು ಅಥವಾ ಕಾರ್ಯಕಾರಿ ಸಮಿತಿಯ ಆದೇಶದ ಮೂಲಕ ಅವರು ಪರಸ್ಪರ ತಬ್ಬಿಕೊಳ್ಳುವಂತೆ ಮಾಡಲು ಸರ್ಕಾರಕ್ಕೆ ಆಗುವುದಿಲ್ಲ. ಆದರೆ, ಅಸ್ಪೃಶ್ಯರು ತಮ್ಮ ಕೆಳಗಿನ ಪರಿಸ್ಥಿತಿಯಲ್ಲಿಯೇ ಉಳಿಯುವಂತೆ ಮಾಡುವ ಎಲ್ಲ ಅಡ್ಡಿಗಳನ್ನೂ ದೂರ ಮಾಡುವುದು ಸರ್ಕಾರಕ್ಕೆ ಸಾಧ್ಯವಾಗಬೇಕು. ಈ ಅಭಿಪ್ರಾಯ ಸರಿಯಾಗಿದ್ದ ಪಕ್ಷದಲ್ಲಿ, ಇತರ ಸಮುದಾಯಗಳಿಗಿಂತಲೂ ದುರ್ಬಲ ವರ್ಗಗಳವರಿಗೆ ಹೆಚ್ಚು ರಾಜಕೀಯ ಪ್ರಾತಿನಿಧ್ಯದ ಅಗತ್ಯವಿದೆ.

(೭೩) ಮಹಮದೀಯ ಅಲ್ಪಸಂಖ್ಯಾತರು ತಮ್ಮ ಜನಸಂಖ್ಯಾ ದಾಮಾಷೆಗಿಂತ ಶೇ. ೧೨ರಷ್ಟು ಹೆಚ್ಚು ಪ್ರಾತಿನಿಧ್ಯವನ್ನು ಏಕೆ ಪಡೆಯಬೇಕೆಂದು ನನ್ನ ಸಹೋದ್ಯೋಗಿಗಳು ಎಲ್ಲಿಯೂ ವಿವರಿಸಿಲ್ಲ. ದುರ್ಬಲ ವರ್ಗಗಳವರ ಜನಸಂಖ್ಯೆಯನ್ನಾಧರಿಸಿ ಅವರಿಗೆ ನೀಡಬೇಕಾದ ಪಾಲನ್ನು ಏಕೆ ನೀಡಿಲ್ಲವೆಂದೂ ಅವರು ವಿವರಿಸಿಲ್ಲ. ಹೆಚ್ಚಿನ ಪ್ರಾತಿನಿಧ್ಯವನ್ನು ಸಮರ್ಥಿಸುವವರು ಅದನ್ನು ತಮ್ಮ ಸಂಖ್ಯೆಯ ಆಧಾರದ ಮೇಲೆಯೇ ಕೊಡಬೇಕೆಂದು ಒತ್ತಾಯಿಸಿಲ್ಲ ಎಂಬುದನ್ನು ಮಹಮದೀಯರು ತಿಳಿದಿರುವುದು ಗಮನಾರ್ಹ. ನಿರೀಕ್ಷಿಸಬಹುದಾದಂತೆ, ಅವರ ಪ್ರಗತಿ ಅಥವಾ ಕಲ್ಯಾಣವನ್ನು ಖಚಿತಗೊಳಿಸಲು ಇದು ಅಗತ್ಯವಾಗಿತ್ತು. ಮಹಮದೀಯರು ಆಳುವ ವರ್ಗದಿಂದ ಬಂದವರು. ಅವರಿಗೆ ಹೆಚ್ಚಿನ ಈ ಪ್ರಾತಿನಿಧ್ಯ ಏಕೆ ಅಗತ್ಯವೆಂದರೆ, ಅದಿಲ್ಲದೆ ಹೋದಲ್ಲಿ ಈ ಸಮುದಾಯದ ಪ್ರಾಮುಖ್ಯ–ಪ್ರಭಾವಗಳು ಕಮ್ಮಿಯಾಗುತ್ತವೆಂಬ ಭಯ ಅವರಿಗಿದೆ. ಈ ಕಾರಣಕ್ಕಾಗಿಯೇ ಮಹಮದೀಯರು ಹೆಚ್ಚಿನ ಪ್ರಾತಿನಿಧ್ಯಕ್ಕಾಗಿ ಒತ್ತಾಯಿ

ಸುವುದು, ಎಷ್ಟು ಅಗತ್ಯವೆಂಬುದರ ಆಧಾರದ ಮೇಲಿಲ್ಲ. ಬದಲಾಗಿ ಶ್ರೇಷ್ಠತೆಯ ಆಧಾರದ ಮೇಲೆ ಎಂದು ಕಂಡುಬರುತ್ತದೆ. ಪ್ರಜಾಪ್ರಭುತ್ವ ಸ್ವರೂಪದ ಯಾವುದೇ ಸರ್ಕಾರದಲ್ಲಿ ಎಲ್ಲ ಸಮುದಾಯ ಗಳಿಗೂ ಸಮಾನ ರಾಜಕೀಯ ಮಹತ್ವ ನೀಡಿ ಅವುಗಳೊಂದಿಗೆ ವ್ಯವಹರಿಸಬೇಕು ಹಾಗೂ ಯಾವುದೇ ಸಮುದಾಯಕ್ಕೂ ವಿಶೇಷ ಪ್ರಾತಿನಿಧ್ಯಕ್ಕಾಗಿ ಒತ್ತಾಯಿಸಲು ಅವಕಾಶವಿರಕೂಡದು ಎಂಬ ಬಲವಾದ ಅಭಿಪ್ರಾಯ ನನ್ನದಾಗಿದೆ. ನನ್ನ ಸಮುದಾಯವೇ ಪ್ರಮುಖವಾದದ್ದು ಹಾಗೂ ಅದಕ್ಕೆ ನ್ಯಾಯವಾದ ಮತ್ತು ತಕ್ಕುದಾದ ಪ್ರಾತಿನಿಧ್ಯ ಸಿಗಬೇಕು ಎಂದು ಯಾವನೇ ವ್ಯಕ್ತಿ ಹೇಳಿದಾಗ ಅವನ ಒತ್ತಾಯವನ್ನು ಎಲ್ಲರೂ ಅನುಕಂಪದಿಂದ ಪರಿಗಣಿಸುತ್ತಾರೆ. ಆದರೆ ಯಾವನೇ ವ್ಯಕ್ತಿ ತನ್ನ ಸಮುದಾಯ ವಿಶೇಷವಾಗಿ ಪ್ರಮುಖವಾದದ್ದು ಮತ್ತು ಈ ಕಾರಣದಿಂದ ತನ್ನ ನ್ಯಾಯವಾದ ಪಾಲಿಗಿಂತಲೂ ಹೆಚ್ಚಿನ ಪ್ರಾತಿನಿಧ್ಯ ಅದಕ್ಕೆ ಸಿಗಬೇಕು ಎಂದು ಒತ್ತಾಯಿಸಿದಾಗ, ಇತರ ಸಮುದಾಯಗಳು ಹೋಲಿಕೆಯಲ್ಲಿ ತನಗಿಂತ ಕೆಳಗಿನವು ಹಾಗೂ ಅವುಗಳಿಗೆ ನ್ಯಾಯವಾಗಿ ಸಿಗಬೇಕಾದ ಪಾಲಿಗಿಂತಲೂ ಕಡಿಮೆ ಪ್ರಾತಿನಿಧ್ಯ ಸಿಗಬೇಕು ಎಂಬ ಭಾವನೆಯುಂಟಾಗುವುದರಲ್ಲಿ ಸಂದೇಹವಿಲ್ಲ. ಇತರ ಸಮುದಾಯಗಳು ಸ್ವಾಭಾವಿಕವಾಗಿಯೇ ಒಪ್ಪದಂಥ ಪರಿಸ್ಥಿತಿ ಇದಾಗಿದೆ. ಆದ್ದರಿಂದ ಅಷ್ಟು ಬೇಗ ಮಹಮದೀಯರ ಸಮುದಾಯ, ವಿವೇಕರಹಿತವಾದ ಈ ಭಾವನೆಯನ್ನು ಬಿಟ್ಟುಬಿಡುತ್ತದೆಯೋ, ಅಷ್ಟು ಬೇಗ ಆ ಸಮುದಾಯದ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದಾಗುತ್ತದೆ. ಏಕೆಂದರೆ ಇತರ ಸಮುದಾಯಗಳು ತಾವಾಗಿಯೇ ಬಿಟ್ಟುಕೊಡದ ಮತ್ತು ನಿರಂತರವಾಗಿ ಹೋರಾಡಿ ಪಡೆಯಬೇಕಾದ ಒಂದು ಅನುಕೂಲದಲ್ಲಿ ಯಾವುದೇ ಲಾಭವಿರುವುದಿಲ್ಲ. ವ್ಯತಿರಿಕ್ತವಾಗಿ, ಇದರ ಫಲಿತಾಂಶಕ್ಕಾಗಿ ಮಹಮದೀಯರ ಸಮುದಾಯಕ್ಕೆ ಹಾನಿಯೇ ಉಂಟಾಗಬಹುದು. ಆ ಸಮು ದಾಯ ಹಾಗೂ ಸಂಬಂಧಿಸಿದ ಇತರ ಸಮುದಾಯಗಳ ನಡುವೆ ಸ್ವಭಾವಸಿದ್ಧವಾದ ವೈರ ಬೆಳೆಯ ಬಹುದು.

(೭೪) ಆಳುವ ವರ್ಗದ ಘನತೆಯನ್ನು ಕಳೆದುಕೊಂಡುದಕ್ಕೆ ಮಹಮದೀಯರು ಮಾತ್ರ ಏಕೈಕ ಉದಾಹರಣೆಯಲ್ಲ. ಕೆನಡದಲ್ಲಿನ ಫ್ರೆಂಚರದು ಹಾಗೂ ದಕ್ಷಿಣ ಆಫ್ರಿಕದಲ್ಲಿನ ಡಚ್ಚರದು ಆಳುವ ವರ್ಗ ದಿಂದ ಪ್ರಜಾವರ್ಗಕ್ಕೆ ಇಳಿದಂಥ ಇನ್ನೆರಡು ನಿದರ್ಶನಗಳಾಗಿರುತ್ತವೆ. ಆದರೆ ಕೆನಡಾದ ಫ್ರೆಂಚರಾಗಲಿ, ದಕ್ಷಿಣ ಆಫ್ರಿಕದ ಡಚ್ಚರಾಗಲಿ, ಆಳುವವರಾಗಿ ತಮ್ಮ ಹಿಂದಿನ ಪರಿಸ್ಥಿತಿಯನ್ನು ಉಳಿಸಿಕೊಳ್ಳುವುದು ಸಾಧ್ಯವಾಗಬೇಕೆಂಬ ಉದ್ದೇಶದಿಂದ ಹೆಚ್ಚಿನ ಪ್ರಾತಿನಿಧ್ಯಕ್ಕಾಗಿ ಎಂದೂ ಒತ್ತಾಯಿಸಿಲ್ಲ. ವಿಶ್ವದ ಇತರ ಭಾಗಗಳಲ್ಲಿನ ಅಲ್ಪಸಂಖ್ಯಾತ ಮಹಮದೀಯರಿಗೂ ಇಂಥ ಪರಿಗಣನೆಯನ್ನು ತೋರಿಸಲಾಗಿಲ್ಲ. ಆಲ್ಬೇನಿಯ, ರುಮೇನಿಯಾ, ಗ್ರೀಸ್, ಬಲ್ಗೇರಿಯಾಗಳಲ್ಲಿನ ಅಲ್ಪಸಂಖ್ಯಾತ ಮಹಮದೀಯರ ಪೂರ್ವಜರು ಮೊದಲು ಆಳುವ ವರ್ಗದವರೇ ಆಗಿದ್ದರು. ಆದರೂ ಈ ಯಾವುದೇ ರಾಷ್ಟ್ರಗಳಲ್ಲಿನ ಮಹಮದೀಯರೂ ಪ್ರಾತಿ ನಿಧ್ಯದಲ್ಲಿ ಅಧಿಕ ಪಾಲಿಗಾಗಿ ಆಗ್ರಹಿಸಿಲ್ಲ. ಪ್ರಭಾವಕ್ಕನುಗುಣವಾಗಿ, ಮಹಮದೀಯರು ಪ್ರಾತಿನಿಧ್ಯಕ್ಕಾಗಿ ಆಗ್ರಹಪಡಿಸಿದುದು ಈವರೆಗೆ ಬೇರೆಲ್ಲಿಯೂ ಕೇಳಿಬಂದಿಲ್ಲ. ಅಷ್ಟೇ ಅಲ್ಲ, ಪ್ರಾತಿನಿಧಿಕ ಸರ್ಕಾರಿ ಪದ್ಧತಿಗೆ ಇದು ಅಸಂಗತವೂ ಆಗಿದೆ. ಭೂಮಾಲೀಕರು, ಬಂಡವಾಳಗಾರರು ಹಾಗೂ ಪಾದ್ರಿಗಳು ಪ್ರತಿ ಸಮಾಜ ದಲ್ಲಿಯೂ ಅತ್ಯಧಿಕ ಪ್ರಭಾವ ಹೊಂದಿರುತ್ತಾರೆ. ಆದರೆ ಈ ವರ್ಗಗಳವರಿಗೆ ಅತ್ಯಧಿಕ ಪ್ರಾತಿನಿಧ್ಯ ನೀಡ ತಕ್ಕದ್ದೆಂದು ಎಂದೂ ಯಾರೂ ಒತ್ತಾಯ ಮಾಡಿಲ್ಲ. ಆದ್ದರಿಂದ ಮಹಮದೀಯರಂಥದೇ ಸಂದರ್ಭವನ್ನು ಉಳಿದೆಡೆ ನಿರ್ಲಕ್ಷಿಸಿರುವಾಗ, ಭಾರತದಲ್ಲಿ ಮಾತ್ರ ಮಹಮದೀಯರ ಒತ್ತಾಯಕ್ಕೆ ಏಕೆ ಗಮನ ಹರಿಸಬೇಕು ಎಂಬುದಕ್ಕೆ ಯಾವುದೇ ಕಾರಣವಿಲ್ಲ.

(೭೫) ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗಲು ಮೊದಲು ಅವರ ಪರಿಸ್ಥಿತಿ ಹೇಗೆಯೇ ಇದ್ದಿರಲಿ; ಮಹಮದೀಯರು ಐದು ಶತಮಾನಗಳ ಕಾಲ ಭಾರತವನ್ನು ಆಳಿದ್ದರೆ, ಹಿಂದೂಗಳು ಅವರಿಗಿಂತಲೂ ಮೊದಲು ಮತ್ತು ಅವರ ಆನಂತರವೂ ಅನೇಕ ಶತಮಾನಗಳ ಕಾಲ ಆಳ್ವಿಕೆ ನಡೆಸಿದ್ದರೆಂಬುದನ್ನು ಮತ್ತೆ ನಾವು ನೆನಪಿನಲ್ಲಿರಿಸಿಕೊಳ್ಳಬೇಕು. ಬ್ರಿಟಿಷರ ವಿಜಯದ ಫಲಿತಾಂಶವಾಗಿ ಎಲ್ಲ ಸಮುದಾಯಗಳವರು ಸಾಮಾನ್ಯ ಹಂತದಲ್ಲಿ ಇರುವಂತೆ ಹಾಗೂ ತಮ್ಮ ಹಿಂದಿನ ರಾಜಕೀಯ ಇತಿಹಾಸದ ಬಗ್ಗೆ ಯಾವುದೇ ಲಕ್ಷ್ಯ ಹರಿಸದೆ ಇರುವಂತೆ ಆಯಿತು ಎಂಬುದರ ಆಧಾರದ ಮೇಲೆ ಮುಂದುವರಿಯುವುದೇ ಸುರಕ್ಷಿತ ಮಾರ್ಗ. ನ್ಯಾಯವೇ ಆಗಿರುವ ಇಂಥದೊಂದು ಪ್ರವೃತ್ತಿಯನ್ನು ಇಂಡಿಯನ್ ಪೀನಲ್ ಕೋಡಿನ ಕರಡು ಸಿದ್ಧಪಡಿಸಿದ್ದ ಕಾನೂನು ಆಯೋಗದವರು, ಸೂಕ್ಷ್ಮ ಮನೋಭಾವನೆಗಳನ್ನು ಮನಸ್ಸಿನಲ್ಲಿರಿಸಿಕೊಂಡು, ಸೆಕ್ರೆಟರಿ ಆಫ್ ಸ್ಟೇಟ್‌ಗೆ ಬರೆದ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ. ಅಲ್ಲಿ ಅವರು ಹೀಗೆಂದಿದ್ದಾರೆ:

> "ಕಂಪೆನಿಗೆ ಸೇರಿದ ಪ್ರದೇಶಗಳೊಳಗೆ ಇರುವ ಭಾರತದ ಯಾವುದೇ ಪ್ರಾಚೀನ ಸದನಗಳನ್ನು ಈ ಸಂಹಿತೆಯ ಕಾರ್ಯಾಚರಣೆಯಿಂದ ಹೊರಗಿಡುವಂತೆ ನಾವು ಪ್ರಸ್ತಾಪಿಸಿಲ್ಲ ಎಂಬುದನ್ನು ನೀವೇ ನೋಡುತ್ತೀರಿ. ಅಂಥ ವಿನಾಯಿತಿಗಳನ್ನೇನಾದರೂ ಮಾಡಬೇಕಾಗಿದೆಯೇ ಎಂಬ ಪ್ರಶ್ನೆ ಎಂಥ ಪ್ರಶ್ನೆಯಾಗಿರುತ್ತದೆಂದರೆ, ಸದ್ಯದ ಒಪ್ಪಂದಗಳು, ಅಂಥ ಒಪ್ಪಂದಗಳನ್ನು ಎಂಥ ಮನೋಭಾವದೊಡನೆ ಒಪ್ಪಿಕೊಳ್ಳಲಾಗಿದೆ, ಸಂಧಾನಗಳ ಇತಿಹಾಸ, ನಿರ್ದಿಷ್ಟ ಕುಟುಂಬಗಳ ಮನೋಧರ್ಮ ಹಾಗೂ ಅಧಿಕಾರ, ಈ ಕುಟುಂಬಗಳತ್ತ ಜನಸಮೂಹ ಹೊಂದಿರುವಂಥ ಭಾವನೆ ಇವುಗಳ ಬಗ್ಗೆ ನಮಗಿರುವ ತಿಳುವಳಿಕೆಗಿಂತಲೂ ಹೆಚ್ಚು ನಿಷ್ಕೃಷ್ಟವಾದ ಜ್ಞಾನವಿಲ್ಲದೆ, ನಾವು ತೀರ್ಮಾನ ಕೈಗೊಳ್ಳುವ ಸಾಹಸಕ್ಕೆ ಹೋಗಲು ಸಾಧ್ಯವಾಗದಂಥ ಪ್ರಶ್ನೆಯಾಗಿದೆ. ಅಂಥ ಪ್ರತಿಯೊಂದು ವಿನಾಯಿತಿಯೂ ಒಂದು ಕೆಡುಕು ಎಂದು ಪರಿಗಣಿಸಲು ಮಾತ್ರ ಅತ್ಯಂತ ಗೌರವ ಭಾವದಿಂದ ನಾವು ಅನುಮತಿ ಕೋರುತ್ತೇವೆ. ಯಾವುದೆ ವ್ಯಕ್ತಿ ಶಾಸನವನ್ನೂ ಮೀರಬೇಕು ಎಂಬುದೇ ಒಂದು ಕೆಡುಕು, ಶಾಸನವನ್ನು ಮೀರಿರುವುದರ ಸೌಲಭ್ಯವನ್ನು, ಹೊಟ್ಟೆಕಿಚ್ಚುಪಡುವಂಥ ಹೆಚ್ಚುಗಾರಿಕೆಯಂತೆ ಭಾವಿಸುವ ಹಾಗೆ ಸಾರ್ವಜನಿಕರಿಗೆ ಬೋಧಿಸುವುದು ಇನ್ನೂ ಮಿಗಿಲಾದ ಕೆಡುಕು. ಇಂಥ ಸೌಕರ್ಯಗಳಿಗೆ ಎಷ್ಟು ದೀರ್ಘಕಾಲ ಉಳಿಯಲು ಅವಕಾಶ ಸಿಗುತ್ತದೆಯೋ ಅವುಗಳನ್ನು ರದ್ದು ಮಾಡಲು ಅಷ್ಟೇ ಹೆಚ್ಚು ಕಷ್ಟವಾಗುತ್ತದೆ. ವಿವಿಧ ಜನಾಂಗ ಮತ್ತು ಧರ್ಮಗಳಿಗೆ ಸೇರಿದ ಜನರ ಮೇಲೆ ಒಂದೇ ಬಗೆಯಾದ ನಿರ್ಬಂಧ ವಿಧಿಸುವಂಥ ಹೊಸ ಸೂತ್ರವನ್ನು ಸರ್ಕಾರ ಘೋಷಿಸುವ ವೇಳೆಗಿಂತ ಹೆಚ್ಚು ಸೂಕ್ತವಾದ ಅವಕಾಶ, ಇಂಥ ಸೌಲಭ್ಯಗಳನ್ನು ರದ್ದುಪಡಿಸಲು ಎಂದೂ ಬರುವುದಿಲ್ಲ. ಜನರ ಶ್ರದ್ಧೆಯನ್ನು ಹೊರತುಪಡಿಸಿದಂತೆ, ಬೇರಾವುದೇ ಪರಿಗಣನೆಯನ್ನು ಸಮಾನ ನ್ಯಾಯದ ಪ್ರಯೋಜನಗಳಿಗೆ ವಿರುದ್ಧವಾದುದ್ದೆಂದು ಭಾವಿಸುವ ಅಗತ್ಯವಿದೆಯೋ ಎಂದು ನಾವು ತುಂಬ ಸಂಶಯಪಡುತ್ತೇವೆ."

(೭೬) ಇವು ತುಂಬ ವಿವೇಕಯುತ ಮಾತುಗಳಾಗಿವೆ. ಇದಕ್ಕಿಂತಲೂ ಹೆಚ್ಚು ವಿವೇಕವೆನಿಸುವ ಮಾತುಗಳನ್ನು ಭಾರತದ ಸಾರ್ವಜನಿಕ ವ್ಯವಹಾರಗಳ ಹೊಣೆ ಹೊತ್ತಿರುವ ಮಾರ್ಗದರ್ಶನಕ್ಕಾಗಿ ಎಂದೂ ಹೇಳಲಾಗಿಲ್ಲ ಎಂಬ ವಿಶ್ವಾಸ ನನಗಿದೆ. ಎಂಥ ಸಂದರ್ಭದಲ್ಲಿ ಅಥವಾ ಯಾವ ಯಾವ

ಉದ್ದೇಶಕ್ಕೆ ಸಂಬಂಧಿಸಿದಂತೆ ಈ ಮಾತುಗಳನ್ನು ಆಡಲಾಯಿತೋ ಆ ಸಂದರ್ಭ ಉದ್ದೇಶಗಳಿಗಷ್ಟೇ ಅವರ ವಿವೇಕ ಸೀಮಿತವಾಗಿಲ್ಲ. ಅವರ ವಿವೇಕಪೂರ್ಣ ನುಡಿಗಳು ಹೆಚ್ಚು ಪ್ರಬಲವಾಗಿ ಅಲ್ಲದಿದ್ದರೂ ಅಷ್ಟೇ ಸಮನಾಗಿ ಪ್ರಸ್ತುತ ಪರಿಸ್ಥಿತಿಗೂ ಅನ್ವಯಿಸುತ್ತವೆಂಬುದರಲ್ಲಿ ನನಗೆ ಅನುಮಾನವಿಲ್ಲ. ಕಾನೂನು ಆಯೋಗಗಳ ಭಾಷೆಯನ್ನೇ ಬಳಸುವುದಾದರೆ, ನಿಜವಾಗಿ ನಾನು ಹೀಗೆ ಹೇಳಬೇಕಾಗುತ್ತದೆ. ದೇಶದ ಸಂವಿಧಾನಾತ್ಮಕ ಕಾನೂನು, ಯಾವುದೋ ಒಂದು ಸಮುದಾಯವು ಉಳಿದ ಸಮುದಾಯಗಳಿಗಿಂತ ಮೇಲಿದೆ ಎಂದು ಗುರುತಿಸಬೇಕೆಂಬುದೇ ಒಂದು ಕೆಡುಕಾಗಿರುತ್ತದೆ. ಒಬ್ಬ ವ್ಯಕ್ತಿಯನ್ನು ಗೌರವದಿಂದ ಹಾಗೂ ಇನ್ನೊಬ್ಬನನ್ನು ತಿರಸ್ಕಾರ ದೃಷ್ಟಿಯಿಂದ ನೋಡುವಂತೆ ಮಾಡುವ ವಿಧಾನದಲ್ಲಿ ರಾಜಕೀಯ ಮಹತ್ವದ ಶ್ರೇಣಿಯಲ್ಲಿ, ತಮ್ಮನ್ನು ತೂಗಿಕೊಳ್ಳಲು ಸಾರ್ವಜನಿಕ ವಿಭಾಗವೊಂದಕ್ಕೆ ಶಿಕ್ಷಣ ನೀಡುವುದು ಮತ್ತೂ ಮಹತ್ತರವಾದ ಕೆಡುಕಾಗಿದೆ. ಎಷ್ಟು ದೀರ್ಘಕಾಲ ಇಂಥ ಅಭಿಪ್ರಾಯಗಳು ಉಳಿಯುವುವೋ ಅವುಗಳನ್ನು ಬೇರುಸಹಿತ ನಿರ್ಮೂಲನ ಮಾಡುವುದೂ ಅಷ್ಟು ಕಷ್ಟವಾಗುತ್ತದೆ. ಹಾಗೂ ವಿವಿಧ ಜನಾಂಗಗಳು ಮತ್ತು ಧರ್ಮಗಳಿಗೆ ಸೇರಿದ ಜನರ ಮೇಲೆ ಒಂದೇ ಬಗೆಯಾದ ನಿರ್ಬಂಧ ವಿಧಿಸುವಂಥ ಸಂವಿಧಾನಾತ್ಮಕ ಕಾನೂನಿನ ಹೊಸದೊಂದು ಸೂತ್ರವನ್ನು ಸಂಸತ್ತು ಘೋಷಿಸುವ ವೇಳೆಗಿಂತ ಅವುಗಳನ್ನು ತೊಲಗಿಸಲು ಸೂಕ್ತವಾದ ಅವಕಾಶ ಎಂದೂ ಕೂಡಿಬರುವುದಿಲ್ಲ.

(೭೭) ಪ್ರಾತಿನಿಧ್ಯದ ವಿಷಯದಲ್ಲಿ ಎಲ್ಲ ಅಲ್ಪಸಂಖ್ಯಾತ ವರ್ಗಗಳವರೊಡನೆಯೂ ಸಮಾನ ವಾಗಿ ವ್ಯವಹರಿಸುವುದು, ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಸಮಸ್ಯೆಯ ಕೇವಲ ಒಂದು ಭಾಗವಷ್ಟೇ ಆಗಿ ರುತ್ತದೆ. ಸ್ಥಾನಗಳ ವಿತರಣೆಗಾಗಿ ತೃಪ್ತಿಕರವಾದ ಪರಿಮಾಣಾತ್ಮಕ ಮಾನದಂಡವನ್ನು ನಿರ್ಣಯಿ ಸುವುದು ಸಮಸ್ಯೆಯ ಇನ್ನೊಂದು ಹಾಗೂ ಮಹತ್ವದ ಭಾಗವಾಗಿದೆ. ಆದರೆ ಇದು ಅತ್ಯಂತ ವಿವಾದಾತ್ಮಕ ಪ್ರಶ್ನೆ. ಪರಸ್ಪರ ವಿರುದ್ಧವಾಗಿರುವ ಎರಡು ಸಿದ್ಧಾಂತಗಳಲ್ಲಿ, ಅಲ್ಪಸಂಖ್ಯಾತರಿಗೆ ನೀಡುವ ಪ್ರಾತಿ ನಿಧ್ಯವು ಅವರ ಜನಸಂಖ್ಯೆಗೆ ಕರಾರುವಾಕ್ ಆದ ದಾಮಾಷೆಯಲ್ಲಿ ಇರತಕ್ಕದ್ದೆಂಬುದು ಒಂದನೆಯ ದಾಗಿದೆ. ಅಂಥ ಪ್ರಾತಿನಿಧ್ಯವು ತಕ್ಕಷ್ಟು ಇರತಕ್ಕದ್ದು ಎಂಬುದು ಅಲ್ಪಸಂಖ್ಯಾತರು ಪ್ರಬಲವಾಗಿ ಪ್ರತಿ ಪಾದಿಸಿದ ಇನ್ನೊಂದು ಸಿದ್ಧಾಂತವಾಗಿದೆ. ವಿಧಾನ ಪರಿಷತ್ತು ಎಂಬುದು ಪ್ರತಿಯೊಂದು ಜೀವಜಾತಿಯನ್ನು ಅಥವಾ ವಸ್ತುವನ್ನು ನಿರ್ದಿಷ್ಟ ಸಂಖ್ಯೆಯಲ್ಲಿರಿಸಬೇಕಾದ ಒಂದು ಮೃಗಾಲಯ ಅಥವಾ ವಸ್ತು ಸಂಗ್ರಹಾಲಯವಾಗಿದ್ದರೆ, ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಅಂಥದೊಂದು ಸಿದ್ಧಾಂತವನ್ನು ಸಹಿಸಬಹು ದಾಗಿತ್ತು. ಆದರೆ, ವಿಧಾನ ಪರಿಷತ್ತು ಮೃಗಾಲಯ ಅಥವಾ ವಸ್ತು ಸಂಗ್ರಹಾಲಯವಲ್ಲವೆಂಬುದನ್ನು ಗಮನಕ್ಕೆ ತಂದುಕೊಳ್ಳಬೇಕಾದ ಅಗತ್ಯವಿದೆ. ಹಕ್ಕುಗಳನ್ನು ಪಡೆಯಲು, ವಿಶೇಷಾಧಿಕಾರಗಳನ್ನು ತೊಡೆದುಹಾಕಲು ಹಾಗೂ ಅನ್ಯಾಯವನ್ನು ತಡೆಯಲು ಇದೊಂದು ಯುದ್ಧರಂಗವಾಗಿದೆ. ಈ ಬೆಳಕಿನಲ್ಲಿ ನೋಡಿದಾಗ, ತಮ್ಮ ಪ್ರಾತಿನಿಧ್ಯವು ತಮ್ಮ ಜನಸಂಖ್ಯೆಗನುಗುಣವಾಗಿ ಪೂರ್ಣ ಪ್ರಮಾಣದಲ್ಲಿದೆ. ಆದರೂ ಅದೆಷ್ಟು ಕಡಿಮೆಯಾಗಿದೆಯೆಂದರೆ, ತಾವು ಅನಿವಾರ್ಯವಾಗಿ ಯಾರಿಂದ ತೊಂದರೆಗಳಿಗೆ ಒಳಗಾಗ ಬೇಕಾಗಿದೆಯೋ ಆ ಬಹುಸಂಖ್ಯಾತರ ದ್ವೇಷದಿಂದ ಕೂಡಿದ ಆಕ್ರಮಣದ ವಿರುದ್ಧ ರಕ್ಷಣೆ ಪಡೆಯಲು ಅಥವಾ ಪರಿಸ್ಥಿತಿ ಸುಧಾರಿಸಿಕೊಳ್ಳಲು ಎಲ್ಲ ಪ್ರಯತ್ನ ಮಾಡಬೇಕಾಗಿದೆ ಎಂಬುದನ್ನು ಅಲ್ಪಸಂಖ್ಯಾತರು ಅರ್ಥ ಮಾಡಿಕೊಳ್ಳಬಹುದು. ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಉದ್ದೇಶವು ರಾಜಕೀಯ ತಮಾಷೆಯನ್ನು ಉಂಟುಮಾಡುವುದಾಗಿರದೆ ಇದ್ದರೆ, ಜನಸಂಖ್ಯೆಗನುಗುಣ ವಾದ ಪ್ರಾತಿನಿಧ್ಯದ ಸಿದ್ಧಾಂತವನ್ನು ನಿರಾಕರಿಸ ಬೇಕು ಹಾಗೂ ಅವರ ಜನಸಂಖ್ಯೆಯ ದಾಮಾಷೆಯನ್ನು ಮೀರುವ ಪ್ರಾತಿನಿಧ್ಯದ ಕೆಲಮಟ್ಟಿನ ಹೆಚ್ಚಳವನ್ನೂ,

ಮಹತ್ವದ ಆಧಾರದ ಮೇಲೆ ಬಿಟ್ಟುಕೊಡಬೇಕು.

(೭೮) ಇಲ್ಲಿ ಮಹತ್ವದ ಅಥವಾ ಗುರುತ್ವದ ಅಗತ್ಯತೆಯನ್ನು ಗುರುತಿಸುವುದು ಮುಖ್ಯವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅಷ್ಟೇ ಮುಖ್ಯವಾದುದೆಂದರೆ, ಜಾಣತನ ಹಾಗೂ ವಿವೇಕ ಇವೆರಡರಿಂದಲೂ ಕೂಡಿರುವ ಯಾವುದಾದರೊಂದು ಸಿದ್ಧಾಂತದ ಆಧಾರದ ಮೇಲೆ ಅಲ್ಪಸಂಖ್ಯಾತ ವರ್ಗಗಳಿಂದ ಈ ಮಹತ್ವವನ್ನೂ ನಿರ್ಧರಿಸಬೇಕು. ಏಕೆಂದರೆ ಸಾಕಷ್ಟು ರಕ್ಷಣೆ ಹುಡುಕುವ ನೆಪದಲ್ಲಿ ಅಲ್ಪಸಂಖ್ಯಾತರು, ಅಸಂಬದ್ಧವೆನಿಸಬಹುದಾದಂತಹ ಬೇಡಿಕೆಗಳನ್ನು ಮುಂದಿಡುವ ಒಲವು ತೋರುತ್ತಾರೆ ಎಂಬುದನ್ನು ಗಮನಿಸಬೇಕು. ಇದರಿಂದ ಪಾರಾಗಬೇಕಾದರೆ, ಮೊದಲು ಯಥೋಚಿತ ಪ್ರಾತಿನಿಧ್ಯವೆಂದರೇನೆಂಬುದನ್ನು ನಾವು ನಿರ್ಧರಿಸಬೇಕು. ಯಥೋಚಿತ ಎಂಬುದಕ್ಕೆ ನಿಷ್ಕೃಷ್ಟ ವಿವರಣೆ ನೀಡುವುದು ಅಸಾಧ್ಯವೆಂಬುದರಲ್ಲಿ ಸಂಶಯವಿಲ್ಲ. ಆದರೆ ಕೆಲವು ವಿಶಾಲ ಪರಿಗಣನೆಗಳನ್ನು ನಾವು ಮನಸ್ಸಿನಲ್ಲಿರಿಸಿಕೊಂಡ ಪಕ್ಷದಲ್ಲಿ ಯಥೋಚಿತ ಎಂಬ ಶಬ್ದದ ವ್ಯಾಖ್ಯೆಯ ಅನಿಶ್ಚಿತತೆಯನ್ನು ಸಾಕಷ್ಟು ಕಡಿಮೆ ಮಾಡಬಹುದು. ಮೊತ್ತ ಮೊದಲನೆಯದಾಗಿ ಅಲ್ಪಸಂಖ್ಯಾತರ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ, ಒಂದೆಡೆ ಯಥೋಚಿತತೆ ಮತ್ತು ಇನ್ನೊಂದೆಡೆ ಶ್ರೇಷ್ಠತೆ– ಇವುಗಳ ನಡುವಣ ವ್ಯತ್ಯಾಸವನ್ನು ತಿಳಿಯಬೇಕು. ನನ್ನ ದೃಷ್ಟಿಯಲ್ಲಿ ಶ್ರೇಷ್ಠತೆಯೆಂದರೆ ಅಲ್ಪಸಂಖ್ಯಾತರನ್ನು ನಿರಂಕುಶಾಧಿಕಾರಿಗಳಾಗಿ ಮಾಡಬಹುದಾಗಿರುವಷ್ಟು ಮಟ್ಟಿನ ವಿಸ್ತಾರತೆ (ಬಾಹುಳ್ಯ). ಹಾಗೂ ಯಥೋಚಿತತೆಯೆಂದರೆ ಬಹುಸಂಖ್ಯಾತರ ಯಾವುದೇ ಒಂದು ಪಕ್ಷವು ಅಲ್ಪಸಂಖ್ಯಾತರೊಂದಿಗೆ ಮಿತ್ರ ಸಂಬಂಧ ಬೆಳೆಸಿಕೊಳ್ಳುವಂತೆ ಪಕ್ಷವೊಂದನ್ನು ಒತ್ತಾಯಿಸುವಾಗ, ನಿಸ್ಸಂದೇಹವಾಗಿಯೂ ಅಲ್ಪಸಂಖ್ಯಾತರು ನಿರಂಕುಶಾಧಿಕಾರಿಗಳ ಸ್ಥಾನದಲ್ಲಿಯೇ ಇರುತ್ತಾರೆ. ಇನ್ನೊಂದೆಡೆ ಅಲ್ಪಸಂಖ್ಯಾತರೊಂದಿಗೆ ಸ್ನೇಹಸಂಬಂಧ ಬೆಳೆಸಿಕೊಳ್ಳುವಂತೆ ಪಕ್ಷವೊಂದನ್ನು ಪುಸಲಾಯಿಸುವ ಪ್ರಸಂಗದಲ್ಲಿ ಅಲ್ಪಸಂಖ್ಯಾತರಿಗೆ ಕೇವಲ ಯಥೋಚಿತ ಪ್ರಾತಿನಿಧ್ಯ ಮಾತ್ರ ಇರುತ್ತದೆ. ಆದ್ದರಿಂದ ಅಲ್ಪಸಂಖ್ಯಾತರಿಗೆ ಸ್ಥಾನಗಳನ್ನು ವಿತರಿಸುವ ವಿಚಾರದಲ್ಲಿ ಮನಸ್ಸಿನಲ್ಲಿರಿಸಿಕೊಳ್ಳಬೇಕಾದ ಮೊತ್ತಮೊದಲ ವಿಚಾರವೆಂದರೆ, ಯಥೋಚಿತತೆಯಿಲ್ಲದಿರುವುದು ಹಾಗೂ ಶ್ರೇಷ್ಠತೆ– ಇವೆರಡು ಅತಿರೇಕಗಳಿಂದ ಪಾರಾಗುವುದೇ ಆಗಿದೆ. ನನ್ನ ಅಭಿಪ್ರಾಯದಲ್ಲಿ ಮುಖ್ಯವಾಗಿ ಅಲ್ಪಸಂಖ್ಯಾತರ ಪ್ರಾತಿನಿಧ್ಯವನ್ನು ಹೇಗೆ ನಿಯಂತ್ರಿಸಬೇಕೆಂದರೆ, ಅಲ್ಪಸಂಖ್ಯಾತರಿಗೆ ಹೊಂದಲು ಅಧಿಕಾರವಿರುವ ಸ್ಥಾನಗಳ ಸಂಖ್ಯೆಯು ಒಟ್ಟು ಸ್ಥಾನಗಳೊಂದಿಗೆ ಅವರ ಸಂಖ್ಯೆ ಹೊಂದಿರುವ ಅನುಪಾತಕ್ಕೆ ಒಂದಕ್ಕಿಂತ ಹೆಚ್ಚಾಗಿರುವ, ಆದರೆ ಎರಡಕ್ಕಿಂತ ಕಮ್ಮಿಯಾಗಿರುವ ಯಾವುದೋ ಒಂದು ಅಪವರ್ತನದಿಂದ ಗುಣಿಸಿದಾಗ ಬರುವ ಸಂಖ್ಯೆಯಾಗಿರತಕ್ಕದ್ದು. ಈ ನಿಯಮವನ್ನು ನಾವು ಅನುಸರಿಸಿದಲ್ಲಿ, ಆಗ ಎರಡೂ ಅತಿರೇಕಗಳಿಂದ ಪಾರಾಗುವುದು ಸಾಧ್ಯ.

(೭೯) ಅಲ್ಪಸಂಖ್ಯಾತರ ಪ್ರಾತಿನಿಧ್ಯವನ್ನು ಯಾವ ಮಿತಿಗಳೊಳಗೆ ನಿರ್ಣಯಿಸಬೇಕೆಂಬುದನ್ನಷ್ಟೇ ಈ ಸಿದ್ಧಾಂತ ಸ್ಪಷ್ಟಪಡಿಸುತ್ತದೆಂಬುದು ಸ್ಪಷ್ಟ. ಈ ಗುಣಕ ಯಾವುದರೊಂದಿಗೆ ವ್ಯತ್ಯಾಸ ಹೊಂದುತ್ತದೆ ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಅದಿನ್ನೂ ಅಸ್ಪಷ್ಟವಾಗಿಯೇ ಇದೆ. ಸಂಬಂಧಿಸಿದ ನಿರ್ದಿಷ್ಟ ಅಲ್ಪಸಂಖ್ಯಾತರ ಅಗತ್ಯಗಳಿಗನುಗುಣವಾಗಿ ಇದು ವ್ಯತ್ಯಾಸ ಹೊಂದಬೇಕೆಂಬುದು ನನ್ನ ಸಲಹೆಯಾಗಿದೆ. ಈ ವಿಧಾನದಿಂದ ಗ್ರಹಿಸಲು ಸಾಧ್ಯವಾದುದೂ ವಿವೇಕಪೂರ್ಣವೂ ಆಗಿರುವಂತೆ ಅಲ್ಪಸಂಖ್ಯಾತರಿಗೆ ನೀಡಬೇಕಾದ ಮಹತ್ವ ನಿರ್ಣಯಿಸುವ ಸಿದ್ಧಾಂತಕ್ಕೆ ನಾವು ಬರುತ್ತೇವೆ. ಏಕೆಂದರೆ ಅಲ್ಪಸಂಖ್ಯಾತರ ಅಗತ್ಯಗಳು ಹೆಚ್ಚು ಕಡಿಮೆ ನಿಖರವಾಗಿ ಗೊತ್ತುಪಡಿಸಲು ಸಾಧ್ಯವಾಗಿರುವಂತಹದಾಗಿವೆ. ರಾಜಕೀಯ ರಕ್ಷಣೆಗಾಗಿ ಅಲ್ಪಸಂಖ್ಯಾತರು ಹೊಂದಿರುವ ಅಗತ್ಯಗಳು ಸಾಮಾಜಿಕ ಹೋರಾಟದಲ್ಲಿ ತಮ್ಮನ್ನು ರಕ್ಷಿಸಿಕೊಳ್ಳಲು

ಅವಶ್ಯಕವಾಗಿರುವ ಅಧಿಕಾರಕ್ಕೆ ಅನುರೂಪವಾಗಿರಬೇಕೆಂಬುದು ಸಾಮಾನ್ಯವಾಗಿ ಎಲ್ಲರೂ ಒಪ್ಪಿರುವ ಅಭಿಪ್ರಾಯವೇ ಆಗಿರುತ್ತದೆ. ಆ ಅಧಿಕಾರವು ಸ್ಪಷ್ಟವಾಗಿಯೂ ಅಲ್ಪಸಂಖ್ಯಾತರ ಆರ್ಥಿಕ ಮತ್ತು ಶೈಕ್ಷಣಿಕ ಅಂತಸ್ತು ಏರಿದಷ್ಟೂ ಆ ಅಲ್ಪಸಂಖ್ಯಾತ ವರ್ಗಕ್ಕೆ ರಾಜಕೀಯ ರಕ್ಷಣೆ ಪಡೆಯುವ ಅಗತ್ಯ ಕಡಿಮೆಯಾಗುತ್ತದೆ. ಇನ್ನೊಂದೆಡೆ ಅಲ್ಪಸಂಖ್ಯಾತರ ಶೈಕ್ಷಣಿಕ ಹಾಗೂ ಆರ್ಥಿಕ ಅಂತಸ್ತು ಕೆಳಗಿಳಿದಷ್ಟೂ ಆ ವರ್ಗಕ್ಕೆ ರಾಜಕೀಯ ರಕ್ಷಣೆ ಪಡೆಯುವ ಅಗತ್ಯ ಹೆಚ್ಚಾಗುತ್ತದೆ.

(೮೦) ಒಂದೆಡೆ ಸಮಾನತೆಯ ಸಿದ್ಧಾಂತ ಮತ್ತು ಇನ್ನೊಂದೆಡೆ ಯಥೋಚಿತತೆಯ ಸಿದ್ಧಾಂತ ಇವುಗಳ ಖಚಿತವಾದ ಆಧಾರದ ಬಗೆಗಿನ ನನ್ನ ನಿಲುವನ್ನು ಗಮನಕ್ಕೆ ತೆಗೆದುಕೊಂಡಾಗ, ವಿವಿಧ ಅಲ್ಪಸಂಖ್ಯಾತ ವರ್ಗಗಳಿಗಾಗಿ ನನ್ನ ಸಹೋದ್ಯೋಗಿಗಳು ಪ್ರಸ್ತಾವಿಸಿದ ಸ್ಥಾನಗಳ ವಿತರಣೆಯನ್ನು ನಾನು ಆಕ್ಷೇಪಿಸಲೇಬೇಕು ಎಂದು ನನಗಿಸುತ್ತದೆ. ನನ್ನ ಸೂಚನೆ ಹೀಗಿದೆ: ಒಟ್ಟು ೧೪೦ ಸ್ಥಾನಗಳಲ್ಲಿ ಮಹಮದೀಯರಿಗೆ ೩೩ ಸ್ಥಾನಗಳೂ ದುರ್ಬಲ ವರ್ಗಗಳವರಿಗೆ ೧೫ ಸ್ಥಾನಗಳೂ ಇರಬೇಕು. ಇದರಿಂದ ಕೌನ್ಸಿಲಿನ ಒಟ್ಟು ಸ್ಥಾನಗಳಲ್ಲಿ ಮಹಮದೀಯರಿಗೆ ಶೇ. ೨೩ರಷ್ಟು ಹಾಗೂ ದುರ್ಬಲ ವರ್ಗಗಳವರಿಗೆ ಶೇ.೧೯.೭ರಷ್ಟು ಸ್ಥಾನಗಳು ದೊರೆತಂತಾಗುತ್ತದೆ. ಹೀಗೆ ಮಾಡುವುದರಿಂದ ಅನುಗುಣವಾದ ತಮ್ಮ ಸಂಖ್ಯಾ ದಾಮಾಷೆಗಳಿಗಿಂತ ಸುಮಾರು ಶೇ. ೪ರಷ್ಟು ಹೆಚ್ಚು ಸ್ಥಾನವನ್ನು ಮಹಮದೀಯರೂ ಶೇ.೨ರಷ್ಟು ಹೆಚ್ಚು ಸ್ಥಾನವನ್ನು ದುರ್ಬಲ ವರ್ಗಗಳವರೂ ಪಡೆಯುತ್ತಾರೆ. ನನ್ನ ಅಭಿಪ್ರಾಯದಲ್ಲಿ ಆಯಾ ಸಮುದಾಯ ಗಳಿಗೆ ಇಷ್ಟೊಂದು ಮಹತ್ವ ನೀಡುವುದು ಅವಶ್ಯಕ ಹಾಗೂ ಸಮಂಜಸವಾದ್ದರಿಂದ ಇದಕ್ಕೆ ಅವಕಾಶ ಮಾಡಿಕೊಡಬಹುದು. ಅಲ್ಲದೆ, ಇದರ ಪರವಾಗಿರುವ ನನ್ನ ಸೂಚನೆಯಲ್ಲಿ ಇನ್ನೊಂದು ಅಂಶವೂ ಇದೆ. ಅದೇನೆಂದರೆ, ಆಗ ಮಹಮದೀಯ ಪ್ರಾತಿನಿಧ್ಯ ಬದಲಾಗದೆ ಉಳಿಯುತ್ತದೆ. ಪ್ರಸ್ತುತ ಕೌನ್ಸಿಲಿನಲ್ಲಿ ಒಟ್ಟು ಪ್ರಾತಿನಿಧ್ಯದಲ್ಲಿ ಮಹಮದೀಯರು ಶೇ. ೨೩ ಹೊಂದಿದ್ದಾರೆ. ನನ್ನ ಸೂಚನೆಯ ಫಲಿತಾಂಶವಾಗಿ ಅವರು ಹೊಸ ಕೌನ್ಸಿಲ್ಲಿನಲ್ಲಿಯೂ ಅದೇ ಅನುಪಾತದ ಪ್ರಾತಿನಿಧ್ಯವನ್ನು ಹೊಂದಿರುತ್ತಾರೆ.

(೮೧) ಕೆಲವರು, ದುರ್ಬಲ ವರ್ಗಗಳವರಿಗೆ ನಾನು ಅವಕಾಶ ನೀಡಿದಷ್ಟು ಪ್ರಾತಿನಿಧ್ಯವನ್ನು ಇಷ್ಟಪಡುವುದಿಲ್ಲ. ಆದರೆ ವಿರೋಧಿಸುತ್ತಾರೆ ಎಂದೇನೂ ನಾನು ಹೇಳುವುದಿಲ್ಲ ಎಂಬ ವಾಸ್ತವಾಂಶದ ದೃಷ್ಟಿಯಿಂದ, ಇನ್ನಷ್ಟು ಹೆಚ್ಚು ವಿವರಗಳನ್ನು ನೀಡುವ ಮೂಲಕ ಗೊಂದಲವನ್ನು ಪರಿಹರಿಸ ಬೇಕಾದ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ ದುರ್ಬಲ ವರ್ಗಗಳವರಿಗೆ ಅವಕಾಶ ಮಾಡಿಕೊಡುವ ಪ್ರಾರಂಭಿಕ ಪ್ರಾತಿನಿಧ್ಯವು ಸ್ಥೂಲವಾಗಿ ಪಕ್ಷಪಾತದಿಂದ ಕೂಡಿದ್ದಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಸಂಯುಕ್ತ ವರದಿಯ ಲೇಖಕರು ಹೀಗೆ ಒತ್ತಿ ಹೇಳಿದ್ದಾರೆ (ಪ್ಯಾರಾ ೧೫೩). "(ದುರ್ಬಲ ವರ್ಗಗಳವರ) ಪ್ರಾತಿನಿಧ್ಯಕ್ಕಾಗಿ ಸಾಧ್ಯವಾದಷ್ಟುಮಟ್ಟಿಗೆ ಉತ್ತಮ ಏರ್ಪಾಡುಗಳನ್ನು ಮಾಡುವುದು ನಮ್ಮ ಉದ್ದೇಶವಾಗಿರುತ್ತದೆ." ಆದರೆ, ಮತದಾನಪದ್ಧತಿಯನ್ನು ವಿನ್ಯಾಸಗೊಳಿಸಲು ಸಂವಿಧಾನವನ್ನು ರೂಪಿಸಲು ಹಾಗೂ ಭಾರತದಲ್ಲಿನ ವಿಲಕ್ಷಣ ಸಾಮಾಜಿಕ ಸ್ಥಿತಿಗತಿಗಳ ಪರಿಣಾಮವಾಗಿ ಪ್ರಸ್ತಾವಿಸಲಾದ ಜನಪ್ರಿಯ ಸರ್ಕಾರದ ಸ್ವರೂಪದಲ್ಲಿ, ಅಗತ್ಯವಾಗಿ ಮಾಡಬೇಕಾಗಿರುವ ಹೊಂದಾಣಿಕೆಯನ್ನು ಕುರಿತಂತೆ ಶಿಫಾರಸ್ಸು ಮಾಡಲು ಮುಂದೆ ನೇಮಕಗೊಂಡ ಸೌತ್‌ಬರೋ ಸಮಿತಿ ಈ ವಾಗ್ದಾನವನ್ನು ಸಂಪೂರ್ಣವಾಗಿ ಗಾಳಿಗೆ ತೂರಿಬಿಟ್ಟಿದೆ. ಒಟ್ಟಿನ ಮೇಲೆ ದುರ್ಬಲ ವರ್ಗಗಳವರ ಹಿತಾಸಕ್ತಿಗಳನ್ನು ರಕ್ಷಿಸಲು ಮಾಡಿಕೊಡಬೇಕಾಗಿರುವ ಯಥೋಚಿತ ಅವಕಾಶಗಳ ಸಮಸ್ಯೆಗೆ ಸಂಬಂಧಿಸಿದಂತೆ, ಸೌತ್ ಬರೋ ಸಮಿತಿ ಎಷ್ಟು ತಟಸ್ಥವಾಗಿತ್ತೆಂದರೆ, ಈ ಬಗ್ಗೆ ನಿರ್ದಿಷ್ಟ ಮನೋಭಾವನೆಯನ್ನೇ ಹೊಂದಿರದಂಥ

ಭಾರತ ಸರ್ಕಾರ ಕೂಡ, ಸೌತ್ ಬರೋ ಸಮಿತಿಯ ವರದಿಯನ್ನು ಕುರಿತ ತನ್ನ ಪತ್ರದ ೧೩ನೇ ಪ್ಯಾರಾದಲ್ಲಿ ಹೀಗೆ ಮನವಿ ಮಾಡಿಕೊಂಡಿತು: "ಸಾಮಾನ್ಯವಾಗಿ ನಾವು (ಅಧಿಕಾರೇತರರನ್ನು ನಾಮಕರಣ ಮಾಡುವ ಬಗೆಗಿನ) ಪ್ರಸ್ತಾವಗಳನ್ನು ಒಪ್ಪುತ್ತೇವೆ. ಆದರೆ ಸಮಿತಿ ನೀಡುವುದಕ್ಕಿಂತಲೂ ಹೆಚ್ಚು ಪರಿಗಣನೆ ನಿಜವಾಗಿಯೂ ಅವಶ್ಯಕವಾಗಿರುವುದೆಂದು ನಮಗೆ ಕಾಣುವಂಥ ಒಂದು ಸಮುದಾಯವಿದೆ. ಭಾರತದ ಸಂವಿಧಾನಾತ್ಮಕ ಸುಧಾರಣೆಗಳಿಗೆ ಸಂಬಂಧಿಸಿದ ವರದಿಯು, ದುರ್ಬಲ ವರ್ಗಗಳವರ ಸಮಸ್ಯೆಯನ್ನು ಸ್ಪಷ್ಟವಾಗಿಯೇ ಗುರುತಿಸಿ, ಅವುಗಳನ್ನು ಗೌರವಿಸುವ ಪ್ರತಿಜ್ಞೆ ಮಾಡಿದೆ. ಈ ಸಮಿತಿಯ ವರದಿಯಲ್ಲಿ "ಹಿಂದೂಗಳು–ಇತರರು" ಎಂದು ವರ್ಣಿಸಲಾದ ಜಾತಿಗಳನ್ನು ವಿವಿಧ ಹೆಸರುಗಳಲ್ಲಿ ನಿರ್ವಚಿಸಲಾಗಿದ್ದಾಗ್ಯೂ, ಅವನ್ನು ವಿಶಾಲ ದೃಷ್ಟಿಯಲ್ಲಿ ನೋಡಿದಾಗ ಸಮಾನ ಸ್ಥಾನಮಾನದವಾಗಿರುತ್ತದೆ. ಇವರನ್ನು ಹೊರತುಪಡಿಸಲು ಕಾರಣವಾಗಿರುವ ಸ್ಥೂಲ ವ್ಯತ್ಯಾಸಗಳನ್ನು ಬಿಟ್ಟರೆ, ಇವರೆಲ್ಲ ಹೆಚ್ಚು ಕಡಮೆ ಮದ್ರಾಸಿನಲ್ಲಿರುವ ಪಂಚಮರ ಸ್ಥಾನಮಾನಗಳನ್ನೆ ಹೊಂದಿರುತ್ತಾರೆ. ನಿಶ್ಚಿತವಾಗಿಯೂ ಇವರು ಹಿಂದೂ ಸಮುದಾಯದ ಹೊರಗಿದ್ದಾರೆ. ಇವರಿಗೆ ದೇವಾಲಯಗಳಲ್ಲಿ ಪ್ರವೇಶವಿಲ್ಲ. ಇವರ ಸಂಖ್ಯೆ ಒಟ್ಟು ಜನಸಂಖ್ಯೆಯ ಸುಮಾರು ೧೫ರಷ್ಟಿಗೆ ಇವರನ್ನು ಮಾರ್ಲೆ–ಮಿಂಟೊ ಸುಧಾರಣೆಗಳಲ್ಲಿ ಕೂಡ ಪರಿಗಣಿಸಿಲ್ಲ. ಸಮಿತಿಯ ವರದಿ ದುರ್ಬಲ ವರ್ಗಗಳನ್ನು ಕುರಿತಂತೆ ಎರಡು ಸಲ ಮಾತ್ರ ಉಲ್ಲೇಖಿಸಿದೆ. ಆದರೆ ಹೀಗೆ ಉಲ್ಲೇಖಿಸಿರುವುದು, ತೃಪ್ತಿಕರ ಮತದಾನ ಸಮುದಾಯಗಳಿಲ್ಲದಾಗ, ಅವರಿಗೆ ನಾಮಕರಣದ ಮೂಲಕ ಅಥವಾ ಬೇರೆ ರೀತಿ ಒದಗಿಸಲಾದ ಪ್ರಾತಿನಿಧ್ಯ ಕುರಿತು ವಿವರಿಸಲು ಮಾತ್ರ ತಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುವ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ, ಈ ಜನರ ಪರಿಸ್ಥಿತಿಯನ್ನು ಕುರಿತು ಈ ವರದಿ ಚರ್ಚಿಸುವುದಿಲ್ಲ. (ಮತದಾನ ಸಮಿತಿಯ) ವರದಿಯ ೨೪ನೇ ಪ್ಯಾರ, ಸಮಿತಿ ದುರ್ಬಲ ವರ್ಗಗಳನ್ನು ಉಲ್ಲೇಖಿಸುತ್ತಾ ಇತ್ತು ಎಂದು ಸೂಚಿಸದೆ ಇರುವುದರಿಂದ, ಆ ಆಧಾರದ ಮೇಲೆ ನಾಮಕರಣ ಸ್ಥಾನಗಳ ಪರಿಮಿತಿಯನ್ನು ಸಮರ್ಥಿಸಿದೆ. ಈ ಸಮುದಾಯಕ್ಕೆ ಅವರು ಪ್ರಸ್ತಾವಿಸಿದ ಪ್ರಾತಿನಿಧ್ಯದ ಪ್ರಮಾಣ ಹೀಗಿವೆ. (ನೋಡಿ ಮುಂದಿನ ಪುಟ)

ಈ ಅಂಕಿ ಅಂಶಗಳೇ ವಾಸ್ತವಾಂಶಗಳನ್ನು ಸೂಚಿಸುತ್ತದೆ. ಬ್ರಿಟಿಶ್ ಭಾರತದ ಒಟ್ಟು ಜನಸಂಖ್ಯೆಯ ಐದನೆಯ ಒಂದರಷ್ಟಿರುವ ಜನರಿಗೆ ವಾಸ್ತವಾಗಿ ಇರುವ ೮೦೦ ಸ್ಥಾನಗಳಲ್ಲಿ ೭ ಸ್ಥಾನಗಳನ್ನು ವಿತರಿಸಬೇಕು ಎಂದು ಇವು ಸೂಚಿಸುತ್ತವೆ. ಈ ಎಲ್ಲ ಕೌನ್ಸಿಲ್‌ಗಳಲ್ಲಿಯೂ ದುರ್ಬಲ ವರ್ಗಗಳವರ ಹಿತಾಸಕ್ತಿಗಳನ್ನು ಮನಸ್ಸಿನಲ್ಲಿರಿಸಿಕೊಳ್ಳುವವರೆಂದು ನಿರೀಕ್ಷಿಸಬಹುದಾದ ಅಧಿಕಾರಗಳ ಸಂಖ್ಯೆ ಸುಮಾರು ಆರನೆಯ ಒಂದರಷ್ಟು ಇರುತ್ತದೆಂಬುದು ಸತ್ಯ. ಆದರೆ ನಮ್ಮ ಅಭಿಪ್ರಾಯದಲ್ಲಿ, ಸುಧಾರಣೆಗಳ ಮೇಲಿನ ವರದಿ ಯಾವ ಧ್ಯೇಯ ಹೊಂದಿದೆಯೋ ಅದನ್ನು ಸಾಧಿಸಲು ಈ ವ್ಯವಸ್ಥೆ ಏನೂ ಸಾಲದು. ದುರ್ಬಲ ವರ್ಗಗಳವರು ಸ್ವರಕ್ಷಣೆಯ ಪಾಠವನ್ನು ಕಲಿಯಬೇಕಾಗಿದೆಯೆಂದು ವರದಿಯ ಲೇಖಕರು ಹೇಳಿದ್ದಾರೆ. ೬೦ ರಿಂದ ೯೦ರಷ್ಟು ಪರಿಶುದ್ಧ ಜಾತಿಯ ಹಿಂದೂಗಳಿರುವ ಅಸೆಂಬ್ಲಿಯಲ್ಲಿ ಸಮುದಾಯದ ಒಬ್ಬನೇ ವ್ಯಕ್ತಿಯನ್ನು ಸೇರಿಸುವುದರಿಂದ ಈ ಫಲಿತಾಂಶವನ್ನು ನಿರೀಕ್ಷಿಸುವುದು ಸಾಧ್ಯ ಎಂದು ಆಶಿಸುವುದು ನಿಜವಾಗಿಯೂ ಭ್ರಮೆಯೇ ಸರಿ. ವರದಿಯ ೧೫೧, ೧೫೨ ಹಾಗೂ ೧೫೫ನೇ ಪ್ಯಾರಾಗಳ ಸಿದ್ಧಾಂತಗಳ ಉಪಯೋಗ ಮಾಡಿಕೊಳ್ಳಲು ನಾವು ಹೊರಜಾತಿಗಳವರತ್ತ ಹೆಚ್ಚು ಹೆಚ್ಚು ಉದಾರವರ್ತನೆ ತೋರಿಸಬೇಕಾಗಿದೆ.

(೮೨) ಸೌತ್ ಬರೋ ಸಮಿತಿಯ, ಪ್ರಾತಿನಿಧ್ಯದ ವಿಚಾರದಲ್ಲಿ ದುರ್ಬಲ ವರ್ಗಗಳವರೊಂದಿಗೆ

| ಪ್ರಾಂತ | ಒಟ್ಟು ಜನಸಂಖ್ಯೆ (ಮಿಲಿಯನ್ ಗಳಲ್ಲಿ) | ದುರ್ಬಲವರ್ಗ ಗಳವರ ಜನ ಸಂಖ್ಯೆ (ಮಿಲಿ ಯನ್ ಗಳಲ್ಲಿ) | ಒಟ್ಟು ಸ್ಥಾನ ಗಳು | ದುರ್ಬಲವರ್ಗ ಗಳಿವರಿಗಾಗಿ ಇರುವ ಸ್ಥಾನಗಳು |
|---|---|---|---|---|
| ಮದ್ರಾಸ್ | ೩೯.೮ | ೬.೩ | ೧೨೦ | ೨ |
| ಮುಂಬಯಿ | ೧೯.೫ | ೦.೬ | ೧೧೩ | ೧ |
| ಬಂಗಾಳ | ೪೫.೦ | ೯.೯ | ೧೨೭ | ೧ |
| ಸಂಯುಕ್ತ ಪ್ರಾಂತಗಳು | ೪೭.೦ | ೧೦.೧ | ೧೨೦ | ೧ |
| ಪಂಜಾಬು | ೧೯.೫ | ೧.೭ | ೮೫ | ..... |
| ಬಿಹಾರ ಮತ್ತು ಒರಿಸ್ಸಾ | ೩೨.೪ | ೯.೩ | ೧೦೦ | ೧ |
| ಕೇಂದ್ರ ಪ್ರಾಂತಗಳು | ೧೨.೦ | ೩.೭ | ೭೨ | ೧ |
| ಅಸ್ಸಾಮು | ೬.೦ | ೦.೩ | ೫೪ | ..... |
| **ಒಟ್ಟು** | **೨೨೧.೨** | **೪೧.೯** | **೭೯೧** | **೭** |

ನ್ಯಾಯವಾಗಿ ನಡೆದುಕೊಂಡಿಲ್ಲ ಎಂಬುದನ್ನು ಸಂಯುಕ್ತ ಆಯ್ಕೆ ಸಮಿತಿ ಕೂಡ ಗುರುತಿಸಿದೆ. ಏಕೆಂದರೆ ಸಮಿತಿ ತನ್ನ ವರದಿಯಲ್ಲಿ ಹೀಗೆ ಹೇಳಲೇಬೇಕಾಗಿ ಬಂದಿದೆ. "ದುರ್ಬಲ ವರ್ಗಗಳವರಿಗಾಗಿ ಪ್ರಸ್ತಾವಿಸಲಾದ ಪ್ರಾತಿನಿಧ್ಯ ಯಥೋಚಿತವಾಗಿಲ್ಲ. ಮತದಾನ ಸಮಿತಿಯ ವರದಿಯಲ್ಲಿ ತೋರಿಸಲಾದಂತೆ ಭಾರತದ ಸಮಗ್ರ ಜನಸಂಖ್ಯೆಯ ಬಹುಭಾಗ ಈ ವ್ಯಾಖ್ಯೆಯ ಒಳಗೆಯೇ ಸೇರುತ್ತದೆ. ಈ ವ್ಯಾಖ್ಯೆ ಸೂಚಿಸುವಂತೆ, ಪ್ರತಿಯೊಂದು ಆಧಿಪತ್ಯದಲ್ಲಿರುವ ದುರ್ಬಲ ವರ್ಗಗಳವರ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಹಾಗೂ ಸ್ಥಳೀಯ ಸರ್ಕಾರಗಳೊಡನೆ ಸಮಾಲೋಚನೆ ನಡೆಸಿದ ಅನಂತರ, ನಾಮಕರಣದ ಮೂಲಕ ಇಂಥ ವರ್ಗಗಳ ಜನರಿಗೆ ಪ್ರಾತಿನಿಧ್ಯದ ಅಧಿಕ ಪಾಲನ್ನು ನೀಡುವಂತೆ ಭಾರತ ಸರ್ಕಾರಕ್ಕೆ ತಿಳಿಸ ಬೇಕಾದ್ದು ಯೋಗ್ಯವೆಂದು ವರದಿಯ ಲೇಖಕರು ಭಾವಿಸಿದ್ದಾರೆ. ಅಗತ್ಯವೆನಿಸಿದ ಪಕ್ಷದಲ್ಲಿ ಈ ಪ್ರಾತಿ ನಿಧ್ಯವು ಸಾಮಾನ್ಯ ಮತದಾರ ಸಮುದಾಯಕ್ಕೆ ಸೇರ್ಪಡೆಯಾಗಿರಬೇಕು. ಆದರೆ ಅದಕ್ಕಿಂತ ಕಮ್ಮಿಯಾಗಿರ ಬಾರದು. ಹಾಗಿದ್ದರೂ ಇವೆಲ್ಲ ಉಪಯೋಗವಾಗಲಿಲ್ಲ. ದುರ್ಬಲ ವರ್ಗಗಳವರ ಸೌತ್ ಬರೋ ಸಮಿತಿ ಮಾಡಿದ ತಪ್ಪನ್ನು ಸರಿಪಡಿಸುವುದಾಗದೆ ಅದು ಹಾಗೆಯೇ ಉಳಿದುಬಿಟ್ಟಿತು. ಈಗಿನದು ದುರ್ಬಲ ವರ್ಗಗಳವರಿಗೆ ಅತಿಯಾದ ಪ್ರಾತಿನಿಧ್ಯ ನೀಡುವ ವಿಚಾರವೇನೂ ಅಲ್ಲ. ಇದು ಹಿಂದೆ ಮಾಡಿದ ತಪ್ಪನ್ನು ಸರಿಪಡಿಸುವ ಪ್ರಯತ್ನವಷ್ಟೇ ಆಗಿರುತ್ತದೆ. ಪ್ರಾತಿನಿಧ್ಯದ ಪ್ರಮಾಣವನ್ನು ಸೂಚಿಸುವಲ್ಲಿ, ಅವಿವೇಕದ್ದೆಂಬ ವಿರೋಧಕ್ಕೆ ಇದು ಮುಕ್ತವಾಗಿದೆಯೆಂದೂ ಹೇಳಲು ಸಾಧ್ಯವಿಲ್ಲ. ಏಕೆಂದರೆ "ಇವೆರಡೂ ವರ್ಗಗಳ (ಎಂದರೆ ಕಾರ್ಮಿಕ ವರ್ಗ ಮತ್ತು ದುರ್ಬಲ ವರ್ಗಗಳ) ಹಿತಾಸಕ್ತಿಗಳು ಇನ್ನಷ್ಟು ಪ್ರಾತಿನಿಧ್ಯ ಪಡೆಯಬೇಕಾದುದು ಅಪೇಕ್ಷಣೀಯವೆಂಬ ವಾಸ್ತವಾಂಶವನ್ನು ಸಾಮಾನ್ಯವಾಗಿಯೇ ಗಮನಿಸಲಾಗಿತ್ತು" ಎಂದು ಹೇಳಿದ, ಹಾಗೂ "ಈ ದೃಷ್ಟಿಕೋನ ತನಗೆ ಒಪ್ಪಿಗೆಯಾಗಿದೆ" ಎಂದು ಸ್ವತಃ ಅಭಿವ್ಯಕ್ತಿಸಿದ

ಮಡಿಮನ್ ಸಮಿತಿ ಕೂಡ ವಿಧಾನ ಪರಿಷತ್ತಿನಲ್ಲಿ ಅವರಿಗೆ ೧೧೩ ಸ್ಥಾನಗಳಲ್ಲಿ ೧೧ ಸ್ಥಾನಗಳನ್ನು ನೀಡುವ ಪ್ರಸ್ತಾವ ಮಾಡಿದೆ. ೧೧೩ರಲ್ಲಿ ೧೧ ಸ್ಥಾನಗಳು ವಿವೇಕಯುತವಾದ ವಿತರಣೆಯಾಗಿದ್ದ ಪಕ್ಷದಲ್ಲಿ ಆಗ ೧೪೦ರಲ್ಲಿ ೧೫ ಎಂಬುದನ್ನು ತುಂಬ ಹಾಳತವೆಂದು ಒಪ್ಪಿಕೊಳ್ಳಬೇಕಾಗಿದೆ. ಈ ೧೫ರ ದೇಯಾಂಶವು ಅಧಿಕವೆಂದು ತೋರುವುದಕ್ಕೆ ಪ್ರಾರಂಭಿಕ ಪಾಲು ಕಮ್ಮಿಯಾಗುತ್ತೆಂಬುದೊಂದೇ ಕಾರಣ. ಪ್ರಮಾಣಾನುಗುಣವಾಗಿಲ್ಲವೆಂಬ ಕಾರಣಕ್ಕಾಗಿ ಈ ೧೫ರ ದೇಯಾಂಶವನ್ನು ವಿರೋಧಿಸುವವರು ಆದರ್ಶ ಪ್ರಮಾಣವೆಂದು ತಾವು ಅನ್ವಯಿಸುತ್ತಿರುವ ಸ್ಥಾನಗಳ ಪ್ರಾರಂಭಿಕ ದೇಯಾಂಶವು ನ್ಯಾಯಯುತವಾಗಿಯಾಗಲಿ, ಸಮಂಜಸವಾಗಿಯಾಗಲಿ ಇಲ್ಲವೆಂಬುದನ್ನು ಮರೆತುಬಿಟ್ಟಿರುತ್ತಾರೆ.

(೮೩) ಇಲ್ಲಿ ಇನ್ನೊಂದು ವಿಚಾರವನ್ನು ಸ್ಪಷ್ಟಪಡಿಸಬೇಕಾಗಿದೆ. ಮಹಮದೀಯ ಸಮುದಾಯಕ್ಕೆ ವಿತರಿಸಬೇಕಾದ ಸ್ಥಾನಗಳ ಪ್ರಶ್ನೆಯನ್ನು ಕುರಿತು ಚರ್ಚಿಸಿದ ತಮ್ಮ ವರದಿಯ ೧೬ನೇ ಪ್ಯಾರಾದಲ್ಲಿ ನನ್ನ ಸಹೋದ್ಯೋಗಿಗಳೂ ಹೀಗೆಂದಿದ್ದಾರೆ: "ನಮ್ಮಲ್ಲಿ ಇಬ್ಬರು ಸದಸ್ಯರು, ಸರ್ದಾರ್ ಮಜುಮ್‌ದಾರ್ ಹಾಗೂ ಡಾ. ಅಂಬೇಡ್ಕರ್ ಅವರು, ಎಲ್ಲ ಸರಕಾರಗಳಿಗೂ ಸಂಬಂಧಪಟ್ಟಂತೆ ಲಖ್ನೊ ಒಪ್ಪಂದ ನಿಂತಿರುವಷ್ಟು ದೀರ್ಘ ಕಾಲದವರಿಗೆ ಈ ವ್ಯವಸ್ಥೆ ಉಳಿಯಬಲ್ಲದು ಎಂಬ ಅಭಿಪ್ರಾಯ ಹೊಂದಿದ್ದಾರೆ." ನನ್ನ ಬಗ್ಗೆ ನನ್ನ ಸಹೋದ್ಯೋಗಿಗಳು ತಪ್ಪು ತಿಳುವಳಿಕೆ ಹೊಂದಿರುತ್ತಾರೆ. ಆದ್ದರಿಂದ ನನ್ನನ್ನು ತಪ್ಪು ರೀತಿಯಲ್ಲಿ ಬಿಂಬಿಸಿದ್ದಾರೆ. ನಾನು ಎತ್ತಿ ತೋರಿಸಲು ಬಯಸಿರುವುದಾದರೂ ಏನು? ಕೋಮುವಾರು ಮತದಾರ ಸಮುದಾಯಗಳನ್ನಾಗಲಿ ಮಹಮದೀಯರಿಗೆ ನೀಡಬೇಕಾದ ಸ್ಥಾನಗಳ ಸಂಖ್ಯೆಯನ್ನಾಗಲೀ ಅವರು ಸಮರ್ಥಿಸದೆ ಇರುವುದರಿಂದ ಇದು ಲಖ್ನೊ ಒಪ್ಪಂದವನ್ನೇ ಅನುಸರಿಸಿದೆ ಎಂದು ತಮ್ಮ ವರದಿಯಲ್ಲಿ ಅವರು ಹೇಳಿದ್ದರೆ ಉತ್ತಮವಾಗುತ್ತಿತ್ತು. ನನ್ನ ಬಗ್ಗೆ ನನ್ನ ಸಹೋದ್ಯೋಗಿಗಳು ವರದಿ ಮಾಡಿದ ವಿಧಾನ ನಾನು ಲಖ್ನೊ ಒಪ್ಪಂದವನ್ನು ಬೆಂಬಲಿಸುತ್ತಿದ್ದೇನೆ ಎಂದು ಸೂಚಿಸುವಂತೆ ಕಾಣುತ್ತದೆ. ಇಂಥ ಸೂಚನೆ ಅಸಮರ್ಥನೀಯವೆಂದು ಹೇಳಲು ನಾನು ಈ ಅವಕಾಶವನ್ನು ಬಳಸಿಕೊಳ್ಳುತ್ತೇನೆ.

## II. ಸ್ಥಾನಗಳ ಪ್ರದೇಶಾನುಗುಣ ವಿತರಣೆ:

(೮೪) ನನ್ನ ಸಹೋದ್ಯೋಗಿಗಳೊಂದಿಗೆ ಇರುವ ನನ್ನ ಭಿನ್ನಾಭಿಪ್ರಾಯವು ವಿವಿಧ ಅಲ್ಪಸಂಖ್ಯಾತ ವರ್ಗಗಳವರಿಗೆ ನೀಡಬೇಕಾದ ಸ್ಥಾನಗಳ ವಿತರಣೆಯ ಪ್ರಶ್ನೆಗಷ್ಟೇ ಸೀಮಿತವಾಗಿಲ್ಲ. ಬೇರೆ ಬೇರೆ ಮತದಾನ ಕ್ಷೇತ್ರಗಳಲ್ಲಿ ಸ್ಥಾನಗಳನ್ನು ವಿತರಿಸುವ ಪ್ರಶ್ನೆಗೂ ಇದು ವಿಸ್ತರಿಸಿದೆ. ಕೆಲವು ಭಾಗಗಳು ಅತಿ ಪ್ರಾತಿನಿಧ್ಯವನ್ನು ಉಳಿದವು ಅತ್ಯಲ್ಪ ಪ್ರಾತಿನಿಧ್ಯವನ್ನು ಹೊಂದಿರುವುದು, ಈಗ ರಚಿತವಾಗಿರುವಂಥ ಕೌನ್ಸಿಲಿನ ಒಂದು ಅಹಿತಕರ ಲಕ್ಷಣವಾಗಿರುತ್ತದೆ. ಎಷ್ಟರಮಟ್ಟಿಗೆ ಇದೊಂದು ಭಾರೀ ಕೆಡುಕಾಗಿದೆಯೆಂಬುದನ್ನು ಈ ಕೆಳಗಿನ ಅಂಕಿಸಂಖ್ಯೆಗಳು ಸ್ಪಷ್ಟಪಡಿಸುತ್ತವೆ:

(೮೫) ಮೇಲಿನ ತಃಖ್ತೆಯಿಂದ ಸಾಬೀತಾಗುವ ಅಸಮಾನತೆಗಳು ಎಷ್ಟೊಂದು ಗಮನಾರ್ಹವಾಗಿವೆ! ಜನಸಂಖ್ಯೆಯನ್ನು ಆಧಾರವಾಗಿ ತೆಗೆದುಕೊಂಡಾಗ ಮಹಾರಾಷ್ಟ್ರ ಮತ್ತು ಕರ್ನಾಟಕಗಳಿಗೆ ಒಟ್ಟಾರೆ ಕಡಮೆ ಪ್ರಾತಿನಿಧ್ಯ ದೊರೆತಿದೆ. ಗುಜರಾತ್ ಪಡೆದ ಪ್ರಾತಿನಿಧ್ಯವನ್ನು ಆದರ್ಶವಾಗಿ ಅನ್ವಯಿಸಿದಾಗ, ಮಹಾರಾಷ್ಟ್ರ ೪೮ ಸ್ಥಾನಗಳಿಗೂ ಕರ್ನಾಟಕಕ್ಕೆ ೧೭ ಸ್ಥಾನಗಳಿಗೂ ಅವಕಾಶ ಮಾಡಕೊಡಬೇಕಾಗುತ್ತದೆ. ಸ್ಥಾನಗಳ ವಿತರಣೆಯ ಆಧಾರವಾಗಿ ಭೂಕಂದಾಯವನ್ನೇ ತೆಗೆದುಕೊಂಡಾಗ್ಯೂ ಮಹಾರಾಷ್ಟ್ರ ಮತ್ತು ಕರ್ನಾಟಕಗಳೊಡನೆ ನ್ಯಾಯವಲ್ಲದ ರೀತಿಯಲ್ಲಿ ವ್ಯವಹರಿಸಿದ್ದು ನಿಸ್ಸಂದೇಹವಾಗಿ ತಿಳಿದು

| | ಪ್ರದೇಶ (ಚ.ಮೈ. ಲಿಗಳಲ್ಲಿ | ಜನ ಸಂಖ್ಯೆ | ೧೯೨೫–೨೬ಕ್ಕಾಗಿ ಭೂಕಂದಾಯ ಬೇಡಿಕೆ | ಸದ್ಯ ಕೌನ್ಸಿಲಿನಲ್ಲಿ ಸ್ಥಾನಗಳ ಸಂಖ್ಯೆ |
|---|---|---|---|---|
| ಮಹಾರಾಷ್ಟ್ರ | ೪೭,೮೫೪ | ೮,೫೩೬,೨೧೭ | ೨,೧೮,೧೮,೧೫೫ | ೨೫ |
| ಗುಜರಾತ್ | ೧೦,೧೧೮ | ೨,೯೫೮,೬೮೯ | ೯೯,೪೧,೨೬೪ | ೧೬ |
| ಕರ್ನಾಟಕ | ೧೮,೮೭೦ | ೩,೧೮೮,೫೨೩ | ೮೨,೯೧,೨೨೫ | ೮ |
| ಸಿಂಧ್ | ೪೪,೫೦೬ | ೩,೨೭೯,೩೭೭ | ೧,೦೩,೮೫,೦೩೧ | ೧೯ |

ಬರುತ್ತದೆ. ಏಕೆಂದರೆ ಈ ಆಧಾರದ ಮೇಲೆಯೂ ಮಹಾರಾಷ್ಟ್ರ ೩೨ ಸ್ಥಾನಗಳನ್ನೂ ಕರ್ನಾಟಕ ೧೫ ಸ್ಥಾನಗಳನ್ನೂ ಪಡೆಯಬೇಕಾಗುತ್ತದೆ. ಸಮಾನ ಚುನಾಯಕ ಹಕ್ಕುಗಳಿಗಾಗಿ ಒತ್ತಾಯಿಸುವುದು ಕೇವಲ ಭಾವೋದ್ವೇಗಪೂರ್ಣ ಕೋರಿಕೆಯಾಗಲೀ ಕರಾರುವಾಕ್ ಆದ ಚುನಾಯಕ ಹಕ್ಕಿನ ಸಾಮಂಜಸ್ಯದ ಬಗೆಗಿನ ಬೇಡಿಕೆಯಾಗಲೀ ಅಲ್ಲ. ಇದರ ಹಿಂದೆ ಹೆಚ್ಚಿನ ಸೈದ್ಧಾಂತಿಕ ಸಮರ್ಥನೆಯೂ ಇದೆ. ಏಕೆಂದರೆ ಒಂದು ಮತದಾನ ಕ್ಷೇತ್ರದಲ್ಲಿ ಅಧಿಕವಾಗಿರುವ ಮತದ ಮೌಲ್ಯವು ಇನ್ನೊಂದು ಮತದಾನ ಕ್ಷೇತ್ರದಲ್ಲಿ ಕಮ್ಮಿಯಾಗಿರಲು ಸಾಧ್ಯವಾಗಿರುವಂತಹ ಒಂದು ವ್ಯವಸ್ಥೆಯಲ್ಲಿ, ಸಮುದಾಯದ ಪ್ರತಿ ಸದಸ್ಯನೂ ಆಳುವವರನ್ನು ಆಯ್ಕೆ ಮಾಡುವಲ್ಲಿ, ಇತರರು ಹೊಂದಿರುವಷ್ಟೇ ಪಾಲನ್ನು ಪಡೆದಿರುವುದಿಲ್ಲ. ಆದರೆ ಎಲ್ಲ ಮತಗಳೂ ನಿಶ್ಚಿತವಾಗಿ ಸಮಾನವೆಂಬ ಸಿದ್ಧಾಂತವನ್ನು ರಾಜಕೀಯ ನ್ಯಾಯದ ಮೂಲಭೂತ ಸಿದ್ಧಾಂತವಾಗಿ ಪರಿಗಣಿಸಿದಾಗ್ಯೂ, ಈ ರೀತಿಯ ವ್ಯತ್ಯಾಸವು, ದೇಶದ ಒಂದು ಭಾಗದಲ್ಲಿ ಅಧಿಕ ಪ್ರಾತಿನಿಧ್ಯದ ದುಷ್ಪರಿಣಾಮಗಳನ್ನು ಉಂಟುಮಾಡದೆ ಇರುವುದಿಲ್ಲ. ಅಥವಾ ಒಂದು ಬಗೆಯ ಅಭಿಪ್ರಾಯಗಳಿಗಾಗಲಿ, ಹಿತಾಸಕ್ತಿಗಳಿಗಾಗಲಿ, ಇತರರ ಹಿತಾಸಕ್ತಿಗಳಿಗೆ ವಿರುದ್ಧವಾಗಿರದೆ ಇರುವುದಿಲ್ಲ. ಸ್ಥಾನಗಳನ್ನು ವಿತರಿಸುವ ಪ್ರಸ್ತುತ ವಿಧಾನದಿಂದಾಗಿ, ಶಾಸಕಾಂಗ ಹಾಗೂ ಕಾರ್ಯಾಂಗಗಳ ಮಹತ್ವವು ಅನುಚಿತ ರೀತಿಯಲ್ಲಿ ಕೇಂದ್ರೀಕೃತವಾಗಿದೆ ಎಂಬುದನ್ನು ಅನುಭವವೇ ತೋರಿಸಿದೆ. ಫಲಿತಾಂಶವಾಗಿ ಪ್ರಾಂತ್ಯದ ಕೆಲವು ಭಾಗಗಳಿಗೆ ಮಾತ್ರ ಪ್ರಾತಿನಿಧ್ಯ ಸಿಕ್ಕಿದೆ. ಇತರ ಭಾಗಗಳು ಸರ್ಕಾರದ ಗಮನದಿಂದ ಹಾಗೂ ಸಮಾನ ಪಾಲು ನೀಡಬೇಕೆಂಬ ಪರಿಗಣನೆಯಿಂದ ವಂಚಿತವಾಗಿದೆ. ಈ ವಾಸ್ತವಿಕ ದೃಷ್ಟಿಕೋನದಿಂದ ಹೇಳುವುದಾದರೆ, ಸ್ಥಾನಗಳ ಪ್ರಸ್ತುತ ವಿತರಣೆ ಅಸಮಾಧಾನಕರವಾಗಿದೆ. ಯಾವುದೇ ಬಗೆಯಲ್ಲಿ ಇದನ್ನು ಸಮರ್ಥಿಸುವಂತಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳು, ತಮ್ಮ ಜನಸಂಖ್ಯೆಗಳ ಕಾರಣದಿಂದಾಗಿ ತಾವು ಹೇರಬಹುದಾದಷ್ಟು ಒತ್ತಾಯವನ್ನು ಈ ಪ್ರಾಂತ್ಯದ ಸರ್ಕಾರದ ಮೇಲೆ ಎಂದಿಗೂ ಹೇರಲಾರವು. ಕರ್ನಾಟಕದ ನಿದರ್ಶನವೇ ಸೂಚಿಸುವಂತೆ, ಇದು ಗಂಭೀರವಾಗಿ ಪರಿಗಣಿಸಬೇಕಾದ ವಾಸ್ತವಿಕ ತೊಂದರೆಯಾಗಿದೆ. ವಿಧಾನಪರಿಷತ್ತಿನ ಜವಾಬ್ದಾರಿಯುತ ಲಕ್ಷಣಗಳು ಹೆಚ್ಚಿದಂತೆ ಈ ತೊಂದರೆಯೂ ಹೆಚ್ಚಾಗುವುದು ಅನಿವಾರ್ಯ. ಅದರೊಂದಿಗೆ ಸಾರ್ವಜನಿಕ ವ್ಯವಹಾರಗಳ ಮೇಲೆ ಅದು ಬೀರುವ ಪ್ರಭಾವವೂ ಹೆಚ್ಚಾಗುತ್ತದೆ. ಆದ್ದರಿಂದ ಭಾವನೆಯ ಕಹಿ ತೊಡೆದುಹೋಗುವ ಬದಲು ಅದು ಹೆಚ್ಚು ಹೆಚ್ಚು ತೀಕ್ಷ್ಣವಾಗುತ್ತದೆ ಎಂಬ ಭಯಕ್ಕೆ ಕಾರಣವುಂಟು. ಹೀಗಾಗಿ ಸರ್ಕಾರವನ್ನು ಪ್ರಾತಿ

ನಿಧಿಕವನ್ನಾಗಿಯೂ ಜವಾಬ್ದಾರಿಯುತವನ್ನಾಗಿಯೂ ಮಾಡುವ ಅಭಿಪ್ರಾಯದಿಂದ ಸರ್ಕಾರೀ ಯಂತ್ರವನ್ನು ಕೂಲಂಕಷವಾಗಿ ಪರೀಕ್ಷಿಸುವ ಸಮಯದಲ್ಲಿಯೇ ಈ ತೊಂದರೆಯನ್ನು ನೇರ್ಪಡಿಸಬೇಬೇಕಾದ್ದು ಸೂಕ್ತವಾಗಿರುತ್ತದೆ.

(೮೬) ಪ್ರಾಂತ್ಯದ ಕೆಲವು ಭಾಗಗಳಲ್ಲಿ ಅಧಿಕ ಪ್ರಾತಿನಿಧ್ಯವೂ ಇತರ ಭಾಗಗಳಲ್ಲಿ ಕಡಿಮೆ ಪ್ರಾತಿನಿಧ್ಯವೂ ಇರುವ ಕೆಡುಕಿನ ಪರಿಸ್ಥಿತಿಗೆ ಸೌತ್ ಬರೊ ಸಮಿತಿಯೇ ಕಾರಣ. ಅದು ತನ್ನ ಮನಸ್ಸಿಗೆ ಬಂದಂತೆ ಕೆಲಸ ಮಾಡಿತು ಹಾಗೂ ಸ್ಥಾನಗಳ ವಿತರಣೆಯ ವಿಷಯದಲ್ಲಿ ಯಾವುದೇ ನಿರ್ದಿಷ್ಟ ಸಿದ್ಧಾಂತವನ್ನು ಅನುಸರಿಸಲಿಲ್ಲ. ಇದು ವಾಸ್ತವವಾದ ಸಂಗತಿ. ಸ್ಥಾನಗಳ ವಿತರಣೆಯ ವಿಷಯದಲ್ಲಿ ಸಾಧ್ಯವಾದ ಮಟ್ಟಿಗೆ ಏಕರೂಪದ ಸಿದ್ಧಾಂತವೊಂದನ್ನು ಮಂಡಿಸಲು ನನ್ನ ಸಹೋದ್ಯೋಗಿಗಳು ಪ್ರಯತ್ನಿಸದ ಬಗ್ಗೆ ನನಗೆ ಸಂತೋಷ ಉಂಟಾಗಿದೆ. ಆದರೆ, ಸ್ಥಾನಗಳ ವಿತರಣೆಗೆ ಆಧಾರವಾಗಿ ಅತಿ ಕೆಟ್ಟದಾದ ಸಿದ್ಧಾಂತವೊಂದನ್ನು ಅವರು ತೆಗೆದುಕೊಂಡರೆಂಬುದೇ ನನ್ನ ಆಕ್ಷೇಪ. ಖಜಾನೆಗೆ ಕೊಡುಗೆಗಳು, ಮತದಾನದ ಪಟ್ಟಿಯಲ್ಲಿರುವವರ ಸಂಖ್ಯೆ ಹಾಗೂ ಮತದಾನ ಕ್ಷೇತ್ರದ ಜನಸಂಖ್ಯೆ ಇವು ಸ್ಥಾನಗಳ ವಿತರಣೆಗೆ ಆಧಾರವಾಗಿ ಅನ್ವಯಿಸಬಹುದಾದ ಮೂರು ಸಂಭಾವ್ಯ ಪರೀಕ್ಷಾ ಮಾನದಂಡಗಳಾಗಿವೆ. ಈ ಮೂರರಲ್ಲಿ ಮತದಾರರ ಸಂಖ್ಯೆಗೆ ಸಂಬಂಧಿಸಿದ ಪರೀಕ್ಷೆ ಅತ್ಯಂತ ಅನಿಶ್ಚಿತವೂ ಅಸಮರ್ಥನೀಯವೂ ಆಗಿರುತ್ತದೆ. ಮೊದಲನೆಯದಾಗಿ ಮತದಾನವು ಈಗಿರುವ ಹಾಗೆ ತುಂಬ ನಿರ್ಬಂಧಿತವಾದುದಾದರೆ, ಅದು ಶ್ರೀಮಂತರ ಅಧಿಕಾರವೆನಿಸುತ್ತದೆ. ಎಂದರೆ, ಸಂಪತ್ತಿನ ಅರ್ಹತೆಯ ಯಾವುದೇ ಸ್ವೇಚ್ಛಾನುಸಾರವಾದ ಪರೀಕ್ಷಾ ಪ್ರಮಾಣದ ಆಧಾರದ ಮೇಲೆ ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮತದಾರರ ಮೂಲಭೂತ ದೇಯಾಂಶ ಇಲ್ಲದೆ ಹೋದಲ್ಲಿ ಆ ಪ್ರದೇಶಕ್ಕೆ ಪ್ರಾತಿನಿಧ್ಯ ಸಿಗುವುದಿಲ್ಲ. ಇದು ಮತದಾರರ ಸಂಖ್ಯೆಗೆ ಸಂಬಂಧಿಸಿದ ಪರೀಕ್ಷೆಯನ್ನು ಅನುಸರಿಸಿ ಉಂಟಾಗುವ ಅನಿವಾರ್ಯ ಪರಿಣಾಮವಾಗಿರತಕ್ಕದ್ದು ಎಂಬುದು ದುರ್ಬಲ ವರ್ಗಗಳವರಿಗಾಗಿ ಬಹುಸಂಖ್ಯಾತ ವರ್ಗದವರು ಸೂಚಿಸಿರುವ ವಿತರಣೆಯಿಂದ ಸ್ಪಷ್ಟವಾಗಿದೆ. ಇದರ ಅನುಸಾರ ಕೆಲವು ಪ್ರದೇಶಗಳಲ್ಲಿನ ದುರ್ಬಲ ವರ್ಗಗಳವರು ಅಧಿಕ ಪ್ರಾತಿನಿಧ್ಯ ಹೊಂದಿರುತ್ತಾರೆ. ರಾಜ್ಯದ ಇತರ ಭಾಗಗಳವರಿಗೆ, ಯಾವುದೇ ಪ್ರಾತಿನಿಧ್ಯ ಇರುವುದಿಲ್ಲ. ಇಂಥ ಅಸಂಗತ ಫಲಿತಾಂಶಗಳನ್ನುಂಟುಮಾಡುವ ಸಿದ್ಧಾಂತವನ್ನು ಸಮರ್ಥಿಸಲು ಸಾಧ್ಯವಿಲ್ಲವೆಂದು ಭಾವಿಸಿ ತಳ್ಳಿ ಹಾಕಬೇಕು. ಕಂದಾಯವು ಮತದಾನ ಸಮುದಾಯಗಳ ಪರೀಕ್ಷಾ ಪ್ರಮಾಣಕ್ಕಿಂತ ಉತ್ತಮವಾಗಿರುವ ಪರೀಕ್ಷಾ ಪ್ರಮಾಣವಾಗಿರುತ್ತದೆ. ಏಕೆಂದರೆ ಸರ್ಕಾರದ ಮೇಲೆ ಪ್ರಭಾವ ಬೀರುವ ಅಧಿಕಾರವು ಸರ್ಕಾರಕ್ಕೆ ಪಾವತಿ ಮಾಡಲಾಗುವ ಕಂದಾಯಕ್ಕೆ ಸಮಪ್ರಮಾಣದ್ದಾಗಿರಬೇಕು ಎಂದು ವಾದಿಸಬಹುದು. ಗಳಿಸಿದ ಎಲ್ಲ ಆದಾಯವನ್ನು ತೆರಿಗೆಯಾಗಿ ಸರ್ಕಾರಕ್ಕೆ ನೀಡಬೇಕಾಗಿಲ್ಲವಾದ್ದರಿಂದ ಮೋಸವಾದುದು ಹಾಗೂ ಅಸಮಂಜಸವಾದುದು ಎಂಬ ಕಾರಣವನ್ನು ಮುಂದಿರಿಸಿ ಈ ಪರೀಕ್ಷೆಯನ್ನು ನಿರಾಕರಿಸಬೇಕು. ರಾಷ್ಟ್ರದ ನಿಜವಾದ ಆದಾಯವೆಷ್ಟೆಂದು ತಿಳಿಯುವುದು ಕಷ್ಟವೆಂಬುದೂ ವಾಸ್ತವ ಸಂಗತಿ. ಭಾರೀ ಆದಾಯವನ್ನು ಗಳಿಸುವವರಿರುವ ಒಂದು ಮತದಾನ ಕ್ಷೇತ್ರವು, ಆ ಆದಾಯವು ತೆರಿಗೆಯ ರೂಪದಲ್ಲಿ ಇನ್ನೊಂದು ಕ್ಷೇತ್ರದಲ್ಲಿ ಪಾವತಿಯಾಗುವ ಕಾರಣದಿಂದಾಗಿ, ಸ್ಥಾನಗಳ ವಿತರಣೆಗೆ ಸಂಬಂಧಿಸಿದಂತೆ ಕೊರತೆಯನ್ನು ಅನುಭವಿಸಬಹುದು. ಆದರೆ ಈ ಎರಡು ಪರೀಕ್ಷೆಗಳಿಗೂ ಬಹಳ ಮುಖ್ಯವಾದ ವಿರೋಧವೊಂದಿದೆ. ರಾಷ್ಟ್ರವು ಮತದಾರರ ಅಥವಾ ತೆರಿಗೆ ಪಾವತಿ ಮಾಡುವವರ ಉಪಯುಕ್ತತೆಗಾಗಿ ಇರುವುದಿಲ್ಲ. ಅದು ತನ್ನ ಬಲಪ್ರಯೋಗ ಕ್ರಿಯೆಯನ್ನು ಈ ಎರಡು ವರ್ಗಗಳವರಿಗಾಗಿ ಮಾತ್ರ ಸೀಮಿತಗೊಳಿಸಿರುವುದಿಲ್ಲ.

ತೆರಿಗೆದಾರರು, ಚುನಾಯಿತರಷ್ಟೇ ಅಲ್ಲದೆ ರಾಷ್ಟ್ರದ ಎಲ್ಲಾ ಜನಗಳ ಮೇಲೆಯೂ ತನ್ನ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ. ಇದರಿಂದಾಗಿಯೇ ಸ್ಥಾನಗಳ ನ್ಯಾಯಯುತವಾದ ಹಾಗೂ ಸಮಂಜಸ ವಿತರಣೆಗೆ ಜನಸಂಖ್ಯೆಯೊಂದೇ ಸೂಕ್ತ ಪರೀಕ್ಷಾ ಪ್ರಮಾಣವಾಗಿರುತ್ತದೆ. ಇಂಗ್ಲೆಂಡಿನಲ್ಲಿ ಹಾಗೂ ಸರ್ಕಾರದ ಪ್ರಾತಿನಿಧಿಕ ಪದ್ಧತಿಯಿರುವ ಎಲ್ಲ ರಾಷ್ಟ್ರಗಳಲ್ಲಿ ಇದೇ ಪರೀಕ್ಷೆಯನ್ನು ಅನ್ವಯಿಸಲಾಗುತ್ತದೆ. ಬಾಂಬೆ ವಿಧಾನ ಪರಿಷತ್ತಿಗಾಗಿ ಇರುವ ಸ್ಥಾನಗಳನ್ನು ಈ ಆಧಾರದ ಮೇಲೆಯೇ ವಿತರಿಸಬೇಕೆಂದು ನಾನು ಶಿಫಾರಸ್ ಮಾಡುತ್ತೇನೆ.

**III. ಸ್ಥಾನಗಳ ವಿತರಣೆಯ ಇತರ ಅಂಶಗಳು:**

(೮೭) ಅಲ್ಪಸಂಖ್ಯಾತರಿಗಾಗಿ ನನ್ನ ಸಹೋದ್ಯೋಗಿಗಳು ಸೂಚಿಸಿರುವ ಸ್ಥಾನಗಳ ವಿತರಣೆಯಲ್ಲಿ ಕಾಣಬರುವ ತತ್ವದ ಕೊರತೆಯನ್ನು ಬಂಡವಾಳ ಮತ್ತು ಕಾರ್ಮಿಕ ವರ್ಗ ಹಾಗೂ ಭೂ ಮಾಲಿಕರು ಮತ್ತು ಉದ್ದಿಮೆದಾರರು ಇವರುಗಳ ನಡುವೆ ವಿತರಣೆಯಲ್ಲಿಯೂ ಕಾಣಬಹುದು. ಉದ್ದಿಮೆಯ ಮೂಲಕ ಪ್ರತಿನಿಧಿಸಲ್ಪಟ್ಟ ಬಂಡವಾಳಗಾರರಿಗೆ ಅವರು ೧೧ ಸ್ಥಾನಗಳನ್ನು ಕೊಟ್ಟಿದ್ದು ಕಾರ್ಮಿಕರಿಗೆ ನಾಲ್ಕು ಸ್ಥಾನಗಳನ್ನು ಮಾತ್ರ ಕೊಟ್ಟಿರುತ್ತಾರೆ. ಗೇಣಿದಾರರಿಗೆ ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರಯಾಸದಿಂದ ಪಡೆಯ ಬಹುದಾದಷ್ಟರ ಸಾಧ್ಯತೆಯ ಹೊರತು ಇನ್ನೇನನ್ನೂ ಕೊಟ್ಟಿಲ್ಲದಿರುವಾಗ ಭೂಮಾಲಿಕರಿಗೆ ಐದು ಸ್ಥಾನಗಳನ್ನು ಕೊಟ್ಟಿರುತ್ತಾರೆ. ಆದರೆ ಇದು ಸರಿಯಲ್ಲ. ಏಕೆಂದರೆ, ನಾವು ಸಿಂಧ್ ಮತ್ತು ಇತರ ಪ್ರಾಂತ್ಯಗಳ ಸದಸ್ಯರನ್ನು ಪರಿಗಣಿಸಿದಾಗ ಪರಿಷತ್ತಿನಲ್ಲಿ ಭೂಮಾಲಿಕರ ಸ್ಥಾನಗಳು ಸುಲಭವಾಗಿ ನಲವತ್ತಕ್ಕೆ ತಲುಪಬಹುದು. ನನ್ನ ಸಹೋದ್ಯೋಗಿಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಸ್ಥಾನಗಳ ವಿತರಣೆಯನ್ನು ಸರಿಯಾಗಿ ಮಾಡಿದ್ದಾರೆಂದು ಕೂಡ ನಾನು ಹೇಳಲಾರೆ. ಸಧ್ಯದಲ್ಲಿ ಶಾಸಕಾಂಗವು ಹೆಚ್ಚಾಗಿ ಗ್ರಾಮೀಣ ವರ್ಗಗಳ ಅಧೀನದಲ್ಲಿದ್ದು, ಕೃಷಿಕರ ಹೆಸರಿನಲ್ಲಿ ಶಾಶ್ವತ ಆಸ್ತಿ ವ್ಯವಸ್ಥೆ ಮತ್ತು ನೆಲೆಗಳು, ಅಗ್ಗದ ದರದಲ್ಲಿ ನೀರಾವರಿ ಮತ್ತು ಮುಕ್ತ ಅರಣ್ಯ ಮುಂತಾದ ಅಪಾಯಕಾರಿ ಯೋಜನೆಗಳನ್ನು ಕಾನೂನುಬದ್ಧಗೊಳಿಸುವುದಕ್ಕಾಗಿ ಸರಕಾರದ ಅಧಿಕಾರಗಳನ್ನು ದುರುಪಯೋಗಪಡಿಸಿಕೊಳ್ಳುವ ಭಯವಿದೆ. ಇಂತಹ ಯೋಜನೆಗಳನ್ನು ಕಾನೂನಿನ ವ್ಯಾಪ್ತಿಯಿಂದ ಹೊರಗಿಡಬೇಕಾದರೆ ನಗರ ವರ್ಗಗಳಿಗೆ ಅವರ ಸಾಮರ್ಥ್ಯ ಮತ್ತು ಕೊಡುಗೆಗಳಿನುಗುಣವಾದ ಪ್ರಮಾಣದಲ್ಲಿ ಅವರ ಪ್ರಾತಿನಿಧ್ಯವನ್ನು ಹೆಚ್ಚಿಸುವ ಅವಶ್ಯಕತೆ ಇದೆ. ನನ್ನ ಸಹೋದ್ಯೋಗಿಗಳು ಪ್ರಾಂತದ ವಿವಿಧ ಭಾಗಗಳ ನಡುವೆ ಸ್ಥಾನಗಳ ವಿತರಣೆಯ ಕಾರ್ಯವನ್ನು ಒಂದು ಪ್ರತ್ಯೇಕ ಸಮಿತಿಗೆ ಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಅವರು ದುರ್ಬಲ ವರ್ಗಗಳಿಗೆ ನ್ಯಾಯ ದೊರಕಿಸಿಕೊಡುವುದರಲ್ಲಿ ಯಶಸ್ವಿಯಗಿದ್ದಾರೆಂದು ನಾನು ಹೇಳಲಾರೆ. ಈ ಸಮಸ್ಯೆಯನ್ನು ನಿರ್ವಹಿಸುವುದಕ್ಕಾಗಿ ಒಂದು ಪ್ರತ್ಯೇಕ ಸಮಿತಿಯನ್ನು ನೇಮಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

**IV. ಸ್ಥಾನಗಳು ಮತ್ತು ವಸತಿ ಅರ್ಹತೆ:**

(೮೮) ಮುಂಬಯಿ ಚುನಾವಣಾ ನಿಯಮ ೬(೧) (ಬಿ)ಯ ಪ್ರಕಾರ ವಿಧಾನ ಪರಿಷತ್ತಿಗೆ ಚುನಾಯಿತರಾಗಬಯಸುವ ಅಭ್ಯರ್ಥಿಗಳಿಗೆ ವಾಸದ ಅಥವಾ ವಸತಿಯ ಅರ್ಹತೆಯನ್ನು ನಿಗದಿ ಮಾಡಲಾಗಿದೆ. ಈ ನಿಯಮ ಹೇಳುವಂತೆ, "ಯಾವುದೇ ಸಾಮಾನ್ಯ ಮತಕ್ಷೇತ್ರವನ್ನು ಪರಿಷತ್ತಿನಲ್ಲಿ ಸದಸ್ಯನಾಗಿ ಪ್ರತಿನಿಧಿಸಲು ಆ ಮತಕ್ಷೇತ್ರದಿಂದ ನಾಮಪತ್ರ ಸಲ್ಲಿಸಲು ಗೊತ್ತುಪಡಿಸಲಾದ ಕೊನೆಯ ದಿನಾಂಕಕ್ಕೆ ಆರು

ತಿಂಗಳ ಕಾಲ ಆ ಮತಕ್ಷೇತ್ರದಲ್ಲಿ ಅಥವಾ ಆ ಮತಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟ ಯಾವುದೇ ವಿಭಾಗದಲ್ಲಿ ವಾಸವಾಗಿರದ ಯಾವುದೇ ವ್ಯಕ್ತಿ ಪರಿಷತ್ತಿಗೆ ಚುನಾಯಿತನಾಗಲು ಅರ್ಹನಾಗಿರುವುದಿಲ್ಲ." ಈ ಪ್ರಾಂತ್ಯದಲ್ಲಿ ಈ ನಿಯಮವನ್ನು (ಅದು ಕೇವಲ ವಾಸಸ್ಥಾನವಾಗಿರದೆ ಅಥವಾ ಆಗಿಂದಾಗ್ಗೆ ಬಂದು ಹೋಗುವುದಾಗಿರದೆ), ಸದ್ಯದಲ್ಲಿ ವಾಸ್ತವಿಕ ಅಥವಾ ರೂಢಿಗತವಾಗಿ ತನ್ನ ಮತಕ್ಷೇತ್ರದಲ್ಲಿ ವಾಸವಾಗಿರತಕ್ಕದ್ದೆಂದು ಅರ್ಥ ಮಾಡಲಾಗಿದೆ. ಈ ಪ್ರಶ್ನೆಯ ಮೇಲೆ ನನ್ನ ತೀರ್ಪನ್ನು ಕೊಡುವ ಮುನ್ನ ಈ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಈ ನಿರ್ಬಂಧನೆಯ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಯಬಯಸುತ್ತೇನೆ. ಅಂದಿನ ಚುನಾವಣಾ ವ್ಯವಸ್ಥೆಯಲ್ಲಿ ನ್ಯಾಯವಾದಿಗಳ ಉದ್ಯೋಗಕ್ಕೆ ಸೇರಿದವರೇ ಹೆಚ್ಚು ಪ್ರಮಾಣದಲ್ಲಿ ಚುನಾವಣೆಗಳಲ್ಲಿ ಜಯ ಗಳಿಸುತ್ತಿರುವುದು ಗಮನಾರ್ಹ ಅಂಶವಾಗಿದೆ. ಒಂದೇ ಕಸುಬು ಅಥವಾ ಉದ್ಯೋಗಕ್ಕೆ ಸೇರಿದವರು ರಾಜಕೀಯ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಸಮಾಜದ ಹಿತದ ದೃಷ್ಟಿಯಿಂದ ಸೂಕ್ತವಲ್ಲ ಎಂದೂ ಸಹ ಅದರಲ್ಲಿ ಹೇಳಲಾಗಿದೆ. ಆದ್ದರಿಂದ ಹೊಸ ಮತ ಕ್ಷೇತ್ರಗಳನ್ನು ರಚಿಸುವಾಗ ಸಮಾಜದ ಇತರ ವರ್ಗದವರು ಮತ್ತು ಕಸುಬಿನವರೂ ಕೂಡ ಪರಿಷತ್ತುಗಳಲ್ಲಿ ಸಾಕಷ್ಟು ಸ್ಥಾನಗಳನ್ನು ಪಡೆಯಲು ಸಹಾಯಕವಾಗುವಂತೆ ಮಾಡುವ ಉದ್ದೇಶವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಗ್ರಾಮೀಣ ಸ್ಥಾನಗಳಿಗೆ ನಿರ್ದಿಷ್ಟ ಅರ್ಹತೆಗಳನ್ನು ನಿಗದಿಗೊಳಿಸುವುದರ ಮೂಲಕ ಇದು ಸಾಧ್ಯ. ಈ ಪ್ರಶ್ನೆಯನ್ನು ಸೌತ್‌ಬರೋ ಸಮಿತಿಯು ಬಹಳ ಜಾಗರೂಕತೆಯಿಂದ ಪರಿಶೀಲಿಸಿತು. ಅವರು ತಮ್ಮ ವರದಿಯ ೨೯ನೆಯ ಪರಿಚ್ಛೇದದಲ್ಲಿ ಕೆಲವು ಸ್ಥಳೀಯ ಸರಕಾರಗಳು, ಎಂದರೆ ಸಂಯುಕ್ತ ಪ್ರಾಂತಗಳು, ಬಿಹಾರ, ಒರಿಸ್ಸಾ ಮತ್ತು ಅಸಾಮ ಸ್ಥಳೀಯ ಸರಕಾರಗಳು ವಸತಿ ಅರ್ಹತೆಯನ್ನು ಸೇರಿಸಲು ಒತ್ತಾಯಿಸಲಿಲ್ಲ. ಆದರೆ ಬಂಗಾಳ, ಮುಂಬಯಿ ಮತ್ತು ಮದ್ರಾಸ್ ಪ್ರಾಂತ್ಯ ಸರಕಾರಗಳು ತಾವು ಪ್ರತಿನಿಧಿಸಬಯಸುವ ಕ್ಷೇತ್ರಗಳಲ್ಲಿ ವಾಸಮಾಡದೇ ಇರುವವರನ್ನು ಅಭ್ಯರ್ಥಿಗಳೆಂದು ಪರಿಗಣಿಸುವುದು ಹೊಸ ಮತದಾರರ ಬಹುಭಾಗದ ಜನರ ಹಿತಾಸಕ್ತಿಗಳಿಗೆ ಅಪಾಯಕಾರಿಯಾಗುವುದೆಂದು ಪ್ರತಿಪಾದಿಸಿದುದಾಗಿ ಹೇಳಲಾಗಿದೆ. ಸೌತ್‌ಬರೋ ಸಮಿತಿಯ ಬಹುಸಂಖ್ಯೆ ಸದಸ್ಯರು ತಾತ್ವಿಕವಾಗಿ ವಸತಿ ಅರ್ಹತೆಗೆ ವಿರೋಧವಾಗಿದ್ದರು. ಆದರೆ ರಾಜೀಸೂತ್ರವಾಗಿ ಅವರು ಮಧ್ಯಪ್ರಾಂತ್ಯಗಳು, ಮುಂಬಯಿ ಮತ್ತು ಪಂಜಾಬ ಪ್ರಾಂತ್ಯಗಳಲ್ಲಿ ಮಾತ್ರ ಈ ನಿರ್ಬಂಧವನ್ನು ಹೇರಲು ನಿರ್ಣಯಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿದರು. ಉಳಿದ ಪ್ರಾಂತಗಳಿಗೆ ಇದನ್ನು ಅನ್ವಯಿಸಲಿಲ್ಲ. ಭಾರತ ಸರಕಾರವು ಸೌತ್‌ಬರೋ ಸಮಿತಿಯ ಶಿಫಾರಸುಗಳ ಮೇಲೆ ತನ್ನ ಅಭಿಪ್ರಾಯವನ್ನು ವ್ಯಕ್ತಮಾಡುವಾಗ ಈ ಶಿಫಾರಸುಗಳನ್ನು ಒಪ್ಪಿಕೊಂಡಿತು. ಆದರೆ ಸಮಿತಿಯು ಈ ನಿರ್ಬಂಧದ ಪರವಾಗಿರುವ ಕೆಲವು ಸ್ಥಳೀಯ ಸರಕಾರಗಳ ಅಭಿಪ್ರಾಯವನ್ನು ಮಾನ್ಯಮಾಡಿ, ಅದಕ್ಕಾಗಿ ಅಷ್ಟೇ ಒತ್ತಾಯ ಮಾಡಿದ ಇತರ ಪ್ರಾಂತ್ಯ ಸರಕಾರಗಳ ಅಭಿಪ್ರಾಯಗಳನ್ನು ನಿರಾಕರಿಸಿರುವುದರಿಂದ ಈ ಶಿಫಾರಸುಗಳು ಭಾರತ ಸರಕಾರವನ್ನು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಸಿದೆ ಎಂದು ಹೇಳಿತು. ಭಾರತ ಸರಕಾರವು ಮಸೂದೆಯ ಕುರಿತ ಸಂಯುಕ್ತ ಸಂಸದೀಯ ಸಮಿತಿ (Joint Parliamentary Committee)ಯು ಚುನಾವಣಾ ಸಮಿತಿಯು ಸೂಚಿಸಿರುವ ಈ ರಾಜೀ ಸೂತ್ರವನ್ನು ಒಪ್ಪಿಕೊಳ್ಳಬೇಕೆಂದು ಶಿಫಾರಸು ಮಾಡಿತು. ಇದರಂತೆ ವಸತಿ ಅರ್ಹತೆಯನ್ನು ಮಧ್ಯ ಪ್ರಾಂತ್ಯಗಳು, ಮುಂಬಯಿ ಮತ್ತು ಪಂಜಾಬ್ ಪ್ರಾಂತ್ಯಗಳಲ್ಲಿ ಮಾತ್ರ ವಿಧಿಸಲಾಯಿತು. ಇದಾದ ನಂತರ ೧೯೨೩ರ ಸಾರ್ವತ್ರಿಕ ಚುನಾವಣೆಗಳ ಮುನ್ನ ಚುನಾವಣಾ ನಿಯಮಗಳಲ್ಲಿ ಮಾಡಲಾದ ಪುನರ್ ಪರಿಶೀಲನೆಯಲ್ಲಿ ಪಂಜಾಬ್ ಪ್ರಾಂತ್ಯದಲ್ಲಿ ಈ ವಾಸದ ಅರ್ಹತೆಯನ್ನು ಕೈಬಿಡಲಾಯಿತೆಂದು ತಿಳಿಸ ಬಯಸುತ್ತೇನೆ. ಪಂಜಾಬ್ ಸರಕಾರದವರೇ ಮಡಿಮನ್ ಸಮಿತಿಗೆ ತಿಳಿಸಿದ ತಮ್ಮ ಅಭಿಪ್ರಾಯದಲ್ಲಿ

ಮೊದಲನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಗ್ರಾಮೀಣ ಪ್ರತಿನಿಧಿಗಳು ಪ್ರವೇಶ ಪಡೆಯುವ ಸಾಧ್ಯತೆಗೆ ಕುಂದುಂಟಾಗದಂತೆ ವಸತಿ ಅರ್ಹತೆಯನ್ನು ತೆಗೆದುಹಾಕಬೇಕೆಂದು ಮತ್ತು ಅದನ್ನು ಪುನಃ ಜಾರಿಗೊಳಿಸಲು ಸಾಕಷ್ಟು ಕಾರಣಗಳಿಲ್ಲ ಎಂದು ತಿಳಿಸಿದರು. ಆದ್ದರಿಂದ ಸಧ್ಯದಲ್ಲಿ ಮುಂಬಯಿ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ಮಾತ್ರ ವಸತಿ ಅರ್ಹತೆ ಜಾರಿಯಲ್ಲಿದೆ. ಮಧ್ಯ ಪ್ರಾಂತ್ಯಗಳಲ್ಲಿ ಈ ನಿಯಮವನ್ನು ಮುಂಬಯಿ ಪ್ರಾಂತ್ಯದಲ್ಲಿ ಅರ್ಥ ಮಾಡಿದಷ್ಟು ಕರಾರುವಾಕ್ಕಾಗಿ ಅರ್ಥ ಮಾಡಿಲ್ಲ. ನನ್ನ ಅಭಿಪ್ರಾಯದಲ್ಲಿ ಭಾರತದ ಇಂತಹ ಮುಂದುವರಿದ ಪ್ರಾಂತ್ಯದಲ್ಲಿ ಇರುವುದಕ್ಕಿಂತಲೂ ಹಿಂದುಳಿದ ಪ್ರಾಂತ್ಯಗಳಲ್ಲಿ ಇದರ ಅವಶ್ಯಕತೆಯನ್ನು ಸಮರ್ಥಿಸುವುದು ಕಷ್ಟವೆನಿಸುವುದು. ಈ ನಿರ್ಬಂಧವನ್ನು ಉಳಿಸಿಕೊಳ್ಳುವುದರಿಂದ ವಿಶೇಷ ಸ್ಥಾನಮಾನ ಹೊಂದಿರುವ ಮತ್ತು ಹೆಚ್ಚಾಗಿ ನಗರ ಭಾಗಗಳಲ್ಲಿರುವ ಯೋಗ್ಯತೆ ಮತ್ತು ಸಾಬೀತಾದ ರಾಜಕೀಯ ಪರಿಶ್ರಮ ಹೊಂದಿರುವ ವ್ಯಕ್ತಿಗಳನ್ನು ಪರಿಷತ್ತುಗಳಿಂದ ಹೊರಗಿಡುವಂತೆ ಆಗಿದೆ ಎಂದು ನನ್ನ ಅಭಿಪ್ರಾಯ. ವಸತಿ ಅರ್ಹತೆಯಿಂದಾಗಿ ಅವರು ಯಾವುದೇ ಕಾರಣದಿಂದಾಗಿ ತಾವು ವಾಸಿಸುತ್ತಿರುವ ಪ್ರದೇಶದಿಂದ ಚುನಾಯಿತರಾಗುವುದು ಸಾಧ್ಯವಿಲ್ಲದೇ ಹೋದಾಗ ಬೇರೆ ಯಾವುದೇ ಪ್ರದೇಶದಿಂದ ಚುನಾವಣೆಗೆ ನಿಲ್ಲುವುದನ್ನು ನಿರಾಕರಿಸಿದಂತಾಗುತ್ತದೆ. ಆದ್ದರಿಂದ ಈ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಈ ವಾಸದ ಅರ್ಹತೆಯನ್ನು ಈಗ ತೆಗೆದುಹಾಕಬೇಕೆಂದು ನಾನು ಶಿಫಾರಸು ಮಾಡುತ್ತೇನೆ.

## ಅಧ್ಯಾಯ–೪

# ಲಕ್ನೋ ಒಪ್ಪಂದ

೮೯. ಕೋಮು ಚುನಾಯಕ ಪದ್ಧತಿಯ ಬದಲು ಸಂಯುಕ್ತ ಚುನಾಯಕ ಪದ್ಧತಿಯನ್ನು ಜಾರಿಗೊಳಿಸುವ ಮತ್ತು ಸ್ಥಾನಗಳ ವಿಂಗಡಣೆಯ ಸಂಬಂಧವಾದ ನನ್ನ ಶಿಫಾರಸುಗಳು ಮಹಮದೀಯ ಸಮುದಾಯದ ಪ್ರಾತಿನಿಧ್ಯದ ಸಂಬಂಧವಾದ ಲಕ್ನೋ ಒಪ್ಪಂದದ ಶರತ್ತುಗಳಿಗೆ ವಿರೋಧವಾಗಿವೆ ಎಂಬ ಅರಿವು ನನಗಿದೆ. ೧೯೧೯ರಲ್ಲಿ ರಚಿಸಲಾದ ನಿಯಮಗಳಂತೆ ನಿಗದಿಸೊಳಿಸಲಾದ ಮಹಮದೀಯ ಸಮಾಜದ ಪ್ರಾತಿನಿಧ್ಯವು ಬಹುಭಾಗ ಲಕ್ನೋ ಒಪ್ಪಂದವೆಂದು ಕರೆಯಲಾದ ಒಪ್ಪಂದದ ಶರತ್ತುಗಳನ್ನೇ ಆಧರಿಸಿದೆ. ಈ ಒಪ್ಪಂದವು ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ೧೯೧೭ರಲ್ಲಿ ಲಕ್ನೋದಲ್ಲಿ ಮಾಡಿಕೊಳ್ಳಲಾದ ಒಪ್ಪಂದದಲ್ಲಿ ಅಡಕವಾಗಿದೆ. ಮುಸ್ಲಿಂ ಲೀಗ್ ಮಹಮದೀಯರ ಪರವಾಗಿ ಮತ್ತು ಕಾಂಗ್ರೆಸ್ ಹಿಂದೂಗಳ ಪರವಾಗಿ ಈ ಒಪ್ಪಂದ ಮಾಡಿಕೊಂಡಿದ್ದವು. ಇದರ ಪ್ರಕಾರ ಮಹಮದೀಯರಿಗೆ ಕೋಮು ಚುನಾಯಕ ಹಕ್ಕನ್ನು ಮತ್ತು ಪ್ರಾಂತ್ಯ ಹಾಗೂ ಕೇಂದ್ರ ಶಾಸಕಾಂಗದಲ್ಲಿ ಬೇರೆ ಬೇರೆ ಪ್ರಮಾಣದ ಸ್ಥಾನಗಳನ್ನು ಕೊಡಮಾಡಲಾಗಿತ್ತು. ಮಹಮದೀಯರ ಪ್ರಾತಿನಿಧ್ಯದ ಬಗ್ಗೆ ನಾನು ಮಂಡಿಸಿರುವ ಅಭಿಪ್ರಾಯಗಳು ಈ ಒಪ್ಪಂದವನ್ನು ಬುಡಮೇಲು ಮಾಡುವಂತಿರುವುದು ನನಗೆ ಗೊತ್ತಿದೆ. ಮತ್ತು ಈ ಒಪ್ಪಂದವನ್ನು ತೊಡೆದುಹಾಕಬೇಕೆಂದು ನಾನು ಏಕೆ ಹೇಳುತ್ತಿರುವೆನೆಂಬುದರ ಕಾರಣಗಳನ್ನು ವಿವರಿಸಲು ನಾನು ಬಾಧ್ಯ ಎಂದು ನನಗನಿಸುತ್ತದೆ.

(೯೦) ಲಕ್ನೋ ಒಪ್ಪಂದದಲ್ಲಿ ಅಳವಡಿಸಲಾಗಿರುವ ವ್ಯವಸ್ಥೆ ಸರಿಯಾದ ವ್ಯವಸ್ಥೆಯಲ್ಲ ಎಂಬುದು ನನ್ನ ಮೊದಲನೆಯ ವಾದ. ಎಲ್ಲಾ ಸ್ಥಳೀಯ ಸರಕಾರಗಳ ಅಭಿಪ್ರಾಯವೂ ಇದೇ ಆಗಿದೆ. ಚುನಾವಣಾ ವ್ಯವಸ್ಥೆಯ ಸಮಿತಿಯ ಶಿಫಾರಸುಗಳ ಮೇಲೆ ಭಾರತ ಸರಕಾರವು ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಕಳುಹಿಸಿದ ಸರಕಾರಿ ಪತ್ರದ ಮೂಲಕ ಮಾಡಿದ ವರದಿಯಲ್ಲಿ ಹೀಗೆ ಹೇಳಲಾಗಿದೆ. "ಸ್ಥಳೀಯ ಸರಕಾರಗಳು ಈ ಒಪ್ಪಂದದ ಬಗ್ಗೆ ಒಮ್ಮತ ಹೊಂದಿಲ್ಲ ಎಂಬುದನ್ನು ನಾವು ಗಮನಿಸಿದ್ದೇವೆ. ಮದರಾಸ ಸರಕಾರವು ಒಪ್ಪಂದವನ್ನು ಲೆಕ್ಕಿಸದೆ ಮಹಮದೀಯ ಸಮುದಾಯದ ಪ್ರಾತಿನಿಧ್ಯವನ್ನು ಕುರಿತು ತನ್ನದೇ ಆದ ಸೂಚನೆಗಳನ್ನು ಮಾಡಿದೆ. ಮುಂಬಯಿ ಸರಕಾರವು ಈ ಒಪ್ಪಂದವನ್ನು ಅಳವಡಿಸಿಕೊಳ್ಳುವಾಗ ಜನಸಂಖ್ಯೆಯ ಆಧಾರದ ಮೇಲೆ ನೀಡಬಹುದಾದ ಪ್ರಾತಿನಿಧ್ಯದ ಯೋಜನೆಯ ಚರ್ಚೆಯನ್ನು ತಳ್ಳಿಹಾಕಿಲ್ಲ. ಮಧ್ಯ ಪ್ರಾಂತ್ಯಗಳ ಮುಖ್ಯ ಆಯುಕ್ತರು (Chief Commissioner) ಮಹಮದೀಯರ ಪ್ರತ್ಯೇಕ ಚುನಾವಣಾ ವ್ಯವಸ್ಥೆಗೆ ತಮ್ಮ ವಿರೋಧ ವ್ಯಕ್ತಪಡಿಸಿರುವವರಲ್ಲದೆ, ಒಪ್ಪಂದದಲ್ಲಿ ಸೂಚಿಸಲಾಗಿರುವ ಪ್ರಮಾಣವು "ಈ ಸಮುದಾಯದ ಬಲ ಮತ್ತು ಸ್ಥಾನಮಾನಕ್ಕೆ ಹೋಲಿಸಿದಾಗ ಸಂಪೂರ್ಣ ಅಸಮ ಪ್ರಮಾಣದ್ದಾಗಿದೆ" ಎಂದು ಪರಿಗಣಿಸಿದ್ದಾರೆ. ಅಸಾಮದ ಮುಖ್ಯ ಆಯುಕ್ತರು ಈ ಸಮುದಾಯಕ್ಕೆ ತನ್ನ ಸಾಂಖಿಕ ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಾತಿನಿಧ್ಯ ಕೊಡುವುದು ಮುಸಲ್ಮಾನರ ದೃಷ್ಟಿಯಿಂದಲೂ ಸರಿಯಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಸ್ಥಳೀಯ ಸರಕಾರದ ಅಭಿಪ್ರಾಯದೊಡನೆ ಭಾರತ ಸರಕಾರ

ಭಿನ್ನಾಭಿಪ್ರಾಯ ಹೊಂದಿರಲಿಲ್ಲ. ಲಕ್ನೋ ಒಪ್ಪಂದದ ಬಗ್ಗೆ ವಿವಿಧ ಪ್ರಾಂತ್ಯಗಳಲ್ಲಿ ಉಂಟಾದ ಪರಿಣಾಮಗಳನ್ನು ಪರಿಶೀಲಿಸುತ್ತಾ ಭಾರತ ಸರಕಾರ ಹೀಗೆ ಹೇಳಿತು: "ಇದರ ಪರಿಣಾಮವಾಗಿ ಬಂಗಾಳದ ಮಹಮದೀಯರು ಮತ್ತು ಪಂಜಾಬದ ಮಹಮದೀಯರು ತಮ್ಮ ಜನಸಂಖ್ಯೆಯ ಆಧಾರದ ಮೇಲೆ ತಮಗೆ ಬರಬೇಕಾಗಿದ್ದದ್ದರಲ್ಲಿ ಕ್ರಮವಾಗಿ ನಾಲ್ಕರಲ್ಲಿ ಮೂರು ಮತ್ತು ಹತ್ತರಲ್ಲಿ ಒಂಬತ್ತು ಭಾಗವನ್ನು ಮಾತ್ರ ಪಡೆಯುವಾಗ, ಇತರ ಪ್ರಾಂತ್ಯಗಳು ಇದಕ್ಕೂ ಹೆಚ್ಚು ಅನುಕೂಲಕರ ಪ್ರಾತಿನಿಧ್ಯ ಪಡೆಯುತ್ತಾರೆ. ಈ ಪರಿಣಾಮವು ವಿವಿಧ ಪ್ರಾಂತ್ಯಗಳ ಮಹಮದೀಯರ ನಡುವೆಯಾಗಲೀ, ಅಥವಾ ಮಹಮದೀಯರು ಮತ್ತು ಇತರ ಸಮುದಾಯದ ನಡುವೆ ಹಾರ್ದಿಕ ಸಂಬಂಧದ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ನಾವು ಭಾವಿಸಲಾರೆವು." ಸರ್ ವಿಲಿಯಂ ವಿನ್ಸೆಂಟ್‌ರವರು ತಮ್ಮ ಭಿನ್ನಾಭಿಪ್ರಾಯದ ಒಕ್ಕಣಿಕೆಯಲ್ಲಿ ಎಲ್ಲಿಯತನಕ ಹೋದರೆಂದರೆ: "ಮಹಮದೀಯರಿಗೆ ನಾವು ಕೊಟ್ಟಿರುವ ವಚನವನ್ನು ಪೂರೈಸಲು ಲಕ್ನೋ ವ್ಯವಸ್ಥೆಯ ವಿವರಗಳನ್ನು ಲೆಕ್ಕಿಸದೇ ಯಾವುದು ಸರಿಯಾದ ಮಾರ್ಗವೆಂದು ನಾವು ಪರಿಗಣಿಸುತ್ತೇವೆಯೋ ಅಂತಹ ಮಾರ್ಗವನ್ನೇ ಅನುಸರಿಸಬೇಕೆಂಬುದು ನನ್ನ ಅಭಿಪ್ರಾಯ" ಎಂದು ಹೇಳಿರುತ್ತಾರೆ.

(೯೧) ವಿವಿಧ ಪ್ರಾಂತ್ಯಗಳಲ್ಲಿ ಮಹಮದೀಯರನ್ನು ಅಸಮ ರೀತಿಯಲ್ಲಿ ಪರಿಗಣಿಸಿ, ಕೆಲವು ಪ್ರಾಂತ್ಯಗಳಲ್ಲಿ ಉದಾರವಾಗಿ ಮತ್ತು ಕೆಲವು ಪ್ರಾಂತ್ಯಗಳಲ್ಲಿ ನಿಕೃಷ್ಟವಾಗಿ ಕೊಡಮಾಡಿರುವುದಷ್ಟೇ ಲಕ್ನೋ ಒಪ್ಪಂದದ ದೋಷವಲ್ಲ. ತುಲನಾತ್ಮಕವಾಗಿ ಹೇಳುವುದಾದರೆ ಇದು ಸಣ್ಣ ವಿಷಯ. ಲಕ್ನೋ ಒಪ್ಪಂದದ ಪ್ರಮುಖ ದೋಷವೆಂದರೆ ಅದು ಮಹಮದೀಯರಿಗೆ ಸ್ಥಳಗಳನ್ನು ನಿಗದಿಪಡಿಸುವಾಗ ಇತರ ಹಿತಾಸಕ್ತಿಗಳ ಮೇಲೆ ಅದರ ಪರಿಣಾಮವನ್ನು ಗಣನೆಗೆ ತೆಗೆದುಕೊಳ್ಳದಿರುವುದು. ಭಾರತ ಸರಕಾರವು ತೋರಿಸಿ ಕೊಟ್ಟಂತೆ ಲಕ್ನೋ ಒಪ್ಪಂದದ ಕರ್ತೃಗಳು ಮಹಮದೀಯರಿಗೆ ಕೊಡಮಾಡುವ ಯಾವುದೇ ಸೌಲಭ್ಯವನ್ನು ಬೇರೆಯವರ ಹಿತಾಸಕ್ತಿಗಳಿಂದ ಕಸಿದುಕೊಂಡು ಕೊಡಲಾಗಿದೆ ಎಂಬುದನ್ನು ತಿಳಿದುಕೊಳ್ಳುವಲ್ಲಿ ವಿಫಲ ರಾದರು. ಸರ್ ವಿಲಿಯಂ ವಿನ್ಸಂಟರೂ ಕೂಡ ಇದನ್ನು ಹೇಳುವುದರಲ್ಲಿ ಬಹು ಎಚ್ಚರಿಕೆ ವಹಿಸಿದ್ದರು. ಅವರು ತಮ್ಮ ಭಿನ್ನಾಭಿಪ್ರಾಯದ ಟಿಪ್ಪಣಿಯಲ್ಲಿ ಇದನ್ನೂ ಸಹ ಹೇಳಿದ್ದಾರೆ. "ಈ ಒಪ್ಪಂದವು ಈಗಿನ ಕಾಲದಲ್ಲಿ ಟೀಕೆಗಿಂತ ಹೆಚ್ಚು ಮನ್ನಣೆಯನ್ನೇ ಪಡೆಯಲಿದೆ: ಆದರೆ ನಂತರದಲ್ಲಿ ಮತಗಳು ಮತ್ತು ಪ್ರಾತಿನಿಧ್ಯದ ಮಹತ್ವದ ಅರಿವಾದಾಗ ಇದರಿಂದ ಹೆಚ್ಚು ತೊಂದರೆಗೀಡಾಗುವವರು ಭಾರತ ಸರಕಾರವು ಇಂತಹ ಅನ್ಯಾಯದ ಒಪ್ಪಂದವನ್ನು ಮಾನ್ಯ ಮಾಡಿದುದು ತಪ್ಪು ಎಂದು ದೂರಬಹುದು." ಈ ಭವಿಷ್ಯವಾಣಿ ಎಷ್ಟರಮಟ್ಟಿಗೆ ನಿಜವಾಗಿದೆ ಎಂಬುದು ಗಮನಾರ್ಹವಾಗಿದೆ, ಮತ್ತು ಲಕ್ನೋ ಒಪ್ಪಂದದ ಪರಿಣಾಮದ ಬಗ್ಗೆ ಉಂಟಾಗಿರುವ ಸಾರ್ವತ್ರಿಕ ಅಸಮಾಧಾನವು ಲಕ್ನೋ ವ್ಯವಸ್ಥೆಯಲ್ಲಿ ಅಳವಡಿಸಲಾಗಿರುವ ಅಂಶಗಳು ಎಷ್ಟು ದೋಷಪೂರಿತವಾಗಿವೆ ಎಂಬುದನ್ನು ತೋರಿಸಲು ಇದಕ್ಕಿಂತಲೂ ಹೆಚ್ಚಿನ ಪ್ರಮಾಣ ಬೇಕಿಲ್ಲ. ಇಂತಹ ಅನ್ಯಾಯದಿಂದ ಕೂಡಿದ ಒಪ್ಪಂದದಲ್ಲಿ ಅನ್ಯಾಯವನ್ನು ಸರಿಪಡಿಸಲು ಒತ್ತಾಯಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ, ಇಂತಹ ಒತ್ತಾಯಕ್ಕೆ ಮಹಮದೀಯ ಸಮುದಾಯದಿಂದ ವಿರೋಧ ಬರುವುದು ಶತಸ್ಸಿದ್ಧ. ಮಿತಿ ಮೀರಿದ ಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆದುಕೊಂಡಿರುವಾಗ ಅವರು ನಿಜವಾಗಿಯೂ ತಮ್ಮ ಹಿಂದಿನ ಹಕ್ಕುಗಳು ಮತ್ತು ಪೂರ್ವ ನಿದರ್ಶನಗಳ ಆಧಾರದ ಮೇಲೆ ತಮ್ಮ ನಿಲುವನ್ನು ತೆಗೆದುಕೊಳ್ಳುವರು. ಆದರೆ ಥಾಮಸ್ ಪೇಯ್ನ್ ಹೇಳಿರುವಂತೆ, ಯಾರು ತಮ್ಮ ಹಕ್ಕುಗಳಿಗಾಗಿ ಪ್ರಾಚೀನತೆಯಿಂದ ಪಡೆದ ಪೂರ್ವ ನಿದರ್ಶನಗಳ ಆಧಾರದ ಮೇಲೆ ತರ್ಕ ಮಾಡುವರೋ ಅಂಥವರು

ಯಾವ ಹಿತಾಸಕ್ತಿಗಳೂ ಅಸ್ತಿತ್ವದಲ್ಲಿರದ ಆರಂಭ ಕಾಲದ ಪರಿಸ್ಥಿತಿಯ ಬಗ್ಗೆ ಯೋಚಿಸದೇ ಇರುವುದು ಅವರು ಮಾಡುತ್ತಿರುವ ತಪ್ಪು. ಇದು ನಿಜವಿರಲಿಕ್ಕೇ ಬೇಕು. ಏಕೆಂದರೆ, ಸಮಸ್ತ ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಯಲ್ಲಿ ತಪ್ಪಿಗೆ ಯಾವುದೇ ಶಾಸನಬದ್ಧ ಪರಂಪರೆ ಇರುವುದು ಸಾಧ್ಯವಿಲ್ಲ. ಇದನ್ನು ಅರಿತರೆ ಅವರು ತಮ್ಮ ಹಕ್ಕುಗಳು ಎಂದೆಂದಿಗೂ ಬದಲಾಯಿಸಲಾಗದುದು ಎನ್ನುವುದನ್ನು ತೊರೆದು, ಅವುಗಳು ತಮಗೆ ಲಭ್ಯವಾಗಿದ್ದುದು ಕೇವಲ ಆಕಸ್ಮಿಕ ಎಂಬುದನ್ನೂ ಮತ್ತು ಕಾಲಕ್ಕೆ ಸರಿಯಾಗಿ ಹೊಂದಿಕೊಳ್ಳುವುದನ್ನೂ ಅರಿಯುತ್ತಾರೆ. ಮತ್ತು ಅಂತಹ ಬೆಳವಣಿಗೆಯಲ್ಲಿ ಯಾವುದು ತಪ್ಪಾಗಿ ನಿರ್ಣಯಿಸಲಾಗಿರುವುದೋ ಅದು ಸಾರ್ವಕಾಲಿಕವಾಗಿ ಒಪ್ಪುವ ನಿರ್ಣಯವೆನಿಸಿಕೊಳ್ಳಲಾರದು ಎಂಬ ಸೂತ್ರದ ಆಧಾರವನ್ನವಲಂಬಿಸಿದೆ. ಒಪ್ಪಂದವನ್ನು ಪರಿಷ್ಕರಿಸಬೇಕಾಗಿ ಬಂದಿರುವಂತಹುವುಗಳಲ್ಲಿ ಲಕ್ನೋ ಒಪ್ಪಂದವೊಂದೇ ನಿದರ್ಶನವಲ್ಲ. ಐರ್ಲೆಂಡ್ ಮತ್ತು ಇಂಗ್ಲೆಂಡ್‌ಗಳ ನಡುವೆ ಆಗಿದ್ದ ಒಕ್ಕೂಟದ ಕಾಯ್ದೆಯೂ ಇದೇ ರೀತಿಯ ಒಪ್ಪಂದವಾಗಿತ್ತು. ಅದು ನಿಜವಾಗಿಯೂ ಲಕ್ನೋ ಒಪ್ಪಂದಕ್ಕಿಂತ ಹೆಚ್ಚಿನ ಕಠಿಣ ನಿಯಮಗಳಿಗೆ ಒಳಗಾಗಿತ್ತು. ವಾಸ್ತವಿಕವಾಗಿ ಅದು ಸಂಸತ್ತಿನಲ್ಲಿ ಐರ್ಲೆಂಡ್‌ಗೆ ೧೦೦ ಸ್ಥಾನಗಳನ್ನು ನೀಡುವ ಭರವಸೆಯ ಸ್ವರೂಪದ್ದಾಗಿತ್ತು. ಹೀಗಿದ್ದಾಗ್ಯೂ ೧೯೦೫ರಲ್ಲಿ ಮಿಸ್ಟರ್ ಬ್ಯಾಲಫರ್‌ರವರ ಸರಕಾರವು ಐರ್ಲೆಂಡಿಗೆ ನೀಡಲಾಗಿದ್ದ ಸ್ಥಾನಗಳಲ್ಲಿ ೩೦ ಸ್ಥಾನಗಳನ್ನು ಕಡಿಮೆ ಮಾಡುವಂತಹ ಮಸೂದೆಯನ್ನು ಮಂಡಿಸುವುಕ್ಕೆ ಹಿಂಜರಿಯಲಿಲ್ಲ. ಮಿಸ್ಟರ್ ಬ್ಯಾಲಫರ್‌ರವರ ಸರಕಾರ ನೀಡಿದ ರಾಜೀನಾಮೆಯಿಂದಾಗಿ ಈ ಮಸೂದೆ ಕಾನೂನಾಗದೇ ಹೋದುದು ಬೇರೆ ವಿಷಯ. ಆದರೆ ಈ ನಿರ್ಣಯವು ಎರಡು ಪಕ್ಷಗಳ ನಡುವೆ ಆದ ಒಪ್ಪಂದದ ಆಧಾರ ಹೊಂದಿದೆ ಎಂಬ ಕಾರಣಕ್ಕಾಗಿಯೇ ಪ್ರಾತಿನಿಧ್ಯದ ಸಂಬಂಧವಾಗಿ ಮಾಡಿಕೊಳ್ಳಲಾಗಿದ್ದ ಐರಿಷ್ ಒಪ್ಪಂದವನ್ನು ಪರಿಷ್ಕರಿಸುವುದು ಸಾಧ್ಯವಿಲ್ಲ ಎಂಬ ಅಂಶವನ್ನು ಅಲ್ಲಗಳೆಯಲಾಯಿತು. ಯಾವುದೇ ಪರಿಷ್ಕಾರವನ್ನು ಐರ್ಲೆಂಡಿನ ಸಮ್ಮತಿಯಿಂದಲೇ ಮಾಡಬಹುದಾಗಿದೆ ಎಂಬ ಅಂಶವನ್ನು ಮಿಸ್ಟರ್ ಬ್ಯಾಲ್‌ಫರ್‌ರವರು ಒಪ್ಪಲಿಲ್ಲ. ನಿಜವಾಗಿಯೂ ಐರ್ಲೆಂಡಿನ ವಿರೋಧವನ್ನು ಲೆಕ್ಕಿಸದೇ ಅವರು ಸ್ಥಾನಗಳ ಮರುವಿತರಣೆಯ ಯೋಜನೆಯನ್ನು ಆರಂಭಿಸಿದ್ದರು. ಆದರೆ ಇಂತಹ ಮತ್ತೊಂದು ಪೂರ್ವ ನಿದರ್ಶನ ನಮ್ಮ ಸಮೀಪದಲ್ಲಿಯೇ ಇರುವಾಗ ಅದನ್ನು ಹುಡುಕಿಕೊಂಡು ಇಷ್ಟು ದೂರ ಹೋಗುವ ಅವಶ್ಯಕತೆಯಿಲ್ಲ. ಸಿಂಹಳ (ಸಿಲೋನ)ದ ಸಂವಿಧಾನವೂ ಕೂಡ ಕೋಮುವಾರು ಪ್ರಾತಿನಿಧ್ಯ ಮತ್ತು ಸ್ಥಾನಗಳ ವಿತರಣೆಯನ್ನು ಕೋಮು ಆಧಾರದ ಮೇಲೆ ಮಾಡುವುದಕ್ಕಾಗಿ ವಿವಿಧ ಸಂಘಟನೆಗಳ ನಡುವೆ ಮಾಡಿಕೊಳ್ಳಲಾದ ಒಡಂಬಡಿಕೆಗಳು ಮತ್ತು ಒಪ್ಪಂದಗಳಿಗೆ ಮನ್ನಣೆ ನೀಡಿತ್ತು. ಆದರೆ ೧೯೨೮ರ ಸಿಂಹಳ ಆಯೋಗವು "ಯಾವುದೇ ಸಂದರ್ಭದಲ್ಲಿ, ಪ್ರಾತಿನಿಧ್ಯದ ಇಡೀ ಸಮಸ್ಯೆಯನ್ನು ಹೊಸದಾಗಿ ಪರಿಶೀಲಿಸುವಾಗ ವಿವಿಧ ಜನಾಂಗಗಳ ಅಥವಾ ಸಮೂಹಗಳ ನಡುವೆ ಮಾಡಿಕೊಳ್ಳಲಾದ ಖಾಸಗಿ ವ್ಯವಸ್ಥೆಗಳು ಗಮನಾರ್ಹವಾಗಿದ್ದಾಗ್ಯೂ ಸಿಂಹಳದ ಇಡೀ ಜನತೆಯ ಹಿತಾಸಕ್ತಿಯ ಮೇಲೆ ಆದ್ಯತೆ ಪಡೆಯಲಾರವ" ಎಂದು ಖಚಿತ ಅಭಿಪ್ರಾಯವನ್ನು ತಿಳಿಸಿತು. ಆದ್ದರಿಂದ ಅದು ಸಿಂಹಳದಲ್ಲಿ ಪ್ರಾತಿನಿಧ್ಯದ ಇಡೀ ಯೋಜನೆಯನ್ನು ಗುರುತಿಸಲಾರದಷ್ಟು ಪ್ರಮಾಣದಲ್ಲಿ ಮಾರ್ಪಡಿಸಲು ಹಿಂಜರಿಯಲಿಲ್ಲ.

(೯೨) ಲಕ್ನೋ ಒಪ್ಪಂದಕ್ಕೆ ಬೆಲೆ ಇಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಭಾರತ ಸರಕಾರದ ಮಾತುಗಳಲ್ಲಿಯೇ ಹೇಳುವುದಾದರೆ ಅದು "ರಾಜಕೀಯ ಸಂಧಾನದ ಪ್ರತಿಫಲ ವಾಗಿದೆಯೇ ಹೊರತು ಸಾವಧಾನಯುತ ಆಲೋಚನೆಯ ಫಲವಾಗಿಲ್ಲ." ಇದೂ ಅಲ್ಲದೇ ಸಂಬಂಧಪಟ್ಟ ಸಮುದಾಯಗಳ ಪರವಾಗಿ ಒಪ್ಪಂದ ಮಾಡಿಕೊಳ್ಳುವ ಈ ಸಂಘಟನೆಗಳು, ವಾಸ್ತವವಾಗಿ ಆರ್ಯ

ಸಮುದಾಯಗಳ ಪ್ರಾತಿನಿಧಿಕ ಸಂಸ್ಥೆಗಳಾಗಿರಲಿಲ್ಲ. ಅಖಿಲ ಭಾರತ ಮುಸ್ಲಿಂ ಲೀಗ್ ಎಲ್ಲಾ ಮಹಮದೀಯರ ಪರವಾಗಿ ಮಾತನಾಡುವ ಅರ್ಹತೆ ಪಡೆದಿರಲಿಲ್ಲ. ಭಾರತ ಸರಕಾರದ ಅಭಿಪ್ರಾಯವೂ ಇದೇ ಆಗಿತ್ತು ಎಂಬುದನ್ನು ಅದು ಸೌತ್ ಬರೋ ಸಮಿತಿಯ ವರದಿಯ ಮೇಲಣ ತನ್ನ ಅಧಿಕೃತ ಟಿಪ್ಪಣಿಯಲ್ಲಿ ಸಾಕಷ್ಟು ಸ್ಪಷ್ಟಪಡಿಸಿದೆ. ಕಾಂಗ್ರೆಸ್‌ನ ಬಗ್ಗೆ ಹೇಳುವುದಾದರೆ ಅದು ಬ್ರಾಹ್ಮಣೇತರರು ಮತ್ತು ನಿಮ್ನ ವರ್ಗಗಳ ವಿಶಾಲ ಜನಸಮುದಾಯವನ್ನು ಪ್ರತಿನಿಧಿಸುವುದಿಲ್ಲ. ಜನತೆಯ ಪ್ರಾತಿನಿಧಿಕ ಸಂಘಟನೆಗಳಾಗದ ಇವು ಮಾಡಿಕೊಂಡ ಒಪ್ಪಂದಕ್ಕೆ ಆ ಸಂಘಟನೆಗಳು ಮಾತ್ರ ಬಾಧ್ಯವಾಗಬೇಕೇ ಹೊರತು, ಈ ಒಪ್ಪಂದವು ಇಡೀ ಜನತೆಗೆ ಅನ್ವಯವಾಗಬಾರದು. ಈ ಒಪ್ಪಂದವನ್ನು, ಎರಡು ಸಾರ್ವಭೌಮ ಅಧಿಕಾರವನ್ನುಳ್ಳ ದೇಶಗಳ ನಡುವಿನ ಒಪ್ಪಂದವೆಂದು ಪರಿಗಣಿಸಿದರೆ, ಅದರಿಂದ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್‌ಗಳಿಗೆ ನಿಜವಾಗಿ ಇಲ್ಲದ ಅಧಿಕಾರದ ಅರ್ಹತೆಯನ್ನು ಕೊಟ್ಟಂತಾಗುತ್ತದೆ. ಈ ಒಪ್ಪಂದದ ಬಾಧ್ಯತೆಯನ್ನು ಪರಿಶೀಲಿಸುವ ಅವಶ್ಯಕತೆ ಮುಂಬಯಿ ಸರಕಾರವು ಇದರ ಬಗ್ಗೆ ತಳೆದ ಧೋರಣೆಯಿಂದ ಉದ್ಭವವಾಗಿದೆ. ಅದರ ಅಭಿಪ್ರಾಯದಲ್ಲಿ "ಪ್ರತ್ಯೇಕ ಚುನಾಯಕ ವ್ಯವಸ್ಥೆಯನ್ನು ರದ್ದುಪಡಿಸುವ ದಿಶೆಯಲ್ಲಿ ತೆಗೆದುಕೊಳ್ಳಲಾಗುವ ಯಾವುದೇ ಉಪಕ್ರಮ ಎರಡೂ ಕೋಮುಗಳ ನಡುವೆ ಒಪ್ಪಿಗೆಯ ಆಧಾರ ಹೊಂದಿರಬೇಕು. ಈ ಪ್ರಶ್ನೆಯು ಅಖಿಲ ಭಾರತ ಪ್ರಶ್ನೆಯಾಗಿದ್ದು, ಇದನ್ನು ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ರೀತಿ ಮಾಡಲು ಬರುವುದಿಲ್ಲ. ಮುಂಬಯಿ ಸರಕಾರವು ತಾನು ೧೯೧೮ರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವನ್ನೇ ಈಗಲೂ ಹೊಂದಿದೆ. ಅದೇನೆಂದರೆ ಕೋಮುವಾರು ಚುನಾಯಕ ವ್ಯವಸ್ಥೆಗೆ ಅದರ ಸಮ್ಮತಿ ಇರುವುದಿಲ್ಲ. ಮತ್ತು ಲಕ್ನೋ ಒಪ್ಪಂದದ ಸಂಬಂಧದಲ್ಲಿರುವಂತೆ ಎರಡೂ ಪಕ್ಷಗಳ ಸಮ್ಮತಿ ಪಡೆದು ಕೋಮುವಾರು ಚುನಾಯಕ ವ್ಯವಸ್ಥೆಯನ್ನು ರದ್ದುಪಡಿಸುವುದು ಅಪೇಕ್ಷಣೀಯ." ನನ್ನ ದೃಷ್ಟಿಯಲ್ಲಿ ಈ ಅಭಿಪ್ರಾಯ ಎಷ್ಟು ಅಪಾಯಕಾರಿಯಾಗಿದೆಯೋ ಅಷ್ಟೇ ಬೇಜವಾಬ್ದಾರಿಯದಾಗಿದೆ. ಅದು ಏಕೆ ಬೇಜವಾಬ್ದಾರಿಯದಾಗಿದೆ ಎಂದರೆ ಇದರಿಂದ ಇಂತಹ ಪ್ರಶ್ನೆಯಲ್ಲಿ ಸಂಸತ್ತಿಗಿರುವ ತೀರ್ಮಾನದ ಹಕ್ಕನ್ನು ಅದು ಬಿಟ್ಟುಕೊಟ್ಟಂತಾಗುತ್ತದೆ. ಭಾರತ ಸರಕಾರವು ಈ ಒಪ್ಪಂದವನ್ನು "ಕಡೆಗಣಿಸುವುದೇ" ವಿಹಿತವೆಂದು ಭಾವಿಸಿದೆ. ಏಕೆಂದರೆ ಅದರ ಅಭಿಪ್ರಾಯದಲ್ಲಿ (ಲಕ್ನೋ) ಒಪ್ಪಂದವು ಅತ್ಯಂತ ವಿವಾದಾತ್ಮಕ ವಿಷಯವನ್ನು ಕುರಿತು ಎರಡು ಕೋಮುಗಳು ಮಾಡಿದ ನಿಷ್ಕಪಟ ಪ್ರಯತ್ನವಾಗಿದೆ ಮತ್ತು "ಇದು ಒಂದು ದೊಡ್ಡ ಕೋಮಿನವರು ಒಮ್ಮತ ಮತ್ತು ಏಕೀಕೃತ ರಾಜಕೀಯ ಮುನ್ನಡೆಗಾಗಿ ತಮ್ಮ ಸಧ್ಯದ ಹಿತಾಸಕ್ತಿಗಳನ್ನು ತ್ಯಜಿಸುವ ಹೆಜ್ಜೆಯಾಗಿದೆ" ಎಂಬುದು ನಿಜ. ಇದರಿಂದ ಭಾರತ ಸರಕಾರವಾಗಲೀ ಅಥವಾ ಇನ್ನಾವುದೇ ಪ್ರಾಧಿಕಾರವಾಗಲೀ ಮಹಮದೀಯರ ಪ್ರಾತಿನಿಧ್ಯದ ಪ್ರಶ್ನೆಯಲ್ಲಿ ಕಾಂಗ್ರೆಸ್ ಮತ್ತು ಲೀಗ್ ಪರಸ್ಪರ ಸಂಧಾನದ ಮೂಲಕ ಮಾಡಿಕೊಳ್ಳಲಾದ ನಿರ್ಣಯವನ್ನು ಒಪ್ಪಿಕೊಳ್ಳುತ್ತವೆ ಎಂದು ಹೇಳಿದಂತಾಗುವುದಿಲ್ಲ. ನಿಜವಾಗಿಯೂ ಸರ್ ವಿಲಿಯಂ ವಿನ್ಸೆಂಟ್ ಅವರು "ಈ ವಿಷಯದಲ್ಲಿ (ಭಾರತ ಸರಕಾರವು) ಸಂಸತ್ತಿಗೆ ತಾನು ಹೊಂದಿರುವ (ತನ್ನ) ಜವಾಬ್ದಾರಿಯನ್ನು ಇತರರಿಗೆ ಹಸ್ತಾಂತರಿಸಲು ಬರುವುದಿಲ್ಲ" ಎಂದು ಹೇಳುವಾಗ ಬಹಳ ಎಚ್ಚರಿಕೆ ವಹಿಸಿದ್ದರು.

(೯೩) ಮುಂಬಯಿ ಸರಕಾರದ ನಿಲುವು ಅಪಾಯಕಾರಿಯೂ ಆಗಿದೆ. ಏಕೆಂದರೆ, ಒಂದು ತಪ್ಪು ಮಾಡಲಾಗಿದೆ ಎಂದು ಒಪ್ಪಿಕೊಂಡಾಗ್ಯೂ ಅದನ್ನು ಸರಿಪಡಿಸಬೇಕಾದ ಕಾರ್ಯವನ್ನು ನಿರ್ವಹಿಸಲು ಅದು ನಿರಾಕರಿಸುತ್ತಿದೆ. ಈ ತಪ್ಪು ದೇಶದ ಸಂವಿಧಾನದ ವ್ಯವಸ್ಥೆಯಲ್ಲಿ ಕಂಡುಬರದೇ ಹೋಗಿದ್ದರೆ ನಾನು ಅದನ್ನು ಒಂದು ಕ್ಷಮಾರ್ಹ ಪಾಪ ಎಂದು ಪರಿಗಣಿಸುತ್ತಿದ್ದೆ. ಆದರೆ ಅದು ಕಾರ್ಯಾಚರಣೆಯಲ್ಲಿ

ಮಾರಕ ಸ್ವರೂಪದ್ದಾಗುತ್ತದೆ. ಇಂತಹ ತಪ್ಪು ಇಡೀ ಸಮುದಾಯದ ಮೇಲೂ ಮತ್ತು ಅದರ ಪ್ರತಿಯೊಂದು ಅಂಗದ ಮೇಲೂ ದುಷ್ಪರಿಣಾಮ ಉಂಟುಮಾಡುವುದು. ಅದು ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದಲ್ಲಿ ಅನಾಹುತ ಮತ್ತು ವಿನಾಶಕ್ಕೆಡೆ ಮಾಡುತ್ತದೆ. ಅದನ್ನು ಸರಿಪಡಿಸುವುದು ಬಹುಮಟ್ಟಿಗೆ ಅಸಾಧ್ಯವಾಗುವುದು. ಮುಂಬಯಿ ಸರಕಾರವು ಎಲ್ಲ ಸಂವಿಧಾನಾತ್ಮಕ ಬದಲಾವಣೆಗಳು ಅಂತಿಮ ಸ್ವರೂಪದವುಗಳಾಗಿದ್ದು, ಅವುಗಳ ಪರಿಣಾಮಗಳೇನೇ ಇರಲಿ, ಅವುಗಳಿಗೆ ಅಧೀನರಾಗಬೇಕು ಎಂಬ ಭಾವನೆಯನ್ನು ಹೊಂದಿರುವಂತಿದೆ. ಈ ಗ್ರಹಿಕೆಯು ಇಂತಹ ವಿಷಯಗಳಲ್ಲಿ ನಮ್ಮನ್ನು ಒಂದು ಬೇಜವಾಬ್ದಾರಿಯ ಶಕ್ತಿಯು ಒಂದು ಗೊತ್ತಾದ ಮಾರ್ಗದಲ್ಲಿ ಅನಿವಾರ್ಯ ವಿನಾಶದತ್ತ ನಮ್ಮನ್ನು ಎಳೆದೊಯ್ಯುತ್ತದೆ ಎಂಬ ವಿನಾಶಕಾರಿ ನಿರ್ಲಿಪ್ತ ಭಾವನೆಯಿಂದ ಉದ್ಭವಿಸುತ್ತದೆ ಎಂಬುದು ನಿಸ್ಸಂಶಯ. ಆದರೆ ಸಂತೋಷದ ಸಂಗತಿ ಎಂದರೆ ಭಾರತ ಸರಕಾರವು ಈ ಒಪ್ಪಂದವನ್ನು ಮಾನ್ಯ ಮಾಡುವಾಗ ಕಾಯ್ದೆಯಲ್ಲಿ ಅಳವಡಿಸಲಾದ ಅದರ ಅಂಶಗಳು ತಿದ್ದುಪಡಿ ಮಾಡಲಾಗದವು ಎಂಬ ನಿಲುವನ್ನು ತೆಗೆದುಕೊಂಡಿಲ್ಲ. ಅವರು ಈ ವಿಷಯವನ್ನು ಸಂದಿಗ್ಧತೆಯ ಮುಸುಕಿನಲ್ಲಿಟ್ಟರೂ ಕೂಡ ಈ ವ್ಯವಸ್ಥೆಯು ಮೊದಲನೆಯ ಶಾಸನಬದ್ಧ ಸಮಿತಿ (Satrutary Commission)ಯ ವರದಿ ಬರುವವರೆಗೆ ಮಾತ್ರ ಜಾರಿಯಲ್ಲಿರತಕ್ಕದ್ದೆಂದು ಸ್ಪಷ್ಟಪಡಿಸಿದ್ದಾರೆ. ಸೌತ್‌ಬರೋ ಸಮಿತಿಯ ವರದಿಯ ಮೇಲಣ ತಮ್ಮ ಅಧಿಕೃತ ಪತ್ರದಲ್ಲಿ ಅವರು ಹೀಗೆ ಹೇಳಿದ್ದಾರೆ: "ನಾವು ಈ ವರದಿಯನ್ನು ಪರಿಶೀಲಿಸುವ ಮೊದಲು ಸ್ವಲ್ಪ ಮಹತ್ವದ ಒಂದು ಪೂರ್ವಭಾವಿ ಪ್ರಶ್ನೆ ತಾನಾಗಿಯೇ ಉದ್ಭವಿಸುತ್ತದೆ. ನೀವೇ ನೋಡುವಂತೆ, ಸಮಿತಿಯ ಕಾರ್ಯ ಬಹುಮಟ್ಟಿಗೆ ತತ್ವಗಳನ್ನು ನಿರೂಪಿಸುವತ್ತ ನಿರ್ದೇಶಿತವಾಗಿರಲಿಲ್ಲ. ಅವರೆದುರಿಗೆ ಬಂದ ವಿವಿಧ ಸಮಸ್ಯೆಗಳನ್ನು ಪರಿಶೀಲಿಸುವಾಗ ಅವರು ಆ ಸಮಸ್ಯೆಗಳಿಗೆ ತರ್ಕಬದ್ಧವಾದ ಪರಿಹಾರಗಳನ್ನು ಒದಗಿಸುವುದರ ಬದಲು ತಮಗೆ ತೋರಿದ ರೀತಿಯ ಒಪ್ಪಂದಕ್ಕೆ ಬರುವ ಪ್ರಯತ್ನ ಮಾಡಿದರು. ಪರಿಸ್ಥಿತಿಯ ಒತ್ತಡದಿಂದಲೂ ಕೂಡ ಇದನ್ನು ಹೊರತು ಇನ್ನಾವುದೇ ಮಾರ್ಗವನ್ನನುಸರಿಸುವುದು ಕಷ್ಟಕರವಾಗಿತ್ತೆಂಬುದೇನೋ ನಿಸ್ಸಂಶಯ. ಆದರೆ, ಅವರು ನೀಡಿರುವ ಸೂಚನೆಗಳನ್ನು ಪರಿಶೀಲಿಸುವಾಗ ನಾವೇ ನಮಗೆ ಒಂದು ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ. ಅದೇನೆಂದರೆ, ಇಂತಹ ವಿಧಾನಗಳ ಪರಿಣಾಮಗಳು ಯಾವುದೇ ರೀತಿಯಲ್ಲಾದರೂ ಶಾಶ್ವತವಾದವುಗಳಾಗಬೇಕೆಂದು ಉದ್ದೇಶಿಸಲಾಗಿದೆಯೋ... ಅದನ್ನು ಮಾರ್ಪಡಿಸುವ ಅವ್ಯವಸ್ಥೆ ಏನೇ ಆಗಿರಲಿ, ಭಾರತದಲ್ಲಿ ಸ್ಥಾಪಿಸುವ ಈ ಪ್ರಥಮ ಚುನಾವಣಾ ವ್ಯವಸ್ಥೆ ಎಲ್ಲಿಯವರೆಗೆ ಉಳಿಯಬೇಕೆಂದು ಉದ್ದೇಶಿಸಲಾಗಿದೆ ಎಂಬ ವ್ಯಾವಹಾರಿಕ ಪ್ರಶ್ನೆಯನ್ನು ನಾವು ಎದುರಿಸಬೇಕಾಗಿದೆ. ಅದನ್ನು ಆರಂಭದಲ್ಲಿಯೇ ಪ್ರಾಂತೀಯ ಶಾಸಕಾಂಗಗಳ ಇಚ್ಛೆಯ ಮೇರೆಗೆ ಪುನಾರಚಿಸಬಹುದಾಗಿಯೇ ಅಥವಾ ಕೊನೇಪಕ್ಷ ಮೊದಲನೆಯ ಶಾಸನಬದ್ಧ ಆಯೋಗದ ವರದಿ ಬರುವವರೆಗಾದರೂ ಅದನ್ನು ಮಾರ್ಪಡಿಸದಂತೆ ಇರಬಹುದೇ? ಈ ಎರಡೂ ವಿಚಾರಗಳ ಪರವಾಗಿ ಕೆಲವು ಬಲವಾದ ಕಾರಣಗಳಿವೆ. ಜವಾಬ್ದಾರಿ ಅಥವಾ ಹೊಣೆಗಾರಿಕೆಯ ಬೆಳವಣಿಗೆಯ ದೃಷ್ಟಿಯಿಂದ ವಿವಿಧ ಹಿತಾಸಕ್ತಿಗಳ ಪ್ರಾತಿನಿಧ್ಯವನ್ನು ಒಂದು ನಿಗದಿತ ಪ್ರಮಾಣ ಮತ್ತು ಏಕರೀತಿಯಲ್ಲಿ ಮಾಡುವುದು ಅಪೇಕ್ಷಣೀಯವಲ್ಲ. ಪ್ರತ್ಯೇಕ ವರ್ಗಗಳು ಮತ್ತು ಕೋಮುವಾರು ಮತಕ್ಷೇತ್ರಗಳು ಒಂದು ಕಟ್ಟುನಿಟ್ಟಾದ ರೂಪದಲ್ಲಿ ದೀರ್ಘಕಾಲವಿದ್ದಷ್ಟೂ ಪ್ರಾತಿನಿಧ್ಯದ ಆದರ್ಶಪ್ರಾಯ ವಿಧಾನಗಳತ್ತ ಬೆಳವಣಿಗೆ ಕಷ್ಟಕರವಾಗುವುದು. ಇದೂ ಅಲ್ಲದೇ, ಅವುಗಳ ಪುನರ್ ಪರಿಶೀಲನೆಗಾಗಿ ಸತತ ಸಮರವನ್ನು ಆಹ್ವಾನಿಸುವುದು ಸರ್ವಥಾ ಅಪೇಕ್ಷಣೀಯವಲ್ಲ." ಈ ತಪ್ಪಿನ ಅವಧಿಯನ್ನು ಹೆಚ್ಚಿಸಬೇಕೇ ಅಥವಾ ಬೇಡವೇ ಎಂಬುದನ್ನು ಹೇಳುವುದು ಆಯೋಗಕ್ಕೆ ಸೇರಿದ

ವಿಷಯ. ಆಯೋಗವು, "ಕೋಮುವಾರು ವ್ಯವಸ್ಥೆಯ ತತ್ವಕ್ಕೆ ಇರುವ ತಕರಾರುಗಳ ಸತ್ವವನ್ನು ನಾವು ಅರಿತಿದ್ದೇವೆ. ಆದರೆ, ಭಾರತವು ಜವಾಬ್ದಾರಿ ಸರಕಾರದ ಮಾರ್ಗವನ್ನು ಸ್ವಸಂತೋಷದಿಮದ ಆರಿಸಿಕೊಂಡಿರುವುದರಿಂದ ನಾವು ಅಸಹಾಯಕರಾಗಿದ್ದೇವೆ" ಎಂದು ಹೇಳುವುದಾಗಿ ನನಗೆ ವಿಶ್ವಾಸವಿದೆ. ಏಕೆಂದರೆ, ಆಯೋಗವು ಪ್ರಜ್ಞಾಪೂರ್ವಕವಾಗಿ ಭಾರತಕ್ಕೆ ಸರಿಯಾದ ದಾರಿಯನ್ನು ತೋರಿಸುವ ಕರ್ತವ್ಯವು ಯೋಗ್ಯವಾದುದೆಂಬುದಷ್ಟಕ್ಕೇ ಸೀಮಿತವಾಗದೆ, ಅದರಲ್ಲಿ ಬ್ರಿಟಿಷ್ ಅಧಿಕಾರಿಗಳು ೧೯೦೯ ತೋರಿಸಿದ ದಾರಿಯಲ್ಲಿನ ತಪ್ಪುಗಳತ್ತ ಬೆರಳು ತೋರಿಸುವುದೂ ಸೇರಿದೆ.

## ಅಧ್ಯಾಯ–೫

# ಮೇಲ್ಮನೆ

(೯೪) ನನ್ನ ಸಹೋದ್ಯೋಗಿಗಳು ಈ ಪ್ರಾಂತ್ಯದ ಶಾಸಕಾಂಗದ ಅಂಗವಾಗಿ ಮೇಲ್ಮನೆಯನ್ನು (ಎರಡನೆಯ ಸದನವನ್ನು) ಸ್ಥಾಪಿಸಬೇಕೆಂದು ಶಿಫಾರಸು ಮಾಡಿರುವವರಲ್ಲದೆ ಅದರ ಘಟನೆಯ ರೂಪುರೇಷೆಯನ್ನೂ ಸೂಚಿಸಿದ್ದಾರೆ. ನನ್ನ ಸಹೋದ್ಯೋಗಿಗಳು ಇದರ ಸ್ಥಾಪನೆಯಲ್ಲಡಗಿರುವ ಕಷ್ಟಗಳ ಬಗ್ಗೆ ಸಾಕಷ್ಟು ವಿಚಾರ ಮಾಡಿಲ್ಲವೆಂದು ನನಗನಿಸುತ್ತದೆ. ಶಾಸಕಾಂಗದ ರಚನೆಯ ವಿಷಯವಾಗಿ, ಎರಡನೆಯ ಸದನವೆಂಬುದೊಂದು ಇರುವುದಾದರೆ, ಅದು ಮೊದಲನೆಯದಕ್ಕಿಂತ ಭಿನ್ನವಾಗಿರಲೇಬೇಕು. ಅದರ ಅಧಿಕಾರಗಳ ವಿಷಯದಲ್ಲಿ ಎರಡನೆಯ ಸದನವು ಮೊದಲನೆಯ ಸದನದ ಕಾರ್ಯಗಳಿಗೆ ಅಡ್ಡಿಯಾಗದಂತೆ ಇರಬೇಕು. ಈ ಎರಡೂ ನಿಯಮಗಳನ್ನು ಅಳವಡಿಸಿಕೊಳ್ಳುವಂತಹ ಎರಡನೆಯ ಸದನವನ್ನು ರಚಿಸುವುದು ಬಹು ಕಷ್ಟದ ಕೆಲಸ ಎಂದು ನನಗನ್ನಿಸುತ್ತದೆ. ಸಂಪೂರ್ಣವಾಗಿ ನಾಮಕರಣಗೊಂಡ ಎರಡನೆಯ ಸದನ ಇರುವುದು ಅಸಾಧ್ಯ. ಕೆನಡಾದ ಸೆನೆಟ್ ಇಂತಹ ನಾಮಕರಣಗೊಂಡ ಎರಡನೆಯ ಸದನದ ವಿರುದ್ಧ ಒಂದು ನಿರಂತರ ಎಚ್ಚರಿಕೆಯ ನಿದರ್ಶನವಾಗಿದೆ. ಸೂಕ್ತ ನಿರ್ಣಯವನ್ನು ಕೈಗೊಳ್ಳುವುದಕ್ಕೆ ಜನಪ್ರಿಯ ಸದನಕ್ಕೆ ಇರುವ ಹಾಗೆ, ಅದಕ್ಕೆ ನೈತಿಕ ಅಧಿಕಾರವೂ ಇರುವುದಿಲ್ಲ. ಅಲ್ಲದೆ, ತನ್ನನ್ನು ನೇಮಿಸಿದ ಜನಪ್ರಿಯ ಸದನದ ನಿರ್ಣಯಗಳನ್ನು ಪರಿಷ್ಕರಿಸುವ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ. ಎರಡನೆಯ ಸದನವು ಚುನಾಯಿತ ಸದನವಾಗಿದ್ದಾಗ ಮಾತ್ರ ಎರಡೂ ಸದನಗಳ ಚುನಾವಣಾ ಪದ್ಧತಿ, ಚುನಾವಣೆಯ ಕಾಲ ಮತ್ತು ಅವುಗಳ ಅಧಿಕಾರವನ್ನವಲಂಬಿಸಿ ಅದು ಮೊದಲನೆಯ ಸದನದೊಂದಿಗೆ ಸುಸೂತ್ರವಾಗಿ ಕೆಲಸ ಮಾಡಬಹುದು. ಎರಡನೆಯ ಸದನವು ನಿರ್ಬಂಧಿತ ಚುನಾವಣಾ ಪದ್ಧತಿಯ ಮೇಲೆ ಆಯ್ಕೆಯಾಗಿದ್ದಾದರೆ, ಅದು ಜನಸಾಮಾನ್ಯರ ಮೇಲೆ ವಿಶೇಷ ಪ್ರಮಾಣದ ನಿಯಂತ್ರಣ ಹೊಂದುವಂತಹ ಮತ್ತು ಶ್ರೀಮಂತ ವರ್ಗದ ಒಂದು ಚಿಕ್ಕ ಗುಂಪನ್ನು ಆಳುವ ವರ್ಗವನ್ನಾಗಿ ಸೃಷ್ಟಿಸುವಲ್ಲಿ ಪರ್ಯವಸಾನಗೊಳ್ಳುವುದು ಖಚಿತ. ಇಂತಹ ಎರಡನೆಯ ಸದನವು ಪರಿಷ್ಕಾರಕ ಸದನವಾಗಿ ಕೆಳಸದನದ ದುಡುಕಿನ ಮತ್ತು ಅವಿಚಾರದ ನಿರ್ಣಯಗಳನ್ನು ನಿಯಂತ್ರಿಸುವುದು ದೂರವೇ ಉಳಿಯಿತು. ಅದು ಸಾಮಾನ್ಯ ಸುಧಾರಣೆಗೆ ಉತ್ತೇಜನ ನೀಡದ ಸದನದ ಪಟ್ಟಭದ್ರ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಂಡು ಹೋಗುವುದಕ್ಕೆ ಉತ್ತೇಜನ ನೀಡುವ ಸದನವಾಗುವುದು. ಅದು ಸಂಪ್ರದಾಯವಾದಿ ಆಡಳಿತವಿದ್ದಾಗ ಸುಪ್ತವಾಗಿದ್ದು ತೀವ್ರಗಾಮಿ ಆಡಳಿತದಲ್ಲಿ ಮಾತ್ರ ಚೇತನಗೊಳ್ಳುತ್ತದೆ. ಅದು ಪರಿಷ್ಕಾರ ಮಾಡಲೇಬೇಕಾದಾಗ ಹಾಗೆ ಮಾಡಲು ನಿರಾಕರಿಸುತ್ತದೆ. ಮತ್ತು ಅಗತ್ಯವಿಲ್ಲದಾಗ ಪರಿಷ್ಕಾರ ಮಾಡಲು ಮುಂದಾಗುತ್ತದೆ. ಹೀಗೆ ಎಲ್ಲಾ ವಿಧಗಳಲ್ಲಿಯೂ ಅದು ಅಡ್ಡಿಯುಂಟುಮಾಡುತ್ತದೆ. ಎರಡೂ ಸದನಗಳು ಏಕರೀತಿಯ ಚುನಾವಣಾ ಪದ್ಧತಿಯಂತೆ ಚುನಾಯಿತವಾದರೆ, ಎರಡನೆಯ ಸದನವು ಮೊದಲನೆಯ ಸದನದೊಡನೆ ಏಕಕಾಲದಲ್ಲಿ ಚುನಾಯಿತವಾದರೂ ಇದೇ ಪರಿಣಾಮವಾಗುತ್ತದೆ. ಅಂತೆಯೇ ಎರಡನೆಯ ಸದನವು ಮೊದಲನೆಯ ಸದನಕ್ಕಿಂತ ಬೇರೆ ಸಮಯದಲ್ಲಿ ಚುನಾಯಿತವಾದರೆ ಅದು ಕಾರ್ಯಾಂಗದ

ಸ್ಥೈರ್ಯಗೆಡಿಸಿ ಅದರ ದಕ್ಷತೆಯನ್ನು ಕುಗ್ಗಿಸುವುದು ಶತಸ್ಸಿದ್ಧ. ಏಕೆಂದರೆ, ಅದು ಪರಿಪೂರ್ಣ ನೀತಿ ನಿರೂಪಣೆಗೆ ಅಡ್ಡಿಯುಂಟು ಮಾಡುವುದಲ್ಲದೆ, ಅದು ಕಾರ್ಯಾಂಗದ ನೀತಿಯಲ್ಲಿ ಪ್ರಚಂಡ ಶಿಥಿಲತೆಯನ್ನುಂಟು ಮಾಡಿ ಸದಾ ಸಾರ್ವತ್ರಿಕ ಚುನಾವಣೆಗಳಿಗೆಡೆಮಾಡಬಹುದು. ಎರಡೂ ಸದನಗಳು ಸಮಾನಾಧಿಕಾರ ಹೊಂದಿದ್ದೇ ಆದರೆ, ಬಿಕ್ಕಟ್ಟುಗಳು ಸಹಜವಾಗಿಯೇ ಉದ್ಭವಿಸುವುವು. ತಾತ್ವಿಕ ವಿವಾದಗಳು ಸಂಪೂರ್ಣವಾಗಿ ಅನಪೇಕ್ಷಣೀಯವಲ್ಲದಿದ್ದರೂ, ಅಸಂತೋಷಕರ ಹೊಂದಾಣಿಕೆಯೇ ಎಲ್ಲಾ ಬಿಕ್ಕಟ್ಟುಗಳ ಅನಿವಾರ್ಯ ಪರಿಣಾಮವಾಗುತ್ತದೆ. ಇನ್ನೊಂದು ಕಡೆ, ಎರಡನೆಯ ಸದನದ ಅಧಿಕಾರಗಳು ಮೊದಲನೆಯದಕ್ಕಿಂತ ಕಡಿಮೆಯಾಗಿದ್ದರೆ ಅದು ಮೊದಲನೆಯ ಸದನದ ದುಡುಕಿನ ಮತ್ತು ಅವಿಚಾರದ ನಿರ್ಣಯಗಳನ್ನು ನಿಯಂತ್ರಿಸುವುದು ಸಾಧ್ಯವಾಗದು. ಆದ್ದರಿಂದ ಅದು ತನ್ನ ಅಸ್ತಿತ್ವದ ಉದ್ದೇಶದಲ್ಲಿ ವಿಫಲಗೊಳ್ಳುವುದು.

೯೫. ಎರಡನೆಯ ಸದನದ ಘಟನೆಯನ್ನು ರೂಪಿಸುವಲ್ಲಿ ನನ್ನ ಸಹೋದ್ಯೋಗಿಗಳು ಈ ಎಲ್ಲಾ ತೊಂದರೆಗಳನ್ನು ಕಡೆಗಣಿಸಿದ್ದಾರೆ. ಹೀಗೆ ಮಾಡುವಾಗ ಅವರು ಎರಡನೆಯ ಸದನ ಹೊಂದಿರ ಬೇಕಾದ ಯಾವುದೇ ಶ್ರೇಷ್ಠತೆಯನ್ನೂ ಹೊಂದಿರದ ಮತ್ತು ಎಲ್ಲಾ ದೋಷಗಳಿಂದ ಕೂಡಿರುವಂತಹ ಸದನವನ್ನು ರಚಿಸಹೊರಟಿದ್ದಾರೆ ಎಂದು ನಾನು ಹೇಳಬಲ್ಲೆ. ಎರಡನೆಯ ಸದನದ ವಿಚಾರವನ್ನು ಬೆಂಬಲಿಸುವಲ್ಲಿ ನನ್ನ ಸಹೋದ್ಯೋಗಿಗಳು ಬಹುಮಟ್ಟಿಗೆ ಗುಂಪು ಅಥವಾ ಸಾಮೂಹಿಕ ಮನೋ ಭಾವನೆಯನ್ನನುಸರಿಸಿದ್ದಾರೆಂದು ನನಗನಿಸುತ್ತದೆ. ಎರಡನೆಯ ಸದನಗಳು ಇತಿಹಾಸ ಕಾಲದಿಂದಲೂ ವ್ಯಾಪಕವಾಗಿ ಅಸ್ತಿತ್ವದಲ್ಲಿದ್ದುದರ ಕಾರಣ ಅವುಗಳು ಜನತಾ ಸರಕಾರದ ಅವಶ್ಯ ಅಂಗ ಎಂಬ ರಾಜ್ಯಶಾಸ್ತ್ರ ಸಿದ್ಧಾಂತದ ಉಗಮವಾಗಿದೆ. ಆದರೆ ಇಂಗ್ಲೆಂಡಿನಲ್ಲಿ ಉಗಮವಾಗಿದ್ದ ದ್ವಿ–ಸದನ ಪದ್ಧತಿ ಕೇವಲ ಒಂದು ಐತಿಹಾಸಿಕ ಆಕಸ್ಮಿಕವಾಗಿತ್ತೆಂಬುದನ್ನು ಮರೆಯಲಾಗಿದೆ. ಇತರ ದೇಶಗಳ ಸಂವಿಧಾನಗಳಲ್ಲಿ ಅದಕ್ಕೆ ದೊರೆತ ಸ್ಥಾನ ಕೆಳಗಿನವರು, ಮೇಲಿನವರನ್ನು ಅನುಸರಿಸುವುದರ ಫಲವಾಗಿತ್ತಲ್ಲದೆ ಅದು ಜನತೆಯಿಂದ ಚುನಾಯಿತವಾದ ಸದನದ ದುಡಕಿನ ಮತ್ತು ಉದ್ವೇಗದ ನಿರ್ಣಯಗಳಿಗೆ ತಡೆಯೊಡ್ಡುವ ಗುಣವನ್ನು ಹೊಂದಿದೆ ಎಂದು ಹೇಳಿರುವುದು, ಆಗಲೇ ವ್ಯಾಪಕವಾಗಿ ಅಸ್ತಿತ್ವದಲ್ಲಿದ್ದ ಸಂಗತಿಗೆ ಪುಷ್ಟಿ ಕೊಡುವ ವಾದವು ಮಾನವ–ಸಹಜವಾದ ಪಶ್ಚಾತ್ ಬುದ್ಧಿಯ ಆವಿಷ್ಕಾರವಾಗಿದೆ. ಆದರೆ ಎರಡನೆಯ ಸದನದ ಮೇಲಿನ ವಿಶ್ವಾಸ ಇತ್ತೀಚೆಗೆ ಕುಗ್ಗುತ್ತಿದೆ ಎಂಬುದನ್ನು ಗಮನಿಸಬೇಕು. ಕೆನಡಾ ಮತ್ತು ದಕ್ಷಿಣ ಆಫ್ರಿಕಾದ ಯುದ್ಧ–ಪೂರ್ವ ಸಂವಿಧಾನಗಳಲ್ಲಿ ಮತ್ತು ಲ್ಯಾಟ್ವಿಯ, ಲಿಥುವೇನಿಯ, ಇಸ್ಥೋನಿಯ ಮತ್ತು ಯುಗೋಸ್ಲಾವಿಯಾ ಮೊದಲಾದ ದೇಶಗಳ ಯುದ್ಧಪೂರ್ವ ಸಂವಿಧಾನಗಳಲ್ಲಿ ಎರಡನೆಯ ಸದನಗಳನ್ನು ರದ್ದುಮಾಡಲಾಗಿದೆ. ಒಂದು ಸರಕಾರವನ್ನು ಅದರ ರಚನೆಯ ಪರಸ್ಪರಾನುರೂಪತೆಯಿಂದ ಅಳೆಯದೆ ಅದರ ರಾಜಕೀಯ ಸಾಧನೆ, ಅದು ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯ ವಾಸ್ತವಿಕ ಅಂಶಗಳು ಮತ್ತು ಅದು ಇಡೀ ರಾಷ್ಟ್ರಕ್ಕೆ ಒದಗಿಸುತ್ತಿರುವ ಸುರಕ್ಷತೆಯ ಪ್ರಮಾಣದಿಂದ ಅಳೆಯಬೇಕೆಂಬ ಅರಿವಿನಿಂದ ಈ ಪ್ರತಿಕ್ರಿಯೆ ಉಂಟಾಗಿದೆ.

(೯೬) ಎರಡನೆಯ ಸದನದ ಸ್ಥಾಪನೆಯನ್ನು ಉಪಯುಕ್ತತೆಯ ದೃಷ್ಟಿಯಿಂದ ನೋಡಿದಾಗ ಅದು ಪರಿಷ್ಕಾರಕ ಸದನವಾಗಿ ಕಾರ್ಯ ನಿರ್ವಹಿಸುತ್ತದೆ ಎಂಬ ವಾದವನ್ನು ಒಪ್ಪಲು ನಾನು ಸಿದ್ಧನಿಲ್ಲ. ಪರಿಷ್ಕರಣೆ ಅಥವಾ ಪುನರ್ ಪರಿಶೀಲನೆ ಎಂದರೆ ಮತದಾರರ ಇಚ್ಛೆ ಅಥವಾ ಇಂಗಿತವನ್ನು ಅರ್ಥೈ ಸುವುದು ಎಂದು ಹೇಳುವುದಾದರೆ ಮತದಾರರ ಇಚ್ಛೆ ಏನು ಎಂಬುದನ್ನು ಎರಡನೆಯ ಸದನವು

ಮೊದಲನೆಯ ಸದನಕ್ಕಿಂತ ಚೆನ್ನಾಗಿ ತಿಳಿದುಕೊಳ್ಳಬಲ್ಲದು ಎಂದು ಹೇಳುವುದರ ಅರ್ಥ ನನಗಾಗುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಅಂತಹ ಸಂದರ್ಭದಲ್ಲಿ ಎರಡನೆಯ ಸದನದ ಸದಸ್ಯರು ತಮ್ಮ ಸ್ಥಾನ ಬಲದಿಂದ ಕೆಳಸದನದ ಸದಸ್ಯರಿಗಿಂತ ಹೆಚ್ಚಿನ ಪ್ರಾಶಸ್ತ್ಯ ಹೊಂದಿರುವುದಾದರೆ ಅದು ಬೇರೆ ವಿಷಯ. ಎರಡನೆಯ ಸದನದ ಸದಸ್ಯರು ಅಂತಹ ಯಾವುದೇ ಶ್ರೇಷ್ಠತೆ ಹೊಂದಿರುವರೆಂಬ ಮಾತನ್ನು ನಾನು ಅಲ್ಲಗಳೆಯುತ್ತೇನೆ. ಅದೂ ಅಲ್ಲದೆ, ಎರಡನೆಯ ಸದನವು ಜನತೆಯ ಇಚ್ಛೆ ಆಕಾಂಕ್ಷೆಗಳನ್ನು ಸರಿಯಾಗಿ ಅಳೆಯುವುದರಲ್ಲಿ ಅಷ್ಟೇ ವಿಫಲವಾಗುವುದೂ ಅಲ್ಲದೆ, ಈ ವಿಷಯದಲ್ಲಿ ತನ್ನ ಸ್ವಂತ ಹಿತಾಸಕ್ತಿಗಳ ಕಾರಣದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ವೈಯಕ್ತಿಕ ಪಕ್ಷಪಾತ ಮತ್ತು ಒಲವನ್ನು ತೋರಿಸುವುದರ ಮೂಲಕ ಸ್ವತಂತ್ರ ಮತ್ತು ವಿವೇಕಯುತ ತೀರ್ಮಾನ ಮಾಡಲು ಅದು ಅಸಮರ್ಥವಾಗುವುದು. ಆದ್ದರಿಂದ ಏಕ ಸದನವನ್ನು ಹೊಂದಿರುವುದು ಶ್ರೇಷ್ಠ, ಕ್ಷೇಮಕರ ಮತ್ತು ಹೆಚ್ಚು ವಿವೇಕಯುತವೆನಿಸುವುದು, ಮತ್ತು ಸಂದಿಗ್ಧ ಪರಿಸ್ಥಿತಿ ಉಂಟಾದಾಗ ಈ ಸದನವನ್ನು ಚುನಾಯಿಸುವ ಮತದಾರರಿಗೇ ನಿರ್ಣಯದ ಜವಾಬ್ದಾರಿ ಹೊರಿಸುವುದು ಒಳ್ಳೆಯದು. ಇದೂ ಅಲ್ಲದೆ, ಮೊದಲನೆಯ ಸದನದ ನಿರ್ಣಯಗಳಲ್ಲಿ ವಿಳಂಬ ಉಂಟುಮಾಡುವುದೇ ಎರಡನೆಯ ಸದನದ ಪರವಾಗಿರುವ ವಿಚಾರವಾಗಿದ್ದರೆ, ಈಗಾಗಲೇ ಅಂತಹ ಅವಕಾಶ ಲಭ್ಯವಿದೆ. ಶಾಸಕಾಂಗದಲ್ಲಿ ಅಂಗೀಕರಿಸಲಾದ ಯಾವುದೇ ವಿಧಾಯಕವನ್ನು ಶಾಸಕಾಂಗದ ಪುನರ್ ಪರಿಶೀಲನೆಗೆ ವಾಪಸು ಕಳುಹಿಸುವ ಅಧಿಕಾರ ಗವರ್ನರಿಗಿದೆ. ಶಾಸಕಾಂಗಗಳು ಅದನ್ನು ಪುನರ್ ಪರಿಶೀಲಿಸದೆ ಮೊದಲಿನ ರೂಪದಲ್ಲಿಯೇ ಅದನ್ನು ಪುನಃ ಅನುಮೋದಿಸಿ ಕಳುಹಿಸಿದರೂ ಸಹ ಗವರ್ನರರು ತಮ್ಮ ನಿಷೇಧಾಧಿಕಾರ (ವೀಟೋ) ಚಲಾಯಿಸಿ ಅದನ್ನು ತಡೆಹಿಡಿಯಬಹುದು. ಶಾಸಕಾಂಗವು ಗವರ್ನರರ ನಿರ್ಣಯವನ್ನು ಒಪ್ಪದೇ ಹೋದಲ್ಲಿ ಸದನವನ್ನು ವಿಸರ್ಜಿಸಿ ವಿವಾದಾತ್ಮಕ ವಿಷಯವನ್ನು ಮತದಾರರ ಅಭಿಪ್ರಾಯಕ್ಕೆ ಹಾಕುವಂತೆ ಅವರನ್ನು ಒತ್ತಾಯಿಸಬಹುದಾಗಿದೆ. ಆದ್ದರಿಂದ ಯಾವುದನ್ನು ಎರಡನೆಯ ಸದನವು ಮಾಡಬಹುದು ಅಥವಾ ಮಾಡಬೇಕೆಂದು ನಿರೀಕ್ಷಿಸಲಾಗಿದೆಯೋ ಆ ಕೆಲಸವನ್ನು ಗವರ್ನರರೇ ತಮ್ಮ ನಿಷೇಧಾಧಿಕಾರದ ಮೂಲಕ ಮಾಡಬಹುದು. ಈ ಸಂಗತಿಯನ್ನು ಒಪ್ಪಿಕೊಂಡರೆ, ಎರಡನೆಯ ಸದನವು ಜನತಾ ಸದನಕ್ಕೆ ಒಂದು ನಿರುಪಯೋಗಿ ಅನುಬಂಧವಾಗುವುದು.

(೯೭) ಏಕ ಸದನವು ದುಡುಕಿನ ಮತ್ತು ಅಪಕ್ವ ಶಾಸನಗಳನ್ನು ಪಾಸುಮಾಡುತ್ತದೆ ಎಂಬ ನನ್ನ ಸಹೋದ್ಯೋಗಿಗಳ ಗ್ರಹಿಕೆ ಸರಿಯಾದ ಆಧಾರಗಳನ್ನು ಹೊಂದಿಲ್ಲ ಮತ್ತು ಉಪಯುಕ್ತತೆಯ ಮಾನ ದಂಡವನ್ನು ಬೇರೆ ದೇಶಗಳಲ್ಲಿರುವ ಪರಿಸ್ಥಿತಿಯಿಂದ ಪ್ರೇರಿತವಾಗಿ ಅನ್ವಯಿಸುತ್ತಿಲ್ಲವೆಂಬ ಭರವಸೆ ನನಗಿದೆ. ಅವರ ಗ್ರಹಿಕೆಯು ಸಂಪೂರ್ಣ ಆಧಾರರಹಿತವಾಗಿದ್ದು, ಆಧುನಿಕ ರಾಜಕೀಯದ ಕಾರ್ಯ ವಿಧಾನದ ಬಗ್ಗೆ ಅವರಿಗಿರುವ ಅಜ್ಞಾನವನ್ನು ಅದು ತೋರಿಸುತ್ತದೆ ಎಂದು ನನಗನಿಸುತ್ತದೆ. ಆಧುನಿಕ ಕಾಲದಲ್ಲಿ ಯಾವುದೇ ವಿಧಾಯಕವನ್ನು ಶಾಸಕಾಂಗದಲ್ಲಿ ಆಶ್ಚರ್ಯಕರ ರೀತಿಯಲ್ಲಿ ಎತ್ತಲಾಗುವುದಿಲ್ಲ. ಪ್ರತಿಯೊಂದು ಸೂಚಿತ ವಿಧಾಯಕವು ಅದು ಶಾಸನವಾಗುವ ಮುನ್ನ ಅನೇಕ ಕಾಲ ಸಾರ್ವಜನಿಕರ ಚರ್ಚೆ ಮತ್ತು ವಿಮರ್ಶೆಗೊಳಗಾಗುತ್ತದೆ. ಕಾನೂನಿನ ಗ್ರಂಥದಲ್ಲಿ ಸ್ಥಾನ ಪಡೆದ ಪ್ರತಿಯೊಂದು ಕಾನೂನಿನ ಹಿನ್ನೆಲೆಯ ಇತಿಹಾಸವನ್ನು ಪರಿಶೀಲಿಸಿದಾಗ ಕಾನೂನಿನ ವಿಚಾರ ಹುಟ್ಟಿದಂದಿನಿಂದ ಅದು ಅಂಗೀಕಾರವಾಗುವವರೆಗಿನ ಅವಧಿ ಸರ್ವೇಸಾಮಾನ್ಯವಾಗಿ ದೀರ್ಘವಾಗಿದೆಯೇ ಹೊರತು ಸಂಕ್ಷಿಪ್ತವಾಗಿಲ್ಲ. ಪರಿಸ್ಥಿತಿ ಹೀಗಿರುವಾಗ ಜನತಾ ಸದನವು ದುಡುಕಿನಿಂದ ಕಾನೂನು ಮಾಡುತ್ತದೆಯಾದ್ದರಿಂದ ಅದರ ವೇಗದ ಚಕ್ರಗಳಿಗೆ ತಡೆ ಹಾಕುವುದು ಅವಶ್ಯ ಎಂಬ ಗ್ರಹಿಕೆ ಇಲ್ಲದ ರೋಗಕ್ಕೆ ಪರಿಹಾರವನ್ನು ಸೂಚಿಸಿದಂತಿದೆ.

(೯೮) ನನ್ನ ಸಹೋದ್ಯೋಗಿಗಳು ಬಯಸುತ್ತಿರುವುದು ಪರಿಷ್ಕಾರಕ ಸದನವಲ್ಲ. ಅವರು ಬಯಸುತ್ತಿರುವುದು ಒಂದು ಆಳುವ ಜಾತಿಯ ನಿರ್ಮಾಣ. ಅವರು ಹೇಳಿರುವ ಉದ್ದೇಶದಿಂದ ಅದನ್ನು ರಚಿಸಲು ಸೂಚಿಸಲಾಗಿರುವ ಮತದಾನದ ವ್ಯವಸ್ಥೆಯಿಂದ ಮತ್ತು ಅವರು ಸೂಚಿಸಿರುವಂತೆ ಅದಕ್ಕೆ ನೀಡಬಹುದಾದ ಅಧಿಕಾರಗಳಿಂದ ಇದು ಸ್ಪಷ್ಟವಾಗುತ್ತದೆ. ಶಾಸಕಾಂಗಕ್ಕೆ ನೀಡಲಾದ ಅಧಿಕಾರಗಳನ್ನು ಎರಡನೆಯ ಸದನದ ರಚನೆಯ ಮೂಲಕ ಸೀಮಿತಗೊಳಿಸಿ ಆ ಅಧಿಕಾರಗಳನ್ನು ಒಂದು ನಿರ್ದಿಷ್ಟ ಕೋಮಿನ ಅಥವಾ ಹಿತಾಸಕ್ತಿಗೆ ಧಕ್ಕೆಯಾಗುವಂತೆ ಉಪಯೋಗಿಸಲು ಮಾಡಿಕೊಂಡಿರುವ ಒಂದು ವಿಧಾನವನ್ನಾಗಿ ಮಾರ್ಪಡಿಸಿರುವುದನ್ನು ನೋಡಿ ನನಗೆ ಆಶ್ಚರ್ಯವೆನಿಸಿದೆ. ನಾನು ತಿಳಿದಮಟ್ಟಿಗೆ ನಾವು ಬಯಸಿರುವುದು ರಾಜಕೀಯ ಅಧಿಕಾರದ ಕೇಂದ್ರಬಿಂದು ಅಥವಾ ಒಲವಿನಲ್ಲಿ ಬದಲಾವಣೆಯನ್ನುಂಟು ಮಾಡುವ ಸುಧಾರಣೆಯಾಗಿರದೆ, ಅದನ್ನು ಕೆಲವು ಇತಿಮಿತಿಗಳಲ್ಲಿ ಒಳಗೊಳಗೇ ಗುಟ್ಟಾಗಿ ಜನತಾ ಸಮೂಹದ ವಿರುದ್ಧ ತಿರುಗಿಸಿದವುಗಳೇ ಆಗಿವೆ. ಈ ಅಧಿಕಾರದ ಹಸ್ತಾಂತರವನ್ನು ಸೀಮಿತಗೊಳಿಸುವ ಪ್ರಯತ್ನದ ರಾಜಕೀಯ ಸುಧಾರಣೆಯ ಹೆಚ್ಚು ಅಪೇಕ್ಷಣೀಯ ರೀತಿ ಎಂದರೆ ಸಂಬಂಧಪಟ್ಟ ವಿವಿಧ ಕೋಮುಗಳಲ್ಲಿ ಈಗಿರುವ ಅಧಿಕಾರದ ಸಮತೋಲನದಲ್ಲಿ ಯಾವುದೇ ಬದಲಾವಣೆಯಾಗದಂತೆ ಅದನ್ನು ಹಾಗೆಯೇ ಉಳಿಸಿಕೊಂಡು ಹೋಗುವುದೇ ಅವರ ವಿಚಾರವಾಗಿದೆ. ಯಥಾಸ್ಥಿತಿಗೆ ಧಕ್ಕೆ ಉಂಟು ಮಾಡುವಂತಹ ಯಾವುದೇ ಸುಧಾರಣೆ ಮಾಡಲು ಅವರು ಸಿದ್ಧರಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ವಿವಿಧ ವರ್ಗಗಳ ಅಧಿಕಾರದ ಸಮತೋಲನ ಬದಲಾಯಿಸುವುದೇ ಎಲ್ಲಾ ಸುಧಾರಣೆಗಳ ತಿರುಳು ಎಂದು ಹೇಳುವುದರಲ್ಲಿ ನನಗೆ ಎಳ್ಳಷ್ಟೂ ಸಂಶಯವೇ ಇಲ್ಲ. ಕೆಳವರ್ಗಗಳಿಗೆ ಏನಾದರೂ ಲಾಭವಾದರೆ, ಇತರ ಕೆಲ ವರ್ಗಗಳಿಗೆ ನಷ್ಟವಾಗಲೇಬೇಕು. ಪ್ರತಿಯೊಂದು ವರ್ಗವು ತಾನು ಮೊದಲು ಹೊಂದಿದಷ್ಟೇ ರಾಜಕೀಯ ಅಧಿಕಾರವನ್ನು ಹೊಂದುವುದಾದರೆ ಅದು ನಿಜವಾದ ಸುಧಾರಣೆ ಎನಿಸುವುದಿಲ್ಲ. ಸುಧಾರಣೆಯಲ್ಲಿ ಆಸಕ್ತಿ ಹೊಂದಿರುವ ಕೆಳವರ್ಗಗಳೇ ಆಗಲಿ ಅಥವಾ ಇತರ ಯಾವುದೇ ವರ್ಗವಾಗಲಿ, ರಾಜಕೀಯ ಸುಧಾರಣೆಯ ಹೆಸರಿನಲ್ಲಿ ಮಾಡಲಾದ ಯಾವುದೇ ಕಾನೂನಿಂದ ಅಥವಾ ಎಲ್ಲವನ್ನೂ ಬದಲಾಯಿಸಲಾಗುವುದೆಂದು ಹೇಳುತ್ತಾ, ಇದ್ದದ್ದನ್ನು ಇದ್ದ ಹಾಗೆಯೇ ಉಳಿಸಿಕೊಂಡು ಹೋಗುವ ತಂತ್ರದಿಂದ ತೃಪ್ತಿಯಾಗುವುದೆಂದು ಹೇಳುವುದು ವ್ಯರ್ಥಾಲಾಪವೆನಿಸುವುದು. ರಾಜಕೀಯ ಅಧಿಕಾರದ ಹಸ್ತಾಂತರವು ಜನಸಾಮಾನ್ಯರವರೆಗೆ ಹೋಗದೆ ಕೆಲವ ವರ್ಗಗಳಿಗೆ ಮಾತ್ರ ತಲುಪಬೇಕೆಂದು ಸರಳ ಮಾತುಗಳಲ್ಲಿ ನೇರವಾಗಿ ಹೇಳುವುದು ಒಳ್ಳೆಯದು. ಅಂತಹ ಯಾವುದೇ ಸುಧಾರಣೆಯ ಯೋಜನೆಗಳಿಗೆ ನಾನು ಸಮ್ಮತಿಸಲಾರೆ ಎಂದು ಸ್ಪಷ್ಟಪಡಿಸುತ್ತೇನೆ.

(೯೯) ಎರಡನೆಯ ಸದನವು ಅವಶ್ಯವೆಂದು ಒಪ್ಪಿಕೊಂಡರೂ ಅದರ ರಚನೆಯ ಬಗ್ಗೆ ಒಂದು ಬಹುದೊಡ್ಡ ಕಷ್ಟವಿದೆ. ಮಾಂಟೆಗೂ–ಚೆಲ್ಮ್ಸ್‌ಫರ್ಡ್ ವರದಿಯ ಕರ್ತೃಗಳು ೧೯೧೭ರಲ್ಲಿಯೇ ಪ್ರಾಂತ್ಯಗಳಲ್ಲಿ ಎರಡನೆಯ ಸದನಗಳನ್ನು ಸ್ಥಾಪಿಸುವ ಪ್ರಶ್ನೆಯನ್ನು ಬಹು ಸಾವಧಾನದಿಂದ ಪರಿಶೀಲಿಸಿದ್ದರು. ಆದರೆ, ಇದರಲ್ಲಡಗಿದ ಎಲ್ಲಾ ಅಂಶಗಳನ್ನು ಪರಿಗಣಿಸಿ ಈ ಸೂಚನೆಯ ವಿರುದ್ಧ ನಿರ್ಣಯಿಸಿದ್ದರು. ಅವರು ಹೇಳಿರುವಂತೆ "ಈ ಸೂಚನೆಗೆ ಗಂಭೀರವಾದ ಕಾರ್ಯಾಚರಣೆಯಲ್ಲಿರುವ ತೊಂದರೆಗಳ ಕುರಿತ ಆಕ್ಷೇಪಣೆಗಳನ್ನು ನಾವು ಗಮನಿಸಿದ್ದೇವೆ. ಅನೇಕ ಪ್ರಾಂತ್ಯಗಳಲ್ಲಿ ಎರಡು ಸದನಗಳಿಗೆ ಸಾಕಾಗುವಷ್ಟು ಅರ್ಹರಾದ ಸದಸ್ಯರನ್ನು ದೊರಕಿಸುವುದು ಅಸಾಧ್ಯ. ಎರಡನೆಯ ಸದನದಲ್ಲಿ ಶ್ರೀಮಂತ ಮತ್ತು ಭೂ ಮಾಲಿಕರ ಹಿತಾಸಕ್ತಿಗಳನ್ನು ಪ್ರತಿನಿಧಿಸುವವರೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅಂತಹ ಹಿತಾಸಕ್ತಿಗಳ

ವಿರುದ್ಧ ಮಾಡಬಹುದಾದ ಕಾನೂನುಗಳ ವಿರುದ್ಧ ಪರಿಣಾಮಕಾರಿಯಾಗಿ ಅಡ್ಡಿಯುಂಟುಮಾಡಬಹುದು. ಅದೂ ಅಲ್ಲದೆ, ಎರಡನೆಯ ಸದನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭೂಮಾಲೀಕರಿದ್ದರೆ ಇದೇ ವರ್ಗದ ಇತರರು ಮತದಾರರಿಂದ ಮತಯಾಚನೆ ಮಾಡದಂತೆ ತಡೆಯುವ ದುರದೃಷ್ಟಕರ ಪರಿಣಾಮವನ್ನುಂಟು ಮಾಡಬಹುದು. ಕಾನೂನು ಮಾಡುವಲ್ಲಿ ಎರಡೂ ಸದನಗಳಲ್ಲಿ ಆಗಲೇಬೇಕಾದ ಸುತ್ತುಬಳಸಿನ ಕಾರ್ಯ ವಿಧಿಯ ಕಾರಣ ಪ್ರಾಂತೀಯ ಶಾಸಕಾಂಗದಲ್ಲಿ ಕಾನೂನು ಮಾಡುವಾಗ ಅನವಶ್ಯಕ ವಿಳಂಬವಾಗುವು ದೆಂದು ನಮಗನ್ನಿಸುತ್ತದೆ. ಆದ್ದರಿಂದ ನಾವು ಸದ್ಯದಲ್ಲಿ ಪ್ರಾಂತ್ಯಗಳಲ್ಲಿ ದ್ವಿ–ಸದನ ಪದ್ಧತಿಯ ವಿರುದ್ಧ ನಿರ್ಣಯಿಸಿದ್ದೇವೆ." ಎರಡನೆಯ ಸದನದ ವಿರುದ್ಧ ೧೯೧೭ರಲ್ಲಿ ಪ್ರಸ್ತಾಪಿಸಲಾಗಿದ್ದ ಆಕ್ಷೇಪಣೆಗಳು ಇಂದೂ ಪ್ರಸ್ತುತವಾಗಿವೆ. ಈ ಪ್ರಾಂತ್ಯದಲ್ಲಿ ಎರಡೂ ಸದನಗಳ ಕಾರ್ಯ ನಿರ್ವಹಿಸುವಂತ ಪ್ರಖ್ಯಾತ ವ್ಯಕ್ತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ದೊರಕಿಸಿಕೊಳ್ಳುವದು ಸಾಧ್ಯವಿಲ್ಲವೆಂದು ನಾನು ಖಚಿತವಾಗಿ ಹೇಳಬಲ್ಲೆ. ಎರಡನೆಯ ಸದನವು ಮೊದಲನೆಯ ಸದನವನ್ನು ನಿಸ್ಸತ್ವಗೊಳಿಸಬಹುದು. ಎರಡು ಸದನಗಳಿಗೆ ಅಗತ್ಯವಾದ ಸಾಧನಗಳು ನಮ್ಮಲ್ಲಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗಿರದ ಎರಡು ಸದನಗಳಿರುವ ಬದಲು ಒಂದೇ ದಕ್ಷ ಸದನ ಇರುವುದು ಲೇಸು. ಈ ಕಾರಣಗಳಿಂದ ನಾನು ಈ ಪ್ರಾಂತ್ಯದಲ್ಲಿ ಎರಡನೆಯ ಸದನದ ಸ್ಥಾಪನೆಯನ್ನು ವಿರೋಧಿಸುತ್ತೇನೆ.

## ಅಧ್ಯಾಯ-೬

# ಶಾಸಕಾಂಗದ ಅಧಿಕಾರಿಗಳು

**(೧೦೦) ಅಧ್ಯಕ್ಷರನ್ನು ನೇಮಿಸುವ ಮತ್ತು ತೆಗೆದುಹಾಕುವ ಅಧಿಕಾರ:**

೧೯೧೯ರ ಸುಧಾರಣೆಗಳಿಗೆ ಮೊದಲು ಪ್ರಾಂತ್ಯ ಕಾರ್ಯಾಂಗದ ಪ್ರಮುಖರಾಗಿದ್ದ ಗವರ್ನರರು ಪ್ರಾಂತೀಯ ಶಾಸಕಾಂಗದ ಅಧ್ಯಕ್ಷರಾಗಿದ್ದರು. ೧೯೧೯ರಲ್ಲಿ ಜಾರಿಗೊಳಿಸಲಾದ ಬದಲಾವಣೆಗಳಿಂದಾಗಿ ಪ್ರಾಂತೀಯ ಶಾಸಕಾಂಗವು ತನ್ನ ಸದಸ್ಯರೊಳಗೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸುವ ಮತ್ತು ಅವರನ್ನು ತೆಗೆದುಹಾಕುವ ಅಧಿಕಾರವನ್ನು ಪಡೆದುಕೊಂಡಿತು. ಇದು ಒಂದು ಅಮೂಲ್ಯವಾದ ವಿಶೇಷಾಧಿಕಾರವಾಗಿತ್ತು. ಆದರೆ, ಈ ವಿಶೇಷಾಧಿಕಾರದ ಚಲಾವಣೆಯನ್ನು ಕೆಲವು ನಿರ್ಬಂಧಗಳಿಗೊಳಪಡಿಸಲಾಗಿತ್ತು. ಅಧ್ಯಕ್ಷರ ನೇಮಕ ಮತ್ತು ತೆಗೆದುಹಾಕುವುದನ್ನು ಗವರ್ನರರ ಸಮ್ಮತಿಯಿಂದ ಮಾಡಬೇಕಾಗಿತ್ತು. ಆ ನಿರ್ಬಂಧಗಳು ಶಾಸಕಾಂಗದ ಮೇಲೆ ಕಾರ್ಯಾಂಗ ಪರಮಾಧಿಕಾರ ಹೊಂದಿದ್ದ ಗತಕಾಲದ ಪಳೆಯುಳಿಕೆಗಳಾಗಿದ್ದವು. ಡೊಮಿನಿಯನ್ (ಬ್ರಿಟಿಷ್ ಚಕ್ರಾಧಿಪತ್ಯದ ಸ್ವತಂತ್ರ ಒಳರಾಷ್ಟ್ರ)ಗಳ ಸಂವಿಧಾನಗಳಲ್ಲಿ ಇಂತಹ ನಿರ್ಬಂಧಗಳಿರಲಿಲ್ಲ. ಇವು ಶಾಸಕಾಂಗದ ಸ್ವಾತಂತ್ರ್ಯಕ್ಕೆ ಅಸಂಬದ್ಧವಾಗಿದ್ದು, ಇವುಗಳನ್ನು ತೆಗೆದುಹಾಕಲೇಬೇಕು. ಅಧ್ಯಕ್ಷರು ಕಾರ್ಯಾಂಗದಿಂದ ಸ್ವತಂತ್ರರಾಗಿರಬೇಕೆಂಬುದನ್ನು ಒಪ್ಪಿಕೊಂಡರೂ, ಅವರು ನ್ಯಾಯಾಂಗದಿಂದಲೂ ಸ್ವತಂತ್ರರಾಗಿರಬೇಕೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಭಾರತ ಸರಕಾರ ಕಾಯ್ದೆ (೧೯೧೯)ಯ ೧೧೦ನೆಯ ವಿಭಾಗದಲ್ಲಿ ಯಾವ ಅಧಿಕಾರಿಗಳು ಮತ್ತು ವಿಷಯಗಳು ಉಚ್ಚನ್ಯಾಯಾಲಯಗಳ ವ್ಯಾಪ್ತಿಯಿಂದ ವಿನಾಯಿತಿ ಹೊಂದಿವೆ ಎಂದು ವ್ಯಾಖ್ಯಾನಿಸಲಾಗಿದೆ. ವಿಧಾನ ಪರಿಷತ್ತಿನ ಅಧ್ಯಕ್ಷರು ಇಂತಹ ವಿನಾಯಿತಿ ಹೊಂದಿರುವ ಅಧಿಕಾರಿಗಳಲ್ಲೊಬ್ಬರಾಗಿಲ್ಲ. ಹೀಗಿರುವಾಗ, ಶಾಸಕಾಂಗದ ಅಧ್ಯಕ್ಷರು ಅವರು ಅಧ್ಯಕ್ಷರಾಗಿ ಮಾಡುವ ಕೆಲಸ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೊಳಪಡುತ್ತದೆ. ಎಂದರೆ ಅಧ್ಯಕ್ಷ ಸ್ಥಾನದಿಂದ ಅವರು ಮಾಡುವ ಕೆಲಸ ಮತ್ತು ನಡತೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಇದು ಕ್ಷುದ್ರ ಮೊಕದ್ದಮೆಗಳಿಗೆ ಮುಕ್ತ ಅವಕಾಶ ನೀಡುವುದೆಂಬ ಭಯವಿದ್ದು, ಶಾಸಕಾಂಗದ ಕಾರ್ಯಕಲಾಪಗಳಲ್ಲಿ ಅಪಾರ ವಿಳಂಬ ಉಂಟುಮಾಡುವುದು. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯಿಂದ ಅಧ್ಯಕ್ಷರಿಗೆ ವಿನಾಯಿತಿ ಕೊಡುವ ಮೂಲಕ ಈ ದೋಷವನ್ನು ನಿವಾರಿಸುವ ಪ್ರಯತ್ನ ಮಾಡಲಾಗಿದೆ. ನಾನು ಈ ಮಾರ್ಪಾಟನ್ನು ವಿರೋಧಿಸುತ್ತೇನೆ ಮತ್ತು ಯಥಾಸ್ಥಿತಿಯನ್ನು ಉಳಿಸಿಕೊಂಡು ಹೋಗುವುದನ್ನು ಅನುಮೋದಿಸುತ್ತೇನೆ.

**(೧೦೧): ವಿಶೇಷಾಧಿಕಾರಗಳನ್ನು ನಿರ್ಣಯಿಸುವ ಅಧಿಕಾರ:**

ಒಂದು ಶಾಸಕಾಂಗದ ಅಸ್ತಿತ್ವಕ್ಕೆ ಮತ್ತು ಅದು ನಿರ್ವಹಿಸಬೇಕಾದ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಅವಶ್ಯವೆನಿಸಿದ ಅಧಿಕಾರಗಳನ್ನು ನೀಡುವ ಅವಶ್ಯಕತೆಯನ್ನು ಯಾರೂ ಪ್ರಶ್ನಿಸಲಾರರು. ಸದ್ಯದಲ್ಲಿ ಚಾಲ್ತಿಯಲ್ಲಿರುವ ಕಾನೂನುಗಳ ಪ್ರಕಾರ ಪ್ರಾಂತೀಯ ಶಾಸಕಾಂಗಗಳ ಪರಿಸ್ಥಿತಿ

ಅತ್ಯಂತ ಅತೃಪ್ತಿಕರವಾಗಿದೆ. ಶಾಸಕಾಂಗದ ಸದಸ್ಯರಿಗೆ ಕೆಲವು ವಿಶೇಷ ವಿನಾಯಿತಿಗಳನ್ನು ನೀಡಿರುವುದಲ್ಲದೆ, ವಿಧಾನ ಪರಿಷತ್ತುಗಳ ೧೭ನೆಯ ನಿಯಮದ ಪ್ರಕಾರ ಅಸಭ್ಯ ವರ್ತನೆಗಾಗಿ ಸದಸ್ಯರನ್ನು ಸದನದಿಂದ ಹೊರಗೆ ಕಳುಹಿಸಲು ಅಧ್ಯಕ್ಷರಿಗೆ ನೀಡಲಾದ ಅಲ್ಪ ಅಧಿಕಾರವನ್ನು ಬಿಟ್ಟರೆ, ಶಾಸಕಾಂಗಕ್ಕೆ ತನ್ನ ಕಾರ್ಯ ಕಲಾಪಗಳಿಗೆ ಅಡ್ಡಿಯುಂಟಾದಾಗ ಮತ್ತು ತನ್ನ ಘನತೆಗೆ ಕುಂದುಂಟಾದಾಗ ತನ್ನ ಸ್ಥಾನಮಾನವನ್ನು ಸಂರಕ್ಷಿಸಿಕೊಳ್ಳುವ ಅಧಿಕಾರವನ್ನು ಕಾನೂನು ಕೊಡಮಾಡಿಲ್ಲ. ಅಂತಹ ಅಧಿಕಾರವನ್ನು ಶಾಸಕಾಂಗಕ್ಕೆ ಕೊಡದೆ ಇರುವುದು ಸಾಧ್ಯವಿಲ್ಲ; ಆದ್ದರಿಂದ ಡೊಮಿನಿಯನ್ ಶಾಸಕಾಂಗಗಳಿರುವಂತೆ ಪ್ರಾಂತೀಯ ಶಾಸಕಾಂಗಗಳಿಗೆ ಕೆಲವು ಇತಿಮಿತಿಗಳಿಂದ ಕೂಡಿದ ತನ್ನ ಹಿತರಕ್ಷಣೆಗೆ ಅವಶ್ಯವೆನಿಸಿದ ವಿಶೇಷ ಅಧಿಕಾರ ಗಳನ್ನು ನೀಡಬೇಕೆಂದು ನಾನು ಶಿಫಾರಸು ಮಾಡುತ್ತೇನೆ.

**(೧೦೨) ಕಾರ್ಯ ವಿಧಾನಗಳನ್ನು ಕ್ರಮಪಡಿಸುವ ಅಧಿಕಾರ:**

ಮುಂಬಯಿ ವಿಧಾನ ಪರಿಷತ್ತಿನ ಕಾರ್ಯಕಲಾಪಗಳನ್ನು ಭಾರತ ಸರಕಾರ ಕಾಯ್ದೆಯ ೭೨ ಡಿ (೬) ವಿಭಾಗದ ಪ್ರಕಾರ ರೂಪಿಸಲಾದ ನಿಯಮಗಳು ಮತ್ತು ಅದೇ ೭೨ಡಿ (೭)ನೆಯ ವಿಭಾಗದನ್ವಯ ಪೂರಕವಾಗಿ ಹೊರಡಿಸಲಾದ ಸ್ಥಾಯೀ ಆದೇಶಗಳ ಪ್ರಕಾರ ನಡೆಸಲಾಗುತ್ತಿದೆ. ಶಾಸಕಾಂಗಕ್ಕೆ ಈ ನಿಯಮಗಳಿಗೆ ಮತ್ತು ಆದೇಶಗಳಿಗೆ ತಿದ್ದುಪಡಿಗಳನ್ನು ಸೂಚಿಸುವ ಸ್ವಾತಂತ್ರ್ಯವಿದ್ದಾಗ್ಯೂ ಸ್ಥಾಯೀ ಆದೇಶಗಳನ್ನು ಗವರ್ನರ್–ಜನರಲ್–ಇನ್–ಕೌನ್ಸಿಲ್‌ರವರೇ ಹೊರಡಿಸುತ್ತಿದ್ದರು. ಆದರೆ ೧೨೯ ಎ ವಿಭಾಗದ ಪ್ರಕಾರ ನಿಯಮಗಳನ್ನು ಗವರ್ನರ್–ಜನರಲ್–ಇನ್–ಕೌನ್ಸಿಲ್‌ರವರೇ ರೂಪಿಸುತ್ತಿದ್ದು, ಪ್ರಾಂತೀಯ ಶಾಸಕಾಂಗವು ಅವುಗಳನ್ನು ಬದಲಾಯಿಸುವ ಅಥವಾ ರದ್ದುಪಡಿಸುವ ಅಧಿಕಾರ ಹೊಂದಿಲ್ಲ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ನನ್ನ ಅಭಿಪ್ರಾಯದಲ್ಲಿ ಪ್ರಾಂತೀಯ ಶಾಸಕಾಂಗಗಳು ತಮ್ಮ ಕಾರ್ಯ ವಿಧಾನಗಳನ್ನು ತಾವೇ ಕ್ರಮಪಡಿಸಿಕೊಳ್ಳುವ ಅಧಿಕಾರವನ್ನು ಹೊಂದಿರಬೇಕು. ಪ್ರಾಂತೀಯ ಶಾಸಕಾಂಗಗಳಿಗೆ ಇಂತಹ ಸ್ವಾತಂತ್ರ್ಯವನ್ನು ನೀಡುವ ದಿಶೆಯಲ್ಲಿ ಕೆಲವು ತೊಂದರೆಗಳಿದ್ದು, ಕೆಲವು ಕಟ್ಟುಪಾಡುಗಳಿಗೆ ಸಂಬಂಧಿಸಿದ ನಿಯಮಗಳು ಇಲ್ಲಿ ಬೇರೆ ದೇಶಗಳಲ್ಲಿರುವಂತೆ ಸಂವಿಧಾನಾತ್ಮಕ ಕಾನೂನಿನ ಅಂಗವಾಗಿರದೇ ಇರುವುದ ರಿಂದ ಉದ್ಭವಿಸುತ್ತವೆ ಎಂದು ತೋರುತ್ತದೆ. ಹೀಗೆ ಆ ನಿಯಮಗಳು ಸಂವಿಧಾನಾತ್ಮಕ ಕಾನೂನಿನ ಅಂಗವಾಗಿದ್ದ ಪಕ್ಷದಲ್ಲಿ ಇವುಗಳ ತಿದ್ದುಪಡಿ ಮಾಡುವುದೆಂದರೆ ಸಂವಿಧಾನವನ್ನೇ ಮಾರ್ಪಡಿಸಿದಂತಾಗುತ್ತದೆ. ಆದರೆ, ಅಂತಹ ನಿಯಮಗಳನ್ನು ಭಾರತ ಸರಕಾರದ ಕಾಯ್ದೆಯ ಒಂದು ವಿಭಾಗವಾಗಿ ಶಾಸನ ಮಾಡಿದ್ದೇ ಆಗಿದ್ದರೆ, ಈ ತೊಂದರೆಯನ್ನು ಸುಲಭವಾಗಿ ಜಾರಿಗೊಳಿಸಬಹುದು ಮತ್ತು ಪ್ರಾಂತೀಯ ಶಾಸಕಾಂಗಗಳನ್ನು ಆಸ್ಟ್ರೇಲಿಯ, ದಕ್ಷಿಣ ಆಫ್ರಿಕ ಮತ್ತು ಕೆನಡಾ ಡೊಮಿನಿಯನ್‌ಗಳ ಶಾಸಕಾಂಗಗಳ ಮಟ್ಟಕ್ಕೆ ತರಬಹುದು.

**(೧೦೩) ಶಾಸನ ಮಾಡುವ ಅಧಿಕಾರ:**

ಭಾರತ ಸರಕಾರ ಕಾಯ್ದೆ ೮೦ ಸಿ ವಿಭಾಗದಲ್ಲಿ ಹೇಳಲಾಗಿರುವಂತೆ ಗವರ್ನರ್, ಲೆಫ್ಟಿನಂಟ್–ಗವರ್ನರ್ ಅಥವಾ ಚೀಫ್ ಕಮೀಷನರರ ಪೂರ್ವಾನುಮತಿ ಪಡೆಯದೇ ಸ್ಥಳೀಯ ಶಾಸಕಾಂಗಗಳ ಯಾವ ಸದಸ್ಯರೂ ಪ್ರಾಂತ್ಯದ ಸಾರ್ವಜನಿಕ ಆದಾಯಕ್ಕೆ ಸಂಬಂಧಪಟ್ಟ ಅಥವಾ ಆ ಆದಾಯದಿಂದ ಮಾಡಲಾಗುವ ಖರ್ಚಿಗೆ ಸಂಬಂಧಿಸಿದ ಯಾವುದೇ ವಿಧೇಯಕ ಅಥವಾ ಸೂಚನೆಯನ್ನು ಮಂಡಿಸುವುದು

ನ್ಯಾಯಬದ್ಧವಲ್ಲ. ಕಾಯ್ದೆಯ ಈ ವಿಭಾಗವು ಶಾಸಕಾಂಗದ ಅಧಿಕಾರಗಳ ಮೇಲೆ ಗಂಭೀರವಾದ ನಿರ್ಬಂಧವಾಗಿದೆ. ಇದು ದೇಶದ ಆಡಳಿತದಲ್ಲಿ ಜನತೆಗೆ ಯಾವ ಪಾತ್ರವೂ ಇಲ್ಲದಿದ್ದ ಕಾಲದ ಅವಶೇಷವಾಗಿದೆ. ಈ ಅಧಿಕಾರಗಳನ್ನು ಉಳಿಸಿಕೊಂಡು ಹೋಗುವುದು ಕಾರ್ಯಾಂಗದ ಮೇಲೆ ಶಾಸಕಾಂಗದ ಪರಮಾಧಿಕಾರಕ್ಕೆ ಅಸಂಗತವೆನಿಸುವುದು. ಆದ್ದರಿಂದ ಕಾಯ್ದೆಯ ಈ ವಿಭಾಗವನ್ನು ಕೈಬಿಡಬೇಕು. ಪರಿಷತ್ತು ಅಂಗೀಕರಿಸಿದ ಯಾವುದೇ ಕಾನೂನನ್ನು ನಿಷೇಧಿಸುವ (ವೀಟೋ) ಅಧಿಕಾರ ಗವರ್ನರರಿಗೆ ಇದ್ದೇ ಇದೆ. ಅದಷ್ಟೇ ಸಾಕು, ಅವರಿಗೆ ಇದಕ್ಕಿಂತ ಹೆಚ್ಚಿನ ಅಧಿಕಾರ ನೀಡಿದರೆ ಮಂತ್ರಿಮಂಡಲದ ಸಂಪೂರ್ಣ ಜವಾಬ್ದಾರಿ ವ್ಯವಸ್ಥೆಯಲ್ಲಿ ಅವರ ಸ್ಥಾನ ಅಸಂಗತವೆನಿಸುವುದು.

**(೧೦೪) ಹಣಕಾಸು ವಿನಿಯೋಗಿಸುವ ಅಧಿಕಾರ:**

೭೨ ಡಿ ವಿಭಾಗದ ಪ್ರಕಾರ ವಿಧಾನ ಪರಿಷತ್ತು ಯಾವುದೇ ಬೇಡಿಕೆಗೆ ಸಮ್ಮತಿ ನೀಡಬಹುದು, ಅಥವಾ ನಿರಾಕರಿಸಬಹುದು; ಅಥವಾ ಅದರ ಮೊತ್ತದಲ್ಲಿ ಕಡಿತ ಮಾಡಬಹುದು ಅಥವಾ ಬೇಡಿಕೆಯ ಅಂಗವಾಗಿರುವ ಯಾವುದೇ ವೆಚ್ಚದ ಮೊಬಲಗನ್ನು ಕಡಿಮೆ ಮಾಡಬಹುದು ಅಥವಾ ಸಂಪೂರ್ಣ ವಾಗಿ ಕೈಬಿಡಬಹುದು. ಈ ಅಧಿಕಾರವು ಕೆಲವು ಮುಖ್ಯವಾದ ನಿಯಮಗಳನ್ನವಲಂಬಿಸಿದೆ. ಬೇಡಿಕೆಗಳು ಆರಕ್ಷಿತ ವಿಷಯಗಳಿಗೆ ಸಂಬಂಧಿಸಿದ್ದಾದರೆ ಗವರ್ನರರು ಶಾಸಕಾಂಗದ ನಿರ್ಣಯವನ್ನು ತಳ್ಳಿಹಾಕುವ ಅಧಿಕಾರ ಹೊಂದಿದ್ದಾರೆ. ಹಾಗೆ ಮಾಡುವಾಗ ಅವರು ಆ ಬೇಡಿಕೆಯಲ್ಲಿ ಕೇಳಲಾದ ಮೊತ್ತವು ಆ ವಿಷಯದ ಬಗ್ಗೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಅವಶ್ಯವಾಗಿದೆ ಎಂದು ದೃಢೀಕರಿಸಬೇಕಾ ಗುತ್ತದೆ. ವಿಭಾಗ ೭೨ ಡಿ, ಖಂಡ (೨) (ಬಿ) ಹಣಕಾಸು ವಿನಿಯೋಗದ ಶಾಸಕಾಂಗದ ಅಧಿಕಾರದ ಮೇಲೆ ನಿರ್ಬಂಧ ಹಾಕುವ ಇನ್ನೊಂದು ವಿಧಿಯಾಗಿದೆ. ಇದರ ಪ್ರಕಾರ ಗವರ್ನರರು "ತಮ್ಮ ಅಭಿಪ್ರಾಯ ದಲ್ಲಿ ತುರ್ತು ಪರಿಸ್ಥಿತಿಯಲ್ಲಿ ಪ್ರಾಂತ್ಯದ ಸುರಕ್ಷತೆ ಮತ್ತು ಶಾಂತಿಪಾಲನೆಗಾಗಿ ಅಥವಾ ಯಾವುದೇ ಇಲಾಖೆಯ ಕಾರ್ಯವನ್ನು ನಡೆಸಿಕೊಂಡು ಹೋಗಲು ಅವಶ್ಯವಾದ ಯಾವುದೇ ವೆಚ್ಚವನ್ನು ಮಂಜೂರು ಮಾಡುವ ಅಧಿಕಾರ ಹೊಂದಿದ್ದಾರೆ." ಇವುಗಳನ್ನು ಕಾಯ್ದೆಯಿಂದ ತೆಗೆದುಹಾಕಬೇಕೆಂದು ನಾನು ಸೂಚಿಸುತ್ತೇನೆ. ಮೊದಲನೆಯ ವಿಧಿಯಲ್ಲಿ ಗವರ್ನರರಿಗೆ ಕೊಡಲಾಗಿರುವ ಅಧಿಕಾರಗಳು ಸಂಪೂರ್ಣ ಜವಾಬ್ದಾರಿ ಸರಕಾರದಲ್ಲಿ ಅನವಶ್ಯಕವಾದುವುಗಳಾಗಿರುವುದಲ್ಲದೆ ಅವುಗಳನ್ನು ನಿರ್ವಹಿಸುವ ಜವಾಬ್ದಾರಿ ಕಾರ್ಯಾಂಗಕ್ಕಿಂತ ಹೆಚ್ಚಾಗಿ ಗವರ್ನರರ ವಿಶೇಷ ಕರ್ತವ್ಯವೇನೂ ಅಲ್ಲ. ಈ ಕಾರಣದಿಂದ ಎರಡನೆಯ ವಿಧಿಯನ್ವಯ ಗವರ್ನರರಿಗೆ ನೀಡಲಾಗಿರುವ ಅಧಿಕಾರಗಳು ಅನವಶ್ಯಕ. ಆದ್ದರಿಂದ ಅವುಗಳನ್ನು ತೆಗೆದುಹಾಕಬೇಕು.

(೧೦೫) ಶಾಸಕಾಂಗದ ಹಣಕಾಸಿನ ಅಧಿಕಾರಗಳ ಮೇಲೆ ಇರುವ ಇನ್ನೊಂದು ನಿರ್ಬಂಧವು ೭೨ ಡಿ (೩)ನೆಯ ವಿಭಾಗದಲ್ಲಿ ಅಡಕವಾಗಿದೆ. ಇದರನ್ವಯ, ಈ ವಿಭಾಗದಲ್ಲಿ ಕಾಣಿಸಲಾಗಿರುವ ಕೆಲವು ಬಾಬುಗಳ ಮೇಲೆ ಮಾಡಬಹುದಾದ ವೆಚ್ಚಕ್ಕೆ ಕಾರ್ಯಾಂಗವು ಶಾಸಕಾಂಗದ ಸಮ್ಮತಿ ಪಡೆಯಬೇಕಾಗಿಲ್ಲ. ಇದರ ಪರಿಣಾಮವಾಗಿ ಒಂದು ಪ್ರಾಂತ್ಯದ ಆಯ–ವ್ಯಯ ಪತ್ರದಲ್ಲಿ ಶಾಸಕಾಂಗದ ಅಧಿಕಾರಕ್ಕೊಳಪಡದ ಬಹುಮಟ್ಟಿನ ಖಾಯಂ ರೂಪದಲ್ಲಿ ವಿನಿಯೋಗಿಸಲಾದ ವೆಚ್ಚದ ಬಾಬುಗಳೇ ಹೆಚ್ಚಾಗಿರುತ್ತವೆ. ಸೈದ್ಧಾಂತಿಕವಾಗಿ ಹೇಳುವುದಾದರೆ, ವೆಚ್ಚದ ಪ್ರತಿಯೊಂದು ಬಾಬೂ ಪ್ರತಿ ವರ್ಷ ಶಾಸಕಾಂಗದ ಮಂಜೂರಾತಿ ಪಡೆಯಬೇಕು. ಆದರೆ ಎಲ್ಲಾ ದೇಶಗಳ ಆಯ–ವ್ಯಯ ಪತ್ರದಲ್ಲಿ ಪ್ರತಿ

ವರ್ಷ ಶಾಸಕಾಂಗದ ಮಂಜೂರಾತಿ ಪಡೆಯಬೇಕಾಗಿರದಂತಹ ಖಾಯಂ ಆಗಿ ವಿನಿಯೋಗಿಸಲಾದ ಬಾಬುಗಳು ಇದ್ದೇ ಇರುತ್ತವೆ. ಇಂಗ್ಲೆಂಡಿನಲ್ಲಿಯೂ ಕೂಡ ಖಾಯಂ ಆಗಿ ವಿನಿಯೋಗಿಸಲಾದ ಬಾಬುಗಳ ದೊಡ್ಡ ಪಟ್ಟಿಯೇ ಬೆಳೆದಿದೆ. ಯುದ್ಧಪೂರ್ವದಲ್ಲಿ ಇದು ವಾರ್ಷಿಕ ವೆಚ್ಚದ ಸುಮಾರು ಮೂರರಲ್ಲಿ ಒಂದು ಭಾಗದಷ್ಟಿತ್ತು; ವೆಚ್ಚದ ಮೊತ್ತವನ್ನು ಗೊತ್ತುಪಡಿಸಿ ಸಾರ್ವಜನಿಕ ವೆಚ್ಚದ ಸ್ವರೂಪವನ್ನು ನಿಗದಿಪಡಿಸುವ ಕಾರ್ಯದಲ್ಲಿ ಕಾರ್ಯಾಂಗವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಹುದೇ ಅಥವಾ ಇಲ್ಲವೇ ಎಂಬ ಪ್ರಶ್ನೆ ಜನತೆ ಸಂವಿಧಾನಾತ್ಮಕ ಸರಕಾರವನ್ನು ಹೊಂದುವ ದಿಶೆಯಲ್ಲಿ ಯಾವ ಮಟ್ಟವನ್ನು ತಲುಪಿದ್ದಾರೆ ಎಂಬುದನ್ನು ಅವಲಂಬಿಸಿರುತ್ತದೆ. ಅದು ಸರಕಾರದ ಮತ್ತು ಜನತೆಯ ರಾಜಕೀಯ ಹಕ್ಕುಗಳ ಸಂಬಂಧವಾಗಿ ಅನಿಶ್ಚಿತತೆಯ ಹಂತದಲ್ಲಿದ್ದರೆ, ೭೨ ಡಿ(ಡಿ)ನೆಯ ವಿಭಾಗದಲ್ಲಿ ಹೇಳಲಾದ ಸಾರ್ವಜನಿಕ ಹಣಕಾಸಿನ ಖಾಯಂ ವಿನಿಯೋಗವನ್ನು ಶಾಸಕಾಂಗದ ಮಂಜೂರಿಯಿಲ್ಲದೆ ಮಾಡುವುದು ಕ್ಷೇಮಕರವಲ್ಲ. ಪ್ರಾಂತ್ಯಗಳಲ್ಲಿ ಜವಾಬ್ದಾರಿ ಸರಕಾರದ ಬುನಾದಿಯನ್ನು ಈಗ ತಾನೇ ಹಾಕಲಾಗಿದ್ದು, ಪ್ರಾಂತೀಯ ಶಾಸಕಾಂಗಗಳು ತಮ್ಮ ಮೇಲೆ ಕಾರ್ಯಾಂಗದ ಅತಿಕ್ರಮಣದ ವಿರುದ್ಧ ಜಾಗರೂಕತೆ ವಹಿಸಬೇಕಾಗುತ್ತದೆ. ಅಂತೆಯೇ, ಸಾರ್ವಜನಿಕ ವ್ಯವಹಾರಗಳ ಮೇಲೆ ಜನತೆಯ ನಿಯಂತ್ರಣದ ಹಕ್ಕನ್ನು ಮಾನ್ಯ ಮಾಡಲಾಗಿದೆಯೆಂಬುದನ್ನು ತಿಳಿದುಕೊಳ್ಳಬೇಕು ಮತ್ತು ಹೊಸ ಸಂವಿಧಾನದಲ್ಲಿ ಇದನ್ನು ಸಂಪೂರ್ಣವಾಗಿ ಮಾನ್ಯ ಮಾಡಲಾಗುವುದು. ಸಾರ್ವಜನಿಕ ಅಧಿಕಾರವನ್ನು ಸ್ವೇಚ್ಛೆಯಾಗಿ ಚಲಾಯಿಸದಂತೆ ಅನೇಕ ನಿರ್ಬಂಧಗಳನ್ನು ಹೇರಲಾಗುವುದರಿಂದ ಸಾರ್ವಜನಿಕ ವೆಚ್ಚದ ಪ್ರತಿಯೊಂದು ಬಾಬನ್ನು ವಾರ್ಷಿಕ ಮಂಜೂರಾತಿಗಾಗಿ ಸಲ್ಲಿಸಬೇಕೆಂದು ಒತ್ತಾಯಿಸುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಈ ಖಾಯಂ ವಿನಿಯೋಗದ ಪದ್ಧತಿಗೆ ನನ್ನ ಆಕ್ಷೇಪವಿಲ್ಲ. ಆದರೆ, ಅವುಗಳನ್ನು ಕಾನೂನುಬದ್ಧವಾಗಿ ಮಾಡಿ ಶಾಸಕಾಂಗದ ಅಧಿಕಾರಗಳನ್ನು ಕುಂಠಿತಗೊಳಿಸುವುದಕ್ಕೆ ನನ್ನ ವಿರೋಧವಿದೆ. ಅವುಗಳನ್ನು ಕಾನೂನುಬದ್ಧಗೊಳಿಸುವುದರಿಂದ ಈ ಮಂಜೂರಾತಿ ಪಡೆಯುವ ಅವಶ್ಯಕತೆಯಿಲ್ಲದ ಬಾಬುಗಳ ಆಡಳಿತ ಸಂಬಂಧದ ಧೋರಣೆಯನ್ನು ಚರ್ಚಿಸಲೂ ಸಹ ಶಾಸಕಾಂಗಕ್ಕೆ ಅವಕಾಶ ನಿರಾಕರಿಸಿದಂತಾಗುವುದು. ಇಂತಹ ಮತಕ್ಕೆ ಹಾಕಲಾಗದ ಬಾಬುಗಳ ನಿರ್ಮಾಣವನ್ನು ಸಮಯದ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳಬೇಕಾಗುವಂತಹದು. ಅವುಗಳ ವಿಷಯದಲ್ಲಿ ಶಾಸಕಾಂಗದ ಮೇಲೆ ಕಾನೂನಿನ ನಿರ್ಬಂಧವಿರಬಾರದು.

**(೧೦೬) ಕಾರ್ಯಾಂಗವನ್ನು ನಿಯಂತ್ರಿಸುವ ಅಧಿಕಾರ:**

ಮೂಲತಃ ೧೯೧೯ರ ಸುಧಾರಿತ ಸಂವಿಧಾನದ ಪ್ರಕಾರ ಪ್ರಾಂತೀಯ ಶಾಸಕಾಂಗಗಳು ಮಂತ್ರಿಗಳನ್ನು ಮೂರು ವಿಧಾನಗಳಿಂದ ನಿಯಂತ್ರಿಸಬಹುದಾಗಿತ್ತು: (೧) ಕಾನೂನು ಮಾಡುವ ಮೂಲಕ, (೨) ಪೂರೈಕೆಯನ್ನು ನಿರಾಕರಿಸುವುದು ಮತ್ತು (೩) ಅವರ ಸಂಬಳ ಸಾರಿಗೆಗಳನ್ನು ನಿರಾಕರಿಸುವುದು ಅಥವ ತಗ್ಗಿಸುವುದು. ಎರಡು ಮತ್ತು ಮೂರನೆಯ ವಿಧಾನಗಳು ಮಾತ್ರ ಶಾಸ ಕಾಂಗವು ಮಂತ್ರಿಗಳ ಆಡಳಿತದ ನಿಯಂತ್ರಣ ಮಾಡುವ ವಿಧಾನಗಳಾಗಿದ್ದವು. ಇಂತಹ ನಿಯಂತ್ರಣ ವನ್ನು ವರ್ಷಕ್ಕೊಮ್ಮೆ ಚಲಾಯಿಸಬಹುದಾಗಿದ್ದರಿಂದ ಅದು ಸಾಕಾಗಿರಲಿಲ್ಲ. ಪರಿಣಾಮವಾಗಿ, ೧೯೨೬ ರಲ್ಲಿ ಒಬ್ಬ ಮಂತ್ರಿಯ ಬಗ್ಗೆ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಅವಕಾಶ ಮಾಡಲಾಯಿತು. ಶಾಸ ಕಾಂಗವು ಒಬ್ಬ ಮಂತ್ರಿಯ ಕಾರ್ಯಗಳನ್ನು ನಿಯಂತ್ರಿಸಲು ಈ ಅಧಿಕಾರಗಳು ಸಾಕೆನಿಸಿದ್ದು, ಪ್ರತಿಯೊಬ್ಬ ಮಂತ್ರಿಯೂ ತನ್ನ ಕಾರ್ಯಗಳಿಗೆ ವೈಯಕ್ತಿಕ ಜವಾಬ್ದಾರಿ ಹೊಂದಿರುವನೆಂಬ ತತ್ವಕ್ಕನುಗುಣ

ವಾಗಿವೆ. ಮುಂದಿನ ಮಂತ್ರಿಮಂಡಳಿಯು ಸಂಯುಕ್ತ ಜವಾಬ್ದಾರಿ ತತ್ವವನ್ನಾಧರಿಸಲಿದ್ದು ಇದರನ್ವಯ ಮಂತ್ರಿಗಳು ಒಟ್ಟಾಗಿ ಉಳಿಯುವರು ಇಲ್ಲವೇ ಒಟ್ಟಾಗಿ ಬೀಳುವರು. ಶಾಸಕಾಂಗವು ಈಗ ಹೊಂದಿರುವ ಅಧಿಕಾರಗಳಲ್ಲಿ ಅದು ಮಂತ್ರಿಮಂಡಳವನ್ನು ಒಟ್ಟಾಗಿ ವಜಾ ಮಾಡುವ ಇಚ್ಛೆಯ ಯಾವ ಸೂಚನೆಯೂ ಇಲ್ಲ. ಸಧ್ಯದಲ್ಲಿರುವ ನಿರ್ಣಯಕ್ಕೆ ಭಿನ್ನವಾದ "ಅವಿಶ್ವಾಸ ನಿರ್ಣಯ" ಎಂಬ ಹೊಸ ರೀತಿಯ ನಿರ್ಣಯ ವನ್ನು ಸೇರಿಸುವ ಮೂಲಕ ಈ ಬಗ್ಗೆ ಒಂದು ಉಪಬಂಧವನ್ನು ಮಾಡಬೇಕೆಂದು ನನಗನ್ನಿಸುತ್ತದೆ. ಇದನ್ನು "ಒಂದು ಗೊತ್ತಾದ ವಿಷಯದ ಮೇಲೆ ಮಂತ್ರಿಯ ನೀತಿಯನ್ನು ಪ್ರಶ್ನಿಸುವ ನಿರ್ಣಯ" ಎಂದು ಹೊಸದಾಗಿ ಕರೆಯಬೇಕು. ಇದನ್ನು ಮಡಿಮನ್ ಸಮಿತಿಯೂ ಸೂಚಿಸಿತ್ತು. ಆದರೆ, ಅದು ಕಾರ್ಯಗತ ವಾಗಲಿಲ್ಲ.

**(೧೦೭) ಸಂವಿಧಾನವನ್ನು ಬದಲಾಯಿಸುವ ಅಧಿಕಾರ:**

ಪ್ರಾಂತೀಯ ಶಾಸಕಾಂಗಗಳು ತಮ್ಮನ್ನು ಸೃಷ್ಟಿಸಿದ ದಸ್ತಾವೇಜುಗಳ ಶರತ್ತುಗಳಿಗೆ ಬದ್ಧವಾಗಿವೆ. ಅವುಗಳ ಪ್ರಕಾರ ಇವು ಪ್ರದೇಶದಲ್ಲಿ ಎಲ್ಲಾ ವ್ಯಕ್ತಿಗಳ ಮೇಲೆ ನಿಗದಿತವಾದ ಮತ್ತು ಗೊತ್ತಾದ ಸಮಗ್ರ ಸರಕಾರಿ ಅಧಿಕಾರ ಹೊಂದಿರುವ ಸಂಸ್ಥೆಗಳಾಗಿವೆ. ಸರಕಾರದ ಸಮಗ್ರ ಅಧಿಕಾರ ಹೊಂದಿದ ಮಾತ್ರಕ್ಕೆ ಅವುಗಳಿಗೆ ಸಂವಿಧಾನವನ್ನೇ ಬದಲಾಯಿಸುವ ಅಧಿಕಾರವಿರುವುದಿಲ್ಲ. ಪ್ರಾಂತೀಯ ಶಾಸಕಾಂಗಗಳು ಸಂವಿಧಾನದಲ್ಲಿ ಬದಲಾವಣೆ ಮಾಡುವಂತಹ ಅಧಿಕಾರವುಳ್ಳ ಒಂದು ಘಟನಾ ಸಭೆಯ ಅಧಿಕಾರ ಹೊಂದಿರಬೇಕೆಂಬ ಬಯಕೆ ಏನೋ ಇದೆ. ಈ ಸೂಚನೆಯ ಪರವಾಗಿ ಬಹಳಷ್ಟು ಹೇಳುವುದಿದೆ. ಪ್ರಾಂತ್ಯದ ಜನತೆಗೆ ಸ್ವಯಂ–ಸರಕಾರವನ್ನು ಕೊಡಮಾಡಲು ಒಪ್ಪಿರುವಾಗ, ಅವರು ತಾವು ಎಂತಹ ಸ್ವರೂಪದ ಸರಕಾರದಡಿಯಲ್ಲಿ ವಾಸ ಮಾಡಬೇಕೆಂದು ನಿರ್ಣಯಿಸುವ ಹಕ್ಕನ್ನು ಪಡೆಯಬೇಕೆಂದು ಬಯಸುವುದು ಸಹಜ. ಆದರೆ, ತಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು ಬಹುಸಂಖ್ಯಾತರು ನಿರ್ಣಯಿಸ ಬಾರದೆಂದು ಹೇಳುವ ಅಲ್ಪಸಂಖ್ಯಾತರೂ ಇದ್ದಾರೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಪ್ರಾಂತೀಯ ಶಾಸಕಾಂಗಗಳಿಗೆ ಸಂವಿಧಾನದಲ್ಲಿ ಬದಲಾವಣೆ ಮಾಡುವ ಹಕ್ಕನ್ನು ನೀಡಿದರೆ ಇಂತಹ ಪರಿಸ್ಥಿತಿ ಉಂಟಾಗುತ್ತದೆ. ಇದೇ ಕಾರಣಕ್ಕಾಗಿಯೇ ಕೆನಡಾದ ಸಂವಿಧಾನದಲ್ಲಿ ಆ ದೇಶದ ಸಂಸತ್ತಿಗೆ ತಮ್ಮ ಸಂವಿಧಾನವನ್ನು ಬದಲಾಯಿಸುವ ಅಧಿಕಾರ ನೀಡಿಲ್ಲ. ಆದಾಗ್ಯೂ ದಕ್ಷಿಣ ಆಫ್ರಿಕಾದ ನಿದರ್ಶನವು ಇದೆ. ಅಲ್ಲಿ ಅಲ್ಪಸಂಖ್ಯಾತರ ಸ್ಥಾನಮಾನಗಳಿಗೆ ಧಕ್ಕೆಯುಂಟಾಗದಂತೆ ಸಂವಿಧಾನವನ್ನು ಬದಲಾಯಿಸುವ ಅಧಿಕಾರವನ್ನು ಶಾಸಂಕಾಗಕ್ಕೆ ಕೊಡಬಹುದೆಂಬುದನ್ನೂ ತೋರಿಸಿಕೊಡಲಾಗಿದೆ. ಆದ್ದರಿಂದ ದಕ್ಷಿಣ ಆಫ್ರಿಕಾದ ನಿದರ್ಶನವನ್ನು ಏಕೆ ಪಾಲಿಸಬೇಕೆಂಬುದಕ್ಕೆ ಕಾರಣಗಳಿವೆ. ತಮ್ಮ ಪ್ರಾಂತ್ಯದ ಸಂವಿಧಾನವನ್ನು ಬದಲಾಯಿಸುವ ಅಧಿಕಾರವನ್ನು ಪ್ರಾಂತೀಯ ಶಾಸಕಾಂಗಗಳಿಗೆ ನೀಡಬೇಕೆಂದು ನಾನು ಶಿಫಾರಸು ಮಾಡುತ್ತೇನೆ. ಆದರೆ, ಶಾಸಕಾಂಗದಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ವಿಧಿಗಳನ್ನು ಬದಲಾಯಿಸುವ ಅಧಿಕಾರ ಅದಕ್ಕಿರಬಾರದು.

(೧೦೮) ಅಂತಹ ಶಾಸನವನ್ನು ಮಾಡುವ ವಿಧಾನ ಯಾವುದಾಗಿರಬೇಕು ಎಂಬುದನ್ನು ನಿರ್ಣಯಿಸುವುದು ಕಷ್ಟಕರ. ಆದರೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ವಿಧಾನ ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಅದು ಸಾಕಷ್ಟು ಕಠಿಣ ವಿಧಾನವಾಗಿರಬೇಕು ಎಂದು ಹೇಳಬಹುದು. ಇದೂ ಅಲ್ಲದೆ, ಆ ವಿಧಾನವು ಅಭಿವೃದ್ಧಿಯಷ್ಟೇ ಜೀವನದ ನಿಯಮವಾಗಿದೆ ಎಂಬುದನ್ನು ಮಾನ್ಯ

ಮಾಡಿ ಬಹುಮತದ ಆಳ್ವಿಕೆಯ ತತ್ವಕ್ಕನುಗುಣವಾಗಿ ಕಾರ್ಯಾಚರಣೆಯ ಮುನ್ನ ಮುಕ್ತ ಚರ್ಚೆಗೆ ಅವಕಾಶ ನೀಡುವಷ್ಟು ಕಠಿಣವಾಗಿರಬೇಕು. ನನಗೆ ತೋರಿದಂತೆ, ಸಂವಿಧಾನದ ಬೇರೆ ಬೇರೆ ವಿಧದ ತಿದ್ದುಪಡಿಗಳಿಗೆ ಬೇರೆ ಬೇರೆ ವಿಧಾನಗಳನ್ನು ವಿಧಿಸುವುದು ಅತ್ಯಂತ ಕ್ಷೇಮಕರ ಮಾರ್ಗ. ಹೆಚ್ಚು ಮೂಲಭೂತವಾದ ತಿದ್ದುಪಡಿಗಳ ವಿಧಾನ ಕಡಿಮೆ ಮೂಲಭೂತ ಭಾಗಗಳ ತಿದ್ದುಪಡಿಯ ವಿಧಾನಗಳಿಗಿಂತ ಹೆಚ್ಚು ಕಠಿಣವಾಗಿರಬೇಕು.

## ವಿಭಾಗ–IV

# ಪ್ರಾಂತೀಯ ಸ್ವಾಯತ್ತತೆ

## ಅಧ್ಯಾಯ–೧

**ಭಾರತ ಸರಕಾರ ಮತ್ತು ಪ್ರಾಂತ್ಯ ಸರಕಾರಗಳ ನಡುವಣ ಸಂಬಂಧ:**

(೧೦೯) ಪ್ರಾಂತೀಯ ಕಾರ್ಯಾಂಗವು ಪ್ರಾಂತೀಯ ಶಾಸಕಾಂಗಕ್ಕೆ ಅಧೀನವಾಗಿರದೆ ಪ್ರಾಂತ್ಯದ ಹೊರಗಿನ ಇತರ ಯಾವುದೇ ಸಂಸ್ಥೆಗೆ ಅಧೀನವಾಗಿದ್ದರೆ ಅಥವಾ ಪ್ರಾಂತೀಯ ಶಾಸಕಾಂಗವು ತನ್ನ ಕ್ಷೇತ್ರದಲ್ಲಿ ತನ್ನ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಾರ್ವಭೌಮವಾಗಿರದೆ ಇನ್ನಾವುದೋ ಪ್ರಾಧಿಕಾರಕ್ಕೆ ಅಧೀನವಾಗಿದ್ದರೆ ಕಾರ್ಯಾಂಗದ ಜವಾಬ್ದಾರಿಯು ನಿರರ್ಥಕವಾಗುವುದೆಂಬುದು ಸುಸ್ಪಷ್ಟ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ಒಂದು ಜವಾಬ್ದಾರಿ ಸರಕಾರವು ಸ್ವಾಯತ್ತ ಸರಕಾರವೂ ಆಗಿರಬೇಕು. ಪ್ರಾಂತೀಯ ಸರಕಾರವನ್ನು ಸ್ವಾಯತ್ತಗೊಳಿಸಲು ಪ್ರಾಂತೀಯ ಮತ್ತು ಕೇಂದ್ರ ಸರಕಾರಗಳ ಕಾರ್ಯ ಕ್ಷೇತ್ರಗಳನ್ನು ಸ್ಪಷ್ಟವಾಗಿ ವಿಂಗಡಿಸಿ ಅವುಗಳ ಪರಸ್ಪರ ಎಲ್ಲೆಗಳನ್ನು ನಿರ್ಧರಿಸುವುದು ಅತ್ಯವಶ್ಯಕ.

(೧೧೦) ೧೯೧೯ರ ಮುನ್ನ ಭಾರತ ಸರಕಾರ ಕಾಯ್ದೆ ೧೯೧೯ರ ೪೫ನೆಯ ವಿಭಾಗದ ಪ್ರಕಾರ ಪ್ರಾಂತೀಯ ಸರಕಾರವು ಗವರ್ನರ್–ಜನರಲ್–ಇನ್–ಕೌನ್ಸಿಲ್‌ರವರ ಆದೇಶಗಳನ್ನು ಪಾಲಿಸಬೇಕಾಗಿತ್ತು ಮತ್ತು ಪ್ರಾಂತೀಯ ಸರಕಾರವು ತನ್ನ ಅಭಿಪ್ರಾಯದಲ್ಲಿ ಯಾವ ವಿಷಯದಲ್ಲಿ ತನ್ನ ಸರಕಾರಕ್ಕೆ ಸಂಬಂಧಿಸಿ ದಂತೆ ಅವರಿಗೆ ವರದಿ ಮಾಡಬೇಕೆಂದು ಭಾವಿಸಿದೆಯೋ ಅಥವಾ ಯಾವುದರ ಬಗ್ಗೆ ಅವರಿಗೆ ಮಾಹಿತಿ ಬೇಕಾಗಿದೆಯೋ ಮತ್ತು ಯಾವುದು ಅವರ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಗಾ ಗಿದೆಯೋ ಅಂತಹ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ತನ್ನ ನಡಾವಳಿಗಳನ್ನು ಮತ್ತು ಮಾಹಿತಿಯನ್ನು ಸತತವಾಗಿ ಮತ್ತು ಜಾಗರೂಕತೆಯಿಂದ ಅವರಿಗೆ ತಿಳಿಸಬೇಕಾಗಿತ್ತು. ಇದರಿಂದ ಪ್ರಾಂತೀಯ ಸರಕಾರಗಳು ತಾವು ಆಡಳಿತ ನಡೆಸುತ್ತಿದ್ದ ಯಾವುದೇ ವಿಷಯಗಳ ಮೇಲೆ ನಿರ್ದಿಷ್ಟ ಅಧಿಕಾರ ಹೊಂದಿರಲಿಲ್ಲ ಎಂದಂತಾಯಿತು. ಅವು ಚಲಾಯಿಸುತ್ತಿದ್ದ ಅಧಿಕಾರಗಳು ಒಬ್ಬ ಪ್ರಮುಖನು ತನ್ನ ನಿಯೋಗಿಗೆ ಕೊಡ ಮಾಡುವ ಅಧಿಕಾರದ ರೀತಿಯಲ್ಲಿ ಕೇಂದ್ರ ಸರಕಾರವು ಪ್ರಾಂತ್ಯ ಸರಕಾರಗಳಿಗೆ ನೀಡಲ್ಪಟ್ಟ ಅಧಿಕಾರ ಗಳಾಗಿದ್ದವು. ೧೯೧೯ರ ಕಾಯ್ದೆಯ ೪೫(೧)(ಬಿ) ವಿಭಾಗದಲ್ಲಿ "ಪ್ರಾಂತೀಯ ವಿಷಯಗಳಲ್ಲಿ ಸ್ಥಳೀಯ ಸರಕಾರಗಳಿಗೆ ಅಧಿಕಾರ ವಹಿಸಿಕೊಡುವ ಮತ್ತು ಆ ಸರಕಾರಗಳಿಗೆ ಆದಾಯ ಮತ್ತು ಇತರ ಹಣಕಾಸನ್ನು ಅವುಗಳಿಗೆ ಕೊಡಮಾಡಲು", ಅವಕಾಶ ಮಾಡಲಾಯಿತು. ೪೫(೩)ನೆಯ ವಿಭಾಗದನ್ವಯ "ವರ್ಗಾಯಿಸಲಾದ ವಿಷಯಗಳಲ್ಲಿ ಈ ಕಾಯ್ದೆಯಲ್ಲಿ ಗವರ್ನರ್–ಜನರಲ್ ಇನ್ ಕೌನ್ಸಿಲ್–ರವರಿಗೆ ನೀಡಲಾಗಿರುವ ಸ್ಥಳೀಯ ಸರಕಾರಗಳ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದ ಅಧಿಕಾರಗಳನ್ನು ಈ ಕಾಯ್ದೆಯನ್ವಯ ಮಾಡಲಾಗಿರುವ ನಿಯಮಗಳಲ್ಲಿ ಗೊತ್ತುಪಡಿಸಲಾದ ಉದ್ದೇಶಗಳಿಗಾಗಿ ಮಾತ್ರ ಚಲಾಯಿಸತಕ್ಕದ್ದು. ಆದರೆ, ಅಂತಹ ಅಧಿಕಾರಗಳನ್ನು ಚಲಾಯಿಸುವಾಗ ಯಾವುದೇ ಪ್ರಕರಣವು

ಗೊತ್ತುಪಡಿಸಲಾದ ಉದ್ದೇಶಗಳ ವ್ಯಾಪ್ತಿಯೊಳಗೆ ಬರುವುದೇ ಎಂಬ ಅಂಶವನ್ನು ನಿರ್ಧರಿಸುವಲ್ಲಿ ಗವರ್ನರ್–ಜನರಲ್‌ರವರು ಮಾತ್ರ ಹೊಂದಿರುತ್ತಾರೆ." ಆದ್ದರಿಂದ ೧೯೧೯ರ ಕಾಯ್ದೆಯು ಎರಡು ಬದಲಾವಣೆಗಳನ್ನು ಮಾಡಿತು: (೧) ಭಾರತ ಸರಕಾರದ ಪ್ರತಿನಿಧಿಯಾಗಿ ನಿರ್ವಹಿಸುತ್ತಿದ್ದ ಅಧಿಕಾರಗಳಿಗಿಂತ ಭಿನ್ನವಾದ ಅಧಿಕಾರಗಳನ್ನು ಸ್ವತಂತ್ರವಾಗಿ ನಡೆಸುವಂತೆ ಅನುವು ಮಾಡಿಕೊಟ್ಟಿತು. (೨) ಈ ಮೊದಲು ಮಂತ್ರಿಗಳ ನಿಯಂತ್ರಣಕ್ಕೆ ವರ್ಗಾಯಿಸಲಾಗಿದ್ದ ವಿಷಯಗಳಲ್ಲಿ ಭಾರತ ಸರಕಾರದ ನಿರ್ದೇಶನಗಳಿಗೆ ಬಾಧ್ಯವಾಗಿರಬೇಕಾದ ಮತ್ತು ಆ ವಿಷಯಗಳ ಮೇಲ್ವಿಚಾರಣೆಯ ಅಧಿಕಾರವನ್ನು ಹೊಂದಿರಬಹುದು ಎಂದೂ ಹೇಳಿತು. ಎಲ್ಲಾ ವಿಷಯಗಳನ್ನೂ ಮಂತ್ರಿಗಳ ನಿಯಂತ್ರಣಕ್ಕೆ ಸಂಪೂರ್ಣವಾಗಿ ವರ್ಗಾಯಿಸುವ ಸಾಧ್ಯತೆ ಇದರಿಂದ ಸ್ಪಷ್ಟವಾಗುತ್ತದೆ. ಆದರೆ, ಹಾಗೆ ವರ್ಗಾವಣೆಯಾದಾಗಲೂ ಪ್ರಾಂತೀಯ ಸರಕಾರಗಳು ತಮ್ಮ ಕಾರ್ಯಾಚರಣೆಯ ಸ್ವಾತಂತ್ರ್ಯವನ್ನು ಕಳೆದುಕೊಂಡು ಭಾರತ ಸರಕಾರದ ಮೇಲ್ವಿಚಾರಣೆ ಮತ್ತು ಹಸ್ತಕ್ಷೇಪಕ್ಕೊಳಪಡುತ್ತವೆ. ಇಂತಹ ಮೇಲ್ವಿಚಾರಣೆಯ ಅಧಿಕಾರ ಅವಶ್ಯವೇ ಎಂಬುದು ಮುಖ್ಯ ಪ್ರಶ್ನೆ. ಮತ್ತು ಅದು ಅವಶ್ಯವಾಗಿದ್ದರೆ ಭಾರತ ಸರಕಾರ ಮತ್ತು ಪ್ರಾಂತೀಯ ಸರಕಾರಗಳ ಸಂಬಂಧದಲ್ಲಿ ಪ್ರಾಂತ್ಯದ ಸ್ವಾಯತ್ತತೆಗೆ ಧಕ್ಕೆ ಬರದಂತೆ ಈ ಅಧಿಕಾರವನ್ನು ನೀಡುವ ಇನ್ನಾವುದಾದರೂ ಮಾರ್ಗವನ್ನು ನಾವು ಯೋಚಿಸಬಹುದೇ?

(೧೧೧) ೧೯೧೯ರ ಕಾಯ್ದೆ ಮತ್ತು ಅದರಂಗವಾಗಿ ಮಾಡಲಾದ ನಿಯಮಗಳ ಪ್ರಕಾರ ಪ್ರಾಂತೀಯ ವಿಷಯಗಳನ್ನು ಕೇಂದ್ರದ ವಿಷಯಗಳಿಂದ ಪ್ರತ್ಯೇಕಿಸಲಾಗಿದೆ. ಹೀಗೆ ಮಾಡಲಾಗಿದ್ದಾಗ್ಯೂ, ಪ್ರಾಂತೀಯ ಶಾಸಕಾಂಗಗಳಿಗೆ ಪ್ರಾಂತೀಯ ವಿಷಯಗಳ ಮೇಲೆ ಶಾಸನ ಮಾಡುವ ಅಥವಾ ಅವುಗಳ ಬಗ್ಗೆ ಅಂತಿಮ ಕ್ರಮ ತೆಗೆದುಕೊಳ್ಳುವ ಸ್ವಾತಂತ್ರ್ಯ ಕೊಡಲಾಗಿಲ್ಲ. ಪ್ರಾಂತೀಯ ಶಾಸಕಾಂಗಗಳ ಅಧಿಕಾರ ಗಳನ್ನು ಎರಡು ವಿಧದಲ್ಲಿ ನಿರ್ಬಂಧಿಸಲಾಗಿದೆ. ೮೦ಎ ವಿಭಾಗದಲ್ಲಿ ವಿವರಿಸಲಾಗಿರುವ ಕೆಲವು ವಿಷಯ ಗಳಲ್ಲಿ ಅದು ಗವರ್ನರ್–ಜನರಲ್‌ರ ಪೂರ್ವ ಮಂಜೂರಾತಿ ಇಲ್ಲದೇ ಪ್ರಾಂತೀಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯವಾದಾಗ್ಯೂ ಯಾವುದೇ ಶಾಸನವನ್ನು ಮಾಡುವುದಕ್ಕಾಗಲೀ ಅಥವಾ ಪರಿಗಣಿಸುವುದ ಕ್ಕಾಗಲೀ ಬರುವುದಿಲ್ಲ. ಇನ್ನುಳಿದ ವಿಷಯಗಳಲ್ಲಿ ಪ್ರಾಂತೀಯ ಶಾಸಕಾಂಗವು ಕಾನೂನು ಮಾಡ ಬಹುದು. ಆದರೆ ಅದು ೮೧ ಎ ವಿಧಿಯ ಮತ್ತು ಅದರಂಗವಾಗಿ ರೂಪಿಸಲಾದ ನಿಯಮಗಳ ವ್ಯಾಪ್ತಿಗೊಳಪಡುವುದಾದರೆ ಅದು ಗವರ್ನರ್–ಜನರಲ್‌ರ ನಿಷೇಧಾಧಿಕಾರ (ವೀಟೋ)ಕ್ಕೊಳ ಪಡುತ್ತದೆ. ಪ್ರಾಂತೀಯ ಸ್ವಾಯತ್ತತೆಯ ಮೇಲೆ ಈ ಎರಡೂ ನಿರ್ಬಂಧಗಳ ಪರಿಣಾಮವನ್ನು ಸುಲಭ ವಾಗಿ ತಿಳಿದುಕೊಳ್ಳಬಹುದು. ಪ್ರಾಂತೀಯ ಮತ್ತು ಕೇಂದ್ರ ಸರಕಾರಗಳ ನಡುವೆ ಪ್ರಾಂತೀಯ ಸ್ವಾಯ ತ್ತತೆಗೆ ಧಕ್ಕೆ ಬರದಂತೆ ಇನ್ನಾವುದೇ ರೀತಿಯ ಸಂಬಂಧವನ್ನು ರೂಪಿಸುವುದು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

(೧೧೨) ಸರಕಾರದ ಕಾರ್ಯಗಳನ್ನು ಎರಡು ಭಿನ್ನ ರಾಜಕೀಯ ವ್ಯವಸ್ಥೆಗಳಲ್ಲಿ ಹಂಚಿಕೊಟ್ಟಿರುವ ಯಾವುದೇ ದೇಶದಲ್ಲಿ ಪ್ರಾಂತೀಯ ವಿಷಯಗಳ ಆಡಳಿತದ ವಿಷಯದಲ್ಲಿ ಪ್ರಾಂತೀಯ ಸರಕಾರದ ಮೇಲೆ ಕೇಂದ್ರ ಸರಕಾರದ ಮೇಲ್ವಿಚಾರಣೆ ಮತ್ತು ಪ್ರಾಂತೀಯ ಕಾನೂನು ಮಾಡಲು ಕೇಂದ್ರ ಸರಕಾರದ ಪೂರ್ವಾನುಮತಿ ಪಡೆದುಕೊಳ್ಳುವುದು ಅಥವಾ ನಂತರ ನಿಷೇಧಾಧಿಕಾರಕ್ಕೊಳಪಡುವಂತಹ ಉಪಬಂಧ ಅಥವಾ ಅವಕಾಶ ಇರುವುದಿಲ್ಲ. ಕೆನಡ, ಆಸ್ಟ್ರೇಲಿಯ ಮತ್ತು ಸಂಯುಕ್ತ ಸಂಸ್ಥಾನಗಳಂತಹ ದೇಶಗಳಲ್ಲಿಯೂ ಸಹ ಹೀಗಿಲ್ಲ. ಪೂರ್ವಾನುಮತಿ ಪಡೆಯಬೇಕೆಂಬ ಅಂಶವನ್ನು ಭಾರತ ಸಂವಿಧಾನದಲ್ಲಿ ಎರಡು ತಪ್ಪು

ಗ್ರಹಿಕೆಗಳ ಕಾರಣದಿಂದ ಸೇರಿಸಲಾಗಿದೆ. ಒಂದನೆಯದಾಗಿ, ಕರ್ತವ್ಯಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲು ಬರುವುದಿಲ್ಲ ಎಂಬ ಕಾರಣ. ಈ ಗ್ರಹಿಕೆಗೆ ಸಾಕಷ್ಟು ಆಧಾರವಿಲ್ಲ. ಏಕೆಂದರೆ ಕೆನಡಾದ ಸಂವಿಧಾನದಲ್ಲಿ ಕರ್ತವ್ಯಗಳನ್ನು ಎರಡು ಪ್ರತ್ಯೇಕ ವರ್ಗಗಳಲ್ಲಿ ವಿಭಜಿಸಲಾಗಿದೆ: (೧) ಪ್ರತ್ಯೇಕವಾಗಿ ಕೇಂದ್ರ ಸರಕಾರಕ್ಕೆ ಸೇರಿದ ಕರ್ತವ್ಯಗಳು, ಮತ್ತು (೨) ಪ್ರತ್ಯೇಕವಾಗಿ ಪ್ರಾಂತೀಯ ಸರಕಾರಕ್ಕೆ ಸೇರಿದ ವಿಷಯಗಳು. ಹೀಗೆ ಮಾಡುವುದರ ಮೂಲಕ ಪ್ರತಿಯೊಂದು ಸರಕಾರಕ್ಕೂ ತನಗೆ ವಹಿಸಿಕೊಡಲಾದ ಕಾರ್ಯ ಕ್ಷೇತ್ರದಲ್ಲಿ ಪರಿಪೂರ್ಣ ಸ್ವಾಯತ್ತತೆ ನೀಡಲಾಗಿದೆ. ಎರಡನೆಯ ಗ್ರಹಿಕೆ ಎಂದರೆ, ಪ್ರಾಂತೀಯ ಸರಕಾರಗಳಿಗೆ ಪ್ರತ್ಯೇಕವಾಗಿ ಸೇರಿವೆ ಎಂದು ಹೇಳಲಾಗದ ವಿಷಯಗಳಲ್ಲಿ ಅವುಗಳ ನಿರ್ವಹಣೆಯಲ್ಲಿ ಕೇಂದ್ರ ಸರಕಾರದ ಪೂರ್ವ ಮಂಜೂರಾತಿ ಮತ್ತು ನಿಷೇಧಾಧಿಕಾರ ನೀಡುವುದೊಂದೇ ಮಾರ್ಗ. ಇದೂ ಕೂಡ ತಪ್ಪು ಗ್ರಹಿಕೆ ಎಂದೇ ನನಗನಿಸುತ್ತದೆ. ಆಸ್ಟ್ರೇಲಿಯಾ ಮತ್ತು ಸಂಯುಕ್ತ ಸಂಸ್ಥಾನಗಳ ಸಂವಿಧಾನಗಳು ಕೆನಡಾದಂತೆ ಕರ್ತವ್ಯಗಳನ್ನು ಎರಡು ಪ್ರತ್ಯೇಕ ಮತ್ತು ಸ್ಪಷ್ಟ ರೀತಿಯಲ್ಲಿ ವಿಭಾಗಿಸದೇ ಇರುವ ಸಂವಿಧಾನಗಳ ಉದಾಹರಣೆಗಳಾಗಿವೆ. ಆಸ್ಟ್ರೇಲಿಯ ಸಂವಿಧಾನದಲ್ಲಿ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ವಿಭಜಿಸುವ ಯೋಜನೆಯಲ್ಲಿ ಕೇಂದ್ರ ಸರಕಾರವು ಪ್ರತ್ಯೇಕ ಮತ್ತು ಸಂಪೂರ್ಣ ಅಧಿಕಾರ ಹೊಂದಿರುವ ಕೆಲವು ವಿಷಯಗಳಿವೆ. ಇನ್ನು ಕೆಲವು ಇತರ ವಿಷಯಗಳಲ್ಲಿ ಕೇಂದ್ರ ಸರಕಾರದ ಅಧಿಕಾರಗಳು ಪ್ರಾಂತೀಯ ಸರಕಾರಗಳ ಅಧಿಕಾರಗಳೊಂದಿಗೆ ಸಮಾನಾಧಿಕಾರದವುಗಳಾಗಿವೆ. ಈ ಸಮಾನಾಧಿಕಾರದ ಶಾಸನಗಳು ಎರಡು ವಿಧವಾಗಿವೆ: (೧) ರಾಜ್ಯವು ತನ್ನದೇ ಆದ ಅಧಿಕಾರಗಳನ್ನು ಚಲಾಯಿಸಿದಾಗ ಅವುಗಳನ್ನು ರದ್ದುಪಡಿಸುವ ಪರಮ ಶಾಸನವನ್ನು ಮಾಡುವ ಅಧಿಕಾರವನ್ನು ಕಾಮನ್‌ವೆಲ್ತ್ ಹೊಂದಿರುವಂತಹುದು ಮತ್ತು (೨) ಕಾಮನ್‌ವೆಲ್ತ್‌ಗೆ ಪರಮಾಧಿಕಾರ ಕೊಡದೇ ಇರುವುದು. (ಅಮೇರಿಕ) ಸಂಯುಕ್ತ ಸಂಸ್ಥಾನ ದಲ್ಲಿ ಸರಕಾರದ ಅಧಿಕಾರಗಳನ್ನು: (೧) ಕೇಂದ್ರ ಸರಕಾರಕ್ಕೆ ಮಾತ್ರ ನೀಡಲಾದ ಅಧಿಕಾರಗಳು, (೨) ರಾಜ್ಯ ಸರಕಾರಗಳಿಗೆ ಮಾತ್ರ ನೀಡಲಾದ ಅಧಿಕಾರಗಳು, (೩) ಕೇಂದ್ರ ಸರಕಾರದಿಂದಾಗಲೀ ಅಥವಾ ರಾಜ್ಯಗಳಿಂದಾಗಲೀ ಚಲಾಯಿಸಬಹುದಾದ ಅಧಿಕಾರಗಳು, (೪) ಕೇಂದ್ರ ಸರಕಾರಕ್ಕೆ ನಿಷೇಧಿಸಲಾದ ಅಧಿಕಾರಗಳು ಎಂದು ವಿಂಗಡಿಸಲಾಗಿದೆ. ಆದ್ದರಿಂದ ಆಸ್ಟ್ರೇಲಿಯಾ ಮತ್ತು (ಅಮೆರಿಕ) ಸಂಯುಕ್ತ ಸಂಸ್ಥಾನಗಳ ಈ ಎರಡೂ ಸಂವಿಧಾನಗಳಲ್ಲಿ ಎರಡೂ ಸರಕಾರಗಳಿಗೆ ಪ್ರತ್ಯೇಕವಾಗಿ ಸೇರದೇ ಇರುವಂತಹ ಕರ್ತವ್ಯಗಳಿರಬಹುದೆಂಬ ಅಂಶವನ್ನು ಮಾನ್ಯ ಮಾಡಲಾಗಿದೆ. ಆದರೆ ಇವುಗಳಲ್ಲಿ ಯಾವ ಸಂವಿಧಾನವೂ ಒಂದು ಸರಕಾರದ ಮೇಲೆ ಇನ್ನೊಂದು ಸರಕಾರದ ನಿಷೇಧಾಧಿಕಾರವನ್ನು ಹೇರುವಂತಹ ಮತ್ತು ಪೂರ್ವ ಮಂಜೂರಾತಿ ಪಡೆದುಕೊಳ್ಳುವಂತಹ ಯೋಜನೆಯನ್ನು ಮಾಡಿಲ್ಲ. ಕೆನಡಾದಲ್ಲಿರುವಂತಹ ಕರ್ತವ್ಯಗಳ ಮತ್ತು ಅಧಿಕಾರಗಳ ಯೋಜನೆಯ ಪ್ರಯೋಗ ಮಾಡುವಂತೆ ನಾನು ಶಿಫಾರಸು ಮಾಡುತ್ತೇನೆ. ಇದಾಗದೇ ಹೋದರೆ ಆಸ್ಟ್ರೇಲಿಯಾ ಅಥವಾ ಸಂಯುಕ್ತ ಸಂಸ್ಥಾನಗಳಲ್ಲಿರುವ ಅಳವಡಿಸಿಕೊಳ್ಳಬೇಕು. ಆದರೆ ಏನೇ ಆಗಲಿ, ಪೂರ್ವ ಮಂಜೂರಾತಿ ಮತ್ತು ನಿಷೇಧಾಧಿಕಾರದ ಯೋಜನೆಯನ್ನಂತೂ ಕೈಬಿಡಲೇ ಬೇಕು.

(೧೧೩) ಪ್ರಾಂತೀಯ ಸರಕಾರಗಳ ನಿಯಂತ್ರಣಕ್ಕೆ ವರ್ಗಾಯಿಸಲಾಗಿರುವ ವಿಷಯಗಳ ಮೇಲ್ವಿಚಾರಣೆಯ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ನೀಡಿರುವುದು, ಸ್ವಲ್ಪಮಟ್ಟಿಗೆ ನಿಗದಿಗೊಳಿಸದೇ ಇರುವುದರಿಂದ ಮತ್ತು ಸ್ವಲ್ಪಮಟ್ಟಿಗೆ ಪ್ರಾಂತ್ಯಕ್ಕೆ ಸೇರಿದ ವಿಷಯಗಳ ಆಡಳಿತಕ್ಕೆ ಕೇಂದ್ರ ಸರಕಾರ ಜವಾಬ್ದಾರಿ ಹೊಂದಿದೆ ಎಂದು ತಪ್ಪು ಗ್ರಹಿಕೆಯಿಂದ ಆಗಿದೆ. ಕೆಲವು ವಿಷಯಗಳು ಕೇಂದ್ರ ಸರಕಾರಕ್ಕೆ ಮಹತ್ವವಾಗಿವೆ ಎಂಬ

ಕಾರಣದಿಂದಲೂ ಈಗ ನೀಡಲಾಗಿರುವ ಮೇಲ್ವಿಚಾರಣೆಯ ಅಧಿಕಾರವನ್ನು ಸಮರ್ಥಿಸಿಕೊಳ್ಳಲಾಗಿದೆ. ಕೆನಡ, ಆಸ್ಟ್ರೇಲಿಯಾ ಮತ್ತು ಅಮೇರಿಕದ ಮಾದರಿಯಲ್ಲಿ ಅಧಿಕಾರದ ಸರಿಯಾದ ವಿಭಜನೆ ಮಾಡಿದ್ದೇ ಆದರೆ, ಈ ಸಮರ್ಥನೆ ನಿರಾಧಾರವೆನಿಸುವುದು. ಮೇಲ್ವಿಚಾರಣೆಯ ಅಧಿಕಾರದ ಪರವಾಗಿ ನೀಡಲಾದ ಇನ್ನೊಂದು ಸಮರ್ಥನೆ ಎಂದರೆ ಭಾರತ ಸರಕಾರಕ್ಕೆ ಇಡೀ ಭಾರತ ದೇಶದಲ್ಲಿ ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಸರಕಾರ ನೀಡುವ ಜವಾಬ್ದಾರಿ ಇರಲೇಬೇಕು ಮತ್ತು ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಅದಕ್ಕೆ ಮೇಲ್ವಿಚಾರಣೆಯ ಅಧಿಕಾರವಿರಲೇಬೇಕೆಂಬ ವಾದ. ಆದರೆ, ಕರ್ತವ್ಯಗಳ ವಿಭಜನೆಯನ್ನು ಮಾಡಿದಾಗ ಅದರ ಜೊತೆಯಲ್ಲಿಯೇ ಜವಾಬ್ದಾರಿಗಳ ವಿಭಜನೆಯೂ ಆಗಬೇಕಾಗುತ್ತದೆ ಎಂದು ನನಗನಿಸುತ್ತದೆ. ಈ ಜವಾಬ್ದಾರಿಗಳ ವಿಭಜನೆಯಾದರೆ ಮತ್ತು ಕೇಂದ್ರ ಸರಕಾರವು ತನಗೆ ನೀಡಲಾದ ವಿಷಯಗಳಿಗೆ ತನ್ನ ಕಾರ್ಯವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡರೆ ಪ್ರಾಂತೀಯ ಸರಕಾರಗಳ ಮೇಲ್ವಿಚಾರಣೆಯನ್ನು ಮಾಡುವ ಅವಶ್ಯಕತೆ ಇಲ್ಲದಾಗುತ್ತದೆ. ಮತ್ತು ಭಾರತ ಸರಕಾರದ ಕಾಯ್ದೆಯಲ್ಲಿ ಕೇಂದ್ರ ಸರಕಾರದ ಜವಾಬ್ದಾರಿಗಳನ್ನು ನಿಗದಿಗೊಳಿಸುವ ಅಧಿನಿಯಮಗಳಲ್ಲಿ ಸೂಕ್ತ ರೀತೀಯ ತಿದ್ದುಪಡಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

(೧೧೪) ಸಂಪೂರ್ಣ ಪ್ರಾಂತೀಯ ಸ್ವಾಯತ್ತತೆಯ ಸ್ಥಾಪನೆಗೆ ನಾನು ಕಾತುರನಾಗಿರುವೆನಾದರೂ, ಕೇಂದ್ರ ಸರಕಾರವನ್ನು ಯಾವುದೇ ರೀತಿಯಲ್ಲಿ ದುರ್ಬಲಗೊಳಿಸುವ ಅಥವಾ ಅದರ ರಾಷ್ಟ್ರೀಯ ಸ್ವರೂಪವನ್ನು ಕುಂಠಿತಗೊಳಿಸುವ ಅಥವಾ ಜನತೆಯ ದೃಷ್ಟಿಯಲ್ಲಿ ಅದರ ಅಸ್ತಿತ್ವವನ್ನು ಮಸುಕುಗೊಳಿಸುವ ಯಾವುದೇ ಬದಲಾವಣೆಗೆ ನಾನು ವಿರೋಧಿಯಾಗಿದ್ದೇನೆ. ಇಂತಹ ಅಭಿಪ್ರಾಯ ಹೊಂದಿದ್ದಾಗ್ಯೂ ನಾನು ಕೇಂದ್ರ ಸರಕಾರವನ್ನು ಕೆಲವು ಉದ್ದೇಶಗಳಿಗೆ ಮಾತ್ರ ಒಂದೇ ಸಂಸ್ಥೆಯಾಗುವಂತಹ ಅನೇಕ ಸರಕಾರಗಳಿಂದ ಕೂಡಿದ ಒಂದು ಒಕ್ಕೂಟವನ್ನಾಗಿ ಮಾಡುವುದಕ್ಕೂ ನನ್ನ ವಿರೋಧವಿದೆ. ಅಂತಹ ಒಪ್ಪಂದದ ಪರಿಣಾಮ ಸ್ಪಷ್ಟವಿದೆ. ಅಂತಹ ಸಂಘಟನೆಯು ಸರಕಾರಗಳ ಒಂದು ಸಮೂಹವಾಗಿರುವುದರಿಂದ, ಆ ಸರಕಾರಗಳು ಪರಸ್ಪರರಿಂದ ಬೇರೆಯಾಗಲು ನಿರ್ಧರಿಸಿದಾಗ ಅದು ಅಳಿಸಿಹೋಗುವುದು. ಅಂತಹ ಕೇಂದ್ರ ಸರಕಾರವು ಘಟಕ ಸರಕಾರಗಳು ಎಲ್ಲಿಯವರೆಗೆ ಬಯಸುವುವೋ ಅಲ್ಲಿಯವರೆಗೆ ಮಾತ್ರ ಅಸ್ತಿತ್ವದಲ್ಲಿರುವುದು. ಈ ಸಂಘಟನೆಯು ಸರಕಾರಗಳ ಒಂದು ಮೈತ್ರಿಕೂಟ ಅಥವಾ ಒಕ್ಕೂಟದಂತಿದ್ದು ಅದು ಸರಕಾರಗಳೊಂದಿಗೆ ಮಾತ್ರ ವ್ಯವಹರಿಸಬಲ್ಲದು. ವೈಯಕ್ತಿಕವಾಗಿ ನಾಗರಿಕರೊಂದಿಗೆ ಅದು ಯಾವ ಸಂಬಂಧವನ್ನೂ ಹೊಂದಲಾರದು. ಅದು ವ್ಯಕ್ತಿಗಳ ಮೇಲೆ ತೆರಿಗೆ ಹಾಕುವಂತಿಲ್ಲ. ಅವನ ವಿವಾದಗಳನ್ನು ಬಗೆಹರಿಸುವಂತಿಲ್ಲ ಮತ್ತು ಅವನಿಗೆ ಅನ್ವಯಿಸುವಂತೆ ಕಾನೂನುಗಳನ್ನು ಮಾಡಲು ಬರುವುದಿಲ್ಲ. ಇಂತಹ ಕೇಂದ್ರ ಸರಕಾರ ಅತ್ಯಂತ ದುರ್ಬಲ ಸರಕಾರವೆನಿಸುವುದು. ನನ್ನ ಭಾವನೆ ಅಥವಾ ಕಲ್ಪನೆಯ ಕೇಂದ್ರ ಸರಕಾರ ಮತ್ತು ಅದರ ಸ್ಥಾನಮಾನದ ಕಾರಣದಿಂದಾಗಿ ಅಮೇರಿಕದ ಸಂವಿಧಾನದಲ್ಲಿ ಕಾಣಬರುವ ಸಂಬಂಧಗಳ ಸ್ವರೂಪವನ್ನೂ ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ. ಅಮೇರಿಕದ ಸಂವಿಧಾನದಲ್ಲಿ ಕೇಂದ್ರ ಸರಕಾರವು ಒಂದು ಲೋಕಹಿತ ಪ್ರಜಾಸಂಸ್ಥೆಯಂತಿದ್ದು (Common Wealth) ಈ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರವು ಪ್ರತಿಯೊಬ್ಬ ವ್ಯಕ್ತಿಯ ವಿಷಯದಲ್ಲಿ ತನ್ನ ನ್ಯಾಯಾಲಯಗಳು ಮತ್ತು ಕಾರ್ಯಾಂಗದ ವ್ಯಕ್ತಿಯ ವಿಷಯದಲ್ಲಿ ತನ್ನ ನ್ಯಾಯಾಲಯಗಳು ಮತ್ತು ಕಾರ್ಯಾಂಗದ ಅಧಿಕಾರಗಳ ಮೂಲಕ ಕಾರ್ಯ ಪ್ರವೃತ್ತವಾಗುವುದೆಂಬುದೇನೋ ನಿಜ. ಆದರೆ, ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕೇಂದ್ರ ಸರಕಾರವು ರಾಜ್ಯಗಳ ಸೃಷ್ಟಿ ಎಂಬುದೂ ಅಷ್ಟೇ ನಿಜ. ಅದು ರಾಜ್ಯಗಳು ಸೃಷ್ಟಿಸಿದ ವ್ಯವಸ್ಥೆಯಾಗಿರುವುದರಿಂದ

ಅದು ರಾಜ್ಯಗಳೊಂದಿಗೇ ಉಳಿಯಬೇಕು ಅಥವಾ ಅಳಿಯಬೇಕು. ರಾಜ್ಯಗಳು ತಾವು ನಿರ್ದಿಷ್ಟವಾಗಿ ಅದಕ್ಕೆ ಕೊಡಮಾಡದೇ ಇರುವ ಎಲ್ಲ ಅಧಿಕಾರಗಳನ್ನು ತಮ್ಮ ಕೈಯಲ್ಲಿ ಉಳಿಸಿಕೊಂಡಿರುತ್ತವೆ. ಕೇಂದ್ರ ಸರಕಾರಕ್ಕೆ ಶಾಸನಬದ್ಧವಾಗಿ ನೀಡಲಾದ ಅಧಿಕಾರಗಳಿಗಿಂತಲೂ ಹೆಚ್ಚಿನ ಅಧಿಕಾರಗಳಿರುವುದಿಲ್ಲ. ಇಂತಹ ಕೇಂದ್ರ ಸರಕಾರವು, ಅದು ಸಂಘದ ಕೇಂದ್ರ ಸರಕಾರಕ್ಕಿಂತ ಎಷ್ಟೇ ಬಲಶಾಲಿಯಾಗಿದ್ದಾಗ್ಯೂ, ನನ್ನ ಅಭಿಪ್ರಾಯದಲ್ಲಿ ಅದು ಭಾರತದ ಅವಶ್ಯಕತೆಗಳ ದೃಷ್ಟಿಯಿಂದ ಬಲಿಯಾಗಲಾರದು. ಕೇಂದ್ರ ಸರಕಾರವು ಪ್ರಾಂತೀಯ ಸರಕಾರಗಳ ಬೆಂಬಲದಿಂದ ಅಸ್ತಿತ್ವದಲ್ಲಿದೆ ಎಂಬ ಭಾವನೆ ಉಂಟಾಗಬಾರದೆಂಬುದೇ ನನ್ನ ವಿಚಾರ. ಅದರ ಸ್ಥಾನ ಎಷ್ಟು ಸುಭದ್ರ ಮತ್ತು ಸ್ವತಂತ್ರವಾಗಿರಬೇಕೆಂದರೆ ಎಲ್ಲಾ ಪ್ರಾಂತೀಯ ಸರಕಾರಗಳು ಅಳಿದುಹೋದರೂ ಅಥವಾ ಬೇರೆ ರೀತಿಯಲ್ಲಿ ಸಂಘಟಿತಗೊಂಡರೂ ತಾನು ಅಸ್ತಿತ್ವದಲ್ಲಿರಬೇಕಲ್ಲದೇ, ಯಾವುದೇ ಪ್ರಾಂತೀಯ ಸರಕಾರವು ದಂಗೆ ಅಥವಾ ಇನ್ನಾವುದೇ ಕಾರಣದಿಂದ ತನ್ನ ಕರ್ತವ್ಯ ನಿರ್ವಹಿಸುವ ಸ್ಥಿತಿಯಲ್ಲಿಲ್ಲದಂತಾದಾಗಲೂ ಆ ಪ್ರಾಂತ್ಯದ ಆಡಳಿತವನ್ನು ತಾನು ನಡೆಸಿಕೊಂಡು ಹೋಗುವ ಹಾಗೆ ಇರಬೇಕು. ಮೇಲ್ಕಂಡ ಪ್ರಶ್ನೆಯ ಈ ಅಂಶ ಕುರಿತು ನಾನು ಈ ಶಿಫಾರಸುಗಳನ್ನು ಮಾಡುತ್ತೇನೆ:

(೧) ಎಲ್ಲಾ ಶೇಷ ಅಧಿಕಾರಗಳು (residuary powers) ಕೇಂದ್ರ ಸರಕಾರಕ್ಕಿರಬೇಕು, (೨) ಅವಿಧೇಯ ಅಥವಾ ದಂಗೆಕೋರ ಪ್ರಾಂತ್ಯವು ದೇಶದ ಹಿತಕ್ಕೆ ಧಕ್ಕೆಯುಂಟುಮಾಡುವಂತೆ ವರ್ತಿಸಿದಾಗ ಅದನ್ನು ನಿಯಂತ್ರಿಸುವ ಮತ್ತು ದಂಡಿಸುವ ನಿರ್ದಿಷ್ಟ ರೂಪದ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ಕೊಡಬೇಕು. (೩) ಪ್ರಾಂತೀಯ ಸರಕಾರ ನಿಷ್ಕ್ರಿಯವಾದಾಗ ಅದಕ್ಕೆ ನೀಡಲಾದ ಎಲ್ಲಾ ಅಧಿಕಾರಗಳು ಕೇಂದ್ರ ಸರಕಾರಕ್ಕೆ ಮರಳಬೇಕು. (೪) ಕೇಂದ್ರ ಶಾಸಕಾಂಗಕ್ಕೆ ನೇರ ಅಥವಾ ಪ್ರತ್ಯಕ್ಷ ಚುನಾವಣೆ ಇರಬೇಕು.

## ಅಧ್ಯಾಯ–೨

# ಪ್ರಭುತ್ವ(Crown)ದೊಂದಿಗೆ ಪ್ರಾಂತ್ಯ ಸರಕಾರದ ಸಂಬಂಧ

(೧೧೫) ಪ್ರಾಂತೀಯ ಸ್ವಾಯತ್ತತೆಯನ್ನು ಹೊಂದುವುದಕ್ಕಾಗಿ ಪ್ರಾಂತ್ಯ ಸರಕಾರ ಮತ್ತು ಕೇಂದ್ರ ಸರಕಾರದ ನಡುವೆ ಸರಿಯಾದ ಸಂಬಂಧಗಳನ್ನು ಗೊತ್ತುಪಡಿಸಿದರೆ ಸಾಲದು. ಪ್ರಾಂತ್ಯ ಸರಕಾರದ ಸ್ಥಾನಮಾನವನ್ನೂ ಸ್ಪಷ್ಟಪಡಿಸುವುದು ಅವಶ್ಯ. ಇದು ಅವುಗಳು ಹೊಂದುವ ದೇಶದ ಹೊರಗಣ ವ್ಯವಹಾರಗಳ ಕಾರ್ಯಾಚರಣೆಯ ದೃಷ್ಟಿಯಿಂದ ಅತಿ ಮುಖ್ಯವೆನಿಸುವುದು. ಪ್ರಾಂತ್ಯಗಳು ಅಂತರರಾಷ್ಟ್ರೀಯ ಅಂತಸ್ತನ್ನು ಹೊಂದಲಾರವು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಸ್ವದೇಶದ (ಬ್ರಿಟಿಷ್) ಸರಕಾರದೊಂದಿಗೆ ಅವುಗಳ ಸಂಬಂಧದ ಪ್ರಶ್ನೆ ಬೇರೆಯೇ ಆಗಿದ್ದು, ಅದನ್ನು ಸುಲಭವಾಗಿ ಬಗೆಹರಿಸಲಾಗುವುದಿಲ್ಲ. ಪ್ರಾಂತ್ಯ ಸರಕಾರ ಮತ್ತು ಸ್ವದೇಶ (ಬ್ರಿಟಿಷ್) ಸರಕಾರದ ನಡುವಣ ಸಂಬಂಧದ ಸ್ವರೂಪ ಏನೇ ಇದ್ದರೂ, ಅದು ದೇಶದ ಸಂವಿಧಾನಾತ್ಮಕ ಕಾನೂನಿನನ್ವಯ ಇರಬೇಕೆಂಬುದು ಸುಸ್ಪಷ್ಟ. ಒಂದು ಪ್ರಾಂತ್ಯದ ಸ್ವತಂತ್ರ ರಾಜಕೀಯ ಅಸ್ತಿತ್ವದ ಅಂತಸ್ತು ಅಥವಾ ಮಟ್ಟ ಈ ಸಮಸ್ಯೆಯ ಮೇಲಣ ದೃಷ್ಟಿಕೋನವನ್ನು ನಿರ್ಧರಿಸುತ್ತದೆ. ಪ್ರಾಂತ್ಯಗಳನ್ನು ಸ್ವತಂತ್ರ ರಾಜಕೀಯ ಅಸ್ತಿತ್ವವನ್ನು ಹೊಂದಿರದ ಮತ್ತು ಭಾರತದ ಹೊರಗಡೆ ಗೊತ್ತಿಲ್ಲದ, ಮಾನ್ಯತೆ ಪಡೆಯದ ಸ್ಥಾನಿಕ ಸರಕಾರಗಳೊಂದಿಗೆ ಹೋಲಿಸಬಹುದಾದಂತಹ ಆಂತರಿಕ ವಿಭಾಗಗಳೆಂದು ಮಾತ್ರ ಪರಿಗಣಿಸಬೇಕೇ? ಹೀಗಿದ್ದ ಪಕ್ಷದಲ್ಲಿ, ಸಾಮ್ರಾಜ್ಯ ಸರಕಾರವು ಕೇಂದ್ರ ಸರಕಾರವನ್ನು ಏಕೈಕ ಭಾರತೀಯ ಪ್ರಾಧಿಕಾರವೆಂದು ತಿಳಿದು ಅದರೊಂದಿಗೆ ಮಾತ್ರ ವ್ಯವಹರಿಸಬೇಕಾಗುವುದು. ಇಲ್ಲವೇ ಪ್ರಾಂತೀಯ ಸರಕಾರಗಳು ಕಾನೂನಿನ ದೃಷ್ಟಿಯಲ್ಲಿ ಸ್ವತಂತ್ರ ರಾಜಕೀಯ ಅಸ್ತಿತ್ವವನ್ನು ಹೊಂದಿವೆಯೇ? ಅವು ಅಂತಹ ಅಸ್ತಿತ್ವವನ್ನು ಹೊಂದಿರುವುದಾದರೆ, ಸಾಮ್ರಾಜ್ಯ ಸರಕಾರವು ಅವುಗಳನ್ನು ಮಾನ್ಯ ಮಾಡಿ ಎಲ್ಲಾ ಪ್ರಾಂತೀಯ ವಿಷಯಗಳಲ್ಲಿ ಅವುಗಳೊಂದಿಗೆ ಪತ್ರ ವ್ಯವಹಾರ ಮಾಡಿ ಉತ್ತರ ಪಡೆದುಕೊಳ್ಳಬೇಕಾಗುತ್ತದೆ. ಅವುಗಳ ನಡುವಣ ಸಂಬಂಧದ ಈ ಎರಡು ಸಾಧ್ಯ ಆಧಾರಗಳಲ್ಲಿ ಎರಡನೆಯದೇ ಹೆಚ್ಚು ಸಮಂಜಸವೆನಿಸುತ್ತದೆ. ಪ್ರಾಂತ್ಯಗಳ ಸ್ವತಂತ್ರ ರಾಜಕೀಯ ಅಸ್ತಿತ್ವ ಈಗ ಸಿದ್ಧ ಸಂಗತಿ. ಅವುಗಳಿಗೆ ತಮ್ಮದೇ ಅಧಿಕಾರ ವ್ಯಾಪ್ತಿ ಇರುವ ಕಾರ್ಯಕ್ಷೇತ್ರವಿದೆ. ಸುಧಾರಣೆಗಳ ಇಡೀ ಯೋಜನೆ ಅವುಗಳನ್ನು ಕೇಂದ್ರಕ್ಕೆ ಅಧೀನವನ್ನಾಗಿ ಮಾಡುವುದರ ವಿರುದ್ಧವಿದೆ. ಪ್ರಾಂತ್ಯದ ಮುಖ್ಯ ಕಾರ್ಯ ನಿರ್ವಾಹಕರು ಕೇಂದ್ರ ಸರಕಾರದ ಮುಖ್ಯಸ್ಥನಿಂದ ನಾಮಕರಣವಾದವರಲ್ಲ. ಅವರು ಪ್ರಾಂತ್ಯದಲ್ಲಿ (ಬ್ರಿಟನ್ನಿನ) ಪ್ರಭುತ್ವ(Crown)ದ ಪ್ರತಿನಿಧಿಯೇ ಹೊರತು ಗವರ್ನರ್–ಜನರಲ್‌ರ ಪ್ರತಿನಿಧಿಯಾಗಿಲ್ಲ. ಸಂವಿಧಾನವು ಬಹುತ್ವ ಸಂವಿಧಾನ ವಾಗಿದ್ದು, ಭಾರತದಲ್ಲಿ ಮಾತ್ರ ಅದರ ಬಹುತ್ವವನ್ನು ಪರಿಗಣಿಸಿ ಪ್ರತಿಯೊಂದಕ್ಕೂ ಸ್ಪಷ್ಟ ಅಧಿಕಾರಗಳನ್ನು ನೀಡಿ, ಸಾಮ್ರಾಜ್ಯ ಸರಕಾರವು ಮಾತ್ರ ಒಂದೇ ಜವಾಬ್ದಾರಿ ಸರಕಾರದಿಂದ ಕೂಡಿದ ಏಕಾತ್ಮಕ ಸಂವಿಧಾನವೆಂದು ಪರಿಗಣಿಸಬೇಕಾಗುವುದೆಂದು ಎಲ್ಲಿಯೂ ಸೂಚಿಸಲಾಗುವುದಿಲ್ಲ.

(೧೧೬) ಯಾವ ವಿಷಯಗಳಲ್ಲಿ ಪ್ರಾಂತೀಯ ಸರಕಾರಗಳು ಸ್ವದೇಶದ (ಬ್ರಿಟಿಷ್) ಸರಕಾರ

ದೊಂದಿಗೆ ನೇರವಾಗಿ ವ್ಯವಹರಿಸುವ ಹಕ್ಕನ್ನು ಮನ್ನಿಸಬೇಕು? ಆಸ್ಟ್ರೇಲಿಯಾ ಕಾಮನ್‌ವೆಲ್ತ್‌ನಲ್ಲಿರುವ ಪಾತ್ರವನ್ನನುಸರಿಸಿದ್ದಾದರೆ, ಸರಕಾರದ ಘಟನೆಯ ಒಂದು ಅಂಗವಾಗಿ ಪ್ರಭುತ್ವಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪತ್ರ ವ್ಯವಹಾರವು ರಾಜ್ಯದ ಗವರ್ನರರು ಮತ್ತು ವಸಾಹತು ಕಛೇರಿಯ ನಡುವೆ ಗವರ್ನರ್-ಜನರಲ್‌ರ ಹಸ್ತಕ್ಷೇಪವಿಲ್ಲದೆ ನೇರವಾಗಿ ಜರುಗುತ್ತದೆ. ಆದ್ದರಿಂದ ಪ್ರಾಂತೀಯ ಸರಕಾರಗಳು ಸ್ವದೇಶದ (ಬ್ರಿಟಿಷ್) ಸರಕಾರದೊಂದಿಗೆ ಕೇಂದ್ರ ಸರಕಾರದ ಹಸ್ತಕ್ಷೇಪವಿಲ್ಲದೆ ನೇರವಾಗಿ ವ್ಯವಹರಿಸಬಹುದೆಂದು ಅವುಗಳ ಪರವಾಗಿ ವಾದಿಸಬಹುದು. ಅದು ಇಂತಹ ಹಕ್ಕನ್ನು ಪಡೆದ ವಿಷಯಗಳಲ್ಲಿ ಸಂಪೂರ್ಣವಾಗಿ ಪ್ರಾಂತ್ಯಗಳಿಗೆ ಸೇರಿದ ವಿಷಯಗಳಾದ ಪ್ರಾಂತೀಯ ಶಾಸನಗಳನ್ನು ತಡೆಹಿಡಿಯುವುದು, ಅವುಗಳಿಗೆ ಅವಕಾಶ ಕೊಡುವ ಅಥವಾ ನಿರಾಕರಿಸುವ, ಪ್ರಾಂತ್ಯಗಳ ಗವರ್ನರುಗಳ ನೇಮಕ ಮಾಡುವ ಮತ್ತು ತೆಗೆದುಹಾಕುವ, ಅವರ ನಿರ್ದೇಶನಗಳಿಗೆ ಪ್ರಾಂತ್ಯಗಳ ಸಂವಿಧಾನಗಳಿಗೆ ತಿದ್ದುಪಡಿ ಮಾಡುವ ವಿಷಯಗಳೂ ಮತ್ತು ಇತರ ವಿಷಯಗಳೂ ಸೇರಿರಬೇಕು. ಸಂಪೂರ್ಣವಾಗಿ ಎರಡೂ ಸರಕಾರಗಳಿಗೂ ಸೇರಿರದ ವಿಷಯಗಳಲ್ಲಿ ಏನು ಮಾಡಬೇಕು? ಕೇಂದ್ರ ಸರಕಾರವು ಶಾಸನ ಮಾಡುವ ಪರಮಾಧಿಕಾರವನ್ನು ಹೊಂದಿರುವ ವಿಷಯಗಳಲ್ಲಿ ಕೇಂದ್ರ ಸರಕಾರವೇ ಭಾರತದ ಏಕೈಕ ಪ್ರತಿನಿಧಿಯಾಗಿರಬೇಕು. ಆದರೆ, ಕೇಂದ್ರ ಮತ್ತು ಪ್ರಾಂತ್ಯಗಳ ಸರಕಾರಗಳು ಸಮಾನಾಧಿಕಾರ ಹೊಂದಿರುವ ವಿಷಯಗಳಲ್ಲಿ, ಪ್ರಾಂತೀಯ ಸರಕಾರಕ್ಕೆ ನೇರ ಪ್ರಾತಿನಿಧ್ಯದ (ವ್ಯವಹರಿಸುವ) ಹಕ್ಕು ಇರಬೇಕು.

(೧೧೭) ಪ್ರಾಂತ್ಯಗಳ ರಾಜಕೀಯ ಅಸ್ತಿತ್ವ ಭಾರತ ಸರಕಾರದಿಂದ ಸ್ವತಂತ್ರವಾಗಿ ಪ್ರಾಂತ್ಯಗಳ ಕಾರ್ಯಾಂಗ ಮತ್ತು ಶಾಸಕಾಂಗಗಳಲ್ಲಿ ಪ್ರಭುತ್ವದ ಪ್ರಾತಿನಿಧ್ಯವು ಈಗಿರುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿರ ಬೇಕು. ಸದ್ಯದಲ್ಲಿರುವ ಕಾನೂನಿನಂತೆ ಸೆಕ್ರೆಟರಿ ಆಫ್ ಸ್ಟೇಟ್‌ರವರು ಪ್ರಭುತ್ವವನ್ನು ಹಿಂಬದಿಗೆ ಸರಿಸಿದಂತೆ ಕಾಣುತ್ತದೆ. ಅಷ್ಟೇ ಅಲ್ಲದೆ, ಅದರ ಸ್ಥಾನವನ್ನು ಆಕ್ರಮಿಸಿದಂತೆ ಕಾಣುತ್ತದೆ. ಭಾರತದ ಕಾರ್ಯದರ್ಶಿಯವರ ಅಧಿಕಾರ ವಸಾಹತುಗಳ ಸೆಕ್ರೆಟರಿ ಆಫ್ ಸ್ಟೇಟ್‌ರವರ ಅಧಿಕಾರಕ್ಕೆ ಸಮನಾಗಿದೆ. ಆದರೆ, ಇವರಿಬ್ಬರೂ ಬೇರೆ ಪಾತ್ರವನ್ನೇ ಹೊಂದಿರುತ್ತಾರೆ. ವಸಾಹತುಗಳ ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಡೊಮಿನಿಯನ್‌ಗಳ ಸಂವಿಧಾನಾತ್ಮಕ ಕಾನೂನಿನಲ್ಲಿ ಯಾವ ಸ್ಥಾನವೂ ಇಲ್ಲ. ಎಲ್ಲಾ ಡೊಮಿನಿಯನ್‌ಗಳ ಸಂವಿಧಾನಾತ್ಮಕ ಕಾನೂನಿನಲ್ಲಿ ತಮ್ಮ ಕಾರ್ಯಾಂಗದ ಮತ್ತು ಶಾಸಕಾಂಗದ ಸರಕಾರ ಪ್ರಭುತ್ವದಲ್ಲಿ ಸೇರಿದೆ ಎಂದು ಒತ್ತಿ ಹೇಳಲಾಗಿದೆ. ಭಾರತ ಸರಕಾರ ಕಾಯ್ದೆಯ ೨ನೆಯ ವಿಭಾಗಗಳು ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ನಿರ್ದಿಷ್ಟವಾದ ಕಾನೂನಿನ ಅಂತಸ್ತನ್ನು ನೀಡಿವೆ. ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಕೊಟ್ಟಿರುವ ಸ್ಥಾನ ಎಷ್ಟು ಪ್ರಾಮುಖ್ಯವಾಗಿದೆ ಎಂದರೆ, ಅವರು ಪ್ರಭುತ್ವವನ್ನು ಸಹ ಕಳೆಗುಂದಿಸಿದ್ದಾರೆ. ೧ನೆಯ ವಿಭಾಗದಲ್ಲಿ ಪ್ರಾಸಂಗಿಕ ಉಲ್ಲೇಖವನ್ನು ಬಿಟ್ಟರೆ ಭಾರತ ಸರಕಾರ ಕಾಯ್ದೆಯಲ್ಲಿ ಎಲ್ಲಿಯೂ ಪ್ರಭುತ್ವದ (Crown) ಉಲ್ಲೇಖವೇ ಇಲ್ಲ. ಇದಕ್ಕೆ ಕಾರಣಗಳು ಇತಿಹಾಸದಲ್ಲಿದ್ದು, ಅವುಗಳನ್ನು ೧೭೭೩ರ ರೆಗ್ಯುಲೇಟಿಂಗ್ ಕಾಯ್ದೆಯಲ್ಲಿ ಕಾಣಬಹುದು. ಈಸ್ಟ್ ಇಂಡಿಯಾ ಕಂಪೆನಿಯು ಪ್ರಭುತ್ವ ಮತ್ತು ಪ್ರಭುತ್ವದ ನಡುವೆ ಪೌರ್ವಾತ್ಯದಿಂದ ಗಳಿಸಿದ ಸಂಪತ್ತನ್ನು ಹೊಂದುವ ಹಕ್ಕಿನ ಪ್ರಶ್ನೆ ಬಂದಾಗ ಈ ಅಧಿನಿಯಮವನ್ನು ಜಾರಿಗೊಳಿಸಲಾಯಿತು. ಐತಿಹಾಸಿಕ ಭಿನ್ನಾಭಿಪ್ರಾಯಗಳೇನೇ ಇರಲಿ, ಡೊಮಿನಿಯನ್ ಕಾನೂನುಗಳು ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಮಾನ್ಯತೆ ನೀಡದೇ ಇರುವುದು ಮತ್ತು ಭಾರತೀಯ ಕಾನೂನುಗಳು ಅವರನ್ನು ಮಾನ್ಯ ಮಾಡಿರುವುದು ನಿಜ ಸಂಗತಿಗಳು. ಇದರ ಪರಿಣಾಮವಾಗಿ ವಸಾಹತುಗಳ ಸೆಕ್ರೆಟರಿ ಆಫ್ ಸ್ಟೇಟ್‌ರವರು ಡೊಮಿನಿಯನ್‌ಗಳನ್ನು ಆಳುವುದಿಲ್ಲ. ಡೊಮಿನಿಯನ್ ಸರಕಾರಗಳ ಕಾನೂನುಗಳಿಗೆ

ಒಪ್ಪಿಗೆ ಕೊಡಬೇಕೇ ಅಥವಾ ಬೇಡವೇ ಎಂಬ ವಿಷಯದಲ್ಲಿ ಅವರು ಪ್ರಭುತ್ವಕ್ಕೆ ಸಲಹೆ ನೀಡುವುದು ಮಾತ್ರ ಅವರ ಕರ್ತವ್ಯವಾಗಿದೆ. ಆದರೆ ಸೆಕ್ರೆಟರಿ ಆಫ್ ಸ್ಟೇಟ್‌ರವರು ಪ್ರಭುತ್ವಕ್ಕೆ ಸಲಹೆಗಾರ ಮಾತ್ರವಲ್ಲ. ಭಾರತ ಸರಕಾರ ಕಾಯ್ದೆಯ ೨ನೆಯ ವಿಭಾಗದಂತೆ ಅವರಿಗೆ ಸರಕಾರದ ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆ.

(೧೧೮) ಈ ೨ನೆಯ ವಿಭಾಗದ ಅಧಿನಿಯಮಗಳನ್ನು ಯಾವುದೇ ಸಂದರ್ಭದಲ್ಲಿಯೂ ಸಮರ್ಥಿಸಲು ಬರುವುದಿಲ್ಲ. ಅವು ಪ್ರಭುತ್ವದ ಘನತೆಗೆ ಕುಂದುಂಟುಮಾಡುವಂತಿವೆ ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ರವರ ಸ್ಥಾನದ ವಿಪರ್ಯಾಸವೆನಿಸಿವೆ. ಇವುಗಳಲ್ಲಿ ಪ್ರಾಂತೀಯ ಸರಕಾರಗಳ ಸ್ಥಾನದ ತಪ್ಪು ಚಿತ್ರಣ ಮಾಡಲಾಗಿದೆ. ೧೯೧೯ರ ಮುಂಚೆ ೨ನೆಯ ವಿಭಾಗದ ಅಧಿನಿಯಮಗಳಿಗೆ ಏನೇ ಸಮರ್ಥನೆ ಇರಲಿ, ಅದೇ ವರ್ಷ ಜಾರಿಗೊಳಿಸಲಾದ ಬದಲಾವಣೆಗಳಲ್ಲಿ ಅದನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. ಸರಕಾರದ ಅಧಿಕಾರಗಳನ್ನು ಜನತೆಗೆ ವರ್ಗಾಯಿಸಿರುವುದರಿಂದ, ಆ ಅಧಿಕಾರಗಳನ್ನು ಸೆಕ್ರೆಟರಿ ಆಫ್ ಸ್ಟೇಟ್‌ರವರ ಕೈಯಲ್ಲಿ ಉಳಿಸುವುದು ಸಾಧ್ಯವೇ ಇಲ್ಲ. ಹಾಗೆ ಮಾಡುವುದೆಂದರೆ ಗಂಭೀರವಾದ ಘರ್ಷಣೆಗೆ ಅವಕಾಶ ಕೊಡುವ ಸಾಧ್ಯತೆಯಿಂದ ಕೂಡಿದ ದ್ವಿ–ಸರಕಾರ ಪದ್ಧತಿಯನ್ನು ಜಾರಿಗೆ ತಂದಂತಾಗುವುದು. ಆದ್ದರಿಂದ ಭಾರತ ಸರಕಾರ ಕಾಯ್ದೆಯ (೨)ನೆಯ ವಿಭಾಗಗಳನ್ನು ಕೈಬಿಡಬೇಕು ಮತ್ತು ಈ ಕೆಳಗೆ ಹೇಳುವ ಧೋರಣೆಯ ಎರಡು ಹೊಸ ವಿಭಾಗಗಳನ್ನು ಸೇರಿಸಬೇಕೆಂದು ನಾನು ಶಿಫಾರಸು ಮಾಡುತ್ತೇನೆ.

(೧) ಪ್ರಾಂತ್ಯದ ಶಾಸಕಾಂಗ ಅಧಿಕಾರವನ್ನು ದೊರೆ ಮತ್ತು ದೊರೆಯ ಮಂತ್ರಾಲೋಚನಾ ಸಮಿತಿ ಮತ್ತು ಒಂದು ಪ್ರತಿನಿಧಿಗಳ ಸಮಿತಿಯಿಂದ ಕೂಡಿದ ಪ್ರಾಂತೀಯ ಸಂಸತ್ತಿಗೆ ನೀಡತಕ್ಕದ್ದು ಮತ್ತು ಇನ್ನು ಮುಂದೆ ಅದನ್ನು "ಪ್ರಾಂತೀಯ ಶಾಸಕಾಂಗ" ಎಂದು ಕರೆಯತಕ್ಕದ್ದು."

(೨) ಪ್ರಾಂತ್ಯದ ಕಾರ್ಯಾಂಗಾಧಿಕಾರವು ದೊರೆಯ ಕೈಯಲ್ಲಿದ್ದು ಅದನ್ನು ದೊರೆಯ ಪ್ರತಿನಿಧಿಯಾಗಿ ಗವರ್ನರರು ಚಲಾಯಿಸತಕ್ಕದ್ದು. ಈ ಅಧಿಕಾರವು ಸಂವಿಧಾನ ಮತ್ತು ಪ್ರಾಂತ್ಯದ ಕಾನೂನುಗಳನ್ನು ಉಳಿಸಿಕೊಂಡು ಹೋಗುವುದಾಗಿದೆ.

ಭಾರತ ಸರಕಾರದಲ್ಲಿ ಪ್ರಭುತ್ವದ ಸ್ಥಾನವನ್ನು ಕುರಿತು ಇದೇ ಅರ್ಥ ನೀಡುವ ವಿಭಾಗಗಳನ್ನು ೧೯೧೯ರ ಕಾಯ್ದೆಯಲ್ಲಿ ಸೇರಿಸಬೇಕು. ಇಂತಹ ಬದಲಾವಣೆ ಪ್ರಭುತ್ವ ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಯೋಗ್ಯ ಸ್ಥಾನ ನೀಡುವುದೇ ಅಲ್ಲದೆ, ಭಾರತದ ಸಂವಿಧಾನಾತ್ಮಕ ಕಾನೂನನ್ನು ಡೊಮಿನಿಯನ್‌ಗಳ ಸಂವಿಧಾನಾತ್ಮಕ ಕಾನೂನಿನ ಶ್ರೇಣಿಗೆ ತಂದಂತೆಯೂ ಆಗುತ್ತದೆ.

## ವಿಭಾಗ–V

# ಸಾರ್ವಜನಿಕ ಸೇವೆಗಳು

## ೧. ಸೇವೆಗಳ ಪುನರ್ ರಚನೆ

(೧೧೯) ಸೇವೆಗಳನ್ನು ಪ್ರತ್ಯೇಕಿಸುವುದು:–

ಭಾರತದಲ್ಲಿ ಸಾರ್ವಜನಿಕ ಸೇವೆಗಳ ಪ್ರಸ್ತುತ ವ್ಯವಸ್ಥೆ ಭಾರತದ ಸಾರ್ವಜನಿಕ ಸೇವೆಗಳ ಕುರಿತ ವಿಚಾರಣೆಯ ನಂತರ ೧೮೮೬–೮೭ರಲ್ಲಿ ಐಚಿಸನ್ ಆಯೋಗ (Aitchison Commission) ಮಾಡಿದ ಶಿಫಾರಸುಗಳ ಪರಿಣಾಮವಾಗಿವೆ. ಈ ಆಯೋಗದ ನೇಮಕದ ಮುನ್ನ ಹೆಚ್ಚಿನ ಜವಾಬ್ದಾರಿಯ ಮತ್ತು ಹೆಚ್ಚಿನ ಸಂಬಳ ಸಾರಿಗೆಗಳ ನಾಗರಿಕ ಹುದ್ದೆಗಳ ಬಹುಪಾಲು ಸ್ಥಾನಗಳಿಗೆ ಯುರೋಪಿನಿಂದ ಆಯ್ಕೆ ಮಾಡಲಾದ ಅಭ್ಯರ್ಥಿಗಳನ್ನೇ ನೇಮಕ ಮಾಡಲಾಗುತ್ತಿತ್ತು. ಈ ಆಯೋಗವನ್ನು "ನಾಗರಿಕ ಸೇವೆಯಲ್ಲಿ ದೇಶೀಯ ಭಾರತೀಯರಿಗೆ ತಮ್ಮ ದೇಶದಲ್ಲಿ ಉನ್ನತ ಮಟ್ಟದ ಮತ್ತು ವ್ಯಾಪಕ ನೇಮಕಗಳಿಗಾಗಿ ಅವರ ಬೇಡಿಕೆಗೆ ಸಂಪೂರ್ಣ ನ್ಯಾಯ ದೊರಕಿಸಿಕೊಡುವಂತಹ" ಸೂಕ್ತ ವಿಧಾನಗಳನ್ನು ಸೂಚಿಸುವಂತೆ ಸ್ಪಷ್ಟವಾಗಿ ನಿರ್ದೇಶಿಸಲಾಗಿತ್ತು. ಆಯೋಗದ ದೃಷ್ಟಿಯಲ್ಲಿ ನಾಗರಿಕ ಸೇವೆಯು ಒಂದು "ಉತ್ತಮರ ದಳ" ವಾಗಿರತಕ್ಕದ್ದು. ತತ್ಪರಿಣಾಮವಾಗಿ ಆಯೋಗವು ಇಂಗ್ಲೆಂಡಿನಲ್ಲಿ ಮಾಡುತ್ತಿದ್ದ ಉನ್ನತ ಅಧಿಕಾರಿಗಳ ನೇಮಕವನ್ನು ಗಣನೀಯವಾಗಿ ಕಡಿಮೆ ಮಾಡಿ, ಎಲ್ಲಾ ಉನ್ನತ ನೇಮಕಗಳನ್ನು ಸ್ಥಳೀಯವಾಗಿ ಭಾರತದಲ್ಲಿಯೇ ಮಾಡಬೇಕು ಎಂದು ಶಿಫಾರಸು ಮಾಡಿತು. ಈ ಶಿಫಾರಸುಗಳ ಫಲವಾಗಿ ಇಂಗ್ಲೆಂಡಿನಲ್ಲಿ ನೇಮಕಗೊಂಡ ಅಧಿಕಾರಿಗಳು ಸಾಮ್ರಾಜ್ಯದ (Imperial) ಸೇವೆಗಳಿಗೆ ಮತ್ತು ಸ್ಥಳೀಯವಾಗಿ ನೇಮಕಗೊಂಡ ಅಧಿಕಾರಿಗಳು ಪ್ರಾಂತೀಯ ಸೇವೆಗಳಿಗೆ ಸೇರಿದವರೆಂದು ಕರೆಯಲಾಯಿತು. ಈ ಎರಡೂ ಸೇವೆಗಳಿಗೆ ಸೇರಿದ ಅಧಿಕಾರಿಗಳ ಸಂಬಳ, ರಜೆ ಮತ್ತು ನಿವೃತ್ತಿ ವೇತನದ ನಿಯಮಗಳನ್ನು ಸ್ವತಂತ್ರವಾಗಿ ಪ್ರತ್ಯೇಕ ಆಧಾರಗಳ ಮೇಲೆ ನಿಗದಿಗೊಳಿಸಲಾಗಿದ್ದು, ಅವುಗಳಲ್ಲಿ ಯಾವುದೇ ಪರಸ್ಪರ ಸಂಬಂಧವಿರಬೇಕಾಗಿರಲಿಲ್ಲ. ಸಾಮ್ರಾಜ್ಯದ ಮತ್ತು ಪ್ರಾಂತೀಯ ಸೇವೆಗಳ ವಿಭಜನೆ ಸಾಮಾನ್ಯವಾಗಿ ದೇಶದ ಎಲ್ಲಾ ನಾಗರಿಕ ಸೇವೆಗಳಲ್ಲಿ ಕಂಡುಬರುತ್ತಿದ್ದು, ಇಲ್ಲಿ ಅವುಗಳ ವಿವರಣೆ ನೀಡುವ ಅವಶ್ಯಕತೆ ಇಲ್ಲ. ಆದರೆ, ಗಮನದಲ್ಲಿಡಬೇಕಾದ ಮುಖ್ಯ ಅಂಶವೆಂದರೆ, ಈ ವಿಭಜನೆಯನ್ನು ಇಂಗ್ಲೆಂಡಿನಲ್ಲಿ ನೇಮಕಗೊಂಡ ಮತ್ತು ಭಾರತದಲ್ಲಿ ನೇಮಕಗೊಂಡ ಅಧಿಕಾರಿಗಳ ನಡುವೆ ವ್ಯತ್ಯಾಸ ಮತ್ತು ಭೇದವನ್ನುಂಟುಮಾಡುವ ಉದ್ದೇಶದಿಂದಲೇ ಮಾಡಲಾಗಿತ್ತು. ಅವುಗಳಲ್ಲಿ ಭಾರತ ಸರಕಾರದ ಸೇವೆಗೆ ನೀಡಲಾದವರು ಮತ್ತು ಕೆಲವು ನಿರ್ದಿಷ್ಟ ಪ್ರಾಂತ್ಯಗಳ ಸ್ಥಳೀಯ ಸರಕಾರಗಳ ಸೇವೆಗಾಗಿರುವವರು ಎಂಬ ವ್ಯತ್ಯಾಸ ತೋರಿಸುವ ದೃಷ್ಟಿಯಿಂದ ಹೀಗೆ ಮಾಡಲಾಗಿರಲಿಲ್ಲ. ಇದು ಈ ಬಗ್ಗೆ ನೀಡಲಾದ ವಿವರಣೆಯಿಂದ ಸ್ಪಷ್ಟವಾಗುವುದು. ಉದಾಹರಣೆಗಾಗಿ, ಪ್ರಾಂತ್ಯಗಳ ಸೇವೆಗಳಲ್ಲಿ ಟೆಲಿಗ್ರಾಫ್ (ಇಂಜಿನಿಯರಿಂಗ್) ಮತ್ತು ಭಾರತ ಸರ್ವೆಯ ಅಧಿಕಾರಿಗಳು ಯಾವುದೇ ಒಂದು ಪ್ರಾಂತ್ಯಕ್ಕೆ ಸೇರಿರದೆ ಭಾರತ ಸರಕಾರದ ನೇರ ಅಧಿಕಾರಕ್ಕೊಳಪಟ್ಟಿದ್ದಾರೆ. ಆದರೆ ಸಾಮ್ರಾಜ್ಯದ ಸೇವೆಗಳಿಗೆ ಸೇರಿದ ಶಿಕ್ಷಣ

ಮತ್ತು ಪೊಲೀಸ್ ಇಲಾಖೆಗಳ ಅಧಿಕಾರಿಗಳನ್ನು ವಿವಿಧ ಪ್ರಾಂತ್ಯಗಳಿಗೆ ನೀಡಲಾಗಿದೆ. ನನ್ನ ಅಭಿಪ್ರಾಯದಲ್ಲಿ ಪ್ರತಿಯೊಂದು ಪ್ರಾಂತ್ಯವೂ ತನ್ನದೇ ಆದ ನಾಗರಿಕ ಸೇವಾ ವರ್ಗವನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ ಹೊಂದುವ ಕಾಲ ಈಗ ಬಂದಿದೆ. ಈ ದಿಶೆಯಲ್ಲಿ ಸೇವಾ ವರ್ಗಗಳ ಅಖಿಲ ಭಾರತ ಸ್ವರೂಪ ಕೊನೆಗೊಳ್ಳಬೇಕು. ಕೇಂದ್ರ ಸರಕಾರವು ತನ್ನ ಅವಶ್ಯಕತೆಗಳಿಗನುಗುಣವಾಗಿ ಮತ್ತು ಭಾರತ ಸರಕಾರವು ತನಗೆ ಕೊಡಮಾಡಿರುವ ವಿವಿಧ ಇಲಾಖೆಗಳ ಕೆಲಸ ನಿರ್ವಹಿಸಲು ಮತ್ತು ಪ್ರಾಂತ್ಯಗಳಲ್ಲಿ ಸೇವೆ ಸಲ್ಲಿಸುವ ಯಾವುದೇ ರೀತಿಯ ಬಾಧ್ಯತೆಯಿರದಂತಹ ಕೇಂದ್ರ ನಾಗರಿಕ ಸೇವಾ ವರ್ಗಕ್ಕೆ ಕೇಂದ್ರ ಸರಕಾರವೇ ನೇಮಕ ಮಾಡಿ ಅದನ್ನು ನಡೆಸಿಕೊಂಡು ಹೋಗುವ ಅವಕಾಶವಿರಬೇಕು. ಇದೇ ರೀತಿ, ಪ್ರತಿಯೊಂದು ಪ್ರಾಂತ್ಯ ಸರಕಾರವು ತನ್ನ ಅವಶ್ಯಕತೆಗಳಿಗನುಗುಣವಾಗಿ ನೇಮಕ ಮಾಡಿ ಪ್ರತ್ಯೇಕವಾಗಿ ತನ್ನದೇ ಆದ ಸೇವಾ ವರ್ಗವನ್ನಾಗಿ ನಡೆಸಿಕೊಂಡು ಹೋಗುವ ಪ್ರಾಂತೀಯ ನಾಗರಿಕ ಸೇವಾ ವರ್ಗವಿರಬೇಕು. ಈ ಶಿಫಾರಸಿನಿಂದ ಈಗಿನ ವ್ಯವಸ್ಥೆಯಲ್ಲಿ ಯಾವುದೇ ಗಣನೀಯ ಬದಲಾವಣೆಯಾಗುವುದು ಎಂದು ಹೇಳಲಾಗದು. ಏಕೆಂದರೆ ಸಾಮ್ರಾಜ್ಯ ಸೇವಾ ವರ್ಗ ಮತ್ತು ಪ್ರಾಂತೀಯ ಸೇವಾ ವರ್ಗದ ಸದಸ್ಯರು ಭಾರತದ ಯಾವುದೇ ಭಾಗದಲ್ಲಿ ಸೇವೆ ಮಾಡಬಹುದಾಗಿದೆಯಾದರೂ, ಅವುಗಳ ಅಖಿಲ–ಭಾರತ ಸ್ವರೂಪ ಹೆಸರಿಗೆ ಮಾತ್ರ ಇರುತ್ತದೆ. ಕಾರಣ, ಸಾಮ್ರಾಜ್ಯ ಸೇವೆಯವರೇ ಆಗಲೀ ಪ್ರಾಂತೀಯ ಸೇವೆಯವರೇ ಆಗಲೀ ಮೊದಲು ಅವರು ನೇಮಕಗೊಂಡ ಪ್ರಾಂತ್ಯದಿಂದ ಬೇರೆ ಪ್ರಾಂತ್ಯದಲ್ಲಿ ಸೇವೆ ಸಲ್ಲಿಸಬೇಕಾಗಿ ಬಂದ ಉದಾಹರಣೆಗಳು ಅತ್ಯಂತ ವಿರಳ. ಸರ್ವೇ–ಸಾಮಾನ್ಯವಾಗಿ ಎಲ್ಲರೂ ತಾವು ಆರಂಭದಲ್ಲಿ ನೇಮಕಗೊಂಡ ಪ್ರಾಂತ್ಯದಲ್ಲಿಯೇ ಕೊನೆಯವರೆಗೂ ಸೇವೆಯಲ್ಲಿ ಮುಂದುವರೆದಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ನಾನು ಸೂಚಿಸಿರುವ ಸುಧಾರಣೆ ಯಾವ ಬದಲಾವಣೆಯನ್ನೂ ಉಂಟುಮಾಡುವುದಿಲ್ಲ. ಅದು ವಾಸ್ತವ ಸಂಗತಿಗಳನ್ನು ಮಾತ್ರ ಗುರುತಿಸುತ್ತದೆ.

(೧೨೦) ನಾಗರಿಕ ಸೇವೆಗಳ ರಚನೆಯಲ್ಲಿ ಈ ಸುಧಾರಣೆಗಳಿಗೆ ನಾನು ಒತ್ತಾಯಿಸಲು ಅನೇಕ ಕಾರಣಗಳಿವೆ. ಮೊದಲನೆಯದಾಗಿ, ಭಾರತ ಸರಕಾರದ ಉದ್ಯೋಗದಲ್ಲಿರುವ ಕೇಂದ್ರ ಸೇವೆಗಳನ್ನು ಪ್ರಾಂತ್ಯದ ಸೇವೆಗಳಿಂದ ಪ್ರತ್ಯೇಕಿಸುವುದರಲ್ಲಿ ಇರುವ ಹೆಚ್ಚಿನ ಅನುಕೂಲವೆಂದರೆ ಅದು, ಪ್ರಾಂತ್ಯ ಸರ ಕಾರಗಳ ಸ್ವರೂಪದಲ್ಲಾಗಿರುವ ಬದಲಾವಣೆಯಿಂದ ಅವಶ್ಯವೆನಿಸಿದೆ. ಈಗಿರುವ ಪದ್ಧತಿಯನ್ನು ಮುಂದುವರಿಸಿಕೊಂಡು ಹೋದಲ್ಲಿ, ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ಸಾಧಿಸುವುದು ಕಷ್ಟವಾಗುತ್ತದೆ. ಭಾರತ ಸರಕಾರ ಕಾಯ್ದೆಯ ೯೬(ಬಿ) ವಿಭಾಗದ ಪ್ರಕಾರ ಭಾರತದಲ್ಲಿ ಸಾರ್ವಜನಿಕ ಸಿಬ್ಬಂದಿಯವರು ಪ್ರಭುತ್ವದ ವಿಶ್ವಾಸದಿಂದ ತಮ್ಮ ಸ್ಥಾನಗಳನ್ನು ಹೊಂದಿರುತ್ತಾರೆ. ಆದರೆ ಅವರನ್ನು ಮಹಾಪ್ರಭುವು ಯಾವಾಗ ಕೆಲಸದಿಂದ ವಜಾ ಮಾಡಬೇಕೆಂಬುದನ್ನು ನಿರ್ಣಯಿಸುವ ಅಧಿಕಾರವನ್ನು ಕಾಯ್ದೆಯು ಮಂತ್ರಿಗಳಿಗೆ ಕೊಟ್ಟಿಲ್ಲವೆಂಬುದನ್ನು ನಾವು ನೆನಪಿನಲ್ಲಿಡಬೇಕು. ಆ ಅಧಿಕಾರವನ್ನು ನೇಮಕ ಮಾಡುವ ಅಧಿಕಾರಿಗೆ ನೀಡಲಾಗಿದೆಯಾದರೂ, ಹಾಗೆ ವಜಾ ಮಾಡಲಾದ ಅಧಿಕಾರಿಗೆ ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಮೇಲ್ಮನವಿ ಮಾಡಿಕೊಳ್ಳುವ ಹಕ್ಕು ಇದೆ. ಮಂತ್ರಿಗೆ ಒಬ್ಬ ಅಧಿಕಾರಿಯನ್ನು ಕೆಲಸದಿಂದ ವಜಾ ಮಾಡುವ ಹಕ್ಕು ಮಾತ್ರವಲ್ಲ, ಧೈರ್ಯವಾಗಿ ಅವನನ್ನು ಶಿಕ್ಷಿಸುವ ಹಕ್ಕೂ ಇರುವುದಿಲ್ಲ. ಏಕೆಂದರೆ ಕಾಯ್ದೆಯಲ್ಲಿ ಸೆಕ್ರೆಟರಿ ಆಫ್ ಸ್ಟೇಟ್–ಇನ್–ಕೌನ್ಸಿಲ್‌ರವರಿಂದ ನೇಮಕಗೊಂಡ ಯಾವುದೇ ಅಧಿಕಾರಿಗೆ ಅವನ ಮೇಲಧಿಕಾರಿಯಿಂದ ಅನ್ಯಾಯವಾದಾಗ ಅವನಿಗೆ ಸಂಬಂಧಪಟ್ಟ ಗವರ್ನರರಿಗೆ ದೂರು ನೀಡುವ ಹಕ್ಕಿದೆ. ಅಂತಹ ದೂರು ಬಂದಾಗ ಕಾಯ್ದೆಯ ಪ್ರಕಾರ ಮತ್ತು ನಿರ್ದೇಶನಗಳ ದಸ್ತಾವೇಜಿನ ಪ್ರಕಾರ

ಗವರ್ನರರು ವಿಚಾರಣೆ ನಡೆಸಲು ಬದ್ಧರಾಗಿದ್ದು, ತಮಗೆ ಯಾವುದು ನ್ಯಾಯಸಮ್ಮತ ಎಂದು ತೋರುವುದೋ ಅಂತಹ ಆಜ್ಞೆಯನ್ನು ನೀಡಬೇಕು. ಈ ಅಧಿನಿಯಮಗಳು ಮಂತ್ರಿಯನ್ನು ಅವನು ಎಷ್ಟೇ ಬಲಶಾಲಿಯಾಗಿರಲಿ, ಅವನು ಶಾಸಕಾಂಗಕ್ಕೆ ಜವಾಬ್ದಾರನಾಗಿರುವ ವಿಷಯಗಳಲ್ಲಿ ತನ್ನ ಇಷ್ಟಕ್ಕನುಗುಣವಾಗಿ ಧೋರಣೆಗಳನ್ನು ಕಾರ್ಯಗತಗೊಳಿಸಲು ನಿರಾಕರಿಸುವ ಅವಿಧೇಯ ಅಧಿಕಾರಿಯ ವಿರುದ್ಧ ನಿಸ್ಸಹಾಯಕನನ್ನಾಗಿ ಮಾಡುತ್ತವೆ. ಒಬ್ಬ ಮಂತ್ರಿಗೆ ತನ್ನ ಕೈಕೆಳಗೆ ಕೆಲಸ ಮಾಡುವ ಅಧಿಕಾರಿಯನ್ನು ಅವನು ತಪ್ಪು ಮಾಡಿದಾಗ ಅವನನ್ನು ಪರಿಣಾಮಕಾರಿಯಾಗಿ ದಂಡಿಸುವ ಅಧಿಕಾರವಿರಬೇಕಾಗಿರುವುದು ಮಂತ್ರಿಮಂಡಳದ ಜವಾಬ್ದಾರಿ ತತ್ತ್ವದ ಒಂದು ಆವಶ್ಯಕತೆ. ತಾನು ಎಷ್ಟು ಜನ ಅಧಿಕಾರಿಗಳನ್ನು ಹೊಂದಿರಬೇಕು ಮತ್ತು ಅವರನ್ನು ಯಾವ ಹುದ್ದೆಗೆ ನೇಮಿಸಬೇಕೆಂದು ನಿರ್ಧರಿಸುವ ಅಧಿಕಾರವೂ ಮಂತ್ರಿಗೆ ಇರಬೇಕು. ಈಗಿರುವ ಅಧಿನಿಯಮಗಳು ಅವನಿಗೆ ಇಂತಹ ಯಾವುದೇ ಅಧಿಕಾರಗಳನ್ನು ನೀಡಿಲ್ಲ. ಈ ಅಸಂಗತ ಅಂಶವನ್ನು ಸುಧಾರಣೆಗಳನ್ನು ಜಾರಿಗೊಳಿಸಿದ ಕೂಡಲೆ ನೇಮಕವಾಗಿದ್ದ ಲೀ ಆಯೋಗವು (Lee Commission) ಗುರುತಿಸಿತು. ವರ್ಗಾಯಿಸಲಾದ ಇಲಾಖೆಗಳಲ್ಲಿ ಅಖಿಲ ಭಾರತ ಆಧಾರದ ಮೇಲೆ ಇನ್ನು ಮುಂದೆ ಯಾವುದೇ ನೇಮಕಗಳನ್ನು ಮಾಡಕೂಡದೆಂದು ಮತ್ತು ಅವುಗಳಿಗೆ ಅಗತ್ಯವಿರುವ ಸಿಬ್ಬಂದಿಯನ್ನು ಪ್ರಾಂತೀಯ ಸರಕಾರಗಳೇ ಆಯ್ಕೆ ಮಾಡಿ ನೇಮಕ ಮಾಡಬೇಕೆಂದು ಈ ಆಯೋಗ ಶಿಫಾರಸು ಮಾಡಿತು. ಈ ಶಿಫಾರಸ್ಸಿನ ಪರಿಣಾಮವಾಗಿ ಪ್ರಾಂತ್ಯಗಳಿಗೆ ಅಧಿಕಾರಿಗಳನ್ನು ಭರ್ತಿ ಮಾಡಲು ಆವಶ್ಯಕವಾದ ನಿಯಮ ಗಳನ್ನು ರಚಿಸಲು ಅಧಿಕಾರ ನೀಡಲಾಗಿದ್ದು, ಹೀಗೆ ನೇಮಕಗೊಂಡ ಅಧಿಕಾರಿಗಳು, ವರ್ಗಾಯಿಸಲಾದ ವಿಷಯಗಳ ಇಲಾಖೆಗಳಲ್ಲಿ ಈಗ ಕೆಲಸ ಮಾಡುತ್ತಿರುವ ಅಖಿಲ–ಭಾರತ ಸೇವಾ ವರ್ಗಗಳ ಅಧಿಕಾರಿಗಳು ತಮ್ಮ ಹುದ್ದೆಗಳನ್ನು ಖಾಲಿ ಮಾಡಿದಾಗ, ಅವರ ಸ್ಥಾನಗಳಲ್ಲಿ ನೇಮಕಗೊಳ್ಳುವರು. ನಾನು ಸೂಚಿಸಿರುವ ಸುಧಾರಣೆಯ ಪರಿಸ್ಥಿತಿಯ ಆವಶ್ಯಕತೆಯ ಒತ್ತಡದಲ್ಲಿ ಒಪ್ಪಿಕೊಳ್ಳಲೇಬೇಕಾದಂತಹ ತತ್ತ್ವದ ವಿಸ್ತರಣೆಯಾಗಿದೆ. ಈ ವಿಸ್ತರಣೆಯ ಕಾರ್ಯದಲ್ಲಿ ಈಗ ವಿಳಂಬವಾಗಬಾರದು. ಏಕೆಂದರೆ ಸಂಪೂರ್ಣ ಜವಾಬ್ದಾರಿ ಸರಕಾರ ವ್ಯವಸ್ಥೆಯಲ್ಲಿ ಆರಕ್ಷಿತ ಮತ್ತು ವರ್ಗಾಯಿಸಲಾದ ವಿಷಯಗಳ ಇಲಾಖೆಗಳ ನಡುವಣ ಈಗಿನ ವ್ಯತ್ಯಾಸ ಮಾಯವಾಗಿದೆ.

(೧೨೧) ಪ್ರತ್ಯೇಕ ಪ್ರಾಂತೀಯ ನಾಗರಿಕ ಸೇವಾ ವರ್ಗದ ಎರಡನೆಯ ಪ್ರಯೋಜನವೆಂದರೆ, ಅದು ಪ್ರಾಂತ್ಯಗಳಿಗೆ ಸೇರಿದ ಸೇವೆಗಳ ಮೂಲಬಲ ಅಥವಾ ವರ್ಗಗಳಲ್ಲಿ ಬದಲಾವಣೆ ಮಾಡುವ ಸ್ವಾತಂತ್ರ್ಯವನ್ನು ಪ್ರಾಂತೀಯ ಸರಕಾರಗಳಿಗೆ ನೀಡುತ್ತದೆ. ಅಖಿಲ–ಭಾರತ ವ್ಯವಸ್ಥೆಯ ದೋಷ ವೆಂದರೆ, ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳು ಹೊಂದಿರುವ ಅನೇಕ ಹುದ್ದೆಗಳು ಅನವಶ್ಯಕವೆನಿಸಿದರೆ, ಮತ್ತು ಅವುಗಳ ಕೆಲಸಗಳನ್ನು ಕಡಿಮೆ ವೇತನ ಪಡೆಯುತ್ತಿರುವ ಪ್ರಾಂತೀಯ ಸೇವಾ ವರ್ಗದ ಅಧಿಕಾರಿಗಳು ದಕ್ಷತೆಯಿಂದ ನಿರ್ವಹಿಸಬಹುದೆಂದು ಮಂತ್ರಿಗೆ ಮನದಟ್ಟಾದಾಗ ಅಂತಹ ಹುದ್ದೆಗಳನ್ನು ರದ್ದುಪಡಿಸುವ ಅಥವಾ ಪ್ರಾಂತ್ಯ ಸೇವಾ ವರ್ಗದ ಅಧಿಕಾರಿಗಳಿಗೆ ವರ್ಗಾಯಿಸುವ ಅಧಿಕಾರ ಅವನಿಗಿರುವುದಿಲ್ಲ. ಏಕೆಂದರೆ, ಕಾಯ್ದೆಯಲ್ಲಿ ಅವನಿಗೆ ಅಂತಹ ಅಧಿಕಾರ ನೀಡಲಾಗಿಲ್ಲ. ಅಂತಹ ಸಂದರ್ಭಗಳಲ್ಲಿ ಅವನು ಅಂತಹ ಹುದ್ದೆಗಳನ್ನು ತಡೆಹಿಡಿಯಬಹುದು ಅಥವಾ ಪ್ರಾಂತ್ಯ ಸೇವಾವರ್ಗಕ್ಕೆ ಸೇರಿದ ಅಧಿಕಾರಿಯನ್ನು ಸುದೀರ್ಘ ಅವಧಿಯಲ್ಲಿ ಕಾರ್ಯ ನಿರ್ವಹಿಸುವಂತೆ ಮಾತ್ರ ಮಾಡಬಹುದಾಗಿದೆ. ಆದರೆ ಈ ವಿಷಯದಲ್ಲಿಯೂ ಅವನ ಅಧಿಕಾರ ಸೀಮಿತವಾಗಿದೆ. ಕಾರಣ ನಿಯಮಗಳ ಪ್ರಕಾರ ಅವನು ಸೆಕ್ರೆಟರಿ ಆಫ್ ಸ್ಟೇಟ್‌ರವರ ಮಂಜೂರಾತಿ ಇಲ್ಲದೇ ನಿಗದಿತ ತಿಂಗಳುಗಳಿಗಿಂತ ಹೆಚ್ಚು

ಕಾಲ ಹೀಗೆ ಮಾಡುವಂತಿಲ್ಲ. ಇದು ಅಖಿಲ–ಭಾರತ ಸೇವಾ ವರ್ಗಗಳ ರಚನೆಯಿಂದ ಉದ್ಭವಿಸುವ ಗಂಭೀರ ಸ್ವರೂಪದ ಪರಿಮಿತಿಯಾಗಿದೆ. ಇದರಿಂದಾಗಿ ಸುಧಾರಿತ (ಪುನಾರಚಿತ) ಪರಿಷತ್ತು (Reformed Council) ತನ್ನ ತನ್ನ ಸ್ಥಾಪನೆಯಾದಾಗಿನಿಂದಲೂ ಒತ್ತಾಯಪಡಿಸುತ್ತಿರುವ ಉಳಿತಾಯ ಸಾಧನೆಯ ಉದ್ದೇಶ ವಿಫಲಗೊಳ್ಳುತ್ತದೆ.

(೧೨೨) ಸ್ವತಂತ್ರ ಪ್ರಾಂತೀಯ ನಾಗರಿಕ ಸೇವೆಗಳ ವ್ಯವಸ್ಥೆಯ ಪ್ರಯೋಜನಗಳು ಇವಷ್ಟೇ ಅಲ್ಲ, ಸೇವೆಗಳ ಅಖಿಲ–ಭಾರತ ಸ್ವರೂಪದಿಂದ ಪ್ರಾಂತ್ಯಗಳಲ್ಲಿ ಸಂಬಳ, ರಜೆ, ಸೌಲಭ್ಯ ಬಡತಿ ಮತ್ತು ನಿವೃತ್ತಿ ವೇತನಗಳಿಗೆ ಸಂಬಂಧಿಸಿದಂತೆ ನೇಮಕಗಳ ನಿಯಮಗಳಲ್ಲಿ ಏಕರೂಪತೆಯನ್ನು ಹೇರುತ್ತದೆ. ಅಂತಹ ಏಕರೂಪತೆ ತುಲನಾತ್ಮಕವಾಗಿ ಬಡ ಪ್ರಾಂತ್ಯಗಳ ಸಂಪನ್ಮೂಲಗಳ ಮೇಲೆ ಹೆಚ್ಚಿನ ಹೊರೆಯಾಗಬಹುದೆಂಬುದು ನನ್ನ ವಾದ. ಅವು ಯುಕ್ತ ರೀತಿಯಲ್ಲಿ ಕೊಡಬಹುದಾದುದಕ್ಕಿಂತಲೂ ಹೆಚ್ಚಿನ ವೇತನ ಕೊಡಬೇಕಾಗುತ್ತದೆ. ಜೀವನ ಮಟ್ಟದಲ್ಲಿ ಸಮಾನತೆಯನ್ನುಂಟುಮಾಡುವ ದೃಷ್ಟಿಯಿಂದ ಎಲ್ಲಾ ಪ್ರಾಂತ್ಯಗಳಲ್ಲಿ ಏಕರೂಪ ವೇತನ ಶ್ರೇಣಿಯನ್ನು ಕೊಡುವುದು ಅವಶ್ಯವೆಂದು ಹೇಳಲಾಗದು. ಸ್ಥಳೀಯ ಪರಿಸ್ಥಿತಿಗಳಿಂದಾಗಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ ವಿಭಿನ್ನ ವೇತನದಲ್ಲಿ ಒಂದೇ ರೀತಿಯ ಜೀವನ ಸವಲತ್ತುಗಳನ್ನು ಹೊಂದಬಹುದೆಂಬುದು ಚೆನ್ನಾಗಿ ತಿಳಿದಿರುವ ವಿಷಯ. ಹೀಗಿರುವಾಗ, ಏಕರೂಪ ವೇತನವು ಹೊರೆ ಅಥವಾ ಅನ್ಯಾಯಯುತವೆನಿಸುವಾಗ ಅದನ್ನು ಜಾರಿಗೊಳಿಸುವ ಕಾರಣವೇ ಇಲ್ಲ.

(೧೨೩) ಸೇವಾನಿಯಮಗಳಲ್ಲಿ ಏಕರೂಪತೆಯ ಅವಶ್ಯಕತೆ ನಾಗರಿಕ ಸೇವೆಗಳ ಅಖಿಲ–ಭಾರತ ಸ್ವರೂಪದ ನೇರ ಪರಿಣಾಮವಾಗಿದೆ. ಮತ್ತು ಸೇವೆಗಳ ಈ ಅಖಿಲ ಭಾರತ ಸ್ವರೂಪವನ್ನು ಕಳೆದುಕೊಳ್ಳುವವರೆಗೆ ಇದು ನಿವಾರಣೆಯಾಗದು. ಸ್ವತಂತ್ರ ಪ್ರಾಂತೀಯ ನಾಗರಿಕ ವರ್ಗದ ರಚನೆಯ ಮೂಲಕ ಈ ಉದ್ದೇಶವನ್ನು ಸಾಧಿಸಬಹುದು. ಇದರಿಂದ ಆಡಳಿತ ವೆಚ್ಚ ಕಡಿಮೆಯಾಗುವುದಲ್ಲದೆ ಪ್ರಾಂತಗಳಿಗೆ ತಮ್ಮ ಸ್ವಂತ ವ್ಯವಹಾರಗಳನ್ನು ತಮ್ಮದೇ ಆದ ರೀತಿಯಲ್ಲಿ ನಡೆಸಿಕೊಂಡು ಹೋಗುವ ಸಂಪೂರ್ಣ ಸ್ವಾತಂತ್ರ್ಯ ನೀಡುವುದರಿಂದ ಇದು ಸ್ವಾಗತಾರ್ಹ. ಆದರೆ, ಸಾರ್ವಜನಿಕ ಸೇವೆಗಳಿಗೆ ನೇಮಕಗಳ ವಿಷಯದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಪ್ರಾಂತ್ಯ ಸರಕಾರಗಳ ಸ್ಥಾನಮಾನದಲ್ಲಿ ಆಮೂಲಾಗ್ರ ಬದಲಾವಣೆ ಮಾಡಬೇಕಾಗುತ್ತದೆ. ಸೆಕ್ರೆಟರಿ ಆಫ್ ಸ್ಟೇಟ್‌ರವರು ಸಾಮಾನ್ಯವಾಗಿ ಎಲ್ಲಾ ಉದ್ಯೋಗಗಳಿಗೆ ನೇಮಕ ಮಾಡುವ ಬದಲು ಮತ್ತು ಪ್ರಾಂತ್ಯ ಸರಕಾರಗಳು ತಮ್ಮ ಪ್ರಾಂತ್ಯಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ನೇಮಕ ಮಾಡುವಂತೆ ಅವರನ್ನು ಕೋರುವ ಬದಲು, ಸೆಕ್ರೆಟರಿ ಆಫ್ ಸ್ಟೇಟ್‌ರವರು ಇಂಗ್ಲೆಂಡಿನಲ್ಲಿ ನೇಮಕ ಮಾಡುವುದು ಅವಶ್ಯವೆನಿಸುವ ಸಂದರ್ಭಗಳಲ್ಲಿ ತಾನು ನಿರೂಪಿಸಿದ ಶರತ್ತುಗಳಂತೆ ನೇಮಕ ಮಾಡದೆ ಸಂಬಂಧಪಟ್ಟ ಪ್ರಾಂತ್ಯಗಳು ಗೊತ್ತುಪಡಿಸಲಾದ ಶರತ್ತುಗಳ ಪ್ರಕಾರ ನೇಮಕ ಮಾಡುವ ಆಯಾ ಪ್ರಾಂತ್ಯದ ನಿಯೋಗದಂತೆ ಮಾತ್ರ ವರ್ತಿಸಬೇಕಾಗುವುದು. ಪ್ರಾಂತ್ಯಗಳು ಇನ್ನು ಮುಂದೆ ಸೆಕ್ರೆಟರಿ ಆಫ್ ಸ್ಟೇಟ್‌ರವರಿಂದ ಎರವಲು ಕೊಡಲ್ಪಟ್ಟ ಅಥವಾ ಕಳುಹಿಸಿಕೊಡಲಾದವರನ್ನು ಸೇವೆಗೆ ತೆಗೆದುಕೊಳ್ಳುವ ಪದ್ಧತಿಯನ್ನು ಕೈಬಿಡಬೇಕು. ಎಲ್ಲಿಯವರೆಗೆ ಇಂತಹ ಪದ್ಧತಿ ಮುಂದುವರಿಯುವುದೋ ಅಲ್ಲಿಯವರೆಗೆ ಸೆಕ್ರೆಟರಿ ಆಫ್ ಸ್ಟೇಟ್‌ರವರು ತಾವು ಈಗ ಭಾರತ ಸರಕಾರ ಕಾಯ್ದೆಯ ೯೬ (ಬಿ) ವಿಭಾಗದನ್ವಯ ಹೊಂದಿರುವ ಅಧಿಕಾರಗಳನ್ನು ಚಲಾಯಿಸಿಯೇ ತೀರುತ್ತಾರೆ. ಸೆಕ್ರೆಟರಿ ಆಫ್ ಸ್ಟೇಟ್‌ರವರು ನಾಗರಿಕ ಸೇವಾವರ್ಗಗಳ ಮೇಲೆ ತಮ್ಮ ಕೈಯಲ್ಲಿ ಇಟ್ಟುಕೊಂಡಿರುವ ಈ ಅಧಿಕಾರಗಳಿಂದ ಜವಾಬ್ದಾರಿ ಸರಕಾರ ಅಸಾಧ್ಯವಾಗುವುದೆಂಬುದರ ಬಗ್ಗೆ ಮಂತ್ರಿಗಳು ಬಹಳಷ್ಟು ಹೇಳುತ್ತಿದ್ದಾರೆ. ಈ ಟೀಕೆ

ಸಂಪೂರ್ಣವಾಗಿ ಸಮಂಜಸವಾಗಿದೆ. ಆದರೆ, ಈ ಟೀಕೆಯನ್ನು ಪದೇ ಪದೇ ಮಾಡುತ್ತಿರುವ ಸೆಕ್ರೆಟರಿ ಆಫ್ ಸ್ಟೇಟ್‌ರವರು ನೇಮಕಾಧಿಕಾರಿಯಾಗಿ ಕಾರ್ಯ ನಿರ್ವಹಿಸುವುದನ್ನು ತಪ್ಪಿಸುವವರೆಗೂ ಈ ಅಧಿಕಾರಗಳನ್ನು ತೆಗೆದುಕೊಳ್ಳಲು ಬರುವುದಿಲ್ಲ ಎಂಬ ಅಂಶವನ್ನು ಅರಿತಂತೆ ತೋರುವುದಿಲ್ಲ.

(೧೨೪) ಸೇವಾವರ್ಗಗಳನ್ನು ಪ್ರತ್ಯೇಕಿಸುವ ಈ ಸುಧಾರಣೆಯನ್ನು ಕಾರ್ಯಗತಗೊಳಿಸಿದರೆ, ನಾನು ಈ ಕೆಳಕಂಡ ಪ್ರಾಂತೀಯ ಸೇವೆಗಳ ವರ್ಗೀಕರಣವನ್ನು ಸೂಚಿಸುತ್ತೇನೆ:–

ಪ್ರಾಂತೀಯ ನಾಗರಿಕ ಸೇವೆ

- ಅತ್ಯುನ್ನತ ಸೇವೆ
- ತದನಂತರದ ಕೆಳ ಶ್ರೇಣಿ
- ಗುಮಾಸ್ತ ಸೇವಾಶ್ರೇಣಿ
- ಜವಾನ ಸೇವಾ ಶ್ರೇಣಿ
- ಪ್ರಸಕ್ತ ಇರುವ ಪ್ರಭುತ್ವ ಸೇವೆ ಮತ್ತು ಭಾರತೀಯ ನಾಗರಿಕ ಸೇವೆಗಳಿಗೆ ಸಮನಾದ ಪ್ರಥಮ ದರ್ಜೆ
- ಪ್ರಸಕ್ತ ಇರುವ ಪ್ರಾಂತೀಯ ಸೇವೆಗಳಿಗೆ ಸಮನಾದ ದ್ವಿತೀಯ ದರ್ಜೆ

**(೧೨೫) ಪ್ರಾಂತೀಯ ಸಿವಿಲ್ ಸೇವೆಗಳಿಗೆ ಭರ್ತಿ ಮಾಡುವ ಸಂಸ್ಥೆ:**

ಪ್ರಾಂತೀಯ ಸಿವಿಲ್ ಸೇವೆಗಳಿಗೆ ಸೆಕ್ರೆಟರಿ ಆಫ್ ಸ್ಟೇಟ್‌ರವರು ನೇಮಕ ಮಾಡುವ ಕೆಲಸವನ್ನು ಬಿಟ್ಟುಕೊಟ್ಟ ನಂತರ ಆ ಕಾರ್ಯವನ್ನು ಯಾವ ಸಂಸ್ಥೆ ಅಥವಾ ಅಧಿಕಾರಿಗೆ ವಹಿಸಿಕೊಡಬೇಕೆಂಬುದು ಮುಂದಿನ ಪ್ರಶ್ನೆ. ಸಿವಿಲ್ ಸೇವೆಗಳನ್ನು ರಾಜಕೀಯ ಪ್ರಭಾವ ಮತ್ತು ಅವ್ಯವಹಾರಗಳಿಂದ ಮುಕ್ತಗೊಳಿಸಬೇಕಾದರೆ, ಅದಕ್ಕೆ ಭರ್ತಿ ಮಾಡುವ ಪ್ರಾಧಿಕಾರ ಸಂಸ್ಥೆ ಮಂತ್ರಿಗಳಿಂದ ಸ್ವತಂತ್ರವಾಗಿರಬೇಕೆಂಬ ವಾದವನ್ನು ನಾನು ಒಪ್ಪುತ್ತೇನೆ. ಆದರೆ, ಈ ಕೆಲಸವನ್ನು ನಿರ್ವಹಿಸಲು ಪ್ರಾಂತೀಯ ಲೋಕಸೇವಾ ಆಯೋಗವನ್ನು ಸ್ಥಾಪಿಸಬೇಕೆಂದು ಹೇಳಲು ನಾನು ಸಿದ್ಧನಿಲ್ಲ. ಆರ್ಥಿಕ ಕಾರಣಗಳಿಂದಲೇ ಈ ಸೂಚನೆ ಬೃಹತ್ತಾಗಿ ತೋರುವುದು. ಪ್ರತಿಯೊಂದು ಪ್ರಾಂತ್ಯದಲ್ಲಿ ಸೇವೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸುವ ವಿಶೇಷ ಜವಾಬ್ದಾರಿಯುಳ್ಳ ಒಬ್ಬ ಪೂರ್ಣಾವಧಿ ಅಧಿಕಾರಿ ಇರಬೇಕೆಂಬ ಸಲಹೆಯನ್ನು ನಾನು ಅನುಮೋದಿಸುತ್ತೇನೆ. ಆತನು ಲೋಕ ಸೇವಾ ಆಯೋಗ ಮತ್ತು ಸ್ಥಳೀಯ ಸರಕಾರದ ನಡುವೆ ಸಂಪರ್ಕ ಅಧಿಕಾರಿಯಾಗಿ ಕೆಲಸ ಮಾಡಬೇಕು.

## II. ಸೇವೆಗಳ ಭಾರತೀಕರಣ

**(೧೨೬) (j) ಭಾರತೀಯರ ನೇಮಕ (ಭರ್ತಿ)**

ಭಾರತೀಕರಣದ ವಾದವನ್ನು ೧೯೧೫ರಲ್ಲಿ ಐಲಿಂಗಟನ್ ಆಯೋಗವು (Islington Commission) ಅಂಗೀಕರಿಸಿತ್ತು. ಸುಧಾರಣೆಗಳ ಯಶಸ್ಸಿಗೆ ಇರುವ ಅದರ ಸಂಬಂಧವನ್ನು ಸಂಯುಕ್ತ ವರದಿಯ (Joint Report) ಕರ್ತೃಗಳು ಒತ್ತಿ ಹೇಳಿದ್ದರು ಮತ್ತು ಲೀ ಆಯೋಗವು (Lee Commission) ವಿವಿಧ ಸೇವೆಗಳಲ್ಲಿ ಭಾರತೀಯರ ಮತ್ತು ಐರೋಪ್ಯರ ಪ್ರಮಾಣವನ್ನು ನಿರ್ಣಯಿಸುವುದರ ಮೂಲಕ ಅದನ್ನು ಕಾರ್ಯಗತಗೊಳಿಸಿದ್ದಿತು. ಆದ್ದರಿಂದ ಭಾರತೀಕರಣದ ವಾದವನ್ನು ಹೊಸದಾಗಿ ಪುಷ್ಟೀಕರಿಸುವ ಆವಶ್ಯಕತೆ ಇಲ್ಲ. ಐಲಿಂಗಟನ್ ಆಯೋಗದ ನೇಮಕ ಮತ್ತು ಲೀ ಆಯೋಗದ ನೇಮಕದ ಮಧ್ಯಂತರ ಸಮಯದಲ್ಲಿ ಈ ಪ್ರಶ್ನೆಯ ಮೇಲಣ ದೃಷ್ಟಿಕೋನದಲ್ಲಿ ಸಂಪೂರ್ಣ ಬದಲಾವಣೆಯಾಗಿದೆ ಎಂಬುದನ್ನು ಮಾತ್ರ ಈಗ ಹೇಳಬೇಕಾಗಿದೆ. ಐಲಿಂಗಟನ್ ಆಯೋಗದ ದಿನಗಳಲ್ಲಿ ಇದ್ದ ಪ್ರಶ್ನೆ "ಎಷ್ಟು ಭಾರತೀಯರನ್ನು ಸೇವೆಗಳಿಗೆ ಭರ್ತಿ ಮಾಡಿಕೊಳ್ಳಬೇಕು?" ಎಂಬುದಾಗಿದೆ. ಲೀ ಆಯೋಗದ ಕಾಲದಲ್ಲಿ ಅದು "ಈಗಲೂ ನೇಮಕ ಮಾಡಬೇಕಾದ ಆಂಗ್ಲರ ಕನಿಷ್ಠ ಸಂಖ್ಯೆ ಎಷ್ಟಿರಬೇಕು" ಎಂದಾಗಿತ್ತು. ಲೀ ಆಯೋಗವು ಈ ಬದಲಾದ ಅಥವಾ ಹೊಸ ದೃಷ್ಟಿಕೋನವನ್ನು ಸಂಪೂರ್ಣವಾಗಿ ಮನ್ನಿಸಿರುವುದು ಸಂತೋಷದ ಸಂಗತಿ. ಭಾರತೀಕರಣದ ವೇಗವನ್ನು ಹೆಚ್ಚಿಸಲು ಈಗ ನಿರ್ಣಯಿಸಬೇಕಾಗಿರುವ ಅಂಶವೆಂದರೆ ಲೀ ಆಯೋಗವು ಭಾರತೀಯರು ಮತ್ತು ಐರೋಪ್ಯರ ಪ್ರಮಾಣವನ್ನು ನಿರ್ಧರಿಸುವುದಕ್ಕಾಗಿ ಅನುಸರಿಸಿದ ತತ್ವಗಳಲ್ಲಿ ಮಾಡಬೇಕಾದ ಬದಲಾವಣೆಗಳು ಈ ಪ್ರಮಾಣವನ್ನು ನಿರ್ಧರಿಸುವಾಗ ಆಯಾ ಇಲಾಖೆಯ ಅಗತ್ಯತೆಗಳು ಮತ್ತು ಅವುಗಳನ್ನು ನಡೆಸಿಕೊಂಡು ಹೋಗಲು ಅರ್ಹತೆ ಹೊಂದಿದ ಭಾರತೀಯರ ಸಾಮರ್ಥ್ಯ ಇವುಗಳನ್ನು ಪರಿಗಣಿಸಬೇಕೆಂಬುದು ನನ್ನ ಅಭಿಪ್ರಾಯ. ಈ ಆಧಾರಗಳನ್ನನುಸರಿಸಿದ್ದೇ ಆದರೆ ಕಾನೂನು ಮತ್ತು ಸುವ್ಯವಸ್ಥೆ, ಅರಣ್ಯ ಮತ್ತು ಇತರ ತಾಂತ್ರಿಕ ಇಲಾಖೆಗಳನ್ನು ಹೊರತುಪಡಿಸಿ ಇತರ ಎಲ್ಲಾ ಇಲಾಖೆಗಳಲ್ಲಿ ಲೀ ಆಯೋಗವು ನಿರ್ಣಯಿಸಿದ್ದ ಪ್ರಮಾಣವನ್ನು, ಭಾರತೀಯರ ಪರವಾಗಿ ಮಾರ್ಪಡಿಸಬೇಕಾಗುತ್ತವೆ.

(೧೨೭) (ii) ಭಾರತೀಯರ ವೇತನಗಳು:

ನಾನು ಭಾರತೀಕರಣವನ್ನು, ಅದರ ಅರ್ಹತೆ ಅಥವಾ ಯೋಗ್ಯತೆಯ ಕಾರಣಕ್ಕಾಗಿ ಮಾತ್ರವಲ್ಲ. ಆದರೆ, ಅದು ಪ್ರಾಂತ್ಯಗಳ ಆರ್ಥಿಕ ಪರಿಸ್ಥಿತಿಯ ಮೇಲೆ ಉಂಟುಮಾಡಬಹುದಾದ ಪರಿಣಾಮಗಳ ಕಾರಣದಿಂದಲೂ ಒತ್ತಾಯಿಸುತ್ತಿದ್ದೇನೆ. ಏಕೆಂದರೆ, ಭಾರತೀಕರಣದಿಂದ ಆಡಳಿತದಲ್ಲಿ ಉಳಿತಾಯ ಸಾಧಿಸಬಹುದು. ಅಖಿಲ–ಭಾರತ ಸೇವಾ ವರ್ಗಕ್ಕೆ ಸೇರಿದ ಮಾತ್ರಕ್ಕೆ ಭಾರತೀಯರಿಗೂ ಮತ್ತು ಐರೋಪ್ಯರಿಗೂ ಸಮಾನ ವೇತನ ಕೊಡಬೇಕಾಗುವುದೆಂಬ ವಾದ ನನಗೆ ಅರ್ಥವಾಗುತ್ತಿಲ್ಲ. ಈ ಪ್ರಶ್ನೆಯನ್ನು ಯೋಗ್ಯತೆ ಅಥವಾ ಪ್ರತಿಭೆಯ ದೃಷ್ಟಿಯಿಂದ ನೋಡಿದಾಗ ಸಾರ್ವಜನಿಕ ಸಿಬ್ಬಂದಿಯ ಈ ಎರಡೂ ವರ್ಗಗಳವರಿಗೆ ಸಮಾನ ಸಂಭಾವನೆ ಕೊಡುವ ಪರವಾಗಿ ನ್ಯಾಯಯುತ ಸಮರ್ಥನೆ ನನಗೆ ಮನವರಿಕೆಯಾಗಿಲ್ಲ. ಒಂದು ವರ್ಗದಲ್ಲಿ ತಮ್ಮ ತಾಯ್ನಾಡಿನಿಂದ ಹೊರಬಂದು, ಸಾವಿರಾರು ಮೈಲು ದೂರವಿರುವ ಮತ್ತು ತಮ್ಮ ಮಕ್ಕಳಿಗೆ ಸರಿಯಾಗಿ ಶಿಕ್ಷಣ ಕೊಡುವಂತಹ ಅಥವಾ ತಮ್ಮ ಆರೋಗ್ಯವನ್ನು ಸರಿಯಾಗಿ ನೋಡಿಕೊಳ್ಳುವ ಭರವಸೆ ಇಲ್ಲದ ಸಾರ್ವಜನಿಕ ಸಿಬ್ಬಂದಿಯವರಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ

ಅವರು ಎರಡು ದೇಶಗಳಲ್ಲಿ ತಮ್ಮ ಸಂಸಾರವನ್ನಿಟ್ಟುಕೊಂಡು ಉನ್ನತ ಜೀವನ ಮಟ್ಟವನ್ನು ಕಾಯ್ದುಕೊಂಡು ಹೋಗುವ ಒತ್ತಡಕ್ಕೊಳಪಟ್ಟಿದ್ದಾರೆ. ಆದರೆ ಇಂತಹ ಯಾವುದೇ ಪರಿಸ್ಥಿತಿಗೊಳಗಾಗದ ಭಾರತೀಯ ಸಿಬ್ಬಂದಿ ವರ್ಗ ಇನ್ನೊಂದಿದೆ. ಅವರು ತಮ್ಮ ಐರೋಪ್ಯ ಸಹೋದ್ಯೋಗಿಗಳ ಪರಿಸ್ಥಿತಿಗೆ ವಿರುದ್ಧವಾಗಿ ತಾವು ವಾಸವಾಗಿರುವ ದೇಶದಲ್ಲಿಯೇ ಕೆಲಸ ಮಾಡುತ್ತಿದ್ದು, ಬೇರೆ ಬೇರೆ ಕಡೆ ಎರಡು ಸಂಸಾರಗಳನ್ನು ಹೊಂದಿರುವ ಅವಶ್ಯಕತೆಯಿಲ್ಲದೆ, ಅಥವಾ ಹವಾಮಾನದ ಕಾರಣ ಅನಾರೋಗ್ಯಕ್ಕೆಡೆಯಾಗದೆ ಮತ್ತು ತುಲನಾತ್ಮಕವಾಗಿ ಕಡಿಮೆ ಜೀವನ ಮಟ್ಟ ಹೊಂದಿದವರಾಗಿದ್ದಾರೆ. ತಮ್ಮ ಐರೋಪ್ಯ ಸಹೋದ್ಯೋಗಿಗಳೊಂದಿಗೆ ಹೋಲಿಸಿದಾಗ ಇವರ ಆರ್ಥಿಕ ಹೊರೆ ಕಡಿಮೆ ಪ್ರಮಾಣದ್ದಾಗಿದೆ. ಈ ವ್ಯತ್ಯಾಸಗಳ ಕಾರಣ ಮತ್ತು ತಮ್ಮ ಕರ್ತವ್ಯಗಳ ನಿರ್ವಹಣೆಯಲ್ಲಿ ಅವರಿಗಿರುವ ವೈಯಕ್ತಿಕ ಅನಾನುಕೂಲ ಮತ್ತು ತ್ಯಾಗಗಳನ್ನು ಗಣನೆಗೆ ತೆಗೆದುಕೊಂಡರೆ ಈ ಎರಡೂ ವರ್ಗಗಳಿಗೆ ಸಮಾನವಾದ ವೇತನಕೊಡುವುದನ್ನು ಯಾವುದೇ ರೀತಿಯಲ್ಲಿ ಸಮರ್ಥಿಸಿಕೊಳ್ಳಲು ಆಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಒಟ್ಟಾರೆಯಲ್ಲಿ ಭಾರತದ ಸಾರ್ವಜನಿಕ ಸಿಬ್ಬಂದಿಯಲ್ಲಿರುವ ಎರಡು ವರ್ಗಗಳನ್ನು ಹೋಲಿಸಿ ನೋಡಿದಾಗ ಒಂದು ಮಾತಂತೂ ನಿಜ. ಅದೇನೆಂದರೆ ಐರೋಪ್ಯ ಅಧಿಕಾರಿಗಳಿಗೆ ಸಧ್ಯ ನೀಡುತ್ತಿರುವ ವೇತನ ಹೆಚ್ಚು ಎಂಬ ಅಂಶ ನಿಸ್ಸಂದೇಹ. ಅಂತೆಯೇ ಭಾರತೀಯ ಅಧಿಕಾರಿಗಳಿಗೆ ನೀಡುತ್ತಿರುವ ವೇತನ ಹೆಚ್ಚಲ್ಲ ಎಂದು ವಾದಿಸುವುದಾದರೆ ಐರೋಪ್ಯ ಅಧಿಕಾರಿಗಳಿಗೆ ಕೊಡುತ್ತಿರುವ ವೇತನ ಕಡಿಮೆಯದಾಗಿದೆ ಎಂದು ಅರ್ಥವಾಗುವುದು. ಯಾವುದೇ ದೃಷ್ಟಿಯಿಂದಲೂ ಭಾರತೀಯರಿಗೆ ಮತ್ತು ಐರೋಪ್ಯರಿಗೆ ಈಗ ನೀಡುತ್ತಿರುವ ಸಮಾನ ವೇತನದ ನೀತಿ ಅತ್ಯಂತ ಅಸಮರ್ಪಕ ಪರಿಸ್ಥಿತಿಗೆಡೆಮಾಡುತ್ತದೆ. ವಾಸ್ತವಿಕವಾದ ಸಮಾನ ವೇತನ ಪದ್ಧತಿಯಂತೆ ಐರೋಪ್ಯರಿಗೆ ನೀಡುತ್ತಿರುವ ವೇತನ ಸಾಕಷ್ಟಿದೆಯೋ ಇಲ್ಲವೋ, ಆದರೆ ಭಾರತೀಯರಿಗೆ ಕೊಡುವ ವೇತನ ಹೆಚ್ಚು ಎಂದು ಹೇಳಲು ನಾನು ಹಿಂಜರಿಯುವುದಿಲ್ಲ. ನನ್ನ ಅಭಿಪ್ರಾಯ ಹೀಗಿರುವಾಗ, ಭಾರತೀಯ ಸಾರ್ವಜನಿಕ ಸಿಬ್ಬಂದಿಯವರಿಗೆ ಕಡಿಮೆ ವೇತನ ಶ್ರೇಣಿಯನ್ನು ನಿಗದಿ ಮಾಡಲು ನಾನು ಕಾತರನಾಗಿದ್ದೇನೆ. ವಿವಿಧ ಪ್ರಾಂತ್ಯ ಸರಕಾರಗಳ ಆರ್ಥಿಕ ಸ್ಥಿತಿಯನ್ನು ಮತ್ತು ಸಾರ್ವಜನಿಕ ಸಿಬ್ಬಂದಿಗೆ ಕೊಡಬೇಕಾದ ಸಂಬಳ ಸಾರಿಗೆಗಳ ಕಾರಣ ಅವುಗಳು ಎದುರಿಸುತ್ತಿರುವ ಪೇಚಾಟದ ಗಂಭೀರ ಪರಿಸ್ಥಿತಿಯನ್ನು ಅವಲೋಕಿಸುವ ಯಾವ ಭಾರತೀಯನಿಗಾದರೂ ಇದು ಅರ್ಥವಾಗದೇ ಇರದು. ಅಸಮಾನ ವೇತನದ ತತ್ವವನ್ನು ವಿರೋಧಿಸುವ ಕೆಲವು ಭಾರತೀಯರಿದ್ದಾರೆಂಬುದು ನನಗೆ ಗೊತ್ತು. ಈ ವಿರೋಧ ಹೆಚ್ಚಾಗಿ ಯಾವ ವರ್ಗಗಳಿಂದ ಸಾರ್ವಜನಿಕ ಸೇವೆಗಳಿಗೆ ಭರ್ತಿ ಹೊಂದುತ್ತಿರುವರೋ ಅಂತಹ ವರ್ಗಗಳಿಂದ ವ್ಯಕ್ತವಾಗುತ್ತಿರುವುದನ್ನು ಗಮನಿಸಬೇಕು. ಅವರ ವಾದ ಹುರುಳಿಲ್ಲದ್ದಾಗಿದ್ದು ತಿರಸ್ಕರಿಸಲು ಯೋಗ್ಯವಾಗಿದೆ. ಅದರಲ್ಲಿ ಯಾವ ಹುರುಳೂ ಇಲ್ಲ, ಏಕೆಂದರೆ ಅಂತಸ್ತಿನ ಅಸಮಾನತೆ ಅವಶ್ಯವಾಗಿ ಅಸಮಾನ ವೇತನದ ಪರಿಣಾಮವಾಗಿರಬೇಕಾಗಿಲ್ಲ. ಆ ವಾದ ಸ್ವಾರ್ಥಪರವಾಗಿರುವುದರಿಂದ ತಿರಸ್ಕಾರಾರ್ಹವಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ಅದು ಬೃಹತ್ಪ್ರಮಾಣದ ಉಳಿತಾಯದ ಅವಕಾಶಕ್ಕೆ ನೀಡಲಿರುವ ಮುಖ್ಯ ಕಾರಣಕ್ಕಾಗಿ ನಾನು ಹೆಚ್ಚಿನ ಪ್ರಮಾಣದಲ್ಲಿ ಸೇವೆಗಳ ಭಾರತೀಕರಣದ ಪರವಾಗಿದ್ದೇನೆ.

(೧೨೮) (ii) ಭಾರತೀಕರಣ ಮತ್ತು ಹಿಂದುಳಿದ ವರ್ಗಗಳ ಬೇಡಿಕೆಗಳು:

ಭಾರತೀಯರಿಗಾಗಿ ಮುಕ್ತಗೊಳಿಸಲಾದ ಸಾರ್ವಜನಿಕ ಸೇವೆಗಳು ವಿವಿಧ ಸಂದರ್ಭಗಳಿಗಾಗಿ ಕೇವಲ ಬ್ರಾಹ್ಮಣರ ಮತ್ತು ತತ್ಸಂಬಂಧ ಇತರ ಜಾತಿಗಳ ಸ್ವತ್ತಾಗಿರುವುದು ಎಲ್ಲರಿಗೂ ಸಾಕಷ್ಟು ತಿಳಿದಿರುವ

ವಿಷಯ. ಬ್ರಾಹ್ಮಣೇತರರು, ನಿಮ್ನ ವರ್ಗಗಳು ಮತ್ತು ಮಹಮದೀಯರು ಈ ಸೇವೆಗಳಿಂದ ಸಂಪೂರ್ಣ ವರ್ಜಿತರಾಗಿದ್ದಾರೆ. ಸಾರ್ವಜನಿಕ ಸೇವೆಗಳಲ್ಲಿ ತಮಗೆ ನ್ಯಾಯವಾಗಿ ದೊರಕಬೇಕಾದ ಪಾಲನ್ನು ಪಡೆದು ಕೊಳ್ಳಲು ಅವರು ತೀವ್ರ ಚಳುವಳಿ ನಡೆಸಿದ್ದಾರೆ. ಈ ಉದ್ದೇಶದಿಂದ ಅವರು ಮುಕ್ತ ಸ್ಪರ್ಧೆಯ ಮೂಲಕ ನೇಮಕದ ಬದಲು ಆಯ್ಕೆ ಪದ್ಧತಿಯನ್ನು ಅಪೇಕ್ಷಿಸುತ್ತಾರೆ. ಇದನ್ನು ಬ್ರಾಹ್ಮಣರು ಮತ್ತು ತತ್ಸಂಬಂಧದ ಜಾತಿಗಳವರು ದೇಶದ ಹಿತದಲ್ಲಿ ಸಾರ್ವಜನಿಕ ಸ್ಥಾನಗಳಿಗೆ ನೇಮಕ ಮಾಡುವಾಗ ದಕ್ಷತೆಯೇ ಏಕೈಕ ಆಧಾರವಾಗಿರಬೇಕೆಂದು ಮತ್ತು ಜಾತಿ, ಮತ ಮುಂತಾದ ಅಂಶಗಳನ್ನು ಪರಿಗಣಿಸಬಾರದೆಂದು ಬಲವಾಗಿ ವಿರೋಧಿಸುತ್ತಿದ್ದಾರೆ. ಶೈಕ್ಷಣಿಕ ಯೋಗ್ಯತೆ ಅಥವಾ ಅರ್ಹತೆಯ ಆಧಾರದ ಮೇಲೆಯೇ ದಕ್ಷತೆಯನ್ನು ಅಳೆಯಬಹುದಾದುದರಿಂದ ಸಾರ್ವಜನಿಕ ಸೇವೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮುಖಾಂತರವೇ ನೇಮಕಮಾಡಬೇಕೆಂದು ಅವರು ಒತ್ತಾಯಪಡಿಸುತ್ತಿದ್ದಾರೆ. ಆ ಪದ್ಧತಿ ಸಾರ್ವಜನಿಕ ಸೇವೆಗಳಿಗೆ ಹಿಂದುಳಿದ ವರ್ಗಗಳವರ ಪ್ರವೇಶವನ್ನು ನಿಷೇಧಿಸದೆ ದಕ್ಷತೆಯ ಆವಶ್ಯಕತೆಯನ್ನೂ ಈಡೇರಿಸುವುದು ಎಂದು ವಾದಿಸಲಾಗುತ್ತಿದೆ. ಏಕೆಂದರೆ, ಸ್ಪರ್ಧಾತ್ಮಕ ಪರೀಕ್ಷೆಗಳು ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೆ ಮುಕ್ತವಾಗಿರುವುದರಿಂದ, ಅವಶ್ಯ ಮಟ್ಟವನ್ನು ತಲುಪುವಂತಿದ್ದರೆ, ಈ ಜಾತಿಗಳ ಅಭ್ಯರ್ಥಿಗಳಿಗೂ ಮುಕ್ತ ಅವಕಾಶವಿರುವುದು.

(೧೨೯) ಈ ಪ್ರಶ್ನೆಯ ಬಗ್ಗೆ ಬ್ರಾಹ್ಮಣರು ಮತ್ತು ಸಂಬಂಧಪಟ್ಟ ಜಾತಿಗಳ ಭಾವನೆ ತೋರಿಕೆಗೆ ನ್ಯಾಯಯುತವೆಂದು ಕಂಡುಬರುವುದೇನೋ ನಿಜ. ಸ್ಪರ್ಧಾತ್ಮಕ ಪರೀಕ್ಷೆಗಳ ಪದ್ಧತಿ ಎಲ್ಲಾ ಜಾತಿ, ಮತ ಗಳವರಿಗೆ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ನ್ಯಾಯ ನೀಡಬಹುದು. ಆದರೆ, ಆ ಸಂದರ್ಭಗಳು ದೇಶದ ಶಿಕ್ಷಣ ಪದ್ಧತಿಯು ಸಾಕಷ್ಟು ಪ್ರಜಾಸತ್ತಾತ್ಮಕವಾಗಿದ್ದು ಶಿಕ್ಷಣದ ಸೌಲಭ್ಯಗಳು ಸಾಕಷ್ಟು ವ್ಯಾಪಕವಾಗಿದ್ದು ಸಾರ್ವಜನಿಕ ಸೇವೆಗಳಿಗೆ ಸ್ಪರ್ಧಿಸಲು ಮುಂದೆ ಬರುವಷ್ಟು ವ್ಯಾಪಕವಾಗಿರುವುದನ್ನು ಅವಲಂಬಿಸಿವೆ. ಇಲ್ಲದೇ ಹೋದರೆ, ಮುಕ್ತ ಸ್ಪರ್ಧೆಯ ಪದ್ಧತಿಯಿದ್ದಾಗ್ಯೂ ಬಹುಸಂಖ್ಯೆಯಲ್ಲಿರುವ ವರ್ಗಗಳ ಜನರೂ ಹೊರಗುಳಿಯುವರು. ಈ ಮೂಲಭೂತ ಸ್ಥಿತಿ ಭಾರತದಲ್ಲಿ ಇಲ್ಲದೇ ಇರುವುದು ಎದ್ದು ಕಾಣುತ್ತದೆ. ಆದ್ದರಿಂದ ಹಿಂದುಳಿದ ವರ್ಗಗಳ ಜನರನ್ನು ಸಾರ್ವಜನಿಕ ಸೇವೆಗಳಿಗೆ ಪ್ರವೇಶ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ಆಹ್ವಾನಿಸುವುದೆಂದರೆ ಅವರಿಗೆ ಮೋಸ ಮಾಡಿದಂತಾಗುವುದು. ಮತ್ತು ಹಿಂದುಳಿದ ವರ್ಗಗಳು ಈ ರೀತಿ ಮೋಸ ಹೋಗಲು ನಿರಾಕರಿಸುವುದು ಸರಿಯೇ ಆಗಿದೆ.

(೧೩೦) ಆದ್ದರಿಂದ ಸಾರ್ವಜನಿಕ ಸೇವೆಗಳಲ್ಲಿ ಹಿಂದುಳಿದ ವರ್ಗಗಳವರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯುವುದು ಸಾಧ್ಯವಿಲ್ಲವೆಂದು ಭಾವಿಸಿದರೆ, ಅದರಿಂದ ಉದ್ಭವಿಸುವ ಹಾಗೂ ಪರಿಶೀಲಿಸಬೇಕಾದ ಮೊದಲನೆ ಪ್ರಶ್ನೆ ಎಂದರೆ, ಹಿಂದುಳಿದ ವರ್ಗಗಳವರಿಗೆ ಸೌಲಭ್ಯ ಪಡೆಯಲು ಸಮರ್ಥನೆ ಇದೆಯೇ? ಅವರು ತಮ್ಮ ವಾದವನ್ನು ಸರಿಯಾಗಿ ಸಮರ್ಥಿಸಿಕೊಳ್ಳದೇ ಹೋದರೆ, ಅವರು ದಕ್ಷತೆಯ ಹೊರತು ಇನ್ನಾವುದೇ ಆಧಾರದ ಮೇಲೆ ನೇಮಕ ಮಾಡಬೇಕೆಂಬ ತತ್ವದಲ್ಲಿ ಯಾವುದೇ ಮಾರ್ಪಾಡನ್ನು ನಿರೀಕ್ಷಿಸಲಾಗದು. ಈ ಮುಖ್ಯ ಪ್ರಶ್ನೆಯ ವಿಷಯದಲ್ಲಿ ಹಿಂದುಳಿದ ವರ್ಗಗಳು ತಮ್ಮ ಪರವಾಗಿ ಯಾರೂ ಅಲ್ಲಗಳೆಯಲಾರದಂತಹ ಬಲವಾದ ವಾದವನ್ನು ಹೊಂದಿರುವರೆಂದು ಹೇಳಲು ನಾನು ಹಿಂಜರಿಯುವುದಿಲ್ಲ.

(೧೩೧) ಸಾರ್ವಜನಿಕ ಸೇವೆಗಳ ನೇಮಕದಲ್ಲಿ ದಕ್ಷತೆಯೇ ಆಧಾರವಾಗಿರಬೇಕೆಂದು ಬಲವಾಗಿ ಪ್ರತಿಪಾದಿಸುವವರಿಗೆ ಆಧುನಿಕ ಆಡಳಿತದ ವ್ಯಾಪ್ತಿಯಲ್ಲಿ ಬರುವ ವಿಷಯಗಳ ಕಲ್ಪನೆ ಇದ್ದಂತೆ ತೋರು

ವುದಿಲ್ಲ. ಶಾಸಕಾಂಗದಲ್ಲಿ ಪಾಸಾದ ಶಾಸನಗಳನ್ನು ಜಾರಿಗೊಳಿಸುವುದು ಮಾತ್ರ ಆಡಳಿತವೆಂದು ಅವರು ಭಾವಿಸಿದಂತಿದೆ. ಇದು ಆಡಳಿತದ ವ್ಯಾಪ್ತಿ ಮತ್ತು ಮಹತ್ವದ ಅಪೂರ್ಣ ತಿಳುವಳಿಕೆಯಾಗಿದೆ ಎಂಬುದು ಪ್ರಶ್ನಾತೀತ. ಆಧುನಿಕ ಕಾಲದಲ್ಲಿ ಆಡಳಿತವೆಂದರೆ ರಾಜ್ಯದ ಕಾನೂನುಗಳನ್ನು ತಿಳಿದುಕೊಳ್ಳುವ ಸಲುವಾಗಿ ಕಾನೂನುಗಳ ಪರಿಶೀಲನೆಗೆ ಮಾತ್ರ ಸೀಮಿತವಾಗಿರದೆ, ಅದಕ್ಕೆ ಇದಕ್ಕಿಂತಲೂ ಹೆಚ್ಚಿನ ಕಾರ್ಯಗಳಿವೆ. ಅನೇಕ ಸಂದರ್ಭಗಳಲ್ಲಿ ಸಮಯದ ಒತ್ತಡದಿಂದ ಅಥವಾ ಸೌಲಭ್ಯದ ದೃಷ್ಟಿಯಿಂದ ಸರಕಾರದ ಒಂದು ಇಲಾಖೆ ಇಂದಿನ ದಿನಗಳಲ್ಲಿ ಯಾವುದೇ ಒಂದು ನಿರ್ದಿಷ್ಟ ಕಾನೂನನ್ನು ಜಾರಿ ಗೊಳಿಸುವುದಕ್ಕಾಗಿ ನಿಯಮಗಳನ್ನು ರೂಪಿಸುವ ಅಧಿಕಾರವನ್ನೂ ಹೊಂದಿರುತ್ತದೆ. ಅಂತಹ ಸಂದರ್ಭ ಗಳಲ್ಲಿ ಆಡಳಿತವೆಂದರೆ ಕೇವಲ ಕಾನೂನನ್ನು ಜಾರಿಗೊಳಿಸುವುದಷ್ಟೇ ಅಲ್ಲ ಎಂಬುದು ಸ್ಪಷ್ಟವಾಗಿದೆ. ಕಾನೂನಿನಷ್ಟೇ ಬಲವನ್ನು ಹೊಂದಿರುವ ನಿಯಮಗಳನ್ನು ಮಾಡುವುದೂ ಅಲ್ಲದೆ, ಅವುಗಳನ್ನು ಜಾರಿಗೊಳಿಸುವುದೂ ಆಡಳಿತದ ವ್ಯಾಪ್ತಿಯಲ್ಲಿ ಬರುತ್ತದೆ. ಪ್ರತಿನಿಯೋಜನೆಯ ಮೂಲಕ ಕಾನೂನು ಮಾಡುವ ಈ ಪದ್ಧತಿ ಇಂದು ಎಲ್ಲಾ ಆಧುನಿಕ ಸರಕಾರಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಪದ್ಧತಿ ಯಾಗಿದ್ದು, ಬರುವ ವರ್ಷಗಳಲ್ಲಿ ಅದು ಇನ್ನೂ ಹೆಚ್ಚುವ ಸಂಭವವಿದೆ. ಬಹುಸಂಖ್ಯೆಯ ವರ್ಗಗಳ ಕಲ್ಯಾಣದ ಸಂಬಂಧದ ವ್ಯಾಪಕ ಅಧಿಕಾರಗಳನ್ನು ತನ್ನ ಹಿತಾಸಕ್ತಿಗಳು ಮತ್ತು ಉದ್ದೇಶಗಳಲ್ಲಿ ಜನಸಂಖ್ಯೆಯ ಉಳಿದ ವರ್ಗಗಳಿಗೆ ವಿರೋಧವಾಗಿರುವ ಮತ್ತು ಅವರ ಬಯಕೆಗಳು, ನೋವು–ನಲಿವುಗಳ ಅರಿವಿಲ್ಲದೇ ಇರುವ ಹಾಗೂ ಅವರ ಆಶೋತ್ತರಗಳಿಗೆ ಮಾರಕವಾಗಿರುವಂತಹ ಒಂದು ನಿರ್ದಿಷ್ಟ ವರ್ಗದವರ ಕೈಯಲ್ಲಿ ಶಿಕ್ಷಣದ ಒರೆಗಲ್ಲಿನಿಂದ ಇವೆಲ್ಲವೂ ಶಿಕ್ಷಣದಿಂದ ದೊರೆಯುತ್ತವೆ ಎಂಬ ಒಂದೇ ಕಾರಣದಿಂದ, ಅಂತಹ ನಿಯಮಗಳನ್ನು ರೂಪಿಸುವ ವ್ಯಾಪಕ ಅಧಿಕಾರಗಳನ್ನು ಕೊಡಲಾಗುವುದು ಎಂಬುದು ನಿರ್ವಿವಾದವಾದ ಅಂಶ.

(೧೩೨) ಆಡಳಿತವೆಂದರೆ ಶಾಸಕಾಂಗವು ಪಾಸು ಮಾಡಿದ ಕಾನೂನುಗಳನ್ನು ಜಾರಿ ಗೊಳಿಸುವ ಪ್ರಕ್ರಿಯೆಯಾಗಿದೆ ಎಂದು ಭಾವಿಸಿದಾಗ್ಯೂ, ಅದು ಹಿಂದುಳಿದ ವರ್ಗಗಳ ಹಕ್ಕು ಅಥವಾ ಅರ್ಹತೆಗಳನ್ನು ದುರ್ಬಲಗೊಳಿಸಲಾಗದು. ಏಕೆಂದರೆ, ಒಂದು ನಿರ್ದಿಷ್ಟ ವರ್ಗದಿಂದ ನೇಮಕಗೊಂಡ ಅಧಿಕಾರಿಗಳು ಮತ್ತು ಯಾರ ಅಂತರಾಳದಲ್ಲಿ ಸಾರ್ವಜನಿಕ ಕರ್ತವ್ಯಕ್ಕಿಂತ ಹೆಚ್ಚಾಗಿ ಜಾತಿ ಪ್ರಜ್ಞೆ ಬೇರೂರಿರುತ್ತದೆಯೋ ಅಂತಹವರು ಸಾರ್ವಜನಿಕರ ಹಿತಾಸಕ್ತಿಗೆ ವಿರುದ್ಧವಾಗಿ ಸ್ವಜಾತಿಯ ಪ್ರತಿಷ್ಠೆ ಯನ್ನು ಹೆಚ್ಚಿಸಿಕೊಳ್ಳುವಲ್ಲಿ ತಮ್ಮ ಅಧಿಕಾರ ಸ್ಥಾನಗಳನ್ನು ಭ್ರಷ್ಟಗೊಳಿಸಬಹುದು. ಉಳುವುದಕ್ಕಾಗಿ ಸರ ಕಾರದ ಭೂಮಿಯನ್ನು ಕೊಡಲು ಇರುವ ಕಾನೂನನ್ನು ಜಾರಿ ಮಾಡುವ ಒಬ್ಬ ಸಾಧಾರಣ ಮಾಮಲೇ ದಾರನ ಉದಾಹರಣೆಯನ್ನೇ ತೆಗೆದುಕೊಳ್ಳಿ. ಅವನು ಕೇವಲ ಕಾನೂನನ್ನು ಅನ್ವಯಿಸುತ್ತಾನೆಂಬು ದೇನೋ ನಿಜ. ಆದರೆ, ಹೀಗೆ ಮಾಡುವಾಗ ಅವನು ತನ್ನ ಪಕ್ಷಪಾತ ಬುದ್ಧಿ ಅಥವಾ ಪೂರ್ವಪೀಡಿತ ಒಲವಿನಿಂದಾಗಿ ಗೇಣಿದಾರರನ್ನು ತೋರಿಕೆಗೆ ಅಲ್ಲದಿದ್ದರೂ, ವಾಸ್ತವಿಕವಾಗಿ ಜಾತಿಯ ಆಧಾರದ ಮೇಲೆಯೇ ಆರಿಸಬಹುದು. ಜನಗಣತಿಯ ಇಲಾಖೆಗೆ ಸೇರಿದ ಅಧಿಕಾರಿಯ ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಈ ಅಧಿಕಾರಿಯು ವಿವಿಧ ಕೋಮುಗಳ ಹೆಸರು ಮತ್ತು ಸಾಮಾಜಿಕ ಅಂತಸ್ತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿರುತ್ತಾನೆ. ಈ ಇಲಾಖೆಗೆ ಸೇರಿದ ಒಬ್ಬ ಅಧಿಕಾರಿಯು ಒಂದು ನಿರ್ದಿಷ್ಟ ಜಾತಿಗೆ ಸೇರಿದವನಾಗಿರುವ ಕಾರಣ ತನ್ನ ಆಡಳಿತದಲ್ಲಿ ಒಂದು ಪ್ರತಿಸ್ಪರ್ಧಿ ಜಾತಿಗೆ ಅದಕ್ಕೆ ಕೊಡಬೇಕಾದ ಹೆಸರು ಮತ್ತು ಸಾಮಾಜಿಕ ಅಂತಸ್ತನ್ನು ನಿರಾಕರಿಸುವ ಮೂಲಕ ಆ ಜಾತಿ

ಯವರಿಗೆ ಅನ್ಯಾಯ ಮಾಡಬಹುದು. ಜಾತಿ ಮತಗಳ ಆಧಾರದ ಮೇಲೆ ಪ್ರೋತ್ಸಾಹ ಮನೋಭಾವನೆಯ ನಿದರ್ಶನಗಳು ಸರ್ವೇ ಸಾಮಾನ್ಯವಾಗಿದ್ದು ಅವುಗಳನ್ನು ಯಾವುದಾದರೂ ಒಂದು ತೋರಿಕೆಗೆ ನ್ಯಾಯ ವೆಂದು ಕಾಣುವ ಕಾರಣದಿಂದ ಸಮರ್ಥಿಸಿಕೊಳ್ಳಲಾಗುತ್ತದೆ. ಆದರೆ ಮದ್ರಾಸ್ ಪ್ರಾಂತ್ಯದ ವಿಶ್ವಕರ್ಮ ಜಾತಿಗೆ ಸಂಬಂಧಿಸಿದ ಒಂದು ನಿದರ್ಶನವನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಈ ಜನರು ೧೯೨೪ರ ಸುಧಾರಣೆಗಳ ವಿಚಾರಣಾ ಸಮಿತಿ (Reforms Enquiry Committee)ಗೆ ತಾವು ಬರೆದ ಪತ್ರದಲ್ಲಿ "ಮದರಾಸು ಕಾರ್ಯ ನಿರ್ವಾಹಕ ಮಂಡಳಿಯ ಒಬ್ಬ ಬ್ರಾಹ್ಮಣ ಸದಸ್ಯ ಸರ್ (ಆಗ ಶ್ರೀ) ಪಿ.ಶಿವಸ್ವಾಮಿ ಅಯ್ಯರ್‌ರವರು ಕಾನೂನು ಖಾತೆಯನ್ನು ಹೊಂದಿದ್ದಾಗ ವಿಶ್ವಕರ್ಮ ಜನಾಂಗದವರು ವಾಡಿಕೆಯಾಗಿ ತಮ್ಮ ಹೆಸರಿನ ಮುಂದೆ 'ಆಚಾರ್ಯ' ಎಂಬ ಪ್ರತ್ಯಯವನ್ನು ಸೇರಿಸಿಕೊಳ್ಳುವುದನ್ನು ಆಕ್ಷೇಪಿಸುವ ಸರಕಾರಿ ಆಜ್ಞೆಯನ್ನು ಹೊರಡಿಸಿ, ಈ ಪ್ರತ್ಯಯದ ಬದಲು ಅವರು ಸಾಮಾನ್ಯವಾಗಿ ಅಸಹ್ಯವಾದ ಮತ್ತು ದ್ವೇಷದಿಂದ ಕೂಡಿದ 'ಆಸ್ರೀ' (Asry) ಎಂಬ ಪ್ರತ್ಯಯವನ್ನು ಹಚ್ಚಿಕೊಳ್ಳಬೇಕೆಂದು ಆಜ್ಞಾಪಿಸಿದ್ದರ" ವಿರುದ್ಧ ದೂರು ನೀಡಿದ್ದರು. "ಕಾನೂನು ಸದಸ್ಯರು ಹೊರಡಿಸಿದ ಈ ಆಜ್ಞೆಗೆ ಯಾವುದೇ ಆವಶ್ಯಕತೆ ಅಥವಾ ಸಮರ್ಥನೆ ನೀಡುವ ಅಧಿಕಾರ ಇಲ್ಲದಿದ್ದಾಗ್ಯೂ ಕಾನೂನು ಇಲಾಖೆಯ ಈ ಸರಕಾರಿ ಆದೇಶವು ಅಕ್ಷರ ಸಂಯೋಜನೆ ಅಥವಾ ಕಾಗುಣಿತ ದೋಷ ಸಮಿತಿ (Spelling Mistakes Committee)ಯ ಶಿಫಾರಸಿನ ಮೇಲೆ ಹೊರಡಿಸಲಾದ ಸರಕಾರಿ ಆಜ್ಞೆ ಎಂಬಂತೆ ಅದನ್ನು ಪ್ರಕಟಿಸಲಾಯಿತು. ನಮ್ಮ ದುರದೃಷ್ಟದಿಂದ ಸಮಿತಿಯ ಅಧಿಕಾರೇತರ ಸದಸ್ಯರೆಲ್ಲರೂ ತಮ್ಮ ಸೋದರ ಜಾತಿಗಳವರ ಹಕ್ಕುಗಳನ್ನು ಗೌರವಿಸುವುದನ್ನು ಎಂದೂ ತಿಳಿದುಕೊಳ್ಳದ ಬ್ರಾಹ್ಮಣ ಕೋಮಿಗೆ ಸೇರಿದವರಾಗಿದ್ದು, ಅವರು ತಾವು ಮಾಡಲಿರುವ ನಿರ್ಣಯದ ಸುಳಿವೂ ನಮಗೆ ಸಿಗದಂತೆ ಮಾಡಿದರು. ಇದು ಹೆಚ್ಚು ಕಡಿಮೆ ಕತ್ತಲಲ್ಲಿ ಚೂರಿ ಇರಿದ ರೀತಿಯಲ್ಲಿತ್ತು.

(೧೩೩) ಇದು ಅನಿವಾರ್ಯ. ಒಂದು ವರ್ಗದ ಆಡಳಿತವೆಂದರೆ ಆ ವರ್ಗದ ಹಿತಾಸಕ್ತಿಗಳು ಮತ್ತು ಪೂರ್ವಾಗ್ರಹಗಳ ಆಡಳಿತವೆಂದೇ ಅರ್ಥ. ಇಂತಹ ಪರಿಣಾಮಗಳು ಅನಿವಾರ್ಯವಾಗಿದ್ದರೆ, ಎಲ್ಲಾ ಪ್ರಾಮಾಣಿಕ ಜನಗಳ ಮನಸ್ಸಿನಲ್ಲಿ ಏಳಬೇಕಾದ ಒಂದು ಪ್ರಶ್ನೆ ಎಂದರೆ ದಕ್ಷ ಸರಕಾರವು ನಮಗೆ ಒಳ್ಳೆಯ ಸರಕಾರವನ್ನೂ ನೀಡಿದೆಯೇ? ಇಲ್ಲದಿದ್ದಲ್ಲಿ ಪರಿಹಾರವೇನು? ಬ್ರಾಹ್ಮಣರು ಮತ್ತು ತತ್ಸಂಬಂಧಿ ಜಾತಿಗಳಿಗೆ ಸೇರಿದ ಅಧಿಕಾರಿಗಳ ವರ್ಗ ಪಕ್ಷಪಾತದಿಂದ ಉಂಟಾಗುವ ಅನನುಕೂಲತೆಗಳು ಅವರ ದಕ್ಷತೆಯಿಂದ ದೊರಕಬಹುದಾದ ಎಲ್ಲಾ ಅನುಕೂಲತೆಗಳನ್ನು ಮೀರಿಸಿವೆ ಮತ್ತು ಒಟ್ಟಾರೆಯಾಗಿ ಅವರು ಒಳ್ಳೆಯದನ್ನು ಮಾಡುವುದಕ್ಕಿಂತ ಹೆಚ್ಚಾಗಿ ಕೆಡುಕನ್ನೇ ಮಾಡಿದ್ದಾರೆ ಎಂದೇ ನನ್ನ ಅಭಿಪ್ರಾಯ. ನಾನು ಕಂಡಂತೆ ಸಾರ್ವಜನಿಕ ಸೇವೆಗಳಲ್ಲಿ ವಿವಿಧ ಜಾತಿಗಳವರನ್ನು ಬೆರೆಕೆ ಮಾಡುವುದೇ ಇದಕ್ಕೆ ಪರಿಹಾರ ವೆನಿಸುವುದು. ಇದರಿಂದ ಸ್ವಲ್ಪ ಪ್ರಮಾಣದಲ್ಲಿ ಅದಕ್ಷತೆಯನ್ನುಂಟು ಮಾಡಿದಂತಾಗಬಹುದು. ಆದರೆ, ಇದು ವರ್ಗ ಪಕ್ಷಪಾತದ ಕೇಡುಗಳಿಗೆ ಅಮೂಲ್ಯವಾದ ಪರಿಹಾರವನ್ನೊದಗಿಸುತ್ತದೆ. ಈಗ ದೇಶದಲ್ಲಿ ನಡೆದಿರುವ ಸಾಮಾಜಿಕ ಸಂಘರ್ಷಗಳ ಕಾರಣದಿಂದ ಇದು ಅತ್ಯಂತ ಅವಶ್ಯವಾಗಿದೆ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವೆ, ಹಿಂದೂಗಳು ಮತ್ತು ಮಹಮದೀಯರ ನಡುವೆ, ಸ್ಪೃಶ್ಯರು ಮತ್ತು ಅಸ್ಪೃಶ್ಯರ ನಡುವೆ ಇರುವ ಎಲ್ಲಾ ಅಸಮಾನತೆಗಳನ್ನು ನಿವಾರಿಸಿ ಸಮಾನತೆಯನ್ನು ಸ್ಥಾಪಿಸಲು ನಡೆದಿರುವ ಹೋರಾಟಗಳ ಕಠೋರತೆ ನ್ಯಾಯಾಧೀಶರನ್ನಾಗಲೀ, ದಂಡಾಧಿಕಾರಿಗಳನ್ನಾಗಲೀ, ನಾಗರಿಕ ಅಧಿಕಾರಿಗಳನ್ನಾಗಲೀ ಅಥವಾ ಪೊಲೀಸರನ್ನಾಗಲೀ ಈ ಹೋರಾಟದ ಯುಕ್ತಾಯುಕ್ತತೆಯನ್ನು

ನಿರ್ಣಯಿಸುವಾಗ ತನ್ನ ಪ್ರಭಾವದಿಂದ ಹೊರಗಿಡುವುದಿಲ್ಲ. ಹೋರಾಡುತ್ತಿರುವ ಜಾತಿಗಳಿಗೆ ಸೇರಿದವರಾಗಿರುವ ಕಾರಣ ಅವರು ಪಕ್ಷವರ್ತಿಗಳಾಗಿಯೇ ಆಗುತ್ತಾರೆ. ಇದರ ಪರಿಣಾಮವಾಗಿ ಸಾರ್ವಜನಿಕರು ತಮ್ಮ ಸೇವಾ ಸಿಬ್ಬಂದಿಯಲ್ಲಿಟ್ಟಿರುವ ಭರವಸೆ ಕುಗ್ಗಿಹೋಗಬಹುದು.

(೧೩೪) ಇಲ್ಲಿಯವರೆಗೆ ನಾನು ಹಿಂದುಳಿದ ವರ್ಗಗಳವರ ವಿಷಯವನ್ನು ಆಡಳಿತಾತ್ಮಕ ಉಪಯುಕ್ತತೆಯ ದೃಷ್ಟಿಯಿಂದ ಪರಿಶೀಲಿಸಿದ್ದೇನೆ. ಆದರೆ ಅವರಿಗೆ ಸಾರ್ವಜನಿಕ ಸೇವೆಗಳಿಗೆ ಏಕೆ ಪ್ರವೇಶ ನೀಡಬೇಕೆಂಬುದಕ್ಕೆ ನೈತಿಕ ಆಧಾರಗಳೂ ಇವೆ. ಒಬ್ಬ ವ್ಯಕ್ತಿಯನ್ನು ಸಾರ್ವಜನಿಕ ಸೇವೆಗಳಿಂದ ಹೊರಗಿಡುವುದರಿಂದ ಉದ್ಭವಿಸುವ ನೈತಿಕ ಕೇಡುಗಳನ್ನು ದಿವಂಗತ ಶ್ರೀ ಗೋಖಲೆಯವರಿಗಿಂತ ಚೆನ್ನಾಗಿ ಇನ್ನಾರೂ ಚಿತ್ರಿಸಿರಲಾರರು. ತಮ್ಮ ಒಂದು ಪರಿಣಾಮಕಾರಿ ಭಾಷಣದಲ್ಲಿ ಅವರು ಹೀಗೆ ಹೇಳಿದ್ದಾರೆ: "ಈ ವಿದೇಶಿ ಸಿಬ್ಬಂದಿಯು ಅತಿ ದುಬಾರಿಯಾಗಿರುವುದೊಂದೇ ಅದರ ದೋಷವಾಗಿಲ್ಲ. ಇದಕ್ಕಿಂತಲೂ ಹೆಚ್ಚಿನದಾದ ನೈತಿಕ ಕೇಡೆಂಬುದೊಂದಿದೆ. ಪ್ರಸ್ತುತ ವ್ಯವಸ್ಥೆಯಲ್ಲಿ ಭಾರತೀಯ ಜನಾಂಗವನ್ನು ಕುಬ್ಜಗೊಳಿಸುವಂತಹ ಅಥವಾ ಕುಂಠಿತಗೊಳಿಸುವಂತಹ ಪ್ರಕ್ರಿಯೆ ಜರುಗುತ್ತಿದೆ. ನಾವು ನಮ್ಮ ಇಡೀ ಜೀವಮಾನದ ಎಲ್ಲಾ ದಿನಗಳನ್ನೂ ಕೀಳರಿಮೆಯ ವಾತಾವರಣದಲ್ಲಿಯೇ ಕಳೆಯಬೇಕಾಗಿದೆ ಮತ್ತು ಪ್ರಸ್ತುತ ವ್ಯವಸ್ಥೆಯ ಆವಶ್ಯಕತೆಗಳನ್ನು ತೃಪ್ತಿಗೊಳಿಸಲು ನಮ್ಮಲ್ಲಿರುವ ಅತ್ಯಂತ ಉದ್ದಾಮ ವ್ಯಕ್ತಿಗಳೂ ತಗ್ಗಿ ನಡೆಯಬೇಕಾಗಿದೆ. ಈಟನ್ ಅಥವಾ ಹ್ಯಾರೋದಲ್ಲಿನ ಪ್ರತಿಯೊಬ್ಬ ಶಾಲಾ ವಿದ್ಯಾರ್ಥಿಯು ಬೆಳೆಸಿಕೊಂಡಿರುವ ತಲೆ ಎತ್ತಿ ನಡೆಯುವ ಪ್ರೇರಣೆಯೆಂದು ಕರೆಯಬಹುದಾದ ಪ್ರೇರಣಾ ಬಲದಿಂದಾಗಿ ಮುಂದೆ ತಾನೊಬ್ಬ ಗ್ಲ್ಯಾಡಸ್ಟನ್, ನೆಲ್ಸನ್ ಅಥವಾ ವೆಲ್ಲಿಂಗ್ಟನ್ನನಾಗುವೆನೆಂಬ ಆತ್ಮವಿಶ್ವಾಸವನ್ನು ಹೊಂದುತ್ತಾನೆ. ಆದರೆ, ಅಂತಹ ಅವಕಾಶವನ್ನು ನಮಗೆ ನಿರಾಕರಿಸಲಾಗಿದೆ. ಪ್ರಸ್ತುತ ವ್ಯವಸ್ಥೆಯಲ್ಲಿ ನಮ್ಮ ಯೋಗ್ಯತೆಗೆ ತಕ್ಕ ಮನುಷ್ಯತ್ವ ಅಥವಾ ವ್ಯಕ್ತಿತ್ವದ ಪರಾಕಾಷ್ಠತೆಯನ್ನು ನಾವು ಎಂದಿಗೂ ತಲುಪಲಾರೆವು. ಸ್ವರಾಜ್ಯದಲ್ಲಿರುವ ಪ್ರತಿಯೊಂದು ಜನಾಂಗ ಅನುಭವಿಸುವ ನೈತಿಕ ಔನ್ನತ್ಯ ಅಥವಾ ಎತ್ತರವನ್ನು ನಾವು ಎಂದೂ ಅನುಭವಿಸಲಾರೆವು. ನಮ್ಮ ಆಡಳಿತಾತ್ಮಕ ಮತ್ತು ಸೈನಿಕ ಶಕ್ತಿ ಸಾಮರ್ಥ್ಯಗಳು ಬಳಸದಿರುವ ಕಾರಣದಿಂದಲೇ ಮಾಯವಾಗಿ ಕೊನೆಗೊಮ್ಮೆ ನಾವು ನಮ್ಮ ದೇಶದಲ್ಲಿಯೇ ಕಟ್ಟಿಗೆ ಕಡಿಯುವವರು ಮತ್ತು ನೀರು ಹೊರುವವರಾಗಿ ಉಳಿಯುವುದೇ ನಮ್ಮ ಹಣೆಬರಹವಾಗಿದೆ." ಹಿಂದುಳಿದ ವರ್ಗಗಳಿಗೆ ಸಾರ್ವಜನಿಕ ಸೇವೆಗಳಲ್ಲಿ ಪ್ರವೇಶ ಪಡೆಯುವ ನ್ಯಾಯಯುತ ಹಕ್ಕನ್ನು ನಿರಾಕರಿಸುತ್ತಿರುವವರಿಗೆ ಈಗ ಯಾವ ಪ್ರಶ್ನೆಯನ್ನು ಹಾಕಬೇಕು. ಶ್ರೀಯುತ ಗೋಖಲೆಯವರು ಭಾರತೀಯರ ಪರವಾಗಿ ವಿದೇಶಿ ಆಡಳಿತದ ವಿರುದ್ಧ ಮಾಡಲಾದ ಆಪಾದನೆಗಳನ್ನು ಹಿಂದುಳಿದ ವರ್ಗಗಳು ಬ್ರಾಹ್ಮಣರು ಮತ್ತು ತತ್ಸಂಬಂಧ ಜಾತಿಗಳ ವಿರುದ್ಧ ಮಾಡಲು ಅವಕಾಶವಿಲ್ಲವೇ? ನಿಮ್ಮ ವರ್ಗಗಳವರೂ, ಬ್ರಾಹ್ಮಣೇತರರೂ ಮತ್ತು ಮಹಮದೀಯರು ಸಾರ್ವಜನಿಕ ಸೇವೆಗಳಿಂದ ತಮ್ಮನ್ನು ಹೊರಗಿಡುವುದು ತಮ್ಮ ಕೋಮುಗಳವರನ್ನು ಕುಬ್ಜಗೊಳಿಸಿ ಬೆಳೆಯದಂತೆ ಮಾಡುವ ಒಂದು ವಿಧಾನವಾಗಿಲ್ಲವೇ ಎಂದು ಕೇಳಬಹುದಲ್ಲವೇ? ತಮ್ಮನ್ನು ಹೊರಗಿಟ್ಟಿರುವುದರ ಪರಿಣಾಮವಾಗಿ ತಮ್ಮ ಜೀವನಪರ್ಯಂತ ತಾವು ಕೀಳರಿಮೆಯ ವಾತಾವರಣದಲ್ಲಿ ವಾಸ ಮಾಡುವಂತಹ ಪರಿಸ್ಥಿತಿಯಲ್ಲಿದ್ದು, ಪ್ರಸ್ತುತ ವ್ಯವಸ್ಥೆಯ ಒತ್ತಡದಿಂದಾಗಿ ತಮ್ಮಲ್ಲಿನ ಅತ್ಯಂತ ಉದ್ದಾಮ ಅಥವಾ ಶ್ರೇಷ್ಠ ವ್ಯಕ್ತಿಯೂ ಕೂಡ ತಗ್ಗಿ ನಡೆಯಬೇಕಾಗಿದೆ ಎಂಬುದು ದೂರಬಹುದಾಗಿದೆಯಲ್ಲವೇ? ಬ್ರಾಹ್ಮಣ ಜಾತಿಯ ಪ್ರತಿಯೊಬ್ಬ ಶಾಲಾ ಬಾಲಕನೂ ಮುಂದೆ ತಾನೊಬ್ಬ ಸಿನ್ಹಾ, ಶಾಸ್ತ್ರಿ, ರಾನಡೆ ಅಥವಾ ಪರಾಂಜಪೆ ಆಗುವೆನೆಂಬ ಆಕಾಂಕ್ಷೆಯಿಂದ ತನ್ನಲ್ಲಡಗಿರುವ ಉತ್ಕೃಷ್ಟ

ಗುಣಗಳನ್ನು ಚೇತನಗೊಳಿಸುವ ಪ್ರವೃತ್ತಿಯನ್ನು ತಮಗೆ ನಿರಾಕರಿಸಲಾಗಿದೆ ಎಂದು ಕಂಠೋಕ್ತವಾಗಿ ಹೇಳಬಹುದಾಗಿದೆಯಲ್ಲವೇ? ಪ್ರಸ್ತುತ ವ್ಯವಸ್ಥೆಯಡಿಯಲ್ಲಿ ತಮ್ಮ ವ್ಯಕ್ತಿತ್ವವು ತಲುಪಬಹುದಾಗಿರುವ ಎತ್ತರವನ್ನು ತಾವು ಎಂದಿಗೂ ತಲುಪಲಾರೆವು ಎಂದು ಅವರು ರೋಷದಿಂದ ಹೇಳಬಹುದಾಗಿದೆಯಲ್ಲವೇ? ಸ್ವರಾಜ್ಯದಲ್ಲಿ ಪ್ರತಿಯೊಂದು ಜನಾಂಗವೂ ಅನುಭವಿಸಬಹುದಾದ ನೈತಿಕ ಔನ್ನತ್ಯವನ್ನು ತಾವು ಅನುಭವಿಸಲಾರೆವು ಮತ್ತು ಬಳಸಲಾರದ ಕಾರಣ ತಮ್ಮ ಆಡಳಿತಾತ್ಮಕ ಪ್ರತಿಭೆಗಳು ಕೇವಲ ಜಿಗುಪ್ಸೆಯಿಂದ ಮಾಯವಾಗಿ ಕೊನೆಗೆ ತಮ್ಮ ದೇಶದಲ್ಲಿಯೇ ತಾವು ಕಟ್ಟಿಗೆ ಕಡಿಯುವವರು ಮತ್ತು ನೀರು ಸೇದುವವರಾಗಿಯೇ ಇರಬೇಕಾಗಬಹುದೆಂದು ವ್ಯಥೆಪಡಬಹುದಾಗಿದೆಯಲ್ಲವೇ? ಈ ಪ್ರಶ್ನೆಗಳಿಗೆ ಉತ್ತರಗಳು ಅನ್ವಯಾತ್ಮಕವಾಗಿಯೇ ಇರಬೇಕಾಗುತ್ತದೆ. ಮುಂದುವರಿದ ಜಾತಿಗಳವರನ್ನು ದೇಶದ ಸಾರ್ವಜನಿಕ ಸೇವೆಗಳಿಂದ ಹೊರಗಿಡುವುದು ನೈತಿಕ ಅನ್ಯಾಯವಾಗಿದ್ದರೆ, ಹಿಂದುಳಿದ ಜಾತಿಗಳವರನ್ನು ಅದೇ ಕ್ಷೇತ್ರದಿಂದ ಹೊರಗಿಡುವುದೂ ಸಹ ನೈತಿಕ ಅನ್ಯಾಯವಾಗಿರೇಕು ಮತ್ತು ಅದು ಹಾಗಿದ್ದ ಪಕ್ಷದಲ್ಲಿ ಅದನ್ನು ಸರಿಪಡಿಸಬೇಕು.

(೧೩೫) ಇವು ಹಿಂದುಳಿದ ವರ್ಗಗಳ ಪರವಾಗಿರುವ ಆಧಾರಗಳು ಮತ್ತು ಆಲೋಚನೆಗಳು ಅಥವಾ ಪರಿಗಣನೆಗಳು. ಈ ಎಲ್ಲಾ ಆಲೋಚನೆಗಳೂ ಭಾರತೀಕರಣದ ಪರವಾಗಿ ಒತ್ತಾಯಿಸಲಾದ ವಿಚಾರಗಳಿಂದ ಭಿನ್ನವಾಗಿಲ್ಲ. ಭಾರತೀಕರಣದ ಪರ ವಾದವು ದಕ್ಷ ಆಡಳಿತದ ಆಧಾರವನ್ನವಲಂಬಿಸಿರಲಿಲ್ಲ ವೆಂಬುದನ್ನು ನೆನಪಿನಲ್ಲಿಡಬೇಕು. ಅದು ಒಳ್ಳೆಯ ಆಡಳಿತದ ಪರವಾದ ವಿಚಾರವನ್ನವಲಂಬಿಸಿದ್ದಿತು. ಒಬ್ಬ ದಕ್ಷ ಆಡಳಿತಗಾರನ ಗುಣ ವಿಶೇಷಗಳಲ್ಲಿ ಭಾರತೀಯನು ಐರೋಪ್ಯನಿಗಿಂತ ಕಡಿಮೆ ಮಟ್ಟದವನೆಂಬುದನ್ನು ಆಕ್ಷೇಪಿಸಲಿಲ್ಲ. ಐರೋಪ್ಯ ನೌಕರಶಾಹಿಯು ತಮ್ಮ ರಸ್ತೆಗಳನ್ನು ಸುಧಾರಿಸಿತು. ಕಾಲುವೆಗಳನ್ನು ಹೆಚ್ಚು ವೈಜ್ಞಾನಿಕವಾಗಿ ನಿರ್ಮಿಸಿತು. ರೈಲು ಮಾರ್ಗದ ಮುಖಾಂತರ ಸಾಗಾಣಿಕೆಗೆ ಅನುವು ಮಾಡಿತು. ತಮ್ಮ ಟಪಾಲುಗಳನ್ನು ಸುಲಭ ಅಂಚೆಯ ಮೂಲಕ ಕೊಂಡೊಯ್ಯಿತು. ಮಿಂಚಿನ ರೀತಿಯಲ್ಲಿ ತಮ್ಮ ಸಂದೇಶಗಳನ್ನು ತಲುಪಿಸಿತು. ತಮ್ಮ ನಾಣ್ಯ ಪದ್ಧತಿಯನ್ನು ಸುಧಾರಿಸಿತು. ತಮ್ಮ ಅಳತೆ–ತೂಕ ಪದ್ಧತಿಯನ್ನು ಕ್ರಮಗೊಳಿಸಿತು. ಭೂಗೋಲ, ಖಗೋಳ ವಿಜ್ಞಾನ ಮತ್ತು ಔಷಧದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸರಿಪಡಿಸಿತು ಮತ್ತು ಆಂತರಿಕ ಕಲಹಗಳನ್ನು ಕೊನೆಗೊಳಿಸಿತು ಎಂಬುದನ್ನು ನಿರಾಕರಿಸಲಿಲ್ಲ. ಐರೋಪ್ಯ ನೌಕರಶಾಹಿಯು ಅತ್ಯಂತ ದಕ್ಷ ಸರಕಾರವನ್ನು ನೀಡಿತೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ಪುರಾವೆ ಬೇಕಾಗಿಲ್ಲ. ಐರೋಪ್ಯ ನೌಕರಶಾಹಿ ಇಷ್ಟೆಲ್ಲಾ ದಕ್ಷತೆ ಹೊಂದಿದ್ದಾಗ್ಯೂ, ಮಾನವೀಯತೆಯಿಂದ ಕೂಡಿದ ಆಡಳಿತದ ಅವಶ್ಯ ಗುಣ ವಿಶೇಷಗಳನ್ನು ಹೊಂದಿರದ ಕಾರಣ ಅದನ್ನು ಖಂಡಿಸಲಾಯಿತು. ಆದ್ದರಿಂದ ಭಾರತೀಕರಣಕ್ಕಾಗಿ ಒತ್ತಾಯಿಸಿದವರೇ, ಹಿಂದುಳಿದ ವರ್ಗಗಳ ಪರವಾದ ವಾದವನ್ನು ವಿರೋಧಿಸುತ್ತಿರುವುದು ಸೋಜಿಗದ ಸಂಗತಿ. ಹಿಂದುಳಿದ ವರ್ಗಗಳ ಪರವಾದ ವಾದವು ಭಾರತೀಕರಣದ ಅಂಗವಾಗಿದೆ ಎಂಬ ಅಂಶವನ್ನು ಅವರು ಮರೆತಿದ್ದಾರೆ. ಅದೇನೇ ಇರಲಿ, ನಾನು ಪ್ರಾಂತೀಯ ಸ್ವಾಯತ್ತತೆ ಅಥವಾ ಪ್ರಾಂತೀಯ ಕಾರ್ಯಾಂಗಕ್ಕೆ ಸಂಪೂರ್ಣ ಜವಾಬ್ದಾರಿ ನೀಡುವ ವಿಷಯಕ್ಕಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಇದಕ್ಕೆ ನೀಡುತ್ತೇನೆ. ಇಷ್ಟು ವ್ಯಾಪಕ ಅಧಿಕಾರಗಳು ಇತರ ವರ್ಗಗಳನ್ನುಳಿದು ಒಂದು ವಿಶಿಷ್ಟ ವರ್ಗಕ್ಕೆ ಹಸ್ತಾಂತರಗೊಳ್ಳುವುದೆಂದು ನನಗನಿಸಿದರೆ ನಾನು ಅದನ್ನು ಆಗಗೊಡಲಾರೆ. ಇದು ನನ್ನ ಅಭಿಪ್ರಾಯವಾಗಿರುವಾಗ, ನನ್ನ ಶಿಫಾರಸುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಈ ಕೆಳಗೆ ಸೂಚಿಸಲಾದ ಕ್ರಮಗಳನ್ನು ಕೈಗೊಳ್ಳಬೇಕು:–

(೧) ಉನ್ನತ ಸೇವೆಗಳಿಗೆ ಸೇರಿದ ಒಂದನೆಯ ಮತ್ತು ಎರಡನೆಯ ದರ್ಜೆಯಲ್ಲಿ ಮತ್ತು ಅಧೀನ ದರ್ಜೆಗಳ ಕೆಲ ಖಾಲಿ ಸ್ಥಾನಗಳಿಗೆ ಪ್ರತಿ ವರ್ಷವೂ ಅರ್ಹತೆಯ ಪರೀಕ್ಷೆಯ ಮುಖಾಂತರ ನೇಮಕ ಮಾಡಬೇಕು. ಈ ನೇಮಕಗಳನ್ನು ಅಭ್ಯರ್ಥಿಯ ಯೋಗ್ಯತೆಯನ್ನು ನಿರ್ಣಯಿಸುವ ಸಾಮರ್ಥ್ಯವುಳ್ಳ ಮತ್ತು ಮೇಲೆ ಹೇಳಲಾದ ಸಿವಿಲ್ ಅಧಿಕಾರಿಯೊಡನೆ ಕೆಲಸ ಮಾಡುವವರಿಂದ ಕೂಡಿದ ಆಯ್ದ ಸಮಿತಿಯ ಶಿಫಾರಸಿನಂತೆ ಮಾಡಬೇಕು. ಅಂತಹ ನೇಮಕಗಳು ನಿಮ್ನ ವರ್ಗಗಳು, ಮಹಮದೀಯರು ಮತ್ತು ಬ್ರಾಹ್ಮಣೇತರರಿಗೆ ಅನುಕ್ರಮವಾಗಿ ಈ ಆದ್ಯತೆಯ ಪ್ರಕಾರ ಸೇವೆಗಳಲ್ಲಿ ಇವರ ಸಂಖ್ಯೆ ಒಂದು ಪ್ರಮಾಣ ತಲುಪುವವರೆಗೆ ಮೀಸಲಾಗಿರಿಸಬೇಕು.

(೨) ಈ ಕೋಮುಗಳಿಗೆ ಹೆಚ್ಚು ಸಂಖ್ಯೆಯ ಅಧಿಕಾರಿಗಳನ್ನು ಕೇಂದ್ರ ಕಾರ್ಯ ಸ್ಥಾನದಲ್ಲಿ ನೇಮಕ ಮಾಡಲು ಕ್ರಮ ತೆಗೆದುಕೊಳ್ಳಬೇಕು.

(೩) ವಿವಿಧ ಕಛೇರಿಗಳಲ್ಲಿ ಕಾಲ ಕಾಲಕ್ಕೆ ಉಂಟಾಗುವ ಖಾಲಿ ಸ್ಥಾನಗಳ ಬಗ್ಗೆ ಅಭ್ಯರ್ಥಿಗಳಿಗೆ ಮಾಹಿತಿ ಒದಗಿಸಲು ಮತ್ತು ನೇಮಕಾತಿ ಕೋರಿ ಬಂದ ಎಲ್ಲಾ ಅರ್ಜಿಗಳನ್ನು ದಾಖಲೆ ಮಾಡಿಕೊಂಡು ವಿವಿಧ ಕಛೇರಿಗಳೊಡನೆ ಅವರಿಗೆ ಸಂಪರ್ಕ ಕಲ್ಪಿಸಲು ಒಂದು ಕೇಂದ್ರ ನೇಮಕ ಮಂಡಲಿಯನ್ನು ಸ್ಥಾಪಿಸಬೇಕು. ಈ ಉದ್ದೇಶ ಸಫಲವಾಗಬೇಕಾದರೆ ವ್ಯಕ್ತಿ ಮತ್ತು ಹುದ್ದೆಯ ನಡುವೆ ಸಂಪರ್ಕ ಕಲ್ಪಿಸುವುದು ಅವಶ್ಯ. ಇಂತಹ ಮಂಡಳಿ ಇಲ್ಲದಿರುವುದರಿಂದಲೇ ಈ ವಿಷಯದಲ್ಲಿ ಮುಂಬಯಿ ಸರಕಾರದ ಪ್ರಯತ್ನಗಳು ಆಗಬೇಕಾದಷ್ಟು ಯಶಸ್ವಿಯಾಗಿಲ್ಲ.

# ವಿಭಾಗ–VI

## ಶಿಫಾರಸುಗಳ ಸಾರಾಂಶ

## ಅಧ್ಯಾಯ–೧

ಕರ್ನಾಟಕವನ್ನಾಗಲೀ ಅಥವಾ ಸಿಂಧ್ ಭಾಗಗಳನ್ನಾಗಲೀ ಮುಂಬಯಿ ಪ್ರಾಂತ್ಯದಿಂದ ಪ್ರತ್ಯೇಕಿಸಬಾರದು.

## ಅಧ್ಯಾಯ–೨

ಅಧ್ಯಾಯ–೧: ಶಾಸಕಾಂಗದ ಸದಸ್ಯರು ಯಾವುದೇ ವಿಷಯವನ್ನು ಆರಕ್ಷಿತ ವಿಷಯವೆಂದು ನಿರ್ಣಯ ಮಾಡಿದ್ದಲ್ಲಿ, ಅವರ ನಿರ್ಣಯವನ್ನು ಕಾರ್ಯಗತಗೊಳಿಸುವ ಕರಾರಿಗೊಳಪಟ್ಟಂಥ ಪ್ರಾಂತೀಯ ಕಾರ್ಯಾಂಗ ಸಂಪೂರ್ಣ ಜವಾಬ್ದಾರಿ ಹೊಂದಿರಬೇಕು.

ಅಧ್ಯಾಯ–೨: ಯಾವುದೇ ಸಂದರ್ಭದಲ್ಲಿ ಕಾರ್ಯಾಂಗವು ತೆಗೆದುಹಾಕಲಾರದಂತಹ ಕಾರ್ಯಾಂಗವಾಗಿರಬಾರದು. ಕಾರ್ಯಾಂಗದಲ್ಲಿ ಕೋಮುವಾರು ಪ್ರಾತಿನಿಧ್ಯವಿರಬಾರದು. ಮುಖ್ಯಮಂತ್ರಿ ತಮ್ಮ ಕಾನೂನುಬಾಹಿರ ಕಾರ್ಯಗಳಿಗೆ ನ್ಯಾಯಾಲಯಗಳ ವ್ಯಾಪ್ತಿಗೊಳಪಡಬೇಕು. ಸಂವಿಧಾನದಲ್ಲಿ ಮಂತ್ರಿಗಳ ಮೇಲೆ ನಿಂದಾರೋಪಣೆಯ ಮೂಲಕ ಅವರನ್ನು ತೆಗೆದುಹಾಕಲು ಅವಕಾಶವಿರಬೇಕು. ಕಾರ್ಯಾಂಗದ ಮುಖ್ಯಸ್ಥನಾಗಿ ಗವರ್ನರರ ಬದಲು ಒಬ್ಬ ಪ್ರಧಾನಮಂತ್ರಿ ಇರಬೇಕು.

ಅಧ್ಯಾಯ–೩: ಗವರ್ನರನು ಸಂವಿಧಾನಾತ್ಮಕ ಮುಖ್ಯಸ್ಥನಾಗಿರಬೇಕು. ಅವನಿಗೆ ಆಪತ್ಕಾಲೀನ ವಿಶೇಷ ಅಧಿಕಾರಿಗಳಿರಬಾರದು.

## ಅಧ್ಯಾಯ–೩

ಅಧ್ಯಾಯ–೧: ವಯಸ್ಕ ಮತದಾನ ಪದ್ಧತಿ ಇರಬೇಕು.

ಅಧ್ಯಾಯ–೨: ಸಂಪೂರ್ಣ ಚುನಾಯಿತ ಶಾಸಕಾಂಗವಿರಬೇಕು. ಐರೋಪ್ಯರ ಹೊರತು ಎಲ್ಲಾ ರೀತಿಯ ವರ್ಗ ಮತ್ತು ಕೋಮುವಾರು ಚುನಾವಣಾ ಪದ್ಧತಿಯನ್ನು ರದ್ದುಗೊಳಿಸಬೇಕು. ಮಹಮದೀಯರು, ನಿಮ್ನ ವರ್ಗದವರು ಮತ್ತು ಆಂಗ್ಲೋ–ಇಂಡಿಯನರಿಗೆ ಸ್ಥಾನಗಳ ಮೀಸಲಾತಿ ನೀಡಬೇಕು ಮತ್ತು ನಿರ್ಬಂಧಿತ ಚುನಾವಣಾ ಪದ್ಧತಿ ಮುಂದುವರಿದರೆ ಮಾತ್ರ ಬ್ರಾಹ್ಮಣೇತರರಿಗೂ ಸ್ಥಾನ ಮೀಸಲಾತಿ ಸೌಲಭ್ಯ ನೀಡಬೇಕು.

ಅಧ್ಯಾಯ–೩: ಶಾಸಕಾಂಗದಲ್ಲಿ ೧೪೦ ಸದಸ್ಯರಿರಬೇಕು. ಇವರಲ್ಲಿ ೩೩ ಮಹಮದೀಯರು ಮತ್ತು ೧೫ ನಿಮ್ನ ವರ್ಗಗಳವರಿರಬೇಕು. ಕೆಲವು ಜಿಲ್ಲೆಗಳಿಗಿರುವ ಕಡಿಮೆ ಪ್ರಾತಿನಿಧ್ಯ ಮತ್ತು ಇತರ ಜಿಲ್ಲೆಗಳಿಗಿರುವ ಹೆಚ್ಚಿನ ಪ್ರಾತಿನಿಧ್ಯವನ್ನು ಜನಸಂಖ್ಯೆಯ ಆಧಾರದ ಮೇಲೆ ಸರಿಪಡಿಸಬೇಕು. ವಿವಿಧ ವರ್ಗಗಳು ಮತ್ತು ಹಿತಾಸಕ್ತಿಗಳ ನಡುವೆ ಸ್ಥಾನಗಳ ಹೊಂದಾಣಿಕೆ ಮಾಡಲು ಒಂದು ಸಮಿತಿ ಇರಬೇಕು. ಅಭ್ಯರ್ಥಿಯಾಗಲು ಅವಶ್ಯವಾಗಿರುವ ವಸತಿ ಅಥವಾ ವಾಸದ ಅರ್ಹತೆಯನ್ನು ತೆಗೆದುಹಾಕಬೇಕು.

ಅಧ್ಯಾಯ–೪: ಲಕ್ನೋ ಒಪ್ಪಂದವು ಖಾಯಂ ತೀರ್ಮಾನವಲ್ಲ ಮತ್ತು ಅದರಿಂದ ಉದ್ಭವಿಸುವ ಪ್ರಶ್ನೆಗಳನ್ನು ಹೊಸದಾಗಿ ಅವುಗಳ ಅರ್ಹತೆಯ ಆಧಾರದ ಮೇಲೆ ಮಾಡಬಹುದಾದ ಪುನರ್ ಪರಿಶೀಲನೆಯನ್ನು ತಡೆಯಲಾಗದು.

ಅಧ್ಯಾಯ–೫: ಪ್ರಾಂತ್ಯಗಳಲ್ಲಿ ಎರಡನೆಯ ಸದನ ಇರಕೂಡದು.

ಅಧ್ಯಾಯ–೬: ಶಾಸಕಾಂಗಕ್ಕೆ ಅಧ್ಯಕ್ಷರನ್ನು ನೇಮಿಸುವ ಮತ್ತು ತೆಗೆದುಹಾಕುವ, ತನ್ನ ವಿಶೇಷಾಧಿಕಾರಗಳನ್ನು ನಿರ್ದಿಷ್ಟಗೊಳಿಸುವ ಮತ್ತು ತನ್ನ ಕಾರ್ಯ ವಿಧಾನವನ್ನು ಕ್ರಮಪಡಿಸುವ ಅಧಿಕಾರವಿರಬೇಕು. ಭಾರತ ಸರಕಾರ ಕಾಯ್ದೆಯ ೭೨ ಡಿ ಮತ್ತು ೮೦ ಸಿ ವಿಭಾಗಗಳನ್ನು ಕಾನೂನಿನಿಂದ ತೆಗೆದುಹಾಕಬೇಕು. ಕೆಲವು ಕರಾರುಗಳಿಗೊಳಪಟ್ಟು, ಶಾಸಕಾಂಗಕ್ಕೆ ಸಂವಿಧಾನವನ್ನು ಬದಲಾಯಿಸುವ ಅಧಿಕಾರವಿರಬೇಕು.

## ಅಧ್ಯಾಯ–೪

ಅಧ್ಯಾಯ–೧: ಸಂಪೂರ್ಣ ಪ್ರಾಂತೀಯ ಸ್ವಾಯತ್ತತೆ ಇರಬೇಕು. ಪೂರ್ವಾನುಮತಿ ಮತ್ತು ನಂತರದ ನಿಷೇಧಾಧಿಕಾರದ ಮೂಲಕ ಈಗ ಆಚರಣೆಯಲ್ಲಿರುವ ಕೇಂದ್ರ ಸರಕಾರದ ನಿಯಂತ್ರಣವನ್ನು ತೆಗೆದು ಹಾಕುವ ದೃಷ್ಟಿಯಿಂದ ಕೇಂದ್ರ ಮತ್ತು ಪ್ರಾಂತ್ಯ ಸರಕಾರಗಳ ನಡುವಣ ಕಾರ್ಯಗಳ ವಿಭಜನೆಯನ್ನು ಪುನರ್ ಪರಿಶೀಲಿಸಬೇಕು.

ಅಧ್ಯಾಯ–೨: ಪ್ರಾಂತೀಯ ಸರಕಾರಕ್ಕೆ ಗೊತ್ತುಪಡಿಸಲಾದ ಕಾರ್ಯಗಳ ಇತಿಮಿತಿಯಲ್ಲಿ ಆ ಸರಕಾರ ಮತ್ತು ದೇಶದ (ಬ್ರಿಟಿಷ್) ಸರಕಾರದ ನಡುವಣ ಸಂಬಂಧ ನೇರವಾಗಿರಬೇಕೇ ಹೊರತು ಕೇಂದ್ರ ಸರಕಾರದ ಮುಖಾಂತರವಲ್ಲ. ಭಾರತ ಸರಕಾರ ಕಾಯ್ದೆಯ ೨ನೆಯ ವಿಭಾಗವು ಭಾರತದ ಆಡಳಿತದೊಂದಿಗೆ ಪ್ರಭುತ್ವದ ಸಂಬಂಧವನ್ನು ಮಸುಕುಗೊಳಿಸುವುದರಿಂದ ಅದನ್ನು ಕೈಬಿಡಬೇಕು.

## ಅಧ್ಯಾಯ–೫

ಒಂದು ಪ್ರತ್ಯೇಕವಾದ ಪ್ರಾಂತೀಯ ನಾಗರಿಕ ಸೇವಾ ವರ್ಗವಿರಬೇಕು ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ರವರು ನೇಮಕಾತಿಯ ಕಾರ್ಯವನ್ನು ನಿರ್ವಹಿಸಬಾರದು. ಸೇವೆಗಳ ಬಗ್ಗೆ ಅವರು ಈಗ ನೆರವೇರಿಸುತ್ತಿರುವ ಕಾರ್ಯಗಳನ್ನು ಪ್ರಾಂತೀಯ ಲೋಕಸೇವಾ ಆಯೋಗ ನಿರ್ವಹಿಸಬೇಕು ಅಥವಾ ಭಾರತದ ಲೋಕಸೇವಾ ಆಯೋಗದೊಂದಿಗೆ ಕೆಲಸ ಮಾಡುವ ಒಬ್ಬ ಅಧಿಕಾರಿ ಈ ಕಾರ್ಯಗಳನ್ನು

ನಿರ್ವಹಿಸಬೇಕು. ಅದರ ಗತಿ ಅಥವಾ ವೇಗ ದೇಶದ ವಿವಿಧ ಇಲಾಖೆಗಳ ಸ್ವರೂಪಕ್ಕನುಗುಣವಾಗಿ ಬೇರೆ ಬೇರೆಯದಾಗಿರಬೇಕು. ಸೇವೆಗಳ ಭಾರತೀಕರಣದೊಂದಿಗೆ ವಿಭಿನ್ನ ವೇತನ ಶ್ರೇಣಿ ಮತ್ತು ಭತ್ಯೆ ಜಾರಿಗೆ ಬರಬೇಕು. ಸೇವಾ ವರ್ಗಗಳ ಭಾರತೀಕರಣ ಮಾಡುವಾಗ ಹಿಂದುಳಿದ ವರ್ಗಗಳ ಬೇಡಿಕೆಗಳನ್ನೂ ಪೂರೈಸುವ ವ್ಯವಸ್ಥೆ ಮಾಡಬೇಕು.

**ಮೇ ೧೭, ೧೯೨೯.** **ಬಿ. ಆರ್. ಅಂಬೇಡ್ಕರ್.**

# ಅನುಬಂಧ

## ಮುಂಬಯಿ ಪ್ರಾಂತ್ಯದ ಶಿಕ್ಷಣ ಮಂಡಳಿಯ ೧೮೫೦–೫೧ನೆಯ ಸಾಲಿನ ವರದಿಯಿಂದ ಆಯ್ದ ಭಾಗಗಳು.

ನಿರ್ದೇಶಕರ ನ್ಯಾಯ ಮಂಡಳಿಯ ಅಭಿಪ್ರಾಯಗಳನ್ನಾಧರಿಸಿ ನಿರೂಪಿಸಲಾದ ವ್ಯವಸ್ಥೆ:

"ಪ್ಯಾರಾ–೫: ಆದ್ದರಿಂದ, ಈ ಪ್ರಾಂತ್ಯದ ಶಿಕ್ಷಣ ಮಂಡಳಿಯು ಗೌರವಾನ್ವಿತ ನ್ಯಾಯಮಂಡಳಿಯ ಸರಕಾರಿ ಪತ್ರಗಳ ಮೂಲಕ ನೀಡಲಾಗಿರುವ ಆಜ್ಞೆಗಳ ಮೇರೆಗೆ ಮತ್ತು ಭಾರತದಲ್ಲಿ ಶಿಕ್ಷಣದ ಪ್ರಗತಿಯನ್ನು ಜಾಗರೂಕತೆಯಿಂದ ಪರಿಶೀಲಿಸುತ್ತಿರುವಂತಹ ಮಹನೀಯರುಗಳಾದ ಆರ್ಲ್ ಆಫ್ ಆಕ್‌ಲ್ಯಾಂಡ್, ಮೇಜರ್ ಕ್ಯಾಂಡಿ ಮತ್ತು ಇತರರ ಅಭಿಪ್ರಾಯಗಳನ್ನು ಅಷ್ಟಾಗಿ ಅವಲಂಬಿಸದೆ ಮತ್ತು ದೇಶೀಯರಲ್ಲಿ ಅತ್ಯಂತ ಬುದ್ಧಿವಂತರು ಬಹಿರಂಗವಾಗಿ ಸಾರಿದ ಅಭೀಷ್ಟಗಳನ್ನು ಕಡೆಗಣಿಸಿ ರೂಪಿಸಲಾದ ಶಿಕ್ಷಣ ವ್ಯವಸ್ಥೆಯನ್ನು ರದ್ದುಪಡಿಸಬೇಕೆಂದು ಪ್ರಭುಗಳಾದ ತಮ್ಮ ಪೂರ್ವಾಧಿಕಾರಿಯವರು ಮಂಡಳಿಗೆ ತಿಳಿಸಿದ್ದರೆಂದು ಪುನಃ ಹೇಳುತ್ತೇವೆ."

ಮೇಲಿನ ವರ್ಗಗಳ ಶಿಕ್ಷಣದ ಯುಕ್ತತೆಯ ಕುರಿತು ನ್ಯಾಯ ಮಂಡಳಿಯ ಅಭಿಪ್ರಾಯಗಳು:

"ಪ್ಯಾರಾ–೮: ನಾವು ಹೀಗೆ ಹೇಳಲು ಅನುಮತಿ ಇದ್ದಲ್ಲಿ ಗೌರವಾನ್ವಿತ ನ್ಯಾಯಮಂಡಳಿಯ ನಿರ್ಬಂಧಕಾಜ್ಞೆಯ ಇಂಗಿತ ಸರಕಾರದ ಶಿಕ್ಷಣ ನೀತಿ ಮತ್ತು ಈ ಬಾಬಿನ ಖರ್ಚಿಗಾಗಿ ದೊರೆಯಬಹುದಾದ ಅತ್ಯಲ್ಪ ಹಣದಿಂದಾಗಿ ಅದು ಅಷ್ಟೇ ಬುದ್ಧಿವಂತಿಕೆಯದಾಗಿದೆ ಎಂದು ಹೇಳಬಹುದು. ಗೌರವಾನ್ವಿತ ನ್ಯಾಯಮಂಡಳಿಯು ಮದರಾಸು ಸರಕಾರಕ್ಕೆ ೧೮೩೦ರಲ್ಲಿ ಹೀಗೆ ಬರೆದಿತ್ತು:

"ಜನತೆಯ ನೈತಿಕ ಮತ್ತು ಬೌದ್ಧಿಕ ಸ್ಥಿತಿಯನ್ನು ಹೆಚ್ಚಿಸಲು ಸಹಾಯಕವಾಗುವಂತಹ ಶಿಕ್ಷಣದ ಸುಧಾರಣೆಗಳು ತಮ್ಮ ಇತರ ದೇಶ ಬಾಂಧವರ ಮನಸ್ಸಿನ ಮೇಲೆ ಸ್ವಾಭಾವಿಕ ಪ್ರಭಾವ ಬೀರುವ ಸ್ಥಿತಿಯಲ್ಲಿರುವ ಮತ್ತು ಸಾಕಷ್ಟು ಬಿಡುವು ಹೊಂದಿರುವ ಉನ್ನತ ವರ್ಗಗಳ ಶಿಕ್ಷಣಕ್ಕೆ ಸಂಬಂಧಪಟ್ಟಿರಬೇಕು. ಈ ವರ್ಗಗಳಿಗೆ ಸೇರಿದವರಲ್ಲಿ ಬೋಧನಾ ಮಟ್ಟವನ್ನು ಹೆಚ್ಚಿಸುವುದರ ಮೂಲಕ ಅವರ ವಿಚಾರಗಳು ಮತ್ತು ಭಾವನೆಗಳಲ್ಲಿ ಬಹುಸಂಖ್ಯೆಯಲ್ಲಿರುವವರ ವರ್ಗಗಳ ಮೇಲೆ ನೇರ ಕಾರ್ಯಾಚರಣೆಗಿಂತ ಅತ್ಯಂತ ಹೆಚ್ಚಿನ ಲಾಭದಾಯಕ ಬದಲಾವಣೆಗಳನ್ನುಂಟುಮಾಡಬಹುದು. ಇದೂ ಅಲ್ಲದೆ, ತಮ್ಮ ರೂಢಿ ಮತ್ತು ಹೊಂದಿರುವುದಕ್ಕಿಂತ ಹೆಚ್ಚಿನ ಪಾಲು ಪಡೆಯುವುದಲ್ಲದೆ ಹೆಚ್ಚಿನ ಸ್ಥಾನಗಳಿಗೆ ನೇಮಕಗೊಳ್ಳಲು ಅರ್ಹತೆ ಪಡೆದ ದೇಶೀ ಜನರ ಪಡೆಯನ್ನು ನಮ್ಮ ಸೇವೆಯಲ್ಲಿ ಹೊಂದಿರಬೇಕೆಂಬ ನಮ್ಮ ಉತ್ಕಟೇಚ್ಛೆಯು ನಿಮಗೆ ತಿಳಿದೇ ಇದೆ. ಆದಾಗ್ಯೂ ನಮಗೆ ಅನೇಕ

ಕಡೆಗಳಿಂದ, ಅದರಲ್ಲಿಯೂ ಯಾರು ಸಾಮಾನ್ಯ ಜನಸಮೂಹದ ಶಿಕ್ಷಣದ ಅವಶ್ಯಕತೆ ಮತ್ತು ಯುರೋಪಿನ ಕಲೆ ಮತ್ತು ವಿಜ್ಞಾನವನ್ನು ಭಾರತದ ಒಂದು ನೂರು ಅಥವಾ ಒಂದು ನೂರಾ ನಲವತ್ತು ದಶಲಕ್ಷ ಜನರಲ್ಲಿ (ಸಂಖ್ಯೆ ಅಪ್ರಧಾನ) ಪ್ರಸಾರ ಮಾಡಲು ಇರುವ ಸೌಲಭ್ಯದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವವರೋ ಅಂತಹವರಿಂದಲೂ ಕೇಳಿಬಂದಿರುವಂತೆ ಮತ್ತು ಈ ವಿಷಯದ ಬಗ್ಗೆ ಅಸ್ಪಷ್ಟ ವಿಚಾರಗಳನ್ನು ವ್ಯಕ್ತಪಡಿಸುವ ಸಾಮಾನ್ಯ ಹೇಳಿಕೆಗಳಿಂದಾಗಿ ಹೆಚ್ಚಿಗೆ ತಿಳಿದುಕೊಂಡಿರದವರು ದೇಶದ ಎಲ್ಲಾ ಸಂಪನ್ಮೂಲಗಳು ಇಂಗ್ಲೆಂಡಿನಲ್ಲಿ ಕೊಡಲಾದ ಅಲ್ಪಪ್ರಮಾಣದ ಹಣಕ್ಕಿಂತ ಹೆಚ್ಚಿಗೆ ಹಣವನ್ನು ಶಿಕ್ಷಣ ಮಂಡಳಿಗೆ ನೀಡಲಾಗಿದೆ ಎಂಬ ದೂರು ಕೇಳಿ ಬಂದಿದೆ."

ಸಾಮಾನ್ಯ ಜನರ ಶಿಕ್ಷಣಕ್ಕೆ ಯಾವ ಸಾಧನಗಳೂ ಇಲ್ಲವೆಂಬ ತೀರ್ಮಾನ:

"ಪ್ಯಾರಾ–೧೪: ದೇಶೀಯ ಭಾಷೆಗಳ ೧೭೫ ಶಾಲೆಗಳನ್ನು ಸುವ್ಯವಸ್ಥಿತಗೊಳಿಸಲು ಸಾಕಷ್ಟು ಹಣ ದೊರೆಯದೇಹೋದರೆ ಮತ್ತು "ಒಂದು ನೂರಾನಲವತ್ತು ದಶಲಕ್ಷ" ಜನರಿಗೆ ಮುಂಬಯಿ ಪ್ರಾಂತ್ಯದಲ್ಲಿ ೯೦೦.೦೦೦ ಹುಡುಗರಿಗೆ ಶಿಕ್ಷಣ ನೀಡುವ ಪ್ರಶ್ನೆ ಇಲ್ಲದಾಗುತ್ತದೆ ಎಂಬ ಅಂಶ ಈ ಅಂಕಿಸಂಖ್ಯೆಗಳಿಂದ ಸ್ಪಷ್ಟವಾಗುತ್ತದೆ. ಸರಕಾರವು ಏನನ್ನು ಸಾಧಿಸುವುದು ಅಥವಾ ಸಾಧಿಸಬಹುದಾಗಿದೆ ಎಂಬುದು ಉದ್ದೇಶವಲ್ಲ ಮತ್ತು ಶಿಕ್ಷಣ ಮಂಡಳಿಗಳು ತಮ್ಮ ಸೀಮಿತ ಮತ್ತು ವಾಸ್ತವಿಕ ಕಾರ್ಯ ಕ್ಷೇತ್ರವನ್ನು ಬಿಟ್ಟು ಕಲ್ಪನಾತ್ಮಕ ಊಹೆಗಳ ನಿರರ್ಥಕ ದಯಾಪರತೆಯ ಭಾವನೆಗಳತ್ತ ಹೊರಳ ಬಾರದು."

ಪರಿಮಿತ ಸಾಧನಗಳಿಂದ ಕಾರ್ಯ ವಿಧಾನ ಕುರಿತು ನ್ಯಾಯಮಂಡಳಿಯ ಅಭಿಪ್ರಾಯಗಳು:

"ಪ್ಯಾರಾ–೧೫: ಗೌರವಾನ್ವಿತ ನ್ಯಾಯಮಂಡಳಿಯವರು ಕೊನೆಯ ಪ್ಯಾರಾದಲ್ಲಿನ ತೀರ್ಮಾನವನ್ನು ಸ್ಪಷ್ಟವಾಗಿ ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರುವಂತೆ ತೋರುತ್ತದೆ. ಜನತೆಯನ್ನು ಸುಧಾರಿಸುವುದಕ್ಕಾಗಿ ಅವರು ಮಾಡುತ್ತಿರುವ ಶೈಕ್ಷಣಿಕ ಪ್ರಯತ್ನಗಳು ಅಲ್ಪ ಪ್ರಮಾಣದಲ್ಲಿ ಮಾತ್ರ ಸಾಧ್ಯ ಎಂದು ಗ್ರಹಿಸಿದಾಗ್ಯೂ, ತಮ್ಮ ವಿವಿಧ ಸರಕಾರಗಳಿಗೆ ಪರಿಮಿತ ಸಾಧನಗಳಿಂದ ಅತ್ಯಂತ ಹೆಚ್ಚಿನ ಪರಿಣಾಮಗಳನ್ನು ಪಡೆಯುವ ನಿಜವಾದ ಪದ್ಧತಿಯನ್ನು ತಿಳಿಸಿಕೊಡುವುದು ಅವಶ್ಯ ಎಂದು ಅವರು ಭಾವಿಸಿದ್ದಾರೆ. ಈ ವಿಷಯದಲ್ಲಿ ಮದರಾಸು ಸರಕಾರಕ್ಕೆ ನೀಡಲಾದ ನಿರ್ಬಂಧಕಾಜ್ಞೆಯನ್ನು ನಾವು ಈಗಾಗಲೇ ೭ನೆಯ ಪ್ಯಾರಾದಲ್ಲಿ ಉಲ್ಲೇಖಿಸಿದ್ದೇವೆ. ಮತ್ತು ಅದೇ ದಿನಾಂಕದಂದು ಅವರು ಸರಕಾರಕ್ಕೆ ಕಳುಹಿಸಿದ ಅಧಿಕೃತ ಪತ್ರದಲ್ಲಿ ಇದೇ ಅರ್ಥ ಬರುವಂತಹ ಭಾವನೆಗಳಿಗೆ ಪುಷ್ಟಿ ಇದೆ. ಭಾರತದ ದೇಶೀಯ ಉನ್ನತ ವರ್ಗಗಳವರಿಗೆ ಐರೋಪ್ಯ ವಿಜ್ಞಾನಗಳ ಬೋಧನೆಯ ಸಾಧನಗಳನ್ನು ನೀಡುವುದು ಮತ್ತು ನಾಗರಿಕ ಯುರೋಪಿನ ಸಾಹಿತ್ಯದ ಪರಿಚಯವನ್ನು ಮಾಡಿಕೊಡುವುದು ನಮ್ಮ ಉತ್ಕಟೇಚ್ಛೆಯಾಗಿದೆ. ಬಿಡುವು ಹೊಂದಿರುವ ಮತ್ತು ಸ್ವಾಭಾವಿಕ ಪ್ರಭಾವ ಹೊಂದಿರುವ ವರ್ಗಗಳ ಗುಣಮಟ್ಟ ಅಂತಿಮವಾಗಿ ಇತರ ಎಲ್ಲಾ ಜನರ ಗುಣಮಟ್ಟವನ್ನು ನಿರ್ಧರಿಸುತ್ತದೆ."

ಭಾರತದ ಉಚ್ಚ ವರ್ಗಗಳ ಕುರಿತ ವಿಚಾರಣೆ:

"ಪ್ಯಾರಾ–೧೬: ಭಾರತದ ಜನಸಂಖ್ಯೆಯ ಒಂದು ಸಣ್ಣ ಭಾಗವನ್ನು ಮಾತ್ರ ಸರಕಾರೀ ಶಿಕ್ಷಣದ ಪ್ರಭಾವಕ್ಕೊಳಪಡಿಸಬಹುದಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟ ನಂತರ, ಮತ್ತು ಗೌರವಾನ್ವಿತ ನ್ಯಾಯಮಂಡಳಿಯು ಇಂತಹ ವರ್ಗ 'ಉಚ್ಚ ವರ್ಗ'ಗಳಿಂದ ಕೂಡಿರಬೇಕೆಂದು ನಿರ್ಣಯಿಸಿದ ಮೇರೆಗೆ, ಈ ವರ್ಗಗಳಲ್ಲಿ ಯಾರು ಸೇರಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದು ಆವಶ್ಯಕ. ಈ ಸಂದರ್ಭದಲ್ಲಿ ಐರೋಪ್ಯ ಶೋಧಕನು ಆಂಗ್ಲೋ–ಇಂಡಿಯನ್ ಪರ್ಯಾಲೋಚನೆಯಲ್ಲಿ ಅಪ್ರತ್ಯಕ್ಷವಾಗಿ ಮತ್ತು ಅಕಲ್ಪಿತವಾಗಿ ನುಸುಳಿಕೊಂಡು ಬರಬಹುದಾದಂತಹ ಐರೋಪ್ಯ ಸಾಮ್ಯಗಳನ್ನು ತನ್ನ ಮನಸ್ಸಿನಿಂದ ದೂರವಿಡಬೇಕು. ಯುರೋಪಿನಲ್ಲಿ ಅದರಲ್ಲಿಯೂ ಇಂಗ್ಲೆಂಡಿನಲ್ಲಿ ಉಚ್ಚ ವರ್ಗಗಳು ಮತ್ತು ಕೆಳವರ್ಗಗಳ ನಡುವೆ ಎದ್ದು ಕಾಣುವಂತಹ ನಡೆವಳಿಗಳು, ಸಂಪತ್ತು, ರಾಜಕೀಯ ಮತ್ತು ಸಾಮಾಜಿಕ ಪ್ರಭಾವಗಳಿವೆ. ಆದರೆ ಭಾರತದಲ್ಲಿ ಅಂತಹ ಯಾವುದೇ ರೇಖೆ ಅಥವಾ ಪಂಕ್ತಿ ಇರುವುದಿಲ್ಲ. ಎಲ್ಲಾ ನಿರಂಕುಶಾಡಳಿತಗಳಲ್ಲಿರುವಂತೆ, ಭಾರತದಲ್ಲಿ, ಜನರನ್ನು ಜೀವನದಲ್ಲಿ ಅತ್ಯಂತ ದೀನ ಅಥವಾ ಸಾಮಾನ್ಯ ಸ್ಥಿತಿಯಿಂದ ಅತಿ ಉನ್ನತ ಸ್ಥಾನಕ್ಕೆ ಏರಿಸಲು ಅರಸನ ಇಚ್ಛೆಯೇ ಸಾಕಾಗಿತ್ತು ಮತ್ತು ಇದರ ಪರಿಣಾಮವಾಗಿ ನಡಾವಳಿ ಅಥವಾ ವರ್ತನೆಗಳಲ್ಲಿ ಏಕರೂಪತೆ ಉಂಟಾಗಿದೆ. ಇಂಗ್ಲೀಷರ ಭಾವನೆಗಳ ಪ್ರಕಾರ ಒಬ್ಬ ಭಿಕ್ಷುಕ ಕಾರ್ಯಾಗಾರಗಳಲ್ಲಿ ಕಡ್ಡಾಯವಾಗಿ ಶ್ರಮಿಸಲು ಮತ್ತು ಜೀತದವನಾಗಿರಲು ಮಾತ್ರ ಯೋಗ್ಯ. ಭಾರತದಲ್ಲಿ ಬ್ರಾಹ್ಮಣ ಸಿದ್ಧಾಂತದ ಪ್ರಕಾರ ಭಿಕ್ಷುಕ ಗೌರವಾನ್ವಿತ ವ್ಯಕ್ತಿ ಅವನು ಪೂಜಾರ್ಹ. ಏಕೆಂದರೆ, ಈ ಸಿದ್ಧಾಂತದ ಪ್ರಕಾರ ಅವನು ಜೀವನದ ಎಲ್ಲಾ ಸುಖಗಳನ್ನು ಮತ್ತು ಪ್ರೇರಣೆಗಳನ್ನು ತ್ಯಜಿಸಿ ಜ್ಞಾನಾರ್ಜನೆ ಮತ್ತು ತನ್ನ ಆರಾಧ್ಯ ದೇವತೆ ಅಥವಾ ಸೃಷ್ಟಿಕರ್ತನ ಧ್ಯಾನದಲ್ಲಿಯೇ ಮಗ್ನನಾಗಿರುತ್ತಾನೆ."

ಭಾರತದಲ್ಲಿ ಉಚ್ಚ ವರ್ಗಗಳು:

"ಪ್ಯಾರಾ–೧೭: ಭಾರತದಲ್ಲಿ ಉಚ್ಚ ವರ್ಗಗಳ ಮತ್ತು ಯಾರನ್ನು ಪ್ರಭಾವಶಾಲಿಗಳೆಂದು ಪರಿಗಣಿಸಬಹುದೋ ಅವರನ್ನು ಈ ರೀತಿ ವರ್ಗೀಕರಿಸಬಹುದು:

೧ನೆಯ ವರ್ಗ: ಭೂ ಮಾಲೀಕರು ಮತ್ತು ಜಹಗೀರದಾರರು, ಹಿಂದಿನ ಸಾಮಂತರ ಪ್ರತಿನಿಧಿಗಳು ಮತ್ತು ದೇಶೀ ಅರಸರ ಅಧಿಕಾರದಲ್ಲಿರುವವರು ಮತ್ತು ಸೈನಿಕ ವರ್ಗವೆಂದು ಕರೆಯಬಹುದಾದವರು.

೨ನೆಯ ವರ್ಗ: ವಾಣಿಜ್ಯ ಮತ್ತು ವ್ಯಾಪಾರದ ಮೂಲಕ ಸಂಪತ್ತು ಗಳಿಸಿದವರು ಅಥವಾ ವರ್ತಕ ವರ್ಗ.

೩ನೆಯ ವರ್ಗ: ಸರಕಾರದ ಉನ್ನತ ಉದ್ಯೋಗಿಗಳು.

೪ನೆಯ ವರ್ಗ: ಬ್ರಾಹ್ಮಣರು ಮತ್ತು ತಮ್ಮ ವಿದ್ಯಾರ್ಜನೆಯಿಂದ ಹಾಗೂ ಅಂತಸ್ತಿನಲ್ಲಿ ಸಾಧನೆ ಮಾಡಿದ ಇತರ ಉಚ್ಚ ವರ್ಗದ ಮತ್ತು ಬರಹದಿಂದಲೇ ಜೀವಿಸುವ ಬರಹಗಾರರಾದ ಮುಂಬಯಿಯಲ್ಲಿ ಪ್ರಭುಗಳು ಮತ್ತು ಷೆಣ್ವಿಗಳೆಂದು, ಬಂಗಾಳದಲ್ಲಿ ಕಾಯಸ್ಥರೆಂದೂ ಕರೆಯಲಾಗುತ್ತಿರುವವರನ್ನು ಈ ವರ್ಗದಲ್ಲಿ ಸೇರಿಸಬಹುದು."

ಅತ್ಯಂತ ಪ್ರಭಾವಶಾಲಿಗಳಾದ ಬ್ರಾಹ್ಮಣರು:

"ಪ್ಯಾರಾ–೧೮: ಈ ನಾಲ್ಕು ವರ್ಗಗಳಲ್ಲಿ ಎಲ್ಲರಿಗಿಂತಲೂ ಅತ್ಯಂತ ಪ್ರಭಾವಶಾಲಿಗಳು, ಹೆಚ್ಚಿನ ಸಂಖ್ಯೆಯಲ್ಲಿರುವವರು ಮತ್ತು ಒಟ್ಟಾರೆ ಸರಕಾರ ಅತ್ಯಂತ ಸುಲಭವಾಗಿ ಉಪಯೋಗಿಸಿ ಕೊಳ್ಳಬಹುದಾದವರೆಂದರೆ ಕಡೆಯ ವರ್ಗದವರು–ಬ್ರಾಹ್ಮಣರು, ಭಾರತದಾದ್ಯಂತ ನಮ್ಮ ಆಳ್ವಿಕೆಯಲ್ಲಿ ಹಿಂದಿನ ಕಾಲದ ಜಹಗೀರದಾರರು ಮತ್ತು ಸೈನಿಕ ವರ್ಗದವರು ದಿನೇ ದಿನೇ ಕ್ಷೀಣವಾಗುತ್ತಿರುವುದು ಎಲ್ಲರಿಗೂ ಚೆನ್ನಾಗಿ ಗೊತ್ತಿರುವ ವಿಷಯ. ಅವರು ತಮ್ಮ ಪುರಾತನ ಉದ್ಯೋಗವನ್ನು ಕಳೆದುಕೊಂಡಿದ್ದಾರೆ ಮತ್ತು ಹೊಸ ಉದ್ಯೋಗವನ್ನು ಮಾಡುವ ಪ್ರವೃತ್ತಿಯನ್ನಾಗಲೀ ಅಥವಾ ಯೋಗ್ಯತೆಯನ್ನಾಗಲೀ ತೋರಿಸುತ್ತಿಲ್ಲ. ಅಥವಾ ಶಾಂತಿಯುತ ಬಾಳ್ವೆಯ ಕಲೆಯನ್ನಾಗಲೀ ಬೆಳೆಸಿಕೊಂಡಿಲ್ಲ. ಈ ಪ್ರಾಂತ್ಯದಲ್ಲಿ ಭೂಮಾಲಿಕರ ವರ್ಗವನ್ನು ಪ್ರೋತ್ಸಾಹಿಸಲು ಶ್ರೀಯುತ ಎಲ್ಫಿನ್‌ಸ್ಟನ್ ಮತ್ತು ಅವರ ನಂತರ ಬಂದವರು ಮಾಡಿದ ಪ್ರಯತ್ನಗಳೆಲ್ಲವೂ ಶೋಚನೀಯ ರೀತಿಯಲ್ಲಿ ವಿಫಲವಾದವು. ಮತ್ತು ಹಿಂದೂಸ್ತಾನದ ಮೈದಾನಗಳಲ್ಲಿ ತಮ್ಮ ಪೂರ್ವಿಕರು ನಡೆಸಿದ ಯಶಸ್ವಿ ದಾಳಿಗಳ ನೆನಪುಗಳಿಂದ ಪ್ರೇರಿತವಾದ ವ್ಯರ್ಥ ವೈಭವ ಮತ್ತು ಅತಿವರ್ತನೆಯಲ್ಲದೇ ಇನ್ನಾವುದರಿಂದಲೂ ಉದ್ರೇಕಗೊಳ್ಳದ ಜನಾಂಗಕ್ಕೆ ಸಾರ್ವಜನಿಕ ಗೌರವ ಮತ್ತು ಶಿಕ್ಷಣದ ಮೂಲಕ ಪ್ರಖ್ಯಾತಿ ಅಥವಾ ಯಶಸ್ಸಿನ ಮಾರ್ಗವನ್ನು ತೋರಿಸಿಕೊಡುವ ಎಲ್ಲಾ ಪ್ರಯತ್ನಗಳು ವಿಫಲವಾಗಿವೆ. ಅಲ್ಲದೇ ವಾಣಿಜ್ಯ ವರ್ಗಗಳಲ್ಲಿ ಕೆಲವು ಅಪವಾದಗಳನ್ನು ಬಿಟ್ಟರೆ, ಉಚ್ಚ ಶಿಕ್ಷಣದ ಪ್ರಭಾವಕ್ಕೆ ಹೆಚ್ಚಿನ ಅವಕಾಶಗಳು ಇಲ್ಲ. ಎಲ್ಲಾ ದೇಶಗಳಲ್ಲಿಯಂತೆ, ಆದರೆ ಯುರೋಪಿನ ಹೆಚ್ಚು ನಾಗರಿಕತೆ ಹೊಂದಿದವುಗಳಿಗಿಂತ ಹೆಚ್ಚಾಗಿ ಭಾರತದಲ್ಲಿ, ಕಿರಿಯ ವ್ಯಾಪಾರಸ್ಥ ತನ್ನ ಉದ್ಯೋಗಕ್ಕೆ ಅವಶ್ಯವೆನಿಸಿದ ಮಾರುಕಟ್ಟೆಯಲ್ಲಿ ಅಥವಾ ಲೆಕ್ಕದ ಕಛೇರಿಗಳಲ್ಲಿ ವಿಶೇಷ ಶಿಕ್ಷಣ ಪಡೆಯುವುದಕ್ಕಾಗಿ ತನ್ನ ಚಿಕ್ಕ ವಯಸ್ಸಿನಲ್ಲಿಯೇ ಶಾಲೆಯನ್ನು ಬಿಡಬೇಕಾಗಿತ್ತು. ಕೊನೆಯದಾಗಿ, ಸರಕಾರಿ ಉದ್ಯೋಗಿಗಳು, ಸರಕಾರದೊಡನೆ ಸಂಪರ್ಕದಲ್ಲಿ ಬರುವ ಅನೇಕರ ಮೇಲೆ ಪ್ರಭಾವ ಬೀರಬಹುದಾದರೂ ಅವರು ಅಂತಹ ಪ್ರಭಾವ ಬೀರುತ್ತಿಲ್ಲ. ಸರಕಾರದ ಸಂಪರ್ಕದಲ್ಲಿ ಬರದೇ ಇರುವ ಇನ್ನೂ ಹೆಚ್ಚಿನ ಸಂಖ್ಯೆಯ ಜನರ ಮಾತಂತೂ ಹಾಗೇ ಉಳಿಯಿತು ಮತ್ತು ಸಾರ್ವಜನಿಕ ಸಿಬ್ಬಂದಿ ಇಂಗ್ಲೆಂಡಿನಲ್ಲಿಯಂತೆ ಇಲ್ಲಿಯೂ ಸಾರ್ವಜನಿಕರಲ್ಲಿ ಅದೇ ರೀತಿಯ ಅಪನಂಬುಗೆಯನ್ನು ಉಂಟುಮಾಡುತ್ತಿರುವುದಾಗಿ ತೋರುತ್ತದೆ. ಅವರನ್ನು ಸಾಮಾನ್ಯ ಜನರು ಕೇವಲ ರಾಜ್ಯದ ಗುಲಾಮರೆಂದು ಪರಿಗಣಿಸಿದ್ದಾರೆ."

ಬ್ರಾಹ್ಮಣರ ಬಡತನ:

"ಪ್ಯಾರಾ–೧೯: ಇದುವರೆಗೆ ಮಾಡಲಾದ ವಿಶ್ಲೇಷಣೆ ದೀರ್ಘವೆನಿಸಿದರೂ ಅನಿವಾರ್ಯವಾಗಿದೆ. ಏಕೆಂದರೆ, ನಾವು ಅದರಿಂದ ಕೆಲವು ಪ್ರಮುಖ ನಿರ್ಣಯಗಳಿಗೆ ಬರಬಹುದು. ಮೊದಲನೆಯದಾಗಿ, ಶಿಕ್ಷಣದ ಬೀಜವನ್ನು ಬಿತ್ತಿ ಪಸರಿಸುವುದಕ್ಕಾಗಿ ಸರಕಾರ ಉಪಯೋಗಿಸುತ್ತಿರುವ ಪ್ರಭಾವಿ ಮಾರ್ಗಗಳೆಂದರೆ ಬ್ರಾಹ್ಮಣರು ಮತ್ತು ಅವರಂತಹ ಇತರ ಉಚ್ಚ ವರ್ಗದ ಜನರು. ಆದರೆ ಬ್ರಾಹ್ಮಣರು ಮತ್ತು ಅವರಂತಹ ಈ ಉಚ್ಚ ವರ್ಗದ ಜನರು ಕಡುಬಡವರಾಗಿದ್ದಾರೆ; ಮತ್ತು ಭಾರತದ ಅನೇಕ ಭಾಗಗಳಲ್ಲಿ ಬ್ರಾಹ್ಮಣ ಪದವು 'ಭಿಕ್ಷುಕ' ಪದಕ್ಕೆ ಸಮಾನವಾಗಿದೆ."

ಶ್ರೀಮಂತ ವರ್ಗಗಳು ಸದ್ಯದಲ್ಲಿ ಉಚ್ಚ ಶಿಕ್ಷಣಕ್ಕೆ ಬೆಂಬಲ ನೀಡುವುದಿಲ್ಲ:

"ಪ್ಯಾರಾ-೨೦: ಇಂತಹ ಪರಿಸ್ಥಿತಿಯಲ್ಲಿ ಘನತೆವೆತ್ತ ತಾವು ಮತ್ತು ಪರಿಷತ್ತಿನಲ್ಲಿ ತಮ್ಮ ೨೪ನೆಯ ಏಪ್ರಿಲ್ ೧೮೫೦ರ ಪತ್ರದಲ್ಲಿ ನಮಗೆ ಬಲವಾಗಿ ಆಜ್ಞಾಪಿಸಿರುವ ವಿಷಯವನ್ನು ಜಾರಿಗೊಳಿಸುವುದು ಎಷ್ಟು ಕಷ್ಟ ಹಾಗೂ ನಿರರ್ಥಕವಾಗುವುದೆಂಬುದನ್ನು ಈಗ ಕಾಣಬಹುದು. ಮೇಲ್ನೋಟಕ್ಕೆ ಯಾವುದು ಸೂಕ್ತ ಮತ್ತು ನ್ಯಾಯಸಮ್ಮತ ಅಥವಾ ಸಾಧ್ಯವೆಂದು ತೋರುತ್ತದೆಯೋ- ಯಾವುದನ್ನು ಮಾಡಲು ಮಂಡಳಿಯವರೇ ಪ್ರಯತ್ನಿಸಿದ್ದಾರೋ ಅಂದರೆ, ಉಚ್ಚ ಶಿಕ್ಷಣವನ್ನು ಅದಕ್ಕಾಗಿ ಹಣ ನೀಡುವ ಸಾಮರ್ಥ್ಯ ಹೊಂದಿರುವ ಶ್ರೀಮಂತರಿಗೆ ಮತ್ತು ಅಸಾಧಾರಣ ಬುದ್ಧಿವಂತಿಕೆಯ ಯುವಕರಿಗೆ ಮಾತ್ರ ಕಟ್ಟುನಿಟ್ಟಾಗಿ ನಿರ್ಬಂಧಿಸುವ ಪ್ರಯತ್ನ ನಿರರ್ಥಕವೆನಿಸುವುದು. ಇಂತಹ ಸೂಚನೆಯನ್ನು ಜಾರಿಗೊಳಿಸುವ ಪ್ರಯತ್ನದಲ್ಲಿ ಮಂಡಳಿಗೆ ದೊರೆತ ಸಹಜ ಉತ್ತರವೆಂದರೆ, ಶ್ರೀಮಂತರು ಉಚ್ಚ ಶಿಕ್ಷಣದ ಬಗ್ಗೆ ಸಂಪೂರ್ಣ ಔದಾಸೀನ್ಯ ಹೊಂದಿದ್ದಾರೆ ಮತ್ತು ಶಾಲಾ ತರಬೇತಿಯಿಂದ ಬೆಳಸಲ್ಪಟ್ಟ ಮತ್ತು ಪರೀಕ್ಷೆಯ ಮುಖಾಂತರ ಗೊತ್ತಾಗುವವರೆಗೂ ಬಡವರ ಅಸಾಧಾರಣ ಬುದ್ಧಿಶಕ್ತಿಯನ್ನು ತಿಳಿದುಕೊಳ್ಳಲು ಯಾವ ಸಾಧನಗಳೂ ಇರುವುದಿಲ್ಲ. ಉಚ್ಚ ಶಿಕ್ಷಣದ ಲಾಭಗಳನ್ನರಿತ ಶ್ರೀಮಂತ ವರ್ಗಗಳ ಕೆಲವೇ ಜನರೇನೋ ಆಸಕ್ತಿ ಪ್ರಕಟಿಸುತ್ತಿದ್ದಾರೆ. ಇಂತಹವರು ಮುಂಬಯಿ ಪ್ರಾಂತ್ಯಕ್ಕಿಂತ ದೀರ್ಘ ಕಾಲದಿಂದ ಸರಕಾರದ ಉತ್ತೇಜನ ಪಡೆಯುತ್ತಿರುವ ಬಂಗಾಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಂತಹ ವರ್ಗ ಬೆಳೆಯಬೇಕಾದುದು ಅನಿವಾರ್ಯವೆಂದು ನಮಗನಿಸುತ್ತದೆ. ಏಕೆಂದರೆ, ಹೆಚ್ಚಿನ ಸಾಧನೆಗಳು ಉತ್ಕೃಷ್ಟತೆಗೆ ಕಾರಣವಾಗುತ್ತವೆ ಮತ್ತು ಸಾಮಾಜಿಕ ಸಮಾನತೆಯ ಆಧಾರದ ಮೇಲೆ ಐರೋಪ್ಯರೊಂದಿಗೆ ಪರಸ್ಪರ ಸಂಬಂಧಗಳನ್ನು ತಡೆಯುವುದು ಅನಿವಾರ್ಯವೆಂದು ನಮ್ಮ ಅನುಭವದಿಂದ ತಿಳಿದಿದೆ. ಆದರೆ, ಸದ್ಯದಲ್ಲಿ ಯುರೋಪಿನ ಕಲೆ ಮತ್ತು ವಿಜ್ಞಾನಗಳ ಶೈಕ್ಷಣಿಕ ಬೋಧನೆ ವಿದ್ಯಾರ್ಥಿಗಳ ಅಥವಾ ಧನಿಕ ವರ್ಗಗಳ ಹಣದ ಆಧಾರದ ಮೇಲೆ ಸಾಧ್ಯವಾಗದು ಎಂಬ ಅಂಶ ನಮಗೆ ಮನವರಿಕೆ ಆಗಿದೆ."

ಕೆಳಜಾತಿಗಳವರ ಶಿಕ್ಷಣದ ಪ್ರಶ್ನೆ:

"ಪ್ಯಾರಾ-೨೧: ಅನೇಕ ವರ್ಷಗಳ ಅನುಭವದಿಂದ ನಮ್ಮ ಗಮನಕ್ಕೆ ಬಂದಿರುವ ಸಂಗತಿಗಳಿಂದ ನಾವು ಮಾಡಬೇಕಾದ ತೀರ್ಮಾನವೆಂದರೆ ನಮ್ಮ ಕೈಯಲ್ಲಿ ಶಿಕ್ಷಣ ಪಡೆಯಬಯಸುವ ಉಚ್ಚ ಜಾತಿಗಳಿಗೆ ಸೇರಿದ ಬಡಮಕ್ಕಳಿಗೆ ಉಚ್ಚ ಶಿಕ್ಷಣದ ಬಾಗಿಲನ್ನು ಮುಕ್ತವಾಗಿಡಬೇಕು. ಆದರೆ, ಇದರಲ್ಲಿಯೂ ಕೂಡ ಗಮನಾರ್ಹವಾದ ಮತ್ತು ಪೇಚಾಟವನ್ನುಂಟುಮಾಡುವಂತಹ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಸರಕಾರಿ ಸಂಸ್ಥೆಗಳಿಗೆ ಬಡವರ ಮಕ್ಕಳನ್ನು ಉಚಿತವಾಗಿ ಮತ್ತು ಮುಕ್ತವಾಗಿ ಸೇರಿಸಿಕೊಳ್ಳುವುದಾದರೆ ಕೀಳು ಜಾತಿಗಳಾದ ಧೇಡರು ಮುಂತಾದವರ ಮಕ್ಕಳು ಶಾಲೆಗಳಿಗೆ ನುಗ್ಗುವುದನ್ನು ಏಕೆ ತಡೆಯಬೇಕು?"

ಹಿಂದೂಗಳ ಸಾಮಾಜಿಕ ದುರಭಿಪ್ರಾಯಗಳು:

"ಪ್ಯಾರಾ–೨೨: ಮುಂಬಯಿಯಲ್ಲಿ ಈ ಕೊನೆಯ ಜಾತಿಗಳ ವರ್ಗ ನಿರ್ಮಾಣವಾದರೆ, ಅವರು ಮಂಡಳಿಯ ಸೇವೆಯಲ್ಲಿರುವ ಪ್ರಾಧ್ಯಾಪಕರು ಮತ್ತು ಉಪಾಧ್ಯಾಯರುಗಳಿಂದ ತರಬೇತಿ ಪಡೆದು ಸಮಾಜದ ಇತರ ಯಾವುದೇ ಜಾತಿಯವರಿಗಿಂತ ಶ್ರೇಷ್ಠ ಬುದ್ಧಿ ಶಕ್ತಿಯುಳ್ಳವರಾಗುವರು. ಮತ್ತು ಪಡೆದುಕೊಳ್ಳುವ ಅಂತಹ ಅರ್ಹತೆಗಳಿಂದ ಅವರು ದೇಶೀಯ ಪ್ರತಿಭೆಗೆ ಮುಕ್ತವಾದ ನ್ಯಾಯಪೀಠ, ಗ್ರಾಂಡ್‌ಜ್ಯೂರಿ, ಕಮೀಷನ್ ಆಫ್ ಪೀಸ್ ಮುಂತಾದ ಸ್ಥಾನಗಳಿಗೆ ಬರುವ ಆಕಾಂಕ್ಷೆ ಹೊಂದಬಹುದು. ಇಂತಹ ಸ್ಥಾನಗಳಿಗೆ ನೇಮಕ ಮಾಡುವುದರಿಂದ ಜನರಲ್ಲಿ ಜುಗುಪ್ಸೆಗೆ, ಉದ್ರೇಕಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ, ಮತ್ತು ಜಾತಿ ವ್ಯವಸ್ಥೆಯ ಮೇಲೆ ಆಕ್ರಮಣ ಮಾಡಿದಂತಾಗುತ್ತದೆ, ಇದರಿಂದ ಬ್ರಿಟಿಷ್ ಸರಕಾರವು ತನ್ನ ಉದಾರ ನೀತಿಯನ್ನು ಅಪಾತ್ರರಿಗೆ ತೋರಿಸಿದಂತೆ ಆಗುತ್ತದೆ. ಮತ್ತು ಇದೇ ಒಂದು ದುರ್ಬಲತೆಯಾಗಿ ಕಾಣಿಸಿಕೊಳ್ಳುತ್ತದೆ" ಎಂದು ಉದಾರವಾದಿಗಳು ಹೇಳುತ್ತಾರೆ."

ಸನ್ಮಾನ್ಯ ಮೌಂಟ್ ಸ್ಟ್ಯೂಯರ್ಟ್ ಎಲ್ಫಿನ್‌ಸ್ಟನ್‌ರವರ ವಿವೇಕಯುತ ವಿಚಾರಗಳ ಉಲ್ಲೇಖ:

"ಪ್ಯಾರಾ–೨೩: ಈ ದಿಶೆಯಲ್ಲಿ ಭಾರತದ ಈ ಭಾಗದಲ್ಲಿದ್ದ ಅತ್ಯಂತ ಉದಾರ ಮತ್ತು ವಿಶಾಲ ಮನಸ್ಸಿನ ಆಡಳಿತಗಾರರಾಗಿದ್ದ ಶ್ರೀಯುತ ಎಲ್ಫಿನ್‌ಸ್ಟನ್‌ರವರ ವಿವೇಕಯುತ ಮತ್ತು ಗಂಭೀರ ವಿಚಾರಗಳು ನಿಜವಾದ ಕಾರ್ಯ ವಿಧಾನವನ್ನು ಸೂಚಿಸುತ್ತವೆ. ಅವರು ಹೇಳಿರುವಂತೆ, "ಧರ್ಮ ಪ್ರಚಾರಕರಾದ ಪಾದ್ರಿಗಳ ಅಭಿಪ್ರಾಯದಂತೆ ಅತ್ಯಂತ ಕೀಳು ಜಾತಿಗಳಲ್ಲಿ ಅತ್ಯಂತ ಶ್ರೇಷ್ಠ 'ವಿದ್ಯಾರ್ಥಿ'ಗಳು ದೊರೆಯುತ್ತಾರೆ. ಆದರೆ, ಇಂತಹವರಿಗೆ ಯಾವುದೇ ವಿಶೇಷ ಪ್ರೋತ್ಸಾಹ ನೀಡುವಲ್ಲಿ ನಾವು ಎಚ್ಚರ ವಹಿಸಬೇಕು. ಅವರು ಅತ್ಯಂತ ಕೀಳು ಜಾತಿಯವರಾಗಿರುವವರಲ್ಲದೆ, ಸಮಾಜದ ದೊಡ್ಡ ವಿಭಾಗಗಳಲ್ಲಿ ಅತಿ ಕಡಿಮೆ ಸಂಖ್ಯೆಯವರಾಗಿದ್ದಾರೆ. ಮತ್ತು ನಮ್ಮ ಶಿಕ್ಷಣದ ಪದ್ಧತಿಯು ಮೊದಲು ಅವರ ನಡುವೆ ಬೇರೂರಿತೆಂದರೆ, ಅದು ಇನ್ನೆಂದಿಗೂ ಬೆಳೆಯುವುದಿಲ್ಲ. ಮತ್ತು ನಾವು ಉಪಯುಕ್ತ ಜ್ಞಾನದಲ್ಲಿ ಉಳಿದವರಿಗಿಂತ ಉತ್ತಮರಾದವರು. ಆದರೆ, ಯಾವ ಜಾತಿಗಳ ಈ ಹೊಸ ಸಾಧನೆಗಳು ನಮ್ಮನ್ನು ಅವರ ಪರವಾಗಿರುವಂತೆ ಪ್ರೇರಿಸುವುದೋ ಅಂತಹವರಿಂದ ತಿರಸ್ಕರಿಸಲ್ಪಟ್ಟ ಮತ್ತು ಕಡೆಗಣಿಸಲ್ಪಟ್ಟ ಜನರ ಇನ್ನೊಂದು ಹೊಸ ವರ್ಗದ ಮುಂಚೂಣಿಯಲ್ಲಿರಬೇಕಾಗುವ ಸಂಭವವಿದೆ. ನಾವು ನಮ್ಮ ಅಧಿಕಾರವನ್ನು ಸ್ಥಿರಗೊಳಿಸಲು ನಮ್ಮ ಸೈನ್ಯದ ಅಥವಾ ಜನಸಂಖ್ಯೆಯ ಒಂದು ಭಾಗವನ್ನವಲಂಬಿಸಿರುವುದರಿಂದಲೇ ತೃಪ್ತರಾದಲ್ಲಿ ಅಧಿಕಾರವನ್ನು ಹೆಚ್ಚು ವಿಸ್ತೃತ ಆಧಾರದ ಮೇಲೆ ನಿಲ್ಲಿಸುವ ನಮ್ಮ ಮೂಲ ಉದ್ದೇಶ ಮತ್ತು ಪ್ರಯತ್ನಕ್ಕೆ ಅದು ಅಸಮಂಜಸವೆನಿಸುವುದು."

# I. ೧೮೧೫ರಿಂದ ೧೮೮೪ರವರೆಗೆ

೧. ಬ್ರಿಟಿಷರ ಆಡಳಿತದಲ್ಲಿ ಮುಂಬಯಿ ಪ್ರಾಂತದಲ್ಲಿ ವಿದ್ಯಾಭ್ಯಾಸ ಪ್ರಾರಂಭವಾದದ್ದು ೧೮೧೫ ರಲ್ಲಿ ಬಾಂಬೆ ಎಜುಕೇಷನ್ ಸೊಸೈಟಿ ಸ್ಥಾಪಿತವಾದಾಗಲೇ ಎನ್ನಬೇಕು. ಆ ಸಂಸ್ಥೆಯು ತನ್ನ ಪ್ರಯತ್ನ ಗಳನ್ನು ಯುರೋಪಿಯನ್ ಮಕ್ಕಳ ವಿದ್ಯಾಭ್ಯಾಸಕ್ಕೆ ಸೀಮಿತಗೊಳಿಸಲಿಲ್ಲ. ಸೂರತ್ ಮತ್ತು ಠಾಣಾ ಗಳಲ್ಲಿ ತನ್ನ ಶಾಲೆಗಳಿಗೆ ಹೋಗುವಂತೆ ದೇಶೀಯ ಬಾಲಕರಿಗೂ ಪ್ರೋತ್ಸಾಹ ಕೊಟ್ಟಿತು; ೧೮೨೦ರ ಪ್ರಾರಂಭದಲ್ಲಿ ದೇಶೀಯ ಮಕ್ಕಳಿಗಾಗಿಯೆ ಮುಂಬಯಿಯಲ್ಲಿ ನಾಲ್ಕು ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸ ಲಾಗಿತ್ತು. ಸುಮಾರು ೨೫೦ ಮಂದಿ ವಿದ್ಯಾರ್ಥಿಗಳು ಈ ಶಾಲೆಗಳಿಗೆ ಹೋಗುತ್ತಿದ್ದರು. ದೇಶೀಯ ವಿದ್ಯಾರ್ಥಿಗಳ ಶಿಕ್ಷಣವನ್ನು ವಿಸ್ತರಿಸಲು ಅದೇ ವರ್ಷ ಆಗಸ್ಟಿನಲ್ಲಿ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳ ಲಾಯಿತು. ದೇಶೀಯ ಭಾಷೆಗಳಲ್ಲಿ ಶಾಲೆಗಳ ಪುಸ್ತಕಗಳನ್ನು ಸಿದ್ಧಗೊಳಿಸಲು ಮತ್ತು ದೇಶೀಯ ಶಾಲೆಗಳಿಗೆ ನೆರವು ನೀಡಲು ಅಥವಾ ಅಂತಹ ಶಾಲೆಗಳನ್ನು ಪ್ರಾರಂಭಿಸಲು ಒಂದು ವಿಶೇಷ ಸಮಿತಿ ಯನ್ನು ಈ ಸಂಸ್ಥೆ ನೇಮಿಸಿತು. ಆದರೆ, ಈ ಪ್ರಯತ್ನದ ವಿಶಾಲ ವ್ಯಾಪ್ತಿಯು ಮುಖ್ಯವಾಗಿ ಬಡವರ ವಿದ್ಯಾಭ್ಯಾಸಕ್ಕಾಗಿಯೆ ಸ್ಥಾಪಿಸಲಾದ ಸಂಸ್ಥೆಯ ಗುರಿಗಳನ್ನು ಮೀರಿದ್ದು ಎನ್ನುವುದು ಬೇಗ ಸ್ಪಷ್ಟವಾಯಿತು; ೧೮೨೨ರಲ್ಲಿ ಈ ಸಮಿತಿಯು ಪ್ರತ್ಯೇಕ ನಿಗಮವಾಗಿ ಮಾರ್ಪಟ್ಟು 'ಬಾಂಬೆ ನೇಟಿವ್ ಸ್ಕೂಲ್ ಬುಕ್ ಅಂಡ್ ಸ್ಕೂಲ್ ಸೊಸೈಟಿ' ಎನ್ನುವ ಹೆಸರನ್ನು ಪಡೆಯಿತು; ೧೮೨೭ರಲ್ಲಿ ಈ ಹೆಸರು 'ಬಾಂಬೆ ನೇಟಿವ್ ಎಜುಕೇಷನ್ ಸೊಸೈಟಿ' ಎಂದು ಬದಲಾಯಿತು. ಈ ಸೊಸೈಟಿಯ ಮೊದಲ ಅಧ್ಯಕ್ಷರು ದಿ ಆನರಬಲ್ ಮೌಂಟ್ ಸ್ಟೂವರ್ಟ್ ಎಲ್ಫಿನ್‌ಸ್ಟನ್. ಮುಖ್ಯ ನ್ಯಾಯಧೀಶರೂ ಮತ್ತು ಮುಂಬಯಿ ಸರ್ಕಾರದ ಕಾರ್ಯ ನಿರ್ವಾಹಕ ಮಂಡಲಿಯ ಮೂವರು ಸದಸ್ಯರು ಉಪಾಧ್ಯಕ್ಷರಾಗಿದ್ದರು; ಕಾರ್ಯ ನಿರ್ವಾಹಕ ಸಮಿತಿ ಯಲ್ಲಿ ಹನ್ನೆರಡು ಮಂದಿ ಯುರೋಪಿಯನ್ನರು, ಹನ್ನೆರಡು ಮಂದಿ ಭಾರತೀಯರು ಸದಸ್ಯ ರಾಗಿದ್ದು ಕ್ಯಾಪ್ಟನ್ ಜಾರ್ಜ್ ಜರ್ವಿಸ್, ಆರ್. ಇ. ಮತ್ತು ಶ್ರೀ ಸದಾಶಿವ ಕಾಶೀನಾಥ ಛತ್ರೆ ಕಾರ್ಯದರ್ಶಿಗಳಾಗಿದ್ದರು. ಸೊಸೈಟಿಯು ಸರ್ಕಾರದಿಂದ ತಿಂಗಳಿಗೆ ೬೦೦ ರೂಪಾಯಿ ಅನುದಾನ ಪಡೆದು ಕೆಲಸವನ್ನು ಪ್ರಾರಂಭಿಸಿತು. ೧೮೨೫ರಷ್ಟು ಹಿಂದೆಯೇ ಮುಂಬಯಿ ಸರ್ಕಾರವು ತನ್ನ ಖರ್ಚಿನಲ್ಲಿ ಜಿಲ್ಲಾ ನಗರಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ಅವನ್ನು ಕಲೆಕ್ಟರರ ನಿರ್ವಹಣೆಗೆ ಒಪ್ಪಿಸಿದ್ದಿತು. ಈ ಎರಡು ಪ್ರತ್ಯೇಕ ಸಂಸ್ಥೆಗಳ ಕೆಲಸ ಕಾರ್ಯಗಳ ಹೊಂದಾಣಿಕೆ ಮಾಡಲು ೧೮೪೦ರಲ್ಲಿ ಆರು ಸದಸ್ಯರ ಬೋರ್ಡ್ ಆಫ್ ಎಜುಕೇಷನ್ ಅನ್ನು ಸ್ಥಾಪಿಸಲಾಯಿತು; ಸರ್ಕಾರವು ಮೂವರು ಸದಸ್ಯರನ್ನು ಮತ್ತು ನೇಟಿವ್ ಎಜುಕೇಷನ್ ಸೊಸೈಟಿಯು ಮೂವರು ಸದಸ್ಯರನ್ನು ನೇಮಿಸುತ್ತಿದ್ದವು. ೧೮೫೫ರಲ್ಲಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರ ನೇಮಕವಾಗುವವರೆಗೆ ಬೋರ್ಡ್ ಶಿಕ್ಷಣ ಇಲಾಖೆಯು ಪ್ರಚಾರದಲ್ಲಿತ್ತು.

೨. ೧೮೫೫ರ ಮಾರ್ಚ್ ೧ರಂದು ಮಂಡಲಿಯನ್ನು ವಿಸರ್ಜಿಸಿದಾಗ ಮುಂಬಯಿ ಪ್ರಾಂತದಲ್ಲಿ ಬೋರ್ಡಿನ ಅಧೀನದಲ್ಲಿ ೧೫ ಇಂಗ್ಲಿಷ್ ಕಾಲೇಜುಗಳು ಮತ್ತು ಶಾಲೆಗಳಿದ್ದು ಇವುಗಳಲ್ಲಿ ದಾಖಲೆ ಪುಸ್ತಕದ ಪ್ರಕಾರ ೨೨೫೦ ವಿದ್ಯಾರ್ಥಿಗಳಿದ್ದರು ಮತ್ತು ೨೫೬ ದೇಶೀಯ ಭಾಷೆಗಳ ಶಾಲೆಗಳಿದ್ದು

ದಾಖಲೆಯ ಪುಸ್ತಕದ ಪ್ರಕಾರ ೧೮,೮೮೮ ವಿದ್ಯಾರ್ಥಿಗಳಿದ್ದರು. ಇದೇ ವರದಿಯಲ್ಲಿ ಬೋರ್ಡ್ ಹೀಗೆ ಹೇಳಿದೆ:

> "೨೪. (೧೮೫೫)ರ ಆಗಸ್ಟ್ ತಿಂಗಳಿನಲ್ಲಿ ಅಹಮದ್ ನಗರದ ಕೆಲವರು ನಿವಾಸಿಗಳಿಂದ ನಮಗೊಂದು ಮನವಿ ಪತ್ರ ಬಂದಿತು; ಅವರು ಹಿಂದಿನ ನಿಯಮಗಳ ಪ್ರಕಾರ ಕೆಳಗಿನ ಜಾತಿಯವರ ಒಂದು ಶಾಲೆಯನ್ನು ಸ್ಥಾಪಿಸಬೇಕೆಂದು ಪ್ರಾರ್ಥಿಸಿ ಉಪಾಧ್ಯಾಯರ ಸಂಬಳದಲ್ಲಿ ಅರ್ಧ ಭಾಗದ ವೆಚ್ಚವನ್ನು ವಹಿಸಿಕೊಳ್ಳಲು ಒಪ್ಪಿದ್ದರು. ಮನವಿದಾರರು ಒಂದು ಶಾಲಾ ಕಟ್ಟಡವನ್ನು ನಿರ್ಮಿಸಿದ್ದರು, ೩೦ ಮಂದಿ ವಿದ್ಯಾರ್ಥಿಗಳು ಬರಬಹುದೆಂದು ಲೆಕ್ಕ ಹಾಕಲಾಗಿತ್ತು. ಇಂತಹ ಶಾಲೆಯನ್ನು ಸ್ಥಾಪಿಸುವುದು ಇನ್ನೂ ಶ್ರೀಮಂತವಾದ ಮತ್ತು ಮೇಲ್ವರ್ಗದ ಜಾತಿಗಳವರ ಪೂರ್ವಾಗ್ರಹಗಳಿಗೆ ವಿರುದ್ಧವಾಗಿತ್ತು. ಅಲ್ಲದೆ, ಹೆಚ್ಚೇನೂ ಅಲ್ಲದ ಸಂಬಳಕ್ಕೆ ಒಬ್ಬ ಉಪಾಧ್ಯಾಯರನ್ನು ತರುವುದೂ ಸ್ವಲ್ಪ ಕಷ್ಟವಾಯಿತು; ಆದರೆ ಮನವಿಯು ಈ ವಿಷಯವಾಗಿ ಹಿಂದೆ ಹೊರಡಿಸಿದ್ದ ಪ್ರಕಟಣೆಯ ಷರತ್ತುಗಳಿಗೆ ಕಟ್ಟುನಿಟ್ಟಾಗಿ ಅನುಗುಣವಾಗಿದ್ದುದರಿಂದ ನಾವು ಕೂಡಲೇ ವಿನಂತಿಯನ್ನು ಮನ್ನಿಸಿದೆವು ಮತ್ತು ಶಾಲೆಯು ನವೆಂಬರ್‌ನಲ್ಲಿ ಪ್ರಾರಂಭವಾಯಿತು. *ಈ ಜಾತಿಯವರಿಗಾಗಿ ನಾವು ಶಾಲೆಯನ್ನು ಸ್ಥಾಪಿಸಿದ್ದು ಇದೇ ಮೊದಲ ಬಾರಿಯಾದ್ದರಿಂದ ನಾವು ಈ ವಿಷಯವನ್ನು ಪ್ರಸ್ತಾಪಿಸಿದ್ದೇವೆ."*
> (ಮೂಲದಲ್ಲಿ ಈ ವಾಕ್ಯ ಇಟಾಲಿಕ್ಸ್ ಅಕ್ಷರಗಳಲ್ಲಿಲ್ಲ.)

೩. ಈ ಪ್ರಾಂತದಲ್ಲಿ ಕೆಳಜಾತಿಯವರಿಗೆ ಶಾಲೆಯನ್ನು ಸ್ಥಾಪಿಸಿದ್ದು ಇದೇ ಮೊದಲು ಎನ್ನುವ ಬೋರ್ಡ್‌ನ ಹೇಳಿಕೆಯಿಂದ ೧೮೫೫ಕ್ಕೆ ಮೊದಲು ನಿಮ್ಮ ವರ್ಗದವರ ವಿದ್ಯಾಭ್ಯಾಸದ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಪ್ರಶ್ನೆಗೆ ಸರ್ಕಾರದ ಶಿಕ್ಷಣದ ಧೋರಣೆಯ ಇಣುಕುನೋಟವನ್ನು ಹಾಯಿಸುವುದು ಅಗತ್ಯ. ಪೇಷ್ವಾ ಸರ್ಕಾರದ ಆಡಳಿತದಲ್ಲಿ ನಿಮ್ಮ ವರ್ಗದವರು ಪೂರ್ಣವಾಗಿ ಶಿಕ್ಷಣದ ವ್ಯಾಪ್ತಿಯ ಹೊರಗಡೆ ಇದ್ದರು ಎಂಬುದನ್ನು ಒಪ್ಪಬೇಕು. ಸರ್ಕಾರ ನೀಡುವ ಶಿಕ್ಷಣದ ಯಾವುದೇ ವಿಚಾರದಲ್ಲಿ ಅವರಿಗೆ ಸ್ಥಾನ ಸಿಕ್ಕಿರಲಿಲ್ಲ. ಅದಕ್ಕೆ ಕಾರಣ ಸರಳವಾಗಿತ್ತು; ಪೇಷ್ವಾ ಸರ್ಕಾರವು ಮನುವಿನ ಸೂತ್ರಗಳ ಪ್ರಕಾರ ನಡೆಸಲ್ಪಡುತ್ತಿದ್ದುದರಿಂದ (ಶಿಕ್ಷಣ ಇಲಾಖೆಯ ಹಿಂದುಳಿದ ವರ್ಗಗಳಿಗೆ ಸಂವಾದಿಯಾದ) ಶೂದ್ರರು ಮತ್ತು ಅತಿಶೂದ್ರರಿಗೆ ಪ್ರಾಣ, ಸ್ವಾತಂತ್ರ್ಯ ಮತ್ತು ಆಸ್ತಿಗಳ ಮೇಲೆ ಏನಾದರೂ ಹಕ್ಕಿದ್ದರೂ ಸಹ ಶಿಕ್ಷಣದ ಹಕ್ಕಿರಲಿಲ್ಲ. ಇಂತಹ ಅನರ್ಹತೆಗಳಿಂದ ಕಷ್ಟಪಡುತ್ತಿದ್ದ ನಿಮ್ಮ ವರ್ಗದವರು ತಾವು ದ್ವೇಷಿಸುತ್ತಿದ್ದ ಈ ಧರ್ಮತಂತ್ರ ಉರುಳಿದಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಬ್ರಿಟಿಷ್ ಆಡಳಿತದ ಉದಯದಿಂದ ನಿಮ್ಮ ವರ್ಗದವರಲ್ಲಿ ದೊಡ್ಡ ಭರವಸೆಗಳು ಮೂಡಿದವು. ಪ್ರತಿಯೊಬ್ಬ ಮನುಷ್ಯನಿಗೂ ಅವನು ಉಚ್ಚ ಸ್ಥಾನ ದಲ್ಲಿರಲಿ, ಕೆಳಗಿನ ಸ್ಥಾನದಲ್ಲಿರಲಿ ಒಂದೇ ಮೌಲ್ಯ ಎಂದು ನಂಬುವ ಪ್ರಜಾಪ್ರಭುತ್ವ ಬ್ರಿಟಿಷ್ ಆಡಳಿತ ಎಂದು ಅವರು ನಂಬಿದ್ದು ಮೊದಲನೆಯ ಕಾರಣ. ಅದು ತನ್ನ ತತ್ವಗಳಿಗೆ ಬದ್ಧವಾಗಿದ್ದಲ್ಲಿ, ಇಂತಹ ಪ್ರಜಾಪ್ರಭುತ್ವವು ಪೇಷ್ವಾಗಳ ಧರ್ಮತಂತ್ರಕ್ಕಿಂತ ತೀರ ಭಿನ್ನವಾಗಿತ್ತು. ಎರಡನೆಯದಾಗಿ ಈ ದೇಶವನ್ನು ಗೆಲ್ಲಲು ನಿಮ್ಮ ವರ್ಗದವರು ಬ್ರಿಟಿಷರಿಗೆ ಸಹಾಯ ಮಾಡಿದ್ದರು. ಆದ್ದರಿಂದ ಬ್ರಿಟಿಷರು ತಮಗೆ ವಿಶೇಷ ಸಹಾಯ ನೀಡದಿದ್ದರೂ ಇತರರಿಗೆ ನೀಡಿದಷ್ಟು ಸಹಾಯವನ್ನು ನೀಡುವರೆಂದು ಸಹಜವಾಗಿ ನಂಬಿದ್ದರು.

೪. ಬಹುಕಾಲ ಬ್ರಿಟಿಷರು ದೇಶೀಯ ಪ್ರಜೆಗಳಲ್ಲಿ ಶಿಕ್ಷಣವನ್ನು ಬೆಳೆಸುವ ವಿಷಯದಲ್ಲಿ ಮೌನವಾಗಿಯೇ ಇದ್ದರು. ಭಾರತದ ಜನತೆಯಲ್ಲಿ ತಿಳುವಳಿಕೆಯನ್ನು ಬೆಳೆಸುವ ನೈತಿಕ ಕರ್ತವ್ಯ ಮತ್ತು ಆಡಳಿತದ ಅಗತ್ಯವನ್ನು ಭಾರತದ ಆಡಳಿತದಲ್ಲಿ ಉನ್ನತ ಸ್ಥಾನಗಳಲ್ಲಿದ್ದ ವ್ಯಕ್ತಿಗಳು ಮರೆಯದೆ ಇದ್ದರೂ ೧೮೧೩ರವರೆಗೆ ಈ ವಿಷಯದಲ್ಲಿ ಸರ್ಕಾರದ ಹೊಣೆಯನ್ನು ಕುರಿತು ಯಾವುದೇ ಸಾರ್ವಜನಿಕ ಘೋಷಣೆಯನ್ನು ಮಾಡಲಿಲ್ಲ. ಆ ವರ್ಷ ಜಾರ್ಜ್ IV ೧೫೫ನೇ ಅಧ್ಯಾಯದ ೩೩ನೇ ನಿಯಮದ ೪೩ನೇ ವಿಭಾಗದಲ್ಲಿ ಸಂಸತ್ತು "ಭಾರತದ ನಿವ್ವಳ ಆದಾಯದಲ್ಲಿ ಪ್ರತಿವರ್ಷ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಹಣವನ್ನು ಪ್ರತ್ಯೇಕವಾಗಿ ತೆಗೆದಿಟ್ಟು ಇದನ್ನು ಸಾಹಿತ್ಯದ ಪುನರುಜ್ಜೀವನ ಮತ್ತು ಸುಧಾರಣೆಗಳಿಗಾಗಿಯೂ ಭಾರತದ ದೇಶೀಯ ವಿದ್ವಾಂಸರಿಗೆ ಪ್ರೋತ್ಸಾಹ ಕೊಡುವುದಕ್ಕಾಗಿಯೇ ಭಾರತದಲ್ಲಿ ಬ್ರಿಟಿಷ್ ಆಡಳಿತದಲ್ಲಿರುವ ಪ್ರದೇಶಗಳಲ್ಲಿರುವ ಜನತೆಯಲ್ಲಿ ವಿಜ್ಞಾನಗಳ ತಿಳುವಳಿಕೆಯನ್ನು ಮೂಡಿಸಿ ಪ್ರೋತ್ಸಾಹಿಸುವುದು ಮುಂತಾದವುಗಳಿಗಾಗಿಯೇ ಬಳಸತಕ್ಕದ್ದು" ಎಂದು ವಿಧಿಸಿತು. ಆದರೆ, ಈ ಶಾಸನಬದ್ಧ ಅವಕಾಶದಿಂದ ಸಹ ಈ ದೇಶದ ಜನರ ಶಿಕ್ಷಣವನ್ನು ದೃಢವಾದ ಮತ್ತು ವ್ಯವಸ್ಥಿತವಾದ ಆಧಾರದ ಮೇಲೆ ರೂಪಿಸುವ ಪ್ರಯತ್ನ ೧೮೭೩ರವರೆಗೆ ನಡೆಯಲಿಲ್ಲ. ಏಕೆಂದರೆ ಕೋರ್ಟ್ ಆಫ್ ಡೈರೆಕ್ಟರ್ಸ್ ೧೮೧೪ರ ಜೂನ್ ೩ರಂದು ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಬರೆದ ಅಧಿಕೃತವಾದ ಪತ್ರದಲ್ಲಿ ಹಿಂದೂಗಳಲ್ಲಿ ಸಂಸ್ಕೃತದ ಅಭ್ಯಾಸಕ್ಕೆ ಪ್ರೋತ್ಸಾಹ ಕೊಟ್ಟರೆ ಸಂಸತ್ತು ಮನಸ್ಸಿನಲ್ಲಿ ಹೊಂದಿದ್ದ ಉದ್ದೇಶ ಈಡೇರಿದಂತೆಯೇ ಎಂದು ಅಪ್ಪಣೆ ಮಾಡಿತು. ಈ ದೇಶದ ಜನತೆಯ ವಿದ್ಯಾಭ್ಯಾಸವನ್ನು ದೃಢವಾದ ಮತ್ತು ವ್ಯವಸ್ಥಿತವಾದ ಆಧಾರದ ಮೇಲೆ ರೂಪಿಸಲು ವ್ಯವಸ್ಥಿತವಾದ ಪ್ರಯತ್ನ ಪ್ರಾರಂಭವಾದಾಗ ನಿಮ್ನ ವರ್ಗದವರಿಗೆ ಎಂತಹ ನಿರಾಸೆ! ಏಕೆಂದರೆ ಉದ್ದೇಶಪೂರ್ವಕವಾಗಿ ಬ್ರಿಟಿಷ್ ಸರ್ಕಾರವು ವಿದ್ಯಾಭ್ಯಾಸವು ಮೇಲ್ವರ್ಗದವರಿಗಾಗಿಯೆ ಕಾದಿರಿಸಿದ ಕ್ಷೇತ್ರ ಎಂದು ತೀರ್ಮಾನ ಮಾಡಿತು. ಯಾರಾದರೂ ಇದು ಕಟ್ಟುಕಥೆ ಎಂದುಕೊಳ್ಳಬಹುದಾದುದರಿಂದ ೧೮೫೦–೫೧ನೇ ವರ್ಷದ ಮುಂಬಯಿ ಪ್ರಾಂತದ ಬೋರ್ಡ್ ಆಫ್ ಎಜುಕೇಷನ್‌ನ ವರದಿಯಿಂದ ತೆಗೆದ ಈ ಕೆಳಗಿನ ಭಾಗಗಳನ್ನು ಗಮನಿಸಬೇಕೆಂದು ಕೇಳಿಕೊಳ್ಳಲಾಗಿದೆ.

**ಕೋರ್ಟ್ ಆಫ್ ಡೈರೆಕ್ಟರರ ಅಭಿಪ್ರಾಯಗಳ ಆಧಾರದ ಮೇಲೆ ಬೋರ್ಡ್ ಆರಿಸಿಕೊಂಡ ವ್ಯವಸ್ಥೆ**

"ಐದನೆಯ ಪ್ಯಾರಾಗ್ರಾಫ್. ಈ ಪ್ರಾಂತದ ಬೋರ್ಡ್ ಆಫ್ ಎಜುಕೇಷನ್, ಗೌರವಾನ್ವಿತ ಕೋರ್ಟಿನ ಪತ್ರಗಳಲ್ಲಿ ಮುಖ್ಯ ಆಜ್ಞೆಗಳಿಗೆ ಅನುಗುಣವಾಗಿ ಮತ್ತು ಭಾರತದಲ್ಲಿ ಶಿಕ್ಷಣದ ಪ್ರಗತಿಯನ್ನು ಲಕ್ಷ್ಯವಿಟ್ಟು ಪರಿಶೀಲಿಸುತ್ತಿದ್ದ ಅರ್ಲ್ ಆಫ್ ಆಕಲೆಂಡ್, ಮೇಜರ್ ಕ್ಯಾಂಡಿ ಮೊದಲಾದವರ ಅಭಿಪ್ರಾಯಗಳಿಗಿಂತ ಹೆಚ್ಚಾಗಿ ದೇಶೀಯರಲ್ಲೇ ಬಹು ಬುದ್ಧಿವಂತರಾದವರು ಬಹಿರಂಗವಾಗಿ ಘೋಷಿಸಿದ ಪ್ರಕಾರ ಅವರ ಅಗತ್ಯಗಳನ್ನು ಆಧರಿಸಿದ ಶಿಕ್ಷಣ ವ್ಯವಸ್ಥೆಯನ್ನು ನಿರ್ಧರಿಸಿರಲು ಕೌನ್ಸಿಲಿನಲ್ಲಿ ಪ್ರಭುಗಳಾದ ತಮ್ಮ ಹಿಂದಿನವರು ಈ ಪ್ರತಿಕ್ರಿಯೆಯನ್ನು ಹಿಮ್ಮೊಗ ಮಾಡಬೇಕೆಂದು ಬೋರ್ಡಿಗೆ ತಿಳಿಸಿದರು ಎಂದು ಪುನರುಚ್ಚರಿಸುತ್ತೇನೆ.

**ಮೇಲ್ವರ್ಗಗಳಿಗೆ ಶಿಕ್ಷಣ ನೀಡುವುದರ ಔಚಿತ್ಯವನ್ನು ಕುರಿತು ಕೋರ್ಟಿನ ಅಭಿಪ್ರಾಯಗಳು**

"ಎಂಟನೆಯ ಪ್ಯಾರಾಗ್ರಾಫ್. ಸರ್ಕಾರ ನೀಡುವ ಶಿಕ್ಷಣವು ತಲುಪಬೇಕಾದ ವಲಯಗಳ ವಿಷಯದಲ್ಲಿ ವೆಚ್ಚಕ್ಕಾಗಿ ಈ ಶಾಖೆಗೆ ಲಭ್ಯವಿರುವ ಬಹುಪರಿಮಿತವಾದ ಹಣದ ದೃಷ್ಟಿಯಿಂದಲಂತೂ ಗೌರವಾನ್ವಿತ ಕೋರ್ಟಿನ ಸೂಚನೆಗಳು, ತಾವು ನಾವು ಆ ಮಾತುಗಳನ್ನು ಬಳಸಲು ಅನುಮತಿ ನೀಡುವುದಾದರೆ, ಅಷ್ಟೆ ವಿವೇಕಯುತವಾದವು ಎನ್ನಬೇಕು. ೧೮೩೦ರಲ್ಲಿ ಗೌರವಾನ್ವಿತ ಕೋರ್ಟ್ ಮದರಾಸಿಗೆ ಹೀಗೆ ಬರೆಯಿತು: "ಜನತೆಯ ನೈತಿಕ ಹಾಗೂ ಬೌದ್ಧಿಕ ಮಟ್ಟವನ್ನು ಉತ್ತಮಪಡಿಸಬಲ್ಲಂತಹ ಶಿಕ್ಷಣದ ಅಭಿವೃದ್ಧಿಯೆಂದರೆ, ಉಳಿದ ಜನತೆಯ ಮೇಲೆ ಪ್ರಭಾವವನ್ನು ಬೀರಬಲ್ಲ ಮತ್ತು ಅಧ್ಯಯನಕ್ಕೆ ಸಾಕಷ್ಟು ಕಾಲಾವಕಾಶವನ್ನು ಹೊಂದಿರತಕ್ಕ ಮೇಲ್ವರ್ಗಗಳವರಿಗೆ ಶಿಕ್ಷಣವನ್ನು ನೀಡುವುದೇ ಆಗಿದೆ. ಬಹುಸಂಖ್ಯಾತರಾದ ಇತರ ವರ್ಗಗಳವರಿಗೆ ಶಿಕ್ಷಣ ಕೊಡುವುದರಿಂದ ಆಗುವ ಲಾಭಕ್ಕಿಂತ ಹೆಚ್ಚಿನ ಉಪಯೋಗವು ಈ ವರ್ಗಗಳವರಿಗೆ ಉತ್ತಮ ಶಿಕ್ಷಣ ಕೊಡುವುದರಿಂದ ದೊರೆಯುತ್ತದೆ. ಅಲ್ಲದೆ, ಪ್ರಕೃತ ಇರುವ ಪರಿಸ್ಥಿತಿಗೆ ಬದಲಾಗಿ ಭಾರತ ಸರಕಾರದ ಸೇವೆಗೆ ಅರ್ಹರಾದ ದೇಶೀಯರನ್ನು ಸಿದ್ಧಗೊಳಿಸುವ ನಮ್ಮ ತೀವ್ರವಾದ ಹಂಬಲ ನಿಮ್ಮ ಅರಿವಿಗೆ ಬಂದಿರಬೇಕು."

ಇಷ್ಟಾದರೂ ನಮ್ಮ ಸುತ್ತಲೆಲ್ಲ ಭಾರತದ ಒಂದು ನೂರು ದಶಲಕ್ಷ ಅಥವಾ ಒಂದು ನೂರು ನಲವತ್ತು ದಶಲಕ್ಷ ಜನರಿಗೆ (ಈ ಸಂಖ್ಯೆಗಳಿಗೆ ಅರ್ಥವೇ ಇಲ್ಲ) ಯೂರೋಪಿನ ಕಲೆಗಳು ಮತ್ತು ವಿಜ್ಞಾನಗಳು ಹರಡಿ ಲಭ್ಯವಾಗುವಂತೆ ಜನಸಾಮಾನ್ಯರಿಗೆ ವಿದ್ಯಾಭ್ಯಾಸ ನೀಡುವ ಅಗತ್ಯ ಮತ್ತು ಸೌಲಭ್ಯವನ್ನು ಹಾಗೆಯೇ ಇತರ ಸಾಮಾನ್ಯ ವಿಷಯಗಳನ್ನು ಕುರಿತು ಹೆಚ್ಚಿನ ತಿಳುವಳಿಕೆ ಇರಬೇಕಾದವರೂ ಸಹ ಮಾತನಾಡುವುದನ್ನು ಕೇಳುತ್ತೇವೆ; ಈ ವಿಷಯವಾಗಿ ಅಸ್ಪಷ್ಟ ವಿಚಾರ ರೀತಿಯನ್ನು ತೋರಿಸುವ ಈ ಮಾತುಗಳನ್ನು ಕೇಳಿದ ಯಾರಿಗಾದರೂ ಎಜುಕೇಷನಲ್ ಬೋರ್ಡುಗಳಿಗೆ ಲಭ್ಯವಿರುವುದು ಇಂಗ್ಲೆಂಡಿನಲ್ಲಿ ಒಂದು ಸಂಸ್ಥೆಗೆ ಖರ್ಚು ಮಾಡುವುದಕ್ಕಿಂತ ಕಡಿಮೆ ಮೊತ್ತ ಹಾಗೂ ಇಡೀ ಸರ್ಕಾರದ ಎಲ್ಲ ಸಂಪನ್ಮೂಲಗಳು ಈ ಬೋರ್ಡುಗಳ ಕೈಯಲ್ಲಿ ಇವೆ ಎನಿಸಿಬಿಡಬಹುದು.

**ಕಳೆದ ಹತ್ತು ವರ್ಷಗಳಲ್ಲಿನ ಪ್ರಮುಖ ಶೈಕ್ಷಣಿಕ ವಾಸ್ತವಾಂಶಗಳ ಬಗ್ಗೆ ಗಮನ ಹರಿಸುವುದು.**

ಅನಗತ್ಯ ವಿವಾದಗಳನ್ನು ಮತ್ತು ಊಹಾಪೋಹಗಳನ್ನು ದೂರವಿಟ್ಟು ವಾಸ್ತವಾಂಶಗಳನ್ನು ಮತ್ತು ಮೇಲೆ ಹೇಳಿದ ವಿಷಯಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ, ಸಾಕಷ್ಟು ಶ್ರಮವಹಿಸಿ, ನಿಷ್ಪಕ್ಷಪಾತದಿಂದ ಕಾರ್ಯೋನ್ಮುಖರಾಗುವುದು ಉಪಯುಕ್ತವಾಗಬಲ್ಲುದು ಎಂಬುದು ವಿದಿತವಾಗುತ್ತದೆ. ಇಂತಹ ಪುನರಾವಲೋಕನಕ್ಕೆ ಪ್ರಸಕ್ತ ಅವಧಿಯು ವಿಶೇಷವಾಗಿ ಸೂಕ್ತವಾಗಿರುವಂತೆ. ಕಂಡುಬರುತ್ತದೆ; ಏಕೆಂದರೆ ಈ ಪ್ರಾಂತದ ಶಾಲೆಗಳು ಸಂಪೂರ್ಣವಾಗಿ ಒಂದು ಸರ್ಕಾರಿ ಬೋರ್ಡ್‌ನ ಆಡಳಿತಕ್ಕೆ ೧೮೪೦ರಲ್ಲಿ ಬಂದ ನಂತರ ಎರಡನೆಯ ದಶಕದ ಪರಿಸ್ಥಿತಿಯ ಹಾಗೆಯೇ ಇಂದಿನ ಪರಿಸ್ಥಿತಿಯೂ ಇರುವುದು ಕಂಡುಬರುತ್ತದೆ. ಈ ಹೊತ್ತಿಗೆ ಗಣನೀಯ ಪ್ರಮಾಣದಲ್ಲಿ ಮಾಹಿತಿ ಸಂಗ್ರಹವಾಗಿರ ಬಹುದು; ಮತ್ತು ಈಗಿನ ಸದಸ್ಯರಲ್ಲಿ ಬಹುಮಂದಿ ಈ ಅವಧಿಯ ಹೆಚ್ಚಿನ ಭಾಗದಲ್ಲಿ ಬೋರ್ಡಿನಲ್ಲಿ ಇದ್ದುದರಿಂದ, ಅವರು ತಮ್ಮ ಅನುಭವವನ್ನು ದಾಖಲೆ ಮಾಡಿದರೆ, ಈ ಬೋರ್ಡಿಗೆ ಅವರ

ನಂತರ ಬರುವ ಸದಸ್ಯರ ಮುಂದೆ ಮತ್ತೆ ಮತ್ತೆ ಬರಬಹುದಾದ ಕೆಲವು ಕ್ಲಿಷ್ಟವಾದ ಆದರೆ, ಬಹು ಕುತೂಹಲಕಾರಿಯಾದ ಹಲವು ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲಬಹುದೆಂದು ಆಶಿಸ ಬಹುದಾಗಿದೆ.

**ಬಂಗಾಳ ಮತ್ತು ಮುಂಬಯಿಗಳಲ್ಲಿ ತಾನಾಗಿಯೇ ಏಕರೂಪದ ವ್ಯವಸ್ಥೆ ಬೆಳೆಯುತ್ತದೆ.**

"ಹತ್ತನೆಯ ಪ್ಯಾರಾಗ್ರಾಫ್: ನಮ್ಮ ಗಮನಕ್ಕೆ ತಾವಾಗಿ ಬಂದ ಕೆಲವು ಪ್ರಮುಖ ಶೈಕ್ಷಣಿಕ ಅಂಶಗಳನ್ನು, ನಮ್ಮ ಮಿತಿಯಲ್ಲಿ ಸಾಧ್ಯವಾದಷ್ಟು ವಿವರವಾಗಿ ಈಗ ಹೇಳುತ್ತೇವೆ. ಈ ವಾಸ್ತವಾಂಶಗಳನ್ನು ಸರಿಯಾಗಿ ಗ್ರಹಿಸಿದಾಗ ಭಾರತದ ಶೈಕ್ಷಣಿಕ ರಂಗದಲ್ಲಿ ಏಳುವ ಅನೇಕ ವಿವಾದಾತ್ಮಕ ಪ್ರಶ್ನೆಗಳು ತಾವಾಗಿಯೇ ಬಗೆಹರಿಯುತ್ತವೆ ಮತ್ತು ಈ ದೇಶದ ಸ್ಥಿತಿಗತಿಗಳಿಗೆ ಹೊಂದಿಕೊಂಡು ತಾನಾಗಿಯೇ ಬೆಳೆಯುವಂತೆ ಮಾಡುವ ಸಾಮಾನ್ಯ ಕಾರಣಗಳು ಕೆಲಸ ಮಾಡುತ್ತಿವೆ ಎನ್ನುವುದನ್ನು ತೋರಿಸುವಂತಹ ವ್ಯವಸ್ಥೆಯು ಮುಂಬಯಿಯಲ್ಲಿಯೂ ಇತರ ಪ್ರಾಂತಗಳಲ್ಲಿಯೂ ತಾನಾಗಿಯೇ ರೂಪುಗೊಳ್ಳುತ್ತಿದೆ ಎನ್ನುವುದು ಸ್ಪಷ್ಟವಾಗುತ್ತದೆ ಎಂಬುದು ನಮಗೆ ತೋರುತ್ತದೆ.

**ಮುಂಬಯಿ ಶಿಕ್ಷಣದ ಅಂಕಿಸಂಖ್ಯೆಗಳು**

"ಹನ್ನೊಂದನೆಯ ಪ್ಯಾರಾಗ್ರಾಫ್. ಮುಂದಿನ ಪುಟದ ವರದಿಯಲ್ಲಿ ೧೮೪೦ರಲ್ಲಿ ಶಾಲೆಗಳು ಮೊಟ್ಟಮೊದಲಿಗೆ ಬೋರ್ಡ್‌ನ ಆಡಳಿತಕ್ಕೆ ಬಂದಾಗ ಮತ್ತು ೧೮೫೦ರ ಏಪ್ರಿಲ್‌ನಲ್ಲಿ ಇದ್ದ ಶಾಲೆಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ತುಲನಾತ್ಮಕ ದೃಷ್ಟಿಯನ್ನು ಕೊಟ್ಟಿದೆ. ೧೮೫೦ರ ಏಪ್ರಿಲ್ ಹೊತ್ತಿಗೆ ನಾಲ್ಕು ಇಂಗ್ಲಿಷ್ ಶಾಲೆಗಳು ಮತ್ತು ೮೩ ಶಾಲೆಗಳು ಸೇರಿದ್ದವು. ಮತ್ತು ವಿದ್ಯಾರ್ಥಿಗಳ ಸಂಖ್ಯೆ ಶೇಕಡ ೧೦೦ಕ್ಕಿಂತ ಹೆಚ್ಚಾಗಿತ್ತು ಎನ್ನುವುದನ್ನು ಇದು ತೋರಿಸುತ್ತದೆ. ಈಗ ಸರ್ಕಾರಿ ಶಿಕ್ಷಣವನ್ನು ಪಡೆಯುತ್ತಿರುವವರ ಒಟ್ಟು ಸಂಖ್ಯೆ ೧೨೭೧೨: ವಿವರಗಳು ಹೀಗಿವೆ:–

| | |
|---|---|
| ಇಂಗ್ಲಿಷ್ ಶಿಕ್ಷಣ | ೧,೬೯೯ |
| ದೇಶೀಯ ಶಿಕ್ಷಣ | ೧೦,೭೩೦ |
| ಸಂಸ್ಕೃತ ಶಿಕ್ಷಣ | ೨೮೩ |

(ಕೋಷ್ಟಕಗಳಿಂದ ಹೋಲಿಕೆ: ೧೮೪೦ರಲ್ಲಿದ್ದ ಶಾಲೆಗಳ ಸಂಖ್ಯೆ ೯೭, ವಿದ್ಯಾರ್ಥಿಗಳ ಸಂಖ್ಯೆ ೫೪೯೧. ೧೮೫೦ರಲ್ಲಿದ್ದ ಶಾಲೆಗಳ ಸಂಖ್ಯೆ ೧೮೫ ಮತ್ತು ವಿದ್ಯಾರ್ಥಿಗಳ ಸಂಖ್ಯೆ ೧೨೭೧೨.)

**ಅದೇ ವಿಷಯ**

"ಹನ್ನೆರಡನೆಯ ಪ್ಯಾರಾಗ್ರಾಫ್: ಈ ವಿಷಯವಾಗಿ ಅಧಿಕಾರಯುತವಾಗಿ ಮಾತನಾಡಬಲ್ಲವರ ಪ್ರಕಾರ ಈಗಿನ ಮುಂಬಯಿ ಪ್ರಾಂತದ ಜನಸಂಖ್ಯೆ ೧೦ ದಶಲಕ್ಷವಾಗುತ್ತದೆ. ಹಿಂದಿನ ಒಂದು

ವರದಿಯಲ್ಲಿ (೧೮೪೨–೪೩, ಪುಟ ೨೬) ಗಮನಿಸಿದ ಷಿಯನ್ ಜನಗಣತಿಯಿಂದ ಗುರುತಿಸಿದ ಸಂಖ್ಯಾಶಾಸ್ತ್ರದ ನಿಯಮವನ್ನು ಅನ್ವಯಿಸಿದರೆ ಈ ಜನಸಂಖ್ಯೆ ೭ರಿಂದ ೧೪ ವಯೋಮಿತಿಯ ಮತ್ತು ಶಾಲಾ ಶಿಕ್ಷಣಕ್ಕೆ ಯೋಗ್ಯವಾದ ಗಂಡು ಹುಡುಗರು ೯,೦೦,೦೦೦ಕ್ಕಿಂತ ಕಡಿಮೆ ಇರುತ್ತಾರೆ ಎಂದು ತಿಳಿಯುತ್ತದೆ. ಆದ್ದರಿಂದ ಶಾಲೆಗೆ ಹೋಗುವ ವಯಸ್ಸಿನ ೬೯ ಬಾಲಕರಲ್ಲಿ ಒಬ್ಬನಿಗಿಂತ ಹೆಚ್ಚು ಜನಕ್ಕೆ ಅವಕಾಶವನ್ನು ಕಲ್ಪಿಸಿಕೊಡಲು ಈ ಪ್ರಾಂತದ ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

**ಅದೇ ವಿಷಯ**

"೧೩ನೆಯ ಪ್ಯಾರಾಗ್ರಾಫ್: ಅಲ್ಲದೆ, ದೇಶೀಯ ಶಾಲೆಯಲ್ಲಿ ನೀಡುವ ಶಿಕ್ಷಣದ ದಕ್ಷತೆ ಏನೇನೂ ಸಾಲದು ಎನ್ನುವುದನ್ನು ಒಪ್ಪಿಕೊಳ್ಳಲಾಗಿದೆ. ಶ್ರೀ ವಿಲ್ಲೋಬೈ ಅವರ ಸೂಚನಾಪತ್ರದ ಟೀಕೆಗಳನ್ನು ಬಹುಭಾಗ ಈ ಶಾಲೆಗಳ ದೋಷಪೂರಿತ ಸ್ವರೂಪ ಮತ್ತು ಗಣನೆಗೆ ಬಾರದ ಫಲಿತಾಂಶಗಳನ್ನು ಕುರಿತದ್ದಾಗಿಯೇ ಇವೆ. ಬೋರ್ಡ್ ಈ ವಾಸ್ತವಾಂಶವನ್ನು ಒಪ್ಪಿಕೊಳ್ಳುವುದಷ್ಟೇ ಅಲ್ಲ, ಕಳೆದ ಹಲವು ವರ್ಷಗಳಿಂದ ಇದನ್ನು ಎತ್ತಿ ತೋರಿಸುವಷ್ಟು ಅದಕ್ಕೆ ಗಮನ ನೀಡಿದ್ದಾರೆ. ಈ ವಿಷಯದಲ್ಲಿ ಅಧಿಕಾರಯುತವಾಗಿ ಮಾತನಾಡಬಲ್ಲ ಕೆಲವು ವೀಕ್ಷಕರ ಅಭಿಪ್ರಾಯದಂತೆ, ದೇಶೀಯ ಶಾಲೆಗಳ ಪ್ರತಿಕೂಲವಾದ ಚಿತ್ರವನ್ನು ಚಿತ್ರಿಸಿದ್ದಾರೆ. ಆದರೆ ಹೀಗೆ ಸೂಚಿಸಿದ ಎದ್ದುಕಾಣುವ ಕುಂದುಗಳಿಗೆ ಪರಿಹಾರಗಳೇನು? ಶ್ರೀ ವಿಲ್ಲೋಬೈ ಅವನ್ನು ಸರಿಯಾಗಿ ವರ್ಣಿಸುತ್ತಾರೆ: "ಇನ್ನೂ ಉತ್ತಮ ವರ್ಗದ ಶಾಲಾ ಉಪಾಧ್ಯಾಯರು, ಉಪಾಧ್ಯಾಯರು ಶಿಕ್ಷಣ ಶಾಲೆಗಳು, ಇನ್ನೂ ದಕ್ಷ ಮೇಲ್ವಿಚಾರಣೆ, ದೇಶೀಯ ಭಾಷೆಗಳ ಸಾಹಿತ್ಯಗಳ ಸೇರ್ಪಡೆಗಳು." ಆದರೆ ಇವೆಲ್ಲ ಹಲವಾರು ವರ್ಷಗಳಿಂದ ಬೋರ್ಡ್ ಗಮನಕ್ಕೆ ತಂದುಕೊಂಡಿರುವ ವಿಷಯಗಳೇ. ಇವು ಹೆಚ್ಚಿನ ವೆಚ್ಚವಿಲ್ಲದೆ ಒಂದೇ ಒಂದು ಹೆಜ್ಜೆಯನ್ನೂ ಮುಂದಿಡಲು ಸಾಧ್ಯವಿಲ್ಲದಿರುವಂತಹವು. ಆದರೆ ಕೌನ್ಸಿನಲ್ಲಿರುವ ತಮ್ಮ ಕಾಗದವು ನಮಗೆ "ಇನ್ನೂ ಹಲಕಾಲದವರೆಗೆ ಬೋರ್ಡಿಗೆ ಒದಗಿಸುತ್ತಿರುವುದಕ್ಕಿಂತ ಹೆಚ್ಚಿನ ಹಣದ ಸಹಾಯವನ್ನು ನೀಡಲು ಸರ್ಕಾರಕ್ಕೆ ಸಾಧ್ಯವಾಗುವ ಸಂಭವವಿಲ್ಲ" ಎಂದು ತಿಳಿಸಿದೆ.

**ಜನಸಾಮಾನ್ಯರಿಗೆ ವಿದ್ಯಾಭ್ಯಾಸ ಕೊಡಲು ಸಾಧನಗಳಿಲ್ಲ ಎಂಬ ತೀರ್ಮಾನ**

"೧೪ನೆಯ ಪ್ಯಾರಾಗ್ರಾಫ್: ವಾಸ್ತವಾಂಶಗಳಿಂದ ಇಷ್ಟು ಸ್ಪಷ್ಟವಾಗುತ್ತದೆ. ೧೭೫ ದೇಶೀಯ ಶಾಲೆಗಳನ್ನು ಯೋಗ್ಯವಾದ ರೀತಿಯಲ್ಲಿ ವ್ಯವಸ್ಥೆಗೊಳಿಸಲು ಮತ್ತು ೧೦,೩೩೦ ಮಂದಿ ಬಾಲಕರಿಗೆ ಯೋಗ್ಯವಾದ ಪ್ರಾಥಮಿಕ ಶಿಕ್ಷಣವನ್ನು ನೀಡಲು ಸಾಕಷ್ಟು ಹಣವಿಲ್ಲದಿದ್ದರೆ, 'ಜನ ಸಾಮಾನ್ಯರಿಗೆ', 'ಒಂದು ನೂರನಲವತ್ತು ದಶಲಕ್ಷ ಜನರಿಗೆ' ಮುಂಬಯಿ ಪ್ರಾಂತದ ೯,೦೦,೦೦೦ ಹುಡುಗರಿಗೆ ವಿದ್ಯಾಭ್ಯಾಸ ನೀಡುವ ಪ್ರಶ್ನೆಯೇ ಕಣ್ಮರೆಯಾಗಿಬಿಡುತ್ತದೆ. ಇದು ಸರ್ಕಾರ ಸಾಧಿಸಬಹುದಾದ ಅಥವಾ ಸಮೀಪಿಸಬಹುದಾದ ಗುರಿಯಲ್ಲ; ತಮ್ಮ ಮಿತವಾದ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಬೇಕಾಗಿರುವ ವಿದ್ಯಾಮಂಡಳಿಗಳು ವಿವೇಕಯುತವಲ್ಲದ ಔದಾರ್ಯ, ಕನಸುಗಾರಿಕೆಯ ಯೋಜನೆಗಳಿಂದ ವಿಚಲಿತವಾಗಬಾರದು.

**ಮಿತವಾದ ಸಾಧನಗಳೊಡನೆ ಕಾರ್ಯ ನಿರ್ವಹಣೆಯ ಅತ್ಯುತ್ತಮ ವಿಧಾನವನ್ನು ಕುರಿತು ಕೋರ್ಟ್ ಆಫ್ ಡೈರೆಕ್ಟರ್ಸ್ ಅಭಿಪ್ರಾಯಗಳು**

"೧೫ನೆಯ ಪ್ಯಾರಾಗ್ರಾಫ್: ಕಳೆದ ಪ್ಯಾರಾಗ್ರಾಫ್‌ನಲ್ಲಿ ಹೇಳಲಾಗಿರುವ ಅಭಿಪ್ರಾಯವನ್ನು ಸನ್ಮಾನ್ಯ ಕೋರ್ಟು ಸದಾ ಸ್ಪಷ್ಟವಾಗಿ ಗಮನದಲ್ಲಿರಿಸಿಕೊಂಡಿರುವಂತೆ ಕಾಣುತ್ತದೆ. ಜನರ ಸ್ಥಿತಿಯನ್ನು ಸುಧಾರಿಸಲು ತೀರ ಮಿತವಾದ ಪ್ರಮಾಣದಲ್ಲಿ ಮಾತ್ರ ಶೈಕ್ಷಣಿಕ ಪ್ರಯತ್ನಗಳನ್ನು ಮಾಡಲು ಸಾಧ್ಯ ಎನ್ನುವುದನ್ನು ಕಂಡುಕೊಂಡಿರುವ ಅವರು ಮಿತವಾದ ಸಾಧನೆಗಳಿಂದ ಅತ್ಯಂತ ಹೆಚ್ಚಿನ ಪರಿಣಾಮಗಳನ್ನು ಸಾಧಿಸುವ ಸರಿಯಾದ ಮಾರ್ಗವನ್ನು ವಿವಿಧ ಸರ್ಕಾರಗಳಿಗೆ ತೋರಿಸಿ ಕೊಡುವುದು ಅಗತ್ಯ ಎಂದು ಭಾವಿಸಿದ್ದಾರೆ. ಈ ವಿಷಯದಲ್ಲಿ ಅವರು ಮದ್ರಾಸ್ ಸರ್ಕಾರಕ್ಕೆ ನೀಡಿದ ಆದೇಶವನ್ನು ಆಗಲೇ ಉಲ್ಲೇಖಿಸಿದ್ದೇವೆ. (೭ನೆಯ ಪ್ಯಾರ) ಮತ್ತು ಅದೇ ದಿನ ಅವರು ಸರ್ಕಾರಕ್ಕೆ ಕಳುಹಿಸಿದ ಪತ್ರವು ಅದೇ ಇಂಗಿತದ ಅನಿಸಿಕೆಯನ್ನು ಸ್ಪಷ್ಟಪಡಿಸುತ್ತದೆ: "ಭಾರತದ ನಿವಾಸಿಗಳಲ್ಲಿ ಮೇಲು ವರ್ಗದವರಿಗೆ ಯುರೋಪಿನ ವಿಜ್ಞಾನಗಳಲ್ಲಿ ಬೋಧನೆಯನ್ನು ಮತ್ತು ನಾಗರಿಕ ಯುರೋಪಿನ ಸಾಹಿತ್ಯವನ್ನು ಅಭ್ಯಾಸ ಮಾಡುವ ಸಾಧನಗಳನ್ನು ಒದಗಿಸಿ ಕೊಡುವುದು ನಮ್ಮ ತೀವ್ರವಾದ ಅಪೇಕ್ಷೆ. ವಿರಾಮವೂ, ಸಹಜವಾದ ಪ್ರಭಾವವೂ ಇರುವ ವರ್ಗಗಳಿಗೆ ಕೊಡುವ ಚಾರಿತ್ರ್ಯದ ಶಿಕ್ಷಣವೂ ಕಟ್ಟಕಡೆಯಲ್ಲಿ ಇಡೀ ಜನತೆಯ ಚಾರಿತ್ರ್ಯದ ಮೇಲೆ ಪ್ರಭಾವವನ್ನು ಬೀರುತ್ತದೆ."

**ಭಾರತದ ಮೇಲ್ವರ್ಗದವರನ್ನು ಕುರಿತು ಶೋಧನೆ**

"ಹದಿನಾರನೆಯ ಪ್ಯಾರಾಗ್ರಾಫ್: ಭಾರತದ ಜನತೆಯಲ್ಲಿ ಒಂದು ಸಣ್ಣ ವಿಭಾಗವನ್ನು ಮಾತ್ರ ಸರ್ಕಾರದ ಶಿಕ್ಷಣಕ್ಕೆ ಒಳಪಡಿಸಕೊಳ್ಳಬಹುದೆಂಬುದು ಸ್ಪಷ್ಟವಾಗಿದ್ದು, ಗೌರವಾನ್ವಿತ ಕೋರ್ಟು ಮೇಲ್ವರ್ಗದವರನ್ನು ಈ ಗುಂಪಿಗೆ ಸೇರಿಸಬೇಕೆಂದು ತೀರ್ಮಾನಿಸಿರುವುದರಿಂದ ಈ ಮೇಲ್ವರ್ಗಗಳು ಯಾವುವು ಎಂಬುದನ್ನು ಕಂಡುಕೊಳ್ಳುವುದು ಅಗತ್ಯವಾಗಿದೆ. ಇಂತಹ ಶೋಧನೆಗಳಲ್ಲಿ ತೊಡಗಿಕೊಳ್ಳುವ ಯುರೋಪಿಯನ್ನರು ಆಂಗ್ಲೋ-ಇಂಡಿಯನ್ ಪರಿಕಲ್ಪನೆಗಳಲ್ಲಿ ಅರಿವಿಲ್ಲದೆಯೇ ನುಸುಳಿಕೊಂಡು ಬರುವ ಯುರೋಪಿಯನ್ ಸಾಮಾನ್ಯ ಊಹೆಗಳನ್ನು ತಮ್ಮ ಮನಸ್ಸಿನಿಂದ ಹೊರಗಟ್ಟುವುದು ಅತ್ಯಂತ ಅಗತ್ಯ. ಯುರೋಪಿನಲ್ಲಿ ಅದರಲ್ಲಿಯೂ ಇಂಗ್ಲೆಂಡಿನಲ್ಲಿ ಮೇಲ್ವರ್ಗದವರು ಮತ್ತು ಕೆಳವರ್ಗದವರ ನಡುವೆ ಅಲ್ಲಿನ ಸನ್ನಿವೇಶಗಳೇ ಗೆರೆ ಎಳೆದಿವೆ; ಈ ಗೆರೆಯನ್ನು ಅವರ ರೀತಿನೀತಿಗಳಲ್ಲಿ, ಶ್ರೀಮಂತಿಕೆಯಲ್ಲಿ, ರಾಜಕೀಯ ಮತ್ತು ಸಾಮಾಜಿಕ ಪ್ರಭಾವದಲ್ಲಿ ಕಾಣಬಹುದು. ಭಾರತದಲ್ಲಿ ಇಂತಹ ವಿಭಾಗ ಕಾಣುವುದಿಲ್ಲ; ಎಲ್ಲ ಸರ್ವಾಧಿಕಾರಗಳಲ್ಲಿರುವಂತೆ ಇಲ್ಲಿಯೂ ಮಹಾರಾಜನ ಇಚ್ಛೆಯೊಂದೇ ಜನರನ್ನು ಬದುಕಿನ ಅತ್ಯಂತ ಹೀನಸ್ಥಿತಿಯಿಂದ ಅತ್ಯಂತ ಮೇಲಿನ ಸ್ಥಾನಕ್ಕೆ ಏರಿಸಿಬಿಡಬಲ್ಲುದಾಗಿದೆ; ಇದರಿಂದಾಗಿ ರೀತಿನೀತಿಗಳಲ್ಲಿ ಹೆಚ್ಚಿನ ಏಕರೂಪತೆಯೇ ಸಾಮಾನ್ಯವಾಗಿ ಕಂಡಿದೆ. ಇಂಗ್ಲಿಷರ ಅಭಿಪ್ರಾಯದಂತೆ ಭಿಕ್ಷುಕನನ್ನು ದಂಡನೆಯ ಚೌಕಟ್ಟಿನಲ್ಲಿ ಇಡಬೇಕು ಅಥವಾ ಅವನಿಂದ ಕಡ್ಡಾಯವಾಗಿ ಕೆಲಸಮಾಡಿಸಬೇಕು, ಅವನು ಇಷ್ಟಕ್ಕೆ ಮಾತ್ರ ಯೋಗ್ಯ. ಆದರೆ ಭಾರತದಲ್ಲಿ ಅವನು ಗೌರವಾನ್ವಿತ ವ್ಯಕ್ತಿ; ಬ್ರಾಹ್ಮಣರ ಸಿದ್ಧಾಂತದ ಪ್ರಕಾರ ಅವನು ಬದುಕಿನ ಎಲ್ಲ ಸಂತೋಷಗಳನ್ನು, ಆಮಿಷಗಳನ್ನು ತ್ಯಜಿಸಿ ವಿದ್ವತ್ತು ಮತ್ತು

ದೇವರನ್ನು ಕುರಿತ ತಪಸ್ಸು ಇವುಗಳಿಗಾಗಿಯೇ ಬದುಕಿರುವವನು, ಆದ್ದರಿಂದ ಅವನನ್ನು ಪೂಜ್ಯಭಾವನೆಯಿಂದ ಕಾಣಬೇಕು.

**ಭಾರತದಲ್ಲಿ ಮೇಲ್ವರ್ಗಗಳವರು**

"ಹದಿನೇಳನೆಯ ಪ್ಯಾರಾಗ್ರಾಫ್: ಪ್ರಭಾವ ಉಳ್ಳವರಾಗಿ, ಆ ಕಾರಣದಿಂದ ಭಾರತದಲ್ಲಿ ಮೇಲ್ವರ್ಗದವರು ಎಂದು ಭಾವಿಸಬಹುದಾದವರನ್ನು ಹೀಗೆ ಪಟ್ಟಿ ಮಾಡಬಹುದು.

ಮೊದಲನೆಯದಾಗಿ ಜಮೀನ್ದಾರರು ಮತ್ತು ಜಹಗೀರುದಾರರು ದೇಶೀಯ ಆಡಳಿತದಲ್ಲಿ ಅಧಿಕಾರದಲ್ಲಿದ್ದ ಸಾಮಂತರು ಮತ್ತು ಯೋಧವರ್ಗದವರು.

ಎರಡನೆಯದಾಗಿ ವಾಣಿಜ್ಯ ವ್ಯವಹಾರಗಳಲ್ಲಿ ಹಣ ಗಳಿಸಿದವರು ಅಥವಾ ವ್ಯಾಪಾರಿಗಳು.

ಮೂರನೆಯದಾಗಿ ಸರ್ಕಾರದಲ್ಲಿನ ಉನ್ನತ ನೌಕರರು,

ನಾಲ್ಕನೆಯದಾಗಿ ಬ್ರಾಹ್ಮಣರು. ಇವರಿಂದ ಬಹುದೂರವಾಗಿ ಆದರೆ ಇದೇ ವರ್ಗದಲ್ಲಿ ಮುಂಬಯಿ ಪ್ರಭುಗಳು ಮತ್ತು ಶೆಣ್ವಿಗಳು, ಬಂಗಾಳದ ಕಾಯಸ್ಥರು (ಇವರು ವಿದ್ವತ್ತಿನಿಂದ ಅಥವಾ ಪದವಿಯಿಂದ ಸ್ಥಾನಗಳಿಸಿದ್ದಲ್ಲಿ ಮಾತ್ರ) ಹೀಗೆ ಬರಹದಿಂದ ಜೀವನ ಸಂಪಾದಿಸುವ ಮೇಲುಜಾತಿಗಳ ಬರಹಗಾರರು.

**ಬ್ರಾಹ್ಮಣರೇ ಅತ್ಯಂತ ಪ್ರಭಾವಿಗಳು**

"ಹದಿನೆಂಟನೆಯ ಪ್ಯಾರಾಗ್ರಾಫ್: ಈ ನಾಲ್ಕು ವರ್ಗಗಳಲ್ಲಿ ಎಣೆಯೇ ಇಲ್ಲದಷ್ಟು ಪ್ರಭಾವಶಾಲಿಗಳು, ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿರುವವರು ಮತ್ತು ಸರ್ಕಾರವು ಅತ್ಯಂತ ಸುಲಭವಾಗಿ ಪ್ರಭಾವ ಬೀರಲು ಸಾಧ್ಯವಿರುವವರು ಕಡೆಯ ವರ್ಗದವರೇ. ನಮ್ಮ ಆಡಳಿತದಲ್ಲಿ ಹಿಂದಿನ ಜಹಗೀರುದಾರರು, ಯೋಧ ವರ್ಗದವರು ದಿನದಿನಕ್ಕೆ ಕ್ಷೀಣಿಸುತ್ತಿದ್ದಾರೆ ಎನ್ನುವುದು ಇಡೀ ಭಾರತದಲ್ಲಿ ತಿಳಿದಿರುವ ವಿಷಯ. ಅವರ ಹಳೆಯ ವೃತ್ತಿ ಹೊರಟುಹೋಯಿತು. ಹೊಸ ವೃತ್ತಿಯನ್ನು ಕಲಿಯುವ ಇಚ್ಛೆಯನ್ನಾಗಲಿ, ಸಾಮರ್ಥ್ಯವನ್ನಾಗಲಿ ಅವರು ತೋರಿಸಿಲ್ಲ. ಶಾಂತಿಯಿಂದ ಬಾಳುವ ಅಭ್ಯಾಸವನ್ನು ಬೆಳೆಸಿಕೊಳ್ಳುವ ಇಚ್ಛೆಯೂ ಇಲ್ಲ. ಈ ಪ್ರಾಂತದಲ್ಲಿ ಜಮೀನ್ದಾರರು ಮತ್ತು ಜಹಗೀರುದಾರರ ವರ್ಗವನ್ನು ಎತ್ತಿ ಹಿಡಿಯಲು ಶ್ರೀ ಎಲ್ಫಿನ್‌ಸ್ಟನ್ ಮತ್ತು ಅವರ ನಂತರ ಬಂದವರು ಮಾಡಿದ ಪ್ರಯತ್ನಗಳು ವಿಷಾದನೀಯವಾಗಿ ವಿಫಲಗೊಂಡಿವೆ. ಪ್ರತಿಷ್ಠೆಯ ವೈಭವ ಮತ್ತು ದುಂದು ಖರ್ಚು, ಹಿಂದೂಸ್ಥಾನದ ಬಯಲು ಪ್ರದೇಶಗಳಲ್ಲಿ ತಮ್ಮ ಪೂರ್ವಿಕರ ವಿಜಯಗಳ ನೆನಪುಗಳು, ಇವಲ್ಲದೆ ಬೇರೆ ಯಾವುದರಿಂದಲೂ ಉತ್ತೇಜನ ಪಡೆಯಲಾಗದ ಜನಾಂಗಕ್ಕೆ ನಾಗರಿಕ ಸನ್ಮಾನಗಳು ಮತ್ತು ಶಿಕ್ಷಣದ ಮೂಲಕ ಹೊಸ ದಾರಿಯನ್ನು ತೋರಿಸುವ ಎಲ್ಲ ಪ್ರಯತ್ನಗಳಿಗೆ ಈವರೆಗೆ ಸೋಲೇ ಒದಗಿದೆ. ವಾಣಿಜ್ಯ ವರ್ಗಗಳಲ್ಲಿಯೂ ಕೆಲವರನ್ನು ಬಿಟ್ಟರೆ ಮೇಲ್ಮಟ್ಟದ ಶಿಕ್ಷಣದ ಪ್ರಭಾವಕ್ಕೆ ಹೆಚ್ಚಿನ ಅವಕಾಶವಿಲ್ಲ. ಎಲ್ಲ ದೇಶಗಳಲ್ಲಿರುವಂತೆ, ಆದರೆ ಯೂರೋಪಿನ ಹೆಚ್ಚು ನಾಗರಿಕ ದೇಶಗಳಲ್ಲಿ ಕಾಣುವುದಕ್ಕಿಂತ ಹೆಚ್ಚಾಗಿ, ಭಾರತದಲ್ಲಿ ತರುಣ ವ್ಯಾಪಾರಿಗಳು ಅಥವಾ ವರ್ತಕರು ಮಾರುಕಟ್ಟೆಯಲ್ಲಿ ಅಥವಾ ಲೆಕ್ಕದ ಕಚೇರಿಯಲ್ಲಿ ತನ್ನ ವೃತ್ತಿಗೆ ಅವಶ್ಯಕವಾದ ವಿಶೇಷ ಶಿಕ್ಷಣವನ್ನು ಪಡೆಯಲು ಶಾಲೆಯನ್ನು ಬೇಗನೆ ಬಿಡಬೇಕಾಗುತ್ತದೆ. ಕಡೆಯದಾಗಿ ಸರ್ಕಾರಿ

ನೌಕರರಿಗೆ ಸರ್ಕಾರದೊಡನೆ ಸಂಪರ್ಕ ಪಡೆಯುವ ಅಧಿಕ ಸಂಖ್ಯೆಯ ಜನರ ಮೇಲೆ ಹೆಚ್ಚಿನ ಪ್ರಭಾವ ಇರುವುದಾದರೂ, ಸರ್ಕಾರವನ್ನು ಅವಲಂಬಿಸದ ಇನ್ನೂ ಅಧಿಕ ಸಂಖ್ಯೆಯ ಜನರ ಮೇಲೆ ಅವರಿಗೆ ಒಂದಿಷ್ಟೂ ಪ್ರಭಾವವಿಲ್ಲ; ಹಲವೊಮ್ಮೆ ಸರ್ಕಾರಿ ನೌಕರರು ಇಂಗ್ಲೆಂಡಿನಲ್ಲಿ ಸಾರ್ವಜನಿಕರಲ್ಲಿ ಮೂಡಿಸಿರುವ ಅಪನಂಬಿಕೆಯನ್ನೇ ಇಲ್ಲಿಯ ಇತರ ಜನಸಾಮಾನ್ಯರ ದೃಷ್ಟಿಯಲ್ಲಿ ಮೂಡಿಸುತ್ತಾರೆ.

**ಬ್ರಾಹ್ಮಣರ ಬಡತನ**

"೧೯ನೆಯ ಪ್ಯಾರಾಗ್ರಾಫ್: ಮೇಲಿನ ವಿಶ್ಲೇಷಣೆಯು ದೀರ್ಘವಾಯಿತೆಂದು ಕಂಡರೂ ಅದು ಅನಿವಾರ್ಯ. ಏಕೆಂದರೆ, ಹಲವು ಮುಖ್ಯವಾದ ತೀರ್ಮಾನಗಳು ಇದರಿಂದ ಉದ್ಭವಿಸುತ್ತದೆ. ಮೊದಲನೆಯದಾಗಿ, ಶಿಕ್ಷಣದ ಬೀಜಗಳನ್ನು ಎರಚಲು ಸರ್ಕಾರವು ಬಳಸಿಕೊಳ್ಳಬಹುದಾದ ಪ್ರಭಾವೀ ವರ್ಗ ಎಂದರೆ ಬ್ರಾಹ್ಮಣರು ಮತ್ತು ಬ್ರಾಹ್ಮಣರ ಸಮೀಪದ ಮೇಲು ಜಾತಿಯವರು ಎನ್ನುವುದನ್ನು ಇದು ತೋರಿಸುತ್ತದೆ. ಆದರೆ, ಬ್ರಾಹ್ಮಣರೂ, ಈ ಮೇಲುಜಾತಿಯವರೂ ಕರುಣಾಜನಕ ದಾರಿದ್ರ್ಯದಲ್ಲಿದ್ದಾರೆ; ಭಾರತದ ಹಲವು ಭಾಗಗಳಲ್ಲಿ ಬ್ರಾಹ್ಮಣ ಎಂದರೆ ಭಿಕ್ಷುಕ ಎಂದೇ ಅರ್ಥ.

**ಶ್ರೀಮಂತ ವರ್ಗಗಳು ಈಗ ಮೇಲ್ಮಟ್ಟದ ಶಿಕ್ಷಣವನ್ನು ಬೆಂಬಲಿಸುವುದಿಲ್ಲ**

"೨೦ನೆಯ ಪ್ಯಾರಾಗ್ರಾಫ್: ಇದರಿಂದ ೧೮೫೦ರ ಏಪ್ರಿಲ್ ೨೪ರ ಪತ್ರದಲ್ಲಿ ಕೌನ್ಸಿಲ್‌ನಲ್ಲಿ ಪ್ರಭುಗಳಾದ ತಾವು ಒತ್ತಿ ಹೇಳಿ ನಮಗಿತ್ತ ಆದೇಶವನ್ನು ಕಾರ್ಯಗತಮಾಡುವುದು ಎಷ್ಟು ನಿರರ್ಥಕ ಎಂಬುದನ್ನು ಕಾಣಬಹುದು. ತಮ್ಮ ಆದೇಶ ಮೇಲ್ನೋಟಕ್ಕೆ ಬಹುಮಟ್ಟಿಗೆ ಕಾರ್ಯಸಾಧ್ಯ ಮತ್ತು ಸೂಕ್ತ ಎಂದು ಕಾಣುತ್ತದೆ. ಮಂಡಲಿ ಸಹ ಮತ್ತೆ ಮತ್ತೆ ಇದನ್ನೇ ಎಂದರೆ ಮೇಲ್ಮಟ್ಟದ ಶಿಕ್ಷಣವನ್ನು "ಅದಕ್ಕೆ ಹಣ ತೆರಬಲ್ಲ ಶ್ರೀಮಂತರು ಮತ್ತು ಅಸಾಧಾರಣ ಬುದ್ಧಿಶಕ್ತಿ ಇರುವ ತರುಣರಿಗೆ" ಮಿತಗೊಳಿಸುವುದಕ್ಕೆ ಪ್ರಯತ್ನಿಸಿದೆ. ಇಂತಹ ದೃಷ್ಟಿಯನ್ನು ಕಾರ್ಯಗತ ಮಾಡಲು ಮಂಡಳಿ ಪ್ರಯತ್ನಿಸಿದಾಗಲೆಲ್ಲ ದೊರೆತ ಒಂದೇ ಉತ್ತರ ಎಂದರೆ ಶ್ರೀಮಂತರಿಗೆ ಮೇಲ್ಮಟ್ಟದ ಶಿಕ್ಷಣದಲ್ಲಿ ಸಂಪೂರ್ಣವಾಗಿ ನಿರ್ಲಕ್ಷ್ಯ ಮತ್ತು ಬಡ ವರ್ಗದವರಿಗೆ ಶಾಲಾ ಶಿಕ್ಷಣವು ದೊರೆತು ಆ ಮೂಲಕ ಅವರ ಸಾಮರ್ಥ್ಯದ ಪರೀಕ್ಷೆಯೂ ಬೆಳವಣಿಗೆಯಾಗುವವರೆಗೆ ಅವರಲ್ಲಿ ಅಸಾಧಾರಣ ಬುದ್ಧಿಶಕ್ತಿ ಇರುವವರನ್ನು ಕಂಡುಹಿಡಿಯಲು ಯಾವ ಸಾಧನವೂ ಇಲ್ಲ. ಶ್ರೀಮಂತವರ್ಗಗಳಲ್ಲೆ ಮೇಲ್ಮಟ್ಟದ ವಿದ್ಯಾಭ್ಯಾಸದ ಪ್ರಯೋಜನಗಳನ್ನು ಅರ್ಥ ಮಾಡಿಕೊಂಡವರ ಸಣ್ಣ ವಿಭಾಗವೊಂದು ಕಾಣಿಸುತ್ತಿದೆ ಎನ್ನುವುದು ನಿಜ; ಸರ್ಕಾರವೇ ಹೆಚ್ಚುಕಾಲ ಶಿಕ್ಷಣವನ್ನು ಪೋಷಿಸಿರುವ ಬಂಗಾಳದಲ್ಲಿ ಮುಂಬಯಿಗಿಂತ ಇದು ದೊಡ್ಡದಾಗಿದೆ; ಮೇಲ್ಮಟ್ಟದ ಸಾಧನೆಗಳಿಂದ ಪ್ರಖ್ಯಾತಿಯನ್ನು ಪಡೆಯಲು ಮತ್ತು ಯುರೋಪಿಯನರೊಂದಿಗೆ ಸರಿಸಮಾನರಾಗಿ ಬೆರೆತು ಹೊಕ್ಕು ಬಳಕೆಯನ್ನು ದೊರಕಿಸಿಕೊಳ್ಳಲು ಇಂತಹ ವರ್ಗವು ಬೆಳೆಯುವುದೂ ಅನಿವಾರ್ಯ; ಆದರೆ ಸಧ್ಯದ ಸಾಮಾನ್ಯ ಸಿದ್ಧಾಂತವಾಗಿ, ಯುರೋಪಿನ ಕಲೆಗಳು ಮತ್ತು ವಿಜ್ಞಾನಗಳನ್ನು ವಿದ್ಯಾ ಸಂಸ್ಥೆಗಳಲ್ಲಿ ಔಪಚಾರಿಕವಾಗಿ ಬೋಧಿಸಲು ಭಾರತದ ಶ್ರೀಮಂತ ವರ್ಗಗಳ ವಿದ್ಯಾರ್ಥಿಗಳ ಕೊಡುಗೆಯನ್ನಾಗಲಿ, ನಿಧಿಗಳನ್ನಾಗಲಿ ಆಧರಿಸುವುದು ಸಾಧ್ಯವಿಲ್ಲ ಎಂದು ನಮಗೆ ಮನವರಿಕೆಯಾಗಿದೆ.

**ಕೆಳಗಿನ ಜಾತಿಯವರಿಗೆ ವಿದ್ಯಾಭ್ಯಾಸ ಕೊಡುವ ಪ್ರಶ್ನೆ**

"೨೧ನೆಯ ಪ್ಯಾರಾಗ್ರಾಫ್: ಹಲವಾರು ವರ್ಷಗಳ ಅನುಭವವು ಒತ್ತಾಯದಿಂದ ನಮ್ಮ ಗಮನಕ್ಕೆ ತಂದಿರುವ ಈ ವಾಸ್ತವಾಂಶಗಳಿಂದ ಮುಟ್ಟಬೇಕಾದ ವ್ಯಾವಹಾರಿಕ ನಿರ್ಣಯವೆಂದರೆ ನಮ್ಮಿಂದ ವಿದ್ಯಾಭ್ಯಾಸವನ್ನು ಪಡೆಯಲು ಒಪ್ಪುವ ಬಡ ಮೇಲುಜಾತಿಯ ಮಕ್ಕಳಿಗೆ ಬಾಗಿಲನ್ನು ವಿಶಾಲವಾಗಿ ತೆರೆದಿಡಬೇಕು. ಆದರೆ, ಇಲ್ಲಿ ಮತ್ತೊಂದು ಇಕ್ಕಟ್ಟಿನ ಪ್ರಶ್ನೆ ಏಳುತ್ತದೆ. ಇದನ್ನು ಗಮನಿಸುವುದು ನ್ಯಾಯ: ಬಡವರ ಮಕ್ಕಳನ್ನು ಮುಕ್ತವಾಗಿ ಸರ್ಕಾರಿ ಸಂಸ್ಥೆಗಳಿಗೆ ಸೇರಿಸಿಕೊಳ್ಳುವುದಾದರೆ ಧೇಡರು, ಮಹಾರರು ಮುಂತಾದ ಉಪೇಕ್ಷಿತ ಜಾತಿಯವರೆಲ್ಲ ಈ ಶಾಲೆಗಳಿಗೆ ನುಗ್ಗುವುದನ್ನು ತಡೆಗಟ್ಟುವುದು ಹೇಗೆ?

**ಹಿಂದೂಗಳ ಸಾಮಾಜಿಕ ಪೂರ್ವಾಗ್ರಹಗಳು**

"೨೨ನೆಯ ಪ್ಯಾರಾಗ್ರಾಫ್: ಈ ಉಪೇಕ್ಷಿತ ಜಾತಿಯವರ ವರ್ಗವೊಂದನ್ನು ಮುಂಬಯಿಯಲ್ಲಿ ರೂಪಿಸಿದಲ್ಲಿ ಮಂಡಲಿಯ ಸೇವೆಯಲ್ಲಿರುವ ಪ್ರೊಫೆಸರುಗಳು ಮತ್ತು ಉಪಾಧ್ಯಾಯರ ಮಾರ್ಗದರ್ಶನದಿಂದ ಸಮುದಾಯದಲ್ಲಿ ಬೇರೆ ಯಾರನ್ನೇ ಆಗಲಿ ಮೀರಿಸಿದ ಬುದ್ಧಿಶಕ್ತಿ ಜನರನ್ನಾಗಿ ಇವರನ್ನು ತರಬೇತು ಮಾಡಬಹುದು ಎನ್ನುವುದರಲ್ಲಿ ಅನುಮಾನವಿಲ್ಲ; ಅವರು ಪಡೆದುಕೊಳ್ಳುವ ಇಂತಹ ಅರ್ಹತೆಯಿಂದ ದೇಶೀಯ ಜನರಿಗೆ ಲಭ್ಯವಿರುವ ಅತ್ಯಂತ ಉಚ್ಚ ಸ್ಥಾನಗಳನ್ನು ಸಹ–ನ್ಯಾಯಾಧೀಶರು, ನ್ಯಾಯದರ್ಶಿಗಳ ಮಹಾಮಂಡಲಿಯ ಸದಸ್ಯರು, ಚಕ್ರವರ್ತಿನಿಯವರ ಶಾಂತಿ ನ್ಯಾಯಾಧಿಕಾರಿಗಳು– ಇಂತಹ ಸ್ಥಾನಗಳನ್ನು ಸಹ ಅವರು ಬಯಸುವುದಕ್ಕೆ ಅಡ್ಡಿಯೇನೂ ಇರುವುದಿಲ್ಲ. ಇಂತಹ ನೇಮಕಾತಿಗಳು ಹಿಂದೂ ಜನಾಂಗದವರಲ್ಲಿ ಉಂಟುಮಾಡುವ ಜಿಗುಪ್ಸೆಗೆ ಹೆದರಿ ಸುಮ್ಮನಾಗುವುದು ಬ್ರಿಟಿಷ್ ಸರ್ಕಾರದ ಅನುದಾರತೆ ಮತ್ತು ದೌರ್ಬಲ್ಯಗಳ ಪರಮಾವಧಿ ಎಂದೂ ಜಾತಿಗಳ ನಡುವಣ ಅಡ್ಡಿಗಳನ್ನು ಬಹಿರಂಗವಾಗಿ ಖಂಡಿಸಬೇಕೆಂದೂ ಅನೇಕ ಮಂದಿ ಉದಾರಿಗಳು ಭಾವಿಸುತ್ತಾರೆ.

**ಸನ್ಮಾನ್ಯ ಮೌಂಟ್ ಸ್ಟೂವರ್ಟ್ ಎಲ್ಫಿನ್‌ಸ್ಟನ್‌ರ ವಿವೇಕದ ಮಾತುಗಳ ಉಲ್ಲೇಖನ**

"೨೩ನೆಯ ಪ್ಯಾರಾಗ್ರಾಫ್: ಆದರೆ ಇಲ್ಲಿ, ಭಾರತದ ಈ ಭಾಗದಲ್ಲಿ ಮಾಡಿದ ಅತ್ಯಂತ ಉದಾರೀ ಮತ್ತು ವಿಶಾಲ ಮನಸ್ಸಿನ ಆಡಳಿತಗಾರರಾದ ಶ್ರೀ ಎಲ್ಫಿನ್‌ಸ್ಟನ್‌ರ ವಿವೇಕದ ಚಿಂತನೆಗಳು ಯೋಗ್ಯವಾದ ಕಾರ್ಯ ನಿಯಮಗಳನ್ನು ತೋರಿಸಿಕೊಡುತ್ತದೆ. ಅವರು 'ಮತಪ್ರಚಾರಕರು ಕೆಳಗಿನ ಜಾತಿಯವರೇ ಅತ್ಯುತ್ತಮ ಶಿಷ್ಯರೆಂದು ಕಂಡುಕೊಂಡಿದ್ದಾರೆ ಎಂದು ಹೇಳಲಾಗಿದೆ; ಆದರೆ ಈ ಬಗೆಯ ಜನರಿಗೆ ನಾವು ವಿಶೇಷ ಉತ್ತೇಜನಕೊಡುವಾಗ ಎಚ್ಚರಿಕೆಯಿಂದಿರಬೇಕು; ಸಮಾಜದ ಮಹಾ ವಿಭಾಗಗಳಲ್ಲಿ ಅವರು ಅತ್ಯಂತ ಉಪೇಕ್ಷಿತರು ಮಾತ್ರವಲ್ಲ, ಅತ್ಯಂದ ಕಡಿಮೆ ಸಂಖ್ಯೆಯವರು ಆಗಿದ್ದಾರೆ; ನಮ್ಮ ವಿದ್ಯಾಭ್ಯಾಸ ಪದ್ಧತಿ ಮೊದಲು ಅವರಲ್ಲಿ ಬೇರುಬಿಟ್ಟರೆ ಅದು ಮುಂದಕ್ಕೆ ಹರಡಿಕೊಳ್ಳುವುದೇ ಇಲ್ಲ ಎಂಬ ಭಯವಿದೆ; ನಾವು ಹೊಸದೊಂದು ವರ್ಗದ ನಾಯಕರಾಗಿಬಿಡಬಹುದು; ಈ ವರ್ಗ ಉಪಯುಕ್ತ ತಿಳುವಳಿಕೆಯಲ್ಲಿ ಇತರರಿಗಿಂತ ಮೇಲಾಗಿರಬಹುದು; ಆದರೆ ಅವರ ಈ ಹೊಸಸಾಧನಗಳಿಂದ ನಾವು ಇತರ ಜಾತಿಯವರಿಗಿಂತ

ಅವರಿಗೇ ಪಕ್ಷಪಾತ ತೋರಿದರೂ ಇತರ ಜಾತಿಗಳವರು ಅವರನ್ನು ದ್ವೇಷಿಸುವರು ಮತ್ತು ತಿರಸ್ಕಾರದಿಂದ ಕಾಣುವರು. ನಾವು ನಮ್ಮ ಅಧಿಕಾರಕ್ಕೆ ನಮ್ಮ ಸೈನ್ಯವನ್ನು ಅಥವಾ ಜನತೆಯ ಒಂದು ಭಾಗ ಮಾತ್ರದ ವಿಶ್ವಾಸವನ್ನು ಆಧಾರವನ್ನಾಗಿ ಮಾಡಿಕೊಳ್ಳುವುದಾದರೆ ಇಂತಹ ಪರಿಸ್ಥಿತಿ ಅಪೇಕ್ಷಣೀಯವಾಗಿರುತ್ತಿತ್ತು. ಆದರೆ ನಮ್ಮ ಅಧಿಕಾರಕ್ಕೆ ಇನ್ನೂ ವಿಶಾಲವಾದ ಆಧಾರಗಳನ್ನು ನಿರ್ಮಿಸುವ ಪ್ರಯತ್ನಕ್ಕೆ ಇದು ಹೊಂದಾಣಿಕೆಯಾಗುವುದಿಲ್ಲ."

೫. ೧೮೫೫ಕ್ಕೆ ಮೊದಲು ಮುಂಬಯಿಪ್ರಾಂತದಲ್ಲಿ ನಿಮ್ನ ವರ್ಗದವರಿಗಾಗಿ ಶಾಲೆಗಳನ್ನು ತೆರೆಯದಿದ್ದರೆ, ಅದಕ್ಕೆ ಕಾರಣ ವಿದ್ಯಾಭ್ಯಾಸದ ಪ್ರಯೋಜನವನ್ನು ಬಡವರಾದ ಮೇಲು ಜಾತಿಯವರಿಗೆ ಮುಖ್ಯವಾಗಿ ಬ್ರಾಹ್ಮಣರಿಗೆ ಮಿತಗೊಳಿಸುವುದು ಬ್ರಿಟಿಷ್ ಸರ್ಕಾರದ ಉದ್ದೇಶಿತ ಧೋರಣೆಯೇ ಆಗಿತ್ತು ಎಂಬುದು ಸ್ಪಷ್ಟವಾಗಿದೆ. ಈ ಧೋರಣೆ ಸರಿಯೇ ತಪ್ಪೇ ಎನ್ನುವುದು ಬೇರೆ ವಿಷಯ. ವಾಸ್ತವಾಂಶ ಎಂದರೆ ಈ ಅವಧಿಯಲ್ಲಿ ವಿದ್ಯಾಭ್ಯಾಸದ ಸತ್ಫಲಗಳಲ್ಲಿ ಪಾಲು ಪಡೆಯಲು ಸರ್ಕಾರವು ನಿಮ್ನ ವರ್ಗದವರಿಗೆ ಅವಕಾಶವನ್ನು ನೀಡಲಿಲ್ಲ.

## II. ೧೮೫೪ರಿಂದ ೧೮೮೨ರವರೆಗೆ

೬. ೧೮೫೪ರ ಜುಲೈ ೧೯ನೇ ದಿನಾಂಕದ ೪೯ನೆಯ ಸಂಖ್ಯೆಯ ಅಧಿಕೃತ ಪತ್ರದಲ್ಲಿ ಕೋರ್ಟ್ ಆಫ್ ಡೈರೆಕ್ಟರ್ ಹೀಗೆಂದಿತು:

"ಇದಕ್ಕೂ ಮುಖ್ಯವಾದ ಮತ್ತು ಈವರೆಗೆ ತೀರ ನಿರ್ಲಕ್ಷ್ಯಕ್ಕೆ ಒಳಗಾದದ್ದೆಂದು ನಾವು ಒಪ್ಪಿಕೊಳ್ಳಬೇಕಾದ ಒಂದು ಪರಾಮರ್ಶೆಗೆ ನಾವೀಗ ಗಮನ ಕೊಡಬೇಕು; ಇದೆಂದರೆ, ಬದುಕಿನ ಎಲ್ಲ ಸ್ಥಾನಗಳಿಗೆ ಯೋಗ್ಯವೂ ಉಪಯುಕ್ತವೂ, ವ್ಯಾವಹಾರಿಕವೂ ಆದ ತಿಳುವಳಿಕೆಯನ್ನು ಜನತೆಯ ಬೃಹತ್ ಸಮುದಾಯಕ್ಕೆ ಮುಟ್ಟಿಸುವುದು ಹೇಗೆ ಎನ್ನುವುದು; ಸಾರ್ಥಕ ವಿದ್ಯಾಭ್ಯಾಸವನ್ನು ತಮ್ಮದೇ ಪ್ರಯತ್ನದಿಂದ ಪಡೆಯಲು ಈ ಜನರು ಸಂಪೂರ್ಣವಾಗಿ ಅಸಮರ್ಥರು. ಇನ್ನು ಮುಂದೆ ಸರ್ಕಾರದ ಕ್ರಿಯಾಶೀಲ ಕ್ರಮಗಳು ಈ ಗುರಿಯ ಸಾಧನೆಯತ್ತ ಹರಿಯಬೇಕೆಂದು ನಮ್ಮ ಅಪೇಕ್ಷೆ. ಇದಕ್ಕಾಗಿ ನಾವು ವೆಚ್ಚದಲ್ಲಿ ಗಮನಾರ್ಹವಾದ ಪ್ರಮಾಣದ ಹೆಚ್ಚಳವನ್ನು ಮಂಜೂರು ಮಾಡಲು ಸಿದ್ಧವಾಗಿದ್ದೇವೆ."

ಈ ದೇಶದಲ್ಲಿ ಜನಸಾಮಾನ್ಯರ ವಿದ್ಯಾಭ್ಯಾಸಕ್ಕೆ ಈ ಆದೇಶವೇ ಅಸ್ತಿಭಾರವನ್ನು ಹಾಕಿತು ಎಂದು ಸರಿಯಾಗಿಯೇ ಭಾವಿಸಲಾಗಿದೆ. ಈ ಧೋರಣೆಯ ಫಲಿತಾಂಶವನ್ನು ಭಾರತದ ವಿದ್ಯಾಭ್ಯಾಸವನ್ನು ಅಧ್ಯಯನ ಮಾಡಿದ ಹಂಟರ್ ಆಯೋಗ ೧೮೮೧ರಲ್ಲಿ ಮೊಟ್ಟ ಮೊದಲ ಬಾರಿಗೆ ಪರಿಶೀಲಿಸಿತು. ೨೮ ವರ್ಷಗಳ ಸಾಧನೆಯನ್ನು ಈ ಕೆಳಗಿನ ಸಂಖ್ಯೆಗಳು ತೋರಿಸುತ್ತವೆ.

**ಪ್ರಾಥಮಿಕ ಶಿಕ್ಷಣ ೧೮೮೧–೮೧**

| | ಶಾಲೆಯಲ್ಲಿನ ವಿದ್ಯಾರ್ಥಿಗಳು | ಒಟ್ಟಿನಲ್ಲಿ ಶೇಕಡಾವಾರು |
|---|---|---|
| ಕ್ರಿಶ್ಚಿಯನ್ನರು | ೧೫೨೧ | ೦.೪೯ |
| ಬ್ರಾಹ್ಮಣರು | ೬೩೦೭೧ | ೨೦.೧೭ |
| ಇತರ ಹಿಂದೂಗಳು | ೨೦೨,೩೪೫ | ೬೪.೯ |
| ಮಹಮದೀಯರು | ೩೯.೨೩೧ | ೧೨.೫೪ |
| ಪಾರ್ಸಿಗಳು | ೩೫೧೭ | ೧.೧೨ |
| ಆದಿವಾಸಿಗಳು ಮತ್ತು ಗುಡ್ಡಗಾಡು ಜನರು | ೨೭೧೩ | ೦.೮೭ |
| ಕೆಳಜಾತಿಯ ಹಿಂದುಗಳು | ೨೮೬೨ | ೦.೮೭ |
| ಯಹೂದ್ಯರು ಮತ್ತು ಇತರರು | ೩೭೩ | ೦.೧೨ |

**ಮಾಧ್ಯಮಿಕ ವಿದ್ಯಾಭ್ಯಾಸ ೧೮೮೧–೮೨**

| | ಮಾಧ್ಯಮಿಕ ಶಾಲೆಗಳು | | ಪ್ರೌಢ ಶಾಲೆಗಳು | |
|---|---|---|---|---|
| | ಶಾಲೆ ಗಳಲ್ಲಿರುವ ವಿದ್ಯಾರ್ಥಿಗಳು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇಕಡಾವಾರು | ಶಾಲೆ ಗಳಲ್ಲಿರುವ ವಿದ್ಯಾರ್ಥಿಗಳು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇಕಡಾವಾರು |
| ಕ್ರಿಶ್ಚಿಯನ್ನರು | ೧೪೨೯ | ೧೨.೦೬ | ೧೧೧ | ೨.೨೬ |
| ಬ್ರಾಹ್ಮಣರು | ೩೬೩೯ | ೩೦.೭೦ | ೧೯೭೮ | ೪೦.೨೯ |
| ಕೃಷಿಕರು | ೬೨೪ | ೫.೨೬ | ೧೪೦ | ೨.೮೫ |
| <u>ಇತರ ಹಿಂದೂಗಳು</u> | | | | |
| ಕೆಳಜಾತಿಯವರು | ೧೭ | ೦.೧೪ | – | – |
| ಇತರ ಜಾತಿಗಳವರು | ೩೮೨೩ | ೩೨.೨೫ | ೧೫೭೩ | ೩೨.೦೪ |
| ಮಹಮದೀಯರು | ೬೮೭ | ೫.೮೦ | ೧೦೦ | ೨.೦೪ |
| ಪಾರ್ಸಿಗಳು | ೧೫೨೬ | ೧೨.೮೭ | ೯೬೫ | ೧೯.೬೬ |
| ಆದಿವಾಸಿಗಳು ಮತ್ತು ಗುಡ್ಡಗಾಡಿನ ಜನರು | ೬ | ೦.೦೫ | – | – |
| ಇತರರು (ಯಹೂದ್ಯರು ಮೊದಲಾದವರು) | ೧೦೩ | ೦.೮೭ | ೯೨ | ೦.೮೬ |

| ಕಾಲೇಜು ವಿದ್ಯಾ ಭ್ಯಾಸ ೧೮೮೧-೮೨ | | |
|---|---|---|
| | ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇಕಡಾವಾರು |
| ಕ್ರಿಶ್ಚಿಯನ್ನರು | ೧೪ | ೩ |
| ಬ್ರಾಹ್ಮಣರು | ೨೪೧ | ೫೦ |
| ಕೃಷಿಕರು | ೫ | ೧ |
| **<u>ಇತರ ಹಿಂದೂಗಳು</u>** | | |
| ಕೆಳಜಾತಿಯವರು | ೦ | ೦ |
| ಇತರ ಜಾತಿಯವರು | ೧೦೩ | ೨೧.೩ |
| ಮಹಮದೀಯರು | ೭ | ೧. |
| ಪಾರ್ಸಿಗಳು | ೧೦೮ | ೨೧.೫ |
| ಆದಿವಾಸಿಗಳು ಮತ್ತು ಗುಡ್ಡಗಾಡಿನ ಜನರು | ೦ | ೦ |
| ಇತರರು (ಯಹೂದ್ಯರು ಮೊದಲಾದವರು) | ೨ | ೦.೪ |

೭. ಈ ಸಂಖ್ಯೆಗಳು ತೋರಿಸುವ ಅಂಶವೆಂದರೆ: ಜನಸಾಮಾನ್ಯರ ಶಿಕ್ಷಣವೇ ಸರ್ಕಾರದ ಧೋರಣೆಯಾಗಿದ್ದರೂ ಜನಸಾಮಾನ್ಯರು ೧೮೫೪ಕ್ಕೆ ಮೊದಲು ಎಷ್ಟರಮಟ್ಟಿಗೆ ಶಿಕ್ಷಣ ಕ್ಷೇತ್ರದ ಹೊರಗೆ ಇದ್ದರೋ ಅಷ್ಟರಮಟ್ಟಿಗೇ ಇನ್ನೂ ಹೊರಗುಳಿದಿದ್ದರು ಮತ್ತು ವಿದ್ಯಾಭ್ಯಾಸ ಪಡೆದವರು ಹಿಂದೂಗಳ ಪಟ್ಟಿಯಲ್ಲಿ ಅತ್ಯಂತ ಕೆಳಗಿನ ವರ್ಗದವರು ಮತ್ತು ಆದಿವಾಸಿಗಳು ಕಟ್ಟಕಡೆಯವರಾಗೇ ಉಳಿದಿದ್ದರು; ಇದು ಎಷ್ಟರಮಟ್ಟಿಗಿತ್ತೆಂದರೆ ೧೮೮೧-೮೨ರಲ್ಲಿ ಈ ಸಮುದಾಯದಿಂದ ಈ ಪ್ರಾಂತದ ಪ್ರೌಢಶಾಲೆಗಳು ಮತ್ತು ಕಾಲೇಜುಗಳಲ್ಲಿ ಒಬ್ಬನೇ ಒಬ್ಬ ವಿದ್ಯಾರ್ಥಿಯೂ ಇರಲಿಲ್ಲ. ವಿದ್ಯಾಭ್ಯಾಸದಲ್ಲಿ ನಿಮ್ನ ವರ್ಗದವರನ್ನು ಇತರರ ಮಟ್ಟಕ್ಕೆ ಏರಿಸುವಲ್ಲಿ ಸೋಲಾದುದಕ್ಕೆ ಕಾರಣ ಏನಿರಬಹುದು? ಈ ಪ್ರಶ್ನೆಗೆ ಉತ್ತರ ಹೇಳಲು ಈ ಪ್ರಾಂತದ ಸರ್ಕಾರದ ಶೈಕ್ಷಣಿಕ ನೀತಿಯ ಇತಿಹಾಸಕ್ಕೆ ಮತ್ತೆ ತಿರುಗುವುದು ಅಗತ್ಯವಾಗುತ್ತದೆ.

೮. ೧೮೫೪ರಲ್ಲಿ ಕೋರ್ಟ್ ಆಫ್ ಡೈರೆಕ್ಟರ್ಸ್ ಕಳುಹಿಸಿದ ಅಧಿಕೃತ ಪತ್ರದಲ್ಲಿ ೪೦ ವರ್ಷಗಳು ಕಳೆದ ನಂತರ ಮೊಟ್ಟಮೊದಲ ಬಾರಿಗೆ ಜನತೆಯ ಬೃಹತ್ ಸಮುದಾಯದ ವಿದ್ಯಾಭ್ಯಾಸವು ಸರ್ಕಾರದ ಹೊಣೆ ಎಂಬುದನ್ನು ಗುರುತಿಸಲಾಯಿತು. ಆದರೆ ಈ ಅಧಿಕೃತ ಪತ್ರದಲ್ಲಿ ನಿರೂಪಿಸಿದ ತತ್ವದ ವಿವೇಕದಲ್ಲಿ ತುಂಬಾ ಅಪನಂಬಿಕೆಯನ್ನಿಟ್ಟುಕೊಂಡಿದ್ದ ಮತ್ತು ಈ ನೀತಿಯನ್ನು ಕೈಬಿಡುವಂತೆ ಮಾಡಲು ತೊಡಗಿಕೊಂಡಿದ್ದ ಹಠಮಾರಿಗಳು ಇದ್ದೇ ಇದ್ದರು. ಹಿಂದುಳಿದ ವರ್ಗಗಳವರಿಗೆ ಜೀವನದಲ್ಲಿ ಅವರ ಸ್ಥಾನವನ್ನು ಮೀರಿದ ವಿದ್ಯಾಭ್ಯಾಸವನ್ನು ಕೊಟ್ಟು ಅವರನ್ನು ಮೇಲೇರಿಸುವುದರಿಂದ ಬ್ರಿಟಿಷ್ ಪ್ರಭುತ್ವಕ್ಕಾಗುವ ಘೋರ ಪರಿಣಾಮಗಳ ಚಿಂತೆ ಬೋರ್ಡ್ ಆಫ್ ಕಂಟ್ರೋಲ್‌ನ ಅಧ್ಯಕ್ಷ ಲಾರ್ಡ್ ಎಲೆನ್‌ಬರೋ ಅವರನ್ನು ಕಾಡುತ್ತಲೇ ಇತ್ತು.

೧೮೫೮ರ ಏಪ್ರಿಲ್ ೨೮ರಂದು ಅವರು ಕೋರ್ಟ್ ಆಫ್ ಡೈರೆಕ್ಟರ್ಸ್‌ನ ಅಧ್ಯಕ್ಷರಿಗೆ ಬರೆದ ಕಾಗದದಲ್ಲಿ ಈ ಕೆಳಗಿನ ಎಚ್ಚರಿಕೆಯನ್ನು ಕೊಡಲು ಹಿಂಜರಿಯಲಿಲ್ಲ.

"ಮಾನ್ಯರೆ, ೧೮೫೪ರಲ್ಲಿ ಕೋರ್ಟ್ ಆಫ್ ಡೈರೆಕ್ಟರ್ಸ್ ಕಳುಹಿಸಿದ ಸೂಚನೆಗಳ ಪ್ರಕಾರ ಭಾರತದ ವಿವಿಧ ಭಾಗಗಳಲ್ಲಿ ಪ್ರಚಲಿತವಿರುವ ಶಿಕ್ಷಣ ವ್ಯವಸ್ಥೆಯನ್ನು ವಿಮರ್ಶಿಸಿ ಈಚೆಗೆ ನನಗೆ ಹೆಚ್ಚಿನ ಸಂಖ್ಯೆಯಲ್ಲಿ ಪತ್ರಗಳು ಬರುತ್ತಿವೆ. ಆಗ ಸ್ಥಾಪಿಸಿದ ವ್ಯವಸ್ಥೆಯಿಂದ ನಿರೀಕ್ಷಿಸಿದ ಸತ್ಪರಿಣಾಮ ಆಗಿದೆ ಎನ್ನುವ ಭಾವನೆಯನ್ನು ಅವು ಮೂಡಿಸಿಲ್ಲವಾದರೂ ನಿರೀಕ್ಷಿಸಬಹುದಾಗಿದ್ದ ವೆಚ್ಚವೆಲ್ಲ ಮುಂದುವರೆಯುತ್ತಿದೆ ಎಂದು ನಾನು ಒಪ್ಪಿಕೊಳ್ಳಬೇಕು."

"ಹನ್ನೊಂದನೆಯ ಪ್ಯಾರಾಗ್ರಾಫ್: ಕೆಳವರ್ಗಗಳ ತಂದೆ–ತಾಯಿಯರಿಗೆ ತಮ್ಮ ಮಕ್ಕಳನ್ನು ನಮ್ಮ ಶಾಲೆಗಳಿಗೆ ಕಳಿಸಲು ನಾವು ಮನವೊಲಿಸುವುದೇ ಇಲ್ಲ ಎನ್ನುವಷ್ಟು ಅದು ವಿರಳ. ನಾವು ಬಯಸಿದಂತೆ ಶಿಕ್ಷಣವನ್ನು ವಿಸ್ತರಿಸಿದ್ದೇ ಆದರೆ, ನಾವು ವಾಸ್ತವವಾಗಿ ಕಾರ್ಮಿಕ ವರ್ಗದವರ ಮನಸ್ಸನ್ನು ಬಹು ಎತ್ತರಕ್ಕೆ ಬೆಳೆಸುತ್ತ ಶ್ರೀಮಂತರಾದವರನ್ನು ಇನ್ನೂ ಅಜ್ಞಾನದಲ್ಲಿ ಉಳಿಸಿ ದಂತಾಯಿತು.

"ಹನ್ನೆರಡನೆಯ ಪ್ಯಾರಾಗ್ರಾಫ್: ಈ ಫಲಿತಾಂಶದಿಂದ ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಅನುಕೂಲವಾಗುವಂತೆ ಕಾಣುವುದಿಲ್ಲ. ಕೆಳವರ್ಗದಲ್ಲಿ ಅತ್ಯುತ್ತಮ ಶಿಕ್ಷಣ ಪಡೆದವರಿಗೆ ನಾವು ಪ್ರಚೋದಿಸತಕ್ಕ ಆಕಾಂಕ್ಷೆಯನ್ನು ತೃಪ್ತಿಗೊಳಿಸಿಕೊಳ್ಳುವ ಸಾಧನವನ್ನು ಒದಗಿಸುವುದು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

"ಹದಿಮೂರನೆಯ ಪ್ಯಾರಾಗ್ರಾಫ್: ಬಡವರಿಗೆ ಕೊಟ್ಟ ಮೇಲ್ಮಟ್ಟದ ಶಿಕ್ಷಣದ ಮೂಲಕ ಜನಸಾಮಾನ್ಯರ ಮೇಲೆ ಅವರಿಗೆ ಅಧಿಕ ಅಧಿಕಾರವನ್ನು ಕೊಟ್ಟು ನಾವು ಅತ್ಯಂತ ಅತೃಪ್ತವಾದ ಬಡವರ ಸಮುದಾಯವೊಂದನ್ನು ಸೃಷ್ಟಿಸುತ್ತೇವೆ.

"ಹದಿನಾಲ್ಕನೆಯ ಪ್ಯಾರಾಗ್ರಾಫ್: ಶಿಕ್ಷಣ ಮತ್ತು ನಾಗರಿಕತೆ ಮೇಲ್ವರ್ಗಗಳಿಂದ ಕೆಳಗಿನ ವರ್ಗಗಳಿಗೆ ಇಳಿದುಬರಬಹುದು. ಹೀಗೆ ಅವರಿಗೆ ತಲುಪಿ ಸಮುದಾಯಕ್ಕೆ ಹೊಸ ಚೈತನ್ಯವನ್ನು ನೀಡಬಹುದು. ಆದರೆ, ಅವು ಎಂದೂ ಕೆಳಗಿನ ವರ್ಗದವರಿಂದ ಮೇಲಿನ ವರ್ಗಗಳಿಗೆ ಏರಲಾರವು. ಕೆಳಗಿನ ವರ್ಗಗಳಿಗೆ ಮಾತ್ರವೇ ಅವನ್ನು ಬೋಧಿಸಿದರೆ, ಅವುಗಳಿಂದ ಎಲ್ಲೆಡೆ ಪ್ರತಿಭೆಗೆ ಎಡೆಯಾಗಿ, ಅದಕ್ಕೆ ವಿದೇಶಿಯರೇ ಮೊದಲು ಬಲಿಯಾಗುತ್ತಾರೆ.

"ಹದಿನೈದನೆಯ ಪ್ಯಾರಾಗ್ರಾಫ್: ನಾವು ಶಿಕ್ಷಣ ಪ್ರಸಾರವನ್ನು ಬಯಸುವುದಾದರೆ ಮೇಲಿನ ವರ್ಗಗಳಿಗೆ ನೀಡಲು ಪ್ರಯತ್ನಿಸೋಣ.

"ಹದಿನಾರನೆಯ ಪ್ಯಾರಾಗ್ರಾಫ್: ಇದಕ್ಕೆ ಎರಡೇ ದಾರಿ– ಮೇಲಿನ ವರ್ಗಗಳವರಿಗೆ ಮಾತ್ರವೇ ಪ್ರವೇಶವಿರುವ ಕಾಲೇಜುಗಳನ್ನು ಸ್ಥಾಪಿಸುವುದು ಮತ್ತು ಸೈನ್ಯವನ್ನು ಪುನರ್ ವ್ಯವಸ್ಥೆಗೊಳಿಸುವಾಗ ದೇಶೀಯ ಗೌರವಸ್ಥರ ಮೇಲಿನ ಗಂಡು ಮಕ್ಕಳಲ್ಲಿ ಕಮೀಷನ್ ಹುದ್ದೆಗಳನ್ನು ಪಡೆಯಲು ಅರ್ಹತೆ ಪಡೆದಿರುವ ಎಲ್ಲರಿಗೂ ಕೂಡಲೇ ಕಮೀಷನ್ ನೀಡುವುದು."

೯. ಅಸ್ಪೃಶ್ಯರ ವಿಷಯದಲ್ಲಿ ಯುರೋಪಿಯನ್ ಅಧಿಕಾರಿಗಳಿಗಿದ್ದ ಈ ವೈರವನ್ನು ಅಂತಿಮವಾಗಿ ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ದ ೧೮೫೯ರ ಆದೇಶ ತಿದ್ದಿತು. ಈ ಆದೇಶವು ಜನಸಾಮಾನ್ಯರ ಶಿಕ್ಷಣದ ವಿಷಯದಲ್ಲಿ ಸರ್ಕಾರದ ಹೊಣೆಯನ್ನು ಪುನರುಚ್ಚರಿಸಿತು.

೧೦. ಇದು ವಿಲಕ್ಷಣವಾಗಿ ತೋರಬಹುದಾದರೂ, ಜನಸಾಮಾನ್ಯರ ವಿದ್ಯಾಭ್ಯಾಸದ ವಿಷಯದಲ್ಲಿ ಸರ್ಕಾರ ತನ್ನ ಹೊಣೆಯನ್ನು ಗುರುತಿಸಿದುದರಿಂದ ನಿಮ್ನ ವರ್ಗದವರಿಗೆ ಪ್ರಾಪ್ತವಾದದ್ದು ನಾಮ ಮಾತ್ರದ ಪ್ರಯೋಜನ. ಏಕೆಂದರೆ ಜನಸಾಮಾನ್ಯರಿಗಾಗಿ ಹಲವು ಜಿಲ್ಲೆಗಳಲ್ಲಿ ಶಾಲೆಗಳನ್ನು ತೆರೆದರೂ ನಿಮ್ನ ವರ್ಗದವರನ್ನು ಈ ಶಾಲೆಗಳಿಗೆ ಸೇರಿಸಿಕೊಳ್ಳುವ ಪ್ರಶ್ನೆಯನ್ನು ಇನ್ನೂ ಬಿಡಿಸಬೇಕಾಗಿತ್ತು. ೧೮೫೬ರಲ್ಲಿ ಈ ಪ್ರಶ್ನೆ ವ್ಯಾವಹಾರಿಕವಾಗಿಯೇ ಎದುರಾಯಿತು. ಆದರೆ ಮುಂಬಯಿ ಪ್ರಾಂತಕ್ಕೆ ಸಂಬಂಧಿಸಿದಂತೆ ೧೮೫೬–೫೭ನೇ ವರ್ಷಕ್ಕೆ ಸಾರ್ವಜನಿಕ ಶಿಕ್ಷಣದ ನಿರ್ದೇಶಕರು ಸಲ್ಲಿಸಿದ ವರದಿಯಿಂದ ಉದ್ಧರಿಸಿದ ಕೆಳಗಿನ ಭಾಗಗಳು ತೋರಿಸುವಂತೆ ಸರ್ಕಾರದ ನಿರ್ಣಯ ನಿಮ್ನ ವರ್ಗದವರಿಗೆ ಅನುಕೂಲಕರ ವಾಗಿರಲಿಲ್ಲ.

"೧೭೭ನೆಯ ಪ್ಯಾರಾಗ್ರಾಫ್: ಕೆಳಜಾತಿಯವರಿಗೆ ಮತ್ತು ಅನಾಗರಿಕ ಬಣಗಳವರಿಗೆ ಶಾಲೆಗಳು. ನೇರವಾಗಿ ಸರ್ಕಾರವೇ ಕೆಳವರ್ಗದವರಿಗಾಗಿ ಸ್ಥಾಪಿಸಿದ ಶಾಲೆಗಳು ಇಲ್ಲ. ಪರಮೋಚ್ಚ ಸರ್ಕಾರವು ಇಂತಹ ಶಾಲೆಗಳ ವಿಷಯದಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸಿವೆ. ಸರ್ಕಾರದ ಸಂಪೂರ್ಣ ನೆರವಿನಿಂದ ಸಾಮಾನ್ಯ ಶಾಲೆಗಳು ತತ್ವದಲ್ಲಿ ತಾರತಮ್ಯವಿಲ್ಲದೆ ಎಲ್ಲರಿಗೂ ತೆರೆದಿವೆ. ೧೮೫೫–೫೬ರ ನನ್ನ ವರದಿಯನ್ನು ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಸರ್ಕಾರವು ಈ ಕೆಳಗಿನ ಆಜ್ಞೆಯನ್ನು ಹೊರಡಿಸಿತು: "ಸರ್ಕಾರಿ ಶಾಲೆಗಳಿಗೆ ಅತ್ಯಂತ ಕೆಳವರ್ಗದ ಬಾಲಕರನ್ನು ಸೇರಿಸಿಕೊಳ್ಳುವ ಪ್ರಶ್ನೆಯನ್ನು ಈವರೆಗೆ ಸರ್ಕಾರದ ಮುಂದೆ ಒಂದೇ ಒಂದು ಬಾರಿ ಮಾತ್ರ ಇಡಲಾಗಿದೆ; ೧೮೫೬ರ ಜೂನ್ ತಿಂಗಳಿನಲ್ಲಿ ಒಬ್ಬ ಮಹಾರ್ ಹುಡುಗನ ಪರವಾಗಿ ಒಪ್ಪಿಸಿದ ಮನವಿಯಲ್ಲಿ ಅವನು ಶಿಕ್ಷಣದ ಸಾಮಾನ್ಯ ಶುಲ್ಕವನ್ನು ಕೊಡಲು ಸಿದ್ಧನಿದ್ದರೂ ಧಾರವಾಡದ ಸರ್ಕಾರಿ ಶಾಲೆಗೆ ಅವನಿಗೆ ಪ್ರವೇಶವನ್ನು ನಿರಾಕರಿಸಲಾಯಿತೆಂದು ದೂರು ಕೊಡಲಾಯಿತು. ಹೀಗೆ ಸರ್ಕಾರೀ ವಿದ್ಯಾಭ್ಯಾಸ ಇಲಾಖೆಯನ್ನು ಸ್ಥಾಪಿಸಿರುವುದು ದೇಶೀಯರ ತಿಳಿವಳಿಕೆಗಾಗಿ. ಅಮೂರ್ತವಾದ ನ್ಯಾಯದ ವಿಷಯದಲ್ಲಿ ದೇಶೀಯರಲ್ಲಿ ಬಹುಮಂದಿಯ ಸಾಮಾನ್ಯ ಭಾವನೆಗಳಿಗೆ ವಿರುದ್ಧವಾಗಿ ನಿರ್ಣಯ ತೆಗೆದುಕೊಳ್ಳಬೇಕಾಗಿ ಬಂದುದರಿಂದ ಸರ್ಕಾರವು ಒಂದು ದೊಡ್ಡ ವ್ಯಾವಹಾರಿಕ ಸಂಕಷ್ಟವನ್ನು ಎದುರಿಸಬೇಕಾಯಿತು. ಆ ಸಮಯದಲ್ಲಿ ಸಾಕಷ್ಟು ಹಿಂಜರಿಕೆಯಿಂದಲೇ ಅನುಮೋದಿಸಿದ ನಿರ್ಣಯದಲ್ಲಿ ಹೀಗೆ ತೀರ್ಮಾನಿಸಲಾಯಿತು.

## * ೧೮೫೭ರ ಜುಲೈ ೨೧ರಂದು ಸರ್ಕಾರ ಅನುಮೋದಿಸಿದ ನಿರ್ಣಯದ ಪಾಠ:-

೧. ಪತ್ರವ್ಯವಹಾರದಲ್ಲಿ ಚರ್ಚಿಸಿದ ಪ್ರಶ್ನೆ ವ್ಯಾವಹಾರಿಕವಾಗಿ ಬಹು ಕಷ್ಟದ ಪ್ರಶ್ನೆ.

೨. ಅಮೂರ್ತ ನ್ಯಾಯ ಮಹಾರ್ ಮನವಿದಾರನ ಪರವಾಗಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಧಾರವಾಡದಲ್ಲಿ ಲಭ್ಯವಿರುವ ಶಿಕ್ಷಣ ಸಾಧನವನ್ನು ಅವನು ಬಳಸಿಕೊಳ್ಳಲು ಈಗ ಇರುವ ಪೂರ್ವಾಗ್ರಹವನ್ನು ಸ್ವಲ್ಪ ಕಾಲದಲ್ಲಿಯೇ ಕೊನೆಗಾಣಿಸಲು ಸಾಧ್ಯವಾಗುವುದೆಂದು ಸರ್ಕಾರ ನಂಬುತ್ತದೆ.

೩. ಆದರೆ, ಒಬ್ಬ ವ್ಯಕ್ತಿ ಅಥವಾ ಕೆಲವೇ ವ್ಯಕ್ತಿಗಳಿಗಾಗಿ ಯುಗಯುಗಗಳ ಪೂರ್ವಾಗ್ರಹಗಳಲ್ಲಿ ಹಸ್ತಕ್ಷೇಪ ಮಾಡುವುದೆಂದರೆ ಶಿಕ್ಷಣದ ಗುರಿಗೇ ಪ್ರಾಯಶಃ ಬಹುಮಟ್ಟಿನ ಹಾನಿಯಾಗುವುದೆಂಬ ಸಂಗತಿಯನ್ನು ಸರ್ಕಾರ ಗಮನಿಸಬೇಕಾಗಿದೆ. ಮನವಿದಾರನು ಅನುಭವಿಸುತ್ತಿರುವ ತೊಂದರೆ ಈ ಸರ್ಕಾರದಿಂದ ಉದ್ಭವಿಸಲಿಲ್ಲ ಮತ್ತು ಆತ ಬೇಡಿರುವಂತೆ ಅವನ ಪರವಾಗಿ ಮಧ್ಯ ಪ್ರವೇಶಿಸಿ ಕ್ಷಿಪ್ರ ಕ್ರಮದಿಂದ ಸರ್ಕಾರವು ತೆಗೆದುಹಾಕಲು ಸಾಧ್ಯಗುವಂತಹ ತೊಂದರೆಯೂ ಅದಲ್ಲ.

ಒಬ್ಬ ಮಹಾರ್ ವ್ಯಕ್ತಿಗಾಗಿ, ಬಲಾತ್ಕಾರವಾಗಿ ಇತರರು ಅವನೊಡನೆ ಸೇರುವಂತೆ ಮಾಡಿ, ದೇಶೀಯ ಜನರಲ್ಲಿ ಬಹುಸಂಖ್ಯಾತರಿಗೆ ಶಾಲೆಯು ವಾಸ್ತವಿಕವಾಗಿ ನಿಷ್ಪ್ರಯೋಜಕವನ್ನಾಗಿ ಮಾಡುವ ಅಪಾಯವನ್ನು ತಂದುಕೊಳ್ಳುವುದು ಸರಿಯಲ್ಲ."

ಈ ವಿಷಯದಲ್ಲಿ ಮುಂಬಯಿ ಸರ್ಕಾರದ ನಡವಳಿಕೆಗಳನ್ನು ಭಾರತ ಸರ್ಕಾರವು ೧೮೫೮ರಲ್ಲಿ ಜನವರಿ ೨೩ನೆ ದಿನಾಂಕದ ೧೧ನೆ ಸಂಖ್ಯೆಯ ಪತ್ರದಲ್ಲಿ ಈ ಮಾತುಗಳನ್ನು ಗಮನಿಸಿತು.

"ಗವರ್ನರ್ ಜನರಲ್ ಇನ್ ಕೌನ್ಸಿಲ್ ಈ ವಿಷಯದಲ್ಲಿ ಮುಂಬಯಿ ಸರ್ಕಾರ ವಿವೇಕದಿಂದ ನಡೆದುಕೊಂಡಿದೆ ಎಂದು ಭಾವಿಸುತ್ತಾರೆ; ಆದರೆ ಆ ಬಾಲಕನಿಗೆ ಬಂಗಾಳ ಪ್ರಾಂತದ ಯಾವುದೇ ಸರ್ಕಾರಿ ಶಾಲೆಯು ಪ್ರವೇಶವನ್ನು ನಿರಾಕರಿಸುತ್ತಿರಲಿಲ್ಲ ಎಂದು ಭಾರತ ಸರಕಾರದ ಕಾರ್ಯದರ್ಶಿಯಾದ ನಾನು ಹೇಳಬೇಕೆಂದು ಕೌನ್ಸಿಲ್ ಅಪೇಕ್ಷಿಸುತ್ತದೆ."

ಈ ಪತ್ರ ತಲುಪಿದಾಗ, ಇಡೀ ದೇಶದಲ್ಲಿನ ಶಾಲೆಗಳ ಜಾತಿಯ ವಿಚಾರದಲ್ಲಿ ಹೊಂದಿರುವ ಪ್ರತ್ಯೇಕತಾ ಭಾವನೆಯನ್ನು ಕಡಿಮೆಯಾಗುವಂತೆ ಮಾಡುವಲ್ಲಿ ಯಾವುದೇ ಸಾಧನವನ್ನು ಅಲಕ್ಷ್ಯ ಮಾಡಲು ಸರ್ಕಾರಕ್ಕೆ ಎಳ್ಳಷ್ಟೂ ಇಷ್ಟವಿಲ್ಲ ಎನ್ನುವ ಬಗ್ಗೆ ಭಾರತದ ೧೮೫೮ರ ೨೮ನೆ ಏಪ್ರಿಲ್ ದಿನಾಂಕದ ೫೮ನೆ ಸಂಖ್ಯೆಯ ಪತ್ರದಲ್ಲಿ ಕೋರ್ಟ್ ಆಫ್ ಡೈರೆಕ್ಟರರು ಈ ವಿಷಯವಾಗಿ ಕೆಳಗಿನ ಆಜ್ಞೆಯನ್ನು ಮಾಡಿದರು: "ಸರ್ಕಾರದ ಶಿಕ್ಷಣ ಸಂಸ್ಥೆಗಳು ಎಲ್ಲರಿಗೂ ತೆರೆದಿರಬೇಕೆಂದು ನನ್ನ ಅಪೇಕ್ಷೆ. ಮೂಲತಃ ವಿರುದ್ಧವಾಗಿರುವ ಮತ್ತು ಅನುರಕ್ಷಣೆಯು ಬಹುಮುಖ್ಯವಾಗಿರುವ ತತ್ವವನ್ನು ನಾವು ದೂರ ಮಾಡಲು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಈ ತತ್ವವನ್ನು ಕಾರ್ಯಗತ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಒಂದು ಭಾಗವು ಶಾಲೆಯನ್ನು ಬಿಟ್ಟುಹೋಗುವುದು ಅಸಂಭವವಲ್ಲ. ಆದರೆ ಇದನ್ನು ಕಾರ್ಯಗತ ಮಾಡುವುದನ್ನು

---

* ಮೇಲು ಜಾತಿಯ ಬಾಲಕರು ಮಾತ್ರ ಸೇರಿರುವ ಶಾಲೆಗೆ ಪ್ರವೇಶವನ್ನು ಕೋರಿದವನು ಒಬ್ಬನೇ ಒಬ್ಬ ಮಹಾರ್.

ವಿರೋಧಿಸುವವರು ತಮ್ಮ ವಂತಿಗೆಗಳನ್ನು ಹಿಂದಕ್ಕೆ ತೆಗೆದುಕೊಂಡು ತಮ್ಮ ಹಣವನ್ನು ಬೇರೆ ಆಧಾರದ ಮೇಲೆ ಶಾಲೆಗಳ ಸ್ಥಾಪನೆಗೆ ಬಳಸಲು ಸ್ವತಂತ್ರರು ಎಂದಷ್ಟೇ ಹೇಳಿದರೆ ಸಾಕು."

ಸರ್ಕಾರಿ ಶಾಲೆಗಳಿಗೆ ಸಾಮಾನ್ಯವಾಗಿ ಅಪಖ್ಯಾತಿ ಉಂಟಾಗಿ, ಆ ಮೂಲಕ ಅವುಗಳ ದಕ್ಷತೆಯನ್ನು ನಾಶಮಾಡಿ ಅವನ್ನು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಯಿತೋ ಅದೇ ವಿಫಲವಾಗದಂತೆ ಇದನ್ನು ಜಾರಿಗೊಳಿಸಲು ಸಾಧ್ಯವಾದರೆ ಹಾಗೆ ಮಾಡಬಹುದಾಗಿದೆ. ಬಂಗಾಳದಲ್ಲಿ ಅನುಸರಿಸಲಾಗುತ್ತಿದೆ ಎನ್ನಲಾದ ತತ್ವ ಸಾಮಾನ್ಯ ಉಪಯುಕ್ತತೆಯ ಮೇಲೆ ವ್ಯಾವಹಾರಿಕ ಕಾರ್ಯಾಚರಣೆಯಿಂದ ಸರ್ಕಾರಿ ಶಾಲೆಗೆ ಯಾವ ಪರಿಣಾಮವಾಗಿದೆ ಎನ್ನುವುದರ ಬಗೆಗೆ ವಿಚಾರಣೆ ನಡೆಸಬೇಕೆಂತಲೂ ಸಹ ನಿರ್ಧರಿಸಲಾಯಿತು.

೧೧. ಬಂಗಾಳದಲ್ಲಿ ರೂಢಿಯಲ್ಲಿದ್ದ ಆಚರಣೆಗಳನ್ನು ಕುರಿತು ವಿಚಾರಣೆ ನಡೆಸಿದಾಗ, ಭಾರತ ಸರ್ಕಾರ ಭಾವಿಸಿದ್ದುದಕ್ಕೆ ವ್ಯತಿರಿಕ್ತವಾಗಿ ಬಂಗಾಳದ ಅಧಿಕಾರಿಗಳು ಕೆಳಗಿನ ಜಾತಿಗಳು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಅಥವಾ ತಿರಸ್ಕರಿಸುವ ನಿರ್ಧಾರವನ್ನು, ಸ್ಥಳೀಯ ದೇಶೀಯರ ಭಾವನೆಗಳನ್ನು ಗಮನಿಸಿ ಕೈಗೊಳ್ಳುವಂತೆ ಶಿಕ್ಷಣದ ಜಿಲ್ಲಾ ಸಮಿತಿಗಳಿಗೆ ಬಿಟ್ಟುಬಿಟ್ಟಿದ್ದರೆಂದು ತಿಳಿದುಬಂದಿತು. ಇದರ ಪರಿಣಾಮವಾಗಿ ನಿಮ್ನ ವರ್ಗದವರು ಕೇಳುವವರೇ ಇಲ್ಲದೆ, ಸಹಾಯಹೀನರಾಗಿ ಉಳಿದರು; ಏಕೆಂದರೆ, ಸರ್ಕಾರವು ತನ್ನ ಸಕಲ ಪ್ರಜೆಗಳ ಒಳಿತಿಗಾಗಿ ಹೊತ್ತಿಸಿದ್ದ ಜ್ಞಾನವೆಂಬ ಅಗ್ನಿಯ ಬಳಿ ನಿಮ್ನ ವರ್ಗದವರು ಕುಳಿತುಕೊಳ್ಳಲು ಸ್ಪೃಶ್ಯ ವರ್ಗದವರು ಅವಕಾಶ ಕೊಡಲಿಲ್ಲ.

೧೨. ಇಂತಹ ಸನ್ನಿವೇಶದಲ್ಲಿ ೧೮೫೪ರ ಅಧಿಕಾರಪತ್ರದಲ್ಲಿ ಸರ್ಕಾರ ಸೂಚಿಸಿದ ಜನ ಸಾಮಾನ್ಯರ ಶಿಕ್ಷಣವು, ಬಳಕೆಯಲ್ಲಿ ನಿಮ್ನ ವರ್ಗಗಳವರನ್ನು ಬಿಟ್ಟು ಉಳಿದವರಿಗೆಲ್ಲ ಲಭ್ಯವಾಯಿತು. ನಿಮ್ನ ವರ್ಗದವರ ವಿದ್ಯಾಭ್ಯಾಸಕ್ಕೆ ವಿಧಿಸಿದ್ದ ನಿರ್ಬಂಧವನ್ನು ೧೮೫೪ರಲ್ಲಿ ತೆಗೆದುಹಾಕಿದ್ದು ಹೆಸರಿಗೆ ಮಾತ್ರವಾಯಿತು. ಏಕೆಂದರೆ ಪ್ರತ್ಯೇಕತೆ ಕೂಡದು ಎಂಬ ತತ್ವವನ್ನು ಸರ್ಕಾರ ದೃಢವಾಗಿ ಹೇಳಿದರೂ ಅದನ್ನು ವ್ಯಾವಹಾರಿಕವಾಗಿ ಕಾರ್ಯಗತಮಾಡುವುದನ್ನು ಎಚ್ಚರಿಕೆಯಿಂದ ತಪ್ಪಿಸಲಾಯಿತು; ಆದುದರಿಂದ ಪ್ರತಿಬಂಧವನ್ನು ಬಳಕೆಯಲ್ಲಿ ಮೊದಲಿನಂತೆಯೇ ಮುಂದುವರಿಸಿಕೊಂಡು ಹೋಗಲಾಯಿತು ಎಂದು ನಾವು ಹೇಳಬಹುದು.

ನಿಮ್ನ ವರ್ಗದವರ ವಿದ್ಯಾಭ್ಯಾಸದ ಕಾರ್ಯವನ್ನು ವಹಿಸಿಕೊಳ್ಳಬಲ್ಲ ಏಕೈಕ ಸಾಧನವೆಂದರೆ ಕ್ರೈಸ್ತ ಮತ ಪ್ರಚಾರಕರು. ಮೌಂಟ್ ಸ್ಟೂವರ್ಟ್ ಎಲ್ಫಿನ್‌ಸ್ಟನ್‌ನ ಮಾತುಗಳಲ್ಲಿ "ಅತಿ ಕೆಳವರ್ಗದವರೇ ಅತ್ಯುತ್ತಮ ಜನ" ಎಂದು ಅವರಿಗೆ ಕಂಡಿತು. ಆದರೆ, ಸರ್ಕಾರ ಧಾರ್ಮಿಕ ವಿಷಯದಲ್ಲಿ ನೀತಿಗೆ ವಚನಬದ್ಧವಾಗಿತ್ತು. ಮತ ಪ್ರಚಾರಕರ ಶಾಲೆಗಳಿಗೆ ನೆರವು ನೀಡುವ ದಾರಿ ಕಾಣದಾಯಿತು. ಇದರಿಂದ ೧೮೫೪ರ ಶೈಕ್ಷಣಿಕ ಅಧಿಕಾರ ಪತ್ರವು ಮತ ಪ್ರಚಾರಕರ ಶಾಲೆಗಳಿಗೆ ಅನುದಾನ ನೀಡುವುದನ್ನು ಪ್ರತಿಬಂಧಿಸದಿದ್ದರೂ ಈ ಅವಧಿಯ ಪ್ರಾರಂಭದ ಭಾಗದಲ್ಲಿ ಈ ಪ್ರಾಂತದಲ್ಲಿ ಮತ ಪ್ರಚಾರಕರ ಯಾವ ಶಾಲೆಗೂ ಹಣದ ಸಹಾಯವನ್ನು ನೀಡಲಿಲ್ಲ.

೧೩. ಈ ಇಕ್ಕಟ್ಟಿನಿಂದ ಪಾರಾಗಲು ಸರ್ಕಾರವು ಎರಡು ಕ್ರಮಗಳನ್ನು ಕೈಗೊಂಡಿತು. (೧) ಕೆಳ ವರ್ಗದ ಹುಡುಗರಿಗಾಗಿ ಪ್ರತ್ಯೇಕ ಸರ್ಕಾರಿ ಶಾಲೆಗಳ ಸ್ಥಾಪನೆ ಮತ್ತು (೨) ಸಹಾಯಾನುದಾನಗಳ ನಿಯಮಗಳನ್ನು ಸಡಲಿಸುವುದರ ಮೂಲಕ ಮತಪ್ರಚಾರದ ಸಂಸ್ಥೆಗಳು ಅವರ ವಿದ್ಯಾಭ್ಯಾಸವನ್ನು ವಹಿಸಿಕೊಳ್ಳಲು ವಿಶೇಷ ಪ್ರೋತ್ಸಾಹವನ್ನು ವಿಸ್ತರಿಸುವುದು. ಈ ಎರಡು ಕ್ರಮಗಳನ್ನು ಕೈಗೊಳ್ಳದೆ ಹೋಗಿದ್ದರೆ,

೧೮೮೨ರಲ್ಲಿ ಹಂಟರ್ ಆಯೋಗವು ಪರಿಸ್ಥಿತಿಯ ವಿಮರ್ಶನೆಯನ್ನು ಮಾಡಿದಾಗ ಕಂಡ ತೀರ ಅಲ್ಪ ಪ್ರಮಾಣದ ಫಲಿತಾಂಶವೂ ಸಾಧ್ಯವಾಗುತ್ತಿರಲಿಲ್ಲ.

## III. ೧೮೮೨ರಿಂದ ೧೯೨೮

೧೪. ಮುಂಬಯಿ ಪ್ರಾಂತದ ಶೈಕ್ಷಣಿಕ ಇತಿಹಾಸದಲ್ಲಿ ೧೮೮೨ನೆ ವರ್ಷದ ನಂತರ ಮುಂದಿನ ಹೆಗ್ಗುರುತು ೧೯೨೩ನೆ ವರ್ಷ. ಪ್ರಾಥಮಿಕ ಶಿಕ್ಷಣವು ಪ್ರಾಂತೀಯ ಸರ್ಕಾರಗಳ ನಿಯಂತ್ರಣದಿಂದ ಬಿಡುಗಡೆಯಾಗಿ ಸ್ಥಳೀಯ ಸಂಸ್ಥೆಗಳ ನಿಯಂತ್ರಣಕ್ಕೆ ಬಂದದ್ದು ಆ ವರ್ಷವೇ ಆದ್ದರಿಂದ ೧೯೨೩ರಲ್ಲಿ ಪರಿಸ್ಥಿತಿ ಹೇಗಿತ್ತು ಎಂದು ಪರಿಶೀಲಿಸುವುದು ಸೂಕ್ತ.

ಶೈಕ್ಷಣಿಕ ಪ್ರಗತಿಯಲ್ಲಿ ೧೯೨೩ರಲ್ಲಿ ಮುಂಬಯಿ ಪ್ರಾಂತದಲ್ಲಿನ ಬೇರೆ ಬೇರೆ ಕೋಮುಗಳ ಸ್ಥಾನಗಳನ್ನು ಕೆಳಗಿನಂತೆ ಕೋಷ್ಟಕದ ರೂಪದಲ್ಲಿ ತೋರಿಸಬಹುದು.

| ಪ್ರಾಂತದಲ್ಲಿ ಜನರಲ್ಲಿ ವರ್ಗಗಳು | ಜನಸಂಖ್ಯೆಯಲ್ಲಿ ಅನುಕ್ರಮ | ಶಿಕ್ಷಣದಲ್ಲಿ ಅನುಕ್ರಮ | | |
|---|---|---|---|---|
| | | ಪ್ರಾಥಮಿಕ | ಪ್ರೌಢ (ಸೆಕೆಂಡರಿ) | ಕಾಲೇಜ್ |
| ಮುಂದುವರಿದ ಹಿಂದೂಗಳು | ೪ನೆಯದು | ೧ನೆಯದು | ೧ನೆಯದು | ೧ನೆಯದು |
| ಮಧ್ಯಮ ವರ್ಗದ ಹಿಂದೂಗಳು | ೧ನೆಯದು | ೩ನೆಯದು | ೩ನೆಯದು | ೩ನೆಯದರು |
| ಹಿಂದುಳಿದ ಹಿಂದೂಗಳು | ೨ನೆಯದು | ೪ನೆಯದು | ೪ನೆಯದು | ೪ನೆಯದರು |
| ಮಹಮ್ಮದೀಯರು | ೩ನೆಯದು | ೨ನೆಯದು | ೨ನೆಯದು | ೨ನೆಯದು |

೧೫. ಈ ಕೋಷ್ಟಕದಿಂದ ಶಿಕ್ಷಣದ ವಿಷಯದಲ್ಲಿ ಈ ಬೇರೆ ಬೇರೆ ಕೋಮುಗಳ ಮುನ್ನಡೆಯನ್ನು ತುಲನಾತ್ಮಕವಾಗಿ ನೋಡಿದಾಗ ಬಹುಹೆಚ್ಚಿನ ಏರುಪೇರುಗಳು ಕಾಣುತ್ತವೆ. ಜನತೆಯ ಈ ವರ್ಗಗಳು ಪ್ರಜಾಸಂಖ್ಯೆಯ ದೃಷ್ಟಿಯಿಂದ ಹಾಗೂ ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ಹೋಲಿಸಿ ನೋಡಿದಾಗ ಜನ ಸಂಖ್ಯೆಯಲ್ಲಿ ಮೊದಲನೆಯದಾದ ಮಧ್ಯಮ ವರ್ಗವು ಕಾಲೇಜ್ ವಿದ್ಯಾಭ್ಯಾಸದಲ್ಲಿ, ಪ್ರೌಢ ವಿದ್ಯಾಭ್ಯಾಸದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಮೂರನೆಯದಾಗಿರುವುದನ್ನು ಕಾಣುತ್ತೇವೆ.

* ಇಲಾಖೆಯ ಉದ್ದೇಶಕ್ಕಾಗಿ ಮುಂಬಯಿ ಸರ್ಕಾರದ ಶಿಕ್ಷಣ ಇಲಾಖೆಯು ಪ್ರಾಂತದ ಜನತೆಯನ್ನು ನಾಲ್ಕು ವರ್ಗಗಳನ್ನಾಗಿ ವಿಭಾಗಿಸಿದೆ. ಒಂದು ವರ್ಗದಲ್ಲಿ ಬ್ರಾಹ್ಮಣರನ್ನು ಇವರೊಂದಿಗೆ ಸೇರುವ ಜಾತಿಗಳನ್ನು ಒಂದುಗೂಡಿಸಿ "ಮುಂದುವರೆದ ಹಿಂದೂಗಳು" ಎಂದು ಒಟ್ಟಾಗಿ ಕರೆದಿದೆ. ಮರಾಠರನ್ನೂ, ಇವರೊಡನೆ ಸೇರುವ ಜಾತಿಗಳನ್ನು "ಮಧ್ಯಮ ವರ್ಗದ ಹಿಂದೂಗಳು" ಎನ್ನುವ ಬೇರೆ ವಿಭಾಗಕ್ಕೆ ಸೇರಿಸಿದೆ. ನಿಮ್ನ ವರ್ಗ ಗಳವರು, ಗುಡ್ಡಗಾಡು ಜನ ಮತ್ತು ಅಪರಾಧೀ ಕುಲಗಳು ಸೇರಿದಂತೆ ಉಳಿದ ಜನರನ್ನು ಪ್ರತ್ಯೇಕ ವಿಭಾಗ ಮಾಡಿ "ಹಿಂದುಳಿದ ಹಿಂದೂಗಳು" ಎಂದು ನಾಮಕರಣ ಮಾಡಲಾಗಿದೆ. ಈ ಪ್ರಾಂತದ ಮತ್ತು ಸಿಂಧ್‌ನ ಮಹಮ್ಮದೀಯರ ಇನ್ನೊಂದು ವರ್ಗವನ್ನು ಈ ಮೂರು ವರ್ಗಗಳ ಜೊತೆಗೆ ಸೇರಿಸಬೇಕು.

ಜನಸಂಖ್ಯೆಯಲ್ಲಿ ಎರಡನೆಯವರಾಗಿರುವ ನಿಮ್ನ ವರ್ಗದವರು ಕಾಲೇಜ್ ವಿದ್ಯಾಭ್ಯಾಸದಲ್ಲಿ ನಾಲ್ಕನೆಯವರು. ಎಂದರೆ ಕೊನೆಯವರು. ಪ್ರೌಢ ವಿದ್ಯಾಭ್ಯಾಸದಲ್ಲಿ ಕೊನೆಯಲ್ಲೂ ಮತ್ತು ಪ್ರಾಥಮಿಕ ವಿದ್ಯಾಭ್ಯಾಸದಲ್ಲೂ ಕೊನೆಯವರು. ಜನಸಂಖ್ಯೆಯಲ್ಲಿ ಮೂರನೆಯವರಾದ ಮಹಮ್ಮದೀಯರು ಕಾಲೇಜು ವಿದ್ಯಾಭ್ಯಾಸದಲ್ಲಿ ಎರಡನೆಯವರು. ಪ್ರೌಢ ಶಿಕ್ಷಣದಲ್ಲಿ ಎರಡನೆಯವರು, ಪ್ರಾಥಮಿಕ ಶಿಕ್ಷಣದಲ್ಲೂ ಎರಡನೆಯವರು. "ಮುಂದುವರೆದ ಹಿಂದೂಗಳು"ದರೋ ಪ್ರಜಾಸಂಖ್ಯೆಯಲ್ಲಿ ನಾಲ್ಕನೆಯವರು. ಕಾಲೇಜ್ ಶಿಕ್ಷಣದಲ್ಲಿ ಮೊದಲನೆಯವರು. ಪ್ರೌಢ ಶಿಕ್ಷಣದಲ್ಲೂ ಮೊದಲನೆಯವರು, ಪ್ರಾಥಮಿಕ ಶಿಕ್ಷಣದಲ್ಲಿಯೂ ಮೊದಲನೆಯವರು. ಇದರಿಂದ ನಾವು ಹೋಲಿಸಿ ಹೇಳುವುದಾದರೆ, ಈ ದಿಸೆಯಲ್ಲಿ ೧೮೮೨ರಲ್ಲಿದ್ದುದಕ್ಕಿಂತ ಹೆಚ್ಚಿನ ಯಾವುದೇ ಸುಧಾರಣೆಯಾಗಿಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು.

೧೬. ೧೯೨೩–೨೪ರ ವರ್ಷಕ್ಕೆ ಮುಂಬಯಿ ಪ್ರಾಂತದ ಸಾರ್ವಜನಿಕ ಶಿಕ್ಷಣ ನಿರ್ದೇಶಕರು ಸಲ್ಲಿಸಿದ ವರದಿಯನ್ನು ಆಧರಿಸಿದ ಮೇಲಿನ ಹೇಳಿಕೆ ವಿವಿಧ ಕೋಮುಗಳ ಶೈಕ್ಷಣಿಕ ಪ್ರಗತಿಯಲ್ಲಿರುವ ವ್ಯತ್ಯಾಸವನ್ನಷ್ಟೇ ತೋರಿಸುತ್ತದೆ. ಆದರೆ, ವಿವಿಧ ಕೋಮುಗಳ ಶೈಕ್ಷಣಿಕ ಮಟ್ಟಗಳಲ್ಲಿನ ವ್ಯತ್ಯಾಸ ಬಹು ಹೆಚ್ಚಿಲ್ಲದಿದ್ದರೆ ಅಲ್ಪ ಸಂಗತಿಯಾಗುತ್ತಿತ್ತು. ವ್ಯತ್ಯಾಸಗಳ ಪ್ರಮಾಣವನ್ನು ತಿಳಿಯದಿದ್ದರೆ ನಾವು ಯಾವುದೇ ಮುಖ್ಯ ನಿರ್ಣಯಕ್ಕೂ ಬರುವಂತಿಲ್ಲ. ಈ ದೃಷ್ಟಿಯಿಂದ ವಸ್ತುಸ್ಥಿತಿಯನ್ನು ಸೃಷ್ಟಿಗೊಳಿಸಲು ಕೆಳಗಿನ ಕೋಷ್ಟಕವನ್ನು ಕೊಟ್ಟಿದೆ.

| ಜನತೆಯ ವರ್ಗಗಳು | ಆಯಾ ಶಿಕ್ಷಣ ವರ್ಗದ ೧೦೦೦ ಜನಸಂಖ್ಯೆಯಲ್ಲಿನ ಪ್ರಾಥಮಿಕ ಶಿಕ್ಷಣದ ವಿದ್ಯಾರ್ಥಿಗಳು | ಆಯಾ ವರ್ಗದ ೧,೦೦,೦೦೦ ಜನ ಸಂಖ್ಯೆಯಲ್ಲಿ ಪ್ರೌಢ ಶಿಕ್ಷಣದ ವಿದ್ಯಾರ್ಥಿಗಳು | ಆಯಾ ವರ್ಗದ ೨,೦೦,೦೦೦ ಜನಸಂಖ್ಯೆಯಲ್ಲಿ ಕಾಲೇಜ್ ಶಿಕ್ಷಣದ ವಿದ್ಯಾರ್ಥಿಗಳು |
|---|---|---|---|
| ಮುಂದುವರಿದ ಹಿಂದೂಗಳು | ೧೯೯ | ೩,೦೦೦ | ೧,೦೦೦ |
| ಮಹಮ್ಮದೀಯರು | ೯೨ | ೫೦೦ | ೫೨ |
| ಮಧ್ಯಮವರ್ಗ | ೩೮ | ೧೪೦ | ೧೪ |
| ಹಿಂದುಳಿದ ವರ್ಗ | ೧೮ | ೧೪೧ | ಇಲ್ಲವೇ ಇಲ್ಲ (ಇದ್ದರೆ ಒಬ್ಬರಿರಬಹುದು ಅಷ್ಟೆ) |

೧೭. ಮೇಲಿನ ಅಂಕಿ ಸಂಖ್ಯೆಗಳು, ಪ್ರಾಥಮಿಕ, ಪ್ರೌಢ ಮತ್ತು ಕಾಲೇಜ್ ಶಿಕ್ಷಣದ ವಿಷಯದಲ್ಲಿ ಪ್ರತಿ ಕೋಮು ಇತರರಿಗಿಂತ ಎಷ್ಟು ಮುಂದಿದೆ ಎನ್ನುವುದನ್ನು ತೋರಿಸುತ್ತದೆ. ಈ ಪ್ರಾಂತದ ವಿವಿಧ ಕೋಮುಗಳಲ್ಲಿನ ವ್ಯತ್ಯಾಸ ಅವು ಕಾಣಿಸಿಕೊಡುವಂತೆ ಶೈಕ್ಷಣಿಕ ವಿಷಯದಲ್ಲಿ ಕೆಲವು ಕೋಮುಗಳ ಸ್ಥಿತಿಯು ನಮ್ಮನ್ನು ಬೆಚ್ಚಿಬೀಳಿಸುತ್ತದೆ. ಮೇಲೆ ಕಾಣಿಸಿರುವ ಅಂಕಿ ಅಂಶಗಳಿಂದ ಎರಡು ಅಂಶಗಳು ವಾದಾತೀತವಾಗಿ ಎದ್ದು ಕಾಣುತ್ತದೆ: (೧) ಈ ಪ್ರಾಂತದಲ್ಲಿ ಹಿಂದುಳಿದ ವರ್ಗಗಳವರ ಶೈಕ್ಷಣಿಕ ಪರಿಸ್ಥಿತಿ ಶೋಚನೀಯ. ಜನಸಂಖ್ಯೆಯಲ್ಲಿ ಅವರದು ಎರಡನೆಯ ಸ್ಥಾನ. ಆದರೆ ವಿದ್ಯಾಭ್ಯಾಸದ ಮಟ್ಟಿಗೆ ಅವರ ಸ್ಥಾನ ಕಡೆಯದು ಮಾತ್ರವಲ್ಲ. ತೀರ ಕೆಳಮಟ್ಟದ್ದೂ ಹೌದು. (೨) ಈ ಪ್ರಾಂತದ ಮಹಮ್ಮದೀಯರು ಶೈಕ್ಷಣಿಕವಾಗಿ ವೇಗವಾದ ಪ್ರಗತಿಯನ್ನು

ಸಾಧಿಸಿದ್ದಾರೆ; ಎಷ್ಟರಮಟ್ಟಿಗೆ ಎಂದರೆ, ಮೂವತ್ತು ವರ್ಷಗಳಲ್ಲಿ ಅವರು ಮಧ್ಯಮ ವರ್ಗದವರು ಮತ್ತು ಹಿಂದುಳಿದ ವರ್ಗದವರನ್ನು ಹಿಂದಕ್ಕೆ ಹಾಕಿರುವುದು ಮಾತ್ರವಲ್ಲ, ಬ್ರಾಹ್ಮಣರು ಮತ್ತು ಸಂಬಂಧಿಸಿದ ಜಾತಿಗಳವರ ಸಮೀಪಕ್ಕೆ ಬಂದುಬಿಟ್ಟಿದ್ದಾರೆ.

೧೮. ಇದಕ್ಕೆ ಕಾರಣ ಏನಿರಬಹುದು? ಎಂದೂ ಇದ್ದೇ ಇರುವ ಈ ಪ್ರಶ್ನೆಗೆ ನಮ್ಮ ಉತ್ತರ, ಸರ್ಕಾರ ಕಾಣುವ ರೀತಿಯಲ್ಲಿ ತಾರತಮ್ಯವೇ ಎಂಬುದು. ಈ ಎರಡು ವರ್ಗಗಳನ್ನು ನಡೆಸಿಕೊಳ್ಳುವುದರಲ್ಲಿ ಎಷ್ಟೊಂದು ತಾರತಮ್ಯವಿತ್ತು ಎನ್ನುವುದು ಶಿಕ್ಷಣವನ್ನು ಕುರಿತ ಪಂಚವಾರ್ಷಿಕ ವರದಿಗಳಿಂದ ಉದ್ಧರಿಸಿದ ಭಾಗಗಳಿಂದ ವ್ಯಕ್ತವಾಗುತ್ತದೆ. ವಿದ್ಯಾಭ್ಯಾಸದ ವಿಷಯದಲ್ಲಿ ಮಹಮ್ಮದೀಯರನ್ನು ನಡೆಸಿಕೊಂಡ ರೀತಿಗೆ ಸಂಬಂಧಿಸಿದಂತೆ ಮೂರನೆಯ ಪಂಚವಾರ್ಷಿಕ ವರದಿ (೧೮೯೨–೯೬)ಯಿಂದ ತೆಗೆದ ಭಾಗಗಳು ಗಮನಾರ್ಹ:

"ಮುಂಬಯಿ ಪ್ರಾಂತದಲ್ಲಿ ಮಹಮ್ಮದೀಯರ ವಿದ್ಯಾಭ್ಯಾಸದ ಅಂಕಿಗಳನ್ನು ಕುರಿತಂತೆ... 'ಪ್ರತಿಕೂಲ ಸನ್ನಿವೇಶವಿಲ್ಲದಿದ್ದರೆ' ಬೆಳವಣಿಗೆ ಇನ್ನೂ ಹೆಚ್ಚಾಗಿರುತ್ತಿತ್ತು ಎಂದು ನಿರ್ದೇಶಕರು ಅಭಿಪ್ರಾಯಪಡುತ್ತಾರೆ: ಮುಂಬಯಿಯಲ್ಲಿ ಉಳಿದ ಜನರಿಗಿಂತ ಮಹಮ್ಮದೀಯರು ಸಾರ್ವಜನಿಕ ವಿದ್ಯಾಸಂಸ್ಥೆಗಳ ಪ್ರಯೋಜನ ಪಡೆಯುತ್ತಾರೆ ಎಂಬುದನ್ನು ಬಹುಕಾಲದಿಂದ ಗುರುತಿಸಲಾಗಿದೆ... ಮಹಮ್ಮದೀಯರ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲು ಏನು ಮಾಡಿದೆ ಎಂಬ ಸಾಮಾನ್ಯ ಪ್ರಶ್ನೆಯನ್ನು ಕುರಿತು ನಿರ್ದೇಶಕರು ಹೀಗೆ ಬರೆಯುತ್ತಾರೆ:

> "ಮೊದಲನೆಯದಾಗಿ ಪ್ರತಿ ಜಿಲ್ಲೆಯಲ್ಲಿ ಉಪ ಅಥವಾ ಸಹಾಯಕ ಉಪ ಮೇಲ್ವಿಚಾರಕರಾಗಿ ಒಬ್ಬ ಮಹಮ್ಮದೀಯ ಅಧಿಕಾರಿಯನ್ನು ನೇಮಿಸಲಾಗುತ್ತಿದೆ. ಕೈರ, ಕೊಲ್ಲಾಪುರ ಮತ್ತು ಹೈದರಾಬಾದುಗಳಲ್ಲಿ ಮೂವರು ಮಹಮ್ಮದೀಯ ಪದವೀಧರರು ಉಪ ಮೇಲ್ವಿಚಾರಕ ರಾಗಿದ್ದಾರೆ. ಕಂದಾಯ ಇಲಾಖೆಯ ಮೇಲಿನ ವರ್ಗಕ್ಕೆ ನಾಲ್ಕನೆಯ ಪದವೀಧರನನ್ನು ಸೇರಿಸಿಕೊಂಡಿದೆ. ಹೀಗೆ ಸಿಬ್ಬಂದಿಯು ಮಹಮ್ಮದೀಯ ಪ್ರಜಾವರ್ಗದೊಡನೆ ಸಂಪರ್ಕ ಹೊಂದಿಲ್ಲದ ಒಂದೆ ಜಿಲ್ಲೆಯೂ ಇಲ್ಲ. ಅಲ್ಲದೆ ಮುಂಬಯಿ, ಕರಾಚಿ ಮತ್ತು ಜುನಾಘಡ (ಕಾಥೇವಾಡದ ಒಂದು ಮಹಮ್ಮದೀಯ ಸಂಸ್ಥಾನ)ಗಳಲ್ಲಿ ಮಹಮ್ಮದೀಯರಿಗಾಗಿ ಕಡಿಮೆ ಶುಲ್ಕ ದರಗಳ ಪ್ರೌಢಶಾಲೆಗಳನ್ನು ಸ್ಥಾಪಿಸಲು ವಿಶೇಷ ಪ್ರಯತ್ನಗಳನ್ನು ಮಾಡಲಾಗಿದೆ ಮತ್ತು ಇತರೆಡೆಗಳಲ್ಲಿ ಇತರ ಅಂಜುಮಾನ್‌ಗಳು (ಮಹಮ್ಮದೀಯ ಸಂಘಗಳು) ಸಣ್ಣ ಪಾಠಶಾಲೆಗಳನ್ನು ತೆರೆದಿವೆ. ಅವರ ಅನುಕೂಲಕ್ಕಾಗಿಯೇ ಇಲಾಖೆಯ ವಿಶೇಷ ಗುಣಮಟ್ಟಗಳನ್ನು ನಿರ್ಧರಿಸಿದೆ ಮತ್ತು ಕೆಲವು ಪ್ರದೇಶಗಳ ವಿಶೇಷ ಪಾಠಶಾಲೆಗಳನ್ನು ನಡೆಸುತ್ತದೆ. ಅಲ್ಲದೆ, ಪ್ರಾಂತೀಯ ಮತ್ತು ಸ್ಥಳೀಯ ಸಂಸ್ಥೆಗಳ ವಿದ್ಯಾರ್ಥಿ ವೇತನಗಳಲ್ಲಿ ಮೂರರಲ್ಲಿ ಒಂದರಷ್ಟನ್ನು ಕಾದಿರಿಸಲಾಗಿದೆ. ಇದಲ್ಲದೆ ಖಾನ್ ಬಹದ್ದೂರ್ ಕಾಜೀ ಷಾಬುದ್ದೀನರು (ಒಂದು ಕಾಲದಲ್ಲಿ ಬರೋಡದ ದಿವಾನರು) ಸ್ಥಾಪಿಸಿದ ವಿಶೇಷ ವಿದ್ಯಾರ್ಥಿ ವೇತನಗಳಿವೆ; ಸಿಂಧ್ ಕಲಾ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗಾಗಿ ಖಾರಿಪುರ ದೇಶೀಯ ಸಂಸ್ಥಾನದ ಉತ್ತರಾಧಿಕಾರಿ ಊಟದ ವ್ಯವಸ್ಥೆಗಾಗಿಯೇ ಒಂದಿಷ್ಟು ವಿದ್ಯಾರ್ಥಿ ವೇತನಗಳನ್ನು ಕೊಟ್ಟಿದ್ದಾರೆ (ವಿದ್ಯಾರ್ಥಿವೇತನ ೨೫ ರೂಪಾಯಿಗಳಷ್ಟಿದ್ದರೂ ಕಳೆದ ವರ್ಷ ಅದನ್ನು ಕೊಡುವುದಕ್ಕೂ ನನಗೆ ಕಷ್ಟವಾಯಿತು) ಪ್ರಾಥಮಿಕ ಶಾಲೆಗಳಲ್ಲಿ ಶುಲ್ಕದ ವಿಷಯದಲ್ಲಿ ಮಹಮ್ಮದೀಯರನ್ನು ಬಹು ಉದಾರವಾಗಿಯೇ ಕಾಣಲಾಗುತ್ತಿದೆ. ಹಿಂದೂಗಳು

ತೆಗೆದುಕೊಳ್ಳುವುದಕ್ಕಿಂತ ಸುಲಭವಾದ ಪರೀಕ್ಷೆಯನ್ನು ಕೊಡುವ ವಿಶೇಷ ನಿಯಮಗಳ ಮೂಲಕ ಅವರು ತರಬೇತಿ ಕಾಲೇಜುಗಳಿಗೆ ಬರಲು ಉತ್ತೇಜನ ನೀಡಲಾಗುತ್ತಿದೆ... ಒಬ್ಬ ಮಹಮದೀಯ ಉಪ ಪರೀಕ್ಷಾಧಿಕಾರಿಯನ್ನು ನೇಮಿಸಿ ಮುಂಬೈಯಲ್ಲಿರುವ ಸಂಯುಕ್ತ ಶಾಲೆಗಳ ಸಮಿತಿಯು ಮಹಮ್ಮದೀಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲು ಈಚೆಗೆ ವಿಶೇಷ ಪ್ರಯತ್ನವನ್ನು ಮಾಡಿದೆ..."

೧೯. ಈ ಅಭಿಪ್ರಾಯಗಳೊಂದಿಗೆ ೫ನೆಯ ಪಂಚವಾರ್ಷಿಕ ವರದಿಯಲ್ಲಿ (೧೯೦೨-೦೭) ನಿಮ್ನ ವರ್ಗದವರ ಶಿಕ್ಷಣವನ್ನು ಕುರಿತ ಈ ಮಾತುಗಳನ್ನು ಹೋಲಿಸಿ:

"೯೫೫. ಮುಂಬಯಿ-ಮುಂಬಯಿಯ ಕೇಂದ್ರ ವಿಭಾಗದಲ್ಲಿ ಕೆಳಜಾತಿಯ ಮಕ್ಕಳನ್ನು ಶುಲ್ಕ ವಿಲ್ಲದೆ ಶಾಲೆಗಳಿಗೆ ಸೇರಿಸಿಕೊಳ್ಳಲಾಗುತ್ತದೆ ಮತ್ತು ಪುಸ್ತಕಗಳು, ಸ್ಲೇಟುಗಳು ಮೊದಲಾದವುಗಳ ರೂಪದಲ್ಲಿ ಉಡುಗೊರೆಗಳನ್ನು ಕೊಡಲಾಗುತ್ತದೆ... ಕಾಥೆಯವಾಡದಲ್ಲಿ ನಿಮ್ನ ವರ್ಗದ ಮೂವರು ಮಕ್ಕಳು ಮಾತ್ರ ಶಿಕ್ಷಣ ಪಡೆಯುತ್ತಿದ್ದಾರೆ. ದಕ್ಷಿಣ ವಿಭಾಗದಲ್ಲಿ ಅವರಿಗಾಗಿ ೭೨ ವಿಶೇಷ ಶಾಲೆಗಳು ಅಥವಾ ತರಗತಿಗಳಿವೆ. ಇವುಗಳ ಉಪಾಧ್ಯಾಯರಲ್ಲಿ ಬಹುಮಂದಿ ಸಾಕಷ್ಟು ಅರ್ಹತೆ ಇಲ್ಲದವರು."

೨೦. ಈ ತಾರತಮ್ಯಕ್ಕೆ ಮೂಲ ಹಂಟರ್ ಆಯೋಗದ ಶಿಫಾರಸುಗಳು ಮಹಮ್ಮದೀಯರ ವಿಷಯದಲ್ಲಿ ಅದು ಮಾಡಿದ ಶಿಫಾರಸುಗಳನ್ನು ನಿಮ್ನ ವರ್ಗದವರ ಹಿತಾಸಕ್ತಿಗಾಗಿ ಮಾಡಿದ ಶಿಫಾರಸುಗಳೊಂದಿಗೆ ಹೋಲಿಸಿದರೆ ಹಂಟರ್ ಆಯೋಗಕ್ಕೆ ಮಹಮ್ಮದೀಯರ ವಿಷಯದಲ್ಲಿ ಎಷ್ಟೊಂದು ಪಕ್ಷಪಾತವಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಮಹಮದೀಯರ ವಿಷಯದಲ್ಲಿ ಆಯೋಗವು ಮಾಡಿದ ಹದಿನೇಳು ಶಿಫಾರಸುಗಳಲ್ಲಿ ಈ ಕೆಳಗಿನವು ಗಮನಾರ್ಹವಾದವು:-

(೧) ಮಹಮ್ಮದೀಯ ಶಿಕ್ಷಣದ ವಿಶೇಷ ಉತ್ತೇಜನವು ಸ್ಥಳೀಯ, ಪುರಸಭೆಯ ಮತ್ತು ಪ್ರಾಂತ್ಯದ ಹಣಕಾಸುಗಳ ವೆಚ್ಚಕ್ಕೆ ನ್ಯಾಯವಾಗಿಯೇ ಸೇರಿದುದು ಎಂದು ಭಾವಿಸಬೇಕು.

(೭) ಪ್ರೌಢ ಶಿಕ್ಷಣಕ್ಕೆ ವಿದ್ಯಾಭ್ಯಾಸದಲ್ಲಿ ಈ ಕೋಮಿಗೆ ವಿಶೇಷ ನೆರವು ಅಗತ್ಯವಾದುದರಿಂದ ಅದಕ್ಕೆ ಉದಾರವಾಗಿ ಪ್ರೋತ್ಸಾಹವನ್ನು ನೀಡಬೇಕು.

(೮) ಅಗತ್ಯವಿದ್ದಲ್ಲಿ ಮಹಮ್ಮದೀಯರಿಗೆ ದರ್ಜೆಗಳಾಗಿ ವರ್ಗೀಕರಿಸಿದ ವ್ಯವಸ್ಥೆಗನುಗುಣವಾಗಿ ವಿಶೇಷ ವಿದ್ಯಾರ್ಥಿವೇತನಗಳನ್ನು ಸ್ಥಾಪಿಸಬೇಕು. ಇವನ್ನು (ಅ) ಮಾಧ್ಯಮಿಕ ಶಾಲೆಗಳಲ್ಲೂ ಮುಂದುವರಿಯುವಂತೆ ಪ್ರಾಥಮಿಕ ಶಾಲೆಗಳಲ್ಲಿ; (ಆ) ಪ್ರೌಢಶಾಲೆಗಳಲ್ಲೂ ಮುಂದು ವರಿಯುವಂತೆ ಮಾಧ್ಯಮಿಕ ಶಾಲೆಗಳಲ್ಲಿ; (ಇ) ಮೆಟ್ರಿಕ್ಯುಲೇಷನ್ ಮತ್ತು ಫಸ್ಟ್ ಆರ್ಟ್ಸ್ ಪರೀಕ್ಷೆಗಳ ಫಲಿತಾಂಶಗಳ ಆಧಾರದ ಮೇಲೆ, ಕಾಲೇಜುಗಳಲ್ಲಿಯೂ ಮುಂದುವರಿಯುವಂತೆ ನೀಡಬೇಕು.

(೯) ಸಾರ್ವಜನಿಕ ಹಣಕಾಸಿನಿಂದ ನಿರ್ವಹಿಸುವ ಎಲ್ಲ ಶಾಲೆಗಳಲ್ಲಿ ಮಹಮ್ಮದೀಯ ವಿದ್ಯಾರ್ಥಿಗಳಿಗಾಗಿಯೇ ಒಂದು ನಿಶ್ಚಿತ ಭಾಗವನ್ನು ಮೀಸಲಾಗಿಡಬೇಕು.

(೧೦) ಮಹಮ್ಮದೀಯರ ಉಪಯೋಗಕ್ಕಾಗಿಯೇ ಸ್ಥಾಪಿತವಾಗಿದ್ದು, ಸರ್ಕಾರವು ನಿರ್ವಹಿಸುತ್ತಿರುವ ಶೈಕ್ಷಣಿಕ ದತ್ತಿಗಳಲ್ಲಿ ಪ್ರತಿ ದತ್ತಿಯಿಂದ ಬರುವ ಹಣವನ್ನೆಲ್ಲ ಮಹಮ್ಮದೀಯರ ಶಿಕ್ಷಣದ ಪ್ರಗತಿಗೆ ಮಾತ್ರವೇ ಬಳಸತಕ್ಕದ್ದು.

(೧೧) ಮಹಮ್ಮದೀಯರು ಇರುವ ಸ್ಥಳಗಳಲ್ಲಿ, ಅಥವಾ ಅವರು ಖಾಸಗಿ ವ್ಯಕ್ತಿಗಳ ಅಥವಾ ಸಂಸ್ಥೆಗಳ ಅಧೀನದಲ್ಲಿ ಇದ್ದಲ್ಲಿ ಸಹಾಯಾನುದಾನದ ವ್ಯವಸ್ಥೆಗೆ ಅನುಗುಣವಾಗಿ ಇಂಗ್ಲಿಷನ್ನು ಬೋಧಿಸುವ ಶಾಲೆಗಳನ್ನು ಕಾಲೇಜುಗಳನ್ನು ಸ್ಥಾಪಿಸುವ ಅವರಿಗೆ ಉದಾರವಾಗಿ ಸಹಾಯಾನುದಾನಗಳನ್ನು ನೀಡಿ ಪ್ರೋತ್ಸಾಹ ನೀಡಬೇಕು.

(೧೨) ಅಗತ್ಯವಾದೆಡೆಗಳಲ್ಲಿ ಮಹಮ್ಮದೀಯ ಉಪಾಧ್ಯಾಯರ ತರಬೇತಿಗಾಗಿ ನಾರ್ಮಲ್ ಸ್ಕೂಲುಗಳನ್ನು ಅಥವಾ ತರಬೇತಿಗಳನ್ನು ಸ್ಥಾಪಿಸಬೇಕು.

(೧೪) ಮಹಮ್ಮದೀಯರ ಪ್ರಾಥಮಿಕ ಶಾಲೆಗಳ ಪರೀಕ್ಷೆಗಾಗಿ ಈವರೆಗೆ ನೇಮಿಸಿದುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಮ್ಮದೀಯರ ತನಿಖಾಧಿಕಾರಿಗಳನ್ನು ನೇಮಿಸಬೇಕು.

(೧೭) ಶಿಕ್ಷಣ ಪಡೆದ ಮಹಮ್ಮದೀಯರು ಮತ್ತು ಇತರರಿಗೆ ನೀಡುತ್ತಿರುವ ಸಹಾಯದ ಪ್ರಮಾಣದ ಪ್ರಶ್ನೆಯ ಕಡೆಗೆ ಸ್ಥಳೀಯ ಆಡಳಿತಗಳ ಗಮನವನ್ನು ಸೆಳೆಯಬೇಕು.

೨೧. ಹಂಟರ್ ಆಯೋಗವು ಮಾಡಿದ ಈ ಶಿಫಾರಸುಗಳಲ್ಲಿ ಪ್ರತಿಯೊಂದೂ ವರ್ಗದವರ ಹಿತದೃಷ್ಟಿಯಿಂದ ಅಗತ್ಯವಾಗಿತ್ತು. ಆದರೆ, ಆಯೋಗವು ಹಿಂದುಳಿದ ವರ್ಗದವರ ಹಿತಕ್ಕಾಗಿ ಮಾಡಿದ ಶಿಫಾರಸುಗಳನ್ನು ವಿಶ್ಲೇಷಿಸಿದಾಗ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸವು ಸರ್ಕಾರದ ವೆಚ್ಚಕ್ಕೆ ನ್ಯಾಯ ವಾಗಿಯೇ ಸೇರಿದುದು ಎಂದು ಭಾವಿಸಬೇಕೆಂದಾಗಲೀ ಅವರಿಗಾಗಿ ವಿದ್ಯಾರ್ಥಿ ವೇತನಗಳನ್ನು ಇತರ ನೆರವುಗಳನ್ನು ಮೀಸಲಾಗಿಡಬೇಕೆಂದಾಗಲೀ, ಅವರ ಶೈಕ್ಷಣಿಕ ಅಗತ್ಯಗಳಿಗೆ ಗಮನಕೊಡಲು ವಿಶೇಷ ತನಿಖಾ ಸಿಬ್ಬಂದಿಯನ್ನು ನೇಮಿಸಬೇಕೆಂದಾಗಲೀ ಅವರಲ್ಲಿ ವಿದ್ಯಾಭ್ಯಾಸ ಬೆಳೆಯಲು ಸರ್ಕಾರ ನೆರವನ್ನು ನೀಡಬೇಕೆಂದಾಗಲೀ ಆದೇಶಿಸುವನ್ನು ಕಾಣುವುದಿಲ್ಲ. ಆಯೋಗವು ಹೇಳುವುದು ಇಷ್ಟನ್ನೇ: "(೧) ಜಾತಿಯೊಂದರ ಆಧಾರದ ಮೇಲೆ ಸರ್ಕಾರಿ ಕಾಲೇಜು ಅಥವಾ ಶಾಲೆಯಲ್ಲಿ ಯಾವ ಹುಡುಗನಿಗೂ ಪ್ರವೇಶವನ್ನು ನಿರಾಕರಿಸಲಾಗದು" ಎಂಬ ತತ್ವವನ್ನು ಮತ್ತೆ ದೃಢವಾಗಿ ಹೇಳತಕ್ಕದ್ದು ಮತ್ತು ಪ್ರಾಂತೀಯ ವಾಗಿರಲಿ, ಪುರಸಭೆಗೆ ಸೇರಿಸಲಿ, ಸ್ಥಳೀಯವಾಗಿರಲಿ ಸಾರ್ವಜನಿಕ ಹಣದಿಂದಲೇ ಸಂಪೂರ್ಣವಾಗಿ ನಿರ್ವಹಿಸುತ್ತಿದ್ದು ವಿಶೇಷ ಜನಾಂಗಗಳಿಗೆ ಮುಡಿಪಾಗಿಲ್ಲದ ವಿದ್ಯಾಸಂಸ್ಥೆಗಳಲ್ಲಿ ಈ ತತ್ವವನ್ನು ಅನುಸರಿಸ ತಕ್ಕದ್ದು. (೨) ಸಾರ್ವಜನಿಕ ಹಣದಿಂದ ಆಗಲೇ ನಿರ್ವಹಿಸುತ್ತಿರುವ ಶಾಲೆಗಳಲ್ಲಿ ಕೆಳವರ್ಗಗಳ ವಿದ್ಯಾರ್ಥಿ ಗಳಿಗೆ ತಕ್ಕಷ್ಟು ಅವಕಾಶ ಇಲ್ಲದೆ, ಅವರಿಗಾಗಿಯೇ ಪ್ರತ್ಯೇಕ ಶಾಲೆಗಳನ್ನು ಅಥವಾ ತರಗತಿಗಳನ್ನು ಪ್ರಾರಂಭಿಸಲು ಅಂತಹ ಮಕ್ಕಳು ತಕ್ಕಷ್ಟು ಸಂಖ್ಯೆಯಲ್ಲಿ ಇರುವ ಸ್ಥಳಗಳಲ್ಲಿ ಅವರಿಗಾಗಿಯೇ ವಿಶೇಷ ತರಗತಿಗಳನ್ನು, ಶಾಲೆಗಳನ್ನು ಸ್ಥಾಪಿಸಲು ವಿಶೇಷ ಪ್ರೋತ್ಸಾಹವನ್ನು ಕೊಡಬೇಕು. ವಾಸ್ತವಿಕವಾಗಿ ಆಯೋಗವು ಮಹಮ್ಮದೀಯರಿಗಾಗಿ ಮಾಡಿದ ಶಿಫಾರಸುಗಳು ಮಹಮ್ಮದೀಯರಿಗಿಂತ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿಯೇ ಹೆಚ್ಚು ಅಗತ್ಯವಾಗಿದ್ದವು. ಏಕೆಂದರೆ ಮಹಮ್ಮದೀಯರ ವಿಷಯದಲ್ಲಿ ವಿಶೇಷ ಸಹಾನು ಭೂತಿಯನ್ನು ಹೊಂದಿದ್ದ ಅಧ್ಯಕ್ಷರೇ ಇದ್ದ ಹಂಟರ್ ಆಯೋಗವೂ ಸಹ, '೧೮೭೧–೭೩ರಲ್ಲಿ ಮಾಡಿದ ತನಿಖೆಯು ಮಹಮ್ಮದೀಯರು ಪ್ರೌಢಶಿಕ್ಷಣದಲ್ಲಿ ಹಿಂದುಳಿದಿರುವುದನ್ನು ಉತ್ಪ್ರೇಕ್ಷಿಸುವ ಪ್ರವೃತ್ತಿಯನ್ನು

ಸ್ಥಾಪಿಸಿದೆ' ಎಂದು ಒಪ್ಪಿಕೊಳ್ಳಬೇಕಾಯಿತು. ಹೀಗಿದ್ದೂ ಸಹ ಹಂಟರ್ ಆಯೋಗವು ಮಾಡಿದ್ದು ಮೇಲೆ ಹೇಳಿದ ಎರಡು ಶಿಫಾರಸುಗಳನ್ನು ಮಾತ್ರ. ನಿಮ್ನ ವರ್ಗದವರಿಗೆ ಸಂಬಂಧಿಸಿದಂತೆ ಆಯೋಗವು ಮಾಡಿದ ಈ ಎರಡೂ ಶಿಫಾರಸುಗಳು ಸಹ ಹೆಚ್ಚು ಪ್ರಯೋಜನಕ್ಕೆ ಬರುವಂತಹವೇನೂ ಅಲ್ಲ. ಅವು ನಿಷ್ಪ್ರಯೋಜಕವಾಗುವುದು ಅನಿವಾರ್ಯವಾಗಿತ್ತು. ಐದನೆಯ ಬಾರಿಯೇ ಆದರೂ ತತ್ವವನ್ನು ಪುನರುಚ್ಚರಿಸುವುದರಿಂದ ಏನೂ ಫಲವಿರಲಿಲ್ಲ. ಏಕೆಂದರೆ ಆಯೋಗವು ಸೇರಿಸಿದ ಷರತ್ತಿನ ಪ್ರಕಾರ ಇದನ್ನು ಕಾರ್ಯಗತಮಾಡುವುದನ್ನು ತಪ್ಪಿಸಬೇಕಾಗಿತ್ತು. ಹಾಗೆಯೇ ನಿಮ್ನ ವರ್ಗದವರಿಗಾಗಿಯೆ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು ಸ್ವಲ್ಪ ಹೆಚ್ಚುಕಡಿಮೆ ಸಾಧ್ಯವೇ ಇರಲಿಲ್ಲ. ಏಕೆಂದರೆ ಇವು ನಿಷ್ಫಲವೇ ಆಗುತ್ತಿದ್ದವು. ಪ್ರಾಥಮಿಕ ಶಿಕ್ಷಣವೇ ಕಷ್ಟದ ಕೆಲಸವಾಗಿದ್ದ ಸರ್ಕಾರಕ್ಕೆ ಇನ್ನೂ ವೆಚ್ಚವನ್ನು ತರುವ ಪ್ರತ್ಯೇಕ ಶಾಲೆಗಳು ಒಪ್ಪಿಗೆಯಾಗುವಂತಿರಲಿಲ್ಲ. ಅಲ್ಲದೆ ಇಂತಹ ಶಾಲೆಗಳನ್ನು ಹಿಂದುಳಿದ ವರ್ಗಗಳವರು ಹೆಚ್ಚಿನ ಸಂಖ್ಯೆಯಲ್ಲಿ ಇರುವಲ್ಲಿ ತೆರೆಯಬೇಕೆಂಬ ಷರತ್ತು ಶಿಫಾರಸ್ಸುಗಳನ್ನು ನಿರರ್ಥಕಗೊಳಿಸಲು ಸಾಕಾಗಿತ್ತು. ಏಕೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳವರು ಒಂದೇ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವುದು ವಿರಳ.

೨೨. ಹಿಂದುಳಿದ ವರ್ಗಗಳವರ ವಿದ್ಯಾಭ್ಯಾಸಕ್ಕೆ ಹಂಟರ್ ಆಯೋಗವು ಇಷ್ಟು ಅಲ್ಪ ಗಮನವನ್ನು ಕೊಟ್ಟಿದ್ದು ಏಕೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಮಹಮ್ಮದೀಯರ ವಿಷಯದಲ್ಲಿ ತಾನು ಉದಾರವಾಗಿರಬೇಕೆಂದು ಅದಕ್ಕೆ ಅನ್ನಿಸಿದಲ್ಲಿ, ವಿದ್ಯಾಭ್ಯಾಸ, ಐಶ್ವರ್ಯ ಮತ್ತು ಅಂತಸ್ತುಗಳೆಲ್ಲದ್ದರಲ್ಲೂ ಮಹಮ್ಮದೀಯರಿಗಿಂತ ಬಹು ಹಿಂದುಳಿದಿದ್ದ, ಹಿಂದುಳಿದ ವರ್ಗಗಳ ವಿಷಯದಲ್ಲಿ ಅದು ನ್ಯಾಯವಾಗಿ ಯಾದರೂ ನಡೆದುಕೊಳ್ಳಬೇಕಾಗಿತ್ತು. ಹಂಟರ್ ಆಯೋಗವು ಒಮ್ಮೆ ನಿಮ್ನ ವರ್ಗದವರನ್ನು ಹಿಂದಕ್ಕೆ ತಳ್ಳಿದ ನಂತರ ಅವರು ಅಲ್ಲಿಯೇ ಉಳಿದರು. ಆ ತರುವಾಯ ಸರ್ಕಾರವು ಅವರಿಗೆ ಲಕ್ಷ್ಯವನ್ನೇ ಕೊಡಲಿಲ್ಲ. ಇದಕ್ಕೆ ಒಂದು ನಿದರ್ಶನವಾಗಿ, ದೆಹಲಿಯಲ್ಲಿ ೧೯೧೩ ಫೆಬ್ರವರಿ ೧೩ನೇ ದಿನಾಂಕದಂದು ಶಿಕ್ಷಣ ಇಲಾಖೆಯು ಮಾಡಿದ ಭಾರತ ಸರ್ಕಾರದ ನಿರ್ಣಯದತ್ತ ಗಮನವನ್ನು ಸೆಳೆಯಬಹುದು. ಭಾರತ ಸರ್ಕಾರ ಹೊರಡಿಸಿದ ಅತ್ಯಂತ ಮುಖ್ಯವಾದ ನಿರ್ಣಯಗಳಲ್ಲಿ ಅದು ಒಂದು; ಆ ನಿರ್ಣಯದಲ್ಲಿ ಸರ್ಕಾರವು "ವಿವಿಧ ಪ್ರಾಂತಗಳಲ್ಲಿ ಸಮಗ್ರ ಶೈಕ್ಷಣಿಕ ವ್ಯವಸ್ಥೆಗಳನ್ನು ವಿಸ್ತರಿಸಲು, ಹಣ ಒದಗಿಸಿದಂತೆ ಚಕ್ರಾಧಿಪತ್ಯದ ನಿಧಿಯಿಂದ ಹೆಚ್ಚಿನ ಅನುದಾನಗಳನ್ನು ಕೊಟ್ಟು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ನೆರವಾಗಲು" ತೀರ್ಮಾನಿಸಿತು. ಈ ನಿರ್ಣಯದಲ್ಲಿ ಸರ್ಕಾರವು ಒಂದು ಸ್ಥಳದಲ್ಲಿ ಖಾಯಂ ನಿವಾಸಿಗಳಾಗಿರುವವರ ಮತ್ತು ಮಹಮ್ಮದೀಯ ಕೋಮುಗಳ ಶೈಕ್ಷಣಿಕ ಅಗತ್ಯವನ್ನು ಪ್ರಾಂತ ಸರ್ಕಾರಗಳಿಗೆ ಎತ್ತಿ ತೋರಿಸಲು ವಿಶೇಷ ಗಮನ ಕೊಟ್ಟಿತು; ಆದರೆ ನಿರ್ಣಯದಲ್ಲಿ ಹಿಂದುಳಿದ ವರ್ಗದವರನ್ನು ಕುರಿತು ಒಂದೇ ಒಂದು ಮಾತನ್ನೂ ಆಡಲಿಲ್ಲ. ಮುಂಬಯಿ ಸರ್ಕಾರವು ಸೂಚನೆಯನ್ನು ಒಡನೆಯೇ ಒಪ್ಪಿ, ಮಹಮ್ಮದೀಯರಲ್ಲಿ ವಿದ್ಯಾಭ್ಯಾಸವನ್ನು ಬೆಳೆಸಲು ಶಿಫಾರಸುಗಳನ್ನು ಮಾಡಲು ವಿದ್ಯಾಭ್ಯಾಸ ಸಮಿತಿಗೆ ಒಬ್ಬ ಮಹಮ್ಮದೀಯನನ್ನು ನೇಮಿಸಿತು. ೧೯೧೨ರಲ್ಲಿ ಕಲ್ಕತ್ತ ವಿಶ್ವವಿದ್ಯಾನಿಲಯವು ಮಹಾಕೃಪಾಳು ಚಕ್ರವರ್ತಿಯವರಿಗೆ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರ ನೀಡುತ್ತ ಚಕ್ರವರ್ತಿಯವರು ಹೀಗೆ ಹೇಳಿದ್ದರು:

> "ಈ ನಾಡಿನಲ್ಲೆಲ್ಲ ಶಾಲಾ-ಕಾಲೇಜುಗಳ ಜಾಲ ಹಬ್ಬಲಿ. ಈ ಸಂಸ್ಥೆಗಳಿಂದ ರಾಜನಿಷ್ಠ, ಪೌರುಷವಂತ ಮತ್ತು ಉಪಯುಕ್ತ ಪೌರರು, ಕೈಗಾರಿಕೆ, ಕೃಷಿ ಮತ್ತು ಬದುಕಿನ ಎಲ್ಲ

ವೃತ್ತಿಗಳಲ್ಲಿ ತಮ್ಮ ಯೋಗ್ಯತೆಯನ್ನು ಸ್ಥಾಪಿಸಬಲ್ಲವರು ಹೊರಬರಲಿ ಎಂದು ನಾನು ಆಶಿಸುತ್ತೇನೆ. ವಿದ್ಯೆಯು ಹರಡಿ, ಅದು ತರುವ ಇನ್ನೂ ಉನ್ನತ ಮಟ್ಟದ ಚಿಂತನೆ, ನೆಮ್ಮದಿ ಮತ್ತು ಆರೋಗ್ಯಗಳಿಂದ ನನ್ನ ಭಾರತೀಯ ಪ್ರಜೆಗಳ ಗೃಹಗಳು ಬೆಳಗಲಿ, ಅವರ ಶ್ರಮವು ಸಾರ್ಥಕವಾಗಲಿ ಎಂಬುದೂ ನನ್ನ ಅಪೇಕ್ಷೆ. ನನ್ನ ಆಸೆಯು ಕೈಗೂಡುವುದು ವಿದ್ಯಾಭ್ಯಾಸದ ಮೂಲಕವೇ. ಭಾರತದಲ್ಲಿ ವಿದ್ಯಾಭ್ಯಾಸದ ಗುರಿಯು ನನ್ನ ಹೃದಯಕ್ಕೆ ಎಂದೂ ಬಹಳ ಸಮೀಪವಾಗಿರುತ್ತದೆ." ಈ ಘೋಷಣೆಯನ್ನು ಕಾರ್ಯಗತ ಮಾಡುವುದಕ್ಕಾಗಲೀ ೧೯೧೩ರ ನಂತರ ಭಾರತ ಸರ್ಕಾರವು ದೊಡ್ಡ ಮೊತ್ತದ ಅನುದಾನಗಳನ್ನು ನೀಡಿತು ಎನ್ನುವುದನ್ನು ಅರ್ಥ ಮಾಡಿಕೊಂಡಾಗಲಂತೂ ಸರ್ಕಾರವು ತೋರಿದ ಈ ನಿರ್ಮಮ ನಿರ್ಲಕ್ಷ್ಯದ ಸಾತ್ವಿಕ ಸಂತಾಪವು ಸಹಜವಾಗಿಯೇ ಉಕ್ಕುತ್ತದೆ.

## IV. ೧೯೨೩ ಮತ್ತು ಅನಂತರ

೨೩. ಸುಧಾರಣಾ ಕಾನೂನು ೧೯೨೧ರಲ್ಲಿ ಜಾರಿಗೆ ಬಂದಿತು. ಶಿಕ್ಷಣವು ವರ್ಗಾಯಿಸಲಾದ ವಿಷಯದಲ್ಲಿ ಒಬ್ಬ ಮಂತ್ರಿಯ ಅಧೀನಕ್ಕೆ ಬಂದಿತು. ಸಹಜವಾಗಿ ಆತನಿಂದ ಶಿಕ್ಷಣದಲ್ಲಿ ವೇಗವಾದ ಪ್ರಗತಿ ಸಾಧ್ಯವಾಗುವುದೆಂದು ನಿರೀಕ್ಷಣೆ ಇತ್ತು. ಆದರೆ, ಶಿಕ್ಷಣವು ಮಂತ್ರಿಗಳಿಗೆ ವರ್ಗಾಯಿಸಿದುದರಿಂದ ತಮಗೆ ಏನಾದರೂ ಪ್ರಯೋಜನವಾಗುತ್ತದೆಯೇ ಎಂಬ ಸಂದೇಹವು ಹಿಂದುಳಿದ ವರ್ಗಗಳವರಿಗೆ ಇದ್ದೇ ಇದ್ದವು. ಅದಾಗಲೇ ಅವರು ಶಿಕ್ಷಣದ ವಿಷಯದಲ್ಲಿ ನೌಕರಶಾಹಿಯ ಕೈಯಲ್ಲಿ ಕಷ್ಟಪಟ್ಟಿದ್ದರು. ಪೌರಶಾಹಿ ಅಸ್ತಿತ್ವವನ್ನು ಮೊದಲ ಅವಧಿಯಲ್ಲಿ ಅವರಿಗೆ ವಿದ್ಯಾಭ್ಯಾಸದ ಪ್ರಯೋಜನವನ್ನು ಪಡೆಯಲು ಅವಕಾಶವನ್ನು ನೀಡಲಿಲ್ಲ. ಎರಡನೆಯ ಅವಧಿಯಲ್ಲಿ ಅಧಿಕಾರಶಾಹಿಯು ವಿದ್ಯಾಭ್ಯಾಸವನ್ನು ಪಡೆಯುವುದರಲ್ಲಿ ಅವರಿಗೆ ನೆರವಾಗಲಿಲ್ಲ. ಇಷ್ಟಾದರೂ, ಅಧಿಕಾರಶಾಹಿಗೆ ಎಷ್ಟು ತಿಳುವಳಿಕೆ ಇತ್ತೆಂದರೆ ಹಿಂದುಳಿದ ವರ್ಗಗಳಿಗೂ ವಿದ್ಯಾಭ್ಯಾಸದ ಹಕ್ಕುಂಟು ಎನ್ನುವ ತತ್ವವನ್ನು ಅದು ತಿರಸ್ಕರಿಸುವಂತಿರಲಿಲ್ಲ. ಅಧಿಕಾರಶಾಹಿಯು ಸ್ಥಾನವನ್ನು ಪಡೆಯಲು ಹೆಣಗುತ್ತಿದ್ದ ಭಾರತೀಯ ಬೌದ್ಧಿಕ ವರ್ಗಕ್ಕೆ ಇಷ್ಟು ತಿಳುವಳಿಕೆ ಉಂಟು ಎಂದು ಭಾವಿಸಲು ಹಿಂದುಳಿದ ವರ್ಗಗಳವರು ಸಿದ್ಧರಿರಲಿಲ್ಲ. ಹಿಂದುಳಿದ ವರ್ಗಗಳವರಿಗೆ ಸಿದ್ಧ ಹಕ್ಕುಗಳು ಇಲ್ಲದ ಭಾಗದಲ್ಲಿ ಭಾರತೀಯ ಬೌದ್ಧಿಕ ವರ್ಗಗಳ ಬೇರುಗಳಿದ್ದುದರಿಂದ, ಹಿಂದಾದದ್ದೇ ವರ್ತಮಾನದಲ್ಲಿಯೂ ಆಗಬಹುದೆಂಬ ಭಯ ಹಿಂದುಳಿದ ವರ್ಗಗಳನ್ನು ಕಾಡುತ್ತಿತ್ತು.

೨೪. ದುರದೃಷ್ಟದಿಂದ ಅವರ ಸಂದೇಹಗಳು ನಿಜವೇ ಆದವು. ಸುಧಾರಣೆಗಳಿಂದ ಮುಂಬಯಿ ಪ್ರಾಂತದ ಹಿಂದುಳಿದ ವರ್ಗದವರು ಪರಿಶುದ್ಧ ಲೋಕದಿಂದ ನರಕಕ್ಕೆ ಬಿದ್ದರೆಂದು ವಾಸ್ತವವಾಗಿಯೇ ಹೇಳಬಹುದು. ಪ್ರಸಕ್ತ ಪರಿಸ್ಥಿತಿಯಲ್ಲಿ ಕುರಿತು ಇದು ಬಹು ತೀಕ್ಷ್ಣವಾದ ಅಭಿಪ್ರಾಯ ಎಂದು ತೋರಬಹುದು. ಆದರೆ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನು (ಮುಂಬಯಿ ಕಾನೂನು ಸಂಖ್ಯೆ IV, ೧೯೨೩) ಹಿಂದುಳಿದ ವರ್ಗಗಳವರಿಗೆ ಮುಂಬಯಿ ಪ್ರಾಂತದಲ್ಲಿ ಸೃಷ್ಟಿಸಿದ ಸನ್ನಿವೇಶವನ್ನು ಬೇರಾವ ಮಾತುಗಳಲ್ಲಿಯೂ ವರ್ಣಿಸುವುದು ಕಠಿಣ. ಬಹು ಮುಖ್ಯವಾದ ಅರ್ಥದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನು ಒಂದು 'ವಂಚನೆ'. ಪ್ರಾಥಮಿಕ ಶಿಕ್ಷಣವು ಸ್ವ–ಇಚ್ಛೆಗೆ ಬಿಟ್ಟಿದುದು ಹೋಗಿ ಕಡ್ಡಾಯವಾಗುತ್ತದೆ ಎಂದು ಹೇಳಿ ಈ ಕಾನೂನನ್ನು ಸಮರ್ಥಿಸಲಾಗುತ್ತಿತ್ತು. ಈ ಕಾನೂನು ಇಂಥದೇನನ್ನೂ

ಮಾಡಲಿಲ್ಲ. ಕಾನೂನಿನ ೧೦ನೇ ಪ್ರಕರಣವನ್ನು ಗಮನಿಸಿದರೆ ಸಾಕು, ಈ 'ವಂಚನೆ' ಬಯಲಿಗೆ ಬರುತ್ತದೆ. ಹಿಂದೆ ಈ ವ್ಯವಸ್ಥೆ ಎಷ್ಟು ಸ್ವ–ಇಚ್ಛೆಗೆ ಬಿಟ್ಟಿತ್ತೋ ಈಗಲೂ ಅಷ್ಟೇ ಬಿಟ್ಟಿದೆ; ಎಂದೂ ಇದಕ್ಕೆ ಕೊನೆಯೇ ಕಾಣುವುದಿಲ್ಲ. ಏಕೆಂದರೆ, ಅಲ್ಲಿ ಇದನ್ನು ಕಡ್ಡಾಯ ಮಾಡುವ ಹೊಣೆಗಾರಿಕೆಯಿಲ್ಲ. ಮಾತ್ರವಲ್ಲ, ಇಂತಹ ಹೊಣೆಗಾರಿಕೆಯನ್ನು ನೆರವೇರಿಸಲು ಕಾಲಮಿತಿಯನ್ನೂ ವಿಧಿಸಿಲ್ಲ. ಇದಲ್ಲದೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನು, ಪ್ರಾಥಮಿಕ ಶಿಕ್ಷಣ ನಿಯಂತ್ರಣಕ್ಕಾಗಿ ಆಡಳಿತ ವ್ಯವಸ್ಥೆಯಲ್ಲಿ ತೀರ ವಿಪರೀತವೆನಿಸ ಬಹುದಾದ ಬದಲಾವಣೆಯೊಂದನ್ನು ಮಾಡಿದೆ. ಈವರೆಗೆ ಪ್ರಾಥಮಿಕ ವಿದ್ಯಾಭ್ಯಾಸದ ನಿಯಂತ್ರಣ ಮತ್ತು ನಿರ್ವಹಣೆಯನ್ನು ಪ್ರಾಂತೀಯ ಸರ್ಕಾರಕ್ಕೆ ವಹಿಸಿತ್ತು ಮತ್ತು ಸ್ಥಳೀಯ ಮಂಡಲಿಗಳಿಗೆ ನಿರ್ದಿಷ್ಟವಾಗಿ ಸೂಚಿಸಿದ ಕೆಲವು ಮೂಲಗಳಿಂದ ಬರುವ ವರಮಾನದ ಮೂರನೆಯ ಒಂದು ಭಾಗದ ಸಣ್ಣ ಅನುದಾನವನ್ನು ಬಿಟ್ಟರೆ, ಪ್ರಾಥಮಿಕ ಶಿಕ್ಷಣದ ಇಡೀ ವೆಚ್ಚವನ್ನು ಪ್ರಾಂತೀಯ ಆದಾಯದಿಂದ ನಿರ್ವಹಿಸಲಾಗುತ್ತಿತ್ತು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನಿನಿಂದ ಇದು ತಿರುಗುಮುರುಗಾಗಿದೆ. ಪ್ರಾಥಮಿಕ ಶಿಕ್ಷಣದ ನಿಯಂತ್ರಣ ಮತ್ತು ನಿರ್ವಹಣೆಯನ್ನು ಈಗ ಜಿಲ್ಲಾ ಶಾಲಾ ಮಂಡಳಿಗಳಿಗೆ (ಇವು ಜಿಲ್ಲಾ ಸ್ಥಳೀಯ ಮಂಡಲಿಗಳ ಸಮಿತಿಗಳು) ವಹಿಸಲಾಗಿದೆ; ಸ್ಥಳೀಯ ಮಂಡಲಿಗಳು ಪ್ರಾಂತ ಸರ್ಕಾರಕ್ಕೆ ಅನುದಾನ ನೀಡುವ ಬದಲು ಪ್ರಾಂತ ಸರ್ಕಾರವೇ ಜಿಲ್ಲಾ ಶಾಲಾ ಮಂಡಲಿಗೆ ಅನುದಾನ ನೀಡಬೇಕೆಂದು ವಿಧಿಸಿದೆ. ಹೀಗೆ ರೂಪಿಸಿರುವ ಈ ಮಾರ್ಪಾಡು ಎಷ್ಟು ಯದ್ವಾತದ್ವಾ ಸ್ಥಿತಿಯಲ್ಲಿದೆ ಎಂದರೆ ಈ ಕಾನೂನು ಶಾಲಾ ಮಂಡಳಿಗೇ ತನ್ನ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಿಸಿಕೊಳ್ಳುವ ವಿಶೇಷ ಅಧಿಕಾರವನ್ನು ನೀಡುತ್ತದೆ. ಮುಂಬಯಿ ಪುರಸಭೆಯಂತಹ ಮುಂದುವರೆದ ಮಹಾನಗರ ಪಾಲಿಕೆಗೂ ಈ ಸುಯೋಗವಿಲ್ಲ.

೨೫. ಈ ಮಾರ್ಪಾಟು ಕ್ರಾಂತಿಕಾರವಾದದ್ದು, ಒಟ್ಟಿನಲ್ಲಿ ಈ ಪ್ರಾಂತದ ಮತ್ತು ವಿಶೇಷವಾಗಿ ಹಿಂದುಳಿದ ವರ್ಗಗಳ ಹಿತಾಸಕ್ತಿಗಳಿಗೆ ಇದರಿಂದ ಹಾನಿಯೇ ಆಗುತ್ತದೆ ಎಂದು (ಬಹಿಷ್ಕೃತ ಹಿತ ಕಾರಣಿ) ಸಭೆಯು ಅಭಿಪ್ರಾಯಪಡುತ್ತದೆ. ವಿದ್ಯಾಭ್ಯಾಸವು ಜೀವನಕ್ಕೆ ಅತ್ಯಂತ ಅಗತ್ಯ ಎನ್ನುವುದನ್ನು ಜನತೆಯ ಎಲ್ಲ ವರ್ಗಗಳೂ ಅರ್ಥಮಾಡಿಕೊಂಡಿಲ್ಲ ಎನ್ನುವುದು ಮನಸ್ಸಿನಲ್ಲಿರಬೇಕು. ಬ್ರಾಹ್ಮಣರನ್ನು ಬಿಟ್ಟರೆ ಬೇರೆ ಯಾರಿಗೂ ಶಿಕ್ಷಣದಲ್ಲಿ ಆಸಕ್ತಿ ಇರಬೇಕಾಗಿಲ್ಲ ಎನ್ನುವುದು ಸರ್ವಸಾಧಾರಣ ಭಾವನೆ. ರಾಜಕೀಯವನ್ನು ಪ್ರವೇಶಿಸಿದ ಕೆಲವರಿಗೆ ಮಾತ್ರವೇ ಶಿಕ್ಷಣವು ಹರಡಬೇಕೆಂಬ ಕಳವಳ ಇರುವುದು. ಶಿಕ್ಷಣವು ಬ್ರಾಹ್ಮಣರಿಗೆ ಮಾತ್ರವೇ ಸಂಬಂಧಿಸಿದ್ದು ಎಂಬ ವಾತಾವರಣದಲ್ಲಿ ಬೆಳೆದು, ಅದರಲ್ಲಿ ಆಸಕ್ತಿಯೇ ಇಲ್ಲದ ಮತ್ತು ಅದರ ಕಡ್ಡಾಯವನ್ನು ವಿರೋಧಿಸುವ ತಿಳುವಳಿಕೆ ಇಲ್ಲದ ಹಳ್ಳಿಯವರ ಪೈಕಿಯವರನ್ನು ಶಾಲಾ ಮಂಡಲಿಗೆ ನೇಮಿಸಿದ್ದಿರಬೇಕು. ಶಿಕ್ಷಣದ ಆಡಳಿತ ದಕ್ಷತೆಯಿಂದ ನಡೆಯ ಬೇಕೆಂದರೆ ಅದು ಇನ್ನೂ ಒಂದಿಷ್ಟು ಕಾಲ ವಿಧಾನ ಪರಿಷತ್ತಿನ ನೇರ ನಿಯಂತ್ರಣದಲ್ಲಿ ಪ್ರಾಂತ ಸರ್ಕಾರದ ಅಧೀನದಲ್ಲೆ ಇರಬೇಕು. ಶಿಕ್ಷಣದ ಅಗತ್ಯವನ್ನು ಬಲ್ಲ ಕೆಲವರು ರಾಜಕಾರಣಿಗಳು ಆ ಪರಿಷತ್ತಿನಲ್ಲಿ ಇರುವ ಸಾಧ್ಯತೆಯುಂಟು. ಆದುದರಿಂದ, ಶಿಕ್ಷಣವನ್ನು ಶಿಕ್ಷಣ ಇಲಾಖೆಯಿಂದ ಶಾಲಾಮಂಡಲಿಗಳಿಗೆ ವರ್ಗಾಯಿಸುವುದೆಂದರೆ ನೆಚ್ಚಬಹುದಾದ ಕೈಗಳಿಂದ ಯೋಗ್ಯತೆ ಇಲ್ಲದ ಕೈಗಳಿಗೆ ವರ್ಗಾಯಿಸುವುದೆಂದೇ ಅರ್ಥ. ಈ ವರ್ಗಾವಣೆಯು ಶಿಕ್ಷಣದ ಒಟ್ಟು ಪ್ರಗತಿಗೇ ಹಾನಿಯನ್ನು ಮಾಡುವಂತಹದಾದರೆ, ವಿಶೇಷವಾಗಿ ಹಿಂದುಳಿದ ವರ್ಗಗಳ ಹಿತಾಸಕ್ತಿಗೂ ತೀರ ಹಾನಿಕರ. ಜನಸಾಮಾನ್ಯರಿಗೆ ಶಿಕ್ಷಣದಲ್ಲಿ ನಂಬಿಕೆ ಉಂಟೇ ಇಲ್ಲವೇ ಎನ್ನುವ ವಿಷಯದಲ್ಲಿ ಸ್ವಲ್ಪ ಸಂದೇಹವಿರಬಹುದಾದರೂ, ಹಿಂದುಳಿದ

ವರ್ಗಗಳಿಗೆ ಶಿಕ್ಷಣ ಅಗತ್ಯ. ಈ ವಿಚಾರದಲ್ಲಿ ನಂಬಿಕೆ ಅವರಿಗಿಲ್ಲ ಎನ್ನುವುದರಲ್ಲಿ ಸಂದೇಹವಿಲ್ಲವೆಂಬುದನ್ನು ನೆನಪಿಡಬೇಕು. ಸಮುದಾಯದ ಕೆಳವರ್ಗದವರಿಗೆ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವ ವಿಷಯದಲ್ಲಿ ಮೇಲಿನ ವರ್ಗಗಳವರ ಮನೋಧರ್ಮವನ್ನು ಕುರಿತು ಹಂಟರ್ ಆಯೋಗ ಹೀಗೆಂದಿದೆ: "ಶಾಲೆಗೆ ಕೆಳಜಾತಿಯ ಹುಡುಗರನ್ನು ಸೇರಿಸುವ ವಿಷಯದಲ್ಲಿ ಪ್ರಬಲವಾದ ವಿರೋಧವಿದೆ ಎಂದು ಹಲವರು ಸಾಕ್ಷಿಗಳು ನುಡಿದಿದ್ದಾರೆ. ಕಲ್ಲಿಕೋಟೆಯಲ್ಲಿ ಹಿಂದಿನ ಗುಲಾಮರ ಜಾತಿಯಾದ ಚೆರುಮಾನರಿಗಾಗಿ ಪ್ರತ್ಯೇಕ ಶಾಲೆಯನ್ನು ಸ್ಥಾಪಿಸಿದ ಸಂಗತಿಯನ್ನು ಮದರಾಸಿನ ಒಬ್ಬ ಸಾಕ್ಷಿ ಪ್ರಸ್ತಾಪಿಸುತ್ತಾನೆ. ಆ ಹುಡುಗರು ಶಾಲೆಗೆ ಹೋಗುತ್ತಿದ್ದಾಗ ನಾಯರರು ಮತ್ತು ತೀಯಾಗಳು ಅಡ್ಡ ಹಾಕಿ ಪುಸ್ತಕಗಳನ್ನು ಅವರ ಕೈಯಿಂದ ಕಿತ್ತುಕೊಂಡುಬಿಡುತ್ತಿದ್ದರು ಎಂದು ಹೇಳುತ್ತಾರೆ. ಈ ವಿಷಯವನ್ನು ನಾವು ಚರ್ಚಿಸಿದಾಗ, ಮಧ್ಯಪ್ರಾಂತ ಮತ್ತು ಮುಂಬಯಿಯ ಪ್ರಾಂತದ ಕೆಲ ಭಾಗಗಳಲ್ಲಿ ಕೆಳವರ್ಗದವರಿಗೆ ಶಿಕ್ಷಣ ದೊರೆತರೆ ಅವರು ಮುಂದುವರೆದುಬಿಡುತ್ತಾರೆ ಮತ್ತು ಇದರಿಂದ ಅವರ ಈಗಿನ ದಾಸ್ಯ ಸ್ಥಿತಿಯಿಂದ ವಿಮೋಚನೆ ಪಡೆಯಲು ಅವರಿಗೆ ಪ್ರಚೋದನೆಯಾಗುತ್ತದೆ ಎನ್ನುವ ಕಾರಣದಿಂದ ಗ್ರಾಮೀಣ ಸಮುದಾಯಗಳು ವಿಶೇಷವಾಗಿ ಆಕ್ಷೇಪಣೆಯನ್ನು ಎತ್ತುತ್ತಾರೆ ಎಂಬುದನ್ನು ನಮ್ಮ ಗಮನಕ್ಕೆ ತರಲಾಯಿತು. ಮುಂಬಯಿಯ ಸಾರ್ವಜನಿಕ ಶಿಕ್ಷಣದ ನಿರ್ದೇಶಕರು ೧೮೭೬–೭೭ರ ತಮ್ಮ ವರದಿಯಲ್ಲಿ ಒಂದು ಪ್ರಸಂಗವನ್ನು ಉಲ್ಲೇಖಿಸಿದರು. ತೈರ ಜಿಲ್ಲೆಯ ಸ್ಥಳೀಯ ಅಧಿಕಾರಿಗಳು ಕೆಳವರ್ಗದ ಹುಡುಗರನ್ನು ಸೇರಿಸಿಕೊಳ್ಳಬೇಕೆಂದು ಅಪ್ಪಣೆಮಾಡಿದ್ದರಿಂದ ಐದಾರು ದೊಡ್ಡ ಶಾಲೆಗಳನ್ನು ಹಲವು ವರ್ಷಗಳ ಕಾಲ ಮುಚ್ಚಬೇಕಾಯಿತು. ಒಂದು ಹಳ್ಳಿಯಲ್ಲಿ ಕೆಳಜಾತಿಯ ಜನರ ಗುಡಿಸಲುಗಳನ್ನೂ, ಬೆಳೆಯನ್ನೂ ಸುಟ್ಟುಹಾಕಲಾಯಿತು. ಆ ಹಳ್ಳಿಗೆ ಎರಡು ವರ್ಷಗಳ ಕಾಲ ಭಾರಿ ಮುಂಡುಗಂದಾಯ ಹಾಕಬೇಕಾಯಿತು.

೨೬. ಗ್ರಾಮಾಂತರ ಸಮುದಾಯಗಳ ಮನೋಧರ್ಮವು ಈ ರೀತಿ ಇರುವಾಗ, ಶಾಲಾ ಮಂಡಲಿಗಳ ಸದಸ್ಯರಲ್ಲಿ ಬಹುಮಟ್ಟಿನವರು ಗ್ರಾಮಾಂತರ ಸಮುದಾಯಗಳಿಂದ ಬರುವವರೇ. ಆಗಿರುವಾಗ ಮಂಡಲಿಗಳು ನಿಮ್ನ ವರ್ಗಗಳವರ ವಿದ್ಯಾಭ್ಯಾಸದ ವಿಷಯದಲ್ಲಿ ತಮ್ಮಲ್ಲಿಟ್ಟ ವಿಶ್ವಾಸಕ್ಕೆ ಪ್ರತಿಯಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತವೆ ಎಂದು ನಿರೀಕ್ಷಿಸುವುದು ಹೇಗೆ? ಹಿಂದುಳಿದ ವರ್ಗಗಳವರ ವಿದ್ಯಾಭ್ಯಾಸವನ್ನು ಶಾಲಾ ಮಂಡಲಿಗಳ ಅಧೀನಕ್ಕೆ ವಹಿಸಿಕೊಡುವುದೆಂದರೆ, ಪ್ರಾಸಿಕ್ಯೂಟರನನ್ನೇ ಪ್ರಭುವನ್ನಾಗಿ ಮಾಡಿದಂತೆ. ಪ್ರಾಥಮಿಕ ಶಿಕ್ಷಣದ ಹತೋಟಿಯನ್ನು ಶಾಲಾ ಮಂಡಲಗಳಿಗೆ ವರ್ಗಾಯಿಸುವುದನ್ನು ಖಂಡಿಸುತ್ತ, ಹಿಂದುಳಿದ ವರ್ಗಗಳವರು ನಿರ್ಣಯಗಳನ್ನು ಕೈಗೊಳ್ಳುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಶಾಲಾ ಮಂಡಲಗಳಲ್ಲಿ ನಿಮ್ನ ವರ್ಗಗಳವರ ಪ್ರತಿನಿಧಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಿದ್ದರೆ ಸ್ವಲ್ಪಮಟ್ಟಿನ ನೆರವಾಗುತ್ತಿತ್ತು. ಆದರೆ, ಹೀಗಾಗಿಲ್ಲ. (ವಿಧಾನ) ಪರಿಷತ್ತಿನಿಂದ ಹಿಡಿದು ಸ್ಥಳೀಯ ಆಡಳಿತ ಮಂಡಲಿಗಳವರೆಗೆ ಸ್ವಯಮಾಡಳಿತವಿರುವ ಸಂಸ್ಥೆಗಳಲ್ಲಿ ಪ್ರಾತಿನಿಧ್ಯವನ್ನು ಸರ್ಕಾರವು ಯೋಜಿಸಿರುವ ರೀತಿಯೆಂದರೆ, ತನ್ನ ವಸ್ತು ಸಂಗ್ರಹ ಶಾಲೆಯಲ್ಲಿ ಯಾವುದೇ ವರ್ಗದ ಒಂದೇ ಒಂದು ಮಾದರಿಗಿಂತ ಹೆಚ್ಚಿರಲೇಬಾರದು ಎನ್ನುವ ವಸ್ತು ಸಂಗ್ರಹ ಶಾಲೆಯ ಅಧಿಕಾರಿಯ ರೀತಿ ನಲವತ್ತು ಮಂದಿ ಸದಸ್ಯರಿರುವ ಜಿಲ್ಲಾ ಸ್ಥಳೀಯ ಮಂಡಲಿಗೆ ಸರ್ಕಾರವು ನಿಮ್ನ ವರ್ಗದಿಂದ ಒಬ್ಬರನ್ನು ನಾಮಕರಣ ಮಾಡುತ್ತದೆ. ಶಾಲಾ ಮಂಡಲಿಯು ನಿಮ್ನ ವರ್ಗದ ಒಬ್ಬರನ್ನು ಸಹಸದಸ್ಯನಾಗಿ ಸೇರಿಸಿಕೊಳ್ಳಬೇಕೆಂದು ಆದೇಶ ನೀಡಲಾಗಿದೆ. ಸೇರಿಸಿಕೊಳ್ಳುವ ತತ್ವದಲ್ಲಿ ಅನರ್ಹ ಮನುಷ್ಯನನ್ನು

ಸೇರಿಸಿಕೊಳ್ಳುವ ಅಪಾಯವಿದ್ದೇ ಇದೆ. ಈಚೆಗೆ ಪೂರ್ವ ಖಾನ್ ದೇಶದಲ್ಲಿ ನಡೆದ ಶಾಲಾ ಮಂಡಲಿ ಚುನಾವಣೆಯಲ್ಲಿ ನಿಮ್ನ ವರ್ಗದವರು ಈ ಅಪಾಯವನ್ನು ಎದುರಿಸಬೇಕಾಯಿತು. ಯೋಗ್ಯ ಮನುಷ್ಯನನ್ನೇ ಸಹಸದಸ್ಯನಾಗಿ ಸೇರಿಸಿಕೊಳ್ಳುತ್ತಾನೆ ಎಂದು ಭಾವಿಸೋಣ, ಆಗಲೂ ತನ್ನನ್ನು ವಿರೋಧಿಸುವ ಹದಿನೈದು ಮಂದಿಯ (ಶಾಲಾ ಮಂಡಳಿಯ ಸದಸ್ಯರ ಗರಿಷ್ಠ ಸಂಖ್ಯೆ ಇದು) ಗುಂಪಿನಲ್ಲಿ ಒಬ್ಬನೇ ಒಬ್ಬ ವ್ಯಕ್ತಿ ಏನು ಮಾಡಬಲ್ಲ?

೨೭. ನಿಮ್ನ ವರ್ಗದವರ ಶಿಕ್ಷಣದ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರವು ಪ್ರಾಮಾಣಿಕವಾಗಿದ್ದರೆ, ಅದು ಕೈಕೊಳ್ಳತಕ್ಕ ಕೆಲವು ಕ್ರಮಗಳುಂಟು. ಈ ಸಂಬಂಧದಲ್ಲಿ ಸರ್ಕಾರವು ಏನು ಮಾಡಬೇಕು ಎಂಬ ವಿಷಯದಲ್ಲಿ ಸಭೆಗೆ ತನ್ನದೇ ದೃಢ ಅಭಿಪ್ರಾಯಗಳಿವೆ; ಇವನ್ನು ಈ ಕೆಳಗಿನ ಪ್ರಸ್ತಾವಗಳ ರೂಪದಲ್ಲಿ ಪ್ರತಿಪಾದಿಸಲು ಬಯಸುತ್ತದೆ:

(೧) ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾನೂನನ್ನು ರದ್ದು ಮಾಡಿ ಪ್ರಾಥಮಿಕ ಶಾಲೆಗಳನ್ನು ಶಾಲಾ ಮಂಡಲಿಗಳಿಗೆ ವರ್ಗಾಯಿಸುವುದನ್ನು ನಿಲ್ಲಿಸದೆ ಹೋದರೆ, ನಿಮ್ನ ವರ್ಗದವರ ಶಿಕ್ಷಣಕ್ಕೆ ತೀವ್ರ ಹಿನ್ನಡೆಯಾಗುತ್ತದೆ ಎಂಬ ಭಯ ಸಭೆಗಿದೆ.

(೨) ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಲೇಬೇಕೆಂದು ವಿಧಿಸದೆ ಹೋದರೆ ಮತ್ತು ಪ್ರಾಥಮಿಕ ಶಾಲೆಗಳಿಗೆ ಅವರು ಪ್ರವೇಶವನ್ನು ಕಟ್ಟುನಿಟ್ಟಾಗಿ ಪಾಲಿಸದೆ ಹೋದರೆ ಹಿಂದುಳಿದ ವರ್ಗಗಳ ಶೈಕ್ಷಣಿಕ ಪ್ರಗತಿಗೆ ಅತ್ಯಗತ್ಯವಾದ ಪರಿಸ್ಥಿತಿ ಒದಗಿಬರುವುದೇ ಇಲ್ಲ.

(೩) ಹಂಟರ್ ಆಯೋಗವು ಮಹಮ್ಮದೀಯರ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಮಾಡಿದ ಶಿಫಾರಸುಗಳನ್ನು ನಿಮ್ನ ವರ್ಗದವರಿಗೆ ಅನ್ವಯಿಸದೆ ಹೋದರೆ ಅವರ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಎಂದೂ ಇರುವುದಿಲ್ಲ.

(೪) ಸಾರ್ವಜನಿಕ ಸೇವೆಯಲ್ಲಿ ನಿಮ್ನ ವರ್ಗದವರಿಗೆ ಪ್ರವೇಶವನ್ನು ವ್ಯವಸ್ಥಿತಗೊಳಿಸದೆ ಹೋದಲ್ಲಿ, ಅವರಿಗೆ ವಿದ್ಯಾಭ್ಯಾಸವನ್ನು ಪಡೆದುಕೊಳ್ಳಲು ಪ್ರೇರಣೆಯೇ ಆಗುವುದಿಲ್ಲ.

೨೮. ಸುಧಾರಣೆಗನುಗುಣವಾಗಿ ಈ ಪ್ರಾಂತದಲ್ಲಿ ಶೈಕ್ಷಣಿಕ ವಿಷಯಗಳ ನಿರ್ವಹಣೆಯು ನಿಮ್ನ ವರ್ಗದವರ ಮೇಲೆ ಯಾವ ಪರಿಣಾಮವನ್ನುಂಟುಮಾಡುತ್ತದೆ ಎನ್ನುವ ವಿಷಯದಲ್ಲಿ ಈ ಅಭಿಪ್ರಾಯ ಗಳನ್ನು ವ್ಯಕ್ತಪಡಿಸುವಾಗ ನಿಮ್ನ ವರ್ಗದವರ ವಿದ್ಯಾಭ್ಯಾಸಕ್ಕಾಗಿ ಕೆಲವು ವಿದ್ಯಾರ್ಥಿನಿಲಯಗಳ ಮತ್ತು ಉನ್ನತ ಶಿಕ್ಷಣಕ್ಕಾಗಿ ಕೆಲವು ವಿದ್ಯಾರ್ಥಿ ವೇತನಗಳ ರೂಪದಲ್ಲಿ ನೀಡಿರುವ ವಿಶೇಷ ಸೌಲಭ್ಯಗಳನ್ನು ಸಭೆಯು ಮರೆತಿಲ್ಲ. ಆದರೆ ಪ್ರಾಥಮಿಕ ಶಿಕ್ಷಣದ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸದೆ ನಿಮ್ನ ವರ್ಗದವರ ಉನ್ನತ ಶಿಕ್ಷಣಕ್ಕೆ ಸೌಲಭ್ಯಗಳನ್ನು ನೀಡುವುದರಿಂದ ಪ್ರಯೋಜನವಿಲ್ಲ ಎಂಬುದರತ್ತ ವಿನಯದಿಂದ ಗಮನ ಸೆಳೆಯಲು ಸಭೆಯು ಬಯಸುತ್ತದೆ. ಅಲ್ಲದೆ, ಇಂತಹ ರಿಯಾಯಿತಿಗಳು ಮುಂದುವರೆಯುತ್ತದೆ ಎಂಬುದಕ್ಕೆ ಖಚಿತ ಆಶ್ವಾಸನೆ ಏನೂ ಇಲ್ಲ. ಸೌಲಭ್ಯಗಳು ಶಿಕ್ಷಣದ ಹೊಣೆ ಹೊತ್ತ ಮಂತ್ರಿಯನ್ನೂ ವಿಧಾನಪರಿಷತ್ತಿನಲ್ಲಿ ನಿಮ್ನ ವರ್ಗದವರಿಗಿರುವ ಮತಸಂಖ್ಯೆಗಳನ್ನು ಅವಲಂಬಿಸಿದೆ. ಆದರೆ, ಇವೆರಡೂ ಅನಿಶ್ಚಿತ ಅಂಶಗಳು, ಇದನ್ನು ನೆಚ್ಚುವಂತಿಲ್ಲ.

**ಮುಂಬಯಿ ಪ್ರಾಂತದಲ್ಲಿ ಅಲ್ಪಸಂಖ್ಯಾತರಾಗಿರತಕ್ಕ ನಿಮ್ನ ವರ್ಗದವರ ಹಿತಾಸಕ್ತಿಗಳ ರಕ್ಷಣೆಗೆ ಅಗತ್ಯವಾದ  ರಕ್ಷಣೋಪಾಯಗಳು ಮತ್ತು ಪ್ರಾಂತೀಯ ಸ್ವಾಯತ್ತತೆಯಲ್ಲಿ ಇವನ್ನು ಖಂಡಿತಗೊಳಿಸಲು ಮುಂಬಯಿಯ ವಿಧಾನ ಪರಿಷತ್ತಿನ ಸ್ವರೂಪದಲ್ಲಿ ಅಗತ್ಯವಾದ ಮಾರ್ಪಾಡುಗಳು ಮತ್ತು ವಿಧಾನ ಪರಿಷತ್ತಿನಿಂದ ದೊರಕಬೇಕಾದ ಖಚಿತ ಆಶ್ವಾಸನೆಗಳನ್ನು ಕುರಿತ ಹೇಳಿಕೆ**

**ಭಾರತೀಯ ಶಾಸನಬದ್ಧ ಆಯೋಗಕ್ಕೆ ಬಹಿಷ್ಕೃತ ಹಿತಾಕಾರಣಿ ಸಭೆ**

(ಮುಂಬಯಿಯ ನಿಮ್ನ ವರ್ಗಗಳವರ ಸಂಸ್ಥೆ)

ಯ ಪರವಾಗಿ

**ಡಾ. ಭೀಮರಾವ್ ಆರ್. ಅಂಬೇಡ್ಕರ್, ಎಂ.ಎ., ಪಿಎಚ್.ಡಿ.,**

**ಡಿ.ಎಸ್.ಸಿ., ಬಾರ್–ಅಟ್–ಲಾ**

(ಮುಂಬಯಿಯ ವಿಧಾನಪರಿಷತ್ತಿನ ಸದಸ್ಯರು)

ಅವರು ಸಲ್ಲಿಸಿದ್ದು

**೨೯ನೇ ಮೇ ೧೯೨೮**

**ದಾಮೋದರ ಹಾಲ್,**

**ಪರೇಲ್, ಮುಂಬಯಿ–೧೨, ಭಾರತ**

# I. ತಕ್ಕಷ್ಟು ಪ್ರಾತಿನಿಧ್ಯದ ಮೂಲಕ ರಕ್ಷಣೆ

೧. ಶಾಸನಬದ್ಧ ಆಯೋಗಕ್ಕೆ ಭಾರತೀಯನೊಬ್ಬನನ್ನು ನೇಮಿಸುವುದಿಲ್ಲ ಎಂದು ಸಂಸತ್ತು ತೀರ್ಮಾನಿಸಿರುವುದು (ಬಹಿಷ್ಕೃತ ಹಿತಕಾರಿಣಿ) ಸಭೆಯ ಆತಂಕವನ್ನು ಬಹುಮಟ್ಟಿಗೆ ಕೊನೆಗಾಣಿಸಿದೆ. ಸ್ವಯಂ ಆಡಳಿತವನ್ನು ಭಾರತೀಯರೆಲ್ಲರೂ ಕೇಳುತ್ತಿದ್ದ ಇದನ್ನು ಆಯೋಗವು ಪರಿಶೀಲಿಸಬೇಕಾಗಿದ್ದರೆ, ಭಾರತೀಯರೊಬ್ಬರ ನೇಮಕಕ್ಕಾಗಿ ಚಳುವಳಿ ಮಾಡುವುದು ಯೋಗ್ಯವಾಗಿರುತ್ತಿತ್ತು. ವಾಸ್ತವಾಂಶ ವೆಂದರೆ ಆಯೋಗವು ಪರಿಶೀಲಿಸಬೇಕಾದ್ದು ಒಂದು ಬೇಡಿಕೆಯನ್ನಲ್ಲ, ಆದರೆ ದೇಶದಲ್ಲಿರುವ ಬೇರೆ ಬೇರೆ ಹಿತಾಸಕ್ತಿಗಳ ವಿವಿಧ ಬೇಡಿಕೆಗಳನ್ನು. ಹೀಗಿರುವಾಗ ಆಯೋಗದಲ್ಲಿ ಇಂತಹ ಎಲ್ಲಾ ಹಿತಾಸಕ್ತಿಗಳಿಗೂ ಪ್ರಾತಿನಿಧ್ಯವಿರಬೇಕೆಂದು ಚಳುವಳಿ ಹೂಡಬೇಕಾಗಿತ್ತು. ತನ್ನ ಹಿತಾಸಕ್ತಿಯೂ ಸೇರಿದಂತೆ ದೇಶದ ವಿವಿಧ ಹಿತಾಸಕ್ತಿಗಳನ್ನು ಪ್ರತಿನಿಧಿಸುವಂತೆ ಭಾರತೀಯರನ್ನು ಶಾಸನಬದ್ಧ ಆಯೋಗಕ್ಕೆ ನೇಮಿಸಿದ್ದರೆ, ನಿಮ್ನ ವರ್ಗಗಳವರಿಗೆ ಅದಕ್ಕಿಂತ ಹೆಚ್ಚಿನ ತೃಪ್ತಿಯನ್ನು ಇನ್ನಾವುದೂ ಕೊಡುತ್ತಿರಲಿಲ್ಲ ಎಂದು ಹೇಳಲು ಸಭೆಯು ಅಪೇಕ್ಷಿಸುತ್ತದೆ. ಆದರೆ ಶಾಸನಬದ್ಧ ಆಯೋಗದಲ್ಲಿ ಪ್ರಾತಿನಿಧ್ಯ ದೊರಕಬೇಕೆಂಬ ಚಳವಳಿ ಈ ರೀತಿಯದಾಗಿರಲಿಲ್ಲ. ಆದುದರಿಂದ ಪ್ರಾತಿನಿಧ್ಯವನ್ನು ಆಗ್ರಹಪಡಿಸುವವರ ಅಭಿಪ್ರಾಯವನ್ನು ಸಭೆಗೆ ಒಪ್ಪಲಾಗಲಿಲ್ಲ. ತನ್ನ ಅಭಿಪ್ರಾಯಕ್ಕನುಗುಣವಾಗಿಯೇ ಆಯೋಗದಲ್ಲಿ ನಿಮ್ನ ವರ್ಗಗಳವರಿಗೆ ಪ್ರಾತಿನಿಧ್ಯ ದೊರಕಬೇಕೆಂದು ಸಭೆಯು ಚಳವಳಿ ನಡೆಸಬೇಕಾಗಿತ್ತು. ಅದರೆ, ಹಾಗೆ ನಡೆಸಲಿಲ್ಲ ಎನ್ನುವುದು ನಿಜ. ಇದಕ್ಕೆ ಕಾರಣ, ವೈಸ್‌ರಾಯ್‌ರವರಿಂದ ಹಿಡಿದು ಆಡಳಿತವನ್ನು ನಡೆಸುವ ಪ್ರತಿಯೊಬ್ಬರೂ ಗದ್ದಲ ಮಾಡುವ ಕೆಲವೇ ಮಂದಿಗೆ ಮನ್ನಣೆ ಕೊಟ್ಟು ಮೂಕರಾದ ಕೋಟ್ಯಂತರ ಮಂದಿಯನ್ನು ಮರೆಯುವ ಅಭ್ಯಾಸವನ್ನು ಬೆಳೆಸಿಕೊಂಡಿರುವ ದೇಶದಲ್ಲಿ ಇಂತಹ ಆಸೆಯನ್ನು ಇಟ್ಟುಕೊಳ್ಳುವುದು ಸಾಧ್ಯವೇ ಇಲ್ಲ. ಬರ್ಕ್‌ನ ಭಾಷೆಯಲ್ಲಿ ಹೇಳುವುದಾದರೆ ಸಾವಿರಾರು ದೊಡ್ಡ ದೊಡ್ಡ ಪ್ರಾಣಿಗಳು ಓಕ್ ಮರದ ನೆರಳಿನಲ್ಲಿ ವಿಶ್ರಮಿಸುತ್ತ ಮೆಲುಕು ಹಾಕುತ್ತ ನಿಶ್ಶಬ್ದವಾಗಿರುವಂತೆ ಜನಸಾಮಾನ್ಯರು ಇರುವಾಗ ಒಂದು ಕಾಡುಪ್ರಾಣಿಯ ನೆರಳಿನಲ್ಲಿ ಮಿಡತೆಗಳು ಸೇರಿಕೊಂಡು ನಿಲ್ಲದ ತಮ್ಮ ಶಬ್ದವನ್ನು ಮೈದಾನದಲ್ಲೆಲ್ಲಾ ತುಂಬಿಬಿಡುವಂತೆ ನಾಲ್ಕಾರು ಮಂದಿ ರಾಜಕಾರಣಿಗಳು ಗದ್ದಲ ಮಾಡಿದ ಮಾತ್ರಕ್ಕೆ ಸರ್ಕಾರವು ಗದ್ದಲ ಮಾಡುತ್ತಿರುವವರು ಮಾತ್ರವೆ ರಾಜಕಾರಣಿಗಳು, ಅವರ ಸಂಖ್ಯೆಯೇ ಅಧಿಕವಾಗಿದೆ ಅಥವಾ ಏನೇ ಆಗಲಿ ಅವರು ಒಂದು ಗಂಟೆ ಮಾತ್ರ ಬದುಕುವ ಸಣ್ಣ ಮುದುಡಿಹೋದ ಕ್ಷುದ್ರ ಹಾಗೂ ಕುಪ್ಪಳಿಸುವ ಕ್ರಿಮಿಗಳಲ್ಲ ಎಂದು ಭಾರತ ಸರ್ಕಾರ ಭಾವಿಸಿಬಿಡುತ್ತದೆ. ಸಭೆಯು ತನ್ನ ಅಭಿಪ್ರಾಯಗಳನ್ನು ಆಗ್ರಹಪಡಿಸದಿರಲು ಇನ್ನೂ ಒಂದು ಕಾರಣವಿದೆ. ಸಭೆಯ ಅಭಿಪ್ರಾಯವನ್ನು ಶಾಸನಬದ್ಧ ಆಯೋಗದಿಂದ ಭಾರತೀಯರನ್ನು ಹೊರಗಿಟ್ಟದ್ದು ನಿಮ್ನ ವರ್ಗಗಳ ಮಟ್ಟಿಗೆ ಸಣ್ಣ ಉಪಕಾರವೇನೂ ಅಲ್ಲ. ಏಕೆಂದರೆ ನಿಮ್ನ ವರ್ಗದವರನ್ನು ಹೊರತುಪಡಿಸುವ ನಿಮಿತ್ತ ಈಗ ಸಭೆಯ ಆಯೋಗದ ಮುಂದಿಡುತ್ತಿರುವ ವಾದದ ವಿರುದ್ಧವಾಗಿ ಆಯೋಗದಲ್ಲಿ ಪೂರ್ವಾಗ್ರಹ ಇರುವುದು ತಪ್ಪಿದಂತಾಗಿದೆ.

೨. ೧೯೧೯ರಲ್ಲಿ ನಿಮ್ನ ವರ್ಗಗಳವರಿಗೆ ಆದ ಅನ್ಯಾಯ– ಸಾಮಾಜಿಕ ವ್ಯತ್ಯಾಸಗಳು ಮತ್ತು ವಿಭಾಗಗಳು, "ಭಾರತೀಯ ಸಮಾಜದ ಒಂದು ಲಕ್ಷಣ, ಇದು ಪ್ರಪಂಚದ ಇತರ ಭಾಗಗಳಲ್ಲಿರುವ

ಪ್ರಾತಿನಿಧಿಕ ಸಂಸ್ಥೆಗಳ ಮೂಲಭೂತವಾದ ವಿಚಾರಗಳೊಂದಿಗೆ ಹೊಂದಿಕೊಳ್ಳುವುದಿಲ್ಲ" ಎಂಬುದನ್ನು ಮಾಂಟೆಗೊ ಚೆಲಮ್ಸ್‌ಫರ್ಡ್ ವರದಿಯು ಸಂಪೂರ್ಣವಾಗಿ ಗುರುತಿಸಿತ್ತು (ಪ್ಯಾರಾ ೧೫೧) ಮತ್ತು ವರದಿಯನ್ನು ಸಿದ್ಧಪಡಿಸಿದವರು ಈ ವ್ಯತ್ಯಾಸಗಳು ಮತ್ತು ವಿಭಾಗಗಳನ್ನು "ಪರಿಗಣಿಸಬೇಕು ಮತ್ತು ಇತರ ಕಡೆ ಪರಿಚಿತವಾದ ಪ್ರಜಾಭಿಪ್ರಾಯ ಸರ್ಕಾರಗಳು ರೂಪಗಳನ್ನು ಭಾರತೀಯ ಜೀವನದ ವಿಶೇಷ ಪರಿಸ್ಥಿತಿಗೆ ಹೊಂದಿಸಬೇಕು" ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಅನುಗುಣವಾಗಿ ಅವರು ಸುಧಾರಣೆಗಳನ್ನು ತೀವ್ರವಾಗಿ ವಿರೋಧಿಸಿದ್ದ ನಿಮ್ಮ ವರ್ಗಗಳವರನ್ನು ಸಮಾಧಾನಪಡಿಸಲು ಅವರ ಹಿತಾಸಕ್ತಿಗಳನ್ನು ರಕ್ಷಿಸುವ ಷರತ್ತುಗಳನ್ನು ಹಾಕುವ ಭರವಸೆಯನ್ನು ನೀಡಿದ್ದರು; ಅವರ ವರದಿಯ ೧೫೫ನೆಯ ಪ್ಯಾರಾದಲ್ಲಿರುವ ಈ ಹೇಳಿಕೆಯಲ್ಲಿ ಕಾಣಬಹುದು: ರೈತನ ರಾಜಕೀಯ ಶಿಕ್ಷಣ ವೇಗವಾಗಿ ಸಾಗಲಾರದು ಮತ್ತು ಅದು ಕಷ್ಟದ ಪ್ರಕ್ರಿಯೆಯೇ ಆಗುವುದು ಎನ್ನುವುದನ್ನು ನಾವು ತೋರಿಸಿದ್ದೇವೆ. ಇದು ಮುಗಿಯುವವರೆಗೆ ಆತ ತನಗಿಂತ ಬಲಿಷ್ಠರೂ, ಬುದ್ಧಿವಂತರೂ ಆದವರ ದಬ್ಬಾಳಿಕೆಗೆ ಒಳಗಾಗುವ ಅಪಾಯದಲ್ಲಿಯೇ ಇರುತ್ತಾನೆ; ಆದ್ದರಿಂದ ಅವನ ಹಿತಾಸಕ್ತಿಗಳನ್ನು ಅವನಿಗೇ ಬಿಡಬಹುದು ಅಥವಾ ಶಾಸನ ಸಭೆಯು ಅವನ ಹಿತಾಸಕ್ತಿಗಳನ್ನು ಪ್ರತಿನಿಧಿಸಿ ಪರಿಗಣಿಸುತ್ತದೆ ಎನ್ನುವುದು ಸ್ಪಷ್ಟವಾಗುವವರೆಗೆ ನಾವು ಅವನ ರಕ್ಷಣೆಯ ಅಧಿಕಾರವನ್ನು ಉಳಿಸಿಕೊಳ್ಳಬೇಕು. ಆದುದರಿಂದ ನಿಮ್ಮ ವರ್ಗಗಳವರು ಕಾಲಾನುಕ್ರಮದಲ್ಲಿ ಆತ್ಮರಕ್ಷಣೆಯ ಪಾಠವನ್ನು ಕಲಿಯುವುದಕ್ಕಾಗಿ ಅವರಿಗೆ ಪ್ರಾತಿನಿಧ್ಯವನ್ನು ನೀಡಲು ಅತ್ಯುತ್ತಮ ಏರ್ಪಾಡುಗಳನ್ನು ಮಾಡುವುದೇ ನಮ್ಮ ಅಪೇಕ್ಷೆ. ಆದರೆ ಅವರ ಹಿತಾಸಕ್ತಿಗಳಿಗೆ ಧಕ್ಕೆಯಾಗುತ್ತದೆ ಮತ್ತು ಒಟ್ಟಾರೆ ಪ್ರಗತಿಯಲ್ಲಿ ಅವರಿಗೆ ಪಾಲು ದೊರೆಯುವುದಿಲ್ಲ ಎಂದು ಕಂಡುಬಂದಲ್ಲಿ ಅವರಿಗೆ ಸಹಾಯ ಮಾಡುವ ಸಾಧನಗಳನ್ನು ನಮ್ಮ ಕೈಯಲ್ಲಿ ಉಳಿಸಿಕೊಳ್ಳಬೇಕು....."

೩. ಮತ ನೀಡಿಕೆಯನ್ನು ರೂಪಿಸಿ ಚುನಾವಣಾ ಕ್ಷೇತ್ರಗಳನ್ನು ಯೋಜಿಸಿ ಭಾರತದಲ್ಲಿನ ವಿಶಿಷ್ಟ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ, ಪ್ರಾಸ್ತಾವಿಕ ಜನಪ್ರಿಯ ಸರ್ಕಾರದ ಸ್ವರೂಪದಲ್ಲಿ ಯಾವ ಹೊಂದಾಣಿಕೆಗಳನ್ನು ಮಾಡಬೇಕು ಎಂದು ಶಿಫಾರಸು ಮಾಡಲು ಮುಂದೆ ಸೌತ್ ಬರೊ ಸಮಿತಿಯನ್ನು ನೇಮಿಸಲಾಯಿತು; ಮೇಲಿನ ಭರವಸೆಗಳನ್ನೆಲ್ಲ ಈ ಸಮಿತಿಯು ಗಾಳಿಗೆ ತೂರಿತು ಎಂದು ಹೇಳಲು ಸಭೆ ವಿಷಾದಿಸುತ್ತದೆ. ನಿಮ್ಮ ವರ್ಗದವರ ಹಿತಾಸಕ್ತಿಗಳ ರಕ್ಷಣೆಗಾಗಿ ಸಾಕಷ್ಟು ಅವಕಾಶ ಮಾಡುವುದರ ಅಗತ್ಯದ ವಿಷಯದಲ್ಲಿ ಸೌತ್ ಬರೊ ಸಮಿತಿಯ ವರದಿಯನ್ನು ಕುರಿತ ತಮ್ಮ ಅಧಿಕೃತ ಪತ್ರದ ೧೩ನೆ ಪ್ಯಾರಾದಲ್ಲಿ ಈ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅನಿವಾರ್ಯವಾಯಿತು.

"(ಅಧಿಕಾರೇತರ ನಾಮಕರಣ ವಿಷಯದಲ್ಲಿ) ಶಿಫಾರಸುಗಳನ್ನು ಒಟ್ಟಿನಲ್ಲಿ ಒಪ್ಪಿಕೊಳ್ಳುತ್ತದೆ. ಆದರೆ, ಸಮಿತಿಯು ಕೊಟ್ಟಿರುವ ಲಕ್ಷ್ಯಕ್ಕಿಂತ ಹೆಚ್ಚಿನ ಲಕ್ಷ್ಯವು ಅಗತ್ಯವೆನ್ನಿಸುವ ಒಂದು ಜಾತಿಯುಂಟು. ಭಾರತೀಯ ಸಂವಿಧಾನ ಸುಧಾರಣೆಯನ್ನು ಕುರಿತ ವರದಿ ನಿಮ್ಮ ವರ್ಗದವರ ಸಮಸ್ಯೆಯನ್ನು ಸ್ಪಷ್ಟವಾಗಿ ಗುರುತಿಸಿ ಅವರ ವಿಷಯದಲ್ಲಿ ಒಂದು ವಾಗ್ದಾನವನ್ನು ನೀಡಿತು. ಸಮಿತಿಯ ವರದಿಯಲ್ಲಿ 'ಇತರ ಹಿಂದೂಗಳು' ಎಂದು ಬೇರೆ ಬೇರೆ ಜಾತಿಯವರನ್ನು ಪಾರಿಭಾಷಿಕವಾಗಿ ಕರೆದಿದ್ದರೂ ಒಟ್ಟಿನಲ್ಲಿ ಅವರೆಲ್ಲ ಒಂದು ಬಗೆಯ ಜನ. ಅವರನ್ನು ಇತರರು ಎಷ್ಟು ದೂರ ಇಡುತ್ತಾರೆ ಎನ್ನುವುದರಲ್ಲಿ ವ್ಯತ್ಯಾಸಗಳಿರಬಹುದು. ಆದರೂ ಅವರೆಲ್ಲ ಹೆಚ್ಚು ಕಡಿಮೆ ಮದರಾಸಿನ ಪಂಚಮರ ಸ್ಥಿತಿಯಲ್ಲೇ ಇದ್ದಾರೆ. ಅಂದರೆ, ಹಿಂದೂ ಧರ್ಮದವರಲ್ಲಿ ದೇವಾಲಯ ಪ್ರವೇಶ ಮಾಡಬಹುದಾದ ಜನಗಳ ಗುಂಪಿಗೆ ಸೇರದೇ ಉಳಿದಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಐದರಲ್ಲಿ ಒಂದು ಭಾಗ ಇರುವ ಇವರಿಗೆ ಮಾರ್ಲೆ–ಮಿಂಟೊ

ಮಂಡಲಿಗಳಲ್ಲಿ ಸ್ವಲ್ಪವೂ ಪ್ರಾತಿನಿಧ್ಯ ಇಲ್ಲ. ಸಮಿತಿಯ ವರದಿಯು ನಿಮ್ನ ವರ್ಗದವರನ್ನು ಎರಡು ಬಾರಿ ಹೆಸರಿಸುತ್ತದೆ. ಆದರೆ, ಇದು ಸಮರ್ಪಕ ಮತದಾರ ಕ್ಷೇತ್ರಗಳಲ್ಲದಿರುವುದರಿಂದ ನಾಮಕರಣದ ಮೂಲಕ ಅವರಿಗೆ ಅನುಕೂಲಮಾಡಲಾಗಿದೆ ಎಂದು ಹೇಳುವುದಕ್ಕೆ ಮಾತ್ರ. ಈ ಜನರ ಸ್ಥಾನವನ್ನಾಗಲಿ, ತಮ್ಮ ಹಿತಾಸಕ್ತಿಗಳನ್ನು ತಾವೇ ರಕ್ಷಿಸಿಕೊಳ್ಳಲು ಅದು ಹೊಂದಿರುವ ಸಾಮರ್ಥ್ಯವನ್ನಾಗಲಿ ವರದಿ ಚರ್ಚಿಸುವುದಿಲ್ಲ. ಅವರಿಗೆ ಎಷ್ಟು ಪ್ರಮಾಣದ ನಾಮಕರಣವನ್ನು ಸಮಿತಿ ಸೂಚಿಸುತ್ತದೆ ಎನ್ನುವುದನ್ನು ವಿವರಿಸುವುದಿಲ್ಲ. (ಮತದಾನ ಸಮಿತಿಯ) ವರದಿಯ ೨೪ನೆಯ ಪ್ಯಾರಾ ನಾಮಕರಣವಾಗುವವರ ಸಂಖ್ಯೆಯನ್ನು ಮಿತಗೊಳಿಸುವುದನ್ನು ಸಮರ್ಥಿಸುತ್ತದೆ. ಈ ವರ್ಗಕ್ಕೆ ಅವರು ಸಲಹೆ ಮಾಡಿರುವ ಪ್ರಾತಿನಿಧ್ಯ ಹೀಗಿದೆ:

| ಪ್ರಾಂತ | ಒಟ್ಟು ಜನಸಂಖ್ಯೆ (ದಶ ಲಕ್ಷಗಳಲ್ಲಿ) | ನಿಮ್ನ ವರ್ಗದವರ ಜನಸಂಖ್ಯೆ (ದಶ ಲಕ್ಷಗಳಲ್ಲಿ) | ಒಟ್ಟು ಸ್ಥಾನಗಳು | ನಿಮ್ನ ವರ್ಗದವರ ಸ್ಥಾನಗಳು |
|---|---|---|---|---|
| ಮದರಾಸು | ೩೯.೮ | ೬.೩ | ೧೨೦ | ೨ |
| ಮುಂಬಯಿ | ೧೯.೫ | ೦.೬ | ೧೧೩ | ೧ |
| ಬಂಗಾಳ | ೪೫.೦ | ೯.೯ | ೧೨೭ | ೧ |
| ಸಂಯುಕ್ತ ಪ್ರಾಂತಗಳು | ೪೭.೦ | ೧೦.೧ | ೧೨೦ | ೧ |
| ಪಂಜಾಬ್ | ೧೯.೫ | ೧.೭ | ೮೫ | – |
| ಬಿಹಾರ್ ಮತ್ತು ಒರಿಸ್ಸಾ | ೩೨.೬ | ೯.೩ | ೧೦೦ | ೧ |
| ಮಧ್ಯಪ್ರಾಂತಗಳು | ೧೨.೦ | ೩.೭ | ೭೨ | ೧ |
| ಅಸ್ಸಾಂ | ೬.೦ | ೦.೩ | ೫೪ | – |
| **ಒಟ್ಟು** | **೨೨೧.೪** | **೪೧.೯** | **೭೯೧** | **೭** |

"ಈ ಸಂಖ್ಯೆಗಳೇ ವಿಷಯವನ್ನು ಮನವರಿಕೆ ಮಾಡಿಕೊಡುತ್ತವೆ. ಬ್ರಿಟಿಷ್ ಭಾರತದ ಒಟ್ಟು ಜನಸಂಖ್ಯೆಯ ಐದನೆ ಒಂದು ಭಾಗಕ್ಕೆ ಸ್ವಲ್ಪ ಹೆಚ್ಚು ಕಡಿಮೆ ೮೦೦ ಸ್ಥಾನಗಳಲ್ಲಿ ಏಳು ಸ್ಥಾನಗಳನ್ನು ಕೊಡಬೇಕೆಂದು ಸಲಹೆ ಮಾಡಲಾಗಿದೆ. ಎಲ್ಲ ಮಂಡಲಿಗಳಲ್ಲಿ ಸರಿಸುಮಾರು ಆರರಲ್ಲಿ ಒಂದರಷ್ಟು ಭಾಗ ಅಧಿಕಾರಿಗಳೇ ಇದ್ದು, ಇವರ ನಿಮ್ನ ವರ್ಗದವರ ಹಿತಾಸಕ್ತಿಗಳನ್ನು ಮನಸ್ಸಿನಲ್ಲಿರಿಸಿಕೊಂಡಿರುತ್ತಾರೆ (?) ಎಂದು ನಿರೀಕ್ಷಿಸಬಹುದು ಎನ್ನುವುದು ನಿಜವಾದರೂ, ನಮ್ಮ ಅಭಿಪ್ರಾಯದಲ್ಲಿ, ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಮಾಡುವುದು ವರದಿಯ ಗುರಿಯಲ್ಲ. ನಿಮ್ನ ವರ್ಗದವರು ಆತ್ಮರಕ್ಷಣೆಯ ಪಾಠವನ್ನು ಕಲಿಯಬೇಕು ಎಂದು ಇದನ್ನು ಸಿದ್ಧಗೊಳಿಸಿದವರು ಹೇಳಿದರು. ೬೦ರಿಂದ ೯೦ ಮಂದಿ ಸವರ್ಣೀಯ ಹಿಂದೂಗಳಿರುವ ಶಾಸನಸಭೆಯಲ್ಲಿ ಈ ಜಾತಿಯ ಒಬ್ಬರನ್ನು ಸೇರಿಸಿಬಿಟ್ಟ ಮಾತ್ರಕ್ಕೆ ಈ ಫಲಿತಾಂಶ ಸಾಧ್ಯವಾಗುತ್ತದೆ ಎಂದು ನಿರೀಕ್ಷಿಸುವುದು ಖಂಡಿತ ಅವಾಸ್ತವಿಕ ಭ್ರಮೆಯಷ್ಟೇ. ವರದಿಯ ೧೫೧, ೧೫೨,

೧೫೪ ಮತ್ತು ೧೫೫ನೆ ಪ್ಯಾರಾಗಳ ತತ್ವಗಳನ್ನು ಕಾರ್ಯಗತ ಮಾಡಲು ಅಸ್ಪೃಶ್ಯರನ್ನು ನಾವು ಇನ್ನೂ ಉದಾರವಾಗಿ ನಡೆಸಿಕೊಳ್ಳಬೇಕು..."

೪. ೧೯೧೯ರ ಸುಧಾರಣಾ ಯೋಜನೆಯನ್ನು ಸಿದ್ಧಗೊಳಿಸಿದವರು ನಿಮ್ನ ವರ್ಗಗಳಿಗೆ ಮಾಡಿದ ಅನ್ಯಾಯದ ವಿಷಯದಲ್ಲಿ ಇಂತಹ ಅಭಿಪ್ರಾಯ ತನ್ನಂತೆಯೇ ಇತರರೂ ಹೊಂದಿದ್ದಾರೆ ಎಂಬುದರಿಂದ ಸಭೆಗೆ ಸಂತೋಷವಾಗಿದೆ. ಸುಧಾರಣೆಗಳ ಯೋಜನೆಗಳನ್ನು ಉತ್ತಮಗೊಳಿಸಿ ವಿಸ್ತರಿಸುವ ಸಾಧ್ಯತೆಯನ್ನು ಕುರಿತು ವರದಿ ಮಾಡಲು ಎರಡು ವರ್ಷಗಳ ನಂತರ ನೇಮಕವಾದ ಮಡಿಮನ್ ಸಮಿತಿಯೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಯೋಜನೆಯ ಪ್ರಕಾರ ನಿಮ್ನ ವರ್ಗದವರಿಗೆ ನೀಡಿದ ಪ್ರಾತಿನಿಧ್ಯ ಸಾಲದು ಎಂದು ಆ ಸಮಿತಿಯೂ ತನ್ನ ವರದಿಯಲ್ಲಿ ಒಪ್ಪಿಕೊಂಡಿತು (೬೪ನೆಯ ಪ್ಯಾರ).

**೫. ನಿಮ್ನ ವರ್ಗದವರಿಗೆ ನೀಡಬೇಕಾದ ಪ್ರಾತಿನಿಧ್ಯದ ಪ್ರಮಾಣ:** ನಿಮ್ನ ವರ್ಗದವರಿಗೆ ಪರ್ಯಾಪ್ತವಾದ ಪ್ರಾತಿನಿಧ್ಯ ಎನ್ನಬಹುದಾದುದರ ಪ್ರಮಾಣ ಎಷ್ಟು? ಸಭೆಯ ಅಭಿಪ್ರಾಯದಲ್ಲಿ ಸಿಂಧನ್ನು ಈ ಪ್ರಾಂತದಿಂದ ಪ್ರತ್ಯೇಕಿಸುತ್ತಾರೆ ಎಂದು ಭಾವಿಸುವುದಾದರೆ ಮುಂಬಯಿಯ ವಿಧಾನ ಪರಿಷತ್ತಿನ ರಚನೆಯ ಈ ಕೆಳಗಿನ ಯೋಜನೆಯಿಂದ ನಿಮ್ನ ವರ್ಗದವರು ಸಾಕಷ್ಟು ಪ್ರಾತಿನಿಧ್ಯಕ್ಕಾಗಿ ಮಾಡುತ್ತಿರುವ ಹಕ್ಕೊತ್ತಾಯವನ್ನು ಪೂರೈಸುವುದೆಂದು ಭಾವಿಸಬಹುದಾಗಿದೆ.

**ಮುಂಬಯಿ ವಿಧಾನಪರಿಷತ್ತಿನ ರಚನೆ: I ಸಿಂಧ್ ಇಲ್ಲದೆ ಮುಂಬಯಿ ಪ್ರಾಂತಕ್ಕೆ**

| | ಮತದಾರ ಕ್ಷೇತ್ರಗಳು | ಒಟ್ಟು ಕ್ಷೇತ್ರಗಳು | ನಿಮ್ನವರ್ಗದವರಿಗೆ ಮೀಸಲು | ಮಹಮ್ಮದೀಯರಿಗೆ ಮೀಸಲು | ಮರಾಠರು ಮತ್ತು ಸಂಬಂಧಿಸಿದ ಜಾತಿಗಳಿಗೆ ಮೀಸಲು |
|---|---|---|---|---|---|
| | **I ಸಾಮಾನ್ಯ (ಎ) ನಗರ ಪ್ರದೇಶ** | | | | |
| ೧ | ಮುಂಬಯಿ ನಗರ ಉತ್ತರ | ೫ | ೧ | ೧ | ಪ್ರಕೃತ ಇರುವಂತೆಯೇ |
| ೨ | ಮುಂಬಯಿ ನಗರ ದಕ್ಷಿಣ | ೩ | – | – | |
| ೩ | ಅಹಮದಾಬಾದ್ ನಗರ | ೩ | ೧ | ೧ | |
| ೪ | ಸೂರತ್ ನಗರ | ೧ | – | – | |
| ೫ | ಶೊಲ್ಲಾಪುರ ನಗರ | ೩ | ೧ | ೧ | |
| ೬ | ಪುಣೆ | ೧ | – | – | |
| | **(ಬಿ) ಗ್ರಾಮೀಣ ಉತ್ತರ ವಿಭಾಗ** | | | | |
| ೭ | ಅಹಮದಾಬಾದ್ ಜಿಲ್ಲೆ | ೫ | ೧ | ೧ | |

| | | | | | |
|---|---|---|---|---|---|
| ೮ | ಬ್ರೋಚ್ ಜಿಲ್ಲೆ | ೪ | ೧ | ೧ | ಪ್ರಕೃತ ಇರುವಂತೆಯೇ |
| ೯ | ಕೈರಾ ಜಿಲ್ಲೆ | ೫ | ೧ | ೧ | |
| ೧೦ | ಪಂಚಮಹಲುಗಳ ಜಿಲ್ಲೆ | ೪ | ೧ | ೧ | |
| ೧೧ | ಸೂರತ್ ಜಿಲ್ಲೆ | ೫ | ೧ | ೧ | |
| ೧೨ | ಠಾಣಾ ಜಿಲ್ಲೆ | ೫ | ೧ | ೧ | |
| | **ಮಧ್ಯ ವಿಭಾಗ** | | | | |
| ೧೩ | ಅಹಮದ್ ನಗರ ಜಿಲ್ಲೆ | ೫ | ೧ | ೧ | |
| ೧೪ | ಖಾಂದೇಶ್ ಪೂರ್ವ ಜಿಲ್ಲೆ | ೬ | ೧ | ೧ | |
| ೧೫ | ಖಾಂದೇಶ್ ಪಶ್ಚಿಮ ಜಿಲ್ಲೆ | ೫ | ೧ | ೧ | |
| ೧೬ | ನಾಸಿಕ್ ಜಿಲ್ಲೆ | ೫ | ೧ | ೧ | |
| ೧೭ | ಪುಣೆ ಜಿಲ್ಲೆ | ೬ | ೧ | ೧ | |
| ೧೮ | ಸತಾರ ಜಿಲ್ಲೆ | ೬ | ೧ | ೧ | |
| ೧೯ | ಶೊಲ್ಲಾಪುರ ಜಿಲ್ಲೆ | ೫ | ೧ | ೧ | |
| | **ದಕ್ಷಿಣ ವಿಭಾಗ** | | | | |
| ೨೦ | ಬೆಳಗಾಂ ಜಿಲ್ಲೆ | ೫ | ೧ | ೧ | |
| ೨೧ | ಬಿಜಾಪುರ ಜಿಲ್ಲೆ | ೫ | ೧ | ೧ | |
| ೨೨ | ಧಾರವಾಡ ಜಿಲ್ಲೆ | ೬ | ೧ | ೧ | |
| ೨೩ | ಕೆನರಾ ಜಿಲ್ಲೆ | ೪ | ೧ | ೧ | |
| ೨೪ | ಕೊಲಾಬಾ ಜಿಲ್ಲೆ | ೪ | ೧ | ೧ | |
| ೨೫ | ರತ್ನಗಿರಿ | ೬ | ೧ | ೧ | |
| | **ಸಾಮಾನ್ಯ ಒಟ್ಟು** | **೧೧೨** | **೨೨** | **೨೨** | |
| | **II ವಿಶೇಷ** | | | | |
| ೨೬ | ಕಾರ್ಮಿಕ ಸಂಘಗಳು | ೪ | | | |
| ೨೭ | ವಿಶ್ವವಿದ್ಯಾನಿಲಯ | ೩ | | | |
| ೨೮ | ಯುರೋಪಿಯನ್ನರು | ೪ | | | |
| ೨೯ | ಮಿಲ್‌ಗಳ ಮಾಲೀಕರು | ೨ | | | |
| ೩೦ | ವಾಣಿಜ್ಯ | ೨ | | | |
| ೩೧ | ಕೃಷಿ | ೩ | | | |

| | | | | | |
|---|---|---|---|---|---|
| ೩೨ | ಇನಾಂದಾರರು | ೧ | | | |
| ೩೩ | ಅಧಿಕಾರಿಗಳು | ೯ | | | |
| | **ವಿಶೇಷ ಒಟ್ಟು** | **೨೮** | | | |
| | **ಒಟ್ಟು** | **೧೪೦** | **೨೨** | **೨** | |

ಮುಂಬಯಿ ವಿಧಾನ ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆ ಇಷ್ಟಿರಬೇಕು.

ಸಿಂಧ್ ಅನ್ನು ಮುಂಬಯಿ ಪ್ರಾಂತದ ಭಾಗವಾಗಿ ಉಳಿಸಿಕೊಳ್ಳಲು ನಿರ್ಧರಿಸಿದಲ್ಲಿ ಮುಂಬಯಿ ವಿಧಾನಪರಿಷತ್ತಿನ ರಚನೆಗೆ ಈ ಕೆಳಗಿನ ಯೋಜನೆಯನ್ನು ಸೂಚಿಸಲು ಸಭೆ ಅಪೇಕ್ಷಿಸುತ್ತದೆ.

**ಮುಂಬಯಿ ವಿಧಾನಪರಿಷತ್ತಿನ ರಚನೆ: II ಸಿಂಧ್ ಸೇರಿದಂತೆ ಮುಂಬಯಿ ಪ್ರಾಂತಕ್ಕೆ**

| | ಮತದಾರ ಕ್ಷೇತ್ರಗಳು | ಸ್ಥಾನಗಳ ಸಂಖ್ಯೆ | ನಿಮ್ನವರ್ಗದವರಿಗೆ ಮೀಸಲು | ಮರಾಠರು ಮತ್ತು ಸಂಬಂಧಿಸಿದ ಜಾತಿಗಳಿಗೆ ಮೀಸಲು |
|---|---|---|---|---|
| ೧ | ಮುಂಬಯಿ ನಗರ ಉತ್ತರ | ೫ | ೧ | |
| ೨ | ಮುಂಬಯಿ ನಗರ ದಕ್ಷಿಣ | ೪ | – | |
| ೩ | ಕರಾಚಿ ನಗರ | ೧ | – | |
| ೪ | ಅಹಮದಾಬಾದ್ ನಗರ | ೩ | ೧ | |
| ೫ | ಸೂರತ್ ನಗರ | ೨ | – | |
| ೬ | ಶೊಲ್ಲಾಪುರ ನಗರ | ೪ | ೧ | |
| ೭ | ಪುಣೆ ನಗರ | ೨ | – | |
| | **ಬಿ–ಗ್ರಾಮೀಣ** | | | |
| ೮ | ಅಹಮದಾಬಾದ್ ಜಿಲ್ಲೆ | ೫ | ೧ | |
| ೯ | ಬ್ರೋಚ್ ಜಿಲ್ಲೆ | ೪ | ೧ | |
| ೧೦ | ಕೈರಾ ಜಿಲ್ಲೆ | ೪ | ೧ | |
| ೧೧ | ಪಂಚಮಹಲುಗಳ ಜಿಲ್ಲೆ | ೪ | ೧ | |
| ೧೨ | ಸೂರತ್ ಜಿಲ್ಲೆ | ೪ | ೧ | |
| ೧೩ | ಠಾಣಾ ಜಿಲ್ಲೆ | ೪ | ೧ | |
| ೧೪ | ಅಹಮದ್ ನಗರ ಜಿಲ್ಲೆ | ೪ | ೧ | |
| ೧೫ | ಖಾಂದೇಶ ಪೂರ್ವ ಜಿಲ್ಲೆ | ೫ | ೧ | |
| ೧೬ | ನಾಸಿಕ್ ಜಿಲ್ಲೆ | ೪ | ೧ | |

| | | | | |
|---|---|---|---|---|
| ೧೭ | ಪೂನಾ ಜಿಲ್ಲೆ | ೫ | ೧ | |
| ೧೮ | ಸತಾರಾ ಜಿಲ್ಲೆ | ೫ | ೧ | |
| ೧೯ | ಬೆಳಗಾಂ ಜಿಲ್ಲೆ | ೪ | ೧ | |
| ೨೦ | ಬಿಜಾಪುರ ಜಿಲ್ಲೆ | ೪ | ೧ | |
| ೨೧ | ಧಾರವಾಡ | ೪ | ೧ | |
| ೨೨ | ಕೆನರಾ ಜಿಲ್ಲೆ | ೪ | ೧ | |
| ೨೩ | ರತ್ನಗಿರಿ ಜಿಲ್ಲೆ | ೫ | ೧ | |
| ೨೪ | ಪೂರ್ವ ಸಿಂಧ್ ಜಿಲ್ಲೆ | ೨ | – | |
| ೨೫ | ಪಶ್ಚಿಮ ಸಿಂಧ್ ಜಿಲ್ಲೆ | ೨ | – | |
| ೨೬ | ಶೊಲ್ಲಾಪುರ ಜಿಲ್ಲೆ | ೪ | ೧ | |
| ೨೭ | ಕೊಲಾಬಾ ಜಿಲ್ಲೆ | ೪ | ೧ | |
| ೨೮ | ಖಾಂದೇಶ್ ಪಶ್ಚಿಮಜಿಲ್ಲೆ | ೪ | ೧ | |
| | **ಒಟ್ಟು** | **೮೬** | **೨೨** | |
| | **II ಮಹಮ್ಮದೀಯರು (ಎ ನಗರ ಪ್ರದೇಶ)** | | | |
| ೨೯ | ಮುಂಬಯಿ ನಗರ | ೨ | | |
| ೩೦ | ಕರಾಚಿ ನಗರ | ೨ | | |
| ೩೧ | ಅಹಮದಾಬಾದ್ ನಗರ | ೧ | | ಪ್ರಕೃತ ಇರುವಂತೆಯೇ |
| ೩೨ | ಸೂರತ್ ನಗರ | ೧ | | |
| ೩೩ | ಪುಣೆ ನಗರ | ೧ | | |
| ೩೪ | ಶೊಲ್ಲಾಪುರ ನಗರ | ೧ | | |
| | **ಬಿ. ಗ್ರಾಮೀಣ** | | | |
| ೩೫ | ಉತ್ತರ ವಿಭಾಗ | ೨ | | |
| ೩೬ | ಮಧ್ಯ ವಿಭಾಗ | ೩ | | |
| ೩೭ | ದಕ್ಷಿಣ ವಿಭಾಗ | ೩ | | |
| ೩೮ | ಹೈದರಾಬಾದ್ ಜಿಲ್ಲೆ | ೨ | | |
| ೩೯ | ಕರಾಚಿ ಜಿಲ್ಲೆ | ೨ | | |
| ೪೦ | ಲಾರ್ಕನ ಜಿಲ್ಲೆ | ೨ | | |
| ೪೧ | ಸಕೂರ್ ಜಿಲ್ಲೆ | ೨ | | |

| | | | | | |
|---|---|---|---|---|---|
| ೪೨ | ಥಾರ್ ಮತ್ತು ಪಾರ್ಕರ್ ಜಿಲ್ಲೆ | ೨ | | | |
| ೪೩ | ನವಾಬ್ ಷಾ ಜಿಲ್ಲೆ | ೨ | | | |
| ೪೪ | ಮೇಲಿನ ಸಿಂಧ್ ಗಡಿ | ೨ | | | |
| | **ಒಟ್ಟು** | **೩೦** | | | |
| | **III ವಿಶೇಷ** | | | | |
| ೪೫ | ಕಾರ್ಮಿಕ ಸಂಘ | ೪ | | | |
| ೪೬ | ವಿಶ್ವವಿದ್ಯಾನಿಲಯ | ೨ | | | |
| ೪೭ | ಯುರೋಪಿಯನ್ನರು | ೪ | | | |
| ೪೮ | ಮಿಲ್ ಓನರ್‌ಗಳು | ೧ | | | |
| ೪೯ | ವಾಣಿಜ್ಯ | ೧ | | | |
| ೫೦ | ಕೃಷಿ | ೧ | | | |
| ೫೧ | ಇನಾಂದಾರರು ಮತ್ತು ಜಹಗೀರುದಾರರು | ೨ | | | |
| ೫೨ | ಅಧಿಕಾರಿಗಳು | ೯ | | | |
| | **ವಿಶೇಷ ಭಾಗ ಒಟ್ಟು** | **೨೪** | | | |
| | **ಒಟ್ಟು** | **೧೪೦** | | | |
| **ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆ ಇದಾಗಿರಬೇಕು** | | | | | |

* ಮೇಲೆ ಕೊಟ್ಟ ಕೋಷ್ಟಕದಲ್ಲಿ ಸೌತ್ ಬರೊ ಸಮಿತಿಯು ಕೊಟ್ಟು ಭಾರತ ಸರ್ಕಾರವು ಒಪ್ಪಿಕೊಂಡ ಸಂಖ್ಯೆ ೫೭೭,೫೧೬. ಸೌತ್ ಬರೊ ಸಮಿತಿಯು ಆಧಾರವೆಂದು ಸ್ವೀಕರಿಸಿದ ಮೂಲದ ಪ್ರಕಾರ ೧೯೧೧ರಲ್ಲಿ ಮುಂಬಯಿ ಪ್ರಾಂತದ ನಿಮ್ನ ವರ್ಗದವರ ಸಂಖ್ಯೆ ೨,೧೪೫,೨೦೮

೭. ಎರಡರಲ್ಲಿ ಯಾವ ರೀತಿಯೇ ಆಗಲಿ, ೧೪೦ ಸದಸ್ಯರಿರುವ ಪರಿಷತ್ತಿನಲ್ಲಿ ನಿಮ್ನ ವರ್ಗದವರ ಪ್ರತಿನಿಧಿಗಳು ೨೨ ಮಂದಿ ಇರಬೇಕೆಂಬುದೇ ಹಕ್ಕೊತ್ತಾಯವಾಗಿದೆ. ೧೪೦ ಮಂದಿಯ ಪರಿಷತ್ತಿನಲ್ಲಿ ನಿಮ್ನ ವರ್ಗಕ್ಕೆ ಈ ಮಟ್ಟಿನ ಪ್ರಾತಿನಿಧ್ಯ ನ್ಯಾಯವಾಗಿಯೇ ಇದೆ ಎಂದು ಸಭೆ ಒತ್ತಾಯಪೂರ್ವಕವಾಗಿ ಹೇಳಲು ಬಯಸುತ್ತದೆ. ಇಂತಹ ಕೇಳಿಕೆ ತೀರ ಹೆಚ್ಚಾಯಿತು ಎಂದು ಕೆಲವರು ಹೇಳಬಹುದೆಂದು ಸಭೆಗೆ ಅರಿವಿದೆ. ಇಂತಹ ಅಭಿಪ್ರಾಯವು ನಿಮ್ನ ವರ್ಗದವರ ವಿರುದ್ಧವಾದ ಪೂರ್ವಾಗ್ರಹ ಪರಿಣಾಮವಷ್ಟೇ ಎಂದು ಭಾವಿಸಬೇಕಾಗುತ್ತದೆ. ಇದಕ್ಕೆ ಯಾವುದೇ ಖಚಿತ ಕಾರಣದ ಆಧಾರವಿರಲು ಸಾಧ್ಯವಿಲ್ಲ. ಇಂತಹ ಅಭಿಪ್ರಾಯವನ್ನು ತಿದ್ದಲು ನಿಮ್ನ ವರ್ಗದವರ ಜನಸಂಖ್ಯೆಯ ಖಚಿತ ತಿಳಿವಳಿಕೆಯೇ ಸಾಕು ಎಂದು ಸಭೆ ಭಾವಿಸುತ್ತದೆ. ಏಕೆಂದರೆ, ಯಾವುದೇ ಕೋಮಿಗೆ ನೀಡಬೇಕಾದ ಪ್ರಾತಿನಿಧ್ಯವನ್ನು ಲೆಕ್ಕ ಹಾಕಲು ಜನಸಂಖ್ಯೆಯೇ ಅಳತೆಗೋಲು ಎಂಬುದನ್ನು ಒಪ್ಪಬೇಕಾಗುತ್ತದೆ. ಆದುದರಿಂದ ನಿಮ್ನ ವರ್ಗದವರ ಜನಸಂಖ್ಯೆಯನ್ನು

ಖಚಿತವಾಗಿ ನಿರ್ಧರಿಸುವುದು ಬಹುಮುಖ್ಯ ಸಂಗತಿ. ನಿಮ್ನ ವರ್ಗದವರಿಗೆ ಈಗಾಗಲೇ ೧೯೧೯ರಲ್ಲಿ ಸೌತ್ ಬರೊ ಸಮಿತಿಯಿಂದ ಅನ್ಯಾಯವಾಗಿದೆ. ಮುಂಬಯಿ ಪ್ರಾಂತದಲ್ಲಿ ನಿಮ್ನ ವರ್ಗದವರ ಸಂಖ್ಯೆಯನ್ನು ಆ ಸಮಿತಿ ತನ್ನ ವರದಿಯಲ್ಲಿ ತೀರ ತಪ್ಪಾಗಿ ಕೊಟ್ಟಿತು. ೧೯೧೧ರ ಜನಗಣತಿಯ ಪ್ರಕಾರ ಈ ಸಂಖ್ಯೆಗೆ ಆಧಾರವೇ ಇಲ್ಲ. ಸೌತ್ ಬರೊ ಸಮಿತಿ ತೋರಿಸಿದಂತೆ ನಿಮ್ನ ವರ್ಗದವರ ಸಂಖ್ಯೆ ಎಷ್ಟು ಕಡಿಮೆ ಯಾಗಿತ್ತು ಎಂದರೆ ಮುಂಬಯಿ ವಿಧಾನಪರಿಷತ್ತಿನಲ್ಲಿ ನಿಮ್ನ ವರ್ಗದವರ ಇಬ್ಬರು ಪ್ರತಿನಿಧಿಗಳಿರಬೇಕೆಂಬ ಭಾರತ ಸರ್ಕಾರದ ಸಲಹೆಯಿಂದ ಏನೇನೂ ಪರಿಣಾಮವಾಗಲಿಲ್ಲ. ನಿಮ್ನ ವರ್ಗದವರ ಸಂಖ್ಯೆಯನ್ನು ಕೆಳಗಿಳಿಸಲು ಜವಾಬ್ದಾರಿ ಹೊಂದಿರುವ ವಲಯಗಳಲ್ಲಿ ಈಗ ಇಂಥದೇ ಪ್ರಯತ್ನವನ್ನು ಮಾಡಲಾಗುತ್ತಿದೆ. ಉದಾಹರಣೆಗೆ ೧೯೨೮ರ ಫೆಬ್ರವರಿ ೨೩ರಂದು ಭಾರತ ಸರ್ಕಾರದ ಪರವಾಗಿ ವಿಧಾನಸಭೆಯಲ್ಲಿ ಮಾತನಾಡುತ್ತ ಶ್ರೀ ಬಾಜ್‌ಪಾಯಿಯವರು "ಭಾರತದಲ್ಲಿ ನಿಮ್ನ ವರ್ಗದವರ ಸಂಖ್ಯೆಯನ್ನು ತುಂಬಾ ಉತ್ಪ್ರೇಕ್ಷೆ ಮಾಡಲಾಗಿದೆ. ನಿಮ್ನ ವರ್ಗದವರ ನಿಜವಾದ ಸಂಖ್ಯೆ ಇಪ್ಪತ್ತೆಂಟೂವರೆ ದಶಲಕ್ಷ ಮಾತ್ರವಲ್ಲದೆ ೬೦ ದಶಲಕ್ಷವಲ್ಲ" ಎಂದು ಹೇಳಿದರು. ಸೌತ್ ಬರೊ ಸಮಿತಿಯು ಮಾಡಿದ ತಪ್ಪನ್ನೇ ಆಯೋಗವು ಮಾಡಬಹುದು. ಇದರ ಪರಿಣಾಮವಾಗಿ ತಪ್ಪು ಲೆಕ್ಕಾಚಾರಗಳ ಆಧಾರದ ಮೇಲೆ ಶಿಫಾರಸುಗಳನ್ನು ಮಾಡಬಹುದು ಎನ್ನುವ ಭಯ ಸಭೆಗಿದೆ. ಆದುದರಿಂದ ಇದಕ್ಕೆ ಸಂಬಂಧಿಸಿದಂತೆ ಭಾರತದ ಜನಗಣತಿಯ ನಿರ್ದೇಶಕರು ಏನು ಹೇಳುತ್ತಾರೆ ಎನ್ನುವುದರತ್ತ ಆಯೋಗದ ಗಮನವನ್ನು ಸೆಳೆಯಲು ಸಭೆಯು ಅಪೇಕ್ಷಿಸುತ್ತದೆ. ೧೯೨೧ರ ಭಾರತದ ಜನಗಣತಿಯ ಮೊದಲ ಸಂಪುಟದ ಹನ್ನೊಂದನೆಯ ಅಧ್ಯಾಯದಲ್ಲಿ ನಿರ್ದೇಶಕರು ಹೀಗೆ ಹೇಳುತ್ತಾರೆ:

> "೧೯೩ನೆ ಪ್ಯಾರಾಗ್ರಾಫ್: ನಮೂದಾದ ಒಂದು ನಿರ್ದಿಷ್ಟ ಭಾಗವನ್ನು 'ನಿಮ್ನ ವರ್ಗ'ದವರೆಂದು ಕರೆಯುವ ಉಮೇದು ಈಚೆಗಿನ ವರ್ಷಗಳಲ್ಲಿ ರೂಢಿಯಾಗಿದೆ. ನನಗೆ ತಿಳಿದಂತೆ ಈ ಮಾತಿಗೆ ಕಟ್ಟಕಡೆಯ ವಿವರಣೆ ಏನೇನೂ ಇಲ್ಲ, ಇದು ಯಾರಿಗೆ ಅನ್ವಯಿಸುತ್ತದೆ ಎಂಬುದೂ ಖಚಿತವಿಲ್ಲ. ೧೯೧೨ರಿಂದ ೧೯೧೭ರವರೆಗಿನ ಶಿಕ್ಷಣ ಪ್ರಗತಿಯ ಪಂಚವಾರ್ಷಿಕ ವಿಮರ್ಶೆಯಲ್ಲಿ (೧೮ನೆ ಅಧ್ಯಾಯ ೫೦೫ನೆಯ ಪ್ಯಾರಾಗ್ರಾಫ್) ನಿಮ್ನ ವರ್ಗದವರನ್ನು ಶೈಕ್ಷಣಿಕ ನೆರವು ಮತ್ತು ಪ್ರಗತಿಯ ದೃಷ್ಟಿಯಿಂದ ಪರಿಗಣಿಸಲಾಗಿದೆ ಮತ್ತು ಆ ವರದಿಯ ೧೮ನೇ ಅನುಬಂಧದಲ್ಲಿ ಕೋಮಿನ ಈ ಭಾಗಕ್ಕೆ ಸೇರಿದ ಜಾತಿಗಳು ಮತ್ತು ಬಣಗಳ ಪಟ್ಟಿಯೊಂದನ್ನು ಕೊಟ್ಟಿದೆ. ಈ ಪಟ್ಟಿಗಳಲ್ಲಿ ನಿಮ್ನ ವರ್ಗದವರೆಂದು ತೋರಿಸಿರುವಂತೆ ಒಟ್ಟು ೩೧ ದಶಲಕ್ಷ ಅಥವಾ ಬ್ರಿಟಿಷ್ ಭಾರತದ ಹಿಂದೂಗಳ ಮತ್ತು ಬಣಗಳ ಸಂಖ್ಯೆಯಲ್ಲಿ ಶೇಕಡಾ ೧೯. ಸಾರ್ವಜನಿಕ ವರದಿಯಲ್ಲಿ ಕೋಪ ಬರಿಸುವಂತಹ ಸಾಮಾಜಿಕ ವ್ಯತ್ಯಾಸಗಳನ್ನು ಮಾಡುವುದರಿಂದ ಅಸಮಾಧಾನ ವನ್ನುಂಟುಮಾಡುವ ಅಪಾಯ ಸ್ವಲ್ಪಮಟ್ಟಿಗೆ ಇದ್ದೇ ಇದೆ. ಆದರೆ ಆಗಲೇ ಸಿದ್ಧಗೊಳಿಸಿರುವ ಪಟ್ಟಿಗಳನ್ನು ಗಮನದಲ್ಲಿಟ್ಟುಕೊಂಡರೆ ಮತ್ತು 'ನಿಮ್ನ ವರ್ಗದವರು' ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಆಗಲೇ ವರ್ಗ ಪ್ರಜ್ಞೆಯನ್ನು ವರ್ಗ ವ್ಯವಸ್ಥೆಯನ್ನು ಬೆಳೆಸಿಕೊಂಡಿದ್ದಾರೆ. ಉದಾರಿಗಳಾದ ಸಂಸ್ಥೆಗಳು 'ಬೆಳೆಸಿದ' ಸೇವಾ ಸಂಸ್ಥೆಗಳು ಅವರಿಗೆ ನೆರವಾಗುತ್ತಿವೆ. ಶಾಸನಸಭೆಯಲ್ಲಿ ಅಧಿಕಾರಯುತವಾಗಿ ಪ್ರಾತಿನಿಧ್ಯವನ್ನು ಪಡೆದಿದ್ದಾರೆ ಎಂಬ ಎಲ್ಲ ಅಂಶಗಳನ್ನು ಗಮನಿಸಿದರೆ ವಾಸ್ತವಾಂಶಗಳನ್ನು ಎದುರಿಸಿ ಅವರ ಸಂಖ್ಯೆಯ ವಿಷಯ ಒಂದು ಅಂದಾಜನ್ನು ಪಡೆಯುವುದು

ಅಪೇಕ್ಷಣೀಯ ಎಂದು ಕಾಣುತ್ತದೆ. ಆದ್ದರಿಂದ ನಾವು 'ನಿಮ್ನ ವರ್ಗ' ಎನ್ನುವ ವಿಭಾಗದಲ್ಲಿ ಸಾಮಾನ್ಯವಾಗಿ ಸೇರಿಸುವ ಜಾತಿಗಳ ಅಂದಾಜು ಸಂಖ್ಯೆಯನ್ನು ಜನಗಣತಿಯ ಸಂಖ್ಯೆಗಳ ಆಧಾರದ ಮೇಲೆ ನನಗೆ ಕಳುಹಿಸುವಂತೆ ಪ್ರಾಂತೀಯ ಮೇಲ್ವಿಚಾರಕರನ್ನು (ಸೂಪರಿಂಟೆಂಡಂಟರು) ಕೋರಲಾಗಿದೆ. ಸಂಯುಕ್ತ ಪ್ರಾಂತವನ್ನು ಬಿಟ್ಟು ಉಳಿದೆಲ್ಲ ಪ್ರಾಂತಗಳಿಂದ ಮತ್ತು ರಾಜ್ಯಗಳಿಂದ ಇಂತಹ ಪಟ್ಟಿಗಳು ನನಗೆ ತಲುಪಿದವು. ಆದರೆ ತಮ್ಮ ಆಧಿಕಾರಿಕ ಸೂಕ್ಷ್ಮತೆಯಿಂದಾಗಿ ಸಂಯುಕ್ತಪ್ರಾಂತವು ಇಂತಹ ಒಂದು ವರದಿಯನ್ನು ನೀಡಲು ಹಿಂಜರಿಯುತ್ತಿದೆ. ಒಂದೇ ಗುಂಪಿನ ಸ್ಥಾನದ ಬಗ್ಗೆ ಭಾರತದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಅಭಿಪ್ರಾಯಗಳಿರುವುದರಿಂದ ಈ ಸಂಖ್ಯೆಗಳಿಗೆ ನಿಖರವಾದ ಏಕರೂಪದ ಮಾನದಂಡಗಳ ಆಧಾರಗಳೇನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ನಾನು ಶೈಕ್ಷಣಿಕ ವರದಿಯಲ್ಲಿನ ಅಂಕಿಗಳು ಮತ್ತು ೧೯೧೦ರ ವರದಿಗಳು ಮತ್ತು ಕೋಷ್ಟಗಳು ಇವುಗಳ ಆಧಾರದ ಮೇಲೆ ಅಂದಾಜನ್ನು ಮಾರ್ಪಡಿಸಬೇಕಾಯಿತು. ಇವುಗಳಲ್ಲಿ ಆಗಲೇ ವಿವರಿಸಿದ ಸಾಮಾನ್ಯ ದೋಷವೂ ಎಂದರೆ ಯಾವುದೇ ಜಾತಿಯ ಜನರ ಒಟ್ಟು ಸಂಖ್ಯೆಯನ್ನು ದಾಖಲೆ ಮಾಡಿಲ್ಲ ಎಂಬುದೂ ಉಂಟು. ಆದರೂ (ಕೆಳಗೆ ಕೊಟ್ಟಿರುವ) ತಃಖ್ತೆಯು, ಹಿಂದೂ ಸಮುದಾಯದಲ್ಲಿ 'ನಿಮ್ನ ವರ್ಗ'ದವರನ್ನೆಸಿಕೊಳ್ಳುವವರ ಕನಿಷ್ಠ ಸಂಖ್ಯೆ ಎಂದು ಭಾವಿಸಬಹುದಾದ ಅಂದಾಜನ್ನು ಕೊಡುತ್ತದೆ. ಈ ಪ್ರಾಂತೀಯ ಅಂಕಿಗಳ ಮೊತ್ತ ಸುಮಾರು ೫೩ ದಶಲಕ್ಷಗಳು. ಆದರೆ ಈ ಅಂದಾಜು (೧) ಸಂಬಂಧಿಸಿದ ಜಾತಿಗಳ ಮತ್ತು ಕೋಮುಗಳ ಸಂಪೂರ್ಣ ಸಂಖ್ಯಾಬಲವನ್ನು ಮತ್ತು (೨) ಈಚೆಗೆ ಹಿಂದೂಧರ್ಮಕ್ಕೆ ಸೇರಿಸಿಕೊಂಡ ಆದರೆ, ಅವರಲ್ಲಿ ಬಹುಮಂದಿ ಅಸ್ಪೃಶ್ಯರೆಂದು ಪರಿಗಣಿತರಾಗುವ ಆದಿವಾಸಿಗಳನ್ನು ಒಳಗೊಳ್ಳುವುದಿಲ್ಲವಾದ್ದರಿಂದ, ಈ ಸಂಖ್ಯೆಯನ್ನು ಕನಿಷ್ಠವಾದ ಮತ್ತು ಬಿಗಿಹಿಡಿತದ ಅಂದಾಜು ಎಂದೇ ತೆಗೆದುಕೊಳ್ಳಬೇಕು. ಭಾರತದಲ್ಲಿ ಅಸ್ಪೃಶ್ಯ ಜನ ಎಂದೇ ಪರಿಗಣಿತರಾಗುವ ಎಲ್ಲ ನಿಮ್ನ ವರ್ಗದವರ ಸಂಖ್ಯೆಯನ್ನು ಖಚಿತವಾಗಿ ಎನ್ನಬಹುದಾದ ಪ್ರದೇಶಗಳಲ್ಲಿ ಐವತ್ತೈದರಿಂದ ಅರವತ್ತು ದಶಲಕ್ಷ ಎಂದು ನಾವು ನಿಸ್ಸಂದೇಹವಾಗಿ ಹೇಳಬಹುದು....."

## ಭಾರತದಲ್ಲಿ ನಿಮ್ನ ವರ್ಗಗಳವರ ಜನಸಂಖ್ಯೆ

| ಪ್ರಾಂತಗಳು | ೦೦೦ಗಳನ್ನು ಬಿಟ್ಟಿದೆ. |
|---|---|
| **ಒಟ್ಟು** | **೫೨,೬೮೦** |
| ಅಸ್ಸಾಂ | ೨,೦೦೦ |
| ಬಂಗಾಳ | ೯,೦೦೦ |
| ಬಿಹಾರ್ ಮತ್ತು ಒರಿಸ್ಸಾ | ೮,೦೦೦ |
| ಮುಂಬಯಿ | ೨,೮೦೦ |
| ಸಿ.ಪಿ. ಮತ್ತು ಬೀರಾರ್ | ೩,೫೦೦ |
| ಮದರಾಸ್ | ೬,೦೭೨ |
| ಪಂಜಾಬ್ | ೨,೮೯೩ |

| | |
|---|---|
| ಸಂಯುಕ್ತ ಪ್ರಾಂತ | ೯,೦೦೦ |
| ಬರೋಡ | ೧೭೭ |
| ಮಧ್ಯಭಾರತ | ೧,೧೪೦ |
| ಗ್ವಾಲಿಯರ್ | ೫೦೦ |
| ಹೈದರಾಬಾದ್ | ೨,೩೩೯ |
| ಮೈಸೂರು | ೯೩೨ |
| ರಾಜಾಸ್ಥಾನ | ೨,೨೬೭ |
| ತಿರುವಾಂಕೂರು | ೧,೨೬೦ |

೮. ಎಚ್ಚರಿಕೆಯಿಂದ ಮತ್ತು ಸಾಕಷ್ಟು ಪರಿಶೀಲನೆಯೊಡನೆ ಜನಗಣತಿಯ ನಿರ್ದೇಶಕರು ಮಾಡಿದ ಈ ಅಂದಾಜು ಭಾರತದ ವಿವಿಧ ಪ್ರಾಂತಗಳಲ್ಲಿ ನಿಮ್ನ ವರ್ಗದವರ ಸಂಖ್ಯಾಬಲವನ್ನು ಕುರಿತ ಎಲ್ಲಾ ಊಹೆಗಳನ್ನು ಬದಿಗೊತ್ತಬೇಕು. ಶ್ರೀ ಬಾಜಪೇಯಿಯವರ ಅಂದಾಜಿನ ಸಿಂಧುತ್ವವನ್ನು ಅದು ನಾಶ ಮಾಡುತ್ತದೆ. ಏಕೆಂದರೆ, ತಮ್ಮ ಹೇಳಿಕೆಗೆ ಆಧಾರವಾಗಿದ್ದುವೆಂದು ಶ್ರೀ ಬಾಜಪೇಯಿಯವರು ಹೇಳಿದ ಪ್ರಾಂತೀಯ ಶೈಕ್ಷಣಿಕ ವರದಿಗಳ ಅಂಕಿಗಳನ್ನು ಸರಿ ನೋಡಿದ ನಂತರವೇ ಈ ಅಂದಾಜನ್ನು ನಿರ್ಣಯಿಸಿರುವುದು. ಇದರ ನಿಖರತೆಯನ್ನು ಒಪ್ಪಿಕೊಳ್ಳಬೇಕು. ಏಕೆಂದರೆ, ನಿರ್ದೇಶಕರು ಹೇಳಿದಂತೆ ಎಚ್ಚರಿಕೆಯ ತನಿಖೆಯ ನಂತರವೇ ಈ ಅಂದಾಜನ್ನು ಮಾಡಿರುವುದು. ಆದ್ದರಿಂದ ಶಾಸನಬದ್ಧ ಆಯೋಗವು ಬೇರಾವುದೇ ಅಂಕಿ ಸಂಖ್ಯೆಗಳನ್ನು ಒಪ್ಪದೇ, ಇವನ್ನೇ ಒಪ್ಪಬೇಕೆಂದು ಒತ್ತಾಯ ಮಾಡಬೇಕಾಗಿದೆ. ಈ ಅಂದಾಜಿನ ಪ್ರಕಾರ, ಮುಂಬಯಿ ಪ್ರಾಂತದಲ್ಲಿ ನಿಮ್ನ ವರ್ಗದವರ ಸಂಖ್ಯಾಬಲ ೨೮,೦೦,೦೦೦ ಜನ ಅಥವಾ ಒಟ್ಟು ಪ್ರಜಾಸಂಖ್ಯೆಯಲ್ಲಿ ಶೇಕಡಾ ೧೦.೮. ಅವರ ಸಂಖ್ಯಾಬಲ ಒಂದರ ಆಧಾರದ ಮೇಲೆಯೇ ನಿಮ್ನ ವರ್ಗದವರಿಗೆ ೧೪೦ ಸ್ಥಾನಗಳಲ್ಲಿ ೧೫ ಸ್ಥಾನಗಳಿಗೆ ಹಕ್ಕುಂಟು.

೯. ಒಂದು ಕೋಮಿಗೆ ನೀಡುವ ಪ್ರಾತಿನಿಧ್ಯದ ಪ್ರಮಾಣಕ್ಕೆ ಅದರ ಸಂಖ್ಯಾಬಲವೊಂದೇ ಆಧಾರ ಅಂಶವಾಗಿದ್ದರೆ, ನಿಮ್ನ ವರ್ಗದವರು ಏಳು ಹೆಚ್ಚು ಸ್ಥಾನಗಳನ್ನು ಬಯಸುವುದು ಸಹಜವೆಂಬುದು ನಿಸ್ಸಂದೇಹ. ಆದರೆ, ಇಂತಹ ವಿಷಯವನ್ನು ನಿರ್ಧರಿಸುವಾಗ ಕೋಮಿನ ಸಂಖ್ಯಾಬಲವನ್ನು ಏಕೈಕ ನಿರ್ಣಾಯಕ ಅಂಶವನ್ನಾಗಿ ತೆಗೆದುಕೊಳ್ಳುವ ಸಾಧ್ಯವಿಲ್ಲ ಎಂದು ಗುರುತಿಸಬೇಕು. ಪ್ರಾತಿನಿಧ್ಯದ ಅಂಶವೇನೂ ಆಗುವುದಿಲ್ಲ. ಕೋಮಿನ ಪರಿಸ್ಥಿತಿ ಎಂದರೆ ಸಾಮಾಜಿಕ ಹೋರಾಟದಲ್ಲಿ ಅದರ ಸ್ವಯಂ ರಕ್ಷಣೆಯ ಸಾಮರ್ಥ್ಯ. ಈ ಸಾಮರ್ಥ್ಯವು ಸ್ಪಷ್ಟವಾಗಿ ಕೋಮಿನ ಶೈಕ್ಷಣಿಕ ಮತ್ತು ಆರ್ಥಿಕ ಅಂತಸ್ತನ್ನು ಅವಲಂಬಿಸಿ ರುತ್ತದೆ. ಕೋಮಿನ ಪರಿಸ್ಥಿತಿ ಕೆಳಸ್ಥಿತಿಯಲ್ಲಿದ್ದಷ್ಟೂ ಅದಕ್ಕೆ ಇತರರಿಗಿಂತ ಚುನಾವಣೆಯ ಮೂಲಕ ದೊರೆಯುವ ಅನುಕೂಲಗಳು ಹೆಚ್ಚಾಗಿರಬೇಕು ಎಂಬ ತತ್ವದ ಮನ್ನಣೆಯಿಂದ ಇದು ಸ್ವಯಂಸಿದ್ಧವಾಗು ತ್ತದೆ. ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ನಿಮ್ನ ವರ್ಗದವರ ಸ್ಥಾನವು ಈ ಪ್ರಾಂತದಲ್ಲಿ ಕಟ್ಟಕಡೆಯದು ಎನ್ನುವುದರಲ್ಲಿ ಭಿನ್ನಾಭಿಪ್ರಾಯವೇ ಸಾಧ್ಯವಿಲ್ಲ. ಆದ್ದರಿಂದ ಸಂಖ್ಯಾಬಲಕ್ಕೆ ಅನುಗುಣವಾಗಿ ದೊರಕ ಬೇಕಾದ ಚುನಾವಣಾ ಅನುಕೂಲಕ್ಕಿಂತ ಹೆಚ್ಚಿನ ಅನುಕೂಲಗಳನ್ನು ಪಡೆಯಲು ಅವರಿಗೆ ಹಕ್ಕಿದೆ.

ಸಂಖ್ಯಾಬಲದಿಂದ ದೊರಕುವ ಚುನಾವಣಾ ಅನುಕೂಲಕ್ಕಿಂತ ಹೆಚ್ಚಿನ ಅನುಕೂಲ ನಿಮ್ನ ವರ್ಗಗಳವರಿಗೆ ದೊರಕಬೇಕು. ಏಕೆಂದರೆ ಬೇರಾವ ಕೋಮುಗಳೂ ನಿಮ್ನ ವರ್ಗಗಳವರಷ್ಟು ದಲಿತ

ಪರಿಸ್ಥಿತಿಯಲ್ಲಿವೆ ಎಂದು ಹೇಳುವಂತಿಲ್ಲ. ಅಲ್ಲದೆ, ನಿಮ್ನ ವರ್ಗದವರ ಸಾಮಾನ್ಯ ಹಣೆಯಬರಹವೇ ಆಗಿಹೋಗಿ ಬದುಕಿನಲ್ಲಿ ಅವರ ತುಚ್ಛ ಸ್ಥಾನದಿಂದ ಮೇಲೇರಲು ಸಾಧ್ಯವೇ ಇಲ್ಲದಂತೆ ಮಾಡಿರುವ ತೀವ್ರ ನಿಷೇಧಗಳ ಹೊರೆ ಬೇರಾವುದೇ ವರ್ಗಗಳ ಮೇಲೆ ಎಂದು ಹೇಳಲು ಸಾಧ್ಯವಿಲ್ಲ. ಪ್ರಾತಿನಿಧ್ಯದಲ್ಲಿ ಹೆಚ್ಚಳ ಬೇಕೆಂದು ಕೇಳುವುದಕ್ಕೆ ಇರುವ ಒಂದು ನ್ಯಾಯವಾದ ಕಾರಣ ಇಂದು ಎಂದು ಸಭೆ ಭಾವಿಸುತ್ತದೆ. ನಿಮ್ನ ವರ್ಗಗಳವರಿಗೆ ಅದು ಅಪೇಕ್ಷಿಸುವ ಅಧಿಕ ಪ್ರಾತಿನಿಧ್ಯವನ್ನು ಸಮರ್ಥಿಸುವ ಇನ್ನೊಂದು ಕಾರಣವು ಇದೆ ಎಂದು ಸಭೆಯ ಅಭಿಪ್ರಾಯ. ಅಲ್ಪಸಂಖ್ಯಾತ ವರ್ಗವನ್ನು ಅದರ ಪ್ರತಿನಿಧಿಗಳು ರಕ್ಷಿಸುವುದು ಸಾಧ್ಯವಾಗಬೇಕಾದರೆ ಅದಕ್ಕೆ ದೊರಕುವ ಪ್ರಾತಿನಿಧ್ಯ ಪರಿಣಾಮಕಾರಿಯಾಗಿರಬೇಕು. ಇಲ್ಲವಾದರೆ ಪ್ರಾತಿನಿಧ್ಯ ಹಾಸ್ಯಾಸ್ಪದವಷ್ಟೇ ಆಗುತ್ತದೆ. ಈ ಆಕ್ಷೇಪಣೆಯಿಂದ ತಪ್ಪಿಸಿಕೊಳ್ಳಬೇಕಾದರೆ, ಅಲ್ಪಸಂಖ್ಯಾತ ವರ್ಗದವರನ್ನು ರಕ್ಷಿಸಬೇಕಾದರೆ ಅದು ದಲಿತ ಸ್ಥಿತಿಯಲ್ಲಿ ಮುಂದುವರೆಯುವುದನ್ನು ತಡೆಯಬೇಕಾದರೆ ಅದಕ್ಕೆ ಸಾಕಷ್ಟು ಪ್ರಾತಿನಿಧ್ಯ ದೊರಕಬೇಕೆಂಬುದನ್ನು ಗುರುತಿಸಬೇಕು. ಇದೇ ಅಭಿಪ್ರಾಯಕ್ಕೆ ಒಂದು ಹೇಳಿಕೆಯ ರೂಪವನ್ನು ಕೊಡುವುದಾದರೆ ಅಲ್ಪಸಂಖ್ಯಾತ ವರ್ಗದ ಪ್ರಾತಿನಿಧ್ಯದ ಪರಿಣಾಮ ತನ್ನನ್ನು ಇತರರು ತಳ್ಳಿಹಾಕಿಬಿಡುವುದು ಅಸಾಧ್ಯ ಎಂಬ ಭಾವನೆ ಬರುವುದನ್ನು ಅವಲಂಬಿಸಿದೆ. ಹೆಚ್ಚಿನ ಪ್ರಾತಿನಿಧ್ಯವನ್ನು ಕೇಳುವಾಗ ದೇಶದ ಇತರ ಅಲ್ಪಸಂಖ್ಯಾತ ವರ್ಗಗಳೊಂದಿಗೆ ಈ ತತ್ವವನ್ನು ತಮ್ಮ ಪರವಾಗಿ ಆಶ್ರಯಿಸಲು ಸಭೆಗೆ ಹಕ್ಕಿದೆ ಎಂದು ಅದು ಭಾವಿಸುತ್ತದೆ.

೧೦. ಎಲ್ಲ ಅಲ್ಪಸಂಖ್ಯಾತ ಕೋಮುಗಳನ್ನು ನಿಷ್ಪಕ್ಷಪಾತವಾಗಿ ಕಾಣುವ ಅಗತ್ಯ: ಪ್ರಾತಿನಿಧ್ಯದ ಪ್ರಮಾಣವನ್ನು ನಿರ್ಧರಿಸುವ ಈ ತತ್ವಗಳು ಭಾರತ ಸರ್ಕಾರವು ಸೌತ್ ಬರೊ ಸಮಿತಿಯ ವರದಿಯನ್ನು ವಿಮರ್ಶಿಸಿದೆ. ಅಧಿಕೃತ ಪತ್ರದಲ್ಲಿ ನಿರ್ಧರಿಸುವ ತತ್ವಗಳು ಇಡೀ ಭಾರತದಲ್ಲಿ ಹೆಸರಿಸಬಹುದಾಗಿದ್ದ ಬೇರೆ ಯಾವುದೇ ಕೋಮಿಗಿಂತ ನಿಮ್ನ ವರ್ಗಗಳವರಿಗೆ ಅನ್ವಯಿಸುವುದು ಹೆಚ್ಚು ಯೋಗ್ಯವಾಗಿತ್ತು ಎಂದು ಹೇಳಲು ಸಭೆ ಅಪೇಕ್ಷಿಸುತ್ತದೆ. ಆಚರಣೆಯಲ್ಲಿ ಮಾತ್ರ ಇಡೀ ಭಾರತದಲ್ಲಿ ನಿಮ್ನ ವರ್ಗಗಳವರಿಂದ ಈ ತತ್ವಗಳನ್ನು ದೂರವೇ ಇಡಲಾಯಿತು ಮತ್ತು ನಿಮ್ನ ವರ್ಗಗಳವರ ವಿಷಯದಲ್ಲಿ ಹೇಳಬಹುದಾದಂತಹ ಸ್ಥಿತಿಗಿಂತ ಬಹು ಉತ್ತಮವಾದ ಮತ್ತು ಶಕ್ತಿಯುವಾದ ಸ್ಥಾನವನ್ನು ಹೊಂದಿದ್ದ ಮಹಮ್ಮದೀಯರಂತಹ ಕೋಮಿಗೆ ಈ ತತ್ವಗಳ ಲಾಭವನ್ನು ನೀಡಲಾಯಿತು. ಸಮಾನತೆ ನೀಡದ ಇಂತಹ ನಡವಳಿಕೆಯ ಒಂದು ನಿದರ್ಶನವಾಗಿ ಸಭೆಯು ಈ ಕೆಳಗಿನ ವಾಸ್ತವಾಂಶಗಳತ್ತ ಆಯೋಗದ ಗಮನವನ್ನು ಸೆಳೆಯುತ್ತದೆ.

| ಪ್ರಾಂತಗಳು | ಮುಸ್ಲಿಮರ ಸಂಖ್ಯೆ | ಮುಸ್ಲಿಮರಿಗೆ ಸ್ಥಾನಗಳು | ನಿಮ್ನ ವರ್ಗಗಳ ಜನಸಂಖ್ಯೆ | ನಿಮ್ನ ವರ್ಗಗಳಿಗೆ ಸ್ಥಾನಗಳು |
|---|---|---|---|---|
| ಮಧ್ಯಪ್ರಾಂತಗಳು | ೫೭೪,೨೭೬ | ೧೧ | ೩,೦೬೦,೨೩೨ | ೨ |
| ಮುಂಬಯಿ ಪ್ರಾಂತ | ೧,೨೦೭,೪೪೨ | ೭ | ೧,೬೨೭,೯೯೦ | ೧ |

ನಿಮ್ನ ವರ್ಗದವರಿಗೆ ಮಾಡಲಾದ ಈ ಅನ್ಯಾಯವನ್ನು ಕಂಡು ಯಾರಿಗೆ ಎಷ್ಟೇ ರೋಷ ಉಕ್ಕಿದರೂ ಭಾರತ ಸರ್ಕಾರಕ್ಕೆ ಮಾತ್ರ ನಾಚಿಕೆಯಾಗುವುದಿಲ್ಲ. ಏಕೆಂದರೆ ಅದು ಈ ತತ್ವಗಳನ್ನು ಘೋಷಿಸಿದ್ದು

ಅವುಗಳನ್ನು ಮಹಮ್ಮದೀಯರಿಗೆ ಮಾತ್ರವೇ ಅನ್ವಯಿಸುವ ಪರಿಮಿತ ಉದ್ದೇಶದಿಂದ. ಎಲ್ಲರಿಗೂ ತಿಳಿದಿರುವ ಹಾಗೆ, ಇದಕ್ಕೆ ಕಾರಣ ಬೇರೆ ಬೇರೆ ಕೋಮುಗಳವರ ರಾಜಕೀಯ ಪ್ರಾಮುಖ್ಯತೆಗೆ ಅನುಗುಣವಾಗಿ ಅಂತಸ್ತುಗಳಾಗಿ ವರ್ಗೀಕರಿಸುವುದನ್ನು ಸಭೆ ವಿರೋಧಿಸುತ್ತದೆ. ಎಲ್ಲ ಕೋಮುಗಳಿಗೂ ರಾಜಕೀಯ ವಾಗಿ ಒಂದೇ ಸಮವಾದ ಪ್ರಾಮುಖ್ಯತೆ ಎನ್ನುವುದನ್ನು ಬಿಟ್ಟು ಬೇರಾವುದೇ ಕ್ಷೇಮಕರವಾದ, ಸುಭದ್ರ ವಾದ ನಿಯಮ ಇರಲು ಸಾಧ್ಯವಿಲ್ಲ. ಎಲ್ಲ ಕೋಮುವಾರು ತೊಂದರೆಗಳ ಬೇರು ಈ ಅನ್ಯಾಯದ ತಾರತಮ್ಯವೇ. ಇದು ಸಮಾನಾವಕಾಶದ ತತ್ವವನ್ನು ನಾಶ ಮಾಡುತ್ತದೆ. ಸಂಸತ್ತು ಸುಧಾರಣೆಗಳ ಮೊದ ಲನೆಯ ಕಂತನ್ನು ನೀಡಿದಾಗಲೇ ಭಾರತದ ಆಡಳಿತದಲ್ಲಿ ಈ ತತ್ವವನ್ನು ನುಸುಳಿಸಿದ್ದು ನಿಮ್ನ ವರ್ಗ ಗಳವರ ರಾಜಕೀಯ ಸುಧಾರಣೆಗಳನ್ನು ವಿಸ್ತರಿಸುವ ಸಂದರ್ಭದಲ್ಲಿ ನಿಮ್ನ ವರ್ಗಗಳವರ ಅಸ್ತಿತ್ವವು ಗಂಭೀರವಾಗಿ ಪರಿಗಣಿಸಬೇಕಾದ ಸಮಸ್ಯೆ ಎಂದು ಈಗಿನ ಸೆಕ್ರೆಟರಿ ಆಫ್ ಸ್ಟೇಟ್ ಅವರು ಗುರುತಿಸಿರು ವುದಕ್ಕೆ ಸಭೆ ಸಂತೋಷಪಡುತ್ತದೆ. ಆದರೆ ಹೀಗೆ ಗುರುತಿಸಿರುವುದು ದೇಶದ ಸಂವಿಧಾನದ ಚೌಕಟ್ಟಿನಲ್ಲಿ ಮಾಡಬಹುದಾದ ಮಾರ್ಪಾಡುಗಳಲ್ಲಿ ಪ್ರತಿಬಿಂಬಿತವಾಗದಿದ್ದರೆ ಅದು ನಿಷ್ಫಲವಾಗುತ್ತದೆ ಎನ್ನುವುದರತ್ತ ಗಮನ ಸೆಳೆಯಲು ಸಭೆಯು ಬಯಸುತ್ತದೆ.

೧೧. ಪ್ರಾತಿನಿಧ್ಯದ ವಿಧಾನಸಭೆಯ ನಾಮಕರಣ ತತ್ವವನ್ನು ವಿರೋಧಿಸುತ್ತದೆ. ಚುನಾವಣೆಯ ತತ್ವವನ್ನು ನಿಮ್ನ ವರ್ಗಗಳಿಗೂ ವಿಸ್ತರಿಸಬೇಕೆಂದು ಒತ್ತಾಯಪಡಿಸುತ್ತದೆ. ಚುನಾವಣೆಯ ಜವಾಬ್ದಾರಿ ಸರ್ಕಾರದ ದೃಷ್ಟಿಯಿಂದ ಸರಿಯಾದ ತತ್ವವಷ್ಟೇ ಅಲ್ಲ. ರಾಜಕೀಯ ಶಿಕ್ಷಣದ ದೃಷ್ಟಿಯಿಂದಲೂ ರೂಢಿ ಯಲ್ಲಿ ಅಗತ್ಯ. ಪ್ರತಿ ಕೋಮಿಗೂ ರಾಜಕೀಯ ಶಿಕ್ಷಣದ ಅಗತ್ಯವಿದೆ, ಮತ ಚಲಾವಣೆಯಿಲ್ಲದೆ ಬೇರಾವ ರೀತಿಯಲ್ಲೂ ಈ ಶಿಕ್ಷಣ ದೊರಕಲು ಸಾಧ್ಯವಿಲ್ಲ. ಬೇರಾವ ಕೋಮಿಗಿಂತ ಇಂತಹ ಶಿಕ್ಷಣದ ಅಗತ್ಯ ಇರುವ ನಿಮ್ನ ವರ್ಗಗಳವರಿಂದ, ಶೀಘ್ರವಾಗಿ ವಿಕಾಸಗೊಳ್ಳುತ್ತಿರುವ ಭಾರತದ ರಾಜಕೀಯ ಜೀವನ ತಮ್ಮ ಪಾಲನ್ನು ಪಡೆದುಕೊಳ್ಳಲು ಅವಕಾಶವನ್ನು ಕಳೆದುಕೊಂಡಿರುವುದು ದುರದೃಷ್ಟದ ಸಂಗತಿ. ನಿಮ್ನ ವರ್ಗಗಳವರ ಮಟ್ಟಿಗೆ ಚುನಾವಣೆ ಅಗತ್ಯವಾಗಿರುವುದಕ್ಕೆ ಇನ್ನೊಂದು ಕಾರಣವೂ ಇದೆ. ಸಚಿವ ಸ್ಥಾನ ಬಹು ಮುಖ್ಯವಾದ ಹಕ್ಕು, ನಿಮ್ನ ವರ್ಗದವರು ಇದನ್ನು ಬಿಟ್ಟುಕೊಡಲು ಸಾಧ್ಯವಿಲ್ಲ. ದೇಶದ ಸಚಿವ ಮಂಡಲದಲ್ಲಿ ಸ್ಥಾನವನ್ನು ಪಡೆದು ಅಲ್ಲಿಂದ ಸರ್ಕಾರದ ಧೋರಣೆಯ ಮೇಲೆ ಪ್ರಭಾವ ಬೀರಲು ಸಾಧ್ಯವಾಗದೆ ಹೋದರೆ ರಾಜಕೀಯ ಸುಧಾರಣೆಗಳನ್ನು ಕಾರ್ಯಗತ ಮಾಡುವುದರಿಂದ ಅವರಿಗೆ ಹೆಚ್ಚಿನ ಪ್ರಯೋಜನವೇನೂ ಆಗಲು ಸಾಧ್ಯವಿಲ್ಲ. ತಮ್ಮ ಪ್ರತಿನಿಧಿಗಳನ್ನು ತಾವೇ ಆರಿಸಿಕೊಳ್ಳುವ ಅವಕಾಶವನ್ನು ಅವರಿಗೆ ನೀಡದಿದ್ದರೆ, ಈ ಅವಕಾಶವೂ ಅವರಿಗೆ ತಪ್ಪಿಹೋಗುತ್ತದೆ. ಏಕೆಂದರೆ, ಜವಾಬ್ದಾರಿ ಸರ್ಕಾರದಲ್ಲಿ ನಾಮಕರಣ ಸದಸ್ಯರು ಸಚಿವರಾಗಲು ಅನರ್ಹರಾಗುತ್ತಾರೆ. ನಿಮ್ನ ವರ್ಗಗಳವರನ್ನು ಹಕ್ಕಿನಿಂದ ವಂಚಿತರನ್ನಾಗಿ ಮಾಡಬಲ್ಲ ನಾಮಕರಣದಂತಹ ಪ್ರಾತಿನಿಧ್ಯ ಪದ್ಧತಿ ತನಗೆ ತಾನೇ ಅಯೋಗ್ಯ ಎನಿಸುತ್ತದೆ.

೧೨. ಚುನಾವಣೆಯ ತತ್ವವನ್ನು ನಿಮ್ನ ವರ್ಗದವರಿಗೆ ವಿಸ್ತರಿಸುವುದಕ್ಕೆ ಸಾಮಾನ್ಯವಾಗಿ ಎರಡು ಆಕ್ಷೇಪಣೆಗಳನ್ನು ಒಡ್ಡುತ್ತಾರೆ.

**(ಅ) ಮತದಾರ ಕ್ಷೇತ್ರಗಳನ್ನು ರೂಪಿಸುವುದರಲ್ಲಿ ಕಷ್ಟ:** ಇದು ಪ್ರಾಮಾಣಿಕವಲ್ಲ ಎಂದು ತಳ್ಳಿಹಾಕ ಬೇಕಾದ ಆಕ್ಷೇಪಣೆ ಎಂದು ಸಭೆ ಭಾವಿಸುತ್ತದೆ. ನಿಮ್ನ ವರ್ಗಗಳವರ ಪ್ರಾತಿನಿಧ್ಯದ ವಿಷಯದಲ್ಲಿ ಚುನಾವಣೆಯನ್ನು ಕೈಬಿಟ್ಟು ಸರ್ಕಾರವು ನಾಮಕರಣ ಪದ್ಧತಿಯನ್ನು ಆರಿಸಲು ಮತದಾರರ ಕ್ಷೇತ್ರ ಗಳನ್ನು ರೂಪಿಸುವುದರಲ್ಲಿನ ಕಷ್ಟವೆ ಕಾರಣವಾಗಿದ್ದರೆ ಚುನಾವಣೆಯ ತತ್ವವನ್ನು ಸರ್ಕಾರವು ಮುಸ್ಲಿಮರಿಗೆ

ಮತ್ತು ಯುರೋಪಿಯನ್ನರಿಗೆ ಅನ್ವಯಿಸುವ ಸಾಹಸ ಮಾಡಿದ್ದೇಕೆ ಎಂದು ಅರ್ಥವಾಗುವುದಿಲ್ಲ. ಇವು ನಿಮ್ಮ ವರ್ಗದವರಿಗಿಂತ ಕಡಿಮೆ ಪ್ರಮಾಣದಲ್ಲಿ ಚದುರಿರುವ ಕೋಮುಗಳಲ್ಲಿ, ಈಗಿರುವ ಮತದಾರರ ಕ್ಷೇತ್ರಗಳೂ ಸೇರಿರುವಂತೆ ಯಾವ ರೀತಿಯಲ್ಲಿ ಮತದಾರರ ಕ್ಷೇತ್ರಗಳನ್ನು ರೂಪಿಸಿದರೂ ಅವುಗಳನ್ನು ತರ್ಕಕ್ಕನುಗುಣವಾಗಿ ಅಸಂಬದ್ಧ ಎಂದು ಖಂಡಿಸಿಬಿಡಬಹುದು. ಆದರೂ, ಈ ಕೋಮುಗಳಿಗೆ ಸಮ ರೂಪದ ಮತದಾರ ಕ್ಷೇತ್ರಗಳನ್ನು ರೂಪಿಸುವುದು ಸಾಧ್ಯವಿಲ್ಲ ಎಂಬುದನ್ನು ಕಂಡುಕೊಂಡಾಗ ಮುಂಬಯಿ ಸರ್ಕಾರವು ತನ್ನ ಸೌಂದರ್ಯ ಪ್ರಜ್ಞೆಯನ್ನು ಬಿಟ್ಟುಕೊಟ್ಟು ಅಸಮರೂಪದ ಕ್ಷೇತ್ರಗಳನ್ನು ರೂಪಿಸುವುದರಲ್ಲಿ ಎದುರಾಗುವ ಈ ಕಷ್ಟಗಳೆಲ್ಲ ಸಭೆಯು ವಿವರಿಸಿರುವ ಪ್ರಾತಿನಿಧ್ಯ ಯೋಜನೆಯಿಂದ ಮರೆಯಾಗುತ್ತದೆ. ಸಮಸ್ಯೆಯೂ ಹೀಗೆ ಸರಳವಾದ ಮೇಲೆ ಈಗ ನಾಮಕರಣ ಪದ್ಧತಿಯ ಬದಲು ಚುನಾವಣಾ ಪದ್ಧತಿಯನ್ನು ಅನುಸರಿಸಲು ಯಾವ ಆಕ್ಷೇಪಣೆಯನ್ನೂ ಎತ್ತಲಾಗದು.

**(ಆ) ತಕ್ಕಷ್ಟು ದೊಡ್ಡದಾದ ಮತದಾರರ ಕ್ಷೇತ್ರವನ್ನು ರೂಪಿಸುವುದರಲ್ಲಿರುವ ಕಷ್ಟ–** ಶಾಸನಸಭೆಗೆ ನಿಮ್ಮ ವರ್ಗದವರನ್ನು ಚುನಾವಣೆಗೆ ಬೇಕಾಗುವಷ್ಟು ಸಂಖ್ಯೆಯ ಮತದಾರರು ಯಾವುದಾದರೂ ಮತ ಕ್ಷೇತ್ರದಲ್ಲಿ ಇರುವರೇ? ನಾಮಕರಣದ ಬದಲು ಚುನಾವಣೆಯನ್ನು ಅನುಸರಿಸಲು ಇರುವ ಒಂದು ಕಷ್ಟವನ್ನು ಎತ್ತಿ ತೋರಿಸಲು ಸಾಮಾನ್ಯವಾಗಿ ಈ ಪ್ರಶ್ನೆಯನ್ನೆತ್ತಿ 'ಇಲ್ಲ' ಎಂದು ಉತ್ತರಿಸಲಾಗುತ್ತದೆ. ಮತ ನೀಡಿಕೆಯ ಈಗಿನ ಮಟ್ಟವನ್ನು ಮುಟ್ಟಲಾಗದು, ಅದು ಹಾಗೆಯೇ ಇರತಕ್ಕದ್ದು ಎಂದು ತೀರ್ಮಾನಿಸಿದರೆ ಈ ಕಷ್ಟ ನಿಸ್ಸಂದೇಹವಾಗಿಯೂ ಇರುತ್ತದೆ; ಈ ಮಟ್ಟ ಈಗಿರುವಂತೆ ಇರುವಷ್ಟು ಕಾಲವೂ ನಿಮ್ಮ ವರ್ಗದ ಮತದಾರರು ಬಹು ಸಂಖ್ಯೆಯಲ್ಲಿರುತ್ತಾರೆ ಎನ್ನುವುದನ್ನು ಸಭೆಯು ಒಪ್ಪಲೇಬೇಕು. ಆದರೆ ಈಗಿರುವ ಮಟ್ಟವನ್ನು ಯಾವ ದೃಷ್ಟಿಯಿಂದ ಪರಿಶೀಲಿಸಿದರೂ ಅದಕ್ಕೆ ಸಮರ್ಥನೆ ಇಲ್ಲ ಎಂದು ಸಭೆ ಅಭಿಪ್ರಾಯ ಪಡುತ್ತದೆ. ಇದು ಜವಾಬ್ದಾರಿ ಸರ್ಕಾರವನ್ನು ಅಪಹಾಸ್ಯಕ್ಕೆ ಈಡುಮಾಡಿದೆ. ಈಗಿರುವ ಮಟ್ಟದ ಅರ್ಥವೆಂದರೆ ಈಗಿರುವ ಮತದಾರ ಪದ್ಧತಿಯಲ್ಲಿ ಮತದಾರರಾಗುವ ಭಾಗ್ಯವನ್ನು ಪಡೆದ ಮಾತ್ರದಿಂದಲೇ ಏಳು ಲಕ್ಷದಷ್ಟು ಅಲ್ಪಸಂಖ್ಯಾತರು ಎರಡು ಕೋಟಿ ಜನರಿರುವ ಪ್ರಾಂತವನ್ನು ಆಳುತ್ತಾರೆ ಎಂಬುದು. ಇಂತಹ ಪರಿಸ್ಥಿತಿ ಸ್ಪಷ್ಟವಾಗಿ ಕೆಡುಕಿನದು; ಇನ್ನು ಮುಂದೆ ಜವಾಬ್ದಾರಿ ಸರ್ಕಾರ ಹೆಸರಿಗೆ ಮಾತ್ರವಲ್ಲದೆ ವಾಸ್ತವಿಕವಾಗಿಯೂ ಇರಬೇಕಾದಲ್ಲಿ, ಈ ಪರಿಸ್ಥಿತಿ ಮುಂದುವರೆಯಲು ಬಿಡಲಾಗದು. ಸುಧಾರಣೆಗಳಾಗಬೇಕೆಂದು ಅತ್ಯಂತ ಗಟ್ಟಿಯಾಗಿ ದನಿ ಎತ್ತಿ ಕೇಳಿದ ವರ್ಗ ಮತ ನೀಡಿಕೆಯ ಹಕ್ಕಿನ ಪ್ರಶ್ನೆಯನ್ನು ಸಾಕಷ್ಟು ಒತ್ತಾಯಪೂರ್ವಕವಾಗಿ ಎತ್ತಲಿಲ್ಲ ಎಂದು ಕಾಣುತ್ತದೆ. ಇದಕ್ಕಾಗಿ ವಿಷಾದಪಡಬೇಕಾಗಿದೆ. ಈ ವರ್ಗದ ಗುರಿ ಪ್ರಜಾಪ್ರಭುತ್ವ ಎಂದು ಹೇಳಲಾಗಿದೆ. ಆದರೆ ನಿಜವನ್ನು ಹೇಳಬೇಕೆಂದರೆ, ಬರ್ಮಾ ಸರ್ಕಾರದ ಮಾತಿನಲ್ಲಿ ಹೇಳುವುದಾದರೆ, "ಅವರು ಮುಖ್ಯವಾಗಿ ಒಂದು ಪ್ರಜಾಪ್ರಭುತ್ವವಿರುವ ರಾಷ್ಟ್ರಕ್ಕೆ ಮನವಿ ಮಾಡುತ್ತಿರುವುದರಿಂದ ಪ್ರಜಾಪ್ರಭುತ್ವದ ಸಂಸ್ಥೆಗಳ ಪರವಾಗಿದ್ದಾರೆ. ಅವರು ಪ್ರಜಾಪ್ರಭುತ್ವವನ್ನು ಬೇಡಿ ಪ್ರಜೆಗಳನ್ನು ಹೊರಗಿಡುವಂತಿಲ್ಲ. ಸುಧಾರಣೆಯಲ್ಲಿ ಅವರಿಗಿರುವ ಮುಖ್ಯ ಆಸಕ್ತಿ ಎಂದರೆ, ಕಾರ್ಯಾಂಗದ ಮೇಲೆ ಅವರಿಗೆ ಲಭ್ಯವಾಗುವುದೆಂದು ಅವರು ನಿರೀಕ್ಷಿಸುವ ಅಧಿಕಾರ. ವಿಶಾಲವಾದ ಮತದಾನದ ಹಕ್ಕು ಮತ್ತು ಗ್ರಾಮೀಣ ಮತದಾರರಿಂದ ಅದರ ನಿಜವಾದ ಅರ್ಥದಲ್ಲಿ ಹೊಣೆಗಾರಿಕೆಯ ಮತನೀಡಿಕೆ ಇವು ಅವರ ಕೇಳಿಕೆಯ ತಿರುಳಿನಲ್ಲಿಲ್ಲ. ಶಾಸಕರೆಲ್ಲ ತಮ್ಮ ವರ್ಗದಿಂದಲೇ ಆಯ್ಕೆಯಾಗಿ ತಾವು ಅಪೇಕ್ಷಿಸುವ ನಿಯಂತ್ರಣವನ್ನು ಅವರು ಚಲಾಯಿಸುತ್ತಿರುವವರೆಗೆ ಅವರು ಕೆಲವೇ ಮತದಾರರ ಪ್ರತಿನಿಧಿಗಳೇ, ಹೆಚ್ಚು ಸಂಖ್ಯೆಯ ಮತದಾರರ ಪ್ರತಿನಿಧಿಗಳೇ ಎನ್ನುವುದು ಇವರಿಗೆ ಬೇಕೇ ಇಲ್ಲ."

ಮತದಾನದ ಹಕ್ಕಿನ ಮುಖ್ಯ ಪ್ರಶ್ನೆಯ ವಿಷಯದಲ್ಲಿ ಭಾರತೀಯ ರಾಜಕಾರಣಿಗಳಿಗಿರುವ ಅಲಕ್ಷ್ಯದ ಸರಿಯಾದ ವಿವರಣೆಯಾಗಿರಲಿ ಅಥವಾ ಇಲ್ಲದಿರಲಿ ಕಾಂಗ್ರೆಸಿನ ರಾಜಕೀಯದಲ್ಲಿ ಅಧಿಕಾರ ವರ್ಗಾವಣೆಯ ಪ್ರಶ್ನೆಗೆ ಹೋಲಿಸಿದರೆ ಮತದಾನದ ಹಕ್ಕಿನ ಪ್ರಶ್ನೆ ಅಮುಖ್ಯವಾದ ಸ್ಥಾನವನ್ನು ಪಡೆದಿದೆ ಎನ್ನುವುದಂತೂ ವಾಸ್ತವಾಂಶ. ಸಭೆಯ ಅಭಿಪ್ರಾಯದಲ್ಲಿ ಕಾಂಗ್ರೆಸ್ ರಾಜಕಾರಣಿಗಳ ಈ ಧೋರಣೆಯು ಮತದಾನದ ಹಕ್ಕಿನ ಪ್ರಶ್ನೆಗೂ ಅಧಿಕಾರ ವರ್ಗಾವಣೆಯ ಪ್ರಶ್ನೆಗೂ ಇರುವ ನಿಜವಾದ ಸಂಬಂಧವನ್ನು ತಲೆಕೆಳಗು ಮಾಡಿದಂತೆ ಈಗ ಆಡಳಿತವನ್ನು ಒಂದುಗೂಡಿಸಿ ನಿರ್ವಹಿಸುತ್ತಿರುವ ಶಕ್ತಿಗಳಿಂದ ತೃಪ್ತಿಕರವಾದ ಬೇರೆ ಶಕ್ತಿಗಳು ಅಧಿಕಾರವನ್ನು ವಹಿಸಿಕೊಳ್ಳಲು ಸಿದ್ಧವಾಗುವವರೆಗೆ ಈಗಿನ ಶಕ್ತಿಗಳನ್ನು ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ ಎನ್ನುವ ಭಾರತ ಸರ್ಕಾರದ ನಿರ್ಧಾರವನ್ನು ಸರಿಯಾದ ದೃಷ್ಟಿಕೋನಗಳಿಂದ ವಾಸ್ತವಾಂಶಗಳನ್ನು ಕಾಣಲು ಸಿದ್ಧವಾಗಿರುವ ಎಲ್ಲರೂ ಸ್ವೀಕರಿಸತಕ್ಕದ್ದೆಂದು ಒಪ್ಪಬೇಕು. ಬದಲಿ ಶಕ್ತಿಗಳೆಂದರೆ ಸ್ಪಷ್ಟ ವಾಗಿ ಮತದಾರರೇ; ಇದರಿಂದ ಸ್ಪಷ್ಟವಾಗುವ ಮಾತು ದೇಶದ ಸರ್ಕಾರದಲ್ಲಿ ಸೇರಬಹುದಾದ ಹೊಣೆಯ ಪ್ರಮಾಣ ಮತ್ತು ಸ್ವರೂಪವು ಮತದಾರರ ಶಕ್ತಿಯನ್ನು ಅವಲಂಬಿಸಿದೆ ಎನ್ನುವುದು. ಮತ ದಾನದ ಹಕ್ಕಿನ ಈ ಪ್ರಶ್ನೆ ಎಷ್ಟು ಮುಖ್ಯವಾದುದು ಎಂದರೆ ರಾಜಕೀಯ ಅಧಿಕಾರ ಎಷ್ಟರಮಟ್ಟಿಗೆ ವರ್ಗಾವಣೆಯಾಗುತ್ತದೆ ಎನ್ನುವುದು ಪ್ರಶ್ನೆಗೆ ನೀಡುವ ಉತ್ತರ ಒಂದನ್ನೇ ಅವಲಂಬಿಸಿದೆ. ಮತದಾನದ ಹಕ್ಕು ಯಾರಿಗೆ ಎನ್ನುವುದು ಬಹುಮುಖ್ಯವಾದ ಪ್ರಶ್ನೆಯಾಗುತ್ತದೆ. ಈಗ ಈ ಪ್ರಶ್ನೆಯನ್ನು ಉತ್ತರಿಸಿರುವ ರೀತಿಯಲ್ಲಿ ಜವಾಬ್ದಾರಿ ಸರ್ಕಾರದ ಮುಖ್ಯ ಗುರಿಯೇ ಮರೆಯಾಗಿಹೋಗಿದೆ ಎಂದು ಹೇಳಲು ಸಭೆ ಬಯಸುತ್ತದೆ.

ಮತದಾನದ ಹಕ್ಕು ಎಂದರೆ ಒಟ್ಟಿಗೆ ಬದುಕುವುದು ಹೇಗೆ ಎಂಬುದಕ್ಕೆ ಬೇಕಾದ ಆಧಾರವನ್ನು ನಿರ್ಧರಿಸುವ ಹಕ್ಕು. ಮತದಾನದ ಹಕ್ಕು ಎಂದರೆ ಬೇರೇನೂ ಅರ್ಥವಿರಲು ಸಾಧ್ಯವೇ ಇಲ್ಲ. ಮತದಾನದ ಹಕ್ಕಿನ ಅರ್ಥ ಇದಾದರೆ, ಯಾರು ಸಹಯೋಗ ಬದುಕಿನ ಆಧಾರವು ತಮಗೆ ಅನುಕೂಲವಾಗುವ ರೀತಿಯಲ್ಲಿ ತಮಗಿಂತ ಶಕ್ತರು ನಿರ್ಧರಿಸಬಹುದಾದ ಅಪಾಯವನ್ನು ಎದುರಿಸುತ್ತಿದ್ದಾರೊ ಅವರಿಗೆ ಈ ಹಕ್ಕನ್ನು ಕೊಡಬೇಕೆಂದೇ ತರ್ಕಬದ್ಧವಾಗಿ ಆಗುತ್ತದೆ. ಇದು ನಿಜವಾದಲ್ಲಿ ಜವಾಬ್ದಾರಿ ಸರ್ಕಾರದ ಈ ಜರೂರುಗಳೇ ಮತದಾನದ ಹಕ್ಕು ಎನ್ನುವ ಮಾತನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದಲ್ಲಿ, ಮತದಾನದ ಹಕ್ಕು ಎಷ್ಟು ಕೆಳಗಿನವರಿಗೆ ದಕ್ಕಬೇಕೆಂದರೆ ಸಮಾಜದ ಬಡವರೂ ತುಳಿತಕ್ಕೆ ಸಿಕ್ಕವರೂ ಆದ ಅಧಿಕ ಬಹುಸಂಖ್ಯಾತರಿಗೆ ಅದು ಲಭ್ಯವಾಗಬೇಕು. ವಾಸ್ತವವಾಗಿ ಆ ಶಬ್ದದ ನಿಜವಾದ ಅರ್ಥಕ್ಕೆ ಹೊಂದಿಕೊಳ್ಳುವು ದೆಂದರೆ ವಯಸ್ಕರ ಮತದಾನದ ಹಕ್ಕು ಮಾತ್ರ. ಆದರೆ ಶಾಸನ ಸಭೆಗೆ ಮತದಾನದ ಹಕ್ಕು ಪ್ರಾಂತದ ಗ್ರಾಮೀಣ ಪ್ರದೇಶದಲ್ಲಿ ತಾಲ್ಲೂಕು ಸ್ಥಳೀಯ ಮಂಡಲಿಯ ಮತದಾನದ ಹಕ್ಕಿನಂತೆ ಮತ್ತು ನಗರ ಪ್ರದೇಶದಲ್ಲಿ ತಿಂಗಳಿಗೆ ಮೂರು ರೂಪಾಯಿ ಬಾಡಿಗೆ ಕೊಡುವವರಿಗೆ ದಕ್ಕಿದರೆ ಸಭೆಗೆ ತೃಪ್ತಿಯಾಗುತ್ತದೆ. ಹೀಗೆ ಮತದಾನದ ಹಕ್ಕನ್ನು ವಿಸ್ತರಿಸಿದರೆ, ಬುದ್ಧಿ ಇಲ್ಲದ ಬಹುಮಂದಿಯ ಪ್ರವೇಶಕ್ಕೆ ದಾರಿಯಾಗುತ್ತದೆ ಎಂದು ಸರ್ಕಾರ ಬಹು ವೇಳೆ ಭಯಪಡುತ್ತದೆ; ಇದಕ್ಕೆ ಆಧಾರವಿಲ್ಲ. ಹೆಚ್ಚಿನ ಆಸ್ತಿಯೂ ಅಜ್ಞಾನದೊಂದಿಗೆ ಸೇರಿಸಬಹುದು. ದಟ್ಟದಾರಿದ್ರ್ಯವಿದ್ದ ಮಾತ್ರಕ್ಕೆ ತೀಕ್ಷ್ಣ ಬುದ್ಧಿಶಕ್ತಿ ಇರಬಾರದೆಂದೇನೂ ಇಲ್ಲ. ಆಸ್ತಿಯೇ ಬುದ್ಧಿಶಕ್ತಿಯನ್ನು ಮೊಂಡುಮಾಡಬಹುದು. ಬಡತನ ಬುದ್ಧಿಶಕ್ತಿಗೆ ಪ್ರಚೋದನೆ ನೀಡಬಲ್ಲದು. ಹೀಗೆ ಎಷ್ಟೋ ಬಾರಿ ನೀಡಿರುವುದೂ ಉಂಟು. ಆದ್ದರಿಂದ ಅಜ್ಞಾನವನ್ನು ದೂರವಿಡುವುದಕ್ಕಾಗಿ ಸರ್ಕಾರವು ಆಸ್ತಿಯ ಅರ್ಹತೆಗೆ ಅಂಟಿಕೊಂಡಿರುವುದು ಬರಿಯ ಮೂಢನಂಬಿಕೆಯಲ್ಲದೆ ಬೇರೇನೂ ಅಲ್ಲ; ಉಳ್ಳವರು

ಇದನ್ನು ಪೋಷಿಸುತ್ತಾರೆ. ಸರ್ಕಾರವೂ ಬೆಳೆಸುತ್ತದೆ. ಇದರ ಉದ್ದೇಶ ತಮ್ಮ ಸರ್ಕಾರವನ್ನು ರಚಿಸಲು ಸಾಮಾನ್ಯ ಜನಕ್ಕಿರುವ ಹಕ್ಕನ್ನು ಕಿತ್ತುಕೊಳ್ಳುವುದೇ ಆಗಿದೆ.

**೧೩. ಚುನಾವಣೆಯ ವ್ಯವಸ್ಥೆ:** ಸಭೆಯ ಅಭಿಪ್ರಾಯದಲ್ಲಿ ಸಾಮಾನ್ಯ ಮತದಾರ ಕ್ಷೇತ್ರಗಳಲ್ಲಿ ಅನಿರ್ಬಂಧಿತ ಚುನಾವಣೆ ಎನ್ನುವುದನ್ನು ನಿಮ್ನ ವರ್ಗದವರ ಮಟ್ಟಿಗೆ ಯೋಚಿಸುವಂತೆಯೂ ಇಲ್ಲ. ಆದರೆ ಕೋಮುವಾರು ಮತದಾರ ಕ್ಷೇತ್ರಗಳು ಬೇಕೆಂದು ಕೇಳಲು ಸಭೆಗೆ ಇಷ್ಟವಿಲ್ಲ. ಅದರ ಅಭಿಪ್ರಾಯದಲ್ಲಿ ಸಾಮಾನ್ಯ ಮತದಾರ ಕ್ಷೇತ್ರಗಳಲ್ಲಿ ನಿಮ್ನ ವರ್ಗಗಳವರಿಗೆ ಜಾಗಗಳನ್ನು ಮೀಸಲಾಗಿಟ್ಟರೆ ಸಾಕು. ನಿಮ್ನ ವರ್ಗಗಳ ಚುನಾವಣಾ ಅಭ್ಯರ್ಥಿಗಳ ಮಟ್ಟಿಗೆ ನಿವಾಸದ ಅರ್ಹತೆಯನ್ನು ಸಂಪೂರ್ಣವಾಗಿ ಕೈಬಿಟ್ಟು, ಠೇವಣಾತಿಯ ವಿಷಯದಲ್ಲಿ ಭಾಗಶಃ ನಿಯಮವನ್ನು ಸಡಿಲಗೊಳಿಸಬೇಕೆಂದು ಸಭೆ ಒತ್ತಾಯಪೂರ್ವಕವಾಗಿ ಹೇಳಬಯಸುತ್ತದೆ.

**೧೪. ಶಾಸನಸಭೆಯಲ್ಲಿ ಪ್ರಾತಿನಿಧ್ಯ:** ೧೯೧೯ರ ಶಾಸನಸಭೆಯಲ್ಲಿ ನಿಮ್ನ ವರ್ಗಗಳ ಹಕ್ಕನ್ನು ಕಡೆಗಣಿಸಿದುದಕ್ಕೆ ಸಭೆಯು ವಿನಯಪೂರ್ವಕವಾಗಿ ಪ್ರತಿಭಟಿಸುತ್ತದೆ. ನೇರವಾಗಿ ತನ್ನ ನಿಯಂತ್ರಣದಲ್ಲಿರುವ ಅಥವಾ ಪ್ರಾಂತ ಸರ್ಕಾರಗಳಿಗೆ ಮೀಸಲಾಗಿರಿಸಿದ ಮುಖ್ಯ ವಿಷಯಗಳಲ್ಲಿ ಅರ್ಧಕ್ಕೂ ಹೆಚ್ಚಿಗೆ ಕೇಂದ್ರ ಸರ್ಕಾರದ್ದೇ ಪರಮೋಚ್ಚ ಅಧಿಕಾರ. ವರ್ಗಾಯಿಸಿದ ವಿಷಯಗಳ ಮಟ್ಟಿಗೂ ಅದಕ್ಕೆ ಮೇಲುಸ್ತುವಾರಿಯ ಅಧಿಕಾರವಿದೆ. ಆದುದರಿಂದ ಇಷ್ಟು ವಿಶಾಲವಾದ ಅಧಿಕಾರಗಳ ನಿರ್ವಹಣೆಯಲ್ಲಿ ನಿಮ್ನ ವರ್ಗಗಳ ದನಿಗೆ ಅವಕಾಶವಿರಬೇಕೆಂಬುದು ಸ್ಪಷ್ಟ; ಆದುದರಿಂದ ಮುಂಬಯಿ ಪ್ರಾಂತದ ಶಾಸನಸಭೆಗೆ ನಿಮ್ನ ವರ್ಗಗಳವರ ಪ್ರತಿನಿಧಿಗಳಾಗಿ ಮೂವರನ್ನು ಆರಿಸಬೇಕೆಂದು ಸಭೆ ಕೇಳುತ್ತದೆ.

## II. ಭರವಸೆಗಳ ಮೂಲಕ ರಕ್ಷಣೆ

೧೫. ಸಾಕಷ್ಟು ಪ್ರಾತಿನಿಧ್ಯದ ಹಕ್ಕೊತ್ತಾಯದೊಂದಿಗೆ ದೇಶದ ಸಂವಿಧಾನದಲ್ಲಿ ಭರವಸೆ ನೀಡುವ ಅಧಿನಿಯಮಗಳನ್ನು ಸೇರಿಸಿ ಮುಂಬಯಿ ಪ್ರಾಂತದಲ್ಲಿ ನಿಮ್ಮ ವರ್ಗದವರು ಅಲ್ಪಸಂಖ್ಯಾತರಾದುದರಿಂದ ಅವರ ನಾಗರಿಕ ಹಕ್ಕುಗಳನ್ನು ಮೂಲಭೂತ ಹಕ್ಕಾಗಿ ಪರಿಗಣಿಸುವ ಆಶ್ವಾಸನೆಯನ್ನು ಹಕ್ಕೊತ್ತಾಯವಾಗಿ ಕೇಳಬೇಕೆಂದು ಸಭೆ ಭಾವಿಸುತ್ತದೆ. ಈ ಆಶ್ವಾಸನೆಗಳು ನಿಮ್ಮ ವರ್ಗದವರ ಹಿತಾಸಕ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹಕ್ಕುಗಳನ್ನು ಒಳಗೊಳ್ಳಬೇಕು:

(೧) ಪ್ರಾಂತದ ಆದಾಯದಲ್ಲಿ ಮೊದಲ ಆದ್ಯತೆ ಪಟ್ಟಿ ನಿಮ್ಮ ವರ್ಗದವರ ಶಿಕ್ಷಣಕ್ಕಾಗಿ ಇರತಕ್ಕದ್ದು ಮತ್ತು ಶಿಕ್ಷಣಕ್ಕಾಗಿ ನಿಗದಿಯಾಗುವ ಒಟ್ಟು ಮೊತ್ತದಲ್ಲಿ ನ್ಯಾಯವಾದ ಪ್ರಮಾಣವನ್ನು ನಿಮ್ಮ ವರ್ಗದವರ ಪ್ರಯೋಜನಕ್ಕಾಗಿಯೇ ಪ್ರತ್ಯೇಕವಾಗಿ ಇರಿಸತಕ್ಕದ್ದು.

(೨) ಜಾತಿಗೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧವಿಲ್ಲದೆ ಭೂಸೈನ್ಯ, ನೌಕಾಸೈನ್ಯ ಮತ್ತು ಪೋಲೀಸ್ ಇಲಾಖೆಗಳಿಗೆ ನೇಮಕಾತಿ ಪಡೆಯಲು ನಿಮ್ಮ ವರ್ಗದವರ ಹಕ್ಕನ್ನು ಗುರುತಿಸ ತಕ್ಕದ್ದು.

(೩) ಮೂವತ್ತು ವರ್ಷಗಳ ಕಾಲ ಎಲ್ಲ ಸೇವಾ ಇಲಾಖೆಗಳಲ್ಲಿ ಗೆಜೆಟೆಡ್, ನಾನ್ ಗೆಜೆಟೆಡ್‌ನ ಎಲ್ಲ ಸ್ಥಾನಗಳ ನೇಮಕಾತಿಯಲ್ಲಿ ನಿಮ್ಮ ವರ್ಗದವರಿಗೆ ಆದ್ಯತೆ ಇರಬೇಕೆಂಬುದನ್ನು ಗುರುತಿಸ ತಕ್ಕದ್ದು.

(೪) ಪ್ರತಿ ಜಿಲ್ಲೆಗೆ ನಿಮ್ಮ ವರ್ಗದವರಲ್ಲೊಬ್ಬರನ್ನು ವಿಶೇಷ ಪೋಲೀಸ್ ಇನ್ಸ್‌ಪೆಕ್ಟರರನ್ನು ನೇಮಿಸುವ ಹಕ್ಕನ್ನು ಗುರುತಿಸತಕ್ಕದ್ದು.

(೫) ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ (ಮೇಲೆ ಸೂಚಿಸಿದಂತೆ) ಪರಿಣಾಮಕಾರಿಯಾದ ಪ್ರಾತಿನಿಧ್ಯ ಪಡೆಯಲು ನಿಮ್ಮ ವರ್ಗದವರಿಗಿರುವ ಹಕ್ಕನ್ನು ಪ್ರಾಂತ ಸರ್ಕಾರ ಒಪ್ಪಿಕೊಳ್ಳತಕ್ಕದ್ದು.

(೬) ಪ್ರಾಂತ ಸರ್ಕಾರವು ಈ ಹಕ್ಕುಗಳನ್ನು ಉಲ್ಲಂಘಿಸಿದಲ್ಲಿ ಭಾರತ ಸರ್ಕಾರಕ್ಕೆ ಮನವಿ ಮಾಡುವ ನಿಮ್ಮ ವರ್ಗದವರ ಹಕ್ಕನ್ನು ಒಪ್ಪಿಕೊಳ್ಳತಕ್ಕದ್ದು ಮತ್ತು ಈ ವಿಷಯದಲ್ಲಿ ಕಾನೂನಿಗೆ ಅನುಗುಣ ವಾಗಿ ನಡೆದುಕೊಳ್ಳುವಂತೆ ಪ್ರಾಂತ ಸರ್ಕಾರಕ್ಕೆ ಅಪ್ಪಣೆ ಮಾಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ಕೊಡತಕ್ಕದ್ದು.

**೧೬. ಇಂತಹ ಭರವಸೆಗಳಿಗೆ ಸಮರ್ಥನೆ–** ಶಾಸನಸಭೆಯಲ್ಲಿ ನಿಮ್ಮ ವರ್ಗದವರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ನೀಡಿರುವುದರಿಂದ, ಪ್ರಾತಿನಿಧ್ಯವಿಲ್ಲದ ಅಲ್ಪಸಂಖ್ಯಾತ ವರ್ಗವೂ ಇರುವುದಿಲ್ಲ. ಅವರ ಹಕ್ಕುಗಳಿಗೆ ಅಪಾಯವೂ ಇಲ್ಲ ಎಂದು ವಾದಿಸಬಹುದು. ಈ ಆಶ್ವಾಸನೆಗಳ ಅಗತ್ಯವೇನು ಎಂದು ಕೇಳಬಹುದು. ಬಹುಸಂಖ್ಯಾತರ ದಬ್ಬಾಳಿಕೆಯಿಂದ ಅಲ್ಪಸಂಖ್ಯಾತ ವರ್ಗವನ್ನು ರಕ್ಷಿಸಲು ಪ್ರಾತಿನಿಧಿಕ ರೂಪದ ಸರ್ಕಾರಕ್ಕೆ ಇಷ್ಟೊಂದು ಸಾಮರ್ಥ್ಯವಿದೆ ಎನ್ನುವ ವಿಶ್ವಾಸವನ್ನು ಸಭೆ ಒಪ್ಪುವುದಿಲ್ಲ. ಈ ಸಂದರ್ಭದಲ್ಲಿ

ಸಭೆಯು ಜಾನ್ ಸ್ಟೂವರ್ಟ್ ಮಿಲ್‌ನ ಅಭಿಪ್ರಾಯದತ್ತ ಸರ್ಕಾರದ ಗಮನವನ್ನು ಸೆಳೆಯಬಯಸುತ್ತದೆ. ಆತ ಹೇಳುತ್ತಾನೆ, "ಜನರ ಸರ್ಕಾರ ಎನ್ನುವುದು ಕನಸಿನಲ್ಲಿ ಮಾತ್ರ ಕಾಣಲು ಸಾಧ್ಯವಾಗಿದ್ದಾಗ ಅಥವಾ ಅದು ಬಹು ಹಿಂದಿನ ಯಾವುದೋ ಯುಗದಲ್ಲಿದ್ದ ಸರ್ಕಾರವಾಗಿದ್ದಾಗ ಜನತೆ ತನ್ನ ಅಧಿಕಾರಕ್ಕೆ ತಾನೇ ಮಿತಿ ಕಲ್ಪಿಸಿಕೊಳ್ಳಬೇಕಾಗಿಲ್ಲ ಎನ್ನುವುದು ಸ್ವಯಂವೇದ್ಯ ಸತ್ಯ ಎಂದು ಕಾಣಬಹುದು. ಸ್ವಯಮಾಡಳಿತ, ಜನತೆಗೆ ತನ್ನ ಮೇಲೆ ಅಧಿಕಾರ ಇಂತಹ ಪದವೃಂದಗಳು ವಾಸ್ತವಿಕ ಸ್ಥಿತಿಯನ್ನು ತೋರಿಸುವುದಿಲ್ಲ ಎನ್ನುವುದು ಈಗ ಕಾಣಬರುತ್ತಿದೆ. ಅಧಿಕಾರ ಚಲಾಯಿಸುವವರೂ ಅವರ ಅಧಿಕಾರಕ್ಕೆ ಒಳಗಾಗುವರೂ ಅವೇ ಜನರಾಗಿರುವುದಿಲ್ಲ; ಸ್ವಯಮಾಡಳಿತ ಎಂದಾಗ ಪ್ರತಿಯೊಬ್ಬನೂ ತನ್ನನ್ನು ಆಳಿಕೊಳ್ಳುವುದಿಲ್ಲ; ಪ್ರತಿಯೊಬ್ಬನನ್ನೂ ಉಳಿದವರೆಲ್ಲ ಆಳುವುದು. ಅಲ್ಲದೆ, ಜನತೆಯ ಸಂಕಲ್ಪ ಎನ್ನುವುದಕ್ಕೆ ಜನತೆಯಲ್ಲಿ ಬಹುಹೆಚ್ಚಿನ ಸಂಖ್ಯೆಯ ಅಥವಾ ಬಹು ಚಟುವಟಿಕೆಯಿಂದಿರುವ ಭಾಗದ ಸಂಕಲ್ಪ. ತಾವೇ ಬಹುಸಂಖ್ಯಾತರು ಎಂದು ಒಪ್ಪಿಸಿಬಿಡಬಲ್ಲವರ ಸಂಕಲ್ಪ ಎಂದೇ ಆಗುತ್ತದೆ. ಇದರಿಂದ, ಜನತೆಯು ತನ್ನ ಒಂದು ಭಾಗವನ್ನು ತುಳಿಯಲು ಅಪೇಕ್ಷಿಸಬಹುದು. ಬೇರೆ ಯಾವುದೇ ರೀತಿಯ ಅಧಿಕಾರದ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಅಗತ್ಯವಿರುವಂತೆ ಇದರ ವಿಷಯದಲ್ಲೂ ಮುಂಜಾಗ್ರತೆ ಇರಬೇಕಾದುದು ಅಗತ್ಯ. ಆದುದರಿಂದ ಅಧಿಕಾರ ಪಡೆದಿರುವವರು ಸಮುದಾಯಕ್ಕೆ ಎಂದರೆ ಅದರ ಅತ್ಯಂತ ಪ್ರಬಲ ಪಕ್ಷಕ್ಕೆ, ನಿಗದಿಯಾದ ಕ್ರಮದಲ್ಲಿ ಜವಾಬ್ದಾರಿಯಾಗತಕ್ಕದ್ದೆನ್ನುವುದರಿಂದ ಸರ್ಕಾರಕ್ಕೆ ವ್ಯಕ್ತಿಗಳ ಮೇಲಿರುವ ಅಧಿಕಾರದ ಮಿತಿ ತನ್ನ ಪ್ರಾಧಾನ್ಯವನ್ನೇನೂ ಕಳೆದುಕೊಳ್ಳುವುದಿಲ್ಲ. ಈ ಅಭಿಪ್ರಾಯವೂ ಚಿಂತನಶೀಲರಾದವರ ಬುದ್ಧಿಶಕ್ತಿಗೂ ಯುರೋಪಿನ ಸಮಾಜದಲ್ಲಿ ಯಾವ ಪ್ರಮುಖ ವರ್ಗಗಳ ವಾಸ್ತವಿಕ ಅಥವಾ ಕಲ್ಪಿತ ಹಿತಾಸಕ್ತಿಗಳಿಗೆ ಪ್ರಜಾಪ್ರಭುತ್ವವು ವಿರೋಧಿಯಾಗಿದೆಯೋ ಆ ವರ್ಗಗಳ ಪ್ರವೃತ್ತಿಗೂ ಒಂದೇ ರೀತಿಯಲ್ಲಿ ಒಪ್ಪಿಗೆಯಾಗಿದೆ. ಈ ಅಭಿಪ್ರಾಯವು ಯಾವ ಕಷ್ಟವೂ ಇಲ್ಲದೆ ಬೇರುಬಿಟ್ಟಿದೆ; ರಾಜಕೀಯ ಜಿಜ್ಞಾಸೆಗಳ, ಸಮಾಜವು ಎಚ್ಚರಿಕೆ ವಹಿಸಬೇಕಾದ ಕೇಡುಕುಗಳಲ್ಲಿ ಬಹುಸಂಖ್ಯಾತರ ದಬ್ಬಾಳಿಕೆಯನ್ನು ಸಾಮಾನ್ಯವಾಗಿ ಈಗ ಸೇರಿಸುತ್ತಾರೆ."

೧೭. ರಾಷ್ಟ್ರದ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಣೆಗಾಗಿ ಇಂತಹ ಆಶ್ವಾಸನೆಗಳ ಅಗತ್ಯವನ್ನು ಪ್ರಾತಿನಿಧಿಕ ಸರ್ಕಾರ ಕಡೆಗಣಿಸಲಾರದು ಎನ್ನುವುದು ಸ್ಪಷ್ಟವಾಗಿದೆ. ಪ್ರಾತಿನಿಧಿಕ ಸರ್ಕಾರವು ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಒದಗಿಸುವ ಮಾತಿರಲಿ, ಈ ಉದ್ದೇಶಕ್ಕೆ ಅದು ಎಷ್ಟು ಅಸಮರ್ಪಕ ಎಂದರೆ ಆಶ್ವಾಸನೆಗಳ ವ್ಯವಸ್ಥೆಯನ್ನು ಅದರ ಭಾಗವನ್ನಾಗಿ ಮಾಡದೆ ಇಂತಹ ಸರ್ಕಾರವನ್ನು ಸ್ಥಾಪಿಸುವುದು ಅತ್ಯಂತ ಅಪಾಯಕಾರಿಯಾದ ಪ್ರಯೋಗವೆಂದೇ ಪರಿಗಣಿಸಲಾಗುತ್ತಿತ್ತು ಎಂದೇ ಹೇಳಬಹುದು. ಯುದ್ಧಾನಂತರದ ಯುರೋಪಿನಲ್ಲಿ ಇದಕ್ಕೆ ನಿದರ್ಶನಗಳು ಹೇರಳವಾಗಿವೆ. ಮಿತ್ರರ ರಾಷ್ಟ್ರಗಳು ಜಿಕೋಸ್ಲಾವಾಕಿಯಾ, ಆಸ್ಟ್ರಿಯ, ಹಂಗೆರಿ, ರುಮಾನಿಯಾಗಳಿಗೂ ಆದ ಶಾಂತಿ ಒಪ್ಪಂದಗಳಲ್ಲಿ ಮತ್ತು ಮೇಲಿನ ಸೈಲಷಿಯಾಗೆ ಸಂಬಂಧಿಸಿದಂತೆ ಪೋಲೀಷ್ ಜರ್ಮನ್ ಕನ್‌ವೆನ್‌ಷನ್ ಶಾಂತಿ ಕರಾರಿನಲ್ಲಿ ಅಲ್ಪಸಂಖ್ಯಾತರ ಅನುಕೂಲಕ್ಕಾಗಿ ಆಶ್ವಾಸನೆಗಳನ್ನು ಅಳವಡಿಸಲಾಯಿತು. ಅಲ್ಪಸಂಖ್ಯಾತರು ಪ್ರತಿನಿಧಿ ಸರ್ಕಾರವನ್ನು ನೆಚ್ಚುವಂತಿಲ್ಲ. ತಮ್ಮ ಹಕ್ಕುಗಳ ಬಗ್ಗೆ ಆಶ್ವಾಸನೆ ಪಡೆದು ರಕ್ಷಣೆ ಗಳಿಸಿಕೊಳ್ಳಬೇಕೆಂಬ ಸಂಗತಿಗೆ ಇದು ಪ್ರಬಲ ಸಾಕ್ಷಿಗಳಾಗಿವೆ.

೧೮. ರಾಜಕೀಯ ಲೌಕಿಕೀರಣವು ನಮ್ಮ ದೇಶಕ್ಕಿಂತ ಬಹು ಮುಂದೆ ಸಾಗಿರುವ ಯೂರೋಪಿನ ಜನಾಂಗಗಳಲ್ಲೆ ಪ್ರಾತಿನಿಧಿಕ ಸರ್ಕಾರದ ಕಾರ್ಯ ರೀತಿಯು ಇಷ್ಟು ದುರ್ಬಲವಾಗಿದ್ದರೆ ರಾಜಕೀಯವು ಕ್ರಿಯಾಶೀಲ ಮತಶಾಸ್ತ್ರವಲ್ಲದೆ ಬೇರೇನೂ ಅಲ್ಲದಿರುವ ಭಾರತದಲ್ಲಿ ಅದು ಇನ್ನೆಷ್ಟು ದುರ್ಬಲವಾಗಿರಬೇಕು?

ನಿಮ್ನ ವರ್ಗಗಳು ರಕ್ಷಣೆ ಪಡೆಯಬೇಕಾದದ್ದು ಈ ಮತಶಾಸ್ತ್ರದಿಂದಲೇ. ಈ ಮತಶಾಸ್ತ್ರವು ನಿಜವಾದ ಪೌರತ್ವವನ್ನು ಎಷ್ಟರಮಟ್ಟಿಗೆ ನಾಶಮಾಡುತ್ತದೆ ಎನ್ನುವುದನ್ನು ೧೯೧೮ರ ಡಿಸೆಂಬರ್ ೨೧ರಂದು ಸನ್ಮಾನ್ಯ ಸರ್ ಅಲೆಕ್ಸಾಂಡರ್ ಕಾರ್‌ಡ್ಯೂ, ಕೆ.ಸಿ.ಎಸ್.ಐ., ಐ.ಸಿ.ಎಸ್. ಅವರು ಭಾರತ ಸರ್ಕಾರಕ್ಕೆ ಬರೆದ ೧೧೪೮ (ಸುಧಾರಣೆಗಳು) ಸಂಖ್ಯೆಯ ಪತ್ರದಲ್ಲಿನ ಟಿಪ್ಪಣಿಯಲ್ಲಿ ವಿವರಿಸಿರುವಷ್ಟು ಸೊಗಸಾಗಿ ಬೇರೆಲ್ಲೂ ವಿವರಿಸಿಲ್ಲ. ಕೆಳಗಿನ ಉದ್ಧೃತಭಾಗಗಳು ಟಿಪ್ಪಣಿಯಲ್ಲಿವೆ:

"೨. ಪ್ರಜಾಪ್ರಭುತ್ವದ ವಿಚಾರವು ಭಾರತದ ಜನತೆಯ ಈಗಿನ ತತ್ವ ಚಿಂತನೆಗೆ ಅನುಗುಣವಾಗಿ ದೆಯೇ ಎಂದು ಮೊದಲು ಪ್ರಶ್ನಿಸಬಹುದು. ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರದ ಮೂಲತತ್ವ, ಪ್ರತಿವ್ಯಕ್ತಿಯ ಪ್ರಾಮುಖ್ಯತೆಯನ್ನು ಗುರುತಿಸುವುದು ಮತ್ತು ಪ್ರತಿವ್ಯಕ್ತಿಗೂ ಒಂದೇ ಜನ್ಮವಿರುವುದರಿಂದ ಆ ಜನ್ಮದಲ್ಲಿ ಗರಿಷ್ಠ ಬೆಳವಣಿಗೆಗೆ ಸಂಪೂರ್ಣ ಅವಕಾಶವನ್ನು ಕಲ್ಪಿಸಿಕೊಡಬೇಕೆಂಬ ನಂಬಿಕೆ. ಭಾರತದ ಪ್ರಚಲಿತ ತತ್ವ ಚಿಂತನೆಯು ಈ ಎರಡು ಹೇಳಿಕೆಗಳನ್ನು ಒಪ್ಪುವುದಿಲ್ಲ. ಈ ಚಿಂತನೆಯ ಪ್ರಕಾರ, ಈಗಿನ ಬದುಕು ಹಲವು ಜನ್ಮಗಳ ಸರಣಿಯಲ್ಲಿ ಒಂದು; ಪ್ರತಿಯೊಬ್ಬನ ಸ್ಥಾನವನ್ನು ಹಿಂದಿನ ಜನ್ಮದ ಅವನ ಪಾಪ ಪುಣ್ಯಗಳು ನಿರ್ಧರಿಸಿಬಿಟ್ಟಿದೆ; ಆದ್ದರಿಂದ, ಸಾಮಾಜಿಕ ವ್ಯವಸ್ಥೆಯಲ್ಲಿ ಅವನ ಸ್ಥಾನವು ಬದಲಾಯಿಸಲು ಸಾಧ್ಯವಾಗದಂತೆ ನಿರ್ಧಾರವಾಗಿಹೋಗಿದೆ. ಆದ್ದರಿಂದ ಪ್ರಜಾಪ್ರಭುತ್ವದ ಬೇರುಗಳಾದ ವಿಚಾರಗಳು ಭಾರತದಲ್ಲಿ ಸಾವಿರಾರು ವರ್ಷಗಳಿಂದ ಜನತೆಯ ನಂಬಿಕೆಯ ಭಂಡಾರದ ಎಲ್ಲ ವಿಚಾರಗಳಿಗೆ ವಿರುದ್ಧವಾಗಿದೆ ಎಂದು ಅನುಮಾನವಿಲ್ಲದೆ ಹೇಳಿಬಿಡಬಹುದು.

"೩. ಈ ಜನ್ಮದಲ್ಲಿ ಪ್ರತಿ ಮನುಷ್ಯನ ಸ್ಥಾನವನ್ನೂ ಹಿಂದಿನ ಜನ್ಮದಲ್ಲಿ ಆತನು ಮಾಡಿದ ಕಾರ್ಯ ಗಳೇ ನಿರ್ಧರಿಸಿವೆ ಎಂಬ ನಂಬಿಕೆಗೆ ನಿಕಟ ಸಂಬಂಧವಿರುವ ಸಂಸ್ಥೆ ಜಾತಿ. ಇದರ ಪರಿಣಾಮವೆಂದರೆ ಸಾಮಾಜಿಕ ಶ್ರೇಣಿಯಲ್ಲಿ ಪ್ರತಿ ವ್ಯಕ್ತಿಯ ಸ್ಥಾನವನ್ನು ಪಡಿಯಚ್ಚು ಮಾಡಿ ಬದಲಾವಣೆಗೆ ಅವಕಾಶವೇ ಇಲ್ಲದಂತೆ ನಿರ್ಧರಿಸುವುದು ಎಂದರೆ, ಬ್ರಾಹ್ಮಣನಾಗಿ ಹುಟ್ಟಿದವನು ಬ್ರಾಹ್ಮಣನಾಗಿಯೇ ಉಳಿಯಬೇಕು, ಅಸ್ಪೃಶ್ಯನಾಗಿ ಹುಟ್ಟಿದವನು ಅಸ್ಪೃಶ್ಯನಾಗಿಯೇ ಉಳಿಯಬೇಕು. ಇಂತಹ ಪರಿಸ್ಥಿತಿಯಲ್ಲಿ ಅವಕಾಶದ ಸಮಾನತೆ ಸಾಧ್ಯವೇ ಇಲ್ಲ; ಭಾರತದಲ್ಲಿ ಜನಾಭಿಪ್ರಾಯ ಅದನ್ನು ಗುರುತಿಸುವುದೂ ಇಲ್ಲ, ಬಯಸುವುದೂ ಇಲ್ಲ.

"೪. ಜಾತಿಯ ಪಿರಮಿಡ್‌ನ ಅತ್ಯುನ್ನತ ಬಿಂದುವಿನಲ್ಲಿ ಬ್ರಾಹ್ಮಣನಿದ್ದಾನೆ. ದಕ್ಷಿಣ ಭಾರತದಲ್ಲಿ ಯಾದರೂ ಜನಾಂಗೀಯ ವ್ಯತ್ಯಾಸವನ್ನು ಸೂಚಿಸುತ್ತಿದ್ದ ಈ ಜಾತಿಯು ದೀರ್ಘ ಕಾಲಾವಧಿಯಲ್ಲಿ ಇವರ ಎಲ್ಲ ಜಾತಿಗಳ ಮೇಲೆ ತನ್ನ ಪರಮಾಧಿಕಾರವನ್ನು ಸ್ಥಾಪಿಸಿಬಿಟ್ಟಿತು. ಬ್ರಾಹ್ಮಣನ ಮೇಲ್ಮೈಯ ಕೇಳಿಕೆಗೆ ಜನಾಂಗ ಮತ್ತು ಬುದ್ಧಿಶಕ್ತಿಗಳಷ್ಟೇ ಅಲ್ಲದೆ, ಧರ್ಮದ ಅಪ್ಪಣೆಗಳೂ ಆಧಾರವಾಗಿವೆ. ವಿದ್ಯಾಭ್ಯಾಸಕ್ಕೆ ಹಣ ಕೊಟ್ಟು ಅವನ ಹೆಣ್ಣು ಮಕ್ಕಳ ಮದುವೆಗೆ ಹಣ ನೀಡಿ, ಅವನಿಗೆ ಭೂಮಿ ದಾನ ಮಾಡಿ, ಪುಣ್ಯ ಸಂಪಾದಿಸಬಹುದೆಂಬ ನಂಬಿಕೆ ಭಾರತದಲ್ಲಿ ಶತಮಾನಗಳಿಂದ ಬೇರುಬಿಟ್ಟಿದೆ. ಬ್ರಾಹ್ಮಣರಿಗೆ ಅಸಂಖ್ಯಾತ ವಿಶಿಷ್ಟ ಹಕ್ಕುಗಳಿದ್ದವು.

"೬. ಬದುಕಿನ ಹಲವಾರು ಕ್ಷೇತ್ರಗಳಲ್ಲಿ ಇಂತಹ ಪ್ರಾಧಾನ್ಯವಿದ್ದುದರಿಂದ ಬ್ರಾಹ್ಮಣನು ರಾಜಕೀಯ ವನ್ನು ಸುಲಭವಾಗಿ ಹತೋಟಿಗೆ ತೆಗೆದುಕೊಂಡದ್ದು ಆಶ್ಚರ್ಯವಲ್ಲ... ದೊಡ್ಡದಾದ ಅಸ್ಪೃಶ್ಯ ಜಾತಿಯ ಅಥವಾ ಕ್ರೈಸ್ತ ಜಾತಿಯ ಒಬ್ಬರೇ ಒಬ್ಬರೂ ಈ ಮತದಾನ ಕ್ಷೇತ್ರಗಳಿಂದ ಆರಿಸಿ ಬಂದಿಲ್ಲ, ಆರಿಸಿ ಬರುವ ಅವಕಾಶವೂ ಇಲ್ಲ. ಇತರ ವರ್ಗಗಳಿಗೆ ತಕ್ಕಷ್ಟು ಪ್ರಾತಿನಿಧ್ಯವನ್ನು ಗಳಿಸಿಕೊಡಲು ವಿಶೇಷ ಕ್ರಮಗಳನ್ನು

ಕೈಗೊಳ್ಳದೆ ಹೋದಲ್ಲಿ ಹಿಂದಿನಂತೆಯೇ ಭವಿಷ್ಯದಲ್ಲಿ ರಾಜಕೀಯ ಯಂತ್ರವು ಬ್ರಾಹ್ಮಣರ ನಿಯಂತ್ರಣ ದಲ್ಲಿಯೇ ಉಳಿಯುತ್ತದೆ ಎಂದು ಅನುಭವವು ಸೂಚಿಸುತ್ತದೆ.

"೮. ಬ್ರಾಹ್ಮಣನ ನಂತರ, ಬಹು ದೂರದ ಅಂತರದಲ್ಲಿ ಹಿಂದೂ ಜಾತಿಗಳ ಒಂದು ದೊಡ್ಡ ಗುಂಪೇ ಬರುತ್ತದೆ– ಕೆಲವು ಸ್ವಲ್ಪ ಮೇಲ್ವರ್ಗದವು, ಕೆಲವು ಸ್ವಲ್ಪ ಕೆಳವರ್ಗದವು. ಆದರೆ, ಎಲ್ಲರನ್ನೂ ಬ್ರಾಹ್ಮಣೇತರ ರೆಂದು ಕರೆಯಲಾಗುತ್ತದೆ. ಇವೆಲ್ಲ ಒಂದೇ ರೀತಿಯಲ್ಲಿ ಒಬ್ಬರಿಂದೊಬ್ಬರು ದೂರವಿರುವವರು. ಪರಸ್ಪರ ವಿರೋಧಭಾವದವರು. ಈ ಜಾತಿಯವರುಗಳಲ್ಲಿ ಒಬ್ಬನೇನಾದರೂ ಪ್ರಭಾವಶಾಲಿ ಸ್ಥಾನಕ್ಕೆ ಬಂದ ನೆಂದರೆ ತನ್ನ ಕೈಯಲ್ಲಿರುವ ಎಲ್ಲ ಸ್ಥಾನಗಳನ್ನೂ ತನ್ನ ಜಾತಿಯವರಿಂದಲೇ ತುಂಬಿಬಿಡುತ್ತಾನೆನ್ನುವ ಕುಖ್ಯಾತಿ ಇದೆ. ಸರ್ಕಾರದ ಖಾಯಂ ಆಜ್ಞೆಗಳು ಈ ಪ್ರಕೃತಿಯನ್ನು ಗುರುತಿಸುತ್ತದೆ ಮತ್ತು ಅದನ್ನು ತಡೆಗಟ್ಟಲು ಅವುಗಳಲ್ಲಿ ಸೂಚನೆಗಳಿವೆ. ಸಂಯುಕ್ತ ವರದಿಗೂ ಇದು ತಿಳಿದಿರಲ್ಲವೆಂದಲ್ಲ, ಏಕೆಂದರೆ ಅದು "ಭಾರತೀಯ ಸಮಾಜದುದ್ದಕ್ಕೂ ಧರ್ಮ, ಜನಾಂಗ ಮತ್ತು ಜಾತಿಗಳ ಬಿರುಕು ಹಬ್ಬಿದೆ. ಇದು ಆ ಸಮಾಜದ ಐಕ್ಯತೆಗೆಂದು ಅಪಾಯ" ಎಂದು ಹೇಳುತ್ತದೆ. ಈ ಜಾತಿಭೇದಗಳು ಭಾರತೀಯ ಸಮಾಜದ ಐಕ್ಯತೆಗೆ ಅಪಾಯ ತರುವಂಥದ್ದೇ ಅಲ್ಲ– ಅಂತಹ ಐಕ್ಯತೆಯೇ ಸಾಧ್ಯವಿಲ್ಲದಂತೆ ಮಾಡುತ್ತದೆ.

"೯. ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸವರ್ಣೀಯರ ಕೆಳಗೆ ಬರುತ್ತಾರೆ. ಕೆಳಜಾತಿಯವರು ಅಥವಾ ಇನ್ನೂ ನಿಕೃಷ್ಟವಾಗಿ ಹೇಳುವುದಾದರೆ, ಜಾತಿಯೇ ಇಲ್ಲದವರು. ಈ ಪ್ರಾಂತದಲ್ಲಿ (ಎಂದರೆ ಮದರಾಸು) ಅವರ ಸಂಖ್ಯೆ ಸುಮಾರು ಒಂದು ಕೋಟಿ. ಅನುಕೂಲಕ್ಕಾಗಿ ಅವರನ್ನು ಪಂಚಮರು ಅಥವಾ ಅಸ್ಪೃಶ್ಯರು ಎಂದು ಕರೆಯಬಹುದು. ಇವರು ಕೆಳಗಿನ ಜಾತಿಯವರು ಎಂದು ಪರಿಗಣಿಸುವುದಷ್ಟೇ ಅಲ್ಲ, ಅವರು ಎದುರಿಗಿದ್ದರೇ ಮೈಲಿಗೆ. ಇದನ್ನು ತೊಡೆದುಕೊಳ್ಳಲು ಧಾರ್ಮಿಕ ವಿಧಿಗಳು ಅಗತ್ಯ ಎಂದು ಭಾವಿಸಲಾಗುತ್ತದೆ.

"೧೩. ಅಕ್ಷರಜ್ಞಾನವಿಲ್ಲದ, ಎಲ್ಲರಿಗಿಂತ ಮೇಲೆ ಬ್ರಾಹ್ಮಣ, ಮಧ್ಯದಲ್ಲಿ ಹಲವಾರು ಬ್ರಾಹ್ಮಣೇತರ ಜಾತಿಗಳು, ಇಬ್ಬರಿಂದಲೂ ತುಳಿತಕ್ಕೆ ಒಳಗಾಗಬಹುದಾದ ಕೆಳಜಾತಿಗಳವರು– ಇಂತಹ ಕಟ್ಟುನಿಟ್ಟಾದ ಜಾತಿಗಳಲ್ಲಿ ವಿಭಾಗವಾದ ಇಂತಹ ಸಮಾಜದಲ್ಲಿ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಸಂಯುಕ್ತ ವರದಿಯನ್ನು ಬರೆದವರು ಈ ಕಷ್ಟವನ್ನು ಅರ್ಥ ಮಾಡಿಕೊಂಡಂತೆ ಕಾಣು ವುದಿಲ್ಲ. ನಿಸ್ಸಂಶಯವಾಗಿಯೂ ಯಾವುದೇ ಸುಧಾರಣೆಯ ಯೋಜನೆಯಲ್ಲಿ ಮೊದಲ ಅಗತ್ಯ ಪ್ರಜೆ ಗಳೇ ಮೂಕ ಜನತೆಗೆ ಒಳ್ಳೆಯ ಆಡಳಿತ ದೊರೆಯುವಂತೆ ಸಾಕಷ್ಟು ರಕ್ಷಣೆಯನ್ನು ಒದಗಿಸುವುದು."

೧೯. ಪ್ರಚಲಿತ ಸ್ಥಿತಿಯ ಈ ವರ್ಣನೆ ಸರಿಯಾಗಿದ್ದಲ್ಲಿ ತಮ್ಮ ಹಕ್ಕುಗಳ ಬಗೆಗೆ ಆಶ್ವಾಸನೆಗಳನ್ನು ಪಡೆಯಲು ನಿಮ್ಮ ವರ್ಗದವರಿಗಿಂತ ಯೂರೋಪಿನ ಅಲ್ಪಸಂಖ್ಯಾತರು ಹೆಚ್ಚು ಅರ್ಹರೇನೂ ಅಲ್ಲ. ಸನ್ನಿವೇಶದ ಒತ್ತಡದಿಂದಾಗಿ ಪ್ರಪಂಚದಲ್ಲಿ ಅನೇಕರು ಕೆಳಕ್ಕೆ ಬಿದ್ದಿದ್ದಾರೆ. ಆದರೆ, ಬಿದ್ದನಂತರ ಅವರಿಗೆ ಮೇಲೇಳುವ ಸ್ವಾತಂತ್ರ್ಯವುಂಟು. ಆದರೆ, ತಮ್ಮ ದೇಶದ ಜನತೆಯ ಅಧಿಕ ಸಂಖ್ಯೆಯವರ ಧಾರ್ಮಿಕ ವಿಚಾರಗಳಿಗೆ ಅವರ ಉತ್ಕರ್ಷವು ವಿರೋಧಿಯಾಗಿದೆ ಎನ್ನುವ ಕಾರಣದಿಂದ ಕೆಳಗೆ ಬಿದ್ದೇ ಇರಬೇಕಾದ ಜನಾಂಗದ ಒಂದೇ ಒಂದು ನಿದರ್ಶನ ಎಂದರೆ ನಿಮ್ಮ ವರ್ಗಗಳವರದು.

ಹಲವಾರು ಶಾಸನಸಭೆಗಳು ನಿಮ್ಮ ವರ್ಗದವರಿಗೆ ಬಾವಿಗಳ, ಆಸ್ಪತ್ರೆಗಳ ಮತ್ತು ಧರ್ಮ ಶಾಲೆಗಳ ಬಳಕೆಯನ್ನು ಸಾಧ್ಯ ಮಾಡುವಂತೆ ಮಾಡಿದ ನಿರ್ಣಯಗಳು. ಶಿಕ್ಷಣ ಮಂತ್ರಿಗಳು ನಿಮ್ಮ ವರ್ಗದವರ ಮಕ್ಕಳನ್ನು ಇತರ ಮಕ್ಕಳೊಂದಿಗೆ ಶಾಲೆಗಳಿಗೆ ಸೇರಿಸಿಕೊಳ್ಳಬೇಕೆಂದು ಕಳುಹಿಸಿರುವ ಸುತ್ತೋಲೆಗಳು– ಇವನ್ನು ದೊಡ್ಡದನ್ನಾಗಿ ಮಾಡಿ ಕೆಲವರು ಮಡಿಮನ್ ಆಯೋಗದ ಮುಂದೆ ಮಾತನಾಡಿದರು. ಆದರೆ

ಈ ಹೇಳಿಕೆಗೆ ಸೇರಿಸಿರುವ ಅನುಬಂಧವನ್ನು 'ಎ'ಯನ್ನು ಆಯೋಗವು ಪರಿಶೀಲಿಸಿದರೆ ಇಂತಹ ನಿರ್ಣಯಗಳು ಮತ್ತು ಸುತ್ತೋಲೆಗಳು ಒಂದು ಅಣಕವಷ್ಟೇ ಎನ್ನುವುದು ಸ್ಪಷ್ಟವಾಗುತ್ತದೆ. ದೇಶದ ಹಲವಾರು ವೃತ್ತ ಪತ್ರಿಕೆಗಳು ಆಗಾಗ ವರದಿ ಮಾಡಿದ ಘಟನೆಗಳು (೧ರಿಂದ ೧೦ರವರೆಗಿನ ಐಟಂಗಳು) ತೋರಿಸಿ ಕೊಡುವಂತೆ ನಿಮ್ಮ ವರ್ಗದವರನ್ನು ಬಹುಸಂಖ್ಯಾತರು ಹೇಗೆ ಕಾಣುತ್ತಾರೆ ಎನ್ನುವುದನ್ನು ಅದು ಸ್ಪಷ್ಟ ಮಾಡುತ್ತದೆ. ಈ ವಾರ್ತಾ ವರದಿಗಳನ್ನು ಪರಿಶೀಲಿಸಿದರೆ ನಿಮ್ಮ ವರ್ಗದವರು ಭೂಸೈನ್ಯ, ನೌಕಾಪಡೆ ಮತ್ತು ಪೋಲೀಸ್ ದಳಗಳನ್ನು ಪ್ರವೇಶಿಸುವಂತಿಲ್ಲ. ಏಕೆಂದರೆ, ಹೀಗೆ ಅವರಿಗೆ ಕೆಲಸ ಕೊಡುವುದು ಬಹುಸಂಖ್ಯಾತರ ಧಾರ್ಮಿಕ ಭಾವನೆಗಳಿಗೆ ವಿರುದ್ಧವಾಗಿದೆ ಎನ್ನುವುದು ಅರ್ಥವಾಗುತ್ತದೆ (ಎಂಟನೆಯ ಐಟಂ). ಅವರ ಪ್ರವೇಶವು ಬಹುಸಂಖ್ಯಾತರ ಧಾರ್ಮಿಕ ಭಾವನೆಗಳಿಗೆ ವಿರುದ್ಧವಾಗಿದೆ. ಆದುದರಿಂದ ಅವರು ಶಾಲೆಗಳನ್ನು ಸೇರುವಂತಿಲ್ಲ (೧೨ನೆಯ ಐಟಂ). ಅವರು ಸರ್ಕಾರಿ ಆಸ್ಪತ್ರೆಗಳ ಸೌಲಭ್ಯವನ್ನು ಪಡೆದುಕೊಳ್ಳುವಂತಿಲ್ಲ. ಏಕೆಂದರೆ, ಅವರು ತಮಗಾಗಲಿ ತಮ್ಮ ಆಸ್ಪತ್ರೆಗಳಿಗಾಗಲಿ ಮೈಲಿಗೆಯನ್ನುಂಟು ಮಾಡಲು ವೈದ್ಯರು ಅವಕಾಶ ಕೊಡುವುದಿಲ್ಲ (೨ ಮತ್ತು ೫ನೆಯ ಐಟಂ). ಅವರು ಇನ್ನೂ ಸ್ವಚ್ಛವಾದ, ಮೇಲ್ಮಟ್ಟದ ಬದುಕನ್ನು ಸಾಗಿಸುವಂತಿಲ್ಲ. ಏಕೆಂದರೆ ಅವರಿಗೆ ವಿಧಿಸಿದ ಸ್ಥಾನವನ್ನು ಮೀರುವ ರೀತಿಯಲ್ಲಿ ಬದುಕುವುದು ಬಹುಸಂಖ್ಯಾತರ ಧಾರ್ಮಿಕ ವಿಚಾರಗಳಿಗೆ ವಿರುದ್ಧವಾಗಿದೆ (೧ನೆಯ ಮತ್ತು ೬ನೆಯ ಐಟಂ). ನಿಮ್ಮ ವರ್ಗದವರ ವಿರುದ್ಧ ಸಾಮಾಜಿಕ ಕಟ್ಟಳೆ ಎಷ್ಟು ಕಟ್ಟುನಿಟ್ಟಾಗಿದೆ ಎಂದರೆ ನಿಮ್ಮ ವರ್ಗದವರು ತಮ್ಮ ಪ್ರಾಥಮಿಕ ಪೌರಹಕ್ಕನ್ನು ಉಪಯೋಗಿಸುವ ಪ್ರಯತ್ನವನ್ನು ಮಾಡಿದರೂ ಅಧಿಕ ಸಂಖ್ಯಾತರ ಚರಿತ್ರೆಯಲ್ಲಿಯೇ ಅತ್ಯಂತ ಕೀಳು ರೂಪದ ಸಾಮಾಜಿಕ ದಬ್ಬಾಳಿಕೆಯಲ್ಲಿಯೇ ಅಂತ್ಯವಾಗುತ್ತದೆ. (೪, ೭ ಮತ್ತು ೧೧ನೆ ಐಟಂ.) ಸಮಾಜವೇ ಕ್ರೂರ ಪ್ರಭುವಾದರೆ ತನ್ನ ಅಧಿಕಾರಗಳ ಮೂಲಕ ಮಾಡುವ ಕೃತ್ಯಗಳಿಗಷ್ಟೇ ಅದರ ದಬ್ಬಾಳಿಕೆ ಮುಗಿಯುವುದಿಲ್ಲ. ತಪ್ಪಿಸಿಕೊಳ್ಳುವ ಮಾರ್ಗಗಳೂ ಕಡಿಮೆಯಾಗುತ್ತದೆ. ಈ ದಬ್ಬಾಳಿಕೆ ಬದುಕಿನ ವಿವರಗಳಿಗೂ ಆಳವಾಗಿ ಇಳಿಯುತ್ತದೆ. ಆತ್ಮವನ್ನೇ ದಾಸನನ್ನಾಗಿ ಮಾಡಿಬಿಡುತ್ತದೆ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಸಾಮಾನ್ಯವಾಗಿ ಇಂತಹ ದಬ್ಬಾಳಿಕೆಯಿಂದ ರಕ್ಷಣೆ ದೊರಕುವುದು ಪೋಲೀಸ್ ಪಡೆಯಿಂದ. ಆದರೆ ದುರದೃಷ್ಟದಿಂದ, ನಿಮ್ಮ ವರ್ಗದವರು ಒಂದು ಕಡೆ ಮತ್ತು ಸವರ್ಣೀಯ ಹಿಂದೂಗಳು ಮತ್ತೊಂದು ಕಡೆ ಇರುವ ಯಾವುದೇ ಘರ್ಷಣೆಯಲ್ಲಿ ಯಾವಾಗಲೂ ಪೋಲೀಸ್ ದಳ ದಬ್ಬಾಳಿಕೆ ನಡೆಸುವ ಬಹುಸಂಖ್ಯಾತರೊಡನೆಯೇ ಇರುತ್ತದೆ (೧೧ನೆ ಐಟಂ). ಇದಕ್ಕೆ ಕಾರಣವೆಂದರೆ, ನಿಮ್ಮ ವರ್ಗಗಳವರಿಗೆ ಪೋಲೀಸ್ ದಳದಲ್ಲಾಗಲೀ ನ್ಯಾಯಾಧೀಶ ಸಮೂಹದಲ್ಲಾಗಲಿ ಯಾವುದೇ ಸ್ಥಾನವಿಲ್ಲ.

೨೦. ಇದೆಲ್ಲವನ್ನು ಗಮನಿಸಿದಾಗ, ಕೆಲವು ಶಾಸನಸಭೆಗಳು ನಿಮ್ಮ ವರ್ಗಗಳ ಪರವಾಗಿ ನಿರ್ಣಯಗಳನ್ನು ಮಾಡಿದೆ. ಕೆಲವರು ಮಂತ್ರಿಗಳು ಸುತ್ತೋಲೆಗಳನ್ನು ಕಳುಹಿಸಿದ್ದಾರೆ ಎಂದ ಮಾತ್ರಕ್ಕೆ ನಿಮ್ಮ ವರ್ಗದವರ ಹಿತಾಸಕ್ತಿಗಳು ಅವರ ದೇಶಬಾಂಧವರ ಕೈಯಲ್ಲಿ ಸುರಕ್ಷಿತವಾಗಿರುತ್ತವೆ ಎಂದು ಅವರನ್ನು ನಂಬಿಸುವುದು ಅನ್ಯಾಯವಾಗುತ್ತದೆ. ಬಹುಸಂಖ್ಯಾತ ಹಿಂದೂಗಳ ನಡತೆಯ ಅತ್ಯುತ್ತಮ ನಿದರ್ಶನಗಳಿಂದ ಅವರ ಬಗೆಗೆ ಉತ್ತಮ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದರ ವಿರುದ್ಧ ಸಭೆಯು ಆಯೋಗಕ್ಕೆ ಎಚ್ಚರಿಕೆಯನ್ನು ನೀಡಲು ಬಯಸುತ್ತದೆ. ಒಂದು ಕಡೆ ಅಧಿಕಾರದ ಪ್ರೀತಿಯ ಬಳಕೆ, ಮತ್ತೊಂದು ಕಡೆ ಪ್ರೀತಿಯ ವಿಧೇಯತೆ, ಶ್ರೇಷ್ಠ ವಿವೇಕವು ಆಶ್ರಿತರಿಗೆ ಅತ್ಯಂತ ಉಪಕಾರವಾಗುವಂತೆ ಎಲ್ಲವನ್ನೂ ನಿರ್ದೇಶಿಸುವುದು– ಇಂತಹ ವರ್ಣನೆಗಳು ಓದಲು ಮಾತ್ರ ಚೆನ್ನ.

ನಿಮ್ನ ವರ್ಗಗಳವರಲ್ಲಿ ಯಾರೇ ಆದರೂ ಹಿಂದೂ ಸಮಾಜದಲ್ಲಿ ಒಳ್ಳೆಯವರು ಇಲ್ಲವೆ ಇಲ್ಲ ಎಂದರೆ ಮಾತ್ರ ಇಂತಹ ಚಿತ್ರಗಳು ಪ್ರಸ್ತುತವಾಗುತ್ತವೆ. ಆದರೆ, ಒಳ್ಳೆಯ ಹಿಂದೂವಿನ ಆಡಳಿತದಲ್ಲಿ ಎಲ್ಲೆಡೆ ಬಹು ಸುಖವಿರುತ್ತದೆ ಎನ್ನುವುದರಲ್ಲಿ ನಿಮ್ನ ವರ್ಗದ ಯಾರಿಗೂ ಸಂದೇಹವಿಲ್ಲ. ಆದರೆ, ವಾಸ್ತವಾಂಶ ಎಂದರೆ, ಕಾನೂನುಗಳೂ, ಸಂಸ್ಥೆಗಳೂ ದುಷ್ಟರನ್ನು ಗಮನದಲ್ಲಿಟ್ಟುಕೊಳ್ಳಬೇಕಲ್ಲದೆ ಸಜ್ಜನರನ್ನಲ್ಲ. ಈ ದೃಷ್ಟಿಯಿಂದ ಕೆಲವು ಆಶ್ವಾಸನೆಗಳ ಅಧಿನಿಯಮಗಳನ್ನು ಸೇರಿಸಿ ಅಲ್ಪಸಂಖ್ಯಾತರಿಗೆ ಅಗತ್ಯವಾದ ರಕ್ಷಣೆಯನ್ನು ಒದಗಿಸುವುದು, ದಬ್ಬಾಳಿಕೆಯ ಪ್ರವೃತ್ತಿಯ ಬಹುಸಂಖ್ಯಾತರಲ್ಲಿ, ಅಲ್ಪಸಂಖ್ಯಾತರಲ್ಲಿ ಸಹಾನುಭೂತಿ ಇರುವ ಕೆಲವು ಸಜ್ಜನರಿದ್ದಾರೆ ಎನ್ನುವ ಕಾಲ್ಪನಿಕ ಕಾರಣಕ್ಕಾಗಿ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡದಿರುವುದಕ್ಕಿಂತ ಕ್ಷೇಮಕರ. ನಿಮ್ನ ವರ್ಗದವರನ್ನು ಬಿಟ್ಟು ಉಳಿದವರಿಗೆ ಇಂತಹ ಆಶ್ವಾಸನೆಗಳು ಅನಗತ್ಯ ಎಂದು ತೋರಬಹುದು; ಆದರೆ, ನಿಮ್ನ ವರ್ಗದವರ ದೃಷ್ಟಿಯಲ್ಲಿ ಇದು ಅಗತ್ಯವಾದ ರಕ್ಷಣೆ. ಸುಧಾರಣೆಗಳ ವಿಷಯದಲ್ಲಿ ನಿಮ್ನ ವರ್ಗಗಳವರಲ್ಲಿ ಎಷ್ಟೊಂದು ಭೀತಿ ಇದೆ ಎಂದರೆ, ಅವರು ಪ್ರಾರಂಭದಿಂದ ಅವುಗಳನ್ನು ಕಾರ್ಯರೂಪಕ್ಕೆ ತರುವುದನ್ನು ವಿರೋಧಿಸುತ್ತಲೇ ಇದ್ದಾರೆ. ಸುಧಾರಣೆಗಳ ವಿರುದ್ಧ ಅವರ ಭಾವನೆ ಎಷ್ಟು ತೀವ್ರವಾಗಿದೆ ಎಂದರೆ ಮಿ. ಮಾಂಟೆಗೊ ಅವರಿಗೆ ಅರ್ಪಿಸಿದ ಒಂದು ಬಿನ್ನವತ್ತಳೆಯಲ್ಲಿ, "ಬ್ರಿಟಿಷರ ಕೈಯಿಂದ ಉತ್ತಮ ಜಾತಿಯವರೆನ್ನಿಸಿಕೊಂಡ ಹಿಂದೂಗಳಿಗೆ ಈ ದೇಶದ ಅಧಿಕಾರದ ಕೇಂದ್ರವನ್ನು ವಹಿಸಿಕೊಡುವ ಯಾವುದೇ ಪ್ರಯತ್ನದ ವಿರುದ್ಧ ನಮ್ಮ ರಕ್ತದ ಕಡೆಯ ತೊಟ್ಟು ಇರುವತನಕ ಹೋರಾಡುತ್ತೇವೆ" ಎಂದು ನಿಮ್ನ ವರ್ಗಗಳವರು ಘೋಷಿಸಿದರು. ಆಶ್ವಾಸನೆಗಳ ವ್ಯವಸ್ಥೆಯಂತೆ ಬೇರಾವುದೂ ಈ ಭಯವನ್ನು ಹೋಗಲಾಡಿಸಲಾರದು. ಸರ್ಕಾರವು ವಿಶ್ವಾಸದ ಆಧಾರ ಮೇಲಲ್ಲದೆ ತರ್ಕಬದ್ಧತೆಯ ಮೇಲೆ ನಿಂತಿರುವುದಿಲ್ಲ. ನಿಮ್ನ ವರ್ಗಗಳವರಿಗೆ ಹೊಸ ಸಂವಿಧಾನದಲ್ಲಿ ವಿಶ್ವಾಸವಿಲ್ಲದಿದ್ದರೆ, ಇಲ್ಲಿ ಕೇಳಿರುವ ರಿಯಾಯಿತಿಗಳನ್ನು ನೀಡಿ ಆ ವಿಶ್ವಾಸವನ್ನು ಪಡೆದುಕೊಳ್ಳಲು ಸಾಧ್ಯವಿದ್ದರೆ ಹಾಗೆ ಮಾಡುವುದೇ ಮುತ್ಸದ್ಧಿತನ.

# ಅನುಬಂಧ ಎ

## ಅಂಶ–೧

(೧೯೨೮ ಫೆಬ್ರವರಿ ೮ರ 'ಟೈಮ್ಸ್ ಆಫ್ ಇಂಡಿಯ'ದಿಂದ)

ಮಹಾಮಹೋಪಾಧ್ಯಾಯ ಪಂಡಿತ ಅನಂತಕೃಷ್ಣ ಶಾಸ್ತ್ರಿಯವರು (ಕಲ್ಕತ್ತ ವಿಶ್ವವಿದ್ಯಾನಿಲಯದ ಪ್ರೊಫೆಸರು) ಕಳೆದ ತಿಂಗಳು ಸ್ಥಳೀಯ ನರನಾರಾಯಣ ದೇವಾಲಯದಲ್ಲಿ ಸನಾತನೀ ಅಗರವಾಲ ಮಾರ್ವಾಡಿಗಳ ಸಭೆಯಲ್ಲಿ ಮಾಡಿದ ಭಾಷಣವನ್ನು ಭಾರತದ ಸಾಮಾಜಿಕ ಸುಧಾರಣೆ ತೀವ್ರಗತಿಯ ಮುನ್ನಡೆಯಲ್ಲಿ ಒಂದು ಹೆಗ್ಗುರುತಾಗಿ ಅದಕ್ಕೆ ಬರಬಾರದ ಅವಜ್ಞತೆಯಿಂದ ಉಳಿಸಲು ಅರ್ಹವಾದದ್ದು. ಭಾಷಣದ ವಿಷಯ "ಪತಿತರ ಉದ್ಧಾರ ಮಾರ್ಗ" ಮುಂಬಯಿಯ ಹೊಸ ವೈಷ್ಣವ ದೇವಾಲಯದ ಶ್ರೀ ಜಗದ್ಗುರು ಅನಂತಾಚಾರ್ಯ ಮಹಾರಾಜರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು. ಶಾಸ್ತ್ರಗಳಿಂದ ಭಾಗಗಳನ್ನು ಉದ್ಧರಿಸಿ ಉಪನ್ಯಾಸಕರು ಜಾತಿಗಳು ಅನಾದಿಕಾಲದಿಂದಿವೆ. ಅವು ಎಂದೂ ಇರತಕ್ಕವೇ ಎಂದು ಸ್ಥಾಪಿಸಿದರು. ಅಂತ್ಯಜರನ್ನು ಮೇಲೆತ್ತುವ ಮಾತನ್ನಾಡುವವರು ಮಾತುಗಾರರಷ್ಟೇ, ವಾಸ್ತವವಾಗಿ ಅವರನ್ನು ನಾಲ್ಕು ವರ್ಗಗಳಲ್ಲಿ ಯಾವುದಕ್ಕಾದರೂ ಸೇರಿಸಿಕೊಳ್ಳುವ ಅವರ ಈಗಿನ ಸಾಮಾಜಿಕ ಸ್ಥಾನದಿಂದ ಹೊರಕ್ಕೆ ತರುವ ದಾರಿಯೇ ಇಲ್ಲ ಎಂದ ಅವರು ಮುಂದುವರಿದು ಹೇಳಿದರು.

ಆಚಾರವಂತರ ಔದಾರ್ಯ

"ಉದ್ಧರಿಸಲು ಸಾಧ್ಯವೆ ಇಲ್ಲದ ಪತಿತ"ರನ್ನು ಮೇಲೆತ್ತಲು ವಿದ್ವಾಂಸರಾದ ಉಪನ್ಯಾಸಕರು ಒಂದೇ ದಾರಿಯನ್ನು ಸೂಚಿಸಿದರು. ಅದೇಂದರೆ ಈಗ ವಿವೇಚನೆಯಾಗಲಿ, ಆಚಾರವಾಗಲಿ ಇಲ್ಲದ ಸವರ್ಣೀಯರು ಆಕ್ರಮಿಸಿ ಕೊಂಡಿರುವ, ಪತಿತರು ಬಿಟ್ಟುಕೊಡಲು ಸಾಧ್ಯವೇ ಇಲ್ಲದ ವೃತ್ತಿಗಳಲ್ಲಿ ಕೆಲವನ್ನು ಉದಾರವಾಗಿ ಅವರಿಗೇ ಮತ್ತೆ ಬಿಟ್ಟುಕೊಡುವುದು. ಮಹಾ ಮಹೋಪಾಧ್ಯಾಯರು ಹೀಗೆ ಅಪ್ಪಣೆ ಕೊಡಿಸಿದರು. "ಈ ಇಪ್ಪತ್ತನೆಯ ಶತಮಾನದಲ್ಲಿ ಜನರು ಬೆಳಿಗ್ಗೆ ಎದ್ದವರು ತಮ್ಮ ನಿಯತ ಧಾರ್ಮಿಕ ವಿಧಿಗಳಲ್ಲಿ ತೊಡಗುವುದನ್ನು ಬಿಟ್ಟು ತಮ್ಮ ಬಹು ಬೆಲೆ ಬಾಳುವ ಬೂಟುಗಳನ್ನು ಸ್ವಚ್ಛಗೊಳಿಸಲು ಕುಳಿತುಕೊಳ್ಳುತ್ತಾರೆ. ಅನಂತರ ಕ್ಷೌರ ಮಾಡಿಕೊಳ್ಳಲು ಕುಳಿತುಕೊಳ್ಳುತ್ತಾರೆ. ಸ್ವದೇಶೀ ರೀತಿಯಲ್ಲಿ (ಎಂದರೆ ಜಾಲಿ ಮರದ ಕಡ್ಡಿ ಮೊದಲಾದವುಗಳಿಂದ) ಹಲ್ಲನ್ನು ಸ್ವಚ್ಛ ಮಾಡಿಕೊಳ್ಳುವುದನ್ನು ಬಿಟ್ಟು ಬ್ರಷ್‌ಗಳಿಂದ ಹಲ್ಲುಗಳಿಗೆ ಪುಡಿಯನ್ನು ತಿಕ್ಕುತ್ತಾರೆ. ಇವೆಲ್ಲ ಮಾಡುವುದರಿಂದ ಅವರು ಮೋಚಿಗಳು, ಹಜಾಮರು, ಹಲ್ಲಿನ ಕಡ್ಡಿಗಳನ್ನು ಮಾಡುವವರು ಇವರೆಲ್ಲರ ಜೀವನೋಪಾಯವನ್ನು ಕಿತ್ತುಕೊಳ್ಳುತ್ತಾರೆ. ಪ್ರತಿಯೊಬ್ಬರೂ ತಮ್ಮ ಧರ್ಮಾನುಸಾರ ಕರ್ತವ್ಯಪಾಲನೆ ಮಾಡಿ ತೃಪ್ತಿಪಡಲು ಅಂತ್ಯಜರ ಉದ್ಧಾರಕ್ಕೆ ಇದೊಂದೇ ದಾರಿ– ಈ ಪತಿತರ ಜೀವನೋಪಾಯವನ್ನು ಕಸಿದುಕೊಂಡವರು ಅದನ್ನು ಹಿಂದಕ್ಕೆ ಕೊಟ್ಟುಬಿಡಲಿ."

## ಅಂಶ–೨
## (೧೯೨೮ರ ಮಾರ್ಚ್ ೨ರ 'ಟೈಮ್ಸ್ ಆಫ್ ಇಂಡಿಯ'ದಿಂದ)

ಭಾರತದಲ್ಲಿ ಅಂತ್ಯಜರು

ದೇಶಾಭಿಮಾನಿಗಳು ಉದ್ವೇಗದಿಂದ, ಇದೆಲ್ಲ ಆದದ್ದು ಬ್ರಿಟಿಷ್ ಭಾರತದಲ್ಲಿ ಭಾರತೀಯರ ಭಾರತದಲ್ಲಲ್ಲ ಎಂದು ಹೇಳಿದ್ದಾರೆ. ಸರಿಯೇ, ಮಧ್ಯ ಭಾರತದ ದೊಡ್ಡ ದೇಶೀಯ ಸಂಸ್ಥಾನ ಒಂದರಲ್ಲಿ ಬಲಾಯರು ಸವರ್ಣೀಯ ಹಿಂದೂಗಳಂತೆ ಬೆಳ್ಳಿ ಬಂಗಾರದ ಒಡವೆಗಳನ್ನು ಧರಿಸಿಕೊಂಡು ಮೂರ್ಖರಾಗಿ ಅವರಂತೆಯೇ ವರ್ತಿಸುವ ಅಹಂಕಾರ ತೋರಿಸಿದುದಕ್ಕೆ ಮೊನ್ನೆ ತಾನೇ ಏನಾಯಿತೆಂದು ನಮಗೆಲ್ಲ ತಿಳಿದಿದೆ. ಈ ನತದೃಷ್ಟರ ವಿಷಯದಲ್ಲಿ ಗಾಢವಾದ ಸಹಾನುಭೂತಿ ಇರುವ ಮಹಾರಾಜರು ಆಳುವ ಬರೋಡ ಪ್ರದೇಶದಲ್ಲಿನ ಅಂತ್ಯಜರ ವಿಷಯದಲ್ಲಿ 'ಸೌರಾಷ್ಟ್ರ' ಪತ್ರಿಕೆಯ ವರದಿ ಇದು:

> "ಅಂತ್ಯಜ ಹುಡುಗರನ್ನು ಗುಜರಾತೀ ಶಾಲೆಗಳಿಗೆ ಸೇರಿಸಿಕೊಳ್ಳಬೇಕೆಂಬ ಆಜ್ಞೆ ಕಾಗದದ ಮೇಲಿದೆ ಅಷ್ಟೆ. ನೂರಕ್ಕೆ ೬೫ ಶಾಲೆಗಳಲ್ಲಿ, ಚಳಿ ಇರಲಿ, ಮಳೆ ಇರಲಿ, ಬಿಸಿಲಿರಲಿ ಅಂತ್ಯಜರ ಮಕ್ಕಳು ಹೊರಗೆ ಕುಳಿತುಕೊಳ್ಳುವಂತೆ ನಿರ್ಬಂಧಿಸಲಾಗುತ್ತದೆ. ಅವರು ಸಗಣಿ, ಸೌದೆ, ಕಸಕಡ್ಡಿಗಳನ್ನೆಲ್ಲ ತರಬೇಕಾಗುತ್ತದೆ..... ೧೯೨೭ರ ಏಪ್ರಿಲ್ ತಿಂಗಳಲ್ಲಿ ಅಂತ್ಯಜನೊಬ್ಬ ಧಮ್ ನಗರದಲ್ಲಿ ಆಸ್ಪತ್ರೆಗೆ ಔಷಧಕ್ಕಾಗಿ ಹೋದ. ಡಾಕ್ಟರು ಅವನನ್ನು ಹನ್ನೆರಡು ಗಂಟೆಗಳ ಕಾಲ ಕಾಯಿಸಿದ. ಅನಂತರ ಅವನನ್ನು ಪರೀಕ್ಷಿಸಿದ– ದೂರದಿಂದ; ಅವನಿಗೆ ಔಷಧ ಕೊಟ್ಟ– ದೂರದಿಂದ. ಇದು ಬರೋಡ ವಿಧಾನಸಭೆಯ ಅಂತ್ಯಜ ಸದಸ್ಯರೊಬ್ಬರ ಎದುರಿನಲ್ಲೆ ನಡೆಯಿತು." ಸೂರತ್‌ನ 'ಪ್ರತಾಪ್' ಪತ್ರಿಕೆ ಈ ಘಟನೆಯನ್ನು ಹೇಳಿದೆ– ನವಸಾರಿ ಅಂತ್ಯಜ ಆಶ್ರಮದ ಉಪಾಧ್ಯಾಯರೊಬ್ಬರು ಕಾಯಿಲೆ ಇದ್ದ ಹುಡುಗನನ್ನು ಸ್ಥಳೀಯ ಆಸ್ಪತ್ರೆಗೆ ಕರೆದುಕೊಂಡು ಹೋದಾಗ, ಅಲ್ಲಿನ ಡಾಕ್ಟರು ಅವರಿಬ್ಬರನ್ನೂ ಓಡಿಸಿಬಿಟ್ಟ. ಓಡಿಸುವಾಗ ಈ ಗಮನಾರ್ಹ ಮಾತುಗಳನ್ನು ಹೇಳಿದ: "ಹೋಗಿ ಆಚೆಗೆ! ಇದು ಗಾಂಧಿ ರಾಜ್ಯವಲ್ಲ, ಬರೋಡಾ ಸರ್ಕಾರದ ರಾಜ್ಯ!"

## ಅಂಶ–೩
## (೧೯೨೭ರ ಮೇ ೧೧ರ 'ಈವ್ನಿಂಗ್ ನ್ಯೂಸ್'ನಿಂದ)
## ಜಂಬೂಸರ್ ಪುರಸಭೆಯಲ್ಲಿ ಅಸ್ಪೃಶ್ಯ– ನಾಲ್ವರು ಹಿಂದೂಗಳ ರಾಜೀನಾಮೆ

ಜಂಬೂಸಾರ್ ಪುರಸಭೆಗೆ ಒಬ್ಬ ಅಸ್ಪೃಶ್ಯರ ಚುನಾವಣೆಯಿಂದ ಜಂಬೂಸರದಲ್ಲಿ ಕೋಲಾಹಲವೆದ್ದಿದೆ. ನಾಲ್ವರು ಹಿಂದೂಗಳು ರಾಜೀನಾಮೆ ನೀಡಿದ್ದಾರೆ. ಉಳಿದವರು ಅಸ್ಪೃಶ್ಯ ಸದಸ್ಯನನ್ನು ಮುಟ್ಟುವುದಿಲ್ಲವೆಂದೂ, ಅಕಸ್ಮಾತ್ ಮುಟ್ಟಿದಲ್ಲಿ ಸ್ನಾನ ಮಾಡುವುದಾಗಿಯೂ ಮಾತುಕೊಟ್ಟಿದ್ದಾರೆ.

## ಅಂಶ–೪
## ('ಬಾಂಬೆ ಕ್ರಾನಿಕಲ್' ಪತ್ರಿಕೆಯಿಂದ)
## ಕೋಲಾಬ ನಿಮ್ನ ವರ್ಗದವರ ಸಮ್ಮೇಳನ–
## ಮೇಲ್ವರ್ಗಗಳ ಹಿಂದೂಗಳ ಗೂಂಡಾಗಿರಿ

'ಟೈಮ್ಸ್ ಆಫ್ ಇಂಡಿಯ' ಪತ್ರಿಕೆಯು ೨೪ನೆ ದಿನಾಂಕದ ಸಂಚಿಕೆಯಲ್ಲಿ ಮಹಮ್ ದೊಂಬಿ ಯನ್ನು ಕುರಿತು ಒಂದು ಹೇಳಿಕೆಯನ್ನು ಕೊಟ್ಟಿದೆ. ಆದರೆ ಹೇಳಿಕೆಯೂ ಸಂಪೂರ್ಣವಾಗಿಲ್ಲದೆ, ಏನಾಯಿತೆಂಬುದರ ಸರಿಯಾದ ಚಿತ್ರವನ್ನು ಕೊಡಲು ವಿಫಲವಾಗಿರುವುದರಿಂದ ದೊಂಬಿಯ ಸಂಪೂರ್ಣ ವಾದ ಮತ್ತು ನಿಖರವಾದ ವರದಿಯನ್ನು ಕೊಡುವುದು ಅಗತ್ಯವಾಗಿದೆ.

ಕೊಲಾಬ ಜಿಲ್ಲೆಯ ನಿಮ್ನ ವರ್ಗದವರ ಸಮ್ಮೇಳನವು (೧೯೨೭ರ ಮಾರ್ಚ್) ೧೯ ಮತ್ತು ೨೦ರಂದು ಮಹದ್‌ನಲ್ಲಿ ಡಾ. ಬಿ. ಆರ್. ಅಂಬೇಡ್ಕರ್, ಬಾರ್–ಎಟ್–ಲಾ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ೨೫೦೦ಕ್ಕಿಂತ ಹೆಚ್ಚು ಮಂದಿ ನಿಮ್ನ ವರ್ಗದವರು ಬಂದಿದ್ದರು. ಬಹು ಉತ್ಸಾಹವು ಕಾಣುತ್ತಿತ್ತು. ಆದರೆ, ಸಮ್ಮೇಳನದ ಕಾರ್ಯವನ್ನು ದೊಂಬಿಯೊಂದು ಬಹಳ ಮಟ್ಟಿಗೆ ಹಾಳು ಮಾಡಿತು, ಈ ದೊಂಬಿಯ ಹೊಣೆ ಸಂಪೂರ್ಣವಾಗಿ ಮಹದ್ ಪಟ್ಟಣದಲ್ಲಿ ವಾಸಿಸುವ ಮೇಲ್ವರ್ಗದ ಹಿಂದೂಗಳದೇ. ಸಮ್ಮೇಳನದ ಮೊದಲ ದಿನ, ಅಧ್ಯಕ್ಷರು ತಮ್ಮ ಭಾಷಣವನ್ನು ಮಾಡಿದ ನಂತರ, ಅನೇಕ ಮಂದಿ ಮೇಲ್ವರ್ಗದ ಹಿಂದೂಗಳು ಸಮ್ಮೇಳನದಲ್ಲಿ ಮಾತನಾಡಿ, ನಿಮ್ನ ವರ್ಗದವರಿಗೆ ಎಲ್ಲ ರೀತಿಗಳಲ್ಲಿ ತಾವು ನೆರವಾಗಲು ಬಯಸುವುದಾಗಿ ಆಶ್ವಾಸನೆ ನೀಡಿದರು ಮತ್ತು ನಿಮ್ನ ವರ್ಗದವರು ಮೇಲ್ವರ್ಗದ ಹಿಂದೂಗಳ ಬಗೆಗೆ ದ್ವೇಷ ಭಾವನೆಯನ್ನು ಬೆಳೆಸಿಕೊಳ್ಳಬಾರದೆಂದು ಒತ್ತಾಯಪೂರ್ವಕವಾಗಿ ಹೇಳಿದರು. ಇದನ್ನನುಸರಿಸಿ, ವಿಷಯ ನಿಯಾಮಕ ಸಮಿತಿಯು ನಿರ್ಣಯಗಳ ಕರಡನ್ನು ಸಿದ್ಧಗೊಳಿಸುವಾಗ, ನಿಮ್ನ ವರ್ಗದವರ ಸ್ಥಿತಿಯನ್ನು ಉತ್ತಮಗೊಳಿಸಲು ಮೇಲ್ವರ್ಗದ ಹಿಂದೂಗಳು ಏನು ಮಾಡ ಬೇಕೆಂದು ನಿರ್ದೇಶಿಸಿ ಒಂದು ನಿರ್ಣಾಯಕ ಕರಡನ್ನು ಸಿದ್ಧಪಡಿಸಿತು. ಮಹದ್‌ನಲ್ಲಿ ನಿಮ್ನ ವರ್ಗಗಳವರಿಗೆ ಕುಡಿಯುವ ನೀರನ್ನು ಪಡೆಯಲು ಬಹುಕಷ್ಟವಿದೆ. ಈ ಕಷ್ಟವನ್ನು ಅನುಭವಿಸುವವರು ಮಹದ್‌ನಲ್ಲಿ ವಾಸಿಸುವ ನಿಮ್ನವರ್ಗಗಳವರು ಮಾತ್ರವಲ್ಲ, ಖಾಸಗಿ ವ್ಯವಹಾರಕ್ಕಾಗಿ ಅಥವಾ ಸರ್ಕಾರಿ ಕೆಲಸಕ್ಕಾಗಿ ಮಹದ್‌ಗೆ ಬರುವ ನಿಮ್ನವರ್ಗಗಳವರಿಗೂ ತೊಂದರೆ ಇದೆ ಎಂಬ ವಿಷಯವನ್ನು ಕೆಲವರು ವಿಷಯ ನಿಯಾಮಕ ಸಮಿತಿಯ ಗಮನಕ್ಕೆ ತಂದರು. ನೀರಿನ ಅಭಾವ ಎಷ್ಟೊಂದಿತ್ತೆಂದರೆ, ಸಮ್ಮೇಳನದ ಅಗತ್ಯ ಗಳನ್ನು ಪೂರೈಸಲು ಪ್ರತಿದಿನ ಹದಿನೈದು ರೂಪಾಯಿಗಳ ನೀರನ್ನು ಕೊಳ್ಳಬೇಕಾಯಿತು. ಮಹದ್‌ನ ಪುರಸಭೆಯು ಸ್ವಲ್ಪ ಕಾಲದ ಹಿಂದೆ ನಗರದ ಕೆರೆಗಳು ಸಾರ್ವಜನಿಕ ಉಪಯೋಗಕ್ಕೆ ತೆರೆದಿವೆ ಎಂದು ನಿರ್ಣಯವನ್ನು ಮಾಡಿತ್ತು. ಆದರೆ, ಅಲ್ಲಿ ಹಾಗೆಂದು ಬೋರ್ಡ್ ಹಾಕದಿದ್ದುದರಿಂದ ಜನರು ಅವನ್ನು ಬಳಸಲು ಹೆದರಿಕೊಳ್ಳುತ್ತಿದ್ದರು. ಆದುದರಿಂದ ಸಮ್ಮೇಳನಕ್ಕೆ ಬಂದಿದ್ದ ಮೇಲ್ವರ್ಗಗಳವರ ಅಭಿಪ್ರಾಯವನ್ನು ತಿಳಿದುಕೊಂಡು, ಸಮ್ಮೇಳನದವರೆಲ್ಲ ಒಟ್ಟಿಗೆ ಚೌದರ್ ಕೆರೆಗೆ ಹೋಗಿ, ಅಲ್ಲಿ ನೀರನ್ನು ತೆಗೆದುಕೊಳ್ಳುವ ಹಕ್ಕನ್ನು ಸ್ಥಾಪಿಸಲು ನಿಮ್ನ ವರ್ಗಗಳವರಿಗೆ ನೆರವಾಗಬೇಕೆಂದು ವಿಷಯ ನಿಯಾಮಕ ಸಮಿತಿಯು ನಿರ್ಧರಿಸಿತು.

## ಸುಳ್ಳು ವದಂತಿ

ಆದುದರಿಂದ ೨೦ನೆ ದಿನಾಂಕ ಸಮ್ಮೇಳನವು ಸಮಾವೇಶಗೊಂಡು, ನಿಮ್ನ ವರ್ಗಗಳವರಿಗಾಗಿ ಮೇಲಿನ ವರ್ಗಗಳವರು ಏನು ಮಾಡಬೇಕು ಎಂದು ಸಾರುವ ನಿರ್ಣಯವನ್ನು ಸಮ್ಮೇಳನದ ಮುಂದೆ ಮಂಡಿಸಿದಾಗ (ಮೇಲಿನ ವರ್ಗಗಳವರ ಪ್ರತಿನಿಧಿಗಳಾಗಿ) ಶ್ರೀ ಪುರುಷೋತ್ತಮ ಪ್ರಭಾಕರ ಜೋಶಿ ಮತ್ತು ಗೋವಿಂದ ನಾರಾಯಣ ಧಾರ್ಯ ಅವರನ್ನು ನಿರ್ಣಯದ ಮೇಲೆ ಮಾತನಾಡುವಂತೆ ಕೇಳಿದರು. ಅಂತರ್ವಿವಾಹಗಳನ್ನು ಕುರಿತ ಒಂದು ಭಾಗವನ್ನು ಬಿಟ್ಟು ಅವರಿಬ್ಬರೂ ನಿರ್ಣಯವನ್ನು ಒಪ್ಪಿಕೊಂಡರು. ಹೀಗೆ ಅದಕ್ಕೆ ಒಟ್ಟಾರೆ ಬೆಂಬಲ ಉಂಟೆಂದು ಖಚಿತ ಮಾಡಿಕೊಂಡು ಸಮ್ಮೇಳನದವರು ಸಮಾವೇಶ ಮುಗಿದ ನಂತರ, ಒಟ್ಟಾಗಿ ಮೇಲೆ ಹೇಳಿದ ಕೆರೆಗೆ ಹೋದರು. ಮೆರವಣಿಗೆ ಬಹು ಶಾಂತಿಯುತವಾಗಿತ್ತು. ಎಲ್ಲವೂ ಸಮಾಧಾನದಿಂದ ನಡೆಯಿತು. ಆದರೆ, ಎರಡು ಗಂಟೆಗಳ ನಂತರ ಊರಿನ ಕೆಲವರು ದುಷ್ಟಬುದ್ಧಿಯ ನಾಯಕರು, ನಿಮ್ನ ವರ್ಗಗಳವರು ವೀರೇಶ್ವರ ದೇವಾಲಯವನ್ನು ಪ್ರವೇಶಿಸಲು ಸನ್ನಾಹ ಮಾಡುತ್ತಿದ್ದಾರೆ ಎಂದು ಸುಳ್ಳು ವದಂತಿಯನ್ನು ಹಬ್ಬಿಸಿದರು. ಇದರಿಂದ ಪುಂಡುಪೋಕರಿಗಳ ದೊಡ್ಡದೊಂದು ಗುಂಪು ಬೊಂಬು ಕೋಲುಗಳನ್ನು ಹಿಡಿದುಕೊಂಡು ಜಮಾಯಿಸಿತು. ಸ್ವಲ್ಪ ಹೊತ್ತಿನಲ್ಲಿ ಗುಂಪು ಜಗಳಗಂಟಿಯಾಯಿತು. ಇಡಿ ಊರೇ ನಿಮ್ನ ವರ್ಗದವರ ರಕ್ತಕ್ಕಾಗಿ ಕುದಿಯುತ್ತಿದ್ದಂತೆ ಕಾಣುತ್ತಿದ್ದು ನುಗ್ಗಾಡುತ್ತಿದ್ದ ಗೂಂಡಾಗಳ ಸಮುದಾಯವಾಗಿಬಿಟ್ಟಿತು.

## ಇಪ್ಪತ್ತು ಮಂದಿಗೆ ಗಾಯ

ನಿಮ್ನ ವರ್ಗಗಳವರು ತಮ್ಮ ತಮ್ಮ ಹಳ್ಳಿಗಳಿಗೆ ಹಿಂದಿರುಗುವ ಮೊದಲು ಊಟ ಮುಗಿಸುವುದರಲ್ಲಿ ನಿರತರಾಗಿದ್ದರು. ಅವರಲ್ಲಿ ಬಹುಮಂದಿ ಊರನ್ನು ಬಿಟ್ಟ ಮೇಲೆ ಗೂಂಡಾಗಳು ನಿಮ್ನ ವರ್ಗದವರು ಊಟ ಮಾಡುತ್ತಿದ್ದ ಸ್ಥಳವನ್ನು ಪ್ರವೇಶಿಸಿದರು. ಎರಡು ಬಣಗಳ ನಡುವೆ ಕಾಳಗವೇ ನಡೆದು ಹೋಗುತ್ತಿತ್ತು. ಆದರೆ ನಿಮ್ನ ವರ್ಗಗಳ ನಾಯಕರು ತಮ್ಮ ಜನರನ್ನು ತಡೆದರು; ಇದರಿಂದ ದೊಡ್ಡ ದೊಂಬಿಯಾಗುವುದು ತಪ್ಪಿತು. ಪ್ರಚೋದನೆಗೆ ಕಾರಣವೇ ಸಿಕ್ಕದಿದ್ದುದರಿಂದ ಗೂಂಡಾಗಳು ಊರಿನ ಮುಖ್ಯರಸ್ತೆಗಳಲ್ಲಿ ಠಳಾಯಿಸಲು ಪ್ರಾರಂಭಿಸಿದರು. ಅಲ್ಲಲ್ಲಿ ಸಣ್ಣ ಗುಂಪುಗಳಲ್ಲಿ ತಮ್ಮ ಹಳ್ಳಿಗಳಿಗೆ ಹಿಂದಿರುಗುತ್ತಿದ್ದ ನಿಮ್ನ ವರ್ಗಗಳವರ ಮೇಲೆ ಹಲ್ಲೆ ನಡೆಸಿದರು. ನಿಮ್ನ ವರ್ಗಗಳವರ ಹಲವು ಮನೆಗಳಿಗೆ ಅತಿಕ್ರಮ ಪ್ರವೇಶ ಮಾಡಿದರು ಮತ್ತು ಮನೆಗಳಲ್ಲಿದ್ದವರ ಮೇಲೆ ತೀವ್ರ ಹಲ್ಲೆ ನಡೆಸಿದರು. ಒಟ್ಟಿನಲ್ಲಿ ನಿಮ್ನ ವರ್ಗಗಳವರಲ್ಲಿ ಗಾಯಗೊಂಡವರ ಸಂಖ್ಯೆ ಇಪ್ಪತ್ತು ಎಂದು ಊಹಿಸಲಾಗಿದೆ. ಈ ಪ್ರಸಂಗದಲ್ಲಿ ನಿಮ್ನ ವರ್ಗಗಳವರ ರೀತಿ ಮೆಚ್ಚಬೇಕಾದಂಥದು. ಮೇಲಿನ ವರ್ಗಗಳಲ್ಲಿ ಬಹು ಮಂದಿಯ ರೀತಿ ಅಯೋಗ್ಯವಾದದ್ದು. ಅಲ್ಲಿ ಸೇರಿದ್ದ ನಿಮ್ನ ವರ್ಗಗಳವರ ಸಂಖ್ಯೆ ಮೇಲಿನ ವರ್ಗಗಳವರ ಸಂಖ್ಯೆಗಿಂತ ಬಹು ಪಟ್ಟು ದೊಡ್ಡದು. ಆದರೆ ಅವರ ನಾಯಕರ ಉದ್ದೇಶ ಎಲ್ಲವನ್ನೂ ಅಹಿಂಸಾಯುತವಾಗಿ ಮತ್ತು ಸಂಪೂರ್ಣವಾಗಿ ಸಂವಿಧಾನಬದ್ಧವಾಗಿ ಮಾಡುವುದಾಗಿತ್ತು. ಅವರಿಗೆ ತೀವ್ರ ಪ್ರಚೋದನೆ ಇದ್ದರೂ ಅವರು ಸಂಯಮವನ್ನು ಉಳಿಸಿಕೊಂಡರೆಂಬುದು ನಿಮ್ನ ವರ್ಗಗಳವರಿಗೆ ಬಹು ಒಳ್ಳೆಯ ಹೆಸರನ್ನು ತರುವಂಥದು. ನಿಮ್ನ ವರ್ಗಗಳವರು ಸಾರ್ವಜನಿಕ ಜಲಾಶಯಗಳಿಂದ ನೀರನ್ನು ತೆಗೆದುಕೊಳ್ಳುವಂತಹ

ಪ್ರಾಥಮಿಕ ಪೌರ ಹಕ್ಕುಗಳನ್ನು ಅನುಭವಿಸುವುದನ್ನು ಸಹಿಸಿಕೊಳ್ಳಲು ಮೇಲಿನ ವರ್ಗಗಳವರು ಸಿದ್ಧರಿಲ್ಲ ಎನ್ನುವುದನ್ನು ಮಹದ್ ಸಮ್ಮೇಳನವು ತೋರಿಸಿಕೊಟ್ಟಿದೆ.

ಮಹದ್‌ನಲ್ಲಿ ಮತ್ತು ಕೊಲಾಬ ಜಿಲ್ಲೆಯಲ್ಲಿನ ಮೇಲು ಜಾತಿಯ ಹಿಂದೂಗಳ ವರ್ತನೆಯ ಅತ್ಯಂತ ಆಕ್ಷೇಪಣೀಯವಾದ ಅಂಶ ಎಂದರೆ, ಸಮ್ಮೇಳನಕ್ಕೆ ಬಂದಿದ್ದ ನಿಮ್ನ ವರ್ಗಗಳ ಪ್ರತಿನಿಧಿಗಳು ತಮ್ಮ ತಮ್ಮ ಹಳ್ಳಿಗಳಿಗೆ ಹಿಂದಿರುತ್ತಲೇ ಶಿಕ್ಷಿಸಬೇಕೆಂದು ವಿವಿಧ ಹಳ್ಳಿಗಳಿಗೆ ಕೂಡಲೇ ಸಂದೇಶಗಳನ್ನು ಕಳುಹಿಸಿದ ರೆಂಬುದು. ಈ ಅಪ್ಪಣೆಗನುಸಾರವಾಗಿ, ಸಮ್ಮೇಳನದಿಂದ ಹಿಂದಿರುಗುತ್ತಿದ್ದ ಅನೇಕ ಮಂದಿ ಮಹಾರರು ತಮ್ಮ ಹಳ್ಳಿ ತಲುಪುವ ಮೊದಲೇ ಅಥವಾ ತಲುಪಿದ ಕೂಡಲೇ ಹಲ್ಲೆಗೊಳಗಾದರು; ಈ ಹಳ್ಳಿಗಳಲ್ಲಿ ಮೇಲುಜಾತಿಯ ಹಿಂದೂಗಳ ಸಂಖ್ಯೆ ನಿಮ್ನ ವರ್ಗಗಳವರ ಸಂಖ್ಯೆಗಿಂತ ಎದುರಿಸಲಾಗದಷ್ಟು ದೊಡ್ಡದು. ನಿಮ್ನ ವರ್ಗಗಳವರ ಪ್ರತಿನಿಧಿಗಳು ಅಧಿಕಾರಿಗಳಿಗೆ ರಕ್ಷಣೆಗಾಗಿ ಮನವಿ ಮಾಡಿದ್ದಾರೆ ಮತ್ತು ಡಿ.ಎಸ್.ಪಿ. ಅವರೂ ಸೇರಿದಂತೆ ಜಿಲ್ಲೆಯ ಅಧಿಕಾರಿಗಳು ಸ್ಥಳದಲ್ಲೆ ವಿಚಾರಣೆಯನ್ನು ನಡೆಸುತ್ತಿದ್ದಾರೆ. ಆದರೆ, ಒಂದು ಮಾತನ್ನು ಹೇಳಲೇಬೇಕು– ಸ್ಥಳದಲ್ಲೇ ವಾಸಿಸುವ ಮ್ಯಾಜಿಸ್ಟ್ರೇಟರು ಏನನ್ನಾದರೂ ಮಾಡಿ ಎರಡು ಅಮೂಲ್ಯ ಗಂಟೆಗಳು ಕಳೆದುಹೋಗಲು ಅವಕಾಶ ನೀಡದೆ ಹೋಗಿದ್ದರೆ ದೊಂಬಿಯನ್ನು ತಪ್ಪಿಸಬಹುದಾಗಿತ್ತು.

## ಅಂಶ–೫
## (೧೯೨೭ರ ಮೇ ೫ರಂದು 'ಯಂಗ್ ಇಂಡಿಯಾ'ದಿಂದ)
## ಮನುಷ್ಯರ ಮೇಲೆ ಮನುಷ್ಯರ ಅಮಾನುಷತೆ
## (ಎಂ.ಕೆ.ಗಾಂಧಿಯವರಿಂದ)

ಕಾಥೆಯವಾಡದ ಒಂದು ಹಳ್ಳಿಯಲ್ಲಿ ತುಳಿತಕ್ಕೊಳಗಾದ ವರ್ಗದ ಒಬ್ಬಾತನ ಹೆಂಡತಿಗೆ ವೈದ್ಯನೊಬ್ಬ ತೋರಿದ ಯೋಜಿತ ಅಮಾನುಷತೆಯ ಅತ್ಯಂತ ನಾಚಿಕೆಗೇಡಿನ ಒಂದು ಪ್ರಸಂಗವನ್ನು ಕುರಿತು 'ನವಜೀವನ'ದಿಂದ ತೆಗೆದುಕೊಂಡ ಒಂದು ಭಾಗವನ್ನು– ಇನ್ನೊಂದು ಕಾಲಂನಲ್ಲಿ ನೋಡಬಹುದು. ಈ ಪ್ರಸಂಗದ ವಿವರಗಳನ್ನು ಕೊಟ್ಟ ಶ್ರೀ ಅಮೃತಲಾಲ್ ಠಕ್ಕರರು, ತುಳಿತಕ್ಕೆ ಸಿಕ್ಕ ವರ್ಗದ ಬಡಪಾಯಿ ಉಪಾಧ್ಯಾಯನನ್ನು ವೈದ್ಯ ಇನ್ನೂ ಗೋಳಾಡಿಸಬಹುದೆಂಬ ಭಯದಿಂದ ಸ್ಥಳದ ಮತ್ತು ಸಂಬಂಧಿಸಿದ ವ್ಯಕ್ತಿಗಳ ಹೆಸರನ್ನು ಹೇಳಿಲ್ಲ. ಆದರೆ, ಹೆಸರನ್ನು ಹೇಳಲಿ ಎಂದು ನನ್ನ ಅಪೇಕ್ಷೆ. ತುಳಿತಕ್ಕೊಳಗಾದ ವರ್ಗದ ಜನರು ಇನ್ನೂ ಹೆಚ್ಚಿನ ಕಷ್ಟಗಳನ್ನು, ದಬ್ಬಾಳಿಕೆಯನ್ನು ಅನುಭವಿಸಲು ಧೈರ್ಯ ಮಾಡುವಂತೆ ನಾವು ಪ್ರೋತ್ಸಾಹಿಸುವ ಕಾಲ ಬರಬೇಕು. ಇನ್ನೂ ಹೆಚ್ಚಿನ ಕಷ್ಟಗಳ ಅರಿವಾಗದಷ್ಟು ಈಗಾಗಲೇ ಅವರು ಯಾತನೆಪಡುತ್ತಿದ್ದಾರೆ. ದೂರುಗಳು ನಿಜವೇ ಎಂದು ತನಿಖೆ ಮಾಡಿ ಅವುಗಳ ಮೂಲಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲ. ಮುಂಬಯಿಯ ವೈದ್ಯರ ಮಂಡಲಿಯ ನಿಯಮಗಳನ್ನು ನಾನು ಅರಿಯೆ. ಆದರೆ, ಇಷ್ಟು ನನಗೆ ಗೊತ್ತು; ಇತರೆ ಸ್ಥಳಗಳಲ್ಲಿ ತನ್ನ ಫೀಯನ್ನು ಕೊಡುವವರೆಗೆ ರೋಗಿಗೆ ಗಮನ ಕೊಡುವುದಿಲ್ಲ ಎನ್ನುವ ವೈದ್ಯರು ಮಂಡಲಿಗೆ ಉತ್ತರ ಹೇಳಬೇಕಾಗುತ್ತದೆ. ಅವನ ಹೆಸರನ್ನು ಮಂಡಲಿಯ ಪಟ್ಟಿಯಿಂದ ತೆಗೆದುಹಾಕುವ ಶಿಕ್ಷೆಯೂ ಸಾಧ್ಯ ಮತ್ತು ಬೇರೆ ರೀತಿಯಲ್ಲಿಯೂ ಶಿಸ್ತಿನ ಕ್ರಮಕ್ಕೆ ಒಳ ಪಡುತ್ತಾನೆ. ಫೀಸನ್ನು ತೆಗೆದುಕೊಳ್ಳಬೇಕು, ಸಂದೇಹವಿಲ್ಲ; ಆದರೆ ರೋಗಿಗೆ ಅಗತ್ಯವಾದ ಗಮನ

ವನ್ನು ಕೊಡುವುದು ವೈದ್ಯನ ಪ್ರಪ್ರಥಮ ಕರ್ತವ್ಯ. ಕೊಟ್ಟಿರುವ ವಿವರಗಳು ಸತ್ಯವೇ ಆದಲ್ಲಿ ಅಮಾನುಷತೆ ನಿಜವಾಗಿ ಇರುವುದು ವೈದ್ಯನು ಅಸ್ಪೃಶ್ಯರ ಮನೆಯನ್ನು ಪ್ರವೇಶಿಸಲು ನಿರಾಕರಿಸಿದುದರಲ್ಲಿ, ತಾನೇ ರೋಗಿಯನ್ನು ನೋಡಲು ನಿರಾಕರಿಸಿದುದರಲ್ಲಿ ಮತ್ತು ತಾನೇ ಥರ್ಮಾಮೀಟರನ್ನು ಇಟ್ಟು ನೋಡಲು ನಿರಾಕರಿಸಿದುದರಲ್ಲಿ ಯಾವುದೇ ಸನ್ನಿವೇಶದಲ್ಲಿ ಎಂದೇ ಆಗಲಿ ಒಬ್ಬ ಮನುಷ್ಯನನ್ನು ಮುಟ್ಟಿಸಿಕೊಳ್ಳಬಾರದು ಎನ್ನುವ ತತ್ವವನ್ನು ಅನ್ವಯಿಸುವುದು ನ್ಯಾಯವಾದಲ್ಲಿ ಆ ತತ್ವವು ತನ್ನ ವೃತ್ತಿಗೇ ಮಸಿ ಬಳಿದ ಮನುಷ್ಯನಿಗೆ ಖಂಡಿತ ಅನ್ವಯಿಸಬಹುದು. ಆದರೆ ನಾನು ಶ್ರೀಯುತ ಠಕ್ಕರ್ ಅವರಿಗೆ ಪತ್ರ ಬರೆದವರ ಹೇಳಿಕೆಯಲ್ಲಿ ಒಂದಿಷ್ಟು ಉತ್ಪ್ರೇಕ್ಷೆ ಇದೆ ಎಂದು ಭರವಸೆ ಇಟ್ಟುಕೊಂಡಿದ್ದೇನೆ; ಉತ್ಪ್ರೇಕ್ಷೆ ಇಲ್ಲವಾದರೆ ವೈದ್ಯನೇ ಮುಂದೆ ಬಂದು, ತನ್ನ ಅಮಾನುಷ ವರ್ತನೆಯಿಂದ ಇಷ್ಟೊಂದು ಆಘಾತಕ್ಕೆ ತಾನು ಒಳ ಮಾಡಿದ ಸಮಾಜಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ನೀಡುತ್ತಾನೆ ಎಂದು ಭರವಸೆ ಇಟ್ಟುಕೊಂಡಿದ್ದೇನೆ.

## ಓದಿ, ಯೋಚಿಸಿ ಮತ್ತು ಕಣ್ಣೀರಿಡಿ

ಕಾಥೆವಾಡದ ಒಂದು ಹಳ್ಳಿಯಲ್ಲಿ ತುಳಿತಕ್ಕೊಳಗಾದ ವರ್ಗಗಳ ಮಕ್ಕಳಿಗಾಗಿ ಒಂದು ಶಾಲೆ ಇದೆ. ಅಲ್ಲಿ ಉಪಾಧ್ಯಾಯ ಸುಸಂಸ್ಕೃತ, ದೇಶಾಭಿಮಾನಿ ಮನುಷ್ಯ; 'ಧೇಡ್ ಅಥವಾ ನೇಯ್ಗೆ (ಅಸ್ಪೃಶ್ಯ) ವರ್ಗದವನು. ಮಹಾರಾಜ ಗಾಯಕವಾಡರ ಕಡ್ಡಾಯ ಶಿಕ್ಷಣ ನೀತಿಯಿಂದ ಆತ ಶಿಕ್ಷಣ ಪಡೆಯಲು ಸಾಧ್ಯವಾಯಿತು. ತನ್ನ ಪ್ರಾಂತೀಯ ಸ್ಥಿತಿಯ ಸುಧಾರಣೆಗಾಗಿ ತನ್ನಿಂದಾದುದನ್ನು ಮಾಡುತ್ತಿದ್ದಾನೆ. ಆತ ಸ್ವಚ್ಛ ಅಭ್ಯಾಸಗಳ ಮತ್ತು ಸುಸಂಸ್ಕೃತ ರೀತಿಯ ಮನುಷ್ಯ. ಆದುದರಿಂದ ಯಾರಿಗೂ ಅವನು ಅಸ್ಪೃಶ್ಯ ವರ್ಗದವದವನೆಂದು ಗುರುತಿಸಲಾಗುವುದಿಲ್ಲ. ಆದರೆ ಅವನ ಅದೃಷ್ಟವೋ, ದುರದೃಷ್ಟವೋ ಆತ ಕಾಥೆಯವಾಡದ ಒಂದು ಸಂಪ್ರದಾಯನಿಷ್ಠ ಹಳ್ಳಿಯೊಂದರಲ್ಲಿ ತನ್ನ ಜಾತಿಯ ಮಕ್ಕಳಿಗೇ ಪಾಠ ಹೇಳುವುದರಿಂದ ಪ್ರತಿಯೊಬ್ಬರೂ ಅವನನ್ನು ಅಸ್ಪೃಶ್ಯನೆಂದೇ ಕಾಣುತ್ತಾರೆ. ಆದರೆ, ಅದಕ್ಕೆ ಲಕ್ಷ್ಯ ಕೊಡದೆ ಆತ ಸದ್ದಿಲ್ಲದೆ ತನ್ನ ಕೆಲಸ ಮಾಡಿಕೊಂಡು ಹೋಗುತ್ತಿದ್ದ. ಆದರೆ, ಅತ್ಯಂತ ಸಹನಾಶೀಲ ಮನುಷ್ಯನೂ ಸಹಿಸಲಾಗದ ಸ್ಥಿತಿಯಲ್ಲಿ ಬದುಕುವಾಗ ತನ್ನ ಯಾತನೆ ಮತ್ತು ಕೋಪಗಳನ್ನು ತೋಡಿಕೊಳ್ಳಬಹುದಾದ ಕೆಲವು ಕ್ಷಣಗಳುಂಟು; ಉಪಾಧ್ಯಾಯನು ಬರೆದ ಈ ಕೆಳಗಿನ ಕಾಗದಗಳಿಂದ ಇದು ಸ್ಪಷ್ಟವಾಗುತ್ತದೆ. ಅವುಗಳಲ್ಲಿ ಪ್ರತಿಯೊಂದು ಪುಟ್ಟ ವಾಕ್ಯದಲ್ಲೂ ಕರುಣಾಜನಕ ಗುಣ ತುಂಬಿ ತುಳುಕಾಡುತ್ತಿದೆ. ಉಪಾಧ್ಯಾಯನಿಗೆ ಇನ್ನೂ ತೊಂದರೆಯಾದೀತೆಂದು ನಾನು ಅವರ ಪತ್ರದಲ್ಲಿ ಹೇಳಿರುವ ಹಳ್ಳಿಯ ಮತ್ತು ಜನರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟಿದ್ದೇನೆ.

ನಮಸ್ತೆ. ಐದನೆಯ ತಾರೀಖು ನನ್ನ ಹೆಂಡತಿ ಒಂದು ಮಗುವನ್ನು ಹೆತ್ತಳು. ೭ನೇ ತಾರೀಖು ಕಾಯಿಲೆ ಬಿದ್ದಳು, ಭೇದಿಯಾಯಿತು.

ಮಾತು ನಿಂತುಹೋಯಿತು. ಉಸಿರಾಟ ಕಷ್ಟವಾಯಿತು. ಎದೆ ಊದಿಕೊಂಡಿತು, ಅಲ್ಲದೆ, ಅವಳ ಪಕ್ಕೆಲುಬುಗಳು ವಿಪರೀತ ನೋಯುತ್ತಿದ್ದವು. ನಾನು ಡಾ. ಅವರನ್ನು ಕರೆಯಲು ಹೋದೆ. ಆದರೆ ಆತ "ಅಸ್ಪೃಶ್ಯರ ಮನೆಗಳಿಗೆ ನಾನು ಬರುವುದಿಲ್ಲ. ಆಕೆಯನ್ನು ನಾನು ಪರೀಕ್ಷೆ ಮಾಡುವುದೂ ಇಲ್ಲ" ಎಂದರು. ಅನಂತರ ನಾನು ನಗರ ಶೇಟರನ್ನೂ, ಗಾರ್ಸಿಯ ದರ್ಬಾರನ್ನೂ ನನಗಾಗಿ ತಮ್ಮ ಪ್ರಭಾವವನ್ನು

ಬಳಸುವಂತೆ ಪ್ರಾರ್ಥಿಸಿಕೊಂಡೆ. ಅವರು ಬಂದರು; ಡಾಕ್ಟರರ ಫೀ ಎರಡು ರೂಪಾಯಿಗಳಿಗೆ ನಗರ ಶೆಟ್ಟರು ನನಗೆ ಜಾಮೀನಾಗಿ ನಿಂತ ನಂತರ ಮತ್ತು ರೋಗಿಯನ್ನು ಅಸ್ಪೃಶ್ಯರ ನಿವಾಸ ಸ್ಥಳದಿಂದ ಹೊರಕ್ಕೆ ತರಬೇಕೆಂಬ ಕರಾರನ್ನು ಹಾಕಿ ಡಾಕ್ಟರು ಬರಲು ಒಪ್ಪಿದರು. ಆತ ಬಂದರು; ಎರಡೇ ದಿನಗಳ ಮಗುವಿನ ತಾಯಿಯನ್ನು ತಾವು ಹೊರಕ್ಕೆ ಕರೆತಂದೆವು. ಅನಂತರ ಡಾಕ್ಟರು ತಮ್ಮ ಥರ್ಮಾಮೀಟರನ್ನು ಒಬ್ಬ ಮುಸಲ್ಮಾನನಿಗೆ ಕೊಟ್ಟರು. ಆತ ಅದನ್ನು ನನಗೆ ಕೊಟ್ಟು, ನಾನು ಥರ್ಮಾಮೀಟರನ್ನು ನನ್ನ ಹೆಂಡತಿಗೆ ಇಟ್ಟು ಅನಂತರ ಮುಸಲ್ಮಾನನಿಗೆ ಕೊಟ್ಟೆ. ಆತ ಅದನ್ನು ಡಾಕ್ಟರಿಗೆ ಕೊಟ್ಟ. ಆಗ ರಾತ್ರಿ ಸುಮಾರು ಎಂಟು ಗಂಟೆ; ಒಂದು ದೀಪದ ಬೆಳಕಿನಲ್ಲಿ ಥರ್ಮಾಮೀಟರನ್ನು ಕೊಟ್ಟ ಆತ. "ಆಕೆಗೆ ನ್ಯುಮೋನಿಯ ಮತ್ತು ಉಸಿರು ಕಟ್ಟುತ್ತಿದೆ" ಎಂದರು. ಇದಾದನಂತರ ಡಾಕ್ಟರು ಹೋಗಿ ಔಷಧವನ್ನು ಕಳುಹಿಸಿದ್ದರು. ನಾನು ಅಂಗಡಿಯಿಂದ ಔಷಧವನ್ನು ತಂದೆ; ನಾವು ಆಕೆಗೆ ಕ್ವಾಲ್ಟೀಸ್ ಹಾಕುತ್ತಿದ್ದೇವೆ, ಔಷಧವನ್ನು ಕೊಡುತ್ತಿದ್ದೇನೆ. ಡಾಕ್ಟರು ಆಕೆಯನ್ನು ಪರೀಕ್ಷಿಸುವ ಕೃಪೆ ಮಾಡಲಿಲ್ಲ. ದೂರದಿಂದ ಆಕೆಯ ಕಡೆ ನೋಡಿದ ನಾನು ಆತನ ಫೀ ಎರಡು ರೂಪಾಯಿಯನ್ನು ಕೊಟ್ಟುಬಿಟ್ಟೆ. ಇದು ತೀವ್ರವಾದ ಕಾಯಿಲೆ. ಎಲ್ಲ ಭಗವಂತನ ಕೈಯಲ್ಲಿದೆ.

## II

ನನ್ನ ಬದುಕಿನ ದೀಪ ಆರಿಹೋಯಿತು. ಇಂದು ಮಧ್ಯಾಹ್ನ ಎರಡು ಗಂಟೆಗೆ ಆಕೆ ತೀರಿಕೊಂಡಳು.

ಟೀಕೆ ಅನಗತ್ಯ. ವಿದ್ಯಾವಂತನಾದರೂ ಥರ್ಮಾಮೀಟರನ್ನು ಶುದ್ಧಿಗೊಳಿಸಲು ಮಧ್ಯೆ ಮುಸಲ್ಮಾನನಿಲ್ಲದೆ, ತಾನೇ ಅದನ್ನಿಟ್ಟು ನೋಡಲು ನಿರಾಕರಿಸಿದ ಮತ್ತು ಎರಡು ದಿನಗಳ ರೋಗಿ ಬಾಣಂತಿಯನ್ನು ನಾಯಿ ಅಥವಾ ಬೆಕ್ಕಿಗಿಂತ ಕಡೆಯಾಗಿ ಕಂಡ ಡಾಕ್ಟರನ ಅಮಾನವೀಯತೆಯನ್ನು ಕುರಿತು ಏನು ಮಾಡಬಹುದು! ಇಂತಹ ಅಮಾನವೀಯತೆಯನ್ನು ಸಹಿಸುವ ಸಮಾಜವನ್ನು ಕುರಿತು ಏನು ಹೇಳಬಹುದು? ಯೋಚಿಸಬಹುದು, ಕಣ್ಣೀರಿಡಬಹುದು ಅಷ್ಟೆ.

–ಎ.ವಿ.ಥಕ್ಕರ್

## ಅಂಶ–೬

### (೧–೪–೨೮ ಮತ್ತು ೧೦–೨–೨೮ರ 'ಟೈಮ್ಸ್ ಆಫ್ ಇಂಡಿಯ'ದಿಂದ)

### ಹಿಂದೂಗಳ ದಬ್ಬಾಳಿಕೆ

### ಬಲೈಯರಿಗೆ ನಿಯಮಗಳು

### ಜೀವನವಿಧಾನವನ್ನು ಕುರಿತು ಅಪ್ಪಣೆ

ಕಳೆದ ಮೇ ತಿಂಗಳಲ್ಲಿ ಇಂದೂರು ಜಿಲ್ಲೆಯ ಕನಾಂಯ, ಬಿಚೋಲಿ, ಹಾಫ್ ಸಿ, ಬಿಚೋಲ, ಮಾರ್ದನ ಹಳ್ಳಿಗಳ ಮತ್ತು ಇನ್ನು ಸುಮಾರು ೧೫ ಹಳ್ಳಿಗಳ ಮೇಲುಜಾತಿಗಳ ಹಿಂದೂಗಳು ಎಂದರೆ ಕಲೋಟರು, ರಜಪೂತರು ಮತ್ತು ಪಟೇಲರೂ ಪಟವಾರಿಗಳೂ ಸೇರಿದಂತೆ ಬ್ರಾಹ್ಮಣರು, ತಮ್ಮ

ತಮ್ಮ ಹಳ್ಳಿಗಳ ಬಲ್ಲೈಯರಿಗೆ ಅವರು ತಮ್ಮೊಡನೆ ವಾಸವಾಗಿರಬೇಕೆಂದು ಬಯಸಿದಲ್ಲಿ ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕೆಂದು ತಿಳಿಸಿದರು. (೧) ಬಲ್ಲೈಯರು ಚಿನ್ನದ ಜರತಾರಿಯ ಪಗ್ರಿಗಳನ್ನು ಧರಿಸಬಾರದು. (೨) ಬಣ್ಣದ ಅಥವಾ ಅಂದದ ಅಂಚುಗಳ ಧೋತಿಗಳನ್ನು ಉಡಬಾರದು. (೩) ಯಾವುದೇ ಹಿಂದು ತೀರಿಕೊಂಡರೆ ಅವನ ಬಂಧುಗಳು ಎಷ್ಟೇ ದೂರದಲ್ಲಿ ವಾಸಿಸುತ್ತಿರಲಿ ಅವರಿಗೆ ಸಾವಿನ ಸುದ್ದಿಯನ್ನು ತಲುಪಿಸಬೇಕು. (೪) ಎಲ್ಲ ಹಿಂದೂ ವಿವಾಹಗಳಲ್ಲಿ ಬಲ್ಲೈಯರು ಮೆರವಣಿಗೆಯ ಮುಂಭಾಗದಲ್ಲಿ ಮತ್ತು ವಿವಾಹ ಕಾಲದಲ್ಲಿ ಸಂಗೀತ ವಾದ್ಯಗಳನ್ನು ನುಡಿಸಬೇಕು. (೫) ಬಲ್ಲೈಯ ಹೆಂಗಸರು ಬಂಗಾರದ ಅಥವಾ ಬೆಳ್ಳಿಯ ಒಡವೆಗಳನ್ನು ಧರಿಸಬಾರದು; ಅಂದದ ಮೇಲುಡುಪನ್ನಾಗಲಿ, ಕುಪ್ಪಸಗಳನ್ನಾಗಲಿ ಧರಿಸಬಾರದು. (೬) ಬಲ್ಲೈಯ ಹೆಂಗಸರು ಎಲ್ಲ ಹಿಂದೂ ಹೆಂಗಸರ ಹೆರಿಗೆಗೆ ಬರಬೇಕು. (೭) ಬಲ್ಲೈಯರು ಪ್ರತಿಫಲ ಕೇಳದೆ ಕೆಲಸ ಮಾಡಬೇಕು ಮತ್ತು ಹಿಂದೂ ಸಂಪ್ರೀತನಾಗಿ ಕೊಟ್ಟಷ್ಟನ್ನು ತೆಗೆದುಕೊಳ್ಳಬೇಕು. (೮) ಬಲ್ಲೈಯರು ಈ ನಿಯಮಗಳನ್ನು ಪಾಲಿಸಲು ಒಪ್ಪದಿದ್ದಲ್ಲಿ ಅವರು ಹಳ್ಳಿಯನ್ನು ಬಿಟ್ಟು ಹೋಗಬೇಕು.

### ಬಲ್ಲೈಯರ ನಿರಾಕರಣೆ

ಇದಕ್ಕೆ ಬಲ್ಲೈಯರು ಒಪ್ಪಲಿಲ್ಲ; ಹಿಂದೂಗಳು ಅವರ ವಿರುದ್ಧ ಕ್ರಮ ಕೈಗೊಂಡರು. ಬಲ್ಲೈಯರು ಹಳ್ಳಿಗಳ ಭಾವಿಗಳಿಂದ ನೀರನ್ನು ತೆಗೆದುಕೊಳ್ಳಲು ಬಿಡಲಿಲ್ಲ; ಅವರು ತಮ್ಮ ದನಕರುಗಳನ್ನು ಮೇಯಿಸಲು ಅವಕಾಶ ಕೊಡಲಿಲ್ಲ. ಹಿಂದೂಗಳಿಗೆ ಸೇರಿದ ಜಮೀನಿನಲ್ಲಿ ಬಲ್ಲೈಯ ಕಾಲಿಡುವಂತಿರಲಿಲ್ಲ. ಆದುದರಿಂದ ಬಲ್ಲೈಯನೊಬ್ಬನಿಗೆ ಸೇರಿದ ಜಮೀನು ಸುತ್ತ ಹಿಂದೂಗಳ ಜಮೀನುಗಳಿದ್ದರೆ ಬಲ್ಲೈಯ ತನ್ನ ಜಮೀನಿಗೆ ಹೋಗಲು ಸಾಧ್ಯವಿರಲಿಲ್ಲ. ಹಿಂದೂಗಳು ತಮ್ಮ ದನಕರುಗಳು ಬಲ್ಲೈಯರ ಜಮೀನಿನ ಬೆಳೆಯನ್ನು ಸಂಪೂರ್ಣವಾಗಿ ಮೇಯುವಂತೆ ಬಿಟ್ಟರು. ಈ ರೀತಿ ಗೋಳಾಡಿಸುವುದರ ವಿರುದ್ಧ ಬಲ್ಲೈಯರು ದರ್ಬಾರಿ ಅರ್ಜಿಗಳನ್ನು ಸಲ್ಲಿಸಿದರು: ಆದರೆ, ಸಕಾಲದಲ್ಲಿ ನೆರವು ದೊರೆಯದಿದ್ದುದರಿಂದ ಮತ್ತು ದಬ್ಬಾಳಿಕೆ ಮುಂದುವರೆದಿದ್ದರಿಂದ ನೂರಾರು ಮಂದಿ ಬಲ್ಲೈಯರು ತಮ್ಮ ಪೂರ್ವಿಕರು ತಲೆಮಾರುಗಳಿಂದ ವಾಸಿಸುತ್ತಿದ್ದ ಮನೆಗಳನ್ನು ಬಿಟ್ಟು ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಧರ್, ದೇತಾಸ್, ಬಗ್ಲಿ, ಭೂಪಾಲ್, ಗ್ವಾಲಿಯರ್ ಮತ್ತಿತರ ಸಂಸ್ಥಾನಗಳ ಹಳ್ಳಿಗಳಿಗೆ ವಲಸೆ ಹೋಗಬೇಕಾಯಿತು.

### ಒತ್ತಾಯದ ಒಪ್ಪಂದ

ಇಂದೂರು ನಗರದ ಉತ್ತರಕ್ಕೆ ಏಳೇ ಮೈಲಿಗಳು. ದೂರದಲ್ಲಿರುವ ರಿಯೋಟಿ ಹಳ್ಳಿಯ ಹಿಂದೂಗಳು ಇತರ ಹಳ್ಳಿಗಳ ಹಿಂದೂಗಳು ಬಲ್ಲೈಯರ ವಿರುದ್ಧ ರೂಪಿಸಿದ ನಿಯಮಗಳಿಗೆ ಅನುಗುಣವಾಗಿ ಸ್ಟಾಂಪ್ ಹಚ್ಚಿದ ಪತ್ರಕ್ಕೆ ಸಹಿ ಮಾಡಬೇಕೆಂದು ಬಲ್ಲೈಯರಿಗೆ ಅಪ್ಪಣೆ ಮಾಡಿದರು. ಬಲ್ಲೈಯರು ಒಪ್ಪಲಿಲ್ಲ. ಅವರಲ್ಲಿ ಕೆಲವರನ್ನು ಹಿಂದೂಗಳು ಹೊಡೆದರೆಂದು ಆರೋಪಿಸಲಾಗಿದೆ; ಒಬ್ಬ ಬಲ್ಲೈಯನನ್ನು ಕಂಬಕ್ಕೆ ಕಟ್ಟಿದರು. ಅವನು ಒಪ್ಪಂದಕ್ಕೆ ಸಹಿ ಮಾಡಿದರೆ ಬಿಡುವುದಾಗಿ ಹೇಳಿದರು. ಆತ ಒಪ್ಪಂದಕ್ಕೆ

ಸಹಿ ಹಾಕಿದ, ಅವನನ್ನು ಬಿಟ್ಟಿತು. ಹಳ್ಳಿಯ ಕೆಲವರು ಬಲ್ಯೈಯರು ಅಂದೇ ಎಂದರೆ ಡಿಸೆಂಬರ್ ೨೦ರಂದು ಪ್ರಧಾನ ಮಂತ್ರಿ ಬಳಿಗೆ ಓಡಿಹೋದರು. ರಿಯೋಟಿ ಹಳ್ಳಿಯ ಹಿಂದೂ ಗ್ರಾಮಸ್ಥರು ತಮಗೆ ತೊಂದರೆ ಕೊಟ್ಟ ಸಂಗತಿಯ ಬಗ್ಗೆ ದೂರು ಕೊಟ್ಟರು. ಅವರನ್ನು ಜಿಲ್ಲೆಯ ಸುಭಾನ ಬಳಿಗೆ ಕಳಿಹಿಸಲಾಯಿತು. ಈ ಅಧಿಕಾರಿ ಪೋಲೀಸರ ಸಹಾಯ ಪಡೆದು ಹಳ್ಳಿಯಲ್ಲಿ ವಿಚಾರಣೆ ನಡೆಸಿದರು ಮತ್ತು ಹಿಂದೂಗಳ ವಿರುದ್ಧ ಭಾರತೀಯ ದಂಡಸಂಹಿತೆಯ ೩೪೨ ಮತ್ತು ೧೪೭ನೆ ವಿಭಾಗದ ಪ್ರಕಾರ ಮತ್ತು ಬಲ್ಯೈಯವರ ವಿರುದ್ಧ ೧೪೭ನೆ ವಿಭಾಗದ ಪ್ರಕಾರ ಕ್ರಮವನ್ನು ಜರುಗಿಸಬೇಕೆಂದು ಶಿಫಾರಸು ಮಾಡಿದರು.

## ಹಳ್ಳಿಗಳಿಂದ ಬಲ್ಯೈಯರ ನಿರ್ಗಮನ
## ಜಾತೀಯ ದಬ್ಬಾಳಿಕೆ
## ಕಾನೂನಿನ ಅಜ್ಞಾನವೇ ಒಂದು ಅನಾನುಕೂಲ

ಕೆಲವು ಹಳ್ಳಿಗಳ ಹಿಂದು ನಿವಾಸಿಗಳು ಬಲ್ಯೈಯರನ್ನು ನಡೆಸಿಕೊಳ್ಳುವ ರೀತಿಯಲ್ಲಿ ಏನೂ ಸುಧಾರಣೆಯಾಗಿಲ್ಲ. ಮೇಲಿನ ಜಾತಿಯ ಹಿಂದೂಗಳು ಬಲ್ಯೈಯರಿಗೆ ತೊಂದರೆ ಕೊಡುತ್ತಿದ್ದಾರೆ ಎನ್ನುವುದು ಆಗಲೇ ವರದಿಯಾಗಿದೆ. ಇಂದೂರು ಜಿಲ್ಲೆಯ ದೇವಾಲಪುರ ಪರಗಣ ಒಂದರಿಂದಲೇ ತಮ್ಮ ಮನೆಗಳನ್ನು ಬಿಟ್ಟು ನೆರೆಹೊರೆಯ ಸಂಸ್ಥಾನಗಳಲ್ಲಿ ಆಶ್ರಯ ಹುಡುಕಿಕೊಂಡ ಬಲ್ಯೈಯರ ಸಂಖ್ಯೆ ದೊಡ್ಡದು. ಬಲಾತ್ಕಾರದಿಂದ ಬಲ್ಯೈಯರನ್ನು ಹೊರಗಟ್ಟಿದ ಹಳ್ಳಿಗಳು ಬದೋಲಿ, ಅಹಿರ್–ಖೆರಲ್, ಪಿಪ್ಲೊದ, ಮೂರ್ಖೆರ, ಪಮಲಪುರ್, ಕರೋಡ, ಚಟವಾಡ, ನೆವ್ರಿಪಾನ್, ಸನೌದ, ಅಜ್ನೋಟಿ, ಬಟೇಡಿ ಮತ್ತು ಸನವ್ದ. ಪಮಲ್‌ಪುರ್ ಹಳ್ಳಿಯನ್ನು ಬಲ್ಯೈಯರು ಸಂಪೂರ್ಣವಾಗಿ ತ್ಯಜಿಸಿದ್ದಾರೆ. ಬಲ್ಯೈಯ ಗಂಡಸರು, ಹೆಂಗಸರು, ಮಕ್ಕಳು ಯಾರೂ ಅಲ್ಲಿ ಕಾಣುವುದಿಲ್ಲ. ಮೇಲೆ ಹೆಸರಿಸಿದ ಹಳ್ಳಿಗಳೊಂದರಲ್ಲಿ ವಾಸವಾಗಿದ್ದ ನಂದಾ ಬಲ್ಯೈಯನನ್ನು, ಹಳ್ಳಿಯ ಎಲ್ಲ ಬಲ್ಯೈಯರ ವಸತಿಗಳನ್ನು ಹಿಂದೂಗಳು ಸುಟ್ಟುಹಾಕಿದರು. ಆದರೆ ದುಷ್ಕರ್ಮಿಗಳು ಈವರೆಗೆ ಪತ್ತೆಯಾಗಿಲ್ಲ ಎಂದೂ ಹೇಳಲಾಗಿದೆ.

ಬಲ್ಯೈಯರು ತಿಳುವಳಿಕೆ ಇಲ್ಲದ ಜನ ಕಾನೂನಿನ ಕ್ರಮ ಅವರಿಗೆ ತಿಳಿಯದು. ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿಬಿಟ್ಟರೆ, ತಮಗೆ ಬೇಕಾದುದನ್ನೆಲ್ಲ ಸರ್ಕಾರವು ಮಾಡಿಬಿಡುತ್ತದೆ ಎಂದು ಅವರು ಭಾವಿಸಿದ್ದಾರೆ. ದೂರನ್ನು ಕೊನೆಯವರೆಗೆ ಸಾಧಿಸಲು ಅಗತ್ಯವಾದ ತಿಳುವಳಿಕೆ, ಸಾಧನ ಸಂಪತ್ತು ಮತ್ತು ಕಾರ್ಯಶೀಲತೆ ಯಾವುದೂ ಅವರಿಗಿಲ್ಲ. ಕೆಲವು ಮೊಕದ್ದಮೆಗಳಿಗೆ ಅವರು ಹಾಜರಾಗಲಿಲ್ಲ. ಅಥವಾ ತಮ್ಮ ಆಪಾದನೆಗಳನ್ನು ಸಮರ್ಥಿಸುವ ಸಾಕ್ಷಿಗಳನ್ನು ಕರೆತರಲಿಲ್ಲ. ಆದುದರಿಂದ ಮ್ಯಾಜಿಸ್ಟ್ರೇಟರಿಗೆ ಅವರ ದೂರನ್ನು ತಳ್ಳಿಹಾಕದೆ ಬೇರೆ ದಾರಿಯೇ ಇರಲಿಲ್ಲ ಎಂದೂ ಹೇಳಲಾಗಿದೆ.

## ಅಂಶ–೭

## (೧೯೨೮ರ ಫೆಬ್ರವರಿ ೨೫ರ 'ಬಾಂಬೆ ಕ್ರಾನಿಕಲ್' ಪತ್ರಿಕೆಯಿಂದ)

## ಆಚಾರವಂತಿಕೆಗೆ ಹುಚ್ಚು ಹಿಡಿಯಿತು

## 'ಅಸ್ಪೃಶ್ಯರ' ವಿಷಯದಲ್ಲಿ ಅನಾಗರಿಕ ವರ್ತನೆ

## ಮಹಾರರಾಗಿರುವುದೇ ಅಪರಾಧ

ಅಹಮದಾಬಾದಿನ ಶ್ರೀ ಕೇಶವ್‌ಜಿ ರಣ್‌ಛೋಡಿ ವಘೇಲರು ಬಹಿಷ್ಕೃತ ಹಿತಕಾರಿಣಿ ಸಭೆಯ ಅಧ್ಯಕ್ಷ ಡಾ. ಬಿ. ಆರ್. ಅಂಬೇಡ್ಕರರಿಗೆ ಹೀಗೆ ತಿಳಿಸುತ್ತಾರೆ:

ಬಾಪುರಾವ್ ಲಕ್ಷ್ಮಣ್ ಆತನ ಸೋದರ ಕೌರಾವ್ ಕಳೆದ ಆರು ವರ್ಷಗಳಿಂದ ಅಹಮದಾಬಾದಿನಲ್ಲಿ ವಾಸಿಸುತ್ತಿದ್ದಾರೆ. ಅವರು ದಖನಿನಿಂದ ಬಂದ ಮರಾಠ ಜಾತಿಯ ಕೆಲವರೊಂದಿಗೆ ಬೆರೆಯುತ್ತಿದ್ದರು. ಕೌರಾವ್‌ನ ಇಬ್ಬರು ಗಂಡುಮಕ್ಕಳು ದಾಮು ಮತ್ತು ಲಕ್ಷ್ಮಣ್ ಮರಾಠರ ಭಜನಾ ಕೂಟಗಳಲ್ಲಿ ಭಾಗವಹಿಸುತ್ತಿದ್ದರು. ದಾಮು ಮತ್ತು ಲಕ್ಷ್ಮಣ್ ಮಹಾರ್ ಜಾತಿಗೆ ಸೇರಿದವರೆಂದು ಮರಾಠರಿಗೆ ಈಚೆಗೆ ತಿಳಿಯಿತು; ಇದನ್ನು ಖಚಿತಪಡಿಸಿಕೊಳ್ಳಲು ಸೂರತ್ ಮತ್ತು ಅಹಮದಾಬಾದ್ ನಡುವೆ ಓಡಾಡುವ ಪಾರ್ಸೆಲ್ ರೈಲಿನಲ್ಲಿ ನೌಕರರಾಗಿರುವ ಇಬ್ಬರು ಮಹಾರರನ್ನು ದಾಮು ಮತ್ತು ಲಕ್ಷ್ಮಣರನ್ನು ಗುರುತಿಸಲೆಂದೇ ವಿಶೇಷವಾಗಿ ಕರೆಸಿಕೊಳ್ಳಲಾಯಿತು. ದಾಮು ಮತ್ತು ಲಕ್ಷ್ಮಣ್ ಮಹಾರರೆಂದು ಖಂಡಿತವಾದಾಗ ಅವರನ್ನು ಭಂಡೇರಿ ಪೋಲ್‌ನ ಕಲೂಪುರಕ್ಕೆ ಭಜನೆಯ ಕೂಟಕ್ಕೆಂದು ೧೧ರ ಮಧ್ಯರಾತ್ರಿ ಆಹ್ವಾನಿಸಲಾಯಿತು. ಅವರು ಯಾವ ಜಾತಿಯವರು ಎಂದು ಪ್ರಶ್ನಿಸಿದಾಗ ದಾಮು ಮತ್ತು ಲಕ್ಷ್ಮಣ್ ತಾವು ಸೋಮವಂಶೀಯರೆಂದು ಹೇಳಿದರು. ಈ ಉತ್ತರವು ಮರಾಠರನ್ನು ರೇಗಿಸಿತು. ಅವರು ತಮ್ಮನ್ನು ಮೈಲಿಗೆ ಮಾಡಿದುದಕ್ಕಾಗಿ ಈ ಸೋದರರರನ್ನು ಬಾಯಿಗೆ ಬಂದಂತೆ ಬೈದರು. ಮರಾಠರು ಮಹಾರ್ ಸೋದರರ ಮೇಲೆ ಹಲ್ಲೆಯನ್ನು ಮಾಡಿದರು. ಸೋದರರಲ್ಲಿ ಒಬ್ಬ ಬಂಗಾರದ ಉಂಗುರವನ್ನು ಧರಿಸಿದ್ದ. ಅದನ್ನು ಬಲಾತ್ಕಾರವಾಗಿ ಕಿತ್ತುಕೊಂಡು ೧೧ ರೂಪಾಯಿಗಳಿಗೆ ಮಾರಲಾಯಿತು. ಈ ಹಣದಲ್ಲಿ ಅಣ್ಣತಮ್ಮಂದಿರನ್ನು ಗುರುತು ಹಿಡಿಯಲು ಸೂರತ್ತಿನಿಂದ ಕರೆಸಿದ್ದ ಮಹಾರರಿಗೆ ೬ ರೂಪಾಯಿ ಕೊಡಲಾಯಿತು. ದಾಮು ಮತ್ತು ಲಕ್ಷ್ಮಣ್ ತಮ್ಮನ್ನು ತಮ್ಮ ಮನೆಗೆ ಹಿಂದಿರುಗಲು ಬಿಡಿ ಎಂದು ಮರಾಠರನ್ನು ಅಂಗಲಾಚಿದರು. ಮರಾಠರು ಅವರು ಐದು ನೂರು ರೂಪಾಯಿಗಳ ಜುಲ್ಮಾನೆಯನ್ನು ತೆತ್ತರೆ ಮಾತ್ರ ಬಿಡುವುದಾಗಿ ಹೇಳಿದರು. ಅಷ್ಟು ದೊಡ್ಡ ಮೊತ್ತದ ಹಣವನ್ನು ಕೊಡಲು ತಮ್ಮ ಕೈಯಲ್ಲಾಗುವುದಿಲ್ಲ ಎಂದು ಸೋದರರು ವಿನಂತಿ ಮಾಡಿಕೊಂಡಾಗ ಮರಾಠರಲ್ಲಿ ಒಬ್ಬಾತ ಅವರಿಗೆ ೧೨೫ ರೂಪಾಯಿಗಳ ದಂಡವನ್ನು ಮಾತ್ರ ವಿಧಿಸಬೇಕೆಂದು ಸೂಚಿಸಿದ. ಈಗ ಇನ್ನೊಬ್ಬ ಮರಾಠ ದಂಡ ವಿಧಿಸುವ ಸಲಹೆಯನ್ನೇ ವಿರೋಧಿಸಿ, ಮರಾಠರು ದಂಡ ವಿಧಿಸಿ ತೃಪ್ತರಾಗಬಾರದು. ತಮ್ಮ ಜಾತಿಯನ್ನು ಮರೆಮಾಚಿದುದಕ್ಕಾಗಿ ಮಹಾರರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಹೇಳಿದ. ಈ ಕ್ರಮವೇ ಒಪ್ಪಿಗೆಯಾದುದರಿಂದ ಮಹಾರ್ ಸೋದರರನ್ನು ನಿಲ್ಲಿಸಿಕೊಳ್ಳಲಾಯಿತು ಮತ್ತು ಬೆಳಿಗ್ಗೆ ಒಂಬತ್ತರ ಹೊತ್ತಿಗೆ ಅವರನ್ನು ಅನಾಗರಿಕ ಅಪಮಾನಗಳಿಗೆ ಒಳಗು ಮಾಡಲಾಯಿತು. ಅವರ ಮೀಸೆಯ ಎಡಭಾಗವನ್ನು ಬಲ ಹುಬ್ಬನ್ನು ಬೋಳಿಸಲಾಯಿತು, ಇಲ್ಲಣವನ್ನೂ ಕೊಳೆಯನ್ನೂ ಎಣ್ಣೆಯಲ್ಲಿ ಕಲಸಿ ಅವರ ಮೈಗೆಲ್ಲ ಮೆತ್ತಲಾಯಿತು, ಹಳೆಯ ಚಪ್ಪಲಿಗಳ ಮಾಲೆಗಳನ್ನು ಅವರ ಕೊರಳಿಗೆ ಹಾಕಲಾಯಿತು. ಒಬ್ಬನಿಗೆ ಕೈಯಲ್ಲಿ ಪೊರಕೆಯನ್ನು

ಹಿಡಿದುಕೊಳ್ಳಲು ಹೇಳಲಾಯಿತು. ಇನ್ನೊಬ್ಬನ ಕೈಗೆ 'ಈ ಅಪರಾಧಿಗಳು ಉನ್ನತ ಜಾತಿಯವರನ್ನು ಮುಟ್ಟುವಷ್ಟು ಧೈರ್ಯ ಮಾಡಿದುದಕ್ಕಾಗಿ ಈ ಶಿಕ್ಷೆಯನ್ನು ವಿಧಿಸಲಾಯಿತು' ಎಂದು ಬರೆದಿದ್ದ ಫಲಕವನ್ನು ಕೊಡಲಾಯಿತು. ಸುಮಾರು ೭೫ ಮಂದಿ ಇದ್ದ ಮೆರವಣಿಗೆಯಲ್ಲಿ ಮುಂದೆ ತಮಟೆ ಹೊಡೆಯುತ್ತ ಮಹಾರ್ ಸೋದರರನ್ನು ಕರೆದೊಯ್ಯಲಾಯಿತು.

ಈ ಇಬ್ಬರು ಸೋದರರೂ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಆರೋಪಿಗಳು ತಮ್ಮ ಹೇಳಿಕೆಯಲ್ಲಿ ದಾಮು ಮತ್ತು ಲಕ್ಷ್ಮಣರನ್ನು ಆಪಾದಿಸಿದ ರೀತಿಯಲ್ಲಿ ನಡೆಸಿಕೊಳ್ಳಲಾಯಿತೆಂದು ಒಪ್ಪಿಕೊಂಡಿದ್ದಾರೆ. ಆದರೆ, ಫಿರ್ಯಾದುದಾರರು ಸ್ವ ಇಚ್ಛೆಯಿಂದ ಶಿಕ್ಷೆಗೆ ಒಪ್ಪಿದ್ದರೆಂದು ಮನವಿ ಮಾಡಿದ್ದಾರೆ. ದಾಮು ಮತ್ತು ಲಕ್ಷ್ಮಣರನ್ನು ಹೀನಾಯವಾಗಿ ಬಯ್ದು, ಅವರ ಮೇಲೆ ಹಲ್ಲೆ ಮಾಡಿ, ಕ್ರೂರ ಶಿಕ್ಷೆಯನ್ನು ಕೊಡುವುದಾಗಿ ಬೆದರಿಸಿ ಅನಾಗರಿಕ ಅಪಮಾನಗಳಿಗೆ ಗುರಿ ಮಾಡಿದಾಗ ಅವರು ನಿಸ್ಸಹಾಯಕರಾಗಿದ್ದರು ಎನ್ನುವುದು ಸ್ಪಷ್ಟವಾಗಿದೆ. ಅಸ್ಪೃಶ್ಯ ಜಾತಿಗಳೆಂದು ಕರೆಸಿಕೊಳ್ಳುವ ಜನರಲ್ಲಿ ಈ ಮೊಕದ್ದಮೆ ತುಂಬಾ ಕೋಲಾಹಲವನ್ನು ಉಂಟುಮಾಡಿದೆ; ಫಿರ್ಯಾದುದಾರನಿಗೆ ಸರಿಯಾದ ಕಾನೂನು ನೆರವು ನೀಡಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

## ಅಂಶ–೮

(ಮುಂಬಯಿ ವಿಧಾನ ಪರಿಷತ್ತಿನ ಚರ್ಚೆಗಳು ೧೮೨೭, ಸಂಪುಟ ೨೦)

(ಭಾಗ ೧೬, ಪುಟ ೧೨೭೩)

ಪೊಲೀಸ್ ಕೆಲಸಕ್ಕೆ ಮಹಾರರ ನೇಮಕಾತಿ

ಡಾ. ಬಿ. ಆರ್. ಅಂಬೇಡ್ಕರ್: ಈ ಪ್ರಾಂತದ ಪೊಲೀಸ್ ದಳಕ್ಕೆ ನಿಮ್ನ ವರ್ಗದವರನ್ನು ಸೇರಿಸಿಕೊಳ್ಳಕೂಡದೆಂದು ಯಾವುದಾದರೂ ನಿಯಮ ಉಂಟೇ ಎಂದು ಸರ್ಕಾರವು ದಯೆಯಿಟ್ಟು ತಿಳಿಸಬಹುದೆ?

ಮಾನ್ಯ ಶ್ರೀ ಜೆ. ಇ. ಬಿ. ಹಾಟ್ಸನ್: ಅಂತಹ ಯಾವುದೇ ನಿಯಮ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇಂತಹ ಪ್ರತಿಬಂಧಕವಿಲ್ಲದಿದ್ದರೆ ಮುಂಬಯಿ ನಗರದ ಪೊಲೀಸ್ ಕಮೀಷನರರು ಪೊಲೀಸ್ ಪಡೆಗೆ ನಿಮ್ನ ವರ್ಗದವರನ್ನು ನೇಮಿಸಲು ನಿರಾಕರಿಸುವುದೇಕೆ ಎಂದು ದಯೆಯಿಟ್ಟು ಮಾನ್ಯ ಸದಸ್ಯರು ತಿಳಿಸುವರೆ?

ಮಾನ್ಯ ಶ್ರೀ ಜೆ. ಇ. ಬಿ. ಹಾಟ್ಸನ್: ಇದು ಒಂದು ಬಹು ವಿಶಾಲವಾದ ವಿಷಯಕ್ಕೆ ಕರೆದೊಯ್ಯುತ್ತದೆ. ಈ ಸದನದ ಪ್ರತಿಯೊಬ್ಬ ಸದಸ್ಯರಿಗೂ ತಿಳಿದೇ ಇರುವಂತೆ ಇದನ್ನು ಕಾರ್ಯಗತ ಮಾಡುವಲ್ಲಿ ಕಷ್ಟಗಳಿವೆ. ಈ ವರ್ಗಗಳ ಜನರನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಪಡೆಗೆ ಸೇರಿಸಿಕೊಳ್ಳಲು ಈ ಕಷ್ಟಗಳು ಅಡ್ಡಿಯಾಗುತ್ತದೆ ಎಂದಷ್ಟೇ ನಾನು ಹೇಳಬಲ್ಲೆ. ಆದರೆ ಇದನ್ನು ಪ್ರತಿಬಂಧಿಸುವ ನಿಯಮ ಯಾವುದೂ ಇಲ್ಲ.

ಟಿಪ್ಪಣಿ: ಶ್ರೀ ಹಾಟ್ಸನ್ ಅವರು ಪ್ರಸ್ತಾಪಿಸಿದ 'ಕಾರ್ಯಗತ ಮಾಡುವಲ್ಲಿರುವ ಕಷ್ಟಗಳು' ಸ್ಪಷ್ಟವಾಗಿ ಅಸ್ಪೃಶ್ಯತೆಯಿಂದ ಉದ್ಭವಿಸುವ ಕಷ್ಟಗಳು.

## ಅಂಶ–೯

(ಮುಂಬಯಿ ವಿಧಾನ ಪರಿಷತ್ತಿನ ಚರ್ಚೆಗಳಲ್ಲಿ ೧೯೨೮, ಸಂಪುಟ ೨೨)

(ಭಾಗ ಎರಡು, ಪುಟಗಳು ೯೬–೯೭)

ಸರ್ಕಾರಿ ಸೇವೆಗಳಲ್ಲಿ ಗುಮಾಸ್ತರು

ಶ್ರೀ ಆರ್. ಎಸ್. ಅಸರಾಳೆ (ಸರ್ಕಾರದ): ವಿವಿಧ ಇಲಾಖೆಗಳ ಕಛೇರಿಗಳಲ್ಲಿ ಗುಮಾಸ್ತ ದರ್ಜೆಗಳಲ್ಲಿರುವವರ ಒಟ್ಟು ಸಂಖ್ಯೆಯನ್ನು ಸರ್ಕಾರವು ದಯೆಯಿಟ್ಟು ತಿಳಿಸಬಹುದೆ!

ಮಾನ್ಯ ಸರ್ ಚುನಿಲಾಲ್ ಮೆಹ್ತ: ಅಗತ್ಯವಾದ ಮಾಹಿತಿಯನ್ನು ನೀಡುವ ಕೋಷ್ಟಕವನ್ನು ಪರಿಷತ್ತಿನಲ್ಲಿ ಮಂಡಿಸಲಾಗಿದೆ.

| | ಮರಾಠರು ಮತ್ತು ಸಂಬಂಧಿಸಿದ ಜಾತಿಗಳು | ಮಹಮದೀಯರು | ನಿಮ್ನ ವರ್ಗಗಳವರು | ಮುಂದುವರೆದ ಹಿಂದೂಗಳು | ಪಾರ್ಸಿಗಳು | ಕ್ರೈಸ್ತರು ಮತ್ತು ಯಹೂದ್ಯರು | ಇತರರು | ಒಟ್ಟು |
|---|---|---|---|---|---|---|---|---|
| ೧. ಸಚಿವಾಲಯ | ೩೧ | ೧೧ | – | ೨೬೮ | ೩೮ | ೮೧ | ೧೧ | ೪೪೦ |
| ೨. ಸಾರ್ವಜನಿಕ ಕಾಮಗಾರಿ ಇಲಾಖೆ (ಪಿ.ಡಬ್ಲ್ಯೂಡಿ. | ೬ | – | – | ೬೪ | ೮ | ೧೦ | ೩ | ೯೧ |
| ೩. ಮುಂಬಯಿ ಕಲೆಕ್ಟರು | ೩ | ೮ | – | ೨೮ | – | ೪ | ೧ | ೪೪ |
| ೪. ಸುಂಕದ ಕಮೀಷನರ್ | ೧ | – | – | ೧೨ | ೫ | – | – | ೧೮ |
| ೫. ಸಣ್ಣ ಮೊಕದ್ದಮೆಗಳ ನ್ಯಾಯಾಲಯ | ೯ | ೭ | – | ೫೮ | ೧ | ೫ | ೮ | ೯೭ |
| ೬. ಹೈಕೋರ್ಟ್ | ೪ | ೧೫ | – | ೧೨೫ | ೨೨ | ೨೩ | ೯ | ೧೯೮ |
| ೭. ಮುಂಬಯಿ ಪೊಲೀಸ್ ನ್ಯಾಯಾಲಯಗಳು | ೭ | ೪ | – | ೩೨ | – | ೪ | – | ೪೭ |
| ೮. ಮುಂಬಯಿ ಪೊಲೀಸ್ ಕಮೀಷನರ್ | – | ೭ | – | ೫೯ | – | ೪ | – | ೮೭ |

## ಅಂಶ–೧೦
## (೧೯೨೮ರ ಮೇ ೩೦ರ 'ಟೈಮ್ಸ್ ಆಫ್ ಇಂಡಿಯ'ದಿಂದ)
## ಭಾರತೀಯರ ದೃಷ್ಟಿಯಲ್ಲಿ
## ಚಮಾರ್‌ದಾಸ್ ಮತ್ತು ಮಹಾರ್ ದಾಸ್

ಅಸ್ಪೃಶ್ಯರ ಸ್ಥಿತಿಯ ನ್ಯೂನತೆಗಳು ಮತ್ತು ಕಷ್ಟಗಳನ್ನು ಕುರಿತು ಗರ್ಜಿಸುವ ರಾಜಕೀಯ ಸಿಂಹಗಳು ಎಷ್ಟು ಪ್ರಾಮಾಣಿಕರು ಎನ್ನುವುದು ಮಹಾರಾಷ್ಟ್ರ ಸಮ್ಮೇಳನದಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಪ್ರಶ್ನೆಯನ್ನು ಬುದ್ಧಿವಂತಿಕೆಯಿಂದ ಮೂಲೆಗೆ ತಳ್ಳಿದಾಗ ಸ್ಪಷ್ಟವಾಯಿತು. ಈ ಕುಯುಕ್ತಿಯನ್ನು ವಿರೋಧಿಸಿದ ಸುಮಾರು ಆರು ಮಂದಿಯಲ್ಲಿ 'ಸ್ವರಾಜ್ಯ' ಪತ್ರಿಕೆಗೆ ಸೇರಿದವರಿದ್ದರು. ಈ ಕಿರಿಕಿರಿಯನ್ನುಂಟು ಮಾಡುವ ಸಮಸ್ಯೆಯನ್ನು ಕುರಿತು ಹಿಂದೂಗಳ ಒಟ್ಟಾರೆ ನಿಲುವನ್ನು ಬಯಲಿಗೆಳೆದು ಅವರಲ್ಲಿ ಒಬ್ಬರು ಆ ಪತ್ರಿಕೆಯಲ್ಲಿ ಒಂದು ಮುಚ್ಚುಮರೆ ಇಲ್ಲದ ಲೇಖನವನ್ನು ಬರೆದರು. ಈ ಲೇಖನವು ಮಹಾರಾಷ್ಟ್ರ ಸಮ್ಮೇಳನವು ಮಾಡಿದ ಕೆಲಸದ ಮೇಲೆ ತುಂಬಾ ಬೆಳಕನ್ನು ಚೆಲ್ಲುತ್ತದೆ. ಪುಣೆಯ ಸಮತಾ ಸಂಘದ ವಿಷಯವಾಗಿ ಲೇಖಕರು ಹೀಗೆ ಬರೆದಿದ್ದಾರೆ: "ನನ್ನ ಸ್ನೇಹಿತರೊಬ್ಬರು ನಿಮ್ಮಂತಹ ಜನ ಅವರೊಡನೆ ಸೇರುವುದರಿಂದಲೇ ಈ ಚಮಾರ್‌ದಾಸರೂ ಮಹಾರ್‌ದಾಸರೂ (ಎಂದರೆ 'ಯಃಕಶ್ಚಿತ್ ಚಮ್ಮಾರರು, ಮಹಾರರು') ದುರಹಂಕಾರಿ ಗಳಾಗುತ್ತಾರೆ" ಎಂದು ಹೇಳಿದರು. ಮೇಲಿನ ವರ್ಗದವರಲ್ಲಿ ಅಸ್ಪೃಶ್ಯರನ್ನು ಕಂಡರೆ ಈಗಲೂ ಎಷ್ಟೊಂದು ದ್ವೇಷವಿದೆ ಎನ್ನುವುದನ್ನು ಈ ಮಾತಿನಿಂದ ಅರ್ಥಮಾಡಿಕೊಳ್ಳಬಹುದು."

### ನಿರ್ಣಯಗಳು ಮತ್ತು ಕೃತಿಗಳು

ವಿಷಾದಗೊಂಡ ಸುಧಾಕರ ಮುಂದುವರೆದು ಹೇಳುತ್ತಾರೆ: "ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಒಂದು ಕಳಂಕ ಎಂದು ಮಹಾತ್ಮಾಜಿ ಘೋಷಣೆ ಹೊರಡಿಸುತ್ತಾರೆ. ಹಿಂದೂ ಸಮಾಜದಿಂದ ಅಸ್ಪೃಶ್ಯತೆಯನ್ನು ತೊಡೆದುಹಾಕದಿದ್ದರೆ ನಾವು ಎಂದಿಗೂ ಸ್ವರಾಜ್ಯವನ್ನು ಪಡೆಯಲು ಸಾಧ್ಯವೇ ಇಲ್ಲ ಎಂದು ಸ್ವಾಮಿ ಶ್ರದ್ಧಾನಂದರೂ, ಲಾಲಾ ಲಜಪತರಾಯ್ ಅವರೂ ಯಾವಾಗಲೂ ಹೇಳುತ್ತಲೇ ಬಂದಿದ್ದಾರೆ. ಕಳೆದ ಏಳು ವರ್ಷಗಳಿಂದ ಕಾಂಗ್ರೆಸ್ ಇದನ್ನು ತೊಲಗಿಸಬೇಕು ಎಂದು ನಿರ್ಣಯಗಳನ್ನು ಮಾಡುತ್ತಲೇ ಬಂದಿದೆ; ಆದರೆ ಈ ಎಲ್ಲ ಚಟುವಟಿಕೆಗಳ ಪರಿಣಾಮ ಏನಾಗಿದೆ? ಮೇಲೆ ಉಲ್ಲೇಖಿಸಿದ ಹೇಳಿಕೆಗಳಂತಹ ಮಾತುಗಳು ತುಂಬಾ ವಿದ್ಯಾವಂತರ ಬಾಯಿಗಳಿಂದ ಬರುತ್ತಲೇ ಇವೆ! ಅಸ್ಪೃಶ್ಯರು ದೇವಸ್ಥಾನವನ್ನು ಪ್ರವೇಶಿಸಲು ಅವಕಾಶವಿರಬೇಕು, ಸಾರ್ವಜನಿಕ ಕೆರೆಗಳು, ಭಾವಿಗಳು ಮೊದಲಾದವುಗಳ ಉಪಯೋಗ ಅವರಿಗೆ ದೊರಕಬೇಕು ಎಂದೆಲ್ಲ ಕಾಂಗ್ರೆಸಿನಲ್ಲಿ, ಹಿಂದೂ ಸಭೆಯಲ್ಲಿ ಠರಾವುಗಳನ್ನು ಮಾಡುತ್ತೇವೆ. ಆದರೆ, ಇವನ್ನು ಕಾರ್ಯಗತ ಮಾಡುವ ಸಮಯ ಬಂದಾಗ, ನಾವು ಅಸ್ಪೃಶ್ಯರನ್ನು ಹೀನಾಯವಾಗಿ ಕಾಣುತ್ತೇವೆ. ಅಷ್ಟೇ ಅಲ್ಲ, ಅವರ ಮೇಲೆ ಹಲ್ಲೆ ಮಾಡುತ್ತೇವೆ. ಕಾನೂನಿನ ಪ್ರಕಾರ ಅವರ ಮೇಲೆ ಕ್ರಮ ಜರುಗಿಸುತ್ತೇವೆ ಮತ್ತು ಅವರನ್ನು ಸೆರೆಮನೆಗೆ ಕಳುಹಿಸುತ್ತೇವೆ."

## ಅಂಶ–II

## ರತ್ನಗಿರಿ ಜಿಲ್ಲೆಯ ದಪೋಲಿಯಲ್ಲಿ ನಡೆದ ನಿಮ್ನ ವರ್ಗಗಳವರ ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯಗಳು

೧. (೧) ನಿಮ್ನ ವರ್ಗಗಳವರು ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಲು ನಿರಾಕರಿಸಿದುದಕ್ಕಾಗಿ ಈ ಜಿಲ್ಲೆಯ ಸವರ್ಣ ಹಿಂದೂಗಳು ಎನ್ನಿಸಿಕೊಂಡವರು ನಿಮ್ನ ವರ್ಗದವರಿಗೆ ಹಿಂಸೆ ಕೊಡುವ ಚಳವಳಿಯನ್ನೇ ನಡೆಸುತ್ತಿರುವುದರ ಬಗ್ಗೆ ಈ ಸಮ್ಮೇಳನವು ತನ್ನ ಕೋಪವನ್ನು ವ್ಯಕ್ತಪಡಿಸುತ್ತದೆ.

(ಆ) ಮೇಲಿನ ಜಾತಿಗಳ ಹಿಂದೂಗಳು ಎನ್ನಿಸಿಕೊಂಡವರು ನಿಮ್ನ ವರ್ಗದವರ ದನಕರುಗಳನ್ನು ಹಿಡಿದುಹಾಕಿ, ಅವರ ಮೇಲೆ ಹಲ್ಲೆ ನಡೆಸಿ, ಅವರ ವಿರುದ್ಧ ಕಟ್ಟುನಿಟ್ಟಾದ ಸಾಮಾಜಿಕ ಬಹಿಷ್ಕಾರವನ್ನು ಹಾಕಿ ಅವರು ಅಂಗಡಿಗಳಿಂದ ಜೀವನಕ್ಕೆ ಅಗತ್ಯವಾದ ಸಾಮಾನುಗಳನ್ನು ಪಡೆಯಲಾಗದಂತೆ ಮಾಡಿ ಅವರನ್ನು ದಬ್ಬಾಳಿಕೆ ಮತ್ತು ಅನ್ಯಾಯಗಳಿಗೆ ಬಲಿ ಮಾಡುತ್ತಿದ್ದಾರೆ; ಜಿಲ್ಲೆಗಳಲ್ಲಿ ಪೊಲೀಸ್ ಅಧಿಕಾರಿಗಳೂ ಮ್ಯಾಜಿಸ್ಟ್ರೇಟರೂ ನಿಮ್ನ ವರ್ಗಗಳವರಿಗೆ ರಕ್ಷಣೆ ನೀಡುವುದರ ಬದಲು ವ್ಯವಸ್ಥಿತವಾಗಿ ಅವರನ್ನು ನಿಂದಿಸುತ್ತಾರೆ ಎನ್ನುವುದನ್ನು ಕಂಡು ಸಮ್ಮೇಳನ ತೀವ್ರ ದುಃಖವನ್ನು ವ್ಯಕ್ತಪಡಿಸುತ್ತದೆ.

(ಇ) ವತನದಾರ ಮಹಾರರು ಸತ್ತ ಪ್ರಾಣಿಗಳನ್ನು ತಿನ್ನಲು ಮತ್ತು ಹೊರಲು, ಭಿಕ್ಷೆ ಬೇಡಲು ಮತ್ತಿತರ ಕೊಳಕು ಕೆಲಸಗಳನ್ನು ಮಾಡಲು ನಿರಾಕರಿಸಿದ್ದರಿಂದ ಮೇಲಿನ ಜಾತಿಗಳ ಹಿಂದೂಗಳು ಅವರಿಗೆ ಸಲ್ಲಬೇಕಾಗಿದ್ದ 'ಬಲೂಟ' ಸಂಭಾವನೆಯನ್ನು ಕಸಿದುಕೊಂಡಿದ್ದಾರೆ; ಇದನ್ನು ವತನದಾರ ಮಹಾರರಿಗೆ ಕೊಡಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕೆಂದು ಈ ಸಮ್ಮೇಳನವು ವಿನಂತಿ ಮಾಡುತ್ತದೆ.

೩. (ಅ) ಬಹುತೇಕ ಹಳ್ಳಿಗಳಲ್ಲಿ ನಿಮ್ನ ವರ್ಗದವರ ವಿರುದ್ಧ ಹಿಂಸಾಚಾರಕ್ಕೆ ಅವಕಾಶ ಕೊಡುವವರು ಪೊಲೀಸ್ ಪಟೇಲರೇ ಎಂದು ತಿಳಿದುಬಂದಿರುವುದರಿಂದ, ಇಂತಹ ಪೊಲೀಸ್ ಪಟೇಲರ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಪ್ರಾರ್ಥಿಸುತ್ತದೆ.

(ಆ) ನಿಮ್ನ ವರ್ಗದವರ ರಕ್ಷಣೆಗಾಗಿ ಪ್ರತಿ ಜಿಲ್ಲೆಯಲ್ಲಿ ನಿಮ್ನ ವರ್ಗದವರೇ ಆದ ಒಬ್ಬ ವಿಶೇಷ ಪೊಲೀಸ್ ಇನ್ಸ್‌ಪೆಕ್ಟರನ್ನು ನೇಮಿಸಬೇಕೆಂದೂ ಈ ವರ್ಗಗಳಿಂದ ಪೊಲೀಸ್ ಪಡೆಗೆ ನೇಮಕಾತಿ ಗಳನ್ನು ಮಾಡಬೇಕೆಂದೂ ಈ ಸಮ್ಮೇಳನವು ಸರ್ಕಾರವನ್ನು ಪ್ರಾರ್ಥಿಸುತ್ತದೆ.

(ಇ) ಪೀಡಿಸುವುದು, ಸಾಮಾಜಿಕ ಬಹಿಷ್ಕಾರ ಮತ್ತು ಬಹಿರಂಗ ಹಲ್ಲೆಗಳಿಂದ ವಾಡವಾಲ್, ಮಟ್ವನ್, ತುಳಸಿ, ದೇಗಾವ್, ಮಂದನಗಾಡ್, ಸತಾರ ಮೊದಲಾದ ಹಳ್ಳಿಗಳ ನಿಮ್ನ ವರ್ಗದವರಿಗೆ ವಾಸಿಸುವುದೇ ಅಸಾಧ್ಯವಾಗಿರುವುದರಿಂದ, ಈ ಹಳ್ಳಿಗಳಲ್ಲಿ ನಿಮ್ನ ವರ್ಗಕ್ಕೆ ಸೇರಿದ ನಿವೃತ್ತ ಸೈನ್ಯಾಧಿಕಾರಿಗಳ ನಾಯಕತ್ವದಲ್ಲಿ ಮೇಲುಜಾತಿಗಳ ಹಿಂದೂಗಳೆನ್ನಿಸಿಕೊಂಡವರಿಗೆ ದಂಡ ರೂಪದಲ್ಲಿ ಅವರ ವೆಚ್ಚದಲ್ಲಿ ಈ ಹಳ್ಳಿಗಳಲ್ಲಿ ಕೂಡಲೇ ಪೊಲೀಸರನ್ನಿಡಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಪ್ರಾರ್ಥಿಸುತ್ತದೆ.

೩. ನಿಮ್ನ ವರ್ಗದವರ ಹಿತಗಳಿಗೆ ಸೂಕ್ತ ರಕ್ಷಣೆ ಇಲ್ಲದೆ, ಭಾರತಕ್ಕೆ ಸ್ವಯಂ ಆಡಳಿತದ ಇನ್ನಾವ ಕಂತನ್ನು ನೀಡಕೂಡದೆಂದು ಈ ಸಮ್ಮೇಳನದ ದೃಢವಾದ ಅಭಿಪ್ರಾಯ.

## ಅಂಶ–೧೨
## (೨೦–೧೦–೨೭ರ 'ಬಾಂಬೆ ಕ್ರಾನಿಕಲ್'ನಿಂದ)
## (ಮುಂಬಯಿ ನಗರದಲ್ಲಿ ಪುರಸಭಾ ಶಾಲೆಗಳು)

ಕುಡಿಯುವ ಲೋಟಗಳ ಸಣ್ಣ ಪ್ರಶ್ನೆಗೆ ಬೆದರಿ ಶಾಲೆಗಳ ಸಮಿತಿ ಪರಿಹಾಸ್ಯಕ್ಕೆ ಈಡಾಗಿದೆ. ಪುರಸಭಾ ಶಾಲೆಗಳಲ್ಲಿ ಜಾತಿಭೇದವಿರತಕ್ಕದಲ್ಲ ಎಂದು ಕಾರ್ಪೋರೇಷನ್ ನಿರ್ಣಯಮಾಡಿದ್ದರೂ, 'ನಿಮ್ನ' ವರ್ಗದ ಮಕ್ಕಳಿಗೆ ನೀರು ಕುಡಿಯಲು ಪ್ರತ್ಯೇಕ ಲೋಟಗಳನ್ನು ಕೊಡಲಾಗುತ್ತಿದೆ ಎಂದು ಕಾಣುತ್ತದೆ. ಶಾಲೆಗಳ ಸಮಿತಿಯ ಒಂದು ಉಪಸಮಿತಿಯು ಎಲ್ಲ ಮಕ್ಕಳಿಗೂ ಅದೇ ಲೋಟಗಳನ್ನು ಕೊಡಬೇಕೆಂದು ಶಿಫಾರಸು ಮಾಡಿತು. ಆದರೆ, ಶಾಲೆಗಳ ಸಮಿತಿಯ ಸದಸ್ಯರು ಈ ವಿಷಯವಾಗಿ ಗಂಭೀರವಾಗಿ ಪರಿಶೀಲನೆ ಮಾಡಿದರು. ಎಲ್ಲ ಬಗೆಯ ಭಯಗಳನ್ನು ಅನುಭವಿಸಿದರು. ಕೆಲವರು ಈ ಬದಲಾವಣೆಯಿಂದ ಸವರ್ಣೀಯ ಹಿಂದೂಗಳಿಗೆ ಅಸಮಾಧಾನವಾಗುತ್ತದೆ ಎಂದರು. 'ಕೆಳ'ಜಾತಿಯ ಹಿಂದೂಗಳ ಅಸಮಾಧಾನಕ್ಕೆ ಬೆಲೆಯೇ ಇಲ್ಲ ಎನ್ನುವುದು ಸ್ಪಷ್ಟ. ಪ್ರೊ.ವಿ.ಜಿ.ರಾವ್ ಇದು ಕ್ರಾಂತಿಕಾರಕ ಬದಲಾವಣೆ ಎಂದರು. ಪ್ರಸಿದ್ಧ ಸಾಮಾಜಿಕ ಸುಧಾರಕರಾದ ಶ್ರೀ ಡಿ.ಜಿ. ದಲ್ವಿಯವರೇ ಈ ಭಯಗಳಿಗೆ ಒಂದು ಕಾನೂನಿನ ಭಯವನ್ನು ಪೋಣಿಸಿದರು– ಕೆಲವು ತಂದೆ–ತಾಯಿಯರು ಸಮಿತಿಯ ವಿರುದ್ಧ ನ್ಯಾಯಾಲಯಕ್ಕೆ ಹೋಗಬಹುದು ಎಂದು ಕಡೆಗೆ ಶಾಲಾ ಸಮಿತಿಯು ಪ್ರಶ್ನೆಯನ್ನು ಉಪಸಮಿತಿಗೆ ಹಿಂದಿರುಗಿಸಿತು. ಇದರ ಅರ್ಥ ಉಪಸಮಿತಿಯ ಶಿಫಾರಸು ಸಮಿತಿಗೆ ಒಪ್ಪಿಗೆಯಾಗುವುದಿಲ್ಲ ಎಂದು.

### ಉದ್ದೇಶಪೂರ್ವಕ ಅಪಮಾನ

ಮೇಲೆ ಹೇಳಿದ ಭಯಗಳು ಅಸಂಬದ್ಧ. ಏಕೆಂದರೆ, ಪ್ರತಿಯೊಬ್ಬ ಹುಡುಗನೂ ಸ್ವಚ್ಛತೆಯ ಕಾರಣಕ್ಕಾಗಿ ಮತ್ತು ಅವನ ಮನಸ್ಸು ಹಾಗಿದ್ದರೆ– ಜಾತಿಯ ಕಾರಣಕ್ಕಾಗಿ ಲೋಟವನ್ನು ಉಪಯೋಗಿಸುವ ಮೊದಲು ಚೆನ್ನಾಗಿ ತೊಳೆಯುತ್ತಾನೆ ಎಂಬುದೇ ನಿರೀಕ್ಷೆ. 'ಅಸ್ಪೃಶ್ಯ' ಹುಡುಗ ಒಂದು ಬಾರಿ ಲೋಟವನ್ನು ಬಳಸಿದರೆ, ಅದನ್ನು ಸ್ವಚ್ಛವಾಗಿ ತೊಳೆದರೂ ಅದೂ ಅಸ್ಪೃಶ್ಯವಾಗುತ್ತದೆ ಅಥವಾ 'ಮೇಲಿನ' ಜಾತಿಯ ಹಿಂದೂಗಳು ಬಳಸಲಾಗದುದಾಗುತ್ತದೆ ಎನ್ನುವುದು ನತದೃಷ್ಟ 'ಅಸ್ಪೃಶ್ಯ' ವರ್ಗಗಳಿಗೆ ಉದ್ದೇಶಪೂರ್ವಕವಾಗಿ ಮಾಡುವ ಅಪಮಾನ. ಇದನ್ನು ಶಾಲೆಯ ಸಮಿತಿ ಒಪ್ಪುತ್ತದೆ ಎಂದು ನಾವು ನಿರೀಕ್ಷಿಸಿರಲಿಲ್ಲ. ಶಿಕ್ಷಣವು ಕಡ್ಡಾಯವಾದುದರಿಂದ ಕೆಲವು ವಾರ್ಡ್‌ಗಳಲ್ಲಿ ತಂದೆ–ತಾಯಿಯರು "ಯಾವ ರೀತಿಯಲ್ಲೂ ಕಾನೂನುಬದ್ಧವಲ್ಲದ ಕರ್ತವ್ಯವನ್ನು ಬಲಾತ್ಕಾರ ಮಾಡುವುದಕ್ಕಾಗಿ" ಸಮಿತಿಯ ವಿರುದ್ಧ ನ್ಯಾಯಾಲಯಕ್ಕೆ ಹೋಗಬಹುದು ಎಂದು ಶ್ರೀ ದಲ್ವಿ ಹೇಳಿದರು. ಆದರೆ ಶಾಲೆಗಳಲ್ಲಿ ಎಲ್ಲರೂ ಬಳಸಬಹುದಾದ ಲೋಟವನ್ನು ಬಳಸುವುದು ಯಾರ ಕಡ್ಡಾಯವಾದ ಕರ್ತವ್ಯವೂ ಅಲ್ಲ. ಅತಿ ಕಟ್ಟುನಿಟ್ಟಿನ ಈ ತಂದೆ–ತಾಯಿಗಳು ತಮ್ಮ ಮಕ್ಕಳಿಗೆ ತಮ್ಮದೇ ಲೋಟಗಳನ್ನು ಕೊಟ್ಟು ತಮ್ಮ 'ಧರ್ಮ'ವನ್ನು ಉಳಿಸಿಕೊಳ್ಳಬಹುದು. 'ನಿಮ್ನ' ವರ್ಗದವರ ಮಟ್ಟಿಗಂತೂ ಅವರು ತಮ್ಮದೇ ಲೋಟಗಳನ್ನು ತಂದರೂ ಅಥವಾ ನ್ಯಾಯವನ್ನು ಕುರಿತು ಇನ್ನೂ ಒಳ್ಳೆಯ ವಿಚಾರಯುತ ಶಾಲೆಗಳಿಗೆ ಹೋದರೂ, ಅಪಮಾನವಂತೂ ಉಳಿದೇ ಉಳಿಯುತ್ತದೆ.

## ಭಾರತೀಯ ಶಾಸನಬದ್ಧ ಆಯೋಗದ ಮುಂದೆ

## ೧೯೨೮ರ ಅಕ್ಟೋಬರ್ ೨೧ರಂದು ಡಾ. ಅಂಬೇಡ್ಕರ್‌ರ ಸಾಕ್ಷ್ಯ

**ಭಾರತೀಯ ಶಾಸನಬದ್ಧ ಆಯೋಗ, ಪುಣೆ ***

**ಹಾಜರಿದ್ದವರು ರಾಜಾ ನವಾಬ್ ಆಲಿ ಖಾನರನ್ನು ಬಿಟ್ಟು ಆಯೋಗದ ಉಳಿದ ಎಲ್ಲ ಸದಸ್ಯರು, ಕೇಂದ್ರ ಸಮಿತಿಯ ಎಲ್ಲ ಸದಸ್ಯರು, ಮುಂಬಯಿ ಪ್ರಾಂತ ಸಮಿತಿಯ ಎಲ್ಲ ಸದಸ್ಯರು.**

(ಮುಂಬಯಿ ಸಮಿತಿಯ ಒಬ್ಬ ಸದಸ್ಯರಾದ) ಡಾ. ಬಿ. ಆರ್. ಅಂಬೇಡ್ಕರ್ ಮತ್ತು (ನಿಮ್ನ ವರ್ಗದ ಪ್ರತಿನಿಧಿಯಾಗಿ) ಡಾ. ಪಿ. ಜಿ. ಸೋಲಂಕಿ ಇವರನ್ನು ಬರಮಾಡಿಕೊಂಡು ಪ್ರಶ್ನಿಸಲಾಯಿತು.

ಅಧ್ಯಕ್ಷರು: ನನ್ನ ಸಹೋದ್ಯೋಗಿಗಳಿಗೆ ನೆನಪು ಕೊಡುವುದಕ್ಕಷ್ಟೇ ಈ ಮಾತು: ನಮ್ಮ ಮುಂದಿರಬೇಕಾದ ದಾಖಲೆಗಳು ಇವು: ಮುಂಬಯಿಯ ಡಿಪ್ರೆಸ್ಡ್ ಕ್ಲಾಸಸ್ ಇನ್ಸ್‌ಟಿಟ್ಯೂಟಿನ ಅಸೋಸಿಯೇಷನ್ ಮತ್ತು ದಿ ಸರ್ವೆಂಟ್ಸ್ ಆಫ್ ಸೋಮವಂಶೀ ಸೊಸೈಟಿಗಳ ಜಂಟಿ ವಿಜ್ಞಾಪನಾ ಪತ್ರ. ಡಾಕ್ಟರ್ ಅಂಬೇಡ್ಕರರು ತಮ್ಮ ಪೀಠವನ್ನು ಬದಲಾಯಿಸಿದ್ದಾರೆ. ಏಕೆಂದರೆ, ಈಗ ಅವರು ನಮ್ಮ ಮುಂದಿನ ಸಾಕ್ಷಿಗಳಲ್ಲೊಬ್ಬರಾಗಿದ್ದಾರೆ. ಡಾಕ್ಟರ್ ಅಂಬೇಡ್ಕರರು ಮುಂಬಯಿ ಸಮಿತಿಯ ಸದಸ್ಯರಾಗಿ ನಮಗೆಲ್ಲ ಪರಿಚಿತರು. ಡಾಕ್ಟರ್ ಸೋಲಂಕಿಯವರೆ, ಇನ್ನೊಂದು ದಾಖಲೆಯ ಜವಾಬ್ದಾರಿ ನಿಮ್ಮದೋ, ನಿಮ್ಮ ಸಂಘದ್ದೋ ಇರಬೇಕು ಎಂದು ನನ್ನ ಭಾವನೆ.

ಡಾ. ಸೋಲಂಕಿ: ಡಾ. ಅಂಬೇಡ್ಕರ್ ಸಲ್ಲಿಸಿರುವ ಮನವಿಯನ್ನು ನಾನು ಒಪ್ಪುತ್ತೇನೆ.

೨. ಈ ಪ್ರಾಂತದ ನಿಮ್ನ ವರ್ಗದವರ ಸಂಖ್ಯೆ ಸುಮಾರು ಎಷ್ಟಿರಬಹುದು ಎಂಬ ವಿಷಯದಲ್ಲಿ ನಮಗೆ ನೆರವಾಗಿ ನೀವು ಪ್ರಾರಂಭಿಸಬೇಕೆಂದು ನನ್ನ ಅಪೇಕ್ಷೆ. ಡಾ. ಅಂಬೇಡ್ಕರ್, ಈ ವಿಷಯದಲ್ಲಿ ನಮಗೆ ನೀವು ಸಹಾಯ ಮಾಡಬಲ್ಲಿರಾ?

ಡಾ. ಅಂಬೇಡ್ಕರ್: ಬೊಂಬಾಯಿ ಸರ್ಕಾರ ಸಲ್ಲಿಸಿರುವ ವಿಜ್ಞಾಪನಾ ಪತ್ರ (ಏಳನೇ ಸಂಪುಟದ) ಮೂರನೇ ಪುಟದಲ್ಲಿ ಅವರು ನಿಮ್ನ ವರ್ಗದವರ ಸಂಖ್ಯೆ ೧,೪೭೮,೩೯೦ ಎಂದು ಲೆಕ್ಕ ಹಾಕಿದ್ದಾರೆ ಎಂದು ನಾನು ನೋಡಿದ್ದೇನೆ.

೩. ನೋಡೋಣ. ಅವರು ಹೀಗೆ ಹೇಳುತ್ತಾರೆ: "ಬಹುಮಟ್ಟಿಗೆ ಧೇಡರು, ಮಂಗರು, ಮಹಾರರು ಮತ್ತು ಹೊಲೆಯರಿರುವ ನಿಮ್ನ ವರ್ಗದವರ ಸಂಖ್ಯೆ ೧೯೨೧ರ ಪ್ರಕಾರ, ಸುಮಾರು ೧,೪೭೮,೩೯೦'

*ಭಾರತೀಯ ಶಾಸನಬದ್ಧ ಆಯೋಗ, ಸಂಪುಟ XVI ಮನವಿಗಳಿಂದ ಮತ್ತು ಮೌಖಿಕ ಸಾಕ್ಷ್ಯದಿಂದ ಆಯ್ಕೆಗಳು ಭಾಗ–೧. ಚಕ್ರವರ್ತಿಗಳವರ ಪುಸ್ತಕ ಸಾಮಗ್ರಿಗಳ ಕಚೇರಿ, ಲಂಡನ್, ಇವರು ಪ್ರಕಟಿಸಿದ್ದು, ೧೯೩೦, ಪುಟಗಳು ೫೨–೭೫ ಈ ಆಯೋಗವನ್ನು ಜನ ಅದರ ಅಧ್ಯಕ್ಷ ಸರ್ ಜಾನ್ ಸೈಮನರ ಹೆಸರಿನಿಂದ ಕರೆಯುತ್ತಾರೆ.

ಈ ಸಂಖ್ಯೆಯ ವಿಷಯವಾಗಿ ನೀವೇನ್ನುವಿರಿ!

ಡಾ. ಬಿ. ಆರ್. ಅಂಬೇಡ್ಕರ್: ನೀವೇ ನೋಡುವಂತೆ ನನ್ನ ವಿಜ್ಞಾಪನಾ ಪತ್ರದ ೩೯ನೆ ಪುಟದಲ್ಲಿ ನಾನು ಕೊಟ್ಟಿರುವ ಸಂಖ್ಯೆ ಸುಮಾರು ೨೮ ಲಕ್ಷ.

೪. ಈ ಸಂಖ್ಯೆ ಸುಮಾರು ೨,೮೦೦,೦೦೦ ಇರಬೇಕೆಂದು ನಿಮ್ಮ ಅಭಿಪ್ರಾಯವೇ?

ಡಾ. ಅಂಬೇಡ್ಕರ್: ಹೌದು.

೫. ಈ ಸಂಖ್ಯೆಗಳಲ್ಲಿ ಹೊಂದಾಣಿಕೆ ಇಲ್ಲದಿರುವುದಕ್ಕೆ ಕಾರಣವೇನು?

ಡಾ. ಅಂಬೇಡ್ಕರ್: ಮೊಟ್ಟಮೊದಲನೆಯದಾಗಿ ನಾನು ಹೇಳಬಯಸುವುದು ಈ ಮಾತನ್ನು. ಮುಂಬಯಿ ಸರ್ಕಾರವು ಕೊಟ್ಟಿರುವ ಸಂಖ್ಯೆಗಳನ್ನು 'ಸೆನ್ಸಸ್ ಆಫ್ ಇಂಡಿಯ, ೧೯೩೧'ರ ಎಂಟನೆಯ ಸಂಪುಟ 'ಬಾಂಬೆ ಪ್ರೆಸಿಡೆನ್ಸಿ'ಯ ಎರಡನೆಯ ಭಾಗದಲ್ಲಿ ೧೭೬ನೆ ಪುಟದಲ್ಲಿ ಕೊಟ್ಟಿರುವ ಕೋಷ್ಟಕಗಳಿಂದ ತೆಗೆದುಕೊಂಡಿದೆ ಎಂದು ನನ್ನ ಭಾವನೆ. ನನ್ನ ಮನವಿಯಲ್ಲಿ ಕೊಟ್ಟಿರುವ ಸಂಖ್ಯೆಗಳನ್ನು 'ಸೆನ್ಸಸ್ ಆಫ್ ಇಂಡಿಯ, ೧೯೨೧'ರ ಮೊದಲನೆಯ ಸಂಪುಟದ ಎರಡನೆಯ ಅಧ್ಯಾಯದಿಂದ ತೆಗೆದುಕೊಂಡಿದ್ದೇನೆ. ಇವು ಜನಗಣತಿಯ ನಿರ್ದೇಶಕರ ಅಂದಾಜು ಅಂಕಿಗಳು. ಅವರು ಅಂಕಿಗಳನ್ನು ಬೇರೆ ಬೇರೆ ಪ್ರಾಂತಗಳಿಂದ ಪಡೆದಿದ್ದಾರೆ: ಅವರ ಲೆಕ್ಕಾಚಾರವನ್ನು ನಾನು ಹಾಗೆಯೇ ಎತ್ತಿಕೊಂಡು ನನ್ನ ಮನವಿಯ ೨೯ನೆಯ ಪುಟದಲ್ಲಿ 'ಭಾರತದಲ್ಲಿ ನಿಮ್ಮ ವರ್ಗದವರ ಜನಸಂಖ್ಯೆ' ಎನ್ನುವ ಶೀರ್ಷಿಕೆಯ ಕೆಳಗೆ ಕೊಟ್ಟಿದ್ದೇನೆ; ಈ ಲೆಕ್ಕಾಚಾರವು ಪ್ರತಿ ಪ್ರಾಂತದಲ್ಲಿ ನಿಮ್ನ ವರ್ಗದವರ ಸಂಖ್ಯೆಯನ್ನು ತೋರಿಸುತ್ತದೆ. ಸಂಖ್ಯೆಗಳ ಈ ಎರಡು ಸಂಗ್ರಹಗಳಲ್ಲಿ ವ್ಯತ್ಯಾಸವಿದೆ. ಪ್ರಾಂತದ ಸಂಖ್ಯೆಗಳಾಗಲಿ ಕೇಂದ್ರದ ಸಂಖ್ಯೆಗಳಾಗಲಿ ಕರಾರುವಾಕ್ಕಾಗಿ ಇರುವುದು ಸಾಧ್ಯವೇ ಇಲ್ಲ. ವಾಸ್ತವವಾಗಿ ನನ್ನ ಮನವಿ ಪತ್ರದ ೩೯ನೆಯ ಪುಟದಲ್ಲಿ ನಾನು ಉದ್ಧೃತ ಮಾಡಲು ಪ್ರಾರಂಭಿಸುವ ಭಾರತದ ಜನಗಣತಿಯ ನಿರ್ದೇಶಕರ ಮಾತುಗಳನ್ನು ಸಮ್ಮೇಳನ ಗಮನಿಸಿದರೆ ಅವರು ನಿಮ್ನ ವರ್ಗದವರ ಒಟ್ಟು ಜನಸಂಖ್ಯೆಯ ಅಂದಾಜನ್ನು ಕೊಟ್ಟು ಹೀಗೆ ಮುಂದುವರಿಯುತ್ತಾರೆ ಎನ್ನುವುದನ್ನು ಕಾಣಬಹುದು: (ಮನವಿಯ ೩೦ನೆಯ ಪುಟ ಇಟಾಲಿಕ್ಸ್ ಅಕ್ಷರಗಳಲ್ಲಿದೆ): "ಇದು ಕನಿಷ್ಠವಾದ ಮತ್ತು ಅತಿ ಎಚ್ಚರಿಕೆಯ ಅಂದಾಜು ಎಂದೇ ತೆಗೆದುಕೊಳ್ಳಬೇಕು. ಏಕೆಂದರೆ ಇದು (೧) ಸಂಬಂಧಿಸಿದ ಜಾತಿಗಳು ಮತ್ತು ಬಣಗಳ ಸಂಪೂರ್ಣ ಸಂಖ್ಯೆಯನ್ನಾಗಲಿ (೨) ಹಿಂದೂ ಧರ್ಮದಲ್ಲಿ ಈಚೆಗೆ ಸೇರಿಹೋದ ಗುಡ್ಡಗಾಡು ಮೂಲದ ಜನರನ್ನಾಗಲಿ (ಇವರು ಮೈಲಿಗೆಯ ಜನ ಎಂದೇ ಪರಿಗಣಿಸಲಾಗುತ್ತದೆ) ಒಳಗೊಂಡಿಲ್ಲ. ಮೈಲಿಗೆ ಎಂದು ಪರಿಗಣಿಸಲ್ಪಡುವ ಎಲ್ಲ ನಿಮ್ನ ವರ್ಗದವರ ಸಂಖ್ಯೆಯನ್ನು ಯಥಾರ್ಥವಾಗಿ ಭಾರತದಲ್ಲಿ ೫೫ರಿಂದ ೬೦ ದಶಲಕ್ಷಗಳ ನಡುವೆ ಎಂದು ಧೈರ್ಯವಾಗಿ ಹೇಳಬಹುದು." ಆನಂತರ ಅವರು ಪ್ರತಿ ಪ್ರಾಂತಕ್ಕೂ ಸಂಬಂಧಿಸಿದಂತೆ ಅಂಕಿಗಳನ್ನು ಕೊಟ್ಟಿದ್ದಾರೆ.

೬. ನಿಖರವಾದ ಅಂಕಿಗಳತ್ತ ನೋಡದೆ, ಎರಡು ಗ್ರಹಿಕೆಗಳ ವ್ಯತ್ಯಾಸವನ್ನು ಗಮನಿಸಿ ನನ್ನ ಮನಸ್ಸಿನಲ್ಲಿ ಸ್ಪಷ್ಟ ಮಾಡಿಕೊಳ್ಳಲು ಪ್ರಯತ್ನಿಸಿದರೆ ನಿಮಗೆ ಬೇಸರವಿಲ್ಲವಲ್ಲ? ಜನಗಣತಿಯಷ್ಟು ನಿಖರವಾಗಿ ಕೆಲವು ಅಧಿಕಾರಿಗಳು ೧,೪,೭೮,೦೦೦ರಂತಹ ಒಟ್ಟು ಸಂಖ್ಯೆಯನ್ನು ಕೊಟ್ಟು, ಇನ್ನು ಕೆಲವು ಅಧಿಕಾರಿಗಳು ಅಷ್ಟೇ ನಿಖರವಾಗಿ ಮಾತನಾಡುತ್ತ ೨,೮೦೦,೦೦೦ರಂತಹ ಒಟ್ಟು ಸಂಖ್ಯೆಯನ್ನು ಕೊಟ್ಟರೆ, ಎರಡನೆಯವರು ಮೊದಲನೆಯವರು ಸೇರಿಸಿಕೊಳ್ಳದಿದ್ದ ಜನರನ್ನು ಸೇರಿಸಿಕೊಂಡು ಲೆಕ್ಕ ಹಾಕಿದ್ದಾರೆಂಬುದು ಸ್ಪಷ್ಟ ಅಲ್ಲವೆ?

ಡಾ. ಅಂಬೇಡ್ಕರ್: ಅದು ನಿಜ. ಆದುದರಿಂದ, ವಾಸ್ತವವಾಗಿ ಅಸ್ಪೃಶ್ಯ ವರ್ಗದವರಾದ ಹಲವು ಜಾತಿಗಳವರನ್ನು ಪ್ರಾಂತದ ಅಂಕಿಗಳಲ್ಲಿ ಸೇರಿಸಿಲ್ಲ ಎಂದು ಸಮ್ಮೇಳನದ ಗಮನಕ್ಕೆ ತರಲು ಬಯಸುತ್ತೇನೆ.

೭. ಹೀಗೆ ಹೇಳಬಹುದೆ? ನನ್ನ ಗ್ರಹಿಕೆ ಸರಿಯೇ ನೋಡಿ, ಸರಿಯಾಗಿಲ್ಲದಿದ್ದರೆ ದಯವಿಟ್ಟು ಹೇಳಿ. ನಿಮ್ಮ ಮತ್ತು ಡಾ. ಸೋಲಂಕಿಯವರ ನೆರವಿಗಾಗಿ ಕಾಯುತ್ತಿದ್ದೇನಾದರೂ ನನ್ನಿಂದಾದಷ್ಟು ಇದನ್ನು ಅಧ್ಯಯನ ಮಾಡಿದ್ದೇನೆ. 'ನಿಮ್ನ ವರ್ಗದವರು' ಎಂದರೆ ಒಂದು ಅರ್ಥ ಹಿಂದೂಗಳ ದೇವಾಲಯಕ್ಕೆ ಪ್ರವೇಶಾವಕಾಶ ಇಲ್ಲದವರು ಎನ್ನಬಹುದಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು

೮. ಇನ್ನೊಂದು ಅರ್ಥದಲ್ಲಿ 'ನಿಮ್ನ ವರ್ಗದವರು' ಎಂದರೆ ನಾನು ಆಗಲೇ ಹೇಳಿದವರನ್ನು ಮಾತ್ರವಲ್ಲದೆ ಅಪರಾಧಿ ಬಣಗಳವರು, ಗುಡ್ಡಗಾಡು ಜನ ಮತ್ತು ಶ್ರೇಣಿಯಲ್ಲಿ ಬಹು ಕೆಳಗಿದ್ದರೂ ಪ್ರಾಯಶಃ ಹಿಂದೂಗಳ ಶ್ರೇಣೀಕೃತ ವ್ಯವಸ್ಥೆಯ ದೃಷ್ಟಿಯಿಂದ ಸಂಕುಚಿತ ಅರ್ಥದಲ್ಲಿ ಅಸ್ಪೃಶ್ಯರಲ್ಲದವರು, ಇವರನ್ನೆಲ್ಲ ಸೇರಿಸಬಹುದಲ್ಲವೆ!

ಡಾ. ಬಿ. ಆರ್. ಅಂಬೇಡ್ಕರ್: ನಿಜ.

೯. ಈ ದೃಷ್ಟಿ ಸಾಧ್ಯ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಸಾಧ್ಯ.

೧೦. ಕೆಲವು ಸಂದರ್ಭಗಳಲ್ಲಿ ನಿಮ್ನ ವರ್ಗದವರು ಎಂದಾಗ ಅಸ್ಪೃಶ್ಯರು, ಹಿಂದೂ ದೇವಾಲಯಗಳಿಗೆ ಪ್ರವೇಶ ಇಲ್ಲದವರು ಎಂಬ ಅರ್ಥದಲ್ಲಿ ನಿಮ್ನ ವರ್ಗದವರ ಸಂಖ್ಯೆ ಎಂದು ಒಂದು ಅಂಕಿ, ಬೇರೆ ಸಂದರ್ಭಗಳಲ್ಲಿ ಅಪರಾಧಿ ಮತ್ತಿತರ ಬಣಗಳವರನ್ನು ಸೇರಿಸಿಕೊಂಡು ಇನ್ನೊಂದು ದೊಡ್ಡ ಅಂಕಿ ಬರುವುದಕ್ಕೆ ಇದೇ ವಾಸ್ತವವಾದ ವಿವರಣೆ, ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಈ ಸಂದರ್ಭದಲ್ಲಿ ಹೀಗಾಗಿದೆ ಎಂದು ನನಗೆ ಎನ್ನಿಸುವುದಿಲ್ಲ. ಏಕೆಂದರೆ ನಾನು ಕೊಟ್ಟಿರುವ ಅಂಕಿಗಳು, ಗುಡ್ಡಗಾಡಿನ ಜನ ಮತ್ತು ಅಪರಾಧೀ ಬಣಗಳನ್ನು ಬಿಟ್ಟು ಸ್ಪಷ್ಟವಾಗಿ ನಿಮ್ನ ವರ್ಗದವರದು ಎಂದು ಕಾಣುತ್ತದೆ.

೧೧. ಈ ಅಂಶವನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ನನ್ನ ಮುಂದೆ ಮೂರು ಸಂಖ್ಯೆಗಳಿವೆ. ೧೯೨೧ರ ಜನಗಣತಿಯಿಂದ ಬಂದ ಸಂಖ್ಯೆ ೧,೪೭೮,೦೦೦ ಮೇಲೊಂದಿಷ್ಟು; ಇದರಲ್ಲಿ ಮಹಾರರು, ಧೇಡರು, ಇತರರು ಸೇರಿದ್ದಾರೆ. ಅಪರಾಧಿ ಬಣಗಳವರು ಮತ್ತಿತರರೆಲ್ಲ ಸೇರಿದ ದೊಡ್ಡ ಪಟ್ಟಿಯೊಂದಿದೆ. ಈ ಸಂಖ್ಯೆ ೫೪೯,೦೦೦– ಐದು ಲಕ್ಷಕ್ಕಿಂತ ಸ್ವಲ್ಪ ಹೆಚ್ಚು. ಆಮೇಲೆ ಮೂರನೆಯ ಪಟ್ಟಿ ಇದೆ– ಆದಿವಾಸಿಗಳು, ಭಿಲ್ಲರು ಮತ್ತೆ ಅಂತಹ ಗುಡ್ಡಗಾಡು ಜನರು, ಇವರೆಲ್ಲ ಸೇರಿ ಇನ್ನು ಹತ್ತು ಲಕ್ಷ ಮೊದಲ ಸಂಖ್ಯೆಗೆ ಆದಿವಾಸಿಗಳ ಮತ್ತು ಅಪರಾಧಿ ಬಣಗಳನ್ನು ಸೇರಿಸಿದರೆ, ಸರಿಸುಮಾರಾಗಿ ನೀವು ಕೊಟ್ಟ ೨,೮೦೦,೦೦೦ರ ಸಂಖ್ಯೆ ಆಗುತ್ತದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನನ್ನ ೩೯ನೆಯ ಪುಟದಲ್ಲಿ ಜನಗಣತಿಯ ನಿರ್ದೇಶಕರ ಹೇಳಿಕೆಗಳಿಂದ ಉದ್ಧರಿಸಿರುವ ಭಾಗವು ನನಗೆ ಅವರ ಅಂಕಿ ನಿಮ್ನ ವರ್ಗಗಳವರದು ಮಾತ್ರವೇ ಎಂಬ ಭಾವನೆಯನ್ನು ಉಂಟುಮಾಡುತ್ತದೆ. ಜನಗಣತಿಯ ನಿರ್ದೇಶಕರು ಲೆಕ್ಕ ಹಾಕಿ, ನನ್ನ ೩೯ನೆಯ ಪುಟದಲ್ಲಿ ನಾನು ಉದ್ಧರಿಸಿರುವ ಪ್ಯಾರಾದಲ್ಲಿ ಅವರು ಪ್ರಸ್ತಾಪಿಸುವ ಸಂಖ್ಯೆ ನಿಮ್ನ ವರ್ಗಗಳವರಿಗೆ ಮಾತ್ರ ಅನ್ವಯಿಸುತ್ತದೆ ಎಂದು ನನಗೆ ತೋರುತ್ತದೆ.

೧೨. ೧೯೨೧ರ ಭಾರತದ ಜನಗಣತಿಯ ನಿರ್ದೇಶಕರು ಹೀಗೆ ಹೇಳಿರುವುದು ನನ್ನ ಮುಂದಿದೆ: "ಇತ್ತೀಚೆಗಿನ ವರ್ಷಗಳಲ್ಲಿ ಈ ಜಾತಿಯ ಒಂದು ವಿಭಾಗದವರನ್ನು 'ನಿಮ್ನ ವರ್ಗದವರು' ಎಂದು ಕರೆಯುವುದು ವಾಡಿಕೆಯಾಗಿದೆ– ನನಗೆ ತಿಳಿದ ಮಟ್ಟಿಗೆ ಈ ಪದಕ್ಕೆ ಕಟ್ಟಕಡೆಯ ವಿವರಣೆ ಎಂಬುದಿಲ್ಲ. ಅದು ಯಾರಿಗೆ ಅನ್ವಯಿಸುತ್ತದೆ ಎನ್ನುವುದು ಖಚಿತವಿಲ್ಲ." ಈ ಹೇಳಿಕೆಯಿಂದ ನಿಮ್ನ ವರ್ಗದವರಲ್ಲಿ ಗುಡ್ಡಗಾಡು ಜನರನ್ನು ಸೇರಿಸಿಲ್ಲ ಎಂದು ಭಾಸವಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು. "ನಿಮ್ನ ವರ್ಗದವರೆಂದು ಈ ಪಟ್ಟಿಗಳಿಗೆ ಅನುಗುಣವಾಗಿ ವರ್ಗೀಕರಿಸಿರುವ ಒಟ್ಟು ಜನರ ಸಂಖ್ಯೆ ೩೧ ದಶಲಕ್ಷ ಅಥವಾ ಬ್ರಿಟಿಷ್ ಭಾರತದ ಹಿಂದೂ ಮತ್ತು ಗುಡ್ಡಗಾಡು ಜನಾಂಗದ ಜನಸಂಖ್ಯೆಯ ಶೇಕಡಾ ೧೯ರಷ್ಟು" ಈ ಹೇಳಿಕೆಯಿಂದ ಗುಡ್ಡಗಾಡು ಜನರನ್ನು ನಿಮ್ನ ವರ್ಗಗಳ ವರ್ಗದಿಂದ ಹೊರಗಿಟ್ಟಂತೆ ಕಾಣುತ್ತದೆ.

೧೩. ನನಗೆ ಸ್ಪಷ್ಟವಿಲ್ಲ. ಅಂತೂ ಇದು ಒಂದು ಸಾಧ್ಯವಾದ ವಿವರಣೆ; ನಾನು ವಿವರಿಸಲು ಪ್ರಯತ್ನಿಸಿದ ಅರ್ಥದಲ್ಲಿನ ಅಂಕಿಯೇ ಕಡಿಮೆಯ ಅಂಕಿ ಎನ್ನುವ ಒಂದು ವಿವರಣೆ ಸಾಧ್ಯ ಎಂದು ನೀವು ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ಅನೇಕ ಉದ್ದೇಶಗಳಿಗಾಗಿ, ಅತ್ಯಂತ ಕೀಳು ಸ್ಥಿತಿಯಲ್ಲಿರುವವರ ಮುನ್ನಡೆ ಮತ್ತು ಮೇಲ್ಮೆಯನ್ನು ಬಹುವಾಗಿ ಬಯಸುವವರು ತಮ್ಮ ಸಮೀಕ್ಷೆ ಅಪರಾಧಿ ಮತ್ತು ಗುಡ್ಡಗಾಡು ಬಣಗಳವರನ್ನು ಒಳಗೊಂಡಂತೆ ಹೆಚ್ಚು ಜನರನ್ನು ಸೇರಿಸಬಹುದು ಎನ್ನುವುದು ಸ್ಪಷ್ಟವಾಗಿದೆ. ಅದೂ ಸಾಧ್ಯ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಅದೂ ಸಾಧ್ಯ.

೧೪. ನಿಮಗೆ ಇನ್ನೊಂದು ಸಾಧ್ಯವಾದ ದೃಷ್ಟಿಕೋನವನ್ನು ಸೂಚಿಸಬಯಸುತ್ತೇನೆ. ನಿಮ್ಮ ೩ನೆಯ ಪುಟದಲ್ಲಿ, ಪ್ರಾಂತೀಯ ಅಂಕಿಗಳನ್ನು ಸೇರಿಸಿದರೆ ಭಾರತದಲ್ಲಿ ಒಟ್ಟು ಸುಮಾರು ೫೫ರಿಂದ ೬೦ ದಶಲಕ್ಷಗಳ ಮೊತ್ತ ಬರುತ್ತದೆ ಎಂದು ನೀವು ತೋರಿಸಿದ್ದೀರಲ್ಲವೆ! ನಿಮ್ಮ ಹೇಳಿಕೆ ಕರಾರುವಾಕ್ಕಾಗಿದೆ ಎಂದೇ ನನ್ನ ಅನಿಸಿಕೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೫. 'ಯಥಾರ್ಥವಾದ ಭಾರತ' ಎಂದರೆ, ದೇಶೀಯ ಸಂಸ್ಥಾನಗಳೂ ಸೇರುತ್ತವೆ ಎಂದು ನನಗೆ ತೋರುತ್ತದೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ನಾನು ಅದನ್ನು ಯೋಚಿಸಿದೆ. ಆದರೆ, ನಾನು ಒಂದು ಅಂಶದತ್ತ ಗಮನ ಸೆಳೆಯಲು ಬಯಸುತ್ತೇನೆ. ಅವರು ಬರೋಡಕ್ಕೆ ಪ್ರತ್ಯೇಕ ಅಂಕಿಯನ್ನು ಕೊಡುತ್ತಾರೆ. ಆದ್ದರಿಂದ ಅವರು ದೇಶೀಯ ಸಂಸ್ಥಾನಗಳನ್ನು ಸೇರಿಸಿಲ್ಲ ಎಂದು ಕಾಣುತ್ತದೆ.

೧೬. ಪ್ರಾಯಶಃ ಅವರು ಒಂದೆರಡು ದೊಡ್ಡ ಸಂಸ್ಥಾನಗಳನ್ನು ಹೆಸರಿಸಿದ್ದಾರೇನೋ?

ಡಾ. ಬಿ. ಆರ್. ಅಂಬೇಡ್ಕರ್: ಇರಬಹುದು.

೧೭. ಅಂಕಿ ಸಂಖ್ಯೆಗಳ ಚರ್ಚೆಯಲ್ಲೆ ಹೆಚ್ಚು ಕಾಲವನ್ನು ನಾವು ಕಳೆಯಬೇಕಾಗಿಲ್ಲ. ಏಕೆಂದರೆ ಸರಿಯಾದ ಅಂಕಿ ಹದಿನೈದು ಲಕ್ಷವಾಗಲಿ, ಇಪ್ಪತ್ತು ಲಕ್ಷವಾಗಲಿ, ಇಪ್ಪತ್ತೈದು ಲಕ್ಷವಾಗಲಿ ಬಹುದೊಡ್ಡ ಸಂಖ್ಯೆಯ ಜನ ಅವರು ಮತ್ತು ಅವರಿಗೆ ಅತ್ಯಂತ ವಿಶೇಷವಾದ ಸಹಾನುಭೂತಿ ಅಗತ್ಯ ಎಂಬುದು ಸ್ಪಷ್ಟ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನಾನು ಪ್ರಸ್ತಾಪಿಸಬೇಕೆಂದಿರುವ ಒಂದು ಅಂಶ ಇದು. ಪ್ರಾಂತಗಳ ಲೆಕ್ಕಾಚಾರಕ್ಕೆ ಆರಿಸಿಕೊಂಡ ಅಂಕಿಗಳು ಮುಖ್ಯವಾದ ಭಾರತೀಯ ಜಾತಿಗಳಿಗೆ ಮಾತ್ರ ಸಂಬಂಧಿಸಿದ ಕೋಷ್ಟಕದಲ್ಲಿದೆ. ಅದು ಸಮಗ್ರವಾದ ಕೋಷ್ಟಕವಲ್ಲ. ಈ ಕೋಷ್ಟಕವನ್ನು ನಾನು ಪರಿಶೀಲಿಸಿದಾಗ ನಿಸ್ಸಂದೇಹವಾಗಿಯೂ ಅಸ್ಪೃಶ್ಯ ಜಾತಿಗಳೇ ಆದ ಹತ್ತು ಜಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ಅಂಕಿಗಳನ್ನು ಕೊಟ್ಟಿಲ್ಲ. ಎನ್ನುವುದನ್ನು ನೋಡಿದೆ. ಅವನ್ನು ಮುಖ್ಯವಾದ ಭಾರತೀಯ ಜಾತಿಗಳಲ್ಲಿ ಸೇರಿಸಿಲ್ಲ.

೧೮. ನಿಮ್ಮಿಬ್ಬರಿಗೂ ಒಪ್ಪಿಗೆಯಾಗುವ ಹಾಗಿದ್ದರೆ, ನಾನು ಈ ಸೂಚನೆಯನ್ನು ಮಾಡಬೇಕೆಂದಿದ್ದೇನೆ. ಸಂಖ್ಯೆಗಳಿಗೆ ಸಂಬಂಧಿಸಿದಂತೆ ಮುಖ್ಯವಾಗಿ ಗಮನಿಸಬೇಕಾದ ಅಂಶವನ್ನು ನೀವು ಪ್ರಸ್ತಾಪಿಸಿದ್ದೀರಿ. ನಿಖರವಾದ ಅಂಕಿಗಳನ್ನು ನಿರ್ಧರಿಸಿ ಆದಷ್ಟು ಬೇಗ ಈ ಸಂಖ್ಯೆಗಳ ವಿಷಯವನ್ನು ಮುಗಿಸುವುದು ಒಳ್ಳೆಯದು ಎಂದು ತೋರುತ್ತದೆ; ಅನಂತರ ನಾವು ಈ ವರ್ಗಗಳ ಸ್ಥಿತಿ ಮತ್ತು ಅವನ್ನು ಕಾಣುವ ರೀತಿ ಈ ಪ್ರಶ್ನೆಗಳಿಗೆ ಹೋಗಬಹುದು. ಈ ವಿಷಯ ನಾನು ಕೇಳಬೇಕಾದುದನ್ನು ಕೇಳಿದ್ದೇನೆ. ಕಟ್ಟುನಿಟ್ಟಾಗಿ ಪರೀಕ್ಷಿಸಿದರೆ ೧೫ ಲಕ್ಷದ ಸಂಖ್ಯೆ ಬರಬಹುದು. ಇನ್ನೂ ವಿಸ್ತಾರವಾಗಿ ಪರಿಗಣಿಸಿದರೆ ಇಪ್ಪತ್ತು ಲಕ್ಷ ಅಥವಾ ಇಪ್ಪತ್ತೈದು ಲಕ್ಷ ಎನ್ನುವ ಸಂಖ್ಯೆ ಬರಬಹುದು ಎಂದು ಭಾವಿಸಲು ನಾನು ಸಿದ್ಧ. ನನಗೆ ಅರ್ಥವಾದಮಟ್ಟಿಗೆ ನೀವೂ ಇದನ್ನು ಒಪ್ಪುತ್ತೀರಿ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಆದರೆ, ಈ ಒಂದು ಮಾತನ್ನು ಸೇರಿಸಬೇಕು– ಬೊಂಬಾಯಿಯ ಅಂಕಿಗಳಲ್ಲಿ ಹತ್ತು ಜಾತಿಗಳು ಸೇರಿಲ್ಲ.

ಅಧ್ಯಕ್ಷರು: ನಾವು ನಿಜವಾಗಿ ಮುಖ್ಯವಾಗಿರುವ ವಿಷಯಕ್ಕೆ ಬರಬೇಕು, ಈ ಅಂಕಿಅಂಶಗಳ ವಿಷಯಕ್ಕೆ ಇನ್ನಷ್ಟು ಸಮಯ ಕೊಡಬೇಕೆಂದು ಯಾರಿಗಾದರೂ ಎನ್ನಿಸುತ್ತದೆಯೆ? ಅಂಕಿಅಂಶಗಳ ಬಗ್ಗೆ ನಿಮ್ಮ ಒಪ್ಪಿಗೆ ಇದೆಯೆ, ಮಿ. ರಾಜ?

ರಾವ್ ಬಹದ್ದೂರ್ ರಾಜ: ಯಾವ ಅಂಕಿಅಂಶಗಳು?

ಅಧ್ಯಕ್ಷರು: ನಿಜವಾಗಿ ಮುಖ್ಯವಾದ ಪ್ರಶ್ನೆ ಅವರ ಪ್ರಾತಿನಿಧ್ಯದ ಪ್ರಶ್ನೆ. ಅದಕ್ಕೆ ನಾವು ಹೋಗಬಹುದು. ಎಂದು ನಿಮಗೆ ತೋರುವುದಿಲ್ಲವೆ? ಅಂಕಿಗಳ ವಿಷಯ ಈ ರೀತಿ ಎಂದುಕೊಳ್ಳಬಹುದು; ೧೯೨೧ರ ಜನಗಣತಿಯ ಬೊಂಬಾಯಿ ಪ್ರಾಂತಕ್ಕೆ ೧೫ ಲಕ್ಷ ಸಂಖ್ಯೆಯನ್ನು ತೋರಿಸಿದೆ; ಆದರೆ, ಇದು ನಾನು ಹೇಳಿದ ಕಟ್ಟುನಿಟ್ಟಾದ ಅರ್ಥದಲ್ಲಿ ನಿಮ್ಮ ವರ್ಗಗಳಿಗೆ ಸೇರಿದವರದಲ್ಲ ಎಂದು ಕಾಣುತ್ತದೆ; ಡಾಕ್ಟರ್ ಅಂಬೇಡ್ಕರ್ ಹೇಳಿದಂತೆ, ನೀವು ಇನ್ನೂ ವಿಶಾಲವಾದ ಆದರೆ, ನ್ಯಾಯವೇ ಆದ ದೃಷ್ಟಿಯನ್ನು ತಳೆದರೆ, ಅಧಿಕಾರಯುತವಾದ ವಾಸ್ತವ ಸಂಖ್ಯೆ ಇಪ್ಪತ್ತರಿಂದ ಮೂವತ್ತು ಲಕ್ಷ ಇರಬಹುದು ಎಂದು ತೋರಿಸುತ್ತದೆ. ನಾನು ನಿರೂಪಿಸಿದ ರೀತಿ ನ್ಯಾಯ ತಾನೆ?

ರಾವ್ ಬಹದ್ದೂರ್ ರಾಜ: ಸರಿ.

ಅಧ್ಯಕ್ಷರು: ಇದರ ವಿಷಯವಾಗಿ ಯಾರಾದರೂ ಇನ್ನೇನಾದರೂ ಹೇಳುವುದಿದೆಯೆ?

೧೯. ಕರ್ನಲ್ ಲೇನ್ ಫ್ಯಾಕ್ಸ್: ನಮಗೆ ಬಂದಿರುವ ಎರಡು ಮನವಿಗಳಿಗೆ ಆಧಾರ ಯಾವ ಸಂಖ್ಯೆ? ಪ್ರತಿ ಮನವಿಯಲ್ಲೂ ನೀವು ನಿಮ್ಮ ವರ್ಗಗಳವರಿಗೆ ವಿಶೇಷ ಪ್ರಾತಿನಿಧ್ಯ ಬೇಕೆಂದು ಕೇಳಿದ್ದೀರಿ. ಒಂದು ಮನವಿಯಲ್ಲಿ ವಯಸ್ಕರ ಮತದಾನದ ಹಕ್ಕು ಬೇಕೆಂದು ಕೇಳುತ್ತೀರಿ. ಸೈನ್ಯ, ನೌಕಾದಳ ಮೊದಲಾದವುಗಳಲ್ಲಿ ವಿಶೇಷ ನೇಮಕಾತಿ ಮೊದಲಾದುವನ್ನೆಲ್ಲ ಕೇಳುತ್ತೀರಿ. ನೀವು ಇದನ್ನು ಆದಿ

ವಾಸಿಗಳು, ಅಪರಾಧಿ ಬುಡಕಟ್ಟುಗಳು ಮತ್ತಿತರರಿಗೂ ಬೇಕೆಂದು ಕೇಳಿದರೆ ಇದು ಅತಿ ಯಾಯಿತು ಎನ್ನುವುದು ಸ್ಪಷ್ಟ. ಈ ಸೌಕರ್ಯಗಳನ್ನೇ ನೀವು ಕೇಳುವುದು ಬಹುಸಂಖ್ಯಾತರಿಗೋ ಅಲ್ಪ ಸಂಖ್ಯಾತರಿಗೋ?

ಡಾ. ಬಿ. ಆರ್. ಅಂಬೇಡ್ಕರ್: ಅವು ನಿಮ್ನ ವರ್ಗಗಳವರಿಗೆ ದೊರೆಯಬೇಕು ಎಂದು ನಾನು ಕೇಳುತ್ತೇನೆ.

೨೦. ಆದಿವಾಸಿಗಳು ಮತ್ತು ಅಪರಾಧಿ ಬುಡಕಟ್ಟುಗಳವರಿಗೂ ಸಹ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ಅವರಿಗೆ ವಯಸ್ಕರ ಮತದಾನದ ಹಕ್ಕನ್ನು ಕೊಡಲು ಸಾಧ್ಯ ಎಂದು ನನಗೆ ಎನ್ನಿಸುವುದಿಲ್ಲ.

೨೧. ಆದರೆ ನೀವು ದೊಡ್ಡ ಸಂಖ್ಯೆಯನ್ನೇ ಪ್ರಸ್ತಾಪಿಸುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ನಾನು ನನ್ನ ಮನವಿಯಲ್ಲಿ ಕೊಟ್ಟ ಸಂಖ್ಯೆಯಲ್ಲಿ ಆದಿವಾಸಿಗಳು, ಗುಡ್ಡಗಾಡು ಬುಡಕಟ್ಟುಗಳವರೂ ಸೇರಿದ್ದಾರೆ ಎಂಬ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತಿಲ್ಲ. ಸರಿಯಾಗಿ ಲೆಕ್ಕ ಹಾಕಿದರೆ ನಾನು ಕೊಟ್ಟ ಸಂಖ್ಯೆಯು ನಿಮ್ನ ವರ್ಗದವರ ಸಂಖ್ಯೆಯೇ ಎಂದೇ ಇನ್ನೂ ನನ್ನ ಅಭಿಪ್ರಾಯ. ಇನ್ನೊಂದು ದೃಷ್ಟಿಯೂ ಸಾಧ್ಯ ಎಂದಷ್ಟೇ ನಾನು ಒಪ್ಪುತ್ತೇನೆ.

ಅಧ್ಯಕ್ಷರು: ನಾನು ಇನ್ನೊಂದು ಸಂಗತಿಯನ್ನು ಮಾತ್ರ ಸೇರಿಸಬಹುದು. ಸರ್ ಆರ್ಥರ್ ಫ್ರೂಮ್ ಅವರು ಅದನ್ನು ದೃಢೀಕರಿಸಬಹುದು. ಮಡಿಮನ್ ಸಮಿತಿ (ಸುಧಾರಣಾ ವಿಚಾರಣಾ ಸಮಿತಿ, ೧೯೨೫) ತಮ್ಮ ವರದಿಯ ೬೪ನೆಯ ಪುಟದಲ್ಲಿ ಕೊಟ್ಟಿರುವ ಕೋಷ್ಟಕದಲ್ಲಿ ಈ ಸಂಖ್ಯೆಯನ್ನು ೨,೮೦,೦೦೦ ಎಂದು ತೋರಿಸಿದ್ದಾರೆ ಎಂದು ನೋಡಿದ್ದೇನೆ.

೨೨. ಸರ್ ಹರಿಸಿಂಗ್ ಗೌರ್: ಡಾ. ಅಂಬೇಡ್ಕರ್ 'ನಿಮ್ನ ವರ್ಗಗಳವರು' ಮತ್ತು 'ಅಸ್ಪೃಶ್ಯರು' ಎನ್ನುವುವು ಒಂದೇ ಅರ್ಥದ ಪದಗಳು ಎಂದು ನೀವು ಭಾವಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೩. ನಿಮ್ನ ವರ್ಗದವರಿಗೆ ವಿಶೇಷ ಪ್ರಾತಿನಿಧ್ಯ ಇರಬೇಕೆಂದು ನೀವು ಹೇಳುವಾಗ ನೀವು ಅಸ್ಪೃಶ್ಯರ ಮಟ್ಟಿಗೆ ಮಾತ್ರ ಹೇಳುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೪. ಕೆಲವರು ಆದಿವಾಸಿಗಳು ಅಸ್ಪೃಶ್ಯರಲ್ಲ, ಅಪರಾಧಿ ಬುಡಕಟ್ಟುಗಳವರು ಅಸ್ಪೃಶ್ಯರಲ್ಲ, ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಅವರಲ್ಲಿ ಕೆಲವರು ಅಸ್ಪೃಶ್ಯರು.

೨೫. ಕೆಲವರು ಮಾತ್ರ; ಆದರೆ ಬುಡಕಟ್ಟೆ ಅಸ್ಪೃಶ್ಯವಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಅಪರಾಧಿ ಬುಡಕಟ್ಟುಗಳಿಗೆ ಇತರ ಹಿಂದೂಗಳೊಡನೆ ಎಷ್ಟು ಸ್ವಲ್ಪ ಸಾಮಾಜಿಕ ಸಂಬಂಧ ಇದೆ ಎಂದರೆ, ಆ ವಿಷಯದಲ್ಲಿ ಯಾವುದೇ ಖಚಿತವಾದ ಅಭಿಪ್ರಾಯಕ್ಕೂ ಆಧಾರವಿಲ್ಲ. ಆದರೆ, ಅವರಿಗೆ ಅಂತಹ ಸಂಬಂಧಗಳಿದ್ದಿದ್ದರೆ ಅವರನ್ನು ಅಸ್ಪೃಶ್ಯರೆಂದೇ ಪರಿಗಣಿಸಲಾಗುತ್ತಿತ್ತು ಎಂದು ನನ್ನ ಭಾವನೆ.

೨೬. ಹಾಗಾದರೆ ಕೆಲವು ವರ್ಗಗಳು ಸ್ಪೃಶ್ಯತೆ–ಅಸ್ಪೃಶ್ಯತೆಗಳ ಮಧ್ಯೆ ಇವೆ?

ಡಾ. ಬಿ. ಆರ್. ಅಂಬೇಡ್ಕರ್: ಅವು ಅಸ್ಪೃಶ್ಯರಿಗಿಂತ ಕೆಳಗಿವೆ ಎಂದು ನಾನು ಹೇಳುವುದು.

೨೮. ಅಲ್ಲ. ಅತಿ ಅಸ್ಪೃಶ್ಯವಾಗಿರುವ ವರ್ಗವೊಂದು ಸಾಮಾಜಿಕ ಶ್ರೇಣಿಯಲ್ಲಿ ಇನ್ನೂ ಮೊದಲಿದೆಯಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೇಳಲಾರೆ. ನಾನು ಹೇಳುವುದಿದು: ಅಪರಾಧಿ ಬುಡಕಟ್ಟುಗಳವರು ಅಸ್ಪೃಶ್ಯರೇ ಅಲ್ಲವೇ ಎಂದು ಹೇಳುವುದಕ್ಕೆ ನಮಗೆ ಮಾಹಿತಿಯೇ ಇಲ್ಲ. ಏಕೆಂದರೆ ಹಿಂದೂಗಳಲ್ಲಿ ಬಹು ಭಾಗದವರಿಗೂ ಅಪರಾಧಿ ಬುಡಕಟ್ಟುಗಳವರಿಗೂ ತೀರ ಸ್ವಲ್ಪ ಸಂಪರ್ಕವಿದೆ.

೨೯. ಅಪರಾಧಿ ಬುಡಕಟ್ಟುಗಳು ಮತ್ತು ಆದಿವಾಸಿಗಳ ಮಾತನ್ನು ಬಿಡಿ; ಈಗ ನಾನು ಅಸ್ಪೃಶ್ಯರ ವಿಷಯ ಮಾತನಾಡುತ್ತಿದ್ದೇನೆ. ಈ ಅಸ್ಪೃಶ್ಯರಲ್ಲಿಯೇ ಅಸ್ಪೃಶ್ಯತೆಯ ಬೇರೆ ಬೇರೆ ಪ್ರಮಾಣಗಳಿವೆ ಅಲ್ಲವೆ? ಅವರಲ್ಲೆ ಅರೆ ಅಸ್ಪೃಶ್ಯರು ಎನ್ನಬಹುದಾದವರು ಕೆಲವರಿದ್ದಾರೆ, ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: (ಇಬ್ಬರೂ ಸಾಕ್ಷಿಗಳೂ) ಇಲ್ಲ.

೩೦. ನಿಮಗೊಂದು ಉದಾಹರಣೆಯನ್ನು ಕೊಡುತ್ತೇನೆ. ಚಮ್ಮಾರನ ಸ್ಥಾನವೇನು?

ಡಾ. ಬಿ. ಆರ್. ಅಂಬೇಡ್ಕರ್: ಅವನು ಅಸ್ಪೃಶ್ಯ.

೩೧. ಮಹಾರ್‌ನಷ್ಟೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೩೨. ನಿಮಗೆ ಖಚಿತವಾಗಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು; ಸಾರ್ವಜನಿಕ ನೀರು ಹಾಗೂ ದೇವಾಲಯದ ವಿಷಯವನ್ನೇ ಮಾನಕವನ್ನಾಗಿ ತೆಗೆದುಕೊಂಡರೆ ಅದು ಸರಿ.

೩೩. ಅಲ್ಲ, ಅಸ್ಪೃಶ್ಯತೆ ಎಂದರೆ ನನ್ನ ಅರ್ಥ ಮುಟ್ಟಿದರೆ ಮೇಲಿನ ಜಾತಿಯ ಹಿಂದೂವಿಗೆ ಮೈಲಿಗೆ ಉಂಟು ಮಾಡುವವನು.

ಡಾ. ಬಿ. ಆರ್. ಅಂಬೇಡ್ಕರ್: ದೇವಾಲಯದೊಳಕ್ಕೆ ಹೋಗುವುದು ಅಥವಾ ನೀರನ್ನು ತೆಗೆದುಕೊಳ್ಳುವ ಅವಕಾಶ ಇವನ್ನು ನೀವು ಮಾನದಂಡವನ್ನಾಗಿ ಇಟ್ಟುಕೊಳ್ಳಬಹುದು.

ಅಧ್ಯಕ್ಷರು: ನಾವಿಲ್ಲಿ ಸಂವಿಧಾನ ಮತ್ತು ರಾಜಕೀಯಕ್ಕೆ ಸಂಬಂಧಿಸಿದ ವಿಚಾರಣೆಯಲ್ಲಷ್ಟೆ ತೊಡಗಿದ್ದೇವೆ. ಸಾಮಾಜಿಕ ಪದ್ಧತಿ ಮತ್ತು ಆಳವಾಗಿ ಬೇರು ಬಿಟ್ಟಿರುವ ಧಾರ್ಮಿಕ ಸಂಪ್ರದಾಯಗಳು ಯಾವುದೇ ಆಯೋಗವು ರಾತ್ರಿಯಿಂದ ಬೆಳಗಿನೊಳಗೆ ತೆಗೆದುಹಾಕಿಬಿಡಬಹುದಾದ ಸಂಗತಿಗಳಲ್ಲ; ಅದು ಸ್ಪಷ್ಟವಾಗಿಯೇ ಇದೆ. ಇದೆಲ್ಲದರ ಸಾರಾಂಶ ಇಷ್ಟೆ: ಒಂದು ಅರ್ಥದಲ್ಲಿ ನಿಮ್ಮ ವರ್ಗಗಳವರೆಂದರೆ ಅಸ್ಪೃಶ್ಯರು; ಇವರಿಗೆ ಹಿಂದೂ ದೇವಾಲಯಗಳಿಗೆ ಪ್ರವೇಶವಿಲ್ಲ; ಬಹುಮಟ್ಟಿಗೆ ಇವರು ಧರ್ಮಶಾಲೆಗಳು, ಶಾಲೆಗಳು ಮತ್ತು ಇಂತಹ ಇತರ ಸೌಲಭ್ಯಗಳಿಂದ ವಂಚಿತರು ಎಂದೂ ಸೂಚಿಸಲಾಗಿದೆ. ಇದಲ್ಲದೆ, ರಾಜಕೀಯವಾಗಿ ಮತ್ತು ರಾಜ್ಯಾಂಗಕ್ಕನುಗುಣವಾಗಿ ಹೇಳುವುದಾದರೆ, ಸರ್ ಹರಿಸಿಂಗ್ ಗೌರ್ ಅವರು ಹೇಳಿದ ಹಾಗೆ ಅಪರಾಧಿ ಬುಡಕಟ್ಟುಗಳವರು, ಗುಡ್ಡಗಾಡು ಇಂತಹವರು ಇದ್ದಾರೆ. ಇವರು ನಾಗರಿಕತೆಯಲ್ಲಿ ಅಷ್ಟೇನೂ ಮೇಲಿನ ಶ್ರೇಣಿಯಲ್ಲಿ ಇಲ್ಲದವರು. ಆದರೆ, ಇವರು ಭಾರತದ ನಿವಾಸಿಗಳಾದ್ದರಿಂದ ನಾವು ಅವರ ವಿಷಯಕ್ಕೆ ಗಮನ ಕೊಡಲೇಬೇಕು ಎಂಬುದನ್ನು ನಾವು ಒಪ್ಪೋಣ.

ಸರ್ ಹರಿಗೌರ್ ಸಿಂಗ್: ಹಿಂದೂಗಳಲ್ಲಿ ನಾಲ್ಕು ವರ್ಣಗಳು. ಶೂದ್ರರೂ ದೇವಾಲಯದೊಳಕ್ಕೆ ಹೋಗುವ ಹಾಗಿಲ್ಲ...

ಅಧ್ಯಕ್ಷರು: ನಮಗೆಲ್ಲರಿಗೂ ಅದು ಅರ್ಥವಾಗಿದೆ. ಆದರೆ ನಮ್ಮ ಕೆಲಸ ಹಿಂದೂಧರ್ಮಕ್ಕೆ ಶಾಸನ ಗಳನ್ನು ಮಾಡುವುದಲ್ಲ. ಬ್ರಿಟಿಷ್ ಭಾರತದ ರಾಜ್ಯಾಂಗ ರಚನೆಯನ್ನು ಪರಿಶೀಲಿಸುವುದು; ಇದು ತೀರ ಭಿನ್ನವಾದ ವಿಷಯ.

೩೪. ಆ ಅಂಕಿಯನ್ನೆ ಇಟ್ಟುಕೊಂಡು ಹೇಳುವುದಾದರೆ, ಭಾರತದ ರಾಜ್ಯಾಂಗ, ಅದರಲ್ಲೂ ಮುಖ್ಯವಾಗಿ ಮುಂಬಯಿ ಪ್ರಾಂತದ ರಾಜ್ಯಾಂಗವು ಈ ಜನರಿಗೆ ನ್ಯಾಯವಾಗಿ ಏನು ಮಾಡಬೇಕು ಎಂದು ನಿಮ್ಮ ಅಭಿಪ್ರಾಯ?

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮ್ಮ ಮುಂದಿಡಬೇಕಾದ ಮೊದಲನೆಯ ಅಂಶವೊಂದಕ್ಕೆ ನಾನು ಹಿಂದೂಗಳಿಂದ ಬೇರೆಯೇ ಆದ ಅಲ್ಪಸಂಖ್ಯಾತರು ಎಂದು ನಮ್ಮನ್ನು ಪರಿಗಣಿಸಬೇಕೆಂದು ಕೇಳು ತ್ತಿದ್ದೇನೆ. ನಮ್ಮನ್ನು ಹಿಂದೂ ಸ್ವರೂಪದಲ್ಲಿ ಮರೆಮಾಚಿದಂತಾಗಿದೆ. ಆದರೆ, ವಾಸ್ತವವಾಗಿ ಹಿಂದೂ ಧರ್ಮ ದವರಿಗೂ ನಿಮ್ಮ ವರ್ಗದವರಿಗೂ ಸಂಬಂಧವೇ ಇಲ್ಲ. ಆದ್ದರಿಂದ ನಾನು ಈ ಸಮ್ಮೇಳನದ ಮುಂದೆ ಒತ್ತಿ ಹೇಳಬೇಕೆಂದಿರುವ ಮೊದಲನೆಯ ವಿಷಯವೆಂದರೆ, ನಮ್ಮನ್ನು ಪ್ರತ್ಯೇಕವಾದ ಮತ್ತು ಅಲ್ಪಸಂಖ್ಯಾತ ವರ್ಗ ಎಂದೇ ಪರಿಗಣಿಸಬೇಕು. ಎರಡನೆಯದಾಗಿ ನಾನು ಹೇಳಬಯಸುವುದು ಬ್ರಿಟಿಷ್ ಭಾರತದ ಬೇರೆ ಯಾವುದೇ ಅಲ್ಪಸಂಖ್ಯಾತ ವರ್ಗಕ್ಕಿಂತ ನಿಮ್ಮ ವರ್ಗಗಳ ಅಲ್ಪಸಂಖ್ಯಾತರಿಗೆ ಹೆಚ್ಚಿನ ರಾಜಕೀಯ ರಕ್ಷಣೆಯ ಅಗತ್ಯವಿದೆ. ಏಕೆಂದರೆ, ಈ ವರ್ಗ ವಿದ್ಯಾಭ್ಯಾಸದಲ್ಲಿ ತೀರ ಹಿಂದುಳಿದಿದೆ. ಆರ್ಥಿಕವಾಗಿ ಹೀನ ಸ್ಥಿತಿಯಲ್ಲಿದೆ. ಸಾಮಾಜಿಕವಾಗಿ ದಾಸ್ಯದಲ್ಲಿದೆ ಮತ್ತು ಬೇರೆ ಯಾವ ಜಾತಿಗೂ ಇಲ್ಲದ ಕೆಲವು ಗಂಭೀರ ವಾದ ರಾಜಕೀಯ ಅನನುಕೂಲಗಳಿಂದ ನರಳುತ್ತಿದೆ. ಇದಲ್ಲದೆ ನಾನು ಹೇಳಬೇಕೆಂದಿರುವುದು ಮಹಮದೀಯ ಅಲ್ಪಸಂಖ್ಯಾತರು ರಾಜಕೀಯ ರಕ್ಷಣೆಗಾಗಿ ನೀಡುವ ಆಧಾರಗಳನ್ನೇ ನಾವೂ ನಮ್ಮ ರಾಜಕೀಯ ರಕ್ಷಣೆಗಾಗಿ ನೀಡುತ್ತೇವೆ. ವಯಸ್ಕ ಮತದಾನದ ಹಕ್ಕಿನೊಂದಿಗೆ ಮೀಸಲಾತಿ ಸ್ಥಾನಗಳಿಗಾಗಿ ನಾವು ಒತ್ತಾಯಿಸುತ್ತೇವೆ.

೩೫. ವಯಸ್ಕರ ಮತದಾನ ಇಲ್ಲವಾದರೆ?

ಡಾ. ಬಿ. ಆರ್. ಅಂಬೇಡ್ಕರ್: ಹಾಗಿದ್ದಲ್ಲಿ ಪ್ರತ್ಯೇಕ ಮತದಾನ ಕ್ಷೇತ್ರವನ್ನು ಕೇಳುತ್ತೇನೆ. ಇದರೊಂದಿಗೆ ಸಾಧ್ಯವಾದರೆ, ರಾಜ್ಯಾಂಗದಲ್ಲಿ ಅಥವಾ ಗವರ್ನರಿಗೆ ನೀಡುವ ಮಾರ್ಗದರ್ಶನ ಪತ್ರದಲ್ಲಿ ನಿಮ್ಮವರ್ಗದವರಿಗೆ ಶಿಕ್ಷಣ ಮತ್ತು ಸಾರ್ವಜನಿಕ ಸೇವಾ ಇಲಾಖೆಗಳಲ್ಲಿ ಅವರ ಪ್ರವೇಶ ಇವುಗಳ ವಿಷಯದಲ್ಲಿಯೂ ಕೆಲವು ರಕ್ಷಣೆಗಳನ್ನು ಅಪೇಕ್ಷಿಸುತ್ತೇವೆ.

೩೬. ಡಾ. ಸೋಲಂಕಿಯವರು ಈ ಅಂಶವನ್ನು ಒಪ್ಪುತ್ತಾರೆಯೇ ಎಂದು ಕೇಳಬಹುದೆ?

ಡಾ. ಸೋಲಂಕಿ: ನಾನು ಎಲ್ಲ ಅಂಶಗಳನ್ನೂ ಒಪ್ಪುತ್ತೇನೆ.

೩೭. ಹಾಗಾದರೆ ಇದೇ ನಿಮ್ಮಿಬ್ಬರ ಅಭಿಪ್ರಾಯವೋ ಎಂದು ನಾವು ಭಾವಿಸಬಹುದೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೩೮. ನಾವು ಈ ಸಂದರ್ಭದಲ್ಲಿ ನಾನು ಒಂದೆರಡು ಪ್ರಶ್ನೆಗಳನ್ನು ಕೇಳಬಹುದೆ? ನಿಮ್ಮ ವರ್ಗಗಳ ವರನ್ನು ಒಂದು ಅರ್ಥದಲ್ಲಿ ಹಿಂದೂ ಧರ್ಮದಲ್ಲಿ ಸೇರಿಸಿದರೂ ರಾಜ್ಯಾಂಗದಲ್ಲಿ ಅವರನ್ನು ಹಿಂದೂ ಧರ್ಮದಲ್ಲಿರುವ ಇತರರಿಂದ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಲ್ಪಸಂಖ್ಯಾತ ವರ್ಗವೆಂದೇ ಪರಿಗಣಿಸ ಬೇಕು ಎಂದು ನೀವು ಹೇಳುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೩೯. ಹಿಂದೂ ಧರ್ಮದ ಮೇಲಿನ ವರ್ಗಗಳಲ್ಲಿರುವವರು ತಮ್ಮ ಹಿತಾಸಕ್ತಿಗಳನ್ನು ಸಮರ್ಪಕ ವಾಗಿ ಪ್ರತಿನಿಧಿಸುವರೆಂದು ನಿಮ್ಮ ವರ್ಗದವರು ನಿರೀಕ್ಷಿಸಲು ಸಾಧ್ಯವಿಲ್ಲ ಎನ್ನುವುದು ಇದಕ್ಕೆ ಕಾರಣವೇ?

ಡಾ. ಬಿ. ಆರ್. ಅಂಬೇಡ್ಕರ್: ಅದು ಒಂದು ಕಾರಣ. ಆದರೆ, ವಾಸ್ತವವಾಗಿ ನಮ್ಮನ್ನು ನಾವು ಹಿಂದೂ ಧರ್ಮದ ಒಂದು ಭಾಗ ಎಂದು ಪರಿಗಣಿಸುವುದು ಸಾಧ್ಯವೇ ಇಲ್ಲ.

೪೦. ಈ ಖಂಡದಲ್ಲಿ ಮೊದಲೇ ವಾಸಿಸುತ್ತಿದ್ದ ಜನಾಂಗದ ಸಂತತಿ ನೀವು ಎಂದು ನನ್ನ ನಂಬಿಕೆ, ಇದು ಸರಿಯೇ?

ಡಾ. ಬಿ. ಆರ್. ಅಂಬೇಡ್ಕರ್: ಅದು ಒಂದು ಅಭಿಪ್ರಾಯ ಎಂದು ನನಗೆ ಎನಿಸುತ್ತದೆ.

೪೧. ವಿವರಗಳಿಗೆ ಹೋಗುವುದು ಬೇಡ; ನೀವು ಆರ್ಯರಿಗಿಂತ ಪೂರ್ವಕಾಲದವರು ಎಂದು ಭಾವನೆ ಇದೆಯಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ತಿಳಿಯದು. ಅದೂ ಒಂದು ಅಭಿಪ್ರಾಯ.

* * * *

೪೩. ನಿಮ್ಮನ್ನು ಈ ಪ್ರಶ್ನೆ ಕೇಳಿದುದಕ್ಕೆ ಕಾರಣ ಕೆಲವರು ಬಹು ಖ್ಯಾತ ಹಿಂದೂಗಳು, ಸಾರ್ವ ಜನಿಕ ಜೀವನದಲ್ಲಿರುವವರು– ನಾನು ಹೆಸರುಗಳನ್ನು ಹೇಳುವುದಿಲ್ಲ– ನಿಮ್ಮವರ್ಗದವರ ವಿಷಯ ದಲ್ಲಿ ನಿಸ್ಸಂದೇಹವಾಗಿಯೂ ಬಹು ಆಸಕ್ತಿಯನ್ನು ತೋರಿಸಿದ್ದಾರೆ. ಈ ವಿಷಯದಲ್ಲಿ ಪ್ರಶ್ನೆ ಇಲ್ಲ, ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಬೇಕಾದಷ್ಟು ಜನ ಸಾರ್ವಜನಿಕವಾಗಿ ಮಾತನಾಡುತ್ತಾರೆ.

೪೪. ನನಗೆ ಗೊತ್ತು. ಆದರೆ, ಒಟ್ಟಿನಲ್ಲಿ ನಿಮ್ಮ ಅಭಿಪ್ರಾಯ ಇದು. ರಾಜ್ಯಾಂಗದ ದೃಷ್ಟಿಯಲ್ಲಿ ನಿಮ್ಮನ್ನು ಪ್ರತ್ಯೇಕವಾದ ಮತ್ತು ವಿಶಿಷ್ಟವಾದ ಸಮುದಾಯ ಎಂದೇ ಪರಿಗಣಿಸಬೇಕು ಎಂದು ನೀವು ಹೇಳುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೪೫. ಪ್ರಾತಿನಿಧ್ಯದ ವಿಷಯಕ್ಕೆ ಬಂದರೆ, ವಯಸ್ಕರ ಮತದಾನದ ಹಕ್ಕು ಇರಲಿ, ಇಲ್ಲದಿರಲಿ ನೀವು ನಾಮಕರಣದ ವಿಚಾರವನ್ನು ಬಿಟ್ಟುಕೊಟ್ಟಂತೆ ಕಾಣುತ್ತದೆ. ನಿಮಗೆ ಚುನಾವಣೆಯೇ ಬೇಕೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೪೬. ನಿಮ್ಮಿಬ್ಬರ ಅಭಿಪ್ರಾಯವೂ ಅದೇ?

ಡಾ. ಸೋಲಂಕಿ: ಹೌದು.

೪೭. ಎಂದರೆ, ಮತದಾರರ ಪಟ್ಟಿಯನ್ನು ಸಿದ್ಧಮಾಡಬೇಕೆಂದು ಅರ್ಥ ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೪೮. ಅಲ್ಲದೆ, ಮತದಾನ ಮಾಡಲು ಬಂದ ವ್ಯಕ್ತಿ ಮತದಾರರ ಪಟ್ಟಿಯಲ್ಲಿದ್ದಾನೆ. ಬೇರೆ ಅಲ್ಲ ಎಂದು ಖಚಿತ ಮಾಡಿಕೊಳ್ಳಬೇಕಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೪೯. ಡಾ. ಬಿ. ಆರ್. ಅಂಬೇಡ್ಕರ್, ನೀವು ನಿಮ್ಮವರ್ಗದವರು ಎಂದು ಕರೆಯುವವರಲ್ಲಿ ನೂರಕ್ಕೆ ಎಷ್ಟು ಮಂದಿ ಓದಬಲ್ಲರು ಎಂದು ಏನಾದರೂ ಅಂದಾಜು ಹೇಳಬಲ್ಲಿರ?

ಡಾ. ಬಿ. ಆರ್. ಅಂಬೇಡ್ಕರ್: ಮುಂಬಯಿ ಪ್ರಾಂತದಲ್ಲಿ ವಿದ್ಯಾಭ್ಯಾಸವನ್ನು ಕುರಿತು ನಾನು ಆಯೋಗಕ್ಕೆ ಸಲ್ಲಿಸಿರುವ ಪ್ರತ್ಯೇಕ ಮನವಿಯಲ್ಲಿ ಅಂಕಿಗಳನ್ನು ಕೊಟ್ಟಿದ್ದೇನೆ.

೫೦. ಅದು ಬಹು ಸಣ್ಣ ಪ್ರಮಾಣ ಎಂದು ನನಗೆನ್ನಿಸುತ್ತದೆ, ಸರಿಯೆ?

ಡಾ. ಬಿ. ಆರ್. ಅಂಬೇಡ್ಕರ್: ನಿಜವಾಗಿ.

೫೧. ಉಳಿದ ಅದೃಷ್ಟವಂತರಿಗೆ ದೊರೆತ ಹಾಗೆ ಅವರಿಗೆ ಶಾಲೆಗಳಿಗೆ ಪ್ರವೇಶ ದೊರೆಯಲಿಲ್ಲ ಎನ್ನುವುದು ಒಂದು ದೂರಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ನಿಜ.

೫೨. ಎಂದರೆ, ಚುನಾವಣೆಯನ್ನು ಮಾಡುವುದಾದರೆ, ಅದರಲ್ಲಿ ಭಾಗವಹಿಸುವವರು ಸ್ವಲ್ಪ ಹೆಚ್ಚು ಕಡಿಮೆ ಅವರೆಲ್ಲರೂ ಸ್ವತಃ ಮತಪತ್ರವನ್ನು ಓದಲು ಬಾರದವರೇ ಎಂದು ಅರ್ಥ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಮತದಾರರಲ್ಲಿ ಬಹು ಜನರ ಬಗ್ಗೆ ಈ ಮಾತು ಇಂದೂ ನಿಜ.

೫೩. ನಿಜವೆ. ನಿಮ್ಮವರ್ಗದವರಿಗೆ ಮುಂಬಯಿ ಪ್ರಾಂತದಲ್ಲಿ ಎಷ್ಟು ಸ್ಥಾನಗಳು ಮೀಸಲಿರಬೇಕೆಂದು ನಿಮ್ಮ ಸಲಹೆ, ದಯೆಯಿಟ್ಟು ಹೇಳುವಿರಾ?

ಡಾ. ಬಿ. ಆರ್. ಅಂಬೇಡ್ಕರ್: ನಾನು ಸಿದ್ಧಗೊಳಿಸಿದ ಯೋಜನೆಯಲ್ಲಿ ೧೪೦ ಸ್ಥಾನಗಳಲ್ಲಿ ನಮಗೆ ೨೨ ಇರಬೇಕೆಂದು ಹೇಳಿದ್ದೇನೆ.

೫೪. ಎಂದರೆ, ಮುಂಬಯಿ ಪರಿಷತ್ತಿನಲ್ಲಿ ೧೪೦ ಸ್ಥಾನಗಳಿದ್ದು, ಎಲ್ಲ ಚುನಾಯಿತ ಸ್ಥಾನಗಳೇ. ಆದರೆ ನೀವು ಪ್ರತಿನಿಧಿಸುವ ಸಮುದಾಯಕ್ಕೆ ೨೨ ಚುನಾಯಿತ ಸ್ಥಾನಗಳಿರಬೇಕೆಂದು ನಿಮ್ಮ ಸಲಹೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೫೫. ನೀವು ಸೂಚಿಸಿದ ಇನ್ನೊಂದು ವಿಧಾನವನ್ನು ತೆಗೆದುಕೊಂಡರೆ, ವಯಸ್ಕ ಮತದಾನದ ಹಕ್ಕು ಇಲ್ಲವಾದರೆ, ನೀವು ಪ್ರತ್ಯೇಕ ಮತಕ್ಷೇತ್ರಗಳನ್ನು ಕೇಳುತ್ತೀರಿ. ಆಗಲೂ ನಿಮಗೆ ೨೨ ಸ್ಥಾನಗಳು ಬೇಕಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೫೬. ಇನ್ನೊಂದೇ ವಿಷಯ ಕೇಳುತ್ತೇನೆ. ಸಾಮಾಜಿಕ ಸ್ಥಿತಿಯನ್ನು ಸ್ಪಷ್ಟಗೊಳಿಸಲು ಶ್ರೀ ರಾಜ ಅವರು ಸಂತೋಷದಿಂದ ಕೆಲವು ಪ್ರಶ್ನೆಗಳನ್ನು ಕೇಳುತ್ತಾರೆ ಎಂದುಕೊಂಡಿದ್ದೇನೆ. ಈಗ ಮುಂಬಯಿ ವಿಧಾನಸಭೆಯಲ್ಲಿ ನಿಮ್ಮ ವರ್ಗದವರ ಪ್ರತಿನಿಧಿಗಳಾಗಿ ನಾಮಕರಣವಾದವರು ಇಬ್ಬರಿದ್ದಾರೆ, ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೫೭. ಅವರಲ್ಲಿ ನೀವು ಒಬ್ಬರು?

ಡಾ. ಬಿ. ಆರ್. ಅಂಬೇಡ್ಕರ್: ನಿಜ.

೫೮. ಇನ್ನೊಬ್ಬರು ಡಾ. ಸೋಲಂಕಿಯವರು?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೫೯. ಅದಕ್ಕೆ ಸೌತ್ ಬರೊ ಸಮಿತಿಯ ವರದಿಯೇ ಆಧಾರವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ನಾನು ಹಾಗೆಂದುಕೊಂಡಿದ್ದೇನೆ.

೬೦. ನೀವು ಸೌತ್ ಬರೊ ಸಮಿತಿಯ ಮುಂದೆ ಸಾಕ್ಷ್ಯ ನೀಡಿದವರು ಎಂದು ನನ್ನ ನಂಬಿಕೆ, ಇದು ಸರಿಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೬೧. ಸಮಿತಿಯ ಮುಂದೆ ನೀವು ನೀಡಿದ ಸಾಕ್ಷ್ಯವನ್ನು ಓದುತ್ತಿದ್ದೇನೆ. ನಿಮ್ಮ ವರ್ಗದವರ ಸಂಖ್ಯೆ ಎಷ್ಟು ಎಂದು ನೀವು ಹೇಳಿದ್ದಿರಿ ಎಂದು ಹುಡುಕುತ್ತಿದ್ದೆ. ನಿಮ್ಮ ವಿಜ್ಞಾಪನಾಪತ್ರದಲ್ಲಿ ೩ನೆಯ ಪುಟದಡಿಯ ಟಿಪ್ಪಣಿಯಲ್ಲಿ ನೀವು ಸೌತ್ ಬರೊ ಸಮಿತಿ ಮುಂಬಯಿ ಪ್ರಾಂತದಲ್ಲಿ ೫,೭೭,೦೦೦ ಜನ ನಿಮ್ಮ ವರ್ಗದವರಿದ್ದಾರೆ ಎಂದು ಹೇಳಿರುವ ಬಗ್ಗೆ ಗಮನ ಸೆಳೆದಿದ್ದೀರಿ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೬೨. ನಿಮ್ಮ ದೃಷ್ಟಿಯಲ್ಲಿ ಅದು ತಪ್ಪು, ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಬಹು ದೊಡ್ಡ ತಪ್ಪು.

೬೩. ವಾಸ್ತವವಾಗಿ ಅವರಿಗೆ ಆ ಅಂಕಿ ಹೇಗೆ ಬಂದಿತು ಎಂದು ನೀವು ಹೇಳಬಲ್ಲಿರಾ? ನಿಮಗೆ ಗೊತ್ತೇನು?

ಡಾ. ಬಿ. ಆರ್. ಅಂಬೇಡ್ಕರ್: ಮೈಲಿಗೆ ಎಂದು ಪರಿಗಣಿಸುವ ಜಾತಿಗಳನ್ನು ಕುರಿತು ಒಂದು ಸಣ್ಣ ಕೋಷ್ಟಕವನ್ನು ಬಳಸಿಬಿಟ್ಟರು ಅಷ್ಟೇ ಎಂದು ನನಗೆ ಕಾಣುತ್ತದೆ.

೬೪. ನಿಮ್ಮ ವರ್ಗದವರೆಂದರೆ ಯಾರು ಎನ್ನುವ ವಿಷಯದಲ್ಲಿ ಸಮಿತಿ ಇನ್ನೂ ಸಂಕುಚಿತ ದೃಷ್ಟಿಯನ್ನಿಟ್ಟುಕೊಂಡಿತ್ತೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೬೫. ಶ್ರೀ ಹ್ಯಾರಿಸ್ ಹಾರ್ನ್: ಸೌತ್ ಬರೊ ಸಮಿತಿಯ ೫,೭೭,೦೦೦ ಎನ್ನುವ ಅಂಕಿಯನ್ನು ಪ್ರಸ್ತಾಪಿಸಿದ ನಂತರ ನೀವು "ಸೌತ್ ಬರೊ ಸಮಿತಿ ಆಧಾರವೆಂದು ಅವಲಂಬಿಸಿದ ಮೂಲದ ಪ್ರಕಾರ ೧೯೧೧ರಲ್ಲಿ ಮುಂಬಯಿ ಪ್ರಾಂತದಲ್ಲಿ ನಿಮ್ಮ ವರ್ಗಗಳವರ ಸಂಖ್ಯೆ ೨,೧೪೫,೦೦೦" ಎಂದು ಹೇಳಿದ್ದೀರಿ?

ಡಾ. ಬಿ. ಆರ್. ಅಂಬೇಡ್ಕರ್: ಜನಗಣತಿಯಲ್ಲಿ.

೬೬. ಅವರು ನೆಚ್ಚಿದ ಆಧಾರ ಅದೇ ಏನು? ಈ ಅಂಶವೇ ನನಗೆ ಬೇಕಾಗಿದ್ದದ್ದು.

ಡಾ. ಬಿ. ಆರ್. ಅಂಬೇಡ್ಕರ್: ಹೌದು. ನನಗೆ ಸರಿಯಾಗಿ ನೆನಪಿರುವುದಾದರೂ ಈ ಮೂಲದವರು ಎರಡು ಬೇರೆ ಬೇರೆ ಸಂಖ್ಯೆಗಳನ್ನು ಕೊಟ್ಟರು. ಒಂದು ಪುಟದಲ್ಲಿ ಅವರು ಕಡಿಮೆ ಸಂಖ್ಯೆಯನ್ನು ಕೊಟ್ಟರು, ಇವರು ಅದನ್ನೇ ತೆಗೆದುಕೊಂಡರು. ಸೌತ್ ಬರೊ ಸಮಿತಿಯ ವರದಿ ಪ್ರಕಟವಾಗುತ್ತಲೆ ನಾವು ಈ ಅಂದಾಜಿನ ವಿರುದ್ಧ ಮುಂಬಯಿ ಸರ್ಕಾರಕ್ಕೆ ಪ್ರತಿಭಟನೆಯನ್ನು ಸಲ್ಲಿಸಿದೆವು.

೬೭. ಅಧ್ಯಕ್ಷರು: ೨,೧೦೦,೦೦೦ ಅಂಕಿ ಯಾವುದು ಎನ್ನುವುದು ಸ್ಪಷ್ಟ ಎಂದು ನನಗೆ ತೋರುತ್ತದೆ. ನಾನು ಹೇಳಿದಂತೆ ೧೯೨೧ರ ಜನಗಣತಿಯ ಪ್ರಕಾರ ಅಸ್ಪೃಶ್ಯರು ೧,೪೭೮,೦೦೦; ಅಪರಾಧಿ ಬುಡಕಟ್ಟುಗಳವರ ಸಂಖ್ಯೆ ೬೨೩,೦೦೦ ಇವೆರಡರನ್ನು ಸೇರಿಸಿದರೆ ೨,೧೦೦,೦೦೦ ಆಗುತ್ತದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೬೮. ಸಮಿತಿ ಆದಿವಾಸಿಗಳನ್ನು ಗುಡ್ಡಗಾಡು ಬುಡಕಟ್ಟುಗಳವರನ್ನು ಬಿಟ್ಟುಬಿಟ್ಟಿತು. ಬಿಟ್ಟಿರಲೇ ಬೇಕಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೬೯. ಶ್ರೀ ಮಿಲ್ಲರ್: ಕೆಲವು ದೇಶೀಯ ಸಂಸ್ಥಾನಗಳಲ್ಲಿನ ಪರಿಸ್ಥಿತಿಯ ವಿಷಯ ಕೇಳಲು ಬಯಸುತ್ತೇನೆ. ಬರೋಡ, ಹಾಗೂ ಇನ್ನೊಂದು ಸಂಸ್ಥಾನದಲ್ಲಿರಬಹುದು,– ಈ ಎರಡು ಸಂಸ್ಥಾನಗಳಲ್ಲಿ

ನೀಡಿರುವ ವಿಶೇಷ ಸೌಕರ್ಯಗಳಲ್ಲದೆ, ಬೇರೆ ಯಾವುದಾದರೂ ಸೌಕರ್ಯಗಳನ್ನು ನೀಡಿದ್ದಾರೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಏನೇನೂ ಇಲ್ಲ.

೭೦. ಆ ಸಂಸ್ಥಾನದ ಸರ್ಕಾರದಲ್ಲಿ ನಿಮಗೆ ಕೆಲಸ ದೊರೆಯುವುದು ಸಾಧ್ಯವೇ?

ಡಾ. ಬಿ. ಆರ್. ಅಂಬೇಡ್ಕರ್: ಬಹಳ ಕಷ್ಟವಾಗುತ್ತದೆ ಎಂದು ನನಗೆ ಎನಿಸುತ್ತದೆ.

೭೧. ಸಾರ್ವಜನಿಕ ಸೇವೆಗಳಲ್ಲಿ ಉದ್ಯೋಗ ದೊರಕಬೇಕೆಂಬುದು ನಿಮ್ಮ ವಿಶೇಷ ಅಪೇಕ್ಷೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಖಂಡಿತವಾಗಿ.

೭೨. ಅದೇಕೆ?

ಡಾ. ಬಿ. ಆರ್. ಅಂಬೇಡ್ಕರ್: ಈ ವಿಷಯವಾಗಿ ನಾನು ಈ ಮಾತನ್ನು ಹೇಳಲು ಬಯಸುತ್ತೇನೆ. ಕಾನೂನಿನ ನಿರ್ವಹಣೆಯ ಬಗ್ಗೆ ನಮ್ಮ ಅನುಭವ ತೀರ ಕಹಿಯಾದದ್ದು. ಬಹುಬಾರಿ ನಿಮ್ನ ವರ್ಗದ ಮನುಷ್ಯನಿಗೆ ಅನನುಕೂಲವಾಗುವಂತೆ ಕಾನೂನನ್ನು ನಿರ್ವಹಿಸಲಾಗುತ್ತದೆ ಎಂದು ಒತ್ತಿ ಒತ್ತಿ ಹೇಳಲು ಬಯಸುತ್ತೇನೆ. ಹೆಸರುಗಳನ್ನು ಹೇಳದೆ ಒಂದು ಜಿಲ್ಲೆಯಲ್ಲಿ ಏನಾಯಿತು ಎಂದು ಮೂರ್ತವಾಗಿ ಒಂದು ನಿದರ್ಶನವನ್ನು ಕೊಡುತ್ತೇನೆ. ಪ್ರತಿ ವರ್ಷವೂ ಮುಂಬಯಿ ಸರ್ಕಾರವು ಕೆಲವು ಷರತ್ತುಗಳ ಮೇಲೆ ತನ್ನ ಕಾಡುಭೂಮಿಯನ್ನು ಹಳ್ಳಿಯವರಿಗೆ ಗುತ್ತಿಗೆಗೆ ಕೊಡುತ್ತದೆ. ಜಮೀನೇ ಇಲ್ಲದ ಅಥವಾ ತೀರ ಕಡಿಮೆ ಜಮೀನಿದ್ದ ಕೂಲಿ ಕೆಲಸ ಮಾಡುವ ನಿಮ್ನ ವರ್ಗದವರಿಗೆ, ಯಾವುದಾದರೂ ರೀತಿಯಲ್ಲಿ ಒಂದಿಷ್ಟಾದರೂ ಆರ್ಥಿಕ ಸುಭದ್ರತೆಗಾಗಿ ಹಂಬಲಿಸುತ್ತಿದ್ದವರಿಗೆ ಈ ಕಾಡುಭೂಮಿಯ ವಿತರಣೆಯಲ್ಲಿ ಪಾಲೇ ಸಿಕ್ಕುತ್ತಿರಲಿಲ್ಲ ಎಂದು ನಮಗೆ ಗೊತ್ತಾಯಿತು. ವಾಸ್ತವವಾಗಿ ಈ ಭೂಮಿಯನ್ನು ಹಂಚುವ ಕೆಲಸವನ್ನು ನಿರ್ವಹಿಸುತ್ತಿದ್ದ ಮಾಮಲೇದಾರರು ನಿಮ್ನವರ್ಗದ ಜನರನ್ನು ಸಂಪೂರ್ಣವಾಗಿ ಕೈಬಿಟ್ಟು ಮೇಲು ವರ್ಗದ ಹಿಂದೂವಿನ ಪರವಾಗಿ ಪಕ್ಷಪಾತ ಮಾಡುತ್ತಿದ್ದರು. ಕಳೆದ ವರ್ಷ ಒಂದು ಜಿಲ್ಲೆಯಲ್ಲಿ ನಾವು ನಿಮ್ನವರ್ಗದವರನ್ನು ಒಂದುಗೂಡಿಸಿ ವ್ಯವಸ್ಥೆ ಮಾಡಿ ಜಿಲ್ಲೆಯ ಅಸಿಸ್ಟೆಂಟ್ ಡೆಪ್ಯುಟಿ ಕಲೆಕ್ಟರಿಗೆ ಒಂದು ನಿಯೋಗವನ್ನು ಕಳುಹಿಸಿ ಈ ಭೂಮಿಯ ವಿಷಯದಲ್ಲಿ ನಮ್ಮ ದೂರುಗಳನ್ನು ಹೇಳಿಕೊಂಡೆವು. ಅವರು ನಿಮ್ನ ವರ್ಗದವರ ಅರ್ಜಿಗಳನ್ನು ಗಮನಿಸಬೇಕು ಎಂದು ಮಾಮಲೇದಾರರಿಗೆ ಸುತ್ತೋಲೆ ಕಳುಹಿಸಿದರು. ಕೆಲವು ಮಾಮಲೇದಾರರು, ತಾವು ಸುತ್ತೋಲೆಯ ಪ್ರಕಾರ ಕೆಲಸ ಮಾಡಿದ್ದೇವೆ ಎಂದು ತೋರಿಸುವುದಕ್ಕೋಸ್ಕರ ನಿಮ್ನ ವರ್ಗಗಳವರಿಗೆ ಒಂದಿಷ್ಟು ಭೂಮಿಯನ್ನೇನೊ ಕೊಟ್ಟರು. ಆದರೆ, ನಾನು ಈ ಮಾತನ್ನು ಹೇಳಬಹುದಾದರೆ, ಅವರು ನಮಗೆ ಮೋಸ ಮಾಡಿದರು ಎಂದು ಕಂಡುಬಂದಿತು. ಅವರು ಮಾಡಿದ್ದು ಎಂದರೆ, ಕಾಗದದ ಮೇಲೆ ಅವರು ನಿಮ್ನವರ್ಗಗಳವರಿಗೆ ಬೇಕಾದಷ್ಟು ಭೂಮಿಯನ್ನು ಕೊಟ್ಟರು, ಸವರ್ಣೀಯ ಹಿಂದೂಗಳಿಗೆ ಬಹುಸ್ವಲ್ಪ ಭೂಮಿಯನ್ನು ಕೊಟ್ಟರು. ಆದರೆ, ನಮಗೆ ಕೊಟ್ಟ ಭೂಮಿ ಯಾವುದು ಎಂದು ನಾವು ನೋಡಿದಾಗ, ನಿಮ್ನ ವರ್ಗದವರಿಗೆ ಕೊಟ್ಟಿದ್ದೆಲ್ಲ ಕಲ್ಲುಬಂಡೆಗಳದ್ದು ಕೃಷಿಗೆ ಯೋಗ್ಯವಲ್ಲದ ಭೂಮಿ; ಸವರ್ಣೀಯರಿಗೆ ಕೊಟ್ಟ ಭೂಮಿಯ ವಿಸ್ತಾರ ಬಹುಸ್ವಲ್ಪ. ಆದರೆ, ಅದು ಸೊಗಸಾದ ಫಲವತ್ತಾದ ಭೂಮಿ. ಅಧಿಕಾರಿಗಳಿಗೆ ವಹಿಸಿಕೊಟ್ಟ ಅಧಿಕಾರವನ್ನು ಕಣ್ಣಿಗೆ ಹೊಡೆಯುವಂತೆ ದುರುಪಯೋಗಪಡಿಸಿಕೊಂಡ ನಿದರ್ಶನ ಇದು ಎಂದು ನನಗೆ ತೋರುತ್ತದೆ; ಕಾನೂನನ್ನು ನಿರ್ವಹಿಸುವುದರಲ್ಲಿ ದಕ್ಷತೆಗಿಂತ ನ್ಯಾಯಕ್ಕೆ ವೈಯಕ್ತಿಕವಾಗಿ ಹೆಚ್ಚು ಬೆಲೆ ಕೊಡುವ ಮನುಷ್ಯ ನಾನು.

೭೩. ಅಧ್ಯಕ್ಷರು: ನೀವು ಹೇಳಿದ್ದು ಆಸಕ್ತಿಯನ್ನು ಹುಟ್ಟಿಸುವಂತಹದೆ; ನಮ್ಮ ಈ ವಿಚಾರಣೆಗೆ ಅದು ಅಗತ್ಯವಾದುದು ಈ ಕಾರಣದಿಂದಲೇ ಎಂದು ನನಗೆ ಕಾಣುತ್ತದೆ. ದಿನನಿತ್ಯದ ಆಡಳಿತದಲ್ಲಿ ಪ್ರವೇಶಿಸುವುದು ಈ ಆಯೋಗದ ವ್ಯಾಪ್ತಿಯಲ್ಲಿ ಸೇರಿಲ್ಲ, ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ.

೭೪. ನಿಮ್ಮ ವರ್ಗದವರಿಗೆ ಸಂಪೂರ್ಣ ಪ್ರಾತಿನಿಧ್ಯ ಇರಬೇಕು ಎಂಬ ನಿಮ್ಮ ಅಭಿಪ್ರಾಯವನ್ನು ಸಮರ್ಥಿಸುವುದಕ್ಕೆ ನೀವು ಇದನ್ನು ಒಂದು ವಾದವಾಗಿ ಬೆಳೆಸುತ್ತಿದ್ದೀರಿ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಸರ್ಕಾರಿ ಸೇವೆಯಲ್ಲಿ.

೭೫. ಹೌದು, ಅದೇ ನೀವು ಹೇಳಬೇಕೆಂದಿರುವುದು?

ಡಾ. ಬಿ. ಆರ್. ಅಂಬೇಡ್ಕರ್: ಅದೇ ನಾನು ಹೇಳಬೇಕೆಂದಿರುವುದು. ಈ ಪ್ರಾಂತದ ನ್ಯಾಯಾಲಯ ಗಳಲ್ಲಿ ವಾಸ್ತವಿಕವಾಗಿ ಏನಾಗುತ್ತದೆ ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಒಂದು ನ್ಯಾಯಾಲಯದಲ್ಲಿ ನಿಮ್ಮ ವರ್ಗದವನೊಬ್ಬನ ಪರವಾಗಿ ನಾನು ವಕಾಲತ್ತು ವಹಿಸಿದ್ದೆ; ಆತ ನ್ಯಾಯಾಲಯದ ಹೊರಗಡೆ ಗೋಡೆಯಾಚೆ ಕಿಟಕಿಯ ಹಿಂದೆ ನಿಂತುಕೊಳ್ಳಬೇಕಾಯಿತು ಎಂದು ಕಂಡು ನನಗೆ ಆಶ್ಚರ್ಯವಾಯಿತು; ಆತ ಒಳಕ್ಕೆ ಬರಲು ಒಪ್ಪಲೇ ಇಲ್ಲ. ಆತ ಹೇಳಿದ್ದು ಇಷ್ಟೇ: "ನಿಮಗೇನೋ ಇದೆಲ್ಲ ಸರಿ ಹೋಗುತ್ತದೆ. ಆದರೆ, ನಾನು ನ್ಯಾಯಾಲಯದ ಒಳಕ್ಕೆ ಬಂದರೆ ಸಮಾಜದಲ್ಲಿ ನನ್ನನ್ನು ಸಹಿಸಲಾರದಷ್ಟು ದೂರ ಇರುತ್ತಾರೆ."

೭೬. ಒಳಕ್ಕೆ ಬರುವುದಕ್ಕೆ ಕಕ್ಷಿಗಾರನಿಗೆ ಇಷ್ಟವಿರಲಿಲ್ಲ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಬರುವುದಕ್ಕೆ ಅವನಿಗೆ ಧೈರ್ಯವಿರಲಿಲ್ಲ.

೭೭. ಸಮಾಜದಲ್ಲಿ ದೂರ ಇಡುವುದು ಎಂದರೆ ಅವನ ಅರ್ಥವೇನು?

ಡಾ. ಬಿ. ಆರ್. ಅಂಬೇಡ್ಕರ್: ಸಮಾಜದಲ್ಲಿ ದೂರ ಇಡುವುದು ಎಂದರೆ, ಅವನು ಹಳ್ಳಿಗೆ ವಾಪಸ್ಸು ಹೋದರೆ ಅಂಗಡಿಯವರು ದೂರ ಇಡುತ್ತಿದ್ದರು. ಯಾರೂ ಅವನಿಗೆ ಧಾನ್ಯ ಮಾರುತ್ತಿರಲಿಲ್ಲ. ಹಳ್ಳಿಯ ಸೇವಕನಾದ ಅವನಿಗೆ ಕೊಡಬೇಕಾದ್ದನ್ನು ಹಳ್ಳಿಯವರು ನಿಲ್ಲಿಸುತ್ತಿದ್ದರು. ಅವನು ಹಳ್ಳಿಯೊಳಕ್ಕೆ ಕಾಲಿಡುವುದಕ್ಕೆ ಬಿಡುತ್ತಿರಲಿಲ್ಲ. ನಿಮ್ಮ ವರ್ಗದವರು ಯಾವಾಗಲೂ ವಾಸ ಮಾಡುವುದು ಹಳ್ಳಿಯ ಅಂಚಿನಲ್ಲಿ, ಊರ ಮಧ್ಯೆ ಅಥವಾ ಇತರ ಜನರ ಮಧ್ಯೆ ಅಲ್ಲ.

೭೮. ನೀವು ಹೇಳುತ್ತಿರುವುದು, ಆತ ಈ ಸಂದರ್ಭದಲ್ಲಿ ನ್ಯಾಯಾಲಯದೊಳಕ್ಕೆ ಬರಲು ಹೆದರಿದ್ದು ಆಮೇಲೆ ಹಳ್ಳಿಯ ಇತರ ಜನ, ಸವರ್ಣೀಯರು, ಆತ ಬರಲು ಹಕ್ಕಿಲ್ಲದಿದ್ದ ಕಡೆಗೆ ನುಗ್ಗಿಬಿಟ್ಟ ಎಂದು ಭಾವಿಸುತ್ತಾರೆ ಎಂಬ ಕಾರಣಕ್ಕಾಗಿ ಎಂದಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಖಂಡಿತವಾಗಿ, ಅವನು ಸಾಮಾಜಿಕ ಅಂತಸ್ತನ್ನು ಮೀರಿ ನಡೆದುಕೊಂಡ ಎನ್ನುವ ಕಾರಣಕ್ಕೋಸ್ಕರ.

೭೯. ಇದೊಂದೇ ಪ್ರಕರಣವೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಈ ಅನುಭವ ಆಯಿತು. ನ್ಯಾಯಾಲಯದೊಳಕ್ಕೆ ನಿಮ್ನ ವರ್ಗದವರನ್ನು ಬಿಡಬೇಕು ಎಂದು ಮುಂಬಯಿ ಹೈಕೋರ್ಟ್‌ನ ಆದೇಶ ಇರುವುದೇ ಅನೇಕ ಬಾರಿ ಹೀಗಾಗುತ್ತದೆ ಎಂಬುದನ್ನು ತೋರಿಸುತ್ತದೆ ಎಂದು ನನ್ನ ಭಾವನೆ. ಆ ಸುತ್ತೋಲೆಗೆ ಕಾರಣ ಇರಲೇಬೇಕು.

೮೦. ಶ್ರೀ ಮಿಲ್ಲರ್: ನಾನು ಕೇಳಬೇಕೆಂದಿರುವ ಇನ್ನೊಂದೇ ಪ್ರಶ್ನೆ ಇದು. ವಿಧಾನ ಮಂಡಲಿಯಲ್ಲಿ ನಿಮಗೆ ೨೨ ಸ್ಥಾನ ದೊರೆತರೆ, ಅರ್ಹರಾದ ೨೨ ಮಂದಿಯನ್ನು ನೀವು ತರಬಲ್ಲಿರಿ ಎಂದು ನಿಮಗೆ ತೋರುತ್ತದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ನನಗೆ ಹಾಗೆಯೇ ತೋರುತ್ತದೆ.

೮೧. ಖಾನ್ ಸಾಹಿಬ್ ಅಬ್ದುಲ್ ಲತೀಫ್: ಕೆಲವು ಕಾರಣಗಳಿಗೋಸ್ಕರ ಅಧಿಕಾರಿಗಳ ತಂಡವನ್ನು ಹಿಂದಕ್ಕೆ ತೆಗೆದುಕೊಂಡಾಗ ಮುಂಬಯಿ ವಿಧಾನ ಮಂಡಲಿಯಲ್ಲಿ ಅಲ್ಪಸಂಖ್ಯಾತರ ಸ್ಥಿತಿ ಏನು ಎಂಬುದನ್ನು ಈ ಸಮ್ಮೇಳನಕ್ಕೆ ದಯೆಯಿಟ್ಟು ತಿಳಿಸಿಕೊಡುವಿರಾ?

ಡಾ. ಬಿ. ಆರ್. ಅಂಬೇಡ್ಕರ್: ಅಲ್ಪಸಂಖ್ಯಾತರು ತೀರ ದುರದೃಷ್ಟಕ್ಕೆ ಒಳಗಾಗುವರು ಎಂದು ನನಗೆ ಅರ್ಥವಾಗುತ್ತದೆ. ಅವರ ಸ್ಥಿತಿ ಕಷ್ಟದ್ದೆ.

೮೨. ಮುಂದುವರೆದ ವರ್ಗಕ್ಕೆ ಸೇರಿದ ಮಾನ್ಯ ಮಂತ್ರಿಗಳು ಈ ಯೋಜನೆಗಾಗಲಿ, ಮಹಮ್ಮದೀಯರು, ಬ್ರಾಹ್ಮಣೇತರರು ಮತ್ತು ನಿಮ್ಮ ವರ್ಗದವರ ಭಾವನೆಗಳಿಗಾಗಲಿ ಒಂದಿಷ್ಟಾದರೂ ಸ್ಪಂದಿಸಿದರೆ?

೮೩. ಮುಂಬಯಿ ವಿಧಾನ ಮಂಡಲ ಯಾವ ಶಾಸನವನ್ನಾದರೂ ಅಂಗೀಕರಿಸುವಂತೆ ಮಾಡುವುದ ರಿಂದಲಾಗಲೀ, ಅಂತಹ ಶಾಸನವನ್ನು ಮಂಡಿಸುವುದರಿಂದಾಗಲೀ ಅಲ್ಪಸಂಖ್ಯಾತ ಕೋಮುಗಳವರಿಗೆ ಏನಾದರೂ ಅವಕಾಶ ಸಿಕ್ಕುವುದೆ?

ಡಾ. ಬಿ. ಆರ್. ಅಂಬೇಡ್ಕರ್: ಅವರಿಗೆ ಅವಕಾಶ ದೊರೆಯುವುದೇ ಇಲ್ಲ ಎನ್ನಬೇಕು.

*****

೯೮. ಸರ್ದಾರ್ ಮುಜಂದಾರ್: ನಿಮ್ಮ ವರ್ಗಗಳದರಲ್ಲಿಯೇ ವಿವಿಧ ಜಾತಿಗಳಿವೆ, ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೯೯. ಈ ಕೋಮುಗಳ ಅಂದಾಜು ಸಂಖ್ಯೆಯನ್ನು ಹೇಳಬಲ್ಲಿರಾ?

ಡಾ. ಬಿ. ಆರ್. ಅಂಬೇಡ್ಕರ್: ಅಸ್ಪೃಶ್ಯರು ಎಂದು ಪಟ್ಟಿ ಮಾಡಿರುವವರ ಸಂಖ್ಯೆ ಜನಗಣತಿಯಲ್ಲಿ ನಿಮಗೆ ಸಿಗುತ್ತದೆ ಎಂದು ನನಗನಿಸುತ್ತದೆ.

೧೦೦. ಬೇರೆ ಬೇರೆ ಕೋಮುಗಳ ಸಂಖ್ಯೆ ಎಷ್ಟಿರಬಹುದೆಂದು ಸರಿ ಸುಮಾರಾಗಿಯಾದರೂ ಹೇಳಬಲ್ಲಿರಾ?

ಡಾ. ಬಿ. ಆರ್. ಅಂಬೇಡ್ಕರ್: ಸುಮಾರು ಒಂದು ಡಜನ್, ಜನಗಣತಿ ಹೇಳಿದೆ.

೧೦೧. ಮುಂಬಯಿಯ ನಿಮ್ಮ ವರ್ಗಗಳವರಲ್ಲಿ ಎಷ್ಟು ಜಾತಿಗಳನ್ನು ಸೇರಿಸಿದೆ.

ಡಾ. ಬಿ. ಆರ್. ಅಂಬೇಡ್ಕರ್: ಸ್ವಲ್ಪ ಹೆಚ್ಚು ಕಡಿಮೆ ಎಲ್ಲವನ್ನೂ.

೧೦೨. ಹಾಗಾದರೆ, ಬೇರೆ ಬೇರೆ ಕೋಮಿನವರು ನಿಮ್ಮ ಸಂಸ್ಥೆಯ ಸದಸ್ಯರೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಎಲ್ಲ ನಿಮ್ಮ ವರ್ಗದವರೂ ಇರುವ ಸಂಸ್ಥೆ ಅದು.

೧೦೩. ಎಂದರೆ, ನಿಮ್ಮ ವರ್ಗಗಳಲ್ಲಿ ಇವರೆಲ್ಲ ಸೇರಿಸುತ್ತಾರೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೦೪. ನೀವು ಭಿಲ್ಲರು, ವಾಡಿಯರು ಮತ್ತಿತರರ ಬೇಡಿಕೆಗಳನ್ನು ಪರಿಗಣಿಸಿದ್ದೀರಾ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ.

೧೦೫. ಆ ಅಲ್ಪಸಂಖ್ಯಾತರ ರಕ್ಷಣೆಯ ವಿಷಯವಾಗಿ ಏನು ಹೇಳುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ಅವರಿಗೂ ಪ್ರಾತಿನಿಧ್ಯ ನೀಡಿ ಸ್ವಲ್ಪ ರಕ್ಷಣೆ ಕೊಡಬೇಕು ಎಂದು ನನಗೆ ತೋರುತ್ತದೆ.

೧೦೬. ಈ ಹಿಂದುಳಿದವರಲ್ಲೂ ಅಲ್ಪಸಂಖ್ಯಾತರಾಗಿರುವ ಕೆಲವು ಕೋಮುಗಳಿವೆ ಎಂದು ನಿಮಗೆ ತೋರುವುದಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೦೭. ಹಾಗಾದರೆ ಈಗಿನ ಸಂವಿಧಾನದಲ್ಲಿ ಅವರ ಹಿತಾಸಕ್ತಿಗಳ ರಕ್ಷಣೆಗೆ ಏನಾದರೂ ಅವಕಾಶ ಉಂಟೆ?

ಅಧ್ಯಕ್ಷರು: ನೀವು ಪ್ರಸ್ತಾಪಿಸಿರುವ ಕೋಮುಗಳವರು ಹಿಂದೂ ದೇವಾಲಯಗಳಿಗೆ ಹೋಗಕೂಡದೆಂಬ ನಿಷೇಧ ಇದೆಯೆ?

ಸರ್ದಾರ್ ಮುಜುಂದಾರ್: ಇಲ್ಲ, ಅವರು ಒಳಕ್ಕೆ ಹೋಗಬಹುದು.

ಅಧ್ಯಕ್ಷರು: ಇವತ್ತು ಬೆಳಿಗ್ಗೆ ನಾವು ನಿಮ್ನವರ್ಗಗಳವರು ಮತ್ತು ಹಿಂದೂ ದೇವಾಲಯಗಳಿಂದ ಹೊರಗಿಟ್ಟಿರುವವರ ವಿಷಯವನ್ನು ಪರಿಗಣಿಸುತ್ತಿದ್ದೇವೆ. ಹಿಂದೂ ದೇವಾಲಯಗಳಿಗೆ ಪ್ರವೇಶ ಇರುವ ಹಿಂದುಳಿದ ಜಾತಿಗಳವರ ಪ್ರಶ್ನೆಯನ್ನು ನಾವು ಎತ್ತಿಕೊಳ್ಳಲು ಸಾಧ್ಯ ಎಂದು ನನಗೆ ತೋರುವುದಿಲ್ಲ.

ಸರ್ದಾರ್ ಮುಜುಂದಾರ್: ನಾನು ಮುಂದಿಡಬೇಕಾಗಿರುವುದು ಹಿಂದುಳಿದ ವರ್ಗಗಳವರಲ್ಲಿಯೂ ಅನೇಕ ಅಲ್ಪಸಂಖ್ಯಾತರಿದ್ದಾರೆ ಎನ್ನುವ ವಿಷಯ ಸೂಕ್ತತೆಯ ಪ್ರಶ್ನೆ ನಮ್ಮ ಮುಂದಿಲ್ಲ. ನಾವು ಇಲ್ಲಿರುವುದು ಎಲ್ಲ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ.

ಅಧ್ಯಕ್ಷರು: ನಿಜವಾಗಿಯೂ.

ಸರ್ದಾರ್ ಮುಜುಂದಾರ್: ಆ ದೃಷ್ಟಿಯಿಂದ ನಾನು ಪ್ರಶ್ನೆ ಕೇಳಿದ್ದು.

ಅಧ್ಯಕ್ಷರು: ಈ ಕೂಡಲೇ ನಿಮ್ಮ ಮನಸ್ಸಮಾಧಾನ ಮಾಡುತ್ತೇನೆ. ಭಾರತದ ತುಂಬ ಅಲ್ಪಸಂಖ್ಯಾತರಿದ್ದಾರೆ. ನೀವು ಅವರಲ್ಲಿ ಕೆಲವರನ್ನು ಹೆಸರಿಸಿದ್ದೀರಿ; ಆದರೆ ಇವತ್ತು ಬೆಳಿಗ್ಗೆ ನಾವು ನಿಮ್ನವರ್ಗದವರು ಎಂದು ಕರೆಯುವ ಜನ ಸಮುದಾಯವನ್ನು ಕುರಿತು ಪರಿಶೀಲಿಸುತ್ತಿದ್ದೆವು.

ಸರ್ದಾರ್ ಮುಜುಂದಾರ್: ಸರಿ, ಸ್ವಾಮಿ.

೧೦೭. ಸೈಯದ್ ಮಿರಾನ್ ಮಹಮ್ಮದ್ ಷಾ: ಮಹಮ್ಮದೀಯರಿಗೆ ಸಿಕ್ಕಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ನಿಮಗೂ ದೊರೆಯಬೇಕು ಎಂದು ಈಗತಾನೆ ನೀವು ಹೇಳಿದಿರಿ ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೦೮. ಮಹಮ್ಮದೀಯರಿಗೆ ಸಿಕ್ಕಿತೆಂಬ ಕಾರಣಕ್ಕಾಗಿಯೇ ನಿಮಗೂ ಅದು ಬೇಕೇನು? ಅದರಲ್ಲಿ ಒಂದಿಷ್ಟಾದರೂ ನ್ಯಾಯವಿದೆ ಎಂದು ನಿಮಗೆ ತೋರುತ್ತದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಅದರಲ್ಲಿ ನ್ಯಾಯವೇ ಕಾಣುತ್ತದೆ. ಶಾಸನಸಭೆ ಬೇರೆ ಬೇರೆ ಕೋಮಿನವರ ಇಂತಿಷ್ಟು ಮಾದರಿಗಳನ್ನು ಇರಿಸಬೇಕಾದ ವಸ್ತು ಪ್ರದರ್ಶನಾಲಯ ಎನ್ನುವಂತೆ ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ಕೊಡುವ ತತ್ವವನ್ನು ನಾನು ಒಪ್ಪುವುದಿಲ್ಲ. ಶಾಸನಸಭೆ ವಸ್ತು ಪ್ರದರ್ಶನಾಲಯಕ್ಕಿಂತ ಹಿರಿದಾದದ್ದು. ಉದಾಹರಣೆಗೆ ಅಲ್ಲಿ ಸಾಮಾಜಿಕ ಹೋರಾಟಗಳನ್ನು ನಡೆಸಬೇಕಾಗುತ್ತದೆ. ಸವಲತ್ತುಗಳನ್ನು ನಾಶ ಮಾಡಬೇಕಾಗುತ್ತದೆ. ಹಕ್ಕುಗಳನ್ನು ಗೆದ್ದುಕೊಳ್ಳಬೇಕಾಗುತ್ತದೆ. ಇದು ಶಾಸನಸಭೆಯ

ಕಲ್ಪನೆಯಾಗುವುದಾದರೆ, ಅಲ್ಪಸಂಖ್ಯಾತರನ್ನು ಜನಸಂಖ್ಯೆಗನುಗುಣದ ಪ್ರಾತಿನಿಧ್ಯಕ್ಕೆ ಮಿತಗೊಳಿಸುವುದು ಸರಿ ಎಂದೇ ನನಗನಿಸುವುದಿಲ್ಲ. ಏಕೆಂದರೆ ಆಗ ಅಲ್ಪಸಂಖ್ಯಾತರು ಎಂದೂ ಬಹುಸಂಖ್ಯಾತರ ರೀತಿಯ ಮೇಲೆ ಪ್ರಭಾವ ಬೀರುವುದಕ್ಕೆ ಸಾಧ್ಯವಿಲ್ಲವಾಗಿ ಎಂದೆಂದೂ ಅವರು ಅಲ್ಪಸಂಖ್ಯಾತರಾಗಿಯೇ ಉಳಿಯುವ ಶಿಕ್ಷೆ ವಿಧಿಸಿದಂತೆ.

೧೦೯. ಗ್ರಾಮೀಣ ಪ್ರದೇಶದಲ್ಲಿ ಮತದಾನದ ಹಕ್ಕನ್ನು ಸ್ಥಳೀಯ ಸಂಸ್ಥೆಗಳಿಗೆ ಸೀಮಿತಗೊಳಿಸಿದರೆ ನಿಮಗೆ ಒಪ್ಪಿಗೆಯೇ?

ಡಾ. ಬಿ. ಆರ್. ಅಂಬೇಡ್ಕರ್: ವಯಸ್ಕರ ಮತದಾನವಿರಲೇಬೇಕೆಂದು ನನ್ನ ಒತ್ತಾಯ. ಮತದಾನದ ಹಕ್ಕಿಗಾಗಿ ಇರುವ ಅರ್ಹತೆ ಎಷ್ಟು ಇಳಿದರೆ ಅಷ್ಟು ಒಳ್ಳೆಯದು. ಆ ತತ್ವದ ಮೇಲೆ ಯಾವ ಇಳಿತಾಯ ವನ್ನಾದರೂ ನಾನು ಒಪ್ಪುತ್ತೇನೆ; ಆದರೆ ಅಷ್ಟರಿಂದಲೇ ನನಗೆ ಸಮಾಧಾನವಾಗುತ್ತದೆ ಎಂದು ಖಂಡಿತ ಹೇಳಲಾರೆ.

೧೧೦. ಹಾಗಾದರೆ ವಯಸ್ಕರ ಮತದಾನವನ್ನು ಆದಿವಾಸಿಗಳು, ಅಪರಾಧೀ ಮತ್ತು ಗುಡ್ಡಗಾಡು ಬಣಗಳವರಿಗೂ ವಿಸ್ತರಿಸುವಿರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಹಾಗೆ ಮಾಡಬೇಕೆನ್ನಿಸುತ್ತದೆ.

೧೧೧. ವಿಸ್ತರಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೧೨. ಅಥವಾ, ಅವರಿಗೆ ಆ ಹಕ್ಕನ್ನು ಕೊಡದೆ ನಾಮಕರಣವನ್ನು ಕೊಟ್ಟು, ನಿಮಗೆ ವಯಸ್ಕರ ಮತದಾನ ಇಟ್ಟುಕೊಳ್ಳುವಿರಾ?

ಡಾ. ಬಿ. ಆರ್. ಅಂಬೇಡ್ಕರ್: ಒಂದು ವಿಷಯವನ್ನು ಹೇಳುತ್ತೇನೆ. ಅಪರಾಧೀ ಬಣಗಳ ಮಟ್ಟಿಗೆ ವಯಸ್ಕರ ಮತದಾನ ಕೊಡುವುದು ಸೂಕ್ತವಾಗದೆ ಹೋಗಬಹುದು. ಏಕೆಂದರೆ, ಅವರ ಕಸುಬಿನ ಕಾರಣದಿಂದ ಅವರಿಗೆ ತಮ್ಮ ಸಮುದಾಯದ ಹಿತಾಸಕ್ತಿಯಷ್ಟೇ ಮುಖ್ಯ, ಜೀವನ ಹೇಗೆ ಸಾಗಿಸುತ್ತೇವೆ ಎಂದು ಅವರು ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ, ಆದಿವಾಸಿಗಳಿಗೆ ಮತದಾನದ ಹಕ್ಕನ್ನು ಕೊಡುವುದರಲ್ಲಿ ಕೆಡಕಿದೆ ಎಂದು ನನಗೆ ತೋರುವುದಿಲ್ಲ.

೧೧೩. ಅವರಿಗೆ ಮತದಾನದ ಹಕ್ಕನ್ನು ಕೊಡಬೇಕೆ ಅಥವಾ ಅವರ ಹಕ್ಕನ್ನು ನಾಮಕರಣದಿಂದ ರಕ್ಷಿಸಬೇಕೆ?

ಡಾ. ಬಿ. ಆರ್. ಅಂಬೇಡ್ಕರ್: ಹೇಗಾದರೂ ರಕ್ಷಿಸಬೇಕು; ಹೇಗೆ ಎನ್ನುವುದು ನನಗೆ ಮುಖ್ಯವಲ್ಲ. ತನಗೇನು ಬೇಕು ಎಂಬುದನ್ನು ನಿಖರವಾಗಿ ತಿಳಿದುಕೊಳ್ಳುವಷ್ಟು ಬುದ್ಧಿ ಪ್ರತಿಯೊಬ್ಬ ಮನುಷ್ಯನಿಗೂ ಇರುತ್ತದೆ ಎಂದು ನನ್ನ ಭಾವನೆ; ಅಕ್ಷರಜ್ಞಾನಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ; ಒಬ್ಬ ಮನುಷ್ಯ ನಿರಕ್ಷರಸ್ಥನಾಗಿರಬಹುದು. ಆದರೂ ಬಹಳ ಬುದ್ಧಿವಂತನಾಗಿರಬಹುದು.

೧೧೪. ಪ್ರತ್ಯೇಕ ಪ್ರಾತಿನಿಧ್ಯದಿಂದ ಕೋಮುವಾರು ಬಿಕ್ಕಟ್ಟು ಹೆಚ್ಚುತ್ತದೆ ಎಂದು ಭಾವಿಸಿದರೂ ಅದನ್ನು ತಪ್ಪಿಸುವುದು ಹೇಗೆ ಎಂದು ನನಗೆ ಕಾಣುವುದಿಲ್ಲ. ಇದರಿಂದ ಬಿಕ್ಕಟ್ಟು ಉಂಟಾಗುತ್ತದೆ ಎನ್ನು ವುದನ್ನೇ ಪ್ರಶ್ನಿಸಬೇಕು. ಆದರೆ, ಅದು ಹೇಗೆ ಇದ್ದರೂ, ಸಮಾಜವು ವರ್ಗಗಳಾಗಿ ಮತ್ತು ಕೋಮು ಗಳಾಗಿ ವಿಭಾಗವಾಗಿರುವಾಗ ಅದನ್ನು ತಪ್ಪಿಸುವುದು ಹೇಗೆ ಎಂದು ನನಗೆ ತೋರುತ್ತಿಲ್ಲ.

೧೧೫. ಇದೇ ವೈಮನಸ್ಯಗಳ ಮೂಲ ಕಾರಣ ಎಂದು ನಿಮಗೆ ಎನ್ನಿಸುವುದಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನಾನು ಹಾಗೆ ಯೋಚಿಸುವುದಿಲ್ಲ. ಆದರೆ, ಒಂದು ಮಾತನ್ನಂತೂ ಹೇಳುತ್ತೇನೆ; ಕೋಮುವಾದ ಪ್ರಾತಿನಿಧ್ಯದ ಪರಿಣಾಮವಾಗಿ, ಕೋಮುಗಳ ನಾಯಕರ ರಾಜಿ ಮನೋಭಾವ ಕಡಿಮೆಯಾಗಿದೆ. ಹಾಗೆಂದು ನನ್ನ ಭಾವನೆ. ಆದರೆ, ಇದರಿಂದ ಕೋಮುವಾರು ಗಲಭೆಗಳಾಗುತ್ತವೆ ಎಂದು ನನಗೆ ತೋರುವುದಿಲ್ಲ. ಅವುಗಳ ಕಾರಣವೇ ಬೇರೆ.

೧೧೬. ಸೈಯದ್ ಮೀನ್ ಮಹಮ್ಮದ್ ಷಾ: ಅಧಿಕಾರಿಗಳ ತಂಡವನ್ನು ತೆಗೆದು ಅಧಿಕಾರಿಗಳಲ್ಲದವರನ್ನು ಕ್ರಮಬದ್ಧವಾಗಿ ನಾಮಕರಣ ಮಾಡಬಹುದು ಎಂದು ನೀವು ಸಲಹೆ ಮಾಡುವುದಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನಾಮಕರಣಗಳೇ ನನಗೆ ಬೇಡ.

೧೧೭. ಮೇಜರ್ ಆಟ್ಲಿ: ಕೈಗಾರಿಕೆಗಳಲ್ಲಿ ಎಂದರೆ ಹತ್ತಿಯ ಕಾರ್ಖಾನೆಗಳು ಮೊದಲಾದವುಗಳಲ್ಲಿ ಕೆಲಸ ಮಾಡುವ ನಿಮ್ಮ ವರ್ಗಗಳವರಿದ್ದಾರೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಅವರೆಲ್ಲರೂ ಕಾರ್ಮಿಕರೇ.

೧೧೮. ನಾನು ಕೇಳಬೇಕೆಂದಿದ್ದದ್ದು ನಿಮಗೆ ಅರ್ಥವಾಗಲಿಲ್ಲ. ನಾನು ಕೈಗಾರಿಕೆಗಳ ವಿಷಯ ಮಾತನಾಡುತ್ತಿದ್ದೆ. ಹಳ್ಳಿಗಳಲ್ಲಿ ಕೆಲಸ ಮಾಡುವ ನಿಮ್ಮ ವರ್ಗಗಳವರಿದ್ದರೆ; ಬಹುಮಟ್ಟಿಗೆ ಕೆಲವೇ ವೃತ್ತಿಗಳಲ್ಲಿ ಕೆಲಸ ಮಾಡುತ್ತಾರೆ. ಆದರೆ ಕೈಗಾರಿಕೆಗಳಲ್ಲೂ ಕೆಲಸ ಮಾಡುವ ನಿಮ್ಮ ವರ್ಗಗಳವರಿದ್ದಾರೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಅವರದು ಬಹು ದೊಡ್ಡ ಸಂಖ್ಯೆಯೇ.

೧೧೯. ಮುಂಬಯಿಯಂತಹ ನಗರದಲ್ಲಿ ಅವರದು ದೊಡ್ಡ ಸಂಖ್ಯೆಯೇ ಇರುತ್ತದಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೨೦. ಅವರ ಅಸ್ಪೃಶ್ಯತೆ ಸ್ವಲ್ಪವಾದರೂ ಕಡಿಮೆಯಾಗುತ್ತದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ನಾನು ಹೇಳಬಯಸುವುದೇನೆಂದರೆ ಅತ್ಯಂತ ಹೆಚ್ಚು ಹಣ ದೊರೆಯುವ ನೇಯ್ಗೆಯ ಇಲಾಖೆಯಿಂದ ನಿಮ್ಮ ವರ್ಗದವರನ್ನು ಹೊರಗೇ ಇಡುತ್ತಾರೆ. ನೂಲುವ ಯಂತ್ರದ ಇಲಾಖೆಯಂತಹ ಇಲಾಖೆಗಳಲ್ಲಿ ಮಾತ್ರ ಅವರು ಪ್ರವೇಶಿಸಬಹುದು.

೧೨೧. ಏಕೆ?

ಡಾ. ಬಿ. ಆರ್. ಅಂಬೇಡ್ಕರ್: ಅಸ್ಪೃಶ್ಯತೆಯ ಕಾರಣದಿಂದ.

೧೨೨. ಅಲ್ಲಿ ಕೆಲಸ ಮಾಡುವಾಗ ಆತ ಎಲ್ಲ ಜಾತಿಗಳವರ ಜೊತೆಗೆ ಕೆಲಸ ಮಾಡುತ್ತಾನೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಸಂಪೂರ್ಣವಾಗಿ ಹಾಗಲ್ಲ. ಜಾತಿಗನುಗುಣವಾಗಿ ಇಲಾಖೆಗಳನ್ನು ವಿಂಗಡಿಸಿರುತ್ತಾರೆ. ಒಂದು ಇಲಾಖೆಯಲ್ಲಿ ನಿಮ್ಮ ವರ್ಗದವರು ಮಾತ್ರವೇ ಇರುತ್ತಾರೆ. ಇನ್ನೊಂದರಲ್ಲಿ ಉದಾಹರಣೆಗೆ ನೇಯ್ಗೆಯ ಇಲಾಖೆ ಮಹಮ್ಮದೀಯರು ಮತ್ತು ಸವರ್ಣ ಹಿಂದೂಗಳಿರುತ್ತಾರೆ.

೧೨೩. ಅವರು ಕಾರ್ಮಿಕ ಸಂಘಗಳಲ್ಲಿ ಭಾಗವಹಿಸುತ್ತಾರೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಈಗೀಗ ಪ್ರಾರಂಭಿಸುತ್ತಿದ್ದಾರೆ.

೧೨೪. ನಿಮ್ಮ ವರ್ಗಗಳವರಿಗಿಂತ ಮೇಲ್ವರ್ಗಗಳರೊಂದಿಗೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೨೫. ನಿಮ್ಮಿಂದ ಈ ವಿಷಯ ತಿಳಿಯಬೇಕೆಂದಿದ್ದೆ. ನೀವು ಸಂಖ್ಯೆಯ ಆಧಾರದ ಮೇಲೆ ನಿಮ್ಮ

ವರ್ಗಗಳವರ ಪ್ರಾತಿನಿಧ್ಯವನ್ನು ಕೇಳುತ್ತೀರಿ; ಬೇರೆಯೇ ಆಧಾರದ ಮೇಲೆ ಕೇಳುವ ಬೇಡಿಕೆಗಳು ನಮ್ಮ ಮುಂದಿವೆ. ಉದಾಹರಣೆಗೆ ಕಾರ್ಮಿಕ ವರ್ಗದ ಆಧಾರದ ಮೇಲೆ ಹೀಗೆ ಒಂದಕ್ಕೊಂದು ಸೇರಿದಂತೆ ವಿಭಾಗಗಳಾಗುವುದಿಲ್ಲವೆ? ಒಬ್ಬನೇ ಮನುಷ್ಯ ನಿಮ್ಮ ವರ್ಗದವನೂ ಆಗಿರಬಹುದು. ಕಾರ್ಮಿಕನೂ ಆಗಿರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಯಾವಾಗಲೂ ಹಾಗೆಯೇ ಎಂದಲ್ಲ. ಆದರೆ, ಸಾಮಾನ್ಯವಾಗಿ ಅವನು ಕಾರ್ಮಿಕ.

೧೨೬. ಇದು ಮಾತುಗಳ ದೊಂಬರಾಟ ಅಲ್ಲವೆ? ನಾನು ಸಾಮಾನ್ಯವಾದ ಮತ್ತು ವ್ಯವಸ್ಥಿತವಲ್ಲದ ಕಾರ್ಮಿಕ ವರ್ಗದ ವಿಷಯ ಮಾತನಾಡುತ್ತಿಲ್ಲ. ಬಂಡವಾಳ ಮತ್ತು ಕಾರ್ಮಿಕರು, ದೊಡ್ಡ ಕೈಗಾರಿಕೆಗಳಲ್ಲಿ ಕಾರ್ಮಿಕರು ಇವರ ವಿಷಯ ಮಾತನಾಡುತ್ತಿದ್ದೇನೆ. ನಾನು ವ್ಯವಸ್ಥಿತ ಕಾರ್ಮಿಕ ವರ್ಗದ ವಿಷಯ ಮಾತನಾಡುತ್ತಿದ್ದೇನೆ. ಈ ಕಷ್ಟವನ್ನು ನೀವು ಹೇಗೆ ನಿವಾರಿಸುತ್ತೀರಿ? ಒಂದು ಕಡೆ ಸಾಮಾಜಿಕ ಅಂತಸ್ತಿನ ಆಧಾರದ ಮೇಲೆ ಪ್ರಾತಿನಿಧ್ಯ, ಇನ್ನೊಂದೆಡೆ ಕೈಗಾರಿಕೆಯ ಆಧಾರದ ಮೇಲೆ ಪ್ರಾತಿನಿಧ್ಯ ಕೊಡುವುದಾದರೆ, ಎರಡೂ ಬೆರೆಯುತ್ತದೆ. ಇದನ್ನು ಹೇಗೆ ಪರಿಹರಿಸುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ವ್ಯವಸ್ಥಿತ ಕಾರ್ಮಿಕ ವರ್ಗಕ್ಕೆ ಒಂದಿಷ್ಟು ಪ್ರಾತಿನಿಧ್ಯ ಇರುತ್ತದೆ; ನಿಮ್ಮ ವರ್ಗದವರಲ್ಲಿ ಬಹುಸಂಖ್ಯಾತರು ಕಾರ್ಮಿಕರು.

೧೨೭. ಮಿ. ಹ್ಯಾರಿಸನ್: ಡಾ. ಅಂಬೇಡ್ಕರ್, ನೀವು ವಯಸ್ಕರ ಮತದಾನದ ಪರವಾಗಿದ್ದೀರಿ ಎಂಬುದನ್ನು ಸಾಕಷ್ಟು ಸ್ಪಷ್ಟಮಾಡಿದ್ದೀರಿ ಎಂದು ನನಗೆನ್ನಿಸುತ್ತದೆ. ಆದರೆ, ನಿಮ್ಮ ವಿಜ್ಞಾಪನಾ ಪತ್ರದ ೪೧ನೆ ಪುಟದಲ್ಲಿ ನೀವು "ಶಾಸನಸಭೆಗಳಿಗೆ ಮತದಾನದ ಹಕ್ಕನ್ನು ಗ್ರಾಮೀಣ ಪ್ರದೇಶಗಳಲ್ಲಿ ತಾಲ್ಲೂಕು ಸ್ಥಳೀಯ ಮಂಡಲಿಗೆ ನಿಶ್ಚಯಿಸಿರುವ ಮಟ್ಟದಲ್ಲಿ ಇಟ್ಟು ಪ್ರಾಂತದ ನಗರ ಪ್ರದೇಶಗಳಲ್ಲಿ ತಿಂಗಳಲ್ಲಿ ಮೂರು ರೂಪಾಯಿಯ ಬಾಡಿಗೆಯ ಮಟ್ಟದಲ್ಲಿಟ್ಟರೆ ಸಭೆಗೆ ಸಮಧಾನವಾಗುತ್ತದೆ" ಎಂದು ಹೇಳಿದ್ದೀರಿ. ಈ ಅರ್ಹತೆಯಿಂದ ಮತದಾನದ ಹಕ್ಕು ಎಷ್ಟು ಜನರಿಗೆ ಹೊಸದಾಗಿ ದೊರೆಯುತ್ತದೆ ಎಂದು ನಮಗೆ ತಿಳಿಸಲು ನಿಮಗೇನಾದರೂ ಕಲ್ಪನೆಯುಂಟೆ ಅಥವಾ ಅಂಕಿ ಅಂಶಗಳಿವೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಆ ಹೇಳಿಕೆಯ ವಿಷಯ ನನಗೇ ಖಚಿತವಿಲ್ಲ ಎಂದು ಹೇಳಬಯಸುತ್ತೇನೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ನನಗೆ ದೊರೆತ ಮಾಹಿತಿಯಿಂದ, ಈಗಿರುವ ತಾಲ್ಲೂಕು ಸ್ಥಳೀಯ ಸಂಸ್ಥೆಗಳ ಮತದಾನದಲ್ಲಿ ನಿಮ್ಮ ವರ್ಗದಿಂದ ಹಲವಾರು ಮಂದಿ ಮತದಾರರಾಗಿರುತ್ತಾರೆ ಎಂದು ನನ್ನ ನಂಬಿಕೆ.

೧೨೮. ನಾನು ಯೋಚಿಸುತ್ತಿದ್ದದ್ದು ಅದನ್ನಲ್ಲ– ಈಗಿನ ಮತದಾನದ ಅರ್ಹತೆಯ ಬದಲು ಈ ಅರ್ಹತೆಯನ್ನು ಒಪ್ಪಿದರೆ, ಮುಂಬಯಿ ಪ್ರಾಂತದಲ್ಲಿ ಮತದಾರರ ಸಂಖ್ಯೆ ಎಷ್ಟು ಹೆಚ್ಚುತ್ತದೆ ಎಂದು ಹೇಳಬಲ್ಲಿರಾ?

ಡಾ. ಬಿ. ಆರ್. ಅಂಬೇಡ್ಕರ್: ಈ ವಿಷಯವಾಗಿ ನಿಮಗೆ ಖಚಿತವಾದ ಮಾಹಿತಿ ಕೊಡಬಲ್ಲೆ ಎಂದು ನನಗೆ ಎನ್ನಿಸುವುದಿಲ್ಲ.

೧೨೯. ಮೇಜರ್ ಆಟ್ಲಿಯವರು ನಿಮ್ಮನ್ನು ಕೇಳಿದ ಒಂದು ಪ್ರಶ್ನೆಗೆ ಮತ್ತೆ ನಾನು ಹೋಗ ಬಹುದೆ? ನಿಮ್ಮ ವರ್ಗದವರು ಕಾರ್ಖಾನೆಗಳಲ್ಲಿ ಪ್ರತ್ಯೇಕವಾಗಿಯೇ ಕೆಲಸ ಮಾಡುತ್ತಾರೆ ಎಂಬುದು ಸರಿಯೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಪ್ರತ್ಯೇಕವಾಗಿಯೇ.

೧೩೦. ಅವರಿಗೆ ತಮ್ಮದೇ ಆದ ಷೆಡ್‌ಗಳು, ಇಲಾಖೆಗಳು ಇರುತ್ತವೆ?

ಡಾ. ಬಿ. ಆರ್. ಅಂಬೇಡ್ಕರ್: ಅವರದೇ ಇಲಾಖೆಗಳಿವೆ; ಷೆಡ್‌ಗಳಿಲ್ಲ.

೧೩೧. ಅದೇನೇ ಇರಲಿ, ಕಾರ್ಖಾನೆಗಳಲ್ಲಿ ಅವರನ್ನು ಇತರ ಕೆಲಸಗಾರರಿಂದ ಪ್ರತ್ಯೇಕವಾಗಿಟ್ಟಿರುತ್ತಾರಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಅದನ್ನು ನಾನು ಹೀಗೆ ಹೇಳಬಹುದು. ಕೆಲವು ಇಲಾಖೆಗಳನ್ನು ನಿಮ್ನ ವರ್ಗದವರಿಗಾಗಿಯೇ ಗೊತ್ತು ಮಾಡಿರುತ್ತಾರೆ; ಅವರಿಗೆ ಪ್ರವೇಶವಿಲ್ಲದ ಕೆಲವು ಇಲಾಖೆಗಳಿರುತ್ತವೆ.

೧೩೨. ಅವರಿಗೆ ಕೆಲವು ವೃತ್ತಿಗಳನ್ನು ಆರಿಸಿಕೊಳ್ಳಲು ಅವಕಾಶವಿಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಕಾರ್ಖಾನೆಗಳಲ್ಲಿ ಹಾಗಿದೆ.

೧೩೩. ಅವರು ನೇಯ್ಗೆಯ ಇಲಾಖೆಯೊಳಕ್ಕೆ ಹೋಗುವಂತಿಲ್ಲ ಎಂದು ನೀವು ಹೇಳಿದಿರಿ ಎಂದುಕೊಂಡಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೩೪. ಅವರು ಒಂದೇ ಕಾರ್ಮಿಕ ಸಂಘದ ಸದಸ್ಯರಾದರೂ, ನೇಯ್ಗೆ ಇಲಾಖೆಯ ಕೆಲಸಗಾರರು ಅವರನ್ನು ಒಳಕ್ಕೆ ಬಿಡಲು ಒಪ್ಪುವುದಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಒಪ್ಪುವುದಿಲ್ಲ. ಇದನ್ನು ನಾನು ಹೇಳಬಹುದಾದರೆ, ಇತ್ತೀಚೆಗಿನ ಮುಂಬಯಿ ಮುಷ್ಕರದಲ್ಲಿ ನಾನು ಈ ವಿಷಯವನ್ನು ಪ್ರಮುಖವಾಗಿ ಹೇಳಿದೆ. ನಿಮ್ನ ವರ್ಗದವರಿಗೆ ಎಲ್ಲ ಇಲಾಖೆಗಳಲ್ಲಿ ಕೆಲಸ ಮಾಡುವ ಹಕ್ಕಿದೆ ಎಂದು ಅವರು ಒಪ್ಪದಿದ್ದರೆ ನಾನು ನಿಮ್ನ ವರ್ಗದವರಿಗೆ ಮುಷ್ಕರದಲ್ಲಿ ಭಾಗವಹಿಸಿದಂತೆ ಮನ ಒಲಿಸುತ್ತೇನೆ ಎಂದು ಹೇಳಿದೆ. ಅನಂತರ ಅವರು, ತೀರ ಇಷ್ಟವಿಲ್ಲದೆಯೇ, ಇದನ್ನು ತಮ್ಮ ಹಕ್ಕೊತ್ತಾಯಗಳಲ್ಲಿ ಸೇರಿಸಲು ಒಪ್ಪಿದರು; ಅನಂತರ ಅವರು ಇದನ್ನು ಗಿರಣಿಯ ಮಾಲಿಕರ ಮುಂದಿಟ್ಟಾಗ, ಅವರು ಸರಿಯಾಗಿಯೇ ಅವರ ಮುಖಭಂಗ ಮಾಡಿದರು ಮತ್ತು ಇದು ಅನ್ಯಾಯವೆಂದಾದರೆ ಇದಕ್ಕೆ ತಾವು ಖಂಡಿತ ಹೊಣೆಯಲ್ಲ ಎಂದರು.

೧೩೫. ಮಾಲಿಕರು ಅಗ್ಗದ ಕಾರ್ಮಿಕರನ್ನು ಬಯಸಿ, ಆರ್ಥಿಕ ಕಾರಣಗಳಿಗಾಗಿ ನಿಮ್ನ ವರ್ಗದವರನ್ನು ಕೆಲವೇ ಇಲಾಖೆಗಳಲ್ಲಿಡುವಂತೆ ಮಾಡುವ ಪ್ರಸಂಗವಷ್ಟೇ ಅಲ್ಲವೇ ಇದು!

ಡಾ. ಬಿ. ಆರ್. ಅಂಬೇಡ್ಕರ್: ಅಲ್ಲ, ಇದರ ಕಾರಣ ಅಸ್ಪೃಶ್ಯತೆ.

೧೩೬. ಈ ಸನ್ನಿವೇಶದಲ್ಲಿ ಹೀಗೇನಾದರೂ ಇರಬಹುದೇನು? ಹೆಚ್ಚಿಗೆ ಕೂಲಿ ಪಡೆಯುವ ಕಾರ್ಮಿಕನು, ಅಸ್ಪೃಶ್ಯನೂ ತನ್ನ ಇಲಾಖೆಗೆ ಬಂದರೆ ತನ್ನ ಇಲಾಖೆಯಲ್ಲಿ ಕೂಲಿ ತಗ್ಗುತ್ತದೆ ಎಂದು ಅವನನ್ನು ಸೇರಿಸದಿರಬಹುದೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ಕೂಲಿಯ ಆಧಾರದ ಮೇಲೆ ವ್ಯತ್ಯಾಸಗಳೇನೂ ಇಲ್ಲ.

೧೩೭. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲವೇ ಇಲ್ಲ.

೧೩೮. ಇದು ಬರೀ ಅಸ್ಪೃಶ್ಯತೆಯ ಪ್ರಶ್ನೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೩೯. ಮಿ. ಕಡೋಗನ್: ಅವರು ಕಾರ್ಮಿಕ ಸಂಘದ ಸದಸ್ಯರಾಗಬಹುದಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೪೦. ಮಿ. ಪ್ರೇಮಚಂದ್: ನಿಮ್ಮ ವರ್ಗದವರೆಂದು ಮತದಾರರ ವಿಶಿಷ್ಟ ದಾಖಲಾತಿಯಲ್ಲಿ ಸೇರುವ ವರ್ಗಗಳ ನಿಖರವಾದ ವಿವರಣೆ ಕೊಡಬಲ್ಲಿರಾ?

ಡಾ. ಬಿ. ಆರ್. ಅಂಬೇಡ್ಕರ್: ಮೈಲಿಗೆ ಮಾಡುವರೆನಿಸಿಕೊಂಡ ಜಾತಿಗಳವರು.

೧೪೧. ಕೋಮಿನ ಅಂತಸ್ತು ಕೆಳಗಾದಷ್ಟೂ ಅದಕ್ಕೆ ಇತರರಿಗಿಂತ ಚುನಾವಣೆಯಲ್ಲಿ ಲಭ್ಯವಾಗುವ ಅನುಕೂಲವೂ ಹೆಚ್ಚಾಗಬೇಕು ಎನ್ನುವ ತತ್ವ ನ್ಯಾಯಸಮ್ಮತವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೪೨. ಎಲ್ಲ ಅಲ್ಪಸಂಖ್ಯಾತರಿಗೂ ಹೆಚ್ಚಿನ ಸ್ಥಾನಗಳನ್ನು ಕೊಟ್ಟಿದೆ. ಬಹುಸಂಖ್ಯಾತರು ಯಾರಾಗುತ್ತಾರೆ?

ಡಾ. ಬಿ. ಆರ್. ಅಂಬೇಡ್ಕರ್: ಅಲ್ಪಸಂಖ್ಯಾತರು ಸೇರಿ ಬಹುಸಂಖ್ಯಾತರಾದರೆ ಬಹುಸಂಖ್ಯೆ ಇಲ್ಲವೇ ಇಲ್ಲ. ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಲ್ಪಸಂಖ್ಯಾತರಲ್ಲಿ ವರ್ಗಭೇದಗಳಿರಬಹುದು. ಮುಂಬಯಿ ಪ್ರಾಂತದಲ್ಲಿ ಮಹಮದೀಯರಲ್ಲಿ ಎರಡು ಗುಂಪುಗಳಾಗಿ, ಒಂದು ಕಾರ್ಮಿಕರ ಪರವಾಗಿ ಮತ್ತೊಂದು ಬಂಡವಾಳಗಾರರ ಪರವಾಗಿ ಇರುವುದನ್ನು ನಾನು ಊಹಿಸಿಕೊಳ್ಳಬಲ್ಲೆ.

೧೪೩. ರಾಜಕೀಯ ಒಲವಿಲ್ಲದವರು ಅಥವಾ ಶಿಕ್ಷಣವಿಲ್ಲದವರನ್ನು ವೃತ್ತಿನಿರತ ನಾಯಕರು ಬಹು ಬಾರಿ ಸುಲಭವಾಗಿ ತಪ್ಪುದಾರಿಗೆ ಎಳೆಯುತ್ತಾರೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ತಿಳಿಯದು. ನಾನು ಎಂದೂ ವೃತ್ತಿನಿರತ ನಾಯಕನಾಗಿರಲಿಲ್ಲ. ಆದುದರಿಂದ ನಾನು ಹೇಳಲಾರೆ.

೧೪೪. ಸಮಾಜದಲ್ಲಿ ಅವಿದ್ಯಾವಂತರಾದವರ ದೊಡ್ಡ ವಿಭಾಗಕ್ಕೆ ಮತದಾನದ ಹಕ್ಕನ್ನು ವಿಸ್ತರಿಸುವುದರಿಂದ ತೀರ ಅಪಾಯವಿದೆ. ಅದನ್ನು ತಪ್ಪಾಗಿ ಬಳಸುವ ಸಾಧ್ಯತೆ ಇರುತ್ತದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ನನಗೆ ಹಾಗೆನ್ನಿಸುವುದಿಲ್ಲ.

೧೪೫. ಪ್ರಾಂತದ ಆದಾಯಕ್ಕೆ ಖರ್ಚು ಹಾಕದೆ, ಈಗಿರುವ ಶಾಲಾ ಕಾಲೇಜುಗಳಿಗೆ ನಿಮ್ಮ ವರ್ಗಗಳವರನ್ನು ಸೇರಿಸಿಕೊಳ್ಳಲು ಏಕೆ ಸಾಧ್ಯವಾಗುವುದಿಲ್ಲ, ಹೇಳಬಲ್ಲಿರಾ?

ಡಾ. ಬಿ. ಆರ್. ಅಂಬೇಡ್ಕರ್: ಏಕೆಂದರೆ ಅವರು ಈಗಿನ ವ್ಯವಸ್ಥೆಯಲ್ಲಿ ತೀವ್ರ ಅಲಕ್ಷ್ಯಕ್ಕೆ ಗುರಿಯಾಗಿದ್ದಾರೆ.

೧೪೬. ಪ್ರಾಂತದ ಆದಾಯಕ್ಕೆ ಖರ್ಚು ಹಾಕದೆ, ಈಗಿರುವ ಶಾಲಾ ಕಾಲೇಜುಗಳಿಗೇ ನಿಮ್ಮ ವರ್ಗಗಳವರನ್ನು ಸೇರಿಸಿಕೊಳ್ಳಲು ಏಕೆ ಸಾಧ್ಯವಾಗುವುದಿಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಒಪ್ಪದೆ ಇರುವವರನ್ನು ನೀವು ಅವರು ಒಪ್ಪದಿರಲು ಕಾರಣವೇನು ಎಂದು ಕೇಳಬೇಕು?

೧೪೭. ಯಾವುದಕ್ಕೆ ಒಪ್ಪದಿರುವುದು?

ಡಾ. ಬಿ. ಆರ್. ಅಂಬೇಡ್ಕರ್: ಅವರನ್ನು ಸೇರಿಸಿಕೊಳ್ಳದಿರುವುದಕ್ಕೆ.

೧೪೮. ಶಾಲಾ ಕಾಲೇಜುಗಳಿಗೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೪೯. ಈಗ ಮುಂಬಯಿ ಪುರಸಭೆ ಒಂದು ನಿಯಮವನ್ನು ಮಾಡಿದೆ ಎಂದು ನಿಮಗೆ ಗೊತ್ತಲ್ಲವೆ?

೧೫೦. ಒಂದು ಭಾಗದವರು ಪ್ರತಿಭಟಿಸಿರಬಹುದು. ಆದರೆ, ಪುರಸಭೆಯ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಿದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಮುಂದಿನ ಚುನಾವಣೆಯಲ್ಲಿ ಅವರು ಅದಕ್ಕೆ ಎಷ್ಟರಮಟ್ಟಿಗೆ ಅಂಟಿಕೊಳ್ಳುತ್ತಾರೆ ಎಂಬುದನ್ನು ನೋಡಬೇಕು.

೧೫೧. ಆದರೂ ಅದನ್ನು ಅವರು ಮಾಡಿದ್ದಾರೆಯೆಂಬುದು ನಿಮಗೆ ಗೊತ್ತಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೫೨. ಅಧ್ಯಕ್ಷರು: ಅವರು ಪ್ರಸ್ತಾಪಿಸುತ್ತಿರುವ ಪ್ರತಿಭಟನಾ ಸಭೆ ಯಾವುದು, ನಾವೂ ತಿಳಿಯ ಬಹುದೆ?

ಡಾ. ಬಿ. ಆರ್. ಅಂಬೇಡ್ಕರ್: ಸ್ಥಿತಿ ಇರುವುದು ಹೀಗೆ. ಈವರೆಗೆ ಮುಂಬಯಿ ನಗರದಲ್ಲಿ ಮುಂಬಯಿ ನಗರಸಭೆ ನಿಮ್ನ ವರ್ಗದವರಿಗಾಗಿಯೇ ಪ್ರತ್ಯೇಕ ಶಾಲೆಗಳನ್ನು ನಡೆಸುತ್ತಿತ್ತು. ಈಗ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಯೋಜನೆಯ ಪ್ರಕಾರ ಮುಂಬಯಿ ನಗರಸಭೆ ಅನಿವಾರ್ಯವಾಗಿ ಶಾಲೆಗಳ ಸಂಖ್ಯೆಗಳಲ್ಲಿ ಕಡಿಮೆ ಮಾಡಿ, ಮಿತವ್ಯಯಕ್ಕಾಗಿ ಬೇರೆ ಬೇರೆ ಚದುರಿ ಹೋಗಿದ್ದ ನಿಮ್ನ ವರ್ಗದ ಮಕ್ಕಳನ್ನು ಸವರ್ಣ ಹಿಂದೂಗಳ ಶಾಲೆಗಳೊಳಕ್ಕೆ ತರಬೇಕಾಗಿದೆ. ಸಹಜವಾಗಿಯೇ ಅಲ್ಲಿಗೆ ಬರುವ ಹುಡುಗರಿಗೆ ಕುಡಿಯುವ ನೀರು ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಪ್ರತ್ಯೇಕತೆ ಇರಬೇಕೆ, ಅಸ್ಪೃಶ್ಯರು ಕುಡಿಯಲು ಸುವರ್ಣ ಹಿಂದೂಗಳು ಬಳಸದಿರುವ ಪ್ರತ್ಯೇಕ ಪಾತ್ರೆಗಳಿರಬೇಕೆ ಎನ್ನುವ ಪ್ರಶ್ನೆ ಎದ್ದಿತು. ಪುರಸಭೆಯು "ನಮ್ಮ ಶಾಲೆಗಳಲ್ಲಿ ಅಸ್ಪೃಶ್ಯತೆಗೆ ಮನ್ನಣೆ ಕೊಡಲು ಸಾಧ್ಯವಿಲ್ಲ" ಎಂದು ಒಂದು ನಿರ್ಣಯವನ್ನು ಮಾಡಿತು. ಕುಡಿಯುವ ಪಾತ್ರೆಗಳ ವಿಷಯದಲ್ಲಿ ಶಾಲೆಗಳಲ್ಲಿ ಪ್ರತ್ಯೇಕತೆ ಇರಕೂಡದೆಂದು ಅವರು ಒಂದು ಸುತ್ತೋಲೆ ಹೊರಡಿಸಿದರು. ಈ ರೀತಿ ಒಂದೇ ಬಗೆಯ ವ್ಯವಸ್ಥೆ ಮಾಡುವುದು ಹಿಂದೂ ಧರ್ಮಕ್ಕೆ ವಿರುದ್ಧ ಎಂದು ಹೇಳಿ ಪ್ರತಿಭಟಿಸಲು ಮುಂಬಯಿ ಪ್ರಾಂತದ ಒಬ್ಬ ಮುಖ್ಯ ನಾಯಕರ ಅಧ್ಯಕ್ಷತೆಯಲ್ಲಿ ನಡೆದ ಪ್ರತಿಭಟನೆಯ ಸಭೆ ಇದು.

೧೫೩. ಮಿ. ಪ್ರೇಮಚಂದ್: ಅಹ್ಮದಾಬಾದ್ ಗಿರಣಿಗಳ ನೇಯುವ ಇಲಾಖೆಗಳಲ್ಲಿ ನಿಮ್ನ ವರ್ಗದ ಕೆಲಸಗಾರರಿದ್ದಾರೆ ಎಂದು ನಿಮಗೆ ಗೊತ್ತೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಅದು ತಿಳಿದಿರಲಿಲ್ಲ.

೧೫೪. ಅವರು ಕೆಲಸದಲ್ಲಿದ್ದಾರೆ ಎಂದು ನಾನು ನಿಮಗೆ ಹೇಳಬಲ್ಲೆ.

ಡಾ. ಬಿ. ಆರ್. ಅಂಬೇಡ್ಕರ್: ಈ ವಿಷಯವಾಗಿಯೂ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಪ್ರಾಯಶಃ ಅವರನ್ನು ಕೆಲಸಕ್ಕೆ ಸೇರಿಸಿಕೊಂಡು ಪ್ರತ್ಯೇಕವಾಗಿಟ್ಟಿರುತ್ತಾರೆ. ಉದಾಹರಣೆಗೆ ಇಂತಿಷ್ಟು ಮಗ್ಗ ಗಳನ್ನು ನಿಮ್ನ ವರ್ಗದವರಿಗೇ ವಹಿಸಿಕೊಡುವ ಸನ್ನಿವೇಶವನ್ನು ನಾನು ಕಲ್ಪಿಸಿಕೊಳ್ಳಬಲ್ಲೆ. ಇವತ್ತು ಕೆಲವು ಗಿರಣಿಗಳಲ್ಲಿ ನಿಮ್ನ ವರ್ಗದವರು ಇಡೀ ನೇಯ್ಗೆ ಇಲಾಖೆಯನ್ನು ವಹಿಸಿಕೊಳ್ಳಬೇಕು. ಗಿರಣಿ ಮಾಲಿಕರು ಅದನ್ನು ಅವರಿಗೆ ವಹಿಸಿಕೊಡಬೇಕು. ಆದರೆ, ಕೆಲವರು ನಿಮ್ನ ವರ್ಗದವರು ಕೆಲವರು ಸವರ್ಣೀಯರು ಇರುವಂತಿಲ್ಲ ಎನ್ನುವ ಸಲಹೆ ಇದೆ.

೧೫೫. ಅಧ್ಯಕ್ಷರು: ಸಮಸ್ಯೆ ಇರುವುದು ಇಬ್ಬರನ್ನೂ ಸೇರಿಸುವುದರಲ್ಲಿ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೫೬. ಸರ್ ಹರಿಸಿಂಗ್ ಗೌರ್: ರಾಜ್ಯಾಂಗದ ಸುಧಾರಣೆಗಳ ಒಟ್ಟು ಯೋಜನೆಯ ವಿಷಯದಲ್ಲಿ ನಿಮ್ಮ ಸಂಸ್ಥೆಯ ಅಭಿಪ್ರಾಯವೇನು? ಈ ವಿಷಯದಲ್ಲಿ ಅಭಿಪ್ರಾಯಗಳನ್ನು ರೂಪಿಸಿಕೊಂಡಿದ್ದೀರೇನು?

ಡಾ. ಬಿ. ಆರ್. ಅಂಬೇಡ್ಕರ್: ನಾನು ಇದನ್ನು ನಿಮಗೆ ಹೇಳಬಹುದು. ನಿಮ್ನವರ್ಗದವರಿಗೆ ರಾಜ್ಯಾಂಗದ ಸುಧಾರಣೆಗಳಲ್ಲಿ ಯಾವ ಆಸಕ್ತಿಯೂ ಇಲ್ಲ. ಯಾವುದೇ ಸ್ವರೂಪದ ಸರ್ಕಾರವೇ ಬರಲಿ, ತಮಗೆ ಅಗತ್ಯವಾದ ಆಶ್ವಾಸನೆಯನ್ನು ಮತ್ತು ಸುರಕ್ಷತೆಯನ್ನು ಪಡೆದುಕೊಳ್ಳುವುದರಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ. ಆದ್ದರಿಂದ ಪ್ರಾಂತ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಸ್ವರೂಪದ ವಿಷಯದಲ್ಲಿ ನಿಮ್ನ ವರ್ಗದವರಿಗೆ ಯಾವುದೇ ಅಭಿಪ್ರಾಯವಿದೆ ಎಂದು ನನಗೆ ಎನ್ನಿಸುವುದಿಲ್ಲ. ಆದರೆ, ನಿಮ್ನ ವರ್ಗದ ಒಬ್ಬ ಸದಸ್ಯನಾಗಿ ನನಗೆ ನನ್ನದೇ ವೈಯಕ್ತಿಕ ಅಭಿಪಾಯಗಳಿವೆ. ಇವು ನಿಮ್ನವರ್ಗದವರ ಅಭಿಪ್ರಾಯಗಳೇನಲ್ಲ. ಈ ಕಾರಣದಿಂದಲೇ ನನ್ನ ಮನವಿಯಲ್ಲಿ ರಾಜ್ಯಂಗವನ್ನು ಕುರಿತು ಏನನ್ನೂ ಹೇಳಿಲ್ಲ.

೧೫೭. ನನಗೆ ಅದು ಗೊತ್ತು. ಆದ್ದರಿಂದಲೇ ನಾನು ನಿಮಗೆ ಆ ಪ್ರಶ್ನೆಯನ್ನು ಕೇಳಿದ್ದು, ನಿಮ್ಮ ವೈಯಕ್ತಿಕ ಅಭಿಪ್ರಾಯಗಳೇನು?

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತ ಸರ್ಕಾರದ ಮಟ್ಟಿಗೆ, ನಾನು ಪ್ರಾಂತೀಯ ಸ್ವಾಯತ್ತತೆಯ ಪರವಾಗಿದ್ದೇನೆ.

೧೫೮. ಸಂಪೂರ್ಣವಾಗಿಯೋ, ಷರತ್ತುಗಳಿಗೊಳಪಟ್ಟೋ?

ಡಾ. ಬಿ. ಆರ್. ಅಂಬೇಡ್ಕರ್: ಶಾಂತಿ ಮತ್ತು ವ್ಯವಸ್ಥೆಗಳ ವರ್ಗಾವಣೆಗಳ ಮಟ್ಟಿಗೆ ಕೆಲವು 'ಸೇಫ್ ಗಾರ್ಡ್' ಇರಬಹುದು. ಶಾಂತಿ ಮತ್ತು ವ್ಯವಸ್ಥೆಗಳ ವರ್ಗಾವಣೆಯನ್ನು ನಾನು ವಿರೋಧಿಸುತ್ತೇನೆ ಎಂದಲ್ಲ; ನಾನು ವರ್ಗಾವಣೆಯ ಪರವೇ; ಆದರೆ ಒಂದಿಷ್ಟು ರಕ್ಷಣೆಗಳು ಇರಬೇಕೆಂದು ನನ್ನ ಅಪೇಕ್ಷೆ. ಅವುಗಳು ಹೇಗಿರಬೇಕು ಎಂದು ಇವತ್ತು ನನಗೆ ಖಚಿತವಿಲ್ಲ. ಆದರೆ, ಈ ವಿಷಯದಲ್ಲಿ ಸ್ವಲ್ಪ ರಕ್ಷಣೆ ಇದ್ದರೆ, ಅನುಕೂಲವುಂಟು. (ವೈಯಕ್ತಿಕವಾಗಿ ಹೇಳುವುದಾದರೆ) ಇದನ್ನು ಬಿಟ್ಟು ನಾನು ಸಂಪೂರ್ಣ ಪ್ರಾಂತೀಯ ಸ್ವಾಯತ್ತತೆಯನ್ನು ಬೆಂಬಲಿಸುತ್ತೇನೆ.

೧೫೯. ಕೇಂದ್ರ ಸರ್ಕಾರದ ವಿಷಯದಲ್ಲಿ?

ಡಾ. ಬಿ. ಆರ್. ಅಂಬೇಡ್ಕರ್: ಅಲ್ಲಿ ದ್ವಿಮುಖ ಸರ್ಕಾರದಿಂದ ಪ್ರಾರಂಭಿಸಬಹುದು ಎಂದು ನನಗೆ ತೋರುತ್ತದೆ.

೧೬೦. ಮತದಾನದ ಹಕ್ಕಿನ ವಿಷಯದಲ್ಲಿ, ಎಲ್ಲ ವಯಸ್ಕ ಸ್ತ್ರೀಯರಿಗೆ ಮತ್ತು ಪುರುಷರಿಗೆ ಮತದಾನದ ಹಕ್ಕು ಕೊಡುವುದರ ಪರವಾಗಿ ನೀವು ಇರುವಿರಿ ಎಂದು ನನಗೆ ತೋರುತ್ತದೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೬೧. ಇದು ಕಾರ್ಯ ಸಾಧ್ಯ ಸೂಚನೆ ಎಂದು ನಿಮಗೆನ್ನಿಸುತ್ತದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಬಹು ಕಾರ್ಯ ಸಾಧ್ಯವಾದದ್ದು.

೧೬೨. ರಾಜಕೀಯ ಮತದಾನದ ಹಕ್ಕನ್ನು ತಮ್ಮ ಸಮುದಾಯದ ಒಳಿತಿಗಾಗಿ ಬಳಸಿಕೊಳ್ಳಲು ಸಮರ್ಥರಾಗುವ ಮಟ್ಟಿಗೆ ಜನಸಾಮಾನ್ಯರು ರಾಜಕೀಯ ಅರಿವನ್ನು ಪಡೆದಿದ್ದಾರೆ ಎಂದು ನಿಮಗೆ ತೋರುತ್ತದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ನಿಮ್ನವರ್ಗದವರ ಪರವಾಗಿ ಮಾತನಾಡುತ್ತ ನಿಮ್ನವರ್ಗದವರು ತಮ್ಮ ಮತವನ್ನು ಅತ್ಯಂತ ಜಾಣ್ಮೆಯಿಂದ ಬಳಸುತ್ತಾರೆ ಎಂದು ಒತ್ತಿ ಹೇಳಲು ಬಯಸುತ್ತೇನೆ. ನಾನು

ಮುಂಬಯಿ ಪ್ರಾಂತವನ್ನು ಕುರಿತು ಹೇಳುತ್ತಿದ್ದೇನೆ. ಅವರ ಬದುಕಿನಲ್ಲಿ ಪ್ರತಿಕ್ಷಣವೂ ಅಸ್ಪೃಶ್ಯತೆಯ ಮಹಾ ವ್ಯಾಧಿಯು ಅವರ ಮನಸ್ಸಿನ ಮುಂದೆ ಇದ್ದೇ ಇರುತ್ತದೆ ಎಂಬುದನ್ನು ಗಮನಿಸಿ ಮತ್ತು ಈ ಕಷ್ಟಕ್ಕೆ ಒಂದೇ ಪರಿಹಾರ ಎಂದರೆ ರಾಜಕೀಯ ಅಧಿಕಾರ ಎನ್ನುವುದರ ಅರಿವು ಅವರಿಗಿದೆ ಎನ್ನುವುದನ್ನು ಗಮನಿಸಿ, ನಿಮ್ಮ ವರ್ಗದ ಮತದಾರ ಬುದ್ಧಿವಂತ ಮತದಾರನಾಗುತ್ತಾನೆ ಎಂದು ಒತ್ತಿ ಹೇಳುತ್ತೇನೆ.

೧೬೩. ಇತರ ದೇಶಗಳ ಉದಾಹರಣೆಗಳನ್ನು ಅನುಸರಿಸಿ, ಯಾವ ತೆರಿಗೆಯನ್ನೂ ಕೊಡದವರಿಗೆ ರಾಜಕೀಯ ಅಸ್ತಿತ್ವ ಪಡೆದು ರಾಜಕೀಯ ಅಧಿಕಾರವನ್ನು ದೊರಕಿದರೆ ಅವರು ಈಗಾಗಲೇ ಹೆಚ್ಚಿನ ತೆರಿಗೆಯ ಭಾರದಿಂದ ಕುಗ್ಗಿರುವವರ ಮೇಲೆ ಇನ್ನಷ್ಟು ತೆರಿಗೆಯನ್ನು ಹೊರಿಸುತ್ತಾರೆ ಎಂದು ನಿಮಗೆ ಅನ್ನಿಸುವುದಿಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಅದು ಇರಬೇಕಾದದ್ದೇ ಹಾಗೆ. ಅದರಲ್ಲಿ ನನಗೆ ತಪ್ಪೇನೂ ಕಾಣಿಸುವುದಿಲ್ಲ.

೧೬೪. ತೆರಿಗೆ ಕೊಡುವ ಸಮುದಾಯದ ಶೋಷಣೆಯಲ್ಲಿ ನಿಮಗೆ ತಪ್ಪೇನೂ ಕಾಣಿಸುವುದಿಲ್ಲವೆ? ಇದು ನಿಮ್ಮ ಸ್ವಂತ ಅಭಿಪ್ರಾಯವೋ ಅಥವಾ ನೀವು ಪ್ರತಿನಿಧಿಸುವ ಸಂಸ್ಥೆಯ ಅಭಿಪ್ರಾಯವೊ?

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಸ್ವಂತ ಅಭಿಪ್ರಾಯ. ಈ ವಿಷಯವಾಗಿ ಇಲ್ಲಿ ಸಂಸ್ಥೆಯು ಏನನ್ನೂ ಹೇಳಿಲ್ಲ.

೧೬೫. ಈ ಅಭಿಪ್ರಾಯವನ್ನು ಆಯೋಗದ ಮುಂದಿಡುವಾಗ ನೀವು ಸಂಸ್ಥೆಯ ಒಟ್ಟಾರೆ ಅಭಿ ಪ್ರಾಯವನ್ನು ಪ್ರತಿನಿಧಿಸುತ್ತೀರಿ ಎಂದು ನಿಮಗೆ ತೋರುತ್ತದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಎಲ್ಲ ಬಡ ಸಮುದಾಯಗಳ ಅಭಿಪ್ರಾಯ ಹಾಗೆಯೇ ಇರುತ್ತದೆ ಎಂದು ನನ್ನ ಭಾವನೆ.

೧೬೭. ಸರ್ ಹರಿಸಿಂಗ್ ಗೌರ್: ಅಧ್ಯಕ್ಷರ ಪ್ರಶ್ನೆಗೆ ಉತ್ತರಿಸುತ್ತ ನೀವು ನಿಮ್ಮ ವರ್ಗಗಳವರನ್ನು ಹಿಂದೂ ಧರ್ಮದವರಿಂದ ಪ್ರತ್ಯೇಕವಾದ ಕೋಮು ಎಂದು ಪರಿಗಣಿಸಬೇಕು ಎಂದಿರಿ. ಇದು ಚುನಾವಣೆಯ ಮಟ್ಟಿಗೆ ಮಾತ್ರವೋ ಅಥವಾ ಎಲ್ಲ ವಿಷಯಗಳಿಗೂ ಅನ್ವಯಿಸುತ್ತದೆಯೋ?

ಡಾ. ಬಿ. ಆರ್. ಅಂಬೇಡ್ಕರ್: ಎಲ್ಲ ವಿಷಯಗಳಲ್ಲಿಯೂ ವಾಸ್ತವವಾಗಿ ಅವರು ಪ್ರತ್ಯೇಕವೇ ಆಗಿದ್ದಾರೆ.

೧೬೮. ನಿಮ್ಮ ವರ್ಗದವರನ್ನು ನಿಜವಾದ ಹಿಂದೂಗಳು ಎಂದು ವರ್ಗೀಕರಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೆಸರು ನನಗೆ ಮುಖ್ಯವಲ್ಲ. ನಾನು ಹಿಂದೂ ಸಮುದಾಯದ ಪರಿಧಿಯಾಚೆ ಉಳಿದಿರುವಾಗ ನಾನು ನನ್ನನ್ನು ಹಿಂದೂ ಎಂದು ಕರೆದುಕೊಳ್ಳುತ್ತೇನೆಯೆ ಅಥವಾ ಹಿಂದೂಯೇತರ ಎಂದು ಕರೆದುಕೊಳ್ಳುತ್ತೇನೆಯೆ ಎನ್ನುವುದು ಮುಖ್ಯವಲ್ಲ.

೧೭೦. ಅದರಿಂದ ಬೇಕಾದಷ್ಟು ವ್ಯತ್ಯಾಸವಾಗುತ್ತದೆ. ನೀವು ಹಿಂದೂ ಧರ್ಮದ ಹೊರಗಿದ್ದರೆ ನಿಮಗೆ ಹಿಂದೂ ಕಾನೂನು ಅನ್ವಯಿಸುವುದಿಲ್ಲ. ಉದಾಹರಣೆಗೆ ನೀವು ೧೯೨೩ರ ೩೦ನೆಯ ಶಾಸನ ಅನ್ವಯವಾಗುವಂತೆ ಮದುವೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಶಾಸನವು ಮದುವೆಗೆ ಸಂಬಂಧಿಸಿದಂತೆ ಎಲ್ಲ ಜಾತಿ ವ್ಯತ್ಯಾಸಗಳನ್ನೂ ತೊಡೆದುಹಾಕಿದೆ. ಹಿಂದೂ–ಮಹಾರ್, ಸ್ಪೃಶ್ಯ–ಅಸ್ಪೃಶ್ಯ ಎಲ್ಲ ವ್ಯತ್ಯಾಸಗಳನ್ನೂ ಕೊನೆಗಾಣಿಸಿದೆ. ನೀವು ಧರ್ಮದಿಂದ ಹೊರಕ್ಕೆ ಹೋದರೆ, ಆ ಸಾಮಾಜಿಕ ವ್ಯವಸ್ಥೆಯಿಂದ ಹೊರಕ್ಕೆ ಹೋದರೆ, ಆ ಮಟ್ಟಿಗೆ ನೀವು ಹಿಂದೂ ಕಾನೂನಿನ ವ್ಯಾಪ್ತಿಯ ಹೊರಗುಳಿಯುತ್ತೀರಿ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಇರಬಹುದು.

೧೭೧. ಹಾಗಾದರೆ ನಿಮಗೆ ಯಾವ ಕಾನೂನು ಅನ್ವಯವಾಗುತ್ತದೆ?

ಡಾ. ಬಿ. ಆರ್. ಅಂಬೇಡ್ಕರ್: ಮುಸ್ಲಿಮರಾದ ಖೋಜಾಗಳು ಆಸ್ತಿಯ ಹಕ್ಕಿನ ಮಟ್ಟಿಗೆ ಹಿಂದೂ ಕಾನೂನಿನ ಪ್ರಕಾರ ವ್ಯವಹರಿಸಲು ಬಯಸುವಂತೆ ನಾವೂ ಹಿಂದೂ ಕಾನೂನಿಗೆ ಬದ್ಧರಾಗುತ್ತೇವೆ.

೧೭೨. ಎಂದರೆ ನೀವು ೧೯೨೫ರ ೩೦ನೆಯ ಶಾಸನಕ್ಕೆ, ಹಿಂದೂ ಕಾನೂನಿಗೆ ಒಳಪಡುತ್ತೀರ?

ಡಾ. ಬಿ. ಆರ್. ಅಂಬೇಡ್ಕರ್: ಮದುವೆಯ ವಿಷಯವಾಗಿ ನಿಮ್ಮ ವರ್ಗದವರ ಅಭಿಪ್ರಾಯ ಏನು ಎಂಬುದು ನನಗೆ ತಿಳಿಯದು.

೧೭೩. ದಯೆಯಿಟ್ಟು ನಿಮ್ಮ ವಿಜ್ಞಾಪನಾಪತ್ರದಲ್ಲಿ ನೋಡುವಿರಾ? ೩ನೆಯ ಪುಟದಲ್ಲಿ ನೀವು ಹೇಳುತ್ತೀರಿ– ನನ್ನ ಮಿತ್ರ ಶ್ರೀ ಕಿಕಾಭಾಯಿಯವರ ಪ್ರಶ್ನೆಗೆ ಇವತ್ತು ನೀವು ಉತ್ತರವಾಗಿ ಮತ್ತೆ ಅದನ್ನೇ ಹೇಳಿದಿರಿ. "ಕೋಮಿನ ಅಂತಸ್ತು ಎಂದರೆ ಅದು ಸಾಮಾಜಿಕ ಹೋರಾಟದಲ್ಲಿ ತನ್ನನ್ನು ರಕ್ಷಿಸಿಕೊಳ್ಳುವ ಶಕ್ತಿ ಎಂದು ಅರ್ಥವಾಗಬೇಕು. ಆ ಶಕ್ತಿ ಸ್ಪಷ್ಟವಾಗಿ ಆ ಕೋಮಿನ ಶೈಕ್ಷಣಿಕ ಮತ್ತು ಆರ್ಥಿಕ ಅಂತಸ್ತನ್ನು ಅವಲಂಬಿಸುತ್ತದೆ."

ಡಾ. ಬಿ. ಆರ್. ಅಂಬೇಡ್ಕರ್: ಖಂಡಿತವಾಗಿಯೂ.

೧೭೪. ಈ ತತ್ವವನ್ನು ಒಪ್ಪಿಕೊಂಡರೆ ಕೋಮಿನ ಅಂತಸ್ತು ಎಷ್ಟು ಕೆಳಗಿನದಾದರೆ ಅಷ್ಟು ಅದಕ್ಕೆ ಇತರರಿಗಿಂತ ಹೆಚ್ಚಾಗಿ ಚುನಾವಣೆಯಲ್ಲಿ ಅನುಕೂಲ ದೊರೆಯಬೇಕು. ಈ ಕೊನೆಯ ವಾಕ್ಯವನ್ನು ನೀವು ಅದಕ್ಕೆ ಮೊದಲು ಹೇಳಿದ ಎರಡು ಆಧಾರ ವಚನಗಳಿಂದ ಉದ್ಭವಿಸುವ ತರ್ಕಬದ್ಧ ನಿರ್ಣಯ ಎಂದು ಮುಂದಿಡುತ್ತೀರೇನು?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೭೫. ಅದು ತರ್ಕಬದ್ಧ ನಿರ್ಣಯ ಎಂದು ನಿಮ್ಮ ಅಭಿಪ್ರಾಯ?

ಡಾ. ಬಿ. ಆರ್. ಅಂಬೇಡ್ಕರ್: ಖಂಡಿತವಾಗಿಯೂ.

೧೭೬. .....ನೀವು, "ಸಾಕಷ್ಟು ಪ್ರಾತಿನಿಧ್ಯದ ಜೊತೆಗೆ, ದೇಶದ ಸಂವಿಧಾನದಲ್ಲಿ ಖಂಡಗಳ (ಕ್ಲಾಸಸ್) ಸೇರುವಿಕೆಯನ್ನು ಒತ್ತಾಯಪೂರ್ವಕವಾಗಿ ಕೇಳಬೇಕು ಎಂದು ಸಭೆಯ ಭಾವನೆ" ಎಂದು ನೀವು ಹೇಳಿದ್ದಿರಿ ಎನ್ನುವುದರ ಕಡೆಗೆ ನಾನು ನಿಮ್ಮ ಗಮನವನ್ನು ಸೆಳೆಯಬೇಕು. ಈ ಖಂಡಗಳಲ್ಲಿ ಇಂತಹವೂ ಸೇರಿವೆ: "ತಮ್ಮವರಲ್ಲಿಯೇ ಒಬ್ಬರನ್ನು ವಿಶೇಷ ಪೊಲೀಸ್ ಇನ್ಸ್‌ಪೆಕ್ಟರಾಗಿ ನೇಮಕ ಮಾಡಿಸಿಕೊಳ್ಳುವುದು ನಿಮ್ಮವರ್ಗದವರ ಹಕ್ಕು."

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೭೭. ಸಂಸತ್ತಿನ ಶಾಸನವೊಂದು ಭಾರತದ ಪ್ರತಿ ಜಿಲ್ಲೆಯಲ್ಲಿ ನಿಮ್ಮ ವರ್ಗದವರಿಗೆ ಅವರಲ್ಲಿಯೇ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಇರತಕ್ಕದ್ದು ಎನ್ನುವ ಒಂದು ಖಂಡ ಇರಬೇಕೆಂದು ನೀವು ನಿರೀಕ್ಷಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಅದರಲ್ಲಿ ವಿಚಿತ್ರವಾದುದೇನೂ ಕಾಣುವುದಿಲ್ಲ.

೧೭೮. (ನಿಮಗೆ ಕೆಲವು ರಾಜ್ಯಾಂಗದತ್ತ ಆಶ್ವಾಸನೆಗಳಿದ್ದರೆ, ಇತರ ಕೋಮಿನವರಿಗೂ ಅದೇ ಹಕ್ಕಿರುತ್ತದೆ ಎಂದು ಅಂತರ್ಗತ ಅರ್ಥ) ಎಲ್ಲ ಕೋಮುಗಳವರಿಗೂ ಸಂಬಂಧಿಸಿದ ಹಾಗೆ ಇಂತಹ ನಿಯಮವಿದ್ದರೆ, ಸರ್ಕಾರದ ಸ್ಥಾನಗಳನ್ನೂ ಇತರ ಎಲ್ಲವನ್ನೂ ಹೀಗೆಯೇ ಬೇರೆ ಬೇರೆ ಕೋಮುಗಳಿಗೆ ಹಂಚಿಕೊಟ್ಟುಬಿಡುತ್ತೀರೇನು? ನೀವು ಭಾರತದಲ್ಲಿ ಇರಬೇಕೆಂದು ನಿರೀಕ್ಷಿಸುವ ರಾಜ್ಯಾಂಗ ಇದೇ ಏನು?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಅದು ತಿಳಿಯದು. ನಾನೇನಿದ್ದರೂ ನಿಮ್ಮ ವರ್ಗದವರ ಪರವಾಗಿ ಮಾತನಾಡುತ್ತಿದ್ದೇನೆ. ನಾನು ಒಂದು ಅಂಶವನ್ನು ಸ್ಪಷ್ಟಪಡಿಸಬಹುದೆ?

೧೭೯. ನಾನು ನನ್ನ ವಾಕ್ಯವನ್ನು ಮುಗಿಸಲು ಅವಕಾಶವಿಲ್ಲವೇ? ನಿಮ್ಮ ಮನಸ್ಸಿಗೆ ಆ ಸಾಧ್ಯತೆ ಯಾವ ಆತಂಕವನ್ನೂ ಉಂಟುಮಾಡುವುದಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನೀವು ಮುಂದುವರಿಸುವ ಮೊದಲು ನಾನು ವಿವರಿಸಲು ಅವಕಾಶ ಕೊಡಿ. 'ಅಲ್ಪಸಂಖ್ಯಾತರು' ಎನ್ನುವ ಶಬ್ದವನ್ನು ಬಳಸುವಾಗ ನಾವು ಬಹು ಎಚ್ಚರಿಕೆಯಿಂದಿರಬೇಕೆಂದು ನನಗೆನ್ನಿಸುತ್ತದೆ. ಒಂದು ಕೋಮಿನವರ ಸಂಖ್ಯೆ ಸಣ್ಣದಾದ ಮಾತ್ರಕ್ಕೆ ಅದನ್ನು ರಾಜಕೀಯವಾಗಿಯೂ ಅಲ್ಪಸಂಖ್ಯಾತ ಎಂದು ಕರೆಯಬಹುದು ಎಂದು ನನಗೆ ತೋರುವುದಿಲ್ಲ. ತುಳಿತಕ್ಕೆ ಸಿಕ್ಕ ಅಥವಾ ಬಹುಸಂಖ್ಯಾತರು ಹಕ್ಕುಗಳನ್ನು ನಿರಾಕರಿಸಿದ ಅಲ್ಪಸಂಖ್ಯಾತ ಕೋಮು ಮಾತ್ರ ರಾಜಕೀಯ ವಿಷಯ ಗಳಲ್ಲಿಯೂ ಅಲ್ಪಸಂಖ್ಯಾತ ಎನಿಸಿಕೊಳ್ಳುತ್ತದೆ.

೧೮೦. ಇತರ ದೇಶಗಳಲ್ಲಿ ಇಂತಹ ಅಲ್ಪಸಂಖ್ಯಾತರಿರುವೆಡೆಗಳಲ್ಲಿ ಅವಕಾಶವನ್ನು ಕಲ್ಪಿಸಿ ರುತ್ತಾರೆ. ಅಲ್ಪಸಂಖ್ಯಾತರ ರಕ್ಷಣೆಗೆ ಒಬ್ಬ ಮಂತ್ರಿ ಇರುತ್ತಾರೆ. ಇದನ್ನು ಕುರಿತು ನೀವು ಯೋಚಿಸಿದ್ದೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೧೮೧. ನಾವು ನಿಮಗೆ ರಕ್ಷಣೆ ನೀಡಿದರೆ– ರಕ್ಷಣೆ ಯಾವುದೇ ರೂಪದಲ್ಲಿರಬಹುದು, ನಾನು ಹಾಗೆ ಹೇಳಬಹುದಾದರೆ?

ಡಾ. ಬಿ. ಆರ್. ಅಂಬೇಡ್ಕರ್: ನಡುವೆ ಮಾತನಾಡಬೇಕಾಗಿರುವುದಕ್ಕೆ ವಿಷಾದಿಸುತ್ತೇನೆ– ಶಾಂತಿ ಸ್ಥಾಪನೆಯಿಂದ ಮೇಲೆ ಸ್ಲಾವನಿಕ ದೇಶಗಳಲ್ಲಿ ಬಹುಸಂಖ್ಯೆಯವರನ್ನು ಒಳಗೊಂಡ ಹಲವಾರು ಯುರೋಪಿನ ದೇಶಗಳಿಗಾಗಿ ರೂಪಿಸಿದ ಹೊಸ ರಾಜ್ಯಾಂಗಗಳಲ್ಲಿ ಈ ತತ್ವ ಸೇರಿದೆ ಎಂದು ನಾನು ಕಂಡಿದ್ದೇನೆ. ನಾನು ಹೀಗೆ ಹೇಳಲು ನೀವು ಅವಕಾಶ ಕೊಡುವುದಾದರೆ, ನಾನು ಹೀಗೆ ಹೇಳಬಹುದು. ಈ ವಿಷಯಕ್ಕೆ ನಾನು ಒಂದಿಷ್ಟು ವಿಶೇಷ ಗಮನ ಕೊಟ್ಟಿದ್ದೇನೆ.

೧೮೨. ಲಾರ್ಡ್ ಬರ್ನಮ್: ಅದನ್ನು ಕಾರ್ಯಗತ ಮಾಡಿದೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಅದು ರಾಜ್ಯಾಂಗದ ಭಾಗವಾಗಿದೆ.

೧೮೩. ಕಾರ್ಯಗತವೂ ಆಗಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಕಾರ್ಯಗತವೂ ಆಗಿದೆ; ಸಂಗತಿ ಇದು. ಆಶ್ವಾಸನೆಯನ್ನು ಕಾರ್ಯಗತ ಮಾಡಿಲ್ಲ ಎನಿಸಿದರೆ ಅಲ್ಪಸಂಖ್ಯಾತರಿಗೆ ಲೀಗ್ ಆಫ್ ನೇಷನ್ಸ್‌ಗೆ ಮನವಿ ಮಾಡಲು ಹಕ್ಕಿದೆ.

*****

೧೮೬. ನಾನು ತತ್ವದ ವಿಷಯ ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಿಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಸ್ವರೂಪದ ವಿಷಯ ನನಗೆ ಮುಖ್ಯವಲ್ಲ ಎಂದು ನಾನು ಹೇಳಬಹುದು.

೧೮೭. ನೀವು ಸೂಚಿಸಿರುವ ಯೋಜನೆಯ ವಿವರಗಳನ್ನು ದೇಶದ ರಾಜ್ಯಾಂಗದಲ್ಲಿ ಸೇರಿಸಿದರೆ, ಅದು ನಿರಂತರ ವರ್ಗಕಲಹಕ್ಕೆ ಕಾರಣವಾಗುವುದಿಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಆಗಬಹುದು. ಆದರೆ, ಅದು ಬಹುಸಂಖ್ಯಾತರ ಮನೋಧರ್ಮ ವನ್ನು ಅವಲಂಬಿಸಿರುತ್ತದೆ.

೧೮೮. ಆದ್ದರಿಂದ, ವಿವೇಕಯುಕ್ತ ರಾಜನೀತಿಜ್ಞರಾದ ನೀವು.....

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೀಗೆ ಹೇಳಲು ನೀವು ಅವಕಾಶ ನೀಡುವುದಾದರೆ, ನಾವು ಇವೆಲ್ಲಕ್ಕೂ ಒತ್ತಾಯ ಮಾಡಿದ್ದರೂ ಇವೆಲ್ಲ ಅಲ್ಪಕಾಲದ ಅವಕಾಶ ನೀಡಿಕೆಗಳಷ್ಟೇ ಎಂದು ನಾನು

ಒಪ್ಪುತ್ತೇನೆ. ಭಾರತ ಒಂದಾಗುವ ಕಾಲವನ್ನು ಕುರಿತು ನಾನು ಚಿಂತಿಸುತ್ತೇನೆ. ಹಾಗಿರಬೇಕೆಂದು ಬಯಸುತ್ತೇನೆ. ಇವೆಲ್ಲ ಅಗತ್ಯವಾಗಿಲ್ಲದ ಕಾಲ ಬರುತ್ತದೆ ಎಂದು ನಾನು ನಂಬಿದ್ದೇನೆ; ಆದರೆ, ಅವೆಲ್ಲ ಬಹುಸಂಖ್ಯಾತರು, ಅಲ್ಪಸಂಖ್ಯಾತರನ್ನು ಹೇಗೆ ಕಾಣುತ್ತಾರೆ ಎನ್ನುವುದನ್ನು ಅವಲಂಬಿಸಿದೆ.

*****

೧೯೮. ಸಾಮಾಜಿಕ ಬಹಿಷ್ಕಾರಕ್ಕಾಗಿ ಹೆದರಿ ನ್ಯಾಯಾಲಯದ ಹೊರಗಡೆ ಕಿಟಕಿಯ ಬಳಿಯೆ ನಿಂತ ನಿಮ್ಮ ವರ್ಗದವನೊಬ್ಬನ ಮೊಕದ್ದಮೆಯನ್ನು ನೀವು ನಡೆಸಿದಿರಿ ಎಂದು ಹೇಳಿದ್ದಿರಿ. ಇದು ಯಾವ ಜಿಲ್ಲೆಯಲ್ಲಿ ಆಯಿತು?

ಡಾ. ಬಿ. ಆರ್. ಅಂಬೇಡ್ಕರ್: ಖಾಂದೇಶ್ ಜಿಲ್ಲೆ.

೧೯೯. ಸಾಮಾನ್ಯ ಮ್ಯಾಜಿಸ್ಟ್ರೇಟರ ನ್ಯಾಯಾಲಯವೆ?

ಡಾ. ಬಿ. ಆರ್. ಅಂಬೇಡ್ಕರ್: ವೈತನಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯ.

೨೦೦. ಮ್ಯಾಜಿಸ್ಟ್ರೇಟರು ಯಾವ ಕೋಮಿನವರು?

ಡಾ. ಬಿ. ಆರ್. ಅಂಬೇಡ್ಕರ್: ಹಿಂದು.

೨೦೧. ಅವರು ಆಪಾದಿತನು ನ್ಯಾಯಾಲಯದೊಳಕ್ಕೆ ಬರುವುದಕ್ಕೆ ಆಕ್ಷೇಪಣೆ ಎತ್ತಲಿಲ್ಲ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ಆಪಾದಿತನೇ ಒಳಕ್ಕೆ ಬರಲು ಒಪ್ಪಲಿಲ್ಲ ಎಂದು ನಾನು ಹೇಳಿದೆ.

೨೦೨. ಹಿಂದೂಗಳು ಹಿಂದೆ ನಡೆಸಿದ್ದ ಕೃತ್ಯಗಳಿಂದ ಆಪಾದಿತನೇ ಭಯಗೊಂಡಿದ್ದನೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೦೩. ಅವನಿಗೆ ಸವರ್ಣೀಯರು ಕೊಟ್ಟಿದ್ದ ಮಿತವಾದ ಹಕ್ಕುಗಳಾದರೆ ಅವನು ಹೆಜ್ಜೆ ಇಟ್ಟರೆ ಅನಂತರ ಅವನಿಗೆ ನ್ಯಾಯ ದೊರಕುವುದಿಲ್ಲ ಎನ್ನುವ ಭಯ, ಸವರ್ಣೀಯರ ತುಳಿತದಿಂದ ನಿಮ್ಮ ವರ್ಗದವರ ಮನಸ್ಸುಗಳಲ್ಲಿ ಬೆಳೆದಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೦೪. ಸರ್ ಹರಿಸಿಂಗ್ ಗೌರ್: ಡಾ. ಅಂಬೇಡ್ಕರ್ ಅವರೆ, ಅಸ್ಪೃಶ್ಯತೆಯನ್ನು ತೆಗೆದುಹಾಕಿ ನಿಮ್ಮ ವರ್ಗದವರ ದಾರಿಯಲ್ಲಿರುವ ಎಲ್ಲ ಅನರ್ಹತೆಗಳನ್ನು ನಿವಾರಿಸಲು ಕಳೆದ ಕೆಲವು ವರ್ಷಗಳಲ್ಲಿ ಪ್ರಗತಿಯಾಗಿದೆ ಎಂದು ನೀವು ಒಪ್ಪುತ್ತೀರಿ ಎಂದು ನಾನು ಭಾವಿಸಿದೇನೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೦೫. ಸುಧಾರಣೆಗಳು ನಿಮ್ಮ ಕನಸುಗಳು ಮತ್ತು ಆಸೆಗಳು ಬಯಸಿದ ಪ್ರಮಾಣದಲ್ಲಿ ಆಗಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಹಿಂದೂಗಳಲ್ಲಿ ಸವರ್ಣೀಯರು ಮತ್ತು ಇತರರ ನಡುವೆ ಇರುವ ಎಲ್ಲ ಅಡ್ಡಿಗಳನ್ನೂ ತೆಗೆದುಹಾಕಿ ಎಲ್ಲ ಹಿಂದೂಗಳನ್ನು ಒಗ್ಗೂಡಿಸಬೇಕೆಂಬ ಭಾವನೆ ಬೆಳೆಯುತ್ತಿದೆ ಎಂದು ನಾವು ಗುರುತಿಸಬೇಕಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ವೇದಿಕೆಗಳಿಂದ ಭಾಷಣಗಳಾಗಿವೆ.

೨೦೬. ಕ್ರಿಯಾತ್ಮಕವಾಗಿಯೂ ಕೆಲಸವಾಗಿದೆಯಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ದೇಶದಲ್ಲಿ ನನ್ನ ಭಾಗವಾದ ಮುಂಬಯಿ ಪ್ರಾಂತದ ವಿಷಯ ಮಾತನಾಡುವುದಾದರೆ, ನಿಮ್ಮ ಹೇಳಿಕೆಯನ್ನು ಸಂಪೂರ್ಣವಾಗಿ ಒಪ್ಪುವುದು ಸಾಧ್ಯವಿಲ್ಲ.

೨೦೭. ಹಾಗಾದರೆ, ನಾನು ನಿದರ್ಶನಗಳನ್ನು ಕೊಡುತ್ತೇನೆ. ಪ್ರತಿವರ್ಷ ಜಾತಿ ಇರುವವರ ಮತ್ತು ಇಲ್ಲದವರ ಸಮಾಜ ಇರುವ ಕಡೆಗಳಲ್ಲಿ ಹಿಂದೂಗಳು ಸಮಾರಾಧನೆಯನ್ನು ಏರ್ಪಡಿಸುತ್ತಾರೆ. ಒಂದು ವರ್ಗದ ಜನರಿಗೆ ಮತ್ತೊಂದು ವರ್ಗದವರ ಜೊತೆಗೆ ಹೊಂದಾಣಿಕೆ ಆಗಲಿ ಎಂದು ಊಟಕ್ಕೆ ಒಟ್ಟಿಗೆ ಕುಳಿತುಕೊಳ್ಳುತ್ತಾರೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಈ ಪ್ರಾಂತದಲ್ಲಿ ಹೀಗೆ ನಡೆಯುವ ಸಂಗತಿ ನನಗೆ ತಿಳಿಯದು.

೨೦೮. ನಾನು ಅಂತಹ ಅನೇಕ ಸಮಾರಾಧನೆಗಳಿಗೆ ಹೋಗಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಪ್ರಾಂತದಲ್ಲಿ?

ಸರ್ ಹರಿಸಿಂಗ್ ಗೌರ್: ಅಲ್ಲ, ನಾಗಪುರದಲ್ಲಿ.

೨೦೯. ಇಲ್ಲಿ ಅಂತಹ ಚಳವಳಿ ಇಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ.

೨೧೦. ಆದರೂ ತುಳಿತ ಹೋಗಬೇಕು, ಅಸ್ಪೃಶ್ಯತೆ ಹೋಗಬೇಕು ಎನ್ನುವುದನ್ನು ಗುರುತಿಸಲಾಗಿದೆ ಮತ್ತು ಈ ರೀತಿಯನ್ನು ಸೂಚಿಸುವ ಯಾವುದೇ ಕ್ರಮವನ್ನಾದರೂ ಸವರ್ಣೀಯರು, ಅದರಲ್ಲಿಯೂ ಸುಧಾರಕರು, ಸಹಾನುಭೂತಿಯಿಂದ ಪರಿಶೀಲಿಸುತ್ತಾರೆ ಎನ್ನುವುದನ್ನು ನೀವು ಒಪ್ಪುವಿರಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಆ ಪ್ರಶ್ನೆಗೆ ಉತ್ತರ ಹೇಳಲೂ ನಾನು ಅನುಮಾನಿಸುತ್ತೇನೆ.

ಅಧ್ಯಕ್ಷರು: ವಾಸ್ತವಾಂಶಗಳನ್ನು ಕುರಿತು ಈ ಸಾಕ್ಷಿಯ ಅಭಿಪ್ರಾಯಗಳನ್ನು ಪಡೆಯಲು ನಿಮ್ಮ ಧಾಟಿಯಲ್ಲಿಯೇ ನಾನು ಎರಡು ಮೂರು ಪ್ರಶ್ನೆಗಳನ್ನು ಕೇಳಲು ನಿಮ್ಮ ಒಪ್ಪಿಗೆಯುಂಟೆ?

ಡಾ. ಬಿ. ಆರ್. ಅಂಬೇಡ್ಕರ್: ಅಗತ್ಯವಾಗಿ ಕೇಳಿ.

೨೧೧. ಅಧ್ಯಕ್ಷರು: ಈ ಕಾರ್ಯಕ್ಕೆ ಶ್ರೀ ರಾಜಾ ಅವರೇ ಬಹು ಅರ್ಹರು, ಆದರೆ ನಿಮ್ಮ ಅಭಿಪ್ರಾಯಗಳನ್ನೂ ನೀವು ಹೇಳಬೇಕೆಂದು ನನ್ನ ಅಪೇಕ್ಷೆ. ಮುಂಬಯಿ ಪ್ರಾಂತದಲ್ಲಿ ಇಪ್ಪತ್ತು ವರ್ಷಗಳ ಹಿಂದಿನ ಸ್ಥಿತಿಯನ್ನು ಇಂದಿನ ಸ್ಥಿತಿಯನ್ನೂ ಹೋಲಿಸಿ. ನಾನು ಈ ಪ್ರಶ್ನೆ ಕೇಳಬಹುದಾದರೆ, ನೀವು ಇಲ್ಲಿ ಎಷ್ಟು ವರ್ಷಗಳಿಂದ ಇದ್ದೀರಿ?

ಡಾ. ಬಿ. ಆರ್. ಅಂಬೇಡ್ಕರ್: ಐದಾರು ವರ್ಷಗಳು.

೨೧೨. ಅದಕ್ಕೆ ಬಹು ಹಿಂದಿನಿಂದಲೂ ನೀವು ನಿಮ್ಮ ಕೋಮಿನ ವಿಷಯದಲ್ಲಿ ಆಸಕ್ತಿ ವಹಿಸಿಯೇ ಇರುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೧೩. ಇಪ್ಪತ್ತು ವರ್ಷಗಳ ಹಿಂದಿನ ಕಾಲವನ್ನು ಸ್ಮರಿಸಿಕೊಂಡು, ನಮಗೆ ಅಂದಾಜಾಗಿ ತಿಳಿಸಬಲ್ಲಿರಾ?

ಡಾ. ಬಿ. ಆರ್. ಅಂಬೇಡ್ಕರ್: ಆಗಬಹುದು.

೨೧೪. ಎರಡು–ಮೂರು ವಿಷಯಗಳನ್ನು ತೆಗೆದುಕೊಳ್ಳುತ್ತೇನೆ. ಮೊದಲನೆಯದಾಗಿ, ನಿಮ್ಮ ವರ್ಗದವರನ್ನು ಹಿಂದೂ ದೇವಾಲಯದ ಒಳಕ್ಕೆ ಬರುವ ವಿಷಯದಲ್ಲಿ ಏನೂ ವ್ಯತ್ಯಾಸವಾಗಿಲ್ಲ ಎಂದು ನಾನೆಂದುಕೊಂಡಿದ್ದೇನೆ. ಅದು ಧಾರ್ಮಿಕ ಮತ್ತು ರೂಢಿಯ ವಿಷಯ. ಅದನ್ನು ನಾನು ಟೀಕಿಸುವುದಿಲ್ಲ. ಆದರೆ, ವ್ಯತ್ಯಾಸ ಒಂದಿಷ್ಟೂ ಆಗಿಲ್ಲ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ, ಆ ವಿಷಯದಲ್ಲಿ ಎಳ್ಳಷ್ಟೂ ವ್ಯತ್ಯಾಸವಾಗಿಲ್ಲ.

೨೧೫. ನಾನು ತಿಳಿಯಬಯಸುವುದು ಇದು. ಈ ಪ್ರಾಂತದಲ್ಲಿ ಖಚಿತವಾಗಿ ಎರಡು–ಮೂರು

ಸಂಗತಿಗಳನ್ನು ತೆಗೆದುಕೊಳ್ಳೋಣ. ಗ್ರಾಮಾಂತರ ಜಿಲ್ಲೆಗಳಲ್ಲಿ ನಿಮ್ಮ ವರ್ಗದವರೇ ಪ್ರತ್ಯೇಕವಾಗಿ ವಾಸಿಸುವುದೇ ನಿಯಮ ಎಂದು ನೀವು ಹೇಳಿದ್ದೀರಿ. ನಾನೂ ಅದನ್ನು ಹಲವು ಬಾರಿ ಕಂಡಿದ್ದೇನೆ. ಹಿಂದೂಗಳ ಹಳ್ಳಿಯಾದರೆ, ಅವರು ಹಳ್ಳಿಯ ಒಂದು ಮೂಲೆಯಲ್ಲಿ ವಾಸಿಸುತ್ತಾರೆ. ಒಮ್ಮೊಮ್ಮೆ ತಮ್ಮದೇ ಆದ ಸಣ್ಣ ಹಳ್ಳಿಯಲ್ಲಿ ವಾಸಿಸುತ್ತಾರೆ. ಅವರು ಸಾಮಾನ್ಯವಾಗಿ ಎಲ್ಲ ಕೋಮಿನವರೊಡನೆ ವಾಸಿಸುವ ವಿಷಯದಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಏನಾದರೂ ವ್ಯತ್ಯಾಸವಾಗಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಏನೂ ವ್ಯತ್ಯಾಸವಾಗಿಲ್ಲ.

೨೧೬. ಕೆಲವು ದಿನಗಳ ಹಿಂದೆ ನಾವು ಕೆಲವು ಹಳ್ಳಿಗಳನ್ನು ನೋಡಿದೆವು. ಅವರಲ್ಲಿ ಕೆಲವರು ನದಿಯಿಂದ ನೀರು ತೆಗೆದುಕೊಳ್ಳಲು ಅವಕಾಶವಿದೆ ಎಂದು ನಮಗೆ ತಿಳಿದುಬಂತು; ಬಾವಿಗಳನ್ನು ಅವಲಂಬಿಸಿರುವ ಇತರೆ ಹಳ್ಳಿಗಳಿವೆ ಎಂದು ನನ್ನ ಭಾವನೆ.

ಡಾ. ಬಿ. ಆರ್. ಅಂಬೇಡ್ಕರ್: ನದಿಗಳಿರುವ ಕಡೆಯೂ ಅವರು ನದಿಯ ಒಂದು ಭಾಗದಿಂದ ಮಾತ್ರ ನೀರು ತೆಗೆದುಕೊಳ್ಳಲು ಅವಕಾಶವಿದೆ. ಅವರಿಗಾಗಿಯೇ ನದಿಯ ಒಂದು ಸ್ಥಳವನ್ನು ಗೊತ್ತು ಮಾಡಿದೆ.

೨೧೭. ಎಂದರೆ, ನಿಮ್ಮ ವರ್ಗದವರು ಸವರ್ಣೀಯರಿಗಿಂತ ನದಿಯ ಕೆಳಗಿನ ಭಾಗದಲ್ಲಿ ನೀರನ್ನು ತೆಗೆದುಕೊಳ್ಳುತ್ತಾರೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೧೮. ಈಗ ಬಾವಿಗಳನ್ನೇ ಅವಲಂಬಿಸಿರುವ ಹಳ್ಳಿಗಳ ವಿಷಯವನ್ನು ತೆಗೆದುಕೊಳ್ಳೋಣ. ಇದೇನೂ ವಿರಳವಲ್ಲ, ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ, ವಿರಳವಲ್ಲ.

೨೧೯. ನನಗೆ ಈ ವಿಷಯ ತಿಳಿದುಕೊಳ್ಳಲು ಬಹಳ ಕಾತರವಿದೆ. ನೀವು ಮನಸ್ಸು ಬಿಚ್ಚಿ ಹೇಳುತ್ತೀರಿ ಎಂದು ಆಶಿಸುತ್ತೇನೆ. ಈ ವಿಷಯದಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಏನಾದರೂ ಸುಧಾರಣೆ ಆಗಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ.

೨೨೦. ಈ ವಿಷಯವಾಗಿ ನಿರ್ಣಯಗಳನ್ನು ಮಾಡಿದೆ ಎನ್ನುವ ಸಂಗತಿಗೆ ನಿಮ್ಮ ಗಮನವನ್ನು ಸೆಳೆಯಲಾಗಿದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಅವು ನಿರ್ಣಯಗಳಷ್ಟೇ.

೨೨೧. ಅಸ್ಪೃಶ್ಯತೆ, ಕೆಲವೊಮ್ಮೆ ಎಷ್ಟು ದೂರ ಹೋಗುತ್ತದೆ ಎಂದರೆ, ಆ ಮನುಷ್ಯನನ್ನು ಮುಟ್ಟಿದ ಮಾತ್ರಕ್ಕೆ (ಒಮ್ಮೊಮ್ಮೆ, ಅವನ ನೆರಳು ತಗುಲಿದ ಮಾತ್ರಕ್ಕೆ) ಮೈಲಿಗೆ ಎಂದು ಮೇಲಿನ ವರ್ಗದವರು ಭಾವಿಸುತ್ತಾರೆ ಎಂದು ಸೂಚಿಸಲಾಗಿದೆ ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೨೨. ಈ ವಿಷಯದಲ್ಲಿ ಸುಧಾರಣೆ ಆಗಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಈ ವಿಷಯದಲ್ಲಿ ಸ್ವಲ್ಪ ಸುಧಾರಣೆ ಆಗಿದೆ.

೨೨೩. ಅದನ್ನು ಕೇಳಿ ನನಗೆ ಸಂತೋಷವಾಗಿದೆ. ಹೀಗೆಂದರೆ, ಇಪ್ಪತ್ತು ವರ್ಷಗಳ ಹಿಂದೆ ಸವರ್ಣೀಯನೊಬ್ಬ ತಾನು ಒಬ್ಬ ಅಸ್ಪೃಶ್ಯನನ್ನು ಮುಟ್ಟಿದ್ದೇನೆ ಎಂದು ಕಂಡುಕೊಂಡರೆ ಶುದ್ಧಿ ಮಾಡಿಕೊಳ್ಳುವುದು ತನ್ನ ಧಾರ್ಮಿಕ ಕರ್ತವ್ಯ ಎಂದು ಭಾವಿಸುತ್ತಿದ್ದ. ಆದರೆ, ಅದನ್ನು ಈಗ ಎಷ್ಟು ಕಟ್ಟುನಿಟ್ಟಾಗಿ ಕಾಣುತ್ತಿಲ್ಲ ಎಂದರ್ಥ ಅಲ್ಲವೆ? ಈ ವ್ಯಾಖ್ಯಾನ ಸರಿಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೨೪. ಹಾಗೆಯೇ ಇಪ್ಪತ್ತು ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ, ವೃತ್ತಿಗಳಲ್ಲಿಯೂ ಬಹು ಎತ್ತರಕ್ಕೆ ಏರಿರುವ ನಿಮ್ಮ ವರ್ಗದವರು ಇದ್ದಾರೆ ಎಂದು ನಾನು ಭಾವಿಸುತ್ತೇನೆ. ಇಪ್ಪತ್ತು ವರ್ಷಗಳ ಹಿಂದೆ ಮುಂಬಯಿಯಲ್ಲಿ ವಕೀಲರಾಗಿ ವೃತ್ತಿನಿರತರಾಗಿದ್ದವರು ನಿಮ್ಮ ವರ್ಗದವರಲ್ಲಿ ಇದ್ದರೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ.

೨೨೫. ಈಗ ಎಷ್ಟು ಮಂದಿ ನಿಮ್ಮ ವರ್ಗದವರು ವಕೀಲರಾಗಿದ್ದಾರೆ?

ಡಾ. ಬಿ. ಆರ್. ಅಂಬೇಡ್ಕರ್: ನಾನೊಬ್ಬನೇ.

೨೨೬. ಸರ್ದಾರರು ಮತ್ತು ಇನಾಂದಾರರಿಗೆ ಮತ ನೀಡುವವರ ಪಟ್ಟಿಯಲ್ಲಿ ನಿಮ್ಮ ವರ್ಗದವರು ಇಬ್ಬರಿದ್ದಾರೆ ಎಂದು ನಿನ್ನೆ ನಮಗೆ ಹೇಳಿದಂತೆ ನೆನಪು.

ಡಾ. ಬಿ. ಆರ್. ಅಂಬೇಡ್ಕರ್: ಒಬ್ಬಾತ ಮಾತ್ರ. ಅವನ ಪರಿಸ್ಥಿತಿಯೂ ಬೇರೆ. ಅವನ ಜಾಗೀರನ್ನು ಯುದ್ಧಭೂಮಿಯಲ್ಲಿ ಸಲ್ಲಿಸಿದ ಸೇವೆಗಾಗಿ ಪೇಷ್ವೆಗಳು ಕೊಟ್ಟರು. ಅವನ ಬಿರುದನ್ನು ಬ್ರಿಟಿಷ್ ಸರ್ಕಾರ ಕೊಡಲಿಲ್ಲ.

೨೨೭. ಭಾರತದಲ್ಲಿ ಕ್ರಮೇಣ ಊರುಗಳನ್ನು, ಹಳ್ಳಿಗಳನ್ನು ಸೇರಿಸುವ ಮೋಟಾರ್ ಬಸ್‌ನ ಬಳಕೆ ಹೆಚ್ಚಾಗುತ್ತಿದೆ ಎನ್ನುವುದು ಯಾರಿಗಾದರೂ ಗಮನಕ್ಕೆ ಬರುತ್ತದೆ. ಅವು ರಸ್ತೆಗಳಲ್ಲಿ ಹೋಗುತ್ತಿರುವುದನ್ನು ನಾನು ನೋಡಿದ್ದೇನೆ. ಈ ಸಾರ್ವಜನಿಕ ವಾಹನಗಳನ್ನು ನಿಮ್ಮ ವರ್ಗದವರು ಬಳಸಬಹುದೆ?

ಡಾ. ಬಿ. ಆರ್. ಅಂಬೇಡ್ಕರ್: ಹಳ್ಳಿಗಳಲ್ಲಿ ಸಾಧ್ಯವಿಲ್ಲ. ನಿಮ್ಮ ವರ್ಗದವರು ಈ ಬಸ್ಸುಗಳಲ್ಲಿ ಪ್ರಯಾಣ ಮಾಡಲು ಅವಕಾಶವಿಲ್ಲದ ಹಳ್ಳಿಗಳು ಬೇಕಾದಷ್ಟಿವೆ.

೨೨೮. ಅವರನ್ನು ಯಾರು ತಡೆಯುತ್ತಾರೆ?

ಡಾ. ಬಿ. ಆರ್. ಅಂಬೇಡ್ಕರ್: ಚಾಲಕ ಅವರನ್ನು ಒಳಗೆ ಬಿಡುವುದಿಲ್ಲ.

೨೨೯. ಯಾರು ಹಣ ಕೊಟ್ಟರೆ ಅವರನ್ನು ಚಾಲಕ ಕರೆದುಕೊಂಡು ಹೋಗುತ್ತಾನೆ ಎಂದೇ ನಾವು ನಿರೀಕ್ಷಿಸುವುದು. ಅವನು ಅವರನ್ನು ಏತಕ್ಕೆ ಕರೆದುಕೊಂಡು ಹೋಗುವುದಿಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಏಕೆಂದರೆ ಅವನು ಅವರನ್ನು ಒಳಕ್ಕೆ ಬಿಟ್ಟರೆ ಇತರೆ ಜನ ಅವನ ಬಸ್ಸಿನೊಳಕ್ಕೆ ಬರುವುದಿಲ್ಲ. ಉದಾಹರಣೆಗೆ ನಾನು ಒಂದು ರೂಪಾಯಿ ಕೊಡುತ್ತೇನೆಂದರೂ ಇಲ್ಲಿನ ಕ್ಷೌರಿಕ ನನಗೆ ಕ್ಷೌರ ಮಾಡುವುದಿಲ್ಲ.

೨೩೦. ರಾವ್ ಸಾಹೇಬ ಪಾಟೀಲ್: ಚಾಲಕ ಯಾವುದೇ ಪ್ರಯಾಣಿಕರನ್ನು ಕರೆದುಕೊಂಡು ಹೋಗಲು ನಿರಾಕರಿಸಿದರೆ ಅವನ ಮೇಲೆ ಮೊಕದ್ದಮೆ ಹೂಡಬಹುದಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಬಸ್ಸು ಭರ್ತಿಯಾಗಿದೆ ಎಂದು ಹೇಳಿ ಅದರಿಂದ ನುಣುಚಿಕೊಳ್ಳಬಹುದು.

೨೩೧. ಈ ವಿಷಯದಲ್ಲಿ ಪರಿಸ್ಥಿತಿ ಉತ್ತಮವಾಗುತ್ತಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಅದು ಉತ್ತಮಗೊಳ್ಳುತ್ತಿದೆ; ಆದರೆ, ಈ ಬಸ್ಸಿನೊಳಕ್ಕೆ ನಿಮ್ಮ ವರ್ಗಗಳವರನ್ನು ಬಿಡದಿರುವ ನಿದರ್ಶನಗಳು ಇನ್ನೂ ಹೇರಳವಾಗಿವೆ.

೨೩೨. ಮುಂಬಯಿಯ ಮಿಲ್ಲುಗಳಲ್ಲಿ ಕೆಲಸ ಮಾಡುವ ನಿಮ್ಮ ವರ್ಗದವರನ್ನು ತೆಗೆದುಕೊಳ್ಳೋಣ. ಅವರಲ್ಲಿ ಕೆಲವರು ಟ್ರಾಮ್‌ಗಳಲ್ಲಿ ಹೋಗುತ್ತಾರೆ ಎಂದುಕೊಂಡಿದ್ದೇನೆ. ಅವರು ಟ್ರಾಮುಗಳನ್ನು ಬಳಸಲು ಅವಕಾಶ ಕೊಡುವುದಿಲ್ಲ ಎಂದು ನೀವು ಹೇಳುತ್ತೀರೇನು?

ಡಾ. ಬಿ. ಆರ್. ಅಂಬೇಡ್ಕರ್: ಎರಡು ವರ್ಷಗಳ ಹಿಂದೆ ಭಂಗಿಯೊಬ್ಬನು ಟ್ರಾಮ್‌ನ್ನು ಹತ್ತಲು ಅವಕಾಶ ಕೊಡದೆ ಇದ್ದ ಘಟನೆ ನಡೆಯಿತು.

೨೩೩. ನೀವು ಎರಡು ವರ್ಷಗಳ ಹಿಂದಿನ ಘಟನೆಯನ್ನು ಹೇಳಿದಾಗ ಅದು ಸಾಮಾನ್ಯವಾಗಿ ನಡೆಯುವ ಸಂಗತಿಯಲ್ಲಿ, ರೂಢಿಯಿಂದ ಹೊರತಾದದ್ದು ಎಂದು ನನಗೆನ್ನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಬಿ.ಬಿ. ಮತ್ತು ಸಿ.ಐ. ರೈಲ್ವೆಯಲ್ಲಿ ಪ್ರಯಾಣ ಮಾಡುವಾಗ ನಿಮ್ನ ವರ್ಗದವರು ಗಾಡಿಯೊಳಕ್ಕೆ ಬಾರದಂತೆ ಪ್ರಯಾಣಿಕರು ತಡೆದದ್ದನ್ನು ನೂರಾರು ಬಾರಿ ನೋಡಿದ್ದೇನೆ.

೨೩೪. ಸರ್ ಹರಿಸಿಂಗ್ ಗೌರ್: ನೀವು ಪ್ರಸ್ತಾಪಿಸಿದ ಭಂಗಿಯ ವಿಷಯ. ಆತನ ಉಡುಪು ಸರಿಯಾಗಿರಲಿಲ್ಲ. ಆದ್ದರಿಂದ ಅವನನ್ನು ಟ್ರಾಮ್‌ನೊಳಕ್ಕೆ ಬಿಡಲಿಲ್ಲ ಎನ್ನುವುದು ನಿಮಗೆ ಗೊತ್ತೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಆ ವಿಷಯ ತಿಳಿಯದು.

೨೩೫. ಒಬ್ಬ ಮನುಷ್ಯನನ್ನು ಟ್ರಾಮ್ ಒಳಗೆ ಹೋಗುವ ಮೊದಲು ಅವನ ಜಾತಿಯನ್ನು ಕೇಳುವುದಿಲ್ಲ; ಅವನ ಹತ್ತಿರ ಟಿಕೆಟ್‌ಗೆ ದುಡ್ಡಿದೆಯೇ ಎಂದಷ್ಟೇ ಕೇಳುತ್ತಾರೆ ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಜನ ಅವನನ್ನು ಸುಲಭವಾಗಿ ಗುರುತು ಹಿಡಿಯಬಲ್ಲರು.

೨೩೬. ಅದು ಅವನ ಉಡುಪಿನಿಂದಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಅವನು ನಿಮ್ನ ವರ್ಗದವನು ಎಂದು ಗೊತ್ತಾದರೆ ಅವನನ್ನು ಬಹಳ ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುತ್ತಾರೆ.

೨೩೭. ಜಾತಿಯ ಪ್ರಶ್ನೆಯಲ್ಲದೆ ಉಡುಪಿನ ಪ್ರಶ್ನೆಯೂ ಇದೆಯಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಆದರೆ, ನಿಮ್ನ ವರ್ಗಗಳಲ್ಲಿ ಕೆಲವರು ಬಹುಚೆನ್ನಾಗಿ ಉಡುಪು ಧರಿಸಿರುತ್ತಾರೆ.

೨೩೮. ನಿಮ್ನ ವರ್ಗದವನ ನೆರಳಲ್ಲಿ ನಡೆದರೆ ಮೈಲಿಗೆ ಎನ್ನುವಂತಹುದೇನೂ ಮುಂಬಯಿ ಪ್ರಾಂತದಲ್ಲಿಲ್ಲವಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಇದೆ. ಕೊಂಕಣದ ಕೆಲವು ಭಾಗಗಳಲ್ಲಿ ಮತ್ತು ಕಾಥೇವಾಡದಲ್ಲಿ ಇದೆ.

೨೩೯. ಅದು ಇಳಿಮುಖವಾಗುತ್ತಿದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೪೦. ಅಹಮದಾಬಾದಿನ ಅಂಬಾಲಾಲ್ ಸರಳಾ ಶಾಲೆಯ ವಿಷಯಕ್ಕೆ ಬರೋಣ; ಅವನ ಸೋದರಿ ನಿಮ್ನ ವರ್ಗಗಳವರಿಗಾಗಿಯೆ ಶಾಲೆಯನ್ನು ಪ್ರಾರಂಭಿಸಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಅದೊಂದೇ ಗೌರವಯುತವಾದ ವಿನಾಯತಿ.

೨೪೧. ಆ ಶಾಲೆ ನಿಮ್ನ ವರ್ಗಗಳವರಿಗಾಗಿಯೆ ಸಾರ್ವಜನಿಕ ನಿಧಿಯಿಂದ ನಡೆಯುತ್ತಿದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಗೊತ್ತಿಲ್ಲ. ಆದರೆ, ಆ ಮಹಿಳೆ ನಿಮ್ನ ವರ್ಗಗಳವರ ಸ್ಥಿತಿ ಯನ್ನು ಉತ್ತಮಪಡಿಸಲು ಆಸಕ್ತಿ ವಹಿಸುತ್ತಿದ್ದಾರೆ ಎಂದು ಗೊತ್ತು.

೨೪೨. ಅಧ್ಯಕ್ಷರು: ಇದು ಒಂದು ಅಪರೂಪದ ಪ್ರಕರಣ ಎಂದು ನಾನು ತಿಳಿದುಕೊಳ್ಳಬಹುದೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ತೀರ ಅಪರೂಪದ್ದು.

೨೪೩. ಡಾ. ಸುಹ್ರಾವರ್ದಿ: ಈಗ ತಾನೆ ನೀವು ಹೇಳಿದ ಸಾರ್ವಜನಿಕ ಬಹಿಷ್ಕಾರ ಮತ್ತು ದಬ್ಬಾಳಿಕೆಗಳ

ನಿದರ್ಶನದಿಂದ, ಸಾರ್ವಜನಿಕ ಚುನಾವಣೆಗಳಲ್ಲಿ ನಿಮ್ಮ ಕೋಮಿನವರನ್ನು ಮತಗಟ್ಟೆಗಳಿಂದ ಹೆದರಿಸಿ ಓಡಿಸಿಬಿಡಬಹುದು ಎಂದು ನಿಮಗನ್ನಿಸುವುದಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಹಾಗೆ ಆಗಬಹುದು.

೨೪೪. ಅಲ್ಲದೆ, ಅಸ್ಪೃಶ್ಯರು ಮತ ಹಾಕಲು ಹೋಗುವ ಸ್ಥಳಕ್ಕೆ ತಾವು ಹೋಗಿ ಚುನಾವಣೆಯಲ್ಲಿ ಭಾಗವಹಿಸಲು ಸವರ್ಣೀಯರು ನಿರಾಕರಿಸಬಹುದು ಎನ್ನುವ ಭಯವೂ ಇದೆಯಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಅವರು ಹಾಗೆ ಮಾಡಬಹುದು. ಆದರೆ ಏನಾಗುತ್ತದೆ ಎಂದು ಹೇಳುವುದು ಕಷ್ಟ. ಉದಾಹರಣೆಗೆ ನಿಮ್ಮ ವರ್ಗದ ಸದಸ್ಯರು ಮೇಜಿನ ಹತ್ತಿರ ಕುಳಿತುಕೊಳ್ಳುವ ಹಕ್ಕು ಕೇಳಿದರೆಂದು ಸವರ್ಣೀಯರು ಸ್ಥಳವನ್ನೇ ಬಿಟ್ಟುಹೋದ ನಿದರ್ಶನಗಳಿವೆ.

೨೪೫. ಸ್ಥಿತಿ ಹೀಗಿರುವಾಗ ಸಾರ್ವಜನಿಕ ಮತ ಕ್ಷೇತ್ರಗಳಲ್ಲಿ ನಿಮಗೆ ಸ್ಥಾನಗಳನ್ನು ಮೀಸಲಾಗಿರಿಸಿದರೂ ವಾಸ್ತವವಾಗಿ ಪ್ರತ್ಯೇಕ ಮತದಾರರ ಕ್ಷೇತ್ರವೇ ಆಗುವುದರಿಂದ ನಿಮಗೆ ಪ್ರತ್ಯೇಕ ಮತ ಕ್ಷೇತ್ರಗಳಿರುವುದೇ ಉತ್ತಮ ಎಂದು ನಿಮಗನ್ನಿಸುವುದಿಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೪೬. ರಾವ್ ಬಹದ್ದೂರ್ ರಾಜಾ: ನನ್ನ ಸ್ನೇಹಿತರು ಸರ್ ಹರಿಸಿಂಗ್ ಗೌರರು ನಿಮ್ಮ ವರ್ಗದವರ ಉಡುಪಿನ ಪ್ರಶ್ನೆಯನ್ನು ಕೇಳಿದರು. ಕ್ಷೌರಿಕನು ನೀವು ಒಳ್ಳೆಯ ಉಡುಪನ್ನು ಧರಿಸಿರಲಿಲ್ಲ ಎನ್ನುವ ಕಾರಣಕ್ಕಾಗಿ ನಿಮಗೆ ಕ್ಷೌರ ಮಾಡಲು ನಿರಾಕರಿಸಿದನೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ, ನಾನು ನಿಮ್ಮ ವರ್ಗಕ್ಕೆ ಸೇರಿದವನು ಎನ್ನುವ ಕಾರಣಕ್ಕಾಗಿ.

೨೪೭. ನೀವು ಹಾಕಿಕೊಂಡಿದ್ದ ಉಡುಪಿನ ಕಾರಣದಿಂದ ಅಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ಅಲ್ಲ.

೨೪೮. ಸಮಿತಿಯ ಮತ್ತೊಬ್ಬ ಸದಸ್ಯರು ಕೇಳಿದ ಒಂದು ಪ್ರಶ್ನೆಗೆ ಸಂಬಂಧಿಸಿದಂತೆ, ಬಸ್ ಮಾಲೀಕ ನಿಮ್ಮ ವರ್ಗದ ಸದಸ್ಯನೊಬ್ಬನನ್ನು ಒಳಕ್ಕೆ ಸೇರಿಸಲಿಲ್ಲ ಎನ್ನುವ ಕಾರಣಕ್ಕಾಗಿ ಅವನ ಮೇಲೆ ಮೊಕದ್ದಮೆ ಹೂಡುವುದು ಸುಲಭವೆ ಎಂದು ನಾನು ನಿಮ್ಮನ್ನು ಪ್ರಶ್ನಿಸಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಸಾಧ್ಯವಿಲ್ಲ.

೨೪೯. ನಿಮ್ಮ ವರ್ಗದವರ ಏಳಿಗೆಯ ವಿಷಯದಲ್ಲಿ ನೀವು ವಿಶೇಷ ಆಸಕ್ತಿ ತೆಗೆದುಕೊಳ್ಳುತ್ತಿದ್ದೀರಿ ಎಂದು ನನ್ನ ತಿಳಿವಳಿಕೆ. ಇದರ ಪ್ರಚಾರದಲ್ಲಿ ನಿಮಗೆ ಮೇಲಿನ ವರ್ಗಗಳಿಂದ ಸಹಾಯ ದೊರೆಯುವ ವಿಷಯದಲ್ಲಿ ನಿಮ್ಮ ಅನುಭವವೇನು? ಇನ್ನೂ ಹೆಚ್ಚಿನ ಸ್ವಚ್ಛತೆ, ಆರೋಗ್ಯ ಮೊದಲಾದವನ್ನು ನಿಮ್ಮ ವರ್ಗಗಳವರಿಗೆ ತಿಳಿದುಕೊಳ್ಳುವ ವಿಷಯದಲ್ಲಿ ಅವರು ನಿಮಗೆ ಸಹಾಯ ಮಾಡುತ್ತಾರೆಯೆ?

ಡಾ. ಬಿ. ಆರ್. ಅಂಬೇಡ್ಕರ್: ದುರದೃಷ್ಟದಿಂದ ಈ ವಿಷಯದಲ್ಲಿ ನನ್ನ ಅನುಭವ ತುಂಬಾ ಕಹಿಯಾದದ್ದು. ನಿಮ್ಮ ವರ್ಗಗಳವರ ಕೆಲವು ಕೊಳಕು ಅಭ್ಯಾಸಗಳಿಂದ ಅವರು ಇತರರ ಜೊತೆ ಸೇರಲು ಅರ್ಹರಲ್ಲ ಎಂದು ಹೇಳಲಾಗಿದೆ. ಇದು ಮೇಲಿನ ವರ್ಗಗಳವರ ಆಪಾದನೆ. ಎಂದರೆ, ಅವರು ಸತ್ತ ಪ್ರಾಣಿಗಳ ಮಾಂಸ ತಿನ್ನುತ್ತಾರೆ, ಸ್ವಚ್ಛವಾಗಿರುವುದಿಲ್ಲ ಇತ್ಯಾದಿ. ಈ ಪ್ರಾಂತ್ಯದಲ್ಲಿ ನಿಮ್ಮ ವರ್ಗಗಳವರು ತಮ್ಮ ಕೊಳಕು ಅಭ್ಯಾಸಗಳಲ್ಲಿ ಕೆಲವನ್ನು ಬಿಟ್ಟು ಶುದ್ಧರಾಗುವಂತೆ ಮಾಡಲು ಎರಡು ವರ್ಷಗಳಿಂದ ನಾನು ಒಂದು ಚಳವಳಿಯನ್ನು ಪ್ರಾರಂಭಿಸಿದ್ದೇನೆ. ಈ ವಿಷಯದಲ್ಲಿ ಸವರ್ಣೀಯರಿಂದ ಅತ್ಯಂತ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸಿದ್ದೆ. ಆದರೆ ನನ್ನ ದುರದೃಷ್ಟದಿಂದ ಇಡೀ ಸವರ್ಣೀಯ ಸಮುದಾಯವೇ ನನ್ನ

ವಿರುದ್ಧ ವಾಗಿ ನಿಂತದ್ದನ್ನು ಕಂಡೆ. ಅವರ ಈ ವಿರೋಧದ ಮೂಲವನ್ನು ವಿಶ್ಲೇಷಿಸಲು ನಾನು ಪ್ರಾರಂಭಿಸಿದಾಗ ಅವರು ನಿಮ್ನ ವರ್ಗಗಳವರು ಈ ಕೊಳಕು ಅಭ್ಯಾಸಗಳನ್ನು ಉಳಿಸಿಕೊಳ್ಳಬೇಕೆಂದು ಹಠ ಹಿಡಿದಿದ್ದರ ಕಾರಣವು, ಈ ಅಭ್ಯಾಸಗಳನ್ನು ಬಿಟ್ಟುಬಿಟ್ಟರೆ ನಿಮ್ನವರ್ಗಗಳವರು ತಮ್ಮ ಸಾಮಾಜಿಕ ಅಂತಸ್ತುಗಳನ್ನು ಮೀರಿ ಮೇಲಿನ ವರ್ಗದವರೊಂದಿಗೆ ಪೈಪೋಟಿ ನಡೆಸಿದಂತಾಗುತ್ತದೆ ಎನ್ನುವುದೇ ಎಂಬುದನ್ನು ಕಂಡುಕೊಂಡೆ. ಉದಾಹರಣೆಗೆ ಕೊಲಾಬಾ ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಎಲ್ಲಾ ಮಹಾರ್ ಜನರೂ ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದು ಬಿಟ್ಟುಬಿಟ್ಟಿದ್ದಾರೆ. ಆದರೆ ಅವರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಮತ್ತು ಸಾಮಾಜಿಕ ತುಳಿತವನ್ನು ಮಾತುಗಳಲ್ಲಿ ಹೇಳುವುದಕ್ಕೇ ಸಾಧ್ಯವಿಲ್ಲ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅವರ ಮೇಲೆ ಸಂಪೂರ್ಣ ಬಹಿಷ್ಕಾರವನ್ನು ಹೇರಲಾಗಿದೆ. ಸವರ್ಣೀಯ ಜಮೀನ್ದಾರರು ನಿಮ್ನ ವರ್ಗಗಳವರು ಎಷ್ಟೋ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಅವರಿಂದ ಕಿತ್ತುಕೊಂಡಿದ್ದಾರೆ. ನಿಮ್ನವರ್ಗಗಳವರು ತಮ್ಮ ಕೊಳಕು ಅಭ್ಯಾಸಗಳನ್ನು ಮುಂದುವರೆಸುವಂತೆ ಬಲಾತ್ಕರಿಸಲು ಎಲ್ಲ ರೀತಿಗಳ ಸಾಮಾಜಿಕ ಮತ್ತು ಆರ್ಥಿಕ ಒತ್ತಡವನ್ನು ಹೇರುತ್ತಿದ್ದಾರೆ. ಅಧಿಕಾರಿಗಳೆಲ್ಲ ಸವರ್ಣೀಯರಾಗಿದ್ದು, ಅವರಿಂದ ನಿಮ್ನ ವರ್ಗಗಳವರಿಗೆ ಯಾವ ರಕ್ಷಣೆಯೂ ಸಿಗುತ್ತಿಲ್ಲ. ನಿಮ್ನ ವರ್ಗಗಳವರ ಸ್ಥಿತಿ ನಿಜವಾಗಿಯೂ ಕರುಣಾಜನಕವಾಗಿದೆ. ಇದಿಷ್ಟಕ್ಕೂ ಕಾರಣ ಅವರು ಕೊಳಕು ಅಭ್ಯಾಸಗಳನ್ನು ಬಿಟ್ಟುಬಿಡಲು ಪ್ರಯತ್ನಿಸಿದರು ಎನ್ನುವುದೇ. ನನಗೆ ಸಹಕಾರ ಕೊಡುವುದರ ಬದಲು ಮೇಲಿನ ವರ್ಗಗಳ ಸದಸ್ಯರು ನನ್ನ ವಿರುದ್ಧ ಕತೆ ಕಟ್ಟಿದ್ದಾರೆ ಎಂದು ನನ್ನ ಅನುಭವ. "ನಿಮ್ನ ವರ್ಗಗಳವರ ಈ ಕೆಟ್ಟ ಅಭ್ಯಾಸಗಳು ಅವರ ಕೀಳುತನದ ಗುರುತುಗಳು, ಅವು ಇರಲೇಬೇಕು" ಎನ್ನುತ್ತಾರೆ ಅವರು.

೨೫೦. ಮೊನ್ನೆ ಒಂದು ದಿನ ಒಬ್ಬ ಸಾಕ್ಷಿಯು ನೈರ್ಮಲ್ಯ ಮಂಡಲಿಗಳಲ್ಲಿ ಒಬ್ಬನೇ ಒಬ್ಬ ನಿಮ್ನ ವರ್ಗದ ಸದಸ್ಯನೂ ಇಲ್ಲ ಎಂದು ಹೇಳಿದುದನ್ನು ಕೇಳಿದೆವು ಮೇಲಿನ ಜಾತಿಯವರ ವಿಷಯ ನೀವು ಈಗ ಹೇಳಿದ್ದು ನಿಜವಾದರೆ, ನಿಮ್ನ ವರ್ಗಗಳವರು ಈ ಮಂಡಲಿಗಳ ಸದಸ್ಯರಾಗುವುದರಿಂದ ನಿಮ್ನ ವರ್ಗದವರ ನೈರ್ಮಲ್ಯವನ್ನು ಉತ್ತಮಗೊಳಿಸುವುದಕ್ಕೆ ಏನಾದರೂ ಪ್ರಯೋಜನ ಆದೀತೆ?

ಡಾ. ಬಿ. ಆರ್. ಅಂಬೇಡ್ಕರ್: ಪ್ರತಿಯೊಂದು ಸ್ಥಳೀಯ ಅಧಿಕಾರ ಮಂಡಲಿಯಲ್ಲಿ ನಿಮ್ನ ವರ್ಗಗಳವರಿಗೆ ಪ್ರಾತಿನಿಧ್ಯ ಇರಬೇಕು ಎಂಬುದು ನನ್ನ ಭಾವನೆ.

೨೫೧. ಈ ಪ್ರಾಂತದ ನಿಮ್ನ ವರ್ಗದವರು ನ್ಯಾಯಾಲಯಗಳ ಹತ್ತಿರ ಹೋಗುವಂತಿಲ್ಲ ಎಂದು ಈಗ ತಾನೆ ಹೇಳಿದಿರಿ. ನಿಮ್ನ ವರ್ಗದವರನ್ನು ಕೆಲವು ನ್ಯಾಯಾಲಯಗಳೊಳಗೆ ಸೇರಿಸುವುದಿಲ್ಲ ಎಂದು ನಿಮ್ಮ ಅರ್ಥವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೫೨. ಒಂದು ಮೊಕದ್ದಮೆಯಲ್ಲಿ ಆ ಮನುಷ್ಯನಿಗೆ ನ್ಯಾಯಾಲಯದ ಒಳಕ್ಕೆ ಹೋಗಲು ಧೈರ್ಯವೆ ಬರಲಿಲ್ಲ ಎಂದು ನಾನು ಅರ್ಥ ಮಾಡಿಕೊಂಡೆ. ಇದು ಸರಿಯೆ?

ಡಾ. ಬಿ. ಆರ್. ಅಂಬೇಡ್ಕರ್: ವಾಸ್ತವದ ಸಂಗತಿ ಎಂದರೆ ಸವರ್ಣೀಯರು ನಿಮ್ನ ವರ್ಗದ ಮನುಷ್ಯನಿಗೆ ಬದುಕಿನಲ್ಲಿ ಒಂದು ನಿರ್ದಿಷ್ಟ ಸ್ಥಾನವಿದೆ ಎಂದುಕೊಂಡಿದ್ದಾರೆ; ಅವನು ನ್ಯಾಯಾಲಯಕ್ಕೆ ಬಂದರೆ ಆ ಸ್ಥಾನವನ್ನು ಮೀರಿದ ಹಾಗೆ, ಅವನು ತನ್ನ ಸ್ಥಾನವನ್ನು ಮೀರಿದರೆ ಅವರು ಅವನಿಗೆ ತುಂಬ ತೊಂದರೆ ಕೊಡುತ್ತಾರೆ. ತನ್ನ ಸಾಮಾಜಿಕ ಮಿತಿಗಳನ್ನು ಮೀರಿದ ಮನುಷ್ಯ ಅನಂತರ ಸವರ್ಣೀಯರ ಕೈಯಲ್ಲಿ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆ ಒಂದು ಮೊಕದ್ದಮೆಯಲ್ಲಿ ನಾನು ಕೊಡಬಹುದಾಗಿದ್ದ

ರಕ್ಷಣೆ ಸ್ವಲ್ಪಕಾಲದ್ದು ಮಾತ್ರ; ಮೊಕದ್ದಮೆ ಮುಗಿಯುತ್ತಲೇ ರಕ್ಷಣೆಯೂ ಕೊನೆಗಾಣುತ್ತದೆ ಎಂದು ಅವನಿಗೆ ತಿಳಿದಿತ್ತು.

೨೫೩. ನೀವು ಅಲ್ಲಿ ಇರದೆ ಇದ್ದರೆ ಮತ್ತು ಅವನು ನ್ಯಾಯಾಲಯದೊಳಕ್ಕೆ ಹೋಗಲು ಪ್ರಯತ್ನಿಸಿದ್ದರೆ ಅವನಿಗೆ ಏನಾಗುತ್ತಿತ್ತು?

ಡಾ. ಬಿ. ಆರ್. ಅಂಬೇಡ್ಕರ್: ನಾನು ಮುಂಬಯಿಯಲ್ಲಿ ದೇವಸ್ಥಾನವನ್ನು ಪ್ರವೇಶಿಸಲು ಪ್ರಯತ್ನಿಸಿದರೆ ನನಗೆ ಆದ ಗತಿಯೇ ಅವನಿಗೂ ಗತಿಯಾಗುತ್ತಿತ್ತು?

೨೫೪. ವೈದ್ಯಕೀಯ ನೆರವಿನ ವಿಷಯಕ್ಕೆ ಬರೋಣ. ನಿಮ್ಮ ವರ್ಗಗಳವರಿಗೆ ಯಾವ ರೀತಿಯ ವೈದ್ಯಕೀಯ ಸಹಾಯ ದೊರೆಯುತ್ತಿದೆ, ತಿಳಿಸಿಕೊಡುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ರೋಗಿಯ ಸ್ಥಿತಿ ತೀರ ಗಂಭೀರವಾಗಿಲ್ಲದಿದ್ದರೆ ಅವನನ್ನು ಆಸ್ಪತ್ರೆಯ ಒಳಕ್ಕೆ ಬಿಡುವುದಿಲ್ಲ; ಎಂದರೆ ರೋಗಿಯನ್ನು ಆಸ್ಪತ್ರೆಗೆ ಸೇರಿಸಿಕೊಳ್ಳದಿದ್ದರೆ ಅಧಿಕಾರಿಯ ನಡತೆ ಮೇಲಿನವರ ಗಮನಕ್ಕೆ ಬರುತ್ತದೆ ಎನ್ನುವಷ್ಟು ಗಂಭೀರವಾಗಿದ್ದರೆ ಮಾತ್ರ ಒಳಕ್ಕೆ ಬಿಡುತ್ತಾರೆ. ಸಾಮಾನ್ಯವಾಗಿ ಚಿಕಿತ್ಸೆ ಹೊರಗಡೆಯೇ ನಡೆಯುತ್ತದೆ.

೨೫೫. ಅಧ್ಯಕ್ಷರು: ನೀವು ಗ್ರಾಮಾಂತರದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ವಿಷಯ ತಾನೇ ಹೇಳುತ್ತಿರುವುದು?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಸರ್ಕಾರಿ ಆಸ್ಪತ್ರೆಗಳ ವಿಷಯವೆ.

೨೫೬. ಅವು ವೈದ್ಯಕೀಯ ಆಡಳಿತದ ಸಚಿವರ ಇಲಾಖೆಯಲ್ಲಿವೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೫೭. ಸಚಿವರ ನಿಯಮಗಳ ಪ್ರಕಾರ ಯಾರು ಬೇಕಾದರೂ ಈ ಆಸ್ಪತ್ರೆಗಳಿಗೆ ಹೋಗಬಹುದು ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೫೮. ಆದರೆ, ಗ್ರಾಮಾಂತರದಲ್ಲಿ ವಾಸ್ತವವಾಗಿ ಹೀಗೆ ನಡೆಯುವುದಿಲ್ಲ ಎಂದು ನೀವು ಹೇಳುತ್ತೀರಿ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ನಡೆಯುವುದಿಲ್ಲ.

ಡಾ. ಸೋಲಂಕಿ: ಆಚಾರವಂತನಾದ ಹಿಂದೂ ವೈದ್ಯ ನಿಮ್ಮ ವರ್ಗಗಳವರನ್ನು ಪರೀಕ್ಷಿಸುವುದನ್ನು ವಿರೋಧಿಸುತ್ತಾನೆ. ವೈದ್ಯಕೀಯ ಸಹಾಯವಿಲ್ಲದೆ ಹೋದದ್ದರಿಂದ ಜನರು ಸತ್ತ ಪ್ರಸಂಗಗಳು ಗುಜರಾತಿನಲ್ಲಿ ನಡೆದಿದೆ. ರೋಗಿ ನ್ಯುಮೋನಿಯಾದಿಂದ ನರಳುತ್ತಿದ್ದಾಗ ಅವನನ್ನು ಮುಟ್ಟಲೂ ವೈದ್ಯರು ಒಪ್ಪದಿದ್ದ ಪ್ರಸಂಗಗಳನ್ನು ನಾನು ಬಲ್ಲೆ. ಥರ್ಮಾಮೀಟರನ್ನು ಹೇಗೆ ಹಿಡಿಯಬೇಕೆಂದು ತಿಳಿಯದಿದ್ದ ಮಹಮ್ಮದೀಯನ ಕೈಗೆ ವೈದ್ಯ ಥರ್ಮಾಮೀಟರನ್ನು ಕೊಡುತ್ತಿದ್ದ, ಅದನ್ನು ಮಹಮ್ಮದೀಯ ರೋಗಿಯ ಕೈಗೆ ಕೊಡುತ್ತಿದ್ದ. ಇದು ವಾಸ್ತವವಾಗಿ ನಡೆದಿರುವ ಸಂಗತಿ.

೨೫೯. ನಾನು ಮೊದಲೇ ಹೇಳಿದ ಮಾತನ್ನು ಮತ್ತೆ ಹೇಳುತ್ತಿದ್ದೇನೆ. ವಾಸ್ತವವಾದ ಚಿತ್ರವನ್ನು ಪಡೆಯುವುದು ಮುಖ್ಯ. ಯಾವಾಗಲಾದರೊಮ್ಮೆ ಒಂದು ಸಂಗತಿ ನಡೆಯಬಹುದು. ನೀವು ವರ್ಣಿಸುತ್ತಿರುವುದು ಯಾವನೋ ಒಬ್ಬ ವೈದ್ಯನ ವಿರೋಧದಿಂದ ಯಾವಾಗಲೋ ನಡೆಯುವ ಘಟನೆಯೇ ಅಥವಾ ಇದು ಪ್ರತಿನಿತ್ಯ ನಡೆಯುವ ಘಟನೆ ಎಂದು ನಿಮ್ಮ ಅಭಿಪ್ರಾಯವೇ ಎಂಬುದು ನಾನು ತಿಳಿಯಬೇಕಾಗಿದೆ.

ಡಾ. ಸೋಲಂಕಿ: ಆಚಾರವಂತರಾದ ವೈದ್ಯರು ಹೀಗೇ ಮಾಡುತ್ತಾರೆ.

೨೬೦. ಇಲ್ಲಿರುವ ಕಷ್ಟ ಎಂದರೆ, ವೈದ್ಯನ ವಿರೋಧ ಅವನ ಸ್ವಂತ ಧಾರ್ಮಿಕ ಅಭಿಪ್ರಾಯಗಳಿಂದ ಬಂದದ್ದು ಎನ್ನುವುದು ಅಲ್ಲವೆ?

ಡಾ. ಸೋಲಂಕಿ: ಹೌದು.

೨೬೧. ರಾವ್ ಬಹದ್ದೂರ್ ರಾಜಾ: ಈ ಸಂಗತಿಗಳನ್ನು ಸಂಬಂಧಪಟ್ಟ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದೆಯೇ!

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೬೨. ಅವರು ಏನು ಕ್ರಮ ಕೈಗೊಂಡರು?

ಡಾ. ಬಿ. ಆರ್. ಅಂಬೇಡ್ಕರ್: ಮಂತ್ರಿಗಳು ಕೊಟ್ಟ ಉತ್ತರ ಎಂದರೆ ನಾವು ಮನವೊಲಿಸುವುದನ್ನೇ ನೆಚ್ಚುವುದು ಉತ್ತಮ ಎಂದು; ಅದೇ ಅವರು ಬಳಸಿದ ಪದ.

ಅಧ್ಯಕ್ಷರು: ರಾವ್ ಬಹದ್ದೂರರೆ, ನಮಗಾಗಿ ನೀವು ಹೀಗೆ ಮಾಡುತ್ತೀರಾ? ಈ ವಿಷಯದ ಬೇರೆ ಬೇರೆ ಮುಖಗಳ ಬಗ್ಗೆ ನಾವು ಕೇಳುತ್ತೇವೆ; ನನಗೆ ವಾಸ್ತವಾಂಶಗಳು ಬೇಕು. ಈ ಪ್ರಾಂತದ ಸಾಮಾನ್ಯ ಸಾರ್ವಜನಿಕ ಶಾಲೆಗಳಲ್ಲಿ ನಿಮ್ನ ವರ್ಗಗಳ ಮಕ್ಕಳ ಸ್ಥಿತಿ ಏನು? ನನ್ನ ಪರವಾಗಿ ಸಾಕ್ಷಿಯನ್ನು ಈ ವಿಷಯ ಪ್ರಶ್ನಿಸುತ್ತೀರಾ?

೨೬೩. ರಾವ್ ಬಹದ್ದೂರ್ ರಾಜಾ: ಶಾಲಾ ಉಪಾಧ್ಯಾಯರು ಅಥವಾ ಶಿಕ್ಷಣ ಇಲಾಖೆಯವರು ಅಥವಾ ಶಾಲೆಗಳನ್ನು ನಡೆಸುವವರು ನಿಮ್ನ ವರ್ಗಗಳ ಮಕ್ಕಳನ್ನು ಹೇಗೆ ಕಾಣುತ್ತಾರೆ? ದಯೆಯಿಟ್ಟು ನಮಗೆ ತಿಳಿಸಿಕೊಡುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಡಾ. ಪರಾಂಜಪೆಯವರು ಈ ಪ್ರಾಂತದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದಾಗ, ಎಲ್ಲ ಶಾಲೆಗಳಲ್ಲೂ ನಿಮ್ನ ವರ್ಗಗಳ ಮಕ್ಕಳನ್ನು ಸೇರಿಸಿಕೊಳ್ಳಬೇಕೆಂದು ಹೊರಡಿಸಿದ್ದ ಸುತ್ತೋಲೆ ಇದೆ. ಆದರೆ, ನಮಗೆ ತಿಳಿದಿರುವಂತೆ ಈ ಸುತ್ತೋಲೆಯನ್ನು ಕಾರ್ಯಗತ ಮಾಡಿಯೇ ಇಲ್ಲ. ಸಾರ್ವಜನಿಕ ಶಿಕ್ಷಣ ನಿರ್ದೇಶಕರ ವರದಿಯಲ್ಲಿ ಸುತ್ತೋಲೆ ಜಾರಿಗೆ ಬಂದಿದೆ ಎಂದು ಹೇಳಿರುವುದು ನಿಜ; ಆದರೆ, ಆ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳಲಾರೆ. ಇಂದು ಇರುವ ಸ್ಥಿತಿಯಲ್ಲೂ ಅದು ಸತ್ಯವಲ್ಲ. ಕೆಲವೇ ದಿನಗಳ ಹಿಂದೆ ಪುಣೆಯಲ್ಲಿ ಡಿಯೋನಲ್ಲಿ ಒಂದು ಘಟನೆ ನಡೆಯಿತು. ನಿಮ್ನ ವರ್ಗಗಳ ಮಕ್ಕಳಿಗೆ ಪ್ರವೇಶ ಸಿಕ್ಕಲಿಲ್ಲ; ಅವರು ಹಠ ಹಿಡಿದಾಗ ಹಳ್ಳಿಯ ನಿಮ್ನವರ್ಗದವರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹೇರಿತು.

೨೬೪. ನಿಮ್ಮ ವಿಜ್ಞಾಪನಾ ಪತ್ರ ಆ ವರದಿಯನ್ನು ಪ್ರಸ್ತಾಪಿಸುತ್ತದೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ನಾನು ಹೇಳಿದಂತೆ ಅದು ಸತ್ಯಾಂಶಗಳ ಹೇಳಿಕೆ ಅಲ್ಲ. ನಾನು ಅದನ್ನು ಒಪ್ಪುವುದಿಲ್ಲ.

೨೬೫. ರಾವ್ ಬಹದ್ದೂರ್ ರಾಜಾ: ಪೋಲೀಸರು ತಮ್ಮ ಕರ್ತವ್ಯ ಪಾಲನೆಯಲ್ಲಿ ಮನೆಗಳ ಶೋಧನೆ ಮತ್ತು ಬಂಧನಗಳನ್ನು ನಡೆಸಬೇಕಾದ್ದರಿಂದ ನಿಮ್ನವರ್ಗಗಳವರನ್ನು ಪೊಲೀಸ್ ಇಲಾಖೆಯಲ್ಲಿ ನೇಮಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಶ್ರೀ ಗ್ರಿಫಿತ್ ಅವರ ಅಭಿಪ್ರಾಯ ಎಂದು ಅರ್ಥ ಮಾಡಿಕೊಂಡೆ. ವಾದಕ್ಕಾಗಿ ಅದು ನಿಜ ಎಂದು ಒಪ್ಪಿಕೊಂಡರೆ, ನಿಮ್ಮ ವರ್ಗದವರನ್ನು ಇತರ ಅಧೀನ ಮತ್ತು ಪ್ರಾಂತೀಯ ಸೇವೆಗಳಿಗೆ ನೇಮಿಸುವುದಕ್ಕೂ ಅಂತಹುದೇ ಆಕ್ಷೇಪಣೆ ಇರುವುದೇ?

ಡಾ. ಬಿ. ಆರ್. ಅಂಬೇಡ್ಕರ್: ಅನೇಕ ಆಕ್ಷೇಪಗಳನ್ನು ಎತ್ತುತ್ತಾರೆ ಎಂಬುದನ್ನು ಕಂಡಿದ್ದೇನೆ.

೨೬೬. ನೀವು ಇಲ್ಲಿನ ವಿಧಾನ ಪರಿಷತ್ತಿನಲ್ಲಿ ಸದಸ್ಯರಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೬೭. ನಿಮ್ಮ ಅನುಭವದಲ್ಲಿ ಇಲ್ಲಿನ ಪರಿಷತ್ತಿನ ಮೇಲಿನ ಜಾತಿಯ ಸದಸ್ಯರು ನಿಮ್ಮ ಕೋಮಿನವರನ್ನು ಹೇಗೆ ಕಾಣುತ್ತಾರೆ?

ಡಾ. ಬಿ. ಆರ್. ಅಂಬೇಡ್ಕರ್: ಅವರ ದೃಷ್ಟಿ ನಿಮ್ನ ವರ್ಗದವರಿಗೆ ಅನುಕೂಲಕರವಾಗಿರುವಂತೆ ಇದೆ ಎಂದು ಹೇಳುವಂತಿಲ್ಲ.

೨೬೮. ನಿಮ್ಮ ಪ್ರಾಂತದಲ್ಲಿ ನಿಮ್ಮ ಕೋಮಿನ ವಿಷಯದಲ್ಲಿ ಸರ್ಕಾರದ ರೀತಿ ಹೇಗಿದೆ?

ಡಾ. ಬಿ. ಆರ್. ಅಂಬೇಡ್ಕರ್: ತೀರ ನಿರ್ಲಕ್ಷಿಸಲ್ಪಟ್ಟಿದೆ.

೨೬೯. ಈ ಪ್ರಾಂತದಲ್ಲಿ ಗೌರವ ಬೆಂಚುಗಳಿವೆ, ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳಿವೆ ಎಂದು ನಾನು ಭಾವಿಸಿದ್ದೇನೆ. ಈ ನ್ಯಾಯಾಲಯಗಳಲ್ಲಿ ನಿಮ್ನ ವರ್ಗಗಳವರ ಪ್ರತಿನಿಧಿಗಳು ಇದ್ದಾರೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಒಬ್ಬರೂ ಇಲ್ಲ. ನ್ಯಾಯಾಧೀಶರಲ್ಲಿ ಕೆಲವರಾದರೂ ನಿಮ್ನ ವರ್ಗದವರು ಇರಬೇಕೆಂದು ನಾವು ಪ್ರಯತ್ನಿಸುತ್ತಿದ್ದೇವೆ. ಪ್ರಯೋಜನವಾಗಿಲ್ಲ. ಇಂತಹ ನ್ಯಾಯಾಲಯಕ್ಕೆ ತನ್ನನ್ನು ನೇಮಿಸಬೇಕೆಂದು ನಿಮ್ನವರ್ಗದ ಒಬ್ಬಾತ ಕಲೆಕ್ಟರಿಗೆ ಬರೆದ ಅರ್ಜಿಗೆ ಕಲೆಕ್ಟರನು ಬರೆದ ಉತ್ತರವನ್ನು ನಾನು ಓದಿದರೆ ಅದು ಆಸಕ್ತಿಯನ್ನುಂಟುಮಾಡಬಹುದು. ಈ ಸ್ಥಾನಕ್ಕೆ ಆತನನ್ನು ಏಕೆ ನೇಮಿಸಬಾರದು ಎಂದು ಪತ್ರವು ಕಾರಣಗಳನ್ನು ಕೊಡುತ್ತದೆ; ಆದರೆ ಒಕ್ಕಣೆ ಇದು:

"ನಿಮ್ನವರ್ಗಗಳವರ ಆಶೋತ್ತರಗಳ ವಿಷಯದಲ್ಲಿ ಕಲೆಕ್ಟರರಿಗೆ ಸಂಪೂರ್ಣ ಸಹಾನುಭೂತಿ ಇದೆ. ಶ್ರೀ ಮೇಧೆಯವರು ಸಾರ್ವಜನಿಕ ಚಟುವಟಿಕೆಗಳ ಬೇರೆ ಬೇರೆ ಕ್ಷೇತ್ರಗಳಲ್ಲಿ ಮಾಡಿರುವ ಒಳ್ಳೆಯ ಕೆಲಸವನ್ನು ಅವರು ಮೆಚ್ಚುತ್ತಾರೆ. ಆದರೆ, ಅವರ ಅಭಿಪ್ರಾಯದಲ್ಲಿ ನಿಮ್ನವರ್ಗದ ಒಬ್ಬರಿಗೆ ನ್ಯಾಯಾಧೀಶರ ಸ್ಥಾನವನ್ನು ಕೊಡುವ ಕಾಲ ಇನ್ನೂ ಬಂದಿಲ್ಲ. ಮತ್ತು ನಿಮ್ನ ವರ್ಗದವರ ಆಶೋತ್ತರಗಳಿಗೆ ನೆರವಾಗುವಂತಹ ಹೇಳಿಕೆಯನ್ನು ನೀಡುವವರೆಗೆ, ಇಂತಹ ನೇಮಕಾತಿಯನ್ನು ಶಿಫಾರಸು ಮಾಡಲು ತಮಗೆ ಸಾಧ್ಯವಿಲ್ಲ ಎಂದು ಹೇಳಲು ಅವರು ವಿಷಾದಿಕರಿಸುತ್ತಾರೆ."

ಪತ್ರದ ತಾರೀಖು ೨೫ನೆ ಸೆಪ್ಟೆಂಬರ್ ೧೯೨೮.

೨೭೦. ಈ ಸಂಸ್ಥೆಗಳಿಗೆ ಮಾಡುವ ನೇಮಕಗಳಿಗೂ ಕೋಮುಗಳ ಪ್ರಗತಿಗೂ ಏನೂ ಸಂಬಂಧವಿಲ್ಲ ಎನ್ನುವ ನನ್ನ ಅಭಿಪ್ರಾಯವನ್ನು ನೀವು ಒಪ್ಪುತ್ತೀರಿ ಎಂದುಕೊಂಡಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಏನೂ ಸಂಬಂಧವಿಲ್ಲ.

೨೭೧. ಅಭ್ಯರ್ಥಿ ತನ್ನ ಕರ್ತವ್ಯವನ್ನು ಜವಾಬ್ದಾರಿಯ ಅರಿವಿನಿಂದ ನಿರ್ವಹಿಸಬಲ್ಲನೇ ಎನ್ನುವುದನ್ನೇ ಪರಿಗಣಿಸಬೇಕು ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೭೨. ಲಾರ್ಡ್ ಬರ್ನಮ್: ನಿಮ್ನ ವರ್ಗದವರ ಹಿತಾಸಕ್ತಿಗಳನ್ನು ರಕ್ಷಿಸುವ ಎಲ್ಲ ವಿಧಾನಗಳಲ್ಲಿ ಎಲ್ಲರಿಗೂ ಮತದಾನದ ಹಕ್ಕನ್ನು ಕೊಡುವುದನ್ನೇ ನೀವು ಆರಿಸುತ್ತೀರಿ ಎಂದು ನಾನು ಅರ್ಥ ಮಾಡಿಕೊಂಡೆ. ಇದು ಸರಿಯೆ?

ಡಾ. ಬಿ. ಆರ್. ಅಂಬೇಡ್ಕರ್: ವಿಧಾನಸಭೆಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಇರುವುದರ ಕಡೆಗೇ ನನ್ನ ಒಲವು.

೨೭೩. ನೀವು ಎಲ್ಲರಿಗೆ ಮತದಾನದ ಹಕ್ಕನ್ನು ಕೊಡುವುದನ್ನು ಬೆಂಬಲಿಸುತ್ತೀರಿ ಎಂದುಕೊಂಡೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೭೪. ಅದು ದೊರೆಯದಿದ್ದರೆ ನೀವು ಪ್ರತ್ಯೇಕ ಮತಕ್ಷೇತ್ರಗಳನ್ನೇ ಬಯಸುತ್ತೀರಿ? ನಿಮಗೆ ಈ ಎರಡು ದೊರೆಯದಿದ್ದರೂ ನೀವು ನಾಮಕರಣ ಪದ್ಧತಿಯನ್ನು ಬೆಂಬಲಿಸುತ್ತಿರೇನು?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ನಮ್ಮ ಪ್ರತಿನಿಧಿಗಳು ಚುನಾಯಿತರಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

೨೭೫. ನೀವು ಸೂಚಿಸಿದ ಷರತ್ತುಗಳ ಪ್ರಕಾರ ಚುನಾವಣೆ ದೊರೆಯದಿದ್ದರೆ ನೀವು ವಯಸ್ಕರ ಮತದಾನವನ್ನು ಆರಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೭೬. ಅಧ್ಯಕ್ಷರು: ನಿಮ್ನವರ್ಗದವರ ಪ್ರತಿನಿಧಿಗಳನ್ನು ಚುನಾವಣೆಯೇ ನಿರ್ಧರಿಸಬೇಕೆಂಬ ನಿಮ್ಮ ಬಲವತ್ತರವಾದ ಅಪೇಕ್ಷೆಯನ್ನು ಹೇಳಿದ್ದೀರಿ. ಚುನಾವಣೆಯ ವಿಧಾನವೇ ಆದರೆ, ನಿಮ್ನವರ್ಗದವರನ್ನು ಅತ್ಯುತ್ತಮವಾಗಿ ಪ್ರತಿನಿಧಿಸುವವರೇ ಆಯ್ಕೆಯಾಗುತ್ತಾರೆ ಎಂದು ನಿಮಗೆ ನಂಬಿಕೆ ಇದೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಅದೇ ನನ್ನ ನಂಬಿಕೆ.

೨೭೭. ನಿಮ್ನ ವರ್ಗದವರ ಹಿತಾಸಕ್ತಿಗಳನ್ನು ನಿಜವಾಗಿ ವಿರೋಧಿಸುವ ಪ್ರಭಾವಗಳು ಕೆಲಸ ಮಾಡುತ್ತವೆ ಎಂಬ ಆತಂಕ ನಿಮಗಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನಾನು ಆ ಸಾಧ್ಯತೆಯನ್ನು ಒಪ್ಪಿಕೊಳ್ಳುತ್ತೇನೆ; ಆ ಕಾರಣಕ್ಕಾಗಿಯೇ ವಯಸ್ಕರ ಮತದಾನ ನನಗೆ ಬೇಕು.

೨೭೮. ವಯಸ್ಕರ ಮತದಾನದ ಕಾರಣದಿಂದ ಪ್ರಭಾವ ನಿಷ್ಕ್ರಿಯವಾಗುತ್ತದೆ ಎಂದು ನಮಗನ್ನಿಸುತ್ತದೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಅದಕ್ಕೆ ಪ್ರತಿಯಾಗಿ ಪ್ರಭಾವವಿರುತ್ತದೆ.

೨೭೯. ನಿಮ್ನವರ್ಗದವನಿಗೆ ಅದಕ್ಕೆ ಅಗತ್ಯವಾದ ಅರ್ಹತೆ ಇದೆ ಎಂದು ಭಾವಿಸೋಣ. ಆಗ ಆತ ಸಾಮಾನ್ಯ ಮತಕ್ಷೇತ್ರದಲ್ಲಿ ಮತ ನೀಡುತ್ತಾನೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೮೦. ನಿಮ್ಮ ವಿಷಯವನ್ನೆ ತೆಗೆದುಕೊಂಡರೆ ನಿಮಗೆ ಯಾವುದೋ ಒಂದು ಸಾಮಾನ್ಯ ಮತಕ್ಷೇತ್ರದಲ್ಲಿ ಮತ ನೀಡುವ ಹಕ್ಕಿದೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು; ನನ್ನ ಸ್ನೇಹಿತರೂ ನಾನೂ ವಿಶ್ವವಿದ್ಯಾನಿಲಯದ ಮರುಕ್ಷೇತ್ರದಲ್ಲಿ ಮತ ನೀಡುತ್ತೇವೆ.

೨೮೧. ತೆರಿಗೆಗಳನ್ನು ಕೊಡುವ ವಿಷಯದಲ್ಲಿ ಸ್ಥಿತಿ ಏನು? ನಿಮ್ನ ವರ್ಗಗಳವರು ತೆರಿಗೆಗಳನ್ನು ಕೊಡುವುದಿಲ್ಲ ಎಂಬ ಸೂಚನೆ ಕೇಳಿಸಿತು. ಸುಂಕದ ತೆರಿಗೆಗಳು ಮತ್ತು ಇತರ ಪರೋಕ್ಷ ತೆರಿಗೆಗಳಿಂದ ಬೆಲೆಗಳು ಏರುತ್ತವೆ; ನಿಮ್ನ ವರ್ಗಗಳವರೂ ಇತರರಂತೆಯೇ ಏರಿದ ಬೆಲೆಗಳನ್ನು ತೆರಬೇಕಾಗುತ್ತದೆ ಎಂದು ಭಾವಿಸಿದ್ದೇನೆ. ಹಾಗೇ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಜೊತೆಗೆ ಸಾಮಾನ್ಯವಾಗಿ ನಿಮ್ನ ವರ್ಗಗಳವರಿಗೆ ಮುಖ್ಯವಾಗಿ ಮಹಾರ್ ಕೋಮಿನವರಿಗೆ ಸಾಮಾನ್ಯ ಗುತ್ತಿಗೆಯ ಅಥವಾ ವತನ್ ಗುತ್ತಿಗೆಯ ಭೂಮಿ ಇರುತ್ತದೆ. ಅವರೂ ಇತರರಂತೆಯೇ ಜೂಡಿ ಹಣವನ್ನು ತೆರುತ್ತಾರೆ.

೨೮೨. ಸಾಕಷ್ಟು ಮಂದಿ ಮಹಾರರು ಖಾಸಗಿ ಸೇವೆಗಳಲ್ಲಿ ಪರಿಚಾರಕರಾಗಿ ಕೆಲಸ ಮಾಡುತ್ತಾರೆ ಎಂದುಕೊಂಡಿದ್ದೇನೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಕೆಲವೇ ಕೆಲವರು ಮಾತ್ರ. ಆದರೂ ಮುಖ್ಯವಾಗಿ ನಗರಗಳಲ್ಲಿ ಕಾರ್ಖಾನೆಗಳ ಕೆಲಸ ಮಾಡುತ್ತಾರೆ.

೨೮೩. ಯುರೋಪಿಯನ್ನರ ಖಾಸಗಿ ಮನೆ ಅಥವಾ ಕ್ಲಬ್ಬನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ. ಅವರು ಮಹಾರರನ್ನು ನೇಮಕ ಮಾಡಿಕೊಳ್ಳುತ್ತಾರೆ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು.

೨೮೪. ಸಾಮಾನ್ಯ ಮತಕ್ಷೇತ್ರದಲ್ಲಿ ಮತದಾನ ಮಾಡುವ ಹಕ್ಕು ಈ ಜನರಿಗೆ ಇರುತ್ತದೆಯೋ ಇಲ್ಲವೋ.

ಡಾ. ಬಿ. ಆರ್. ಅಂಬೇಡ್ಕರ್: ಅದು ಮತದಾನದ ಹಕ್ಕಿನ ಅರ್ಹತೆಯನ್ನು ಅವಲಂಬಿಸಿರುತ್ತದೆ.

೨೮೫. ಸಾಮಾನ್ಯವಾಗಿ ಈ ಪರಿಚಾರಕರಿಗೆ ಅರ್ಹತೆ ಇರುವುದಿಲ್ಲ ಅಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಈಗಿರುವ ಪರಿಸ್ಥಿತಿಯಲ್ಲಿ ಇಲ್ಲ.

೨೮೬. ಸರ್ದಾರ್ ಮಜುಂದಾರ್: ನಿಮ್ಮ ವರ್ಗಗಳಿಂದ ಬಂದ ಸಂತರನ್ನು ಎಲ್ಲ ವರ್ಗಗಳವರೂ ಪೂಜ್ಯ ಭಾವನೆಯಿಂದ ಕಾಣುತ್ತಾರೆ, ಮೇಲಿನ ವರ್ಗಗಳಿಂದ ಬಂದ ಸಂತರಿಗೆ ಎಷ್ಟು ಭಕ್ತಿಯಿಂದ ತಲೆ ಬಾಗುತ್ತಾರೋ ಅಷ್ಟೇ ಭಕ್ತಿಯಿಂದ ಈ ಸಂತರ ಮುಂದೆಯೂ ತಲೆಬಾಗುತ್ತಾರೆ ಎನ್ನುವುದು ನಿಮಗೆ ತಿಳಿದಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ತಿಳಿದಮಟ್ಟಿಗೆ ಅಂತಹ ಒಂದೇ ಪ್ರಸಂಗವಿದೆ.

೨೮೭. ಆದರೂ ಹಾಗೆ ನಡೆದುಕೊಳ್ಳುತ್ತಾರಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಮಹಮ್ಮದೀಯ ಪೀರ್‌ನ ವಿಷಯದಲ್ಲಿ ನಡೆದುಕೊಂಡ ಹಾಗೆ.

೨೮೮. ಫಂಡರಪುರದ ವಿಠೋಬನ ಭಕ್ತರಾದ ವಾರಕರಿ ಪಂಥದವರು ಅಸ್ಪೃಶ್ಯತೆಯನ್ನು ಆಚರಿಸುವುದಿಲ್ಲ ಎಂಬುದು ನಿಮಗೆ ಗೊತ್ತೆ?

ಡಾ. ಬಿ. ಆರ್. ಅಂಬೇಡ್ಕರ್: ಅದು ಸಂಪೂರ್ಣವಾಗಿ ತಪ್ಪು.

೨೮೯. ಕಳೆದ ೨೫ ವರ್ಷಗಳಲ್ಲಿ ನಿಮ್ಮ ವರ್ಗದವರನ್ನು ಕಾಣುವ ರೀತಿಯಲ್ಲಿ ಬಹುದೊಡ್ಡ ಬದಲಾವಣೆಯಾಗಿದೆ. ಮೇಲಿನ ವರ್ಗಗಳಲ್ಲಿ ವಿದ್ಯಾವಂತರಾದವರು ಅಸ್ಪೃಶ್ಯತೆಯ ಈ ಪೀಡೆಯನ್ನು ತೊಲಗಿಸಿ ಅವರೊಡನೆ ನಿಸ್ಸಂಕೋಚವಾಗಿ ಬೆರೆಯಲು ಪ್ರಯತ್ನಿಸುತ್ತಿದ್ದಾರೆ ಮತ್ತು ನಿಮ್ಮ ವರ್ಗದವರ ಸ್ಥಿತಿಯಲ್ಲಿ ಮತ್ತು ವಿದ್ಯಾವಂತ ಸಾರ್ವಜನಿಕರು ಅವರೊಡನೆ ವ್ಯವಹರಿಸುವ ರೀತಿಯಲ್ಲಿ ಕ್ರಮೇಣ ಬದಲಾವಣೆಯಾಗುತ್ತಿದೆ ಎಂದು ನೀವು ಒಪ್ಪುತ್ತೀರ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಅದು ನಿಜ. ಆದರೆ ಸಹಾನುಭೂತಿ ಕಾಣುವುದು ಮಾತುಗಳಲ್ಲಿ ಮಾತ್ರ. ಅದು ಕಾರ್ಯರೂಪಕ್ಕೆ ಬರುವುದು ವಿರಳ.

೨೯೦. ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಹಳ್ಳಿಗಳಲ್ಲಿ ನಿಮ್ಮ ವರ್ಗಗಳವರಿಗೆ ಪ್ರತ್ಯೇಕವಾದ ಬಾವಿಗಳನ್ನು ಒದಗಿಸಿಕೊಟ್ಟಿರುವುದು ನಿಮಗೆ ತಿಳಿದಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ.

೨೯೧. ಇಂತಹ ಬಾವಿಗಳಿಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ಪ್ರತಿ ಹಳ್ಳಿಯಲ್ಲೂ ಇಲ್ಲ.

೨೯೨. ನಿಮ್ಮ ವರ್ಗಗಳವರು ಎಂದರೆ ಯಾರು? ದಯವಿಟ್ಟು ಆ ಜಾತಿಗಳ ಹೆಸರುಗಳನ್ನು ಹೇಳುವಿರ?

ಡಾ. ಬಿ. ಆರ್. ಅಂಬೇಡ್ಕರ್: ಜನಗಣತಿಯೇ ಇದೆ.

೨೯೩. ಮಂಗ್ ಮತ್ತು ಮಹಾರ್ ಜಾತಿಗಳವರಲ್ಲಿ ಪರಸ್ಪರ ಮದುವೆ ನಡೆಯುವುದೇ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ, ಸವರ್ಣೀಯರು ತಮ್ಮ ವಿಷವನ್ನು ಇತರರಿಗೂ ಹಬ್ಬಿಸಿದ್ದಾರೆ.

೨೯೪. ಅವರು ಒಟ್ಟಿಗೆ ಊಟ ಮಾಡುತ್ತಾರೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಈಗಿನ ದಿನಗಳಲ್ಲಿ. ಒಗ್ಗಟ್ಟಿಗಾಗಿ ಚಳವಳಿ ನಡೆಯುತ್ತಿದೆ; ಈಗ ಮಂಗ್ ಮತ್ತು ಮಹಾರರ ನಡುವೆ ಮದುವೆಯ ಪರವಾಗಿ ವಾದವಿದೆ.

೨೯೫. ನಿಮ್ಮ ವರ್ಗಗಳಿಗೆ ಸೇರಿದ ಇಬ್ಬರು ಇನಾಂದಾರರು ನನ್ನ ಮತಕ್ಷೇತ್ರದಲ್ಲಿಯೆ ಇದಾರಲ್ಲವೆ?

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಗೊತ್ತಿಲ್ಲ.

# *ಭಾರತೀಯ ಮತದಾನ ಹಕ್ಕಿನ ಸಮಿತಿ

(ಲೋಥಿಯನ್ ಸಮಿತಿ)ಗೆ
ಡಾ. ಬಿ. ಆರ್. ಅಂಬೇಡ್ಕರ್‌ರವರು
೧೯೩೨ರ ಮೇ ೧ರಂದು ಕೊಟ್ಟ ಟಿಪ್ಪಣಿ

## ಸಾಮಾನ್ಯ

೧. ನಿಮ್ನ ವರ್ಗಗಳವರು ಎನ್ನುವ ಮಾತನ್ನು ಅಸ್ಪೃಶ್ಯರಿಗೆ ಮಾತ್ರ ಮಿತಗೊಳಿಸಲು ನಾನು ಒಪ್ಪಿಕೊಂಡಿದ್ದೇನೆ. ಅಸ್ಪೃಶ್ಯತೆಯ ವ್ಯವಸ್ಥೆಯಲ್ಲೇ ಸೇರಿಕೊಂಡಿರುವ ಸಾಮಾಜಿಕ ತಾರಮತ್ಯದಿಂದ ಯಾತನೆ ಪಟ್ಟವರಿಗೆಲ್ಲಾ ಸಮಾನವಾಗಿರುವ ಒಂದೇ ಬಗೆಯ ಅರಿವು ಯಾರಲ್ಲಿ ಇರಲು ಸಾಧ್ಯವಿಲ್ಲವೋ ಮತ್ತು ಇದರ ಪರಿಣಾಮವಾಗಿ ಯಾರು ಅಸ್ಪೃಶ್ಯರನ್ನು ತಮ್ಮ ಉದ್ದೇಶಗಳಿಗಾಗಿ ಶೋಷಣೆ ಮಾಡಬಹುದೋ ಅವರನ್ನು ಅಸ್ಪೃಶ್ಯ ವರ್ಗದಿಂದ ಹೊರಗಿಡಲು ನಾನೇ ಪ್ರಯತ್ನಿಸಿದ್ದೇನೆ. ಅಸ್ಪೃಶ್ಯ ವರ್ಗಗಳನ್ನು ನಿರ್ಧರಿಸಲು ಸಮಿತಿಯ ವರದಿಯಲ್ಲಿ ಪ್ರಸ್ತಾಪಿಸಿರುವ ಏಳನೆಯ ಮತ್ತು ಎಂಟನೆಯ ಪರೀಕ್ಷೆಗಳ ಬಳಕೆಗೂ ನಾನು ಆಕ್ಷೇಪಣೆಯನ್ನು ಎತ್ತಿಲ್ಲ. ಆದರೆ ಬೇರೆ ಬೇರೆ ವ್ಯಕ್ತಿಗಳು ಅವನ್ನು ಬೇರೆ ಬೇರೆ ರೀತಿಗಳಲ್ಲಿ ಅನ್ವಯಿಸಲು ಪ್ರಯತ್ನಿಸುತ್ತಾರೆ ಅಥವಾ ಅವಕ್ಕೆ ಬೇರೆ ಬೇರೆ ವ್ಯಾಖ್ಯಾನಗಳನ್ನು ಕೊಡುತ್ತಾರೆ ಎಂದು ನನಗೆ ಕಂಡದ್ದರಿಂದ ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ವಿವರಿಸುವುದು ಅಗತ್ಯ ಎಂದು ಭಾವಿಸುತ್ತೇನೆ.

೨. ಮೊದಲನೆಯದಾಗಿ, ಅಸ್ಪೃಶ್ಯ ವರ್ಗಗಳನ್ನು ನಿರ್ಧರಿಸಲು ಯಾವ ಪರೀಕ್ಷೆಗಳನ್ನು ಬಳಸಿದರೂ ಅವನ್ನು ಭಾರತದಲ್ಲೆಲ್ಲ ಏಕರೀತಿಯಾಗಿ ಬಳಸಬೇಕೆಂದು ಕೆಲವೆಡೆಗಳಲ್ಲಿ ಹೇಳಲಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ, ಇಂತಹ ವಿಷಯದಲ್ಲಿ ಭಾರತದಲ್ಲೆಲ್ಲ ಒಂದೇ ಪರೀಕ್ಷೆಯನ್ನು ಅಥವಾ ಪರೀಕ್ಷೆಗಳನ್ನು ಅನ್ವಯಿಸುವುದು ಸೂಕ್ತವಾಗುವುದಿಲ್ಲ ಎಂದು ಹೇಳಲು ನಾನು ಬಯಸುತ್ತೇನೆ. ಇಡೀ ಭಾರತವು ಒಂದೇ ತೆರನಾದ ದೇಶವಲ್ಲ. ಅದು ಒಂದು ಖಂಡ. ವಿವಿಧ ಪ್ರಾಂತ್ಯಗಳಲ್ಲಿ ಸ್ಥಿತಿಗತಿಗಳಲ್ಲಿ ತೀರ ಹೆಚ್ಚಿನ ಭಿನ್ನತೆಗಳಿವೆ ಮತ್ತು ಜನಾಂಗದ ಅಥವಾ ಭಾಷೆಯ ಸಂಬಂಧವಿಲ್ಲ. ಸಂಪರ್ಕದ ಅಭಾವದಿಂದ ಪ್ರತಿಯೊಂದು ಪ್ರಾಂತ್ಯವೂ ತನ್ನದೇ ವಿಶಿಷ್ಟವಾದ ಸಾಮಾಜಿಕ ಬದುಕಿನ ರೀತಿನೀತಿಗಳನ್ನು ಪಡೆದುಕೊಂಡು ತನ್ನದೇ ರೀತಿಯಲ್ಲಿ ವಿಕಾಸವಾಗಿದೆ. ಇಂತಹ ಸನ್ನಿವೇಶಗಳಲ್ಲಿ ಇಡೀ ಭಾರತದಲ್ಲಿ ಅಸ್ಪೃಶ್ಯತೆಯನ್ನು ನಿರ್ಧರಿಸುವ ಅನೇಕ ಪರೀಕ್ಷೆಗಳು ಅಥವಾ ಮಾಪಕಗಳು ಎಷ್ಟರ ಮಟ್ಟಿಗೆ ಏಕ ರೀತಿಯಲ್ಲಿ ಅನ್ವಯವಾಗುತ್ತವೆ ಎನ್ನುವುದು ಗಮನಾರ್ಹ– ಉದಾಹರಣೆಗೆ ಭಾರತದಲ್ಲಿ ಎಲ್ಲೆಲ್ಲೂ ದೇವಾಲಯ ಪ್ರದೇಶವನ್ನು ನಿಷೇಧಿಸಿದೆ. ಏಕ

---

*ಭಾರತೀಯ ಮತದಾನ ಹಕ್ಕಿನ ಸಮಿತಿಯ ವರದಿ, ಸಂಪುಟ ೧, ಎರಡನೆಯ ಆವೃತ್ತಿ, ಪುಟ ೨೦೨–೧೧. ಭಾರತೀಯ ಮತದಾನ ಹಕ್ಕಿನ ಸಮಿತಿಯನ್ನು ದುಂಡುಮೇಜಿನ ಪರಿಷತ್ತಿನ ಮತದಾನ ಹಕ್ಕಿನ ಉಪಸಮಿತಿಯ ಶಿಫಾರಸಿನ ಪ್ರಕಾರ ೧೯೩೧ರ ಡಿಸೆಂಬರ್‌ನಲ್ಲಿ ರಚಿಸಲಾಯಿತು. ಡಾ. ಬಿ. ಆರ್. ಅಂಬೇಡ್ಕರರು ಸೇರಿದಂತೆ ೧೮ ಮಂದಿ ಸದಸ್ಯರಿದ್ದರು. ಪಾರ್ಲಿಮೆಂಟರಿ ಅಂಡರ್ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಆಗಿದ್ದ ಮಾರ್ಕ್ವಿಸ್ ಆಫ್ ಲೋತಿಯಾನ್, ಸಿ.ಎಚ್. ಈ ಸಮಿತಿಯ ಅಧ್ಯಕ್ಷರು.

ರೀತಿಯ ಕಟ್ಟುನಿಟ್ಟಿನಿಂದ ಎಲ್ಲ ಕಡೆಯೂ ಕಾಣದಿದ್ದರೂ ಬಾವಿಯ ನೀರನ್ನು ತೆಗೆದುಕೊಳ್ಳಬಾರದೆಂಬ ಮತ್ತು ಮುಟ್ಟಿದರೆ ಮೈಲಿಗೆ ಎನ್ನುವ ನಿಯಮಗಳೂ ಅನ್ವಯಿಸುತ್ತದೆ. ಆದರೆ, ಎಷ್ಟೇ ಆದರೂ ಇದು ಅಸ್ಪೃಶ್ಯತೆಯು ಸಾಮಾಜಿಕ ನಡತೆಗೆ ಸಂಬಂಧಿಸಿದ ವಿಷಯ; ಆದುದರಿಂದ ಇದು ಪ್ರತಿ ಪ್ರಾಂತ್ಯದ ಸನ್ನಿವೇಶಗಳೊಂದಿಗೆ ಮತ್ತು ಪ್ರತಿ ವ್ಯಕ್ತಿಯ ಸನ್ನಿವೇಶಗಳೊಂದಿಗೆ ಭಿನ್ನವಾಗಲೇಬೇಕು; ಆದುದರಿಂದ ಈ ವ್ಯವಸ್ಥೆಯಲ್ಲಿ ಸಂಪೂರ್ಣ ಏಕರೀತಿ ಇರಬೇಕು ಎಂದು ಒತ್ತಾಯಿಸುವುದು ಸಮಸ್ಯೆಯನ್ನು ಹಗುರವಾಗಿ ಅಥವಾ ಬಾಲಿಶವಾಗಿ ಕಂಡಂತೆಯೆ. ಶಾಸನಬದ್ಧ ಆಯೋಗವು ಈ ರೀತಿಯ ವಾದವು ಬರಬಹುದೆಂದು ನಿರೀಕ್ಷಿಸಿಯೇ ಇತ್ತು; ಅದನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಅಸ್ಪೃಶ್ಯತೆಯ ಪರೀಕ್ಷೆಗಳ ಅನ್ವಯದಲ್ಲಿ ವೈವಿಧ್ಯದ ಸೂತ್ರವನ್ನು ಒಪ್ಪಿಕೊಂಡು ಈ ವಾದವನ್ನು ತಳ್ಳಿಹಾಕಿತು. ಅದರ ಶಿಫಾರಸುಗಳಿರುವ ಎರಡನೆಯ ಸಂಪುಟದ ೬೭ನೆಯ ಪುಟದಲ್ಲಿ ಅದು ಹಿಗನ್ನುತ್ತದೆ: "ಪ್ರಾತಿನಿಧ್ಯ ಹೊಸ ವ್ಯವಸ್ಥೆಯ ಮುಖ್ಯ ತತ್ವಗಳನ್ನು ನಿರ್ಧರಿಸಿದ ಮೇಲೆ (ಹಿಂದಿನ ಮತದಾನ ಹಕ್ಕಿನ ಸಮಿತಿಯಂತೆ) ವಿಶೇಷವಾಗಿ ನೇಮಿಸಲ್ಪಟ್ಟ ಸಮಿತಿಗೆ, ಈ ತತ್ವಗಳನ್ನು ಕಾರ್ಯರೂಪಕ್ಕೆ ತರುವ ಕೆಲಸವನ್ನು ವಹಿಸಿಕೊಡುವುದು ಸ್ಪಷ್ಟವಾಗಿ ಅಗತ್ಯವಾಗುತ್ತದೆ; 'ನಿಮ್ನ ವರ್ಗಗಳವರು' ಎನ್ನುವುದಕ್ಕೆ ಪ್ರತಿ ಪ್ರಾಂತಕ್ಕೂ ಒಂದು ವಿವರಣೆಯನ್ನು (ಇದು ಒಂದೇ ಪ್ರಾಂತದ ಬೇರೆ ಬೇರೆ ಭಾಗಗಳಲ್ಲಿ ಸಹ ಒಮ್ಮೊಮ್ಮೆ ಬೇರೆಯಾಗಬಹುದು) ರೂಪಿಸುವುದು ಮತ್ತು ಈ ವಿವರಣೆಗೆ ಅನುಗುಣವಾಗಿ ಅವರ ಸಂಖ್ಯೆಯನ್ನು ನಿರ್ಧರಿಸುವುದು ಈ ಸಮಿತಿಯ ಕೆಲಸಗಳಲ್ಲಿ ಒಂದಾಗಿರುತ್ತದೆ" ನಾನು ಒತ್ತಿ ಹೇಳಬೇಕೆಂದಿರುವ ಇನ್ನೊಂದು ಅಂಶ, ಇಡೀ ಭಾರತದಲ್ಲಿ ಅಸ್ಪೃಶ್ಯತೆಯನ್ನು ನಿರ್ಧರಿಸಲು ಏಕರೀತಿಯ ಪರೀಕ್ಷೆಗಳನ್ನು ಅನ್ವಯಿಸಬೇಕೆಂದು ಒತ್ತಾಯಿಸುವುದು ವ್ಯರ್ಥ ಎನ್ನುವುದು. ಅಸ್ಪೃಶ್ಯತೆಯ ನಿರ್ಧಾರಕ್ಕೆ ಬಳಸುವ ಪರೀಕ್ಷೆಗಳು ಬೇರೆ ಯಾದ ಮಾತ್ರಕ್ಕೆ ಅಸ್ಪೃಶ್ಯರ ಸ್ಥಿತಿಗತಿಗಳೂ ಬೇರೆಯಾಗಿರುತ್ತವೆ ಎಂದು ಭಾವಿಸುವುದು ತೀರ ತಪ್ಪು; ಇವು ಸೂಚಿಸುವ ಮನೋಧರ್ಮಗಳನ್ನು ಸರಿಯಾಗಿ ವಿಶ್ಲೇಷಿಸಿದರೆ, ಪರಿಕ್ಷೆಯು ಸ್ಪರ್ಶಮಾತ್ರದಿಂದ ಮೈಲಿಗೆಯಾಗುತ್ತದೆ ಎನ್ನುವುದಾಗಲಿ ಎಲ್ಲರಿಗೆ ಸೇರಿದ ಬಾವಿಯನ್ನು ಬಳಸಬಾರದು ಎನ್ನುವುದಾಗಲಿ ಎರಡಕ್ಕೂ ಆಧಾರವಾದ ವಿಚಾರ ರೀತಿಯು ಒಂದೇ ಎನ್ನುವುದು ಕಾಣುತ್ತದೆ. ಹಿಂದೂ ಆದವನು ಅಸ್ಪೃಶ್ಯನನ್ನು ಏಕೆ ಮುಟ್ಟುವುದಿಲ್ಲ? ಅಸ್ಪೃಶ್ಯನು ದೇವಸ್ಥಾನದ ಒಳಕ್ಕೆ ಹೋಗಲು ಅಥವಾ ಬಾವಿಯನ್ನು ಬಳಸಲು ಒಬ್ಬ ಹಿಂದೂ ಏಕೆ ಅವಕಾಶ ಕೊಡುವುದಿಲ್ಲ? ಅಸ್ಪೃಶ್ಯನನ್ನು ಉಪಾಹಾರ ಗೃಹದೊಳಕ್ಕೆ ಒಬ್ಬ ಹಿಂದೂ ಏಕೆ ಬಿಡುವುದಿಲ್ಲ? ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಒಂದೇ. ಅಸ್ಪೃಶ್ಯನಾದವನು ಮೈಲಿಗೆ ಉಂಟುಮಾಡುವವನಾಗಿದ್ದು ಸಾಮಾಜಿಕ ವ್ಯವಹಾರಕ್ಕೆ ಯೋಗ್ಯನಲ್ಲ ಎನ್ನುವುದೇ ಉತ್ತರ. ಅಸ್ಪೃಶ್ಯನೊಬ್ಬ ನಡೆಸುವ ಧಾರ್ಮಿಕ ವಿಧಿಗೆ ಬ್ರಾಹ್ಮಣ ಏಕೆ ಪುರೋಹಿತನಾಗುವುದಿಲ್ಲ? ಕ್ಷೌರಿಕ ಅಸ್ಪೃಶ್ಯನಿಗೆ ಏಕೆ ಕ್ಷೌರ ಮಾಡುವುದಿಲ್ಲ? ಈ ಪ್ರಶ್ನೆಗಳಿಗೂ ಒಂದೇ ಉತ್ತರ– ಅದು ತಮ್ಮ ಘನತೆಗೆ ತಕ್ಕುದಲ್ಲ ಎನ್ನುವುದು. ಸಾಮಾಜಿಕ ಅಸಹ್ಯತೆಯಿಂದ ನರಳುವ ಜನರ ವರ್ಗವನ್ನು ಗುರುತಿಸುವುದು ನಮ್ಮ ಉದ್ದೇಶವಾಗಿದ್ದರೆ, ನಾವು ಯಾವ ಪರೀಕ್ಷೆಯನ್ನು ಬಳಸುತ್ತೇವೆ ಎನ್ನುವುದು ಅಮುಖ್ಯ. ಏಕೆಂದರೆ ನಾನು ಆಗಲೇ ತೋರಿಸಿದಂತೆ, ಈ ಪರೀಕ್ಷೆಗಳಲ್ಲಿ ಪ್ರತಿಯೊಂದೂ ಸ್ಪೃಶ್ಯರು, ಅಸ್ಪೃಶ್ಯರಲ್ಲಿ ತಳೆದಿರುವ ಒಂದೇ ಮನೋಧರ್ಮವನ್ನು ತೋರಿಸುತ್ತದೆ.

೩. ಎರಡನೆಯದಾಗಿ 'ಮುಟ್ಟಿದರೆ ಮೈಲಿಗೆ' ಎನ್ನುವ ಪರೀಕ್ಷೆಯಿಂದ ಅಸ್ಪೃಶ್ಯತೆಯನ್ನು ನಿರ್ಧರಿಸುವಾಗ ಈ ಮಾತನ್ನು ಅಕ್ಷರಶಃ ಅನ್ವಯಿಸಬೇಕು. ಜನರ ಭಾವನೆಯಷ್ಟನ್ನೇ ಗಮನಿಸಿದರೆ ಸಾಲದು ಎನ್ನುವ ಅಭಿಪ್ರಾಯವನ್ನು ಹೇಳುವುದುಂಟು. ಅಕ್ಷರಶಃ ತೆಗೆದುಕೊಂಡರೆ, ಯಾರನ್ನು ಮುಟ್ಟಿದರೆ ಮೈಲಿಗೆ ಎಂದು

ದೂರ ಇಡುತ್ತಾರೋ ಅಥವಾ ಮುಟ್ಟಿಸಿಕೊಂಡರೆ ಸ್ನಾನ ಮಾಡಿ ಶುದ್ಧಿಮಾಡಿಕೊಳ್ಳಬೇಕಾಗುತ್ತದೋ ಅವರು ಅಸ್ಪೃಶ್ಯರು. ಭಾವವನ್ನು ಗಣನೆಗೆ ತೆಗೆದುಕೊಂಡರೆ, ಮುಟ್ಟಿದರೆ ಮೈಲಿಗೆಯಾಗುತ್ತದೆ ಎಂದು ಭಾವಿಸುವ ವರ್ಗಕ್ಕೆ ಸೇರಿದವನು ಅಸ್ಪೃಶ್ಯ. ಸ್ಥಳದ ಸನ್ನಿವೇಶಗಳಿಂದ ಅವನನ್ನು ಮುಟ್ಟದೆ ಇರಲು ಸಾಧ್ಯವಾಗದೆ ಇರಬಹುದು ಅಥವಾ ಮುಟ್ಟಿದರೆ ಸ್ನಾನ ಮಾಡಲು ಸಾಧ್ಯವಾಗದೆ ಹೋಗಬಹುದು. ಆದರೂ ಅವನು ಅಸ್ಪೃಶ್ಯನೆ. ಅಕ್ಷರಶಃ ಈ ಪರೀಕ್ಷೆಯನ್ನು ಅನ್ವಯಿಸಬೇಕು ಎನ್ನುವವರ ಪ್ರಕಾರ ಪರಿಸ್ಥಿತಿ ಬದಲಾಗಿ ಜನರು ಅಸ್ಪೃಶ್ಯರನ್ನು ಮುಟ್ಟುವುದನ್ನೇ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವಾದರೆ ಅಥವಾ ಮುಟ್ಟಿದರೆ ಶುದ್ಧಿ ಮಾಡಿಕೊಳ್ಳುವ ತೊಂದರೆಯನ್ನು ತೆಗೆದುಕೊಳ್ಳದಿದ್ದರೆ ಅಸ್ಪೃಶ್ಯರು ಎಂದು ಕರೆಯುವವರನ್ನು ಅಸ್ಪೃಶ್ಯರ ವರ್ಗದಲ್ಲಿ ಸೇರಿಸಬೇಕಾಗಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದು ಒಂದು ತಪ್ಪು ಅಭಿಪ್ರಾಯವನ್ನು ಆಧರಿಸಿದೆ ಎಂದು ನನಗೆ ತೋರುತ್ತದೆ. ಆದುದರಿಂದ ಇದನ್ನು ನಾನು ಒಪ್ಪುವುದಿಲ್ಲ ಹಲವಾರು ಸನ್ನಿವೇಶಗಳಿಂದಾಗಿ ಒಬ್ಬ ಮನುಷ್ಯನನ್ನು ಅಕ್ಷರಶಃ ಅಸ್ಪೃಶ್ಯ ಎಂದು ಕಾಣದೇ ಇರಬಹುದು. ಆದರೂ ಸನ್ನಿವೇಶಗಳ ಪರಿಣಾಮದಿಂದಾಗಿ, ಆತನು ಅಸ್ಪೃಶ್ಯರ ವರ್ಗಕ್ಕೆ ಸೇರಿದವನು ಎನ್ನುವ ಕಾರಣದಿಂದ ಅವನು ಮೈಲಿಗೆ ಮನುಷ್ಯ ಎಂದೇ ಪರಿಗಣಿಸುತ್ತಾರೆ. ಬಿಹಾರ್ ಮತ್ತು ಒರಿಸ್ಸಾಗಳ ಜನಗಣತಿಯ ಸೂಪರಿಟೆಂಡಂಟರು ಈ ವ್ಯತ್ಯಾಸವನ್ನು ತಮ್ಮ ೧೯೨೧ರ ಜನಗಣತಿಯ ವರದಿಯಲ್ಲಿ ಬಹು ಚೆನ್ನಾಗಿ ತೋರಿಸಿಕೊಟ್ಟಿದ್ದಾರೆ; ಈ ಮುಂದಿನ ಭಾಗವನ್ನು ಇದೇ ವರದಿಯಿಂದ ತೆಗೆದುಕೊಂಡಿದೆ. ಜಾತಿ ನಿಯಮಗಳು ಸಡಿಲಗೊಳ್ಳುತ್ತಿರುವ ವಿಷಯ ಹೇಳುತ್ತ ಅವರು ಹೀಗೆನ್ನುತ್ತಾರೆ. "ಮೇಲಿನ ಅಂತಸ್ತುಗಳನ್ನು ಬಯಸುತ್ತಿರುವ ಮೇಲ್ವರ್ಗಗಳ ಮತ್ತು ಹೆಚ್ಚು ವಿದ್ಯಾವಂತ ಜಾತಿಗಳಲ್ಲಿ ಮಾತ್ರ ನಾವು ಕಂಡಿರುವ ಇಂತಹ ಪ್ರಸಂಗಗಳನ್ನು ಜಾತಿ ವ್ಯವಸ್ಥೆಯ ಕುಸಿತದ ಸೂಚನೆಗಳನ್ನಾಗಿ ಭಾವಿಸಬೇಕಾಗಿಲ್ಲ. ಅವು ಆಧುನಿಕ ಸ್ಥಿತಿಗತಿಗಳಿಗೆ ಹೊಂದಾಣಿಕೆ ಮಾತ್ರ. ಒಬ್ಬರನ್ನೊಬ್ಬರು ಮುಟ್ಟುವುದು ಅಥವಾ ಬೇರೊಬ್ಬರು ಮುಟ್ಟಿದ್ದನ್ನು ತಿನ್ನುವುದು, ಕುಡಿಯುವುದು ಇವುಗಳಿಗೆ ಸಂಬಂಧಿಸಿದಂತೆ ಇರುವ ನಿಯಮಗಳ ಮಾರ್ಪಾಡನ್ನು ಕುರಿತು ಇದೇ ಮಾತನ್ನು ಹೇಳಬಹುದು... ಜಮ್ಷೆಡ್‌ಪುರದಂತೆ ಆಧುನಿಕ ಪರಿಸ್ಥಿತಿಯಲ್ಲಿ ಕೆಲಸ ಮಾಡುವ ಸ್ಥಳಗಳಲ್ಲಿ ತಮ್ಮ ಅಕ್ಕಪಕ್ಕದವರ ಜಾತಿಯ ವಿಷಯ ತಲೆಕೆಡಿಸಿಕೊಳ್ಳದೆ ಎಲ್ಲ ಜಾತಿಗಳ ಮತ್ತು ಜನಾಂಗಗಳ ಜನರೂ ಮಿಲ್ಲಿನಲ್ಲಿ ಪಕ್ಕಪಕ್ಕದಲ್ಲಿ ಕೆಲಸ ಮಾಡುತ್ತಾರೆ. ಆದರೆ ಒಂದು ನೂರು ವರುಷಗಳ ಹಿಂದಿನ ನಿಯಮಗಳನ್ನು ಅನುಸರಿಸುವುದು ಇಂದಿನ ನಿತ್ಯಜೀವನದ ವಾಸ್ತವಾಂಶಗಳಿಂದ ಸಾಧ್ಯವಾಗುತ್ತಿಲ್ಲ ಎಂದ ಮಾತ್ರಕ್ಕೆ ಮಡಿ ಮತ್ತು ಮೈಲಿಗೆ, ಸ್ಪೃಶ್ಯ ಮತ್ತು ಅಸ್ಪೃಶ್ಯ ಇಂತಹ ವ್ಯತ್ಯಾಸಗಳನ್ನು ಪರಿಗಣಿಸುತ್ತಲೇ ಇಲ್ಲ ಎಂದುಕೊಳ್ಳುವ ಹಾಗಿಲ್ಲ. ಮೇಲ್ವರ್ಗದ ಹಿಂದೂ ಒಬ್ಬ 'ಅಸ್ಪೃಶ್ಯ'ನಿಗೆ ತನ್ನೊಡನೆ ಒಂದೇ ಪೀಠದಲ್ಲಿ ಕುಳಿತುಕೊಳ್ಳಲು ಅಥವಾ ಒಂದೇ ಹುಕ್ಕವನ್ನು ಸೇದಲು ಅಥವಾ ತನ್ನನ್ನಾಗಲೀ, ತನ್ನ ಪೀಠವನ್ನಾಗಲೀ, ತನ್ನ ಆಹಾರವನ್ನಾಗಲೀ, ತಾನು ಕುಡಿಯುವ ನೀರನ್ನಾಗಲೀ ಮುಟ್ಟಲು ಅವಕಾಶ ಕೊಡುವುದಿಲ್ಲ. "ಬದುಕಿನ ವಾಸ್ತವಾಂಶಗಳನ್ನು ಇಲ್ಲಿ ಸರಿಯಾಗಿ ಹೇಳಿದರೆ, ಅಕ್ಷರಶಃ ಅಸ್ಪೃಶ್ಯತೆ ಮತ್ತು ಅಸ್ಪೃಶ್ಯತೆಯ ಭಾವನೆ ಇವುಗಳ ನಡುವಿನ ವ್ಯತ್ಯಾಸದಿಂದ ಕಡೆಗೆ ಯಾವ ಪರಿಣಾಮವೂ ಆಗುವುದಿಲ್ಲ; ಏಕೆಂದರೆ ಮೇಲೆ ಹೇಳಿದ ಭಾಗವು ತೋರಿಸುವಂತೆ ಅಕ್ಷರಶಃ ಅಸ್ಪೃಶ್ಯತೆ ಇಲ್ಲದಿರುವ ಕಡೆಯೂ ಭಾವನಾತ್ಮಕವಾಗಿ ಅಸ್ಪೃಶ್ಯತೆಯು ಇದ್ದೇ ಇರುತ್ತದೆ. ಆದ್ದರಿಂದಲೆ ಅಸ್ಪೃಶ್ಯತೆಯನ್ನು ನಿರ್ಧರಿಸುವಾಗ ಭಾವನಾತ್ಮಕ ಅಪೇಕ್ಷೆಯನ್ನೆ ಅನುಸರಿಸಬೇಕೆಂದು ನಾನು ಒತ್ತಿ ಹೇಳುವುದು.

೪. ಮೂರನೆಯದಾಗಿ ಅಸ್ಪೃಶ್ಯತೆಯು ತ್ವರಿತಗತಿಯಿಂದ ಮರೆಯಾಗುತ್ತಿದೆ ಎನ್ನುವ ಅಭಿಪ್ರಾಯವನ್ನು ಪ್ರಚಾರ ಮಾಡಲಾಗುತ್ತಿದೆ. ಈ ಅಭಿಪ್ರಾಯವನ್ನು ಒಪ್ಪಬಾರದೆಂದು ಎಚ್ಚರಿಕೆಯ ಮಾತನ್ನು ಹೇಳಿ

ವಾಸ್ತವಾಂಶ ಹಾಗೂ ಪ್ರಚಾರಗಳ ನಡುವಿನ ವ್ಯತ್ಯಾಸವನ್ನು ತೋರಿಸಬಯಸುತ್ತೇನೆ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು, ಸ್ಪೃಶ್ಯರು ಮತ್ತು ಅಸ್ಪೃಶ್ಯರು ಒಮ್ಮೊಮ್ಮೆ ಸೇರುವ ಪ್ರಸಂಗಗಳಿಂದ ಯಾವುದೇ ತೀರ್ಮಾನಕ್ಕೆ ಬರಬೇಕಾದರೆ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ ಸಂಗತಿ ಎಂದರೆ ಜಾತಿಯ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವ್ಯವಸ್ಥೆ ಹಿಂದೂ ಸಮಾಜದಲ್ಲಿರುವ ಉಕ್ಕಿನ ಚೌಕಟ್ಟು ಎಂದು ನನ್ನ ಅಭಿಪ್ರಾಯ. ಇದಕ್ಕೆ ತರ್ಕಬದ್ಧವಾದ, ಆರ್ಥಿಕವಾದ ಅಥವಾ ವರ್ಣಗಳನ್ನು ಆಧರಿಸಿದ ಕಾರಣಗಳು ಇಲ್ಲವಾದುದರಿಂದ ಇದನ್ನು ಸುಲಭವಾಗಿ ತೊಡೆದುಹಾಕಲು ಸಾಧ್ಯವಿಲ್ಲ. ಅಸ್ಪೃಶ್ಯತೆಯ ಪದ್ಧತಿಯನ್ನು ಮುರಿಯುವುದು ಏಕೆ ಇಷ್ಟು ಕಷ್ಟವೆಂದರೆ ಅದಕ್ಕೆ ಧಾರ್ಮಿಕ ಒಪ್ಪಿಗೆಯುಂಟು. ಸಾಮಾನ್ಯ ಹಿಂದುವಂತೂ ಇದು ತನ್ನ ಧರ್ಮದ ಭಾಗವೆಂದೇ ಭಾವಿಸುತ್ತಾನೆ. ಅಸ್ಪೃಶ್ಯರ ವಿಷಯದಲ್ಲಿ ಅಮಾನವೀಯ ಎನ್ನುವಂತಹ ರೀತಿಯಲ್ಲಿ ನಡೆದುಕೊಳ್ಳುವಾಗ ಉದ್ದೇಶಪೂರ್ವಕ ಕ್ರೌರ್ಯಕ್ಕಿಂತ ಆತನಲ್ಲಿರುವುದು ತನ್ನ ಧರ್ಮದ ಪ್ರಕಾರ ನಡೆದುಕೊಳ್ಳುತ್ತಿದ್ದೇನೆ ಎನ್ನುವ ಭಾವನೆ. ಧರ್ಮವನ್ನೇ ಆಧಾರಮಾಡಿಕೊಂಡ ಹಿಂದೂ, ಅಸ್ಪೃಶ್ಯತೆಯ ನಿಯಮಗಳನ್ನು ಆಚರಿಸಲು ಸಾಧ್ಯವಿಲ್ಲದಿದ್ದಾಗ ಮಾತ್ರ ಅವನ್ನು ಸಡಿಲಿಸುತ್ತಾನೆ. ಅವನ್ನು ಆತ ಬಿಟ್ಟುಬಿಡುವುದೇ ಇಲ್ಲ. ಭಾರತದ ನೆಲದಿಂದ ಅಸ್ಪೃಶ್ಯತೆಯನ್ನು ಬುಡಸಹಿತ ಕಿತ್ತುಹಾಕಲು ಅನೇಕ ಮಂದಿ ಮಹಾತ್ಮರು ಮಾಡಿದ ಪ್ರಯತ್ನಗಳ ದಾಖಲೆ ಭಾರತದ ಇತಿಹಾಸದಲ್ಲಿದೆ. ಅವರಲ್ಲಿ ಬುದ್ಧ, ರಾಮಾನುಜ ಮತ್ತು ಆಧುನಿಕ ಕಾಲದ ವೈಷ್ಣವ ಸಂತರಂತಹ ಮಹಾಪುರುಷರು ಸೇರಿದ್ದಾರೆ. ಇವರೆಲ್ಲರ ಪ್ರಯತ್ನಗಳನ್ನೂ ಎದುರಿಸಿ ನಿಂತ ವ್ಯವಸ್ಥೆಯು ಕುಸಿದುಬೀಳುತ್ತದೆ ಎಂದು ನಿರೀಕ್ಷಿಸುವುದು ಅಪಾಯಕಾರಿ. ಅಸ್ಪೃಶ್ಯತೆಯ ಆಚರಣೆಯು ತನಗೆ ಪುಣ್ಯವನ್ನು ತಂದುಕೊಡುತ್ತದೆ. ಅದನ್ನು ಆಚರಿಸದಿದ್ದರೆ ಪಾಪ ಬರುತ್ತದೆ ಎಂದು ಹಿಂದೂ ಭಾವಿಸುತ್ತಾನೆ. ಈ ಭಾವನೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಅಸ್ಪೃಶ್ಯತೆಯೂ ಇರುತ್ತದೆ ಎಂದು ನನ್ನ ಅಭಿಪ್ರಾಯ.

ಅಸ್ಪೃಶ್ಯತೆಯ ವ್ಯವಸ್ಥೆಯ ವ್ಯಾಖ್ಯಾನಗಳು ಮತ್ತು ಧ್ವನಿಗಳನ್ನು ಕುರಿತ ಸಾಮಾನ್ಯ ಪ್ರಶ್ನೆಗಳನ್ನು ಕುರಿತು ನನ್ನ ಅಭಿಪ್ರಾಯಗಳನ್ನು ವಿವರಿಸಿದ ನಂತರ, ಏಕಾಭಿಪ್ರಾಯವಿಲ್ಲದ ಮೂರು ಪ್ರಾಂತಗಳಲ್ಲಿ ನಿಮ್ನ ವರ್ಗದವರ ಸಂಖ್ಯೆಯ ಕುರಿತ ಪ್ರಶ್ನೆಯ ಬಗೆಗೆ ನನ್ನ ಅಭಿಪ್ರಾಯಗಳನ್ನು ಹೇಳಬಯಸುತ್ತೇನೆ.

## II. ಸಂಯುಕ್ತ ಪ್ರಾಂತಗಳ ನಿಮ್ನ ವರ್ಗದವರು

೫. ಸಂಯುಕ್ತ ಪ್ರಾಂತದಲ್ಲಿ ನಿಮ್ನ ವರ್ಗದವರನ್ನು ಕುರಿತು ಸಮಿತಿಗೆ ಐದು ಬೇರೆ ಬೇರೆ ಅಂದಾಜುಗಳು ಬಂದಿವೆ:

(೧) ಸಂಯುಕ್ತ ಪ್ರಾಂತಗಳ ಪ್ರಾಂತೀಯ ಮತದಾನ ಹಕ್ಕಿನ ಸಮಿತಿಯ ಅಂದಾಜು.

(೨) ಮಿ. ಬ್ಲಂಟ್‌ರವರು ತಮ್ಮ ಟಿಪ್ಪಣಿಯಲ್ಲಿ ಕೊಟ್ಟ ಅಂದಾಜು.

(೩) ಜನಗಣತಿ ಕಮೀಷನರ ಅಂದಾಜು.

(೪) ಸಂಯುಕ್ತ ಪ್ರಾಂತಗಳ ಸರ್ಕಾರವು ಕೊಟ್ಟ ಎರಡು ಅಂದಾಜುಗಳು.

೬. ಮಿ. ಬ್ಲಂಟರ್ ಟಿಪ್ಪಣಿಗೆ ಹೆಚ್ಚಿನ ಆಧಾರಸಹಿತವಾಗಿರುವುದು ಉಂಟು ಎಂದು ನಾನು ಒಪ್ಪುತ್ತೇನೆ. ಆತ ೧೯೧೧ರಲ್ಲಿ ಸಂಯುಕ್ತ ಪ್ರಾಂತಗಳ ಜನಗಣತಿಯ ಕಮೀಷನರ್ ಆಗಿದ್ದಾಗ ಅವರಿಗೆ ಲಭ್ಯವಾಗಿದ್ದ ಮಾಹಿತಿಯೇ ಅದಕ್ಕೆ ಆಧಾರ. ಇದಕ್ಕೆ ಇನ್ನೊಂದು ಅಂಶದಿಂದಲೂ ತೂಕ ಬರುತ್ತದೆ. ಮಿ. ಬ್ಲಂಟರು

ತಮ್ಮ ಮೊದಲ ಕರಡಿನಲ್ಲಿ ಮಾಡಿದ್ದ ಸಂಯುಕ್ತ ಪ್ರಾಂತಗಳ ಅಸ್ಪೃಶ್ಯ ಜಾತಿಗಳ ಪಟ್ಟಿಗಳು ಎಷ್ಟು ಸರಿ ಎಂದು ಪರಿಶೀಲಿಸಲು ಸಂಯುಕ್ತ ಪ್ರಾಂತಗಳ ಸರ್ಕಾರವು ಖಾಸಗಿ ಹಿಂದೂಗಳ ಸಮಿತಿಯೊಂದನ್ನು ನೇಮಿಸಿತೆಂಬುದು ನನಗೆ ತಿಳಿದುಬಂದಿದೆ. ಈ ಸಮಿತಿಯ ಅಭಿಪ್ರಾಯವು ಈ ಟಿಪ್ಪಣಿಗೆ ಸೇರಿದೆ. ಆದರೂ ಈ ಕೆಳಗಿನ ವಿವರಗಳ ವಿಷಯದಲ್ಲಿ ಮಿ. ಬ್ಲಂಟರ್ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ.

ಕೆಳಗಿನ ಒಂದೊಂದು ಕೋಮುಗಳನ್ನು ಮಿ. ಬ್ಲಂಟರ್ ಪ್ರತ್ಯೇಕ ಪ್ರತ್ಯೇಕವಾದ ಒಂದು ಸ್ಪೃಶ್ಯ ಮತ್ತೊಂದು ಅಸ್ಪೃಶ್ಯ ಎಂದು ಎರಡು ಕೋಮುಗಳನ್ನಾಗಿ ಒಡೆದಿದ್ದಾರೆ:

| | ಸ್ಪೃಶ್ಯರು | ಅಸ್ಪೃಶ್ಯರು |
|---|---|---|
| (೧) ಭೋಖ್ಯಾ ಗುಂಪು | ೩೦,೦೦೦ | ೧೯,೦೨೮ |
| (೨) ಕೋರಿ ಗುಂಪು | ೧೫೪,೮೬೭ | ೭೭೫,೮೩೯ |
| (೩) ಚಮ್ಮಾರ್ ಗುಂಪು | ೨,೦೦೦,೦೦೦ | ೪,೧೮೭,೭೭೦ |

(ii) ಭಿನ್ನಾಭಿಪ್ರಾಯವಿರುವ ಎರಡನೆಯ ಅಂಶ ಎಂದರೆ, ೧೧೦,೦೩೨ ಜನಸಂಖ್ಯೆ ಇರುವ ಅರಖ್ ಗುಂಪನ್ನು ಅವರು ಸ್ಪೃಶ್ಯರು ಎಂದೇ ಪರಿಗಣಿಸುತ್ತಾರೆ; ವಾಸ್ತವವಾಗಿ ಈ ಗುಂಪು ನಿಸ್ಸಂದೇಹವಾಗಿಯೂ ಅಸ್ಪೃಶ್ಯ ಕೋಮೇ ಆದ ಪಾಸಿ ಕೋಮಿನ ಒಂದು ಭಾಗ.

ಮಿ. ಬ್ಲಂಟ್ ಅನುಸರಿಸಿದ ಕಾರ್ಯ ವಿಧಾನವು ವಾಸ್ತವಾಂಶಗಳಿಗೆ ಅನುಗುಣವಾಗಿಲ್ಲ. ಹಿಂದೂಗಳ ಸಾಮಾಜಿಕ ಜೀವನದ ಮೂಲಭೂತ ವಿಚಾರಸರಣಿಯು ಸಮರ್ಥಿಸುವಂತಹುದಲ್ಲ ಎನ್ನುವುದು ನನ್ನ ವಾದ. ಕೋರಿ ಗುಂಪು, ಚಮ್ಮಾರ ಗುಂಪಿನ ಒಂದು ಭಾಗವಷ್ಟೇ ಆದ್ದರಿಂದ ಸಂಪೂರ್ಣವಾಗಿ ಅಸ್ಪೃಶ್ಯ ಗುಂಪು ಎನ್ನುವುದನ್ನು ಮಿ. ಬ್ಲಂಟ್ ಅವರು ಜನಗಣತಿಯ ಸೂಪರಿಂಟೆಂಡೆಂಟರಾಗಿದ್ದಾಗ ೧೯೧೧ರ ಸಂಯುಕ್ತ ಪ್ರಾಂತಗಳ ಜನಗಣತಿಯ ವರದಿಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳೇ ತೋರಿಸಿಕೊಡುತ್ತವೆ. ೧೯೧೧ರ ಜನಗಣತಿಯ ವರದಿಯ ೩೪೭ನೆ ಪ್ಯಾರಾದಲ್ಲಿ, ಕೋರಿ ಮತ್ತು ಚಮ್ಮಾರರ ಸಂಬಂಧವನ್ನು ಚರ್ಚಿಸುವಾಗ ಅವರು ಹೇಳಿರುವ ಮಾತುಗಳನ್ನೇ ನಾನು ಆಧಾರವಾಗಿಟ್ಟುಕೊಂಡಿದ್ದೇನೆ. ಇದೇ ವರದಿಯನ್ನು ಅವರು ಈ ಕೆಳಗಿನ ಅಭಿಪ್ರಾಯಗಳನ್ನು ಹೇಳಿದ್ದಾರೆ:

"ಕೋರಿ ಮತ್ತು ಚಮ್ಮಾರರ ಸಂಬಂಧವನ್ನು ಈಗಾಗಲೇ ಪ್ರಸ್ತಾಪಿಸಿದೆ. ಇದು ಗೋರಖಪುರದಲ್ಲಿ ಇನ್ನೂ ನಿಕಟವಾಗಿದ್ದಂತೆ ಕಾಣುತ್ತದೆ. ಅಲ್ಲಿ ಕೋರಿ ಚಮ್ಮಾರರನ್ನು ಬಿಟ್ಟು ಬೇರೆ ಚಮ್ಮಾರರೇ ಇಲ್ಲ ಎಂದು ಹೇಳಲಾಗಿದೆ. ಆದರೆ, ಕೋರಿ ಚಮ್ಮಾರರು ಚಮ್ಮಾರ ಎನ್ನುವ ಶಬ್ದವನ್ನು ಬಿಟ್ಟು ಅಥವಾ ಆ ಶಬ್ದವನ್ನು 'ಕೋರಿ' ಎಂದು ಕೇಳಿಸುವಂತೆ ಅಸ್ಪಷ್ಟವಾಗಿ ಉಚ್ಚರಿಸಿ ತಾನು ಕೇವಲ ಕೋರಿಯಷ್ಟೆ ಎಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಉಪಾಯವನ್ನು ಬಳಸಿ ತಾವು ಆತನ ಕೈಯಿಂದ ನೀರು ಕುಡಿಯುವಂತೆ ಮಾಡಿದುದಕ್ಕಾಗಿ ಗೋರಖಪುರ ಜಿಲ್ಲೆಯ ಖಲಾಸಿಯೊಬ್ಬನನ್ನು ಇತರ ಹಿಂದೂ ಸೇವಕರು ಚೆನ್ನಾಗಿ ಥಳಿಸಿದರು."

ಅರಬ್ ಗುಂಪಿನ ವಿಷಯದಲ್ಲಿ ಮಿ. ಬ್ಲಂಟ್ ಅವರೇ ತಮ್ಮ ಟಿಪ್ಪಣಿಯಲ್ಲಿ "ಒಟ್ಟಿನಲ್ಲಿ ಈ ಜಾತಿಗಳು ಮುಖ್ಯವಾದ ಪಾಸಿ ಕುಲದಿಂದ ಬಂದವು ಎಂದು ಕಾಣುತ್ತದೆ" ಎಂದು ಒಪ್ಪಿಕೊಳ್ಳುತ್ತಾರೆ. ಪಾಸಿ ಕುಲವನ್ನು ಅಸ್ಪೃಶ್ಯ ಎಂದೇ ಅವರು ಪರಿಗಣಿಸುತ್ತಾರೆ. ಇಪ್ಪತ್ತು ಲಕ್ಷ ಮಂದಿ ಚಮ್ಮಾರರನ್ನು ಅಸ್ಪೃಶ್ಯರ ಸಮುದಾಯದಿಂದ ಹೊರಗಿಡಲು ಮಿ. ಬ್ಲಂಟರು ತಮ್ಮ ಕಾರಣಗಳನ್ನು ಟಿಪ್ಪಣಿಯ ೧೭ನೆ ಪುಟದಲ್ಲಿ ಕೊಡುತ್ತಾರೆ. ಅವರು ಹೇಳುತ್ತಾರೆ: "ಅನೇಕ ಮಂದಿ ಚಮ್ಮಾರರು ಜೀನುದಾರ, ಮೋಚಿ, ಕುದುರೆ ಮೇಲುಸ್ತುವಾರಿಗಾರ ಇವರ ಉದ್ಯೋಗಗಳಂತಹ ಇನ್ನೂ ಸ್ವಚ್ಛ ಕಸುಬುಗಳನ್ನು ಆರಿಸಿಕೊಂಡಿದ್ದಾರೆ; ಕಾನ್‌ಪುರ ಮತ್ತು ಬೇರೆಡೆಗಳಲ್ಲಿ ಚರ್ಮ ಕೈಗಾರಿಕೆ ವಿಸ್ತರಿಸಿರುವುದರಿಂದ ಹಲವಾರು ಚಮ್ಮಾರರಿಗೆ ಶ್ರೀಮಂತರಾಗುವುದು ಸಾಧ್ಯವಾಗಿದೆ. ಹಳ್ಳಿಗಳಲ್ಲಿರುವ ತಮ್ಮ ಸೋದರರಿಗಿಂತ ಬಹು ಮೇಲಿನ ಸಾಮಾಜಿಕ ಅಂತಸ್ತು ಅವನ ಗುರಿ. ಇಂತಹ ಚಮ್ಮಾರರನ್ನು ಸಾಮಾನ್ಯವಾಗಿ ಸ್ಪೃಶ್ಯರು ಎಂದೇ ಪರಿಗಣಿಸಲಾಗುತ್ತಿದೆ; ಅನೇಕರು ಕೋರಿಲ್, ಅಹರ್‌ವಾರ್, ಜಟಿಯ, ಧುಸಿಯ ಮತ್ತು ವಿಶೇಷ ವಾಗಿ ಜೈಸ್ವರ್ ಇಂತಹ ಅಷ್ಟೊಂದು ಹೀನಾಯವೆನ್ನಿಸಿದ ಜಾತಿಯ ಹೆಸರುಗಳನ್ನು ಆರಿಸುತ್ತಾರೆ. "ನನ್ನ ದೃಷ್ಟಿಯಲ್ಲಿ ಇನ್ನೂ ಸ್ವಚ್ಛ ಕಸುಬುಗಳನ್ನು ಆರಿಸಿಕೊಂಡ ಅಥವಾ ಶ್ರೀಮಂತರಾದ ಚಮ್ಮಾರ ರನ್ನು ಅಸ್ಪೃಶ್ಯರ ವರ್ಗದಿಂದ ಹೊರಗಿಡುವುದು ಸಂಪೂರ್ಣವಾಗಿ ತಪ್ಪು ಅಭಿಪ್ರಾಯ. ಅಸ್ಪೃಶ್ಯತೆ ಮತ್ತು ಜಾತಿಪದ್ಧತಿಗಳ ಒಂದು ಲಕ್ಷಣವೆಂದರೆ ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ಅವನ ಕೋಮಿಗೆ ಅನುಗುಣ ವಾಗಿ ಏರುತ್ತದೆ ಅಥವಾ ಇಳಿಯುತ್ತದೆ ಎಂದೂ, ಹಿಂದೂ ಸಾಮಾಜಿಕ ಜೀವನದ ನಿಯಮ, ಒಮ್ಮೆ ಅಸ್ಪೃಶ್ಯನೆಂದಾದರೆ ಎಂದೆಂದಿಗೂ ಅಸ್ಪೃಶ್ಯನೇ ಎನ್ನುವುದು. ಇದು ಮುಖ್ಯವಾದ ಲಕ್ಷಣ; ಹಿಂದೂ ಸಾಮಾಜಿಕ ಜೀವನವನ್ನು, ವ್ಯಕ್ತಿಯ ಸಾಮಾಜಿಕ ಅಂತಸ್ತು ಅವನು ಹುಟ್ಟಿದ ಕೋಮನ್ನು ಅವಲಂಬಿಸದೆ ಅವನ ಗುಣಾವಗುಣಗಳನ್ನು ಅವಲಂಬಿಸುವ ವರ್ಗ ವ್ಯವಸ್ಥೆಯನ್ನು ಭಿನ್ನ ಮಾಡುವ ಅಂಶ ಇದೇ. ಎಲ್ಲರೂ ಒಪ್ಪಿಕೊಂಡಂತೆ ಅಸ್ಪೃಶ್ಯ ಜಾತಿಯ ಕೆಲವರು ಸ್ಪೃಶ್ಯರು ಎನ್ನುವ ಮಿ. ಬ್ಲಂಟರು ಮಾಡುವ ವಿಭಾಗ ವನ್ನು ಹಿಂದೂ ಸಾಮಾಜಿಕ ಜೀವನದ ಮೂಲಭೂತ ತತ್ವವನ್ನು ಗಮನಿಸಿ ಬಿಟ್ಟುಬಿಡಬೇಕಾಗುತ್ತದೆ. ವಾಸ್ತವವಾಗಿ ಅವರದು ಪರಸ್ಪರ ವಿರೋಧಾಭಾಸದ ಮಾತು; ವಾಸ್ತವಾಂಶಗಳಿಗೆ ಹೊಂದಿಕೊಳ್ಳುವಂತೆ ಕಾಣುವುದಿಲ್ಲ. ಮಿ. ಬ್ಲಂಟರು ಪ್ರಸ್ತಾಪಿಸಿರುವ ಚಮ್ಮಾರ ಜಾತಿಯ ಕೆಲವು ವಿಭಾಗಗಳವರನ್ನು ಸ್ಪೃಶ್ಯರೆಂದೇ ಕಾಣುತ್ತಾರೆಂಬುದಾಗಲೀ ಅವರನ್ನು ದೇವಾಲಯಗಳೊಳಕ್ಕೆ ಬಿಡುತ್ತಾರೆಂದಾಗಲೀ ಅವರು ಸಾರ್ವಜನಿಕ ಬಾವಿಗಳಿಂದ ನೀರನ್ನು ತೆಗೆದುಕೊಳ್ಳಲು ಅವಕಾಶ ಕೊಡುತ್ತಾರೆಂದಾಗಲೀ ಹೇಳುವುದು ನಿಜವಲ್ಲ. ಅದಕ್ಕೆ ವಿರುದ್ಧವಾಗಿ ಮಿ. ಬ್ಲಂಟರೇ ಹೇಳುವಂತೆ, ತಮ್ಮನ್ನು ಅಸ್ಪೃಶ್ಯರೆಂದು ಕಾಣುವುದನ್ನು ತಪ್ಪಿಸಿಕೊಳ್ಳಲು ಅವರು ಹೊಸ ಹೆಸರುಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇದಕ್ಕೆ ನಿದರ್ಶನಗಳನ್ನು ಮಿ. ಬ್ಲಂಟರೇ ಸಂಯುಕ್ತ ಪ್ರಾಂತಗಳ ೧೯೧೧ರ ಜನಗಣತಿ ವರದಿಯಲ್ಲಿ ಕೊಟ್ಟಿದ್ದಾರೆ. ಭಾಗ ೧ರಿಂದ ಕೆಳಗಿನ ಭಾಗವನ್ನು ತೆಗೆದುಕೊಂಡಿದ್ದೇನೆ.

"ಇದೇ ರೀತಿಯಲ್ಲಿ ಜೈಸ್ವಾರ್ ಚಮ್ಮಾರನು ತಾನು ಚಮ್ಮಾರನೆಂದು ಒಪ್ಪುವುದೇ ಇಲ್ಲ, ರಾಜಪುತ್ರನೂ ಸೇರಿದಂತೆ ಹಲವಾರು ಜಾತಿಗಳ ಒಂದು ಉಪಜಾತಿಯಾದ ಜೈಸ್ವಾರ್ ಮಾತ್ರ ಎಂದೇ ತೋರಿಸಿ ಕೊಳ್ಳಲು ಪ್ರಯತ್ನಿಸುತ್ತಾನೆ. ಕುದುರೆ ನೋಡಿಕೊಳ್ಳುವವನೊಬ್ಬ ಈ ಉಪಾಯವನ್ನು ನನ್ನ ಮೇಲೆ ಪ್ರಯೋಗಿಸಲು ಪ್ರಯತ್ನಿಸಿದ. ಜೈಸ್ವಾರರ ಒಂದು ವಸಾಹತೇ ನನಗೆ ಕಂಡಿತು; ವಿಚಾರಿಸಿದಾಗ

ಅವರು ಸೈನ್ಯದ ಚತುರ ಕುದುರೆಯಾಳುಗಳು ಹಿಂದೆ ಅಲ್ಲಿ ನೆಲೆಸಿದ್ದು ಅವರ ಸಂತಾನ ಎಂದು ಗೊತ್ತಾಯಿತು.''

ನನ್ನ ವಾದಗಳನ್ನು ಒಪ್ಪಿಕೊಂಡು, ಮಿ. ಬ್ಲಂಟರು ಸ್ಪೃಶ್ಯರು ಎಂದು ಪರಿಗಣಿಸುವ ಗುಂಪನ್ನು ಅಸ್ಪೃಶ್ಯರ ಸಂಖ್ಯೆಗೆ ಸೇರಿಸಿದರೆ, ಸಂಯುಕ್ತ ಪ್ರಾಂತ್ಯಗಳಲ್ಲಿ ಮಿ. ಬ್ಲಂಟರ ಅಂಕೆಗೆ ಅನುಗುಣವಾಗಿ ಅಸ್ಪೃಶ್ಯರ ಒಟ್ಟು ಸಂಖ್ಯೆ ೧,೧೪,೭೬,೨೧೪ ಆಗುತ್ತದೆ.

೭. ಜನಗಣತಿ ಕಮೀಷನರು ಒಟ್ಟು ನಿಮ್ನ ವರ್ಗಗಳವರ ಸಂಖ್ಯೆ ೧೨.೬ ದಶಲಕ್ಷ ಎಂದು ಅಂದಾಜು ಮಾಡುತ್ತಾರೆ. ಇನ್ನೂ ಕಟ್ಟುನಿಟ್ಟಾದ ಲೆಕ್ಕ ಹಾಕಿ ಅಸ್ಪೃಶ್ಯರನ್ನು ಒಳಗೊಳ್ಳುವ 'ಎ' ಪಟ್ಟಿಯನ್ನು ಮಾತ್ರ ಒಪ್ಪಿಕೊಂಡರೂ ಹೀಗೆ ಗುರುತಿಸುವ ನಿಮ್ನ ವರ್ಗದವರ ಸಂಖ್ಯೆ ೧೧ ದಶಲಕ್ಷಕ್ಕಿಂತ ಸ್ವಲ್ಪ ಹೆಚ್ಚಾಗುತ್ತದೆ. ಇದು ಮಿ. ಬ್ಲಂಟರು ಕೊಟ್ಟ ಸಂಖ್ಯೆಗೆ ಹತ್ತಿರವೇ ಬರುತ್ತದೆ.

೮. ಸಂಯುಕ್ತ ಪ್ರಾಂತಗಳ ಸರ್ಕಾರ ಎರಡು ಅಂದಾಜುಗಳ 'ಸೆಟ್'ಗಳನ್ನು ಕೊಟ್ಟಿದೆ. ಅದರ ಮೊದಲನೆಯ ವರದಿಯಲ್ಲಿನ ಸಂಖ್ಯೆ ಅದು ೬,೭೭೩,೮೧೪. ಅದರ ಅಂತಿಮ ವರದಿಯಲ್ಲಿ ಅದು, ಮುಟ್ಟಿದರೆ ಮೈಲಿಗೆ ಎನ್ನುವ ನಿಯಮದ ಬಳಕೆಯ ವಿವರಣೆಯಲ್ಲಿ ಬರುವ ಜಾತಿಗಳ ಜನಸಂಖ್ಯೆ ೪೫೯,೦೦೦ಗೆ ಇಳಿಯಿತೆಂದು ಪ್ರಾಂತೀಯ ಸಮಿತಿಯ ಅಭಿಪ್ರಾಯವನ್ನು ಒಪ್ಪಿಕೊಂಡಿತು. ಅದರ ಮೊದಲನೆಯ ವರದಿಯ ಅಂದಾಜಾದ ಸಂಖ್ಯೆ ೬,೭೭೩,೮೧೪ ಇದು ಸಂಯುಕ್ತ ಪ್ರಾಂತಗಳಲ್ಲಿನ ಅಸ್ಪೃಶ್ಯರ ಸಂಖ್ಯೆಯ ಅಂದಾಜಲ್ಲ ಎಂಬುದನ್ನು ಗಮನಿಸುವುದು ಅಗತ್ಯ. ಈ ಅಂಶದ ಮಟ್ಟಿಗೆ ಸಂಯುಕ್ತ ಪ್ರಾಂತಗಳ ಸರ್ಕಾರವು ಮಿ. ಬ್ಲಂಟರು ತಮ್ಮ ಟಿಪ್ಪಣಿಯಲ್ಲಿ ಕೊಟ್ಟ ಅಂಕಿಯನ್ನು ಪ್ರಕಟವಾಗಿ ಹೇಳದೆ ಒಪ್ಪಿಕೊಂಡಿದೆ. ಸಂಯುಕ್ತ ಪ್ರಾಂತದ ಸರ್ಕಾರವು ಕೊಟ್ಟಿರುವ ೬,೭೭೩,೯೧೪ ಎನ್ನುವ ಸಂಖ್ಯೆ ಅದರ ಅಭಿಪ್ರಾಯದಲ್ಲಿ ರಾಜಕೀಯ ರಕ್ಷಣೆಯ ಅಗತ್ಯವಿರುವವರ ಸಂಖ್ಯೆಯ ಅಂದಾಜು. ಈ ಕ್ರಮದ ಗುಣಾವಗುಣಗಳನ್ನು ಮುಂದೆ ಚರ್ಚಿಸಿದ್ದೇನೆ. ಸಂಯುಕ್ತ ಪ್ರಾಂತಗಳ ಸರ್ಕಾರದ ಅಂದಾಜು ಅಸ್ಪೃಶ್ಯರ ಒಟ್ಟು ಸಂಖ್ಯೆಯ ಅಂದಾಜಲ್ಲ ಎನ್ನುವುದನ್ನು ಪುನರುಚ್ಚರಿಸಬಯಸುತ್ತದೆ. ಸಂಯುಕ್ತ ಪ್ರಾಂತಗಳ ಸರ್ಕಾರವು ತನ್ನ ಕಡೆಯ ವರದಿಯಲ್ಲಿ ಕೊಟ್ಟ ಅಂದಾಜಿನ ಬಗ್ಗೆ ನಾನು ಹೇಳಬೇಕಾದುದೆಂದರೆ ಅದೇ ಸರ್ಕಾರವು ಸೈಮನ್ ಆಯೋಗಕ್ಕೆ ಕೊಟ್ಟ ಸಂಖ್ಯೆಯ ಜೊತೆ ಹೋಲಿಸುವುದು. ಶಾಸನಬದ್ಧ ಆಯೋಗಕ್ಕೆ ಅವರು ಸಲ್ಲಿಸಿದ ವಿಜ್ಞಾಪನಾಪತ್ರದ ಕಡೆಯ ಭಾಗಕ್ಕೆ ಅನುಬಂಧ ಎಂದು ಅಚ್ಚಾದ ಟಿಪ್ಪಣಿಯಲ್ಲಿ ಅವರು ಹೀಗೆ ಹೇಳಿದ್ದಾರೆ. "ಪ್ರಾಂತದ ಹಿಂದೂಗಳ ಒಟ್ಟು ಸಂಖ್ಯೆಯಲ್ಲಿ ಮೂರರಲ್ಲಿ ಒಂದರಷ್ಟು ಭಾಗ ದವರು ಎಂದರೆ ಹತ್ತಿರ ಹತ್ತಿರ ಹದಿಮೂರು ದಶಲಕ್ಷಗಳಷ್ಟು ಜನ ಅಸ್ಪೃಶ್ಯರೆಂದು ಆಚಾರಶೀಲ ಹಿಂದೂಗಳು ಭಾವಿಸುತ್ತಾರೆ. ಅಸ್ಪೃಶ್ಯರೆಂದು ಪರಿಗಣಿತವಾಗುವ ಜಾತಿಗಳ ಪಟ್ಟಿಯನ್ನು ೧೯೧೧ರ ಜನಗಣತಿ ವರದಿಯಿಂದ ತೆಗೆದುಕೊಂಡು ಈ ಟಿಪ್ಪಣಿಗೆ ಲಗತ್ತಿಸಿದೆ... ಅಸ್ಪೃಶ್ಯತೆಗೆ ಅಂಟಿಕೊಂಡ ಸಾಮಾಜಿಕ ಮೈಲಿಗೆಯ ಅರ್ಥ, ಮೇಲಿನ ಜಾತಿಯವನು ಅಸ್ಪೃಶ್ಯನಿಂದ ಆಹಾರ ಅಥವಾ ನೀರನ್ನು ತೆಗೆದುಕೊಳ್ಳುವುದಿಲ್ಲ. ಅಂತಹ ಮನುಷ್ಯನನ್ನು ಮುಟ್ಟಿಸಿಕೊಂಡರೆ ಅಥವಾ ಅವನಿಗೆ ಬಹು ಹತ್ತಿರ ಬಂದರೆ ಆತ ಏನನ್ನಾದರೂ ತಿನ್ನುವ ಮೊದಲು ಮತ್ತು ಮೇಲಿನ ಜಾತಿಯವರೊಂದಿಗೆ ಬೆರೆಯುವ ಮೊದಲು ಸ್ನಾನ ಮಾಡಬೇಕು ಎನ್ನುವುದೇ.'' ವಿಜ್ಞಾಪನಾ ಪತ್ರವನ್ನು ಸಲ್ಲಿಸಿದ ದಿನ ಎಂದರೆ ೧೯೨೮ರ ಮೇ ೧೬ರಂದು, ಅಸ್ಪೃಶ್ಯತೆ ಎಂದರೆ ಮುಟ್ಟಿದರೆ ಮೈಲಿಗೆ ಎಂದರ್ಥ ಎನ್ನುವ ವ್ಯಾಖ್ಯಾನಕ್ಕನುಗುಣವಾಗಿ, ಅಸ್ಪೃಶ್ಯರ ಸಂಖ್ಯೆ ೧೩

ದಶಲಕ್ಷ ಎನ್ನುವುದು ಸ್ಪಷ್ಟವಾಗಿದೆ. ನಮ್ಮ ಸಮಿತಿಯ ಅಧ್ಯಕ್ಷರು ಕೊಟ್ಟ ವಿವರಣೆಗೂ ಸಂಯುಕ್ತ ಪ್ರಾಂತಗಳಲ್ಲಿ ಪ್ರಚಲಿತವಿದ್ದ ೧೯೨೮ರಲ್ಲಿ ಈ ೧೩ ದಶಲಕ್ಷಗಳ ಸಂಖ್ಯೆಯನ್ನು ಲೆಕ್ಕ ಮಾಡಲು ಬಳಸಿದ ವಿವರಣೆಗೂ ವ್ಯತ್ಯಾಸವಿಲ್ಲ ಎಂದು ಸ್ಪಷ್ಟವಾಗಿದೆ. ಸಂಯುಕ್ತ ಪ್ರಾಂತದಲ್ಲಿನ ಅಸ್ಪೃಶ್ಯರ ಸಂಖ್ಯೆಯ ಅಂದಾಜುಗಳಲ್ಲಿ ಸಂಯುಕ್ತ ಪ್ರಾಂತಗಳ ಸರಕಾರದ ಅಂದಾಜುಗಳಲ್ಲಿನ ಈ ವ್ಯತ್ಯಾಸವು ನಿಮ್ನ ವರ್ಗಗಳ ಪ್ರಾತಿನಿಧ್ಯದ ವಿಧಾನದ ವಿಷಯದಲ್ಲಿ ಮಧ್ಯಪ್ರಾಂತದ ಸರಕಾರದ ಅಭಿಪ್ರಾಯಗಳಲ್ಲಿನ ವ್ಯತ್ಯಾಸಕ್ಕೆ ಸಮನಾಗಿದೆ ಎಂದು ನಾನು ಹೇಳಲೇ ಬೇಕಾಗಿದೆ. ೧೯೩೦ರ ಆಗಸ್ಟ್ ೨೩ರಂದು ಸಂಯುಕ್ತ ಪ್ರಾಂತಗಳ ಸರಕಾರವು ಶಾಸನಬದ್ಧ ಆಯೋಗದ ವರದಿಯನ್ನು ಕುರಿತು ಬರೆದ ಪತ್ರದಲ್ಲಿ ಆ ಸರಕಾರವು ನಿಮ್ನ ವರ್ಗಗಳವರಿಗೆ ಪ್ರತ್ಯೇಕ ಮತಕ್ಷೇತ್ರವಿರಬೇಕೆಂದು ದೃಢವಾಗಿ ಸಮರ್ಥಿಸಿತು. ನಮ್ಮ ಸಮಿತಿಗೆ ಕೊಟ್ಟ ಮೊದಲನೆಯ ವರದಿಯಲ್ಲಿ ಆ ಸರಕಾರವು ಹೆಸರುಗಳ ಒಂದು ಪಟ್ಟಿಯಿಂದ ನಾಮಕರಣ ಮಾಡಬೇಕೆನ್ನುವುದಕ್ಕೆ ಇಳಿಯಿತು; ಕಡೆಯ ಪಟ್ಟಿಯಲ್ಲಿ ಸ್ಥಾನಗಳ ಮೀಸಲಾತಿಯನ್ನು ಶಿಫಾರಸು ಮಾಡಿತು. ನಿಮ್ನ ವರ್ಗಗಳವರ ಜನಸಂಖ್ಯೆ ಮತ್ತು ಪ್ರಾತಿನಿಧ್ಯಗಳಂತಹ ಎರಡು ಬಹುಮುಖ್ಯ ವಿಷಯಗಳ ಬಗ್ಗೆ ಒಂದು ಸರಕಾರದ ಅಭಿಪ್ರಾಯಗಳು ಇಷ್ಟು ವಿಚಿತ್ರವಾಗಿ ತೂಗಾಡುತ್ತಿದ್ದರೆ ನಿಮ್ನ ವರ್ಗಗಳವರ ಹಿತಾಸಕ್ತಿಗೆ ಅದೊಂದು ದೊಡ್ಡ ವಿಪತ್ತೇ ಆಗುತ್ತದೆ.

೯. ಸಂಯುಕ್ತ ಪ್ರಾಂತಗಳ ಪ್ರಾಂತೀಯ ಮತದಾನ ಹಕ್ಕಿನ ಸಮಿತಿಯು ಕೊಟ್ಟ ಅಂದಾಜಿನ ವಿಷಯದಲ್ಲಿ ಈ ಕೆಳಗಿನ ವಾಸ್ತವಾಂಶಗಳಿಗೆ ಗಮನ ಸೆಳೆಯಲು ಬಯಸುತ್ತೇನೆ:

(i) ಜನಗಣತಿಯ ಕಮೀಷನರ್, ಮಿ. ಬ್ಲಂಟ್ ಅವರ ಮತ್ತು ೧೯೨೮ರಲ್ಲಿ ಸರಕಾರದ ಎಲ್ಲ ಅಂಕಿಗಳೂ ನಿಮ್ನ ವರ್ಗದ ಎಂದರೆ ಮುಟ್ಟಿದರೆ ಮೈಲಿಗೆ ಎಂದು ಪರಿಗಣಿಸಲ್ಪಟ್ಟವರ ಸಂಖ್ಯೆ ಸುಮಾರು ಹನ್ನೊಂದೂವರೆಯಿಂದ ಹದಿಮೂರು ದಶಲಕ್ಷಗಳವರೆಗೆ ಎಂದು ಒಪ್ಪುತ್ತವೆ. ಆದ್ದರಿಂದ ಸಮಿತಿಯು ನಂಬಲಾಗದಷ್ಟು ಕಡಿಮೆ ಇರುವ ತನ್ನ ಅಂದಾಜನ್ನು ಸಮರ್ಥಿಸಿಕೊಳ್ಳಬೇಕಾಗಿದೆ.

(ii) ಸಮಿತಿಯು ಇಬ್ಬರು ನಿಮ್ನ ವರ್ಗದ ಸದಸ್ಯರು ತನ್ನ ಅಭಿಪ್ರಾಯವನ್ನು ಒಪ್ಪುತ್ತಾರೆ ಮತ್ತು ಈ ಒಪ್ಪಿಗೆಯ ಎಲ್ಲ ಅಂತರಾರ್ಥಗಳು ಸಮಿತಿಯ ಅಧಿಕ ಸಂಖ್ಯೆಯ ಸದಸ್ಯರಿಗೆ ಒಪ್ಪಿಗೆ ಎಂದು ಸಮಿತಿಯು ಹೇಳಿದಾಗ ನನಗೆ ಖಾತ್ರಿಯಾಗುವುದಿಲ್ಲ. ಏನೇ ಆಗಲಿ ಈ ವಿಷಯದಲ್ಲಿ ಬಾಬು ರಾಮ್ ಚರಣರ ಅಭಿಪ್ರಾಯಕ್ಕೆ ಬೆಲೆ ಇಲ್ಲ ಎಂದು ನಾನು ಹೇಳಲೇಬೇಕಾಗಿದೆ. ಅವರು ಆರ್ಥಿಕವಾಗಿ ಬಡತನದಲ್ಲಿರುವ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳ ಅರ್ಥದಲ್ಲಿ ಮಾತ್ರ ನಿಮ್ನ ವರ್ಗದವರು; ಅಸ್ಪೃಶ್ಯ ವರ್ಗಗಳೆನ್ನುವ ಕಟ್ಟುನಿಟ್ಟಾದ ಅರ್ಥದಲ್ಲಿ ಅಲ್ಲ.

(iii) ಸಮಿತಿಯು ಇಬ್ಬರು ನಿಮ್ನ ವರ್ಗದ ಸದಸ್ಯರು ತನ್ನ ಅಭಿಪ್ರಾಯವನ್ನು ಒಪ್ಪುತ್ತಾರೆ ಮತ್ತು ಈ ಒಪ್ಪಿಗೆಯ ಎಲ್ಲ ಅಂತರಾರ್ಥಗಳು ಸಮಿತಿಯ ಅಧಿಕ ಸಂಖ್ಯೆಯ ಸದಸ್ಯರಿಗೆ ಒಪ್ಪಿಗೆ ಎಂದು ಸಮಿತಿಯು ಸ್ಪರ್ಶದಿಂದ ಮೈಲಿಗೆಯಾಗುವ ಒಂದೇ ಆಧಾರದ ಮೇಲೆ ಮುಂದುವರೆದಿದೆ; ಆ ಮಾತನ್ನು ಅದರ ಭಾವನಾತ್ಮಕ ಅರ್ಥದಲ್ಲಿ ತೆಗೆದುಕೊಳ್ಳದೆ ಅಕ್ಷರಶಃ ತೆಗೆದುಕೊಂಡಿದೆ.

(iv) ನಮ್ಮ ಅಧ್ಯಕ್ಷರು ಅಸ್ಪೃಶ್ಯತೆಗೆ ಕೊಟ್ಟ ವಿವರಣೆಯನ್ನು– ಅದನ್ನು ಅವರು ತಮ್ಮ ಜವಾಬ್ದಾರಿಯ ಮೇಲೆಯೇ ಕೊಟ್ಟರು ಎಂದು ನಾನು ಹೇಳಬೇಕು– ಅನುಸರಿಸುವಾಗ ಪ್ರಾಂತೀಯ ಮತದಾನ ಹಕ್ಕಿನ ಸಮಿತಿಯು “ಸಂಯುಕ್ತ ಪ್ರಾಂತಗಳಲ್ಲಿರುವಂತೆ” ಎನ್ನುವ ಷರತ್ತಿಗೆ ಗಮನಕೊಟ್ಟಂತೆ ಕಾಣುವುದಿಲ್ಲ.

೧೦. ನಿಮ್ನ ವರ್ಗಗಳವರ ಜನಸಂಖ್ಯೆಯನ್ನು ಅಂದಾಜು ಮಾಡಲು ಮಿ. ಬ್ಲಂಟರೂ ಸಂಯುಕ್ತ ಪ್ರಾಂತಗಳ ಸರಕಾರವೂ ಅನುಸರಿಸಿದ ವಿಧಾನದಿಂದ ಮತ್ತೊಂದು ಬಹುಮುಖ್ಯವಾದ ಪ್ರಶ್ನೆ ಉದ್ಭವಿಸುತ್ತದೆ. ಭಾರತೀಯ ಮತದಾನ ಹಕ್ಕು ಸಮಿತಿಯು ತಾನು ಸ್ವೀಕರಿಸಿದ ಈ ಎರಡು ಪರೀಕ್ಷೆಗಳಿಗೆ ಒಳಪಟ್ಟವರೆಲ್ಲರೂ ಅಸ್ಪೃಶ್ಯರು ಮತ್ತು ವಿಶೇಷ ಪ್ರಾತಿನಿಧ್ಯದ ಉದ್ದೇಶಕ್ಕೆ ಪರಿಗಣಿಸಬೇಕಾದವರು ಎನ್ನುವ ಆಧಾರ ಕಲ್ಪನೆಯ ಮೇಲೆ ಮುಂದುವರೆದಿದೆ. ತನ್ನ ವಿಚಾರಣೆಯು ಮುಂದುವರಿದಂತೆ ಭಾರತೀಯ ಮತದಾನ ಹಕ್ಕಿನ ಸಮಿತಿಯು, ಭಾರತದಲ್ಲಿ ಇದ್ದ ಪರಿಸ್ಥಿತಿಯಲ್ಲಿ, ನಿಮ್ನ ವರ್ಗದವರೆಲ್ಲ ಅಸ್ಪೃಶ್ಯರಲ್ಲ ಮತ್ತು ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿ ಏನೆ ಇರಲಿ. ಅವರೆಲ್ಲರೂ ಅಸ್ಪೃಶ್ಯರೆನಿಸಿಕೊಳ್ಳುವುದಿಲ್ಲ. ಮಿ. ಬ್ಲಂಟರೂ ಸಂಯುಕ್ತ ಪ್ರಾಂತಗಳ ಸರ್ಕಾರವೂ ಬೇರೆಯೇ ರೀತಿಯಲ್ಲಿ 'ಅಸ್ಪೃಶ್ಯರಿಗೂ' ಮತ್ತು 'ನಿಮ್ನ ವರ್ಗಗಳವರಿಗೂ' ವ್ಯತ್ಯಾಸ ಮಾಡುವಂತೆ ತೋರುತ್ತದೆ. ಅವರ ಪ್ರಕಾರ ನಿಮ್ನ ವರ್ಗಗಳವರೆಲ್ಲ ಅಸ್ಪೃಶ್ಯರು. ಆದರೆ ಅಸ್ಪೃಶ್ಯರೆಲ್ಲ ನಿಮ್ನ ವರ್ಗಗಳವರಲ್ಲ. ಇದು ಭಾರತೀಯ ಮತದಾನ ಹಕ್ಕು ಸಮಿತಿಯ ಕಾರ್ಯರೀತಿ ಮತ್ತು ನಿರ್ಣಯಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಇಲ್ಲಿ ಹೆಸರಿನ ಪ್ರಶ್ನೆಯೊಂದೇ ಇಲ್ಲ. ಪ್ರಾತಿನಿಧ್ಯದ ಪ್ರಮಾಣವನ್ನೇ ಬದಲಾಯಿಸುವಷ್ಟು ದೂರ ಇದರ ಪರಿಣಾಮಗಳು ಹೋಗುತ್ತವೆ. ಸಂಯುಕ್ತ ಪ್ರಾಂತಗಳ ಸರ್ಕಾರವೂ ಮಿ. ಬ್ಲಂಟ್ ಅವರೂ ಪ್ರಾತಿನಿಧ್ಯದ ವಿಷಯದಲ್ಲಿ ಎಲ್ಲ ಅಸ್ಪೃಶ್ಯರನ್ನು ಪರಿಗಣಿಸುವುದಿಲ್ಲ. ನಿಮ್ನ ವರ್ಗಗಳವರು ಎಂದು ಕರೆಯಬಹುದಾದ ಅಸ್ಪೃಶ್ಯರನ್ನು ಮಾತ್ರ ಪರಿಗಣಿಸುತ್ತಾರೆ. ಭಾರತೀಯ ಮತದಾನ ಹಕ್ಕಿನ ಸಮಿತಿ ತಾನು ಒಪ್ಪಿಕೊಂಡ ಎರಡು ಪರೀಕ್ಷೆಗಳ ಪ್ರಕಾರ ಅಸ್ಪೃಶ್ಯರ ವರ್ಗವನ್ನು ನಿರ್ಧರಿಸಿದ ಮೇಲೆ, ಪ್ರಾತಿನಿಧ್ಯದ ವಿಷಯದಲ್ಲಿ ಹೀಗೆ ನಿರ್ಧರಿಸಿದ ಇಡೀ ವರ್ಗವನ್ನು ಪರಿಗಣಿಸಬೇಕು, ಶ್ರೀಮಂತರು ಮತ್ತು ಬಡವರು, ಮುಂದುವರೆದವರು ಮತ್ತು ಹಿಂದುಳಿದವರು, ವಿದ್ಯಾವಂತರು ಮತ್ತು ಅವಿದ್ಯಾವಂತರು ಈ ಬಗೆಯ ಯಾವುದೇ ವ್ಯತ್ಯಾಸವಿಲ್ಲದೆ ಪರಿಗಣಿಸಬೇಕು ಎನ್ನುವ ಕಲ್ಪನೆಯ ಆಧಾರದ ಮೇಲೆ ಮುಂದುವರೆಯುತ್ತದೆ; ನನ್ನ ಅಭಿಪ್ರಾಯದಲ್ಲಿ ಇದೇ ಸರಿಯಾದ ಕಾರ್ಯವಿಧಾನ.

ಮಿ. ಬ್ಲಂಟರು ಸಂಯುಕ್ತ ಪ್ರಾಂತಗಳ ಸರ್ಕಾರವು ಅನುಸರಿಸಿದ ಕಾರ್ಯ ವಿಧಾನವನ್ನು ನಾನು ಒಪ್ಪುವುದಿಲ್ಲ ಎಂದು ಬೇರೆ ಹೇಳುವ ಅಗತ್ಯವಿಲ್ಲ.

## III. ಪಂಜಾಬಿನಲ್ಲಿ ನಿಮ್ನ ವರ್ಗಗಳವರು

೧೧. ನಿಮ್ನ ವರ್ಗಗಳವರ ಜನಸಂಖ್ಯೆಯ ವಿಷಯವನ್ನು ೧೯೩೧ರ ಜನಗಣತಿಯಲ್ಲಿ ಕೊಟ್ಟಿರುವ ಎರಡು ಅಂಶಗಳತ್ತ ಗಮನ ಸೆಳೆಯಲು ನಾನು ಬಯಸುತ್ತೇನೆ.

(೧) ಮುಟ್ಟಿದರೆ ಮೈಲಿಗೆ ಎನ್ನಿಸಿಕೊಂಡವರ ಸಂಖ್ಯೆಯು ೧೯೧೧ರ ಜನಗಣತಿಯ ಪ್ರಕಾರ ೨.೮ ದಶಲಕ್ಷಗಳಿದ್ದದ್ದು ೧೯೩೧ರ ಜನಗಣತಿಯಲ್ಲಿ ಅಸ್ಪೃಶ್ಯರ ಸಂಖ್ಯೆ ೧.೩ ದಶಲಕ್ಷಗಳು ಎಂದು ಕೊಟ್ಟಿದೆ.

(೨) ೧೯೧೧ರ ಜನಗಣತಿಯು ಮುಟ್ಟಿದರೆ ಮೈಲಿಗೆ ಎನಿಸಿಕೊಳ್ಳುವವರ ೨೩ ಜಾತಿಗಳನ್ನು ಪಟ್ಟಿ ಮಾಡಿತು. ೧೯೩೧ರ ಜನಗಣತಿ ಪಂಜಾಬಿನಲ್ಲಿ ಜಾತಿಗಳನ್ನು ಮಾತ್ರ ಅಸ್ಪೃಶ್ಯವರ್ಗಕ್ಕೆ ಸೇರಿದವು ಎಂದು ಹೇಳುತ್ತದೆ.

೧೨. ಅಸ್ಪೃಶ್ಯರ ಒಟ್ಟು ಸಂಖ್ಯೆ ಮತ್ತು ಆ ವರ್ಗಕ್ಕೆ ಸೇರಿದ ಜಾತಿಗಳ ಪಟ್ಟಿ ೧೯೧೧ ಮತ್ತು ೧೯೩೧ರ ನಡುವೆ ಇಷ್ಟರಮಟ್ಟಿಗೆ ಏಕೆ ಕುಗ್ಗಬೇಕು ಎನ್ನುವುದು ನನಗೆ ತಿಳಿದಿಲ್ಲ. ಆದರೆ, ಪಂಜಾಬಿನ ಅಸ್ಪೃಶ್ಯರಲ್ಲಿ ಹಲವು ವರ್ಷಗಳಿಂದ ಅದ್–ಧರ್ಮ್ ಚಳುವಳಿ ನಡೆಯುತ್ತಿದೆ ಮತ್ತು ಇದರ ಉದ್ದೇಶ ಹಿಂದೂ ಸಮುದಾಯದಿಂದ ಬೇರೆಯಾಗಿ ಅದ್–ಧರ್ಮೀಯರು ಎಂಬ ಹೆಸರಿನಿಂದ ಪ್ರತ್ಯೇಕ ಕೋಮನ್ನೇ ರೂಪಿಸಿಕೊಳ್ಳುವುದು ಎನ್ನುವುದನ್ನು ಹೇಳುವುದು ಅಗತ್ಯ. ಈ ಚಳವಳಿಯು ಎಷ್ಟು ಪ್ರಬಲವಾಗಿದೆ ಎಂದರೆ ಅಸ್ಪೃಶ್ಯರು ೧೯೩೧ರ ಜನಗಣತಿಯಲ್ಲಿ ತಾವು ಹಿಂದೂಗಳು ಎಂದು ಹೇಳದೆ ಅದ್–ಧರ್ಮೀಯರು ಎಂದು ಹೇಳಿಕೊಳ್ಳಲು ನಿರ್ಧರಿಸಿದರು ಮತ್ತು ಸರ್ಕಾರವು ಈ ಭಾವನೆಗೆ ಮನ್ನಣೆಯನ್ನು ಕೊಟ್ಟು ಅದ್–ಧರ್ಮೀಯರು ಎನ್ನುವ ಹೊಸ ವರ್ಗವನ್ನು ತೆರೆಯಲು ಪಂಜಾಬಿನ ಜನಗಣತಿಯ ಸೂಪರಿಟೆಂಡೆಂಟರಿಗೆ ಅನುಮತಿಯನ್ನು ನೀಡಿತು. ಇದರ ಪರಿಣಾಮವಾಗಿ ಪಂಜಾಬಿನ ಕೆಲವು ಭಾಗಗಳಲ್ಲಿ ಹಿಂದೂಗಳ ಮತ್ತು ಅಸ್ಪೃಶ್ಯರ ನಡುವೆ ಗಲಭೆಗಳಾದವು. ಆದರೂ ಕೆಲವು ಭಾಗಗಳಲ್ಲಿ ಅಸ್ಪೃಶ್ಯರು ತಾವು ಅದ್–ಧರ್ಮೀಯರು ಎಂದೇ ಹೇಳಿಕೊಂಡರು. ಹೀಗೆ ಮಾಡಲು ಅವರಿಗೆ ಅವಕಾಶ ಕೊಡದಿದ್ದ ಸ್ಥಳಗಳಲ್ಲಿ ತಮ್ಮ ಜಾತಿಗಳ ಹೆಸರಿನಲ್ಲಿ ಹಿಂದೂಗಳೆಂದು ಹೇಳಿಕೊಂಡರು. ನಾನು ಈ ವಾಸ್ತವಾಂಶಗಳನ್ನು ಹೇಳುತ್ತಿರುವುದರ ಉದ್ದೇಶ ಅಸ್ಪೃಶ್ಯರ ಗಣತಿಯಲ್ಲಿ ಉದ್ಭವಿಸಿದ ಕಷ್ಟಗಳು– ಇದನ್ನು ಪಂಜಾಬ್ ಸರ್ಕಾರವೇ ಒಪ್ಪಿಕೊಂಡಿದೆ– ಪಂಜಾಬಿನಲ್ಲಿ ಅಸ್ಪೃಶ್ಯರ ಸಂಖ್ಯೆ ಮತ್ತು ಪಟ್ಟಿಗಳು ಕುಗ್ಗಿದುದಕ್ಕೆ ಕಾರಣವಾಗಿರಬಹುದು ಎನ್ನುವುದನ್ನು ತೋರಿಸುವುದು. ಆದ್ದರಿಂದ ಈ ವಿಷಯವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗಿದೆ.

## IV. ಬಂಗಾಳದಲ್ಲಿ ನಿಮ್ನ ವರ್ಗಗಳವರು

೧೩. ಬಂಗಾಳದ ನಿಮ್ನ ವರ್ಗಗಳವರ ವಿಷಯದಲ್ಲಿ ಒಂದು ಮುಖ್ಯ ಸಾಕ್ಷ್ಯಾಂಶದತ್ತ ನಾನು ಗಮನವನ್ನು ಸೆಳೆಯಬೇಕು; ಬಂಗಾಳದಲ್ಲಿ ೧೯೧೧ರ ಬಂಗಾಳದ ಜನಗಣತಿಯಲ್ಲಿ ಕೊಟ್ಟಿರುವ ಪಟ್ಟಿಯೆ ಅಸ್ಪೃಶ್ಯ ಜಾತಿಗಳವರು ಎಂದು ಸಾಂಪ್ರದಾಯಿಕವಾಗಿ ಪರಿಗಣಿಸುವವರ ಸರಿಯಾದ ಗಣತಿ ಎನ್ನುವುದನ್ನು

ಇದು ತೋರಿಸುತ್ತದೆ. ನಾನು ಪ್ರಸ್ತಾಪಿಸುತ್ತಿರುವುದು ೧೮೮೯ರ ವಿನಿಮಯ IVರ ೭ನೆ ವಿಭಾಗವನ್ನು (೧೮೦೬ರ ವಿನಿಮಯ IV ಮತ್ತು Vನ್ನು ಹಿಂತೆಗೆದುಕೊಳ್ಳುವುದಕ್ಕೆ ಮತ್ತು ಜಗನ್ನಾಥ ದರ್ಶನಕ್ಕಾಗಿ ಬರುವ ಯಾತ್ರಿಕರಿಗೆ ತೆರಿಗೆ ವಿಧಿಸಲು ಮತ್ತು ದೇವಾಲಯದ ಮೇಲ್ವಿಚಾರಣೆ ಮತ್ತು ನಿರ್ವಹಣೆಗೆ ಮೇಲೆ ಹೇಳಿದ ವಿನಿಮಯಗಳಲ್ಲಿ ವಿಧಿಸಿದ ನಿಯಮಗಳಿಗೆ ಬದಲು ಬೇರೆ ನಿಯಮಗಳನ್ನು ಸೇರಿಸು ವುದಕ್ಕೆ ವಿನಿಮಯ); ಈ ವಿಭಾಗವು ಪುರಿಯಲ್ಲಿನ ಜಗನ್ನಾಥ ದೇವಾಲಯಕ್ಕೆ ಪ್ರವೇಶಾಧಿಕಾರ ಇಲ್ಲ ದವರ ಪಟ್ಟಿಯನ್ನು ಹೀಗೆ ಕೊಟ್ಟಿದೆ: (೧) ಲೋಲಿ ಅಥವಾ ಕಾಶಿ (೨) ಕಲಾಲ್ ಅಥವಾ ಸುನ್ನಿ (೩) ಮವ್ಘಅ (೪) ನಾಮಶೂದ್ರ ಅಥವಾ ಚಂಡಾಲ (೫) ಘುಸ್ಕಿ (೬) ಗುಸುರ್ (೭) ಬಾಗ್ದಿ (೮) ಜೋಗಿ ಅಥವಾ ನುರ್ ಬಾಫ್ (೯) ಬಹರ್–ಚಾರಿ ಮತ್ತು ದುಲಿಯ (೧೦) ರಾಜ್ ಬನ್ಸಿ (೧೧) ಪಿರಾಲಿ (೧೨) ಚಮರ್ (೧೩) ದೋಮ್ (೧೪) ಪಾನ್ (೧೫) ತಿಯರ್ (೧೬) ಭುಯಿನ್ನಲಿ ಮತ್ತು (೧೭) ಹರಿ.

ಈ ಪಟ್ಟಿಯೂ ೧೯೧೧ರ ಜನಗಣತಿಯ ಪಟ್ಟಿಯೂ ಒಂದೇ ಆಗಿದ್ದು ಅದು ಸರಿ ಎನ್ನುವುದನ್ನು ಸಮರ್ಥಿಸುತ್ತದೆ. ಪ್ರಾಸಂಗಿಕವಾಗಿ, ಅಸ್ಪೃಶ್ಯರ ಸಾಮಾಜಿಕ ಅಂತಸ್ತಿನಲ್ಲಿ ಒಂದು ನೂರು ವರ್ಷಗಳಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ ಎನ್ನುವುದನ್ನು ಇದು ತೋರಿಸುತ್ತದೆ.

ಭಾಗ – ಮೂರು

# ದುಂಡು ಮೇಜಿನ ಪರಿಷತ್ತುಗಳಲ್ಲಿ ಡಾ. ಅಂಬೇಡ್ಕರ್

ಸರ್ವ ಸದಸ್ಯರ ಸಭೆಯಲ್ಲಿ

# ಐದನೆಯ ಸಭೆ, ೧೯೩೦ರ ನವೆಂಬರ್ ೨೦

## ನಿಮ್ನ ವರ್ಗದವರಿಗೆ ರಾಜಕೀಯ ಅಧಿಕಾರದ ಅವಶ್ಯಕತೆ

* ಡಾ: ಬಿ. ಆರ್. ಅಂಬೇಡ್ಕರ್: ಅಧ್ಯಕ್ಷರೆ, ಈ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಲು ನಿಂತ ನನ್ನ ಮುಖ್ಯ ಉದ್ದೇಶವೆಂದರೆ ಯಾವ ನಿಮ್ನ ವರ್ಗದ ಜನತೆಯನ್ನು ನಾನು ಮತ್ತು ನನ್ನ ಸಹೋದ್ಯೋಗಿ ರಾವ್ ಬಹದ್ದೂರ ಶ್ರೀನಿವಾಸನ್ ಅವರು ಪ್ರತಿನಿಧಿಸುವ ಸೌಭಾಗ್ಯವನ್ನು ಪಡೆದಿರುತ್ತೇವೆಯೋ ಆ ನಿಮ್ನ ವರ್ಗದವರ ಅಭಿಪ್ರಾಯಗಳನ್ನು ಸಂವಿಧಾನದ ಸುಧಾರಣೆಗೆ ಸಂಬಂಧಿಸಿದಂತೆ ತಮ್ಮ ಮುಂದೆ ಇಡುವುದೇ ಮುಖ್ಯವಾಗಿರುತ್ತದೆ. ಇದು ೪೩,೦೦೦,೦೦೦ ಜನರ ಅಥವಾ ಬ್ರಿಟಿಷ್ ಭಾರತದ ಜನ ಸಂಖ್ಯೆಯ ಐದನೆಯ ಒಂದು ಅಂಶದ ಜನತೆಯ ಅಭಿಪ್ರಾಯವಾಗಿದೆ. ಈ ನಿಮ್ನ ವರ್ಗಗಳವರು ತಮ್ಮವೇ ಆದ ಗುಂಪುಗಳನ್ನು ಮಾಡಿಕೊಂಡಿದ್ದಾರೆ. ಈ ಗುಂಪುಗಳು ಮುಸ್ಲಿಮರಿಗಿಂತ ಭಿನ್ನ ಮತ್ತು ಬೇರೆಯಾದವುಗಳು. ಅವರನ್ನೂ ಹಿಂದೂಗಳೇ ಎಂದು ಪರಿಗಣಿಸಿದಾಗ್ಯೂ ಸಹ ಯಾವುದೇ ಅರ್ಥದಲ್ಲಿ ಅವರು ಈ ಸಮಾಜದ ಸಮಗ್ರ ಭಾಗವಾಗಿಲ್ಲ. ಅವರಿಗೆ ತಮ್ಮದೇ ಆದ ಬೇರೆ ಅಸ್ತಿತ್ವ ಇರುವುದಷ್ಟೇ ಅಲ್ಲದೆ, ನೋವನ್ನುಂಟುಮಾಡುವಂಥ ಮತ್ತು ಭಾರತದಲ್ಲಿನ ಇತರ ಯಾವುದೇ ಸಮಾಜವು ಅನುಭವಿಸುತ್ತಿರುವ ಸ್ಥಾನಮಾನಗಳಿಗಿಂತ ಭಿನ್ನವಾದ ಸ್ಥಾನವನ್ನು ಕೊಡುವ ಶಾಸನವನ್ನೇ ಈ ಸಮಾಜ ಅವರಿಗೆ ಕೊಟ್ಟಿದೆ. ಕೆಳಮಟ್ಟದ ಮತ್ತು ಅಧೀನ ಸ್ಥಾನವನ್ನು ಹೊಂದಿರುವಂಥ ಹಲವಾರು ಕೋಮುಗಳು ಭಾರತದಲ್ಲಿ ಇವೆ: ಆದರೆ, ನಿಮ್ನ ವರ್ಗದವರಿಗೆ ಕೊಡಲಾಗಿರುವ ಸ್ಥಾನವು ಸಂಪೂರ್ಣವಾಗಿ ಭಿನ್ನವಾದುದಾಗಿರುತ್ತದೆ. ಅದು ಯಜಮಾನ ಮತ್ತು ಸೇವಕನ ನಡುವೆ ಇರುವ ಸಂಬಂಧದ ಮಧ್ಯವರ್ತಿ ಹಂತದ ಸ್ವರೂಪದ್ದಾಗಿದೆ. ಅದು ಒಂದು ಭಿನ್ನರೀತಿಯ ಗುಲಾಮಗಿರಿ ಎಂದು ಅನುಕೂಲಕ್ಕಾಗಿ ಕರೆಯಬಹುದು. ಅಂದರೆ ಒಡೆಯ ಮತ್ತು ಸೇವಕ ದೈಹಿಕ ಸಂಪರ್ಕ ಹೊಂದಬಹುದಾಗಿತ್ತು. ಆದರೆ, ನಿಮ್ನ ವರ್ಗದವರನ್ನು ಅಂಥ ಸಂಬಂಧದಿಂದ ಹೊರಗಿಡಲಾಗಿದೆ. ಇದಕ್ಕಿಂತಲೂ ಖೇದದಾಯಕ ವಿಷಯವೆಂದರೆ ಅವರ ಅಸ್ಪೃಶ್ಯತೆಯ ಕಾರಣದಿಂದಾಗಿ ಮೂಡಿ ಬಂದ ಈ ಒತ್ತಾಯದಿಂದ ಗುಲಾಮಗಿರಿ ಮತ್ತು ಮಾನವ ಸಂಪರ್ಕಕ್ಕೆ ಒಡ್ಡಿದ ಪ್ರತಿಬಂಧಗಳು, ಸಾರ್ವಜನಿಕ ಜೀವನದಲ್ಲಿ ತಾರತಮ್ಯವನ್ನುಂಟುಮಾಡುವುದನ್ನೊಳಗೊಳ್ಳುವುದಷ್ಟೇ ಅಲ್ಲದೆ, ವಾಸ್ತವವಾಗಿ ಅವಕಾಶಗಳು ಸಮಾನತೆಯನ್ನು ಮತ್ತು ಯಾವ ನಾಗರಿಕ ಹಕ್ಕುಗಳ ಆಧಾರದಿಂದ ಮಾನವತೆ ಬದುಕುತ್ತಿದೆಯೋ ಅಂಥ ತೀರಾ ಸಾಮಾನ್ಯ ನಾಗರಿಕ ಹಕ್ಕುಗಳನ್ನೂ ಸಹ ನಿರಾಕರಿಸುವುದನ್ನೂ

---

* (ಈ ಮುಂದೆ ದು. ಮೇ. ಪ ಎಂದು ಉಲ್ಲೇಖಿತ) ದುಂಡು ಮೇಜಿನ ಪರಿಷತ್ತಿನ ನಡವಳಿಗಳು (ಮೊದಲನೆಯ ಅಧಿವೇಶನ), ಭಾರತ ಸರ್ಕಾರ, ಕೇಂದ್ರ ಪ್ರಕಟಣೆ ಶಾಖೆ, ಕಲಕತ್ತ ೧೯೩೧. ಪು. ೧೨೩–೨೯.

ಒಳಗೊಳ್ಳುತ್ತದೆ. ಇಂಗ್ಲೆಂಡಿನ ಅಥವಾ ಫ್ರಾನ್ಸಿನ ಜನಸಂಖ್ಯೆಗೆ ಸರಿಸಮವಾದ ಜನಸಂಖ್ಯೆಯನ್ನು ಹೊಂದಿರುವ ಮತ್ತು ತನ್ನ ಅಸ್ತಿತ್ವದ ಹೋರಾಟದಲ್ಲಿ ತುಂಬಾ ಕೋಟಲೆಗಳನ್ನು ಎದುರಿಸುತ್ತಿರುವ ಕೋಮಿನ ಅಭಿಪ್ರಾಯವು ರಾಜಕೀಯ ಸಮಸ್ಯೆಗಳ ಸರಿಯಾದ ಪರಿಹಾರಕ್ಕೆ ಸ್ವಲ್ಪವಾದರೂ ಸಂಬಂಧವನ್ನು ಹೊಂದಿರುತ್ತದೆ ಎಂಬುದನ್ನು ಮತ್ತು ಈ ಸಮ್ಮೇಳನವು ಅಂಥ ಅಭಿಪ್ರಾಯವನ್ನು ಪ್ರಾರಂಭದಲ್ಲಿಯೇ ತಿಳಿದುಕೊಂಡಿರಲಿ ಎಂದು ನಾನು ಕಾತರದಿಂದ ಬಯಸುತ್ತೇನೆ.

ನನಗೆ ಸಾಧ್ಯವಿರುವಷ್ಟರ ಮಟ್ಟಿಗೆ ನಾನು ಈ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸುತ್ತೇನೆ. ಭಾರತದಲ್ಲಿ ನೌಕರಶಾಹೀ ಪದ್ಧತಿಯ ಸರಕಾರದ ಬದಲಿಗೆ ಜನತೆಯ, ಜನತೆಯ ಮೂಲಕ, ಜನತೆಗಾಗಿ ಇರುವ ಸರಕಾರವನ್ನು ಅಸ್ತಿತ್ವದಲ್ಲಿ ತರಬೇಕು. ನಿಮ್ನ ವರ್ಗದ ಜನತೆಯ ಅಭಿಪ್ರಾಯದ ಈ ಹೇಳಿಕೆಯು ಕೆಲವು ನಿರ್ದಿಷ್ಟ ಜನರಿಗೆ ಆಶ್ಚರ್ಯವನ್ನುಂಟುಮಾಡುತ್ತದೆಂಬುದು ಖಚಿತ. ನಿಮ್ನ ವರ್ಗದವರನ್ನು ಬ್ರಿಟಿಶ್ ಭಾರತಕ್ಕೆ ಬಂಧಿಸಿದ ಕಟ್ಟು ಅದ್ವಿತೀಯ ಸ್ವರೂಪದ್ದಾಗಿರುತ್ತದೆ. ನಿಮ್ನ ವರ್ಗದವರು ಅನಂತ ಕಾಲದಿಂದ ನಡೆದುಬಂದ ಸಂಪ್ರದಾಯವಾದಿಗಳಾದ ಹಿಂದೂಗಳ ದಬ್ಬಾಳಿಕೆಯಿಂದ ಮತ್ತು ತುಳಿತದಿಂದ ಬಿಡುಗಡೆ ಮಾಡಿದವರೆಂದು ಬ್ರಿಟಿಷರನ್ನು ಸ್ವಾಗತಿಸಿದರು. ಅವರು ಹಿಂದೂಗಳ, ಮುಸಲ್ಮಾನರ ಮತ್ತು ಸಿಖ್ಖರ ವಿರುದ್ಧ ಹೋರಾಟವನ್ನೇ ಮಾಡಿದರು ಮತ್ತು ತಮಗಾಗಿ ಅವರು ಈ ವಿಶಾಲವಾದ ಭಾರತ ಸಾಮ್ರಾಜ್ಯವನ್ನೇ ಗೆದ್ದುಕೊಂಡರು. ಬ್ರಿಟಿಶರೂ ನಿಮ್ನ ವರ್ಗದವರ ನ್ಯಾಸಧಾರಿಗಳ (ಟ್ರಸ್ಟಿಗಳ) ಪಾತ್ರವನ್ನು ವಹಿಸಿದರು. ಉಭಯ ಪಕ್ಷದವರ ನಡುವಣ ಅಂಥ ಪರಸ್ಪರ ವಿಶ್ವಾಸಾರ್ಹವಾದ ಸಂಬಂಧವನ್ನು ಗಮನಿಸಿದಾಗ ಭಾರತದಲ್ಲಿನ ಬ್ರಿಟಿಶರ ಆಡಳಿತದ ಬಗ್ಗೆ ಈ ನಿಮ್ನ ವರ್ಗದವರ ಈ ಬದಲಾದ ಮನೋಭಾವನೆಯು ನಿಃಸಂಶಯವಾಗಿಯೂ ಅತಿಮುಖ್ಯವಾದ ಅಸಾಧಾರಣ ಘಟನೆಯಾಗಿರುತ್ತದೆ. ಬದಲಾದ ಈ ಮನೋಭಾವನೆಯ ಕಾರಣಗಳನ್ನು ಶೋಧಿಸಲು ಬಹುದೂರ ಹೋಗಬೇಕಾಗಿಲ್ಲ. ನಾವೂ ಸಹ ಬಹುಸಂಖ್ಯಾತರೊಡನೆ ನಮ್ಮ ಪಾಲಿನದನ್ನೂ ಚೆಲ್ಲಿಬಿಟ್ಟರಾಯಿತು ಎಂದು ಇಚ್ಛಿಸುತ್ತೇವೆ ಎಂಬ ಕಾರಣಕ್ಕಾಗಿ ಮಾತ್ರವೇ ನಾವು ಈ ನಿರ್ಣಯವನ್ನು ತೆಗೆದುಕೊಂಡಿಲ್ಲ. ನಾನು ಪ್ರತಿನಿಧಿಸುವ ನಿರ್ದಿಷ್ಟ ಅಲ್ಪಸಂಖ್ಯಾತರ ಮತ್ತು ಬಹುಸಂಖ್ಯಾತರ ನಡುವೆ ನಿಜವಾಗಿಯೂ ತೀವ್ರ ತರವಾದ ಭಿನ್ನಾಭಿಪ್ರಾಯವಿಲ್ಲ ಎನ್ನುವುದು ನಿಮಗೆ ತಿಳಿದಿದೆ. ನಮ್ಮದು ಸ್ವತಂತ್ರ ನಿರ್ಣಯವಾಗಿರುತ್ತದೆ. ಈಗಿರುವ ಆಡಳಿತವನ್ನು ಕೇವಲ ನಮ್ಮದೇ ಆದ ಸಂದರ್ಭಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ತೂಗಿ ನೋಡಿದ್ದೇವೆ ಮತ್ತು ಉತ್ತಮ ಸರಕಾರದಲ್ಲಿರಬೇಕಾದ ಅವಶ್ಯಕ ಘಟಕಾಂಶಗಳು ಅದರಲ್ಲಿ ಇಲ್ಲದ್ದನ್ನು ನಾವು ಕಂಡುಕೊಂಡಿದ್ದೇವೆ. ಬ್ರಿಟಿಶರು ಬರುವುದಕ್ಕಿಂತ ಪೂರ್ವದಲ್ಲಿನ ಭಾರತೀಯ ಸಮಾಜದಲ್ಲಿ ನಾವು ಅನುಭವಿಸಿದ್ದಕ್ಕೂ ಮತ್ತು ನಮ್ಮ ಈಗಿನ ಪರಿಸ್ಥಿತಿಗೂ ಹೋಲಿಕೆ ಮಾಡಿದಾಗ, ನಾವು ಮುಂದುವರೆಯುವುದರ ಬದಲಿಗೆ ಕೇವಲ ಕಾಲಹರಣ ಮಾಡಿದ್ದು ಕಂಡುಬರುತ್ತದೆ. ಬ್ರಿಟಿಶರು ಬರುವುದಕ್ಕಿಂತ ಪೂರ್ವದಲ್ಲಿ ನಾವು ನಮ್ಮ ಅಸ್ಪೃಶ್ಯತೆಯ ಕಾರಣದಿಂದಾಗಿ ತುಂಬಾ ಹೀನಾಯಮಾನವಾದ ಸ್ಥಿತಿಯಲ್ಲಿ ಇದ್ದೆವು. ಬ್ರಿಟಿಶರ ಕಾಲಕ್ಕಿಂತ ಮುಂಚೆ ನಾವು ದೇವಸ್ಥಾನಗಳಲ್ಲಿ ಪ್ರವೇಶಿಸುವಂತಿದ್ದಿಲ್ಲ. ಈಗ ನಾವು ಪ್ರವೇಶಿಸಬಹುದೇ? ಬ್ರಿಟಿಶರ ಕಾಲಕ್ಕಿಂತ ಮುಂಚೆ ನಾವು ಪೋಲೀಸ್ ಪಡೆಯನ್ನು ಸೇರುವುದನ್ನು ನಿರಾಕರಿಸಲಾಗುತ್ತಿತ್ತು. ಬ್ರಿಟಿಶ್ ಸರಕಾರವು ನಾವು ಆ ಪಡೆಯನ್ನು ಸೇರಲು ಈಗ ಅನುಮತಿಸುತ್ತಿದೆಯೇ? ಬ್ರಿಟಿಶ್ ಕಾಲಕ್ಕಿಂತ ಮುಂಚೆ ಸೈನ್ಯದಲ್ಲಿ ಸೇವೆ ಸಲ್ಲಿಸಲು ನಮಗೆ ಅನುಮತಿ ಇರಲಿಲ್ಲ. ಅಂಥ ಅವಕಾಶ ನಮಗೆ ಈಗ ಮುಕ್ತವಾಗಿದೆಯೇ? ಈ ಯಾವ ಪ್ರಶ್ನೆಗಾದರೂ ನಾವು ಸಕಾರಾತ್ಮಕ ಉತ್ತರವನ್ನು ಕೊಡಬಲ್ಲೆವೋ? ಇಷ್ಟು ದೀರ್ಘಕಾಲದವರೆಗೆ ತಮ್ಮ

ಪ್ರಭಾವದಲ್ಲಿ ನಮ್ಮನ್ನು ಹಿಡಿದಿಟ್ಟುಕೊಂಡ ಬ್ರಿಟಿಶರು ನಮಗಾಗಿ ಮಾಡಿದ ಉಪಕಾರಕ್ಕಾಗಿ ನಾವು ಸಂತೋಷದಿಂದ ಕೃತಜ್ಞತೆಯಿಂದ ಸಲ್ಲಿಸುತ್ತೇವೆ. ಆದರೆ, ನಿಜವಾಗಿಯೂ ನಮ್ಮ ಸ್ಥಾನಮಾನದಲ್ಲಿ ಯಾವ ಮೂಲಭೂತ ಬದಲಾವಣೆಯೂ ಆಗಿಲ್ಲ. ನಿಜವಾಗಿಯೂ, ನಮಗೆ ಸಂಬಂಧಪಟ್ಟಂತೆ ಬ್ರಿಟಿಶ್ ಸರಕಾರವು ಅದಕ್ಕೆ ಕಂಡುಬಂದಂತೆ ಆಗ ಇದ್ದಂಥ ಸಾಮಾಜಿಕ ವ್ಯವಸ್ಥೆಗಳನ್ನು ಒಪ್ಪಿಕೊಂಡಿತು ಮತ್ತು ಹಳೆಯ ಕೋಟನ್ನು ಮಾದರಿಗಾಗಿ ಕೊಟ್ಟ ಕೋಟಿನ ಪ್ರತಿರೂಪವನ್ನೇ ಅದರ ಹೊಲಿಗೆಗಳು ತೇಪೆಗಳು ಇತ್ಯಾದಿಗಳನ್ನೊಳಗೊಂಡಂತೆಯೇ ತುಂಬಾ ಹೆಮ್ಮೆಯಿಂದ ಹೊಸದನ್ನು ಹೊಲಿದುಕೊಟ್ಟಿತು ಚೀನದ ಸಿಂಪಿಯಂತೆ. ಹಿಂದಿನ ವ್ಯವಸ್ಥೆಯನ್ನೇ ಪ್ರಾಮಾಣಿಕವಾದ ನಿಷ್ಠೆಯಿಂದಲೇ ಉಳಿಸಿಕೊಂಡು ಬಂದಿತು. ನಮಗೆಸಗಿದ ಅನ್ಯಾಯಗಳು ಒಡೆದು ಸೋರುತ್ತಿರುವ ಗಾಯಗಳಂತೆ ಉಳಿದುಬಂದಿವೆ. ಬ್ರಿಟಿಶ್ ಆಡಳಿತದಲ್ಲಿ ೧೫೦ ವರುಷಗಳೇ ಉರುಳಿ ಹೋಗಿದ್ದರೂ ಅವುಗಳಿಗೆ ಯಾವ ಉಪಚಾರವನ್ನೂ ಮಾಡಿಲ್ಲ.

ಬ್ರಿಟಿಶರು ಉದಾಸೀನರಾಗಿದ್ದರು ಅಥವಾ ಅವರಿಗೆ ಸಹಾನುಭೂತಿ ಇರಲಿಲ್ಲ ಎಂದು ನಾವು ಆರೋಪಿಸುವುದಿಲ್ಲ. ಅವರು ನಮ್ಮ ಸಮಸ್ಯೆಯನ್ನು ಬಿಡಿಸುವಲ್ಲಿ ಅಸಮರ್ಥರಾಗಿದ್ದಾರೆಂದು ನಾವು ಕಂಡುಕೊಂಡಿದ್ದೇವೆ. ಇದು ಕೇವಲ ಉದಾಸೀನತೆಯ ಪ್ರಶ್ನೆ ಮಾತ್ರವೇ ಆಗಿದ್ದರೆ, ಅದು ಕ್ಷಣಮಾತ್ರದಲ್ಲಿ ಸರಿಪಡಿಸಬಹುದಾದ ವಿಷಯವಾಗಿತ್ತು ಮತ್ತು ಅದು ನಮ್ಮ ಪ್ರವೃತ್ತಿಯಲ್ಲಿ ಇಂಥ ಆಳವಾದ ಬದಲಾವಣೆಯನ್ನು ಮಾಡುತ್ತಿರಲಿಲ್ಲ. ಆದರೆ ಸಂದರ್ಭದ ಆಳವಾದ ವಿಶ್ಲೇಷಣೆಯ ನಂತರ ಇದು ಕೇವಲ ಉದಾಸೀನತೆಯ ವಿಷಯವಲ್ಲ. ಆದರೆ ಸಮಸ್ಯೆಯನ್ನು ಕೈಗೆತ್ತಿಕೊಳ್ಳಲು ಇರುವ ಅಸಮರ್ಥತೆಯ ಪ್ರಶ್ನೆ ಎಂಬುದನ್ನು ಕಂಡುಕೊಂಡಿದ್ದೇವೆ. ಭಾರತದಲ್ಲಿನ ಬ್ರಿಟಿಶ್ ಸರಕಾರವು ಎರಡು ತೀವ್ರವಾದ ಪರಿಮಿತಿಗಳಿಗೊಳಪಟ್ಟಿತ್ತು ಎಂಬುದನ್ನು ನಿಮ್ನ ವರ್ಗಗಳು ಕಂಡುಕೊಂಡಿರುತ್ತವೆ. ಪ್ರಪ್ರಥಮವಾಗಿ ಅಧಿಕಾರದಲ್ಲಿದ್ದವರ ಸ್ವಭಾವ, ಉದ್ದೇಶ ಮತ್ತು ಹಿತಾಸಕ್ತಿಗಳಿಂದ ಉಂಟಾದ ಆಂತರಿಕ ಪರಿಮಿತಿಗಳು. ಅವುಗಳು ಈ ವಿಷಯಗಳಿಗೆ ಸಂಬಂಧಿಸಿದಂತೆ ಸಹಾಯ ಮಾಡಲಾರವು ಎಂಬುದು ಕಾರಣವಲ್ಲ. ಆದರೆ ಇದು ಅವರ ಸ್ವಭಾವ. ಉದ್ದೇಶ ಮತ್ತು ಹಿತಾಸಕ್ತಿಗಳಿಗೆ ವಿರುದ್ಧವಾಗಿತ್ತು ಎಂಬುದೇ ಕಾರಣವಾಗಿರುತ್ತದೆ. ಅದರ ಅಧಿಕಾರವನ್ನು ಪರಿಮಿತಿಗೊಳಿಸುವ ಎರಡನೆಯ ವಿಚಾರವೆಂದರೆ ಅದಕ್ಕೆ ಬಹಿರಂಗ ಪ್ರತಿಭಟನೆಯಂಥ ಪ್ರಾಣಾಂತಿಕ ಭಯ. ಭಾರತೀಯ ಸಮಾಜದ ಚೈತನ್ಯವನ್ನೇ ತಿಂದುಹಾಕುತ್ತಿರುವ ಮತ್ತು ಇಷ್ಟೆಲ್ಲ ವರುಷಗಳವರೆಗೆ ನಿಮ್ನ ವರ್ಗದವರ ಜೀವವನ್ನು ಹತ್ತಿಕ್ಕಿದ ಸಾಮಾಜಿಕ ಕೆಡಕುಗಳನ್ನು ತೆಗೆದುಹಾಕಬೇಕಾದುದರ ಅಗತ್ಯತೆಯನ್ನು ಭಾರತ ಸರಕಾರವು ಅರಿತುಕೊಂಡಿದೆ. ಭೂ ಮಾಲಿಕರು ಕೆಳವರ್ಗದ ಜನತೆಯ ಜೀವವನ್ನೇ ಹಿಂಡುತ್ತಿರುವುದನ್ನು ಮತ್ತು ಬಂಡವಾಳಶಾಹಿಗಳು ಕಾರ್ಮಿಕರಿಗೆ ಬದುಕುವಷ್ಟು ಸಹ ಕೂಲಿಯನ್ನು ಕೊಡದಿರುವುದನ್ನು ಮತ್ತು ದುಡಿಯಲು ಯುಕ್ತವಾದ ವಾತಾವರಣವನ್ನು ಒದಗಿಸದಿರುವುದನ್ನು ಭಾರತ ಸರಕಾರವು ಸ್ಪಷ್ಟವಾಗಿ ಕಂಡುಕೊಂಡಿದೆ. ಆದಾಗ್ಯೂ ಅತ್ಯಂತ ದುಃಖದ ಸಂಗತಿ ಎಂದರೆ ಈ ಯಾವ ಕೆಡಕುಗಳನ್ನೂ ಅದು ನಿವಾರಿಸುವ ಧೈರ್ಯ ಮಾಡದೆ ಇರುವುದು. ಏಕೆ? ಅವುಗಳನ್ನು ತೆಗೆದುಹಾಕಲು ಅದಕ್ಕೆ ಕಾನೂನಿನ ಬಲವಿಲ್ಲದಿರುವುದೇ? ಅಲ್ಲ. ಅದು ಇದಕ್ಕೆ ಕೈ ಹಾಕದೆ ಇರಲು ಕಾರಣವೆಂದರೆ, ಈಗಿರುವ ಸಾಮಾಜಿಕ ಮತ್ತು ಆರ್ಥಿಕ ಸಂಹಿತೆಗಳನ್ನು ತಿದ್ದುಪಡಿ ಮಾಡಲು ಅದು ಕೈ ಹಾಕಿದರೆ, ಅದು ಪ್ರತಿಭಟನೆಗೆ ಅವಕಾಶ ಕೊಡುತ್ತದೆ ಎಂದು ಅದು ಭಯಪಟ್ಟಿದೆ. ಅಂಥ ಸರಕಾರ ಯಾರ ಹಿತಕ್ಕಾಗಿ ಇರುತ್ತದೆ? ಇಂಥ ಎರಡು ಪರಿಮಿತಿಗಳಿರುವ ಅಸ್ತವ್ಯಸ್ತವಾದ ಸರಕಾರದಲ್ಲಿ ಬದುಕನ್ನು ಉತ್ತಮಗೊಳಿಸು

ವಂಥ ಯಾವದೇ ಪ್ರಯತ್ನವೇ ಆಗಲಿ ತಡೆಗಟ್ಟಲ್ಪಡುತ್ತದೆ. ಅಧಿಕಾರದಲ್ಲಿರುವವರು ತಮ್ಮ ಅಖಂಡ ಶ್ರದ್ಧೆಯನ್ನು ಇಡೀ ದೇಶದ ಅತ್ಯುತ್ತಮ ಹಿತಾಸಕ್ತಿಗೆ ಅರ್ಪಿಸುವ ಜನರು ಇರುವ ಸರಕಾರ ನಮಗಿರಬೇಕು. ಎಲ್ಲಿ ವಿಧೇಯತೆ ಕೊನೆಗಾಣುತ್ತದೆ ಮತ್ತು ಎಲ್ಲಿ ಪ್ರತಿಭಟನೆ ಪ್ರಾರಂಭವಾಗುತ್ತದೆ ಎಂಬುದನ್ನು ಅರಿತು ಕೊಂಡವರು, ನ್ಯಾಯದ ಅಂತರಾತ್ಮ ಮತ್ತು ಸಮಯದ ಅಗತ್ಯತೆ ಈ ಕೂಡಲೇ ಮಾಡಲೇಬೇಕೆಂದು ಹೇಳುವಂಥ ಸಾಮಾಜಿಕ ಮತ್ತು ಆರ್ಥಿಕ ಸಂಹಿತೆಗಳಿಗೆ ತಿದ್ದುಪಡಿ ಮಾಡಲು ಅಂಜದಿರುವ ಜನರಿರುವ ಸರಕಾರವನ್ನೇ ನಾವು ಹೊಂದಬೇಕು. ಬ್ರಿಟಿಶ್ ಸರಕಾರವು ಈ ಪಾತ್ರವನ್ನು ವಹಿಸಲು ಎಂದೂ ಸಮರ್ಥವಾಗುವುದಿಲ್ಲ. ಕೇವಲ ಜನತೆಯ, ಜನತೆಗಾಗಿ ಮತ್ತು ಜನತೆಯಿಂದ ಕೂಡಿದ ಸರಕಾರದಿಂದ ಮಾತ್ರವೇ ಇದು ಸಾಧ್ಯವಾಗಬಹುದು.

ಇವು ನಿಮ್ನ ವರ್ಗದವರು ಎತ್ತಿದ ಹಲವು ಪ್ರಶ್ನೆಗಳು ಮತ್ತು ಅವರ ದೃಷ್ಟಿಯಲ್ಲಿ ಈ ಪ್ರಶ್ನೆಗಳಿಗೆ ಸಾಧ್ಯವೆಂದು ತೋರುವ ಉತ್ತರಗಳು ಆಗಿವೆ. ಕಾರಣ ನಿಮ್ನ ವರ್ಗಗಳು ತಲುಪಿದ ಅನಿವಾರ್ಯ ನಿರ್ಣಯಗಳಾಗಿವೆ. ಅವುಗಳೆಂದರೆ ಅಧಿಕಾರಶಾಹಿ ಭಾರತ ಸರಕಾರವು ತನ್ನ ಅತ್ಯುತ್ಕೃಷ್ಟ ಸದಿಚ್ಛೆಯಿಂದಲೂ ಸಹ ನಮ್ಮ ನಿರ್ದಿಷ್ಟ ಸಂಕಷ್ಟಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಯಾವುದೇ ಬದಲಾವಣೆಯನ್ನು ಜಾರಿಗೆ ತರುವಲ್ಲಿ ಸತ್ವಹೀನವಾಗಿಯೇ ಉಳಿಯುತ್ತದೆ. ನಮ್ಮ ಈ ಸಂಕಷ್ಟಗಳನ್ನು ಯಾರೂ ತೊಡೆದುಹಾಕಲಾರರು ಮತ್ತು ನಮ್ಮ ಕೈಯಲ್ಲೇ ರಾಜಕೀಯ ಅಧಿಕಾರ ಬರದ ಹೊರತು ನಾವೂ ಕೂಡ ಅವುಗಳನ್ನು ತೊಡೆದುಹಾಕಲಾರೆವು. ಬ್ರಿಟಿಶ್ ಸರಕಾರವು ಈಗಿರುವಂತೆಯೇ ಇರುವವರೆಗೆ ರಾಜಕೀಯ ಅಧಿಕಾರದ ಯಾವ ಪಾಲೂ ನಮಗೆ ಬರಲಾರದು. ಯಾವ ರಾಜಕೀಯ ಅಧಿಕಾರವು ಇಲ್ಲದ ಹೊರತು ನಾವು ನಮ್ಮ ಜನರಿಗೆ ವಿಮೋಚನೆಯನ್ನು ತರಲಾರೆವೋ ಅಂಥ ರಾಜಕೀಯ ಅಧಿಕಾರವು ನಮ್ಮ ಕೈಯಲ್ಲಿ ಬರುವಂಥ ಬದಲಾವಣೆಯು ಸ್ವರಾಜ್ಯ ಸಂವಿಧಾನದಲ್ಲಿ ಮಾತ್ರ ಸಾಧ್ಯವಿದೆ.

ಮಾನ್ಯರೆ, ಒಂದು ವಿಷಯಕ್ಕೆ ಸಂಬಂಧಿಸಿದಂತೆ ನಾನು ನಿಮ್ಮ ವಿಶೇಷ ಲಕ್ಷ್ಯವನ್ನು ಸೆಳೆಯ ಬಯಸುತ್ತೇನೆ. ಅಂದರೆ, ನಿಮ್ನ ವರ್ಗಗಳ ದೃಷ್ಟಿಕೋನವನ್ನು ನಿಮ್ಮ ಎದುರಿಗೆ ಇಡುವಲ್ಲಿ ನಾನು ಡೊಮಿನಿಯನ್ ಸ್ಥಾನ ಎಂಬ ಪದಾವಳಿಯನ್ನು ಉಪಯೋಗಿಸಿಲ್ಲ. ಆ ಪದಾವಳಿಯ ಪ್ರಯೋಗವನ್ನು ನಾನು ಬಿಟ್ಟಿದ್ದೇನೆ. ಏಕೆಂದರೆ ಅದರ ಒಳಾರ್ಥದ ಪರಿಣಾಮಗಳನ್ನು ನಾನು ತಿಳಿದಿಲ್ಲ ಎಂದಾಗಲೀ ಅಥವಾ ಅದನ್ನು ಉಪಯೋಗಿಸದಿರುವುದು ನಿಮ್ನ ವರ್ಗಗಳು ಭಾರತವು ಡೊಮಿನಿಯನ್ನಿನ ಸ್ಥಾನವನ್ನು ಪಡೆದುಕೊಳ್ಳುವುದಕ್ಕೆ ಆಕ್ಷೇಪಿಸುತ್ತವೆ ಎಂದಾಗಲೀ ಅಲ್ಲ. ಅದನ್ನು ಉಪಯೋಗಿಸದಿರುವುದಕ್ಕೆ ಮುಖ್ಯ ಆಧಾರವೆಂದರೆ ಈ ಪದಾವಳಿಯು ನಿಮ್ನ ವರ್ಗಗಳ ನಿಲುವಿನ ಪೂರ್ಣ ಒಳಾಂಶಗಳನ್ನು ಹೇಳುವುದಿಲ್ಲ. ಕೆಲವೊಂದು ರಕ್ಷಣೆಗಳೊಡನೆ ಡೊಮಿನಿಯನ್ ಸ್ಥಾನದ ಪರವಾಗಿ ನಿಮ್ನ ವರ್ಗಗಳು ಸಮರ್ಥಿಸಿದಾಗ್ಯೂ, ಅವು ಕೇವಲ ಒಂದು, ಒಂದೇ ಒಂದು ಪ್ರಶ್ನೆಯ ಮೇಲೆ ಒತ್ತು ಕೊಡುತ್ತದೆ. ಆ ಪ್ರಶ್ನೆಯೆಂದರೆ ಡೊಮಿನಿಯನ್ ಭಾರತವು ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸುವುದು ಎಂಬುದೇ ಆಗಿರುತ್ತದೆ. ರಾಜಕೀಯ ಅಧಿಕಾರದ ಕೇಂದ್ರ ಬಿಂದು ಎಲ್ಲಿ ಇರುತ್ತದೆ? ಅದನ್ನು ಯಾರು ಪಡೆದು ಕೊಳ್ಳುತ್ತಾರೆ? ನಿಮ್ನ ವರ್ಗದವರು ಅದಕ್ಕೆ ವಾರಸುದಾರರು ಆಗುತ್ತಾರೆಯೋ? ಈ ಪ್ರಶ್ನೆಗಳೇ ಅವರ ಚಿಂತನದ ಮುಖ್ಯ ವಿಷಯವಾಗಿವೆ. ಹೊಸ ಸಂವಿಧಾನದಲ್ಲಿನ ರಾಜಕೀಯ ವಿಧಾನವು ವಿಶೇಷ ರಚನೆ ಯನ್ನು ಹೊಂದಿರದ ಹೊರತು ತಮಗೆ ಸ್ವಲ್ಪವೂ ರಾಜಕೀಯ ಅಧಿಕಾರವು ದೊರಕುವುದಿಲ್ಲವೆಂದು ನಿಮ್ನ ವರ್ಗಗಳವರು ಭಾವಿಸುತ್ತಾರೆ. ಈ ವಿಧಾನವನ್ನು ರಚಿಸುವಲ್ಲಿ ಭಾರತದ ಸಾಮಾಜಿಕ ಜೀವನದ ಹಲವು

ನೈಜ ಸಂಗತಿಗಳನ್ನು ಗಮನಿಸದೆ ಇರಲಾಗದು. ಭಾರತೀಯ ಸಮಾಜವು ಭಯ ಭಕ್ತಿಯ ಏರಿಕೆಯ ಕ್ರಮವನ್ನು ಮತ್ತು ತಿರಸ್ಕಾರದ ಇಳಿಕೆಯ ಕ್ರಮವನ್ನೂ ಅಂದರೆ ಪ್ರಜಾಸತ್ತಾತ್ಮಕ ಸರಕಾರಕ್ಕೆ ಅತ್ಯಂತ ಅವಶ್ಯವಾದ ಸಮಾನತೆ ಮತ್ತು ಬಂಧುತ್ವದ ಭಾವನೆಯ ಬೆಳವಣಿಗೆಗೆ ಯಾವುದೇ ಅವಕಾಶವನ್ನು ಕೊಡುವಂಥ–ಪದ್ಧತಿಯನ್ನು ಒಳಗೊಂಡಿದೆ. ವಿದ್ಯಾವಂತ ವರ್ಗವು ಭಾರತೀಯ ಸಮಾಜದ ಅತ್ಯಂತ ಮಹತ್ವದ ಭಾಗವಾಗಿರುವುದನ್ನೂ ಮತ್ತು ಈ ವರ್ಗವು ಸಮಾಜದ ಮೇಲ್ವರ್ಗಕ್ಕೆ ಸೇರಿರುವುದನ್ನೂ ಸಹ ಗಮನಿಸಲೇಬೇಕು. ಆ ವರ್ಗದವರು ದೇಶದ ಹೆಸರಿನಲ್ಲಿಯೇ ಮಾತನಾಡುತ್ತಿದ್ದಾಗ್ಯೂ ಮತ್ತು ರಾಜಕೀಯ ಚಟುವಟಿಕೆಗಳ ಮಾರ್ಗದರ್ಶನ ಮಾಡುತ್ತಿದ್ದಾಗ್ಯೂ, ತಾವು ಸೇರಿರುವ ಆ ವರ್ಗದ ಸಂಕುಚಿತ ವಿಶಿಷ್ಟತೆ ಯನ್ನು ಅವರು ತೊಡೆದು ಹಾಕಿರುವುದಿಲ್ಲ. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ರಾಜಕೀಯ ವಿಧಾನವು ಯಾವ ಸಮಾಜಕ್ಕಾಗಿ ಅದನ್ನು ರೂಪಿಸಲಾಗುತ್ತಿದೆಯೋ ಆ ಸಮಾಜದ ಮಾನಸಿಕ ಸ್ಥಿತಿಗೆ ನಿಶ್ಚಿತ ಸಂಬಂಧವನ್ನು ಹೊಂದಿರತಕ್ಕುದ್ದು ಮತ್ತು ಅದು ಆ ಬಗ್ಗೆ ಗಮನ ಹರಿಸತಕ್ಕದ್ದು ಎಂಬುದನ್ನು ನಿಮ್ನ ವರ್ಗಗಳವರು ಹೇಳಲು ಇಚ್ಛಿಸುತ್ತಾರೆ. ಇಲ್ಲದೇ ಹೋದರೆ ನೀವು ಯಾವ ಸಮಾಜಕ್ಕಾಗಿ ಸಂವಿಧಾನವನ್ನು ರಚಿಸುತ್ತಿರುವಿರೋ ಆ ಸಮಾಜಕ್ಕೆ ಅಂಥ ಸಂವಿಧಾನವು ಎಷ್ಟೇ ಸಮರೂಪವಾಗಿದ್ದರೂ ಒಂದು ಬೇರ್ಪಟ್ಟ ತುಂಡಾಗಿ ಉಳಿದು ಯುಕ್ತವಾದುದಾಗುವುದಿಲ್ಲ.

ಈ ವಿಷಯವನ್ನು ಮುಕ್ತಾಯಗೊಳಿಸುವ ಮೊದಲು ನಾನು ವಿವರಿಸಲು ಇಚ್ಛಿಸುವ ಇನ್ನೊಂದು ಅಂಶವಿದೆ. ನಿಮ್ನ ವರ್ಗದವರ ಸಮಸ್ಯೆಯು ಸಾಮಾಜಿಕ ಸಮಸ್ಯೆಯಾಗಿದೆ ಮತ್ತು ಅದರ ಪರಿಹಾರೋಪಾಯವು ರಾಜಕೀಯವನ್ನು ಬಿಟ್ಟು ಬೇರೆಲ್ಲಿಯೋ ಇದೆ ಎಂದು ನಮಗೆ ಮೇಲಿಂದ ಮೇಲೆ ನೆನಪು ಮಾಡಿಕೊಡಲಾಗುತ್ತಿದೆ. ಈ ಅಭಿಪ್ರಾಯಕ್ಕೆ ನಮ್ಮ ತೀವ್ರ ಆಕ್ಷೇಪ ಇದೆ. ಅವರು ರಾಜಕೀಯ ಅಧಿಕಾರವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳದ ಹೊರತು ನಿಮ್ನ ವರ್ಗದವರ ಸಮಸ್ಯೆಯನ್ನು ಪರಿಹರಿಸಲು ಎಂದೆಂದಿಗೂ ಸಾಧ್ಯವಾಗದು ಎನ್ನುವುದೇ ನಮ್ಮ ಅಭಿಪ್ರಾಯವಾಗಿದೆ. ಇದು ನಿಜವಾದುದೇ ಆಗಿದ್ದರೆ, ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಹೊಂದಿರಬಹುದೆಂದು ನಾನು ಭಾವಿಸುವುದಿಲ್ಲ. ನಾನು ಅತ್ಯಂತ ಸ್ಪಷ್ಟವಾಗಿ ಹೇಳುವುದೇನೆಂದರೆ ನಿಮ್ನ ವರ್ಗದವರ ಸಮಸ್ಯೆಯು ರಾಜಕೀಯ ಸಮಸ್ಯೆಯೇ ಆಗಿದೆ ಮತ್ತು ಅದನ್ನು ರಾಜಕೀಯವಾಗಿಯೇ ಪರಿಹರಿಸಬೇಕು. ರಾಜಕೀಯ ಅಧಿಕಾರವು ಬ್ರಿಟಿಶರಿಂದ ನಮ್ಮ ಅಸ್ತಿತ್ವದ ಮೇಲೆ ತುಂಬಾ ಬಲಯುತವಾದ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಪ್ರಭಾವ ಬೀರುವವರ ಕೈಗೆ ಸೇರುತ್ತದೆ ಎಂಬುದು ನಮಗೆ ಗೊತ್ತಿದೆ. ಸ್ವರಾಜ್ಯದ ಕಲ್ಪನೆಯು ನಮ್ಮಲ್ಲಿ ಹಲವರ ಮನಸ್ಸಿನಲ್ಲಿ ಈ ಹಿಂದೆ ನಮ್ಮ ಮೇಲೆ ನಡೆದ ದಬ್ಬಾಳಿಕೆ, ಬಲಾತ್ಕಾರ ಮತ್ತು ಅನ್ಯಾಯಗಳನ್ನು ನೆನಪಿಗೆ ತರುತ್ತದೆ ಮತ್ತು ಸ್ವರಾಜ್ಯದಲ್ಲಿಯೂ ಅವುಗಳ ಪುನರಾವರ್ತನೆಯ ಭಯವನ್ನು ಹುಟ್ಟಿಸುತ್ತದೆ. ಆದರೂ ಅದು ಸಿದ್ಧಿಸಲಿ ಎಂದು ನಾವು ಮನಸ್ಸು ಮಾಡಿದ್ದೇವೆ. ದೇಶದ ಇತರ ಬಾಂಧವರೊಡನೆ ತಕ್ಕ ಪ್ರಮಾಣದಲ್ಲಿ ನಮ್ಮನ್ನೂ ಸಹ ರಾಜಕೀಯ ಪ್ರಭುಗಳು ಎಂದು ಪ್ರತಿಷ್ಠಾಪಿಸುತ್ತಾರೆ ಎಂಬ ಆಶೆಯಿಂದ ಅನಿವಾರ್ಯವಾದ ಅಪಾಯವನ್ನು ಎದುರಿಸಲೂ ನಾವು ಸಿದ್ಧರಾಗಿರುತ್ತೇವೆ. ಅದಕ್ಕೆ ನಾವು ಒಂದು ಷರತ್ತಿನ ಮೇಲೆ ಸಮ್ಮತಿಸುತ್ತೇವೆ ಮತ್ತು ಆ ಷರತ್ತು ಅಂದರೆ ನಮ್ಮ ಸಮಸ್ಯೆಯನ್ನು ಕಾಲವೇ ಪರಿಹರಿಸಲಿ ಎನ್ನಬಾರದು. ಕಾಲವು ತನ್ನ ಪವಾಡವನ್ನು ಮಾಡಲಿ ಎಂದು ನಿಮ್ನ ವರ್ಗದವರು ಸುದೀರ್ಘವಾಗಿ ಕಾಯ್ದಿದ್ದಾರೆ. ಬ್ರಿಟಿಶ್ ಸರಕಾರದವರು ಪ್ರಾತಿನಿಧಿಕ ಸರಕಾರದ ವ್ಯಾಪ್ತಿಯನ್ನು ವಿಸ್ತರಿಸಲು ತೆಗೆದುಕೊಂಡ ಶ್ರಮದ ಪ್ರತಿ ಹಂತದಲ್ಲೂ ನಿಮ್ನವರ್ಗದವರನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಕೈ

ಬಿಟ್ಟಿರುತ್ತಾರೆ. ರಾಜಕೀಯ ಅಧಿಕಾರಕ್ಕೆ ಅವರಿಗಿರುವ ಹಕ್ಕಿನ ಬಗ್ಗೆ ಯಾವುದೇ ವಿಚಾರವನ್ನು ಮಾಡಿಲ್ಲ. ಇದನ್ನು ನಾವು ಇನ್ನು ಮುಂದೆ ಸಹಿಸಿಕೊಳ್ಳುವುದಿಲ್ಲ ಎಂದು ಹೇಳಿ ನನಗೆ ಸಾಧ್ಯವಿದ್ದಷ್ಟು ಒತ್ತು ಕೊಟ್ಟು ನಾನು ಪ್ರತಿಭಟಿಸುತ್ತೇನೆ. ನಮ್ಮ ಸಮಸ್ಯೆಯ ಇತ್ಯರ್ಥವು ಸಾಮಾನ್ಯ ರಾಜಕೀಯ ಇತ್ಯರ್ಥದ ಒಂದು ಭಾಗವೇ ಆಗಬೇಕು. ಅದನ್ನು ಭಾವೀ ಆಡಳಿತಗಾರರ ಅನಿಶ್ಚಿತ ಕರುಣೆ ಮತ್ತು ಸದಿಚ್ಛೆಗಳಿಗೆ ಬಿಡ ಬಾರದು. ನಿಮ್ನವರ್ಗದವರು ಹೀಗೆ ಏಕೆ ಒತ್ತಾಯಪಡಿಸುತ್ತಾರೆಂಬುದಕ್ಕೆ ಇರುವ ಕಾರಣಗಳು ಸ್ಪಷ್ಟವಾಗಿಯೇ ಇವೆ. ಅಧಿಕಾರದ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯು ಅಂತಹ ಸ್ವಾಧೀನತೆ ಇಲ್ಲದ ವ್ಯಕ್ತಿಗಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತಾನೆ ಎಂಬುದು ನಮ್ಮಲ್ಲಿ ಪ್ರತಿಯೊಬ್ಬರಿಗೂ ಗೊತ್ತಿದೆ. ಯಾರ ಸ್ವಾಧೀನದಲ್ಲಿ ಅಧಿಕಾರವಿರುತ್ತದೆಯೋ ಅಂಥ ವ್ಯಕ್ತಿಯು, ಅಧಿಕಾರದಿಂದ ಹೊರಗಿರುವವರ ಪರವಾಗಿ ತನ್ನ ಅಧಿಕಾರವನ್ನು ತ್ಯಜಿಸುವುದಿಲ್ಲ ಎಂಬುದೂ ನಮ್ಮೆಲ್ಲರಿಗೆ ಗೊತ್ತಿದೆ. ಈ ಕಾರಣದಿಂದಾಗಿಯೇ ನಾವು ನಮ್ಮ ಸಾಮಾಜಿಕ ಸಮಸ್ಯೆಗಳು ಪರಿಣಾಮಕಾರಿಯಾಗಿ ಇತ್ಯರ್ಥವಾಗುತ್ತದೆ ಎಂದು ಆಶಿಸಲಾರೆವು. ಅಧಿಕಾರ ಮತ್ತು ಪ್ರತಿಷ್ಠೆಯ ಸಿಂಹಾಸನವನ್ನು ಏರಲು ಯಾರಿಗೆ ಸಹಾಯ ಮಾಡಿರುತ್ತೇವೆಯೋ ಅವರನ್ನು ಕೆಳಗಿಳಿಸಲು ಮತ್ತೊಂದು ಕ್ರಾಂತಿಯನ್ನು ನಾವು ಮಾಡದ ಹೊರತು ನಮ್ಮ ಸಮಸ್ಯೆಯನ್ನು ಇತ್ಯರ್ಥಪಡಿಸಲು ಇಚ್ಛಿಸದವರ ಕೈಗೆ ಅಧಿಕಾರ ದೊರಕುವುದಕ್ಕೆ ನಾವು ಅನುಮತಿಸಿದರೆ, ಅತಿ ವಿಶ್ವಾಸದ ಭದ್ರತೆಯಿಂದ ಹಾಳಾಗುವುದರ ಬದಲು ತುಂಬ ಕುತೂಹಲದ ಸಂಶಯಕ್ಕಾಗಿ ಉಪೇಕ್ಷಿಸಲ್ಪಡು ವುದನ್ನು ನಾವು ಬಯಸುತ್ತೇವೆ. ನಮ್ಮ ಸಮಸ್ಯೆ ಇತ್ಯರ್ಥಕ್ಕೆ ಅತಿ ಉತ್ತಮವಾದ ಭರವಸೆ ಎಂದರೆ ರಾಜಕೀಯ ವಿಧಾನವನ್ನು ಅದರ ಮೇಲೆ ನಮ್ಮ ಹಿಡಿತವಿರುವಂತೆ ಬದಲಾಯಿಸುವ ಹಾಗೆ ಒತ್ತಾಯಿ ಸುವುದೇ ನ್ಯಾಯಯುತ ಮತ್ತು ಯುಕ್ತ. ಅದರ ಹೊರತು ಆ ವಿಧಾನದ ಮೇಲೆ ತಮ್ಮದೇ ಆದ ಯಾವ ಬಂಧನವೂ ಇಲ್ಲದ ಹಿಡಿತವಿಟ್ಟುಕೊಳ್ಳಲು ಶತಪ್ರಯತ್ನ ಮಾಡುವವರ ಇಚ್ಛೆಯಲ್ಲಿ ಅಲ್ಲ ಎಂದು ನಾನು ಭಾವಿಸುತ್ತೇನೆ.

ನಿಮ್ನ ವರ್ಗದವರು ತಮ್ಮ ರಕ್ಷಣೆಗಾಗಿ ಮತ್ತು ಸುರಕ್ಷತೆಗಾಗಿ ರಾಜಕೀಯ ವಿಧಾನದ ಎಂಥ ಹೊಂದಾಣಿಕೆಗಳನ್ನು ಬಯಸುತ್ತಾರೆ ಎಂಬ ವಿಷಯವನ್ನು ನಾನು ಉಚಿತ ಸಮಯದಲ್ಲಿ ಹೇಳುತ್ತೇನೆ. ಆ ಸಮಯದಲ್ಲಿ ನಾನು ಹೇಳಲು ಇಚ್ಛಿಸುವುದು ಏನೆಂದರೆ ನಾವೂ ಹೊಣೆಗಾರ ಸರಕಾರವನ್ನು ಬಯಸುತ್ತೇವೆಯಾದಾಗ್ಯೂ, ಕೇವಲ ಯಾಜಮಾನ್ಯದ ಬದಲಾವಣೆ ಅರ್ಥ ಹೊಂದಿರುವ ಸರಕಾರ ನಮಗೆ ಬೇಡ. ನಿಮ್ಮ ಕಾರ್ಯಾಂಗವು ಸಂಪೂರ್ಣ ಹೊಣೆಗಾರವಾಗಿದ್ದರೆ, ಶಾಸಕಾಂಗವೂ ಪೂರ್ಣವಾಗಿ ಮತ್ತು ಪ್ರಾತಿನಿಧಿಕವಾದುದಾಗಿರಲಿ.

ಅಧ್ಯಕ್ಷರೇ, ಇಂಥ ಸ್ಪಷ್ಟ ಪದಗಳಲ್ಲಿ ನಾನು ಮಾತನಾಡಿದ್ದಕ್ಕೆ ನನಗೆ ದುಃಖವೆನಿಸುತ್ತದೆ. ಆದರೆ, ನನಗೆ ಬೇರೆಯ ಮಾರ್ಗವೇ ಇರಲಿಲ್ಲ.

ನಿಮ್ನ ವರ್ಗದವರಿಗೆ ಎಂದೂ ಯಾವ ಮಿತ್ರನೂ ಇರಲಿಲ್ಲ. ಸರಕಾರವು ತನ್ನ ಅಸ್ತಿತ್ವವನ್ನು ಮುಂದುವರೆಸುವುದಕ್ಕಾಗಿ ಯಾವಾಗಲೂ ಅವರನ್ನು ಉಪಯೋಗಿಸಿಕೊಳ್ಳುತ್ತಾ ಬಂದಿದೆ. ಹಿಂದುಗಳು ಅವರನ್ನು ಅಲ್ಲಗಳೆಯಲೆಂದೇ ಅಥವಾ ಇನ್ನೂ ಉತ್ತಮ ರೀತಿಯಲ್ಲಿ ಹೇಳಬೇಕೆಂದರೆ ಹಕ್ಕನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ಅವರನ್ನು ತಮ್ಮವರೆಂದರು. ಮುಸಲ್ಮಾನರು ಅವರ ಭಿನ್ನವಾದ ಅಸ್ತಿತ್ವವನ್ನು ಒಪ್ಪಲು ನಕಾರ ಮಾಡಿದರು. ಏಕೆಂದರೆ ಎದುರಾಳಿಯನ್ನು ಒಪ್ಪಿದರೆ ತಮ್ಮ ವಿಶೇಷ ಹಕ್ಕುಗಳಿಗೆ ಚ್ಯುತಿ ಬರಬಹುದೆಂದು ಅವರು ಭಯಪಟ್ಟರು. ಸರಕಾರದಿಂದ ನಿಮ್ನ ವರ್ಗದವರೆಂದು ಕರೆಯಲ್ಪಟ್ಟು,

ಹಿಂದೂಗಳಿಂದ ಹತ್ತಿಕ್ಕಲ್ಪಟ್ಟು, ಮುಸ್ಲಿಮರಿಂದ ತಿರಸ್ಕರಿಸಲ್ಪಟ್ಟು, ಯಾವುದೇ ರೀತಿಯ ಸರಿಸಮ ಹೋಲಿಕೆ ಇಲ್ಲದಂಥ ಅತ್ಯಂತ ನಿಃಸಹಾಯಕ ಸ್ಥಿತಿಯಲ್ಲಿ ನಮ್ಮನ್ನು ಬಿಡಲಾಗಿದೆ. ಅಂಥ ನಮ್ಮ ಸ್ಥಿತಿಯ ಬಗ್ಗೆ ನಿಮ್ಮ ಲಕ್ಷ್ಯವನ್ನು ನಾನು ಸೆಳೆಯಲೇಬೇಕು.

ಚರ್ಚೆಗೆ ಎತ್ತಿಕೊಂಡ ಇನ್ನೊಂದು ಪ್ರಶ್ನೆಗೆ ಸಂಬಂಧಿಸಿದಂತೆ, ಈ ವಿಷಯವನ್ನು ಚರ್ಚೆಯ ವಿಷಯದೊಂದಿಗೆ ತಳಕು ಹಾಕಲಾಗಿದೆ ಎಂದು ಹೇಳಲು ನನಗೆ ದುಃಖವಾಗುತ್ತದೆ. ಅದರ ಬಗ್ಗೆಯೆ ಒಂದು ಅಧಿವೇಶನವನ್ನೇ ನಡೆಸಬೇಕಾದಂಥ ಮಹತ್ವವನ್ನು ಅದು ಹೊಂದಿದೆ. ಅದು ನಿಮ್ನ ವರ್ಗದವರಿಗೆ ತುಂಬಾ ಆಳವಾಗಿ ಸಂಬಂಧಪಟ್ಟ ವಿಷಯವಾಗಿದೆ ಮತ್ತು ಅದನ್ನು ಅವರು ತುಂಬಾ ಮಹತ್ವದ ಪ್ರಶ್ನೆಯೆಂದು ಭಾವಿಸಿದ್ದಾರೆ. ಬಹುಸಂಖ್ಯಾತರ ದುರಾಡಳಿತದಿಂದ ಅಲ್ಪಸಂಖ್ಯಾತರನ್ನು ಪಾರು ಮಾಡಲು ಕೇಂದ್ರ ಸರಕಾರವು ಪ್ರಾಂತೀಯ ಬಹುಮತಕ್ಕೆ ಸತ್ವಯುತ ತಡೆಯಾಗಿ ಕಾರ್ಯ ಮಾಡುತ್ತಿದೆ ಎಂದು ನಾವು ಆಶಿಸುತ್ತೇವೆ. ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಹಿತಾಸಕ್ತಿಯುಳ್ಳ ಒಬ್ಬ ಭಾರತೀಯನಾಗಿ ನಾನು ಒಕ್ಕೂಟ ಸ್ವರೂಪದ ಸರಕಾರದಲ್ಲಿ ಬಲವಾದ ನಂಬಿಕೆ ಇಟ್ಟವನು ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಅದನ್ನು ವ್ಯಸ್ತಗೊಳಿಸುವ ಯಾವುದೇ ವಿಚಾರವು ನನ್ನನ್ನು ಸ್ವಲ್ಪವೂ ಸಂತೋಷಗೊಳಿಸುವುದಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಭಾರತ ರಾಷ್ಟ್ರವನ್ನು ಕಟ್ಟುವುದಕ್ಕೆ ಏಕರೂಪ ಸರಕಾರವು ತುಂಬಾ ಬಲಯುತವಾದ ಅಂತಃಸತ್ವವಾಗಿರುತ್ತದೆ. ಏಕರೂಪದ ಸರಕಾರದ ಪದ್ಧತಿಯ ಪರಿಣಾಮವಾದ ಒಂದುಗೂಡುವಿಕೆಯ ಕಾರ್ಯಗತಿಯು ಸಂಪೂರ್ಣವಾಗಿಲ್ಲ ಮತ್ತು ಬೆಳವಣಿಗೆಯ ಈ ಕಾಲದಲ್ಲಿ ಮತ್ತು ಅದು ತನ್ನ ಅಂತಿಮಘಟ್ಟವನ್ನು ಕಾಣುವ ಮುಂಚೆಯೇ ಇಂಥ ಸತ್ವಯುತವಾದ ಉದ್ದೀಪನವನ್ನು ವಾಪಸು ತೆಗೆದುಕೊಳ್ಳುವುದು ನನಗೆ ಜಿಗುಪ್ಸೆ ತರುವಂಥದು.

ಏನೇ ಆದಾಗ್ಯೂ, ಈ ಪ್ರಶ್ನೆಯು ಈಗ ಮಂಡಿಸಲಾಗಿರುವ ರೂಪದಲ್ಲಿ ಕೇವಲ ವೈಚಾರಿಕ ಪ್ರಶ್ನೆ ಮಾತ್ರ ಆಗಿದೆ. ಕೇಂದ್ರದ ಏಕತೆಗೆ ಸ್ಥಾನಿಕ ಸ್ವಾಯುತ್ತತೆಯು ಅಸಂಗತವಾಗುವುದಿಲ್ಲ ಎಂಬುದನ್ನು ತೋರಿಸಿದರೆ ಫೆಡರಲ್ ಸ್ವರೂಪದ (ಸಂಯುಕ್ತ ಸ್ವರೂಪದ) ಬಗ್ಗೆ ಪರ್ಯಾಲೋಚಿಸಲು ನಾನು ಸಿದ್ಧನಿರುತ್ತೇನೆ.

ಮಾನ್ಯರೇ, ನಿಮ್ನ ವರ್ಗದವರ ಪ್ರತಿನಿಧಿಯಾಗಿ ಅವರ ಪರವಾಗಿ ನಾನು ಹೇಳಬೇಕಾದುದನ್ನು ಹೇಳಿದ್ದೇನೆ. ಈಗ ನಾವು ಎದುರಿಸುತ್ತಿರುವ ಸಂದರ್ಭದ ಬಗ್ಗೆ ನಾನು ಭಾರತೀಯನಾಗಿ ಸಾಮಾನ್ಯವಾದ ಒಂದೆರಡು ಮಾತುಗಳನ್ನು ಹೇಳಿದರೆ ತಾವು ತಾಳ್ಮೆಯಿಂದ ಕೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ನಾನು ಇಂಥ ಈ ಬೆಳವಣಿಗೆಯ ಮೂಕ ಪ್ರೇಕ್ಷಕನಾಗಿರದಿದ್ದಾಗ್ಯೂ, ಅದರ ಮಹತ್ವದ ಬಗ್ಗೆ ಈಗ ಹೇಳಲಾಗಿರುವುದನ್ನು ಗಮನಿಸಿದರೆ ಈ ಬಗ್ಗೆ ಒಂದು ಶಬ್ದವನ್ನೂ ಸೇರಿಸುವ ಧೈರ್ಯವನ್ನು ನಾನು ಮಾಡಬಾರದು. ಈಗ ನಾವು ಪರಿಹಾರಗಳನ್ನು ಕಂಡುಹಿಡಿಯುವಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸುತ್ತಿರುವೆಯೇ ಎಂಬ ವಿಷಯದಲ್ಲಿ ಚಿಂತಿತನಾಗಿದ್ದೇನೆ. ಬ್ರಿಟಿಶ್ ಪ್ರತಿನಿಧಿಗಳು ಆಯ್ಕೆ ಮಾಡುವ ಅಭಿಪ್ರಾಯ ಮಾತ್ರವೇ ಪರಿಹಾರದ ಆಧಾರವಾಗಬೇಕೆ? ಅವರನ್ನು ಉದ್ದೇಶಿಸಿ ನಾನು ಹೀಗೆ ಕೇಳುತ್ತೇನೆ. ನೀವು ಈ ಸಮಸ್ಯೆಯನ್ನು ಪರಸ್ಪರ ತಿಳವಳಿಕೆಯ ಆಧಾರದ ಮೇಲೆ ಎದುರಿಸುತ್ತೀರೋ ಅಥವಾ ಬಲವನ್ನು ಉಪಯೋಗಿಸಿ ಪರಿಹರಿಸುತ್ತೀರೋ ಎಂಬುದು ನಿಮ್ಮ ನಿರ್ಣಯಕ್ಕೆ ಸಂಬಂಧಪಟ್ಟ ವಿಷಯ. ಏಕೆಂದರೆ ಎಲ್ಲ ಹೊಣೆಗಾರಿಕೆಯು ನಿಮ್ಮದೇ ಆಗಿದೆ. ಬಲ ಪ್ರಯೋಗ ಮಾಡಲು ಮತ್ತು ಅಧಿಕಾರ ಚಲಾಯಿಸುವ ಮತ್ತು ಕಾರಾಗೃಹ ತುಂಬುವ ಆಡಳಿತ ನಡೆಸಲು ವಿಶೇಷ ಆಸಕ್ತಿಯುಳ್ಳ ನಿಮ್ಮಲ್ಲಿನ ಹಲವರಿಗೆ, ರಾಜಕೀಯ ತತ್ವಶಾಸ್ತ್ರದ

ಮಹಾ ಬೋಧಕರಾದ ಎಡ್ಮಂಡ್ ಬರ್ಕ್‌ರವರು ಹೇಳಿದ್ದನ್ನು ನಿಮ್ಮ ನೆನಪಿಗೆ ತರಲು ಅನುಮತಿಸಿರಿ. ಅಮೆರಿಕಾದಲ್ಲಿನ ವಸಾಹತುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬ್ರಿಟಿಶ್ ಸರಕಾರ ಎದುರಿಸಿದಾಗ ಅವರು ಈ ಕೆಳಗಿನಂತೆ ಹೇಳಿದರು:

> "ಕೇವಲ ಬಲ ಪ್ರಯೋಗವು ತಾತ್ಕಾಲಿಕವಾದುದು. ಅದು ಒಂದು ಕ್ಷಣ ಬದುಕಬಹುದು, ಆದರೆ ಪುನಃ ದಮನ ಮಾಡುವುದರ ಅಗತ್ಯತೆಯನ್ನು ತೆಗೆದುಹಾಕಲಾರದು, ಮತ್ತು ಯಾವುದನ್ನು ನಿರಂತರವಾಗಿ ಜಯಿಸಬೇಕಾಗುತ್ತದೆಯೋ ಅದು ರಾಷ್ಟ್ರವನ್ನು ಆಳಲಾರದು. ಬಲ ಪ್ರಯೋಗಕ್ಕೆ ಇದ್ದ ಇನ್ನೊಂದು ತರಕಾರು ಎಂದರೆ ಅದರ ಅನಿಶ್ಚಿತತೆ. ಭಯವು ಯಾವಾಗಲೂ ಬಲದ ಪರಿಣಾಮವಲ್ಲ ಮತ್ತು ಶಸ್ತ್ರಸನ್ನಾಹ ವಿಜಯವಲ್ಲ. ನೀನು ಜಯಶಾಲಿಯಾಗದಿದ್ದರೆ, ನಿನಗೆ ಬೇರೆ ಮಾರ್ಗವಿಲ್ಲ. ಪರಸ್ಪರ ತಿಳಿವಳಿಕೆ ವಿಫಲವಾದರೂ ಬಲ ಇನ್ನೂ ಉಳಿದಿರುತ್ತದೆ. ಆದರೆ ಬಲಪ್ರಯೋಗ ವಿಫಲವಾದರೆ, ಪರಸ್ಪರ ತಿಳುವಳಿಕೆಯ ಅವಕಾಶದ ಆಶೆಯೂ ಇಲ್ಲವಾಗುತ್ತದೆ. ಬಲ ಮತ್ತು ಅಧಿಕಾರವನ್ನು ಕೆಲವು ವೇಳೆ ಕರುಣೆ ಕೊಂಡುಕೊಳ್ಳುತ್ತದೆ. ಆದರೆ, ಅವುಗಳನ್ನು ಶಕ್ತಿಯುತವಾಗಿಸುವ ಮತ್ತು ಸೋತುಹೋದ ಬಲದ ಮೂಲಕ ಭಿಕ್ಷೆಯಾಗಿ ಭಿಕ್ಷೆ ಬೇಡಿ ಪಡೆದು ಕೊಳ್ಳಲಾಗದು. ಬಲಪ್ರಯೋಗಕ್ಕೆ ಇರುವ ಇನ್ನೂ ಹೆಚ್ಚಿನ ತಕರಾರು ಎಂದರೆ, ಯಾವುದನ್ನು ಸಂರಕ್ಷಿಸಲು ಪ್ರಯತ್ನಮಾಡಲಾಗುತ್ತಿದೆಯೋ ಆ ಪ್ರಯೋಗವು ಆ ಉದ್ದೇಶಕ್ಕೇನೆ ಧಕ್ಕೆಯುಂಟು ಮಾಡುತ್ತದೆ. ನೀನು ಯಾವ ವಿಷಯಕ್ಕಾಗಿ (ಉದಾ. ಜನತೆ ವಿಶ್ವಾಸ) ಹೋರಾಟ ಮಾಡಿದೆಯೋ ನೀನು ಪಡೆದದ್ದು ಅದೇ ಅಲ್ಲ. ಅದು ಸ್ಪರ್ಧೆಯಲ್ಲಿ ಬೇಡವಾದ, ಕುಸಿದ, ಹಾಳಾದ ಮತ್ತು ಬಳಕೆಯಾದುದಾಗಿರುತ್ತದೆ."

ಈ ಉಪದೇಶದ ಬೆಲೆ ಮತ್ತು ಪರಿಣಾಮ ನಿಮಗೆಲ್ಲ ಗೊತ್ತು. ಅದಕ್ಕೆ ನೀವು ಲಕ್ಷ್ಯಗೊಡಲಿಲ್ಲ. ನೀವು ಅಮೆರಿಕಾದಂಥ ವಿಶಾಲವಾದ ಭೂ ಪ್ರದೇಶವನ್ನೇ ಕಳೆದುಕೊಂಡಿರಿ. ನಿಮ್ಮ ಒಳಿತನ್ನೇ ಕಳೆದುಕೊಳ್ಳು ವವರೆಗೆ ಮತ್ತು ನಿಮಗಿದ್ದ ಉಳಿದ ಡೋಮಿನಿಯನ್ನುಗಳನ್ನು ಕಳೆದುಕೊಳ್ಳುವವರೆಗೆ ನೀವು ಅದನ್ನೇ ಅನುಸರಿಸಿದಿರಿ. ಪರಸ್ಪರ ತಿಳಿವಳಿಕೆಯ ನೀತಿಯನ್ನು ಬಳಸಲು ಮನಸ್ಸಿರುವ ನಿಮ್ಮಲ್ಲಿ ಕೆಲವರಿಗೆ ಒಂದು ವಿಷಯವನ್ನು ಹೇಳಲು ನಾನು ಇಚ್ಛಿಸುತ್ತೇನೆ. ಡೋಮಿನಿಯನ್ ಸ್ಥಾನದ ಬಗ್ಗೆ ಪರ ಮತ್ತು ವಿರುದ್ಧವಾಗಿ ವಾದಿಸಲು ಇಲ್ಲಿಗೆ ಪ್ರತಿನಿಧಿಗಳನ್ನು ಕರೆಯಲಾಗಿದೆ. ಮತ್ತು ಬುದ್ಧಿವಂತಿಕೆಯ ಹೋರಾಟದಲ್ಲಿ ಯಾವ ಪಕ್ಷದವರು ವಿಜಯಿ ಆಗುತ್ತಾರೋ ಅದರ ಮೇಲೆ ಡೋಮಿನಿಯನ್ ಸ್ಥಾನದ ಮಂಜೂರಾತಿಯು ಅವಲಂಬಿಸಿದೆ ಎಂಬ ಭಾವನೆ ಇಲ್ಲಿ ಇರುವುದು ಎದ್ದು ಕಾಣುತ್ತದೆ. ಇಂಥ ಜ್ವಲಂತ ಸಮಸ್ಯೆಯನ್ನು ತರ್ಕ ಶಾಸ್ತ್ರದ ಸೂತ್ರವೂ ನಿರ್ಧರಿಸುವಂತೆ ಮಾಡುವುದಕ್ಕಿಂತ ಹೆಚ್ಚಿನ ತಪ್ಪು ಇನ್ನೊಂದು ಇರಲಾರದೆಂದು ನಾನು ವಿನಯಪೂರ್ವಕ ಹೇಳುತ್ತೇನೆ. ತರ್ಕಶಾಸ್ತ್ರದೊಡನೆ ಮತ್ತು ತಾರ್ಕಿಕರೊಡನೆ ನನಗೆ ಜಗಳವಿಲ್ಲ. ಆದರೆ ತಮ್ಮ ಅನುಮಿತಿಗಳಿಗೆ ಆಧಾರವಾಗಿ ಆಯ್ಕೆ ಮಾಡುವ ಆಧಾರ ವಚನಗಳ (ಪೂರ್ವಪಕ್ಷದ) ಆಯ್ಕೆಯಲ್ಲಿ ಎಚ್ಚರಿಕೆ ವಹಿಸದೇ ಹೋದರೆ ಆಗಬಹುದಾದ ದುರಂತದ ಬಗ್ಗೆ ನಾನು ನಾನು ಅವರಿಗೆ ಎಚ್ಚರಿಕೆ ಕೊಡುತ್ತೇನೆ. ನಿಮ್ಮ ತರ್ಕದ ಪರಿಣಾಮವನ್ನು ನೀವು ಅಳವಡಿಸಿಕೊಳ್ಳುತ್ತೀರೋ ಅಥವಾ ಬರ್ಕ್‌ಲೇ ಅವರ ಅಸಂಬದ್ಧ ಹೇಳಿಕೆಗಳನ್ನು ಡಾ. ಜಾನ್ಸನ್‌ರವರು ಕಾಲ ಕೆಳಗೆ ಹಾಕಿ ತುಳಿದ ರೀತಿಯಲ್ಲಿ ಖಂಡನ

ಮಾಡುತ್ತೀರೋ, ಅದೆಲ್ಲವೂ ನಿಮ್ಮ ಮನೋಧರ್ಮದ ಮಾತಾಗುತ್ತದೆ. ದೇಶದ ಸದ್ಯದ ಮನೋಧರ್ಮದಲ್ಲಿ ಬಹುಮತದ ಜನತೆ ಒಪ್ಪದ ಯಾವುದೇ ಸಂವಿಧಾನವು ಕಾರ್ಯ ಮಾಡಲಾರದು ಎಂಬುದನ್ನು ತಾವು ಸಾಕಷ್ಟು ಪ್ರಮಾಣದಲ್ಲಿ ಅರಿತುಕೊಂಡಿಲ್ಲ ಎಂಬ ಭಯ ನನ್ನದು. ನೀವು ಆಯ್ಕೆ ಮಾಡಬೇಕಾಗಿದ್ದ ಮತ್ತು ಭಾರತ ಒಪ್ಪಿಕೊಳ್ಳಬೇಕಾಗಿದ್ದ ಕಾಲ, ತಿರುಗಿ ಬಾರದಂತೆ, ಮೀರಿಹೋಗಿದೆ. ನೀವು ರಚಿಸಬೇಕೆಂದಿರುವ ಹೊಸ ಸಂವಿಧಾನವು ಕಾರ್ಯಮಾಡಬೇಕೆಂದು ನೀವು ಇಚ್ಛಿಸಿದರೆ ಜನತೆಯ ಸಮ್ಮತಿಯು ಅದಕ್ಕೆ ಆಧಾರವಾಗಬೇಕೇ ಹೊರತು ತರ್ಕದ ಆಕಸ್ಮಿಕವಲ್ಲ.

### ಇಡೀ ಪರಿಷತ್ತಿನ ಸಮಿತಿ
### ಉಪಸಮಿತಿ–೧ರ ಮಧ್ಯಂತರ ವರದಿಯ ಮೇಲಿನ ಟೀಕೆ
### (ಸಂಯುಕ್ತ ರಾಜ್ಯದ ಸ್ವರೂಪ)

## ೧೬ನೇ ಡಿಸೆಂಬರ್ ೧೯೩೦

* ಡಾ. ಅಂಬೇಡ್ಕರ್: ಸಭೆಯನ್ನು ಮುಂದೂಡುವುದಕ್ಕೆ ಮುಂಚೆ ನನ್ನ ಮಿತ್ರ ಶ್ರೀ ಜೋಶಿಯವರು ಉಲ್ಲೇಖಿಸಿದ ಈ ನಿರ್ದಿಷ್ಟ ವಿಷಯಗಳ ಬಗ್ಗೆ ತಮ್ಮ ಯಾವುದೇ ಅಭಿಪ್ರಾಯಗಳನ್ನು ತಿಳಿಸಲು ಚೇರಮನ್ನರಾಗಿ ಲಾರ್ಡ್ ಛಾನ್ಸಲರ್ ಅವರು ಹಲವು ಸದಸ್ಯರನ್ನು ಆಹ್ವಾನಿಸಿರುತ್ತಾರೆ. ಮತ್ತು ನನ್ನನ್ನೊಳಗೊಂಡು ಕೆಲವು ಸದಸ್ಯರು ಉಪಸಮಿತಿಯ ಚೇರಮನ್ನರಿಗೆ ಪತ್ರಗಳನ್ನು ಕಳಿಸಿದ್ದಾರೆ ಮತ್ತು ಆ ಪತ್ರಗಳನ್ನು ಪರ್ಯಾಲೋಚನೆಗಾಗಿ ಉಪಸಮಿತಿಯು ಮುಂದಿಡುವಂತೆ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ. ಆ ಪತ್ರದ ಯಾವ ಉಲ್ಲೇಖವೂ ವರದಿಯಲ್ಲಿ ಇಲ್ಲ. ಲಾರ್ಡ್ ಸ್ಯಾಂಕಿಯವರು ಆ ಪತ್ರವನ್ನು ಉಪಸಮಿತಿಯ ಮುಂದೆ ಇಡಲಿಲ್ಲ. ಆದರೆ, ಅದನ್ನು ತಮಗೇ ಕಳಿಸಲಾಗಿದೆ ಎಂದು ತಿಳಿಸಿರುತ್ತಾರೆ. ಮಾನ್ಯರೇ, ಪ್ರಧಾನ ಮಂತ್ರಿಯಾಗಿ ಆ ಪತ್ರದ ಬಗ್ಗೆ ತಾವು ಆ ರೀತಿಯಲ್ಲಿ ವ್ಯವಹರಿಸಿದ್ದು ಉಚಿತವಾದುದು ಎಂದು ನಾನು ಭಾವಿಸುವುದಿಲ್ಲ. ಆ ಪತ್ರವನ್ನು ಉಪ ಸಮಿತಿಯ ಚೇರಮನ್ನರಿಗೆ, ಆ ಸಮಿತಿಯವರು ಅದನ್ನು ಪರಿಶೀಲಿಸಲೆಂದು ಕರೆಯಲಾಗಿತ್ತು ಮತ್ತು ಅದರಲ್ಲಿ ಫೆಡರೇಶನ್ ಪ್ರಶ್ನೆಯ ಬಗ್ಗೆ ನಾವು ಇಟ್ಟುಕೊಂಡ ಹಲವು ಖಚಿತ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿತ್ತು. ನನ್ನ ಪರವಾಗಿ ಹೇಳಬೇಕಾದರೆ, ಈಗ ತಯಾರಿಸಿರುವಂತೆ ಈ ವರದಿಯು ಆ ಪತ್ರದಲ್ಲಿ ವ್ಯಕ್ತಪಡಿಸಲಾದ ತತ್ವಗಳಿಗೆ ತುಂಬಾ ವ್ಯತಿರಿಕ್ತವಾಗಿರುವುದರಿಂದ ಈ ಟೀಕೆಯನ್ನು ನಾನು ಮಾಡಲೇಬೇಕಾಗಿದೆ. ಒಂದು ಹಂತದಲ್ಲಿ ನಾವು ಈ ಪ್ರಶ್ನೆಯ ಬಗ್ಗೆ ಚರ್ಚೆ ಮಾಡಲೇಬೇಕಾಗುತ್ತದೆ ಮತ್ತು ಲಾರ್ಡ್ ಛಾನ್ಸಲರ್ ಅವರು ಈ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ನಾನು ಇಚ್ಛಿಸುತ್ತೇನೆ.

ಲಾರ್ಡ್ ಸ್ಯಾಂಕಿ: ಡಾ. ಅಂಬೇಡ್ಕರ್ ಅವರು ತಾವು ಸೂಚಿಸಿದ ಅಂಶವನ್ನು ಎತ್ತಿದ್ದಕ್ಕಾಗಿ ಅವರಿಗೆ ನಾನು ತುಂಬಾ ಋಣಿಯಾಗಿದ್ದೇನೆ. ಏಕೆಂದರೆ ಅದನ್ನು ನಾನೇ ಎತ್ತಬೇಕೆಂದು ಇಚ್ಛಿಸಿದ್ದೆ ಮತ್ತು ನಾನು ಪ್ರಾರಂಭದಲ್ಲೇ ಹೇಳಬಹುದಾಗಿದ್ದ ಹಲವು ಮಾತುಗಳನ್ನು ಹೇಳಲು ಅದು ನನಗೆ ಅವಕಾಶವನ್ನು ಒದಗಿಸಿಕೊಟ್ಟಿದೆ. ಇದು ಪೂರ್ಣ ಚಿತ್ರವಲ್ಲ, ಬೇಗನೇ ನಿಮಗೆ ಪೂರ್ಣ ಚಿತ್ರವನ್ನು ಒದಗಿಸಲಾಗುವುದು. ಡಾ. ಅಂಬೇಡ್ಕರ್ ಅವರೇ, ನಿಮ್ಮ ಸಹಾಯವು ನನಗೆ ಬೇಕು. ಅಂಬೇಡ್ಕರ್ ಅವರೇ, ಆ ಪತ್ರಕ್ಕೆ

---

* ದುಂಡು ಮೇಜಿನ ಪರಿಷತ್ತಿನ ನಡವಳಿಗಳು (ಪು.೧೯೩–೯೫) ಡಾ. ಅಂಬೇಡ್ಕರ್ ಅವರು ಈ ಉಪಸಮಿತಿಯ ಸದಸ್ಯರಾಗಿರಲಿಲ್ಲ. ಆದರೆ, ಅವರು ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಫೆಡರಲ್ ರೂಪರೇಷೆ ಸಮಿತಿಯ ಸದಸ್ಯನಾಗಿ ಸೇರಿಸಲ್ಪಟ್ಟರು.

ಸಂಬಂಧಿಸಿದಂತೆ ಅದನ್ನು ನನಗೆ ಕಳಿಸುವ ಸೌಜನ್ಯ ನಿಮ್ಮದು. ಅದನ್ನು ನಾನು ತುಂಬ ಲಕ್ಷ್ಯಗೊಟ್ಟು ಪರಿಶೀಲಿಸಿದ್ದೇನೆ. ನಾವು ೬ನೆಯ ಅಂಶಕ್ಕೆ ಬಂದಾಗ ಅದರ ಬಗ್ಗೆ ಚರ್ಚಿಸುವುದು ತುಂಬಾ ಮಹತ್ವದ್ದಾಗಿರುತ್ತದೆ. (ನಂ.೬ ಫೆಡರಲ್ ಕಾರ್ಯಾಂಗದ ರಚನೆ, ರೂಪ, ಅಧಿಕಾರ ಮತ್ತು ಹೊಣೆಗಾರಿಕೆಗಳನ್ನು ವಿವರಿಸುತ್ತದೆ.)

ಡಾ. ಅಂಬೇಡ್ಕರ್: ನಾನು ಹಾಗೆ ಹೇಳಬೇಕಾದರೆ, ಈ ಪತ್ರವನ್ನು ನೀವು ಸಮಿತಿಯ ಮುಂದಿಡುತ್ತೀರಾ ಎಂಬುದನ್ನು ತಿಳಿಯಲು ಇಚ್ಛಿಸುತ್ತೇನೆ. ನೀವು ಹಾಗೆ ಯಾವ ಹಂತದಲ್ಲಿ ಮಾಡುವಿರಿ ಎಂಬುದು ನಿಮಗೆ ಬಿಟ್ಟ ವಿಷಯ.

ಲಾರ್ಡ್ ಸ್ಯಾಂಕೀ: ಡಾ. ಅಂಬೇಡ್ಕರ್ ಒಂದು ಕ್ಷಣ ತಡೆಯಿರಿ, ನಾನು ಅದಕ್ಕಿಂತ ಇನ್ನೂ ಹೆಚ್ಚಿನದನ್ನೇ ಮಾಡುವವನಿದ್ದೇನೆ. ನಿಮ್ಮ ಪತ್ರವನ್ನು ಸಮಿತಿಯ ಮುಂದಿಡುವುದಷ್ಟೇ ಅಲ್ಲದೆ, ಆ ಬಗ್ಗೆ ಸಮಿತಿಯ ಲಕ್ಷ್ಯವನ್ನು ನಾನೇ ಸೆಳೆಯುತ್ತೇನೆ.

ಡಾ. ಅಂಬೇಡ್ಕರ್: ಋಣಿಯಾಗಿದ್ದೇನೆ. ನನಗೆ ಅಷ್ಟೇ ಸಾಕು.

ಲಾರ್ಡ್ ಸ್ಯಾಂಕೀ: ಒಂದೇ ಕ್ಷಣ ತಡೆಯಿರಿ. ನಾನು ಇನ್ನೂ ಮುಕ್ತಾಯಗೊಳಿಸಿಲ್ಲ. ನೀವು ನನ್ನ ವಯಸ್ಸಿನವರಾದಾಗ ಇಂಥ ಗಡಿಬಿಡಿಯಲ್ಲಿ ಇರುವುದಿಲ್ಲ. ಆ ಕೆಲಸವನ್ನು ನಾನೇ ಮಾಡುವುದರ ಬದಲಿಗೆ ಈ ಪತ್ರವನ್ನು ಕಳಿಸಿದ ಮಹಾಜನಗಳನ್ನೇ ಕರೆದು ಅವರೇ ಆ ಕಾರ್ಯ ಮಾಡುವಂತೆ ಹೇಳುತ್ತೇನೆ. ಆ ಕೆಲಸವನ್ನು ನಾನೇ ಮಾಡಬೇಕಾದರೆ, ನೀವು ಮಾಡಿದಂತೆ ನಾನು ಮಾಡಲಾರೆನು. ಆದರೆ, ನಾನು ಹೀಗೆ ಮಾಡುತ್ತೇನೆ. ಆ ಪತ್ರದಲ್ಲಿನ ಒಂದು ಶಬ್ದವನ್ನೂ ನಾನು ಬಿಡುವುದಿಲ್ಲ. ಆದರೆ, ಅದನ್ನು ಪರಿಶೀಲಿಸಲು ಯುಕ್ತ ಕಾಲ ಇದು ಅಲ್ಲ. ೬ನೇ ನಂಬರಿನದನ್ನು ವಿಚಾರಿಸುವ ಮಹತ್ವದ ವೇಳೆಯಲ್ಲಿಯೇ ಅದರ ಬಗ್ಗೆ ಪರ್ಯಾಲೋಚಿಸತಕ್ಕದು.

## ಗವರ್ನರ್ ಜನರಲ್ಲರ ವಿಶೇಷ ಅಧಿಕಾರದ ಬಗ್ಗೆ ಚರ್ಚಿಸಲಾಗಿರುವ ವರದಿಯ ೧೬ನೇ ಪ್ಯಾರಾ.

*** ಡಾ. ಅಂಬೇಡ್ಕರ್: (ಆರ್.ಟಿ.ಸಿ.ಯ ನಡವಳಿ ಪು. ೨೬೧)**

ತಾವು ಮುಂದುವರೆಯುವ ಮುಂಚೆ ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಅಂದರೆ ಜನತೆಯ ಯಾವುದೇ ಭಾಗದ ಹಿತಾಸಕ್ತಿಗಳಿಗೆ ಆಗಬಹುದಾದ ತೀವ್ರತರ ಅನ್ಯಾಯಗಳ ಸಂದರ್ಭದಲ್ಲಿ ಹಸ್ತಕ್ಷೇಪ ಮಾಡಲು ಗವರ್ನರ ಜನರಲ್ಲರಿಗಿರುವ ಅಧಿಕಾರವನ್ನು ಉಳಿಸಿಕೊಂಡು ಬರತಕ್ಕುದು. ಕೆನಡಾದ ಸಂವಿಧಾನದ ೯೩ನೇ ಕಲಮಿನಲ್ಲಿರುವುದನ್ನು ಅದೇ ರೂಪದಲ್ಲಿಯೇ ಸಂವಿಧಾನದಲ್ಲಿ ಸೇರಿಸತಕ್ಕುದು.

ಲೆ. ಕರ್ನಲ್ ಗಿಡ್ನಿ: ಡಾ. ಅಂಬೇಡ್ಕರ್ ಅವರು ಉಲ್ಲೇಖಿಸಿದಂತೆ ಗವರ್ನರ್ ಜನರಲ್ ಅವರಿಗೆ ಅಧಿಕಾರವನ್ನು ಕಾಯ್ದಿರಿಸುವ ವಿಷಯಕ್ಕೆ ಸಂಬಂಧಿಸಿ ಅವರು ಹೇಳಿದ ಎಲ್ಲವನ್ನೂ ನಾನು ಒಪ್ಪುತ್ತೇನೆ ಮತ್ತು ಸಮರ್ಥಿಸುತ್ತೇನೆ.

---

* ದುಂಡು ಮೇಜಿನ ಪರಿಷತ್ತಿನ ನಡವಳಿಗಳು, ಪು. ೨೬೧
ಅದೇ ಪುಟಗಳು ೨೭೮–೭೦

ಅಧ್ಯಕ್ಷ: (ಪೂರ್ವೋಲ್ಲೇಖ ಪಿಪಿ ೨೭೮–೭೯): ಪ್ಯಾರಾಗ್ರಾಫ್ ೩೪ರ ಬಗ್ಗೆ ಕರ್ನಲ್ ಗಿಡ್ನಿ ಅವರು ಮಾತನಾಡಲಿ.

ಲೆ. ಕ. ಗಿಡ್ನಿ: ಈ ಪ್ಯಾರಾಗ್ರಾಫಿನ ಮೇಲೆ ಅಭಿಪ್ರಾಯವೊಂದನ್ನು ಹೇಳಲು ನಾನು ಇಚ್ಛಿಸುತ್ತೇನೆ ಮತ್ತು ನಾನು ಪ್ಯಾರಾಗ್ರಾಫ್ ೨೯ರೊಂದಿಗೆ ಜೊತೆಗೂಡಿಸಿ ಹಾಗೆ ಮಾಡುತ್ತೇನೆ. ಪ್ಯಾರಾಗ್ರಾಫದಲ್ಲಿ ಹೇಳಿದಂತೆ ಮೇಲ್ಮನೆಯಲ್ಲಿ ವಿವಿಧ ಸಮುದಾಯಗಳ ಪ್ರತಿನಿಧಿತ್ವವನ್ನು ನಿರ್ಧರಿಸುವಾಗ ಜನಸಂಖ್ಯಾ ಪ್ರಮಾಣವನ್ನು ಅಳವಡಿಸಿಕೊಳ್ಳಬೇಕು. ಆದರೆ, ಈ ಪ್ಯಾರಾಗ್ರಾಫ್ ೩೪ರಲ್ಲಿ "ಒಂದು ವೇಳೆ" ಎಂಬ ಪದವನ್ನು ಉಪಯೋಗಿಸಲಾಗಿದೆ. ಅದು ಅಲ್ಪಸಂಖ್ಯಾತರಿಗೆ ಮತ್ತು ವಿಶೇಷ ಹಿತಾಸಕ್ತಿಗಳಿಗೆ ಮೇಲ್ಮನೆಯಲ್ಲಿ ಒಬ್ಬನೇ ಒಬ್ಬ ಪ್ರತಿನಿಧಿಯನ್ನೂ ದೊರಕಿಸಿಕೊಳ್ಳದಂತೆ ಬಾಗಿಲನ್ನು ಇನ್ನೂ ಬಿಗಿಯಾಗಿ ಮುಚ್ಚಿಬಿಡುತ್ತದೆ. ಈ ಪ್ಯಾರಾಗ್ರಾಫಿನಿಂದ "ಒಂದು ವೇಳೆ" ಎಂಬ ಪದವನ್ನು ಮತ್ತು ಮುಂದಿನ "ಮತ್ತು ಖಚಿತವಾಗಿ ಕೆಳಮನೆಯಲ್ಲಿ" ಎಂಬ ಪದಗಳನ್ನು ತೆಗೆದುಹಾಕಬೇಕೆಂದು ನಾನು ಸೂಚಿಸುತ್ತೇನೆ. ಆಗ ಪುನಃ ರೂಪಿಸಲಾದ ಆ ಪ್ಯಾರಾಗ್ರಾಫ್ ಕೆಳಗಿನಂತೆ ಆಗುತ್ತದೆ.

"ಎರಡೂ ಸದನಗಳಲ್ಲಿ ಪ್ರಾತಿನಿಧ್ಯಕ್ಕಾಗಿ ಆ ಪ್ರಾತಿನಿಧ್ಯವು ಎಷ್ಟೇ ಚಿಕ್ಕದಾಗ್ಯೂ, ಉಪಬಂಧ ಕಲ್ಪಿಸ ಬೇಕು."

ಹಾಗಾದಲ್ಲಿ ಮೇಲ್ಮನೆಯಲ್ಲಿ ಎಲ್ಲ ಅಲ್ಪಸಂಖ್ಯಾತ ಕೋಮುಗಳಿಗೆ, ಅದು ಎಷ್ಟೇ ಚಿಕ್ಕದಿದ್ದಾಗ್ಯೂ, ಪ್ರಾತಿನಿಧ್ಯವನ್ನು ಪಡೆಯಲು ಹಕ್ಕು ಉಂಟಾಗುತ್ತದೆ.

ಡಾ. ಅಂಬೇಡ್ಕರ್: ಕರ್ನಲ್ ಕಿಡ್ನಿ ಅವರು ಹೇಳಿದ್ದಕ್ಕೆ ನಾನು ಸಹಮತಿಸುತ್ತೇನೆ.

(೩೪ನೇ ಪ್ಯಾರಾಗ್ರಾಫ್ ಫೆಡರಲ್ ಶಾಸಕಾಂಗದಲ್ಲಿ ವಿಶಿಷ್ಟ ಹಿತಾಸಕ್ತಿಗಳ ಮತ್ತು ರಾಜನ ಪ್ರಾತಿನಿಧಿತ್ವದ ಬಗ್ಗೆ ವಿವರಿಸುತ್ತದೆ.)

ಉಪಸಮಿತಿ ನಂ.೨ರಲ್ಲಿ (ಪ್ರಾಂತೀಯ ಸಂವಿಧಾನ)

# ಒಂದನೆಯ ಸಭೆ–೪ನೇ ಡಿಸೆಂಬರ್ ೧೯೩೦

**ಡಾ. ಅಂಬೇಡ್ಕರ್ (ಉಪಸಮಿತಿ ನಂ.೨ (ಪ್ರಾಂತೀಯ ಸಂವಿಧಾನ)**
**ಭಾರತ ಸರಕಾರ ಸೆಂಟ್ರಲ್ ಪಬ್ಲಿಕೇಷನ್ ಬ್ರಾಂಡ್, ಕಲ್ಕತ್ತ ೧೯೩೧ರ ನಡಾವಳಿಗಳು ಪು.೧೮–೨೨)**

ಈ ಕೆಳಗಿನವು ಈ ಸಮಿತಿಗೆ ವಹಿಸಿಕೊಡಲಾದ ವಿಷಯಗಳಾಗಿದ್ದವು.
೧. "ಪ್ರಾಂತೀಯ ಅಧಿಕಾರಗಳು"
೨. "ಪ್ರಾಂತೀಯ ಕಾರ್ಯಾಂಗದ ರಚನೆ, ರೂಪ, ಅಧಿಕಾರಗಳು ಮತ್ತು ಹೊಣೆಗಾರಿಕೆಗಳು"

ನನ್ನ ಸೂಚನೆಗಳನ್ನು ಮೂರು ಶೀರ್ಷಿಕೆಗಳಲ್ಲಿ ವಿಭಜಿಸುತ್ತೇನೆ:–
೧. ಪ್ರಾಂತೀಯ ಸ್ವಾಯತ್ತತೆ.
೨. ಪ್ರಾಂತಗಳ ಹೊಣೆಗಾರಿಕೆ
೩. ಪ್ರಾಂತೀಯ ಸೇವೆಗಳು

ಪ್ರಾಂತೀಯ ಸ್ವಾಯತ್ತತೆ ಮತ್ತು ಸೇವೆಗಳಲ್ಲಿ ನಾನು ವ್ಯತ್ಯಾಸ ಮಾಡುತ್ತೇನೆ. ಪ್ರಾಂತೀಯ ಸ್ವಾಯತ್ತತೆಯ ಪ್ರಶ್ನೆಯು ಪ್ರಾಂತೀಯ ಸಂಬಂಧದ ಪರಿಭಾಷೆಯ ಪ್ರಶ್ನೆಯನ್ನು ಎತ್ತುತ್ತದೆ ಎಂದು ನನಗೆ ತೋರುತ್ತದೆ. ಈಗಿರುವ ಪರಿಸ್ಥಿತಿಗಳಲ್ಲಿ ಪ್ರಾಂತೀಯ ಸರಕಾರಗಳಿಗೆ ಸಾಧ್ಯವಿರುವಷ್ಟರ ಮಟ್ಟಿಗೆ ಸಂಪೂರ್ಣ ಸ್ವಾಯತ್ತಾಧಿಕಾರವನ್ನು ಕೊಡಬೇಕು ಮತ್ತು ಈಗ ಕೇಂದ್ರ ಸರಕಾರವು ಚಲಾಯಿಸುತ್ತಿರುವಂಥ ನಿಯಂತ್ರಣದಿಂದ ಅವು ಮುಕ್ತವಾಗಿರತಕ್ಕುದು ಎಂಬುದಕ್ಕೆ ಈಗ ಕಾಲ ಪಕ್ವವಾಗಿದೆ ಎಂಬ ಮನೋಭಾವನೆ ಹೊಂದಿದವರೊಂದಿಗೆ ನಾನೂ ಸೇರುತ್ತೇನೆ. ಆದರೆ ಮಾನ್ಯರೆ ಈ ಸಮ್ಮೇಳನದಲ್ಲಿ ನಾನು ಪ್ರತಿನಿಧಿಸುವ ವಿಶೇಷ ವರ್ಗದವರ ದೃಷ್ಟಿಯಿಂದ ಮತ್ತು ಭಾರತದ ಒಟ್ಟು ಹಿತಾಸಕ್ತಿಯ ಮತ್ತು ವಿಶೇಷವಾಗಿ ಕಾರ್ಮಿಕ ವರ್ಗದವರ ದೃಷ್ಟಿಯಿಂದ ಪ್ರಾಂತೀಯ ಸ್ವಾಯತ್ತತೆಯ ಸಮಸ್ಯೆಗಳನ್ನು ಗಮನದಲ್ಲಿ ಇಟ್ಟುಕೊಂಡಾಗ, ಮುಂದಿನ ಯಾವುದೇ ಸಂವಿಧಾನದಲ್ಲಿ ಪ್ರಾಂತಗಳಿಗೆ ಪ್ರಾಂತೀಯ ಸ್ವಾಯತ್ತತೆಯ ಸಂವಿಧಾನವವನ್ನು ರೂಪಿಸುವಾಗ ಆ ಸ್ವಾಯತ್ತತೆಯ ಸ್ವರೂಪವನ್ನು ಮಿತಗೊಳಿಸುವ ಹಲವು ನಿರ್ದಿಷ್ಟ ಸಂಗತಿಗಳನ್ನು ಗಮನಿಸತಕ್ಕುದು ಎಂದು ನನಗೆ ಅನಿಸುವುದಾಗಿ ಮತ್ತೆ ಸೂಚಿಸದಿರಲಾರೆ.

ಪ್ರಾಂತೀಯ ಸ್ವಾಯತ್ತತೆಗೆ ಇರುವ ಮೊದಲನೆಯ ಪರಿಮಿತಿ ಎಂದರೆ ಪ್ರಾಂತೀಯ ಸ್ವರೂಪದವುಗಳಾದಾಗ್ಯೂ ಇಡಿಯ ಭಾರತಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಅದು ಒಳಪಟ್ಟಿರಬೇಕು. ಈ ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರಾಂತಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ಆದಾಗ್ಯೂ ಅವುಗಳ ಬಗ್ಗೆ ಕೇಂದ್ರ ಸರಕಾರವನ್ನು ಕೂಡ ಅದರ ಅಧಿಕಾರ ವ್ಯಾಪ್ತಿಯಿಂದ ಹೊರಗಿಡತಕ್ಕುದಲ್ಲ. ಉದಾಹರಣೆಗೆ, ಕಾರ್ಮಿಕರ ಕಾನೂನು, ರೈತರಿಗೆ ಮತ್ತು ಕೃಷಿಗೆ ಸಂಬಂಧಪಟ್ಟ ಶಾಸನಗಳಿಂದ ಉದಾಹರಿಸ

ಬಯಸುತ್ತೇನೆ. ಭಾರತದಂಥ ದೇಶದಲ್ಲಿ ನಿಃಸಂಶಯವಾಗಿಯೂ ಈ ವಿಷಯಗಳು ಪ್ರಾಂತೀಯ ವಿಷಯಗಳೇ ಆಗಿರಬೇಕು. ಆದರೆ ಅವುಗಳನ್ನು ಪೂರ್ಣವಾಗಿ ಅಂಥ ಸಂಕುಚಿತ ದೃಷ್ಟಿಯಿಂದ ನೋಡ ತಕ್ಕುದು ಎಂದು ನಾನು ಭಾವಿಸುವುದಿಲ್ಲ. ಅವುಗಳನ್ನು ಇಡಿಯ ಭಾರತದ ಸ್ವರೂಪದ್ದಾಗಿಲ್ಲದೆಯೇ ಸಂಪೂರ್ಣ ಪ್ರಾಂತೀಯ ವಿಷಯಗಳೆಂದು ಕಾಣಲಾಗದು. ಅದು ಪ್ರಾಂತೀಯ ಸ್ವಾಯತ್ತತೆಯನ್ನು ಉಲ್ಲಂಘಿಸಿದರೂ ಅಡ್ಡಿಯಿಲ್ಲ. ಈ ಸ್ವರೂಪದ ವಿಷಯಗಳ ಮೇಲೆ ಕೇಂದ್ರ ಸರಕಾರವು ಕೆಲಮಟ್ಟಿನ ಅಧಿಕಾರ ವ್ಯಾಪ್ತಿಯನ್ನು ಹೊಂದಿರಲೇಬೇಕು.

ಎರಡನೆಯದಾಗಿ ಭಾರತದ ಮುಂದಿನ ಸಂವಿಧಾನದಲ್ಲಿ ಪ್ರಾಂತಗಳಿಗೆ ಸಾಧ್ಯವಿರುವಷ್ಟರ ಮಟ್ಟಿಗೆ ಸಂಪೂರ್ಣ ಸ್ವಾಯತ್ತತೆಯನ್ನು ಕೊಡುವ ದೃಷ್ಟಿಯಿಂದ ಸರಕಾರದ ಅಧಿಕಾರಗಳನ್ನು ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ನಡುವೆ ಹಂಚಿಕೆ ಮಾಡುವಲ್ಲಿ ಸ್ಪಷ್ಟಪಡಿಸದಿರುವಂಥ ಅಧಿಕಾರಗಳನ್ನು ಕೇಂದ್ರಕ್ಕೇ ಬಿಟ್ಟುಕೊಡಬೇಕು ಎಂದು ನಾನು ಹೇಳುತ್ತೇನೆ. ಈಗ ಈ ಅಂಶ ಕುರಿತಂತೆ ಭಿನ್ನಾಭಿಪ್ರಾಯ ಇದೆ ಎಂದು ನಾನು ಭಾವಿಸುವುದಿಲ್ಲ. ಭಾರತದಲ್ಲಿನ ಈಗಿರುವ ಪರಿಸ್ಥಿತಿಯಲ್ಲಿ ಅಂದರೆ ನಮ್ಮೆಲ್ಲರಿಗೂ ತಿಳಿದಿರುವಂತೆ ಪ್ರತ್ಯೇಕತಾವಾದದ ಮನೋಪ್ರವೃತ್ತಿ ಇರುವಲ್ಲಿ ಮತ್ತು ಪ್ರಾಂತೀಯ ಮತ್ತು ಸ್ಥಾನಿಕ ನಿಷ್ಠೆಯು ರಾಷ್ಟ್ರೀಯತೆಗಿಂತ ಹೆಚ್ಚು ಪ್ರಭಾವಶಾಲಿಯಾಗಿರುವಲ್ಲಿ ನಾವು ಸಂಪೂರ್ಣ ಸ್ವಾಯತ್ತತೆಯುಳ್ಳ ಘಟಕಗಳ ಸಂಯುಕ್ತ ಭಾರತವನ್ನು ಕಟ್ಟುತ್ತಿರುವಾಗ, ಇಡಿಯ ಭಾರತವನ್ನು ಶಕ್ತಿಯುತವಾದ ಮತ್ತು ಒಂದುಗೂಡಿದ ರಾಷ್ಟ್ರವನ್ನಾಗಿ ಮಾಡುವ ವ್ಯವಸ್ಥೆ ಉಳಿದೇ ಉಳಿಯುತ್ತದೆ ಎಂದು ನಾನು ಹೇಳು ತ್ತೇನೆ. ಇನ್ನೂ ಮುಂದುವರೆದು ನಾನು ಹೇಳಬಯಸುವುದೇನೆಂದರೆ ಕೇಂದ್ರ ಸರಕಾರದಲ್ಲಿ ಅಧಿಕಾರ ವನ್ನು ಕಾಯ್ದಿರಿಸುವುದು ಪ್ರಾಂತಗಳ ಸ್ವಾಯತ್ತತೆಗೆ ಬಾಧಕವಾಗಬಹುದೆಂದು ನಾನು ಭಾವಿಸು ವುದಿಲ್ಲ. ಕೆನಡಾ ಮೊಕದ್ದಮೆಯಲ್ಲಿ ಪ್ರಿವಿ ಕೌನ್ಸಿಲ್ಲಿನ ಜ್ಯೂಡಿಶಿಯಲ್ ಕಮಿಟಿಯವರು ಅರ್ಥೈಸಿರುವಂತೆ "ಅಧಿಕಾರಗಳ ಕಾಯ್ದಿರಿಸುವಿಕೆ"ಯು ಈ ಅಧ್ಯಾರೋಹಿ ಪರಿಣಾಮವನ್ನು ಹೊಂದಿರಲಿಲ್ಲ. ಅಂದರೆ ಸ್ಪಷ್ಟವಾಗಿ ಪ್ರಾಂತಗಳಿಗೆ ಹಂಚಿಕೊಡಲಾಗಿರದ ಕ್ಷೇತ್ರಗಳಲ್ಲಿ ತುರ್ತು ಪರಿಸ್ಥಿತಿಯಲ್ಲಿ ಅಸ್ತಿತ್ವಕ್ಕೆ ಬಂದ ಅಧಿಕಾರದಿಂದ ಪ್ರಾಂತೀಯ ಸ್ವಾಯತ್ತತೆಗೆ ನಿಜವಾಗಿಯೂ ಯಾವುದೇ ರೀತಿಯಲ್ಲಿ ಬಾಧೆಯುಂಟಾಗುತ್ತದೆ ಎಂದು ನಾನು ಭಾವಿಸುವುದಿಲ್ಲ.

ಪ್ರಾಂತೀಯ ಸ್ವಾಯತ್ತತೆಯ ಪ್ರಶ್ನೆಗೆ ಸಂಬಂಧಿಸಿ ನಾನು ಹೇಳಬೇಕಾದ ಎರಡನೆಯ ವಿಷಯ ವೆಂದರೆ ಅಲ್ಪಸಂಖ್ಯಾತರ ಮತ್ತು ನಿಮ್ನ ವರ್ಗದವರ ಹಿತಾಸಕ್ತಿಗಳ ರಕ್ಷಣೆಗೆ ಅವಕಾಶ ಮಾಡಿಕೊಟ್ಟು ಅದರ ಸ್ವಾಯತ್ತತೆಯನ್ನು ಪರಿಮಿತಗೊಳಿಸಬೇಕು. ಹೊಸ ಸಂವಿಧಾನದಿಂದ ರೂಪಿತವಾಗುವ ಭಾರತದ ಸ್ಥಿತಿಯನ್ನು ನಾನು ಕಣ್ಣ ಮುಂದೆ ಚಿತ್ರಿಸಿಕೊಂಡಾಗ, ಕೆಲವು ವಿಶಿಷ್ಟ ಕೋಮಿನವರು ಬಹುಸಂಖ್ಯೆ ಯಲ್ಲಿರುವ ಕೆಲವು ಪ್ರಾಂತಗಳಿರುವುದು ಕಂಡು ಬರುತ್ತದೆ. ಆದರೆ, ನಾನು ಪ್ರತಿನಿಧಿಸುವ ನಿಮ್ನ ವರ್ಗ ದವರು ಎಲ್ಲ ಪ್ರಾಂತಗಳಲ್ಲೂ ಅಲ್ಪಸಂಖ್ಯಾತರೇ ಆಗಿದ್ದಾರೆ. ಈ ಹಂತದಲ್ಲಿ ಪ್ರಾಂತೀಯ ಬಹುಮತ ಗಳವರು ಈ ಬಡಜನತೆ ಸಂಬಂಧಪಟ್ಟಂತೆ ದುರಾಡಳಿತ ನಡೆಸಿದಲ್ಲಿ ಅಥವಾ ಅವರ ಹಿತಾಸಕ್ತಿ ಗಳನ್ನು ನಿರ್ಲಕ್ಷಿಸಿದಲ್ಲಿ ಅಲ್ಪಸಂಖ್ಯಾತರಿಗೆ ಮೇಲ್ಮನವಿ ಮಾಡುವ ಯಾವುದೇ ಅಧಿಕಾರವನ್ನು ಕೊಡದೆಯೇ ಅವರ ಹಣೇಬರಹ ನಿರ್ಧರಿಸುವಲ್ಲಿ ಸಂಪೂರ್ಣವಾದ ಅಡೆತಡೆ ಇಲ್ಲದ ಮತ್ತು ಸರ್ವಾಧಿಕಾರೀ ಅಧಿಪತ್ಯವನ್ನು ನಡೆಸಲು ನಾವು ಹೇಗೆ ಅನುಮತಿಸಬೇಕೆಂಬುದು ನನಗೆ ಅರ್ಥವಾಗುವುದಿಲ್ಲ. ಯಾವುದೋ ಒಂದು ಹಂತದಲ್ಲಿ ಪ್ರಾಂತೀಯ ಸರಕಾರದ ಮೇಲೆ ಒಂದು ಪ್ರಾಧಿಕಾರವಿರಲೇಬೇಕು. ಅದು ಪ್ರಾಂತೀಯ ಸರಕಾರಗಳು

ನಿಮ್ನ ವರ್ಗದವರ ಯಾವುದೇ ಪ್ರತಿಕೂಲ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಾಗ ಮಧ್ಯ ಪ್ರವೇಶಿಸಿ ಅದರಿಂದ ಅವರನ್ನು ಸಂರಕ್ಷಿಸುವ ಸ್ಥಾನದಲ್ಲಿರಬೇಕು.

ಏನೇ ಆದರೂ ನನ್ನ ಅಭಿಪ್ರಾಯದಲ್ಲಿ ಈ ಮೂರು ವಿಷಯಗಳು ಭಾರತ ಭಾವೀ ಪ್ರಾಂತೀಯ ಸರಕಾರಗಳ ಸ್ವಾಯತ್ತತೆಯನ್ನು ಪರಿಮಿತಗೊಳಿಸತಕ್ಕುದು.

ಪ್ರಾಂತೀಯ ಸರಕಾರಗಳ ಹೊಣೆಗಾರಿಕೆಯ ಸ್ವರೂಪದ ಪ್ರಶ್ನೆಗೆ ಸಂಬಂಧಿಸಿದಂತೆ ನನ್ನ ಮೊದಲನೆಯ ಅಭಿಪ್ರಾಯವೆಂದರೆ ಪ್ರಾಂತೀಯ ಶಾಸಕಾಂಗದ ಹೊಣೆಗಾರಿಕೆಯ ಇಡಿಯ ಪ್ರಶ್ನೆಯು ಪ್ರಾಂತಗಳಲ್ಲಿ ಯಾವ ಪ್ರಕಾರದ ಶಾಸಕಾಂಗವನ್ನು ನೀವು ಹೊಂದಲು ಇಚ್ಛಿಸುತ್ತೀರಿ ಎಂಬುದನ್ನೇ ಸಂಪೂರ್ಣವಾಗಿ ಅವಲಂಬಿಸಿರುತ್ತದೆ. ಪ್ರಾಂತಗಳಲ್ಲಿ ನೀವು ತರಬಯಸುವ ಶಾಸಕಾಂಗವು ಆ ಪ್ರಾಂತದ ಒಟ್ಟು ಜನತೆಯನ್ನು ಪ್ರತಿಬಿಂಬಿಸುವ ಶಾಸಕಾಂಗವಾಗಿದ್ದರೆ, ಮತ್ತು ನಿಜವಾಗಿಯೂ ಅದು ಕೇವಲ ವಸ್ತು ಸಂಗ್ರಹಾಲಯ ಸ್ವರೂಪದ್ದಲ್ಲದೆ ಅಂದರೆ, ಪ್ರತಿಯೊಂದು ಪಂಗಡದ ಕೆಲವು ಮಾದರಿಗಳನ್ನು ಸಾಮಾನ್ಯ ಸಂದರ್ಶಕನು ನೋಡಲು ಇಡುವಂತೆ ಇರದೆ, ಪರಿಪೂರ್ಣ ಪ್ರಾತಿನಿಧಿಕ ಸ್ವರೂಪದ್ದಾಗಿದ್ದರೆ, ತಮ್ಮ ಅಸ್ತಿತ್ವಕ್ಕೇ ಧಕ್ಕೆ ಇದೆ ಎಂದು ಭಯಪಡುತ್ತಿರುವ ಪ್ರತಿಯೊಂದು ವರ್ಗದವರು ಮತ್ತು ಎಲ್ಲ ಅಲ್ಪಸಂಖ್ಯಾತರು ಪ್ರಭಾವವನ್ನು ಬೀರುವಂಥ ಸ್ಥಾನದಲ್ಲಿ ಇದ್ದರೆ, ಆಗ ಅಂಥ ಶಾಸಕಾಂಗದಲ್ಲಿ ಪ್ರಾಂತೀಯ ಹೊಣೆಗಾರಿಕೆಯನ್ನು ಪೂರ್ಣ ರೂಪದಲ್ಲಿ ಆಚರಣೆಯಲ್ಲಿ ತರಲು ಯಾವುದೇ ಹಾನಿ ಇರಲಾರದು ಎಂದು ನಾನು ಭಾವಿಸುತ್ತೇನೆ. ಇದು ನನ್ನ ಪ್ರಥಮ ಅಭಿಪ್ರಾಯ.

ಶಾಸಕಾಂಗವು ಪೂರ್ಣವಾಗಿಯೂ ಮತ್ತು ಯಥೋಚಿತವಾಗಿಯೂ ಎಲ್ಲ ವರ್ಗಗಳ ಪ್ರಾತಿನಿಧಿಕ ಸ್ವರೂಪದ್ದಾಗಿರತಕ್ಕುದು ಎಂಬ ಷರತ್ತನ್ನು ವಿಧಿಸುವುದು ಈಗ ಕಾಯ್ದಿರಿಸಲಾಗಿರುವ ವಿಷಯಗಳನ್ನು ಜನಪ್ರಿಯ ನಿಯಂತ್ರಣಕ್ಕೆ ವರ್ಗಾಯಿಸುವಲ್ಲಿ ಯಾವ ಅಡಚಣೆಯೂ ನನಗೆ ಕಾಣುವುದಿಲ್ಲ.

ಪ್ರಾಂತದಲ್ಲಿ ಹೊಣೆಗಾರಿಕೆಯು ಜಂಟಿಯಾಗಿರತಕ್ಕುದೇ ಅಥವಾ ವೈಯಕ್ತಿಕವಾಗಿರತಕ್ಕುದೇ ಎಂಬ ಪ್ರಶ್ನೆಗೆ ಸಂಬಂಧಿಸಿದಂತೆ, ಅಂತ ಹೊಣೆಗಾರಿಕೆಯು ಜಂಟಿಯಾಗಿರಬೇಕು. ಅಷ್ಟೇ ಅಲ್ಲ, ಅದು ಜಂಟಿ ಸ್ವರೂಪದ್ದೇ ಆಗಿರತಕ್ಕುದು ಎಂದು ಹೇಳಲು ನಾನು ಸ್ವಲ್ಪವೂ ಹಿಂಜರಿಯುವುದಿಲ್ಲ. ನಾನು ವಿಧಾನಪರಿಷತ್ತಿನ ಸದಸ್ಯನಾಗಿದ್ದೇನೆ ಮತ್ತು ಪ್ರಾಂತಗಳಲ್ಲಿ ಮಂತ್ರಿಗಳು ಹೇಗೆ ತಮ್ಮ ಕೆಲಸವನ್ನು ನಿರ್ವಹಿಸುತ್ತಾರೆ ಎಂಬುದನ್ನು ಅರಿತಿದ್ದೇನೆ. ವಿಧಾನ ಪರಿಷತ್ತಿನ ಸದಸ್ಯರಾಗುವ ಸುದೈವಿ ಅಥವಾ ದುರ್ದೈವಿಗಳಿಗೆ ನನಗಾಗಿರುವಂತೆ ತಾವು ಅಳವಡಿಸಿಕೊಳ್ಳುತ್ತಿರುವ ನಿರ್ದಿಷ್ಟ ನೀತಿಯ ಬಗ್ಗೆ ಒಮ್ಮತದ ಅಥವಾ ಅವಿರೋಧದ ಅಭಿಪ್ರಾಯವಿಲ್ಲದೆ ಮಂತ್ರಿ ಮಂಡಲಗಳು ಶಿಥಿಲ ಕೂಟಗಳಂತೆ ಕಾರ್ಯ ಮಾಡುವುದನ್ನು ನೋಡುವ ಅನುಭವ ಆಗಿದೆ ಎಂದು ನಾನು ನಂಬಿರುತ್ತೇನೆ. ಹೋಳಾದ ಪರಿಷತ್ತುಗಳು ಮತ್ತು ಪರಸ್ಪರ ಸಮರ್ಥನೆ ಮಾಡಲು ಮನಸ್ಸಿಲ್ಲದ ಮಂತ್ರಿಗಳೂ ಆಗಿ ಹೋಗಿದ್ದಾರೆ.

ಇವುಗಳ ಪರಿಣಾಮವೆಂದರೆ ಯಾವೊಂದು ಸಂದರ್ಭದಲ್ಲಿಯೂ ಮಂತ್ರಿಮಂಡಲವು ವಿವರವಾಗಿ ರೂಪಿಸಿ ಒಮ್ಮತದಿಂದ ಪರ್ಯಾಲೋಚಿಸಿದ ನೀತಿಯನ್ನು ಶಾಸಕಾಂಗದ ಕೌನ್ಸಿಲ್ಲಿನ ಮುಂದೆ ಇಟ್ಟಿಲ್ಲ. ಮನಬಂದ ರೀತಿಯಲ್ಲಿ ಕಾರ್ಯ ಮಾಡಲಾಗಿದೆ. ನಮ್ಮ ಹೊಣೆಗಾರಿಕೆಯ ಭವಿಷ್ಯತ್ತಿನಲ್ಲಿಯೂ ಈ ರೀತಿಯಾಗಿ ವ್ಯರ್ಥವಾಗುವುದು ಅಗತ್ಯ ಎಂದು ನನಗನಿಸುವುದಿಲ್ಲ.

ಮಂತ್ರಿ ಮಂಡಲದಲ್ಲಿ ಕೋಮು ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಪ್ರಶ್ನೆಯತ್ತ ಗಮನ ಹರಿಸಿದಾಗ, ಮಂತ್ರಿಮಂಡಲದಲ್ಲಿ ಕೋಮು ಪ್ರಾತಿನಿಧ್ಯವಿರಬೇಕೆಂಬ ಸೂಚನೆ ನನಗೆ ಅಷ್ಟು ಆಕರ್ಷಣೀಯವಾಗಿ

ಕಾಣುವುದಿಲ್ಲ ಎಂಬುದನ್ನು ನಾನು ಒಪ್ಪಲೇಬೇಕು. ನಿಜವಾಗಿಯೂ ನಾನು ಈ ಸಂಗತಿಯನ್ನು ಮರೆತಿಲ್ಲ. ಅಲ್ಪಸಂಖ್ಯಾತ ಕೋಮುಗಳು ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯವನ್ನು ಹೊಂದದಿದ್ದರೆ, ಅವರ ದಿನನಿತ್ಯದ ಜೀವನದ ಮೇಲೆ ಪರಿಣಾಮ ಬೀರುವ ಆಡಳಿತದ ವಿಷಯಗಳಲ್ಲಿ, ಕೋಮುವಾದವೇ ಮೂಲ ಹಿತಾಸಕ್ತಿಯಾಗಿರುವ ಮಂತ್ರಿಗಳ ನೀತಿಯಿಂದ ಅವರ ಹಿತಾಸಕ್ತಿಗಳಿಗೆ ಬಾಧೆಯುಂಟಾಗಬಹುದು ಮತ್ತು ಬಾಧೆಯುಂಟಾಗುವ ಸಂಭವವಿದೆ ಎಂಬುದು ನನಗೆ ಗೊತ್ತು ಎಂಬುದು ವಾಸ್ತವ ಸಂಗತಿಯಾಗಿದೆ. ಅದನ್ನು ಒಂದು ಕ್ಷಣ ನಾನು ಮರೆಯಲಾರೆ. ಆದರೆ ಅಂಥ ಕೆಡುಕಿನ ಬಗ್ಗೆ ವ್ಯವಹರಿಸಲು ಉತ್ತಮವಾದ ಬೇರೆ ಮಾರ್ಗಗಳೂ ಇರುತ್ತವೆ ಎಂದು ನಾನು ಹೇಳುತ್ತೇನೆ. ಮಂತ್ರಿಮಂಡಲದ ಯಾವುದೇ ಕ್ರಮದಿಂದಲಾಗಲೀ, ಕರ್ತವ್ಯಚ್ಯುತಿಯಿಂದಲಾಗಲೀ ಸಂಭವಿಸಬಹುದಾದ ಅಪಾಯಗಳ ವಿಷಯದಲ್ಲಿ ಸಂವಿಧಾನದಲ್ಲಿ ನಿರೂಪಿತವಾಗಿರುವ ಪರಿಹಾರಗಳು ನಿಮ್ಮ ವರ್ಗದವರಿಗೆ ಸಂವಿಧಾನಾತ್ಮಕವಾಗಿ ಮತ್ತು ಕಾನೂನಿನ ರೀತಿಯಲ್ಲಿಯೇ ದೊರಕುವುದಾದರೆ, ಮಂತ್ರಿಮಂಡಲವು ಕೆಲವು ಕೋಮುಗಳ ಹಿಡಿತದಲ್ಲಿ ಸಿಕ್ಕಿಕೊಂಡು ಅದರಿಂದ ತೊಂದರೆ ಉಂಟಾಗಬಹುದು ಎಂದು ನಾವು ಪಡುತ್ತಿರುವ ಭಯವು ಮಾಯವಾಗುತ್ತದೆ ಮತ್ತು ಮಂತ್ರಿಮಂಡಲದಲ್ಲಿ ಕೋಮುವಾರು ಪ್ರಾತಿನಿಧ್ಯಕ್ಕಾಗಿ ನಾವು ಒತ್ತಾಯಿಸುವುದಿಲ್ಲ.

ಮುಖ್ಯಮಂತ್ರಿಯು, ಆತನು ಯಾರೇ ಆಗಿರಲಿ ಪ್ರಮುಖ ಅಲ್ಪಸಂಖ್ಯಾತರು ಮಂತ್ರಿಮಂಡಲದಲ್ಲಿ ಪ್ರತಿನಿಧಿತರಾಗಬೇಕೆಂಬ ಬಗ್ಗೆ ಕಳಕಳಿ ಇಟ್ಟುಕೊಳ್ಳುವುದನ್ನು ಆತ ಅರಿತುಕೊಳ್ಳಬೇಕು ಅಥವಾ ಅರಿತು ಕೊಳ್ಳುವಂತೆ ಮಾಡಬೇಕು ಎಂಬ ಬಗ್ಗೆ ನನಗೆ ತುಂಬಾ ಇಚ್ಛೆ ಇರುವುದಾದರೂ ಸಹ, ಏನೇ ಆಗಲಿ, ಮಂತ್ರಿಮಂಡಲದ ಸ್ಥಾನ ತುಂಬಾ ಹೊಣೆಗಾರಿಕೆಯ ಸ್ಥಾನ ಎಂಬುದನ್ನು ಒಂದು ಕ್ಷಣ ಸಹ ನಾವು ಮರೆಯಲಾರೆವು. ಕ್ಯಾಬಿನೆಟ್ ದರ್ಜೆಯ ಮಂತ್ರಿಯು ಕೇವಲ ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ಮಾತ್ರವೇ ಗಮನಿಸಬೇಕಾಗಿಲ್ಲ; ಆತ ಒಟ್ಟು ಪ್ರಾಂತದ ಸುರಕ್ಷತೆ ಮತ್ತು ಹಿತಾಸಕ್ತಿಯನ್ನು ಗಮನಿಸಬೇಕಾಗಿದೆ. ಅದಕ್ಕೆ ಸಾಮರ್ಥ್ಯ ಮತ್ತು ಸಕ್ಷಮತೆ ಬೇಕು. ಅದಕ್ಕೆ ಕೇವಲ ಕೋಮುವಾರು ದೃಷ್ಟಿ ಮಾತ್ರವೇ ಸಾಲದು. ಈ ದೃಷ್ಟಿಕೋನದಿಂದ ನಾನು ಈ ವಿಷಯವನ್ನು ಗಮನಿಸುತ್ತೇನೆ. ಅಲ್ಪಸಂಖ್ಯಾತರ ಮತ್ತು ನಿಮ್ಮ ವರ್ಗ ದವರ ಹಿತಾಸಕ್ತಿಗಳನ್ನು ಯಾವ ರೀತಿಯಲ್ಲಿ ಸಂರಕ್ಷಿಸಬೇಕೆಂದು ನಾನು ಬಯಸುತ್ತೇನೆಂದರೆ, ಬಹು ಸಂಖ್ಯಾತ ಕೋಮುಗಳಲ್ಲಿಂದ ಬಂದ ಮಂತ್ರಿಗಳಿಗೆ ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗದಂತೆ ಮಾಡಲು ಮತ್ತು ಅವರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಲು ಸಾಧ್ಯವಾಗದಂತೆ ಸಂವಿಧಾನದಲ್ಲಿಯೇ ಪ್ರತಿಬಂಧಕವಿರಬೇಕು.

ಗವರ್ನರರ ಮತ್ತು ಆತನ ಮಂತ್ರಿಮಂಡಲದ ನಡುವೆ ಸಂಬಂಧದ ಪ್ರಶ್ನೆಯ ಬಗ್ಗೆ ಹೇಳಬೇಕೆಂದರೆ, ಒಂದು ಸಂಗತಿ ತುಂಬಾ ಸ್ಪಷ್ಟವಾಗಿದೆ. ಅದೇನೆಂದರೆ ಒಂದು ಸಂವಿಧಾನವು ಸಂಪೂರ್ಣ ಹೊಣೆಗಾರ ಸರಕಾರವನ್ನು ಮತ್ತು ಜಂಟೀ ಹೊಣೆಗಾರಿಕೆಯನ್ನು ಒಳಗೊಂಡಿರಬೇಕಾದರೆ ಅದು ದೇಶದ ದಿನನಿತ್ಯದ ಆಡಳಿತದಲ್ಲಿ ಕೈ ಹಾಕಬಹುದಾದಂಥ ಅಧಿಕಾರವನ್ನು ಗವರ್ನರನಿಗೆ ನೀಡಲಾರದು. ಹಾಗೆ ಮಾಡಿದರೆ ಅದು ಹೊಣೆಗಾರ ಸರಕಾರ ಮತ್ತು ಜಂಟಿ ಹೊಣೆಗಾರಿಕೆ ಪದ್ಧತಿಗಳಿಗೆ ತೀರಾ ವಿರೋಧವಾದುದಾಗುವುದು. ಮಂತ್ರಿಮಂಡಲವು ತನ್ನ ದಿನನಿತ್ಯದ ಆಡಳಿತವನ್ನು ಜಂಟಿ ಹೊಣೆಗಾರಿಕೆಯ ಆಧಾರದ ಮೇಲೆಯೇ ನಡೆಸಿಕೊಂಡು ಹೋಗಲು ಅವಕಾಶ ಇರಲೇಬೇಕು.

ತುರ್ತು ಪರಿಸ್ಥಿತಿಯಲ್ಲಿನ ಅಧಿಕಾರಗಳ ಪ್ರಶ್ನೆಗೆ ಸಂಬಂಧಿಸಿದಂತೆ ಅವುಗಳನ್ನು ಗವರ್ನರರಿಗೇನೇ ಬಿಟ್ಟುಬಿಡಬೇಕೆಂಬ ಸೂಚನೆ ಇದೆ. ಇಲ್ಲಿ ನಾನು ಸ್ವಲ್ಪ ಕಠಿಣ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಂತಾಗಿದೆ.

ಏಕೆಂದರೆ, ಆ ಸೂಚನೆಯ ಖಚಿತ ಅರ್ಥ ಏನು ಅನ್ನುವುದು ನನಗೇ ತಿಳಿಯದಾಗಿದೆ. ತುರ್ತು ಪರಿಸ್ಥಿತಿ ಉಂಟಾದಾಗ ಗವರ್ನರನು ಮಂತ್ರಿಮಂಡಲವನ್ನು ವಜಾ ಮಾಡಬೇಕೆ, ಅದರೊಂದಿಗೆ ಆತ ಮಾಡಬೇಕಾದದ್ದು ಇನ್ನೇನೂ ಇಲ್ಲವೇ ಮತ್ತು ಆ ಪರಿಸ್ಥಿತಿಯನ್ನು ಎದುರಿಸಲು ತನಗೆ ಅವಶ್ಯ ವೆನಿಸಿದ ಕಾನೂನುಗಳನ್ನು, ಅಧ್ಯಾದೇಶಗಳನ್ನು ಘೋಷಿಸಬಲ್ಲನೇ, ಕ್ರಮಗಳನ್ನು ತೆಗೆದುಕೊಳ್ಳ ಬಲ್ಲನೇ ಎಂಬ ಅರ್ಥವನ್ನು ಅದು ಹೊಂದಿರುತ್ತದೆಯೋ? ಇಲ್ಲಿ ಏನು ಅಗತ್ಯವಿದೆಯೋ ಅದು ನನಗೆ ತಿಳಿಯದಾಗಿದೆ. ಅದು ದೇಶದ ಹಿತರಕ್ಷಣೆಗಾಗಿ ಕಾರ್ಯ ಮಾಡುತ್ತಿಲ್ಲ ಎಂದು ಗವರ್ನರನಿಗೆ ಅನಿಸಿದರೆ ಅಂಥ ಮಂತ್ರಿ ಮಂಡಲವನ್ನು ವಜಾ ಮಾಡಲು ಆತನಿಗೆ ನಿರುಪಾಧಿಕವಾದ, ಸ್ಪಷ್ಟವಾದ ಮತ್ತು ಪರಿಮಿತಿ ಇಲ್ಲದ ಅಧಿಕಾರ ಇರಬೇಕೆನ್ನುವುದನ್ನು ನಾನು ತಿಳಿದುಕೊಳ್ಳಬಲ್ಲೆನು. ಆದರೆ, ಮಂತ್ರಿಮಂಡಲ ವಿಲ್ಲದೆಯೇ ಗವರ್ನರನು ಕಾರ್ಯ ಮಾಡಲು ಅನುಮತಿಸಿದರೆ ಆ ಪ್ರಾಂತದಲ್ಲಿ ಹೇಗೆ ಹೊಣೆ ಗಾರ ಸರಕಾರ ಇರುತ್ತದೆ ಎಂಬುದನ್ನು ನಾನು ತಿಳಿಯದವನಾಗಿದ್ದೇನೆ. ಒಂದು ನಿರ್ದಿಷ್ಟ ಗಂಡಾಂತರದ ಪರಿಸ್ಥಿತಿಯಲ್ಲಿ ತಾನು ಸಹಮತಿಸಬಹುದಾದ ಮಂತ್ರಿಮಂಡಲವಿರಬೇಕೆಂದು ಹೇಳುವುದು ಒಂದು ವಿಷಯವಾದರೆ ಗಂಡಾಂತರ ಪರಿಸ್ಥಿತಿ ಉಂಟಾದಾಗ ಗವರ್ನರನು ಮಂತ್ರಿಮಂಡಲವನ್ನು ಸಂಪೂರ್ಣವಾಗಿ ನಿರ್ಲಕ್ಷಿಸತಕ್ಕುದು ಎನ್ನುವುದು ಒಂದು ಬೇರೆ ವಿಷಯವೇ ಸರಿ. ಈ ಅಂಶದ ಬಗ್ಗೆ ವಿವರವಾದ ಚರ್ಚೆ ಅವಶ್ಯವೆನಿಸುತ್ತದೆ. ಏಕೆಂದರೆ, ನಾನು ಆಗಲೇ ಹೇಳಿದಂತೆ ಅದು ನನಗೆ ಇದು ಅರ್ಥವಾಗಿಲ್ಲ.

ಸೇವೆಗಳಿಗೆ ಸಂಬಂಧಿಸಿದ ಪ್ರಶ್ನೆಗೆ ಬಂದರೆ, ನಾನು ಹೇಳಲೇಬೇಕಾದ ಒಂದು ಅಭಿಪ್ರಾಯ ಹೀಗಿದೆ. ಅಂದರೆ ಪ್ರಾಂತೀಯ ಸ್ವಾಯತ್ತತೆಯೊಂದಿಗೆ ಪ್ರಾಂತಗಳಲ್ಲಿನ ಸೇವೆಗಳನ್ನು ವಿನಿಮಯಗೊಳಿಸುವ ಅಧಿ ಕಾರವೂ ಪ್ರಾಂತಗಳಿಗೆ ಇರತಕ್ಕುದು. ಮತ್ತು ಪ್ರಾಂತಗಳು ತಾವು ಇಚ್ಛಿಸಿದಂತೆ ಮತ್ತು ತಮಗೆ ಲಭ್ಯವಿದ್ದ ಸಾಧನಗಳು ಮತ್ತು ಸಂದರ್ಭಗಳಿಗನುಸಾರವಾಗಿ ಸೇವೆಗಳನ್ನು ಭಾರತೀಯಗೊಳಿಸಲು ಅವುಗಳಿಗೆ ಸಂಪೂರ್ಣ ಸ್ವಾತಂತ್ರ್ಯವು ಇರತಕ್ಕುದು ಎಂಬ ತತ್ವವನ್ನು ನಾನು ಒಪ್ಪುತ್ತೇನೆ. ಆದಾಗ್ಯೂ, ನಾನು ಹೇಳಲೇಬೇಕೆಂದು ಭಾವಿಸುವ ಅಭಿಪ್ರಾಯವು ಹೀಗಿದೆ: ಭಾರತೀಯರು ಕೋಮುಭಾವನೆ ಹೊಂದಿದವರು ಎನ್ನುವುದನ್ನು ನಾನು ಮರೆಯಲಾರೆ. ಅವರಿಗೆ ವಹಿಸಿಕೊಟ್ಟ ವಿಷಯಗಳ ಆಡಳಿತ ನಡೆಸುವಾಗ ಎಲ್ಲ ಭಾರತೀಯರು ಸಮಸ್ಯೆಗಳನ್ನು ಕೋಮು ದೃಷ್ಟಿಯಿಂದ ಗಮನಿಸುವುದನ್ನು ಬಿಟ್ಟುಬಿಡುವ ಕಾಲವೊಮ್ಮೆ ಬರುತ್ತದೆ ಎಂದು ನಾವು ಆಶಿಸುತ್ತೇವೆ. ಇದು ಕೇವಲ ಆಶೆ ಮಾತ್ರವೇ ಆಗಿದೆ: ಅದು ವಾಸ್ತವ ಸಂಗತಿ ಅಲ್ಲ. ಭಾರತೀಯರು ಕಾನೂನಿನ ಆಡಳಿತದಲ್ಲಿ ಅವರಿಗೆ ಬಿಟ್ಟುಕೊಡಲಾದ ವಿವೇಚನೆಯನ್ನು ಉಪಯೋಗಿಸುವಾಗ, ವರ್ಗ ವರ್ಗಗಳ ನಡುವೆ, ಕೋಮು ಕೋಮುಗಳ ನಡುವೆ ಪಕ್ಷಪಾತ ಮಾಡುತ್ತಾರೆ ಎಂಬುದೇ ವಾಸ್ತವ ಸಂಗತಿಯಾಗಿದೆ. ಈ ವಾಸ್ತವ ಸಂಗತಿಯನ್ನು ನಾನು ಅಲ್ಲಗಳೆಯಲಾರೆ. ಯಾವುದರಿಂದ ನಾನು ಎಣೆ ಇಲ್ಲದಷ್ಟು ಕಷ್ಟಪಟ್ಟೆನೋ ಅಂಥ ವಾಸ್ತವ ಸಂಗತಿ ಅದಾಗಿದೆ. ನಿಮ್ಮ ವರ್ಗದವರ ಈಗಿನ ಪರಿಸ್ಥಿತಿಯನ್ನು ಗಮನಿಸಿದರೆ, ಮತ್ತು ಅವರಲ್ಲಿ ವ್ಯಾಪಕವಾಗಿ ಶಿಕ್ಷಣ ಬೆಳೆದಿಲ್ಲ ಎಂಬ ವಾಸ್ತವ ಸಂಗತಿಯನ್ನು ಗಮನಿಸಿದರೆ, ಮತ್ತು ಮುಂಬೈ ಪ್ರಾಂತದಲ್ಲಿ ಉದಾಹರಣೆಗೆ, ಒಬ್ಬನೇ ಒಬ್ಬ ವ್ಯಕ್ತಿಯೂ ಸಹ ಗೆಜೆಟೆಡ್ ಹುದ್ದೆಯನ್ನು ಹೊಂದಿಲ್ಲವೆಂಬುದನ್ನು ಗಮನಿಸಿದರೆ ಭಾರತದ ಮುಂದಿನ ಸಂವಿಧಾನಕ್ಕೆ ಸಂಬಂಧಿಸಿದಂತೆ ನನಗೆ ಭಯವಾಗುತ್ತಿದೆ.

ಒಬ್ಬ ಸದಸ್ಯರು: ಒಬ್ಬರಿದ್ದಾರೆ.

ಡಾ. ಅಂಬೇಡ್ಕರ್: ಹೌದು. ಒಬ್ಬರಿದ್ದಾರೆ. ಅದು ಸತ್ಯ ಸಂಗತಿಯನ್ನು ರುಜುವಾತುಪಡಿಸುವ ಒಂದು ಅಪವಾದವಾಗಿದೆ. ಅವನನ್ನು ಒಳಗೆ ತರಲು ನಾನು ಎಷ್ಟು ತೊಂದರೆಪಡಬೇಕಾಯಿತು ಎಂಬುದು ನಿಮಗೆ ತಿಳಿದಿದೆ. ಈ ಭಾರತೀಕರಣ ದಬ್ಬಾಳಿಕೆಯಾದೀತೆಂಬ ಭಯ ನನಗಿದೆ. ಕಾರಣ ನನ್ನ ವಿಶಿಷ್ಟ ದೃಷ್ಟಿಕೋನದಿಂದ, ಸೇವೆಗಳಲ್ಲಿ ಬ್ರಿಟಿಶ್ ಅಂಶವನ್ನು ಏನೇ ಆಗಲಿ ಕೆಲ ಕಾಲ ದವರೆಗೆ ಉಳಿಸಿಕೊಳ್ಳುವುದು ಅವಶ್ಯವೆಂದು ತೋರುತ್ತಿದೆ ಎಂಬುದನ್ನು ನಾನು ಒತ್ತಿ ಹೇಳಬಯ ಸುತ್ತೇನೆ. ಸೇವೆಗಳನ್ನು ಭಾರತೀಕರಣಗೊಳಿಸಬಾರದೆಂದು ನಾನು ಹೇಳುವುದಿಲ್ಲ. ಆದರೆ, ನಮ್ಮ ಹಿತಾ ಸಕ್ತಿಗಳನ್ನು ಗಮನಿಸಿದಾಗ, ಕೆಲವರು ಇಚ್ಛಿಸುವಂತೆ ಅದು ತೀವ್ರಗತಿಯಲ್ಲಿ ಆಗದೆ, ಸಾವಕಾಶವಾಗಿ ಆಗಬೇಕು.

ಇವು ನಮ್ಮ ದೃಷ್ಟಿಯಿಂದ ನಾನು ಹೇಳಬಯಸಿದ ಸಾಮಾನ್ಯ ಸೂಚನೆಗಳಾಗಿವೆ.

# ಮೂರನೆಯ ಸಭೆ

## ೮ನೇ ಡಿಸೆಂಬರ್ ೧೯೩೦

**ಉಪಸಮಿತಿ ೨ರ ವ್ಯವಹರಣೆಗಳು (ಪ್ರಾಂತೀಯ ಸಂವಿಧಾನ ಪು. ೫೬):–**

ಡಾ. ಅಂಬೇಡ್ಕರ್: ನಾನು ಒಂದು ಸೂಚನೆಯನ್ನು ಮಾಡಬಹುದೇ? ಎರಡನೆಯ ಸದನದ (ಸೆಕೆಂಡ್ಸ್ ಛೇಂಬರ್ಸ್) ಪ್ರಶ್ನೆಯು ತುಂಬಾ ಮಹತ್ವದಾಗಿದೆ ಎಂದು ನನಗನಿಸುತ್ತದೆ. ಅಂದರೆ ನಾವು ಈಗ ಚರ್ಚಿಸುತ್ತಿರುವ ವಿಷಯಗಳ ಸರಣಿಗೆ ಅದನ್ನು ಜೋಡಿಸಿದರೆ ಆ ಬಗ್ಗೆ ಯುಕ್ತವಾದ ಮತ್ತು ಸಾಕಷ್ಟು ಪ್ರಮಾಣದಲ್ಲಿ ಚರ್ಚೆ ಮಾಡಲು ಆಗುವುದಿಲ್ಲ. ಈ ವಿಷಯಕ್ಕೇನೆ ಒಂದು ವಿಶೇಷ ದಿನವನ್ನು ಮೀಸಲಾಗಿಡಬೇಕೆಂಬುದು ನನ್ನ ಅಭಿಪ್ರಾಯ. ಎರಡನೆಯ ಸದನ ಮತ್ತು ಅಲ್ಪಸಂಖ್ಯಾತರ ಸಂರಕ್ಷಣೆಯ ನಡುವೆ ಮತ್ತು ೧ ಮತ್ತು ೨ನೇ ಬಾಬುಗಳಲ್ಲಿ ಹೇಳಲಾಗಿರುವ ಇತರ ಯಾವುದೇ ವಿಷಯಗಳ ನಡುವೆ ಯಾವುದೇ ಸಂಬಂಧವಿರುವುದನ್ನು ನಾನು ಗಮನಿಸಿಲ್ಲ. ಶಾಸಕಾಂಗದ ರಚನೆಯನ್ನು ಕುರಿತು ವಿವೇಚಿಸುವ ಶೀಷಿಕೆಗಳ ಪಟ್ಟಿಯಲ್ಲಿ ಇದರ ಬಗ್ಗೆ ನನಗೆ ಏನೂ ಕಾಣಿಸುತ್ತಿಲ್ಲ. ಇದು ಬಹು ಮಹತ್ವದ ಪ್ರಶ್ನೆಯೆಂದು ನನಗೆ ತೋರುತ್ತದೆ. ನೀವು "ಶಾಸಕಾಂಗದ ರಚನೆ" ಎಂಬ ಶೀರ್ಷಿಕೆಯೊಂದನ್ನು ಸೇರಿಸಬಯಸುವುದಾದರೆ ಇಡಿಯ ವಿಷಯವನ್ನು ಚರ್ಚಿಸಲು ನಮಗೆ ಸಾಕಷ್ಟು ಅವಕಾಶ ದೊರಕುವುದು.

ಅಧ್ಯಕ್ಷ:– ಈ ಇಡಿಯ ವಿಷಯವನ್ನು ನೀವು ಹೇಗೆ ಪ್ರತ್ಯೇಕಿಸಿ ಪೃಥಕ್ಕರಿಸಬಲ್ಲಿರಿ ಎಂಬುದು ನನಗೆ ತಿಳಿಯದಾಗಿದೆ.

ಡಾ. ಅಂಬೇಡ್ಕರ್: ಎರಡನೆಯ ಸದನದ ಪ್ರಶ್ನೆಯನ್ನು ಅಲ್ಪಸಂಖ್ಯಾತರಿಂದ ಖಚಿತವಾಗಿಯೂ ಪ್ರತ್ಯೇಕಿಸಬಹುದು.

ಅಧ್ಯಕ್ಷ:– ಸಂಪೂರ್ಣವಾಗಿ ಅಲ್ಲ, ಎರಡನೆಯ ಸದನ ಇರಬೇಕೋ ಬೇಡವೋ ಎಂಬುದು ಚರ್ಚೆಗೆ ಬರುವ ಇತರ ಎಲ್ಲ ವಿಷಯಗಳಿಗೂ, ಗವರ್ನರರಿಗೆ ಸಂಬಂಧಿಸಿದಂತೆ ಕಾರ್ಯಾಂಗದ ಮತ್ತು ಶಾಸಕಾಂಗದ ಅಧಿಕಾರಗಳು ಇತ್ಯಾದಿ ವಿಷಯಗಳೆಲ್ಲಕ್ಕೂ ಸಂಬಂಧಿಸಿರುವುದಾಗಿರುತ್ತದೆ. ನಾವು ಮುಂದುವರೆಯಲು ನೀವು ಅವಕಾಶ ಕೊಟ್ಟರೆ ಒಳ್ಳೆಯದಾಗುತ್ತದೆ ಮತ್ತು ನಾವು ಮಾಡಿದ ಚರ್ಚೆಯು ಸಾಕಷ್ಟಾಗಲಿಲ್ಲ ಎಂದು ಕೊನೆಯಲ್ಲಿ ನಮಗೆ ಕಂಡುಬಂದರೆ, ಈ ವಿಷಯದ ಮೇಲೆಯೇ ಹೆಚ್ಚಿನ ಚರ್ಚೆಯನ್ನು ವ್ಯವಸ್ಥೆಗೊಳಿಸಲು ಪ್ರಯತ್ನಿಸೋಣ.

# ನಾಲ್ಕನೆಯ ಸಭೆ

# ೯ನೇ ಡಿಸೆಂಬರ್ ೧೯೩೦

**ಉಪಸಮಿತಿ ನಂ. ೨ರ ವ್ಯವಹರಣೆಗಳು (ಪ್ರಾಂತೀಯ ಸಂವಿಧಾನ) ಪುಟಗಳು ೯೫–೧೦೨):**

ಡಾ. ಅಂಬೇಡ್ಕರ್: ಅದು ಇರಬಹುದು. ಆದರೆ ಈಗ ಸದ್ಯಕ್ಕೆ ನಾನು ಈ ಎರಡು ಕೋಮುಗಳನ್ನು ತೆಗೆದುಕೊಳ್ಳುತ್ತೇನೆ. ಏಕೆಂದರೆ ಅವು ಮಹತ್ವದವುಗಳಾಗಿವೆ. ಆ ಸಂಗತಿಯನ್ನು ಆಧರಿಸಿದ ಯಾವುದೇ ವಾದವು, ಕಾನೂನು ಮತ್ತು ಶಾಂತಿಪಾಲನಾ ವಿಷಯಗಳನ್ನು ವರ್ಗಾವಣೆಮಾಡಲು ನಮ್ಮನ್ನು ಎಂದೂ ಸಮರ್ಥಗೊಳಿಸಲಾರದಂಥ ನಿರ್ಣಯಕ್ಕೆ ಬರುವಂತೆ ಮಾಡುವ ವಾದವೇ ಆಗುವುದೆಂದು ನನಗೆ ಕಂಡುಬರುತ್ತದೆ. ಆ ಕಾರಣದಿಂದಾಗಿ ಆ ವಾದವು ಅಳವಡಿಸಿಕೊಳ್ಳಲಾರದಂಥ ಅಥವಾ ಒಪ್ಪಲಾರದಂಥ ವಾದವೆಂದು ನನಗೆ ಅನಿಸುತ್ತದೆ. ಒಬ್ಬ ಮೊಹಮಡನ್ ಅಥವಾ ಹಿಂದೂ, ಕಾನೂನು ಮತ್ತು ಶಾಂತಿಪಾಲನಾ ಇಲಾಖೆಯ ಪ್ರಭಾರದಲ್ಲಿದ್ದಾಗ್ಯೂ, ಆತನು ಸೇರಿದ ವಿಶಿಷ್ಟ ಕೋಮಿನ ಪ್ರಭಾವಕ್ಕೆ ಆತನು ಸಂಪೂರ್ಣವಾಗಿ ಒಳಪಟ್ಟವನಾಗಿರುತ್ತಾನೆ ಎಂದು ನೋಬಲ್ ಮಾರ್ಕ್ಸ್ ಗ್ರಹಿಸುತ್ತಾನೆ.

ಮಾನ್ಯರೆ, ನನ್ನ ವಿನಂತಿ ಹೀಗಿದೆ. ಪರಿಸ್ಥಿತಿ ಹೀಗಾದರೆ ಭವಿಷ್ಯದಲ್ಲಿ ಭಾರತದ ರಾಜಕೀಯ ಪಕ್ಷಗಳನ್ನು, ಭವಿಷ್ಯವನ್ನು, ಧಾರ್ಮಿಕ ಆಧಾರದ ಮೇಲೆ ವಿಭಜನೆ ಆಗುತ್ತವೆಯೇ ಹೊರತು ರಾಜಕೀಯ ಅಥವಾ ಆರ್ಥಿಕ ಭಿನ್ನತೆಗಳನ್ನು ಆಧರಿಸಿರದ ರೀತಿಯಲ್ಲಿ ಅಲ್ಲ ಎಂಬ ಗ್ರಹಿಕೆಯುಂಟಾಗುತ್ತದೆ. ಪರಿಸ್ಥಿತಿಯನ್ನು ನಾನು ಗಮನಿಸಿದಂತೆ ನೋಡಲಾಗಿ, ಭಾರತದ ಭಾವೀ ಸಂವಿಧಾನದಲ್ಲಿ ಧರ್ಮ ಮತ್ತು ಜನಾಂಗ ಭೇದವು ಮೇಲೆದ್ದು ಬರುವುದು ಕಡಿಮೆಯಾಗುವಂತೆ ಮತ್ತು ಹಿಂದೂ ಮಂತ್ರಿಯು ಒಂದು ಪಕ್ಷವನ್ನು ಹೊಂದಿದ್ದು ಅವನ ಅನುಯಾಯಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೊಹಮಡನ್ನರು ಇರುವ ಹಾಗೆ ಮತ್ತು ಮೊಹಮಡನ್ ಮಂತ್ರಿಯು ತನ್ನ ಗುಂಪಿನಲ್ಲಿ ಹಿಂದೂ ಅನುಯಾಯಿಗಳನ್ನು ಹೊಂದಿರುವ ಹಾಗೆ ಭಾರತದ ಕಾರ್ಯಾಂಗವನ್ನು ವಿಭಜಿಸುವುದಾಗಿ ಕಂಡುಬರುತ್ತದೆ. ಹಾಗೆ ಘಟಿಸಿದರೆ, ಹಾಗೆ ಘಟಿಸಿಯೇ ತೀರುವುದೆಂದು ನನಗೆ ಖಚಿತವಾಗಿದೆ, ಕಾನೂನು ಮತ್ತು ಶಾಂತಿಪಾಲನೆಯ ಇಲಾಖೆಯ ಮುಖ್ಯನಾದ ಒಬ್ಬ ಹಿಂದೂ ಮಂತ್ರಿಯು, ತಾನು ಅಧಿಕಾರದಲ್ಲುಳಿಯಲು ಬೆಂಬಲಿಸುವ ಗುಂಪಿನ ಒಂದು ಭಾಗಕ್ಕೆ ನೋವುಂಟುಮಾಡುವ ರೀತಿಯಲ್ಲಿ ಕಾನೂನು ಮತ್ತು ಶಾಂತಿಪಾಲನೆಯ ಆಡಳಿತವನ್ನು ಹೇಗೆ ನಡೆಸಬಲ್ಲನು ಎಂಬುದು ನನಗೆ ತಿಳಿಯದಂತಾಗಿದೆ. ಕಾರಣ ಈ ವಿಷಯದ ಈ ವಿಶಿಷ್ಟ ಭಾಗಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ ಇರುವ ಭಯವು ಆಧಾರವಿಲ್ಲದ್ದೆಂದು ನನಗೆ ಅನಿಸುತ್ತದೆ.

ಸ್ವಲ್ಪ ಹೆಚ್ಚು ಕಡಿಮೆ ಒಪ್ಪಿಕೊಂಡಂತೆ ಕಂಡುಬರುವ ಎರಡನೆಯ ವಿಷಯ ಹೀಗಿದೆ: ಕಾರ್ಯಾಂಗವು ಏಕೀಕೃತ ಕಾರ್ಯಾಂಗವಾಗಬೇಕಿಲ್ಲ, ಈ ಏಕೀಕೃತ ಕಾರ್ಯಾಂಗದ ಹೊಣೆಗಾರಿಕೆಯೂ ಕೂಡ ಜಂಟೀ ಸ್ವರೂಪದ್ದೇ ಆಗಿರಬೇಕೇ ಹೊರತು ವಿಭಜಿತವಾದುದಲ್ಲ. ಮಾನ್ಯರೇ, ಈ ನಿರ್ಣಯಗಳಿಗೆ ನಾನು ಒಪ್ಪುತ್ತೇನೆ. ಆದರೆ, ಚರ್ಚೆಯ ಕಾಲದಲ್ಲಿ ಮೂಡಿಬಂದ ಮತ್ತು ನಾವು ಸುದೀರ್ಘವಾಗಿ ಲಕ್ಷ್ಯಗೊಟ್ಟ ಭಿನ್ನಾಭಿಪ್ರಾಯದ

ಅಂಶಗಳು ಕಾರ್ಯಾಂಗದ ಘಟಕಾಂಶಗಳ ಜೋಡಣೆಗೆ ಸಂಬಂಧಪಟ್ಟಿರುತ್ತವೆ ಮತ್ತು ಕಾರ್ಯಾಂಗದ ರಚನೆಗೆ ಸಂಬಂಧಿಸಿದಂತೆ ನಮ್ಮ ಪರ್ಯಾಲೋಚನೆಗೆ ಮೂರು ಬೇರೆ ಬೇರೆ ಪ್ರಶ್ನೆಗಳು ಉದ್ಭವಿಸುತ್ತವೆ ಎಂದು ನನಗನಿಸುತ್ತದೆ. ಮೊದಲನೆಯ ಪ್ರಶ್ನೆಯೆಂದರೆ: ಕಾರ್ಯಾಂಗವು ಶಾಸಕಾಂಗದ ಸದಸ್ಯರಿಗೆ ಮಾತ್ರ ಮಿತಿಗೊಳ್ಳತಕ್ಕದ್ದೇ ಅಥವಾ ಅದು ಅಧಿಕಾರಿಗಳಿಗೆ ಅಥವಾ ಅಧಿಕಾರಿಗಳಲ್ಲದವರಿಗೆ ಮತ್ತು ಶಾಸಕಾಂಗದ ಹೊರಗಿನವರಿಗೂ ತೆರೆದಿರಬೇಕೇ? ಎರಡನೆಯ ಪ್ರಶ್ನೆಯೆಂದರೆ: ಅದು ಅಲ್ಪಸಂಖ್ಯಾತ ಕೋಮಿನ ಸದಸ್ಯರನ್ನೂ ಒಳಗೊಂಡಿರಬೇಕೇ? ಮೂರನೆಯ ಪ್ರಶ್ನೆಯೆಂದರೆ: ಮಂತ್ರಿಗಳನ್ನು ನೇಮಕ ಮಾಡುವ ಹೊಣೆಯು ಗವರ್ನರನಿಗೇ ಇರತಕ್ಕುದೋ ಅಥವಾ ಆತನು ಮುಖ್ಯಮಂತ್ರಿಯನ್ನು ನೇಮಿಸಿ ಆ ಸಹೋದ್ಯೋಗಿಗಳನ್ನು ಆಯ್ಕೆ ಮಾಡಿಕೊಳ್ಳುವ ವಿಷಯವನ್ನು ಮುಖ್ಯಮಂತ್ರಿಗೇ ಬಿಟ್ಟುಕೊಡಬೇಕೇ?

ಮಾನ್ಯರೇ, ಈಗ ಈ ಮೂರು ಪ್ರಶ್ನೆಗಳಿಗೆ ನನ್ನ ಉತ್ತರವು ಸಕಾರಾತ್ಮಕವಾದುದಾಗಿದೆ. ಮಂತ್ರಿ ಮಂಡಲದ ಸದಸ್ಯತ್ವವು ಕಟ್ಟುನಿಟ್ಟಾಗಿ ಶಾಸಕಾಂಗದ ಸದಸ್ಯರಿಗೆ ಮಾತ್ರವೇ ಸಂಪೂರ್ಣವಾಗಿ ಏಕೆ ಸೀಮಿತವಾಗಿರಬೇಕು ಮತ್ತು ಅವರಿಗಷ್ಟೇ ಪರಿಮಿತವಾಗಿರಬೇಕು ಎಂಬುದಕ್ಕೆ ನನಗೆ ಯಾವ ಕಾರಣಗಳೂ ಕಂಡುಬರುವುದಿಲ್ಲ. ಕಾರ್ಯಾಂಗವು ಸಾಧ್ಯವಿರುವಷ್ಟರ ಮಟ್ಟಿಗೆ ಶಾಸಕಾಂಗದಲ್ಲಿ ಪ್ರತಿನಿಧಿಸಲ್ಪಟ್ಟ ಎಲ್ಲ ಕೋಮುಗಳ ಪ್ರತಿನಿಧಿಯಾಗಿರುವಂತೆ ಮಾಡಲು ಉಪಬಂಧಗಳು ಏಕೆ ಇರಕೂಡದೆಂಬುದಕ್ಕೂ ನನಗೆ ಯಾವ ಕಾರಣಗಳೂ ಕಂಡುಬರುವುದಿಲ್ಲ. ಮೂರನೆಯದಾಗಿ, ತನ್ನ ಮಂತ್ರಿಮಂಡಲವನ್ನು ರಚಿಸುವುದಕ್ಕೆ ಇರುವ ಅಧಿಕಾರಕ್ಕೆ ಸಂಬಂಧಿಸಿದಂತೆ ಮಂತ್ರಿಮಂಡಲ ರಚಿಸುವುದು ಆತನ ವಿಶೇಷಾಧಿಕಾರವಾಗಿದೆಯೆಂಬುದನ್ನು ನಾವು ಒಪ್ಪಬೇಕಾಗುತ್ತದೆ. ಮತ್ತು ಆಗ ತನ್ನ ಜನರನ್ನು ಆಯ್ಕೆ ಮಾಡಿಕೊಳ್ಳುವುದನ್ನು ಆತನ ವಿವೇಚನೆಗೇನೇ ಬಿಟ್ಟುಕೊಡಬೇಕಾಗುತ್ತದೆ. ಆದರೆ ಮಾನ್ಯರೆ, ನಾನು ಈ ಮೂರು ಪ್ರಶ್ನೆಗಳಿಗೆ ಸಕಾರಾತ್ಮಕವಾಗಿ ನಾನು ಉತ್ತರಿಸಿದರೂ, ವಿವಿಧ ಕೋಮುಗಳು ಮಂತ್ರಿಮಂಡಲದಲ್ಲಿ ಪ್ರತಿನಿಧಿಸಲ್ಪಡುವುದಕ್ಕೆ ಅವಕಾಶ ಮಾಡಿಕೊಡುವ ಉಪಬಂಧವೊಂದು ಇರತಕ್ಕುದು. ತನ್ನ ಮಂತ್ರಿಮಂಡಲವನ್ನು ರಚಿಸಲು ಗವರ್ನರನಿಗೆ ತನ್ನದೇ ಆದ ಅಪಾರ ವಿವೇಚನೆ ಇರಬೇಕು. ನಾನು ಹೀಗೆ ಒಪ್ಪಿ ಅವುಗಳನ್ನು ಅನುಲ್ಲಂಘನೀಯ ಷರತ್ತಿಗೆ ಒಳಪಡಿಸುತ್ತೇನೆ ಎಂದು ಹೇಳುತ್ತೇನೆ. ಅದೆಂದರೆ ಕಾರ್ಯಾಂಗವು ಯಾವುದೇ ರೀತಿಯಲ್ಲಿ ರಚಿತವಾಗಿದ್ದಾಗ್ಯೂ ಅದು ಜಂಟಿ ಹೊಣೆಗಾರಿಕೆಯ ತತ್ವವನ್ನು ಒಪ್ಪಿಕೊಳ್ಳತಕ್ಕುದು. ಉದಾಹರಣೆಗೆ ಈ ಜಂಟೀ ಹೊಣೆಗಾರಿಕೆಯನ್ನು ಕಾರ್ಯಾಂಗಕ್ಕೆ ಬಂಧಕವೆಂದು ಮಾಡಿದರೆ, ಮಂತ್ರಿಮಂಡಲದಲ್ಲಿ ಹೊರಗಿನವರನ್ನು ತರುವುದು ನಾವು ಭಾವಿಸುವಂತೆ ತೊಂದರೆಯನ್ನುಂಟುಮಾಡುವ ಅಂಶವಾಗಲಾರದು. ಉದಾಹರಣೆಗೆ, ವಿಧಾನಪರಿಷತ್ತಿನ ಸದಸ್ಯನಲ್ಲದ ಹೊಸಬನು ಮಂತ್ರಿಮಂಡಲದಲ್ಲಿ ಸೇರಿದಾಗ ಮಂತ್ರಿಮಂಡಲದೊಡನೆ ಜಂಟೀ ಹೊಣೆಗಾರಿಕೆಯನ್ನು ಸ್ವೀಕರಿಸಿದರೆ, ಅಂಥ ಪ್ರಕ್ರಿಯೆಗೆ ಏಕೆ ಒಪ್ಪಿಗೆ ಕೊಡಬಾರದೆಂಬುದಕ್ಕೆ ನನಗೆ ಯಾವುದೇ ಕಾರಣಗಳೂ ತೋಚುತ್ತಿಲ್ಲ. ಮಂತ್ರಿಮಂಡಲವು ಅವಿಶ್ವಾಸಕ್ಕೆ ಗುರಿಯಾದಾಗ ಅದು ತೊಲಗುತ್ತದೆ. ಆಗ ಅಧಿಕಾರಿ ಅಥವಾ ಶಾಸಕಾಂಗಕ್ಕೆ ಸಂಬಂಧಿಸಿರದ ವ್ಯಕ್ತಿಯು ಉಳಿಯುತ್ತಾನೆ ಮತ್ತು ಮಂತ್ರಿಮಂಡಲದ ಇತರ ಸದಸ್ಯರು ತೊಲಗುತ್ತಾರೆ. ಹೊಸ ಮಂತ್ರಿಮಂಡಲ ರಚಿತವಾದಾಗ ಪುನಃ ಆತನನ್ನು ಆ ಮಂತ್ರಿಮಂಡಲಕ್ಕೆ ತಳಕು ಹಾಕಲಾಗುತ್ತದೆ ಮತ್ತು ಆತ ನಿರಂತರವಾಗಿ ಪರಿಷತ್ತಿನಲ್ಲಿ ಉಳಿದುಬಿಡುತ್ತಾನೆ. ಇಂಥ ಪ್ರಸಂಗ ಬರಬಹುದು ಎಂಬುದನ್ನು ಎತ್ತಿ ತೋರಿಸಲಾಗುತ್ತಿದೆ. ನಿಮಗೆಲ್ಲ ಗೌರವಪೂರ್ವಕವಾಗಿ ನಾನು ಹೇಳುವುದೇನೆಂದರೆ, ಅದು ತಪ್ಪು ಕಲ್ಪನೆಯಿಂದ ಕೂಡಿದೆ. ಸದಸ್ಯರು ಅವನನ್ನು ತಮ್ಮ ಜೊತೆಗೆ ತೆಗೆದುಕೊಳ್ಳಲು ಸಿದ್ಧರಾಗಿದ್ದ ಹೊರತು ಮತ್ತು ಆತನ ಕೃತ್ಯದ

ಹೊಣೆಗಾರಿಕೆಯನ್ನು ತಾವು ವಹಿಸಿಕೊಳ್ಳಲು ಸಿದ್ಧರಾಗದ ಹೊರತು ಅವರು ಆತನ ಜೊತೆಗೆ ಕಾರ್ಯ ನಿರ್ವಹಿಸಲು ಸಮ್ಮತಿಸಲಾರರು. ಅವನು ಅವರ ಅಭಿಪ್ರಾಯವನ್ನು ಒಪ್ಪಿಕೊಂಡರೆ ಅವರೂ ಆತನ ಅಭಿಪ್ರಾಯ ಒಪ್ಪಿಕೊಳ್ಳುತ್ತಾರೆ. ಉದಾಹರಣೆಗೆ, ಹೊರಗಿನವನನ್ನು ತನ್ನ ಮಂತ್ರಿಮಂಡಲದಲ್ಲಿ ಸುಲಭವಾಗಿ ತೆಗೆದುಕೊಳ್ಳಬಹುದಾದಂಥ ಸಂದರ್ಭದಲ್ಲಿ ಮತ್ತು ಸಭೆಯ ವಿಶ್ವಾಸವನ್ನು ಉಳಿಸಿಕೊಳ್ಳಬಲ್ಲವನಾಗಿರುವಲ್ಲಿ ಮುಖ್ಯಮಂತ್ರಿಯು ಅಂಥ ಅಧಿಕಾರ ಹೊಂದುವುದಕ್ಕೆ ಏಕೆ ಅಡ್ಡಿಯುಂಟುಮಾಡಬೇಕು ಎಂಬುದಕ್ಕೆ ನನಗೆ ಯಾವ ಕಾರಣಗಳೂ ಕಾಣುವುದಿಲ್ಲ.

ಮಾನ್ಯರೇ, ಅದೇ ರೀತಿಯಲ್ಲಿ, ಉದಾಹರಣೆಗಾಗಿ, ಗವರ್ನರನು ತನ್ನ ಮಂತ್ರಿಮಂಡಲದಲ್ಲಿ ಅಲ್ಪಸಂಖ್ಯಾತ ಕೋಮಿನವರೂ ಸಹ ಪ್ರಾತಿನಿಧ್ಯ ಹೊಂದುವಂತೆ ಮಾಡುವ ಅಧಿಕಾರವನ್ನು ಗವರ್ನರರಿಗೆ ಕೊಡಬೇಕು ಎಂಬುದು ಸಾಧ್ಯ ಎಂದು ಕಂಡುಬಂದಿದೆ ಮತ್ತು ಅದೇ ಸಮಯದಲ್ಲಿ, ಮಂತ್ರಿಮಂಡಲದಲ್ಲಿ ಸೇರಿಸಿಕೊಂಡ ಪ್ರತಿಯೊಬ್ಬನೂ ಇತರರೊಡನೆ ಜಂಟಿ ಹೊಣೆಗಾರಿಕೆಯನ್ನು ಒಪ್ಪಬೇಕು ಎಂಬುವಂತೆ ಮಾಡುವುದು ಸಾಧ್ಯವೆಂದು ಕಂಡುಬರುತ್ತದೆ. ಆಗ ಈ ವಿಧಾನವನ್ನು ಅನುಸರಿಸುವಲ್ಲಿ ಯಾವುದೇ ಹಾನಿ ಕಂಡುಬರುವುದಿಲ್ಲ. ಕಾರಣ, ಗವರ್ನರನು ತನಗೆ ಇಚ್ಛೆ ಬಂದಂತೆ ಮಂತ್ರಿಮಂಡಲವನ್ನು ರಚಿಸುವ ಅಧಿಕಾರವು ಅವನಿಗೆ ಸೇರಿದ ಅಧಿಕಾರವೇ ಆಗಿರಬೇಕು. ಆದರೆ, ಆ ಮಂತ್ರಿಮಂಡಲವು ಜಂಟೀ ಹೊಣೆಗಾರಿಕೆಯ ತತ್ವವನ್ನು ಉಲ್ಲಂಘಿಸಿದಂತೆ ಕಾರ್ಯ ನಿರ್ವಹಿಸಬೇಕು ಎಂಬ ಅಂಶವನ್ನು ಒತ್ತಿ ಹೇಳಬೇಕಾದ ಅವಶ್ಯಕತೆ ಇದೆ ಎಂದು ನನಗೆ ತೋರುತ್ತದೆ.

ಮಾನ್ಯರೇ, ಈಗ ನಾನು ಉತ್ತರಿಸಬೇಕಾದ ಮುಂದಿನ ಪ್ರಶ್ನೆ ಎಂದರೆ, ಈ ಪರಿಣಾಮವನ್ನು ಪಡೆಯುವ ಅತ್ಯುತ್ತಮ ಮಾರ್ಗ ಯಾವುದು, ಹೊಣೆಗಾರ ಮತ್ತು ಏಕೀಕೃತ ಕಾರ್ಯಾಂಗವನ್ನು ಸಾಧಿಸುವ ಅತಿ ಉತ್ತಮ ರೀತಿ ಯಾವುದು ಎಂಬುದು ಇಲ್ಲಿ ನಮಗೆ ಇರುವ ಮಾರ್ಗಗಳು ಎರಡು ಎಂದು ತೋರುತ್ತದೆ. ಒಂದು ಮಾರ್ಗವೆಂದರೆ, ಸಂವಿಧಾನದಲ್ಲಿಯೇ ಕಾನೂನು ಮೇರೆಗೆ ಕಾರ್ಯಾಂಗದ ಸ್ವರೂಪವನ್ನು ಖಚಿತ್ತಾಗಿ ಗೊತ್ತುಪಡಿಸುವುದು. ಮತ್ತೊಂದೆಂದರೆ ಕಾರ್ಯಾಂಗದ ರಚನೆಯನ್ನು ರೂಢಿಗೆ, ಪದ್ಧತಿಗೆ ಬಿಟ್ಟುಕೊಡುವುದು. ಎರಡೂ ಮಾರ್ಗಗಳನ್ನು ಅಳವಡಿಸಿಕೊಂಡಿರುವುದು ನಿಮಗೆ ಗೊತ್ತೇ ಇದೆ. ಕೆನಡಾ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಡೋಮಿನಿಯನ್ನುಗಳಲ್ಲಿ ಏಕತ್ರ ಸ್ವರೂಪದ ಹೊಣೆಗಾರ ಸರಕಾರವು ಸಂಪ್ರದಾಯವನ್ನೇ ಆಧರಿಸಿದೆ ಎಂಬುದು ನಮಗೆ ಗೊತ್ತಿದೆ. ಕೆನಡಾದ ಅಧಿನಿಯಮದಲ್ಲಿ ಅಥವಾ ದಕ್ಷಿಣ ಆಫ್ರಿಕಾದ ಅಥವಾ ಆಸ್ಟ್ರೇಲಿಯಾದ ಅಧಿನಿಯಮಗಳಲ್ಲಿ "ಹೊಣೆಗಾರ ಸರಕಾರ" ಎಂಬ ಪದಗಳೇ ಇಲ್ಲ ಎಂಬುದು ನಮ್ಮಲ್ಲಿ ಪ್ರತಿಯೊಬ್ಬರಿಗೂ ಗೊತ್ತಿದೆ. ವಾಸ್ತವವಾಗಿ ಮಂತ್ರಿಗಳು ಗವರ್ನರನಿಗೆ ಸಲಹೆ ಮಾಡುತ್ತಿದ್ದಾಗ್ಯೂ ಗವರ್ನರನಿಗೆ ಸಲಹೆ ಮಾಡುವ ಮಂತ್ರಿಗಳು ಶಾಸಕಾಂಗದ ಸದಸ್ಯರಾಗಬೇಕೆಂದು ಕೆನಡಾದ ಅಧಿನಿಯಮದಲ್ಲಿ ಉಲ್ಲೇಖ ಕೂಡ ಮಾಡಿಲ್ಲ ಎಂಬುದು ನನಗೆ ತುಂಬಾ ಆಶ್ಚರ್ಯವನ್ನುಂಟು ಮಾಡಿತು. ಆದರೆ, ನಮಗೆ ಗೊತ್ತಿರುವಂತೆ, ಐರ್ಲಂಡ, ಮಾಲ್ಟಾ ಮತ್ತು ರೋಡೇಶಿಯಾದ ಸಂವಿಧಾನಗಳಲ್ಲಿ, ಈ ವಿಷಯವನ್ನು ಸಂಪ್ರದಾಯಕ್ಕೆ ಬಿಟ್ಟುಕೊಟ್ಟಿಲ್ಲ. ಅದನ್ನು ಕಾನೂನಿನಲ್ಲೇ ಸೇರಿಸಲಾಗಿದೆ. ಐರ್ಲಂಡಿನ ಪ್ರಧಾನ ಮಂತ್ರಿಯು ಕಾನೂನಿನ ಕೂಸು. ಜಂಟಿ ಹೊಣೆಗಾರಿಕೆಯನ್ನೂ ಕೂಡ ಕಾನೂನೇ ಪರಿಭಾಷಿಸುತ್ತದೆ ಎಂಬುದೂ ನಮಗೆ ಗೊತ್ತಿದೆ.

ಈ ಕಾರಣಕ್ಕಾಗಿ ನಾವು ಎರಡರಲ್ಲೊಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ ಮತ್ತು ಆಯ್ಕೆ ಮಾಡಿಕೊಳ್ಳುವಲ್ಲಿ ನಾವು ಎರಡು ವಿಚಾರಗಳಿಂದ ಮಾರ್ಗದರ್ಶನ ಪಡೆದುಕೊಳ್ಳಬೇಕೆಂದು ನನಗನಿ

ಸುತ್ತದೆ. ಈ ವಿಷಯವನ್ನು ಸಂಪ್ರದಾಯಕ್ಕೆ ಬಿಟ್ಟುಕೊಟ್ಟಾಗ ತಪ್ಪಾಗಿ ಉಪಯೋಗಿಸುವ, ದುರುಪಯೋಗ ಮಾಡುವ ಮತ್ತು ದುರ್ಬುದ್ಧಿಯಿಂದ ದುರುಪಯೋಗ ಮಾಡುವ ಸಾಧ್ಯತೆ ಇದೆ ಎಂಬುದನ್ನು ನಾನು ಸಂಪೂರ್ಣ ಅರ್ಥ ಮಾಡಿಕೊಂಡಿದ್ದೇನೆ. ಭಾರತದಂಥ ದೇಶದಲ್ಲಿ ಈ ವಿಷಯಗಳನ್ನು ಸಂಪ್ರದಾಯಕ್ಕೆ ಬಿಟ್ಟುಕೊಡುವುದರ ಅಪಾಯವು ಇನ್ನು ಹೆಚ್ಚಾಗಿದೆ. ಏಕೆಂದರೆ ಸಂವಿಧಾನವು ಯಾವ ರೀತಿಯಲ್ಲಿ ಕಾರ್ಯ ಮಾಡುತ್ತದೆ ಎಂಬುದರ ಬಗ್ಗೆ ಲಕ್ಷ್ಯ ವಹಿಸುವ ಪಕ್ಷಗಳು ಭಾರತದಲ್ಲಿ ಇಲ್ಲ ಮತ್ತು ಮಂತ್ರಿಮಂಡಲದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕೆ ತೋರಿಸುವ ಹಿತಾಸಕ್ತಿಗಿಂತ ಸಂವಿಧಾನವು ಯುಕ್ತ ಉದ್ದೇಶದಿಂದ ಕಾರ್ಯ ಮಾಡಬೇಕೆಂಬಲ್ಲಿ ಕಡಿಮೆ ಹಿತಾಸಕ್ತಿ ತೋರುವ ಮಂತ್ರಿಗಳೂ ನಮಗೆ ದೊರಕಬಹುದು. ಅಲ್ಲದೇ ಕಾನೂನು ಎಲ್ಲಿ ವಿಷಯಗಳನ್ನು ಸ್ಪಷ್ಟಪಡಿಸಿರುವುದೋ ಅಲ್ಲಿ ಅದು ಗವರ್ನರನಿಗೆ ಬಿಟ್ಟುಕೊಟ್ಟ ಎಲ್ಲ ವಿವೇಚನೆಯನ್ನೂ ಹಿಂತೆಗೆದುಕೊಳ್ಳಬೇಕು. ಭಾರತದಂಥ ದೇಶದಲ್ಲಿ ಅಂದರೆ ಯಾವ ದೇಶದಲ್ಲಿ ಕೋಮುವಾದ ಮತ್ತು ಜನಾಂಗವಾದದ ಸಂಕಷ್ಟಗಳಿಂದ ಕೂಡಿದ ರಾಜಕೀಯ ಕ್ಷೇತ್ರವು ಅಳೆಯಲಸಾಧ್ಯವಾದ ಸಾಗರದಂತೆ ಇರುವಾಗ ಗವರ್ನರನಿಗೆ ಸಾಕಷ್ಟು ಪ್ರಮಾಣದ ವಿವೇಚನೆಗೆ ಎಡೆಗೊಡಲೇಬೇಕೆಂಬ ರೀತಿಯಲ್ಲಿ ನಾವು ಪ್ರಯತ್ನಿಸಬೇಕೆಂದು ನನಗನಿಸುತ್ತದೆ. ನನ್ನ ಖಚಿತ ಸೂಚನೆ ಹೀಗಿದೆ. ಏನೆಂದರೆ: ಕಾರ್ಯಾಂಗದ ಜಂಟಿ ಹೊಣೆಗಾರಿಕೆಯನ್ನು ಕಾನೂನು ಗೊತ್ತುಪಡಿಸತಕ್ಕುದು ಮತ್ತು ಉಳಿದ ವಿಷಯವನ್ನು ಗವರ್ನರನ ವಿವೇಚನೆಗೆ ಬಿಟ್ಟುಕೊಡತಕ್ಕುದು. ಹೀಗೆ ಮಾಡಿದರೆ ಎರಡೂ ಷರತ್ತುಗಳನ್ನು ನಾವು ಪಾಲಿಸಿದಂತೆ ಆಗುತ್ತದೆ. ಇದ್ದ ಯಾವುದೇ ಹೊಣೆಗಾರಿಕೆಯು ಜಂಟೀ ಹೊಣೆಗಾರಿಕೆಯಾಗಿದೆ ಎಂಬಂತೆ ನಾವು ಉಪಬಂಧಿಸುವಂತಾಗುತ್ತದೆ ಜೊತೆಗೆ ಕಾರ್ಯಾಂಗದ ರಚನೆಗೂ ತೊಡಕಾಗದು. ಅಂದರೆ, ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯ ಬೇಕಾದ ಕೋಮುಗಳಿಗೆ ಪ್ರಾತಿನಿಧ್ಯ ಕೊಡಬಹುದು ಅಥವಾ ಪ್ರಧಾನಮಂತ್ರಿಗೆ ತನ್ನ ಮಂತ್ರಿಮಂಡಲದಲ್ಲಿ ಹೊರಗಿನವರು ಇರುವುದು ಅವಶ್ಯವೆನಿಸಿದರೆ ಹಾಗೆ ಮಾಡಲು ಅವಕಾಶವಾಗುವುದು. ನಾವು ಹಾಗೆ ಮಾಡಿದರೆ ಮತ್ತು ಅದನ್ನು ಗವರ್ನರನ ವಿವೇಚನೆಗೆ ಬಿಡದೆ ಕಾನೂನಿನ ಮೂಲಕ ಕಾರ್ಯಾಂಗವು ಜಂಟೀ ಹೊಣೆಗಾರಿಕೆ ಇದ್ದ ಜಂಟೀ ಕಾರ್ಯಾಂಗವಾಗಿರತಕ್ಕುದು ಎಂದು ಒತ್ತಾಯಿಸಿದರೆ, ಉಳಿದ ಎಲ್ಲ ವಿಷಯಗಳನ್ನೂ, ಅವು ದುರುಪಯೋಗವಾಗಬಹುದೆಂಬ ಯಾವ ಭಯವೂ ಇಲ್ಲದೆ ಗವರ್ನರನ ಆಯ್ಕೆಗೆ ಬಿಟ್ಟುಕೊಡಬಹುದೆಂದು ನನಗೆ ತೋರುತ್ತದೆ.

ಮಾನ್ಯರೇ, ಈಗ ನಾನು ಚರ್ಚೆಗೆ ತೆಗೆದುಕೊಳ್ಳುವ ವಿಷಯವೆಂದರೆ ಗವರ್ನರನ ಮತ್ತು ಕಾರ್ಯಾಂಗದ ನಡುವಿನ ಅಧಿಕಾರಕ್ಕೆ ಸಂಬಂಧಿಸಿದ ವಿಷಯ. ನಮಗೆಲ್ಲ ತಿಳಿದಿರುವಂತೆ ಗವರ್ನರನ ಮತ್ತು ಮಂತ್ರಿಯ ನಡುವಣ ಸಂಬಂಧವನ್ನು ೫೨ನೇ ಕಲಮಿನ ೩ನೇ ಉಪಕಲಮಿನಲ್ಲಿ ವಿವರಿಸಲಾಗಿದೆ. ವರ್ಗಾವಣೆ ಮಾಡಲಾಗಿರುವ ಎಲ್ಲ ವಿಷಯಗಳಲ್ಲಿ ಮತ್ತು ಈಗ ವರ್ಗಾವಣೆಯಾಗುವ ಎಲ್ಲ ವಿಷಯಗಳಲ್ಲಿ ಯಾವನ್ನೂ ಕಾಯ್ದಿಡದೆ ಗವರ್ನರನು ತನ್ನ ಮಂತ್ರಿಗಳ ಸಲಹೆಯ ಮೂಲಕ ಮಾರ್ಗದರ್ಶನ ಪಡೆಯುತ್ತಾನೆ ಎಂದು ಈ ಖಂಡವು ಹೇಳುತ್ತದೆ; ಅಲ್ಲದೆ, ಅದು ಮತ್ತೊಂದನ್ನೂ ಸೇರಿಸುತ್ತದೆ. ಅಂದರೆ ಮಂತ್ರಿಗಳ ಸಲಹೆಗೆ ಸಮ್ಮತಿಸದಿರಲು ಆತನಿಗೆ ಸಾಕಷ್ಟು ಕಾರಣಗಳಿದ್ದರೆ, ಆ ಸಲಹೆಗೆ ವ್ಯತಿರಿಕ್ತವಾಗಿ ಕ್ರಮ ತೆಗೆದುಕೊಳ್ಳುವಂತೆ ಆತ ಮಾಡಬಲ್ಲ. ಈ ಖಂಡವನ್ನು ರೂಪಿಸಿದ ಎಲ್ಲರಿಗೂ ಯುಕ್ತಗೌರವದೊಂದಿಗೆ ಹೇಳುವುದಾದರೆ, ಹೊಣೆಗಾರ ಸರಕಾರವನ್ನು ಒದಗಿಸುವ ಉದ್ದೇಶದಿಂದಲೇ ಅವರು ಹಾಗೆ ಮಾಡಿರುತ್ತಾರೆಂದು ಹೇಳಿದರೂ, ಈ ಖಂಡವು ಈಗಿರುವಂತೆ ಹೊಣೆಗಾರ ಸರಕಾರದ ವಿಕೃತ ರೂಪ

ವಾಗಿದೆ ಎಂದು ಹೇಳದಿರಲಾರೆ. ಅದು ಹೊಣೆಗಾರ ಸರಕಾರವನ್ನು ಅನುಕೂಲಸಿಂಧುವಾಗಿ ಮಾಡುತ್ತದೆ. ಗವರ್ನರನಿಗೆ ಅನುಕೂಲಕರವಾಗಿ ಕಂಡಾಗ ಮಾತ್ರ ಅದು ಒಪ್ಪಬಹುದಾದ ಮತ್ತು ಅನುಸರಿಸಬಹುದಾದ ವಿಷಯವಾಗುತ್ತದೆ. ಆದರೆ ವಾಸ್ತವವಾಗಿ, ಜವಾಬ್ದಾರಿ ಸರಕಾರವು ಅನಿವಾರ್ಯವಾಗಿರಬೇಕು ಎಂದು ನಾವು ಬಯಸುತ್ತೇವೆ. ಹೊಣೆಗಾರ ಸರಕಾರವೆಂಬುದಕ್ಕೆ ಏನಾದರೂ ಅರ್ಥವಿದ್ದರೆ ಅದು ಹೀಗಿದೆ: ಯಾವುದೇ ಕ್ಷೇತ್ರದಲ್ಲಿ ಗವರ್ನರನು ಕೈಕೊಂಡ ಯಾವುದೇ ಕ್ರಮದಲ್ಲಿ ಶಾಸಕಾಂಗದ ವಿಶ್ವಾಸವಿದ್ದ ಮಂತ್ರಿಮಂಡಲದ ಸಮರ್ಥನೆ ಇರುತ್ತದೆ. ಅದು ನಾವು ನಿರ್ಲಕ್ಷಿಸಲಾಗದ ಮೂಲಭೂತ ಪ್ರಸ್ತಾಪವಾಗಿದೆ. ಆದಕಾರಣ ನನ್ನ ನಮ್ರ ಹೇಳಿಕೆಯೆಂದರೆ, ಈ ಖಂಡವು. ಅಂದರೆ ೫೨ನೇ ಪ್ರಕರಣವು ಸ್ಪಷ್ಟ ಅರ್ಥ ಬರುವಂತೆ ಬದಲಾವಣೆಯಾಗಬೇಕು. ಅಂದರೆ, ಶಾಸನದ ಮೂಲಕ ವ್ಯತಿರಿಕ್ತವಾದ ನಿರ್ದಿಷ್ಟ ಉಪಬಂಧವನ್ನು ರೂಪಿಸದ ಹೊರತು, ನಾನು ಮುಂದೆ ವಿವರಿಸುವಂತಹ ಗವರ್ನರನು ಯಾವಾಗಲೂ ಮಂತ್ರಿಗಳ ಸಲಹೆಯ ಮೇರೆಗೇ ಕ್ರಮ ಕೈಗೊಳ್ಳತಕ್ಕುದು ಎಂಬಂಥ ಸಂದರ್ಭಗಳೂ ಇರಬಹುದಾಗಿದೆ.

ಮಾನ್ಯರೇ, ಈಗ ಗವರ್ನರನಿಗೆ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರಗಳನ್ನು ಕೊಡುವುದು ಅವಶ್ಯವಾದಂಥ ಸಂದರ್ಭಗಳು ಮತ್ತು ಮಂತ್ರಿಗಳ ಸಲಹೆಯನ್ನು ಅನುಸರಿಸಬೇಕಾದ ಅಗತ್ಯ ಇಲ್ಲದಂಥ, ಆದರೆ ಸ್ವತಂತ್ರವಾಗಿ ಕ್ರಮ ಕೈಗೊಳ್ಳಲು ಹಕ್ಕುಳ್ಳಂಥ ಅಧಿಕಾರ ಕೊಡುವುದು ಕೆಲವು ಸಂದರ್ಭಗಳಲ್ಲಿ ಅವಶ್ಯ ಇರಬಹುದು ಎಂಬುದನ್ನು ನಾನು ಒಪ್ಪುತ್ತೇನೆ. ಅಂಥ ಸಂದರ್ಭಗಳನ್ನು ಸೈಮನ್ ಆಯೋಗದ ವರದಿಯ ೨ನೇ ಸಂಪುಟದ ೩೬ನೇ ಪುಟದಲ್ಲಿನ ೫೦ನೇ ಪ್ಯಾರಾಗ್ರಾಫಿನಲ್ಲಿ ಹೇಳಲಾಗಿದೆ. ಮೊದಲನೆಯದೆಂದರೆ: ಪ್ರಾಂತದ ಭದ್ರತೆ ಮತ್ತು ಶಾಂತಿಯನ್ನು ಕಾಪಾಡಿಕೊಂಡು ಹೋಗಲು ಅವನು ಕೆಲವು ಅಧಿಕಾರಗಳನ್ನು ಹೊಂದಿರಬೇಕು. ಎರಡನೆಯದಾಗಿ, ಒಂದು ಕೋಮಿನ ಒಂದು ಅಥವಾ ಹೆಚ್ಚಿನ ಪಂಗಡಗಳಿಗೆ ಇತರ ಪಂಗಡಗಳಿಗಿಂತ ಹೆಚ್ಚು ಅನ್ಯಾಯವಾಗುವುದನ್ನು ತಡೆಯಲು ಆತನಿಗೆ ಅಧಿಕಾರಗಳು ಇರತಕ್ಕುದು. ಕೊನೆಯದಾಗಿ ಅದು ಗವರ್ನರನಿಗೆ ಇಡಿಯ ಕಾರ್ಯಾಂಗದ ಹೊಣೆಗಾರಿಕೆಯ ಹೊರತಾಗಿ ನಿರ್ದಿಷ್ಟ ಹೊಣೆಯನ್ನು ವಿಧಿಸಬಹುದಾದಂಥ ಹಲವು ಸಂದರ್ಭಗಳನ್ನು ಉಲ್ಲೇಖಿಸುತ್ತದೆ. ಅಂಥ ಸಂದರ್ಭಗಳಲ್ಲಿ ಆತನಿಗೆ ಇಂತಹ ಅಧಿಕಾರ ಇರಬೇಕೆಂದೂ ಅದು ಹೇಳುತ್ತದೆ.

ಈ ಬಾಬುಗಳಿಗೆ ಸಂಬಂಧಿಸಿದಂತೆ ನನ್ನ ಮೊದಲನೆಯ ಹೇಳಿಕೆಯೆಂದರೆ ಪ್ರಾಂತದ ಶಾಂತಿಯನ್ನು, ಭದ್ರತೆಯನ್ನು ಮತ್ತು ಸ್ಥಿರತೆಯನ್ನು ಕಾಪಾಡಲು ತನ್ನ ಮಂತ್ರಿಗಳ ಮೇಲೆ ಅಧಿಕಾರವನ್ನು ಗವರ್ನರನಿಗೆ ಕೊಟ್ಟರೆ, ಪ್ರಾಂತದಲ್ಲಿನ ಹೊಣೆಗಾರ ಸರಕಾರದ ಬಹು ದೊಡ್ಡದಾದ ಭಾಗವನ್ನು ನೀವು ಕಿತ್ತುಕೊಳ್ಳುವಂತೆ ಕಂಡುಬರುತ್ತದೆ. ಏನೇ ಆಗಲಿ, ನಾವು ಈಗ ಮಾಡುತ್ತಿರುವ ಪ್ರಯತ್ನವೆಂದರೆ ಗವರ್ನರನು ತನ್ನ ಪ್ರಾಂತವನ್ನು ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಅಂದರೆ ಶಾಂತಿ, ಭದ್ರತೆ ಮತ್ತು ಸ್ಥಿರತೆಯಂಥ ವಿಷಯಗಳನ್ನು ಒಳಗೊಂಡಂತೆ, ಮಂತ್ರಿಗಳ ಸಲಹೆಯ ಮೇರೆಗೇ ಆಡಳಿತ ನಡೆಸತಕ್ಕುದು. ಅವರ ಸಲಹೆಗೆ ವ್ಯತಿರಿಕ್ತವಾಗಿ ಆಡಳಿತ ನಡೆಸುವ ಅಧಿಕಾರವನ್ನು ಗವರ್ನರನಿಗೆ ಮೀಸಲಾಗಿಟ್ಟರೆ, ನೀವು ಬಹುವಿಸ್ತೃತ ರೀತಿಯಲ್ಲಿ ಹೊಣೆಗಾರ ಸರಕಾರದ ಅಧಿಕಾರವನ್ನು ನಾಶ ಮಾಡುತ್ತೀರಿ. ಕಾರಣ, ಈ ಪ್ರಕಾರದ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಅಧ್ಯಾರೋಹಿ ಅಧಿಕಾರಗಳನ್ನು ಕೊಡಕೂಡದು, ಆದರೆ, ಇಡಿಯ ಸಂದರ್ಭವನ್ನೇ ನುಂಗುವಂತಹ ಈ ವಿಶಾಲವಾದ ಸೂತ್ರವನ್ನು ಪರಿಮಿತವಾಗಿ ವಿವರಿಸಬಹುದು ಎಂದು ನಾನು ಹೇಳುತ್ತೇನೆ.

ಮತ್ತೊಂದು ಪ್ರಶ್ನೆಗೆ, ಅಂದರೆ ಇತರರೊಡನೆ ಹೋಲಿಸಿದಾಗ ಒಂದು ಕೋಮಿಗೆ ಒಂದು ಪಂಗಡದವರಿಗೆ ಅನ್ಯಾಯವಾಗುವುದಕ್ಕೆ ಸಂಬಂಧಿಸಿದಂತೆ ನನ್ನದೇ ಆದ ಅಭಿಪ್ರಾಯವೆಂದರೆ ಇದು ತುಂಬಾ ಹಿತಕಾರಿ ಸಂಗತಿಯಾದಾಗ್ಯೂ, ಯಾವುದೇ ವಿಶಿಷ್ಟ ಕೋಮಿನ ಹಿತಾಸಕ್ತಿಗಳಿಗೆ ಬಾಧೆಯುಂಟಾಗುವ ರೀತಿಯಲ್ಲಿ ಪರಿಣಾಮ ಬೀರುತ್ತಿದ್ದರೆ ಅವುಗಳನ್ನು ಶಾಸನದ ಮೂಲಕ ಕಾರ್ಯಗತಗೊಳಿಸಬೇಕು ಎಂಬುದಕ್ಕೆ ನಾನು ಹೆಚ್ಚಿನ ಪುರಸ್ಕಾರ ಕೊಡುತ್ತೇನೆ. ಅದನ್ನು ಗವರ್ನರರ ಇಷ್ಟಕ್ಕೆ ಎಂದೂ ಬಿಡತಕ್ಕುದಲ್ಲ. ಅದಕ್ಕೆ ಈ ಒಂದು ಉತ್ತಮ ಕಾರಣವಿದೆ. ಏನೇ ಆದರೂ ಗವರ್ನರನು ಮಂತ್ರಿಮಂಡಲದೊಳಗೆ ಸಂಪರ್ಕ ಇಟ್ಟುಕೊಂಡಿರಲೇಬೇಕಾಗುತ್ತದೆ. ಏಕೆಂದರೆ, ಆ ಮಂತ್ರಿಮಂಡಲಕ್ಕೆ ಶಾಸಕಾಂಗದ ಬಹುಮತ ಬೆಂಬಲ ಇರುತ್ತದೆ. ಆತನು ಮಂತ್ರಿ ಮಂಡಲವನ್ನು ಎದುರು ಹಾಕಿಕೊಂಡು ಕಾರ್ಯ ಮಾಡಲಾರ. ಅವರವರ ನಡುವೆ ತುಂಬಾ ಅನ್ಯೋನ್ಯತೆ ಇರಬೇಕು. ಶಾಸಕಾಂಗದಲ್ಲಿನ ಬಹುಮತವನ್ನು ಪ್ರತಿನಿಧಿಸುತ್ತಿರುವಂಥ ಮಂತ್ರಿಮಂಡಲದೊಡನೆ ತನ್ನ ದೃಷ್ಟಿಯಲ್ಲಿ ಅತಿ ಮಹತ್ವದ್ದಲ್ಲದ ಅಲ್ಪಸಂಖ್ಯಾತರ ರಕ್ಷಣೆಗಾಗಿಯೇ ಯಾವಾಗಲೂ ಜಗಳ ತೆಗೆಯುವ ಮನಸ್ಸನ್ನು ಗವರ್ನರನು ಹೊಂದಿರುತ್ತಾನೆ ಎಂಬ ಬಗ್ಗೆ ನನಗೆ ನಂಬಿಕೆ ಇಲ್ಲ. ಕಾರಣ ಅಲ್ಲಿ ಹೇಳಲಾಗಿರುವ ಸೂಚನೆಯನ್ನು ನಾನು ಒಪ್ಪಿದರೂ, ಅಲ್ಪಸಂಖ್ಯಾತರ ಹಿತರಕ್ಷಣೆಯನ್ನು ಅಲ್ಲಿ ಸೂಚಿಸಿರುವುದಕ್ಕಿಂತ ದೃಢವಾದ ರೀತಿಯಲ್ಲಿ ರಕ್ಷಿಸಬೇಕು ಎಂಬುದಕ್ಕೆ ನಾನು ಮಹತ್ವ ಕೊಡುತ್ತೇನೆ. ನನಗೆ ಈ ಅಧಿಕಾರವನ್ನು ನೀಡಿದರೆ ನಾನು ಈ ಖಂಡವನ್ನು ಕೈ ಬಿಡಲೂ ಸಿದ್ಧ.

ಇತರ ೩, ೪ ಮತ್ತು ೫ನೆಯ ಬಾಬುಗಳ ವಿಷಯದಲ್ಲಿ ಈ ಬಗೆಯ ಸಂದರ್ಭಗಳಲ್ಲಿ ಗವರ್ನರನಿಗೆ ಅಧ್ಯಾರೋಹೀ ಅಧಿಕಾರಗಳಿರಲೇಬೇಕು. ಏಕೆಂದರೆ, ಅವನು ಆಡಳಿತ ನಡೆಸಲು ಸ್ವತಃ ಹೊಣೆಗಾರನಾಗಿರುವಂಥ ಸಂದರ್ಭಗಳೂ ಇವೆ.

ಗವರ್ನರರ ಮತ್ತು ಶಾಸಕಾಂಗದ ನಡುವಿನ ಅಧಿಕಾರಗಳ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಸೂಚನೆಗಳನ್ನು ಮೂರು ಶೀರ್ಷಿಕೆಗಳಲ್ಲಿ ವಿಭಜಿಸುತ್ತೇನೆ. ಪ್ರಪ್ರಥಮವಾಗಿ ಬಜೆಟ್ ಅಧಿವೇಶನ, ಎರಡನೆಯದಾಗಿ ಸಾಮಾನ್ಯ ಶಾಸನ ರೂಪಿಸುವುದು; ಮೂರನೆಯದಾಗಿ ತುರ್ತುಸ್ಥಿತಿಯ ಶಾಸನ ರೂಪಿಸುವುದು, ಮೀಸಲಿಡಲ್ಪಟ್ಟ ವಿಷಯಗಳ ಬಗ್ಗೆ ಉಪಬಂಧಗಳನ್ನು ಕಲ್ಪಿಸಲು ಈಗ ಗವರ್ನರರಿಗೆ ಅಧಿಕಾರವಿದೆ. ಅದು ಅವಶ್ಯವಾಗಿ ಅರಾಜಕತೆಯನ್ನು ತೊಡೆದು ಹಾಕುತ್ತವೆ. ಎರಡನೆಯದಾಗಿ, ಪ್ರಾಂತದ ಸುರಕ್ಷತೆಗಾಗಿ ಮತ್ತು ಶಾಂತಿಪಾನೆಗಾಗಿ ಖರ್ಚು ಮಾಡಲು ಅನುಮತಿಸುವ ಅಧಿಕಾರವೂ ಗವರ್ನರನಿಗೆ ಇರುತ್ತದೆ. ನೀವು ಶಾಂತಿ ಮತ್ತು ಭದ್ರತೆಯ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ನಿರ್ಣಯಿಸಲು ಹೊಣೆಗಾರ ಮಂತ್ರಿಮಂಡಲಕ್ಕೆ ಬಿಡುವುದಿದ್ದರೆ, ಪ್ರಾಂತದ ಸುರಕ್ಷತೆ ಮತ್ತು ಶಾಂತಿಪಾಲನೆಗಾಗಿ ಹಣವನ್ನು ಖರ್ಚು ಮಾಡಲು ಅನುಮತಿಸುವ ಈ ಅಧಿಕಾರವನ್ನು ಗವರ್ನರನು ಹೊಂದಿರತಕ್ಕುದಲ್ಲ ಎಂದು ನಾನು ಹೇಳುತ್ತೇನೆ. ಅವನಿಗೆ ಮಸೂದೆಗಳನ್ನು ಪ್ರಮಾಣೀಕರಿಸುವ ಅಧಿಕಾರವೂ ಇರುತ್ತದೆ. ಅದು ಎರಡು ಪ್ರಕಾರದ್ದಾಗಿರುತ್ತದೆ. ಶಾಸಕಾಂಗದಲ್ಲಿ ಚರ್ಚಿಸಲ್ಪಡುತ್ತಿರುವ ಮಸೂದೆ ಪ್ರಾಂತದ ಸುರಕ್ಷತೆ ಮತ್ತು ಶಾಂತಿಪಾಲನೆಗೆ ಬಾಧೆಯನ್ನುಂಟು ಮಾಡುತ್ತದೆ ಎಂಬ ಕಾರಣದಿಂದ ಅದನ್ನು ಚರ್ಚಿಸಬಾರದೆಂದು ಆತ ಪ್ರಮಾಣೀಕರಿಸಬಹುದು. ಅದೂ ಅಲ್ಲದೆ, ಶಾಸಕಾಂಗವು ಚರ್ಚಿಸಲು ಇಷ್ಟಪಡದಿರುವ ಮಸೂದೆಯನ್ನು ಪ್ರಾಂತದ ಸಂರಕ್ಷಣೆ ಮತ್ತು ಶಾಂತಿಪಾಲನೆಯ ಹಿತಾಸಕ್ತಿಗಾಗಿ ಅವಶ್ಯವಿರುವುದರಿಂದ ಅದನ್ನು ಆತನು ಪ್ರಮಾಣೀಕರಿಸ

ಬಹುದು. ಈ ಎರಡೂ ಅಧಿಕಾರಗಳು ಇರತಕ್ಕುದಲ್ಲ. ಭಾರತದ ಭಾವೀ ಸಂವಿಧಾನದಲ್ಲಿ ಇವು ಅವಶ್ಯವೆನಿಸುವುದಿಲ್ಲ.

ಪೂರ್ವ ಮಂಜೂರಾತಿಯನ್ನು ಕೊಡುವ ಅಧಿಕಾರವೂ ಅವನಿಗೆ ಇರುತ್ತದೆ. ಹಲವು ವಿಷಯಗಳಿಗೆ ಅವು ಚರ್ಚೆಗೆ ಬರುವುದಕ್ಕಿಂತ ಮುಂಚೆಯೇ, ಅವನು ಮಂಜೂರಿ ನೀಡುವುದು ಅವಶ್ಯವಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಅವನ ಈ ಅಧಿಕಾರವೂ ಹೋಗಬೇಕು.

ಸರ್ ಅಹಮದ್ ಸಯ್ಯದ್ ಖಾನ್: ಪಕ್ಷಪಾತದಿಂದ ಕೂಡಿದ ಶಾಸನವೇ?

ಡಾ. ಅಂಬೇಡ್ಕರ್: ಅದು ಶಾಸನದಿಂದ ಶಾಸಿತವಾಗಬೇಕು. ಅದನ್ನು ಗವರ್ನರನಿಗೆ ಬಿಡಬೇಕಾಗಿಲ್ಲ. ಗವರ್ನರನಿಗೆ ವಿಟೋ ಅಧಿಕಾರ ಇರತಕ್ಕುದು: ಯಾವ ಪ್ರಾಂತಗಳಿಗೆ ಎರಡನೆಯ ಸದನ ಬೇಡವೋ ಅಲ್ಲಿ ಎರಡನೆಯ ಸದನ ಇರುವುದಿಲ್ಲ ಎಂಬುದನ್ನು ಗಮನಿಸಿದಾಗ ಗವರ್ನರನಿಗೆ ವಿಟೋ ಅಧಿಕಾರ ಇರುವುದು ತುಂಬಾ ಅವಶ್ಯವಾಗಿರುತ್ತದೆ. ಮಸೂದೆಯನ್ನು ಶಾಸನಸಸಭೆಗೆ ಮರು ಪರಿಶೀಲನೆಗಾಗಿ ಹಿಂತಿರುಗಿಸಲು ಇಂದು ಗವರ್ನರನಿಗೆ ಅಧಿಕಾರವಿರುತ್ತದೆ. ಇದು ಹಲವಾರು ಡೊಮಿನಿಯನ್ ಸಂವಿಧಾನಗಳಲ್ಲಿ ಇರುವ ಅತ್ಯಂತ ಉಪಯುಕ್ತ ಅಧಿಕಾರವಾಗಿದೆ. ಮತ್ತು ಅದನ್ನು ನಾವು ಉಳಿಸಿಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಗವರ್ನರ್ ಜನರಲ್ಲನ ಪರ್ಯಾಲೋಚನೆಗಾಗಿ ಮಸೂದೆಯನ್ನು ಕಾಯ್ದಿಡುವ ಅಧಿಕಾರವೂ ಗವರ್ನರನಿಗೆ ಇರುತ್ತದೆ ಮತ್ತು ಎಂಥ ಸಂದರ್ಭಗಳಲ್ಲಿ ಆತ ಹಾಗೆ ಮಾಡಬಹುದೆಂದು ಶಾಸನವೇ ಗೊತ್ತುಪಡಿಸಿರುತ್ತದೆ. ಈ ವಿಷಯವು ನಾವು ಕೇಂದ್ರ ಸರಕಾರದೊಡನೆ ಪ್ರಾಂತೀಯ ಸರಕಾರಗಳ ಸಂಬಂಧವನ್ನು ಪರ್ಯಾಲೋಚಿಸುವಾಗ ತುಂಬಾ ಅನುಕೂಲಕರವಾಗಿ ಈ ಬಗ್ಗೆ ಪರ್ಯಾಲೋಚಿಸಬಹುದಾದಂಥ ವಿಷಯವಾಗಿದೆ. ಆದರೆ, ಈ ವಿಷಯದ ಮೇಲೆ ನಾನು ಒಂದು ಅಭಿಪ್ರಾಯ ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ನಾವು ಪ್ರಾಂತೀಯ ಸಂವಿಧಾನವನ್ನು ಅದು ತನ್ನ ನಿಯಂತ್ರಣಕ್ಕೆ ವರ್ಗಾಯಿಸಲಾಗಿರುವ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾಧ್ಯವಿರುವಷ್ಟರ ಮಟ್ಟಿಗೆ ಕೇಂದ್ರ ಸರಕಾರದ ಹಸ್ತಕ್ಷೇಪವಿಲ್ಲದೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತೆ ರಚಿಸಲು ನಾವು ಪ್ರಯತ್ನಪಡಬೇಕು. ಮಸೂದೆಗಳನ್ನು ಕಾಯ್ದಿರಿಸುವುದರ ಮೂಲಕ ಆಡಳಿತಾತ್ಮಕವಾಗಿ ಅಥವಾ ಶಾಸನ ರಚಿಸುವ ವಿಷಯದಲ್ಲಾಗಲೀ ಕೇಂದ್ರ ಸರಕಾರವು ಮೇಲಿಂದ ಮೇಲೆ ಹಸ್ತಕ್ಷೇಪ ಮಾಡಲು ಅವಕಾಶವಿರದಂಥ ಸಂವಿಧಾನವನ್ನು ನಾವು ರೂಪಿಸಬೇಕು.

ಕಾನೂನು ಮತ್ತು ಸುವ್ಯವಸ್ಥೆಯನ್ನು ಸಂರಕ್ಷಿಸಲು ಮತ್ತು ಅಲ್ಪಸಂಖ್ಯಾತರಿಗಾಗಿ ಇರುವ ಪ್ರಶ್ನೆಗೆ ಸಂಬಂಧಿಸಿದಂತೆ ಕಾನೂನು ಮತ್ತು ಸುವ್ಯವಸ್ಥೆಯ ವಿಷಯವನ್ನು ವರ್ಗಾಯಿಸಬೇಕೆಂದು ಈಗಾಗಲೇ ಹೇಳಿರುತ್ತೇನೆ. ಏಕೆಂದರೆ ಅದು ಅಷ್ಟು ಮೌಲಿಕವಾಗಿದೆ. ಆಪತ್ಕಾಲದ ಸಂದರ್ಭಗಳಲ್ಲಿ, ಕಾನೂನು ಮತ್ತು ಸುವ್ಯವಸ್ಥೆ ಅಪಾಯಕ್ಕೊಳಗಾದಾಗ ಮಂತ್ರಿಮಂಡಲದ ಸಲಹೆಗೆ ಕಿವಿಗೊಡದೆಯೇ ಪೊಲೀಸ್ ಅಧಿಕಾರಿಗಳ ನೇಮಕಾತಿ ಮತ್ತು ವರ್ಗಾವಣೆಗೆ ಸಂಬಂಧಿಸಿದ ವಿಷಯದಲ್ಲಿ ಕೊನೆಯದಾಗಿ ಆದೇಶಗಳನ್ನು ಮಾಡಲು ಗವರ್ನರನಿಗೆ ಅಧಿಕಾರವಿರಬೇಕು. ಅದು ಅವಶ್ಯವಾಗಿದೆ.

ಸರ್ ಕಾಸಾಜಿ ಜಹಾಂಗೀರ: ಕೇವಲ ಆಪತ್ಕಾಲದಲ್ಲಿ ಮಾತ್ರವೇ?

ಡಾ. ಅಂಬೇಡ್ಕರ್: ಹೌದು. ಆದರೆ, ಬೇರೆ ಸಂದರ್ಭಗಳಲ್ಲಿ ಅಲ್ಲ.

ಮಿ. ಪಾಲ್: ಸಹಜ ಪರಿಸ್ಥಿತಿಗಳಲ್ಲಿ ಅಲ್ಲ?

ಡಾ. ಅಂಬೇಡ್ಕರ್: ಸಹಜ ಪರಿಸ್ಥಿತಿಗಳಲ್ಲಿ ಅಲ್ಲವೇ ಅಲ್ಲ. ಆದರೆ, ದಂಗೆಗಳೆದ್ದಾಗ ಅಥವಾ

ಅಶಾಂತಿ ಹರಡಿದಂಥ ಆಪತ್ಕಾಲದ ಸಂದರ್ಭಗಳಲ್ಲಿ, ಗವರ್ನರನಂಥ ನಿಷ್ಪಕ್ಷಪಾತಿಯಾದ ಮತ್ತು ಮಂತ್ರಿ ಮಂಡಲದಲ್ಲಿ ಏನು ನಡೆಯುತ್ತಿದೆ ಎಂಬುದರ ಪ್ರಭಾವಕ್ಕೊಳಗಾಗದ ಅಧಿಕಾರಿಗೆ, ದಂಗೆಯು ಮುಂದುವರೆಯುತ್ತಿರುವಾಗ ಜನರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಯಾವುದೇ ಒಂದು ಕೋಮಿಗೆ ಸಹಾಯವಾಗುವ ರೀತಿಯಲ್ಲಿ ವರ್ಗಾವಣೆ ಆಗುವುದನ್ನು ತಡೆಯಲು ಕೊನೆಯ ಅಧಿಕಾರ ಇರುವುದು ತುಂಬಾ ಅಗತ್ಯವಾಗಿರುತ್ತದೆ. ಕಾನೂನು ಮತ್ತು ಶಾಂತಿಪಾಲನೆಯ ವ್ಯವಸ್ಥೆಯನ್ನು ಸಂರಕ್ಷಿಸಿಕೊಳ್ಳುವಲ್ಲಿ ಇದು ಅವನಿಗೆ ಸಾಕಷ್ಟು ಅಧಿಕಾರವನ್ನು ಕೊಡುತ್ತದೆ ಎಂದು ನನಗೆ ಅನಿಸುತ್ತದೆ.

ಅಲ್ಪಸಂಖ್ಯಾತರ ಪ್ರಶ್ನೆಗೆ ಸಂಬಂಧಿಸಿದಂತೆ ಕೆಲವು ಭಾಷಣಕಾರರು ಎರಡನೆಯ ಸದನವು ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುತ್ತದೆ ಎಂದು ಸೂಚಿಸಿದರು ಮತ್ತು ನನ್ನ ಸ್ನೇಹಿತ ಮಿ.ವುಡ್ ಅವರು ಎರಡನೆಯ ಸದನಕ್ಕೆ ಸಂಬಂಧಿಸಿದಂತೆ ನಿಮ್ನ ವರ್ಗದವರ ಸ್ಥಾನವನ್ನು ನಾನು ಸರಿಯಾಗಿ ಪರ್ಯಾಲೋಚಿಸಿಲ್ಲ ಎಂಬ ಸೂಚನೆಯನ್ನು ಮುಂದಿಟ್ಟರು. ಈ ವಿಷಯದ ಬಗ್ಗೆ ನಾನು ಅತಿ ಹೆಚ್ಚಿನ ಜಾಗರೂಕತೆಯಿಂದ ಪರ್ಯಾಲೋಚಿಸಿರುತ್ತೇನೆ ಎಂದು ನನ್ನ ಮಿತ್ರರಿಗೆ ಖಚಿತಪಡಿಸಲು ಇಚ್ಛಿಸುತ್ತೇನೆ ಮತ್ತು ಸ್ನೇಹಿತರಾದ ಮಿ. ಪಾಲ ಅವರು ಎರಡನೆಯ ಸದನವು ಅಲ್ಪಸಂಖ್ಯಾತರಿಗೆ ರಕ್ಷಣೆಯಾಗುವುದರ ಬದಲಿಗೆ ಅವರ ಕೊರಳಿಗೆ ನೇಣು ಆಗುತ್ತಿದೆ ಎಂದು ಹೇಳಿರುವುದನ್ನು ನಾನು ಪೂರ್ಣ ಒಪ್ಪುತ್ತೇನೆ.

ಈ ಮೊದಲು ಹೇಳದಿರುವ ಒಂದು ವಿಷಯವೂ ಇದೆ. ಅದನ್ನು ಈಗ ನಾನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ. ಅದೆಂದರೆ, ಮಂತ್ರಿಮಂಡಲದೊಡನೆ ಗವರ್ನರಿಗಿರುವ ಸಂಬಂಧ. ಅತನು ತನ್ನ ಅಧಿಕಾರ ಬಲದಿಂದ ಮಂತ್ರಿಮಂಡಲದ ಅಧ್ಯಕ್ಷನಾಗಿರಬೇಕೋ ಅಥವಾ ಇಲ್ಲವೋ? ಅರಸನು ಇಲ್ಲದೆಯೇ ಮಂತ್ರಿಮಂಡಲವು ತನ್ನ ಸಭೆಗಳನ್ನು ನಡೆಸುವ ಈ ದೇಶದಲ್ಲಿ ಅಂಥ ಪದ್ಧತಿ ಇರಬೇಕೆ ಮತ್ತು ಹಾಗಾದರೆ ಮಂತ್ರಿಮಂಡಲವು ತೆಗೆದುಕೊಂಡ ನಿರ್ಣಯಗಳನ್ನು ಮತ್ತು ಪರಿಣಾಮಗಳನ್ನು ಗವರ್ನರನಿಗೆ ತಿಳಿಸುವ ವಿಧಾನ ಯಾವುದು ಇರಬೇಕು? ಈ ಬಾಬಿಗೆ ಸಂಬಂಧಿಸಿದಂತೆ ಈ ಪ್ರಶ್ನೆ ಉಂಟಾಗುವುದೋ ಹೇಗೋ ನನಗೆ ಗೊತ್ತಿಲ್ಲ; ಅದು ಉಂಟಾಗುವುದಿಲ್ಲವಾದರೆ ಆ ಬಗ್ಗೆ ಚರ್ಚಿಸಲು ವೇಳೆ ಕಳೆಯಲಾರೆ.

ಅಧ್ಯಕ್ಷ: ನಾವು ಸಾಮಾನ್ಯವಾಗಿ ಇಡಿಯ ಪ್ರಶ್ನೆಯ ಬಗ್ಗೆ ಚರ್ಚಿಸಿದ್ದೇವೆ. ತಾವು ಅದನ್ನು ಮುಂದುವರಿಸಲು ಇಚ್ಛಿಸಿದರೆ ನಾನು ಅದಕ್ಕೆ ಅಡ್ಡಿಯುಂಟುಮಾಡುವುದಿಲ್ಲ.

ಡಾ. ಅಂಬೇಡ್ಕರ್: ಅದಕ್ಕೆ ಸಂಬಂಧಿಸಿದಂತೆ ಒಂದು ವಿಷಯವನ್ನು ಹೇಳಲಿಚ್ಛಿಸುತ್ತೇನೆ. ಸೈಮನ್ ಆಯೋಗವು, ಮಂತ್ರಿಮಂಡಲದ ಕಾರ್ಯದರ್ಶಿಯನ್ನಾಗಿ ಆಯ್.ಸಿ.ಎಸ್. ಅಧಿಕಾರಿ ಸ್ಥಾನಮಾನದವನೊಬ್ಬನನ್ನು ನೇಮಿಸತಕ್ಕುದೆಂದು ಮತ್ತು ಆತನು ಮಂತ್ರಿಮಂಡಲ ಮತ್ತು ಗವರ್ನರನ ನಡುವಣ ಸಂಪರ್ಕಾಧಿಕಾರಿಯಾಗಿ ಕಾರ್ಯ ನಿರ್ವಹಿಸುವಂತಾಗಬೇಕು ಎಂದು ಸೂಚಿಸಿರುತ್ತದೆ. ಈ ಸೂಚನೆಯನ್ನು ಮಾಡುವುದಕ್ಕೆ ಆಯೋಗವು ಈ ದೇಶದಲ್ಲಿ ಇರುವ ರೂಢಿಯನ್ನು ಆಧರಿಸಲಾಗಿದೆಯೆಂದು ಹೇಳುತ್ತದೆ. ಆ ರೂಢಿಯೆಂದರೆ ಈಗ ಮಂತ್ರಿಮಂಡಲವು ಯಾವಾಗಲೂ ಒಬ್ಬ ಕಾರ್ಯದರ್ಶಿಯನ್ನು ಹೊಂದಿರುತ್ತದೆ. ಮೊದಲು ಹಾಗೆ ಇರಲಿಲ್ಲ. ಏನೇ ಆದರೂ ನಾನು ಒಂದು ಸಂಗತಿಯನ್ನು ಹೇಳಬಯಸುತ್ತೇನೆ. ಅಂದರೆ, ಮಂತ್ರಿಮಂಡಲವು ಕಾರ್ಯದರ್ಶಿಯನ್ನು ಹೊಂದಿರಬೇಕು ಅನ್ನುವುದು ಒಂದು

ವಿಷಯವಾದರೆ, ಮಂತ್ರಿಗಳನ್ನೂ ಮೀರಿ ಆತ ಗವರ್ನರನನ್ನು ಕಾಣಬಹುದೆಂಬುದು ಸಂಪೂರ್ಣ ವಾಗಿ ಬೇರೆ ವಿಷಯವಾಗಿರುತ್ತದೆ. ಆ ದೇಶದಲ್ಲಿ ಕಾರ್ಯದರ್ಶಿಯನ್ನು ನೇಮಕ ಮಾಡುವ ಪದ್ಧತಿಯು ಅಸ್ತಿತ್ವದಲ್ಲಿದೆ. ಆದರೆ, ಮಂತ್ರಿಗಳನ್ನು ಅಥವಾ ಪ್ರಧಾನ ಮಂತ್ರಿಯನ್ನು ಮೀರಿ ಮಂತ್ರಿ ಮಂಡಲದ ಕಾರ್ಯದರ್ಶಿಯು ಮಹಾರಾಜನನ್ನು ಭೇಟಿ ಆಗಲು ಈ ದೇಶದಲ್ಲಿನ ಯಾವುದೇ ಮಂತ್ರಿ ಮಂಡಲವಾಗಲೀ ಅಥವಾ ಪ್ರಧಾನಮಂತ್ರಿಯಾಗಲೀ ಸಮ್ಮತಿಸುತ್ತಾರೆಂದು ನನಗೆ ಅನ್ನಿಸುವುದಿಲ್ಲ; ಅಂಥ ವಿಷಯವೇ ಅಸಹನೀಯವಾಗಿರುತ್ತದೆ. ಈ ದೇಶದಲ್ಲಿ ಮಂತ್ರಿಮಂಡಲದ ಇತಿಹಾಸದುದ್ದಕ್ಕೂ ಮಹಾ ರಾಜನಿಗೆ ಸಮೀಪವರ್ತಿಯಾದ ವ್ಯಕ್ತಿಗಳೆಲ್ಲರೂ ಮಂತ್ರಿಮಂಡಲದ ಛಾಯೆಯನ್ನು ಹೊಂದಿ ದವರೇ ಆಗಿರಬೇಕೆಂದು ಮಂತ್ರಿಮಂಡಲವು ಒತ್ತುಕೊಡುತ್ತಾ ಬಂದಿದೆ ಎಂಬುದನ್ನು ನಾವು ಬಲ್ಲೆವು. ಮಹಾರಾಣಿಯವರ ಪರಿಚಾರಿಕೆಯ ಕಾರ್ಯ ಮಾಡುವ ಲೇಡಿಸ್ ಆಫ್ ಚೇಂಬರ್ ಅವರನ್ನೂ ಸಹ ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಲವು ನಾಮಕರಣ ಮಾಡುವವಷ್ಟರವರೆಗೆ ಇದನ್ನು ಬೆಳೆಸಿಕೊಳ್ಳಲಾಗಿದೆ ಎಂಬುದನ್ನು ನಾವು ಬಲ್ಲೆವು. ಆದಕಾರಣ, ಸೂಚಿಸಲಾದ ಸಂದರ್ಭವು ಸಂಪೂರ್ಣ ಅಸಾಧ್ಯ ವಾದುದು ಎಂದು ನನಗೆ ತೋರುತ್ತದೆ. ಜಂಟೀ ಹೊಣೆಗಾರಿಕೆಯ ತತ್ವದ ಮೇಲೆ ಕಾರ್ಯ ಮಾಡುತ್ತಿರುವ ಯಾವುದೇ ಮಂತ್ರಿಮಂಡಲವು ಈ ರೀತಿಯ ಕಾರ್ಯದರ್ಶಿ ತನಗಿರುವುದಕ್ಕೆ ಸಮ್ಮತಿಸುತ್ತಿದೆಯೆಂದು ನಾನು ಭಾವಿಸುವುದಿಲ್ಲ.

ಬೇರೆ ರೀತಿಯಲ್ಲಿ ಗಮನಿಸುವುದಾದರೆ, ಮಂತ್ರಿಮಂಡಲವು ತನ್ನ ನೀತಿ ನಿರ್ಧಾರದ ಬಗ್ಗೆ ಚರ್ಚೆ ನಡೆಸುತ್ತಿರುವಾಗ ಅದರ ಅಧ್ಯಕ್ಷತೆ ವಹಿಸಲು ಗವರ್ನರನಿಗೆ ಅಧಿಕಾರ ಕೊಟ್ಟರೆ, ಅದು ಕಾರ್ಯಕಾರೀ ಆಗಬಹುದು ಎಂದು ನನಗೆ ಅನಿಸುವುದಿಲ್ಲ. ಏಕೆಂದರೆ, ಮಂತ್ರಿಮಂಡಲವು ತಾನು ಕೈಕೊಂಡ ನಿರ್ಣಯಗಳನ್ನು ಗವರ್ನರನಿಗೆ ತಿಳಿಸಬಹುದು ಮತ್ತು ತಿಳಿಸಲೇಬೇಕು. ಆದಾಗ್ಯೂ ಅದು ತನ್ನ ಚರ್ಚೆಯ ಕಾಲದಲ್ಲಿ ಬಂದ ನಿರ್ಣಯಗಳಿಗೆ ಆಧಾರವಾದ ಕಾರಣಗಳನ್ನು ಗವರ್ನರನಿಗೆ ತಿಳಿಸಲು ಸಮ್ಮತಿಸುತ್ತದೆ ಎಂದು ನಾನು ಭಾವಿಸಲಾರೆ. ಕಾರಣಗಳು ತುಂಬಾ ವಿಶಿಷ್ಟವಾದವುಗಳೂ ಮತ್ತು ಸೂಕ್ಷ್ಮವಾದವುಗಳೂ ಇರಬಹುದು. ಮತ್ತು ಮಂತ್ರಿಮಂಡಲವು ತಾನು ತೆಗೆದುಕೊಂಡ ವಿಶಿಷ್ಟ ನಿರ್ಣಯಕ್ಕೆ ಇದ್ದ ಕಾರಣಗಳನ್ನು ಗವರ್ನರನು ತಿಳಿದುಕೊಳ್ಳತಕ್ಕುದಲ್ಲ ಎಂಬ ಬಗ್ಗೆ ಅದು ತುಂಬಾ ಎಚ್ಚರಿಕೆಯುಳ್ಳದ್ದಾಗಿರುತ್ತದೆ ಎಂಬುದು ನಿಮಗೆಲ್ಲರಿಗೂ ತಿಳಿದೇ ಇರುತ್ತದೆ. ಅದರ ವಿವರಣೆ ಹೀಗಿದೆ: ಮಂತ್ರಿಮಂಡಲವನ್ನು ಅಲ್ಲಗಳೆಯಲು ಗವರ್ನರನಿಗೆ ಅತಿ ಹೆಚ್ಚಿನ ಪ್ರಮಾಣದ ಅಧಿಕಾರವಿರುತ್ತದೆ. ಏಕೆಂದರೆ ಶಾಸನ ಸಭೆಯನ್ನು ರದ್ದುಪಡಿಸಲು ಮಂತ್ರಿಮಂಡಲವು ಮಾಡಿದ ಸಲಹೆಯನ್ನು ಆತ ಒಪ್ಪಲಿಕ್ಕಿಲ್ಲ. ಆದರೆ, ಅದನ್ನು ಶಾಸನದಲ್ಲಿ ಸೇರಿಸುವುದರ ಬದಲಿಗೆ ಆ ವಿಷಯವನ್ನು ಸಲಹೆಗಳ ಲಿಖಿತಗಳಿಗೆ ಬಿಟ್ಟುಬಿಡಬೇಕು. ಗವರ್ನರನು ತಾನು ಇಚ್ಛಿಸಿದರೆ ಹಾಜರಾಗಬಹುದು. ಆದರೆ, ತನ್ನ ಸಭೆಯಲ್ಲಿ ತಾನು ಮಾಡಿದ ಎಲ್ಲ ಶಿಫಾರಸುಗಳನ್ನು ಅದು ಗವರ್ನರನಿಗೆ ತಿಳಿಸತಕ್ಕುದು ಎಂಬುದನ್ನು ಬಂಧನಕಾರಿಯನ್ನಾಗಿ ಮಾಡಬೇಕು. ಆ ಅಂಶದ ಮೇಲೆ ನಾನು ಹೇಳಲಿಚ್ಛಿಸುವುದೆಲ್ಲವೂ ಅಷ್ಟೆ.

ಡಾ. ಅಂಬೇಡ್ಕರ್: (ಉಪಸಮಿತಿ ನಂ.೨ (ಪ್ರಾಂತೀಯ ಸಂವಿಧಾನ) ಪು.೧೩೩) ಆ ಅಂಶದ ಮೇಲೆ ನಾನು ಒಂದು ವಿಷಯವನ್ನು ಹೇಳಲು ಇಚ್ಛಿಸುತ್ತೇನೆ. ಎರಡನೆಯ ಸದನವನ್ನು ಮೊದಲು ರಚಿಸತಕ್ಕುದಲ್ಲ ಮತ್ತು ಆಮೇಲೆ ಅದನ್ನು ತೆಗೆದುಹಾಕುವುದನ್ನು ಒಂದು ನಿರ್ದಿಷ್ಟ ಬಹುಮತ ದೊಂದಿಗೆ ಸಂವಿಧಾನಾತ್ಮಕ ನಿರ್ಣಯಕ್ಕೆ ಬಿಟ್ಟುಕೊಡಬೇಕು. ನಾವು ಸೂಚಿಸುವುದೇನೆಂದರೆ, ಕೆಲವು

ಪ್ರಾಂತಗಳಲ್ಲಿ ಅದನ್ನು ವಿವೇಚನೆಗೆ ಬಿಟ್ಟುಕೊಡಬೇಕಾದ ವಿಷಯವಾಗಿರತಕ್ಕುದು ಎಂಬಂಥ ಸಂದರ್ಭ ವಿದ್ದರೆ ಆಗ ಪ್ರಪ್ರಥಮವಾಗಿ ಪ್ರಾಂತೀಯ ಶಾಸನಸಭೆಗಳು ಎರಡನೆಯ ಸದನ ಬೇಕೆಂಬ ಇಚ್ಛೆ ಯನ್ನು ವ್ಯಕ್ತಪಡಿಸುವ ಠರಾವನ್ನು ಪಾಸು ಮಾಡಿಕೊಳ್ಳಬೇಕು ಮತ್ತು ಅನಂತರ ಎರಡನೆಯ ಸದನ ವನ್ನು ರಚಿಸತಕ್ಕುದು. ಸಂವಿಧಾನದ ಮೂಲಕವೇ ಅವನ್ನು ಪ್ರಾಂತೀಯ ಶಾಸನ ಸಭೆಗಳ ಮೇಲೆ ಹೇರಬಾರದು.

# ಐದನೆಯ ಸಭೆ
# ೧೫ನೇ ಡಿಸೆಂಬರ್ ೧೯೩೦

ಡಾ. ಅಂಬೇಡ್ಕರ್ (ಅದೇ ಪುಟ.೧೫೬–೫೭) ಮಾನ್ಯ ಮಾರ್ಕಸ್ ಅವರು ಮುಂದಿಟ್ಟ ತಿದ್ದುಪಡಿಯ ಬಗ್ಗೆ ನಾನು ಒಂದೆರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಅವರು ತಿಳಿದುಕೊಂಡ ಪರಿಸ್ಥಿತಿಯು ಸಂಪೂರ್ಣವಾಗಿ ತಾರ್ಕಿಕವಾದುದು ಎಂದು ನಾನು ಈಗಲೇ ಹೇಳಲಿಚ್ಛಿಸುತ್ತೇನೆ. ವಿಧಾನ ಪರಿಷತ್ತಿನಲ್ಲಿ ನಿರ್ದಿಷ್ಟ ಹಿತಾಸಕ್ತಿಗಳನ್ನು ಮತ್ತು ಅಲ್ಪಸಂಖ್ಯಾತ ಗುಂಪುಗಳನ್ನು ನಾಮ ನಿರ್ದೇಶನದ ಮೂಲಕ ಪ್ರತಿನಿಧಿಸಬೇಕು ಎಂಬುದಕ್ಕೆ ನಾವು ಈ ವರದಿಯಲ್ಲಿ ಅವಕಾಶ ಮಾಡಿಕೊಡುವವರಾಗಿದ್ದೇವೆ. ಅದೇ ಸಮಯದಲ್ಲಿ ಗವರ್ನರ್‌ನು ತನ್ನ ಮಂತ್ರಿಮಂಡಲದಲ್ಲಿ ಎಲ್ಲ ಹಿತಾಸಕ್ತಿಗಳ ಮತ್ತು ಎಲ್ಲ ಅಲ್ಪಸಂಖ್ಯಾತರ ಪ್ರತಿನಿಧಿಗಳನ್ನು ದೊರಕಿಸಿಕೊಳ್ಳುವಂತೆ ಪ್ರಯತ್ನ ಮಾಡುವುದನ್ನು ಆತನಿಗೆ ನಿರ್ಬಂಧಕವಾದುದನ್ನಾಗಿ ಮಾಡಲೂ ಸಹ ನಾವು ಈ ವರದಿಯಲ್ಲಿ ಉಪಬಂಧ ಕಲ್ಪಿಸುವವರಿದ್ದೇವೆ. ಮಾನ್ಯರೇ, ಈ ಮಂತ್ರಿಮಂಡಲವನ್ನು ರಚಿಸುವಲ್ಲಿ ಗವರ್ನರನು ಕೆಲವು ವಿಶಿಷ್ಟ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಸದಸ್ಯರನ್ನು ನಾಮ ನಿರ್ದೇಶನದ ಮೂಲಕ ಸೇರಿಸುವ ಹಕ್ಕನ್ನು ಹೊಂದಿರತಕ್ಕುದು ಎಂದು ಉಪಬಂಧಿಸದಿದ್ದರೆ ನೀವು ಸ್ಪಷ್ಟವಾಗಿಯೂ ತರ್ಕಬದ್ಧವಲ್ಲದ ಪರಿಸ್ಥಿತಿಯನ್ನುಂಟು ಮಾಡುತ್ತೀರಿ ಎಂದು ನನಗೆ ಅನಿಸುತ್ತದೆ. ವಿಧಾನಪರಿಷತ್ತಿಗೆ ನಾಮನಿರ್ದೇಶನವೇ ಇರತಕ್ಕುದಾದಲ್ಲಿ ಎಂದಾದರೂ ಉಪಬಂಧಿಸಿರಿ– ಅಂದರೆ ಎಲ್ಲ ಹಿತಾಸಕ್ತಿಗಳು, ಅದು ಎಷ್ಟೇ ಅಲ್ಪ ಪ್ರಮಾಣದ್ದಿರಲಿ ವಿಧಾನ ಪರಿಷತ್ತಿಗೆ ಚುನಾವಣೆಯ ಮೂಲಕವೇ ಭದ್ರತೆಯನ್ನು ಒದಗಿಸಿಕೊಳ್ಳಲಿ ಎನ್ನಿರಿ ಅಥವಾ ನಾಮ ನಿರ್ದೇಶನವನ್ನು ಇರಿಸಿಕೊಳ್ಳುವುದಾದರೆ ನಾಮನಿರ್ದೇಶನ ಹೊಂದಿದ ಸದಸ್ಯನು ತನ್ನ ಸಹೋದ್ಯೋಗಿಗಳು ಅವನೊಡನೆ ಜಂಟೀ ಹೊಣೆಗಾರಿಕೆಯ ತತ್ವವನ್ನು ಆಧರಿಸಿ ಕಾರ್ಯ ಮಾಡಲು ಒಪ್ಪಿದರೆ ಮಂತ್ರಿಮಂಡಲದಲ್ಲಿ ಇರಲು ಅವನಿಗೆ ಅಧಿಕಾರವಿರತಕ್ಕುದು ಎಂದು ನೀವು ಉಪಬಂಧಿಸಬೇಕು. ಈ ಎರಡು ಪರಿಸ್ಥಿತಿಗಳಲ್ಲಿ ಯಾವುದೊಂದರಿಂದಲೂ ತಪ್ಪಿಸಿಕೊಳ್ಳುವಂತಿಲ್ಲ.

ಮಾನ್ಯರೇ, ಈಗ ನಾಮ ನಿರ್ದೇಶನಮಾಡಲಾದ ಸದಸ್ಯನು ಮಂತ್ರಿಮಂಡಲದ ಸದಸ್ಯನಾಗತಕ್ಕುದು ಅಥವಾ ಅವನಿಗೆ ಹಾಗಾಗುವುದಕ್ಕೆ ಯಾವ ಪ್ರತಿಬಂಧವೂ ಇರಬಾರದು ಎಂಬ ತತ್ವವನ್ನು ನಾವು ಒಪ್ಪಿದರೆ ಅದು ಹೊಣೆಗಾರಿಕೆಯ ತತ್ವಕ್ಕೆ ವ್ಯತಿರಿಕ್ತವಾಗುತ್ತದೆ ಎಂದು ಈ ಬದಿಗೆ ಕುಳಿತ ಸ್ನೇಹಿತರು ಹೇಳುತ್ತಾರೆ. ಅಂಥ ಪರಿಸ್ಥಿತಿಯ ಅರ್ಥವೇ ನನಗೆ ಆಗುವುದಿಲ್ಲ. ಅದು ಹೊಣೆಗಾರಿಕೆಯ ತತ್ವಕ್ಕೆ ವ್ಯತಿರಿಕ್ತವಾಗುತ್ತದೆ ಎಂದು ಹೇಳುವ ಈ ಸಭ್ಯಗೃಹಸ್ಥರು ನಾಮ ನಿರ್ದೇಶಿತರಾದ ಸದಸ್ಯರ ಮತವನ್ನು ಪಡೆದುಕೊಳ್ಳಲು ಸಿದ್ಧರಿದ್ದರೆ. ವರದಿಯನ್ನು ನಾನು ಅದು ಇರುವಂತೆಯೇ ಅರ್ಥ ಮಾಡುತ್ತೇನೆ. ಭಾವೀ ತಿದ್ದುಪಡಿಗಳು ಏನಿರುತ್ತವೆಯೋ ನಾನು ಅರಿಯೆ. ವರದಿಯು ಅದು ಇರುವಂತೆಯೇ ಕಾರ್ಯಗತಗೊಂಡರೆ, ವಿಧಾನ ಪರಿಷತ್ತಿನಲ್ಲಿ ನಾಮ ನಿರ್ದೇಶಿತರಾಗುವ ಕೆಲವು ಸದಸ್ಯರಿರುತ್ತಾರೆ. ಈ ಸಭ್ಯಗೃಹಸ್ಥರ ಹೇಳಿಕೆಯ ಪ್ರಕಾರ ಅವರ ಮಾತುಗಳು ಕಾನೂನುಬದ್ಧವಲ್ಲದವುಗಳಾಗುತ್ತವೆ ಎಂದು ಅರ್ಥವೇ? ಶಾಸನ

ಸಭೆಯ ಆಯ್ಕೆಗೊಂಡ ಸದಸ್ಯರಿಂದ ಮಂತ್ರಿಮಂಡಲ ರಚಿಸಲು ತೆಗೆದುಕೊಂಡ ಸದಸ್ಯರು ವಿಧಾನ ಪರಿಷತ್ತಿಗೆ ನಾಮ ನಿರ್ದೇಶಿತರಾದ ಸದಸ್ಯರ ಮತವನ್ನು ಉಪಯೋಗಿಸುವುದು ಸಿಂಧುವಾಗಬಹುದಾದರೆ ಮತ್ತು ಅಂಥ ಮತಗಳು ಸರಕಾರದ ನೀತಿಗೆ ತರ್ಕಬದ್ಧವಾಗಿ ಆಧಾರವಾಗಬಹುದಾದರೆ ನಾಮ ನಿರ್ದೇಶಿತ ರಾದ ಸದಸ್ಯರ ಗುಂಪಿನಲ್ಲೊಬ್ಬನು ಆ ಮಂತ್ರಿಮಂಡಲದ ಸದಸ್ಯನಾಗಲಾರನು ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಂಪೂರ್ಣವಾಗಿ ನಾನು ವಿಫಲನಾಗಿದ್ದೇನೆ. ಈ ನಾಮ ನಿರ್ದೇಶಿತ ಸದಸ್ಯರ ಮತ ಗಳನ್ನು ಅವರು ಪಡೆದು ತಮ್ಮ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಲ್ಲವರಾದರೆ, ನಾಮ ನಿರ್ದೇಶಿತ ಸದಸ್ಯರ ಗುಂಪಿನಿಂದ ಒಬ್ಬ ಸದಸ್ಯನನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲು ಯಾವ ರೀತಿಯ ಅಡ್ಡಿ ಇರಬಹುದು ಎಂಬುದು ನನಗೆ ತಿಳಿಯದು. ತಮ್ಮ ತಿದ್ದುಪಡಿಯಲ್ಲಿ ಮಾರ್ಕ್ವೆಸ್ ಅವರು ಸೂಚಿಸಿದಂಥ ಉಪಬಂಧವನ್ನು ಮಾಡಬೇಕೋ ಅಥವಾ ನನ್ನ ಸ್ನೇಹಿತರು ಅನಂತರ ಹೇಳುತ್ತೇವೆ ಅನ್ನುವ ಇನ್ನೊಂದು ಪ್ರಸ್ತಾಪವನ್ನು ಅಂದರೆ ವಿಧಾನಪರಿಷತ್ತಿನಲ್ಲಿ ನಾಮ ನಿರ್ದೇಶನದ ಅಂಶವೇ ಇರಬಾರದೆಂಬುದರಲ್ಲಿ ಒಂದನ್ನು ನಾವು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ನನ್ನ ವೈಯಕ್ತಿಕ ಭಾವನೆಯೆಂದರೆ ವಿಧಾನಪರಿಷತ್ತು ನಾಮ ನಿರ್ದೇಶನದ ಎಳ್ಳಷ್ಟೂ ಅಂಶವಿಲ್ಲದ ಕೇವಲ ಆಯ್ಕೆಗೊಂಡದ್ದೇ ಆಗಿರಬೇಕು. ಆ ದೃಷ್ಟಿಯಿಂದ ಗಮನಿಸಿದಾಗ ಮಾನ್ಯ ಮಾರ್ಕ್ವೆಸ್ ಅವರು ಸೂಚಿಸಿದ ತಿದ್ದುಪಡಿಯನ್ನು ನಾನು ಅಷ್ಟಾಗಿ ಅನುಮೋದಿ ಸುವುದಿಲ್ಲ. ಆದರೆ, ಈ ಸಮಿತಿಯಲ್ಲಿ ಅಥವಾ ನಂತರದ ಯಾವುದೇ ಹಂತದಲ್ಲಿ, ನಾಮನಿರ್ದೇಶನ ಉಳಿದರೆ, ಆಗ ನಾನು ಮಾನ್ಯ ಮಾರ್ಕ್ವೆಸ್ ಅವರೊಡನೆ ಸಹಮತಿಸಬೇಕಾಗುತ್ತದೆ ಮತ್ತು ಅವರು ಪ್ರಸ್ತಾಪಿಸಿದ ತಿದ್ದುಪಡಿಯನ್ನು ಒಪ್ಪಬೇಕಾಗುತ್ತದೆ.

ದಿವಾನ ಬಹಾದ್ದೂರ ರಾಮಚಂದ್ರರಾವ್: ನಾನು ಈಗ ಲಕ್ಷ್ಯಗೊಟ್ಟು ಕೇಳಿದ ಭಾಷಣದ ಬಗ್ಗೆ ಸೋಜಿಗವಾಗುತ್ತದೆ.

ಡಾ. ಅಂಬೇಡ್ಕರ್: ನೀವು ಹಾಗೆ ಮಾಡಬಹುದು. ಆದರೆ, ನೀವು ಎರಡನ್ನೂ ಹಿಡಿದುಕೊಳ್ಳ ಲಾರಿರಿ.

ದಿವಾನ್ ಬಹದ್ದೂರ ರಾಮಚಂದ್ರರಾವ್: ಈಗಿರುವ ಪದ್ಧತಿಯ ಮೇರೆಗೂ ಸಹ ನಾಮ ನಿರ್ದೇಶಿತರಾದ ಸದಸ್ಯರು ಮಂತ್ರಿಗಳಾಗಿ ನೇಮಕ ಹೊಂದಲು ಅರ್ಹರಲ್ಲ ಎಂಬುದು ಅವರಿಗೆ ಗೊತ್ತಿದೆ. ಸ್ಥಳೀಯ ಶಾಸನಸಭೆಗೆ ಆಯ್ಕೆಗೊಂಡ ಸದಸ್ಯನಿರದ ಹೊರತು ಯಾವುದೇ ಮಂತ್ರಿಯು ಆರು ತಿಂಗಳಿ ಗಿಂಥ ಹೆಚ್ಚಿನ ಅವಧಿಯವರೆಗೆ ಅಧಿಕಾರದಲ್ಲಿರಲಾರನು ಎಂದು ೫೨ನೇ ಕಲಮು ಸ್ಪಷ್ಟವಾಗಿ ಹೇಳುತ್ತದೆ.

ಡಾ. ಅಂಬೇಡ್ಕರ್: ಅದು ಈ ಸಂದರ್ಭದಲ್ಲಿ ಇದೆ.

## ಶಾಸನ ಸಭೆಯಲ್ಲಿ ಸಹಸದಸ್ಯರ ಆಯ್ಕೆಗೆ ವಿರೋಧ

(ಉಪಸಮಿತಿ ೨ರ ವ್ಯವಹರಣೆಗಳು (ಪ್ರಾಂತೀಯ ಸಂವಿಧಾನ) –ಪ.೧೯೪)

ಡಾ. ಅಂಬೇಡ್ಕರ್: ಈ ತಿದ್ದುಪಡಿಯನ್ನು ನಾನು ವಿರೋಧಿಸಬೇಕಾಗುತ್ತದೆ ಎಂಬ ಭಯ ನನಗೆ. ಪ್ರಪ್ರಥಮವಾಗಿ, ನಾವು ಮುಂಬಯಿಯಲ್ಲಿ ಪಡೆದ ಅಂಥ ಸಹಸದಸ್ಯ ಆಯ್ಕೆಯ ಅನುಭವವು ಧೈರ್ಯ ನೀಡುವಂಥದಲ್ಲ. ಅದು ಅತ್ಯಂತ ಕೆಟ್ಟ ರೀತಿಯ ದುರ್ವ್ಯವಹಾರವಾಗಿ ಬೆಳೆಯಿತು. ಅಲ್ಲಿ ಬೆಳೆದ ಭ್ರಷ್ಟಾಚಾರ ಮತ್ತು ಲಂಚರುಷುವತ್ತುಗಳ ಪ್ರಮಾಣವನ್ನು ಗಮನಿಸಿದಾಗ, ನನ್ನ ಮಟ್ಟಿಗೆ

ಹೇಳುವುದಾದರೆ, ಮುಂಬಯಿ ಶಾಸನ ಮಂಡಳ ರಚನೆಯಲ್ಲಿ ಈ ತತ್ವವನ್ನು ಸೇರಿಸಲು ನಾನು ಇಚ್ಛಿಸುವುದಿಲ್ಲ.

ಇನ್ನೂ ಹೆಚ್ಚಿನ ತಕರಾರು ಹೀಗಿದೆ. ಚುನಾವಣೆಯಲ್ಲಿ ಬೇರೆ ಬೇರೆ ಕೋಮುಗಳವರು ತಮ್ಮನ್ನು ತಾವು ಆಯ್ಕೆ ಮಾಡಿಕೊಳ್ಳಲಾರದವರಾದರೆ ಮತ್ತು ನಿಜವಾದ ಪ್ರಾತಿನಿಧ್ಯವನ್ನು ಅವರು ಪಡೆಯಬೇಕಾದರೆ ಸಹಸದಸ್ಯ ಆಯ್ಕೆಯ ಸಿದ್ಧಾಂತವು ನಿಜವಾಗಿಯೂ ಅವರಿಗೆ ಯಾವ ಸಹಾಯವನ್ನೂ ಮಾಡಲಾರದು. ಏಕೆಂದರೆ ಅನೇಕ ಕೋಮಿನ ಪ್ರತಿನಿಧಿಗಳು ಕೇವಲ ಸಹಸದಸ್ಯ ಆಯ್ಕೆಯ ಪರವಾಗಿಯೇ ಇದ್ದಾರೆ. ಬಹುಮತದ ಅಧೀನವಾದ ಮತ್ತು ಅವರ ಕೈಗೊಂಬೆಯಾಗಿರುವವರನ್ನು ಮಾತ್ರ ವಾಸ್ತವವಾಗಿ ಸಹ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಪ್ರಾತಿನಿಧ್ಯ ಇಲ್ಲದುದಕ್ಕಿಂತಲೂ ಇದು ಹೆಚ್ಚಿನ ಕೆಡುಕಾಗಿ ನನಗೆ ಕಂಡುಬರುತ್ತದೆ ಮತ್ತು ಆ ಆಧಾರದ ಮೇಲೆಯೇ ನಾನು ತಿದ್ದುಪಡಿಯನ್ನು ವಿರೋಧಿಸಬೇಕಾಗುತ್ತದೆ. ಆದರೆ, ಮಾನ್ಯರೇ, ಪ್ರಾಂತೀಯ ಶಾಸನ ಸಭೆಗಳಲ್ಲಿ ನಾಮನಿರ್ದೇಶಿತರಾದ ಸದಸ್ಯರು ಇರಬೇಕೆಂದು ಈ ಉಪಸಮಿತಿಯು ಭಾವೀ ಸಂವಿಧಾನಕ್ಕೆ ಶಿಫಾರಸು ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ದಿವಾನ ಬಹಾದ್ದೂರ ರಾಮಚಂದ್ರರಾವ್: ಶಾಸನ ಸಭೆಗಳು ಸಂಪೂರ್ಣ ಚುನಾಯಿತವಾದುವೇ ಆಗಿರಬೇಕೆಂದು ಈ ವರದಿಯಲ್ಲಿ ಸೇರಿಸುವುದಕ್ಕೆ ನಾನು ಒಪ್ಪುತ್ತೇನೆ ಮತ್ತು ಈ ಉಪಸಮಿತಿಯು ಅಂತಹ ದೃಷ್ಟಿಕೋನದ ಸೂಚನೆಯನ್ನು ಕೊಡದೆಹೋದರೆ, ನಮ್ಮಲ್ಲಿ ಅನೇಕ ಸದಸ್ಯರು ಅದು ಅಳಿದು ಹೋಗಬೇಕೆಂದು ಇಚ್ಛಿಸಿದ್ದಾಗ್ಯೂ, ನಾಮನಿರ್ದೇಶನದ ಅಂಶವು ಮುಂದುವರೆಯುತ್ತದೆ ಎಂದು ತೋರುತ್ತದೆ. ಅದಕ್ಕೆ ಸಂಬಂಧಿಸಿದ ಹೇಳಿಕೆಯು ವರದಿಯಲ್ಲಿ ಸ್ಥಾನವನ್ನು ಪಡೆಯಲೇಬೇಕು. ನಮ್ಮಲ್ಲಿ ಪ್ರತಿಯೊಬ್ಬರೂ ನಾಮನಿರ್ದೇಶನದ ದುಷ್ಪರಿಣಾಮಗಳ ಅರಿವು ಇದ್ದವರೇ ಆಗಿದ್ದಾರೆ ಎಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ ಮತ್ತು ಅದು ಎಷ್ಟು ಸಾಧ್ಯವೋ ಅಷ್ಟು ತೀವ್ರವಾಗಿ ಅಳಿದುಹೋಗತಕ್ಕುದು ಎಂಬ ಬಗ್ಗೆ ನಾವು ಕಾತರರಾಗಿದ್ದೇವೆ. ಈ ಸಂದರ್ಭಗಳಲ್ಲಿ ನಾನು ತಿದ್ದುಪಡಿಯನ್ನು ಸಮರ್ಥಿಸಲು ಸಿದ್ಧನಿಲ್ಲ ಮತ್ತು ನನ್ನ ಸ್ನೇಹಿತ ಡಾ. ಅಂಬೇಡ್ಕರರು ಮಾಡಿದ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷ: ಏನು ಪ್ರಸ್ತಾಪ ಮಾಡಲಾಗಿತ್ತು? ಇಲ್ಲಿ ನಾನು ಹೇಳಬೇಕಾದದ್ದು ಏನೂ ಇಲ್ಲವೇ?

ಡಾ. ಅಂಬೇಡ್ಕರ್: ಇನ್ನು ಮೇಲೆ ಪ್ರಾಂತಗಳಲ್ಲಿನ ಶಾಸನ ಸಭೆಗಳು ಸಂಪೂರ್ಣವಾಗಿ ಚುನಾಯಿತವಾದವುಗಳು ಆಗಿರತಕ್ಕುದು ಎಂಬುದು ಉಪಸಮಿತಿಯ ಅಭಿಪ್ರಾಯವಾಗಿದೆ ಎಂದು ನಾವು ಹೇಳಲೇಬೇಕು.

ಅಧ್ಯಕ್ಷ: ಅದು ಸಂಪೂರ್ಣವಾಗಿ ಮತ್ತೊಂದು ತಿದ್ದುಪಡಿಯೇ ಆಗಿದೆ. ನೀವು ಆ ಬಗ್ಗೆ ಪ್ರಸ್ತಾಪ ಮಾಡಬೇಕಾದರೆ ಅದನ್ನು ಬರೆದು ಲಿಖಿತದಲ್ಲಿ ಕಳಿಸಬೇಕಾಗುತ್ತದೆ.

* ಅಧ್ಯಕ್ಷ: ಈ ಅಂಶದ ಮೇಲೆ ನಾನು ನಿಮ್ಮ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ

ರಾಜಾ ನರೇಂದ್ರನಾಥ: ನಾನು ಸರ್. ಎ. ಪಿ. ಪಾತ್ರೋ ಅವರನ್ನು ಬೆಂಬಲಿಸುತ್ತೇನೆ. ಚುನಾವಣೆಯ ಮೂಲಕ ಯಾವ ಹಿತಾಸಕ್ತಿಗಳನ್ನು ಪ್ರತಿನಿಧಿಸಲಾಗುವುದಿಲ್ಲವೋ ಅಂಥ ವಿಷಯಗಳಿಗೆ ಮಾತ್ರವೇ ನಾಮನಿರ್ದೇಶನದ ಅಧಿಕಾರವನ್ನು ಸೀಮಿತಗೊಳಿಸಬೇಕು.

---

* ಅದೇ, ಪುಟ: ೧೯೬

ಡಾ. ಶಫಾಅತ ಮಹಮದ್ ಖಾನ್: ಹೌದು.

ರಾಜಾ ನರೇಂದ್ರನಾಥ: ಡಾ. ಅಂಬೇಡ್ಕರ್ ಅವರ ಕೋಮಿನಂತೆ ಪ್ರಾಂತಗಳಲ್ಲಿ ಹಲವಾರು ಕೋಮುಗಳು ಇರಬಹುದು. ಅವುಗಳಿಗೆ ಚುನಾವಣೆಯ ವ್ಯವಸ್ಥೆ ಮಾಡಲು ಸಾಧ್ಯವಾಗಲಿಕ್ಕಿಲ್ಲ.

ಡಾ. ಅಂಬೇಡ್ಕರ್: ಯಾವುದೇ ಕೋಮಿಗೆ ಮತದಾನದ ಹಕ್ಕನ್ನು ಕೊಡದೇ ಇರುವ ಯಾವುದೇ ಸಂವಿಧಾನದೊಡನೆ ನನಗೆ ಯಾವ ಆಸಕ್ತಿಯೂ ಇಲ್ಲ.

ರಾಜಾ ನರೇಂದ್ರನಾಥ: ಡಾ. ಅಂಬೇಡ್ಕರರು ಸಂಬಂಧಪಟ್ಟ ಕೋಮಿಗೆ ಮತದಾನದ ಹಕ್ಕು ಕೊಡಬೇಕಾದರೆ ಮತದಾನವನ್ನು ತೀರಾ ಭಿನ್ನವಾದ ಆಧಾರದ ಮೇಲೆಯೇ ವ್ಯವಸ್ಥೆ ಮಾಡಬೇಕಾಗುತ್ತದೆ. ಕಾರಣ ನಾಮನಿರ್ದೇಶನದ ಪರಿಮಿತ ಅಧಿಕಾರವನ್ನು ಉಪಬಂಧಿಸಬೇಕು.

ಅಧ್ಯಕ್ಷ: (ಸಿ) ಖಂಡವು ವರದಿಯಲ್ಲಿ ಈಗಿರುವಂತೆಯೇ ಉಪಸಮಿತಿಯ ಬಹುಮತ ಹೊಂದಿದೆ ಎಂದು ನನಗೆ ಅನಿಸುತ್ತದೆ.

### ಇಡೀ ಪರಿಷತ್ತಿನ ಸಮಿತಿ
### ಉಪಸಮಿತಿ ನಂ.೨ರ (ಪ್ರಾಂತೀಯ ಸಂವಿಧಾನ)
### ವರದಿಯ ಮೇಲಿನ ಟೀಕೆಗಳು

## *೧೬ನೇ ಡಿಸೆಂಬರ್ ೧೯೩೦

ಪ್ರಾಂತಗಳಲ್ಲಿ ಎರಡನೆಯ ಸದನದ ಸ್ಥಾಪನೆಗೆ ಶ್ರೀ ಚಿಂತಾಮಣಿಯವರು ವಿರೋಧಿಸಿದರು. ಅದು ಅತಿ ಹೆಚ್ಚಿನ ವೆಚ್ಚದ ವಿಲಾಸದ ವಸ್ತುವಾಗುತ್ತದೆಯೇ ಹೊರತು ಸಾರ್ವಜನಿಕ ಉಪಯೋಗದ ಸಂಸ್ಥೆಯಾಗಲಾರದು. ಎರಡನೆಯ ಸದನಕ್ಕೆ ಸಂಯುಕ್ತ ಪ್ರಾಂತ್ಯದಲ್ಲಿ ಕೋಮಿನ ಅತಿ ಚಿಕ್ಕ ಭಾಗ ದಿಂದ ಮಾತ್ರವೇ ಬೇಡಿಕೆ ಬಂದಿದೆ. ಈ ಚಿಕ್ಕ ಭಾಗವು ಪ್ರಾಂತೀಯ ಶಾಸನ ಸಭೆಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಪ್ರತಿನಿಧಿಸಲ್ಪಟ್ಟಿದೆ. ಕಾರಣ ಯು.ಪಿ.ಯಲ್ಲಾಗಲೀ ಅಥವಾ ಭಾರತದ ಇತರ ಯಾವುದೇ ಪ್ರಾಂತದಲ್ಲಿಯೇ ಆಗಲಿ ಎಷ್ಟೇ ಅವಧಿಗಾಗಿ, ಎಂಥದೇ ಪರಿಸ್ಥಿತಿಯಲ್ಲಿ ಸೂಚಿತ ಎರಡನೆಯ ಸದನವು ಸಂಪೂರ್ಣವಾಗಿ ಅನವಶ್ಯಕ ಮತ್ತು ಅನಪೇಕ್ಷಿತ ಎಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಡಾ. ಅಂಬೇಡ್ಕರ್ ಹೇಳಿದರು: "ಶ್ರೀ ಚಿಂತಾಮಣಿಯವರು ಇದೀಗ ಹೇಳಿದ ಸೂಚನೆಗಳಿಗೆ ನಾನು ಸಹ ಮತಿಸುತ್ತೇನೆ ಎಂದು.

ಅಧ್ಯಕ್ಷ: ಚರ್ಚೆಯು ಪ್ಯಾರಾಗ್ರಾಫ್ ೫ (ಬಿ)ಯಲ್ಲಿ ಇದೆ. (ಈ ಪ್ಯಾರಾಗ್ರಾಫ್ ಮಂತ್ರಿಗಳ ನೇಮಕದ ಪ್ರಕ್ರಿಯೆಯನ್ನು ವಿವರಿಸುತ್ತದೆ).

ಡಾ. ಅಂಬೇಡ್ಕರ್: ಸಮಿತಿಯು ತನ್ನ ವರದಿಯ ಬೇರೆ ಭಾಗದಲ್ಲಿ ಶಾಸಕಾಂಗದ ಸ್ವಲ್ಪ ಭಾಗ ವನ್ನಾದರೂ ನಾಮನಿರ್ದೇಶಿತ ಸದಸ್ಯರಿಂದ ಕೂಡಿ ರಚಿಸಬಹುದೆಂದು ಮಾಡಿದ ಶಿಫಾರಸನ್ನು ಗಮನ ದಲ್ಲಿಟ್ಟುಕೊಂಡು ಈ ಉಪಸಮಿತಿಯಲ್ಲಿ "ಚುನಾಯಿತ" (ಪ್ರಾಂತೀಯ ಶಾಸನಸಭೆಯ ಚುನಾಯಿತ ಸದಸ್ಯರು) ಪದವನ್ನು ತೆಗೆದುಹಾಕಬೇಕೆಂದು ಪ್ರಸ್ತಾಪಿಸಲಾಯಿತು. ಶಾಸನಸಭೆಯ ರಚನೆಯ ಬಗ್ಗೆ ರೂಪಿಸಲಾದ ಸಮಿತಿಯು ಒಂದು ವೇಳೆ ನಾಮ ನಿರ್ದೇಶಿತ ಸದಸ್ಯರು ಇರತಕ್ಕುದು ಎಂಬ ನಿರ್ಣಯಕ್ಕೆ ಬಂದರೆ "ಚುನಾಯಿತ" ಎಂಬ ಪದವನ್ನು ಕೈ ಬಿಡಬೇಕು ಎಂದು ಆಗ ನಿರ್ಣಯಿಸಲಾಗಿತ್ತು.

ಅಧ್ಯಕ್ಷ: ಉಪಯೋಗಿಸಲಾಗಿರುವ ಪದವು "ಸಾಮಾನ್ಯವಾಗಿ" ಎಂಬುದಾಗಿದೆ. ("ಸಾಮಾನ್ಯವಾಗಿ ಮಂತ್ರಿಗಳನ್ನು ತೆಗೆದುಕೊಳ್ಳತಕ್ಕುದು") ಅದು ಈ ಅಂಶವನ್ನು ಒಳಗೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ. ಅದು ಅತ್ಯಂತ ವಿಶಿಷ್ಟಕ್ರಮದ ಸಂಭವನೀಯ ಅವಶ್ಯಕತೆಯನ್ನೂ ಸೂಚಿಸುತ್ತದೆ.

---

* ಆರ್.ಟಿ.ಸಿ.ಯ ನಡಾವಳಿಗಳು, ಪು. ೩೧೪

### ಉಪಸಮಿತಿ ನಂ.೨ರಲ್ಲಿ (ಅಲ್ಪಸಂಖ್ಯಾತರು)

# *ಎರಡನೆಯ ಸಭೆ

# ೩೧ನೇ ಡಿಸೆಂಬರ್ ೧೯೩೦

ಡಾ. ಅಂಬೇಡ್ಕರ್: ಅಧ್ಯಕ್ಷರೇ ನಿಮ್ಮ ವರ್ಗದವರನ್ನು ಪ್ರತಿನಿಧಿಸುವ ಕಾರ್ಯಭಾರವನ್ನು ನನಗೆ ವಹಿಸಿಕೊಟ್ಟಿರುವುದು ಹಿರಿಯ ಹೊಣೆಯಾಗಿದೆ ಎಂಬ ಬಗ್ಗೆ ನೀವು ಖಂಡಿತ ಒಪ್ಪುತ್ತೀರಿ ಎಂದು ನಾನು ನಂಬಿದ್ದೇನೆ. ನಿಮ್ಮ ವರ್ಗದವರ ಪ್ರಶ್ನೆಯನ್ನು ರಾಜಕೀಯ ದೃಷ್ಟಿಯಿಂದ ಪರ್ಯಾಲೋಚಿಸುತ್ತಿರುವುದು ಇದೇ ಪ್ರಥಮ ಬಾರಿಯಾಗಿದೆ ಎಂದು ನನಗನ್ನಿಸುತ್ತದೆ. ನಿಮ್ಮ ವರ್ಗದವರ ಅಸಹಾಯತೆಗಳನ್ನು ಭಾರತದ ರಾಜಕೀಯ ಬೆಳವಣಿಗೆಗೆ ಸಂಬಂಧಿಸಿ ಭಾರತ ಸರಕಾರಕ್ಕೆ ಕಳುಹಿಸಲಾಗಿರುವ ಎಲ್ಲ ಪತ್ರ ವ್ಯವಹಾರಗಳಲ್ಲಿ ಹೇಳಲಾಗಿದೆ. ಆದರೆ, ಪತ್ರ ವ್ಯವಹಾರಗಳು ಇರುವ ತೊಂದರೆಗಳನ್ನು ಮಾತ್ರ ಉಲ್ಲೇಖಿಸಿವೆಯೇ ಹೊರತು ಅವುಗಳ ಪರಿಹಾರಕ್ಕೆ ಯಾವುದೇ ಉಪಾಯಗಳನ್ನು ಹೇಳಲಿಲ್ಲ. ಪ್ರಶ್ನೆ ಇದ್ದ ಸ್ಥಿತಿಯಲ್ಲಿಯೇ ಇರಲು ಬಿಡಲಾಯಿತು. ಈ ದೃಷ್ಟಿಯಿಂದ ಮತ್ತು ಇನ್ನೂ ಅನೇಕ ವಿಷಯಗಳ ದೃಷ್ಟಿಯಿಂದ ನೋಡಿದಾಗ, ಈ ಸಮಿತಿಯು ತಿಳಿದಿರುವ ಹಾಗೆ, ಹೋಲಿಕೆಗೆ ಸಾಧ್ಯವಿಲ್ಲದಷ್ಟು ದುಃಖದ ಪರಂಪರೆಯನ್ನೇ ಅನುಭವಿಸುತ್ತಿರುವ ೪೩ ದಶಲಕ್ಷ ಜನರ ನೋವಿಗೆ ಇಷ್ಟೊಂದು ಜನ ಸದಸ್ಯರಿರುವ ಈ ಸಮಿತಿಯಲ್ಲಿ ಕೇವಲ ನಾವಿಬ್ಬರು ಮಾತ್ರ ದನಿಯಾಗುತ್ತಿದ್ದೇವೆ. ನಮ್ಮ ಕಾರ್ಯಭಾರವು ಗುರುತರವಾಗಿದೆ. ಈ ವಾದವನ್ನು ಮಂಡಿಸಲು ನನಗೆ ವೇಳೆಯ ದೃಷ್ಟಿಯಿಂದ ಇನ್ನಷ್ಟು ಹೆಚ್ಚಿನ ಅವಕಾಶವನ್ನು ಒದಗಿಸಿಕೊಡಬೇಕಾಗಿತ್ತು ಎಂದು ನಾನು ಆಶೆಪಟ್ಟಿದ್ದೆ. ಆದರೆ, ನನಗೆ ಸರ್ವ ಸದಸ್ಯರ ಸಭೆಯಲ್ಲಿ ಆಗಿರುವಂತೆ ನಿಜವಾಗಿಯೂ ಇಲ್ಲಿಯೂ ಸಹ ನನ್ನ ಹಣೆಯಬರಹ ಅದೇ ಆಗಬಹುದು ಎಂದೂ ನಾನು ಊಹಿಸಿದ್ದೆನು. ಮತ್ತು ಹಾಗಾಗಬಹುದೆಂದು ತರ್ಕದಿಂದಲೇ ನಾನು ಮತ್ತು ನನ್ನ ಸಹೋದ್ಯೋಗಿ ರಾವ್‌ಬಹದ್ದೂರ ಶ್ರೀನಿವಾಸನ್‌ರವರು ಈ ಸಮ್ಮೇಳನಕ್ಕೆ ಲಿಖಿತ ವಿಜ್ಞಾಪನಾ ಪತ್ರವನ್ನು ಕೊಡುವುದು ಸೂಕ್ತವೆಂದು ಭಾವಿಸಿದೆವು. ಸದರೀ ವಿಜ್ಞಾಪನಾ ಪತ್ರದಲ್ಲಿ ನಿಮ್ಮ ವರ್ಗದವರು ಭಾರತದ ಭಾವೀ ಸಂವಿಧಾನದಲ್ಲಿ ತಮ್ಮ ಬಗ್ಗೆ ಎಂಥ ರಾಜಕೀಯ ಸಂರಕ್ಷಣೆಗಳನ್ನು ಕೊಡಬೇಕೆಂದು ಇಚ್ಛಿಸುತ್ತಾರೆ ಎಂಬ ಬಗ್ಗೆ ಸ್ಪಷ್ಟೋಕ್ತಿಗಳಲ್ಲಿ ಹೇಳಲಾಗಿದೆ. ವಿಜ್ಞಾಪನಾ ಪತ್ರವನ್ನು ಈಗಾಗಲೇ ಈ ಸಮಿತಿಗೆ ಒಪ್ಪಿಸಲಾಗಿದೆ ಮತ್ತು ಸದಸ್ಯರೆಲ್ಲರಿಗೂ ತಲುಪಿಸಲಾಗಿದೆ ಮತ್ತು ಪ್ರತಿಯೊಬ್ಬ ಸದಸ್ಯನಿಗೂ ಅದು ತಲುಪಿದೆಯೆಂದು ನಾನು ನಂಬಿದ್ದೇನೆ. ನಿಮ್ಮ ವರ್ಗದವರ ಭವಿಷ್ಯವು ಈ ಸಮಿತಿಯ ಸದಸ್ಯರ ಕೈಯಲ್ಲಿ

---

* ಉಪಸಮಿತಿ ನಂ. ೩ರ (ಅಲ್ಪಸಂಖ್ಯಾತರು) ವ್ಯವಹರಣೆಗಳು: ಸೆಂಟ್ರಲ್ ಪಬ್ಲಿಕೇಶನ್ ಬ್ರ್ಯಾಂಚ್, ಕಲಕತ್ತಾ ೧೯೩೧ ಪುಟಗಳು ೭೩–೮೦

ಈ ಉಪಸಮಿತಿಗೆ ವಹಿಸಿಕೊಟ್ಟ ಅಂಶಗಳು ಈ ಕೆಳಗಿನಂತೆ ಇರುತ್ತವೆ:– "ಅಲ್ಪಸಂಖ್ಯಾತರ ಮತ್ತು ವಿಶೇಷ ಹಿತಾಸಕ್ತಿಗಳವರ ಮನಃಪೂರ್ವಕ ಸಹಕಾರವನ್ನು ಪಡೆದುಕೊಳ್ಳಲು ಉಪಬಂಧವನ್ನು ರಚಿಸುವುದು."

ಇದೆ ಎಂಬ ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು, ಈ ವಾದವನ್ನು ಮುಂದಿಡಲು ಹೆಚ್ಚಿನ ಕಾಲಾವಕಾಶವನ್ನು ಕೊಡಿರಿ ಎಂದು ಚೇರಮನ್ನರನ್ನು ನಾನು ಕೇಳಿಕೊಳ್ಳಬಯಸು ವುದಿಲ್ಲ. ಈಗಾಗಲೇ ಸಮಿತಿಯ ಸದಸ್ಯರ ಕೈಯಲ್ಲಿರುವ ಮನವಿಯಲ್ಲಿ ಹೇಳಿದ್ದನ್ನು ಮಾತ್ರವೇ ಸಂಕ್ಷಿಪ್ತವಾಗಿ, ಆದರೆ ಒತ್ತು ಕೊಟ್ಟು ಹೇಳಬಯಸುತ್ತೇನೆ.

ಮಾನ್ಯರೇ, ನನ್ನ ಮೊದಲನೆಯ ಅಭಿಪ್ರಾಯವು ಹೀಗಿದೆ. ರಾಜಕೀಯವಾಗಿ ಗುರುತಿಸಬೇಕಾದ ಹತ್ತು ಹಲವಾರು ಅಲ್ಪಸಂಖ್ಯಾತ ಕೋಮುಗಳು ಭಾರತದಲಿರುವಾಗ್ಯೂ, ಎಲ್ಲ ಅಲ್ಪಸಂಖ್ಯಾತರನ್ನು ಒಂದೇ ರೀತಿಯಲ್ಲಿ ನೋಡಲು ಆಗುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಉದಾಹರಣೆಗೆ ಭಾರತದಲ್ಲಿ ಅತಿ ಚಿಕ್ಕ ಅಲ್ಪಸಂಖ್ಯಾತ ಕೋಮು ಪಾರ್ಸಿಯವರದು ಆದಾಗ್ಯೂ ಬಹುಸಂಖ್ಯಾತರೊಡನೆ ಅದರ ಸಾಮಾಜಿಕ ಸ್ಥಾನವನ್ನು ಹೋಲಿಸಿದಾಗ ಪ್ರಾಶಸ್ತ್ಯ ಕ್ರಮದಲ್ಲಿ ಅದೇ ಅತ್ಯಂತ ಅಗ್ರಸ್ಥಾನದಲ್ಲಿರುವುದು ಕಂಡುಬರುತ್ತದೆ.

ಆದರೆ ನಿಮ್ನ ವರ್ಗದವರನ್ನು ಗಮನಿಸಿದರೆ, ಅವರು ಭಾರತದಲ್ಲಿ ಮುಸಲ್ಮಾನರ ಅನಂತರ ಬರುವ ಅಲ್ಪಸಂಖ್ಯಾತರಾಗಿರುತ್ತಾರೆ. ಆದಾಗ್ಯೂ ಅವರ ಸಾಮಾಜಿಕ ಮಟ್ಟವು ಸಾಮಾನ್ಯ ಮನುಷ್ಯ ನಿಗಿಂತಲೂ ಕೆಳಮಟ್ಟದ್ದೇ ಆಗಿದೆ.

ಪುನಃ ಹೇಳಬೇಕೆಂದರೆ, ನೀವು ಅಲ್ಪಸಂಖ್ಯಾತರನ್ನು ಅವರ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳ ಆಧಾರದ ಮೇಲೆ ವರ್ಗೀಕರಣ ಮಾಡಿದರೆ, ಹಲವು ಅಲ್ಪಸಂಖ್ಯಾತರು ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭವಿಸುತ್ತಿರುವುದು ಮತ್ತು ಅವರು ಅಲ್ಪಸಂಖ್ಯಾತರೆನ್ನುವುದು ಅವರು ತಮ್ಮ ಆ ನಾಗರಿಕ ಹಕ್ಕುಗಳನ್ನು ಸಂಪೂರ್ಣವಾಗಿ ಮತ್ತು ಸ್ವತಂತ್ರವಾಗಿ ಅನುಭವಿಸುವಲ್ಲಿ ಯಾವುದೇ ರೀತಿಯಲ್ಲಿ ಅಡ್ಡಿಯಾಗಿಲ್ಲ ಎನ್ನುವುದು ಕಂಡು ಬರುತ್ತದೆ. ಆದರೆ, ನಿಮ್ನ ವರ್ಗದವರ ಬಗ್ಗೆ ವಿಚಾರಿಸಿದರೆ ಅವರ ಸ್ಥಾನವು ತುಂಬಾ ವಿಭಿನ್ನವಾಗಿರುತ್ತದೆ. ಹಲವು ವಿಷಯಗಳಿಗೆ ಸಂಬಂಧಪಟ್ಟಂತೆ ಅವರಿಗೆ ಯಾವ ಹಕ್ಕೂ ಇಲ್ಲ ಮತ್ತು ಅವರಿಗೆ ಹಲವು ಹಕ್ಕುಗಳಿರುವಲ್ಲಿಯೂ ಸಹ ಬಹುಮತದ ಕೋಮಿನವರು ಅವುಗಳನ್ನು ಅನುಭವಿಸಲು ಅವರಿಗೆ ಅವಕಾಶವನ್ನೇ ಕೊಡುವುದಿಲ್ಲ.

ಹಾಗಾದರೆ, ಈ ಸಮಿತಿಗೆ ನನ್ನ ಪ್ರಥಮ ವಿನಂತಿಯೆಂದರೆ ದೃಷ್ಟಾಂತದೊಡನೆ ಹೇಳಬೇಕೆಂದರೆ, ಅಲ್ಪಸಂಖ್ಯಾತರೆಲ್ಲರೂ ಒಂದೇ ನಾವೆಯಲ್ಲಿ ಇರುವವರೇ ಆಗಿದ್ದಾಗ್ಯೂ ನೆನಪಿಡಬೇಕಾದ ಅತ್ಯಂತ ಮಹತ್ವದ ಅಂಶವೆಂದರೆ ಅದೇ ನಾವೆಯಲ್ಲಿನ ಒಂದೇ ವರ್ಗದಲ್ಲಿ ಅವರೆಲ್ಲರೂ ಇಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕೆಲವರು "ಎ" ವರ್ಗದಲ್ಲಿ ಪ್ರಯಾಣಿಸುತ್ತಿದ್ದಾರೆ. ನಿಮ್ನ ವರ್ಗದವರು ಅವರು ಅಲ್ಪಸಂಖ್ಯಾತರಾದಾಗ್ಯೂ ಮತ್ತು ಇತರ ಅಲ್ಪಸಂಖ್ಯಾತರೂ ಸಹ ಅದೇ ನಾವೆಯಲ್ಲಿ ಪ್ರವಾಸ ಮಾಡುತ್ತಿದ್ದಾಗ್ಯೂ ಅವರು "ಸಿ" ಅಥವಾ "ಡಿ" ವರ್ಗದಲ್ಲೂ ಇಲ್ಲ. ಆದರೆ ಅವರು ನಾವೆಯಲ್ಲಿ ಸರಕನ್ನಿಡುವ ಸ್ಥಳದಲ್ಲಿ ಇರುತ್ತಾರೆ ಎಂಬುದರ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ.

ಆ ದೃಷ್ಟಿಕೋನದಿಂದ ಪ್ರಾರಂಭಿಸಿದಲ್ಲಿ ಕೆಲವು ರೀತಿಯಲ್ಲಿ ನಿಮ್ನ ವರ್ಗದವರ ಸ್ಥಾನವು ಭಾರತ ದಲ್ಲಿನ ಇತರ ಅಲ್ಪಸಂಖ್ಯಾತರ ಸ್ಥಾನಕ್ಕೆ ಸಮಾನವಾದುದೇ ಆಗಿರುತ್ತದೆ ಎಂಬುದನ್ನು ಒಪ್ಪುತ್ತೇನೆ. ಇತರ ಅಲ್ಪಸಂಖ್ಯಾತರೊಡನೆ ನಿಮ್ನ ವರ್ಗದವರೂ ಭಾರತದ ಸಂವಿಧಾನದ ಮೇರೆಗೆ ಬಹುಮತದ ಆಳ್ವಿಕೆಯನ್ನು ಸ್ಥಾಪಿಸಲಾಗುವುದು ಮತ್ತು ಬಹುಮತದ ಆಳ್ವಿಕೆಯು ಸಂಪ್ರದಾಯವಾದಿಯಾದ ಹಿಂದೂ ಗಳದೇ ಆಗುತ್ತದೆ ಎಂದು ಭಯಪಡುತ್ತಾರೆ. ಅಲ್ಲದೆ, ಆ ಬಹುಮತವು ತನ್ನ ಸಂಪ್ರದಾಯವಾದಿ ನಂಬಿಕೆ

ಮತ್ತು ಪೂರ್ವಗ್ರಹ ಪೀಡಿತ ಉಲ್ಲಂಘಿಸಬಹುದೆಂಬ ಹೆಚ್ಚಿನ ಭಯವಿರುತ್ತದೆ. ಶಾಸನ ರೂಪಿಸುವಲ್ಲಿ ಅಥವಾ ಆಡಳಿತದಲ್ಲಿ ಅಥವಾ ನಾಗರಿಕನ ಇತರ ಸಾರ್ವಜನಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರೊಡನೆ ಪಕ್ಷಪಾತ ನಡೆಯಬಹುದೆಂಬ ಹೆಚ್ಚಿನ ಭಯವೂ ಇದೆ ಮತ್ತು ಆ ಕಾರಣದಿಂದಾಗಿ ಅಲ್ಪಸಂಖ್ಯಾತರ ಸ್ಥಾನವನ್ನು, ಅವರು ಭಯಪಟ್ಟಿರುವ ಪಕ್ಷಪಾತವು ನಡೆಯದ ರೀತಿಯಲ್ಲಿ ಅವುಗಳನ್ನು ರಕ್ಷಿಸುವುದು ಅವಶ್ಯವಾಗಿದೆ.

ಏನೇ ಆದಾಗ್ಯೂ, ಆ ದೃಷ್ಟಿಯಿಂದ ಕೇಳಲಾಗಿರುವುದು ಶಾಸಕಾಂಗದಲ್ಲಿ ಮತ್ತು ಕಾರ್ಯಾಂಗದಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ ಇರಬೇಕು, ದೇಶದ ಸಾರ್ವಜನಿಕ ಸೇವೆಗಳಲ್ಲಿ ಅವರಿಗೆ ಪ್ರಾತಿನಿಧ್ಯ ಇರಬೇಕು. ಭಾರತದ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿನ ಭಾವೀ ಶಾಸನ ಸಭೆಗಳ ಮೇಲೆ ಅವುಗಳು ರಚಿಸುವ ಶಾಸನಗಳು ನಾಗರಿಕ ಮತ್ತು ನಾಗರಿಕರಲ್ಲಿ ಪಕ್ಷಪಾತ ಮಾಡುವಂಥ ಕಾನೂನುಗಳನ್ನು ರಚಿಸಿ ತಮಗಿರುವ ಅಧಿಕಾರದ ದುರುಪಯೋಗ ಮಾಡುವುದನ್ನು ತಡೆಯುವ ರೀತಿಯಲ್ಲಿ ಅವುಗಳ ಶಾಸನಾಧಿಕಾರದ ಮೇಲೆ ಕೆಲವು ಪರಿಮಿತಿಗಳನ್ನು ವಿಧಿಸುವುದಕ್ಕೆ ಸಂವಿಧಾನವು ಉಪಬಂಧಿಸಬೇಕು– ಇಷ್ಟು ಮಾತ್ರ.

ಈ ಸಂದರ್ಭವು– ಈ ಪಕ್ಷಪಾತದ ಅಪಾಯವು ಎಲ್ಲ ಅಲ್ಪಸಂಖ್ಯಾತರಿಗೂ ಸಮಾನವಾದುದಾಗಿದೆ ಮತ್ತು ನಿಮ್ಮ ವರ್ಗದ ಪ್ರತಿನಿಧಿಯಾಗಿ ನಾನು ಇತರ ಅಲ್ಪಸಂಖ್ಯಾತರು ಮಾಡಿದ ಬೇಡಿಕೆಗಳಿಗೆ ಸಹಮತಿಸುತ್ತೇನೆ.

ಮಾನ್ಯರೇ, ಈಗ ಭಾರತದಲ್ಲಿಯ ನಿಮ್ಮ ವರ್ಗದವರನ್ನು ಮತ್ತು ಇತರ ಅಲ್ಪಸಂಖ್ಯಾತರನ್ನು ಬೇರ್ಪಡಿಸುವ ಸಂದರ್ಭಗಳ ಬಗ್ಗೆ ಹೇಳುತ್ತೇನೆ. ಭಾರತದಲ್ಲಿ ನಿಮ್ಮ ವರ್ಗದವರ ಸ್ಥಾನವು ಇತರ ಅಲ್ಪಸಂಖ್ಯಾತರ ಸ್ಥಾನದೊಡನೆ ಯಾವ ರೀತಿಯಲ್ಲಿ ಬೇರೆಯಾಗಿದೆ ಎಂಬುದನ್ನು ಈಗ ನಾನು ಹೇಳುತ್ತೇನೆ. ಅದು ಈಗಿರುವ ಪರಿಸ್ಥಿತಿಗಳಲ್ಲಿ ನಿಮ್ಮ ವರ್ಗದವರು, ಇತರ ಅಲ್ಪಸಂಖ್ಯಾತರು ಕಾನೂನು ಮೇರೆಗೆ ಅನುಭವಿಸುತ್ತಿರುವ ಹಲವು ನಾಗರಿಕ ಹಕ್ಕುಗಳನ್ನು ಪಡೆದಿಲ್ಲ. ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ಈಗಿರುವ ಸಂದರ್ಭಗಳಲ್ಲಿ ನಿಮ್ಮ ವರ್ಗದವರು ನಾಗರಿಕ ಹಕ್ಕುಗಳಿಂದ ವಂಚಿತರಾಗಿರುತ್ತಾರೆ. ನಾನು ನಿಮಗೆ ಒಂದೆರಡು ದೃಷ್ಟಾಂತಗಳನ್ನು ಮಾತ್ರ ಕೊಡಬಯಸುತ್ತೇನೆ. ಏಕೆಂದರೆ ನನಗೆ ಹೆಚ್ಚು ಕಾಲಾವಕಾಶ ಇಲ್ಲ ಎನ್ನುವುದು ಗೊತ್ತಿದೆ.

ಪೊಲೀಸ್ ಅಥವಾ ಸೈನ್ಯದಲ್ಲಿಯ ನೌಕರಿಯ ವಿಷಯವನ್ನೇ ತೆಗೆದುಕೊಳ್ಳೋಣ. ಸಾಮ್ರಾಜ್ಯದ ಯಾವನೇ ನಾಗರಿಕನಿಗೆ ಅವನ ಜಾತಿ, ಮತ, ಪಂಥ ಅಥವಾ ಬಣ್ಣದ ಕಾರಣದಿಂದಾಗಿ ಸಾರ್ವಜನಿಕ ಸೇವೆಯಲ್ಲಿ ನೌಕರಿಗೆ ಸೇರಲು ಇರುವ ಅವನ ಹಕ್ಕನ್ನು ಕಸಿದುಕೊಳ್ಳತಕ್ಕುದಲ್ಲ ಎಂದು ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮದಲ್ಲಿ ಉಪಬಂಧಿಸಲಾಗಿತ್ತು. ಅದನ್ನು ಲಕ್ಷ್ಯದಲ್ಲಿಟ್ಟುಕೊಂಡಾಗ, ನಿಮ್ಮ ವರ್ಗದ ಕೋಮಿಗೆ ಸೇರಿದ ಪ್ರತಿಯೊಬ್ಬ ಸದಸ್ಯನು, ಸಮರ್ಥನಿರುವಾಗ ಮತ್ತು ಸಾರ್ವಜನಿಕ ಇಲಾಖೆಯಲ್ಲಿ ನೌಕರಿಗಾಗಿ ಇರುವ ಸ್ಪರ್ಧೆಯಲ್ಲಿ ತೇರ್ಗಡೆಯಾಗುವಂತಿರುವಾಗ, ಸಾರ್ವಜನಿಕ ಇಲಾಖೆಯನ್ನು ಸೇರಲು ಹಕ್ಕುಳ್ಳವನಾಗಿರತಕ್ಕುದು. ಆದರೆ ಈಗ ನಮಗೆ ಕಂಡು ಬರುತ್ತಿರುವುದು ಏನು? ಅದು ಹೇಗಿದೆ ಎಂದರೆ ನಿಮ್ಮ ವರ್ಗದ ವ್ಯಕ್ತಿಯು ಪೊಲೀಸ್ ಇಲಾಖೆಯಲ್ಲಿ ಸೇವೆಗಾಗಿ ಇಂದು ಅರ್ಜಿಯನ್ನು ಸಲ್ಲಿಸಿದರೆ ಸರಕಾರದ ಕಾರ್ಯಕಾರೀ ಅಧಿಕಾರಿಗಳು ಪೋಲೀಸ್ ಸೇವೆಯಲ್ಲಿ ನಿಮ್ಮ ವರ್ಗದವರನ್ನು ಸೇರಿಸಿಕೊಳ್ಳಲು ಆಗುವುದಿಲ್ಲ, ಏಕೆಂದರೆ ನೀವು ಅಸ್ಪೃಶ್ಯರು ಎಂದು ಖಂಡತುಂಡಾಗಿ ಹೇಳುತ್ತಾರೆ. ಸೇನೆಯ ವಿಷಯದಲ್ಲೂ ಅದೇ ಪರಿಸ್ಥಿತಿ ಇದೆ. ೧೮೯೨ರವರೆಗೆ ಇಡೀ ಮದರಾಸ್ ಸೈನ್ಯ ಮತ್ತು ಇಡೀ

ಬಾಂಬೆ ಸೈನ್ಯಗಳು ನಿಮ್ನ ವರ್ಗದ ಸದಸ್ಯರನ್ನೇ ಒಳಗೊಂಡಿತ್ತು. ಭಾರತದ ಇತಿಹಾಸದಲ್ಲಿನ ಎಲ್ಲ ಮಹಾಯುದ್ಧಗಳು ಮುಂಬೈ ಮತ್ತು ಮದ್ರಾಸ ಪ್ರಾಂತಗಳಲ್ಲಿ ನಿಮ್ನ ವರ್ಗದಲ್ಲಿಂದ ತೆಗೆದುಕೊಂಡ ಸಿಪಾಯಿಗಳ ಸಹಾಯದಿಂದಲೇ ನಡೆದಿವೆ. ಆದಾಗ್ಯೂ ೧೮೯೨ರಲ್ಲಿ ನಿಮ್ನ ವರ್ಗದವರು ಸೈನಿಕ ಸೇವೆಯಲ್ಲಿ ಸೇರುವುದನ್ನು ಪ್ರತಿಬಂಧಿಸಿ ಒಂದು ನಿಮಯವನ್ನು ಮಾಡಲಾಯಿತು. ಇಂದೂ ಸಹ ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿ ಹೀಗೇಕೆ ಮಾಡಲಾಯಿತು ಎಂದು ಕೇಳಿದರೆ ಈ ವರ್ಗದವರನ್ನು ಭರ್ತಿ ಮಾಡಿಕೊಳ್ಳುವಲ್ಲಿ ಅಸ್ಪೃಶ್ಯತೆಯು ಪರಿಹರಿಸಲು ಆಗದಂಥ ತೊಂದರೆಗಳಿಗೆ ಕಾರಣವಾಗುತ್ತದೆ ಎಂಬ ಉತ್ತರ ಬರುತ್ತದೆ.

ಈ ಅಸಮರ್ಥತೆಯು ಕಾನೂನು ಮೇರೆಗೆ ವಿಧಿಸಿದ್ದರೆ ಎಷ್ಟು ಪರಿಣಾಮಕಾರೀ ಆಗುತ್ತಿತ್ತೋ ಈಗಲೂ ಅಷ್ಟೇ ಪರಿಣಾಮಕಾರಿಯಾಗಿದೆ ಮತ್ತು ಸಾಮ್ರಾಜ್ಯದ ಎಲ್ಲ ನಾಗರಿಕರಿಗೂ, ಎಲ್ಲ ರೀತಿಯಲ್ಲೂ ಯೋಗ್ಯರಾಗಿದ್ದರೆ, ನೌಕರಿಗೆ ಸೇರಲು ಅವರು ಸ್ವತಂತ್ರರು ಎಂದು ಹೇಳುವ ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮದ ಕಲಮನ್ನು ಅರ್ಥಹೀನವನ್ನಾಗಿ ಮಾಡಿದೆ.

ಇಂಥ ಅನೇಕ ಉದಾಹರಣೆಗಳನ್ನು ನಾನು ಹೇಳಬಲ್ಲೆ. ಉದಾ: ಪ್ರವಾಸದಲ್ಲಿ ಸಾರ್ವಜನಿಕ ಖಾನಾವಳಿಯಲ್ಲಿ ಪ್ರವೇಶ ಪಡೆಯಲು ನಿಮ್ನ ವರ್ಗದವನಿಗೆ ಆಗುವ ತೊಂದರೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ಬಸ್ಸಿನಲ್ಲಿ ಸ್ಥಳ ದೊರಕಿಸಿಕೊಳ್ಳಲು ಅವನಿಗೆ ಆಗುವ ಕಷ್ಟ, ತಾವು ಕೊಡುಗೆ ನೀಡಿ ಕಟ್ಟಿದ ಸಾರ್ವಜನಿಕ ಶಾಲೆಗಳಿಗೆ ಪ್ರವೇಶ ಪಡೆಯಲು ಇರುವ ಕಷ್ಟ, ಯಾವ ಬಾವಿಯನ್ನು ಕಟ್ಟಲು ಅವರು ಕರವನ್ನು ಕೊಟ್ಟಿರುತ್ತಾರೋ ಆ ಬಾವಿಯಿಂದ ನೀರನ್ನು ಸೇದಲು ಅವರು ಪಡುವ ಕಷ್ಟ ಇತ್ಯಾದಿ ಇತ್ಯಾದಿಗಳು. ಆದರೆ, ಅವೆಲ್ಲವುಗಳನ್ನು ನಾನಿಲ್ಲಿ ಚರ್ಚಿಸಬೇಕಿಲ್ಲ. ಇತರ ಅಲ್ಪಸಂಖ್ಯಾತರಿಂದ ನಿಮ್ನ ವರ್ಗದವರನ್ನು ಪ್ರತ್ಯೇಕಗೊಳಿಸುವ ಒಂದು ಸಂಗತಿಯೆಂದರೆ ಕಾನೂನು ವಿಧಿಸಿದ ಕ್ರಮದಷ್ಟೇ ಪರಿಣಾಮಕಾರಿಯಾಗಿರುವ ಅವರ ನಾಗರಿಕ ಅಸಹಾಯಕತೆ.

ನನ್ನ ಅಭಿಪ್ರಾಯದಲ್ಲಿ ನಿಮ್ನ ವರ್ಗದವರನ್ನು ಪ್ರತ್ಯೇಕಿಸುವ ಎರಡನೆಯ ಮತ್ತು ತೀರಾ ಭೀಕರ ವಾದ ವ್ಯತ್ಯಾಸವೆಂದರೆ ಅವರಿಗೆ ಕೊಡುತ್ತಿರುವ ಮತ್ತು ಅದು ಜಗತ್ತಿನ ಇತರ ಭಾಗದವರಿಗೆ ಗೊತ್ತಿಲ್ಲ ದಿರುವಂಥ ಹಿಂಸೆಯಾಗಿದೆ. ಈ ಸಂಬಂಧದಲ್ಲಿ ನಿಮ್ನ ವರ್ಗದವರ ಸ್ಥಾನದ ಬಗ್ಗೆ ತನಿಖೆ ನಡೆಸಲು ೧೯೨೮ರಲ್ಲಿ ಮುಂಬಯಿ ಸರಕಾರದವರು ನೇಮಕ ಮಾಡಿದ ಸಮಿತಿಯ ವರದಿಯಲ್ಲಿನ ಚಿಕ್ಕ ಭಾಗವನ್ನು ಈ ಉಪಸಮಿತಿಯ ಮುಂದೆ ಓದಲಿಚ್ಛಿಸುತ್ತೇನೆ. ರಾಜ್ಯದ ಇತರ ನಾಗರಿಕರೊಡನೆ ನಿಮ್ನ ವರ್ಗದವರಿಗೂ ಕೊಟ್ಟ ಹಕ್ಕುಗಳನ್ನು ಅವರು ಅನುಭವಿಸಲು ಯಾವುದಾದರೂ ಅಡ್ಡಿ–ಆತಂಕಗಳು ಉಂಟೋ ಎಂಬುದನ್ನು ಕಂಡುಹಿಡಿಯಲು ಆ ಸಮಿತಿಯು ಪ್ರಯತ್ನಿಸಿತು.

"ಎಲ್ಲಾ ಸಾರ್ವಜನಿಕ ಸೇವೆಗಳಲ್ಲಿ ನಿಮ್ನ ವರ್ಗದವರಿಗಿರುವ ಹಕ್ಕುಗಳನ್ನು ದೊರಕಿಸಿಕೊಡಲು ನಾವು ಹಲವಾರು ಪರಿಹಾರಗಳನ್ನು ಶಿಫಾರಸ್ಸು ಮಾಡಿರುತ್ತೇವೆ. ಆದಾಗ್ಯೂ ಅವುಗಳನ್ನು ಕಾರ್ಯಗತ ಗೊಳಿಸುವಲ್ಲಿ ಬಹಳ ಕಾಲದವರೆಗೆ ಅಡ್ಡಿಗಳು ಇರುತ್ತವೆಯೆಂಬ ಭಯ ನಮಗಿದೆ. ಸಂಪ್ರದಾಯವಾದೀ ವರ್ಗದವರಿಂದ ನಿಮ್ನ ವರ್ಗದವರ ವಿರುದ್ಧ ಬಹಿರಂಗ ಹಿಂಸೆ ಉಂಟಾಗಬಹುದೆಂಬುದು ಮೊದಲನೆಯ ಅಡ್ಡಿ. ಪ್ರತಿ ಹಳ್ಳಿಯಲ್ಲೂ ನಿಮ್ನ ವರ್ಗದವರು ತುಂಬಾ ಅಲ್ಪ ಪ್ರಮಾಣದಲ್ಲಿದ್ದಾರೆ ಎಂಬುದನ್ನು ನಾವು ಗಮನಿಸಲೇಬೇಕು. ಅವರಿಗೆ ಎದುರಾಗಿ ಸಂಪ್ರದಾಯವಾದಿಗಳ ಬಹುಸಂಖ್ಯಾತರ ದೊಡ್ಡಗುಂಪೇ ಇರುತ್ತದೆ ಮತ್ತು ಅವರು ತಮ್ಮ ಹಿತಾಸಕ್ತಿ ಮತ್ತು ಗೌರವದ ಮೇಲೆ ನಿಮ್ನ ವರ್ಗದವರಿಂದ ಆಗುತ್ತದೆಂಬ ಕಾಲ್ಪನಿಕ ದಾಳಿಯಿಂದ ರಕ್ಷಿಸಿಕೊಳ್ಳಲು ಯಾವುದೇ ಬೆಲೆ ಕೊಟ್ಟಾದರೂ ಶತ ಪ್ರಯತ್ನ ಮಾಡಿಯೇ ಮಾಡುತ್ತಾರೆ.

ಪೊಲೀಸರು ತಮ್ಮ ಮೇಲೆ ಮೊಕದ್ದಮೆ ಹೂಡಬಹುದೆಂಬ ಭಯವು ಈ ಸಂಪ್ರದಾಯವಾದಿಗಳು ಮಾಡಬಹುದಾದ ಹಿಂಸೆಯ ಪ್ರಯೋಗಕ್ಕೆ ಪರಿಮಿತಿಯನ್ನು ಹಾಕಿದೆ. ಅದರಿಂದಾಗಿ ಅಂಥ ಪ್ರಕರಣಗಳು ಕ್ವಚಿತ್ತಾಗಿವೆ."

"ನಿಮ್ನ ವರ್ಗದವರು ಈಗಿರುವ ಆರ್ಥಿಕ ಸ್ಥಿತಿಯ ಕಾರಣದಿಂದಾಗಿ ಎರಡನೆಯ ತೊಂದರೆ ಉಂಟಾಗುತ್ತದೆ. ಪ್ರಾಂತದ ಹೆಚ್ಚಿನ ಭಾಗದಲ್ಲಿ ನಿಮ್ನ ವರ್ಗದವರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲ. ಹಲವರು ಸಂಪ್ರದಾಯವಾದಿಗಳ ಜಮೀನುಗಳನ್ನು ಅವರ ಇಷ್ಟದ ಮೇಲೆ ರೈತರಾಗಿ ಸಾಗುವಳಿ ಮಾಡುತ್ತಾರೆ. ಇತರರು ಸಂಪ್ರದಾಯವಾದಿಗಳ ಜಮೀನುಗಳಲ್ಲಿ ಕೂಲಿಗಳಾಗಿ ದುಡಿದು ಬಂದ ದುಡಿಮೆಯ ಮೇಲೆ ಬದುಕುತ್ತಾರೆ. ಇನ್ನುಳಿದವರು ಹಳ್ಳಿಯ ಆಳುಗಳೆಂದು ಈ ಸಂಪ್ರದಾಯವಾದಿಗಳ ಸೇವೆ ಮಾಡಿ ಅವರು ಕೊಟ್ಟ ಆಹಾರ ಮತ್ತು ಕಾಳುಕಡ್ಡಿಗಳ ಮೇಲೆ ಉಪಜೀವನ ಮಾಡುತ್ತಾರೆ. ನಿಮ್ನ ವರ್ಗದವರು ತಮ್ಮ ಹಕ್ಕುಗಳನ್ನು ಚಲಾಯಿಸಲು ಪ್ರಯತ್ನಿಸಿದಾಗ ಆಯಾ ಗ್ರಾಮದಲ್ಲಿನ ಸಂಪ್ರದಾಯವಾದಿ ವರ್ಗದವರು ಆ ನಿಮ್ನ ವರ್ಗದವರನ್ನು ಹತ್ತಿಕ್ಕಲು ತಮ್ಮ ಆರ್ಥಿಕ ಬಲವನ್ನು ಅವರ ವಿರುದ್ಧ ಒಂದು ಅಸ್ತ್ರವಾಗಿ ಉಪ ಯೋಗಿಸಿದ ಮತ್ತು ಅವರನ್ನು ಜಮೀನುಗಳಿಂದ ಹೊರಹಾಕಿದ, ಅವರಿಗೆ ಕೆಲಸ ಕೊಡುವುದನ್ನು ನಿಲ್ಲಿಸಿದ ಮತ್ತು ಹಳ್ಳಿಯ ಆಳುಗಳೆಂದು ಅವರಿಗೆ ಕೊಡುತ್ತಿರುವ ಸಂಭಾವನೆಯನ್ನು ನಿಲ್ಲಿಸುವ, ಹಲವಾರು ಘಟನೆಗಳ ಬಗ್ಗೆ ನಾವು ಕೇಳಿದ್ದೇವೆ. ಈ ಸ್ವರೂಪದ ಬಹಿಷ್ಕಾರವನ್ನು ತುಂಬಾ ವ್ಯಾಪಕ ರೀತಿಯಲ್ಲಿ ನಡೆಸಲಾಗುತ್ತಿತ್ತು. ಅಂದರೆ, ಸಾರ್ವಜನಿಕ ಮಾರ್ಗಗಳನ್ನು ಅವರು ಉಪಯೋಗಿಸಿದಂತೆ ತಡೆಯುವುದು ಮತ್ತು ಗ್ರಾಮದಲ್ಲಿನ ಬನಿಯಾಗಳು ಅವರ ಜೀವನದ ಅವಶ್ಯಕತೆಗಳ ಪೂರೈಕೆಯನ್ನೇ ನೀಡದಿರುವುದು ಮೊದಲಾದವು ಸಾಮಾನ್ಯವಾಗಿದ್ದವು. ಒಂದು ಚಿಕ್ಕ ಕಾರಣವೂ ಸಹ ಈ ನಿಮ್ನವರ್ಗದವರ ವಿರುದ್ಧ ಸಾಮಾಜಿಕ ಬಹಿಷ್ಕಾರವನ್ನು ಘೋಷಿಸುವುದಕ್ಕೆ ಸಾಕಾಗಿತ್ತು ಎಂಬ ಬಗ್ಗೆ ಪುರಾವೆ ದೊರಕುತ್ತದೆ. ನಿಮ್ನ ವರ್ಗದವರು ಊರಲ್ಲಿಯ ಸಾರ್ವಜನಿಕ ಬಾವಿಯನ್ನು ಉಪಯೋಗಿಸಲು ತಮ್ಮ ಹಕ್ಕನ್ನು ಚಲಾಯಿಸಿ ದಾಗಲೂ ಇಂಥ ಘಟನೆಗಳು ನಡೆದದ್ದುಂಟು. ಆದರೆ, ನಿಮ್ನವರ್ಗದವನೊಬ್ಬನು ಜನಿವಾರ ಧರಿಸಿದಾಗ, ತುಂಡು ಭೂಮಿಯನ್ನು ಕೊಂಡಾಗ, ಒಳ್ಳೆಯ ಬಟ್ಟೆ ಧರಿಸಿದಾಗ, ಅಥವಾ ಆಭರಣಗಳನ್ನು ಧರಿಸಿದಾಗ, ಮದುಮಗನನ್ನು ಕುದುರೆಯ ಮೇಲೆ ಕೂಡಿಸಿ ಮದುವೆಯ ಮೆರವಣಿಗೆ ತೆಗೆದಾಗ ತುಂಬಾ ಕಠೋರ ರೀತಿಯ ಬಹಿಷ್ಕಾರವನ್ನು ಹಾಕಿದ ಘಟನೆಗಳೇನೂ ವಿರಳವಾಗಿಲ್ಲ. "ನಿಮ್ನ ವರ್ಗದವರನ್ನು ಹತ್ತಿಕ್ಕಲು ಇಂಥ ಸಾಮಾಜಿಕ ಬಹಿಷ್ಕಾರಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಬೇರೆ ಯಾವುದೇ ಅಸ್ತ್ರವು ನಮಗೆ ಗೊತ್ತಿಲ್ಲ. ಬಹಿರಂಗ ಹಿಂಸಾಚಾರವು ಇದರ ಮುಂದೆ ಮಂಕಾಗಿ ಹೋಗುತ್ತದೆ. ಏಕೆಂದರೆ ಇದರ ಪರಿಣಾಮವು ತುಂಬಾ ದೀರ್ಘವಾದುದೂ ಮತ್ತು ಮರಣಾಂತಿಕವಾದುದೂ ಆಗಿರುತ್ತದೆ. ಅದು ತುಂಬಾ ಅಪಾಯಕಾರಿಯೂ ಆಗಿದೆ. ಏಕೆಂದರೆ ಅದು ಸಂಪರ್ಕ ಸ್ವಾತಂತ್ರ್ಯ ಸಿದ್ಧಾಂತಕ್ಕೆ ಸುಸಂಗತವಾಗಿ ಕಾನೂನುಸಮ್ಮತ ವಿಧಾನವಾಗಿ ಬಿಡುತ್ತದೆ. ನಿಮ್ನ ವರ್ಗದವರ ಉನ್ನತಿಗಾಗಿ ಅವರ ವಾಕ್ ಸ್ವಾತಂತ್ರ್ಯ ಮತ್ತು ಕಾರ್ಯ ಸ್ವಾತಂತ್ರ್ಯವನ್ನು ನಾವು ಸಂರಕ್ಷಿಸುವ ಭರವಸೆಯನ್ನು ಕೊಡುವುದಾದರೆ, ಬಹುಮತ ದವರ ಈ ದಬ್ಬಾಳಿಕೆಯನ್ನು ನಾವು ದೃಢ ಹಸ್ತದಿಂದ ಹತ್ತಿಕ್ಕಲೇಬೇಕು."

ನಿಮ್ನ ವರ್ಗದವರು ಇತರ ಯಾವುದೇ ಕೋಮಿನವರಿಗಿಂತ ಹೆಚ್ಚಿನ ರೀತಿಯಲ್ಲಿ ಭಯಪಡುವ ಮೂರನೆಯ ವಿಷಯವೆಂದರೆ, ಹೊಸ ಶಾಸಕಾಂಗದಲ್ಲಿ ಅವರಿಗೆ ಯಾವುದೇ ಪ್ರಾತಿನಿಧ್ಯವನ್ನು ಕೊಡಬಹುದಾದರೂ ಅವರು ಯಾವಾಗಲೂ ಅತಿ ಚಿಕ್ಕ ಪ್ರಮಾಣದ ಅಲ್ಪಸಂಖ್ಯಾತರೇ ಆಗುತ್ತಾರೆ ಮತ್ತು

ಆ ಕಾರಣದಿಂದಾಗಿ ನಿಮ್ನ ವರ್ಗದವರಿಗೆ ಸಂಪ್ರದಾಯವಾದಿಗಳ ತಿರಸ್ಕಾರದಿಂದ ಕೂಡಿದ ಮನೋಧರ್ಮವನ್ನು ಗಮನಿಸಿದಾಗ, ನಿಮ್ನ ವರ್ಗದವರ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಬಹುದಾದ ಅಥವಾ ಅವರ ಹಿತಾಸಕ್ತಿಗಳಿಗೆ ಕೊನೆಗೆ ಹಾನಿಕಾರಕವಾಗಿ ಪರಿಣಮಿಸಬಹುದಾದ ಕ್ರಮವನ್ನು ಕೈಕೊಳ್ಳಬಹುದಾದ ಅಪಾಯವು ಯಾವಾಗಲೂ ಇರುತ್ತದೆ.

ನಿಮ್ನ ವರ್ಗದವರಿಗೆ ಬಾಧಕವಾಗುವ ಈ ಸಂದರ್ಭಗಳಿಗೆ ವಿರುದ್ಧವಾಗಿ ನಾವು ಕೆಳಗೆ ಹೇಳಲಾಗಿರುವ ರಕ್ಷಣಾ ಕ್ರಮಗಳನ್ನು ಸೂಚಿಸುತ್ತೇವೆ. ಪ್ರಪ್ರಥಮವಾಗಿ ಎಲ್ಲ ಸಾರ್ವಜನಿಕ ಉದ್ದೇಶಗಳಿಗಾಗಿ “ಅಸ್ಪೃಶ್ಯತೆ”ಯನ್ನು ಕಾನೂನು ವಿರುದ್ಧವಾದುದು ಎಂದು ಘೋಷಿಸುವಂಥ ಮೂಲಭೂತ ಹಕ್ಕನ್ನು ಸಂವಿಧಾನದಲ್ಲಿ ಉಪಬಂಧಿಸಬೇಕೆಂದು ನಾವು ಹೇಳುತ್ತೇವೆ. ನಾವು ಸಂವಿಧಾನಕ್ಕೆ ಸಮ್ಮತಿಸುವುದೇ ಆದರೆ ಅದಕ್ಕೆ ಮೊದಲು ಈ ಸಾಮಾಜಿಕ ಶಾಪದಿಂದ, ಹಾಗೆ ಹೇಳುವುದಾದರೆ, ನಮ್ಮನ್ನು ಮುಕ್ತಗೊಳಿಸಬೇಕು. ಎರಡನೆಯದಾಗಿ ಇಲ್ಲಿಯವರೆಗಿದ್ದ ಅಸಹಾಯಕತೆಗಳನ್ನು ಮತ್ತು ಪಕ್ಷಪಾತಗಳನ್ನು ಈ ಮೂಲಭೂತ ಹಕ್ಕು ಅಸಿಂಧುಗೊಳಿಸತಕ್ಕುದು ಮತ್ತು ಅನೂರ್ಜಿತಗೊಳಿಸತಕ್ಕುದು. ಮುಂದಿನ ಕ್ರಮವೆಂದರೆ ನಾನು ಇದೀಗ ನಿಮ್ಮ ಗಮನವನ್ನು ಸೆಳೆದ ವಿಷಯವಾದ ನಿಮ್ನವರ್ಗದವರ ಮೇಲೆ ನಡೆಯುತ್ತಿರುವ ಸಾಮಾಜಿಕ ಹಿಂಸಾಚಾರದ ವಿರುದ್ಧ ಶಾಸನವನ್ನು ರಚಿಸಬೇಕು ಎಂಬುದಾಗಿದೆ ಮತ್ತು ಈ ಬಗ್ಗೆ ನಾವು ದಾಖಲಾತಿಗಳನ್ನು ಕೊಟ್ಟಿದ್ದು, ಬರ್ಮಾದಲ್ಲಿ ಈಗ ಜಾರಿಯಲ್ಲಿರುವ ಕೆಲವು ಖಂಡಗಳನ್ನು ಅದರಲ್ಲಿ ಸೇರಿಸಿದ್ದೇವೆ. ಆ ಬಗ್ಗೆ ಈಗಲೇ ವಿವರವಾಗಿ ನಾನು ಚರ್ಚಿಸುವುದಿಲ್ಲ. ನಮಗೆ ಈಗ ಬೇಕಾಗಿರುವುದು ಏನೆಂದರೆ ಪ್ರಭುತ್ವದ ಕಾರ್ಯಾಂಗದ ಅಧಿಕಾರಿಗಳು ದಬ್ಬಾಳಿಕೆಯ ಮತ್ತು ತುಳಿತದ ಕೃತ್ಯಗಳಿಗಾಗಿ ಅವರಿಗಿರುವ ಹೊಣೆಗಾರಿಕೆಯು ಪರಿಣಾಮಕಾರಿಯಾಗುವಂತೆ ಮಾಡತಕ್ಕುದು. ಇಂದು ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮದ ೧೧೦ ಮತ್ತು ೧೧೧ನೇ ಕಲಮುಗಳ ಮೇರೆಗಿರುವ ಆ ಹೊಣೆಗಾರಿಕೆ ನಿಜವಾದುದಲ್ಲ. ಕೊನೆಯದಾಗಿ, ನಮಗೆ ತೋರುವ ನಿರ್ಲಕ್ಷ್ಯ, ಪೂರ್ವಗ್ರಹಪೀಡಿತ ವರ್ತನೆಗಳ ವಿರುದ್ಧ ಕೇಂದ್ರಕ್ಕೆ ಅಪೀಲು ಮಾಡುವ ಹಕ್ಕು ನಮಗೆ ಬೇಕಾಗಿದೆ. ಅದು ಸಾಧ್ಯವಾಗದಿದ್ದರೆ ನಮ್ಮ ಕಲ್ಯಾಣದ ಹೊಣೆಯನ್ನು ವಹಿಸಿಕೊಳ್ಳಲು ಕೇಂದ್ರ ಸರಕಾರದಲ್ಲಿ ಒಬ್ಬ ಸೆಕ್ರೆಟರಿ ಆಫ್ ಸ್ಟೇಟ್ ಇರಬೇಕು ಮತ್ತು ಆ ಬಗ್ಗೆ ಒಂದು ಪ್ರತ್ಯೇಕ ಇಲಾಖೆಯೇ ಇರಬೇಕು.

ನಿಮ್ನ ವರ್ಗದವರಿಗೆ ಸಂಬಂಧಿಸಿದಂತೆ ಇದು ನಮ್ಮ ಸಾಮಾನ್ಯ ವಾದವಾಗಿದೆ ಮತ್ತು ಅವರು ಹೇಳುವ ರಕ್ಷಣೆಗಳಾಗಿವೆ. ಅವುಗಳಲ್ಲಿ ಅತ್ಯಂತ ಮಹತ್ವದವುಗಳಾದ ಒಂದೆರಡರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅವೆಂದರೆ ಸಭೆಗಳಲ್ಲಿ ತಮಗೆ ಯುಕ್ತ ಪ್ರಾತಿನಿಧ್ಯಕ್ಕೆ ಇರುವ ಹಕ್ಕು. ನಿಮ್ನ ವರ್ಗದವರ ಪ್ರಾತಿನಿಧ್ಯದ ಪ್ರಶ್ನೆಗೆ ಸಂಬಂಧಿಸಿದಂತೆ ಅವರ ಪ್ರಾತಿನಿಧ್ಯವು ಚುನಾವಣೆಯ ಮೂಲಕ ಆಗಬೇಕಲ್ಲದೆ ನಾಮನಿರ್ದೇಶನದ ಮೂಲಕ ಅಲ್ಲ ಎಂಬ ಬಗ್ಗೆ ನಾವೆಲ್ಲರೂ ಒಮ್ಮತದವರಾಗಿದ್ದೇವೆ. ನಿಮ್ನ ವರ್ಗದವರಿಗೆ ಸಂಬಂಧಿಸಿದಂತೆ ನಾಮನಿರ್ದೇಶನ ಪದ್ಧತಿಯು ನಾವೆಲ್ಲರೂ ಅಸಹ್ಯಕರ ಎಂದು ಹೇಳಬಲ್ಲ ಪರಿಣಾಮಗಳನ್ನುಂಟುಮಾಡಿದೆ. ಈ ಪದ್ಧತಿಯನ್ನು, ಅಂಥ ರೀತಿಯಲ್ಲಿ ಅದರ ದುರುಪಯೋಗ ಆಗಬಹುದೆಂದು ಊಹಿಸಲಸಾಧ್ಯವಾಗಿರದ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಅದು ನಿಮ್ನ ವರ್ಗದವರಿಗೆ ಅದನ್ನು ತಮ್ಮ ರಕ್ಷಣೆಯಾಗಿ ಉಪಯೋಗಿಸಬಹುದಾದ ರೀತಿಯಲ್ಲಿ ನಿಜವಾದ ಮತ್ತು ಸ್ವತಂತ್ರವಾದ ಪ್ರಾತಿನಿಧ್ಯವನ್ನು ಎಂದೂ ಕೊಟ್ಟಿಲ್ಲ. ಕಾರಣ, ಯಾವುದೇ ಸಂದರ್ಭಗಳಲ್ಲಿ ನಿಮ್ನ ವರ್ಗದವರು ನಾಮನಿರ್ದೇಶನದ ಮೂಲಕ ಪ್ರಾತಿನಿಧ್ಯವನ್ನು ಒಪ್ಪತಕ್ಕದ್ದಲ್ಲ.

ಜಂಟಿ ಅಥವಾ ಪ್ರತ್ಯೇಕ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಶ್ನೆಯ ಬಗ್ಗೆ ನಮ್ಮ ನಿಲುವು ಈ ರೀತಿ ಇದೆ. ನೀವು ನಮಗೆ ವಯಸ್ಕ ಮತದಾನದ ಹಕ್ಕನ್ನು ಕೊಟ್ಟರೆ ಅವರ ಸಂಘಟನೆಗಾಗಿ ಬೇಕಾಗುವ ಮಾರ್ಪಾಡಿಗಾಗಿ ಅಲ್ಪ ಕಾಲವನ್ನು ಕೊಟ್ಟರೂ, ನಿಮ್ಮ ವರ್ಗದವರು ಜಂಟೀ ಮತ ಕ್ಷೇತ್ರಗಳ ಬಗ್ಗೆ ಮತ್ತು ಸ್ಥಳಗಳ ಮೀಸಲಾತಿಗೆ ಒಪ್ಪಲು ಸಿದ್ಧರಿರುತ್ತಾರೆ; ಆದರೆ ನೀವು ನಮಗೆ ವಯಸ್ಕ ಮತದಾನದ ಹಕ್ಕನ್ನು ಕೊಡದಿದ್ದರೆ, ನಾವು ನಮ್ಮ ಪ್ರಾತಿನಿಧ್ಯಕ್ಕಾಗಿ ಪ್ರತ್ಯೇಕ ಮತದಾರ ಕ್ಷೇತ್ರಗಳನ್ನು ಕೇಳಲೇಬೇಕಾಗುತ್ತದೆ. ಇದು ನಮ್ಮ ವಾದವಾಗಿದೆ.

ಈ ಸ್ಥಾನಗಳ ಸಂಖ್ಯೆಯ ಪ್ರಶ್ನೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಅವಮಾನಕಾರಕ ಪಕ್ಷಪಾತವನ್ನು ಸಹಿಸುವುದಿಲ್ಲ ಎಂದು ಹೇಳುವುದರ ಹೊರತಾಗಿ ನಿಜವಾಗಿಯೂ ಆ ಸಂಖ್ಯೆ ಎಷ್ಟು ಎಂದು ಹೇಳುವುದು ಸಾಧ್ಯವಿಲ್ಲ. ನಾವು ಸಮಾನ ವರ್ತನೆಯನ್ನೇ ಒತ್ತಾಯಿಸುತ್ತೇವೆ. ಆದರೆ, ನನ್ನ ಅಭಿಪ್ರಾಯದಂತೆ ಒಟ್ಟು ಪ್ರಶ್ನೆಯು ಸಂಪೂರ್ಣವಾಗಿ ಸಂಬಂಧಾರ್ಥಕ ಪ್ರಶ್ನೆಯಾಗಿದೆ. ಇತರ ಅಲ್ಪ ಸಂಖ್ಯಾತ ಕೋಮುಗಳಿಗೆ ಹಂಚಿಕೊಡಬಹುದಾದ ಸ್ಥಾನಗಳಿಗೆ ಸಂಬಂಧಿಸಿದಂತೆ ಮತ್ತು ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಮೂಲಕ ಮಾತ್ರವೇ ಈ ಪ್ರಶ್ನೆಯನ್ನು ನಿರ್ಧರಿಸಬಹುದಾಗಿದೆ; ಆದರೆ ಈ ಸಂಬಂಧದಲ್ಲಿ ನಾನು ಎರಡು ಸೂಚನೆಗಳನ್ನು ನೀಡುತ್ತೇನೆ. ನಾನು ಮಾಡುವ ಮೊದಲನೆಯ ಸೂಚನೆ ಹೀಗಿದೆ: ನಿಮ್ಮ ವರ್ಗದವರಾದ ನಾವು ನಮ್ಮ ಮತ್ತು ಉಳಿದ ಹಿಂದೂಗಳ ನಡುವೆ ಸಂಪೂರ್ಣ ವಿಭಜನೆಯನ್ನು ಬೇಡುತ್ತೇವೆ. ಅದು ಮೊದಲನೆಯ ವಿಷಯ. ನಮ್ಮನ್ನು ರಾಜಕೀಯ ಕಾರಣಗಳಿಗಾಗಿ ಹಿಂದೂಗಳೆಂದು ಕರೆಯುತ್ತಾರೆ. ಆದರೆ ಹಿಂದೂಗಳು ಸಾಮಾಜಿಕವಾಗಿ ನಮ್ಮನ್ನು ಎಂದೂ ಅವರ ಸಹೋದರರೆಂದು ಒಪ್ಪಿಕೊಂಡಿಲ್ಲ. ನಮ್ಮ ಸಂಖ್ಯೆಯು ನಮ್ಮ ಮತದಾನ ಶಕ್ತಿಯು ಅವರಿಗೆ ಕೊಟ್ಟ ಎಲ್ಲ ಅನುಕೂಲಗಳನ್ನು ಅವರು ತಮಗಾಗಿ ಮಾತ್ರವೇ ಬಳಸಿಕೊಂಡಿದ್ದಾರೆ. ಆದರೆ, ಪ್ರತಿಫಲವಾಗಿ ನಾವು ಏನನ್ನೂ ಪಡೆದಿಲ್ಲ. ನಾವು ಅವರಿಂದ ಪಡೆದುಕೊಂಡುದು ಅವರು ಹಿಂದೂಗಳೆಂದು ಕರೆಯುವ ಇತರ ಕೋಮುಗಳವರನ್ನು ನಡೆಸಿಕೊಳ್ಳುತ್ತಿರುವುದಕ್ಕಿಂತ ಅತ್ಯಂತ ಕೀಳಾಗಿ ನಮ್ಮನ್ನು ನಡೆಸಿಕೊಂಡುದು ಮಾತ್ರವೇ ಆಗಿದೆ. ಆ ಕಾರಣದಿಂದಾಗಿ ನಮಗೆ ಅದನ್ನು ಪ್ರಥಮವಾಗಿ ಮಾಡಲೇಬೇಕೆಂಬುದು ನಮಗೆ ಬೇಕಾಗಿದೆ.

ನಾನು ಹೇಳುವ ಎರಡನೆಯ ವಿಷಯ ವೇಟೇಜ ಪ್ರಶ್ನೆಗೆ ಸಂಬಂಧಿಸಿದ್ದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಈ ಪದ್ಧತಿಯನ್ನೂ ದುರುಪಯೋಗಪಡಿಸಿಕೊಳ್ಳಲಾಗಿದೆ. ನಾನು ಈ ವೆಟೇಜ ತತ್ವಕ್ಕೆ ವಿರೋಧಿಯಾಗಿಲ್ಲ. ಎಲ್ಲ ಸಂದರ್ಭಗಳಲ್ಲೂ ಪ್ರತಿಯೊಂದು ಅಲ್ಪಸಂಖ್ಯಾತ ಕೋಮು ತನ್ನ ಜನಸಂಖ್ಯಾ ಪ್ರಮಾಣಕ್ಕೇನೇ ಸೀಮಿತಗೊಂಡಿರತಕ್ಕುದು ಎಂಬ ತತ್ವವನ್ನು ನಾನು ಒಪ್ಪುವುದಿಲ್ಲ. ಒಂದು ಅಲ್ಪಸಂಖ್ಯಾತ ಕೋಮಿನ ಜನಸಂಖ್ಯೆಯು ತನ್ನ ಹಿತರಕ್ಷಣೆಯ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಅಸಮರ್ಪಕ ವಾದ ರೀತಿಯಲ್ಲಿ ಪ್ರಾತಿನಿಧ್ಯವನ್ನು ಕೊಡುವಷ್ಟು ಅಲ್ಪ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರಬಹುದು. ಆ ಪ್ರಾತಿನಿಧ್ಯವು ಯಾವುದೇ ರೀತಿಯಲ್ಲಿ ಪ್ರಯೋಜನಕಾರಿ ಆಗದೇ ಹೋಗುವಂಥದು ಆಗಬಹುದು. ಆ ಕಾರಣದಿಂದಾಗಿ, ನೀವು ಅಲ್ಪಸಂಖ್ಯಾತರನ್ನು ತಕ್ಕ ಪ್ರಮಾಣದಲ್ಲಿ ಮತ್ತು ನಿಜವಾಗಿಯೂ ರಕ್ಷಣೆ ಮಾಡಬೇಕಾಗುತ್ತದೆ. ಆದರೆ, ವೇಟೇಜ ಹಂಚಿಕೆಯು ಹಲವು ಏಕರೂಪದ ಮತ್ತು ಅರಿಯಬಹುದಾದ ತತ್ವಕ್ಕೆ ಒಳಪಟ್ಟಿರತಕ್ಕುದು. ನಮ್ಮ ಅಭಿಪ್ರಾಯದ ಮೇರೆಗೆ, ವೇಟೇಜನ್ನು ನಾವು ಒಪ್ಪಬೇಕಾಗುತ್ತದೆ. ಆದರೆ ವೆಟೇಜ ಹಂಚಿಕೆಯು ಹಲವು ಏಕರೂಪದ ಮತ್ತು ಅರಿಯಬಹುದಾದ ತತ್ವಕ್ಕೆ ಒಳಪಟ್ಟಿರತಕ್ಕುದು. ನಮ್ಮ

ಅಭಿಪ್ರಾಯದ ಮೇರೆಗೆ, ವೇಟೇಜನ್ನು ನಾವು ಒಪ್ಪಬೇಕಾಗುತ್ತದೆ. ಏಕೆಂದರೆ, ಸಂಖ್ಯೆಯಲ್ಲಿ ಅಥವಾ ಸಾಮಾಜಿಕವಾಗಿ ಅವರ ಸ್ಥಾನವು ಕೆಳಮಟ್ಟದ್ದಿರುವುದರಿಂದಾಗಿ ಅಥವಾ ಇತರರೊಡನೆ ಅವರನ್ನು ಹೋಲಿಸಿದಾಗ ಅವರ ಶೈಕ್ಷಣಿಕ ಮಟ್ಟ ಹಿಂದುಳಿದುದಾಗಿರುವುದರಿಂದ ಅಥವಾ ಇತರ ಕೋಮಿನವರೊಡನೆ ಹೋರಾಟ ನಡೆಸಲು ಅವರ ಆರ್ಥಿಕ ಸ್ಥಿತಿಯು ಸಾಕಷ್ಟು ಶಕ್ತಿಯನ್ನು ಅವರಿಗೆ ಕೊಡಲಾರದ್ದಾಗಿರುವುದರಿಂದ, ಈ ಪ್ರಭಾವ (ವೇಟೇಜ) ಸಿದ್ಧಾಂತವನ್ನು ನಾವು ಒಪ್ಪಬೇಕಾಗುತ್ತದೆ.

ಒಬ್ಬ ಸದಸ್ಯ: ಸರಿಯಾಗಿದೆ.

ಡಾ. ಅಂಬೇಡ್ಕರ್: ಆದರೆ ಉದಾಹರಣೆಗಾಗಿ, ರಾಜಕೀಯ ಮಹತ್ವದ ಅಥವಾ ನಿಷ್ಠೆಯ ಸಾಮ್ರಾಜ್ಯಕ್ಕೆ ಅಥವಾ ಬ್ರಿಟಿಶ್ ಸರಕಾರಕ್ಕೆ ಸಲ್ಲಿಸಿದ ಸೇವೆಯ ಆಧಾರದ ಮೇಲೆ ವೇಟೇಜನ್ನು ಹೇಗೆ ಕೊಡಬಹುದು ಅನ್ನುವುದು ನನಗೆ ತಿಳಿಯದಾಗಿದೆ. ನಾವು ಆ ತತ್ವವನ್ನು ಅಳವಡಿಸಿಕೊಂಡರೆ ಹೊರಬರಲು ಸಾಧ್ಯವಾಗದಿರುವಂಥ ತುಂಬಾ ಕಠಿಣ ಪರಿಸ್ಥಿತಿಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ.

ಕೇಂದ್ರ ಶಾಸನ ಸಭೆಯಲ್ಲಿ ನಿಮ್ಮ ವರ್ಗದವರ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಬಗ್ಗೆ ಕೇಂದ್ರ ಶಾಸನ ಸಭೆಯ ಸದಸ್ಯರನ್ನು ಆಯ್ಕೆ ಮಾಡಲು ವಯಸ್ಕ ಮತದಾನವನ್ನು ಅನುಸರಿಸಿದರೆ ಆಗ, ನಿಜವಾಗಿಯೂ ನಿಮ್ಮ ವರ್ಗದವರು ಶಾಸನ ಸಭೆಯಲ್ಲಿ ಇತರ ಅಲ್ಪಸಂಖ್ಯಾತರಿಗೆ ಹಂಚಿಕೊಟ್ಟ ಸ್ಥಾನಗಳ ಸಂಯೋಗ ದೊಂದಿಗೆ ಅವರಿಗೆ ಹಂಚಿಕೊಟ್ಟ ಸ್ಥಾನಗಳ ಬಗ್ಗೆ ಬೇರೆ ಪ್ರಾತಿನಿಧ್ಯವನ್ನೇ ಕ್ಲೇಮು ಮಾಡುವವರು. ಆದರೆ, ನಿಮ್ಮ ಪ್ರತಿನಿಧಿತ್ವವು ಸ್ವತ್ತನ್ನು ಆಧರಿಸಿದ ಉಚ್ಚಮಟ್ಟದ ಅಥವಾ ಇನ್ನೂ ಹೆಚ್ಚಿನ ಉಚ್ಚಮಟ್ಟದ ಮತ್ತು ನಿಮ್ಮ ವರ್ಗದವರು ಸಂಪೂರ್ಣವಾಗಿ ಹೊರಗುಳಿಯುವಂಥ ಮತ್ತೂ ಹೆಚ್ಚಿನ ಮಟ್ಟದ ಮತದಾನವನ್ನು ಆಧರಿಸಿದರೆ, ಆಗ ನಿಮ್ಮ ವರ್ಗದವರು ಕೇಂದ್ರ ಶಾಸನ ಸಭೆಗೆ ಪರೋಕ್ಷ ಚುನಾವಣೆಗೆ ಕ್ಲೇಮು ಮಾಡಬಹುದು ಮತ್ತು ಶಾಸನ ಸಭೆಗೆ ಪ್ರಾಂತೀಯ ಶಾಸನ ಸಭೆಗಳು ಮತ್ತು ಮುನಸಿಪಾಲಿಟಿಗಳ ನ್ನೊಳಗೊಂಡ ಮತ ಕ್ಷೇತ್ರಗಳ ಮೂಲಕ ಪರೋಕ್ಷ ಚುನಾವಣೆಗೆ ಕ್ಲೇಮು ಮಾಡಬಹುದು. ನಿಮ್ಮ ವರ್ಗದವರಿಗೆ ಸಂಬಂಧಿಸಿದಂತೆ ಅಷ್ಟು ಮಾತ್ರ ನಾನು ಹೇಳಬೇಕಾಗಿದೆ.

ನಾನು ಹೇಳಬೇಕಾದುದನ್ನೆಲ್ಲ ಹೇಳಿದ ನಂತರ ಕೊನೆಯದಾಗಿ ಒಂದು ಸಂಗತಿಯನ್ನು ಸೇರಿಸಬಯಸುತ್ತೇನೆ. ಏನೆಂದರೆ, ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಒಟ್ಟು ಪ್ರಶ್ನೆಯು ಇಡಿಯ ಸಂದರ್ಭದ ನಿಜವಾದ ಒಗಟಾಗಿದೆ. ಮತ್ತು ಎಲ್ಲ ಅಲ್ಪಸಂಖ್ಯಾತರು ತಮ್ಮೊಡನೆ, ಭಾರತಕ್ಕೆ ಅವರು ಕರೆಯುವ ಡೋಮಿನಿಯನ್ನ ಸ್ಥಾನವನ್ನು ಅಥವಾ ಜನತೆಯ, ಜನರಿಗಾಗಿ ಮತ್ತು ಜನತೆಯ ಹೆಸರಿನಲ್ಲಿ ನಡೆಯುವ ಸರಕಾರವೆಂದು ನಾವು ಕರೆಯಲು ಇಚ್ಛಿಸುವ ಸಂವಿಧಾನವನ್ನು ಹೊಂದಲು ಅಥವಾ ಕೇಳಲು, ಬಹುಮತದ ಕೋಮಿನವರು ಇಚ್ಛೆ ಪಟ್ಟರೆ, ಆಗ ಅಲ್ಪಸಂಖ್ಯಾತರ ಎಲ್ಲ ಆತಂಕವನ್ನೂ ನಿವಾರಿಸಲು ಬಹುಮತದವರು ಪ್ರಯತ್ನಿಸಬೇಕಾಗುತ್ತದೆಂಬ ಭಯ ನನಗೆ. ಇಲ್ಲದೇ ಹೋದರೆ ಡೊಮಿನಿಯನ್ನ ಸ್ಥಾನವನ್ನು ಕೇಳುವಲ್ಲಿ ನಮ್ಮಲ್ಲಿ ಅನೇಕರು ಈಗ ಎದುರಿಸುತ್ತಿರುವ ಅಪಾಯವನ್ನು ನಾವು ಎದುರಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಮುಚ್ಚುಮರೆಯಿಲ್ಲದೆ ಹೇಳಬೇಕಾಗುತ್ತದೆ.

# ಐದನೆಯ ಸಭೆ
# ೧೪ನೇ ಜನವರಿ ೧೯೩೧

ಅಧ್ಯಕ್ಷ: ಇದೀಗ ಮಾಡಿದ ಪ್ರಸ್ತಾಪದಿಂದ ನಾವು ಮುಂದೆ ಸಾಗುವುದು ಮತ್ತು ಕರಡು ವರದಿ ಅಳವಡಿಸಿಕೊಳ್ಳುವುದು ಅಸಾಧ್ಯವಾಗಿದೆ. ಏಕೆಂದರೆ ನಿಜವಾಗಿಯೂ, ಅದು ಇಡಿಯ ಪರಿಸ್ಥಿತಿಯನ್ನೇ ಬದಲಾಯಿಸುತ್ತದೆ. ತಾವು ಒಪ್ಪುವುದಾದರೆ ಈ ಉಪಸಮಿತಿಯನ್ನು ಈಗ ಮುಂದೂಡಬೇಕೆಂದು ನಾನು ಸೂಚಿಸುತ್ತೇನೆ ಮತ್ತು ನೀವು ಒಪ್ಪುವುದಾದರೆ ನಾನು ಅಧ್ಯಕ್ಷನಾಗಿ ಮುಂದುವರೆಯುತ್ತೇನೆ ಮತ್ತು ನಿಮ್ಮಲ್ಲಿ ಮುಖ್ಯವಾಗಿ ಆ ಬಗ್ಗೆ ಹಿತಾಸಕ್ತಿಯುಳ್ಳವರು ಸಭೆ ಸೇರಬೇಕು ಮತ್ತು ಡಾ. ಅಂಬೇಡ್ಕರ್ ಅವರನ್ನು ಅದರಲ್ಲಿ ಸೇರಿಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ. ಅಂಬೇಡ್ಕರ್: ಮಾನ್ಯರೆ, ನಾನು ತಮಗೆ ಋಣಿ.

ಅಧ್ಯಕ್ಷ: ನೀವು ಅವರನ್ನು ಸೇರಿಸಿಕೊಳ್ಳಬೇಕು ಮತ್ತು ಪರಸ್ಪರ ಅಭಿಪ್ರಾಯಗಳ ವಿನಿಮಯದ ಮೂಲಕ ನಾವು ಒಂದು ಒಪ್ಪಂದಕ್ಕೆ ಬರುವುದು ಸಾಧ್ಯವಿಲ್ಲವೋ ಎಂಬುದನ್ನು ನೋಡಬೇಕು.

ಸರ್. ಪಿ. ಸಿ. ಮಿತ್ತರ: ಮಾನ್ಯರೇ, ಆ ಚರ್ಚೆಗಳಲ್ಲಿ ನಾನೂ ಭಾಗವಹಿಸಲು ಇಚ್ಛಿಸುತ್ತೇನೆ.

ಡಾ. ಅಂಬೇಡ್ಕರ್: ಈ ಪ್ರಸ್ತಾವಗಳನ್ನು ನಾವು ಈಗ ಮಾತ್ರವೇ ಕೇಳಿದೆವು ಮತ್ತು ಶೇಕಡಾವಾರು ಪ್ರಮಾಣ ಈಗ ಮುಗಿದುಹೋಗಿದೆ. ಆದರೆ ಈ ಎಲ್ಲವುಗಳನ್ನೂ ನೀವು ಕೂಡಿಸುತ್ತಾ ಹೋದರೆ ಶೇಕಡಾವಾರು ೧೦೦ಕ್ಕಿಂತಲೂ ಹೆಚ್ಚಾಗುತ್ತದೆ ಎಂದು ನನಗೆ ಅನಿಸುತ್ತದೆ. ಆದರೆ ವಾಸ್ತವವಾಗಿ ಅವರು ಪಂಜಾಬ, ಬಂಗಾಲ ಮತ್ತು ಇತರ ಕಡೆಗಳಲ್ಲಿ ಇರುವ ಇತರ ಕೋಮುಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಈ ಕೋಮುಗಳವರು ಅಂದರೆ ಸಿಖ್ಖರು, ಮೊಹಮಡನ್ನರು ಮತ್ತು ಹಿಂದೂಗಳು ೪೯ ಮತ್ತು ೨೦, ಈ ರೀತಿಯಲ್ಲಿ ಸ್ಥಾನಗಳನ್ನು ಹಂಚಿಕೊಳ್ಳುತ್ತಾ ಹೋದರೆ ಇತರ ಜನತೆಗೆ ಏನು ಉಳಿಯುತ್ತದೆ? ಅವರನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೋ ಅಥವಾ ಬೇಡವೋ? ಪ್ರಧಾನ ಮಂತ್ರಿಗಳೇ ಅದು ತುಂಬಾ ಗಂಭೀರವಾದ ಪ್ರಶ್ನೆಯಾಗಿದೆ.

ಲೆ. ಕರ್ನಲ್ ಗಿಡ್ನೆ: ನಾನೂ ನನ್ನ ನಮ್ಮ ದನಿಯನ್ನು ಎತ್ತಬಹುದೇ? ಈ ತಿಕ್ಕಾಟದಲ್ಲಿ ಇದು ತುಂಬಾ ಸಣ್ಣ ಧ್ವನಿ ಎನ್ನುವುದು ನನಗೆ ಗೊತ್ತಿದೆ. ಡಾ.ಅಂಬೇಡ್ಕರರು ಈಗ ತಾನೇ ಹೇಳಿದ್ದನ್ನು ನಾನು ಅನುಮೋದಿಸುತ್ತೇನೆ. ನಿಜವಾಗಿಯೂ ನೀವು ರಾಜಕೀಯದ ಒಂದು ರೂಪಾಯಿಯನ್ನು ತೆಗೆದುಕೊಂಡು ೧೫ ಆಣೆ ೯ ಪೈಗಳನ್ನು ಬಹುಸಂಖ್ಯಾತ ಕೋಮಿನವರಿಗೆ ಕೊಟ್ಟು ಕೇವಲ ೩ ಪೈಗಳನ್ನು ಮಾತ್ರ ಇತರ ಕೋಮಿನವರಿಗೆ ಹಂಚಿಕೊಳ್ಳಲು ಬಿಡಲಾರಿರಿ. ಚಿಕ್ಕಪುಟ್ಟ ಕೋಮಿನವರ ಪರವಾಗಿ ಈ ಹಂಚಿಕೆಯಲ್ಲಿ ನಾವೂ ಹೇಳುವುದು ಇದೆ ಎಂದು ನಾನು ಭಾವಿಸಿದ್ದೇನೆ.

---

* ನಂ. ೩ನೆಯ ಉಪಸಮಿತಿಯ (ಅಲ್ಪಸಂಖ್ಯಾತರು) ನಡಾವಳಿ, ಪುಟಗಳು : ೧೨೭–೨೮

ಅಧ್ಯಕ್ಷ: ಅದೇ ನಿಜವಾದ ಅಂಶವಾಗಿದೆ. ಈ ವಿಷಯವನ್ನು ನಾವು ಇನ್ನೂ ಚಿಕ್ಕ ಸಭೆಯಲ್ಲಿ ಮತ್ತು ಸ್ವಲ್ಪ ಹೆಚ್ಚಿಗೆ ಆದರೆ ಔಪಚಾರಿಕವಾಗಿ ಚರ್ಚಿಸುವುದು ಉತ್ತಮವೆಂದು ನನಗೆ ಅನಿಸುತ್ತಿದೆ.

ಮಿ. ಫುಟ್: ಯಾವ ಟಿಪ್ಪಣಿಗಳನ್ನೂ ತೆಗೆದುಕೊಳ್ಳದೆಯೆ?

ಅಧ್ಯಕ್ಷ: ಮತ್ತು ನೀವು ಒಪ್ಪಿದರೆ ನಾನು ಅಧ್ಯಕ್ಷನಾಗಿ ಇರುತ್ತೇನೆ ಮತ್ತು ಸರ್ ಮಹಮ್ಮದ್ ಶಫಿ ಅವರು ಮಾಡಿದ ಅತ್ಯಂತ ಆಶಾದಾಯಕ ಸೂಚನೆಯು ಈ ಪರಿಸ್ಥಿತಿಯನ್ನು ಸರಳಗೊಳಿಸಲು ಏನು ಮಾಡಬಹುದು ಎಂಬ ಬಗ್ಗೆ ವಿಚಾರಿಸುತ್ತೇನೆ.

# ಆರನೆಯ ಸಭೆ
# ೧೬ನೇ ಜನವರಿ ೧೯೩೧

* ಅಧ್ಯಕ್ಷ: ಹಲವಾರು ಕೋಮುಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನವನ್ನು ಸಂರಕ್ಷಿಸುವ ಮತ್ತು ಜನಾಂಗ ಬೇಧವಿಲ್ಲದೆಯೇ ಪ್ರತಿಯೊಬ್ಬ ವ್ಯಕ್ತಿಯೂ "ಮುಕ್ತ ಬದಲಾವಣೆ" ಇತ್ಯಾದಿಗಳನ್ನು ಒದಗಿಸಿ ಕೊಡುವ ಮೂಲಭೂತ ಹಕ್ಕುಗಳ ಘೋಷಣೆಯನ್ನು ಸಂವಿಧಾನದಲ್ಲಿ ಸೇರಿಸುವುದು.

ರಾಜಾ ನರೇಂದ್ರನಾಥ: "ಮುಕ್ತ ಸಮಾನ ಆಚರಣೆ" ಎಂದು ಹೇಳಬೇಕೆಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷ: "ಆತನ ಅಥವಾ ಆಕೆಯ ಆರ್ಥಿಕ, ಸಾಮಾಜಿಕ ಮತ್ತು ಸಿವಿಲ್ ಹಕ್ಕುಗಳು."

ರಾಜಾ ನರೇಂದ್ರನಾಥ: "ಆತನ ಅಥವಾ ಆಕೆಯ" ಇದು ಬೇಕು ಎಂದು ನನಗೆ ಅನಿಸುವುದಿಲ್ಲ. "ನಾಗರಿಕರಿಂದ ಆರ್ಥಿಕ, ಸಾಮಾಜಿಕ ಮತ್ತು ಸಿವಿಲ್ ಹಕ್ಕುಗಳ ಮುಕ್ತ ಸಮಾನ ಆಚರಣೆ" ಎಂದು ನಾವು ಹೇಳಲಾರೆವೆ? ನಾನು ಅದನ್ನು ಒತ್ತಾಯಿಸುವುದಿಲ್ಲ.

ಅಧ್ಯಕ್ಷ: "ಸಮಾನ" ಇದು ಮೂಲ ಅಂಶ, ಆದರೆ ಇತರ ವಿಷಯಗಳು ಅಷ್ಟು ಮಹತ್ವದವುಗಳೆಂದು ನನಗೆ ಅನಿಸುವುದಿಲ್ಲ.

ರಾಜಾನರೇಂದ್ರನಾಥ: "ಸಮಾನ" ಎಂಬ ಪದವನ್ನು ಡಾ.ಅಂಬೇಡ್ಕರರ ಭಾಷಣದಲ್ಲಿ ಉಪಯೋಗಿಸಲಾಗಿದೆ.

ಸರ್ ಎಂ. ಶಫಿ: "ಮುಕ್ತ" ಪದ ಅದನ್ನು ಒಳಗೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ.

ಡಾ. ಸಫಾಅತ ಅಹಮದ್ ಖಾನ್: "ಅದು ಈಗಿರುವಂತೆಯೇ ಇರಬೇಕೆಂದು ನಾನು ಭಾವಿಸುತ್ತೇನೆ."

ಅಧ್ಯಕ್ಷ: "ಪ್ರತಿ ವ್ಯಕ್ತಿಗೂ ದೊರಕಿಸಿ ಕೊಡುವುದು... ಮುಕ್ತ ಆಚರಣೆ" ಎಂದು ಅದು ಹೇಳುತ್ತದೆ.

ಸಮಾನ ಆಚರಣೆಯನ್ನು ನೀವು ದೊರಕಿಸಿ ಕೊಡಲಾರಿರಿ. ಏಕೆಂದರೆ ಸಮಾನ ಅನ್ನುವುದು ತನ್ನ ಹಕ್ಕನ್ನು ಉಪಯೋಗಿಸುವ ವ್ಯಕ್ತಿಯ ಉಪಾಧಿಯಾಗಿದೆ.

ರಾಜಾನರೇಂದ್ರನಾಥ:– ಹಕ್ಕುಗಳಲ್ಲಿ ಸಮಾನತೆ ಎಂದು ನಾನು ಕೇಳಿದೆ. ಸಮಾನ ಹಕ್ಕುಗಳು.

ಮಿ. ಚಿಂತಾಮಣಿ: ಈ ವಸ್ತುನಿಷ್ಠ "ಸಮಾನ" ಪದದ ಯಾವುದೇ ವಿಶಿಷ್ಟವಾದ ಔಚಿತ್ಯ ನನಗೆ ಕಂಡು ಬರುವುದಿಲ್ಲ.

ರಾಜಾ ನರೇಂದ್ರನಾಥ: ಅದನ್ನು ಡಾ. ಅಂಬೇಡ್ಕರ್ ಅವರ ಕರಡು ಪ್ರತಿಯಲ್ಲಿ ಉಪಯೋಗಿಸಲಾಗಿದೆ.

---

* ಪ್ರೊಸೀಡಿಂಗ್ಸ್ ಆಫ್ ದಿ ಸಬ್‌ಕಮಿಟಿ ಸಂ. III (ಮೈನಾರಿಟೀಸ್), ಪುಟಗಳು: ೧೨೯–೩೧

ಅಧ್ಯಕ್ಷ: ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಹಕ್ಕಿನ ಮುಕ್ತ ಚಲಾವಣೆಯನ್ನು ನೀವು ದೊರಕಿಸಿಕೊಳ್ಳ ಬಹುದು. ಆದರೆ, ಆತನು ಅವುಗಳನ್ನು ಸಮಾನತಾ ಷರತ್ತಿನ ಮೇಲೆ ಆಚರಿಸದಿದ್ದರೆ, ಅದು ಅವನ ಕಾರ್ಯವೇ ಹೊರತು ಸರಕಾರದ ಕಾರ್ಯವಲ್ಲ.

ರಾಜಾ ನರೇಂದ್ರನಾಥ: ತುಂಬಾ ಒಳ್ಳೆಯದು.

ಅಧ್ಯಕ್ಷ: "ಆತನ ಅಥವಾ ಆಕೆಯ" ಇರಕೂಡದೆಂದು ನಾನು ಭಾವಿಸುತ್ತೇನೆ.

ಡಾ. ಅಂಬೇಡ್ಕರ್: ಪ್ಯಾರಾದ ಕೊನೆಯಲ್ಲಿನ "ಹಕ್ಕುಗಳು" ಪದದ ಅನಂತರ "ಪಕ್ಷಪಾತವಿಲ್ಲದೆ" ಎಂಬ ಪದಗಳನ್ನು ಸೇರಿಸಬೇಕೆಂಬುದು ನನ್ನ ಇಚ್ಛೆ.

ಅಧ್ಯಕ್ಷ: "ಜನಾಂಗ, ಜಾತಿ, ವಂಶ ಅಥವಾ ಲಿಂಗ" ಎಂದು ಈಗಾಗಲೇ ಅದು ಹೇಳುತ್ತದೆ.

ಡಾ. ಅಂಬೇಡ್ಕರ್: "ಅಸ್ಪೃಶ್ಯತಾ" ಪದವು ಸರಿಯೇ. ಅಲ್ಲಿ ಅದನ್ನು ನೀವು ಸೇರಿಸಿದ್ದೀರಿ.

ಅಧ್ಯಕ್ಷ... "ಅಸ್ಪೃಶ್ಯತಾ" ಜನಾಂಗ ಮತ್ತು ಜಾತಿ ಈಗಾಗಲೇ ಅಲ್ಲಿವೆ.

ಡಾ.ಮೂಂಜೆ: ಅದು ಸರಿಯೆಂದು ನನ್ನ ಭಾವನೆ.

ಡಾ. ಅಂಬೇಡ್ಕರ್: ವಿಷಯವನ್ನು ಚೆನ್ನಾಗಿ ವಿವರಿಸಲು ಆ ಪದವನ್ನು ಸೇರಿಸುವುದು ಉತ್ತಮವೆಂದು ನನಗೆ ತೋರುತ್ತದೆ.

ಅಧ್ಯಕ್ಷ: ನಾವು ಬಳಸುವ ಪದಗಳನ್ನು ನೋಡಿ ಜನ ನಗುವಂತಾಗುವ ಹಾಗೆ ದಸ್ತಾವೇಜನ್ನು ಸಿದ್ಧಪಡಿಸುವುದು ಬೇಡ.

ಡಾ. ಅಂಬೇಡ್ಕರ್: ಜಾತಿ ಮತ್ತು ಅಸ್ಪೃಶ್ಯತೆಯ ನಡುವೆ ನಾವು ವ್ಯತ್ಯಾಸವನ್ನು ಮಾಡಬೇಕು ಎಂದು ನನಗನಿಸುತ್ತದೆ. ಜಾತಿ ಹೊಂದಿರುವ ಅನೇಕ ಜನರು ಅಸ್ಪೃಶ್ಯತೆಯ ತೊಂದರೆಗಳನ್ನು ಅನುಭವಿಸುವುದಿಲ್ಲ.

ರಾಜಾ ನರೇಂದ್ರನಾಥ: ಮುಸ್ಲಿಮರಲ್ಲಿಯೂ ಜಾತಿ ಇದೆ.

ದಿವಾನ ಬಹಾದ್ದೂರ ರಾಮಚಂದ್ರರಾವ್: ಅಸ್ಪೃಶ್ಯರಲ್ಲಿಯೂ ಜಾತಿ ಇದೆ. "ಜಾತಿ" ವಿಶಾಲ ಅರ್ಥವನ್ನು ಹೊಂದಿರುತ್ತದೆ.

ಮಿ. ಫುಟ್: ಸಮಂಜಸವಾದ ಬದಲಾವಣೆಯನ್ನು ಸೂಚಿಸದ ಹೊರತು, ಈ ಹಂತದಲ್ಲಿ ಯಾವುದೇ ಬದಲಾವಣೆಯನ್ನು ಮಾಡುವ ಕಾಲ ಮಿಂಚಿದೆ ಎಂದು ನನ್ನ ಅಭಿಪ್ರಾಯ.

ಡಾ. ಅಂಬೇಡ್ಕರ್: ಅಸ್ಪೃಶ್ಯತೆಯ ಕಾರಣದಿಂದಾಗಿ ಅಥವಾ ಅನ್ಯಥಾ ಸಾಮಾಜಿಕ ಮತ್ತು "ಸಿವಿಲ್ ಹಕ್ಕುಗಳು" ಎಂದು ಹೇಳಲು ನಾನು ಇಚ್ಛಿಸುತ್ತೇನೆ.

ಅಧ್ಯಕ್ಷ: ಅಸ್ಪೃಶ್ಯತೆಯ ಸಿವಿಲ್ ಹಕ್ಕುಗಳ ಉಲ್ಲಂಘನೆಯಾಗಿದೆ. ಅದನ್ನು ಹೆಚ್ಚು ಖಚಿತಪಡಿಸದೆ ನೀವು ಪದಗಳನ್ನು ಜೋಡಿಸುತ್ತಾ ಹೋದರೆ, ವಾಸ್ತವವಾಗಿ ಅದಕ್ಕೆ ಪ್ರತ್ಯೇಕತಾ ಭಾವವೇ ಇರುತ್ತದೆ. ಸಾಮಾನ್ಯ ತತ್ವಕ್ಕೆ ನೀವು ನಿರ್ದಿಷ್ಟ ಅನ್ವಯಾರ್ಥವನ್ನು ಕೊಟ್ಟರೆ ಅದು ಸಂಕುಚಿತವಾಗುತ್ತದೆ. ಅದನ್ನು ನೀವು ಒಂದೇ ನಿರ್ದಿಷ್ಟ ದೂರಿಗೆ ಅನ್ವಯಿಸುತ್ತಿದೆ ಎಂದು ಅರ್ಥ ಮಾಡುವುದಕ್ಕಿಂತ ನೀವು ನಿಮ್ಮ ಸಾಮಾನ್ಯ ತತ್ವವನ್ನು ಯುಕ್ತವಾಗಿಡುವುದಾದರೆ ಅದರ ಅನ್ವಯಕ್ಕೆ ಸಂಬಂಧಿಸಿ ನೀವು ಹೆಚ್ಚು ಸುರಕ್ಷಿತರಾಗಿರುತ್ತೀರಿ.

ಡಾ. ಅಂಬೇಡ್ಕರ್: ಅದು ನಿಜ. ಆದರೆ, ಈ ವರದಿಯನ್ನು ಯಾರೇ ಅಭ್ಯಸಿಸಲಿ ಅವರು ಅಸ್ಪೃಶ್ಯತಾ ಕಾರಣದಿಂದಾಗಿ ಯಾವುದೇ ಅಸಮರ್ಥತೆಯನ್ನು ವಿಧಿಸಬೇಕೆಂದು ಈ ಸಮಿತಿಯು ಎಂದೂ ಅರ್ಥ ಮಾಡಿಲ್ಲ ಎಂಬುದನ್ನು ಅರಿತುಕೊಳ್ಳಬೇಕೆಂದು ನಾನು ಇಚ್ಛೆಪಡುತ್ತೇನೆ.

ಅಧ್ಯಕ್ಷ: ಅಂಥ ಸಂದರ್ಭದಲ್ಲಿ, ಆ ಬಗ್ಗೆ ಏನಾದರೂ ಸಂಶಯವಿದ್ದರೆ ನಾನು ಸಮಿತಿಯ ಅಭಿಪ್ರಾಯವನ್ನು ಪಡೆದು ಅದನ್ನು ನಿರ್ಣಯಿಸುತ್ತೇನೆ. ಡಾ. ಅಂಬೇಡ್ಕರ್ ನೀವು ಇನ್ನೂ ಒತ್ತಾಯಿಸುತ್ತೀರಾ?

ಡಾ. ಅಂಬೇಡ್ಕರ್: ಮಾನ್ಯರೇ, ನಾನು ಹಾಗೆ ಮಾಡಲೇಬೇಕಾಗುತ್ತದೆ ಎಂಬ ಭಯ ನನಗೆ. ನನ್ನ ಭಿನ್ನಾಭಿಪ್ರಾಯವನ್ನು ಟಿಪ್ಪಣಿ ಮಾಡಬೇಕು. ಈ ವಿಷಯವನ್ನು ಸ್ಪಷ್ಟಪಡಿಸಬೇಕೆಂದು ನಾನು ಇಚ್ಛಿಸುತ್ತೇನೆ.

ಅಧ್ಯಕ್ಷ: "ಪಕ್ಷಪಾತ" ಪದದ ಬದಲಿಗೆ "ಭೇದಭಾವ" ಪದವನ್ನು ಉಪಯೋಗಿಸಬೇಕೆಂಬ ಸೂಚನೆಯನ್ನು ಮಾಡಲಾಗಿದೆ. ಆಗ ಅದನ್ನು "ಜನಾಂಗ, ಜಾತಿ ಭೇದಭಾವವಿಲ್ಲದೆ" ಇತ್ಯಾದಿಯಾಗಿ ಓದಬಹುದು.

ಡಾ. ಅಂಬೇಡ್ಕರ್: ಹೌದು, ಅದು ಹಾಗಾಗುತ್ತದೆ.

ಅಧ್ಯಕ್ಷ: ಸರಿ, ತಾವು ಆ ಬದಲಾವಣೆಯನ್ನು ಮಾಡುತ್ತೀರಾ? ಆಗ ಅದನ್ನು ಪಕ್ಷಪಾತವಿಲ್ಲದೆ ಎಂದು ಓದಬಹುದು.

ಡಾ. ಅಂಬೇಡ್ಕರ್: ಹೌದು.

ಅಧ್ಯಕ್ಷ: ಅದು ಉತ್ತಮ ತಿದ್ದುಪಡಿಯಾಗಿದೆ. ಬೇರೆ ಯಾವುದೂ ಸರಿಯಾಗುತ್ತಿರಲಿಲ್ಲ ಎಂದು ನಾನು ಭಾವಿಸುತ್ತೇನೆ.

ಡಾ. ಅಂಬೇಡ್ಕರ್: ಮಾನ್ಯರೇ ಮೂರನೇ ಪ್ಯಾರಾವು ಈ ಸಮಿತಿಯ ಮುಂದೆ ಬೇರೆ ಬೇರೆ ಕೋಮಿನವರು ಇಟ್ಟ ಬೇಡಿಕೆಗಳ ಸಾರಾಂಶವಾಗಿದೆ ಎಂದು ನನಗೆ ತೋರುತ್ತದೆ.

ಅಧ್ಯಕ್ಷ: ಹೌದು.

ಡಾ. ಅಂಬೇಡ್ಕರ್: ಈ ದೃಷ್ಟಿಯಲ್ಲಿ ನಿಮ್ಮ ವರ್ಗದವರು ತಮ್ಮವೇ ಆದ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ, ಇತರ ಅಲ್ಪಸಂಖ್ಯಾತರ ಸ್ಥಾನಕ್ಕಿಂತ ತಮ್ಮ ಸ್ಥಾನವು ಸ್ವಲ್ಪ ಭಿನ್ನವಾಗಿದೆ ಎಂಬುದರ ಕಾರಣದಿಂದಾಗಿ, ಅವರು ಮಾಡಿದ ಬೇಡಿಕೆಗಳನ್ನೂ ಸೇರಿಸಬೇಕೆಂದು ನಾನು ಸೂಚಿಸಲು ಇಚ್ಛಿಸುತ್ತೇನೆ. ಈ ಸಮ್ಮೇಳನವು ಅವುಗಳನ್ನು ಒಪ್ಪಲಾಗಿರುವ ಪ್ರಸ್ತಾವಗಳೆಂದು ಸೇರಿಸಬೇಕೆಂದು ಇದರ ಅರ್ಥವಲ್ಲ. ಆದರೆ, ಅದರ ಪರಿಪೂರ್ಣತೆಗಾಗಿ ಈ ಬೇಡಿಕೆಗಳನ್ನು ಸೇರಿಸಬೇಕು. ಈ ಕಾರಣದಿಂದಾಗಿ ಈ ಪ್ಯಾರಾಕ್ಕೆ "ಹಕ್ಕುಗಳು" ಪದದ ಅನಂತರ ಕೆಳಗೆ ಹೇಳಿದ ಪ್ಯಾರಾವನ್ನು ಸೇರಿಸಬೇಕೆಂದು ನಾನು ಸೂಚಿಸುತ್ತೇನೆ. "ಅಸ್ಪೃಶ್ಯತೆಯನ್ನು ಅದರ ಎಲ್ಲ ಅನುಷಂಗಿಕ ಅಸಮರ್ಥತೆಗಳನ್ನೂ ಒಳಗೊಂಡಂತೆ ಕಾನೂನಿನ ಮೇರೆಗೆ ತೆಗೆದುಹಾಕಬೇಕು ಮತ್ತು ತಮ್ಮ ಹಕ್ಕುಗಳ ಸ್ವತಂತ್ರ ಮತ್ತು ಮುಕ್ತ ಉಪಭೋಗಕ್ಕೆ ಭರವಸೆ ಕೊಡಬೇಕೆಂದು ನಿಮ್ನ ವರ್ಗದವರು ಒತ್ತಾಯಪೂರ್ವ ವಿನಂತಿಸುತ್ತಾರೆ. ಅವರ ಹಿತಾಸಕ್ತಿಗಳಿಗೆ ಬಾಧೆಯಾದಾಗ ಅಥವಾ ಅವುಗಳನ್ನು ನಿರ್ಲಕ್ಷಿಸಿದಾಗ ಆ ಬಗ್ಗೆ ಗವರ್ನರ್– ಜನರಲ್ಲರಿಗೆ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಅಪೀಲು ಮಾಡುವ ಹಕ್ಕನ್ನು ಕೇಳುತ್ತಾರೆ."

ಅಧ್ಯಕ್ಷ: ಆದರೆ ನೀವು ಸ್ವಲ್ಪ ಗಮನಿಸಬೇಕು. ಈ ಸೂಚನೆಗಳು ಕಾರ್ಯಾತ್ಮಕ ಆಗುವಂತೆ ಮಾಡುವಷ್ಟರ ಮಟ್ಟಿಗೆ ಅವುಗಳ ಬಗ್ಗೆ ವಿವರವಾಗಿ ಚರ್ಚಿಸುವಾಗ ಆ ವಿಷಯ ಬರುತ್ತದೆ.

ಡಾ. ಅಂಬೇಡ್ಕರ್: ನಾನದನ್ನು ಗಮನಿಸಿದ್ದೇನೆ.

ಅಧ್ಯಕ್ಷ: ಭಾಗಶಃ ಶಾಸಕಾಂಗ ಮತ್ತು ಭಾಗಶಃ ಆಡಳಿತಾತ್ಮಕ.

ಡಾ.ಅಂಬೇಡ್ಕರ್: ಆದರೆ ನಾನು ಹೇಳಬಯಸುವುದು ಇಷ್ಟು, ಬೇರೆ ಬೇರೆ ಕೋಮಿನವರು ಈ

ಸಮಿತಿಯ ಮುಂದೆ ಇಟ್ಟಿರುವುದುನ್ನು ಈ ಪ್ಯಾರಾವು ಸಾರಾಂಶ ಮಾಡಿ ಹೇಳಲು ಪ್ರಯತ್ನಿಸುತ್ತಿದೆ ಎಂಬುದನ್ನು ಗಮನಿಸಿದಾಗ, ಇತರ ಕೋಮಿನವರಿಗೆ ಬೇಕಾಗಿದ್ದುದು ನಿರ್ದಿಷ್ಟವಾಗಿ ತಮಗೆ ಮಾತ್ರ ಬೇಕೆಂದು ನಿಮ್ಮ ವರ್ಗದವರು ಮುಂದಿಟ್ಟಿದ್ದರೋ, ಅದು ಪೂರ್ತಿಗೊಳ್ಳುವಂತೆ ಒಳಸೇರಬೇಕು.

ಅಧ್ಯಕ್ಷ: ಆದರೆ "ಭೇದಭಾವವಿಲ್ಲದೆ" ಇತ್ಯಾದಿಯಾಗಿ ಅದು ಹೇಳುತ್ತದೆ.

ಡಾ. ಅಂಬೇಡ್ಕರ್: ಮಾನ್ಯ ಪ್ರಧಾನ ಮಂತ್ರಿಯವರೇ ನನ್ನನ್ನು ಕ್ಷಮಿಸಿರಿ. ಯಾವ ವ್ಯಕ್ತಿಯ ವಿರುದ್ಧವೂ ತಾರತಮ್ಯ ಮಾಡುವುದಿಲ್ಲ ಮತ್ತು ಪ್ರತಿ ವ್ಯಕ್ತಿಗೂ ಮುಕ್ತ ಅನುಭೋಗದ ಭರವಸೆ ಕೊಡಲಾಗಿದೆ ಇತ್ಯಾದಿ ಎಂದು ಸಂವಿಧಾನದಲ್ಲಿ ಹೇಳುವುದು ಒಂದು ವಿಷಯವಾಗಿದೆ; ಆದರೆ, ವಾಸ್ತವವಾಗಿ ನಾವು ಸತ್ಯ ಘಟನೆಗಳನ್ನು ಒಪ್ಪದವರಾಗಿದ್ದೇವೆ ಮತ್ತು ಸಂವಿಧಾನವು ನಮಗೆ ಕೊಟ್ಟ ಹಕ್ಕುಗಳನ್ನು ಅನುಭವಿಸಲು ಜನ ನಮಗೆ ಅವಕಾಶ ಕೊಡುವುದಿಲ್ಲ. ನಾನು ಇರುವುದು ಎಷ್ಟು ಸ್ಪಷ್ಟವಾಗಿದೆಯೋ ನಾನು ಹೇಳುವುದೂ ಅಷ್ಟೇ ಸ್ಪಷ್ಟವಾಗಿದೆ. ಕೇವಲ ಕಾಗದದಲ್ಲಿನ ಭರವಸೆ ನನಗೆ ಬೇಡ. ಇಡಿಯ ಕೋಮೇ ನಮ್ಮ ವಿರುದ್ಧವಾಗುತ್ತದೆ. ನಾವು ನಿಜವಾಗಿಯೂ ನಮಗೆ ಕೊಟ್ಟ ಹಕ್ಕುಗಳ ಒಂದು ಹತ್ತಂಶದಷ್ಟನ್ನೂ ಸಹ ಎಂದೂ ಅನುಭವಿಸಲಾರೆವು. ಆ ಕಾರಣದಿಂದಾಗಿ ನಾನು ಹೇಳುವುದೇನೆಂದರೆ ಪ್ರತಿಯೊಂದು ಕೋಮಿನವರಿಗೆ ಇರುವ ವಿಶಿಷ್ಟ ಹಕ್ಕುಗಳು ನಮಗೂ ಇರತಕ್ಕುದೆಂದೂ ಸಂವಿಧಾನವು ಘೋಷಿಸಬೇಕು. ಅಷ್ಟೇ ಅಲ್ಲ, ಆ ಹಕ್ಕುಗಳ ಚಲಾವಣೆಯನ್ನು ರಕ್ಷಿಸಿಕೊಳ್ಳಲು ವಿಧಿ ವಿಧಾನಗಳನ್ನೂ ಸಂವಿಧಾನವು ಹೇಳಬೇಕು.

ಅಧ್ಯಕ್ಷ: ಎಂದರೆ ನಿಮಗೆ ಸರಿಯಾಗುವಂಥ ಕಾನೂನನ್ನು ಶಾಸಕಾಂಗವು ಪಾಸು ಮಾಡದಿದ್ದರೆ, ಆಗ ಸಂವಿಧಾನವನ್ನು ಉಲ್ಲಂಘಿಸಿದಂತಾಗುವುದೇ.

ಡಾ. ಅಂಬೇಡ್ಕರ್: ಅಲ್ಲ, ನಾನು ಸೂಚಿಸುವುದು ಇದು. ನಾನು ನಿಮಗೆ ಹಂಚಿದ ವಿಜ್ಞಾಪನಾ ಪತ್ರದಲ್ಲಿ ನಾವು ಭಾವಿಸಿದಂತೆ ನಮ್ಮ ಹಕ್ಕುಗಳ ಚಲಾವಣೆಯನ್ನು ಮಾಡುವಲ್ಲಿ ಅವುಗಳನ್ನು ರಕ್ಷಿಸಿಕೊಳ್ಳಬಹುದೆಂಬ ಬಗ್ಗೆ ನಾನು ಹಲವು ವಿಧಿ ವಿಧಾನಗಳನ್ನು ಸೂಚಿಸಿದ್ದೇನೆ. ಈ ಸಮಿತಿಯು ಹಾಗೆ ಮಾಡುವುದು ಸಮುಚಿತವಾದ ಮಾರ್ಗವೆಂದು ಒಪ್ಪದಿರಬಹುದು. ಅದನ್ನು ಮಾಡಲು ಇತರ ಅನೇಕ ವಿಧಿ ವಿಧಾನಗಳು ಇವೆ ಎಂದು ಸಮಿತಿಯು ಹೇಳಬಹುದು. ಆದರೆ, ನಾನು ಹೇಳಬೇಕಾದುದು ಇಷ್ಟೆ; ನಿಮ್ಮ ವರ್ಗದವರನ್ನು ಇತರ ಕೋಮುಗಳೊಡನೆ ಸಮಾನ ಸ್ಥಾನದಲ್ಲಿ ಇರಿಸಲಾಗಿದೆ ಎಂದು ಘೋಷಿಸುವುದರಿಂದ ಮಾತ್ರವೇ ಅವರು ಸಮಾಧಾನಪಟ್ಟಿಲ್ಲ ಎಂಬುದನ್ನು ಸೂಚಿಸಿದ್ದಾರೆ ಎಂಬುದನ್ನು ಈ ಕರಡು ವರದಿ ಮಾಡತಕ್ಕುದು. ಸಂವಿಧಾನವೇ ಅವರಿಗೆ ಹಕ್ಕುಗಳನ್ನು ಕೊಡಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಅದಕ್ಕಿಂತ ಹೆಚ್ಚಿನದೇನೂ ನನಗೆ ಬೇಕಾಗಿಲ್ಲ. ಅದು ವರದಿಯನ್ನು ಪೂರ್ಣಗೊಳಿಸುತ್ತದೆ. ನಾನು ಸಲ್ಲಿಸಿದ ವಿಜ್ಞಾಪನಾ ಪತ್ರದಲ್ಲಿ ಆ ಬಗ್ಗೆ ಒಂದು ನಿರ್ದಿಷ್ಟ ಕ್ರಮವನ್ನು ನಾನು ಶಿಫಾರಸು ಮಾಡಿರುವುದನ್ನು ನೀವು ಕಾಣುತ್ತೀರಿ.

ಮಿ. ಫೂಟ್: ಡಾ. ಅಂಬೇಡ್ಕರ್ ಅವರ ಬಗ್ಗೆ ಪೂರ್ಣ ಸಹಾನುಭೂತಿ ಇದೆ. ಆದರೆ, ನನಗೆ ಕಂಡು ಬಂದ ಒಂದೇ ಒಂದು ತೊಂದರೆ ಎಂದರೆ, ನಿಮ್ಮ ಸ್ಥಾನಕ್ಕೆ ಸಂಬಂಧಪಟ್ಟ ಹೇಳಿಕೆಯಲ್ಲಿ ಅದನ್ನು ಸೇರಿಸಿದರೆ ಅದು ಪರಿಪೂರ್ಣವಾದ ಹೇಳಿಕೆಯಾಗುತ್ತಿತ್ತು. ನಾವು ಈಗಾಗಲೇ ಆ ಬಗೆಗಿನ ಟಿಪ್ಪಣಿಗಳು ಮತ್ತು ಮಾಡಲಾದ ಕ್ಲೇಮುಗಳ ಬಗ್ಗೆ ವಿಚಾರಿಸುತ್ತಿದ್ದೇವೆ ಮತ್ತು ೧೬ನೇ ಪ್ಯಾರಾದ ಕೊನೆಯಲ್ಲಿ ಆ ಬಗ್ಗೆ

* ಉಪಸಮಿತಿ–೩ರ (ಅಲ್ಪಸಂಖ್ಯಾತರು) ನಡಾವಳಿಗಳು, ಪುಟಗಳು ೧೩೩–೩೫.

ಸಹಾನುಭೂತಿ ಪರವಾದ ಅಳವಡಿಕೆಯನ್ನೂ ಮಾಡಲಾಗಿದೆ. ನೀವು ಈಗ ಯಾವುದೇ ಕ್ಲೇಮನ್ನು ಮಾಡುವುದಾದರೆ, ಅದನ್ನು ನೀವು ಸಂಪೂರ್ಣವಾಗಿ ನಿಮ್ಮ ವಿಜ್ಞಾಪನಾ ಪತ್ರದಲ್ಲಿ ಹೇಳಲೇಬೇಕಾದ ಅಪಾಯ ಉಂಟಾಗಬಹುದೆಂದು ನನಗೆ ಕಂಡುಬರುತ್ತದೆ.

ಡಾ. ಅಂಬೇಡ್ಕರ್: ೧೬ನೇ ಪ್ಯಾರಾದ ಬಗ್ಗೆ ಹೇಳಲು ನಾನು ಇಚ್ಛಿಸುತ್ತೇನೆ. ಕೊನೆಯ ಎರಡು ವಾಕ್ಯಗಳು ನಿಮ್ಮ ವರ್ಗದವರ ಬಗ್ಗೆ ಉಲ್ಲೇಖಿಸುತ್ತವೆ. ಅವರಿಗೆ ಹಂಚಬೇಕಾದ ಸ್ಥಾನಗಳ ಬಗ್ಗೆ ಮಾತ್ರ ಅವು ಸೀಮಿತವಾಗಿವೆ. ಅದು ಸಂಪೂರ್ಣವಾಗಿ ಬೇರೆ ವಿಷಯವೇ ಆಗಿದೆ. ನಾನು ಹೇಳುವುದು ಇದು. ಸಂವಿಧಾನವು ನನಗೆ ಕೆಲವು ಹಕ್ಕುಗಳನ್ನು ಕೊಡಬಹುದು. ಆದರೆ, ಭಾರತದಲ್ಲಿನ ಶೆಕಡಾ ೯೯ರಷ್ಟು ಜನ, ನಾವು ಆ ಹಕ್ಕುಗಳನ್ನು ಚಲಾಯಿಸಲು ಬಿಡುವುದಿಲ್ಲ. ನನ್ನ ಹಕ್ಕನ್ನು ಯಾರಾದರೂ ಉಲ್ಲಂಘಿಸಿದರೆ ಆತನು ದಂಡನೆಗೆ ಅರ್ಹನು ಎಂದು ಸಂವಿಧಾನವು ಉಪಬಂಧಿಸದ ಹೊರತು ಆ ಕಾಗದ ದಲ್ಲಿನ ಹಕ್ಕುಗಳಿಂದ ನನಗೆ ಏನು ಪ್ರಯೋಜನ? ನಾನು ಹೇಳುವುದಿಷ್ಟೇ. ಈ ಸಭೆಯು ನಾನು ಮಾಡಿದ ಪ್ರಸ್ತಾವಗಳನ್ನು ಅಳವಡಿಸಿಕೊಳ್ಳಬೇಕೆಂದು ನಾನು ಒತ್ತಾಯಿಸುವುದಿಲ್ಲ. ಉಪಸಮಿತಿಯಲ್ಲಿ ನಿಮ್ಮ ವರ್ಗ ದವರ ಪರವಾಗಿ ನಾನು ಹೇಳಿದ್ದನ್ನು ಒಳಗೊಂಡು ಸಂವಿಧಾನವು ಪೂರ್ಣಗೊಳ್ಳಬೇಕೆಂಬುದು ನನಗೆ ಬೇಕಾಗಿದೆ.

ಅಧ್ಯಕ್ಷ: ನಿಮ್ಮ ವಾದದ ಬಗ್ಗೆ ನಮಗೆ ಸಂಪೂರ್ಣ ಸಹಾನುಭೂತಿ ಇದೆ. ಮತ್ತು ನಾವು ಅದನ್ನು ಸಮರ್ಥಿಸಲು ಸಿದ್ಧರಿದ್ದೇವೆ. ಆದರೆ, ಮೂಲಭೂತ ಹಕ್ಕುಗಳನ್ನು ಘೋಷಿಸುವ ಪ್ಯಾರಾವನ್ನು ಸಂವಿ ಧಾನದಲ್ಲಿ ಸೇರಿಸುವುದರ ಮತ್ತು ಆ ಮೂಲಭೂತ ಹಕ್ಕುಗಳ ಜಾರಿಗಾಗಿ ಕಾನೂನು ರಚಿಸು ವುದರ ನಡುವೆ ವ್ಯತ್ಯಾಸವಿರುವುದು ವಾಸ್ತವ ಸಂಗತಿ. ಕಾನೂನನ್ನು ಜಾರಿಗೊಳಿಸಲು ಬೇಕಾದ ವಿವರ ಗಳನ್ನು ಸಂವಿಧಾನಾತ್ಮಕ ಘೋಷಣೆಯಲ್ಲಿ ನೀವು ಸೇರಿಸಲಾರಿರಿ. ನೀವು ಮಾಡಬೇಕಾದುದು ಇಷ್ಟು. ಸಂವಿಧಾನದಲ್ಲಿ ನೀವು ನಿಮ್ಮ ಪ್ರಾತಿನಿಧ್ಯವನ್ನು ಪಡೆದಾಗ ನಿಮ್ಮ ಹಕ್ಕುಗಳ ಘೋಷಣೆ ಆದಾಗ ನೀವು ನಿಮ್ಮ ಜನತೆಯ ಪ್ರತಿನಿಧಿಯಾಗಿ ಮತ್ತು ಶಾಸನ ಸಭೆಯಲ್ಲಿ ಇತರರ ಸಹಕಾರದೊಂದಿಗೆ, ಸಂವಿ ಧಾನದಲ್ಲಿ ಘೋಷಿಸಲಾರದುದನ್ನು ಕಾರ್ಯಗತಗೊಳಿಸಲು ಬೇಕಾಗುವ ಕಾನೂನನ್ನು ಪಾಸು ಮಾಡಿಕೊಳ್ಳಬಹುದು ಮತ್ತು ಸಂವಿಧಾನವನ್ನು ನಾವು ಹಾಗೆ ಕಾರ್ಯಗತಗೊಳಿಸದಿದ್ದರೆ ನಾವು ಅದನ್ನು ಎಳ್ಳಷ್ಟೂ ಕಾರ್ಯರೂಪದಲ್ಲಿ ತಂದಂತೆ ಆಗುವುದಿಲ್ಲ. ಹಾಗೆ ಆ ರೀತಿಯಲ್ಲಿ ನೀವು ಎಂದೂ ಮುಂದುವರಿಯಲಾರಿರಿ.

ಡಾ. ಅಂಬೇಡ್ಕರ್: ನಾನು ಹೇಳುವುದು ಇಷ್ಟು– ಮೂಲಭೂತ ಹಕ್ಕುಗಳ ಈ ಘೋಷಣೆ ಯಾವ ಪ್ರಯೋಜನಕ್ಕೂ ಬರುವುದಿಲ್ಲ ಎಂಬ ಬಗ್ಗೆ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾನು ವೈಯಕ್ತಿಕ ವಾಗಿ ಅದಕ್ಕೆ ಯಾವ ಮಹತ್ವವನ್ನೂ ಕೊಡುವುದಿಲ್ಲ. ಆದರೆ, ಏನೇ ಆದಾಗ್ಯೂ ಒಬ್ಬ ವ್ಯಕ್ತಿಗೆ ವೈಯಕ್ತಿಕ ವಾಗಿ ಮಹತ್ವದ ಸಂಗತಿ ಎಂದರೆ ತನ್ನ ಹಕ್ಕುಗಳನ್ನು ಘೋಷಿಸುವುದು ಅಲ್ಲ. ಆದರೆ, ಆ ಹಕ್ಕುಗಳನ್ನು ಚಲಾಯಿಸಲು ಅವನಿಗೆ ಅವಕಾಶ ಇರತಕ್ಕುದು ಎಂಬುದು ಘೋಷಣೆಯಲ್ಲಿ ಹೇಳಲಾಗಿರುವ ಹಕ್ಕು ಗಳಿಗೆ ಅದು ಪರಿಣಾಮಕಾರಿ ರಕ್ಷಣೆ ಆಗಿರುತ್ತದೆ. ಮತ್ತು ಆ ಕಾರಣದಿಂದಾಗಿ ನನಗೆ ಅನ್ಯಾಯ ಆದಾಗ ನಾನು ಪರಿಹಾರ ಪಡೆದುಕೊಳ್ಳುವಂತೆ ಒಂದು ವಿಧಾನವನ್ನು ಸಂವಿಧಾನ ನನಗೆ ಕೊಡ ಬೇಕೆಂಬುದು ನನ್ನ ಬೇಡಿಕೆಯಾಗಿದೆ. ಅಸ್ಪೃಶ್ಯತೆ ಇತ್ಯಾದಿ ಇಲ್ಲ ಎಂದು ಹೇಳುವುದರಿಂದ ಮಾತ್ರ ಯಾವ ಉಪಯೋಗವಿಲ್ಲ.

ಅಧ್ಯಕ್ಷ: ವಾಸ್ತವ ವಿಷಯವೆಂದರೆ, ನಮ್ಮ ಮನಸ್ಸಿನಲ್ಲಿ ನಮಗೆ ಬೇಕಾದ ಅಂಶ ಸ್ಪಷ್ಟವಿದೆ. ಅದನ್ನು ಪುನಃ ಹೇಳುವ ಅವಶ್ಯಕತೆ ಇಲ್ಲ. ಆದರೆ, ಡಾ. ಅಂಬೇಡ್ಕರ್ ಅವರು ಹೇಳುವುದೆಂದರೆ, ಕಾನೂನು ಮೂಲಕ ಜಾರಿಗೊಳಿಸಲಾಗದಂಥ ಕೇವಲ ಸಂವಿಧಾನದಲ್ಲಿನ ಘೋಷಣೆ ಯಾವ ಪ್ರಯೋಜನಕ್ಕೂ ಬಾರದು ಎಂಬುದು, ಅದು ಹಾಗೆಯೇ ಇದೆ. ಕಾನೂನು ಮೂಲಕ ಅದನ್ನು ಜಾರಿಗೊಳಿಸುವಂತೆ ಮಾಡಬೇಕಾದರೆ ಅಪರಾಧಗಳನ್ನು ಮತ್ತು ದಂಡನೆಗಳನ್ನು ರೂಪಿಸುವ ಕಾನೂನುಗಳನ್ನು ಪಾಸು ಮಾಡಬೇಕು. ಪ್ರಪ್ರಥಮವಾಗಿ ಅಪರಾಧಗಳನ್ನು ನಂತರ ದಂಡನೆಗಳನ್ನು ರೂಪಿಸಬೇಕಾಗುತ್ತದೆ. ಈ ಪ್ರಕಾರದ ಅಪರಾಧಗಳನ್ನು ನೀವೇ ಸೃಷ್ಟಿಸಲಾರಿರಿ. ಅದು ಸುರಕ್ಷಿತವಾದುದು ಅಲ್ಲ. ನಾನು ಲಾರ್ಡ್ ರೀಡಿಂಗರ ಅಧೀನದಲ್ಲಿದ್ದೇನೆ. ಅವರು ನ್ಯಾಯವಾದಿ; ನಾನು ಅಲ್ಲ. ನಿಮ್ಮ ಸಂವಿಧಾನಕ್ಕೆ ಸಾಮಾನ್ಯ ಪ್ರಸ್ತಾವನಾ ವಾಕ್ಯಾವಳಿಯನ್ನು ತಯಾರಿಸುವಾಗ, ಸಂವಿಧಾನದ ಮೂಲಕ ನೀನು ಕ್ಲೇಮು ಮಾಡಬಹುದಾದ ಹಕ್ಕುಗಳಿಗಿಂತ ಹೆಚ್ಚಿನ ಹಕ್ಕುಗಳನ್ನು ಕೊಡುವ ಅಪರಾಧಗಳನ್ನು ನೀನು ಸೃಷ್ಟಿಸು. ಸಂವಿಧಾನದ ಮೇರೆಗೆ ನಿನಗೆ ಕೊಡಲಾದ ಹಲವು ಹಕ್ಕುಗಳನ್ನು ನೀನು ಪಡೆದುಕೊಂಡಿರುವಿ ಮತ್ತು ಪರಿಸ್ಥಿತಿ ಏನು ಎಂಬ ಬಗ್ಗೆ ನನಗೆ ಯಾವುದೂ ಖಚಿತವಾಗಿಲ್ಲ. ಈ ಘೋಷಣೆಯನ್ನು ಉಲ್ಲಂಘಿಸಿ ನಿಮ್ಮ ವರ್ಗದವನೊಬ್ಬನನ್ನು ಹಿಂಸೆಪಡಿಸಿದರೆ, ಆ ಬಗ್ಗೆ ಆತನು ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋಗಲಾರೆನೋ?

ಲಾರ್ಡ್ ರೀಡಿಂಗ್: ಎಲ್ಲಾ ಸರಿ, ನಿಜವಾಗಿಯೂ ನೀವು ಆ ಬಗ್ಗೆ ಏನಾದರೂ ಪರಿಹಾರವನ್ನು ಕೊಡಲೇಬೇಕು. ಅದನ್ನು ನೀವು ಅಲ್ಪಾಪರಾಧವನ್ನಾಗಿಯಾದರೂ ಮಾಡಬೇಕು.

ಅಧ್ಯಕ್ಷ: ಅದನ್ನು ನೀವು ಸಂವಿಧಾನದಲ್ಲಿ ಮಾಡಬಲ್ಲಿರೋ?

ಲಾರ್ಡ್ ರೀಡಿಂಗ್: ಇಲ್ಲಾ, ಹಾಗೆ ನಾನು ಭಾವಿಸುವುದಿಲ್ಲ. ನೀವು ಸಧ್ಯ ನನ್ನನ್ನು ಕ್ಷಮಿಸಿರಿ. ಡಾ.ಅಂಬೇಡ್ಕರರು ಅದನ್ನು ಒತ್ತಾಯಿಸುತ್ತಿದ್ದರು ಎಂದು ನಾನು ಭಾವಿಸುವುದಿಲ್ಲ. ನಾನು ತಿಳಿದುಕೊಂಡಂತೆ, "ಮುಕ್ತ ಆಚರಣೆ" ಇತ್ಯಾದಿಗಳ ಕೇವಲ ಘೋಷಣೆ ಮಾಡುವುದರಿಂದ ಅವನಿಗೆ ಸಮಧಾನ ಇಲ್ಲ ಎಂಬ ಬಗ್ಗೆ ತಾನು ಕ್ಲೇಮನ್ನು ಮುಂದಿಟ್ಟ ವಿಷಯವಾಗಿ ಖಚಿತ ಹೇಳಿಕೆಯನ್ನು ನಾವು ಕೊಡಬೇಕೆಂಬುದು ಅವರಿಗೆ ಬೇಕಾಗಿದೆ. ಈ ಹಕ್ಕುಗಳ ಉಲ್ಲಂಘನೆಯ ವಿರುದ್ಧ ರಕ್ಷಣೆ ಇಲ್ಲದ ಹೊರತು ಅದು ಎಳ್ಳಷ್ಟೂ ಉಪಯೋಗವಿಲ್ಲ ಎಂಬ ಸಂಗತಿಯ ಬಗ್ಗೆ ನಮ್ಮ ವಿಶೇಷ ಲಕ್ಷ್ಯವನ್ನು ಸೆಳೆಯುವುದು ಅವರಿಗೆ ಬೇಕಾಗಿದೆ ಮತ್ತು ಅದನ್ನು ಅವರು ಅಷ್ಟಕ್ಕೆ ಬಿಟ್ಟಿರುತ್ತಾರೆ. ಆಮೇಲೆ ಪರಿಹಾರೋಪಾಯ ಏನು ಎಂದು ನೀವು ಪರ್ಯಾಲೋಚಿಸಬೇಕು. ನಾನು ಅವರನ್ನು ಅರಿತುಕೊಂಡಿರುವುದು ಹಾಗೆ.

ಡಾ. ಅಂಬೇಡ್ಕರ್: ಅದು ನನ್ನ ವಾದ.

## ವರದಿಯ ೪ನೇ ಪ್ಯಾರಾದ ಮೇಲಿನ ಚರ್ಚೆ

ಡಾ. ಅಂಬೇಡ್ಕರ್: ೪ನೇ ಪ್ಯಾರಾದ ಎರಡನೆಯ ಉಪಪ್ಯಾರಾಕ್ಕೆ ಒಂದು ತಿದ್ದುಪಡಿಯನ್ನು ಸೂಚಿಸಲು ನಾನು ಇಚ್ಛಿಸುತ್ತೇನೆ. "ನಿಮ್ನ ವರ್ಗಗಳು" ಎಂಬ ಪದದ ನಂತರ "ಪ್ರಾರಂಭಿಕ ಅಲ್ಪಾವಧಿಯನ್ನು ಹೊರತುಪಡಿಸಿ" ಎಂಬ ಪದಗಳನ್ನು ಸೇರಿಸಬೇಕೆಂದು ನಾನು ಬಯಸುತ್ತೇನೆ. ಅದು ಈ ರೀತಿ ಆಗುತ್ತದೆ; "ಪ್ರಾರಂಭಿಕ ಅಲ್ಪಾವಧಿಯನ್ನು ಹೊರತುಪಡಿಸಿ ನಿಮ್ನವರ್ಗದವರಿಗೆ ಅದು ಒಪ್ಪಿತವಾಗುತ್ತದೆ."

ಅಧ್ಯಕ್ಷ: ವಯಸ್ಕ ಮತದಾನವಿದ್ದರೆ ಮಾತ್ರ ಅದನ್ನು ನೀವು ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಡಾ. ಅಂಬೇಡ್ಕರ್: ವಯಸ್ಕ ಮತದಾನ ಇರಲಿ ಅಥವಾ ಇಲ್ಲದೆ ಇರಲಿ ಹತ್ತು ವರುಷಗಳವರೆಗೆ ನಮಗೆ ಪ್ರತ್ಯೇಕ ಮತ ಕ್ಷೇತ್ರಗಳೇ ಇರಬೇಕೆಂದು ನಾನು ಹೇಳಿದ್ದೇನೆ.

ಅಧ್ಯಕ್ಷ: ಮತ್ತು ಬದಲಾವಣೆಯ ಕಾಲದ ನಂತರ ನಿಮ್ಮ ವರ್ಗದವರಿಗೆ ಅದು ಒಪ್ಪಿತವಾಗ ಬಹುದಾಗಿದೆಯೇ?

ಡಾ. ಅಂಬೇಡ್ಕರ್: ಹೌದು.

ಅಧ್ಯಕ್ಷ: ಅದು ಇನ್ನೂ ಹೆಚ್ಚು ನಿಷ್ಕೃಷ್ಟವಾಗುತ್ತದೆ ಎಂಬುದನ್ನು ನೀವು ಒಪ್ಪುತ್ತೀರೋ?

ಮಿ.ಚಿಂತಾಮಣಿ: "ಮತದಾನವು ವಯಸ್ಕ ಮತದಾನವನ್ನು ಆಧರಿಸಿದ ಹೊರತು" ಎಂಬ ಪರಂತುಕ ವನ್ನು ನಾವು ಕೈ ಬಿಡಬೇಕೋ?

ಅಧ್ಯಕ್ಷ: ಇಲ್ಲ. ಮಾಡಲಾಗಿರುವ ಭಾಷಣಗಳನ್ನು ನಾವು ಬದಲಿಸಲಾರೆವು. ಆದರೆ, ಡಾ. ಅಂಬೇಡ್ಕರ್ ಹೇಳಿದ್ದು ವಯಸ್ಕ ಮತದಾನ ಇಲ್ಲದಿದ್ದರೆ ಆಗ ಅವರು ಬೇರೆ ಮತ ಕ್ಷೇತ್ರಗಳನ್ನು ಕೇಳಲೇಬೇಕು ಮತ್ತು ವಯಸ್ಕ ಮತದಾನವಿದ್ದರೆ ಆಗ, ಬದಲಾವಣೆಯ ಅವಧಿಯ ನಂತರ, ಅವುಗಳನ್ನು ಅವು ಪರಿತ್ಯಜಿಸಬೇಕೆಂಬುದು. ನಾನು ತಪ್ಪಿದ್ದರೆ ಅವರು ಸರಿಪಡಿಸಬಹುದು. ಖಚಿತತೆಯನ್ನು ಬದಲಾಯಿಸಲು ನಾನು ಅನುಮತಿಸುವುದಿಲ್ಲ.

## ವರದಿಯ ೧೨ನೇ ಪ್ಯಾರಾದ ಮೇಲಿನ ಚರ್ಚೆ:

ಡಾ. ಅಂಬೇಡ್ಕರ್: ಹನ್ನೆರಡನೆಯ ಪ್ಯಾರಾಕ್ಕೆ ಕೆಳಗೆ ಹೇಳಿದ ಪದಗಳನ್ನು ಪ್ರಾರಂಭ ದಲ್ಲಿಯೇ ಸೇರಿಸಬೇಕೆಂದು ನಾನು ಹೇಳುತ್ತೇನೆ. "ಅಲ್ಪ ಸಂಖ್ಯಾತರು ಮತ್ತು ನಿಮ್ನ ವರ್ಗದವರು ಅವರ ಬೇಡಿಕೆಗಳನ್ನು ಒಪ್ಪದ ಹೊರತು ಭಾರತದ ಬಗ್ಗೆ ಸ್ವಯಂ ಆಡಳಿತ ಸಂವಿಧಾನಕ್ಕೆ ಸಮ್ಮತಿಸುವುದಿಲ್ಲ ಎಂಬುದನ್ನು ಖಚಿತಪಡಿಸಿದ್ದಾರೆ" ಅನಂತರ ನೀವು "ಶಿಫಾರಸುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಒಪ್ಪಿಗೆ ಇತ್ತು" ಇತ್ಯಾದಿಯಾಗಿ ಮುಂದುವರೆಯಬಹುದು. ನನ್ನ ಮಟ್ಟಿಗೆ ಮಾತ್ರ ಹೇಳುವುದಾದರೆ, ಹೊಸ ಸಂವಿಧಾನದಲ್ಲಿ ನಮ್ಮ ಸುರಕ್ಷಿತತೆಯ ಬಗ್ಗೆ ಭರವಸೆ ನೀಡದೆ ಹೋದರೆ ಹೊಣೆಗಾರಿಕೆಯ ತತ್ವವನ್ನೊಳ ಗೊಂಡ ಯಾವುದೇ ಸಂವಿಧಾನಕ್ಕೆ ನಾವು ಸಮ್ಮತಿಯನ್ನು ಕೊಡುವುದಿಲ್ಲ ಎಂದು ಈ ಸಮಿತಿಯಲ್ಲಿ ನಾನು ಮಾಡಿದ ಭಾಷಣಗಳಲ್ಲಿ ಸ್ಪಷ್ಟಪಡಿಸಿದ್ದೇನೆ ಎಂದು ಭಾವಿಸಿದ್ದೇನೆ. ಇತರ ಕೋಮಿನವರು ಇಲ್ಲಿ ನಮ್ಮೊಡನೆ ಸೇರಲು ನಿರಾಕರಿಸಿದರೆ, ನಿಮ್ನ ವರ್ಗದವರ ಪರವಾಗಿ ಅದು ನನ್ನ ಹೇಳಿಕೆ ಮಾತ್ರವಾಗಿ ಉಳಿಯುತ್ತದೆ.

ಲೆ. ಕ. ಗಿಡ್ನೆ: ಮಾನ್ಯರೇ, ನಾನೂ ಸಹ ಈ ಹೇಳಿಕೆಗೆ ಸಹಮತಿಸುತ್ತೇನೆ.

ಅಧ್ಯಕ್ಷ: ವಾಸ್ತವವಾಗಿ ಆ ಹೇಳಿಕೆಯನ್ನು ನೀಡಲಾಯಿತು. ಮತ್ತು ಅದನ್ನು ಪ್ರಾತಿನಿಧಿಕ ಸ್ವರೂಪದಲ್ಲೇ ಮಾಡಲಾಯಿತೇ ಹೊರತು ಕೇವಲ ವೈಯಕ್ತಿಕವಾದ ಹೇಳಿಕೆಯಾಗಿ ಅಲ್ಲ. ಆದರೆ, "ಅದನ್ನು ಈ ವರದಿಯಲ್ಲಿ ಸೇರಿಸಿದರೆ ನೀವು ಅದರ ಪರಿಣಾಮದ ಕ್ಲೇಮುಗಳನ್ನು ಈಡೇರಿಸುತ್ತಿಲ್ಲ" ಎಂದು ಹೇಳುತ್ತೀರಿ. ಇದು ಸಮಿತಿಯ ನಿರ್ಣಯವಲ್ಲ. ಆದರೆ, ಪ್ರತಿಯೊಬ್ಬರೂ ಇಲ್ಲಿ ಏನು ನಡೆಯುತ್ತಿದೆಯೋ ಅದಕ್ಕೆ ಸಮ್ಮತಿಸಿರುತ್ತೇವೆ ಎಂದು ಹೇಳಿದ ಹೊರತು ಹಾಗೆ ಮಾಡುವುದಕ್ಕೆ ಅದು ಯಾವ ಅಡ್ಡಿಯನ್ನೂ ಉಂಟು ಮಾಡುವುದಿಲ್ಲ. ನಿಃಸಂಶಯವಾಗಿ ಸಮಿತಿಗೆ ಕೊಟ್ಟ ಹೇಳಿಕೆಯನ್ನು ಪರಿಗಣಿಸುವುದು ಜಾಣತನದ್ದೆಂದು ನೀವು ಭಾವಿಸುತ್ತೀರಾದರೆ, ಸಮಿತಿಯು ಪರಿಷತ್ತಿಗೆ ಕಳಿಸುವ ವರದಿಯಲ್ಲಿ ಅದನ್ನು ಅಭಿಲೇಖಿಸುವುದು

ಅವಶ್ಯವೆಂಬ ಸ್ಥಿತಿಯಲ್ಲಿ ಅದನ್ನು ಸೇರಿಸಬೇಕು ಎಂಬುದು ನಿಮಗೆ ಬಿಟ್ಟ ವಿಷಯವಾಗಿದೆ. ದಾಖಲೆಗೆ ಸಂಬಂಧಿಸಿದಂತೆ ನಾನು ಅದಕ್ಕೆ ತಕರಾರು ಮಾಡುವುದಿಲ್ಲ.

ಲಾರ್ಡ್ ರೀಡಿಂಗ್: ಇದು ಈ ಪ್ಯಾರಾದಲ್ಲಿ ಯಾವ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಕಂಡುಕೊಳ್ಳುವುದು ಸ್ವಲ್ಪ ಕಠಿಣವಾದ ಕೆಲಸ: ಇದು ಕಾರ್ಯಾಂಗಕ್ಕೆ ಸಂಬಂಧಪಟ್ಟ ವಿಷಯ ಮತ್ತು ಹೊಸ ಸಂವಿಧಾನದ ಬಗ್ಗೆ ಹೇಳಲಾಗಿರುವ ಒಂದೇ ಅಂಶವೆಂದರೆ, ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವುದೇ ಆಗಿರುತ್ತದೆ.

ಡಾ. ಅಂಬೇಡ್ಕರ್: ಮಾನ್ಯರೇ ನನ್ನ ಹೇಳಿಕೆ ಹೀಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಕೇವಲ ಹೇಳಿಕೆಯನ್ನು ಕೊಡುವುದಿಲ್ಲ. ನಾನು ಹಲವು ಬೇಡಿಕೆಗಳನ್ನಿಟ್ಟೆನೆಂದು ದಾಖಲೆ ಮಾಡುವುದು ಮಾತ್ರ ನನಗೆ ಬೇಡ. ಈ ಬೇಡಿಕೆಯ ಹಿಂದಿರುವ ನನ್ನ ಭಾವನೆಗಳ ಸತ್ವವನ್ನೂ ಸಹ ಈ ವರದಿಯು ಅಭಿಲೇಖಿಸುವುದು ನನಗೆ ಬೇಕಾಗಿದೆ. ಈ ನನ್ನ ಬೇಡಿಕೆಯನ್ನು ಅದನ್ನು ಒಪ್ಪಲು ಅಥವಾ ತಿರಸ್ಕರಿಸಲು ಮಾತ್ರ ಮಾಡಿದ್ದು ಅಲ್ಲ. ಆದರೆ, ಈ ಬೇಡಿಕೆಗಳಿಗೆ ಸಮ್ಮತಿಸುವುದು ಅದನ್ನು ಸಮ್ಮತಿಸುವ ಷರತ್ತನ್ನು ಆಧರಿಸಿತ್ತು.

ಲಾರ್ಡ್ ರೀಡಿಂಗ್: ಇದು ಈ ಪ್ಯಾರಾದಲ್ಲಿ ಹೇಗೆ ಬರುತ್ತದೆ ಎಂಬುದು ನನಗೆ ತಿಳಿಯುತ್ತಿಲ್ಲ.

ಡಾ.ಅಂಬೇಡ್ಕರ್: ಅದು ಎಲ್ಲಿಯಾದರೂ ಬರಬಹುದು. ಅದು ಸಾಮಾನ್ಯವಾದಿಗಳ ಬಗ್ಗೆಯೇ ಇರುವಾಗ ಈ ಹಲವು ವಾಕ್ಯಗಳು ಆ ಪ್ಯಾರಾದ ಪ್ರಾರಂಭದಲ್ಲಿಯೇ ಬರುವುದು ಉಚಿತವಾಗಿ ಕಾಣುತ್ತದೆ. ಇದು ಸರಿ ಅಲ್ಲ ಎಂದರೆ ನನ್ನ ತಕರಾರು ಇಲ್ಲ.

ಅಧ್ಯಕ್ಷ: ಇದು ಇಲ್ಲಿ ಬರಬಹುದೆಂದು ನನಗೆ ಅನಿಸುವುದಿಲ್ಲ. ಅದನ್ನು ನೀವು ಇಲ್ಲಿ ಹೇಗೆ ಸೇರಿಸಬಲ್ಲಿರೋ ನನಗೆ ತಿಳಿಯದು. ಅದನ್ನು ನೀವು ಪುನಃ ಎತ್ತಬಹುದು. ಹೌಸ್ ಆಫ್ ಕಾಮನ್ಸ್‌ದಲ್ಲಿ ನಾವು ಮಸೂದೆ ಎಂದು ಕರೆಯುವಂಥದೇ ಆಗಿದೆ. ಅಲ್ಲದೆ, ಅದು ಹೊಸ ವಾಕ್ಯಾವಳಿಯೇ ಆಗಿದೆಯಲ್ಲದೆ ೧೨ನೇ ವಾಕ್ಯಾವಳಿಗೆ ತಂದ ತಿದ್ದುಪಡಿ ಅಲ್ಲ.

ಡಾ. ಅಂಬೇಡ್ಕರ್: ಮೂರನೆಯ ಸಾಲಿನಲ್ಲಿ ಅದು ಹೀಗಿದೆ: "ಪ್ರಾಂತೀಯ ಕಾರ್ಯಾಂಗದಲ್ಲಿ ಕೆಲವು ಮಹತ್ವದ ಅಲ್ಪಸಂಖ್ಯಾತ ಕೋಮುಗಳ ಅಂದರೆ, ಹಿಂದುಗಳು, ಮುಸಲ್ಮಾನರು ಮತ್ತು ಸಿಖ್ಖರು ಇವರ ಪ್ರಾತಿನಿಧ್ಯವು ವ್ಯಾವಹಾರಿಕವಾಗಿ ಅತ್ಯಂತ ಮಹತ್ವದ ವಿಷಯವಾಗಿದೆ." ನನ್ನ ತಿದ್ದುಪಡಿ ಹೀಗಿದೆ: ನಾವು "ಮಹತ್ವದ" ಪದವನ್ನು ತೆಗೆದುಹಾಕಬೇಕು. ಯಾಕೆಂದರೆ ಅಲ್ಪಸಂಖ್ಯಾತರಲ್ಲಿ ಪರಸ್ಪರ ಯಾವುದೇ ಭೇದಭಾವ ಮಾಡುವುದು ನನಗೆ ಬೇಕಾಗಿಲ್ಲ. ಆದರೆ, ಯಾವುದೇ ಅಲ್ಪಸಂಖ್ಯಾತ ಕೋಮನ್ನು ಹೆಸರಿಸುವುದು ಬೇಡ ಮತ್ತು ನೀವು ಹಾಗೆ ಮಾಡುವುದಾದರೆ ಆಗ ನೀವು ಅಲ್ಪಸಂಖ್ಯಾತರನ್ನೂ ಹೆಸರಿಸಬೇಕಾಗುತ್ತದೆ.

ಡಾ: ಮೂಂಜೆ: ನಾನೂ ಸಹ ಅದನ್ನೇ ಹೇಳಬೇಕೆಂದಿದ್ದೆ.

ಅಧ್ಯಕ್ಷ: ವಾಸ್ತವವಾಗಿ ಹೇಳಬೇಕೆಂದರೆ, ಈ ಶಬ್ದಗಳನ್ನು ಸೇರಿಸಲು ಇರುವ ಕಾರಣವೆಂದರೆ ನಾವು ಉಲ್ಲೇಖಿಸಲಾದ ವರದಿಯಲ್ಲಿ ಈ ಪದಗಳನ್ನು ಸೇರಿಸಲಾಗಿದೆ. ತಿದ್ದುಪಡಿ ಏನು? ನೀವು ಒಪ್ಪದಿರುವ ಯಾವುದೇ ವಿಷಯವನ್ನು ನಾವು ಇಲ್ಲಿ ಸೇರಿಸುವುದಿಲ್ಲ. "ಪ್ರಾಂತೀಯ ಕಾರ್ಯಾಂಗದಲ್ಲಿ ಅಲ್ಪಸಂಖ್ಯಾತ ಕೋಮುಗಳ ಪ್ರಾತಿನಿಧ್ಯ"?

ಡಾ. ಅಂಬೇಡ್ಕರ್: ಅದನ್ನು ಅಷ್ಟಕ್ಕೆ ಬಿಡಿ. "ಹಿಂದೂಗಳು, ಮುಸಲ್ಮಾನರು ಮತ್ತು ಸಿಖ್ಖರು" ಇದನ್ನು ತೆಗೆದುಬಿಡಿ.

ಅಧ್ಯಕ್ಷ: ಅದರ ಅರ್ಥ ಏನು ಎಂಬುದನ್ನು ನೋಡೋಣ. ಆ ವಾಕ್ಯವು "ಪ್ರಾಂತೀಯ ಕಾರ್ಯಾಂಗದಲ್ಲಿ ಅಲ್ಪಸಂಖ್ಯಾತ ಕೋಮುಗಳ ಪ್ರಾತಿನಿಧ್ಯವು ಯಶಸ್ವಿ ಕಾರ್ಯಾಚರಣೆಗಾಗಿ ವ್ಯಾವಹಾರಿಕವಾಗಿ ಅತ್ಯಂತ ಮಹತ್ವದ ವಿಷಯವಾಗಿದೆ" ಎಂದಾಗುತ್ತದೆ.

ಡಾ. ಅಂಬೇಡ್ಕರ್: ಹೌದು.

ಅಧ್ಯಕ್ಷ: ಅದರ ಅರ್ಥವೆಂದರೆ ಪ್ರತಿಯೊಂದು ಅಲ್ಪಸಂಖ್ಯಾತ ಕೋಮು ಎಂದಾಗುತ್ತದೆ. ಅದು ೮, ೯, ೧೦ ಅಥವಾ ೧೨ ಇದ್ದಾಗ್ಯೂ ಕಾರ್ಯಾಂಗದಲ್ಲಿ ಅದರ ಪ್ರಾತಿನಿಧ್ಯವಿರತಕ್ಕುದು.

ಡಾ. ಅಂಬೇಡ್ಕರ್: ಇಲ್ಲ; ಆಗ ನಾನು ಈ ಪದಗಳನ್ನು ಸೇರಿಸುತ್ತೇನೆ. "ಗವರ್ನರ್‌ರ ವಿವೇಚನೆ ಗೊಳಪಟ್ಟು ಸಾಧ್ಯವಿರುವಷ್ಟರ ಮಟ್ಟಿಗೆ" ಯಾವುದೇ ಕೋಮನ್ನು ನಿರ್ದಿಷ್ಟವಾಗಿ ಹೆಸರಿಸುವುದು ನನಗೆ ಬೇಕಾಗಿಲ್ಲ.

ಲಾರ್ಡ್ ರೀಡಿಂಗ್: ಇದು ಏನು ಹೇಳುತ್ತದೆ ಎಂಬುದನ್ನು ನೀವು ಗಮನಿಸಲೇಬೇಕು. "ಉಪಸಮಿತಿ ೧೧(ಪ್ರಾಂತೀಯ ಸಂವಿಧಾನ)ರ ಶಿಫಾರಸುಗಳಿಗೆ ಸಾಮಾನ್ಯವಾದ ಸಮ್ಮತಿ ಇತ್ತು." ನಂತರ ಅದನ್ನು ಉಲ್ಲೇಖಿಸುತ್ತಾ ಮುಂದುವರೆಯುತ್ತದೆ.

ಡಾ. ಅಂಬೇಡ್ಕರ್: ಹಾಗಾಗತಕ್ಕುದಲ್ಲ.

ಡಾ. ಮೂಂಜೆ: ನನ್ನ ಸೂಚನೆ ಚಿಕ್ಕದಾಗಿತ್ತು. ಆದರೆ, ಅದು ಡಾ. ಅಂಬೇಡ್ಕರ್ ಅವರ ಅಭಿಪ್ರಾಯ ವನ್ನು ಸಮಾಧಾನಪಡಿಸಬಹುದು. ಅದು ಆ ರೀತಿಯಲ್ಲೇ ಇರುತ್ತದೆ. "ಮಹತ್ವದ ಅಲ್ಪಸಂಖ್ಯಾತ ಕೋಮು ಗಳು ಅಂದರೆ ಮುಸಲ್ಮಾನರು, ಸಿಖ್ಖರು, ನಿಮ್ನ ವರ್ಗದವರು" ಅದು ನನ್ನ ಚಿಕ್ಕ ತಿದ್ದುಪಡಿ ಆಗಿದೆ.

ಲಾರ್ಡ್ ರೀಡಿಂಗ್: ಆಗ ಇತರರನ್ನೂ ಸೇರಿಸಲೇಬೇಕಾಗುತ್ತದೆ.

ಸರ್ ಎ. ಪಿ. ಪ್ಯಾಟ್ರೋ: ನಿಮ್ನವರ್ಗದವರು ಹಿಂದೂಗಳಲ್ಲವೇ? ನೀವು ನಿಮ್ನವರ್ಗದವರನ್ನು ಬೇರ್ಪಡಿಸುತ್ತೀರಾ? ತಾವು ಹಿಂದೂಗಳು ಅಲ್ಲವೆಂದರೆ ಕೆಲವು ನಿಮ್ನ ವರ್ಗದವರು ದಂಗೆ ಏಳುವರೆಂಬ ಸೂಚನೆಗಳಿವೆ. ಡಾ. ಅಂಬೇಡ್ಕರ್ ಅವರು ದಕ್ಷಿಣ ಭಾರತಕ್ಕೆ ಬಂದು ತಾವು ಹಿಂದೂಗಳು ಅಲ್ಲ ಎಂದರೆ ದಕ್ಷಿಣ ಭಾರತದಲ್ಲಿ ಡಾ. ಅಂಬೇಡ್ಕರ್ ಅವರ ಸ್ಥಾನ ಏನಾಗುತ್ತದೆಯೋ ನನಗೆ ತಿಳಿಯದು.

ಡಾ. ಅಂಬೇಡ್ಕರ್: ಇಲ್ಲಿ ನಾವು ಅದನ್ನು ಚರ್ಚಿಸುತ್ತಿಲ್ಲ.

ಸರ್ ಎ. ಪಿ. ಪ್ಯಾಟ್ರೋ: ಕಾರಣ ಪ್ರಾತಿನಿಧ್ಯವು ಸಂಗತಿಗಳಿಗೆ ಮತ್ತು ಅನುಭವಗಳಿಗೆ ಹೊಂದಾಣಿಕೆ ಯಾಗುವಂತಿರಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷ: ನಾವು ಉಲ್ಲೇಖಿಸಿದ ವರದಿಯ ಬಗ್ಗೆ ನಾನು ಹೇಳಿದೆ. "ಹಿಂದೂಗಳು, ಮುಸಲ್ಮಾನರು ಮತ್ತು ಇತರರು" ಇದನ್ನು ದೃಷ್ಟಾಂತ ರೂಪದಲ್ಲಿ ಸೇರಿಸಲಾಗಿದೆ ಎಂದು ನನಗೆ ತಿಳಿಸಲಾಗಿದೆ ಮತ್ತು ಈ ಪದಗಳು ವರದಿಯಲ್ಲಿ ಇಲ್ಲ.

ಸರ್ ಮಹಮದ್ ಶಫಿ: ನಾನು ಸಹ ಇದನ್ನೇ ಹೇಳಬೇಕೆಂದಿದ್ದೆ.

ಅಧ್ಯಕ್ಷ: ಒಂದು ಕ್ಷಣ ತಾಳಿ, "ಮಹತ್ವದ" ಪದವು ಮಾಡುವುದಿಷ್ಟು "ಪ್ರಾಂತೀಯ ಕಾರ್ಯಾಂಗದಲ್ಲಿ ಮಹತ್ವದ ಅಲ್ಪಸಂಖ್ಯಾತರ ಪ್ರಾತಿನಿಧ್ಯವು" ಕಾರಣ "ಮಹತ್ವದ" ಪದ ಉಳಿಯಬೇಕು.

ಸದಸ್ಯರು: ಹೌದು.

ಅಧ್ಯಕ್ಷ: ಆದರೆ "ಹಿಂದೂಗಳು, ಮುಸಲ್ಮಾನರು ಮತ್ತು ಸಿಖ್ಖರು" ಇದನ್ನು ತೆಗೆದು ಹಾಕಬೇಕಾಗುತ್ತದೆ. ಅಲ್ಲಿ ಇರಲು ಅವರಿಗೆ ಏನೂ ಕೆಲಸವಿಲ್ಲ.

ಡಾ. ಅಂಬೇಡ್ಕರ್: ತಾವು ಅಲ್ಲಿಂದ ಮುಂದುವರೆಯುವ ಮೊದಲು ಮಾನ್ಯರೇ, "ಹೊಸ ಸಂವಿಧಾನದ ಕಾರ್ಯನಿರ್ವಹಣೆ ಮತ್ತು ಫೆಡರಲ್ ಕಾರ್ಯಾಂಗದಲ್ಲೂ ಅದೇ ಆಧಾರದ ಮೇಲೆ ಮುಸಲ್ಮಾನರಿಗೂ ಪ್ರಾತಿನಿಧ್ಯ ಇರಬೇಕು ಎಂದು ಒಪ್ಪಲಾಗಿತ್ತು" ಎಂಬ ಪದಗಳ ಕಡೆಗೆ ನಿಮ್ಮ ಲಕ್ಷ್ಯವನ್ನು ಸೆಳೆಯಬಯಸುತ್ತೇನೆ. "ಮಹತ್ವದ ಅಲ್ಪಸಂಖ್ಯಾತರು" ಎಂಬ ಪದವು "ಮುಸಲ್ಮಾನರು" ಎಂಬ ಪದದ ಬದಲಿಗೆ ಸೇರಬೇಕು. ಪ್ರಾರಂಭದಲ್ಲಿ ನಾವು ಹೇಳಿದ್ದನ್ನು ಗಮನಿಸಿ ನಾನು ಹಾಗೆ ಹೇಳುತ್ತೇನೆ.

ಅಧ್ಯಕ್ಷ: ಸರಿ, ಸರಿ; ಅದೇ ಆಧಾರಗಳ ಮೇಲೆ ಅದನ್ನು ಒಪ್ಪಲಾಗಿತ್ತು."

ಡಾ. ಅಂಬೇಡ್ಕರ್: "ಫೆಡರಲ್ ಕಾರ್ಯಾಂಗದಲ್ಲೂ ಅವರ ಪ್ರಾತಿನಿಧ್ಯ ಇರಬೇಕು."

ಅಧ್ಯಕ್ಷ: "ಫೆಡರಲ್ ಕಾರ್ಯಾಂಗದಲ್ಲಿ ಮಹತ್ವದ ಅಲ್ಪಸಂಖ್ಯಾತರೂ ಪ್ರಾತನಿಧ್ಯ ಪಡೆಯತಕ್ಕುದು." ಚಿಕ್ಕಮಟ್ಟ ಅಲ್ಪಸಂಖ್ಯಾತರ ಪರವಾಗಿ, ವೈಯಕ್ತಿಕವಾಗಿಯಾಗಲೀ ಅಥವಾ ಒಟ್ಟಾಗಿಯಾಗಲೀ, ಪ್ರಾಂತೀಯ ಅಥವಾ ಫೆಡರಲ್ ಕಾರ್ಯಾಂಗದಲ್ಲಿ ಪ್ರಾತಿನಿಧ್ಯಕ್ಕಾಗಿ ಮಾಡಲಾದ ಕ್ಲೇಮು ಅಥವಾ ಇದಾಗದಿದ್ದರೆ, ಪ್ರತಿ ಮಂತ್ರಿಮಂಡಲದಲ್ಲಿ ಆ ಕಾರ್ಯಕ್ಕಾಗಿ ನಿರ್ದಿಷ್ಟವಾಗಿ ಒಬ್ಬ ಮಂತ್ರಿ ಇರಬೇಕು." ಇತ್ಯಾದಿ ಮುಂದಿಡಲಾದ ವಿಷಯವು ಸ್ಪಷ್ಟವಾಗಿ ಅದೇ ಆಗಿತ್ತು.

ಲಾರ್ಡ್ ರೀಡಿಂಗ್: ಹೌದು.

ಅಧ್ಯಕ್ಷ: ಅಧಿಕೃತವಾಗಿ.

* ಅಧ್ಯಕ್ಷ: ಸರಿಯಾಗಿ ಅಭಿಲೇಖಿಸುವುದಕ್ಕೆ ಸಂಬಂಧಿಸಿದಂತೆ ಮೊಹಮಡನ್ ಪದದ ಉಪಯೋಗವು ತುಂಬಾ ಸರಿಯಾಗಿದೆ.

ಸರ್ ಮಹಮ್ಮದ ಶಫಿ: ಫೆಡರಲ್ ಇದು ವಿದೇಶೀ ಆಧಾರದ ಮೇಲೆ ನಿಂತಿದೆ.

ಅಧ್ಯಕ್ಷ: "ಮೊಹಮಡನ್" ಹಾಗೇ ಇರಬೇಕು.

ಮಿ. ಜೋಶಿ: ಹೌದು ಅದನ್ನು ನಾನು ಒಪ್ಪುತ್ತೇನೆ.

ಡಾ. ಅಂಬೇಡ್ಕರ್: ಹಾಗಾದರೆ "ಮೊಹಮಡನ್" ಮತ್ತು ಇತರ ಮಹತ್ವದ ಅಲ್ಪಸಂಖ್ಯಾತರು ಪದಗಳನ್ನು ಸೇರಿಸಲೇಬೇಕು.

ಅಧ್ಯಕ್ಷ: ಇಲ್ಲಾ, ನೀವು ಹಾಗೆ ಮಾಡಲಾರಿರಿ, ಅದೇ ಕ್ಲೇಮಾಗಿತ್ತು.

ಡಾ. ಅಂಬೇಡ್ಕರ್: ನಾನು ನನ್ನ ಮಟ್ಟಿಗಾದರೂ ಅಷ್ಟನ್ನು ಹೇಳಲಾರೆನೇ? ನನ್ನಷ್ಟಕ್ಕೆ ಹೇಳುವಾಗ ನಿಮ್ನವರ್ಗದವರ ಪರವಾಗಿಯೂ ನಾನು ಹೇಳುತ್ತೇನೆ.

ಮಿ. ಜೋಶಿ: ಅದನ್ನು ಒಪ್ಪಲಾಗಿಲ್ಲ. ನೀವು ಅಂಥ ಕ್ಲೇಮನ್ನು ಮಾಡಲಿಲ್ಲ.

ಡಾ. ಅಂಬೇಡ್ಕರ್: ನಾನು ಮಾಡಿದೆ ಅಥವಾ ಇಲ್ಲ ಅನ್ನುವುದು ಇಲ್ಲಿ ಪ್ರಶ್ನೆ ಅಲ್ಲ.

ಅಧ್ಯಕ್ಷ: ಈಗ ನಾವು ಕಾರ್ಯ ನಿರ್ವಹಿಸುತ್ತಿದ್ದೇವೆ. ಮತ್ತು ಹನ್ನೊಂದಕ್ಕೆ ಎರಡು ನಿಮಿಷ ಮಾತ್ರ ಇದೆ.

ಡಾ. ಮೂಂಜೆ: "ಒಪ್ಪಲಾದ" ಪದದ ಬದಲಿಗೆ "ಅವೇ ಆಧಾರಗಳ ಮೇಲೆ ಅದನ್ನು ಸಹ ಕ್ಲೇಮು ಮಾಡಲಾಯಿತು" ಎಂಬುದನ್ನು ಸೇರಿಸಬೇಕೆಂದು ಹೇಳಲು ನಾನು ಇಚ್ಛಿಸುತ್ತೇನೆ.

---

* ಉಪಸಮಿತಿ–III (ಅಲ್ಪಸಂಖ್ಯಾತರು)ರ ನಡಾವಳಿಗಳು, ಪುಟಗಳು ೧೪೪–೪೬.

ಸರ್ ಮಹಮ್ಮದ ಶಫಿ:– ಇಲ್ಲ, ಇಲ್ಲ, ಅದನ್ನು ಒಪ್ಪಲಾಗಿತ್ತು. ಅದು ವಾಸ್ತವ ಸಂಗತಿಯಾಗಿದೆ.

ಡಾ. ಮುಂಜೆ: ಫೆಡರಲ್ ರಚನಾ ಸಮಿತಿಯಲ್ಲಿ ಏನು ನಡೆಯಿತು ಎಂಬುದು ನನಗೆ ಗೊತ್ತಿಲ್ಲ.

ಸರ್ ಮಹಮ್ಮದ್ ಶಫಿ: ದಾಖಲೆ ಅದನ್ನು ತೋರಿಸುತ್ತದೆ.

ಡಾ. ಮುಂಜೆ: ಆದರೆ, ಇಲ್ಲಿ ನಿಜವಾಗಿಯೂ, ನಾನು ಆ ಅಂಶವನ್ನು ಒಪ್ಪುವುದಿಲ್ಲ.

ಸರ್ ಎ. ಪಿ. ಪ್ಯಾಟ್ರೋ: ಅದನ್ನು ಎಪ್ಪಲಾಗಿದೆ ಮತ್ತು ಅದು ಮುಂದಿನ ಪ್ಯಾರಾಕ್ಕೆ ಮುಂದುವರೆಯುತ್ತದೆ.

ಡಾ. ಮೂಂಜೆ: ಕ್ಲೇಮನ್ನು ಮಾಡಲಾಗಿತ್ತು.

ಅಧ್ಯಕ್ಷ: ಮೊಹಮಡನ್ನರನ್ನು ಗುರುತಿಸಬೇಕೆಂದು ಹೇಳಿಕೆಯನ್ನು ಕೊಡಲಾಗಿತ್ತು ಮತ್ತು ನಡವಳಿಕೆಯ ಟಿಪ್ಪಣಿಗಳಂತೆ, ಅದನ್ನು ಒಪ್ಪಲಾಗಿತ್ತು ಮತ್ತು ಅದನ್ನು ಆದಾಗಲೇ ದಾಖಲೆಗಳಿಂದ ತೆಗೆದುಹಾಕಲಾಗಿದೆ.

ಮಿ. ಜೋಶಿ: ಈ ಸಮಿತಿಯ ದಾಖಲೆಗಳೇ?

ಲೆ. ಕ. ಗಿಡ್ನೆ: ಸರ್ವ ಸದಸ್ಯರ ಸಭೆಯಲ್ಲಿ ನಾನು ಒಂದು ನಿರ್ದಿಷ್ಟ ಹೇಳಿಕೆಯನ್ನು ಮಾಡಿದೆ. ನಾನು ಕೊಟ್ಟ ಹೇಳಿಕೆಯೆಂದರೆ, ಹಲವು ಬೇಡಿಕೆಗಳನ್ನು ಮುಂದಿಡುವುದು ದೊಡ್ಡ ಕೋಮುಗಳವರಿಗೆ ಎಲ್ಲವೂ ಸರಿಯಾದದ್ದೇ, ಆದರೆ ಅಲ್ಪಸಂಖ್ಯಾತರು ಸ್ವಲ್ಪವಾದರೂ ಪ್ರಾತಿನಿಧ್ಯ ಬೇಡಿದ್ದಾರೆ.

ಅಧ್ಯಕ್ಷ: ಅದು ಅದರಲ್ಲಿದೆ.

ಲೆ. ಕ. ಗಿಡ್ನೆ: ಇದು ಕೇವಲ ಪರ್ಯಾಯ ವ್ಯವಸ್ಥೆ.

ಅಧ್ಯಕ್ಷ: ಅಲ್ಲ, ಅಲ್ಲ: ಅದು ಹಾಗಲ್ಲ. ಆ ವಾಕ್ಯವು ಪರ್ಯಾಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಆದರೆ, ಅದು ಕ್ಲೇಮನ್ನೂ ಹೇಗೆ ಮಾಡಲಾಯಿತೆಂದರೆ ಅಲ್ಪಸಂಖ್ಯಾತರ ನೇರ ಪ್ರಾತಿನಿಧ್ಯ ಇರಬೇಕು ಅಥವಾ ಅದು ವಿಫಲವಾದರೆ, ಅಂದರೆ ಅಸಾಧ್ಯವಾದರೆ ಆಗ.

ಲೆ. ಕ. ಗಿಡ್ನೆ: ನಮಗೆ ಬೇಕಾದುದೆಲ್ಲವೂ ಅಷ್ಟೇ.

ರಾವ ಬಹಾದ್ದೂರ ಪನ್ನೀರ ಸೆಲ್ವಮ್: "ಅದು ವಿಫಲವಾದರೆ" ಇದರ ಬದಲಾಗಿ "ಇದು ಅಸಾಧ್ಯವೆಂದು ಕಂಡುಬಂದರೆ" ಎಂಬುದನ್ನು ಸೇರಿಸಬೇಕು.

ಅಧ್ಯಕ್ಷ: ಹೌದು. "ಅದು ವಿಫಲವಾದರೆ" ಇದರ ಬದಲಾಗಿ "ಇದು ಅಸಾಧ್ಯವೆಂದು ಕಂಡು ಬಂದರೆ" ಅದನ್ನು ಏಕೆ ಬದಲಾಯಿಸಬಾರದೆಂಬುದಕ್ಕೆ ಯಾವ ಕಾರಣವೂ ಇಲ್ಲ.

ಲಾರ್ಡ್ ರೀಡಿಂಗ್: ವ್ಯತ್ಯಾಸ ಏನು? ಪರಸ್ಪರ ಬದಲಾಯಿಸಬಹುದಾದಂಥ ವಾಕ್ಯಾವಳಿಗಳ ಬಗ್ಗೆ ನಾವು ಕಾಲವ್ಯಯ ಮಾಡುತ್ತಿದ್ದೇವೆ, ಅಷ್ಟೆ.

ಸರ್ದಾರ ಉಜ್ವಲ ಸಿಂಘ್: ಫೆಡರಲ್ ಕಾರ್ಯಾಂಗದಲ್ಲಿ ಇತರ ಯಾವುದೇ ಕೋಮುಗಳಿಗಾಗಿ ಅವಕಾಶ ಕಲ್ಪಿಸಿ ಮತ್ತು ಅಲ್ಲಿ "ಮಹತ್ವದ ಅಲ್ಪಸಂಖ್ಯಾತರು" ಪದಗಳನ್ನು ಸೇರಿಸಿರಿ. ಒಂದಿಲ್ಲೊಂದು ರೀತಿಯಲ್ಲಿ ನಾವು ಅವಕಾಶ ಕಲ್ಪಿಸಬಹುದು. ಆದರೆ, ಅವಶ್ಯವಾಗಿ ಅಲ್ಲ. ಆದರೆ ಅವಕಾಶವಿದ್ದೇ ಇರತಕ್ಕುದು.

ಅಧ್ಯಕ್ಷ: ವಸ್ತುಸ್ಥಿತಿಯ ಕಟು ಸತ್ಯಸಂಗತಿಗಳ ಬಗ್ಗೆ ನಾನು ನಿಮಗೆ ತಿಳಿಯಪಡಿಸಬಹುದೇ? ಫೆಡರಲ್ ಕಾರ್ಯಾಂಗದಲ್ಲಿ ಎಲ್ಲ ಅಲ್ಪಸಂಖ್ಯಾತರನ್ನೂ ಹೊಂದಿರಲಾರಿರಿ.

ಡಾ. ಅಂಬೇಡ್ಕರ್: ನನ್ನ ವಾದವನ್ನು ಸ್ಪಷ್ಟಪಡಿಸುತ್ತೇನೆ. ಪ್ರಾಂತೀಯ ಸಂವಿಧಾನದಲ್ಲಿ ನಾವು ಮಾಡಿದ್ದೇನೆಂದರೆ ಗವರ್ನರಿಗೆ ಅದನ್ನು ಸಾಧಿಸಲು ಪ್ರಯತ್ನ ಪಡಬೇಕೆಂಬ ಹೊಣೆಯನ್ನು ವಿಧಿಸಿದ್ದೇವೆ.

ಅವನನ್ನು ಕಟ್ಟಿಹಾಕಲಾಗಿಲ್ಲ. ಆದರೆ ಅಂಥ ಪ್ರಯತ್ನದಲ್ಲಿ ಮಹತ್ವದ ಅಲ್ಪಸಂಖ್ಯಾತರಲ್ಲಿಂದಲೂ ಸಹ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಅವನಿಗೆ ಕೊಡಲಾಗುವುದು. ಸಂವಿಧಾನ ರಚಿಸುವಲ್ಲಿ ನಾವು ಆತನ ಕೈ ಕಾಲುಗಳನ್ನು ಕಟ್ಟಿಹಾಕುತ್ತಿಲ್ಲ. ನಾವು ಮಾಡಿದ್ದು ಇಷ್ಟು ಮಾತ್ರ. ಏಕೆಂದರೆ ಆತನು ಆಯ್ಕೆಯನ್ನು ಮಾಡತಕ್ಕುದಲ್ಲ ಎಂಬ ಹೊಣೆಯನ್ನು ನಾವು ಆತನಿಗೆ ವಿಧಿಸುವುದಿಲ್ಲ. ಆದರೆ, ಆಯ್ಕೆ ಮಾಡಲು ಪ್ರಯತ್ನ ಮಾಡತಕ್ಕುದೆಂಬ ಹೊಣೆಯನ್ನು ಮಾತ್ರ ವಿಧಿಸುತ್ತಿದ್ದೇವೆ. ಅದು ಆತನನ್ನು ಯಾವುದೇ ರೀತಿಯಲ್ಲಿ ಕಟ್ಟಿ ಹಾಕಿದಂತೆ ಆಗಲಿಲ್ಲ ಮತ್ತು "ಮೊಹಮಡನ್ನರು" ಎಂಬ ಪದದ ಅನಂತರ "ಇತರ ಮಹತ್ವದ ಅಲ್ಪಸಂಖ್ಯಾತ ಕೋಮುಗಳು" ಎಂಬ ಶಬ್ದಗಳು ಬರಬೇಕು ಎಂದು ನಾನು ಹೇಳುತ್ತೇನೆ.

ಅಧ್ಯಕ್ಷ: ಇಲ್ಲ, ಆ ಅಂಶವನ್ನು ನಾವು ಈಗಾಗಲೇ ದಾಟಿ ಬಂದಿದ್ದೇವೆ. ಈಗ ನಾವು ಎರಡನೆಯ ಅಂಶದಲ್ಲಿದ್ದೇವೆ.

ಸರ್ ಎ. ಪಿ. ಪ್ಯಾಟ್ರೋ: ನಾನು ೧೩ನೇ ಪ್ಯಾರಾದ ಉಲ್ಲೇಖ ಮಾಡಬಹುದೋ?

ಡಾ. ಅಂಬೇಡ್ಕರ್: ೧೨ನೇ ಪ್ಯಾರಾಕ್ಕೆ ನನ್ನ ಅಸಮ್ಮತಿಯನ್ನು ಅಭಿಲೇಖಿಸಬೇಕೆಂದು ನಾನು ಸೂಚಿಸುತ್ತೇನೆ.

ಸರ್ದಾರ ಉಜ್ವಲ್‌ಸಿಂಗ್: "ಮೊಹಮಡನ್ನರು" ಪದದ ಅನಂತರ "ಇತರ ಮಹತ್ವದ ಕೋಮುಗಳವರು" ಎಂಬುದನ್ನು ಸೇರಿಸಬೇಕು.

ಲೆ. ಕ. ಗಿಡ್ನೆ: ಇತರ ಅಲ್ಪಸಂಖ್ಯಾತರಿಗೆ ಈ ಮಾರ್ಗವನ್ನು ಏಕೆ ಮುಚ್ಚಿಡಬೇಕು?

ಅಧ್ಯಕ್ಷ: ನಾನು ಈಗ ನಿರ್ಣಯ ಹೇಳಲೇಬೇಕು. ಈಗಾಗಲೇ ನಾನು ಹೇಳಿರುವಂತೆ ಆ ಮಾರ್ಗವನ್ನು ನಾವು ಇತರ ಅಲ್ಪಸಂಖ್ಯಾತರಿಗೆ ಮುಚ್ಚುತ್ತಿಲ್ಲ. ಶಬ್ದಗಳ ಮೇಲೆ ಅವುಗಳು ಈಗಿರುವಂತೆ, ತಿದ್ದುಪಡಿ ಮಾಡಲು ಚರ್ಚೆಗೆ ನಾನು ಸಿದ್ಧನಿದ್ದೇನೆ, ಆದರೆ ನೀವು ನಿಜವಾಗಿಯೂ ಸುಳ್ಳು ವಿವಾದಾಂಶಗಳನ್ನು ಎತ್ತಬಾರದು. ಇದು ಇತರ ಅಲ್ಪಸಂಖ್ಯಾತರೂ ಸಹ ಪ್ರಾತಿನಿಧ್ಯ ಪಡೆಯತಕ್ಕುದು ಎಂಬ ಕ್ಲೇಮನ್ನು ಮುಂದಿಡುತ್ತದೆ. ಆದರೆ, ಅದು ಅಸಾಧ್ಯವೆಂದು ಕಂಡುಬಂದರೆ ಆಗ ಅಲ್ಲಿ ಮಂತ್ರಿಯೊಬ್ಬರಿರುತ್ತಾರೆ ಎಂಬ ಬದಲಾವಣೆಯನ್ನು ಮಾಡಲಾಗಿದೆ. ಇದು ಬೇಡಿಕೆಗಳ ಖಚಿತವಾದ ದಾಖಲೆಯಾಗಿದೆ.

**ಪ್ಯಾರಾ ೧೨ನ್ನು ಒಪ್ಪಲಾಯಿತು:**

ಡಾ. ಅಂಬೇಡ್ಕರ್: ನಮ್ಮ ಅಸಮ್ಮತಿಯನ್ನು ಅಭಿಲೇಖಿಸಬೇಕೆಂದು ನಾನು ಭಾವಿಸುತ್ತೇನೆ.

ಅಧ್ಯಕ್ಷ: ಸರಿ.

ಉಪಸಮಿತಿ ನಂ. III (ಅಲ್ಪಸಂಖ್ಯಾತರು) ಅಳವಡಿಸಿಕೊಂಡ ೧೨ನೇ ಪ್ಯಾರಾ:

೧೨: ಉಪಸಮಿತಿಯ ನಂ.೧೧ (ಪ್ರಾಂತೀಯ ಸಂವಿಧಾನ) ಮಾಡಿದ ಶಿಫಾರಸುಗಳಿಗೆ ಸಾಮಾನ್ಯ ಒಪ್ಪಿಗೆ ಇದೆ. ಅಂದರೆ ಪ್ರಾಂತೀಯ ಕಾರ್ಯಾಂಗಗಳಲ್ಲಿ ಮಹತ್ವದ ಅಲ್ಪಸಂಖ್ಯಾತ ಕೋಮುಗಳ ಪ್ರಾತಿನಿಧ್ಯವು ಹೊಸ ಸಂವಿಧಾನವನ್ನು ಸಫಲತೆಯಿಂದ ಕಾರ್ಯಗತಗೊಳಿಸುವಲ್ಲಿ ವ್ಯಾವಹಾರಿಕವಾಗಿ ಅತಿ ಹೆಚ್ಚಿನ ಮಹತ್ವದ ವಿಷಯವಾಗಿದೆ. ಅಲ್ಲದೆ, ಅವೇ ಆಧಾರಗಳ ಮೇಲೆ ಫೆಡರಲ್ ಕಾರ್ಯಾಂಗದಲ್ಲಿ ಮೊಹಮಡನ್ನರಿಗೆ ಪ್ರಾತಿನಿಧ್ಯವಿರತಕ್ಕುದು ಎಂಬ ಬಗ್ಗೆಯೂ ಒಪ್ಪಲಾಯಿತು.

ಚಿಕ್ಕಪುಟ್ಟ ಅಲ್ಪಸಂಖ್ಯಾತರ ಪರವಾಗಿಯೂ ವೈಯಕ್ತಿಕವಾಗಿಯಾಗಲೀ ಅಥವಾ ಒಟ್ಟಾಗಿ ಆಗಲೀ ಪ್ರಾಂತೀಯ ಮತ್ತು ಫೆಡರಲ್ ಕಾರ್ಯಾಂಗದಲ್ಲಿ ಅವರ ಪ್ರಾತಿನಿಧ್ಯಕ್ಕಾಗಿ ಅಥವಾ ಅದು ಅಸಾಧ್ಯವೆಂದು ಕಂಡುಬಂದಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿಯ ರಕ್ಷಣೆಯ ಭಾರವನ್ನು ಹೊತ್ತ ಮಂತ್ರಿಯೊಬ್ಬನು ಪ್ರತಿ ಮಂತ್ರಿಮಂಡಲದಲ್ಲಿ ಇರತಕ್ಕುದು ಎಂಬ ಕ್ಲೇಮನ್ನೂ ಮಾಡ ಲಾಯಿತು.

(ಡಾ. ಅಂಬೇಡ್ಕರ್ ಮತ್ತು ಸರ್ದಾರ ಉಜ್ವಲ್ ಸಿಂಗ್ ಅವರು ೬ನೇ ಸಾಲಿನಲ್ಲಿ "ಮಹಮ್ಮಡನ್ನರು" ಪದದ ಅನಂತರ "ಮತ್ತು ಇತರ ಮಹತ್ವದ ಅಲ್ಪಸಂಖ್ಯಾತರು" ಎಂಬ ಪದಗಳನ್ನು ಸೇರಿಸಿದರು) (ಉಪಸಮಿತಿ ನಂ. III ಚರ್ಚೆಯ ನಂತರ ಅಳವಡಿಸಿಕೊಂಡ ಪ್ಯಾರಾ ೧೨)

## ವರದಿ. ೧೮ನೇ ಪ್ಯಾರಾದ ಮೇಲಿನ ಚರ್ಚೆ
## (ಉಪಸಮಿತಿ ನಂ. III. (ಅಲ್ಪಸಂಖ್ಯಾತರು) ವ್ಯವಹರಣೆಗಳು ಪು.೧೫೩)

ಅಧ್ಯಕ್ಷ: ೧೭ನೆಯದನ್ನು ತೆಗೆದುಹಾಕಲಾಗಿದೆ. ಈಗ ೧೮, ೧೭ ಆಗುತ್ತದೆ. ಈ ವರದಿಯನ್ನು ಇಡಿಯ ಸಮ್ಮೇಳನದ ಸಮಿತಿಗೆ ಒಪ್ಪಿಸಬೇಕು. ಪರವಾಗಿ ಯಾರು? ವಿರುದ್ಧವಾಗಿ ಯಾರು? ಅದನ್ನು ಒಪ್ಪಲಾಗುವುದು. ನಂತರ ಅದು ಇಡಿಯ ಸಮ್ಮೇಳನದ ಸಮಿತಿಗೆ ಹೋಗುತ್ತದೆ.

ಡಾ. ಅಂಬೇಡ್ಕರ್: ಮಾನ್ಯರೇ, ನನ್ನದೊಂದು ತಿದ್ದುಪಡಿ ಇದೆ.

ಅಧ್ಯಕ್ಷ: ನನ್ನನ್ನು ಕ್ಷಮಿಸಿರಿ. ಸಾಧ್ಯವಾಗದು ಎನ್ನುವುದಕ್ಕೆ ನನಗೆ ತುಂಬಾ ಖೇದವೆನಿಸುತ್ತಿದೆ.

ಡಾ. ಅಂಬೇಡ್ಕರ್: ಈ ತಿದ್ದುಪಡಿಯನ್ನು ೧೬ನೇ ಪ್ಯಾರಾದ ಅನಂತರ ಹೊಸ ಪ್ಯಾರಾ ಮಾಡಿ ಸೇರಿಸಲು ನಾನು ಇಚ್ಛಿಸುತ್ತೇನೆ.

ಅಧ್ಯಕ್ಷ: ಅದನ್ನು ಕೊನೆಯ ಪ್ಯಾರಾ ಮಾಡಿರಿ.

ಡಾ. ಅಂಬೇಡ್ಕರ್: ಸರಿ.

ಅಧ್ಯಕ್ಷ: ಆಗ ಅದು ಅಧ್ಯಾರೋಹಿ ಪ್ಯಾರಾ ಆಗುತ್ತದೆ.

ಡಾ. ಅಂಬೇಡ್ಕರ್: ನನ್ನ ತಿದ್ದುಪಡಿ ಹೀಗಿದೆ: "ಅಲ್ಪಸಂಖ್ಯಾತರು ಮತ್ತು ನಿಮ್ನ ವರ್ಗದವರು ತಮ್ಮ ಬೇಡಿಕೆಗಳನ್ನು ಒಪ್ಪದ ಹೊರತು ಭಾರತಕ್ಕೆ ಸ್ವಯಂ ಆಡಳಿತ ಸರಕಾರದ ಸಂವಿಧಾನಕ್ಕೆ ಸಮ್ಮತಿಸುವುದಿಲ್ಲ" ಎಂದು ದೃಢವಾಗಿ ಹೇಳುತ್ತಾರೆ.:

ಅಧ್ಯಕ್ಷ: ವಾಸ್ತವವಾಗಿ ಅದನ್ನು ಈಗಾಗಲೇ ಹೇಳಿದ್ದಾಗಿದೆ ಮತ್ತು ಅದನ್ನು ತುಂಬಾ ಹೊಣೆಗಾರಿಕೆಯಿಂದ ಹೇಳಲಾಗಿದೆ; ಅದು ಕೇವಲ ವೈಯಕ್ತಿಕ ಅಭಿಪ್ರಾಯ.

ಡಾ. ಅಂಬೇಡ್ಕರ್: ಅದನ್ನು ಸೇರಿಸಲೇಬೇಕೆಂದು ನಾನು ಇಚ್ಛಿಸುತ್ತೇನೆ.

ಮಿ. ಜೋಶಿ: ಈ ಹೇಳಿಕೆಗೆ ಸಂಬಂಧಿಸಿದಂತೆ ಕಾರ್ಮಿಕರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸ ಲಾಗಿದೆಯೆಂಬುದು ನನ್ನ ಭಾವನೆ.

ಅಧ್ಯಕ್ಷ: ನಾನು ಅದನ್ನು ತಳ್ಳಿಹಾಕಲಾರೆ.

ಡಾ. ಅಂಬೇಡ್ಕರ್: "ಅವರ ಬೇಡಿಕೆಗಳನ್ನು ಯುಕ್ತ ರೀತಿಯಲ್ಲಿ ಒಪ್ಪದ ಹೊರತು" ಎಂಬ ಪದಗಳನ್ನು

ನಾನು ಒಪ್ಪುತ್ತೇನೆ.

ಅಧ್ಯಕ್ಷ: ಅಗ ಅದು ಅರ್ಥಹೀನವಾಗುತ್ತದೆ.

ಡಾ. ಅಂಬೇಡ್ಕರ್: ಅಥವಾ "ಅವರ ಯುಕ್ತ ಬೇಡಿಕೆಗಳನ್ನು ಒಪ್ಪಲಾಗಿದೆ."

ಮಿ. ಜಫ್ರುಲ್ಲಾಖಾನ್: ಬೇಡಿಕೆಗಳನ್ನು ಯುಕ್ತ ರೀತಿಯಲ್ಲಿ ಸಮಾಧಾನಪಡಿಸಿದರೆ ಅದರಿಂದ ಅವರು ಸಂತೋಷಪಡುತ್ತಾರೆ ಎಂದು ಯಾರಾದರೂ ಭಾವಿಸಿರುವಿರಾ?

ಮಿ. ಪುಟ್: ಇದು ಕ್ಲೇಮಿನ ಅಭಿಲೇಖ ಮಾತ್ರವೇ ಆಗಿದೆ.

ಅಧ್ಯಕ್ಷ: ಇದು ಕ್ಲೇಮಿನ ಕೇವಲ ಅಭಿಲೇಖ ಮಾತ್ರ ಆಗಿದೆ. ಆ ಪ್ಯಾರಾವನ್ನು ಹೊಸದಾಗಿ ೧೮ನೇ ಪ್ಯಾರಾ ಆಗಿ ಸೇರಿಸಬೇಕು.

## ಅನುಬಂಧ–I

ಸ್ವಯಮಾಡಳಿತ ಭಾರತದ ಭಾವೀ ಸಂವಿಧಾನದಲ್ಲಿ ನಿಮ್ನ ವರ್ಗದವರ ಸಂರಕ್ಷಣೆಗಾಗಿ ರಾಜಕೀಯ ರಕ್ಷಣೋಪಾಯಗಳ ಯೋಜನೆ.

**(ಉಪಸಮಿತಿ–IIIರ (ಅಲ್ಪಸಂಖ್ಯಾತರು) ವ್ಯವಹರಣೆಗಳು ೧೬೮–೭೬)**
**ಉಪಸಮಿತಿ–IIIರ (ಅಲ್ಪಸಂಖ್ಯಾತರು) ವರದಿಗೆ ಪರಿಶಿಷ್ಟ.**

(ಡಾ. ಭೀಮರಾವ್ ಆರ್. ಅಂಬೇಡ್ಕರ್ ಮತ್ತು ರಾವಬಹಾದ್ದೂರ ಆರ್. ಶ್ರೀನಿವಾಸನ್ ಅವರು ಮಂಡಿಸಿದ್ದು)

ಕೆಳಗೆ ಹೇಳಲಾಗಿರುವ ಷರತ್ತುಗಳ ಮತ್ತು ನಿಬಂಧನೆಗಳ ಮೇಲೆ ನಿಮ್ನವರ್ಗದವರು ಸ್ವಯಮಾಡಳಿತ ಭಾರತದಲ್ಲಿ ಬಹುಮತದ ಆಡಳಿತಕ್ಕೆ ಸಮ್ಮತಿಸುತ್ತಾರೆ.

## ಷರತ್ತು–೧
## ಸಮಾನ ಪೌರತ್ವ

ಈಗಿರುವ ವಂಶಪಾರಂಪರ್ಯವಾದ ಜೀತ ಪದ್ಧತಿಯಲ್ಲಿ ಬಹುಮತದವರಿಗೆ ತಮ್ಮನ್ನು ಒಪ್ಪಿಸಿಕೊಳ್ಳಲು ನಿಮ್ನ ವರ್ಗದವರು ಸಮ್ಮತಿಸಲಾರರು. ಬಹುಮತದ ಆಡಳಿತವನ್ನು ಸ್ಥಾಪಿಸುವ ಮೊದಲು ಅಸ್ಪೃಶ್ಯತಾ ಪದ್ಧತಿಯಿಂದ ಅವರನ್ನು ಬಿಡುಗಡೆ ಮಾಡಬೇಕಾದದ್ದು ಆವಶ್ಯಕ. ಅದನ್ನು ಬಹುಮತದವರ ಇಚ್ಛೆಗೆ ಬಿಡತಕ್ಕುದಲ್ಲ. ರಾಜ್ಯದ ಇತರ ನಾಗರಿಕರೊಡನೆ ನಿಮ್ನ ವರ್ಗದವರನ್ನೂ ಸಹ ನಾಗರಿಕನ ಎಲ್ಲ ಹಕ್ಕಗಳನ್ನೂ ಅನುಭವಿಸಲು ಹಕ್ಕುಳ್ಳ ಸ್ವತಂತ್ರ ನಾಗರೀಕರನ್ನಾಗಿ ಮಾಡತಕ್ಕುದು.

(ಅ) ಅಸ್ಪೃಶ್ಯತಾ ನಿವಾರಣೆಯನ್ನು ಸಾಧಿಸಲು ಮತ್ತು ಸಮಾನ ಪೌರತ್ವವನ್ನು ರಚಿಸಲು ಕೆಳಗೆ ಹೇಳಲಾಗಿರುವ ಮೂಲಭೂತ ಹಕ್ಕುಗಳನ್ನು ಸಂವಿಧಾನದ ಭಾಗವಾಗಿ ಮಾಡಲು ಸೂಚಿಸ ಲಾಗಿದೆ.

## ಮೂಲಭೂತ ಹಕ್ಕು

"ರಾಜ್ಯದ ಎಲ್ಲ ಪ್ರಜೆಗಳೂ ಕಾನೂನಿನ ದೃಷ್ಟಿಯಲ್ಲಿ ಸಮಾನರು ಮತ್ತು ಸಮಾನ ಸಿವಿಲ್ ಹಕ್ಕುಗಳನ್ನು ಹೊಂದಿರುತ್ತಾರೆ. ಸದ್ಯ ಅಸ್ತಿತ್ವದಲ್ಲಿರುವ ಅಧಿನಿಯಮ ಮಿತಿ, ನಿಯಮನ, ಆದೇಶ, ಸಂಪ್ರದಾಯ ಅಥವಾ ಕಾನೂನನ್ನು ಅರ್ಥೈಸುವದರ ಮೂಲಕ ಯಾವುದೇ ದಂಡವನ್ನು, ಅನಾನುಕೂಲತೆಯನ್ನು ಅಥವಾ ಅಸಮರ್ಥತೆಯನ್ನು ವಿಧಿಸಲಾಗಿದೆಯೋ ಅಥವಾ ಅಸ್ಪೃಶ್ಯತೆಯ ಕಾರಣದಿಂದಾಗಿ ರಾಜ್ಯದ ಯಾವನೇ ಪ್ರಜೆಯ ವಿರುದ್ಧ ಭೇದಭಾವ ಮಾಡಲಾಗುತ್ತಿದೆಯೋ ಸಂವಿಧಾನವು ಜಾರಿಯಲ್ಲಿ ಬಂದ ದಿನದಿಂದ ಅವೆಲ್ಲವುಗಳೂ ಭಾರತದಲ್ಲಿ ಪರಿಣಾಮಕಾರಿಯಾಗುವುದು ನಿಂತು ಹೋಗುತ್ತದೆ."

> ಅಮೆರಿಕಾ ಸಂಯುಕ್ತ ಸಂಸ್ಥಾನದ ಸಂವಿಧಾನದ ತಿದ್ದುಪಡಿ ೧೪ ಮತ್ತು ಐರ್ಲಂಡ್ ಸರಕಾರದ ಅಧಿನಿಯಮ ೧೯೨೦, ೧೦ ಮತ್ತು ೧೧ ಜಿ.ಇ.ಓ ೫ ಚಾ ೬೭, ಕಲಮು ೫ (೨)ಅ

(ಬ) ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮ, ೧೯೧೯ರ ೧೧೦ ಮತ್ತು ೧೧೧ನೇ ಕಲಮುಗಳ ಮೇರೆಗೆ ಕಾರ್ಯಾಂಗದ ಅಧಿಕಾರಿಗಳು ನಾವು ಅನುಭೋಗಿಸುತ್ತಿರುವ ಬಡತಿ ಮತ್ತು ವಿನಾಯಿತಿಗಳನ್ನು ತೆಗೆದುಹಾಕುವುದು ಮತ್ತು ಅವರ ಕಾರ್ಯಾಂಗದ ಕ್ರಮಗಳಿಗಾಗಿ ಇರುವ ಹೊಣೆಗಾರಿಕೆಯು ಯುರೋಪದ ಬ್ರಿಟಿಶರ ಪ್ರಜೆಗಳ ವಿಷಯದಲ್ಲಿರುವಂತೆ ಸಹ ವ್ಯಾಪ್ತವಾಗಿರಬೇಕು.

> ಇದು ಎಲ್ಲ ಸಂವಿಧಾನಗಳಲ್ಲಿ ಹೀಗೆ ಇರುತ್ತದೆ. ಪ್ರೊ.ಕೀಥ್ ಅವರ ಟಿಪ್ಪಣಿಗಳನ್ನು ನೋಡಿರಿ ೨೦೭ ಪುಟ ೫೬

## ಷರತ್ತು–II
## ಸಮಾನ ಹಕ್ಕುಗಳ ಮುಕ್ತ ಅನುಭೋಗ

ಸಮಾನ ಹಕ್ಕುಗಳ ಘೋಷಣೆ ಪಡೆದುಕೊಳ್ಳುವುದರಿಂದ ನಿಮ್ನ ವರ್ಗದವರಿಗೆ ಯಾವುದೇ ಉಪಯೋಗವಿಲ್ಲ. ನಿಮ್ನ ವರ್ಗದವರು ಪೌರತ್ವದ ಸಮಾನ ಹಕ್ಕುಗಳನ್ನು ಚಲಾಯಿಸಲು ಪ್ರಯತ್ನಿಸಿದರೆ ಇಡೀ ಸಂಪ್ರದಾಯವಾದಿ ಸಮಾಜವನ್ನೇ ಅವರು ಎದುರಿಸಬೇಕಾಗುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಹಕ್ಕುಗಳ ಘೋಷಣೆಗಳು ಕೇವಲ ಉಚ್ಚಾರಣೆಗಳಾಗದಿರಬೇಕಾದರೆ ಮತ್ತು ದಿನನಿತ್ಯದ ವಾಸ್ತವ ಸಂಗತಿಗಳಾಗಿರಬೇಕಾಗಿದ್ದರೆ ಅವುಗಳನ್ನು ಹೀಗೆ ಘೋಷಿಸಲಾದ ಹಕ್ಕುಗಳ ಅನುಭೋಗದಲ್ಲಿ ಹಸ್ತಕ್ಷೇಪ ವಾಗುವುದನ್ನು ಸಾಕಷ್ಟು ಶ್ರಮದಿಂದಾಗಲೀ ಅಥವಾ ದಂಡ ತೆತ್ತಾಗಲೀ ರಕ್ಷಿಸಬೇಕು ಎಂದು ಅವರು ಬಯಸುತ್ತಾರೆ.

(ಎ) ಈ ಕಾರಣದಿಂದಾಗಿ ನಿಮ್ನವರ್ಗದವರು, ಅಪರಾಧಗಳು, ಪ್ರಕ್ರಿಯೆ ಮತ್ತು ದಂಡನೆಗಳಿಗೆ ಸಂಬಂಧಿಸಿರುವ ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮ ೧೯೧೯ರ ೧೧ನೇ ಭಾಗದಲ್ಲಿ ಕೆಳಗೆ ಹೇಳಲಾಗಿರುವ ಕಲಮನ್ನು ಸೇರಿಸಲು ಸೂಚಿಸುತ್ತಾರೆ.

(೧) ಪೌರ ಉಲ್ಲಂಘನೆಯ ಅಪರಾಧ.

ಅಸ್ಪೃಶ್ಯತೆಯ ಮುಂಚಿನ ಸ್ಥಿತಿ ಏನೇ ಇದ್ದಾಗ್ಯೂ ಯಾರೇ ಆಗಲಿ, ಎಲ್ಲ ವರ್ಗದವರಿಗೂ ಸಹ

ಯು.ಎಸ್.ಶಾಸನಗಳು ೧೮೬೬ರ ಏಪ್ರಿಲ್‌ರ ಸಿವಿಲ್ ರೈಟ್ಸ್ ಪ್ರೊಟೆಕ್ಷನ್ ಅಧಿ ನಿಯಮಗಳು ಮತ್ತು ಮಾರ್ಚ್ ೧, ೧೮೭೫ನೇ ಶಾಸನಗಳು ನೀಗ್ರೋಗಳ ಜೀತ ವಿಮುಕ್ತಿಯ ಅನಂತರ ಅವರ ಹಿತಾಸಕ್ತಿಗಾಗಿ ಮಾಡಲ್ಪಟ್ಟವುಗಳು.

ಅನ್ವಯಿಸುವ ಕಾನೂನಿನ ಕಾರಣದಿಂದಾಗಿ ಹೊರತು ಯಾವುದೇ ಸ್ಥಳಾವಕಾಶವನ್ನು ಅನುಕೂಲತೆಗಳನ್ನು, ಸವಲತ್ತುಗಳನ್ನು, ಖಾನಾವಳಿ, ಶೈಕ್ಷಣಿಕ ಸಂಸ್ಥೆ, ರಸ್ತೆ ಹಾದಿಗಳು, ಓಣಿಗಳು, ಕೆರೆಗಳು, ಬಾವಿಗಳು ಮತ್ತು ನೀರು ಪೂರೈಸುವ ಇತರ ಸ್ಥಳಗಳು, ಭೂಮಿ, ನೀರು ಮತ್ತು ಆಕಾಶಗಳ ಮೂಲಕ ಮಾಡುವ ಸಾರ್ವಜನಿಕ ಸಾರಿಗೆ ಸಾಧನಗಳು, ಥೇಟರುಗಳು ಅಥವಾ ಇತರ ಸಾರ್ವಜನಿಕ ಮನರಂಜನಾ ಸ್ಥಳಗಳು, ವಸತಿ ಸ್ಥಾನಗಳು ಅಥವಾ ಅನುಕೂಲ ಸ್ಥಳಗಳು, ಅವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ದತ್ತಿಯಾಗಿ ಕೊಟ್ಟಿರಲಿ ಅಥವಾ ಇಟ್ಟುಕೊಂಡು ಬಂದಿರಲಿ ಅಥವಾ ಲೈಸನ್ಸನ್ನು ಕೊಟ್ಟಿರಲಿ, ಅವುಗಳ ಸಂಪೂರ್ಣ ಅನುಭೋಗವನ್ನು ನಿರಾಕರಿಸಿದರೆ ಅವನಿಗೆ ಐದು ವರುಷಗಳವರೆಗೆ ವಿಸ್ತರಿಸಬಹುದಾದ ಸೆರೆಮನೆ ವಾಸವನ್ನು ಮತ್ತು ದಂಡವನ್ನು ವಿಧಿಸಬಹುದು.

(ಬಿ) ಅವರ ಹಕ್ಕುಗಳನ್ನು ಶಾಂತ ರೀತಿಯಿಂದ ಅನುಭೋಗಿಸಲು ನಿಮ್ನ ವರ್ಗದವರಿಗೆ ಸಂಪ್ರದಾಯವಾದಿ ವ್ಯಕ್ತಿಗಳು ಮಾಡುವ ಅಡ್ಡಿಯಷ್ಟೇ ಅಲ್ಲದೆ, ಸಾಮಾಜಿಕ ಬಹಿಷ್ಕಾರವು ಸಂಪ್ರದಾಯ ವಾದಿ ವರ್ಗದವರ ಕೈಯಲ್ಲಿರುವ ಮಹಾ ಅಸ್ತ್ರ. ನಿಮ್ನ ವರ್ಗದವರು ಕೈಕೊಂಡ ಕಾರ್ಯಕ್ರಮವು ಅವರಿಗೆ ಸರಿಬರದಿದ್ದರೆ, ಈ ಸಂಪ್ರದಾಯವಾದಿಗಳು ಈ ಅಸ್ತ್ರವನ್ನು ಉಪಯೋಗಿಸಿ ನಿಮ್ನವರ್ಗದವರ ಪ್ರಯತ್ನವನ್ನು ಹೊಸಕಿಹಾಕುತ್ತಾರೆ. ಅದು ಹೇಗೆ ಕಾರ್ಯ ಮಾಡುತ್ತದೆ ಮತ್ತು ಅದನ್ನು ಯಾವ ಸಂದರ್ಭ ಗಳಲ್ಲಿ ಕಾರ್ಯಾಚರಣೆಯಲ್ಲಿ ತರಲಾಗುತ್ತಿದೆ ಎಂಬುದನ್ನು ಮುಂಬಯಿ ಸರಕಾರದವರು ೧೯೨೮ರಲ್ಲಿ ನೇಮಿಸಿದ ಸಮಿತಿಯ ವರದಿಯಲ್ಲಿ ಉತ್ತಮ ರೀತಿಯಲ್ಲಿ ವರ್ಣಿಸಲಾಗಿದೆ. ಈ ಸಮಿತಿಯನ್ನು ಈ ಪ್ರಾಂತದಲ್ಲಿನ ನಿಮ್ನ ವರ್ಗದವರ (ಅಸ್ಪೃಶ್ಯರ) ಮತ್ತು ಆದಿವಾಸಿಗಳ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳ ಬಗ್ಗೆ ವಿಚಾರಣೆ ನಡೆಸಲು ಮತ್ತು ಅವರ ಏಳ್ಗೆಗಾಗಿ ವಿಧಾನಗಳನ್ನು ಶಿಫಾರಸು ಮಾಡಲು ನೇಮಿಸಲಾಗಿತ್ತು.

(ಈ ಮುಂದೆ ಕೊಟ್ಟಿರುವುದು ಅದರಿಂದ ಉದ್ಧರಿಸಲ್ಪಟ್ಟ ಭಾಗ.)

## ನಿಮ್ನ ವರ್ಗದರು ಮತ್ತು ಸಾಮಾಜಿಕ ಬಹಿಷ್ಕಾರ:

"೧೦೨: ಎಲ್ಲ ಸಾರ್ವಜನಿಕ ಸೌಕರ್ಯಗಳಿಗೆ ನಿಮ್ನ ವರ್ಗದವರಿಗೆ ಇರುವ ಹಕ್ಕುಗಳನ್ನು ಅವರಿಗೆ ಒದಗಿಸಿಕೊಡಲು ನಾವು ಹಲವಾರು ಪರಿಹಾರೋಪಾಯಗಳನ್ನು ಶಿಫಾರಸು ಮಾಡಿದಾಗ್ಯೂ ಆ ಹಕ್ಕು ಗಳನ್ನು ಅವರು ಚಲಾಯಿಸುವಲ್ಲಿ ಅವರಿಗೆ ಬಹುಕಾಲದವರೆಗೆ ಅಡ್ಡಿಯುಂಟಾಗಬಹುದಾದ ಭಯವಿದೆ. ಮೊದಲನೆಯ ಅಡ್ಡಿಯೆಂದರೆ ಸಂಪ್ರದಾಯವಾದಿ ವರ್ಗದವರು ಅವರ ವಿರುದ್ಧ ಬಹಿರಂಗ ಹಿಂಸೆ ಗಿಳಿಯುವುದು. ಪ್ರತಿಯೊಂದು ಹಳ್ಳಿಯಲ್ಲೂ ನಿಮ್ನ ವರ್ಗದವರು ಅತಿ ಚಿಕ್ಕದಾದ ಅಲ್ಪಸಂಖ್ಯಾತರ ಗುಂಪು ಆಗಿರುತ್ತಾರೆ. ಅವರ ವಿರುದ್ಧ ಬಹುಸಂಖ್ಯಾತ ಸಂಪ್ರದಾಯವಾದಿಗಳ ದೊಡ್ಡ ವರ್ಗವೇ ಇರುತ್ತದೆ ಮತ್ತು ಈ ಸಂಪ್ರದಾಯವಾದಿ ವರ್ಗದವರು ಈ ನಿಮ್ನ ವರ್ಗದವರಿಂದ ತಮ್ಮ ಹಿತಾಸಕ್ತಿಗಳಿಗೆ ಮತ್ತು ದೊಡ್ಡಸ್ತಿಕೆಗೆ ಆಗಬಹುದಾದ ಯಾವುದೇ ಊಹ್ಯ ಆಕ್ರಮಣದಿಂದ ಅವುಗಳನ್ನು ಯಾವುದೇ ಸಂದರ್ಭದಲ್ಲಿ ರಕ್ಷಿಸಿಕೊಳ್ಳಲು ಸಿದ್ಧರಿರುತ್ತಾರೆ. ಸಂಪ್ರದಾಯವಾದಿಗಳು ಬಲಪ್ರಯೋಗ ಮಾಡುವುದಕ್ಕೆ ಪೊಲೀಸರು

ಕ್ರಮ ಕೈಕೊಳ್ಳಬಹುದಾದ ಭಯವು ಒಂದು ಪರಿಮಿತಿಯನ್ನು ಹಾಕಿದೆ. ಆ ಪರಿಣಾಮವಾಗಿ ಅಂಥ ಪ್ರಕರಣಗಳು ಅಪರೂಪವಾಗಿವೆ.

ಎರಡನೆಯ ಅಡ್ಡಿಯೆಂದರೆ ಇಂದು ನಿಮ್ನ ವರ್ಗದವರು ಇರುವ ಆರ್ಥಿಕ ಸ್ಥಿತಿಯಿಂದ ಉಂಟಾಗಿರುವುದು. ಪ್ರಾಂತದ ಹೆಚ್ಚಿನ ಭಾಗಗಳಲ್ಲಿ ನಿಮ್ನ ವರ್ಗದವರಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲ. ಹಲವರು ಸಂಪ್ರದಾಯವಾದಿ ವರ್ಗದವರ ಜಮೀನುಗಳನ್ನು ಅವರ ಇಷ್ಟ ಇರುವವರೆಗೆ ಮಾತ್ರ ಸಾಗುವಳಿ ಮಾಡುತ್ತಾರೆ. ಇತರರು ಈ ಸಂಪ್ರದಾಯವಾದಿಗಳ ಜಮೀನಿನಲ್ಲಿ ಕೂಲಿಗಳಾಗಿ ದುಡಿದು ಬಂದದ್ದರಲ್ಲಿ ಬದುಕುತ್ತಾರೆ ಮತ್ತು ಉಳಿದ ಇತರರು ತಾವು ಹಳ್ಳಿಯ ಸೇವಕರಾಗಿ ಮಾಡಿದ ಸೇವೆಗೆ ಈ ಸಂಪ್ರದಾಯವಾದಿಗಳು ಕೊಟ್ಟ ಆಹಾರ, ಕಾಳುಕಡಿಗಳ ಮೇಲೆ ಜೀವಿಸುತ್ತಾರೆ. ನಿಮ್ನವರ್ಗದವರು ತಮ್ಮ ಹಕ್ಕುಗಳನ್ನು ಚಲಾಯಿಸಲು ಧೈರ್ಯಮಾಡಿದಾಗಲೆಲ್ಲ ಈ ಸಂಪ್ರದಾಯವಾದಿಗಳು ತಮ್ಮ ಗ್ರಾಮಗಳಲ್ಲಿನ ಆ ನಿಮ್ನವರ್ಗದವರ ವಿರುದ್ಧ ತಮ್ಮ ಆರ್ಥಿಕ ಶಕ್ತಿಯನ್ನು ಆಯುಧವನ್ನಾಗಿ ಉಪಯೋಗಿಸಿ ಮತ್ತು ಅವರನ್ನು ತಮ್ಮ ಜಮೀನುಗಳಿಂದ ಹೊರಹಾಕಿದ, ಅವರಿಗೆ ಕೂಲಿ ಕೊಡುವುದನ್ನು ನಿಲ್ಲಿಸಿದ ಮತ್ತು ಹಳ್ಳಿಯ ಸೇವಕರೆಂದು ಅವರಿಗೆ ಕೊಡುವ ಪ್ರತಿಫಲವನ್ನು ನಿಲ್ಲಿಸಿದ ಹಲವಾರು ಉದಾಹರಣೆಗಳನ್ನು ನಾವು ಕೇಳಿದ್ದೇವೆ. ಈ ಬಹಿಷ್ಕಾರವು ಹಲವಾರು ಬಾರಿ ಪೂರ್ವ ನಿಯೋಜಿತವಾಗಿರುತ್ತಿತ್ತು. ಅಲ್ಲದೆ, ಅದು ನಿಮ್ನವರ್ಗದವರನ್ನು ಸಾರ್ವಜನಿಕ ರಸ್ತೆಯ ಉಪಯೋಗವನ್ನು ಪ್ರತಿಬಂಧಿಸುವ ಮತ್ತು ಹಳ್ಳಿಯ ಬನಿಯಾ ಅವರಿಗೆ ದಿನನಿತ್ಯದ ಜೀವನದ ಅವಶ್ಯಕ ವಸ್ತುಗಳನ್ನು ಕೊಡದಂತೆ ಮಾಡುವಂಥ ಕ್ರಮಗಳನ್ನು ಒಳಗೊಳ್ಳುತ್ತಿತ್ತು. ಲಭ್ಯವಿರುವ ಸಾಕ್ಷ್ಯದಂತೆ ಒಮ್ಮೊಮ್ಮೆ ಅತಿ ಚಿಕ್ಕ ಕಾರಣವೂ ಸಹ ನಿಮ್ನವರ್ಗದವರ ವಿರುದ್ಧ ಬಹಿಷ್ಕಾರ ಹಾಕಲು ಸಾಕಾಗುತ್ತಿತ್ತು. ನಿಮ್ನ ವರ್ಗದವರು ಸಾರ್ವಜನಿಕರ ಬಾವಿಯನ್ನು ಉಪಯೋಗಿಸುವ ಹಕ್ಕನ್ನು ಚಲಾಯಿಸಿದಾಗಲೂ ಅದನ್ನು ಅನುಸರಿಸಲಾಗುತ್ತಿತ್ತು. ನಿಮ್ನವರ್ಗದವನೊಬ್ಬನು ಜನಿವಾರ ಧರಿಸಿದನೆಂಬ ಅಥವಾ ಆಭರಣಗಳನ್ನು ಧರಿಸಿದನೆಂಬ ಅಥವಾ ಸಾರ್ವಜನಿಕ ರಸ್ತೆಯಲ್ಲಿ ಮದುಮಗನನ್ನು ಕುದುರೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿದರೆಂಬ ಕಾರಣ ಹೇಳಿ ತೀವ್ರತರವಾದ ಬಹಿಷ್ಕಾರ ಹಾಕಿದ ಉದಾಹರಣೆಗಳು ಕ್ವಚಿತ್ತಾದವುಗಳೇನೂ ಅಲ್ಲ.

"ನಿಮ್ನವರ್ಗದವರನ್ನು ಹತ್ತಿಕ್ಕಲು ಶೋಧಿಸಲಾಗಿರುವ ಇದಕ್ಕಿಂತ ಅತಿ ಹೆಚ್ಚು ಪರಿಣಾಕಾರಿಯಾದ ಯಾವ ಅಸ್ತ್ರವೂ ನಮಗೆ ಗೊತ್ತಿಲ್ಲ. ಬಹಿರಂಗ ಹಿಂಸಾಚಾರದ ವಿಧಾನವು ಈ ಬಹಿಷ್ಕಾರ ವಿಧಾನದ ಎದುರಿನಲ್ಲಿ ಕಳಾಹೀನವಾಗುತ್ತದೆ. ಯಾಕೆಂದರೆ ಅದು ತುಂಬಾ ಆಳವಾದ ಮತ್ತು ಮರಣಾಂತಿಕ ಪರಿಣಾಮಗಳನ್ನುಂಟು ಮಾಡುತ್ತದೆ. ಅದು ತುಂಬಾ ಅಪಾಯಕಾರಿಯಾಗಿರುತ್ತದೆ. ಏಕೆಂದರೆ ಅದು ಕರಾರಿನ ಸ್ವಾತಂತ್ರ್ಯದ ತತ್ವಕ್ಕೆ ಅನುಗುಣವಾದ ಕಾನೂನು ಸಮ್ಮತ ವಿಧಾನವಾಗುತ್ತದೆ. ನಿಮ್ನ ವರ್ಗದವರಿಗೆ ವಾಕ್ ಸ್ವಾತಂತ್ರ್ಯದ ಮತ್ತು ಅವರ ಉದ್ಧಾರಕ್ಕಾಗಿ ಅಗತ್ಯದ ಕ್ರಮ ಕೈಗೊಳ್ಳುವ ಭರವಸೆಯನ್ನು ನಾವು ಕೊಡುವು ದಾದರೆ ಬಹುಮತದ ಈ ದಬ್ಬಾಳಿಕೆಯನ್ನು ದೃಢ ನಿರ್ಧಾರದಿಂದ ಹತ್ತಿಕ್ಕಲೇಬೇಕು."

ನಿಮ್ನವರ್ಗದವರ ಅಭಿಪ್ರಾಯದಲ್ಲಿ ಅವರ ಹಕ್ಕುಗಳಿಗೆ ಮತ್ತು ಸ್ವಾತಂತ್ರ್ಯಗಳಿಗೆ ಇರುವ ಗಂಡಾಂತರದಿಂದ ಪಾರಾಗಲು ಇರುವ ಒಂದೇ ಮಾರ್ಗವೆಂದರೆ ಸಾಮಾಜಿಕ ಬಹಿಷ್ಕಾರವನ್ನು ಕಾನೂನು ಮೇರೆಗೆ ದಂಡನೀಯ ಅಪರಾಧವನ್ನಾಗಿ ಮಾಡಬೇಕು ಎಂಬುದಾಗಿದೆ. ಈ ಕಾರಣದಿಂದಾಗಿಯೇ ಅಪರಾಧಗಳು, ಪ್ರಕ್ರಿಯೆ ಮತ್ತು ದಂಡನೆಗಳ ವಿಷಯದ ಬಗ್ಗೆ ಇರುವ ೧೯೧೯ರ ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮ ೧೧ನೇ ಭಾಗದಲ್ಲಿ ಇವುಗಳನ್ನು ಸೇರಿಸಬೇಕೆಂದು ಒತ್ತಾಯಿಸಬೇಕಾಗಿದೆ.

## I. ಬಹಿಷ್ಕಾರ ಅಪರಾಧದ ವ್ಯಾಖ್ಯೆ

(೧) ಯಾವನು ಮತ್ತೊಬ್ಬನಿಗೆ

(ಎ) ಯಾವುದೇ ಮನೆ ಅಥವಾ ಜಮೀನನ್ನು ಬಾಡಿಗೆಗೆ ಕೊಡಲು ಉಪಯೋಗಿಸಲು ಅಥವಾ ಸ್ವಾಧೀನದಲ್ಲಿಟ್ಟುಕೊಳ್ಳಲು ಅಥವಾ ಅವುಗಳ ಬಗ್ಗೆ ವ್ಯವಹರಿಸಲು, ಕೂಲಿಗಾಗಿ ದುಡಿಯಲು ಅಥವಾ ಮತ್ತೊಬ್ಬನೊಡನೆ ವ್ಯವಹಾರ ಮಾಡಲು ಅಥವಾ ಅವನಿಗೆ ಸೇವೆ ಸಲ್ಲಿಸಲು, ಅವನಿಂದ ಸೇವೆ ಪಡೆಯಲು ನಿರಾಕರಿಸಿದರೆ ಅಥವಾ ಸಾಮಾನ್ಯ ವ್ಯವಹಾರದ ರೀತಿಯಲ್ಲಿ ಈ ಯಾವುದೇ ವಿಷಯಗಳಲ್ಲಿನ ಯಾವುದನ್ನೇ ಆಗಲಿ ಹಾಗೆ ಮಾಡಲು ನಿರಾಕರಿಸಿದರೆ,

> ಇದನ್ನು ಮತ್ತು ಕೆಳಗಿನ ಉಪಬಂಧ ಗಳನ್ನು ಬರ್ಮಾ ಅಂಟಿ ಬಾಯ ಬಾಯ್ಕಾಟ್ ೧೯೨೨ರಲ್ಲಿ ಅವಿರು ವಂತೆಯೇ ಸಂದರ್ಭಕ್ಕೆ ಅಗತ್ಯ ವಾಗುವಂತೆ ಅಲ್ಪ ಬದಲಾವಣೆ ಯೊಂದಿಗೆ ಎತ್ತಿಕೊಳ್ಳಲಾಗಿದೆ.

(ಬಿ) ಒಂದು ಕೋಮಿನ ಅಸ್ತಿತ್ವದಲ್ಲಿರುವ ಮತ್ತು ಸಂವಿಧಾನದಲ್ಲಿ ಘೋಷಿಸಲಾಗಿರುವ ಮೂಲಭೂತ ಹಕ್ಕುಗಳಿಗೆ ಅಥವಾ ಪೌರತ್ವದ ಇತರ ಹಕ್ಕುಗಳಿಗೆ ಸಂಗತವಾಗಿರುವ ಸಂಪ್ರದಾಯಗಳನ್ನು ನಿರ್ಲಕ್ಷಿಸಿ ತಾನು ಮತ್ತೊಬ್ಬನೊಡನೆ ಸಾಮಾನ್ಯವಾಗಿ ಇಟ್ಟು ಕೊಂಡು ಬರಬೇಕಾಗಿರುವ ಸಾಮಾಜಿಕ, ವೃತ್ತಿಪರ ಅಥವಾ ವ್ಯವಹಾರದ ಸಂಬಂಧಗಳಿಂದ ವಿಮುಖನಾದರೆ,

(ಸಿ) ಯಾವನೊಬ್ಬನು ತನ್ನ ಕಾನೂನು ಸಮ್ಮತ ಹಕ್ಕುಗಳನ್ನು ಚಲಾಯಿಸುವಲ್ಲಿ ಅವನಿಗೆ ಯಾವುದೇ ರೀತಿಯಲ್ಲಿ ನೋವುಂಟುಮಾಡಿದರೆ, ಪೀಡಿಸಿದರೆ ಅಥವಾ ಹಸ್ತಕ್ಷೇಪ ಮಾಡಿದರೆ–

ಆ ವ್ಯಕ್ತಿಯು ಆ ಮತ್ತೊಬ್ಬನಿಗೆ ಬಹಿಷ್ಕಾರ ಹಾಕುತ್ತಾನೆ ಎಂದು ಭಾವಿಸ ತಕ್ಕುದು.

## II. ಬಹಿಷ್ಕಾರ ಮಾಡಿದ್ದಕ್ಕಾಗಿ ದಂಡನೆ

ಯಾರೇ ಆಗಲಿ, ಒಬ್ಬನು ತಾನು ಮಾಡಲು ಕಾನೂನಿನ ಪ್ರಕಾರ ಹಕ್ಕನ್ನು ಪಡೆದಿದ್ದು, ಅಂಥ ಕೃತ್ಯವನ್ನು ಮಾಡಿದ್ದಕ್ಕಾಗಿ ಅಥವಾ ತಾನು ಕಾನೂನು ಮೇರೆಗೆ ಮಾಡಬೇಕಾದ ಕೃತ್ಯವನ್ನು ಮಾಡದಿದ್ದಕ್ಕಾಗಿ ಅಥವಾ ಒಬ್ಬ ವ್ಯಕ್ತಿಯು ಕಾನೂನು ಮೇರೆಗೆ ಮಾಡಬಾರದ ಕೃತ್ಯವನ್ನು ಆತನು ಮಾಡುವಂತೆ ಮಾಡುವ ಇಚ್ಛೆಯಿಂದ ಅಥವಾ ತಾನು ಕಾನೂನು ಮೇರೆಗೆ ಮಾಡಬೇಕಾದ ಕೃತ್ಯವನ್ನು ಮಾಡದಿರುವಂತೆ ಮಾಡುವುದು ಅಥವಾ ಅಂಥ ವ್ಯಕ್ತಿಗೆ ದೈಹಿಕ, ಮಾನಸಿಕ, ನೋವನ್ನುಂಟುಮಾಡುವುದು ಅಥವಾ ಆತನ ಪ್ರತಿಷ್ಠೆಗೆ ಅಥವಾ ಸ್ವತ್ತಿಗೆ ಹಾನಿಯನ್ನುಂಟು ಮಾಡುವುದು ಅಥವಾ ಆತನ ವ್ಯವಹಾರದಲ್ಲಿ ಅಥವಾ ಜೀವನದ ಆಧಾರವಾಗಿರುವುದರಲ್ಲಿ ಆತನು ಮಾಡಿದ ಕೃತ್ಯದ ಪರಿಣಾಮವಾಗಿ ಅಂಥ ವ್ಯಕ್ತಿಗೆ ಅಥವಾ ಆ ವ್ಯಕ್ತಿಯಲ್ಲಿ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗೆ ಬಹಿಷ್ಕಾರ ಹಾಕಿದರೆ ಆತನಿಗೆ ಏಳು ವರುಷದವರೆಗೆ ವಿಸ್ತರಿಸಬಹುದಾದ ಸೆರೆಮನೆ ವಾಸದ ದಂಡನೆ ಅಥವಾ ಜುಲ್ಮಾನೆ ಅಥವಾ ಅವೆರಡಕ್ಕೂ ದಂಡವಾಗಿ ವಿಧಿಸಬಹುದು.

ಪರಂತು, ಆರೋಪಿತನು ಮತ್ತೊಬ್ಬನ ಚಿತಾವಣೆಯಿಂದ ಅಥವಾ ಮತ್ತೊಬ್ಬನೊಡನೆ ಹೊಂದಿಕೊಂಡು ಅಥವಾ ಮತ್ತೊಬ್ಬನ ಪ್ರೇರಣೆಯಿಂದ ಅಥವ ಮತ್ತೊಬ್ಬನೊಡನೆ ಒಂದಾಗಿ, ಅಥವಾ ಬಹಿಷ್ಕಾರ ಮಾಡಲು ಯಾವುದೇ ಸಂಚಿನ ಅಥವ ಯಾವುದೇ ಒಪ್ಪಂದದ ಅಥವಾ ಹೊಂದಾಣಿಕೆಯ ಕಾರಣದಿಂದಾಗಿ ಕೃತ್ಯ ಮಾಡಿಲ್ಲವೆಂದು ನ್ಯಾಯಾಲಯಕ್ಕೆ ಸಮಾಧಾನವಾದರೆ ಈ ಕಲಮಿನ ಮೇರೆಗೆ ಯಾವುದೇ ಅಪರಾಧವನ್ನು ಮಾಡಲಾಗಿಲ್ಲ ಎಂದು ಭಾವಿಸತಕ್ಕುದು.

## III. ಬಹಿಷ್ಕಾರವನ್ನು ಪ್ರಚೋದಿಸುವುದಕ್ಕೆ ಅಥವಾ ಉತ್ತೇಜಿಸುವುದಕ್ಕೆ ದಂಡನೆ.

(೧) ಯಾರೇ ಆಗಲಿ ಸಾರ್ವಜನಿಕವಾಗಿ ಬಹಿಷ್ಕಾರದ ಒಂದು ಪ್ರಸ್ತಾಪವನ್ನು ಮಾಡಿದರೆ ಅಥವಾ ಪ್ರಕಟಿಸಿದರೆ ಅಥವಾ ಹಂಚಿದರೆ ಅಥವಾ

(ಬಿ) ಯಾವುದೇ ಹೇಳಿಕೆಯನ್ನು, ಬಹಿಷ್ಕಾರದ ಬಗ್ಗೆ ಗಾಳಿಸುದ್ದಿಯನ್ನು ಅಥವಾ ವರದಿಯನ್ನು ಒಂದು ಇಚ್ಛೆಯಿಂದ ಅಥವಾ ಉಂಟುಮಾಡಬಹುದೆಂದು ನಂಬಲು ಕಾರಣವಿರುವಾಗ ಅಂಥ ಹೇಳಿಕೆಯನ್ನು ನೀಡಿದರೆ ಪ್ರಕಟಪಡಿಸಿದರೆ, ಹಂಚಿದರೆ ಅಥವಾ

(ಸಿ) ಬೇರೆ ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಬಹಿಷ್ಕಾರ ಹಾಕಲು ಪ್ರಚೋದಿಸಿದರೆ ಅಥವಾ ಉತ್ತೇಜಿಸಿದರೆ–

ಆತನು ಐದು ವರುಷಗಳವರೆಗೆ ವಿಸ್ತರಿಸಬಹುದಾದ ಸೆರೆಮನೆವಾಸದಿಂದ ಅಥವಾ ದಂಡದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

ವಿವರಣೆ: ಇಲ್ಲಿ ಉಲ್ಲೇಖಿಸಲಾದ ಸ್ವರೂಪದ ಯಾವುದೇ ಕೃತ್ಯದಿಂದ ಬಾಧಿತನಾದ ಅಥವಾ ಬಾಧಿತನಾಗಬಹುದಾದ ಯಾವನೇ ವ್ಯಕ್ತಿಯನ್ನು ಆತನ ಹೆಸರಿನ ಅಥವಾ ವರ್ಗದ ಮೂಲಕ ನಿರ್ದಿಷ್ಟವಾಗಿ ಸೂಚಿಸದಿದ್ದಾಗ್ಯೂ, ಈ ಕೃತ್ಯಗಳನ್ನು ಮಾಡಿದರೆ, ಹಾಗೆ ಮಾಡಿದ ವ್ಯಕ್ತಿಯು ಈ ಕಲಮಿನ ಪ್ರಕಾರ ಅಪರಾಧವನ್ನು ಮಾಡಿದ್ದಾನೆ ಎಂದು ಭಾವಿಸತಕ್ಕುದು.

## IV. ಬಹಿಷ್ಕಾರದ ಬೆದರಿಕೆಗೆ ದಂಡನೆ

ಯಾವನೇ ಆಗಲಿ, ಯಾವನೇ ಒಬ್ಬ ವ್ಯಕ್ತಿಯು ತಾನು ಕಾನೂನು ಮೇರೆಗೆ ಮಾಡಲು ಹಕ್ಕಿದ್ದ ಯಾವುದೇ ಕೃತ್ಯವನ್ನು ಮಾಡಿದ್ದಕ್ಕಾಗಿ ಅಥವಾ ಕಾನೂನು ಮೇರೆಗೆ ಮಾಡಬಾರದಾಗಿರುವ ಕೃತ್ಯವನ್ನು ಮಾಡದೇ ಬಿಟ್ಟದ್ದಕ್ಕಾಗಿ ಅಥವಾ ಒಬ್ಬ ವ್ಯಕ್ತಿಯು ಕಾನೂನು ಮೇರೆಗೆ ಮಾಡಬಾರದಾದ ಕೃತ್ಯವನ್ನು ಮಾಡುವಂತೆ ಮಾಡುವ ಉದ್ದೇಶದಿಂದ ಆ ವ್ಯಕ್ತಿಗೆ ಅಥವಾ ಆ ವ್ಯಕ್ತಿಯಲ್ಲಿ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗೆ ಬಹಿಷ್ಕಾರ ಹಾಕುವ ಬೆದರಿಕೆಯನ್ನು ಹಾಕಿದರೆ ಆತನು ಐದು ವರುಷಗಳವರೆಗೆ ವಿಸ್ತರಿಸಬಹುದಾದ ಸೆರೆಮನೆ ವಾಸದ ದಂಡನೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗ ತಕ್ಕುದು.

ಇದಕ್ಕೆ ಅಪವಾದವೆಂದರೆ

(i) ಸದ್ಭಾವನೆಯಿಂದ ಕೂಡಿದ ಕಾರ್ಮಿಕ ವಿವಾದದ ಸಮರ್ಥನೆಗಾಗಿ ಯಾವುದೇ ಕೃತ್ಯವನ್ನು ಮಾಡುವುದು.

(ii) ಸಾಮಾನ್ಯ ವ್ಯವಹಾರದಲ್ಲಿ ಸ್ಪರ್ಧೆಯ ಕೃತ್ಯವನ್ನು ಮಾಡುವುದು– ಬಹಿಷ್ಕಾರವಲ್ಲ.

ವಿಶೇಷ ಸೂಚನೆ: ಈ ಎಲ್ಲ ಅಪರಾಧಗಳನ್ನು ವಿಚಾರಣಾರ್ಹ ಅಪರಾಧಗಳೆಂದು ಭಾವಿಸ ತಕ್ಕುದು.

## ಷರತ್ತು-III

**ಭೇದಭಾವದ ವಿರುದ್ಧ ರಕ್ಷಣೆ**

ಶಾಸಕಾಂಗ ಅಥವಾ ಕಾರ್ಯಾಂಗವು ಮುಂದೆ ಮಾಡಬಹುದಾದ ಆದೇಶದ ಮೂಲಕ ಆಗಬಹುದಾದ ಭೇದಭಾವದ ಬಗ್ಗೆ ನಿಮ್ನವರ್ಗದವರು ಬಹಳ ಭಯಪಡುತ್ತಾರೆ. ಕಾರಣ ನಿಮ್ನವರ್ಗದವರ ವಿರುದ್ಧ ರೋಷನ್ನುಂಟುಮಾಡುವಂಥ ಭೇದಭಾವವನ್ನು ಶಾಸಕಾಂಗ ಅಥವಾ ಕಾರ್ಯಾಂಗ ಮಾಡುವುದು ಕಾನೂನು ಮೇರೆಗೆ ಅಸಾಧ್ಯವಾಗುವಂತೆ ಮಾಡದ ಹೊರತು ಅವರು ಬಹುಮತದ ಆಡಳಿತಕ್ಕೆ ಸಮ್ಮತಿಸಲಾರರು.

ಆದಕಾರಣ ಭಾರತದ ಸಂವಿಧಾನಾತ್ಮಕ ಕಾನೂನಿನಲ್ಲಿ ಕೆಳಗೆ ಹೇಳಿದ ಶಾಸನಾತ್ಮಕ ಉಪಬಂಧಗಳನ್ನು ಕಲ್ಪಿಸಲು ಸೂಚಿಸಲಾಗಿದೆ.

ಅಸ್ಪೃಶ್ಯತೆಯ ಮೊದಲಿನ ಸ್ಥಿತಿ ಯಾವುದೇ ಇದ್ದಾಗ್ಯೂ ಮತ್ತು ಭಾರತ ಡೊಮಿನಿಯನ್ನಿನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲ ಪ್ರದೇಶಗಳಲ್ಲಿ,

(೧) ಕರಾರುಗಳನ್ನು ಮಾಡಲು ಮತ್ತು ಚಲಾಯಿಸಲು, ದಾವೆ ಹೂಡಲು, ಪಕ್ಷಕಾರರಾಗುವುದು ಮತ್ತು ಸಾಕ್ಷಿ ಹೇಳುವುದು ವಾರಸಾ ಮೂಲಕ ಪಡೆಯುವುದು, ಖರೀದಿಸುವುದು, ಲಾವಣಿ ವೈಯಕ್ತಿಕ ಸ್ವತನ್ನು ಹೊಂದಿರುವುದು ಮತ್ತು ವರ್ಗಾವಣೆ ಮಾಡುವುದು.

(೨) ರಾಜ್ಯದ ಪ್ರಜೆಗಳ ಎಲ್ಲ ವರ್ಗಗಳ ಯುಕ್ತ ಮತ್ತು ತಕ್ಕ ಪ್ರಾತಿನಿಧ್ಯವನ್ನು ಕೊಡಲು ಅವಶ್ಯವಾದ ಷರತ್ತು ಮತ್ತು ಪರಿಮಿತಿಗಳ ಹೊರತು ಸಿವಿಲ್ ಮತ್ತು ಸೈನಿಕ ಸೇವೆಗಳಿಗೆ ಎಲ್ಲ ಶೈಕ್ಷಣಿಕ ಸಂಸ್ಥೆಗಳಿಗೆ ಸೇರಲು ಅರ್ಹರಾಗಿರುವುದು.

(೩) ಪ್ರತಿ ಜನಾಂಗದ, ವರ್ಗದ, ಜಾತಿಯ, ವರ್ಣದ ಅಥವಾ ವಂಶದ ಎಲ್ಲ ಪ್ರಜೆಗಳಿಗೆ ಸರಿಸಮವಾಗಿ ಅನ್ವಯವಾಗುವ ಷರತ್ತು ಮತ್ತು ಪರಿಮಿತಿಗಳಿಗೆ ಹೊರತಾಗಿ, ಸ್ಥಳಾವಕಾಶ, ಅನುಕೂಲತೆಗಳು, ಸೌಲಭ್ಯಗಳು, ಶೈಕ್ಷಣಿಕ ಸಂಸ್ಥೆಗಳು, ಊಟದ ಮನೆಗಳ ಸವಲತ್ತು, ನದಿಗಳು, ಪ್ರವಾಹಗಳು, ಬಾವಿಗಳು, ಕೆರೆಗಳು, ರಸ್ತೆಗಳು, ದಾರಿಗಳು, ಓಣಿಗಳು, ಭೂಮಿ ಆಕಾಶ ಮತ್ತು ನೀರ ಮೇಲಿನ ಸಾಗಣೆ, ಥೇಟರುಗಳು, ಮತ್ತು ಸಾರ್ವಜನಿಕ ಪ್ರವೇಶವಿರುವ ಅಥವಾ ಮನರಂಜನೆಯ ಎಲ್ಲ ಸ್ಥಳಗಳಿಗೆ ಪ್ರವೇಶಿಸುವ ಪೂರ್ಣ ಮತ್ತು ಸಮ ಅನುಭೋಗಕ್ಕಾಗಿ ಹಕ್ಕನ್ನು ಹೊಂದಿರುವುದು.

(೪) ಸಾರ್ವಜನಿಕರಿಗೆ ಅಥವಾ ಒಂದೇ ಶ್ರದ್ಧೆ ಮತ್ತು ಧರ್ಮದಲ್ಲಿ ನಂಬಿಕೆಯುಳ್ಳ ವ್ಯಕ್ತಿಗಳಿಗಾಗಿ ದಾನ ಮಾಡಿದ, ಅಥವಾ ಸ್ಥಾಪಿಸಿದ, ಅಥವಾ ಇಟ್ಟುಕೊಂಡು ಬಂದ ಅಥವಾ ಲೈಸನ್ಸು ಪಡೆದ ಯಾವುದೇ ಧಾರ್ಮಿಕ ಅಥವಾ ಧರ್ಮಾರ್ಥ ದತ್ತಿಯ ಪ್ರಯೋಜನಗಳನ್ನು ಯಾವುದೇ ಭೇದಭಾವವಿಲ್ಲದೆ ಹಂಚಿಕೊಳ್ಳಲು ಅರ್ಹರಾಗಿರುತ್ತಾರೆ ಮತ್ತು ಸಮರ್ಥರಾಗಿರುತ್ತಾರೆ ಎಂದು ಭಾವಿಸುವುದು.

(೫) ಮುಂಚಿನ ಅಸ್ಪೃಶ್ಯತೆಯ ಸ್ಥಿತಿಯು ಏನೇ ಇದ್ದಾಗ್ಯೂ ಇತರ ಪ್ರಜೆಗಳು ಅನುಭೋಗಿಸದಂತೆ ವ್ಯಕ್ತಿಗಳ ಮತ್ತು ಸ್ವತ್ತಿನ ಭದ್ರತೆಗಾಗಿ ಇರುವ ಎಲ್ಲ ಕಾನೂನುಗಳ ಮತ್ತು ವ್ಯವಹರಣೆಗಳ ಪೂರ್ಣ ಮತ್ತು

ಸಮಾನ ಪ್ರಯೋಜನವನ್ನು ಕ್ಲೇಮು ಮಾಡುವುದು ಮತ್ತು ಒಂದೇ ರೀತಿಯ ದಂಡನೆಗೆ, ನೋವಿಗೆ ಮತ್ತು ಜುಲ್ಮಾನೆಗಳಿಗೆ ಒಳಪಟ್ಟಿರುವುದು, ಇತರ ಯಾವುದಕ್ಕೂ ಅಲ್ಲ.

## ಷರತ್ತು-IV

–ಹಕ್ಕುಗಳ ವಿರುದ್ಧ ಅಥವಾ ಅವುಗಳನ್ನು ಉಲ್ಲಂಘಿಸುವಂತಹ, ಕಾನೂನುಗಳನ್ನು ಪಾಸು ಮಾಡುವುದಕ್ಕಾಗಲೀ ಜಾರಿಗೆ ತರುವುದಕ್ಕಾಗಲೀ ಅಧಿಕಾರವನ್ನು ಕಾರ್ಯಾಂಗವಾಗಲೀ, ಶಾಸಕಾಂಗವಾಗಲೀ ಹೊಂದಿರಬಾರದು.

ಶಾಸನ ಸಭೆಗಳಲ್ಲಿ ಯುಕ್ತ ಪ್ರಾತಿನಿಧ್ಯ:–

ನಿಮ್ನವರ್ಗದವರಿಗೆ ಅವರ ಕಲ್ಯಾಣಕ್ಕೆ ಭದ್ರತೆಯೊದಗಿಸುವ ಉದ್ದೇಶಕ್ಕಾಗಿ ಅವರಿಗೆ ಶಾಸ ಕಾಂಗದ ಮತ್ತು ಕಾರ್ಯಾಂಗದ ಮೇಲೆ ಪ್ರಭಾವ ಬೀರಲು ಸಾಕಷ್ಟು ರಾಜಕೀಯ ಅಧಿಕಾರವನ್ನು ಕೊಡತಕ್ಕುದು. ಈ ಕಾರಣಕ್ಕಾಗಿ ಕೆಳಗೆ ಹೇಳಲಾಗಿರುವ ಉಪಬಂಧಗಳನ್ನು ಚುನಾವಣಾ ಕಾನೂನಿನಲ್ಲಿ ಅವರಿಗಾಗಿ ಕಲ್ಪಿಸಬೇಕೆಂದು ಅವರು ಕೇಳುತ್ತಾರೆ.

(೧) ರಾಷ್ಟ್ರದ, ಪ್ರಾಂತದ ಮತ್ತು ಕೇಂದ್ರದ ಶಾಸನ ಸಭೆಗಳಲ್ಲಿ ಯುಕ್ತ ಪ್ರಾತಿನಿಧ್ಯದ ಹಕ್ಕು.

(೨) ತಮ್ಮ ಪ್ರತಿನಿಧಿಗಳೆಂದು ತಮ್ಮವರನ್ನೇ (ಎ) ವಯಸ್ಕ ಮತದಾನ ಪದ್ಧತಿಯಿಂದ, ಮತ್ತು (ಬಿ) ಮೊದಲಿನ ಹತ್ತು ವರುಷಗಳವರೆಗೆ ಬೇರೆ ಮತಕ್ಷೇತ್ರಗಳ ಮತ್ತು ಅನಂತರ ಜಂಟೀ ಮತಕ್ಷೇತ್ರಗಳ ಮತ್ತು ಕಾಯ್ದಿಟ್ಟ ಸ್ಥಳಗಳ ಮೂಲಕ ಮತ್ತು ಜಂಟಿ ಮತಕ್ಷೇತ್ರಗಳನ್ನು ನಿಮ್ನ ವರ್ಗದವರ ಮೇಲೆ ಹೇರತಕ್ಕುದಲ್ಲ ಎಂಬ ಅರ್ಥದಲ್ಲಿ ಜಂಟೀ ಮತ ಕ್ಷೇತ್ರಗಳನ್ನು ಅರ್ಥಮಾಡಿಕೊಂಡು ಚುನಾಯಿಸುವ ಹಕ್ಕು.

ವಿಶೇಷ ಸೂಚನೆ: ಇತರ ಕೋಮುಗಳಿಗೆ ಕೊಡಲಾದ ಪ್ರಾತಿನಿಧ್ಯದ ಪ್ರಮಾಣವನ್ನು ತಿಳಿಯದ ಹೊರತು ನಿಮ್ನ ವರ್ಗದವರಿಗೆ ಯುಕ್ತ ಪ್ರಾತಿನಿಧ್ಯ ಅಂದರೆ ಏನು ಎಂದು ಲೆಖ್ಖ ಹಾಕಿ ಹೇಳಲು ಬಾರದು. ಆದರೆ ನಿಮ್ನವರ್ಗದವರು ತಮಗೆ ಕೊಡಮಾಡಿದ ಪ್ರಾತಿನಿಧ್ಯಕ್ಕಿಂತ ಉತ್ತಮ ಪ್ರಾತಿನಿಧ್ಯವನ್ನು ಇತರ ಯಾವುದೇ ಕೋಮಿಗೆ ಕೊಡುವುದಕ್ಕೆ ಅವರು ಸಮ್ಮತಿಸುವುದಿಲ್ಲ ಎಂಬುದನ್ನು ತಿಳಿದುಕೊಳ್ಳಲೇ ಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮನ್ನು ಅನನುಕೂಲ ಪರಿಸ್ಥಿತಿಗೆ ಸಿಲುಕಿಸಿಕೊಳ್ಳಲು ಅವರು ಒಪ್ಪುವುದಿಲ್ಲ ಏನೇ ಇದ್ದರೂ, ಮುಂಬಯಿ ಮತ್ತು ಮದ್ರಾಸ್ ಪ್ರಾಂತದ ನಿಮ್ನ ವರ್ಗದವರಿಗೆ, ಆ ಪ್ರಾಂತಗಳಲ್ಲಿ ಇತರ ಅಲ್ಪಸಂಖ್ಯಾತರಿಗೆ ಎಷ್ಟೇ ಪ್ರಾತಿನಿಧ್ಯವಿದ್ದರೂ, ಪ್ರಾತಿನಿಧ್ಯದಲ್ಲಿ ಅವರ ಜನಸಂಖ್ಯೆಯ ಅನುಪಾತಕ್ಕಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರಬೇಕು.

## ಷರತ್ತು-V
## ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ

ಕಾನೂನಿನ ದುರುಪಯೋಗ ಪಡೆದುಕೊಂಡು ಅಥವಾ ಕಾನೂನನ್ನು ಜಾರಿಗೊಳಿಸುವಲ್ಲಿ ಕಾನೂನು ಅವರಿಗೆ ಕೊಟ್ಟ ವಿವೇಚನೆಯನ್ನು ನ್ಯಾಯ, ಧರ್ಮನ್ಯಾಯ ಮತ್ತು ವಿವೇಕಗಳ ವಿವೇಚನೆ ಇಲ್ಲದೆಯೇ ನಿಮ್ನ ವರ್ಗದವರಿಗೆ ಹಾನಿಕಾರಕವಾಗುವಂತೆ ಮತ್ತು ಉಚ್ಚ ಜಾತಿಯ ಹಿಂದೂಗಳಿಗೆ

ಸಹಾಯಕಾರಿ ಆಗುವಂತೆ ಮತ್ತು ಉಚ್ಚ ಜಾತಿಯ ಹಿಂದೂಗಳಿಗೆ ಸಹಾಯಕಾರಿ ಆಗುವಂತೆ ದುರುಪಯೋಗ ಮಾಡಿಕೊಂಡು ಸಾರ್ವಜನಿಕ ಸೇವೆಗಳ ಏಕಸ್ವಾಮ್ಯವನ್ನು ಪಡೆದುಕೊಂಡಿರುವ ಉಚ್ಚ ಜಾತಿಯ ಅಧಿಕಾರಿಗಳಿಂದ ನಿಮ್ನ ವರ್ಗದವರು ಎಣೆಯಿಲ್ಲದ ಕಷ್ಟ ಅನುಭವಿಸಿದ್ದಾರೆ. ಸಾರ್ವಜನಿಕ ಸೇವೆಗಳಲ್ಲಿರುವ ಉಚ್ಚ ಜಾತಿಯವರ ಏಕಸ್ವಾಮ್ಯವನ್ನು ನಷ್ಟಮಾಡುವ ಮತ್ತು ಸ್ಥಾನಗಳಿಗೆ ಭರ್ತಿ ಮಾಡುವಾಗ ನಿಮ್ನ ವರ್ಗದವರನ್ನು ಒಳಗೊಂಡು ಎಲ್ಲ ಕೋಮಿನವರಿಗೂ ಯುಕ್ತ ಪಾಲು ದೊರಕುವಂತೆ ಭರ್ತಿಯನ್ನು ನಿಯಮಿಸುವ ಮೂಲಕ ಈ ಕೇಡನ್ನು ತಪ್ಪಿಸಬಹುದು. ಈ ಉದ್ದೇಶಕ್ಕಾಗಿ ನಿಮ್ನ ವರ್ಗದವರು ಸಂವಿಧಾನಾತ್ಮಕ ಕಾನೂನಿನ ಭಾಗವಾಗಿ ಶಾಸನದ ಮೂಲಕ ಕಾನೂನುಗಳನ್ನು ಕೆಳಗಿನ ಪ್ರಸ್ತಾಪಗಳನ್ನು ಅಧಿನಿಯಮಿಸ ಬೇಕು ಎಂದು ಮಂಡಿಸಬೇಕಾಗಿದೆ:–

(೧) ಸಾರ್ವಜನಿಕ ಸೇವೆಗಳಿಗೆ ಭರ್ತಿಮಾಡಿಕೊಳ್ಳಲು ಹಾಗೂ ಅವುಗಳನ್ನು ನಿಯಂತ್ರಿಸಲು ಭಾರತದಲ್ಲಿ ಮತ್ತು ಪ್ರತಿಯೊಂದು ಪ್ರಾಂತದಲ್ಲಿ ಲೋಕಸೇವಾ ಆಯೋಗವನ್ನು ರಚಿಸಬೇಕು.

(೨) ಲೋಕಸೇವಾ ಆಯೋಗದ ಯಾವುದೇ ಸದಸ್ಯನನ್ನು ಶಾಸನಸಭೆಯ ಠರಾವಿನ ಮೂಲಕವಲ್ಲದೆ ತೆಗೆದುಹಾಕಬಾರದು ಮತ್ತು ಆತ ನಿವೃತ್ತನಾದ ಅನಂತರ ಸರಕಾರದ ಯಾವುದೇ ಸೇವೆಗೆ ನೇಮಿತನಾಗಬಾರದು.

(೩) ಗೊತ್ತುಪಡಿಸಿರುವ ಕಾರ್ಯ ಸಾಮರ್ಥ್ಯದ ಪರೀಕ್ಷೆಗೆ ಒಳಪಟ್ಟು (ಎ) ಎಲ್ಲ ಕೋಮು ಗಳಿಗೂ ಸಲ್ಲತಕ್ಕ ಮತ್ತು ಸಾಕಷ್ಟು ಪ್ರಾತಿನಿಧ್ಯವನ್ನು ದೊರಕಿಸಿಕೊಡುವ ರೀತಿಯಲ್ಲಿ ಸೇವೆಗಳಿಗೆ ಭರ್ತಿ ಮಾಡುವುದು ಮತ್ತು (ಬಿ) ಸಂಬಂಧಪಟ್ಟ ಯಾವುದೇ ವಿಶಿಷ್ಟ ಸೇವೆಯಲ್ಲಿ, ವಿವಿಧ ಕೋಮುಗಳಿಗೆ ಈಗಿರುವ ಪ್ರಾತಿನಿಧ್ಯದ ಮಟ್ಟವನ್ನು ಅನುಸರಿಸಿ, ಕಾಲಕಾಲಕ್ಕೆ ಪ್ರಾಶಸ್ತ್ಯವನ್ನು ಜಾರಿಗೆ ತರುವುದು.

## ಷರತ್ತು-VI

ಪೂರ್ವಗ್ರಹಪೀಡಿತ ಕ್ರಮದ ಅಥವಾ ಹಿತಾಸಕ್ತಿಗಳ ನಿರ್ಲಕ್ಷ್ಯದ ವಿರುದ್ಧ ಪರಿಹಾರ:–

ಭಾವೀ ಬಹುಮತದ ಆಳ್ವಿಕೆಯು ಸಂಪ್ರದಾಯವಾದಿಗಳ ಆಳ್ವಿಕೆಯೇ ಆಗುವುದೆಂಬ ಸಂಗತಿಯನ್ನು ಅನುಲಕ್ಷಿಸಿ, ನಿಮ್ನ ವರ್ಗದವರ ಅಂಥ ಬಹುಮತದ ಆಳ್ವಿಕೆಗೆ ತಮ್ಮ ಪರವಾಗಿ ಸಹಾನುಭೂತಿ ಇರು ವುದಿಲ್ಲ ಮತ್ತು ತಮ್ಮ ಹಿತಾಸಕ್ತಿಗಳಿಗೆ ಹಾನಿಯಾಗಬಹುದಾದ ಮತ್ತು ತಮ್ಮ ಜೀವಾಳದ ಅಗತ್ಯಗಳನ್ನು ನಿರ್ಲಕ್ಷಿಸುವ ಸಂಭವಗಳನ್ನು ಕಡೆಗಣಿಸುವಂತಿಲ್ಲ. ಅದಕ್ಕೆ ಪರಿಹಾರ ಕಲ್ಪಿಸಲೇಬೇಕು. ಏಕೆಂದರೆ ವಿಶೇಷ ವಾಗಿ, ಒದಗಿಸಿದರೂ ನಿಮ್ನ ವರ್ಗದವರು ಎಲ್ಲ ಶಾಸನ ಸಭೆಗಳಲ್ಲಿ ಅಲ್ಪಸಂಖ್ಯಾತರೇ ಆಗಿರುತ್ತಾರೆ. ಆದಕಾರಣ, ಪರಿಹಾರದ ವಿಧಾನಗಳ ಸಂವಿಧಾನದಲ್ಲಿ ಒದಗಿಸುವುದು ಅವಶ್ಯವೆಂದು ನಿಮ್ನ ವರ್ಗದವರು ಭಾವಿಸುತ್ತಾರೆ. ಇದಕ್ಕಾಗಿ ಭಾರತ ಸಂವಿಧಾನದಲ್ಲಿ ಈ ಕೆಳಗೆ ಹೇಳಲಾದ ಉಪಬಂಧವನ್ನು ಸೇರಿಸಬೇಕೆಂದು ಸೂಚಿಸಲಾಗಿದೆ–

"ಪ್ರತಿಯೊಂದು ಪ್ರಾಂತದಲ್ಲಿ ಮತ್ತು ಪ್ರಾಂತಕ್ಕಾಗಿ, ನಿಮ್ನ ವರ್ಗದವರ ಶಿಕ್ಷಣ, ಸ್ವಚ್ಛತೆ, ಸಾರ್ವಜನಿಕ ಸೇವೆಗಳಲ್ಲಿ ಭರ್ತಿ ಮತ್ತು ಇತರ ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ಬೆಳವಣಿಗಾಗಿ ಮತ್ತು ಅವರಿಗೆ ಹಾನಿಕಾರಕವಾಗಿ ಪರಿಣಮಿಸುವ ಯಾವುದನ್ನೂ ಮಾಡದಂತೆ ಯುಕ್ತ ಉಪಬಂಧ

ಕಲ್ಪಿಸುವುದು ಶಾಸಕಾಂಗದ ಮತ್ತು ಕಾರ್ಯಾಂಗದ ಅಥವಾ ಕಾನೂನು ಮೇರೆಗೆ ಸ್ಥಾಪಿತವಾದ ಯಾವುದೇ ಪ್ರಾಧಿಕಾರದ ಕರ್ತವ್ಯ ಮತ್ತು ಹೊಣೆಗಾರಿಕೆಯಾಗಿರುತ್ತದೆ."

"(೨) ಯಾವುದೇ ಪ್ರಾಂತದಲ್ಲಿ ಅಥವಾ ಭಾರತದಲ್ಲಿ ಈ ಕಲಮಿನ ಉಪಬಂಧಗಳ ಉಲ್ಲಂಘನೆಯಾದಲ್ಲಿ ಯಾವುದೇ ಪ್ರಾಂತೀಯ ಪ್ರಾಧಿಕಾರದ ಯಾವುದೇ ಕೃತ್ಯದ ಅಥವಾ ನಿರ್ಣಯದ ವಿರುದ್ಧ ಗವರ್ನರ್ ಜನರಲ್–ಇನ್–ಕೌನ್ಸಿಲ್ ಅವರಿಗೆ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಪ್ರಾಧಿಕಾರದ ಯಾವುದೇ ಕೃತ್ಯದ ಅಥವಾ ನಿರ್ಣಯದ ವಿರುದ್ಧ ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಅಪೀಲು ಸಲ್ಲಿಸಬಹುದು.

(೩) ಗವರ್ನರ್ ಜನರಲ್–ಇನ್–ಕೌನ್ಸಿಲ್ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಪ್ರಾಂತೀಯ ಪ್ರಾಧಿಕಾರವು ಅಥವಾ ಕೇಂದ್ರ ಪ್ರಾಧಿಕಾರವು ಈ ಕಲಮಿನ ಉಪಬಂಧಗಳನ್ನು ಕಾರ್ಯಗತ ಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಕಂಡುಬಂದಲ್ಲಿ, ಆಗ ಮತ್ತು ಅಂಥ ಪ್ರತಿಯೊಂದು ಪ್ರಕರಣದಲ್ಲಿ ಮತ್ತು ಪ್ರತಿ ಪ್ರಕರಣದ ಸಂದರ್ಭಗಳು, ಅಗತ್ಯಕ್ಕೆ ತಕ್ಕಂತೆ ಮಾತ್ರ, ಗವರ್ನರ್ ಜನರಲ್–ಇನ್–ಕೌನ್ಸಿಲ್ ಅಥವಾ ಸೆಕ್ರೆಟರಿ ಆಫ್ ಸ್ಟೇಟ್, ತಮಗೆ ಯುಕ್ತ ಕಂಡ ಅವಧಿಯವರೆಗೆ, ಈ ಕಲಮಿನ ಉಪಬಂಧಗಳನ್ನು ಮತ್ತು ಈ ಕಲಮಿನ ಮೇರೆಗಿನ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಪರಿಹಾರದ ಕ್ರಮಗಳನ್ನು ಗೊತ್ತುಪಡಿಸಬಹುದು ಮತ್ತು ಈ ಕ್ರಮಗಳಿಗೆ ಯಾವ ಪ್ರಾಧಿಕಾರದ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಪ್ರಾಧಿಕಾರಗಳು ಬದ್ಧವಾಗಿರತಕ್ಕುದು."

## ಷರತ್ತು-VII
## ವಿಶೇಷ ಇಲಾಖಾ ರಕ್ಷಣೆ

ನಿಮ್ನ ವರ್ಗದವರ ಅಸಹಾಯ, ನಿಸ್ಸಹಾಯ, ನಿರ್ಭಾಗ್ಯ ಮತ್ತು ನಿರ್ಜೀವ ಸ್ಥಿತಿಗೆ, ನಿಮ್ನ ವರ್ಗದವರಿಗೆ ಸಮಾನ ಸ್ಥಾನಮಾನ ಮತ್ತು ಸಮಾನ ನಡವಳಿಕೆಗೆ ಅವಕಾಶ ನೀಡದ ಇಡಿಯ ಸಂಪ್ರದಾಯವಾದಿ ಜನತೆಯ ಹಠಮಾರಿ ಮತ್ತು ದೃಢ ನಿರ್ಧಾರದ ವಿರೋಧವೇ ಸಂಪೂರ್ಣವಾಗಿ ಕಾರಣವೆನ್ನಬೇಕು. ಅವರು ಬಡವರು ಅಥವಾ ಭೂಹೀನ ಕೂಲಿಗಳ ವರ್ಗದವರು ಎಂದು ಹೇಳುವುದು ಅವರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಹೇಳುವುದು ವಾಸ್ತವ ಸಂಗತಿಯಾದರೂ, ಅದು ಭಾಷಣಕ್ಕೆ ಮಾತ್ರ ಸೀಮಿತವಾಗಲಾರದು. ಈ ನಿಮ್ನ ವರ್ಗದವರ ಬಡತನವು ಹೆಚ್ಚಾಗಿ ಸಾಮಾಜಿಕ ಪಕ್ಷಪಾತದ ಕಾರಣದಿಂದಾಗಿ ಉಂಟಾಗಿರುತ್ತದೆ. ಏಕೆಂದರೆ ಇದರಿಂದಾಗಿ ನಿಮ್ನ ವರ್ಗದವರಿಗೆ ಆಧಾರವಾಗಿದ್ದ ಉದ್ಯೋಗಗಳು ಅವರಿಗೆ ದೊರಕದಾದವು. ಇದು ನಿಜ ಸಂಗತಿ. ಇದು ನಿಮ್ನ ವರ್ಗದ ಕೂಲಿಗಳನ್ನು ಇತರ ಸಾಮಾನ್ಯ ಜಾತಿಯ ಕೂಲಿಗಳಿಂದ ಬೇರ್ಪಡಿಸುತ್ತದೆ ಮತ್ತು ಅನೇಕ ಸಂದರ್ಭಗಳಲ್ಲಿ ಅದು ಅವರಿಬ್ಬರ ನಡುವಣ ತೊಂದರೆಗೆ ಕಾರಣವಾಗುತ್ತದೆ. ನಿಮ್ನ ವರ್ಗದವರ ವಿರುದ್ಧ ನಡೆಸಲಾದ ದಬ್ಬಾಳಿಕೆಯ ಮತ್ತು ಹತ್ತಿಕ್ಕುವಿಕೆಯ ನಮೂನೆಗಳು ಹತ್ತು ಹಲವಾರು ತರಹದವುಗಳಾಗಿವೆ ಮತ್ತು ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ ಸಾಮರ್ಥ್ಯವು ಈ ನಿಮ್ನ ವರ್ಗದವರಲ್ಲಿ ತುಂಬಾ ಅಲ್ಪಪ್ರಮಾಣದ್ದು ಅನ್ನುವುದನ್ನು ನೆನಪಿನಲ್ಲಿಡಬೇಕು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಇರುವ ಮತ್ತು ಭಾರತದ ಎಲ್ಲೆಡೆ ನಡೆಯುವ ಇಂಥ ಸಂಗತಿಗಳನ್ನು ೫–೧೧–೧೯೮೨, ೭೩ನೆಯ

ಮದ್ರಾಸ ಸರಕಾರದ ಭೂ ಕಂದಾಯ ವ್ಯವಹರಣೆಗಳ ಅವತರಣಿಕೆಗಳಲ್ಲಿ ತುಂಬಾ ಉತ್ತಮವಾಗಿ ವರ್ಣಿಸಲಾಗಿದೆ. ಅದರಿಂದ ಆಯ್ದುಕೊಳ್ಳಲಾದ ಕೆಲವು ಭಾಗವನ್ನು ಕೆಳಗೆ ಕೊಡಲಾಗಿದೆ.

"೧೩೪: ದಬ್ಬಾಳಿಕೆಯ ಹಲವಾರು ನಮೂನೆಗಳನ್ನು ಈ ಹಿಂದೆ ಸೂಚಿಸಲಾಗಿದ್ದರೂ ಅವುಗಳನ್ನು ಕುತೂಹಲಕ್ಕಾಗಿಯಾದರೂ ಹೇಳಲೇಬೇಕು. ಪರೈಯಾರ ಅವಿಧೇಯತೆಯನ್ನು ದಂಡಿಸಲು ಅವರ ಒಡೆಯರು,

(ಎ) ಗ್ರಾಮ ನ್ಯಾಯಾಲಯದಲ್ಲಿ ಅಥವಾ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಸುಳ್ಳು ಮೊಕದ್ದಮೆಗಳನ್ನು ಹೂಡುವುದು.

(ಬಿ) ಪರೈಯಾ ಅವರ ದನಕರುಗಳನ್ನು ಹಿಡಿದುಹಾಕಲು ಪರೈಯಾಗಳು ಅವರ ದೇವಸ್ಥಾನಕ್ಕೆ ಹೋಗುವ ದಾರಿಗೆ ಅಡ್ಡಿಯನ್ನುಂಟುಮಾಡುವಂಥ ಅರ್ಜಿಯನ್ನು ಸಲ್ಲಿಸಿ, ಪರಾಚೇರಿಯ ಸುತ್ತುಮುತ್ತಲಿನ ಜಮೀನನ್ನು, ಮಾಡುವಂತೆ ಸರಕಾರದಿಂದ ಪಡೆದುಕೊಳ್ಳುವುದು.

(ಸಿ) ಪರಾಚೇರಿಯ ವಿರುದ್ಧ ಸರಕಾರದ ಖಾತೆಯಲ್ಲಿ ಮಿರಾಸಿ ಹೆಸರುಗಳನ್ನು ಹೊಸದಾಗಿ ದಾಖಲ್ಮಾಡುವುದು.

(ಡಿ) ಗುಡಿಸಲುಗಳನ್ನು ಕೆಡವಿಹಾಕುವುದು, ಮತ್ತು ಹಿತ್ತಲಿನಲ್ಲಿ ಬೆಳೆದ ಗಿಡಗಳನ್ನು ನಾಶ ಮಾಡುವುದು.

(ಇ) ಹಿಂದಿನಿಂದಲೂ ಇದ್ದ ಮೋಟ ಲಾವಣಿಯ ಅನುಭೋಗವನ್ನು ನಿರಾಕರಿಸುವುದು.

(ಎಫ್) ಪರೈಯಾ ಅವರ ಬೆಳೆಗಳನ್ನು ಬಲ ಪ್ರಯೋಗದಿಂದ ಕೊಯ್ಯುವುದು, ಅದನ್ನು ಎದುರಿಸಿದಾಗ ಅವರ ಮೇಲೆ ಕಳವಿನ ಮತ್ತು ದಂಗೆ ಎಬ್ಬಿಸಿದ ಆರೋಪಗಳನ್ನು ಹೇರುವುದು.

(ಜಿ) ತಪ್ಪು ತಿಳವಳಿಕೆಯನ್ನು ನೀಡಿ ಕಾಗದ ಪತ್ರಗಳನ್ನು ಅವರಿಂದ ಬರೆಯಿಸಿಕೊಂಡು ಅವರ ಸರ್ವನಾಶಕ್ಕೆ ಕಾರಣವಾಗುವುದು.

(ಹೆಚ್) ಅವರ ಜಮೀನಿನಿಂದ ನೀರು ಹರಿದುಹೋಗುವುದನ್ನು ನಿಲ್ಲಿಸುವುದು.

(ಐ) ಭೂ ಒಡೆಯನ ಕಂದಾಯ ಬಾಕಿಗಾಗಿ ಮೋಟ ಕುಳಗಳ ಸ್ವತ್ತನ್ನು ಯಾವುದೇ ಕಾನೂನುಸಮ್ಮತ ನೋಟೀಸನ್ನು ಕೊಡದೇ ಜಪ್ತಿ ಮಾಡುವುದು."

೧೩೫. ಈ ಹಾನಿಗಳಲ್ಲಿ ಯಾವೊಂದರ ಪರಿಹಾರಕ್ಕಾಗಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳಿರುತ್ತವೆ ಎಂದು ಹೇಳಬಹುದು. ನ್ಯಾಯಾಲಯಗಳಿರುವುದೇನೋ ನಿಜ. ಆದರೆ ಭಾರತವು ಹಳ್ಳಿಗಳಲ್ಲಿ ತಮ್ಮ ಹಕ್ಕಿಗಾಗಿ ಹೋರಾಡಲು ಬೇಕಾದ ಧೈರ್ಯವನ್ನು ಬೆಳೆಸುವುದಿಲ್ಲ. ನ್ಯಾಯಾಲಯಕ್ಕೆ ಹೋಗಲು ಧೈರ್ಯ ಬೇಕು. ಕಾನೂನು ಜ್ಞಾನವುಳ್ಳವರನ್ನು ನೇಮಿಸಿಕೊಳ್ಳಲು ಮತ್ತು ಇತರ ಖರ್ಚಿಗಾಗಿ ಹಣಬೇಕು; ಆ ಕೇಸು ಮತ್ತು ಅದರ ಮೇಲಿನ ಅಪೀಲು ನಡೆಯುವವರೆಗೂ ಬದುಕಲು ಆಧಾರಬೇಕು. ಇನ್ನೂ ಹೆಚ್ಚು ಹೇಳಬೇಕೆಂದರೆ, ಬಹಳ ಮೊಕದ್ದಮೆಗಳು ಪ್ರಥಮ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿರುತ್ತವೆ ಮತ್ತು ಈ ನ್ಯಾಯಾಲಯಗಳು ಕೆಲವೊಮ್ಮೆ ಭ್ರಷ್ಟ ಪೀಠಸ್ಥ ಅಧಿಕಾರಿಗಳನ್ನು ಹೊಂದಿರುತ್ತವೆ ಮತ್ತು ಅವರು ಬೇರೆ ಬೇರೆ ಕಾರಣಗಳಿಗಾಗಿ ಶ್ರೀಮಂತ ಮತ್ತು ಭೂ ಒಡೆಯರ ವರ್ಗಗಳಿಗೆ ಸೇರಿದವರಿಗೆ ಸಹಾನುಭೂತಿಯುಳ್ಳವರಾಗಿರುತ್ತಾರೆ.

೧೩೬. ಅಧಿಕಾರಿಗಳ ಮೇಲೆ ಈ ವರ್ಗದವರು ಹೊಂದಿರುವ ಪ್ರಭಾವದ ಬಗ್ಗೆ ಉತ್ಪ್ರೇಕ್ಷೆಗೊಳಿಸಿ

ಹೇಳಬೇಕಾಗಿಲ್ಲ. ಇದು ದೇಶೀಯ ಅಧಿಕಾರಿಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದೆ ಮತ್ತು ಯುರೋಪಿಯನ್ನರಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿದೆ. ಮೇಲಿನಿಂದ ಕೆಳಗಿನವರೆಗಿನ ಎಲ್ಲ ಕಚೇರಿಗಳು ಅವರ ಪ್ರತಿನಿಧಿಗಳಿಂದಲೇ ತುಂಬಿಕೊಂಡಿವೆ ಮತ್ತು ಅವರಿಗೆ ಪ್ರತಿಕೂಲವಾಗುವ ಯಾವ ಸಂದರ್ಭಗಳೂ ಇಲ್ಲ.

ಇಂಥ ಪರಿಸ್ಥಿತಿಗಳನ್ನು ಗಮನಿಸಿದಾಗ, ಸರಕಾರದ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ನಿಮ್ನ ವರ್ಗದವರ ಉದ್ಧಾರಕ್ಕೆ ಪ್ರಾಧಾನ್ಯತೆ ಕೊಡದ ಹೊರತು ಮತ್ತು ಸರಕಾರವು ನಿಶ್ಚಿತ ನೀತಿಯನ್ನು ಅನುಸರಿಸಿ ಮತ್ತು ದೃಢವಾದ ಪ್ರಯತ್ನ ಮಾಡಿ ಸಮಾನ ಅವಕಾಶವೊದಗಿಸುವುದನ್ನು ಕಾರ್ಯಗತಗೊಳಿಸಿದ ಹೊರತು, ನಿಮ್ನವರ್ಗದವರ ಉದ್ಧಾರವು ಸದ್ಭಾವದ ಆಶೆಯಾಗಿ ಮಾತ್ರ ಉಳಿಯಬಲ್ಲದು. ಈ ಗುರಿಯನ್ನು ಸಾಧಿಸಲು ನಿಮ್ನವರ್ಗದವರ ಸೂಚನೆ ಹೀಗಿದೆ. ಸಂವಿಧಾನಾತ್ಮಕ ಕಾನೂನು ಭಾರತ ಸರಕಾರದ ಮೇಲೆ ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮದಲ್ಲಿ ಕೆಳಕಂಡ ಕಲಮುಗಳನ್ನು ಸೇರಿಸಿ ಅವರ ಸಮಸ್ಯೆಗಳ ಬಗ್ಗೆ ಕ್ರಮ ಕೈಕೊಳ್ಳಲು ಎಲ್ಲ ಕಾಲಮಿತಿಯನ್ನೂ ಒಂದು ಪ್ರತ್ಯೇಕ ಇಲಾಖೆಯನ್ನೂ ಇಟ್ಟುಕೊಂಡು ಬರಬೇಕು:–

೧. ಈ ಸಂವಿಧಾನವನ್ನು ಜಾರಿಯಲ್ಲಿ ತರುವುದರ ಜೊತೆ ಜೊತೆಗೆ ಮತ್ತು ಅದರ ಭಾಗವಾಗಿ ಭಾರತ ಸರಕಾರದಲ್ಲಿ ಮಂತ್ರಿಯೊಬ್ಬರ ಹಿರಿಯತನದಲ್ಲಿ ನಿಮ್ನ ವರ್ಗದವರ ಹಿತಾಸಕ್ತಿಗಳ ಬಗ್ಗೆ ಗಮನ ಹರಿಸುವುದಕ್ಕಾಗಿ ಮತ್ತು ಅವರ ಕಲ್ಯಾಣಕ್ಕಾಗಿ ಒಂದು ಇಲಾಖೆಯನ್ನು ಸ್ಥಾಪಿಸಬೇಕು.

೨. ಆ ಮಂತ್ರಿಯು ಕೇಂದ್ರ ಶಾಸನ ಸಭೆಯ ವಿಶ್ವಾಸವನ್ನು ಹೊಂದಿರುವವರೆಗೆ ಆ ಅಧಿಕಾರದಲ್ಲಿರತಕ್ಕುದು.

೩. ತನಗೆ ಕಾನೂನು ಮೇರೆಗೆ ಕೊಡಲಾದ ಅಥವಾ ವರ್ಗಾಯಿಸಲಾದ ಅಧಿಕಾರಗಳನ್ನೂ ಮತ್ತು ಕರ್ತವ್ಯಗಳನ್ನೂ ಚಲಾಯಿಸುವಲ್ಲಿ, ನಿಮ್ನ ವರ್ಗದವರ ವಿರುದ್ಧ ಮಾಡಲಾಗುವ ಸಾಮಾಜಿಕ ಅನ್ಯಾಯ, ದಬ್ಬಾಳಿಕೆ ಅಥವಾ ಹತ್ತಿಕ್ಕುವುದು ಮೊದಲಾದ ಕೃತ್ಯಗಳನ್ನು ಪ್ರತಿಬಂಧಿಸುವ ಪರಿಹಾರ ವ್ಯವಸ್ಥೆಯ ಸಿದ್ಧತೆ, ಪರಿಣಾಮಕಾರಿ ಅನುಷ್ಠಾನ ಹಾಗೂ ಸಮಸ್ಯೆಗಳನ್ನು ಸುನಿಶ್ಚಿತಗೊಳಿಸಲು ಇಡಿಯ ಭಾರತದಲ್ಲೆಲ್ಲ ಅವರ ಕಲ್ಯಾಣಕ್ಕೆ ಸಹಾಯಕಾರಿಯಾಗುಂಥ ಎಲ್ಲ ಕ್ರಮಗಳನ್ನು ಕೈಕೊಳ್ಳುವುದು ಆ ಮಂತ್ರಿಯ ಕರ್ತವ್ಯವಾಗಿರತಕ್ಕದ್ದು."

"(ಎ) ನಿಮ್ನ ವರ್ಗದವರ ಕಲ್ಯಾಣಕ್ಕೆ ಸಂಬಂಧಿಸಿದ ಶಿಕ್ಷಣ, ಆರೋಗ್ಯ ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದೇ ಅಧಿನಿಯಮಗಳಿಂದ ಕೊಡಲಾದ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಆ ಮಂತ್ರಿಗೆ ವರ್ಗಾಯಿಸಲು,

(ಬಿ) ಆ ಮಂತ್ರಿಯೊಂದಿಗೆ ಹೊಂದಾಣಿಕೆಯಿಂದ ಮತ್ತು ಆ ಪ್ರಾಂತೀಯ ಅಧಿಕಾರದ ಅಡಿಯಲ್ಲಿ ಮತ್ತು ಅವರೊಂದಿಗೆ ಕಾರ್ಯ ನಿರ್ವಹಿಸಲು ಪ್ರತಿ ಪ್ರಾಂತ್ಯದಲ್ಲಿ ನಿಮ್ನ ವರ್ಗದವರ ಕಲ್ಯಾಣಕ್ಕಾಗಿ ಒಂದು ಬ್ಯುರೋ ಸ್ಥಾಪಿಸುವುದು."

–ಇವುಗಳಿಗೆ ಗೌರ್ನರ್ ಜನರಲ್ಲರಿಗೆ ಅಧಿಕಾರವಿರತಕ್ಕದ್ದು.

## ಷರತ್ತು-VIII
## ನಿಮ್ನ ವರ್ಗಗಳು ಮತ್ತು ಮಂತ್ರಿಮಂಡಲ

ನಿಮ್ನ ವರ್ಗಗಳು ಮತ್ತು ಮಂತ್ರಿ ಮಂಡಲದ ಕ್ರಮಗಳ ಮೇಲೆ ಪ್ರಭಾವ ಬೀರಲು ನಿಮ್ನವರ್ಗದವರಿಗೆ ಅಧಿಕಾರವಿರುವುದು ಹೇಗೆ ಅವಶ್ಯವೋ ಹಾಗೆಯೇ ಸರಕಾರದ ಸಾಮಾನ್ಯ ನೀತಿಯನ್ನು ರೂಪಿಸುವಲ್ಲಿ ನಿಮ್ನವರ್ಗದವರಿಗೆ ಅವಕಾಶವಿರತಕ್ಕುದು ಎಂಬುದೂ ಸಹ ಅಪೇಕ್ಷಣೀಯವಾದ ವಿಷಯವಾಗಿದೆ. ಇದನ್ನು ಸಾಧಿಸುವುದು ಅವರು ಮಂತ್ರಿಮಂಡಲದಲ್ಲಿ ಒಂದು ಸ್ಥಾನವನ್ನು ಪಡೆದುಕೊಳ್ಳುವುದರಿಂದ ಮಾತ್ರ ಸಾಧ್ಯ. ಆದ ಕಾರಣ, ಇತರ ಅಲ್ಪಸಂಖ್ಯಾತರ ಹಾಗೆಯೇ ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯ ಹೊಂದಿರತಕ್ಕ ತಮ್ಮ ನೈತಿಕ ಹಕ್ಕುಗಳಿಗೆ ಮನ್ನಣೆ ನೀಡಬೇಕೆಂದು ನಿಮ್ನವರ್ಗದವರು ಕ್ಲೇಮು ಮಾಡುತ್ತಾರೆ. ಈ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ನಿಮ್ನವರ್ಗದವರು–

ಸೂಚನೆಗಳ ದಸ್ತಾವೇಜಿನಲ್ಲಿ ಮಂತ್ರಿಮಂಡಲದಲ್ಲಿ ನಿಮ್ನ ವರ್ಗದವರ ಪ್ರಾತಿನಿಧ್ಯವನ್ನು ದೊರಕಿಸಿ ಕೊಳ್ಳಲು ಪ್ರಯತ್ನ ಮಾಡತಕ್ಕುದೆಂಬ ಹೊಣೆಗಾರಿಕೆಯನ್ನು ಗವರ್ನರ್ ಮತ್ತು ಗವರ್ನರ್ ಜನರಲ್ಲರ ಮೇಲೆ ಹೊರಿಸತಕ್ಕುದು–

–ಎಂದು ಪ್ರಸ್ತಾಪ ಮಾಡಿದ್ದಾರೆ.

## ಷರತ್ತು-II
## ಉಪಸಮಿತಿ IIIರ ವರದಿ (ಅಲ್ಪಸಂಖ್ಯಾತರು)

೧೯–೧–೧೯೩೧ರ ಇಡಿಯ ಸಮ್ಮೇಳನದ ಸಮಿತಿಯು ಅನುಮೋದಿಸಲಾದ ನಿಮ್ನ ವರ್ಗದವರ ಹಿತಾಸಕ್ತಿಗಳಿಗೆ ಸಂಬಂಧಿಸಿದ ಆ ವರದಿಯಲ್ಲಿನ ಹಲವು ಪ್ಯಾರಾಗಳು ಇವು:

(೩) ವಿವಿಧ ಕೋಮುಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನವನ್ನು ರಕ್ಷಿಸುವ ಮತ್ತು ಜನಾಂಗ, ಜಾತಿ, ವಂಶ ಅಥವಾ ಲಿಂಗಗಳ ಆಧಾರದ ಯಾವ ಭೇದಭಾವವೂ ಇಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆರ್ಥಿಕ, ಸಾಮಾಜಿಕ ಮತ್ತು ಸಿವಿಲ್ ಹಕ್ಕುಗಳನ್ನು ಮುಕ್ತವಾಗಿ ಚಲಾಯಿಸುವ ಅವಕಾಶವನ್ನು ವ್ಯವಸ್ಥೆಗೊಳಿಸುವಂಥ ಮೂಲಭೂತ ಹಕ್ಕುಗಳ ಘೋಷಣೆಯನ್ನು ಸಂವಿಧಾನದಲ್ಲಿ ಸೇರಿಸಬೇಕು. –ಇದು ಉಪಸಮಿತಿಯ ಮುಂದೆ ಮಾಡಲಾದ ಮುಖ್ಯ ಪ್ರಸ್ತಾಪಗಳಲ್ಲಿ ಒಂದು.

(ಡಾ: ಅಂಬೇಡ್ಕರರು, ಮೂಲಭೂತ ಹಕ್ಕುಗಳ ಉಲ್ಲಂಘನೆ ಆದಾಗ ಆ ಬಗ್ಗೆ ಪರಿಹಾರ ಹಕ್ಕು ಸಹಿತವಾಗಿ ಮೂಲಭೂತ ಹಕ್ಕುಗಳ ಜಾರಿಗೆ ಮಂಜೂರಾತಿ ಕೊಡುವುದನ್ನು ಸಂವಿಧಾನದಲ್ಲಿ ಸೇರಿಸಬೇಕಾದ ಅಗತ್ಯತೆಯ ಬಗ್ಗೆ ಲಕ್ಷ್ಯ ಸೆಳೆದರು.)

(೪) ಸಂಯುಕ್ತ ಹಾಗೂ ಮುಕ್ತ ಮತಕ್ಷೇತ್ರಗಳ ಪದ್ಧತಿಯು ಪ್ರಜಾತಂತ್ರ ತತ್ವಗಳಿಗೆ ಅನುಗುಣವಾಗಿದೆ ಯೆಂದು ಸಾಮಾನ್ಯವಾಗಿ ಚುನಾವಣೆಯು ವಯಸ್ಕ ಮತದಾನದ ಪದ್ಧತಿಯನ್ನು ಆಧರಿಸಿದರೆ ನಿಮ್ನ ವರ್ಗದವರೆದುರಿಗೆ ಅಲ್ಪ ಸಂಕ್ರಮಣಾವಧಿ ತರುವಾಯ ಗ್ರಾಹ್ಯವಾಗಬಹುದೆಂದು ಒಪ್ಪಿಕೊಂಡರೂ ಭಾರತ ದಲ್ಲಿ ಕೋಮುಗಳ ಹಂಚಿಕೆಯ ಮತ್ತು ಅವರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಣಾಮ ಸಾಮರ್ಥ್ಯದ ಅಸಮಾನತೆಯ ದೃಷ್ಟಿಯಿಂದ ಅಂಥ ಪದ್ಧತಿಯ ಮೇರೆಗೆ ಅಲ್ಪಸಂಖ್ಯಾತರು ಪಡೆದು

ಕೊಳ್ಳುವ ಪ್ರಾತಿನಿಧ್ಯವು ಅಸಮರ್ಪಕವಾಗಿರುವ ವಾಸ್ತವ ಅಪಾಯವಿದೆಯೆಂದು ಮತ್ತು ಈ ಪದ್ಧತಿಯು ಕೋಮು ಭದ್ರತೆಯನ್ನು ಒದಗಿಸುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು.

(೫) ಆದ್ದರಿಂದ ಪ್ರಾತಿನಿಧ್ಯವನ್ನು ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಸ್ಥಾನಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಹಲವಾರು ಕೋಮುಗಳಿಗೆ ಕಾಯ್ದಿಟ್ಟ ಸ್ಥಾನಗಳ ಸಂಖ್ಯೆಯು ಜನಸಂಖ್ಯೆಯಲ್ಲಿ ಆ ಕೋಮು ಹೊಂದಿರತಕ್ಕ ಪ್ರಮಾಣಕ್ಕೆ ಯಾವ ಸಂದರ್ಭದಲ್ಲಿಯೂ ಕಡಿಮೆ ಆಗತಕ್ಕುದಲ್ಲ ಎಂದು ಸಹ ಒತ್ತಾಯಪೂರ್ವಕ ಹೇಳಲಾಯಿತು. ಇದನ್ನು ಸಾಧಿಸಲು ಇರುವ ಮುಖ್ಯ ವಿಧಾನಗಳು ಮೂರು. (೧) ನಾಮ ನಿರ್ದೇಶನ (೨) ಸ್ಥಳಗಳ ಮೀಸಲಾತಿ ಸಹಿತ ಜಂಟಿ ಮತ ಕ್ಷೇತ್ರಗಳು ಮತ್ತು (೩) ಪ್ರತ್ಯೇಕ ಮತ ಕ್ಷೇತ್ರ.

(೮) ಸಾಮಾನ್ಯವಾಗಿ ಒಪ್ಪಬಹುದಾದ ಒಂದೇ ಒಂದು ಬೇಡಿಕೆ ಎಂದರೆ ಪ್ರತ್ಯೇಕ ಮತಕ್ಷೇತ್ರಗಳು ಎಂಬುದನ್ನು ಈ ಚರ್ಚೆಯು ಸ್ಪಷ್ಟಪಡಿಸಿತು. ಈ ಯೋಜನೆಗೆ ಇದ್ದ ಸಾಮಾನ್ಯ ತಕರಾರಿಗೆ ಸಂಬಂಧಪಟ್ಟಂತೆ ಭಾರತದಲ್ಲಿ ಈ ಮೊದಲು ಸಾಕಷ್ಟು ಚರ್ಚೆಯಾಗಿದ್ದುಂಟು. ಅದು ಪರಿಹರಿಸಲು ಕ್ಲಿಷ್ಟವಾದ ಸಮಸ್ಯೆಯನ್ನು ಒಳಗೊಂಡಿದೆ. ಅಂದರೆ, ಬೇರೆ ಬೇರೆ ಪ್ರಾಂತಗಳಲ್ಲಿ ಮತ್ತು ಕೇಂದ್ರದಲ್ಲಿ ಕೋಮು ಪ್ರಾತಿನಿಧ್ಯದ ಪ್ರಮಾಣ ಎಷ್ಟಿರಬೇಕು ಎಂಬುದು ಆಗಿರುತ್ತದೆ. ಅಂದರೆ, ಶಾಸನ ಸಭೆಗಳಲ್ಲಿನ ಎಲ್ಲ ಅಂದರೆ, ಸಂಪೂರ್ಣವಾಗಿ ಎಲ್ಲ ಸ್ಥಳಗಳನ್ನೂ ವಿವಿಧ ಕೋಮುಗಳಿಗೆ ಕೊಡಬೇಕಾದಾಗ, ಅಲ್ಲಿ ಸ್ವತಂತ್ರ ರಾಜಕೀಯ ಅಭಿಪ್ರಾಯದ ಬೆಳವಣಿಗೆಗೆ ಅಥವಾ ನಿಜವಾದ ರಾಜಕೀಯ ಪಕ್ಷಗಳ ವಿಕಾಸಕ್ಕೆ ಅವಕಾಶವೇ ಉಳಿಯುವುದಿಲ್ಲ ಮತ್ತು ನಿಮ್ನ ವರ್ಗದ ಪ್ರತಿನಿಧಿಗಳು ತಮ್ಮನ್ನು ಹಿಂದೂ ಜನಸಂಖ್ಯೆಯಿಂದ ಬೇರ್ಪಡಿಸಬೇಕು ಮತ್ತು ಮತ ಕ್ಷೇತ್ರಗಳ ಉದ್ದೇಶಗಳಿಗಾಗಿ ತಮ್ಮನ್ನು ಬೇರೆಯ ಕೋಮು ಎಂದು ಪರಿಗಣಿಸಬೇಕೆಂಬ ಬೇಡಿಕೆ ಮಾಡಿದಾಗ ಈ ಸಮಸ್ಯೆ ಇನ್ನಷ್ಟು ಕ್ಲಿಷ್ಟವಾಯಿತು.

೧೨. ಉಪಸಮಿತಿ II (ಪ್ರಾಂತೀಯ ಸಂವಿಧಾನ) ಮಾಡಿದ 'ಹೊಸ ಸಂವಿಧಾನದ ಯಶಸ್ವೀ ಕಾರ್ಯಾಚರಣೆಗೆ ಪ್ರಾಂತೀಯ ಕಾರ್ಯಾಂಗದಲ್ಲಿ ಮಹತ್ವದ ಅಲ್ಪಸಂಖ್ಯಾತ ಕೋಮುಗಳ ಪ್ರಾತಿನಿಧ್ಯವು ಅತೀ ಹೆಚ್ಚಿನ ವ್ಯಾವಹಾರಿಕ ಮಹತ್ವದ ವಿಷಯವಾಗಿದೆ' ಎಂಬ ಶಿಫಾರಸಿಗೆ ಸಾಮಾನ್ಯ ಒಪ್ಪಿಗೆ ಇತ್ತು ಮತ್ತು ಫೆಡರಲ್ ಕಾರ್ಯಾಂಗದಲ್ಲೂ ಮುಸಲ್ಮಾನರ ಪ್ರಾತಿನಿಧ್ಯವೂ ಸಹ ಅದೇ ಆಧಾರಗಳ ಮೇಲೆ ಇರಬೇಕೆಂದೂ ಸಹ ಒಪ್ಪಲಾಗಿತ್ತು. (ಡಾ: ಅಂಬೇಡ್ಕರ್ ಅವರು ಈ ಕೆಳಗಿನಂತೆ ಪದಗಳನ್ನು ಸೇರಿಸುತ್ತಾರೆ "ಮತ್ತೂ ಇತರ ಮಹತ್ವದ ಅಲ್ಪಸಂಖ್ಯಾತರು" ಇದನ್ನು ಮುಸಲ್ಮಾನರು ಪದದ ಅನಂತರ ಸೇರಿಸಬೇಕೆಂದು ಅವರು ಹೇಳುತ್ತಾರೆ). ಇತರ ಚಿಕ್ಕಪುಟ್ಟ ಅಲ್ಪಸಂಖ್ಯಾತರ ಪರವಾಗಿ ಪ್ರಾಂತೀಯ ಅಥವಾ ಫೆಡರಲ್ ಕಾರ್ಯಾಂಗಗಳಲ್ಲಿ ವೈಯಕ್ತಿಕವಾಗಿ ಅಥವಾ ಜಂಟಿಯಾಗಿ ಅವರಿಗೆ ಪ್ರಾತಿನಿಧ್ಯ ಇರಬೇಕೆಂಬ ಅಥವಾ ಇದು ಅಸಾಧ್ಯವಾದರೆ ಪ್ರತಿಯೊಂದು ಮಂತ್ರಿಮಂಡಳದಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬರಲು ಒಬ್ಬ ಮಂತ್ರಿ ಇರಬೇಕು ಎಂಬ ಕ್ಲೇಮನ್ನು ಮಾಡಲಾಯಿತು.

೧೩. ಆಡಳಿತಕ್ಕೆ ಸಂಬಂಧಿಸಿದಂತೆ, ಪ್ರಾಂತೀಯ ಮತ್ತು ಕೇಂದ್ರದ ಸೇವೆಗಳಿಗೆ ಭರ್ತಿ ಮಾಡುವ ಕಾರ್ಯವನ್ನು ಲೋಕಸೇವಾ ಆಯೋಗಗಳಿಗೆ ಒಪ್ಪಿಸಬೇಕು ಮತ್ತು ಅವುಗಳಿಗೆ ಸಾಮರ್ಥ್ಯದ ಯುಕ್ತ ಪ್ರಮಾಣಗಳನ್ನು ಉಳಿಸಿಕೊಳ್ಳುತ್ತ ವಿವಿಧ ಕೋಮುಗಳ ಕ್ಲೇಮುಗಳಿಗೆ ಅನುಸಾರವಾಗಿ ಭರ್ತಿ ಮಾಡ ಬೇಕೆಂಬ ಸೂಚನೆಗಳನ್ನು ಕೊಡಬೇಕು ಎಂದು ಒಪ್ಪಿಕೊಳ್ಳಲಾಯಿತು.

೧೪. ಬ್ರಿಟಿಶ್ ಸರಕಾರವು ಒಪ್ಪಂದದ ಯಾವುದೇ ಸಾಧ್ಯತೆಯನ್ನಿಟ್ಟುಕೊಂಡು ಒಂದಿಲ್ಲೊಂದು

ರೀತಿಯಲ್ಲಿ ವಿರೋಧವನ್ನುಂಟುಮಾಡುವಂಥ ಚುನಾವಣಾ ತತ್ವಗಳನ್ನು ಕೋಮುಗಳ ಮೇಲೆ ವಿಧಿಸಬಾರದು ಎಂಬುದನ್ನು ಸಹ ಸ್ಪಷ್ಟಪಡಿಸಲಾಗಿದೆ. ಆದುದರಿಂದ, ಒಪ್ಪಂದ ವಿಫಲವಾದಲ್ಲಿ, ಪ್ರತ್ಯೇಕ ಮತ ಕ್ಷೇತ್ರಗಳನ್ನು ಅವುಗಳಿಂದುಂಟಾಗಬಹುದಾದ ಏನೇ ತೊಂದರೆಗಳಾಗಲಿ ನ್ಯೂನತೆಗಳಾಗಲೀ ಇದ್ದರೂ ಸಂವಿಧಾನದ ಅಡಿಯಲ್ಲಿನ ಚುನಾವಣಾ ವ್ಯವಸ್ಥೆಗೆ ಆಧಾರವಾಗಿ ಉಳಿಸಿಕೊಂಡು ಹೋಗಬೇಕಾಗುತ್ತದೆ. ಇದರಿಂದಾಗಿಯೇ ಪ್ರಮಾಣದ ಪ್ರಶ್ನೆಯು ಉದ್ಭವಿಸುತ್ತದೆ. ಸಂದರ್ಭಗಳಲ್ಲಿ ನಿಮ್ನ ವರ್ಗದವರ ಕ್ಲೇಮುಗಳನ್ನು ಪರ್ಯಾಪ್ತವಾಗಿ ಪರ್ಯಾಲೋಚಿಸಬೇಕಾಗುತ್ತದೆ.

೧೮. ಅಲ್ಪ ಸಂಖ್ಯಾತರು ಮತ್ತು ನಿಮ್ನ ವರ್ಗದವರು ತಮ್ಮ ಬೇಡಿಕೆಗಳನ್ನು ಯುಕ್ತ ರೀತಿಯಲ್ಲಿ ಪೂರೈಸದ ಹೊರತು ಭಾರತಕ್ಕೆ ಸ್ವಯಮಾಡಳಿತದ ಸಂವಿಧಾನವನ್ನು ರೂಪಿಸುವ ವಿಚಾರದಲ್ಲಿ ಸಮ್ಮತಿಸುವುದಿಲ್ಲ ಎಂದು ಖಚಿತವಾಗಿ ಸ್ಪಷ್ಟಪಡಿಸಿರುತ್ತಾರೆ.

# ಉಪಸಮಿತಿ ನಂ. VI (ಮತದಾನದ ಹಕ್ಕು)

# ಎರಡನೆಯ ಸಭೆ–೨೨ ಡಿಸೆಂಬರ್ ೧೯೩೦

**ಉಪಸಮಿತಿ ನಂ. ೬ (ಮತದಾನದ ಹಕ್ಕು) ಇದರ ನಡಾವಳಿಗಳು, ಭಾರತ ಸರಕಾರ ಸೆಂಟ್ರಲ್ ಪಬ್ಲಿಕೇಶನ್ ಬ್ರಾಂಚ್, ಕಲ್ಕತ್ತಾ ೧೯೩೧, ಪುಟಗಳು ೨೮೮–೪೫.**

ಈ ಸಮಿತಿಗೆ ಕಳಿಸಿದ ಪರಿಶೀಲನಾಂಶಗಳು ಈ ಕೆಳಗಿನಂತೆ ಇರುತ್ತವೆ.

"ಪುರುಷರ ಮತ್ತು ಮಹಿಳೆಯರ ಮತಾಧಿಕಾರವು ಯಾವ ಮುಖ್ಯ ತತ್ವಗಳನ್ನು ಆಧರಿಸಿರ ತಕ್ಕುದು?"

ಡಾ. ಅಂಬೇಡ್ಕರ್: ಈ ದುಂಡು ಮೇಜಿನ ಪರಿಷತ್ತು ಪರ್ಯಾಲೋಚಿಸಬೇಕಾದ ಮಹತ್ವದ ಪ್ರಶ್ನೆಗಳು ಕೇವಲ ಎರಡೇ ಎಂದು ನನಗೆ ಕಂಡುಬರುತ್ತದೆ. ಭಾರತವು ಹೊಣೆಗಾರ ಸರಕಾರವನ್ನು ಹೊಂದಿರತಕ್ಕುದೋ ಎಂಬುದು ಒಂದು ಪ್ರಶ್ನೆ ಮತ್ತು ಆ ಸರಕಾರವು ಯಾವ ಜನತೆಗೆ ಹೊಣೆಗಾರವಾಗಿರಬೇಕೆಂಬುದು ಎರಡನೆಯ ಪ್ರಶ್ನೆ.

ಭಾರತವು ಹೊಣೆಗಾರ ರೂಪದ ಸರಕಾರವನ್ನು ಹೊಂದಿರತಕ್ಕುದೆಂಬ ಬಗ್ಗೆ ನಾವೆಲ್ಲರೂ ಪೂರ್ಣ ಸಮ್ಮೇಳನದಲ್ಲಿ ಏಕ ಧ್ವನಿಯಿಂದ ಬೇಡಿಕೆಯನ್ನು ಸಲ್ಲಿಸಿದ್ದೇವೆ. ಮತ್ತು ಪೂರ್ಣ ಸಮ್ಮೇಳನದಲ್ಲಿ ನನ್ನ ಮಟ್ಟಿಗೆ ಹೇಳಬೇಕಾದರೆ ನಿಮ್ಮ ವರ್ಗದವರ ಪರವಾಗಿ ನನ್ನ ಎದುರಿಗೆ ಕುಳಿತಿರುವ ನನ್ನ ಸ್ನೇಹಿತರೊಂದಿಗೆ ಅವರು ಭಾರತಕ್ಕೆ ಹೊಣೆಗಾರ ಸರಕಾರ ಬೇಕೆಂದು ಕೇಳುವ ಅವರ ಬೇಡಿಕೆಯಲ್ಲಿ ಕೂಡಿದ್ದೇವೆ. ಏನೇ ಆದಾಗ್ಯೂ, ನಾನು ಹಾಗೆ ಮಾಡಿದಾಗ, ದುಂಡು ಮೇಜಿನ ಪರಿಷತ್ತಿನಲ್ಲಿ ತಮ್ಮ ದೇಶವನ್ನು ಪ್ರತಿನಿಧಿಸಲು ಬಂದ ಭಾರತೀಯರು, ಭಾರತಕ್ಕೆ ಹೊಣೆಗಾರ ಸರಕಾರ ಬೇಕೆಂಬ ಬಗ್ಗೆ ಮಾತ್ರವೇ ಏಕಾಭಿಪ್ರಾಯ ಹೊಂದಿರದೆ ಅಂಥ ಸರಕಾರವು ಯಾರಿಗೆ ಹೊಣೆಗಾರವಾಗಿರಬೇಕೆಂಬ ಬಗ್ಗೆಯೂ ಸಹ ಒಮ್ಮತ ಹೊಂದಿರುತ್ತಾರೆ ಎಂಬ ಅನಿಸಿಕೆ ನನ್ನದಾಗಿತ್ತು.

ಮಾನ್ಯರೇ, ಅದು ನನ್ನ ಭ್ರಮೆಯಾಗಿತ್ತು ಎಂದು ಹೇಳಲು ನನಗೆ ವಿಷಾದವಾಗುತ್ತದೆ. ಡೋಮಿನಿಯನ್ ಸ್ಥಾನದ ಬೇಡಿಕೆಯ ಬಗ್ಗೆ ನಮ್ಮ ಜನತೆಯಲ್ಲಿ ಕೆಲವರು ನಾನು ಮತ್ತು ಇತರರು ಅವರ ಜೊತೆ ಸೇರಬೇಕೆಂದು ಇಚ್ಛಿಸುತ್ತಾರೆಂಬುದು ನನಗೆ ಗೊತ್ತಾದಾಗ್ಯೂ, ಡೋಮಿನಿಯನ್ ಸ್ಥಾನದ ಮೇರೆಗೆ ಸ್ಥಾಪಿಸಲಾಗುವ ಸರಕಾರವು ಭಾರತದ ಇಡಿಯ ಜನತೆಗೆ ಹೊಣೆಗಾರವಾಗಿರತಕ್ಕುದೆಂಬ ನಮ್ಮ ಬೇಡಿಕೆಯಲ್ಲಿ ಅವರು ನಮ್ಮ ಜೊತೆಗೂಡುವುದಿಲ್ಲ. ಇಂಥ ಅಭಿಪ್ರಾಯ ಉಂಟಾಗಬಹುದೆಂದೂ ಮತ್ತು ನಾವು ಈಗ ತೆಗೆದುಕೊಂಡ ನಿಲುವನ್ನು ರಕ್ಷಿಸುವುದಕ್ಕಾಗಿ ನಾನು ಎದ್ದು ನಿಲ್ಲಬೇಕಾಗುತ್ತದೆಂದು ನಾನು ಎಂದೂ ಭಾವಿಸಿರಲಿಲ್ಲ.

ಮಾನ್ಯರೇ, ಈಗ ನಿಮ್ಮ ವರ್ಗದವರ ಪರವಾಗಿ ಮಾತನಾಡುತ್ತ ಹೇಳಬೇಕೆಂದರೆ ನಾನು ಯಾವ ಜನತೆಯ ಬಗ್ಗೆ ಮಾತನಾಡುತ್ತಿರುವೆನೋ ಆ ಜನತೆಗೆ ಸಂವಿಧಾನದಲ್ಲಿ ಸ್ಥಾನ ಇರುವ ಬಗ್ಗೆ ನನಗೆ ಖಾತ್ರಿ

ಯೆನ್ನಿಸದ ಹೊರತು ಹೊಣೆಗಾರ ಸರಕಾರಕ್ಕಾಗಲೀ ಅಥವಾ ಡೋಮಿನಿಯನ್ ಸ್ಥಾನಕ್ಕಾಗಲೀ ಪ್ರಾಮಾಣಿಕವಾಗಿ ನಾನು ಸಮ್ಮತಿಸಲಾರೆನು. ಆ ಸಂಗತಿಯನ್ನು ನಾನು ನನ್ನ ಎಲ್ಲ ಸ್ನೇಹಿತರಿಗೆ ಸ್ಪಷ್ಟಪಡಿಸಲೇಬೇಕು. ಹಲವು ಸ್ನೇಹಿತರು ವಯಸ್ಕ ಮತದಾನದ ಪ್ರಸ್ತಾವಕ್ಕೆ ತಕರಾರು ಮಾಡಿರುವುದರಿಂದ, ಅದರ ವಿರುದ್ಧವಾಗಿ ಮಾಡಲಾಗಿರುವ ವಾದದ ಬಗ್ಗೆ ವಿವರಿಸಲು ನಾನು ಸೂಚಿಸುತ್ತೇನೆ.

ಈ ದೇಶದಲ್ಲಿ ಅನುಸರಿಸಲಾದ ಪೂರ್ವ ದೃಷ್ಟಾಂತವನ್ನು ಅಂದರೆ ಮತದಾನವನ್ನು ಹಂತ ಹಂತವಾಗಿ ಅನುಷ್ಠಾನಕ್ಕೆ ತರಬೇಕೆಂಬುದು ಮುಂದಿಡಲಾಗಿರುವ ವಾದಗಳಲ್ಲೊಂದಾಗಿದೆ. ಈ ದೇಶದಲ್ಲಿ ೧೮೩೨ರಿಂದ ೧೯೧೮ರವರೆಗೆ ಅಳವಡಿಸಿಕೊಳ್ಳಲಾದ ಹಂತಗಳನ್ನು ನಾವು ಅನುಸರಿಸಬೇಕೆಂದು ಸೂಚಿಸಲಾಗಿದೆ. ಈ ದೇಶದಲ್ಲಿ ಮತದಾನ ಪದ್ಧತಿಯ ರಾಜಕೀಯ ಇತಿಹಾಸದ ಆಧಾರದ ಮೇಲೆ ತಮ್ಮ ವಾದವನ್ನು ಮಂಡಿಸುವವರು, ೧೮೩೨ರಿಂದ ಮುಂದೆ ಜನತೆಗೆ ಮತದಾನದ ಹಕ್ಕನ್ನು ಕೊಡುವಲ್ಲಿ ಬ್ರಿಟಿಶರು ತೆಗೆದುಕೊಂಡ ಕ್ರಮಗಳನ್ನು ರೂಪಿಸುವಲ್ಲಿ ಇಂಗ್ಲೀಷರು ಒಂದು ತಾತ್ವಿಕ ಕಾರ್ಯಯೋಜನೆ ಇಟ್ಟುಕೊಂಡಿದ್ದರೆಂದು ಮತ್ತು ೧೮೩೨ರಲ್ಲಿ ಪರಿಮಿತ ಜನತೆಗೆ ಮಾತ್ರವೇ ಮತದಾನದ ಹಕ್ಕನ್ನು ಕೊಡಬೇಕೆಂದು ಮೊದಲೇ ನಿರ್ಣಯಿಸಿದ್ದರೆಂದು, ಇಲ್ಲದೇ ಹೋದರೆ ಅದು ತಾತ್ವಿಕವಾಗಿ ತಪ್ಪಾಗುತ್ತದೆ ಎಂದು ಭಾವಿಸಿದಂತೆ ಕಂಡುಬರುತ್ತದೆ. ಅವರು ಮುಂದಿನ ಕ್ರಮವನ್ನು ಕೇವಲ ೧೮೬೭ರಲ್ಲಿ ತೆಗೆದುಕೊಳ್ಳಬೇಕೇ ಹೊರತು ೧೮೬೬ರಲ್ಲಿ ಅಲ್ಲ. ಅವರು ಮುಂದಿನ ಕ್ರಮವನ್ನು ೧೮೮೪ರಲ್ಲಿ ತೆಗೆದುಕೊಳ್ಳಬೇಕೇ ಹೊರತು ೧೮೬೭ರಲ್ಲಿ ಅಲ್ಲ. ಈ ವಾದವನ್ನು ಮುಂದಿಡುವವರು ಈ ಸಂಗತಿಯ ಹಿಂದೆ ಯಾವುದೇ ತಾತ್ವಿಕ ನಂಬಿಗೆ ಇತ್ತೆಂದು ನಂಬುವರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಸಂಗತಿಯ ಮೇಲೆ ತಮ್ಮ ವಾದವನ್ನು ಆಧರಿಸುವ ನನ್ನ ಸ್ನೇಹಿತರಿಗೆ, ನಾನು ಹೇಳಬಯಸುವುದೇನೆಂದರೆ, ನೀವು ಇಂಗ್ಲೆಂಡಿನ ರಾಜಕೀಯ ಇತಿಹಾಸವನ್ನು ಓದಿದರೆ, ಬ್ರಿಟಿಶ್ ಜನತೆ ತೆಗೆದುಕೊಂಡ ಕ್ರಮಗಳನ್ನು ನಿರ್ಧರಿಸುವಲ್ಲಿ ಯಾವುದೇ ತಾತ್ವಿಕ ನಂಬಿಗೆ ಇರಲಿಲ್ಲ ಎಂಬುದನ್ನಷ್ಟೇ ಅಲ್ಲದೆ, ಮತಾಧಿಕಾರದ ಪ್ರಶ್ನೆಯನ್ನು ಈ ದೇಶದಲ್ಲಿ ಕೇವಲ ಪಕ್ಷದ ರಾಜಕೀಯದ ವಿಷಯವನ್ನಾಗಿ ತಿಳಿದುಕೊಂಡರೆಂಬುದು ಕಂಡುಬರುತ್ತದೆ. ಪ್ರತಿ ಪಕ್ಷವೂ ಮತಾಧಿಕಾರವನ್ನು ವಿಸ್ತರಿಸಲು ಪ್ರಯತ್ನಪಟ್ಟಿತು. ಏಕೆಂದರೆ, ಅದು ರಾಜಕೀಯ ಘೋಷಣೆ ಯಾಗಿ ಪಕ್ಷದ ಪ್ರಭಾವವನ್ನು ಬೆಳೆಸುತ್ತದೆ ಮತ್ತು ವೃದ್ಧಿಗೊಳಿಸುತ್ತದೆ ಎಂದು ಎಲ್ಲ ಪಕ್ಷಗಳೂ ಭಾವಿಸಿದ್ದವು. ಆ ವಾದವನ್ನು ಮುಂದಿಟ್ಟ ನನ್ನ ಸ್ನೇಹಿತರಿಗೆ ಅದು ಒಂದು ಹೊಸ ಸಮಾಚಾರ ಆಗಬಹುದು ಮತ್ತು ಯಾವಾಗಲೂ ಅದನ್ನು ಅವರು ತನ್ನ ಸಮಾಧಾನಕ್ಕಾಗಿಯಾದರೂ ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ಮಾರ್ಗದಲ್ಲಿ ಎದುರಿಸಲು ಅಸಾಧ್ಯವಾದ ಅಡ್ಡಿಯನ್ನುಂಟುಮಾಡಿದೆನೆಂದು ಅವರು ಸಮಾಧಾನಪಟ್ಟುಕೊಳ್ಳುತ್ತಾರೆ. ಇಂಗ್ಲೆಂಡಿನ ಜನತೆಗೆ ರಾಜಕೀಯ ಮತಾಧಿಕಾರ ನೀಡುವಲ್ಲಿ ತೆಗೆದುಕೊಂಡ ಅತಿ ದೊಡ್ಡ ಕ್ರಮವನ್ನು ಈ ದೇಶದಲ್ಲಿನ ಕನ್ಸರ್ವೇಟಿವ್ ಸರ್ಕಾರ ತೆಗೆದುಕೊಂಡಿತೇ ಹೊರತು, ಲಿಬರಲ್ ಅಥವಾ ರ್‍ಯಾಡಿಕಲ್ಸ್ ಪಕ್ಷದವರಲ್ಲ ಎಂಬುದನ್ನು ಕಂಡುಕೊಳ್ಳುವುದು ಸಂತೋಷದ ವಿಷಯ.

ನನ್ನ ಸ್ನೇಹಿತರಿಗೆ ತೋರಿಸಬಯಸುವ ಎರಡನೆಯ ವಿಷಯ ಇದು. ಆ ದೇಶಗಳಲ್ಲಿ ಮತಾಧಿಕಾರವು ಪರಿಮಿತವಾಗಿರುವುದರಿಂದ ಮತ್ತು ಆ ಕಾರಣದಿಂದಾಗಿ ಅಂಥ ಮತಾಧಿಕಾರ ಮತ್ತು ಅಂಥ ಮತಾಧಿಕಾರವು ರಚಿಸಿದ ಸರಕಾರವು ಉತ್ತಮವೆಂದು ಮತ್ತು ಆ ಸರಕಾರದ ಉದ್ದೇಶವು ಜನತೆಯ ಕಲ್ಯಾಣ ಮತ್ತು ಶ್ರೀಸಾಮಾನ್ಯನ ಏಳ್ಗೆಯಾಗಿದೆ ಎಂದೂ ಹೇಳಲು ಅವರು ನಿಜವಾಗಿಯೂ ಬಯಸುತ್ತಾರೋ? ಆ

ಸಂಗತಿಯ ಆಧಾರದಿಂದ ಅವರು ಈ ಊಹೆಯನ್ನು ಮಾಡಲು ಇಚ್ಛಿಸುತ್ತಾರೋ? ಮತಾಧಿಕಾರ ಪರಿಮಿತವಾಗಿರುವುದರಿಂದ ಅಲ್ಲಿ ಯಾವ ತೊಂದರೆಯೂ ಇಲ್ಲವೆಂದು ಈ ದೇಶದಲ್ಲಿನ ಪ್ರತಿಯೊಬ್ಬನೂ ಸಂತುಷ್ಟನಾಗಿರುವನೆನ್ನುವರೋ? ಅದು ನಿಜವಾದ ಪರಿಸ್ಥಿತಿ ಅಲ್ಲ. ಲಾರ್ಡ್ ಶಾಫ್ಟ್ಸಬೇರೀ ಅವರ ಜೀವನಚರಿತ್ರೆಯನ್ನು ಮತ್ತು ಇಂಗ್ಲೆಂಡಿನ ಸಾಮಾಜಿಕ ಮತ್ತು ರಾಜಕೀಯ ಇತಿಹಾಸವನ್ನು ಓದುವ ತೊಂದರೆ ತೆಗೆದುಕೊಂಡರೆ, ಸುಧಾರಣೆ ಕಾಣದ ಸಂಸತ್ತು ಯಾರಿಗೂ ಒಳ್ಳೆಯದನ್ನು ಮಾಡಲಿಲ್ಲ ಅನ್ನುವುದನ್ನು ಅವರು ಖಚಿತವಾಗಿ ಕಂಡುಕೊಳ್ಳುತ್ತಾರೆ.

ಮೂರನೆಯದಾಗಿ ನನ್ನ ಸ್ನೇಹಿತರಿಗೆ ನಾನು ಹೇಳಬಯಸುವುದೆಂದರೆ, ಅವರು ತಾವು ಹೇಳಿದ್ದರ ಬಗ್ಗೆ ಗಂಭೀರ ಭಾವನೆ ತಳೆದಿದ್ದರೆ ಅಥವಾ ಅವರು ತಾವು ಹೇಳುವುದನ್ನು ನಿಜವಾಗಿಯೂ ನಂಬಿದ್ದರೆ– ಅಂದರೆ ಭಾರತದ ಜನತೆಗೆ ವಯಸ್ಕ ಮತಾಧಿಕಾರ ಕೊಡಬಾರದು. ಏಕೆಂದರೆ, ಅದಕ್ಕೆ ಅವರು ತಕ್ಕವರಲ್ಲ ಎಂದರೆ ಅವರಿಗೆ ಈಗ ಉಳಿದಿರುವ ಒಂದೇ ಮಾರ್ಗ ಅವರು ತಿರುಗಿ ಭಾರತಕ್ಕೆ ಹೋಗುವುದು ಮತ್ತು ಅವರು ಡೋಮಿನಿಯನ್ ಸ್ಥಾನವನ್ನಾಗಲೀ ಅಥವಾ ಹೊಣೆಗಾರ ಸರಕಾರವನ್ನಾಗಲೀ ಕೇಳದೆ ಇರುವುದು. ಏಕೆಂದರೆ, ನಿಜವಾಗಿಯೂ ಭಾರತದ ಜನತೆಯು ಮತಾಧಿಕಾರವನ್ನು ಚಲಾಯಿಸಲು ತಕ್ಕವರಲ್ಲ ಮತ್ತು ಸರಕಾರದ ಹೊಣೆಯನ್ನು ತಾವೇ ವಹಿಸಲು ಸಮರ್ಥರಲ್ಲ ಎಂಬುದು ಈ ಸಭ್ಯ ಗೃಹಸ್ಥರ ಅಭಿಪ್ರಾಯ ವಾಗಿದ್ದು, ಅವರು ಯಾರ ಹೆಸರಿನಲ್ಲಿ ಹೊಣೆಗಾರ ಸರಕಾರವನ್ನು ಕೇಳುತ್ತಾರೆ ಎಂಬುದು ನನಗೆ ತಿಳಿಯದಾಗಿದೆ. ಅದು ಈ ವರ್ಗದವರಿಗಾಗಿಯೇ? ಅದು ತನಗಾಗಿಯೇ? ಅದು ಯಾರ ಸಲುವಾಗಿ ನಾನು ತಿಳಿದುಕೊಂಡಂತೆ ಹೊಣೆಗಾರ ಸರಕಾರದ ಮತ್ತು ಡೋಮಿನಿಯನ್ ಸ್ಟೇಟಸ್ ಪರವಾಗಿ ಮಾಡಬಹುದಾದ ಒಂದೇ ವಾದವೆಂದರೆ ಭಾರತದ ಜನತೆ ಸರಕಾರದ ಹೊಣೆಗಾರಿಕೆಯನ್ನು ನಿರ್ವಹಿಸಲು ಸಮರ್ಥರಿರುತ್ತಾರೆ ಎಂಬ ಪೂರ್ವ ಭಾವನೆಯು ಅಂಥ ವಾದಕ್ಕೆ ಆಧಾರವಾಗಿರಬೇಕು. ಭಾರತದ ಜನತೆ ಆ ಹೊಣೆಗಾರಿಕೆಯನ್ನು ನಿರ್ವಹಿಸಲು ಸಮರ್ಥರಿರುತ್ತಾರೆ ಎಂದು ನಂಬಲು ನನ್ನ ಸ್ನೇಹಿತರು ಸಿದ್ಧರಿರದಿದ್ದರೆ, ಆಗ ಭಾರತದ ಜನತೆಗೆ ಡೊಮಿನಿಯನ್ ಸ್ಥಾನವೂ ಸಲ್ಲ ಮತ್ತು ಹೊಣೆಗಾರಿಕೆಯೂ ಸಲ್ಲ ಎಂಬ ನಿರ್ಣಯಕ್ಕೆ ಬರಬೇಕಾಗುತ್ತದೆ.

ಮಂಡಿಸಲಾದ ಎರಡನೆಯ ವಾದವೆಂದರೆ, ವಯಸ್ಕ ಮತಾಧಿಕಾರ ಆದರ್ಶವಾದುದು. ಆದಾಗ್ಯೂ ಅದನ್ನು ಈಗ ಸದ್ಯ ಜಾರಿಯಲ್ಲಿ ತರಲು ಸಾಧ್ಯವಿಲ್ಲ. ಏಕೆಂದರೆ ಅದನ್ನು ಪರಿಣಾಮಕಾರಿಯಾಗಿ ಜಾರಿಯಲ್ಲಿ ತರುವಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಆ ವಾದದ ಬಗ್ಗೆ ನನಗೆ ಸಂಪೂರ್ಣ ಸಹಾನುಭೂತಿ ಇರುತ್ತದೆ. ಆದರೆ, ಆ ವಾದಕ್ಕೆ ಮಾಡಲಾದ ಎದುರುವಾದದಲ್ಲಿಯೂ ಪರ್ಯಾಲೋಚಿಸಬೇಕಾದ ಹಲವು ಅಂಶಗಳು ಇರುತ್ತವೆ. ನಿಜವಾಗಿ ಮತಾಧಿಕಾರ ಅಂದರೆ ಏನು ಎಂಬುದನ್ನು ನಾವು ಮೊದಲು ತಿಳಿದುಕೊಳ್ಳೋಣ. ನಿಜವಾಗಿಯೂ ಮತಾಧಿಕಾರವೆಂದರೆ ಕೇವಲ ಮತಪೆಟ್ಟಿಗೆಯ ವಿಷಯ ಮಾತ್ರವೇ ಅಲ್ಲ ಮತ್ತು ಮತಗಟ್ಟೆಗಳ ವಿಷಯವಲ್ಲ ಮತ್ತು ಅಲ್ಲಿ ಪೋಲಿಂಗ್ ಅಧಿಕಾರಗಳನ್ನು ನೇಮಿಸುವುದೂ ಅಲ್ಲ. ಮತಾಧಿಕಾರವೆಂದರೆ, ಅದಕ್ಕೂ ಮಿಗಿಲಾದ ಜೀವಾಳದ ವಿಚಾರ. ಮಾನ್ಯರೇ, ಈಗ ನಾನು ತಿಳಿದು ಕೊಂಡಂತೆ ಮತ್ತು ನನ್ನ ದೃಷ್ಟಿಯಲ್ಲಿ ಮತ ಮತ್ತು ಮತಾಧಿಕಾರವೆಂದರೆ ಆತ್ಮರಕ್ಷಣೆಯ ಹಕ್ಕೇ ಹೊರತು ಬೇರೆ ಏನೂ ಅಲ್ಲ. ಅದರ ಅರ್ಥ, ಜನತೆಯ ಬದುಕು, ಸ್ವಾತಂತ್ರ್ಯ ಮತ್ತು ಸ್ವತ್ತಿನ ಮೇಲೆ ಪರಿಣಾಮ ಬೀರುವ ಕಾನೂನನ್ನು ರಚಿಸಲು ಸಾಕಷ್ಟು ಅಧಿಕಾರವಿರುವ ಶಾಸನಸಭೆಯನ್ನು ಸೃಷ್ಟಿಸುವುದು ಎಂಬುದು. ನಿಜವಾಗಿಯೂ ಅಂಥ ಸ್ಥಿತಿಯು ಉಂಟಾಗಬಹುದಾದರೆ, ಇಂಥ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ

ನಿಮ್ಮ ಬದುಕಿನ ಮೇಲೆ ಪರಿಣಾಮ ಬೀರುವಂಥ ಅಧಿಕಾರವನ್ನು ನಿಮ್ಮ ಶಾಸನ ಸಭೆಯು ಹೊಂದುವುದಾದರೆ, ಆಗ ಅಂಥ ಶಾಸನ ಸಭೆಗೆ ಅಧೀನವಾಗುವ ಪ್ರತಿಯೊಬ್ಬ ವ್ಯಕ್ತಿಯೂ ಅಂಥ ಸಂದರ್ಭಗಳಲ್ಲಿ ತನ್ನ ಸ್ವಾತಂತ್ರ್ಯದ ಮೇಲೆ ಆಕ್ರಮಣಮಾಡಬಹುದಾದ ತನ್ನ ಬದುಕಿನ ಮೇಲೆ ಮತ್ತು ಸ್ವತ್ತಿನ ಆಕ್ರಮಣ ಮಾಡಬಹುದಾದ ಕಾನೂನುಗಳ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಬಹುದಾದ ಅಧಿಕಾರ ಹೊಂದಿರಬೇಕು. ಅದು ಮತಪೆಟ್ಟಿಗೆಯ ಪ್ರಶ್ನೆಯಷ್ಟೇ ಅಲ್ಲ.

ಇದನ್ನು ನಾನು ಬೇರೆ ರೀತಿಯಲ್ಲಿ ಹೇಳಬಹುದೇ? ನಾನು ಮತಾಧಿಕಾರದ ಅರ್ಥವನ್ನು ತಿಳಿದುಕೊಂಡಿದ್ದರೆ, ಅದು ಸಮಾಜದಲ್ಲಿ ಕೂಡಿ ಬಾಳುವ ಷರತ್ತುಗಳನ್ನು ನಿಮಯಗೊಳಿಸುವ ಹಕ್ಕು ಎಂದು ಎಂದುಕೊಂಡಿದ್ದೇನೆ. ಅದೇ ಮತಾಧಿಕಾರದ ಸತ್ವ– ಒಬ್ಬನಿಗೆ ನೀವು ಮತಾಧಿಕಾರವನ್ನು ಕೊಟ್ಟರೆ ಅದರ ಅರ್ಥವೆಂದರೆ ನೀವು ಅವನಿಗೆ ತಾನು ಸಮಾಜದಲ್ಲಿನ ಇತರ ವ್ಯಕ್ತಿಗಳೊಡನೆ ಅವನು ಬದುಕಬೇಕಾದ ಷರತ್ತುಗಳನ್ನು ನಿಮಯಗೊಳಿಸುವ ಅಧಿಕಾರವನ್ನು ಕೊಟ್ಟಂತಾಗುತ್ತದೆ. ಈಗ, ಮತಾಧಿಕಾರದ ಅರ್ಥವು ಅದಾದರೆ, ನಿಜವಾಗಿಯೂ ಉಚ್ಚ ವರ್ಗದವರಿಗೆ– ಅವರನ್ನು ನಾವು ಕರೆಯುವಂತೆ ಪ್ರಾಜ್ಞರಿಗೆ ಅಥವಾ ಆಸ್ತಿಯುಳ್ಳವರಿಗೆ– ನೀವು ಕೂಡಿ ಬದುಕುವುದರ ಷರತ್ತುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಕೊಟ್ಟು ಅವರ ದಯೆಯಲ್ಲಿ ಬದುಕುವಂತೆ ನಿಮ್ನವರ್ಗಗಳವರನ್ನು ಮಾಡಬಾರದು. ಕೂಡಿ ಬಾಳುವ ಷರತ್ತುಗಳ ಮೇಲೆ ಕಾರ್ಮಿಕನೊಂದಿಗೆ ಹೇಗೆ ಬದುಕಬೇಕೆಂಬುದನ್ನು ವಿಧಿಸುವ ಅಧಿಕಾರ ಬಂಡವಾಳಶಾಹಿಗೆ ಇರಬಹುದಾದರೆ, ಅವನಿಗೂ ಒಂದು ಸಂವಿಧಾನ ಇರಬಹುದಾದರೆ, ಕಾರ್ಮಿಕನು ಸಹ ತಾನು ತನ್ನ ಬಂಡವಾಳಶಾಹಿ ಒಡೆಯನೊಡನೆ ಕೂಡಿ ಬಾಳುವ ಷರತ್ತುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರಲೇಬೇಕು. ಅದು ಒಮ್ಮುಖದ ವ್ಯವಹಾರವಾಗಲಾರದು. ಅದು ಒಮ್ಮುಖದ ವ್ಯವಹಾರವಾಗತಕ್ಕುದಲ್ಲ. ಮತಾಧಿಕಾರವನ್ನು ಆ ಪದದ ಸರಿಯಾದ ಅರ್ಥದಲ್ಲಿ ತಿಳಿದುಕೊಂಡರೆ, ಅದು ರಾಜ್ಯದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಅಂತರ್ನಿಹಿತ ಹಕ್ಕು ಎಂದು ಭಾವಿಸಬೇಕಾದುದಾಗಿರುತ್ತದೆ ಎಂದು ನನಗೆ ಅನ್ನಿಸುತ್ತದೆ; ಮತಾಧಿಕಾರವು ಅದನ್ನು ಅರಿತುಕೊಳ್ಳುವ ರಾಜ್ಯದಲ್ಲಿನ ಪ್ರತಿ ಪುರುಷ ಮತ್ತು ಮಹಿಳೆಯ ಅಂತರ್ನಿಹಿತ ಹಕ್ಕು ಎಂದು ನೀವು ತಿಳಿದುಕೊಂಡರೆ, ಆಗ ನೀವು ಜನತೆಯ ಅಂತರ್ನಿಹಿತ ಹಕ್ಕನ್ನು ನಿಮ್ಮ ಆಡಳಿತದ ಅನುಕೂಲತೆಯನ್ನು ಅವಲಂಬಿಸುವಂತೆ ಮಾಡಲಾರಿರಿ. ನಾವು ವಯಸ್ಕ ಮತಾಧಿಕಾರವನ್ನು ಹೊಂದಿರಬಾರದು. ಏಕೆಂದರೆ, ನಮ್ಮಲ್ಲಿ ಮತಗಟ್ಟೆಗಳು ಮತ್ತು ಚುನಾವಣಾ ಅಧಿಕಾರಿಗಳು ಇರುವುದಿಲ್ಲ ಎಂದು ನನ್ನ ಸ್ನೇಹಿತರು ವಾದಿಸಿದರು. ಅವರಿಗೆ ನಾನು ನೆನಪು ಮಾಡಿಕೊಡಲು ಬಯಸುವುದೇನೆಂದರೆ: ಒಬ್ಬ ವ್ಯಕ್ತಿಯು ಅವರಿಗೆ ಅನ್ಯಾಯ ಮಾಡಿರುತ್ತಾನೆ ಎಂದು ಅವರಿಗೆ ಹೇಳಿದಾಗ ಮತ್ತು ನ್ಯಾಯವು ಅವರ ಪರವಾಗಿಯೇ ಇರುತ್ತದೆ ಎಂದೂ ಸಹ ತಿಳಿದಿರುವಾಗ ಮತ್ತು ಆ ಬಗ್ಗೆ ನ್ಯಾಯಾಲಯದ ಮೊರೆ ಹೋದರೆ ಜಯ ತನಗೆ ಕಟ್ಟಿಟ್ಟದ್ದೇ ಎಂಬುದು ಸ್ಪಷ್ಟವಿರುವಾಗ, ಉಚ್ಚ ನ್ಯಾಯಾಲಯದಲ್ಲಿ ಸಾಕಷ್ಟು ಸಂಖ್ಯೆಯ ನ್ಯಾಯಾಧೀಶರಿಲ್ಲ. ಆದಕಾರಣ ನಿನಗೆ ಪರಿಹಾರ ಸಿಗಲಾರದು ಎಂದು ಹೇಳಿದರೆ ಅವರ ಪರಿಸ್ಥಿತಿ ಹೇಗೆ ಆಗುತ್ತದೆ? ಅಂಥ ಪರಿಸ್ಥಿತಿಯನ್ನು ಅವರು ಎಷ್ಟರಮಟ್ಟಿಗೆ ಒಪ್ಪುವರು? ನಿಜವಾಗಿಯೂ, ಮತಾಧಿಕಾರವು ಅಂತರ್ನಿಹಿತ ಹಕ್ಕೇ ಆಗಿದ್ದರೆ, ಮತ್ತು ಆ ಮತಾಧಿಕಾರವನ್ನು ಜಾರಿಯಲ್ಲಿ ತರಲು ಆಡಳಿತಾತ್ಮಕ ತೊಂದರೆಗಳಿದ್ದರೆ ಅದರ ಪರಿಹಾರವು ಆ ಮತಾಧಿಕಾರವನ್ನೇ ಹತ್ತಿಕ್ಕುವುದು ಅಲ್ಲ. ಆದರೆ, ಅವಶ್ಯ ವ್ಯವಸ್ಥೆಯನ್ನು ಒದಗಿಸಿಕೊಡುವುದು ಅಂದರೆ ಆ ಮತಾಧಿಕಾರದ ಹಕ್ಕನ್ನು ಅನುಭವಿಸುವ ಹಕ್ಕಿದ್ದ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಯು ತಮ್ಮ ಆ ಹಕ್ಕನ್ನು ಚಲಾಯಿಸುವ ಅವಕಾಶ ಕೊಡುವುದೇ ಪರಿಹಾರವಾಗಿರುತ್ತದೆ.

ಮಾನ್ಯರೇ, ಮತಾಧಿಕಾರವನ್ನು ಜಾರಿಗೊಳಿಸುವಲ್ಲಿ ನಮ್ಮ ಎದುರಿಗೆ ಇಡಲಾಗಿರುವ ತೊಂದರೆಗಳು ಎರಡು ಬೇರೆ ಬೇರೆ ಕಾರಣಗಳಿಂದ ಉಂಟಾಗುತ್ತವೆ ಎಂದು ನನಗನ್ನಿಸುತ್ತದೆ. ಭಾರತದಲ್ಲಿ ಮತ ಕ್ಷೇತ್ರಗಳು ತುಂಬಾ ವಿಶಾಲವಾದವುಗಳಾಗಿರುತ್ತವೆ ಎಂದು ನಮಗೆ ಹೇಳಲಾಗಿದೆ ಮತ್ತು ನಿಜವಾಗಿಯೂ, ಸೈಮನ್ ಸಮಿತಿಯ ವರದಿಯಲ್ಲಿ ನಾವು ಕಂಡಂತೆ ಅವು ನಂಬಲರ್ಹವಾಗದಷ್ಟು ವಿಶಾಲ ಸ್ವರೂಪದವುಗಳಾಗಿರುತ್ತವೆ. ಈಗಿರುವಂತೆ ಮತ ಕ್ಷೇತ್ರಗಳಲ್ಲಿನ ಮತದಾರರ ಸಂಖ್ಯೆಯನ್ನು ಹೆಚ್ಚಿಸಿದರೆ, ಇಡಿಯ ಆಡಳಿತ ಯಂತ್ರವೇ ಕುಸಿದುಬೀಳುತ್ತದೆ. ಈ ಸಮ್ಮೇಳನಕ್ಕೆ ನನ್ನ ವಿನಂತಿ ಹೀಗಿದೆ; ಈ ತೊಂದರೆಯನ್ನು ಸುಲಭವಾಗಿ ಪರಿಹರಿಸಬಹುದು. ಈ ತೊಂದರೆಗೆ ಮುಖ್ಯ ಕಾರಣವೆಂದರೆ ಇಂದಿನ ನಿಮ್ಮ ಲೆಜಿಸ್ಲೇಟೀವ್ ಕೌನ್ಸಿಲ್ಲಿನ ರಚನೆ ಮತ್ತು ಸಂಖ್ಯಾಬಲ ಎಂದು ನನಗೆ ಕಂಡುಬರುತ್ತದೆ. ಆ ರಚನೆ ಎಷ್ಟು ಪರಿಮಿತವಾಗಿದೆ ಎಂದರೆ ಈಗಿರುವಂತೆ ಬಹು ವಿಶಾಲವಾದ ಮತ ಕ್ಷೇತ್ರಗಳನ್ನು ರಚಿಸದೆ ಬೇರೆ ಮಾರ್ಗವೇ ಇಲ್ಲದಾಗಿದೆ. ಅಂಕಿಗಳ ಆಧಾರದ ಮೇಲೆ ಗಮನಿಸಿದರೆ ಪ್ರಾಂತೀಯ ಶಾಸನಸಭೆಗಳಲ್ಲಿನ ಸದಸ್ಯರ ಸಂಖ್ಯೆ ಹಾಸ್ಯಾಸ್ಪದವಾಗಿದೆ ಎಂದು ನನಗೆ ಅನ್ನಿಸುತ್ತದೆ. ನಮ್ಮ ಮನಸ್ಸಿನ ಮುಂದೆ ಕೆಲಕಾಲ ಆ ಅಂಕಿಗಳು ಮೂಡಿಬರಲಿ. ಹೋಲಿಕೆ ಮಾಡಿದಾಗ ಮದ್ರಾಸ್, ಬಂಗಾಲ ಮತ್ತು ಸಂಯುಕ್ತ ಪ್ರಾಂತಗಳು ಸ್ವಲ್ಪ ಹೆಚ್ಚು ಕಡಿಮೆ ಫ್ರಾನ್ಸ್, ಗ್ರೇಟ್ ಬ್ರಿಟನ್ ಮತ್ತು ಇಟಲಿಯ ಜನಸಂಖ್ಯೆಯಷ್ಟು ಜನಸಂಖ್ಯೆಯುಳ್ಳವಾಗಿವೆ. ಮದ್ರಾಸಿನ ಲೆಜಿಸ್ಲೇಟೀವ್ ಕೌನ್ಸಿಲ್ ೧೩೨ ಸದಸ್ಯರನ್ನೂ ಹೊಂದಿವೆ. ಬಂಗಾಲದ ಲೆಜಿಸ್ಲೇಟೀವ್ ಕೌನ್ಸಿಲ್ಲು ೧೪೦ ಸದಸ್ಯರನ್ನು, ಸಂಯುಕ್ತ ಪ್ರಾಂತಗಳ ಲೆಜಿಸ್ಲೇಟೀವ್ ಕೌನ್ಸಿಲ್ಲು ೧೨೩ ಸದಸ್ಯರನ್ನೂ ಹೊಂದಿದೆ. ಆದರೆ ಫ್ರಾನ್ಸಿನಲ್ಲಿ ಕೆಳಮನೆ (ಲೋವರ್ ಚೇಂಬರ್ಸ್) ಇದ್ದು ಅದರಲ್ಲಿ ೭೨೬ ಸದಸ್ಯರಿರುತ್ತಾರೆ. ಗ್ರೇಟ್ ಬ್ರಿಟನ್ನಿನಲ್ಲಿ ಸುಮಾರು ೬೦೦ಕ್ಕಿಂತ ಹೆಚ್ಚಿನ ಸದಸ್ಯರಿರುತ್ತಾರೆ ಮತ್ತು ಇಟಲಿಯಲ್ಲಿ ೫೬೦ ಸದಸ್ಯರಿರುತ್ತಾರೆ. ಮುಂಬೈ ಮತ್ತು ಪಂಜಾಬ್ ಪ್ರಾಂತಗಳನ್ನು ಗಮನಿಸಬೇಕು. ಅವೆರಡೂ ಜನಸಂಖ್ಯಾ ಪ್ರಮಾಣದ ಮೇಲೆ ಸರಿಸಮ ಇರುತ್ತವೆ ಎನ್ನಬೇಕಾಗುತ್ತದೆ. ಮುಂಬೈಯಲ್ಲಿ ೧೧೪ ಸದಸ್ಯರಿರುತ್ತಾರೆ. ಪಂಜಾಬದಲ್ಲಿ ಕೇವಲ ೯೪ ಜನ ಸದಸ್ಯರಿರುತ್ತಾರೆ. ಮುಂಬಯಿ ಮತ್ತು ಪಂಜಾಬ ಪ್ರಾಂತಗಳು ಸ್ಪೇನ್ ಜನಸಂಖ್ಯೆಯ ಸರಿಸಮ ಜನಸಂಖ್ಯೆಯುಳ್ಳವುಗಳು ಇರುತ್ತವೆ. ಸ್ಪೇನದ ಕೆಳಮನೆ (ಲೋವರ್ ಚೇಂಬರ್)ಯಲ್ಲಿ ೪೧೭ ಸದಸ್ಯರಿರುತ್ತಾರೆ. ಅದು ಬೇರೆ ವಿಚಾರ. ಅದು ಸಂವಿಧಾನದ ವಿಚಾರ. ಫ್ರಾನ್ಸದಲ್ಲಿ ಅದು ಇನ್ನೂ ಹೆಚ್ಚಿನ ಸದಸ್ಯ ಸಂಖ್ಯೆಯನ್ನು ಹೊಂದಿದ್ದು ಇನ್ನು ಅಸ್ತಿತ್ವದಲ್ಲಿದೆ. ಮಧ್ಯ ಪ್ರಾಂತವನ್ನು ಗಮನಿಸಿದರೆ ಅಲ್ಲಿಯ ಲೆಜಿಸ್ಲೇಟೀವ್ ಕೌನ್ಸಿಲ್ ಕೇವಲ ೨೩ ಸದಸ್ಯರನ್ನು ಹೊಂದಿದೆ. ಮಧ್ಯ ಪ್ರಾಂತ ಯುಗೋಸ್ಲಾನಿಯಾ ದೇಶದ ಜನಸಂಖ್ಯೆಗೆ ಸರಿಸಮ ಜನಸಂಖ್ಯೆಯನ್ನು ಹೊಂದಿದೆ ಎಂದು ನನಗೆ ಕಂಡುಬಂದಿದೆ. ಯುಗೋಸ್ಲಾವಿಯಾದಲ್ಲಿ ೩೧೩ ಸದಸ್ಯರಿರುತ್ತಾರೆ. ಅಸ್ಸಾಮ ರಾಜ್ಯದಲ್ಲಿ ೫೩ ಸದಸ್ಯರಿರುತ್ತಾರೆ. ಜನಸಂಖ್ಯೆಯ ದೃಷ್ಟಿಯಲ್ಲಿ ಅದು ಪೋರ್ಚುಗಲ್‌ಗೆ ಸರಿಸಮ ಇದೆ. ಪೋರ್ಚುಗಲ್‌ನಲ್ಲಿ ೧೪೬ ಸದಸ್ಯರಿರುತ್ತಾರೆ.

ಈಗ ನಿಜವಾಗಿಯೂ ನೀವು ಈ ವಿಶಾಲ ಜನಸಮುದಾಯವನ್ನು ೧೪೦ಕ್ಕಿಂತ ಹೆಚ್ಚಿನ ಸಂಖ್ಯೆಗೇರದ ಲೆಜಿಸ್ಲೇಟೀವ್ ಕೌನ್ಸಿಲ್ಲಿನಲ್ಲಿ ಹಾಕಿ ಅದನ್ನು ಸಂಕುಚಿತಗೊಳಿಸಲು ಪ್ರಯತ್ನಿಸಿದರೆ, ಅದರ ಪರಿಣಾಮವಾಗಿ ನೀವು ತುಂಬಾ ವಿಶಾಲವಾದ ಮತ ಕ್ಷೇತ್ರಗಳನ್ನೇ ರಚಿಸಬೇಕಾಗುತ್ತದೆ. ಶಾಸನ ಸಭೆಗಳ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ನೀವು ಏಕೆ ಭಯಪಡುತ್ತೀರಿ. ಅದು ನನಗೆ ಅರ್ಥ ಆಗಲೊಲ್ಲದು. ನೀವು ಭಯಪಡದವರಾಗಿದ್ದರೆ, ನೀವು ಬೇರೆ ದೇಶಗಳನ್ನು ಅನುಸರಿಸಲು ಬಯಸುತ್ತಿದ್ದರೆ,

ಆಗ ನೀವು ನಿಜವಾಗಿಯೂ ಮತ ಕ್ಷೇತ್ರಗಳ ಗಾತ್ರವನ್ನು ಕಡಿಮೆ ಮಾಡಬಲ್ಲಿರಿ ಮತ್ತು ಆ ಮೂಲಕ ವಯಸ್ಕ ಮತಾಧಿಕಾರಕ್ಕೆ ಸಂಬಂಧಿಸಿದಂತೆ ಇರುವ ಒಂದು ತೊಂದರೆಯನ್ನು ತೆಗೆದು ಹಾಕಬಲ್ಲಿರಿ.

ನಮ್ಮಲ್ಲಿ ಸಾಕಷ್ಟು ಚುನಾವಣಾಧಿಕಾರಿಗಳು ಸಿಗುತ್ತಿಲ್ಲವೆಂದು ಹೇಳಲಾಗುತ್ತಿದ್ದು, ಅದು ಅಂತಹ ದೊಡ್ಡ ಸಮಸ್ಯೆಯೇನೂ ಅಲ್ಲ. ಭಾರತದಲ್ಲಿನ ಕಾಲೇಜುಗಳಲ್ಲಿನ ಎಲ್ಲ ವಿದ್ಯಾರ್ಥಿಗಳನ್ನು ಚುನಾವಣಾ ಇಲಾಖೆಗೆ ಸೇರಿಸಿಕೊಂಡರೆ ಈ ತೊಂದರೆಯನ್ನು ಸುಲಭವಾಗಿ ಪರಿಹರಿಸಬಹುದು. ಎದುರಿಗಿರುವ ನನ್ನ ಹಲವು ಸ್ನೇಹಿತರು ಈ ಸೂಚನೆಗೆ ಹಾಸ್ಯಮಾಡುತ್ತಾರೆ. ಆದರೆ, ಅವರು ಏಕೆ ನಗುತ್ತಾರೆ ಅನ್ನುವುದು ನನಗೆ ಅರ್ಥವಾಗುವುದಿಲ್ಲ. ಜನಗಣತಿ ಕಾಲದಲ್ಲಿ ಎಲ್ಲ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳು ಜನಗಣತಿ ಇಲಾಖೆಗೆ ಸಹಾಯಮಾಡುತ್ತಿರುವುದು ವಾಸ್ತವ ಸಂಗತಿಯಾಗಿದೆ. ಉದಾಹರಣೆಗೆ ಹೇಳಬೇಕೆಂದರೆ ಅದೇ ಪದ್ಧತಿಯನ್ನು ಮತದಾನದ ದಿವಸ ಅನುಸರಿಸಿದರೆ ಮತ್ತು ಕಾಲೇಜ್ ವಿದ್ಯಾರ್ಥಿಗಳನ್ನು ಆ ವಿಷಯಕ್ಕೆ ಸಂಬಂಧಪಟ್ಟಂತೆ ಸಹಾಯ ಮಾಡಲು ಕೇಳಿದರೆ ಮತ್ತು ಅವರು ಈ ಇಲಾಖೆಯ ಸಹಾಯಕ್ಕೆ ಬರುತ್ತಾರೆಂಬುದರಲ್ಲಿ ನನಗೆ ಎಳ್ಳಷ್ಟು ಸಂಶಯವಿಲ್ಲ. ಆಗ ಇಂಥ ಸಂದರ್ಭದಲ್ಲಿ ನಮಗೆ ಬೇಕಾದುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣಾಧಿಕಾರಿಗಳು ದೊರಕುತ್ತಾರೆ.

ಆದುದರಿಂದ ಈ ಪರಿಸ್ಥಿತಿಯಿಂದಾಗಿ ಉಂಟಾಗುವ ತೊಂದರೆಗಳು ಪರಿಹರಿಸಲು ಆಗದಂಥವುಗಳೇನೂ ಅಲ್ಲ ಎಂದು ನನಗೆ ಅನ್ನಿಸುತ್ತದೆ. ಈ ಆಧಾರದ ಮೇಲೆ ವಯಸ್ಕ ಮತಾಧಿಕಾರಕ್ಕೆ ತಕರಾರು ಮಾಡುವ ನನ್ನ ಸ್ನೇಹಿತರಿಗೆ ನಾನು ಹೀಗೆ ಹೇಳಬಯಸುತ್ತೇನೆ. ಅವರ ವಾದ ಒಂದು ರೀತಿಯಲ್ಲಿ ವಿಚಿತ್ರವಾಗಿ ಕಾಣುತ್ತದೆ. ಬ್ರಿಟಿಶ್ ಸದಸ್ಯರೊಬ್ಬರು ಒಂದು ತೊಂದರೆಯನ್ನು ಸೂಚಿಸಿದಾಗ ಮತ್ತು ಭಾರತವು ಕ್ರಮಿಸುವ ಮಾರ್ಗದಲ್ಲಿ ಹಲವಾರು ತೊಂದರೆಗಳಿವೆ ಮತ್ತು ಆ ಕಾರಣದಿಂದ ಭಾರತವು ಡೋಮಿನಿಯನ್ ಸ್ಥಾನವನ್ನಾಗಲೀ ಅಥವಾ ಹೊಣೆಗಾರ ಸರಕಾರವನ್ನಾಗಲೀ ಪಡೆಯಲಾರದು ಎಂದಾಗ, ಎದುರಿಗೆ ಕುಳಿತ ಸಭ್ಯ ಗೃಹಸ್ಥರು ಆ ತೊಂದರೆಗಳ ಪ್ರಯೋಜನವನ್ನು ಆ ಇಂಗ್ಲಿಷ್ ಸಭ್ಯಗೃಹಸ್ಥನು ಉಪಯೋಗಿಸಿಕೊಳ್ಳಲು ಒಪ್ಪುವುದಿಲ್ಲ. ಅವರು ಅವನಿಗೆ ಕೂಡಲೇ "ನಮ್ಮ ಕ್ಲೇಮುಗಳನ್ನು ಹತ್ತಿಕ್ಕಲು ತೊಂದರೆಗಳನ್ನೇ ಏಕೆ ಮುಂದೆ ಮಾಡುತ್ತೀರಿ? ಈ ತೊಂದರೆಗಳು ನಿಜವಾಗಿಯೂ ಪರಿಹರಿಸಬಲ್ಲವಾಗಿವೆ" ಎಂದು ಹೇಳುವಿರಿ. ಈ ಬದಿಗೆ ಕುಳಿತ ನಾವೂ ಸಹ ಆ ತೊಂದರೆಗಳ ಪ್ರಯೋಜನವನ್ನು ನೀವು ಪಡೆದುಕೊಳ್ಳಲು ಬಿಡುವುದಕ್ಕೆ ಸಿದ್ಧರಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇವೆ. ಅಧಿಕಾರವನ್ನು ನಮ್ಮ ಕೈಯಲ್ಲಿ ತೆಗೆದುಕೊಳ್ಳಲು ತೊಂದರೆಗಳು ಇದ್ದರೆ, ಆ ತೊಂದರೆಗಳನ್ನು ಪರಿಹರಿಸಲೇಬೇಕು. ನೀವು ಪರಿಸ್ಥಿತಿಯ ಪ್ರಯೋಜನವನ್ನು ಪಡೆದುಕೊಳ್ಳಲು ನಾವು ಬಿಡುವುದೇ ಇಲ್ಲ.

ಮಾನ್ಯರೇ, ನಾನು ಇಲ್ಲಿಯವರೆಗೆ ವಯಸ್ಕ ಮತಾಧಿಕಾರದ ಬಗ್ಗೆ ಸಲ್ಲಿಸಲಾಗಿರುವ ವಾದಗಳ ಬಗ್ಗೆ ಹೇಳಿದೆನು. ಈಗ ವಯಸ್ಕ ಮತಾಧಿಕಾರದ ಪರವಾಗಿ ಇರುವವೆಂದು ನಾನು ಭಾವಿಸಿರುವ ಮತ್ತು ಅವು ನಿರ್ಣಾಯಕ ಅಂಶಗಳೆಂದು ನಾನು ತಿಳಿದಿರುವ ಒಂದೆರಡು ಅಂಶಗಳನ್ನು ಮಂಡಿಸಲು ನನಗೆ ಅನುಮತಿಸಿರಿ. ನಾನು ಮಂಡಿಸುವ ಮೊದಲನೆಯ ವಾದವೆಂದರೆ ಭಾರತದಲ್ಲಿ ಎಲ್ಲ ಜಾತಿಗಳಿಗೆ ಮತ್ತು ಕೋಮುಗಳಿಗೆ ಪ್ರಾತಿನಿಧ್ಯದ ಸಮಾನತೆಯನ್ನು ಕೊಡುವ ವಯಸ್ಕ ಮತಾಧಿಕಾರವನ್ನು ಕೊಡುವುದಕ್ಕಿಂತ ಕಡಿಮೆಯಾದ ಯಾವುದೇ ಪದ್ಧತಿಯ ಚುನಾವಣೆಯನ್ನು ನಾವು ಹೊಂದಲಾರೆವು. ಈ ಪರಿಣಾಮವನ್ನು ಕೊಡುವಂಥ

ಬೇರೆ ಯಾವುದೇ ಬೇರೆ ಪದ್ಧತಿಯು ಇಲ್ಲವೇ ಇಲ್ಲ. ಮತಕ್ಷೇತ್ರಗಳ ಉದಾಹರಣೆಯನ್ನು ಇಲ್ಲಿ ಉಲ್ಲೇಖಿಸಬಹುದು. ಬಂಗಾಲ ಮತ್ತು ಪಂಜಾಬದಲ್ಲಿ ಮಹಮಡನ್ನರು ಬಹುಮತವನ್ನು ಹೊಂದಿದವರಾಗಿರುತ್ತಾರೆ. ಸಿಂಧ್‌ನಲ್ಲೂ ಹಾಗೆಯೇ ಇದೆ. ಮುಂಬಯಿಯಲ್ಲಿ ಹಾಗಿಲ್ಲ. ಈ ಪ್ರಾಂತಗಳಲ್ಲಿ ಮುಸಲ್ಮಾನರ ಪದ್ಧತಿ ಏನು? ನಿಮ್ಮ ಮನಸ್ಸನ್ನು ತಿಳಿಗೊಳಿಸಲು ನಾನು ಇದನ್ನು ಹೇಳುತ್ತಿದ್ದೇನೆ. ನನ್ನ ಮೊಹಮಡನ್ ಸ್ನೇಹಿತರು ಇದನ್ನು ಬಿಟ್ಟು ಬೇರೆ ವಾದವನ್ನು ಮಂಡಿಸಬಹುದು. ಇದನ್ನು ನಾನು ಒಂದು ಪ್ರಕರಣದ ರೀತಿಯಲ್ಲಿ ಮಂಡಿಸುತ್ತಿದ್ದೇನೆ. ಇಂದು ನಾವು ಅನುಸರಿಸುತ್ತಿರುವ ಚುನಾವಣಾ ಪದ್ಧತಿಯ ಮೇರೆಗೆ ಈ ಪ್ರಾಂತಗಳಲ್ಲಿ ಮೊಹಮಡನ್ ಕೋಮುಗಳವರ ಸ್ಥಾನವೇನು? ಸಿಂಧದಲ್ಲಿ ಮೊಹಮಡನ್ನರು ಜನತೆಯ ಶೇಕಡಾ ೭೦ರಷ್ಟು ಇರುತ್ತಾರೆ. ಆದರೆ, ನಾನು ತಪ್ಪಾಗಿ ತಿಳಿದುಕೊಂಡಿರದಿದ್ದರೆ, ಅವರ ಮತದಾನದ ಬಲ ಕೇವಲ ಶೇಕಡಾ ೪೯ ಮಾತ್ರ ಇರುತ್ತದೆ. ಬಂಗಾಲ ಮತ್ತು ಪಂಜಾಬದ ಉದಾಹರಣೆಯನ್ನು ಪುನಃ ಉಲ್ಲೇಖಿಸಬೇಕೆಂದರೆ, ಅಲ್ಲಿಯೂ ಸಹ ಮಹಮಡನ್ನರೇ ಜನಸಂಖ್ಯೆಯಲ್ಲಿ ಮೇಲ್ಮೈ ಪಡೆಯುತ್ತಾರೆ. ಆದರೆ, ಮತದಾರರ ಯಾದಿಯಲ್ಲಿ ಅವರು ಅಲ್ಪಸಂಖ್ಯಾತರಾಗಿಯೇ ಇರುತ್ತಾರೆ. ನಿಮ್ಮ ವರ್ಗದವರ ಉದಾಹರಣೆಯನ್ನು ತೆಗೆದುಕೊಳ್ಳಿರಿ; ಈಗಿರುವ ಮತದಾರರ ಯಾದಿಯಲ್ಲಿ ಅವರು ಎಲ್ಲಿಯೂ ಇಲ್ಲ. ಈ ಸ್ವರೂಪದ ಮತಾಧಿಕಾರ ಇರುವುದು ತುಂಬಾ ಅವಮಾನಕರವಾದುದೆಂದು ನಾನು ಭಾವಿಸುತ್ತೇನೆ. ಇಲ್ಲಿ ನೀವು ಒಂದು ಸಂಗತಿಯನ್ನು ನೆನಪಿನಲ್ಲಿಡಬೇಕು. ಭಾರತೀಯ ಸಮಾಜವು ಹಲವಾರು ಜಾತಿಗಳು ಮತ್ತು ಕುಲಗಳಿಂದ ಕೂಡಿರುತ್ತದೆ ಮತ್ತು ಈ ಜಾತಿಗಳು ಮತ್ತು ಕುಲಗಳು ಪರಸ್ಪರ ಕಾಟಕೋನದ ರೇಖೆಗಳಂತೆ ಒಂದಕ್ಕೊಂದು ಸಂಬಂಧಿಸಿರುವುದಿಲ್ಲ. ಅಂದರೆ, ಈ ಜನತೆಯನ್ನು ನೀವು ಯಾವುದೇ ಒಂದು ನಿಶ್ಚಿತ ಸ್ಥಳದಲ್ಲಿ ತುಂಡರಿಸಿದರೆ ಅದರಲ್ಲಿ ಎಲ್ಲ ಕೋಮುಗಳನ್ನೂ ಸಮಪ್ರಮಾಣದಲ್ಲಿ ಪ್ರತಿನಿಧಿಸುವ ಒಂದು ಭಾಗವನ್ನೇ ನೀವು ಪಡೆದುಕೊಳ್ಳುತ್ತೀರಿ. ಇನ್ನೊಂದು ರೀತಿಯಲ್ಲಿ ನೋಡಿದರೆ, ನಾನು ಹೀಗೆ ಹೇಳಬಹುದಾದರೆ, ಅವುಗಳು ಸರಿಸಮ ಕಾಳುಗಳನ್ನು ಒಂದರ ಮೇಲೊಂದರಂತೆ ಸಮಾಂತರದಲ್ಲಿ ಇಟ್ಟು ಅಂದರೆ, ಅದನ್ನು ನೀವು ಯಾವುದೇ ಒಂದು ಸ್ಥಳದಲ್ಲಿ ತುಂಡರಿಸಿದರೆ ಆಗ ನಿಮಗೆ ಒಂದು ಅಥವಾ ಎರಡು ಕೋಮುಗಳನ್ನು ಮಾತ್ರ ಪ್ರತಿನಿಧಿಸುವ ಭಾಗಗಳು ಮಾತ್ರ ದೊರಕುತ್ತದೆ. ಉಳಿದ ಯಾವ ಕೋಮುಗಳ ಪ್ರಾತಿನಿಧ್ಯವೂ ಅಲ್ಲಿ ಇರುವುದಿಲ್ಲ. ಕೇವಲ ಕೆಲವು ಜಾತಿಗಳು ಮತ್ತು ಕೋಮುಗಳು ಮಾತ್ರ ಪ್ರಾಬಲ್ಯ ಹೊಂದಿರುವಂಥ ರಾಜಕೀಯ ಸರಕಾರದ ಪದ್ಧತಿಯನ್ನು ರಚಿಸಲು ನಿಜವಾಗಿಯೂ ನಿಮಗಾರಿಗೂ ಬೇಕಾಗಿಲ್ಲ. ಭಾರತದಲ್ಲಿ ನೀವು ಕೆಲವರಿಗೆ ಮಾತ್ರವೇ ಮತಾಧಿಕಾರವಿದ್ದು ಉಳಿದ ಯಾರಿಗೂ ಮತಾಧಿಕಾರವಿಲ್ಲದ ದಕ್ಷಿಣ ಆಫ್ರಿಕಾವನ್ನು ಸೃಷ್ಟಿಸುವುದನ್ನು ಖಂಡಿತವಾಗಿಯೂ ಇಷ್ಟಪಡಲಿಕ್ಕಿಲ್ಲ, ಪ್ರತಿಯೊಬ್ಬ ವ್ಯಕ್ತಿಗೂ ನೀವು ಮತಾಧಿಕಾರವನ್ನು ಕೊಡಲು ಇಚ್ಛೆಪಟ್ಟವರಾಗಿದ್ದರೆ, ಪ್ರತಿಯೊಬ್ಬ ವ್ಯಕ್ತಿಗೂ ರಾಜಕೀಯ ಚುನಾವಣಾಧಿಕಾರವನ್ನೂ, ಆತ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಬಹುದೆಂದು, ಕೊಡಲು ಇಚ್ಛೆಪಟ್ಟವರಾಗಿದ್ದರೆ, ಆಗ ಭಾರತದಲ್ಲಿ ವಯಸ್ಕ ಮತಾಧಿಕಾರವನ್ನೂ ಹೊಂದಿರುವ ಚುನಾವಣಾ ಪದ್ಧತಿಯ ಹೊರತು ಬೇರೆ ಯಾವ ಪದ್ಧತಿಯನ್ನೂ ಇಟ್ಟುಕೊಳ್ಳಲಾರಿರಿ ಎಂದು ನಾನು ಹೇಳುತ್ತೇನೆ.

ನಾನು ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಮಹಿಳೆಗೆ ಮತಾಧಿಕಾರ ಕೊಡುವ ವಿಚಾರಕ್ಕೆ ನಾನು ವಿರೋಧಿಯಲ್ಲ, ನಿಮ್ಮ ಮಹಿಳಾ ಸದಸ್ಯರಾದ ಶ್ರೀಮತಿ ಸುಬ್ಬರಾಯನ್ ಅವರ ಈ ವಾದಕ್ಕೆ ಸಮರ್ಥನೆ ನೀಡುತ್ತೇನೆ. ಮತಾಧಿಕಾರವನ್ನು ವಿಸ್ತಾರಗೊಳಿಸಲು ಮತ್ತು ಹೆಚ್ಚಿಸಲು ಸೂಚಿಸಲಾದ ವಿಷಯದ

ಬಗ್ಗೆ ಒಂದೆರಡು ದೃಷ್ಟಾಂತಗಳನ್ನು ಹೇಳಲು ನನಗೆ ಅವಕಾಶ ಕೊಡಿರಿ. ಸಾಕ್ಷರತಾ ಆಧಾರದ ಮತಾಧಿಕಾರ ಇರಬೇಕೆಂದು ಸೂಚಿಸಲಾಗಿದೆ. ಇದನ್ನು ಮೋಜಿನ ಮತದಾನ ಎಂದು ಕರೆಯಲು ನಾನು ಇಚ್ಛಿಸುವುದಿಲ್ಲ. ಆದರೆ, ಅದರ ಪರಿಣಾಮ ಏನು ಎಂದು ಹೇಳಬಯಸುತ್ತೇನೆ. ಅದರ ಪರಿಣಾಮ ಹೀಗೆ ಆಗುತ್ತದೆ. ಇದರಿಂದ ಹಲವು ಕೋಮುಗಳ ಮತದಾರರ ಸಂಖ್ಯೆ ದುಪ್ಪಟ್ಟಾಗುತ್ತದೆ. ಆದರೆ, ಉಳಿದ ಕೋಮಿನವರ ಸಂಖ್ಯೆ ಇದ್ದಷ್ಟೇ ಉಳಿಯುತ್ತದೆ. ಭಾರತದ ಎಲ್ಲ ಕಡೆಯಲ್ಲಿಯೂ ಸಾಕ್ಷರತೆಯ ಪ್ರಮಾಣ ಒಂದೇ ರೀತಿಯಾಗಿಲ್ಲ. ಹಲವು ಕೋಮುಗಳ ಮತಾಧಿಕಾರವು ಇನ್ನೂ ಬೆಳೆಯುತ್ತದೆ. ಆದರೆ ಇತರ ಕೋಮಿನವರು ಇದ್ದಲ್ಲಿಯೇ ಉಳಿದುಬಿಡುತ್ತಾರೆ. ಖಂಡಿತವಾಗಿಯೂ, ಅಂಥ ಪರಿಸ್ಥಿತಿಯನ್ನು ಉಂಟುಮಾಡಲು ನೀವು ಇಚ್ಛಿಸಲಿಕ್ಕಿಲ್ಲ.

ಆದಕಾರಣ ನನ್ನ ವಿನಂತಿ ಹೀಗಿದೆ. ಏನೆಂದರೆ ಮೇಲೆ ಸುತ್ತಲೂ ಕುಳಿತಿರುವ ಸದಸ್ಯರೂ ಮತ್ತು ಈ ಸಮ್ಮೇಳನದಲ್ಲಿರುವವರೂ ತಮ್ಮ ಆತ್ಮಸಾಕ್ಷಿಗೆ ಓಗೊಡುವವರಾಗಿದ್ದರೆ ನಂಬಿರಿ, ಭಾರತವು ಹೊಣೆಗಾರ ಸರಕಾರವನ್ನೇ ಹೊಂದಿರತಕ್ಕುದು ಮತ್ತು ಸರಕಾರವು ಜನತೆಗೆ ಹೊಣೆಗಾರವಾಗಿರತಕ್ಕುದು ಎಂದು ನಂಬುತ್ತಾರೆ. ಹಾಗಾಗಬೇಕಾದರೆ ವಯಸ್ಕ ಮತಾಧಿಕಾರಕ್ಕೆ ಪರ್ಯಾಯವಾದುದು ಯಾವುದೂ ಇಲ್ಲ ಎಂದು ನಾನು ಹೇಳುತ್ತೇನೆ.

ಮಾನ್ಯರೆ, ಈಗ ನಾನು ನಿಮ್ಮ ಗಮನಕ್ಕೆ ತರಬೇಕೆಂದಿರುವ ಇನ್ನೊಂದು ವಿಷಯವಿದೆ. ಅದು ವಿಷಯದಲ್ಲಿ ತುಂಬಾ ನಿರ್ಣಯಾತ್ಮಕವಾಗಿರುವಂತೆ ಕಂಡುಬರುತ್ತದೆ. ಜಂಟೀ ಮತ ಕ್ಷೇತ್ರ ಅಥವಾ ಪ್ರತ್ಯೇಕ ಮತ ಕ್ಷೇತ್ರದ ಪ್ರಶ್ನೆಯು ತುಂಬ ಜಟಿಲವಾದುದೆಂದು ನಮಗೆಲ್ಲ ತಿಳಿದಿದೆ. ಅದು ತುಂಬಾ ಮಹತ್ವದ ಪ್ರಶ್ನೆಯಾಗಿರುತ್ತದೆ ಎಂದೂ ಕಂಡುಬರುತ್ತದೆ. ಈ ಜಂಟೀ ಮತಕ್ಷೇತ್ರ ಅಥವಾ ಪ್ರತ್ಯೇಕ ಮತ ಕ್ಷೇತ್ರದ ಪ್ರಶ್ನೆಯು ಬಿಡಿಸಲಾರದಂತೆ ಮತಾಧಿಕಾರದ ಪ್ರಶ್ನೆಯೊಡನೆ, ಕೊನೆಯ ಪಕ್ಷ ನನ್ನ ಅಭಿಪ್ರಾಯದಲ್ಲಿ ಬೆರೆತುಕೊಂಡಿದೆ ಎಂಬುದನ್ನು ನಾನು ಎತ್ತಿ ತೋರಿಸಬಹುದೋ? ಭಾರತದಲ್ಲಿನ ಯಾವುದೇ ಅಲ್ಪ ಸಂಖ್ಯಾತ ವರ್ಗಕ್ಕೆ ವಯಸ್ಕ ಮತಾಧಿಕಾರವನ್ನು ಒದಗಿಸದ ಹೊರತು, ಆ ಯಾವುದೇ ಅಲ್ಪಸಂಖ್ಯಾತ ವರ್ಗವನ್ನು ಸಂಯುಕ್ತ ಮತಕ್ಷೇತ್ರಕ್ಕೆ ಸಮ್ಮತಿಸುವಂತೆ ನೀವು ಕೇಳುವಂತಿಲ್ಲ, ಒತ್ತಾಯಪಡಿಸುವಂತಿಲ್ಲ. ನನ್ನ ಸಾಮಾಜಿಕ ಅಧಿಕಾರದೊಂದಿಗೆ ಹೊಂದಿಕೊಂಡಿರುವ ಚುನಾವಣೆಯಲ್ಲಿ ಭಾಗವಹಿಸುವವನಾಗಿರುವ ಅಧಿಕಾರವನ್ನು ನಾನು ಚಲಾಯಿಸಬಲ್ಲೆನೆಂಬುದು ಖಚಿತವಾಗದ ಹೊರತು ನಾನು ಬಹುಮತದವರ ಯಾವುದೇ ಸರಕಾರದ ಮುಷ್ಠಿಯಲ್ಲಿ ಮತ್ತು ಅದರ ಅಧಿಕಾರದ ಕೆಳಗೆ ನನ್ನನ್ನು ಅರ್ಪಿಸಿಕೊಳ್ಳಲು ಸಿದ್ಧನಿಲ್ಲ. ನಿಮ್ನವರ್ಗದವರ ಕೋಮುಗಳ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆಯು ಮತ ಚಲಾಯಿಸಲು ಮತ್ತು ದೇಶದಲ್ಲಿನ ಜನತೆಯನ್ನು ಪ್ರತಿನಿಧಿಸುವ ಉಮೇದುವಾರನ ಅದೃಷ್ಟವನ್ನು ನಿರ್ಧರಿಸಲು ಸಮರ್ಥರಿರುವರೆಂದು ನಾನು ತಿಳಿಯದ ಹೊರತು ಜಂಟೀ ಮತ ಕ್ಷೇತ್ರಗಳಿಗಾಗಿ ನಾನು ಸಮ್ಮತಿಸುವುದೇ ಇಲ್ಲ. ಖಚಿತವಾಗಿಯೂ ಸಮ್ಮತಿಸುವುದಿಲ್ಲ. ಅಲ್ಪಸಂಖ್ಯಾತನ ಸ್ಥಾನದಲ್ಲಿ ನಿಲ್ಲಲು ನಾನು ಅವಕಾಶ ಕೊಡುವುದಿಲ್ಲ. ಬಹುಮತದವರು ನನ್ನ ಉಮೇದುವಾರನನ್ನು ಆಯ್ಕೆ ಮಾಡಲು ನಾನು ಅನುಮತಿಸುವುದಿಲ್ಲ. ಎಂಥ ಸಂದರ್ಭದಲ್ಲೂ ಇಲ್ಲ. ನನ್ನ ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ನಿಜ ಸಂಗತಿ ಏನೇ ಇದ್ದರೂ ಅದು ಮೊಹಮಡನ್ನರಿಗೂ ಸಂಬಂಧಿಸಿದಂತೆ ನಿಜ ಸಂಗತಿಯೇ ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ಇನ್ನೊಂದು ಸಮಿತಿಯ ಮುಂದೆ ಹೇಳಬೇಕಾದ ಯಾವುದೇ ವಿಷಯವನ್ನು ಇಲ್ಲಿ ಹೇಳಲು ನಾನು ಇಚ್ಛಿಸುವುದಿಲ್ಲ. ಆದರೆ, ಈ ಅಂಶವು ತುಂಬಾ ಸುಸಂಬದ್ಧವಾದುದೂ ಮತ್ತು ಮಹತ್ವದ್ದೂ ಇದ್ದು ಅದನ್ನು

ನಾನು ಹೇಳದೇ ಇರಲಾರೆ. ಬಂಗಾಲದ ಅಥವಾ ಪಂಜಾಬದ ಮೊಹಮಡನ್ನರು ನೀವು ಬಹುಮತದ ಮತದಾರರಲ್ಲಿ ಸೇರಿಸದ ಹೊರತು, ನ್ಯಾಯಯುತವಾಗಿ ಜಂಟೀ ಮತ ಕ್ಷೇತ್ರಗಳನ್ನು ಒಪ್ಪಿಕೊಳ್ಳಿರೆಂದು ನೀವು ಅವರನ್ನು ಕೇಳಲಾರಿರಿ. ಮೊಹಮಡನ್ನರಿಗೆ ನೀವು ಮತಾಧಿಕಾರವನ್ನು ನಿರಾಕರಿಸಲಾರಿರಿ ಮತ್ತು ಚುನಾವಣಾ ಅಧಿಕಾರದಲ್ಲಿ ಅವರನ್ನು ಅಲ್ಪಸಂಖ್ಯಾತರನ್ನಾಗಿ ಮಾಡಲಾರಿರಿ ಮತ್ತು ಜೊತೆಗೆ ಬನ್ನಿ ಮತ್ತು ಜಂಟೀ ಮತ ಕ್ಷೇತ್ರವನ್ನು ಪಡೆಯಿರಿ" ಎನ್ನಲಾರಿರಿ.

ನೆಹರೂ ಸಮಿತಿಯು ಮತ್ತು ಭಾರತ ಕೇಂದ್ರ ಸಮಿತಿಯ ಮೂವರು ಸದಸ್ಯರು ಈ ಸಂಗತಿಯ ನಿರ್ಣಯಾತ್ಮಕ ಸ್ವರೂಪವನ್ನು ಒಪ್ಪಿಕೊಂಡಿದ್ದಾರೆ.

ನಮಗೆ ವಯಸ್ಕ ಮತಾಧಿಕಾರವನ್ನು ಕೊಡದ ನನ್ನ ಸ್ನೇಹಿತರಿಗೆ ನನ್ನ ಮಾತು ಮುಗಿಸುವ ಮುಂಚೆ ಒಂದೆರಡು ಸೂಚನೆ ಮಾಡಲು ಅನುಮತಿಯನ್ನು ಕೋರುವೆನು. ನನ್ನ ಭಾಷಣದ ಪ್ರಾರಂಭದಲ್ಲಿಯೇ ನಾನು ಭಾರತಕ್ಕೆ ಹೊಣೆಗಾರ ಸರಕಾರವನ್ನು ಕೊಡುವ ಪ್ರಶ್ನೆಯು ಸಂಪೂರ್ಣವಾಗಿ ಈ ಪ್ರಶ್ನೆಯನ್ನು ಆಧರಿಸಿರತಕ್ಕುದಲ್ಲ ಎಂಬುದನ್ನು ಸ್ಪಷ್ಟಪಡಿಸಿರುತ್ತೇನೆ. ೮೦ ಅಥವಾ ೯೦ ಸದಸ್ಯರಿರುವ ಈ ಸಮ್ಮೇಳನದಲ್ಲಿ ನಾನು ಮತ್ತು ನನ್ನ ಸ್ನೇಹಿತ ಇಬ್ಬರೇ ಇಲ್ಲಿ ಪ್ರತ್ಯೇಕವಾಗಿ ಇರುತ್ತೇವೆ ಎಂಬುದು ನನಗೆ ಗೊತ್ತಿದೆಯಾದರೂ ನಾವಿಬ್ಬರು ೪೩ ದಶಲಕ್ಷ ಜನತೆಯನ್ನು ಪ್ರತಿನಿಧಿಸುತ್ತೇವೆ.

ದಿವಾನ ಬಹುದ್ದೂರ ರಾಮಚಂದ್ರ ರಾವ: ಡಾ. ಅಂಬೇಡ್ಕರ್ ಅವರು ಲಾರ್ಡ್ ಜೆಟ್‌ಲ್ಯಾಂಡ್ ಅವರ ಪ್ರಸ್ತಾಪವನ್ನು ಒಪ್ಪುತ್ತಾರೋ?

ಡಾ. ಅಂಬೇಡ್ಕರ್: ನಾವು ಸಿದ್ಧಾಂತವನ್ನು ಒಪ್ಪಬಹುದು. ಆದರೆ, ನಾನು ಈಗ ಮುಂದಿಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ ನೂರಾರು ಪತ್ರಗಳು ಮತ್ತು ತಂತೀ ಸಂದೇಶಗಳೂ ನನಗೆ ಬರುತ್ತಿವೆ ಎಂಬುದನ್ನು ನಾನು ಹೇಳಬಹುದೋ. ಇದು ತುಂಬಾ ಮಹತ್ವದ ವಿಷಯವಾಗಿದೆ.

ಸರ್ ಪಿ. ಸಿ. ಮಿತ್ತಲ್: ಕೇಂದ್ರ ಶಾಸನಸಭೆಯ ಬಗ್ಗೆ ಏನು? ಅಲ್ಲಿಯೂ ಅವರಿಗೆ ವಯಸ್ಕ ಮತಾಧಿಕಾರ ಬೇಕೋ ಮತ್ತು ಶಾಸನಸಭೆಯ ಗಾತ್ರ ಎಷ್ಟಿರಬೇಕು?

ಡಾ. ಅಂಬೇಡ್ಕರ್: ಅದು ಅನಂತರ ನಿರ್ಣಯಿಸಬೇಕಾದ ಪ್ರಶ್ನೆಯಾಗಿದೆ. ಕೇಂದ್ರ ಶಾಸನ ಸಭೆ ನನ್ನ ತಿಳಿವಳಿಕೆಯಂತೆ, ೫೦೦ ಸದಸ್ಯರನ್ನು ಹೊಂದಿರತಕ್ಕುದು.

ಸರ್ ಪಿ. ಸಿ. ಮಿತ್ತಲ್: ಮತ್ತು ವಯಸ್ಕ ಮತಾಧಿಕಾರವೂ ಸಹ?

ಡಾ. ಅಂಬೇಡ್ಕರ್: ಹೌದು.

* * *

* ಸರ್ ಕೌಸಾಜೀ ಜಹಾಂಗೀರ: ಬೇಗಮ್ ಅವರಿಗೆ ಯುಕ್ತ ಗೌರವದೊಂದಿಗೆ ನಾನು ಹಾಗೆ ಹೇಳಬಹುದಾದರೆ, ಈ ಎಲ್ಲ ಸೂಚನೆಗಳು ಕೌನ್ಸಿಲ್ಲಿನಲ್ಲಿನ ಪ್ರಾತಿನಿಧ್ಯಕ್ಕೆ ಮತಾಧಿಕಾರವೇ ಬುನಾದಿಯಾಗಿದೆ ಎಂಬ ಭಾವನೆಯಿಂದ ಮೂಡಿಬಂದವುಗಳಾಗಿವೆ. ಎಲ್ಲ ದೇಶಗಳಲ್ಲೂ ಹಾಗೆಯೇ.

---

* ಉಪಸಮಿತಿ–VI (ಮತದಾನದ ಅಧಿಕಾರ)ರ ವ್ಯವಹರಣೆಗಳು; ಪುಟಗಳು:– ೬೮–೬೯

ಆದರೆ ಕೋಮುಗಳಿಗೆ ಪ್ರಾಮುಖ್ಯವನ್ನು ನೀಡುವ ತತ್ವವನ್ನು ಅನುಸರಿಸಿದಲ್ಲೆಲ್ಲ ಈ ಸಿದ್ಧಾಂತ ಸರಿಯಾಗುವುದಿಲ್ಲ.

ಕರ್ನಲ್ ಗಿಡ್ನೆ: ನಾನು ಈಗ ಒಂದು ನಿಶ್ಚಿತ ಸೂಚನೆಯನ್ನು ಮಾಡುತ್ತೇನೆ. ಅದು ಹೀಗಿದೆ. ಲಾರ್ಡ್ ಜೆಟ್‌ಲ್ಯಾಂಡ್ ಅವರು ಸೂಚಿಸಿದ ಯೋಜನೆಯನ್ನು ಅಳವಡಿಸಿಕೊಳ್ಳುವಲ್ಲಿ ನಾವು ನೇರ ಮತ್ತು ಪರೋಕ್ಷ ಚುನಾವಣೆಗಳನ್ನು ಅನುಸರಿಸಬೇಕಾಗುತ್ತದೆ. ನೇರ ಚುನಾವಣೆಗೆ ಸಂಬಂಧಿಸಿದಂತೆ, ಮತಾಧಿಕಾರವನ್ನು ಇನ್ನೂ ವಿಸ್ತರಿಸುವಂತಾಗಬಾರದೆಂಬುದು ಮತ್ತು ಅದು ಈಗಿರುವಂತೆಯೇ ಉಳಿಯಬೇಕೆಂಬುದು ನನ್ನ ಸೂಚನೆ.

ಡಾ: ಅಂಬೇಡ್ಕರ್: ಹಾಗಾಗಕೂಡದು.

ಕರ್ನಲ್ ಗಿಡ್ನೆ: ಸರಿ.

ಸರ್ ಕೌಸಾಜಿ ಜಹಾಂಗೀರ: ನಗರ ಪ್ರದೇಶ ಮತ್ತು ಗ್ರಾಮಾಂತರ ಮತ ಕ್ಷೇತ್ರಗಳಿಗಾಗಿ ನಿರ್ದಿಷ್ಟ ಸಂಖ್ಯೆಯ ಪ್ರತಿನಿಧಿಗಳನ್ನು ಕಳಿಸಬೇಕು. ಜನಸಂಖ್ಯೆಯ ಅತಿ ದೊಡ್ಡ ಭಾಗವು ನೇರ ಮತ ವಿಲ್ಲದೆ ಉಳಿಯುತ್ತದೆ. ಈ ಜನಸಂಖ್ಯೆಯ ಇಡಿಯ ಸಮುದಾಯಕ್ಕೆ ಮತಾಧಿಕಾರವನ್ನು ವಿಸ್ತರಿಸಬೇಕು. ಅದು ವಯಸ್ಕ ಜನ ಸಂಖ್ಯೆಯ ಶೇಕಡಾ ೨೫ರ ಆಧಾರದ ಮೇಲೆ ಇರತಕ್ಕುದು ಮತ್ತು ಅವರು ನಗರ ಮತ್ತು ಗ್ರಾಮಾಂತರ ಪ್ರದೇಶಗಳೆರಡರಲ್ಲೂ ತಮ್ಮ ಪ್ರತಿನಿಧಿಗಳನ್ನು ಪರೋಕ್ಷ ಚುನಾವಣೆಯ ಪದ್ಧತಿಯ ಮೇರೆಗೆ ತಮ್ಮ ಪ್ರತಿನಿಧಿಗಳನ್ನು ಕಳಿಸತಕ್ಕುದು. ಈ ಎರಡರ ನಡುವೆ ನಾನು ಯಾವ ಭೇದವನ್ನೂ ಮಾಡುವುದಿಲ್ಲ. ಅದರಿಂದಾಗಿ ಔದ್ಯೋಗಿಕ ಕಾರ್ಮಿಕರನ್ನು ಮತ್ತು ಕೃಷಿ ಕಾರ್ಮಿಕರನ್ನು ಒಳಗೊಳ್ಳು ವಂತಾಗುತ್ತದೆ.

ಡಾ. ಅಂಬೇಡ್ಕರ್: ಅದು ಅಂಥ ಯಾವುದನ್ನೂ ತರುವುದಿಲ್ಲ.

* * *

* ಡಾ. ಅಂಬೇಡ್ಕರ್: ಮಾನ್ಯರೆ, ಮತಾಧಿಕಾರದ ಪ್ರಶ್ನೆಯ ಬಗ್ಗೆ ಇಂದು ಮುಂಜಾನೆ ನಾನು ಹೇಳಬೇಕಾದುದನ್ನು ಹೇಳಿರುತ್ತೇನೆ. ಇಂದು ಮುಂಜಾನೆ ನಾನು ಹೇಳಿದ್ದಕ್ಕೆ ಯಾವುದೇ ವಿರೋಧ ಇಲ್ಲದಂತೆ ಮತಾಧಿಕಾರದ ಅಧಿಕಾರವನ್ನು ವಿಸ್ತರಿಸುವ ಉದ್ದೇಶದಿಂದ ಸಮಿತಿಯ ಮುಂದೆ ಇಡ ಲಾಗಿರುವ ಸೂಚನೆಗಳನ್ನು ನಾನು ಪರೀಕ್ಷಿಸಬಯಸುತ್ತೇನೆ. ವಯಸ್ಕ ಮತಾಧಿಕಾರವು ಆದರ್ಶವಾದುದು ಎಂದು ಈ ಸಮಿತಿಯು ಒಪ್ಪಿದೆ ಎಂದು ನಾನು ಭಾವಿಸುತ್ತೇನೆ. ಇದನ್ನು ಕೂಡಲೇ ಸಾಧಿಸತಕ್ಕು ದೆಂದು ನಮ್ಮಲ್ಲಿ ಹಲವರು ಆಲೋಚಿಸುತ್ತಾರೆ. ಉಳಿದವರು ಅದನ್ನು ಹಂತಹಂತವಾಗಿ ಸಾಧಿಸಬೇಕೆ ನ್ನುತ್ತಾರೆ. ಕಾರಣ ನಾವು ನಮ್ಮ ಎದುರಿನಲ್ಲಿ ಎರಡು ಖಚಿತ ಸೂಚನೆಗಳನ್ನು ಇಟ್ಟುಕೊಂಡಿದ್ದೇವೆ. ನಾವು ಈ ಪದ್ಧತಿಯನ್ನು ಹಂತಹಂತವಾಗಿ ಅನುಸರಿಸಬೇಕು ಮತ್ತು ಈಗಿರುವ ಮತದಾರರ ಯಾದಿಯಲ್ಲಿ ಶೇಕಡಾ ೨೫ರಷ್ಟನ್ನು ಒಂದು ನಿರ್ದಿಷ್ಟ ಯೋಜನೆಯಂತೆ ಹಲವು ನಿಶ್ಚಿತ ವರುಷಗಳ ಅವಧಿಯಲ್ಲಿ ಹೆಚ್ಚಿಸುತ್ತಾ ಹೋಗಬೇಕೆನ್ನುವುದು ಒಂದು ಸೂಚನೆ. ಮತ್ತೊಂದು ಸೂಚನೆ ಎಂದರೆ ನಮ್ಮ ಗೌರವಾನ್ವಿತ

* ಅದೇ, ಪುಟಗಳು ೭೨–೭೩

ಸ್ನೇಹಿತರಾದ ಜೆಟ್‌ಲ್ಯಾಂಡ್ ಮಾರ್ಕೆಸ್ ವಯಸ್ಕ ಮತದಾನದ ಬಗ್ಗೆ ತೆಗೆದುಕೊಳ್ಳಬೇಕೆಂದು ಸೂಚಿಸಿರುವ ಕ್ರಮದ ಬಗೆಗಿನ ಆ ಸೂಚನೆಯನ್ನು ಕಾರ್ಯಗತಗೊಳಿಸುವುದು.

ಈಗ ಇವೆರಡನ್ನೂ ಹೋಲಿಸಿದಾಗ, ನಾನು ಈಗಾಗಲೇ ಹೇಳಿದಂತೆ, ನಾವು ವಯಸ್ಕ ಮತಾಧಿಕಾರವೇ ಬೇಕೆಂದು ದೃಢವಾಗಿ ನಂಬಿರುವಾಗ್ಯೂ, ಲಾರ್ಡ್ ಅವರು ಮಾಡಿದ ಸೂಚನೆಯ ಬಗ್ಗೆ ನಾನು ಪಕ್ಷಪಾತಿಯಾಗಿರುತ್ತೇನೆ. ಅದು ಕೇವಲ ಎರಡರಲ್ಲೊಂದನ್ನು ಆರಿಸಿಕೊಳ್ಳುವ ಪ್ರಶ್ನೆ ಮಾತ್ರವೇ ಆಗಿದ್ದರೆ, ನಾನು ಕೇವಲ ಕೆಲವು ವರ್ಗದ ಜನತೆಗೆ ಮಾತ್ರವೇ ಮತಾಧಿಕಾರ ಕೊಟ್ಟು ಸ್ವಯಂ ಆಡಳಿತದ ಸರಕಾರವನ್ನು ಹೆಚ್ಚಿನ ಜನತೆಗೆ ಕೊಡುವುದನ್ನು ಕಾಲನ ಕೈಯಲ್ಲಿ ಬಿಟ್ಟು ಅದನ್ನು ಮುಂದೂಡುತ್ತಾ ಹೋಗುವುದಕ್ಕಿಂತ ವಯಸ್ಕ ಮತಾಧಿಕಾರಕ್ಕೆ ಭದ್ರ ಬುನಾದಿಯನ್ನು ಕೂಡಲೇ ಹಾಕುವ ಪದ್ಧತಿಗೆ ಆದ್ಯತೆಯ ಮೇಲೆ ಸಮ್ಮತಿಯನ್ನು ಕೊಡುತ್ತೇನೆ. ಅದನ್ನು ಹಾಗೆ ಹೇಳಿದ ನಂತರವೂ ಸಹ, ನಾನು ಹೇಳಿದಂತೆ ಆ ಸೂಚನೆಗೆ ನಾನು ಪೂರ್ಣ ಮನಸ್ಸಿನ ಒಪ್ಪಿಗೆಯನ್ನು ಕೊಡಲಾರೆ. ಏಕೆಂದರೆ, ಅದರಲ್ಲಿ ಹಲವು ತೊಂದರೆಗಳಿವೆ. ಆದರೆ ನಮ್ಮಲ್ಲಿ ಕೆಲವರು ಅನುಭವಿಸುತ್ತಿರುವ ಹಲವು ತೊಂದರೆಗಳನ್ನು ಪರಿಹರಿಸುವಲ್ಲಿ ಗೌರವಾನ್ವಿತ ಮಾರ್ಕ್ವೆಸ್ ಅವರು ನಮ್ಮ ಸಹಾಯಕ್ಕೆ ಬರುತ್ತಾರೆ ಎಂದು ನಾನು ಭಾವಿಸಿದ್ದೇನೆ ಮತ್ತು ನಾನು ಒಂದೆರಡು ಸೂಚನೆಗಳನ್ನು ಮಾಡುತ್ತೇನೆ. ನನಗೆ ಕಂಡಂತೆ ಒಂದು ಹೀಗಿರುತ್ತದೆ: ಗುಂಪುಗಳ ಆಧಾರದ ಮೇಲೆ ಪರೋಕ್ಷ ಚುನಾವಣಾ ಪದ್ಧತಿಯನ್ನು ನಾವು ಅಳವಡಿಸಿಕೊಂಡರೆ, ನಿಮ್ನ ವರ್ಗದವರಿಗೆ ಈಗಿರುವ ಪದ್ಧತಿಯ ಮೇರೆಗೆ ದೊರಕುವುದಕ್ಕಿಂತ ಹೆಚ್ಚಿನ ಒಳ್ಳೆಯದೇನೂ ಆಗುವುದಿಲ್ಲ ಎಂದು ನನಗೆ ಕಂಡುಬರುತ್ತದೆ. ಈ ಕಾರಣಕ್ಕಾಗಿ ನಾನು ಹೀಗೆ ಹೇಳುತ್ತೇನೆ. ನಿಮ್ನ ವರ್ಗದವರು ಭಾರತದ ತುಂಬೆಲ್ಲ ಇರುವ ಹಳ್ಳಿಗಳಲ್ಲಿ ಅತೀ ಅಲ್ಪಸಂಖ್ಯೆಗಳಲ್ಲಿ ಚೆದುರಿಹೋಗಿದ್ದಾರೆ. ಅವರನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ತನ್ನ ಹಿಡಿತದಲ್ಲಿಟ್ಟುಕೊಂಡಿರುವ ತುಂಬಾ ಶಕ್ತಿಯುತವಾದ ಗುಂಪುಗಳಿಂದ ಅವರು ಸುತ್ತುವರಿಯಲ್ಪಟ್ಟವರಾಗಿರುತ್ತಾರೆ. ಈ ಅಪರೋಕ್ಷ ಚುನಾವಣೆಯನ್ನು ಅವರಿಗೆ ಅನ್ವಯಿಸಿದಾಗ, ನಿಮ್ನ ವರ್ಗದವರ ಮೇಲೆ ಹಳ್ಳಿಯ ಆ ಗುಂಪುಗಳವರು ಪ್ರಾಥಮಿಕ ಚುನಾವಣೆಯಲ್ಲಿ ಮತ ಚಲಾಯಿಸುವಲ್ಲಿ ಅವರ ಇಷ್ಟಾನುಸಾರದ ಅತ್ಯುತ್ತಮ ಪ್ರತಿನಿಧಿಗಳಾಗಿ ಜನರನ್ನು ಆಯ್ಕೆ ಮಾಡುವಂತೆ ಅವರ ಮೇಲೆ ಒತ್ತಾಯ ತರುವುದು ಸಾಧ್ಯವಾಗಬಹುದು ಮತ್ತು ಸಂಭವನೀಯವೂ ಹೌದು ಎಂದು ನಾನು ಭಾವಿಸುತ್ತೇನೆ. ನನಗೆ ನಿಜವಾಗಿ ಈ ಭಯವಿದೆ.

ಇನ್ನೊಂದು ಭಯವೆಂದರೆ, ಕಂತು ರೂಪದಲ್ಲಿ ಮತಾಧಿಕಾರದ ಹಕ್ಕನ್ನು ಚಲಾಯಿಸುವ ಪದ್ಧತಿಯನ್ನು ಈ ಪದ್ಧತಿಗೆ ಬದಲಾಗಿ ಅಳವಡಿಸಿಕೊಂಡರೆ, ಅದನ್ನು ಕೇವಲ ಆಸ್ತಿವಂತರ ವರ್ಗಕ್ಕೆ ಅಥವಾ ಯಾವುದೇ ವರ್ಗಕ್ಕೆ ಮಾತ್ರ ಏಕೆ ಸೀಮಿತಗೊಳಿಸಬೇಕೆಂಬುದು ನನಗೆ ತಿಳಿಯದು. ವಯಸ್ಕ ಮತಾಧಿಕಾರವು ಈ ಪದ್ಧತಿಯ ಬುನಾದಿಯಾಗುವ ರೀತಿಯಲ್ಲಿ ಈ ಪದ್ಧತಿಯನ್ನೇ ಏಕೆ ವಿಸ್ತರಿಸಬಾರದೆಂಬ ಬಗ್ಗೆ ಯಾವ ಕಾರಣವೂ ನನಗೆ ತಿಳಿಯದು.

ಒಬ್ಬ ಸದಸ್ಯರು: ಅದೇ ಉದ್ದೇಶ.

ಡಾ. ಅಂಬೇಡ್ಕರ್: ಅದನ್ನು ಕೇಳಿ ನನಗೆ ಸಂತೋಷವಾಯಿತು. ಅದರಿಂದಾಗಿ ಪ್ರತ್ಯೇಕ ಮತ ಕ್ಷೇತ್ರಗಳ ವಿಷಯವು ಕ್ಲಿಷ್ಟಗೊಳ್ಳುವುದೆಂದು ಸೂಚಿಸಲಾಗಿದ್ದರೂ, ಹಾಗಾದೀತೆಂದು ನಾನು ಭಾವಿಸುವುದಿಲ್ಲ. ಕಾರಣವೆಂದರೆ, ಪರೋಕ್ಷ ಚುನಾವಣೆ ಇದ್ದರೂ, ಇಷ್ಟಪಡುವ ಕೋಮುಗಳಿಗಾಗಿ, ನೀವು ಪ್ರತ್ಯೇಕ ರಿಜಿಸ್ಟರುಗಳನ್ನು ಇಟ್ಟುಕೊಳ್ಳಬಹುದು. ಆ ಮೂಲಕ ಆ ವಿಚಾರದಲ್ಲಿ

ಯಾವುದೇ ತೊಂದರೆ ಉಂಟಾಗುವುದೆಂದು ನಾನು ಭಾವಿಸುವುದಿಲ್ಲ. ಆದರೆ ನಾನು ಹೇಳುವುದೇನೆಂದರೆ, ಇದು ಪ್ರಯೋಗದಲ್ಲಿ ಯಾವ ರೀತಿಯ ಕಾರ್ಯ ಮಾಡುತ್ತದೆ ಎಂಬುದನ್ನು ತಿಳಿಯದ ಹೊರತು ಅದರ ಬಗ್ಗೆ ಎಲ್ಲವನ್ನು ವಿವರವಾಗಿ ತಿಳಿದುಕೊಳ್ಳದ ಹೊರತು ನಾವು ಅದಕ್ಕೆ ಬೆಂಬಲ ನೀಡಲಾರೆವು. ಕಾರಣ ನನ್ನ ಖಚಿತ ಸೂಚನೆ ಎಂದರೆ ಈ ಸಮಿತಿಯು ಈ ಪದ್ಧತಿಯ ಬಗ್ಗೆ ಪರಿಶೀಲಿಸಲು ಮತ್ತು ಆ ಬಗ್ಗೆ ವರದಿಯನ್ನು ಮಾಡಲು ಅಂದರೆ ಈ ಪದ್ಧತಿಯನ್ನು ಕಾರ್ಯಗತಗೊಳಿಸುವ ಬಗ್ಗೆ ಪರಿಶೀಲಿಸುವ ಮತಾಧಿಕಾರಿ ಸಮಿತಿ ಪೂರ್ಣ ತಿಳಿವಳಿಕೆಯೊಂದಿಗೆ ಮತ್ತು ಮಾಹಿತಿಯೊಂದಿಗೆ ಶಿಫಾರಸು ಮಾಡಲು ನಮ್ಮನ್ನು ಸಮರ್ಥಗೊಳಿಸುವುದಕ್ಕಾಗಿ ಒಂದು ಉಪಸಮಿತಿಯನ್ನು ನೇಮಿಸಬೇಕು ಎಂಬುದೇ ಆಗಿರುತ್ತದೆ. ಅದು ಇನ್ನೂ ಅರೆ ಬರೆ ರೂಪದಲ್ಲಿದೆ ಎಂದು ನಾನು ಹೇಳುತ್ತೇನೆ. ಗೌರವಾನ್ವಿತ ಲಾರ್ಡ್ ಅವರು ಈ ಪದವನ್ನು ಜಾರಿಗೊಳಿಸುವುದು ಕಠಿಣವಾಗಿರುತ್ತದೆ. ಮತ್ತು ಈ ತತ್ವಕ್ಕೆ ಬೆಂಬಲ ನೀಡುವುದು, ನಮ್ಮಲ್ಲಿ ಯಾರಿಗೇ ಆಗಲೀ, ನಮ್ಮ ಮಟ್ಟಿಗೆ ಹೇಳುವುದಾದರೂ ನಮ್ಮ ಅಳವಿಗೆ ಮೀರಿದ ವಿಚಾರ.

* ಮಿ. ಬಾಸು: ಏನೇ ಆಗಲಿ ಗರಿಷ್ಠ ಸಂಖ್ಯೆಯನ್ನು ಗೊತ್ತುಪಡಿಸುವುದು ಅವಶ್ಯವೇ? ಏಕೆಂದರೆ ಮತಾಧಿಕಾರ ಸಮಿತಿ ಇರುತ್ತದೆ. ಅವರು ಈ ಬಗ್ಗೆ ಪರ್ಯಾಲೋಚಿಸುತ್ತಾರೆ ಮತ್ತು ವಿವರವಾಗಿ ಪರಿಶೀಲಿಸುತ್ತಾರೆ. ನಾವು ಕನಿಷ್ಠ ಸಂಖ್ಯೆಯನ್ನು ಗೊತ್ತುಪಡಿಸಬೇಕು ಎಂದು ನನಗೆ ಅನ್ನಿಸುತ್ತದೆ. ಮಾಡಬೇಕಾದುದೆಲ್ಲವೂ ಇಷ್ಟೆ. ಗರಿಷ್ಠ ಸಂಖ್ಯೆಯ ಬಗ್ಗೆ ಹೇಳುವುದಾದರೆ ಅದು ಯಾವ ಸಂಖ್ಯೆ ಎನ್ನುವುದನ್ನು ಅವರೇ ನಿರ್ಧರಿಸಬಹುದು.

ಡಾ. ಅಂಬೇಡ್ಕರ್: ನಿಮ್ಮ ಸಂಕ್ಷಿಪ್ತ ಹೇಳಿಕೆಯ ಮೊದಲನೆಯ ಪ್ಯಾರಾದ ಬಗ್ಗೆ ನಾನು ಕೆಲವು ಮಾತು ಹೇಳಬೇಕೆನ್ನುತ್ತೇನೆ. ಮತಾಧಿಕಾರದ ವಿಸ್ತರಣೆಯನ್ನು ಆಡಳಿತ ಮತ್ತು ವ್ಯವಸ್ಥೆಗಳನ್ನು ಆಧರಿಸಿ ಮೇಲೆ ಸೀಮಿತಗೊಳಿಸಬೇಕೆಂಬುದು ಸಮಿತಿಯ ಅಭಿಪ್ರಾಯವಾಗಿದೆ ಎಂದು ಹೇಳಲಾಗಿರುವ ಪ್ಯಾರಾದಲ್ಲಿಯೇ ಇದನ್ನು ಹೇಳಬೇಕೆಂದು ಬಯಸುತ್ತೇನೆ. ನಾವು ಸೇರಿಸಬೇಕೆಂದು ವಿಚಾರಿಸಿದ ಪರಿಮಿತಿ ಎಂದರೆ ಅದೊಂದೇ.

ಸರ್. ಸಿ. ಸೆಟಲವಾಡ: ಅದು ಕೇವಲ ಆಡಳಿತವಲ್ಲ, ಇಲ್ಲಿ ಬೇರೆ ವಿಚಾರಗಳೂ ಇರುತ್ತವೆ.

ಶ್ರೀಮತಿ ಸುಬ್ಬರಾಯನ್: ಯಾವುದು ವ್ಯಾವಹಾರಿಕ?

ಡಾ. ಅಂಬೇಡ್ಕರ್: ವ್ಯಾವಹಾರಿಕ ಅಂದರೆ ವ್ಯವಸ್ಥೆ ಸಮಿತಿಯು ಈಗಿರುವ ಸಿಬ್ಬಂದಿ ವ್ಯವಸ್ಥೆಯ ಮೂಲಕ ಶೇಕಡಾ ೫೦ರಷ್ಟು ಜನಸಂಖ್ಯೆಯನ್ನು ಮತಾಧಿಕಾರದಲ್ಲಿ ತರಬೇಕೆಂಬುದು ವ್ಯಾವಹಾರಿಕ ಎಂದು ನನ್ನ ಅರ್ಥ.

ಮಿ. ಜಫ್ರುಲ್ಲಾಖಾನ್: ಒಟ್ಟು ಜನಸಂಖ್ಯೆಯ ಶೇಕಡಾ ೫೦ರಷ್ಟು ಎಂದು ಅರ್ಥವೇ?

ಡಾ: ಅಂಬೇಡ್ಕರ್: ಹೌದು.

ಮಿ. ಜಫ್ರುಲ್ಲಾಖಾನ್: ಅದು ಸಂಪೂರ್ಣ ವಯಸ್ಕ ಮತಾಧಿಕಾರಕ್ಕಿಂತ ಸ್ವಲ್ಪ ಹೆಚ್ಚಾಗುತ್ತದೆ.

ಅಧ್ಯಕ್ಷ: ನಾವು ಗರಿಷ್ಠ ಸಂಖ್ಯೆಯ ವಿಚಾರವನ್ನು ಬಿಡಬೇಕು ಎಂದು ಸೂಚಿಸಲಾಗಿದೆ. ಅದನ್ನು ವ್ಯಾವಹಾರಿಕ ಮತ್ತು ಅಪೇಕ್ಷಣೀಯ ಎಂದು ತಜ್ಞ ಸಮಿತಿಯು ನಿರ್ಣಯಿಸುವುದರ ಮೇಲೆ

---

* ಉಪಸಮಿತಿ ನಂ.VI (ಮತಾಧಿಕಾರ)ರ ವ್ಯವಹರಣೆಗಳು; ಪು:– ೭೪–೭೫.

ಇಡಿಯ ವಿಷಯವು ನಿಂತಿರುತ್ತದೆ. ಅಂದರೆ, ನಾವು ಗರಿಷ್ಠ ಸಂಖ್ಯೆಯನ್ನು ಹೊಂದುವ ಅಗತ್ಯವಿಲ್ಲ. ನಾವು ಗರಿಷ್ಠ ಸಂಖ್ಯೆಯನ್ನು ಬಿಟ್ಟುಬಿಡೋಣ. ನಾನು ಅದನ್ನು ಪುನಃ ಓದಬೇಕೆಂದು ಯಾರಾದರೂ ಇಚ್ಛಿಸುತ್ತೀರಾ?

ಮಿ. ಕೆ. ಟಿ. ಪಾಲ: ಶೇಕಡಾ ೨೫ರಷ್ಟನ್ನು ನೀವು ಬಿಟ್ಟಲ್ಲಿ, ಅದು ನಮ್ಮ ವಾದವನ್ನು ದುರ್ಬಲಗೊಳಿಸುವುದಾದರೆ, ನಾನು ಅದನ್ನು ಒಪ್ಪುವುದಿಲ್ಲ.

ಅಧ್ಯಕ್ಷ: ಅದು ನಿಮ್ಮ ವಾದವನ್ನು ದುರ್ಬಲಗೊಳಿಸುವುದಿಲ್ಲ.

ಮಿ. ಚಿಂತಾಮಣಿ: ಈ ವಿಷಯಗಳಿಗೆ ಸಂಬಂಧಿಸಿದಂತೆ ಕನಿಷ್ಠ ಸಂಖ್ಯೆಯನ್ನು ನೋಡಿದಾಗ ಅದನ್ನು ಕಾರ್ಯಗತಗೊಳಿಸುವಾಗ ಅನೇಕ ಸಂದರ್ಭಗಳಲ್ಲಿ ಅದೇ ಗರಿಷ್ಠ ಸಂಖ್ಯೆಯಾಗುತ್ತದೆ. ವರದಿಯಲ್ಲಿ ನಾವು ಗರಿಷ್ಠ ಸಂಖ್ಯೆ ಶೇಕಡಾ ೧೦ ಎಂದು ಸೂಚಿಸಿದರೆ ನೇಮಿಸಲಾಗಿರುವ ಮತಾಧಿಕಾರ ಸಮಿತಿಗೆ ಗರಿಷ್ಠ ಶೇಕಡಾ ೧೦ ದೊರಕಿಸಿಕೊಟ್ಟರೆ ನಾವು ಅಷ್ಟರಿಂದಲೇ ಸಮಾಧಾನಪಡಬೇಕೆಂಬುದನ್ನು ಅದು ತೋರಿಸುತ್ತದೆ. ನಮ್ಮ ಪೈಕಿ ಶೇಕಡ ೨೫ರ ಸಂಖ್ಯೆಯನ್ನು ಉಲ್ಲೇಖಿಸಿದವರು ಅದನ್ನು ಸಧ್ಯದ ಅತಿ ಮತ್ತು ವಯಸ್ಕ ಮತಾಧಿಕಾರಗಳ ನಡುವಣ ಅಸಮರ್ಪಕ ರಾಜಿಯನ್ನಾಗಿ ನಮೂದಿಸಿರುತ್ತಾರೆ. ಅದನ್ನು ನೀವು ತೆಗೆದು ಹಾಕಿದರೆ, ನನ್ನ ಮಟ್ಟಿಗೆ ಹೇಳುವುದಾದರೆ, ನನಗಂತೂ ಸಂತೋಷವಾಗಲಿಕ್ಕಿಲ್ಲ.

ಮಿ. ಪುಟ್: ಶ್ರೀ ಚಿಂತಾಮಣಿಯವರು ವಯಸ್ಕ ಜನತೆಯ ಶೇಕಡಾ ೨೫ ಎಂದು ಹೇಳಿದರೋ?

ಶ್ರೀ ಚಿಂತಾಮಣಿ : ಒಟ್ಟು ಜನತೆಯ

ಮಿ. ಪುಟ್: ಕ್ಷಮಿಸಬೇಕು.

ವಿ. ಜೋಶಿ: ಮಾನ್ಯರೇ, ನೀವು ವರದಿಯಲ್ಲಿ ಈ ಸೂಚನೆಯು ಒಮ್ಮತದಿಂದ ಆದುದು ಎಂದು ಸೇರಿಸಬಾರದು ಎಂದು ಹೇಳಲು ನನಗೆ ಖೇದವಾಗುತ್ತದೆ. ಏಕೆಂದರೆ ನನ್ನ ಮಟ್ಟಿಗೆ ಹೇಳುವುದಾದರೆ ನಾನು ಅದಕ್ಕೆ ಒಪ್ಪುವುದಿಲ್ಲ ಮತ್ತು ಪೂರ್ಣ ಸಮ್ಮೇಳನದಲ್ಲಿ ವಯಸ್ಕ ಮತಾಧಿಕಾರದ ಪ್ರಶ್ನೆಯನ್ನು ಪುನಃ ಎತ್ತಲು ನನಗಿರುವ ಹಕ್ಕನ್ನು ಕಾಯ್ದಿಟ್ಟುಕೊಳ್ಳುತ್ತೇನೆ.

ಡಾ. ಅಂಬೇಡ್ಕರ್: ನನ್ನ ಸ್ಥಿತಿಯೂ ಅದೇ ಇರುತ್ತದೆ.

ಶ್ರೀ ಜೋಶಿ: ಅದನ್ನು ವರದಿಯಲ್ಲಿ ಸೇರಿಸಬೇಕು.

* * *

* ಡಾ. ಅಂಬೇಡ್ಕರ್: ಅದು ಕಾರ್ಯಸಾಧ್ಯವಾಗುವಂತಿದ್ದರೆ, ಅದು (ಪೂರ್ಣ ವಯಸ್ಕ ಮತಾಧಿಕಾರ) ಅತ್ಯುತ್ತಮವಾದುದರಲ್ಲಿ ಎರಡನೆಯದಾಗುತ್ತದೆ.

ಅಧ್ಯಕ್ಷ: ಅದಕ್ಕೆ ಒಳಪಟ್ಟು, ಉಳಿದ ಸಮಿತಿಯ ಒಪ್ಪಿಗೆ ಇದೆಯೇ?

---

* ಉಪಸಮಿತಿ VI (ಮತಾಧಿಕಾರ)ರ ವ್ಯವಹರಣೆಗಳು; ಪು:– ೭೬–೭೮.

ಸರ್ ಸಿ. ಜಹಾಂಗೀರ: ಒಟ್ಟು ಸಂಗತಿಗಳೆಲ್ಲ ನಮ್ಮ ಮುಂದಿರದ ಹೊರತು ಈ ಶೇಕಡಾ ೨೫ರ ಸಂಖ್ಯೆಗೆ ನಾನು ಒಪ್ಪಲಾರೆ.

ಅಧ್ಯಕ್ಷ: ತಜ್ಞ ಮತಾಧಿಕಾರ ಸಮಿತಿಯೊಂದನ್ನು ನಾವು ರಚಿಸಬೇಕು ಎಂದು ನಾನು ಸೂಚಿಸುತ್ತೇವೆ.

ಸರ್ ಪಿ. ಸಿ. ಮಿತ್ತಲ್: ನಾವು ಸಂಪೂರ್ಣವಾಗಿ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಮುಂಚೆಯೇ ಬದ್ಧ ಹೇಳಿಕೆ ಕೊಡತಕ್ಕದಲ್ಲ.

ಅಧ್ಯಕ್ಷ: ತಜ್ಞ ಮತಾಧಿಕಾರ ಸಮಿತಿಗೆ ನಮ್ಮ ಕಾರ್ಯವನ್ನು ವಹಿಸಿಕೊಡುವುದು ನಮಗೆ ಸರಿಯಾದುದಲ್ಲ. ನಾವು ಹಲವು ಶಿಫಾರಸುಗಳನ್ನು ಮಾಡಬೇಕಾದ ದುರ್ದೈವದ ಸ್ಥಿತಿಯಲ್ಲಿದ್ದೇವೆ ಮತ್ತು ನಮ್ಮ ಕೆಲಸವನ್ನು ಬೇರೆಯವರು ಮಾಡಬೇಕೆಂಬ ಶಿಫಾರಸನ್ನು ಮಾತ್ರವೇ ನಾವು ಮಾಡುತ್ತೇವೆ ಎಂದು ಹೇಳಲಾರೆವು.

ಸರ್ ಪಿ. ಸಿ. ಮಿತ್ತಲ್: ನಾನು ಕೇವಲ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಮಾತ್ರ ಹೇಳುತ್ತಿದ್ದೇನೆ. ಮತಾಧಿಕಾರದ ಸಮಿತಿಗೆ ನಾನು ಸೂಚಿಸುವುದೇನೆಂದರೆ ಹೆಚ್ಚಳ ಇರಬೇಕು. ನಾವು ಆಧರಿಸಬೇಕಾದ ಎಲ್ಲ ವಿಷಯಗಳನ್ನು ನಾನು ಮೊದಲೆ ತಿಳಿದಿದ್ದರೆ ಎಷ್ಟು ಸಾಧ್ಯವೋ ಅಷ್ಟು ಹೆಚ್ಚಳ ಇರಬೇಕು. ಅದು ಶೇಕಡಾ ೧೦ ಅಥವಾ ೨೦ ಅಥವಾ ೫೦ರಷ್ಟು ಆದರೂ ನಾನು ತಕರಾರು ಮಾಡುವುದಿಲ್ಲ.

ಅಧ್ಯಕ್ಷ: ಸರ್ ಪ್ರೋವಾಶ, ನೀವು ಇಚ್ಛಿಸುವಂಥ ಷರತ್ತನ್ನು ಅಂದರೆ ಗರಿಷ್ಠ ಸಂಖ್ಯೆ ಅಥವಾ ಕನಿಷ್ಠ ಸಂಖ್ಯೆಯನ್ನು ಶಿಫಾರಸು ಮಾಡುವುದು ಸಂಪೂರ್ಣವಾಗಿ ಮತಾಧಿಕಾರ ಸಮಿತಿಯ ವಿವೇಚನೆಗೆ ಒಳಪಟ್ಟಿರಬೇಕೆಂಬ ಅಂಶವನ್ನು ಸೇರಿಸಬಯಸುತ್ತೀರಾ? ನಾವು ಆ ಸಮಿತಿಗೆ ಕೆಲವು ಮಾರ್ಗದರ್ಶಿ ಸೂಚನೆಗಳನ್ನು ಕೊಡಬೇಕೆಂಬುದು ನನ್ನ ಭಾವನೆ. ಏನೇ ಆದಾಗ್ಯೂ ನಾವು ಈಗ ಸ್ವಲ್ಪ ಸನಿಹದಲ್ಲಿ ಬಂದಿದ್ದೇವೆ ಮತ್ತು ಈ ಬಗ್ಗೆ ನಿಮ್ಮ ಜೊತೆ ಚರ್ಚಿಸುವ ಅವಕಾಶವನ್ನು ನಾವು ಮತ್ತೆ ಯಾವಾಗಲಾದರೂ ತೆಗೆದುಕೊಳ್ಳುತ್ತೇವೆ.

ಶ್ರೀ ಚಿಂತಾಮಣಿ: ಮಾನ್ಯರೆ, ಈಗ ನಾನು ಸೂಚಿಸಲಿರುವುದನ್ನು ನೀವು ಒಪ್ಪುವಿರಾ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆದರೆ, ಸಾಧ್ಯವಿರುವಷ್ಟರ ಮಟ್ಟಿಗೆ ಬೇರೆ ಬೇರೆ ಕೋಮುಗಳಿಗೆ ಅವುಗಳ ಜನಸಂಖ್ಯೆಯ ಪ್ರಮಾಣಾನುಸಾರ ಸರಿಹೊಂದುವಂತೆ ಮತದಾರರು ಬರುವಂಥ ವಿಧಾನವೊಂದನ್ನು ಶೋಧಿಸಲು ಮತಾಧಿಕಾರ ಸಮಿತಿಗೆ ಸೂಚಿಸಬೇಕು ಎಂಬ ಮಹತ್ವದ ಪ್ರಸ್ತಾವ ಒಂದು ನಮ್ಮ ಮುಂದಿದೆ. ಇದನ್ನು ಸೈಮನ್ ಆಯೋಗ ಪ್ರಸ್ತಾಪಿಸಿತ್ತು ಮತ್ತು ಅದನ್ನು ಅನೇಕ ಸ್ಥಳೀಯ ಸರಕಾರಗಳು ಅನುಮೋದಿಸಿವೆ. ಅದನ್ನು ಈಗ ಹೊಸದು ಎನ್ನಬಹುದೇ? ಮತಾಧಿಕಾರ ಸಮಿತಿಯವರು ಅದು ಅಸಾಧ್ಯವೆಂದು ಕಂಡುಬಂದರೆ ಅದನ್ನು ತಿರಸ್ಕರಿಸುತ್ತಾರೆ.

ಅಧ್ಯಕ್ಷ: ಅದು ಮುಂದಿನ ಶಿರೋನಾಮೆಯಲ್ಲಿ ಬರುತ್ತದೆ ಎಂದು ನನಗನ್ನಿಸುತ್ತದೆ. "ಅಂದರೆ ಮತಾಧಿಕಾರದ ಸಾಮಾನ್ಯ ಆಧಾರಗಳು ಅದೇ ಕ್ಷೇತ್ರದಲ್ಲಿ ಎಲ್ಲ ಕೋಮಿನವರಿಗೂ ಮತಾಧಿಕಾರದ ಅರ್ಹತೆಗಳು ಒಂದೇ ಸಮ ಇರತಕ್ಕುದೇ?" ಅದೇ ಕ್ಷೇತ್ರದಲ್ಲಿ ಎಂಬ ಪದಗಳನ್ನು ಲಕ್ಷ್ಯವಿಟ್ಟು ಗಮನಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ನಾವು ಮಹಿಳೆಯ ಮತಾಧಿಕಾರದ ಅಥವಾ ಅಂಥ ಯಾವುದರ ಬಗ್ಗೆಯೂ ಗಮನ ಹರಿಸುವುದು ಬೇಡ.

ಸರ್ ಪಿ. ಸಿ. ಮಿತ್ತಲ್: ನಿಮ್ಮ ನಿರ್ಣಯದ ಆಧಾರದ ಮೇಲೆ ವಿಶೇಷ ಹಿತಾಸಕ್ತಿಗಳು ಮತ್ತು ಕೋಮು ಹಿತಾಸಕ್ತಿಗಳು ಅಲ್ಪಸಂಖ್ಯಾತರ ಸಮಿತಿಯ ವ್ಯಾಪ್ತಿಯಲ್ಲಿ ಬರುತ್ತವೆಯೆಂದು ನಾನು ಭಾವಿಸಿದ್ದೆ.

ಅಧ್ಯಕ್ಷ: ಆ ಬಗ್ಗೆ ನಾಳೆಯ ನಂತರ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳುವವರಿದ್ದೇವೆ. ಸದ್ಯದ ಕ್ಷಣದಲ್ಲಿ ನಾವು ಮತಾಧಿಕಾರಕ್ಕೆ ಅಗತ್ಯವಾದ ಸಾಮಾನ್ಯ ಆಧಾರಗಳ ಬಗ್ಗೆ ಮತ್ತು ಎಲ್ಲ ಕೋಮುಗಳವರ ಅರ್ಹತೆಗಳು ಒಂದೇ ಆಗಿರಬೇಕೆ ಎಂಬುದರ ಬಗ್ಗೆ ಚರ್ಚಿಸುತ್ತಿದ್ದೇವೆ.

ದಿವಾನ ಬಹಾದ್ದೂರ ರಾಮಚಂದ್ರರಾವ್: ನೀವು ಪ್ರಧಾನಮಂತ್ರಿಗಳ ಜೊತೆ ಮಾತನಾಡುತ್ತೇನೆಂದು ಹೇಳಿದಿರಿ ಮತ್ತು ಈ ವಿಷಯವು ನಮ್ಮ ಸಮಿತಿಯ ವ್ಯಾಪ್ತಿಯಲ್ಲಿ ಬರುತ್ತದೆಯೇ ಅಥವಾ ಬೇರೆ ಸಮಿತಿಯ ವ್ಯಾಪ್ತಿಯಲ್ಲೋ ಅನ್ನುವ ಬಗ್ಗೆ ನಾವು ತಿಳಿದುಕೊಳ್ಳೋಣ.

ಡಾ. ಅಂಬೇಡ್ಕರ್: ನಾನು ಒಂದು ಪ್ರಸ್ತಾಪವನ್ನು ಮಾಡಲು ಬಯಸುತ್ತೇನೆ. ಈ ಸಮಿತಿಯ ಹಲವು ಸದಸ್ಯರು ಸಂಪೂರ್ಣ ವಯಸ್ಕ ಮತಾಧಿಕಾರದ ಪ್ರಶ್ನೆಯನ್ನು ಅದು ಸಧ್ಯದಲ್ಲಿ ಅಸಾಧ್ಯವಾದುದು ಅಥವಾ ಅವ್ಯಾವಹಾರಿಕವಾದುದು ಎಂದು ಹೇಳಿದಾಗ್ಯೂ ಏನೇ ಆಗಲಿ, ನಿಮ್ಮ ವರ್ಗದವರಿಗೆ ವಯಸ್ಕ ಮತಾಧಿಕಾರ ಕೊಡಲು ಸಾಧ್ಯವಿದೆ ಎಂದು ನನಗೆ ತೋರುತ್ತದೆ. ಉದಾಹರಣೆಗೆ ಹೇಳಬೇಕೆಂದರೆ, ವಾಸ್ತವವಾಗಿ ಎಲ್ಲ ಕೋಮುಗಳಿಗೂ ಒಂದೇ ರೀತಿಯ ಮತಾಧಿಕಾರವಿರಬೇಕೆಂದರೆ ಜೀವನದಲ್ಲಿ ದಿನನಿತ್ಯದ ವ್ಯವಹಾರಗಳಲ್ಲಿಯೂ ಸಮಾನ ಸ್ಥಾನಕ್ಕಾಗಿ ಅಸಮಾನತೆಯ ವಿಧಾನವನ್ನೇ ಅನುಸರಿಸುವ ಹಲವಾರು ಸಂದರ್ಭಗಳು ಉಂಟಾಗುವುದನ್ನು ನಾವು ಕಾಣುತ್ತೇವೆ. ಕಡುಬಡವರಿಗೆ ಹೋಲಿಸಿದಾಗ ಸಿರಿವಂತರನ್ನು ನಡೆಸಿಕೊಳ್ಳುವ ವಿಷಯಕ್ಕೆ ಸಂಬಂಧಪಟ್ಟಂತೆ, ಉದಾಹರಣೆಗೆ ಹೇಳಬೇಕೆಂದರೆ, ಬಡವರ್ಗದವರಿಗೆ ಪ್ರಯೋಜನಕಾರಿಯಾದ ವಿಶೇಷ ಕ್ರಮಗಳನ್ನು ಹೇಳಿ ಕಾನೂನು ಮಾಡುತ್ತೇವೆ. ಸಿರಿವಂತ ವರ್ಗಕ್ಕೆ ಬಡವರಿಗಿಂತ ಹೆಚ್ಚಿನ ದರದಲ್ಲಿ ಕರ ವಿಧಿಸುತ್ತೇವೆ. ಇದಕ್ಕೆ ಕಾರಣವೆಂದರೆ ಕರ ಕೊಡುವ ಸಾಮರ್ಥ್ಯದ ಸಿದ್ಧಾಂತವನ್ನು ಆಚರಣೆಯಲ್ಲಿ ತರುವುದು ಸಾಧ್ಯವಾಗಲಿ ಎಂಬುದೇ. ಅದೇ ವಿಚಾರವನ್ನು ನಿಮ್ಮವರ್ಗದವರಿಗೂ ಅನ್ವಯಿಸಬೇಕೆಂದು ನಾನು ತಿಳಿಯುತ್ತೇನೆ. ಎಲ್ಲ ಕೋಮುಗಳವರೂ ಮತ ಕ್ಷೇತ್ರದಲ್ಲಿ ಜನಸಂಖ್ಯೆಯ ಪ್ರಮಾಣದಲ್ಲಿ ಪ್ರತಿನಿಧಿಸಲ್ಪಡಬೇಕೆಂಬುದು ಸಮಿತಿ. ಉದ್ದೇಶವಾಗಿದ್ದರೆ, ಒಂದು ವರ್ಗದ ಜನರನ್ನು ಮತ್ತೊಂದು ವರ್ಗದ ಜನರಿಗಿಂತ ಭಿನ್ನವಾಗಿ ನಡೆಸಿಕೊಳ್ಳುವುದು, ಆ ಉದ್ದೇಶಕ್ಕಾಗಿ ಲಭ್ಯವಿರುವ ಒಂದೇ ವಿಧಾನವಾಗಿದ್ದರೆ ಹಾಗೆ ಯಾಕೆ ಮಾಡಬಾರದು ಎಂಬುದಕ್ಕೆ ಕಾರಣವಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ನಿಮ್ಮ ವರ್ಗದವರಿಗೆ ವಯಸ್ಕ ಮತಾಧಿಕಾರವನ್ನು ಅನ್ವಯಿಸಿದರೆ ಮತ್ತು ಇತರ ಕೋಮುಗಳಿಗೆ ಅದನ್ನು ಅನ್ವಯಿಸದಿದ್ದರೆ, ಲಾರ್ಡ್ ಜೆಟ್‌ಲ್ಯಾಂಡ್ ಅವರು ಸೂಚಿಸಿದಂಥ ಪದ್ಧತಿಗಳು ಈ ಇತರ ಕೋಮುಗಳಲ್ಲಿರುವುದಾದರೆ, ಅದು ನೈಜವಾಗಿ ಯಾವ ವ್ಯತ್ಯಾಸವನ್ನೂ ಮಾಡಲಾರದು ಮತ್ತು ನಿಮ್ಮ ವರ್ಗದವರ ವಿಶಿಷ್ಟ ಸ್ಥಾನವನ್ನು ಗಮನಿಸಿದಾಗ ಮತ್ತು ಇತರ ಯಾವುದೇ ಚುನಾವಣಾ ಪದ್ಧತಿಯು ಅವರಿಗೆ ಮತಾಧಿಕಾರವನ್ನು ಕೊಡಲಾರದು ಎಂಬ ಸಾಮಾನ್ಯ ಅಭಿಪ್ರಾಯವನ್ನು ಗಮನಿಸಿದಾಗ, ಈ ವೇಳೆಯಲ್ಲಿ ವಿಧಾನಸಭೆಗೆ ನಿಲ್ಲುವ ಯಾವನೇ ಉಮೇದುದಾರನು ಅವರ ಬಗ್ಗೆ ಯಾವುದೇ ಸಹಾನುಭೂತಿಯನ್ನು ತೋರಲಾರನು ಎಂಬುದನ್ನು ಗಮನಿಸಿದಾಗ, ಪ್ರಾಂತಗಳಲ್ಲಿ ಲಭ್ಯವಿರುವ ಸಿಬ್ಬಂದಿಯ ಮೇಲೆ ಯಾವುದೇ ಹೆಚ್ಚಿನ ಭಾರವನ್ನು

ಅದು ಹೇರಲಾರದು ಎಂಬುದು ನನಗೆ ಕಂಡುಬರುತ್ತದೆ. ಸಮಿತಿಯು ಈ ತತ್ವವನ್ನು ನಿಮ್ನ ವರ್ಗದವರಿಗೆ ಅನ್ವಯಿಸುವುದಕ್ಕೆ ಒಪ್ಪಿದರೆ, ಅದರಿಂದಾಗಿ ಯಾವುದೇ ಹೆಚ್ಚಿನ ಹಾನಿಯಾಗಲಾರದೆಂದು ಭಾವಿಸುತ್ತೇನೆ.

# ಮೂರನೆಯ ಸಭೆ
# ೩೦ನೇ ಡಿಸೆಂಬರ್ ೧೯೩೦

* ಅಧ್ಯಕ್ಷ: ನಾವು ಈಗ ಶೈಕ್ಷಣಿಕ ಅರ್ಹತೆಗಳ ಪ್ರಶ್ನೆಯ ಬಗ್ಗೆ ಚರ್ಚಿಸುತ್ತಿದ್ದೇವೆ. ನಾವು ಸಲ್ಲಿಸಿದ ಎರಡನೆಯ ನಿರ್ಣಯದ ಬಗ್ಗೆ ನಿಮಗೆ ನೆನಪು ಮಾಡುತ್ತೇನೆ. "ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮತಾಧಿಕಾರದ ಅರ್ಹತೆಯು ಎಲ್ಲ ಕೋಮಿನವರಿಗೂ ಒಂದೇ ಇರತಕ್ಕುದು. ಆದರೆ, ತಜ್ಞ ಮತಾಧಿಕಾರ ಸಮಿತಿಯು ತಮ್ಮ ಶಿಫಾರಸುಗಳನ್ನು ಮಾಡುವಾಗ ಆದರ್ಶ ಪದ್ಧತಿಯು ಸಾಧ್ಯವಿರುವಷ್ಟರ ಮಟ್ಟಿಗೆ ಪ್ರತಿಯೊಂದು ಕೋಮಿಗೂ ಅದರ ಜನಸಂಖ್ಯೆಯ ಪ್ರಮಾಣದಲ್ಲಿರುವಂತೆ ಮತಾಧಿಕಾರದ ಬಲವನ್ನು ಕೊಡತಕ್ಕುದು ಮತ್ತು ಈ ಸಮಿತಿಯೂ ಇಂಥ ಪರಿಣಾಮವನ್ನು ವ್ಯಾವಹಾರಿಕವಾಗುವಷ್ಟರ ಮಟ್ಟಿಗೆ ಸಾಧಿಸಲು ಸಾಧ್ಯವಾಗುವಂತೆ ಮತಾಧಿಕಾರವನ್ನು ರೂಪಿಸಬೇಕು ಎಂದು ನಾವು ಶಿಫಾರಸು ಮಾಡುತ್ತೇವೆ." ಅದು ಪರಿಪೂರ್ಣತೆಗೆ ಮಾರ್ಗದರ್ಶನ ಎಂದು ಹೇಳಲು ಭಯವಾಗುತ್ತದೆ. ಆದರೆ, ಅದೇ ವೇಳೆಯಲ್ಲಿ ಅವರಿಗೆ ಸ್ವಲ್ಪ ಸವಲತ್ತನ್ನು ತೋರಿಸುವುದರಿಂದ ಅವರು ಇದನ್ನು ಸಾಧಿಸುತ್ತಾರೆಂದು ಆಶೆಪಡಬಹುದಾಗಿದೆ. ಇದು ಸ್ವಯಂ ಸ್ಪಷ್ಟವಾಗಿದೆ. ಕಾರಣ ವಿದ್ಯಾರ್ಹತೆ ಇತ್ಯಾದಿಗಳ ಪ್ರಶ್ನೆಗಳನ್ನು ಪರ್ಯಾಲೋಚಿಸುವಲ್ಲಿ, ತಜ್ಞ ಮತಾಧಿಕಾರ ಸಮಿತಿಯು ಈ ಎಲ್ಲವುಗಳನ್ನೂ ಗಮನದಲ್ಲಿ ತೆಗೆದುಕೊಳ್ಳಲು ಅನುಮತಿಸದ ಹೊರತು ನೀವು ಅವರ ಕಾರ್ಯ ವ್ಯಾಪ್ತಿಯನ್ನು ವಿಸ್ತೃತಗೊಳಿಸುವುದರ ಬದಲು ಕುಂಠಿತಗೊಳಿಸುತ್ತೀರಿ ಎಂಬುದನ್ನು ನೆನಪಿನಲ್ಲಿಡಬೇಕು.

ಡಾ. ಅಂಬೇಡ್ಕರ್: ಮಾನ್ಯರೆ, ನೀವು ಓದಿದ ಮತ್ತು ಸಮಿತಿಯು ಬಂದಿದೆ ಎಂದು ಹೇಳಲಾದ ನಿರ್ಣಯಕ್ಕೆ ಸಂಬಂಧಿಸಿ, ಒಂದು ಪ್ರಶ್ನೆಯನ್ನು ಕೇಳಲು ಇಚ್ಛಿಸುತ್ತೇನೆ. ಮತಾಧಿಕಾರದ ಬಗ್ಗೆ ಪರ್ಯಾಲೋಚಿಸಲು ಮತ್ತು ಮತಾಧಿಕಾರದ ಬಲವು ಆಯಾ ಕೋಮುಗಳ ಜನಬಲಕ್ಕೆ ಸಮ ಪ್ರಮಾಣದಲ್ಲಿರತಕ್ಕುದು ಎಂಬ ನಿರ್ಣಯಕ್ಕೆ ಬದಲು ವಿವಿಧ ಕೋಮುಗಳವರಿಗೆ ಬೇರೆ ಬೇರೆ ರೀತಿಯ ಮತಾಧಿಕಾರವನ್ನು ನೀಡುವ ಸ್ವಾತಂತ್ರ್ಯ ಮತಾಧಿಕಾರ ಸಮಿತಿಗೆ ಇದೆಯೆಂದು ಇದರ ಅರ್ಥವೇ?

ಅಧ್ಯಕ್ಷ: ಅದು ಹಾಗೆ ಆಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ನಾವು ಮತಾಧಿಕಾರದ ಸಮಿತಿಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಅವರು ವಿವರಗಳನ್ನು ಪೂರ್ಣಗೊಳಿಸುತ್ತಾರೆ. ನಾವು ಶಿಲ್ಪಕಾರರು, ಅವರು ಗಾರೆ ಕೆಲಸಗಾರರು ಮತ್ತು ಕಟ್ಟಡ ಕಟ್ಟುವವರು.

ಡಾ. ಅಂಬೇಡ್ಕರ್: ನನಗೆ ಅದು ತಿಳಿಯುತ್ತದೆ. ಆದರೆ, ಆ ನಿರ್ಣಯವು ಮತಾಧಿಕಾರ ಸಮಿತಿಗೆ ಸಮಾನತೆಯನ್ನು ದೊರಕಿಸುವ ಉದ್ದೇಶದಿಂದ ಬೇರೆ ಬೇರೆ ಕೋಮುಗಳಿಗೆ ಬೇರೆ ಬೇರೆ ಮತಾಧಿಕಾರವನ್ನು ಕೊಡುವ ಸ್ವಾತಂತ್ರ್ಯವನ್ನು ಕೊಡುತ್ತದೆಯೋ ಎಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ.

---

* ಉಪಸಮಿತಿ ನಂ. VI (ಮತಾಧಿಕಾರ)ರ ವ್ಯವಹರಣೆಗಳು; ಪು. ೯೪)

ಅಧ್ಯಕ್ಷ: ಇಲ್ಲ, ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಮತಾಧಿಕಾರದ ಅರ್ಹತೆಯು ಎಲ್ಲ ಕೋಮುಗಳಿಗೂ ಒಂದೇ ಇರತಕ್ಕುದು ಎಂದು ನಾವು ಶಿಫಾರಸು ಮಾಡುತ್ತೇವೆ ಎಂದು ಮೊದಲನೆಯ ವಾಕ್ಯವು ಹೇಳುತ್ತದೆ. ನಾವು ಈಗ ಶೈಕ್ಷಣಿಕ ಅರ್ಹತೆಗಳ ಬಗ್ಗೆ ಚರ್ಚೆಯನ್ನು ಮುಂದುವರೆಸೋಣ.

* ಮಿ. ಜಾದವ: ಯಾವುದೇ ಲೇಜಿಸ್ಲೇಟಿವ್ ಕೌನ್ಸಿಲಿಗೆ ಹತ್ತು ವರುಷ ಹಿಂದೆ ಹೋಗಿ ಮತಾಧಿಕಾರವನ್ನು ಸಂಕುಚಿತಗೊಳಿಸಲು ಅಧಿಕಾರವಿದೆಯೇ? ಅವರಲ್ಲಿ ಹಲವರು ಹಾಗೆ ಮಾಡಲು ಪ್ರಯತ್ನಿಸಬಹುದು.

ಅಧ್ಯಕ್ಷ: ಅವರ ಅಧಿಕಾರಗಳು ಅದನ್ನು ವಿಸ್ತರಿಸುವಂಥವೇ ಹೊರತು ಕಡಿಮೆಗೊಳಿಸುವಂಥವುಗಳು ಅಲ್ಲ.

ಡಾ. ಅಂಬೇಡ್ಕರ್: ಇಲ್ಲಿಯವರೆಗೆ ನಾನು ಹೊಂದಿರುವ ಅಭಿಪ್ರಾಯಕ್ಕೆ ವಿರೋಧವಾಗದ ಹಾಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಒಂದು ಮಾತನ್ನು ಹೇಳಲು ಬಯಸುತ್ತೇನೆ. ನಾವು ಸೂಚಿಸಲಾಗಿರುವ ಪರ್ಯಾಯ ವ್ಯವಸ್ಥೆಗಳಿಗೆ ಹೋಲಿಸಿದಾಗ, ಮಿ. ಜೋಶಿಯವರು ಹೇಳಿದ ಹಾಗೆ, ಸ್ವತಃ ವಿಸ್ತೃತವಾಗುವ ಹಾಗೆ ಒಂದು ಕಾನೂನು ಇರಬೇಕು. ಇನ್ನೊಂದು ಮುಖ್ಯ ಪ್ರಸ್ತಾಪವೆಂದರೆ, ಆ ವಿಷಯವನ್ನು ಶಾಸನ ಸಭೆಗಳ ಇಚ್ಛೆಗೇ ಬಿಟ್ಟುಕೊಡುವುದು. ಸೈಮನ್ ಆಯೋಗವು ಮಾಡಿದ ಶಿಫಾರಸುಗಳು ಎಲ್ಲಾ ದೃಷ್ಟಿಯಿಂದಲೂ ಉತ್ತಮವಾಗಿಯೂ ಮತ್ತು ಬೇಗನೇ ಒಪ್ಪಿಕೊಳ್ಳಬಹುದಾಗಿರುವಂಥವುಗಳೂ ಆಗಿವೆ ಎಂದು ನನಗೆ ಕಂಡುಬರುತ್ತದೆ. ನಾನು ಹೇಳಿದಂತೆ ಒಂದು ನಿರ್ದಿಷ್ಟ ಅವಧಿಯಲ್ಲಿ ಮತಾಧಿಕಾರವು ಕಾರ್ಯ ಮಾಡಿದ ರೀತಿಯು ಯಾವ ಪರಿಣಾಮ ಮಾಡಿದೆ ಎಂಬುದನ್ನು ತನಿಖೆ ಮಾಡಲು, ಮತ್ತು ಬೇರೆ ಬೇರೆ ಪ್ರಾಂತಗಳಲ್ಲಿ ಎಂಥ ಅಸಮಾನತೆ ಇದೆ ಎಂಬುದನ್ನು ಕಂಡುಹಿಡಿಯಲು ಅದು ಸಮರ್ಥವಾಗುತ್ತದೆ. ಹತ್ತು ವರುಷಗಳ ಮುಕ್ತಾಯದ ನಂತರ ಎಂಥ ಆಡಳಿತಯಂತ್ರ ಅಸ್ತಿತ್ವದಲ್ಲಿದೆ ಎಂಬುದನ್ನು ಕಂಡುಹಿಡಿಯಲು ಸಮರ್ಥವಾದುದಾಗುವುದು. ಮತಾಧಿಕಾರವನ್ನು ಬದಲಾಯಿಸಬೇಕಾಗಿ ಬಂದರೆ, ಆ ಪ್ರಾಧಿಕಾರವು ನಿಷ್ಪಕ್ಷಪಾತವಾದುದಾಗಿರುವುದರಿಂದ, ಅದು ತುಂಬಾ ಸಮುಚಿತವಾದ ಮತ್ತು ನಾವು ಇಂದು ಸೇರಿಸುತ್ತಿರುವ ಸೀಮಿತ ಮತಾಧಿಕಾರದ ಪರಿಣಾಮವಾಗಿ ನಾವು ಆಯ್ಕೆ ಮಾಡಿ ಕಳಿಸಬಹುದಾದ ವರ್ಗ ಪ್ರಶ್ನೆ ಇದ್ದವರಿಗಿಂತ ಅದು ಜನತೆಯ ಹಕ್ಕುಗಳಿಗೆ ಸಂಬಂಧಿಸಿದಂತೆ ನ್ಯಾಯಯುತವಾದ ರೀತಿಯಲ್ಲಿ, ಕೂಡಲೇ ಕ್ರಮ ಕೈಗೊಳ್ಳಲು ಸಮರ್ಥವಾದುದಾಗುತ್ತದೆ. ಈ ಎಲ್ಲ ಕಾರಣಗಳಿಂದ ಸೈಮನ್ ಆಯೋಗವು ಮಾಡಿದ ಸೂಚನೆಗಳು ಇತರ ಸೂಚನೆಗಳಿಗಿಂತ ಉತ್ತಮವಾದವುಗಳಾಗಿ ಕಂಡುಬರುತ್ತವೆ.

ಸರ್ ಕೌಸಾಜಿ ಜಹಾಂಗೀರ್: ಅದನ್ನು ಯಾರು ಸ್ಥಾಪಿಸಬೇಕು?

ಡಾ. ಅಂಬೇಡ್ಕರ್: ಸಂಸತ್ತು ಅಧಿನಿಯಮದಲ್ಲಿ ಲೋಕಸೇವಾ ಆಯೋಗ ಇರಬೇಕೆಂದು ಸೂಚಿಸಿರುವಂತೆ ಸಮಿತಿಯ ನೇಮಕಾತಿಯನ್ನೂ ಮಾಡಬೇಕೆಂದೂ ಸಹ ಸೂಚಿಸಬಹುದು.

ಸರ್ ಕೌಸಾಜಿ ಜಹಾಂಗೀರ್: ಕೇಂದ್ರ ಸರಕಾರದಿಂದಲೋ?

ಡಾ. ಅಂಬೇಡ್ಕರ್: ಹೌದು.

---

* ಉಪಸಮಿತಿ ನಂ. VI ರ( ಮತದಾನ ಹಕ್ಕು) ನಡಾವಳಿಗಳು, ಪುಟಗಳು.೧೩೮–೩೯

ಅಧ್ಯಕ್ಷ: ಈ ವಿಷಯದ ಮೇಲೆ ಕರಡು ವರದಿಯನ್ನು ಸಿದ್ಧಪಡಿಸಲು ನಾನು ಸಾಕಷ್ಟು ವಿಷಯ ತಿಳಿದುಕೊಂಡಿದ್ದೇನೆ ಎಂದು ಭಾವಿಸಿದ್ದೇನೆ. ಅದರೆ ನಿಮ್ಮ ಅಭಿಪ್ರಾಯ ಏನು ಎಂಬುದನ್ನು ತಿಳಿದು ಕೊಳ್ಳಲು ನಾನು ಇಚ್ಛಿಸುತ್ತೇನೆ– ಹದಿನೈದು ವರುಷಗಳ ನಂತರ ತಜ್ಞ ಮತಾಧಿಕಾರ ಸಮಿತಿಯನ್ನು ಅಥವಾ ಇತರ ಸಮಿತಿಯನ್ನು ರಚಿಸಬೇಕೆಂದು ಇಲ್ಲಿಯೇ ಈಗಲೇ ನಾವು ಶಿಫಾರಸು ಮಾಡಬೇಕೆ, ಒಂದು ಪ್ರಾಂತವು ಮತ್ತೊಂದು ಪ್ರಾಂತಕ್ಕಿಂತ ಹೆಚ್ಚು ವಿಸ್ತೃತವಾಗಿ ಮತಾಧಿಕಾರವನ್ನು ಕೊಡಬಹುದಾದ ಸಂಭವವಿರುವ ದೃಷ್ಟಿಯಲ್ಲಿ, ಇಡಿಯ ವಿಷಯವೇ ಕೈ ಮೀರಿ ಹೋಗಬಹುದಾಗಿರುವಲ್ಲಿ, ಆಗ ನಾವು ಈ ವಿಷಯದ ಬಗ್ಗೆ ನೋಡಿಕೊಳ್ಳಲು, ವಿಷಯಗಳನ್ನು ಸರಿಪಡಿಸಲು, ಹೊಂದಾಣಿಕೆ ಮಾಡಲು ಯಾರನ್ನಾದರೂ ನೇಮಿಸಬಹುದೆಂಬ ಬಗ್ಗೆ ವಿಚಾರ ಮಾಡಬಹುದೋ, ಅಥವಾ ಆ ವಿಷಯವನ್ನು ಪ್ರಾಂತಗಳಿಗೇನೇ ಬಿಟ್ಟುಕೊಟ್ಟು ಸಮಾಧಾನ ಪಟ್ಟುಕೊಳ್ಳಬೇಕೋ ಅಥವಾ ಡಾ. ಅಂಬೇಡ್ಕರರು ಸೂಚಿಸಿದ ಸಮಿತಿಯ ವಿಚಾರವನ್ನು ಅನುಸರಿಸಬೇಕೋ? ಅದು ಅಸ್ಥಿತ್ವದಲ್ಲಿ ಬರಬೇಕೆಂದು ಅಥವಾ ಅದು ಅಸ್ಥಿತ್ವದಲ್ಲಿ ಯಾವಾಗ ಬರಬೇಕೆಂದು ನಾವು ಹೇಳಬೇಕಾದ ಅವಶ್ಯಕತೆ ಇಲ್ಲ. ಆದರೆ ಅದು ಅಸ್ತಿತ್ವದಲ್ಲಿ ಬಂದಾಗ ಅದು ಕಾರ್ಯ ಮಾಡಬೇಕು.

ಮಿ. ಬಾಸು: ಸಮಿತಿಯನ್ನು ನೇಮಿಸಲು ಕೇಂದ್ರ ಸರಕಾರವು ಇಚ್ಛಿಸಿದ ಯಾವುದೇ ಅವಧಿಯಲ್ಲಿ.

ಅಧ್ಯಕ್ಷ: ಅದನ್ನು ಹೇಗೆ ನೇಮಕ ಮಾಡಬೇಕೆಂದು ನಾವು ಹೇಳುವುದಿಲ್ಲ. ಆದರೆ ಅಂಥ ಸಮಿತಿಯನ್ನು ನೇಮಕ ಮಾಡುವ ಸಂಭವದ ಬಗ್ಗೆ ನೀವು ಏನು ಹೇಳುತ್ತೀರಿ?

ದಿವಾನ್ ಬಹಾದ್ದೂರ್ ರಾಮಚಂದ್ರರಾವ್: ಅಂಥ ಸಮಿತಿಯನ್ನು ಸರಕಾರವೇ ರಚಿಸಬೇಕು. ಸಂಸತ್ತು ಅಂಥ ಸಮಿತಿಯನ್ನು ರಚಿಸತಕ್ಕುದಲ್ಲ.

ಡಾ. ಅಂಬೇಡ್ಕರ್: ಅದರಿಂದ ಯಾವ ವ್ಯತ್ಯಾಸವಾಗುವುದು?

ದಿವಾನ್ ಬಹಾದ್ದೂರ್ ರಾಮಚಂದ್ರರಾವ್: ಈ ಎಲ್ಲ ವಿಷಯಗಳಲ್ಲಿ ನಾವು ಅತಿ ಹೆಚ್ಚು ಸ್ವಾತಂತ್ರ್ಯ ವನ್ನು ಕೊಡುತ್ತಿದ್ದೇವೆ. ಸಂಸದೀಯ ನಿಯಂತ್ರಣವನ್ನು ತೆಗೆದು ಹಾಕಬೇಕೆಂದು ನಾನು ಇಚ್ಛಿಸುತ್ತೇನೆ. ಪ್ರಸ್ತಾವ ಏನು ಎಂಬುದನ್ನು ತಿಳಿದುಕೊಳ್ಳಲು ನಾನು ಬಯಸುತ್ತೇನೆ. ಹಲವು ವರುಷಗಳ ನಂತರ ಎಲ್ಲ ಪ್ರಾಂತಗಳಲ್ಲಿ ಈ ವಿಷಯವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಕ ಮಾಡಲು ಭಾರತ ಸರಕಾರವು ಸಕ್ಷಮವಾದುದಾಗಿರುತ್ತದೆ ಎಂದು ನೀವು ಹೇಳಿದರೆ ನನ್ನ ತಕರಾರು ಏನೂ ಇಲ್ಲ. ಆದರೆ ಹತ್ತು ವರುಷಗಳ ನಂತರ ಪುನಃ ಸಂಸತ್ತು ಈ ವಿಷಯದ ಬಗ್ಗೆ ಪರಿಶೀಲನೆ ಮಾಡುವ ಪ್ರಶ್ನೆ ಬಂದರೆ ಸಂಪೂರ್ಣವಾಗಿ ಅದನ್ನು ವಿರೋಧಿಸುತ್ತೇನೆ. ಮತಾಧಿಕಾರವನ್ನು ವಿಸ್ತರಿಸುವ ಬಗ್ಗೆ ಸಮಿತಿಯನ್ನು ನೇಮಕ ಮಾಡಲು ನನ್ನ ಅಭ್ಯಂತರವಿಲ್ಲ. ಆದರೆ, ಆ ಅಧಿಕಾರವನ್ನು ಸಂಪೂರ್ಣವಾಗಿ ಭಾರತ ಸರಕಾರದಲ್ಲಿಯೇ ನಿಹಿತಗೊಳಿಸಬೇಕು ಮತ್ತು ಹಲವು ನಿರ್ದಿಷ್ಟ ವರುಷಗಳ ಒಳಗಾಗಿ ಅಥವಾ ಹಲವು ನಿರ್ದಿಷ್ಟ ವರುಷಗಳ ನಂತರ ಅವಶ್ಯಕತೆ ಕಂಡುಬಂದಾಗ ಅದು ಆ ಅಧಿಕಾರವನ್ನು ತನ್ನ ವಿವೇಚನೆಯಂತೆ ಚಲಾಯಿಸುವಂಥದಿರಬೇಕೆಂದು ನಾನು ಇಚ್ಛಿಸುತ್ತೇನೆ.

ಡಾ. ಅಂಬೇಡ್ಕರ್: ಈ ಉಪಸಮಿತಿಯ ಪ್ರಕಾರ್ಯಗಳಿಗೆ ಅದು ಹೇಗೆ ಸಂಬಂಧಪಟ್ಟಿರುತ್ತದೆ, ಈ ಸಮಿತಿಯನ್ನು ಸಂಸತ್ತು ರಚಿಸುವುದೋ ಅಥವಾ ಭಾರತ ಸರಕಾರ ರಚಿಸುವುದೋ?

ದಿವಾನ ಬಹಾದ್ದೂರ್ ರಾಮಚಂದ್ರರಾವ್: ನಾವು ಸಂಸತ್ತಿನಿಂದ ಭಾರತ ಸರಕಾರಕ್ಕೆ ಅಧಿಕಾರವನ್ನು ವರ್ಗಾಯಿಸುತ್ತಿದ್ದೇವೆ. ಏಕೆಂದರೆ ೧೯೧೯ರಲ್ಲಿ ಸಂಸತ್ತಿನ ಸಮಿತಿಯ ಮುಂದೆ ಈ ಪ್ರಶ್ನೆ ಬಂದಾಗ ನಾನು

ಮತ್ತು ಇನ್ನೂ ಹಲವರು ಈ ಅಧಿಕಾರವನ್ನು ಪ್ರಾಧಿಕಾರಗಳಿಗೆ ವಹಿಸಬೇಕೆಂದು ಹೇಳಿದ್ದೆವು. ಮತ್ತು ಅಂಥ ಕ್ರಮವನ್ನು ತೆಗೆದುಕೊಳ್ಳಲಿಲ್ಲವಾದ್ದರಿಂದ ಈಗ ನಾವು ಮಾಡುತ್ತಿರುವಂಥ ಮತಾಧಿಕಾರಕ್ಕೆ ಸಂಬಂಧಿಸಿದ ಹಲವಾರು ತಕರಾರುಗಳನ್ನು ಒಟ್ಟಿಗೇ ಎದುರಿಸಬೇಕಾಗಿದೆ. ಮತ್ತು ಆ ಬಗ್ಗೆ ಸಂಸತ್ತಿನ ಅನುಮತಿ ಬೇಕಾಗುವುದರಿಂದ ನಾವು ವಿಚಾರಣೆಯನ್ನು ಮಾಡಲಾರೆವು. ಆದಕಾರಣ ಆ ದಿಶೆಯಲ್ಲಿ ನಾವು ತೆಗೆದುಕೊಳ್ಳುವ ಯಾವುದೇ ಕ್ರಮವು ಭಾರತ ಸರಕಾರಕ್ಕೇ ಸಂಪೂರ್ಣ ಅಧಿಕಾರ ಕೊಡುವಂತೆ ಮತ್ತು ಕೆಲವು ನಿರ್ದಿಷ್ಟ ವರುಷಗಳಲ್ಲಿ ಮತಾಧಿಕಾರದ ಇಡಿಯ ಪ್ರಶ್ನೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದನ್ನು ಅದರ ವಿವೇಚನೆಗೆ ಬಿಟ್ಟುಕೊಡಬೇಕು ಎಂದು ನಾನು ಸೂಚಿಸುತ್ತೇನೆ. ನಾನು ನಿಜವಾಗಿಯೂ ಒತ್ತುಕೊಡಲು ಇಚ್ಛಿಸುವ ಅಂಶ ಇದೇ ಆಗಿರುತ್ತದೆ.

* ಅಂಬೇಡ್ಕರ್: ನನ್ನ ಮತ್ತು ನನ್ನ ಕೆಲವು ಸ್ನೇಹಿತರ ಮಟ್ಟಿಗೆ ಮಾತ್ರವೇ ಹೇಳುವುದಾದರೆ, ಉಪಸಮಿತಿಯ ಮುಂದೆ ಇಡಲಾಗುವ ಕೆಲವು ಪ್ರಸ್ತಾವಗಳ ಬಗ್ಗೆ ನಮ್ಮ ಅಸಮ್ಮತಿಯನ್ನು ದಾಖಲಿಸ ಬೇಕಾಗುತ್ತದೆಂಬುದು ಈಗ ಸ್ಪಷ್ಟವಾಗಿದೆ. ಹಲವಾರು ಅಂಶಗಳ ಮೇಲಿನ ನಮ್ಮ ಪ್ರಸ್ತಾವಗಳನ್ನು ಅಸಮ್ಮತಿಸುತ್ತೀರಾ, ಮತ್ತು ಆ ಅಂಶಗಳನ್ನು ನಿಮ್ಮ ವರದಿಗೆ ದಯಮಾಡಿ ಸೇರಿಸುತ್ತೀರಾ ಅಥವಾ ನೀವು ನಮಗೆ ಬೇರೆ ವಿಧಾನಕ್ಕೆ ಅನುವು ಮಾಡಿಕೊಡುತ್ತೀರಾ?

ಅಧ್ಯಕ್ಷ: ಇಲ್ಲಿಯವರೆಗೆ ಯಾವುದೇ ಉಪಸಮಿತಿ ಭಿನ್ನಮತದವರ ವರದಿಗಳನ್ನು ಸೇರಿಸಿರುತ್ತವೆ ಎಂದು ನನಗೆ ಅನ್ನಿಸುವುದಿಲ್ಲ. ಉಪಸಮಿತಿಯ ವರದಿ ಒಂದೇ ವರದಿಯಾಗಿದೆ ಎಂದು ನಾನು ಭಾವಿಸಿದ್ದೇನೆ. ಆದರೆ, ಅದರ ಮೇಲಿನ ಪುಟದಲ್ಲಿ ಸಮ್ಮತಿಸದಿರುವವರ ಸಂಖ್ಯೆಯನ್ನು ಅವಶ್ಯವಿದ್ದಲ್ಲಿ ಅವರ ಹೆಸರುಗಳನ್ನು ಸೂಚಿಸಿದ್ದು ಕಂಡುಬರುತ್ತದೆ.

ಡಾ. ಅಂಬೇಡ್ಕರ್: ನಾನು ನಿಮ್ಮ ಅನುಮತಿಯನ್ನು ಪಡೆದು, ಆ ಪದ್ಧತಿಯಲ್ಲಿರುವ ಒಂದು ಅನಾನುಕೂಲತೆಯನ್ನು ಎತ್ತಿತೋರಿಸಬಯಸುತ್ತೇನೆ. ನಮ್ಮ ಅಸಮ್ಮತಿಯ ವ್ಯವಹರಣೆಯನ್ನು ದಾಖಲಿಸಲು ನಮಗೆ ಅನುಮತಿ ದೊರಕದಿದ್ದರೆ, ನೀವು ನಮಗೆ ನಮ್ಮ ಸೂಚನೆಗಳನ್ನು ಖಚಿತವಾಗಿ ಹೇಳಲು ಅವಕಾಶವನ್ನು ಕೊಡುತ್ತಿಲ್ಲ. ನೀವು ಅನುಮತಿಸಿದರೆ ಹಾಗೆ ಖಚಿತವಾದ ಸೂಚನೆಗಳನ್ನು ಕೊಡಲು ಇಚ್ಛಿಸುತ್ತೇವೆ. ನಾವು ಒಪ್ಪುವುದಿಲ್ಲ ಎಂದು ಹೇಳುವ ನಿಷೇಧಾತ್ಮಕ ಸ್ವಾತಂತ್ರ್ಯವನ್ನು ನಮಗೆ ಕೊಡಲಾಗಿದೆ. ಅಷ್ಟೇ.

ಅಧ್ಯಕ್ಷ: ನಿಮಗೆ ಉತ್ತರಿಸಲಾರೆವೆಂದು ನಾನು ಹೇಳುತ್ತಿಲ್ಲ. ನೀವು ನಮ್ಮ ತಕರಾರುಗಳನ್ನು ಸ್ಪಷ್ಟಪಡಿಸುತ್ತೀರಿ ಎಂದು ನಾನು ಭಾವಿಸಿದ್ದೇನೆ. ನಿಮಗೆ ನಿಜವಾಗಿಯೂ ಬೇಕಾಗಿರುವುದು ವಯಸ್ಕ ಮತಾಧಿಕಾರ, ನಮ್ಮ ಉಪಸಮಿತಿಯ ಹಲವು ಸದಸ್ಯರು ಇದಕ್ಕೆ ತಕರಾರು ಮಾಡಿದರು. ಏಕೆಂದರೆ, ವಯಸ್ಕ ಮತಾಧಿಕಾರದ ಪದ್ಧತಿ ಮಾತ್ರವೇ ಸಮಾಧಾನಕರವಾದ ಪದ್ಧತಿಯೆಂದು ಅವರು ಭಾವಿಸಿದ್ದಾರೆ ಎಂಬುದನ್ನು ಸೂಚಿಸುವ ವಾಕ್ಯವೊಂದನ್ನು ಅಲ್ಲಿ ಸೇರಿಸಲಾಗಿದೆ ಎಂದು ನಾನು ಭಾವಿಸಿದ್ದೇನೆ. ಈ ಅಂಶವನ್ನು ಅದು ಸ್ಪಷ್ಟಪಡಿಸುತ್ತದೆ.

ಡಾ. ಅಂಬೇಡ್ಕರ್: ನಾವು ಏನು ಮಾಡಬೇಕೆಂಬುದು ಆ ವರದಿಯನ್ನು ಆಧರಿಸಿದೆ.

ಅಧ್ಯಕ್ಷ: ಆ ತೊಂದರೆಯನ್ನು ಅದು ಉಂಟಾಗುವವರೆಗೆ ಬಿಟ್ಟುಬಿಡೋಣ ಮತ್ತು ಆ ನಂತರವೂ ನಾವು ನಿಮ್ಮನ್ನು ತೃಪ್ತಿಗೊಳಿಸಲಾಗದಿದ್ದರೆ, ನಾವು ಹಾಗೆಯೇ ಮಾಡಬಲ್ಲೆವೆಂದು ನಾನು ಭಾವಿಸಿದ್ದೇನೆ.

---

* ಉಪಸಮಿತಿ ನಂ. VI (ಮತಾಧಿಕಾರ)ರ ವ್ಯವಹರಣೆಗಳು, ಪು:– ೧೪೭–೪೮.)

# ನಾಲ್ಕನೆಯ ಸಭೆ
# ೧ನೇ ಜನವರಿ ೧೯೩೧
## *ಕರಡು ವರದಿ–ಅಂಶ ೪

೪. ಮತಾಧಿಕಾರದ ವಿಸ್ತರಣೆ: ವಯಸ್ಕ ಮತಾಧಿಕಾರವೇ ಕೊನೆಯದಾಗಿ ಸಾಧಿಸಲೇ ಬೇಕಾದ ಗುರಿಯಾಗಿರುತ್ತದೆ ಎಂದು ಸಾಮಾನ್ಯವಾಗಿ ಅಭಿಪ್ರಾಯಪಡಲಾಗಿದ್ದಾಗ್ಯೂ, ಮತಾಧಿಕಾರದ ಬುನಾದಿಯನ್ನು ಈ ಕೂಡಲೇ ವಿಸ್ತೃತಗೊಳಿಸಬೇಕು ಮತ್ತು ದೊಡ್ಡ ಪ್ರಮಾಣವು ಅಪೇಕ್ಷಣೀಯ ಎಂದು ಒಪ್ಪಲಾಗಿತ್ತು.

ಸದ್ಯದ ಪರಿಸ್ಥಿತಿಯಲ್ಲಿ ಎಷ್ಟರಮಟ್ಟಿಗೆ ಇದು ವ್ಯಾವಹಾರಿಕವಾಗಿರುತ್ತದೆ ಎಂಬ ಬಗ್ಗೆ ಭಿನ್ನಾಭಿಪ್ರಾಯ ಇತ್ತು. ಮತ್ತು ಮುಂದುವರೆಯುವಿಕೆಯ ಖಚಿತ ಪರಿಮಿತಿಯನ್ನು ನಿರ್ಧರಿಸಲು ಅವಶ್ಯವಾದ ವಿಷಯ ಸಂಗ್ರಹವು ಸಮಿತಿಗೆ ಲಭ್ಯವಿರಲಿಲ್ಲ ಎಂಬುದನ್ನು ಕಂಡುಕೊಳ್ಳಲಾಯಿತು. ಶಾಸನಬದ್ಧ ಆಯೋಗವು ಮತದಾರರ ಸಂಖ್ಯೆಯನ್ನು ಆಯಾ ಜನಸಂಖ್ಯೆಯ ಶೇಕಡಾ ಹತ್ತರಷ್ಟಾಗುವಂತೆ ಹೆಚ್ಚಿಸಲು ಸೂಚಿಸಿತ್ತು. ನಮ್ಮಲ್ಲಿ ಹಲವು ಸದಸ್ಯರು ಶೇಕಡಾ ಇಪ್ಪತ್ತೈದರಷ್ಟು ಹೆಚ್ಚಿಸುವುದು ಕೂಡಲೇ ವ್ಯಾವಹಾರಿಕವಾದುದು ಎಂಬ ಅಭಿಪ್ರಾಯದವರಾಗಿದ್ದರು.

ಒಟ್ಟು ಜನಸಂಖ್ಯೆಯ ಶೇಕಡಾ ಹತ್ತರಷ್ಟು ನಿಜವಾಗಿ ಇನ್ನೂ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ, ಆದರೆ ಒಟ್ಟು ಜನಸಂಖ್ಯೆಯ ಶೇಕಡಾ ಇಪ್ಪತ್ತೈದನ್ನು ಮೀರದಂತೆ, ಪೂರ್ಣ ವಿಚಾರಣೆಯ ಅನಂತರ ಅದು ವ್ಯಾವಹರಿಕವಾದುದು ಮತ್ತು ಬಯಸಬಹುದಾದುದು ಎಂದು ಕಂಡುಬಂದರೆ, ಮತದಾರರ ಸಂಖ್ಯೆಯನ್ನು ಕೂಡಲೇ ಹೆಚ್ಚಿಸಲು ಉಪಬಂಧ ಕಲ್ಪಿಸುವಂತೆ ಸೂಚಿಸಿ ತಜ್ಞ ಮತಾಧಿಕಾರ ಆಯೋಗವನ್ನು ರಚಿಸಬೇಕೆಂದು ನಾವು ಶಿಫಾರಸು ಮಾಡುತ್ತೇವೆ.

ಈ ಹೆಚ್ಚಳಕ್ಕೆ ಉಪಬಂಧ ಕಲ್ಪಿಸುವುದರ ಜೊತಗೆ, ಆಯೋಗವು ಈ ಕೆಳಗಿನಂಥ ಯೋಜನೆಯನ್ನು ಸೇರಿಸುವುದರ ಬಗ್ಗೆ ವಿಚಾರಿಸಬೇಕು. ಆ ಯೋಜನೆಯೆಂದರೆ, ನೇರ ಮತಾಧಿಕಾರ ಇಲ್ಲದ ಎಲ್ಲ ವಯಸ್ಕರನ್ನು ಸರಿ ಸುಮಾರು ಗುಂಪುಗಳಲ್ಲಿ ಸೇರಿಸಿ ಗುಂಪುಗಳನ್ನಾಗಿ ರಚಿಸಬೇಕು. ಪ್ರತಿ ಗುಂಪು ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕು. ಆ ಪ್ರತಿನಿಧಿಯ ಪ್ರಾಂತೀಯ ಚುನಾವಣೆಗಳಲ್ಲಿ ಅದೇ ಮತ ಕ್ಷೇತ್ರದಲ್ಲಿ ನೇರವಾಗಿ ಮತ ನೀಡಲು ಅರ್ಹರಾದವರ ಜೊತೆಗೇ ಮತ ನೀಡಬಹುದು ಅಥವಾ ಅವರಿಗಾಗಿ ರಚಿತವಾಗಿರುವ ಬೇರೆ ಮತ ಕ್ಷೇತ್ರದಲ್ಲಿ ಮತ ನೀಡಬಹುದು.

(ಮಿ. ಜೋಶಿ, ಮಿ. ಶಿವರಾವ್, ಡಾ. ಅಂಬೇಡ್ಕರ್ ಮತ್ತು ಮಿ. ಶ್ರೀನಿವಾಸನ್ ಈ ಪ್ರಸ್ತಾವಗಳನ್ನು ಎರಡನೆಯ ಅತ್ಯುತ್ತಮ ಪ್ರಸ್ತಾವಗಳೆಂದು ಭಾವಿಸುತ್ತಾರೆ ಮತ್ತು ವಯಸ್ಕ ಮತದಾನ ಪದ್ಧತಿಯನ್ನು

---

ಅದೇ, ಪುಟಗಳು ೧೪೯–೫೦

ಜಾರಿಯಲ್ಲಿ ತರುವುದು ವ್ಯಾವಹಾರಿಕವಾದುದೂ ಮತ್ತು ಅಪೇಕ್ಷಣೀಯವೂ ಆಗಿದೆ ಎಂದೂ ಸಹ ಅವರು ಭಾವಿಸುತ್ತಾರೆ.

ಸರ್ ಕೌಸಾಜಿ ಜಹಾಂಗೀರ್, ಸರ್ ಪಿ. ಸಿ. ಮಿತ್ತಲ್ ಮತ್ತು ಮಿ. ಬಾಸು ಇವರು ಸೂಚಿಸಿದ ಗರಿಷ್ಠ ಅಥವಾ ಕನಿಷ್ಠಗಳಿಗೆ ಸಮ್ಮತಿಸುವುದಿಲ್ಲ. ಆದರೆ ಮತಾಧಿಕಾರ ಸಮಿತಿಗೆ ನೀಡುವ ವಿವೇಚನಾಧಿಕಾರವು ಸಂಪೂರ್ಣವಾಗಿ ಅಬಾಧಿತವಾದುದಾಗಿರಬೇಕೆಂದು ಬಯಸುತ್ತಾರೆ.)

## *ಕರಡು ವರದಿಯ ೪ನೇ ಅಂಶದ ಮೇಲಿನ ಚರ್ಚೆ

ಡಾ. ಅಂಬೇಡ್ಕರ್: ನಾಲ್ಕನೇ ಪ್ಯಾರಾಕ್ಕೆ ಒಂದು ತಿದ್ದುಪಡಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇಂದರೆ: ಎರಡನೆಯ ಕಲಮಿನಲ್ಲಿ ಎರಡನೆಯ ಸಾಲಿನಲ್ಲಿ "ವ್ಯಾವಹಾರಿಕ" ಪದದ ಮೊದಲು "ಸಧ್ಯದ ಪರಿಸ್ಥಿತಿಯಲ್ಲಿ ಲಭ್ಯವಿರುವ ಚುನಾವಣಾ ಸಿಬ್ಬಂದಿಯೊಂದಿಗೆ" ಎಂಬ ಪದಗಳನ್ನು ಸೇರಿಸಬೇಕು. ಅನಂತರ ಅದು ಹೀಗಾಗುತ್ತದೆ ಸಧ್ಯದ ಪರಿಸ್ಥಿತಿಯಲ್ಲಿ ಲಭ್ಯವಿರುವ ಚುನಾವಣಾ ಸಿಬ್ಬಂದಿಯೊಂದಿಗೆ ಇದು ಎಷ್ಟರ ಮಟ್ಟಿಗೆ ವ್ಯಾವಹಾರಿಕವಾದುದೆನ್ನುವುದಕ್ಕೆ ಸಂಬಂಧಿಸಿದಂತೆ ಸ್ವಲ್ಪ ಭಿನ್ನಾಭಿಪ್ರಾಯವಿತ್ತು.

ಅನೇಕ ಸದಸ್ಯರು: ಇತರ ಆಧಾರಗಳೂ ಉಂಟು.

ಡಾ. ಅಂಬೇಡ್ಕರ್: ಅದು ನನ್ನ ತಿದ್ದುಪಡಿ. ಈ ಸಮಿತಿಯು ಹೇಳಿದುದರ ಅರ್ಥ ಸಾರಾಂಶ ರೂಪದಲ್ಲಿ ಹೇಳಲು ಅತ್ಯುತ್ತಮ ನಿರ್ಣಯ ಕೊಡಬಲ್ಲವರಾದ ಅಧ್ಯಕ್ಷರಿಗೇನೇ ನಾನು ಇದನ್ನು ಬಿಟ್ಟು ಕೊಡುತ್ತೇನೆ. ಆದರೆ ನನ್ನ ಅಭಿಪ್ರಾಯವೆಂದರೆ ಒಟ್ಟು ವಯಸ್ಕ ಮತಾಧಿಕಾರಕ್ಕೆ, ಅದು ನಿಕಟ ಭವಿಷ್ಯಕ್ಕಾಗಿ ವ್ಯಾವಹಾರಿಕ ರಾಜಕೀಯವೆಂದು ವಿರೋಧ ಮಾಡಿದ ಬಹುಮತದವರು, ಭಾರತದಲ್ಲಿನ ಎಲ್ಲರಿಗೂ ಮತಾಧಿಕಾರವನ್ನು ನೀಡಿದರೆ ಅದನ್ನು ನಿರ್ವಹಿಸಲು ಈಗಿರುವ ಚುನಾವಣಾ ಸಿಬ್ಬಂದಿಯು ಸಾಕಾಗುವುದಿಲ್ಲ ಎಂಬ ಆಧಾರದ ಮೇಲೆ ಹಾಗೆ ಮಾಡಿರುತ್ತಾರೆ.

ಅಧ್ಯಕ್ಷ: ಮಿ. ಅಂಬೇಡ್ಕರ್, ಅದೊಂದೇ ಆಧಾರದ ಮೇಲೆ ಆ ವಿಷಯವನ್ನು ಹಾಗೆ ಬಿಡಲಾಯಿತು ಎಂದು ನಾನು ಭಾವಿಸುವುದಿಲ್ಲ. ಹಲವು ಆಧಾರಗಳಲ್ಲಿ ಅದು ಮುಖ್ಯವಾದುದಾಗಿತ್ತು. ಆದರೆ, ಸಮಿತಿಯ ಅಭಿಪ್ರಾಯವನ್ನು ಅಭಿಲೇಖಿಸುವಾಗ ಅದೊಂದೇ ಏಕಮೇವ ಆಧಾರವಾಗಿದೆ ಎಂದು ಹೇಳುವಷ್ಟಕ್ಕೆ ಮಾತ್ರವೇ ನಮ್ಮನ್ನು ನಾವು ಸೀಮಿತಗೊಳಿಸಿಕೊಳ್ಳಬೇಕಾಗಿದೆ ಎಂದು ನಾನು ಭಾವಿಸುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಸಾಧನ ಸಂಪರ್ಕಗಳ ತೊಂದರೆಗಳು ಮತ್ತು ಪ್ರಯಾಣದ ಅನುಕೂಲತೆಗಳು ಲಭ್ಯವಿಲ್ಲದಿರುವುದು ಇತ್ಯಾದಿ, ಇತ್ಯಾದಿಗಳ ಮೇಲೂ ಸಹ ಹೆಚ್ಚು ಒತ್ತು ಕೊಡಲಾಯಿತು.

ಡಾ. ಅಂಬೇಡ್ಕರ್: ಅದನ್ನು ವರದಿಯಲ್ಲಿ ಸ್ಪಷ್ಟಪಡಿಸಬೇಕೆಂದು ನಾನು ಇಚ್ಛಿಸುತ್ತೇನೆ.

ಮಿ. ಜೋಶಿ: "ಚುನಾವಣೆಯ ವ್ಯಾವಹಾರಿಕ ಅಡ್ಡಿಗಳು" ಎಂಬಂಥ ಹಲವು ಪದಗಳನ್ನು ನೀವು ಅಲ್ಲಿ ಸೇರಿಸಬಹುದು.

ಸರ್ ಕೌಸಾಜಿ ಜಹಾಂಗೀರ್: ಆದರೆ ಇತರ ತಕರಾರುಗಳೂ ಉಂಟು.

---

* ಉಪಸಮಿತಿ ನಂ. VI (ಮತಾಧಿಕಾರ)ರ ವ್ಯವಹರಣೆಗಳು, ಪುಟಗಳು ೧೫೨–೫೪.)

ಮಿ. ಜೋಶಿ: ನಾವು ಸಾಮಾನ್ಯ ಬಹುಮತದ ಬಗ್ಗೆ ಮಾತನಾಡುತ್ತಿದ್ದೇವೆಯೇ ಹೊರತು ತತ್ವಾಧಾರಿತವಾಗಿ ಮತ ನೀಡಲು ಒಲ್ಲದವರ ಪರವಾಗಿ ಅಲ್ಲ.

ಅಧ್ಯಕ್ಷ: ಈಗಾಗಲೇ ಹೇಳಿರುವುದು ಈ ಅಂಶವನ್ನು ಪ್ರತಿಪಾದಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಏನೇ ಆಗಲೀ ನೀವು ಮತ್ತು ಮಿ.ಜೋಶಿಯವರು ಕೊನೆಯ ಟಿಪ್ಪಣಿಯಲ್ಲಿ ಬಂದೇ ಬರುತ್ತೀರಿ.

ಡಾ. ಅಂಬೇಡ್ಕರ್: ನನಗೆ ಅದು ಸ್ಪಷ್ಟವಿದೆ. ನಾವು ಒಂದು ಆದರ್ಶಕ್ಕಾಗಿ ಇದ್ದಾಗ್ಯೂ, ನಾವು ಎರಡನೆಯ ಅತ್ಯುತ್ತಮವಾದುದನ್ನು ಒಪ್ಪಲೇಬೇಕಾಗಬಹುದು. ಆದರೆ, ಆ ಎರಡನೆಯ ಅತ್ಯುತ್ತಮವಾದುದನ್ನು ಸಾಧ್ಯವಾದಷ್ಟು ಉತ್ತಮಗೊಳಿಸಬೇಕು. ನನ್ನ ಈ ಅಂಶವನ್ನು ಸ್ಪಷ್ಟಪಡಿಸಬೇಕು. ಏಕೆಂದರೆ, ತಜ್ಞ ಮತಾಧಿಕಾರ ಸಮಿತಿಯು ಅದನ್ನು ಪರ್ಯಾಲೋಚಿಸಬಹುದು.

ಅಧ್ಯಕ್ಷ: ಅದು ಸಮಿತಿಯ ಬಹುಮತಕ್ಕೆ ಒಪ್ಪಿತವಾಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ಸಮಿತಿಯ ಬಹುಮತವು ಶಬ್ದಗಳ ಅರ್ಥವನ್ನು ಪರಿಮಿತಿಗೊಳಿಸಬಯಸುತ್ತದೆ ಎಂದು ನನಗೆ ಅನ್ನಿಸುತ್ತದೆ. ಒಳ್ಳೆಯದು.

ಕಡಿಮೆಯಿಲ್ಲದಂತೆ ಹಾಗೂ ಒಟ್ಟು ಜನಸಂಖ್ಯೆಯ ಶೇಕಡಾ ಹತ್ತರಷ್ಟಕ್ಕಿಂತ ಮತದಾರರ ಸಂಖ್ಯೆಯನ್ನು ವ್ಯಾವಹಾರಿಕವಾಗಿ ಕಾರ್ಯಸಾಧುವಾಗುವಂತೆ ರೂಪಿಸುವಂತೆ ನಿರ್ದೇಶ ಮಾಡಿ ಒಂದು ತಜ್ಞಮತಾಧಿಕಾರದ ಸಮಿತಿಯನ್ನು ನೇಮಿಸಬೇಕು ಎಂದು ಶಿಫಾರಸು ಮಾಡುತ್ತೇವೆ.

ಡಾ. ಅಂಬೇಡ್ಕರ್: ೩ನೇ ಪುಟದಲ್ಲಿ ಮಾಡಬೇಕಾದ ನನ್ನದೊಂದು ತಿದ್ದುಪಡಿ ಇರುತ್ತದೆ. 'ಆದರೆ..... ಅಲ್ಲ' (but not) ಪದಗಳ ಬದಲಿಗೆ 'ಮತ್ತು ಬದಲಿಗೆ ಸೇರಿಸಲಾಗಿದ್ದು ಸಹ' ಎಂಬ ಪದಗಳನ್ನು ಸೇರಿಸಬೇಕೆಂದು ನಾನು ಇಚ್ಛಿಸುತ್ತೇನೆ.

ಅಧ್ಯಕ್ಷ: ನನ್ನನ್ನೂ ಒಳಗೊಂಡಂತೆ ನಮ್ಮಲ್ಲಿ ಅನೇಕರು ಕೂಡಲೇ ಶೇಕಡಾ ಇಪ್ಪತ್ತೈದರಷ್ಟು ಹೆಚ್ಚಳವು ಕೆಲಮಟ್ಟಿಗೆ ಒತ್ತಡ ಉಂಟುಮಾಡುತ್ತದೆ ಮತ್ತು ಅದಕ್ಕೆ ಇನ್ನೂ ಹೆಚ್ಚಿನ ಒತ್ತಡವನ್ನುಂಟುಮಾಡುವಂತೆ ಒತ್ತಾಯಿಸುವುದು ಸರಿಯಿರುವುದಿಲ್ಲ ಎಂದು ಭಾವಿಸಿದ್ದೇವೆ ಅದಕ್ಕಿಂತ ಇನ್ನೂ ಹೆಚ್ಚಿನ ಒತ್ತಡವನ್ನುಂಟು ಮಾಡುವಂತೆ ಒತ್ತಾಯಿಸಲಿಕ್ಕಿಲ್ಲ ಮತ್ತು ಡಾ. ಅಂಬೇಡ್ಕರ್ ಅವರೇ, ನೀವು ನಿಮ್ಮ ಕಾಯ್ದಿಟ್ಟ ಸ್ಥಳದ ವ್ಯಾಪ್ತಿಯಲ್ಲಿ ಬಂದೇ ಬರುತ್ತೀರಿ.

ಡಾ. ಅಂಬೇಡ್ಕರ್: ನನ್ನ ಎರಡನೆಯ ತಿದ್ದುಪಡಿಯು "ಮತ್ತು ಅಪೇಕ್ಷಣೀಯ" ಎಂಬ ಪದಗಳನ್ನು ಹೊಡೆದು ಹಾಕಬೇಕು ಎನ್ನುವುದು ಆಗಿದೆ. ಯಾವುದೇ ಹೆಚ್ಚಳವು ಅಪೇಕ್ಷಣೀಯವಾದುದು ಆಗಿರಲಿ ಅಥವಾ ಇಲ್ಲದಿರಲಿ ಈ ವಿಷಯವನ್ನು ಈ ಸಮಿತಿ ಮಾತ್ರವೇ ನಿರ್ಧರಿಸಬೇಕು. ತಜ್ಞ ಮತಾಧಿಕಾರ ಸಮಿತಿಯು ಇದನ್ನು ನಿರ್ಧರಿಸಲಾರದು. ನಾವು ತೆಗೆದುಕೊಂಡ ನಿರ್ಣಯಗಳನ್ನು ಕಾರ್ಯಗತಗೊಳಿಸುವ ವಿಧಾನಗಳನ್ನು ರೂಪಿಸುವುದಕ್ಕಾಗಿ ಆ ಸಮಿತಿಯನ್ನು ನೇಮಕ ಮಾಡಲಾಗುತ್ತಿದೆ. ಹೆಚ್ಚಳವು ಎಷ್ಟರ ಮಟ್ಟಿಗೆ ಅಪೇಕ್ಷಣೀಯ ಎನ್ನುವುದನ್ನು ನಾವು ಈ ಹೊಸ ಮತಾಧಿಕಾರ ಸಮಿತಿಗೆ ಬಿಡಬಾರದಂಥ ವಿಷಯವಾಗಿರುತ್ತದೆ. ಆ ದೃಷ್ಟಿಯಿಂದ ನೋಡಿದಾಗ ಈ ಪದಗಳನ್ನು ಕೈ ಬಿಡುವುದು ಅವಶ್ಯವೆಂದು ನನಗನ್ನಿಸುತ್ತದೆ.

ಅಧ್ಯಕ್ಷ: ಯಾವುದು ವ್ಯಾವಹಾರಿಕ ಮತ್ತು ಯಾವುದು ಅಪೇಕ್ಷಣೀಯ ಅನ್ನುವುದನ್ನು ಬೇರ್ಪಡಿಸುವುದು ತುಂಬಾ ಕಷ್ಟದ ಕೆಲಸವಾಗಿದೆ. "ವ್ಯಾವಹಾರಿಕವಾದುದು" ಪದದ ಅರ್ಥವು ಹೆಚ್ಚು ಹೊಂದಾಣಿಕೆ

ಮಾಡಿಕೊಳ್ಳಬಹುದಾದಂಥದಾಗಿದೆ. ಅದನ್ನು ಸಾಧಿಸುವುದು ತುಂಬಾ ಕಠಿಣವಾದುದಾಗಿರಬಹುದು ಅಥವಾ ಹೋಲಿಸಿ ನೋಡಿದಾಗ ಸಾಧಿಸಲು ಸರಳವಾದ ವಿಷಯವೂ ಆಗಿರಬಹುದು; ಆದರೆ ಅದನ್ನು ಸಾಧಿಸುವುದು ಸಾಧ್ಯವಾಗಬಹುದು ಎಂಬ ಕಾರಣಕ್ಕಾಗಿ ನೀವು ಅದನ್ನು ವ್ಯಾವಹಾರಿಕವಾದುದು ಎನ್ನುತ್ತೀರಿ. ಅಪೇಕ್ಷಣೀಯತೆಯ ಬಗ್ಗೆ ವಿಚಾರಿಸಿದಾಗ, ಯಾವುದೇ ಒಂದು ವಿಷಯವು ಎಷ್ಟರಮಟ್ಟಿಗೆ ವ್ಯಾವಹಾರಿಕ ವಾದುದು ಎಂಬ ಆಲೋಚನೆಯನ್ನು ನಿಮ್ಮ ಮನಸ್ಸಿನಿಂದ ತೆಗೆದುಹಾಕಲು ಸಾಧ್ಯವಿಲ್ಲ. ಕೆಲಮಟ್ಟಿಗೆ "ಈ ಎರಡೂ" ಎಂದು ಇರಲೇಬೇಕು.

ಡಾ. ಅಂಬೇಡ್ಕರ್: ನಮ್ಮ ಅಭಿಪ್ರಾಯದಲ್ಲಿ ಶೇಕಡಾ ಇಪ್ಪತ್ತೈದರಷ್ಟು ಜನತೆಯನ್ನು ಒಳಗೊಳ್ಳುವಂಥ ವಿಸ್ತರಣೆಯು ಅಪೇಕ್ಷಣೀಯವಾದುದು ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ.

ಅಧ್ಯಕ್ಷ: "ವ್ಯಾವಹಾರಿಕವಾದುದು" ಎಂಬಂಥ ಹೊಂದಾಣಿಕೆ ಮಾಡಿಕೊಳ್ಳಬಹುದಾದ ಅರ್ಥವುಳ್ಳ ಪದವನ್ನು ನೀವು ಉಪಯೋಗಿಸುತ್ತೀರಿ. ಎಂಬುದೇ ನನಗಿರುವ ತೊಂದರೆ, ಎರಡೂ ಪದಗಳನ್ನು ನೀವು ಸಂಪೂರ್ಣ ಬೇರೆ ಬೇರೆಯಾದ ಅರ್ಥದಲ್ಲಿ ಇರಿಸಲಾರಿರಿ. ಯಾವುದು ವ್ಯಾವಹಾರಿಕ ಎನ್ನುವುದು ಯಾವುದು ಅಪೇಕ್ಷಣೀಯ ಅನ್ನುವುದಕ್ಕೆ ಪ್ರತಿಕ್ರಿಯಿಸತಕ್ಕದ್ದು ಮತ್ತು ನೀವು ತುಂಬಾ ಹೆಚ್ಚು ಕಡಿಮೆ ಮಾಡಬಹುದಾದ ಅರ್ಥವಿದ್ದ ಪದವನ್ನು ಉಪಯೋಗಿಸುತ್ತೀರಿ. ಈ ಎರಡನ್ನೂ ಅಲ್ಲಿಡುವುದು ಜಾಣತನವಾಗುತ್ತದೆ. ನಾವು ವಯಸ್ಕ ಮತಾಧಿಕಾರವು ಆದರ್ಶವಾದುದಾಗಿದೆ ಎಂದು ಸ್ಪಷ್ಟವಾಗಿ ಹೇಳಿ ನಮ್ಮ ಸೂಚನೆಯ ಸ್ಪಷ್ಟ ಚಿತ್ರಣವನ್ನು ಕೊಡುತ್ತೇವೆ.

* ಅಧ್ಯಕ್ಷ: ನಾವು ಅದರ ಪ್ರತಿಯೊಂದು ಸಾಲನ್ನೂ ಚರ್ಚಿಸಬೇಕು. ಯಾರೇ ಆಗಲಿ ತಾವು ತಿದ್ದುಪಡಿ ಸೂಚಿಸುವುದಿದ್ದರೆ ಮಧ್ಯ ಪ್ರವೇಶಿಸುವಿರಾ? "ಈ ಹೆಚ್ಚಳಕ್ಕೆ ಉಪಬಂಧ ಕಲ್ಪಿಸುವುದರ ಜೊತೆಗೆ ನೇರ ಮತಾಧಿಕಾರವಿಲ್ಲದ ಎಲ್ಲ ವಯಸ್ಕರನ್ನು ಇಪ್ಪತ್ತು ಜನರ ಪ್ರಾಥಮಿಕ ಗುಂಪುಗಳಾಗಿ ಒಟ್ಟುಗೂಡಿಸುವ ಯೋಜನೆ ಸೂಚಿಸುವುದನ್ನು ಆಯೋಗವು ಪರಿಶೀಲಿಸಬೇಕು"– ಆಗ "ಅಥವಾ ಇತರೆ ಯಾವುದೇ ಯುಕ್ತ ರೀತಿಯಲ್ಲಿ" ಪದಗಳನ್ನು ಸೇರಿಸಬೇಕೆಂದು ಸೂಚಿಸಲಾಗಿದೆ.

ಇದಕ್ಕೆ ಏನಾದರೂ ತಕರಾರು ಇದೆಯೇ?

"ನೇರವಾಗಿ ಮತ ನೀಡಲು ಅರ್ಹರಾದವರಂತೆ ಅದೇ ಮತಕ್ಷೇತ್ರದಲ್ಲಿ ಅಥವಾ ಅವರಿಗಾಗಿ ರಚಿಸಲಾಗಿರುವ ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರಾಂತೀಯ ಚುನಾವಣೆಗಳಲ್ಲಿ ಮತ ನೀಡಲು ಹಕ್ಕುಳ್ಳವನಾಗುವಂತೆ ಒಬ್ಬ ಪ್ರತಿನಿಧಿಯನ್ನು ಪ್ರತಿಯೊಂದು ಗುಂಪಿನಿಂದ ಆಯ್ಕೆ ಮಾಡುವುದಕ್ಕೆ"

(ಮಿ. ಜೋಶಿ, ಮಿ. ಶಿವರಾವ್, ಡಾ. ಅಂಬೇಡ್ಕರ್ ಮತ್ತು ಮಿ. ಶ್ರೀನಿವಾಸನ್ ಇವರು ಈ ಪ್ರಸ್ತಾಪವನ್ನು ಕೇವಲ "ಎರಡನೆಯ ಅತ್ಯುತ್ತಮ" ಎಂದು ಭಾವಿಸುತ್ತಾರೆ ಮತ್ತು ವಯಸ್ಕ ಮತಾಧಿಕಾರ ಪದ್ಧತಿಯನ್ನು ಕೂಡಲೇ ಅನುಸರಿಸುವುದು ವ್ಯಾವಹಾರಿಕವೂ ಮತ್ತು ಅಪೇಕ್ಷಣೀಯವಾದುದೂ ಆಗಿರುತ್ತದೆ ಎಂದು ಭಾವಿಸುತ್ತಾರೆ.")

ಡಾ. ಅಂಬೇಡ್ಕರ್: ಮಿ. ಕೆ. ಟಿ. ಪಾಲ್ ಅವರೂ ಸಹ ನಮ್ಮ ಅಭಿಪ್ರಾಯವನ್ನೇ ಹೊಂದಿದ್ದಾರೆ ಎಂದು ಹೇಳಲು ಇಚ್ಛಿಸುತ್ತೇನೆ.

ಅಧ್ಯಕ್ಷ: ಅದನ್ನು ಟಿಪ್ಪಣಿ ಮಾಡಲಾಗುವುದು.

---

* (ಉಪ ಸಮಿತಿ ನಂ. VI (ಮತಾಧಿಕಾರ)ರ ವ್ಯವಹರಣೆಗಳು, ಪುಟ. ೧೫೫.)

ಮಿ. ಜೋಶಿ: "ಎರಡನೆಯ ಅತ್ಯುತ್ತಮ" ಪದಗಳ ಬದಲಿಗೆ "ಪೂರ್ಣ ಅಸಮರ್ಪಕ" ಪದಗಳನ್ನು ಸೇರಿಸಬೇಕೆಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷ: ಸಭ್ಯರೇ, ಅದೇ ನಿಜವಾಗಿಯೂ ನಿಮ್ಮ ಮುಂದಿರುವ ವಿಷಯವಾಗಿದೆ. "ಎರಡನೆಯ ಅತ್ಯುತ್ತಮ" ಪದಗಳ ಬದಲಿಗೆ "ಪೂರ್ಣ ಅಸಮರ್ಪಕ" ಪದಗಳನ್ನು ಒಪ್ಪುವಿರಾದರೆ ಅದು ನಿಜ ವಾಗಿಯೂ ನಿಮಗೆ ಸಂಬಂಧಿಸಿದ ವಿಷಯವಾಗಿದೆ. ಹಾಗಾದಾಗ ಅದನ್ನು ಹೀಗೆ ಓದಬೇಕು. ಮಿ. ಜೋಶಿ, ಮಿ. ಶಿವರಾವ್, ಡಾ: ಅಂಬೇಡ್ಕರ್, ಮಿ. ಶ್ರೀನಿವಾಸನ್ ಮತ್ತು ಮಿ. ಕೆ. ಟಿ. ಪಾಲ್ ಇವರು ಈ ಪ್ರಸ್ತಾಪಗಳನ್ನು ಸಂಪೂರ್ಣ ಅಸಮರ್ಪಕವಾದವುಗಳು ಎಂದು ಭಾವಿಸುತ್ತಾರೆ ಮತ್ತು ವಯಸ್ಕ ಮತಾಧಿಕಾರವನ್ನು ಕೂಡಲೇ ಅನುಸರಿಸುವುದು ವ್ಯಾವಹಾರಿಕವಾದುದು ಮತ್ತು ಅಪೇಕ್ಷಣೀಯವಾದುದೂ ಆಗಿರುತ್ತದೆ ಎಂದು ಭಾವಿಸುತ್ತಾರೆ."

ಮಿ. ಜಾಧವ್: ನನ್ನ ಹೆಸರನ್ನೂ ಆ ಯಾದಿಗೆ ಸೇರಿಸಬೇಕು.

ಅಧ್ಯಕ್ಷ: ಆ ಬಗ್ಗೆ ಟಿಪ್ಪಣಿ ಮಾಡಲಾಗುವುದು. ಆಗ ಅದು ಹೀಗೆ ಮುಂದುವರೆಯುತ್ತದೆ. "...ಸರ್ ಕೌಸಜಿ ಜಹಾಂಗೀರ್ ಮತ್ತು ಪಿ. ಸಿ. ಮಿತ್ತಲ್ ಮತ್ತು ಮಿ. ಬಾಸು ಇವರು ನಾವು ಸೂಚಿಸಿದ ಗರಿಷ್ಠ ಮತ್ತು ಕನಿಷ್ಠ ಸಂಖ್ಯೆಗಳಿಗೆ ಒಪ್ಪುವುದಿಲ್ಲ. ಆದರೆ ಮತಾಧಿಕಾರ ಸಮಿತಿಯ ವಿವೇಚನೆಯು ಸಂಪೂರ್ಣವಾಗಿ ಅಬಾಧಿತವಾಗಿರತಕ್ಕುದು ಎಂದು ಅಪೇಕ್ಷಿಪಡುತ್ತಾರೆ" ಆ ವಿಷಯದ ಬಗ್ಗೆ ಹೇಳಲು ಅವರಿಗೇನೇ ಬಿಟ್ಟುಕೊಡಲಾಗಿರುವುದು ಸ್ಪಷ್ಟವಾಗಿದೆ.

* ಅಧ್ಯಕ್ಷ: ಪ್ರತ್ಯೇಕ ಮತದಾರರಿರಲಿ ಅಥವಾ ಕಾಯ್ದಿರಿಸಿದ ಕ್ಷೇತ್ರಗಳನ್ನು ಜಂಟಿಯಾಗಿ ಹೊಂದಿರಲಿ, ಅಲ್ಪಸಂಖ್ಯಾತ ಕೋಮಿನವರು ತಮ್ಮ ಮತದಾರರಿಗಿಂತ ಹೆಚ್ಚಾಗಿ ತಮಗೆ ಇರುವ ಪ್ರತಿನಿಧಿಗಳಿಂದ ಸಂರಕ್ಷಿಸಲ್ಪಟ್ಟಿರುತ್ತಾರೆ.

ಆದರೆ ಒಂದು ನಿರ್ಣಯಕ್ಕೆ ಬರುವ ಸಲುವಾಗಿ ನಾವು ಹೀಗೆ ಹೇಳಬಹುದೇ? ಏನೆಂದರೆ "ಪ್ರತಿ ಕೋಮೂ" ಎಂಬ ಪದಗಳ ಬದಲಿಗೆ– ಮಿ. ಚಿಂತಾಮಣಿಯವರು ಹೇಳಿದಂತೆ– "ಮತಾಧಿಕಾರ ಆಯೋಗವು ತಮ್ಮ ಸೂಚನೆಗಳನ್ನು ಮಾಡುವಾಗ ಸಾಧ್ಯವಿರುವಷ್ಟರ ಮಟ್ಟಿಗೆ ಬಹುಮತದ ಕೋಮುಗಳಿಗೆ ಅವುಗಳ ಜನಸಂಖ್ಯೆಗೆ ಅನುಗುಣವಾದ ಪ್ರಮಾಣದ ಮತಾಧಿಕಾರದ ಬಲವನ್ನು ಕೊಡುವಂಥ ಪದ್ಧತಿಯು ಆದರ್ಶ ಪದ್ದತಿ ಆಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾವು ಅಪೇಕ್ಷಿಸುತ್ತೇವೆ" ಇತ್ಯಾದಿ. ಅಷ್ಟಾದರೆ ಸರಿ ಎಂದು ನಾನು ಭಾವಿಸುತ್ತೇನೆ.

ಸರ್ ಸಿ. ಜಹಾಂಗೀರ್: "ಎರಡು ದೊಡ್ಡ ಕೋಮುಗಳು."

ಅಧ್ಯಕ್ಷ: ಅವರು ಹೇಳುವುದೇನೆಂದರೆ ಕೇವಲ ದೊಡ್ಡ ಕೋಮುಗಳಿಗಷ್ಟೆ ತಮ್ಮನ್ನು ಸೀಮಿತ ಗೊಳಿಸಿಕೊಳ್ಳುವುದು ಅವರಿಗೆ ಬೇಕಾಗಿಲ್ಲ. ಆದರೆ, ತಾವು ಕೇವಲ ದೊಡ್ಡ ಕೋಮುಗಳಿಗೆ ಸಂಬಂಧಿಸಿದಂತೆ ಮಾತ್ರವೇ ಶಿಫಾರಸು ಮಾಡುತ್ತಿದ್ದೇವೆ ಎನ್ನುವ ರೀತಿಯಲ್ಲಿ ಹೇಳುವುದು ಅವರಿಗೆ ಬೇಕಾಗಿರುತ್ತದೆ. ದೊಡ್ಡ ಕೋಮುಗಳು ಇಲ್ಲಿ ಚರ್ಚೆಯ ವಿಷಯವೇ ಅಲ್ಲ. ಆ ಅಂಶದ ಮೇಲೆ ನೀವು ಅವರೊಡನೆ ಚರ್ಚಿಸುವಿರಾ?

ಸರ್ ಸಿ. ಜಹಾಂಗೀರ್: ಅದು ತುಂಬಾ ಅಪಾಯಕಾರಿಯಾಗಿರುತ್ತದೆ. ನೀವು ಪ್ರತ್ಯೇಕ ಮತ ಕ್ಷೇತ್ರದ ಬಗ್ಗೆ ಮಾತನಾಡುತ್ತಿರುವಾಗ, ನಮಗೆ ಪ್ರತ್ಯೇಕ ಕ್ಷೇತ್ರಗಳಿಲ್ಲ ಮತ್ತು ಅವು ನಮಗೆ ಬೇಕಾಗಿಯೂ ಇಲ್ಲ.

ಡಾ. ಅಂಬೇಡ್ಕರ್: ಈಗಿರುವ ವಿಸ್ತಾರವಾದ ಮತಕ್ಷೇತ್ರದ ಪ್ರಯೋಜನವನ್ನು ಉಳಿಸಿ ಕೊಳ್ಳುವುದಕ್ಕಾಗಿ ಮತಾಧಿಕಾರವನ್ನು ಬಹುಮತದ ಜನತೆಗೆ ಕೊಡಬಾರದೆಂದು ಇದರ ಅರ್ಥ ಆಗುತ್ತದೆ. ತನ್ನ ಜನಸಂಖ್ಯೆಯ ಬಲದ ಪ್ರಮಾಣಕ್ಕನುಸಾರವಾಗಿ ಈಗಿರುವ ಮತ ಕ್ಷೇತ್ರಗಳ ಸಂಖ್ಯೆ ಯನ್ನು ಉಳಿಸಿಕೊಳ್ಳುವುದಕ್ಕಾಗಿ ಮತ್ತು ಈ ದೇಶದಲ್ಲಿನ ಇತರ ಜನತೆಯು ಮತಾಧಿಕಾರದ ಬಲವನ್ನು ಹೊಂದಬಾರದೆಂದು ಜಹಾಂಗೀರ್ ಅವರು ಹೇಳುತ್ತಾರೆ ಎಂಬ ಅರ್ಥವನ್ನು ಈ ಹೇಳಿಕೆ ಕೊಡುತ್ತದೆ.

ಸರ್ ಸಿ. ಜಹಾಂಗೀರ್: ಚಿಕ್ಕ ಕೋಮುಗಳವರು ತೊಂದರೆಗೊಳಗಾಗಬಾರದೆಂದು ಮಾತ್ರ ನಾನು ಹೇಳುತ್ತಿದ್ದೇನೆ.

ಡಾ. ಅಂಬೇಡ್ಕರ್: ಮತಾಧಿಕಾರವನ್ನು ಕೆಳಗಿಳಿಸುವುದರಿಂದ ನಿಮ್ಮ ಸ್ಥಾನಕ್ಕೇನೆ ಅಪಾಯವಾಗುತ್ತದೆ ಮತ್ತು ಇತರ ಮತದಾರರ ಪ್ರಮಾಣವನ್ನು ಗಮನಿಸಿದಾಗ ನಿಮ್ಮ ಸ್ಥಾನವು ಕೆಳಗೆ ಹೋಗುತ್ತದೆ ಎಂದು ತಮಗೆ ಅನ್ನಿಸಿದರೆ, ಆಗ ನಿಮ್ಮ ಸುರಕ್ಷತೆಯ ಬಹುಮತವನ್ನು ನಂಬುವುದರಲ್ಲಿ ಅಥವಾ ಬೇರೆ ಮತ ಕ್ಷೇತ್ರಗಳನ್ನು ಬೇಡುವಲ್ಲಿ ಇರುತ್ತದೆ. ಏಕೆಂದರೆ ನಮ್ಮನ್ನು ಕೆಳಗೆ ತಳ್ಳುತ್ತಿದ್ದಾರೆ. ನಾವು ಮುಳುಗಿ ಹೋಗುತ್ತೇವೆ. ಆದ್ದರಿಂದ ಅದನ್ನು ಬೇರೆ ಕೋಮುಗಳವರಿಗೆ ಕೊಡಬಾರದು ಎಂದು ನೀವು ಹೇಳಲಾರಿರಿ. ಇಷ್ಟನ್ನು ಬಿಟ್ಟು ಅದು ಬೇರೆ ಏನು ಆಗುವುದಿಲ್ಲ.

ಸರ್ ಸಿ. ಜಹಾಂಗೀರ್: ನಾನು ಹಾಗೆ ಹೇಳುವುದಿಲ್ಲ.

ಅಧ್ಯಕ್ಷ: ಈಗ ನಾವು ನಿರ್ಣಯವನ್ನು ಮಾಡಲೇಬೇಕಾಗುತ್ತದೆ. ನೀವು ಮನಸ್ಸು ಮಾಡಿದರೆ ನಾವು ವಯಸ್ಕ ಮತಾಧಿಕಾರವನ್ನು ಆದರ್ಶವಾದುದು ಎಂದು ಒಪ್ಪುತ್ತೇವೆ ಎಂಬುದನ್ನು ನೆನಪಿಡಿ. ಮತಾಧಿಕಾರವನ್ನು ಆದರ್ಶವಾದುದು ಎಂದು ಒಪ್ಪುತ್ತೇವೆ ಎಂಬುದನ್ನು ನೆನಪಿಡಿ. ವರದಿಯ ಆ ಭಾಗವನ್ನು ನಾವು ಈಗಾಗಲೇ ದಾಟಿರುತ್ತೇವೆ. "ಸಾಧ್ಯವಿರುವಷ್ಟರ ಮಟ್ಟಿಗೆ ಕನಿಷ್ಟ ಪಕ್ಷ ದೊಡ್ಡ ಕೋಮುಗಳಿಗೆ ಕೊಡಿ" ಎಂಬ ಪದಗಳನ್ನು ನಾನು ಸೂಚಿಸಿದ್ದೇನೆ.

ಪ್ರಪ್ರಥಮವಾಗಿ ಪದಗಳು ಅವು ಈಗಿರುವಂತೇ ಇರಲಿ ಎಂದು ನಾನು ಸಮಿತಿಗೆ ಹೇಳುತ್ತೇನೆ. "ಸಾಧ್ಯವಾದರೆ ಪ್ರತಿ ಕೋಮಿಗೆ ಕೊಡಿ". ಇದಕ್ಕೆ ಯಾರಾದರೂ ವಿರುದ್ಧ ಇದ್ದಾರೆಯೇ?

ಸರ್ ಕೌಸಾಜಿ ಜಹಾಂಗೀರ್, ಕರ್ನಲ್ ಗಿಡ್ನೆ ಮತ್ತು ಸರ್ದಾರ ಉಜ್ವಲ ಸಿಂಗ್ ಆ ನಂತರದ ಭಾಗಕ್ಕೆ ಸಮ್ಮತಿಸುವುದಿಲ್ಲ ಎಂದು ಟಿಪ್ಪಣಿ ಮಾಡಲಾಗುತ್ತದೆ.

ಡಾ. ಅಂಬೇಡ್ಕರ್: ನೀವು ಅದನ್ನು ಮತಾಧಿಕಾರ ಸಮಿತಿಯ ಮುಂದೆ ಇಡುವುದಾದರೆ, ನಮ್ಮ ದೃಷ್ಟಿಯಲ್ಲಿ ವಯಸ್ಕ ಮತಾಧಿಕಾರ ತತ್ವವನ್ನು ನಿಮ್ನ ವರ್ಗದವರಿಗೂ ಅನ್ವಯಿಸಬೇಕೆಂದು ಆಗಲೂ ಹೇಳಲು ನಾವು ಇಚ್ಛಿಸುತ್ತೇವೆ.

ಅಧ್ಯಕ್ಷ: ಈಗಾಗಲೇ ನಮ್ಮ ಅದು ಹತ್ತಿರ ಇದೆ.

ಮಿ. ಫೂಟ್: ಇಲ್ಲದೇ ಹೋದರೆ ಪ್ರತಿ ಪ್ಯಾರಾಕ್ಕೂ ನೀವು ಪುರವಣಿಯನ್ನು ಸೇರಿಸುತ್ತೀರಿ.

ಅಧ್ಯಕ್ಷ: ಪ್ರತಿ ಸಲವೂ ನಾವು ಹಾಗೆ ಮಾಡುವಂತಿಲ್ಲ.

ಮಿ. ಜಾಧವ್: ಮುಂಬಯಿಯಲ್ಲಿನ ಬ್ರಾಹ್ಮಣರು, ಬ್ರಾಹ್ಮಣೇತರರು ಮತ್ತು ಇತರ ಕೋಮಿನವರು, ನಿಮ್ನವರ್ಗದವರು ಮತ್ತು ಇತರ ಎಲ್ಲರನ್ನೂ ಸೇರಿಸಬೇಕು.

ಅಧ್ಯಕ್ಷ: ನಾವು ಆ ಬಗ್ಗೆ ಚರ್ಚಿಸಲಾರೆವು.

(ಡಾ: ಅಂಬೇಡ್ಕರ್ ಅವರು ೧೩ನೇ ಪ್ಯಾರಾಕ್ಕೆ ಇರುವ ತಮ್ಮ ಅಸಮ್ಮತಿಯನ್ನು ಅಭಿಲೇಖಿಸಲು ಒತ್ತಾಯಿಸುತ್ತಾರೆ.)

* ಮಿ. ಫುಟ್: ಇಲ್ಲಿ ಒಂದೇ ಒಂದು ವಿಷಯವಿದೆ. ವಯಸ್ಕ ಮತಾಧಿಕಾರದ ಕ್ಲೇಮನ್ನು ಆಧರಿಸಿ ಮಾಡಲಾದ ಸಾಮಾನ್ಯ ತಕರಾರುಗಳ ದೃಷ್ಟಿಯಿಂದ ಪ್ರತಿ ಪ್ಯಾರಾಕ್ಕೂ ಟಿಪ್ಪಣಿ ಅಗತ್ಯವೋ? ಮಿ. ಜೋಶಿ ಮತ್ತು ಅವರ ಸ್ನೇಹಿತರು ಸಲ್ಲಿಸಿದ ಆಕ್ಷೇಪಣೆಗಳ ಒಂದೇ ಟಿಪ್ಪಣಿಯನ್ನು ಸೇರಿಸಲು ಬರುವುದಿಲ್ಲವೋ?

ಅಧ್ಯಕ್ಷ: ಅದು ನಿಮಗೆ ಸರಿ ಕಾಣುತ್ತದೆ ಎನಿಸುತ್ತದೆ. ನಿಮ್ಮ ನಿಲುವನ್ನು ನಾನು ಬಲ್ಲೆ.

ಡಾ. ಅಂಬೇಡ್ಕರ್: ಅದನ್ನು ನಾನು ನಿಮಗೆ ಬಿಟ್ಟುಕೊಡುತ್ತೇನೆ.

ಅಧ್ಯಕ್ಷ: ನಾನು ಹೀಗೆ ಹೇಳಬಹುದಾದರೆ, ಉದಾಹರಣೆಗೆ ಮಹಿಳೆಯರಿಗೆ ಮತಾಧಿಕಾರ ಕೊಡುವುದಕ್ಕೂ ನೀವು ತಕರಾರು ಮಾಡುವಂತೆ ತೋರಿದರೆ ನಿಮ್ಮ ನಿಲುವು ಸರಿಯಾದ ಆಧಾರ ಹೊಂದಿಲ್ಲ ಎಂದು ನನಗೆ ತೋರುತ್ತದೆ.

ಡಾ. ಅಂಬೇಡ್ಕರ್: ಹಾಗೆ ಮಾಡಲು ನಮಗೆ ಉತ್ತಮ ಆಧಾರವಿರುತ್ತದೆ. ಮಾನಸಿಕವಾಗಿ ನಾವು ಅದಕ್ಕೆ ಸಿದ್ಧರಾಗಿರುತ್ತೇವೆ ಮತ್ತು ಆ ಆಧಾರದ ಮೇಲೆ ಯಾವುದೇ ತಕರಾರುಗಳನ್ನು ಎದುರಿಸಬಲ್ಲೆವು. ಮಹಿಳೆಯರ ಬಗ್ಗೆ ಸೈದ್ಧಾಂತಿಕವಾಗಿ ನಮ್ಮಿಂದ ಯಾವುದೇ ತಕರಾರು ಇರುವುದಿಲ್ಲ.

ಮಿ. ಜಾಧವ್: ಗರಿಷ್ಠ ಶೇಕಡ ೨೫ರಷ್ಟು ಭಾಗವು ಮಹಿಳೆಯರಿಗೇ ಹೋಗುತ್ತದೆ. ಆ ತರುವಾಯ ಮತಾಧಿಕಾರದಲ್ಲಿ ಯಾವುದೇ ಇಳಿತದ ಅಗತ್ಯವಿರಲಿಕ್ಕಿಲ್ಲ.

* (ಉಪ ಸಮಿತಿ ನಂ. VI (ಮತಾಧಿಕಾರ)ರ ವ್ಯವಹರಣೆಗಳು, ಪುಟಗಳು ೧೭೫–೭೬.)

## ಅಖಿಲ ಸಮ್ಮೇಳನದ ಸಮಿತಿ

## ಉಪಸಮಿತಿ VI (ಮತಾಧಿಕಾರ) ಸಲ್ಲಿಸಿದ ವರದಿಯ ಸಾರಾಂಶ:

## ೧೬ನೇ ಜನವರಿ ೧೯೩೧

(ಡಾ. ಅಂಬೇಡ್ಕರರ ಪ್ರಸ್ತಾವಗಳಿಗೆ ಸಂಬಂಧಿಸಿದ ಹಲವು ಪ್ಯಾರಾಗಳು) ಉಪಸಮಿತಿಯು ಈ ರೀತಿ ಶಿಫಾರಸು ಮಾಡಿತು.

ಪ್ಯಾರಾ ೪: (೧) ಒಟ್ಟು ಜನಸಂಖ್ಯೆಯ ಶೇಕಡಾ ಹತ್ತರಷ್ಟಕ್ಕಿಂತ ಕಡಿಮೆಯಿಲ್ಲದಂತೆ ಮತ್ತು ಹೆಚ್ಚೆಂದರೆ ಒಟ್ಟು ಜನಸಂಖ್ಯೆಯ ಶೇಕಡಾ ಇಪ್ಪತ್ತೈದಕ್ಕಿಂತ ಹೆಚ್ಚಾಗದಂತೆ ಪೂರ್ಣ ತನಿಖೆಯ ನಂತರ ಅದು ವ್ಯಾವಹಾರಿಕವಾದುದು ಮತ್ತು ಅಪೇಕ್ಷಣೀಯವಾದುದೆಂದು ಕಂಡುಬಂದರೆ ಜನತೆಗೆ ಮತಾಧಿಕಾರವನ್ನು ಕೊಡಲು ಸಾಧ್ಯವಾಗುವಂತೆ ಮತ ಕ್ಷೇತ್ರಗಳನ್ನು ಕೂಡಲೇ ಹೆಚ್ಚಿಸಲು ಉಪಬಂಧಿಸು ವಂತೆ ತಜ್ಞ ಮತಾಧಿಕಾರ ಆಯೋಗವನ್ನು ನೇಮಕ ಮಾಡತಕ್ಕುದು.

(೨) ಈ ಹೆಚ್ಚಳಕ್ಕೆ ಉಪಬಂಧಿಸುವುದರ ಜೊತೆಗೆ ನೇರ ಮತ ನೀಡಲು ಹಕ್ಕಿಲ್ಲದ ವಯಸ್ಕರನ್ನು ಇಪ್ಪತ್ತು ಜನರ ಪ್ರಾಥಮಿಕ ಅಥವಾ ಇತರ ಯುಕ್ತ ರೀತಿಯ ಗುಂಪುಗಳನ್ನಾಗಿ ಮಾಡಿ ಅವರು ತಮ್ಮ ಗುಂಪಿನಲ್ಲಿಯೇ ಒಬ್ಬನನ್ನು ತಮ್ಮ ಮತಕ್ಷೇತ್ರದಲ್ಲಿ ಅಥವಾ ತಮಗಾಗಿ ರೂಪಿಸಲಿರುವ ಮತ ಕ್ಷೇತ್ರದಲ್ಲಿ ಮತ ಚಲಾಯಿಸುವಂತೆ ಮಾಡಲು ನೇಮಿಸುವ ಯೋಜನೆಯನ್ನು ಆಯೋಗವು ಪರ್ಯಾಲೋಚಿಸತಕ್ಕದ್ದು.

(ಮಿ. ಜೋಶಿ, ಮಿ. ಶಿವರಾವ್, ಡಾ. ಅಂಬೇಡ್ಕರ್, ಮಿ. ಶ್ರೀನಿವಾಸನ್ ಮಿ. ಕೆ. ಟಿ. ಪಾಲ್ ಮತ್ತು ಮಿ. ಜಾಧವ್ ಈ ಸೂಚನೆಗಳು ಅತ್ಯಂತ ಅಸಮರ್ಪಕವಾದವುಗಳೆಂದು ಭಾವಿಸುತ್ತಾರೆ ಮತ್ತು ವಯಸ್ಕ ಮತಾಧಿಕಾರವನ್ನು ಕೂಡಲೇ ಜಾರಿಯಲ್ಲಿ ತರುವುದು ವ್ಯಾವಹಾರಿಕವಾದುದೂ ಮತ್ತು ಅಪೇಕ್ಷಣೀಯ ವಾದುದೂ ಎಂದು ಭಾವಿಸುತ್ತಾರೆ.)

ಪ್ಯಾರಾ ೭: ಮತಾಧಿಕಾರ ಆಯೋಗವು ಮತಾಧಿಕಾರ ಕೊಡುವುದಕ್ಕೆ ಯುಕ್ತ ಶೈಕ್ಷಣಿಕ ಅರ್ಹತೆ ಯನ್ನು ಒಂದು ಹೆಚ್ಚಿನ ಅರ್ಹತೆಯಾಗಿ ರೂಪಿಸುವ ಸಾಧ್ಯತೆಯ ಬಗ್ಗೆ ಪರ್ಯಾಲೋಚಿಸತಕ್ಕುದು ಎಂದು ಉಪಸಮಿತಿಯು ಅಭಿಪ್ರಾಯಪಡುತ್ತದೆ.

ಪ್ಯಾರಾ ೮: ಈಗ ಅಸ್ತಿತ್ವದಲ್ಲಿರುವ ಸೈನಿಕ ಸೇವೆಯ ಅರ್ಹತೆಯನ್ನು ಉಳಿಸಿಕೊಳ್ಳತಕ್ಕುದು ಎಂಬ ಬಗ್ಗೆ ಉಪಸಮಿತಿಯು ಒಪ್ಪಿದೆ ಮತ್ತು ಈ ಅರ್ಹತೆಯನ್ನು ಸಹಾಯಕ ಮತ್ತು ಪ್ರಾದೇಶಿಕ ಪಡೆಗಳ ಸೇವೆಗಳಿಗೂ ವಿಸ್ತರಿಸುವುದನ್ನು ಮತಾಧಿಕಾರ ಆಯೋಗವು ಪರ್ಯಾಲೋಚಿಸತಕ್ಕುದೆಂದು ಶಿಫಾರಸು ಮಾಡಿದೆ.

ಪ್ಯಾರಾ ೯: ಮಹಿಳೆಯರಿಗಾಗಿ ವಿಶೇಷ ಅರ್ಹತೆಗಳನ್ನು ಗೊತ್ತುಪಡಿಸಬೇಕೆಂಬುದನ್ನು ಉಪ ಸಮಿತಿಯು ಒಪ್ಪಿದೆ ಮತ್ತು ಶಾಸನಬದ್ಧ ಆಯೋಗ ಮಾಡಿದ ಶಿಫಾರಸುಗಳನ್ನು ಮತ್ತು ಶಾಸನಬದ್ಧ

ಆಯೋಗವು ತನ್ನ ಪ್ರಸ್ತಾವಗಳಲ್ಲಿ ಮಾಡಿದ ವಯೋಮಿತಿಯನ್ನು ೨೫ರಿಂದ ೨೧ಕ್ಕೆ ಇಳಿಸಬೇಕೆಂದು ಉಪಸಮಿತಿಯು ಮಾಡಿದ ಸೂಚನೆಯನ್ನೂ ಒಳಗೊಂಡಂತೆ ಲಭ್ಯವಿದ್ದ ಎಲ್ಲ ಸಾಕ್ಷ್ಯವನ್ನು ಗಮನ ದಲ್ಲಿಟ್ಟುಕೊಂಡು ಮತಾಧಿಕಾರ ಸಮಿತಿಯು ಈ ಪ್ರಶ್ನೆಗೆ ವಿಶೇಷ ಲಕ್ಷ್ಯ ವಹಿಸತಕ್ಕದು ಎಂದು ಶಿಫಾರಸು ಮಾಡಿತು.

(ಮಿ. ಜೋಶಿ, ಮಿ. ಶಿವರಾವ್, ಡಾ. ಅಂಬೇಡ್ಕರ್ ಮತ್ತು ಮಿ. ಶ್ರೀನಿವಾಸನ್ ಇವರು ೭, ೮ ಮತ್ತು ೯ನೇ ಪ್ಯಾರಾಗಳಲ್ಲಿನ ಪ್ರಸ್ತಾವಗಳಿಗೆ ಸಮ್ಮತಿಸಲಿಲ್ಲ.)

೧೩. ಮತಾಧಿಕಾರವನ್ನು ಯಾಂತ್ರಿಕವಾಗಿ ವಿಸ್ತರಿಸುವುದು ಅನಪೇಕ್ಷಣೀಯ ಎಂದು ಉಪ ಸಮಿತಿ ಭಾವಿಸಿದೆ. ಅದನ್ನು ಹೊಸ ಸಂವಿಧನವು ಜಾರಿಗೆ ಬಂದ ೧೦ ವರ್ಷಗಳ ನಂತರ ಪ್ರಾಂತೀಯ ಶಾಸಕಾಂಗವು ತನ್ನ ವಿವೇಚನೆಯಂತೆ ವಿಸ್ತರಿಸಲು ಪ್ರಾಂತೀಯ ಶಾಸಕಾಂಗಕ್ಕೆ ಬಿಟ್ಟುಕೊಡಲು ಇಚ್ಛಿಸಿದೆ.

(ಮಿ. ಜೋಶಿ, ಮಿ. ಶಿವರಾವ್, ಡಾ. ಅಂಬೇಡ್ಕರ್ ಮತ್ತು ಮಿ. ಶ್ರೀನಿವಾಸನ್‌ರವರು ಮತಾಧಿಕಾರವನ್ನು ಯಾಂತ್ರಿಕವಾಗಿ ಎಂದರೆ ತಂತಾನೇ ವಿಸ್ತರಿಸುವಂತೆ ಅವಕಾಶ ಮಾಡಬೇಕೆಂಬುದರ ಬಗ್ಗೆ ತಮ್ಮ ಒಲವು ತೋರಿದರು.)

[ಈ ಚರ್ಚೆಯಲ್ಲಿ ಡಾ. ಅಂಬೇಡ್ಕರರ ಯಾವ ಟೀಕೆಗಳೂ ಇಲ್ಲ. ಉಪಸಮಿತಿ ನಂ.೧ (ಮತಾಧಿಕಾರ)ರ ವರದಿಯ ಮೇಲೆ ಇಡಿಯ ಸಮ್ಮೇಳನದ (೧೬ನೇ ಜನವರಿ ೧೯೩೧) ಸಮಿತಿಯಲ್ಲಿ ಮಿ. ಎಮ್. ಎನ್. ಜೋಶಿಯವರು ಮಾಡಿದ ಟೀಕೆ.]

ಮಿ. ಜೋಶಿ: ೯ನೆಯ ಪ್ಯಾರಾದ ಬಗ್ಗೆ ನಾನು ಒಂದು ಅಂಶವನ್ನು ಸ್ಪಷ್ಟಪಡಿಸಬಯಸುತ್ತೇನೆ. ೭, ೮ ಮತ್ತು ೯ನೇ ಪ್ಯಾರಾಗಳಲ್ಲಿನ ಪ್ರಸ್ತಾವಗಳ ಬಗ್ಗೆ ನಾನು, ಮಿ. ಶಿವರಾವ್, ಡಾ. ಅಂಬೇಡ್ಕರ್ ಮತ್ತು ಮಿ. ಶ್ರೀನಿವಾಸನ್ ಇವರು ಅಸಮ್ಮತಿಸಿರುತ್ತಾರೆ ಎಂದು ಹೇಳಲಾಗಿದೆ. ಮಹಿಳೆಯರಿಗೆ ಯಾವುದೇ ಪ್ರಕಾರದ ಅರ್ಹತೆಯನ್ನು ರೂಪಿಸುವುದಕ್ಕೆ ಮಾಡುವ ಅವರ ಕ್ಲೇಮಿಗೆ ನಾವು ವಿರೋಧಿಗಳಲ್ಲ ಎಂಬುದನ್ನು ಟಿಪ್ಪಣಿ ಮಾಡುವುದು ನಮಗೆ ಬೇಕಾಗಿದೆ. ದುರ್ದೈವದಿಂದ ನಾವು ಸಮಿತಿಯಲ್ಲಿ ತೆಗೆದುಕೊಂಡ ನಿಲುವನ್ನೇ ಇಲ್ಲಿ ಅನುಸರಿಸಬೇಕಾಗಿದೆ. ಸಮಿತಿಯು ಒಟ್ಟು ಮತದಾರರ ಸಂಖ್ಯೆಗೆ ಒಂದು ನಿಶ್ಚಿತ ಮಿತಿಯನ್ನು ಗೊತ್ತುಪಡಿಸಿದ ಸಂಗತಿಯ ಕಾರಣದಿಂದಾಗಿ ಮತ್ತು ಈ ಸಂದರ್ಭಗಳಲ್ಲಿ ಮತಾಧಿಕಾರವನ್ನು ಪಡೆಯ ದವರ ಹಿತಾಸಕ್ತಿಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ. ಏಕೆಂದರೆ ಮತಾಧಿಕಾರ ಇಲ್ಲದವರಿಗೆ ಮತಾಧಿಕಾರವನ್ನು ಕೊಡುವ ಮಿತಿಯು ಹೆಚ್ಚುತ್ತದೆ. ನಾವು ಈಗ ಇರುವ ವಿಶಿಷ್ಟ ಮತ್ತು ಕಷ್ಟದ ಸ್ಥಿತಿಯಲ್ಲಿ ಯಾರಿಗೆ ಈಗಾಗಲೇ ಮತಾಧಿಕಾರವನ್ನು ಕೊಡಲಾಗಿದೆಯೋ ಅವರ ಪತ್ನಿಯರಿಗೆ ಮತಾಧಿಕಾರವನ್ನು ಕೊಡತಕ್ಕದಲ್ಲವೆಂಬ ಮತ್ತು ಹಾಗೆ ಮಾಡಿ ಮತಾಧಿಕಾರವಿಲ್ಲದವರಿಗೆ ಇರುವ ಹಕ್ಕಿನಿಂದ ಅವರನ್ನು ವಂಚಿತಗೊಳಿಸತಕ್ಕದಲ್ಲವೆಂಬ ಮನೋಭಾವವನ್ನು ಹೊಂದಿರಬೇಕಾಗಿದೆ. ಲಿಂಗ ಆಧಾರಿತ ಅನರ್ಹತೆಯನ್ನು ತೆಗೆದುಹಾಕುವುದಕ್ಕೆ ನಾವು ವಿರೋಧಿಗಳಲ್ಲ.

ಅಧ್ಯಕ್ಷ: ೯ನೇ ಪ್ಯಾರಾ ಟಿಪ್ಪಣಿ ಮಾಡಲಾಯಿತು.

# ಅಖಿಲ ಸಮ್ಮೇಳನದ ಸಮಿತಿ
## ಉಪಸಮಿತಿ ನಂ.II (ರಕ್ಷಣೆ)ರ ವರದಿಯ ಮೇಲಿನ ಟೀಕೆಗಳು
## ೧೬ನೇ ಜನವರಿ ೧೯೩೧

* ಡಾ. ಅಂಬೇಡ್ಕರ್: ವರದಿಯ ೪ನೇ ಪ್ಯಾರಾದ ೨ನೇ ವಾಕ್ಯಾವಳಿಗೆ ಒಂದು ತಿದ್ದುಪಡಿಯನ್ನು ಸೂಚಿಸಬೇಕೆಂದು ಮಾಡಿದ್ದೇನೆ. ಅದೆಂದರೆ ನಿಮ್ಮ ವರ್ಗದವರನ್ನೊಳಗೊಂಡಂತೆ ರಾಜ್ಯದ ಎಲ್ಲ ಪ್ರಜೆಗಳಿಗೂ, ದಕ್ಷತೆ ಮತ್ತು ಅವಶ್ಯಕ ಅರ್ಹತೆ ಭಾರತೀಯ ಸೇನೆಯಲ್ಲಿನ ನೇಮಕಾತಿಗೆ ಮುಕ್ತ ಅವಕಾಶವಿರಬೇಕು. ಇದರ ಬಗ್ಗೆ ಸೂಕ್ತ ಕ್ರಮವನ್ನು ತಕ್ಷಣವೇ ತೆಗೆದುಕೊಳ್ಳಬೇಕು. ಈ ವಿಷಯವನ್ನು ಕೇವಲ ಅಭಿಲೇಖಿಸಬೇಕೆಂದು ಮಾತ್ರವೇ ನಾನು ಇಚ್ಛೆಪಡುವುದಿಲ್ಲ. ಅದು ಮೂಲಭೂತ ತಿದ್ದುಪಡಿಯಾಗುವಂತೆ ಮುಂದಿಡಲು ನಾನು ಇಚ್ಛಿಸುತ್ತೇನೆ. ಏಕೆಂದರೆ ಆ ಬಗ್ಗೆ ಸದನದ ಅನಿಸಿಕೆಯನ್ನು ಅರಿತುಕೊಳ್ಳಬಹುದು. ನನ್ನ ತಿದ್ದುಪಡಿಯು ತುಂಬಾ ಸರಳವಾದುದಾಗಿದೆ. ಸೈನಿಕ ಸೇವೆಗಳಲ್ಲಿ ಸೇರಲು ರಾಜ್ಯದ ಪ್ರಜೆಗಳ ಬೇರೆ ಬೇರೆ ವರ್ಗಗಳ ನಡುವೆ ಇರುವ ಎಲ್ಲ ತಾರತಮ್ಯವನ್ನು ತೆಗೆದು ಹಾಕುವುದು ಅದರ ಉದ್ದೇಶವಾಗಿದೆ. ಈ ತಿದ್ದುಪಡಿಯನ್ನು ನಾನು ಮುಖ್ಯವಾಗಿ ನಿಮ್ಮ ವರ್ಗದವರ ವಿಶಿಷ್ಟ ಹಕ್ಕುಗಳನ್ನು ರಕ್ಷಿಸುವ ಮೂಲ ಉದ್ದೇಶದಿಂದ ಮಾಡಿರುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ.

ಆದರೆ ಹಾಗೆ ಮಾಡುವಲ್ಲಿ ಸಮಿತಿಯನ್ನು ನಾನು ಯಾವುದೇ ಅನುಗ್ರಹ ಮಾಡಿ ಎಂದು ಕೇಳುತ್ತಿಲ್ಲ. ರಾಜ್ಯದ ಯಾವನೇ ಪ್ರಜೆಯನ್ನು ಆತನ ಜಾತಿ, ವಂಶ ಅಥವಾ ಬಣ್ಣದ ಆಧಾರದ ಮೇಲೆ ಸಾರ್ವಜನಿಕ ಸೇವೆಗಳಲ್ಲಿ ಸೇರಲು ಪ್ರತಿಬಂಧಿಸತಕ್ಕದ್ದಲ್ಲ ಎಂದು ಗವರ್ನಮೆಂಟ್ ಆಫ್ ಇಂಡಿಯಾ ಅಧಿನಿಯಮವು ಗುರುತಿಸಿದ ತತ್ವವನ್ನು ಆಚರಣೆಯಲ್ಲಿ ತಂದಿರುವುದನ್ನು ನಾವು ಕಾಣುವಂತೆ ಮಾಡಬೇಕು ಎಂದು ನಾನು ಸಮಿತಿಯನ್ನು ಕೇಳಿಕೊಳ್ಳುತ್ತೇನೆ. ಅದರಿಂದಾಗಿ ಹಾಗೆ ಮಾಡುವಲ್ಲಿ ನಾನು ಯಾವುದೇ ಅನುಗ್ರಹಕ್ಕಾಗಿ ಕೇಳಿಕೊಳ್ಳುತ್ತಿದ್ದೇನೆ ಎಂದು ಭಾವಿಸುವುದಿಲ್ಲ.

ನಾನು ನಿಮಗೆ ಸ್ಪಷ್ಟಪಡಿಸುವ ಅಂಶವೆಂದರೆ ಈ ತಿದ್ದುಪಡಿಯ ಸೇವೆಗಳ ಸಮಿತಿಯು ಅಳವಡಿಸಿಕೊಂಡ ರೀತಿಯನ್ನೇ ಆಧರಿಸಿರುತ್ತದೆ. ಮಾನ್ಯರೇ, ನೀವು ಈ ಸಮಿತಿಯು ನೇಮಿಸಿದ ಸೇವೆಗಳ ಸಮಿತಿಯ ವರದಿಯನ್ನು ಗಮನಿಸಿದರೆ ಆ ಸಮಿತಿಯು ದೇಶದ ಲೋಕ ಸೇವೆಗಳಲ್ಲಿ ರಾಜ್ಯದ ಎಲ್ಲ ಪ್ರಜೆಗಳಿಗೂ ನ್ಯಾಯವಾದ ಮತ್ತು ಸಾಕಷ್ಟು ಅವಕಾಶ ದೊರಕುವಂತೆ ಎಲ್ಲ ಪ್ರಯತ್ನಗಳನ್ನು ಮಾಡಿದ್ದು ನಿಮಗೆ ಕಂಡುಬರುತ್ತದೆ. ರಾಷ್ಟ್ರದ ಯಾವ ಪ್ರಜೆಯೂ ಲೋಕಸೇವೆಗಳಿಗೆ ಸೇರಲು ನಿಷೇಧಿತನಾಗದಂತೆ ರಕ್ಷಿಸಿ ಅವರು ಹಲವು ಮೂಲಭೂತ ಹಕ್ಕುಗಳನ್ನು ನಿರೂಪಿಸಿದರಲ್ಲದೆ, ಅವರು ಆಂಗ್ಲೋ ಇಂಡಿಯನ್

---

*ಆರ್ ಟಿ ಸಿ (ಪ್ರಥಮ ಅಧಿವೇಶನ)ದ ವ್ಯವಹರಣೆಗಳು, ಪುಟಗಳು ೩೭೯–೮೦.

ಮತ್ತು ನಿಮ್ನ ವರ್ಗಗಳಂಥ ವಿಶಿಷ್ಟ ಕೋಮುಗಳನ್ನು ಹೆಸರಿಸುವಲ್ಲಿ ತಮ್ಮ ಕಾರ್ಯವ್ಯಾಪ್ತಿಯನ್ನು ಮೀರಿದ್ದಾರೆ.

ಮಾನ್ಯರೆ, ಈ ತಿದ್ದುಪಡಿಯು ಕೇವಲ ನಿಮ್ನ ವರ್ಗದವರಿಗಾಗಿ ಮಾತ್ರವೇ ಇಲ್ಲ. ಇದು ಎಲ್ಲ ಕೋಮುಗಳ ಮತ್ತು ರಾಜ್ಯದ ಎಲ್ಲ ಪ್ರಜೆಗಳ ಹಿತಾಸಕ್ತಿಗಾಗಿಯೇ ಇರುತ್ತದೆ. ಮಾನ್ಯರೆ ಭಾರತ ದಲ್ಲಿನ ಯಾವುದೇ ಒಂದು ಕೋಮು ದೇಶದಲ್ಲಿನ ಯಾವುದೇ ಒಂದು ಸೇವೆಯಲ್ಲಿ ಏಕ ಸ್ವಾಮ್ಯವನ್ನು ಪಡೆದುಕೊಳ್ಳುವುದು ಅತಿ ದೊಡ್ಡ ಸಾರ್ವಜನಿಕ ಅಪಾಯವೆಂದು ಏಕೆ ಹೇಳುತ್ತೇನೆ ಎಂದರೆ ಇದು ಅನುಕೂಲಕರ ಸ್ಥಾನದಲ್ಲಿ ಇರಿಸಲಾದ ಆಯಾ ಕೋಮಿನಲ್ಲಿ ತಾನು ಶ್ರೇಷ್ಠ ಎನ್ನುವ ಭಾವನೆಯನ್ನು ಕೆರಳಿಸುತ್ತದೆಯಲ್ಲದೆ, ಅದು ಜನತೆಯ ಕಲ್ಯಾಣಕ್ಕೂ ಅಡ್ಡಿಯುಂಟುಮಾಡುತ್ತದೆ. ಏಕೆಂದರೆ, ಅದು ಹಲವು ವಿಶಿಷ್ಟ ಕೋಮುಗಳು ತಮಗೆ ಕೊಡುವ ರಕ್ಷಣೆಯನ್ನು ಅವರು ಆಧರಿಸಿರುವಂತೆ ಮಾಡುತ್ತದೆ. ಕಾರಣ ನಾವೀಗ ಭಾರತಕ್ಕೆ ಹೊಸ ಸಂವಿಧಾನವನ್ನು ರೂಪಿಸುತ್ತಿರುವುದರಿಂದ, ರಾಜ್ಯದ ಎಲ್ಲ ಸಮು ದಾಯದ ಪ್ರತಿ ಸದಸ್ಯನೂ ದೇಶದ ಲೋಕಸೇವೆಯಲ್ಲಿ ತನ್ನ ಸಕ್ಷಮತೆ ಕಾರಣದಿಂದಾಗಿ ತನಗೆ ಸಾಧ್ಯವಿದ್ದ ಮಟ್ಟಿಗೆ ಭಾಗವಹಿಸಲು ಎಡೆಕೊಡುವಂಥ ಪದ್ಧತಿಯಿಂದ ಪ್ರಾರಂಭಿಸಬೇಕು ಎಂದು ನಾನು ವಿನಯ ಪೂರ್ವಕ ಹೇಳುತ್ತೇನೆ. ಮಾನ್ಯರೆ, ನಾನು ಹಾಗೆ ಹೇಳಬಹುದಾದರೆ, ನಾನು ಸೂಚಿಸುತ್ತಿರುವ ತಿದ್ದು ಪಡಿಯು ಈ ಪ್ಯಾರಾದಲ್ಲಿಯೇ ಹೇಳಲಾಗಿರುವ ತತ್ವದ ತರ್ಕಬದ್ಧ ಪರಿಣಾಮವೇ ಆಗಿದೆ. ಏಕೆಂದರೆ ೪ನೇ ವಾಕ್ಯಾವಳಿಯ ೧ನೇ ಉಪ ವಾಕ್ಯಾವಳಿಯನ್ನು ನೀವು ಗಮನಿಸಿದರೆ ನಿಮಗೆ ಅದು ಕಂಡು ಬರುತ್ತದೆ.

"ಉಪಸಮಿತಿಯು ಭಾರತದಲ್ಲಿ ಹೊಸ ರಾಜಕೀಯ ರೂಪರೇಷೆಯ ಸರಕಾರದೊಂದಿಗೆ, ಭಾರತದ ರಕ್ಷಣೆಯೂ ಸಹ ಹೆಚ್ಚಿನ ಪ್ರಮಾಣದಲ್ಲಿ ಭಾರತದ ಜನತೆಗೆ ಸಂಬಂಧಪಟ್ಟದ್ದೇ ಆಗಿರತಕ್ಕುದೇ ಹೊರತು ಬ್ರಿಟಿಶ್ ಸರಕಾರದ್ದಲ್ಲ."

ಈಗ ಮಾನ್ಯರೆ, ಆ ವಾಕ್ಯಕ್ಕೆ ಯಾವುದೇ ಅರ್ಥವಿದ್ದರೆ, ಅಂದರೆ ಭಾರತದ ರಕ್ಷಣೆಯು ಹೆಚ್ಚಿನ ಪ್ರಮಾಣದಲ್ಲಿ ಭಾರತದ ಜನತೆಗೆ ಸಂಬಂಧಪಟ್ಟದ್ದೇ ಆಗಿರತಕ್ಕುದು ಎನ್ನುವುದಾದರೆ ಅದು ಭಾರತಕ್ಕೆ ಜನತೆಗೆ ಸಂಬಂಧಪಟ್ಟ ವಿಷಯವೇ ಹೊರತು ಅದು ಯಾವುದೇ ಒಂದು ಕೋಮಿಗೆ ಸಂಬಂಧಪಟ್ಟ ವಿಷಯವಲ್ಲ. ಆದಕಾರಣ ಈ ಸಭೆಯು ನಾನು ಸೂಚಿಸುವ ತಿದ್ದುಪಡಿಯನ್ನು ಒಪ್ಪಲೇಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ. ಮುಂಜೇ: ಸೇವೆಗಳನ್ನು ಭಾರತದ ಎಲ್ಲ ಕೋಮುಗಳಿಗೂ ಮುಕ್ತವಿಡತಕ್ಕುದು ಎಂಬ ಡಾ. ಅಂಬೇಡ್ಕರ್ ಅವರ ಪ್ರಸ್ತಾವಕ್ಕೆ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಪರಂತು ದಕ್ಷತೆಯ ಮಟ್ಟವನ್ನು ಉಳಿಸಿಕೊಂಡು ಬರಬೇಕು.

ಡಾ. ಅಂಬೇಡ್ಕರ್: ಅದೇ ನನ್ನ ತಿದ್ದುಪಡಿ ಆಗಿರುತ್ತದೆ. ಅದು ದಕ್ಷತೆಗೆ ಸಂಗತವಾಗಿರತಕ್ಕುದು ಎಂದು ನಾನು ಹೇಳುತ್ತೇನೆ.

ಸರ್. ತೇಜ ಬಹಾದ್ದೂರ ಸಪ್ರು: ಡಾ. ಅಂಬೇಡ್ಕರರು ಹೇಳಿದ್ದಕ್ಕೆ ನಾನು ಸಹಮತಿಸುತ್ತೇನೆ.

ಮಿ. ಬಾಸು: ಅಧ್ಯಕ್ಷರೇ, ನಾನು ಒಂದು ಕ್ರಿಯಾಲೋಪವೆತ್ತುತ್ತೇನೆ. ಈ ತಿದ್ದುಪಡಿಯು ಸೇವೆಗಳ ಸಮಿತಿಯ ಒಂದು ಭಾಗವನ್ನು ವ್ಯಾಪಿಸುತ್ತದೆ. ಅಂದರೆ, ಯಾವುದೇ ಸಮಿತಿಯ ಸದಸ್ಯತ್ವದ ಬಗ್ಗೆ ೫ (೪)

ವಾಕ್ಯಾವಳಿಯಲ್ಲಿ ಹೇಳಿದಂತೆ ಜಾತಿ, ವಂಶ, ಜನಾಂಗಗಳು ಯಾವುದೇ ಲೋಕಸೇವೆಗಳಲ್ಲಿ ಬಡ್ತಿಗಾಗಿ ಅಥವಾ ರದ್ದತಿಗಾಗಿ ಆಧಾರವಾಗಿರತಕ್ಕುದಲ್ಲ ಎಂದು ಅದು ಹೇಳುತ್ತದೆ.

ಡಾ. ಅಂಬೇಡ್ಕರ್: ನಮ್ಮ ಪರ್ಯಾಲೋಚನೆಯಲ್ಲಿ ಸೇನೆಯನ್ನು ಸೇರಿಸಿಲ್ಲ.

ಮಿ. ಥಾಮಸ್: ಅಧ್ಯಕ್ಷರೇ, ಈ ತಿದ್ದುಪಡಿಯ ಅವಶ್ಯಕತೆ ಇದೆ ಎಂದು ನನಗೆ ಅನ್ನಿಸುವುದಿಲ್ಲ. ಈ ಪ್ಯಾರಾವನ್ನು ಉದ್ದೇಶಪೂರ್ವಕವಾಗಿಯೇ ಸೇರಿಸಲಾಗಿದೆ. "ಭಾರತದಲ್ಲಿ ಹೊಸ ರಾಜಕೀಯ ರೂಪ ರೇಷೆಯ ಬೆಳವಣಿಗೆಯೊಂದಿಗೆ, ಭಾರತದ ರಕ್ಷಣೆಯೂ ಸಹ ಹೆಚ್ಚಿನ ಪ್ರಮಾಣದಲ್ಲಿ ಭಾರತದ ಜನತೆಗೆ ಸಂಬಂಧಪಟ್ಟ ವಿಷಯವೇ ಆಗಿರತಕ್ಕುದು ಮತ್ತು ಅದು ಕೇವಲ ಬ್ರಿಟಿಶ್ ಸರಕಾರಕ್ಕೆ ಸಂಬಂಧಪಟ್ಟ ವಿಷಯವಾಗಿರತಕ್ಕುದಲ್ಲ ಎಂದು ಉಪಸಮಿತಿಯು ಆಲೋಚಿಸುತ್ತದೆ." ಭಾರತದಲ್ಲಿನ ಯಾವುದೇ ಒಂದು ವರ್ಗದ ವಿಶೇಷ ಕರ್ತವ್ಯವಾಗಿರತಕ್ಕುದು ಎಂದು ಅದು ಹೇಳುವುದಿಲ್ಲ. ಅದನ್ನು ಒಳಗೊಳ್ಳುವಂತೆಯೇ ಉದ್ದೇಶಪೂರ್ವಕವಾಗಿಯೇ ಅದನ್ನು ರೂಪಿಸಲಾಗಿದೆ ಮತ್ತು "ಭಾರತೀಯಗೊಳಿಸುವಿಕೆ" ಎಂಬ ಪದವು ಅನ್ವಯಿಸುತ್ತದೆ.

ಡಾ. ಅಂಬೇಡ್ಕರ್: ಹೌದು, ಆದರೆ ಲೋಕಸೇವೆಗೆ ಸೇರಲು ಎಲ್ಲ ಕೋಮುಗಳ ಪುರುಷರಿಗೆ ಅವಕಾಶವಿಲ್ಲದ ರೀತಿಯಲ್ಲಿ ಭಾರತೀಕರಿಸುವಿಕೆಯು ನಡೆಯಬಹುದು ಎಂಬ ಅರ್ಥದಲ್ಲಿ ನಾನು ಹೇಳಿದೆ. "ಭಾರತೀಕರಿಸುವಿಕೆ ಎಂದರೆ ಹಲವು ಕೋಮುಗಳ ಏಕಸ್ವಾಮಿತ್ವ ಎಂದೇ ಅರ್ಥವಾಗ ಬಹುದು."

ಅಧ್ಯಕ್ಷ: ಪರಿಸ್ಥಿತಿ ಹಾಗಿದೆ; ಅದನ್ನು ಟಿಪ್ಪಣಿ ಮಾಡಲಾಗುವುದು.

# ಉಪಸಮಿತಿ ನಂ.VIII (ಸೇವೆಗಳು)
# ಎರಡನೆಯ ಸಭೆ
# ೭ನೇ ಜನವರಿ ೧೯೩೧

* ಡಾ. ಅಂಬೇಡ್ಕರ್: ಉಪಸಮಿತಿಯು ವಿಚಾರ ಮಾಡಲೇಬೇಕಾದ ಅವಶ್ಯಕತೆ ಇದ್ದ ಒಂದು ವಿಷಯ ಇದೆ ಎಂದು ನನಗೆ ಅನ್ನಿಸುತ್ತದೆ. ಅದೇನೆಂದರೆ ಭಾವೀ ಸಿವಿಲ್ ಸೇವೆಗಳಲ್ಲಿ ಸಂಬಳ, ಪಿಂಚಣಿ ಮತ್ತು ಇತರ ವಿಶೇಷ ಸವಲತ್ತುಗಳಿಗೆ ಸಂಬಂಧಿಸಿದಂತೆ ಯುರೋಪಿಯನ್ನರ ವಿರುದ್ಧ ಭಾರತೀಯರಿಗೆ, ಭಾರತೀಯಗೊಳಿಸುವಿಕೆಯ ಪ್ರಕ್ರಿಯೆಯಲ್ಲಿ ಯಾವುದೇ ಭಿನ್ನತೆ ಇರಬಾರದು ಎಂಬುದು ಇರುತ್ತದೆ. ಈ ಉಪಸಮಿತಿಯು ವಿಚಾರಿಸಬೇಕಾದುದು ಇದೇ ಅಂಶವಾಗಿದೆ ಎಂದು ನಾನು ಭಾವಿಸುತ್ತೇನೆ. ಆದಕಾರಣ ನಾನು ಈ ಪ್ಯಾರಾಕ್ಕೆ "ಸಂಬಳ, ಪಿಂಚಣಿ ಮತ್ತು ಇತರ ವಿಶೇಷ ಸವಲತ್ತುಗಳಿಗೆ ಸಂಬಂಧಿಸಿ ದಂತೆ ಭಾರತೀಯ ಅಂಶವು ಯುರೋಪಿಯನ್ ಅಂಶಕ್ಕೆ ಸರಿಸಮವಾಗಿರಬೇಕು" ಎಂಬುದಾಗಿ ಸೇರಿಸ ಬಯಸುತ್ತೇನೆ.

ಅಧ್ಯಕ್ಷ: ನಾವು ಅದನ್ನು ಲಕ್ಷ್ಯದಲ್ಲಿಟ್ಟುಕೊಳ್ಳುತ್ತೇವೆ. ನಂತರ "(೪) ಹೊಸ ಸಂವಿಧಾನದ ಮೇರೆಗೆ ಅಖಿಲ ಭಾರತ ಸೇವೆಗಳಿಗೆ ಭರ್ತಿ ಮಾಡಲು ಇರುವ ಪ್ರಾಧಿಕಾರವನ್ನು ಯಾರು ನೇಮಕಮಾಡ ತಕ್ಕುದು?"

ಸರ್. ಚಿಮನಲಾಲ್ ಸೆಟಲವಾಡ: ಯಾರು ಭರ್ತಿಮಾಡತಕ್ಕುದು ಮತ್ತು ಯಾರು ನಿಯಂತ್ರಿಸ ತಕ್ಕುದು ಎಂಬ ನಿಯಂತ್ರಣದ ಪ್ರಶ್ನೆಯನ್ನು ಅಲ್ಲಿ ನೀವು ಸೇರಿಸಬೇಕಾಗುತ್ತದೆ.

ನಂತರ "(೫) ಭಾರತೀಯ ವೈದ್ಯಕೀಯ ಸೇವೆಯ ಸಿವಿಲ್ ವಿಭಾಗಕ್ಕೆ ಸಂಬಂಧಿಸಿದಂತೆ ಶಿಫಾರಸುಗಳು." ಅದು ವಿಸ್ತಾರವಾದುದು, ಆ ಬಗ್ಗೆ ನಾವು ನಮಗೆ ತೋಚಿದ ಶಿಫಾರಸುಗಳನ್ನು ಮಾಡಬಹುದಾಗಿದೆ.

ನಂತರ "(೬) ಭಾವೀ ನೌಕರಿಗಳಿಗೆ ಸರಿಯಾದ ಉಮೇದುದಾರರನ್ನು ಆಕರ್ಷಿಸಲು ಮತ್ತು ಉಳಿಸಿಕೊಳ್ಳಲು ಯಾವ ಷರತ್ತುಗಳು ಅಗತ್ಯವಾಗಿದೆ ಎನ್ನುವ ಪ್ರಶ್ನೆಯನ್ನು ಒಂದು ತಾಂತ್ರಿಕ ಸಮಿತಿಗೆ ಅಥವಾ ಸಮಿತಿಗಳಿಗೆ ಉಲ್ಲೇಖಿಸಬೇಕೋ ಎಂಬುದನ್ನು ಶಿಫಾರಸು ಮಾಡುವುದರ ಅಪೇಕ್ಷಣೀಯತೆ." ಇಂಥ ಹಲವಾರು ಅಂಶಗಳಿರುವುದು ನನಗೆ ಹೊಳೆದಿದೆ. ಉದಾಹರಣೆಗೆ ಹೇಳಬೇಕೆಂದರೆ, ಸಂಬಳದ

---

* ಉಪಸಮಿತಿ ನಂ. III (ಸೇವೆಗಳು)ರ ವ್ಯವಹರಣೆಗಳು
ಭಾರತ ಸರಕಾರ, ಸೆಂಟ್ರಲ್ ಪಬ್ಲಿಕೇಶನ್, ಬ್ರ್ಯಾಂಚ್, ಕಲ್ಕತ್ತಾ ೧೯೩೧, ಪು. ೪೪–೪೬
(ಈ ಸಮಿತಿಗೆ ಸೂಚಿಸಲಾದ ಪರಿಶೀಲನಾಂಶಗಳು ಈ ಕೆಳಗಿನಂತೆ ಇರುತ್ತವೆ."ಹೊಸ ರಾಜಕೀಯ ಸ್ವರೂಪಕ್ಕೆ ಸೇವೆಗಳ ಸಂಬಂಧ" ಅದು ಅಖಿಲ ಭಾರತ ಸೇವೆಗಳಿಗೆ ಬ್ರಿಟೀಶರ ಭಾರತೀಯ ಪ್ರಮಾಣವನ್ನು ಒಳಗೊಳ್ಳುತ್ತದೆ ಎಂದು ಅರ್ಥ.)

ದರ, ಆ ಬಗ್ಗೆ ನಾವು ಪರ್ಯಾಲೋಚಿಸಬೇಕಾಗಿದೆ. ಯೋಗ್ಯ ವ್ಯಕ್ತಿಗಳು ನಿಮಗೆ ಸಿಗದಿರುವಾಗ ಯೋಗ್ಯ ಸಂಬಳ ಕೊಡದಿರುವುದು ಕೆಟ್ಟ ರೀತಿಯ ಮಿತವ್ಯಯ ಎನಿಸುವುದು ಸ್ಪಷ್ಟ.

ನಿಯಂತ್ರಣಕ್ಕೆ ಸಂಬಂಧಿಸಿದ ಪ್ರಶ್ನೆಯ ಬಗ್ಗೆ ಮಾಡಲಾಗಿರುವ ಅಂಶವು ಅತ್ಯುಚ್ಚ ಮಟ್ಟದ ತಾಂತ್ರಿಕ ವಿಷಯವನ್ನೊಳಗೊಂಡಿರುವಂತೆ ಕಂಡುಬರುತ್ತದೆ. ಇಲ್ಲಿ ಅಭಿಪ್ರಾಯ ಅವಶ್ಯ– ಕಾರಣ ಈ ಸಮಿತಿಯು ಆ ಬಗ್ಗೆ ತನ್ನ ಕೊನೆಯ ಅಭಿಪ್ರಾಯವನ್ನು ಹೇಳಬಲ್ಲುದೋ ಎಂಬ ಬಗ್ಗೆ ನನಗೆ ಸಂಶಯ ಬರುತ್ತಿದೆ. ನಾನು ತಜ್ಞನಲ್ಲವೆಂಬುದು ನನಗೆ ಗೊತ್ತಿದೆ. ಆದಕಾರಣ ನಾನು ೬ನೇ ಬಾಬನ್ನು ಉದ್ದೇಶಪೂರ್ವಕವಾಗಿ ರೂಪಿಸಿದ್ದೇನೆ. ಏಕೆಂದರೆ ಈ ಪ್ರಶ್ನೆಯನ್ನು ನಿರ್ಧರಿಸಲು ಆಯೋಗ ಒಂದನ್ನು ರಚಿಸಬೇಕೆಂದು ಹೇಳಬೇಕೋ, ಬೇಡವೋ ಎಂಬುದನ್ನು ವಿಚಾರಿಸಬಹುದು. ನಿಮ್ಮಲ್ಲಿ ಯಾರಾದರೂ ಯೋಗ್ಯ ಜನರನ್ನು ಆಕರ್ಷಿಸಲು ಸಂಬಳದ ದರ ಎಷ್ಟಿರುವುದು ಅವಶ್ಯ ಎಂದು ಹೇಳಬಲ್ಲಿರಾ? ನಾನಂತೂ ಹೇಳಲಾರೆ ಅಥವಾ ಈ ವಿಷಯಕ್ಕೆ ಸಂಬಂಧಪಟ್ಟಂತೆ ಖಚಿತ ನಿಯಮಾವಳಿಗಳನ್ನು ರೂಪಿಸಲು ಯಾರಾದರು ಸಿದ್ಧರಿರುವಿರಾ?

ಸರ್ ಚಿಮನಲಾಲ್ ಸೆಟಲವಾಡ: ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಸ್ಪಷ್ಟ ಸಿದ್ಧಾಂತವನ್ನು ನಾವು ಇಲ್ಲಿ ಚರ್ಚಿಸಬಹುದು. ಉದಾ: ಈಗಿರುವಂತೆ ಅದು ಸೆಕ್ರೆಟರಿ ಆಫ್ ಸ್ಟೇಟ್ ಅವರಲ್ಲಿ ನಿಹಿತವಾಗಿರಬೇಕೋ ಅಥವಾ ಭಾರತ ಸರಕಾರದಲ್ಲಿ ನಿಹಿತವಾಗಿರಬೇಕೋ?

ಡಾ. ಅಂಬೇಡ್ಕರ್: ಯುರೋಪಿಯನ್ನರ ಮತ್ತು ಭಾರತೀಯರ ನಡುವೆ ಸಂಬಳಕ್ಕೆ ಸಂಬಂಧಿಸಿದಂತೆ ಇರುವ ವ್ಯತ್ಯಾಸವು ಸ್ಪಷ್ಟ ಪ್ರಶ್ನೆಯಾಗಿದ್ದು, ಅದನ್ನು ಈ ಉಪಸಮಿತಿಯು ನಿರ್ಧರಿಸಲೇಬೇಕು. ಸೇವೆಯಲ್ಲಿನ ಈ ಎರಡು ಘಟಕಾಂಶಗಳನ್ನು ಸಮನಾಗಿಯೇ ತೆಗೆದುಕೊಳ್ಳಬೇಕೋ ಹೇಗೆ ಎನ್ನುವ ನಿರ್ದಿಷ್ಟ ತತ್ವವು ನಿಜವಾಗಿಯೂ ಈ ಉಪಸಮಿತಿಗೆ ಸಂಬಂಧಿಸಿದ್ದೇ ಆಗಿರುತ್ತದೆ.

ಸರ್ ಪಿ. ಸಿ. ಮಿತ್ತಲ್: ನಿಮಗೆ ಅಖಿಲ ಭಾರತ ಸೇವೆಗಳು ಬೇಕಾಗಿದ್ದರೆ ಪ್ರಾಂತಗಳಲ್ಲಿನ ಪರಿಸ್ಥಿತಿಗಳು ಒಂದೇ ತೆರನಾಗಿರುವುದಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡುವುದು ಅವಶ್ಯ. ನೀವು ಸಾಕ್ಷ್ಯವನ್ನು ಸಂಗ್ರಹಿಸದೆ, ಭಾರತದ ತುಂಬೆಲ್ಲ ಸೇವೆಗಳಿಗಾಗಿ ಅತ್ಯುತ್ತಮ ವ್ಯಕ್ತಿಗಳನ್ನು ಆಕರ್ಷಿಸುವ ಪ್ರಶ್ನೆಯ ಮೇಲೆ ಸ್ಥೂಲವಾದ ಸಾಮಾನ್ಯ ಸೂತ್ರವೊಂದನ್ನು ಹೇಗೆ ರೂಪಿಸಬಲ್ಲಿರೆಂಬುದು ನನಗೆ ತಿಳಿಯದು.

ಸರ್ ಎ. ಪಿ. ಪ್ಯಾಟ್ರೋ: ಸೇವೆಗಳಲ್ಲಿ ಕಡಿತವಿರಬೇಕೆ ಎನ್ನುವುದರ ಬಗ್ಗೆ ವಿಚಾರಣೆ ನಡೆಸಲು ನಮ್ಮ ಒಂದು ಸಮಿತಿ ತಾಳಿದ ನಿರ್ಣಯವು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಸಂಬಳದ ದರಗಳನ್ನು ವಾಸ್ತವವಾಗಿ ಹೆಚ್ಚಿಸಲೇಬೇಕು ಎಂಬುದಾಗಿತ್ತು. ಈ ಪ್ರಶ್ನೆಯನ್ನು ಒಂದು ಸ್ವತಂತ್ರ ಸಮಿತಿಯೇ ಪರಿಶೀಲಿಸಬೇಕೆಂದು ನಾನು ಭಾವಿಸುತ್ತೇನೆ. ನಮ್ಮಲ್ಲಿ ಹಲವರು ಭಾರತೀಕರಣವನ್ನು ಬಲವಾಗಿ ಸಮರ್ಥಿಸುತ್ತಿದ್ದಾಗ್ಯೂ ಸಹ, ನಮ್ಮ ದೇಶದ ಹಿತಾಸಕ್ತಿಯ ದೃಷ್ಟಿಯಿಂದ ಭಾರತೀಯ ಅಧಿಕಾರಿಗಳ ಸಂಬಳದ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಿತವ್ಯಯ ಇರಬೇಕೆಂದೂ ಇಚ್ಛಿಸುತ್ತಾರೆ. ಆದರೆ, ಅದೇ ವೇಳೆಗೆ ಆ ಅಧಿಕಾರಿಗಳು ತಮ್ಮ ಸ್ಥಾನ ಮತ್ತು ಗೌರವವನ್ನು ಈ ದೇಶದಲ್ಲಿ ಉಳಿಸಿಕೊಳ್ಳುವಂತೆ ಅವರನ್ನು ಸಮರ್ಥಗೊಳಿಸಲು ಮತ್ತು ಆಶೆ ಆಮಿಷಗಳಿಂದ ದೂರವಿಡಲು ಸಹಾಯಕಾರಿಯಾಗಿರುವಂತೆ ಅವರ ಸಂಬಳ ಸಾರಿಗೆಗಳು ಸಾಕಷ್ಟು ಆಕರ್ಷಣೀಯವಾಗಿರಬೇಕು. ಅತ್ಯುತ್ತಮ ವ್ಯಕ್ತಿಗಳನ್ನು ಸೇವೆಯಲ್ಲಿ ಉಳಿಸಿಕೊಳ್ಳಲು ಯಾವ ಶ್ರೇಣಿ ಅವಶ್ಯ ಎಂಬುದು ಈ ಕೂಡಲೇ ಆತುರದಲ್ಲಿ ನಿರ್ಣಯಿಸುವ ವಿಷಯವಲ್ಲ. ಇದು ಸಂಪೂರ್ಣವಾಗಿ ತುಂಬಾ ಎಚ್ಚರಿಕೆಯಿಂದ ಗಮನಿಸಬೇಕಾದ ವಿಷಯವಾಗಿದೆ. ಇವು

ಸೇವೆಯ ದಕ್ಷತೆಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳಾಗಿವೆ. ವಿವರಗಳ ಭಾರವನ್ನು ನಾವು ಈಗ ಹೊರುವುದು ಬೇಡ ಎಂಬುದು ನನ್ನ ವಿನಯಪೂರ್ವಕ ಅರಿಕೆ.

ಸರ್ ಚಿಮನಲಾಲ ಸೆಟಲವಾಡ: ನಿಯಂತ್ರಣಕ್ಕೆ ಸಂಬಂಧಿಸಿದಂತೆ ನನ್ನ ಸೂಚನೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂಬ ಭಯ ನನಗೆ. ನಿಯಂತ್ರಣವು ವ್ಹೈಟ್ ಹಾಲಿನಲ್ಲಿರಬೇಕೋ ಅಥವಾ ಭಾರತದಲ್ಲಿರಬೇಕೋ ಎಂಬ ಬಗ್ಗೆ ಸ್ಥೂಲ ಸಿದ್ಧಾಂತವೊಂದನ್ನು ರೂಪಿಸುವುದು ನನಗೆ ಬೇಕಾಗಿದೆ.

ಡಾ. ಅಂಬೇಡ್ಕರ್: ಸಿಲೋನ ಆಯೋಗದ ಶಿಫಾರಸುಗಳ ಕಡೆಗೆ ನಾನು ನಿಮ್ಮ ಲಕ್ಷ್ಯವನ್ನು ಸೆಳೆಯಬಯಸುತ್ತೇನೆ. ಅದು ಸಿಲೋನಿಗಳ ಮತ್ತು ಇತರರ ನಡುವೆ ಸಂಬಳದಲ್ಲಿ ಭಿನ್ನತೆ ಇರಬೇಕೆಂಬ ಸ್ಥೂಲ ತತ್ವವನ್ನು ಶಿಫಾರಸು ಮಾಡಿತ್ತು.

ಅಧ್ಯಕ್ಷ: ಕಾರ್ಯಕ್ರಮದ (೬)ನೇ ಬಾಬಿನ ಕೊನೆಗೆ ಈ ಕೆಳಗಿನಂತೆ ಸೇರಿಸಿದರೆ ಬಹುಶಃ ಸಾಕಾಗ ಬಹುದು. ಅದೆಂದರೆ: "ಮತ್ತು ಹಾಗಿದ್ದರೆ, ಅಂಥ ಸಮಿತಿಗಳ ಮಾರ್ಗದರ್ಶನಕ್ಕಾಗಿ ಯಾವುದೇ ಖಚಿತ ಶಿಫಾರಸುಗಳನ್ನು ಮಾಡಬೇಕೋ..."

ಲಾರ್ಡ್ ಜಟ್‌ಲ್ಯಾಂಡ್: ಸರ್ ಚಿಮನಲಾಲ ಸೆಟಲವಾಡ ಅವರು ಚರ್ಚಿಸಬೇಕೆಂದು ಬಯಸು ತ್ತಿರುವ ಪ್ರಶ್ನೆಯು (೪)ನೇ ಬಾಬಿನಲ್ಲಿ ಬರುತ್ತದೆ. ನಿಯಂತ್ರಣದ ಅಧಿಕಾರವು ಮಾಡುವ ಪ್ರಾಧಿಕಾರಕ್ಕೇ ಇರುತ್ತದೆ.

ಅಧ್ಯಕ್ಷ: (೪)ನೇ ಬಾಬಿಗೆ ನಾವು "ನಿಯಂತ್ರಣಕ್ಕೆ ಸಂಬಂಧಿಸಿದಂತೆ ಯಾವ ಸಾಮಾನ್ಯ ಶಿಫಾರಸು ಗಳನ್ನು ಮಾಡಬೇಕು" ಎಂದು ಸೇರಿಸಬಹುದು. ಒಂದು ಮತ್ತೊಂದಕ್ಕೆ ಪೂರಕವಾಗಿದೆ ಎಂಬ ಲಾರ್ಡ್ ಜಟ್‌ಲ್ಯಾಂಡ್ ಅಭಿಪ್ರಾಯದೊಂದಿಗೆ ನಾನು ಸಹಮತಿಸುತ್ತೇನೆ. ನಿಯಂತ್ರಣವು ಭರ್ತಿ ಮಾಡುವ ಪ್ರಾಧಿಕಾರದೊಂದಿಗೆ ಇರುತ್ತದೆ. ಕಾರಣ ಡಾ. ಅಂಬೇಡ್ಕರರ ಅಂಶಕ್ಕೆ ಉತ್ತರವನ್ನು ನೀಡಲು ನೀವು (೬)ನೇ ಬಾಬಿಗೆ "ಮತ್ತು ಹಾಗಿದ್ದರೆ, ಅಂಥ ಸಮಿತಿಯ ಮಾರ್ಗದರ್ಶನಕ್ಕಾಗಿ ಯಾವುದೇ ಖಚಿತ ಶಿಫಾರಸುಗಳನ್ನು ಮಾಡಬೇಕೇ?" ಎಂದು ಸೇರಿಸಬಹುದೇ?

* ಅಧ್ಯಕ್ಷ: ಈಗ ನಾವು (೩)ನೇ ಬಾಬಿಗೆ ಬರೋಣ "ಕೆಳಗೆ ಹೇಳಲಾದ ಸೇವೆಗಳಿಗಾಗಿ ಅಖಿಲ ಭಾರತದ ಆಧಾರದ ಮೇಲೆ ಭರ್ತಿ ಮಾಡುವುದನ್ನು ಮುಂದುವರೆಸಬೇಕೋ;

(ಎ) ಭಾರತ ಸಿವಿಲ್ ಸೇವೆ (ಬಿ) ಭಾರತ ಪೋಲೀಸ್ ಸೇವೆ (ಸಿ) ಭಾರತ ಅರಣ್ಯ ಸೇವೆ, ಭಾರತ ಇಂಜಿನೀಯರ್ ಸೇವೆಯ ನೀರಾವರಿ ಶಾಖೆ, ಈಗ ಸ್ವಲ್ಪ ತಡೆದು ಸಮಿತಿಯ ಭಾವನೆಯು (ಎ) ಬಗ್ಗೆ "ಹೌದು" (ಬಿ) "ಹೌದು" ಮತ್ತು (ಸಿ) ಬಗ್ಗೆ "ಇಲ್ಲ" ಎಂಬ ರೀತಿಯಲ್ಲಿ ಇದೆ. ಮತ್ತು "ಎ" ಮತ್ತು "ಬಿ" ಬಗ್ಗೆ "ಹೌದು" ಎಂಬ ಉತ್ತರವನ್ನೇ ನಾನು ದಾಖಲಿಸಬಹುದೋ?

ಮಿ. ಶಿವರಾವ್: ಈ ಎಲ್ಲ ಸೇವೆಗಳನ್ನು ಪ್ರಾಂತೀಯಗೊಳಿಸತಕ್ಕುದು ಎಂದು ನಾನು ಭಾವಿಸುತ್ತೇನೆ. ಈ ಸೇವೆಗಳನ್ನು ಅಖಿಲ ಭಾರತ ಆಧಾರದ ಮೇಲೆ ಕಾರ್ಯಗತಗೊಳಿಸುವುದು ಸಮಾಧಾನಕರವಾಗಿದೆ ಎಂದೂ ಮತ್ತು ಅದೇ ವೇಳೆಗೆ ಸೇವೆಗಳ ಮತ್ತು ಮಂತ್ರಿಮಂಡಲದ ನಡುವೆ ಸಮುಚಿತ ಸಂಬಂಧವನ್ನು ಖಚಿತಗೊಳಿಸುತ್ತದೆ ಎಂದು ನನಗೆ ಅನ್ನಿಸುವುದಿಲ್ಲ.

ಮಿ. ಬಾಸು: ಭರ್ತಿ ಮಾಡಲಾಗುವ ಭಾರತೀಯ ನಾಗರಿಕ ಸಾಮಾನ್ಯ ಸೇವೆ ಇರುತ್ತದೆ ಮತ್ತು

---

* (ಉಪ ಸಮಿತಿ III (ಸೇವೆಗಳು) ವ್ಯವಹರಣೆಗಳು, ಪುಟಗಳು ೫೪–೫೮)

ಅದನ್ನು ಎರಡು ಅಥವಾ ಮೂರು ಭಾಗಗಳಾಗಿ ವಿಭಜಿಸಲಾಗಿದೆ. ಸಾಮಾನ್ಯ ಸೇವೆಯಲ್ಲಿ ಕೆಲ ಅವಧಿಯ ಅನಂತರ, ಉದಾಹರಣೆಗೆ ಹೇಳಬೇಕೆಂದರೆ, ಕೆಲವು ಸದಸ್ಯರು ಸುಂಕದ ಇಲಾಖೆಗೆ ಹೋಗುತ್ತಾರೆ. ಕೆಲವರು ನ್ಯಾಯಾಂಗವನ್ನು ಸೇರುತ್ತಾರೆ ಮತ್ತು ಉಳಿದವರು ಕಾರ್ಯಾಂಗ ಮತ್ತು ಕಂದಾಯ ಇಲಾಖೆಯಲ್ಲಿ ಉಳಿಯುತ್ತಾರೆ. ನಾವು ವಿಶಿಷ್ಟ ಸ್ವರೂಪದ್ದಲ್ಲದ ಸೇವೆಯನ್ನು ಹೊಂದಲು ಇಚ್ಛಿಸುತ್ತೇವೆಯೋ? ಹಾಗಿದ್ದರೆ ಪ್ರಾರಂಭದಲ್ಲಿಯೇ ನಾವು ಅದನ್ನು ನಿರ್ಧರಿಸಬೇಕೆ? ನನ್ನ ಒಟ್ಟು ಹೇಳಿಕೆಯಲ್ಲಿ ನಾನು ಸೂಚಿಸಿದಂತೆ ಹೊಸ ಸಂವಿಧಾನದ ಮೇರೆಗೆ ಕೇವಲ ಒಂದೇ ಸೇವೆಯ ಬದಲಿಗೆ, ಅಂದರೆ ಭಾರತ ಸೇವೆಯ ಬದಲಿಗೆ, ಸೇವೆಗಳನ್ನು ಬೇರೆ ಬೇರೆ ಪ್ರವರ್ಗಗಳಲ್ಲಿ ವಿಭಜಿಸುವುದು ಅವಶ್ಯವಾಗುತ್ತದೆ. ಭಾರತ ಸಿವಿಲ್ ಸೇವೆಯು ಹಿಂದೆ ಉತ್ತಮ ಕಾರ್ಯ ಮಾಡಿದೆ. ಆದರೆ ಕೆಲ ಮಟ್ಟಿಗೆ ಅದು ನಿರಂಕುಶಶಾಹಿ ಆಗಿದೆ ಮತ್ತು ಅಲ್ಪ ಕಾಲದಲ್ಲಿ ಅದು ಇನ್ನೂ ಹೆಚ್ಚಬಹುದು. ಈ ರೀತಿಯಲ್ಲಿ ನಾವು ಮುಂದುವರೆಸಲು ಮತ್ತು ಚಿರಂತನಗೊಳಿಸಲು ಇಚ್ಛಿಸುತ್ತಿರುವ ಮೂಲ ಸಿದ್ಧಾಂತವು ಈಗಿರುವ ಅಗತ್ಯಗಳಿಗೆ ಸೂಕ್ತವಲ್ಲದಂಥ ಸಂದರ್ಭವನ್ನುಂಟು ಮಾಡುತ್ತದೆ.

ಡಾ. ಅಂಬೇಡ್ಕರ್: ಈ ಪ್ರಶ್ನೆಯನ್ನು ಹಲವು ದೃಷ್ಟಿಕೋನಗಳಿಂದ ವಿಚಾರಿಸಬೇಕಾಗುತ್ತದೆ. ಪ್ರಪ್ರಥಮ ವಾಗಿ ಪ್ರಾಂತೀಯ ಸ್ವಾಯತ್ತತೆಯ ಪ್ರಶ್ನೆ ನಾವು ರೂಪಿಸುತ್ತಿರುವ ಸಂವಿಧಾನದಲ್ಲಿ ಪ್ರಾಂತಗಳಿಗೆ ಸಾಧ್ಯ ವಿರುವಷ್ಟು ಮಟ್ಟಿಗೆ ಹೆಚ್ಚಿನ ಪ್ರಮಾಣದ ಸ್ವಾಯತ್ತತೆಯನ್ನು ಕೊಡಲು ಸೂಚಿಸುತ್ತೇವೆ ಮತ್ತು ತಮ್ಮ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಸಿವಿಲ್ ಸೇವೆಗಳನ್ನು ನಿಯಂತ್ರಿಸುವ ಅಧಿಕಾರ ಅವುಗಳಿಗೆ ಇಲ್ಲದೇ ಹೋದರೆ, ಆಗ ಯಾವ ಪ್ರಾಂತಕ್ಕೂ ಪ್ರಾಂತೀಯ ಸ್ವಾಯತ್ತತೆ ಇದೆ ಎಂದು ಭಾವಿಸಲಾಗದು ಎಂದು ನನಗೆ ಕಂಡುಬರುತ್ತದೆ. ಇನ್ನೊಂದು ಅತ್ಯಂತ ಮಹತ್ವದ ಅಂಶವೂ ಇದೆ. ಅದೆಂದರೆ ಹಣಕಾಸು. ಅಖಿಲ ಭಾರತ ಸಿವಿಲ್ ಸೇವೆ ಇರುವಾಗ ಒಂದು ನಿಶ್ಚಿತ ವೇತನ ಶ್ರೇಣಿ ಇತ್ತು. ಸಂಬಳ, ಪರಿಶ್ರಮ ಧನ ಮತ್ತು ಇತರ ವಿಶೇಷ ಹಕ್ಕುಗಳು ಹಲವಾರು ಪ್ರಾಂತಗಳಲ್ಲಿದ್ದವುಗಳಿಗಿಂತ ತುಂಬಾ ಹೆಚ್ಚಿನ ವ್ಯತ್ಯಾಸದಿಂದ ಕೂಡಿವೆ. ಮುಂಬಯಿ ಮತ್ತು ಬಂಗಾಲಗಳಿಗೆ ಹೊರೆಯಾಗದಿರುವ ಸಿವಿಲ್ ಸೇವೆಯು ಅಸ್ಸಾಮ್, ಸಿಂಧ್, ಈಶಾನ್ಯ ಗಡಿ ಪ್ರಾಂತ ಮತ್ತು ಪಂಜಾಬಿನಂಥ ಚಿಕ್ಕ ಚಿಕ್ಕ ಪ್ರಾಂತಗಳಿಗೆ ಹೊರೆಯಾಗ ಬಹುದು ಮತ್ತು ಅವು ಈ ಕಾರಣದಿಂದ ಅಖಿಲ ಭಾರತ ಆಧಾರಿತ ಸೇವೆಗಿಂತ ಸ್ವಲ್ಪ ಕಡಿಮೆ ದಕ್ಷತೆಯ ಸೇವೆಯಿಂದಲೇ ಸಮಾಧಾನಪಟ್ಟುಕೊಳ್ಳಬಹುದು. ತಮ್ಮ ಹಣಕಾಸಿನ ಬಲದ ಕಲ್ಪನೆ ಹೊಂದಿದ ಅವು ತಮ್ಮ ಉದ್ದೇಶಕ್ಕಾಗಿ ಲಭ್ಯವಿರುವ ಜಾಣತನ ಮತ್ತು ದಕ್ಷತೆ ತಮಗೆ ಸಾಕಷ್ಟಾಗುತ್ತದೆ ಎಂದು ಭಾವಿಸಬಹುದು. ಕೊನೆಯದಾಗಿ ನಾನು ಹೇಳುವುದೇನೆಂದರೆ, ವಿಶೇಷ ಪ್ರಾವೀಣ್ಯತೆಯ ವಿಷಯವಾಗಿ ನಾನು ಮಿ. ಬಾಸೂ ಅವರೊಂದಿಗೆ ಸಹಮತಿಸುತ್ತೇನೆ. ಆಯ್.ಸಿ.ಎಸ್.ದಂಥ ಪರೀಕ್ಷೆ ಪಾಸು ಮಾಡುವುದು ವಿಶೇಷ ಇಲಾಖೆ ಗಳಲ್ಲಿ ಕಾರ್ಯ ನಿರ್ವಹಿಸಲು ಹೇಗೆ ಸಕ್ಷಮತೆಯನ್ನು ಕೊಡುವುದೋ ನನಗಂತೂ ತಿಳಿಯುವುದಿಲ್ಲ. ಆಯ್.ಸಿ.ಎಸ್. ಪರೀಕ್ಷೆಯಲ್ಲಿ ಗಣಿತವನ್ನು ವಿಶೇಷ ವಿಷಯವಾಗಿ ತೆಗೆದುಕೊಂಡು ಉತ್ತೀರ್ಣನಾದ ವ್ಯಕ್ತಿಯನ್ನು ಒಕ್ಕಲುತನ ಇಲಾಖೆಗೆ ಅಥವಾ ಭಾರತೀಯ ಹಣಕಾಸು ಇಲಾಖೆಗೆ ನೇಮಿಸಬಹುದು. ಸೇವೆಗಳಲ್ಲಿ ಭಾಗವಹಿಸುವವರಿಗೆ ಒಂದು ನಿರ್ದಿಷ್ಟ ಮಟ್ಟದ ಶಿಕ್ಷಣ ಕೊಡುವುದಲ್ಲದೆ ಅವರಿಗೆ ಕೆಲವು ನಿರ್ದಿಷ್ಟ ರೀತಿಯಲ್ಲಿ ವಿಶೇಷ ನೈಪುಣ್ಯತೆ ಬರುವಂಥ ಶಿಕ್ಷಣವನ್ನೂ ಕೊಡಬೇಕು. ನನ್ನ ಅಭಿಪ್ರಾಯದಲ್ಲಿ ಈಗ ಹಲವು ಸೇವೆಗಳು ತಮ್ಮ ಅಖಿಲ ಭಾರತ ಸ್ವರೂಪವನ್ನು ಹೊಂದಿರುವುದು ಕೊನೆಗೊಳ್ಳಬೇಕು ಮತ್ತು ಪ್ರಾಂತೀಯ ಸರಕಾರಗಳು ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು.

ಸರ್ ಪಿಟಿ. ಪ್ಯಾಟ್ರೋ: ಡಾ. ಅಂಬೇಡ್ಕರ್ ಅವರು ಎತ್ತಿರುವ ತಕರಾರು ಅತ್ಯಂತ ಸುಸಂಬದ್ಧವಾದು ದಾಗಿರುತ್ತದೆ.

* ಅಧ್ಯಕ್ಷ: ಡಾ. ಅಂಬೇಡ್ಕರ್ ಅವರು ಮಾಡಿದ ಟೀಕೆಗಳ ಬಗ್ಗೆ ಮಿ. ಬಾಸು ಅವರ ಅಭಿಪ್ರಾಯ ಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಆಯ್.ಸಿ.ಎಸ್.ಗೆ ಭರ್ತಿ ಮಾಡಿಕೊಳ್ಳಲು ನಾವು ಶಿಫಾರಸು ಮಾಡುವಾಗ ಆಯ್.ಸಿ.ಎಸ್.ನ್ನು ಅದು ಉತ್ತಮವಾದುದ್ದಾಗ್ಯೂ, ಅದು ಪರಿಪೂರ್ಣವಾದುದು ಎಂದೂ ಮತ್ತು ಈಗಿರುವ ಆಧಾರಗಳ ಮೇಲೆಯೇ ಅದನ್ನು ಎಂದೆಂದಿಗೂ ಮುಂದುವರೆಸಿಕೊಂಡೇ ಹೋಗ ತಕ್ಕುದು ಎಂದೂ ನಾವು ಭಾವಿಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುವ ಎಚ್ಚರಿಕೆಯನ್ನೂ ನಾವು ಹೊಂದಿರ ಬೇಕು. ಅದಕ್ಕೆ ಹೊಸ ರೂಪ ಮತ್ತು ಆಕಾರ ಕೊಡಲು ಸಾಧ್ಯವಿರುವ ಎಲ್ಲವನ್ನೂ ಮಾಡುವುದು ಅವಶ್ಯವಾಗಿರುತ್ತದೆ. ಡಾ. ಅಂಬೇಡ್ಕರರ ವಿಚಾರವನ್ನು ಅನುಸರಿಸುವವರು ಅಖಿಲ ಭಾರತ ಸೇವೆಯನ್ನು ಸಂಪೂರ್ಣವಾಗಿ ಕೈ ಬಿಡಬೇಕು ಮತ್ತು ಅವುಗಳ ಚಿಕ್ಕ ಚಿಕ್ಕ ಪ್ರಾಂತೀಯ ಸೇವೆಗಳನ್ನು ರಚಿಸಬೇಕು ಎನ್ನುತ್ತಾರೆ.

ಡಾ. ಅಂಬೇಡ್ಕರ್: ನಾನು ನನ್ನ ನಿಲುವನ್ನು ಸ್ಪಷ್ಟಪಡಿಸಬೇಕಾಗುತ್ತದೆಯೆಂದು ಭಾವಿಸುತ್ತೇನೆ. ಸೇವೆ ಗಳಲ್ಲಿ ಯುರೋಪಿಯನ್ನರೂ ಇರಬೇಕಾದುದು ಅವಶ್ಯವೆಂದು ಈ ಸಮಿತಿಯ ಇತರ ಸದಸ್ಯರಂತೆಯೇ ನಾನೂ ಅಭಿಪ್ರಾಯಪಡುತ್ತೇನೆ. ಆದರೆ, ಮಾನ್ಯ ಜೆಟ್‌ಲ್ಯಾಂಡ್‌ರವರು ಪ್ರಾಂತೀಯ ಸೇವೆಗಳನ್ನು ರಚಿಸಿದರೆ ಅದು ಭರ್ತಿಯ ಮೂಲವನ್ನೇ ಒಣಗಿಸಿಬಿಡುವುದೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ.

* ಅಧ್ಯಕ್ಷ: ನಾವು ೧೯೩೮ನ್ನು ಅಥವಾ ನೀವು ಬಯಸಿದ ಯಾವುದಾದರೂ ಇತರ ದಿನಾಂಕವನ್ನು ಗೊತ್ತುಪಡಿಸಬೇಕೆಂದು ಸೂಚಿಸಲಾಗಿದೆ. ದಿನಾಂಕದಲ್ಲಿ ಯಾವುದೇ ಜಾದೂ ಇಲ್ಲ. ನಾವು ಒಂದು ದಿನಾಂಕವನ್ನು ಗೊತ್ತುಪಡಿಸಬೇಕು ಮತ್ತು ಆ ನಂತರ ಆ ವಿಷಯವು ಭಾರತ ಸರಕಾರದ ನಿಷ್ಕರ್ಷೆಗೆ ಮಾತ್ರ ಬಿಡಬೇಕು ಎಂಬುದೇ ಮಾಡಲಾಗಿರುವ ಸೂಚನೆ. ಪ್ರತಿಯೊಬ್ಬರನ್ನು ತೃಪ್ತಿಪಡಿಸಲು ನಾನು ಸೂಚನೆಯನ್ನು ಮಾಡುತ್ತೇನೆ.

ಡಾ. ಅಂಬೇಡ್ಕರ್: ನಿಮ್ಮ ಶಿಫಾರಸುಗಳು ಕೇವಲ ಭಾರತ ಸಿವಿಲ್ ಸೇವೆಗಳಿಗೆ ಮತ್ತು ಭಾರತ ಪೋಲಿಸ್ ಸೇವೆಗಳಿಗೆ ಮಾತ್ರ ಅನ್ವಯಿಸತಕ್ಕದೆಂಬುದು ನನ್ನ ಅಭಿಪ್ರಾಯವಾಗಿದೆ.

ಅಧ್ಯಕ್ಷ: ಅದಕ್ಕೆ ನನ್ನ ಒಪ್ಪಿಗೆ ಇದೆ. ಅದನ್ನು ನಾನು ಸ್ಪಷ್ಟಪಡಿಸುತ್ತೇನೆ.

## IIIನೇ ಅಧಿವೇಶನ
## ೮ನೇ ಜನವರಿ ೧೯೩೧

* ಡಾ. ಅಂಬೇಡ್ಕರ್: ಮಾನ್ಯರೇ, ಭಾವೀ ಭಾರತ ಸರಕಾರಕ್ಕೆ ಮಾರ್ಗದರ್ಶನಕ್ಕಾಗಿ ಒಂದು ಸಮಿತಿಯು ಇರಬೇಕೋ ಅಥವಾ ಇರಬಾರದೋ ಅನ್ನುವ ಪ್ರಶ್ನೆಯ ಬಗ್ಗೆ ನಾನು ಯಾವ ಸ್ಪಷ್ಟವಾದ ಅಭಿಪ್ರಾಯವನ್ನೂ ಹೊಂದಿಲ್ಲ ಎಂದೇ ಹೇಳಲೇಬೇಕು. ಆದರೆ, ಎರಡು ವಿಷಯಗಳ ಬಗ್ಗೆ ಮಾತ್ರ

---

* ಅದೇ, ಪುಟ: ೮೫

* ಅದೇ, ಪುಟಗಳು: ೯೧–೯೩

ನಾನು ತುಂಬ ಸ್ಪಷ್ಟವಾದ ಅಭಿಪ್ರಾಯವನ್ನು ಹೊಂದಿದ್ದೇನೆ. ಮೊದಲನೆಯದು, ಎಲ್ಲ ಇಲಾಖೆಗಳ ಸಿಬ್ಬಂದಿಗಳಿಗೆ ಒಂದೇ ಸಿವಿಲ್ ಸೇವೆಗೆ ಬದಲು, ಈಗಿರುವುದಕ್ಕಿಂತ ಹೆಚ್ಚಿನ ದಕ್ಷತೆಯನ್ನು ಸಾಧಿಸುವುದಕ್ಕಾಗಿ ಸೇವೆಗಳಲ್ಲಿ ವಿಶೇಷತೆಯನ್ನು ಪಡೆದುಕೊಳ್ಳಲು ಅವಕಾಶವಿರುವಂತೆ ಮಾಡುವುದಕ್ಕೆ ಈಗ ಕಾಲ ಪಕ್ವವಾಗಿದೆ ಎಂದು ನಾನು ಭಾವಿಸುತ್ತೇನೆ. ಭಾರತ ಸಿವಿಲ್ ಸೇವೆಯ ಸಾಮರ್ಥ್ಯದ ಬಗ್ಗೆ ನಾನು ಏನನ್ನೂ ಹೇಳಲು ಬಯಸುವುದಿಲ್ಲ. ಏಕೆಂದರೆ ಅದು ಸಮರ್ಥ ಸಿವಿಲ್ ಸೇವೆಯೆಂದು ಸಾಮಾನ್ಯವಾಗಿ ಒಪ್ಪಲಾಗಿದೆ. ಆದರೆ, ಏನೇ ಹೇಳಲಾಗಿದ್ದರೂ ಭಾರತ ಸಿವಿಲ್ ಸೇವೆಯಲ್ಲಿ ಕೊಡುತ್ತಿರುವ ತರಬೇತಿಯು ಹಲವು ತಾಂತ್ರಿಕ ಮತ್ತು ವಿಶೇಷ ಪ್ರಾವೀಣ್ಯತೆ ಬೇಕಾದ ಇಲಾಖೆಗಳಲ್ಲಿನ ನಿರ್ದಿಷ್ಟ ಕಾರ್ಯಗಳನ್ನು ನಿರ್ವಹಿಸಲು ಸಾಕಷ್ಟಾಗುವುದಿಲ್ಲ ಎಂದು ನಾನು ಹೇಳಿಯೇ ಹೇಳುತ್ತೇನೆ. ಸೇವೆಯಲ್ಲಿ ಹೆಚ್ಚಿನ ದಕ್ಷತೆಯನ್ನು ಪಡೆದುಕೊಳ್ಳುವುದಕ್ಕಾಗಿ ಭಾರತ ಸಿವಿಲ್ ಸೇವೆಯಲ್ಲಿ ಒಂದಿಷ್ಟು ಪುನಾರಚನೆಯಾಗಬೇಕಾದುದು ಅವಶ್ಯ. ನಾನು ತುಂಬಾ ಸತ್ವಯುತವಾಗಿ ಹೇಳುವುದು ಇದೊಂದು ವಿಷಯವಾಗಿದೆ. ನಾನು ಇನ್ನು ಹೆಚ್ಚು ಸತ್ವಯುತವಾಗಿ ಹೇಳುವ ಇನ್ನೊಂದು ವಿಷಯವೆಂದರೆ, ಭಾರತ ಸಿವಿಲ್ ಸೇವೆಯನ್ನು ಭಾರತೀಯ ಗೊಳಿಸತಕ್ಕುದು ಎಂಬ ಬಗ್ಗೆ ಮತ್ತು ನಾವು ಊಹಿಸಿರುವುದಕ್ಕಿಂತ ತೀವ್ರ ರೀತಿಯಲ್ಲಿ ಭಾರತ ಸಿವಿಲ್ ಸೇವೆಯನ್ನು ಭಾರತೀಯಗೊಳಿಸಬೇಕೆಂದು ನಾವೆಲ್ಲರೂ ಒಮ್ಮತ ಹೊಂದಿದವರಾಗಿದ್ದಾಗ್ಯೂ ಈ ಸಮಿತಿಗೆ ನನ್ನ ವಿನಂತಿ ಎಂದರೆ ಭಾರತೀಯ ಕರದಾತನ ದೃಷ್ಟಿಯಿಂದ ಈ ಸಮಸ್ಯೆಯನ್ನು ಗಮನಿಸಿದಾಗ ಈ ಭಾರತೀಯತೆಯು ಸೇವೆಯಲ್ಲಿನ ಸಿಬ್ಬಂದಿಯ ಸ್ವರೂಪದ ಬದಲಾವಣೆ ಮಾತ್ರವೇ ಆಗಿರಬಾರದು. ಆದರೆ, ಭಾರತೀಯತೆಯು ಭಾರತದ ಕರದಾತನ ಹೊರೆಯನ್ನು ಕಡಿಮೆ ಮಾಡುವುದನ್ನೂ ಒಳಗೊಂಡಿರಬೇಕು. ಭಾರತೀಯ ಸಿವಿಲ್ ಸೇವೆಯಲ್ಲಿ ಭಾರತೀಯರಿಗೆ ನೀಡುವ ಪ್ರತಿಫಲ ಸಂಬಳ, ವೇತನ, ಮತ್ತು ಪಿಂಚಣಿ ಇವುಗಳು ಮತ್ತು ಇತರ ವಿಶೇಷ ಸವಲತ್ತುಗಳಲ್ಲಿ, ಭಾರತ ಸಿವಿಲ್ ಸೇವೆಯಲ್ಲಿರುವ ಯುರೋಪಿಯನ್ನರಿಗೆ ಕೊಡುವುದು ಇವುಗಳ ನಡುವೆ ಒಂದಿಷ್ಟು ವ್ಯತ್ಯಾಸ ಇರಬೇಕು. ಈ ಸಂಬಂಧದಲ್ಲಿ ಸಿಲೋನ್ ಸಂವಿಧಾನದ ಬಗ್ಗೆ ನೇಮಿಸಲಾದ ಡೋನೇ ಮೋರ ಆಯೋಗದವರು ಮಾಡಿದ ಶಿಫಾರಸುಗಳ ಕಡೆಗೆ ನಿಮ್ಮ ಲಕ್ಷ್ಯವನ್ನು ಸೆಳೆಯಲು ಪ್ರಯತ್ನಿಸುತ್ತೇನೆ. ತಮ್ಮ ವರದಿಯ ೧೩೩ನೇ ಪುಟದಲ್ಲಿ ಈ ಆಯೋಗದವರು ಸಿಲೋನ್ ಸರಕಾರದವರು ಈ ನಂತರ ವೇತನ ಆಯೋಗವನ್ನು ರಚಿಸಬೇಕೆಂದು ಶಿಫಾರಸು ಮಾಡಿದ್ದಾರೆ ಮತ್ತು ಅವರು ಸಿಲೋನ್ ಸಿವಿಲ್ ಸೇವೆಯಲ್ಲಿನ ಯುರೋಪಿಯನ್ನರಿಗೂ ಮತ್ತು ಸಿಲೋನ್ ಸಿವಿಲ್ ಸೇವೆಯಲ್ಲಿರುವ ಸಿಲೋನಿಯರಿಗೂ ಅವರ ಪ್ರತಿಫಲದಲ್ಲಿ ಸಂಬಳಕ್ಕೆ ಸಂಬಂಧಿಸಿದಂತೆ ವ್ಯತ್ಯಾಸ ಇರಬೇಕೆಂದು ಸ್ಪಷ್ಟವಾಗಿ ಶಿಫಾರಸು ಮಾಡಿರುತ್ತಾರೆ. ಇದನ್ನು ಅವರು ಈ ಕೆಳಗಿನಂತೆ ಸಮರ್ಥಿಸಿಕೊಳ್ಳುತ್ತಾರೆ. ಈ ಪ್ರಕರಣದ ಗುಣಾವಣಗುಣಗಳ ಮೇಲೆ ಲೋಕಸೇವೆಗಳ ಎರಡೂ ವರ್ಗಗಳಿಗೆ ಒಂದೇ ಆಧಾರದ ಮೇಲೆ ಪ್ರತಿಫಲ ಕೊಡುವುದಕ್ಕೆ ಯಾವುದೇ ರೀತಿಯ ತರ್ಕಬದ್ಧ ಸಮರ್ಥನೆ ಇಲ್ಲ ಎಂಬುದು ಸ್ಪಷ್ಟವಿದೆ. ಒಂದು ವರ್ಗದಲ್ಲಿ ತಮ್ಮ ಜನ್ಮಸಿದ್ಧ ಹಕ್ಕಾದ ಸಮಶೀತೋಷ್ಣ ಹವಾಮಾನ ಬಿಟ್ಟು ಇಲ್ಲಿಗೆ ಬಂದವರಿರುತ್ತಾರೆ ಮತ್ತು ಅವರು ಹುಟ್ಟಿದ ಮನೆಗಳಿಂದ ಸಾವಿರಾರು ಮೈಲುಗಳ ಆಚೆಗೆ ಈ ಉಷ್ಣ ಪ್ರದೇಶದಲ್ಲಿ ಅವರನ್ನು ನೇಮಕ ಮಾಡುತ್ತಾರೆ. ತಮ್ಮ ಮಕ್ಕಳನ್ನು ಬೆಳೆಸಲು ಸಾಧ್ಯವಾಗದ ಈ ಪ್ರದೇಶದಲ್ಲಿ ಮತ್ತು ತಮ್ಮ ಆರೋಗ್ಯದ ದೃಷ್ಟಿಯಿಂದ ಅವರು ಮೇಲಿಂದ ಮೇಲೆ ರಜೆಯ ಮೇಲೆ ಹೋಗುವುದು ಅಗತ್ಯವಾಗುವುದರಿಂದ ಎರಡು ಮನೆಗಳನ್ನು ನಡೆಸಿಕೊಂಡು ಹೋಗುವಲ್ಲಿ ಇರುವ ತೊಂದರೆಗಳನ್ನು ಎದುರಿಸುವುದಷ್ಟೇ ಅಲ್ಲದೆ ತಮ್ಮ ಆರೋಗ್ಯವನ್ನು ಅಪಾಯಕ್ಕೆ ಒಡ್ಡುವುದು ಮತ್ತು ತಮ್ಮ ಕೌಟುಂಬಿಕ

ಜೀವನದ ಸುಖವನ್ನು ತ್ಯಾಗ ಮಾಡುವುದು, ಇಷ್ಟೇ ಅಲ್ಲದೆ, ಅತಿ ಹೆಚ್ಚಿನ ವೆಚ್ಚದಲ್ಲಿ ಜೀವನ ಮಟ್ಟವನ್ನು ಉಳಿಸಿಕೊಂಡು ಬರುವುದು ಮತ್ತು ತಮ್ಮ ರೂಢಿ ಸಂಪ್ರದಾಯಗಳಿಗೆ ತಕ್ಕಂತೆ ಅತಿಥಿ ಸತ್ಕಾರವನ್ನು ಮಾಡುವುದು ಹಾಗೂ ಕಳೆದ ೧೨೫ ವರುಷಗಳಿಂದ ಒಂದು ಮಹಾ ಸಾಮ್ರಾಜ್ಯದ ಶಕ್ತಿಯನ್ನು ಈ ಸೇವೆಯಲ್ಲಿದ್ದು ಪ್ರತಿನಿಧಿಸಿದ ಮತ್ತು ದೇಶದ ಸೇವೆ ಮಾಡಲು ಈ ಎಲ್ಲ ತೊಂದರೆಗಳನ್ನು ಎದುರಿಸಿದವರು ಯುರೋಪಿಯನ್ನರು. ಅವರ ಜೊತೆ ಜೊತೆಯಾಗಿ ಈ ದೇಶದವರೇ ಆದ ಇಲ್ಲಿಯೇ ವಾಸಿಸುತ್ತಿರುವ, ತಮ್ಮ ಮನೆಗಳ ಸಮೀಪದಲ್ಲಿರುವ, ವಾತಾವರಣದಿಂದ ಯಾವ ತೊಂದರೆಗಳಿಗೂ ಸಿಲುಕದ ಮತ್ತು ತಮ್ಮ ಯುರೋಪಿಯನ್ ಸಹೋದ್ಯೋಗಿಗಳಿಗಿರುವ ಹಣಕಾಸಿನ ಭಾರದ ಅಲ್ಪ ಭಾಗವನ್ನು ಮಾತ್ರ ಸಹಿಸಬೇಕಾಗುವ ದೇಶೀಯರೂ ಇರುತ್ತಾರೆ. ಮೊದಲಿನ ವರ್ಗದ ಲೋಕನೌಕರರಿಗೆ ಅವರ ಈ ಎಲ್ಲ ಕಷ್ಟಗಳಿಗೆ ಸಾಕಷ್ಟು ರೀತಿಯ ಪರಿಹಾರ ಕೊಡುವ ರೀತಿಯಲ್ಲಿ ಅಂದರೆ, ಅವರು ಮಾಡಿದ ಕಾರ್ಯದ ಎಲ್ಲಕ್ಕಿಂತ ಮತ್ತು ಆ ಕಾರ್ಯ ನಿರ್ವಹಿಸುವಲ್ಲಿ ಅವರು ಎದುರಿಸುವ ಅಪಾಯಗಳಿಗಾಗಿ ಮತ್ತು ತ್ಯಾಗಕ್ಕಾಗಿ ಅವರಿಗೆ ಇನ್ನೂ ಹೆಚ್ಚಿಗೆ ಸಂಬಳವನ್ನು ಕೊಡಲೇಬೇಕೆಂಬುದು ಸ್ಪಷ್ಟ. ಮೊದಲಿನ ವರ್ಗದವರಿಗೆ ಕೊಡುವ ಈ ಪರಿಹಾರವನ್ನು ಎರಡನೇ ವರ್ಗದವರಿಗೂ ಅನ್ವಯಿಸಬೇಕೆಂಬುದಕ್ಕೆ ಯಾವುದೇ ನ್ಯಾಯಯುತ ಮತ್ತು ತರ್ಕಬದ್ಧ ಸಮರ್ಥನೆ ಇರಬಾರದು. ಈ ಅಭಿಪ್ರಾಯಗಳು ಭಾರತದ ಸ್ಥಿತಿಗತಿಗಳಿಗೆ ಅದೇ ರೀತಿಯಲ್ಲಿ ಅನ್ವಯಿಸುತ್ತವೆ. ನಾನು ಸಮಿತಿಯ ಮುಂದಿಡುವ ಈ ಎರಡೂ ಅಂಶಗಳನ್ನು ಅಂದರೆ ಭಾರತೀಯ ಸಿವಿಲ್ ಸೇವೆಗಳಲ್ಲಿ ಭಿನ್ನತೆ ಇರುವುದರ ಅವಶ್ಯಕತೆ ಮತ್ತು ಭಾರತೀಯ ಸಿವಿಲ್ ಸೇವೆಗಳಲ್ಲಿ ಇರುವ ಎರಡು ವರ್ಗಗಳವರ ಪ್ರತಿಫಲದಲ್ಲಿ ಮಾಡಬೇಕಾದ ವ್ಯತ್ಯಾಸದ ಅವಶ್ಯಕತೆ, ಅದು ಅವುಗಳನ್ನು ಒಪ್ಪಿಕೊಂಡರೆ, ಈ ಶಿಫಾರಸುಗಳನ್ನು ಕಾರ್ಯರೂಪದಲ್ಲಿ ತರಲು ಭಾರತ ಸರ್ಕಾರಕ್ಕೆ ಮಾರ್ಗದರ್ಶನ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಲೇಬೇಕಾಗುತ್ತದೆ ಎಂಬುದು ಅದರ ಉಪ ಸಿದ್ಧಾಂತ ವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಕಾರಣದಿಂದಲೇ ಹೊಸ ಸಂವಿಧಾನವು ಜಾರಿಯಲ್ಲಿ ಬಂದ ನಂತರ ೬ನೇ ಶಿರೋನಾಮೆಯಲ್ಲಿ ಶಿಫಾರಸು ಮಾಡಲಾದಂಥ ಸಮಿತಿಯನ್ನು ಭಾರತ ಸರಕಾರವು ರಚಿಸತಕ್ಕುದು ಎಂಬ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷ: ಉಪಸಮಿತಿಯ ಮಾರ್ಗದರ್ಶನಕ್ಕಾಗಿ ನಾನು ಹೀಗೆ ಹೇಳಬಹುದೇ? ಏನೆಂದರೆ ನಮಗೆ ಉಲ್ಲೇಖಿಸಲಾಗಿರುವ ಅಂಶವು ಹೊಸ ರಾಜಕೀಯ ರಚನೆಯೊಂದಿಗೆ ಸೇವೆಗಳ ಸಂಬಂಧಗಳು ಇರುತ್ತವೆ ಎಂಬ ಕಾರಣ, ನಾವು ಸಂಬಳದ ಪ್ರಶ್ನೆಯ ಬಗ್ಗೆ ತುಂಬಾ ಆಳವಾಗಿ ಚರ್ಚಿಸಲಾರೆವು. ಏಷಿಯಾ ದವರು ಎಂಬ ಆಧಾರದ ಮೇಲೆ ಈಗಾಗಲೇ ಅಧಿಕಾರಿಗಳ ವೇತನದಲ್ಲಿ ವ್ಯತ್ಯಾಸ ಇರುತ್ತದೆ. ನಿಮ್ಮೆಲ್ಲರಿಗೂ ಇದು ತಿಳಿದಿದೆ ನಾನು ಭಾವಿಸಿದ್ದೇನೆ. ಈ ಎಲ್ಲ ವ್ಯತ್ಯಾಸ ಇಷ್ಟು ಮಾತ್ರ ಇರುತ್ತದೆ. ಏನೆಂದರೆ ಅನಿವಾಸಿ ಏಷಿಯಾದವರು ಸಾಗರೋತ್ತರ ವೇತನವನ್ನು ಪಡೆಯುತ್ತಾರೆ ಮತ್ತು ಆ ವೇತನವು ಉಳಿದ ವೇತನಗಳಿಗಿಂತ ೩೦೦ ಪೌಂಡುಗಳಷ್ಟು ಅಧಿಕವಾಗುತ್ತದೆ.

ಡಾ. ಅಂಬೇಡ್ಕರ್: ಅದು ಈ ಪ್ರಶ್ನೆಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಯುರೋಪಿಯನ್ನರ ಸಂಬಳಕ್ಕೆ ಸ್ವಲ್ಪ ಹೆಚ್ಚಳ ಮಾಡಿ ನೀವು ವ್ಯತ್ಯಾಸವನ್ನು ತೋರಿಸಬಹುದು. ಅದು ಭಾರತೀಯನಿಗೆ ಕೊಡುವ ಪರಿಹಾರವಾಗಲಾರದು.

ಸರ್ ವಿ. ಪಿ. ಪ್ಯಾಟ್ರೋ: ೬ನೇ ಶಿರೋನಾಮೆಯಲ್ಲಿ ಪ್ರತಿಪಾದಿಸಿದ ಎರಡು ಪ್ರಶ್ನೆಗಳಿಗೆ ಸಕಾರಾತ್ಮಕ ವಾಗಿಯೇ ಉತ್ತರ ಕೊಡಬೇಕಾಗುವುದನ್ನು ಡಾ. ಅಂಬೇಡ್ಕರರು ಕೊಟ್ಟಿರುವ ಕಾರಣಗಳು ಅಗತ್ಯಗೊಳಿ

ಸುತ್ತವೆ ಎಂದು ನಾನು ಭಾವಿಸುತ್ತೇನೆ. ಭಾರತೀಯಗೊಳಿಸುವಿಕೆಯ ವಿಷಯದಲ್ಲಿ ಸಂಬಂಧಪಟ್ಟಂತೆ ಪರಿಶೀಲನೆ ಮಾಡುವ ಅಗತ್ಯವನ್ನು ಅವರು ತುಂಬಾ ದೃಢವಾಗಿ ಹೇಳಿದರೆಂದು ನಾನು ಭಾವಿಸುತ್ತೇನೆ. ನಮಗೆ ನೀಡಿರುವ ಉಲ್ಲೇಖವು, ಸರಿಯಾದ ಉಮೇದುವಾರರನ್ನು ಆಕರ್ಷಿಸಲು ಯಾವ ಷರತ್ತುಗಳು ಅವಶ್ಯವಾಗುತ್ತವೆ ಎಂಬುದು ತುಂಬಾ ಮಹತ್ವದ ವಿಷಯವಾಗಿದೆ. ಅತ್ಯುತ್ತಮ ಜನರನ್ನು ಆಕರ್ಷಿಸಲು ಈಗಿರುವ ಷರತ್ತುಗಳನ್ನು ತಿದ್ದಬೇಕು ಮತ್ತು ಬದಲಾಯಿಸಬೇಕು ಎಂದು ಸಮಿತಿಯು ಭಾವಿಸಿದರೆ, ವಿಷಯದ ಆ ಭಾಗದ ಬಗ್ಗೆ ಸಮಿತಿಯು ಪರಿಶೀಲಿಸುವುದು ಮತ್ತು ಆ ಕಾರಣದಿಂದಾಗಿ, ಸಮಿತಿ ಯೊಂದಿರುವುದು ಅವಶ್ಯವಾಗುತ್ತದೆ. ಮತ್ತೊಂದು ಲಕ್ಷಣವೆಂದರೆ, ಭಾವೀ ಭಾರತ ಸರಕಾರಕ್ಕೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಗಮನವಿಡಲು ಅವಕಾಶವಿರತಕ್ಕುದು ಮತ್ತು ಆ ಸಂದರ್ಭಗಳಲ್ಲಿ ಉಂಟಾಗ ಬಹುದಾದ ಪ್ರಸಂಗಗಳ ಮೇರೆಗೆ ಯಾವುದು ಅವಶ್ಯವೆಂಬುದನ್ನು ಪರಿಶೀಲಿಸತಕ್ಕುದು. ಈಗಿರುವ ಪದ್ಧತಿ ಯಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಲು ಸಾಧ್ಯವಿದ್ದ ಎಲ್ಲವನ್ನೂ ಮಂತ್ರಿಗಳು ಮಾಡುತ್ತಾರೆ ಮತ್ತು ಭಾವೀ ಭಾರತ ಸರಕಾರವು ಎಲ್ಲ ರೀತಿಯಲ್ಲೂ ಬದಲಾವಣೆ ಹೊಂದುತ್ತದೆ ಎಂಬ ಕಲ್ಪನೆ ಇರುವ ಬಗ್ಗೆ ನನಗೆ ಭಯವಿದೆ. ಅಂಥ ಕಲ್ಪನೆಯನ್ನು ಎಷ್ಟು ಬೇಗ ನಾವು ಮರೆಯುತ್ತೇವೆಯೋ ಅಷ್ಟು ಬೇಗ ನಮಗೆ ಒಳ್ಳೆಯದಾಗುತ್ತದೆ. ಆಗ ನಾವು ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ರೀತಿಯಲ್ಲಿ ವಾಸ್ತವಿಕ ದೃಷ್ಟಿಯನ್ನು ಹೊಂದಬಹುದು.

ಏನೇ ಆದರೂ, ಕೇಂದ್ರದಲ್ಲಿ ಕೇವಲ ಪರಿಮಿತ ಹೊಣೆಗಾರಿಕೆ ಇರುತ್ತದೆ ಎಂಬುದು ನಮಗೆಲ್ಲ ತಿಳಿದಿದೆ. ಮಂತ್ರಿಗಳ ಹೊಣೆಗಾರಿಕೆ ಪರಿಮಿತವಾಗುತ್ತದೆ. ಆದಕಾರಣ, ಹಿಂದಿನ ಅನುಭವದಿಂದ ನಾವು ಭಾವೀ ಭಾರತ ಸರಕಾರಕ್ಕೆ ಅಲ್ಪಸ್ವಲ್ಪ ಮಾರ್ಗದರ್ಶನ ಮಾಡಬೇಕಾಗುತ್ತದೆ. ಅದು ಖಾಲೀ ಚೆಕ್ಕಿನೊಂದಿಗೆ ಪ್ರಾರಂಭವಾಗತಕ್ಕುದಲ್ಲ. ಇದು ಸಂಪೂರ್ಣ ವ್ಯವಹಾರದ ವಿಷಯವಾಗಿದೆ. ಮತ್ತು ೬ನೇ ಬಾಬಿನಲ್ಲಿನ ಎರಡು ಅಂಶಗಳಿಗೆ ನನ್ನ ಉತ್ತರ ಸಕಾರಾತ್ಮಕವಾದುದೆ ಆಗಿರುತ್ತದೆ.

* ಡಾ. ಅಂಬೇಡ್ಕರ್: ನೀವು ಸೇರಿಸಬೇಕೆಂದು ಪ್ರಯತ್ನಿಸುತ್ತಿರುವ ಪದಗಳಲ್ಲಿ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಉಂಟಾಗುವ ತೊಂದರೆಯನ್ನು ನಾನು ಎತ್ತಿ ತೋರಿಸುತ್ತೇನೆ. ಸಂಗತಿ ಹೀಗಿದೆ. ಶಬ್ದಗಳು ಯಾವುವೇ ಇದ್ದಾಗ್ಯೂ ಸಹ, ನೀವು ಯುಕ್ತ ಮತ್ತು ತಕ್ಕ ಪ್ರಮಾಣದಲ್ಲಿ ಪ್ರಾತಿನಿಧ್ಯವನ್ನು ಕೊಡುವಂತೆ ಸೇವೆಗಳಿಗೆ ಭರ್ತಿ ಮಾಡಬೇಕು ಎಂದು ಲೋಕಸೇವಾ ಆಯೋಗಗಳಿಗೆ ನಿರ್ದೇಶನವನ್ನು ಕೊಡುತ್ತೀರಿ. ಅದರ ಅರ್ಥವೆಂದರೆ ಅನ್ಯಥಾ ಸೇವೆಗಳಲ್ಲಿ ಪ್ರವೇಶ ಸಿಗದ ಕೋಮಿಗೆ ಅದರ ಕೋಟಾ ಸಿಗುವಂತೆ ಮಾಡಲು ಬೇರೆ ಬೇರೆ ಕೋಮುಗಳಲ್ಲಿ ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನು ಆಯೋಗ ಹೊಂದಿ ರುತ್ತವೆ. ಇಲ್ಲಿಯವರೆಗೆ ಲೋಕಸೇವೆಗಳಲ್ಲಿ ಭರ್ತಿ ಮಾಡದಿರುವ ಇತರ ಕೋಮುಗಳಿಗೆ ಇರುವ ತಕ್ಕ ಪ್ರಮಾಣದ ಪ್ರಾತಿನಿಧ್ಯದ ಕ್ಲೇಮನ್ನು ಮಾಡದಿರುವ ಇತರ ಕೋಮುಗಳಿಗೆ ಇರುವ ತಕ್ಕ ಪ್ರಮಾಣದ ಪ್ರಾತಿನಿಧ್ಯದ ಕ್ಲೇಮನ್ನು ಸರಿಪಡಿಸುವುದಕ್ಕಾಗಿ ಅವು ಇತರ ಕೋಮುಗಳ ಸದಸ್ಯರನ್ನು ಹೊರಗಿಡಬೇಕಾಗುತ್ತದೆ ಎಂದು ಅದರ ಅರ್ಥ ಮತ್ತು ಈ ಮೂಲಭೂತ ಹಕ್ಕನ್ನು ನೀವು ಪ್ರತಿಯೊಂದು ಕೋಮಿನ ಪ್ರತಿಯೊಬ್ಬ ವ್ಯಕ್ತಿಗೆ ಕೊಟ್ಟರೆ ನಿಜವಾಗಿಯೂ ಅದು ಲೋಕಸೇವಾ ಆಯೋಗವನ್ನು ಗೊಂದಲದಲ್ಲಿ ಹಾಕುತ್ತದೆ. ಏಕೆಂದರೆ ಇಂಥ ಮೂಲಭೂತ ಹಕ್ಕು ಇರುವ ವ್ಯಕ್ತಿಯು, ಬೇರೆ ಕೋಮಿನ ವ್ಯಕ್ತಿಗೆ ಪ್ರಾಶಸ್ತ್ಯ ಕೊಟ್ಟು ನನ್ನ ಹಕ್ಕಿಗೆ

---

* (ಉಪ ಸಮಿತಿ VIII (ಸೇವೆಗಳು)ರ ವ್ಯವಹರಣೆಗಳು, ಪುಟ ೧೧೧–೧೧೩)

ಬಾಧೆಯುಂಟುಮಾಡುತ್ತೀರಿ ಎಂದು ಹೇಳಬಹುದು. ತೊಂದರೆ ಇದರಲ್ಲಿಯೇ ಇದೆ ಎಂದು ನನಗೆ ಅನ್ನಿಸುತ್ತದೆ.

ಸರ್ ಚಿಮನಲಾಲ್ ಸೆಟಲವಾಡ: ಧರ್ಮ, ಜಾತಿ ಅಥವಾ ವಂಶದ ಕಾರಣಕ್ಕಾಗಿ ಯಾವುದೇ ಅನರ್ಹತೆ ಇರಬಾರದೆಂಬ ಮೂಲಭೂತ ಹಕ್ಕಿನ ವಾದವು ಭಾರತ ಸರಕಾರವನ್ನು ವಹಿಸಿಕೊಂಡಾಗ ವಿಕ್ಟೋರಿಯಾ ರಾಣಿಯು ಮಾಡಿದ ಘೋಷಣೆಯನ್ನು ಪುನರುಚ್ಚರಿಸಿದಂತೆ ಆಗುತ್ತದೆ. ಆಗ ಮಾಡಿದ ಘೋಷಣೆಯಲ್ಲಿ ಅದನ್ನು ಸೇರಿಸಲಾಗಿತ್ತು.

ರಾಜಾ ನರೇಂದ್ರನಾಥ: ಅದು ವ್ಯಾವಹಾರಿಕ ತೊಂದರೆಯನ್ನು ಪರಿಹರಿಸುವುದಿಲ್ಲ.

ಅಧ್ಯಕ್ಷ: ಮೂಲಭೂತ ಹಕ್ಕು ಈಗಾಗಲೇ ಇರುವುದಾಗಿ ನನಗೆ ಕಂಡು ಬರುವುದರಿಂದ, ಆ ಮೂಲಭೂತ ಹಕ್ಕನ್ನೇ ಪುನರುಚ್ಚರಿಸುವುದು ಅವಶ್ಯವೇ ಎಂದು ನಾನು ಕೇಳಬಹುದೇ? ನಮ್ಮ ವರದಿಯಲ್ಲಿ ಸರ್ ಚಿಮನ್‌ಲಾಲ್ ಅವರು ಓದಿದ ಮೊದಲಿನ ಎರಡು ಪ್ರಸ್ತಾವಗಳನ್ನು ಒಪ್ಪಿದರೆ ಮತ್ತು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಘೋಷಣೆಯಲ್ಲಿ ಸೇರಿಸದಿದ್ದರೆ ಉಪಸಮಿತಿಗೆ ಸಮಾಧಾನ ವಾಗುತ್ತದೆಯೋ?

ಡಾ. ಅಂಬೇಡ್ಕರ್: ನೇಮಕಾತಿಗಳನ್ನು ಮಾಡುವಲ್ಲಿ ಲೋಕಸೇವಾ ಆಯೋಗಗಳು ಸ್ಥಳೀಯ ಸರಕಾರಗಳಿಂದ ಪ್ರಭಾವಿತರಾಗದಂತೆ ನಾವು ಎಚ್ಚರ ವಹಿಸಬೇಕು ಎಂದು ನಾನು ಸೂಚಿಸುತ್ತೇನೆ. ಅಲ್ಲದೆ ಲೋಕಸೇವಾ ಆಯೋಗವು ತನ್ನ ಅಧಿಕಾರದ ದುರುಪಯೋಗಪಡಿಸಿಕೊಳ್ಳದಂತೆಯೂ ನಾವು ಎಚ್ಚರಿಕೆ ವಹಿಸಬೇಕು. ಈ ಅಂಶಗಳ ಬಗ್ಗೆ ವಿಶೇಷವಾಗಿ ನನ್ನ ಭಾವನೆಗಳನ್ನು ವ್ಯಕ್ತ ಮಾಡುತ್ತೇನೆ. ಲೋಕಸೇವಾ ಆಯೋಗವು ತನ್ನ ಸದಸ್ಯರ ಸಂಖ್ಯೆಯಲ್ಲಿ ತುಂಬಾ ಪರಿಮಿತವಾಗಿರತಕ್ಕುದು. ಆದಕಾರಣ ದೇಶದಲ್ಲಿಯ ಪ್ರತಿಯೊಂದು ಕೋಮಿನವರ ಪ್ರಾತಿನಿಧ್ಯಕ್ಕೆ ನಾವು ಅವಕಾಶ ಕೊಡಲಾರೆವು. ಹಲವು ಕೋಮುಗಳಿಂದ ಮಾತ್ರ ಸದಸ್ಯರನ್ನೂ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಮಾನವನ ಸ್ವಭಾವ ತನ್ನದೇ ಆದ ಸ್ವರೂಪ ಹೊಂದಿರುವುದರಿಂದ ಲೋಕಸೇವಾ ಆಯೋಗವು ತನ್ನ ಅಧಿಕಾರದ ದುರುಪಯೋಗಮಾಡಿಕೊಳ್ಳಬಹುದು.

ಮಿ ಮೋದಿ: ಇದಕ್ಕೆ ಪರಿಹಾರವೇನು?

ಡಾ. ಅಂಬೇಡ್ಕರ್: ಪರಿಹಾರವೆಂದರೆ, ವಿಧಾನ ಪರಿಷತ್ತು ಲೋಕಸೇವಾ ಆಯೋಗದಲ್ಲಿ ಅವಿಶ್ವಾಸ ಸೂಚಿಸಿ ಠರಾವನ್ನು ಮಾಡುವ ಅಧಿಕಾರವನ್ನು ಹೊಂದಿರುವುದೇ ಆಗಿರುತ್ತದೆ. ಉದಾಹರಣೆಗೆ ಹೇಳ ಬೇಕೆಂದರೆ,

ಸರ್ ಚಿಮನ್‌ಲಾಲ್ ಸೆಟಲ್‌ವಾಡ್: ಅದು ಪೂರ್ಣ ಉದ್ದೇಶವನ್ನೇ ವಿಫಲಗೊಳಿಸುತ್ತದೆ.

ಡಾ. ಅಂಬೇಡ್ಕರ್: ಈ ವಿಧಾನವು ಅಪೇಕ್ಷಣೀಯವಲ್ಲವೆಂದರೆ, ಈ ಅಂಶದ ಮೇಲೆ ಬೇರೆ ವಿಧಾನ, ಬೇರೆ ಮಾರ್ಗವನ್ನು ನಾನು ಸ್ವಾಗತಿಸುತ್ತೇನೆ. ಆದರೆ ತನ್ನ ಕೋಮಿನವರಲ್ಲಿ ಮಾತ್ರವೇ ಹಿತಾಸಕ್ತಿ ಇರುವ ಮತ್ತು ಇತರರಲ್ಲಿ ಇಲ್ಲದ ಲೋಕಸೇವಾ ಆಯೋಗವನ್ನು ಹೊಂದುವುದರಿಂದ ಯಾವ ಉಪಯೋಗವೂ ಆಗುವುದಿಲ್ಲ ಎಂದು ನಾನು ಬಲವಾಗಿ ಭಾವಿಸುತ್ತೇನೆ.

* ಸರ್ ಚಿಮನ್‌ಲಾಲ್ ಸೆಟಲ್‌ವಾಡ್: ಹಲವಾರು ಕೋಮುಗಳ ಯುಕ್ತ ಪ್ರಾತಿನಿಧ್ಯವನ್ನು ಲೋಕಸೇವಾ ಆಯೋಗವು ಪಡೆದುಕೊಳ್ಳಬೇಕು ಎಂದು ಹೇಳಿಯಾದ ಮೇಲೆ ಸೂಚನೆಗಳ ಲಿಖಿತದಲ್ಲಿ ಗವರ್ನರನಿಗೆ

* (ಉಪಸಮಿತಿ ನಂ.VIII (ಸೇವೆಗಳು)ರ ವ್ಯವಹರಣೆಗಳು, ಪುಟಗಳು ೧೨೧–೧೨೨)

ಅಂಥ ಯುಕ್ತ ಪ್ರಾತಿನಿಧ್ಯವನ್ನು ಸಾಧಿಸಲಾಗುವಂತೆ ಅಧಿಕಾರವನ್ನು ಕೊಡೋಣ.

ಡಾ. ಅಂಬೇಡ್ಕರ್: ಗವರ್ನರನು ಅವರಿಗೆ ಕೊಡುವ ನಿರ್ದೇಶನಕ್ಕೊಳಪಟ್ಟು ಇದು ಇರತಕ್ಕುದು ಎಂದು ನೀವು ಎರಡನೆಯ ವಾಕ್ಯಾವಳಿಯಲ್ಲಿ ಅವಕಾಶ ಕಲ್ಪಿಸಬಹುದು.

ಸರ್ ಚಿಮನ್‌ಲಾಲ್ ಸೆಟಲ್‌ವಾಡ್: ಅದು ಗವರ್ನರನಿಗೆ ಮಿತಿ ಮಿರಿದ ಅಧಿಕಾರವನ್ನು ಕೊಟ್ಟಂತಾಗುತ್ತದೆ. ನಿಮಗೆ ಬೇಕಾದುದೆಂದರೆ ಹಲವಾರು ಕೋಮುಗಳಿಗೆ ಯುಕ್ತ ಪ್ರಾತಿನಿಧ್ಯ ದೊರಕಿಸಿಕೊಡುವುದು. ನಾವು ಅವಕಾಶ ಕಲ್ಪಿಸಿಕೊಟ್ಟ ಯುಕ್ತ ಪ್ರಾತಿನಿಧ್ಯವನ್ನು ಲೋಕಸೇವಾ ಆಯೋಗವು ವಾಸ್ತವವಾಗಿ ಸಾಧಿಸಿದೆ ಎನ್ನುವುದನ್ನು ನೀವು ನೋಡಬೇಕಾಗಿದೆ.

ಮಿ. ಜಫ್ರುಲ್ಲಾ ಖಾನ್: ಗವರ್ನರನು ಹೇಗೆ ಆ ಬಗ್ಗೆ ನಿಗಾ ಇಡಬಲ್ಲನು?

ಅಧ್ಯಕ್ಷ: ಮೇಜರ್ ಸ್ಟೇನಿ ಈ ಸೂಚನೆ ಮಾಡಿ ಉಪಕಾರ ಮಾಡಿದ್ದಾರೆ. ಅದು ಈ ಎರಡರ ಮಧ್ಯವರ್ತಿ ಮಾರ್ಗವಾಗಬಹುದು. ಈ ಬಗ್ಗೆ ಅವರು ಹಲವು ಪದಗಳನ್ನು ಸೂಚಿಸುತ್ತಾರೆ. ಎರಡನೆಯ ವಾಕ್ಯಾವಳಿಯ ಕೊನೆಗೆ ನಾವು "ಲೋಕಸೇವಾ ಆಯೋಗಗಳ ಕರ್ತವ್ಯದ ಈ ಭಾಗವು ಪ್ರಾಂತೀಯ ಲೋಕಸೇವಾ ಆಯೋಗಗಳಿಗೆ ಸಂಬಂಧಿಸಿದಂತೆ ಗವರ್ನರನ ಕಾಲ ಕಾಲದ ಪುನರ್ವೀಕ್ಷಣೆಗೆ ಮತ್ತು ಕೇಂದ್ರ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದಂತೆ ಗವರ್ನರ ಜನರಲ್ಲನ ಪುನರ್ವೀಕ್ಷಣೆಗೆ ಒಳಪಟ್ಟಿರ ತಕ್ಕುದು ಮತ್ತು ಅಪೇಕ್ಷಿತ ಪರಿಣಾಮವನ್ನು ಸಾಧಿಸಲು ಅವಶ್ಯಕ ಸೂಚನೆಗಳನ್ನು ಕೊಡಲು ಅವರಿಗೆ ಅಧಿಕಾರವಿರತಕ್ಕುದು"ಎಂದು ಸೇರಿಸಬಹುದು.

ಡಾ. ಅಂಬೇಡ್ಕರ್: ಸರಿ.

ಸರ್ ಚಿಮನ್ ಲಾಲ್ ಸೆಟಲ್‌ವಾಡ್: ಅದು ಸರಿ. ಅದನ್ನು ಒಪ್ಪಲು ನಾನು ಸಿದ್ಧನಿದ್ದೇನೆ.

* ಮಿ. ಶಿವರಾವ್: ಲೋಕಸೇವಾ ಆಯೋಗದ ಪ್ರತಿಯೊಬ್ಬ ಸದಸ್ಯನು ಅವನು ಉತ್ತಮ ನಡತೆಯವ ನಿರುವವರೆಗೆ ಮಾತ್ರ ಅಧಿಕಾರದಲ್ಲಿರತಕ್ಕುದು ಮತ್ತು ಆಯೋಗದ ಅಧ್ಯಕ್ಷನು ಇತರ ಸದಸ್ಯರನ್ನು ಕೇಂದ್ರ ಶಾಸನ ಸಭೆಯು ಗವರ್ನರ ಜನರಲ್ಲನಿಗೆ ಹಾಗೆ ವಿನಂತಿಸಿಕೊಂಡ ಹೊರತು ಮತ್ತು ಪ್ರಾಂತೀಯ ಲೋಕ ಸೇವಾ ಆಯೋಗಗಳಿಗೆ ಸಂಬಂಧಿಸಿದಂತೆ ಪ್ರಾಂತೀಯ ಶಾಸನ ಸಭೆಯು ಸಂಬಂಧಿಸಿದ ಗವರ್ನರನಿಗೆ ಹಾಗೆ ವಿನಂತಿಸಿಕೊಂಡ ಹೊರತು, ಸೇವೆಯಿಂದ ತೆಗೆದು ಹಾಕತಕ್ಕುದಲ್ಲ ಎಂದು ಹೇಳಬೇಕೆಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷ: ಮಿ. ಶಿವರಾವ್ ಅವರು ಹೊಸ ವಾಕ್ಯಾವಳಿಯನ್ನು ಸೂಚಿಸಿದ್ದಾರೆ ಮತ್ತು ಅದನ್ನು ಅವರು ತುಂಬಾ ಸ್ಪಷ್ಟವಾಗಿಯೂ ಹೇಳಿದ್ದಾರೆ. ನಾವು ಭಾಷೆಗೆ ನಮ್ಮನ್ನು ಕಟ್ಟಿಹಾಕಿಕೊಳ್ಳುವುದಿಲ್ಲ. ಆದರೆ ಅದರ ಮಥಿತಾರ್ಥ ಎಂದರೆ ಉತ್ತಮ ನಡತೆಯವನಿರುವಾಗ ಪದವಿಯಲ್ಲಿರತಕ್ಕುದು ಮತ್ತು ಚೇರ್ಮನ್ನನ್ನೇ ಆಗಲಿ ಅಥವಾ ಸದಸ್ಯನನ್ನೇ ಆಗಲಿ ಶಾಸನ ಸಭೆಗಳು ಸಂದರ್ಭಾನುಸಾರ ಗವರ್ನರನಿಗೆ ಅಥವಾ ಗವರ್ನರ ಜನರಲ್ಲನಿಗೆ ವಿನಂತಿಸುವ ಮೂಲಕ ತೆಗೆದುಹಾಕಬಹುದು ಎಂದು ನಾವು ಹೊಸ ವಾಕ್ಯಾವಳಿಯಲ್ಲಿ ಹೇಳಬೇಕು ಎಂಬುದೇ ಆಗಿದೆ. ಅದನ್ನು ಹಾಗೆ ಸೇರಿಸೋಣ.

ಡಾ. ಅಂಬೇಡ್ಕರ್: ನಾನು ಅದನ್ನು ಸಮರ್ಥಿಸುತ್ತೇನೆ.

* ಡಾ. ಅಂಬೇಡ್ಕರ್: ಮಿ.ಶಿವರಾವ್ ಅವರ ಅಭಿಪ್ರಾಯದಂತೆ ಲೋಕಸೇವಾ ಆಯೋಗದ

---

* ಅದೇ, ಪುಟ ೧೨೪

* ಅದೇ, ಪುಟಗಳು ೧೨೫–೧೨೬

ಸದಸ್ಯರನ್ನು ತೆಗೆದುಹಾಕುವ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲವನ್ನೂ ಗವರ್ನರನ ಅಥವಾ ಗವರ್ನರ ಜನರಲ್ಲನ ವಿವೇಚನೆಗೆ ಬಿಟ್ಟುಬಿಡಬೇಕು. ಶಾಸನಸಭೆಯು ವಾಸ್ತವವಾಗಿ ಬಹುಮತದಿಂದ ಠರಾವನ್ನು ಪಾಸುಮಾಡಿದೆ ಎಂಬ ಸಂಗತಿಯು ಅವರನ್ನು ತೆಗೆದುಹಾಕಲು ಸಾಕಷ್ಟಾಗುವುದಿಲ್ಲ. ಆದರೆ, ಗವರ್ನರ ಅಥವಾ ಗವರ್ನರ ಜನರಲ್ಲನು ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎಂಬುದನ್ನು ಪರಿಶೀಲಿಸುತ್ತಾನೆ.

ರಾಜಾ ನರೇಂದ್ರನಾಥ: ನೇಮಕಾತಿಗೆ ಸಂಬಂಧಿಸಿದಂತೆ ಶಾಸಕಾಂಗವು ಯಾವುದೇ ರೀತಿಯ ಹಸ್ತಕ್ಷೇಪ ಮಾಡಲು ನಾನು ಬಿಡುವುದಿಲ್ಲ.

ಡಾ. ಅಂಬೇಡ್ಕರ್: ನ್ಯಾಯಾಧೀಶರು ಭ್ರಷ್ಟರಾಗಿರಬಹುದಾದ ಹಾಗೆಯೇ ಯಾವನೇ ವ್ಯಕ್ತಿ ಭ್ರಷ್ಟನಾಗಿರಬಹುದು. ಅದಕ್ಕೆ ಯಾವ ಪರಿಹಾರವೂ ಇರಲೇಬಾರದೆ? ಅಂಥ ವ್ಯಕ್ತಿಗಳನ್ನು ತೆಗೆದುಹಾಕಲು ಯಾವ ಮಾರ್ಗವೂ ಇರಬಾರದೇ? ಮಂತ್ರಿಗಳು ಸ್ವಜನ ಪಕ್ಷಪಾತಿಗಳಾಗಬಾರದೆಂದು ನಾವು ಕ್ರಮ ತೆಗೆದುಕೊಂಡಿದ್ದೇವೆ. ಏಕೆಂದರೆ, ಅವರು ಭ್ರಷ್ಟರಾಗಬಹುದೆಂದು ನಾವು ಭಾವಿಸುತ್ತೇವೆ. ಆದರೆ, ಲೋಕ ಸೇವಾ ಆಯೋಗಗಳವರೂ ಭ್ರಷ್ಟರಾಗಬಹುದು ಮತ್ತು ಆಯೋಗದ ಯಾವುದೇ ಸದಸ್ಯರನ್ನು ತೆಗೆದುಹಾಕಲು ನಮಗೆ ಅವಕಾಶವಿಲ್ಲದೇ ಹೋದರೆ ಪರಿಸ್ಥಿತಿ ಏನಾಗಬಹುದು?

ಡಾ. ಶಫಾಯತ ಅಹಮದ್ ಖಾನ್: ಲೋಕಸೇವಾ ಆಯೋಗದ ಸದಸ್ಯನನ್ನು ಗವರ್ನರನು ತೆಗೆದು ಹಾಕಬಹುದು ಎಂಬುದಕ್ಕೆ ಡಾ. ಅಂಬೇಡ್ಕರ್ ಅವರು ಒಪ್ಪುತ್ತಾರೆ. ಹಾಗಾದರೆ ಶಾಸಕಾಂಗಗಳು ಆ ಬಗ್ಗೆ ವಿನಂತಿಸುವುದರ ಪ್ರಯೋಜನವೇನು? ಕಾರ್ಯಾಂಗದ ಚರ್ಚಾ ಸ್ವರೂಪದ ಪ್ರಕಾರ್ಯಗಳಿಂದ ಕಾರ್ಯಾಂಗದ ಪ್ರಕಾರ್ಯಗಳನ್ನು ನಾವು ಬೇರೆಯಾಗಿಯೇ ಇಡತಕ್ಕುದು. ಇಂಥ ವಿಷಯಕ್ಕೆ ಸಂಬಂಧಿಸಿ ದಂತೆ ಎರಡು ಪ್ರಕಾರ್ಯಗಳನ್ನು ಒಟ್ಟುಗೂಡಿಸಿದರೆ, ಸಾವಿರಾರು ನೇಮಕಾತಿಯ ವಿಷಯ ಅಡಕ ವಾಗಿರುವಾಗ, ನಾವು ಎರಡರ ಪ್ರಕಾರ್ಯಗಳನ್ನು ಬೆರೆಸಿದರೆ, ನಾವು ತೊಂದರೆಗೆ ಆಹ್ವಾನ ನೀಡಿದಂತೆ ಮತ್ತು ಲೋಕಸೇವಾ ಆಯೋಗದ ಇಡಿಯ ವ್ಯವಹಾರವನ್ನು ನಿರುಪಯೋಗಿ ಮತ್ತು ನಿಷ್ಪ್ರಯೋಜಕ ಮಾಡುತ್ತೇವೆ.

ಅಧ್ಯಕ್ಷ: ಇದು ಉಪಸಮಿತಿಯ ಅಪೇಕ್ಷೆಗನುಗುಣವಾದುದಾಗಿದೆ ಎಂದು ನಾನು ಭಾವಿಸುತ್ತೇನೆ. ಲೋಕಸೇವಾ ಆಯೋಗದ ಯಾವುದೇ ಸದಸ್ಯನು ತನ್ನ ಉತ್ತಮ ನಡತೆಯ ಅವಧಿಯಲ್ಲಿ ಪದವಿಯಲ್ಲಿರ ತಕ್ಕುದು ಮತ್ತು ಸಂದರ್ಭಾನುಸಾರ ಗವರ್ನರ ಅಥವಾ ಗವರ್ನರ ಜೆನರಲ್ಲನು ಅವನನ್ನು ತೆಗೆದು ಹಾಕಲು ಬರುವಂತಿರಬೇಕು (ಒಪ್ಪಲಾಯಿತು).

ಸರ್ ಪ್ರೋವಶ ಚಂದ್ರ ಮಿತ್ತರ್: ಶಾಸಕಾಂಗವನ್ನು ವಿಶೇಷವಾಗಿ ಒಳತರದಂತಾದರೆ ನನಗೆ ಸಮಾಧಾನವಾಗುವುದು.

ಅಧ್ಯಕ್ಷ: ಈ ಹೆಚ್ಚಿನ ತಿದ್ದುಪಡಿಯು ಈ ಉಪಸಮಿತಿಯ ಇಚ್ಛೆಗನುಗುಣವಾಗಿದೆಯೋ? (ಒಪ್ಪಲಾಯಿತು) ವರದಿ ಮಾಡುವ ಹಂತದಲ್ಲಿ ನಾವು ಅದರ ಬಗ್ಗೆ ವಿಚಾರಿಸೋಣ: ಈಗ ನಾವು ಅದನ್ನು ಔಪಚಾರಿಕವಾಗಿ ಪರ್ಯಾಲೋಚಿಸುತ್ತಿದ್ದೇವೆ.

ಈಗ ನಾವು ಕರ್ನಲ್ ಗಿಡ್ನೆ ಅವರ ಸೂಚನೆಯನ್ನು ಗಮನಿಸೋಣ.

ಡಾ. ಅಂಬೇಡ್ಕರ್: ನಾವು ಕರ್ನಲ್ ಗಿಡ್ನೆ ಅವರ ಸೂಚನೆಯನ್ನು ಎತ್ತಿಕೊಳ್ಳುವ ಮುಂಚೆ ಕರಡನ್ನು ಮೊದಲನೆ ಸಾರಿ ಓದಿ ತೋರಿಸಿದಾಗ ಲೋಕಸೇವಾ ಆಯೋಗದ ಸದಸ್ಯನು ಅಂಥ ಆಯೋಗದ

ಸದಸ್ಯನ ಹುದ್ದೆಯಿಂದ ಬಿಡುಗಡೆಯಾದ ನಂತರ ಪ್ರಭುತ್ವದ ಯಾವುದೇ ಸೇವೆಯಲ್ಲಿ ಸೇರಲು ಅರ್ಹನಾಗಿರತಕ್ಕುದಲ್ಲ ಎಂಬ ವಾಕ್ಯಾವಳಿ ಅದರಲ್ಲಿತ್ತು.

* ಅಧ್ಯಕ್ಷ: ಸೂಚನೆ ಏನಿದೆ ಎಂಬುದನ್ನು ಈಗ ನಾನು ನಿಮ್ಮ ಮುಂದೆ ಇಡಲು ಬಯಸುತ್ತೇನೆ. "ಪ್ರಾಂತೀಯ ಆಡಳಿತದ ಕೆಳಗೆ ಇಡತಕ್ಕುದು" ಎಂಬ ಶಬ್ದಗಳನ್ನು ದಯಮಾಡಿ ತೆಗೆದುಹಾಕುತ್ತೀರಾ ಮತ್ತು "ಇನ್ನು ಮುಂದೆ ಅಖಿಲ ಭಾರತ ಆಧಾರದ ಮೇಲೆ ಭರ್ತಿ ಮಾಡತಕ್ಕುದಲ್ಲ" ಎಂಬ ಪದಗಳನ್ನು ಸೇರಿಸುತ್ತೀರಾ?

"ಈ ಎರಡು ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ವಿಶೇಷ ಶಿಫಾರಸುಗಳನ್ನು ಮಾಡುವುದು ಅವಶ್ಯವೆಂದು ನಮಗೆ ಅನ್ನಿಸುವುದಿಲ್ಲ."

"ಭಾರತ ಸಿವಿಲ್ ಸೇವೆ ಮತ್ತು ಭಾರತ ಪೋಲಿಸ್ ಸೇವೆಗಳಿಗಾಗಿ ಭರ್ತಿಯು ಅಖಿಲ ಭಾರತ ಆಧಾರದ ಮೇಲೆಯೇ ಮುಂದುವರೆಯತಕ್ಕುದು (ಮಿ.ಶಿವರಾವ್ ಸಮ್ಮತಿಸುವುದಿಲ್ಲ)"– ಅವರು ಒಬ್ಬರೇ ಇರುತ್ತಾರೋ ಅಥವಾ ಅವರ ಜೊತೆಗೆ ಇನ್ನಾರಾರೂ ಇರುತ್ತಾರೋ ನನಗೆ ತಿಳಿಯದು.

ಡಾ. ಅಂಬೇಡ್ಕರ್: ಈ ಎರಡೂ ಸೇವೆಗಳಲ್ಲಿ ಯುರೋಪಿಯನ್ನರನ್ನು ಹೊರತುಪಡಿಸಿ ಉಳಿದವರನ್ನು ಪ್ರಾಂತೀಯಗೊಳಿಸಬೇಕು ಎಂಬುದು ನನ್ನ ಠರಾವು ಇರುತ್ತದೆ.

ಅಧ್ಯಕ್ಷ: ಅದನ್ನು ಬೇರೆಯಾಗಿಯೇ ಹೇಳಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ.

"(ಶಿವರಾವ್ ಅವರು ಈ ನಿರ್ಣಯಕ್ಕೆ ಸಮ್ಮತಿಸುವುದಿಲ್ಲ. ಮತ್ತು ಈ ಕೂಡಲೇ ಎಲ್ಲ ಸೇವೆಗಳನ್ನೂ ಪ್ರಾಂತೀಯಗೊಳಿಸಬೇಕು ಎನ್ನುತ್ತಾರೆ.)" ನಾವು ಇಲ್ಲಿ ಹೀಗೆ ಜೋಡಿಸಬೇಕು ಎಂದು ಸೂಚಿಸುತ್ತೇನೆ. "ನ್ಯಾಯಾಂಗ ಅಧಿಕಾರಿಗಳನ್ನು ಇನ್ನು ಮಂದೆ ಭಾರತೀಯ ಸಿವಿಲ್ ಸೇವೆಗಳಿಂದ ಭರ್ತಿ ಮಾಡತಕ್ಕುದಲ್ಲ ಎಂಬ ಅಭಿಪ್ರಾಯವನ್ನು ಕೆಲವು ಸದಸ್ಯರು ಹೊಂದಿರುತ್ತಾರೆ.

* ಡಾ. ಅಂಬೇಡ್ಕರ್: ನಾನು ಎರಡೂ ಸೇವೆಗಳು (ಭಾರತೀಯ ಪೋಲೀಸ್ ಸೇವೆಗಳು) ಪ್ರಾಂತೀಯ ಆಧಾರದ ಮೇಲಿರುವುದರ ಪರವಾಗಿದ್ದೇನೆ. ಆದರೆ, ಈ ಎರಡೂ ಸೇವೆಗಳಿಗೆ ಸಂಬಂಧಿಸಿದಂತೆ ಯುರೋಪಿಯನ್ನರು ಅಪವಾದವಾಗಿದ್ದಾರೆ ಎಂದು ಪರಿಗಣಿಸಲು ನಾನು ಸಿದ್ಧ.

ಮಿ. ಜಫ್ರುಲ್ಲಾ ಖಾನ್: ಡಾ. ಅಂಬೇಡ್ಕರರು ಹೇಳಿದ್ದಕ್ಕೆ ನನ್ನ ಒಪ್ಪಿಗೆ ಇರುತ್ತದೆ.

ಸರ್ದಾರ ಸಂಪೂರ್ಣ ಸಿಂಗ್: ಅದೇ ಅಭಿಪ್ರಾಯವನ್ನು ನಾನು ಬೆಂಬಲಿಸುತ್ತೇನೆ.

ಅಧ್ಯಕ್ಷ: ನಾನು ಉಪಕೃತನಾಗಿದ್ದೇನೆ. ಅದನ್ನು ಖಚಿತವಾಗಿ ಸೇರಿಸಲಾಗುವುದು.

ಡಾ. ಅಂಬೇಡ್ಕರ್: ಎರಡನೆಯ ಪುಟದ ಪ್ಯಾರಾದ ಪ್ರಾರಂಭದಲ್ಲಿ "ಅಂಥ ಸರಕಾರವು ತನಗೆ ಅಗತ್ಯವೆನ್ನಿಸಿದರೆ ನಿಸ್ಸಂಶಯವಾಗಿಯೂ" ಮತ್ತು ಇತ್ಯಾದಿ, ಇತ್ಯಾದಿಯಾಗಿ ನೀವು ಲೋಕಸೇವಾ ಇಲಾಖೆಗಳ ಪುನರ್‌ರಚನೆಯ ಮತ್ತು ಹೊಂದಾಣಿಕೆಯ ಪ್ರಶ್ನೆಯನ್ನು ಎತ್ತಿದ್ದಿರಿ. ಇಂದು ಬೆಳಗ್ಗೆ ನಡೆದ ಚರ್ಚೆಯನ್ನು ಗಮನಿಸಿ ಸಂಬಳದ ಆಧಾರದ ಪ್ರಶ್ನೆಯನ್ನು ನೀವು ಅದರಲ್ಲಿ ಸೇರಿಸುತ್ತೀರಾ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

ಅಧ್ಯಕ್ಷ: ಅದು ಈ ಪದಗಳಲ್ಲಿಯೇ ಬರುತ್ತದೆ ಎಂದು ನಾನು ಭಾವಿಸಿದ್ದೇನೆ.

---

* (ಉಪಸಮಿತಿ VIII (ಸೇವೆಗಳು)ರ ವ್ಯವಹರಣೆಗಳು, ಪುಟ ೧೨೮)

* ಅದೇ, ಪುಟ ೧೩೨.

# ನಾಲ್ಕನೆಯ ಸಭೆ
# ೯ ಜನವರಿ ೧೯೩೧

* ಲಾರ್ಡ್ ಜೆಟ್‌ಲ್ಯಾಂಡ್: ಇಲ್ಲ. ಸ್ಥಳೀಯ ಸರಕಾರದ ಅಧಿಕಾರ ವ್ಯಾಪ್ತಿಯನ್ನು ನೀವು ವಾಪಸು ತೆಗೆದುಕೊಳ್ಳಲಾರಿರಿ. ಏಕೆಂದರೆ, ತಮ್ಮ ಅಧಿಕಾರಿಗಳ ಮೇಲೆ ಸ್ಥಳೀಯ ಸರಕಾರದ ಅಧಿಕಾರವೇ ಶ್ರೇಷ್ಠವಾದುದಾಗಿರಬೇಕು ಎಂಬುದು ಅನುಸರಿಸಲು ಅಪೇಕ್ಷಣೀಯವಾದ ರೂಢಿಯಾಗಿರಬೇಕು ಎಂದು ನಾವು ಹೇಳಬಹುದು. ಮಾನ್ಯರೇ, ಅದು ಉಪಸಮಿತಿಯ ಮುಂದೆ ಹೇಳಬೇಕಾದುದನ್ನೊಳಗೊಳ್ಳುತ್ತದೆ ಎಂದು ನಾನು ಭಾವಿಸಿದ್ದೇನೆ. ೧೮೬೧ರ ಪೋಲೀಸ್ ಅಧಿನಿಯಮದ ಮೇರೆಗೆ ಇನ್‌ಸ್ಪೆಕ್ಟರ್ ಜನರಲ್ಲನಲ್ಲಿ ನಿಹಿತವಾಗಿರುವ ಖಚಿತ ಅಧಿಕಾರಗಳನ್ನು ಉಳಿಸಿಕೊಳ್ಳಬೇಕೆಂಬುದನ್ನು ಖಚಿತಪಡಿಸಿಕೊಳ್ಳುವುದೇ ಇದರ ಮುಖ್ಯ ಅಂಶವಾಗಿದೆ. ಮತ್ತು ಪ್ರಾಂತಗಳಲ್ಲಿ ಪೋಲೀಸ್ ಕೌನ್ಸಿಲ್ಲುಗಳ ಸ್ಥಾಪನೆ ಇತ್ಯಾದಿಗಳಂಥ ಇತರ ಹಲವಾರು ಸೂಚನೆಗಳನ್ನು ಪರ್ಯಾಲೋಚನೆಗಾಗಿ ನಾನು ಈ ಉಪಸಮಿತಿಯ ಮುಂದೆ ಇಡುತ್ತೇನೆ.

ಡಾ. ಅಂಬೇಡ್ಕರ್: ನೀವು ಅನುಮತಿಸಿದರೆ ಮಾಹಿತಿಗಾಗಿ ನಾನು ಒಂದು ಪ್ರಶ್ನೆ ಕೇಳಬೇಕೆನ್ನುತ್ತೇನೆ. ಸನ್ಮಾನ್ಯ ಮಾರ್ಕ್ವಿಸ್ ಅವರು ಇನ್‌ಸ್ಪೆಕ್ಟರ್ ಜನರಲ್ ಅವರ ಸ್ಥಾನವನ್ನು ಶಾಸನದ ಮೂಲಕವೇ ಗುರುತಿಸಬೇಕೆಂದು ಅಥವಾ ಪೋಲಿಸ್ ಅಧಿನಿಯಮದ ಮೇರೆಗೆ ಅದು ಈಗಿರುವಂತೆಯೇ ಮುಂದುವರೆಯಬೇಕೆಂದು ಇಚ್ಛಿಸುತ್ತಾರೋ? ಅಥವಾ ಹಲವು ಶಾಸನಾತ್ಮಕ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಹೊಂದಿರುವ ಅಧಿಕಾರಿಗಳೆಂದು ಶಾಸನವು ಗುರುತಿಸಿದವರಾಗಬೇಕೆಂದು ಅವರು ಹೇಳುತ್ತಾರೋ?

ಲಾರ್ಡ್ ಜೆಟ್‌ಲ್ಯಾಂಡ್: ಹೌದು.

ಸರ್ ಪಿ. ಸಿ. ಮಿತ್ತಲ್: ಸಂಸದೀಯ ಶಾಸನದ ಮೇರೆಗೋ?

ಲಾರ್ಡ್ ಜೆಟ್‌ಲ್ಯಾಂಡ್: ಅದು ಸರಿ. ಇನ್‌ಸ್ಪೆಕ್ಟರ್ ಜನರಲ್ಲರಿಗೆ ಈಗ ಇಂಥ ಅಧಿಕಾರಿಗಳು ಶಾಸನದ ಮೇರೆಗೆ ಅಂದರೆ ಪೊಲೀಸ್ ಅಧಿನಿಯಮದ ಮೇರೆಗೆ ಇರುತ್ತವೆ.

ಡಾ. ಅಂಬೇಡ್ಕರ್: ಅದು ಪೊಲೀಸ್ ಅಧಿನಿಯಮಕ್ಕೆ ಬೇರೆ ವಿಷಯವಾಗಿದೆ. ಸ್ಥಳೀಯ ಶಾಸನ ಸಭೆಯು ಆ ಅಧಿನಿಯಮವನ್ನು ತಿದ್ದಬಲ್ಲದು. ಹಲವು ವಿಶಿಷ್ಟ ಕರ್ತವ್ಯಗಳನ್ನು ನಿರ್ವಹಿಸುವ ಅಧಿಕಾರಿ ಎಂದು ಮತ್ತು ಮಂತ್ರಿಯ ಅಥವಾ ಸ್ಥಳೀಯ ಸರಕಾರ ಹಸ್ತಕ್ಷೇಪಕ್ಕೆ ಅವಕಾಶವಿಲ್ಲದ ಅಧಿಕಾರಿ ಎಂದು ನೀವು ಇನ್‌ಸ್ಪೆಕ್ಟರ್ ಜನರಲ್ಲರ ಹುದ್ದೆಯನ್ನು ಗುರುತಿಸಬೇಕೆಂದು ನೀವು ಬಯಸುತ್ತೀರಾ?

---

* (ಉಪಸಮಿತಿ ನಂ.VIII (ಸೇವೆಗಳು)ರ ವ್ಯವಹರಣೆಗಳು, ಪುಟಗಳು ೧೮೧–೮೨)

ಲಾರ್ಡ್ ಜೆಟ್‌ಲ್ಯಾಂಡ್: ಅದರ ಪರಿಣಾಮವೇ ಅದು. ಅದು ನನ್ನ ಸೂಚನೆ. ಈಗ ಇನ್‌ಸ್ಪೆಕ್ಟರ್ ಜನರಲ್ಲನಲ್ಲಿ ನಿಹಿತವಾಗಿರುವ ಅಧಿಕಾರಗಳನ್ನು ಉಳಿಸಿಕೊಳ್ಳಬೇಕು ಎಂಬುದು ನನ್ನ ಭಾವನೆ.

ಸರ್ ಕೌಸಾಜೀ ಜಹಾಂಗೀರ: ಯಾವ ಅಧಿಕಾರದ ಮೇರೆಗೆ? ಪೊಲೀಸ್ ಅಧಿನಿಯಮದ ಮೇರೆಗೋ ಅಥವಾ ಭಾರತ ಸರಕಾರದ ಅಧಿನಿಯಮದ ಮೇರೆಗೋ?

ಸರ್ ಚಿಮನ್‌ಲಾಲ್ ಸೆಟಲ್‌ವಾಡ್: ಪೋಲೀಸ್ ಅಧಿನಿಯಮದ ಉಪಬಂಧಗಳನ್ನು ಬದಲಾಯಿಸುವುದು ಸ್ಥಳೀಯ ಶಾಸನ ಸಭೆಯ ಅಥವಾ ಯಾವುದೇ ಶಾಸನ ಸಭೆಯ ಅಧಿಕಾರದ ಆಚೆಗೆ ಇರತಕ್ಕುದು.

ಲಾರ್ಡ್ ಜೆಟ್‌ಲ್ಯಾಂಡ್: ಹೌದು. ಅದು ಫೆಡರಲ್ ಸರಕಾರದ ಅಧಿನಿಯಮವಾಗಿರತಕ್ಕುದು.

ಮಿ. ಜಫ್ರುಲ್ಲಾಖಾನ್: ಗವರ್ನರ ಜನರಲ್ಲರ ಸಮ್ಮತಿ ಇಲ್ಲದೆಯೇ ಯಾವುದೇ ಪ್ರಾಂತೀಯ ಸರಕಾರವು ನಿರಸನಗೊಳಿಸಲಾಗದ, ಬದಲಾಯಿಸಲಾಗದ ಅಥವಾ ಮಾರ್ಪಾಡುಗೊಳಿಸಲಾಗದ ಅಧಿನಿಯಮಗಳ ಹಾದಿಯಲ್ಲಿ ಅದನ್ನು ಸೇರಿಸುವುದರ ಮೂಲಕ ಹಾಗೆ ಮಾಡಬಹುದು.

ಡಾ. ಅಂಬೇಡ್ಕರ್: ಈಗಿರುವ ಸ್ಥಿತಿಯೂ ಅದೇ. ಏಕೆಂದರೆ ಕೇಂದ್ರ ಸರಕಾರದ ಅನುಮತಿ ಇಲ್ಲದೆಯೇ ಈ ಅಧಿನಿಯಮವನ್ನು ತಿದ್ದುಪಡಿ ಮಾಡಲು ಬರುವುದಿಲ್ಲ.

ಮಿ. ಜಫ್ರುಲ್ಲಾಖಾನ್: ನಾನು ಇಷ್ಟನ್ನು ಸೇರಿಸಬಹುದು ಉಪಸಮಿತಿ ನಂ.೧ ಮತ್ತು ೨ ಇವುಗಳು ಸ್ಥಾಪಿಸಿದ ಫೆಡರಲ್ ರಚನಾ ಉಪಸಮಿತಿ ಮತ್ತು ಜಂಟೀ ಉಪಸಮಿತಿಗಳು ಹಲವು ಮಹತ್ವವಲ್ಲದ ವಿಷಯಗಳಿಗೆ ಸಂಬಂಧಿಸಿದ ಬಹುಸಂಖ್ಯೆಯ ಅಧಿನಿಯಮಗಳನ್ನು ೮೦(೩) (ಎಚ್) ಕಲಮಿನ ಮೇರೆಗಿನ ಆ ಪಟ್ಟಿಯಲ್ಲಿ ಸೇರಿಸಲು ಸೂಚಿಸಿದೆ ಎಂಬುದನ್ನು ಈ ಸಮಿತಿಯ ಸದಸ್ಯರೂ ತಿಳಿದಿರಲಿಕ್ಕಿಲ್ಲ. ಮತ್ತು ನಾವು ಪೊಲೀಸ್ ಅಧಿನಿಯಮವನ್ನು ಆ ಯಾದಿಯಲ್ಲಿ ಸೇರಿಸಿದರೆ ಯಾವುದೇ ಸಿದ್ಧಾಂತವನ್ನು ಉಲ್ಲಂಘಿಸಿದಂತೆ ಆಗುವುದಿಲ್ಲ.

ಡಾ. ಅಂಬೇಡ್ಕರ್: ಮಿ. ಜಫ್ರುಲ್ಲಾಖಾನ್ ಹೇಳಿದ್ದಕ್ಕೆ ನಾನು ಸಾಮಾನ್ಯವಾಗಿ ಒಪ್ಪುತ್ತೇನೆ. ಆ ಅನುಸೂಚಿಯಲ್ಲಿ ಇಂದು ಪೊಲೀಸ್ ಅಧಿನಿಯಮವನ್ನು ಯಾಕೆ ಸೇರಿಸಿಲ್ಲ ಅನ್ನುವುದಕ್ಕೆ ಕಾರಣ ವೆಂದರೆ ಅದು ಕಾಯ್ದಿಟ್ಟ ವಿಷಯವಾಗಿದೆ. ಆದಕಾರಣ ವಾಸ್ತವವಾಗಿ ಭಾರತ ಸರಕಾರವು ಕಾನೂನು ಮತ್ತು ಶಾಂತಿ ಪಾಲನಾ ಇಲಾಖೆಯ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿರುತ್ತದೆ. ಕಾನೂನು ಮತ್ತು ಶಾಂತಿಪಾಲನಾ ಇಲಾಖೆಯನ್ನು ವರ್ಗಾಯಿಸಿದರೆ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಗುತ್ತದೆ. ಕೊನೆಯ ಪಕ್ಷ ಬದಲಾವಣೆಯ ಈ ಅವಧಿಯಲ್ಲಾದರೂ ಹಲವು ರಕ್ಷಣೆಗಳನ್ನು ಅವು ಈಗಿರುವಂತೆ ಉಳಿಸಿಕೊಂಡು ಹೋಗುವುದರ ಅಗತ್ಯತೆಯ ಬಗ್ಗೆ ವಿಚಾರಿಸದಿರುವುದು ಅಗತ್ಯವೆಂದು ನಾನು ಭಾವಿಸುತ್ತೇನೆ. ನಾನು ವೈಯಕ್ತಿಕವಾಗಿ ಪೊಲೀಸ್ ಅಧಿನಿಯಮವನ್ನು ಅನುಸೂಚಿಯಲ್ಲಿ ಸೇರಿಸಬೇಕೆಂಬ ಸೂಚನೆಯ ಪರವಾಗಿಯೇ ಇದ್ದೇನೆ. ಈ ಅನುಸೂಚಿಗೆ ಸಂಬಂಧಿಸಿದಂತೆ ಇಂದು ಗವರ್ನರ್ ಜನರಲ್ಲನ ಅಥವಾ ಭಾರತ ಸರಕಾರದ ಪೂರ್ವ ಸಮ್ಮತಿ ಬೇಕಾಗುತ್ತದೆ.

ಪೊಲೀಸ್ ಮತ್ತು ಕಾನೂನು ಮತ್ತು ಶಾಂತಿ ಪಾಲನಾ ಇಲಾಖೆಯ ಪ್ರಶ್ನೆಗೆ ಸಂಬಂಧಿಸಿದಂತೆ ಒಂದು ಅಂಶದ ಬಗ್ಗೆ ನಾನು ನಿಮ್ಮ ಲಕ್ಷ್ಯವನ್ನು ಸೆಳೆಯಬಯಸುತ್ತೇನೆ. ಆ ಅಂಶವನ್ನು ನಾನು ಪ್ರಾಂತೀಯ

---

* ಅದೇ, ಪುಟಗಳು ೧೮೬–೮೮.

ಸಂವಿಧಾನ ಉಪಸಮಿತಿಯಲ್ಲೂ ಎತ್ತಿದ್ದೆನು. ಈ ಪ್ರಶ್ನೆಯನ್ನು ಭಾವೀ ಪ್ರಾಂತೀಯ ಸರಕಾರದ ಹೊಣೆಗಾರಿಕೆಯ ದೃಷ್ಟಿಕೋನದಿಂದ ವಿಚಾರಿಸಲಾಯಿತು ಎಂಬುದು ನಿಜ. ಈ ಅಂಶವನ್ನು ಪ್ರಾಂತಗಳಲ್ಲಿನ ಬೇರೆ ಬೇರೆ ಅಲ್ಪಸಂಖ್ಯಾತರ ಮತ್ತು ಮತೀಯ ತೊಂದರೆ ಉಂಟಾದ ಸಂದರ್ಭಗಳ ಕಾರಣದಿಂದಾಗಿ ಉಂಟಾಗುವ ತುರ್ತು ಪರಿಸ್ಥಿತಿಗಳ ಮತ್ತು ಅಂಥ ಇತರ ತುರ್ತು ಪರಿಸ್ಥಿತಿಗಳ ದೃಷ್ಟಿಕೋನದಿಂದಲೂ ವಿಚಾರಿಸಬೇಕೆಂದು ನನಗೆ ಅನ್ನಿಸುತ್ತದೆ. ಮತೀಯ ಗಲಭೆಯುಂಟಾದಾಗ ಆಯಾ ನಿರ್ದಿಷ್ಟ ಪ್ರದೇಶದಲ್ಲಿ ಕಾನೂನು ಮತ್ತು ಶಾಂತಿಪಾಲನಾ ಕಾರ್ಯವನ್ನು ನೋಡಿಕೊಳ್ಳುವ ಅಧಿಕಾರಿಯು ಯಾವ ಕೋಮಿಗೆ ಸೇರಿದವನು ಎಂಬುದನ್ನು ತಿಳಿದುಕೊಳ್ಳುವುದು ಬೇರೆ ಬೇರೆ ಪ್ರಾಂತಗಳಲ್ಲಿಯ ಅಲ್ಪಸಂಖ್ಯಾತರಿಗೆ ನಿಜವಾಗಿಯೂ ಇರುವ ದೊಡ್ಡ ರಕ್ಷಣೆಯಾಗಿದೆ ಎಂದು ನನಗೆ ಅನ್ನಿಸುತ್ತದೆ. ಪೊಲೀಸ್ ಅಧಿಕಾರಿಗಳು ಪಕ್ಷಪಾತಿಗಳು ಎಂದು ಮತ್ತು ಒಂದಿಲ್ಲೊಂದು ಕೋಮಿಗೆ ಅನುಕೂಲಕರವಾಗಿರುತ್ತಾರೆ ಎಂದೂ ಆಪಾದಿಸಲಾಗುತ್ತಿದೆ ಎಂಬುದು ನಮಗೆಲ್ಲ ತಿಳಿದಿರುತ್ತದೆ. ಈ ಆಪಾದನೆ ಅಷ್ಟೊಂದು ನ್ಯಾಯಯುತವಾದುದು ಅನ್ನಲು ಬರುವುದಿಲ್ಲ. ಆದರೆ ಆಯಾ ನಿರ್ದಿಷ್ಟ ಪ್ರದೇಶಗಳಲ್ಲಿ ಕಾನೂನು ಮತ್ತು ಶಾಂತಿಪಾಲನಾ ಅಧಿಕಾರಿಗಳು ಪಕ್ಷಪಾತ ಮಾಡುತ್ತಿರುವ ಬಗ್ಗೆ ಸಾಕಷ್ಟು ಸಮರ್ಥನೆ ಇರಬಹುದಾದ ಸಂದರ್ಭಗಳು ಇರಬಹುದು. ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆಗಾಗಿ, ಕೊನೆಯ ಪಕ್ಷ ತುರ್ತು ಪರಿಸ್ಥಿತಿಯ ಕಾಲದಲ್ಲಿ, ಅಧಿಕಾರಿಗಳ ವರ್ಗಾವಣೆ ಮತ್ತು ನೇಮಕಾತಿಯನ್ನು ಮಾಡುವ ಅಧಿಕಾರವು ಮಂತ್ರಿಗಳ ಕೈಯಲ್ಲಿ ಇರಬಾರದು ಎಂಬುದು ತುಂಬಾ ಅವಶ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಪ್ರಾಂತದಲ್ಲಿ ಮತೀಯ ಬಹುಮತವಿದ್ದ ಒಬ್ಬ ಮಂತ್ರಿಯು ಅಂಥ ಸಮಯದಲ್ಲಿ ತನ್ನ ಕೋಮಿಗೆ ಸಹಾಯಮಾಡದಿರುವ ಪೋಲಿಸ್ ಅಧಿಕಾರಿಯನ್ನು ಅಲ್ಲಿಂದ ಎತ್ತಿಹಾಕಬಹುದು.

ಮಿ. ಜಫ್ರುಲ್ಲಾಖಾನ್: ಸಾಮಾನ್ಯವಾಗಿ ಇನ್ಸ್‌ಪೆಕ್ಟರ್ ಜನರಲ್ಲನು ಆ ಕಾರ್ಯವನ್ನು ಮಾಡುತ್ತಾನೆ.

ಡಾ. ಅಂಬೇಡ್ಕರ್: ಮುಂಬೈ ಪ್ರಾಂತದಲ್ಲಿ ಪೊಲೀಸ್ ಅಧಿಕಾರಿಗಳ ವರ್ಗಾವಣೆಯ ಕಾರಣದಿಂದಾಗಿ ದೊಡ್ಡ ಗೊಂದಲವೇ ಆಯಿತು. ಅದು ಇನ್‌ಸ್ಪೆಕ್ಟರ್ ಆಫ್ ಪೊಲೀಸ್ ಅಥವಾ ಪ್ರಭಾರದಲ್ಲಿದ್ದ ಪೊಲೀಸ್ ಅಧಿಕಾರಿಯ ಹೇಳಿಕೆಯ ಮೇರೆಗೆ ಮಾಡಲಾಯಿತೋ ಅಥವಾ ಇಲ್ಲವೋ ಅನ್ನುವುದು ನನಗೆ ತಿಳಿಯದು. ಆದರೆ ಅದು ಭಾವೀ ಭಾರತದ ಸಂವಿಧಾನದಲ್ಲಿ ಅವಶ್ಯವಾಗಿ ಒದಗಿಸಬೇಕಾದ ದೊಡ್ಡ ರಕ್ಷಣೆ ಎಂದು ನಾನು ಭಾವಿಸುತ್ತೇನೆ.

ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ದೊಂಬಿ ಮತ್ತು ಮತೀಯ ಗಲಭೆಗಳು ಉಂಟಾಗುವುದರಿಂದ ಪೊಲೀಸರಿಗೆ ಸಂಬಂಧಿಸಿದಂತೆ ಮಂತ್ರಿಗಳ ಅಧಿಕಾರವನ್ನು ಅಧ್ಯಾರೋಹಿ ಮಾಡುವ ಅಧಿಕಾರವು ಗವರ್ನರನಿಗೆ ಇರತಕ್ಕುದು ಎಂಬುದು ನನ್ನ ನಿರ್ದಿಷ್ಟ ಪ್ರಸ್ತಾಪವಾಗಿದೆ.

# ಐದನೆಯ ಸಭೆ
# ೧೨ನೇ ಜನವರಿ ೧೯೩೧

* ಅಧ್ಯಕ್ಷ: ಡಾ. ಅಂಬೇಡ್ಕರ್, ಮಿ. ಜಫ್ರುಲ್ಲಾಖಾನ್ ಮತ್ತು ಸರ್ದಾರ್ ಸಂಪೂರಣ್ ಸಿಂಗ್ ಇವರು ಯುರೋಪಿಯನ್ನರ ಹೊರತಾಗಿ ಅಖಿಲ ಭಾರತ ಆಧಾರಿತವಾಗಿ ಭಾರತೀಯ ಸಿವಿಲ್ ಸೇವೆಗಳಿಗೆ ಆಯಾ ರಾಜ್ಯದಲ್ಲಿ ಭರ್ತಿ ಮಾಡುವುದಕ್ಕೆ ಸಮ್ಮತಿಸುವುದಿಲ್ಲ. ನ್ಯಾಯಾಂಗದ ಅಧಿಕಾರಿಗಳ ಸ್ಥಾನಗಳಿಗೆ ಇನ್ನು ಮುಂದೆ ಭಾರತೀಯ ಸೇವೆಗಳಿಂದ ಭರ್ತಿ ಮಾಡಿಕೊಳ್ಳತಕ್ಕುದಲ್ಲ ಎಂಬ ಅಭಿಪ್ರಾಯವನ್ನು ಹಲವು ಸದಸ್ಯರು ಹೊಂದಿರುತ್ತಾರೆ.

ಡಾ. ಅಂಬೇಡ್ಕರ್: ಮಾನ್ಯರೇ, ಭಾರತೀಯ ಪೊಲೀಸ್ ಸೇವೆಗೂ ಸಹ.

ಅಧ್ಯಕ್ಷ: ಹೌದು? ಅದು "ಭಾರತೀಯ ಸಿವಿಲ್ ಸೇವೆಗಳಿಗೆ ಮತ್ತು ಭಾರತೀಯ ಪೊಲೀಸ್ ಸೇವೆಗೆ" ಎಂದಿರಬೇಕೆನ್ನುತ್ತೀರಾ?

ಡಾ. ಅಂಬೇಡ್ಕರ್: ಹೌದು.

ಅಧ್ಯಕ್ಷ: ಅದು ಮಿ. ಜಫ್ರುಲ್ಲಾಖಾನ್ ಅವರ ಅಭಿಪ್ರಾಯವೂ ಇದೇ ಆಗಿದೆಯೇ?

ಜಫ್ರುಲ್ಲಾಖಾನ್: ಹೌದು.

ಅಧ್ಯಕ್ಷ: ಮತ್ತು ಸರ್ದಾರ್ ಸಂಪೂರಣ್ ಸಿಂಗ್?

ಸರ್ದಾರ್ ಸಂಪೂರಣ್ ಸಿಂಗ್: ಅದು ಸರಿ.

ಅಧ್ಯಕ್ಷ: ನಾನು ನಿಮ್ಮ ಅಭಿಪ್ರಾಯಗಳನ್ನು ದಾಖಲಿಸಲು ಇಚ್ಛಿಸುತ್ತೇನೆ. "ಮತ್ತು ಭಾರತೀಯ ಪೊಲೀಸ್ ಸೇವೆ" ಎಂಬ ಪದಗಳನ್ನು ಸೇರಿಸಬಯಸುತ್ತೇನೆ.

---

* ಅದೇ, ಪುಟ: ೧೯೮

# ಆರನೆಯ ಸಭೆ

## ೧೩ ಜನವರಿ ೧೯೩೧

* ಡಾ. ಅಂಬೇಡ್ಕರ್: ಉಪ ಪ್ಯಾರಾ (೪)ರ ಅನಂತರ ಹೊಸ ಪ್ಯಾರಾವನ್ನು ಸೇರಿಸಲು ಇಚ್ಛಿಸುತ್ತೇನೆ. ಅದೇನೆಂದರೆ: ಲೋಕ ಸೇವೆಗಳಲ್ಲಿ ನಿಮ್ನ ವರ್ಗದವರ ನೇಮಕಾತಿಯ ವಿಷಯದಲ್ಲಿ ವಿಶಾಲ ಮನೋಭಾವದ ನೀತಿಯನ್ನು ಅನುಸರಿಸಬೇಕೆಂದು ಈ ಉಪಸಮಿತಿಯು ಇಚ್ಛೆಪಡುತ್ತದೆ. ಮತ್ತು ಈಗ ಅವರನ್ನು ಹೊರಗಿಡಲಾಗಿರುವ ಪೋಲೀಸ್ ಮತ್ತು ಸೈನಿಕ ಸೇವೆಗಳನ್ನು ಅವರಿಗಾಗಿ ಮುಕ್ತಗೊಳಿಸಬೇಕು."

ಮಿ. ಚಿಂತಾಮಣಿ: ಅವರನ್ನು ನಿಯಮಗಳ ಮೇರೆಗೆ ಹೊರಗಿಡಲಾಗಿದೆಯೇ ಅಥವಾ ಅದು ಕೇವಲ ರೂಢಿಯೋ?

ಡಾ. ಅಂಬೇಡ್ಕರ್: ನಿಯಮಗಳ ಮೇರೆಗೆ ನಿಮ್ನ ವರ್ಗದವರು ಅರ್ಹರಲ್ಲ ಎಂದು ಪೊಲೀಸ್ ಸೇವಾ ಆಯೋಗವು ಸ್ಪಷ್ಟವಾಗಿ ಹೇಳುತ್ತದೆ.

ಮಿ. ಚಿಂತಾಮಣಿ: ನಿರ್ದಿಷ್ಟ ಇಲಾಖೆಗಳಲ್ಲಿ ಅಂದರೆ ಪೊಲೀಸ್ ಅಥವಾ ಸೇನೆಗಳಂಥವುಗಳಲ್ಲಿ ನೇಮಕವಾಗಲು ನಿಮ್ನ ವರ್ಗದವರನ್ನು ಹೊರತುಪಡಿಸುವ ನಿಯಮಗಳು ಇದ್ದರೆ, ಅವು ಇಡಿಯ ಭಾರತದಲ್ಲೆಲ್ಲ ಜಾರಿಯಲ್ಲಿರುವ ನಿಯಮಗಳಲ್ಲ. ಹಲವು ಪ್ರಾಂತಗಳಲ್ಲಿ ಅಂಥ ನಿಯಮಗಳು ಇರಬಹುದು. ಆದರೆ ಎಲ್ಲ ಪ್ರಾಂತಗಳಲ್ಲೂ ಅಲ್ಲ.

ಡಾ. ಅಂಬೇಡ್ಕರ್: ಹಾಗೆ ಇಚ್ಛಿಸಿದರೆ ನನ್ನ ಸೂಚನೆಯನ್ನು ಕೆಳಗಿನಂತೆ ಮುಕ್ತಾಯಗೊಳಿಸುತ್ತೇನೆ. "ಮತ್ತು ತಮ್ಮ ಅಸ್ಪೃಶ್ಯತೆಯ ಕಾರಣದಿಂದಾಗಿ ಅವರನ್ನು (ನಿಮ್ನ ವರ್ಗದವರನ್ನು) ಇನ್ನು ಮುಂದೆ ಲೋಕ ಸೇವೆಗಳಿಂದ ಹೊರತುಪಡಿಸಬಾರದು ಎಂದು ನಿರ್ದಿಷ್ಟವಾಗಿ ಶಿಫಾರಸು ಮಾಡುತ್ತದೆ."

ರಾಜಾ ನರೇಂದ್ರನಾಥ: (೫) (ಎ) ವಾಕ್ಯಾವಳಿಯು ಅದನ್ನು ಒಳಗೊಂಡಿರುತ್ತದೆ.

ಸರ್ ಕೌಸಾಜಿ ಜಹಾಂಗೀರ್: ಅವರನ್ನು ನೇಮಕ ಮಾಡಿಕೊಳ್ಳುವುದರಲ್ಲಿರುವ ಅವ್ಯಾವಹಾರಿಕತೆಯ ಕಾರಣದಿಂದಾಗಿ ಈ ಕೋಮಿನವರನ್ನು ಹೊರಗಿಡಲಾಗಿದೆ ಎಂಬುದು ವಾಸ್ತವಾಂಶವಾಗಿದೆ. ಈಗಲೇ ಮತ್ತು ಇಲ್ಲಿಯೇ ಆ ಬಗ್ಗೆ ವಿವರವಾದ ಚರ್ಚೆಗೆ ಇಳಿಯಬೇಕಾಗಿಲ್ಲ. ನಿಮ್ನ ವರ್ಗದವರಿಗಾಗಿ ಪೋಲೀಸರ ಬೇರೆ ವಿಭಾಗವಿದ್ದರೆ ಆಗಲೂ ಸಹ ಯಾವ ವರ್ಗದ ಜನರು ಅವರನ್ನು ತಿರಸ್ಕಾರದಿಂದ ನೋಡುತ್ತಿದ್ದಾರೋ ಆ ವರ್ಗದವರಿರುವ ಜನತೆಯಲ್ಲಿ ಅಂಥ ವರ್ಗದ ಸದಸ್ಯರು ಕಾರ್ಯ ನಿರ್ವಹಿಸುವುದು ಕಠಿಣವಾಗುತ್ತದೆ. ಈ ದೊಡ್ಡ ವರ್ಗದ ಸದಸ್ಯರು ಕಾರ್ಯ ನಿರ್ವಹಿಸುವುದು ಕಠಿಣವಾಗುತ್ತದೆ. ಈ ದೊಡ್ಡ ಅನಾನುಕೂಲತೆಯನ್ನು ಹೇಗೆ ತೆಗೆದುಹಾಕಬೇಕು ಎಂಬುದು ಸ್ಪಷ್ಟವಿಲ್ಲ. ನಾನು ನನ್ನ ಅಭಿಪ್ರಾಯವನ್ನು ಹೇಳಲಾರೆ. ಯಾವುದನ್ನು ಮಾಡಲಾಗಿದೆಯೋ ಅದನ್ನು ಅರೆಮನಸ್ಸಿನಿಂದ ಮಾಡಲಾಗಿದೆ. ಡಾ. ಅಂಬೇಡ್ಕರ್ ಅವರು

---

* (ಉಪಸಮಿತಿ ನಂ.VIII (ಸೇವೆಗಳು)ರ ವ್ಯವಹರಣೆಗಳು, ಪುಟಗಳು ೧೩೧–೩೩)

ಅದನ್ನು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಆದರೆ, ನಾವು ಏನು ಮಾಡಬೇಕೆಂದು ಡಾ. ಅಂಬೇಡ್ಕರರು ಇಚ್ಛಿಸುತ್ತಾರೋ ಈ ಇಚ್ಛೆ ಕೇವಲ ಧರ್ಮ, ನ್ಯಾಯದ್ದಾದರೂ ಅದನ್ನು ಹೇಳಲು ಯಾವ ಅಡ್ಡಿಯೂ ನನಗೆ ಕಂಡುಬರುವುದಿಲ್ಲ. ಇದೇ ಅಭಿಪ್ರಾಯವನ್ನು ನಾವು ನೂರಾರು ಸಂದರ್ಭಗಳಲ್ಲಿ ಹೇಳಿದ್ದೇವೆ. ಆದರೆ ಅದರಿಂದ ಯಾವ ಪ್ರಯೋಜನವೂ ಆಗಿಲ್ಲ. ಯಾವ ಆದೇಶಗಳನ್ನು ಮಾಡಲಾಗಿದೆ ಮತ್ತು ಅವು ಹೇಗೆ ಅವ್ಯಾವಹಾರಿಕವಾದವು ಅನ್ನುವುದು ಡಾ. ಅಂಬೇಡ್ಕರ್ ಅವರಿಗೆ ಚೆನ್ನಾಗಿ ಗೊತ್ತಿದೆ.

ಏನೇ ಆದರೂ, ಅವರು ಸೂಚಿಸಿದಂಥ ಯಾವುದೇ ಪ್ಯಾರಾವನ್ನು ಸೇರಿಸುವುದನ್ನು ನಾನು ಸಮರ್ಥಿಸುತ್ತೇನೆ. ನಾವು ಅಪಾಯಕ್ಕೆ ಎಡೆ ಕೊಡುತ್ತಿದ್ದೇವೆ. ಈ ಸೂಚನೆ ವ್ಯಾವಹಾರಿಕವಾಗಲಿಕ್ಕಿಲ್ಲ. ಆದರೆ ಈ ಮೊದಲಿನ ಸಂದರ್ಭದಲ್ಲಿ ಹೇಳಿರುವಂತೆ ನಾವು ಒಂದು ಆದರ್ಶದತ್ತ ಗುರಿ ಇಟ್ಟಾಗ ಯಾವಾಗಲೂ ನಾವು ತರ್ಕಬದ್ಧವಾಗಿಯೇ ಇರಲಾರೆವು.

ಡಾ. ಅಂಬೇಡ್ಕರ್: ಪೊಲೀಸ್ ಮತ್ತು ಸೈನಿಕ ಸೇವೆಗಳನ್ನು ಉಲ್ಲೇಖಿಸಬೇಕೆಂಬ ಬಗ್ಗೆ ನಾನು ವಿಶೇಷವಾಗಿ ಚಿಂತಿತನಾಗಿದ್ದೇನೆ. ಏಕೆಂದರೆ ನಿಮ್ನ ವರ್ಗದವರು ಸೇವೆ ಸಲ್ಲಿಸಲು ತುಂಬಾ ಯೋಗ್ಯವಾದ ಇಲಾಖೆಗಳು ಅವು ಆಗಿರುತ್ತವೆ.

ಅಧ್ಯಕ್ಷ: ೫(ಎ) ಮತ್ತು (ಬಿ) ಈ ಅಂಶವನ್ನು ಒಳಗೊಂಡಿರುತ್ತದೆ.

ಡಾ. ಅಂಬೇಡ್ಕರ್: ಈ ರೀತಿಯಲ್ಲಿ ಆಂಗ್ಲೋ ಇಂಡಿಯನ್ ಕೋಮನ್ನು ಸಹ ಸೇರಿಸಲಾಗಿದೆ. (೪)ನ್ನು ವಾಕ್ಯಾವಳಿಯ ನಂತರ ಹೊಸ ವಾಕ್ಯಾವಳಿಯನ್ನು ಸೇರಿಸಲು ನಾನು ಇಚ್ಛೆಪಡುತ್ತೇನೆ.

"ಲೋಕ ಸೇವೆಗಳಲ್ಲಿ ನಿಮ್ನ ವರ್ಗದವರ ನೇಮಕಾತಿಯ ವಿಷಯದಲ್ಲಿ ವಿಶಾಲ ಮನೋಭಾವದ ನೀತಿಯನ್ನು ಅನುಸರಿಸಬೇಕೆಂದು ಈ ಉಪಸಮಿತಿಯು ಇಚ್ಛೆಪಡುತ್ತದೆ ಮತ್ತು ಅವರನ್ನು ಈಗ ಹೊರಗಿಟ್ಟಿರುವ ಪೋಲೀಸ್ ಮತ್ತು ಸೈನಿಕ ಸೇವೆಗಳನ್ನು ಅವರ ಭರತಿಗಾಗಿ ಮುಕ್ತಗೊಳಿಸಬೇಕು."

ರಾಜಾ ನರೇಂದ್ರನಾಥ: ನಾನು ಒಂದು ಸೂಚನೆಯನ್ನು ಮಾಡಬಯಸುತ್ತೇನೆ. ಅದೆಂದರೆ "ಯಾವನೇ ವ್ಯಕ್ತಿಯು ಆತನ ಧರ್ಮ, ಜಾತಿ ಅಥವಾ ಲಿಂಗ ಇವುಗಳ ಕಾರಣ ಮಾತ್ರದಿಂದಲೇ ಈ ದೇಶದಲ್ಲಿನ ಯಾವುದೇ ಸೇವೆಗೆ ಸೇರಲು ಅನರ್ಹ ಅಥವಾ ತಕ್ಕವನಲ್ಲವೆಂದು ಆಗಿರತಕ್ಕುದಲ್ಲ" ಎಂದು ಸೇರಿಸ ತಕ್ಕುದು. ಅದು ವಿಶೇಷ ಶಿಫಾರಸು ಆಗಬೇಕೆಂದು ನಾನು ಬಯಸುತ್ತೇನೆ.

ಡಾ. ಅಂಬೇಡ್ಕರ್: ಅದು ಅನಂತರ ಬರುತ್ತದೆ.

ಡಾ. ಬಾಸು: ತಮ್ಮ ಕೋಮಿನವರು ಈಗ ಅನುಭವಿಸುತ್ತಿರುವ ತೊಂದರೆಗಳನ್ನು ಹೇಳುತ್ತಿರುವ ಡಾ.ಅಂಬೇಡಕರರ ಬಗ್ಗೆ ಸಹಾನುಭೂತಿ ಇರುತ್ತದೆ ಮತ್ತು ಯಾವುದೇ ರಾಜ್ಯದಲ್ಲಿ ಆಡಳಿತಾತ್ಮಕ ನಿಯಮಗಳ ಮೂಲಕ ಯಾವುದೇ ಅನರ್ಹತೆಯನ್ನು ವಿಧಿಸಲಾಗಿದ್ದರೆ, ಆ ನಿಯಮಗಳನ್ನು ತೊಡೆದು ಹಾಕಬೇಕು. ಆದರೆ, ಆ ವಿಷಯವನ್ನು ಅವರು ತುಂಬಾ ಸಾಮಾನ್ಯ ರೀತಿಯಲ್ಲಿ ಹೇಳಿರುತ್ತಾರೆ. ಉದಾ: ನನ್ನ ಪ್ರಾಂತ್ಯದಲ್ಲಿ ಹಲವಾರು ಹುದ್ದೆಗಳನ್ನು ನಿಮ್ನ ವರ್ಗದ ಸದಸ್ಯರಿಂದಲೇ ಭರ್ತಿ ಮಾಡಲಾಗಿದೆ. ಇದು ನನ್ನ ಪ್ರಾಂತದಲ್ಲಿ ಒಂದು ಸಮಸ್ಯೆಯಾಗಿಲ್ಲ.

ಡಾ. ಅಂಬೇಡ್ಕರ್: ಪರಿಮಿತಗೊಳಿಸುವ ಕೆಲವು ಪದಗಳನ್ನು ಸೇರಿಸಲು ನಾನು ಇಚ್ಛಿಸುತ್ತೇನೆ. ಅವೆಂದರೆ "ಈಗ ಎಲ್ಲಿ ಅವರನ್ನು ಹೊರಗಿಡಲಾಗಿದೆಯೋ."

ರಾಜಾ ನರೇಂದ್ರನಾಥ: ಅವರು ಪೊಲೀಸ್ ಸೇವೆಯಲ್ಲಿ ನೌಕರಿ ಮಾಡುವುದನ್ನು ಪ್ರತಿಬಂಧಿಸುವ

ಯಾವುದೇ ನಿಯಮವಿಲ್ಲ; ಅವರನ್ನು ನೇಮಕ ಮಾಡಿಕೊಳ್ಳದಿರುವುದು ರೂಢಿಯಾಗಿದೆ. ಒಮ್ಮೆ ಕೌನ್ಸಿಲ್ಲಿನ ಸದಸ್ಯರೊಬ್ಬರು ಈ ಜನರನ್ನು ಪೊಲೀಸರಾಗಿ ಏಕೆ ಭರ್ತಿ ಮಾಡಿಕೊಳ್ಳುವುದಿಲ್ಲ ಮತ್ತು ಭಾರತ ಸರಕಾರದ ಅಧಿನಿಯಮದ ೯೬ನೇ ಕಲಮನ್ನು ಈ ರೂಡಿಯು ಉಲ್ಲಂಘಿಸುವುದಿಲ್ಲವೋ ಎಂಬ ಪ್ರಶ್ನೆಯನ್ನು ಕೇಳಿದ್ದರು. ಉತ್ತರ ಸಮಾಧಾನಕರವಾದುದಾಗಿರಲಿಲ್ಲ. ಸೇರಿಸಬೇಕೆಂದು ನಾನು ಹೇಳಿದ ಪದಗಳು ಸಹಾಯಕಾರಿ ಆಗುತ್ತವೆ ಎಂದು ನನ್ನ ಭಾವನೆ; ಮತ್ತು ಸಾಮಾನ್ಯ ಅಪೇಕ್ಷೆ ಮತ್ತು ಸಾಮಾನ್ಯ ಶಿಫಾರಸುಗಳೂ ಸಹ ಸಹಾಯಕಾರಿ ಆಗುತ್ತವೆ. ಆದರೆ ಸಾಮಾನ್ಯ ಭಾವನೆಯನ್ನು ವ್ಯಕ್ತಪಡಿಸುವುದು, ನಾನು ಸೂಚಿಸಿದ ಪದಗಳನ್ನು ಸೇರಿಸಿದಷ್ಟು ಪರಿಣಾಮಕಾರಿಯಾಗುವುದಿಲ್ಲ.

ಮೇಜರ್ ಸ್ಟೇನ್ಲೆ: ಸೈನಿಕ ಸೇವೆಯ ವಿಶೇಷ ಉಲ್ಲೇಖ ನಿಜವಾಗಿಯೂ ಈ ಸಮಿತಿಯ ವ್ಯಾಪ್ತಿಯ ಹೊರಗಿನದಾಗಿದೆ.

ಮಿ. ಮೋದಿ: ಸೇನೆಯ ಅಗತ್ಯತೆಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕುದೆಂದು ನಾವು ಶಿಫಾರಸು ಮಾಡಿದ್ದೇವೆ.

ಅಧ್ಯಕ್ಷ: "ಅದರಲ್ಲೂ ವಿಶೇಷವಾಗಿ ಎಲ್ಲಾ ಸೇವೆಗಳಿಗಾಗಿ ನಡೆಯುವ ಭರತಿಯಲ್ಲಿ ಅವರಿಗೂ ಮುಕ್ತ ಅವಕಾಶವಿರಬೇಕು" ಎಂದು ಶಿಫಾರಸು ಮಾಡುತ್ತೇನೆ ಎಂದು ವಿವಾದಾತ್ಮಕವಲ್ಲದ ರೀತಿಯಲ್ಲಿ ನೀವು ಹೇಳಬೇಕು ಎಂದು ನಿಮಗೆ ಸಲಹೆ ಕೊಡುತ್ತೇನೆ.

ಮಿ. ಮೋದಿ: ಹೌದು ಅವರನ್ನು ಈಗ ಹೊರಗಿಟ್ಟವುಗಳಿಂದ.

ಅಧ್ಯಕ್ಷ: ನಾನು ಹಾಗೆ ಹೇಳುವುದಿಲ್ಲ. ಏಕೆಂದರೆ ಅದು ವಿವಾದಾತ್ಮಕವಾಗುತ್ತದೆ. ಎಲ್ಲ ಸೇವೆಗಳಿಗಾಗಿ ನಡೆಯುವ ಭರತಿಯು ಅವರಿಗೂ ಮುಕ್ತವಿರಬೇಕೆಂಬುದನ್ನು ನೀವು ಬಯಸುವುದಿಲ್ಲವೆ?

ಲೆ. ಕರ್ನಲ್ ಗಿಡ್ನೆ: ಅಂಥ ನೌಕರಿಗೆ ಯಾವುದೇ ಅನರ್ಹತೆ ಇರತಕ್ಕುದಲ್ಲ.

ಅಧ್ಯಕ್ಷ: ನಾನು ಹೀಗೆ ಹೇಳಲೇ? ಈ ವರದಿಯನ್ನು ನಾವು ಅರ್ಥವತ್ತಾಗುವಂತೆ ಮಾಡಬೇಕಾದರೆ, ಅನುಕ್ರಮವಾಗಿ ಇರುವ ಎರಡು ಪ್ಯಾರಾಗಳಲ್ಲಿಯೂ ಒಂದೇ ವಿಷಯವನ್ನು ಹೇಳುವುದು ಗೊಂದಲ ವನ್ನುಂಟುಮಾಡುವುದಾಗಿ ಕಾಣುತ್ತದೆ. ಆದಕಾರಣ ನಾನು ಡಾ. ಅಂಬೇಡ್ಕರ್ ಅವರಿಗೆ ಸೂಚಿಸುವುದೇನೆಂದರೆ ಈ ಪದಗಳು ಅಗತ್ಯವೇ ಆದರೆ, ಅವುಗಳನ್ನು ಐದನೆಯ ವಾಕ್ಯಾವಳಿಯ ಅನಂತರ ಸೇರಿಸಬೇಕು. ನಾವು ನಮ್ಮ ಸಾಮಾನ್ಯ ಶಿಫಾರಸುಗಳನ್ನು ೫ನೇ ವಾಕ್ಯಾವಳಿಯಲ್ಲಿ ಮಾಡೋಣ. ನಂತರ ಐದನೇ ವಾಕ್ಯಾವಳಿಯ ಕೊನೆಗೆ ಈ ಕೆಳಗೆ ಹೇಳುವಂತೆ ವಿಷಯವನ್ನು ಸೇರಿಸಬಹುದು. ಅದೆಂದರೆ:

"ಈ ಶಿಫಾರಸನ್ನು ಮಾಡುವಾಗ" ಅಂದರೆ, ೫ನೇ ವಾಕ್ಯಾವಳಿಯಲ್ಲಿ ಮಾಡಲಾಗಿರುವ ಶಿಫಾರಸು ಗಳನ್ನು ಮಾಡುವಾಗ "ನಿಮ್ಮ ವರ್ಗದವರ ವಿಷಯವನ್ನು ಈ ಉಪಸಮಿತಿಯು ವಿಶೇವಾಗಿ ಲಕ್ಷ್ಯದಲ್ಲಿಟ್ಟು ಕೊಂಡಿರುತ್ತದೆ. ಅವರು ಅಪೇಕ್ಷೆ ಪಡುತ್ತಾರೆ..." ಇತ್ಯಾದಿ ಇತ್ಯಾದಿ.

ಡಾ. ಅಂಬೇಡ್ಕರ್: ಅತ್ಯುತ್ತಮ.

ಅಧ್ಯಕ್ಷ: ನಿಮಗೆ ಬೇಸರವಾಗದಿದ್ದರೆ ೫ನೇ ವಾಕ್ಯಾವಳಿಯನ್ನೇ ನಾವು ಚರ್ಚಿಸೋಣ. ಮತ್ತು ಈ ಬಗ್ಗೆ ಯಾವ ವಾಕ್ಯಾವಳಿಯನ್ನು ಸೇರಿಸಬೇಕು ಎಂಬ ಬಗ್ಗೆ ವಿಚಾರಿಸೋಣ. ೫ನೇ ವಾಕ್ಯಾವಳಿಯ ಮೇಲೆ ಅದನ್ನು ಈಗ ರೂಪಿಸಿರುವಂತೆ, ಯಾರಾದರೂ ಏನನ್ನಾದರೂ ಹೇಳುವವರಿದ್ದೀರೋ?

ರಾಜಾ ನರೇಂದ್ರನಾಥ: ಅದನ್ನೇ ನಾನು ಹೇಳಿದ್ದು. "ಅಸಮರ್ಥತೆ" ಪದದ ನಂತರ "ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರತಿಕೂಲವಾಗಿರಕೂಡದು" ಎಂಬ ಪದಗಳನ್ನು ಸೇರಿಸಬೇಕೆಂದು ನಾನು ಸೂಚಿಸಿದ್ದೆ.

ಅಧ್ಯಕ್ಷ: ಅದನ್ನು ನಾನು ನಂತರ ಸೇರಿಸುತ್ತೇನೆ. ಈ ಅಂಶಕ್ಕೆ ಒಳಪಟ್ಟು ನಾವು ಅದನ್ನು ತೆಗೆದು ಕೊಳ್ಳೋಣ. ಆ ವಿಷಯಕ್ಕೆ ನಾವು ನಂತರ ಬರೋಣ.

೫ನೇ ವಾಕ್ಯಾವಳಿಯಲ್ಲಿ ಪಾಸು ಮಾಡಿದ ಅನಂತರ ಡಾ. ಅಂಬೇಡ್ಕರ್ ಅವರು "ಈ ಶಿಫಾರಸನ್ನು ಮಾಡುವಲ್ಲಿ ಉಪಸಮಿತಿಯು ವಿಶೇಷವಾಗಿ ನಿಮ್ನ ವರ್ಗದವರ ನೇಮಕಾತಿಯ ವಿಷಯದಲ್ಲಿ ವಿಶಾಲ ಮನೋಭಾವದ ನೀತಿಯನ್ನು ಅನುಸರಿಸಬೇಕೆಂದು ಮತ್ತು ಪೊಲೀಸ್ ಸೇವೆಯನ್ನು ಒಳಗೊಂಡಂತೆ ಎಲ್ಲ ಲೋಕಸೇವೆಗಳ್ನು ಅವರು ಭರ್ತಿ ಮಾಡಲು ಮುಕ್ತಗೊಳಿಸತಕ್ಕುದು ಎಂದು ವಿಶೇಷವಾಗಿ ಶಿಫಾರಸು ಮಾಡಬೇಕು" ಎಂಬ ಪದಗಳನ್ನು ಸೇರಿಸಬೇಕೆಂದರು. ಡಾ. ಅಂಬೇಡ್ಕರ್ ಅವರು ೫ನೇ ವಾಕ್ಯಾವಳಿಯ ಕೊನೆಗೆ ಸೇರಿಸಬೇಕೆಂದು ಮಾಡಿದ ತಿದ್ದುಪಡಿಯು ಮೇಲಿನಂತಿದೆ.

ಇದರ ಪರವಾಗಿರುವವರು ದಯಮಾಡಿ ಹಾಗೆ ಹೇಳಬೇಕು. ವಿರುದ್ಧ ಅಭಿಪ್ರಾಯವಿದ್ದವರು: ತಮ್ಮ ಅಭಿಪ್ರಾಯವನ್ನು ಹೇಳಬೇಕು. ಇದನ್ನು ಪಾಸು ಮಾಡಲಾಯಿತು.

ಸರ್ವಸದಸ್ಯರ ಅಧಿವೇಶನದಲ್ಲಿ (ಸಾಮಾನ್ಯ ಪುನರವಲೋಕನ)

# ಎಂಟನೆಯ ಸಭೆ

# ೧೯ನೇ ಜನವರಿ ೧೯೩೧

### ಭಾವೀ ಸಂವಿದಾನದಲ್ಲಿ ನಿಮ್ನ ವರ್ಗದವರ ರಕ್ಷಣೆಗಾಗಿ ನಿರ್ದಿಷ್ಟ ಮತ್ತು ಖಚಿತ ಉಪಬಂಧಗಳ ಬಗ್ಗೆ ಬೇಡಿಕೆ.

* ಡಾ. ಅಂಬೇಡ್ಕರ್: ಮಾನ್ಯ ಪ್ರಧಾನ ಮಂತ್ರಿಯವರೇ, ಒಂದು ಸಮುದಾಯದ ರಾಜಕೀಯ ಜೀವನವನ್ನು ರೂಪಿಸುವ ಯಾವುದೇ ಪ್ರಯತ್ನದಲ್ಲಿ ಉಂಟಾಗಲೇಬೇಕಾದ ಎರಡು ಅತ್ಯಂತ ಮಹತ್ವದ ಪ್ರಶ್ನೆಗಳ ಬಗ್ಗೆಯೂ ಈ ದುಂಡು ಮೇಜಿನ ಪರಿಷತ್ತು ತೀವ್ರ ಗಮನ ಹರಿಸಬೇಕಾಗುತ್ತದೆ. ಹೊಣೆಗಾರ ಸರಕಾರದ ಸಮಸ್ಯೆಯು ಅವುಗಳಲ್ಲೊಂದಾಗಿತ್ತು ಮತ್ತು ಇನ್ನೊಂದು ಪ್ರಾತಿನಿಧಿಕ ಸರಕಾರದ್ದು.

ಪ್ರಾಂತಗಳಲ್ಲಿನ ಹೊಣೆಗಾರ ಸರಕಾರದ ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಹೇಳಬೇಕಾದುದೇನೂ ಇಲ್ಲ. ಸಮಿತಿಯ ವರದಿಯನ್ನು ನನ್ನ ಭಿನ್ನಮತಕ್ಕೊಳಪಟ್ಟಂತೆ ಒಪ್ಪುತ್ತೇನೆ. ನಾನು ಅದನ್ನೇ ಸಮರ್ಥಿಸುತ್ತೇನೆ. ಆದರೆ, ಕೇಂದ್ರದಲ್ಲಿನ ಹೊಣೆಗಾರ ಸರಕಾರಕ್ಕೆ ಸಂಬಂಧಿಸಿದಂತೆ ನಾನು ಬೇರೆ ಅಭಿಪ್ರಾಯ ಪಡಬೇಕಾಗುತ್ತದೆಯೆಂಬ ಭಯ ನನಗೆ. ಫೆಡರಲ್ ರಚನೆಯ ಉಪಸಮಿತಿಯು ನಾವು ಈಗ ತಿಳಿದುಕೊಂಡಿರುವಂತೆ ಅಧಿಕಾರಶಾಹಿ ಸ್ವರೂಪದ ಸರಕಾರದಲ್ಲಿ ಯಾವುದೇ ಬದಲಾವಣೆಯ ಬಗ್ಗೆ ಆಲೋಚಿಸಿಲ್ಲ ಎಂದು ಹೇಳುವುದು ಅಪ್ರಾಮಾಣಿಕವಾದುದಾಗುತ್ತದೆ. ಆದರೆ, ಈ ಬದಲಾವಣೆಯು ಕೇವಲ ಛಾಯೆಯಾಗಿದೆಯೇ ಹೊರತು ನಿಜವಾದುದಾಗಿಲ್ಲ ಮತ್ತು ಹೊಣೆಗಾರಿಕೆಯು ಕೇವಲ ಠಕ್ಕಿನದಾಗಿರುತ್ತದೆಯೇ ಹೊರತು ನಿಜವಾದುದಲ್ಲ ಎಂಬ ನನ್ನ ಅಭಿಪ್ರಾಯವನ್ನು ನಿಮ್ಮಿಂದ ಮುಚ್ಚಿಡುವುದು ಸಹ ಅಷ್ಟೇ ಅಪ್ರಾಮಾಣಿಕವಾದುದಾಗಿರುತ್ತದೆ.

ಲಾರ್ಡ್ ಛಾನ್ಸಲರ್ ಅವರು ತಾವು ಬೀಜ ಬಿತ್ತಿರುವುದಾಗಿಯೂ, ಸಸಿಯನ್ನು ಬೆಳೆಯಿಸುವುದು ನಮಗೆ ಬಿಟ್ಟುಕೊಟ್ಟ ವಿಷಯವಾಗಿದೆ ಎಂದೂ ಹೇಳಿದರು. ಮಾನ್ಯರೆ, ಅತ್ಯಂತ ಮಹತ್ವದ್ದಾದ ಈ ಸಮ್ಮೇಳನದಲ್ಲಿ ಅವರು ವಹಿಸಿದ ಹಿರಿಯ ಪಾತ್ರಕ್ಕಾಗಿ ಲಾರ್ಡ್ ಛಾನ್ಸಲರ್ ಅವರಿಗೆ ನಾವು ನಿಜವಾಗಿಯೂ ತುಂಬಾ ಋಣಿಯಾಗಿರುತ್ತೇವೆ. ಅವರಿಗೆ ನಾನು ಋಣಿಯಾಗಿದ್ದರೂ ಅವರು ನೆಟ್ಟ ಈ ಸಸಿ ಬೆಳೆಯುತ್ತದೆ ಎಂಬ ಭರವಸೆ ನನಗಿಲ್ಲ. ಬೀಜಕ್ಕಾಗಿ ಅವರು ಆರಿಸಿಕೊಂಡ ಕಾಳು ಬರಡು ಮತ್ತು ಅದನ್ನು ನೆಟ್ಟ ನೆಲ ಅದರ ಬೆಳವಣಿಗೆಗೆ ಪೋಷಕವಾದುದಾಗಿಲ್ಲ.

---

* (ದುಂಡು ಮೇಜಿನ ಪರಿಷತ್ತಿನ (೧೯೩೦–೩೧) ವ್ಯವಹರಣೆಗಳು, ಪ್ರಥಮ ಸಭೆ, ಪುಟಗಳು ೪೩೮–೪೧)

** ಲಾರ್ಡ್ ಛಾನ್ಸಲರ ಅವರು ಉಪಸಮಿತಿ ನಂ.೧ (ಫೆಡರಲ್ ರಚನೆ)ರ ಛೇರ್‌ಮನ್ನರಾಗಿದ್ದರು. ಮತ್ತು ಅಂಬೇಡ್ಕರರು ಆ ಸಮಿತಿಯ ಸದಸ್ಯರಾಗಿರಲಿಲ್ಲ. ಇಲ್ಲಿ ಉಲ್ಲೇಖಿಸಿದ ಹೇಳಿಕೆಯನ್ನು ಅದು ಪರ್ಯಾಲೋಚಿಸಲಿಲ್ಲ ಎಂದು ಕಾಣುತ್ತದೆ.

** ಫೆಡರಲ್ ಭಾರತದ ಭಾವೀ ಸಂವಿಧಾನದ ಬಗ್ಗೆ ನನ್ನ ಅಭಿಪ್ರಾಯಗಳನ್ನು ಒಳಗೊಂಡಿರುವ ನನ್ನ ಹೇಳಿಕೆಯನ್ನು ಲಾರ್ಡ್ ಛಾನ್ಸಲರ್ ಅವರಿಗೆ ನಾನು ಕೊಟ್ಟಿದ್ದೆನು. ಅವರು ಅಧ್ಯಕ್ಷತೆ ವಹಿಸಿದ ಆ ಸಭೆಯು ನನ್ನ ಆ ಹೇಳಿಕೆಯನ್ನು ಪರ್ಯಾಲೋಚಿಸಿತೋ ಇಲ್ಲವೋ ಅನ್ನುವುದು ನನಗೆ ತಿಳಿಯದು. ಏಕೆಂದರೆ ಅವರು ಅಧ್ಯಕ್ಷತೆ ವಹಿಸಿದ್ದ ಸಮಿತಿಯ ವರದಿಯಲ್ಲಿ ಆ ಬಗ್ಗೆ ಯಾವ ಉಲ್ಲೇಖವೂ ಕಂಡುಬರುವುದಿಲ್ಲ. ಅಲ್ಲಿ ಹೇಳಲಾಗಿರುವ ನನ್ನ ಅಭಿಪ್ರಾಯಗಳಿಗೇ ನಾನು ಈಗಲೂ ಅಂಟಿಕೊಂಡಿರುತ್ತೇನೆ ಮತ್ತು ಆ ಅಭಿಪ್ರಾಯಗಳಿಂದ ತುಂಬಾ ದೂರವಾಗಿರುವ ಸಂವಿಧಾನಕ್ಕೆ ನಾನು ನನ್ನ ಸಮ್ಮತಿಯನ್ನು ಕೊಡುವುದಿಲ್ಲ. ಈಗಿರುವ ಪದ್ಧತಿ ಮತ್ತು ಸಮಿತಿಯವರ ಸಂಕರ ಪದ್ಧತಿಗಳ ನಡುವೆ ಆಯ್ಕೆ ಮಾಡಿಕೊಳ್ಳಲು ನನಗೆ ಅವಕಾಶ ಕೊಟ್ಟರೆ ನಾನು ನಿಜವಾಗಿಯೂ ಈಗಿರುವ ಪದ್ಧತಿಯನ್ನೇ ಆಯ್ಕೆಮಾಡಿಕೊಳ್ಳುತ್ತೇನೆ. ಮಾನ್ಯರೇ, ಆದರೆ ಸಮಿತಿಯ ವರದಿಯಲ್ಲಿನ ಕೇಂದ್ರ ಸರಕಾರದ ಸಂವಿಧಾನವು ಈ ಸಮಿತಿಯ ಸ್ನೇಹಿತ, ಮಾರ್ಗದರ್ಶಿ ಮತ್ತು ತತ್ವಜ್ಞಾನಿಯಾದ ಸರ್ ಟಿ. ಬಿ. ಸಪ್ರು ಅವರನ್ನು ಸಮಾಧಾನಪಡಿಸುವಂತಿದ್ದರೆ, ಭಾರತದ ತರುಣರನ್ನು ಪ್ರತಿನಿಧಿಸುತ್ತೇನೆನ್ನುವ ಶ್ರೀ ಜಯಕರ ಅವರು ಇದಕ್ಕೆ ಒಪ್ಪುವುದಾದರೆ, ಅವರೇ ಹೇಳುವಂತೆ ಭಾರತದಲ್ಲಿನ ಬ್ರಾಹ್ಮಣರಲ್ಲದವರ ಪರವಾಗಿ ಮಾತನಾಡುತ್ತೇನೆನ್ನುವ ಸರ್ ಎ.ಪಿ.ಪಾತ್ರೋ ಅವರನ್ನು ಸಂತೋಷಪಡಿಸುವಂತಿದ್ದರೆ ಅದನ್ನು ವಿರೋಧಿಸುವುದು ನನ್ನ ಕೆಲಸವಲ್ಲ. ಆ ಕಾರಣದಿಂದ ನನ್ನ ಮನೋವೃತ್ತಿಯು ಅದನ್ನು ಒಪ್ಪದ ಆದರೆ ಅಡ್ಡಿಯನ್ನುಂಟುಮಾಡದ ವ್ಯಕ್ತಿಯ ಮನೋವೃತ್ತಿಯದಾಗಿರುತ್ತದೆ. ಅದನ್ನು ಅನುಮೋದಿಸುವವರನ್ನೇ ಅದನ್ನು ಕಾರ್ಯಗತಗೊಳಿಸಲು ಬಿಡುತ್ತೇನೆ.

ಈ ಮನೋವೃತ್ತಿಯು ನನಗೆ ತುಂಬಾ ಒಪ್ಪಿಗೆಯಾದುದಾಗಿರುತ್ತದೆ. ಏಕೆಂದರೆ ನಾನು ಯಾರನ್ನು ಪ್ರತಿನಿಧಿಸುತ್ತಿರುವೆನೋ ಅವರಿಂದ ನನಗೆ ಸರಕಾರದ ಸ್ವರೂಪದ ಬಗ್ಗೆ ಯಾವುದೇ ರೀತಿಯ ನಿರ್ದೇಶನ ಬಂದಿರುವುದಿಲ್ಲ. ಆದರೆ ನನಗಿರುವ ನಿರ್ದೇಶನವೇನೆಂದರೆ, ಹೊಣೆಗಾರ ಸರಕಾರವನ್ನು ವಿರೋಧಿಸ ತಕ್ಕುದಲ್ಲ. ಆದರೆ, ಹೊಣೆಗಾರ ಸರಕಾರವು ನಿಜವಾಗಿಯೂ ಪ್ರಾತಿನಿಧಿಕ ಸರಕಾರವಾಗಿರದ ಹೊರತು ಅದರ ಸ್ಥಾಪನೆಯಾಗದಂತೆ ನೋಡಿಕೊಳ್ಳಬೇಕೆಂಬ ನಿರ್ದೇಶನವಿದೆ. ಪ್ರಾತಿನಿಧಿಕ ಸರಕಾರದ ಪ್ರಶ್ನೆಯ ಬಗ್ಗೆ ಈ ಸಮ್ಮೇಳನವು ಯಾವ ರೀತಿಯಲ್ಲಿ ವಿಚಾರಣೆ ಮಾಡಿದೆ ಎಂಬುದನ್ನು ಪರಿಶೀಲಿಸಿ, ಸಮ್ಮೇಳನದ ಯಶಸ್ಸಿನ ಬಗ್ಗೆ ಹೇಳಬೇಕೆಂದಾಗ ನನಗೆ ತುಂಬಾ ನಿರಾಶೆಯಾಗುತ್ತದೆ. ಮತಾಧಿಕಾರ ಮತ್ತು ಶಾಸನ ಸಭೆಗಳಲ್ಲಿ ಬೇರೆ ಬೇರೆ ವರ್ಗಗಳ ಪ್ರಾತಿನಿಧ್ಯವು ಪ್ರಾತಿನಿಧಿಕ ಸರಕಾರದ ಎರಡು ಆಧಾರ ಸ್ಥಂಭಗಳಾಗಿವೆ. ನೆಹರೂ ಸಮಿತಿಯು ವಯಸ್ಕ ಮತಾಧಿಕಾರ ಪದ್ಧತಿಯನ್ನು ಅಳವಡಿಸಿಕೊಂಡಿತ್ತು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ ಮತ್ತು ಆ ಅಂಶ ಸಿದ್ಧಪಡಿಸಿದ ಸಂವಿಧಾನದ ಆ ಭಾಗಕ್ಕೆ ಭಾರತದಲ್ಲಿನ ಎಲ್ಲ ಪಕ್ಷಗಳ ಸಮರ್ಥನೆಯೂ ಇತ್ತು. ಮತಾಧಿಕಾರಕ್ಕೆ ಸಂಬಂಧಿಸಿದ ಪ್ರಶ್ನೆಯ ಬಗ್ಗೆ ನಾವು ವಿಜಯಿ ಯಾಗಿದ್ದೇವೆ ಎಂಬ ಭಾವನೆಯಿಂದಲೇ ನಾನು ಈ ಸಮ್ಮೇಳನಕ್ಕೆ ಬಂದೆ. ಆದರೆ, ಮತಾಧಿಕಾರ ಸಮಿತಿ ಯಲ್ಲಿ ಸಂಪೂರ್ಣವಾಗಿ ನನಗೆ ಭ್ರಮನಿರಸನವಾಯಿತು. ನೆಹರು ವರದಿಯನ್ನು ಸಹಿ ಮಾಡಿದ ಎಲ್ಲರೂ ಮುಕ್ತ ಮನಸ್ಸಿನಿಂದ ಹಾಗೆ ಮಾಡಿಲ್ಲ ಎಂಬುದನ್ನು ಕಂಡು ನನಗೆ ಸೋಜಿಗವಾಯಿತು. ಅಂದರೆ, ಭಾರತೀಯ ಸೌಮ್ಯವಾದಿಗಳನ್ನೂ ಸಹ ಪ್ರಾಂತೀಯ ಶಾಸನ ಸಭೆಗಳಿಗಾಗಿ ಜನತೆಯ ಶೇಕಡಾ ೨೫ರಷ್ಟನ್ನು ಮತಾಧಿಕಾರಕ್ಕೊಳಪಡಿಸಲು ಒಪ್ಪುವಂತೆ ಮನ ಒಲಿಸುವುದು ಕಠಿಣವಾಯಿತು. ಕೇಂದ್ರ ಶಾಸನ ಸಭೆಗೆ ಇರುವ ಮತಾಧಿಕಾರದ ಪ್ರಮಾಣವು ನಿಃಸಂಶಯವಾಗಿಯೂ ತಿಳಿಯದಂತಿದೆ. ಆದರೆ, ಅದು ಕೇಂದ್ರ ಶಾಸನ ಸಭೆಯು ಪ್ರಾಂತೀಯ ಶಾಸನ ಸಭೆಗಳಿಗಿಂತ ಹೆಚ್ಚಿನ ಪ್ರಾತಿನಿಧ್ಯವನ್ನು ಹೊಂದಬಹು

ದಾಗಿರುವಂಥಹುದೆಂಬ ಆಶೆ ನನಗಿಲ್ಲ. ಹಾಗೆ ಪರಿಮಿತಿಗೊಳಗಾದ ಮತಾಧಿಕಾರವು ಭಾರತದ ಭಾವೀ ಸರಕಾರವನ್ನು ಖಂಡಿತವಾಗಿ ವರ್ಗಗಳ ಮೂಲಕ ಆದ ಸರಕಾರವನ್ನಾಗಿ ಮಾಡುತ್ತದೆ.

ಬಹುಮತದವರ ಮತ್ತು ಹಲವಾರು ಅಲ್ಪಸಂಖ್ಯಾತ ಕೋಮುಗಳ ನಡುವಣ ಸ್ಥಾನಗಳ ಹಂಚಿಕೆಯ ಪ್ರಶ್ನೆಗೆ ಸಂಬಂಧಿಸಿದಂತೆ ನಮಗೆಲ್ಲ ತಿಳಿದಂತೆ ಬಿಕ್ಕಟ್ಟು ಉಂಟಾಗಿದೆ. ನನ್ನ ಅಭಿಪ್ರಾಯದಲ್ಲಿ ಈ ಬಿಕ್ಕಟ್ಟು ಹಿಂದೆ ಮಾಡಿದ ಕಿಡಿಗೇಡಿತನದ ಪರಿಣಾಮವಾಗಿದೆ. ಹಿಂದೆ ಭಾರತದಲ್ಲಿನ ಅಧಿಕಾರಿಗಳು ಎಲ್ಲರಿಗೂ ನ್ಯಾಯ ಮತ್ತು ಯಾರಿಗೂ ವಿಶೇಷ ಅನುಗ್ರಹವಿಲ್ಲವೆಂಬ ಸಿದ್ಧಾಂತವನ್ನು ಅನುಸರಿಸಿದ್ದರೆ, ನಿಜವಾಗಿಯೂ ಈ ಸಮಸ್ಯೆಯು ಪರಿಹರಿಸಲಾರದಷ್ಟು ಕಠಿಣವಾದುದಾಗುತ್ತಿರಲಿಲ್ಲ. ಬ್ರಿಟಿಶ್ ಸರಕಾರವು ಬೇರೆ ಬೇರೆ ಕೋಮುಗಳಿಗೆ ತಮಗೆ ಅವುಗಳಿಂದಾಗುವ ರಾಜಕೀಯ ಉಪಯೋಗದ ಆಧಾರದ ಮೇಲೆ ಬೇರೆ ಬೇರೆ ಮೌಲ್ಯಗಳನ್ನು ಗೊತ್ತುಪಡಿಸಿದರು ಮತ್ತು ನಿಮ್ನ ವರ್ಗದವರಿಗೆ ಅವರದೇ ಹಕ್ಕಿನಿಂದ ಸಿಗಬೇಕಾದ ಭಾಗವನ್ನು ಅವರಿಗೆ ನಿರಾಕರಿಸಿ ಬೇರೆ ಅನೇಕ ಕೋಮುಗಳವರಿಗೆ ರಾಜಕೀಯ ಅಧಿಕಾರದಲ್ಲಿ ವಿಶೇಷ ಪಾಲನ್ನೇ ಕೊಟ್ಟರು. ಈ ವಿಷಯದಲ್ಲಿ ಅತ್ಯಂತ ತೊಂದರೆಗೀಡಾದ ಕೋಮು ಎಂದರೆ ನಿಮ್ನ ವರ್ಗ ದವರು. ಈಗ ತಪ್ಪಾಗಿ ನಿರ್ಣಯಿಸಲಾದದ್ದು ಎಂದಿಗೂ ನಿರ್ಣಯವಾಗುವುದಿಲ್ಲ ಎಂಬ ತತ್ವವನ್ನು ಆಧರಿಸಿ ಈ ಸಮ್ಮೇಳನವು ಮುಂದುವರೆಯುತ್ತದೆ ಎಂದು ಮತ್ತು ಹಳೆಯ ಮೌಲ್ಯಗಳನ್ನು ಮರು ಪರಿಶೀಲನೆ ಮಾಡಿ ನಿಮ್ನ ವರ್ಗದವರಿಗೆ ಸಿಗಬೇಕಾದ ನ್ಯಾಯಯುತವಾದ ಸ್ಥಳಗಳನ್ನು ಕೊಡುತ್ತಾರೆಂದು ಆಶಿಸಿದ್ದೆನು. ಅದು ಆಗಲಿಲ್ಲ. ಇತರ ಅಲ್ಪಸಂಖ್ಯಾತ ಕೋಮುಗಳ ಕ್ಲೇಮುಗಳನ್ನು ಗುರುತಿಸಿ ನಿರ್ದಿಷ್ಟಪಡಿಸಲಾಗಿದೆ. ಈಗ ಅವರಿಗೆ ಬೇಕಾದುದು ಇಷ್ಟು ಮಾತ್ರವೇ. ಅಂದರೆ ಹೊಸ ಸರಕಾರದ ವೈಶಾಲ್ಯ ಮತ್ತು ಅದರ ವಿಸ್ತೃತವಾದ ವ್ಯಾಪ್ತಿ– ಇವುಗಳಿಗೆ ಹೊಂದಾಣಿಕೆಯಾಗುವಂತೆ ಬದಲಾವಣೆಗಳನ್ನು ಮತ್ತು ತಿದ್ದುಪಡಿಗಳನ್ನು ಅವರು ಕೇಳುತ್ತಾರೆ. ಬದಲಾವಣೆಗಳು ಮತ್ತು ತಿದ್ದುಪಡಿಗಳು ಏನೇ ಆದಾಗ್ಯೂ ಈಗಾಗಲೇ ಹಾಕಲಾಗಿರುವ ಬುನಾದಿಯನ್ನು ಯಾರೂ ಕಿತ್ತು ಹಾಕಲಾರರು. ನಿಮ್ನ ವರ್ಗದವರ ವಿಷಯವು ಸಂಪೂರ್ಣವಾಗಿ ಭಿನ್ನವಾದುದೇ ಆಗಿದೆ. ಅವರ ಕ್ಲೇಮುಗಳನ್ನು ಈಗ ಮಾತ್ರ ಕೇಳಲಾಗಿದೆ. ಅವುಗಳನ್ನು ಇನ್ನೂ ನಿರ್ಣಯಿಸಿಲ್ಲ ಮತ್ತು ಅವುಗಳಲ್ಲಿ ಎಷ್ಟನ್ನು ಒಪ್ಪಲಾಗುತ್ತದೆಯೋ ನನಗೆ ಗೊತ್ತಿಲ್ಲ. ಅವರ ಅಸಹಾಯಕ ಸ್ಥಿತಿಯನ್ನು ಗಮನಿಸಿದಾಗ ತಮ್ಮ ರಕ್ಷಣೆಗಿಂತ ಹೆಚ್ಚಾಗಿ ಅಧಿಕಾರಕ್ಕಾಗಿ ಹಾತೊರೆ ಯುತ್ತಿರುವ ಇತರ ಕೋಮುಗಳವರ ಸದಾ ಹೆಚ್ಚುತ್ತಿರುವ ಆಶೆಯನ್ನು ಸಮಾಧಾನಪಡಿಸಲು ನಿಮ್ನ ವರ್ಗದವರ ಪ್ರಾತಿನಿಧ್ಯದ ಕ್ಲೇಮನ್ನು ಚಿವುಟಿಹಾಕಬಹುದಾದ ಸನ್ನಿವೇಶವು ಅಸಂಭವವಾದುದೇನಲ್ಲವೆಂದು ನನಗನ್ನಿಸುತ್ತದೆ.

ಈ ದೃಷ್ಟಿಯಿಂದ ನನ್ನ ಭಾವನೆಯನ್ನು ಸ್ಪಷ್ಟವಾಗಿ ಹೇಳುವುದು ನನ್ನ ಕರ್ತವ್ಯವಾಗಿರುತ್ತದೆ. ಭಾವೀ ಸಂವಿಧಾನದಲ್ಲಿ ನಿಮ್ನ ವರ್ಗದವರ ಹಕ್ಕುಗಳನ್ನು ಗೊತ್ತುಪಡಿಸದೇ ಇರುವುದರಿಂದ ಕೇಂದ್ರದಲ್ಲಿ ಮತ್ತು ಪ್ರಾಂತಗಳಲ್ಲಿ ಹೊಣೆಗಾರ ಸರಕಾರವನ್ನು ಜಾರಿಯಲ್ಲಿ ತರುವ ವಿಷಯಕ್ಕೆ ಸಂಬಂಧಿಸಿದಂತೆ ಮಹಾ ಪ್ರಭುಗಳ ಸರಕಾರವು ಹೊರಡಿಸಬಹುದಾದ ಯಾವುದೇ ಪ್ರಕಟಣೆಯು, ಈ ದಿಶೆಯಲ್ಲಿ ಯಾವುದೇ ಪ್ರಗತಿಯು ನಿಮ್ನವರ್ಗದವರ ಹಕ್ಕು ಮತ್ತು ಹಿತಾಸಕ್ತಿಗಳಿಗೆ ಪರಿಣಾಮಕಾರಿಯಾದ ರಕ್ಷಣೆಗಳನ್ನು ಒದಗಿಸು ವಂಥ ಕೋಮುಗಳ ನಡುವೆ ಆದ ಒಪ್ಪಂದಕ್ಕೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕುದು ಎಂದು ಸ್ಪಷ್ಟ ಪಡಿಸಬೇಕು. ಪರಿಸ್ಥಿತಿಯು ಗಂಭೀರತೆಯನ್ನು ನಾನು ಒತ್ತಿ ಹೇಳಲೇಬೇಕು ಮತ್ತು ಈ ಬಗ್ಗೆ ಇರುವ ಸ್ಥಿತಿಯನ್ನು ಸ್ಪಷ್ಟಪಡಿಸದ ಹೊರತು ಯಾವುದೇ ಪ್ರಕಟಣೆಯು ನಮಗೆ ಒಪ್ಪಿತವೆನಿಸುವುದಿಲ್ಲ. ಹೀಗೆ

ಮಾಡದಿದ್ದರೆ ನಾನು ಮತ್ತು ನನ್ನ ಸ್ನೇಹಿತರು ಈ ಸಮ್ಮೇಳನದ ಮುಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಹೊಣೆಯನ್ನು ಒಪ್ಪಿಕೊಳ್ಳಲು ಸಮರ್ಥರಾಗುವುದಿಲ್ಲ ಮತ್ತು ನಾವು ಅದರ ಕಾರ್ಯಕಲಾಪಗಳಿಂದ ಹೊರಗುಳಿಯುವುದು ಅನಿವಾರ್ಯವಾಗುವುದು. ಮಾನ್ಯರೇ, ನೀವು ಕೊಟ್ಟ ಮಾತನ್ನು ನಡೆಸುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಲು ನಾನು ನಿಮ್ಮನ್ನು ಕೇಳುತ್ತಿಲ್ಲ. ಬ್ರಿಟಿಶ್ ಸಂಸತ್ತು ಮತ್ತು ಅದರ ಪರವಾಗಿ ಮಾತನಾಡುವವರು ತಾವು ಯಾವಾಗಲೂ ನಿಮ್ನ ವರ್ಗದವರ ಧರ್ಮದರ್ಶಿಗಳೇ ಎಂದು ಹೇಳುತ್ತಾ ಬಂದಿದ್ದಾರೆ. ಅವರು ಹೇಳುವುದು ನಾಗರಿಕತೆಯ ಸಾಂಪ್ರದಾಯಿಕ ಸುಳ್ಳುಗಳಲ್ಲೊಂದಲ್ಲ ಮತ್ತು ಈ ಸುಳ್ಳುಗಳು ಮಾನವ ಸಂಬಂಧವನ್ನು ಸಾಧ್ಯವಿರುವಷ್ಟರ ಮಟ್ಟಿಗೆ ಸಂತೋಷದಾಯಕವಾಗಿ ಇಟ್ಟುಕೊಂಡುಬರಬೇಕೆಂದು ಹೇಳುತ್ತಾ ಬಂದವುಗಳು ಆಗಿವೆ ಎಂದು ಭಾವಿಸಿದ್ದೇನೆ. ಆದಕಾರಣ ಈ ವಿಶ್ವಾಸಕ್ಕೆ ದ್ರೋಹ ಬಗೆಯದಂತೆ ನೋಡಿಕೊಳ್ಳುವುದು ಯಾವುದೇ ಸರಕಾರದ ಅನಿವಾರ್ಯ ಕರ್ತವ್ಯವಾಗಿದೆ. ಪ್ರಧಾನ ಮಂತ್ರಿಯವರೇ, ನಾನು ನಿಮಗೆ ಹೇಳುವುದಿಷ್ಟು; ನಮ್ಮ ಕಲ್ಯಾಣದಲ್ಲಿ ಯಾವುದೇ ಆಸಕ್ತಿಯನ್ನು ತೋರಿಸದೇ ಇರುವವರ ಮತ್ತು ಯಾರ ಏಳ್ಗೆ ಮತ್ತು ದೊಡ್ಡಸ್ತಿಕೆ ನಮ್ಮ ನಾಶದ ಮತ್ತು ಅವಮಾನದ ಆಧಾರದ ಮೇಲೆ ನಿಂತಿದೆಯೋ ಅವರ ಕರುಣೆಗೆ ನಮ್ಮನ್ನು ಬಿಟ್ಟರೆ ಅದನ್ನು ನಿಮ್ನ ವರ್ಗದವರು ಮಹಾಪ್ರಭುಗಳ ಸರಕಾರವು ನಮಗೆ ಮಾಡಿದ ಅತ್ಯಂತ ಹೀನವಾದ ವಿಶ್ವಾಸದ್ರೋಹ ಎಂದೇ ಭಾವಿಸುತ್ತಾರೆ.

ನಾನು ಹಾಗೆ ಹೇಳುವುದರಿಂದ ಭಾರತದ ರಾಷ್ಟ್ರೀಯತಾವಾದಿಗಳು ಮತ್ತು ದೇಶಪ್ರೇಮಿಗಳು ನನ್ನನ್ನು ಕೋಮುವಾದಿ ಎಂದು ಕರೆಯಬಹುದು. ನನಗೆ ಅದರ ಭಯವಿಲ್ಲ. ಭಾರತವು ವಿಚಿತ್ರ ದೇಶ. ಅದರ ದೇಶಪ್ರೇಮಿಗಳೂ ಮತ್ತು ರಾಷ್ಟ್ರೀಯವಾದಿಗಳೂ ಸಹ ವಿಚಿತ್ರ ರೀತಿಯವರೆ ಆಗಿರುತ್ತಾರೆ. ಭಾರತದಲ್ಲಿನ ಭಾರತದ ರಾಷ್ಟ್ರೀಯತಾವಾದಿಗಳು ಮತ್ತು ದೇಶಪ್ರೇಮಿಗಳೂ ತಮ್ಮ ಬಂಧುಗಳನ್ನು ಮಾನವನಿಗಿಂತ ಕೀಳಾದ ಪ್ರಾಣಿಯಂತೆ ನಡೆದುಕೊಳ್ಳುವುದನ್ನು ಪ್ರತ್ಯಕ್ಷವಾಗಿ ನೋಡುತ್ತಿದ್ದಾರೆ. ಆದರೆ, ಅವರ ಮಾನವೀಯತೆ ಅದನ್ನು ಪ್ರತಿಭಟಿಸಿ ಎದ್ದು ನಿಲ್ಲುವುದಿಲ್ಲ. ಯಾವ ತಪ್ಪೂ ಇಲ್ಲದ ಅನೇಕ ಸ್ತ್ರೀ ಪುರುಷರಿಗೆ ಮಾನವ ಹಕ್ಕುಗಳನ್ನು ನಿರಾಕರಿಸಲಾಗಿದೆ ಎಂಬುದೂ ಅವರಿಗೆ ತಿಳಿದಿದೆ. ಆದರೆ, ಅಂತಹವರಿಗೆ ಸಹಾಯ ಮಾಡಬೇಕೆಂಬ ನಾಗರಿಕ ಭಾವನೆಗೆ ಯಾವ ಪ್ರಚೋದನೆಯನ್ನೂ ಮಾಡಿಲ್ಲ. ಅವರ ಇಡಿಯ ವರ್ಗಕ್ಕೇನೇ ಲೋಕಸೇವೆಗಳಿಗೆ ಪ್ರವೇಶವಿಲ್ಲದಿರುವುದೂ ಅವರಿಗೆ ಗೊತ್ತಿದೆ. ಆದರೆ ಅದು ಅವರ ನ್ಯಾಯ ಮತ್ತು ವಿವೇಚನಾ ಬುದ್ಧಿಯನ್ನು ಉದ್ದೀಪನಗೊಳಿಸದಾಗಿದೆ. ಮನುಷ್ಯನಿಗೆ ಮತ್ತು ಸಮಾಜಕ್ಕೆ ಹಾನಿಯುಂಟುಮಾಡುವ ನೂರಾರು ದುಷ್ಟ ರೂಢಿಗಳನ್ನು ಅವರು ಕಂಡಿದ್ದಾರೆ. ಆದರೆ, ಅದರಿಂದ ಅವರಿಗೆ ಯಾವ ಬೇಸರವೂ ಆಗಿಲ್ಲ. ದೇಶಪ್ರೇಮಿಗಳ ಒಂದೇ ಒಂದು ಕೂಗು ಎಂದರೆ ತಮಗೆ ಮತ್ತು ತಮ್ಮ ವರ್ಗದವರಿಗೆ ಅಧಿಕಾರಬೇಕೆಂಬುದು ಮಾತ್ರವೇ ಆಗಿದೆ. ನಾನು ಅಂಥ ದೇಶಪ್ರೇಮಿಗಳ ವರ್ಗಕ್ಕೆ ಸೇರಿದವನಲ್ಲವೆಂಬ ಸಂತೊಷ ನನಗಿದೆ. ಪ್ರಜಾಸತ್ತೆಯನ್ನು ಆಧರಿಸಿದ ಮತ್ತು ಏಕಸ್ವಾಮಿತ್ವವನ್ನು ಅದರ ಎಲ್ಲ ರೂಪ ಮತ್ತು ಆಕಾರಗಳಲ್ಲಿ ನಾಶಪಡಿಸಲು ಉದ್ದೇಶಿಸಿರುವವರ ವರ್ಗಕ್ಕೆ ನಾನು ಸೇರಿದ್ದೇನೆ. ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಅಂದರೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಒಬ್ಬ ವ್ಯಕ್ತಿ ಒಂದೇ ಮೌಲ್ಯ ಎಂಬ ಆದರ್ಶವನ್ನು ವ್ಯಾವಹಾರಿಕವಾಗಿ ಕಾರ್ಯರೂಪದಲ್ಲಿ ತರುವುದು ನಮ್ಮ ಗುರಿಯಾಗಿದೆ. ಪ್ರಾತಿನಿಧಿಕ ಸರಕಾರವು ಆ ಗುರಿಯನ್ನು ಸಾಧಿಸಲು ಇರುವ ಒಂದು ವಿಧಾನವಾಗಿದೆ. ಅದರಿಂದಾಗಿ ನಿಮ್ನ ವರ್ಗದವರು ಅದಕ್ಕೆ ತುಂಬಾ ಮಹತ್ವ ಕೊಡುತ್ತಾರೆ ಮತ್ತು ನಾವು

ಅದಕ್ಕೆ ಅಂಥ ಬೆಲೆ ಕೊಡುತ್ತಿರುವ ಕಾರಣದಿಂದಾಗಿಯೇ ನೀವು ನೀಡುವ ಘೋಷಣೆಯನ್ನು ಅದನ್ನು ಸಾಧಿಸುವುದಕ್ಕೆ ಒಳಪಟ್ಟಂತೆ ಮಾಡಬೇಕಾಗಿರುವುದರ ಅವಶ್ಯಕತೆಯ ಬಗ್ಗೆ ನಿಮಗೆ ಕಳಕಳಿಯಿಂದ ಕೇಳಿಕೊಂಡೆನು. ನಿಮ್ನವರ್ಗದವರ ಬಗ್ಗೆ ನಿಮಗೆ ಪೂರ್ಣ ಸಹಾನುಭೂತಿ ಇದೆ ಎಂದು ನೀವು ಹೇಳಬಹುದು. ಅದಕ್ಕೆ ನನ್ನ ಉತ್ತರವೆಂದರೆ ತುಳಿಯಲ್ಪಟ್ಟವರಿಗೆ ಹೆಚ್ಚು ನೈಜವಾದದ್ದೂ ಮತ್ತು ಹೆಚ್ಚು ಖಚಿತವಾದದ್ದೂ ಬೇಕಾಗಿದೆ. ನಾನು ಅನವಶ್ಯಕವಾಗಿ ಸಂಶಯ ಪ್ರವೃತ್ತಿಯವನು ಎಂದು ನೀವು ನನ್ನನ್ನು ಮೂದಲಿಸಬಹುದು. ಅದಕ್ಕೆ ನನ್ನ ಉತ್ತರವೆಂದರೆ ಭದ್ರತೆಯ ಬಗ್ಗೆ ಅತಿ ವಿಶ್ವಾಸವಿಟ್ಟು ಹಾಳಾಗುವುದಕ್ಕಿಂತ, ಇಂಥ ಸಂಶಯಗಳನ್ನು ವ್ಯಕ್ತಪಡಿಸಿದ್ದಕ್ಕಾಗಿ ಮೂದಲಿಸಲ್ಪಡುವುದು ಉತ್ತಮವಾದುದೆನಿಸುತ್ತದೆ.

೬

### ಫೆಡರಲ್ ರೂಪರೇಷಾ ಸಮಿತಿ

# ಇಪ್ಪತ್ತುಮೂರನೆಯ ಸಭೆ

# ೧೬ನೇ ಸೆಪ್ಟೆಂಬರ್ ೧೯೩೧

## ಶೀರ್ಷಿಕೆ–೨

(ಫೆಡರಲ್ ಶಾಸಕಾಂಗದ ಸದಸ್ಯರ ಚುನಾವಣೆಗೆ ಸಂಬಂಧಿಸಿದ ಪ್ರಶ್ನೆಗಳು)

* ಡಾ. ಅಂಬೇಡ್ಕರ್: ಲಾರ್ಡ್ ಛಾನ್ಸಲರ್‌ರವರೆ, ಫೆಡರಲ್ ರೂಪರೇಷೆ ಸಮಿತಿಯ ಸದಸ್ಯನಾಗಿ ಈಗ ನಾನು ಮೊದಲ ಬಾರಿಗೆ ಮಾತನಾಡುತ್ತಿದ್ದೇನೆ. ಪ್ರತಿಯೊಬ್ಬ ಹೊಸ ಸದಸ್ಯನು ಈ ಸಮಿತಿಯು ಎದುರಿಸಬೇಕಾಗಬಹುದಾಗ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ತಮ್ಮ ವಾದವನ್ನು ಮಂಡಿಸಲು ಕೊಟ್ಟ ಈ ಸುಸಂಧಿಗಾಗಿ ಮತ್ತು ಮಾನ್ಯರೇ, ನೀವು ಈ ಸಮಿತಿಗೆ ಸಲ್ಲಿಸಿದ ಬಹುದೊಡ್ಡ ಸೇವೆಗಾಗಿ ತನ್ನ ಕೃತಜ್ಞತೆ ಸಲ್ಲಿಸುತ್ತಾನೆ. ಅದಕ್ಕೆ ಆತನು ಒಂದು ಪರಂತುಕವನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಅದು ಏನೆಂದರೆ, ತನ್ನ ಕೋಮಿನ ಅಥವಾ ಆತನು ಪ್ರತಿನಿಧಿಸುವ ಹಿತಾಸಕ್ತಿಗಳ ರಕ್ಷಣೆಯು ಕೇಂದ್ರ ಸರಕಾರದಲ್ಲಿ ಹೊಣೆಗಾರಿಕೆಯನ್ನು ಪ್ರತಿಷ್ಠಾಪಿಸುವುದಕ್ಕೆ ಸಮ್ಮತಿಸಲು ಪೂರ್ವಭಾವಿ ಷರತ್ತಾಗಬೇಕೆಂದು ನೇರವಾಗಿ ಹೇಳಿದ್ದಾನೆ. ಲಾರ್ಡ್ ಛಾನ್ಸಲರ್ ಅವರೇ, ಈ ವಿಷಯದ ಮೇಲೆ ಹೇಳಲು ಯಾವ ಅನಿಸಿಕೆಗಳೂ ನನಗೆ ಇಲ್ಲವೆಂದಲ್ಲ. ಆದರೆ, ಅದಕ್ಕೆ ಪ್ರತಿಯಾಗಿ ನನ್ನ ಅನಿಸಿಕೆಗಳು ತುಂಬಾ ಆಳವಾಗಿವೆ. ನಾನು ಅವುಗಳನ್ನು ಹೇಳದುದರ ಕಾರಣ ನೀವು ಇಂದು ಬೆಳಗ್ಗೆ ನೀಡಿದ ನಿರ್ದೇಶನವನ್ನು ಪಾಲಿಸಬಯಸುವುದು.

ಈ ಹಲವು ಪೂರ್ವಭಾವಿ ಮಾತುಗಳೊಂದಿಗೆ ಎರಡನೆಯ ಶೀರ್ಷಿಕೆಯಲ್ಲಿ ಸೇರಿಸಲಾಗಿರುವ ಹಲವಾರು ಉಪಶೀರ್ಷಿಕೆಗಳ ಮೇಲೆ ನನ್ನ ಅಭಿಪ್ರಾಯಗಳನ್ನು ಹೇಳಲು ಇಚ್ಛಿಸುತ್ತೇನೆ. ಹೀಗೆ ಮಾಡುವಾಗ ನಾನು ಈಗ ನಮಗೆ ಕೊಡಲಾಗಿರುವ ಜ್ಞಾಪನಾಪತ್ರದಲ್ಲಿ ಹೇಳಲಾಗಿರುವ ಕ್ರಮವನ್ನು ಅನುಸರಿಸಲು ಇಚ್ಛಿಸುವುದಿಲ್ಲ. ಅಲ್ಲದೆ, ಈ ಜ್ಞಾಪನಾಪತ್ರದಲ್ಲಿ ಹೇಳಲಾಗಿರುವ ಪ್ರತಿಯೊಂದು ಬಾಬಿನ ಮೇಲೆ ನನ್ನ ಅಭಿಪ್ರಾಯ ಹೇಳಲು ಇಚ್ಛಿಸುವುದಿಲ್ಲ. ನಾನು ಖಚಿತವಾಗಿ ತಿಳಿದುಕೊಂಡಿರುವ ಹಾಗೂ ಸ್ಪಷ್ಟವಾಗಿ ನನ್ನ ಅಭಿಪ್ರಾಯಗಳನ್ನು ಹೇಳಬಹುದಾದ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ.

---

* (ಫೆಡರಲ್ ರೂಪರೇಷಾ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿಯ (ದುಂಡು ಮೇಜಿನ ಪರಿಷತ್ತಿನ ಎರಡನೆಯ ಸಭೆ) ವ್ಯವಹರಣೆಗಳು–ಭಾರತ ಸರಕಾರ, ಸೆಂಟ್ರಲ್ ಪಬ್ಲಿಕೇಷನ್ ಬ್ರಾಂಚ್, ಕಲ್ಕತ್ತಾ ೧೯೩೨, ಸಂಪುಟ ೧, ಪುಟಗಳು ೧೨೦–೧೩೨.)

ನಾನು ಮೊದಲು ಫೆಡರಲ್ ಶಾಸನ ಸಭೆಯ ರಚನೆಯ ವಿಷಯದ ಮೇಲೆ ಮಾತನಾಡಲು ಇಚ್ಛಿಸುತ್ತೇನೆ; ನಾನು ಈ ವಿಷಯದ ಮೇಲೆ ಮುಂದುವರೆಯುವುದಕ್ಕೆ ಮೊದಲು ಫೆಡರಲ್ ಶಾಸನ ಸಭೆಯು ಒಂದೇ ಸದನ ಹೊಂದಿರಬೇಕೊ ಅಥವಾ ಎರಡು ಸದನಗಳನ್ನು ಹೊಂದಿರಬೇಕೊ ಎಂಬ ಪ್ರಶ್ನೆಗೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತೇನೆ. ಎರಡು ಸದನಗಳ ಪದ್ಧತಿಯಲ್ಲಿ ನಾನು ಎಂದೂ ನಂಬಿಕೆಗೆ ಇಟ್ಟವನಲ್ಲ ಎಂಬುದನ್ನು ನಾನು ಪ್ರಾರಂಭದಲ್ಲಿಯೇ ಒಪ್ಪಿಕೊಳ್ಳುತ್ತೇನೆ. ಎರಡನೆಯ ಸದನದ ಉಪಯುಕ್ತತೆಯನ್ನು ನಾನು ಎಂದೂ ಒಪ್ಪಿಲ್ಲ. ಇದು ನನ್ನ ಬಲವಾದ ನಂಬಿಗೆಯಾದರೂ ಈ ವಾದವನ್ನು ಒಪ್ಪದ ಇತರ ಅನೇಕರು ಇದ್ದಾರೆ. ಮತ್ತು ಈ ಎರಡನೆಯ ಸದನವು ಅನವಶ್ಯ ಎಂದು ಅವರ ಮನವೊಪ್ಪಿಸಲು ನಮಗೆ ಸಾಧ್ಯವಾಗುವುದಿಲ್ಲ ಎನ್ನುವುದೂ ನನಗೆ ಗೊತ್ತಿದೆ. ಎರಡನೆಯದಾಗಿ, ಎರಡೂ ಸದನಗಳ ಸಂಬಂಧವನ್ನು ಯುಕ್ತ ರೀತಿಯಲ್ಲಿ ನಿಯಮನಗೊಳಿಸಿದರೆ ಮತ್ತು ಭಾರತದಲ್ಲಿ ಸುರಕ್ಷಿತ ಪ್ರಜಾಸತ್ತಾತ್ಮಕ ಸರಕಾರಕ್ಕಾಗಿ ಎರಡನೆಯ ಸದನದ ಬಲವನ್ನು ಹಿಡಿತದಲ್ಲಿಟ್ಟುಕೊಳ್ಳುವ ವಿಧಾನ ಗಳಿರುತ್ತವೆಯಾಗಿ, ಎರಡು ಸದನಗಳ ಪದ್ಧತಿಯನ್ನು ಭಾರತದಲ್ಲಿ ಜಾರಿಯಲ್ಲಿ ತರುವುದಕ್ಕಾಗಿ ನಾನು ಯಾವ ತಕರಾರನ್ನೂ ಎತ್ತಲು ಇಚ್ಛಿಸುವುದಿಲ್ಲ.

ಇಷ್ಟನ್ನು ಹೇಳಿ, ಭಾರತದ ಫೆಡರಲ್ ಶಾಸನ ಸಭೆಯಲ್ಲಿ ಬ್ರಿಟಿಷ್ ಭಾರತೀಯ ಪ್ರಾಂತಗಳ ಪ್ರಾತಿನಿಧ್ಯದ ಪ್ರಶ್ನೆಯತ್ತ ತಿರುಗಲು ನನಗೆ ಅನುಮತಿಯನ್ನು ಕೊಡಿರಿ. ಹಾಗೆ ಮಾಡುವಲ್ಲಿ ಸಂಬಂಧಪಟ್ಟ ಮತ್ತು ನಾವು ಎದುರಿಸಬೇಕಾದ ಮೊದಲನೆಯ ಪ್ರಶ್ನೆಯೆಂದರೆ ಪ್ರಾತಿನಿಧ್ಯವು ಪ್ರತ್ಯಕ್ಷವಾಗಿರತಕ್ಕದೋ ಅಥವಾ ಪರೋಕ್ಷವಾಗಿರತಕ್ಕದೋ ಎಂಬುದು. ಫೆಡರಲ್ ಸಭೆಯ ಕೆಳಮನೆಗೆ ಸಂಬಂಧಿಸಿದಂತೆ ಎರಡು ಅಭಿಪ್ರಾಯಗಳು ಇರುವುದು ಸಾಧ್ಯವೇ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಅದನ್ನು ನೇರ ಚುನಾವಣೆಯ ಮೂಲಕವೇ ರಚಿಸತಕ್ಕುದು. ಈ ಪ್ರಶ್ನೆಗೆ ಸಂಬಂಧಿಸಿದಂತೆ ಸೈಮನ್ ಆಯೋಗವು ಕೆಳ ಮನೆಯು ನೇರ ಚುನಾವಣೆಯ ಮೂಲಕವಲ್ಲದೆ ಕೇವಲ ಪರೋಕ್ಷ ಚುನಾವಣೆಯ ಮೂಲಕ ರಚಿತವಾಗತಕ್ಕುದು ಎಂದು ಶಿಫಾರಸು ಮಾಡಿದ್ದು ಸಂಪೂರ್ಣ ನನ್ನ ಲಕ್ಷ್ಯದಲ್ಲಿದೆ. ಮತ್ತು ಅದನ್ನು ಸಮರ್ಥಿಸಲು ಅವರು, ವಾಸ್ತವವಾಗಿ ನೇರ ಮತ್ತು ಪರೋಕ್ಷ ಚುನಾವಣೆಗಳ ನಡುವೆ ಭಿನ್ನತೆ ಇಲ್ಲ ಮತ್ತು ಪರೋಕ್ಷ ಚುನಾವಣೆಯು ಒಂದು ಹಂತವನ್ನು ಕೈಬಿಟ್ಟು ನೇರ ಚುನಾವಣೆಯೇ ಆಗಿದೆ ಎಂದಿದ್ದಾರೆ. ತರ್ಕಬದ್ಧವಾಗಿ ವಿಚಾರಿಸಿದರೆ ಅದು ಸರಿ ಕಾಣುತ್ತದೆ. ಆದರೆ, ಮಾನಸಿಕವಾಗಿ ನೇರ ಮತ್ತು ಪರೋಕ್ಷ ಚುನಾವಣೆಗಳ ನಡುವೆ ಬಹುದೊಡ್ಡ ವ್ಯತ್ಯಾಸವಿರುತ್ತದೆ. ನನ್ನ ಅಭಿಪ್ರಾಯದಂತೆ ಅತ್ಯಂತ ಮಹತ್ವದ ಅಂಶವೆಂದರೆ ಅಂತಿಮವಾಗಿ ಭಾರತದಲ್ಲಿ ಉತ್ತಮ ಸರಕಾರವನ್ನು ಹೊಂದುವ ಹೊಣೆ ಗಾರಿಕೆಯು ಭಾರತದ ಜನತೆಯದೇ ಇರುತ್ತದೆ ಎಂಬ ಭಾವನೆಯನ್ನು ಅವರಲ್ಲಿ ರಕ್ತಗತಗೊಳಿಸ ಬೇಕು. ಭಾರತದ ನಾಗರಿಕನು ಸರಕಾರವನ್ನು ತಾನೇ ರಚಿಸಬಲ್ಲ ಅಥವಾ ಕೆಡಿಸಬಲ್ಲ ಎಂಬುದನ್ನು ಅವನಲ್ಲಿ ಬಿಂಬಿಸದ ಹೊರತು ನಾವು ಭಾರತದಲ್ಲಿ ಹೊಣೆಗಾರ ಸರಕಾರವನ್ನು ಸ್ಥಾಪಿಸಲು ನಿಜ ವಾದ ಬುನಾದಿಯನ್ನು ಹಾಕಲು ಎಂದೂ ಸಮರ್ಥರಾಗುವುದಿಲ್ಲ ಎಂದು ಧೈರ್ಯದಿಂದ ಸೂಚಿಸುತ್ತೇನೆ. ಈಗ ನನ್ನ ಸೂಚನೆ ಸರಿಯಾಗಿದ್ದರೆ ಅದರ ಪರಿಣಾಮ ಹೀಗಾಗುತ್ತದೆ. ಸರಕಾರದ ಮತ್ತು ದೇಶದ ನಾಗರಿಕನ ನಡುವೆ ನೇರ ಸಂಪರ್ಕವನ್ನು ಸ್ಥಾಪಿಸುವಂಥ ಚುನಾವಣೆಯ ಯಾವುದಾದರೂ ಒಂದು ವಿಧಾನವನ್ನು ಹೊಂದಿರತಕ್ಕುದು. ಮತ್ತು ಈ ಕಾರಣದಿಂದಾಗಿ ಕೇಂದ್ರ ಸರಕಾರದ ಮತ್ತು ನಾಗರಿಕನ ನಡುವಣ ಅಪರೋಕ್ಷ ಚುನಾವಣೆಯ ಭ್ರಮೆಯನ್ನು ತೆಗೆದುಹಾಕಬೇಕು. ದೇಶದ ಸರಕಾರದ ಮೇಲೆ

ಮತ್ತು ತಮ್ಮ ಕಲ್ಯಾಣಕ್ಕೆ ಸಂಬಂಧಿಸಿದಂತೆ ತಾವು ನಡೆಸುವ ಚುನಾವಣೆಯ ಪರಿಣಾಮ ಎಂಥದ್ದೆನ್ನುವುದನ್ನು ಕಂಡುಕೊಳ್ಳಲು ಅವರಿಗೆ ಅವಕಾಶ ಕೊಡತಕ್ಕುದು. ಫೆಡರಲ್ ಸಭೆಯ ಕೆಳಮನೆಗೆ ನೇರ ಚುನಾವಣೆಯನ್ನು ಉಪಬಂಧಿಸಿದ ಯಾವುದೇ ಪದ್ಧತಿಗೆ, ಯಾವುದೇ ಸಂದರ್ಭಗಳಲ್ಲಿ ನಾನು ಸಮ್ಮತಿಸುವುದಿಲ್ಲ.

ಮೇಲ್ಮನೆಯ ರಚನೆಗೆ ಸಂಬಂಧಿಸಿದಂತೆ ಫೆಡರಲ್ ರಚನಾ ಉಪಸಮಿತಿಯು ಸೂಚಿಸಿದ ವಿಧಾನವನ್ನು ನಾನು ಒಪ್ಪುತ್ತೇನೆ. ಅದೆಂದರೆ ಅದನ್ನು ಪರೋಕ್ಷ ಚುನಾವಣಾ ಮೂಲಕ ರಚಿಸಬೇಕು. ಮತ್ತು ಆ ಚುನಾವಣೆಗೆ ಪ್ರಾಂತೀಯ ವಿಧಾನಪರಿಷತ್ತುಗಳು ಮತಕ್ಷೇತ್ರಗಳಾಗಿರಬೇಕು. ಈ ಪದ್ಧತಿಯನ್ನು ನಾನು ಒಪ್ಪುತ್ತೇನೆ. ಏಕೆಂದರೆ ಚುನಾವಣೆಗಳನ್ನು ಪ್ರತ್ಯೇಕ ಮತ್ತು ಕೋಮು ಆಧಾರದ ಮೇಲೆ ಸಂಪೂರ್ಣವಾಗಿ ಬೇರೆ ಬೇರೆಯೇ ಆದ ರೀತಿಯಲ್ಲಿ ನಡೆಸದ ಪ್ರಮಾಣಾನುಗುಣವಾದ ಪ್ರಾತಿನಿಧ್ಯದ ಆಧಾರದ ಮೇಲೆ ನಡೆಸಲಾಗುತ್ತದೆ. ಭಾರತದಂಥ ದೇಶದಲ್ಲಿ ದುರ್ದೈವದಿಂದ ಹಲವಾರು ಪ್ರಸಂಗಗಳಿಂದಾಗಿ ಬೇರೆ ಬೇರೆ ಕೋಮುಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನಾವು ತಪ್ಪಿಸಲಾರೆವು. ಅಂಥ ಈ ಭಾರತದಲ್ಲಿ ಮತೀಯವಲ್ಲದ ಒಂದು ಸದನವನ್ನು ಸ್ಥಾಪಿಸಲು ಸಂವಿಧಾನದಲ್ಲಿ ಅವಕಾಶ ಮೂಡುವುದು ಮತ್ತು ಈ ಸದನದ ಸದಸ್ಯರು ಒಂದೇ ನಿರ್ದಿಷ್ಟ ಕೋಮಿನವರಿಂದ ಆಯ್ಕೆಯಾಗದೆ ಆದರೆ ವಿಶಾಲ ತಳಹದಿಯ ಮೇಲೆ ಜನತೆಯಿಂದ ನಿರ್ದೇಶನ ಪಡೆದವರು ಆಗಿರುವುದರಿಂದ ಇದು ತುಂಬಾ ಪ್ರಯೋಜನಕಾರಿ ಆಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ಆದಾಗ್ಯೂ ಈ ಸೂಚನೆಯ ಮೇಲೆ ಇರುವ ನನ್ನದೊಂದು ಟೀಕೆ ಎಂದರೆ: ನಾನು ಈಗಾಗಲೇ ಹೇಳಿದಂತೆ ನಿಜವಾಗಿಯೂ ಪ್ರಮಾಣಾನುಗುಣ ಪ್ರಾತಿನಿಧ್ಯಕ್ಕೇ ನನ್ನ ತಕರಾರು ಇಲ್ಲ. ನಾನು ಅದನ್ನು ಅನುಮೋದಿಸುತ್ತೇನೆ. ಆದರೆ ಒಂದು ಅಂಶವನ್ನು ಹೇಳಬೇಕೆಂದು ನಾನು ಭಾವಿಸುತ್ತೇನೆ. ಭಾರತದಲ್ಲಿನ ಎಲ್ಲ ಅಲ್ಪಸಂಖ್ಯಾತರು ತಮ್ಮ ಹಿತಾಸಕ್ತಿಗಳ ರಕ್ಷಣೆಯಾಗಬೇಕೆಂದಷ್ಟೇ ಅಲ್ಲದೆ, ಬೇರೆ ಬೇರೆ ಶಾಸನ ಸಭೆಗಳಲ್ಲಿ ತಮ್ಮ ಕೋಮುಗಳ ಪ್ರಾತಿನಿಧ್ಯವಿರಬೇಕೆಂಬ ಇಚ್ಛೆಯುಳ್ಳವರಾಗಿರುತ್ತಾರೆ ಮತ್ತು ಅವರು ನಿಶ್ಚಿತ ಕನಿಷ್ಠ ಸಂಖ್ಯೆಯ ಪ್ರಾತಿನಿಧ್ಯವು ತಮಗೆ ವಾಸ್ತವವಾಗಿ ದೊರಕಬೇಕೆಂಬ ಬಗ್ಗೆಯೂ ಒತ್ತಾಯಿಸುತ್ತಾರೆ ಎಂಬ ವಿಷಯವು ಸಮಿತಿಯ ಎಲ್ಲ ಸದಸ್ಯರಿಗೂ ತಿಳಿದ ವಿಷಯವೇ ಆಗಿರುತ್ತದೆ. ಯುಕ್ತ ಪ್ರಮಾಣಾನುಗುಣ ಪ್ರಾತಿನಿಧ್ಯವು ಅವರಿಗೆ ಮೇಲ್ಮನೆಯಲ್ಲಿ ಸ್ವಲ್ಪ ಪ್ರಾತಿನಿಧ್ಯವನ್ನು ಕೊಡಬಹುದಾದಾಗ್ಯೂ, ಯುಕ್ತ ಪ್ರಮಾಣಾನುಗುಣ ಪ್ರಾತಿನಿಧ್ಯದ ಪರಿಣಾಮದ ಬಗ್ಗೆ ಖಚಿತವಾಗಿ ನಮಗೆ ಇಲ್ಲಿಯವರೆಗೆ ಏನೂ ತಿಳಿಯದಿರುವುದರಿಂದ, ಆಯಾ ಕೋಮುಗಳು ತಮಗೆ ಬೇಕಾದಷ್ಟು ಸಂಖ್ಯೆಯ ಪ್ರಾತಿನಿಧ್ಯವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿ ಆಗುತ್ತಾರೆಯೇ ಎಂಬ ಭಯ ನನಗೆ ಇದೆ. ಆದಕಾರಣ ನಾನು ಹೀಗೆ ಸೂಚಿಸಬಯಸುತ್ತೇನೆ. ಫೆಡರಲ್ ರಚನಾ ಉಪಸಮಿತಿಯ ಈ ಶಿಫಾರಸಿಗೆ ಆಸ್ಟ್ರಿಯಾ ಸಂವಿಧಾನದ ೩೫ನೇ ಅನುಚ್ಛೇದದಂಥ ಪರಂತುಕ ಒಂದನ್ನು ಸೇರಿಸಬೇಕು. ಸದರೀ ಪರಂತುಕವು ಕೋಮುಗಳ ಪ್ರಾತಿನಿಧ್ಯದ ಬಗ್ಗೆ ಹೇಳುವುದಿಲ್ಲ. ಆದರೆ ಕೋಮುಗಳ ಪ್ರಾತಿನಿಧ್ಯಕ್ಕೆ ಅದನ್ನು ಸುಲಭವಾಗಿ ಅನ್ವಯಿಸಬಹುದು. ಆ ಪರಂತುಕವು ಹೀಗಿದೆ.

"ಫೆಡರಲ್ ಕೌನ್ಸಿಲ್ಲಿನ ಸದಸ್ಯರು ಮತ್ತು ಅವರ ಬದಲಿಯವರು ಪ್ರಾಂತೀಯ ಡಯಟ್‌ಗಳಿಂದ ಪ್ರಮಾಣಕ್ಕೆ ಅನುಗುಣವಾದ ಪ್ರಾತಿನಿಧ್ಯದ ತತ್ವಕ್ಕೆ ಅನುಸಾರವಾಗಿ ತಮ್ಮ ಶಾಸನಾಂಗದ ಅವಧಿಗಾಗಿ ಚುನಾಯಿತರಾಗತಕ್ಕುದು; ಆದರೆ, ಕನಿಷ್ಟ ಒಂದು ಸ್ಥಾನವಾದರೂ ಪ್ರಾಂತೀಯ ಡಯಟ್‌ನಲ್ಲಿ

ಅತಿ ಹೆಚ್ಚು ಸ್ಥಾನಗಳನ್ನು ಹೊಂದಿರುವ ಎರಡನೆಯ ಪಕ್ಷಕ್ಕೆ ಅಥವಾ (ಹಲವು ಪಕ್ಷಗಳು ಸಮ ಸಂಖ್ಯೆಯ ಸದಸ್ಯರನ್ನು ಹೊಂದಿದ್ದರೆ) ಪ್ರಾಂತೀಯ ಡಯೆಟ್‌ಗೆ ಆದ ಹಿಂದಿನ ಚುನಾವಣೆಯಲ್ಲಿ ಅತ್ಯಂತ ಹೆಚ್ಚಿನ ಮತ ಪಡೆದ ಎರಡನೆಯ ಪಕ್ಷಕ್ಕೆ ದೊರಕಬೇಕು. ಹಲವು ಪಕ್ಷಗಳ ಕ್ಲೇಮು ಸರಿ ಸಮ ಇರುವಾಗ ಚೀಟಿ ಎತ್ತುವುದರ ಮೂಲಕ ವಿಷಯವನ್ನು ನಿರ್ಣಯಿಸಬೇಕು."

ಇದನ್ನು ಸಂಪೂರ್ಣವಾಗಿ ಎತ್ತಿಕೊಂಡು ಅದಿರುವಂತೆಯೇ ಭಾರತದ ಸಂವಿಧಾನದಲ್ಲಿ ಅಳವಡಿಸಬೇಕೆಂದು ನಾನು ಹೇಳುವುದಿಲ್ಲ. ಆದರೆ ಅದರಲ್ಲಿ ಹೇಳಲಾದ ತತ್ವವನ್ನು ಮತ್ತು ಪ್ರಮಾಣಕ್ಕನುಗುಣ ಪ್ರಾತಿನಿಧ್ಯದ ಸಿದ್ಧಾಂತದೊಂದಿಗೆ ಒಂದು ನಿರ್ದಿಷ್ಟ ಪ್ರಮಾಣದ ಪ್ರಾತಿನಿಧ್ಯವನ್ನು ಖಚಿತಪಡಿಸುವ ಪರಂತುಕದೊಂದಿಗೆ ಸಂವಿಧಾನದಲ್ಲಿ ಅದನ್ನು ಅಳವಡಿಸಿಕೊಳ್ಳಬಹುದು. ಫೆಡರಲ್ ಶಾಸನಸಭೆಯಲ್ಲಿ ಬ್ರಿಟಿಶ್ ಭಾರತದ ಪ್ರಾಂತಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ನಾನು ಹೇಳಬೇಕಾದುದು ಇಷ್ಟು ಮಾತ್ರವಾಗಿದೆ. ನಾನು ಈಗ ವಿಷಯದ ಇನ್ನೊಂದು ಭಾಗಕ್ಕೆ ಬರುತ್ತೇನೆ. ಅಂದರೆ, ಫೆಡರಲ್ ಶಾಸನ ಸಭೆಯಲ್ಲಿ ದೇಶೀ ಸಂಸ್ಥಾನಗಳ ಪ್ರಾತಿನಿಧ್ಯ, ಇದರಲ್ಲಿ ವಿಚಾರಣೆ ಮಾಡುವ ಎರಡು ಅಂಶಗಳಿರುತ್ತದೆ. ಪ್ರತಿಯೊಂದು ಸಂಸ್ಥಾನವೂ ಬೇರೆ ಬೇರೆಯಾಗಿಯೇ ಪ್ರತಿನಿಧಿತವಾಗಬೇಕೋ ಅಥವಾ ಪ್ರಾತಿನಿಧ್ಯಕ್ಕಾಗಿ ಅವುಗಳನ್ನು ಗುಂಪುಗಳಾಗಿ ರಚಿಸಬೇಕೋ ಎನ್ನುವುದು ಮೊದಲನೆಯ ಅಂಶವಾಗಿರುತ್ತದೆ; ಇದರಿಂದ ಉದ್ಭವಿಸುವ ಎರಡನೆಯ ಅಂಶವೆಂದರೆ ಅವುಗಳ ಪ್ರಾತಿನಿಧ್ಯದ ವಿಧಾನ–ಚುನಾವಣೆಯ ಮೂಲಕವೋ ಅಥವಾ ನಾಮನಿರ್ದೇಶನದ ಮೂಲಕವೋ ಎನ್ನುವುದಾಗಿರುತ್ತದೆ.

ನಾನು ಈಗ ಮೊದಲನೆ ಅಂಶವನ್ನು ಎತ್ತಿಕೊಳ್ಳುತ್ತೇನೆ: ಈ ವಿಷಯವನ್ನು ಆಯಾ ರಾಜ್ಯಗಳಿಗೆ ಬಿಟ್ಟುಕೊಡಬೇಕೆಂದು ಫೆಡರಲ್ ರಚನಾ ಉಪಸಮಿತಿಯು ಶಿಫಾರಸು ಮಾಡಿದೆ. ಅವರ ಈ ಅಭಿಪ್ರಾಯಕ್ಕೆ ಭಿನ್ನವಾದ ಅಭಿಪ್ರಾಯವನ್ನು ನಾನು ಹೊಂದಿದ್ದೇನೆ ಎಂದು ಆ ಉಪಸಮಿತಿಗೆ ಹೇಳುತ್ತೇನೆ. ಈ ವಿಷಯವು ರಾಜ್ಯಗಳಿಗೆ ಬಿಟ್ಟುಕೊಡಬೇಕಾದ ವಿಷಯವೇ ಅಲ್ಲ ಎಂದು ನನ್ನ ಭಾವನೆ. ನಾವು ರೂಪಿಸಲು ಹೊರಟಿರುವ ಫೆಡರಲ್ ಸಂವಿಧಾನಕ್ಕೆ ಘಟಕಗಳು ಯಾವುವು ಎಂದು ಗೊತ್ತುಪಡಿಸುವುದು ಫೆಡರಲ್ ರಚನಾ ಸಮಿತಿಯೇ ನಿರ್ಣಯಿಸಬೇಕಾದ ವಿಷಯವಾಗಿರುತ್ತದೆ ಎಂದು ನನ್ನ ಅಭಿಪ್ರಾಯ. ಇಡಿಯ ವಿಷಯವನ್ನು ದೇಶೀ ಸಂಸ್ಥಾನಗಳಿಗೇ ಬಿಟ್ಟುಕೊಟ್ಟರೆ ಆಗಬಹುದಾದ ಪರಿಣಾಮವನ್ನು ನೋಡಿ. ಪ್ರಪ್ರಥಮವಾಗಿ ಭಾರತೀಯ ಫೆಡರೇಷನ್ನಿನಲ್ಲಿ ಪ್ರತಿಯೊಂದು ಸಂಸ್ಥಾನವೂ ಪ್ರಾತಿನಿಧ್ಯ ಹೊಂದಿರುತ್ತದೆ ಎಂದು ನಾನು ಭಾವಿಸಿರುತ್ತೇನೆ. ಹಾಗಾದರೆ, ನಾವು ಹೊಂದಬಹುದಾದ ಫೆಡರೇಶನ್ನು ಬಹು ದೊಡ್ಡ ಗಾತ್ರದ ಫೆಡರೇಶನ್ನು ಆಗುತ್ತದೆ. ಈ ಸಂಗತಿಯನ್ನು ನಾವು ಇತರ ದೇಶಗಳೊಂದಿಗೆ ಹೋಲಿಸಿ ನೋಡೋಣ. ಜರ್ಮನ್ ಸಾಮ್ರಾಜ್ಯದಲ್ಲಿ ಫೆಡರಲ್ ರಾಜ್ಯದ ಘಟಕಗಳು ಕೇವಲ ೨೫ ಇದ್ದವು. ಆಸ್ಟ್ರೇಲಿಯಾದಲ್ಲಿ ಕೇವಲ ೫ ಇರುತ್ತವೆ. ಆಸ್ಟ್ರಿಯಾದಲ್ಲಿ ೮; ಕೆನಡಾದಲ್ಲಿ ೪; ಸ್ವಿಝರ್‌ಲ್ಯಂಡಿನಲ್ಲಿ ೨೨; ಅತ್ಯಂತ ದೊಡ್ಡ ಫೆಡರಲ್ ರಾಜ್ಯವಾದ ಸಂಯುಕ್ತ ಸಂಸ್ಥಾನ (ಅಮೇರಿಕಾ)ದಲ್ಲಿ ೪೮; ಭಾರತದಲ್ಲಿ ಪ್ರತಿ ಸಂಸ್ಥಾನವನ್ನು ಪ್ರತಿನಿಧಿಸಬೇಕೆಂಬ ಅಭಿಪ್ರಾಯದ ಆಧಾರದ ಮೇಲೆ ನೋಡಿದರೆ, ಭಾರತವು ಸುಮಾರು ೫೭೦ ಘಟಕಗಳುಳ್ಳ ಫೆಡರೇಶನ್ ಆಗುತ್ತದೆ. ಬೇರೆ ರೀತಿಯಲ್ಲಿ ಕಲ್ಪನೆ ಮಾಡಿದರೆ, ಅಂದರೆ ನಾವು ಊಹೆ ಮಾಡಿರುವ ಎಲ್ಲ ಸಂಸ್ಥಾನಗಳಿಗೂ ಪ್ರಾತಿನಿಧ್ಯ ದೊರಕದಿದ್ದರೆ ಮತ್ತು ಅವುಗಳಲ್ಲಿ ಕೆಲವಕ್ಕೆ ಮಾತ್ರ ಪ್ರಾತಿನಿಧ್ಯ ದೊರೆತರೆ ಆಗ ಉಂಟಾಗುವ ಪ್ರಶ್ನೆಯೆಂದರೆ ನಾವು ರೂಪಿಸಲಿರುವ ಸಂವಿಧಾನದಲ್ಲಿ ಭಾರತದ ಪ್ರತಿ ಅಂಗುಲವೂ ಪ್ರತಿನಿಧಿತವಾಗತಕ್ಕುದೆಂಬ ನಮ್ಮ

ಆದರ್ಶದ ಮೇಲೆ ಪರಿಣಾಮ ಏನಾಗುತ್ತದೆ? ಕೈ ಬಿಡಲಾಗದ ಸಂಸ್ಥಾನ ಪರಿಸ್ಥಿತಿ ಏನಾಗಬಹುದು? ನಾವು ಈಗ ಈ ಸಮಸ್ಯೆಯನ್ನು ಪರಿಶೀಲಿಸಬೇಕಾಗಿದೆ.

ಮಾನ್ಯ ಲಾರ್ಡ್ ಛಾನ್ಸಲರ್ ಅವರೇ, ನಾನು ಈ ಪ್ರಶ್ನೆಯನ್ನು ಭಾರತೀಯ ಫೆಡರೇಶನ್ನಿನ ಘಟಕಗಳಾಗುವ ರಾಜ್ಯಗಳ ಸಂಖ್ಯೆಯನ್ನು ನೋಡಿ ಗಲಿಬಿಲಿಗೊಂಡು ಎತ್ತಿಲ್ಲ. ನನ್ನ ಮನಃಶಾಂತಿಯನ್ನು ಕದಡುತ್ತಿರುವ ವಿಷಯವೆಂದರೆ, ಭಾರತದ ಭಾವೀ ಫೆಡರೇಶನ್ನಿನ ಘಟಕವೆಂದು ಪ್ರತಿಯೊಂದು ಭಾರತೀಯ ಸಂಸ್ಥಾನ ವನ್ನು ಅದು ಆಧುನಿಕ ನಾಗರಿಕತೆಯ ಭಾರವನ್ನು ಹೊರಲು ಸಮರ್ಥವಾಗಿದೆಯೇ ಅಥವಾ ಇಲ್ಲವೇ ಅನ್ನುವ ಪ್ರಶ್ನೆ ಏನೇ ಇದ್ದರೂ ನಾವು ಪ್ರತಿಯೊಂದನ್ನೂ ಒಂದು ಸ್ವತಂತ್ರ ಘಟಕವೆಂದು ಒಪ್ಪುತ್ತೇವೆಯೋ ಅಥವಾ ಅತ್ಯಂತ ಕನಿಷ್ಠ ಮಟ್ಟದ ಸತ್ವವಿದ್ದ ಘಟಕಗಳಾಗಬಹುದಾದಂಥ ಘಟಕಗಳನ್ನೂ ನಾವು ಫೆಡ ರೇಶನ್ನಿನಲ್ಲಿ ಸೇರಿಸಿಕೊಳ್ಳಲು ಸಿದ್ಧವಿದ್ದೇವೆಯೋ? ಭಾರತೀಯ ರಾಜ್ಯಗಳ ಪ್ರಶ್ನೆಯ ಬಗ್ಗೆ ನಾವು ಚರ್ಚಿಸು ತ್ತಿರುವಾಗ ಬೇರೆ ಬೇರೆ ರಾಜ್ಯಗಳಲ್ಲಿರುವ ಬೇರೆ ಬೇರೆ ರೀತಿಯ ಹತ್ತು ಹಲವಾರು ಸ್ವರೂಪದ ಪರಿಸ್ಥಿತಿಗಳ ಬಗ್ಗೆ ನಮಗೆ ಸಾಕಷ್ಟು ತಿಳವಳಿಕೆ ಇಲ್ಲ ಎಂಬ ಬಗ್ಗೆ ನನಗೆ ಖಚಿತವಾಗಿದೆ. ಮಾನ್ಯ ಲಾರ್ಡ್ ಛಾನ್ಸಲರ್. ಅವರೇ, ತಮ್ಮ ಅನುಮತಿಯಿಂದ ಭಾರತದ ರಾಜ್ಯಗಳ ಪರಿಸ್ಥಿತಿಯನ್ನು ವರ್ಣಿಸುವ ಶ್ರೀ ಡಿ.ವಿ.ಗುಂಡಪ್ಪನವರ ಭಾರತ ಸಂವಿಧಾನದಲ್ಲಿ ರಾಜ್ಯಗಳು ಮತ್ತು ಅವುಗಳ ಜನತೆ (The states and their people in the Indian Constitution.) ಎಂಬ ಚಿಕ್ಕ ಪ್ಯಾರಾವನ್ನು ನಾನು ಓದಲು ಬಯಸುತ್ತೇನೆ. ಈಗ ಅದು ನಿಜಸ್ಥಿತಿಯೇ ಇರುತ್ತದೆ. ಅವರು ಕೊಡುವ ಕೋಷ್ಟಕವನ್ನು ಇಲ್ಲಿ ತಮ್ಮ ಮುಂದಿಟ್ಟು ತಮಗೆ ತೊಂದರೆ ಕೊಡಲು ನಾನು ಇಷ್ಟಪಡುವುದಿಲ್ಲ. ಅವರ ಟೀಕೆಗಳನ್ನು ಮಾತ್ರ ಓದುತ್ತೇನೆ.

"ಮೇಲೆ ತೋರಿಸಲಾದ ಕೋಷ್ಟಕವನ್ನು ಗಮನಿಸಿದಾಗ ೪೫೪ ರಾಜ್ಯಗಳು ೧೦೦೦ ಚದರು ಮೈಲಿಗಿಂತ ಕಡಿಮೆ ವಿಸ್ತೀರ್ಣ ಉಳ್ಳವುಗಳಾಗಿರುತ್ತವೆ: ೪೫೨ ರಾಜ್ಯಗಳು ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳವುಗಳಾಗಿವೆ; ಮತ್ತು ೩೭೪ ರಾಜ್ಯಗಳ ಉತ್ಪನ್ನವು ಒಂದು ಲಕ್ಷಕ್ಕಿಂತ ಕಡಿಮೆ ಇರುತ್ತದೆ. ಬ್ರಿಟಿಶ್ ಭಾರತವು ೧೦,೯೪,೩೦೦ ಚದುರು ಮೈಲು ಕ್ಷೇತ್ರವನ್ನು ಹೊಂದಿದ್ದು ಅಜಮಾಸು ೨೨೨ ದಶಲಕ್ಷ ಜನಸಂಖ್ಯೆಯುಳ್ಳದ್ದಾಗಿರುತ್ತದೆ. ಮತ್ತು ಅದನ್ನು ೨೭೩ ಜಿಲ್ಲೆಗಳಲ್ಲಿ ವಿಭಜಿಸಲಾಗಿದೆ. ಬ್ರಿಟಿಶ್ ಭಾರತದಲ್ಲಿನ ಜಿಲ್ಲೆಯ ಅಜಮಾಸು ಕ್ಷೇತ್ರವು ೪೦೦೦ ಚದುರು ಮೈಲಿಗಳಷ್ಟಾಗುತ್ತಿದೆ ಮತ್ತು ಅದರ ಸರಾಸರಿ ಜನಸಂಖ್ಯೆಯು ಎಂಟು ಲಕ್ಷದಷ್ಟು ಇರುತ್ತದೆ. ಬ್ರಿಟಿಶ್ ಭಾರತದಲ್ಲಿನ ಪ್ರತಿಯೊಂದು ಜಿಲ್ಲೆಯನ್ನು ಒಂದು ರಾಜ್ಯವನ್ನಾಗಿ ರಚಿಸುವಂತೆ ಸೂಚನೆಯನ್ನು ಕೊಟ್ಟರೆ ಇದು ಎಷ್ಟು ಹಾಸ್ಯಾಸ್ಪದವಾಗುತ್ತದೆ? ಆದಾಗ್ಯೂ ೫೬೨ ರಾಜ್ಯಗಳಲ್ಲಿ ಕೇವಲ ೩೦ ರಾಜ್ಯಗಳು ಮಾತ್ರ ಬ್ರಿಟಿಶ್ ಭಾರತದ ಸರಾಸರಿಗೆ ಬರುವ ಕ್ಷೇತ್ರವನ್ನು ಜನಸಂಖ್ಯೆಯನ್ನು ಮತ್ತು ಉತ್ಪನ್ನವನ್ನು ಹೊಂದಿರುತ್ತವೆ. ಹಲವು ರಾಜ್ಯಗಳು ಎಷ್ಟು ಅತ್ಯಂತ ಚಿಕ್ಕವಾಗಿರುವವರೆಂದರೆ ಅವುಗಳ ಮೇಲೆ ಹೇರಲಾದ ದೊಡ್ಡಸ್ತಿಕೆಯ ದುರ್ದೈವವನ್ನು ನೋಡಿ ಅವರ ಮೇಲೆ ಕರುಣೆ ಬರದೆ ಇರದು. ೧೫ ರಾಜ್ಯಗಳ ಕ್ಷೇತ್ರವು ಒಂದು ಚದುರು ಮೈಲಿನಷ್ಟೂ ಸಹ ಇಲ್ಲ. ೨೭ ರಾಜ್ಯಗಳು ಕೇವಲ ೧ ಚದುರು ಮೈಲಿನಷ್ಟು ಮಾತ್ರ ಕ್ಷೇತ್ರವನ್ನು ಹೊಂದಿವೆ. ಸುರತ್ ಜಿಲ್ಲೆಯಲ್ಲಿ ಹದಿನಾಲ್ಕು ರಾಜ್ಯಗಳು ಇರುತ್ತವೆ. ಅವುಗಳಲ್ಲಿ ಒಂದು ರಾಜ್ಯವೂ ಸಹ ೧೯೨೫ರ ಯಾದಿಯಂತೆ ಅದಕ್ಕೆ ನಿಕಟ ಹಣಕಾಸಿನ ವರ್ಷದಲ್ಲಿ ರೂ. ೩,೦೦೦.೦೦ಗಳಿಗಿಂತ ಹೆಚ್ಚಿನ ಉತ್ಪನ್ನವನ್ನು ಪಡೆಯಲಿಲ್ಲ.

> ಅವುಗಳಲ್ಲಿ ಮೂರು ರಾಜ್ಯಗಳು ತನ್ನ ಜನಸಂಖ್ಯೆ ೧೦೦ ಎಂದು ಹೇಳುವ ಮತ್ತು ಐದು ರಾಜ್ಯಗಳನ್ನು ತಮ್ಮ ಉತ್ಪನ್ನ ರೂ. ೧೦೦.೦೦ ಎಂದು ಹೇಳುವ ಹೀನಸ್ಥಿತಿಯಲ್ಲಿ ಇದ್ದವು."

ಆಯಾ ವರ್ಷಕ್ಕೆ ಹೇಳಲಾಗಿರುವ ಅತ್ಯಂತ ಕಡಿಮೆ ಉತ್ಪನ್ನವು ರೂ. ೨೦.೦೦ ಆಗಿತ್ತು.

ಹೆಚ್. ಹೆಚ್. ದಿ ಮಹಾರಾಜಾ ಆಫ್ ಬಿಕಾನೇರ: ನಾನು ನಿನ್ನೆ ಹೇಳಿದ್ದನ್ನು ಇದು ಸಮರ್ಥಿಸುತ್ತದೆ ಎಂದು ಹೇಳಬಹುದೇ? ಇವು ಭಾರತೀಯ ರಾಜ್ಯಗಳೋ ಅಥವಾ ಸಾರ್ವಭೌಮ ರಾಜ್ಯಗಳೋ ಅನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ಗಲಿಬಿಲಿ ಉಂಟಾಗಿದೆ.

ಡಾ. ಅಂಬೇಡ್ಕರ್: ಇಲ್ಲ, ಅಂತಹದೇನೂ ಇಲ್ಲ.

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ಭಾರತೀಯ ರಾಜ್ಯದ ಈ ಇನ್ನೊಬ್ಬರು– ಆತನ ಬಗ್ಗೆ ಸರ್ ಮಿರ್ಜಾ ಅವರು ಹೆಚ್ಚಿಗೆ ಹೇಳಬಲ್ಲರು– ಅದೇ ತಪ್ಪನ್ನು ಮಾಡಿದ್ದಾರೆಂಬುದು ನನ್ನ ಭಯವಾಗಿದೆ.

ಡಾ. ಅಂಬೇಡ್ಕರ್: ಇರಬಹುದು, ಸನ್ಮಾನ್ಯ ಬಿಕಾನೇರ ಮಹಾರಾಜರಿಗೆ ಎಲ್ಲ ಗೌರವದೊಂದಿಗೆ ನಾನು ಈ ಪ್ರಶ್ನೆಯನ್ನು ಕೇಳುತ್ತೇನೆ: ರಾಜ್ಯವೆಂದರೆ ಏನು ಎಂಬ ಬಗ್ಗೆ ಅವರದು ಬೇರೆ ವ್ಯಾಖ್ಯೆ ಇದ್ದರೆ ಮತ್ತು ಭಾರತೀಯ ಫೆಡರೇಶನ್ನಿನಲ್ಲಿ ಪ್ರವೇಶಕ್ಕೆ ಅನುಮತಿ ಕೊಡುವ ವಿಷಯಕ್ಕೆ ಸಂಬಂಧಿಸಿದಂತೆ ಅವರು ಆ ವ್ಯಾಖ್ಯೆಯನ್ನು ಅನುಸರಿಸುವುದಾದರೆ, ಅವರ ಮನಸ್ಸಿನಲ್ಲಿರುವ ಆ ವ್ಯಾಖ್ಯೆಯ ವ್ಯಾಪ್ತಿಯಿಂದ ಹೊರಗೆ ಉಳಿಯುವ ರಾಜ್ಯಗಳ ಪರಿಸ್ಥಿತಿ ಏನು ಎಂಬುದನ್ನು ತಿಳಿದುಕೊಳ್ಳಲು ನಾನು ಬಯಸುತ್ತೇನೆ.

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ಅದೆಲ್ಲವನ್ನೂ ಅನಂತರ ಚರ್ಚಿಸಲಾಗುವುದು ಎಂದು ನಾನು ಭಾವಿಸುತ್ತೇನೆ.

ಡಾ. ಅಂಬೇಡ್ಕರ್: ಈ ಫೆಡರಲ್ ರಚನಾ ಸಮಿತಿಯು ರಾಜ್ಯಗಳಿಗೆ ಅವುಗಳು ಬೇಡಿದ್ದೆಲ್ಲವನ್ನು ಕಣ್ಣುಮುಚ್ಚಿಕೊಂಡು ಕೊಡಲಾರದು.

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ರಾಜ್ಯಗಳೂ ಕೊಡಲಾರವು. ಖಾಲೀ ಚೆಕ್ಕಿಗೆ ನಾವು ಸಹಿ ಹಾಕಲಾರೆವು. ಪರಸ್ಪರ ತೊಂದರೆಗಳನ್ನು ನಾವು ಗಮನಿಸಬೇಕು.

ಅಧ್ಯಕ್ಷ: ಡಾ. ಅಂಬೇಡ್ಕರ್ ಅವರೇ ಆ ಬಗ್ಗೆ ನೀವು ನನಗೆ ಸಹಾಯ ಮಾಡಬಲ್ಲಿರಿ. ನೀವು ತುಂಬಾ ಕುತೂಹಲಕಾರಿಯಾದ ವಿಷಯವನ್ನು ಓದಿದಿರಿ. ಅದನ್ನು ನಾನು ತುಂಬಾ ಲಕ್ಷ್ಯಗೊಟ್ಟು ಕೇಳಿರುತ್ತೇನೆ. ಆದರೆ ಆ ವಿಷಯದ ಆಧಾರದ ಮೇಲೆ ನೀವು ಯಾವ ನಿರ್ಣಯಗಳಿಗೆ ಬರುತ್ತೀರೆಂದು ಕೇಳ ಬಯಸುತ್ತೇನೆ.

ಡಾ. ಅಂಬೇಡ್ಕರ್: ನಾನು ಹೇಳುವುದು ಇಷ್ಟೆ. ಇದು ತುಂಬಾ ಗಂಭೀರ ವಿಷಯವಾಗಿದೆ. ರಾಜ್ಯದ ಲಕ್ಷಣಗಳು ಏನೇ ಇರಲಿ, ಪ್ರತಿಯೊಂದು ರಾಜ್ಯವೂ ಭಾರತೀಯ ಫೆಡರೇಶನ್ನಿನ ಸದಸ್ಯನಾಗುವ ಹಕ್ಕನ್ನು ಹೊಂದಿದೆ ಎಂಬ ಪ್ರಸ್ತಾಪವನ್ನು ಒಪ್ಪಿದರೆ ನೀವು ಆ ರಾಜ್ಯಕ್ಕೆ ಖಾಯಂ ಆಗಿ ಸ್ವತಂತ್ರ ಅಸ್ತಿತ್ವದ ಹಕ್ಕನ್ನು ಕೊಡುವಿರಿ.

ಎಚ್. ಎಚ್. ಮಹಾರಾಜಾ ಆಫ್ ಬಿಕಾನೇರ್: ಆ ಹಕ್ಕನ್ನು ಅದು ಈಗ ಹೊಂದಿರುತ್ತದೆ.

ಡಾ. ಅಂಬೇಡ್ಕರ್: ಅದು ಬ್ರಿಟಿಶ್ ಸರಕಾರದ ದಯೆಯಿಂದಾಗಿ ಆಗಿದೆ. ಆದರೆ, ನನ್ನ ಹೇಳಿಕೆಯೆಂದರೆ ಈ ಪರಿಸ್ಥಿತಿಯನ್ನು ನಾನು ಊಹಿಸಲೂ ಸಾಧ್ಯವಿಲ್ಲ ಮತ್ತು ಅದಕ್ಕೆ ಒಪ್ಪುವುದೂ ಇಲ್ಲ ಮತ್ತು

ಈ ಕಾರಣಕ್ಕಾಗಿ ಪ್ರತಿಯೊಂದು ಘಟಕವೂ ಇತ್ತೀಚಿನ ದಿನಗಳಲ್ಲಿ ಅರ್ವಾಚೀನ ನಾಗರೀಕತೆಯ ಬೇಡಿಕೆಗಳ ಮಟ್ಟದಲ್ಲಿ, ತನ್ನ ವಶದಲ್ಲಿ ಸಾಕಷ್ಟು ಸಂಪನ್ಮೂಲಗಳು ಇದ್ದ ಹೊರತು ಏನೇ ಆದರೂ ಬದುಕಲಾರದು. ಭಾರತೀಯ ರಾಜಕುಮಾರ ತನ್ನನ್ನು ತಾನು ರಾಜಕುಮಾರನೆಂದು ಕರೆದುಕೊಂಡು ಖುಷಿ ಪಡುತ್ತಾನೆಂಬ ಕಾರಣಕ್ಕಾಗಿ, ತನ್ನ ಸಂಸ್ಥಾನ ಜನತೆಗೆ ಅದು ಪ್ರಯೋಜನಕಾರಿ ಆಗುತ್ತದೆಯೋ ಅಥವಾ ಇಲ್ಲವೋ ಅನ್ನುವತ್ತ ಗಮನ ಹರಿಸದೆಯೇ ಬೇರೆ ಅಸ್ತಿತ್ವವನ್ನು ಹೊಂದಿದೆ ಎಂದು ಹೇಳುತ್ತಿರುವ ಭಾರತೀಯ ರಾಜಕುಮಾರನ ಮನಸ್ಸನ್ನು ಸಂತೋಷಪಡಿಸಲು ಪ್ರಯತ್ನಿಸುವುದು ನಿರುಪಯೋಗಿ ಎನಿಸುತ್ತದೆ.

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ಅವರನ್ನು ರಾಜಕುಮಾರನೆಂದು ಕರೆಯುವುದಿಲ್ಲ.

ಡಾ. ಅಂಬೇಡ್ಕರ್: ಏನೇ ಆಗಲಿ ಭಾರತೀಯ ಫೆಡರೇಶನ್ನು ಸೇರುವುದಕ್ಕೆ ಮುಂಚೆ ರಾಜ್ಯಗಳು ಸಮಧಾನಪಡಿಸಬೇಕಾದ ನಿಶ್ಚಿತ ಅರ್ಹತೆಗಳನ್ನು ಈ ಸಮಿತಿಯ ಗೊತ್ತುಪಡಿಸಬೇಕೆಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷ: ಇದು ತುಂಬ ಕುತೂಹಲಕಾರಿಯಾದ ವಿಷಯವಾಗಿದೆ. ಯಾವ ಅರ್ಹತೆಗಳಿರಬೇಕೆಂಬ ಬಗ್ಗೆ ನೀವು ನಮಗೆ ಸಹಾಯ ಮಾಡಬಲ್ಲಿರಾ?

ಡಾ. ಅಂಬೇಡ್ಕರ್: ನಿಶ್ಚಿತ ಕ್ಷೇತ್ರ ಮತ್ತು ನಿಶ್ಚಿತ ಉತ್ಪನ್ನಗಳು ಈ ಬಗ್ಗೆ ಆಧಾರವಾಗಬೇಕೆಂದು ನಾನು ಗೊತ್ತುಪಡಿಸುತ್ತೇನೆ. ಎಷ್ಟು ಕ್ಷೇತ್ರವಿರಬೇಕು, ಎಷ್ಟು ಉತ್ಪನ್ನವಿರಬೇಕು ಎಂಬುದನ್ನು ಈಗಲೇ ಇಲ್ಲಿಯೇ ಹೇಳಲಾರೆ. ಒಂದು ಸಂಸ್ಥಾನದ ರಾಜನು ತನ್ನ ಸಂಸ್ಥಾನವು ಸ್ವತಂತ್ರವಾಗಿ ಉಳಿಯಬೇಕು ಮತ್ತು ಅದು ಭಾರತೀಯ ಫೆಡರೇಶನ್ನಿನ ಭಾಗವಾಗಿರಬೇಕು ಎನ್ನುವುದಾದರೆ, ತನ್ನ ಪ್ರಜೆಗಳಿಗೆ ನಾಗರಿಕ ಜೀವನವನ್ನು ಕೊಡುವುದಕ್ಕೆ ಅವಶ್ಯವಾದ ಸಂಪನ್ಮೂಲಗಳು ಮತ್ತು ಸಾಮರ್ಥ್ಯ ಇವೆ ಎನ್ನುವುದನ್ನು ರುಜುವಾತು ಪಡಿಸಲು ಆತನು ಶಕ್ತನಾಗಿರಬೇಕು ಎಂಬ ಸಂಗತಿಯನ್ನು ಆಧರಿಸಿ ನನ್ನ ಹೇಳಿಕೆಯನ್ನು ಕೊಡುತ್ತೇನೆ. ಇದು ನನ್ನ ವಾದವಾಗಿರುತ್ತದೆ.

ಸರ್ ಮಾಣಿಕಜೀ ದಾದಾಭಾಯಿ: ನನ್ನ ಸ್ನೇಹಿತರ ಹೇಳಿಕೆಯಂತೆ ಅಲ್ಪ ಭೂ ಪ್ರದೇಶವಿದ್ದ ಮತ್ತು ಅಲ್ಪ ಉತ್ಪನ್ನವಿದ್ದ ಚಿಕ್ಕ ಸಂಸ್ಥಾನವು ಫೆಡರೇಶನ್ನಿನಲ್ಲಿ ಸೇರಲು ಅವರು ಅನುಮತಿಸುವುದಿಲ್ಲ ಎಂದು ನಾನು ತಿಳಿದುಕೊಳ್ಳಬಹುದೋ?

ಡಾ. ಅಂಬೇಡ್ಕರ್: ಪ್ರಶ್ನೆಯ ಎರಡನೆಯ ಭಾಗಕ್ಕೆ ಸಂಬಂಧಿಸಿದಂತೆ ಅಂದರೆ ಫೆಡರಲ್ ಶಾಸನ ಸಭೆಯಲ್ಲಿ ಭಾರತೀಯ ರಾಜ್ಯಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ, ಭಾರತೀಯ ರಾಜ್ಯಗಳು ಫೆಡರಲ್ ಶಾಸನ ಸಭೆಗೆ ತಮ್ಮ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಲು ಅನುಮತಿಸಿದರೆ ಮಾತ್ರ ತಾವು ಭಾರತೀಯ ಫೆಡರೇಶನ್ನಿನಲ್ಲಿ ಸೇರುತ್ತೇವೆ ಎಂದು ಸ್ಪಷ್ಟಪಡಿಸಿರುತ್ತಾರೆ. ಭಾರತೀಯ ರಾಜಕುಮಾರರಿಗೆ ತಕ್ಕ ಗೌರವವನ್ನು ಸಲ್ಲಿಸಿ ಹೇಳುವುದೇನೆಂದರೆ ಅವರ ವಾದಕ್ಕೆ ನಾನು ಒಪ್ಪಲಾರೆ ಮತ್ತು ಅವರ ಪ್ರಾತಿನಿಧ್ಯವು ಚುನಾವಣೆಯ ಮೂಲಕವೇ ಆಗತಕ್ಕುದು. ಈ ಅಂಶದ ಮೇಲೆ ನನ್ನ ಹೇಳಿಕೆಯನ್ನು ಕೊಡುವಲ್ಲಿ, ಲಾರ್ಡ್ ಛಾನ್ಸಲರ್ ಅವರೇ, ನಾನು ಎತ್ತಿ ತೋರಿಸಬೇಕಾದ ಮೊದ ಲನೆಯ ವಿಷಯವೆಂದರೆ, ನನ್ನ ತಿಳಿವಳಿಕೆಯಂತೆ, ಯಾವುದೇ ಸಂವಿಧಾನದಲ್ಲಿ ಒಂದನ್ನು ಹೊರತು ಪಡಿಸಿ, ಈ ಬಗ್ಗೆ ಪೂರ್ವನಿದರ್ಶನವಿಲ್ಲ. ಅದನ್ನು ಈ ಕೂಡಲೇ ನಾನು ಹೇಳುತ್ತೇನೆ. ಅದೆಂದರೆ ಫೆಡರಲ್ ಶಾಸನಸಭೆಗೆ

ತಮ್ಮ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಲು ರಾಜ್ಯ ಸರಕಾರಗಳಿಗೆ ಅನುಮತಿಸುವುದಾಗಿರುತ್ತದೆ. ಅದನ್ನು ಗುರುತಿಸಲು ಫೆಡರೇಶನ್ನಿನ ಘಟಕವು ಫೆಡರಲ್ ಶಾಸನಸಭೆಯ ಮೇಲ್ಮನೆಯಲ್ಲಿ ಪ್ರಾತಿನಿಧ್ಯಕ್ಕೆ ಹಕ್ಕುಳ್ಳದ್ದಾಗಿರುತ್ತದೆ ಅನ್ನುವುದು ಒಂದು ವಿಷಯವಾಗಿರುತ್ತದೆ. ಆದರೆ ಮತ್ತೊಂದು ದೃಷ್ಟಿಯಿಂದ ಅದು ಸಂಪೂರ್ಣವಾಗಿ ಭಿನ್ನವಾದ ವಿಷಯವೇ ಆಗಿರುತ್ತದೆ. ಅಂದರೆ ಆ ಮೇಲ್ಮನೆಗೆ ಆಯಾ ಸರಕಾರಗಳೇ ತಮ್ಮ ಜನಪ್ರತಿನಿಧಿಗಳ ನಾಮ ನಿರ್ದೇಶನ ಮಾಡತಕ್ಕುದು. ನನ್ನ ದೃಷ್ಟಿಯಲ್ಲಿ ಈ ಎರಡೂ ವಿಷಯಗಳು ಸ್ಪಷ್ಟವಾಗಿ ಭಿನ್ನವಾಗಿವೆ. ಇಂಥ ವ್ಯವಸ್ಥೆಯನ್ನು ಒಪ್ಪಿಕೊಂಡು ಅದನ್ನು ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿರುವ ನನಗೆ ನೆನಪಿರುವ ಒಂದೇ ಒಂದು ಉದಾಹರಣೆಯೆಂದರೆ ಹಳೇ ಜರ್ಮನ್ ಸಾಮ್ರಾಜ್ಯದ ಸಂವಿಧಾನ. ಅದರ ಮೇರೆಗೆ ರಾಜ್ಯಗಳು ಸರಕಾರಗಳು ಬಂಡಸ್ರಾತಕ್ಕೆ (ಕೇಂದ್ರ ಶಾಸನ ಸಭೆ) ತಮ್ಮ ಪ್ರತಿನಿಧಿಗಳನ್ನು ಕಳಿಸಲು ಅನುಮತಿಸಲಾಗಿತ್ತು. ಈ ಟೇಬಲ್ಲಿನ ಆ ಬದಿಗಿರುವ ನನ್ನ ಸಹೋದರ ಪ್ರತಿನಿಧಿಗಳು ಹಳೆಯ ಜರ್ಮನ್ ಸಾಮ್ರಾಜ್ಯದ ಸಂವಿಧಾನದಲ್ಲಿನ ಈ ಉಪಬಂಧವನ್ನು ಆಧಾರವಾಗಿರಿಸಿಕೊಳ್ಳಬಹುದು. ಮುಂದುವರೆಯುವುದಕ್ಕೆ ಮುಂಚೆ ನಾನು ಕೇವಲ ಒಂದು ಸೂಚನೆ ಮಾಡಬಯಸುತ್ತೇನೆ. ಹಳೆಯ ಜರ್ಮನ್ ಸಾಮ್ರಾಜ್ಯದಲ್ಲಿದ್ದ ಈ ಉಪಬಂಧದ ಎಲ್ಲ ರೀತಿಯ ಅರ್ಥವನ್ನು ರಾಜಕುಮಾರರೆಲ್ಲರೂ ಸರಿಯಾಗಿ ತಿಳಿದುಕೊಂಡಿದ್ದಾರೆಂಬ ಬಗ್ಗೆ ನನಗೆ ನಂಬಿಗೆ ಇಲ್ಲ. ಬಂಡಸ್ರಾತದಲ್ಲಿನ ಹಲವಾರು ರಾಜ್ಯಗಳ ಪ್ರತಿನಿಧಿಗಳನ್ನು ಹಲವು ಖಚಿತ ಸೂಚನೆಗಳೊಂದಿಗೆ ಕಾರ್ಯಮಾಡುತ್ತಿರುವ ಆಯಾ ರಾಜ್ಯಗಳ ರಾಯಭಾರಿಗಳೆಂದು ಪರಿಗಣಿಸಲಾಗುತ್ತಿತ್ತು ಎಂಬುದು ನಿಜ. ಆದರೆ, ಅದರಿಂದಾಗಿ ತುಂಬಾ ಪ್ರಭಾವಶಾಲೀ ಪರಿಣಾಮವು ಉಂಟಾಗುತ್ತಿತ್ತು. ಆದರೆ, ಬಂಡಸ್ರಾತ್ ಆ ರಾಯಭಾರಿಗಳ ಅಧಿಕಾರ ಪತ್ರಗಳೆಂದು ಕರೆಯಲಾಗುತ್ತಿರುವ ದಾಖಲೆಗಳನ್ನು ಪರೀಕ್ಷಿಸುವ ಅಧಿಕಾರವನ್ನು ಹೊಂದಿತ್ತು. ಅದಷ್ಟೇ ಅಲ್ಲ, ಬಂಡಸ್ರಾತ್ ಜರ್ಮನ್ ರಾಜ್ಯಗಳನ್ನು ಆಳುತ್ತಿದ್ದ ಹಲವಾರು ರಾಜಕುಮಾರರ ಮನೆತನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆಯೂ ವಿಚಾರಣೆ ಮಾಡುವ ಅಧಿಕಾರವನ್ನು ಹೊಂದಿತ್ತು. ಏಕೆಂದರೆ, ಅದರ ಅರ್ಥ ಹೀಗೆ, ರಾಜಕುಮಾರನನ್ನು ಆ ರಾಜ್ಯದ ಯಜಮಾನ ಎಂದು ಕಾನೂನು ಮೇರೆಗೆ ಒಪ್ಪದ ಹೊರತು, ಆತನ ಪ್ರತಿನಿಧಿಯು ಬಂಡಸ್ರಾತದಲ್ಲಿ ಕುಳಿತುಕೊಳ್ಳಲು ಅಧಿಕಾರ ಇರಲಿಲ್ಲ. ಈಗ ಈ ತರ್ಕದ ಆಧಾರದ ಮೇಲೆ ತಮ್ಮ ಕ್ಲೇಮನ್ನು ಆಧರಿಸುವ ರಾಜಕುಮಾರರು.....

ಕರ್ನಲ್ ಹಕ್ಸರ್: ಅವರು ಹಾಗೆ ಮಾಡುವುದಿಲ್ಲ.

ಡಾ. ಅಂಬೇಡ್ಕರ್: ಭಾರತದ ಫೆಡರಲ್ ಶಾಸನಸಭೆಗೆ ಬಂಡಸ್ರಾತ್ ಹೊಂದಿರುವಂಥ ಅಧಿಕಾರ ವನ್ನು ಹೊಂದುವುದಕ್ಕೆ ಅನುಮತಿಸುತ್ತಾರೆಂದರೆ ನನಗೆ ಆಶ್ಚರ್ಯವಾಗುತ್ತದೆ. ಲಾರ್ಡ್ ಛಾನ್ಸಲರ್ ಅವರೇ, ನಾನು ಈ ಪ್ರಶ್ನೆಯನ್ನು ಪೂರ್ವನಿದರ್ಶನವನ್ನು ಅಥವಾ ತರ್ಕವನ್ನು ಉಲ್ಲೇಖಿಸಿ ಚರ್ಚಿಸುವುದಿಲ್ಲ. ಇದನ್ನು ನಾನು ಸಂಪೂರ್ಣವಾಗಿ ಬೇರೆಯ ಆಧಾರದ ಮೇಲೆಯೇ ಮತ್ತು ಸಂಪೂರ್ಣವಾಗಿ ಬೇರೆ ಪರೀಕ್ಷೆಗಳನ್ನು ಅನ್ವಯಿಸಿ ಚರ್ಚಿಸುತ್ತೇನೆ. ನಾವೆಲ್ಲರೂ ಸ್ಪಷ್ಟವಾಗಿ ತಿಳಿದುಕೊಂಡಿರುವ ಒಂದು ವಿಷಯ ವೆಂದರೆ ನಾವೆಲ್ಲರೂ ಭಾರತಕ್ಕೆ ಹೊಣೆಗಾರ ಸರಕಾರದ ಪದ್ಧತಿಯನ್ನು ಸ್ಥಾಪಿಸುವ ಸಂವಿಧಾನವನ್ನು ರೂಪಿಸುತ್ತಿದ್ದೇವೆ. ನಾವು ಹಲವಾರು ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದಾಗ್ಯೂ, ನನ್ನ ಮಟ್ಟಿಗೆ ಮಾತ್ರ ಹೇಳುವುದಾದರೆ, ಈ ಸಮಿತಿಯ ಮುಖ್ಯ ಗುರಿ ಮತ್ತು ಮುಖ್ಯ ಹೊಣೆಯು ಅದೇ ಆಗಿರುತ್ತದೆ ಎಂಬುದನ್ನು ನಾನು ಮರೆಯಲಾರೆ. ಇದರ ಪರಿಣಾಮವೆಂದರೆ, ಹೊಣೆಗಾರಿಕೆಯ ಪದ್ಧತಿಯೊಂದಿಗೆ ರಾಜೀ ಮಾಡುವಂಥ ಸವಲತ್ತನ್ನು ಅಥವಾ ಯೋಜನೆಯನ್ನು ಅಥವಾ ನಾವೆಲ್ಲರೂ ಗುರಿ ಇಟ್ಟುಕೊಂಡಿರುವ

ಹೊಣೆಗಾರಿಕೆಯ ಪದ್ಧತಿಯನ್ನು ಚಿವುಟಿ ಹಾಕುವ ಯಾವುದೇ ಸವಲತ್ತನ್ನೂ ಕೊಡತಕ್ಕುದಲ್ಲ ಮತ್ತು ಅಂಥ ಯಾವ ಯೋಜನೆಯನ್ನೂ ಅಳವಡಿಸಿಕೊಳ್ಳತಕ್ಕುದಲ್ಲ.

ಈಗ ಅಂಥ ಪರೀಕ್ಷೆಯನ್ನು ಅನ್ವಯಿಸುವುದರ ಪರಿಣಾಮವೆಂದರೆ ರಾಜಕುಮಾರರು ತಮ್ಮ ಜನಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡುವುದಕ್ಕೆ ನೀವು ಸಮ್ಮತಿಸಲಾರಿರಿ.

ಕರ್ನಲ್ ಹಕ್ಸರ್: ಯಾವ ಸದನಕ್ಕೆ?

ಡಾ. ಅಂಬೇಡ್ಕರ್: ಎರಡೂ ಸದನಗಳಿಗೆ ಮತ್ತು ಈ ಕಾರಣಗಳಿಗಾಗಿ: ಮೊದಲನೆಯದಾಗಿ, ಫೆಡರಲ್ ರಚನಾ ಉಪಸಮಿತಿಯ ವರದಿಯನ್ನು ಓದಿದ ಯಾವನೇ ವ್ಯಕ್ತಿಯು, ರಾಜಕುಮಾರರು ಶಾಸನ ಸಭೆಯಲ್ಲಿ ಬರಬೇಕೆನ್ನುತ್ತಾರೆ. ಅಷ್ಟೇ ಅಲ್ಲದೆ, ದೇಶದ ಕೇಂದ್ರ ಕಾರ್ಯಾಂಗದಲ್ಲಿಯೂ ಪ್ರಾತಿನಿಧ್ಯವನ್ನು ಕೇಳುತ್ತಾರೆ ಎಂಬುದನ್ನು ಕಂಡುಕೊಳ್ಳುತ್ತಾನೆ. ರಾಜಕುಮಾರರು ಆ ಉದ್ದೇಶವನ್ನು ಹೊಂದಿರುವುದು ಸರಿಯೇ ಆಗಿದೆ. ಏಕೆಂದರೆ ಕೇವಲ ಶಾಸನ ಸಭೆಯಲ್ಲಿ ಬರುವುದರಿಂದ ಅವರಿಗೆ ಯಾವ ಲಾಭವೂ ಇಲ್ಲ. ಅವರ ನಿಜವಾದ ಲಾಭವೆಂದರೆ ಕೇಂದ್ರ ಕಾರ್ಯಾಂಗದಲ್ಲಿ ಅವರ ಭಾಗ ಇರುವುದು. ಆ ಅಂಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾನು ಹೇಳುವುದು ಇಷ್ಟು. ಕೇಂದ್ರ ಶಾಸನ ಸಭೆಯಲ್ಲಿ ಇರುವ ಹೊಣೆಗಾರಿಕೆಯ ಪದ್ಧತಿಯು ಸಾಮೂಹಿಕ ಹೊಣೆಗಾರಿಕೆಯದಾಗಿರುತ್ತದೆ ಎಂದು ಫೆಡರಲ್ ರಚನಾ ಉಪಸಮಿತಿಯು ಹೇಳಿರುವುದು ನಿಮಗೆ ತಿಳಿದಿದೆ. ಬ್ರಿಟಿಶ್ ಭಾರತದ ಜನಪ್ರತಿನಿಧಿಗಳು ಫೆಡರಲ್ ಶಾಸನಸಭೆಗೆ ಚುನಾವಣೆಯ ಮೂಲಕ ಬರುವುದಾದರೆ, ಮತ್ತು ಭಾರತೀಯ ಸಂಸ್ಥಾನಗಳ ಪ್ರತಿನಿಧಿಗಳು ತಮ್ಮನ್ನು ನಾಮನಿರ್ದೇಶನ ಮಾಡಿದವರ ಆಜ್ಞಾವರ್ತಿಗಳಾಗಿ ಫೆಡರಲ್ ಶಾಸನಸಭೆಗೆ ಬರುವುದಾದರೆ, ಈ ರೀತಿ ವಿಭಜಿತ ನಿರ್ದೇಶನದೊಂದಿಗೆ– ಬೇರೆ ಬೇರೆ ಸೂಚನೆಗಳೊಂದಿಗೆ ಸಾಮೂಹಿಕ ಹೊಣೆಗಾರಿಕೆಯ ಸಿದ್ಧಾಂತವು ದೇಶದ ಭಾವೀ ಸಂವಿಧಾನದಲ್ಲಿ ಹೇಗೆ ಕಾರ್ಯ ಮಾಡಬಲ್ಲದು ಅನ್ನುವುದನ್ನು ತಿಳಿದುಕೊಳ್ಳಲು ನಾನು ಅಸಮರ್ಥನಾಗಿದ್ದೇನೆ.

ಫೆಡರಲ್ ಶಾಸನಸಭೆಗೆ ರಾಜಕುಮಾರರ ನಾಮನಿರ್ದೇಶನದಿಂದ ಹೊಣೆಗಾರಿಕಾ ಸಿದ್ಧಾಂತಕ್ಕೆ ಇನ್ನೊಂದು ರೀತಿಯಲ್ಲಿಯೂ ಬಾಧೆಯುಂಟಾಗುತ್ತದೆ. ನಾಮನಿರ್ದೇಶಿತ ಪದನಿಮಿತ್ತರ ತಂಡದ ಅಸ್ತಿತ್ವವನ್ನು ನಿನ್ನೆ ಸರ್ ತೇಜ ಬಹಾದ್ದೂರ ಸಪ್ರು ಅವರು ಸರಿಯಾಗಿಯೇ ಖಂಡಿಸಿದ್ದಾರೆ ಮತ್ತು ಅದಕ್ಕೆ ಅವರು ಕೊಟ್ಟ ಸರಳ ಕಾರಣವೆಂದರೆ ಕಾರ್ಯಾಂಗದ ಅಧೀನದಲ್ಲಿರುವ ನಾಮನಿರ್ದೇಶಿತ ಗುಂಪು ಕಾರ್ಯಾಂಗವು ಶಾಸಕಾಂಗಕ್ಕೆ ಹೊಣೆಗಾರವಾಗದಂತೆ ಮಾಡುತ್ತದೆ. ಪದನಿಮಿತ್ತ ಗುಂಪಿಗೆ ಸಮರ್ಥನೆ ಮಾಡದಿರುವುದಕ್ಕೆ ಅವರ ವಾದದ ಸಾರಾಂಶ ಅದೇ ಎಂದು ನಾನು ಭಾವಿಸುತ್ತೇನೆ. ನಾನು ಈಗ ಎತ್ತಬೇಕೆಂದಿರುವ ಪ್ರಶ್ನೆ ಇದು: ಫೆಡರಲ್ ಶಾಸನಸಭೆಗೆ ರಾಜಕುಮಾರರಿಂದ ನಾಮನಿರ್ದೇಶಿತರಾದ ಪದಾಧಿಕಾರಿಗಳ ಪಾತ್ರವನ್ನು ಅವರು ಆಡುವುದಿಲ್ಲ ಎಂಬ ಬಗ್ಗೆ ನಿಮಗೆ ಖಚಿತವಿದೆಯೇ? ನಾನು ನಿಷ್ಪಕ್ಷಪಾತಿಯಾಗಿ ಹೇಳುವುದೇನೆಂದರೆ ನನಗೆ ಆ ಬಗ್ಗೆ ಯಾವುದೂ ಖಚಿತವಾಗಿಲ್ಲ. ನಾನು ಏಕೆ ಹೀಗೆ ಹೇಳುತ್ತೇನೆ ಎಂಬ ಬಗ್ಗೆ ನನ್ನ ವಾದವನ್ನು ಸ್ಪಷ್ಟಪಡಿಸುತ್ತೇನೆ. ರಾಜಕುಮಾರರು ತಮ್ಮ ರಾಜ್ಯಗಳ ಆಡಳಿತವನ್ನು ಸಾರ್ವಭೌಮತ್ವವೆಂಬ ಹೆಸರಿನಿಂದ ಕರೆಯಲಾಗುತ್ತಿರುವ ಪದ್ಧತಿಯ ಮೂಲಕ ನಡೆಸುತ್ತಾರೆಂಬುದು ನಮಗೆಲ್ಲರಿಗೂ ಗೊತ್ತಿದೆ ಮತ್ತು ಸಾರ್ವಭೌಮ ಸಿದ್ಧಾಂತದ ಪರಿಣಾಮಗಳಲ್ಲೊಂದು ಎಂದರೆ ಮಹತ್ವದ ನೇಮಕಾತಿಗಳ ವಿಷಯಕ್ಕೆ ಸಂಬಂಧಪಟ್ಟಂತೆ ಸಲಹೆ ಕೊಡುವ ಹಕ್ಕನ್ನು ಈ ಸಾರ್ವಭೌಮ ಅಧಿಕಾರವು ಹೊಂದಿರುತ್ತದೆ ಎಂಬುದು.

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ಎಲ್ಲದರಲ್ಲೂ ಅಲ್ಲ, ಒಂದೆರಡು ಪ್ರಕರಣಗಳಲ್ಲಿ ಹಾಗೆ ಇರಬಹುದು.

ಡಾ. ಅಂಬೇಡ್ಕರ್: ಸರಿ, ಅದನ್ನೇ ಬಟ್ಲರ್ ಸಮಿತಿಯು ಹೇಳಿದೆ ಎಂದು ಮಾತ್ರ ಹೇಳುತ್ತೇನೆ.

ಕರ್ನಲ್ ಹಕ್ಸರ್: ಅವರು ಹಾಗೆ ಹೇಳಿರುವರೋ?

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ಅವರು ಹಾಗೆ ಹೇಳಿರುವರೋ? ಹಾಗೆ ಅವರು ಮಾಡಿದ್ದರೆ ಅವರು ಇತರ ವಿಷಯಗಳಲ್ಲಿ ಮಾಡಿದಂತೆ ಇಲ್ಲಿಯೂ ಅವರು ತಪ್ಪು ಮಾಡಿದ್ದಾರೆ.

ಡಾ. ಅಂಬೇಡ್ಕರ್: ಅಷ್ಟರಮಟ್ಟಿಗಾದರೂ ನನ್ನ ನಿಲುವು ಸರಿ ಎಂದು ನಾನು ಭಾವಿಸುತ್ತೇನೆ. ನಾನು ಅದನ್ನು ತಿಳಿದುಕೊಂಡಿದ್ದು ಹಾಗೆ. ಮತ್ತು ಹೊಸ ಸಂವಿಧಾನದಲ್ಲಿ ಸಾರ್ವಭೌಮತ್ವವನ್ನು ಕಾಯ್ದಿಟ್ಟ ವಿಷಯವನ್ನಾಗಿ ಉಳಿಸಬೇಕೆಂದು ಭಾವಿಸಲಾಗಿದೆ ಎಂಬುದು ಒಂದು ವಾಸ್ತವ ಸಂಗತಿಯಾಗಿದೆ. ಈಗ ಸಾರ್ವಭೌಮತ್ವದ ಅಧಿಕಾರಗಳನ್ನು ಚಲಾಯಿಸುವ ರಾಜಕೀಯ ವಿಷಯದ ಇಲಾಖೆಯು ಫೆಡರಲ್ ಶಾಸನಸಭೆಗೆ ನಾಮನಿರ್ದೇಶನದ ವಿಷಯಕ್ಕೆ ಸಂಬಂಧಿಸಿದಂತೆ ಸಲಹೆ ನೀಡುವ ಹಕ್ಕನ್ನು ಕೇಳಿದರೆ ಅದರ ಪರಿಣಾಮವೇನು?

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ಅದು ಹಾಗಾಗಲಾರದು ಮತ್ತು ಹಾಗಾಗುವುದಿಲ್ಲ. ಅದನ್ನು ಸಂಸ್ಥಾನಗಳು ಒಪ್ಪಿಕೊಳ್ಳಲಾರವು.

ಡಾ. ಅಂಬೇಡ್ಕರ್: ನಾನು ಹೇಳುವದು ಇಷ್ಟು, ರಾಜಕೀಯ ವಿಷಯಗಳ ಇಲಾಖೆಯು ಫೆಡರಲ್ ಶಾಸನಸಭೆಗೆ ನಾಮ ನಿರ್ದೇಶನ ಮಾಡುವುದು ಮಹತ್ವದ ನೇಮಕಾತಿ ಎಂದು ವಾದ ಮಾಡುತ್ತದೆ ಎಂದು ಭಾವಿಸೋಣ ಮತ್ತು ಆ ಕಾರಣದಿಂದಾಗಿ ರಾಜಕೀಯ ಇಲಾಖೆಯು ರಾಜಕುಮಾರನಿಗೆ ಸಲಹೆ ಕೊಡುವ ತನ್ನ ಅಧಿಕಾರವನ್ನು ಚಲಾಯಿಸತಕ್ಕುದೆಂದರೆ– ಏನು ಸಂಭವಿಸುತ್ತದೆ? ನಾನು ನಿರ್ಣಯಿಸಲು ಸಾಧ್ಯವಿರುವಷ್ಟರ ಮಟ್ಟಿಗೆ, ನಾನು ಊಹೆ ಮಾಡಲು ಸಾಧ್ಯವಿರುವಷ್ಟರ ಮಟ್ಟಿಗೆ, ಅದರ ಪರಿಣಾಮ ಕೇವಲ ಇಷ್ಟೆ; ರಾಜಕುಮಾರರ ನಾಮ ನಿರ್ದೇಶನವು ವಾಸ್ತವವಾಗಿ ಬೇರೆ ರೂಪದಲ್ಲಿ ಬಂದ ಪದನಿಮಿತ್ತ ಗುಂಪಿನಿಂದ ಕಡಿಮೆಯಲ್ಲದ ಮತ್ತು ಅದಕ್ಕಿಂತ ಬೇರೆಯಲ್ಲದೆ ಏನೂ ಆಗುವುದಿಲ್ಲ.

ಕರ್ನಲ ಹಕ್ಸರ್: ಅದು ಸಂಭವಿಸುವುದಿಲ್ಲ.

ಡಾ. ಅಂಬೇಡ್ಕರ್: ಮತ್ತು ಈಗ ಈ ಹಂತದಲ್ಲಿ, ಲಾರ್ಡ್ ಛಾನ್ಸಲರ್, ನಾನು ಒಂದು ವಿಷಯವನ್ನು ಹೇಳಲು ಇಚ್ಛಿಸುತ್ತೇನೆ.

ಸರ್ ಮಾನೆಕ್‌ಜೀ ದಾದಾಬಾಯಿ: ಆದರೆ, ಆ ಸಮಸ್ಯೆಗೆ ನೀವು ಯಾವ ಉಪಾಯವನ್ನೂ ಸೂಚಿಸಲಿಲ್ಲ.

ಡಾ. ಅಂಬೇಡ್ಕರ್: ಸಂಪೂರ್ಣವಾಗಿಯೂ, ಚುನಾಣೆಯೇ ಎಂದು ನಾನು ಹೇಳುತ್ತೇನೆ.

ಕರ್ನಲ್ ಹಕ್ಸರ್: ಡಾ. ಅಂಬೇಡ್ಕರ್ ಅವರೇ, ಯಾವಾಗಲಾದರೂ ಬಟ್ಲರ ಸಮಿತಿಯ ವರದಿಯ ಬಗ್ಗೆ ಉಲ್ಲೇಖವನ್ನು ತೋರಿಸುತ್ತೀರಾ?

ಡಾ. ಅಂಬೇಡ್ಕರ್: ಪ್ರಯತ್ನಿಸುತ್ತೇನೆ.

ಕರ್ನಲ್ ಹಕ್ಸರ್: ಮಹತ್ವದ ಸಂಸ್ಥಾನಗಳಲ್ಲಿ ರಾಜಕೀಯ ವಿಷಯಗಳ ಇಲಾಖೆಯು ನೇಮಕಾತಿಗಳನ್ನು ಮಾಡುತ್ತದೆ ಎಂಬ ನಿಮ್ಮ ಖಚಿತ ಹೇಳಿಕೆಯಿಂದ ನೀವು ಅವರನ್ನು ಬೆಂಬಲಿಸಿದ್ದೀರಿ.

ಡಾ. ಅಂಬೇಡ್ಕರ್: ಸರಿ, ಕರ್ನಲ್ ಹಕ್ಸರ್ ಅವರೇ ನಾವು ವಾದ ವಿವಾದಕ್ಕೆ ಇಳಿಯುವುದು ಬೇಡ;

ಆದರೆ, ಸಾರ್ವಭೌಮತ್ವವನ್ನು ಜಾರಿಯಲ್ಲಿ ತರದೇ ಹೋದರೂ ಇತರ ಅನೇಕ ಪ್ರಭಾವಗಳನ್ನು ಸಹಿಸ ಬಹುದಾದ ಮಟ್ಟಕ್ಕೆ ತರಬಹುದು.

ಕರ್ನಲ್ ಹಕ್ಸರ್: ನೀವು ನಿಮ್ಮ ಅಭಿಪ್ರಾಯವನ್ನು ಬಿಟ್ಟು ಹೊಗುತ್ತಿರುವಿರಿ?

ಡಾ. ಅಂಬೇಡ್ಕರ್: ಇಲ್ಲ. ನಾನು ಹಾಗೆ ಹೋಗುತ್ತಿಲ್ಲ, ನಾನು ನಿಮಗೆ ಉಲ್ಲೇಖವನ್ನು ಕೊಡುತ್ತೇನೆ.

ಈಗ ಲಾರ್ಡ್ ಛಾನ್ಸಲರ್‌ರವರೇ, ನಾನು ಮಾಡಬೇಕೆಂದಿರುವ ಒಂದು ಸೂಚನೆ ಇದೆ. ಅದನ್ನು ನಾನು ಈ ಮುಂಚೆಯೂ ಮಾಡಿದ್ದೇನೆ. ಆದರೆ, ಈಗ ನಾನು ಅದನ್ನು ಒತ್ತುಕೊಟ್ಟು ಹೇಳುತ್ತಿದ್ದೇನೆ. ನಾವೆಲ್ಲರೂ ಇಡಿಯ ಭಾರತಕ್ಕೆ ಫೆಡರಲ್ ಸ್ವರೂಪದ ಸಂವಿಧಾನವನ್ನು ರೂಪಿಸುವಲ್ಲಿ ನಿಜವಾಗಿಯೂ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ನಾವೆಲ್ಲರೂ ಇಲ್ಲಿ ಕೇವಲ ಸರಕಾರದ ರೂಪವನ್ನು ಬದಲಾಯಿಸುವ ಉದ್ದೇಶದಿಂದ ಮಾತ್ರವೇ ಸೇರಿಲ್ಲ ಎಂಬುದನ್ನು ನಾನು ಒತ್ತುಕೊಟ್ಟು ಹೇಳುತ್ತೇನೆ. ಆದರೆ ಅದು ಏಕಾತ್ಮಕ (ಯುನಿಟರಿ) ಸರಕಾರದಿಂದ ಸಂಯುಕ್ತ ರಾಜ್ಯ (ಫೆಡರಲ್) ಸರಕಾರಕ್ಕೆ ಬದಲಾಯಿಸುವುದಾಗಿದೆ.

ಅಧ್ಯಕ್ಷ: ಯಾವುದು ಆಡಳಿತವನ್ನು ಅತ್ಯುತ್ತಮವಾಗಿ ನಡೆಸಬಹುದೋ ಅದೇ ಅತ್ಯುತ್ತಮ ಎನ್ನಬೇಕು ಎಂದು ಕೆಲವರು ಹೇಳುತ್ತಾರೆ.

ಡಾ. ಅಂಬೇಡ್ಕರ್: ಸರಿ. ಆದರೆ, ಅತ್ಯುತ್ತಮವಾಗಿ ಆಡಳಿತ ನಡೆಸಬಹುದಾದದ್ದು ಹೊಣೆಗಾರ ಸರಕಾರವೇ ಎಂಬ ಸಂಗತಿಯ ಬಗ್ಗೆ ನಾವೆಲ್ಲ ಸಮ್ಮತಿಸಿದ್ದೇವೆ ಎಂದೇ ನಾನು ಭಾವಿಸಿದ್ದೆ. ಆದುದರಿಂದ ಈ ಸಂಯುಕ್ತ ರಾಜ್ಯವನ್ನು ಅಸ್ತಿತ್ವಕ್ಕೆ ತರುವಲ್ಲಿ ಹಲವು ರಿಯಾಯಿತಿಗಳನ್ನು ಕೊಡುವುದಕ್ಕೆ ನಾನು ಸಿದ್ಧನಿದ್ದೇನಾದರೂ ಹೊಣೆಗಾರ ಸರಕಾರವೆಂಬ ಆತ್ಮವಿಲ್ಲದ ಕೇವಲ ಎಲುಬಿನ ಹಂದರದಂತಿರುವ ಫೆಡರಲ್ ಸರಕಾರವನ್ನು ಕೊಡುವುದಾದರೆ ಈ ವಿಚಾರದಲ್ಲಿ ನಾನು ರಿಯಾಯಿತಿ ಕೊಡುವುದಕ್ಕೆ ಅಥವಾ ಯಾವುದೇ ರಾಜಿಗೆ ಭಾಗಿ ಆಗಲಾರೆ.

ಬಿಚ್ಚು ಮನಸ್ಸಿನಿಂದ ಹೇಳಬೇಕೆಂದರೆ, ಚುನಾವಣಾ ತತ್ವಕ್ಕೆ ರಾಜಕುಮಾರರು ಏಕೆ ವಿರುದ್ಧವಾಗಿರು ತ್ತಾರೋ ನನಗೆ ತಿಳಿಯದು. ಹಳೆಯ ಜರ್ಮನ್ ಸಾಮ್ರಾಜ್ಯದಲ್ಲಿ ಫೆಡರಲ್ ಘಟಕಗಳು ತಮ್ಮ ರಾಜ್ಯಗಳ ಮೂಲಕ ಪ್ರತಿನಿಧಿತವಾಗಬೇಕೆಂಬ ಅವುಗಳ ಹಕ್ಕನ್ನು ಒಪ್ಪಿದಾಗ, ಕೆಳಸದನವಾಗಿರುವ ರೀಸ್ಟ್ಯಾಗನ್ನು ರಾಜ್ಯದ ಜನತೆಯು ಚುನಾವಣೆ ಮೂಲಕ ರಚಿಸತಕ್ಕುದು ಎಂಬುದನ್ನೂ ಸಹ ರಾಜ್ಯಗಳು ಒಪ್ಪಿವೆ. ಅವರಿಗೆ ಯಾವುದಾದರೂ ತಕರಾರು ಇರಬಹುದೆಂಬುದು ನನಗೆ ಕಂಡುಬರುತ್ತಿಲ್ಲ. ಏಕೆಂದರೆ ಫೆಡರಲ್ ಅಸೆಂಬ್ಲಿ ಚುನಾವಣೆಗಾಗಿ ದೇಶೀ ಸಂಸ್ಥಾನಗಳಲ್ಲಿ ಮಾಡಬೇಕಾದ ಕಾರ್ಯವೆಂದರೆ ಅವು ತಮ್ಮ ಭೂ ಪ್ರದೇಶವನ್ನು ಹಲವಾರು ಮತಕ್ಷೇತ್ರಗಳನ್ನಾಗಿ ವಿಭಜಿಸುವುದೇ ಆಗಿರುತ್ತದೆ. ಒಂದು ವೇಳೆ ನಾವು ಅವರಿಗೆ ತಮ್ಮ ರಾಜ್ಯದಲ್ಲಿ ತಮ್ಮದೇ ಆದ ಶಾಸನ ರಚನಾ ಸಂಸ್ಥೆಯೊಂದನ್ನು ಹೊಂದಿರತಕ್ಕುದು ಮತ್ತು ಅದೇ ಅವರ ರಾಜ್ಯದ ಆಡಳಿತವನ್ನು ನಿಯಂತ್ರಿಸತಕ್ಕುದು ಎಂದು ಹೇಳಿದ್ದರೆ ಅವರು ತಕರಾರು ಮಾಡುವಲ್ಲಿ ಸ್ವಲ್ಪವಾದರೂ ಅರ್ಥವಿರುತ್ತಿತ್ತು. ಆದರೆ, ಅಂಥ ಯಾವುದನ್ನೂ ನಾವು ಅವರಿಗೆ ಹೇಳಿಲ್ಲ. ನಾವು ಹೇಳುತ್ತಿರುವುದೆಲ್ಲವೂ ಇಷ್ಟು ಮಾತ್ರ. ನಿಮ್ಮ ಭೂ ಪ್ರದೇಶವನ್ನು ಮತ ಕ್ಷೇತ್ರಗಳನ್ನಾಗಿ ವಿಭಜಿಸಲು ನಮಗೆ ಅನುಮತಿಯನ್ನು ಕೊಡಿರಿ; ನಿಮ್ಮ ಜನತೆ ನಿಮ್ಮ ಪ್ರತಿನಿಧಿಗಳನ್ನು ಚುನಾಯಿಸಲಿ. ಆ ಪ್ರತಿನಿಧಿಗಳು ಫೆಡರಲ್ ಅಸೆಂಬ್ಲಿಗೆ ಬರುವುದು, ನಿಮ್ಮ ನಿರ್ದಿಷ್ಟ ವಿಷಯಗಳ ಬಗ್ಗೆ ನಿರ್ಣಯಿಸಲಿಕ್ಕಾಗಿ ಅಲ್ಲ, ನಿಮ್ಮ ರಾಜ್ಯದ ವ್ಯವಹಾರಗಳನ್ನು ನಿರ್ಣಯಿಸಲಿಕ್ಕಾಗಿ ಅಲ್ಲ, ಆದರೆ, ಇಡಿಯ ಭಾರತಕ್ಕೆ ಸಂಬಂಧಿಸಿದ ವಿಷಯದ

ಬಗ್ಗೆ ಚರ್ಚಿಸಿ ಮತ ನೀಡಲಿಕ್ಕೆ. ದೇಶೀಯ ಸಂಸ್ಥಾನಗಳ ದೃಷ್ಟಿಯಿಂದ ಗಮನಿಸಿದಾಗಲೂ ಸಹ ಇಲ್ಲಿ ಯಾವುದಾದರೂ ತಕರಾರು ಇರಬಹುದು ಎಂದು ನನಗೆ ನಿಜವಾಗಿಯೂ ಎನಿಸುವುದಿಲ್ಲ.

ಸರ್ ಮಾಣಿಕಜೀ ದಾದಾಬಾಯಿ: ಮತ್ತು ಚಿಕ್ಕ ಸಂಸ್ಥಾನಗಳಲ್ಲೂ ಕೂಡ?

ಡಾ. ಅಂಬೇಡ್ಕರ್: ಫೆಡರಲ್ ಅಸೆಂಬ್ಲಿಯ ಚುನಾವಣೆಯು ಅವರ ಆಡಳಿತಕ್ಕೆ ತೊಂದರೆಯುಂಟು ಮಾಡದಿರುವುದು ಎಂಬ ವಾದವನ್ನು ಅವರು ಒಪ್ಪಿದರೆ ಅದು ಅವರ ಸಂಸ್ಥಾನಕ್ಕೆ ಯಾವುದೇ ರೀತಿಯ ಹಾನಿಯನ್ನುಂಟು ಮಾಡಲಾರದು. ಹಾಗಿರುವಾಗ ಕೆಳ ಸದನದಲ್ಲಿ ಸಂಸ್ಥಾನಗಳ ಪ್ರಾತಿನಿಧ್ಯದ ಪ್ರಶ್ನೆಯನ್ನು ಬಿಡಿಸಲು ಸುಲಭವಾಗುತ್ತದೆ ಎಂದು ನಾನು ಹೇಳುತ್ತೇನೆ. ಆದಾಗ್ಯೂ, ಮೇಲ್ಮನೆಯಲ್ಲಿ ಸಂಸ್ಥಾನಗಳ ಪ್ರಾತಿನಿಧ್ಯದ ಸಮಸ್ಯೆ ಉಳಿದುಬಿಡುತ್ತದೆ. ಅದು ಸಂಸ್ಥಾನದ ನಾಮನಿರ್ದೇಶಿತ ಪ್ರಾತಿನಿಧ್ಯದ ವಿಷಯ ವನ್ನು ಒಳಗೊಳ್ಳದಿರುವಂಥ ವಿಧಾನದಿಂದ ಬಿಡಿಸಬಹುದಾದರೆ ಅದಕ್ಕೆ ನಾನು ಎರಡು ಪರ್ಯಾಯ ವಿಧಾನಗಳನ್ನು ಸೂಚಿಸುತ್ತೇನೆ. ಮೊದಲನೆಯದೆಂದರೆ, ನಾರ್ವೆಯವರ ಯೋಜನೆಯನ್ನು ಅಳವಡಿಸಿಕೊಳ್ಳುವುದು. ಅಲ್ಲಿ ಚುನಾಯಿತ ಜನಪ್ರಿಯ ಸದನ ಇರುತ್ತದೆ ಮತ್ತು ಈ ಸದನವು ತನ್ನಲ್ಲಿಂದ ಎರಡನೆಯ ಸದನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತದೆ. ಇದರಿಂದಾಗಿ ಮೇಲ್ಮನೆಗೆ ರಾಜ್ಯಗಳು ತಮ್ಮ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡುವ ತೊಂದರೆಯಿಂದ ತಪ್ಪಿಸಿಕೊಂಡಂತಾಗುತ್ತದೆ. ಅಥವಾ ಅದು ನಿಮಗೆ ಒಪ್ಪಿಗೆ ಆಗದಿದ್ದಲ್ಲಿ ನಾನು ಸೂಚಿಸಿರುವ ಇನ್ನೊಂದು ಪರಿಹಾರವೂ ಇದೆ. ಅದೆಂದರೆ ರಾಜಕುಮಾರರು ಫೆಡರಲ್ ಶಾಸನಸಭೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಉಮೇದುವಾರರ ಒಂದು ಯಾದಿಯನ್ನು ಕೊಡಬಹುದು.

ಎಚ್. ಎಚ್. ದಿ ಮಹಾರಾಜಾ ಆಫ್ ಬಿಕಾನೇರ: ಯಾರಿಂದ?

ಡಾ. ಅಂಬೇಡ್ಕರ್: ಸದನದಿಂದ; ಆದರೆ ಯಾವುದೇ ಸಂದರ್ಭದಲ್ಲಿ ನಾನು ಒಂದು ಸಂಗತಿಯನ್ನು ಸ್ಪಷ್ಟಪಡಿಸಬೇಕು. ಅದೆಂದರೆ ನನ್ನ ಮಟ್ಟಿಗೆ ಸಂಬಂಧಿಸಿದಂತೆ ನಾಮನಿರ್ದೇಶನದ ಮೂಲಕ ರಾಜ್ಯಗಳ ಪ್ರಾತಿನಿಧ್ಯಕ್ಕೆ ಅನುಮತಿಸುವ ಪದ್ಧತಿಗೆ ನಾನು ಭಾಗಿಯಾಗಲಾರೆ.

ಲಾರ್ಡ್ ಛಾನ್ಸಲರ್ ಅವರೇ, ಈಗ ನಾನು ಚರ್ಚೆಯ ಮತ್ತೊಂದು ಶೀರ್ಷಿಕೆಯನ್ನು ಅಂದರೆ, ವಿಶೇಷ ಹಿತಾಸಕ್ತಿಗಳ ಪ್ರಾತಿನಿಧ್ಯದ ವಿಷಯವನ್ನು ಎತ್ತಿಕೊಳ್ಳುತ್ತೇನೆ.

ಅಧ್ಯಕ್ಷ: ನೀವು ನಂ. Vರ ಬಗ್ಗೆ ಹೇಳಬೇಕು. ಅದೇನೆಂದರೆ ವಿಶೇಷ ಹಿತಾಸಕ್ತಿಗಳಿಗಾಗಿ ವಿಶೇಷ ಮತಕ್ಷೇತ್ರಗಳ ಮೂಲಕ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡುವುದು.

ಡಾ. ಅಂಬೇಡ್ಕರ್: ನಾನು ಸ್ಪಷ್ಟಪಡಿಸಬೇಕೆಂದಿರುವ ಒಂದು ವಿಷಯವೆಂದರೆ ನಿಮ್ನವರ್ಗದವರನ್ನು ವಿಶೇಷ ಹಿತಾಸಕ್ತಿಗಳು ಎಂದು ಪರಿಗಣಿಸುವುದು ನನಗೆ ಬೇಡ. ನಿಮ್ನವರ್ಗದವರನ್ನು ರಾಜಕೀಯ ವಿಷಯಕ್ಕೆ ಸಂಬಂಧಿಸಿದಂತೆ ಮೊಹಮಡನ್ನರಂತೆ ಅಥವಾ ಕ್ರಿಶ್ಚಿಯನ್ನರಂತೆ ಬೇರೆಯ ಕೋಮು ಎಂದೇ ಪರಿಗಣಿಸಬೇಕು. ಪ್ರಾಂತೀಯ ಶಾಸನಸಭೆಗಳಲ್ಲಿ ಅಷ್ಟೇ ಅಲ್ಲದೆ, ಕೇಂದ್ರ ಶಾಸನ ಸಭೆಯ ಎರಡೂ ಸದನಗಳಲ್ಲಿ ಅವರಿಗೂ ಅದೇ ಪ್ರಾತಿನಿಧ್ಯದ ಹಕ್ಕು ಇರತಕ್ಕುದು.

ಅಧ್ಯಕ್ಷ: ಅವೇ ಹಕ್ಕುಗಳು ಎಂದು ನೀವು ಹೇಳುವಾಗ ಇತರರಿಗೆ ಇರುವಷ್ಟು ಸಂಖ್ಯೆಯ ಪ್ರಾತಿನಿಧ್ಯವು ಅವರಿಗೂ ಇರಬೇಕೆಂದು ನಿಮ್ಮ ಅರ್ಥವೋ?

ಡಾ. ಅಂಬೇಡ್ಕರ್: ಅಲ್ಲ. ಯಾವ ಆಧಾರದ ಮೇಲೆ ಇತರರಿಗೆ ಸಂಖ್ಯೆಯನ್ನು ಗೊತ್ತುಪಡಿಸ ಲಾಗುತ್ತದೆಯೋ ಅದೇ ತತ್ವವನ್ನು ಎಲ್ಲರಿಗೂ ಅನ್ವಯಿಸಬಹುದು.

ಅಧ್ಯಕ್ಷ: ನೀವು ಅದನ್ನೇ ಹೇಳಿದಿರಿ. ಧನ್ಯವಾದಗಳು.

ಡಾ. ಅಂಬೇಡ್ಕರ್: ಇಲ್ಲಿಯವರೆಗೆ ಗುರುತಿಸಲಾಗಿರುವ ಇತರ ಹಿತಾಸಕ್ತಿಗಳಿಗೆ ನಾನು ಈಗ ಬರುತ್ತೇನೆ. ಅವೆಂದರೆ ವ್ಯಾಪಾರ, ವಾಣಿಜ್ಯ, ಭೂ ಹಿಡುವಳಿದಾರರು ಮತ್ತು ವಿಶ್ವವಿದ್ಯಾಲಯಗಳು.

ಡಾ. ಶಫಾಯತ ಅಹಮದ್ ಖಾನ್: ವಿಶ್ವವಿದ್ಯಾನಿಲಯಗಳು ಬೇಡವೇ?

ಡಾ. ಅಂಬೇಡ್ಕರ್: ಇಲ್ಲ. ನಮ್ಮಲ್ಲಿ ವಿಶ್ವವಿದ್ಯಾಲಯಗಳೇ ಇಲ್ಲ. ಈ ವಿಶೇಷ ಪ್ರಾತಿನಿಧ್ಯಕ್ಕೆ ನಾನು ಸಮ್ಮತಿಸಲಾರೆ. ಮೊದಲನೆಯದಾಗಿ ಹೇಳಬೇಕೆಂದರೆ ಉದಾ: ಭೂ ಹಿಡುವಳಿದಾರರಿಗೂ ಏಕೆ ವಿಶೇಷ ಪ್ರಾತಿನಿಧ್ಯ ಬೇಕು ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಆತನು ಸಾಮಾನ್ಯ ಮತ ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಜನತೆಯಿಂದ ಮತ ಪಡೆದುಕೊಳ್ಳುವಲ್ಲಿ ಆತನಿಗೆ ಇರುವ ತೊಂದರೆಗಳೇನು ಮತ್ತು ಅಸಮರ್ಥತೆಗಳೇನು ಎಂಬುದು ನನಗೆ ಗೊತ್ತಿಲ್ಲ. ಹಾಗೆ ಮಾಡಲು ಯಾರ ಅಡ್ಡಿಯೂ ಅವನಿಗಿಲ್ಲ. ಇತರ ಎಲ್ಲ ದೇಶಗಳಲ್ಲಿಯೂ ವ್ಯಾಪಾರ, ವಾಣಿಜ್ಯ ಮತ್ತು ಭೂ ಹಿಡುವಳಿದಾರರಿಗೆ ವಿಶೇಷ ಪ್ರಾತಿನಿಧ್ಯ ಕೊಡುವ ಯಾವ ಉಪಬಂಧವೂ ಇಲ್ಲ. ಮತದಾರರ ಮೂಲಕವೇ ತಮ್ಮ ಸ್ಥಳವನ್ನು ಪಡೆದುಕೊಳ್ಳಲು ಅವರಿಗೆ ಬಿಡಲಾಗಿದೆ. ಅದೇ ಪದ್ಧತಿಯನ್ನು ಭಾರತದಲ್ಲಿಯೂ ಅಳವಡಿಸಿಕೊಳ್ಳಬೇಕೆಂದು ನನ್ನ ಭಾವನೆ. ಈ ಹಿತಾಸಕ್ತಿಗಳ ಪ್ರಾತಿನಿಧ್ಯಕ್ಕಾಗಿ ವಿಶೇಷ ಉಪಬಂಧ ಕಲ್ಪಿಸುವುದಕ್ಕೆ ನನ್ನ ಇನ್ನೂ ಹೆಚ್ಚಿನ ತಕರಾರು ಹೀಗಿದೆ. ಪ್ರಪ್ರಥಮವಾಗಿ ಈ ಹಿತಾಸಕ್ತಿಗಳು ಅತಿ ಚಿಕ್ಕದಾದ ಮತಕ್ಷೇತ್ರದ ಮೂಲಕ ಪ್ರಾತಿನಿಧ್ಯ ಪಡೆದುಕೊಳ್ಳುತ್ತವೆ; ಅದು ಕೇವಲ ಸಂಚಿನ ಕೂಟವಾಗುತ್ತದೆ. ಈಗ ಅವರ ಮತಾಧಿಕಾರವನ್ನು ಅವರಿಗೆ ಸಂಬಂಧಪಟ್ಟ ವಿಷಯಗಳಿಗೆ ಮಾತ್ರ ಸೀಮಿತಗೊಳಿಸಿದರೆ, ದುಷ್ಪರಿಣಾಮ ಕಡಿಮೆಯಾಗುತ್ತದೆ. ಆದರೆ, ಅವರು ಕೇವಲ ಇಂಥ ಪರಿಮಿತ ಮತಕ್ಷೇತ್ರದ ಮೂಲಕವಷ್ಟೆ ಶಾಸನಸಭೆಗೆ ಬರುವುದಿಲ್ಲ. ಅವರು ಶಾಸನಸಭೆಯ ಮುಂದೆ ಬಂದ ಎಲ್ಲ ಚಿಕ್ಕಪುಟ್ಟ ವಿಷಯಗಳ ಮೇಲೂ ಕೂಡ ಮತ ಚಲಾಯಿಸುತ್ತಾರೆ. ಮುಂಬಯಿಯ ಶಾಸನಸಭೆಯಲ್ಲಿ ನಾನು ಗಮನಿಸಿದ ಒಂದು ವಿಷಯವೆಂದರೆ ಅಲ್ಲಿ ವ್ಯಾಪಾರ ಮತ್ತು ವಾಣಿಜ್ಯಗಳಿಗಾಗಿ ಮತಕ್ಷೇತ್ರಗಳಿರುತ್ತವೆ. ಈಗ ಮುಂಬಯಿ ಪ್ರಾಂತದಲ್ಲಿ ವ್ಯಾಪಾರ ಮತ್ತು ವಾಣಿಜ್ಯಗಳು ನನಗೆ ತಿಳಿದ ಮಟ್ಟಿಗೆ ಅತ್ಯಂತ ಸಂಪ್ರದಾಯವಾದಿಯಾದ ವಿಶೇಷ ಕೋಮಿನವರ ಏಕಸ್ವಾಮಿತ್ವದಲ್ಲಿದೆ ಎಂದು ಹೇಳಲು ನನಗೆ ದುಃಖವಾಗುತ್ತದೆ.

ಮಿ. ಜಯಕರ್: ರಾಜಕೀಯವಾಗಿ?

ಡಾ. ಅಂಬೇಡ್ಕರ್: ಸಾಮಾಜಿಕವಾಗಿ ಈಗ ಅಂಥ ಸದಸ್ಯರು ಶಾಸನ ಸಭೆಯಲ್ಲಿ ಪ್ರವೇಶ ಪಡೆಯಲು ಈ ಸರಳ ಮತ್ತು ಚಿಕ್ಕಪುಟ್ಟ ಮತಕ್ಷೇತ್ರಗಳನ್ನು ಬಳಸಿಕೊಳ್ಳುತ್ತಾರೆ. ಆಗ, ಯಾವುದೇ ಪ್ರಗತಿಪರ ಯೋಜನೆಯನ್ನು ಮುಂದಿಟ್ಟರೂ ಅವರು ಮುಂದೆ ಬಂದು ಸಂಪ್ರದಾಯವಾದಿಗಳ ಪಕ್ಷ ವಹಿಸುತ್ತಾರೆ ಮತ್ತು ಸ್ವಾತಂತ್ರ್ಯದ ಮತ್ತು ಪ್ರಗತಿಯ ಉದ್ದೇಶಗಳನ್ನು ವಿಫಲಗೊಳಿಸುತ್ತಾರೆ. ಆದಕಾರಣ ನಾನು ಅದಕ್ಕೆ ತಕರಾರು ಮಾಡುತ್ತೇನೆ. ಅಂಥ ಉಪಬಂಧಗಳು ಅವಶ್ಯವಿದ್ದರೆ, ಅದಕ್ಕೆ ನಾನು ಈ ರಿಯಾಯಿತಿಯನ್ನು ಸೂಚಿಸುತ್ತೇನೆ– ಅಂದರೆ ಅಂಥ ಯಾವುದೇ ಹಿತಾಸಕ್ತಿಯು ಉದಾ: ವ್ಯಾಪಾರ, ವಾಣಿಜ್ಯ ಭೂ ಹಿಡುವಳಿದಾರರು ಲೆಜಿಸ್ಲೇಟಿವ್ (ಕೆಳಮನೆ) ಅಸೆಂಬ್ಲಿಯಲ್ಲಿ ಅಥವಾ ಮೇಲ್ಮನೆಯಲ್ಲಿ ಅವರ ನಿರ್ದಿಷ್ಟ ಹಿತಾಸಕ್ತಿಗೆ ಮುಂದಿಡಲು ಹಕ್ಕನ್ನು ಕೊಡಬಹುದು. ತಮ್ಮ ವಾದವನ್ನು ಮಂಡಿಸುವ ಹಕ್ಕನ್ನು ಅವರಿಗೆ ಕೊಡಬಹುದು. ಆದರೆ, ಶಾಸನಸಭೆಯ ಸದಸ್ಯತ್ವವನ್ನು ಅಥವಾ ಶಾಸನಸಭೆಯಲ್ಲಿ

ಚರ್ಚೆಗೆ ಬಂದ ಯಾವುದೇ ಮಸೂದೆಯ ಮೇಲೆ ಮತ ನೀಡುವ ಅಧಿಕಾರವನ್ನು ಅವರಿಗೆ ಕೊಡುವ ಅಗತ್ಯತೆ ಇಲ್ಲ.

ಕಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ನಾನು ಹೇಳುವುದಿಷ್ಟು. ನನ್ನ ಸ್ನೇಹಿತರಾದ ಶ್ರೀ ಜೋಶಿಯವರು ಇದಕ್ಕೆ ಒಪ್ಪುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ, ವಯಸ್ಕ ಮತಾಧಿಕಾರ ಪದ್ಧತಿಯು ಜಾರಿಯಲ್ಲಿ ಬಂದರೆ ಹಾಗಾಗುತ್ತದೆ ಎಂದು ನಾನು ಆಶಿಸುತ್ತೇನೆ. ಮಹಾತ್ಮಾ ಗಾಂಧಿಯವರ ಸಹಾಯ ಮತ್ತು ಸಹಕಾರದಿಂದ ಈ ಸಮ್ಮೇಳನದಲ್ಲಿಯೇ ನಾವು ಅದನ್ನು ಪಾಸು ಮಾಡಬಹುದು. ಆಗ ಕಾರ್ಮಿಕ ವಿಷಯವಾಗಿ ವಿಶೇಷ ಪ್ರಾತಿನಿಧ್ಯದ ಅವಶ್ಯಕತೆ ಬಹುಶಃ ಉಂಟಾಗಲಾರದು. ಆದರೆ, ನಾವು ಕಾರ್ಮಿಕ ವರ್ಗಗಳ ಬಹುದೊಡ್ಡ ಭಾಗವನ್ನು ಅವರು ಸರಕಾರವನ್ನು ನಿಯಂತ್ರಿಸುವಂತೆ ಮತ್ತು ಅವರ ಕಲ್ಯಾಣಕ್ಕಾಗಿ ಮತ್ತು ಏಳ್ಗೆಗಾಗಿ ಪ್ರಭಾವ ಬೀರದಂತೆ ಮಾಡುವುದಕ್ಕಾಗಿ ಅವರನ್ನು ಹೊರಗಿಡುವಂಥ ಪ್ರಾತಿನಿಧ್ಯದ ಪದ್ಧತಿಯನ್ನು ಅಳವಡಿಸಿಕೊಂಡರೆ, ಆಗ ನಿಜವಾಗಿಯೂ ಕಾರ್ಮಿಕ ವಿಷಯದ ಪ್ರಾತಿನಿಧ್ಯಕ್ಕಾಗಿ ವಿಶೇಷ ಉಪಬಂಧವನ್ನು ಮಾಡುವುದು ಅವಶ್ಯವಾಗುತ್ತದೆ. ಮತ್ತು ಅಂಥ ಪ್ರಾತಿನಿಧ್ಯಕ್ಕಾಗಿ ಹಲವಾರು ಕಾರ್ಮಿಕ ಸಂಘಗಳನ್ನು ಮತ ಕ್ಷೇತ್ರಗಳೆಂದು ಗುರುತಿಸಬೇಕಾಗುತ್ತದೆ.

ನಾನು ಉಲ್ಲೇಖಿಸಲು ಇಚ್ಛಿಸುವ ಮುಂದಿನ ವಿಷಯವೆಂದರೆ, ನಾಮನಿರ್ದೇಶಿತ ಸದಸ್ಯರ ಪ್ರಶ್ನೆಯಾಗಿರುತ್ತದೆ. ಫೆಡರಲ್ ಶಾಸನ ಸಭೆಯಲ್ಲಿ ನಾಮನಿರ್ದೇಶಿತ ಸದಸ್ಯರ ಗುಂಪೊಂದನ್ನು ಹೊಂದುವುದರ ಉದ್ದೇಶವೆಂದರೆ, ಇದು ನನ್ನ ಊಹೆ ಮಾತ್ರ. ಆ ಬಗ್ಗೆ ನನಗೆ ಖಚಿತತೆ ಇಲ್ಲ. ಮುಖ್ಯವಾಗಿ ಪ್ರಭುತ್ವದ ಪ್ರಜೆಗಳಿಗೆ ಅಥವಾ ದ್ವಿಪ್ರಭುತ್ವ ಪದ್ಧತಿಯ ಮೇರೆಗೆ ಪ್ರಾಂತಗಳಲ್ಲಿ ಕಾಯ್ದಿಟ್ಟ ಪ್ರಜೆಗಳೆಂದು ಕರೆಯಲಾಗುತ್ತಿರುವವರನ್ನು ಸಮರ್ಥಿಸುವುದಾಗಿರುತ್ತದೆ. ಈ ನಾಮನಿರ್ದೇಶಿತ ಅಧಿಕಾರಿಗಳ ಬಗ್ಗೆ ನನಗೆ ತುಂಬಾ ಭಯವುಂಟಾಗಿದೆ ಎಂದು ಸ್ಪಷ್ಟಪಡಿಸಲು ನಾನು ಇಚ್ಛಿಸುತ್ತೇನೆ. ಮಾಂಟೆಗೋ ಚೆಲ್ಮ್ಸ್‌ಫರ್ಡ್ ಸುಧಾರಣೆಗಳನ್ನು ಜಾರಿಗೆ ತಂದ ಪ್ರಾಂತೀಯ ಸರಕಾರಗಳಲ್ಲಿ ಹೊಣೆಗಾರಿಕೆಯ ಪದ್ಧತಿಯನ್ನು ಸಂಪೂರ್ಣವಾಗಿ ಹಾಳು ಮಾಡಿದ್ದು ಯಾವುದಾದರೂ ಇದ್ದರೆ ಅದು, ನನ್ನ ಅಭಿಪ್ರಾಯದಲ್ಲಿ, ನಾಮನಿರ್ದೇಶಿತ ಅಧಿಕಾರಿಗಳ ಗುಂಪು ಮಾತ್ರವೇ ಆಗಿರುತ್ತದೆ. ಇಡಿಯ ಪದ್ಧತಿಯನ್ನೇ ಇದು ತಿರುವುಮುರುವು ಮಾಡಿತು. ಪ್ರಾಂತಗಳಲ್ಲಿ ಅಲ್ಪ ಮತದಾರರು ಬಹುಮತದ ವಿರುದ್ಧ ಸರಕಾರವನ್ನು ನಡೆಸುವುದನ್ನು ಸಾಧ್ಯವಾಗಿ ಮಾಡಿದ್ದ ಈ ಗುಂಪು ಎಲ್ಲ ತರದ ಜನರೊಡನೆ ಮತ್ತು ಗುಂಪುಗಳೊಂದಿಗೆ ಅವರ ಸಹಾಯ ಅಥವಾ ಸಮರ್ಥನೆ ಬೇಕಾಗಿರುವಂಥ ಗುಂಪುಗಳೇ ಆಗಿರಲಿಕ್ಕಿಲ್ಲ. ಆದರೆ, ಅಲ್ಪ ಲಾಭಕ್ಕಾಗಿ ತಮ್ಮನ್ನೇ ಮಾರಿಕೊಳ್ಳಲು ಸಿದ್ಧವಿದ್ದ ಗುಂಪುಗಳೊಂದಿಗೂ ಸಹ ಒಪ್ಪಂದ ಮಾಡಿಕೊಂಡದ್ದು ಈ ಗುಂಪು. ನಾನು ಹೇಳಿದಂತೆ ನಾಮನಿರ್ದೇಶಿತ ಪದನಿಮಿತ್ತ ಗುಂಪಿಗೆ ನನ್ನ ಅತ್ಯಂತ ತೀವ್ರವಾದ ತಕರಾರು ಇರುತ್ತದೆ.

ಪ್ರಭುತ್ವದ ಪ್ರಜೆಗಳೆಂದು ಕರೆಯಲಾಗುತ್ತಿರುವವರಿಗೆ ಸಹಾಯ ಸಲ್ಲಿಸುವುದಕ್ಕಾಗಿ ನಾಮ ನಿರ್ದೇಶಿತ ಪದನಿಮಿತ್ತ ಗುಂಪು ನಿಜವಾಗಿಯೂ ಎಳ್ಳಷ್ಟೂ ಅವಶ್ಯವಿಲ್ಲ ಎಂದು ನಾನು ಮುಂದುವರೆದು ಹೇಳುತ್ತೇನೆ. ಪ್ರಾಂತೀಯ ಸಂವಿಧಾನದಲ್ಲಿ ಕಾಯ್ದಿಟ್ಟ ಪ್ರಜೆಗಳ ಪದ್ಧತಿಯನ್ನು ನಾವು ಈಗ ಹೊಂದಿರುವಂತೆ, ಈ ಕಾಯ್ದಿಟ್ಟ ಪ್ರಜೆಗಳಿಗೆ ಸಹಾಯಮಾಡಲು ಮತ್ತು ಅವರನ್ನು ಸಂರಕ್ಷಿಸಲು ನಮ್ಮಲ್ಲಿ ಹಲವಾರು ವಿಧಾನಗಳಿರುತ್ತವೆ. ಮೊದಲನೆಯದಾಗಿ, ೭೨–ಡಿ ಕಲಮಿನ ಮೇರೆಗೆ ಈ ಕಾಯ್ದಿಟ್ಟ ಪ್ರಜೆಗಳ ಬಗ್ಗೆಯೇ ತೆಗೆದು

ಹಾಕಲುಬಾರದ ಮತ್ತು ಅವನ ಸಂಬಳವನ್ನು ತಡೆಹಿಡಿಯಲುಬಾರದಂತಹ ಅಧಿಕಾರಿಯೊಬ್ಬನು ಇರುತ್ತಾನೆ. ಎರಡನೆಯದಾಗಿ, ಕಾಯ್ದಿಟ್ಟ ಪ್ರಜೆಗಳ ಸಂರಕ್ಷಣೆಯ ಉದ್ದೇಶಕ್ಕಾಗಿ ತಾನು ಅವಶ್ಯವೆಂದು ಭಾವಿಸುವಷ್ಟು ಖರ್ಚನ್ನು ಪ್ರಮಾಣೀಕರಿಸಲು ಗವರ್ನರನಿಗೆ ಅಧಿಕಾರವನ್ನು ಕೊಡಲಾಗಿದೆ. ಮೂರನೆಯದಾಗಿ, ಕಾಯ್ದಿಟ್ಟ ಪ್ರಜೆಗಳ ಸಾಮರ್ಥ್ಯವನ್ನು ಉಳಿಸಿಕೊಂಡು ಹೋಗುವ ಉದ್ದೇಶಕ್ಕಾಗಿ ಅವಶ್ಯವೆಂದು ತಾನು ಭಾವಿಸುವ ಮಸೂದೆಗಳನ್ನು ಪ್ರಮಾಣೀಕರಿಸಲು ಗವರ್ನರನಿಗೆ ಅಧಿಕಾರವಿರುತ್ತದೆ. ಕೊನೆಯದಾಗಿ, ಗವರ್ನರನು ತಾನು ತಕರಾರು ಮಾಡುವ ಯಾವುದೇ ಮಸೂದೆಗೆ ಸಹಿ ಹಾಕದಿರುವ ನಿಷೇಧಾಧಿಕಾರವನ್ನು ಹೊಂದಿರುತ್ತಾನೆ. ಲಾರ್ಡ್ ಛಾನ್ಸಲರ್ ಅವರೇ, ನನ್ನ ವಿನಂತಿಯೆಂದರೆ ನಾನು ಈಗ ಹೇಳಿದ ರಕ್ಷಣೆಗಳು ಅಂದರೆ ಕಾಯ್ದಿಟ್ಟ ಪ್ರಜೆಗಳ ಪ್ರಭಾರದಲ್ಲಿರುವ ವ್ಯಕ್ತಿಯನ್ನು ತೆಗೆದುಹಾಕದಿರುವ ಆತನ ಸಂಬಳವನ್ನು ತಡೆಹಿಡಿಯದಿರುವ, ಗವರ್ನರನಿಗೆ ವೆಚ್ಚಗಳನ್ನು ಪ್ರಮಾಣೀಕರಿಸಲು ಇರುವ ಅಧಿಕಾರ, ಕಾಯ್ದಿಟ್ಟ ಪ್ರಜೆಗಳ ಸುರಕ್ಷತೆಗೆ ಅವಶ್ಯವಾದ ಮಸೂದೆಗಳನ್ನು ಪ್ರಮಾಣೀಕರಿಸುವ ಅಧಿಕಾರ ಮತ್ತು ಮಸೂದೆಗೆ ಸಂಬಂಧಿಸಿದಂತೆ ಇರುವ ಆತನ ಕೊನೆಯದಾದ ನಿಷೇದಾಧಿಕಾರ– ಇವುಗಳು ನನ್ನ ಅಭಿಪ್ರಾಯದಲ್ಲಿ ಪ್ರಭುತ್ವದ ಪ್ರಜೆಗಳೆಂದು ಕರೆಯಲಾಗುತ್ತಿರುವಂಥವರ ಏಕತೆಯನ್ನು ಉಳಿಸಿಕೊಂಡು ಹೋಗಲು ಸಾಕಾಗುತ್ತವೆ.

ಸರ್ ತೇಜಬಹಾದ್ದೂರ್ ಸಪ್ರು: ಈ ಹಂತದಲ್ಲಿ ನಾನು ನಿಮಗೆ ಒಂದು ಪ್ರಶ್ನೆಯನ್ನು ಕೇಳಬಹುದೊ? ಪ್ರಮಾಣೀಕರಿಸುವ ಅಧಿಕಾರ ಇರಬೇಕೆಂದು ನೀವು ಸೂಚಿಸುತ್ತೀರೋ?

ಡಾ. ಅಂಬೇಡ್ಕರ್: ಪ್ರಮಾಣೀಕರಿಸುವ ಅಧಿಕಾರ ಇರಬೇಕೆಂದು ನಾನು ಸೂಚಿಸುವುದಿಲ್ಲ. ಆ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಅನಂತರ ಚರ್ಚಿಸುತ್ತೇನೆ. ನಾಮನಿರ್ದೇಶಿತ ಪದನಿಮಿತ್ತ ಗುಂಪಿನ ಹೊರತಾಗಿ ಸಂವಿಧಾನದಲ್ಲಿ ಕೊಡಲಾಗಿರುವ ಇತರ ಪರ್ಯಾಯ ವಿಧಾನಗಳು ಇವು ಆಗಿರುತ್ತವೆ ಎಂಬುದು ನನ್ನ ವಾದವಾಗಿರುತ್ತದೆ. ನನ್ನ ಹೇಳಿಕೆ ಹೀಗಿದೆ. ಪ್ರಭುತ್ವದ ಪ್ರಜೆಗಳೆಂದು ಕರೆಯಲಾಗುತ್ತಿರುವವರ ರಕ್ಷಣೆಗಾಗಿ ಶಾಸಕಾಂಗಕ್ಕೆ ಮತ್ತು ಕಾರ್ಯಾಂಗಕ್ಕೆ ಇಷ್ಟು ವಿಪುಲವಾದ ಅಧಿಕಾರವಿರುವಾಗ, ವಿಧಾನಪರಿಷತ್ತಿನಲ್ಲಿ ಪದನಿಮಿತ್ತ ಗುಂಪೊಂದು ಇರುವುದರ ಅವಶ್ಯಕತೆ ಎಳ್ಳಷ್ಟೂ ಇಲ್ಲ.

ಎರಡನೆಯದಾಗಿ ಒಂದು ಆಧಿಕಾರಿಕ ಖಂಡವನ್ನು ಹೊಂದುವುದರ ಮೂಲಕ, ಸಂಗತಿಯನ್ನು ಮರೆಮಾಚುವಿರಿ ಅಥವಾ ಅಡಗಿಸುವಿರಿ. ನಾಮನಿರ್ದೇಶನದ ಆಧಿಕಾರಿಕ ಖಂಡವು ಇಲ್ಲದೆ ಹೋಗಿದ್ದರೆ, ಲೆಜಿಸ್ಲೇಟಿವ್ ಕೌನ್ಸಿಲ್ ಬಹುಶಃ ವಾಸಮಾಡದಿದ್ದ ಮತ್ತು ಗವರ್ನರರೂ ಅವುಗಳನ್ನು ಪ್ರಮಾಣೀಕರಿಸಲು ಒತ್ತಾಯಕ್ಕೆ ಒಳಗಾಗದಿದ್ದ ಅಥವಾ ತನ್ನ ವಿಶೇಷ ಅಧಿಕಾರಗಳ ಅಡಿಯಲ್ಲಿ ಇತರ ಯಾವುದೇ ರೀತಿಯಲ್ಲಿ ಉತ್ತೀರ್ಣಗೊಳಿಸುತ್ತಿದ್ದ ಅನೇಕ ಕ್ರಮಗಳು ಇರುತ್ತಿದ್ದವು.

ಆದರೆ, ನಾಮನಿರ್ದೇಶಿತ ಖಂಡದ ಅಸ್ತಿತ್ವದ ನಿಮಿತ್ತ, ವಾಸ್ತವವಾಗಿ ಅಲ್ಪಮತವು ಆಧಿಕಾರಿಕ ಖಂಡದ ನೆರವಿನಿಂದ ನಿರ್ಣಯಗಳನ್ನು ಪಾಸು ಮಾಡಲು ಅನುಕೂಲ ಒದಗಿಸಿದ್ದರೂ, ಹೊರಗಿನವರಿಗೆ ಲೆಜಿಸ್ಲೇಟಿವ್ ಕೌನ್ಸಿಲ್‌ನ ಬಹುಮತದ ಆಳ್ವಿಕೆಯ ಆಧಾರದ ಮೇಲೆ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯುತ್ತಿವೆಯೆಂದು ತೋರಿಸುವ ವಿಸಂಗತಿಯ ಸ್ಥಿತಿ. ಆದ್ದರಿಂದ, ಭಾರತದ ಭಾವೀ ಸಂವಿಧಾನದಲ್ಲಿ ನಾಮನಿರ್ದೇಶನದ ಆಧಿಕಾರಿಕ ಖಂಡದಿಂದ ಯಾವುದೇ ಪ್ರಯೋಜನವೂ ಇಲ್ಲ ಎಂಬುದು ನನ್ನ ನಮ್ರ ನಿವೇದನೆ.

ನಾನು ಉಲ್ಲೇಖಿಸಬೇಕಾದ ಕೊನೆಯ ವಿಷಯವೊಂದು ಇರುತ್ತದೆ. ಅದೇನೆಂದರೆ, ಪ್ರಮಾಣದ ವಚನದ (ಆಣೆಯ) ಪ್ರಶ್ನೆ. ನನ್ನ ಅಭಿಪ್ರಾಯದಲ್ಲಿ ಇದು ತುಂಬಾ ದೊಡ್ಡ ಪ್ರಶ್ನೆಯಾಗಿದೆ. ಈ ಪ್ರಶ್ನೆಯು ಮತ್ತೊಂದು ದೊಡ್ಡ ಪ್ರಶ್ನೆಯನ್ನು ಉಂಟುಮಾಡುತ್ತದೆ. ಅದೆಂದರೆ, ಭಾರತಕ್ಕೆ ಸಾಮಾನ್ಯ ಪೌರತ್ವದ ಹಕ್ಕು. ನನಗೆ ದೊರಕಿರುವ ಅಲ್ಪ ಕಾಲಾವಕಾಶದಲ್ಲಿ ಇಡಿಯ ವಿಷಯದ ಬಗ್ಗೆ ಚರ್ಚೆ ಮಾಡಲು ಸಾಧ್ಯ ವಾಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ಆದ್ದರಿಂದ ಈ ಪ್ರಶ್ನೆಯ ಬಗ್ಗೆ ವಿವರವಾದ ಚರ್ಚೆ ನಡೆಸಲು ಒಂದು ವಿಶೇಷ ಅವಕಾಶವನ್ನು ಒದಗಿಸಿಕೊಡಬೇಕೆಂದು ನಾನು ವಿನಂತಿಸುತ್ತೇನೆ. ಏಕೆಂದರೆ, ಸಾಮಾನ್ಯ ಪೌರತ್ವದ ಹಕ್ಕು ಇಲ್ಲದ ಹೊರತು ನಿಜವಾದ ಫೆಡರೇಶನ್ನು ಇರುವುದು ಸಾಧ್ಯವೇ ಇಲ್ಲ ಎಂದು ನನ್ನ ಅಭಿಪ್ರಾಯವಾಗಿರುತ್ತದೆ. ಸಾಮಾನ್ಯ ಪೌರತ್ವದ ಹಕ್ಕನ್ನು ಕೊಡದಿರುವ ಸಂವಿಧಾನವನ್ನು ಫೆಡರಲ್ ಸಂವಿಧಾನ ಎಂದು ಕರೆಯುವುದು ಅಸಂಗತವಾದುದಾಗುತ್ತದೆ. ನಾನು ಹೇಳಿದಂತೆ, ಈಗ ನನಗೆ ಹೆಚ್ಚಿನ ಕಾಲಾವಕಾಶ ಇಲ್ಲದ್ದರಿಂದ, ಈಗ ಈ ಅಂಶವನ್ನು ನಾನು ವಿಸ್ತರಿಸಿ ಹೇಳಲಾರೆ.

# ಇಪ್ಪತ್ತೈದನೆಯ ಸಭೆ
# ೧೮ನೇ ಸೆಪ್ಟೆಂಬರ್ ೧೯೩೧

## ವಿಭಾಗ–II

(ಸಂಯುಕ್ತ ಶಾಸಕಾಂಗದ ಸದಸ್ಯರ ಆಯ್ಕೆಯ ಬಗ್ಗೆ ಪ್ರಶ್ನೆಗಳು)

* ಡಾ. ಬಿ. ಆರ್. ಅಂಬೇಡ್ಕರ್: ನಾನು ಗಾಂಧಿಯವರಿಗೆ ಈ ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ: ಶಾಸಕಾಂಗ ಅಥವಾ ಕಾರ್ಯಾಂಗ ಹೇಗಿರಬೇಕೆನ್ನುವ ಪ್ರಶ್ನೆಯನ್ನು ಕಾಂಗ್ರೆಸ್ ಗಮನಿಸಿಯೇ ಇಲ್ಲ. ತಾನು ಬ್ರಿಟಿಷ್ ಚಕ್ರಾಧಿಪತ್ಯದ ಭಾಗವಾಗಿರಬೇಕೊ ಅಥವಾ ಸ್ವತಂತ್ರವಾಗಿರಬೇಕೊ ಎನ್ನುವ ಒಂದು ಪ್ರಶ್ನೆಗೆ ಕಾಂಗ್ರೆಸ್ ಗಮನ ಕೊಟ್ಟಿದೆ. ಆದ್ದರಿಂದ ನಿನ್ನೆ ಗಾಂಧಿಯವರು ಹೇಳಿದ್ದು ಅವರ ವೈಯಕ್ತಿಕ ಅಭಿಪ್ರಾಯವಾಗಿರಬಹುದು. ಅವರು ತಮ್ಮ ಸ್ವಂತ ಅಭಿಪ್ರಾಯವನ್ನು ಹೇಳುತ್ತಿದ್ದರೋ ಅಥವಾ ಆ ಮೂಲಕ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಪ್ರತಿನಿಧಿಸುತ್ತಿದ್ದರೋ ಎಂದು ನಾನು ಅವರನ್ನು ಕೇಳಲಿಚ್ಛಿಸುತ್ತೇನೆ. ಆಮೇಲೆ ಇನ್ನೊಂದು ಪ್ರಶ್ನೆಯನ್ನು ಕೇಳಬೇಕೆನ್ನಿಸುತ್ತದೆ. ಕಾಂಗ್ರೆಸ್ಸಿನ ನಡಾವಳಿಗಳು ಸಾರ್ವಜನಿಕರಿಗೆ ತಿಳಿದು ಬರುವ ಮಟ್ಟಿಗೆ ಹೇಳುವುದಾದರೆ, ನನಗೆ ಗೊತ್ತಿರುವ ಹಾಗೆ, ಈ ಪ್ರಶ್ನೆ ಕಾಂಗ್ರೆಸ್ಸಿನ ಮುಂದೆ ಬರಲೇ ಇಲ್ಲ. ಕಾಂಗ್ರೆಸ್ಸು ಇದನ್ನು ಗುಟ್ಟಾಗಿ ಆಲೋಚಿಸಿರಬಹುದು. ಆದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮುಂದಿನ ಪ್ರಶ್ನೆ ಪರೋಕ್ಷ ಚುನಾವಣೆಗೆ ಸಂಬಂಧಿಸಿದ್ದು. ನಿನ್ನೆ ಅವರು ಅದನ್ನು ಅನುಮೋದಿಸಿದರು. ಆದರೆ ಹೋಂರೂಲ್ ಮಸೂದೆ ರೂಪಗೊಂಡಾಗ ಅದನ್ನು ಶ್ರೀಮತಿ ಅನಿಬೆಸೆಂಟರು ಮಂಡಿಸಿರಲಿಲ್ಲವೆ? ಆ ರೀತಿಯಾಗಿ ಸಂಯುಕ್ತ ಶಾಸಕಾಂಗವನ್ನು ರಚಿಸುವ ಕ್ರಮವನ್ನು ಅಂತಿಮವಾಗಿ ಕಾಂಗ್ರೆಸ್ ತಿರಸ್ಕರಿಸಿರಲಿಲ್ಲವೆ?

* * * * *

## II

* * ಲಾರ್ಡ್ ಛಾನ್ಸಲರ್: ಡಾ. ಅಂಬೇಡ್ಕರ್ ಇನ್ನೊಂದು ವಿಷಯವನ್ನು ಬಹಳ ತೀವ್ರವಾಗಿ ಪ್ರಸ್ತಾಪಿಸಿದ್ದಾರೆ. ಅದು ಈ ಕಡೆಯ ಸದಸ್ಯರಿಗೆ ಸ್ವಲ್ಪಮಟ್ಟಿಗಿನ ಪ್ರಾಮುಖ್ಯವಿರುವ ವಿಷಯವಾದ್ದರಿಂದ, ನಾನು ಅದನ್ನು ಪ್ರಸ್ತಾಪಿಸುತ್ತೇನೆ. ಸಂಸ್ಥಾನಗಳ ಪ್ರಜೆಗಳ ಚುನಾವಣೆಯ ಸೂತ್ರಕ್ಕೆ ಆಶ್ವಾಸನೆ ಸಿಗದಿದ್ದರೆ, ಅಧಿಕಾರದಲ್ಲಿರುವ ಗುಂಪಿಗಿಂತ ಹೆಚ್ಚು ವ್ಯತ್ಯಾಸವಿಲ್ಲದ ಇನ್ನೊಂದು ಗುಂಪನ್ನು ಸೃಷ್ಟಿಸಬಹುದು ಎಂದು

---

* ಸಂಯುಕ್ತ ರಾಜ್ಯ ಸ್ವರೂಪದ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿಯ ನಡಾವಳಿಗಳು, ಸಂ. I ಪು. ೧೭೫.

* * ಅದೇ, ಪುಟಗಳು ೧೮೪–೮೫

ಸೂಚಿಸಲಾಗಿತ್ತು. ಅದಲ್ಲದೆ ಅಂತಹ ಗುಂಪೊಂದನ್ನು ಸೃಷ್ಟಿಸುವುದರಲ್ಲಿ ರಾಜಕೀಯ ಇಲಾಖೆ ಪ್ರಮುಖ ಪಾತ್ರ ವಹಿಸುತ್ತದೆ ಎಂದೂ ಹೇಳಲಾಗಿತ್ತು. ಆದರೆ, ಸಾರ್ವಜನಿಕ ಸೇವಕರಾದ ದೊಡ್ಡ ಮನುಷ್ಯರು ಸದಸ್ಯರಾಗಿರುವ ಈ ರಾಜಕೀಯ ಇಲಾಖೆಯವರು ಆತ್ಮಸಾಕ್ಷಿ ಇರುವವರಾಗಿದ್ದಾರೆ ಮತ್ತು ಭಾರತದಲ್ಲಿ ಅಥವಾ ಹೊರದೇಶದಲ್ಲಿ ಇನ್ಯಾವುದೇ ಸಾರ್ವಜನಿಕ ಸೇವಕರಷ್ಟೇ ನ್ಯಾಯವಂತರಾಗಿದ್ದಾರೆ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ನಿಜವಾದರೆ, ಜವಾಬ್ದಾರಿಯುತ ಸರ್ಕಾರವನ್ನೇಕೆ ರಚಿಸಬೇಕು?

* * * * *

## IV

* ಡಾ. ಬಿ. ಆರ್. ಅಂಬೇಡ್ಕರ್: ನೀವು ಅದೇ ರೀತಿಯಲ್ಲಿ ಸ್ಯಾಮ್ಯುಯಲ್ ಹೋರ್ ಅವರ ಬಗ್ಗೆ ಏಕೆ ರಿಯಾಯಿತಿಯನ್ನು ತೋರಿಸಬಾರದು? ಅವರು ಸಾಕಷ್ಟು ಸಮಯವನ್ನು ತೆಗೆದುಕೊಂಡು ಬ್ರಿಟಿಷ್ ಭಾರತದಲ್ಲಿ ಜನಪ್ರಿಯ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಏಕೆ ಅವಕಾಶ ಕೊಡಬಾರದು? ಅವರು, ಖಂಡಿತವಾಗಿಯೂ ನಿಮಗೆ ಕೃತಜ್ಞರಾಗಿರುತ್ತಾರೆ.

ಅಧ್ಯಕ್ಷರು: ಸರ್ ಸ್ಯಾಮ್ಯುಯಲ್ ಹೋರ್ ಅವರ ಕೃತಜ್ಞತೆಯನ್ನು ಇಲ್ಲಿ ಚರ್ಚಿಸಬೇಕಾಗಿದೆ ಎಂದು ಎನ್ನಿಸುವುದಿಲ್ಲ. ಆ ವಿಷಯ ಈ ಸಮಿತಿಯ ಮುಂದಿರುವ ಚರ್ಚಾ ವಿಷಯವಲ್ಲ.

ಪಂಡಿತ್ ಎಂ. ಎಂ. ಮಾಲವೀಯ: ನನ್ನ ಸ್ನೇಹಿತರಾದ ಡಾ. ಬಿ. ಆರ್. ಅಂಬೇಡ್ಕರ್ ನಾನು ಹೇಳಿದ ವಿಷಯ ಮರೆಯುತ್ತಿದ್ದಾರೆ. ತತ್‌ಕ್ಷಣದಲ್ಲಿ ಪ್ರತಿನಿಧಿತ್ವವನ್ನು ಪ್ರಾಂತಗಳಲ್ಲಿ ಜಾರಿಗೆ ತರಬೇಕೆನ್ನುವ ನನ್ನ ಆಸೆಯನ್ನು ಎರಡೆರಡು ಬಾರಿ, ಮತ್ತೆ ಮತ್ತೆ ಹೇಳಿದ್ದೇನೆ. ಆ ಆಸೆಯನ್ನು ನಾನು ನನ್ನ ಸ್ನೇಹಿತರಾದ ಡಾ. ಅಂಬೇಡ್ಕರ್‌ರಿಗೂ ಬಿಟ್ಟುಕೊಡುವುದಿಲ್ಲ. ಆದರೆ, ನನ್ನ ಆಸೆಗೂ ಮತ್ತು ಅವರ ಆಸೆಗೂ ಇರುವ ವ್ಯತ್ಯಾಸವೂ ನನಗೆ ಗೊತ್ತಿದೆ. ಮತ್ತು ಯಾವಾಗ ಮತ್ತು ಹೇಗೆ ತಮ್ಮ ಪ್ರಾಂತಗಳಲ್ಲಿ ಪ್ರತಿನಿಧಿತತ್ವವನ್ನು ಜಾರಿಗೆ ತರಬೇಕೆಂದು ಯೋಚಿಸಲಿಕ್ಕೆ ಬೇಕಾದ ಸಮಯವನ್ನು ತೆಗೆದುಕೊಳ್ಳುವುದಕ್ಕೂ ಅಧಿಕಾರದಲ್ಲಿರುವ ರಾಜರಿಗೆ ಹಕ್ಕಿದೆ ಎನ್ನುವುದೂ ನನಗೆ ಗೊತ್ತಿದೆ.....

.....ಈಗ ಲಾರ್ಡ್ ಛಾನ್ಸಲರ್ ಅವರೆ, ನಮ್ಮಲ್ಲಿ ಕೆಲವರು ತಾಳ್ಮೆಯಿಲ್ಲದವರು –ನನ್ನಷ್ಟು ತಾಳ್ಮೆಯಿಲ್ಲ ದವರು ಇನ್ಯಾರೂ ಇರಲಾರರು ಎಂದು ಮತ್ತೆ ಹೇಳುತ್ತೇನೆ– ಪ್ರಾತಿನಿಧಿಕ ಸಂಸ್ಥೆಯ ತತ್ವ ಸಂಸ್ಥಾನಗಳಲ್ಲಿ ಪ್ರಾರಂಭವಾಗಬೇಕೆನ್ನುವದರಲ್ಲಿ ತಾಳ್ಮೆಯಿಲ್ಲದವರು ನೆನಪಿನಲ್ಲಿಡಬೇಕಾದ್ದು.....

ಡಾ. ಬಿ. ಆರ್. ಅಂಬೇಡ್ಕರ್: ಲಾರ್ಡ್ ಛಾನ್ಸಲರ್ ಅವರೆ, ಈ ಕಡೆಯ ನಾವು ಪ್ರಾತಿನಿಧಿಕ ಸಂಸ್ಥೆಗಳನ್ನು ಸಂಸ್ಥಾನಗಳಲ್ಲಿ ಪ್ರಾರಂಭಿಸಬೇಕೆಂದು ಎಂದೂ ಹೇಳಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರ ಬಯಸುತ್ತೇನೆ. ಬ್ರಿಟಿಷ್ ಭಾರತದಲ್ಲಿ ಇರುವ ಹಾಗೆ ಭಾರತೀಯ ಸಂಸ್ಥಾನಗಳಲ್ಲೂ ಸಂಯುಕ್ತ ಸಭೆಗೆ ಪ್ರತಿನಿಧಿಗಳನ್ನು ಆರಿಸುವುದಕ್ಕೆ ಚುನಾವಣಾ ಕ್ಷೇತ್ರಗಳಿರಬೇಕೆಂದು ಮಾತ್ರ ನಾವು ಹೇಳುತ್ತಿದ್ದೇವೆ. ಈ ರಾಜಕುಮಾರರು ರಾಜ್ಯಕ್ಕೆ ಸೇರುವ ಮುಂಚೆ ದೇಶೀಯ ಸಂಸ್ಥಾನಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲಿಕ್ಕೆ

---

* ಸಂಯುಕ್ತ ರಾಜ್ಯ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿಯ ನಡಾವಳಿಗಳು: ಪುಟ ೧೯೨–೯೫

ಅವುಗಳಲ್ಲಿ ವಿಧಾನ ಜನಪ್ರಿಯ ಸಭೆಗಳಿರಬೇಕೆನ್ನುವುದು ಒಂದು ಕರಾರಾಗಿರಬೇಕೆಂದು ನಾನು ಯಾವಾಗಲೂ ಹೇಳಿಲ್ಲ.

ಪಂಡಿತ ಎಂ. ಎಂ. ಮಾಲವೀಯ: ಡಾ. ಅಂಬೇಡ್ಕರರ ಪ್ರಕಾರ ಅವರು ಪ್ರಾತಿನಿಧಿಕ ಸಂಸ್ಥೆಗಳು ಬೇಕೆಂದು ಹೇಳಿಲ್ಲವಾದರೆ, ಅವರು ಈ ಸಮಾಧಾನವನ್ನು ಇಟ್ಟುಕೊಳ್ಳಬಹುದು. ಯಾವುದೋ ಒಂದು ಜನಪ್ರಿಯ ರೀತಿಯಲ್ಲಿ ಸಂಯುಕ್ತ ಸಭೆಗಳ ಸದಸ್ಯರು ಆರಿಸಿ ಬರದಿದ್ದರೆ ಅದರಿಂದ ಪ್ರಯೋಜನವಿಲ್ಲ ವೆಂದು ತಿಳಿಯಬಾರದು..... ಭಾರತೀಯ ಸಂಸ್ಥಾನಗಳ ಪ್ರತಿನಿಧಿಗಳು ಜನಪ್ರಿಯ ಚುನಾವಣೆಗಳಲ್ಲಿ ಆರಿಸಿ ಬರದಿದ್ದರೂ– ಹಾಗೆ ಅವರು ಬರಬೇಕೆಂಬುದು ನನ್ನ ಆಸೆ ಎಂದು ಮತ್ತೆ ಹೇಳುತ್ತೇನೆ– ಹಾಗಾದರೂ ನಾವು ಕೆಲವು ಅತ್ಯುತ್ತಮ ಪ್ರತಿನಿಧಿಗಳನ್ನು ಪಡೆಯಬಹುದು ಮತ್ತು ಅವರ ಸಹಕಾರ ನಮ್ಮ ಕೆಲಸಕ್ಕೆ ತುಂಬ ಮೌಲಿಕವಾದದ್ದು ಆಗಬಹುದು.

ಅಧ್ಯಕ್ಷರು: ನೀವು ಹೇಳುವುದನ್ನು ಬಹಳ ಸಂಕ್ಷಿಪ್ತವಾಗಿ ಹೇಳುವುದಾದರೆ "ದರಿದ್ರ ಕ್ಷೇತ್ರ"ಗಳಿಂದ ಯಾವಾಗಲೂ ದರಿದ್ರ ಜನರೇ ಆರಿಸಿಬರುವುದಿಲ್ಲ ಎಂದಾಯಿತು.

ಪಂಡಿತ ಎಂ. ಎಂ. ಮಾಲವೀಯ: ಮಹಾಸ್ವಾಮಿಗಳೆ, ತಾವು ಸೂತ್ರಬದ್ಧವಾಗಿ ಮಾತಾಡುವ ಹಾಗೆ ನನಗೂ ಮಾತಾಡಲಿಕ್ಕೆ ಬಂದಿದ್ದರೆ ಚೆನ್ನಾಗಿತ್ತು.

(ಆಮೇಲೆ ಪಂಡಿತ ಮಾಲವೀಯವರು ಪ್ರತಿನಿಧಿತ್ವವನ್ನು ಪ್ರಾರಂಭಿಸುವುದನ್ನು ರಾಜಕುಮಾರರ ಇಚ್ಛೆಗೆ ಬಿಟ್ಟುಬಿಡಬೇಕೆಂದು ಸೂಚಿಸಿದರು. ತಾವಾಗಿಯೇ ಅವರು ಅದನ್ನು ಪ್ರಾರಂಭಿಸಿದರೆ ತಮಗೆ ಸಂತೋಷವಾಗುತ್ತದೆಂದು ಹೇಳಿದರು) "ಆದರೆ" ಎಂದು ಅವರು ತಮ್ಮ ಮಾತನ್ನು ಹೀಗೆ ಮುಂದು ವರಿಸಿದರು.

"ನಾವು ತಾಳ್ಮೆ ಮತ್ತು ಸೌಜನ್ಯದಿಂದ ಕಾದು ನೋಡೋಣ ಎಂದು ಬ್ರಿಟಿಷ್ ಭಾರತದ ಸ್ನೇಹಿತರಿಗೆ ನಾನು ಹೇಳಬಯಸುತ್ತೇನೆ. ಸರಿಯಾದ ಸಮಯ ಬಂದಾಗ ಅಂಥ ಸಂಸ್ಥೆಗಳು ಆರಂಭವಾಗುತ್ತ ವೆಂದು ಆಶಿಸೋಣ. ಆದರೆ ಯಾವುದರ ಬಗ್ಗೆ ನಾವು ತುಂಬ ಆಸೆಯನ್ನಿಟ್ಟುಕೊಂಡಿದ್ದೇವೋ ಅಂತಹ ಅಖಿಲ ಭಾರತ ರಾಜ್ಯವನ್ನು, ಸ್ಥಾಪಿಸುವುದಕ್ಕೆ ವಿನಾಕಾರಣ ಅಡ್ಡಿಗಳನ್ನು ನಾವು ಸೃಷ್ಟಿಮಾಡುವುದು ಬೇಡ."

ಡಾ. ಬಿ. ಆರ್. ಅಂಬೇಡ್ಕರ್: ಇದೇ ತರಹದ ಬುದ್ಧಿಯನ್ನು ನೀವು ನಿಮ್ನ ವರ್ಗದವರಿಗೆ ಹೇಳಿದ್ದಿರಿ– ಕಾಲಾನುಕ್ರಮದಲ್ಲಿ ಅವರ ಪರಿಸ್ಥಿತಿ ಸುಧಾರಿಸುತ್ತದೆ ಎಂದಿದ್ದಿರಿ.

ಪಂಡಿತ ಎಂ. ಎಂ. ಮಾಲವೀಯ: ಮಹಾಸ್ವಾಮಿ, ನನ್ನ ಸ್ನೇಹಿತರಾದ ಡಾ. ಅಂಬೇಡ್ಕರರು ನನ್ನನ್ನು ಸಂಪೂರ್ಣವಾಗಿ ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ನಾನು ಭಾವಿಸಿದಷ್ಟು ಅವರು ತಿಳಿವಳಿಕಸ್ಥರಲ್ಲ ಎಂದು ಹೇಳಲು ನಾನು ವಿಷಾದಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಇವರಿಂದ ಜ್ಞಾನೋದಯವಾಗುವುದಾದರೆ ನಾನು ಅದಕ್ಕೆ ಸಿದ್ಧ ನಿದ್ದೇನೆ.

ಪಂಡಿತ ಎಂ. ಎಂ. ಮಾಲವೀಯ: ಹಿಂದುಳಿದ ವರ್ಗದವರು ಕಾಯಬೇಕೆಂದು ನಾನು ಹೇಳುತ್ತಿಲ್ಲ. ೧೯೧೮ರಲ್ಲಿ ಮಾಂಟೆಗು–ಚೆಲ್ಮ್ಸ್‌ಫೋರ್ಡ್ ಸೂಚನೆಗಳು ಬಂದಾಗ ಅದರ ವಿಮರ್ಶೆಯನ್ನು ಬರೆ ಯುವ ಗೌರವಾವಕಾಶ ನನಗೆ ಸಿಕ್ಕಿದಾಗ, ನಿಮ್ನ ವರ್ಗದವರ ವಿಷಯಕ್ಕೆ ಸಂಬಂಧಿಸಿದ ಹಾಗೆ ಅದು ಶಿಕ್ಷಣದ ಪ್ರಶ್ನೆ ಎಂದು ಹೇಳಿ ನಾನು ವಾದಿಸಿದ್ದೆ. ಈಗಲೂ ನಾನು ಹಾಗೆಯೇ ವಾದಿಸುತ್ತಿದ್ದೇನೆ. ಕಾಂಗ್ರೆಸ್

ಕೂಡ ವಾದಿಸುತ್ತಿದೆ– ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಸಿಗಬೇಕು– ಕಾಂಗ್ರೆಸ್ ಹುಟ್ಟಿದಾಗಿನಿಂದ ಈ ಮಾತನ್ನು ಹೇಳುತ್ತಿದೆ. ದೇಶದ ಸಂಪತ್ತನ್ನೆಲ್ಲ ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಭಾರತದ ಸರ್ಕಾರ, ಪ್ರಾಥಮಿಕ ಶಿಕ್ಷಣವನ್ನು ಜನರಲ್ಲಿ ಹರಡುವುದಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡಿದ್ದರೆ, ಇಷ್ಟು ಹೊತ್ತಿಗೆ "ನಿಮ್ನವರ್ಗ" ಎನ್ನುವ ಮಾತು ಚರಿತ್ರೆಯಲ್ಲಿ ಮಾತ್ರ ಸಿಗುತ್ತಿತ್ತು ಎನ್ನುವುದನ್ನು ನಾನು ದೃಢವಾಗಿ ನಂಬುತ್ತೇನೆ. ಅವರಿಗೆ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣವೂ ಸಿಗಬೇಕೆನ್ನುವುದು ನಮ್ಮ ಆಸೆಯಾಗಿದೆ. ಒಂದು ವಿಶ್ವವಿದ್ಯಾಲಯದ, ಬೆನಾರಸ್ ಹಿಂದೂ ವಿಶ್ವವಿದ್ಯಾಲಯದ ಕುಲಪತಿಯ ಗೌರವ ಸ್ಥಾನ ನನಗೆ ಸಿಕ್ಕಿದೆ. ಅಲ್ಲಿ ನಿಮ್ನವರ್ಗದ ವಿರುದ್ಧ ಅಲ್ಲಿ ಯಾವ ತಾರರಮ್ಯಕ್ಕೂ ಅವಕಾಶವಿಲ್ಲ. ಅಲ್ಲಿ ಶಿಕ್ಷಣವನ್ನು ಪಡೆದವರು ತುಂಬ ಗಮನಾರ್ಹ ವ್ಯಕ್ತಿಗಳೂ ಆಗುತ್ತಾರೆ. ನನ್ನ ಗೌರವಾರ್ಹ ಸ್ನೇಹಿತರಾದ ಡಾ. ಅಂಬೇಡ್ಕರರ ಹಾಗೆ ಎಂದು ಹೇಳಬಹುದು.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ವಿದ್ಯಾಭ್ಯಾಸ ಸಿಕ್ಕಿದ್ದರೂ ಸಮಾಜದಲ್ಲಿ ನಾನು ಈಗಲೂ ಒಬ್ಬ "ಅಸ್ಪೃಶ್ಯ". ನನಗೆ ಸಿಕ್ಕ ಶಿಕ್ಷಣ ನನ್ನನ್ನು ಅದರಿಂದ ಬಿಡುಗಡೆ ಮಾಡಲಿಲ್ಲ.

ಪಂಡಿತ ಎಂ.ಎಂ.ಮಾಲವೀಯ: ಕ್ಷಮಿಸಬೇಕು, ನೀವು ಒಬ್ಬರು ಅಸ್ಪೃಶ್ಯರಲ್ಲ; ನೀವು ಪ್ರಿಯಮಿತ್ರರು ಮತ್ತು ಸಹೋದ್ಯೋಗಿಗಳು– ಅತ್ಯಂತ ಸಂಪ್ರದಾಯವಾದಿಗಳಾದ ನಿಮ್ಮ ಸ್ನೇಹಿತರು ನಿಮ್ಮ ಜೊತೆಗೆ ಸೇರಿ ಕೆಲಸ ಮಾಡಲು ಸಂತೋಷಪಡುವಂಥ ನೀವು ನಮ್ಮ ಸಹೋದರರು. ಅವರು ನಿಮ್ಮ ಜೊತೆಯಲ್ಲಿ ಕೆಲಸ ಮಾಡುತ್ತಾರೆನ್ನುವುದು ನಿಮಗೆ ಗೊತ್ತಿದೆ. ಈಗಿನ ದಿನಗಳಲ್ಲಿ ನಿಮ್ನ ವರ್ಗಗಳ ಹಿತ ರಕ್ಷಣೆಗಾಗಿ ಎಷ್ಟೊಂದು ಜನ ಬ್ರಾಹ್ಮಣರು ಕೆಲಸ ಮಾಡುತ್ತಿದ್ದಾರೆಂದರೆ ಅಷ್ಟೊಂದು ಜನ ಬೇರೆ ಯಾವ ವರ್ಗದ ಪ್ರತಿನಿಧಿಗಳೂ ಇಲ್ಲ. ಈ ಸಂಗತಿಯನ್ನು ನನ್ನ ಸ್ನೇಹಿತರಾದ ಡಾ. ಅಂಬೇಡ್ಕರರು ಒಪ್ಪುತ್ತಾರೆ ಎಂದು ಎನ್ನಿಸುತ್ತದೆ.

ಈಗ ನಾನು ಹೇಳಬೇಕಾದ ಇನ್ನೊಂದು ವಿಷಯ. ಮಹಾಸ್ವಾಮಿಯವರೆ, ಅದು ನೇರ ಚುನಾವಣೆ ಮತ್ತು ಪರೋಕ್ಷ ಚುನಾವಣೆ. ಈ ವಿಷಯದಲ್ಲಿ ನಿನ್ನೆ ಮಹಾತ್ಮಗಾಂಧಿಯವರು ಹೇಳಿದ್ದು ಸರಿಯಾಗಿ ಅರ್ಥವಾದ ಹಾಗಿಲ್ಲ... ಅವರು ಲಾರ್ಡ್ ಪೀಲ್ ಸೂಚನೆಯನ್ನು ಒಪ್ಪಿ, ಮಾತನಾಡಿದಾಗ ಮತ ಚಲಾವಣೆಯ ಹಕ್ಕನ್ನು ಈ ದೇಶದ ಎಲ್ಲ ವಯಸ್ಕರಿಗೂ ಸಿಗುವಂತೆ ಮಾಡುವುದರಲ್ಲಿ ಅನೇಕ ವ್ಯಾವಹಾರಿಕ ಅಡಚಣೆಗಳಿವೆ ಎನ್ನುವುದನ್ನು ಎಲ್ಲರೂ ಗ್ರಹಿಸಿದ್ದಾರೆ ಎಂದು ಹೇಳುವುದೇ ಅದರ ಉದ್ದೇಶವಾಗಿತ್ತು.... ಮಿಸ್ಟರ್ ಗಾಂಧಿಯವರು ಖಂಡಿತವಾಗಿಯೂ ವಯಸ್ಕರ ಮತದಾನದ ತತ್ವವನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಆ ಯೋಜನೆಯನ್ನು ಸೂಚಿಸಿದರು. ಪರೋಕ್ಷ ಚುನಾವಣೆಯಾದರೆ, ಮತದಾನದ ಹಕ್ಕನ್ನು ಚಲಾಯಿಸಲಿಕ್ಕೆ ಬಿಡಲಿಲ್ಲವೆಂದು ಜನರಿಗೆ ಎನ್ನಿಸಬಾರದೆಂದು ಅವರು ಅದನ್ನು ಅನುಮೋದಿಸಲಿಲ್ಲ.

ಸರ್ ತೇಜ್ ಬಹದ್ದೂರ್ ಸಪ್ರು: ಮಹಾತ್ಮಾಗಾಂಧಿಯವರು ವಯಸ್ಕರ ಮತದಾನ ತತ್ವದ ಬಗ್ಗೆ ವಿವರಿಸಿದ್ದನ್ನು ನಾನು ತುಂಬ ಗಮನಕೊಟ್ಟು ಕೇಳಿದೆ. ಆದರೆ ಅದು ನೆಹರೂ ವರದಿಯಲ್ಲಿ ಕೇಳಿದ್ದಕ್ಕಿಂತ ಕಡಿಮೆಯಾಯಿತು ಅಂತ ನನಗೆ ಅನಿಸುತ್ತೆ. ನನ್ನದು ತಪ್ಪಾಗಿದ್ದರೆ ತಾವು ದಯವಿಟ್ಟು ನನ್ನನ್ನು ತಿದ್ದುತ್ತೀರಾ?

ಸರ್ ಸ್ಯಾಮ್ಯುಯಲ್ ಹೋರ್: ಪಂಡಿತ ಮಾಲವೀಯರೆ, ಅದು ನೇರವಾದ ಚುನಾವಣೆಯೇ ಆಗುತ್ತದೆ. ಈಗ ನೀವು ವಯಸ್ಕರ ಮತದಾನದ ಬಗ್ಗೆ ವಾದಿಸುತ್ತಿದ್ದೀರಿ. ನಿನ್ನೆ ದಿನ ಸಮಿತಿ ವಿಚಾರಿಸುತ್ತಿದ್ದ

ವಿಷಯ ಅದಲ್ಲವೆಂದು ನಾನು ತಿಳಿದಿದ್ದೇನೆ. ನಿನ್ನೆಯ ವಿಷಯ ನೇರವಾದ ಅಥವಾ ಪರೋಕ್ಷವಾದ ಚುನಾವಣೆ. ಮಹಾತ್ಮಾಗಾಂಧಿಯವರ ಮಾತುಗಳನ್ನು ನಾನು ಅರ್ಥ ಮಾಡಿಕೊಂಡಿರುವ ರೀತಿಯಲ್ಲಿ ಅದು ವಯಸ್ಕರ ಮತದಾನದ ಪರವಾಗಿತ್ತು. ಆದರೆ, ಅವರು ಪರೋಕ್ಷ ಚುನಾವಣೆಯ ಪರವಾಗಿಯೂ ಮಾತಾಡಿದ್ದರು.

* ಕರ್ನಲ್ ಹಸ್ಕರ್: .....ಇನ್ನು ನಾನು ಹೆಚ್ಚಿಗೆ ಮಾತಾಡಬೇಕಿಲ್ಲ. ನಾನು ನನ್ನ ಗೌರವಾನ್ವಿತ ಸ್ನೇಹಿತರಾದ ಪಂಡಿತ ಮಾಲವೀಯರು ಹೇಳಿದ್ದನ್ನೇ ಹೇಳಬೇಕಾಗುತ್ತದೆ. ಅವರ ಹೇಳಿಕೆಯ ಒಂದು ಭಾಗದಲ್ಲಿ ಅವರು ಹೇಳಿದ್ದನ್ನು ಸಂಕ್ಷೇಪವಾಗಿ ಹೇಳುವುದಾದರೆ ಅದು ಹೀಗಿತ್ತು ಎನ್ನಬಹುದು. ನಮಗೆ ಅತ್ಯಂತ ಪ್ರಮುಖವಾದ ವಿಚಾರವೆಂದರೆ, ದೇಶವನ್ನು ಒಂದುಗೂಡಿಸುವುದು. ಅದು ನಮ್ಮ ಪ್ರಮುಖ ವಿಚಾರವಾದರೆ, ಆ ಉದ್ದೇಶವನ್ನು ಹೇಗಾದರೂ ನಾವು ಸಾಧಿಸಲೇಬೇಕು; ಆ ಉದ್ದೇಶವನ್ನು ಪೂರೈಸಲಿಕ್ಕೆ ಯಾವುದೂ ಅಡ್ಡಿಯಾಗಲಿಕ್ಕೆ ಬಿಡಬಾರದು.

ಡಾ. ಬಿ. ಆರ್. ಅಂಬೇಡ್ಕರ್: ಹೇಗಾದರೂ ಸಾಧಿಸುವುದು ಅಂದರೆ– ನಮ್ಮನ್ನು ಬಿಟ್ಟುಕೊಟ್ಟು ಸಾಧಿಸುವುದಲ್ಲ ತಾನೆ!

---

* ಸಂಯುಕ್ತ ರಾಜ್ಯ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿ ನಡಾವಳಿಗಳು, ಸಂಪುಟ ೧, ಪುಟ ೨೦೫

# ಇಪ್ಪತ್ತಾರನೆಯ ಸಭೆ
# ೨೧ ಸೆಪ್ಟೆಂಬರ್ ೧೯೩೧
## ವಿಭಾಗ–III

(ಸಂಯುಕ್ತ ರಾಜ್ಯಸಭೆಯ ಎರಡು ಸದನಗಳ ನಡುವಿನ ಸಂಬಂಧಗಳು)

* ಡಾ. ಬಿ. ಆರ್. ಅಂಬೇಡ್ಕರ್: ನಾನು ಮಧ್ಯದಲ್ಲಿ ಮಾತಾಡಬಹುದಾದರೆ, ಒಂದು ಪ್ರಶ್ನೆಯನ್ನು ಕೇಳಬೇಕೆನ್ನಿಸುತ್ತದೆ. ಸರಬರಾಜು ಅಥವಾ ಸಾಧಾರಣವಾಗಿ ಆರ್ಥಿಕ ಬೇಡಿಕೆಗಳ ವಿಷಯದಲ್ಲಿ ಮೇಲ್ಮನೆ ಕೆಳಮನೆಗೆ ಸೂಚನೆಗಳನ್ನು ಮತ್ತು ಶಿಫಾರಸುಗಳನ್ನು ಕಳಿಸಬಹುದೆಂದು ಸರ್ ತೇಜರು ಹೇಳಿದರು; ಆದರೆ ಆ ಸೂಚನೆಗಳನ್ನು ಕೆಳಮನೆಯವರು ಒಪ್ಪಿಕೊಳ್ಳದಿದ್ದರೆ ಏನಾಗುತ್ತದೆ?

ಸರ್ ತೇಜ್ ಬಹದ್ದೂರ್ ಸಪ್ರು: ಹಾಗಾದಾಗ ಮೇಲ್ಮನೆಯವರು ಬೇಡಿಕೆಯನ್ನು ನಿರಾಕರಿಸಬಹುದು. ಆ ರೀತಿಯಲ್ಲಿ ಬಿಕ್ಕಟ್ಟು ಉಂಟಾದಾಗ ದಕ್ಷಿಣ ಆಫ್ರಿಕಾ ಮೇಲ್ಪಂಕ್ತಿಯನ್ನು ಅನುಸರಿಸಿ, ಅವರ ರೀತಿಯಲ್ಲಿ ಕಾರ್ಯಾಚರಣೆಗೆ ತೊಡಗಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಮೇಲ್ಮನೆಗೆ ಕೇವಲ ಸೂಚನೆಗಳನ್ನು ಕೊಡುವ ಮತ್ತು ಶಿಫಾರಸು ಮಾಡುವಷ್ಟೇ ಅಧಿಕಾರವಿದ್ದರೆ ಬಿಕ್ಕಟ್ಟು ಉದ್ಭವಿಸಲಿಕ್ಕೆ ಹೇಗೆ ಸಾಧ್ಯ?

ಸರ್ ತೇಜ್ ಬಹದ್ದೂರ್ ಸಪ್ರು: ಅದು ಆ ಮಸೂದೆಯನ್ನು ಸಂಪೂರ್ಣವಾಗಿ ನಿರಾಕರಿಸ ಬಹುದು.

ಸರ್ ಮಹಮ್ಮದ್ ಶಫಿ: ಹಾಗಿದ್ದರೆ ಕೆಳಮನೆಗೆ ಕಳಿಸಿದ ತಿದ್ದುಪಡಿಗೂ, ನಿರಾಕರಿಸುವ ಅಧಿಕಾರದಿಂದ ಕೆಳಮನೆಗೆ ಕಳಿಸಿದ ಸೂಚನೆಗೂ ಮೂಲಭೂತವಾಗಿ ಏನು ವ್ಯತ್ಯಾಸವಾದ ಹಾಗಾಯಿತು? ಅವೆರಡಕ್ಕೂ ಇರುವ ಮೂಲಭೂತ ವ್ಯತ್ಯಾಸವೇನು? ಅಂತಿಮ ತೀರ್ಮಾನ ಎರಡು ಸದನಗಳು ಒಟ್ಟು ಸೇರಿದಾಗ ಆಗಬೇಕಾದದ್ದು.

ಸರ್ ತೇಜ್ ಬಹದ್ದೂರ್ ಸಪ್ರು: ಮುಖ್ಯವಾಗಿ, ಇದು ಆಧುನಿಕ ಸಂಪ್ರದಾಯಕ್ಕೆ ಹೊಂದಿ ಕೊಳ್ಳುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ ಆರ್ಥಿಕ ಬೇಡಿಕೆಗೂ ಮತ್ತಿತರ ಬೇಡಿಕೆಗೂ ಹೆಚ್ಚಿನ ವ್ಯತ್ಯಾಸವಿಲ್ಲವೆಂದ ಹಾಗಾಯಿತು. ಇರುವ ಒಂದೇ ವ್ಯತ್ಯಾಸವೆಂದರೆ ಹಣದ ಬೇಡಿಕೆ ಪತ್ರವನ್ನು ಮಂಡಿಸುವ ಹಕ್ಕಿರುವುದು ಕೆಳಮನೆಗೆ ಮಾತ್ರ ಎಂದ ಹಾಗಾಯಿತು. ಬೇರೆ ವಿಷಯಗಳಲ್ಲಿ ಎರಡೂ ಮನೆಗಳು ಸಮಾನ ಅಧಿಕಾರವನ್ನು ಹೊಂದಿವೆ ಅಲ್ಲವೆ?

---

* ಸಂಯುಕ್ತ ರಾಜ್ಯಾಂಗ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿಯ ನಡಾವಳಿಗಳು: ಸಂಪುಟ ೧, ಪುಟ ೭೦೫

ಸರ್ ತೇಜ್ ಬಹದ್ದೂರ್ ಸಪ್ರು: ನಾನು ಹೇಳಿದ್ದರ ಒಟ್ಟು ತಾತ್ಪರ್ಯ ಅದು.

* ಮಿಸ್ಟರ್ ಜಫ್ರುಲ್ಲಾ ಖಾನ್: ನನ್ನ ನಿವೇದನೆ ಇಷ್ಟು. ನೀವು ಇರಬೇಕೆನ್ನುವ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ಪರಸ್ಪರ ಸಂವಾದಿಯಾದ ಶಕ್ತಿಗಳು ಅಲ್ಲಿರುತ್ತವೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲಿಯವರೆಗೂ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಹೊಂದಿಕೆಯಾಗಬೇಕಾದರೆ, ಬಹುಮತ ಸರಳವಾದ ಬಹುಮತವಾಗಿರಬಾರದು ಅಥವಾ ಎರಡು ಸದನಗಳ ಒಟ್ಟು ಸಂಖ್ಯೆಯ ಸಂಪೂರ್ಣ ಬಹುಮತವೂ ಆಗಬಾರದು. ಆದರೆ ಅದಕ್ಕಿಂತ ಹೆಚ್ಚಿನದಾಗಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಯಾವುದಾದರೊಂದು ಸದನ ಪ್ರತ್ಯೇಕವಾಗಿ ಸೇರಿ ಸರಳ ಬಹುಮತ ದಿಂದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಮಿಸ್ಟರ್ ಜಫ್ರುಲ್ಲಾ ಖಾನರ ಒಪ್ಪಿಗೆ ಇದೆಯೆ ಅಥವಾ ಅಂತಹ ಸಂದರ್ಭದಲ್ಲಿ ಹಾಜರಿರುವವರ ಬಹುಮತವೇ ಬೇಕು ಅನ್ನುತ್ತಾರಾ?

ಮಿ. ಜಫ್ರುಲ್ಲಾ ಖಾನ್: ಒಂದು ಸರಳ ಬಹುಮತ ಸಾಕು.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ ಆ ಎರಡು ಸದನಗಳೂ ಒಟ್ಟಿಗೆ ಸೇರಿದಾಗ, ಸರಳ ಬಹುಮತದಿಂದ ಪ್ರಶ್ನೆಗಳನ್ನು ಇತ್ಯರ್ಥ ಮಾಡಬಾರದೇಕೆ?

ಸರ್ ಅಹಮ್ಮದ್ ಶಫಿ: ಏಕೆಂದರೆ ಆ ಎರಡೂ ಸದನಗಳಲ್ಲಿ ಅಭಿಪ್ರಾಯ ವ್ಯತ್ಯಾಸ ಇರುತ್ತದೆ.

ಮಿ. ಜಫ್ರುಲ್ಲಾ ಖಾನ್: ಅನೇಕ ಸಾರಿ ಸದಸ್ಯರಿಗೆ ಬೇರೆ ಸದಸ್ಯರ ದೃಷ್ಟಿಕೋನಗಳು ಅರ್ಥವಾಗು ವುದಿಲ್ಲ. ಅದಕ್ಕೆ ಒಂದು ಕಾರಣ, ಎರಡು ಸದನಗಳ ಲಕ್ಷಣಗಳು ಬೇರೆಬೇರೆಯಾಗಿರುತ್ತವೆ.

* ಸರ್ದಾರ್ ಉಜ್ವಲ್ ಸಿಂಗ್: ಸಂಬಂಧಿಸಿದ ವಿಷಯಗಳ ಬಗ್ಗೆ ಕೆಲವು ಸಂಯುಕ್ತ ರಾಷ್ಟ್ರಗಳ ಉದಾಹರಣೆಗಳನ್ನು ನಿಮ್ಮ ಮುಂದಿಡುತ್ತೇನೆ. ಬ್ರಿಟಿಷ್ ಕಾಮನ್ವೆಲ್ತ್‌ನ ಸದಸ್ಯತ್ವವನ್ನು ಹೊಂದಿರುವ ಕೆನಡಾದ ರಾಜ್ಯಾಂಗವನ್ನು ಮೊದಲು ಗಮನಿಸೋಣ. ಸ್ವಾಮಿ, ಈಗಾಗಲೇ ಅನೇಕರು ಇದನ್ನು ಗಮನಕ್ಕೆ ತಂದಿರುವ ಹಾಗೆ ಅಲ್ಲಿನ ೫೩ನೆ ವಿಧಿಯಲ್ಲಿ ಹೀಗೆ ಹೇಳಲಾಗಿದೆ:

> "ಸಾರ್ವಜನಿಕ ಆದಾಯದ ಭಾಗವನ್ನು ಸ್ವಾಧೀನಪಡಿಸಿಕೊಳ್ಳುವ, ಯಾವುದೇ ಮಸೂದೆಯಾಗಲಿ ಅಥವಾ ತೆರಿಗೆ ಅಥವಾ ಸುಂಕವನ್ನು ವಿಧಿಸುವುದೇ ಇರಲಿ, ಅದನ್ನು ಮೊದಲು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಬೇಕು."

ಕೆನಡಾದಲ್ಲಿ ಎರಡೂ ಸದನಗಳ ಅಧಿಕಾರವ್ಯಾಪ್ತಿಯನ್ನು ಸ್ಪಷ್ಟವಾಗಿ ವಿವರಿಸಿಲ್ಲ. ಇದಕ್ಕೆ ಕಾರಣ ವೇನೆಂದರೆ ೧೮ನೆಯ ವಿಧಿಯ ಪ್ರಕಾರ ಕೆನಡಾ ದೇಶವು ಬ್ರಿಟಿಷ್ ಮಾದರಿಯನ್ನು ಅನುಸರಿಸಬೇಕೆಂದು ತೀರ್ಮಾನವಾಗಿದೆ. ಅದರ ಪ್ರಕಾರ:

> "ಹಕ್ಕುಗಳು ರಕ್ಷಣೆಗಳು ಮತ್ತು ಹೊಂದುವ, ಅನುಭವಿಸುವ ಮತ್ತು ಚಲಾಯಿಸುವ ಅಧಿಕಾರಗಳು..."

---

* ಸಂಯುಕ್ತ ರಾಜ್ಯ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿಯ ನಡಾವಳಿಗಳು, ಸಂಪುಟ ೧, ಪುಟ ೨೪೨.

ಡಾ. ಬಿ. ಆರ್. ಅಂಬೇಡ್ಕರ್: ಅದು ಇಲ್ಲಿ ಪ್ರಸ್ತುತವಲ್ಲ; ಅದು ಸದನದೊಳಗಿದ್ದಾಗ ಸಿಗುವ ಹಕ್ಕನ್ನು ಕುರಿತದ್ದು.

ಸರ್ದಾರ್ ಉಜ್ವಲ್ ಸಿಂಗ್: ಕ್ಷಮಿಸಬೇಕು.

"ಹಕ್ಕುಗಳು, ರಕ್ಷಣೆಗಳು ಮತ್ತು ಶಾಸನಸಭೆ (ಸೆನೆಟ್) ಮತ್ತು ಹೌಸ್ ಆಫ್ ಕಾಮನ್ಸ್ ಸಭೆಗಳು ಹೊಂದುವ, ಅನುಭವಿಸುವ ಮತ್ತು ಚಲಾಯಿಸುವ ಅಧಿಕಾರಗಳು..." ಎಂದರೆ ಕೇವಲ ಹೌಸ್ ಆಫ್ ಕಾಮನ್ಸ್ ಸದಸ್ಯರಿಗೆ ಮಾತ್ರ ಅನ್ವಯಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ ಸ್ವಾಮಿ. ನೀವು ಪ್ರಸ್ತಾವನಾ ಭಾಗವನ್ನು ಕುರಿತು ಹೇಳುತ್ತಿದ್ದೀರ, ಕೆನಡಾದ ಸಂವಿಧಾನ ಏನು ಹೇಳುತ್ತಿದೆಯೆಂದರೆ, ಕೆನಡಾದ ಸಂವಿಧಾನ ಯುನೈಟೆಡ್ ಕಿಂಗ್‌ಡಮ್ಮಿನ ಸಂವಿಧಾನದ ಹಾಗಿರಬೇಕು ಎಂದು ಹೇಳುತ್ತಿದೆ. ಅದನ್ನು ನೋಡಿದಾಗ, ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್ ನಡುವಿನ ಸಂಬಂಧ ಕೆನಡಾದ ಆಡಳಿತದ ಮೂಲತತ್ವವಾಗಿದೆ. ಆದರೆ, ಕೆನಡಾದ ಹೌಸ್ ಆಫ್ ಕಾಮನ್ಸ್ ಹಕ್ಕುಗಳಿಗೆ ಅದರಿಂದ ಯಾವ ಬಾಧೆಯೂ ಇಲ್ಲ.

* ಡಾ. ಬಿ. ಆರ್. ಅಂಬೇಡ್ಕರ್: ಇಲ್ಲಿಯವರೆಗೂ ಅಭಿವ್ಯಕ್ತವಾದ ವಿಚಾರಗಳನ್ನು ನೋಡಿದರೆ, ಅವುಗಳಲ್ಲಿ ಸಾಮಾನ್ಯವಾದ ಒಂದು ಅಂಶ ಎದ್ದು ಕಾಣುತ್ತದೆ; ಅದೇನೆಂದರೆ ಭಾವಿ ಭಾರತದ ಸಂವಿಧಾನದಲ್ಲಿ ಎರಡೂ ಸದನಗಳ ಸಂಬಂಧವನ್ನು ವ್ಯವಸ್ಥಿತಗೊಳಿಸಬೇಕಾದರೆ ಹಣಕಾಸಿನ ಮಸೂದೆಯ ಮಂಡನೆ ಮತ್ತು ಮತ ನೀಡುವ ಹಕ್ಕಿನಂತಹ ಸಣ್ಣಪುಟ್ಟ ವಿಷಯಗಳನ್ನು ಬಿಟ್ಟರೆ, ಮಿಕ್ಕ ವಿಷಯದಲ್ಲಿ ಮಾನ್ಯತೆಯ ಸಮಾನತೆ ಮತ್ತು ಅಧಿಕಾರದ ಸಮಾನತೆ ಇರಬೇಕಾಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು, ಇಲ್ಲಿರುವ ಒಟ್ಟು ಅಭಿಪ್ರಾಯವೆಂದರೆ ಎರಡು ಸದನಗಳಿಗೂ ಸಮಾನವಾದ ಸ್ಥಾನವಿರಬೇಕು ಎನ್ನುವುದು.

ಈಗ ತುಂಬ ವಿನಯದಿಂದ ಮತ್ತು ನನಗಿಂತ ಮುಂಚೆ ಮಾತಾಡಿದ ಎಲ್ಲ ಮಹನೀಯರಿಗೆ ಗೌರವ ಪೂರ್ವಕವಾಗಿ ನಾನು ಅವರ ಅಭಿಪ್ರಾಯಗಳನ್ನು ಒಪ್ಪುವುದಿಲ್ಲ ಎಂದು ಹೇಳಬಯಸುತ್ತೇನೆ. ನನಗೂ ಮತ್ತು ಅವರಿಗೂ ಅಭಿಪ್ರಾಯ ವ್ಯತ್ಯಾಸಕ್ಕೆ ಕಾರಣ, ನಾವು ಎರಡನೆಯ ಸದನದ (ಸೆಕೆಂಡ್ ಛೇಂಬರ್) ಕಾರ್ಯಕಲಾಪ ಮತ್ತು ಉದ್ದೇಶಗಳ ಬಗ್ಗೆ ಸಂಪೂರ್ಣವಾಗಿ ಭಿನ್ನವಾದ ಅಭಿಪ್ರಾಯಗಳನ್ನು ಹೊಂದಿದ್ದೇವೆ. ನಾನು ಅವರನ್ನು ಅರ್ಥ ಮಾಡಿಕೊಂಡಿರುವುದು ಸರಿಯಾಗಿದ್ದರೆ, ನಿನ್ನೆ ದಿನ ಕೆಲವು ಮಹನೀಯರು ನಮ್ಮ ಶಾಸನಸಭೆ ಹೇಗಿರಬೇಕೆಂದರೆ, ಹಳೆಯ ಮಾತಿನಲ್ಲಿ ಹೇಳುವುದಾದರೆ, ಎರಡು ಪ್ರತ್ಯೇಕ ವರ್ಗಗಳಾಗಿರಬೇಕು ಅನ್ನುವ ಹಾಗೆ, ಎರಡೂ ಸದನಗಳು ಸಹ–ಸಮಾನ ಅಧಿಕಾರಗಳನ್ನು ಪಡೆದಿರಬೇಕೆಂದು ವಾದಿಸಿದರು. ಕೆಳಮನೆಯ ಸದಸ್ಯರು ಮೇಲ್ಮನೆಯ ಸದಸ್ಯರಿಗಿಂತ ಬೇರೆ ವರ್ಗಗಳಿಗೇ ಸೇರಿದವರಾಗಿರಬೇಕಾದರೆ, ಮೇಲ್ಮನೆಯವರು ಜನಪ್ರಿಯ ಸದನದವರು ಪ್ರತಿನಿಧಿಸುವ ವರ್ಗಗಳಿಗೆ ಸೇರದೇ ಇದ್ದವರಾದರೆ, ನಿನ್ನೆ ಹೇಳಿದ ಅಭಿಪ್ರಾಯಗಳ ಪರವಾಗಿ ಏನಾದರೂ ಹೇಳಬಹುದಾಗಿತ್ತು. ಆದರೆ, ನಮ್ಮ ಶಾಸನಸಭೆ ರಾಜ್ಯದ ಎರಡು ಪ್ರತ್ಯೇಕ ವರ್ಗದವರಿಂದ ತುಂಬಿರಬೇಕು ಎನ್ನುವುದಾದರೆ, ನಾನಂತೂ ಈ ಎರಡು ಸದನಗಳ ಶಾಸಕಾಂಗಕ್ಕೆ ಒಪ್ಪಿಗೆ ಕೊಡುವುದಿಲ್ಲ; ಜನಸಮುದಾಯದ ಪರವಾಗಿ ಹೇಳಬೇಕಾದರೆ– ಈ ವಿಷಯದಲ್ಲಿ ನಾನು ಮಹಾತ್ಮ ಗಾಂಧಿಯವರ ವಿರೋಧಿ– ಜನತೆಯ ಪರವಾಗಿ ಹೇಳುವುದಾದರೆ,

---

* ಸಂಯುಕ್ತ ರಾಜ್ಯ ರಚನಾ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿ ನಡಾವಳಿಗಳು, ಸಂಪುಟ ೧, ಪುಟ ೨೬೬–೭೦

ಅಂತಹ ಶಾಸಕಾಂಗವನ್ನು ನಾನು ಒಪ್ಪುವುದಿಲ್ಲ; ಹಾಗೆ ಒಪ್ಪಿಕೊಂಡು ಅವರ ಭವಿಷ್ಯತ್ವವನ್ನು, ಆ ರೀತಿಯ ಸರ್ಕಾರಕ್ಕೆ ಲಾರ್ಡ್ ಆಸ್ಕಿತ್ತರ ಮಾತಿಲ್ಲಿ ಹೇಳುವುದಾದರೆ ಮೋಸದ ವ್ಯವಸ್ಥೆಗೆ ಒಪ್ಪಿಸಲಿಕ್ಕೆ ನಾನು ತಯಾರಾಗಿಲ್ಲ.

ನಾನು ತಪ್ಪಾಗಿ ತಿಳಿದಿಲ್ಲವಾದರೆ, ನಿಜಸ್ಥಿತಿ ಏನೆಂದರೆ, ನಮ್ಮ ಶಾಸಕಾಂಗದ ಎರಡು ಸದನಗಳು ಎರಡು ಪ್ರತ್ಯೇಕ ವರ್ಗಗಳ ಪ್ರತ್ಯೇಕ ಪ್ರಾತಿನಿಧ್ಯದ ತತ್ವದ ಮೇಲೆ ರೂಪುಗೊಳ್ಳುತ್ತಿಲ್ಲ. ನಾನು ಅರ್ಥ ಮಾಡಿಕೊಂಡಿರುವುದು ಸರಿಯಾಗಿದ್ದರೆ, ಮುಂದೆ ಬರುವ ನಮ್ಮ ಶಾಸಕಾಂಗದ ರಚನೆಯಲ್ಲಿ ಕೆಳಮನೆ ಪ್ರಜೆಗಳ ಪ್ರತಿನಿಧಿ ಸಭೆಯಾಗಿರುತ್ತದೆ. ಪ್ರತಿಯೊಂದು ವರ್ಗವನ್ನು ಪ್ರತಿನಿಧಿಸುತ್ತದೆ. ಮತ್ತು ಸಾರ್ವಜನಿಕ ಅಭಿಪ್ರಾಯದ ಪ್ರತಿಯೊಂದು ಮಗ್ಗುಲನ್ನೂ ಪ್ರತಿನಿಧಿಸುತ್ತದೆ. ಹಾಗಿದ್ದಾಗ, ಅದಕ್ಕೆ ಪ್ರತಿಸ್ಪರ್ಧಿಯೆಂದು ತಿಳಿದುಕೊಳ್ಳುವ, ಅದಕ್ಕೆ ಸರಿಸಮಾನ ಎಂದುಕೊಳ್ಳುವ ಎರಡನೆಯ ಸದನವನ್ನು ನಾವು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಅದು ನನ್ನ ಅಭಿಪ್ರಾಯವಾಗಿರುವುದರಿಂದ, ಲಾರ್ಡ್ ಛಾನ್ಸಲರ್ ಅವರೆ, ವಿಭಾಗ ನಂ.೩ರ ಉಪವಿಭಾಗ(ii)ರಲ್ಲಿ ಎತ್ತುವ ಪ್ರಶ್ನೆಯ ಬಗ್ಗೆ ನನ್ನ ಉತ್ತರವೇನೆಂದರೆ, ಕೊನೆಯ ಮಾತು ಕೆಳಮನೆಯದೇ ಆಗಬೇಕು.

ಅಧ್ಯಕ್ಷರು: ಡಾ. ಬಿ. ಆರ್. ಅಂಬೇಡ್ಕರ್ ಅವರೆ, ನೀವು ಅದನ್ನು ಸಂವಿಧಾನದಲ್ಲಿ ಸೇರಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಹಾಗೆ ಮಾಡಬಹುದು ಅನ್ನಿಸುತ್ತೆ.

ಅಧ್ಯಕ್ಷರು: ಹಾಗೆ ಮಾಡಬಹುದು ಅಂದಿರಿ; ಹಾಗೆ ಮಾಡಿದರೆ ನೀವು ಒಪ್ಪುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ತಾವು ದಯವಿಟ್ಟು ನನಗೆ ಸಮಯ ಕೊಡುವುದಾದರೆ ಆ ವಿಷಯದ ಬಗ್ಗೆ ಆಮೇಲೆ ಮಾತಾಡುತ್ತೇನೆ. ಅದರಲ್ಲೂ ಹಣಕಾಸಿನ ಮಸೂದೆಯ ವಿಷಯದಲ್ಲಂತೂ ಹಾಗಾಗಲೇಬೇಕು. ನನ್ನ ಅಭಿಪ್ರಾಯದಲ್ಲಿ ಎರಡನೆ ಮನೆಯವರಿಗೆ, ಕೆಳಮನೆಯವರು ತೂಗಿ ನೋಡಬೇಕಾದ ಸೂಚನೆಗಳನ್ನು ಕೊಡುವುದಕ್ಕೆ ಅಧಿಕಾರವಿರಬೇಕು. ಕೆಳಮನೆಯವರು ಅದನ್ನು ಬೇಕಾದರೆ ಒಪ್ಪಿಕೊಳ್ಳಬಹುದು. ಆದರೆ, ಎರಡನೆ ಮನೆಗೆ ಹಣಕಾಸಿನ ಮಸೂದೆಯನ್ನು ಮಂಡಿಸುವ ಯಾವ ಅಧಿಕಾರವು ಇರಕೂಡದು. ಅಷ್ಟೇ ಅಲ್ಲ, ಅದನ್ನು ಮಾರ್ಪಡಿಸುವ ಅಧಿಕಾರವೂ ಇರಕೂಡದು. ಒಂದುವೇಳೆ ಮೇಲ್ಮನೆ ತಿರಸ್ಕರಿಸಿದರೂ ಕೂಡ, ಕೆಳಮನೆಯವರು ಶಿಫಾರಸು ಮಾಡಿದ ಹಣಕಾಸು ಮಸೂದೆ ಕಾನೂನು ಆಗಲೇಬೇಕು.

ನಾನು ಈಗ ಪ್ರಸ್ತಾಪಿಸಿದ ವಿಷಯ ಮೂಲಭೂತವಾದದ್ದು ಎಂದು ನನಗೆ ಹೊಳೆಯುತ್ತಿದೆ– ಹಾಗೆ ನೋಡಿದರೆ ಅದನ್ನು ಒಂದು ಕ್ರಾಂತಿಕಾರಕ ವಿಷಯವೆಂದೂ ಕರೆಯಬಹುದು. ಏಕೆಂದರೆ, ಲಾರ್ಡ್ ಛಾನ್ಸಲರ್ ಅವರೆ, ನಿನ್ನೆ ದಿನ ಬಹುಶ್ರುತರೂ ನಮ್ಮ ಸಹೋದ್ಯೋಗಿಗಳೂ ಆದ ಸರ್ ತೇಜ್ ಬಹದೂರ್ ಸಪ್ರು ಮತ್ತು ಸರ್ ಮಹಮ್ಮದ್ ಶಫಿಯವರು ಈ ವಿಷಯದ ಬಗ್ಗೆ ಮಾತಾಡಿದಾಗ, ಅವರು ಕೆಲವು ಅತ್ಯಾಧುನಿಕ ಸಂವಿಧಾನಗಳನ್ನು ಉಲ್ಲೇಖಿಸಲಿಲ್ಲ. ಅವರು ಸಾಕಷ್ಟು ಹಳೆಯದಾದ ಕೆನಡಾ, ಆಸ್ಟ್ರೇಲಿಯಾ ಅಥವಾ ದಕ್ಷಿಣ ಆಫ್ರಿಕಾದ ಸಂವಿಧಾನಗಳಿಂದಲೇ ಉದಾಹರಣೆಗಳನ್ನು ಕೊಡುವುದಕ್ಕೆ ತಮ್ಮನ್ನು ಮಿತಿಗೊಳಿಸಿಕೊಂಡದ್ದು ನನಗೆ ಆಶ್ಚರ್ಯವನ್ನುಂಟುಮಾಡಿತು. ಕೆನಡಾದ ಸಂವಿಧಾನ ರಚನೆಯಾದದ್ದು ೧೮೬೭ರಲ್ಲಿ. ಆಸ್ಟ್ರೇಲಿಯಾದ್ದು ೧೯೦೧ರಲ್ಲಿ ಮತ್ತು ದಕ್ಷಿಣ ಆಫ್ರಿಕಾದ್ದು ೧೯೦೯ರಲ್ಲಿ. ಅವರೇಕೆ ಪ್ರಜಾ ಪ್ರತಿನಿಧಿ ಸಭೆಗೆ (ಹೌಸ್ ಆಫ್ ಕಾಮನ್ಸ್) ಮತ್ತು ಶ್ರೀಮಂತರ ಸಭೆಗೆ (ಹೌಸ್ ಆಫ್ ಲಾರ್ಡ್ಸ್) ಇರುವ ಸಂಬಂಧಗಳನ್ನು ಚರ್ಚಿಸಲಿಲ್ಲ ಎಂದು ನನಗೆ ಗೊತ್ತಾಗಲಿಲ್ಲ. ಉದಾಹರಣೆಗೆ, ಐರ್ಲೆಂಡಿನ ಎರಡು

ಸದನಗಳ ನಡುವಿನ ಸಂಬಂಧಗಳನ್ನು ಅವರೇಕೆ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲವೋ ಹೇಳಲಾರೆ; ಅಥವಾ ಬ್ರೈಸ್ ಸಮಿತಿಯವರ ಸೂಚನೆಗಳನ್ನಾದರೂ ಅವರೇಕೆ ಚರ್ಚಿಸಲಿಲ್ಲವೋ ಗೊತ್ತಿಲ್ಲ. ಅವರು ಹಾಗೆ ಮಾಡಿದ್ದರೆ, ನನ್ನ ಸೂಚನೆಗಳನ್ನು ಕಂಡು ಈ ಸಮಿತಿಯ ಸದಸ್ಯರು ಚಕಿತಗೊಳ್ಳುವ ಹಾಗೆ ಆಗುವ ಪರಿಸ್ಥಿತಿ ಒದಗುತ್ತಿರಲಿಲ್ಲ; ಆದರೆ ಅವರು ಹಾಗೆ ಮಾಡಲಿಲ್ಲವಾದ ಕಾರಣದಿಂದ, ನನ್ನ ಸೂಚನೆಗೆ ಹಿಂದಿನ ನಿದರ್ಶನಗಳನ್ನು ಕೊಟ್ಟು ನಾನು ಅದನ್ನು ಬೆಂಬಲಿಸುತ್ತೇನೆ. ನನ್ನ ಸೂಚನೆಗೂ ೧೯೧೧ ಇಸವಿಯ ಸಂಸದೀಯ ಕಾಯಿದೆಯಲ್ಲಿರುವುದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಹಣಕಾಸಿನ ಮಸೂದೆಗೆ ಸಂಬಂಧಿಸಿದ ಹಾಗೆ ಅಲ್ಲಿ ಹೌಸ್ ಆಫ್ ಲಾರ್ಡ್ಸ್ ಅದನ್ನು ಗಮನಿಸಬಹುದು. ಆದರೆ, ಹೌಸ್ ಆಫ್ ಕಾಮನ್ಸ್ ಪರಮಾಧಿಕಾರವುಳ್ಳದ್ದೆಂದು ಹೇಳಲಾಗಿದೆ. ಆ ಕಾಯಿದೆಯ ಪ್ರಕಾರ ಒಂದು ಹಣಕಾಸಿನ ಮಸೂದೆಯನ್ನು ಹೌಸ್ ಆಫ್ ಕಾಮನ್ಸ್ ಗಮನಿಸಿ ಒಪ್ಪಿಕೊಂಡಾಗ, ಹೌಸ್ ಆಫ್ ಲಾರ್ಡ್ಸ್ ಸಭೆ ಒಪ್ಪಲಿ, ಬಿಡಲಿ ದೊರೆಗಳು ಒಪ್ಪಿಬಿಟ್ಟರೆ ಅದು ಶಾಸನವಾಗುತ್ತದೆ. ಸ್ವಾಮಿ, ಹಣದ ಮಸೂದೆಯ ಬಗ್ಗೆ ಐರ್ಲೆಂಡಿನ ಸಂವಿಧಾನದಲ್ಲಿ ಎರಡು ಮನೆಗಳಿಗೂ, ಇದೇ ರೀತಿಯ ಸಂಬಂಧವನ್ನು ಹೇಳಲಾಗಿದೆ. ಐರ್ಲೆಂಡಿನ ಸಂವಿಧಾನದ ೩೫ನೆಯ ವಿಧಿ ಹೀಗೆ ಹೇಳುತ್ತದೆ:

> "ಮುಂದೆ ವಿವರಿಸುವ ಹಣಕಾಸಿನ ಮಸೂದೆಯ ಬಗ್ಗೆ ಡೇಲ್ ಐರಿಯಾಸ್‌ಗೆ ಸಿಯನಾಡ್ ಐರಿಯಾನನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವ ಶಾಸನದ ಅಧಿಕಾರವಿದೆ"

> ಆಮೇಲೆ ೩೮ನೆ ವಿಧಿ ಹೀಗೆ ಹೇಳುತ್ತದೆ:

> "ಡೇಲ್ ಐರಿಯಾನಲ್ಲಿ ಅಂಗೀಕೃತವಾದ ಪ್ರತಿಯೊಂದು ಮಸೂದೆಯೂ ಸಿಯನಾಡ್ ಐರಿಯಾನ್‌ಗೆ ಹೋಗಲೇಬೇಕು. ಅದು ಹಣದ ಮಸೂದೆಯಾಗದಿದ್ದಲ್ಲಿ ಸಿಯನಾಡ್ ಐರಿಯಾನದಲ್ಲಿ ತಿದ್ದುಪಡಿಯಾಗಬಹುದು" ಇತ್ಯಾದಿ.
> "ಡೆಲ್ ಐರಿಯಾನಲ್ಲಿ ಅಂಗೀಕೃತವಾದ ಮಸೂದೆ..." ಎನ್ನುವಲ್ಲಿಂದ ಆ ವಿಧಿಯ ಉಳಿದ ಭಾಗ ಮುಂದುವರಿಯುತ್ತದೆ.

ಇದಾದ ಮೇಲೆ ನನ್ನ ಸೂಚನೆಗೆ ಆಧಾರವಾಗಿ ನಾನು ಉಲ್ಲೇಖಿಸುವ ಇನ್ನೊಂದು ಪ್ರಮಾಣ ವೆಂದರೆ ಬ್ರೈಸ್ ಸಮಿತಿಯ ಶಿಫಾರಸುಗಳು. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಇದು ಅತ್ಯಂತ ಪ್ರಾತಿ ನಿಧಿಕ ಸಮಿತಿ– ಈ ಸಮಿತಿಯ ಸದಸ್ಯರು ಹೌಸ್ ಆಫ್ ಕಾಮನ್ಸಿನಿಂದಲೂ ಮತ್ತು ಹೌಸ್ ಆಫ್ ಲಾರ್ಡ್ಸ್‌ನಿಂದಲೂ ಬಂದವರು ಮತ್ತು ಈ ಸಮಿತಿಯ ಏಕಾಭಿಪ್ರಾಯವೆಂದರೆ, ಕಡೆಯ ಪಕ್ಷ ಹಣಕಾಸಿನ ಮಸೂದೆಯ ವಿಷಯದಲ್ಲಿ ಪರಿಷತ್ತಿನ ೧೯೧೧ನೆಯ ಇಸವಿಯ ವಿಧಿಯಲ್ಲಿ ನಮುದಿತವಾಗಿರುವ ಅಂಶಗಳು ಸರಿಯಾದವು, ತಕ್ಕವು ಎನ್ನುವುದು.

ಆಮೇಲೆ, ಸ್ವಾಮಿ, ನನ್ನ ಸೂಚನೆಗೆ ಬೆಂಬಲವಾಗಿ ಮೂರನೆಯ ಇನ್ನೊಂದು ಪ್ರಮಾಣವನ್ನು ಉಲ್ಲೇಖಿಸುತ್ತೇನೆ. ಬ್ರೈಸ್ ಸಮಿತಿಯ ವರದಿಯನ್ನು ಮತ್ತು ಶಿಫಾರಸುಗಳನ್ನು ಮೂಲೆಗೆ ಹಾಕಿರಲಿಲ್ಲ. ೧೯೨೨ನೆ ಇಸವಿಯಲ್ಲಿ ಸಮ್ಮಿಳಿತ ಸರ್ಕಾರ ಅದನ್ನು ಪರಿಶೀಲಿಸಿತು. ಬ್ರೈಸ್ ಸಮಿತಿಯ ವರದಿಯ ಬಗ್ಗೆ

ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಠರಾವುಗಳನ್ನು ಮಂಡಿಸಲಾಯಿತು. (ಲಾರ್ಡ್ ಪೀಲ್ ಅವರು ಇಲ್ಲಿದ್ದಾರೆನ್ನುವುದು ನನಗೆ ಸಂತೋಷದ ವಿಷಯವಾಗಿದೆ). ಈ ಠರಾವುಗಳನ್ನು ೧೯೨೨ನೆ ಇಸವಿ ಜುಲೈ ತಿಂಗಳ ೧೧ನೆ ತಾರೀಖು ಸಂಸತ್ತಿನ ಮುಂದಿಡಲಾಯಿತು. ನಾಲ್ಕನೆಯ ಠರಾವು ಹೀಗಿದೆ:

> "ಹೌಸ್ ಆಫ್ ಲಾರ್ಡ್ಸ್ ಹಣಕಾಸಿನ ಮಸೂದೆಯನ್ನು ತಿದ್ದಕೂಡದು ಅಥವಾ ತಿರಸ್ಕರಿಸಬಾರದು. ಒಂದು ಮಸೂದೆ ಹಣಕಾಸಿನ ಮಸೂದೆಯೇ ಅಥವಾ ಭಾಗಶಃ ಹಣಕಾಸಿನ ಮಸೂದೆ ಮತ್ತು ಭಾಗಶಃ ಹಣಕಾಸಿನ ಮಸೂದೆಯಲ್ಲದಿರುವುದನ್ನು ತೀರ್ಮಾನಿಸಲಿಕ್ಕೆ ಅದನ್ನು ಎರಡೂ ಸದನಗಳಿಂದ ನೇಮಿಸಲ್ಪಟ್ಟ ಒಂದು ಸಮಿತಿಯ ಮುಂದೆ ಇಡಬೇಕು. ಅದರ ತೀರ್ಮಾನವೇ ಅಂತಿಮ ತೀರ್ಮಾನವಾಗಿರತಕ್ಕದ್ದು."

ಹಣಕಾಸಿನ ಮಸೂದೆ ಹೌಸ್ ಆಫ್ ಕಾಮನ್ಸ್ ಅಧಿಕಾರಕ್ಕೆ ಮೀಸಲಾಗಿರಬೇಕೆಂದು ಬ್ರೈಸ್ ಸಮಿತಿಯ ಶಿಫಾರಸ್ಸಿನ ತತ್ವ ಈ ಠರಾವುಗಳು ಒತ್ತುಕೊಟ್ಟು ಅವನ್ನು ದೃಢೀಕರಿಸಿದವು. ಆಗ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ವೈಕೌಂಟ್ ಪೀಲ್ ಅವರ ಮಾತುಗಳನ್ನು ನಾನಿಲ್ಲಿ ಉದ್ಧರಿಸುತ್ತೇನೆ. ಈ ಠರಾವುಗಳನ್ನು ಮಂಡಿಸುವಾಗ ಅವರು, ಇವು ತತ್ವಗಳನ್ನು ಮಾತ್ರ ಮಂಡಿಸುವ ಚೌಕಟ್ಟೆಂದು ಹೇಳಿದರು. ತಮ್ಮ ಮಾತನ್ನು ಮುಂದುವರಿಸುತ್ತಿದ್ದಾಗ ಅವರು ಎರಡನೆ ಮನೆಗೆ ಸಮಾನ ಅಧಿಕಾರ ಇರಕೂಡದು, ಅದು ಹೌಸ್ ಆಫ್ ಕಾಮನ್ಸ್ ಸ್ಪರ್ಧಿಯಾಗಬಾರದು. ಸರ್ಕಾರವನ್ನು ತೆಗೆದುಹಾಕುವ ಅಧಿಕಾರ ಅದಕ್ಕೆ ಇರಕೂಡದು ಮತ್ತು ಎರಡೂ ಮನೆಗಳಿಗೆ ಸಮಾನವಾಗಿ ಕಾರ್ಯಾಂಗವನ್ನು ಜವಾಬ್ದಾರಿಯುಳ್ಳದ್ದಾಗಿ ಮಾಡಬಾರದು ಎಂದು ಹೇಳಿದರು.

ನನ್ನ ಸೂಚನೆಯ ಬಗ್ಗೆ ಸಾಕಷ್ಟು ಅಧಿಕಾರಯುತವಾದ ಆಧಾರಗಳನ್ನು ಕೊಟ್ಟಿದ್ದೇನೆಂದು ನನಗೆ ಅನ್ನಿಸುತ್ತೆ. ಈ ಸೂಚನೆಗಳನ್ನು ಈ ಸಮಿತಿಯ ಮುಂದೆ ಇಟ್ಟಿದ್ದೇನೆ.

ಲಾರ್ಡ್ ಪೀಲ್: ಅದು ಸಮ್ಮಿಳಿತ ಸರ್ಕಾರವಾಗಿತ್ತು ಎನ್ನುವುದನ್ನು ನಾನು ನಿಮ್ಮ ಗಮನಕ್ಕೆ ತರಬಹುದೆ?

ಡಾ. ಬಿ. ಆರ್. ಅಂಬೇಡ್ಕರ್: ಹೌದು ಅದು ಸಮ್ಮಿಶ್ರ ಸರ್ಕಾರವಾಗಿತ್ತು.

ಲಾರ್ಡ್ ಪೀಲ್: ಒಂದು ಸಮ್ಮಿಶ್ರ ಸರ್ಕಾರದಲ್ಲಿ ನಿಮಗೆ ಹೇಳಬೇಕು ಅನ್ನಿಸಿದ್ದನ್ನೆಲ್ಲ ಹೇಳುವುದಕ್ಕೆ ಆಗುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ತಾವು ತಮ್ಮ ಮನಸ್ಸಿನಲ್ಲಿ ಬೇಕು–ಬೇಡಗಳನ್ನು ಆಲೋಚಿಸಿರಬಹುದು– ಅದರ ಬಗ್ಗೆ ನಾನೇನೂ ಹೇಳಲಾರೆ– ಇರುವ ವಿಷಯ ಇಷ್ಟು. ಆ ಸಮ್ಮಿಶ್ರ ಸರ್ಕಾರವು ಒಂದು ಸರ್ಕಾರವಾಗಿತ್ತು. ಅದರಲ್ಲಿ ಒಂದಕ್ಕಿಂತ ಹೆಚ್ಚು ಪಕ್ಷಗಳು ಸೇರಿದ್ದವು. ಆದ್ದರಿಂದ ಈ ಸಮ್ಮಿಶ್ರ ಸರ್ಕಾರದ ಹೆಸರಿನಲ್ಲಿ ಕೊಟ್ಟ ಹೇಳಿಕೆ, ಒಂದು ಪಕ್ಷಕ್ಕಿಂತ ಹೆಚ್ಚು ಪಕ್ಷಗಳ ಬೆಂಬಲವನ್ನು ಪಡೆದಿತ್ತು. ಲಾರ್ಡ್ ಪೀಲ್ ಅವರ ಬೆಂಬಲವನ್ನೂ ಪಡೆದಿತ್ತು. ನಾನು ಸಾಕಷ್ಟು ಅಧಿಕಾರಯುತ ಪ್ರಮಾಣಗಳನ್ನು ಕೊಟ್ಟು, ಈ ಸಮಿತಿಯು ಮುಂದಿಡುತ್ತಿರುವ ಸೂಚನೆ ಕ್ರಾಂತಿಕಾರ ಸೂಚನೆಯಲ್ಲ ಎಂದು ಹೇಳಬಯಸುತ್ತೇನೆ.

ಸರ್ ತೇಜ್ ಬಹದ್ದೂರ್ ಸಪ್ರು: ಡಾ. ಅಂಬೇಡ್ಕರ್ ಅವರು ತಮ್ಮ ನಿಲುವಿನ ಸಮರ್ಥನೆಗಾಗಿ, ಯಾವುದಾದರೂ ಸಂಯುಕ್ತ ರಾಜ್ಯಾಂಗದ ಸಂವಿಧಾನವನ್ನು ಉಲ್ಲೇಖಿಸುತ್ತಾರೆಯೇ ಎಂದು ಕೇಳಬಹುದೆ? ಇಂಗ್ಲೆಂಡ್ ಒಂದು ಸಂಯುಕ್ತ ರಾಜ್ಯವಲ್ಲ ಮತ್ತು ಐರ್ಲೆಂಡ್ ಕೂಡ ಅಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ನಿಜ.

ಸರ್ ತೇಜ್ ಬಹದೂರ್ ಸಪ್ರು: ಬ್ರೈಸ್ ಸಮಿತಿಗೂ ಸಂಯುಕ್ತ ರಾಜ್ಯಕ್ಕೂ ಯಾವ ಸಂಬಂಧವೂ ಇರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಕೆಳಮನೆಯ ಸದಸ್ಯರು ಪ್ರತಿನಿಧಿಸದ ಬೇರೆ ಆಸಕ್ತಿಗಳನ್ನು ಮಾತ್ರ ಮೇಲ್ಮನೆಯ ಸದಸ್ಯರು ಪ್ರತಿನಿಧಿಸುವ ಹಾಗೆ ನಮ್ಮ ಸಂಯುಕ್ತ ರಾಜ್ಯದ ಸಂವಿಧಾನವಿದ್ದರೆ ನನ್ನ ಸೂಚನೆಗೆ ಆಸ್ಪದವಿದೆ ಎನ್ನುವುದೇ ನನ್ನ ಉತ್ತರವಾಗಿದೆ. ಯಾವ ರೀತಿಯ ಸರ್ಕಾರವಿರಬೇಕು, ಅದು ಏಕೀಕೃತ ವಾಗಿರಬೇಕೋ ಅಥವಾ ಸಂಯುಕ್ತವಾಗಿರಬೇಕೋ ಎನ್ನುವುದಕ್ಕೂ ಮತ್ತು ಇದಕ್ಕೂ ಯಾವ ಸಂಬಂಧವೂ ಇಲ್ಲ.

ಸರ್ ಪ್ರವಾಶ್ ಚಂದರ್ ಮಿತ್ತಲ್: ನನಗೆ ಒಂದು ಪ್ರಶ್ನೆಯನ್ನು ಕೇಳಬೇಕು ಅನ್ನಿಸುತ್ತೆ. ಹೌಸ್ ಆಫ್ ಲಾರ್ಡ್ಸ್ ವಂಶಪಾರಂಪರ್ಯ ಹಕ್ಕಿನಿಂದ ಕೂಡಿತ್ತು. ಆ ಹಂತದಲ್ಲಿ ಐರ್ಲೆಂಡಿನ ಮೇಲ್ಮನೆ ಕೂಡ ಅದೇ ರೀತಿ ಇರಲಿಲ್ಲವೆ.

ಡಾ. ಬಿ. ಆರ್. ಅಂಬೇಡ್ಕರ್: ಅದರ ಎಲ್ಲ ಘನತೆ ಸಂಪ್ರದಾಯಗಳು ಮತ್ತು ಹಕ್ಕುಗಳೊಂದಿಗೆ ಅತ್ಯಂತ ಪ್ರಾಚೀನವಾದ ಹೌಸ್ ಆಫ್ ಲಾರ್ಡ್ಸ್ ಕೂಡ ಈ ಕ್ರಾಂತಿಕಾರಕ ಬದಲಾವಣೆಗೆ ಒಪ್ಪಿಗೆ ಕೊಟ್ಟಿತ್ತು. ಹೌಸ್ ಆಫ್ ಲಾರ್ಡ್ಸಿಗೆ ಹೋಲಿಸಿದರೆ ಭಾರತದ ಸಂಸ್ಥಾನಗಳು ಎಂಥವು ಎನ್ನುವುದನ್ನು, ವಿನಯ ಪೂರ್ವಕವಾಗಿ ನಾನು ಕೇಳಬಹುದೆ?

ಹೆಚ್.ಹೆಚ್.ಬಿಕೇನೇರಿನ ಮಹಾರಾಜರು: ಬ್ರಿಟಿಷ್ ರಾಜ್ಯಕ್ಕೆ ಸಲ್ಲಬೇಕಾದ ಎಲ್ಲ ಗೌರವಗಳನ್ನು ಮನ್ನಿಸಿ ಹೇಳುವುದಾದರೆ, ಬ್ರಿಟನ್ನಿನ ಅಧೀನ ರಾಜ್ಯಗಳನ್ನೂ ಬಿಟ್ಟುಬಿಟ್ಟರೆ, ಇಲ್ಲಿ ಸಂಸ್ಥಾನಗಳಿಗೆ ಪರಮಾಧಿಕಾರ ಇರುತ್ತದೆ. ಆದರೆ, ಇಂಗ್ಲೆಂಡಿನ ಅತಿಮುಖ್ಯ ಶ್ರೀಮಂತರು ಮತ್ತು ಅವರ ಆಸ್ತಿಪಾಸ್ತಿಗಳಿಗೆ ಬೇರೆ ಲೆಕ್ಕಾಚಾರವಿರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಪರಮಾಧಿಕಾರ ಹೌಸ್ ಆಫ್ ಲಾರ್ಡ್ಸಿನ ಪ್ರಭಾವ ಮತ್ತು ಅಧಿಕಾರಕ್ಕೆ ಒಳಪಟ್ಟಿದೆ.

ಸರ್ ಅಹಮದ್ ಶಫಿ: ಹೌಸ್ ಆಫ್ ಲಾರ್ಡ್ಸಿನ ಹಕ್ಕುಗಳೇನು ಎಂದು ನಾನು ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಕೇಳಬಹುದೆ?

ಡಾ. ಬಿ. ಆರ್. ಅಂಬೇಡ್ಕರ್: ಈ ನಿಲುವನ್ನು ತಳೆದು ನಾನು ಮುಂದೆ ಹೇಳಬೇಕಾಗಿರುವ ವಿಷಯ ವೆಂದರೆ, ಸಂವಿಧಾನದಲ್ಲಿ ಹಣಕಾಸಿನ ಮಸೂದೆ ಅಂದರೆ ಏನು ಎನ್ನುವುದರ ವಿವರಣೆ ಇರಬೇಕು. ಈಗಾಗಲೇ ಸೂಚಿಸಿರುವ ಹಾಗೆ ಅದನ್ನು ಐರ್ಲೆಂಡಿನ ಸಂವಿಧಾನದಲ್ಲಿ ವಿವರಿಸಿರುವ ಹಾಗೆ ವಿವರಿಸಬಹುದು. ಅದು ೧೯೧೧ನೆ ಇಸವಿಯ ಸಂಸತ್ತಿನ ವಿಧಿಯಲ್ಲಿ ಹೇಳಿರುವುದಕ್ಕಿಂತ ಭಿನ್ನವಾಗಿಲ್ಲ.

ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳಬೇಕಾದ ಇನ್ನೊಂದು ವಿಷಯವೆಂದರೆ, ಮಸೂದೆಯನ್ನು ಮಂಡಿಸುವ ಸದಸ್ಯನಾದವನಿಗೆ ತಾನು ಮಂಡಿಸಿರುವುದು ಹಣಕಾಸಿನ ಮಸೂದೆಯೆಂದು ಘೋಷಿಸುವ ಹಕ್ಕಿರಬೇಕು. ಯಾವುದನ್ನು ಹಣಕಾಸಿನ ಮಸೂದೆಯೆಂದು ಹೇಳುತ್ತಿದ್ದಾರೊ ಅದು ಹಣಕಾಸಿನ ಮಸೂದೆ

ಹೌದೋ ಅಲ್ಲವೋ ಎನ್ನುವ ಚರ್ಚೆ ಇದ್ದರೆ, ಎರಡೂ ಸದನಗಳ ಸಮಿತಿಯೊಂದು ಅದರ ಬಗ್ಗೆ ತೀರ್ಮಾನವನ್ನು ಕೊಡಬೇಕು. ಆ ಸಮಿತಿಗೆ ಬರುವ ಪ್ರತಿನಿಧಿಗಳ ಸಂಖ್ಯೆ, ಆಯಾ ಸಮಿತಿಯ ಸಂಖ್ಯಾ ಬಲದ ಪ್ರಮಾಣದಲ್ಲಿರಬೇಕು. ಎಲ್ಲ ಪಕ್ಷಗಳ ಬಲಗಳಿಗೆ ಸರಿಪ್ರಮಾಣದಲ್ಲಿ ಪ್ರತಿನಿಧಿಗಳು ಆ ಸಮಿತಿಯಲ್ಲಿರಬೇಕು.

ಸರ್ ಮಾನೆಕ್ ಜಿ ದಾದಾಭಾಯ್: ಈಗ ಇರುವ ರೂಢಿಯನ್ನು ನೀವು ಬದಲಾಯಿಸಬೇಕು ಅನ್ನುತ್ತಿದ್ದೀರಿ.

ಡಾ. ಬಿ. ಆರ್. ಅಂಬೇಡ್ಕರ್: ಬಹುಮಟ್ಟಿಗೆ ನಿಜ.

ಮಿ. ಜಫ್ರುಲ್ಲಾ ಖಾನ್: ಈಗ ಚಾಲ್ತಿಯಲ್ಲಿರುವ ರೂಢಿ ಸಮಾಧಾನಕರವಾಗಿ ಇದ್ದಿದ್ದರೆ, ನಾವು ಇಲ್ಲಿರಬೇಕಾಗಿರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇನ್ನು ಮುಂದೆ ಹಣಕಾಸು ಮಸೂದೆಯಲ್ಲದ ಮಸೂದೆಗಳ ಬಗ್ಗೆ ಪ್ರಸ್ತಾಪಿಸಬೇಕೆಂದಿದ್ದೇನೆ. ಹಣಕಾಸು ಮಸೂದೆಗೆ ಅನ್ವಯಿಸುವ ತತ್ವಗಳನ್ನು ಎರಡು ಉದ್ದೇಶಗಳಿಗಾಗಿ ಮಾರ್ಪಡಿಸಲಿಕ್ಕೆ ನಾನು ಸಿದ್ಧವಾಗಿದ್ದೇನೆ. ಮೊದಲನೆಯದಾಗಿ ಕೆಳಮನೆಯಿಂದ ಕಳಿಸಿದ ಆರ್ಥಿಕೇತರ ಮಸೂದೆಗಳನ್ನು ಪರಿಷ್ಕರಿಸುವ ಮತ್ತು ಮಾರ್ಪಡಿಸುವ ಹಕ್ಕು ಎರಡನೆ ಮನೆಗೆ ಇರುತ್ತದೆ; ಆದರೆ ಆರ್ಥಿಕ ಸ್ವರೂಪದ ಯಾವುದೇ ತಿದ್ದುಪಡಿಗಳನ್ನು ಮಾಡಕೂಡದು ಎನ್ನುವ ಷರತ್ತೂ ಇರುತ್ತದೆ. ಎರಡನೆಯದಾಗಿ ಎರಡನೆಯ ಮನೆಗೆ ಆರ್ಥಿಕೇತರ ಮಸೂದೆಗಳನ್ನು ಕಾನೂನಾಗಿ ಒಪ್ಪಿಕೊಳ್ಳಲು ನಿಧಾನಿಸುವ ಮತ್ತು ಆತುರದ ಮಸೂದೆಗಳನ್ನು ಕಾನೂನಾಗಿ ಒಪ್ಪಿಕೊಳ್ಳಲು ನಿಧಾನಿಸುವ ಅಥವಾ ಆತುರದ ತೀರ್ಮಾನಗಳನ್ನು ತೆಗೆದುಕೊಳ್ಳದಂತೆ ಎಷ್ಟು ಬೇಕೋ ಅಷ್ಟು ಮಿತವಾಗಿ ತಡೆಹಿಡಿಯುವ ಅಥವ ಚುನಾಯಿಸಿದವರ ಅಭಿಪ್ರಾಯಗಳು ಸಾಕಷ್ಟು ವ್ಯಕ್ತವಾಗಿದೆ ಎಂದು ಪರಿಗಣಿಸುವುದಕ್ಕೆ ಕಾಯುವ ಅಧಿಕಾರವನ್ನು ಪಡೆದಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಆರ್ಥಿಕೇತರ ಮಸೂದೆಗಳ ಬಗ್ಗೆ ಇರುವ ಉಪಶೀರ್ಷಿಕೆಯ ಅಡಿಯಲ್ಲಿ ಬರುವ ಪ್ರಶ್ನೆಗೆ ನನ್ನ ಉತ್ತರವೇನೆಂದರೆ, ಆರ್ಥಿಕೇತರ ಮಸೂದೆಗಳನ್ನು ತಿದ್ದುಪಡಿ ಮಾಡುವ ಹಕ್ಕು ಮೇಲ್ಮನೆಗೆ ಇರಬೇಕು. ಕೆಳಮನೆ ಆ ತಿದ್ದುಪಡಿಗಳನ್ನು ಒಪ್ಪಿಕೊಂಡರೆ ಒಳ್ಳೆಯದೇ ಆಯಿತು; ಒಂದು ವೇಳೆ ಕೆಳಮನೆಯಲ್ಲಿ ಮೂರು ಬೇರೆ ಬೇರೆ ಅವಧಿಗಳಲ್ಲಿ ಒಪ್ಪಿಕೊಂಡರೆ, ಮೇಲ್ಮನೆ ಒಪ್ಪಿಕೊಳ್ಳದಿದ್ದರೂ ಅದು ಕಾನುನಾಗುತ್ತದೆ ಎನ್ನುವ ಸಾಧ್ಯತೆಯೂ ಇರಬೇಕು. ಕೊನೆಯದಾಗಿ ನಾನು ಹೇಳುವುದೇನೆಂದರೆ ಈ ಎರಡೂ ಮನೆಗಳ ಸಂಬಂಧ ಕೇವಲ ರೂಢಿಯ ವಿಷಯವಾಗದೆ ಕಾನೂನಾಗಬೇಕು. ನಾನು ಹೇಳಬೇಕಾಗಿರುವುದು ಇಷ್ಟೆ.

* ಡಾ. ಬಿ. ಆರ್. ಅಂಬೇಡ್ಕರ್: ಮಿ. ಗ್ಯವಿನ್ ಜೋನ್ಸ್ ಅವರೆ, ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯಾದ ಸಂವಿಧಾನಗಳಲ್ಲಿ ಎರಡು ಸದನಗಳ ನಡುವಿನ ಸಂಬಂಧವನ್ನು ವಿವರಿಸಲಾಗಿದೆ ಎನ್ನುವುದು ನಿಮ್ಮ ಅಭಿಪ್ರಾಯವೆ? ಅವರು ಸಂಯುಕ್ತ ರಾಜ್ಯ ರೀತಿಯಾದ ಸಂವಿಧಾನವನ್ನು ರಚಿಸುತ್ತಿದ್ದೇವೆನ್ನುವುದು ಗೊತ್ತಿದ್ದು ಹಾಗೆ ಮಾಡಿದರೆ?

ಮಿ. ಗ್ಯವಿನ್ ಜೋನ್ಸ್: ಹೌದು. ಖಂಡಿತವಾಗಿಯೂ.

---

* ಸಂಯುಕ್ತ ರಾಜ್ಯ ಸ್ವರೂಪ ಸಮಿತಿ ಮತ್ತು ಅಲ್ಪಸಂಖ್ಯಾತ ಸಮಿತಿಯ ನಡಾವಳಿಗಳು: ಸಂಪುಟ ೧, ಪುಟಗಳು ೨೮೧–೮೨.

ಡಾ. ಬಿ. ಆರ್. ಅಂಬೇಡ್ಕರ್: ಹಾಗಿದ್ದರೆ, ಕೆನಡಾದ ಸಂವಿಧಾನದಲ್ಲಿ ಎರಡು ಸದನಗಳ ಸಂಬಂಧದ ಬಗ್ಗೆ ನಿಯಮಗಳನ್ನೇಕೆ ವಿಧಿಸಲಿಲ್ಲ?

ಸರ್ ಮಹಮ್ಮದ್ ಶಫಿ: ಏಕೆಂದರೆ ಎರಡು ಸದನಗಳ ಸಂಬಂಧವೂ ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್‌ನ ಸಂಬಂಧದ ಹಾಗಿರಬೇಕೆನ್ನುವ ಸಾಮಾನ್ಯ ನಿಯಮವಿದೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಅದು ಹೌಸ್ ಆಫ್ ಲಾರ್ಡ್ಸ್‌ನ ಮತ್ತು ಹೌಸ್ ಆಫ್ ಕಾಮನ್ಸ್‌ನ ಒಂದು ಏಕೀಕೃತ ಸರ್ಕಾರವಾಗಿದೆ, ಸಂಯುಕ್ತ ರಾಜ್ಯವಾಗಿಲ್ಲ. ನಾವು ಮುಂಚೆಯೇ ಹೇಳಿದ್ದೇವೆ. ಇದು ಏಕೀಕೃತ ಸರ್ಕಾರದ ಅಥವಾ ಸಂಯುಕ್ತ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ನಾನು ಇನ್ನಷ್ಟು ವಿಷಯವನ್ನು ಹೇಳುವುದಕ್ಕೆ ನೀವು ಅವಕಾಶ ಕೊಟ್ಟರೆ, ನಾನು ಹೇಳುವುದು ಇದು: ಬೇರೆ ಬೇರೆ ರಾಜ್ಯಗಳು ಎರಡು ಸದನಗಳ ಸಂಬಂಧಗಳನ್ನು ಈಗಿರುವ ಹಾಗೆ ಏಕೆ ಮಾಡಿಕೊಂಡವೆಂದರೆ, ಅವರು ತಮ್ಮ ಸಂವಿಧಾನವನ್ನು ರೂಪಿಸಿದಾಗ, ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್‌ನ ಸಂಬಂಧ ಹೇಗಿತ್ತೊ ಹಾಗೆಯೇ ಅದನ್ನು ಉಳಿಸಿಕೊಂಡರು. ಅವುಗಳನ್ನು ಏಕೀಕೃತ ಸರ್ಕಾರ ಅಥವಾ ಸಂಯುಕ್ತ ಸರ್ಕಾರವನ್ನು ಸ್ಥಾಪಿಸಲಿಕ್ಕೆ ಅವರು ಸಂವಿಧಾನವನ್ನು ರಚಿಸುತ್ತಿರಲಿಲ್ಲ. ಕೆನಡಾದ ಸಂವಿಧಾನ ಹೀಗೆ ಹೇಳುತ್ತದೆ...

ಅಧ್ಯಕ್ಷರು: ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ, ಮಿ.ಗ್ಯವಿನ್ ಜೋನ್ಸ್ ಅವರು ಮತಾಡಲಿಕ್ಕೆ ನೀವು ಅವಕಾಶವನ್ನು ಮಾಡಿಕೊಡಬೇಕು.

ಮಿ. ಗ್ಯವಿನ್ ಜೋನ್ಸ್: ಆಸ್ಟ್ರೇಲಿಯಾದ ಸಂವಿಧಾನ ಸಂಯುಕ್ತ ರಾಜ್ಯದ ಸಂವಿಧಾನವಾಗಿದೆ. ಅಷ್ಟು ಮಾತ್ರ ನಾನು ಹೇಳುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ನಿಜ.

ಮಿ. ಗ್ಯವಿನ್ ಜೋನ್ಸ್: ಪ್ರಪಂಚದಲ್ಲಿ ಅತ್ಯಂತ ಪ್ರಜಾಸತ್ತಾತ್ಮಕ ದೇಶಗಳಲ್ಲಿ ಆಸ್ಟ್ರೇಲಿಯಾವು ಒಂದು, ಎಂದೂ ನಾನು ಹೇಳುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಖಂಡಿತವಾಗಿಯೂ ಒಪ್ಪುತ್ತೇನೆ.

ಮಿ. ಗ್ಯವಿನ್ ಜೋನ್ಸ್: ಅವರಿಗೆ ಈ ಎಲ್ಲ ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬೇಕು ಅನಿಸಿದ್ದರೆ, ಅವುಗಳನ್ನು ಭಾರತದಲ್ಲಿಯೂ ಇಟ್ಟುಕೊಳ್ಳುವುದು ಅವಶ್ಯವೆಂದು ನನಗೆ ಅನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಬೇರೆ ವಿಷಯ. ಮುಖ್ಯವಾದದ್ದೇನೆಂದರೆ ಆಸ್ಟ್ರೇಲಿಯಾ ಈ ವಿಷಯದಲ್ಲಿ ಆ ಒಂದು ಏರ್ಪಾಟನ್ನು ಮಾಡಿಕೊಂಡಿದ್ದಕ್ಕೆ ಕಾರಣ ಅದು ಸಂಯುಕ್ತ ರಾಜ್ಯ ಸಂವಿಧಾನವನ್ನು ಬಯಸಿತ್ತು ಎನ್ನುವುದು. ಅವರು ತಮ್ಮ ಸಂವಿಧಾನವನ್ನು ರಚಿಸುತ್ತಿರುವ ಅವುಗಳ ಸಂಬಂಧವನ್ನು ಇಂಗ್ಲೆಂಡಿನಲ್ಲಿದ್ದ ಹಾಗೇ ತೆಗೆದುಕೊಂಡರು ಎಂದು ಹೇಳುತ್ತಿದ್ದೇನೆ.

# ಇಪ್ಪತ್ತೆಂಟನೆಯ ಸಭೆ

# ಸೆಪ್ಟೆಂಬರ್ ೨೩, ೧೯೩೧

## ವಿಭಾಗ–I

(ಸಂಯುಕ್ತ ರಾಜ್ಯ ಶಾಸಕಾಂಗದ ಸಂಖ್ಯೆ ಮತ್ತು ರಚನೆ)

* ಡಾ. ಬಿ. ಆರ್. ಅಂಬೇಡ್ಕರ್: ಉಪ ವಿಭಾಗಗಳು (i), (ii), (iii) ಮತ್ತು (v) ಇವುಗಳ ಬಗ್ಗೆ ನಾನು ಏನನ್ನೂ ಹೇಳಲಿಕ್ಕೆ ಹೊರಟಿಲ್ಲ. ಈ ಬೆಳಿಗ್ಗೆ ನನ್ನ ಮಿತ್ರರಾದ ಮಿ.ಜೋಷಿಯವರು ಹೇಳಿದ್ದರಲ್ಲಿ ಒಂದು ವಿಷಯವನ್ನು ಬಿಟ್ಟು ಮಿಕ್ಕೆಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಈ ಎರಡು ಸದನಗಳ ರಚನೆಯ ಬಗ್ಗೆ ನಾನು ಯಾವ ಒಂದು ಸಂಖ್ಯೆಯ ಬಗ್ಗೆ ವಿಶೇಷವಾದ ಮಹತ್ವವನ್ನು ಕೊಟ್ಟಿಲ್ಲ. ಯಾವುದೋ ಒಂದು ಸಂಖ್ಯೆಯಿಂದ ನಮ್ಮ ಕೆಲಸವನ್ನು ಆರಂಭಿಸುವುದು ಖಂಡಿತಾ ಸರಿಯಾದುದ್ದಲ್ಲ. ಪ್ರಸ್ತುತವಾದ ಎಲ್ಲ ವಿಷಯಗಳನ್ನೂ ಯೋಚಿಸಿದ ಫಲವಾಗಿ ಒಂದು ಸಂಖ್ಯೆಯ ನಿರ್ಧಾರವಾಗಬೇಕು. ದೊಡ್ಡ ಸದನದ ಬಗ್ಗೆ ನನಗೆ ಹೆಚ್ಚು ಒಲವಿದೆ. ಏಕೆಂದರೆ ಆ ಸದನ ವಿಷಯಗಳನ್ನು ತೂಗಿನೋಡುವ ಸದನ ವಾದದ್ದರಿಂದ, ಅದರಲ್ಲಿ ಯಾವುದೋ ಒಂದು ವಿಶೇಷ ಆಸಕ್ತಿಯನ್ನು ತುರುಕುವುದರ ಬದಲು, ಅದರ ರಚನೆ ಹೇಗಿರಬೇಕೆಂದರೆ ಎಲ್ಲ ರೀತಿಯಾದ ಆಸಕ್ತಿಗಳಿಗೂ ಅಲ್ಲಿ ಸ್ಥಾನವಿರಬೇಕು.

ದೊಡ್ಡ ಸದನಗಳ ವಿರುದ್ಧವಾಗಿ ಇರುವ ಒಂದು ವಾದವೆಂದರೆ, ನಮ್ಮ ಸದನಗಳು ಬೇಗ ಬೇಗ ಕೆಲಸಗಳನ್ನು ಮುಗಿಸಿಬಿಡಬೇಕು ಎನ್ನುವುದು. ಆ ವಾದವು ಗಮನಾರ್ಹವಾಗಿದೆ. ಆದರೆ, ಸಭಾಸದಸ್ಯರ ಸಂಖ್ಯೆಗೂ ಬೇಗ ಕೆಲಸ ಮುಗಿಸುವುದಕ್ಕೂ ಏನು ಸಂಬಂಧವಿದೆಯೋ ನನಗೆ ತಿಳಿಯುವುದಿಲ್ಲ. ಕೆಲಸಗಳನ್ನು ಬೇಗ ಮುಗಿಸುವುದು, ಅದರ ಸದಸ್ಯರ ಸಂಖ್ಯೆಗಿಂತ ಹೆಚ್ಚಾಗಿ ತಾನೇ ಮಾಡಿಕೊಂಡ ಸ್ಥಾಯೀ ಕಾನೂನುಗಳು ಮತ್ತು ವ್ಯವಹಾರದ ನಿಯಮಗಳನ್ನು ಅವಲಂಬಿಸಿರುತ್ತದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ಆ ಒಂದು ವಿಚಾರಕ್ಕಾಗಿ ನಾನು ಅದನ್ನು ಮಿತಿಗೊಳಿಸುವುದಕ್ಕೆ ಇಷ್ಟಪಡುವುದಿಲ್ಲ.

ನಾನು ಈಗ ಮಾತಾಡಬೇಕು ಎನ್ನುವ ವಿಷಯ ಉಪವಿಭಾಗ (iv) ಕ್ಕೆ ಸಂಬಂಧಿಸಿದ್ದು. ಉಪ ವಿಭಾಗ (iv)ರ "ಬಿ" ಅಂಶ ಹೀಗಿದೆ:

> "ಸಂಯುಕ್ತ ರಾಜ್ಯ ಸಂವಿಧಾನವನ್ನು ಸಿದ್ಧಪಡಿಸಲಿಕ್ಕೆ ಕಡಿಮೆ ಎಂದರೆ ಭಾರತದ ಎಷ್ಟು ಸಂಸ್ಥಾನಗಳ ಒಪ್ಪಿಗೆಯನ್ನು ಪಡೆದು ಸಂಯುಕ್ತ ರಾಜ್ಯ ವಿಧಾನ ಸಮಿತಿ ತನ್ನ ಕಾರ್ಯವನ್ನು ಆರಂಭಿಸ ಬೇಕು?"

---

* ಸಂಯುಕ್ತ ರಾಜ್ಯ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿಯ ನಡಾವಳಿಗಳು: ಸಂಪುಟ ೧, ಪುಟ ೩೨೨–೪೬

ಎಲ್ಲ ಗೌರವವನ್ನಿಟ್ಟುಕೊಂಡು ಹೇಳಬೇಕಾದರೆ ಈ ಪ್ರಶ್ನೆ ಬ್ರಿಟಿಷ್ ಸರ್ಕಾರಕ್ಕೆ ಕೇಳಬೇಕಾದದು ಎಂದು ನನಗೆ ಅನ್ನಿಸುತ್ತದೆ. ಸಂಯುಕ್ತ ರಾಜ್ಯವನ್ನು ಸ್ಥಾಪಿಸಲು ಹೊರಡುವ ಮುಂಚೆ ಅವರ ಅಭಿಪ್ರಾಯ ದಲ್ಲಿ ಎಷ್ಟು ಸಂಸ್ಥಾನಗಳ ಒಪ್ಪಿಗೆ ಬೇಕು ಎನ್ನುವುದನ್ನು ಅವರು ಹೇಳಬೇಕು.

ಮುಸುಕಿನಲ್ಲಿರುವ ಇನ್ನೂ ಒಂದು ಪ್ರಶ್ನೆ ಉಳಿದಿದೆ. ಭವಿಷ್ಯ ಕಾಲದ ಭಾರತದ ಸಂವಿಧಾನ ಸಂಯುಕ್ತ ರಾಜ್ಯ ಸಂವಿಧಾನವಾಗಿರಬೇಕೆಂದು ನಮಗೆಲ್ಲರಿಗೂ ಹೇಳಿದ್ದಾಗಿದೆ; ಆದರೆ ಸಂಯುಕ್ತ ರಾಜ್ಯ ರೂಪದ ಜವಾಬ್ದಾರಿಯುತ ಸರ್ಕಾರವನ್ನು ಸ್ಥಾಪಿಸುವುದಕ್ಕೂ ಮುಂಚೆ ಭಾರತದ ಸಂಸ್ಥಾನಗಳ ಪ್ರವೇಶವಾಗಬೇಕೆಂಬ ಶರತ್ತಿದೆ ಎನ್ನುವುದನ್ನು ಯಾರೂ ಸ್ಪಷ್ಟವಾಗಿ ಹೇಳಿಲ್ಲ. ಈ ವಿಷಯದಲ್ಲಿ ಮಿಕ್ಕವರ ಖಚಿತವಾದ ನಿಲುವು ಏನೆಂದು ತಿಳಿಯುವವರೆಗೂ ನನಗೆ ಈ ವಿಷಯದಲ್ಲಿ ಮಾತಾಡುವುದು ಕಷ್ಟವಾಗುತ್ತದೆ. ಈ ಪ್ರಶ್ನೆಗೆ ನನ್ನ ಉತ್ತರವೇನೆಂದರೆ ಸಂಯುಕ್ತ ರಾಜ್ಯ ಸಂವಿಧಾನದ ಕೆಲಸವನ್ನು ಆರಂಭಿಸುವುದಕ್ಕೆ ಇಂತಿಷ್ಟು ಸಂಖ್ಯೆ ಸಂಸ್ಥಾನಗಳ ಪ್ರವೇಶವಾಗಬೇಕು ಎನ್ನುವುದಕ್ಕೆ ನಾವು ಅಂಟಿಕೊಳ್ಳಬೇಕಾಗಿಲ್ಲ. ರಾಜರುಗಳು ಸಂಯುಕ್ತ ರಾಜ್ಯ ಸರ್ಕಾರವನ್ನು ಪ್ರವೇಶಿಸುವುದಕ್ಕೆ ಮನಸ್ಸು ಮಾಡುವವರೆಗೆ ಜವಾಬ್ದಾರಿಯು ಸರ್ಕಾರದ ರಚನೆಯನ್ನು ಶೀತಕೋಶದಲ್ಲಿಡಬೇಕೆಂದು ಹೇಳುವ ಯಾವನಾದರೂ ಬ್ರಿಟಿಷ್ ಭಾರತೀಯನೊಬ್ಬ ಇದ್ದರೆ, ಅದು ನನಗೆ ಗೊತ್ತಿಲ್ಲ. ಆದ್ದರಿಂದ ಸಂಯುಕ್ತ ರಾಜ್ಯ ಸಂವಿಧಾನದ ರಚನೆಗೆ ತೊಡಗುವ ಮುಂಚೆ ನಾವು ಮಾಡಬೇಕಾದದ್ದು ಏನೆಂದರೆ ಶಾಸನಸಭೆಯ ಆಜ್ಞೆಯ ಮೇರೆಗೆ ಬ್ರಿಟನ್ನಿನ ರಾಜರು ಹೊಸ ರಾಜ್ಯಗಳು ಸಂಯುಕ್ತ ರಾಜ್ಯದ ಒಂದು ಭಾಗವಾಗಿರುವುದಕ್ಕೆ ಒಪ್ಪಿಗೆ ಕೊಡಬೇಕೆನ್ನುವ ಒಂದು ಷರತ್ತನ್ನು ಸೇರಿಸುವುದು. ಇದೇನು ಅಂತಹ ಹೊಸ ವಿಷಯವಲ್ಲ. ಅಂತಹ ಒಂದು ವ್ಯವಸ್ಥೆ ಕೆನಡಾದ ಸಂವಿಧಾನದ ೧೪೬ ಮತ್ತು ೧೪೭ನೇ ವಿಧಿಯಲ್ಲಿದೆ ಮತ್ತು ಆಸ್ಟ್ರೇಲಿಯಾದ ಸಂವಿಧಾನದ ೧೨೧ ಮತ್ತು ೧೨೪ನೆ ವಿಧಿಯಲ್ಲಿದೆ. ಕೆನಡಾದ ಸಂವಿಧಾನದ ೧೪೬ನೆ ವಿಧಿಯ ಪ್ರಕಾರ, ೧೮೬೭ರ ಸಂಯುಕ್ತ ರಾಜ್ಯ ರಚನೆಯ ಸಮಯದಲ್ಲಿ ಒಂದು ವೇಳೆ ಅದಕ್ಕೆ ಸೇರದೆ ಇರುವ ಘಟಕಗಳು ಉಳಿದಿದ್ದರೆ, ಅವು ಆಮೇಲೆ ತಮ್ಮ ಸಮ್ಮತಿಯನ್ನು ತೋರಿಸಿದರೆ, ಶಾಸನಸಭೆಯ ಆಜ್ಞೆಯ ಮೇರೆಗೆ ಬ್ರಿಟನ್ನಿನ ದೊರೆ, ಅವುಗಳನ್ನು ಸಂವಿಧಾನಕ್ಕೆ ಒಳಪಡುವ ಘಟಕಗಳಾಗಿ ಸೇರಿಸಿಕೊಳ್ಳಬೇಕು ಎಂದಿದೆ. ಸಂಯುಕ್ತ ರಾಜ್ಯ ಸಂವಿಧಾನವನ್ನು ಈ ರೀತಿಯ ಒಂದು ಶರತ್ತನ್ನು ಸೇರಿಸಿಕೊಂಡು ಪ್ರಾರಂಭಿಸಬಹುದೆಂದು ನನಗೆ ಅನ್ನಿಸುತ್ತದೆ. ಇದು ಸಂಯುಕ್ತ ರಾಜ್ಯವನ್ನು ಸೇರಬೇಕೋ ಅಥವಾ ಬಿಡಬೇಕೋ ಅನ್ನುವ ರಾಜರ ಸ್ವಾತಂತ್ರ್ಯಕ್ಕೂ ಹೊಂದಿಕೊಳ್ಳುತ್ತದೆ.

(ಎ) ಮತ್ತು (ಬಿ) ಉಪವಿಭಾಗಕ್ಕೆ ಬಂದಾಗ ಹಿಸ್ ಹೈನೆಸ್ ಬಿಕನೇರಿನ ಮಹಾರಾಜರು ಸೂಚಿಸಿದ ಹಾಗೆ ಸಂಯುಕ್ತ ರಾಜ್ಯಕ್ಕೆ ಸೇರುವ ಸಂಸ್ಥಾನಗಳು ಒಂದೋ ಅಥವಾ ಕೆಲವೋ, ತಮ್ಮ ಮತವನ್ನು ಸಂಪೂರ್ಣವಾಗಿ ಚಲಾಯಿಸುವ ಹಕ್ಕನ್ನು ಪಡೆದಿರಬೇಕು. ತುಂಬ ವಿನಯಪೂರ್ವಕವಾಗಿ ನಾನು ಹೇಳುವು ದೇನೆಂದರೆ, ಈ ಸೂಚನೆ ನನ್ನ ಮನಸ್ಸಿಗಂತೂ ಆಶ್ಚರ್ಯಕಾರಕ ಸೂಚನೆಯಾಗಿದೆ. ಅವರಿಗೆ ಸಲ್ಲ ಬೇಕಾದ ಗೌರವದೊಂದಿಗೆ ನಾನು ಹೇಳಬಹುದಾದರೆ ಆ ಸೂಚನೆಗೆ ತಲೆಯೂ ಇಲ್ಲ, ಬುಡವೂ ಇಲ್ಲ ಎನ್ನಬಹುದು. ಈ ರೀತಿಯಾದ ಅಸಾಧಾರಣ ಲಕ್ಷಣವುಳ್ಳ ಸೂಚನೆಗೆ ಯಾವ ಸಮರ್ಥನೆಯೂ ಇಲ್ಲ. ಅಂತಿಮವಾಗಿ ಅದರ ಅರ್ಥವೆಂದರೆ– ಸಂಯುಕ್ತ ರಾಜ್ಯಕ್ಕೆ ಸೇರಿ, ಬ್ರಿಟಿಷ್ ಭಾರತದ ಪ್ರಜೆಗಳ ಭವಿಷ್ಯ ವನ್ನು ಬದಲಾಯಿಸುವ ಶಾಸನವನ್ನು ರೂಪಿಸುವುದರಲ್ಲಿ ಭಾಗ ವಹಿಸುವ ಒಬ್ಬ ರಾಜ, ತನ್ನ ಮತವನ್ನು ಚಲಾಯಿಸುವ ಹಕ್ಕಿನಿಂದಾಗಿ, ಭಾರತೀಯ ಸಂಸ್ಥಾನಗಳ ಎಲ್ಲ ಬಲವನ್ನೂ ಪ್ರಯೋಗಿಸಿ ಬ್ರಿಟಿಷ್ ರಾಜ್ಯದ ಪ್ರಜೆಗಳು ಶಾಸನವನ್ನು ರೂಪಿಸುವುದರಲ್ಲಿ ಭಾಗವಹಿಸುವಾಗ, ಸಂಯುಕ್ತ ರಾಜ್ಯಕ್ಕೆ ಪ್ರವೇಶಿಸದೆ ಇರುವ

ರಾಜರ ಪ್ರಜೆಗಳ ಭವಿಷ್ಯವನ್ನು ಬದಲಾಯಿಸದ ಹಾಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ಏಕಪಕ್ಷೀಯ ವ್ಯವಸ್ಥೆಯಾಗುತ್ತದೆ. ಈ ವ್ಯವಸ್ಥೆಯಲ್ಲಿ ಶಾಸನ ಸಭೆಯ ಸಂಕಲ್ಪದ ಆಚೆಗೆ ಉಳಿಯುವುದಕ್ಕೆ ನಿರ್ಧರಿಸಿದ ಒಬ್ಬ ರಾಜ ತಾನು ಪಡೆದ ಹಕ್ಕನ್ನು ನೆರೆಯ ರಾಜ್ಯದ ರಾಜನಿಗೆ ಅಥವಾ ತನ್ನ ಸಹೋದ್ಯೋಗಿಗೆ ವರ್ಗಾಯಿಸಿ, ಬ್ರಿಟಿಷ್ ಪ್ರಜೆಗಳಾದ ಭಾರತೀಯರ ಭವಿತವ್ಯವನ್ನು ನಿರ್ಧರಿಸುವ ಶಕ್ತಿಯನ್ನು ಕೊಟ್ಟ ಹಾಗಾಗುತ್ತದೆ. ಅದರಲ್ಲಿ ನ್ಯಾಯವೂ ಇಲ್ಲ, ನೀತಿಯೂ ಇಲ್ಲ ಎಂದು ಹೇಳುತ್ತಿದ್ದೇನೆ. ಅಂತಹದಕ್ಕೆ, ನನ್ನ ಮಟ್ಟಿಗೆ, ನಾನು ಎಂದೂ ಸಮ್ಮತಿಸುವುದಿಲ್ಲ. ಸರಿಯಾದ ಒಂದೇ ಕೆಲಸವೆಂದರೆ, ಸರಿಯಾದ ಒಂದೇ ಮಾರ್ಗವೆಂದರೆ ಸಂಯುಕ್ತ ರಾಜ್ಯಕ್ಕೆ ಸೇರಿಕೊಳ್ಳುವ ಅಂಥ ರಾಜರ ಮತದಾನದ ಶಕ್ತಿ ಸರ್ ಮಿರ್ಜಾ ಇಸ್ಮಾಯಿಲ್ಲರು ಸೂಚಿಸಿದ ವ್ಯವಸ್ಥೆಯಲ್ಲಿರುವ ನಿಗದಿಪಡಿಸಿದ ಮತಗಳಿಗೆ ಮಾತ್ರ ಸೀಮಿತವಾಗಿರಬೇಕು. ಒಬ್ಬನೇ ರಾಜ ಬರುವುದಾದರೆ, ಆತನಿಗೆ ಒಬ್ಬನೇ ಪ್ರತಿನಿಧಿಯಿದ್ದರೆ, ಆತನಿಗೆ ಒಂದು ಮತ ಮಾತ್ರ ಇರಬೇಕು. ರಾಜರುಗಳು ಗುಂಪಾಗಿ ಬರುವುದಾದರೆ, ಸರ್ ಮಿರ್ಜಾ ಇಸ್ಮಾಯಿಲ್ಲರು ಸೂಚಿಸಿದ ವ್ಯವಸ್ಥೆಯಲ್ಲಿ ಆ ಗುಂಪಿಗೆ ಎರಡು ಮತಗಳಿರಬೇಕು. ಆ ಗುಂಪು ಗುಂಪಾಗಿಯೇ ಬರಬೇಕು ಮತ್ತು ಅದಕ್ಕೆ ಎರಡು ಮತಗಳಿಂದ ಹೆಚ್ಚಿಗೆ ಮತ ಹಾಕುವ ಅಧಿಕಾರವಿರುವುದಿಲ್ಲ. ಬೇರೆಯ ಯಾವ ವ್ಯವಸ್ಥೆಗೂ ನಾನಂತೂ ನನ್ನ ಒಪ್ಪಿಗೆಯನ್ನು ಕೊಡಲಾರೆ.

# ಮೂವತ್ತನೆಯ ಸಭೆ
# ೨೫ನೆ ಸೆಪ್ಟೆಂಬರ್ ೧೯೩೧
## ವಿಭಾಗ–IV

(ಸಂಯುಕ್ತ ರಾಜ್ಯ ಮತ್ತು ಅದರ ಘಟಕಗಳ ನಡುವೆ ಸಂಪನ್ಮೂಲಗಳನ್ನು ಹಂಚಿಕೊಳ್ಳುವಿಕೆ)

* ಡಾ. ಬಿ. ಆರ್. ಅಂಬೇಡ್ಕರ್: ಸರ್ ಮಹಮದ್ ಶಫಿಯವರು ಎತ್ತಿರುವ ವಿಷಯ ಬಹಳ ಮುಖ್ಯವಾದದ್ದೆಂದು ನಾನು ತಿಳಿದಿದ್ದೇನೆ. ಕಡೆಯ ಪಕ್ಷ ಆಮೇಲಾದರೂ ಸಂಯುಕ್ತರಾಜ್ಯ ರಚನೆಯ ಉಪಸಮಿತಿ "ಕೇಂದ್ರ ಸರ್ಕಾರ"ದ ಪ್ರಜೆಗಳು ಮತ್ತು ಸಂಯುಕ್ತ ರಾಜ್ಯದ ಪ್ರಜೆಗಳು ಎಂದು ವಿಭಾಗಿಸಿ ಅದನ್ನು ಸಂವಿಧಾನದಲ್ಲಿ ಸೇರಿಸಬೇಕೆ ಅಥವಾ ಬೇಡವೆ ಅನ್ನುವುದನ್ನು ಚರ್ಚಿಸುವುದಕ್ಕೆ ನೀವು ಅವಕಾಶ ಮಾಡಿಕೊಡುತ್ತೀರೆಂದು ಭಾವಿಸಿದ್ದೇನೆ. ನಿಮ್ಮ ಅವಗಾಹನೆಗೆ ಇನ್ನೊಂದು ವಿಷಯವನ್ನು ಸೂಚಿಸ ಬಯಸುತ್ತೇನೆ. ಅದೇನೆಂದರೆ, ಮೊದಲು ಆ ವಿಷಯವನ್ನು ಗಮನಿಸುವುದು ಆಮೇಲೆ ಅದನ್ನು ಆರ್ಥಿಕ ಉಪಸಮಿತಿಯ ಗಮನಕ್ಕೆ ತರುವುದು ಸರಿಯಾಗುತ್ತದೆಯೇ ಅಥವಾ ಮೊದಲು ಆರ್ಥಿಕ ಉಪಸಮಿತಿಯ ನ್ನಿಟ್ಟುಕೊಂಡು ಆಮೇಲೆ ಈ ವಿಷಯವನ್ನು ಗಮನಿಸಬೇಕೇ ಎನ್ನುವುದು. ಈ ವಿಷಯ ನಿಮ್ಮ ತೀರ್ಮಾನಕ್ಕೆ ಬಿಟ್ಟಿದ್ದು. ಈ ದ್ವಂದ್ವ ವಿಭಾಗವನ್ನು ಸಂವಿಧಾನದಲ್ಲಿಟ್ಟುಕೊಳ್ಳುತ್ತೇವೋ ಅಥವಾ ಈ ವಿಷಯಗಳನ್ನು ಉಪಸಮಿತಿಯ ತೀರ್ಮಾನಕ್ಕೆ ಬಿಡುತ್ತೇವೆಯೋ ಎಂದು ಒಂದಲ್ಲ ಒಂದು ನಿರ್ಧಾರಕ್ಕೆ ಬರುವುದು ಉತ್ತಮ ವೆಂದು ನನಗೆ ಅನಿಸುತ್ತದೆ.

---

* ಸಂಯುಕ್ತ ರಾಜ್ಯ ರಚನೆಯ ಸಮಿತಿ ಮತ್ತು ಅಲ್ಪಸಂಖ್ಯಾತರ ಸಮಿತಿಯ ನಡಾವಳಿಗಳು: ಸಂಪುಟ ೧, ಪುಟ ೪೧೮.

# ಮೂವತ್ತನಾಲ್ಕನೆಯ ಸಭೆ
# ಅಕ್ಟೋಬರ್ ೧೪, ೧೯೩೧

## ವಿಭಾಗ–IV

(ಆರ್ಥಿಕ ಸಾಧನಗಳನ್ನು ಸಂಯುಕ್ತ ರಾಜ್ಯ ಮತ್ತು ಅದರ ಘಟಕಗಳಿಗೆ ಹಂಚುವ ವಿಷಯ)
ಸಂಯುಕ್ತ ರಾಜ್ಯ ಆರ್ಥಿಕ ಉಪಸಮಿತಿಯ ವರದಿಯ ಬಗ್ಗೆ ಚರ್ಚೆ:

ಡಾ. ಬಿ. ಆರ್. ಅಂಬೇಡ್ಕರ್: ಲಾರ್ಡ್ ಛಾನ್ಸಲರ್ ಅವರೆ, ಎರಡು ದಿನಗಳಿಂದ ಆರ್ಥಿಕ ಉಪ ಸಮಿತಿಯ ವರದಿಯ ಬಗ್ಗೆ ನಡೆಯುತ್ತಿರುವ ಚರ್ಚೆಯನ್ನು ನಾವು ಕೇಳುತ್ತಿದ್ದೇವೆ. ಈ ಚರ್ಚೆ ಒಂದು ರೀತಿಯಲ್ಲಿ ಬೇಸರ ತರಿಸುತ್ತಿದೆ ಮತ್ತು ಆಯಾಸವನ್ನುಂಟುಮಾಡುತ್ತಿದೆ. ಈ ಉಪಸಮಿತಿಯ ಬಹಳಷ್ಟು ಶಿಫಾರಸ್ಸುಗಳ ಬಗ್ಗೆ ನನಗೆ ಅಸಮಾಧಾನವಿಲ್ಲದಿದ್ದರೆ, ನಾನು ಈ ಚರ್ಚೆಯ ನಡುವೆ ತಲೆ ಹಾಕುತ್ತಲೇ ಇರಲಿಲ್ಲ.

ಉಪಸಮಿತಿಯವರು ಎತ್ತಿಕೊಂಡಿರುವ ಮೊದಲ ಪ್ರಶ್ನೆಯೆಂದರೆ ಸಂಯುಕ್ತ ಸರ್ಕಾರಕ್ಕೂ ಮತ್ತು ಅದರ ಘಟಕಗಳಿಗೂ ಸಾಧನಗಳನ್ನು ಹಂಚುವ ಕೆಲವು ತತ್ವಗಳ ಪ್ರಕಾರ ಮುಂದುವರಿದಿದ್ದಾರೆ. ಆ ತತ್ವಗಳು ವರದಿಯ ಎಂಟನೆ ಪ್ಯಾರಾದಲ್ಲಿದೆ. ಅಲ್ಲಿ ಸೂಚಿಸಿರುವುದೇನೆಂದರೆ, ಸಂಯುಕ್ತ ಸರ್ಕಾರಕ್ಕೂ ಮತ್ತು ಅದರ ಘಟಕಗಳಿಗೂ ಆದಾಯದ ಸರಿಯಾದ ಹಂಚುವಿಕೆ ಯಾವುದೆಂದರೆ "ಪರೋಕ್ಷ" ತೆರಿಗೆಗಳು ಸಂಯುಕ್ತ ಸರ್ಕಾರಕ್ಕೂ ಮತ್ತು "ನೇರ" ತೆರಿಗೆಗಳು ಘಟಕಗಳಿಗೂ ಹೋಗಬೇಕೆನ್ನುವುದು. ಆ ತತ್ವಕ್ಕೆ ನನ್ನ ಆಕ್ಷೇಪಣೆ ಇದೆ ಎನ್ನುತ್ತೇನೆ. ಮೊದಲು ನಾನು ಹೇಳಬೇಕಾದದ್ದು ಪೂರ್ವ ನಿದರ್ಶನಗಳಲ್ಲಿ ಇದಕ್ಕೆ ಯಾವ ಮಾದರಿಯೂ ಇಲ್ಲ. ನಾನು ಅನೇಕ ಸಂಯುಕ್ತ ರಾಜ್ಯಗಳ ಸಂವಿಧಾನಗಳನ್ನು ತುಂಬ ಎಚ್ಚರಿಕೆಯಿಂದ ಪರೀಕ್ಷಿಸಿದ್ದೇನೆ. ಆದರೆ, ಅವುಗಳಲ್ಲಿ ಆರ್ಥಿಕ ಉಪಸಮಿತಿಯವರ ವರದಿಯ ೮ನೆ ಪ್ಯಾರಾದಲ್ಲಿ ವಿವರಿಸಿರುವ ತತ್ವಕ್ಕೆ ಹಿಂದಿನ ನಿರ್ದೇಶನದ ಯಾವ ಆಧಾರವೂ ಇಲ್ಲ. ಉದಾಹರಣೆಗೆ ಕೆನಡಾ ಸಂವಿಧಾನದ ೯೧ ಮತ್ತು ೯೨ನೆಯ ವಿಧಿಗಳನ್ನು ತೆಗೆದುಕೊಳ್ಳಿ. ಅಲ್ಲಿ ವಿಧಿಸಿರುವ ಕ್ರಮವೆಂದರೆ ಕೆನಡಾದ ಪ್ರಾಂತೀಯ ಸರ್ಕಾರಗಳು "ನೇರ" ತೆರಿಗೆಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು. ಆದರೆ ಕೇಂದ್ರ ಸರ್ಕಾರ "ಪರೋಕ್ಷ" ತೆರಿಗೆಗೆ ಮಾತ್ರ ಸೀಮಿತಗೊಳ್ಳಬೇಕಾಗಿಲ್ಲ ಎನ್ನುವುದು. ಕೆನಡಾದ ಕೇಂದ್ರ ಸರ್ಕಾರಕ್ಕೆ "ನೇರ" ತೆರಿಗೆಯನ್ನಾಗಲಿ, ಅಥವಾ ಪರೋಕ್ಷ ತೆರಿಗೆಯನ್ನಾಗಲೀ ತೆಗೆದುಕೊಳ್ಳುವ ಸ್ವಾತಂತ್ರ್ಯವಿದೆ. ನೀವು ಆಸ್ಟ್ರೇಲಿಯಾದ ಸಂವಿಧಾನ ೮೬, ೮೭ ಮತ್ತು ೯೦ನೆಯ ವಿಧಿಗಳನ್ನು ಗಮನಿಸಿದರೆ, ಅಲ್ಲಿ ಬಳಸಿರುವ ರೀತಿ ಬೇರೆಯದಾದರೂ ಪರಿಣಾಮ ಮಾತ್ರ ಅದೇ ಎಂಬುದು ಕಾಣಿಸುತ್ತದೆ. ಈ ವಿಧಿಗಳ ಪ್ರಕಾರ ರಾಜ್ಯಗಳು ಸುಂಕ ಮತ್ತು ಅಬ್ಕಾರಿ ತೆರಿಗೆಗಳನ್ನು ವಿಧಿಸುವ ಹಾಗಿಲ್ಲ. ಹಾಗೆಂದ ಮಾತ್ರಕ್ಕೆ ಆಸ್ಟ್ರೇಲಿಯಾದ ಕೇಂದ್ರ ಸರ್ಕಾರ ಮಾತ್ರ

---

* ಅದೇ, ಪುಟ ೫೨೯–೩೪

ಸುಂಕ ಮತ್ತು ಅಬ್ಕಾರಿ ತೆರಿಗೆಗಳನ್ನು ವಿಧಿಸಬಹುದು ಎಂದೇನೂ ಅಲ್ಲ. ಅಲ್ಲಿಯೂ ಸಹ, ಕೇಂದ್ರ ಸರ್ಕಾರದ "ನೇರ" ತೆರಿಗೆಗಳನ್ನು ಹಾಕುವ ಅಧಿಕಾರ ಭದ್ರವಾಗಿದೆ. ಈ ಉಪಸಮಿತಿ ತನ್ನ ವರದಿಯ ೮ನೆಯ ಪ್ಯಾರಾದಲ್ಲಿ ವಿವರಿಸಿರುವ ಕ್ರಮ ಅಮೆರಿಕಾದ ಸಂಯುಕ್ತ ರಾಜ್ಯದ ಸಂವಿಧಾನದಲ್ಲಿ ೧೯೩೧ನೆ ಇಸವಿಯಲ್ಲಿ ೧೬ನೆ ತಿದ್ದುಪಡಿ ಆಗುವವರೆಗೂ ರೂಢಿಯಲ್ಲಿತ್ತು ಎಂದು ಹೇಳಿದೆ. ಆ ಗ್ರಹಿಕೆ ತಪ್ಪು ಎಂದು ವಿನಯಪೂರ್ವಕವಾಗಿ ತಿಳಿಸುತ್ತೇನೆ. ಸಂಯುಕ್ತ ರಾಜ್ಯದ ಸಂವಿಧಾನ ಅದರ ಪ್ರಾರಂಭದಲ್ಲಿ ಕೂಡ ಸಂಯುಕ್ತ ರಾಜ್ಯದಲ್ಲಿರುವ ಕೇಂದ್ರ ಸರ್ಕಾರವು "ನೇರ" ತೆರಿಗೆಗಳನ್ನು ವಿಧಿಸುವುದರ ಬಗ್ಗೆ ಯಾವ ಮಿತಿಯನ್ನೂ ಹೇರಿರಲಿಲ್ಲ. ನೀವು ಸಂಯುಕ್ತ ರಾಜ್ಯ ಸಂವಿಧಾನದ ೧ನೆ ವಿಧಿಯ ೨ನೆ ವಿಭಾಗವನ್ನು ಉಲ್ಲೇಖಿಸುವುದಾದರೆ, ಅಲ್ಲಿ ಸಂಯುಕ್ತ ರಾಜ್ಯದ ಕೇಂದ್ರ ಸರ್ಕಾರ "ನೇರ" ತೆರಿಗೆಯನ್ನು ವಿಧಿಸುವ ಸ್ವಾತಂತ್ರ್ಯವನ್ನು ಹೊಂದಿದೆ ಎನ್ನುವುದಕ್ಕೆ ಸ್ಪಷ್ಟವಾದ ಆಸ್ಪದವಿರುವುದನ್ನು ಕಾಣುತ್ತೀರಿ. ಸಂಯುಕ್ತ ರಾಜ್ಯದ ಕೇಂದ್ರ ಸರ್ಕಾರ "ನೇರ" ತೆರಿಗೆಯನ್ನು ವಿಧಿಸುವ ಅಧಿಕಾರಕ್ಕೆ ಇದ್ದ ಒಂದೇ ಒಂದು ಮಿತಿಯೆಂದರೆ, "ನೇರ" ತೆರಿಗೆಯನ್ನು ವಿಧಿಸಿದಾಗ ಅದನ್ನು ವಿವಿಧ ರಾಜ್ಯಗಳ ಪ್ರಜಾಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಹಂಚಿಕೊಳ್ಳಬೇಕು ಎಂದಿತ್ತು. ೧೯೧೩ರ ತಿದ್ದುಪಡಿಯಲ್ಲಾದ ಒಂದೇ ಒಂದು ಏರ್ಪಾಟೆಂದರೆ ಕೇಂದ್ರ ಸರ್ಕಾರ ವಿಧಿಸುವ ನೇರ ತೆರಿಗೆಯ ಮೇಲಿದ್ದ ಮಿತಿಯನ್ನು ಅಂದರೆ, ಜನಸಂಖ್ಯೆಗನುಗುಣವಾಗಿ ಹಂಚಬೇಕೆನ್ನುವುದನ್ನು ತೆಗೆದುಹಾಕಲಾಯಿತು. ಆದರೆ, ಈ ಅಧಿಕಾರ ಮೊದಲಿನಿಂದಲೂ ಇತ್ತು. ಅಷ್ಟೇ ಅಲ್ಲ, ೧೮೬೪ರಲ್ಲಿ ಮತ್ತು ೧೮೯೪ರಲ್ಲಿ ಸಂಯುಕ್ತ ರಾಜ್ಯ ಆ ಅಧಿಕಾರವನ್ನು ಚಲಾಯಿಸಿತ್ತು. ಈ ಸಮಿತಿಯವರು ವಿವರಿಸಿರುವ ವ್ಯವಸ್ಥೆಯನ್ನು ಸ್ವಲ್ಪ ಕಾಲ ಇಟ್ಟುಕೊಂಡಿದ್ದ ದೇಶವೆಂದರೆ ಸ್ವಿಟ್ಜರ್‌ಲ್ಯಾಂಡ್ ಮಾತ್ರ. ಕೇಂದ್ರ ಸರ್ಕಾರ ಸಂಪೂರ್ಣವಾಗಿ "ಪರೋಕ್ಷ" ತೆರಿಗೆಗಳ ಮೇಲೆ ಅವಲಂಬಿಸಿದ್ದರೆ, ಅಲ್ಲಿಯ ಮಂಡಲಗಳು "ನೇರ" ತೆರಿಗೆಯನ್ನು ಹಾಕುವ ಅಧಿಕಾರವನ್ನು ಪಡೆದಿದ್ದವು. ಆದರೆ ಇಷ್ಟರಿಂದಲೇ ಈ ಸಮಿತಿಯ ಯಾವ ಸದಸ್ಯರೇ ಆಗಲಿ ಸ್ವಿಟ್ಸರ್‌ಲ್ಯಾಂಡಿನ ಅನುಭವದಿಂದ, ಭಾರತದ ಸಂಯುಕ್ತ ರಾಜ್ಯಕ್ಕೆ ಈ ಮಾರ್ಗವನ್ನು ಸೂಚಿಸುವ ಧೈರ್ಯಮಾಡುತ್ತಾರೆಂದು ನನಗೆ ಊಹಿಸಲಿಕ್ಕೂ ಸಾಧ್ಯವಿಲ್ಲ. ಹಾಗೆ ಹೇಳುವುದಾದರೆ ಸುಣ್ಣವನ್ನು ಮತ್ತು ಗಿಣ್ಣನ್ನು (Cheese) ಹೋಲಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಅಲ್ಲಿಯೂ ಸಹ, ೧೯೧೫ ಸ್ವಿಟ್ಸರ್‌ಲ್ಯಾಂಡ್ ಸಂವಿಧಾನ ಈ ವ್ಯವಸ್ಥೆಯನ್ನು ಬಿಟ್ಟುಬಿಡಬೇಕಾಗಿ ಬಂತು ಮತ್ತು ರಾಜ್ಯಗಳ ಪ್ರಜೆಗಳ ಮೇಲೆ ಕೇಂದ್ರ ಸರ್ಕಾರದವರು "ನೇರ" ತೆರಿಗೆಗಳನ್ನು ಹಾಕುವುದಕ್ಕೆ ಒಪ್ಪಿಗೆ ಕೊಡಬೇಕಾಯಿತು. ಪರಿಣಾಮವಾಗಿ ಈ ವಿಷಯದಲ್ಲಿ ಪರಿಣತರ ಸಮಿತಿಗೆ ಈ ಮಾದರಿ ದಿಕ್ಕನ್ನು ತೋರಿಸುತ್ತದೆ ಎನ್ನುವುದಾದರೆ ಇದಕ್ಕೆ ನಾನು ನನ್ನ ಅನುಮತಿಯನ್ನು ಕೊಡಲಾರೆ.

೧೦ನೆಯ ಪ್ಯಾರಾದಲ್ಲಿ ಈ ಉಪಸಮಿತಿಯವರು ಸೂಚಿಸಿರುವ, ಸಂಪನ್ಮೂಲಗಳನ್ನು ಹಂಚಿಕೊಳ್ಳುವ ವಿಷಯಕ್ಕೆ ಬಂದರೆ, ಈ ಹಂಚಿಕೆಗೆ ಅನ್ವಯಿಸಬಹುದಾದ ಒಂದೇ ಅಳತೆಗೋಲೆಂದರೆ ಅದು ಸಾಕಾಗುತ್ತದೆಯೇ ಎನ್ನುವ ಅಳತೆಗೋಲು. ಈ ಹತ್ತನೆ ಪ್ಯಾರಾದಲ್ಲಿ ತೋರಿಸಿರುವ ಹಂಚಿಕೆ, ಕೇಂದ್ರ ಸರ್ಕಾರಕ್ಕೂ ಮತ್ತು ಘಟಕಗಳಿಗೇ ಅವಶ್ಯಕತೆಗೆ ಸಾಕಾಗುವಷ್ಟು ಆದಾಯವನ್ನು ಕೊಡುತ್ತದೆಯೆ? ಆ ರೀತಿಯ ಅಳತೆಗೋಲಿಂದ ಈ ವಿಷಯವನ್ನು ಅಳೆಯಲಿಕ್ಕಾಗುವುದಿಲ್ಲ– ಹೀಗೆ ಹೇಳುವಾಗ ನನಗೆ ಉಪಸಮಿತಿಯವರ ಮನಸ್ಸನ್ನು ನೋಯಿಸುವ ಇಚ್ಛೆ ಇಲ್ಲ– ಈ ಹಂಚಿಕೆ ಅವಶ್ಯಕತೆಗಳನ್ನು ಪೂರೈಸುತ್ತದೋ ಇಲ್ಲವೋ ಎಂದು ಹೇಳುವುದಕ್ಕೆ ಮುಂಚೆ ಅದನ್ನು ಒರೆಹಚ್ಚುವುದಕ್ಕೆ ಬೇಕಾದ ಆಯವ್ಯಯ ಅಂದಾಜು ಈ ವರದಿಯಲ್ಲಿ ಸೇರಿಲ್ಲ. ಸಾರ್ವಜನಿಕ ಅಭಿವೃದ್ಧಿಶೀಲ ಆದಾಯ ಮೂಲಗಳನ್ನು ಹುಡುಕಿಕೊಳ್ಳಬೇಕು ಎನ್ನುವ

ಅಭಿಪ್ರಾಯದಿಂದ ಈ ಹಂಚಿಕೆಯನ್ನು ಸೂಚಿಸಿದ ಹಾಗೆ ಕಾಣುತ್ತದೆ. ಒಟ್ಟಿನಲ್ಲಿ ಆ ಮಾತು ನಿಜ. ಆದರೆ ಹಾಗೆ ಹಣವನ್ನು ಹಂಚುವುದನ್ನು ಸೂಚಿಸಿದಾಗ, ಕೇಂದ್ರ ಸರ್ಕಾರಕ್ಕೆ ಅದರ ಆರ್ಥಿಕ ವ್ಯವಸ್ಥೆಯಲ್ಲಿ ಸಾಕಾಗುವಷ್ಟು ಮತ್ತು ಬೇಕಾಗುವಷ್ಟನ್ನು ಸಮಿತಿಯವರು ಕಡೆಗಣಿಸಿದ್ದಾರೆ.

ಉಪಸಮಿತಿಯ ವರದಿಯ ೧೦ನೆ ಪ್ಯಾರಾದಲ್ಲಿರುವ ಆದಾಯಕ್ಕೆ ಸಂಬಂಧಿಸಿದ ಸೂಚನೆಗಳನ್ನು ತೆಗೆದುಕೊಳ್ಳೋಣ. ಸುಂಕ ಆದಾಯದ ಒಂದು ಮೂಲವಾಗಿದೆ. ಸುಂಕದಿಂದ ಬರುವ ಆದಾಯ ಅನೇಕ ಸಂಗತಿಗಳನ್ನು ಅವಲಂಬಿಸಿದೆ. ಮೊದಲನೆಯದಾಗಿ ಅದು ವ್ಯಾಪಾರದ ಸಮೃದ್ಧಿ ಅಥವಾ ವ್ಯಾಪಾರದ ಕ್ಷೀಣದೆಸೆಯನ್ನು ಅವಲಂಬಿಸಿರುತ್ತದೆ. ಕ್ಷೀಣದೆಸೆಯ ಕಾಲದಲ್ಲಿ ರಫ್ತು ಕಡಿಮೆಯಾಗುವುದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ಜನರ ಕೊಳ್ಳುವ ಶಕ್ತಿಯೂ ಕಡಿಮೆಯಾಗುವುದರಿಂದ ಆಮದು ಕೂಡ ಕಡಿಮೆ ಯಾಗುತ್ತದೆ; ಆದ್ದರಿಂದ ಸುಂಕದಿಂದ ಬರುವ ಆದಾಯಕ್ಕೆ ನೇರವಾಗಿ ಧಕ್ಕೆಯಾಗುತ್ತದೆ. ಎರಡನೆಯದಾಗಿ ಈ ಆದಾಯದ ಮೂಲ ಮುಂದೆ ಸುಂಕದ ಯಾವ ನೀತಿಯನ್ನು ಅನುಸರಿಸುತ್ತಾರೆ ಎನ್ನುವುದನ್ನು ಅವಲಂಬಿಸಿದೆ. ಭಾರತದಲ್ಲಿ ಸ್ವದೇಶೀ ಕೈಗಾರಿಕೆ ಮತ್ತು ಸಿದ್ಧವಸ್ತುಗಳ ಬಗ್ಗೆ ಪೈಪೋಟಿ ನಡೆಸುವ ಆಮದು ವಸ್ತುಗಳು ಬಾರದ ಹಾಗೆ ಅಡ್ಡಗೋಡೆಯನ್ನು ನಿರ್ಮಿಸಿ, ಸಂಪೂರ್ಣ ರಕ್ಷಣೆಯನ್ನು ಒದಗಿಸಬೇಕೆನ್ನುವುದರಲ್ಲಿ ನಂಬಿಕೆ ಇರುವ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬರಬಹುದು. ಹಾಗಾದಾಗ ರಕ್ಷಣಾ ನೀತಿಯ ಅತಿರೇಕದಿಂದ ಸುಂಕದ ಆದಾಯದ ಮೂಲಕ್ಕೇ ಏಟು ಬೀಳಬಹುದು. ಅದರ ಬದಲು ವ್ಯಾಪಾರದ ಸ್ವಾತಂತ್ರ್ಯದಲ್ಲಿ ಮತ್ತು ರಕ್ಷಣೆ ಬೇಕಿಲ್ಲವೆನ್ನುವುದರಲ್ಲಿ ನಂಬಿಕೆ ಇರುವ ಪಕ್ಷ ಅಧಿಕಾರಕ್ಕೆ ಬಂದರೆ, ಸಂಯುಕ್ತ ರಾಜ್ಯ ತುಂಬ ಕಡಿಮೆಯಾದ ಸುಂಕದ ಆದಾಯವನ್ನು ಅವಲಂಬಿಸುವಂತೆ ಮಾಡಬಹುದು.

ಸಂಯುಕ್ತ ರಾಜ್ಯ ಎರಡನೆಯ ಆದಾಯ ಮೂಲವಾದ ಅಫೀಮನ್ನು ಗಣನೆಗೆ ತೆಗೆದುಕೊಳ್ಳೋಣ. ಭಾರತ ಸರ್ಕಾರದ ಒಂದು ಪತ್ರದ ಪ್ರಕಾರ, ಅಫೀಮಿನ ರಫ್ತಿನಿಂದ ಬರುವ ಎರಡು ಕೋಟಿ ರೂಪಾಯಿಯಷ್ಟು ಆದಾಯವನ್ನು ನಾವು ಕಳೆದುಕೊಳ್ಳುತ್ತೇವೆ. ಆದರೆ, ಅಷ್ಟು ಕಳೆದರೂ ವೈದ್ಯಕೀಯ ಅಫೀಮಿನಿಂದ ೧೦ರಿಂದ ೧೫ ಲಕ್ಷ ರೂಪಾಯಿಗಳನ್ನು ಉಳಿಸುತ್ತೇವೆ. ಇದು ಸಂಯುಕ್ತ ರಾಜ್ಯಕ್ಕೆ ಎಷ್ಟು ನಿಕೃಷ್ಟವಾದ ಆದಾಯದ ಮೂಲ ಎನ್ನುವುದನ್ನು ತೋರಿಸುತ್ತದೆ.

ಸಂಯುಕ್ತ ರಾಜ್ಯಕ್ಕೆ ಉಪಸಮಿತಿಯು ತೋರಿಸಿರುವ ಮೂರನೆಯ ಆದಾಯದ ಮೂಲವೆಂದರೆ ಉಪ್ಪಿನ ತೆರಿಗೆ. ನಮಗೆಲ್ಲ ಗೊತ್ತಿರುವ ಹಾಗೆ ಇದು ವಿವಾದಾಸ್ಪದವಾದ ಮೂಲವಾಗಿದೆ ಮತ್ತು ಭಾರತದ ರಾಜಕಾರಣದ ತುದಿಗೂ ಇದನ್ನು ಎಳೆಯಲಾಗಿದೆ; ಕಾಂಗ್ರೆಸ್ ಪಕ್ಷಕ್ಕೆ ಅವಕಾಶ ಸಿಕ್ಕರೆ, ಈ ತೆರಿಗೆ ಸಂಪೂರ್ಣವಾಗಿ ಮಾಯವಾಗಬಹುದು. ಕಾಂಗ್ರೆಸ್ಸು ಈ ತೆರಿಗೆಯನ್ನು ರದ್ದು ಮಾಡುವುದರಲ್ಲಿ ಯಶಸ್ವಿಯಾಗುವುದೇ ಎಂಬ ಪ್ರಶ್ನೆಯನ್ನು ಮರೆತರೂ ಕೂಡ, ಈ ತೆರಿಗೆ ಭಾರತದ ಜನಸಾಮಾನ್ಯರ ಜೀವನದ ಮಟ್ಟದೊಂದಿಗೆ ಹೆಣೆದುಕೊಂಡಿರುವುದರಿಂದ, ಇದು ಸಂಯುಕ್ತ ರಾಜ್ಯಕ್ಕೆ ದೊಡ್ಡ ಆದಾಯದ ಮೂಲವಾಗುತ್ತದೆ ಎಂದು ನಂಬುವ ಹಾಗಿಲ್ಲ.

ಕೊನೆಯದಾಗಿ, ಸಂಸ್ಥೆಗಳ ಮೇಲೆ ವಿಧಿಸುವ ಶುಲ್ಕವನ್ನು ಸಂಯುಕ್ತ ರಾಜ್ಯದ ಆದಾಯ ಮೂಲ ವಾಗಿ ಉಪಸಮಿತಿ ಸೂಚಿಸಿದೆ. ಅವುಗಳಿಂದ ಬರುವ ಶುಲ್ಕ ಮೂರು ಕೋಟಿಯಷ್ಟು ಎಂದು ಎಲ್ಲೋ ಕೇಳಿದ್ದೇನೆ. ಸಧ್ಯದ ಸ್ಥಿತಿಯಲ್ಲಿ ಅದು ತುಂಬ ಸಣ್ಣ ಪ್ರಮಾಣದ ಆದಾಯವೆನ್ನುವುದು ಸ್ಪಷ್ಟವಾಗಿದೆ. ಭಾರತವು ಸಂಪದ್ಭರಿತವಾಗಬೇಕಾದರೆ ಔದ್ಯೋಗೀಕರಣ ಬಹಳ ಮುಖ್ಯವಾದದ್ದೆಂದು ನಾವು

ಒಪ್ಪಿಕೊಳ್ಳುವುದಾದರೆ, ಬಂಡವಾಳವನ್ನು ಹೂಡುವುದು ಕೂಡ ಅವಶ್ಯಕವಾಗುವುದರಿಂದ, ಈ ತೆರಿಗೆಯನ್ನು ನಾವು ಬಹಳಷ್ಟು ಹೆಚ್ಚಿಸಿದರೆ, ಬಂಡವಾಳ ಹೂಡುವವರನ್ನು ಶಿಕ್ಷಿಸಿದ ಹಾಗಾಗುತ್ತದೆಂದು ನನಗೆ ಅನಿಸುತ್ತದೆ.

ಆಯವ್ಯಯ ಅಂದಾಜಿನ ಬಗ್ಗೆ ನನ್ನ ಅಭಿಪ್ರಾಯ ಇದು. ಈಗ ಖರ್ಚುಗಳ ಬಗ್ಗೆ ಉಪಸಮಿತಿಯವರು ರಕ್ಷಣಾ ವ್ಯವಸ್ಥೆಯೊಂದನ್ನು ಬಿಟ್ಟು ಕೇಂದ್ರ ಸರ್ಕಾರಕ್ಕೆ ಬೇರೆ ಏನೂ ಕೆಲಸವಿಲ್ಲವೆಂದು ತಿಳಿದ ಹಾಗಿದೆ. ಈ ಆಧುನಿಕ ಕಾಲದಲ್ಲಿ ಯಾವುದೇ ಸರ್ಕಾರದ ಕೆಲಸ ಅಷ್ಟೇ ಎಂದರೆ ನಾನು ಒಪ್ಪುವುದಿಲ್ಲ. ಚರಿತ್ರೆಯಲ್ಲಿ ಹಿಂದೆ ಒಂದು ಕಾಲವಿತ್ತು. ಆಗ ಸರ್ಕಾರ ಮಾಡಬೇಕಾದ ಕೆಲಸವೆಂದರೆ ಅನಾಯಕತ್ವವನ್ನು ತಡೆಯುವುದು ಮತ್ತು ಪೋಲೀಸರನ್ನು ಇಡುವುದು ಎಂದು ಜನರು ತಿಳಿದಿದ್ದರು; ಆದರೆ ನಾವು ಅದನ್ನು ಬದಲಾಯಿಸಿದ್ದೇವೆ. ಸರ್ಕಾರ ಪೋಲೀಸರನ್ನು ಇಡುವುದೇ ಅಲ್ಲದೆ ಆಹಾರ, ಆರೋಗ್ಯ ಮತ್ತು ಉದ್ಯೋಗದ ಕಡೆಗೂ ಗಮನಕೊಡಬೇಕೆಂದು ನಾವು ನಂಬಿದ್ದೇವೆ. ನನಗನ್ನಿಸುವುದೇನೆಂದರೆ– ಇದು ನನ್ನ ವೈಯಕ್ತಿಕ ಅಭಿಪ್ರಾಯ. ಬೇರೆ ಸದಸ್ಯರ ಅಭಿಪ್ರಾಯ ಬೇರೆಯೇ ಇರಬಹುದು– ಕಡೆಯ ಪಕ್ಷ ಸ್ವಲ್ಪ ಕಾಲವಾದರೂ ಕೇಂದ್ರ ಸರ್ಕಾರ, ಭಾರತಕ್ಕೆ ವಿಶಿಷ್ಟವಾದ ಕೆಲವು ಜೀವನ ಸೌಕರ್ಯದ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು. ಕೇಂದ್ರ ಸರ್ಕಾರ ಸ್ವಲ್ಪ ಮಟ್ಟಿಗಾದರೂ ಶೋಷಿತವರ್ಗದವರೆಂದು ನಾವು ಕರೆಯುವ ಜನರಿಗೆ ಜೀವನ ಸೌಕರ್ಯಗಳನ್ನು ಒದಗಿಸಿ ಅವರಿಗೆ ನೆರವಾಗುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕೆಂದು ನಾನು ಯೋಚಿಸುತ್ತಿದ್ದೇನೆ. ಈ ವಿಷಯವನ್ನು ಬೇರೆ ಕಡೆಯಲ್ಲೂ ನಾನೂ ಸೂಚಿಸಲಿದ್ದೇನೆ. ಶೋಷಿತ ವರ್ಗದವರ ಪ್ರಶ್ನೆ ಮತ್ತು ಅಸ್ಪೃಶ್ಯತೆಯನ್ನು ತೊಡೆದುಹಾಕುವ ಪ್ರಶ್ನೆಯನ್ನು ಇನ್ನು ಮುಂದೆ ಕೇವಲ ಸ್ಥಳೀಯವಾದ ಅಥವಾ ಪ್ರಾಂತೀಯವಾದ ಪ್ರಶ್ನೆ ಎಂದು ತಿಳಿಯಬಾರದೆನ್ನುವುದು ನನ್ನ ಅಭಿಪ್ರಾಯ. ಅದನ್ನು ಇಡೀ ದೇಶವೇ ಆಸಕ್ತಿ ವಹಿಸುವ ರಾಷ್ಟ್ರೀಯ ಸಮಸ್ಯೆಯೆಂದು ತಿಳಿಯುವುದು ನನಗೆ ಬೇಕಾಗಿದೆ. ಕೇಂದ್ರದಲ್ಲಿರುವ ಸರ್ಕಾರ ಬಹುಶಃ ಶೋಷಿತ ವರ್ಗದವರಷ್ಟೇ ಸಂಖ್ಯೆಯಲ್ಲಿರುವ ಕಾಡಿನಲ್ಲಿರುವ ಬುಡಕಟ್ಟು ಜನರನ್ನು ನಾಗರೀಕತೆಯ ಕಕ್ಷೆಯಲ್ಲಿ ತರುವುದನ್ನೂ ನಾನು ಬಯಸುತ್ತೇನೆ. "ಹಿಂದುಳಿದ ಪ್ರದೇಶಗಳ" ಬಗ್ಗೆಯೂ ಈ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದೂ ಬಯಸುತ್ತೇನೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಕೇಂದ್ರದಲ್ಲಿರುವ ಸರ್ಕಾರ ಕನಿಷ್ಠ ಪ್ರಮಾಣದ ನಾಗರಿಕ ಜೀವನವನ್ನು ಪ್ರತಿಯೊಬ್ಬ ವ್ಯಕ್ತಿಗೂ ಮತ್ತು ಪ್ರತಿಯೊಂದು ಜನಾಂಗಕ್ಕೂ ಸಾಧ್ಯಮಾಡುವಂತಹ ಕಾರ್ಯಕ್ರಮಗಳನ್ನು ಕೈಕೊಳ್ಳಲೇಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಅದೂ ಅಲ್ಲದೆ, ಇಡೀ ಭಾರತಕ್ಕೆ ತಗಲುವಂತಹ ಸಂಕಟಗಳಿರಬಹುದು ಅಥವಾ ಒಂದು ಪ್ರಾಂತಕ್ಕೆ ತಗಲುವಂತಹದು ಇರಬಹುದು. ಅದನ್ನು ನಿವಾರಿಸುವಂತಹ ಶಕ್ತಿ ಆ ಒಂದು ಪ್ರಾಂತಕ್ಕೆ ಆಗ ಇಲ್ಲದೆ ಇರಬಹುದು. ಉದಾಹರಣೆಗೆ ಮಲೇರಿಯಾ ಎಂಥ ಶಾಪವಾಗಿದೆ ನೋಡಿ. ಕೆಲವು ಪ್ರಾಂತಗಳಲ್ಲಿ ಅದು ಸಣ್ಣಪುಟ್ಟ ಕಾಯಿಲೆ. ಕೆಲವು ಪ್ರಾಂತಗಳಲ್ಲಿ ಅದು ಜನರ ಪ್ರಾಣವನ್ನೇ ತಿನ್ನುತ್ತದೆ ಎಂದು ಕೇಳಿದ್ದೇನೆ. ಆ ಪ್ರಾಂತಕ್ಕೆ ಅದನ್ನು ನಿರ್ಮೂಲನ ಮಾಡುವುದಕ್ಕೆ ಸಾಕಷ್ಟು ಆರ್ಥಿಕ ಬಲ ಇಲ್ಲದೆ ಇರಬಹುದು. ಅಂತಹದನ್ನು ರಾಷ್ಟ್ರೀಯ ಸಮಸ್ಯೆಯಾಗಿ ಪರಿಗಣಿಸಬೇಕಾಗುತ್ತದೆ ಮತ್ತು ಅಷ್ಟರಮಟ್ಟಿಗೆ ಜೀವನ ಸೌಕರ್ಯವನ್ನು ಕಲ್ಪಿಸುವ ಕೆಲಸವನ್ನು ರಾಷ್ಟ್ರೀಯ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ.

ಅದೂ ಅಲ್ಲದೆ, ಎಲ್ಲ ಪ್ರಾಂತಗಳಿಗೂ ಸಮಾನವಾಗುವ ಕೆಲವು ಕಾರಣಗಳಿಂದ ಪ್ರತ್ಯೇಕವಾದ ಕೆಲವು ಕಾರಣಗಳಿಗಾಗಿ, ಸಂಯುಕ್ತ ರಾಜ್ಯ ಸರ್ಕಾರ ಕೆಲವು ಸಹಾಯಧನಗಳನ್ನು ಕೊಡಬೇಕಾಗಿ ಬರುವುದನ್ನು

ಉಪಸಮಿತಿಯವರು ಲೆಕ್ಕಕ್ಕೆ ತೆಗೆದುಕೊಂಡಹಾಗಿಲ್ಲ. ಉದಾಹರಣೆಗೆ ಸಾರ್ವಭೌಮತ್ವದ ವಿಶೇಷ ಸಂಬಂಧವಿರುವ ಕಾರಣ ಕೆಲವು ವಿಚಿತ್ರ ಜವಾಬ್ದಾರಿಗಳನ್ನು ಹೊರಬೇಕಾಗಿರುವ ವಾಯುವ್ಯ ಗಡಿನಾಡಿನ ಪ್ರಾಂತಕ್ಕೆ ಸಹಾಯಧನ ಕೊಡಬೇಕಾಗಿ ಬರಬಹುದು. ಹಾಗೆಯೇ ಕೆಲವು ಹೊಸ ಪ್ರಾಂತಗಳು ರಚನೆಯಾಗಿ ಅವು ತಮ್ಮ ಕಾಲ ಮೇಲೆ ನಿಲ್ಲುವುದಕ್ಕಾಗಿ, ಸಂಯುಕ್ತ ಸರ್ಕಾರ ಸಹಾಯಧನವನ್ನು ಕೊಡಬೇಕಾಗಿ ಬರಬಹುದು.

ಈಗ ನನಗೆ ಏನು ಎನಿಸುತ್ತದೆ ಎಂದರೆ ನಾನು ವಿವರಿಸಲಿಕ್ಕೆ ಪ್ರಯತ್ನಿಸಿದ ಹಾಗೆ ಖರ್ಚು ವೆಚ್ಚದ ವಿಷಯವನ್ನು ಎಲ್ಲ ಕಡೆಯಿಂದಲೂ ಗಮನಿಸಿ, ಈ ಉಪಸಮಿತಿಯ ವರದಿಯಲ್ಲಿ ವಿವರಿಸಿರುವ ಆದಾಯದ ವಿಷಯವನ್ನು ಗಮನಿಸಿದರೆ, ಸಂಯುಕ್ತ ಸರ್ಕಾರಕ್ಕಾಗಿ ಯೋಚಿಸಿರುವ ಆರ್ಥಿಕ ವ್ಯವಸ್ಥೆ ಸಾಮಾನ್ಯ ಕಾಲದಲ್ಲಿ ಅದು ಮುಳುಗದ ಹಾಗೆ ನೋಡಿಕೊಳ್ಳಬಹುದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅದು ಹಾಗಾಗದಿರಲೂಬಹುದು. ಯಾವುದಾದರೂ ಕೆಟ್ಟಗಾಳಿ ನುಗ್ಗಿದರೆ ಅದು ಮುಳುಗುವುದಂತೂ ಖಂಡಿತ.

ತುರ್ತು ಪರಿಸ್ಥಿತಿಯ ಬಗ್ಗೆ– ಅತ್ಯಂತ ತುರ್ತು ಪರಿಸ್ಥಿತಿ ಎನ್ನುತ್ತೇನೆ– ಉಪಸಮಿತಿಯವರು ಸೂಚಿಸಿರುವ ಹಂಚಿಕೆಗಳನ್ನು ಗಮನಿಸೋಣ. ಪ್ರತಿಯೊಂದು ಘಟಕದಿಂದ ಸರ್ಕಾರವು ಇಂತಹ ಸಂದರ್ಭದಲ್ಲಿ ಪ್ರಾಂತೀಯ ಸರ್ಕಾರಗಳಿಂದ ಧನಸಹಾಯ ಪಡೆಯುವ ಅಧಿಕಾರವನ್ನು ಹೊಂದಿರಬೇಕು ಎಂದು ಶಿಫಾರಸ್ಸು ಮಾಡುತ್ತದೆ. ಇದು ಸರಿಯಾದ ಕ್ಷೇಮಕರವಾದ ನಂಬಲರ್ಹವಾದ ರೀತಿಯೇ ಎನ್ನುವುದೇ ಪ್ರಶ್ನೆಯಾಗಿದೆ. ಎಲ್ಲ ಸಂದರ್ಭಗಳಲ್ಲೂ ಈ ಕ್ರಮವನ್ನು ನೆಚ್ಚಿ ಕೂಡಬಹುದೆ? ಅತ್ಯಂತ ತುರ್ತು ಪರಿಸ್ಥಿತಿಯಲ್ಲಿ ಪ್ರಾಂತೀಯ ಸರ್ಕಾರಗಳು ವಂತಿಗೆಯನ್ನು ಕೊಡಲು ಒಪ್ಪುವುದರ ಬಗ್ಗೆ ನಿನ್ನೆ ನನ್ನ ಗೌರವಾನ್ವಿತ ಸಹೋದ್ಯೋಗಿಗಳು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಪ್ರಾಂತೀಯ ಸರ್ಕಾರಗಳು ಅತ್ಯಂತ ತುರ್ತು ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಧನ ಸಹಾಯವನ್ನು ಮಾಡುವುದೇ ಆದರೆ, ಅಂತಹ ತುರ್ತು ಪರಿಸ್ಥಿತಿ ಉದ್ಭವಿಸಿದೆಯೇ ಇಲ್ಲವೇ ಎಂದು ನಿರ್ಣಯಿಸುವ ಹಕ್ಕನ್ನು ಪಡೆದಿರಬೇಕು ಎಂದು ಅವರು ಹೇಳಿದರು. ಆ ಅಭಿಪ್ರಾಯವನ್ನು ಎಲ್ಲರೂ ಒಪ್ಪದಿರಬಹುದು; ಆದರೆ ಈ ಅಭಿಪ್ರಾಯ ಒಂದು ವಿಷಯವನ್ನು ಖಂಡಿತವಾಗಿಯೂ ಸ್ಪಷ್ಟಪಡಿಸುತ್ತದೆ. ಅದೇನೆಂದರೆ ಒಂದು ವೇಳೆ ತುರ್ತು ಪರಿಸ್ಥಿತಿ ಉದ್ಭವಿಸಿದರೆ, ಖೋತಾ ಬಿದ್ದದ್ದನ್ನು ತುಂಬಲಿಕ್ಕೆ ಪ್ರಾಂತಗಳು ಸ್ವಇಚ್ಛೆಯಿಂದ ಮುಂದೆ ಬರುವುದಿಲ್ಲ ಎನ್ನುವುದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪ್ರಾಂತಗಳು ತಮ್ಮ ಭಾಗದ ವಂತಿಗೆಯನ್ನು ಕೊಡುತ್ತವೆಂದು ನಂಬಬಹುದೆ? ನಾನು ಈ ಪ್ರಶ್ನೆಯನ್ನು ಎತ್ತಿದ್ದೇನೆ. ಆದರೆ, ನಾನೇ ಅದಕ್ಕೆ ಉತ್ತರ ಕೊಡಬೇಕೇ ಎನ್ನುವುದು ನನಗೆ ಗೊತ್ತಿಲ್ಲ. ಅದೇನೇ ಇರಲಿ, ಅದೊಂದು ನಂಬಲರ್ಹವಾದ ಕ್ರಮವೆಂದು ನನಗೆ ಅನಿಸುವುದಿಲ್ಲ. ಪ್ರಾಂತಗಳಲ್ಲಿ ಹಣವಿರುವ ಬಗ್ಗೆ ನಾವು ಸ್ವಲ್ಪ ಹೆಚ್ಚು ಕಡಿಮೆ ಖಚಿತವಾಗಿರಬಹುದು. ಆದರೆ, ತುರ್ತು ಪರಿಸ್ಥಿತಿಯಲ್ಲಿ, ಅದನ್ನು ನಿವಾರಿಸಲಿಕ್ಕೆ, ಪ್ರಾಂತಗಳಲ್ಲಿ ಹಣವಿರುತ್ತದೆಯೇ ಎನ್ನುವ ಬಗ್ಗೆ ನಾನು ಖಚಿತವಾಗಿ ಹೇಳಲಾರೆ. ಆದ್ದರಿಂದ ಲಾರ್ಡ್ ಛಾನ್ಸಲರ್ ಅವರೆ, ಸಂದರ್ಭಾನುಸಾರವಾಗಿ ಮತ್ತು ತುರ್ತು ಪರಿಸ್ಥಿತಿಗಾಗಿ ಸಾಕಷ್ಟು ಹಣವಿರಬೇಕಾದ್ದರಿಂದ ಸಂಯುಕ್ತ ಸರ್ಕಾರದ ಆರ್ಥಿಕ ವ್ಯವಸ್ಥೆಯ ಉದ್ದ ಅಗಲಗಳನ್ನು ಹಿಗ್ಗಿಸುವುದು ಅತ್ಯುತ್ತಮ ದಾರಿಯೆನ್ನುವುದು ನನ್ನ ತೀರ್ಮಾನವಾಗಿದೆ. ಆದ್ದರಿಂದ ವರಮಾನ ತೆರಿಗೆಯನ್ನು ಸಂಯುಕ್ತ ಸರ್ಕಾರಕ್ಕೂ ಮತ್ತು ಪ್ರಾಂತೀಯ ಸರ್ಕಾರಗಳಿಗೂ ಸೇರಿದ ಆದಾಯವಾಗಿ ಪರಿಗಣಿಸಬೇಕೆನ್ನುವುದು ನನ್ನ ಸೂಚನೆಯಾಗಿದೆ. ಹಾಗಾದರೆ ಪ್ರತಿಯೊಂದು ಸರ್ಕಾರಕ್ಕೂ ಆ ಮೂಲವನ್ನು

ಬಳಸಲಿಕ್ಕೆ ಸಹಜವಾದ ಹಕ್ಕು ಮತ್ತು ಅಧಿಕಾರ ಇರುತ್ತದೆ. ಆದ್ದರಿಂದ ಅವಶ್ಯಕತೆಯಿದ್ದಾಗ ೨೧ನೆ ಪ್ಯಾರಾದಲ್ಲಿ ವಿವರಿಸಿರುವ ವಂತಿಗೆಗಳನ್ನು ಅವಲಂಬಿಸಬೇಕಾಗುವುದಿಲ್ಲ.

ಈ ವಿಷಯದ ಬಗ್ಗೆ ನಾನು ಮಾತನಾಡುತ್ತಿರುವಾಗಲೆ, ಈ ಆದಾಯ ತೆರಿಗೆಯನ್ನು ಹಂಚಿ ಕೊಳ್ಳುವ ಕ್ರಮದ ಬಗ್ಗೆ ಕೆಲವು ಅಭಿಪ್ರಾಯಗಳನ್ನು ಹೇಳಬೇಕೆಂದಿದ್ದೇನೆ. ಅದನ್ನು ಮಾಡುವುದಕ್ಕೂ ಮುಂಚೆ ಎರಡು ಸೂಚನೆಗಳನ್ನು ಸ್ಪಷ್ಟಪಡಿಸುತ್ತೇನೆ. ಮೊದಲನೆಯದಾಗಿ ನಾವು ಅಂತಿಮವಾಗಿ ಸಂಯುಕ್ತ ಸರ್ಕಾರಕ್ಕೂ ಮತ್ತು ಅದರ ಘಟಕಗಳಿಗೂ ಹಣವನ್ನು ಹೇಗೆ ಹಂಚಬೇಕು ಎನ್ನುವ ವಿಷಯ– ನಾನು ವಿಶೇಷವಾಗಿ ಬ್ರಿಟಿಷ್ ಭಾರತದಲ್ಲಿರುವ ಪ್ರಾಂತಗಳ ಬಗ್ಗೆ ಮಾತಾಡುತ್ತಿದ್ದೇನೆ– ಇದನ್ನು ನಾವು ಕಲ್ಪಿಸಬೇಕೆಂದರೆ, ದಾನದ ಮೇಲೆ ಅಥವಾ ವಂತಿಗೆಯ ಮೇಲೆ ಪ್ರಾಂತೀಯ ಆರ್ಥಿಕತೆಯು ಅವಲಂಬಿಸಿರಬಾರದು. ಎರಡನೆಯದಾಗಿ, ಪ್ರಾಂತೀಯ ಆರ್ಥಿಕ ವ್ಯವಸ್ಥೆಯನ್ನು ಹೇಗೆ ರೂಪಿಸಬೇಕೆಂದರೆ, ಪ್ರತಿಯೊಂದು ರಾಜ್ಯಾಂಗಕ್ಕೂ ಶಾಸನಸಭೆಯ ಬಗ್ಗೆ ಇರಲೇಬೇಕಾದ ಜವಾಬ್ದಾರಿಯ ಭಾವನೆಯನ್ನು ಅದು ನಾಶಮಾಡುವ ಹಾಗಿರಬೇಕು.

ಅಧ್ಯಕ್ಷರು: ಪ್ರಾಂತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಒಂದು ವ್ಯವಸ್ಥೆಗೆ ತರಬೇಕಾದದ್ದು ಅತ್ಯಂತ ಮುಖ್ಯ ವಿಷಯವೆಂದು ನೀವು ಹೇಳುತ್ತಿದ್ದೀರಿ ಎಂದು ನಾನು ಅರ್ಥ ಮಾಡಬಹುದೆ? ಪ್ರಾಂತೀಯ ಆರ್ಥಿಕ ವ್ಯವಸ್ಥೆಯ ಬಗ್ಗೆ ನೀವು ನಿಯಮವೊಂದನ್ನು ನಿರ್ಧರಿಸಬೇಕು ಎಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಪ್ರಾಂತೀಯ ಪ್ರಶ್ನೆಗಳೆಲ್ಲ ಆದಷ್ಟು ಬೇಗ ನಿರ್ಧಾರವಾಗಬೇಕೆಂದು ನೀವು ಹೇಳುತ್ತಿದ್ದೀರಿ ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು ಅದಾಗಬೇಕು. ಸಂಯುಕ್ತ ಸರ್ಕಾರ ತೆರಿಗೆಯ ಪ್ರಮಾಣವನ್ನು ನಿರ್ಧರಿಸಿ, ಅದರ ಆದಾಯವನ್ನು ಪ್ರಾಂತಗಳಿಗೂ ಮತ್ತು ತನಗೂ ಹಂಚಿಕೊಳ್ಳುವ, ಆದಾಯ ತೆರಿಗೆಯ ವಿಭಜನೆಯನ್ನು ನಾನು ಒಪ್ಪುವುದಿಲ್ಲ. ನಾನು ಸಂಯುಕ್ತ ಸರ್ಕಾರಕ್ಕೂ ಮತ್ತು ಪ್ರಾಂತೀಯ ಸರ್ಕಾರಕ್ಕೂ ತೆರಿಗೆಗಳು ಯಾವ ರೀತಿಯಲ್ಲಿ ಯಾವುದು ಯಾರಿಂದ ವಸೂಲಾಗಬೇಕು ಎನ್ನುವುದನ್ನೇ ಹಂಚಬೇಕೆ ನ್ನುತ್ತೇನೆ. ತೆರಿಗೆ ವಿಚಾರಣಾ ಸಮಿತಿಯವರು ಶಿಫಾರಸ್ಸು ಮಾಡಿದ ವ್ಯವಸ್ಥೆಯಲ್ಲಿ ಆದಾಯ ತೆರಿಗೆಯನ್ನು ಹಂಚುವ ಮಟ್ಟಿಗೆ ಅದನ್ನು ನಾನು ಒಪ್ಪುತ್ತೇನೆ. ನನ್ನ ಪ್ರಕಾರ "ವೈಯಕ್ತಿಕ ಆದಾಯ"ವನ್ನು ಪ್ರಾಂತಗಳಿಗೂ, ಮಿಕ್ಕವನ್ನು ಸಂಯುಕ್ತ ಸರ್ಕಾರಕ್ಕೂ ವಹಿಸಬೇಕು ಮತ್ತು "ವೈಯಕ್ತಿಕ ಆದಾಯ"ದ ಮೇಲಿನ ತೆರಿಗೆಯನ್ನು ಪ್ರತಿಯೊಂದು ಪ್ರಾಂತವೂ ನಿರ್ಧರಿಸಬೇಕೇ ಹೊರತು, ತನ್ನ ಅವಶ್ಯಕತೆಗನುಗುಣವಾಗಿ ಸಂಯುಕ್ತ ಸರ್ಕಾರ ನಿರ್ಧರಿಸಬಾರದು.

# ಮೂವತ್ತೈದನೆಯ ಸಭೆ
# ೧೫ನೆಯ ಅಕ್ಟೋಬರ್ ೧೯೩೧
## ವಿಭಾಗ–IV

(ಸಂಯುಕ್ತ ರಾಜ್ಯ ಮತ್ತು ಅದರ ಘಟಕಗಳಲ್ಲಿ ಆರ್ಥಿಕ ಆದಾಯದ ಹಂಚಿಕೆ)
ಸಂಯುಕ್ತ ರಾಜ್ಯ ಆರ್ಥಿಕ ಉಪಸಮಿತಿಯ ವರದಿ ಚರ್ಚೆ:

* ಡಾ. ಬಿ. ಆರ್. ಅಂಬೇಡ್ಕರ್: ಲಾರ್ಡ್ ಛಾನ್ಸಲರ್ ಅವರೆ, ಸಂಯುಕ್ತ ಸರ್ಕಾರಕ್ಕಾಗಿ ಉಪ ಸಮಿತಿಯವರು ಯೋಜಿಸಿದ ಆರ್ಥಿಕ ವ್ಯವಸ್ಥೆಯು ನನಗೆ ಅಸಮರ್ಥವಾಗಿದೆ ಹಾಗೂ ಹೊಂದಿಕೆ ಯಾಗದಾಗಿದೆ ಎಂದು ನಾನು ನಿನ್ನೆಯ ದಿವಸ ಹೇಳಿದ್ದೆ. ಯಾವುದೇ ತುರ್ತು ಪರಿಸ್ಥಿತಿಯ ಕಾರಣವಾಗಿ ಅದರ ಮೇಲೆ ಹೇರಬಹುದಾದ ಭಾರವನ್ನು ಅದು ತಡೆದುಕೊಳ್ಳಲು ಶಕ್ಯವಿಲ್ಲವಾದ ಕಾರಣ ಉಪಸಮಿತಿಯವರು ಹೇಳಿರುವ ಆದಾಯದ ಹಂಚಿಕೆಗಳನ್ನು ಬದಲಾಯಿಸಿ ಆದಾಯ ತೆರಿಗೆಯನ್ನು ಎರಡು ಸರ್ಕಾರಕ್ಕೂ ಸೇರುವ ಹಾಗೆ ಮಾಡಬೇಕೆಂದೂ ಹೇಳಿದ್ದೆ. ಸಂಪನ್ಮೂಲಗಳ ಹಂಚಿಕೆಯ ವ್ಯವಸ್ಥೆಯನ್ನು ರೂಪಿಸುವಾಗ ಎರಡು ಪ್ರಸ್ತಾಪಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿದ್ದೆ. ಒಂದು ಸಂಯುಕ್ತ ರಾಜ್ಯದ್ದಾಗಲೀ ಅಥವಾ ಪ್ರಾಂತದ್ದಾಗಲೀ ಆರ್ಥಿಕ ವ್ಯವಸ್ಥೆ ಎರಡನೆಯದಾಗಿ ಕಾರ್ಯಾಂಗ ಮತ್ತು ಶಾಸನಸಭೆಗೂ ಇರಲೇಬೇಕಾದ ಜವಾಬ್ದಾರಿಯ ಭಾವನೆಯನ್ನು ನಾಶಪಡಿಸ ಬಾರದು ಎಂದು ಹೇಳಿದ್ದೆ. ಆ ಸಹಾಯ ಧನಗಳಿಗೂ ಅಥವಾ ವಂತಿಗೆಗಳಿಗೂ ಮತ್ತು ಸ್ವತಂತ್ರ– ಸ್ವಯಂಪೂರ್ಣ ಆರ್ಥಿಕ ವ್ಯವಸ್ಥೆಗೂ ಹೊಂದಿಕೆಯಾಗುವುದಿಲ್ಲವೆನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಅವು ಕಾರ್ಯಾಂಗ ಶಾಸನಸಭೆಗೆ ಒಪ್ಪಿಸಬೇಕಾದ ಜವಾಬ್ದಾರಿಯ ಭಾವನೆಯನ್ನು ಖಂಡಿತ ವಾಗಿಯೂ ನಾಶಮಾಡುತ್ತವೆ ಮತ್ತು ಅವು ಶಾಸಕಾಂಗಕ್ಕೆ ಕಾರ್ಯಾಂಗದ ಬಗ್ಗೆ ನಿರಾಸಕ್ತಿಯನ್ನುಂಟು ಮಾಡುತ್ತದೆ. ಸರಬರಾಜನ್ನು ನಿರಾಕರಿಸುವ ಅಧಿಕಾರವೂ ಮತ್ತು ಹೊರಗಿನಿಂದ ಪಡೆದ ಸರಬ ರಾಜನ್ನು ವಶಪಡಿಸಿಕೊಳ್ಳುವ ಅಧಿಕಾರವೂ, ಕಾರ್ಯಾಂಗವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಮತ್ತು ಅದನ್ನು ಶಾಸಕಾಂಗದ ಅಭಿಪ್ರಾಯಕ್ಕೆ ಹೊಂದಿಸಿಕೊಳ್ಳುವುದಕ್ಕೆ ಫಲದಾಯಕವಾದ ರೀತಿಗಳಲ್ಲ. ಈ ದೃಷ್ಟಿಯಿಂದ ನೋಡಿದಾಗ, ಆದಾಯ ಕ್ಷೇತ್ರಗಳನ್ನು ಹಂಚುವ ಸಮಸ್ಯೆಗೆ ಭಾರೀ ಪ್ರಾಮುಖ್ಯವಿದೆ. ನೀವು ಅವುಗಳನ್ನು ಹೇಗೆ ಹಂಚಬಹುದೆಂದರೆ, ಆ ಹಂಚಿಕೆ ಪ್ರತಿಯೊಂದರ ಅಧಿಕಾರವನ್ನು ಸ್ವತಂತ್ರ ಮತ್ತು ಸ್ವಯಂ ಪೂರ್ಣ ಮಾಡುವ ಹಾಗಿರಬೇಕು ಅಥವಾ ಸಹಾಯಧನ ಮತ್ತು ವಂತಿಗೆಯಿಲ್ಲದೆ ಸ್ವತಂತ್ರವಾಗಿರಲಾರದ ಮತ್ತು ಸ್ವಯಂಪೂರ್ಣವಾಗದ ಆರ್ಥಿಕ ವ್ಯವಸ್ಥೆ ಉಂಟಾಗುವ ಹಾಗೆ ಕೂಡ ಹಂಚಿಕೆಯನ್ನು ನಿರ್ವಹಿಸಬಹುದು.

---

* ಸಂಯುಕ್ತ ರಾಜ್ಯ ರಚನಾ ಸಮಿತಿ ಮತ್ತು ಅಲ್ಪಸಂಖ್ಯಾತ ಸಮಿತಿ ನಡವಳಿ, ಸಂಪುಟ ೧, ಪುಟಗಳು ೫೩೪–೪೦

ಆದಾಯ ತೆರಿಗೆಯನ್ನು ಜಂಟಿ ಆದಾಯದ ವಿಷಯವಾಗಿ ಈ ಒಂದು ಪ್ರತ್ಯೇಕ ರೀತಿಯನ್ನು ಸೂಚಿಸುವುದರಲ್ಲಿ ನಾನು ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಆದಾಯ ತೆರಿಗೆಯನ್ನು ಜಂಟಿ ಸಂಪನ್ಮೂಲವಾಗಿ ಪರಿಗಣಿಸುವುದಕ್ಕೆ ಎರಡು ಆಲೋಚನಾ ವಿಧಾನಗಳಿವೆ. ಮೊದಲನೆಯದಾಗಿ ನೀವು ಆದಾಯ ಕ್ಷೇತ್ರಗಳನ್ನು ವಿಭಾಗಿಸುವ ಮತ್ತು ಆದಾಯದ ಹಂಚಿಕೆಯ ಕ್ರಮವನ್ನು ಸ್ವೀಕರಿಸಬಹುದು; ಎರಡನೆಯದಾಗಿ, ಆದಾಯಕ್ಷೇತ್ರದ ನೇಮಕಾತಿಯ ಅಥವಾ ಆದಾಯದ ಹಂಚಿಕೆಯ ವಿಧಾನವನ್ನು ಸ್ವೀಕರಿಸಬಹುದು. ಮೊದಲನೆಯ ರೀತಿಯಲ್ಲಿ ತೆರಿಗೆಯ ಪ್ರಮಾಣವನ್ನು ನಿರ್ಧರಿಸುವ ಹಕ್ಕು ಎರಡರಲ್ಲಿ ಯಾವುದಾದರೂ ಒಂದರ ಅಧಿಕಾರಕ್ಕೆ ಒಳಪಟ್ಟಿರುತ್ತದೆ ಮತ್ತು ಸಹಜವಾಗಿ ಸಂಯುಕ್ತ ಸರ್ಕಾರದ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ಪ್ರಾಂತೀಯ ಸರ್ಕಾರ ಅಧಿಕಾರವನ್ನು ಚಲಾಯಿಸದ ಪಾಲುಗಾರನಾಗಿ ತೆರಿಗೆಯ ಆದಾಯದಲ್ಲಿ ಒಂದು ಪಾಲನ್ನು ಪಡೆಯುವ ಹಕ್ಕನ್ನು ಹೊಂದಿರುತ್ತದೆ. ಎರಡನೆಯ ರೀತಿ ಯಲ್ಲಿ ಎರಡಕ್ಕೂ ತಮ್ಮ ರೀತಿಯಲ್ಲಿ ಆದಾಯ ತೆರಿಗೆಯ ಪ್ರಮಾಣವನ್ನು ನಿರ್ಧರಿಸುವ ಸಮಾನ ಹಕ್ಕಿರುತ್ತದೆ. ಒಂದು ಪ್ರಾಂತ, ಆ ಪ್ರಾಂತದಲ್ಲಿ ಜಾರಿಯಲ್ಲಿರುವ ತನ್ನದೇ ಆದ ಆದಾಯ ತೆರಿಗೆಯ ಪ್ರಮಾಣವನ್ನು ನಿರ್ಧರಿಸುತ್ತದೆ; ಸಂಯುಕ್ತ ಸರ್ಕಾರ ಸಂಯುಕ್ತ ರಾಜ್ಯದ ಪ್ರತಿಯೊಂದೂ ಘಟಕದಲ್ಲಿ ಚಾಲ್ತಿಗೆ ಬರುವ ತನ್ನದೇ ಆದ ಆದಾಯತೆರಿಗೆಯ ಪ್ರಮಾಣವನ್ನು ನಿರ್ಧರಿಸುತ್ತದೆ. ಆಡಳಿತ ಮತ್ತು ಆದಾಯ ತೆರಿಗೆಯ ಸಂಗ್ರಹವು ಉದ್ದಕ್ಕೂ ಸಂಯುಕ್ತ ರಾಜ್ಯದ ಆಡಳಿತಕ್ಕೆ ಸಂಬಂಧಿಸಿರುತ್ತದೆ ಎನ್ನುವ ಕಾರಣದಿಂದ, ಆದಾಯವನ್ನು ಹಂಚುವ ವಿಷಯದಲ್ಲಿ ಎರಡನೆಯ ಕ್ರಮವನ್ನೇ ಸ್ವೀಕರಿಸಬೇಕೆನ್ನುವುದು ನನ್ನ ಅಭಿಪ್ರಾಯವಾಗಿದೆ. ಇದು ಫ್ರಾನ್ಸ್, ಬೆಲ್ಜಿಯಂ ಮತ್ತು ಇತರ ಯುರೋಪಿನ ದೇಶಗಳಲ್ಲಿರುವ ಪದ್ಧತಿಗಿಂತ ಹೆಚ್ಚು ಭಿನ್ನವಾಗಿರುವುದಿಲ್ಲ. ಈ ವ್ಯವಸ್ಥೆಯಲ್ಲಿ ಆದಾಯ ತೆರಿಗೆಗೆ ಎರಡು ಪ್ರಮಾಣಗಳಿ ರುತ್ತವೆ: (೧) ಸಂಯುಕ್ತ ರಾಜ್ಯದ ಪ್ರಮಾಣ ಇದನ್ನು ಸಂಯುಕ್ತ ರಾಜ್ಯ ಕಾಲದಿಂದ ಕಾಲಕ್ಕೆ ಅದರ ಅವಶ್ಯಕತೆಗೆ ಅನುಗುಣವಾಗಿ ನಿರ್ಧರಿಸುತ್ತದೆ. (೨) ಪ್ರಾಂತೀಯ ಪ್ರಮಾಣ– ಇದನ್ನು ಕಾಲದಿಂದ ಕಾಲಕ್ಕೆ ತನ್ನ ತನ್ನ ಅವಶ್ಯಕತೆಗೆ ಅನುಗುಣವಾಗಿ ಪ್ರತಿ ರಾಜ್ಯವೂ ನಿರ್ಧರಿಸುತ್ತದೆ. ಒಟ್ಟು ತೆರಿಗೆ ಈಗಿರುವ ಹಾಗೆ ಮುಂದುವರಿಯುತ್ತಾ ಸಂಯುಕ್ತ ರಾಜ್ಯ ಅದರ ಆಡಳಿತ ನಿರ್ವಹಣೆ ಮತ್ತು ಸಂಗ್ರಹವನ್ನು ತನ್ನ ಕೈಗೆ ತೆಗೆದುಕೊಳ್ಳುತ್ತದೆ.

ಈ ಯೋಜನೆಯ ಪ್ರಯೋಜನದ ಸ್ಪಷ್ಟವಾಗಿಯೇ ಇದೆ. ಮೊದಲನೆಯದಾಗಿ, ಅದು ದಾನ ಮತ್ತು ಸಹಾಯಧನದ ವ್ಯವಸ್ಥೆಯನ್ನು ತಳ್ಳಿಹಾಕುತ್ತದೆ. ಮತ್ತು ಪ್ರತಿಯೊಂದು ಘಟಕದ ಆರ್ಥಿಕ ವ್ಯವಸ್ಥೆಯನ್ನು ಸ್ವತಂತ್ರವಾದದ್ದಾಗಿ ಮತ್ತು ಸ್ವಯಂಪೂರ್ಣವಾಗಿ ಇಡುವುದಕ್ಕೆ ಉಪಯೋಗವಾಗುತ್ತದೆ. ಎರಡನೆಯದಾಗಿ ಅದು ತನ್ನ ಸರಬರಾಜನ್ನು ಪಡೆಯುವುದಕ್ಕೆ ಸಾಧನವಾದ ಆದಾಯ ತೆರಿಗೆಯ ಪ್ರಮಾಣಕ್ಕೆ, ಶಾಸಕಾಂಗದ ಅನುಮತಿಯನ್ನು ಪಡೆಯಲೇಬೇಕಾಗುವುದರಿಂದ ಕಾರ್ಯಾಂಗ ತನ್ನ ಜವಾಬ್ದಾರಿಯ ಭಾವನೆಯನ್ನು ಇಟ್ಟುಕೊಳ್ಳುವಂತೆ ಮಾಡುತ್ತದೆ. ಬಹಳ ಮುಖ್ಯವಾದ ಮೂರನೆಯ ಪ್ರಯೋಜನವೆಂದರೆ, ಒಂದು ಪ್ರಾಂತದ ಲಾಭಕ್ಕಾಗಿ ಇನ್ನೊಂದು ಪ್ರಾಂತದಿಂದ ತೆರಿಗೆ ವಸೂಲಾಗುವುದಿಲ್ಲ. ಇನ್ನೊಂದು ವ್ಯವಸ್ಥೆಯಲ್ಲಿ, ಸಂಯುಕ್ತ ರಾಜ್ಯದ ತೆರಿಗೆಯ ಪ್ರಮಾಣವನ್ನೇ ಎಲ್ಲ ಪ್ರಾಂತಗಳೂ ಪಾಲಿಸಬೇಕಾಗಿರುವುದರಿಂದ ಆದಾಯವನ್ನು ಹಂಚಿಕೊಳ್ಳಬೇಕಾಗುವುದರಿಂದ, ಒಂದು ಪ್ರಾಂತದಲ್ಲಿ ವಸೂಲಾದ ತೆರಿಗೆಯ ಮೊತ್ತ ಹಂಚಿಕೆಯಲ್ಲಿ, ಅದಕ್ಕೆ ಸಿಗುವ ಮೊತ್ತಕ್ಕೆ ಅನುಗುಣವಾಗಿ ಯಾವಾಗಲೂ ಇರುವುದಿಲ್ಲ; ಕೆಲವು ಪ್ರಾಂತಗಳು ಹೆಚ್ಚು ಹಣವನ್ನು ಕೊಟ್ಟು ಕಡಿಮೆ ಹಣವನ್ನು ತೆಗೆದುಕೊಳ್ಳಬೇಕಾಗುವುದು. ಈ ಪ್ರಾಂತಗಳ ದೃಷ್ಟಿಯಲ್ಲಿ, ಅಂಥ

ಒಂದು ವ್ಯವಸ್ಥೆ, ಒಂದು ಪ್ರಾಂತದ ಲಾಭಕ್ಕಾಗಿ ಇನ್ನೊಂದು ಪ್ರಾಂತವನ್ನು ಅಪ್ರತ್ಯಕ್ಷವಾಗಿ ಸುಲಿಯುವ, ಕ್ರಮವಾಗಿ ಕಾಣುತ್ತದೆ.

ನಾನು ಸೂಚಿಸುತ್ತಿರುವ ಕ್ರಮಕ್ಕೆ ಒಂದೇ ಒಂದು ವಿರೋಧವೆಂದರೆ, ವ್ಯಾಪಾರ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಆದಾಯ ತೆರಿಗೆಯ ಪ್ರಮಾಣ ಏಕ ಪ್ರಕಾರವಾಗಿ ಇರಬೇಕು ಎಂದು ಹಠ ಮಾಡುವವರಿಂದ ಬರುತ್ತದೆ. ಏಕಪ್ರಕಾರವಾದ ತೆರಿಗೆಯ ಪ್ರಮಾಣ ಅಪೇಕ್ಷಣೀಯವಾದದ್ದೇನೋ ನಿಜ. ಆದರೆ, ಅದರ ಪ್ರಾಮುಖ್ಯವನ್ನು, ಉತ್ಪ್ರೇಕ್ಷಿಸುವುದು ಬಹಳ ಸುಲಭ. ಭಾರತ ಯೂರೋಪಿನಷ್ಟು ದೊಡ್ಡದು. ಯೂರೋಪಿನಲ್ಲಿ ಏಕಪ್ರಕಾರವಾದ ಆದಾಯ ತೆರಿಗೆಯ ಪ್ರಮಾಣವಿಲ್ಲದಿದ್ದರೂ, ವ್ಯಾಪಾರ ಮತ್ತು ಉದ್ಯೋಗ ಎಲ್ಲ ಕಡೆಗಳಲ್ಲಿಯ ಹಾಗೆಯೇ ನಡೆಯುತ್ತಿದೆ. ಭಾರತದಲ್ಲಿ ಅದು ಬೇರೆ ಏಕಾಗಬೇಕು? ಅದೂ ಅಲ್ಲದೆ, ಏಕಪ್ರಕಾರವಾದ ಆದಾಯ ತೆರಿಗೆಯ ಪ್ರಮಾಣವೇ ಬೇಕೆನ್ನುವವರು ಭಾರತದಲ್ಲಿರುವ ಕೆಲವು ವಾಸ್ತವ ಸಂಗತಿಗಳನ್ನು– ಉದಾಹರಣೆಗೆ ಭೂಕಂದಾಯದಂತಹ ಸಂಗತಿಗಳನ್ನು ಹೇಗೆ ಸಮನ್ವಯಗೊಳಿಸಿಕೊಳ್ಳುತ್ತಾರೆ. ಅಲ್ಲಿ ಏಕಪ್ರಕಾರ ಅನ್ನುವುದೇ ಇಲ್ಲ. ಅದಕ್ಕೆ ಬದಲಾಗಿ ದಿಗ್ಭ್ರಮೆಗೊಳಿಸುವಷ್ಟು ವ್ಯತ್ಯಾಸಗಳಿಗೆ. ಯಾವುದೇ ಎರಡು ಪ್ರಾಂತಗಳಲ್ಲಿ ಈ ದರಗಳು ಒಂದೇ ಸಮನಾಗಿಲ್ಲ. ಅಥವಾ ಯಾವುದೇ ಎರಡು ಪ್ರಾಂತಗಳಲ್ಲಿ ತೆರಿಗೆಗಳ ವ್ಯವಸ್ಥೆಗಳೂ ಒಂದೇ ಆಗಿಲ್ಲ. ಆದ್ದರಿಂದ ನಾನು ಹೇಳುವ ರೀತಿಯ ಆದಾಯ ತೆರಿಗೆಯ ವ್ಯವಸ್ಥೆಗೆ ಈ ಆಕ್ಷೇಪಣೆ ಇರಲೇಬಾರದು. ಉಪಸಮಿತಿಯ ಸದಸ್ಯರಿಗೆ ಸಲ್ಲಬೇಕಾದ ಗೌರವಗಳೊಂದಿಗೆ ಅವರು ಶಿಫಾರಸ್ಸು ಮಾಡಿರುವ ಹಂಚಿಕೆಯ ಕ್ರಮವನ್ನು ಉತ್ತಮಪಡಿಸುವುದಕ್ಕಾಗಿ ನಾನು ನನ್ನ ವಿಚಾರಗಳನ್ನು ಮಂಡಿಸಿದ್ದೇನೆ. ನಾನು ಹೇಳಿದ್ದು ಸಾಮಾನ್ಯ ಪರಿಸ್ಥಿತಿಯಲ್ಲೂ ಮತ್ತು ತುರ್ತು ಪರಿಸ್ಥಿತಿಯಲ್ಲಿಯೂ, ಇದಕ್ಕೆ ಸಂಬಂಧಿಸಿದ ಎಲ್ಲರ ಅವಶ್ಯಕತೆಗಳನ್ನು ಪೂರೈಸುತ್ತದೆ.

ನಾನು ನಿನ್ನೆ ಕೊಟ್ಟ ಒಂದು ಹೇಳಿಕೆಯನ್ನು ಹಿಂತೆಗೆದುಕೊಳ್ಳಬಯಸುತ್ತೇನೆ. ನಾನು ಹೇಳಿದ ಯೋಜನೆ, ತೆರಿಗೆ ವಿಚಾರಣಾ ಸಮಿತಿಯವರು ಶಿಫಾರಸ್ಸು ಮಾಡಿದ ಯೋಜನೆಯೇ ಎಂದು ಹೇಳಿದ್ದೆ. ಅದು ನಾನು ಈ ಚರ್ಚೆಗಾಗಿ ಹಾಕಿಕೊಂಡ ಟಿಪ್ಪಣಿಗಳಲ್ಲಿ ಹೇಗೋ ನುಸುಳಿಕೊಂಡ ಒಂದು ತಪ್ಪಿನಿಂದ ಆಡಿದ ಮಾತು. ಅವರು ಈ ಯೋಜನೆಯನ್ನು ಗಣನೆಗೆ ತೆಗೆದುಕೊಂಡಿದ್ದರು ಎಂದು ಹೇಳಬೇಕಾಗಿತ್ತು; ಅದಕ್ಕೆ ಪರಿಹರಿಸಲಾಗುವ ವಿರೋಧವನ್ನು ಕಾಣದಿದ್ದರೂ, ಅವರು ಅದನ್ನು ಶಿಫಾರಸ್ಸು ಮಾಡಿರಲಿಲ್ಲ.

ನಾನು ಆಡುವ ಮುಂದಿನ ಮಾತು ಉಪಸಮಿತಿಯ ವರದಿಯ ೧೨ನೆಯ ಪ್ಯಾರಾದಲ್ಲಿ ತೆರಿಗೆಗೆ ಸಂಬಂಧಿಸಿದ "ಮಿಕ್ಕ ಅಧಿಕಾರಗಳ" ಪ್ರಶ್ನೆಯನ್ನು ಕುರಿತದ್ದು. ಮಿಕ್ಕ ಅಧಿಕಾರಗಳು ಪ್ರಾಂತಗಳಿಗೇ ಇರುತ್ತದೆ ಎಂದು ಉಪಸಮಿತಿ ಮುಂದಾಲೋಚನೆ ಮಾಡಿದೆ. ಆ ಆಧಾರದ ಮೇಲೆ ವಿವರಗಳ ಪಟ್ಟಿಯಲ್ಲಿ ಇಲ್ಲದ ತೆರಿಗೆಗಳನ್ನು ವಿಧಿಸುವ ಅಧಿಕಾರ ಘಟಕಗಳ ಕೈಯಲ್ಲಿರಬೇಕೆಂದು ಅವರು ಶಿಫಾರಸ್ಸು ಮಾಡಿದ್ದಾರೆ. ಈ ಒಂದು ತೀರ್ಮಾನಕ್ಕೆ ಅವರೇಕೆ ಬಂದರು ಎನ್ನುವುದಕ್ಕೆ ಉಪಸಮಿತಿಯವರು ಬೇರೆ ಯಾವುದೇ ಶಿಫಾರಸನ್ನು ಮಾಡುವುದಕ್ಕೆ ಸಂವಿಧಾನಾತ್ಮಕ ಆಕ್ಷೇಪಣೆಗಳಿವೆಯೆಂದು ಉಪಸಮಿತಿಯವರು ಹೇಳಿದ್ದಾರೆ. ಇದರಿಂದ ಸಿದ್ಧವಾಗುವುದೇನೆಂದರೆ, ಉಪಸಮಿತಿಯವರ ಅಭಿಪ್ರಾಯದ ಪ್ರಕಾರ, ಯಾವುದೇ ಸಂಯುಕ್ತ ರಾಜ್ಯವಿದ್ದರೂ, ತೆರಿಗೆಗಳನ್ನು ಸಂಬಂಧಿಸಿದ ಮಿಕ್ಕ ಅಧಿಕಾರಗಳು ಘಟಕಗಳಿಗೇ ಇರಬೇಕು ಎನ್ನುವುದು. ಇದು ಸಂಯುಕ್ತ ರಾಜ್ಯದ ಅವಶ್ಯಕ ಪರಿಣಾಮವೆಂದು ನನಗೆ ಅನಿಸುವುದಿಲ್ಲ.

ನೀವು ಕೆನಡಾ ಸಂವಿಧಾನದ ೯೧ನೆಯ ವಿಧಿಯ ಮೂರನೆಯ ಪ್ಯಾರಾವನ್ನು ಗಮನಿಸಿದರೆ, ಕೆನಡಾದ ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವ ತೆರಿಗೆ ವಿಧಿಸುವ ಅಧಿಕಾರ – ಅದು ಸಂಯುಕ್ತ ರಾಜ್ಯ ಸಂವಿಧಾನವೆನ್ನುವುದು ಸ್ಪಷ್ಟವಾಗಿದೆ– ಅದು ಉಪಸಮಿತಿಯವರ ಶಿಫಾರಸ್ಸಿನಲ್ಲಿ ಕಾಣಿಸುವ ಯಾವ ಕಟ್ಟುಪಾಡಿಗೂ ಒಳಪಟ್ಟಿಲ್ಲ. ನಾನು ಈಗ ತಾನೆ ಹೇಳಿದ ಪ್ಯಾರಾದಲ್ಲಿ ಸೂಚಿಸಿರುವುದು ನಾವು ಕಲ್ಪಿಸ ಬಹುದಾದ ಅತ್ಯಂತ ವ್ಯಾಪ್ತವಾದ ವಿಚಾರವಾಗಿದೆ. ಅದು, ತೆರಿಗೆ ವಿಧಿಸುವ ಯಾವುದೇ ಕೇಂದ್ರ ಸರ್ಕಾರ ಪಡೆಯಬಹುದಾದ ಅನಿರ್ಬಂಧಿತ ಅಧಿಕಾರವನ್ನು ಕೊಟ್ಟಿದೆ. ಆದರೆ ಬಹುಶಃ ನಾನೊಂದು ತಪ್ಪು ಉದಾಹರಣೆಯನ್ನು ಕೊಡುತ್ತಿದ್ದೇನೆ ಅನಿಸಬಹುದು. ಏಕೆಂದರೆ ಕೆನಡಾದ ಸಂವಿಧಾನದ ಪ್ರಕಾರ ಮಿಕ್ಕ ಅಧಿಕಾರಗಳು ಕೇಂದ್ರ ಸರ್ಕಾರಕ್ಕಿವೆಯೇ ಹೊರತು ಘಟಕಗಳಿಗಿಲ್ಲ. ನಾನೀಗ ಮಿಕ್ಕ ಅಧಿಕಾರ ಗಳನ್ನು ಘಟಕಗಳಿಗೇ ಬಿಟ್ಟಿರುವ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಅದು ಆಸ್ಟ್ರೇಲಿಯಾದ್ದು. ಅಲ್ಲಿ ತೆರಿಗೆಯ ಮಿಕ್ಕ ಅಧಿಕಾರಗಳನ್ನು ಕೇಂದ್ರಕ್ಕೆ ಬಿಡಲಾಗಿದೆಯೇ ಹೊರತು, ಘಟಕಗಳಿಗೆ ಕೊಟ್ಟಿಲ್ಲ. ಆಸ್ಟ್ರೇಲಿಯಾ ಸಂವಿಧಾನದ ೫೧ನೆ ವಿಧಿಯ ಪ್ಯಾರಾ ii ಏನು ಹೇಳುತ್ತದೆಂದರೆ, ತೆರಿಗೆ ವಿಧಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿರುತ್ತದೆ. ಆದರೆ, ಅದರಿಂದ ಪ್ರಾಂತಗಳಿಗಾಗಲಿ ಅಥವಾ ಪ್ರಾಂತದ ಭಾಗಗಳಿ ಗಾಗಲಿ ತಾರತಮ್ಯ ತೋರಿಸದಂತೆ ಇರಬೇಕು. ಇಲ್ಲಿನ ಭಾಷೆ ಕೂಡ ನಾವು ಕಲ್ಪಿಸಬಹುದಾದ ಅತ್ಯಂತ ವ್ಯಾಪ್ತವಾದ ಭಾಷೆಯಾಗಿದೆ ಮತ್ತು ಆಸ್ಟ್ರೇಲಿಯಾದ ಸಂಯುಕ್ತ ಸರ್ಕಾರದ ಅಧಿಕಾರ ಎಷ್ಟು ವಿಶಾಲವಾಗಿದೆಯೆಂದರೆ ಅದರ ಪ್ರಾಂತಗಳು ತೆರಿಗೆ ವಿಧಿಸುವ ಪದ್ಧತಿಯನ್ನು ನಿಯಂತ್ರಿಸುವ ಅಧಿಕಾರವನ್ನು ಪಡೆದಿವೆ. ಈ ವಿಷಯದಲ್ಲಿ "ದಿ ಕಾಮನ್‌ವೆಲ್ತ್ ಆಫ್ ಆಸ್ಟ್ರೇಲಿಯಾ" ಎನ್ನುವ ಪುಸ್ತಕದಲ್ಲಿ ಮೊದಲ ಮುದ್ರಣದಲ್ಲಿ ಮೂರ್ ತನ್ನ ವ್ಯಾಖ್ಯಾನವನ್ನು ಕೊಟ್ಟಿರುವುದನ್ನು ನಿಮ್ಮ ಗಮನಕ್ಕೆ ತರಲು ಅವಕಾಶ ಕೊಡಿ. ಆಸ್ಟ್ರೇಲಿಯಾದ ಸಂಯುಕ್ತ ರಾಜ್ಯಕ್ಕೆ ತೆರಿಗೆಯ ಅಧಿಕಾರ ಎಷ್ಟರ ಮಟ್ಟಿಗಿದೆ ಎನ್ನುವುದನ್ನು ಅವನು ಹೀಗೆ ಹೇಳುತ್ತಾನೆ:

> "ಈ ಕಾಮನ್‌ವೆಲ್ತನ್ನು ಸ್ಥಾಪಿಸಿದ ಮೇಲೆ, ಕಾಮನ್‌ವೆಲ್ತಿನ ಆಸ್ತಿಯ ಮೇಲೆ ಪ್ರಾಂತಗಳು ತೆರಿಗೆಯನ್ನು ಹಾಕಕೂಡದೆನ್ನುವ ನಿರ್ಬಂಧಕ್ಕೆ ಒಳಪಟ್ಟಿವೆ; ಈ ಮಾತು "ಕಾಮನ್‌ವೆಲ್ತಿನ ಸಾಧನಗಳಿಗೂ" ಅನ್ವಯಿಸುತ್ತದೆ ಮತ್ತು ಒಂದೇ ವಿಧವಾದ ಸುಂಕವನ್ನು ವಿಧಿಸಿದ ಮೇಲೆ ಅವು ಸುಂಕವನ್ನಾಗಲಿ ಅಥವಾ ಅಬ್ಕಾರಿ ತೆರಿಗೆಯನ್ನಾಗಲಿ ವಿಧಿಸಬಾರದು. ಅಥವಾ ಅಂತರ್ ಪ್ರಾಂತೀಯ ವ್ಯಾಪಾರ ಅಥವಾ ವ್ಯವಹಾರದ ಮೇಲೆ ತೆರಿಗೆಯನ್ನು ಹಾಕಕೂಡದು. ಅಷ್ಟೇ ಅಲ್ಲದೆ, ಬೇರೆ ಪ್ರಾಂತಗಳಲ್ಲಿರುವ ಬ್ರಿಟಿಷ್ ಪ್ರಜೆಗಳಿಗೆ ನಷ್ಟವನ್ನುಂಟುಮಾಡುವ ತಾರತಮ್ಯಗಳು ನಿಷ್ಕ್ರಿಯವಾಗುತ್ತವೆ."

ಇನ್ನು ಮುಂದೆ ಹೇಳುವುದು ತುಂಬ ಮುಖ್ಯವಾದುದ್ದು:

> "ಅಂತಿಮವಾಗಿ ಸೂಚಿಸುವುದೇನೆಂದರೆ ಪ್ರಾಂತಗಳು ತೆರಿಗೆ ಹಾಕುವುದನ್ನು ನಿಯಂತ್ರಿಸು ವುದಕ್ಕೆ ಕಾನೂನು ಸಿದ್ಧಪಡಿಸುವ ಕಾಮನ್‌ವೆಲ್ತಿಗೆ ವ್ಯಾಪಕ ಅಧಿಕಾರವನ್ನು ಕೊಡ ಬಹುದು."

ಈ ಸಂವಿಧಾನದಲ್ಲಿ ಮಿಕ್ಕ ಅಧಿಕಾರಗಳು ಪ್ರಾಂತಗಳಿಗೆ ಸೇರಿವೆ. ಆದರೂ ಆರ್ಥಿಕ ವಿಷಯಗಳಲ್ಲಿ ಮಿಕ್ಕ ಅಧಿಕಾರಗಳು ಪ್ರಾಂತಗಳಿಗಿಲ್ಲ. ಆದರೆ, ಸಂಯುಕ್ತ ಸರ್ಕಾರಕ್ಕೆ ಸೇರಿವೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸಂವಿಧಾನದ ೧ನೆಯ ವಿಧಿಯನ್ನು ತೆಗೆದುಕೊಳ್ಳಿ. ಅಲ್ಲಿ ಕೂಡ ಶಾಸನ ರಚನೆಯ ಮಿಕ್ಕ ಅಧಿಕಾರಗಳೂ ಪ್ರಾಂತಗಳಿಗಿವೆಯೇ ಹೊರತು ಕೇಂದ್ರ ಸರ್ಕಾರಕ್ಕಿಲ್ಲ. ಆದರೂ ೧ನೆಯ ವಿಧಿಯ VIIIನೆಯ ಭಾಗದ ಪ್ರಕಾರ ಸಂಯುಕ್ತ ಸಂಸ್ಥಾನಗಳ ಸಂವಿಧಾನ ಹೀಗೆ ಹೇಳುತ್ತದೆ:

> "ಕಾಂಗ್ರೆಸ್ಸಿಗೆ ಆದಾಯ ತೆರಿಗೆ, ಮಾರಾಟ ತೆರಿಗೆ, ಮನರಂಜನಾ ತೆರಿಗೆ ಮತ್ತು ಅಬ್ಕಾರಿ ತೆರಿಗೆಯನ್ನು ಸಂಗ್ರಹಿಸುವ, ಸಾಲಗಳನ್ನು ಪಾವತಿ ಮಾಡುವ ಮತ್ತು ಒಟ್ಟಾರೆ ರಕ್ಷಣೆ ಕೊಡುವ ಮತ್ತು ಸಂಯುಕ್ತ ರಾಜ್ಯದಲ್ಲಿ ಊಟ ವಸತಿ ಉದ್ಯೋಗ ಸೌಕರ್ಯಗಳನ್ನು ಒದಗಿಸುವ ಅಧಿಕಾರವಿರುತ್ತದೆ; ಆದರೆ, ಎಲ್ಲ ಮಾರಾಟ ತೆರಿಗೆಗಳು, ಮನರಂಜನಾ ತೆರಿಗೆಗಳು ಮತ್ತು ಅಬ್ಕಾರಿ ತೆರಿಗೆಗಳು ಸಂಯುಕ್ತ ಸಂಸ್ಥಾನಗಳಾದ್ಯಂತ ಒಂದೇ ಆಗಿರತಕ್ಕದ್ದು."

ಅಲ್ಲಿಯೂ ಸಹ ಸಂಯುಕ್ತ ಸಂಸ್ಥಾನಗಳ ಕೇಂದ್ರ ಸರ್ಕಾರದ ತೆರಿಗೆ ಹಾಕುವ ಅಧಿಕಾರಕ್ಕೆ ಯಾವ ಇತಿಮಿತಿಗಳನ್ನು ನೀವು ಕಾಣುವುದಿಲ್ಲ. ಆದ್ದರಿಂದ ಉಪಸಮಿತಿಯವರು ಮಾಡಿರುವ ಆ ತರಹದ ಶಿಫಾರಸ್ಸುಗಳಿಗೆ ಸಂವಿಧಾನಾತ್ಮಕ ಕಾನೂನುಗಳ ಮಟ್ಟಿಗೆ ಹೇಳುವುದಾದರೆ, ಯಾವ ಘನವಾದ ಕಾರಣಗಳೂ ಕಾಣಿಸುವುದಿಲ್ಲ.

ಅದೇನೇ ಇದ್ದರೂ, ಇನ್ನು ಮುಂದೆ ನಾನು ಹೇಳಬೇಕಾದದ್ದು, ತೆರಿಗೆಯ ಮಿಕ್ಕ ಅಧಿಕಾರಗಳು ಸಂಯುಕ್ತ ಸರ್ಕಾರದಲ್ಲಿರಬೇಕೋ ಅಥವಾ ಮಿಕ್ಕ ಅಧಿಕಾರಗಳು ಪ್ರಾಂತೀಯ ಸರ್ಕಾರಗಳಲ್ಲಿರಬೇಕೊ ಎನ್ನುವುದು. ಇದು ಇನ್ನು ಯಾವ ದೇಶದಲ್ಲಿಯೂ ಉದ್ಭವಿಸದೇ ಇದ್ದ ಕೃತಕ ಪ್ರಶ್ನೆಯಾಗಿದೆ. ಭಾರತದಲ್ಲಿ ಈ ಪ್ರಶ್ನೆ ಎದ್ದಿರುವ ಕಾರಣವೆಂದರೆ, ನಾವು ಇವತ್ತಿನ ನಮ್ಮ ವಿಕೇಂದ್ರೀಕರಣ ಕಾನೂನುಗಳಲ್ಲಿ, ಒಂದು ಅರ್ಥಹೀನ ಪದ್ಧತಿಯನ್ನು– ನಾನು ಹೀಗೆ ಹೇಳಬಹುದಾದರೆ ನಾವು ಯಾವುದನ್ನು ತೆರಿಗೆ ಪದ್ಧತಿಯ ವಿವರಗಳ ಪಟ್ಟಿಯೆಂದು ಕರೆಯುತ್ತೇವೋ ಅದನ್ನು– ಇಟ್ಟುಕೊಂಡಿದ್ದೇವೆ. ಈ ತರಹದ್ದು ಎಲ್ಲಿಯೂ ಇರಲಿಲ್ಲ ಮತ್ತು ಯಾವ ಸರ್ಕಾರವೇ ಆಗಲಿ ಅಥವಾ ಸಂಯುಕ್ತ ರಾಜ್ಯ ಸಂವಿಧಾನವನ್ನು ರೂಪಿಸಿದ ಯಾವ ಸಂವಿಧಾನಾತ್ಮಕ ಅಧಿಕಾರವೇ ಆಗಲಿ, ಇಂತಹ ಕಾನೂನನ್ನು ರೂಪಿಸಿರಲಿಲ್ಲ. ಅದು ಹೇಗೋ ಏನೋ, ನಾವು ತೆರಿಗೆಯ ಕ್ಷೇತ್ರಗಳನ್ನು ವಿಭಾಗಿಸುತ್ತಿದ್ದೇವಷ್ಟೇ ಅಲ್ಲ, ಈ ವಿವರಗಳ ಪಟ್ಟಿಯನ್ನಿಟ್ಟುಕೊಂಡು ಯಾವ ವಿಶಿಷ್ಟ ವ್ಯವಸ್ಥೆಯ, ಯಾವ ವಿಶಿಷ್ಟ ಕ್ರಮದಲ್ಲಿ ತೆರಿಗೆಯನ್ನು ವಸೂಲು ಮಾಡುವ ಅಧಿಕಾರವನ್ನು ಚಲಾಯಿಸಬೇಕೆಂಬುದನ್ನೂ ನಿಗದಿಪಡಿಸುತ್ತಿದ್ದೇವೆ; ಈ ರೀತಿ ಮಾಡುವ ಅವಶ್ಯಕತೆಯಿದೆಯೆಂದು ನನಗೆ ಅನಿಸುವುದಿಲ್ಲ. ಮೊದಲನೆಯದಾಗಿ, ಅದು ತೆರಿಗೆ ವಸೂಲಿಯ ಪದ್ಧತಿಯನ್ನು ರೂಢಿಗೊಳಿಸುತ್ತದೆ ಮತ್ತು ಮುಂದೆ ಬರುವ ರಾಷ್ಟ್ರೀಯ ಖಜಾನೆಯ ಮುಖ್ಯಾಧಿಕಾರಿಗಳ ದಕ್ಷತೆಯನ್ನು ಮಿತಿಗೊಳಿಸುತ್ತದೆ. ತೆರಿಗೆ ಹಾಕುವ ಅಧಿಕಾರಗಳ ವಿಷಯದಲ್ಲಿ ಮತ್ತು ವಿಧಿಸಬೇಕೆಂದಿರುವ ತೆರಿಗೆಗಳ ಆಯ್ಕೆಯಲ್ಲಿ ತನ್ನ ತಾರತಮ್ಯ ಜ್ಞಾನಕ್ಕೆ ಕಡಿವಾಣ ಹಾಕುವ ಇಂತಹ ಆರ್ಥಿಕ ವ್ಯವಸ್ಥೆಯನ್ನು ನಿಭಾಯಿಸುವ ಜವಾಬ್ದಾರಿಯನ್ನು ಯಾವ ರಾಷ್ಟ್ರೀಯ ಖಜಾನೆಯ ಮುಖ್ಯಾಧಿಕಾರಿಯೂ ವಹಿಸಿಕೊಳ್ಳುವುದಿಲ್ಲವೆಂದು ನನಗೆ ಅನಿಸುತ್ತದೆ.

ಆದ್ದರಿಂದ ನನ್ನ ಅಭಿಪ್ರಾಯವೇನೆಂದರೆ ಈ ವಿವರಗಳ ಪಟ್ಟಿಯನ್ನು ನಮ್ಮ ಸಂವಿಧಾನದಿಂದ ತೆಗೆದುಹಾಕಬೇಕು; ಕೇಂದ್ರ ಸರ್ಕಾರವೇ ವಿಧಿಸಬೇಕೆನ್ನುವ ಸುಂಕ ಅಥವಾ ಅಬ್ಕಾರಿಯಂತಹ ತೆರಿಗೆಗಳನ್ನು ಪ್ರಾಂತೀಯ ಸರ್ಕಾರಗಳು ವಿಧಿಸಕೂಡದು ಎನ್ನುವ ಸರಳವಾದ ಒಂದು ಷರತ್ತನ್ನು ಹಾಕಿ, ಬೇರೆ ಸಂಯುಕ್ತ ರಾಜ್ಯಗಳುಳ್ಳ ದೇಶಗಳು ಅನುಸರಿಸುವ ರೀತಿಯಲ್ಲಿ, ತೆರಿಗೆಯ ಕ್ಷೇತ್ರವನ್ನು ಸರಳವಾಗಿ ವಿಭಾಗಿಸಿ, ಮಿಕ್ಕ ತೆರಿಗೆಯ ಕ್ಷೇತ್ರವನ್ನು ಅವರವರಿಗೆ ಇಷ್ಟ ಬಂದಹಾಗೆ ಹಂಚಿಕೊಳ್ಳಲಿಕ್ಕೆ ಎರಡೂ ಸರ್ಕಾರಗಳಿಗೆ ಬಿಟ್ಟುಕೊಡಬೇಕು. ಅದನ್ನು ಸಂಯಕ್ತ ರಾಜ್ಯಗಳುಳ್ಳ ನಮ್ಮ ಸಂವಿಧಾನದಲ್ಲಿ ಸೇರಿಸುವುದು ಖಂಡಿತವಾಗಿಯೂ ಅತ್ಯವಶ್ಯಕವಾದದ್ದೇನೂ ಅಲ್ಲ ಎನ್ನುವುದು ನನ್ನ ವಿಚಾರವಾಗಿದೆ.

ಸಂಯುಕ್ತ ರಾಜ್ಯಗಳ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಾಂತಗಳ ಸ್ಥಾನವೇನು ಎನ್ನುವುದನ್ನು ಈಗ ಪ್ರಸ್ತಾಪಿಸುತ್ತೇನೆ. ಉಪಸಮಿತಿಯ ವರದಿಯ ಈ ಭಾಗಕ್ಕೆ ಬಂದಾಗ, ಕೇಂದ್ರ ಸರ್ಕಾರವು ತನ್ನ ಸಂಪನ್ಮೂಲಗಳಿಗೆ ಪ್ರಾಂತಗಳಿಂದ ಏನನ್ನು ಸೇರಿಸಿಕೊಂಡಿತು. ಅದು ಆದಾಯದ ಯಾವ ವಿಭಾಗಕ್ಕೆ ಸೇರಿದೆ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ನನ್ನ ಗಮನ ಮೊದಲು ಹೋಯಿತು. ಪ್ರಾಂತಗಳು ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಸಂಪನ್ಮೂಲವನ್ನೇನೂ ಕೊಟ್ಟಿಲ್ಲ ಎಂದು ನಾನು ಗಮನಿಸಿದ್ದೇನೆ. ಸುಂಕದ ವಿಷಯಕ್ಕೆ ಬಂದಾಗ, ಅದು ಎಂದೂ ಪ್ರಾಂತಗಳಿಗೆ ಆದಾಯವಾಗಿರಲಿಲ್ಲ ಮತ್ತು ಪ್ರಾಂತಗಳಿಗೆ ಎಂದೂ ಅದರ ಮೇಲೆ ಹಕ್ಕಿರಲಿಲ್ಲವಾದ್ದರಿಂದ ಅವು ತಮ್ಮ ಮೇಲೆ ಹೆಚ್ಚಿನ ಭಾರವನ್ನೇನೂ ತೆಗೆದುಕೊಂಡಿಲ್ಲ. ಇನ್ನು ಉಪ್ಪಿನ ವಿಷಯಕ್ಕೆ ಬಂದರೆ, ಇದು ಭಾರತ ಸರ್ಕಾರದ ಆದಾಯದ ಹಕ್ಕಾದ್ದರಿಂದ, ಪ್ರಾಂತಗಳು ಅದನ್ನು ಕೊಳ್ಳುವುದರಿಂದ ಪ್ರಾಂತಗಳಿಗೆ ಸೇರುವುದಿಲ್ಲ. ಇನ್ನು ನಾಣ್ಯ ಚಲಾವಣೆಯ ಲಾಭಕ್ಕೆ ಬಂದರೆ, ಅದು ಬ್ರಿಟಿಷ್ ಇಂಡಿಯಾದ ಹೆಸರಿನಲ್ಲಿ ಇರುವಂಥದು. ಅದಾದ ಮೇಲೆ ನಗದು ಹಣ ದೇಣಿಗೆ ಮತ್ತು ಸ್ವಾಧೀನ ಪಡಿಸಿಕೊಂಡ ಪ್ರದೇಶಗಳ ಆದಾಯಕ್ಕೆ ಬಂದರೆ, ಇವು ಕೇಂದ್ರ ಸರ್ಕಾರದ ಆದಾಯ ಮೂಲಗಳಾಗಿ ಬಂದಿರುವುದರಿಂದ, ಒಂದು ವೇಳೆ ಸಂಯುಕ್ತ ರಾಜ್ಯ ರಚನೆಯಾಗದಿದ್ದರೂ ಅವು ಹಾಗೆಯೇ ಉಳಿಯುತ್ತಿದ್ದವು. ಆದ್ದರಿಂದ ಪ್ರಾಂತಗಳು ಸಂಯುಕ್ತ ರಾಜ್ಯವನ್ನು ಪ್ರವೇಶಿಸುವುದರಿಂದ, ಅವಕ್ಕೆ ಹಕ್ಕಿದೆ ಎನ್ನಬಹುದಾದ ಯಾವುದನ್ನೂ ಬಿಟ್ಟುಕೊಡುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ. ನನಗೆ ಕಾಣಿಸುವ, ಒಂದೇ ಒಂದು ಸಹಾಯವೆಂದರೆ ಅವರಿಗೆ ಭಾರತದ ರಕ್ಷಣೆಗೆ ಸೈನ್ಯಬಲವನ್ನು ಒದಗಿಸುವುದು. ಭಾರತದ ಸರ್ಕಾರದವರು ನೇಮಿಸಿದ ಉಪಸಮಿತಿಯ ವರದಿಯಲ್ಲಿ ನಮೂದಿಸಿರುವ ಅಂಕಿ ಅಂಶಗಳನ್ನು ನೋಡಿದರೆ, ಸೈನ್ಯಬಲಕ್ಕಾಗಿ ಪ್ರಾಂತಗಳು ಮಾಡುವ ಖರ್ಚು ಜುಜುಬಿ ೨ ಕೋಟಿ ೩೮ ಲಕ್ಷ ಎಂದು ಕಂಡುಬರುತ್ತದೆ.

ಈ ವರದಿಯಲ್ಲಿ ಸಂಯುಕ್ತ ರಾಜ್ಯದ ಆರ್ಥಿಕ ಭಾರವನ್ನು ಹೊರುವ ವಿಷಯದಲ್ಲಿ ಪ್ರಾಂತಗಳಿಗೂ ಮತ್ತು ಸಂಸ್ಥಾನಗಳಿಗೂ ಯಾವುದಾದರೂ ವ್ಯತ್ಯಾಸವಿದೆಯೇ ಎಂದು ನಾನು ಪರೀಕ್ಷಿಸಿದೆ. ಇದನ್ನು ಗಮನಿಸಿದಾಗ ಹೊರೆಯನ್ನು ಸಮಾನವಾಗಿ ಹೊರುವ ತತ್ವವನ್ನು ಉಪಸಮಿತಿಯವರು ನಿರ್ಲಕ್ಷಿಸಿದ್ದಾರೆ ಎನ್ನುವ ತೀರ್ಮಾನಕ್ಕೆ ಬರಬೇಕಾಯಿತು. ಈ ವರದಿಯುದ್ದಕ್ಕೂ ಈ ಅಸಮಾನತೆ ಹೇಗೆ ಹರಡಿಕೊಂಡಿದೆ ಎನ್ನುವುದನ್ನು ನೀವೇ ನೋಡಿ. ಮೊದಲನೆಯದಾಗಿ ಪ್ರಾಂತಗಳು ಸಂಯುಕ್ತ ಸರ್ಕಾರದ "ನೇರ" ತೆರಿಗೆ ಮತ್ತು "ಪರೋಕ್ಷ" ತೆರಿಗೆಗಳನ್ನು ತೆರಬೇಕು. ಸಂಸ್ಥಾನಗಳು ಕೇವಲ "ಪರೋಕ್ಷ" ತೆರಿಗೆಯನ್ನು ಮಾತ್ರ ಕೊಡಬೇಕು. ಅವು, ಸಂಘ ಸಂಸ್ಥೆಗಳ ಮೇಲೆ ಹಾಕುವ ತೆರಿಗೆಯನ್ನು ಕೂಡ

ಒಪ್ಪಿಕೊಳ್ಳಬೇಕೆಂದು ಈ ಸಮಿತಿಯವರು ಒತ್ತಾಯ ಮಾಡಿಲ್ಲ. ಅವು "ನೇರ" ತೆರಿಗೆಯನ್ನು ಕೊಡಬೇಕಾಗಿಲ್ಲ ಎನ್ನುವುದಷ್ಟೇ ಅಲ್ಲ, ಈಗ ಕೊಡುತ್ತಿರುವ ಕಪ್ಪಕಾಣಿಕೆ ಮತ್ತು ನಗದು ದೇಣಿಗೆಯಿಂದಲೂ ಅವುಗಳಿಗೆ ಬಿಡುಗಡೆಯಾಗಬೇಕಂತೆ. ಎರಡನೆಯದಾಗಿ ಸಂಯುಕ್ತ ರಾಜ್ಯದ ಉದ್ದೇಶಗಳಲ್ಲಿ ಸಂಯುಕ್ತ ರಾಜ್ಯದ ಉದ್ದಕ್ಕೂ ವ್ಯಾಪಾರದ ಸ್ವಾತಂತ್ರ್ಯವಿರಬೇಕೆಂದು ಉಪಸಮಿತಿಯವರು ಒಪ್ಪಿಕೊಂಡಿದ್ದರೂ, ಸಂಸ್ಥಾನಗಳ ಒಳಪ್ರದೇಶದಲ್ಲಿ ಸುಂಕವನ್ನು ವಸೂಲ್ಮಾಡುವುದು ಸಂಯುಕ್ತ ರಾಜ್ಯದ ಆದಾಯಕ್ಕೆ (receipts) ಧಕ್ಕೆಯಾಗುತ್ತದೆಂದು ಈ ಸಮಿತಿಗೆ ಗೊತ್ತಿದ್ದರೂ, ಪ್ರಾಂತಗಳು ತಮ್ಮ ಗಡಿಗಳ ಒಳಗೆ ಸುಂಕವನ್ನು ವಸೂಲು ಮಾಡುವ ಹಾಗಿಲ್ಲ. ಆದರೆ, ಆ ಸುಂಕಗಳನ್ನು ವಿಧಿಸುವ ಹಕ್ಕನ್ನು ಸಂಸ್ಥಾನಗಳು ಮಾತ್ರ ಇಟ್ಟುಕೊಳ್ಳುತ್ತವೆ (ಎಂದು ಸಮಿತಿಯ ವರದಿ ಹೇಳುತ್ತದೆ). ಮೂರನೆಯದಾಗಿ, ಸಂಯುಕ್ತ ರಾಜ್ಯದಿಂದ ಸಾಲ ತೆಗೆದುಕೊಳ್ಳಬೇಕಾದರೆ ಪ್ರಾಂತಗಳು ತಮ್ಮ ಆದಾಯವನ್ನು ಅಡವಿಡಬೇಕು. ಆದರೆ, ಪ್ರಾಂತಗಳ ಹಾಗೂ ಸಂಸ್ಥಾನಗಳೂ ಸಹ ಸಂಯುಕ್ತ ರಾಜ್ಯಗಳ ಅಂಗಗಳಾದರೂ ಅವು ಹೊಣೆಯಿಂದ ಮುಕ್ತವಾಗಿವೆ (ಎಂದು ಸಮಿತಿಯ ವರದಿ ಹೇಳುತ್ತದೆ.)

ಸಂಸ್ಥಾನಗಳು ಒಳಪ್ರದೇಶದ ಸುಂಕವನ್ನು ವಸೂಲಿಯ ಹಕ್ಕನ್ನು ತೆಗೆದುಕೊಳ್ಳುವುದಕ್ಕೆ ಬಿಟ್ಟಿರುವುದು ಏಕೆಂದು ನಮಗೆ ಅರ್ಥವಾಗುತ್ತದೆ. ಒಂದು ವೇಳೆ ಅವುಗಳ ಆಂತರಿಕ ಆದಾಯವನ್ನು ದಿಢೀರಾಗಿ ಬಿಟ್ಟುಬಿಡಲೇಬೇಕಾಗಿ ಬಂದರೆ, ಅವುಗಳ ಆರ್ಥಿಕ ಸುಭದ್ರತೆ ಅವ್ಯವಸ್ಥೆಗೆ ದಾರಿ ಮಾಡುತ್ತದೆ ಎನ್ನುವುದೂ ನಿಜ. ಆದರೆ, ಉಪಸಮಿತಿಯವರು ಸಂಯುಕ್ತ ಸರ್ಕಾರದ ಹೊರೆಯನ್ನು ಹಂಚಿಕೊಳ್ಳದೇ ಇರುವ ಸ್ವಾತಂತ್ರ್ಯವನ್ನು ಸಂಸ್ಥಾನಗಳಿಗೆ ಕೊಟ್ಟಿರುವುದು ನಮಗೆ ಅರ್ಥವಾಗುವುದಿಲ್ಲ ಮತ್ತು ಸಂಯುಕ್ತ ರಾಜ್ಯದಿಂದ ಸಾಲ ತೆಗೆದುಕೊಳ್ಳುವಾಗ ಅವು ತಮ್ಮ ಆದಾಯವನ್ನು ಅಡವಿಡಬೇಕಿಲ್ಲವೆನ್ನುವ ಶಿಫಾರಸ್ಸನ್ನು ಉಪಸಮಿತಿಯವರು ಏಕೆ ಮಾಡಿದರೊ, ಅದೂ ಅರ್ಥವಾಗುವುದಿಲ್ಲ.

ಲಾರ್ಡ್ ಛಾನ್ಸಲರ್ ಅವರೆ, ಸಂಪ್ರದಾಯಗಳನ್ನು ಆಚರಿಸುವ ವಿಷಯದಲ್ಲಿ ಪ್ರಾಂತಗಳಿಗೂ ಮತ್ತು ಸಂಸ್ಥಾನಗಳಿಗೂ ವ್ಯತ್ಯಾಸವನ್ನು ತೋರಿಸಬಹುದು. ನಮಗೆ ನಾವೇ ನಮಸ್ಕಾರ ಮಾಡಿಕೊಳ್ಳುವುದನ್ನು ಬೇಡವೆನ್ನಬಹುದು ಮತ್ತು ಅದರ ಬದಲಿಗೆ ಸಂಸ್ಥಾನಗಳು ಏನು ಬೇಕೋ ಅದನ್ನು ಇಟ್ಟುಕೊಳ್ಳಬಹುದು. ನಾವು "ವ್ಯವಹಾರ ವ್ಯವಹಾರವೇ" ಎನ್ನುವ ಸೂತ್ರವನ್ನು ಅನುಸರಿಸಬೇಕು. ಸಂಯುಕ್ತ ರಾಜ್ಯದ ವಿಷಯದಲ್ಲಿ ಬ್ರಿಟಿಷ್ ಭಾರತ ತ್ಯಾಗಗಳನ್ನು ಮಾಡುತ್ತಿದ್ದರೆ, ಸಂಯುಕ್ತ ರಾಜ್ಯದ ಹಿತದೃಷ್ಟಿಯಿಂದ ಅದು ತನ್ನ ಘಟಕಗಳೂ ಅದೇ ರೀತಿಯಾದ ತ್ಯಾಗಗಳನ್ನು ಮಾಡಬೇಕೆಂದು ಕರೆಕೊಡುವುದಕ್ಕೆ ಅದಕ್ಕೆ ಹಕ್ಕಿದೆ. ಆದ್ದರಿಂದ ಸಮಿತಿಯ ವರದಿಯ ಈ ಭಾಗಕ್ಕೆ ನಾನು ಈ ತಿದ್ದುಪಡಿಗಳನ್ನು ಸೂಚಿಸುತ್ತೇನೆ:

(೧) ಸಂಯುಕ್ತ ರಾಜ್ಯ ಸರ್ಕಾರಕ್ಕೆ "ನೇರ" ತೆರಿಗೆ ವಿಧಿಸುವ ಹಕ್ಕಿದೆ ಎನ್ನುವುದನ್ನು ಸಂಸ್ಥಾನಗಳೂ ಒಪ್ಪಿಕೊಳ್ಳಬೇಕು. ಇದು ಆಗುವವರೆಗೆ ನಗದು ದೇಣಿಗೆಗಳನ್ನು ಕೊಡಬಾರದು ಮತ್ತು ಅಧೀನವಾದ ಪ್ರದೇಶದ ಬಗ್ಗೆ ಯಾವ ಗಮನವನ್ನೂ ಕೊಡಬೇಕಿಲ್ಲ.

(೨) ಸಂಯುಕ್ತ ಸರ್ಕಾರದ ಆರ್ಥಿಕ ವ್ಯವಸ್ಥೆಗೆ ಧಕ್ಕೆಯಾಗದ ಹಾಗೆ ಸಂಸ್ಥಾನಗಳು ತಮ್ಮ ಆರ್ಥಿಕ ವ್ಯವಸ್ಥೆಯನ್ನು ತಕ್ಕ ರೀತಿಯಲ್ಲಿ ಮಾರ್ಪಡಿಸಿಕೊಂಡು, ಒಳನಾಡಿನ ಸುಂಕವನ್ನು ರದ್ದುಮಾಡುವುದಕ್ಕೆ

ಒಂದು ಕಾಲಾವಕಾಶವನ್ನು ನಿಗದಿಪಡಿಸಬೇಕು.

(೩) ಸಂಯುಕ್ತ ರಾಜ್ಯದಿಂದ ತೆಗೆದುಕೊಳ್ಳುವ ಸಾಲಕ್ಕೆ ಸಂಸ್ಥಾನಗಳು ತಮ್ಮ ಆದಾಯವನ್ನು ಜಾಮೀನಾಗಿಡಬೇಕು.

ಲಾರ್ಡ್ ಛಾನ್ಸಲರ್ ಅವರೆ, ಈ ವಿಷಯದಲ್ಲಿ ನಾನು ಹೇಳಬೇಕಾಗಿರುವುದು ಇಷ್ಟೇ.

# ಮೂವತ್ತೆಂಟನೆಯ ಸಭೆ
# ೨೨ನೆ ಅಕ್ಟೋಬರ್ ೧೯೩೧
## ವಿಭಾಗ–IV

(ಸಂಯುಕ್ತ ರಾಜ್ಯ ಮತ್ತು ಅದರ ಘಟಕಗಳಲ್ಲಿ ಆರ್ಥಿಕ ಆದಾಯದ ಹಂಚಿಕೆ)
ಸಂಯುಕ್ತ ರಾಜ್ಯ ಆರ್ಥಿಕ ಉಪಸಮಿತಿಯ ವರದಿ ಚರ್ಚೆ:

* ಡಾ. ಬಿ. ಆರ್. ಅಂಬೇಡ್ಕರ್: ನಾನೀಗ ಒಂದು ವಿಷಯವನ್ನು ಹೇಳಬೇಕಾಗಿದೆ. ಸಂಯುಕ್ತ ರಾಜ್ಯ ಆರ್ಥಿಕ ಉಪಸಮಿತಿಯ ವರದಿಯಲ್ಲಿ ವಿವರಿಸಿರುವ ತತ್ವಗಳನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿದ್ದಾರೆ ಎನ್ನುವ ವಿಷಯವನ್ನು ಲಾರ್ಡ್ ಪೀಲ್ ಅವರು ತಿಳಿಸಿದ್ದಾರೆ. ಸಂಯುಕ್ತ ರಾಜ್ಯ ರಚನಾ ಸಮಿತಿಯಲ್ಲಿ ಉಳಿದ ಸದಸ್ಯರ ಅಭಿಪ್ರಾಯ ಏನೇ ಇರಲಿ, ಸಂಯುಕ್ತ ರಾಜ್ಯ ಆರ್ಥಿಕ ಉಪಸಮಿತಿಯವರು ವಿವರಿ ಸಿರುವ ತತ್ವಗಳನ್ನು ನಾನು ಖಂಡಿತಾ ಒಪ್ಪುವುದಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ವ್ಯವಸ್ಥೆಯನ್ನು ಸುಭದ್ರಗೊಳಿಸಲು ವ್ಯವಸ್ಥೆಯನ್ನಾಗಿ ಮಾಡಲು ಒಂದು ವೇಳೆ ಈ ಸಮಿತಿಯ ತತ್ವಗಳ ಬದಲಾವಣೆಗಳನ್ನು ಮತ್ತು ತಿದ್ದುಪಡಿಗಳನ್ನು ಮಾಡುವ ಹಕ್ಕನ್ನು ಪಡೆದಿದೆಯೆನ್ನುವುದಾದರೆ ಈ ಸಮಿತಿಯನ್ನು ನೇಮಿಸುವುದಕ್ಕೆ ನನ್ನ ವಿರೋಧವೇನೂ ಇಲ್ಲ.

## ವಿಭಾಗ–೮

(ಸಂಯುಕ್ತ ರಾಜ್ಯ ನ್ಯಾಯಾಲಯ)

** ಡಾ. ಬಿ. ಆರ್. ಅಂಬೇಡ್ಕರ್: ಲಾರ್ಡ್ ಛಾನ್ಸಲರ್ ಅವರೆ, ಸಂಯುಕ್ತ ರಾಜ್ಯ ನ್ಯಾಯಾಲಯವನ್ನು ಸ್ಥಾಪಿಸುವ ವಿಷಯದಲ್ಲಿ, ನಮಗೆ ಪ್ರಸ್ತುತವಾದ ಮೂರು ಪ್ರಶ್ನೆಗಳಿವೆ ಎಂದು ನನಗೆ ಅನಿಸುತ್ತದೆ. ಮೊದಲನೆಯ ಪ್ರಶ್ನೆ ಸಂಯುಕ್ತ ರಾಜ್ಯ ನ್ಯಾಯಾಲಯದ ಅಧಿಕಾರದ ವ್ಯಾಪ್ತಿ; ಎರಡನೆಯದು, ಸಂಯುಕ್ತ ರಾಜ್ಯ ನ್ಯಾಯಾಲಯದ ತೀರ್ಪು ಮತ್ತು ನಿರ್ಧಾರಗಳನ್ನು ಜಾರಿಗೆ ತರುವುದು; ಮತ್ತು ಮೂರನೆಯದಾಗಿ ಸಂಯುಕ್ತ ನ್ಯಾಯಾಲಯದ ಸಂಘಟನೆ. ಇವುಗಳಲ್ಲಿ ಪ್ರತಿಯೊಂದರ ಬಗ್ಗೆಯೂ ನನಗೆ ಕೆಲವು ವಿಷಯಗಳನ್ನು ಹೇಳುವುದಿದೆ. ಈಗ ಮೊದಲನೆಯ ಪ್ರಶ್ನೆಯಾದ ಸಂಯುಕ್ತ ರಾಜ್ಯ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಗಮನಿಸುತ್ತೇನೆ.

ಸಂಯುಕ್ತ ರಾಜ್ಯ ನ್ಯಾಯಾಲಯದ ಕಾರ್ಯಾಚರಣೆಯಲ್ಲಿ ಸಂಯುಕ್ತ ರಾಜ್ಯದ ಸಂವಿಧಾನವನ್ನು ವ್ಯಾಖ್ಯಾನಿಸುವುದು ಅದರ ಒಂದು ಕೆಲಸವೆನ್ನುವುದು ಈಗಾಗಲೆ ಒಪ್ಪಿಕೊಂಡಿರುವ ವಿಷಯವಾಗಿದೆ.

---

* ಸಂಯುಕ್ತ ರಾಜ್ಯ ರಚನಾ ಸಮಿತಿ ಮತ್ತು ಅಲ್ಪಸಂಖ್ಯಾತ ಸಮಿತಿಯ ನಡಾವಳಿಗಳು, ಸಂಪುಟ ೧, ಪುಟ ೬೮೫

** ಅದೇ, ಪುಟ ೬೮೯–೭೦೨

ಏಕೀಕೃತ ವ್ಯವಸ್ಥೆಯ ಸರ್ಕಾರಕ್ಕೆ ಹೋಲಿಸಿ ನೋಡಿದಾಗ ಸಂಯುಕ್ತ ಸರ್ಕಾರದಲ್ಲಿ ಕಾರ್ಯಾಚರಣೆಯ ಹಂಚಿಕೆ, ಸಂಯುಕ್ತತೆಯ ಜೀವಾಳವಾಗಿರುವುದು ಸಂಯುಕ್ತ ರಾಜ್ಯ ಸರ್ಕಾರದ ವಿಶಿಷ್ಟ ಲಕ್ಷಣವಾಗಿದೆ. ಅಲ್ಲಿ ಕಾನೂನಿನ ಪ್ರಕಾರ ಸಂಯುಕ್ತ ರಾಜ್ಯಕ್ಕೆ ಕೊಟ್ಟದ್ದು ಮತ್ತು ರಾಜ್ಯಕ್ಕೆ ಅಥವಾ ಪ್ರಾಂತೀಯ ಸರ್ಕಾರಕ್ಕೆ ಕೊಟ್ಟದ್ದು– ಹೀಗೆ ಎರಡು ಕ್ಷೇತ್ರಗಳಿವೆ; ಒಂದು ಕ್ಷೇತ್ರ ಇನ್ನೊಂದು ಕ್ಷೇತ್ರದಲ್ಲಿ ತಲೆ ಹಾಕದಂತೆ ನೋಡಿ ಕೊಳ್ಳುವುದು ಸಂಯುಕ್ತ ವ್ಯವಸ್ಥೆಯ ಮುಖ್ಯ ಕೆಲಸವಾಗಿದೆ. ಹಾಗೆ ನೋಡಿಕೊಳ್ಳುವುದಕ್ಕಾಗಿಯೇ, ಎರಡು ಸರ್ಕಾರಗಳನ್ನು ತಮ್ಮ ತಮ್ಮ ಕ್ಷೇತ್ರಗಳಿಗೇ ಮಿತಿಗೊಳಿಸುವುದಕ್ಕಾಗಿ ಸಂಯುಕ್ತ ರಾಜ್ಯ ನ್ಯಾಯ ವ್ಯವಸ್ಥೆಯ ಅವಶ್ಯಕತೆ ಇದೆ. ಆದರೆ ಸಂಯುಕ್ತ ನ್ಯಾಯಾಡಳಿತದ ಸಭೆ ನೆರವೇರಿಸಲೇಬೇಕಾದ ಇನ್ನೊಂದು ಉದ್ದೇಶವೂ ಇದೆ. ಸಂಯುಕ್ತ ನ್ಯಾಯಾಡಳಿತ ಸಭೆಯನ್ನು ಅಂತರಾಷ್ಟ್ರೀಯ ನ್ಯಾಯದ ಸಭೆಯೆಂದೂ ಕರೆಯಬಹುದು. ಸಂಯುಕ್ತ ರಾಜ್ಯ ಸ್ಥಾಪನೆಯಾಗುವುದಕ್ಕೂ ಮುಂಚೆ ಸರ್ಕಾರಗಳ ನಡುವೆ ಮತ್ತು ಬೇರೆ ಬೇರೆ ಘಟಕಗಳ ನಡುವೆ ಹುಟ್ಟಿಕೊಳ್ಳುವ ಜಗಳಗಳನ್ನು ರಾಜನೀತಿ ಕೌಶಲ್ಯದಿಂದ, ಅದು ಸಾಧ್ಯವಾಗದಿದ್ದರೆ ಯುದ್ಧದ ಮೂಲಕ ಪರಿಹರಿಸಲಾಗುತ್ತಿದ್ದುದನ್ನು ಒಂದು ಸಂಯುಕ್ತ ನ್ಯಾಯಾಲಯದ ತೀರ್ಪಿಗೆ ಒಳ ಪಡಿಸುವುದು ಒಂದು ಉದ್ದೇಶವಾಗಿ, ರಾಷ್ಟ್ರೀಯ ಸರ್ಕಾರಗಳು ಸಂಯುಕ್ತ ರಾಜ್ಯವನ್ನು ಸ್ಥಾಪಿಸಬೇಕಾಯಿತು. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಉಚ್ಚ ನ್ಯಾಯಾಲಯವೇ ಈ ಅಭಿಪ್ರಾಯವನ್ನು ಹೊಂದಿದೆ; ನಿಮ್ಮ ಅನುಮತಿಯನ್ನು ಪಡೆದು, ಲೂಸಿಯಾನ ಮತ್ತು ಟೆಕ್ಸಾಸ್ ೧೭೬, ಯು.ಎಸ್.ನಲ್ಲಿ ವರದಿಯಾದ, ಅಮೆರಿಕದ ಸಂಯುಕ್ತ ಸಂಸ್ಥಾನಗಳ ಉಚ್ಚ ನ್ಯಾಯಾಲಯದ ತೀರ್ಪುಗಳಲ್ಲಿ ಒಂದು ಚಿಕ್ಕ ಭಾಗವನ್ನು ಓದಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು: ಅದು ಯಾವ ಕಾಲದಲ್ಲಿ ಪ್ರಕಟವಾಯಿತು?

ಡಾ. ಬಿ. ಆರ್. ಅಂಬೇಡ್ಕರ್: ೧೯೦೦. ಉಚ್ಚ ನ್ಯಾಯಾಲಯದ ಕಾರ್ಯಾಚರಣೆಯ ಬಗ್ಗೆ ನ್ಯಾಯಮೂರ್ತಿ ಮಿ. ಬ್ರೌನ್ ಅವರು ಹೀಗೆ ಹೇಳಿದರು:

> "ಅನಾದಿ ಕಾಲದಿಂದಲೂ ರಾಜ್ಯಗಳು ತಮ್ಮ ಪ್ರಜೆಗಳ ಹಿತಾಸಕ್ತಿಯ ವಿಷಯದಲ್ಲಿ ತೋರಿಸಿದ ಆಸಕ್ತಿಯ ದೃಷ್ಟಿಯಿಂದ, ತಮ್ಮ ಹಕ್ಕುಗಳ ರಕ್ಷಣೆಗಾಗಿ ರಾಜ್ಯಗಳು ಆಗಿಂದಾಗ್ಗೆ ಯುದ್ಧಗಳನ್ನು ಮಾಡುತ್ತಿರುವುದು ವಾಸ್ತವಾಂಶವಾದ್ದರಿಂದ, ಇದಕ್ಕೆ ಹಿಂದೆ ನಡೆದ ಸ್ವಾತಂತ್ರ್ಯದ ಯುದ್ಧ, ಚೈನಾ ಮತ್ತು ಗ್ರೇಟ್ ಬ್ರಿಟನ್ ನಡುವೆ ೧೮೪೦ರಲ್ಲಿ ನಡೆದ ಅಫೀಮು ಯುದ್ಧ ಮತ್ತು ಈಗ ದಕ್ಷಿಣಾ ಆಫ್ರಿಕಾದಲ್ಲಿ ಗ್ರೇಟ್ ಬ್ರಿಟನ್ ಮತ್ತು ಟ್ರಾನ್ಸ್‌ವಾಲ್ ರಿಪಬ್ಲಿಕ್ ನಡುವೆ ನಡೆಯುತ್ತಿರುವ ಯುದ್ಧ ಇಂತಹ ಗಮನಾರ್ಹ ಉದಾಹರಣೆಗಳನ್ನು ನೋಡಿದಾಗ, ಮತ್ತೂ ವೈಯಕ್ತಿಕ ಹಕ್ಕುಗಳ ರಕ್ಷಣೆಗಾಗಿ ರಾಜಕೀಯ ಒಪ್ಪಂದಗಳಾಗುತ್ತಿವೆ ಎನ್ನುವುದನ್ನು ಗಮನಿಸಿದಾಗ ಮತ್ತು ಖಾಸಗಿ ಸಂಸ್ಥೆಗಳ ಹಕ್ಕುಗಳ ಇತ್ಯರ್ಥಕ್ಕಾಗಿ ಅಂತಾರಾಷ್ಟ್ರೀಯ ನ್ಯಾಯಾಸ್ಥಾನಗಳು ಆಗಿಂದಾಗ್ಗೆ ಸ್ಥಾಪಿತವಾಗಿರುವುದ ರಿಂದ– ಸಂವಿಧಾನದ ಪ್ರಕಾರ ಇನ್ನೊಂದು ರಾಜ್ಯದ ಮೇಲೆ ಯುದ್ಧ ಮಾಡಬಾರದೆನ್ನುವ ನಿಷೇಧಕ್ಕೆ ಒಳಪಟ್ಟ ಸಂಯುಕ್ತ ರಾಜ್ಯವೊಂದು, ಇನ್ನೊಂದು ರಾಜ್ಯವು ತನ್ನ ಪ್ರಜೆಗಳ ಮತ್ತು ಅವರ ಆಸ್ತಿಗಳ ಮೇಲೆ ಪ್ರತಿಬಂಧಕವನ್ನು ತರಬೇಕೆಂದು ಈ ನ್ಯಾಯಾಲಯವನ್ನು ಕೇಳದಿದ್ದರೆ, ಅದು ವ್ಯತಿಕ್ರಮವಾಗುತ್ತದೆ. ಪ್ರತಿಬಂಧಕವು ಯುದ್ಧದ ಒಂದು ಭಾಗವಲ್ಲದಿದ್ದರೂ, ಯುದ್ಧವನ್ನು ಘೋಷಿಸುವ ಮುಂಚೆ ಅದನ್ನು ವ್ಯಾಜ್ಯಕ್ಕೆ ಸಾಕಷ್ಟು ಕಾರಣವೆಂದು ಪರಿಗಣಿಸಬಹುದಾಗಿದೆ."

ಅವರು ಇನ್ನೂ ಮುಂದುವರಿದು, ಸಂಯುಕ್ತ ರಾಜ್ಯವಿಲ್ಲದಿದ್ದರೆ ರಾಯಭಾರಿಗಳ ಮೂಲಕ ಅಥವಾ ಯುದ್ಧದಿಂದ ತೀರ್ಮಾನವಾಗುವಂತಹ ಅನೇಕ ಸಂದರ್ಭಗಳು ಸಂಯುಕ್ತ ರಾಜ್ಯದಲ್ಲಿ ಉದ್ಭವಿಸುತ್ತವೆ ಎಂದು ಹೇಳುತ್ತಾರೆ. ಆದ್ದರಿಂದ ಆ ರೀತಿಯ ದುಷ್ಪರಿಣಾಮವನ್ನು ತಡೆಯುವುದಕ್ಕಾಗಿ, ಆ ರೀತಿಯ ಎಲ್ಲ ಸಂದರ್ಭಗಳಲ್ಲೂ ನ್ಯಾಯವನ್ನು ದೊರಕಿಸುವುದಕ್ಕಾಗಿ, ವಿಶಾಲ ವ್ಯಾಪ್ತಿಯುಳ್ಳ ಸಂಯುಕ್ತ ರಾಜ್ಯ ನ್ಯಾಯಾಲಯಕ್ಕೆ ಬೇಕಾದ ಅವಕಾಶಗಳನ್ನು ಸಂಯುಕ್ತ ರಾಜ್ಯದ ನ್ಯಾಯ ವಿಭಾಗವು ಕಲ್ಪಿಸಬೇಕೆಂದೂ ಅವರು ಹೇಳುತ್ತಾರೆ. ಲಾರ್ಡ್ ಛಾನ್ಸಲರ್ ಅವರೆ, ಆ ವಿಷಯವನ್ನು ಎತ್ತಿಕೊಂಡು, ನೀವು ಆ ದಿವಸ ಸಮಿತಿಗೆ ಮಾಡಿದ ಭಾಷಣದಲ್ಲಿ ಸಂಯುಕ್ತ ನ್ಯಾಯಾಲಯವನ್ನು ಕುರಿತು ಅನೇಕ ಅಭಿಪ್ರಾಯಗಳನ್ನೊಳಗೊಂಡ ವ್ಯವಸ್ಥೆಯನ್ನು ಸೂಚಿಸಿದ್ದು, ಅದು ಸ್ವಲ್ಪಮಟ್ಟಿಗೆ ಅಸಮರ್ಪಕವಾಗಿದೆಯೆಂದು ನನಗೆ ಅನ್ನಿಸಿದ್ದನ್ನು, ನೀವು ಕ್ಷಮಿಸುತ್ತೀರಿ ಎಂದು ಭಾವಿಸುತ್ತೇನೆ.

ನೀವು ಆ ದಿವಸ ಕೊಟ್ಟ ಸೂಚನೆಗಳಲ್ಲಿ, ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಸಂಯುಕ್ತ ರಾಜ್ಯದ ಘಟಕಗಳ ನಡುವಿನ ಒಂದು ರಾಜ್ಯ ಇನ್ನೊಂದರ ವಿರುದ್ಧ, ಒಂದು ಪ್ರಾಂತ ಒಂದು ರಾಜ್ಯದ ವಿರುದ್ಧ, ಕಾಮನ್‌ವೆಲ್ತ್ ಭಾರತ ಒಂದು ರಾಜ್ಯ ಅಥವಾ ಪ್ರಾಂತದ ವಿರುದ್ಧವಾದ ವಿಷಯಗಳನ್ನು ವಿಸ್ತರಿಸುತ್ತದೆ ಎಂದು ಹೇಳಿದಿರಿ. ನೀವು "ರಾಜ್ಯ" ಎನ್ನುವ ಪದವನ್ನು ಉಪಯೋಗಿಸಿದಾಗ, ಸಂಘಟಿತವಾದ ಸಂಸ್ಥೆಯೆಂದು ಅಥವಾ ನ್ಯಾಸಧಾರಿ, ಪೋಷಕ ಅಥವಾ ಪ್ರಜೆಗಳ ಪ್ರತಿನಿಧಿ ಎಂದು ಯಾವುದನ್ನು ಸೂಚಿಸಿದಿರಿ ಎಂದು ಗೊತ್ತಾಗಲಿಲ್ಲ. ಆದರೆ ಅದು ಹಾಗಿರಲಿ, ಸಂಯುಕ್ತ ರಾಜ್ಯ ನ್ಯಾಯಾಡಳಿತ ಒಂದು ಘಟಕಕ್ಕೂ ಮತ್ತು ಇನ್ನೊಂದು ಘಟಕದ ಪ್ರಜೆಗೂ ನಡುವೆ ಉದ್ಭವಿಸುವ ಸಮಸ್ಯೆಗಳ ಪರಿಹಾರಕ್ಕೂ ಅವಕಾಶ ಮಾಡಿಕೊಳ್ಳಬೇಕು ಅನ್ನಿಸುತ್ತದೆ. ಈ ಒಂದು ವಿಷಯವನ್ನು ತೆಗೆದುಕೊಳ್ಳಿ. ಒಂದು ಭಾರತೀಯ ಸಂಸ್ಥಾನ ಸಂಯುಕ್ತ ರಾಜ್ಯದ ಒಂದು ಘಟಕವಾಗಿದ್ದು ಮುಕ್ತ ಮಾರುಕಟ್ಟೆಯಲ್ಲಿ, ನಾವು ವ್ಯವಸ್ಥೆ ಮಾಡಬೇಕೆಂದಿರುವ ಸಾಲ ಮಂಡಳಿಯಿಂದ ಸಾಲವನ್ನು ಎತ್ತುತ್ತದೆ ಎಂದಿಟ್ಟುಕೊಳ್ಳೋಣ. ಮುಂಬಯಿ ಪ್ರಾಂತ ವಾಸಿಯೊಬ್ಬ ಸಾಲವನ್ನು ಕೊಡುತ್ತಾನೆ ಎಂದೂ ಮತ್ತು ಸಾಲ ತೆಗೆದುಕೊಂಡ ರಾಜ್ಯ ಅದನ್ನು ಹಿಂತಿರುಗಿಸುವುದಿಲ್ಲ ಎಂದೂ ಊಹಿಸೋಣ. ಆಗ ಪರಿಹಾರಕ್ಕೆ ಏನು ಮಾಡಬೇಕು? ಈಗ ಯೋಜಿಸಿರುವ ವಿಧಾನದಲ್ಲಿ ಸಂಯುಕ್ತ ರಾಜ್ಯದ ನ್ಯಾಯಾಡಳಿತ ಈ ವಿಷಯವನ್ನು ಪರಿಗಣಿಸುವುದಕ್ಕೆ ಯಾವ ಅವಕಾಶವೂ ಇಲ್ಲ. ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಬ್ರಿಟಿಷ್ ಸರಕಾರದ ಅಧೀನ ಪ್ರದೇಶಗಳನ್ನು ತಮಗೆ ಹಿಂತಿರುಗಿಸಬೇಕೆಂದು ಅಥವಾ ಅವನ್ನು ಹಿಂತಿರುಗಿಸದಿದ್ದರೆ, ಪರಿಹಾರಧನವನ್ನಾದರೂ ಕೊಡಬೇಕೆಂದು ರಾಜ್ಯಗಳು ಕೇಳುತ್ತಿವೆ. ಒಂದು ಅಧೀನ ಪ್ರದೇಶದಲ್ಲಿ ಬ್ರಿಟಿಷ್ ಸರ್ಕಾರ ಯಾರೋ ಒಬ್ಬನಿಗೆ ಒಂದು ಭೂಮಿಯನ್ನು ಅವನ ವಶಕ್ಕೆ ಕೊಟ್ಟಿದೆ ಎಂದಿಟ್ಟುಕೊಳ್ಳೋಣ. ಒಂದು ಭಾರತೀಯ ಸಂಸ್ಥಾನಕ್ಕೆ ಆ ಅಧೀನ ಪ್ರದೇಶ ಸೇರಿದ ಮೇಲೆ, ಆ ಸಂಸ್ಥಾನದ ಉನ್ನತಾಧಿಕಾರಿ ಅದೇ ಭೂಮಿಯನ್ನು ಮತ್ತೊಬ್ಬನ ಪಾಲು ಮಾಡುತ್ತಾನೆ ಎಂದಿಟ್ಟುಕೊಳ್ಳೋಣ. ಇಲ್ಲಿ ಎರಡು ಅಧಿಕಾರಗಳು, ಇಬ್ಬರು ಪ್ರತ್ಯೇಕ ವ್ಯಕ್ತಿಗಳಿಗೆ ಒಂದು ಭೂಮಿಯ ಉಪಯೋಗದ ಹಕ್ಕನ್ನು ಬಿಟ್ಟುಕೊಟ್ಟ ಪ್ರಸಂಗವಿದೆ. ಈ ರೀತಿಯ ಜಗಳದಲ್ಲಿ ನ್ಯಾಯವನ್ನು ಪಡೆಯುವುದಕ್ಕೆ ಯಾವ ಪರಿಹಾರವಿದೆ? ಸಂಯುಕ್ತ ರಾಜ್ಯ ನ್ಯಾಯಾಲಯ ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆಯೋ ಇಲ್ಲವೋ? ಹಾಗೆಯೇ ಸಂಯುಕ್ತ ರಾಜ್ಯದ ಬೇರೆ ಬೇರೆ ಘಟಕಗಳಲ್ಲಿ ವಾಸ ಮಾಡುತ್ತ, ತಮ್ಮ ನಡುವೆ ನ್ಯಾಯವಿವಾದವಿರುವ ಎರಡು ವ್ಯಕ್ತಿಗಳ ವಿಷಯವನ್ನು ತೆಗೆದುಕೊಳ್ಳಿ. ಈ ವ್ಯಾಜ್ಯವನ್ನು ಯಾವ ನ್ಯಾಯಾಲಯ ಗಮನಕ್ಕೆ ತೆಗೆದುಕೊಳ್ಳುತ್ತದೆ?

ನೀವು ಮೊನ್ನೆ ಮಾಡಿದ ಭಾಷಣದಲ್ಲಿ ನಾನು ಈಗ ಹೇಳಿದ ವಿಷಯಗಳನ್ನು ಇತ್ಯರ್ಥ ಮಾಡುವ ಅವಕಾಶವನ್ನು ಕಲ್ಪಿಸಿಲ್ಲ ಎಂದು ನನಗೆ ಅನಿಸುತ್ತದೆ.

ನಿಮ್ಮ ವ್ಯವಸ್ಥೆಯಲ್ಲಿ ಸಂಯುಕ್ತ ರಾಜ್ಯ ನ್ಯಾಯಾಲಯಕ್ಕೆ ನೀವು ಸೂಚಿಸಿರುವ ಸಂವಿಧಾನವನ್ನು ಆಸ್ಟ್ರೇಲಿಯಾದ ಸಂಯುಕ್ತ ರಾಜ್ಯ ನ್ಯಾಯಾಲಯ ಮತ್ತು ಅಮೆರಿಕಾದ ಸಂಯುಕ್ತ ಸಂಸ್ಥಾನ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಗೆ ಹೋಲಿಸಿದರೆ, ನೀವು ಸೂಚಿಸಿದ ವ್ಯವಸ್ಥೆ ಸಂಯುಕ್ತ ರಾಜ್ಯಸರ್ಕಾರದ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಸಂಪೂರ್ಣವಾಗಿ ಸೋಲುತ್ತದೆ ಎನಿಸುತ್ತದೆ. ಆಸ್ಟ್ರೇಲಿಯಾದಲ್ಲಿ ೭೫ನೆ ವಿಧಿಯ ಕೆಳಗೆ, ಆಸ್ಟ್ರೇಲಿಯಾದ ಉಚ್ಚ ನ್ಯಾಯಾಲಯಕ್ಕೆ ಎಲ್ಲ ವಿಷಯಗಳಲ್ಲೂ ಅಧಿಕಾರ ವಿರುತ್ತದೆ. (೧) ಯಾವುದೇ ರಾಜಕೀಯ ಒಪ್ಪಂದದಿಂದ ಉದ್ಭವಿಸಿದ್ದು, (೨) ರಾಯಭಾರಿಗಳಿಗೆ ಸಂಬಂಧಿಸಿದ್ದು ಅಥವಾ ಬೇರೆ ರಾಷ್ಟ್ರಗಳ ಪ್ರತಿನಿಧಿಗಳಿಗೆ ಸಂಬಂಧಿಸಿದ್ದು, (೩) ಕಾಮನ್‌ವೆಲ್ತ್ ಆಗಲಿ ಅಥವಾ ಕಾಮನ್ ವೆಲ್ತಿನ ಪರವಾಗಿ ದೂರನ್ನು ಒಯ್ಯುವವನು ಅಥವಾ ಆರೋಪಿಯಾದವನು ಒಂದು ಪಕ್ಷವಾಗಿದ್ದಾಗ, (೪) ರಾಜ್ಯಗಳ ನಡುವೆ ಅಥವಾ ಬೇರೆ ಬೇರೆ ರಾಜ್ಯಗಳ ನಿವಾಸಿಗಳ ನಡುವೆ ಅಧಿಕಾರಿಯೊಬ್ಬನ ವಿರುದ್ಧವಾಗಿ ಉಚ್ಚ ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆಯನ್ನು ಅಥವಾ ಎಚ್ಚರಿಕೆ ಕೋರಿ ಸಲ್ಲಿಸಿದ "ರಿಟ್ ಆಫ್ ಮ್ಯಾಂಡಮಸ್" ಇತ್ಯಾದಿ. ೭೬ನೆಯ ವಿಧಿಯ ಪ್ರಕಾರ ಈ ಕೆಳಕಂಡ ವಿಷಯಗಳು ಅದರ ಅಧಿಕಾರ ವ್ಯಾಪ್ತಿಗೆ ಬರುತ್ತವೆ: (೧) ಸಂವಿಧಾನಕ್ಕೆ ಒಳಪಟ್ಟದ್ದು ಅಥವಾ ಅದರ ವ್ಯಾಖ್ಯಾನವನ್ನು ಒಳಗೊಂಡದ್ದು, (೨) ಶಾಸನಸಭೆಯವರು ಮಾಡಿದ ಕಾನೂನಿಗೆ ಒಳಪಟ್ಟದ್ದು, (೩) ನೌಕಾ ಸೇನಾಧಿಪತ್ಯಕ್ಕೆ ಮತ್ತು ಸಮುದ್ರ ಸಂಬಂಧದ ನ್ಯಾಯಾಡಳಿತಕ್ಕೆ ಸಂಬಂಧಿಸಿದ್ದು ಮತ್ತು (೪) ಬೇರೆ ಬೇರೆ ರಾಜ್ಯಗಳ ಕಾನೂನಿಗೆ ಆದರೂ ಒಂದೇ ವಿಷಯಕ್ಕೆ ಸಂಬಂಧಿಸಿದ್ದು. ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಅಧಿಕಾರ ವ್ಯಾಪ್ತಿ ಮುಂದೆ ಸೂಚಿಸಿದವುಗಳನ್ನು ಒಳಗೊಳ್ಳುತ್ತದೆ. (೧) ಸಂವಿಧಾನದ ಪ್ರಕಾರ ಅನ್ವಯವಾಗುವ ಕಾನೂನು ಮತ್ತು ನ್ಯಾಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳು, ಸಂಯುಕ್ತ ಸಂಸ್ಥಾನದ ಕಾನೂನುಗಳು, ಈಗಾಗಲೇ ಆಗಿರುವ ಅಥವಾ ಅವರ ಅಧಿಕಾರದಲ್ಲಿ ಆಗುವ ಒಪ್ಪಂದಗಳು, (೨) ರಾಯಭಾರಿಗಳಿಗೆ ಸಂಬಂಧಿಸಿದ ಅಥವಾ ಸಾರ್ವಜನಿಕ ಮಂತ್ರಿಗಳಿಗೆ ಮತ್ತು ಪರರಾಷ್ಟ್ರದ ಪ್ರತಿನಿಧಿಗಳಿಗೆ ಸಂಬಂಧಿಸಿದ ಸಮಸ್ಯೆಗಳು, (೩) ನೌಕಾಧಿಪತ್ಯ ಮತ್ತು ಸಮುದ್ರ ಸಂಬಂಧದ ಎಲ್ಲ ವಿಷಯಗಳು, (೪) ಸಂಯುಕ್ತ ಸಂಸ್ಥಾನಗಳಿಗೆ ಸಂಬಂಧವಿರುವ ಎಲ್ಲ ವಿವಾದಗಳು, (೫) ಎರಡು ಅಥವಾ ಹೆಚ್ಚು ರಾಜ್ಯಗಳ ನಡುವಿನ ವಿವಾದಗಳು, (೬) ಒಂದು ರಾಜ್ಯ ಮತ್ತು ಇನ್ನೊಂದು ರಾಜ್ಯದ ಪ್ರಜೆಯ ನಡುವಿನ ವಿವಾದಗಳು (ಸಂವಿಧಾನಕ್ಕೆ ಆದ ಹನ್ನೊಂದನೆಯ ತಿದ್ದುಪಡಿಯಲ್ಲಿ ಇದನ್ನು ಕೈಬಿಡಲಾಯಿತು), (೭) ಬೇರೆ ಬೇರೆ ರಾಜ್ಯಗಳ ಪ್ರಜೆಗಳ ನಡುವಿನ ವಿವಾದಗಳು, (೮) ಒಂದೇ ರಾಜ್ಯದಲ್ಲಿರುವ ಪ್ರಜೆಗಳು ಬೇರೆ ಬೇರೆ ರಾಜ್ಯಗಳಿಂದ ಪಡೆದ ಭೂಮಿಗೆ ಹಕ್ಕುದಾರಿಕೆಯ ವಿಷಯದಲ್ಲಿ ವಿವಾದ ಉಂಟಾಗುವ, ಮತ್ತು (೯) ಒಂದು ರಾಜ್ಯಕ್ಕೂ ಅದರ ಪ್ರಜೆಗಳಿಗೂ ಮತ್ತು ಪರದೇಶದ ನಾಗರಿಕರು ಅಥವಾ ಪ್ರಜೆಗಳ ನಡುವಿನ ವಿವಾದ. ಆದ್ದರಿಂದ ನಾನು ನಿಮಗೆ ನಿವೇದಿಸುತ್ತಿರುವುದೇನೆಂದರೆ, ಈ ಸಂಯುಕ್ತ ರಾಜ್ಯ ನ್ಯಾಯಾಲಯ ಅದರ ನಿಜವಾದ ಅರ್ಥದಲ್ಲಿ ಸಂಯುಕ್ತವಾಗಿರಬೇಕಾದರೆ ಅಂದರೆ ಅದು ಸಂಯುಕ್ತ ರಾಜ್ಯದ ಎಲ್ಲ ಘಟಕಗಳ ಅಥವಾ ಬೇರೆ ಬೇರೆ ಘಟಕಗಳ ನಾಗರಿಕರ ಎಲ್ಲ ವಿವಾದಗಳನ್ನು ಗಮನಿಸಬೇಕಾದರೆ, ಆಗ ಈಗಿರುವ ಪಟ್ಟಿಯನ್ನು ಪುನಃಪರಿಶೀಲಿಸಿ, ಆಸ್ಟ್ರೇಲಿಯಾ ಅಥವಾ ಸಂಯುಕ್ತ ಸಂಸ್ಥಾನಗಳಲ್ಲಿ ಕೊಟ್ಟಿರುವ ಸಂಯುಕ್ತ ರಾಜ್ಯ ನ್ಯಾಯಾಡಳಿತದ ವ್ಯಾಪ್ತಿಗೆ ಸರಿಹೊಂದುವಂತೆ ಮಾಡಬೇಕು.

ಲಾರ್ಡ್ ಛಾನ್ಸಲರ್ ಅವರೆ, ನಾನು ಅರಿಕೆ ಮಾಡಿಕೊಳ್ಳುವ ಇನ್ನೊಂದು ವಿಷಯವೆಂದರೆ ಇದು– ಭಾರತ ದೇಶ ಸಂಯುಕ್ತ ರಾಜ್ಯವುಳ್ಳ ರಾಷ್ಟ್ರವಾಗಲಿರುವುದಾದರೂ, ಈಗ ಆಸ್ಟ್ರೇಲಿಯಾ ಮತ್ತು ಸಂಯುಕ್ತ ಸಂಸ್ಥಾನಗಳ ಉಚ್ಚ ನ್ಯಾಯಾಲಯಗಳ ಆಡಳಿತ ವ್ಯಾಪ್ತಿಯನ್ನಷ್ಟೇ ಪಡೆದು ತೃಪ್ತವಾಗುವ ಹಾಗಿಲ್ಲ. ಭಾರತದಲ್ಲಿ ಕೆಲವು ವಿಚಿತ್ರವಾದ ಸಂದರ್ಭಗಳು ಇರುವ ಹಾಗೆ ಬೇರೆ ದೇಶಗಳಲ್ಲಿ ಇಲ್ಲ. ಆದ್ದರಿಂದ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಭಾರತದ ಸಂಯುಕ್ತ ನ್ಯಾಯಾಲಯದ ನ್ಯಾಯಾಡಳಿತದ ವ್ಯಾಪ್ತಿ ಆಸ್ಟ್ರೇಲಿಯಾ ಮತ್ತು ಸಂಯುಕ್ತ ಸಂಸ್ಥಾನಗಳ ನ್ಯಾಯಾಲಯ ಆಡಳಿತಕ್ಕೆ ಸರಿ ಹೊಂದಬೇಕಾದದದ್ದಷ್ಟೇ ಅಲ್ಲ, ಅದು ಮೂಲಭೂತ ಹಕ್ಕುಗಳಿಗೆ ಮತ್ತು ಅಲ್ಪಸಂಖ್ಯಾತರ ಹಿತರಕ್ಷಣೆಗೆ ಸಂಬಂಧಿಸಿದ ವಿಷಯಗಳಲ್ಲೂ ಅಧಿಕಾರವ್ಯಾಪ್ತಿಯನ್ನು ಹೊಂದಿರಬೇಕಾಗುತ್ತದೆ.

ಅಧ್ಯಕ್ಷರು: ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳ ವಿಷಯವನ್ನು ಉಲ್ಲೇಖಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಆಗಬಹುದು. ಉಲ್ಲೇಖಿಸುತ್ತೇನೆ.

ಅಧ್ಯಕ್ಷರು: ನೀವೇನೂ ತಿಳಿದುಕೊಳ್ಳದಿದ್ದರೆ, ಅದು ಎಲ್ಲಿದೆ ಅಂತ ಹೇಳಿದರೆ ಸಾಕು. ನನಗೆ ಅದು ತುಂಬಾ ಚೆನ್ನಾಗಿ ಗೊತ್ತಿದೆ. ಆದರೆ ಆ ಕ್ಷಣದಲ್ಲಿ ಅದು ನನಗೆ ಸಿಗುತ್ತಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಕ್ಷಮಿಸಬೇಕು. ಅದು ನನ್ನ ಹತ್ತಿರ ಇಲ್ಲ.

ಅಧ್ಯಕ್ಷರು: ಬೇರೆ ಬೇರೆ ರಾಜ್ಯಗಳಲ್ಲಿರುವ ಸ್ವತಂತ್ರ ಪ್ರಜೆಗಳಿಗೆ ಸಿಗುವ ಸವಲತ್ತುಗಳು ಮತ್ತು ವಿನಾಯಿತಿಗಳ ಬಗ್ಗೆ ಇರುವ ಭಾಗವನ್ನು ನಾನು ಯೋಚಿಸುತ್ತಿದ್ದೆ– ಪ್ರತಿಯೊಂದು ಪ್ರಾಂತದ ಮತ್ತು ರಾಜ್ಯದ ಜನರಿಗೆ ರಾಜ್ಯದೊಳಕ್ಕೆ ಪ್ರವೇಶಿಸುವ ಮತ್ತು ರಾಜ್ಯದಿಂದ ಹೊರಗೆ ಹೋಗುವ, ವಿಷಯದ ಬಗ್ಗೆ ಯೋಚಿಸುತ್ತಿದ್ದೆ. ಅದೇನೇ ಇದ್ದರೂ, ಅದನ್ನು ಈಗ ತೆಗೆದು ತೋರಿಸಲಿಕ್ಕೆ ಸಾಧ್ಯ ವಿಲ್ಲವಾದ್ದರಿಂದ ನಾವು ಕಾಲಹರಣ ಮಾಡುವುದು ಬೇಡ. IVನೇ ವಿಧಿಯ ೨ನೇ ಭಾಗವನ್ನು ನಾನು ಯೋಚಿಸುತ್ತಿದ್ದೆ.

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಅರಿಕೆ ಇದು– ನಾವು ಮೂಲಭೂತ ಹಕ್ಕುಗಳ ಬಗ್ಗೆ ಅಥವಾ ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಯಾವುದೇ ರೀತಿಯಲ್ಲಿ ವಿಚಾರ ಮಾಡಿದರೂ ಅವುಗಳಿಗೆ ಸರಿಯಾದ ರಕ್ಷಣೆ ಸಿಗಬೇಕೆನ್ನುವುದೇ ಮುಖ್ಯವಾಗಿದೆ. ನಾನು ಕೊಡುವ ಕಾರಣಗಳು ಇವು. ನಮ್ಮಲ್ಲಿ ಕೆಲವರು ಏನೇನೋ ಪ್ರತಿಭಟನೆ ತೋರಿಸಿದ್ದರೂ ನಾವು ಈಗ ಪಡೆಯಲಿರುವ ಸಂಯುಕ್ತ ರಾಜ್ಯದ ಸಂವಿಧಾನ, ಪರಿಪೂರ್ಣವಾದದ್ದೇನೂ ಆಗುವುದಿಲ್ಲ. ಬಹುಶಃ ಎಲ್ಲ ರೀತಿಯ ಜನಪ್ರಿಯವಾದ ಪ್ರತಿನಿಧಿಗಳನ್ನುಳ್ಳ ಬ್ರಿಟಿಷ್ ಭಾರತ ಮತ್ತು ಯಾವುದೇ ರೀತಿಯ ಜನಪ್ರಿಯವಾದ ಪ್ರತಿನಿಧಿಗಳಿರದ ಭಾರತೀಯ ಸಂಸ್ಥಾನಗಳು ಸೇರಿಕೊಳ್ಳುವ ಒಂದು ಸಂಯುಕ್ತ ರಾಜ್ಯ ಸಂವಿಧಾನವನ್ನು ನಾವು ಪಡೆದುಕೊಳ್ಳುತ್ತೇವೆ. ನಾನೂ ಹೀಗೆ ಊಹಿಸುತ್ತಿದ್ದೇನೆ ಅಷ್ಟೆ. ಬಹುಶಃ ಅದು ಬೇರೆ ರೀತಿಯಲ್ಲೂ ಆಗಬಹುದು; ಹಾಗಾದರೆ ಬೇರೆ ಯಾರೂ ನನ್ನಷ್ಟು ಸಂತೋಷ ಪಡಲಾರರು. ಆದರೆ ಪ್ರಜಾಸತ್ತೆಗೂ ಮತ್ತು ನಿರಂಕುಶ ಪ್ರಭುತ್ವಕ್ಕೂ ನಡುವಿನ ಒಂದು ಪರಿಸ್ಥಿತಿ ನಮ್ಮದಾಗಿರುತ್ತದೆ. ನಾನು ಹೇಳಿದ ಹಾಗೆ, ಬ್ರಿಟಿಷ್ ರಾಜ್ಯದಲ್ಲಿ ರಾಜಕೀಯ ಬಹುಮತವಿಲ್ಲದ ಒಂದು ಸರ್ಕಾರ. ಆದರೆ, ಮತೀಯ ಬಹುಮತವುಳ್ಳ ಸರ್ಕಾರವಿರುತ್ತದೆ. ಆದ್ದರಿಂದ ನನ್ನ ಅಭಿಪ್ರಾಯ ವೇನೆಂದರೆ, ಮೂಲಭೂತ ಹಕ್ಕುಗಳನ್ನು ಮತ್ತು ಅಲ್ಪಸಂಖ್ಯಾತರನ್ನು ರಕ್ಷಿಸುವ ಪ್ರಶ್ನೆ. ಯಾವುದೇ ಸಂವಿಧಾನ ದಲ್ಲಿ ಮುಖ್ಯವಾಗುವುದಕ್ಕಿಂತ, ಭಾರತದಲ್ಲಿ ತುಂಬಾ ಪ್ರಮುಖವಾದದ್ದಾಗುತ್ತದೆ; ಆದ್ದರಿಂದ ಮೂಲಭೂತ

ಹಕ್ಕುಗಳನ್ನು ಸಂಪೂರ್ಣವಾಗಿ ಕೊಡುವ ಜವಾಬ್ದಾರಿಯನ್ನು ಹೊರುವುದು ಕರ್ತವ್ಯವಾಗುತ್ತದೆ. ಅವು ಏನೇ ಇದ್ದರೂ ಮತ್ತು ಅಲ್ಪಸಂಖ್ಯಾತರ ಹಕ್ಕುಗಳು ಏನೇ ಇದ್ದರೂ ಅವು ಬಹಳ ಮುಖ್ಯವಾಗುತ್ತವೆ. ಇವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಂಯುಕ್ತ ರಾಜ್ಯ ನ್ಯಾಯಾಲಯದ ಆಡಳಿತಕ್ಕೆ ಒಪ್ಪಿಸುವುದು ಅತ್ಯುತ್ತಮವಾದ ಮಾರ್ಗವಾಗುತ್ತದೆ. ಇದು ನನ್ನ ಅರಿಕೆ. ಎಲ್ಲ ಕಡೆಯಲ್ಲಿಯೂ, ಮೂಲಭೂತ ಹಕ್ಕುಗಳ ಅಥವಾ ಅಲ್ಪಸಂಖ್ಯಾತರ ರಕ್ಷಣೆಯ ಪ್ರಶ್ನೆ ಏಳುತ್ತದೋ, ಅದು ಬ್ರಿಟಿಷ್ ಭಾರತದಲ್ಲೇ ಆಗಿರಲಿ ಅಥವಾ ಒಂದು ದೇಶೀಯ ರಾಜ್ಯದಲ್ಲೇ ಆಗಿರಲಿ, ಅದರ ವಿಚಾರಣೆ ನಡೆಸುವ ಅಧಿಕಾರವ್ಯಾಪ್ತಿ ಸಂಯುಕ್ತ ರಾಜ್ಯ ನ್ಯಾಯಾಲಯಕ್ಕೆ ಇರಬೇಕು.

ಅಧ್ಯಕ್ಷರು: ವ್ಯಾಪಾರದಲ್ಲಿ ತಾರತಮ್ಯವಾದ ವ್ಯಾಜ್ಯಗಳನ್ನು ನೀವು ಸೇರಿಸಬೇಕು ಅನ್ನುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ವ್ಯಾಪಾರದಲ್ಲಿ ತಾರತಮ್ಯವಿರಬಾರದು ಎನ್ನುವುದನ್ನು ನಾವೆಲ್ಲರೂ ಮೂಲಭೂತ ಹಕ್ಕು ಎಂದು ಪರಿಗಣಿಸುವುದಾದರೆ, ಆಗ ಅದು ಸಂಯುಕ್ತ ರಾಜ್ಯ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಬರಲೇಬೇಕು. ಇಷ್ಟು ಸಂಯುಕ್ತ ರಾಜ್ಯ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಬಗ್ಗೆ ನಾನು ಹೇಳಬೇಕಾದದ್ದು.

ನಾನು ಇನ್ನು ಮುಂದೆ ತೆಗೆದುಕೊಳ್ಳಬೇಕೆಂದಿರುವ ವಿಷಯ ಸಂಯುಕ್ತ ರಾಜ್ಯ ನ್ಯಾಯಾಲಯದ ತೀರ್ಪುಗಳನ್ನು ಜಾರಿಗೆ ತರುವುದರ ಬಗ್ಗೆ. ಲಾರ್ಡ್ ಛಾನ್ಸಲರ್ ಅವರೆ, ನೀವು ನಮ್ಮೆಲ್ಲರ ಗಮನಕ್ಕೆ ತಂದಿರುವ ಟಿಪ್ಪಣಿಯಲ್ಲಿ, ಸಂಯುಕ್ತ ರಾಜ್ಯ ನ್ಯಾಯಾಲಯದ ತೀರ್ಪುಗಳನ್ನು ಜಾರಿಗೆ ತರುವ ಕಾನೂನು ಕ್ರಮಗಳ ಬಗ್ಗೆ ಯಾವ ಸೂಚನೆಯೂ ಇಲ್ಲ. ನನಗೆ ತಿಳಿದಮಟ್ಟಿಗೆ ಈ ವಿಷಯವನ್ನು ಮತ್ತು ಸಂಸ್ಥಾನಗಳ ಸದ್ವರ್ತನೆಯ ಬಗ್ಗೆ ಶಂಕಿಸಬಾರದು ಎಂದು ನೀವು ತಾಕೀತು ಮಾಡಿದ್ದೀರಿ. ಅವರು ವಿಧೇಯವಾಗಿ ಸಂಯುಕ್ತ ರಾಜ್ಯ ನ್ಯಾಯಾಲಯದ ತೀರ್ಮಾನಗಳಿಗೆ ಬದ್ಧವಾಗಿರುತ್ತಾರೆಂದೂ ಮತ್ತು ಆ ತೀರ್ಮಾನ ಗಳನ್ನು ಜಾರಿಗೆ ತರುತ್ತಾರೆಂದು ಭಾವಿಸಿಕೊಳ್ಳಬೇಕು ಎನ್ನುತ್ತೀರಿ. ಲಾರ್ಡ್ ಛಾನ್ಸಲರ್ ಅವರೆ, ಎಲ್ಲರೂ ಒಳ್ಳೆಯವರಾಗಿದ್ದರೆ ಕಾನೂನುಗಳನ್ನು ಮಾಡುವ ಅವಶ್ಯಕತೆಯೆ ಇಲ್ಲವೆನ್ನುವ ಜಾನ್ ಸ್ಟುವರ್ಟ್ ಮಿಲ್‌ರವರ ಸೂತ್ರವನ್ನು ನಾವೀಗ ಅನುಸರಿಸಬೇಕೆಂದು ಕಾಣುತ್ತದೆ. ಆದರೆ, ಕೆಲವು ಜನ ಕೆಟ್ಟವರಾಗಿಯೇ ಇರು ತ್ತಾರೆಂದು ನಮಗೆ ಗೊತ್ತಿರುವುದರಿಂದ, ನಾವು ಕಾನೂನುಗಳನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ಈ ವಿಷಯವನ್ನು ಸಂದಿಗ್ಧ ಸ್ಥಿತಿಯಲ್ಲಿ ಬಿಟ್ಟುಬಿಡುವುದು ಒಳ್ಳೆಯದಲ್ಲ ಅನಿಸುತ್ತದೆ; ನಾನು ಈ ಧೋರಣೆಯನ್ನು ತಾಳುವುದಕ್ಕೆ, ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸರ್ವೋಚ್ಚ ನ್ಯಾಯಾಲಯದ ಅನುಭವ ನನ್ನ ಮಾತನ್ನು ಬೆಂಬಲಿಸುತ್ತದೆ. ನೀವು ಕ್ಷಮಿಸುವುದಾದರೆ, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಜಾರಿಗೆ ತರಲು ಮಾಡಿದ ಪ್ರಯತ್ನಗಳ ಚರಿತ್ರೆಯನ್ನು ಈ ಸಮಿತಿಯ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮೊದಲನೆಯದಾಗಿ ೧೭೯೩ರಲ್ಲಿ ತೀರ್ಮಾನವಾದ ಛಿಶಾಂ ಮತ್ತು ಜಾರ್ಜಿಯಾ ನಡುವಣ ವಿವಾದದ ಬಗ್ಗೆ ನಿಮ್ಮ ಗಮನವನ್ನು ಸೆಳೆಯುತ್ತೇನೆ. ಆಗಿನ ಸಂಯುಕ್ತ ನ್ಯಾಯಾಲಯದ ಆಡಳಿತ ವ್ಯಾಪ್ತಿಯ ಪ್ರಕಾರ ಉಚ್ಚ ನ್ಯಾಯಾಲಯವು ಜಾರ್ಜಿಯಾ ಪ್ರಾಂತದ ವಿರುದ್ಧವಾಗಿ ಮಿಸ್ಟರ್ ಛಿಶಾಂ ಅವರು ಕೆಲವು ಬಾಕಿಗಳನ್ನು ವಸೂಲ್ಮಾಡಿಕೊಳ್ಳಬಹುದೆಂದು ತೀರ್ಪುಕೊಟ್ಟರು. ಆದರೆ ಚರಿತ್ರೆಯಲ್ಲಿ ನಮಗೆ ಕಾಣುವ ಹಾಗೆ, ಜಾರ್ಜಿಯಾ ಪ್ರಾಂತವು ಉಚ್ಚ ನ್ಯಾಯಾಲಯದ ವಿರುದ್ಧ ಪ್ರತಿಭಟಿಸುತ್ತ, ತನ್ನ ಸ್ವಾಯತ್ತತೆಗೆ ಉಚ್ಚ ನ್ಯಾಯಾಲಯ ಅವಮಾನ ಮಾಡಿದೆ ಎನ್ನುತ್ತ ಆ ತೀರ್ಪನ್ನು ಮನ್ನಿಸಲಿಲ್ಲ. ಉಚ್ಚ ನ್ಯಾಯಾಲಯದ ತೀರ್ಪನ್ನು ಅಮಾನತ್ತಿನಲ್ಲಿಡಲಾಯಿತು– ಅದು ಜಾರಿಯಾಗಲಿಲ್ಲ. ಅದು ಹಾಗಾದ್ದರಿಂದ,

ಜಾರ್ಜಿಯ ಪ್ರಾಂತದ ಈ ಧೋರಣೆ ಹನ್ನೊಂದನೆಯ ತಿದ್ದುಪಡಿಗೆ ದಾರಿ ಮಾಡಿತು. ಈ ತಿದ್ದುಪಡಿಯ ಮೂಲಕ ಉಚ್ಚ ನ್ಯಾಯಾಲಯಕ್ಕೆ ಕೊಟ್ಟಿದ್ದ ಸಂಯುಕ್ತ ರಾಜ್ಯಗಳ ಆಡಳಿತದ ವ್ಯಾಪ್ತಿಗೆ ಬರುತ್ತಿದ್ದ ಎರಡು ಪ್ರಾಂತದ ಪ್ರಜೆಗಳ ನಡುವಿನ ವಿವಾದವನ್ನು ಪರಿಗಣಿಸುವ ಅಧಿಕಾರವನ್ನು ತೆಗೆದುಹಾಕಲಾಯಿತು. ಇನ್ನೊಂದು ಉದಾಹರಣೆ ವರ್ಜೀನಿಯ ಮತ್ತು ಪಶ್ಚಿಮ ವರ್ಜೀನಿಯಾಗಳ ವಿವಾದಕ್ಕೆ ಸಂಬಂಧಿಸಿದ್ದು, ಅಂತರ್ಯುದ್ಧ(Civil war)ವಾದ ಮೇಲೆ ಹಳೆಯ ವರ್ಜೀನಿಯಾ ಪ್ರಾಂತವನ್ನು ವರ್ಜೀನಿಯಾ ಮತ್ತು ಪಶ್ಚಿಮ ವರ್ಜೀನಿಯಾ ಎಂದು ಎರಡು ಪ್ರಾಂತಗಳಾಗಿ ವಿಭಜಿಸಲಾಯಿತು. ೧೮೬೧ರಲ್ಲಿ ಈ ಘಟನೆ ನಡೆದಾಗ, ಈ ಒಪ್ಪಂದದ ಪರಿಣಾಮವಾಗಿ ೧೮೬೧ನೆ ಜನವರಿ ೧ನೇ ತಾರೀಖಿನ ಹಿಂದೆ ಮೂಲ ರಾಜ್ಯ ಪಡೆದಿದ್ದ ಸಾರ್ವಜನಿಕ ಸಾಲದ ನ್ಯಾಯವಾದ ಒಂದು ಭಾಗವನ್ನು ಪಶ್ಚಿಮ ವರ್ಜೀನಿಯಾ ಸಂವಿಧಾನದ ಎಂಟನೇ ವಿಧಿಯಲ್ಲಿ ಪುನಃ ದೃಢೀಕರಿಸಲಾಯಿತು. ನಲವತ್ತು ವರ್ಷಗಳ ಕಾಲ ವರ್ಜೀನಿಯಾ ಸ್ನೇಹ ಪೂರ್ವಕ ಮಾತುಕತೆಗಳನ್ನಾಡಿ ಪಶ್ಚಿಮ ವರ್ಜೀನಿಯಾವು ತನಗೆ ಕೊಡಬೇಕಾದ್ದನ್ನು ಪಡೆಯಲಿಕ್ಕೆ ತನ್ನೆಲ್ಲಾ ಶಕ್ತಿಗಳನ್ನು ಉಪಯೋಗಿಸಿತು. ಇದು ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ೧೯೦೬ರಲ್ಲಿ ಈ ವಿಷಯವನ್ನು ವರ್ಜೀನಿಯಾ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಸ್ತಾಪಿಸಿತು. ಪಶ್ಚಿಮ ವರ್ಜೀನಿಯಾ ಏನೇನು ಅಡ್ಡಿಗಳನ್ನೊಡ್ಡಬಹುದೊ ಅದೆಲ್ಲವನ್ನೂ ಒಡ್ಡಿ ಮತ್ತು ಈ ವಿವಾದದ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ಅಧಿಕಾರವನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಲಿಲ್ಲ. ಆಗ ಸರ್ವೋಚ್ಚ ನ್ಯಾಯಾಲಯವು ಈ ವಿವಾದ ತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೆಂದು ನಿರ್ಧರಿಸಿ ಆ ಲೆಕ್ಕಗಳನ್ನು ಪರಿಶೀಲಿಸಿ ವರದಿ ಮಾಡಲಿಕ್ಕೆ ಒಬ್ಬ ತಜ್ಞನನ್ನು ನೇಮಿಸಿತು. ವರದಿ ಏನೋ ತಯಾರಾಯಿತು. ಆಮೇಲೆ ಆ ವರದಿಯನ್ನು ಪ್ರಶ್ನಿಸುವುದಕ್ಕೆ ಪಶ್ಚಿಮ ವರ್ಜೀನಿಯಾ ಸುಮಾರು ವರ್ಷಗಳ ಕಾಲ ತೆಗೆದುಕೊಂಡಿತು. ಅದಾದ ಮೇಲೆ ತಾನು ಈ ಜವಾಬ್ದಾರಿಯನ್ನು ಮನ್ನಿಸಬೇಕೇ ಅಥವಾ ಬೇಡವೆ ಎಂದು ತನ್ನ ಶಾಸನ ಸಭೆಯನ್ನು ವಿಚಾರಿಸಲಿಕ್ಕೆ ಕಾಲಾವಧಿ ಬೇಕೆಂದು ಪಶ್ಚಿಮ ವರ್ಜೀನಿಯಾ ಕೇಳಿಕೊಂಡಿತು. ಹೀಗಾಗಿ ಈ ವಿಷಯ ೧೯೧೩ರವರೆಗೂ ಜಗ್ಗಾಡಿತು. ವರದಿಯಾಗಿ, ಅದಕ್ಕೆ ಬಂದ ತಕರಾರುಗಳನ್ನು ತಳ್ಳಿಹಾಕಿದ ಮೇಲೆ ಮತ್ತೊಮ್ಮೆ ಪಶ್ಚಿಮ ವರ್ಜೀನಿಯಾ ಇನ್ನು ಕೆಲವು ವಿಷಯಗಳನ್ನು ಬರೆದು ಹಾಜರುಪಡಿಸುವುದಾಗಿ ಕೇಳಿಕೊಂಡಿತು. ೧೯೧೫ರಲ್ಲಿ ಎಲ್ಲ ರೀತಿಯ ಅಡ್ಡಿಗಳೂ ಅಯಶಸ್ವಿಯಾದಾಗ ನ್ಯಾಯಾಲಯ ತನ್ನ ತೀರ್ಪನ್ನು ಕೊಟ್ಟಿತು. ನಾಲ್ಕು ವರ್ಷದವರೆಗೆ ಪಶ್ಚಿಮ ವರ್ಜೀನಿಯಾ ಆ ತೀರ್ಪನ್ನು ನೋಡಲಿಕ್ಕೂ ನಿರಾಕರಿಸಿತು. ಆದರೆ, ೧೯೧೯ರಲ್ಲಿ ಆ ಸಾಲವನ್ನು ತೀರಿಸಬೇಕೆಂದು ಪಶ್ಚಿಮ ವರ್ಜೀನಿಯಾ ಪ್ರಾಂತವನ್ನು ಒಪ್ಪಿಸಲಾಯಿತು.

ಮಿಸ್ಟರ್ ಜಿನ್ನಾ: ತೊಂದರೆ ಇವೆಯೆಂದು ಊಹಿಸಿಕೊಂಡ ಮೇಲೆ, ನಿಮ್ಮ ಸಲಹೆ ಏನು?

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಸಲಹೆ ಹೀಗಿದೆ. ಈ ವಿಷಯ ನನ್ನ ಭಾವನೆಗಳು ಒಂದು ರೀತಿಯಲ್ಲಿ ಬಹಳ ದೊಡ್ಡದಾಗಿವೆ ಎಂದು ಹೇಳುತ್ತೇನೆ. ನಾನು ಇದನ್ನೂ ಹೇಳುತ್ತೇನೆ. ಬಹಳಷ್ಟು ಕಾಲ ಕೋಮುವಾರು ಭಾವನೆ, ಪ್ರಾಂತೀಯ ಭಾವನೆ ಇರುತ್ತವೆ. ಈ ಕೋಮುವಾರು ಕ್ಷೋಭೆಯ ಪರಿಸ್ಥಿತಿ ಯಲ್ಲಿ ಸರ್ವೋಚ್ಚ ನ್ಯಾಯಾಲಯದ ಅಥವಾ ಸಂಯುಕ್ತ ನ್ಯಾಯಾಲಯದ– ನೀವು ಏನು ಬೇಕಾದರೂ ಕರೆಯಿರಿ– ತೀರ್ಪುಗಳನ್ನು ತಳ್ಳಿಹಾಕುವುದಿಲ್ಲ ಎಂದು ನಾನು ಖಂಡಿತವಾಗಿ ಹೇಳಲಾರೆ. ಅಲ್ಪಸಂಖ್ಯಾತರ ಪರವಾಗಿ ಮಾತನಾಡುವ ಸದಸ್ಯನಾಗಿ, ಈಗ ಸಧ್ಯದಲ್ಲಿ ಯಾವ ಹಕ್ಕುಗಳೂ ಇರದ ಅಲ್ಪಸಂಖ್ಯಾತರು ತಮ್ಮ ಹಕ್ಕುಗಳನ್ನು ಕೇಳುತ್ತಿರುವಾಗ, ಪ್ರತಿಯೊಂದು ಕಡೆಯೂ ವಿರೋಧವೇ ಎದುರಾಗುತ್ತಿರುವ ಅಲ್ಪ

ಸಂಖ್ಯಾತರ ಪರವಾಗಿ ಮಾತನಾಡುವ ನನಗೆ, ರಾಜ್ಯ ಸಕಾರವೊಂದರಲ್ಲಿ ಜಾತೀಯ ಭಾವನೆಯ ಬಹು ಸಂಖ್ಯಾತರ ವಿಧಾನ ಪರಿಷತ್ತು ತನ್ನ ಹಿತಾಸಕ್ತಿಗಳಿಗೆ ರುಚಿಸದ ತೀರ್ಪುಗಳನ್ನು ಜಾರಿಯಾಗಲು ಬಿಡುತ್ತದೆಂದು ಖಂಡಿತಾ ಅನಿಸುವುದಿಲ್ಲ. ಇದು ನನ್ನ ಅಭಿಪ್ರಾಯವಾಗಿದೆ. ನಾನು ಈ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೇನೆ ಮತ್ತು ಹಾಗೆ ಹೇಳುತ್ತಲೂ ಇದ್ದೇನೆ. ಮಹಾಸ್ವಾಮಿ, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಮತ್ತು ನಿರ್ದೇಶನಗಳನ್ನು ತಳ್ಳಿಹಾಕದ ಹಾಗೆ ಅವು ಪರಿಣಾಮಕಾರಿಯಾಗುವ ಹಾಗೆ ನಾವು ನಮ್ಮ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಬೇಕೆಂದು ನಾನು ಸೂಚಿಸುತ್ತೇನೆ ಮತ್ತು ನಾವು ಆಸ್ಟ್ರೇಲಿಯಾದ ಸಂವಿಧಾನದಲ್ಲಿರುವ ವಿಧಿಗಳನ್ನು ಮತ್ತು ಅವಕಾಶಗಳನ್ನು ನಮ್ಮ ಸಂವಿಧಾನಕ್ಕೆ ಹೊಂದಿಸಿಕೊಳ್ಳಬೇಕೆಂದೂ ಸೂಚಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ಆಸ್ಟ್ರೇಲಿಯಾ ಸಂವಿಧಾನದ ೧೧೮ ಮತ್ತು ೫೧ನೆ ವಿಭಾಗ ಮತ್ತು ೨೫ನೆ ಪ್ಯಾರಾ ಎಲ್ಲ ಕಾನೂನುಗಳಲ್ಲೂ ನಂಬಿಕೆ ಮತ್ತು ವಿಶ್ವಾಸವನ್ನಿಡಬೇಕೆಂದು ಹೇಳಲಾಗಿದೆ. ಅದಿಷ್ಟೇ ಆದರೆ ಏನೂ ಹೇಳಿದಂತಾಗಲಿಲ್ಲ. ಅದನ್ನು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸಂವಿಧಾನದಲ್ಲೂ ಕಾಣುತ್ತೇವೆ. ಆಮೇಲೆ ತೀರ್ಪುಗಳನ್ನು ಜಾರಿಗೆ ತರುವ ಬಗ್ಗೆ, ಆಸ್ಟ್ರೇಲಿಯಾ ಸಂವಿಧಾನದ ೩೪ನೆ ಪ್ಯಾರಾದಲ್ಲಿ ಸಂಯುಕ್ತ ರಾಜ್ಯ ಶಾಸನಸಭೆಗೆ ಅದಕ್ಕೆ ಕೊಟ್ಟಿರುವ ಇತರ ಅಧಿಕಾರಿಗಳಿಗೆ ಆಕಸ್ಮಿಕವಾಗಿ ಸಂಬಂಧಿಸಿದ ವಿಷಯಗಳ ಬಗ್ಗೆ ಕಾನೂನುಗಳನ್ನು ಮಾಡುವ ಅಧಿಕಾರವನ್ನೂ ಹೇಳಲಾಗಿದೆ. ಆಮೇಲೆ ಕೋರ್ಟಿನ ತೀರ್ಪುಗಳನ್ನು ಜಾರಿಗೆ ತರುವ ವಿಷಯದಲ್ಲಿ ಆಸ್ಟ್ರೇಲಿಯಾ ಸಂವಿಧಾನದಲ್ಲಿ ಕೇಂದ್ರ ಸರ್ಕಾರಕ್ಕೆ ಕೆಲವು ನಿರ್ದಿಷ್ಟ ಅಧಿಕಾರಗಳನ್ನೂ ಕೊಡಲಾಗಿದೆ. ಮೊಟ್ಟಮೊದಲಿಗೆ ೫೧ನೆ ವಿಭಾಗದ ೨೪ನೆ ಪ್ಯಾರಾದಲ್ಲಿ ಅಂತರಪ್ರಾಂತ ಸೇವೆಗೆ ಮತ್ತು ಅಂತರಪ್ರಾಂತಗಳ ತೀರ್ಪುಗಳನ್ನು ಜಾರಿಗೆ ತರುವ ಅವಕಾಶಕ್ಕೂ ದಾರಿ ಮಾಡಲಾಗಿದೆ. ಅಷ್ಟೇ ಅಲ್ಲ, ಕಾಮನ್‌ವೆಲ್ತ್‌ನ ಎಲ್ಲ ಕಡೆಗಳಲ್ಲೂ ನಾಗರಿಕ ಸೇವೆ ಮತ್ತು ದಂಡನೆಯ ಕ್ರಮಗಳು ಮತ್ತು ಪ್ರಾಂತಗಳ ನ್ಯಾಯಾಲಯಗಳ ತೀರ್ಪು ಕೂಡ ಒಂದೇ ರೀತಿ ಇರುವ ಹಾಗೆ ಸೂಚಿಸಲಾಗಿದೆ. ಅದು ಗಮನಿಸಬೇಕಾದ ಒಂದು ವಿಷಯ. ಅಮೇಲೆ ಆಸ್ಟ್ರೇಲಿಯಾ ಸಂವಿಧಾನದ ೭೮ನೇ ವಿಭಾಗದಲ್ಲಿ ಹೀಗಿದೆ–

ಅಧ್ಯಕ್ಷರು: "ನ್ಯಾಯಾಧಿಕಾರದ ಮಿತಿಯೊಳಗೆ ಬರುವ ವಿಷಯಗಳಿಗೆ ಸಂಬಂಧಿಸಿದಂತೆ, ಸಂಸತ್ತು ಕಾನೂನುಗಳನ್ನು ರಚಿಸಿ, ಕಾಮನ್‌ವೆಲ್ತಿನ ಅಥವಾ ರಾಜ್ಯದ ವಿರುದ್ಧ ನ್ಯಾಯಾಲಯಕ್ಕೆ ಹೋಗುವ ಹಕ್ಕುಗಳನ್ನು ಕೊಡಬಹುದು."

ಡಾ. ಬಿ. ಆರ್. ಅಂಬೇಡ್ಕರ್: ನಿಜ. ಅದು ಒಂದು ಮಾತು: ಮಹಾಸ್ವಾಮಿಯವರಿಗೆ ಗೊತ್ತಿರುವ ಹಾಗೆ, ೧೯೦೩ನೇ ಇಸವಿಯ ನ್ಯಾಯಮಂಡಳಿಯ ವಿಧಿಯ ಪ್ರಕಾರ, ಪ್ಯಾರಾ ೯ರಲ್ಲಿ ಆಸ್ಟ್ರೇಲಿಯಾದ ಸಂಯುಕ್ತ ರಾಜ್ಯ ಶಾಸನಸಭೆ ತೀರ್ಪುಗಳು ಮತ್ತು ಆಜ್ಞೆಗಳು ಪ್ರಾಂತಗಳ ವಿರುದ್ಧವಾಗಿ ಜಾರಿಗೆ ಬರಬಹುದೆಂದು ನಿರ್ದಿಷ್ಟ ಅವಕಾಶವನ್ನು ಕಲ್ಪಿಸಿದೆ. ಆಮೇಲೆ ಆಸ್ಟ್ರೇಲಿಯಾ ಸಂವಿಧಾನ ೧೨೦ನೇ ವಿಧಿ ಹೀಗೆ ಹೇಳುತ್ತದೆ:

> "ಪ್ರತಿಯೊಂದು ರಾಜ್ಯವೂ ಕಾಮನ್‌ವೆಲ್ತಿನ ಕಾನೂನಿನ ವಿರುದ್ಧವಾಗಿ ವರ್ತಿಸುವ ದೋಷಿಗಳನ್ನು ಅಥವಾ ಆಪಾದಿತರನ್ನು, ಜೈಲುಗಳಲ್ಲಿ ಬಂಧಿಸಿಡಲು ಮತ್ತು ಅಂತಹ ಆಪಾದನೆ ಸಾಬೀತಾದ ಆರೋಪಿಗಳನ್ನು ದಂಡಿಸಲು ಅವಕಾಶಗಳನ್ನಿಟ್ಟುಕೊಂಡಿರಬೇಕು. ಮತ್ತು ಕಾಮನ್‌ವೆಲ್ತಿನ ಸಂಸತ್ ಸಭೆ ಅದಕ್ಕೆ ಬೇಕಾದ ಕಾನೂನುಗಳನ್ನು ಮಾಡಿ, ರಾಜ್ಯಗಳ ಅವಕಾಶಗಳು ಪರಿಣಾಮಕಾರಿಯಾಗುವ ಹಾಗೆ ಮಾಡಬೇಕು."

ಆದ್ದರಿಂದ, ಸಂಯುಕ್ತ ಶಾಸನಸಭೆಗೆ ನಿರ್ದಿಷ್ಟ ಅಧಿಕಾರಗಳನ್ನು ಕೊಟ್ಟು, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಜಾರಿಯಾಗುವ ಹಾಗೆ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷರು: ಯಾವ ರೀತಿಯ ಅನುಮೋದನೆ ಬೇಕೆಂದು ನೀವು ಹೇಳುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ಅವರು ಏನು ಮಾಡುವರೆಂದು ನನಗೆ ಗೊತ್ತಿಲ್ಲ. ಆದರೆ, ಈ ರೀತಿ ಈ ವಿಷಯವನ್ನು ತ್ರಿಶಂಕುವನ್ನಾಗಿ ಬಿಡಬಾರದೆಂದು ನನ್ನ ಅರಿಕೆ. ಸನ್ಮಾನ್ಯರೇ, ನಾನು ಸಂಗ್ರಹಿಸಿದ ಕೆಲವು ಉಲ್ಲೇಖಗಳ ಆಧಾರದಿಂದ ಅಮೆರಿಕದ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಸಂಪೂರ್ಣವಾಗಿ ನಿರುಪಯುಕ್ತವಾದವುಗಳಾಗಿವೆ ಎಂಬ ಅಂಶವನ್ನು ತೋರಿಸಲಿದ್ದೇನೆ. ಏಕೆಂದರೆ ಅವರು ತಮ್ಮ ತೀರ್ಪುಗಳನ್ನು ಕಾರ್ಯಗತಗೊಳಿಸಲಾಗುವುದಿಲ್ಲ ಎಂಬ ಅಂಶವಷ್ಟೇ ಎಲ್ಲ ಅವುಗಳನ್ನು ಉಲ್ಲಂಘಿಸಲಾಗಬಹುದೆಂಬ ಭ್ರಾಂತಿ ಅವರನ್ನು ಕಾಡಿತ್ತು. ಉದಾಹರಣೆಗಾಗಿ, ಒಹಾಯೋ ರಾಜ್ಯದ ರಾಜ್ಯಪಾಲ(Governor)ರ ಪ್ರಕರಣದಲ್ಲಿ ಅವರು ಓಹಿಯೋ ರಾಜ್ಯವನ್ನು ಪ್ರವೇಶಿಸಿ ತಲೆ ತಪ್ಪಿಸಿಕೊಂಡು ಓಡಿಹೋಗಿದ್ದ ಒಬ್ಬ ಅಪರಾಧಿಯನ್ನು ವಾಪಸು ಕಳುಹಿಸಿಕೊಡಬೇಕೆಂದು ರಾಜ್ಯಪಾಲರಿಗೆ ಆಜ್ಞಾಪಿಸಿದ್ದರು. ಆದರೆ, ರಾಜ್ಯಪಾಲರು ಈ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದರು. ನಂತರ ಕೆಂಟಕಿ ರಾಜ್ಯವು ರಾಜ್ಯಪಾಲರಿಗೆ ಕರ್ತವ್ಯ ನಿರ್ವಹಣೆಯ ಆಜ್ಞಾಪತ್ರ(Writ of Mandamus)ವನ್ನು ನೀಡಬೇಕೆಂದು ಕೋರಿತು. ಈ ಹಂತದಲ್ಲಿ ನ್ಯಾಯಾಲಯ ಹೇಳಿದ್ದೇನೆಂದರೆ, ನಮ್ಮ ತೀರ್ಪನ್ನು ನಾವೇ ಜಾರಿಗೊಳಿಸುವ ಅಧಿಕಾರವನ್ನು ಸಂವಿಧಾನ ನಮಗೆ ನೀಡಿರುವುದಿಲ್ಲ; ಆದ್ದರಿಂದ ನಾವು ಕರ್ತವ್ಯ ನಿರ್ವಹಣೆಯ ಆಜ್ಞಾಪತ್ರವನ್ನು ಕೊಡಕೂಡದು. ರಾಜ್ಯಪಾಲರು ಒಬ್ಬ ಪರಾರಿಯಾದ ಅಪರಾಧಿಯನ್ನು ಒಪ್ಪಿಸಲು ಬದ್ಧರಾಗಿದ್ದಾರೆಂದು ಅವರು ಆಜ್ಞಾಪಿಸಿದ್ದಾಗ್ಯೂ ಈ ಪರಿಸ್ಥಿತಿ ಉಂಟಾಗಿತ್ತು. ನನ್ನ ತೀರ್ಪುಗಳು ಜಾರಿಯಾಗಲಿಕ್ಕಿಲ್ಲ ಎಂದು ಅನಿಸಿಕೆಯಿಂದ ನ್ಯಾಯಾಲಯ ಪೀಡಿತವಾಗಿದ್ದ ಕಾರಣದಿಂದಲೇ ಅದು ಅಂತಹ ಪರಿಣಾಮಗಳನ್ನು ನೀಡಲು ನಿರಾಕರಿಸಿತ್ತೆಂಬ ಅಂಶವನ್ನು ನಾನು ಅಮೆರಿಕದ ಸರ್ವೋಚ್ಚ ನ್ಯಾಯಾಲಯದ ನೂರಾರು ಪ್ರಕರಣಗಳ ಆಧಾರದ ಮೇಲೆ ತೋರಿಸಿಕೊಡಬಲ್ಲೆ. ಆದ್ದರಿಂದ ಇಂತಹ ಒಂದು ವಿಧಿಯನ್ನು ಹೊಂದದ ಹೊರತು ಪರಿಸ್ಥಿತಿಯನ್ನು ಹೇಗೆ ಸುರಕ್ಷಿತಗೊಳಿಸಬಹುದೆಂಬುದು ನನಗೆ ತಿಳಿಯುತ್ತಿಲ್ಲ.

ಅಧ್ಯಕ್ಷ: ಯಾವ ವಿಧದ ಕಾನೂನು? ಉದಾಹರಣೆಗೆ ಬಂಗಾಳದ ವಿರುದ್ಧ ತೀರ್ಪನ್ನು ನೀಡಿದಾಗ ಹೇಗಾದರೂ ಮಾಡಿ ಬಂಗಾಳಕ್ಕೆ ತೀರ್ಪನ್ನು ಜಾರಿ ಮಾಡುವ ಅಧಿಕಾರವುಳ್ಳ ಒಬ್ಬ ಅಮೀನನನ್ನು ಕಳುಹಿಸಿಕೊಡಬೇಕೆಂದು ನೀವು ಸೂಚಿಸುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಅಭಿಪ್ರಾಯದಲ್ಲಿ ೭೮ನೆಯ ವಿಭಾಗದಲ್ಲಿ ಹೇಳಿರುವಂತೆ ಸಿವಿಲ್ ಡಿಕ್ರಿಗಳನ್ನು ಜಾರಿಗೊಳಿಸುವ ಅಧಿಕಾರಿಯಾಗಿರುವ ಖಜಾನೆಯ ಅಧಿಕಾರಿ ಹಾಗೆ ಮಾಡಲು ಬಾಧ್ಯನಾಗಿರುತ್ತಾನೆ.

ಅಧ್ಯಕ್ಷ: ಅವನು ಹಾಗೆ ಮಾಡದೇ ಹೋದ ಪಕ್ಷದಲ್ಲಿ ಯಾವ ಪರಿಸ್ಥಿತಿ ಉಂಟಾಗುವುದು?

ಡಾ. ಬಿ. ಆರ್. ಅಂಬೇಡ್ಕರ್: ಆಗ ಅವರು ಅವನನ್ನು ನ್ಯಾಯಾಲಯ ನಿಂದನೆಯ ಆರೋಪದ ಮೇಲೆ ವಿಚಾರಣೆಗೆ ಗುರಿಪಡಿಸುವರೆಂದು ನನಗನಿಸುತ್ತದೆ.

ಸರ್ ಮಾಣಿಕ್‌ಜೀ ದಾದಾಭಾಯಿ: ಅವನನ್ನು ಎಲ್ಲಿ ವಿಚಾರಣೆಗೊಳಪಡಿಸಲಾಗುವುದು?

ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ನ್ಯಾಯಾಲಯದಲ್ಲಿ ಅಥವಾ ಅದು ಎಲ್ಲಿ ಜರುಗಬೇಕೆಂದು ಹೇಳುತ್ತದೆಯೋ ಅಲ್ಲಿ.

ಶ್ರೀಯುತ ಅಯ್ಯಂಗಾರ್: ನಿಂದನೆಯ ವಾರಂಟನ್ನು ಯಾರು ಜಾರಿಗೊಳಿಸುವರು?

ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ಸರಕಾರ ತನ್ನ ಅಧಿಕಾರಗಳ ಮೂಲಕ ಸಂಯುಕ್ತ ಅಥವಾ ಫೆಡರಲ್ ಸರಕಾರಕ್ಕೆ ಈ ಅಧಿಕಾರ ಇರಬೇಕೆಂದು ನಾನು ಬಯಸುತ್ತೇನೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಇದು ಅದರ ಇಂಗಿತ ಅಧಿಕಾರಗಳಲ್ಲಿ ಒಂದಾಗಿತ್ತು ಮತ್ತು ಆಸ್ಟ್ರೇಲಿಯಾ ಸಂವಿಧಾನದ ೧೨೦ನೆಯ ವಿಭಾಗದಂತೆ ಫೆಡರಲ್ ಕಾನೂನಿನ ವಿರುದ್ಧ ಅಪರಾಧವೆಸಗಿದವರನ್ನು ಬಂಧನದಲ್ಲಿಡುವ ಅಧಿಕಾರವನ್ನು ಫೆಡರಲ್ ಸರಕಾರ ಹೊಂದಿದೆ. ಯಾವುದಾದರೂ ಒಂದು ಫೆಡರಲ್ ಕಾನೂನು ಪಾಸಾದಾಗ ಯಾವುದೇ ರಾಜ್ಯದ ನಾಗರಿಕನು ಅದನ್ನು ಉಲ್ಲಂಘಿಸಿದ್ದಾನೆಂಬ ಕಾರಣ ಸರ್ವೋಚ್ಚ ನ್ಯಾಯಾಲಯವು ಅವನ ವಿರುದ್ಧ ತೀರ್ಪನ್ನು ನೀಡಿದಾಗ ಆ ರಾಜ್ಯ ಈ ವ್ಯಕ್ತಿಯನ್ನು ಜೇಲಿನಲ್ಲಿಡಲು ಇಚ್ಛೆಪಡದೇ ಹೋದರೆ, ಅಂತಹ ಸಂದರ್ಭದಲ್ಲಿ ೧೨೦ನೆಯ ವಿಭಾಗದನ್ವಯ ಫೆಡರಲ್ ಸರಕಾರವು ತನ್ನದೇ ಆದ ಬಂದೀಖಾನೆಗಳನ್ನು ಹೊಂದಬೇಕಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಫೆಡರಲ್ ಸರಕಾರ ಎಲ್ಲಾ ವಿಷಯಗಳಲ್ಲಿ ನ್ಯಾಯ ದೊರಕಿಸಿಕೊಡಬೇಕೆಂದು ಬಯಸಿದರೆ ಅದು ತನ್ನ ತೀರ್ಪುಗಳು ಜಾರಿಯಾಗುವಂತೆ ಮಾಡುವ ಅಧಿಕಾರ ಹೊಂದಿರಬೇಕು. ಅದನ್ನು ಯಾವ ರೀತಿ ಕೈಗೊಳ್ಳಬೇಕೆಂದು ಸದ್ಯದಲ್ಲಿ ನಾನು ಹೇಳಲಾರೆ. ಫೆಡರಲ್ ಸರಕಾರಕ್ಕೆ ತನ್ನ ತೀರ್ಪುಗಳು ಮತ್ತು ಆಜ್ಞೆಗಳು ಭಾರತದಾದ್ಯಂತ ಜಾರಿಯಾಗುವಂತೆ ನೋಡಿಕೊಳ್ಳುವ ಅಧಿಕಾರವನ್ನು ಸಂವಿಧಾನದಲ್ಲಿ ಅಳವಡಿಸಬೇಕೆಂದು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಪರಿಹಾರ ವಿಫಲಗೊಂಡರೆ ಹಕ್ಕು ಸಹ ವಿಫಲಗೊಳ್ಳುವುದೆಂಬ ಅಂಶವನ್ನೂ ನಾನು ಇಲ್ಲಿ ಪುನರುಚ್ಚರಿಸುವ ಅವಶ್ಯಕತೆ ಇಲ್ಲ.

ಶ್ರೀಯುತ ಜಯಕರ್: ಜನಾಂಗೀಯ ಅಥವಾ ಕೋಮು ಸಂಘರ್ಷದ ಪರಿಸ್ಥಿತಿಯಲ್ಲಿ ನಿರರ್ಥಕವಾಗಲಾರದಂತಹ ಯಾವ ಪರಿಹಾರವನ್ನೂ ನಿರೂಪಿಸುವುದು ಸಾಧ್ಯವಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇದಕ್ಕೆ ಉತ್ತರ ನೀಡುವುದು ನನ್ನ ಕೆಲಸವಲ್ಲ. ನಾನು ನನ್ನ ಒಂದು ಪ್ರಸಂಗವನ್ನೇ ಪರಿಶೀಲಿಸುವೆ. ಮುಂಬಯಿ ಪ್ರಾಂತ್ಯದಲ್ಲಿ ನಾಸಿಕ್ ಸತ್ಯಾಗ್ರಹದ ಪ್ರಸಂಗವಿದೆ ಮತ್ತು ಒಂದು ಮೂಲಭೂತ ಹಕ್ಕೂ ಸಹ ಇದೆ ಎಂದು ಭಾವಿಸೋಣ. ನಾನು ಸಲ್ಲಿಸಿರುವ ಈ ವಿಜ್ಞಾಪನಾ ಪತ್ರದ ಒಂದನೆಯ ಭಾಗದಲ್ಲಿ ನಾನು ಸೂಚಿಸಿರುವ ದೇವಾಲಯ ಪ್ರವೇಶದ ಹಕ್ಕೇ ಇದಾಗಿದೆ. ನಾವು ಶಾಂತಿ ಭಂಗ ಮಾಡಿದರೆ ನಮ್ಮನ್ನು ಬಂಧನದಲ್ಲಿಡಬಹುದೆಂದು ಭಾವಿಸೋಣ. ಯಾವುದೇ ಫೆಡರಲ್ ನ್ಯಾಯಾಲಯ ಹೊಂದಿರಲೇಬೇಕಾದ ಇಂತಹ ಅಧಿಕಾರ ವ್ಯಾಪ್ತಿಯನ್ವಯ ನಾವು ಫೆಡರಲ್ ನ್ಯಾಯಾಲಯಕ್ಕೆ ಹೋಗುತ್ತೇವೆ ಎಂದು ಇಟ್ಟುಕೊಳ್ಳೋಣ. ಆಗ ಫೆಡರಲ್ ನ್ಯಾಯಾಲಯವು ಮ್ಯಾಜಿಸ್ಟ್ರೇಟರ ಆಜ್ಞೆ ತಪ್ಪು ಎಂದು ತೀರ್ಮಾನಿಸಿತೆಂದು ಭಾವಿಸೋಣ. ಈ ತೀರ್ಪನ್ನು ಜಾರಿಗೊಳಿಸಬೇಕೆಂದು ನಾವು ಗೃಹಖಾತೆಯ ಸಚಿವರನ್ನು ಕೋರುತ್ತೇವೆ ಎಂದು ಸಹ ಭಾವಿಸೋಣ. ಗೃಹ ಸಚಿವರು ಸಂಪ್ರದಾಯವಾದಿಗಳ ಅಭಿಪ್ರಾಯವನ್ನವಲಂಬಿಸಿ "ನಾನು ಹಾಗೆ ಮಾಡಲಾರೆ" ಎಂದು ಹೇಳುತ್ತಾರೆಂದು ಭಾವಿಸಿದರೆ ಇಂತಹ ಪ್ರಸಂಗಗಳಲ್ಲಿ ಕೇಂದ್ರ ಸರ್ಕಾರವು ತನ್ನ ಕಾನೂನುಗಳನ್ನು ತಾನೇ ಕಾರ್ಯಗತಗೊಳಿಸುವ ಅಧಿಕಾರ ಹೊಂದಿರಬೇಕೆಂದು ನಾನು ಬಯಸುತ್ತೇನೆ.

ಮಿಸ್ಟರ್ ಜಿನ್ನಾ: ನೀವು ಹೇಳುತ್ತಿರುವ ಮಾತುಗಳಲ್ಲಿ ಬಹಳ ಸತ್ವ ಇದೆ ಎಂದು ನನಗನಿಸುತ್ತದೆ. ಒಂದು ಡಿಕ್ರಿ ಅಥವಾ ವಾರಂಟನ್ನು ಜಾರಿಗೊಳಿಸಬೇಕಾದರೆ ಮೊದಲನೆಯದಾಗಿ ಅದರ ಹಿಂದೆ ಪೊಲೀಸ್ ಬಲ ಇರಬೇಕು ಮತ್ತು ಎರಡನೆಯ ಹಂತದಲ್ಲಿ ಅಂತಿಮ ಅಧಿಕಾರ ಸೈನ್ಯಕ್ಕೆ ಇರಬೇಕು. ನಿಮ್ಮ ಫೆಡರಲ್

ಸರಕಾರದಲ್ಲಿ ಡಿಕ್ರಿ ಅಥವಾ ಜಾರಿ ಮಾಡುವ ಸದಸ್ಯನು ಸೈನ್ಯದ ಸಹಾಯವಿಲ್ಲದೇ ಇವುಗಳನ್ನು ಹೇಗೆ ಜಾರಿಗೊಳಿಸಬಹುದೆಂದು ನೀವು ನಿರೀಕ್ಷಿಸುತ್ತೀರಿ?

ಡಾ. ಬಿ. ಆರ್. ಅಂಬೇಡ್ಕರ್: ಅವರು ಅದನ್ನೂ ಪಡೆಯಬಹುದು. ಅವರ ಮೇಲೆ ನಾನು ಯಾವ ಪರಿಮಿತಿಯನ್ನೂ ಹೇರುತ್ತಿಲ್ಲ. ಈ ಉದ್ದೇಶಕ್ಕಾಗಿ ಅವರು ಅವಶ್ಯವೆಂದು ಬರೆದ ಎಲ್ಲಾ ಅಧಿಕಾರಗಳನ್ನು ನಾನು ಅವರಿಗೆ ಕೊಡುವೆ. ಅವರು ಸೈನಿಕ ಸಹಾಯ ಪಡೆಯುವ ಪ್ರಸಂಗ ಬರಬಹುದು. ಅದನ್ನು ನಾನು ನಿರಾಕರಿಸುವುದಿಲ್ಲ. ಆದರೆ, ನಾನು ಹೇಳುವುದಿಷ್ಟೇ: ಮೂಲಭೂತ ಹಕ್ಕುಗಳನ್ವಯ ಅಥವಾ ಅಲ್ಪಸಂಖ್ಯಾತರ ಹಕ್ಕುಗಳನ್ವಯವೇ ಅನ್ನಿ, ನಿಜವಾಗಿಯೂ ಜನತೆಯ ರಕ್ಷಣೆ ಮಾಡಬೇಕೆಂದರೆ, ಫೆಡರಲ್ ನ್ಯಾಯಾಲಯದ ತೀರ್ಪುಗಳನ್ನು ಜಾರಿಗೊಳಿಸುವಂತೆ ನೋಡಿಕೊಳ್ಳುವ ಅಧಿಕಾರ ಫೆಡರಲ್ ಸರಕಾರಕ್ಕಿರಬೇಕೆಂದು ನಾನು ಹೇಳಬಯಸುತ್ತೇನೆ.

ಮಿಸ್ಟರ್ ಜಿನ್ನಾ: ಅಧಿಕಾರವನ್ನು ಕೊಡಮಾಡುವುದಷ್ಟೇ ಅಲ್ಲ, ಆ ಅಧಿಕಾರವನ್ನು ಚಲಾಯಿಸಲೂ ಅವರಿಗೆ ಒಂದು ವಿಧಿಬದ್ಧವಾದ ಸಾಧನವನ್ನೂ ಒದಗಿಸಬೇಕಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ವ್ಯವಸ್ಥೆಯಲ್ಲಿ ಅವರಿಗೆ ಅಂತಹ ಸಾಧನವೂ ದೊರೆಯುವುದು.

ಮಿಸ್ಟರ್ ಜಿನ್ನಾ: ಫೆಡರಲ್ ಸರಕಾರಕ್ಕೆ ಅಂತಹ ಅಧಿಕಾರವಿರಬಹುದು. ಆದರೆ, ಆ ಅಧಿಕಾರವನ್ನು ಚಲಾಯಿಸಲು ಅವರ ಕೈಯಲ್ಲಿ ಒಂದು ವಿಧಿಬದ್ಧ ಸಾಧನವೂ ಇರಬೇಕಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಸೈನ್ಯವೇ ಆ ಸಾಧನ.

ಮಿಸ್ಟರ್ ಜಿನ್ನಾ: ಅದು ಸರಿ, ಆದ್ದರಿಂದ ಲಾರ್ಡ್ ಛಾನ್ಸಲರರು ಸಲಹೆ ಮಾಡಿರುವಂತೆ ನೀವು ಇದನ್ನು ಗಮನಿಸಿಲ್ಲ– ಕೊನೆಯಲ್ಲಿ ಫೆಡರಲ್ ನ್ಯಾಯಾಲಯದ ಡಿಕ್ರಿಗಳನ್ನು ಮತ್ತು ಆಜ್ಞೆಗಳನ್ನು ಜಾರಿಗೊಳಿಸುವ ಜವಾಬ್ದಾರಿ ಪ್ರಭುತ್ವ(Crown)ದ ಕೈಯಲ್ಲಿದೆ. ಅಂತಹ ಜವಾಬ್ದಾರಿ ಪ್ರಭುವಿಗಿದೆ ಎಂದು ಏಕೆ ಹೇಳಲಾಗಿದೆ ಎಂದರೆ, ನಾನು ತಿಳಿದಿರುವಂತೆ ಇಲ್ಲಿಯವರೆಗೂ ಇರುವ ವಸ್ತುಸ್ಥಿತಿಯ ಪ್ರಕಾರ ರಕ್ಷಣೆ ಪ್ರಭುವಿನ ಅಧಿಕಾರಕ್ಕೆ ಸೇರಿದ ವಿಷಯವಾಗಿದೆ. ಲಾರ್ಡ್ ಛಾನ್ಸಲರರೇ, ನಾನು ಹೇಳುತ್ತಿರುವುದು ಸರಿಯೇ?

ಅಧ್ಯಕ್ಷ: ಹೌದು. ಅದೇ ಪ್ರಸ್ತುತ ವಿಷಯ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ನಾನು ಪ್ರತಿಪಾದಿಸುತ್ತಿರುವ ವಿಷಯವೇನೆಂದರೆ, ನೀವು ಒಂದು ಕಡೆ ಫೆಡರಲ್ ಸರಕಾರ ಮತ್ತು ಪ್ರಾಂತೀಯ ಸರಕಾರಗಳ ನಡುವೆ ಕಾರ್ಯಗಳನ್ನು ವಿಭಜಿಸುತ್ತಿರುವಾಗ ಇನ್ನೊಂದು ಕಡೆ ಫೆಡರಲ್ ಸರಕಾರಕ್ಕೆ ಶಾಸಕ ಅಥವಾ ಇತರ ಅಧಿಕಾರಗಳನ್ನು ಕೊಡದೇ ಹೋದರೆ, ಅದು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಜಾರಿಗೊಳಿಸಲಾರದು. ಇದು ನನ್ನ ವಾದ.

ಶ್ರೀಯುತ ಜಯಕರ್: ಆದಾಗ್ಯೂ ತೊಂದರೆಗಳು ನಿವಾರಣೆಯಾಗುವುದಿಲ್ಲ. ಇದರಿಂದ ನೀವು ಊಹಿಸುತ್ತಿರುವ ಕೋಮು ವ್ಯಾಜ್ಯ ಪರಿಸ್ಥಿತಿಯಲ್ಲಿ ತೊಂದರೆಗಳ ನಿವಾರಣೆಯಾಗುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇದಕ್ಕಿಂತಲೂ ಹೆಚ್ಚು ಪರಿಣಾಮಕಾರಿ ವಿಧಾನಗಳನ್ನು ಅನುಸರಿಸಬೇಕಾಗಿಬರಬಹುದೆಂಬ ಅಂಶವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಮತ್ತು ನಮಗೆ ತಿಳಿದಿರುವಂತೆ ಸ್ವಿಸ್ ಸಂಯುಕ್ತ ವ್ಯವಸ್ಥೆಯಲ್ಲಿ ಸೈನ್ಯವನ್ನೂ ಸಹ ಬಳಸಲಾಗುತ್ತಿದೆ. ಸ್ವಿಸ್ ಸರಕಾರಕ್ಕೆ ಕೊನೆಯಪಕ್ಷ ತನ್ನ ಫೆಡರಲ್ ನ್ಯಾಯಾಲಯದ ತೀರ್ಪುಗಳನ್ನು ಜಾರಿಗೊಳಿಸಲು ಸೈನ್ಯವನ್ನು ಬಳಸುವ

ಅಧಿಕಾರವನ್ನು ನೀಡಲಾಗಿದೆ. ಯಾವ ವಿಧಾನಗಳನ್ನು ಅನುಸರಿಸಬೇಕೆಂಬುದನ್ನು ನಾನು ಇಲ್ಲಿ ವಿಧಿಸ ಬಯಸುವುದಿಲ್ಲ. ಆದರೆ ನಾನು ಹೇಳುವುದೇನೆಂದರೆ, ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಫೆಡರಲ್ ಸರಕಾರಕ್ಕೆ ಇಂತಹ ಅಧಿಕಾರವಿಲ್ಲದ ಕಾರಣ ಅನೇಕ ತೊಂದರೆಗಳೂ, ಸಮಸ್ಯೆಗಳೂ ಉಂಟಾದವು.

ಅಧ್ಯಕ್ಷ: ನಾನು ನಿಮ್ಮ ಮಾತುಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿರುವೆ. ಆದ್ದರಿಂದಲೇ ಅದು ಅಂತಹ ಜವಾಬ್ದಾರಿಯನ್ನು ಹೊರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಅಂತಹ ಪರಿಸ್ಥಿತಿ ಭಾರತದಲ್ಲಿ ಉಂಟಾಗಬಹುದು.

ಲಾರ್ಡ್ ಲೋತಿಯನ್: ಅಮೆರಿಕದಲ್ಲಿ ಫೆಡರಲ್ ಸರಕಾರ ಒಬ್ಬ ವ್ಯಕ್ತಿಯ ಪ್ರಕರಣದಲ್ಲಿ ಮಾತ್ರ, ಆ ವ್ಯಕ್ತಿಯ ವಿರುದ್ಧ ಕ್ರಮ ತೆಗೆದುಕೊಳ್ಳಬಹುದು. ಆದರೆ, ಈ ಪ್ರಶ್ನೆ ಸಂವಿಧಾನ ರಚನಾ ಸಭೆಯ ಮುಂದೆ ಬಂದಾಗ ಫೆಡರಲ್ ಸರಕಾರವು ಒಂದು ರಾಜ್ಯದ ವಿರುದ್ಧ ಕ್ರಮ ತೆಗೆದುಕೊಳ್ಳಲಾಗದು ಎಂದು ನಿರ್ಣಯಿಸಿತು. ಏಕೆಂದರೆ, ಒಂದು ರಾಜ್ಯ ಇನ್ನೊಂದು ರಾಜ್ಯದ ವಿರುದ್ಧ ಯುದ್ಧದ ಮೂಲಕ ಮಾತ್ರ ಕ್ರಮ ತೆಗೆದುಕೊಳ್ಳಬಹುದು. ಆದ್ದರಿಂದ ಸಂವಿಧಾನ ರಚನಾ ಸಭೆ ಈ ವಿಷಯವನ್ನು ರಾಜ್ಯದ ಮೇಲೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವಂತೆ ಒತ್ತಾಯ ತರುವ ಕಾರ್ಯವನ್ನು ಸಮುದಾಯದ ಸದ್ಭಾವನೆಗೆ ಬಿಟ್ಟುಕೊಟ್ಟಿತು. ಈ ರೀತಿ ಅಮೆರಿಕದಲ್ಲಿ ವ್ಯಕ್ತಿಯ ವಿರುದ್ಧ ಮತ್ತು ರಾಜ್ಯದ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮದ ನಡುವೆ ಭಿನ್ನತೆ ಇರುವುದಿಲ್ಲವೇ? ಒಬ್ಬ ವ್ಯಕ್ತಿಯ ವಿರುದ್ಧ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಒಂದು ಮಟ್ಟದವರೆಗೆ ಮಾಡಬಹುದು. ಆದರೆ, ಒಂದು ಸಂಯುಕ್ತ ರಾಜ್ಯ ವ್ಯವಸ್ಥೆಯಲ್ಲಿ ಒಂದು ರಾಜ್ಯದ ವಿರುದ್ಧ ಫೆಡರಲ್ ಸರಕಾರ ತೆಗೆದುಕೊಳ್ಳಬಹುದಾದ ಕ್ರಮವನ್ನು ಸಂವಿಧಾನದ ಚೌಕಟ್ಟಿನಲ್ಲಿಯೇ ಯುದ್ಧದ ಹೊರತು, ಇನ್ನಾವ ಉಪಕ್ರಮವನ್ನೂ ಅಳವಡಿಸಲು ಬರುವುದಿಲ್ಲ. ಆದರೆ ಹೀಗೆ ಮಾಡಲು ಯಾರೂ ಒಪ್ಪುವುದಿಲ್ಲ. ಇದು ನೀವು ಎದುರಿಸುತ್ತಿರುವ ತೊಂದರೆ.

ಡಾ. ಬಿ. ಆರ್. ಅಂಬೇಡ್ಕರ್: ಒಳ್ಳೆಯದು. ಆದರೆ, ಅದು ನನಗೆ ಗೊತ್ತಿಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿಯೂ ಯಾವುದೇ ದಂಗೆಯನ್ನು ಹತ್ತಿಕ್ಕಲು ಸೈನ್ಯವನ್ನು ಬಳಸುವ ಅಧಿಕಾರ ಅಮೆರಿಕಾದ ಅಧ್ಯಕ್ಷರಿಗಿದೆ.

ಲಾರ್ಡ್ ಲೋಥಿಯನ್: ಆಗ ಅದು ಯುದ್ಧ ಕ್ರಮವೆನಿಸುತ್ತದೆ ಮತ್ತು ಹಿಂದೆ ಅದು ಸಂಭವಿಸಿದೆ.

ಡಾ. ಬಿ. ಆರ್. ಅಂಬೇಡ್ಕರ್: ಅಂತಹ ವಿಧಿಯನ್ನು ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿ ಅಳವಡಿಸಲಾಗಿದೆ.

ಶ್ರೀಯುತ ಜಯಕರ್: ಆದರೆ ನಿಜವಾಗಿಯೂ ಆಯ್ಕೆ ಆಂತರಿಕ ಯುದ್ಧ ಮತ್ತು ಸಂಯುಕ್ತ ಸರಕಾರಕ್ಕೆ ನಿಷ್ಠೆ ಇವೆರಡರಲ್ಲಿಯೇ ಆಗಬೇಕಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಅದನ್ನು ನಾನು ಚೆನ್ನಾಗಿ ಅರಿತಿದ್ದೇನೆ. ನೀವು ಹೇಳುತ್ತಿರುವ ಮಾತನ್ನು ನಾನು ನಿರಾಕರಿಸುತ್ತಿಲ್ಲ. ನಾನು ಹೇಳುವುದಿಷ್ಟೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಉಂಟಾಗಿರುವ ಪರಿಸ್ಥಿತಿ ನಮ್ಮಲ್ಲಿ ಉಂಟಾಗಬಾರದು. ಅಲ್ಲಿ ಸಂಯುಕ್ತ ರಾಜ್ಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಉದ್ಭವಿಸುವ ವಿವಾದಗಳನ್ನು ನಿರ್ಣಯಿಸುವ ಉದ್ದೇಶಕ್ಕಾಗಿಯೇ ಫೆಡರಲ್ ನ್ಯಾಯಾಲಯವಿದ್ದಾಗ್ಯೂ, ತನ್ನ ನಿರ್ಣಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಆ ನ್ಯಾಯಾಲಯ ಹೊಂದಿಲ್ಲ. ನಾನು ಹೇಳುವುದರ ಅರ್ಥವೆಂದರೆ ಫೆಡರಲ್ ಸರಕಾರ ಅಥವಾ ಫೆಡರಲ್ ಶಾಸಕಾಂಗಕ್ಕೆ ಆಸ್ಟ್ರೇಲಿಯಾದ ಫೆಡರಲ್ ಸರಕಾರ ಮತ್ತು ಶಾಸಕಾಂಗಕ್ಕಿರುವ ಅಧಿಕಾರಗಳಿರತಕ್ಕದ್ದು.

ಮಿಸ್ಟರ್ ಜಿನ್ನಾ: ಇರುವ ವ್ಯತ್ಯಾಸವೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಫೆಡರಲ್ ಸರಕಾರ ಸೈನ್ಯದ ಮೇಲೆ ಹತೋಟಿ ಹೊಂದಿರುತ್ತದೆ. ನೀವು ಸೂಚಿಸುತ್ತಿರುವ ನಿಮ್ಮ ಫೆಡರಲ್ ಸರಕಾರವು ಈ ಕೂಡಲೇ ಸೈನ್ಯದ ಜವಾಬ್ದಾರಿ ಮತ್ತು ಅದರ ನಿಯಂತ್ರಣ ಹೊಂದಬೇಕೆಂದು ನೀವು ಭಾವಿಸಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಒಳ್ಳೆಯದು, ಈಗ ಅಲ್ಲದಿದ್ದರೂ ನಂತರವಾದರೂ ಹಾಗಾಗಬಹುದು.

ಮಿಸ್ಟರ್ ಜಿನ್ನಾ: ಹಾಗಾಗುವ ಮುನ್ನ ಸಧ್ಯದಲ್ಲಿ ಏನಾಗಬೇಕು?

ಡಾ. ಬಿ. ಆರ್. ಅಂಬೇಡ್ಕರ್: ನಾನು ಈಗಾಗಲೇ ಹೇಳಿರುವಂತೆ ಅದು ಬೇರೆ ಸಂಗತಿ. ಸೈನ್ಯವನ್ನು ಬಳಸುವ ಅವಶ್ಯಕತೆ ಉದ್ಭವಿಸಲಿಕ್ಕಿಲ್ಲ.

ಶ್ರೀಯುತ ಜಯಕರ್: ಸೈನಿಕ ಸಹಾಯಕ್ಕಾಗಿ ನೀವು ಪ್ರಭುತ್ವವನ್ನು ಕೇಳಬೇಕಾಗಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಹೌದು.

ಶ್ರೀಯುತ ಜಯಕರ್: ಪ್ರಭುತ್ವವು ಸೈನ್ಯದ ಮೇಲೆ ಅಂತಿಮ ಅಧಿಕಾರ ಹೊಂದಿದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಕಾರಣ ನಾನು ಹೇಳುತ್ತಿರುವ ಸಂಗತಿ ಬದಲಾಗುವುದಿಲ್ಲ. ಫೆಡರಲ್ ಶಾಸಕಾಂಗಕ್ಕೆ ಈ ಅಧಿಕಾರವನ್ನು ನೀಡಲೇಬೇಕಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನ ದಲ್ಲಿ ಸರ್ವೋಚ್ಚ ನ್ಯಾಯಾಲಯ ಅದು ತಪ್ಪೆಂದು ಆಜ್ಞಾಪಿಸಿದ್ದಾಗ್ಯೂ ರಾಜ್ಯಗಳು ಜನರನ್ನು ಗಲ್ಲಿಗೇರಿ ಸುತ್ತಿದೆ.

ಅಧ್ಯಕ್ಷ: ಒಂದು ಗಿಡ ಬೆಳೆಯುತ್ತಿದೆಯೋ ಇಲ್ಲವೋ ಎಂದು ಕಂಡುಕೊಳ್ಳಲು ಪದೇ ಪದೇ ಆ ಗಿಡವನ್ನು ಕಿತ್ತು ಅದರ ಬೇರುಗಳನ್ನು ನೋಡುವುದರಲ್ಲಿ ಯಾವ ಪ್ರಯೋಜನವು ಇಲ್ಲ ಎಂಬ ಮಾತನ್ನು ಇಂಗ್ಲಿಷ್ ಸಾಮಾನ್ಯ ಕಾಯ್ದೆಯ ವಿಷಯದಲ್ಲಿ ಹೇಳುವುದನ್ನು ನಾನು ಕೇಳಿದ್ದೇನೆ. ಇಂಗ್ಲಿಷ್ ಸಾಮಾನ್ಯ ಕಾಯ್ದೆ (English Common Law) ಇಂತಹ ಪ್ರಸಂಗವನ್ನು ಸಹಿಸಲಾರದು ಮತ್ತು ಯಾವ ಕಾಯ್ದೆ ವ್ಯವಸ್ಥೆಯೂ ಅದನ್ನು ಸಹಿಸಲಾರದೆಂಬುದು ನಿಮಗೇ ತಿಳಿಯುತ್ತದೆ. ನೀವು ಬಹು ಸ್ವಾರಸ್ಯಕರ ಕಾನೂನಿನ ಒಗಟುಗಳನ್ನು ಪ್ರಸ್ತುತಪಡಿಸುತ್ತಿದ್ದೀರಿ: ಆದರೆ, ಸಂಕ್ಷಿಪ್ತದಲ್ಲಿ ಉತ್ತರಿಸುವುದಾದರೆ ಯಾರಾದರೂ ಯಾವುದೇ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಬಹುದು ಮತ್ತು ಬುನಾದಿ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಕಂಡುಕೊಳ್ಳಲು ಪದೇ ಪದೇ ಬುನಾದಿಯನ್ನು ಅಗೆಯುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ನೀವು ಬಹುಮಟ್ಟಿಗೆ ಜನರ ಸದ್ಭಾವನೆಯಲ್ಲಿ ನಂಬಿಕೆ ಇಡಬೇಕಾಗುತ್ತದೆ. ವರ್ಜೀನಿಯಾ ಪ್ರಕರಣದಲ್ಲಿ ಒಂದು ಸರಿಯಾದ ಅಭಿಪ್ರಾಯಕ್ಕೆ ಬರಲು ಸುಮಾರು ಹತ್ತೊಂಬತ್ತು ವರ್ಷಗಳೇ ಹಿಡಿದವು. ನಿಮ್ಮ ವಿಷಯದಲ್ಲಿಯೂ ಅದು ಸಂಭವಿಸಬಹುದು. ಆರಂಭದಲ್ಲಿ ಇಂತಹ ತೊಂದರೆಗಳು ಅಥವಾ ಕಷ್ಟಗಳು ಇರಬಹುದು. ಆದರೆ, ನೀವು ಕೂಡಿ ಕೆಲಸ ಮಾಡಲು ಆರಂಭಿಸಿದಾಗ ಅನೇಕ ತೊಂದರೆಗಳು ನಿವಾರಣೆ ಯಾಗಬಹುದು. ನೀವು ನಿಮ್ಮ ಮನೆಯ ಬುನಾದಿ ಸರಿಯಾಗಿದೆಯೇ ಎಂದು ತಿಳಿದುಕೊಳ್ಳಲು ಪ್ರತಿ ಮೂರು ವಾರಗಳಿಗೊಮ್ಮೆ ಅದನ್ನು ಅಗೆದು ನೋಡಲು ಸಾಧ್ಯವಿಲ್ಲ. ನೀವು ಸ್ವಲ್ಪ ಮಟ್ಟಿಗಾದರೂ ಜನರಲ್ಲಿ ವಿಶ್ವಾಸವಿಡಬೇಕಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ನಾವು ಮರಳಿನಲ್ಲಿ ಮೇಲೆ ನಮ್ಮ ಬುನಾದಿಯನ್ನು ಹಾಕದಂತೆ ನೋಡಿ ಕೊಳ್ಳಬೇಕೆಂಬುದು ಮಾತ್ರ ಇದಕ್ಕೆ ನನ್ನ ಉತ್ತರ.

ಫೆಡರಲ್ ನ್ಯಾಯಾಲಯದ ರಚನೆಯನ್ನು ಕುರಿತ ಈ ವಿಷಯದ ಮೂರನೆಯ ಭಾಗವನ್ನು ಪರಿಶೀಲಿಸುತ್ತಾ ನಾನು ಹೆಚ್ಚಿಗೆ ಹೇಳಬಯಸುವುದಿಲ್ಲ. ಏಕೆಂದರೆ, ಈಗಾಗಲೇ ಹೇಳಲಾಗಿರುವ ಬಹುತೇಕ

ಅಂಶಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದಾಗ್ಯೂ ನಾನು ಒಂದು ವಿಷಯವನ್ನು ಮಾತ್ರ ಹೇಳಬಯಸುತ್ತೇನೆ. ಅದೇನೆಂದರೆ, ಈ ವಿಷಯದಲ್ಲಿ ನಾವು ಆಸ್ಟ್ರೇಲಿಯಾದ ಮಾದರಿಯನ್ನನುಸರಿಸಿ ಫೆಡರಲ್ ವಿಷಯಗಳಲ್ಲಿ ಮೇಲ್ಮನವಿಯ ವ್ಯಾಪ್ತಿಯ ಫೆಡರಲ್ ನ್ಯಾಯಾಲಯವನ್ನು ಹೊಂದಬೇಕಾಗಿದೆಯಲ್ಲದೆ, ಇಡೀ ಭಾರತಕ್ಕೆ ಮೇಲ್ಮನವಿಗಾಗಿ ಒಂದು ಸರ್ವೋಚ್ಚ ನ್ಯಾಯಾಲಯವನ್ನು ಹೊಂದಬೇಕಾಗುತ್ತದೆ. ಆಸ್ಟ್ರೇಲಿಯಾದಲ್ಲಿ ಹೀಗೆ ಮಾಡಲಾಗಿದೆ. ಅಲ್ಲಿ ಫೆಡರಲ್ ನ್ಯಾಯಾಲಯವು ಫೆಡರಲ್ ವಿಷಯಗಳ ಮೇಲೆ ಕಾರ್ಯ ವ್ಯಾಪ್ತಿ ಹೊಂದಿರುವ ನ್ಯಾಯಾಲಯಗಳಿಂದ ಮೇಲ್ಮನವಿಗಳನ್ನು ಪರಿಶೀಲಿಸುವುದೂ ಅಲ್ಲದೆ, ಫೆಡರಲ್ ಕಾರ್ಯ ವ್ಯಾಪ್ತಿಗೆ ಹೊರತಾದ ವಿಷಯಗಳಲ್ಲಿಯೂ ಮೇಲ್ಮನವಿಗಳನ್ನು ಸ್ವೀಕರಿಸಿ ವಿಚಾರಿಸುತ್ತದೆ.

ಭಾರತದ ಫೆಡರಲ್ ಶಾಸಕಾಂಗಕ್ಕೆ ಭಾರತದ ಸಂಸ್ಥಾನಗಳ ನ್ಯಾಯಾಲಯಗಳಿಗೆ ಫೆಡರಲ್ ಕಾರ್ಯ ವ್ಯಾಪ್ತಿಯ ವಿಷಯಗಳನ್ನು ವಿಚಾರಿಸುವ ಅಧಿಕಾರ ನೀಡುವ ಸ್ವಾತಂತ್ರ್ಯವಿರಬೇಕು. ಇದರಿಂದಾಗಿ ಭಾರತದ ಸಂಸ್ಥಾನಗಳಲ್ಲಿ ಸಂಸ್ಥಾನಗಳ ನ್ಯಾಯಾಲಯಗಳ ಸೇವೆಯನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಫೆಡರಲ್ ಕಾರ್ಯ ವ್ಯಾಪ್ತಿಯನ್ನು ಕೇವಲ ಪ್ರಾಂತ್ಯಗಳ ಉಚ್ಚ ನ್ಯಾಯಾಲಯಗಳಿಗೆ ಮಾತ್ರ ನಿಯೋಜಿಸಬಾರದು. ಫೆಡರಲ್ ಶಾಸಕಾಂಗದ ಅಭಿಪ್ರಾಯದಲ್ಲಿ ಯಾವ ಸಂಸ್ಥಾನದ ನ್ಯಾಯಾಲಯಗಳು ದಕ್ಷತೆಯಿಂದ ಕೆಲಸ ಮಾಡಬಲ್ಲವೋ, ಅಂತಹ ಆಯ್ದ ಕೆಲವು ಸಂಸ್ಥಾನಗಳ ನ್ಯಾಯಾಲಯಗಳಿಗೂ ಕೆಲವು ಫೆಡರಲ್ ವಿಷಯಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಕೊಡಬೇಕು. ನನಗೆ ತಿಳಿದಂತೆ ಇದರಿಂದ ಬಹು ಮಹತ್ವದ ಪರಿಣಾಮವುಂಟಾಗುವುದು. ಮೊದಲನೆಯದಾಗಿ, ಇದು ಸಂಸ್ಥಾನಗಳ ನ್ಯಾಯಾಲಯಗಳ ಗೌರವವನ್ನು ಹೆಚ್ಚಿಸುವುದು ಮತ್ತು ಎರಡನೆಯದಾಗಿ ಇದರಿಂದ ಸಂಸ್ಥಾನದ ನ್ಯಾಯಾಲಯಗಳು ಮತ್ತು ಇಡೀ ಭಾರತದ ನ್ಯಾಯಾಂಗ ವ್ಯವಸ್ಥೆಯ ನಡುವೆ ಸಂಬಂಧ ಕಲ್ಪಿಸುವುದೂ ಅಲ್ಲದೆ, ನಮ್ಮ ಸಂಯುಕ್ತ ರಾಜ್ಯ ವ್ಯವಸ್ಥೆಯನ್ನು ನಿಜವಾದ ಸಂಯುಕ್ತ ರಾಜ್ಯವನ್ನಾಗಿ ರೂಪಿಸುವಲ್ಲಿ ಸಹಾಯಕವಾಗುವುದು.

ಶ್ರೀಯುತ ಜಯಕರ್: ಮೇಲ್ಮನವಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕೋ ಅಥವಾ ಫೆಡರಲ್ ನ್ಯಾಯಾಲಯಕ್ಕೋ?

ಡಾ. ಬಿ. ಆರ್. ಅಂಬೇಡ್ಕರ್: ಅದನ್ನೇ ನಾನು ಪ್ರಸ್ತಾಪಿಸಲಿದ್ದೇನೆ. ಈ ಸಂಬಂಧವಾಗಿ ನಾನು ಸೂಚಿಸುವುದೇನೆಂದರೆ, ಫೆಡರಲ್ ಕಾರ್ಯವ್ಯಾಪ್ತಿಗೆ ಸಂಬಂಧಿಸದ ವಿಷಯಗಳಲ್ಲಿಯೂ ಕೂಡ ಸಂಸ್ಥಾನಗಳ ನ್ಯಾಯಾಲಯಗಳು ತಮ್ಮ ಮೇಲ್ಮನವಿಗಳನ್ನು ಫೆಡರಲ್ ಸರ್ವೋಚ್ಚ ನ್ಯಾಯಾಲಯಕ್ಕೆ ಕಳುಹಿಸಲು ಸಮ್ಮತಿಸಬೇಕು. ಅವು ಹಾಗೆ ಸಮ್ಮತಿಸದಿದ್ದರೆ ನಾವು ಅಮೆರಿಕದ ಸಂವಿಧಾನದಲ್ಲಿ ಅನುಸರಿಸಿರುವ ಮುಕ್ತದ್ವಾರ ನೀತಿಯನ್ನೇ ಅನುಸರಿಸಬೇಕೆಂದು ಸಲಹೆ ಮಾಡುತ್ತೇನೆ. ಆಸ್ಟ್ರೇಲಿಯಾದ ಸಂವಿಧಾನದಲ್ಲಿ ಆಸ್ಟ್ರೇಲಿಯಾದ ಫೆಡರಲ್ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯವು ರಾಜ್ಯಗಳ ನ್ಯಾಯಾಲಯಗಳಿಂದ ಬರುವ ಮೇಲ್ಮನವಿಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿವೆ. ಇಂತಹ ವಿಧಿಯನ್ನು ನಮ್ಮ ಸಂವಿಧಾನದಲ್ಲಿಯೂ ಅಳವಡಿಸಬೇಕೆಂದು ನಾನು ಬಯಸುತ್ತೇನೆ. ಇದೂ ಅಲ್ಲದೆ ಸಂಸ್ಥಾನಗಳ ನ್ಯಾಯಾಲಯಗಳು ತಮ್ಮ ಮೇಲ್ಮನವಿಗಳನ್ನು ಫೆಡರಲ್ ನ್ಯಾಯಾಲಯಕ್ಕೆ ಕಳುಹಿಸಲೇಬೇಕೆಂಬ ಕಡ್ಡಾಯ ಮಾಡದಿದ್ದರೂ ತರುವಾಯದಲ್ಲಿ ಸಂಸ್ಥಾನಗಳ ನ್ಯಾಯಾಲಯಗಳು ತಮ್ಮ ತೀರ್ಪುಗಳ ಮೇಲೆ ಮೇಲ್ಮನವಿಯನ್ನು ಫೆಡರಲ್ ನ್ಯಾಯಾಲಯಕ್ಕೆ ಮೇಲ್ಮನವಿಯ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಲು

ನಿರ್ಣಯಿಸಿದ್ದೇ ಆದರೆ, ಫೆಡರಲ್ ಉಚ್ಚ ನ್ಯಾಯಾಲಯವೂ ಅಂತಹ ಮೇಲ್ಮನವಿಗಳನ್ನು ಪರಿಶೀಲಿಸಲಾರದಂತೆ ನಾವು ನಿರ್ಬಂಧಿಸಬೇಕಾಗುತ್ತದೆ. ನಾನು ಹೇಳಿದ ಹಾಗೆ, ನಾವು ಆಸ್ಟ್ರೇಲಿಯಾ ಸಂವಿಧಾನದ ಮಾದರಿಯಲ್ಲಿ ಸಂಸ್ಥಾನಗಳಿಗೆ ತಮ್ಮ ನ್ಯಾಯಾಲಯಗಳ ತೀರ್ಪಿನ ಮೇಲೆ ಫೆಡರಲ್ ನ್ಯಾಯಾಲಯಗಳಿಗೆ ಮೇಲ್ಮನವಿಯ ಹಕ್ಕನ್ನು ಕ್ರಮಪಡಿಸುವ ಅಥವಾ ನಿಯಂತ್ರಿಸುವ ಹಕ್ಕು ಇರಬೇಕು. ಅವರು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಇರುವ ಮೇಲ್ಮನವಿಯ ಹಕ್ಕನ್ನೇ ಕೊಡಬೇಕಾಗಿಲ್ಲ. ಸಂಸ್ಥಾನಗಳು ಬಯಸಿದರೆ ಈ ಹಕ್ಕನ್ನು ನಿಯಂತ್ರಿಸಬಹುದು.

ಇನ್ನೊಂದು ವಿಷಯವನ್ನೂ ನಾನು ಹೇಳಬಯಸುತ್ತೇನೆ. ಅದು ಉಚ್ಚ ನ್ಯಾಯಾಲಯ ಮತ್ತು ಫೆಡರಲ್ ಅಥವಾ ಸಂಯುಕ್ತ ಸರಕಾರದ ನಡುವಣ ಸಂಬಂಧ ಕುರಿತಾಗಿದೆ. ಸಧ್ಯದಲ್ಲಿ ಭಾರತದ ಉಚ್ಚ ನ್ಯಾಯಾಲಯಗಳು, ಕಲಕತ್ತ ಉಚ್ಚ ನ್ಯಾಯಾಲಯವೊಂದನ್ನು ಹೊರತುಪಡಿಸಿ, ತಮ್ಮ ಆಡಳಿತ ಮತ್ತು ಹಣಕಾಸಿನ ವಿಷಯದಲ್ಲಿ ಪ್ರಾಂತೀಯವಾಗಿದೆ. ಆದರೆ, ಕಲಕತ್ತಾದ ಉಚ್ಚ ನ್ಯಾಯಾಲಯವು ಹಣಕಾಸಿನ ವಿಷಯದಲ್ಲಿ ಪ್ರಾಂತೀಯ ಮತ್ತು ಆಡಳಿತದ ವಿಷಯದಲ್ಲಿ ಕೇಂದ್ರೀಯವಾಗಿದೆ.

ಸರ್ ತೇಜಬಹಾದ್ದೂರ್ ಸಪ್ರೂರವರು ಭಾರತದ ಉಚ್ಚ ನ್ಯಾಯಾಲಯಗಳು ಎಲ್ಲಾ ಪ್ರಾಂತ್ಯಗಳಲ್ಲಿ ಆಡಳಿತದ ದೃಷ್ಟಿಯಿಂದ ಕೇಂದ್ರೀಯವಾಗಿರಬೇಕು ಮತ್ತು ಹಣಕಾಸಿನ ವಿಷಯದಲ್ಲಿ ಪ್ರಾಂತೀಯವಾಗಿರಬೇಕೆಂಬ ಸಲಹೆಯನ್ನು ನಿನ್ನೆ ದಿವಸ ಮಾಡಿದ್ದರು. ಆಡಳಿತದ ವಿಷಯದಲ್ಲಿ ಅವುಗಳು ಕೇಂದ್ರದೊಡನೆ ಸಂಬಂಧ ಹೊಂದಿರಬೇಕೆಂಬ ಸರ್ ತೇಜ್ ಬಹದ್ದೂರ್ ಸಪ್ರೂರವರ ಸಲಹೆಯನ್ನು ನಾನೂ ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಅದಕ್ಕೆ ನನ್ನ ಕಾರಣಗಳು ಅವರ ಕಾರಣಗಳಿಂದ ಭಿನ್ನವಾಗಿದೆ. ಅವುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಭಾರತೀಯ ಪ್ರಾಂತ್ಯಗಳ ನ್ಯಾಯಾಧೀಶರಲ್ಲಿ ಅವರನ್ನು ಸ್ಥಳೀಯ ರಾಜಕೀಯ ಒತ್ತಡಗಳಿಗೆ ಒಳಪಡಿಸುವ ಸಾಧ್ಯತೆಯ ಭೀತಿ ಅವರ ಮನಸ್ಸಿನಲ್ಲಿ ಉಂಟಾಗಿದೆ. ಆದ್ದರಿಂದ ಅವರು ತಮ್ಮನ್ನು ಸ್ಥಳೀಯ ರಾಜಕೀಯದಿಂದ ಮೇಲಕ್ಕೆತ್ತಿ ಸಂಯುಕ್ತ ಕೇಂದ್ರ ಸರಕಾರದ ನಿಯಂತ್ರಣಕ್ಕೊಳಪಡಿಸಬೇಕೆಂದು ಇಚ್ಛೆಪಡುತ್ತಾರೆ ಎಂದು ಸರ್ ಸಪ್ರೂರವರು ಹೇಳಿದರು. ಆದರೆ, ಈಗ ಪ್ರಾತಿನಿಧಿಕ ಪ್ರಜಾಪ್ರಭುತ್ವ ಮತ್ತು ಜವಾಬ್ದಾರಿ ಸರಕಾರ ಹೊಂದಿರುವ ಯಾವುದೇ ದೇಶದಲ್ಲಿ ಉಚ್ಚ ನ್ಯಾಯಾಲಯಗಳು ರಾಜಕೀಯ ಪ್ರಭಾವ ಅಧ್ಯಕ್ಷ ಪಕ್ಷ ರಾಜಕಾರಣಿಗಳ ಪ್ರಭಾವದಿಂದ ಮುಕ್ತವಾಗಿರಲು ಸಾಧ್ಯವಿಲ್ಲವೆಂದು ನನಗನಿಸುತ್ತದೆ.

ಸರ್ ತೇಜ್ ಬಹಾದ್ದೂರ್ ಸಪ್ರೂ: ಕಾನೂನಿನ ಸಿದ್ಧಾಂತದ ಪ್ರಕಾರ ಇಂಗ್ಲಿಷ್ ನ್ಯಾಯಾಲಯಗಳು ಪಕ್ಷ ರಾಜಕೀಯದಿಂದ ದೂರ ಉಳಿದಿವೆ ಎಂದು ನಾನು ತಿಳಿದಿದ್ದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ದೇಶದಲ್ಲಿ ರಾಜಕೀಯ ನೇಮಕಗಳೆಂದು ಪರಿಗಣಿಸಲಾಗಿರುವ ಕೆಲವು ನ್ಯಾಯಾಂಗದ ಹುದ್ದೆಗಳಿವೆ. ಆದರೆ, ಅದು ಬೇರೆ ವಿಷಯ. ಈಗ ನಾನು ಈ ಸಮಿತಿಯ ಪರಿಶೀಲನೆಗಾಗಿ ಮಂಡಿಸುವ ವಿಷಯವೆಂದರೆ, ನಾವು ಈ ಸಂಯುಕ್ತ ರಾಜ್ಯದಲ್ಲಿ ಸುಮಾರು ೫೬೨ ಭಾರತೀಯ ಸಂಸ್ಥಾನಗಳಿಗೆ ಪ್ರವೇಶ ನೀಡಲಿದ್ದೇವೆ.

ಮಿಸ್ಟರ್ ಜಿನ್ನಾ: ನೀವು ಹಾಗೆ ಮಾಡುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಅದೇ ಯೋಜನೆ ಇದೆ ಎಂದು ನಾನು ಭಾವಿಸಿದ್ದೇನೆ. ಕೊನೆ ಪಕ್ಷ ಎಲ್ಲಾ ದೇಶೀಯ ಸಂಸ್ಥಾನಗಳು ಸಂಯುಕ್ತ ರಾಜ್ಯವನ್ನು ಸೇರುವುದೆಂಬ ಧ್ಯೇಯವನ್ನು ನಾವು ಹೊಂದಿ

ದ್ದೇವೆ. ಭಾರತ ಸಂಯುಕ್ತ ರಾಜ್ಯದ ಅಂಗವಾಗುವ ಬಹುತೇಕ ಸಂಸ್ಥಾನಗಳು ಸಮರ್ಥ ನ್ಯಾಯಾಂಗವನ್ನು ಹೊಂದಿ ಅವುಗಳನ್ನು ನಡೆಸಿಕೊಂಡು ಹೋಗಲು ಬೇಕಾದ ಆರ್ಥಿಕ ಬಲವನ್ನು ಹೊಂದಿಲ್ಲ ಎಂಬ ವಿಷಯ ನಿರ್ವಿವಾದ ಎಂಬುದಾಗಿ ನಾನು ತಿಳಿದಿರುವೆ. ಮುಂಬಯಿ ಪ್ರಾಂತ್ಯದಲ್ಲಿರುವ ಮತ್ತು ನಾನು ಚೆನ್ನಾಗಿ ಬಲ್ಲ ಒಂದು ನಿದರ್ಶನವನ್ನು ನಾನು ಹೇಳಬಯಸುತ್ತೇನೆ. ಮುಂಬಯಿ ಪ್ರಾಂತ್ಯದಲ್ಲಿ ಒಂದು ನಿದರ್ಶನವನ್ನು ನಾನು ಹೇಳಬಯಸುತ್ತೇನೆ. ಮುಂಬಯಿ ಪ್ರಾಂತ್ಯದಲ್ಲಿ ಒಂದು ದೇಶೀ ಸಂಸ್ಥಾನವಿದೆ. ಇದರ ಆಡಳಿತವನ್ನು ಒಬ್ಬ ಮಹಿಳೆ ನಡೆಸುತ್ತಿದ್ದಾರೆ. ಈ ಸಂಸ್ಥಾನದಲ್ಲಿ ಒಬ್ಬ ಅಧಿಕಾರಿ ಮಾತ್ರ ಇದ್ದಾನೆ. ಅವನೇ ಸಿವಿಲ್ ನ್ಯಾಯಾಧೀಶನಾಗಿ, ದಂಡಾಧಿಕಾರಿಯಾಗಿ, ಸತ್ರ ನ್ಯಾಯಾಧೀಶನಾಗಿ ಕೆಲಸ ಮಾಡುತ್ತಿದ್ದಾನೆ. ಅವನ ತೀರ್ಪುಗಳ ಮೇಲಣ ಮೇಲ್ಮನವಿಗಳು ಸಂಸ್ಥಾನದ ಪ್ರಮುಖರಿಗೆ ಹೋಗುತ್ತವೆ. ಈ ವಿಷಯದಲ್ಲಿ ಆಕೆಗೆ ಒಬ್ಬ ದಿವಾನ, ನನಗೆ ತಿಳಿದ ಮಟ್ಟಿಗೆ ಈತ ಒಬ್ಬ ನಿವೃತ್ತ ಕಂದಾಯ ಅಧಿಕಾರಿ ಸಹಾಯ ಮಾಡುತ್ತಾನೆ. ಸಂಸ್ಥಾನದ ಪ್ರೀವೀ ಕೌನ್ಸಿಲ್ ಎಂದೇ ಕರೆಯಲಾಗುತ್ತಿರುವ ಈ ನ್ಯಾಯಾಲಯಕ್ಕೆ ಅತ್ಯಂತ ಜಟಿಲವಾದ ಪ್ರಕರಣಗಳು ಬರುತ್ತವೆ ಮತ್ತು ಈ ರೀತಿ ರಚಿತವಾದ ಈ ನ್ಯಾಯಾಲಯ ಇಂದು ತೀರ್ಪುಗಳನ್ನು ನೀಡುತ್ತಿದೆ. ಇದಕ್ಕಾಗಿ ನಾನು ಯಾರನ್ನೂ ದೂಷಿಸುತ್ತಿಲ್ಲ. ನಾನು ಹೇಳುವ ಸಂಗತಿ ಎಂದರೆ ಇಂತಹ ಒಂದು ಸಣ್ಣ ಸಂಸ್ಥಾನ ಒಂದು ಸಮರ್ಥ ನ್ಯಾಯಾಲಯವನ್ನು ನಡೆಸಿಕೊಂಡು ಹೋಗಲು ಸಾಕಷ್ಟು ಆದಾಯ ಹೊಂದಿರುವುದಿಲ್ಲ.

ಇದಲ್ಲದೆ ಪರಿಶೀಲಿಸಬೇಕಾದ ಇನ್ನೂ ಒಂದು ಸಂಗತಿ ಇದೆ. ಅದೇನೆಂದರೆ, ಬ್ರಿಟಿಷ್ ಭಾರತದಲ್ಲಿಯೂ ಕೂಡ ಒಂದು ಉಚ್ಚ ನ್ಯಾಯಾಲಯವನ್ನು ಹೊಂದಲು ಆರ್ಥಿಕವಾಗಿ ಸಬಲವಾಗಿರದಂತಹ ಹೊಸ ಸಣ್ಣ ಪ್ರಾಂತ್ಯಗಳನ್ನು ರಚಿಸುವ ಸಾಧ್ಯತೆಯೂ ಇದೆ. ಇಂತಹ ಪ್ರಸಂಗ ಇಂದೂ ಇದೆ. ಅಸ್ಸಾಂ ಪ್ರಾಂತ್ಯ ಒಂದು ಉಚ್ಚ ನ್ಯಾಯಾಲಯವನ್ನು ನಡೆಸಿಕೊಂಡು ಹೋಗುವ ಸ್ಥಿತಿಯಲ್ಲಿಲ್ಲ. ಅದು ಬಂಗಾಳ ಪ್ರಾಂತ್ಯದ ಉಚ್ಚ ನ್ಯಾಯಾಲಯದಲ್ಲಿ ಪಾಲ್ಗೊಳ್ಳುತ್ತಿದೆ. ನಾವು ಈಗ ಆರ್ಥಿಕವಾಗಿ ದುರ್ಬಲವಾಗಿರುವ ಸಣ್ಣ ಮತ್ತು ಪ್ರತ್ಯೇಕ ಉಚ್ಚ ನ್ಯಾಯಾಲಯ ಹೊಂದಲು ಅಸಮರ್ಥವಾದ ದೇಶೀ ಸಂಸ್ಥಾನಗಳು ಬ್ರಿಟಿಷ್ ಭಾರತದಲ್ಲಿರುವ ಉಚ್ಚ ನ್ಯಾಯಾಲಯಗಳಲ್ಲಿ ತಮ್ಮ ಪ್ರಜೆಗಳಿಗೆ ಸಿವಿಲ್ ಮತ್ತು ಕ್ರಿಮಿನಲ್ ವಿಷಯಗಳ ನ್ಯಾಯದಾನ ಮಾಡುವ ಅವಕಾಶ ಕಲ್ಪಿಸುವ ಸಲಹೆಯನ್ನು ಎಲ್ಲರೂ ಸ್ವಾಗತಿಸಬೇಕೆಂಬುದು ನನ್ನ ವಾದ. ವಾಸ್ತವ ಸಂಗತಿ ಎಂದರೆ, ಎಲ್ಲಿಯವರೆಗೆ ಪ್ರಾಂತೀಯ ಉಚ್ಚ ನ್ಯಾಯಾಲಯ ಸಂಪೂರ್ಣವಾಗಿ ಪ್ರಾಂತೀಯ ಸರಕಾರದ ನಿಯಂತ್ರಣದಲ್ಲಿರುವುದೋ ಅಲ್ಲಿಯವರೆಗೆ ಪ್ರಾಂತ್ಯದ ವಿಷಯಗಳ ಮೇಲೆ ನಿಯಂತ್ರಣ ಹೊಂದಿರದ ಸಂಸ್ಥಾನಗಳು ಆ ಪ್ರಾಂತ್ಯದ ಉಚ್ಚ ನ್ಯಾಯಾಲಯದ ಸೇವೆಯನ್ನು ಪಡೆಯಲು ಮುಂದಾಗುವುದಿಲ್ಲ. ಅದೇ ಪ್ರಾಂತೀಯ ಉಚ್ಚ ನ್ಯಾಯಾಲಯಗಳನ್ನು ಕೇಂದ್ರ ವಿಷಯವನ್ನಾಗಿ ಮಾಡಿದಾಗ ಈ ಎಲ್ಲಾ ಸಂಸ್ಥಾನಗಳು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಪ್ರಾತಿನಿಧ್ಯ ಪಡೆದುಕೊಳ್ಳುವ ಮೂಲಕ ತಮ್ಮ ಪ್ರಜೆಗಳಿಗೆ ನ್ಯಾಯದಾನ ಮಾಡಲು ಈ ಉಚ್ಚ ನ್ಯಾಯಾಲಯಗಳ ಸೇವೆಯನ್ನು ಬಳಸಿಕೊಳ್ಳಲು ಹೆಚ್ಚು ಪ್ರೇರಣೆ ಉಂಟಾಗುವುದಲ್ಲದೆ, ಅದಕ್ಕೆ ವಿರೋಧ ಕಡಿಮೆಯಾಗುವುದಂತೂ ನಿಜ. ಇದರ ಪರಿಣಾಮವಾಗಿ ಭಾರತದ ಭಾವೀ ಸರಕಾರದ ಅಂಗಗಳಾಗಲಿರುವ ದೇಶೀ ಸಂಸ್ಥಾನಗಳಲ್ಲಿ ನ್ಯಾಯಾಡಳಿತದ ಗುಣಮಟ್ಟ ಬಹುಮಟ್ಟಿಗೆ ಸುಧಾರಿಸುವುದು. ಈ ಉದ್ದೇಶವನ್ನು ಪ್ರಾಂತೀಯ ಉಚ್ಚ ನ್ಯಾಯಾಲಯಗಳ ದಕ್ಷತೆಯಲ್ಲಿ ಕುಂದುಂಟುಮಾಡದಂತೆ ಸಾಧಿಸಬಹುದಾಗಿದೆ. ಈ ಆಧಾರದ ಮೇಲೆ ಪ್ರಾಂತೀಯ ಉಚ್ಚ ನ್ಯಾಯಾಲಯಗಳನ್ನು ಆರ್ಥಿಕ ಮತ್ತು

ಆಡಳಿತ ಈ ಎರಡೂ ದೃಷ್ಟಿಗಳಿಂದ ಕೇಂದ್ರದ ಅಧಿಕಾರಕ್ಕೊಳಪಡಿಸಬೇಕೆಂದು ನಾನು ಸೂಚಿಸುತ್ತೇನೆ. ಕಲ್ಕತ್ತಾ ಉಚ್ಚ ನ್ಯಾಯಾಲಯವನ್ನು ಕೇಂದ್ರದ ಆಡಳಿತಕ್ಕೆ ಒಳಪಡಿಸುವುದರ ಕಾರಣವೆಂದರೆ ಅದು ಕೇವಲ ಬಂಗಾಳ ಪ್ರಾಂತ್ಯಕ್ಕೆ ಜಂಟಿ ನ್ಯಾಯಾಲಯವಾಗಿದೆ. ಈ ಕಾರಣಕ್ಕಾಗಿಯೇ ಸೈಮನ್ ಆಯೋಗವು ಈ ವ್ಯವಸ್ಥೆ ಮುಂದುವರಿಯಬೇಕು ಮತ್ತು ಇದನ್ನು ಇತರ ಪ್ರಾಂತ್ಯಗಳಿಗೂ ಅನ್ವಯಿಸಬೇಕೆಂದು ಶಿಫಾರಸು ಮಾಡಿತ್ತು. ಆದ್ದರಿಂದಲೇ ಈ ಸಲಹೆಯನ್ನು ಸ್ವಾಗತಿಸಬೇಕೆಂಬುದು ನನ್ನ ಸಲಹೆ.

ಫೆಡರಲ್ ನ್ಯಾಯಾಲಯದ ವಿಷಯವಾಗಿ ನಾನು ಇಷ್ಟು ಮಾತ್ರ ಹೇಳಬಲ್ಲೆ.

# ನಲವತ್ತನಾಲ್ಕನೆಯ ಸಭೆ
# ೨ನೆಯ ಸೆಪ್ಟೆಂಬರ್ ೧೯೩೧

ಮೂರನೆಯ ವರದಿಯ ಕರಡಿನ ಮೇಲಣ ಚರ್ಚೆ

* ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಪರಿಚ್ಛೇದದ (ಪ್ಯಾರಾ) ಕೊನೆಯ ನಾಲ್ಕು ಪಂಕ್ತಿಗಳತ್ತ ತಮ್ಮ ಲಕ್ಷ್ಯ ಸೆಳೆಯಬಯಸುತ್ತೇನೆ. ಆರಂಭದಲ್ಲಿ ಉಪಸಮಿತಿಯ ಎರಡನೆಯ ವರದಿಯ ೩೪ನೆಯ ಪ್ಯಾರಾದಲ್ಲಿಯ ಶಿಫಾರಸುಗಳನ್ನು ಉಲ್ಲೇಖಿಸುತ್ತಾ ಸನ್ಮಾನ್ಯರಾದ ತಾವು ಹೀಗೆ ಹೇಳಿರುವಿರಿ:

"ಈ ಮೊದಲನೆಯ ನಾಲ್ಕು ಹಿತಾಸಕ್ತಿಗಳ ಬಗ್ಗೆ ನಾವು ಇಲ್ಲಿ ಯಾವ ಶಿಫಾರಸನ್ನೂ ಮಾಡುತ್ತಿಲ್ಲ. ಏಕೆಂದರೆ, ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳುವುದು ಅಲ್ಪಸಂಖ್ಯಾತರ ಉಪಸಮಿತಿಗೆ ಬಿಟ್ಟ ವಿಷಯವಾಗಿದೆ."

ಹೀಗೆ ಹೇಳುವಲ್ಲಿ ಸನ್ಮಾನ್ಯರಾದ ತಾವು ಈ ಸಮಿತಿಯ ಈ ಹಿತಾಸಕ್ತಿಗಳ ಮನವಿಯ ಬಗ್ಗೆ ಆಸಕ್ತಿ ಹೊಂದಿರುವುದಿಲ್ಲ ಎಂದು ಹೇಳಿಲ್ಲವೆಂದು, ಹಾಗೂ ಎರಡನೆಯ ವರದಿಯ ೩೪ನೆಯ ಪ್ಯಾರಾದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯದಿಂದಲೂ ಈ ಅರ್ಥ ಬರುವುದಿಲ್ಲವೆಂದೂ ನನಗನಿಸುತ್ತದೆ. ಇವುಗಳ ಪ್ರಾತಿನಿಧ್ಯದ ವ್ಯಾಪ್ತಿ ಮತ್ತು ವಿಧಾನದ ಬಗ್ಗೆ ಯಾವ ಶಿಫಾರಸನ್ನು ಮಾಡಲೂ ಬರುವುದಿಲ್ಲ ಎಂಬ ಅರ್ಥದಲ್ಲಿ ಮಾತ್ರ ತಾವು ಹೀಗೆ ಹೇಳಿರಬಹುದು. ಆದ್ದರಿಂದ ತಾವು ಈ ಪ್ಯಾರಾದಲ್ಲಿ "ಶಿಫಾರಸು" ಪದದ ತರುವಾಯ

"ಅವರ ಪ್ರಾತಿನಿಧ್ಯದ ವ್ಯಾಪ್ತಿ ಅಥವಾ ವಿಧಾನದ ವಿಷಯವಾಗಿ"

ಎಂಬ ಪದಗಳನ್ನು ಸೇರಿಸುವ ಮೂಲಕ ತಿದ್ದುಪಡಿ ಮಾಡುವುದಾದರೆ ನಾನು ತಮಗೆ ಉಪಕೃತನಾಗಿರುತ್ತೇನೆ.

ಶ್ರೀಮತಿ ಸುಬ್ಬರಾಯನ್: ನಾನು ತಮ್ಮ ಅಧಿವೇಶನವೊಂದರಲ್ಲಿ ಶಾಸಕಾಂಗದಲ್ಲಿ ಮಹಿಳೆಯರ ವಿಶೇಷ ಪ್ರಾತಿನಿಧ್ಯದ ಬಗ್ಗೆ ಕೆಲವು ವಿಶೇಷ ವಿಧಿಗಳನ್ನು ಸೇರಿಸುವ ಸಾಧ್ಯತೆಯ ವಿಷಯವಾಗಿ ಮಾತನಾಡಿದ್ದು ತಮಗೆ ನೆನಪಿರಬಹುದು. ನಾನು ಆಗ ಈ ವಿಷಯದ ಪರಿಶೀಲನೆಯನ್ನು ಅಲ್ಪಸಂಖ್ಯಾತರ ಸಮಿತಿ ತಮ್ಮ ವರದಿಯನ್ನು ಪ್ರಕಟಿಸುವವರೆಗೆ ಮುಂದಕ್ಕೆ ಹಾಕಬೇಕೆಂದೂ ಸಹ ಸೂಚಿಸಿದ್ದೆ. ಆದರೆ, ಈ ವಿಷಯವನ್ನು ಕಡೆಗಾಣಿಸಬಾರದೆಂಬ ದೃಷ್ಟಿಯಿಂದ ಆ ವಿಷಯವನ್ನು ಇಲ್ಲಿಯೇ ಯಾವುದಾದರೂ ರೀತಿಯಲ್ಲಿ ಪ್ರಸ್ತಾಪಿಸಬೇಕೆಂದು ಮತ್ತು ೨೪ನೆಯ ಪ್ಯಾರಾದ ೯ನೆಯ ಪಂಕ್ತಿಯಲ್ಲಿ "ಹಿತಾಸಕ್ತಿಗಳು"

---

* ಪ್ರೊಸೀಡಿಂಗ್ಸ್ ಆಫ್ ದಿ ಫೆಡರಲ್ ಸ್ಟ್ರಕ್ಚರ್ ಕಮಿಡಿ ಅಂಡ್ ಮೈನಾರಿಟೀಸ್ ಕಮಿಟಿ, ಸಂಪುಟ–೧, ಪುಟಗಳು ೮೮೨–೮೩

ಎಂಬ ಪದದ ನಂತರ "ಅಥವಾ ಶಾಸಕಾಂಗದಲ್ಲಿ ಸ್ತ್ರೀಯರ ಪ್ರಾತಿನಿಧ್ಯದ ಬಗ್ಗೆ" ಎಂಬ ಪದಗಳನ್ನು ಸೇರಿಸಬೇಕೆಂದು ವಿನಯಪೂರ್ವಕವಾಗಿ ಸೂಚಿಸುತ್ತೇನೆ.

ಅಧ್ಯಕ್ಷ: ನಾನು ನಿಮಗೆ ಆಭಾರಿಯಾಗಿದ್ದೇನೆ. ಇದು ಅಜಾಗರೂಕತೆಯಿಂದ ಬಿಟ್ಟುಹೋಗಿರುವುದಕ್ಕಾಗಿ ವಿಷಾದಿಸುತ್ತೇನೆ. ಮತ್ತು ನಾನು ಡಾ. ಅಂಬೇಡ್ಕರರಿಗೂ ಅತ್ಯಂತ ಆಭಾರಿಯಾಗಿದ್ದೇನೆ. ಈ ಎರಡೂ ತಿದ್ದುಪಡಿಗಳನ್ನು ಸೇರಿಸೋಣ. ಇದು ಅಜಾಗರೂಕತೆಯಿಂದ ಸಂಭವಿಸಿದೆ.

ಶ್ರೀಮತಿ ಸುಬ್ಬರಾಯನ್: ಈ ಹಿಂದೆ ಒಂದು ಸಂದರ್ಭದಲ್ಲಿ ಶಾಸನ ಸಭೆಗಳಲ್ಲಿ ನಾಮಕರಣಗೊಂಡ ಅನೇಕ ಸದಸ್ಯರು ಹಿಂದೆ ಸಲ್ಲಿಸಿದ ಅಮೂಲ್ಯ ಸೇವೆಯನ್ನು ಮಾನ್ಯ ಮಾಡುವ ವಿಷಯವಾಗಿ ಹೊಸ ಸಂವಿಧಾನದಲ್ಲಿ ನಾಮಕರಣ ಪದ್ಧತಿಯನ್ನನುಸರಿಸುವುದಕ್ಕೆ ತಾತ್ವಿಕವಾಗಿ ವಿರೋಧ ವ್ಯಕ್ತಪಡಿಸಿದ್ದೆ. ಈಗ ಎರಡೂ ಸದನಗಳಿಗೆ ಸರಿಸಮಾನ ಅಧಿಕಾರ ನೀಡಬಹುದಾಗಿದೆ ಎಂಬ ವಿಷಯ ತಿಳಿದ ಮೇಲಂತೂ ನಾನು ನಾಮಕರಣಕ್ಕೆ ಇನ್ನೂ ಹೆಚ್ಚಿನ ವಿರೋಧ ವ್ಯಕ್ತಪಡಿಸಬೇಕಾಗಿದೆ ಎಂದು ನನಗನ್ನಿಸುತ್ತದೆ. ಹಿರಿಯ ಮುತ್ಸದ್ದಿಗಳಾಗಿರುವ ವ್ಯಕ್ತಿಗಳ ಸೇವೆ ಅಮೂಲ್ಯವಾದದ್ದೆಂದು ವರದಿಯಲ್ಲಿ ಹೇಳಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ, ನಾಮಕರಣ ಪದ್ಧತಿ ವಿವೇಕರಹಿತ ಮತ್ತು ಪ್ರಜಾಪ್ರಭುತ್ವ ವಿರೋಧಿ ಪದ್ಧತಿ ಎಂಬುದು ನನ್ನ ಖಚಿತ ಅಭಿಪ್ರಾಯ. ಆದ್ದರಿಂದ ಅಂತಹ ವ್ಯಕ್ತಿಗಳ ಸೇವೆಯನ್ನು ಕೂಡ ಯಾವುದಾದರೂ ರೀತಿಯ ಚುನಾವಣೆಯ ಮೂಲಕ ಪಡೆದುಕೊಳ್ಳುವುದು ಒಳ್ಳೆಯದು. ನಾಮಕರಣ ಪದ್ಧತಿಯನ್ನನುಸರಿಸಿದ್ದೇ ಆದರೆ, ಈ ಖಂಡ ಅಥವಾ ಕಲಮಿನ ಉದ್ದೇಶವೇ ವಿಫಲಗೊಳ್ಳುವುದಲ್ಲದೆ ಮಂತ್ರಿ ಮಂಡಳಿಯು ಮೇಲ್ಮನೆಯಲ್ಲಿ ತನ್ನ ಬಲವರ್ಧನೆಗಾಗಿ ಇದರ ದುರುಪಯೋಗ ಮಾಡಿಕೊಳ್ಳಬಹುದು. ಈ ಒಂದು ಸಾಮಾನ್ಯ ಅಭ್ಯಂತರವೂ ಅಲ್ಲದೇ, ೩೨ನೆಯ ಪ್ಯಾರಾದ ೭, ೧೦, ೧೯ ಮತ್ತು ೨೨ನೆಯ ಪಂಕ್ತಿಗಳಲ್ಲಿ ಇರುವ "ಮನುಷ್ಯರು" ಅಥವಾ "ಪುರುಷರು" (Men) ಪದದ ಬದಲು "ವ್ಯಕ್ತಿಗಳು" (Person) ಎಂಬ ಪದವನ್ನು ಬಳಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷ: ಶ್ರೀಮತಿ ಸುಬ್ಬರಾಯನ್‌ರವರೆ, ನಾನು ನಿಮ್ಮ ಮಾತುಗಳನ್ನು ಒಪ್ಪಿಕೊಳ್ಳುತ್ತೇನೆ. ಇಂಗ್ಲೆಂಡಿನಲ್ಲಿ ಸುಮಾರು ಐದು ವರ್ಷಗಳ ಹಿಂದಿನತನಕ ಸ್ತ್ರೀಯು "ವ್ಯಕ್ತಿ" ಅಲ್ಲ ಎಂದು ತಿಳಿದಿದ್ದೆವು.

ಶ್ರೀಮತಿ ಸುಬ್ಬರಾಯನ್: ಬಹುಶಃ ಅವಳು ಇದಕ್ಕಿಂತಲೂ ಉತ್ತಮಳೆಂದು ಅವರು ತಿಳಿದಿದ್ದಿರಬಹುದು.

ಮಿಸ್ಟರ್ ಝುಫರುಲ್ಲಾ ಖಾನ್: ನಮ್ಮ ಜನರಲ್ ಕ್ಲಾಸಸ್ ಕಾಯ್ದೆಯಲ್ಲಿ "ಮನುಷ್ಯ" ಎಂಬ ಪದದ ಬಳಕೆ ಮಾಡಿದಾಗ "ಸ್ತ್ರೀ"ಯೂ ಸೇರಿದೆ ಎಂದು ಹೇಳಲಾಗಿದೆ.

ಶ್ರೀಯುತ ಅಯ್ಯಂಗಾರ್: ನಾಮಕರಣಗೊಂಡ ಸದಸ್ಯರ ವಿಷಯದಲ್ಲಿ ನಾನು ಶ್ರೀಮತಿ ಸುಬ್ಬರಾಯನ್‌ರವರ ಅಭಿಪ್ರಾಯವನ್ನು ಅನುಮೋದಿಸಬಯಸುತ್ತೇನೆ. ಹಿರಿಯ ರಾಜ್ಯನೀತಿಜ್ಞರು ಮೇಲ್ಸದನದ ಸದಸ್ಯರಾಗಿರುವುದರ ಉಪಯುಕ್ತತೆಯನ್ನು ನಾನು ಒಪ್ಪುತ್ತೇನೆ. ಆದರೆ, ದೇಶಕ್ಕೆ ಇಂತಹ ಹಿರಿಯ ರಾಜ್ಯ ನೀತಿಜ್ಞರ ಅವಶ್ಯಕತೆ ನಿಜವಾಗಿಯೂ ಇರುವುದೇ ಆದ ಪಕ್ಷದಲ್ಲಿ ಅವರು ಯಾವುದಾದರೂ ಮತಕ್ಷೇತ್ರದಿಂದ ಬರಲು ಸಾಧ್ಯವಾಗಲಿಕ್ಕೇ ಬೇಕು. ನನ್ನ ಅಭಿಪ್ರಾಯದಲ್ಲಿ ನಾಮಕರಣ ವಿಕಾರ ಸಿದ್ಧಾಂತವೆನಿಸುವುದು. ಆದ್ದರಿಂದ ಅದನ್ನು ಸಂಪೂರ್ಣವಾಗಿ ಕೈಬಿಡಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಮತಿ ಸುಬ್ಬರಾಯನ್‌ರವರು ಹೇಳಿರುವುದನ್ನೆ ನಾನು ಅನುಮೋದಿಸುತ್ತೇನೆ.

* ಅಧ್ಯಕ್ಷ: "ಸ್ತ್ರೀಯರ ಪ್ರಾತಿನಿಧ್ಯಕ್ಕೆ ಅವಶ್ಯವೆನಿಸಿದ ಯಾವುದೇ ವಿಶೇಷ ವಿಧಿಯನ್ನು ಗಣನೆಗೆ ತೆಗೆದುಕೊಳ್ಳುತ್ತಾ ಮೇಲ್ಮನೆಯ ಅಭ್ಯರ್ಥಿಗಳ ಆಯ್ಕೆಗೆ ಮಾದರಿ ಎಂದು ಅಂಗೀಕರಿಸತಕ್ಕದ್ದು" ಎಂದು ಹೇಳೋಣ.

ಡಾ. ಬಿ. ಆರ್. ಅಂಬೇಡ್ಕರ್: ೩೪ನೆಯ ಪ್ಯಾರಾದಲ್ಲಿ ಹೇಳಲಾಗಿರುವ ರಾಜ್ಯ ಪರಷತ್ತಿಗೆ ಸಂಬಂಧಿಸಿದ ಅರ್ಹತೆಗಳ ಮಾದರಿಯನ್ನನುಸರಿಸುವ ವಿಷಯವನ್ನು ಒಪ್ಪಿಕೊಳ್ಳುವಲ್ಲಿ ನನಗೆ ಕೆಲವು ಅಭ್ಯಂತರಗಳಿವೆ. ಆದ್ದರಿಂದ ನಿಮ್ಮ ವರ್ಗಗಳ ಪ್ರಾತಿನಿಧ್ಯಕ್ಕೆ ಸಂಪೂರ್ಣ ಅಡ್ಡಿಯುಂಟಾಗುವುದೆಂದು ನನಗನಿಸುತ್ತದೆ.

ಅಧ್ಯಕ್ಷ: ನಾವು ಅದಕ್ಕೆ ಅವಕಾಶ ಕೊಡಬಾರದು.

ಡಾ. ಬಿ. ಆರ್. ಅಂಬೇಡ್ಕರ್: ಇದನ್ನು ಗಣನೆಗೆ ತೆಗೆದುಕೊಂಡು ಮಾದರಿ ನಿಯಮಗಳನ್ನು ನಿರೂಪಿಸಲು ಮತದಾನ ಹಕ್ಕು ಅಥವಾ ಚುನಾವಣಾ ಸಮಿತಿ (Franchise Committee)ಗೆ ಸ್ವಾತಂತ್ರ್ಯವನ್ನು ಕೊಡಬೇಕು;

* ಡಾ. ಬಿ. ಆರ್. ಅಂಬೇಡ್ಕರ್: ಈ ಸಮಿತಿಯ ಕೇಂದ್ರ ಸರಕಾರವು ತುರ್ತು ಪರಿಸ್ಥಿತಿಯಲ್ಲಿ ಪ್ರಾಂತ್ಯಗಳ ಇಲ್ಲವೇ ಸಂಸ್ಥಾನಗಳ ಧನಸಹಾಯವನ್ನವಲಂಬಿಸದೆ ಸ್ವತಂತ್ರವಾಗಿ ಮತ್ತು ನೇರವಾಗಿ ಹಣಕಾಸು ಒದಗಿಸಿಕೊಳ್ಳುವ ಅಧಿಕಾರವನ್ನು ನೀಡುವ ಅವಶ್ಯಕತೆಯನ್ನು ಪರಿಶೀಲಿಸಬೇಕೆಂದು ನಾನು ಬಯಸುತ್ತೇನೆ.

ಲಾರ್ಡ್ ಪೀಲ್: ಈ ಎಲ್ಲಾ ಸಂಗತಿಗಳನ್ನು ಎಲ್ಲಾ ದೃಷ್ಟಿಯಿಂದ ಪರಿಗಣಿಸಲಾಗಿದ್ದು ಇದು ಎಲ್ಲರ ನಡುವೆ ಆದ ಒಪ್ಪಂದ ಅಥವಾ ಹೊಂದಾಣಿಕೆಯ ಪ್ರತಿಫಲವಾಗಿದೆ.ಈ ವಿಷಯದ ಮೇಲೆ ಈಗ ನಾನು ಇಷ್ಟು ಮಾತ್ರ ಹೇಳಬಲ್ಲೆ.

ಶ್ರೀಯುತ ಜೋಶಿ: ಲಾರ್ಡ್ ಛಾನ್ಸಲರ್‌ರವರೆ, ಡಾ. ಅಂಬೇಡ್ಕರರ ಅಭಿಪ್ರಾಯಕ್ಕೆ ನನ್ನ ಒಪ್ಪಿಗೆ ಇದೆ.

ಡಾ. ಬಿ. ಆರ್. ಅಂಬೇಡ್ಕರ್: ಲಾರ್ಡ್ ಛಾನ್ಸಲರವರೆ, ವಿಷಯ ಸಂಗ್ರಹಣಾ ಸಮಿತಿ (Fact Finding Committee)ಯು ಸಂಯುಕ್ತ ಸರಕಾರದ ಶಾಸಕಾಂಗದ (ಆರ್ಥಿಕ) ಹೊರೆಯನ್ನು ಬ್ರಿಟಿಷ್ ಪ್ರಾಂತ್ಯಗಳು ಮತ್ತು ಭಾರತೀಯ ಸಂಸ್ಥಾನಗಳ ನಡುವೆ ವಿನಿಯೋಗಿಸುವಾಗ ಈ ಎರಡೂ ಸರಕಾರಗಳ ನಡುವೆ ಸಮನ್ಯಾಯ ತತ್ವವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ಹೇಳ ಬಯಸುತ್ತೇನೆ.

ಅಧ್ಯಕ್ಷ: ಲಾರ್ಡ್ ಪೀಲ್‌ರವರು ಅದನ್ನು ಪರಿಶೀಲಿಸುವರೆಂದು ನಂಬುತ್ತೇನೆ. ನಾವು ಪೂರ್ಣಾಧಿವೇಶನ ದಲ್ಲಿ ಸೇರಿದಾಗ ಇದನ್ನು ಪುನಃ ಪ್ರಸ್ತಾಪಿಸಲು ನಿಮ್ಮ ಅಭ್ಯಂತರವಿಲ್ಲವೆಂದು ನಾನು ಭಾವಿಸುತ್ತೇನೆ.

---

* ಅದೇ, ಪುಟ ೮೮೬

* ಅದೇ, ಪುಟಗಳು ೮೯೯–೯೦೦

# ನಲವತ್ತನೆಯ ಸಭೆ
# ೪ನೆಯ ನವೆಂಬರ್ ೧೯೩೧

* ಅಧ್ಯಕ್ಷ: ನಾನು ಈಗ ತಮ್ಮಿಂದ ಬಯಸುತ್ತಿರುವ ತಮ್ಮ ಅನಿಸಿಕೆಗಳು ಅದೇ ವರದಿಯನ್ನು ಕುರಿತದ್ದಾಗಿದೆ. ದಯವಿಟ್ಟು ೫೨ನೆಯ ಪ್ಯಾರಾವನ್ನು ತೆಗೆದುಕೊಳ್ಳುವಿರಾ?

ಡಾ. ಬಿ. ಆರ್. ಅಂಬೇಡ್ಕರ್: ೫೨ನೆಯ ಪ್ಯಾರಾದ ಬಗ್ಗೆ ನಾನು ಈಗ ಇಷ್ಟು ಮಾತ್ರ ಹೇಳಬಹುದೇ? ನಾವು ಸಂಯುಕ್ತ (ಫೆಡರಲ್) ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಚರ್ಚಿಸುತ್ತಿದ್ದಾಗ ನ್ಯಾಯಾಲಯವು ಸಂವಿಧಾನವನ್ನು ಅರ್ಥೈಸುವುದು ಮತ್ತು ಪ್ರಾಂತೀಯ ಸರಕಾರಗಳಾಗಲೀ ಅಥವಾ ಸಂಯುಕ್ತ ಸರಕಾರವಾಗಲಿ ಪರಸ್ಪರರ ಕಾರ್ಯಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡದಂತೆ ನೋಡಿಕೊಳ್ಳುವುದೂ ಅಲ್ಲದೆ, ಮೂಲಭೂತ ಹಕ್ಕುಗಳು ಅಥವಾ ಅಲ್ಪಸಂಖ್ಯಾತರ ಹಕ್ಕುಗಳ ವಿಷಯದಲ್ಲಿ ಉದ್ಭವಿಸುವ ಸಂಗತಿಗಳನ್ನು ಪರಿಶೀಲಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರಬೇಕೆಂದು ನಾನು ಪ್ರಸ್ತಾಪಿಸಿದ್ದನ್ನು ಸನ್ಮಾನ್ಯರಾದ ತಾವು ಜ್ಞಾಪಿಸಿಕೊಳ್ಳುವಿರೆಂದು ನಂಬಿದ್ದೇನೆ. ನಾನು ಹೀಗೆ ಹೇಳಿದ್ದನ್ನು ಶ್ರೀಯುತರುಗಳಾದ ಜಯಕರ್‌ರವರು ಮತ್ತು ಶಾಸ್ತ್ರಿಯವರೂ ಸಹ ಅನುಮೋದಿಸಿದ್ದರೆಂದು ನನಗನಿಸುತ್ತದೆ. ಈ ಅಂಶವನ್ನು ಈ ಪ್ಯಾರಾದಲ್ಲಿ ನಮೂದಿಸಬಹುದೆಂದು ನಾನು ಕೋರುತ್ತೇನೆ.

ಅಧ್ಯಕ್ಷ: ನಾನು ಡಾ. ಅಂಬೇಡ್ಕರರಿಗೆ ಅಭಾರಿಯಾಗಿದ್ದೇನೆ. ಆದರೆ ಅವುಗಳನ್ನು ಸಂವಿಧಾನದಲ್ಲಿಯೇ ಅಳವಡಿಸಲಾಗಿರುವುದರಿಂದ ಸಹಜವಾಗಿಯೇ ಅವು ಸಂಯುಕ್ತ ನ್ಯಾಯಾಲಯದ ಕಾರ್ಯ ವ್ಯಾಪ್ತಿಗೊಳಪಡುವುದು ಎಂದು ಅವರಿಗೆ ಪುನಃ ಖಾತ್ರಿ ಮಾಡಿಕೊಳ್ಳಲು ನನಗೆ ಸಂತೋಷವೆನಿಸಿದೆ.

ಶ್ರೀಯುತ ಜಯಕರ್: ಅದು "ಸಂವಿಧಾನಾತ್ಮಕ" ಎಂಬ ಪದದಲ್ಲಿ ಸೇರಿರುತ್ತದೆ.

** ಅಧ್ಯಕ್ಷ: ಈಗ ೬೨ನೆಯ ಪ್ಯಾರಾ.

ಡಾ. ಬಿ. ಆರ್. ಅಂಬೇಡ್ಕರ್ ನ್ಯಾಯಾಲಯವನ್ನು ದೆಹಲಿಯಲ್ಲಿ ಸ್ಥಾಪಿಸುವ ಬಗ್ಗೆ ಒಮ್ಮತವಿತ್ತೆಂದು ನನಗೆ ತೋಚಲಿಲ್ಲ. ಈ ವಿಷಯವನ್ನು ಯಾವುದಾದರೂ ಒಂದು ಸಮಿತಿ ಪರೀಕ್ಷಿಸಬೇಕೆಂದು ನಾನು ಬಯಸುತ್ತೇನೆ.

ಶ್ರೀಯುತ ಜಯಕರ್: ಅದು ಎಲ್ಲಿಯಾದರೂ ಒಂದು ಕೇಂದ್ರ ಸ್ಥಳದಲ್ಲಿ ದೆಹಲಿಯಲ್ಲಲ್ಲ ಎಂದರೆ ಇಡೀ ವರ್ಷ ಅದು ಕೆಲಸ ಮಾಡಬಹುದಾದಂತಹ ಅನುಕೂಲಕರ ಹವಾಮಾನ ಇರುವಂತಹ ಕೇಂದ್ರ ಸ್ಥಳದಲ್ಲಿ ಇರಬೇಕೆಂದು ನಾನು ಸೂಚಿಸಿದ್ದೆ.

ಮಿಸ್ಟರ್ ಝಫರುಲ್ಲಾ ಖಾನ್: ವಿವಿಧ ಮೂಲಗಳು ಅನೇಕ ಬಗೆಯ ಸೂಚನೆಗಳನ್ನು ಮಾಡಿವೆ. ಆದರೆ ದೆಹಲಿಯ ಬಗ್ಗೆ ಇದ್ದಷ್ಟು ಬೆಂಬಲ ಇನ್ನಾವುದೇ ಸ್ಥಳದ ಬಗ್ಗೆ ಕಂಡುಬರಲಿಲ್ಲವೆಂದು ನನಗನಿಸುತ್ತದೆ.

ಅಧ್ಯಕ್ಷ: ದಯವಿಟ್ಟು ಈಗ ೬೩ ಮತ್ತು ೬೪ನೆಯ ಪ್ಯಾರಾಗಳನ್ನು ತೆಗೆದುಕೊಳ್ಳಿ.

---

* ಪ್ರೊಸೀಡಿಂಗ್ಸ್ ಆಫ್ ದಿ ಫೆಡರಲ್ ಸ್ಟ್ರಕ್ಚರ್ ಕಮಿಟಿ ಮತ್ತು ಮೈನಾರಿಟೀಸ್ ಕಮಿಟಿ, ಸಂಪುಟ–೧, ಪುಟ ೯೦೮.

** ಅದೇ, ಪುಟ ೬೨೨

# ನಲವತ್ತಾರನೆಯ ಅಧಿವೇಶನ
# ೧೬ನೆಯ ನವೆಂಬರ್ ೧೯೩೧

ಮುಂದಿನ ವಿಧಾನದ ಮೇಲೆ ಚರ್ಚೆ

* ಡಾ. ಬಿ. ಆರ್. ಅಂಬೇಡ್ಕರ್: ಪ್ರಧಾನ ಸೇನಾಧಿಪತಿ ಮತ್ತು ಸೈನಿಕ ಸದಸ್ಯ (ಸಚಿವ) ಇವರ ನಡುವೆ ಇರಬೇಕಾದ ಸಂಬಂಧದ ಬಗ್ಗೆ ಸರ್ ತೇಜ್ ಬಹದ್ದೂರ್ ಸಪ್ರೂರವರ ಅಭಿಪ್ರಾಯವನ್ನು ನಾನು ತಿಳಿಯಬಯಸುತ್ತೇನೆ. ಪ್ರಧಾನ ಸೇನಾಧಿಪತಿಯು ಸೈನಿಕ ಸದಸ್ಯ ಅಥವಾ ಸಚಿವರ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟ ಒಬ್ಬ ಇಲಾಖಾ ಮುಖ್ಯಸ್ಥರಾಗಿ ಮಾತ್ರ ಇರಬೇಕೇ ಅಥವಾ ನೀವು ಅವರಿಗೆ ಸೈನಿಕ ಸದಸ್ಯರು ಹಸ್ತಕ್ಷೇಪ ಮಾಡುವ ಹಕ್ಕನ್ನು ಹೊಂದಿರದಂತಹ ಯಾವುದಾದರೂ ಕೆಲವು ಅಧಿಕಾರ ಗಳನ್ನು ನೀಡುವಿರಾ?

ಸರ್ ತೇಜ್ ಬಹದ್ದೂರ್ ಸಪ್ರೂ: ನಾನು ವಿವರಗಳಿಗೆ ಹೋಗಲು ಬಯಸುವುದಿಲ್ಲ. ಆದರೆ, ನಾನು ಕಲ್ಪಿಸಿಕೊಂಡಿರುವಂತೆ ಸೈನಿಕ ಸದಸ್ಯರ ಸ್ಥಾನವು ಧೋರಣೆಗೆ ಸಂಬಂಧಿಸಿದ ಸಾಮಾನ್ಯ ಪ್ರಶ್ನೆಗಳು ಮತ್ತು ಆರ್ಥಿಕ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟಿರುತ್ತದೆ. ಅವರಿಗೆ ಸೈನ್ಯಕ್ಕೆ ಸಂಬಂಧಿಸಿದ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ವ್ಯವಹರಿಸುವ ಅಧಿಕಾರವಿರುವುದಿಲ್ಲ. ಅವರು ವಿವೇಕಿಗಳಾದರೆ ಅವರಿಗೆ ಅಂತಹ ಅಧಿಕಾರವಿದ್ದರೂ ಅದನ್ನು ಚಲಾಯಿಸುವುದಿಲ್ಲ. ನನಗೆ ಈ ವಿಷಯದಲ್ಲಿ ಸ್ವಂತ ಅನುಭವವಿಲ್ಲ. ಆದರೆ ಸೈನ್ಯದ ವಿಷಯದಲ್ಲಿ ಇಂಗ್ಲೆಂಡಿನಲ್ಲಿ ವಸ್ತುಸ್ಥಿತಿ ಏನಿದೆ ಎಂಬುದನ್ನು ಹೇಳಲು ಇಲ್ಲಿರುವ ನನ್ನ ಬ್ರಿಟಿಷ್ ಸಹೋದ್ಯೋಗಿಗಳಲ್ಲಿ ಮನವಿ ಮಾಡುತ್ತೇನೆ. ರಕ್ಷಣಾ ಮಂತ್ರಿ (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ವಾರ್) ಅವರು ಸೈನ್ಯದ ಆಂತರಿಕ ಶಿಸ್ತಿನ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಹೊಂದಿಲ್ಲ. ಆದರೆ, ಅವರು ಧೋರಣೆಯ ಸಂಬಂಧವಾದ ಮಹತ್ವದ ಪ್ರಶ್ನೆಗಳನ್ನು ಪರಿಶೀಲಿಸುತ್ತಾರೆ. ನಾನು ನಿಮ್ಮ ಸೈನಿಕ ಇತಿಹಾಸದಲ್ಲಿ ಡ್ಯೂಕ್ ಆಫ್ ಕೇಂಬ್ರಿಜ್‌ರ ಕಾಲವನ್ನು ಎಂದಿಗೂ ಮರೆಯಲಾರೆ.

---

* ಅದೇ, ಪುಟ ೬೭೭

ಅಲ್ಪಸಂಖ್ಯಾತರ ಸಮಿತಿಯಲ್ಲಿ

# ಏಳನೆಯ ಸಭೆ

## ೨೮ನೆಯ ಸೆಪ್ಟೆಂಬರ್ ೧೯೩೧

* ಅಧ್ಯಕ್ಷ: (ಇಲ್ಲಿ) ಪ್ರಾತಿನಿಧ್ಯ ಹೊಂದಿರುವ ಇತರ ಅಲ್ಪಸಂಖ್ಯಾತರೂ ಇದ್ದಾರೆ. ನಾವು (ಅಧಿವೇಶನವನ್ನು) ಮುಂದೂಡಿದ ಪಕ್ಷದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಿದ್ಧ ರಾಗುವರೇ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಅವರಿಗೆ ತಮ್ಮ ವಾದವನ್ನು ಮಂಡಿಸಲು ಸಿದ್ಧತೆಗಾಗಿ ಉಪಯೋಗವಾಗುವುದಾದರೆ ಮತ್ತು ಮುಂದಿನ ಸಭೆಯ ಚರ್ಚೆಯಲ್ಲಿ ಭಾಗವಹಿಸುವರ ಹೆಸರುಗಳ ಪಟ್ಟಿಯನ್ನು ನನಗೆ ಕೊಡುವುದಾದರೆ ಈ ಸಭೆಯನ್ನು ಮುಂದೂಡುವುದರಲ್ಲಿ ಅರ್ಥವಿದೆ ಎಂದು ಹೇಳಬಹುದು. ಇದುವರೆಗೆ ಯಾರೂ ತಮ್ಮ ಹೆಸರನ್ನು ನನಗೆ ತಲುಪಿಸಿಲ್ಲವಾದ್ದರಿಂದ ಈ ಬೆಳಿಗ್ಗೆ ನನಗೆ ಸ್ವಲ್ಪ ತೊಂದರೆಯಾಯಿತು. ನೀವು ಬಯಸಿದರೆ ನಾನು ಈ ಅಧಿವೇಶನದಲ್ಲಿ ನಿಮಗೆ ಎರಡು ಮೂರು ಬಾರಿ ಬಿಡುವನ್ನು ನೀಡುವ ರೀತಿಯಲ್ಲಿ ಇದನ್ನು ನಡೆಸಿಕೊಡಬಲ್ಲೆ. ಹೀಗಾಗಬಾರದೆಂಬುದೇ ನನ್ನ ದೃಢ ನಿರ್ಧಾರವಾಗಿದೆ. ಇಲ್ಲಿಯ ಚರ್ಚೆ ಸೌಹಾರ್ದಯುತ ಮತ್ತು ಉಪಯುಕ್ತವಾಗಿ ನಡೆಯಬೇಕೆಂದರೆ ಯಾರು ಮಾತನಾಡಲಿಚ್ಛಿಸುತ್ತಾರೆಂದು ಮತ್ತು ಅವರು ಯಾವ ವಿಷಯಗಳ ಮೇಲೆ ಮಾತನಾಡಲಿದ್ದಾರೆಂದು ತಿಳಿಯಬಯಸುತ್ತೇನೆ. ಆಗ ಮಾತನಾಡುವವರಿಗೆ ನಾನು ಅತ್ಯಂತ ಅನುಕೂಲಕರವಾದ ಸಂದರ್ಭದಲ್ಲಿ ಅವಕಾಶ ಕೊಡಲು ಸಾಧ್ಯವಾಗುತ್ತದೆ. ಭಾಷಣದ ಅವಕಾಶವನ್ನು ಹತ್ತಿಕ್ಕುವುದು ಇದರ ಉದ್ದೇಶವಲ್ಲ. ಆದರೆ, ಚರ್ಚೆ ಅತ್ಯಂತ ಉಪಯುಕ್ತವಾಗಲೆಂಬುದೇ ಇದರ ಉದ್ದೇಶವಾಗಿದೆ. ಅದೂ ಅಲ್ಲದೆ, ನಾನು ನಿಮ್ಮಲ್ಲಿ ವಿನಂತಿಸುವುದೆಂದರೆ, ಸಭೆಯನ್ನು ಈಗಲೇ ಮುಂದೂಡಿದ್ದಾದರೆ ನಿಮ್ಮಲ್ಲಿಯೇ ಕೆಲವರು ನನ್ನಲ್ಲಿಗೆ ಬಂದು ನೀವು ಸಹ ಈ ಸಮಯವನ್ನು ಸಂಕ್ಷಿಪ್ತ ಸಮಗ್ರ, ಮತ್ತು ಉಪಯುಕ್ತ ಹೇಳಿಕೆಯನ್ನು ಸಿದ್ಧ ಗೊಳಿಸಲು ಉಪಯೋಗಿಸಬಹುದಾಗಿದೆ ಎಂದು ಹೇಳಬಹುದೆಂಬುದನ್ನು ದಯವಿಟ್ಟು ನೆನಪಿನಲ್ಲಿಡಿ. ಈ ಒಂದು ತಿಳುವಳಿಕೆ ಮತ್ತು ಒಪ್ಪಂದದ ಮೇಲೆ ಈಗ ಸಭೆಯನ್ನು ಮುಂದೂಡೋಣವೇ?

ಡಾ. ಬಿ. ಆರ್. ಅಂಬೇಡ್ಕರ್: ನಾವು ಸಭೆಯನ್ನು ಮುಂದೂಡುವ ಮುಂಚೆ ನಾನು ಒಂದು ಮಾತು ಹೇಳಬಯಸುತ್ತೇನೆ. ಈ ಸಂಧಾನಗಳು ನಡೆಯುತ್ತಿರುವ ಅವಧಿಯಲ್ಲಿ ಇತರ ಅಲ್ಪಸಂಖ್ಯಾತರ ಕೋಮುಗಳ ಸದಸ್ಯರು ತಮ್ಮ ವಾದದ ಸಿದ್ಧತೆ ಮಾಡಿಕೊಳ್ಳಬೇಕೆಂಬ ತಮ್ಮ ಸಲಹೆಯ ಬಗ್ಗೆ ನಿಮ್ಮ ವರ್ಗದವರಾದ ನಾವು ಈಗಾಗಲೇ ನಮ್ಮ ವಾದವನ್ನು ಅಲ್ಪಸಂಖ್ಯಾತರ ಉಪಸಮಿತಿಗೆ ಸಲ್ಲಿಸಿದ್ದೇವೆಂದು ತಿಳಿಸಬಯಸುತ್ತೇನೆ.

---

* ಪ್ರೊಸೀಡಿಂಗ್ಸ್ ಆಫ್ ದಿ ಫೆಡರಲ್ ಸ್ಟ್ರಕ್ಚರ್ ಕಮಿಟಿ ಮತ್ತು ಮೈನಾರಿಟೀಸ್ ಕಮಿಟಿ, ಸಂಪುಟ–೩, ಪುಟಗಳು: ೧೩೩೭–೩೮.

* ಸಂಪು: ೩, ಪುಟಗಳು: ೧೩೩೭–೩೮

ಈಗ ನಾವು ಮಾಡಬೇಕಾಗಿರುವ ಒಂದೇ ಕೆಲಸವೆಂದರೆ ನಮಗೆ ವಿವಿಧ ಶಾಸನ ಸಭೆಗಳಲ್ಲಿ ದೊರೆಯಬೇಕಾದ ಪ್ರಾತಿನಿಧ್ಯದ ಪ್ರಮಾಣವನ್ನು ಸೂಚಿಸುವ ಒಂದು ಸಂಕ್ಷಿಪ್ತ ಹೇಳಿಕೆಯನ್ನು ಈ ಸಮಿತಿಗೆ ಸಲ್ಲಿಸುವುದು. ಇದಕ್ಕಿಂತಲೂ ಹೆಚ್ಚು ನಾವು ಮಾಡಬೇಕಾದದ್ದು ಇನ್ನೇನೂ ಇಲ್ಲ. ಆದರೆ, ಆರಂಭ ದಲ್ಲಿಯೇ ನಾನು ಕಾತುರನಾಗಿರುವ ಇನ್ನೊಂದು ಅಂಶವೊಂದಿದೆ. ಕೋಮು ಪ್ರಶ್ನೆಯನ್ನು ತೀರ್ಮಾ ನಿಸಲು ಹೆಚ್ಚಿನ ಸಂಧಾನಗಳು ನಡೆಯಲಿವೆ ಎಂದು ಕೇಳಿ ನನಗೆ ಅತ್ಯಂತ ಆನಂದವಾಗಿದೆ. ಈ ವಿಷಯ ದಲ್ಲಿ ಯಾವ ಸಂಶಯವೂ ಉಳಿಯಬಾರದೆಂದು ನಾನು ಆರಂಭದಲ್ಲಿಯೇ ಸ್ಪಷ್ಟವಾಗಿ ಹೇಳಬಯಸು ತ್ತೇನೆ. ಈ ಸಂಧಾನ ಮಾಡುತ್ತಿರುವವರು ತಾವು ಸಂಪೂರ್ಣ ಸ್ವತಂತ್ರ ರಾಯಭಾರಿಗಳಲ್ಲ ಎಂಬ ಅಂಶವನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಶ್ರೀಯುತ ಗಾಂಧಿ ಅಥವಾ ಕಾಂಗ್ರೆಸಿಗರ ಪ್ರಾತಿನಿಧ್ಯ ಸ್ವರೂಪ ಏನೇ ಆಗಿರಲಿ ಅವರು ನಮ್ಮನ್ನು ಬಾಧ್ಯರಾಗುವಂತೆ ಏನನ್ನೂ ಮಾಡಲಾರರು, ಅವರು ನಿಜವಾಗಿಯೂ ಹಾಗೆ ಮಾಡಲಾರರು. ನಾನು ಈ ವಿಷಯವನ್ನು ಈ ಸಭೆಯಲ್ಲಿ ಅತ್ಯಂತ ಸ್ಪಷ್ಟವಾಗಿ ಮತ್ತು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ನಾನು ಹೇಳಬಯಸುವ ಇನ್ನೊಂದು ವಿಷಯವೆಂದರೆ ವಿವಿಧ ಅಲ್ಪಸಂಖ್ಯಾತ ಕೋಮಿ ನವರು ಮಂಡಿಸಿರುವ ಬೇಡಿಕೆಗಳು. ಅವು ಇತರ ಅಲ್ಪಸಂಖ್ಯಾತರು ಮಂಡಿಸಿರುವ ಬೇಡಿಕೆಗಳಿಗೆ ಸುಸಂಬದ್ಧವಾಗಿವೆಯೋ ಇಲ್ಲವೋ, ಅವು ಕೇವಲ ಬೇಡಿಕೆಗಳಾಗಿವೆ. ತತ್ಪರಿಣಾಮವಾಗಿ, ಒಂದು ಕಡೆ ಯಾವುದೇ ಒಂದು ಅಲ್ಪಸಂಖ್ಯಾತ ಕೋಮು ಮತ್ತು ಇನ್ನೊಂದು ಕಡೆ ಕಾಂಗ್ರೆಸ್ ಅಥವಾ ಇನ್ನಾ ರದೋ ಜೊತೆಯಲ್ಲಿ ಇತರ ಅಲ್ಪಸಂಖ್ಯಾತರು ಮಂಡಿಸಿದ ಬೇಡಿಕೆಗಳನ್ನು ಪರಿಗಣಿಸದೇ ನಡೆಸ ಲಾದ ಯಾವುದೇ ಸಂಧಾನ, ನನ್ನ ಮಟ್ಟಿಗೆ ಹೇಳುವುದಾದರೆ ಫಲಕಾರಿಯಾಗುವ ಯಾವ ಸಾಧ್ಯತೆಯೂ ಇಲ್ಲ. ನಾನು ಇದನ್ನು ಸಂಪೂರ್ಣವಾಗಿ ಸ್ಪಷ್ಟಪಡಿಸಬಯಸುತ್ತೇನೆ. ಯಾವುದೇ ಒಂದು ಕೋಮಿಗೆ ಅಧಿಕ ಮಾನ್ಯತೆ ಕೊಡಬೇಕೇ, ಬೇಡವೇ ಎಂಬ ವಿಷಯದಲ್ಲಿ ನನ್ನ ವಿವಾದವಿಲ್ಲ. ಆದರೆ, ನಾನು ಅತ್ಯಂತ ಸ್ಪಷ್ಟವಾಗಿ ಮತ್ತು ಒತ್ತುಕೊಟ್ಟು ಹೇಳುವುದೆಂದರೆ ಯಾರೇ ಅಧಿಕ ಮಾನ್ಯತೆಯನ್ನು ಕೇಳಲಿ ಮತ್ತು ಯಾರೇ ಅದನ್ನು ಕೊಡಲು ಬಯಸಲಿ ಅವರು ಅದನ್ನು ನನ್ನ ಪಾಲಿನಿಂದ ಕೊಡಕೂಡದು ಮತ್ತು ಅವರು ಹಾಗೆ ಕೊಡಲೂಬಾರದು. ಇದನ್ನು ನಾನು ಸಂಪೂರ್ಣವಾಗಿ ಸ್ಪಷ್ಟಪಡಿಸಬಯಸು ತ್ತೇನೆ.

ಸರ್ ಹೆನ್ರಿ ಗಿಡ್ನೆ: ನಾನು ಕೆಲವೇ ಮಾತುಗಳನ್ನು ಹೇಳಬಯಸುತ್ತೇನೆ. ನಾನು ನನ್ನ ಮಿತ್ರ ಡಾ. ಅಂಬೇಡ್ಕರರೊಡನೆ ಹೃತ್ಪೂರ್ವಕವಾಗಿ ಸಹಮತಿಸುತ್ತೇನೆ. ಒಂದು ಸಣ್ಣ ಕೋಮನ್ನು ಪ್ರತಿನಿಧಿಸು ತ್ತಿರುವ ನನಗೆ ಈ ವ್ಯವಹಾರ ಅಥವಾ ಸಂಧಾನದಲ್ಲಿ ಯಾವ ಸ್ಥಾನವಿದೆ ಎಂದು ನನಗೆ ತಿಳಿಯ ದಾಗಿದೆ. ಒಂದು ಕಡೆ ಕಾಂಗ್ರೆಸ್ ಮತ್ತು ಇನ್ನೊಂದು ಕಡೆ ಮಹಮದೀಯರು ತಮ್ಮಲ್ಲಿ ಒಂದು ಒಪ್ಪಂದ ಮಾಡಿಕೊಂಡಿದ್ದೇ ಆದರೆ, ಇತರ ಕೋಮುಗಳ ಸ್ಥಾನವೇನು? ನೀವು ನಮ್ಮಲ್ಲಿಯ ಭಿನ್ನಾಭಿಪ್ರಾಯಗಳನ್ನು ನಮ್ಮಲ್ಲೇ ಬಗೆಹರಿಸಿಕೊಂಡು ಅದನ್ನು ಪ್ರತ್ಯೇಕವಾಗಿ ಸಲ್ಲಿಸಲು ಕೇಳುತ್ತಿದ್ದೀರಿ. ನಾವು ಈಗಾಗಲೇ ಹಾಗೆ ಮಾಡಿದ್ದೇವೆ. ಹೋದ ಸಮ್ಮೇಳನದಲ್ಲಿ ನಾನು ಪ್ರತಿನಿಧಿಸುತ್ತಿರುವ ಸಣ್ಣ ಕೋಮಿನ ಕನಿಷ್ಠ ಪ್ರಮಾಣದ ಬೇಡಿಕೆಗಳನ್ನು ಸಲ್ಲಿಸಿದ್ದೇನೆ. ಭಾರತದ ಹೊಸ ಭೂಪಟ ಅಥವಾ ನಕಾಶೆ ಯನ್ನು ಸಿದ್ಧಪಡಿಸುವಾಗ ಎಲ್ಲಾ ಅಲ್ಪಸಂಖ್ಯಾತರಿಗೂ ಅದರ ಮೇಲೆ ತಮ್ಮ ಚಿಕ್ಕ ಗುರುತುಗಳನ್ನು ಹಾಕುವ ಹಕ್ಕು ಇರಬೇಕೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇಲ್ಲಿಯ ತೀರ್ಮಾನ ಸಂಪೂರ್ಣ

ವಾಗಿ ಒಂದು ಹಿಂದೂ–ಮುಸಲ್ಮಾನರ ನಡುವಣ ಒಪ್ಪಂದವೆನಿಸುವುದಾದರೆ ಇದು ಹೇಗೆ ಸಾಧ್ಯವಾಗುವುದು ಎಂಬುದು ನನಗೆ ತಿಳಿಯದು.

* ಅಧ್ಯಕ್ಷ: ಯಾವ ತಪ್ಪು ತಿಳುವಳಿಕೆಯೂ ಬೇಡ. ಯಾವುದೇ ಅಂತಿಮ ನಿರ್ಣಯ ಅಥವಾ ಒಪ್ಪಂದ ಈ ಸಮಿತಿಯ ಮುಂದೆ ಬರಲೇಬೇಕು. ಪರಸ್ಪರ ಭಿನ್ನಾಭಿಪ್ರಾಯ ಹೊಂದಿರುವ ಕೆಲವು ಅಲ್ಪಸಂಖ್ಯಾತ ಕೋಮುಗಳಿವೆ. ಅವರು ತಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳಲು ಸ್ವಲ್ಪ ಕಾಲಾವಕಾಶವನ್ನು ಮಾಡಿಕೊಳ್ಳಬೇಕು. ಅದು ಸಾರ್ವತ್ರಿಕ ಒಪ್ಪಂದದತ್ತ ಬಹು ಮಹತ್ವದ ಮತ್ತು ಅವಶ್ಯಕ ಹೆಜ್ಜೆ. ಆದರೆ ಒಪ್ಪಂದ ಸಾರ್ವತ್ರಿಕ ಸ್ವರೂಪದ್ದೇ ಆಗಿರುವುದು.

ಡಾ. ಬಿ. ಆರ್. ಅಂಬೇಡ್ಕರ್: ನಾನು ನನ್ನ ನಿಲವನ್ನು ಅತ್ಯಂತ ಸ್ಪಷ್ಟವಾಗಿ ತಿಳಿಸಿದ್ದೇನೆ.

ಅಧ್ಯಕ್ಷ: ಡಾ. ಅಂಬೇಡ್ಕರರು ತಮ್ಮ ನಿಲುವನ್ನು ಅತ್ಯಂತ ಸ್ಪಷ್ಟಗೊಳಿಸಿದ್ದಾರೆ. ಅವರು ಎಂದಿನಂತೆ ತಮ್ಮ ಹೇಳಿಕೆಯಲ್ಲಿ ಈ ಬಗ್ಗೆ ಯಾವುದೇ ಸಂಶಯಕ್ಕೆ ಆಸ್ಪದವಿಲ್ಲದಂತೆ ಮಾಡಿದ್ದಾರೆ. ಈ ಸಮಿತಿಯು ಪುನಃ ಚರ್ಚೆಗೆ ಎತ್ತಿಕೊಂಡಾಗ ಆ ವಿಷಯವನ್ನು ಪ್ರಸ್ತಾಪಿಸಲಾಗುವುದು. ಒಂದು ಸಾರ್ವತ್ರಿಕ ಒಪ್ಪಂದ ದತ್ತ ನೀವೆಲ್ಲರೂ ಕೂಡಿ ಸಹಕರಿಸುತ್ತಿರುವಿರೆಂಬ ಭಾವನೆಯನ್ನು ನೀವು ತಳೆಯಬೇಕೆಂದು ನಾನು ಬಯಸುತ್ತೇನೆ. ಈಗ ಯಾರಿಬ್ಬರ ಅಥವಾ ಮೂವರ ನಡುವೆ ಒಪ್ಪಂದವಿಲ್ಲ. ಆದರೆ ಒಂದು ಸಂಪೂರ್ಣ ಒಪ್ಪಂದದತ್ತ ಸಾಗುತ್ತಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಸಭೆಯನ್ನು ಮುಂದೂಡಿದ ಅವಧಿಯಲ್ಲಿ ಈ ವಿಷಯವನ್ನು ಅನೌಪಚಾರಿಕವಾಗಿ ಚರ್ಚಿಸಲು ಕಾಂಗ್ರೆಸ್‌ನ ಪ್ರತಿನಿಧಿಗಳೂ ಸೇರಿದಂತೆ ವಿವಿಧ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರುಗಳನ್ನೊಳಗೊಂಡ ಒಂದು ಸಣ್ಣ ಸಮಿತಿಯನ್ನು ನೇಮಿಸಲು ಸಾಧ್ಯವೇ ಎಂಬ ಅಂಶವನ್ನು ಕೇಳಬಯಸುತ್ತೇನೆ.

ಅಧ್ಯಕ್ಷ: ನಾನೇ ಈ ಸೂಚನೆ ಮಾಡಬಯಸಿದ್ದೆ. ಅಂತಹ ಸಮಿತಿಯನ್ನು ನೇಮಿಸಬೇಕೆಂದು ನನ್ನನ್ನು ಕೇಳಬೇಡಿ. ನೀವೇ ಅದನ್ನು ಮಾಡಿಕೊಳ್ಳಿ. ನೀವೆಲ್ಲರೂ ಒಂದು ಕಡೆ ಸೇರಲೆಂದೇ ನಾನು ನಿಮ್ಮನ್ನು ಆಹ್ವಾನಿಸಿದ್ದೇನೆ. ನೀವೇ ನಿಮ್ಮೊಳಗೆ ಒಂದು ಅನೌಪಚಾರಿಕ ಸಭೆಯನ್ನು ಮಾಡಿಕೊಂಡು ಈ ವಿಷಯ ಮಾತನಾಡಲು ಸಾಧ್ಯವಿಲ್ಲವೇ? ಆ ನಂತರ ನೀವು ಅಲ್ಲಿ ಮಾತನಾಡುವಾಗ ನಿಮ್ಮ ಮಾತುಗಳು ಇತರರ ಮೇಲೆ ಹೇಗೆ ಪ್ರಭಾವ ಬೀರುವುದೆಂಬ ತಿಳುವಳಿಕೆಯಿಂದ ಮಾತನಾಡಿದಂತಾಗುವುದಿಲ್ಲವೇ? ನಾವು ಈ ವಿಷಯವನ್ನು ಇಷ್ಟಕ್ಕೆ ಬಿಡೋಣವೇ?

ಡಾ. ಬಿ. ಆರ್. ಅಂಬೇಡ್ಕರ್: ತಾವು ಬಯಸಿದ ಹಾಗೆ.

ಅಧ್ಯಕ್ಷ: ಒಳ್ಳೆಯದು.

---

* ಅದೇ, ಪುಟಗಳು ೧೩೩೮–೩೯

# ಎಂಟನೆಯ ಅಧಿವೇಶನ
# ೧ನೆಯ ಅಕ್ಟೋಬರ್ ೧೯೩೧

* ಶ್ರೀಯುತ ಗಾಂಧಿ: ಪ್ರಧಾನಮಂತ್ರಿಯವರೆ, ನಿನ್ನೆ ರಾತ್ರಿ ನಾವು ಹಿಸ್ ಹೈನೆಸ್ ದಿ ಆಗಾಖಾನ್ ಮತ್ತು ಇತರ ಮುಸಲ್ಮಾನ ಮಿತ್ರರೊಡನೆ ನಡೆಸಿದ ಚರ್ಚೆಯ ನಂತರ ಈ ಸಭೆಯನ್ನು ಒಂದು ವಾರ ಮುಂದೂಡುವಂತೆ ಕೇಳಿದರೆ ನಾವು ಇಲ್ಲಿ ಸೇರುವ ಉದ್ದೇಶ ಹೆಚ್ಚು ಫಲಪ್ರದವಾಗುವುದೆಂಬ ನಿರ್ಣಯಕ್ಕೆ ಬಂದಿದ್ದೇವೆ. ನನ್ನ ಇತರ ಸಹೋದ್ಯೋಗಿಗಳೊಡನೆ ಮಾತನಾಡುವ ಅವಕಾಶ ದೊರೆತಿಲ್ಲ. ಆದರೆ, ಅವರೂ ಸಹ ನಾನು ಮಾಡುತ್ತಿರುವ ಈ ಸೂಚನೆಯನ್ನು ಒಪ್ಪಿಕೊಳ್ಳುವರೆಂಬುದರಲ್ಲಿ ನನಗೆ ಸಂದೇಹವಿಲ್ಲ. ನಾನು ನನ್ನ ಮುಸಲ್ಮಾನ ಸ್ನೇಹಿತರೊಡನೆ ಕಾತರಪೂರ್ವಕ ಚರ್ಚೆಯನ್ನು ನಡೆಸಿದ್ದೇನೆಯಲ್ಲದೆ, ನಿನ್ನೆ ಮಧ್ಯಾಹ್ನ ವಿವಿಧ ಪಂಗಡಗಳ ಅಥವಾ ವರ್ಗಗಳಿಗೆ ಸೇರಿದ ಇತರ ಕೆಲವರು ಸ್ನೇಹಿತರನ್ನು ಭೇಟಿ ಮಾಡುವ ಸುಯೋಗ ದೊರಕಿತ್ತು. ನಮಗೆ ಗಣನೀಯ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ. ಆದರೆ, ಅವರೂ ಸಹ ತಮ್ಮೊಳಗೆ ವಿಚಾರವಿನಿಮಯ ಮಾಡಿಕೊಳ್ಳಲು ಕಾಲಾವಕಾಶವಿಲ್ಲದಾಗಿದೆ ಎಂದು ಭಾವಿಸಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ಈ ಒಂದು ವಾರಕ್ಕಿಂತಲೂ ಹೆಚ್ಚಿನ ಮುಂದೂಡಿಕೆಯನ್ನು ನಾನು ಕೇಳುವುದಿಲ್ಲ. ಆದರೆ, ನಾನು ಈ ವಾರದ ಅವಧಿಯಲ್ಲಿ ಇತರರೊಡನೆ ಕೈಗೊಂಡ ಪ್ರಯತ್ನದ ವಿವರವನ್ನು ಈ ಸಮಿತಿಗೆ ವರದಿ ಮಾಡುವೆ.

ನಾನು ನಿನ್ನೆ ರಾತ್ರಿ ಸಂಧಿಸಿದ ಹಿಸ್ ಹೈನೆಸ್ ಮತ್ತು ಇತರ ಸ್ನೇಹಿತರು ವಿವಿಧ ಪಂಗಡಗಳ ಪ್ರತಿನಿಧಿಗಳನ್ನು ಒಂದೆಡೆ ಕೂಡಿಸಿ ಒಂದು ಒಪ್ಪಂದಕ್ಕೆ ಬರುವ ದೃಷ್ಟಿಯಿಂದ ಅವರೊಡನೆ ಸಮಾಲೋಚನೆ ಮಾಡುವ ಹೊರೆಯನ್ನು ನನ್ನ ಮೇಲೆ ಹೊರಿಸಿದ್ದಾರೆ ಎಂದು ನಾನು ಈ ಸಮಿತಿಗೆ ತಿಳಿಸಿದರೆ ಯಾವ ಗುಟ್ಟನ್ನೂ ನಾನು ಬಹಿರಂಗಪಡಿಸಿದಂತೆನಿಸುವುದಿಲ್ಲ. ಪ್ರಧಾನಿಯವರೆ ನನ್ನ ಈ ಪ್ರಸ್ತಾಪ ಅಥವಾ ಸೂಚನೆ ತಮಗೆ ಮತ್ತು ಸಮಿತಿಯ ಇತರ ಸದಸ್ಯರಿಗೆ ಮಾನ್ಯವೆನಿಸಿದರೆ, ನನಗೆ ಸಂತೋಷವೆನಿಸುವುದು. ಹಿಸ್ ಹೈನೆಸ್‌ರವರು ಈ ಸೂಚನೆಯನ್ನು ಅನುಮೋದಿಸುತ್ತಾರೆ ಎಂಬುದನ್ನು ನಾನು ಬಲ್ಲೆ. ವಾರದ ಕೊನೆಯಲ್ಲಿ ಒಂದು ರೀತಿಯ ಒಪ್ಪಂದದ ಬಗ್ಗೆ ವರದಿ ಮಾಡಲು ಸಾಧ್ಯವಾಗಬಹುದೆಂದು ಆಶಿಸೋಣ.

ನಾನು ಈ ಆಶಯವನ್ನು ವ್ಯಕ್ತಪಡಿಸಿದಾಗ, ನನಗೆ ಏನೋ ಗೊತ್ತಿದೆಯಾದ್ದರಿಂದ ಈ ಆಶಯವನ್ನು ವ್ಯಕ್ತಪಡಿಸುತ್ತಿದ್ದೇನೆ ಎಂಬ ಭಾವನೆಯನ್ನು ನಿಮ್ಮಲ್ಲಿ ಉಂಟುಮಾಡುತ್ತಿಲ್ಲ. ಆದರೆ ನಾನು ಒಬ್ಬ ಅದಮ್ಯ ಆಶಾವಾದಿ. ಆಗಾಗ್ಗೆ ನನ್ನ ಜೀವನ ಕ್ಷಿತಿಜದಲ್ಲಿ ಕಪ್ಪು ಮೋಡಗಳ ಕರಾಳ ಛಾಯೆ ಆವರಿಸಿದಾಗಲೆಲ್ಲಾ ನನ್ನಲ್ಲಿ ಆಶಾಕಿರಣ ತೋರಿದ ಯಾವುದಾದರೂ ಒಂದು ಬದಲಾವಣೆ ಅಥವಾ ತಿರುವು ಸಂಭವಿಸಿದೆ. ಅದೇನೇ ಇರಲಿ, ಎಲ್ಲಿಯವರೆಗೆ ಮನುಷ್ಯ ಪ್ರಯತ್ನ ಸಾಧ್ಯವೋ ಅಷ್ಟೆಲ್ಲ ಪ್ರಯತ್ನ ಮಾಡೋಣ. ಈ

---

* ಅದೇ, ಪುಟಗಳು ೧೩೪೦–೪೫

ಸಮಿತಿಯ ಅನೇಕ ಸದಸ್ಯರು ಒಂದು ರೀತಿಯ ಒಪ್ಪಂದಕ್ಕೆ ಬರಲು ಸಾಧ್ಯವಿದೆ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ.

ಈ ಮಾತುಗಳೊಂದಿಗೆ ನನ್ನ ಸೂಚನೆಯನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ. ಈಗ ನೀವು ಗೊತ್ತುಪಡಿಸುವ ದಿನದವರೆಗೆ ಈ ಸೂಚನೆಯ ಪರಿಶೀಲನೆಯನ್ನು ಮುಂದೂಡೋಣ.

ಹೆಚ್. ಹೆಚ್. ದಿ ಆಗಾಖಾನ್: ಈ ಸೂಚನೆಯನ್ನು ನಾನು ಸಂತೋಷದಿಂದ ಅನುಮೋದಿಸುತ್ತೇನೆ.

ಸರ್ದಾರ್ ಉಜ್ವಲ್ ಸಿಂಗ್: ನಾನೂ ಈ ಸೂಚನೆಗೆ ನನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತೇನೆ ಮತ್ತು ಎರಡೂ ಕಡೆಯ ಸದ್ಭಾವನೆಯಿಂದ ನಾವು ಒಂದು ಇತ್ಯರ್ಥಕ್ಕೆ ಬರುವೆವೆಂಬ ಆಶಯದಲ್ಲಿ ನಾನು ಭಾಗಿಯಾಗಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಸಮಿತಿಯು ಪರಿಶೀಲಿಸಬೇಕಾಗಿರುವ ಸಮಸ್ಯೆಯ ಬಗ್ಗೆ ಯಾವುದೇ ಇತ್ಯರ್ಥಕ್ಕೆ ಬರುವ ದಿಶೆಯಲ್ಲಿ ಸರ್ವ ಪ್ರಯತ್ನವನ್ನೂ ಮಾಡುವ ಕಾರ್ಯದಲ್ಲಿ ಯಾವ ತೊಂದರೆ ಗಳನ್ನೂ ಉಂಟುಮಾಡಲು ನಾನು ಬಯಸುವಿದಿಲ್ಲ ಮತ್ತು ಮಹಾತ್ಮ ಗಾಂಧಿಯವರು ಸೂಚಿಸಿರುವ ವಿಧಾನದಿಂದ ಅಂತಹ ಇತ್ಯರ್ಥ ಸಾಧ್ಯವಾಗುವುದಾದರೆ ನನ್ನಿಂದ ಆ ಸೂಚನೆಗೆ ಯಾವುದೇ ವಿವಿಧ ಅಭ್ಯಂತರವಿರುವುದಿಲ್ಲ.

ಆದರೆ ನಿಮ್ನ ವರ್ಗದವರ ಪ್ರತಿನಿಧಿಯಾಗಿರುವ ನಾನು ಒಂದು ತೊಂದರೆಯನ್ನು ಎದುರಿಸುತ್ತಿದ್ದೇನೆ. ಸಮಿತಿಯ ಸಭೆಯನ್ನು ಮುಂದೂಡಿದ ಅವಧಿಯಲ್ಲಿ ಈ ಸಮಸ್ಯೆಯನ್ನು ಪರಿಶೀಲಿಸಲು ಯಾವ ವಿಧವಾದ ಸಮಿತಿಯ ರಚನೆಯನ್ನು ಮಹಾತ್ಮ ಗಾಂಧಿಯವರು ಸೂಚಿಸುತ್ತಾರೆಂಬುದು ನನಗೆ ಗೊತ್ತಾಗಲಿಲ್ಲ. ಆದರೆ, ಆ ಸಮಿತಿಯಲ್ಲಿ ನಿಮ್ನ ವರ್ಗದವರಿಗೆ ಪ್ರಾತಿನಿಧ್ಯವಿರುವುದೆಂದು ನಾನು ಭಾವಿಸುತ್ತೇನೆ.

ಶ್ರೀಯುತ ಗಾಂಧಿ: ನಿಸ್ಸಂದೇಹವಾಗಿ.

ಡಾ. ಬಿ. ಆರ್. ಅಂಬೇಡ್ಕರ್: ಧನ್ಯವಾದಗಳು. ಆದರೆ ಇಂದು ನಾನಿರುವ ಪರಿಸ್ಥಿತಿಯಲ್ಲಿ ನಾನಾಗಲೀ ನನ್ನ ಸಹೋದ್ಯೋಗಿಯಾಗಲೀ ಈ ಸೂಚಿತ ಸಮಿತಿಯಲ್ಲಿ ಕೆಲಸ ಮಾಡುವುದರಲ್ಲಿ ಏನಾದರೂ ಪ್ರಯೋಜನವಿದೆಯೇ ಎಂಬುದನ್ನು ನಾನರಿಯೆ. ಮತ್ತು ಇದಕ್ಕೆ ಕಾರಣವೆಂದರೆ ಮಹಾತ್ಮ ಗಾಂಧಿ ಯವರು ಪ್ರಥಮ ದಿವಸ ಫೆಡರಲ್ ಸ್ಟ್ರಕ್ಚರ್ ಸಮಿತಿಯಲ್ಲಿ ಮಾಡಿದ ಭಾಷಣದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ತಾವು ಮಹಮದೀಯರು ಮತ್ತು ಸಿಖ್ಖರ ಹೊರತು ಇತರ ಯಾವ ಕೋಮಿನವರಿಗೂ ರಾಜಕೀಯ ಮಾನ್ಯತೆ ನೀಡಲು ಸಿದ್ಧರಿಲ್ಲವೆಂದು ಹೇಳಿದುದು. ಅವರು ಆಂಗ್ಲೋ ಇಂಡಿಯನ್‌ರನ್ನು ನಿಮ್ನ ವರ್ಗದವರನ್ನು ಮತ್ತು ಕ್ರಿಶ್ಚಿಯನ್ನರನ್ನು ಮಾನ್ಯ ಮಾಡಲು ಸಿದ್ಧರಿರಲಿಲ್ಲ. ಒಂದು ವಾರದ ಹಿಂದೆ ನಾನು ಮಹಾತ್ಮ ಗಾಂಧಿಯವರನ್ನು ಭೆಟ್ಟಿಯಾಗಿ ಅವರೊಡನೆ ನಿಮ್ನ ವರ್ಗ ದವರ ಸಮಸ್ಯೆಯನ್ನು ಚರ್ಚಿಸುವ ಮತ್ತು ಇತರ ಅಲ್ಪಸಂಖ್ಯಾತರ ಸದಸ್ಯರಾದ ನಾವು ನಿನ್ನೆ ಅವರ ಕಚೇರಿಯಲ್ಲಿ ಅವರೊಡನೆ ಮಾತನಾಡುವ ಅವಕಾಶ ಪಡೆದ ಸುಸಂದರ್ಭದಲ್ಲಿ ಅವರು ತಾವು ಫೆಡರಲ್ ಸ್ಟ್ರಕ್ಚರ್ ಸಮಿತಿಯಲ್ಲಿ ತಳೆದ ನಿಲುವು ತಮ್ಮ ಸಂಪೂರ್ಣವಾದ ಮತ್ತು ಅತಿ ಜಾಗರೂಕತೆಯಿಂದ ತಳೆದ ನಿಲುವಾಗಿದೆ ಎಂದು ನಮಗೆ ತಿಳಿಸಿದುದಾಗಿ ನಾನು ಈ ಸಮಿತಿಯಲ್ಲಿ ಹೇಳಿದರೆ ಯಾವುದೇ ಶಿಷ್ಟಾ ಚಾರಕ್ಕೆ ಅಪಚಾರವೆಸಗುತ್ತಿಲ್ಲ ಎಂದು ನನಗನಿಸುತ್ತದೆ. ನಾನು ಹೇಳಬಯಸುವುದೇನೆಂದರೆ, ನಿಮ್ನ ವರ್ಗದವರನ್ನು ಭಾರತದ ಭಾವಿ ಸಂವಿಧಾನದಲ್ಲಿ ರಾಜಕೀಯ ಮಾನ್ಯತೆಗೆ ಅರ್ಹವಾದ ಸಮುದಾಯ ವೆಂದು ನನಗೆ ಮೊದಲೆ ಗೊತ್ತಾಗದಿದ್ದರೆ ಮಹಾತ್ಮ ಗಾಂಧಿಯವರು ಈ ವಿಷಯ ಪರಿಶೀಲನೆಗಾಗಿ

ಸೂಚಿಸಿರುವ ಸಮಿತಿಯನ್ನು ನಾನು ಸೇರುವುದರಿಂದ ಏನಾದರೂ ಪ್ರಯೋಜನವಿದೆಯೇ ಎಂಬುದು ನನಗೆ ತಿಳಿಯುತ್ತಿಲ್ಲ. ಆದ್ದರಿಂದ ಈ ಸಮಿತಿಯು ತನ್ನ ಕಾರ್ಯವನ್ನು ಆರಂಭಿಸುವಾಗ ಹೋದ ವರ್ಷ ಅಲ್ಪಸಂಖ್ಯಾತರ ಉಪಸಮಿತಿಯು ಭಾರತದ ಸಂವಿಧಾನದಲ್ಲಿ ಮಾನ್ಯ ಮಾಡಬೇಕೆಂದು ಶಿಫಾರಸು ಮಾಡಿದ ಎಲ್ಲಾ ಸಮುದಾಯಗಳೂ ಅದರಲ್ಲಿ ಸೇರ್ಪಡೆಯಾಗಬೇಕೆಂಬ ಗ್ರಹಿಕೆ ಹೊಂದದೇ ಹೋದರೆ, ನಾನು ಮನಃಪೂರ್ವಕವಾಗಿ ಈ ಮುಂದೂಡುವಿಕೆಯನ್ನು ಬೆಂಬಲಿಸಬಲ್ಲೆನೇ ಅಥವಾ ರಚಿಸಲಾಗುವ ಸಮಿತಿಗೂ ಸಂಪೂರ್ಣ ಸಹಕಾರ ನೀಡಬಲ್ಲೆನೇ ಎಂಬುದು ನನಗೆ ತಿಳಿಯದಾಗಿದೆ. ಈಗ ನಾನು ಸ್ಪಷ್ಟಪಡಿಸುವುದಿಷ್ಟೇ.

ಸರ್ ಹೆನ್ರಿ ಗಿಡ್ನೀ (ಆಂಗ್ಲೋ–ಇಂಡಿಯನ್): ನಾನು ಪ್ರತಿನಿಧಿಸುವ ಗೌರವ ಹೊಂದಿರುವ ಕೋಮಿನ ಪರವಾಗಿ, ನನ್ನ ಮಿತ್ರ ಡಾ. ಅಂಬೇಡ್ಕರರಿಗೆ ನನ್ನ ಸಂಪೂರ್ಣ ಸಹಮತ ವ್ಯಕ್ತಪಡಿಸುತ್ತೇನೆ. ನಾನೂ ಸಹ ಮನ್ನಣೆಗೆ ಅರ್ಹವಾದ ಒಂದು ಪ್ರತ್ಯೇಕ ಕೋಮು ಆಗಿ ಮಹಾತ್ಮ ಗಾಂಧಿಯವರಿಂದ ನಿರಾಕರಿಸಲ್ಪಟ್ಟ ನತದೃಷ್ಟ ಪರಿಸ್ಥಿತಿಯಲ್ಲಿದ್ದೇನೆ. ನಾನು ಹೇಳುವುದು ಸರಿಯಾಗಿರಲಿಕ್ಕಿಲ್ಲ. ಆದರೆ, ಈ ವಿಷಯದಲ್ಲಿ ನಾವು ನಿನ್ನೆ ಮಹಾತ್ಮ ಗಾಂಧಿಯವರನ್ನು ಭೇಟ್ಟಿಯಾದಾಗ, ಲಾಹೋರ್ ಕಾಂಗ್ರೆಸ್ ಠರಾವಿನ ಪ್ರಕಾರ, ಬಹುಮಟ್ಟಿಗೆ ಮಹಾತ್ಮ ಗಾಂಧಿಯವರ ಆಜ್ಞೆಯ ಮೇರೆಗೆ ಆಗಿದ್ದ ಮಹಮದೀಯರು ಮತ್ತು ಸಿಖ್ಖರು ಈ ಎರಡು ಕೋಮುಗಳನ್ನು ಮಾತ್ರ ಪರಂಪರಾಗತ ಮತ್ತು ಐತಿಹಾಸಿಕ ಆಧಾರದ ಮೇಲೆ ಮಾನ್ಯ ಮಾಡುವುದು ಸಾಧ್ಯ ಎಂದು ಹೇಳಲಾಗಿದೆಯಾದ್ದರಿಂದ ಗಾಂಧಿಯವರು ಮತ್ತು ಕಾಂಗ್ರೆಸ್ ನಮಗೆ ಮತ್ತು ಇತರ ಯಾವ ಕೋಮುಗಳಿಗೆ ಮನ್ನಣೆ ನೀಡಲು ಸಿದ್ಧವಿಲ್ಲ ಎಂಬ ಅವರ ನಿಲುವಿನ ಬಗ್ಗೆ ನಮಗೆ ಯಾವ ಸಂಶಯವೂ ಉಳಿಯಲಿಲ್ಲ. ನಾನು ತಪ್ಪು ಹೇಳುತ್ತಿದ್ದರೆ ಮಹಾತ್ಮ ಗಾಂಧಿಯವರು ನನ್ನನ್ನು ತಿದ್ದುವರೆಂದು ನನಗೆ ಭರವಸೆ ಇದೆ. ನನ್ನ ಕೋಮಿಗೂ ಅದೇ ಆಧಾರದ ಮೇಲೆ ಮನ್ನಣೆ ನೀಡಬೇಕೆಂದು ಕೋರುವುದು ಅಧಿಕಪ್ರಸಂಗಿತನ ಅಥವಾ ಅಪ್ರಸ್ತುತವೆನಿಸಬಹುದು. ಆದರೆ, ನಾನು ಮಹಾತ್ಮ ಗಾಂಧಿಯವರ ಈ ಸಮಿತಿ ನೇಮಕವಾಗುವ ಮುಂಚೆ, ಸ್ವಾಮಿ, ತಮ್ಮೆದುರಿನಲ್ಲಿ ಮತ್ತು ಮುಂದೂಡಿಕೆಯನ್ನು ಕೇಳುವ ಮೊದಲೇ ಈ ಸಭೆಯಲ್ಲಿ ಈ ಸಮಿತಿಯಿಂದ ಈಗಾಗಲೇ ಮನ್ನಣೆ ಪಡೆದಿರುವ ಇತರ ಕೋಮುಗಳ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಾಗುವುದೆಂದು ಸ್ಪಷ್ಟಗೊಳಿಸಬೇಕೆಂದು ಅವರನ್ನು ಕೇಳುತ್ತೇನೆ.

ರಾವ್ ಬಹದ್ದೂರ್ ಪನ್ನೀರಸೆಲ್ವಂ (ಭಾರತೀಯ ಕ್ರಿಶ್ಚಿಯನ್ನರು): ಡಾ. ಅಂಬೇಡ್ಕರರು ನೀಡಿರುವ ಹೇಳಿಕೆ ನನಗೆ ಹೊಸ ಸುದ್ದಿಯಾಗಿದೆ. ಮಹಾತ್ಮರವರು ನಮಗೆ ಯಾವ ಮನ್ನಣೆ ನೀಡುವುದಿಲ್ಲವೆಂಬ ಸಂಗತಿ ನನಗೆ ಇದುವರೆಗೂ ಗೊತ್ತಿರಲಿಲ್ಲ. ಅದು ನಿಜವಿದ್ದ ಪಕ್ಷದಲ್ಲಿ ನಮ್ಮ ಉಪಸ್ಥಿತಿ ಅನವಶ್ಯಕ ವೆನಿಸುವುದು. ಭವಿಷ್ಯದ ರಾಜಕೀಯದಲ್ಲಿ ನಮ್ಮ ಕೋಮಿಗೆ ಮನ್ನಣೆ ಕೊಡದೇ ರಚಿತವಾಗಲಿರುವ ಸಮಿತಿಯ ಕಲಾಪಗಳಲ್ಲಿ ಭಾಗವಹಿಸುವುದರಿಂದ ಯಾವ ಪ್ರಯೋಜನವೂ ಆಗಲಾರದು. ನಮ್ಮ ಸಮಸ್ಯೆಯನ್ನು ನಾನು ಡಾ. ಅಂಬೇಡ್ಕರ್ ಮತ್ತು ಸರ್ ಹೆನ್ರಿ ಗಿಡ್ನೀಯವರು ಪ್ರಸ್ತುತಪಡಿಸಿದ ರೀತಿಯಲ್ಲಿಯೇ ಮಂಡಿಸಬೇಕಾಗುವುದೆಂದು ನನಗನಿಸುತ್ತದೆ.

ಡಾ. ಮೂಂಜೆ: ಅಲ್ಪಸಂಖ್ಯಾತರಲ್ಲಿ ಮಹಾತ್ಮ ಗಾಂಧಿಯವರಿಂದ ಎರಡು ಕೋಮುಗಳು ಮಾತ್ರ ಮನ್ನಣೆ ಪಡೆಯಲಿದೆ ಎಂದು ಪತ್ರಿಕೆಗಳಲ್ಲಿ ಓದಿದಾಗ ನಾನು ಅದಕ್ಕೆ ಹೆಚ್ಚು ಮಹತ್ವ ಅಥವಾ ಅದನ್ನು ಅಷ್ಟು ಗಂಭೀರವಾಗಿ ಪರಿಗಣಿಸಲಿಲ್ಲ. ಬಹುಶಃ ಅದು ಸಮನ್ವಯ ಮತ್ತು ತಿಳುವಳಿಕೆಗೆ ಅನುವು ಮಾಡಿ ಕೊಡುವ ಮತ್ತು ತೊಂದರೆಗಳನ್ನು ನಿವಾರಿಸುವ ಒಂದು ಉಪಾಯ ಎಂದು ನಾನು ತಿಳಿದಿದ್ದೆ. ಆದರೆ

ಡಾ. ಅಂಬೇಡ್ಕರ್‌ರವರ ಮತ್ತು ಸರ್ ಹೆನ್ರಿ ಗಿಡ್ನಿರವರ ಭಾಷಣಗಳಿಂದ ಈ ಪ್ರಸ್ತಾಪವನ್ನು ಅವರು ಹೆಚ್ಚು ಗಂಭೀರವಾಗಿ ಪರಿಗಣಿಸಿದ್ದಾರೆಂದು ನನಗೆ ತಿಳಿದುಬಂದಿತು. ಆದ್ದರಿಂದ ನಾನು ಹಿಂದೂಗಳು ಕೂಡ ಪಂಜಾಬ್ ಮತ್ತು ಬಂಗಾಳ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತರಾಗಿರುವರೆಂಬ ಅಂಶವನ್ನು ಈ ಸಮಿತಿಯ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ಅವರೂ ಸಹ ತಮ್ಮ ಹಿತರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಈ ಒಂದು ಸಣ್ಣ ವಿವರಣೆಯೊಂದಿಗೆ ಈ ಸಮಸ್ಯೆಯ ಪರಿಶೀಲನೆಗಾಗಿ ಈ ಸಮಿತಿಯ ಸಭೆಯನ್ನು ಮುಂದೂಡುವ ಸೂಚನೆಗೆ ನನ್ನ ವಿರೋಧವಿಲ್ಲ ಎಂದು ಹೇಳಬಯಸುತ್ತೇನೆ.

ಸರ್ ಮುಹಮದ್ ಷಫಿ: ಮಹಾತ್ಮ ಗಾಂಧಿಯವರು ಮಾಡಿರುವ ಸೂಚನೆಯ ಬಗ್ಗೆ ನನ್ನ ಕೆಲವು ಮಿತ್ರರಲ್ಲಿ ತಪ್ಪು ಅಭಿಪ್ರಾಯ ಉಂಟಾಗಿದೆ ಎಂದು ನನಗನಿಸುತ್ತದೆ. ನಾನು ಆ ಸೂಚನೆಯನ್ನು ಅರ್ಥ ಮಾಡಿಕೊಂಡಿರುವ ಪ್ರಕಾರ, ಮಹಾತ್ಮ ಗಾಂಧಿಯವರು ಈ ಸಮಿತಿಯ ಒಂದು ಉಪ ಸಮಿತಿಯನ್ನು ನೇಮಿಸಲು ಕೇಳುತ್ತಿಲ್ಲ ಮತ್ತು ಸಾಮಾನ್ಯ ಅರ್ಥದಲ್ಲಿ ಕೂಡ ಒಂದು ಸಮಿತಿಯ ನೇಮಕವನ್ನು ಅವರು ಕೇಳುತ್ತಿಲ್ಲ. ಉದ್ದೇಶ ಇಷ್ಟೆ. ಈ ಇಡೀ ಸಮಿತಿಯಲ್ಲಿರುವ ನಿಮ್ಮ ವರ್ಗದವರು ಮತ್ತು ಆಂಗ್ಲೋ–ಇಂಡಿಯನ್ ಕೋಮೂ ಸೇರಿದಂತೆ ಪ್ರತಿಯೊಂದು ಕೋಮಿನವರೂ ಕೆಲವು ಪ್ರತಿನಿಧಿಗಳನ್ನು ಎಂದರೆ, ಪ್ರತಿಯೊಂದು ಕೋಮಿನಿಂದಲೂ ಒಬ್ಬರನ್ನು ಅಥವಾ ಇಬ್ಬರನ್ನು ಆರಿಸಬಹುದು. ಹೀಗೆ ಆರಿಸಲ್ಪಟ್ಟವರು ಒಟ್ಟಾಗಿ ಕೂಡಿ ವಿಚಾರ ವಿನಿಮಯದ ನಂತರ ಸರ್ವಸಮ್ಮತವಾದ ಯಾವುದಾದರೂ ಒಂದು ತೀರ್ಮಾನಕ್ಕೆ ಬರಲು ಸಾಧ್ಯವೇ ಎಂಬುದನ್ನು ಪರಿಗಣಿಸುವ ಮೂಲಕ ಈ ಅಲ್ಪಸಂಖ್ಯಾತರ ಸಮಿತಿಯ ಮೇಲಿರುವ ಭಾರವನ್ನು ತಗ್ಗಿಸುವುದು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು. ಅಂತಹ ಒಂದು ಗುರಿ ಸಾಧನೆ ಸಾಧ್ಯವಾಗುವುದಾದರೆ, ಭಾರತದ ಶಾಂತಿಯುತ ಪ್ರಗತಿಯನ್ನು ಬಯಸುವ ಪ್ರತಿಯೊಬ್ಬ ನಿಷ್ಠಾವಂತ ಹಿತಚಿಂತಕನೂ ಅಂತಹ ಒಂದು ಗುರಿ ಸಾಧನೆಗೆ ತನ್ನ ಬೆಂಬಲ ನೀಡುವನೆಂಬ ಭರವಸೆ ನನಗಿದೆ. ನನ್ನ ಮಿತ್ರ ಡಾ. ಅಂಬೇಡ್ಕರವರು ಎತ್ತಿರುವ ಆಕ್ಷೇಪಣೆ ಮಹಾತ್ಮ ಗಾಂಧಿಯವರು ಮಾಡಿರುವ ಮತ್ತು ಹಿಸ್ ಹೈನೆಸ್ ದಿ ಆಗಾಖಾನ್‌ರವರು ಅನುಮೋದಿಸಿರುವ ಸೂಚನೆಯ ಸ್ವರೂಪದ ತಪ್ಪು ತಿಳುವಳಿಕೆಯಿಂದ ಮಾಡಿರುವುದಾಗಿದೆ. ನಾನು ನೀಡಲು ಮುಂದಾಗಿರುವ ಈ ವಿವರಣೆಯಿಂದ, ನಮ್ಮ ತಾಯ್ನಾಡಿನ ಶಾಂತಿಯುತ ಪ್ರಗತಿಯಲ್ಲಿ ಆಸಕ್ತಿ ಹೊಂದಿರುವ ನಾವೆಲ್ಲರೂ ಸ್ನೇಹಪೂರ್ಣ ವಾತಾವರಣದಲ್ಲಿ ಸಹಕಾರ ಭಾವನೆಯಿಂದ ವಿಚಾರ ವಿನಿಮಯ ಮಾಡಿಕೊಳ್ಳುವ ಅವಕಾಶ ನೀಡಲು ಈ ಸಮಿತಿಯ ಸಭೆಯನ್ನು ಒಂದು ವಾರದ ಮಟ್ಟಿಗೆ ಮುಂದೂಡುವ ಸರ್ವಾನುಮತದ ನಿರ್ಣಯ ತೆಗೆದುಕೊಂಡರೆ ನನಗೆ ಅತ್ಯಂತ ಸಂತೋಷವೆನಿಸುವುದು.

ಶ್ರೀಮತಿ ನಾಯ್ಡು: ಮಾನ್ಯ ಪ್ರಧಾನ ಮಂತ್ರಿಯವರೆ, ನಾನು ಯಾವುದೇ ಅಲ್ಪಸಂಖ್ಯಾತರನ್ನಾಗಲಿ ಅಥವಾ ವಿಶೇಷ ಹಿತಾಸಕ್ತಿಯನ್ನಾಗಲೀ ಪ್ರತಿನಿಧಿಸುತ್ತಿಲ್ಲವಾದ್ದರಿಂದ ಅಲ್ಪಸಂಖ್ಯಾತರಿಗೆ ಮತ್ತು ವಿಶೇಷ ಹಿತಾಸಕ್ತಿಗಳಿಗೆ ಯಾವ ಅಡ್ಡಿ ಆತಂಕಗಳನ್ನು ಒಡ್ಡಬಾರದು ಮತ್ತು ಸೂಚನೆಗಳನ್ನು ಪರಿಗಣಿಸುವ ಮುನ್ನವೇ ಅವುಗಳನ್ನು ವಿರೋಧಿಸಬಾರದೆಂದು ಸಂಪೂರ್ಣ ನಿರಾಸಕ್ತಿ ಮತ್ತು ನಿರ್ಲಿಪ್ತತೆಯಿಂದ ಮನವಿ ಮಾಡುತ್ತೇನೆ. ಸ್ವಾಮಿ, ತಾವು ನಿನ್ನೆ ನಮ್ಮ ಆತ್ಮಗೌರವಕ್ಕನುಗುಣವಾಗಿ ನಮ್ಮ ಆಂತರಿಕ ವಿಷಯಗಳನ್ನು ಹೊರಗಿನವರ ಹಸ್ತಕ್ಷೇಪ ಮತ್ತು ತೀರ್ಮಾನಕ್ಕೊಳಪಡಿಸದೆ ನಾವೇ ಬಗೆಹರಿಸಿಕೊಳ್ಳುವ ಕರ್ತವ್ಯಕ್ಕನುಗುಣವಾಗಿ ತಾವು ನಮ್ಮಲ್ಲಿ ಯಾವುದಾದರೂ ಆಂತರಿಕ ವಿವಾದಗಳಿದ್ದ ಪಕ್ಷದಲ್ಲಿ ಅವುಗಳನ್ನು ನಾವೇ ಬಗೆಹರಿಸಿಕೊಂಡು ನಮ್ಮಲ್ಲಿ ಮಾಡಿಕೊಂಡ ರಾಜಿ ಸೂತ್ರವನ್ನು, ಅಂತಹ ರಾಜಿ ಅವಶ್ಯಕವೆನಿಸಿದರೆ,

ಅದನ್ನು ತಮಗೆ ತಿಳಿಯಪಡಿಸುವ ಅವಕಾಶ ಕೋರಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅಂತಹ ಸೌಹಾರ್ದಯುತ ಪರಿಣಾಮದ ದೃಷ್ಟಿಯಿಂದಲೇ ಮಹಾತ್ಮ ಗಾಂಧಿಯವರು ಈ ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ಯಾವುದೇ ಅಲ್ಪಸಂಖ್ಯಾತ ಕೋಮು, ಅದು ಎಷ್ಟೇ ಚಿಕ್ಕದಾಗಿರಲಿ, ಯಾವುದೇ ಭೀತಿ ಅಥವಾ ಆತಂಕ ಹೊಂದಬೇಕಾಗಿಲ್ಲ. ಪ್ರತಿಯೊಂದು ಅಲ್ಪಸಂಖ್ಯಾತ ಕೋಮು ಬಹುಸಂಖ್ಯಾತ ಕೋಮಿನಷ್ಟೇ ರಾಷ್ಟ್ರದ ಅಂಗವಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ತಾನು ಸೈನ್ಯ ಮತ್ತು ಹಣದ ಸಹಾಯವಿಲ್ಲದೇ ಒಂದು ಸ್ವತಂತ್ರ ರಾಷ್ಟ್ರವನ್ನು ಕಟ್ಟಿರುವೆನೆಂದು ಹೆಮ್ಮೆಪಡಬಹುದಾದ ಯುರೋಪಿನ ರಾಜತಂತ್ರಜ್ಞ ಹಾಗೂ ಮುತ್ಸದ್ಧಿಯೊಬ್ಬರ ಆದರ್ಶವನ್ನು ಅನುಕರಿಸುವುದಾಗಿ ನಾನು ಪಣತೊಡುತ್ತೇನೆ. ಎರಡು ವರ್ಷಗಳ ಹಿಂದೆ ಅವರು ನನಗೆ ಹೀಗೆ ಹೇಳಿದ್ದರು: "ತಾಯಿ, ನಿಮ್ಮ ಅಲ್ಪಸಂಖ್ಯಾತರನ್ನು ಸಂತೋಷದಿಂದಿಡಿ: ನಿಮ್ಮ ಅಲ್ಪಸಂಖ್ಯಾತರಲ್ಲಿ ಭದ್ರತೆ(ನೆಮ್ಮದಿ)ಯ ಭಾವನೆಯನ್ನುಂಟುಮಾಡದೆ ನೀವು ಒಂದು ರಾಷ್ಟ್ರವನ್ನು ಕಟ್ಟಲಾರಿರಿ." ನಾವು ಅಲ್ಪಸಂಖ್ಯಾತರಲ್ಲಿ ನೆಮ್ಮದಿಯ ಮತ್ತು ತಾವು ರಾಷ್ಟ್ರದ ಅವಿಭಾಜ್ಯ ಅಂಗ ಎಂಬ ಭಾವನೆಯನ್ನುಂಟು ಮಾಡುವುದಕ್ಕಾಗಿಯೇ ಒಂದು ಬಹುಸಂಖ್ಯಾತ ಕೋಮು ಮಹಾತ್ಮ ಗಾಂಧಿಯವರ ಮುಖಾಂತರ ಮತ್ತು ನಾನು ಹೀಗೆ ಹೇಳಬಹುದಾದರೆ, ಒಂದು ಅಲ್ಪಸಂಖ್ಯಾತ ಕೋಮು ಹಿಸ್ ಹೈನೆಸ್ ದಿ ಆಗಾಖಾನರ ಮುಖಾಂತರ ನಮ್ಮ ಆಂತರಿಕ ವಿವಾದಗಳನ್ನು ಅವುಗಳೊಂದಿಗೆ ಯಾವುದೇ ಸಂಬಂಧವನ್ನೂ ಹೊಂದಿರುವವರೆದುರಿಗೆ ತರದೇ ಅವುಗಳನ್ನು ನಾವೇ ನಮ್ಮೊಳಗೆ ಸಮಾನ ನ್ಯಾಯ, ಉದಾತ್ತತೆ ಮತ್ತು ನ್ಯಾಯಯುತವಾಗಿ, ಸ್ವಾರ್ಥರಹಿತವಾಗಿ ನಮ್ಮ ಮನೆಯಲ್ಲಿರುವ ಭಿನ್ನಾಭಿಪ್ರಾಯಗಳು ಹೊರಗಿನವರಿಗೆ ಗೊತ್ತಾಗದ ರೀತಿಯಲ್ಲಿ, ಆತ್ಮಗೌರವದ ಭಾವನೆಯಿಂದ ನಮ್ಮಲ್ಲಿಯೇ ನಿವಾರಿಸಿಕೊಳ್ಳೋಣ ಎಂದು ಮನವಿ ಮಾಡಿದಂತಿದೆ. ಪ್ರಧಾನಮಂತ್ರಿಯವರೆ, ಇದೇ ನನ್ನ ಆಗ್ರಹಪೂರ್ವಕ ಮನವಿ. ಇಲ್ಲಿ ಉಪಸ್ಥಿತರಿರುವ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು ಇದನ್ನು ಸ್ವೀಕರಿಸುವರೆಂದು ನಾನು ಆಶಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನನ್ನ ನಿಲುವನ್ನು ಇನ್ನೂ ಸ್ಪಷ್ಟಗೊಳಿಸಬಯಸುತ್ತೇನೆ. ನನ್ನ ಹೇಳಿಕೆಯ ಬಗ್ಗೆ ಒಂದು ರೀತಿಯ ತಪ್ಪು ತಿಳುವಳಿಕೆಯುಂಟಾಗಿದೆಯೆಂದು ನನಗನಿಸುತ್ತದೆ. ನಾನು ಸಭೆಯ ಮುಂದೂಡುವಿಕೆಯನ್ನು ವಿರೋಧಿಸುತ್ತಿಲ್ಲ; ಮತ್ತು ಈ ಪ್ರಶ್ನೆಯನ್ನು ಪರಿಶೀಲಿಸಲು ನೇಮಕಗೊಳ್ಳಬಹುದಾದ ಯಾವುದೇ ಸಮಿತಿಯಲ್ಲಿ ಕೆಲಸ ಮಾಡುವುದಕ್ಕೂ ನನ್ನ ಅಭ್ಯಂತರವಿಲ್ಲ; ನನಗೆ ಅಂತಹ ಅವಕಾಶ ಕೊಟ್ಟಿದ್ದೇ ಆದರೆ, ಅಂತಹ ಸಮಿತಿಯನ್ನು ಪ್ರವೇಶಿಸುವ ಮುಂಚೆ ನಾನು ತಿಳಿಯಬಯಸುವುದೇನೆಂದರೆ, ಈ ಸಮಿತಿಯು ಪರಿಶೀಲಿಸಬೇಕಾದ ವಿಷಯವೇನು? ಅದು ಮಹಮದೀಯರು ಮತ್ತು ಹಿಂದೂಗಳ ಪರಸ್ಪರ ಸಂಬಂಧದ ಪ್ರಶ್ನೆಯನ್ನು ಮಾತ್ರ ಪರಿಶೀಲಿಸುವುದೇ? ಅದು ಮಹಮದೀಯರು ಮತ್ತು ಪಂಜಾಬಿನ ಸಿಕ್ಕರ ಪರಸ್ಪರ ಸಂಬಂಧದ ಪ್ರಶ್ನೆಯನ್ನು ಪರಿಶೀಲಿಸುವುದೇ? ಅಥವಾ ಅದು ಸಿಕ್ಕರು ಮತ್ತು ಹಿಂದೂಗಳ ಪರಸ್ಪರ ಸಂಬಂಧದ ಪ್ರಶ್ನೆಯನ್ನು ಪರಿಶೀಲಿಸುವುದೇ? ಅದು ಕ್ರಿಶ್ಚಿಯನ್ನರು, ಆಂಗ್ಲೋ–ಇಂಡಿಯನ್ನರು ಮತ್ತು ನಿಮ್ನವರ್ಗಗಳ ಪ್ರಶ್ನೆಯನ್ನು ಪರಿಶೀಲಿಸುವುದೇ?

ಈ ಸಮಿತಿ ತನ್ನ ಕಾರ್ಯವನ್ನು ಆರಂಭಿಸುವ ಮೊದಲೇ ನಾವು ಈ ಸಮಿತಿ ಹಿಂದೂಗಳೂ ಮತ್ತು ಮಹಮದೀಯರ, ಹಿಂದುಗಳ ಮತ್ತು ಸಿಖ್ಖರ ಪ್ರಶ್ನೆಗಳನ್ನು ಮಾತ್ರ ಪರಿಶೀಲಿಸದೆ, ನಿಮ್ನ ವರ್ಗದವರ, ಆಂಗ್ಲೋ–ಇಂಡಿಯನ್ನರ ಮತ್ತು ಕ್ರಿಶ್ಚಿಯನ್ನರ ವಿಷಯವನ್ನು ಪರಿಶೀಲಿಸುವ ಜವಾಬ್ದಾರಿ ಹೊರುವುದೇ ಎಂದು ತಿಳಿದುಕೊಳ್ಳಬೇಕಾಗಿದೆ. ಅದು ಅಂತಹ ಜವಾಬ್ದಾರಿ ಹೊರುವುದಾದರೆ ನಾನು ಯಾವ

ವಿರೋಧವನ್ನೊಡ್ಡದೆ ಈ ನಿಲುವಳಿ ಸೂಚನೆಯ ಅಂಗೀಕಾರಕ್ಕೆ ಒಪ್ಪುತ್ತೇನೆ. ಆದರೆ ನಾನು ಒತ್ತಾಯ ಪೂರ್ವಕವಾಗಿ ಹೇಳಬಯಸುವುದೇನೆಂದರೆ, ಈ ಮಧ್ಯಂತರ ಅವಧಿಯನ್ನು ಹಿಂದು–ಮುಸಲ್ಮಾನ್ ಮತ್ತು ಹಿಂದು–ಸಿಖ್ ಪ್ರಶ್ನೆಯನ್ನು ಬಗೆಹರಿಸುವ ಉದ್ದೇಶಕ್ಕಾಗಿ ಬಳಸುವುದೇ ಆದರೆ ಈ ಸಮಿತಿಯು ಈ ಸಮಸ್ಯೆಯಲ್ಲಿ ಇತರರು ಕೈಹಾಕುವುದಕ್ಕಿಂತ ಮುಂಚೆ ತಾನೇ ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀಯುತ ಗಾಂಧಿ: ಪ್ರಧಾನಮಂತ್ರಿಯವರೆ ಮತ್ತು ಸ್ನೇಹಿತರೆ, ನಾವು ಕೆಲವರು ಕೈಗೊಂಡಿರುವ ಕಾರ್ಯದ ಸ್ವರೂಪ ಮತ್ತು ವ್ಯಾಪ್ತಿಯ ಬಗ್ಗೆ ತಪ್ಪು ತಿಳುವಳಿಕೆಯಾಗಿದೆ ಎಂದು ನನಗೆ ತೋರುತ್ತಿದೆ. ಡಾ. ಅಂಬೇಡ್ಕರ್, ಕರ್ನಲ್ ಗಿಡ್ನೇ ಮತ್ತು ಇತರ ಮಿತ್ರರು ಭವಿಷ್ಯದಲ್ಲಿ ಏನಾಗುವುದೆಂಬುದರ ಬಗ್ಗೆ ಅನವಶ್ಯಕವಾಗಿ ಆತಂಕಕ್ಕೊಳಗಾಗಿದ್ದಾರೆ. ಭಾರತದಲ್ಲಿ ಯಾವುದೇ ಒಂದು ವರ್ಗ ಅಥವಾ ಹಿತಾಸಕ್ತಿ ಅಷ್ಟೇ ಏಕೆ ಯಾವುದೇ ವ್ಯಕ್ತಿಗೂ ರಾಜಕೀಯ ಸ್ಥಾನವನ್ನು ನಿರಾಕರಿಸಲು ನಾನು ಯಾರು? ಕಾಂಗ್ರೆಸ್‌ನ ಪ್ರತಿನಿಧಿಯಾಗಿ ನಾನು ಯಾವುದೇ ರಾಷ್ಟ್ರೀಯ ಹಿತಾಸಕ್ತಿಯ ಬಲಿದಾನ ಮಾಡಿದ್ದೇ ಆದರೆ, ಕಾಂಗ್ರೆಸ್ ನನ್ನಲ್ಲಿಟ್ಟಿರುವ ವಿಶ್ವಾಸಕ್ಕೆ ದ್ರೋಹದ ಅಪರಾಧವೆಸಗಿದಂತಾಗುತ್ತದೆ. ಈ ವಿಷಯದಲ್ಲಿ ನಾನು ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ. ಮತ್ತು ನಾನು ಆ ಅಭಿಪ್ರಾಯಕ್ಕೆ ಬದ್ಧನಾಗಿದ್ದೇನೆ. ಪ್ರತಿಯೊಂದು ಹಿತಾ ಸಕ್ತಿಗೂ ರಕ್ಷಣೆಯ ಭರವಸೆ ನೀಡುವ ಅನೇಕ ಮಾರ್ಗಗಳಿವೆ. ಅಂತಹ ಒಂದು ಯೋಜನೆಯನ್ನು ರೂಪಿಸುವುದು ಈ ದಿಶೆಯಲ್ಲಿ ಒಟ್ಟಾಗಿ ಕೆಲಸ ಮಾಡುವ ನಾವೆಲ್ಲರೂ ಮಾಡಬೇಕಾದ ಪ್ರಯತ್ನವಾಗಿದೆ. ಅತ್ಯಂತ ಅನೌಪಚಾರಿಕದ ಈ ಸಮ್ಮೇಳನ ಅಥವಾ ಸಭೆಯ ಸದಸ್ಯರೆದುರು ತಮ್ಮ ಅಭಿಪ್ರಾಯಗಳನ್ನು ಒತ್ತಾಯಪೂರ್ವಕವಾಗಿ ತಿಳಿಸಲು ಯಾರಿಗೂ ಅಡೆತಡೆಗಳಿರುವುದಿಲ್ಲ. ನಾವು ಅದನ್ನು ಸಮಿತಿ ಎಂದು ಕರೆಯಬೇಕಾಗಿಲ್ಲ. ಯಾವುದೇ ಸಮಿತಿಯನ್ನು ನೇಮಕ ಮಾಡುವುದಕ್ಕಾಗಲೀ ಅಥವಾ ಸಭೆಯ ಕರೆಯ ಲಿಕ್ಕಾಗಲಿ ನನಗೆ ಯಾವುದೇ ಅಧಿಕಾರವೂ ಇಲ್ಲ. ನಾನು ಒಬ್ಬ ನಮ್ರ ಶಾಂತಿದೂತನಾಗಿ ಮಾತ್ರ ಕೆಲಸ ಮಾಡಬಲ್ಲೆ. ಮತ್ತು ವಿವಿಧ ಹಿತಾಸಕ್ತಿಗಳ ಹಾಗೂ ಪಂಗಡಗಳ ಪ್ರತಿನಿಧಿಗಳನ್ನು ಒಂದು ಕಡೆ ಕೂಡಿಸಿ ಅವರು ಒಂದು ಕಡೆ ಸೇರಿದಾಗ ಮನಬಿಚ್ಚಿ ಮಾತನಾಡಬಲ್ಲರೇ ಎಂದು ಕಂಡುಕೊಳ್ಳುವ ಮತ್ತು ನಾವು ಇಂದು ಎದುರಿಸುತ್ತಿರುವ ತಪ್ಪು ತಿಳುವಳಿಕೆಗಳನ್ನು ನಿವಾರಿಸಿ, ನಮ್ಮೆದುರಿಗಿರುವ ಅಸ್ಪಷ್ಟ ಗುರಿ ಸಾಧನೆಯ ಮಾರ್ಗವನ್ನು ಸುಗಮಗೊಳಿಸುವುದು ಇಂದು ಸಾಧ್ಯವಾಗುವುದಿಲ್ಲವೇ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾತ್ರ ನಾನು ಮಾಡಬಲ್ಲೆ.

ಆದ್ದರಿಂದ ಯಾರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಲೀ ಅಥವಾ ಅದಕ್ಕೆ ಅಂಟಿಕೊಳ್ಳುವುದಕ್ಕಾಗಲೀ ಭಯಪಡಬೇಕಾಗಿಲ್ಲ. ನನ್ನ ಅಭಿಪ್ರಾಯ ಇತರ ಪ್ರತಿಯೊಬ್ಬರ ಅಭಿಪ್ರಾಯ ದೊಂದಿಗೆ ಸಮಾನ ಸ್ಥಾನದಲ್ಲಿದೆ. ನನ್ನ ಅಭಿಪ್ರಾಯಕ್ಕೆ ಹೆಚ್ಚಿನ ತೂಕ ಅಥವಾ ಮನ್ನಣೆ ಇರುವುದಿಲ್ಲ. ಇತರರ ಅಭಿಪ್ರಾಯದ ವಿರುದ್ಧ ನನ್ನ ಅಭಿಪ್ರಾಯವನ್ನೇ ಸಾಧಿಸಿಕೊಳ್ಳುವ ಅಧಿಕಾರ ನನಗಿಲ್ಲ. ರಾಷ್ಟ್ರದ ಹಿತದೃಷ್ಟಿಯಿಂದ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದೇನೆ. ಮತ್ತು ಸುಸಂದರ್ಭ ಒದಗಿದಾಗಲೆಲ್ಲಾ ನಾನು ಅವುಗಳನ್ನು ವ್ಯಕ್ತಪಡಿಸುತ್ತೇನೆ. ನನ್ನ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದು ನಿಮಗೆ ಬಿಟ್ಟ ವಿಷಯ. ಆದ್ದರಿಂದ ದಯವಿಟ್ಟು ನಿಮ್ಮ ಮನಸ್ಸಿನಿಂದ, ಪ್ರತಿಯೊಬ್ಬರ ಮನಸ್ಸಿನಿಂದ, ನಾನು ಭಾಗವಹಿಸುತ್ತಿರುವ ಯಾವುದೇ ಸಮ್ಮೇಳನ ಅಥವಾ ಅನೌಪಚಾರಿಕ ಸಭೆಗಳಲ್ಲಿ ಅಭಿಪ್ರಾಯಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುವುದು ಅಥವಾ ತಳ್ಳಿಹಾಕಲಾಗುವುದೆಂಬ ಭೀತಿಯನ್ನು ತೆಗೆದುಹಾಕಿರಿ.

ಆದರೆ, ಬಿಗುವಿನ ಧೋರಣೆಯಿಂದ ಈ ಮೇಜಿನ ಸುತ್ತ ಕೂಡುವುದಕ್ಕಿಂತ ಪರಸ್ಪರ ಸಮೀಪ ಬರಲು ಇದು ಒಂದು ಮಾರ್ಗ ಎಂದು ನಿಮಗನಿಸಿದ್ದೇ ಆದರೆ, ನೀವು ಈ ನಿಲುವಳಿ ಸೂಚನೆಯನ್ನು ಪಾಸು ಮಾಡುವಿರಲ್ಲದೆ, ನಾನು ಈ ಸಂಬಂಧವಾಗಿ ಮಾಡಿರುವ ಅನೌಪಚಾರಿಕ ಸಭೆಗಳ ಸೂಚನೆಗೆ ನಿಮ್ಮ ಸಂಪೂರ್ಣ ಸಹಕಾರವನ್ನು ಪುನಃಪೂರ್ವಕ ನೀಡುವಿರಾಗಿ ಆಶಿಸುತ್ತೇನೆ.

ಸರ್ ಹ್ಯೂಬರ್ಟ್ ಕಾರ್: ಮಾನ್ಯ ಪ್ರಧಾನ ಮಂತ್ರಿಯವರೆ, ಇಲ್ಲಿ ನನ್ನ ಕೋಮಿನ ಉಲ್ಲೇಖವೇ ಇಲ್ಲ. ಅದು ಒಂದು ಚಿಕ್ಕ ಮೋಮು. ಆದರೆ, ನಿಲುವಳಿ ಸೂಚನೆಯನ್ನು ನಾವು ಸ್ವಾಗತಿಸುತ್ತೇವೆ. ಅಲ್ಲದೇ ಈ ಸಮಸ್ಯೆಯನ್ನು ಬಗೆಹರಿಸಲು ನಾವೆಲ್ಲರೂ ಆಸಕ್ತಿ ಹೊಂದಿರುವ ಇತರ ಪ್ರಶ್ನೆಗಳ ಅಂತಿಮ ಪರಿಶೀಲನೆಯ ಪೂರ್ವಭಾವಿಯಾಗಿ ಸೂಚಿಸಬಹುದಾದ ಯಾವುದೇ ವಿಧಾನಗಳನ್ನು ಸ್ವಾಗತಿಸುವುದಾಗಿ ನಾನು ಹೇಳಬಯಸುತ್ತೇನೆ.

ಡಾ. ದತ್ತ: ಈ ನಿಲುವಳಿ ಸೂಚನೆಯನ್ನು ನಾನು ಸ್ವಾಗತಿಸುತ್ತೇನೆ ಎಂದು ಹೇಳುತ್ತೇನೆ.

ಅಧ್ಯಕ್ಷ: ಹಾಗಾದರೆ ನಾನು ಅದನ್ನು ತಮ್ಮ ಮುಂದೆ ಇಡುವೆ. ಸ್ನೇಹಿತರೆ, ನಾನು ಈ ಸಮ್ಮೇಳನಗಳು, ಶ್ರೀಯುತ ಗಾಂಧಿ ಹೇಳಿದ ಹಾಗೆ ಅನೌಪಚಾರಿಕ ಸಮ್ಮೇಳನಗಳು, ಆದರೂ ಅವು ಅಮೂಲ್ಯ ಮತ್ತು ಫಲಪ್ರದವಾಗುವಂತೆ ಆಶಿಸಿ ಅವು ಕಾಲವಿಳಂಬ ಮಾಡದೆ ಇಂದಿನ ಮತ್ತು ಮುಂದಿನ ಸಭೆ ಸೇರುವ ಮಧ್ಯಂತರದಲ್ಲಿ ಜರುಗುವುವೆಂದು ಆಶಿಸುತ್ತಾ ಅದನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನೀವೆಲ್ಲರೂ ಈ ಸಮಯವನ್ನು ಈ ರೀತಿ ಉಪಯೋಗಿಸಲು ಪ್ರತಿಜ್ಞೆ ಮಾಡುವಿರಾಗಿ ಆಶಿಸುವೆ.

# ಒಂಭತ್ತನೆಯ ಅಧಿವೇಶನ
# ೮ನೆಯ ಅಕ್ಟೋಬರ್ ೧೯೩೧

* ಅಧ್ಯಕ್ಷ: ನಾವು ಕಳೆದ ಗುರುವಾರ ಸೇರಿದ್ದಾಗ ಒಂದು ಒಪ್ಪಂದಕ್ಕೆ ಬರುವ ಉದ್ದೇಶದಿಂದ ಅನೌಪಚಾರಿಕ ಮತ್ತು ಅನಧಿಕೃತ ಸಮಾಲೋಚನೆಗೆ ಅನುವು ಮಾಡಿಕೊಡುವುದಕ್ಕಾಗಿ ಸರ್ವಸಮ್ಮತಿ ಯಿಂದ ಈ ಸಭೆಯನ್ನು ಒಂದು ವಾರ ಮುಂದೂಡಿದ್ದೆವು. ಸಂಧಾನಗಳನ್ನು ವ್ಯವಸ್ಥೆ ಮಾಡಿದವರಿಂದ ವರದಿಯನ್ನು ಪಡೆದುಕೊಳ್ಳುವುದು ಪ್ರಾಯಶಃ ನಮ್ಮ ಮೊದಲನೆಯ ಕೆಲಸವಾಗಿದೆ. ಶ್ರೀಯುತ ಗಾಂಧಿ ಯವರು ಮೊದಲು ಮಾತನಾಡುವಂತೆ ಕೇಳಲೆ?

ಶ್ರೀಯುತ ಗಾಂಧಿ: ಪ್ರಧಾನ ಮಂತ್ರಿಯವರೆ ಮತ್ತು ಸ್ನೇಹಿತರೆ, ಕೋಮು ಸಮಸ್ಯೆಗೆ ವಿವಿಧ ಪಂಗಡಗಳೊಡನೆ ಮತ್ತು ಅವರಲ್ಲಿಯೇ ನಡೆದ ಅನೌಪಚಾರಿಕ ಸಂಭಾಷಣೆಗಳು ಪರಿಹಾರ ಕಂಡು ಹಿಡಿಯುವಲ್ಲಿ ವಿಫಲವಾಗಿದೆ ಎಂದು ನಾನು ಅತ್ಯಂತ ದುಃಖ ಮತ್ತು ದೈನ್ಯದಿಂದ ಪ್ರಕಟಿಸಬೇಕಾಗಿದೆ. ಪ್ರಧಾನಿಯವರೆ ಮತ್ತು ಸ್ನೇಹಿತರೆ, ತಮ್ಮ ಅಮೂಲ್ಯವಾದ ಒಂದು ವಾರವನ್ನು ವ್ಯರ್ಥಗೊಳಿಸಿದ್ದಕ್ಕಾಗಿ ಕ್ಷಮೆಯನ್ನು ಕೋರುತ್ತೇನೆ. ಇದನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತುಕೊಂಡಾಗ ಯಶ ಪಡೆಯುವ ಹೆಚ್ಚಿನ ಭರವಸೆಯನ್ನು ಹೊಂದಿರಲಿಲ್ಲ. ಅದರಲ್ಲಿಯೂ ಪರಿಹಾರವನ್ನು ಕಂಡುಕೊಳ್ಳುವ ದಿಶೆಯಲ್ಲಿ ನಾನು ಮಾಡದೆ ಬಿಟ್ಟ ಪ್ರಯತ್ನ ಯಾವುದೂ ಉಳಿದಿಲ್ಲ.

ಆದರೆ ಮಾತುಕತೆಗಳು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಿದರೆ ಪೂರ್ಣ ಸತ್ಯ ಹೇಳಿದಂತಾಗುವುದಿಲ್ಲ. ವೈಫಲ್ಯದ ಕಾರಣ ಭಾರತೀಯ ಪ್ರತಿನಿಧಿ ಮಂಡಲದ ರಚನೆಯಲ್ಲಿಯೇ ಅಡಗಿದೆ. ಯಾವ ಪಕ್ಷ ಅಥವಾ ಪಂಗಡಗಳನ್ನು ನಾವು ಪ್ರತಿನಿಧಿಸುತ್ತಿದ್ದೇವೆಂದು ತಿಳಿದುಕೊಂಡಿದ್ದೇವೆಯೋ ನಾವು ಅವುಗಳ ಚುನಾಯಿತ ಪ್ರತಿನಿಧಿಗಳಲ್ಲ. ನಾವು ಇಲ್ಲಿ ಸರಕಾರದಿಂದ ನಾಮಕರಣಗೊಂಡವರಾಗಿದ್ದೇವೆ. ಒಂದು ಒಮ್ಮತದ ನಿರ್ಣಯಮಾಡಲು ಯಾರ ಉಪಸ್ಥಿತಿ ಅವಶ್ಯವಾಗಿತ್ತೋ ಅವರು ಇದರಲ್ಲಿಲ್ಲ. ಮತ್ತು ಅಲ್ಪಸಂಖ್ಯಾತರ ಸಮಿತಿಯ ಸಭೆ ಕರೆಯಲು ಇದು ಯಾವ ರೀತಿಯಿಂದಲೂ ಸೂಕ್ತ ಸಮಯವಲ್ಲ ಎಂದು ಹೇಳಲು ನನಗೆ ಅವಕಾಶ ನೀಡುವಿರೆಂದು ಭಾವಿಸುವೆ. ನಮಗೆ ಏನು ದೊರೆಯಲಿದೆ ಎಂದು ತಿಳಿಯದೆ ಇರುವಾಗ ಅದರಲ್ಲಿ ವಾಸ್ತವಿಕತೆಯ ಕಲ್ಪನೆ ಇರಲು ಸಾಧ್ಯವಿಲ್ಲ. ನಮಗೆ ಬೇಕಾಗಿರುವುದು ನಮಗೆ ದೊರಕುವುದೆಂದು ನಿರ್ದಿಷ್ಟ ರೀತಿಯಲ್ಲಿ ನಮಗೆ ಗೊತ್ತಾಗಿದ್ದ ಪಕ್ಷದಲ್ಲಿ ಮತ್ತು ಅದನ್ನು ಪಡೆದುಕೊಳ್ಳುವುದು ಈ ಕೋಮು ವಿವಾದಕ್ಕೆ ಈ ಪ್ರತಿನಿಧಿ ಮಂಡಲವು ಪರಿಹಾರ ಕಂಡುಹಿಡಿಯುವ ಸಾಮರ್ಥ್ಯವನ್ನವಲಂಬಿಸಿದೆ ಎಂದು ಗೊತ್ತಾಗಿದ್ದ ಪಕ್ಷದಲ್ಲಿ ನಾವು ನಮ್ಮ ಈ ಪಾಪಕರ ಕಿತ್ತಾಟದಲ್ಲಿ ಅದನ್ನು

---

* ಪ್ರೋಸಿಡಿಂಗ್ಸ್ ಆಫ್ ದಿ ಫೆಡರ್ಲ ಸ್ಟ್ರಕ್ಚರ್ ಕಮಿಟಿ ಮತ್ತು ಮೈನಾರಿಟೀಸ್ ಕಮಿಟಿ, ಸಂಪುಟ ೧, ಪುಟಗಳು ೧೩೫೬–೫೮.

ಕಳೆದುಕೊಳ್ಳುವ ಅಥವಾ ತಿರಸ್ಕರಿಸುವ ಮುಂಚೆ ಐವತ್ತು ಸಲ ಯೋಚಿಸುತ್ತಿದ್ದೆವು. ಈ ಪರಿಹಾರ ಸ್ವರಾಜ್ಯ ಸಂವಿಧಾನದ ಮುಕುಟವಾಗಬಲ್ಲದೇ ಹೊರತು, ಅದರ ಬುನಾದಿಯಾಗಲಾರದು. ಏಕೆಂದರೆ ನಮ್ಮ ಭಿನ್ನಾಭಿಪ್ರಾಯಗಳು ಪರಕೀಯರ ಅಧಿಪತ್ಯದಿಂದ ಉದ್ಭವವಾಗಿಲ್ಲವಾದರೂ, ಅದರಿಂದ ಕ್ಲಿಷ್ಟವಾಗಿದೆ. ಕೋಮು ಭಿನ್ನಾಭಿಪ್ರಾಯಗಳ ಹಿಮಗಡ್ಡೆ ಸ್ವಾತಂತ್ರ್ಯ ಸೂರ್ಯನ ಶಾಖದಿಂದ ಕರಗಿಹೋಗುವುದೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ.

ಆದ್ದರಿಂದ ಈ ಅಲಸ್ಪಂಖ್ಯಾತರ ಸಮಿತಿಯನ್ನು ಅನಿರ್ದಿಷ್ಟ ಕಾಲ ಮುಂದೂಡಬೇಕೆಂದು ಮತ್ತು ಸಂವಿಧಾನದ ಮೂಲಾಂಶಗಳನ್ನು ಆದಷ್ಟು ಬೇಗ ನಿರೂಪಿಸಬೇಕೆಂದು ನಾನು ಸೂಚಿಸಬಯಸುತ್ತೇನೆ. ಏತನ್ಮಧ್ಯೆ ಕೋಮುವಾರು ಸಮಸ್ಯೆಗೆ ನಿಜವಾದ ಪರಿಹಾರ ಕಂಡುಹಿಡಿಯುವ ಕಾರ್ಯ ಮುಂದುವರಿಯ ತಕ್ಕದ್ದು; ಅದು ಸಂವಿಧಾನ ರಚಿಸುವ ನಮ್ಮ ಕಾರ್ಯವನ್ನು ಕುಂಠಿತಗೊಳಿಸಲು ಅಥವಾ ಆ ದಿಶೆಯಲ್ಲಿ ಪ್ರಗತಿಗೆ ಅದು ಅಡ್ಡಿಯಾಗಬಾರದು. ನಮ್ಮ ಗಮನವನ್ನು ಅದರಿಂದ ತಪ್ಪಿಸಿ ಸಂವಿಧಾನದ ಪ್ರಮುಖ ಭಾಗಗಳ ರಚನೆಯತ್ತ ಹರಿಸಬೇಕು.

ಕೊನೆಯದಾಗಿ, ಭಾರತ ರಾಷ್ಟ್ರೀಯ ಕಾಂಗ್ರೆಸನ್ನು ಪ್ರತಿನಿಧಿಸುತ್ತಿರುವ ಕಾರಣದಿಂದ ಮಾತ್ರ ನಾನು ಅದರ ನಿಲುವನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತಿರುವುದಾಗಿ ಹೇಳುತ್ತಿದೆ. ಅದರಲ್ಲಿಯೂ ಲಕ್ಷೋಪಲಕ್ಷ ಮೂಕ ಜನಾಂಗದಲ್ಲಿ ಸೇರಿರುವ ಅಸಂಖ್ಯಾತ ಅಸ್ಪೃಶ್ಯರು, ಯಾರು ನಿಮ್ನರಾಗಿರುವುದಕ್ಕಿಂತಲೂ ಕಡೆಯಾಗಿ ಹತ್ತಿಕ್ಕಲ್ಪಟ್ಟಿದ್ದಾರೆಯೋ ಅವರನ್ನೂ ಮತ್ತು ಹಿಂದುಳಿದ ಜನಾಂಗವೆಂದು ಪರಿಗಣಿಸಲ್ಪಟ್ಟ, ನತದೃಷ್ಟ ಮತ್ತು ಕಡೆಗಣಿಸಲಾದವರನ್ನೂ ಸಹ ಅದು ಪ್ರತಿನಿಧಿಸುತ್ತದೆ.

ನಾನು ಶಾಸನಸಭೆಗಳಲ್ಲಿ ಅಸ್ಪೃಶ್ಯರ ಪ್ರಾತಿನಿಧ್ಯಕ್ಕೆ ವಿರೋಧಿಯಾಗಿದ್ದೇನೆ ಎಂದು ಹೇಳಲಾಗಿದೆ ಎಂದು ತೋರುತ್ತದೆ. ಇದು ಸತ್ಯದ ವಿಪರ್ಯಾಸ. ನಾನು ಹೇಳಿರುವುದೇನೆಂದರೆ ಹಾಗೂ ನಾನು ಪುನರುಚ್ಚರಿಸುವುದೇನೆಂದರೆ ನಾನು ಅವರ ವಿಶೇಷ ಪ್ರಾತಿನಿಧ್ಯವನ್ನು ವಿರೋಧಿಸುತ್ತೇನೆ. ಅದು ಅವರಿಗೆ ಯಾವ ಹಿತವನ್ನೂ ಉಂಟು ಮಾಡಲಾರದೆಂದು ನನ್ನ ನಿಶ್ಚಿತ ಅಭಿಪ್ರಾಯ. ಅದು ಅವರಿಗೆ ಇನ್ನೂ ಹೆಚ್ಚಿನ ಕೆಡಕು ಮಾಡಬಹುದು. ಕಾಂಗ್ರೆಸ್ ವಯಸ್ಕ ಮತದಾನಕ್ಕೆ ಬದ್ಧವಾಗಿದೆ. ಆದ್ದರಿಂದ ಅವರಲ್ಲಿಯ ಲಕ್ಷೋಪ ಲಕ್ಷ ಜನರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬಹುದಾಗಿದೆ. ಅಸ್ಪೃಶ್ಯತೆ ತೀವ್ರಗತಿಯಲ್ಲಿ ಮಾಯವಾಗು ತ್ತಿರುವಾಗ ಇತರರು ಈ ಮತದಾರರನ್ನು ಬಹಿಷ್ಕರಿಸುವರೆಂಬುದನ್ನು ಊಹಿಸುವುದೂ ಅಸಾಧ್ಯ. ಆದರೆ ಶಾಸನ ಸಭೆಗಳಿಗೆ ಚುನಾಯಿತರಾಗುವುದಕ್ಕಿಂತಲೂ ಇವರಿಗೆ ಸಾಮಾಜಿಕ ಮತ್ತು ಧಾರ್ಮಿಕ ಕಿರುಕುಳ ದಿಂದ ರಕ್ಷಣೆಯ ಅವಶ್ಯಕತೆ ಇದೆ. ಕಾನೂನಿಗಿಂತಲೂ ಶಕ್ತಿಯುತವಾದ ಸಂಪ್ರದಾಯ, ಪ್ರತಿಯೊಬ್ಬ ವಿಚಾರವಂತ ಹಿಂದುವೂ ನಾಚಿಕೆಪಡಬೇಕಾದ ಅಧೋಗತಿಗೆ ಅವರನ್ನು ತಂದಿದೆ. ಇದರ ನಿವಾರಣೆಗೆ ಪ್ರತಿಯೊಬ್ಬ ಹಿಂದುವೂ ತಪಸ್ಸು ಮಾಡಬೇಕಾಗಿದೆ. ಉಚ್ಚ ವರ್ಗದವರೆಂದು ಕರೆದುಕೊಳ್ಳುತ್ತಿರುವ ಜನರು ನನ್ನ ಈ ದೇಶಬಾಂಧವರಿಗೆ ನೀಡುತ್ತಿರುವ ಹಿಂಸೆಯನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಿ ಅದಕ್ಕೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಲು ಅವಕಾಶ ಮಾಡುವಂತಹ ಕಟುವಾದ ಕಾನೂನನ್ನು ರಚಿಸಬೇಕೆಂದು ನಾನು ಪ್ರತಿಪಾದಿಸುತ್ತೇನೆ. ದೇವರ ದಯೆಯಿಂದ ಹಿಂದೂಗಳ ಸದಸದ್ವಿವೇಕ ಜಾಗೃತಗೊಂಡಿದೆ ಮತ್ತು ಅಸ್ಪೃಶ್ಯತೆ ಜೀವನದ ಒಂದು ಅವಶೇಷವಾಗಲಿದೆ.

ಡಾ. ಬಿ. ಆರ್. ಅಂಬೇಡ್ಕರ್: ಮಾನ್ಯ ಪ್ರಧಾನಿಯವರೆ, ನಿನ್ನೆ ರಾತ್ರಿ ನಾವು ಅನೌಪಚಾರಿಕ ಸಮಿತಿಯ ಸಭೆಯನ್ನು ಮುಗಿಸಿ ಹತಾಶ ಭಾವನೆಯಿಂದ ಹೊರಬಂದೆವಾದರೂ ಇಂದಿನ ಸಭೆಯಲ್ಲಿ

ಯಾರೂ ಉದ್ರೇಕಗೊಳಿಸುವಂತಹ ಯಾವುದೇ ಭಾಷಣ ಮಾಡಕೂಡದು ಅಥವಾ ಮಾತುಗಳನ್ನು ಆಡಬಾರದು ಎಂಬ ತಿಳುವಳಿಕೆಯಿಂದ ಹೊರಬಿದ್ದಿದ್ದೆವು. ಶ್ರೀಯುತ ಗಾಂಧಿ ಈ ಒಪ್ಪಂದವನ್ನು ಉಲ್ಲಂಘಿಸಿದ್ದಾರೆ ಎಂದು ಹೇಳಲು ಖೇದವೆನಿಸಿದೆ. ಕ್ಷಮಿಸಿ, ನನಗೆ ಮಾತನಾಡುವ ಅವಕಾಶ ಬೇಕು. ಅನೌಪಚಾರಿಕ ಸಮಿತಿಯ ವೈಫಲ್ಯಕ್ಕೆ ಅವರ ಪ್ರಕಾರ ಇರುವ ಕಾರಣಗಳನ್ನು ವಿವರಿಸುತ್ತಾ ಅವರು ತಮ್ಮ ಮಾತನ್ನು ಆರಂಭಿಸಿದರು. ಈಗ ಅದರ ವೈಫಲ್ಯ ಕುರಿತ ನನ್ನದೇ ಆದ ಕಾರಣಗಳನ್ನು ಹೇಳಬಯಸುವೆ. ಆದರೆ, ನಾನು ಈಗಲೇ ಅವುಗಳನ್ನು ಚರ್ಚಿಸಬಯಸುವುದಿಲ್ಲ. ಶ್ರೀಯುತ ಗಾಂಧಿಯವರ ಮಾತುಗಳನ್ನು ಕೇಳಿದ ನಂತರ ನನಗೆ ಖೇದ ಉಂಟು ಮಾಡಿದ ಸಂಗತಿ ಎಂದರೆ, ಅವರು ಅಲ್ಪಸಂಖ್ಯಾತರ ಸಮಿತಿಯನ್ನು ಅನಿರ್ದಿಷ್ಟ ಕಾಲ ಮುಂದೂಡಬೇಕೆಂಬ ತಮ್ಮ ಪ್ರಸ್ತಾಪ ಮಾಡುವುದನ್ನು ಬಿಟ್ಟು ಈ ಮೇಜಿನ ಸುತ್ತ ಕುಳಿತಿರುವ ವಿವಿಧ ಕೋಮುಗಳ ಪ್ರತಿನಿಧಿಗಳ ಬಗ್ಗೆ ದೋಷಾರೋಪಣೆ ಮಾಡಿದ್ದಾರೆ. ಈ ಪ್ರತಿನಿಧಿಗಳು ಸರಕಾರದಿಂದ ನಾಮಕರಣಗೊಂಡವರೆಂದು ಮತ್ತು ಇವರು ತಾವು ಪ್ರತಿನಿಧಿಸುತ್ತೇವೆಂದು ಹೇಳುತ್ತಿರುವ ತಮ್ಮ ಕೋಮುಗಳ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತಿಲ್ಲ ಎಂದು ಹೇಳಿದ್ದಾರೆ. ಆದರೆ, ನನ್ನ ಮಟ್ಟಿಗೆ ಹೇಳುವುದಾದರೆ, ಈ ಸಮ್ಮೇಳನಕ್ಕೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಅವಕಾಶವನ್ನು ನಿಮ್ನ ವರ್ಗದವರಿಗೆ ಕೊಟ್ಟಿದ್ದ ಪಕ್ಷದಲ್ಲಿಯೂ ಕೂಡ ನನಗೆ ಸ್ಥಾನ ದೊರಕುತ್ತಿತ್ತೆಂಬ ವಿಷಯದಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಆದ್ದರಿಂದ ಅವರು ನನ್ನನ್ನು ತಮ್ಮ ಪ್ರತಿನಿಧಿಯೆಂದು ಹೇಳಲಿ ಬಿಡಲಿ ನಾನು ಸಂಪೂರ್ಣವಾಗಿ ನನ್ನ ಕೋಮನ್ನು ಪ್ರತಿನಿಧಿಸುತ್ತೇನೆ. ಆ ಬಗ್ಗೆ ಯಾರೂ ತಪ್ಪು ಅಭಿಪ್ರಾಯ ಹೊಂದಿರಬೇಕಾಗಿಲ್ಲ.

ಕಾಂಗ್ರೆಸ್ ಯಾವಾಗಲೂ ನಿಮ್ನ ವರ್ಗದ ಪರವಾಗಿದೆಯೆಂದು ಮತ್ತು ನನಗಿಂತ ಅಥವಾ ನನ್ನ ಸಹೋದ್ಯೋಗಿಗಿಂತ ಹೆಚ್ಚಾಗಿ ಕಾಂಗ್ರೆಸ್ ನಿಮ್ನ ವರ್ಗದವರನ್ನು ಪ್ರತಿನಿಧಿಸುತ್ತಿದೆ ಎಂದು ಯಾವಾಗಲೂ ಅವರು ಹೇಳುತ್ತಾ ಬಂದಿದ್ದಾರೆ. ಈ ವಾದದ ಬಗ್ಗೆ ನಾನು ಹೇಳುವುದಿಷ್ಟೇ. ಯಾರ ಪರವಾಗಿ ಇಂತಹ ವಾದವನ್ನು ಮಂಡಿಸಲಾಗುತ್ತಿದೆಯೋ ಮತ್ತು ಮಂಡಿಸುತ್ತಿರುವರೋ ಆ ಜನರೇ ಅದನ್ನು ನಿರಾಕರಿಸುತ್ತಿದ್ದಾಗ್ಯೂ ಬೇಜವಾಬ್ದಾರಿಯುತ ಜನ ನೀಡುತ್ತಿರುವ ಅನೇಕ ಹೇಳಿಕೆಗಳಲ್ಲಿ ಇದೂ ಒಂದಾಗಿದೆ.

ಈಗ ತಾನೇ ನನಗೆ, ನಾನು ಎಂದೂ ಹೋಗಿರದ ಸ್ಥಳ ಮತ್ತು ನಾನು ಎಂದೂ ಭೆಟ್ಟಿಯಾಗಿರದ ವ್ಯಕ್ತಿಯೊಬ್ಬರಿಂದ ಒಂದು ತಂತಿ ಸಂದೇಶ ಬಂದಿದೆ. ಅದು ನನಗೆ ಗೊತ್ತಿರುವಂತೆ ಸಂಯುಕ್ತ ಪ್ರಾಂತ್ಯದಲ್ಲಿರುವ ಕುಮಾವ್‌ನ ಅಲ್‌ಮೋರಾ ಎಂಬ ಸ್ಥಳದ ನಿಮ್ನ ವರ್ಗಗಳವರ ಸಂಘದ ಅಧ್ಯಕ್ಷರಿಂದ ಬಂದಿದೆ. ಅದರಲ್ಲಿ ತಿಳಿಸಲಾಗಿರುವ ಠರಾವು ಹೀಗಿದೆ: "ಈ ಸಭೆಯು ದೇಶದ ಒಳಗೆ ಮತ್ತು ಹೊರಗಡೆ ನಡೆಸಲಾಗುತ್ತಿರುವ ಕಾಂಗ್ರೆಸ್ ಚಳವಳಿಯಲ್ಲಿ ಅವಿಶ್ವಾಸ ವ್ಯಕ್ತಪಡಿಸುತ್ತದೆ ಮತ್ತು ಕಾಂಗ್ರೆಸ್ ಕೆಲಸಗಾರರು ಅನುಸರಿಸುತ್ತಿರುವ ವಿಧಾನಗಳನ್ನು ಖಂಡಿಸುತ್ತದೆ." ಈ ಸಂದೇಶವನ್ನು ಪೂರ್ಣವಾಗಿ ಓದಲು ನಾನು ಬಯಸುವುದಿಲ್ಲ. ಆದರೆ, ನಾನು ಇಷ್ಟು ಮಾತ್ರ ಹೇಳಬಲ್ಲೆ (ಶ್ರೀ ಗಾಂಧಿಯವರು ತಮ್ಮ ಸ್ಥಾನವನ್ನು ಪರಿಶೀಲಿಸಿಕೊಂಡರೆ ಇದರ ಸತ್ಯಾಂಶ ಅವರಿಗೆ ಅರಿವಾಗುವುದೆಂದು ನನಗನಿಸಿದೆ) ಕಾಂಗ್ರೆಸ್‌ನಲ್ಲಿ ನಿಮ್ನ ವರ್ಗಗಳ ಬಗ್ಗೆ ಸಹಾನುಭೂತಿ ಹೊಂದಿರುವ ಕೆಲವರಿರಬಹುದಾದರೂ, ನಿಮ್ನ ವರ್ಗಗಳವರು ಕಾಂಗ್ರೆಸ್ಸಿನಲ್ಲಿಲ್ಲ. ಈ ವಾದವನ್ನು ನಾನು ಪುಷ್ಟೀಕರಿಸುತ್ತೇನೆ. ನಾನು ಈ ವಿವಾದಾತ್ಮಕ ಸಂಗತಿಗಳ ಪ್ರಸ್ತಾಪ ಮಾಡಬಯಸುವುದಿಲ್ಲ. ಅವು ಪ್ರಧಾನ ವಿಷಯಕ್ಕೆ ಸಂಬಂಧಿಸಿಲ್ಲ. ಶ್ರೀಯುತ ಗಾಂಧಿಯವರು ಮಾಡಿರುವ ಪ್ರಧಾನ ಪ್ರಸ್ತಾಪವೆಂದರೆ ಈ ಸಮಿತಿಯ ಸಭೆಯನ್ನು ಅನಿರ್ದಿಷ್ಟ ಕಾಲ ಮುಂದೂಡುವುದು. ಈ ಪ್ರಸ್ತಾಪದ

ಮೇಲೆ ಸರ್ ಮಹಮ್ಮದ್ ಷಫಿ ಅವರ ವಿಚಾರವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಾನು ಈ ಪ್ರಸ್ತಾಪಕ್ಕೆ ನನ್ನ ಒಪ್ಪಿಗೆ ಕೊಡಲಾರೆ. ನನಗೆ ತೋಚಿದಂತೆ ಎರಡು ಪರ್ಯಾಯ ಮಾರ್ಗಗಳು ಮಾತ್ರ ಇವೆ– ಈ ಅಲ್ಪಸಂಖ್ಯಾತರ ಸಮಿತಿಯು ಈ ಸಮಸ್ಯೆಯ ಪರಿಶೀಲನೆಯನ್ನು ಮುಂದುವರಿಸುತ್ತಾ, ಸಾಧ್ಯವಾದರೆ ಒಂದು ತೃಪ್ತಿಕರವಾದ ಪರಿಹಾರ ಕಂಡುಹಿಡಿಯಬೇಕು. ಅದು ಸಾಧ್ಯವಾಗದ ಪಕ್ಷದಲ್ಲಿ ಬ್ರಿಟಿಷ್ ಸರಕಾರವೇ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಕಾರ್ಯ ಕೈಗೊಳ್ಳಬೇಕು. ಇದನ್ನು ಬ್ರಿಟಿಷ್ ಸರಕಾರ ಹೊಂದಿರುವ ಜವಾಬ್ದಾರಿಯಷ್ಟು ಜವಾಬ್ದಾರಿಯ ಪ್ರಜ್ಞೆ ಹೊಂದಿರದ ಮೂರನೆಯವರ ಪಂಚಾಯತಿಗೆ ವಹಿಸಿ ಕೊಡುವುದನ್ನು ನಾವು ಒಪ್ಪಲಾರೆವು.

ಪ್ರಧಾನಮಂತ್ರಿಯವರೆ, ಒಂದು ವಿಷಯವನ್ನು ಸ್ಪಷ್ಟಗೊಳಿಸಲು ನನಗೆ ಅವಕಾಶ ಕೊಡಿ. ಬ್ರಿಟಿಷರು ಆಡಳಿತವನ್ನು ಭಾರತೀಯರಿಗೆ ಕೂಡಲೇ ಹಸ್ತಾಂತರ ಮಾಡಬೇಕೆಂದು ನಿಮ್ನ ವರ್ಗದವರು ಕಾತರರಾಗಿಲ್ಲ. ಅವರು ಅದಕ್ಕಾಗಿ ಬೊಬ್ಬೆ ಹಾಕುತ್ತಲೂ ಇಲ್ಲ ಮತ್ತು ಅದಕ್ಕಾಗಿ ಅವರು ಯಾವ ಚಳವಳಿಯನ್ನೂ ಆರಂಭಿಸಿಲ್ಲ. ಬ್ರಿಟಿಷರ ವಿರುದ್ಧ ಕೆಲವು ಕುಂದುಕೊರತೆಗಳೂ ಅವರಿಗಿದೆ. ಆ ಕುಂದುಕೊರತೆಗಳು ಅತ್ಯಂತ ಯಥಾರ್ಥವಾಗಿವೆ ಎಂಬ ನಮ್ಮ ಭಾವನೆಗಳನ್ನು ನಾನು ಈಗಾಗಲೇ ಸಾಕಷ್ಟು ಪ್ರಭಾವಯುತವಾಗಿ ವ್ಯಕ್ತಪಡಿಸಿರುವೆ. ಆದರೆ, ವಾಸ್ತವ ಸಂಗತಿ ಎಂದರೆ ನಿಮ್ನವರ್ಗದವರು ರಾಜಕೀಯ ಅಧಿಕಾರದ ಹಸ್ತಾಂತರಕ್ಕಾಗಿ ಕಾತರರಾಗಿಲ್ಲ. ಆದರೆ, ಈ ಸಂದರ್ಭದಲ್ಲಿ ಅಧಿಕಾರ ಹಸ್ತಾಂತರಕ್ಕಾಗಿ ದೇಶದಲ್ಲಿ ಒತ್ತಾಯಿಸುತ್ತಿರುವ ಶಕ್ತಿಗಳನ್ನು ಎದುರಿಸುವ ಶಕ್ತಿ ಬ್ರಿಟಿಷ್ ಸರಕಾರಕ್ಕೆ ಇಲ್ಲವಾದರೆ, ನಿಮ್ನವರ್ಗದವರೂ ಅವರು ಈಗಿರುವ ಸ್ಥಿತಿಯಲ್ಲಿ ಅದನ್ನು ಎದುರಿಸಲಾರರು ಎಂಬುದನ್ನು ನಾನು ಬಲ್ಲೆ. ಹಾಗಿದ್ದ ಪಕ್ಷದಲ್ಲಿ ನೀವು ಅಧಿಕಾರ ಹಸ್ತಾಂತರ ಮಾಡುವುದೇ ಆದರೆ, ಅದನ್ನು ಕೆಲವು ಕರಾರುಗಳೊಂದಿಗೆ ಮಾಡಬೇಕೆಂದು ನಾವು ಕೇಳುತ್ತೇವೆ. ಹಸ್ತಾಂತರವಾಗಲಿರುವ ಅಧಿಕಾರವು ಯಾವುದೇ ಒಂದು ವಿಶಿಷ್ಟ ಗುಂಪು ಅಥವಾ ಕೂಟದ ಕೈಗೆ ಅಥವಾ ಮುಸಲ್ಮಾನರ ಅಥವಾ ಹಿಂದೂಗಳ ಒಂದು ಗುಂಪಿನ ಕೈಸೇರದಂತೆ ವಿಧಿವಿಧಾನಗಳನ್ನು ರೂಪಿಸಬೇಕು. ಅಧಿಕಾರದಲ್ಲಿ ಎಲ್ಲ ಕೋಮು ಮತ್ತು ಸಮೂಹಗಳಿಗೆ ತಮ್ಮ (ಜನಸಂಖ್ಯೆಯ) ಪ್ರಮಾಣಕ್ಕನುಗುಣವಾಗಿ ಪಾಲು ಇರಬೇಕು. ಈ ದೃಷ್ಟಿಯಿಂದ ನಾನು ಫೆಡರಲ್ ಸ್ಟ್ರಕ್ಚರ್ ಸಮಿತಿಯ ಚರ್ಚೆಯಲ್ಲಿ ಹೇಗೆ ನಾನು ಭಾಗವಹಿಸಬಹುದೆಂಬುದು ನನಗೆ ತಿಳಿಯುತ್ತಿಲ್ಲ. ಆದರೆ, ನನಗೆ ನನ್ನ ಮತ್ತು ನನ್ನ ಕೋಮಿನ ನಿಲುವು ಚೆನ್ನಾಗಿ ಗೊತ್ತಿದೆ.

ಶ್ರೀಯುತ ಗಾಂಧಿ: ಅಸ್ಪೃಶ್ಯರೆಂದು ಕರೆಯಲಾಗುತ್ತಿರುವವರ ಬಗ್ಗೆ ಇನ್ನೊಂದು ಮಾತು. ಇತರ ಅಲ್ಪಸಂಖ್ಯಾತರು ಮಂಡಿಸಿರುವ ವಾದ ಮತ್ತು ಬೇಡಿಕೆಗಳನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ, ಅಸ್ಪೃಶ್ಯರ ಪರವಾಗಿ ಹೇಳಲಾದ ಅಂಶಗಳು ನನಗೆ ಎಲ್ಲಕ್ಕಿಂತಲೂ ಹೆಚ್ಚು ನಿರ್ದಯೆಯಿಂದ ಕೂಡಿದುದಾಗಿವೆ ಎನಿಸುತ್ತದೆ. ಅದು ನಿರಂತರ ಪ್ರತಿಬಂಧಕದ ಕುರುಹಾಗಲಿದೆ ಎಂಬುದೇ ಇದರ ಅರ್ಥ. ಭಾರತದ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕಾಗಿಯೂ ಕೂಡ ನಾನು ಅಸ್ಪೃಶ್ಯರ ಅತಿ ಮುಖ್ಯವಾದ ಹಿತಾಸಕ್ತಿಗಳನ್ನು ಬಲಿಕೊಡಲಾರೆ. ನಾನು ವೈಯಕ್ತಿಕವಾಗಿ ಅಸ್ಪೃಶ್ಯರ ವಿಶಾಲ ಸಮೂಹದ ಪ್ರತಿನಿಧಿಯಾಗಿದ್ದೇನೆಂದು ಹೇಳುತ್ತೇನೆ. ನಾನು ಇಲ್ಲಿ ಕೇವಲ ಕಾಂಗ್ರೆಸ್‌ನ ಪರವಾಗಿ ಮಾತನಾಡುತ್ತಿಲ್ಲ. ಆದರೆ ನನ್ನ ಪರವಾಗಿಯೂ ಮಾತನಾಡುತ್ತಿದ್ದೇನೆ ಮತ್ತು ಅಸ್ಪೃಶ್ಯರಲ್ಲಿ ಮತಗಣನೆ ನಡೆದದ್ದೇ ಆದರೆ ನಾನು ಅವರ ಮತಗಳನ್ನು ಪಡೆಯುವೆನಲ್ಲದೆ ಅದರಲ್ಲಿ ನಾನು ಎಲ್ಲರಿಗಿಂತಲೂ ಮೇಲೆ ಬರುತ್ತೇನೆ. ಪ್ರತ್ಯೇಕ ಚುನಾವಣಾ ವ್ಯವಸ್ಥೆ ಮತ್ತು ಪ್ರತ್ಯೇಕ ಮೀಸಲಾತಿ ಸನಾತನಿ ಹಿಂದೂಗಳು ನಾಚಿಕೆಪಡಬೇಕಾಗಿರುವಂತಹ ಈ ಪ್ರತಿಬಂಧಕಗಳನ್ನು

ನಿವಾರಿಸುವ ವಿಧಾನಗಳಲ್ಲ ಎಂದು ಅಸ್ಪೃಶ್ಯರಿಗೆ ತಿಳಿಸಿಕೊಡಲು ನಾನು ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೆ ಪ್ರವಾಸ ಕೈಗೊಳ್ಳುತ್ತೇನೆ.

ಇಂದು ಈ ಅಸ್ಪೃಶ್ಯತೆಯ ಕಳಂಕವನ್ನು ತೊಡೆದುಹಾಕಲು ಪ್ರತಿಜ್ಞೆಗೈದ ಹಿಂದೂ ಸುಧಾರಕರ ಒಂದು ತಂಡವಿದೆ ಎಂಬುದನ್ನು ಈ ಸಮಿತಿ ಮತ್ತು ಇಡೀ ಪ್ರಪಂಚ ತಿಳಿದುಕೊಳ್ಳಲಿ. ನಮಗೆ ನಮ್ಮ ದಾಖಲೆಗಳಲ್ಲಿ ಮತ್ತು ಜನಗಣತಿಯಲ್ಲಿ ಅಸ್ಪೃಶ್ಯರನ್ನು ಒಂದು ಪ್ರತ್ಯೇಕ ವರ್ಗವನ್ನಾಗಿ ವರ್ಗೀಕರಿಸುವುದು ಬೇಕಾಗಿಲ್ಲ. ಸಿಖ್ಖರು ಹಾಗೆಯೇ ಎಂದೆಂದಿಗೂ ಉಳಿಯಲಿ, ಅದೇ ರೀತಿ ಮಹಮದೀಯರು ಹಾಗೂ ಯೂರೋಪಿಯನ್ನರು ಶಾಶ್ವತವಾಗಿ ಉಳಿಯಲಿ, ಅಸ್ಪೃಶ್ಯರು ಸದಾ ಅಸ್ಪೃಶ್ಯರಾಗಿಯೇ ಉಳಿಯುವರೇ? ಅಸ್ಪೃಶ್ಯತೆ ಉಳಿಯುವುದಕ್ಕಿಂತ ಹಿಂದೂ ಧರ್ಮವೇ ಅಳಿಯಲಿ ಎಂದು ನಾನು ಬಯಸುತ್ತೇನೆ. ಆದ್ದರಿಂದ ಡಾ. ಅಂಬೇಡ್ಕರರ ಬಗ್ಗೆ ನನಗಿರುವ ಅಪಾರ ಗೌರವ ಮತ್ತು ಅಸ್ಪೃಶ್ಯರ ಉದ್ಧಾರದ ಬಗ್ಗೆ ಅವರಿಗಿರುವ ಕಳಕಳಿ, ಅವರ ಸಾಮರ್ಥ್ಯದ ಬಗ್ಗೆ ನನಗಿರುವ ವಿಶ್ವಾಸದಿಂದ ಅವರು ಅನುಭವಿಸಿರುವ ಕಷ್ಟ ಕಾರ್ಪಣ್ಯಗಳು ಮತ್ತು ಅನ್ಯಾಯಗಳಿಂದ ಅವರ ನಿರ್ಣಯಗಳು ಮತ್ತು ವಿವೇಚನೆ ಸದ್ಯದಲ್ಲಿ ಮಸುಕಾಗಿದೆ ಎಂದು ಅತ್ಯಂತ ನಮ್ರತೆಯಿಂದ ಹೇಳಬಯಸುತ್ತೇನೆ. ಹೀಗೆ ಹೇಳಲು ನನಗೆ ದುಃಖವಾಗುತ್ತದೆ. ಆದರೆ ಇದನ್ನು ಹೇಳದೇ ಹೋದರೆ ನಾನು ನನಗೆ ನನ್ನ ಜೀವಕ್ಕಿಂತಲೂ ಪ್ರಿಯವಾದ ಅಸ್ಪೃಶ್ಯರ ಸಮಸ್ಯೆಗೆ ನಿಷ್ಠೆಯನ್ನು ಕಳೆದುಕೊಂಡಂತಾಗುತ್ತದೆ. ನಾನು ಇಡೀ ಪ್ರಪಂಚದ ಸಾಮ್ರಾಜ್ಯಕ್ಕಾಗಿಯೂ ಅವರ ಹಕ್ಕುಗಳನ್ನು ಬಲಿಕೊಡಲಾರೆ. ನಾನು ಜವಾಬ್ದಾರಿಯ ಪ್ರಜ್ಞೆಯಿಂದ ಮಾತನಾಡುತ್ತಿದ್ದೇನೆ. ಡಾ. ಅಂಬೇಡ್ಕರರು ತಾವು ಭಾರತದ ಇಡೀ ಅಸ್ಪೃಶ್ಯರ ಸಮೂಹದ ಪರವಾಗಿ ಮಾತನಾಡುತ್ತಿದ್ದೇನೆ ಎಮದು ಸಾಧಿಸುತ್ತಿರುವುದು ಸರಿಯಲ್ಲ. ಅದು ಹಿಂದೂ ಧರ್ಮದ ವಿಭಜನೆಗೆಡೆಮಾಡುತ್ತದೆ. ಅದು ನನಗೆ ಯಾವ ತೃಪ್ತಿಯನ್ನೂ ನೀಡಲಾರದು. ಅಸ್ಪೃಶ್ಯರು ಬಯಸಿದರೆ ಅವರು ಇಸ್ಲಾಂ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಲು ನನ್ನ ಅಭ್ಯಂತರವಿಲ್ಲ. ಅದನ್ನು ನಾನು ಸಹಿಸುವೆ. ಆದರೆ ನಮ್ಮ ಗ್ರಾಮಗಳು ಇಬ್ಭಾಗವಾದರೆ ಹಿಂದೂ ಧರ್ಮಕ್ಕೊದಗಬಹುದಾದ ಸ್ಥಿತಿಯನ್ನು ನಾನು ಸಹಿಸಲಾರೆ. ಯಾರು ಅಸ್ಪೃಶ್ಯರ ರಾಜಕೀಯ ಹಕ್ಕುಗಳ ಬಗ್ಗೆ ಮಾತನಾಡುತ್ತಿರುವರೋ ಅವರಿಗೆ ತಮ್ಮ ಭಾರತದ ಅರಿವಿಲ್ಲ. ಭಾರತೀಯ ಸಮಾಜ ಇಂದು ಯಾವ ರೀತಿ ರಚಿತವಾಗಿದೆ ಎಂಬುದು ಅವರಿಗೆ ಗೊತ್ತಿಲ್ಲ. ಆದ್ದರಿಂದ ನಾನು ನನ್ನಲ್ಲಿರುವ ಎಲ್ಲಾ ಶಕ್ತಿಯಿಂದ ಒತ್ತಾಯಪೂರ್ವಕವಾಗಿ ಹೇಳುವುದೇನೆಂದರೆ ಅದನ್ನು ನಾನೊಬ್ಬನೇ ವಿರೋಧಿಸಬೇಕಾಗಿ ಬಂದರೂ ಸಹ ನಾನು ನನ್ನ ಜೀವವನ್ನು ಪಣಕ್ಕಿಟ್ಟಾದರೂ ಅದನ್ನು ವಿರೋಧಿಸುತ್ತೇನೆ ಎಂದು ಹೇಳಬಯಸುತ್ತೇನೆ.

# *ಅನುಬಂಧ–೧

ಕೋಮುವಾರು ಸಮಸ್ಯೆಯ ಪರಿಹಾರಕ್ಕಾಗಿ ಮುಸಲ್ಮಾನರು, ನಿಮ್ನ ವರ್ಗದವರು, ಭಾರತೀಯ ಕ್ರಿಶ್ಚಿಯನ್ನರು, ಆಂಗ್ಲೋ–ಇಂಡಿಯನ್ನರು ಮತ್ತು ಯುರೋಪಿಯನ್ನರು ಸಂಯುಕ್ತವಾಗಿ ಮಂಡಿಸಿದ ನಿಬಂಧನೆಗಳು

## ಅಲ್ಪಸಂಖ್ಯಾತ ಕೋಮುಗಳ ಬೇಡಿಕೆಗಳು

೧. ಯಾವ ವ್ಯಕ್ತಿಗೂ ತನ್ನ ಹುಟ್ಟು, ಧರ್ಮ, ಜಾತಿ ಅಥವಾ ಪಂಗಡದ ಆಧಾರದ ಮೇಲೆ ಸಾರ್ವಜನಿಕ ಉದ್ಯೋಗ, ಅಧಿಕಾರ ಸ್ಥಾನ, ಗೌರವ ಅಥವಾ ನಾಗರಿಕ ಹಕ್ಕುಗಳ ಅನುಭೋಗ ಮತ್ತು ಯಾವುದೇ ವೃತ್ತಿ ಅಥವಾ ಉದ್ಯಮವನ್ನು ಕೈಗೊಳ್ಳುವಲ್ಲಿ ಪ್ರತಿಕೂಲವನ್ನುಂಟು ಮಾಡಲಾಗದು.

೨. ಶಾಸಕಾಂಗವು ಯಾವುದೇ ಕೋಮಿನವರ ಏಕಪಕ್ಷೀಯ ಪಕ್ಷಪಾತಕರ ಕಾನೂನುಗಳನ್ನು ಮಾಡುವುದರಿಂದ ರಕ್ಷಣೆ ಒದಗಿಸಲು ಸಂವಿಧಾನದಲ್ಲಿಯೇ ಶಾಸನಬದ್ಧ ಸಂರಕ್ಷಣೆಗಳನ್ನು ಅಳವಡಿಸಬೇಕು.

೩. ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ಎಂದರೆ ಮತಶ್ರದ್ಧೆ, ಪ್ರಾರ್ಥನೆ, ಆಚರಣೆಗಳು, ಪ್ರಚಾರ, ಸಂಘಟನೆ ಮತ್ತು ಶಿಕ್ಷಣದ ಸ್ವಾತಂತ್ರ್ಯವನ್ನು ಸಾರ್ವಜನಿಕ ಶಾಂತಿ ಮತ್ತು ನೀತಿ ನಿಯಮಗಳ ಇತಿಮಿತಿಗಳಲ್ಲಿ ಎಲ್ಲಾ ಕೋಮಿನವರಿಗೂ ದೊರೆಯುವ ಭರವಸೆ ನೀಡಬೇಕು.
ಕೇವಲ ಮತಾಂತರದ ಕಾರಣಕ್ಕಾಗಿ ಯಾವ ವ್ಯಕ್ತಿಯೂ ತನ್ನ ನಾಗರಿಕ ಹಕ್ಕುಗಳು ಅಥವಾ ಸೌಕರ್ಯಗಳಿಂದ ವಂಚಿತನಾಗಬಾರದು ಅಥವಾ ಯಾವುದೇ ವಿಧದ ದಂಡಕ್ಕೆ ಗುರಿಯಾಗಬಾರದು.

೪. ತಮ್ಮ ಧರ್ಮದ ಆಚರಣೆಯ ಹಕ್ಕಿನ ಅಂಗವಾಗಿ ಅವರು ತಮ್ಮ ವೆಚ್ಚದಿಂದಲೇ ಧರ್ಮಾರ್ಥ ಮತ್ತು ಧಾರ್ಮಿಕ ಹಾಗೂ ಸಾಮಾಜಿಕ ಸಂಘ–ಸಂಸ್ಥೆಗಳನ್ನು, ಶಾಲೆಗಳು ಮತ್ತು ಇತರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳನ್ನು ನಡೆಸಿಕೊಂಡು ಹೋಗುವ ಹಕ್ಕನ್ನು ಹೊಂದಿರಬೇಕು.

೫. ಅಲ್ಪಸಂಖ್ಯಾತ ಕೋಮುಗಳವರ ಧರ್ಮ, ಸಂಸ್ಕೃತಿ ಮತ್ತು ವೈಯಕ್ತಿಕ ಮತ ಸಂಬಂಧೀ ಕಾನೂನು ಹಾಗೂ ಅವರ ಶಿಕ್ಷಣ, ಭಾಷೆ, ಧರ್ಮಾರ್ಥ ಸಂಸ್ಥೆಗಳ ರಕ್ಷಣೆಗೆ ಸಂವಿಧಾನದಲ್ಲಿ

---

* ಇದನ್ನು ಫೆಡರಲ್ ಸ್ಟ್ರಕ್ಚರ್ ಸಮಿತಿ ಮತ್ತು ಮೈನಾರಿಟೀಸ್ ಸಮಿತಿಯ ನಡಾವಳಿಗಳ ೧೩೯೪ರಿಂದ ೯೯ನೆಯವರೆಗಿನ ಪುಟಗಳಲ್ಲಿ ಅನುಬಂಧ III ಎಂದು ಮುದ್ರಿಸಲಾಗಿದೆ.

ಸಾಕಷ್ಟು ರಕ್ಷಣೆ ಒದಗಿಸಬೇಕಲ್ಲದೇ, ಸರಕಾರ ಮತ್ತು ಇತರ ಸ್ವಯಂ ಆಡಳಿತ ಸಂಸ್ಥೆಗಳು ನೀಡುವ ಧನ ಸಹಾಯದಲ್ಲಿ ತಕ್ಕ ಪಾಲು ದೊರೆಯಬೇಕು.

೬. ನಾಗರಿಕ ಹಕ್ಕುಗಳ ಅನುಭೋಗಕ್ಕೆ ಅಡ್ಡಿಯನ್ನುಂಟುಮಾಡುವ ಯಾವುದೇ ಪ್ರಯತ್ನವನ್ನು ಕಾನೂನಿನ ಅನ್ವಯ ಅಪರಾಧವೆಂದು ಪರಿಗಣಿಸಿ ಅದಕ್ಕಾಗಿ ಶಿಕ್ಷೆ ನೀಡುವ ವಿಧೇಯಕದ ಮೂಲಕ ಎಲ್ಲಾ ನಾಗರಿಕರಿಗೂ ಹಕ್ಕುಗಳ ಅನುಭೋಗದ ಭರವಸೆ ನೀಡಬೇಕು.

೭. ಕೇಂದ್ರ ಸರಕಾರ ಮತ್ತು ಪ್ರಾಂತೀಯ ಸರಕಾರಗಳಲ್ಲಿ ಮಂತ್ರಿಮಂಡಳಗಳನ್ನು ರಚಿಸುವಾಗ ಸಾಧ್ಯವಾದ ಮಟ್ಟಿಗೆ ಮುಸಲ್ಮಾನ ಕೋಮು ಮತ್ತು ಇತರ ಅಲ್ಪಸಂಖ್ಯಾತ ಕೋಮುಗಳ ಸದಸ್ಯರನ್ನು ಗಣನೀಯ ಪ್ರಮಾಣದಲ್ಲಿ ಸೇರಿಸಿಕೊಳ್ಳುವ ರೂಢಿ ನಿಯಮವಿರಬೇಕು.

೮. ಅಲ್ಪಸಂಖ್ಯಾತ ಕೋಮುಗಳ ರಕ್ಷಣೆ ಮತ್ತು ಅವುಗಳ ಕಲ್ಯಾಣಕ್ಕಾಗಿ ಕೇಂದ್ರ ಮತ್ತು ಪ್ರಾಂತ್ಯ ಸರಕಾರಗಳಲ್ಲಿ ಶಾಸನಬದ್ಧ ಇಲಾಖೆಗಳಿರಬೇಕು.

೯. ಸದ್ಯದಲ್ಲಿ ಯಾವುದೇ ಶಾಸಕಾಂಗದಲ್ಲಿ ನಾಮಕರಣದ ಮೂಲಕ ಅಥವಾ ಚುನಾವಣೆಯ ಮೂಲಕ ಪ್ರಾತಿನಿಧ್ಯ ಹೊಂದಿರುವ ಎಲ್ಲಾ ಕೋಮುಗಳವರು ಎಲ್ಲಾ ಶಾಸಕಾಂಗಗಳಲ್ಲಿ ಪ್ರತ್ಯೇಕ ಚುನಾವಣಾ ಪದ್ಧತಿಯ ಮೂಲಕ ಪ್ರಾತಿನಿಧ್ಯ ಹೊಂದಬೇಕು ಮತ್ತು ಅಲ್ಪಸಂಖ್ಯಾತರಿಗೆ ಅನುಬಂಧದಲ್ಲಿ ಈಗಾಗಲೇ ಹೇಳಲಾಗಿರುವ ಪ್ರಮಾಣಕ್ಕಿಂತಲೂ ಕಡಿಮೆ ಸ್ಥಾನಗಳನ್ನು ನೀಡಬಾರದು. ಅಂತೆಯೇ ಯಾವುದೇ ಬಹುಸಂಖ್ಯಾತ ಕೋಮಿನವರನ್ನು ಅಲ್ಪಸಂಖ್ಯಾತರನ್ನಾಗಿ ಅಥವಾ ಅವರ ಸಮಾನ ಸ್ಥಾನಕ್ಕೂ ಇಳಿಸಲಾಗದು. ಆದರೆ, ಹತ್ತು ವರ್ಷಗಳ ನಂತರ ಪಂಜಾಬ್ ಮತ್ತು ಬಂಗಾಳದಲ್ಲಿ ಮುಸ್ಲಿಮರು ಮತ್ತು ಇತರ ಯಾವುದೇ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾತ ಕೋಮಿನವರು ಸಂಯುಕ್ತ ಚುನಾವಣಾ ವ್ಯವಸ್ಥೆಯನ್ನಾಗಲೀ, ಅಥವಾ ಸ್ಥಳಗಳ ಮೀಸಲಾತಿಯೊಂದಿಗೆ ಸಂಯುಕ್ತ ವ್ಯವಸ್ಥೆಯನ್ನಾಗಲೀ ಸಂಬಂಧಪಟ್ಟ ಕೋಮಿನ ಸಮ್ಮತಿಯೊಂದಿಗೆ ಸ್ವೀಕರಿಸಲು ಅವಕಾಶವಿರಬೇಕು. ಅದೇ ರೀತಿ ಹತ್ತು ವರ್ಷಗಳ ನಂತರ ಯಾವುದೇ ಅಲ್ಪಸಂಖ್ಯಾತ ಕೋಮು ಸಂಬಂಧಪಟ್ಟ ಕೋಮಿನ ಸಮ್ಮತಿಯೊಂದಿಗೆ ಕೇಂದ್ರ ಶಾಸಕಾಂಗದಲ್ಲಿ ಸಂಯುಕ್ತ ಚುನಾವಣಾ ವ್ಯವಸ್ಥೆಯನ್ನು ಸ್ಥಾನ ಮೀಸಲಾತಿಯೊಂದಿಗಾಗಲೀ ಅಥವಾ ಮೀಸಲಾತಿ ರಹಿತವಾಗಿಯಾಗಲೀ ಸ್ವೀಕರಿಸುವ ಅವಕಾಶವಿರಬೇಕು.

ನಿಮ್ನ ವರ್ಗಗಳವರು ೨೦ ವರ್ಷಗಳು ಮುಗಿಯುವವರೆಗೆ ಪ್ರತ್ಯೇಕ ಚುನಾವಣಾ ವ್ಯವಸ್ಥೆಯನ್ನು ಮತ್ತು ಆ ಕೋಮುಗಳವರಿಗೆ ನೇರ ವಯಸ್ಕ ಮತದಾನ ಪದ್ಧತಿಯನ್ನು ಜಾರಿಗೊಳಿಸುವವರೆಗೆ ಪ್ರತ್ಯೇಕ ಚುನಾವಣಾ ವ್ಯವಸ್ಥೆಯಿಂದ ಸಂಯುಕ್ತ ಚುನಾಯಕ ವ್ಯವಸ್ಥೆ ಮತ್ತು ಸ್ಥಾನ ಮೀಸಲಾತಿ ವ್ಯವಸ್ಥೆಯಾಗಿ ಬದಲಾವಣೆ ಮಾಡಕೂಡದು.

೧೦. ಪ್ರತಿಯೊಂದು ಪ್ರಾಂತ್ಯದಲ್ಲಿ ಮತ್ತು ಕೇಂದ್ರ ಸರಕಾರದಲ್ಲಿ ಒಂದು ಲೋಕ ಸೇವಾ ಆಯೋಗದ ನೇಮಕವಾಗಬೇಕು. ಸಾರ್ವಜನಿಕ ಸೇವೆಗಳಿಗೆ ಮಾಡಲಾಗುವ ಎಲ್ಲಾ ನೇಮಕಗಳನ್ನು ಗವರ್ನರ್ ಜನರಲ್ ಮತ್ತು ಗವರ್ನರುಗಳಿಂದ ನಾಮಕರಣದ ಮೂಲಕ ಮಾಡಲು ಆರಕ್ಷಿತವಾದ ನೇಮಕಗಳನ್ನು ಹೊರತು ಪಡಿಸಿ, ದಕ್ಷತೆ ಮತ್ತು ವಿದ್ಯಾರ್ಹತೆಗಳಿಗನುಗುಣವಾಗಿ ವಿವಿಧ ಅಲಸಂಖ್ಯಾತ ಕೋಮುಗಳಿಗೆ ನ್ಯಾಯವಾದ ಪ್ರಾತಿನಿಧ್ಯ ದೊರಕುವ ರೀತಿಯಲ್ಲಿ ಈ ಲೋಕಸೇವಾ ಆಯೋಗದ ಮುಖಾಂತರವೇ ಮಾಡಬೇಕು. ಗವರ್ನರ್ ಜನರಲ್‌ರವರಿಗೂ

ಮತ್ತು ಗವರ್ನರುಗಳಿಗೂ ನೇಮಕಾತಿಗಳಲ್ಲಿ ಈ ತತ್ವವನ್ನು ಪಾಲಿಸುವಂತೆ ನೋಡಿಕೊಳ್ಳಲು ಮತ್ತು ಈ ಉದ್ದೇಶದಿಂದ ನಿಯತ ಕಾಲದಲ್ಲಿ ಸೇವಾ ನೇಮಕಾತಿಗಳ ಕಾರ್ಯವನ್ನು ಪರಿಶೀಲಿಸತಕ್ಕದ್ದೆಂದು ಅವರಿಗೆ ನೀಡುವ ಆಜ್ಞೆಗಳ ದಸ್ತಾವೇಜುಗಳಲ್ಲಿ (ಇನ್‌ಸ್ಟ್ರುಮೆಂಟ್ ಆಫ್ ಇನ್‌ಸ್ಟ್ರಕ್ಷನ್) ಅಳವಡಿಸಬೇಕು.

೧೧. ಯಾವುದೇ ಶಾಸಕಾಂಗದ ಒಂದು ಕೋಮಿನ ಪ್ರತಿನಿಧಿಗಳು ಶಾಸಕಾಂಗದಲ್ಲಿ ಪಾಸು ಮಾಡಲಾದ ಯಾವುದೇ ಒಂದು ಮಸೂದೆ ತಮ್ಮ ಧರ್ಮ ಅಥವಾ ಧರ್ಮಾಧಾರಿತವಾದ ಯಾವುದೇ ಸಾಮಾಜಿಕ ಆಚರಣೆಯ ಮೇಲೆ ಪರಿಣಾಮ ಬೀರಲಿದೆ ಎಂದು ಆ ಕೋಮಿನ ಮೂರರಲ್ಲಿ ಎರಡರಷ್ಟು ಪ್ರತಿನಿಧಿಗಳು ಅಥವಾ ಪ್ರಜೆಗಳ ಮೂಲಭೂತ ಹಕ್ಕುಗಳ ವಿಷಯದಲ್ಲಿ ಮೂರರಲ್ಲಿ ಒಂದು ಭಾಗದಷ್ಟು ಪ್ರತಿನಿಧಿಗಳು ಸದನದಲ್ಲಿ ಆ ಮಸೂದೆ ಪಾಸಾದ ಒಂದು ತಿಂಗಳ ಅವಧಿಯೊಳಗೆ ಸದನದ ಅಧ್ಯಕ್ಷರಿಗೆ ತಮ್ಮ ತಕರಾರು ಸಲ್ಲಿಸಲು ಅವಕಾಶವಿರಬೇಕು. ಅಂತಹ ತಕರಾರನ್ನು ಸದನದ ಅಧ್ಯಕ್ಷರು ಸಂದರ್ಭಕ್ಕನುಗುಣವಾಗಿ ಗವರ್ನರ್ ಜನರಲ್‌ರವರಿಗೆ ಅಥವಾ ಗವರ್ನರರಿಗೆ ರವಾನಿಸಬೇಕು. ಅವರು (ಗವರ್ನರ್ ಜನರಲ್ ಅಥವಾ ಗವರ್ನರ್) ಸಂಬಂಧಪಟ್ಟ ಮಸೂದೆಯ ಕಾರ್ಯಾಚರಣೆಯನ್ನು ಒಂದು ವರ್ಷದ ಅವಧಿಗೆ ಅಮಾನತ್ತಿನಲ್ಲಿ ಇಡತಕ್ಕದ್ದು. ಒಂದು ವರ್ಷದ ಅವಧಿಯ ನಂತರ ಅವರು ಈ ಮಸೂದೆಯನ್ನು ಪುನರ್ ಪರಿಶೀಲನೆಗಾಗಿ ಶಾಸಕಾಂಗಕ್ಕೆ ವಾಪಸು ಕಳುಹಿಸಬೇಕು. ಆ ಮಸೂದೆಯನ್ನು ಪುನರ್ ಪರಿಶೀಲಿಸಿದ ನಂತರ ಶಾಸಕಾಂಗದ ಮಸೂದೆಯ ವಿರುದ್ಧ ಮಾಡಲಾಗಿರುವ ತಕರಾರಿನ ನಿವಾರಣೆಗಾಗಿ ಅದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ನಿರಾಕರಿಸಿದ ಪಕ್ಷದಲ್ಲಿ ಗವರ್ನರ್ ಜನರಲ್‌ರಾಗಲಿ, ಗವರ್ನರರಾಗಲಿ ಆ ಮಸೂದೆಗೆ ತಮ್ಮ ವಿವೇಚನೆಯ ಅಧಿಕಾರದ ಅಂಗವಾಗಿ ಆ ಮಸೂದೆಗೆ ತಮ್ಮ ಸಮ್ಮತಿ ನೀಡಬಹುದು ಅಥವಾ ಅದನ್ನು ತಿರಸ್ಕರಿಸಬಹುದು. ಹಾಗಾದ ಪಕ್ಷದಲ್ಲಿ ಈ ಮಸೂದೆಯ ಸಿಂಧುತ್ವವನ್ನು ಅದು ತಮ್ಮ ಮೂಲಭೂತ ಹಕ್ಕೊಂದಕ್ಕೆ ವಿರೋಧವಾಗಿದೆಯೆಂದು ಅದರಿಂದ ಅನನುಕೂಲಕ್ಕೊಳಗಾದ ಯಾವುದೇ ಕೋಮಿನ ಯಾರಾದರೂ ಇಬ್ಬರು ಸದಸ್ಯರು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸುವ ಅವಕಾಶವಿರಬೇಕು.

## ಮುಸಲ್ಮಾನರ ವಿಶೇಷ ಬೇಡಿಕೆಗಳು

(ಎ) ಗಡಿಭಾಗದ ಸಂರಕ್ಷಣೆಯ ಆವಶ್ಯಕತೆಗಳಿಗನುಗುಣವಾಗಿ ವಾಯುವ್ಯ ಗಡಿಪ್ರಾಂತ್ಯವನ್ನು ಇತರ ಪ್ರಾಂತ್ಯಗಳ ರಚನೆಯ ಆಧಾರದ ಮೇಲೆ ಗವರ್ನರ್ ಪ್ರಾಂತ್ಯವನ್ನಾಗಿ ಸಂಘಟಿಸಬೇಕು.

ಪ್ರಾಂತೀಯ ಶಾಸಕಾಂಗವನ್ನು ರಚಿಸುವಾಗ ನಾಮಕರಣ ಸದಸ್ಯರ ಪ್ರಮಾಣ ಒಟ್ಟು ಸದಸ್ಯರ ಶೇಕಡ ೧೦ಕ್ಕಿಂತ ಮೀರಿರಬಾರದು.

(ಬಿ) ಸಿಂಧನ್ನು ಮುಂಬಯಿ ಪ್ರಾಂತ್ಯದಿಂದ ಬೇರ್ಪಡಿಸಿ ಅದನ್ನು ಬ್ರಿಟಿಷ್ ಭಾರತದ ಇತರ ಪ್ರಾಂತ್ಯಗಳಂತೆಯೇ ಒಂದು ಗವರ್ನರ್ ಪ್ರಾಂತ್ಯವನ್ನಾಗಿ ರಚಿಸಬೇಕು.

(ಸಿ) ಕೇಂದ್ರ ಶಾಸಕಾಂಗದಲ್ಲಿ ಮುಸಲ್ಮಾನರ ಪ್ರಾತಿನಿಧ್ಯ ಸದನದ ಒಟ್ಟು ಸದಸ್ಯರ ಸಂಖ್ಯೆಯ ಮೂರನೆಯ ಒಂದು ಭಾಗದಷ್ಟಿರಬೇಕು. ಮತ್ತು ಕೇಂದ್ರ ಶಾಸಕಾಂಗದಲ್ಲಿ ಅವರ ಪ್ರಾತಿನಿಧ್ಯ ಅನುಬಂಧದಲ್ಲಿ ಗೊತ್ತುಪಡಿಸಿರುವ ಪ್ರಮಾಣಕ್ಕಿಂತ ಕಡಿಮೆ ಇರಬಾರದು.

## ನಿಮ್ನವರ್ಗಗಳವರ ವಿಶೇಷ ಬೇಡಿಕೆಗಳು

(ಎ) ಅಸ್ಪೃಶ್ಯತೆಯ ಕಾರಣ ಯಾವುದೇ ಪ್ರಜೆಯ ನಾಗರಿಕ ಹಕ್ಕುಗಳ ಅನುಭೋಗಕ್ಕೆ ಅಡ್ಡಿಪಡಿಸುವ ಅಥವಾ ಯಾವುದೇ ದಂಡ ಹಾಕುವ, ಅನನುಕೂಲ ಅಥವಾ ಪಕ್ಷಪಾತ ಮಾಡುವಂತಹ ರೂಢಿ ನಿಯಮಗಳನ್ನು ಸಂವಿಧಾನವು ಅನೂರ್ಜಿತವೆಂದು ಘೋಷಿಸಬೇಕು.

(ಬಿ) ಸಾರ್ವಜನಿಕ ಸೇವಾ ವರ್ಗಗಳ ನೇಮಕಾತಿಯಲ್ಲಿ ಉದಾರ ನೀತಿಯನ್ನನುಸರಿಸಬೇಕು ಮತ್ತು ಪೊಲೀಸ್ ಹಾಗೂ ಸೈನಿಕ ಸೇವೆಯಲ್ಲಿ ನೇಮಕ (ಅವರಿಗೆ) ಮುಕ್ತವಾಗಿರಬೇಕು.

(ಸಿ) ಪಂಜಾಬಿನಲ್ಲಿ ಭೂ ಪರಭಾರೆ ಕಾಯ್ದೆಯ ಪ್ರಯೋಜನಗಳನ್ನು ನಿಮ್ನ ವರ್ಗಗಳವರಿಗೆ ವಿಸ್ತರಿಸಬೇಕು.

(ಡಿ) ಯಾವುದೇ ಕಾರ್ಯಾಂಗದ ಅಧಿಕಾರವು ಎಸಗುವ ಹಾನಿಕಾರಕ ಕಾರ್ಯ ಅಥವಾ ಹಿತಾಸಕ್ತಿಗಳನ್ನು ಕಡೆಗಾಣಿಸುವುದರ ವಿರುದ್ಧ ಮತ್ತು ಅವುಗಳಿಗೆ ಪರಿಹಾರ ಪಡೆಯುವ ಉದ್ದೇಶದಿಂದ ಗವರ್ನರ್ ಅಥವಾ ಗವರ್ನರ್ ಜನರಲ್‌ರವರಿಗೆ ಮೇಲ್ಮನವಿ ಮಾಡಿಕೊಳ್ಳುವ ಹಕ್ಕು ಇರಬೇಕು.

(ಇ) ನಿಮ್ನವರ್ಗಗಳು ಅನುಬಂಧದಲ್ಲಿ ನಿಗದಿಪಡಿಸಿರುವುದಕ್ಕಿಂತ ಕಡಿಮೆಯಾಗದಂತೆ ಪ್ರಾತಿನಿಧ್ಯ ಹೊಂದಬೇಕು.

## ಆಂಗ್ಲೋ–ಇಂಡಿಯನ್ ಕೋಮಿನ ವಿಶೇಷ ಬೇಡಿಕೆಗಳು

(ಎ) ಉಪಸಮಿತಿ ಸಂ. VIII (ಸೇವೆಗಳು) ಇದರಲ್ಲಿ ಅಂಗೀಕೃತವಾಗಿರುವ ಬೇಡಿಕೆಗಳಿಗೆ ಉದಾರ ಅರ್ಥ ನಿರೂಪಣೆ ಕೊಡುತ್ತಾ ಸಮರ್ಪಕ ಜೀವನಮಟ್ಟದ ಅವಶ್ಯಕತೆಗಳನ್ನು ಗಮನದಲ್ಲಿಟ್ಟು ಕೊಂಡು ಮತ್ತು ಈ ಕೋಮಿನವರ ವಿಶಿಷ್ಟ ಸ್ಥಾನದ ದೃಷ್ಟಿಯಿಂದ ಸಾರ್ವಜನಿಕ ಉದ್ಯೋಗಾವಕಾಶಗಳಲ್ಲಿ ವಿಶೇಷ ಪರಿಗಣನೆ ನೀಡಬೇಕು.

(ಬಿ) ಸಚಿವರ ನಿಯಂತ್ರಣಕ್ಕೊಳಪಟ್ಟು ತಮ್ಮದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಎಂದರೆ, ಐರೋಪ್ಯ ಶಿಕ್ಷಣಕ್ಕಾಗಿ ನಡೆಸಿಕೊಂಡು ಹೋಗುವ ಹಕ್ಕು ಇರಬೇಕು. ಸದ್ಯದ ಸಹಾಯ ಧನದ ಆಧಾರದ ಮೇಲೆ ಸಾಕಷ್ಟು ಸಹಾಯಧನ ಮತ್ತು ವಿದ್ಯಾರ್ಥಿ ವೇತನಗಳನ್ನು ನೀಡಲು ಧಾರಾಳವಾದ ನಿಬಂಧನೆಗಳಿರಬೇಕು.

(ಸಿ) ಔರಸ ಮತ್ತು ಸಂತತಿಯ ಪ್ರಮಾಣದ ಕರಾರು ಇಲ್ಲದೇ ಭಾರತದಲ್ಲಿ ಇತರ ಕೋಮುಗಳಿಗಿರುವ ನ್ಯಾಯದರ್ಶಿ (Jury) ಹಕ್ಕುಗಳಿಗೆ ಸಮನಾದ ಹಕ್ಕು ಮತ್ತು ಆಪಾದಿತ ವ್ಯಕ್ತಿ

ಐರೋಪ್ಯ ಅಥವಾ ಭಾರತೀಯ ನ್ಯಾಯದರ್ಶಿ ಮಂಡಲಿಯ ಮೂಲಕ ತನ್ನ ವಿಚಾರಣೆಯನ್ನು ಬೇಡುವ ಹಕ್ಕು ಇರಬೇಕು.

## ಐರೋಪ್ಯ ಕೋಮಿನವರ ವಿಶೇಷ ಬೇಡಿಕೆಗಳು

(ಎ) ಎಲ್ಲಾ ಔದ್ಯೋಗಿಕ ಮತ್ತು ವಾಣಿಜ್ಯ ಚಟುವಟಿಕೆಗಳಲ್ಲಿ ಭಾರತೀಯ ಸಂಜಾತ ಪ್ರಜೆಗಳು ಅನುಭೋಗಿಸುವ ಎಲ್ಲಾ ಹಕ್ಕುಗಳು ಮತ್ತು ವಿಶೇಷ ಸೌಲಭ್ಯಗಳಲ್ಲಿ ಸಮಾನ ಹಕ್ಕು ಇರ ಬೇಕು.

(ಬಿ) ಕ್ರಿಮಿನಲ್ ವಿಚಾರಣೆಯ ವಿಧಾನದಲ್ಲಿ ಸಧ್ಯದಲ್ಲಿರುವ ಹಕ್ಕುಗಳನ್ನು ಉಳಿಸಿಕೊಂಡು ಹೋಗುವುದು ಮತ್ತು ಸಧ್ಯ ಜಾರಿಯಲ್ಲಿರುವ ವಿಧಾನಕ್ಕೆ ತಿದ್ದುಪಡಿ ಮಾಡಲು ಅಥವಾ ಬದಲಾವಣೆ ಮಾಡಲು ಯಾವುದೇ ಮಸೂದೆಯನ್ನು ಗವರ್ನರ್–ಜನರಲ್ ಪೂರ್ವಾನು ಮತಿ ಇಲ್ಲದೆ ಮಂಡಿಸಲಾಗದು.

**ಇವುಗಳಿಗೆ ಒಪ್ಪಿಗೆ ನೀಡಿದವರು:**

ಹಿಸ್ ಹೈನೆಸ್ ದಿ ಆಗಾಖಾನ್ (ಮುಸಲ್ಮಾನರು),
ಡಾ. ಅಂಬೇಡ್ಕರ್ (ನಿಮ್ನ ವರ್ಗಗಳವರು),
ರಾವ್ ಬಹದ್ದೂರ್ ಪನ್ನೀರ ಸೆಲ್ವಂ (ಭಾರತೀಯ ಕ್ರಿಶ್ಚಿಯನ್ನರು).
ಸರ್ ಹೆನ್ರಿ ಗಿಡ್ನೆ (ಆಂಗ್ಲೋ ಇಂಡಿಯನರು),
ಸರ್ ಹ್ಯೂಬರ್ಟ್ ಕಾರ್ (ಯುರೋಪಿಯನರು).

## ಪರಿಶಿಷ್ಟ–೧

## ಅನುಬಂಧ

### ಶಾಸಕಾಂಗಗಳಲ್ಲಿ ಪ್ರಾತಿನಿಧ್ಯ

**ಕಂಸದಲ್ಲಿರುವ ಅಂಕಿಗಳು = ಜನಸಂಖ್ಯೆ (ಆಧಾರ ೧೦೩೧ನೆಯ ಅಂಕಿಗಳು ಮತ್ತು ನಿಮ್ನರ ಶೇಕಡಾವಾರು ಸೈಮನ್ ವರದಿ ಪ್ರಕಾರ.)**

| | ಸದನದ ಸಂಖ್ಯಾಬಲ | ಹಿಂದೂಗಳು | | | ಮುಸಲ್ಮಾನರು | ಕ್ರಿಶ್ಚಿಯನ್ನರು | ಸಿಖ್ಖರು | ಆಂಗ್ಲೋ ಇಂಡಿಯನ್ನರು | ಬುಡಕಟ್ಟಿನವರು ಇತ್ಯಾದಿ | ಯೂರೋಪಿಯನ್ನರು |
|---|---|---|---|---|---|---|---|---|---|---|
| | | ಸವರ್ಣ | ನಿಮ್ನ | ಒಟ್ಟು | | | | | | |
| ಕೇಂದ್ರ | | | | | | | | | | |
| ಅಖಿಲ ಭಾರತ (೧೯೩೧) | | | | | | | | | | |
| | | (೪೭.೫) | (೧೯)* | (೬೬.೫) | (೨೧.೫) | | | | | |
| ಮೇಲ್ಮನೆ ... | ೨೦೦ | ೧೦೧ | ೨೦ | ೧೨೧ | ೬೭ | ೧ | ೬ | ೧ | ... | ೪ |
| ಕೆಳಮನೆ ... | ೩೦೦ | ೧೨೩ | ೪೫ | ೧೬೮ | ೧೦೦ | ೭ | ೧೦ | ೩ | ... | ೧೨ |
| ಅಸ್ಸಾಂ ... | ೧೦೦+ | (೪೮.೯) | (೧೩.೪) | (೬೨.೩) | (೩೪.೮) | | | | | |
| | | ೩೮ | ೧೩ | ೫೧ | ೩೫ | ೩ | ... | ೧ | ... | ೧೦ |
| ಬಂಗಾಳ ... | ೨೦೦ | (೧೮.೩) | (೨೪.೭) | (೪೩) | (೫೪.೯) | | | | | |
| | | ೩೮ | ೩೫ | ೭೩ | ೧೦೨ | ೨ | ... | ೩ | ... | ೨೦ |
| ಬಿಹಾರ ಮತ್ತು ... | ೧೦೦ | (೬೭.೮) | (೧೪.೫) | (೮೨.೩) | (೧೧.೩) | | | | | |
| ಓರಿಸ್ಸಾ | | ೫೧ | ೧೪ | ೬೫ | ೨೫ | ೧ | – | ೧ | ೩ | ೫ |

* ಇದು ಬ್ರಿಟಿಷ್ ಭಾರತದ ಗವರ್ನರ್ ಪ್ರಾಂತ್ಯಗಳಲ್ಲಿ ಶೇಕಡಾವಾರು ತೋರಿಸುತ್ತದೆ

+ ಜನಸಂಖ್ಯೆಯ ಅಂಕಿಗಳಲ್ಲಿ ಬುಡಕಟ್ಟು ಪ್ರದೇಶಗಳು ಸೇರಿಲ್ಲ.

## ಪರಿಶಿಷ್ಟ-೧

### ಅನುಬಂಧ – (ಮುಂದುವರಿದಿದೆ)

**ಶಾಸಕಾಂಗಗಳಲ್ಲಿ ಪ್ರಾತಿನಿಧ್ಯ**

**ಕಂಸದಲ್ಲಿರುವ ಅಂಕಿಗಳು = ಜನಸಂಖ್ಯೆ (ಆಧಾರ ೧೯೩೧ರ ಅಂಕಿಗಳು ಮತ್ತು ನಿಮ್ನರ ಶೇಕಡಾವಾರು ಸೈಮನ್ ವರದಿ ಪ್ರಕಾರ.)**

| | ಸದನದ ಸಂಖ್ಯಾಬಲ | ಹಿಂದೂಗಳು ಸವರ್ಣ | ಹಿಂದೂಗಳು ನಿಮ್ನ | ಹಿಂದೂಗಳು ಒಟ್ಟು | ಮುಸಲ್ಮಾನರು | ಕ್ರಿಶ್ಚಿಯನ್ನರು | ಸಿಖ್ಖರು | ಆಂಗ್ಲೋ ಇಂಡಿಯನ್ನರು | ಬುಡಕಟ್ಟಿನವರು ಇತ್ಯಾದಿ | ಯೂರೋಪಿಯನ್ನರು |
|---|---|---|---|---|---|---|---|---|---|---|
| | | (೬೮) | (೮) | (೭೬) | (೨೦) | | | | | |
| ಮುಂಬಯಿ ... | ೨೦೦ | ೮೮ | ೨೮ | ೧೧೬ | ೬೬ | ೨ | ... | ೩ | ... | ೧೩ |
| | (ಸಿಂಧ್ ಪ್ರತ್ಯೇಕಗೊಂಡಾಗ ಮುಂಬಯಿಯಲ್ಲಿ ಮುಸಲ್ಮಾನರಿಗೆ ನೀಡುವ ಪ್ರಾಮುಖ್ಯತೆ ವಾಯುವ್ಯ ಗಡಿ ಪ್ರಾಂತ್ಯಗಳಲ್ಲಿ ಹಿಂದೂಗಳಿಗೆ ನೀಡಲಾದ ಪ್ರಾಮುಖ್ಯತೆಗೆ ಸಮನಾಗಿರಬೇಕು.) | | | | | | | | | |
| | | (೬೩.೧) | (೨೩.೭) | (೮೬.೮) | (೪೪) | | | | | |
| ಸಿ.ಪಿ. (ಮ.ಪ್ರಾ) ... | ೧೦೦ | ೫೮ | ೨೦ | ೭೮ | ೧೫ | ೧ | ... | ೨ | ೨ | ೨ |
| | | (೭೧.೩) | (೧೫.೪) | (೮೬.೭) | (೭೧) | (೩.೭ | | | | |
| ಮದ್ರಾಸ್ ... | ೨೦೦ | ೧೦೨ | ೪೦ | ೧೪೨ | ೩೦ | ೧೪ | ... | ೪ | ೨ | ೮ |
| | | (೧೫.೧) | (೧೩.೫) | (೨೮.೬) | (೫೬.೫) | | (೧೩) | | | |
| ಯೂ.ಪಿ. (ಸಂ.ಪ್ರಾಂತ್ಯ)... | ೧೦೦ | ೪೪ | ೨೦ | ೭೪ | ೩೦ | ೧ | ... | ೨ | ... | ೩ |
| ಸಿಂಧ್ ಮತ್ತು ವಾಯುವ್ಯ ಗಡಿ ಪ್ರಾಂತ್ಯ | ಮುಸಲ್ಮಾನರು ಪ್ರಾಂತ್ಯಗಳಲ್ಲಿ ಅಲ್ಲಿಯ ಜನಸಂಖ್ಯೆಯಲ್ಲಿ ಅಲ್ಪ ಸಂಖ್ಯಾತರಾಗಿರುವರೋ ಅಲ್ಲಿ ಅವರಿಗೆ ನೀಡಲಾದ ಪ್ರಾಮುಖ್ಯತೆಯ ಸಮನಾಗಿ ಹಿಂದೂಗಳು ಅಲ್ಪಸಂಖ್ಯಾತರಾಗಿರುವ ಪ್ರಾಂತ್ಯವಾದ ಸಿಂಧ್ ಮತ್ತು ಹಿಂದೂಗಳು ಹಾಗೂ ಸಿಖ್ಖರು ಅಲ್ಪಸಂಖ್ಯಾತರಾಗಿರುವ ವಾಯುವ್ಯ ಗಡಿ ಪ್ರಾಂತ್ಯದಲ್ಲಿ ಪ್ರಾಮುಖ್ಯತೆ ಕೊಡಬೇಕು. | | | | | | | | | |

# ೧ನೆಯ ಪರಿಶಿಷ್ಟಕ್ಕೆ ವಿವರಣಾತ್ಮಕ ಟಿಪ್ಪಣಿ

೧. ಸೂಚಿಸಲಾದ ಕೋಮುವಾರು ಪ್ರಾತಿನಿಧ್ಯದ ವಿವರಗಳನ್ನು ಹಿಂದೂಗಳು ಮತ್ತು ಸಿಖ್ಖರು ಒಪ್ಪಿಕೊಂಡಿಲ್ಲ. ಆದರೆ, ಸಿಖ್ಖರು ಕೇಂದ್ರ ಶಾಸಕಾಂಗದಲ್ಲಿ ಬೇಡಿರುವ ಪ್ರಾತಿನಿಧ್ಯವನ್ನು ಸಂಪೂರ್ಣವಾಗಿ ಅಳವಡಿಸಲಾಗಿದೆ.

೨. ವಿವಿಧ ಅಲ್ಪಸಂಖ್ಯಾತ ಕೋಮುಗಳವರಿಗೆ ಸೂಚಿಸಿರುವ ಸ್ಥಾನಗಳ ವಿವರಣೆಯು ಇಡೀ ಯೋಜನೆಯ ಅಂಗವಾಗಿದ್ದು ಈ ಸೂಚನೆಗಳ ವಿವರಗಳನ್ನು ಪ್ರತ್ಯೇಕಿಸಲಾಗುವುದಿಲ್ಲ.

೩. ಯಾವುದೇ ಸಂದರ್ಭದಲ್ಲಿ ಬಹುಸಂಖ್ಯಾತ ಕೋಮನ್ನು ಅಲ್ಪಸಂಖ್ಯಾತ ಸ್ಥಾನಕ್ಕೆ ಇಳಿಸಲಾಗದು, ಅಷ್ಟೇ ಏಕೆ ಅದರ ಸಮಾನ ಸ್ಥಾನಕ್ಕೂ ಇಳಿಸಬಾರದು ಎಂಬ ತತ್ವವನ್ನನುಸರಿಸಿ ಸ್ಥಾನಗಳ ವಿತರಣೆ ಮಾಡಲಾಗಿದೆ.

೪. ವಾಣಿಜ್ಯ, ಉದ್ದಿಮೆ, ಭೂಮಾಲೀಕರು, ಕಾರ್ಮಿಕರು ಇತ್ಯಾದಿಯವರಿಗೆ ಯಾವ ಪ್ರಾತಿನಿಧ್ಯವನ್ನೂ ನೀಡಲಾಗಿಲ್ಲ. ಈ ಸ್ಥಾನಗಳು ಅಂತಿಮವಾಗಿ ಕೋಮುವಾರು ಆಗಿವೆ ಎಂದೇ ಗ್ರಹಿಸಲಾಗಿದೆ. ಯಾವುದೇ ಕೋಮುಗಳವರು ಈ ಹಿತಾಸಕ್ತಿಗಳಿಗೆ ವಿಶೇಷ ಪ್ರಾತಿನಿಧ್ಯ ಬಯಸಿದರೆ ಅದನ್ನು ಅವರು ತಮ್ಮ ಕೋಮಿನ ಪಾಲಿನಲ್ಲಿ ಒದಗಿಸಿಕೊಳ್ಳಬಹುದು.

೫. ಮುಸಲ್ಮಾನರಿಗೆ ಕೇಂದ್ರ ಶಾಸಕಾಂಗದಲ್ಲಿ ಒದಗಿಸಲಾಗಿರುವ ಶೇಕಡ ಮೂವತ್ತಮೂರುವರೆ ಪ್ರಾತಿನಿಧ್ಯದಲ್ಲಿ ಶೇಕಡಾ ೨೬ರಷ್ಟು ಬ್ರಿಟಿಷ್ ಭಾರತದಿಂದ ಮತ್ತು ಕೊನೆ ಪಕ್ಷ ಶೇಕಡಾ ೭ರಷ್ಟು ಭಾರತೀಯ ಸಂಸ್ಥಾನಗಳಿಗೆ ನಿಗದಿಯಾದ ದೇಯಾಂಶ ಅಥವಾ ಪಾಲಿನಲ್ಲಿ ರೂಢಿ ನಿಯವಾಗಿ ಕೊಡಲಾಗುವುದೆಂಬ ಗ್ರಹಿಕೆಯ ಆಧಾರದ ಮೇಲೆ ಮಾಡಲಾಗಿದೆ.

೬. ಪಂಜಾಬಿನಲ್ಲಿ ಮುಸಲ್ಮಾನರು ಸವರ್ಣ ಹಿಂದೂಗಳು ಮತ್ತು ನಿಮ್ನವರ್ಗದವರು ಸೂಚಿತ ಸಾಮಾನ್ಯ ತ್ಯಾಗದಿಂದಾಗಿ ಸಿಖ್ಖರಿಗೆ ಶೇಕಡಾ ೫೪ರಷ್ಟು ಪ್ರಾಮುಖ್ಯತೆಯನ್ನು ನೀಡಲು ಮತ್ತು ಅವರಿಗೆ ಶಾಸಕಾಂಗದಲ್ಲಿ ಶೇಕಡಾ ೨೦ರಷ್ಟು ಪ್ರಾತಿನಿಧ್ಯ ನೀಡಲು ಸಾಧ್ಯ ವಾಗಿದೆ.

೭ ಈ ಸೂಚನೆಗಳು ಭಾರತದ ಜನಸಂಖ್ಯೆಯಲ್ಲಿ ಸುಮಾರು ೧೧೫ ದಶಲಕ್ಷಕ್ಕಿಂತಲೂ ಹೆಚ್ಚಿನ ಅಥವಾ ಶೇಕಡಾ ೪೬ರಷ್ಟು ಜನರಿಗೆ ಸಮ್ಮತವಾಗುವುದೆಂದು ಭಾವಿಸಬಹುದು.

# * ಪರಿಶಿಷ್ಟ–II

ನಿಮ್ನ ವರ್ಗಗಳವರಿಗೆ ವಿಶೇಷ ಪ್ರಾತಿನಿಧ್ಯ ಕುರಿತಾದ ಪುರವಣಿ ವಿಜ್ಞಾಪನಾ ಪತ್ರ

ಸಲ್ಲಿಸಿದವರು: ಡಾ. ಭೀಮರಾವ್, ಆರ್. ಅಂಬೇಡ್ಕರ್ ಮತ್ತು ರಾವ್ ಬಹಾದೂರ್
ಆರ್. ಶ್ರೀನಿವಾಸನ್

ಸ್ವಯಂ ಆಡಳಿತ ಭಾರತದ ಸಂವಿಧಾನದಲ್ಲಿ ನಿಮ್ನವರ್ಗಗಳವರ ರಕ್ಷಣೆಗಾಗಿ ನೀಡಬೇಕಾದ ರಾಜಕೀಯ ರಕ್ಷಣೋಪಾಯಗಳ ಪ್ರಶ್ನೆಯನ್ನು ಕುರಿತಾಗಿ ನಾವು ಹಿಂದಿನ ವರ್ಷ ಸಲ್ಲಿಸಿದ ಮತ್ತು ಅಲ್ಪಸಂಖ್ಯಾತರ ಉಪ ಸಮಿತಿಯ ನಡಾವಳಿಗಳಲ್ಲಿ IIIನೆಯ ಪರಿಶಿಷ್ಟವಾಗಿ ಮುದ್ರಿತವಾಗಿರುವ ವಿಜ್ಞಾಪನಾ ಪತ್ರದಲ್ಲಿ ನಾವು ನಿಮ್ನ ವರ್ಗಗಳವರಿಗೆ ವಿಶೇಷ ಪ್ರಾತಿನಿಧ್ಯ ನೀಡುವುದು ಆ ರಕ್ಷಣೋಪಾಯಗಳಲ್ಲಿ ಒಂದಾಗಿರಬೇಕೆಂದು ಒತ್ತಾಯಪಡಿಸಿದ್ದೆವು. ಆದರೆ ಅವರಿಗೆ ಅವಶ್ಯಕವಾದ ವಿಶೇಷ ಪ್ರಾತಿನಿಧ್ಯದ ವಿವರಗಳನ್ನು ನಾವು ಅದರಲ್ಲಿ ವ್ಯಾಖ್ಯಾನಿಸಿರಲಿಲ್ಲ. ಅಲ್ಪಸಂಖ್ಯಾತರನ್ನು ಕುರಿತ ಉಪಸಮಿತಿಯ ಕಾರ್ಯಕಲಾಪಗಳು ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವ ಮೊದಲೇ ಹಠಾತ್ತನೆ ಕೊನೆಗೊಂಡಿದುದರಿಂದ ನಮಗೆ ವಿವರಗಳನ್ನು ನೀಡಲಾಗಲಿಲ್ಲ. ಈಗ ನಾವು ಈ ಮನವಿಯನ್ನು ಸಲ್ಲಿಸುತ್ತಿದ್ದೇವೆ. ಅಲ್ಪಸಂಖ್ಯಾತರ ಕುರಿತಾದ ಉಪಸಮಿತಿಯು ಈ ವರ್ಷ ಈ ಪ್ರಶ್ನೆಯನ್ನು ಪರಿಶೀಲಿಸುವುದಾದರೆ ಅದರ ಬಗ್ಗೆ ಅವಶ್ಯವಾದ ವಿವರಗಳನ್ನು ಇದರಲ್ಲಿ ಹೊಂದುವುದಾಗಿ ಆಶಿಸಲಾಗಿದೆ.

---

* ಹಿಂದಿನ ವಿಜ್ಞಾಪನಾ ಪತ್ರವನ್ನು ಈ ಸಮ್ಮೇಳನದ ಒಂದನೆಯ ಅಧಿವೇಶನದ ಮೈನಾರಿಟೀಸ್ ಸಬ್ ಕಮಿಟಿಯ ನಡಾವಳಿಗಳ ಪರಿಶಿಷ್ಟದಲ್ಲಿ ನೋಡಿರಿ. ೪ನೆಯ ನವೆಂಬರ್, ೧೯೩೧ರ ಈ ಪುರವಣಿ ವಿಜ್ಞಾಪನಾ ಪತ್ರವು ಮೂಲ ನಡಾವಳಿಗಳ ೧೪೦೯–೧೧೧ನೆಯ ಪುಟಗಳಲ್ಲಿ VIIನೆಯ ಪರಿಶಿಷ್ಟವಾಗಿ ಮುದ್ರಿತವಾಗಿದೆ.

# ೧. ವಿಶೇಷ ಪ್ರಾತಿನಿಧ್ಯದ ವ್ಯಾಪ್ತಿ

## ಎ. ಪ್ರಾಂತೀಯ ಶಾಸಕಾಂಗದಲ್ಲಿ ವಿಶೇಷ ಪ್ರಾತಿನಿಧ್ಯ

(೧) ಬಂಗಾಳ, ಮಧ್ಯಪ್ರಾಂತ್ಯಗಳು, ಅಸ್ಸಾಂ, ಬಿಹಾರ್ ಮತ್ತು ಓರಿಸ್ಸಾ, ಪಂಜಾಬ್ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ನಿಮ್ನವರ್ಗಗಳವರಿಗೆ ಸೈಮನ್ ಆಯೋಗ ಮತ್ತು ಭಾರತೀಯ ಕೇಂದ್ರ ಸಮಿತಿ (ಇಂಡಿಯನ್ ಸೆಂಟ್ರಲ್ ಕಮಿಟಿ) ಮಾಡಿರುವ ಜನಸಂಖ್ಯೆಯ ಅಂದಾಜಿನ ಪ್ರಮಾಣದ ಪ್ರಕಾರ ಪ್ರಾತಿನಿಧ್ಯ ದೊರೆಯಬೇಕು.

(೨) ಮದರಾಸಿನಲ್ಲಿ ನಿಮ್ನವರ್ಗಗಳವರಿಗೆ ಶೇಕಡಾ ಇಪ್ಪತ್ತೈದರಷ್ಟು ಪ್ರಾತಿನಿಧ್ಯವಿರಬೇಕು.

(೩) ಮುಂಬಯಿಯಲ್ಲಿ–

೧. ಮುಂಬಯಿ ಪ್ರಾಂತ್ಯದ ಅಂಗವಾಗಿ ಸಿಂಧ್ ಮುಂದುವರಿದ ಪ್ರಸಂಗದಲ್ಲಿ ನಿಮ್ನವರ್ಗಗಳವರಿಗೆ ಶೇಕಡಾ ಹದಿನಾರರಷ್ಟು ಪ್ರಾತಿನಿಧ್ಯ ದೊರೆಯಬೇಕು.

೨. ಮುಂಬಯಿ ಪ್ರಾಂತ್ಯದಿಂದ ಸಿಂಧ್ ಪ್ರತ್ಯೇಕಗೊಂಡರೆ ನಿಮ್ನ ವರ್ಗಗಳವರಿಗೆ ಈ ಪ್ರಾಂತ್ಯದಲ್ಲಿ ಮುಸಲ್ಮಾನರಿಗಿರುವ ಪ್ರಾತಿನಿಧ್ಯದ ಪ್ರಮಾಣದಷ್ಟೇ ಪ್ರಾತಿನಿಧ್ಯವಿರಬೇಕು. ಏಕೆಂದರೆ ಈ ಎರಡೂ ಕೋಮುಗಳ ಜನಸಂಖ್ಯೆ ಸಮನಾಗಿದೆ.

## ಬಿ. ಸಂಯುಕ್ತ ಶಾಸಕಾಂಗದಲ್ಲಿ ವಿಶೇಷ ಪ್ರಾತಿನಿಧ್ಯ

ಸಂಯುಕ್ತ ಶಾಸಕಾಂಗದ ಎರಡೂ ಸದನಗಳಲ್ಲಿ ನಿಮ್ನವರ್ಗಗಳವರಿಗೆ ಭಾರತದಲ್ಲಿ ಅವರ ಜನ ಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಪ್ರಾತಿನಿಧ್ಯ ದೊರೆಯತಕ್ಕದ್ದು.

## ಆರಕ್ಷಣೆಗಳು (ಮೀಸಲಾತಿ)

ಶಾಸಕಾಂಗಗಳಲ್ಲಿ ಪ್ರಾತಿನಿಧ್ಯದ ಈ ಪ್ರಮಾಣವನ್ನು ಕೆಳಗೆ ಹೇಳಲಾದ ಗ್ರಹಿಕೆಗಳ ಮೇಲೆ ಗೊತ್ತು ಪಡಿಸಿದ್ದೇವೆ:–

(೧) ಸೈಮನ್ ಆಯೋಗ (ಸಂಪುಟ ೧, ಪು. ೪೦) ಮತ್ತು ಭಾರತೀಯ ಕೇಂದ್ರ ಸಮಿತಿ (ವರದಿ ಪುಟ ೪೪)ಗಳು ನೀಡಿರುವ ನಿಮ್ನವರ್ಗಗಳ ಜನಸಂಖ್ಯೆಯ ಅಂಕಿಗಳು ಸ್ಥಾನಗಳ ವಿತರಣೆಗೆ ಸರಿಯಾದ ಆಧಾರ ಎಂದು ಒಪ್ಪಿಕೊಳ್ಳಲಾಗುವುದೆಂದು ನಾವು ಭಾವಿಸಿದ್ದೇವೆ.

(೨) ಸಂಯುಕ್ತ ಶಾಸಕಾಂಗವು ಅಖಿಲ ಭಾರತ ಸ್ವರೂಪದ್ದಾಗಿರುತ್ತದೆ ಎಂದು ನಾವು ಭಾವಿಸಿದ್ದೇವೆ. ಆಗ ಭಾರತೀಯ ಸಂಸ್ಥಾನಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಬೇರ್ಪಡಿಸಿದ ಪ್ರದೇಶ ಗಳಲ್ಲಿನ ನಿಮ್ನವರ್ಗಗಳ ಜನಸಂಖ್ಯೆ, ಗವರ್ನರರ ಪ್ರಾಂತ್ಯಗಳ ಜನಸಂಖ್ಯೆಯೂ ಅಲ್ಲದೆ,

ಸಂಯುಕ್ತ ಶಾಸಕಾಂಗದಲ್ಲಿ ನಿಮ್ನ ವರ್ಗಗಳ ಪ್ರಾತಿನಿಧ್ಯದ ಪ್ರಮಾಣವನ್ನು ಗೊತ್ತುಪಡಿಸುವಲ್ಲಿ ಅತ್ಯಂತ ಸಮರ್ಪಕವಾದ ಮತ್ತು ಹೆಚ್ಚಿನ ಅಂಶವಾಗುವುದೆಂದು ನಾವು ಭಾವಿಸಿದ್ದೇವೆ.

(೩) ಬ್ರಿಟಿಷ್ ಭಾರತ ಪ್ರಾಂತ್ಯಗಳ ಆಡಳಿತ ಕ್ಷೇತ್ರ ಈಗಿರುವಂತೆಯೇ ಮುಂದುವರಿಯುವುದೆಂದು ನಾನು ಭಾವಿಸಿದ್ದೇವೆ.

ಆದರೆ ಜನಸಂಖ್ಯೆಯ ವಿಷಯವಾಗಿ ನಮ್ಮ ಈ ಗ್ರಹಿಕೆಗಳನ್ನು, ಕೆಲವು ಹಿತಾಸಕ್ತಿಗಳು ಈಗಾಗಲೇ ಹೆದರಿಸುತ್ತಿರುವಂತೆ, ಪ್ರಶ್ನಿಸಿದ್ದಾದರೆ ಮತ್ತು ನಿಮ್ನ ವರ್ಗಗಳ ನಿಯಂತ್ರಣ ಹೊಂದಿರದ ಹೊಸ ಜನಗಣತಿಯ ಪ್ರಕಾರ ನಿಮ್ನ ವರ್ಗಗಳ ಜನಸಂಖ್ಯೆಯ ಪ್ರಮಾಣವನ್ನು ಕಡಿಮೆ ಮಾಡಿ ತೋರಿಸಿದರೆ, ಅಥವಾ ಈಗಿನ ಜನಸಂಖ್ಯೆಯ ಪ್ರಮಾಣವನ್ನು ಕಡಿಮೆ ಮಾಡಿ ತೋರಿಸಿದರೆ, ಅಥವಾ ಈಗಿನ ಜನಸಂಖ್ಯೆಯಲ್ಲಿರುವ ಸಮತೋಲನವನ್ನು ಭಂಗಗೊಳಿಸುವ ರೀತಿಯಲ್ಲಿ ಪ್ರಾಂತ್ಯಗಳ ಆಡಳಿತ ಕ್ಷೇತ್ರಗಳನ್ನು ಬದಲಾಯಿಸಿದರೆ ನಿಮ್ನ ವರ್ಗಗಳವರು ತಮ್ಮ ಪ್ರಾತಿನಿಧ್ಯದ ಪ್ರಮಾಣವನ್ನು ಪುನರ್ ಪರಿಶೀಲಿಸುವ ಮತ್ತು ಹೆಚ್ಚಿನ ಪ್ರಾಶಸ್ತ್ಯ ಕೇಳುವ ಹಕ್ಕನ್ನು ಕಾಯ್ದಿರಿಸಿಕೊಳ್ಳಬಹುದಾಗಿದೆ. ಅದೇ ರೀತಿ, ಅಖಿಲ ಭಾರತ ಸಂಯುಕ್ತ ರಾಜ್ಯ ಅಸ್ತಿತ್ವಕ್ಕೆ ಬಾರದೇ ಹೋದರೆ, ಸಂಯುಕ್ತ ಶಾಸಕಾಂಗದಲ್ಲಿ ಆ ಆಧಾರದ ಮೇಲೆ ತಮ್ಮ ಪ್ರಾತಿನಿಧ್ಯದ ಪ್ರಮಾಣದಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು ಅವರು ಒಪ್ಪುವರು.

## II. ಪ್ರಾತಿನಿಧ್ಯದ ವಿಧಾನ

೧. ನಿಮ್ನ ವರ್ಗಗಳವರು ಪ್ರಾಂತೀಯ ಮತ್ತು ಕೇಂದ್ರ ಶಾಸಕಾಂಗಗಳಿಗೆ ತಮ್ಮ ಮತದಾರರಲ್ಲಿ ಪ್ರತ್ಯೇಕ ಚುನಾವಣಾ ವ್ಯವಸ್ಥೆಯ ಪ್ರಕಾರ ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕು ಹೊಂದತಕ್ಕದ್ದು.

ಸಂಯುಕ್ತ ಅಥವಾ ಕೇಂದ್ರ ಶಾಸಕಾಂಗದ ಮೇಲ್ಮನೆಗೆ ಪ್ರಾಂತೀಯ ಶಾಸಕಾಂಗದ ಸದಸ್ಯರಿಂದ ಅಪ್ರತ್ಯಕ್ಷ ಚುನಾವಣೆಗಳಿರಬೇಕೆಂದು ನಿರ್ಣಯಿಸಿದ್ದೇ ಆದರೆ, ನಿಮ್ನವರ್ಗಗಳವರು ಮೇಲ್ಸದನದಲ್ಲಿ ತಮ್ಮ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಮಾತ್ರ ಮುಂದೆ ಮಾಡಬಹುದಾದ ಅನುಪಾತ ಪ್ರಾತಿನಿಧ್ಯ ಪದ್ಧತಿಯ ವ್ಯವಸ್ಥೆಯಲ್ಲಿ ಅವರಿಗೆ ತಮ್ಮ ಸ್ಥಾನಗಳ ಧ್ಯೇಯಾಂಶದ ಭರವಸೆ ದೊರೆತರೆ ಅವರು ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ಕೈಬಿಡಲು ಒಪ್ಪುವರು.

೨. ಈ ಕೆಳಗಿನ ಕರಾರುಗಳನ್ನು ಈಡೇರಿಸದ ಹೊರತು ನಿಮ್ನ ವರ್ಗಗಳವರಿಗಾಗಿರುವ ಪ್ರತ್ಯೇಕ ಚುನಾವಣಾ ವ್ಯವಸ್ಥೆಯ ಬದಲು ಆರಕ್ಷಿತ ಸ್ಥಾನಗಳಿಂದ ಕೂಡಿದ ಸಂಯುಕ್ತ ಚುನಾವಣಾ ವ್ಯವಸ್ಥೆಯನ್ನು ಜಾರಿಗೆ ತರಲಾಗದು.

(ಎ) ಸಂಬಂಧಪಟ್ಟ ಶಾಸಕಾಂಗದಲ್ಲಿ ತಮ್ಮ ಪ್ರತಿನಿಧಿಗಳ ಬಹುಮತದ ಬೇಡಿಕೆಯ ಪ್ರಕಾರ ನಡೆಸಲಾದ ಮತದಾರರ ಅಭಿಪ್ರಾಯ ಸಂಗ್ರಹಣೆಯಲ್ಲಿ ನಿಮ್ನ ವರ್ಗಗಳ ಸದಸ್ಯರು ನಿಚ್ಚಳ ಬಹುಮತ ಮತದಾನದ ಹಕ್ಕನ್ನು ಹೊಂದಿರಬೇಕು.

(ಬಿ) ಇಪ್ಪತ್ತು ವರ್ಷಗಳವರೆಗೆ ಮತ್ತು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಅಸ್ತಿತ್ವಕ್ಕೆ ಬರುವ ವರೆಗೆ ಅಂತಹ ಯಾವುದೇ ಮತದಾರರ ಅಭಿಪ್ರಾಯ ಸಂಗ್ರಹಣೆಯನ್ನು ಕೈಗೆತ್ತಿಕೊಳ್ಳ ಕೂಡದು.

## ನಿಮ್ನ ವರ್ಗಗಳ ಅರ್ಥ ನಿರೂಪಣೆ ಅವಶ್ಯಕತೆ

ಈ ಹಿಂದೆ ಪ್ರಾಂತೀಯ ಶಾಸಕಾಂಗಗಳಲ್ಲಿ ನಿಮ್ನವರ್ಗಗಳಿಗೆ ಸೇರದವರನ್ನು ನಿಮ್ನ ವರ್ಗಗಳ ಪ್ರತಿನಿಧಿಗಳನ್ನಾಗಿ ನಾಮಕರಣ ಮಾಡುವ ಮೂಲಕ ನಿಮ್ನವರ್ಗಗಳ ಪ್ರಾತಿನಿಧ್ಯದ ಸಂಪೂರ್ಣ ದುರುಪಯೋಗಪಡಿಸಿಕೊಳ್ಳಲಾಗಿದೆ ಮತ್ತು ಅಂತಹ ನಿದರ್ಶನಗಳಿಗೆ ಕೊರತೆ ಇಲ್ಲ. ನಿಮ್ನವರ್ಗಗಳನ್ನು ಪ್ರತಿನಿಧಿಸುವುದಕ್ಕಾಗಿ ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರವನ್ನು ಗವರ್ನರರಿಗೆ ನೀಡಿದ್ದ ಕಾರಣ ಇಂತಹ ದುರುಪಯೋಗ ಸಾಧ್ಯವಾಗಿತ್ತು. ಅವರು ನಾಮಕರಣಮಾಡುವಾಗ ನಿಮ್ನವರ್ಗಗಳಿಗೆ ಸೇರಿದವರನ್ನೇ ನಾಮಕರಣ ಮಾಡಬೇಕೆಂಬ ನಿಯಮವಿರಲಿಲ್ಲ. ಹೊಸ ಸಂವಿಧಾನದಲ್ಲಿ ನಾಮಕರಣದ ಬದಲು ಚುನಾವಣೆಯಾಗಬೇಕಾಗುವುದರಿಂದ ಅಂತಹ ದುರುಪಯೋಗಕ್ಕೆ ಅವಕಾಶವಿರುವುದಿಲ್ಲ. ಆದರೆ (ನಿಮ್ನವರ್ಗಗಳವರ) ವಿಶೇಷ ಪ್ರಾತಿನಿಧ್ಯದ ಉದ್ದೇಶವನ್ನು ವಿಫಲಗೊಳಿಸುವಂತೆ ಮಾಡುವ ಯಾವುದೇ ದೋಷವು ಉಳಿಯದಂತೆ ಮಾಡಲು ನಾವು ಈ ಕೆಳಗಿನ ವಿಧಾನಗಳನ್ನು ಸೂಚಿಸುತ್ತೇವೆ.

(೧) ನಿಮ್ನ ವರ್ಗಗಳವರಿಗೆ ತಮ್ಮದೇ ಆದ ಪ್ರತ್ಯೇಕ ಚುನಾಯಕ ವ್ಯವಸ್ಥೆಯನ್ನೂ ಅಲ್ಲದೇ ಅವರು ತಮ್ಮ ಕೋಮುಗಳಿಗೆ ಸೇರಿದವರೇ ತಮ್ಮನ್ನು ಪ್ರತಿನಿಧಿಸುವ ಹಕ್ಕನ್ನು ಹೊಂದಿರತಕ್ಕದ್ದು.

(೨) ಪ್ರತಿಯೊಂದು ಪ್ರಾಂತ್ಯದಲ್ಲಿ ನಿಮ್ನವರ್ಗಗಳವರೆಂದರೆ, ಯಾವುದೇ ರೀತಿಯ ಅಸ್ಪೃಶ್ಯತೆಗೆ ಗುರಿಯಾದ ಮತ್ತು ಚುನಾವಣೆಗಳ ಉದ್ದೇಶಕ್ಕಾಗಿಯೇ ಸಿದ್ಧಪಡಿಸಿದ ಪರಿಶಿಷ್ಟರಲ್ಲಿ ತಮ್ಮ ಹೆಸರಿನೊಂದಿಗೆ ವಿವರಿಸಲಾದ ಕೋಮುಗಳಿಗೆ ಸೇರಿದ ವ್ಯಕ್ತಿಗಳೆಂದು ಕಟ್ಟುನಿಟ್ಟಾಗಿ ಉಲ್ಲೇಖಿಸಿ ದವರಾಗಿರಬೇಕು.

## ಹೆಸರುಗಳ ಪಟ್ಟಿ

ಸಮಸ್ಯೆಯ ಈ ಸಂಗತಿಯನ್ನು ಪರಿಶೀಲಿಸುವಾಗ ಸಧ್ಯ ಅಸ್ತಿತ್ವದಲ್ಲಿರುವ ನಿಮ್ನ ವರ್ಗಗಳ ಹೆಸರುಗಳ ಪಟ್ಟಿಯ ಬಗ್ಗೆ ಈ ವಿಷಯದಲ್ಲಿ ಆಸಕ್ತಿ ಹೊಂದಿರುವ ನಿಮ್ನವರ್ಗಗಳ ಸದಸ್ಯರು ಮತ್ತು ಅವರ ಬಗ್ಗೆ ಆಸಕ್ತಿ ಹೊಂದಿರುವ ಇತರರೂ ಕೂಡ ಆತಂಕ ವ್ಯಕ್ತಪಡಿಸಿರುತ್ತಾರೆ. ಆ ಹೆಸರುಗಳ ಪಟ್ಟಿಯು ಕೀಳು ಮತ್ತು ಅಪಮಾನಕರ ರೀತಿಯಾಗಿದೆ. ಆದ್ದರಿಂದ ಹೊಸ ಸಂವಿಧಾನ ಸಿದ್ಧಪಡಿಸುವ ಈ ಸಂದರ್ಭದ ಉಪಯೋಗ ತೆಗೆದುಕೊಂಡು ಅಧಿಕೃತ ಉದ್ದೇಶಗಳಿಗಾಗಿ ಈಗ ಇರುವ ಹೆಸರುಗಳ ಪಟ್ಟಿಯಲ್ಲಿ ಬದಲಾವಣೆ ಗಳನ್ನು ಮಾಡಬೇಕು. ಅವರನ್ನು ನಿಮ್ನವರ್ಗಗಳವರೆಂದು ಕರೆಯುವ ಬದಲು "ನಿರ್ಜಾತಿ ಹಿಂದೂಗಳು", "ಪ್ರೊಟೆಸ್ಟೆಂಟ್ (ಪ್ರತಿಭಟಿಸಿದ) ಹಿಂದೂಗಳು" ಅಥವಾ "ಅನಂಗೀಕೃತ ಹಿಂದೂಗಳು" ಅಥವಾ ಇನ್ನಾವು ದಾದರೂ ಹೆಸರಿನಿಂದ ಕರೆಯಬಹುದು. ಯಾವುದೇ ನಿರ್ದಿಷ್ಟ ಹೆಸರಿಗಾಗಿ ಒತ್ತಾಯಪಡಿಸುವ ಅಧಿಕಾರ ನಮಗಿಲ್ಲ. ಅವುಗಳ ಸೂಚನೆ ಮಾತ್ರ ಮಾಡಬಲ್ಲೆವು. ಸರಿಯಾದ ಸಮಾಧಾನ ನೀಡಿದ್ದೇ ಆದರೆ, ನಿಮ್ನ ವರ್ಗಗಳವರು ತಮಗೆ ಅತ್ಯಂತ ಸೂಕ್ತವೆನಿಸುವ ಹೆಸರನ್ನು ಸ್ವೀಕರಿಸಲು ಹಿಂಜರಿಯುವುದಿಲ್ಲ ಎಂದು ನಾವು ನಂಬಿದ್ದೇವೆ.

ಭಾರತದಾದ್ಯಂತ ಅತಿ ಹೆಚ್ಚು ಜನಸಂಖ್ಯೆಯಲ್ಲಿ ನಿಮ್ನವರ್ಗಗಳವರಿಂದ ಈ ವಿಜ್ಞಾಪನಾ ಪತ್ರದಲ್ಲಿ ಸಲ್ಲಿಸಲಾಗಿರುವ ಬೇಡಿಕೆಗಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸುವ ತಂತಿ ಸಂದೇಶಗಳು ನಮಗೆ ಬಂದಿವೆ.

# ಭಾರತದಲ್ಲಿ ಸಂವಿಧಾನಾತ್ಮಕ ಸುಧಾರಣೆ ಕುರಿತ ಸಂಯುಕ್ತ ಸಮಿತಿಯ ಎದುರು ಪಡೆಯಲಾದ ಸಾಕ್ಷಿ

ಡಾ. ಬಿ. ಆರ್. ಅಂಬೇಡ್ಕರರು ವಿಚಾರಣೆ ಮಾಡಿದ ಸಾಕ್ಷಿಗಳು

**(೧) ಸರ್ ಪ್ಯಾಟ್ರಿಕ್ ಜೇಮ್ಸ್ ಫ್ಯಾಗನ್, ಕೆ.ಸಿ.ಐ.ಇ.ಎಸ್.ಐ., ಎಫ್.ಆರ್.ಎ.ಎಸ್., ಮಿ.ಈ.ಬಿ. ಲವರ್ಕ್, ಮಿಸ್ಟರ್ ವಿಲ್ ಫ್ರೆಡ್ ಹೆರಾಲ್ಡ್ ಷೂಬರ್ಟ್, ಮಿಸ್ಟರ್ ಯುಸ್ಟೇಸ್ ಆರ್ಥರ್ ಸೆಸಿಲ್ ಕಿಮಗ್, ಮಿಸ್ಟರ್ ಹೆನ್ರಿ ರಾಬರ್ಟ್ ಲ್ಯಾನ್ಸ್ ಲೋಟ್ ನ್ಯೂಮನ್ ಮತ್ತು ಮಿಸ್ಟರ್ ಸೇಲ್, ಯುರೋಪಿಯನ್ ಸರಕಾರಿ ಸೇವಾ ವರ್ಗಗಳವರ, ಭಾರತೀಯ ಪೋಲೀಸ್ ಸಂಘ ಮತ್ತು ಸಿವಿಲ್ ಇಂಜಿನಿಯರರ ಸಂಘದ ಪರವಾಗಿ.**

* ಡಾ. ಬಿ. ಆರ್. ಅಂಬೇಡ್ಕರ್: ಭಾರತದ ಸಾರ್ವಜನಿಕ ಸೇವೆಗಳ ಬಗ್ಗೆ ಭಾರತದ ಪತ್ರಿಕೆಗಳು ಮತ್ತು ಭಾರತದ ರಾಜಕಾರಣಿಗಳಿಂದ ಹೆಚ್ಚಿನ ವಿರೋಧವಿದೆ ಎಂದು ಈಗ ಸ್ವಲ್ಪ ಹೊತ್ತಿನ ಮುಂಚೆ ನೀವು ಹೇಳಿದಿರಲ್ಲವೇ?

ಸರ್. ಪಿ. ಜೆ. ಫ್ಯಾಗನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಲೀ ಕಮೀಷನ್ ವರದಿಯ ೧೩೨ನೆಯ ಪುಟದ ೧೦ನೆಯ ಪ್ಯಾರಾದಲ್ಲಿ ಸೇರಿಸಲಾಗಿರುವ ಸರ್ ರೆಜಿನಾಲ್ಡ್ ಕ್ರ್ಯಾಡಕ್‌ರವರ ಸೂಚನಾ ಪತ್ರದ ಕೆಳಗಿನ ಕೆಲ ಪಂಕ್ತಿಗಳನ್ನು ನಿಮಗೆ ಓದಿ ಹೇಳುವೆ. ಅದರಲ್ಲಿ ಈ ಕೆಳಗಿನ ಪ್ಯಾರಾದತ್ತ ತಮ್ಮ ಗಮನ ಸೆಳೆಯಬಯಸುತ್ತೇನೆ: "ನಮ್ಮೆದುರಿಗೆ ಸಾಕ್ಷ್ಯ ನೀಡಿದ ಅನೇಕರು ಹೊಸ ಶಾಸಕಾಂಗಗಳು ಆಗಿಂದಾಗ್ಗೆ ತೋರುತ್ತಿರುವ ವಿರೋಧವು ಅಖಿಲ ಭಾರತ ಸೇವೆಗಳನ್ನು ತಮ್ಮ ಮೇಲೆ ಹೊರಗಿನಿಂದ ಹೇರಲಾಗುತ್ತಿದೆ ಮತ್ತು ಇವುಗಳಿಗೆ ಹೊಸದಾಗಿ ಮಾಡುವ ನೇಮಕಾತಿಗಳಿಂದ ಈ ಪಟ್ಟಭದ್ರ ಹಿತಾಸಕ್ತಿಗಳನ್ನು ಅನಿರ್ದಿಷ್ಟವಾಗಿ ಮುಂದುವರಿಸಲು ಸಹಾಯಕವಾಗುತ್ತವೆ ಎಂಬ ಅಂಶದಿಂದ ಉಂಟಾಗಿದೆ ಎಂದು ನಂಬಿದ್ದಾರೆ. ಆದರೆ ಅವುಗಳ ಮೇಲಣ ನಿಯಂತ್ರಣ ಸೆಕ್ರೆಟರಿ ಆಫ್ ಸ್ಟೇಟ್‌ರವರಿಂದ ಭಾರತ ಸರಕಾರಕ್ಕೆ ಅಥವಾ ವರ್ಗಾಯಿಸಲಾದ ವಿಷಯಗಳಲ್ಲಿ ಸ್ಥಳೀಯ ಸರಕಾರಕ್ಕೆ ಸೇರಿದ್ದೇ ಆದರೆ, ಎಲ್ಲಾ ವಿಧದ ಪಕ್ಷಪಾತ ಮತ್ತು ವಿರೋಧ ಇಲ್ಲದಾಗುವುದು." ನೀವು ಈ ಹೇಳಿಕೆಯನ್ನು ಒಪ್ಪಿಕೊಳ್ಳುವಿರಾ ಹೇಗೆ ಎಂದು ನಾನು ತಿಳಿಯಬಯಸುತ್ತೇನೆ.

ಸರ್ ಪಿ. ಜೆ. ಫ್ಯಾಗನ್: ಇಲ್ಲ, ಈ ಹೇಳಿಕೆಯನ್ನು ಒಪ್ಪಿಕೊಳ್ಳಲು ಸಾಕಷ್ಟು ಆಧಾರಗಳಿವೆ ಎಂದು ನನಗನ್ನಿಸುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ಅದು ಒಳ್ಳೆಯದೇ. ಆದರೆ ಮನೋಭಾವನೆಯಲ್ಲಿ ಶೀಘ್ರ ಬದಲಾವಣೆಯುಂಟಾಗುವುದೆಂಬ ಈ ಹೇಳಿಕೆಯನ್ನು ಒಪ್ಪಿಕೊಳ್ಳಲು ಸಂಘ-ಸಂಸ್ಥೆಗಳಿಗೆ ಸಾಕಷ್ಟು ಆಧಾರಗಳಿಲ್ಲ ಎಂದು ನನಗನಿಸುತ್ತದೆ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ.II–ಎ, ೧೩ ಜೂನ್ ೧೯೩೩, ಪುಟಗಳು ೬೯–೭೦

ಡಾ. ಬಿ. ಆರ್. ಅಂಬೇಡ್ಕರ್: ನೀವು ಭಾರತದ ಶಾಸಕಾಂಗದ ನಿಯಂತ್ರಣದಿಂದ ಹೊರಗುಳಿಯ ಬಯಸುವ ಸಂಗತಿಯೇ ಮತ್ತು ಹೊಸ ಸರಕಾರವೇ ನಿಮ್ಮ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಉದ್ರೇಕಗೊಳಿಸುವುದೆಂದು ನಿಮಗನಿಸುವುದಿಲ್ಲವೇ?

ಮಿಸ್ಟರ್ ಡಬ್ಲ್ಯೂ. ಹೆಚ್. ಷೊಬರ್ಟ್: ಮಾನ್ಯರೆ, ನಾವು ನಿಯಂತ್ರಣದಿಂದ ಹೊರಗೆ ಉಳಿಯಲು ಬಯಸುವುದಿಲ್ಲ. ನಾವು ಸಧ್ಯದಲ್ಲಿರುವ ನಮ್ಮ ಸಂಚಿತ ಹಕ್ಕುಗಳು, ನಮ್ಮ ನಿವೃತ್ತಿ ವೇತನಗಳು ಮತ್ತು ನಮ್ಮ ಕುಟುಂಬ ವೇತನಗಳನ್ನು ಸುರಕ್ಷಿತಗೊಳಿಸಬೇಕೆಂದು ಮಾತ್ರ ಬಯಸುತ್ತೇವೆ. ನಾವು ನಿಯಂತ್ರಣಕ್ಕೆ ಎಳ್ಳಷ್ಟೂ ಹೊರತಾಗಬಯಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಉದಾಹರಣೆಗಾಗಿ, ಈ ಸಮ್ಮೇಳನದಲ್ಲಿ ಭಾರತೀಯ ನಾಗರಿಕ ಸೇವಾ ವರ್ಗಗಳವರ ನ್ಯಾಯಸಮ್ಮತ ಹಕ್ಕುಗಳು ಎಂದು ಮನ್ನಿಸಲಾದ ಎಲ್ಲಾ ಹಕ್ಕುಗಳನ್ನು ಭಾರತೀಯ ಶಾಸಕಾಂಗಗಳು ಸ್ಥಳೀಯ ಅಥವಾ ಕೇಂದ್ರ ಶಾಸಕಾಂಗಗಳು ಪಾಸು ಮಾಡುವ ಕಾಯ್ದೆಗಳ ಮುಖಾಂತರ ನಿಮಗೆ ಕೊಡಮಾಡುವ ಭರವಸೆ ನೀಡುತ್ತವೆ ಎಂದು ಭಾವಿಸೋಣ. ಅದರಿಂದ ನಿಮಗೆ ಸಾಕಷ್ಟು ರಕ್ಷಣೆ ದೊರೆತಂತಾಗುವುದೇ?

ಸರ್ ಪಿ. ಜೆ. ಫ್ಯಾಗನ್: ನಮಗೆ ಹಣಕಾಸಿನ ಪರಿಸ್ಥಿತಿಯ ಭಯವಿದೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಬೇರೆ ವಿಷಯ. ಭಾರತೀಯ ಶಾಸಕಾಂಗವು ನಿಮ್ಮ ಸೇವೆಯಿಂದಾಗಿ ಸಾಕಷ್ಟು ಹಣ ದೊರಕಿಸಿಕೊಳ್ಳಬಲ್ಲುದೇ ಎಂಬುದು ಬೇರೆ ವಿಷಯವಲ್ಲವೇ?

ಸರ್ ಪಿ. ಜೆ. ಫ್ಯಾಗನ್: ಖಂಡಿತವಾಗಿ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ನಿಮ್ಮ ಸೇವಾ ಕರಾರುಗಳ ವಿಷಯವಾಗಿ ನಾನು ಒತ್ತಾಯಿಸುವುದೇನೆಂದರೆ ಅವುಗಳನ್ನು ಭಾರತೀಯ ಶಾಸಕಾಂಗಗಳ ಕಾಯ್ದೆಗಳ (ಸೆಕ್ರೆಟರಿ ಆಫ್ ಸ್ಟೇಟ್–ಇನ್–ಕೌನ್ಸಿಲ್‌ರವರು ಮಾಡುವ ನಿಯಮಗಳ ಮೂಲಕ) ಪ್ರಕಾರ ಕ್ರಮಪಡಿಸಿದ್ದೇ ಆದರೆ ಅದರಿಂದ ನಿಮಗೆ ಸಾಕಷ್ಟು ರಕ್ಷಣೆ ದೊರೆಯುವುದೊ ಇಲ್ಲವೋ?

ಸರ್ ಪಿ. ಜೆ. ಫ್ಯಾಗನ್: ಇಲ್ಲ.

ಮಿಸ್ಟರ್ ಡಬ್ಲ್ಯೂ.ಹೆಚ್. ಷೊಬರ್ಟ್: ಅಂತಹ ಕಾಯ್ದೆಗಳನ್ನು ಮುಂದೆ ಬರುವ ತೀವ್ರಗಾಮಿ ಸರಕಾರಗಳು ರದ್ದುಪಡಿಸಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಅಂತಹ ಕಾಯ್ದೆಗಳನ್ನು ಕೂಡಲೆ ರದ್ದುಪಡಿಸದಂತೆ ಕೆಲವು ನಿಬಂಧನೆ ಗಳನ್ನು ಹಾಕಿದರೆ?

ಸರ್ ಪಿ. ಜೆ. ಫ್ಯಾಗನ್: ಅದರಿಂದ ಸಾಕಷ್ಟು ರಕ್ಷಣೆ ಒದಗಲಾರದೆಂದು ಸಂಘವು ಭಾವಿಸುವುದಾಗಿ ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಭಾರತದಲ್ಲಿ ಪತ್ರಿಕೆಗಳು ಮತ್ತು ರಾಜಕಾರಣಿಗಳು ನಿಮ್ಮ ವಿರುದ್ಧ ವಿದ್ದಾರೆಂದು ನೀವು ದೊಡ್ಡದು ಮಾಡಿ ಹೇಳುತ್ತಿರುವ ಸಂಗತಿಯನ್ನೇ ನಾನು ಈಗ ಪ್ರಸ್ತಾಪಿಸ ಬಯಸುತ್ತೇನೆ. ಇದರಿಂದ ನೀವು ಶಾಸಕಾಂಗ ಮತ್ತು ಪತ್ರಿಕೆಗಳಲ್ಲಿ ವ್ಯಕ್ತವಾಗುವ ನ್ಯಾಯಸಮ್ಮತವಾದ ಸಾರ್ವಜನಿಕಾಭಿಪ್ರಾಯದ ವ್ಯಾಪ್ತಿಯಿಂದ ಮುಕ್ತರಾಗಿರಬೇಕೆಂಬ ಬಯಕೆಯಿಂದ ಈ ಸಂರಕ್ಷಣೆಗಳನ್ನು ಕೇಳುತ್ತಿದ್ದೇವೆಂದು ಅರ್ಥವಾಗುವುದಿಲ್ಲವೇ?

ಸರ್ ಪಿ. ಜೆ. ಫ್ಯಾಗ್ನ: ಇಲ್ಲ. ಆ ಸಂರಕ್ಷಣೆಗಳ ಕಾರಣ ನಾವು ಸಾರ್ವಜನಿಕಾಭಿಪ್ರಾಯದ ವ್ಯಾಪ್ತಿಯಿಂದ ಖಂಡಿತವಾಗಿಯೂ ಹೊರಗುಳಿಯುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅದರಿಂದ ನಾವು ಆರೋಗ್ಯಕರ ಸಾರ್ವಜನಿಕಾಭಿಪ್ರಾಯದ ವ್ಯಾಪ್ತಿಯಿಂದ ಹೊರಗುಳಿಯುತ್ತೇವೆಂದು ಖಂಡಿತವಾಗಿಯೂ ನನಗನಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಪ್ರಶ್ನೆಯನ್ನು ನಿಮಗೆ ಪುನಃ ಹಾಕಬಯಸುತ್ತೇನೆ. ನೀವು ಭಾರತೀಯ ಮಂತ್ರಿಗಳ ಸಮ್ಮತಿಯಿಂದ ಭಾರತದ ಶಾಸಕಾಂಗದಿಂದ ಮಾಡಲಾದ ಕಾನೂನುಗಳ ನಿಯಂತ್ರಣಕ್ಕೊಳಪಟ್ಟಿದ್ದೇ ಆದರೆ, ಪತ್ರಿಕೆಗಳೂ ಅಥವಾ ಸಾರ್ವಜನಿಕರು ನಿಮ್ಮನ್ನು ಟೀಕಿಸಿದಾಗ ನಿಮಗೆ ಹೊರಗುಳಿದಾಗ ದೊರೆಯುವುದಕ್ಕಿಂತ ಹೆಚ್ಚಿನ ರಕ್ಷಣೆ ಮಂತ್ರಿಗಳಿಂದಲೇ ದೊರೆಯುವುದೆಂದು ನಿಮಗನಿಸುವುದಿಲ್ಲವೇ?

ಸರ್ ಪಿ. ಜೆ. ಫ್ಯಾಗನ್: ಸಂಘವು ಈ ರೀತಿ ಯೋಚಿಸುವುದೆಂದು ನನಗನಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನೀವು ನೀಡಿದ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಸೈಮನ್ ಆಯೋಗದ ವರದಿಯಿಂದ ಕೆಲವು ಆಯ್ದ ಭಾಗಗಳನ್ನು ಈಗ ತಾನೇ ಓದಿದಿರಿ. ಸರ್ ಜಾನ್ ಸೈಮನ್‌ರವರು ಕಾನೂನು ಮತ್ತು ಸುವ್ಯವಸ್ಥೆಯ ವಿಷಯವನ್ನು ಆರಕ್ಷಿತ ವಿಷಯವನ್ನಾಗಿ ಮುಂದುವರಿಸಿದ ಪಕ್ಷದಲ್ಲಿ ಅದು ಈ ಇಲಾಖೆಯಲ್ಲಿ ಕೆಲಸ ಮಾಡುವ ಸೇವಾ ವರ್ಗಗಳನ್ನು ತೀವ್ರ ಟೀಕೆಗೊಳಪಡಿಸುವುದೆಂಬ ನಿರ್ಣಯಕ್ಕೆ ಬಂದದ್ದರಿಂದಲೇ ಅವರು ತಮ್ಮ ಇಷ್ಟಕ್ಕೆ ವಿರುದ್ಧವಾಗಿ ಅದನ್ನು ವರ್ಗಾಯಿಸಲು ಶಿಫಾರಸು ಮಾಡಿದುದು ನಿಜವಲ್ಲವೇ?

ಸರ್ ಪಿ. ಜೆ. ಫ್ಯಾಗನ್: ಈ ವಿಷಯವನ್ನು ಕುರಿತು ನಾವು ಏನನ್ನೂ ಹೇಳಬಯಸುವುದಿಲ್ಲ. ಅದು ಅತ್ಯಂತ ಚರ್ಚಾಸ್ಪದ ವಿಷಯವಾಗಿದ್ದು ಅದರ ಮೇಲೆ ವಿಭಿನ್ನ ವಿಚಾರಗಳಿವೆ. ಸರ್ ಜಾನ್ ಸೈಮನ್‌ರವರ ವಿಚಾರಗಳಿಗೆ ನಾನು ಜವಾಬ್ದಾರನಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಸೈಮನ್ ಆಯೋಗದ ವರದಿಯಲ್ಲಿ ಈ ವಿಚಾರ ವ್ಯಕ್ತವಾಗಿರುವುದಕ್ಕೆ ಇದೇ ಕಾರಣ ಎಂದು ನೀವು ಒಪ್ಪುತ್ತೀರಾ?

ಸರ್ ಅಸ್ಟಿನ್ ಛೇಂಬರ್ಲಿನ್: ಸಾಕ್ಷಿದಾರರು ಈ ಪ್ರಶ್ನೆಗೆ ಉತ್ತರ ನೀಡುವುದರಿಂದ ಈಗಾಗಲೇ ವಿನಾಯತಿ ಕೇಳಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಉತ್ತರ ನೀಡಲಿಚ್ಛಿಸದಿದ್ದರೆ ನಾನು ಅವರನ್ನು ಆಗ್ರಹಪಡಿಸುವುದಿಲ್ಲ.

ಸರ್ ಅಸ್ಟಿನ್ ಛೇಂಬರ್ಲಿನ್: ಇಲ್ಲಿ ತಮ್ಮ ಸ್ಥಾನಮಾನ ಮತ್ತು ಬೇಡಿಕೆಗಳ ಬಗ್ಗೆ ಮಾತನಾಡಲು ಬಂದಿರುವ ಮತ್ತು ಭಾರತದಲ್ಲಿ ಸಾರ್ವತ್ರಿಕ ಸುಧಾರಣೆಗಳ ಮೇಲಣ ಚರ್ಚೆಯಲ್ಲಿ ಭಾಗವಹಿಸುವ ಉದ್ದೇಶ ಹೊಂದಿರದ ನಾಗರಿಕ ಸೇವಾ ವರ್ಗಗಳ ಪ್ರತಿನಿಧಿಗಳಿಂದ ಉತ್ತರ ಪಡೆಯುವಂತಹ ಪ್ರಶ್ನೆ ಇದಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಕಾನೂನು ಮತ್ತು ಸುವ್ಯವಸ್ಥೆ ಇಲಾಖೆಯನ್ನು ವರ್ಗಾಯಿಸಲು ಸರ್ ಜಾನ್ ಸೈಮನ್‌ರವರು ನೀಡಿದ ಕಾರಣ ಮತ್ತು ಉದ್ದೇಶವೆಂದರೆ, ಈ ಇಲಾಖೆಯನ್ನು ಶಾಸಕಾಂಗ ಮತ್ತು ಮಂತ್ರಿಗಳ ನಿಯಂತ್ರಣದಿಂದ ಹೊರತುಪಡಿಸಿದರೆ ಅದನ್ನು ಪತ್ರಿಕೆಗಳು ಮತ್ತು ಸಾರ್ವಜನಿಕರ ಟೀಕೆಗೆ ಈಡು ಮಾಡಿದಂತಾಗುತ್ತದೆ.

ವೈಕೌಂಟ್ ಬರ್ನ್ ಹ್ಯಾಮ್: ಡಾ. ಅಂಬೇಡ್ಕರರ ಹೇಳಿಕೆ ಅತ್ಯಂತ ತಪ್ಪು ಅಭಿಪ್ರಾಯ ಕೊಡುವುದಾಗಿದೆ ಎಂದು ನಾನು ಶಾಸನಬದ್ಧ ಆಯೋಗ (ಸೈಮನ್ ಆಯೋಗ)ದ ಸದಸ್ಯನಾಗಿ ಹೇಳುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಅದನ್ನು ತಪ್ಪಾಗಿ ತಿಳಿದುಕೊಂಡಿರುವ ಸಾಧ್ಯತೆ ಇದೆ.

## (೨)

## ಶ್ರೀಯುತ ಸಚ್ಚಿದಾನಂದ ಸಿನ್ಹಾ, ಬ್ಯಾರಿಸ್ಟರ್–ಎಟ್–ಲಾ, ಎಂಐ.ಸಿ

* ಡಾ. ಬಿ. ಆರ್. ಅಂಬೇಡ್ಕರ್: ನಾನು ಮೊಟ್ಟ ಮೊದಲು ಗವರ್ನರರ ವಿಶೇಷ ಅಧಿಕಾರಗಳ ಬಗ್ಗೆ ಅದರಲ್ಲಿಯೂ ವಿಶೇಷವಾಗಿ ಶಾಂತಿ ಮತ್ತು ಸೌಹಾರ್ದತೆಗೆ ವಿಪತ್ತೊದಗುವುದನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಲು ಅವರಿಗಿರುವ ಅಧಿಕಾರದ ಬಗ್ಗೆ ನಿಮಗೆ ಒಂದು ಪ್ರಶ್ನೆ ಕೇಳಬಯಸುತ್ತೇನೆ. ವರ್ಗಾಯಿಸಲಾದ ವಿಷಯಗಳ ಆಡಳಿತದಲ್ಲಿ ಇಂದಿನ ಪರಿಸ್ಥಿತಿಯತ್ತ ನಿಮ್ಮ ಗಮನ ಸೆಳೆಯಬಯಸುವೆ. ನಿಮ್ಮ ಹತ್ತಿರ ಭಾರತ ಸರಕಾರ ಕಾಯ್ದೆಯ (ಪ್ರತಿ) ಇದೆಯೇ?

ಶ್ರೀಯುತ ಸಚ್ಚಿದಾದನಂದ ಸಿಮ್ಹಾ: ಹೌದು (ಇದೆ).

ಡಾ. ಬಿ. ಆರ್. ಅಂಬೇಡ್ಕರ್: ಭಾರತ ಸರಕಾರ ಕಾಯ್ದೆಯ ೫೨ನೆಯ ವಿಭಾಗವನ್ನು ಪರಾಮರ್ಶಿಸುವಿರಾ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಆಗಲಿ.

ಡಾ. ಬಿ. ಆರ್. ಅಂಬೇಡ್ಕರ್: ನಮಗೆ ಈಗಾಗಲೇ ಗೊತ್ತಿರುವ ಭಾರತ ಸರಕಾರ ಕಾಯ್ದೆಯ ೪೫ನೆಯ ವಿಭಾಗದಲ್ಲಿ ನೀಡಲಾಗಿರುವ ವರ್ಗಾಯಿಸಲಾದ ಮತ್ತು ಆರಕ್ಷಿತ ವಿಷಯಗಳ ವರ್ಗೀಕರಣದತ್ತ ನಿಮ್ಮ ಗಮನ ಸೆಳೆಯಬಯಸುವುದಿಲ್ಲ. ನಾನು ನಿಯಂತ್ರಣದ ಪ್ರಶ್ನೆಯನ್ನು ಮಾತ್ರ ಪರಿಶೀಲಿಸುವೆ. ನೀವು ೫೨ನೆಯ ವಿಭಾಗವನ್ನು ತೆಗೆದುಕೊಂಡರೆ ಅದರ ಉಪ ವಿಭಾಗ (೧)ರಲ್ಲಿ: "…..ಒಂದು ಪ್ರಾಂತ್ಯದ ಗವರ್ನರರು ಪ್ರಕಟಣೆಯ ಮೂಲಕ ತನ್ನ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರಲ್ಲದವರನ್ನೂ ಮಂತ್ರಿಗಳನ್ನಾಗಿ ನೇಮಕ ಮಾಡಬಹುದು" ಇತ್ಯಾದಿಯಾಗಿ ಹೇಳಲಾಗಿದೆಯಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಭಾರತ (೩)ನೆಯ ಉಪ ವಿಭಾಗವನ್ನು ತೆಗೆದುಕೊಂಡಾಗ ಅದರಲ್ಲಿ: "ವರ್ಗಾಯಿಸಲಾದ ವಿಷಯಗಳಲ್ಲಿ ಗವರ್ನರರು ತಮ್ಮ ಮಂತ್ರಿಗಳ ಸಲಹೆಯ ಪ್ರಕಾರ ಅದನ್ನು ತಿರಸ್ಕರಿಸಲು ಸಾಕಷ್ಟು ಆಧಾರಗಳಿಲ್ಲದೇ ಹೋದಾಗ ಮತ್ತು ನೀಡಲಾದ ಸಲಹೆಗನುಗುಣವಲ್ಲದ ಇತರ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದ್ದಾಗ, ಅದರಂತೆ ನಡೆದುಕೊಳ್ಳತಕ್ಕದ್ದು" ಎಂದು ಹೇಳಿಲ್ಲವೆ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಶಾಂತಿ ಮತ್ತು ಸೌಹಾರ್ದಕ್ಕೆ ಭಂಗ ಉಂಟಾಗಿದೆ ಎಂದು ಗವರ್ನರರು ಭಾವಿಸಿದಾಗ ಅವರು ತಮ್ಮ ಮಂತ್ರಿಗಳ ಸಲಹೆಯನ್ನು ತಳ್ಳಿಹಾಕತಕ್ಕದ್ದೆಂದು ಈ ವಿಭಾಗದಲ್ಲಿ ಹೇಳಲಾಗಿಲ್ಲವೆಂಬ ಅಂಶದತ್ತ ನಿಮ್ಮ ಗಮನ ಸೆಳೆಯಬಯಸುವೆ.

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಇಲ್ಲ. ಅದು ಹಾಗಿಲ್ಲ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ.II–ಎ, ೨೨ ಜೂನ್ ೧೯೩೩, ಪುಟಗಳು ೨೫೬–೫೮

ಡಾ. ಬಿ. ಆರ್. ಅಂಬೇಡ್ಕರ್: ಈ ವಿಭಾಗದಲ್ಲಿ ಈಗ ಶ್ವೇತಪತ್ರದಲ್ಲಿ ಮಾಡಲಾಗಿರುವಂತೆ ನಿರ್ದಿಷ್ಟ ನಿಯಮ ಮಾಡಿರುವುದಿಲ್ಲವಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಇಲ್ಲ. ಅದು ಹಾಗೆಯೇ ಇದೆ.

ಡಾ. ಬಿ. ಆರ್. ಅಂಬೇಡ್ಕರ್: ಗವರ್ನರರಿಗೆ ನೀಡಲಾದ ಆಜ್ಞೆಗಳ ದಸ್ತಾವೇಜನ್ನು (ಇನ್‌ಸ್ಟ್ರುಮೆಂಟ್ ಆಫ್ ಇನ್‌ಸ್ಟ್ರಕ್ಷನ್) ಪರಾಮರ್ಶಿಸಿದರೆ ಅವರು ಯಾವ ವಿಷಯ ಅಥವಾ ಪ್ರಕರಣಗಳಲ್ಲಿ ಮಂತ್ರಿಗಳ ಸಲಹೆಯಂತೆ ನಡೆದುಕೊಳ್ಳಬಾರದೆಂಬುದನ್ನು ಅವರಿಗೆ ಹೇಳಲಾಗಿಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಇಲ್ಲಿ ನನ್ನ ಹತ್ತಿರ ಅದರ ಪ್ರತಿ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ನಿಮಗೆ ಈ ಪುಸ್ತಕದ ೨೪೯ನೆಯ ಪುಟದಲ್ಲಿ ದೊರೆಯುತ್ತದೆ.

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು. ಅದು ನನಗೆ ಸಿಕ್ಕಿದೆ.

ಡಾ. ಬಿ. ಆರ್. ಅಂಬೇಡ್ಕರ್: ಆಜ್ಞೆಗಳ ದಸ್ತಾವೇಜಿನ ೨೭೦ನೆಯ ಪುಟದ VIನೆಯ ಖಂಡದಲ್ಲಿ "ಒಬ್ಬ ಮಂತ್ರಿಯ ಸಲಹೆಯನ್ನು ಪರಿಶೀಲಿಸುವಾಗ ಅವರ ಅಭಿಪ್ರಾಯವನ್ನು ಒಪ್ಪದೇ ಇರಲು ಸಾಕಷ್ಟು ಆಧಾರಗಳಿವೆಯೇ ಎಂದು ನಿರ್ಣಯಿಸುವಾಗ ಆ ಮಂತ್ರಿಯು ವಿಧಾನ ಪರಿಷತ್ತಿನೊಂದಿಗೆ ಮತ್ತು ಅದರಲ್ಲಿರುವ ಆ ಪ್ರಾಂತ್ಯದ ಪ್ರತಿನಿಧಿಗಳೊಂದಿಗೆ ಯಾವ ರೀತಿ ಸಂಬಂಧ ಹೊಂದಿರುವನೆಂಬ ಅಂಶವನ್ನು ಪರಿಗಣಿಸಬೇಕು" ಎಂದು ಹೇಳಲಾಗಿದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಸದ್ಯದ ಪರಿಸ್ಥಿತಿಯಲ್ಲಿ ಗವರ್ನರರು ಮಂತ್ರಿಗಳ ಸಲಹೆಯನ್ನು ವರ್ಗಾಯಿಸಲಾದ ವಿಷಯಗಳಲ್ಲಿ ಮಾನ್ಯ ಮಾಡದೇ ಸಂಬಂಧಪಟ್ಟ ಮಂತ್ರಿ ಶಾಸಕಾಂಗದ ಅಥವಾ ಮತಕ್ಷೇತ್ರಗಳ ಬೆಂಬಲ ಹೊಂದಿಲ್ಲವೆಂಬ ನಿರ್ಣಯಕ್ಕೆ ಬಂದಾಗ ಮಾತ್ರ ಅದನ್ನು ತಳ್ಳಿಹಾಕಬಹುದಾಗಿದೆಯಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಅದು ನಿಜ ಎಂದೇ ನನ್ನ ಭಾವನೆ.

ಡಾ. ಬಿ. ಆರ್. ಅಂಬೇಡ್ಕರ್: ಸ್ಪಷ್ಟೀಕರಣದ ದೃಷ್ಟಿಯಿಂದ ನಾನು ಹೇಳಬಹುದಾದುದು ಇಷ್ಟೇ: ವರ್ಗಾಯಿಸಲಾದ ಇಲಾಖೆಗಳ ಆಡಳಿತದಲ್ಲಿ ಈಗಿರುವ ವ್ಯವಸ್ಥೆಯಂತೆ ಗವರ್ನರರಿಗೆ ಈಗ (ಎ) ಖಂಡದಲ್ಲಿ ಕೊಡಲಾಗಿರುವ ಅಧಿಕಾರಗಳ ಪ್ರಕಾರ ಅವರು ಶಾಂತಿ ಸೌಹಾರ್ದತೆಯನ್ನು ಕಾಪಾಡಿಕೊಂಡು ಬರಲು ನಿಷೇದಾಧಿಕಾರ ಚಲಾಯಿಸುವಂತಿಲ್ಲ.

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು. ಅದು ನಿಜ.

ಡಾ. ಬಿ. ಆರ್. ಅಂಬೇಡ್ಕರ್: ಇಂದು, ಕಾನೂನು ಮತ್ತು ಸುವ್ಯವಸ್ಥೆ ಇಲಾಖೆ ಆರಕ್ಷಿತ ವಿಷಯವಾಗಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು, ಅವರು ಈ ಇಲಾಖೆಯ ವ್ಯಾಪ್ತಿಯಲ್ಲಿ ತಮಗೆ ಬೇಕಾದ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಹುದಾಗಿದೆಯಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ಅವರು ಮಂತ್ರಿಗೆ "ನೀವು ವರ್ಗಾಯಿಸಲಾದ ವಿಷಯಕ್ಕೆ ಸಂಬಂಧಪಟ್ಟವರಾದರೂ ನಾನು ನಿಮ್ಮ ಸಲಹೆಯನ್ನು ಒಪ್ಪಿಕೊಳ್ಳಲಾರೆ. ಏಕೆಂದರೆ ನೀವು ತೆಗೆದುಕೊಳ್ಳಲಿರುವ ಕ್ರಮ ಶಾಂತಿ ಮತ್ತು ಸೌಹಾರ್ದತೆಗೆ ವಿಪತ್ಕಾರಿಯಾಗಲಿದೆ" ಎಂದು ಹೇಳಲು ಬರುವುದಿಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದ ತತ್ಪರಿಣಾಮವಾಗಿ ಇದು ಒಂದು ಪ್ರತಿಗಾಮಿ ನಿಬಂಧನೆ ಎನಿಸುವುದಿಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ನಿಸ್ಸಂಶಯವಾಗಿ.

ಡಾ. ಬಿ. ಆರ್. ಅಂಬೇಡ್ಕರ್: ಇಂದು ಮಂತ್ರಿ ತನ್ನ ಇಲಾಖೆಯಲ್ಲಿ ತಾನು ಬಯಸಿದ ಯಾವುದೇ ಕ್ರಮ ತೆಗೆದುಕೊಳ್ಳಬಹುದು. ಶ್ವೇತಪತ್ರದ ಹೊಸ ಯೋಜನೆಯ ಪ್ರಕಾರ (ಈ ಶ್ವೇತಪತ್ರ ಅಂಗೀಕೃತವಾಗುವುದೆಂದು ಭಾವಿಸಿದರೆ) ಪ್ರತಿಯೊಂದು ಇಲಾಖೆಯೂ ವರ್ಗಾಯಿತ ಇಲಾಖೆಯಾಗುವುದು. ಶಾಂತಿ ಮತ್ತು ಸೌಹಾರ್ದ ಕಾಪಾಡಲು ಗವರ್ನರರಿಗೆ ನೀಡಲಾಗಿರುವ ವಿಶೇಷ ಅಧಿಕಾರದಿಂದ ಲಭ್ಯವಿರುವ ನಿಷೇದಾಧಿಕಾರ ಕಾನೂನು ಮತ್ತು ಸುವ್ಯವಸ್ಥೆಯ ಇಲಾಖೆಗೆ ಮಾತ್ರ ಸೀಮಿತವಾಗದೆ ಎಲ್ಲಾ ಇಲಾಖೆಗಳಿಗೆ ಪಸರಿಸುವುದಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಎಲ್ಲಾ ಇಲಾಖೆಗಳೂ ವರ್ಗಾಯಿತ ಇಲಾಖೆಗಳಾಗಿದ್ದರೂ ಇದರಿಂದ ಪ್ರತಿಯೊಂದು ಇಲಾಖೆಯಲ್ಲಿ ಜವಾಬ್ದಾರಿ ಅಷ್ಟರಮಟ್ಟಿಗೆ ಕುಂಠಿತವಾಗುತ್ತದೆಯಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು ಹಾಗಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈಗ ನಾನು ಸೇವಾ ವರ್ಗಗಳ ಪ್ರಶ್ನೆಯನ್ನು ತೆಗೆದುಕೊಳ್ಳುವೆ. ಅವುಗಳ ತಪಶೀಲು ೭ನೆಯ ಪರಿಶಿಷ್ಟದಲ್ಲಿ ದೊರೆಯುತ್ತದೆ.

ವೈಕಾಂಟ್ ಬರ್ನ್ ಹ್ಯಾಮ್: ಮಾನನೀಯ ಅಧ್ಯಕ್ಷರೆ, ನಾನು ಒಂದು ಕ್ರಿಯಾಲೋಪವನ್ನು ಎತ್ತ ಬಯಸುತ್ತೇನೆ. ಪ್ರಾಂತೀಯ ಗವರ್ನರುಗಳು ಈಗ ಹೊಂದಿರುವ ಅಧಿಕಾರಗಳ ಬಗ್ಗೆ ವಿವರಣೆಯನ್ನು ತಿಳಿದುಕೊಂಡೆವು. ಆದರೆ, ಅವುಗಳನ್ನು ಎಲ್ಲಿ ನಮೂದಿಸಲಾಗಿದೆ ಎಂಬುದು ಗೊತ್ತಾಗಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಭಾರತ ಸರಕಾರ ಕಾಯ್ದೆಯ ೫೨(೧)ನೆಯ ವಿಭಾಗದತ್ತ ನಿಮ್ಮ ಗಮನ ಸೆಳೆಯಬಯಸುತ್ತೇನೆ.

ವೈಕಾಂಟ್ ಬರ್ನ್ ಹ್ಯಾಮ್: ಯಾರ ಅಧಿಕಾರದನ್ವಯ ಈ ವಿವರಣೆ ನೀಡಲಾಗಿದೆ?

ಡಾ. ಬಿ. ಆರ್. ಅಂಬೇಡ್ಕರ್: ಅದು ನನಗೆ ಗೊತ್ತಿಲ್ಲ.

ವೈಕಾಂಟ್ ಬರ್ನ್ ಹ್ಯಾಮ್: ನೀವು ನೀಡಿರುವ ವಿವರಣೆಯನ್ನು ಯಾರು ಪ್ರಮಾಣೀಕರಿಸುತ್ತಾರೆ?

ಡಾ. ಬಿ. ಆರ್. ಅಂಬೇಡ್ಕರ್: ಅದು ಕಾಯ್ದೆಗೆ ನಾನು ನೀಡುವ ಅರ್ಥ ಮತ್ತು ಸಾಕ್ಷಿಯು ಅದನ್ನು ಒಪ್ಪಿಕೊಂಡಿದ್ದಾರೆ. ನಾನು ೫೨ನೆಯ ವಿಭಾಗ ಮತ್ತು ಕಾಯ್ದೆಯ ಅಂಗವಾಗಿರುವ ಆಜ್ಞೆಗಳ ದಸ್ತಾವೇಜಿನ ಪ್ರಸ್ತಾಪ ಮಾಡಿದ್ದೇನೆ. ಈಗ ೭ನೆಯ ಪರಿಶಿಷ್ಟದಲ್ಲಿ ದೊರೆಯುವ ಸೇವಾ ವರ್ಗಗಳ ಪ್ರಶ್ನೆಯನ್ನು ತೆಗೆದುಕೊಳ್ಳುವೆ. ಅದರಲ್ಲಿನ ಪ್ರತಿಯೊಂದು ಸಂಗತಿ ಅಥವಾ ನಿಯಮವನ್ನೂ ನಾನು ಪರಿಶೀಲಿಸುವುದಿಲ್ಲ. ಆದರೆ, ಅವರಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್‌ರವರು ಸೇವೆಗಳ ವರ್ಗೀಕರಣ ಮತ್ತು ಸೇವಾ ನಿಯಮಗಳ ಕ್ರಮಪಡಿಸುವಿಕೆಯ ಬಗ್ಗೆ ಎಲ್ಲಾ ಅಧಿಕಾರಗಳ್ನು ಹೊಂದಿರತಕ್ಕದ್ದೆಂದು ಹೇಳಿಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈಗ ನಾನು ೯೬(ಬಿ) ವಿಭಾಗದ (೨)ನೆಯ ಖಂಡದತ್ತ ನಿಮ್ಮ ಗಮನ ಸೆಳೆಯಬಹುದೇ? ಅದರಲ್ಲಿ ಹೀಗೆ ಹೇಳಲಾಗಿದೆ: "ಭಾರತದ ನಾಗರಿಕ ಸೇವಾ ವರ್ಗಗಳ ಕ್ರಮಪಡಿಸುವಿಕೆ, ವರ್ಗೀಕರಣ, ಅವರ ನೇಮಕಾತಿ, ಸೇವಾ ನಿಯಮಗಳು, ವೇತನ ಮತ್ತು ಭತ್ಯೆಗಳು

ಮತ್ತು ಅವರ ಶಿಸ್ತು ಹಾಗೂ ನಡತೆಯ ಬಗ್ಗೆ ನಿಯಮಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್‌ರವರು ಮಾಡಬಹುದು" ಅದೂ ಅಲ್ಲದೆ "ಆ ನಿಯಮಗಳಲ್ಲಿ ನಿಗದಿಗೊಳಿಸಲಾದ ವಿಷಯಗಳು ಮತ್ತು ವ್ಯಾಪ್ತಿಯೊಳಗೆ ನಿಯಮ ನಿರೂಪಣೆಯ ಅಧಿಕಾರವನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್ ಅಥವಾ ಸ್ಥಳೀಯ ಸರಕಾರಗಳಿಗೆ ನಿಯೋಜಿಸಬಹುದು ಅಥವಾ ಭಾರತೀಯ ಶಾಸಕಾಂಗಕ್ಕೆ ಅಥವಾ ಸ್ಥಳೀಯ ಶಾಸಕಾಂಗಗಳಿಗೆ ಸಾರ್ವಜನಿಕ ಸೇವೆಗಳನ್ನು ಕ್ರಮಪಡಿಸುವುದಕ್ಕಾಗಿ ಕಾನೂನು ಮಾಡುವ ಅಧಿಕಾರ ನೀಡಬಹುದು" ಎಂದು ಹೇಳಲಾಗಿದೆ.

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದ ಸಂಬಳ ಸಾರಿಗೆ ಮತ್ತು ಸೇವಾ ನಿಯಮಗಳನ್ನು ಕುರಿತು ಶಾಸನ ಮಾಡುವ ಅಧಿಕಾರವನ್ನು ಗವರ್ನರ್ ಜನರಲ್ ಅಥವಾ ಭಾರತದ ಶಾಸಕಾಂಗಗಳಿಗೆ ನೀಡುವುದು ಭಾರತ ಸರಕಾರ ಕಾಯ್ದೆಯ ಉದ್ದೇಶವಾಗಿತ್ತಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಅಥವಾ ಸ್ಥಳೀಯ ಸರಕಾರಗಳಿಗೆ.

ಡಾ. ಬಿ. ಆರ್. ಅಂಬೇಡ್ಕರ್: ಸೇವಾ ನಿಯಮಗಳು ಭಾರತದಲ್ಲಿ ಜಾರಿಗೊಳಿಸಲಾಗುವ ಹೊಸ ಸರಕಾರ ವ್ಯವಸ್ಥೆಗೆ ಹೊಂದಿಕೊಳ್ಳುವಂತಿರಬೇಕೆಂಬುದು ಉದ್ದೇಶವಾಗಿರಲಿಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಇದೇ ಅದರ ಪರಿಣಾಮವೆಂದು ತೋರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಉದಾಹರಣೆಗಾಗಿ ೭ನೆಯ ಪರಿಶಿಷ್ಟದಲ್ಲಿ ನಮೂದಿಸಲಾದ ಈ ನಿಬಂಧನೆಗಳಿಗೆ ಶಾಸನ ರೂಪ ಕೊಟ್ಟಿದ್ದೇ ಆದರೆ, ಭಾರತೀಯ ಸರಕಾರ ಕಾಯ್ದೆಯಲ್ಲಿ ಕಾಣಬರುವ ಭಾರತೀಯ ಅಧಿಕಾರಿಗಳ ಮೇಲೆ ನಿಯಂತ್ರಣ ಸಾಧಿಸುವ ಪ್ರವೃತ್ತಿಯ ಮೇಲೆ ಕಡಿವಾಣ ಹಾಕಿದಂತಾಗುವುದಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಆದ್ದರಿಂದಲೇ ನಾನು ಸಾರ್ವಜನಿಕ ಸೇವೆಗಳನ್ನು ಕುರಿತ ಸೂಚನೆಗಳು ಭಾರತಕ್ಕೆ ತೃಪ್ತಿಕರವಾಗಿಲ್ಲ ಎಂದು ನನ್ನ ವಿಜ್ಞಾಪನಾ ಪತ್ರದಲ್ಲಿ ಹೇಳಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಈಗ ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್‌ರವರು ಚಲಾಯಿಸುತ್ತಿರುವ ಈ ಅಧಿಕಾರಗಳನ್ನು ಸೂಕ್ತ ಕರಾರುಗಳೊಂದಿಗೆ ಭಾರತದ ಶಾಸಕಾಂಗಕ್ಕೆ ನಿಯೋಜಿಸಬೇಕಾದುದು ಅವಶ್ಯ ಮತ್ತು ಭಾರತ ಸರಕಾರ ಕಾಯ್ದೆಯಲ್ಲಿಯೇ ಇದಕ್ಕೆ ಅವಕಾಶ ಮಾಡಲಾಗಿದೆ.

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಸೇವಾ ವರ್ಗಗಳ ಹಕ್ಕುಗಳ ಬಗ್ಗೆ ಇರುವ ಕೆಲವು ನಿರ್ದಿಷ್ಟ ಅಂಶಗಳನ್ನೇ ತೆಗೆದುಕೊಳ್ಳಿ. ಉದಾಹರಣೆಗಾಗಿ, ೧೨೧ನೆಯ ಪುಟದ ೧೪ನೆಯ ಅಂಶ: "ಗವರ್ನರರ ಸ್ವಂತ ಸ್ಮಮತಿ, ವಿಧಿವಿಹಿತ ನಿಂದನೆ" ಇತ್ಯಾದಿ, ೧೫: "ಅಧಿಕಾರಿಗಳ ನಿಯುಕ್ತಿಯ ಬಗ್ಗೆ ಗವರ್ನರರ ಸ್ವಂತ ಸಮ್ಮತಿ", ೧೬; "ತಮ್ಮ ಮೇಲಿನ ಅಧಿಕಾರಿಯ ಆಜ್ಞೆಯ ವಿರುದ್ಧ ಗವರ್ನರರಿಗೆ ದೂರು ಸಲ್ಲಿಸುವ ಹಕ್ಕು ಇತ್ಯಾದಿ. ಈಗ ಈ ಹಕ್ಕುಗಳನ್ನು ಸೇವಾ ನಿಯಮಗಳ ಅಂಗವಾಗಿ ಅಂತಿಮಗೊಳಿಸಲಾಗಿಲ್ಲ. ಅವು ಇನ್ನೂ ವಿಕಾಸದ ಹಂತದಲ್ಲಿವೆ. ಇವುಗಳಿಗೆ ಮಂತ್ರಿಯ ಪ್ರತಿಕ್ರಿಯೆ ಏನಾಗಿರಬಹುದೆಂಬುದರ ಬಗ್ಗೆ ಯಾರಿಗೂ ತಿಳಿದಿಲ್ಲವಾದ್ದರಿಂದ ಇವುಗಳನ್ನು ವಿಧಿಸಲಾಗಿತ್ತಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಡಾ. ಅಂಬೇಡ್ಕರರವರೆ ನಿಮ್ಮ ಪ್ರಶ್ನೆಯಾದರೂ ಏನು?

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಪ್ರಶ್ನೆ ಏನೆಂದರೆ: ಈಗ ವಿಧಿಸಲಾಗಿರುವ ಕೆಲವು ಸೇವಾ

ಕರಾರುಗಳನ್ನು ಕುರಿತು ನಾನು ಈಗಾಗಲೇ ತಮ್ಮ ಗಮನ ಸೆಳೆದಿರುವಂತೆ, ಅವುಗಳನ್ನು ಜನತಾ ಪ್ರತಿನಿಧಿಯಾಗಿರುವ ಮಂತ್ರಿ ಮತ್ತು ನಾಗರಿಕ ಸೇವಾ ವರ್ಗಗಳ ನಡುವಣ ಈ ಪ್ರಯೋಗದ ನಿರ್ದಿಷ್ಟ ಅಂತಿಮ ಪರಿಣಾಮವೇನಾಗುವುದು ಎಂಬುದನ್ನು ತಿಳಿದುಕೊಳ್ಳಲು ವಿಧಿಸಲಾಗಿತ್ತಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅವುಗಳೇ ಅಂತಿಮವೆಂದು ಪರಿಗಣಿಸುವ ಉದ್ದೇಶ ಇರಲಿಲ್ಲವಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಇಲ್ಲ. ನಾನು ಹಾಗೆ ಭಾವಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅವುಗಳನ್ನು ಈಗಿರುವ ರೀತಿಯಲ್ಲಿ ವಿಧಿಸಿದ್ದೇ ಆದರೆ, ನಾಗರಿಕ ಸೇವೆಗಳ ಕರಾರುಗಳನ್ನು ಭಾರತದ ಜವಾಬ್ದಾರಿ ಸರಕಾರ ವ್ಯವಸ್ಥೆಯೊಡನೆ ಹೊಂದಾಣಿಕೆ ಮಾಡುವ ಪ್ರಕ್ರಿಯೆಗೆ ಅಡ್ಡಿಯುಂಟಾದಂತಾಗುವುದಿಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಕೇಂದ್ರದ ಜವಾಬ್ದಾರಿಯ ಬಗ್ಗೆ ನಾನು ನಿಮಗೆ ಒಂದೇ ಒಂದು ಪ್ರಶ್ನೆ ಕೇಳಬಯಸುತ್ತೇನೆ. ಸರ್ ಹೆನ್ರಿ ಗಿಡ್ನೆಯವರ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ಸಂಯುಕ್ತ ರಾಜ್ಯದ ಉದ್ಘಾಟನೆಗೆ ಒಂದು ದಿನಾಂಕವನ್ನು ಗೊತ್ತುಪಡಿಸಲು ನೀವು ಕಾತರರಾಗಿರುವಿರಾಗಿ ಹೇಳಿದಿರಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಇನ್ನೊಂದು ಕಡೆ, ನಿಮಗೆ ಗೊತ್ತಿರುವಂತೆ, ನಿರ್ದಿಷ್ಟ ದಿನಾಂಕವನ್ನು ಗೊತ್ತುಪಡಿಸುವುದು ಅಸಾಧ್ಯ ಎಂದು ಒತ್ತಾಯಪೂರ್ವಕವಾಗಿ ಹೇಳಲಾಗಿದೆ. ಏಕೆಂದರೆ, ಅನಿಶ್ಚಿತತೆಯ ಅನೇಕ ಅಂಶಗಳಿವೆ. ಅವಾವುದೆಂದರೆ, ನಿಗದಿಪಡಿಸಿದ ಅವಧಿಯೊಳಗೆ ಸಂಸ್ಥಾನಗಳ ಅರಸರು (ಸಂಯುಕ್ತ ರಾಜ್ಯದಲ್ಲಿ) ಸೇರಲಿಕ್ಕಿಲ್ಲ ಮತ್ತು ನಿಮಗೂ ಗೊತ್ತಿರುವಂತೆ ಅದನ್ನು ತಪ್ಪಿಸಲು ಶ್ವೇತಪತ್ರದಲ್ಲಿ ಕೆಲವು ಮಧ್ಯಂತರ ನಿಯಮಗಳನ್ನು ವಿಧಿಸಲಾಗಿದೆ. ಈಗ ನಾನು ಈ ವಿಷಯದ ಮೇಲೆ ನಿಮ್ಮ ಅಭಿಪ್ರಾಯ ತಿಳಿದುಕೊಳ್ಳಲು ಕಾತರತೆಯಿಂದ ಸೂಚಿಸಬಯಸುವುದೇನೆಂದರೆ, ಅಗತ್ಯವಾದ ಸಂಖ್ಯೆಯಷ್ಟು ಸಂಸ್ಥಾನಗಳ ಅರಸರುಗಳು ಪ್ರವೇಶ ಪಡೆಯುವವರೆಗೂ ಸಂಯುಕ್ತ ರಾಜ್ಯವು ತ್ರಿಶಂಕು ಸ್ಥಿತಿಯಲ್ಲಿರಬಾರದೆಂಬ ದೃಷ್ಟಿಯಿಂದ ಕೇಂದ್ರ ಶಾಸಕಾಂಗದಲ್ಲಿ ಭಾಗಶಃ ನಾಮಕರಣಗೊಂಡ ಅಧಿಕಾರಿಗಳು ಮತ್ತು ಭಾಗಶಃ ಅಧಿಕಾರರೇತರರಿಂದ ಕೂಡಿದ ಸಂಯುಕ್ತ ರಾಜ್ಯವನ್ನು ಕೂಡಲೇ ಆರಂಭಿಸುವ ವ್ಯವಸ್ಥೆಗೆ ನಿಮ್ಮದೇನಾದರೂ ಅಭ್ಯಂತರವಿದೆಯೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ನಾನು ಈ ಕ್ಷಣವೇ ನನ್ನ ಅಭಿಪ್ರಾಯ ವ್ಯಕ್ತಪಡಿಸಲಾರೆ. ಆದರೆ ಈ ಸೂಚನೆಯನ್ನು ಪರಿಶೀಲಿಸಬಹುದು. ಇದು ಪರಿಶೀಲಿಸಲು ಯೋಗ್ಯವಾದ ವಿಷಯ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಅಂಶದ ಬಗ್ಗೆ ಸ್ಪಷ್ಟೀಕರಣ ಬಯಸುತ್ತೇನೆ. ಕೇಂದ್ರಕ್ಕೆ ಜವಾಬ್ದಾರಿ ನೀಡಲು ಬ್ರಿಟಿಷ್ ಭಾರತ ಮತ್ತು ಭಾರತೀಯ ಸಾಂಸ್ಥಾನಿಕರುಗಳಿಂದ ಕೂಡಿದ ಸಂಯುಕ್ತ ರಾಜ್ಯ ಸ್ಥಾಪನೆಗೆ ಪೂರ್ವಭಾವಿ ಕರಾರಾಗಿದೆ ಎಂಬುದನ್ನು ನೀವು ಒಪ್ಪುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀಯುತ ಸಚ್ಚಿದಾನಂದ ಸಿನ್ಹಾ: ನಾನು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಬಯಸುವುದಿಲ್ಲ. ಏಕೆಂದರೆ ಶ್ವೇತಪತ್ರದಲ್ಲಿ ಸೂಚಿಸಲಾಗಿರುವ ರೂಪುರೇಷೆಗಳನ್ನು ದುಂಡು ಮೇಜಿನ ಪರಿಷತ್ತಿನಲ್ಲಿ

ಒಪ್ಪಿಕೊಳ್ಳಲಾಗಿತ್ತೆಂದು ನಾನು ತಿಳಿದಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೇಳುತ್ತಿರುವುದೇನೆಂದರೆ, ಶ್ವೇತಪತ್ರವನ್ನು ಬಿಟ್ಟು ಮಾತನಾಡುತ್ತಾ ಬ್ರಿಟಿಷ್ ಭಾರತದಲ್ಲಿ ಸಂಯುಕ್ತ ರಾಜ್ಯ ಅಸ್ತಿತ್ವದಲ್ಲಿರಬೇಕೆಂಬ ಒಂದೇ ಒಂದು ಕರಾರಿನೊಂದಿಗೆ ಕೇಂದ್ರಕ್ಕೆ ಜವಾಬ್ದಾರಿ ಕೊಡಬಹುದೆಂದು ನೀವು ಹೇಳುವುದಿಲ್ಲ ಅಥವಾ ಅದಕ್ಕೆ ನೀವು ಒಪ್ಪುವುದಿಲ್ಲ ವಲ್ಲವೇ?

ಶ್ರೀಯುತ ಸಚ್ಚಿದಾನಂದ ಸಿನ್ಹಾ: ಇಲ್ಲ. ಶ್ವೇತಪತ್ರದ ಹೊರತಾಗಿ ಅಲ್ಲ.

ಮಿಸ್ಟರ್ ಬಟ್ಲರ್: ಮಾನನೀಯ ಅಧ್ಯಕ್ಷರೆ, ನಾವು ಇದನ್ನು ಮುಂದುವರಿಸುವ ಮೊದಲು, ಸಧ್ಯದ ಭಾರತ ಸರಕಾರ ಕಾಯ್ದೆಗೆ ಈ ಪ್ರಶ್ನೆಗಳು ಮತ್ತು ಉತ್ತರಗಳಲ್ಲಿ ನೀಡಲಾದ ಅರ್ಥ ವಿವರಣೆಯನ್ನು ಒಪ್ಪಿಕೊಳ್ಳಲಾರೆವು. ಅದರಲ್ಲಿಯೂ ಇಂದಿನ ಸರಕಾರದ ಆಜ್ಞೆಗಳಲ್ಲಿ ಈಗಿನ ಭಾರತ ಸರಕಾರದ ಕಾಯ್ದೆಯ ೫೨ನೆಯ ವಿಭಾಗದ VIನೆಯ ಖಂಡದಲ್ಲಿ ಗ್ರಹಿಸಲಾಗಿರುವ ಇತಿಮಿತಿಗಳನ್ನು ಒಪ್ಪಿಕೊಳ್ಳಲಾರೆವು.

## ಮೀರ್ ಮುಖ್‌ಬೂಲ್ ಮಹಮೂದ್, ಡಾ. ಪಿ. ಕೆ. ಸೇನ್, ಶ್ರೀ ಕೆ. ಎಮ್. ಪಣಿಕ್ಕರ್, ಶ್ರೀ ಬಿ. ಕಾರ್, ಛೇಂಬರ್ ಆಫ್ ಪ್ರಿನ್ಸಸ್ (ಅರಸರ ಮಂತ್ರಾಲೋಚನೆ ಸಮಿತಿಯ)ಯ ಪರವಾಗಿ

* ಡಾ. ಬಿ. ಆರ್. ಅಂಬೇಡ್ಕರ್: ಈ ಪ್ರಶ್ನೆಗಳಿಂದ ಉದ್ಭವಿಸುವ ಸಂಗತಿಯನ್ನು ನಾನು ಕಂಡಂತೆ ಮಂಡಿಸುವೆ. ಸಂಯುಕ್ತ ರಾಜ್ಯದ ಉದ್ಘಾಟನೆಗೆ ಶ್ವೇತಪತ್ರದಲ್ಲಿ ಒಂದು ಕರಾರನ್ನು ಹಾಕಲಾಗಿದೆ. ಅದೇನೆಂದರೆ ಅದರಲ್ಲಿ ಒಂದು ನಿರ್ದಿಷ್ಟ ಸಂಖ್ಯೆಯ ಭಾರತೀಯ ಸಂಸ್ಥಾನಗಳ ಸೇರ್ಪಡೆ. ಅಲ್ಲದೇ, ಬ್ಯಾಂಕಿನ ಸ್ಥಾಪನೆಯನ್ನು ಹಣಕಾಸಿನ ವರ್ಗಾವಣೆಗೆ ಇನ್ನೊಂದು ಮುಖ್ಯ ಕರಾರನ್ನಾಗಿ ಹಾಕಲಾಗಿದೆ. ನಾನು ನಿಮ್ಮನ್ನು ಕೇಳಬಯಸುವುದಿಷ್ಟೇ? ಹಣಕಾಸು ವರ್ಗಾಯಿತ ವಿಷಯವಾಗದೇ ಇದ್ದರೆ ಅರಸರು ಸಂಯುಕ್ತ ರಾಜ್ಯವನ್ನು ಸೇರಲು ಸಿದ್ಧರಿರುವರೇ?

ಮೀರ್ ಮುಖಬೂಲ್ ಮಹಮೂದ್: ಈ ಪ್ರಶ್ನೆಯ ಬಗ್ಗೆ ನನಗೆ ನಿರ್ದಿಷ್ಟ ತಿಳಿವಳಿಕೆ ನೀಡಲಾಗಿಲ್ಲ. ಆದರೆ, ಈ ಚರ್ಚೆಯ ಧೋರಣೆಯನ್ನು ನೋಡಿದರೆ ಅವರು ಹಾಗೆ ಮಾಡಲು ಸಿದ್ಧರಾಗುವುದಿಲ್ಲವೆಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹಣಕಾಸು ವರ್ಗಾಯಿತ ವಿಷಯವಾಗದಿದ್ದರೆ ಅವರು ಸಂಯುಕ್ತ ರಾಜ್ಯವನ್ನು ಸೇರಲು ಸಿದ್ಧರಿರುವುದಿಲ್ಲವೇ?

ಮೀರು ಮುಖಬೂಲ್ ಮಹಮೂದ್: ನನಗೆ ಹಾಗೆನಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಬೇರೆ ವಿಷಯಗಳನ್ನು ತೆಗೆದುಕೊಳ್ಳೋಣ. ಮೀರ್ ಮುಖಬೂಲ್‌ರವರೆ, ನೀವು ಇದಕ್ಕೂ ಮುಂಚೆ ನೀಡಿದ ಸಾಕ್ಷಿಯಲ್ಲಿ ಒಂದೇ ಕಾಲಕ್ಕೆ ಎಲ್ಲಾ ಅರಸರು ಸಂಯುಕ್ತ ರಾಜ್ಯವನ್ನು ಸೇರದೆ ಹೋದರೆ ಹಾಗೆ ಸೇರಿದ ಅರಸರಿಗೆ ಇನ್ನೂ ಸೇರದೇ ಇರುವ ಅರಸರ ಮತಗಳನ್ನು ಪ್ರಾತಿನಿಧಿಕವಾಗಿ ಪಡೆಯುವ ಸವಲತ್ತಿರುವಂತಹ ಒಂದು ವ್ಯವಸ್ಥೆ ಇರಬೇಕೆಂದು ಹೇಳಿರುವಿರಲ್ಲವೇ? ನಾನು ನಿಮ್ಮ ಅಭಿಪ್ರಾಯವನ್ನು ಸರಿಯಾಗಿ ಮಂಡಿಸಿದ್ದೇನಲ್ಲವೇ?

ಮೀರ್ ಮುಖಬೂಲ್ ಮಹಮೂದ್: ಅದು ಪರಿಸ್ಥಿತಿಯ ಒಂದು ಅಂಶವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಇದು ನಿಮ್ಮ ನಿಲುವಾಗಿದೆಯೇ?

ಮೀರ್ ಮುಖಬೂಲ್ ಮಹಮೂದ್: ಅದು ಪೂರ್ಣ ಸತ್ಯವಾಗಿರದೆ ಅರ್ಧ ಸತ್ಯವಾಗಿದೆ. ನಾವು ಪರಿಸ್ಥಿತಿಯ ಎರಡು ಅಂಶಗಳ ಬಗ್ಗೆ ಯೋಚಿಸಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ಅದೇ, ಒಂದು ಬಗೆಯ ಸಂಯುಕ್ತ ಕೂಟ ತಾನೆ?

ಮೀರ್ ಮುಖಬೂಲ್ ಮಹಮೂದ್: ಅದಲ್ಲ; ಸಂಯುಕ್ತ ರಾಜ್ಯವನ್ನು ಪ್ರವೇಶಿಸುವ

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ.II–ಎ, ೨೭ ಜೂನ್ ೧೯೩೩, ಪುಟಗಳು ೩೭೨–೭೬.

ಸಂಸ್ಥಾನಗಳು ಸಂಯುಕ್ತ ರಾಜ್ಯದಲ್ಲಿ ತಮ್ಮ ಸ್ಥಾನ ಮೇಲ್ಮನೆಯಲ್ಲಿ ಶೇಕಡಾ ೪೦ ಮತ್ತು ಕೆಳ ಸದನದಲ್ಲಿ ಮೂರನೆಯ ಒಂದು ಭಾಗದಷ್ಟಾಗಿರುತ್ತದೆ ಎಂಬ ಗ್ರಹಿಕೆಯ ಮೇಲೆ ಪ್ರವೇಶಿಸುತ್ತವೆ. ಇದು ವೈಯಕ್ತಿಕವಾಗಿ ಪ್ರವೇಶಿಸುವ ಸಂಸ್ಥಾನಗಳ ವಿಷಯವಾಗಿರುವ ಪರಿಸ್ಥಿತಿ. ಇನ್ನೊಂದೆಡೆ ಹೊರ ಗುಳಿದ ಸಂಸ್ಥಾನಗಳೂ ಕೂಡ ಸಂಯುಕ್ತ ರಾಜ್ಯದ ನಿರ್ಣಯಗಳಿಂದ ಪ್ರಭಾವಿತವಾಗುತ್ತವೆ. ಇವೇ ಆ ಎರಡೂ ಅಂಶಗಳು. ನಿಮ್ಮ ಪ್ರಶ್ನೆ ಈ ಎರಡನೆಯ ಅಂಶಕ್ಕೆ ಸಂಬಂಧಿಸಿದ್ದಾಗಿದೆ ಎಂದು ನಾನು ತಿಳಿದು ಕೊಂಡಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ದಯವಿಟ್ಟು ನೀವು ಈಗ ನಾನು ಹೇಳುವ ಅಂಶದ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಬೇಕೆಂದು ಬಯಸುತ್ತೇನೆ. ನಿಮ್ಮ ಈ ಮೊದಲಿನ ಹೇಳಿಕೆಯನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿರುವೆನೆಂದು ತಿಳಿದಿರುವೆ. ಅದೇನೆಂದರೆ, ಆರಂಭದಲ್ಲಿ ಎಲ್ಲಾ ಸಂಸ್ಥಾನಗಳು ಒಟ್ಟಿಗೇ ಸಂಯುಕ್ತ ರಾಜ್ಯವನ್ನು ಪ್ರವೇಶಿಸದೆ, ಕೆಲವೇ ಸಂಸ್ಥಾನಗಳು ಪ್ರವೇಶಿಸಿ ಇತರರು ಹೊರಗುಳಿದ ಪಕ್ಷದಲ್ಲಿ ಸಂಯುಕ್ತ ರಾಜ್ಯವನ್ನು ಪ್ರವೇಶಿಸಿದ ಸಂಸ್ಥಾನಗಳು ಹೊರಗುಳಿದವರ ಪರವಾಗಿ ಮತ ಚಲಾಯಿಸುವಂತಹ ವ್ಯವಸ್ಥೆ ಇರಬೇಕೆಂದು ಅಥವಾ ಒಂದು ವಿಧದ ಹೆಚ್ಚಿನ ಪ್ರಾಶಸ್ತ್ಯವನ್ನು ಅವರು ಬೇಡಬೇಕೆಂದು ನೀವು ಬಯಸುತ್ತೀರಲ್ಲವೇ?

ಮೀರ್ ಮುಖಬೂಲ್ ಮಹಮೂದ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈ ಬಗ್ಗೆ ನಾನು ಈಗ ನಿಮ್ಮನ್ನು ಕೇಳಬೇಕಾಗಿರುವುದೇನೆಂದರೆ: ಆರಂಭದಲ್ಲಿ ಸಂಯುಕ್ತ ರಾಜ್ಯವನ್ನು ಪ್ರವೇಶಿಸದ ಮತ್ತು ಸಂಯುಕ್ತ ರಾಜ್ಯಕ್ಕೆ ಸಂಬಂಧಿಸಿದಂತೆ ಅವರ ಮತಗಳನ್ನು ಅವರ ಪರವಾಗಿ ಆಗಲೇ ಪ್ರವೇಶಿಸಿರುವ ಸಂಸ್ಥಾನಗಳು ಚಲಾಯಿಸಿದರೆ ತೆರಿಗೆ ಮತ್ತು ಸಂಯುಕ್ತ ವಿಧಾಯಕಗಳ ಬಗ್ಗೆ ಇನ್ನೂ ಹೊರಗುಳಿದಿರುವ ಸಂಸ್ಥಾನಗಳ ಪರಿಸ್ಥಿತಿ ಏನಾಗುವುದು? ಸಂಯುಕ್ತ ರಾಜ್ಯದ ವಿಧಾಯಕಗಳು ಪ್ರವೇಶಿಸದೇ ಇರುವ ಹಾಗೂ ಅವರ ಮತಗಳನ್ನು ಇತರರು ಚಲಾಯಿಸುವ ಸಂಸ್ಥಾನಗಳಿಗೂ ಅನ್ವಯವಾಗುತ್ತವೆಯೋ?

ಮೀರ್ ಮುಖಬೂಲ್ ಮಹಮೂದ್: ಅದು ಬಹುಮಟ್ಟಿಗೆ ಈಗಿರುವಂತೆಯೇ ಇರುವುದು.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ನಾನು ಹೇಳುತ್ತಿರುವುದೇನೆಂದರೆ ಸಂಯುಕ್ತ ರಾಜ್ಯವನ್ನು ಪ್ರವೇಶಿಸದೆ ಇರುವ, ಆದರೆ ಯಾರ ಮತಗಳನ್ನು ಚಲಾಯಿಸಲಾಗಿದೆಯೋ ಅಂತಹ ಸಂಸ್ಥಾನಗಳಲ್ಲಿ ಸಂಯುಕ್ತ ರಾಜ್ಯದ ವಿಧೇಯಕಗಳು ಚಾಲ್ತಿಯಲ್ಲಿರುವುವೇ?

ಮೀರ್ ಮುಖಬೂಲ್ ಮಹಮೂದ್: ಹಾಗಿದ್ದಾಗ್ಯೂ ತೆರಿಗೆಗೆ ಸಂಬಂಧವಾದ ಕೆಲವು ವಿಷಯ ಗಳಲ್ಲಿ ಮಾತ್ರ ಅದು ಅನ್ವಯವಾಗುತ್ತದೆ. ಇತರ ವಿಷಯಗಳಲ್ಲಿ ಸಂಧಾನದ ಮೂಲಕ ಅವುಗಳನ್ನು ಅನ್ವಯ ಮಾಡಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಅಂತಹ ಸಂಸ್ಥಾನಗಳನ್ನು (ಪ್ರವೇಶಿಸದೆ ಇರುವ) ಸಂಯುಕ್ತ ರಾಜ್ಯದ ಸದಸ್ಯ ಸಂಸ್ಥಾನಗಳೆಂದು ಪರಿಗಣಿಸಲಾಗುವುದೇ?

ಮೀರ್ ಮುಖಬೂಲ್ ಮಹಮೂದ್: ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅವುಗಳನ್ನು ಹಾಗೆ ಪರಿಗಣಿಸಲಾಗುವುದಿಲ್ಲವೇ?

ಮೀರ್ ಮುಖಬೂಲ್ ಮಹಮದ್: ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆದಾಗ್ಯೂ ಅವರ ಮತಗಳನ್ನು ಉಪಯೋಗಿಸಲಾಗುವುದೇ?

ಮೀರ್ ಮುಖಬೂಲ್ ಮಹಮೂದ್: ಹೌದು. ಕೆನಡಾದ ಸಂವಿಧಾನದ ೧೪೭ನೆಯ ಅನುಚ್ಛೇದದ ಪ್ರಕಾರ ಸೆನೆಟ್‌ನಲ್ಲಿ ಎಡ್ವರ್ಡ್ ಐಲೆಂಡ್‌ನ ಮತಗಳನ್ನು ನೋವಾಸ್ಕೋಷಿಯ ಮತ್ತು ನ್ಯೂಬ್ರನ್ ವಿಕಗಳು ಚಲಾಯಿಸುವ ರೀತಿಯಲ್ಲಿ ಪ್ರವೇಶ ಪಡೆಯದೇ ಇರುವ ಸಂಸ್ಥಾನಗಳು ಸಂಯುಕ್ತ ರಾಜ್ಯದ ಅಂಗಗಳಾಗಿರುತ್ತವೆ.

ಡಾ. ಬಿ. ಆರ್. ಅಂಬೇಡ್ಕರ್: ಈಗ ನಾನು ರಾಷ್ಟ್ರೀಯತೆಯ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ನಿಮ್ಮಲ್ಲಿ ಯಾವ ಮಹನೀಯರು ಈ ಪ್ರಶ್ನೆಯನ್ನು ಪರಿಶೀಲಿಸುವಿರೋ ಅದು ನನಗೆ ತಿಳಿಯದು. ಬ್ರಿಟಿಷ್ ಭಾರತದೊಂದಿಗಿನ ಕಾನೂನಿನ ಸಂಬಂಧದಲ್ಲಿ ಭಾರತೀಯ ಸಂಸ್ಥಾನಗಳ ಪ್ರಜೆಗಳು ಪರಕೀಯರು ಎಂಬ ಅಂಶ ಸಾಮಾನ್ಯ ಸಂಗತಿಯಾಗಿದೆಯಲ್ಲವೇ?

ಸರ್ ಹರಿಸಿಂಗ್ ಗೌರ್: ಅವರು ಬ್ರಿಟಿಷ್ ಪ್ರಜೆಗಳಾಗಿಲ್ಲವೆ?

ಮೀರ್ ಮುಖಬೂಲ್ ಮಹಮೂದ್: ಅವರು ಬ್ರಿಟಿಷ್ ಪ್ರಜೆಗಳಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಬ್ರಿಟಿಷ್ ಭಾರತದಲ್ಲಿ ವಿದೇಶಿಯರ ಕಾಯ್ದೆ (ಫಾರಿನರ್ಸ್ ಆಕ್ಸ್) ಎಂದು ಕರೆಯಲಾಗುವ ಕಾಯ್ದೆಯಡಿಯಲ್ಲಿ ಬರುತ್ತಾರೆ ಅಲ್ಲವೇ?

ಮೀರ್ ಮುಖಬೂಲ್ ಮಹಮೂದ್: ನನಗೆ ಹಾಗೆನಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಈ ಕಾಯ್ದೆಯಡಿ ಬರುವರೆಂಬುದನ್ನು ನನ್ನಿಂದ ತಿಳಿದುಕೊಳ್ಳಿ. ಅದೇನೇ ಇರಲಿ ಅವರು ಬ್ರಿಟಿಷ್ ಪ್ರಜೆಗಳಲ್ಲ ಎಂಬುದು ಸಾಮಾನ್ಯ ಸಂಗತಿ. ಅಖಿಲ ಭಾರತ ಸಂಯುಕ್ತ ರಾಜ್ಯಕ್ಕನುಗುಣವಾದ ಮತ್ತು ಅನುರೂಪವಾದಂತಹ ಒಂದು ಸಾಮಾನ್ಯ ಅಥವಾ ಏಕೈಕ ಭಾರತೀಯ ರಾಷ್ಟ್ರೀಯತೆಯನ್ನು ಹೊಂದಬೇಕೆಂಬ ನೀವು ಹೇಳುತ್ತಿಲ್ಲವೆಂದು ನಾನು ಭಾವಿಸಬಹುದೇ?

ಮೀರ್ ಮುಖಬೂಲ್ ಮಹಮೂದ್: ಅದನ್ನು ಆಲೋಚಿಸಲಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಸದ್ಯದ ಪರಿಸ್ಥಿತಿಯಲ್ಲಿ ಮುಂದುವರಿದಿದ್ದೇ ಆದರೆ, ಪರಕೀಯರು (ಎಂದರೆ ಭಾರತೀಯ ಸಂಸ್ಥಾನಗಳ ಪ್ರಜೆಗಳು) ಬ್ರಿಟಿಷ್ ಪ್ರಭುತ್ವ (ಕ್ರೌನ್)ದ ಪ್ರಜೆಗಳಾಗಿರದಿದ್ದಾಗ್ಯೂ ಅವರು ಮತದಾನದ ಹಕ್ಕನ್ನು ಹೊಂದುವ ಸಂಯುಕ್ತ ರಾಜ್ಯದ ಮತ್ತು ಪ್ರಾಂತೀಯ ಶಾಸನ ಸಭೆ ಸದಸ್ಯತ್ವಕ್ಕೆ ಸ್ಪರ್ಧಿಸಲು ಮತ್ತು ಪ್ರಭುತ್ವದಡಿಯಲ್ಲಿ ಜವಾಬ್ದಾರಿ ಅಧಿಕಾರ ಸ್ಥಾನಗಳನ್ನು ಹೊಂದಲು ಅರ್ಹರಾಗುವುದು ಇದರ ಪರಿಣಾಮವಲ್ಲವೇ?

ಮೀರ್ ಮುಖಬೂಲ್ ಮಹಮೂದ್: ಈಗಲೂ ಅದು ಸಾಧ್ಯ.

ಡಾ. ಬಿ. ಆರ್. ಅಂಬೇಡ್ಕರ್: ಅದು ಸಾಧ್ಯ ಎಂಬುದನ್ನು ನಾನು ಬಲ್ಲೆ.

ಮೀರ್ ಮುಖಬೂಲ್ ಮಹಮೂದ್: ಅದು ಈಗಲೂ ಹಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ನಾನು ಕೇಳಬೇಕೆಂದಿರುವುದೇನೆಂದರೆ, ಇದು ಅಸಂಗತ ಅಥವಾ ಅಸಂಬದ್ಧವೆಂದು ನೀವು ಪರಿಗಣಿಸುವುದಿಲ್ಲವೇ?

ಮೀರ್ ಮುಖಬೂಲ್ ಮಹಮೂದ್: ನಮಗೆ ಹಾಗೆನಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಒಬ್ಬ ಪರಕೀಯನಿಗೆ ಮತದಾನದ ಹಕ್ಕು ಶಾಸಕಾಂಗದ ಸದಸ್ಯತ್ವಕ್ಕೆ ಸ್ಪರ್ಧಿಸುವ ಅರ್ಹತೆ ಮತ್ತು ಜವಾಬ್ದಾರಿಯ ಅಧಿಕಾರ ಸ್ಥಾನವನ್ನು ಪಡೆದುಕೊಳ್ಳುವ ಅರ್ಹತೆಯನ್ನು ನೀವು ಯಾವುದಾದರೂ ಸಂವಿಧಾನದಲ್ಲಿರುವುದನ್ನು ಉಲ್ಲೇಖಿಸಬಲ್ಲಿರಾ?

ಮೀರ್ ಮುಖಬೂಲ್ ಮಹಮೂದ್: ಇಲ್ಲಿ ಕೂಡ ನಮ್ಮ ಪ್ರತಿಭಾನ್ವಿತ ಪ್ರತಿನಿಧಿ ಸರ್ ಪಿ. ಪಟ್ಟಾನಿಯವರು ಕಾರ್ಯಕಾರಿ ಸಮಿತಿ (ಎಕ್ಸಿಕ್ಯೂಟಿವ್ ಕೌನ್ಸಿಲ್)ಯ ಸದಸ್ಯರಾಗಿದ್ದರು.

ಡಾ. ಬಿ. ಆರ್. ಅಂಬೇಡ್ಕರ್: ಅದು ನನಗೆ ಗೊತ್ತು. ಆದರೆ, ನಾನು ನಿಮಗೆ ಮನದಟ್ಟು ಮಾಡಿಕೊಡುವುದೇನೆಂದರೆ ಇದು ಅಸಂಬದ್ಧವೆನಿಸುವುದಲ್ಲದೆ ಇತರ ಯಾವ ಸಂಯುಕ್ತ ರಾಜ್ಯದಲ್ಲಿಯೂ ಕಾಣದಂತಹ ಸಂಗತಿ.

ಮೀರ್ ಮುಖಬೂಲ್ ಮಹಮೂದ್: ಈ ಕ್ಷಣದಲ್ಲಿ ನಾನು ಯಾವ ನಿದರ್ಶನವನ್ನೂ ಉಲ್ಲೇಖಿಸಲಾರೆ.

ಡಾ. ಬಿ. ಆರ್. ಅಂಬೇಡ್ಕರ್: ಭಾರತೀಯ ಸಂಸ್ಥಾನದ ಒಬ್ಬ ಪ್ರಜೆ ಪ್ರಭುತ್ವದಡಿಯಲ್ಲಿ ಜವಾಬ್ದಾರಿ ಅಧಿಕಾರವನ್ನು ಹೊಂದಿದ್ದಾಗ್ಯೂ ಅವನನ್ನು ವಿದೇಶಿಯರ ಕಾಯ್ದೆಯಡಿಯಲ್ಲಿ ಸೇರಿಸುವುದು ಸೂಕ್ತ ಅಥವಾ ಬುದ್ಧಿವಂತಿಕೆಯ ವ್ಯವಸ್ಥೆ ಎಂದು ನೀವು ಭಾವಿಸುವಿರಾ?

ಮೀರ್ ಮುಖಬೂಲ್ ಮಹಮೂದ್: ಎಲ್ಲಿಯವರೆಗೆ ಅವನು ಸಂವಿಧಾನಕ್ಕೆ ನಿಷ್ಠೆಯ ಪ್ರಮಾಣ ವಚನ ತೆಗೆದುಕೊಳ್ಳುವನೋ ಅಲ್ಲಿಯವರೆಗೆ.

ಡಾ. ಬಿ. ಆರ್. ಅಂಬೇಡ್ಕರ್: ಅದರಿಂದ ಅವನು ವಿದೇಶಿಯರ ಕಾಯ್ದೆಯ ವ್ಯಾಪ್ತಿಯಿಂದ ಮುಕ್ತನಾಗುವನೆಂದು ನೀವು ಹೇಳುತ್ತೀರಾ?

ಮೀರ್ ಮುಖಬೂಲ್ ಮಹಮೂದ್: ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಿಮಗನ್ನಿಸಿದರೆ ಹಾಗೆ ಮಾಡಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಅದೇ ನಾನು ಹೇಳುತ್ತಿರುವ ಸಂಗತಿ. ಆದ್ದರಿಂದ ಒಂದು ಸರ್ವಸಾಮಾನ್ಯವಾದ ಭಾರತೀಯ ರಾಷ್ಟ್ರೀಯತೆಯನ್ನು ಹೊಂದುವುದು ಅಪೇಕ್ಷಣೀಯವಲ್ಲವೇ?

ಮೀರ್ ಮುಖಬೂಲ್ ಮಹಮೂದ್: ಈ ಪ್ರಶ್ನೆಯ ಕಾನೂನಿಗನುಗುಣವಾಗಿ ನಾವು ಪರಿಗಣಿಸಿಲ್ಲವೆಂಬುದು ನನ್ನ ಆತಂಕ.

ಶ್ರೀ ಜಯಕರ್: ಅರಸರು ಕೊನೆಪಕ್ಷ ಈ ಸಾಮಾನ್ಯ ರಾಷ್ಟ್ರೀಯತೆಯ ಪ್ರಶ್ನೆಯನ್ನು ಪರಿಗಣಿಸಿದ್ದಾರೆಯೇ?

ಮೀರ್ ಮುಖಬೂಲ್ ಮಹಮೂದ್: ಹೌದು. ಪರಿಗಣಿಸಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಅದನ್ನು ಮನ್ನಿಸಿಲ್ಲವಲ್ಲವೇ?

ಡಾ. ಪಿ. ಕೆ. ಸೇನ್: ಅರಸರು ತಮ್ಮ ಪ್ರಜೆಗಳ ನಿಷ್ಠೆಯನ್ನು ತಮ್ಮ ಸಂಸ್ಥಾನಗಳ ಆಳರಸರ ನಿಷ್ಠೆಗೊಳಪಟ್ಟು ಬ್ರಿಟಿಷ್ ಪ್ರಭುತ್ವಕ್ಕೆ ಅಲ್ಲಗಳೆದಿಲ್ಲ ಎಂದರೆ, ಅದು ಪೂರಕ ನಿಷ್ಠೆ. ಅದನ್ನು ಯಾವಾಗಲೂ ಈ ಅರ್ಥದಲ್ಲಿಯೇ ಪರಿಗಣಿಸಲಾಗಿದೆ. ಆದ್ದರಿಂದ ಭಾರತದ ಪ್ರಾಂತ್ಯಗಳಲ್ಲಿ ಬ್ರಿಟಿಷ್ ಭಾರತೀಯರಿಗೆ ನೀಡಲಾದ ಎಲ್ಲಾ ಸೌಲಭ್ಯಗಳನ್ನೂ ಅವರಿಗೆ ನೀಡಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಕಾನೂನಿನ ದೃಷ್ಟಿಯಲ್ಲಿ ಮುಂದಿನ ಸ್ಥಿತಿ ಬಗ್ಗೆ ಮಾತನಾಡುತ್ತಿದ್ದೇನೆ.

ಮೀರ್ ಮುಖಬೂಲ್ ಮಹಮೂದ್: ನಾನು ಗೌರವಪೂರ್ವಕವಾಗಿ ಹೇಳಬಹುದಾದರೆ ಇಂತಹ ಸಂಗತಿಯಲ್ಲಿ ಈ ಹೋಲಿಕೆ ಉಪಯೋಗವಾಗುವುದೆಂದು ನನಗನಿಸುವುದಿಲ್ಲ. ಏಕೆಂದರೆ, ಭಾರತೀಯ ಸಂಸ್ಥಾನಗಳು ಮತ್ತು ಪ್ರಭುತ್ವದೊಡನೆ ಅವು ಹೊಂದಿರುವ ಸಂಬಂಧ ನಿಸ್ಸಂಶಯವಾಗಿ ವಿಶಿಷ್ಟ ರೀತಿಯ

ದಾಗಿದೆ. ಆದ್ದರಿಂದ ನೀವು ಹೇಳುತ್ತಿರುವ ಹೋಲಿಕೆಗಳಿಂದ ಹೆಚ್ಚಿನ ಯಾವ ಉಪಯೋಗವೂ ಆಗುವುದಿಲ್ಲ. ಆದರೆ ರಾಷ್ಟ್ರೀಯತೆಯ ಪ್ರಶ್ನೆ ನಿಜವಾಗಿಯೂ ಮಹತ್ವದ್ದಾಗಿದೆ ಮತ್ತು ಪರಿಶೀಲನೆಯ ನಂತರ ಯಾವುದಾದರೂ ಒಂದು ಸೂಕ್ತ ಪರಿಹಾರ ಕಂಡುಹಿಡಿಯಲು ಸಾಧ್ಯ ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಆದರೆ, ಕಾನೂನಿಗೆ ಸಂಬಂಧಿಸಿದ ಸ್ಥಿತಿ ಮತ್ತು ಅದರಿಂದ ಉದ್ಭವಿಸಬಹುದಾದ ಪರಿಸ್ಥಿತಿಯ ಬಗ್ಗೆ ಈ ಸಾಕ್ಷಿಯಲ್ಲಿ ನಿರ್ದಿಷ್ಟ ಹೋಲಿಕೆಗಳಿಂದ ಯಾವುದೇ ಸಹಾಯ ಪಡೆಯುವುದು ಸಾಧ್ಯವಿಲ್ಲ ಎಂದು ನಾನು ಹೇಳಿದೆ. ಪ್ರಪಂಚದ ಇತರ ಭಾಗಗಳಲ್ಲಿ ಯಾವ ಪರಿಸ್ಥಿತಿ ಇದೆ ಅಥವಾ ಇಲ್ಲ ಎಂಬುದರಿಂದ ನಮಗೆ ಹೆಚ್ಚು ಪ್ರಯೋಜನವಾಗುವುದಿಲ್ಲ. ಏಕೆಂದರೆ, ಬ್ರಿಟಿಷ್ ಪ್ರಭುತ್ವದೊಡನೆ ಸಂಸ್ಥಾನಗಳು ಹೊಂದಿರುವ ಸಂಬಂಧ ವೈಶಿಷ್ಟ್ಯಪೂರ್ಣವಾಗಿದೆ. ಆದ್ದರಿಂದ ಈ ಪರಿಸ್ಥಿತಿಯಲ್ಲಿ (ಅದು ಎಷ್ಟೇ ಅಸಂಗತವೆನಿಸಿದರೂ) ಸಂಸ್ಥಾನದ ಪ್ರಜೆ ತನ್ನ ಅರಸನಿಗೆ ಹೊಂದಿರುವ ನಿಷ್ಠೆ ಜೊತೆಯಲ್ಲಿಯೇ ಪ್ರಭುತ್ವಕ್ಕೂ ನಿಷ್ಠೆ ಹೊಂದಿರುತ್ತಾನೆ ಮತ್ತು ಕಾನೂನಿಗೆ ಸಂಬಂಧಿಸಿದ ಸ್ಥಿತಿಯೊಂದಿಗೆ ಹಾಗೂ ಅದರಿಂದ ಉದ್ಭವಿಸುವ ಪರಿಣಾಮಗಳೊಂದಿಗೆ ಹೊಂದಿಕೊಳ್ಳುವುದಕ್ಕಾಗಿ ಈ ವಿಷಯವನ್ನು ಎಲ್ಲಾ ದೃಷ್ಟಿಗಳಿಂದ ಪರಿಶೀಲಿಸಬೇಕಾಗುತ್ತದೆ. ಕಾನೂನಿಗೆ ಸಂಬಂಧಿಸಿದಂತೆ ಈ ಪರಿಸ್ಥಿತಿಯ ಕಾನೂನಾತ್ಮಕ ಪರಿಣಾಮಗಳೇನು ಎಂಬ ಪ್ರಶ್ನೆಗೆ ಉತ್ತರ ನೀಡುವುದು ಈ ಸಾಕ್ಷಿಯಲ್ಲಿ ಸಾಧ್ಯವಾಗಲಾರದು.

ಶ್ರೀಯುತ ಜಯಕರ್: ಆದ್ದರಿಂದ ಈ ಅಂಶದ ಮೇಲೆ ಸಂಸ್ಥಾನಗಳು ಯಾವುದೇ ಅಚಲ ಮತ್ತು ಅಂತಿಮ ನಿರ್ಣಯಕ್ಕೆ ಬಂದಿಲ್ಲ ಎಂದು ನಾನು ಭಾವಿಸಬಹುದೇ?

ಮೀರ್ ಮುಖಬೂಲ್ ಮಹಮೂದ್: ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನೀವು ಇದು ಅಸಂಬದ್ಧ ಪರಿಸ್ಥಿತಿಯಾಗಿದೆ ಮತ್ತು ಇದು ಪರಿಶೀಲನಾರ್ಹವಾಗಿದೆ ಎಂದು ಭಾವಿಸಿರುವುದಾಗಿ ನನಗೆ ಮನವರಿಕೆಯಾಗಿದೆ.

ಮೀರ್ ಮುಖಬೂಲ್ ಮಹಮೂದ್: ಅದು ಪರಿಶೀಲನಾರ್ಹವಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈಗ ನಿಮಗೆ ಸಂಯುಕ್ತ ನ್ಯಾಯಾಲಯ (ಫೆಡರಲ್ ಕೋರ್ಟ್)ದ ಬಗ್ಗೆ ಒಂದು ಪ್ರಶ್ನೆ ಕೇಳಬಯಸುವೆ. ನೀವು ಶ್ವೇತಪತ್ರದ ೧೫೫ನೆಯ ಪ್ಯಾರಾವನ್ನು ಪರಾಮರ್ಶಿಸಿರುವಿರಾ? ಒಂದು ಬ್ರಿಟಿಷ್ ಭಾರತೀಯ ಪ್ರಾಂತ್ಯದ ನಾಗರಿಕನ ವಿರುದ್ಧ ಭಾರತೀಯ ಸಂಸ್ಥಾನದ ನಾಗರಿಕ ಹೊಂದಬಹುದಾದ ವಿವಾದ ಅಥವಾ ಭಾರತೀಯ ಸಂಸ್ಥಾನದ ನಾಗರಿಕನ ವಿರುದ್ಧ ಬ್ರಿಟಿಷ್ ಭಾರತೀಯ ಪ್ರಾಂತ್ಯದ ನಾಗರಿಕನ ವಿವಾದವನ್ನು ಬಗೆಹರಿಸುವ ಅಧಿಕಾರ ವ್ಯಾಪ್ತಿಯುಳ್ಳ ಸಂಯುಕ್ತ ನ್ಯಾಯಾಲಯದ ಸ್ಥಾಪನೆಗೆ ಅದರಲ್ಲಿ ಅವಕಾಶ ಮಾಡಿಲ್ಲ ಎಂಬುದನ್ನು ನೀವು ಕಾಣುವಿರಿ. ಒಬ್ಬ ಬ್ರಿಟಿಷ್ ಭಾರತದ ನಾಗರಿಕನು ಸಂಯುಕ್ತ ಕಾನೂನಿನನ್ವಯ ಉದ್ಭವಿಸುವ ಒಂದು ಸಕಾರಣ ವ್ಯಾಜ್ಯವನ್ನು ಒಂದು ಭಾರತೀಯ ಸಂಸ್ಥಾನದ ವಿರುದ್ಧ ನಡೆಸಲು ಮತ್ತು ತನ್ನ ಹಕ್ಕನ್ನು ಸಮರ್ಥಿಸಿಕೊಳ್ಳಲು ಒಂದು ಸೂಕ್ತ ವೇದಿಕೆಯ ಅವಶ್ಯಕತೆ ಇದೆ ಎಂದು ನೀವು ಒಪ್ಪುವಿರಲ್ಲವೇ?

ಮೀರ್ ಮುಖಬೂಲ್ ಮಹಬೂಬ್: ಶ್ವೇತಪತ್ರವನ್ನು ನಾನು ಅರ್ಥಮಾಡಿಕೊಂಡಿರುವಂತೆ, ಅದರ ೧೫೫ನೆಯ ಪ್ಯಾರಾದಲ್ಲಿ ಅದು ಸಂಸ್ಥಾನ ಮತ್ತು ಸಂಸ್ಥಾನ ಮತ್ತು ಪ್ರಾಂತ್ಯ, ಅಥವಾ ಸಂಸ್ಥಾನ ಮತ್ತು ಸಂಯುಕ್ತ ರಾಜ್ಯ, ಅಥವಾ ಪ್ರಾಂತ್ಯ ಮತ್ತು ಸಂಯುಕ್ತ ರಾಜ್ಯದ ನಡುವಣ ಕೆಲವು ವಿಶೇಷ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ. ಒಬ್ಬ ವ್ಯಕ್ತಿಯು ಬ್ರಿಟಿಷ್ ಭಾರತೀಯ ಪ್ರಾಂತ್ಯ ಅಥವಾ ಸಂಸ್ಥಾನದ ವಿರುದ್ಧ

ಹೊಂದಿರಬಹುದಾದ ಸಕಾರಣ ಮಟ್ಟದ ಸಂಬಂಧದಲ್ಲಿ ಸಂಯುಕ್ತ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ನೀಡಲು ಅದರಲ್ಲಿ ಅವಕಾಶವಿಲ್ಲ. ಆದ್ದರಿಂದ ಸಿವಿಲ್ ಪ್ರೊಸೀಜರ್ ಕೋಡಿನಲ್ಲಿರುವಂತೆ ಸಕಾರಣ ವ್ಯಾಜ್ಯವು ಪ್ರತಿವಾದಿಯ ವಾಸಸ್ಥಾನದ ಆಧಾರದ ಮೇಲೆ ವಿವಾದದ ವಿಚಾರಣೆ ಯಾವ ವೇದಿಕೆಯ ಮೇಲೆ ಆಗುವುದೆಂಬ ಅಂಶವನ್ನು ನಿರ್ಣಯಿಸುತ್ತದೆ ಎಂಬುದು ಸ್ಪಷ್ಟವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಶ್ನೆ ಅದಲ್ಲ. ಪ್ರಶ್ನೆ ಏನೆಂದರೆ ಸಂಯುಕ್ತ ನ್ಯಾಯಾಲಯ ಅಧಿಕಾರ ವ್ಯಾಪ್ತಿ ಹೊಂದಿದೆಯೇ?

ಮೀರ್ ಮುಖಬೂಲ್ ಮಹಬೂಬ್: ಇಲ್ಲ. ಸಂಯುಕ್ತ ನ್ಯಾಯಾಲಯ ಅಧಿಕಾರ ವ್ಯಾಪ್ತಿ ಹೊಂದಿರಬೇಕೆಂದು ಆಲೋಚಿಸಲಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಯಾವುದೇ ಒಂದು ಸಂಯುಕ್ತ ಕಾನೂನಿನ್ವಯ ಒಂದು ವ್ಯಾಜ್ಯದ ಕಾರಣದ ಮೇಲೆ ಒಂದು ವಿವಾದ ಉದ್ಭವಿಸುವುದೆಂದು ಭಾವಿಸೋಣ. ಇದರಲ್ಲಿ ಮೂಲ ದಾವೆ ಅಥವಾ ಮೊಕದ್ದಮೆ ಎಲ್ಲಿಯೇ ಇರಲಿ, ಸಂಯುಕ್ತ ನ್ಯಾಯಾಲಯವೇ ಅಂತಿಮ ವೇದಿಕೆಯಾಗಿರಲೇಬೇಕಲ್ಲವೇ? ಮೂಲ ವ್ಯಾಜ್ಯ ಎಂದರೆ ನಾವು ದಾವೆಯನ್ನೇ ನೋಡಬೇಕಲ್ಲವೇ?

ಮೀರ್ ಮುಖಬೂಲ್ ಮಹಬೂಬ್: ದಾವೆಯು ಬ್ರಿಟಿಷ್ ಭಾರತದಲ್ಲಿ ಅಥವಾ ಸಂಸ್ಥಾನದಲ್ಲಿ ನಡೆಯಬೇಕೆಂದು ಅದು ಆಲೋಚಿಸಿರುವುದು ಸುಸ್ಪಷ್ಟವಿದೆ. ಇನ್ನು ನಾವು ಮೇಲ್ಮನವಿಯ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ದಾವೆಯ ಸ್ವರೂಪ ವ್ಯಾಪಕವಾಗಿದ್ದು ಅದರ ಮೇಲಣ ಅಧಿಕಾರ ವ್ಯಾಪ್ತಿ ಸಂಯುಕ್ತ ನ್ಯಾಯಾಲಯಕ್ಕೆ ಇರಬೇಕಾಗುತ್ತದೆಯಲ್ಲವೇ?

ಮೀರ್ ಮುಖಬೂಲ್ ಮಹಮೂದ್: ನನಗೆ ಹಾಗೆನಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮ್ಮ ಗಮನ ಸೆಳೆಯಬಯಸುವ ವಿಷಯವಿಷ್ಟೇ. ೧೫೫ನೆಯ ಪ್ಯಾರಾದಲ್ಲಿರುವ ವಿಧಿಗಳಲ್ಲಿ ಒಬ್ಬ ಖಾಸಗಿ ವ್ಯಕ್ತಿಗೆ ಒಂದು ದೇಶೀಯ ಸಂಸ್ಥಾನದ ವಿರುದ್ಧ ಅಥವಾ ಒಂದು ಭಾರತೀಯ ಸಂಸ್ಥಾನದ ನಾಗರಿಕ ಒಂದು ಭಾರತೀಯ ಪ್ರಾಂತ್ಯದ ವಿರುದ್ಧ ಸಂಯುಕ್ತ ರಾಜ್ಯದ ಕಾನೂನುಗಳಿಂದ ಲಭ್ಯವಾಗುವ ತನ್ನ ಹಕ್ಕುಗಳನ್ನು ಸಮರ್ಥಿಸಿಕೊಳ್ಳಲು ಅದರಲ್ಲಿ ಅವಕಶವಿಲ್ಲವೆಂದಾಯಿತಲ್ಲವೇ?

ಮೀರ್ ಮುಖಬೂಲ್ ಮಹಬೂಬ್: ಅದು ಸ್ಪಷ್ಟವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ತಾವು ದಯವಿಟ್ಟು ನಿಮ್ಮ ವಿಜ್ಞಾಪನಾ ಪತ್ರದ ಪ್ಯಾರಾ "ಜಿ", ೨೧ನೆಯ ದಾಖಲೆ, ಉಪ ಪ್ಯಾರಾ (ಸಿ)ಯನ್ನು ಪರಾಮರ್ಶಿಸುವಿರಾ?

ಮೀರ್ ಮುಖಬೂಲ್ ಮಹಬೂಬ್: ಆಗಲಿ.

ಡಾ. ಬಿ. ಆರ್. ಅಂಬೇಡ್ಕರ್: ಆ ಪ್ಯಾರಾದ ಕೊನೆಯಲ್ಲಿ ಯಾವುದೇ ಸಂಸ್ಥಾನ ಸಂಯುಕ್ತ ನ್ಯಾಯಾಲಯದ ಡಿಕ್ರಿ ಅಥವಾ ಆಜ್ಞೆಯನ್ನು ಜಾರಿ ಮಾಡಲು ವಿಫಲವಾದರೆ, ಹಾಗೆ ಜಾರಿ ಮಾಡುವ ಅಧಿಕಾರವನ್ನು ವೈಸರಾಯ್‌ರವರಿಗೆ ನೀಡಬೇಕೆಂದು ನೀವು ಸೂಚಿಸಿರುವಿರಲ್ಲವೇ?

ಡಾ. ಪಿ. ಕೆ. ಸೇನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನೀವು ಈ ಅಧಿಕಾರವನ್ನು ವೈಸ್‌ರಾಯ್‌ರಿಗೆ ಏಕೆ ಕೊಡಬೇಕೆನ್ನುವಿರಿ?

ಅದನ್ನು ಗವರ್ನರ್–ಜನರಲ್ ಅಥವಾ ಸಂಯುಕ್ತ ರಾಜ್ಯ ಮಂತ್ರಿ ಮಂಡಲಕ್ಕೆ ಏಕೆ ಕೊಡಬಾರದು? ಸಂಯುಕ್ತ ನ್ಯಾಯಾಲಯವು ಸಂಯುಕ್ತ ರಾಜ್ಯ ಸಂವಿಧಾನದ ಅಂಗವಾಗಿರುವುದಿಲ್ಲವೇ?

ಡಾ. ಪಿ. ಕೆ. ಸೇನ್: ಫೆಡರಲ್ ನ್ಯಾಯಾಲಯದ ಯಾವುದೇ ಆಜ್ಞೆಯನ್ನು ಸಂಸ್ಥಾನದ ಘಟಕವು ಜಾರಿಗೊಳಿಸಿದ್ದ ಸಂದರ್ಭದಲ್ಲಿ ವೈಸ್‌ರಾಯ್‌ರವರೇ ಅದನ್ನು ಜಾರಿಗೊಳಿಸುವಂತೆ ನೋಡಿಕೊಳ್ಳುವ ಸೂಕ್ತ ವ್ಯಕ್ತಿ ಎಂದು ತೋರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ವೈಸ್‌ರಾಯ್‌ರವರೇ ಏಕೆ? ಗವರ್ನರ್–ಜನರಲ್ ಅಥವಾ ಸಂಯುಕ್ತ ರಾಜ್ಯ ಮಂತ್ರಿ ಮಂಡಲ ಏಕಾಗಬಾರದು? ವೈಸ್‌ರಾಯ್‌ರವರೇ ಏಕೆ?

ಡಾ. ಪಿ. ಕೆ. ಸೇನ್: ಏಕೆಂದರೆ, ಸಾರ್ವಭೌಮಾಧಿಕಾರದ ಪ್ರತಿನಿಧಿಯಾಗಿರುವ ವೈಸ್‌ರಾಯ್‌ರವರು ಸಂಸ್ಥಾನದ ವ್ಯವಹಾರಗಳೊಂದಿಗೆ ಸಂಪರ್ಕವಿಟ್ಟುಕೊಂಡಿರುವವರಾಗಿದ್ದು, ಅವರು ಒಂದು ಸಂಸ್ಥಾನ ಕೈಗೊಳ್ಳಬೇಕಾದ ಕರ್ತವ್ಯಗಳನ್ನು ನಿರ್ವಹಿಸುವಂತೆ ಮಾಡುವ ಸ್ಥಾನದಲ್ಲಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ಈ ವಿಷಯದಲ್ಲಿ ನಾನು ಬೇರೆ ದೃಷ್ಟಿಯನ್ನೇ ಹೊಂದಿದ್ದು ಅದನ್ನು ನಿಮಗೆ ತಿಳಿಸಬಯಸುತ್ತೇನೆ. ಫೆಡರಲ್ ನ್ಯಾಯಾಲಯವು ಫೆಡರಲ್ ಸರಕಾರದ ಅಂಗವಾಗಿದೆ ಮತ್ತು ಶ್ವೇತಪತ್ರದ ಪ್ರಕಾರ ಗವರ್ನರ್‌ರು ಸಂಯುಕ್ತ ರಾಜ್ಯವನ್ನು ಪ್ರತಿನಿಧಿಸುತ್ತಾರೆ. ವೈಸ್‌ರಾಯ್‌ರವರಲ್ಲ. ಆದ್ದರಿಂದ ಯಾರಾದರೂ ಈ ಅಧಿಕಾರವನ್ನು ಹೊಂದಬೇಕಾಗಿದ್ದಲ್ಲಿ ಅವರು ಗವರ್ನರ್–ಜನರಲ್‌ರೇ ಹೊರತು ವೈಸ್‌ರಾಯ್‌ರಲ್ಲ ಅಲ್ಲವೇ?

ಡಾ. ಪಿ. ಕೆ. ಸೇನ್: ಈಗಿರುವ ಪ್ರಶ್ನೆಯೆಂದರೆ ಸಂಯುಕ್ತ ಕಾರ್ಯಾಂಗದ ಮುಖ್ಯಸ್ಥರಾಗಿರುವ ಗವರ್ನರ್–ಜನರಲ್‌ರು ಯಾವುದಾದರೂ ಸಂಸ್ಥಾನವನ್ನು ಶಿಕ್ಷಿಸುವ ಅಥವಾ ಒಂದು ಆಜ್ಞೆಯನ್ನು ಅಲ್ಲಿ ಜಾರಿಗೆ ತರುವ ಸ್ಥಿತಿಯಲ್ಲಿದ್ದಾರೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಅವರು ಹಾಗೆ ಮಾಡುವುದು ಸಾಧ್ಯ ಎಂಬುದು ನನ್ನ ವಾದ. ಅದು ವೈಸ್‌ರಾಯ್‌ರಿಂದ ಸಾಧ್ಯವಿಲ್ಲ. ಈ ವಿಷಯಗಳಲ್ಲಿ ವೈಸ್‌ರಾಯ್‌ರವರು ಪ್ರಭುತ್ವವನ್ನು ಪ್ರತಿನಿಧಿಸುವರೇ?

ಡಾ. ಪಿ. ಕೆ. ಸೇನ್: ಗವರ್ನರ್–ಜನರಲ್‌ರವರಿಗೆ ಯಾವ ಅಧಿಕಾರ ನೀಡಲಾಗಿದೆ? ನಮ್ಮ ಅಭಿಪ್ರಾಯದಲ್ಲಿ ಸಾರ್ವಭೌಮಾಧಿಕಾರದ ಪ್ರತಿನಿಧಿಯಾಗಿರುವ ವೈಸ್‌ರಾಯ್‌ರವರು ಈ ವಿಷಯಗಳಲ್ಲಿ ನಿಯಂತ್ರಣ ಹೊಂದಿದ್ದು ಅವರೇ ಇದನ್ನು ಜಾರಿಗೊಳಿಸುವ ಸ್ಥಿತಿಯಲ್ಲಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ನನ್ನ ನಿಲುವನ್ನು ಸ್ಪಷ್ಟಗೊಳಿರುವೆನೋ ಇಲ್ಲವೋ ನನಗೆ ತಿಳಿಯದು. ಸಂಯುಕ್ತ ನ್ಯಾಯಾಲಯವು ಸಂಯುಕ್ತ ರಾಜ್ಯ ಸಂವಿಧಾನದ ಅಂಗವಾಗಿದೆ ಎಂದು ನನ್ನ ವಾದ.

ಡಾ. ಪಿ. ಕೆ. ಸೇನ್: ನಿಸ್ಸಂಶಯವಾಗಿ.

ಡಾ. ಬಿ. ಆರ್. ಅಂಬೇಡ್ಕರ್: ಸಂಯುಕ್ತ ರಾಜ್ಯ ಸಂವಿಧಾನದ ಪ್ರಮುಖರು ಗವರ್ನರ್ ಜನರಲ್‌ರು, ವೈಸರಾಯ್‌ರಲ್ಲ.

ಡಾ. ಪಿ. ಕೆ. ಸೇನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ತತ್ಪರಿಣಾಮವಾಗಿ, ಸಂಯುಕ್ತ ಸಂವಿಧಾನದ ಅಂಗವಾಗಿರುವ ಸಂಯುಕ್ತ ನ್ಯಾಯಾಂಗದ ತೀರ್ಮಾನಗಳನ್ನು ಜಾರಿಗೊಳಿಸುವ ಕಾರ್ಯ ಗವರ್ನರ್ ಜನರಲ್‌ರಿಗೆ

ಸೇರಿಸಬೇಕೇ ಹೊರತು ವೈಸ್‌ರಾಯ್‌ರಿಗಲ್ಲ. ಆದ್ದರಿಂದ ಜಾರಿಗೊಳಿಸುವ ಅಧಿಕಾರ ಗವರ್ನರ್ ಜನರಲ್‌ರಿಗೆ ಇರತಕ್ಕದ್ದು.

ಡಾ. ಪಿ. ಕೆ. ಸೇನ್: ನಾನು ಹೇಳಬೇಕೆಂದಿರುವುದಿಷ್ಟೇ. ಗವರ್ನರ್ ಜನರಲ್‌ರವರು ವೈಸ್‌ರಾಯ್ ರವರ ಮುಖಾಂತರವೇ ಹೋಗುವುದು ಸರಿಯಾದ ವಿಧಾನ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಮಾತನ್ನು ಮುಂದುವರಿಸುವುದಿಲ್ಲ. ಶ್ರೀಯುತ ಪಣಿಕ್ಕರ್ ರವರೇ, ನೀವು ಶ್ರೀಯುತ ಜಯಕರ್‌ರವರ ಪ್ರಶ್ನೆಯೊಂದಕ್ಕೆ ನೀಡಿದ ಉತ್ತರದಲ್ಲಿ, ಕೇಂದ್ರದಲ್ಲಿ ಆರಕ್ಷಿತವಾಗಿರುವ ವಿಷಯಗಳನ್ನು ಅದರಲ್ಲಿಯೂ ವಿಶೇಷವಾಗಿ ಸೈನ್ಯದ ವಿಷಯವನ್ನು, ವರ್ಗಾಯಿಸುವಾಗ ಭಾರತೀಯ ಸಂಸ್ಥಾನಗಳ ಪೂರ್ವ ಸಮ್ಮತಿ ಪಡೆಯುವುದು ಅವಶ್ಯ ಎಂದು ಹೇಳಿದಿರಲ್ಲವೇ? ನಾನು ನಿಮ್ಮ ಮಾತುಗಳನ್ನು ಸರಿಯಾಗಿ ಮಂಡಿಸಿದ್ದೇನೆಯೇ?

ಶ್ರೀಯುತ ಕೆ. ಎಮ್. ಪಣಿಕ್ಕರ್: ಸಂಪೂರ್ಣವಾಗಿ.

ಡಾ. ಬಿ. ಆರ್. ಅಂಬೇಡ್ಕರ್: ಎಂದರೆ, ಮುಂದೆ ಚರ್ಚೆಗಾಗಿ ಈ ಪ್ರಶ್ನೆ ಎದ್ದಾಗ ಸೈನ್ಯದ ವಿಷಯವು ವರ್ಗಾಯಿತ ವಿಷಯವಾಗಬಾರದೆಂಬ ವಾದಕ್ಕೆ ಸಂಸ್ಥಾನಗಳು ಸಮ್ಮತಿಸಿದ್ದೇ ಆದರೆ ಅದನ್ನು ವರ್ಗಾಯಿಸಲಾಗುವುದಿಲ್ಲವೆಂದು ನಾನು ತಿಳಿದುಕೊಳ್ಳಲೇ?

ಶ್ರೀಯುತ ಕೆ. ಎಮ್. ಪಣಿಕ್ಕರ್: ಹಾಗೆ ಭಾವಿಸಿಕೊಳ್ಳಬಹುದು.

## (೪)

## ಸರ್ ಮೈಕೆಲ್ ಓ ಡ್ವೈಯರ್ ಜಿ.ಸಿ.ಐ.ಇ. ಕೆ.ಸಿ.ಎಸ್.ಐ.

* ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಸಾಕ್ಷಿಯಲ್ಲಿ ನೀವು ಬುದ್ಧಿವಂತ ವರ್ಗ ಅಥವಾ ಬುದ್ಧಿ ಜೀವಿಗಳು ಮತ್ತು ಸಾಮಾನ್ಯ ಜನರ ನಡುವೆ ಅತಿ ಸ್ಪಷ್ಟ ವ್ಯತ್ಯಾಸ ಮಾಡಿರುವುದನ್ನು ನಾನು ಗಮನಿಸಿದ್ದೇನೆ. ಬುದ್ಧಿಜೀವಿಗಳನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡು ಸಮಾಜದ ಒಂದು ನಿರ್ದಿಷ್ಟ ಸ್ತರದಿಂದ ಆಯ್ಕೆ ಮಾಡಿಕೊಂಡ ಪರಿಸ್ಥಿತಿಯಿಂದ ಅವರನ್ನು ಇನ್ನೊಂದು ಸ್ತರದಿಂದ ಆಯ್ಕೆ ಮಾಡಿಕೊಂಡಾಗ ಏನಾದರೂ ವ್ಯತ್ಯಾಸ ಉಂಟಾಗುವುದೆಂಬುದು ನಿಮ್ಮ ವಿಚಾರವಾಗಿಯೇ ಎಂದು ನಾನು ಕೇಳಬಯಸುತ್ತೇನೆ.

ಸರ್ ಮೈಕೆಲ್ ಓ ಡ್ವೈಯರ್: ಹೌದು. ಅವರನ್ನು ಪ್ರತ್ಯೇಕ ವರ್ಗದಿಂದ ಆಯ್ಕೆ ಮಾಡಿದ್ದೇ ಆದರೆ ಅವರು ವಿಶಾಲ ದೃಷ್ಟಿ ಹೊಂದಿದವರಾಗಿರುತ್ತಾರೆ ಎಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಭಾರತದ ಹಿಂದಿನ ಪರಿಸ್ಥಿತಿಯಲ್ಲಿ ಬುದ್ಧಿಜೀವಿಗಳ ವರ್ಗ ಬ್ರಾಹ್ಮಣರು ಮಾತ್ರವಲ್ಲದೆ, ಬ್ರಾಹ್ಮಣೇತರರು, ಮುಸಲ್ಮಾನರು ಮತ್ತು ನಿಮ್ಮ ವರ್ಗದವರಿಂದ ಕೂಡಿದ ನಿಜವಾಗಿಯೂ ಒಂದು ಸಂಕೀರ್ಣ ಸ್ವರೂಪದ ವರ್ಗವಾಗಿದೆ ಎಂದು ನಿಮಗನಿಸುವುದಿಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಭಾರತದ ವಿವಿಧ ಭಾಗಗಳಲ್ಲಿ ಅದು ಬೇರೆ ಬೇರೆ ರೀತಿಯದಾಗಿದೆ. ಭಾರತದ ಉತ್ತರ ಭಾಗದಲ್ಲಿ ಪಂಜಾಬದ ಹೊರಗಡೆ ಬುದ್ಧಿಜೀವಿಗಳು ಪ್ರಮುಖವಾಗಿ ಮೇಲ್ವರ್ಗದ ಸವರ್ಣ ಹಿಂದೂ ವರ್ಗಕ್ಕೆ ಸೇರಿದವರಾಗಿದ್ದರೆ. ವಿಶಾಲವಾದ ಶಿಕ್ಷಣ ಪ್ರಸಾರವುಳ್ಳ ಮದರಾಸಿನಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಅದಕ್ಕೆ ಸರ್ವವ್ಯಾಪಿ ಸ್ವರೂಪ ಕೊಡುವುದು ಕಷ್ಟ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮಗೆ ಕೇಳಬಯಸುವ ಪ್ರಶ್ನೆ ಇಷ್ಟೆ: ಬುದ್ಧಿವಂತರ ವರ್ಗವನ್ನು ಭಾರತೀಯ ಸಮಾಜದ ವಿಭಿನ್ನ ಸ್ತರಗಳಿಂದ ತೆಗೆದುಕೊಂಡಾಗ ಅವರ ಮತ್ತು ಜನಸಾಮಾನ್ಯರ ನಡುವಣ ದ್ವಂದ್ವ ಮತ್ತು ಬುದ್ಧಿವಂತರ ವರ್ಗವನ್ನು ಸಮಾಜದ ಒಂದೇ ಸ್ತರದಿಂದ ತೆಗೆದುಕೊಂಡಾಗಿನ ದ್ವಂದ್ವ ಏಕರೀತಿಯದಾಗಿರುತ್ತದೆ ಎಂಬುದನ್ನು ನೀವು ಅಲ್ಲಗಳೆಯುವುದಿಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ನಿಮ್ಮ ಈ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅದರಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದ ಜನಸಾಮಾನ್ಯರಿಂದಲೇ ಹೊರಹೊಮ್ಮಿದ ಬುದ್ಧಿವಂತರ ವರ್ಗವು ಆ ಜನತೆಯ ಹಿತರಕ್ಷಣೆ ಮಾಡುವರೆಂದು ನಂಬಬಹುದಾಗಿದೆಯೆಂದು ಹೇಳುವುದು ತರ್ಕ ಬದ್ಧವಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಅವರು ಬಹುಮಟ್ಟಿಗೆ ಹಾಗೆ ಮಾಡಬಹುದೆಂದು ನನಗ ನಿಸುತ್ತದೆ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ.II–ಎ, ೨೯ ಜೂನ್ ೧೯೩೩, ಪುಟಗಳು ೪೦೬–೭.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮಗೆ ಇನ್ನೊಂದು ಪ್ರಶ್ನೆ ಕೇಳಬಯಸುತ್ತೇನೆ. ಈಗಿನ ಸರಕಾರ ಸಾಮಾಜಿಕ ಸುಧಾರಣೆಗಾಗಿ ಶಾಸನಬದ್ಧ ಕಾರ್ಯಕ್ರಮ ಕೈಗೊಳ್ಳಲು ಹಿಂಜರಿಯುತ್ತಿದೆ ಎಂಬುದು ಸತ್ಯಸಂಗತಿಯಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಹೌದು. ಒಟ್ಟಾರೆ ಧಾರ್ಮಿಕ ಆಚರಣೆಯಲ್ಲಿ ಹಸ್ತಕ್ಷೇಪ ಆಗುವುದು ಎಂದು ಅಪಾರ್ಥ ಮಾಡಬಹುದಾದ ಯಾವುದೇ ಕಾರ್ಯ ಕೈಗೊಳ್ಳಲು ಹಿಂಜರಿಕೆ ಇದೆ ಎಂದು ನನ್ನ ಅಭಿಮತ.

ಡಾ. ಬಿ. ಆರ್. ಅಂಬೇಡ್ಕರ್: ಭಾರತೀಯರಲ್ಲಿರುವ ಅದಕ್ಷತೆಗೆ ಈ ಸಾಮಾಜಿಕ ಪಿಡುಗುಗಳೇ ಬಹುಮಟ್ಟಿಗೆ ಕಾರಣವಾಗಿದೆ ಎಂಬುದನ್ನು ನೀವು ಒಪ್ಪುವುದಿಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಬಹುಮಟ್ಟಿಗೆ ಅದು ಕಾರಣವಾಗಿದೆ ಎಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದ ಭಾರತೀಯರಲ್ಲಿರುವ ಸಾಮಾಜಿಕ ಅದಕ್ಷತೆಯ ನಿವಾರಣೆಗೆ ಅವಶ್ಯವಾದ ಶಾಸನಬದ್ಧ ಸುಧಾರಣೆಯ ಕಾರ್ಯಕ್ರಮವನ್ನು ಕೈಗೊಳ್ಳಲು ಹಿಂಜರಿಯುತ್ತಿರುವ ಸರಕಾರ ದುರ್ಬಲ ಸರಕಾರವೆನಿಸುವುದಿಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಸರಕಾರ ಹಿಂಜರಿಯುತ್ತಿದೆ ಎಂದು ನಾನು ಹೇಳುವುದಿಲ್ಲ. ಸಾರ್ವಜನಿಕ ಅಭಿಪ್ರಾಯ ಬಹುಭಾಗ ತನ್ನ ಪರವಾಗಿದೆ ಎಂಬ ಭಾವನೆ ಉಂಟಾಗುವವರೆಗೆ ಅದು ಹಿಂಜರಿಯುತ್ತದೆ ಎಂದು ನಾನು ಭಾವಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಿಜ. ಆದರೆ ಮುಖ್ಯವಾಗಿ ಅದರ ಶಾಸನಬದ್ಧ ಕಾರ್ಯಕ್ರಮಗಳು ಅತ್ಯಂತ ಅಲ್ಪವೆನಿಸುವುದಿಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಹೌದು. ಭಾರತದಂತಹ ದೇಶದಲ್ಲಿ ಕಾನೂನಿನ ಕ್ರಮ ಅಥವಾ ವಿಧಿ ಸಾರ್ವಜನಿಕ ಅಭಿಪ್ರಾಯಕ್ಕಿಂತ ಹೆಚ್ಚು ಮುಂದಾಗಿರುವುದು ಸಾಧ್ಯವಿಲ್ಲ. ಅಂತಹ ಒಂದು ವಿಧಿಯನ್ನು ಸರಕಾರ ಮಂಡಿಸಿದಾಗ ಶ್ರೀಯುತ ತಿಲಕರು ಸರಕಾರ ಧರ್ಮದಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂದು ಹುಯಿಲೆಬ್ಬಿಸಿದರು. ಇದರ ಪರಿಣಾಮವಾಗಿ ದಖ್ಖನದಲ್ಲಿ ಚಳುವಳಿ ಮತ್ತು ಹತ್ಯೆಗಳು ಸಂಭವಿಸಿದವು.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ತಿಲಕರಂತಹ ಒಬ್ಬ ವ್ಯಕ್ತಿಯಿಂದ ಸರಕಾರ ಭಯಭೀತವಾಯಿತೇ?

ಸರ್ ಮೈಕೆಲ್ ಓ ಡ್ವೈಯರ್: ಅದರಲ್ಲಿ ತಿಲಕರೊಬ್ಬರೇ ಇರಲಿಲ್ಲ. ಅವರಿಗೆ ಜನತೆಯನ್ನು ತಮ್ಮೊಡನೆ ತೆಗೆದುಕೊಂಡು ಹೋಗುವಂತಹ ಅದ್ಭುತ ಶಕ್ತಿ ಇತ್ತು.

ಡಾ. ಬಿ. ಆರ್. ಅಂಬೇಡ್ಕರ್: ಭಾರತೀಯರು ತಿಲಕರಿಗೆ ಅಂಜುವುದಿಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಅವರು ಅಂಜುತ್ತಾರೆಂಬುದು ನನ್ನ ವಿಚಾರ. ಕೆಲವೇ ಜನರು ಶ್ರೀಯುತ ತಿಲಕರನ್ನು ವಿರೋಧಿಸುವರೆಂದು ನನಗನಿಸುತ್ತದೆ. ಲಾರ್ಡ್ ಸಿಡೆನ್ ಹ್ಯಾಮ್‌ರವರು ಅವರ ಲ್ಲೊಬ್ಬರು.

ಡಾ. ಬಿ. ಆರ್. ಅಂಬೇಡ್ಕರ್: ಸದ್ಯಕ್ಕೆ ಕಾನೂನು ಮತ್ತು ಸುವ್ಯವಸ್ಥೆಯ ವಿಷಯವನ್ನು ವರ್ಗಾಯಿಸು ವುದಿಲ್ಲ ಎಂದು ನೀವು ಹೇಳಿದಿರಿ. ಅದನ್ನು ವರ್ಗಾಯಿಸುವ ಮೊದಲು ನೀವು ಇತರ ವಿಷಯಗಳನ್ನು ವರ್ಗಾಯಿಸುವಿರಿ ಮತ್ತು ಕೇಂದ್ರದಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ ಎಂದು ಹೇಳಿದಿರಿ. ಕಾನೂನು ಸುವ್ಯವಸ್ಥೆಯ ವಿಷಯವನ್ನು ವರ್ಗಾಯಿಸುವ ಮುಂಚೆ ಎಷ್ಟು ಅವಧಿ ಕಳೆಯಬೇಕಾಗುವುದು ಎಂಬುದರ ಬಗ್ಗೆ ಸೂಚನೆಯನ್ನು ನೀಡುವಿರಾ?

ಸರ್ ಮೈಕೆಲ್ ಓ ಡ್ವೈಯರ್: ನಾನು ಹಾಗೆ ಮಾಡಬಯಸುವೆ. ಕೋಮುವಿರಸ ಶಮನವಾಗಿ, ವಿಸ್ತೃತ ಅಧಿಕಾರ ಪಡೆದುಕೊಂಡಿರುವ ಮಂತ್ರಿಗಳು ಭೂಕಂದಾಯ, ನೀರಾವರಿ ಮತ್ತು ಇತರ ಇಲಾಖೆ ಗಳಲ್ಲಿ ಅಂತಹ ಅಧಿಕಾರ ಉಪಯೋಗಿಸಿಕೊಂಡು ಅವರು ಇನ್ನೂ ಹೆಚ್ಚಿನ ಅಧಿಕಾರ ಪಡೆಯಲು ಯೋಗ್ಯರಾಗಿದ್ದಾರೆಂದು ತೋರಿಸಿಕೊಟ್ಟಾಗ ಮತ್ತು ಈಗ ಕೆಲವು ಪ್ರಾಂತ್ಯಗಳಲ್ಲಿರುವ ಬ್ರಿಟಿಷ್–ವಿರೋಧಿ ಚಳುವಳಿಗಳು ಹಾಗೂ ಭಯೋತ್ಪಾದಕರ ಕೂಟಗಳು ಇಲ್ಲವಾಗಿ ಪರಿಸ್ಥಿತಿ ಅನುಕೂಲಕರವಾದ ನಂತರ ಕಾನೂನು ಮತ್ತು ಸುವ್ಯವಸ್ಥೆ ಇಲಾಖೆಯನ್ನು ವರ್ಗಾಯಿಸುವೆ.

ಡಾ. ಬಿ. ಆರ್. ಅಂಬೇಡ್ಕರ್: ನೀವು ಸೂಚಿಸಿರುವ ಯೋಜನೆಯ ಪರವಾಗಿ ಭಾರತದ ಸಾರ್ವಜನಿಕರಲ್ಲಿ ಯಾವ ವರ್ಗದವರಾದರೂ ಇದ್ದಾರೆಯೇ ಎಂದು ನಿಮ್ಮನ್ನು ಪ್ರಶ್ನಿಸಿದಾಗ ಹೌದು, ಭಾರತದಲ್ಲಿ ಇದನ್ನು ಒಪ್ಪಿಕೊಳ್ಳುವ ಕೆಲವು ವರ್ಗದವರಿದ್ದಾರೆ ಎಂದು ನೀವು ಹೇಳಿರುವಿರಲ್ಲವೇ?

ಸರ್ ಮೈಕೆಲ್ ಓ ಡ್ವೈರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಸೂಚಿತ ಯೋಜನೆಯನ್ನು ಭಾರತದ ಯಾವ ವರ್ಗವೂ ಒಪ್ಪುವುದಿಲ್ಲವೆಂದು ಇಟ್ಟುಕೊಂಡರೆ ನಿಮ್ಮ ಮುಂದಿನ ಕ್ರಮವೇನು? ಅಂತಹ ಸಂದರ್ಭದಲ್ಲಿ ನೀವು ಸಂಸತ್ತಿಗೆ ಯಾವ ಸಲಹೆ ನೀಡುವಿರಿ?

ಸರ್ ಮೈಕೆಲ್ ಓ ಡ್ವೈಯರ್: ಭಾರತದ ಜನತೆಯ ಹಿತದೃಷ್ಟಿಯಿಂದ ಯಾವ ಕ್ರಮ ಸೂಕ್ತವೆನಿಸುವುದೋ ಅದನ್ನು ನಾನು ಅನುಸರಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಭಾರತೀಯರು ಒಪ್ಪಲಿ ಬಿಡಲಿ ನಿಮಗೆ ಯಾವುದು ಸೂಕ್ತವೆನಿಸುವುದೋ ಅದನ್ನು ಸೂಚಿಸುವುದೇ ನಿಮ್ಮ ನಿಲುವಾಗಿದೆಯಲ್ಲವೇ?

ಸರ್ ಮೈಕೆಲ್ ಓ ಡ್ವೈಯರ್: ಹೌದು. ಕಾಲಕ್ರಮೇಣ ವಿಧಿಸಲಾದ ನಿರ್ಬಂಧಗಳ ಉಪಯುಕ್ತತೆಯ ಅರಿವು ಅವರಿಗೆ.....

ಡಾ. ಬಿ. ಆರ್. ಅಂಬೇಡ್ಕರ್: ತಾರ್ಕಿಕ ರೂಪದಲ್ಲಿ, ಸಾಕಷ್ಟು ಕಾಲ ಕಾಯ್ದು ನಂತರ ಯಾವ ಭಾರತೀಯ ವರ್ಗವೂ ನಿಮ್ಮ ಯೋಜನೆಯನ್ನು ಸ್ವೀಕರಿಸುವುದಿಲ್ಲವೆಂಬ ಗ್ರಹಿಕೆ ಮಾಡಿಕೊಂಡರೆ, ನಂತರ ಸಂಸತ್ತಿಗೆ ನೀವು ನೀಡುವ ಸಲಹೆ ಏನು?

ಸರ್ ಮೈಕೆಲ್ ಓ ಡ್ವೈಯರ್: ಸಂಸತ್ತಿಗೆ ನಾನು ನೀಡುವ ಸಲಹೆ ಇಷ್ಟೇ: ನಿಮ್ಮ ಅಭಿಪ್ರಾಯದಲ್ಲಿ ಕಾಲಕ್ರಮೇಣ ಜನರು ನಿಮ್ಮ ಯೋಜನೆ ಸೂಕ್ತ ಮತ್ತು ಸರಿಯಾದದ್ದೆಂದು ಅರಿತುಕೊಳ್ಳುವವರೆಗೆ ಯಾವ ಯೋಜನೆ ಸೂಕ್ತ ಮತ್ತು ಕಾರ್ಯಗತಗೊಳಿಸಬಹುದಾಗಿದೆ ಎಂದಿರುವುದೋ ಅದನ್ನು ಕಾರ್ಯಗತ ಗೊಳಿಸುತ್ತಾ ಹೋಗಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನೀವು ನನ್ನ ಪ್ರಶ್ನೆಯನ್ನು ತಿಳಿದುಕೊಳ್ಳುತ್ತಿಲ್ಲ ಎಂದು ನನಗೆ ವಿಷಾದವಾಗಿದೆ. ನನ್ನ ಪ್ರಶ್ನೆ ಅತ್ಯಂತ ನಿರ್ದಿಷ್ಟವಾದ ಪ್ರಶ್ನೆಯಾಗಿದೆ.

ಸರ್ ಮೈಕೆಲ್ ಓ ಡ್ವೈರ್: ನಾನು ಅದನ್ನು ಈ ರೀತಿಯಾಗಿ ಸಂಕ್ಷಿಪ್ತಗೊಳಿಸಬಹುದು. ಜನರು ಅನಿರ್ದಿಷ್ಟ ಕಾಲ ಅವಿವೇಚನಾಪರ ಧೋರಣೆಯನ್ನು ತಳೆಯುವರೆಂದು ನಾನು ತಿಳಿದಿಲ್ಲ. ದೊರೆಯ ಸರಕಾರವನ್ನು ಸಾಧ್ಯವಾದ ಶ್ರೇಷ್ಠ ಪದ್ಧತಿಗನುಸಾರವಾಗಿ ನಡೆಸಿಕೊಂಡು ಹೋಗಬೇಕಾಗುವುದು.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ II–ಎ, ೨೯ ಜೂನ್ ೧೯೩೩, ಪುಟ ೪೨೪.

* ಡಾ. ಬಿ. ಆರ್. ಅಂಬೇಡ್ಕರ್: ಅಧ್ಯಕ್ಷ ಮಹೋದಯರೇ, ಸರ್ ಮೈಕೆಲ್ ಓ ಡ್ವೈಯರ್‌ಯವರು ಇಲ್ಲಿಂದ ಹೊರಗೆ ಹೋಗುವ ಮುಂಚೆ ನಾನು ಒಂದು ಸಂಗತಿಯನ್ನು ಕೇಳಬಹುದೇ? ಮಿಸ್ಟರ್ ಬಟ್ಲರ್‌ರವರು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಸರ್ ಮೈಕೆಲ್‌ರವರು ಸೈಮನ್ ಆಯೋಗವು ಕಾನೂನು ಮತ್ತು ಸುವ್ಯವಸ್ಥೆಯ ವಿಷಯವನ್ನು ವರ್ಗಾಯಿಸುವ ಬಗ್ಗೆ ಶಿಫಾರಸು ಮಾಡಿದೆ ಎಂಬ ಅಂಶವನ್ನು ಪ್ರಸ್ತಾಪಿಸಿದ್ದಾರೆ. ಅದು ಸೈಮನ್ ಆಯೋಗದ ವರದಿಯ ಎರಡನೆಯ ಸಂಪುಟದ ೩೬೯ನೆಯ ಪ್ಯಾರಾದಲ್ಲಿದೆ. ನೀವು ಮನಸ್ಸಿನಲ್ಲಿಟ್ಟುಕೊಂಡಿದ್ದ ಪ್ಯಾರಾ ಇದೇ ಅಲ್ಲವೇ "ಈ ವರದಿಯನ್ನು ಬರೆಯುವಾಗ ಭಾರತದಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ ಜರುಗಿದ ಘಟನೆಗಳ ಪ್ರಾಸಂಗಿಕ ಪ್ರಸ್ತಾಪ ಮಾಡಿದ್ದೇವೆ."

ಸರ್ ಮೈಕೆಲ್ ಓ ಡ್ವೈರ್: ಹೌದು. ಅದು ನಿಜ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ಇದರಲ್ಲಿ ಪ್ರಸ್ತಾಪಿಸಲಾದ ಘಟನೆಗಳು ಗಾಂಧಿಯವರ ಅಸಹಕಾರ ಚಳುವಳಿಗೆ ಸಂಬಂಧಪಟ್ಟವುಗಳೆಂದು ಮತ್ತು ಭಾರತದಲ್ಲಿ ಸಂಬಂಧಿಸಿದ ಕಾನ್‌ಪುರದಲ್ಲಿ ಜರುಗಿದಂತಹ ಕೋಮುವಾರು ಗಲಭೆಗಳಿಗೆ ಸಂಬಂಧಪಟ್ಟವುಗಳಲ್ಲವೆಂದು ನಮ್ಮಲ್ಲಿ ಅನೇಕರ ತಿಳುವಳಿಕೆಯಾಗಿದೆಯೆಂದು ನಾನು ಇಲ್ಲಿ ತಿಳಿಯಬಯಸುತ್ತೇನೆ.

ವೈಕಾಂಟ್ ಬರ್ಹ್ಯಾಮ್: ಅದು ಕೋಮುವಾರು ಗಲಭೆಗಳಿಗೆ ಸಂಬಂಧಪಟ್ಟಿವೆ ಎಂದು ನಾನು ಹೇಳಿದೆ. ನಾನು ಅದನ್ನು ಈ ಅರ್ಥದಲ್ಲಿಯೇ ತಿಳಿದುಕೊಂಡಿದ್ದೇನೆ. ಅವುಗಳು ನಾಗರಿಕ ಅವಿಧೇಯ ಚಳುವಳಿಗೆ ಅಥವಾ ಅದರ ಪರಿಣಾಮವಾಗಿ ಸಂಭವಿಸಿದ ಕೋಮುವಾರು ಗಲಭೆಗಳಿಗೆ ಸಂಬಂಧಪಟ್ಟವುಗಳಾಗಿಲ್ಲವೆಂದು ನಾನು ಹೇಳಿರುವೆ.

## (೫)

# ಮಿ. ಎಫ್. ಇ. ಜೇಮ್ಸ್, ಮಿ. ಡಬ್ಲ್ಯು. ಡಬ್ಲ್ಯು. ಪೇಜ್, ಮಿ. ಟಿ. ಗಾವಿನ್–ಜೋನ್ಸ್, ಮಿ. ಜಿ. ಇ. ಕಫ್, ಮಿ. ಎಲ್. ಎ. ರೋಫೆ, ಸರ್ ವಿಲಿಯಂ ಮ್ಯಾಕ್ ಕರ್ಕರ್ ಮತ್ತು ಮಿ. ಎಫ್. ಡಬ್ಲ್ಯು. ಹಾಕೆನ್‌ಹಲ್

* ಡಾ. ಬಿ. ಆರ್. ಅಂಬೇಡ್ಕರ್: ಇನ್ನು ಒಂದೆರಡು ಪ್ರಶ್ನೆಗಳು ಮಾತ್ರ. ಮಿ. ಜೋನ್ಸ್‌ರವರೆ. ಮೊದಲನೆಯದಾಗಿ ಒಂದು ಪ್ರಶ್ನೆ. ಲಾರ್ಡ್ ಇರ್ವಿನ್‌ರವರು ತಾವು ವೈಸ್‌ರಾಯ್‌ರಾಗಿದ್ದ ಅವಧಿಯಲ್ಲಿ ೨೯ನೆಯ ಅಕ್ಟೋಬರ್ ೧೯೨೯ರಂದು ಮಾಡಿದ ಘೋಷಣೆಯಲ್ಲಿ ಆಗ ಅಧಿಕಾರದಲ್ಲಿದ್ದ ಮಹಾ ಪ್ರಭುಗಳ ಸರಕಾರದ ದೃಷ್ಟಿಯಲ್ಲಿ ಡೊಮಿನಿಯನ್ ಸ್ಥಾನ ಭಾರತದ ರಾಜಕೀಯ ಸ್ಥಿತಿಯ ತರ್ಕಬದ್ಧ ವಿಕಾಸವಾಗಿದೆ ಎಂಬುದನ್ನು ನಿಮ್ಮ ಸಂಘ ಒಪ್ಪಿಕೊಳ್ಳುವುದೇ? ನಿಮ್ಮ ಸಂಘ ಆ ಘೋಷಣೆಯನ್ನು ಮಾನ್ಯ ಮಾಡುವುದೇ?

ಮಿ. ಎಫ್. ಇ. ಜೇಮ್ಸ್: ಲಾರ್ಡ್ ಇರ್ವಿನ್‌ರವರ ಈ ಹೇಳಿಕೆ ಶ್ವೇತಪತ್ರದಲ್ಲಿದೆ ಎಂದು ನಾನು ನಂಬುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ಅದರಲ್ಲಿಲ್ಲವೇ?

ಮಿ. ಎಫ್. ಇ. ಜೇಮ್ಸ್: ನನ್ನ ವಿಜ್ಞಾಪನಾ ಪತ್ರದಲ್ಲಿ ಶ್ವೇತಪತ್ರದ ಸೂಚನೆಗಳ ಪ್ರಸ್ತಾಪವಿದೆ. ಆದರೆ, ಆ ಹೇಳಿಕೆ ನೀಡಿದ ಸಮಯದಲ್ಲಿ ಸಂಘವು ತನ್ನ ಖಚಿತ ಅಭಿಪ್ರಾಯವನ್ನು ತಿಳಿಸಿತ್ತು. ಇದು ಪ್ರಕಟವಾದ ಪತ್ರಿಕೆಗಳ ಕಡತದತ್ತ ನಾನು ಮಾನ್ಯರ ಗಮನ ಸೆಳೆಯಬಯಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಆ ಖಚಿತ ಅಭಿಪ್ರಾಯದ ಹೇಳಿಕೆಯ ಸಾರಾಂಶವನ್ನು ತಾವು ತಿಳಿಸುವಿರಾ?

ಮಿ. ಎಫ್. ಇ. ಜೇಮ್ಸ್: ಸಧ್ಯದಲ್ಲಿ ಹಾಗೆ ಮಾಡಲು ನಾನು ನನ್ನ ಜ್ಞಾಪಕ ಶಕ್ತಿಯನ್ನವಲಂಬಿಸಲಾರೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನನ್ನ ತರ್ಕವನ್ನು ಇನ್ನೊಂದು ರೀತಿಯಲ್ಲಿ ಮಂಡಿಸಬಯಸುವೆ. ಶ್ವೇತಪತ್ರದಲ್ಲಿ ಅಳವಡಿಸಲಾಗಿರುವ ಭಾರತ ಸಂವಿಧಾನದ ರೂಪುರೇಷೆಗಳು ಅಂತಿಮ ಸ್ವರೂಪದ್ದಾಗಿವೆ ಎಂದು ನೀವು ಮಾನ್ಯ ಮಾಡುವಿರಾ, ಅಥವಾ ಹೆಚ್ಚಿನ ವಿಕಾಸಕ್ಕೆ ಅದರಲ್ಲಿ ಇನ್ನೂ ಅವಕಾಶವಿದೆ ಎಂದು ನೀವು ತಿಳಿಸುವಿರಾ?

ಮಿ. ಎಫ್. ಇ. ಜೇಮ್ಸ್: ಈ ಪ್ರಶ್ನೆಗೆ ಉತ್ತರ ನಮ್ಮ ವಿಜ್ಞಾಪನಾ ಪತ್ರದ ಒಂದನೆಯ ಪ್ಯಾರಾದಲ್ಲಿ ದೊರೆಯುತ್ತದೆ ಎಂದು ನನಗನಿಸುತ್ತದೆ.

---

* ಅದೇ, ೪ ಜುಲೈ ೧೯೩೩, ಪುಟಗಳು ೪೭೬–೭೭

ಡಾ. ಬಿ. ಆರ್. ಅಂಬೇಡ್ಕರ್: ಅದರಲ್ಲಿ ಉತ್ತರ ದೊರೆಯುತ್ತದೆ ಅಲ್ಲವೇ?

ಮಿ. ಎಫ್. ಇ. ಜೇಮ್ಸ್: ಅದಕ್ಕೆ ಎಂದರೆ "ಶ್ವೇತಪತ್ರದ ಸಾಮಾನ್ಯ ಯೋಜನೆ ಒಟ್ಟಾರೆ ಸಮರ್ಪಕವಾಗಿದೆ ಎಂದು ನಾವು ಪರಿಗಣಿಸುತ್ತೇವೆ ಮತ್ತು ಭಾರತದ ಸಂವಿಧಾನದ ರಚನೆಗೆ ಅದು ಸಮಂಜಸವಾದ ಅಥವಾ ನ್ಯಾಯಯುತ ಆಧಾರವನ್ನೊದಗಿಸುತ್ತದೆ."

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಪ್ರಶ್ನೆ ಇದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ನನ್ನ ಪ್ರಶ್ನೆ ಇದು. ನೀವು ಈ ಸೂಚನೆಗಳನ್ನು ಭಾರತದ ರಾಜಕೀಯ ಸಂಘಟನೆಯ ಅಂತಿಮ ಸ್ವರೂಪವೆಂದು ಪರಿಗಣಿಸುವಿರಾ?

ಮಿ. ಎಫ್. ಇ. ಜೇಮ್ಸ್: ನಾನು ವಿಜ್ಞಾಪನಾ ಪತ್ರದ ಒಂದನೆಯ ಪ್ಯಾರಾದ ಮೂರನೆಯ ಉಪ ಪ್ಯಾರಾದತ್ತ ತಮ್ಮ ಗಮನ ಸೆಳೆಯಬಹುದೇ? ಅದರಲ್ಲಿ ನೀವು ಈ ಪದಗಳನ್ನು ಕಾಣುವಿರಿ: "ಸಂಯುಕ್ತ ಚುನಾಯಿತ (ಆಯ್ದ) ಸಮಿತಿಯ ವರದಿಯ ಆಧಾರದ ಮೇಲೆ ಸಂಸತ್ತಿನಲ್ಲಿ ಭಾರತ ಸರಕಾರದ ಭವಿಷ್ಯ ಸರಕಾರವನ್ನು ಕುರಿತ ಮಸೂದೆಯನ್ನು ಮಂಡಿಸಿದ ಮೇಲೆ ಸಂಘದ ಸಮಿತಿಯು ಸಂವಿಧಾನದ ಯೋಜನೆಯ ಬಗ್ಗೆ ತನ್ನ ಅಂತಿಮ ಅಭಿಪ್ರಾಯವನ್ನು ನಿರ್ಣಯಿಸುವ ಹಕ್ಕನ್ನು ಕಾಯ್ದಿರಿಸಿಕೊಳ್ಳುವುದು."

ಡಾ. ಬಿ. ಆರ್. ಅಂಬೇಡ್ಕರ್: ಕ್ಷಮಿಸಿ, ಇದು ನನ್ನ ಪ್ರಶ್ನೆಗೆ ಉತ್ತರವಲ್ಲ. ನನ್ನ ಪ್ರಶ್ನೆ ಸ್ವಲ್ಪ ಮಟ್ಟಿಗೆ ಬೇರೆಯೇ ಆಗಿದೆ. ನನ್ನ ಪ್ರಶ್ನೆ ಇದು: ಭಾರತದ ರಾಜಕೀಯ ಸ್ಥಿತಿಯ ಸುಧಾರಣೆಗೆ ಶ್ವೇತಪ್ರತದಲ್ಲಿ ಅಡಕವಾಗಿರುವ ಸೂಚನೆಗಳನ್ನು ಸುಧಾರಿಸುವುದಕ್ಕೆ ಅವಕಾಶವಿದೆ ಎಂದು ನೀವು ಭಾವಿಸುವಿರಾ? ನನ್ನ ಅಭಿಪ್ರಾಯ ಸ್ಪಷ್ಟವಾಗಿದೆಯೇ?

ಮಿ. ಎಫ್. ಇ. ಜೇಮ್ಸ್: ಹೌದು. ಮುಂದೆ ಮಾರ್ಪಾಡುಗಳನ್ನು ಅಥವಾ ಬದಲಾವಣೆಗಳನ್ನು ಮಾಡಲು ಶ್ವೇತಪತ್ರದಲ್ಲಿ ಅವಕಾಶವಿದೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು "ಸುಧಾರಣೆ" ಎಂಬ ಪದ ಬಳಸಿದ್ದೇನೆ.

ಮಿ. ಎಫ್. ಇ. ಜೇಮ್ಸ್: ನೀವು ಅದನ್ನು ಸುಧಾರಣೆ ಎಂದು ಕರೆದಿರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಸಂಗತಿಯನ್ನು ಇನ್ನು ಮುಂದುವರಿಸಬಯಸುವುದಿಲ್ಲ.

ಮಿ. ಎಫ್. ಇ. ಜೇಮ್ಸ್: ಆದರೆ, ಈಗ ನಾವು ಶ್ವೇತಪತ್ರದ ಸೂಚನೆಗಳನ್ನು ಮಾತ್ರ ಪರಿಗಣಿಸುತ್ತಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ೫೨ನೆಯ ಪ್ಯಾರಾದಲ್ಲಿ ನೀವು ಭಾರತದ ಶಾಸಕಾಂಗಗಳು ಬ್ರಿಟಿಷ್ ರಾಷ್ಟ್ರೀಯತೆಯ ಕಾನೂನಿನ ಮೇಲೆ ಪರಿಣಾಮವನ್ನುಂಟುಮಾಡುವ ಅಧಿಕಾರ ಹೊಂದಿರಕೂಡದು ಎಂಬ ಸೂಚನೆ ಮಾಡಿರುವಿರಿ. ಇದು ನನಗೆ ಅರ್ಥವಾಗುತ್ತದೆ. ನಂತರ ಮುಂದುವರಿದು ನೀವು ಕೆನಡಾ ಕಾಯ್ದೆ (Canada Act)ಯ ಮಾದರಿಯ ಮೇಲೆ ಭಾರತೀಯ ರಾಷ್ಟ್ರೀಯತೆಯನ್ನು ಗೊತ್ತುಪಡಿಸುವ ಅಧಿಕಾರವೂ ಅವುಗಳಿಗೆ ಇರಬಾರದೆಂದು ಹೇಳಿರುವಿರಿ. ನೀವು ಹೇಳುವುದೇನೆಂದು ನನಗೆ ಅರ್ಥವಾಗುತ್ತದೆ. ಆದರೆ, ನಾನು ತಿಳಿಯಬಯಸುವುದಿಷ್ಟೇ. ನೀವು ಭಾರತದ ಶಾಸಕಾಂಗಗಳು ಯಾವುದೇ ಉದ್ದೇಶಕ್ಕಾಗಿಯಾದರೂ ಒಬ್ಬ ಭಾರತೀಯ ರಾಷ್ಟ್ರೀಯನ ಅಂತಸ್ತನ್ನು ನಿರ್ಣಯಿಸದಂತೆ ಅವುಗಳ ಮೇಲೆ ಸಂಪೂರ್ಣ ಪರಿಮಿತಿ ಹಾಕಬಯಸುವಿರಾ?

ಮಿ. ಎಫ್. ಇ. ಜೇಮ್ಸ್: ಇಲ್ಲ. ಆ ಪ್ಯಾರಾ ಅತ್ಯಂತ ಸ್ಪಷ್ಟವಾಗಿದೆ ಎಂದು ನನಗನಿಸುತ್ತದೆ. ಭಾರತವು

ಆ ರೀತಿ ವಿಧಾಯಕ ಮಾಡಬಯಸಿದರೆ ಭಾರತದಲ್ಲಿ ಬ್ರಿಟಿಷ್ ಸಮುದಾಯವನ್ನು ಹೊರಗಿಡುವ ಅಥವಾ ಹೊರತುಪಡಿಸುವ ಅವಕಾಶವನ್ನು ಭಾರತಕ್ಕೆ ನೀಡಬಾರದೆಂದು ಮಾತ್ರ ನಾವು ಹೇಳಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ಅದನ್ನೇ ನಾನು ಈ ರೀತಿ ಹೇಳಬಯಸುತ್ತೇನೆ. ಉದಾಹರಣೆಗಾಗಿ, ಕೆನಡಾದಲ್ಲಿ ಈ ಕಾಯ್ದೆಗೆ ಕಾರಣವಾದಂತಹುದೇ ಒಂದು ಪ್ರಕರಣ ಉದ್ಭವಿಸಿದೆ ಎಂದು ಭಾವಿಸೋಣ; ಯಾವುದಾದರೊಂದು ಅಂತರರಾಷ್ಟ್ರೀಯ ನ್ಯಾಯಮಂಡಲಿಯಲ್ಲಿ ಭಾರತದ ಪ್ರಾತಿನಿಧ್ಯದ ಅವಶ್ಯಕತೆ ಉಂಟಾಗಿದೆ ಎಂದು ಭಾವಿಸೋಣ. ಆಗ ಭಾರತವು ಈ ಪ್ರಾತಿನಿಧ್ಯವನ್ನು ಮಹಾಪ್ರಭುವಿನ ಭಾರತೀಯ ಬ್ರಿಟಿಷ್ ಪ್ರಜೆಗಳಿಗೆ ಅಥವಾ ಮಹಾಪ್ರಭುವಿನ ಭಾರತೀಯ ಪ್ರಜೆಗಳಿಗೆ ಮೀಸಲಾಗಿಡಬೇಕೆಂದು ಬಯಸುತ್ತಾರೆಂದು ಇಟ್ಟುಕೊಳ್ಳೋಣ. ಆಗ ನೀವು ಶಾಸಕಾಂಗವು ಕೆನಡಾ ಕಾಯ್ದೆಯ ಮಾದರಿಯ ಮೇಲೆ ಅಥವಾ ಆ ಉದ್ದೇಶಕ್ಕಾಗಿ ದಕ್ಷಿಣ ಆಫ್ರಿಕ ಕಾಯ್ದೆಯ ಮಾದರಿಯ ಮೇಲೆ ಅಂತಹ ಅಂತಸ್ತನ್ನು ನೀಡುವ ಕಾಯ್ದೆಯನ್ನು ಪಾಸು ಮಾಡಲು ಅವಕಾಶ ಕೊಡುವುದಿಲ್ಲವೇ?

ಮಿ. ಎಫ್. ಇ. ಜೇಮ್ಸ್: ಇದಕ್ಕೆ ಉತ್ತರ ನಮ್ಮ ಪ್ಯಾರಾದ ಕೊನೆಯ ವಾಕ್ಯದಲ್ಲಿದೆ. ಬಹುಶಃ ಮಿ. ಪೇಜ್‌ರವರು ಅದನ್ನು ಸವಿಸ್ತಾರವಾಗಿ ವಿವರಿಸಲಿರುವರು.

ಮಿ. ಪೇಜ್: ಮಾನ್ಯರೆ, ನೀವು ಅದರಲ್ಲಿ ಆ ತರಹದ ಯಾವುದೇ ಗೂಢ ಅರ್ಥವಿದೆ ಎಂದು ಭಯಪಡಬೇಕಾಗಿಲ್ಲ. ಆ ಪ್ಯಾರಾದಲ್ಲಿ ನಮ್ಮ ಏಕೈಕ ಉದ್ದೇಶವೇನೆಂದರೆ, ನಮ್ಮ ಅಭಿಪ್ರಾಯದಲ್ಲಿ ಭಾರತೀಯ ಪೌರತ್ವವನ್ನು ರೂಪಿಸುವಾಗ ಬ್ರಿಟಿಷ್ ಪ್ರಜೆಗಳ ಬ್ರಿಟಿಷ್ ರಾಷ್ಟ್ರೀಯತೆಯ ಹಕ್ಕಿನ ಮೇಲೆ ಪರಿಣಾಮವನ್ನುಂಟುಮಾಡಬಾರದು. ನಿಜವಾಗಿಯೂ ನಾವು ಹೇಳಬೇಕೆಂದಿರುವುದೇನೆಂದರೆ, ಬ್ರಿಟಿಷ್ ರಾಷ್ಟ್ರೀಯರಾಗಲಿರುವ ಪ್ರತಿಯೊಬ್ಬ ವ್ಯಕ್ತಿಗೂ, ಅವರು ಭಾರತದಲ್ಲಿ ತಾತ್ಕಾಲಿಕವಾಗಿಯಾಗಲೀ ಅಥವಾ ಇನ್ನಾವುದೇ ವಿಧದಲ್ಲಿಯೇ ಆಗಲಿ, ವಾಸಿಸುವಾಗ, ಆ ರೀತಿ ವಾಸಮಾಡುತ್ತಿರುವ ಮಹಾಪ್ರಭುಗಳ ಭಾರತೀಯ ಪ್ರಜೆಗಳು ಅರ್ಹರಾಗಿರುವ ಎಲ್ಲಾ ಹಕ್ಕುಗಳನ್ನು ಪಡೆಯುವಂತಾಗಬೇಕು ಮತ್ತು ಅಂತಹ ಹಕ್ಕುಗಳನ್ನು ನಿರ್ಬಂಧಿಸುವಂತಹ ಅಥವಾ ತೆಗೆದುಹಾಕುವಂತಹ ಯಾವುದೇ ನಿಯಮ ಅಥವಾ ಕಾನೂನನ್ನು ಪಾಸು ಮಾಡುವುದನ್ನು ನಾವು ತಪ್ಪಿಸಬಯಸುತ್ತೇವೆ. ಇದೇ ಆ ಪ್ಯಾರಾದ ಇಡೀ ಉದ್ದೇಶ. ಭಾರತೀಯ ಪೌರತ್ವವನ್ನು ನಿರ್ಮಿಸಲು ನಮ್ಮ ಎಳ್ಳಷ್ಟೂ ಅಭ್ಯಂತರವಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅಧ್ಯಕ್ಷ ಮಹೋದಯರೇ, ಮಿಸ್ ಗೇವಿಸ್ ಜೋನ್ಸ್‌ರವರು ಮಾಡಿದ ಸಲಹೆಯ ಮೇಲೆ ಅವರಿಗೆ ಇಂತಹುದೇ ಪ್ರಶ್ನೆ ಹಾಕುವುದು ವಿಧಿಬದ್ಧವೆನಿಸುವುದಿಲ್ಲವೇ? ಅದು ವಿದಿಬದ್ಧವಲ್ಲವೆನಿಸಿದರೆ ನಾನು ಅದನ್ನು ಮುಂದುವರಿಸಬಯಸುವುದಿಲ್ಲ.

ಅಧ್ಯಕ್ಷ: ಡಾ. ಅಂಬೇಡ್ಕರ್‌ರವರು ನನ್ನ ವೈಯಕ್ತಿಕ ಅಭಿಪ್ರಾಯವನ್ನು ಕೇಳುವುದಾದರೆ, ಈ ಹಂತದಲ್ಲಿ ಈ ವಿಷಯ ತೆಗೆದುಕೊಳ್ಳಬಹುದಾದ ಸಮಯವನ್ನು ಸಮರ್ಥಿಸಿಕೊಳ್ಳಲಾಗುವುದಿಲ್ಲ.

## (೬)

## ಸರ್ ಜಾನ್ ಪೆರೋಸಿಟ್ ಥಾಂಪ್ಸನ್, ಕೆ.ಸಿ.ಎಸ್.ಐ. ಕೆ.ಸಿ.ಐ,ಇ., ಸರ್ ಅಲ್‌ಫ್ರೆಡ್ ವ್ಯಾಟ್ಸನ್ ಮತ್ತು ಮಿ. ಎಡ್ವರ್ಡ್ ಮಿಲ್ಲಿಯರ್ಸ್

* ಡಾ. ಬಿ. ಆರ್. ಅಂಬೇಡ್ಕರ್: ಒಂದೇ ಒಂದು ಪ್ರಶ್ನೆ. ಸರ್ ಜಾನ್ ಥಾಂಪ್ಸನ್, ಪ್ರಾಂತ್ಯಗಳ ಆರ್ಥಿಕ ಸ್ಥಿತಿಯನ್ನು ಸಂರಕ್ಷಿಸುವುದಕ್ಕಾಗಿ ಕೆಲವು ವಿಧಿಗಳನ್ನು ಸೇರಿಸುವ ಬಗ್ಗೆ ನಿನ್ನೆ ನೀವು ಒಂದು ಪ್ರಶ್ನೆ ಎತ್ತಿದ್ದಿರಿ, ಮತ್ತು ಉದಾಹರಣೆಯ ರೂಪದಲ್ಲಿ ನೀವು ಸಧ್ಯದ ಪರಿಸ್ಥಿತಿಯಲ್ಲಿ ನೀರಿನ ಕಂದಾಯವು ಪ್ರಾಂತ್ಯಗಳಿಗೆ ಬಹುಭಾಗ ಆದಾಯ ಒದಗಿಸುತ್ತಿರುವುದೆಂದು ಹೇಳುತ್ತಾ ಅದನ್ನು ಕಾರ್ಯಾಂಗದ ಆಜ್ಞೆಯ ಮೂಲಕ ಬದಲಾಯಿಸಬಹುದೆಂದು ಹೇಳಿದಿರಿ. ನಿನ್ನೆ ನೀವು ಹೀಗೆ ಹೇಳಿದಿರೆಂದು ನನ್ನ ಭಾವನೆ.

ಸರ್ ಜಾನ್ ಪಿ. ಥಾಂಪ್ಸನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಬಹುಕಾಲದಿಂದ ಭಾರತೀಯರು ಕೇವಲ ಕಾರ್ಯಾಂಗದ ಆಜ್ಞೆಯ ಮೇರೆಗೆ ಯಾವುದೇ ತೆರಿಗೆಯನ್ನು ವಿಧಿಸಬಾರದು– ಭೂಕಂದಾಯವನ್ನು ಕೂಡ ಕಾರ್ಯಾಂಗದ ಆಜ್ಞೆಯ ಮೇರೆಯೇ ಸಂಗ್ರಹಿಸಲಾಗುತ್ತಿದೆ ಮತ್ತು ಇನ್ನು ಮೇಲೆ ಈ ರೀತಿ ಮಾಡದೆ ಶಾಸಕಾಂಗದ ಕಾನೂನಿನನ್ವಯವೇ ತೆರಿಗೆಗಳನ್ನು ವಿಧಿಸಬೇಕೆಂದು ಚಳವಳಿ ಮಾಡುತ್ತಿರುವುದು ನಿಜ ಸಂಗತಿಯಲ್ಲವೇ?

ಸರ್ ಜಾನ್ ಪಿ. ಥ್ಯಾಂಪ್ಸನ್: ಭೂಕಂದಾಯದ ಬಗ್ಗೆ ಇಂತಹ ಚಳವಳಿಯಾಗುತ್ತಿರುವುದು ನಿಜ ಎಂಬುದರ ಬಗ್ಗೆ ನಾನು ಖಚಿತವಾಗಿ ಹೇಳಲಾರೆ.

ಸರ್ ತೇಜ್ ಬಹದ್ದೂರ್ ಸಪ್ರು: ಭೂಕಂದಾಯವನ್ನು ಕಾರ್ಯಾಂಗದ ಆಜ್ಞೆಯ ಮೇರೆಗೆ ಸಂಗ್ರಹಿಸಲಾಗುವುದಿಲ್ಲ ಎಂಬ ಅಂಶವನ್ನು ಇಲ್ಲಿ ಸೂಚಿಸಬಹುದೇ? ಪ್ರಾಯಶಃ ಭೂಕಂದಾಯ ವನ್ನು ಕಾರ್ಯಾಂಗದ ಆಜ್ಞೆಯ ಮೇರೆಗೆ ನಿಗದಿಗೊಳಿಸಲಾಗುವುದೆಂದು ಅವರು ಯೋಚಿಸುತ್ತಿರ ಬಹುದಲ್ಲವೇ?

ಸರ್ ಜಾನ್ ಪಿ ಥಾಂಪ್ಸನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಆದರೆ ಕಾರ್ಯಾಂಗದ ಆಜ್ಞೆಯ ಮೇರೆಗೆ ಸಂಗ್ರಹಿಸಲಾಗುವ ಎಲ್ಲಾ ತೆರಿಗೆಗಳನ್ನು ಇನ್ನು ಮುಂದೆ ಹಾಗೆ ಮಾಡದೆ ಶಾಸಕಾಂಗದ ಕಾನೂನಿನ ಮೂಲಕ ಮಾಡಬೇಕೆಂದು ಶಿಫಾರಸು ಮಾಡಲಾಗಿದೆಯಲ್ಲವೇ?

ಸರ್ ಜಾನ್ ಪಿ. ಥಾಂಪ್ಸನ್: ಅದು ನನಗೆ ಗೊತ್ತಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದನ್ನು ಕಾರ್ಯಗತಗೊಳಿಸಲಾಗಿಲ್ಲ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ II–ಎ, ೬ನೆಯ ಜುಲೈ ೧೯೩೩, ಪುಟ ೫೪೦.

## (೭)

## ಸರ್ ಛಾರ್ಲ್ಸ್ ಇನ್ಸ್, ಕೆ.ಸಿ.ಎಸ್.ಐ. ಸಿ.ಐ.ಇ.

* ಡಾ. ಬಿ. ಆರ್. ಅಂಬೇಡ್ಕರ್: ಸರ್ ಛಾರ್ಲ್ಸ್‌ರವರೆ, ನೀವು ಎರಡನೆಯ ಸದನಗಳ ಬಗ್ಗೆ ಸಾಕಷ್ಟು ಒತ್ತುಕೊಟ್ಟಿರುವಿರಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅದಕ್ಕೆ ನೀವು ಕೊಟ್ಟ ಕಾರಣವೆಂದರೆ ವಿಶೇಷ ಅಧಿಕಾರಗಳನ್ನು ಸತತವಾಗಿ ಉಪಯೋಗಿಸುವುದನ್ನು ಕಡಿಮೆ ಮಾಡುವುದೇ ಆಗಿದೆಯಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ಅಲ್ಲ. ಅದು ಅಂತಹ ಅವಶ್ಯಕತೆಯನ್ನು ಕಡಿಮೆ ಮಾಡುವುದೆಂದು ನಾನು ಹೇಳಿದ್ದೇನೋ ಇಲ್ಲವೋ ಗೊತ್ತಿಲ್ಲ. ಅದು ವಿಶೇಷ ಅಧಿಕಾರಗಳನ್ನು ಇನ್ನೂ ಹೆಚ್ಚು ಬಲಪಡಿಸುವುದೆಂದು ಮಾತ್ರ ನಾನು ಹೇಳಿದ್ದೆ ಮತ್ತು ಎರಡನೆಯ ಸದನದ ಅಸ್ತಿತ್ವವು ಅದನ್ನು ಅನವಶ್ಯಕಗೊಳಿಸುವುದೆಂದು ಸಹ ಹೇಳಿದ್ದೆ ಅಥವಾ ಯಾರೂ ವಿಶೇಷ ಅಧಿಕಾರಿಗಳ ಬಳಕೆಯನ್ನು ಬಯಸದಿರುವಾಗ ಅದರ ಬಳಕೆಯ ವಿರಳವಾಗಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಎರಡನೆಯ ಸದನಗಳು ವಿಶೇಷ ಅಧಿಕಾರಗಳಿಗೆ ಪ್ರತಿನಿಧಿಗಳು ಅಥವಾ ಬದಲಿ ವ್ಯವಸ್ಥೆ ಎನಿಸುವುವೆಂಬುದು ನಿಮ್ಮ ನಿಲುವಾಗಿಲ್ಲವೇ? ನಾನು ಕೇಳಬೇಕೆಂದಿರುವ ಪ್ರಶ್ನೆ ಎಂದರೆ, ಈ ಬೆಳಿಗ್ಗೆ ನೀವು ವಿಶೇಷ ಜವಾಬ್ದಾರಿಗಳಲ್ಲಿ ಯಾವುದೇ ಅಸಾಧಾರಣ ಸಂಗತಿ ಇಲ್ಲವೆಂದು ಹೇಳಿದಿರಿ ಎಂದು ನನ್ನ ಅನಿಸಿಕೆ ಮತ್ತು ನೀವು ಅಂತಹ ಜವಾಬ್ದಾರಿಗಳು ಕೆಲವು ಡೊಮಿನಿಯನ್‌ಗಳ ಸಂವಿಧಾನಗಳಲ್ಲಿವೆ ಎಂದು ನೀವು ಹೇಳಿದಿರಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ಈ ಸಂರಕ್ಷಣೆಗಳಲ್ಲಿ ಹೊಸದೇನೂ ಇಲ್ಲ ಎಂದು ನಾನು ಹೇಳಿದ್ದೆ. ಅವು ನನ್ನ ನಿಖರವಾದ ಪದಗಳೆಂದು ನಾನು ತಿಳಿದಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ತಮ್ಮನ್ನು ಹೀಗೆ ಕೇಳಬಯಸುತ್ತೇನೆ. ಡೊಮಿನಿಯನ್‌ಗಳ ಸಂವಿಧಾನಗಳಲ್ಲಿ ಸಂರಕ್ಷಣೆಗಳಿಗೂ ಮತ್ತು ಶ್ವೇತಪತ್ರದ ವಿಧಿಗಳಿಗೂ ವ್ಯತ್ಯಾಸವಿರುವುದಿಲ್ಲವೇ? ಈ ಪ್ರಶ್ನೆಯನ್ನು ಸಂಕ್ಷಿಪ್ತ ರೂಪದಲ್ಲಿ ಕೇಳಲಾಗದದ್ದಕ್ಕೆ ನಾನು ವಿಷಾದಿಸುತ್ತೇನೆ. ಏಕೆಂದರೆ ಪ್ರಶ್ನೆಯನ್ನು ಕೇಳುವ ಮೊದಲು ನಾನು ತಿಳಿದುಕೊಂಡಿರುವ ಸಂಗತಿಯ ಬಗ್ಗೆ ವಿವರಣೆ ನೀಡಬಯಸುತ್ತೇನೆ. ಜವಾಬ್ದಾರಿ ಸರಕಾರ ವ್ಯವಸ್ಥೆಯಲ್ಲಿ (ಕೊನೆ ಪಕ್ಷ ನಾನು ತಿಳಿದುಕೊಂಡಿರುವಂತೆ) ಗವರ್ನರರು ಮಂತ್ರಿಮಂಡಳದ ಸಲಹೆಗೆ ಸಂಪೂರ್ಣ ಬದ್ಧರಾಗಿವುದಿಲ್ಲ ಎಂದು ತಿಳಿಯಲಾಗಿದೆ. ಅದು ಅವರಿಗೆ ಅನಾವಶ್ಯಕವೆಂದೆನಿಸಿದಾಗ ಅಂತಹ ಸಲಹೆಯನ್ನು ತೆಗೆದುಕೊಳ್ಳಲು ನಿರಾಕರಿಸಬಹುದು. ಆದರೆ ಅಂತಹ ಸಂದರ್ಭದಲ್ಲಿ ತಮ್ಮ ಆ ಅಭಿಪ್ರಾಯವನ್ನು ಅನುಮೋದಿಸುವಂತಹ ಮಂತ್ರಿಮಂಡಳ ರಚಿಸುವುದು ಅವು ತೆಗೆದುಕೊಳ್ಳಬಹುದಾದ

---

* ಅದೇ ಪುಟಗಳು ೫೭೩–೭೪

ಮುಂದಿನ ಕ್ರಮವಾಗಿದೆ. ಇನ್ನೊಂದು ಮಂತ್ರಿಮಂಡಳವೂ ಗವರ್ನರರ ಅಭಿಪ್ರಾಯವನ್ನು ಅನುಮೋದಿಸದೇ ಹೋದರೆ ಅವರು ವಿಧಾನ ಪರಿಷತ್ತನ್ನು ವಿಸರ್ಜಿಸಿ ಹೊಸ ಶಾಸಕಾಂಗದ ಚುನಾವಣೆ ನಡೆಸಬಹುದು ಮತ್ತು ಆ ಹೊಸ ಶಾಸಕಾಂಗದಲ್ಲಿ ಮಂತ್ರಿಮಂಡಲವನ್ನು ರಚಿಸಲು ಸಾಧ್ಯವಾಗದೇ ಹೋದರೆ ಅವರು ಶರಣಾಗತರಾಗಬೇಕಾಗುವುದಿಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ಹೌದು, ಹೀಗಾಗುವುದು ಸಾಮಾನ್ಯ. ಆದರೆ, ಆ ವಿಷಯ ಅತೀ ಮಹತ್ವದ್ದಾಗಿರುವುದೆಂಬ ಕಾರಣ ಅವರು ಹಾಗೆ ಮಾಡಕೂಡದೆಂದು ಭಾವಿಸಿದರೆ ಅದು ಬೇರೆ ವಿಷಯ.

ಡಾ. ಬಿ. ಆರ್. ಅಂಬೇಡ್ಕರ್: ಶ್ವೇತಪತ್ರದ ಸೂಚನೆಗಳ ಪ್ರಕಾರ ಗವರ್ನರರು ಯಾವುದೇ ಮಂತ್ರಿಮಂಡಲವನ್ನು ತಳ್ಳಿಹಾಕುವ ಅಥವಾ ರದ್ದುಮಾಡುವ ಅಧಿಕಾರ ಹೊಂದಿರುವುದಿಲ್ಲವೇ? ಇದು ಶ್ವೇತಪತ್ರದಲ್ಲಿರುವ ಪ್ರಮುಖ ವ್ಯತ್ಯಾಸವಾಗಿಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ಅವರು ತಮ್ಮ ವಿಶೇಷ ಜವಾಬ್ದಾರಿಗಳನ್ನು ಚಲಾಯಿಸುವಲ್ಲಿ ಮಾತ್ರ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಯಾವಾಗಲೂ ಯಾವ ಮಂತ್ರಿ ಮಂಡಳದ ಸಲಹೆಗೂ ಬದ್ಧ ರಾಗಿರುವುದಿಲ್ಲವಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ನಮ್ಮ ಕಡೆಯಿಂದ ನಾವು ಪ್ರತಿಯೊಬ್ಬ ಭಾರತೀಯನೂ ಸಂವಿಧಾನವನ್ನು ಕಾರ್ಯಗತಗೊಳಿಸುವಲ್ಲಿ ಸಮಂಜಸ ಸಹಕಾರ ಭಾವನೆ ತಳೆಯುವನೆಂದು ಗ್ರಹಿಸಿಕೊಳ್ಳುವಂತೆ ನೀವೂ ಸಹ ಗವರ್ನರರೂ ಸಂವಿಧಾನವನ್ನು ಅದರ ಮೂಲೋದ್ದೇಶಕ್ಕನುಗುಣವಾಗಿಯೇ ಕಾರ್ಯಗತಗೊಳಿಸಲು ಶ್ರಮಿಸುವರೆಂದು ಭಾವಿಸಿಕೊಳ್ಳಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಹೌದು.

ಸರ್ ಛಾರ್ಲ್ಸ್ ಇನ್ಸ್: ಗವರ್ನರರು ಈ ಅಧಿಕಾರಗಳನ್ನು ಚಲಾಯಿಸುವರೆಂದು ನೀವು ಏಕೆ ಭಾವಿಸಿಕೊಳ್ಳುತ್ತಿರುವಿರೆಂಬುದು ನನಗೆ ಅರ್ಥವಾಗುತ್ತಿಲ್ಲ. ಪ್ರತಿಯೊಬ್ಬ ಗವರ್ನರರು ಸಾಧ್ಯವಾದ ಮಟ್ಟಿಗೆ ಈ ಅಧಿಕಾರಿಗಳನ್ನು ಚಲಾಯಿಸದಂತೆ ಎಚ್ಚರಿಕೆ ವಹಿಸುವರೆಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಎರಡೂ ನಿಲುವುಗಳಲ್ಲಿರುವ ವ್ಯತ್ಯಾಸವನ್ನು ನಾನು ತಿಳಿದುಕೊಂಡಂತೆ ವಿವರಿಸ ಬಯಸುತ್ತೇನೆ. ಗವರ್ನರರಿಗೆ ನೀಡಲಾದ ವಿಶೇಷ ಅಧಿಕಾರಿಗಳು ಅವರಿಗೆ ಯಾವುದೇ ಒಂದು ಮಂತ್ರಿಮಂಡಳವು ತಮಗೆ ನೀಡಿದ ಸಲಹೆಯೊಡನೆ ಅಸಮ್ಮತಿ ಹೊಂದಿದಾಗ ಆ ಮಂತ್ರಿ ಮಂಡಳವನ್ನು ರದ್ದುಮಾಡುವ ಅಧಿಕಾರವನ್ನು ನೀಡುವುದಿಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ನೀವು ಏನು ಹೇಳಬಯಸುತ್ತಿರುವಿರೆಂದು ನನಗೆ ಅರ್ಥವಾಗುತ್ತಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮ್ಮನ್ನು ಕೇಳುತ್ತಿರುವುದಿಷ್ಟೇ. ಗವರ್ನರರಿಗೆ ನೀಡಲಾಗಿರುವ ವಿಶೇಷ ಅಧಿಕಾರಗಳು ಅವರು ತಮಗೆ ನೀಡಲಾದ ಸಲಹೆಯನ್ನು ಒಪ್ಪಿಕೊಳ್ಳದೇ ಇರುವ ಸಂದರ್ಭದಲ್ಲಿ ಆ ಒಂದು ಮಂತ್ರಿಮಂಡಲವನ್ನು ಮಾತ್ರ ರದ್ದುಮಾಡುವ ಅಧಿಕಾರವನ್ನು ನೀಡುವುದಿಲ್ಲ. ಆದರೆ, ಯಾವ ಮಂತ್ರಿಮಂಡಳವನ್ನಾದರೂ ರದ್ದುಮಾಡುವ ಅಧಿಕಾರವನ್ನು ಅವರಿಗೆ ಕೊಡಲಾಗಿದೆಯಲ್ಲವೇ?

ಸರ್ ಛಾರ್ಲ್ಸ್ ಇನ್ಸ್: ಅದು ನಿಜ. ಏಕೆಂದರೆ, ಕೆಲವು ವಿಶೇಷ ಜವಾಬ್ದಾರಿಗಳನ್ನು ನಿರ್ವಹಿಸುವುದೇ ಅವರು ಮಾಡಬೇಕಾದ ಕೆಲಸ. ಅದು ಯಾವುದೇ ಒಂದು ಮಂತ್ರಿಮಂಡಳವನ್ನು ರದ್ದು ಮಾಡುವುದು ಅಥವಾ ಮಾಡದೇ ಇರುವುದಾಗಿಲ್ಲ. ಅವರು ಆ ವಿಶೇಷ ಜವಾಬ್ದಾರಿಯನ್ನು ಸಂರಕ್ಷಿಸಬೇಕೇ ಬೇಡವೇ ಎಂಬುದೇ ಪ್ರಶ್ನೆಯಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಅದೇ ಎರಡೂ ಸಂರಕ್ಷಣೆಗಳ ನಡುವೆ ಇರುವ ಪ್ರಮುಖ ವ್ಯತ್ಯಾಸ.

ಸರ್ ಛಾರ್ಲ್ಸ್ ಇನ್ಸ್: ನಾನು ಹೇಳಿದ್ದೂ ಅದೇ. ಕೆಲವು ಕಾರಣಗಳಿಂದಾಗಿ ಭಾರತದಲ್ಲಿರಬೇಕಾದ ಸಂರಕ್ಷಣೆಗಳು ಹೆಚ್ಚು ನಿಖರವಾಗಿರಬೇಕು ಹಾಗೂ ಅವುಗಳ ಸ್ಪಷ್ಟ ವಿವರಣೆ ಇರಬೇಕು. ಉದಾಹರಣೆಗಾಗಿ, ಕೋಮು ಸಮಸ್ಯೆಗಳಿಂದಾಗಿ ಅಂತಹ ಸಂರಕ್ಷಣೆಗಳು ಅವಶ್ಯವೆನಿಸುವುವು.

ಡಾ. ಬಿ. ಆರ್. ಅಂಬೇಡ್ಕರ್: ಅವುಗಳಿಗೆ ಆಧಾರಗಳಿವೆಯೇ ಎಂದು ನಾನು ಕೇಳುತ್ತಿಲ್ಲ. ಅದರಲ್ಲಿ ವ್ಯತ್ಯಾಸವಿದೆ ಎಂದು ನಾನು ತೋರಿಸಿಕೊಡಲು ಮಾತ್ರ ಪ್ರಯತ್ನಿಸುತ್ತಿದ್ದೇನೆ.

ಸರ್ ಛಾರ್ಲ್ಸ್ ಇನ್ಸ್: ಸರಿ.

## (೮)

# ಸರ್ ಎಡ್ವರ್ಡ್ ಬೆಂಥಾಲ್, ಸರ್ ಥಾಮಸ್ ಕ್ಯಾಟ್ಟೋ ಮತ್ತು ಮಿ. ಜಿ. ಎಲ್. ವಿಂಟರ್‌ಬೊಥಾಮ್, ಭಾರತದ ಅಸೋಸಿಯೇಟ್ ಛೇಂಬರ್ ಆಫ್ ಕಾಮರ್ಸ್ ಪರವಾಗಿ

* ಡಾ. ಬಿ. ಆರ್. ಅಂಬೇಡ್ಕರ್: ಸರ್ ಎಡ್ವರ್ಡ್, ನಾನು ಮೊದಲನೆಯದಾಗಿ ನೀವು ನೀಡಿದ ಹೇಳಿಕೆಯ ಸಂಯುಕ್ತ ಹಣಕಾಸು ವ್ಯವಸ್ಥೆಯ (ಫೆಡರಲ್ ಫೈನಾನ್ಸ್) ಬಗ್ಗೆ ಒಂದು ಪ್ರಶ್ನೆ ಕೇಳಬಯಸುತ್ತೇನೆ. ನೀವು ಭಾರತದಲ್ಲಿ ತೆರಿಗೆಗಳಲ್ಲಿ ಏಕರೂಪತೆಗೆ ಹೆಚ್ಚು ಮಹತ್ವ ಕೊಟ್ಟಿರುವಿರೆಂದು ನನಗನಿಸುತ್ತದೆ. ನಾನು ಅದನ್ನು ಸರಿಯಾಗಿ ಹೇಳುತ್ತಿದ್ದೇನೆಯೋ ಇಲ್ಲವೋ ನನಗೆ ತಿಳಿಯದು.

ಸರ್ ಎಡ್ವರ್ಡ್ ಬೆಂಥಾಲ್: ಹೌದು. ಸರಿಯಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಆ ಕಾರಣ ನೀವು ಎಲ್ಲಾ ಆದಾಯದ ಮೂಲಗಳನ್ನು ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಕೇಂದ್ರದಲ್ಲಿಯೇ ಪ್ರತ್ಯೇಕಗೊಳಿಸಿ ಅವುಗಳನ್ನು ಕೇಂದ್ರವೇ ವಿಭಜಿಸಬೇಕೆಂದು ಸಲಹೆ ಮಾಡಿರುವಿರಿ. ಇದು ನಿಜವಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ನಾವು ಈ ಸಲಹೆ ಮಾಡಿರುವೆವೇ?

ಡಾ. ಬಿ. ಆರ್. ಅಂಬೇಡ್ಕರ್: ನಾನು ಸಾಮಾನ್ಯವಾಗಿ ಸಾರಾಂಶ ರೂಪದಲ್ಲಿ ಹೇಳುವುದೇನೆಂದರೆ ತೆರಿಗೆ ನೀತಿಯಲ್ಲಿ ಏಕರೂಪತೆ ಇರಬೇಕೆಂಬ ದೃಷ್ಟಿಯಿಂದ ಎಲ್ಲಾ ಪ್ರಮುಖ ತೆರಿಗೆಗಳನ್ನು ಕೇಂದ್ರವೇ ವಿಧಿಸಬೇಕೆಂದು ನೀವು ಬಯಸುತ್ತಿರುವಿರಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ನಾವು ಹಾಗೆ ಹೇಳುವಷ್ಟು ದೂರ ಹೋಗಿಲ್ಲ. ನಾವು ಏಕರೂಪತೆ ಬಯಸುತ್ತೇವೆ. ಆದರೆ, ಎಲ್ಲಾ ತೆರಿಗೆಗಳನ್ನು ಕೇಂದ್ರವೇ ವಿಧಿಸಬೇಕೆಂದು ಹೇಳುವಷ್ಟರ ಮಟ್ಟಿಗೆ ನಾವು ಹೋಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇಡೀ ಭಾರತದಲ್ಲಿ ತೆರಿಗೆ ವಿಧಿಸುವ ಅಧಿಕಾರ ಹೊಂದಿರುವ ಏಕೈಕ ಪ್ರಾಧಿಕಾರವಿಲ್ಲದೇ ತೆರಿಗೆಯಲ್ಲಿ ಏಕರೂಪತೆಯನ್ನು ಸಾಧಿಸುವುದು ಹೇಗೆ ಸಾಧ್ಯ?

ಸರ್ ಎಡ್ವರ್ಡ್ ಬೆಂಥಾಲ್: ಸಹಯೋಗವನ್ನುಂಟುಮಾಡುವ ಯಾವುದಾದರೂ ವಿಧಾನಗಳನ್ನು ರೂಪಿಸಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಉದಾಹರಣೆಗಾಗಿ, ಪ್ರಾಂತೀಯ ಉದ್ದೇಶಗಳಿಗಾಗಿ ಒಂದು ಪ್ರಾಂತ್ಯವು ಆದಾಯ ತೆರಿಗೆಯ ಮೇಲೆ ಹೆಚ್ಚಿನ ಕರವನ್ನು ಹೇರುವುದೆಂದು ಭಾವಿಸೋಣ. ಅದರಿಂದ ಏಕರೂಪತೆಯ ತತ್ವದ ಉಲ್ಲಂಘನೆಯಾಗುವುದಿಲ್ಲವೇ?

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ II–ಎ, ౧౩ನೆಯ ಜುಲೈ ౧౯౩౩, ಪುಟಗಳು ೬೪೦–೪೨.

ಸರ್ ಎಡ್ವರ್ಡ್ ಬೆಂಥಾಲ್: ಹೌದು. ನಾವು ಅದಕ್ಕೆ ಸಂಪೂರ್ಣ ವಿರೋಧವಾಗಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ಆದಾಗ್ಯೂ ನೀವು ಸಾವಧಿಕ ತೆರಿಗೆ (ಟರ್ಮಿನಲ್ ತೆರಿಗೆ)ಗಳನ್ನು ವಿರೋಧಿಸುವಿರಾ?

ಸರ್ ಎಡ್ವರ್ಡ್ ಬೆಂಥಾಲ್: ನಾವು ತಾತ್ವಿಕವಾಗಿ ಅವುಗಳಿಗೆ ವಿರೋಧವಾಗಿದ್ದೇವೆ ಮತ್ತು ಅಂತರಪ್ರಾಂತೀಯ ಸುಂಕ ತೆರಿಗೆಗಳು ಅಥವಾ ಅಂತರ– ಪ್ರಾಂತೀಯ ನಿರ್ಬಂಧಗಳನ್ನು ನಿರ್ಮಿಸುವ ಯಾವುದೇ ತೆರಿಗೆಗಳನ್ನು ವಿಧಿಸುವಾಗ ಸಂಯುಕ್ತ ರಾಜ್ಯದ ಒಪ್ಪಿಗೆ ಪಡೆಯಬೇಕಾಗುತ್ತದೆ ಎಂದು ನಾವು ಸಲಹೆ ಮಾಡಿದ್ದೇವೆ. ಇದೇ ನಮ್ಮ ಸಾಕ್ಷ್ಯದ ತಾತ್ಪರ್ಯವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ತೆರಿಗೆಯ ಮೂಲಗಳ ಪ್ರತ್ಯೇಕತೆ ಉಂಟಾಗುವುದೆಂದು ಇದರ ಅರ್ಥವಾಗುತ್ತದೆ. ಪ್ರಾಂತ್ಯಗಳು ತೆರಿಗೆ ವಿಧಿಸುವಂತಿಲ್ಲ ಅಥವಾ ಕೇಂದ್ರ ಪೂರ್ವಾನುಮತಿಯಿಂದ ಮಾತ್ರ ವಿಧಿಸಬಹುದಾಗಿದೆಯಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಸಹಯೋಗದ ಯೋಜನೆಯೊಂದನ್ನು ರೂಪಿಸುವಂತಹ ಮೂರನೆಯ ವಿಧಾನವೊಂದಿದೆ ಎಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ನನಗೆ ಗೊತ್ತಿಲ್ಲ. ಈ ಸಹಯೋಗವನ್ನುಂಟುಮಾಡುವ ಯಾವುದಾದರೂ ವಿಧಾನವನ್ನು ನೀವು ಸೂಚಿಸಬಲ್ಲಿರಾ?

ಸರ್ ಎಡ್ವರ್ಡ್ ಬೆಂಥಾಲ್: ಸದ್ಯದಲ್ಲಿ ಕೆಲವು ನಿಯಮಗಳನ್ನು ರೂಪಿಸಲಾಗಿದೆ ಎಂದು ನಾನು ಭಾವಿಸುತ್ತೇನೆ. ಆದರೆ, ಈಗ ನಾವು ನಿಯಮಗಳನ್ನು ಮಾಡುತ್ತಿರುವ ಏಕಾತ್ಮಕ ಪದ್ಧತಿಯ ಸರಕಾರದ ಬಗ್ಗೆ ವಿಚಾರಿಸುತ್ತಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ನಾವು ಇದನ್ನು ನಿಜವಾಗಿ ಈಗ ಪರಿಶೀಲಿಸುತ್ತಿರುವ ಪ್ರಾಂತೀಯ ಸ್ವಾಯತ್ತತೆಯ ದೃಷ್ಟಿಯಿಂದ ಮತ್ತು ಪ್ರಾಂತ್ಯಗಳಲ್ಲಿ ನಾವು ಸ್ಥಾಪಿಸಲಿರುವ ಜವಾಬ್ದಾರಿ ಸರಕಾರದ ದೃಷ್ಟಿಯಿಂದ ನೋಡುತ್ತಿದ್ದೇವೆ.

ಸರ್ ಎಡ್ವರ್ಡ್ ಬೆಂಥಾಲ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈಗ ನಾನು ಅದನ್ನು ಈ ರೀತಿ ಹೇಳುವೆ: ಪ್ರಾಂತೀಯ ಸ್ವಾಯತ್ತತೆಯ ದೃಷ್ಟಿಯಿಂದ ಒಂದು ಪ್ರಾಂತ್ಯವು ತನ್ನ ತೆರಿಗೆ ವ್ಯವಸ್ಥೆಯ ವಿಧಾನವನ್ನು ತಾನೇ ರೂಪಿಸಿಕೊಳ್ಳಲು ಸ್ವತಂತ್ರ ವಾಗಿರದೇ ಹೋದರೆ ಮತ್ತು ಪ್ರತಿಸಾರಿ ಕೇಂದ್ರವನ್ನು ಸಂಪರ್ಕಿಸಬೇಕಾದರೆ ಪ್ರಾಂತೀಯ ಸ್ವಾಯತ್ತತೆಯನ್ನು ಕಾರ್ಯರೂಪದಲ್ಲಿ ಸಾಧಿಸುವುದು ಅತಿ ಕಷ್ಟವೆನಿಸುವುದು.

ಸರ್ ಎಡ್ವರ್ಡ್ ಬೆಂಥಾಲ್: ಪ್ರತಿ ಸಾರಿಯೂ ಹಾಗಾಗುವುದಿಲ್ಲ. ಆದರೆ, ಇದರ ಪರಿಣಾಮ ವಾಗಿ ಭಾರತದ ವಾಣಿಜ್ಯದ ಅಭಿವೃದ್ಧಿ ಕುಂಠಿತವಾಗುವ ಸಾಧ್ಯತೆ ಇದೆ. ಈ ಅಂಶಗಳನ್ನು ಮುಂದಿಡುವುದರ ಮೂಲಕ ಯಾವುದೇ ನಿಯಮಗಳನ್ನು ನಿರೂಪಿಸುವುದು ನಮ್ಮ ಉದ್ದೇಶವಾಗಿಲ್ಲ. ಆದರೆ, ಸಂಯುಕ್ತ ಆಯ್ದ ಸಮಿತಿಯು ಇವುಗಳನ್ನು ಪರಿಶೀಲಿಸಲು ಅದರ ಗಮನಕ್ಕೆ ತರುವುದೇ ನಮ್ಮ ಉದ್ದೇಶವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ, ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಯಾವುದೇ ಹಣಕಾಸಿನ ವ್ಯವಸ್ಥೆಯನ್ನು ನಿರೂಪಿಸುವಾಗ ಯಾವ ವ್ಯವಸ್ಥೆಯನ್ನನುಸರಿಸಿದರೂ ಅದು ಪ್ರಾಂತೀಯ ಸ್ವಾಯತ್ತತೆ ಮತ್ತು ಪ್ರಾಂತ್ಯಗಳಲ್ಲಿ ಜವಾಬ್ದಾರಿ ಸರಕಾರದ ತತ್ವಕ್ಕೆ ಅಸಮಂಜಸವಾದದ್ದಾಗಿರಬಾರದೆಂಬ ಅಂಶವನ್ನು ನೀವು ಮಾನ್ಯ ಮಾಡುವಿರೆಂದು ನಾನು ಹೇಳಬಹುದೇ?

ಸರ್ ಎಡ್ವರ್ಡ್ ಬೆಂಥಾಲ್: ಹೌದು. ಈ ಮೊದಲಿನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಅವಶ್ಯಕತೆಗಿಂತ ಹೆಚ್ಚಾದ ಸಮಾನ ವ್ಯಾಪ್ತಿಯ ಅಧಿಕಾರಗಳಿರಬಾರದೆಂದು ನಾನು ಹೇಳಿದ್ದೆ. ಇದಕ್ಕೆ ನಮ್ಮ ಒಪ್ಪಿಗೆ ಇದೆ. ವಿಷಯಗಳ ಮತ್ತು ತೆರಿಗೆಗಳ ವಿಭಜನೆ ಸಾಧ್ಯವಾದಷ್ಟು ಮಟ್ಟಿಗೆ ಸ್ಪಷ್ಟವಾಗಿರಬೇಕು. ಆದರೆ, ವ್ಯಾಪಾರದ ದೃಷ್ಟಿಯಿಂದ ಹೇಗೆ ಈ ವಿಧಿಗಳು ಅಂತರ ಪ್ರಾಂತೀಯ ಸುಂಕದಕಟ್ಟೆಗಳನ್ನು ನಿರ್ಮಿಸಲಿವೆ ಎಂದು ನಾವು ತಿಳಿಸಬಯಸುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈಗ ಮೂರನೆಯ ಪ್ಯಾರಾದಲ್ಲಿ ನಮೂದಾಗಿರುವ ರಿಸರ್ವ್ ಬ್ಯಾಂಕಿನ ಬಗ್ಗೆ ಒಂದು ಪ್ರಶ್ನೆ ಕೇಳಬಯಸುತ್ತೇನೆ. ಈ ಬ್ಯಾಂಕು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕೆಂದು ನೀವು ಹೇಳುತ್ತೀರಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಗಂಡಾಂತರ ಪರಿಸ್ಥಿತಿಯಲ್ಲಿ ಬ್ಯಾಂಕಿಗೆ ರಾಜಕೀಯ ಸಹಾಯದ ಅವಶ್ಯಕತೆ ಬೀಳುವುದೆಂದು ನೀವು ಒಪ್ಪುವಿರೆಂದು ನಾನು ಭಾವಿಸುತ್ತೇನೆ.

ಸರ್ ಎಡ್ವರ್ಡ್ ಬೆಂಥಾಲ್: ಬೇಕಾಗಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಗಂಡಾಂತರ ಪರಿಸ್ಥಿತಿಯಲ್ಲಿ ಬ್ಯಾಂಕಿಗೆ ಬೆಂಬಲ ನೀಡಲು ಸರಕಾರವು ಸಾಲ ಮರುಪಾವತಿ ಮಾಡುವ ಅವಧಿಯನ್ನು ವಿಸ್ತರಿಸುವುದಕ್ಕಾಗಿ ಅದು ಅವಶ್ಯವೆನಿಸುವುದಿಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಹೌದು. ಎಲ್ಲಾ ರಿಸರ್ವ್ ಬ್ಯಾಂಕುಗಳ ಘಟನೆಗಳಲ್ಲಿ ಹಣಕಾಸಿನ ಬಿಕ್ಕಟ್ಟು ಉಂಟಾದ ಪ್ರಸಂಗಗಳಲ್ಲಿ ಸರಕಾರದ ಹಸ್ತಕ್ಷೇಪಕ್ಕೆ ಅವಕಾಶವಿದ್ದು ನಾನು ಅಂತಹ ಹಸ್ತಕ್ಷೇಪದ ಅಧಿಕಾರ ನೀಡಲು ಆಕ್ಷೇಪಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದ ಬಿಕ್ಕಟ್ಟಿನ ಸಮಯದಲ್ಲಿ ಸರಕಾರವು ಬ್ಯಾಂಕಿಗೆ ಸಹಾಯವನ್ನು ಸಾಲ ತೀರಿಸುವ ಅವಧಿಯನ್ನು ವಿಸ್ತರಿಸುವ ಮೂಲಕವಾಗಲಿ ಅಥವಾ ಬ್ಯಾಂಕು ತನ್ನ ಕಾರ್ಯ ನಿರ್ವಹಣೆ ಮಾಡಿಕೊಂಡು ಹೋಗಲು ಮತ್ತು ತನ್ನ ಕಾಯ್ದಿಟ್ಟ ನಿಧಿ ಅಥವಾ ಆಪದ್ಧನವನ್ನು ಬಲಪಡಿಸಲು ಮುಂಗಡ ಹಣ ನೀಡುವ ಮೂಲಕವಾಗಲಿ ಬ್ಯಾಂಕಿನ ಮೇಲೆ ಮತ್ತು ಅದರ ಕಾರ್ಯಾಚರಣೆಯ ಮೇಲೆ ತನ್ನ ಪ್ರಭಾವ ಹೊಂದಿರುವುದಕ್ಕೆ ನೀವು ಸಮ್ಮತಿಸುವಿರಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಸರಕಾರವು ಒಂದಲ್ಲ ಒಂದು ರೀತಿಯಲ್ಲಿ ಬ್ಯಾಂಕಿನ ಕೆಲವು ಅಧಿಕಾರಿಗಳನ್ನು ಮತ್ತು ನಿರ್ದೇಶಕರನ್ನು ನೇಮಕ ಮಾಡುತ್ತದೆ. ಆದರೆ ಸರಕಾರವು ನಿರ್ದೇಶಕರನ್ನು ಅಂತಹ ಬಹುಸಂಖ್ಯೆಯಲ್ಲಿ ನೇಮಕ ಮಾಡಬಾರದು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಅಂಶವನ್ನು ಸ್ಪಷ್ಟಪಡಿಸಬಯಸುತ್ತೇನೆ. ನಾನು ರಾಜಕೀಯ ಪ್ರವೇಶ, ಹಸ್ತಕ್ಷೇಪ ಮತ್ತು ಪ್ರಭಾವ ಇವುಗಳಲ್ಲಿ ವ್ಯತ್ಯಾಸ ಮಾಡುತ್ತೇನೆ. ಇವುಗಳಲ್ಲಿ ನೀವು ಸರಕಾರಕ್ಕೆ ಯಾವುದಕ್ಕೆ ಅವಕಾಶ ಕೊಡುತ್ತೀರಿ ಅಥವಾ ಯಾವುದಕ್ಕೆ ಅವಕಾಶ ಕೊಡುವುದಿಲ್ಲ?

ಸರ್ ಎಡ್ವರ್ಡ್ ಬೆಂಥಾಲ್: ಇದನ್ನು ಸ್ಪಷ್ಟಪಡಿಸುವುದೆಂದರೆ ರಿಸರ್ವ್ ಬ್ಯಾಂಕಿನ ಘಟನೆಯನ್ನು ಪುನಃ ಬರೆಯಬೇಕೆಂದು ಅರ್ಥವಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಇದನ್ನು ಮುಂದುವರೆಸುವುದಿಲ್ಲ. ಈಗ ನಿರ್ದೇಶಕರ ವಿಷಯದಲ್ಲಿ ರಾಜಕೀಯ ಪ್ರಭಾವವನ್ನು ತಪ್ಪಿಸಲು ನೀವು ಯಾವ ರೀತಿಯ ವಿಧಿಗಳನ್ನು ಸೂಚಿಸುವಿರಿ?

ಉದಾಹರಣೆಗಾಗಿ, ಭಾರತದಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ವ್ಯಕ್ತಿಯನ್ನು ನಿರ್ದೇಶಕನಾಗುವುದರಿಂದ ಅನರ್ಹಗೊಳಿಸುವಿರಾ?

ಸರ್ ಎಡ್ವರ್ಡ್ ಬೆಂಥಾಲ್: ಇಲ್ಲ. ಆರಂಭದಲ್ಲಿ ನಾನು ಷೇರುದಾರರ ಬ್ಯಾಂಕು ಇರಬೇಕೆಂದು ಹೇಳುತ್ತೇನೆ. ಮತ್ತು ಷೇರುದಾರರು ಬ್ಯಾಂಕಿನ ಬಹುಸಂಖ್ಯೆಯ ನಿರ್ದೇಶಕರ ನಾಮಕರಣ ಮಾಡಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಅವರು ರಾಜಕಾರಣಿಗಳಾಗಿರಬಹುದೇ?

ಸರ್ ಎಡ್ವರ್ಡ್ ಬೆಂಥಾಲ್: ಶಾಸಕಾಂಗದಲ್ಲಿ ಕುಳಿತುಕೊಳ್ಳುವ ರಾಜಕಾರಣಿಗಳಾಗಿರಬಾರದು.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಅವರು ಹೆಚ್ಚು ಸಕ್ರಿಯವಾಗಿ ಪಕ್ಷದ ನಿಧಿಯನ್ನು ಬೆಂಬಲಿಸುತ್ತಿರಬಹುದೇ?

ಸರ್ ಎಡ್ವರ್ಡ್ ಬೆಂಥಾಲ್: ಅವರು ಪಕ್ಷ ರಾಜಕೀಯಕ್ಕೆ ಸಕ್ರಿಯ ಬೆಂಬಲ ನೀಡುತ್ತಿದ್ದರೆ ಅಂತಹವರು ಆರ್ಥಿಕ ವಿಷಯಗಳಲ್ಲಿ ದೇಶದ ವಿಶ್ವಾಸ ಹೊಂದಲಾರರು.

ಡಾ. ಬಿ. ಆರ್. ಅಂಬೇಡ್ಕರ್: ಅವರು ಅಂತಹವರನ್ನು ನೇಮಕ ಮಾಡದಂತೆ ಅನರ್ಹತೆ ಏನೂ ಇರುವುದಿಲ್ಲ.

ಸರ್ ಎಡ್ವರ್ಡ್ ಬೆಂಥಾಲ್: ಅವರು ಎರಡೂ ಕೆಲಸಗಳನ್ನು ಏಕಕಾಲದಲ್ಲಿ ನಿಭಾಯಿಸುವುದು ಮೂರ್ಖತನವೆನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈಗ ಶ್ವೇತಪತ್ರದ ೧೨೨ನೆಯ ಪ್ಯಾರಾದ ಮೇಲೆ ನಿಮ್ಮ ವ್ಯಾಖ್ಯೆಗಳ ಸಂಬಂಧವಾಗಿ ನೀವು ೫ನೆಯ ಪ್ಯಾರಾದಲ್ಲಿ ೧೨೨ನೆಯ ಸೂಚನೆಯಲ್ಲಿ ಸೇರ್ಪಡೆ ಮಾಡುವುದಕ್ಕಾಗಿ ಕೆಲವು ಸೂಚನೆಗಳನ್ನು ಮಾಡಿರುವಿರಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಆ ಪ್ಯಾರಾದ ಕೊನೆಯ ನಾಲ್ಕು ಅಥವಾ ಐದು ಪಂಕ್ತಿಗಳನ್ನು ಮಾತ್ರ ಇಲ್ಲಿ ಓದಬಯಸುತ್ತೇನೆ: "ಈ ಉದ್ದೇಶಕ್ಕಾಗಿ ಯಾವುದೇ ಪ್ರದೇಶದಲ್ಲಿ ಯಾವುದೇ ಕೃಷಿ ಭೂಮಿಯನ್ನು, ಆ ಪ್ರದೇಶದಲ್ಲಿ ಕೃಷಿಯಲ್ಲಿ ನಿರತರಾದವರು ಅಥವಾ ಕೃಷಿಗೆ ಸಂಬಂಧಪಟ್ಟವರು ಎಂದು ಮಾನ್ಯ ಮಾಡಲಾಗಿರುವ ಯಾವುದೇ ವರ್ಗದ ವ್ಯಕ್ತಿಗೆ ಕೃಷಿಭೂಮಿಯ ಮಾರಾಟ ಅಥವಾ ಭೋಗ್ಯ ಮಾಡುವುದನ್ನು ಸಂಪೂರ್ಣವಾಗಿ ಅಥವಾ ಕೆಲವು ವಿನಾಯತಿಗಳೊಂದಿಗೆ ನಿಷೇಧಿಸುತ್ತದೆ ಎಂಬ ಒಂದೇ ಆಧಾರದ ಮೇಲೆ ಯಾವ ಕಾನೂನನ್ನೂ ಪಕ್ಷಪಾತಕರವೆಂದು ಘೋಷಿಸಲಾಗುವುದಿಲ್ಲ." ನಾನು ಹೇಳಬಯಸುವುದೇನೆಂದರೆ, "ಜಾತಿ, ಮತ ಅಥವಾ ಧರ್ಮದ ಭೇದವಿಲ್ಲದೆ" ಎಂಬ ಪದಗಳನ್ನು ಕೊನೆಯ ಭಾಗದಲ್ಲಿ ಸೇರಿಸದೇ ಹೋದರೆ, ಅದೇ ವರ್ಗದಲ್ಲಿ ಜಾತಿ, ಮತ ಅಥವಾ ಧರ್ಮದ ಆಧಾರದ ಮೇಲೆ ಪಕ್ಷಪಾತ ಮಾಡುವುದು ಸಾಧ್ಯ ವಾಗುತ್ತದೆ. ಒಂದು ಕೃಷಿಕ ವರ್ಗವಿರುವುದನ್ನು ನೀವು ಕಾಣುವಿರಿ. ಮತ್ತು ಅದೇ ಕೃಷಿಕ ವರ್ಗದಲ್ಲಿ ನೀವು ಜಾತಿ, ಮತ ಮತ್ತು ಧರ್ಮದ ಆಧಾರದ ಮೇಲೆ ಪಕ್ಷಪಾತ ಮಾಡಬಹುದಾಗಿದೆಯಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಹೌದು. ಈ ಪ್ರಶ್ನೆಯನ್ನು ನ್ಯಾಯವಾದಿಗಳು ಪರಿಶೀಲಿಸಬೇಕೆಂದು ನಾನು ಬಯಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮ್ಮನ್ನು ಈ ಬಗ್ಗೆ ಕೇಳಲು ಕಾರಣವೆಂದರೆ, ನೀವು ಈ ಖಂಡ (ಕ್ಲಾಸ್)ವನ್ನು ಉತ್ತಮಗೊಳಿಸುವುದಕ್ಕಾಗಿ: "ಈ ಸೂಚನೆಯು ಪ್ರಭಾವಯುತವಾಗಬೇಕಾದರೆ,

ಅದರಲ್ಲಿ ಬ್ರಿಟಿಷ್ ಭಾರತದಲ್ಲಿ 'ಕಾಯಂ ವಾಸಸ್ಥಾನ, ಮುಂದುವರಿಕೆ ಅಥವಾ ವಾಸದ ಅವಧಿ' ಎಂಬ ಪದಗಳನ್ನು ಸೇರಿಸುವುದು ಅವಶ್ಯಕ" ಎಂದು ಸಲಹೆ ಮಾಡಿರುವಿರಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನೀವು ಅದರಲ್ಲಿ ಜಾತಿ, ಮತ ಮತ್ತು ಧರ್ಮದ ಆಧಾರದ ಮೇಲೆ ಯಾವುದೇ ರೀತಿಯ ಭಿನ್ನಭಾವ ಇರದಂತೆ ಆಗಬೇಕೆಂದು ಹೇಳಿಲ್ಲವಲ್ಲವೇ? ಯಾವುದೇ ಪಕ್ಷಪಾತದ ವಿರುದ್ಧವಾಗಿ ಈ ಪ್ಯಾರಾ ಪ್ರಭಾವಯುತವಾಗಬೇಕಾದರೆ ಹಾಗೆ ಮಾಡಬೇಕಾಗುತ್ತದೆಯಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಪ್ಯಾರಾದ ಕೊನೆಯ ಭಾಗದ ಬಗ್ಗೆ ನಾನು ಹೇಳಿರುವ ಅಂಶಗಳು 'ಜಿ' ವಿಭಾಗದ ೬ನೆಯ ಪ್ಯಾರಾದಲ್ಲಿದೆ. ನಾವು ಅದನ್ನು ಯುರೋಪಿಯನ್ನರು, ಕೃಷಿಕರು ಮತ್ತು ಇತರರು ಭೂಮಿಯನ್ನು ತೆಗೆದುಕೊಳ್ಳುವುದನ್ನು ತಡೆಯುವಂತೆ ಉಪಯೋಗಿಸಲು ಬಯಸಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ನಾನು ಹೇಳುವಂತೆ ನಿಮ್ಮ ಉದ್ದೇಶ ಸಾಧಿಸುವುದಕ್ಕಾಗಿ, ಅವಶ್ಯವೆನಿಸಿದರೆ, ನೀವು ಜಾತಿ, ಮತ, ಜನಾಂಗ ಅಥವ ಧರ್ಮದ ಆಧಾರದ ಮೇಲೆ ಯಾವುದೇ ಭೇದವನ್ನು ಮಾಡಲಾಗುವುದಿಲ್ಲ ಎಂದು ಹೇಳಬಹುದಲ್ಲವೇ?

ಸರ್ ಎಡ್ವರ್ಡ್ ಬೆಂಥಾಲ್: ಹೌದು, ಅದು ಕಾನೂನಿನ ಕರಡು ಸಿದ್ಧಪಡಿಸುವವರಿಗೆ ಸೇರಿದ ವಿಷಯ.

## (೯)

# ಲೇಡಿ ಲೇಟನ್, ಮಿಸೆಸ್ ಓ ಸ್ಟ್ರಾಸಿ ಮತ್ತು ಸರ್ ಫಿಲಿಪ್ ಹ್ಯಾರ್ಟೋಗ್– ಭಾರತೀಯ ಸ್ತ್ರೀಯರ ಮತದಾನ ಹಕ್ಕಿನ ಬ್ರಿಟಿಷ್ ಸಮಿತಿಯ ಪರವಾಗಿ

* ಡಾ. ಬಿ. ಆರ್. ಅಂಬೇಡ್ಕರ್: ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ನಾನು ಹೇಳುವುದನ್ನು ನೀವು ಒಪ್ಪುತ್ತೀರೋ ಇಲ್ಲವೋ ನನಗೆ ತಿಳಿಯದು. ಆದರೆ ನೀವು ಮಹಿಳೆಯರಿಗೆ ಮತದಾನದ ಹಕ್ಕು ನೀಡುವುದಕ್ಕಾಗಿ ಒತ್ತಾಯಪಡಿಸುವಾಗ ಮತದಾರರ ಪಟ್ಟಿಯಲ್ಲಿ ಭಾರತದ ಎಲ್ಲಾ ವರ್ಗಗಳ ಮಹಿಳೆಯರ ಹೆಸರುಗಳನ್ನು ಸೇರಿಸಲು ಬಯಸುವಿರಾಗಿ ನಾನು ಭಾವಿಸುತ್ತೇನೆ. ಅವರನ್ನು ಪ್ರತ್ಯೇಕವಾಗಿ ಕೇವಲ ಉಚ್ಚ ವರ್ಗದಿಂದ ಅಥವಾ ಮಧ್ಯಮವರ್ಗದವರಿಂದ ಅಥವಾ ಕೆಳವರ್ಗದವರಿಂದ ತೆಗೆದುಕೊಳ್ಳದೇ ಯಾವ ಕೋಮುಗಳಿಂದ ಅವರನ್ನು ತೆಗೆದುಕೊಳ್ಳಲಾಗಿದೆಯೋ ಅವರಲ್ಲಿ ಒಂದು ಪ್ರಮಾಣವಿರಬೇಕಾಗು ತ್ತದೆಯಲ್ಲವೇ?

ಲೇಡಿ ಲೇಟನ್: ನಿಜವಾಗಿಯೂ ಸಾಧ್ಯವಾದ ಮಟ್ಟಿಗೆ ಹಾಗಿರಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಎಂದರೆ, ನೀವು ಅದು ಗಣಿತ ಪ್ರಮಾಣದ ಪ್ರಕಾರ ೧ರಿಂದ ೪ ಅಥವಾ ೧ರಿಂದ ೫ರ ಪ್ರಮಾಣದಲ್ಲಿರಬೇಕೆಂದು ಹೇಳುತ್ತಿಲ್ಲವೆಂದು ನಾನು ಅರ್ಥ ಮಾಡುತ್ತೇನೆ. ಆದರೆ ಆ ಪ್ರಮಾಣವೂ ಅಲ್ಲದೆ, ಎಲ್ಲಾ ವರ್ಗಗಳ ಎಲ್ಲಾ ಮಹಿಳೆಯರು ಮತದಾರರ ದಾಖಲೆಯಲ್ಲಿ ಸೇರಬೇಕೆಂದು ನೀವು ಬಯಸುವಿರಾಗಿ ನಾನು ಭಾವಿಸುತ್ತೇನೆ.

ಲೇಡಿ ಲೇಟನ್: ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ನಿಜವಾಗಿಯೂ ನಾವು ನಗರ ಮತ್ತು ಗ್ರಾಮೀಣ ಭಾಗಗಳವರಿಗೆ ಮತ್ತು ವಿವಿಧ ವರ್ಗಗಳವರಿಗೆ ಸಾಕಷ್ಟು ಪ್ರಾತಿನಿಧ್ಯವಿರಬೇಕೆಂದು ಬಯಸುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಹೆಚ್ಚಿನ ಮಟ್ಟದ ಶೈಕ್ಷಣಿಕ ಅರ್ಹತೆ ಅಥವಾ ಆಸ್ತಿ ಅರ್ಹತೆಯನ್ನು ನಿಗದಿಗೊಳಿಸಿದ್ದೇ ಆದರೆ, ಅದರ ಪರಿಣಾಮವಾಗಿ ಭಾರತದ ಒಂದೇ ವರ್ಗಕ್ಕೆ ಸೇರಿದ ಮಹಿಳೆಯರು ಮತದಾರರ ಪಟ್ಟಿಯಲ್ಲಿ ಸೇರುವವರೆಂಬುದನ್ನು ನೀವು ಒಪ್ಪಿಕೊಳ್ಳುವಿರಾಗಿ ಭಾವಿಸುತ್ತೇನೆ.

ಲೇಡಿ ಲೇಟನ್: ಅದು ನಿಜ. ಆಡಳಿತದ ದೃಷ್ಟಿಯಿಂದ ಅದು ಸಾಧ್ಯವಾಗುವುದಾದರೆ ಹೆಚ್ಚಿನ ಮಟ್ಟದ ಆಸ್ತಿ ಅರ್ಹತೆಯನ್ನು ಹೊಂದಿದವರ ಹೆಂಡತಿಯರೂ ಅಲ್ಲದೆ ಕಡಿಮೆ ಆಸ್ತಿ ಅರ್ಹತೆಯನ್ನು ಹೊಂದಿದವರ ಹೆಂಡತಿಯರೂ ಸಹ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕೆಂಬುದನ್ನು ನಾವು ಸ್ವಾಗತಿಸುತ್ತೇವೆ ಮತ್ತು ನಮ್ಮ ವಿಜ್ಞಾಪನಾ ಪತ್ರದಲ್ಲಿ ನಾವು ಇದಕ್ಕಾಗಿ ಒತ್ತಾಯಮಾಡಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ನೀವು ಮಹಿಳಾ ಮತದಾರರ ಸಂಖ್ಯೆಯನ್ನು ಇಡೀ ಜನಸಂಖ್ಯೆಗೆ

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ II–ಸಿ, ೨೬ನೆಯ ಜುಲೈ ೧೯೩೩, ಪುಟಗಳು ೨೨೭೬.

ಸರಿಯಾದ ಪ್ರಮಾಣದಲ್ಲಿ ವಿತರಿಸುವಿರೋ ಅಥವಾ ಮಹಿಳಾ ಮತದಾರರ ವಿರುದ್ಧ ಪುರುಷ ಮತದಾರರ ಪ್ರಮಾಣಕ್ಕೆ ಮಹತ್ವ ನೀಡುವಿರೋ ಎಂದು ತಿಳಿಯಲು ಕಾತರನಾಗಿರುವೆ.

ಲೇಡಿ ಲೇಟನ್: ನಾವು ಈ ಎರಡೂ ಅಂಶಗಳಿಗೆ ಮಹತ್ವ ಕೊಡುತ್ತೇವೆ. ಆದರೆ ಈ ವಿಷಯದಲ್ಲಿ ಸಧ್ಯಕ್ಕೆ ಮಹಿಳೆಯರ ಹಿತಾಸಕ್ತಿಗಳು ಸರಿಯಾಗಿ ಸುರಕ್ಷಿತವಾಗಿವೆ. ಎಲ್ಲಾ ಜಿಲ್ಲೆಗಳಲ್ಲಿ ಇತರ ಮಹಿಳೆಯರನ್ನು ಪ್ರತಿನಿಧಿಸಲು ಸಾಕಷ್ಟು ಸಂಖ್ಯೆಯ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದುದಾದರೆ, ಮತದಾನದ ಹಕ್ಕು ಪಡೆಯದ ಮಹಿಳೆಯರ ಸಂಖ್ಯೆ ಆದಷ್ಟು ಕಡಿಮೆ ಇರಬೇಕೆಂದು ನಾವು ಖಂಡಿತವಾಗಿಯೂ ಬಯಸುತ್ತೇವೆ. ಆ ಸಂಖ್ಯೆಯನ್ನು ಈಗ ನಿಗದಿಗೊಳಿಸಲಾಗಿದ್ದರೆ ಈ ದಿಶೆಯಲ್ಲಿ ಆದಷ್ಟು ತೀವ್ರ ಕ್ರಮ ತೆಗೆದುಕೊಳ್ಳಬೇಕು. ಅದು ಕಾರ್ಯ ಸಾಧ್ಯವೆನಿಸಿದರೆ ನಾವು ವಯಸ್ಕ ಮತದಾನ ಪದ್ಧತಿಗೆ ಒತ್ತಾಯಪಡಿಸಲು ಸಿದ್ಧರಿದ್ದೇವೆ. ಆದರೆ ಅದು ಆಡಳಿತಾತ್ಮಕವಾಗಿ ಅಸಾಧ್ಯವೆಂದು ನಾವು ತಿಳಿದುಕೊಂಡಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಅದೇ ಪ್ರಶ್ನೆಯನ್ನು ಇನ್ನೊಂದು ರೀತಿಯಲ್ಲಿ ಕೇಳಬಹುದೇ? ಎಲ್ಲಾ ಮಹಿಳೆಯರೂ ಸಮಾಜ ಕಲ್ಯಾಣದಲ್ಲಿ ಆಸಕ್ತಿ ಹೊಂದಿರುವುದು ಸಹಜ. ಅದು ನಿಜ ಕೂಡ. ಎಲ್ಲಾ ಮಹಿಳೆಯರ ದೃಷ್ಟಿಕೋನ ಸಾಮಾನ್ಯ ರೀತಿಯದಾಗಿರಬಹುದು. ಆದರೆ, ಸಮಾಜ ಕಲ್ಯಾಣ ಯೋಜನೆಗಳನ್ನು ಕಾರ್ಯಗತಗೊಳಿಸಲು ಹಣ ಬೇಕಾಗುತ್ತದೆ ಎಂಬುದು ನಿಮಗೆ ಗೊತ್ತಿದೆ. ಆಗ ತೆರಿಗೆ ವಿಧಿಸುವುದು ಅನಿವಾರ್ಯವಾಗುವುದಲ್ಲವೇ?

ಲೇಡಿ ಲೇಟನ್: ಹೌದು. ಅದನ್ನು ನಾನು ಚೆನ್ನಾಗಿ ಬಲ್ಲೆ.

ಡಾ. ಬಿ. ಆರ್. ಅಂಬೇಡ್ಕರ್: ಈ ವಿಷಯದಲ್ಲಿ ಎಲ್ಲಾ ಮಹಿಳೆಯರ ದೃಷ್ಟಿ ಒಂದೇ ಆಗಿರಲಿಕ್ಕಿಲ್ಲ. ಅವರು ತಾವು ಸೇರಿದ ವರ್ಗಕ್ಕನುಗುಣವಾಗಿ ವಿಭಜಿತರಾಗುವ ಸಾಧ್ಯತೆ ಇದೆಯಲ್ಲವೇ?

ಲೇಡಿ ಲೇಟನ್: ಹೌದು. ನಾನು ಈ ಪ್ರಶ್ನೆಗೆ ಎರಡು ಉತ್ತರಗಳನ್ನು ನೀಡಬಲ್ಲೆ. ಮೊದಲಿನದಾಗಿ, ಶೈಕ್ಷಣಿಕ ದೃಷ್ಟಿಕೋನವನ್ನೇ ತೆಗೆದುಕೊಳ್ಳೋಣ. ಶಿಕ್ಷಣಕ್ಕಾಗಿ ವಿತರಿಸಲು ನಿಮ್ಮ ಹತ್ತಿರ ಒಂದಿಷ್ಟು ಹಣ ವಿದ್ದರೆ ಅದನ್ನು ಪುರುಷರು ಮತ್ತು ಮಹಿಳೆಯರಿಗಾಗಿ ಸಮನಾಗಿ ಖರ್ಚು ಮಾಡಲು ಎಲ್ಲಾ ವರ್ಗಗಳ ಮಹಿಳೆಯರು ಒಪ್ಪುತ್ತಾರೆ. ಅದೇ ಸಂದರ್ಭದಲ್ಲಿ ಪ್ರಭಾವ ಬೀರಲು ಸಾಕಷ್ಟು ಮಹಿಳೆಯರು ಇಲ್ಲದೇ ಹೋದರೆ ನೀವು ಬಾಲಕಿಯರಿಗಿಂತ ಬಾಲಕರ ಮೇಲೆ ಹೆಚ್ಚು ಹಣ ಖರ್ಚು ಮಾಡುತ್ತಾ ಹೋಗುವಿರಿ. ಇದು ಮೊದಲು ಗಮನಿಸಬೇಕಾದ ಅಂಶಗಳಲ್ಲೊಂದಾಗಿದೆ. ನಾನು ಇನ್ನೂ ಹೇಳುವುದೇನೆಂದರೆ ಕಲ್ಯಾಣ ಕಾರ್ಯಗಳಲ್ಲಿ ಸಕ್ರಿಯ ಆಸಕ್ತಿ ವಹಿಸುತ್ತಿರುವ ಮಹಿಳೆಯರು ಶಿಕ್ಷಣದ ಮೇಲೆ ಹೆಚ್ಚು ಪ್ರಮಾಣ ದಲ್ಲಿ ಹಣ ಖರ್ಚು ಮಾಡಬೇಕೆಂದು ಒತ್ತಾಯಪಡಿಸುತ್ತಿದ್ದಾರೆ. ಬಹುತೇಕ ಎಲ್ಲಾ ವರ್ಗಗಳ ಮಹಿಳೆ ಯರು ಈಗ ಈ ವಿಚಾರ ಹೊಂದಿದವರಾಗಿದ್ದಾರೆಂದು ನೀವು ನಿಸ್ಸಂಶಯವಾಗಿ ಒಪ್ಪಿಕೊಳ್ಳ ಬಹುದು. ಆದರೆ, ಮತದಾನದ ಹಕ್ಕನ್ನು ಸಾಧ್ಯವಾದಷ್ಟು ಮಹಿಳೆಯರಿಗೆ ನೀಡುವುದರಿಂದ ನನಗೆ ಸಂತೋಷವೆನಿಸುವುದು. ಆದ್ದರಿಂದಲೇ ನಾನು ಸಾಕ್ಷರತೆಯ ಅರ್ಹತೆಗೆ ಮಹತ್ವ ನೀಡುತ್ತಿ ರುವುದು. ಯಾವ ವಿಷಯದಲ್ಲಿಯೇ ಆಗಲಿ ಒತ್ತಾಯ ಹೇರುವ ಯೋಗ್ಯತೆಯುಳ್ಳ ಮಹಿಳೆಯು ಆದಷ್ಟು ತೀವ್ರಳಾಗಿ ಸಾಕ್ಷರಳಾಗಲು ಸಾಧ್ಯ ಮತ್ತು ಸಾಕ್ಷರತೆಯ ಅರ್ಹತೆಯನ್ನು ವಿಧಿಸಿದ್ದೇ ಆದರೆ ಆ ಶಕ್ತಿಯುತ ಅಸ್ತ್ರವನ್ನು ಹೊಂದಿರುವ ಮಹಿಳೆಯರು ಅದನ್ನು ಬಳಸುತ್ತಿಲ್ಲ ಎಂದು ಗೊತ್ತಾದಾಗ ಈ ಹಕ್ಕನ್ನು ನೀಡಿದ ಉದ್ದೇಶ ಸಫಲವಾಗುವುದಿಲ್ಲ. ಈ ಕಾರಣಕ್ಕಾಗಿಯೇ ನಾನು ಯಾವಾಗಲೂ ಸಾಕ್ಷರತೆಯ ಪರವಾಗಿ

ರುವುದು ಮತ್ತು ಈ ಕಾರಣದಿಂದಲೇ ಭಾರತದ ಎಲ್ಲಾ ಸಂಘಟಿತ ಮಹಿಳೆಯರೂ ಸಾಕ್ಷರತೆಯ ಪರವಾಗಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ನೀವು ನನ್ನ ಅಭಿಪ್ರಾಯದೊಂದಿಗೆ ಸಹಮತ ಹೊಂದಿರುವುದು ನನಗೆ ತೃಪ್ತಿಯಾಗಿದೆ. ಸರ್ ಫಿಲಿಪ್ ಹಾರ್ಡೋಗ್‌ರವರೇ, ಸಾಕ್ಷರತೆಯ ಬಗ್ಗೆ ನಾನು ನಿಮಗೆ ಒಂದು ಪ್ರಶ್ನೆ ಕೇಳ ಬಯಸುತ್ತೇನೆ. ಮಹಿಳೆಯರ ಮತದಾನದ ಹಕ್ಕಿಗೆ ಸಾಕ್ಷರತೆಯ ಅರ್ಹತೆಯನ್ನು ವಿಧಿಸಲು ಇವೆ ಎನ್ನಲಾದ ಆಡಳಿತಾತ್ಮಕ ತೊಂದರೆಗಳ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ. ಆದರೆ, ಇರಬಹುದಾದ ತೊಂದರೆಗಳು ನನಗೆ ತಿಳಿದಂತೆ ಹೀಗಿವೆ: ಮೊದಲನೆಯದಾಗಿ, ಯಾವುದೇ ಮಹಿಳೆ ಸಾಕ್ಷರತೆಯ ವರ್ಗದಲ್ಲಿ ಬರುವಳೇ ಹೇಗೆ ಎಂದು ಕೂಡಲೇ ತಿಳಿದುಕೊಳ್ಳಲು ನೋಂದಣಿ ಅಧಿಕಾರಿಗಳಿಗೆ ಸಹಾಯಕವಾಗುವಂತಹ ಪ್ರಮಾಣ ಪತ್ರ ಲಭ್ಯವಿರುವುದಿಲ್ಲವೆಂದು ಹೇಳಲಾಗಿದೆ. ಆದ್ದರಿಂದ ಅವರನ್ನು ನೇರವಾಗಿ ಮತದಾರರ ಪಟ್ಟಿಯಲ್ಲಿ ಸೇರಿಸಲು ಬರುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ನಾವು ಯೋಜನೆಯಲ್ಲಿ ಸಲಹೆ ಮಾಡಿರುವಂತೆ ಗ್ರಾಮಾಧಿಕಾರಿಗಳು ಪರಿಶೀಲಿಸಿ ಮತ್ತು ತಹಶೀಲ್ದಾರರು ದೃಢೀಕರಿಸಿದ ಪ್ರಮಾಣಪತ್ರ ನೀಡುವ ಪದ್ಧತಿಯನ್ನನುಸರಿಸಬೇಕಾಗುತ್ತದೆ. ಹೇಳಲಾಗುತ್ತಿರುವ ಆಡಳಿತಾತ್ಮಕ ತೊಂದರೆ ಯಾವುದೆಂದರೆ, ಒಟ್ಟು ಗ್ರಾಮಾಧಿಕಾರಿ ಯಾವುದೇ ಗ್ರಾಮೀಣ ಮಹಿಳೆ ಸಾಕ್ಷರಳಾಗಿದ್ದಾಳೋ ಇಲ್ಲವೋ ಎಂದು ತಿಳಿದುಕೊಳ್ಳಲು ಆಕೆಯನ್ನು ಹೇಗೆ ಸಂಪರ್ಕಿಸಬೇಕು? ಮತಾಧಿಕಾರ ಪಡೆಯ ಬಯಸುವ ಮಹಿಳೆ ಸ್ವತಃ ತಾನೇ ಅರ್ಜಿ ಹಾಕಿಕೊಳ್ಳುವುದು ಆಕೆಗೆ ಸೇರಿದ ಜವಾಬ್ದಾರಿ ಎಂದು ನೀವು ಹೇಳಬಯಸುತ್ತೀರಾ?

ಸರ್ ಫಿಲಿಪ್ ಹಾರ್ಟೋನ್: ಅದೊಂದೇ ಮಾರ್ಗ ಎಂದು ನನಗನಿಸುತ್ತದೆ. ಮಹಿಳೆ, ತಾನೇ ಆಗಲಿ ಅಥವಾ ತನ್ನ ಪತಿಯ ಮುಖಾಂತರವಾಗಲಿ, "ನಾನು ನನ್ನ ಹೆಸರನ್ನು ಮತದಾರ ಪಟ್ಟಿಯಲ್ಲಿ ಸೇರಿಸಬೇಕೆಂದು ಬಯಸುತ್ತೇನೆ. ನಾನು ಸಾಕ್ಷರಿ ಮತ್ತು ನಾನು ಇದಕ್ಕಾಗಿ ಪರೀಕ್ಷೆಗೊಳಗಾಗಲು ಸಿದ್ಧಳಿದ್ದೇನೆ" ಎಂದು ಹೇಳುವಷ್ಟು ಆಸಕ್ತಿಯುಳ್ಳವಳಾಗಿರಬೇಕು.

ಮಿಸ್ಟರ್ ಬಟ್ಲರ್: ಇದಕ್ಕೂ ಅರ್ಜಿಗೂ ಇರುವ ವ್ಯತ್ಯಾಸವೇನು?

ಲೇಡಿ ಲೇಟನ್: ನಾವು ನಮ್ಮ ವಿಜ್ಞಾಪನಾ ಪತ್ರದಲ್ಲಿ ಸಾಕ್ಷರತೆಯ ಬಗ್ಗೆ ಅರ್ಜಿಗೆ ಆಕ್ಷೇಪಣೆ ಮಾಡಿಲ್ಲವೆಂದು ನನಗನಿಸುತ್ತದೆ. ನಾವು ಅದನ್ನು ಆಕ್ಷೇಪಿಸುವುದಿಲ್ಲ. ಯಾವುದೇ ಶೈಕ್ಷಣಿಕ ಅರ್ಹತೆಯ ಮೂಲಕ ಸಾಕ್ಷರರೆಂದು ಮೊದಲೇ ಮಾನ್ಯ ಮಾಡಲಾದ ಎಲ್ಲರನ್ನೂ ಯಾವ ಅಡ್ಡಿಯೂ ಇಲ್ಲದೆ ಮತದಾರರ ಪಟ್ಟಿಯಲ್ಲಿ ಸೇರಿಸಬೇಕು. ಇದನ್ನು ಹೊರತು ಇತರ ಪ್ರಸಂಗಗಳಲ್ಲಿ ಅರ್ಜಿಯ ಪ್ರಮೇಯ ಉಂಟಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದರೆ ನಿಜವಾಗಿಯೂ ಆಕ್ಷೇಪಾರ್ಹವೆನಿಸಿದ ಮನೆಗಳಿಗೆ ಹೋಗಿ ವಿಚಾರ ಮಾಡುವ ಬಗ್ಗೆ ಎತ್ತಲಾಗಿರುವ ಆಕ್ಷೇಪದ ಪ್ರಶ್ನೆ ಉದ್ಭವಿಸುವುದಿಲ್ಲವೇ?

ಸರ್ ಫಿಲಿಪ್ ಹಾರ್ಟೋಗ್: ಡಾ. ಅಂಬೇಡ್ಕರ್‌ರವರು ಎತ್ತಿರುವ ವಿಷಯದ ಮೇಲೆ ನೇರವಾಗಿ ಸಂಬಂಧಿಸಿದಂತೆ ಸೆಕ್ರೆಟರಿ ಆಫ್ ಸ್ಟೇಟ್‌ರವರು ನೀಡಿರುವ ಎರಡು ಉತ್ತರಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವೆನಿಸುವುದರಿಂದ ನಾನು ಅವುಗಳ ಪ್ರಸ್ತಾಪ ಮಾಡಬಹುದೇ? ಸೆಕ್ರೆಟರಿ ಆಫ್ ಸ್ಟೇಟ್‌ರವರು ೭೪೩೭ನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ಹೀಗೆ ಹೇಳಿದರು: "ಭವಿಷ್ಯದಲ್ಲಿ ಮುಂದಿನ ಪೀಳಿಗೆಯ ಬಾಲಕಿಯರು ಅಥವಾ ಸ್ತ್ರೀಯರನ್ನು ವಿದ್ಯಾರ್ಹತೆಯ ನಿಮ್ಮ ದಾಖಲೆ ಪುಸ್ತಕಗಳಲ್ಲಿ ಮತ್ತು ಚುನಾವಣೆಗೆ ಸಂಬಂಧಿಸಿದ ವರದಿಗಳಲ್ಲಿ ಸೇರಿಸುವುದು ಸುಲಭವಾಗುವುದು. ಆದರೆ, ಇದುವರೆಗೆ ಈ ಕೆಲಸ ಆಗ

ದಿರುವ ಪ್ರಾಂತ್ಯಗಳಲ್ಲಿ ಮೊದಲನೆಯ ಚುನಾವಣೆಗಳಿಗಾಗಿ ಇದನ್ನು ಮಾಡುವುದರಲ್ಲಿ ಸಾಕಷ್ಟು ಕಷ್ಟ ವಾಗುವುದು." ನೀವು ಈ ಉತ್ತರವನ್ನು ಸೆಕ್ರೆಟರಿ ಆಫ್ ಸ್ಟೇಟ್‌ರವರು ಇನ್ನೊಂದು ಪ್ರಶ್ನೆಗೆ ಕೊಟ್ಟ ಉತ್ತರದೊಂದಿಗೆ ಓದಬೇಕೆಂದು ಸೂಚಿಸಬಯಸುತ್ತೇನೆ. ೧೭ನೆಯ ಪುಟದಲ್ಲಿ ಕೊಡಲಾಗಿರುವ ೭೨೧೪ ನೆಯ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಅವರು " 'X' ವರ್ಷಗಳವರೆಗೆ (ಎಂದರೆ ಅನಿರ್ದಿಷ್ಟ ಕಾಲ) ಯಾವ ಬದಲಾವಣೆಯೂ ಆಗುವುದಿಲ್ಲ" ಎಂದು ಹೇಳಿದ್ದಾರೆ. ಮಾರ್ಕ್ವಿಸ್ ಆಫ್ ಸ್ಯಾಲಿಸ್ ಬರಿಯವರಿಗೆ ನೀಡಿದ ಉತ್ತರದಲ್ಲಿ ಅವರು ಸಂಸತ್ತಿನ ಕಾಯ್ದೆಯಲ್ಲಿ 'X' ವರ್ಷಗಳ (ಅನಿರ್ದಿಷ್ಟ ವರ್ಷಗಳ)ವರೆಗೆ ಮತದಾನದ ಹಕ್ಕಿನಲ್ಲಿ ಯಾವ ಬದಲಾವಣೆಯೂ ಆಗಲಾರದೆಂದು ತಾವು ಹೇಳುವುದಾಗಿ ಹೇಳಿದರು. ತತ್ಪರಿಣಾಮವಾಗಿ ಎರಡು, ಮೂರು ಮತ್ತು ನಾಲ್ಕನೆಯ ಚುನಾವಣೆಗಳಿಗಾಗಿ ಅವು 'X' ವರ್ಷಗಳ ಅವಧಿಯೊಳಗೆ ಬರುವುದಾದರೆ, ಅವುಗಳಿಗಾಗಿ ದಾಖಲೆ ಪುಸ್ತಕಗಳನ್ನು ಸಿದ್ಧಪಡಿಸುವುದರಲ್ಲಿ ಯಾವ ಪ್ರಯೋಜನವೂ ಆಗಲಾರದು. ಇನ್ನು ಸಂಖ್ಯೆಯ ಪ್ರಶ್ನೆಯನ್ನು ತೆಗೆದುಕೊಳ್ಳುವೆ. ಲೋಥಿಯನ್ ವರದಿಯ ಪ್ರಕಾರ ಸಾಕ್ಷರ ಮಹಿಳೆಯರ ಸಂಖ್ಯೆ ಒಂದೂ ಕಾಲು ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ಇದನ್ನು ಆ ವರದಿಯ ೮೬ನೆಯ ಪುಟದಲ್ಲಿ ಹೇಳಲಾಗಿದೆ. ಇದರಲ್ಲಿ ೩,೪೫,೦೦೦ ಸಾಕ್ಷರ ಮಹಿಳೆಯರು ಮದ್ರಾಸ್ ಪ್ರಾಂತ್ಯದಲ್ಲಿದ್ದಾರೆ. ಇವರ ಬಗ್ಗೆ ಯಾವ ತೊಂದರೆಯೂ ಇಲ್ಲ. ಇದಕ್ಕೆ ಹೋಲಿಸಿದರೆ ಭಾರತದ ಉಳಿದ ಭಾಗಗಳಲ್ಲಿ ಕಡಿಮೆ ಸಂಖ್ಯೆ, ಎಂದರೆ ೮,೭೫,೦೦೦ ಸಾಕ್ಷರ ಮಹಿಳೆಯರಿದ್ದಾರೆ. ಈಗ ಮದ್ರಾಸಿನ ೩,೪೫,೦೦೦ ಮಹಿಳೆಯರನ್ನು ಒಂದು ಚುನಾವಣೆಗಾಗಿ ಮತದಾರರ ಪಟ್ಟಿಯಲ್ಲಿ ಸೇರಿಸುವುದು ಸಾಧ್ಯ ವಾದರೆ, ಅದನ್ನೀಗಾಗಲೇ ಮಾಡಿರಬಹುದಾದರೆ, ಇಡೀ ಭಾರತದಾದ್ಯಂತ ಉಳಿದ ೮,೭೫,೦೦೦ ಮಹಿಳೆಯರನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವುದು ಏಕೆ ಸಾಧ್ಯವಿಲ್ಲ?

## (೧೦)

# ರಾಜಕುಮಾರಿ ಅಮೃತ್ ಕೌರ್ ಮತ್ತು ಶ್ರೀಮತಿ ಹಮೀದ್ ಆಲಿ–ಅಖಿಲ ಭಾರತ ಮಹಿಳಾ ಸಮ್ಮೇಳನ ಮತ್ತು ಇತರ ಎರಡು ಮಹಿಳಾ ಸಂಘಗಳ ಪರವಾಗಿ

* ಡಾ. ಬಿ. ಆರ್. ಅಂಬೇಡ್ಕರ್: ಮಹಮದೀಯರ ಕುಟುಂಬಗಳ ಬಗ್ಗೆ ಯಾವ ತೊಂದರೆಯೂ ಇರುವುದಿಲ್ಲವೆಂದೂ ನೀವು ಹೇಳಿರುವಿರಾ?

ಶ್ರೀಮತಿ ಹಮೀದ್ ಅಲಿ: ಮುಸಲ್ಮಾನನಿಗೆ ತನ್ನ ಪತ್ನಿಯ ಹೆಸರನ್ನು ಹೇಳಲು ಯಾವ ಅಭ್ಯಂತರವೂ ಇರುವುದಿಲ್ಲ. ಸರ್ ಹರಿಯವರು ಹೇಳಿದ ಹಾಗೆ, ಸ್ವಲ್ಪ ಸಂಕೋಚದ ಭಾವನೆಯಿದ್ದಾಗ್ಯೂ ಮುಸಲ್ಮಾನರಲ್ಲಿ ತಮ್ಮ ಪತ್ನಿಯರ ಹೆಸರನ್ನು ಹೇಳುವುದರಲ್ಲಿ ಯಾವುದೇ ತೊಂದರೆ ಇರುವುದು ನನಗೆ ಗೊತ್ತೇ ಇಲ್ಲ. ಮಹಿಳೆಯರು ತಮ್ಮ ಗಂಡಂದಿರ ಹೆಸರನ್ನು ಪದೇ ಪದೇ ಹೇಳುವುದಿಲ್ಲವೆಂಬುದೇನೋ ನಿಜ. ಅವರು ಅದನ್ನು ಆಗಾಗ್ಗೆ ಬಳಸುತ್ತಾರೆ.

ರಾಜಕುಮಾರಿ ಅಮೃತ್ ಕೌರ್: ಆದರೆ ಎಂದೂ ಕುಟುಂಬಗಳಲ್ಲಿ ಗಂಡಂದಿರು, ಹೆಂಡತಿಯ ಹೆಸರನ್ನು ಬಳಸಲು ಆಕ್ಷೇಪ ಎತ್ತಬಹುದು.

* * * * *

ಡಾ. ಬಿ. ಆರ್. ಅಂಬೇಡ್ಕರ್: ಸರ್ ಹರಿಸಿಂಗ್ ಗೌರ್‌ರವರು ಎತ್ತಿದ ಪ್ರಶ್ನೆ ಹಿಂದೂ ಗಂಡಂದಿರಾಗಲಿ ಅಥವಾ ಮುಸಲ್ಮಾನ ಗಂಡಂದಿರಾಗಲಿ ತಮ್ಮ ಹೆಂಡತಿಯರ ಹೆಸರನ್ನು ಹೇಳುವಲ್ಲಿ ತಮ್ಮ ಮನಸ್ಸಿನಲ್ಲಿ ಆಕ್ಷೇಪಣೆ ಇಟ್ಟುಕೊಳ್ಳುವರೇ ಎಂಬುದಕ್ಕೆ ಸಂಬಂಧಪಟ್ಟಿಲ್ಲ. ನಾನು ತಿಳಿದುಕೊಂಡಂತೆ ಅವರ ಪ್ರಶ್ನೆ ಈ ಇಬ್ಬರಲ್ಲಿ ಯಾರು ಅಥವಾ ಯಾರಾದರೂ ನೋಂದಣಿ ಅಥವಾ ದಾಖಲೆ ಅಧಿಕಾರಿ ಮಾಡಬಹುದಾದ ವಿಚಾರಣೆಗೆ ಆಕ್ಷೇಪಿಸುವರೇ ಎಂಬುದಕ್ಕೆ ಸಂಬಂಧಿಸಿದುದಾಗಿದೆ.

ರಾಜಕುಮಾರಿ ಅಮೃತ್ ಕೌರ್: ನೋಂದಣಿ ಅಧಿಕಾರಿಗಳು ಯಾವ ರೀತಿಯ ವಿಚಾರಣೆ ಮಾಡುವರೆಂಬುದು ನನಗೆ ಅರ್ಥವಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ಹೀಗಿರುವುದು: "ನಿಮಗೆ ಹೆಂಡತಿ ಇದ್ದಾರೆಯೇ, ಅವರ ಹೆಸರೇನು?"

ಸರ್ ಹರಿಸಿಂಗ್ ಗೌರ್: ಮತ್ತು "ನಿಮಗೆ ಎಷ್ಟು ಜನ ಹೆಂಡತಿಯರಿದ್ದಾರೆ?"

ಡಾ. ಬಿ. ಆರ್. ಅಂಬೇಡ್ಕರ್: ನೋಂದಣಿ ಅಧಿಕಾರಿಗಳು ಮಾಡಬಹುದಾದ ಇಂತಹ ವಿಚಾರಣೆಗೆ ಯಾರಾದರೂ ಆಕ್ಷೇಪ ಎತ್ತಬಹುದೇ ಎಂಬುದು ಈಗಿರುವ ಪ್ರಶ್ನೆ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ II–ಸಿ, ೨೯ನೆಯ ಜುಲೈ ೧೯೩೩, ಪುಟಗಳು ೨೩೨೪–೨೧.

ಮಾರ್ಕ್ವಿಸ್ ಆಫ್ ಲೋಥಿಯನ್: ಆಕೆಗೆ "೨೧ ವರ್ಷಗಳಿಗಿಂತ ಹೆಚ್ಚಾಗಿವೆಯೇ?"

ಡಾ. ಬಿ. ಆರ್. ಅಂಬೇಡ್ಕರ್: ಈ ತರಹದ ಪ್ರಶ್ನೆ.

ಅಧ್ಯಕ್ಷ: ಸಾಕ್ಷಿದಾರರು ಈ ಮಧ್ಯೆ ಉತ್ತರ ನೀಡಬಯಸಬಹುದು. ನಿಮ್ಮ ಅಭಿಪ್ರಾಯಗಳೇನಾದರೂ ಇದ್ದರೆ ಡಾ. ಅಂಬೇಡ್ಕರರ ಸಲಹೆಗೆ ಉತ್ತರ ಕೊಡಬಯಸುತ್ತೀರಾ?

ರಾಜಕುಮಾರಿ ಅಮೃತ್ ಕೌರ್: ಹೌದು. ಇಂತಹ ಪ್ರಶ್ನೆಗಳಿಗೆ ಯಾವ ಆಕ್ಷೇಪವೂ ಇರಲಾರದೆಂದು ನನಗನಿಸುತ್ತದೆ. ಇಂತಹ ಪ್ರಶ್ನೆಯನ್ನು ಕೇಳಬಯಸುವವರ ಮಾನಸಿಕ ಭಾವನೆಯೂ ನನಗೆ ಅರ್ಥವಾಗುತ್ತಿಲ್ಲ. ಇದು ಸಂಪೂರ್ಣ ಅಗ್ರಾಹ್ಯ ಎಂದೆನಿಸುತ್ತದೆ.

ಅಧ್ಯಕ್ಷ: ಶ್ರೀಮತಿ ಹಮೀದ್ ಆಲಿಯವರೇ ಈ ಉತ್ತರವನ್ನು ನೀವು ಒಪ್ಪಿಕೊಳ್ಳುತ್ತೀರಾ? ಯಾವ ತೊಂದರೆಯೂ ಇರುವುದಿಲ್ಲವೆಂದು ನೀವು ಒಪ್ಪುತ್ತೀರಾ?

ಶ್ರೀಮತಿ ಹಮೀದ್ ಆಲಿ: ಅದು ಇಂತಹ ಪ್ರಶ್ನೆಗಳನ್ನು ಕೇಳುವವರ ಧ್ವನಿ ಮತ್ತು ಧಾಟಿಯನ್ನವಲಂಬಿಸಿರುತ್ತದೆ ಎಂದು ನನಗನಿಸುತ್ತದೆ. ಸಾಮಾನ್ಯವಾಗಿ ಯಾವ ದುರ್ಭಾವನೆಯೂ ಇಲ್ಲದೇ ಸದ್ಭಾವನೆಯಿಂದ ಕೇಳಲಾದ ಇಂತಹ ಪ್ರಶ್ನೆಯನ್ನು ಯಾರೂ ತಪ್ಪಾಗಿ ಭಾವಿಸುವುದಿಲ್ಲವೆಂದು ನಾನು ತಿಳಿಯುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: (ಶ್ರೀಮತಿ ಹಮೀದ್ ಅಲಿಯವರೇ) ನಾನು ನಿಮಗೆ ಇನ್ನೊಂದು ಪ್ರಶ್ನೆ ಕೇಳಬಯಸುತ್ತೇನೆ. ನೀವು ಮುಂಬಯಿಯವರು, ಅಲ್ಲಿ ಪ್ರತ್ಯೇಕ ಮುಸಲ್ಮಾನರೇ ಇರುವ ಕೆಲವು ವಿಶಿಷ್ಟ ಮೊಹಲ್ಲಾಗಳಿವೆ ಎಂಬುದು ನಿಮಗೆ ಗೊತ್ತಿದೆ. ಒಬ್ಬ ಚುನಾವಣಾಧಿಕಾರಿಯು ಇಂತಹ ಮೊಹಲ್ಲಾಗಳಿಗೆ ಪ್ರವೇಶಿಸಿ ತಾನು ಮಾಡಬೇಕಾದ ವಿಚಾರಣೆಯನ್ನು ಮಾಡಬಹುದೆಂದು ನೀವು ನಿಮ್ಮ ಅನುಭವದಿಂದ ಹೇಳಬಲ್ಲಿರಾ?

ಶ್ರೀಮತಿ ಹಮೀದ್ ಅಲಿ: ಮುಂಬಯಿ ಬಗ್ಗೆ ಹೇಳುವುದಾದರೆ ಹೌದು, ಅದು ಸಾಧ್ಯ. ಏಕೆಂದರೆ ಮುಂಬಯಿಯಲ್ಲಿ ಪದೇ ಪದೇ ನಗರಸಭಾ ಚುನಾವಣೆಗಳು ನಡೆಯುವುದರಿಂದ ಜನರಿಗೆ ಈ ರೀತಿಯ ತರಬೇತಿ ಆಗಿರುತ್ತದೆ.

* * * * *

ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ವಿಧಾನಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯದ ಬಗ್ಗೆ ೫೬ನೆಯ ಪುರವಣಿಯಲ್ಲಿ ಏನು ಹೇಳಲಾಗಿದೆ ಎಂಬುದು ನನಗೆ ಸರಿಯಾಗಿ ತಿಳಿದಿಲ್ಲ. "ಕೋಮುವಾರು ವಿಷಯವು ನಮ್ಮ ಒಕ್ಕಟ್ಟಿನ ವರ್ಗದಲ್ಲಿ ಪ್ರವೇಶಿಸಬಾರದೆಂದು ನಾವು ಪದೇಪದೇ ಒತ್ತಾಯಿಸಿದ್ದೇವೆ" ಎಂದು ಹೇಳಲಾಗಿದೆ. ಕೆಳಮನೆ ಮಹಿಳೆಯರ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಶ್ವೇತಪತ್ರದಲ್ಲಿ ಅದು ಕೋಮುವಾರು ಮತದಾನ ಪದ್ಧತಿಯಂತಿರದೆ ವರ್ಗಾಯಿಸಬಹುದಾದ ಏಕಮತ ಪದ್ಧತಿಯಂತೆ ಸಾಮಾನ್ಯ ಮತದಾರ ಸಮೂಹದಿಂದ ಎಂದು ಸೂಚಿಸಿರುವುದು ಕಂಡುಬರುತ್ತದೆ.

ರಾಜಕುಮಾರಿ ಅಮೃತ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆ ದೃಷ್ಟಿಯಿಂದ ಅದು ಕೋಮುವಾರು ಮತದಾನ ಪದ್ಧತಿಯಾಗಿದೆ ಎಂದು ಆಕ್ಷೇಪಿಸಲು ಬರುವುದಿಲ್ಲ ಎಂದು ನಾನು ತಿಳಿಯಬೇಕಾಗುತ್ತದೆಯಲ್ಲವೇ?

ರಾಜಕುಮಾರಿ ಅಮೃತ್ ಕೌರ್: ಮೊದಲನೆಯದಾಗಿ, ಫೆಡರಲ್ ವಿಧಾನಸಭೆಯ ಕೆಳಮನೆಯಲ್ಲಿ ಮಹಿಳೆಯರಿಗಾಗಿ ಸ್ಥಾನಗಳು ನಿಶ್ಚಿತವಾಗಿ ಕೋಮುವಾರು ಆಧಾರದ ಮೇಲೆಯೇ ಇರುತ್ತವೆ. ಈ ಬಗ್ಗೆ ಸೆಕ್ರೆಟರಿ ಆಫ್ ಸ್ಟೇಟ್‌ರವರು ಮೊನ್ನೆ ಅಥವಾ ಮೂರು ದಿವಸಗಳ ಹಿಂದೆ ನೀಡಿರುವ ಸಾಕ್ಷ್ಯದಲ್ಲಿ

ಸ್ಪಷ್ಟ ಆದೇಶವಿದೆ. ಫೆಡರಲ್ ವಿಧಾನಸಭೆಯ ಕೆಳ ಸದನದಲ್ಲಿ ಅಪ್ರತ್ಯಕ್ಷ ಚುನಾವಣೆಯ ಪದ್ಧತಿಯಂತೆ ತುಂಬ ಬೇಕಾದ ಆರಕ್ಷಿತ ಸ್ಥಾನಗಳನ್ನು ಕೋಮುವಾರು ಆಧಾರದ ಮೇಲೆ ತುಂಬಬೇಕಾದುದು ನಿಶ್ಚಿತವಾಗಿದೆ.

ಮಿಸ್ ಮೇರಿ ಪಿಕ್‌ಫೋರ್ಡ್: ನಾನು ಈಗ ಮಧ್ಯ ಪ್ರವೇಶಿಸಬಹುದೇ? ಸೆಕ್ರೆಟರಿ ಆಫ್ ಸ್ಟೇಟ್‌ರವರು ನೀಡಿದ ಉತ್ತರದಲ್ಲಿ ಕೋಮುವಾರು ಪ್ರಶ್ನೆ ಅಡಗಿದೆ ಎಂದು ಹೇಳಿದಾಗ ಅವರು ಬಂಗಾಳದ ಪ್ರಾಂತೀಯ ಪರಿಷತ್ತಿನಲ್ಲಿ ಮಹಿಳೆಯರ ಸ್ಥಾನಗಳನ್ನು ಪ್ರಸ್ತಾಪಿಸಿದ್ದರು. ಅದು ವಿಧಾನಸಭೆಯ ಸ್ಥಾನಗಳ ಸಂಬಂಧವಾಗಿರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನೂ ಕೂಡ ಹಾಗೆಯೇ ತಿಳಿದಿದ್ದೆ. ನಾನು ಸಾಕ್ಷಿದಾರರ ಗಮನವನ್ನು ಶ್ವೇತಪತ್ರದ ೮ನೆಯ ಪುಟ, ಪರಿಶಿಷ್ಟ IIರತ್ತ ಸೆಳೆಯುವುದಾದರೆ, ನಾನೂ ಸಹ ಈ ವಿಷಯವನ್ನು ಕೊನೆಯದಾಗಿ ತೀರ್ಮಾನಿಸಲಾಗಿದೆ ಎಂದು ತಿಳಿಯಬೇಕಾಗಿತ್ತು. ನೀವೂ ಸಹ ಅದನ್ನೇ ಪ್ರಸ್ತಾಪಿಸಿದ್ದೀರಿ. "ಪ್ರತಿಯೊಂದು ಪ್ರಾಂತ್ಯದಲ್ಲಿ ಮಹಿಳೆಯರಿಗಾಗಿ ನಿಗದಿಗೊಳಿಸಲಾದ ಸ್ಥಾನಕ್ಕೆ ಪ್ರಾಂತೀಯ ಶಾಸನ ಸಭೆಯ ಸದಸ್ಯರು ವರ್ಗಾಯಿಸಬಹುದಾದ ಏಕ ಮತ ಪದ್ಧತಿಯನುಸಾರ ಚುನಾವಣೆ ಮಾಡಬೇಕಲ್ಲವೇ?"

ರಾಜಕುಮಾರಿ ಅಮೃತ್ ಕೌರ್: ಹೌದು. ಆದರೆ ನಾನು ಹೇಳುವುದಿಷ್ಟೇ. ಸೆಕ್ರೆಟರಿ ಆಫ್ ಸ್ಟೇಟ್‌ರವರು ಮಿಸ್ ಪಿಕ್‌ಫೋರ್ಡ್‌ರವರ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಬಂಗಾಳದ ಪ್ರಾಂತೀಯ ಪರಿಷತ್ತಿನಲ್ಲಿ ಕೋಮುವಾರು ಆಧಾರದ ಮೇಲೆ ಆರಕ್ಷಿತ ಸ್ಥಾನಗಳ ಬಗ್ಗೆ ಹೇಳಿದ್ದರೇ ಹೇಗೆ ಎಂದು ತಿಳಿಯಬಹುದೇ? ಕೆಳ ಸದನದಲ್ಲಿ ಮಹಿಳೆಯರಿಗಾಗಿ ಕಾಯ್ದಿರಿಸಿದ ಸ್ಥಾನಗಳ ವಿಷಯದಲ್ಲಿ ಕೋಮು ಪ್ರಶ್ನೆ ಪ್ರವೇಶಿಸುವುದಿಲ್ಲವೆಂದು ನಾನು ತಿಳಿದುಕೊಳ್ಳಬಹುದೇ? ಅವುಗಳನ್ನು ಕೋಮು-ರಹಿತ ಆಧಾರದ ಮೇಲೆ ಕಾಯ್ದಿರಿಸಲಾಗುವುದೇ? ನಾನು ಈ ವಿಷಯದಲ್ಲಿ ಸ್ಪಷ್ಟತೆ ಬಯಸುತ್ತೇನೆ. ಯಾವ ಆಧಾರದ ಮೇಲೆ ಈ ಸ್ಥಾನಗಳನ್ನು ಕಾಯ್ದಿರಿಸಲಾಗುವುದೆಂದು ತಿಳಿಯಬಯಸುತ್ತೇನೆ.

* * * * *

ಡಾ. ಬಿ. ಆರ್. ಅಂಬೇಡ್ಕರ್: ನಾನು ಈ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬಯಸುತ್ತೇನೆ. ಏಕೆಂದರೆ, ನನಗೆ ತಿಳಿದಂತೆ ಈ ವಿಷಯದಲ್ಲಿ ಹೆಚ್ಚು ಗೊಂದಲವಿದೆ ಮತ್ತು ನಾನು ಅದನ್ನು ನಿವಾರಿಸಿಕೊಳ್ಳ ಬಯಸುತ್ತೇನೆ. ಮೊದಲನೆಯದಾಗಿ ನೀವು ಅಪ್ರತ್ಯಕ್ಷ ಚುನಾವಣೆಗೆ ಆಕ್ಷೇಪಿಸುವಿರಾ?

ರಾಜಕುಮಾರಿ ಅಮೃತ್ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನೀವು ಹಾಗೆ ಮಾಡುವಿರಾ?

ರಾಜಕುಮಾರಿ ಅಮೃತ್ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅದೊಂದೇ ಆಕ್ಷೇಪಣೆಯಲ್ಲವೇ?

ರಾಜಕುಮಾರಿ ಅಮೃತ್ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ಕೆಳ ಸದನದಲ್ಲಿ ಮಹಿಳೆಯರನ್ನು ಪ್ರತಿನಿಧಿಸುವ ಮಹಿಳಾ ಪ್ರತಿನಿಧಿಗಳು ಪ್ರಾಂತೀಯ ವಿಧಾನಪರಿಷತ್ತಿನಿಂದ ಅಪ್ರತ್ಯಕ್ಷ ಅಥವಾ ಪರೋಕ್ಷ ಚುನಾವಣೆಯ ಮೂಲಕ ಚುನಾಯಿತರಾಗಬಾರದೆಂದು ನೀವು ಬಯಸುವುದಿಲ್ಲವೇ?

ರಾಜಕುಮಾರಿ ಅಮೃತ್ ಕೌರ್: ಖಂಡಿತವಾಗಿಯೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನೀವು ಈ ರೀತಿಯ ಪ್ರತ್ಯಕ್ಷ ಮತ ಕ್ಷೇತ್ರವಿರಬೇಕೆಂದು ಇಷ್ಟಪಡುವಿರಾ?

ರಾಜಕುಮಾರಿ ಅಮೃತ್ ಕೌರ್: ಕೋಮು ಆಧಾರದ ಮೇಲೆ ಕಾಯ್ದಿರಿಸಿದ ಸ್ಥಾನಗಳಿಗೆ ನಮ್ಮ ವಿರೋಧವಿರುವುದರಿಂದ, ನಮ್ಮ ಸಂಬಂಧವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ, ಮಹಿಳೆಯರಿಗೆ ಪ್ರವೇಶಾವಕಾಶ ಇರಬೇಕೆಂದು ನಾವು ಬಯಸುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಸ್ಪಷ್ಟೀಕರಣಕ್ಕಾಗಿ ಮೊದಲು ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ನೀವು ಮಹಿಳೆಯರಿಗಾಗಿ ಕೆಳ ಸದನದಲ್ಲಿ ಸ್ಥಾನಗಳನ್ನು ಕಾಯ್ದಿರಿಸಬೇಕೆಂದು ಬಯಸುವಿರಾ?

ರಾಜಕುಮಾರಿ ಅಮೃತ್ ಕೌರ್: ಸದ್ಯಕ್ಕೆ ಕೆಲ ಕಾಲದವರೆಗೆ, ಎಂದರೆ ನಮ್ಮ ಸಂಘಟನೆಗಳ ಮೂಲಕ ನಾವು ವಯಸ್ಕ ಮತದಾನ ಪದ್ಧತಿಯನ್ನು ಪಡೆದುಕೊಳ್ಳುವವರೆಗೆ, ಮಹಿಳೆಯರಿಗಾಗಿ, ಕೋಮು ವಾರು ಆಧಾರ ಮೇಲಿರದೆ ಅವುಗಳಿಗೆ ಸಂಯುಕ್ತ ಮತದಾರರ ಮೂಲಕ ಚುನಾಯಿಸುವುದಾದರೆ, ಸ್ಥಾನಗಳ ಕಾಯ್ದಿರಿಸುವಿಕೆಯನ್ನು ಒಪ್ಪಿಕೊಳ್ಳುತ್ತೇವೆ. ಈ ಒಂದೇ ಷರತ್ತಿನ ಮೇಲೆ ನಾವು ಸ್ಥಾನಗಳ ಕಾಯ್ದಿರಿಸುವಿಕೆಯನ್ನು ಒಪ್ಪಿಕೊಳ್ಳುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಈಗ ಎರಡು ವಿಷಯಗಳು ನನಗೆ ಸಂಪೂರ್ಣ ಮನವರಿಕೆಯಾಗಿವೆ. ಸದ್ಯದಲ್ಲಿ ಮಹಿಳೆಯರಿಗಾಗಿ ಕೆಲವು ಸ್ಥಾನಗಳನ್ನು ಕಾಯ್ದಿರಿಸಬೇಕೆಂದು ನೀವು ಇಚ್ಛಿಸುವಿರಲ್ಲವೇ?

ರಾಜಕುಮಾರಿ ಅಮೃತ್ ಕೌರ್: ನಾವು ಕಾಯ್ದಿರಿಸುವಿಕೆಗೆ ಯಾವಾಗಲೂ ವಿರೋಧವಾಗಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮಿಂದ ನಾನು ತಿಳಿದುಕೊಂಡಿರುವ ಎರಡನೆಯ ವಿಷಯವೆಂದರೆ, ನಾನು ತಪ್ಪಿದರೆ ಅದನ್ನು ತಿದ್ದಿರಿ– ಫೆಡರಲ್ ಕೆಳಮನೆಯಲ್ಲಿ ಮಹಿಳೆಯರಿಗಾಗಿ ಯಾವುದೇ ರೀತಿಯ ಅಪ್ರತ್ಯಕ್ಷ ಚುನಾವಣಾ ಪದ್ಧತಿಯ ಪ್ರಕಾರ ಪ್ರಾತಿನಿಧ್ಯ ನೀಡುವುದನ್ನು ನೀವು ಬಯಸುವುದಿಲ್ಲ. ನೀವು ಮಂಡಿಸಿದ ಎರಡನೆಯ ವಿಷಯ ಇದೇ ಅಲ್ಲವೇ?

ರಾಜಕುಮಾರಿ ಅಮೃತ್ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮ್ಮನ್ನು ಕೇಳಬೇಕಾಗಿರುವುದೇನೆಂದರೆ...?

ರಾಜಕುಮಾರಿ ಅಮೃತ್ ಕೌರ್: ನಾವು ಮೀಸಲಾತಿಯನ್ನು ಬಯಸುತ್ತೇವೆಂದು ನೀವು ಹೇಳುತ್ತಿರುವಿರಿ. ನಾವು ಮೀಸಲಾತಿಗೆ ಯಾವಾಗಲೂ ವಿರೋಧವಾಗಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಿಮಗೆ ಯಾವ ವಿಧದ ಮೀಸಲಾತಿಯೂ ಬೇಕಿಲ್ಲವೇ?

ರಾಜಕುಮಾರಿ ಅಮೃತ್ ಕೌರ್: ನಮಗೆ ಮೀಸಲಾತಿ ಬೇಕಿಲ್ಲ ಎಂದು ಹೇಳುತ್ತಲೇ ಇದ್ದೇವೆ. ಆದರೆ, ನಾನು ಹೇಳುವಂತೆ ನಮ್ಮ ಇಚ್ಛೆಯ ವಿರುದ್ಧ ಅನೇಕ ಸಂಗತಿಗಳನ್ನು ನಮ್ಮ ಮೇಲೆ ಬಲಾತ್ಕಾರವಾಗಿ ಹೇರಲಾಗಿರುವಂತೆ ಮೀಸಲಾತಿಯನ್ನು ಬಲಾತ್ಕಾರವಾಗಿ ಹೇರುವುದಾದರೆ, ಅದು ಸಂಯುಕ್ತ ಮತದಾರರಿಂದ ಮತ್ತು ಪ್ರತ್ಯಕ್ಷ ಚುನಾವಣೆಯ ಮೂಲಕವಾದರೆ ಮತ್ತು ಸ್ಥಾನಗಳನ್ನು ಕೋಮು ವಾರು ಆಧಾರದ ಮೇಲೆ ನಿಗದಿ ಮಾಡದಾದರೆ ಮಾತ್ರ ಮೀಸಲಾತಿಯನ್ನು ಒಪ್ಪಿಕೊಳ್ಳಲು ನಮ್ಮ ಸಂಘಟನೆಗಳಿಗೆ ನಾವು ಶಿಫಾರಸು ಮಾಡುತ್ತೇವೆ. ನಮಗೆ ಬೇಕಾದ ಮಹಿಳೆಯರನ್ನು ನಿಲ್ಲಿಸುವ ಹಕ್ಕು ನಮಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಇಚ್ಛೆಗೇ ಬಿಡುವುದಾದರೆ, ಫೆಡರಲ್ ಕೆಳಮನೆಯಲ್ಲಿ ಮಹಿಳೆಯರಿಗಾಗಿ ಸ್ಥಾನಗಳನ್ನು ಯಾವುದೇ ರೀತಿಯಲ್ಲಿ ನಿಗದಿಗೊಳಿಸುವುದನ್ನು ನೀವು ಬಯಸುವುದಿಲ್ಲವೇ?

ರಾಜಕುಮಾರಿ ಅಮೃತ್ ಕೌರ್: ನಿಜವಾಗಿಯೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಹಾಗಿದ್ದ ಪಕ್ಷದಲ್ಲಿ ನೀವು ನೇರ ಚುನಾವಣೆ ಮತ್ತು ಸಂಯುಕ್ತ ಚುನಾವಣಾ ಪದ್ಧತಿ ಇರಬೇಕೆಂದು ಹೇಳುವಿರಲ್ಲವೇ?

ರಾಜಕುಮಾರಿ ಅಮೃತ್ ಕೌರ್: ಹೌದು, ನೇರ ಚುನಾವಣೆ ಮತ್ತು ಜಾತ್ಯತೀತವಾಗಿ ಅಥವಾ ಕೋಮುರಹಿತವಾಗಿ ನಡೆಯಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಜಾತ್ಯತೀತ ಅಥವಾ ಕೋಮು–ರಹಿತ ಆಧಾರವನ್ನೇ ತೆಗೆದುಕೊಳ್ಳುವೆ. ನೇರ ಚುನಾವಣೆಗಾಗಿರುವ ಯಾವುದೇ ಮತಕ್ಷೇತ್ರದಲ್ಲಿ ಮಹಿಳೆಯರು ಮಾತ್ರ ಇರಬೇಕೆಂದು ನೀವು ಹೇಳುತ್ತಿರುವಿರಾ?

ರಾಜಕುಮಾರಿ ಅಮೃತ್ ಕೌರ್: ಇಲ್ಲ. ಪುರುಷರು ಮತ್ತು ಮಹಿಳೆಯರು ಇಬ್ಬರೂ ಇರಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಈ ಮತಕ್ಷೇತ್ರವು ಪುರುಷರು ಮತ್ತು ಮಹಿಳೆಯರಿಂದ ಕೂಡಿದ ಒಂದು ರೀತಿಯ ಸಂಯುಕ್ತ ಮತಕ್ಷೇತ್ರವಾಗಿರಬೇಕೆಂದು ನೀವು ಬಯಸುತ್ತೀರಿ.

ರಾಜಕುಮಾರಿ ಅಮೃತ್ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆ ಮತ ಕ್ಷೇತ್ರದಿಂದ ಕೊನೆಗೆ ಒಬ್ಬ ಮಹಿಳೆಯೇ ಆಯ್ಕೆಯಾಗ ಬೇಕೆಂಬ ನಿರ್ಬಂಧದೊಂದಿಗೆಯಲ್ಲವೇ?

ರಾಜಕುಮಾರಿ ಅಮೃತ್ ಕೌಲ್: ಹೌದು, ಒಂದು ಕಾಯ್ದಿಟ್ಟ ಸ್ಥಾನಕ್ಕೆ ಒಬ್ಬ ಮಹಿಳೆ ಚುನಾಯಿತ ಳಾಗಬೇಕೆಂದಿದ್ದಾಗ ಈ ಸಂದರ್ಭದಲ್ಲಿಯೂ ಒಬ್ಬ ಮಹಿಳೆಯೇ ಆಯ್ಕೆಯಾಗಬೇಕೆಂಬುದು ಸಹಜವೇ ಆಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ವಿಧಾನಸಭೆಗೆ ಈ ರೀತಿಯ ಪ್ರತ್ಯಕ್ಷ ಚುನಾವಣೆಯ ಮತಕ್ಷೇತ್ರಗಳನ್ನು ಹೇಗೆ ರಚಿಸುವಿರಿ?

ರಾಜಕುಮಾರಿ ಅಮೃತ್ ಕೌರ್: ನಾನು ಹೇಳಿರುವ ಹಾಗೆ ಈ ವಿಷಯದಲ್ಲಿ ನಮ್ಮಲ್ಲಿ ಯಾವುದೇ ರಚನಾತ್ಮಕ ಸೂಚನೆಗಳೂ ಇರುವುದಿಲ್ಲ. ಏಕೆಂದರೆ ನಾವು ಎಂದಿನಿಂದಲೂ ಸ್ಥಾನಗಳ ಮೀಸಲಾತಿಗೆ ವಿರುದ್ಧವಾಗಿದ್ದೇವೆ. ಅದನ್ನು ನಾವು ಸಮಿತಿಯ ವಿವೇಚನೆಗೆ ಬಿಡುತ್ತೇವೆ. ಆದರೆ, ನಮಗೆ ಮೀಸಲಾತಿ ಯನ್ನು ಒಪ್ಪಿಕೊಳ್ಳಬಹುದಾದಂತಹ ಕರಾರುಗಳೊಂದಿಗೆ ನೀಡಿದ್ದೇ ಆದರೆ, ಅತ್ಯಂತ ಪ್ರಾತಿನಿಧಿಕ ಸ್ವರೂಪದ ಮತ ಕ್ಷೇತ್ರಗಳನ್ನು ರಚಿಸುವ ಕಾರ್ಯವನ್ನು ಸಮಿತಿಯ ವಿವೇಚನೆಗೆ ಬಿಡುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ಶಾಸಕಾಂಗದ ಕೆಳಮನೆಯಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕಾಗಿ ಶ್ವೇತಪತ್ರದಲ್ಲಿ ಅಳವಡಿಸಲಾಗಿರುವ ಅಪ್ರತ್ಯಕ್ಷ ಚುನಾವಣಾ ಪದ್ಧತಿಗೆ ನೀವು ಒಂದು ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಅದು ಒಂದು ವಿಧದಲ್ಲಿ ಜಾತೀಯ ಭಾವನೆಯಿಂದ ಕೂಡಿದ್ದಾಗಿದೆ ಎಂಬ ಕಾರಣದಿಂದ ವಿರೋಧ ವ್ಯಕ್ತಪಡಿಸುವಿರೆಂದು ನಾನು ತಿಳಿದಿದ್ದೆ.

ರಾಜಕುಮಾರಿ ಅಮೃತ್ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಹಾಗಾದಾಗ ವಿವಿಧ ಪ್ರಾಂತೀಯ ಪರಿಷತ್ತುಗಳಲ್ಲಿರುವ ಪ್ರತಿನಿಧಿಗಳು ಕೋಮುವಾರು ಭಾವನೆಯಿಂದ ಕೆಲಸ ಮಾಡುವರೆಂಬುದೇ ನಿಮ್ಮ ಆಕ್ಷೇಪವಲ್ಲವೇ?

ರಾಜಕುಮಾರಿ ಅಮೃತ್ ಕೇರ್: ನಾನು ಈಗಾಗಲೇ ಈ ಪ್ರಶ್ನೆಗೆ ಉತ್ತರ ನೀಡಿರುವೆನಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ನೀಡಿರುವಿರಿ. ನಾನು ಇನ್ನೊಂದು ಪ್ರಶ್ನೆ ಕೇಳಬಯ ಸುತ್ತೇನೆ. ಶ್ವೇತಪತ್ರದಲ್ಲಿ ಅಡಕವಾಗಿರುವ ಅಪ್ರತ್ಯಕ್ಷ ಚುನಾವಣೆಗಳ ಕಾರಣ ಪ್ರಾಂತೀಯ ಶಾಸಕಾಂಗ

ದಲ್ಲಿರುವ ವಿವಿಧ ಕೋಮುಗಳ ಪ್ರತಿನಿಧಿಗಳು ಕೋಮುಭಾವನೆ ಹೊಂದಿದವರಾಗಿರುವುದರಿಂದ ಚುನಾವಣೆಗಳಲ್ಲಿ ಅದು ಕೋಮುವಾರು ಪರಿಗಣನೆಗೆ ಅವಕಾಶವಾಗುವುದೆಂಬುದೇ ನಿಮ್ಮ ಆಕ್ಷೇಪಣೆಯಲ್ಲವೇ? ನಾನು ಈ ವಿಷಯದಲ್ಲಿ ತಮ್ಮಿಂದ ಸ್ಪಷ್ಟೀಕರಣ ಬಯಸುತ್ತೇನೆ.

ರಾಜಕುಮಾರಿ ಅಮೃತ್ ಕೌರ್: ನಾನು ಪುನಃ ಇದಕ್ಕೆ ಉತ್ತರ ಕೊಡಲೇ? ಮೊಟ್ಟ ಮೊದಲನೆಯ ದಾಗಿ ನಾವು ಅಪ್ರತ್ಯಕ್ಷ ಚುನಾವಣೆಯನ್ನು ಆಕ್ಷೇಪಿಸುತ್ತೇವೆ. ಏಕೆಂದರೆ ಸ್ವಾಭಾವಿಕವಾಗಿಯೇ ನಾವು ಪ್ರತ್ಯಕ್ಷ ಚುನಾವಣೆಯನ್ನು ಬಯಸುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ.

ರಾಜಕುಮಾರಿ ಅಮೃತ್ ಕೌರ್: ಅದು ನಮ್ಮ ಮೊದಲನೆಯ ಆಕ್ಷೇಪಣೆ. ಎರಡನೆಯ ಆಕ್ಷೇಪಣೆ ಎಂದರೆ, ಪ್ರಾಂತೀಯ ಪರಿಷತ್ತುಗಳ ಮುಖಾಂತರ ನಮಗಾಗಿ ಈ ಅಪ್ರತ್ಯಕ್ಷ ಚುನಾವಣೆಯನ್ನು ಅನು ಸರಿಸಿದ್ದೇ ಆದರೆ, ಕೋಮುವಾರು ಆಧಾರದ ಮೇಲಿರುವ ಪ್ರಾಂತೀಯ ಪರಿಷತ್ತುಗಳು ಅವು ಚುನಾಯಿಸುವ ಮಹಿಳೆಯರಲ್ಲಿಯೂ ಕೋಮುಭಾವನೆಯನ್ನುಂಟುಮಾಡುತ್ತವೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ನಿಜ. ಆದರೆ, ನಾನು ಇನ್ನೂ ಒಂದು ಪ್ರಶ್ನೆ ಕೇಳಬಯಸುತ್ತೇನೆ. ಪ್ರಾಂತೀಯ ಪರಿಷತ್ತುಗಳಲ್ಲಿ ವಿವಿಧ ಕೋಮುಗಳು ಪ್ರತ್ಯೇಕ ಪ್ರತಿನಿಧಿಗಳನ್ನು ಹೊಂದುವುದರಿಂದ ಮಹಿಳೆಯರ ಚುನಾವಣೆಯಲ್ಲಿ (ಕೋಮು) ವಿಷಯಿಕ ಪರಿಗಣನೆಗೆ ಅವಕಾಶ ನೀಡುವುದೆಂಬ ನಿಮ್ಮ ಆಕ್ಷೇಪಣೆ ನನಗೆ ಅರ್ಥವಾಗಿದೆ.

ಶ್ರೀಯುತ ಎಮ್. ಆರ್. ಜಯಕರ್: ಅದು ನೀವು ಅಪ್ರತ್ಯಕ್ಷ ಚುನಾವಣೆಗಳಿಗೆ ಆಕ್ಷೇಪಿಸುತ್ತಿರುವ ಅನೇಕ ಕಾರಣಗಳಲ್ಲಿ ಒಂದು. ಆದರೆ, ಅದು ಅಪ್ರತ್ಯಕ್ಷವಾಗಿದೆ ಎಂಬುದೇ ನಿಮ್ಮ ಆಕ್ಷೇಪಣೆಗೆ ಇನ್ನೊಂದು ಕಾರಣ ಎಂದು ನಾನು ತಿಳಿದುಕೊಂಡಿರುವೆ.

ರಾಜಕುಮಾರಿ ಅಮೃತ್ ಕೌರ್: ನಾನು ಅನೇಕ ಸಾರಿ ಹಾಗೆ ಹೇಳಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಈಗಿರುವ ಪ್ರಶ್ನೆ ಇದು. ಉದಾಹರಣೆಗೆ ನೀವೇ ಯಾವು ದಾದರೂ ಒಂದು ಪ್ರತ್ಯಕ್ಷ ಮತಕ್ಷೇತ್ರವನ್ನೇ ಆಯ್ದುಕೊಳ್ಳಿ. ಮುಂಬಯಿ ನಗರವನ್ನೇ ತೆಗೆದುಕೊಳ್ಳೋಣ. ಕೆಳಮನೆಯಲ್ಲಿ ಮಹಿಳಾ ಪ್ರತಿನಿಧಿಯನ್ನು ಚುನಾಯಿಸಲು ವಿಶೇಷವಾಗಿ ರೂಪಿಸಬೇಕೆಂದು ನೀವು ಬಯಸಬಹುದಾದ ಈ ಮತಕ್ಷೇತ್ರದಲ್ಲಿ ವಿವಿಧ ಕೋಮುಗಳಿಗೆ ಸೇರಿದ ಮಹಿಳೆಯರು ಮತ್ತು ಪುರುಷ ರಿರುತ್ತಾರಲ್ಲವೇ?

ರಾಜಕುಮಾರಿ ಅಮೃತ್ ಕೌರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಮಹಿಳಾ ಪ್ರತಿನಿಧಿಯ ಚುನಾವಣೆಯಲ್ಲಿ ಭಾಗವಹಿಸುವ ಆ ಮತ ದಾರರು ಪ್ರಾಂತೀಯ ವಿಧಾನ ಪರಿಷತ್ತಿನಲ್ಲಿ ಮಹಿಳಾ ಅಭ್ಯರ್ಥಿಯ ಚುನಾವಣೆಯಲ್ಲಿ ಅಪ್ರತ್ಯಕ್ಷ ಆಧಾರದ ಮೇಲೆ ಭಾಗವಹಿಸುವ ದೊಡ್ಡ ಕೋಮುಗಳಿಗೆ ಸೇರಿದ ಪ್ರತಿನಿಧಿಗಳಿಗಿಂತ ಕಡಿಮೆ ಕೋಮುಭಾವನೆ ಯುಳ್ಳವರಾಗಿರುವರೆಂದು ನೀವು ಹೇಳುತ್ತಿರುವಿರಾ?

ರಾಜಕುಮಾರಿ ಅಮೃತ್ ಕೌರ್: ನಿಸ್ಸಂಶಯವಾಗಿ, ಏಕೆಂದರೆ ಕೋಮು ಭಾವನೆ ಶಾಸಕಾಂಗ ಪ್ರವೇಶಿಸುವ ಜನರಲ್ಲಿ ಸಾಮಾನ್ಯ ಜನಸಮೂಹದಲ್ಲಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ಅದೇ ಮತದಾರರು ಅಪ್ರತ್ಯಕ್ಷ ಚುನಾವಣೆಯಲ್ಲಿ ಮತದಾರ ರಾಗಲಿರುವ ಪುರುಷರನ್ನು ಚುನಾಯಿಸುವರೆಂಬ ಅಂಶದತ್ತ ನಾನು ನಿಮ್ಮ ಗಮನ ಸೆಳೆಯಬಯಸುತ್ತೇನೆ.

ರಾಜಕುಮಾರಿ ಅಮೃತ್ ಕೌರ್: ಇರಬಹುದು, ಆದರೆ ಪ್ರಶ್ನೆ ಸಂಯುಕ್ತ ಮತದಾರರದಾಗಿರುವಾಗ ಮತ್ತು ನಾವು ಆ ಸಂಯುಕ್ತ ಮತದಾರರ ಮತಗಳನ್ನು ಪಡೆದುಕೊಳ್ಳುವಾಗ, ಕೋಮುಭಾವನೆಯಿಂದ ಕೂಡಿದ ಪ್ರತ್ಯೇಕ ಮತದಾರರ ಸಮೂಹದಿಂದ ಚುನಾಯಿತರಾದ ಪ್ರಾಂತೀಯ ಪರಿಷತ್ತಿನಲ್ಲಿರುವಷ್ಟು ಕೋಮುಭಾವನೆ ಇರುವುದಿಲ್ಲ ಮತ್ತು ಅದು ಇರಲು ಸಾಧ್ಯವೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಭಾರತದಲ್ಲಿ ಸಾಮಾನ್ಯ ಮತದಾರ ಸಮೂಹದಲ್ಲಿರುವ ಪುರುಷರು ಮತ್ತು ಸ್ತ್ರೀಯರು ಜಾತಿಭಾವನೆಯಿಂದ ಪ್ರೇರಿತರಾಗುವುದಿಲ್ಲವೆಂದು ನೀವು ತಿಳಿದಿರುವಿರಾ?

ರಾಜಕುಮಾರಿ ಅಮೃತ್ ಕೌರ್: ಸಾಮಾನ್ಯ ಜನತೆಯಲ್ಲಿ ಅದು ಖಂಡಿತವಾಗಿಯೂ ಇರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಚುನಾವಣೆಗಳು ನಡೆಯುತ್ತಿರುವುದನ್ನು ನೀವು ಯಾವಾಗಲಾದರೂ ನೋಡಿರುವಿರಾ?

ರಾಜಕುಮಾರಿ ಅಮೃತ್ ಕೌರ್: ಹೌದು, (ನೋಡಿರುವೆ). ಇತ್ತೀಚಿನ ಒಂದು ನಿದರ್ಶನ ಕೊಡ ಬೇಕೆಂದರೆ, ನಮ್ಮ ಸಂಘಟನೆಗೆ ಸೇರಿದ ಮಹಿಳಾ ಸದಸ್ಯೆಯಲ್ಲೊಬ್ಬರು ಮುಂಬಯಿಯಲ್ಲಿ ಮಹಿಳೆಯರೇ ಇಲ್ಲದ, ಎಲ್ಲರೂ ಪುರುಷರಿರುವ ಮತ್ತು ನಿಮ್ನ ವರ್ಗದವರಿಗೂ ಹಾಗೂ ಇತರ ಪ್ರತಿಯೊಬ್ಬರೂ ಮತದಾನ ಮಾಡಿದ ಸಂಯುಕ್ತ ಮತದಾರರ ಸಮೂಹದಿಂದ ಆಯ್ಕೆಯಾದರಲ್ಲದೇ ಅವರು ಎಲ್ಲರಿ ಗಿಂತಲೂ ಹೆಚ್ಚು ಮತ ಗಳಿಸಿ ಅಗ್ರಸ್ಥಾನ ಪಡೆದರು. ಇದು ನಗರಸಭಾ ಚುನಾವಣೆಯಲ್ಲಿ ಜರುಗಿದ ಸಂಗತಿ. ಆಕೆಯೂ ಅಲ್ಲದೆ, ಇನ್ನೊಬ್ಬ ಮಹಿಳೆಯೂ ಇದ್ದರು. ಮತ್ತು ಪಾಟ್ನಾದಲ್ಲಿ ವಿಶ್ವವಿದ್ಯಾಲಯಗಳ ಚುನಾವಣೆಗಳಲ್ಲಿ ಪುರುಷರಿಂದ ಮಹಿಳೆಯರು ಚುನಾಯಿತರಾಗಿರುವ ಉದಾಹರಣೆಗಳಿವೆ. ಇವುಗಳಲ್ಲಿ ಯಾವುದೇ ರೀತಿಯ ಕೋಮುವಾರು ಭಾವನೆ ಉದ್ಭವಿಸಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಒಬ್ಬ ಮಹಿಳೆ ಚುನಾಯಿತಳಾಗುವಳೇ ಎಂಬ ಪ್ರಶ್ನೆ ಇರುವಾಗ ಕೋಮುಭಾವನೆ ಅಪ್ರತ್ಯಕ್ಷ ಚುನಾವಣೆಯಲ್ಲಿರುವುದಕ್ಕಿಂತ ಪ್ರತ್ಯಕ್ಷ ಚುನಾವಣೆಗಳಲ್ಲಿ ಕಡಿಮೆಯಾಗಿರುತ್ತ ದಲ್ಲವೇ?

ರಾಜಕುಮಾರಿ ಅಮೃತ್ ಕೌರ್: ನಿಜವಾಗಿ. ಅಪ್ರತ್ಯಕ್ಷ ಚುನಾವಣೆ ಪರಿಷತ್ತಿನ ಮುಖಾಂತರವಾದಾಗಲೆಲ್ಲಾ ಕೋಮು ಭಾವನೆ ಅದರಲ್ಲಿ ಪ್ರವೇಶಿಸುತ್ತದೆ.

* * * * *

* ಡಾ. ಬಿ. ಆರ್. ಅಂಬೇಡ್ಕರ್: ಆ ಪರಿಷತ್ತುಗಳ ಸದಸ್ಯರಾಗಿರುವವರನ್ನೇ ಆಯ್ಕೆ ಮಾಡುವಾಗ ಅದನ್ನು ನಾಮಕರಣದ ಮೂಲಕ ಮಾಡಲಾಗುವುದೆಂದು ನಾನು ತಿಳಿದಿದ್ದೇನೆ.

ರಾಜಕುಮಾರಿ ಅಮೃತ್ ಕೌರ್: ಹೌದು, ಅಲ್ಲಿ ಚುನಾವಣೆ ಇರುವುದಿಲ್ಲ.

ಸರ್ ಹರಿಸಿಂಗ್ ಗೌರ್: ಇಲ್ಲಿಯವರೆಗೆ ವಿಧಾನಸಭೆಗೆ ಅವರನ್ನು ಯಾವಾಗಲೂ ನಾಮಕರಣ ಮಾಡಲಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಹೌದು ಯಾವಾಗಲೂ ಮಾಡಲಾಗಿಲ್ಲ.

* * * * *

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ II–ಎ, ೨೯ನೆಯ ಜುಲೈ ೧೯೩೩, ಪುಟ ೨೩೨೭.

ಡಾ. ಬಿ. ಆರ್. ಅಂಬೇಡ್ಕರ್: ಅದಕ್ಕೆ ಯಾವುದಾದರೂ ಅನರ್ಹತೆ ಇದೆಯೇ?

ರಾಜಕುಮಾರಿ ಅಮೃತ್ ಕೌರ್: ನನಗೆ ಹಾಗೆನಿಸುವುದಿಲ್ಲ.

ಶ್ರೀಮತಿ ಹಮೀದ್ ಅಲಿ: ಪ್ರಾಂತ್ಯಗಳು ಬಹಳ ತಡವಾಗಿ ಅನರ್ಹತೆಗಳನ್ನು ಕೈಬಿಟ್ಟಿವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಹುದೇ?

ಡಾ. ಬಿ. ಆರ್. ಅಂಬೇಡ್ಕರ್: ಇತ್ತೀಚೆಗೆ ಹಾಗೆ ಮಾಡಲಾಗಿದೆ. ಕೆಲವು ಪ್ರಾಂತ್ಯಗಳಲ್ಲಿ ಎಷ್ಟು ತಡವಾಗಿ ಮಾಡಲಾಗಿದೆ ಎಂದರೆ ಆ ಅನರ್ಹತೆಗಳನ್ನು ತೆಗೆದುಹಾಕಿದ ನಂತರ ಇನ್ನೊಂದು ಚುನಾವಣೆ ನಡೆಸಲೂ ಸಮಯವಿರಲಿಲ್ಲ.

## (೧೧)

## ಶ್ರೀಮತಿ ಪಿ. ಕೆ. ಸೇನ್ ಮತ್ತು ಶ್ರೀಮತಿ ಎಲ್. ಮುಖರ್ಜಿ

* ಡಾ. ಬಿ. ಆರ್. ಅಂಬೇಡ್ಕರ್: ಮಹಿಳೆಯರು ಉದ್ಯೋಗಸ್ಥೆಯರಾದರೆ ಅವರಲ್ಲಿ ಕೋಮುವಾರು ಭಾವನೆ ಹುಟ್ಟುತ್ತದೆ ಎಂದು ಅರ್ಥವಾಗುವುದೇ?

ಶ್ರೀಮತಿ ಎಲ್. ಮುಖರ್ಜಿ: ನಾನು ಹಾಗೆ ಭಾವಿಸುವುದಿಲ್ಲ. ಮಹಿಳೆ ತನ್ನ ಲಿಂಗದ ಕಾರಣ ಸ್ವಭಾವದಿಂದಲೇ ಅಂತಹ ಕೋಮುಭಾವನೆಗಳಿಂದ ಮುಕ್ತಳಾಗಿರುತ್ತಾಳೆ.

ಡಾ. ಬಿ. ಆರ್. ಅಂಬೇಡ್ಕರ್: ಉದಾಹರಣೆಗಾಗಿ, ಇಂದು ನೌಕರಿಗೆ ಮತ್ತು ಔದ್ಯಮಿಕ ನೇಮಕಗಳಿಗೆ ಇರುವ ಹೋರಾಟ ಮತ್ತು ಕಚ್ಚಾಟ ಪುರುಷರಿಗೆ ಮಾತ್ರ ಸೀಮಿತವಾಗಿದೆಯೇ?

ಶ್ರೀಮತಿ ಎಲ್. ಮುಖರ್ಜಿ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಭಾರತದಲ್ಲಿ ಮಹಿಳೆಯರು ಬಹುಮಟ್ಟಿಗೆ ಕುಟುಂಬದಲ್ಲಿ ಗಳಿಸುವ ಸದಸ್ಯರಾಗಿರುವುದಿಲ್ಲ.

ಶ್ರೀಮತಿ ಎಲ್. ಮುಖರ್ಜಿ: ನಿಮ್ಮ ಮಾತು ನನಗೆ ಅರ್ಥವಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದ ಶಿಕ್ಷಣವನ್ನೇ ತೆಗೆದುಕೊಂಡರೆ ಪುರುಷರೊಡನೆ ಮಹಿಳೆಯರು ಬಹು ಸಂಖ್ಯೆಯಲ್ಲಿ ಆ ಉದ್ಯೋಗವನ್ನು ಪ್ರವೇಶಿಸಿದರೆ ಮತ್ತು ಶಿಕ್ಷಣದ ಫಲವಾಗಿ ಇತರ ಉದ್ಯೋಗ ಗಳನ್ನು ಪ್ರವೇಶಿಸಿದರೆ ಅಥವಾ ನಿಮ್ಮ ವಿಶ್ಲೇಷಣೆಯ ಪ್ರಕಾರ ಪ್ರಾಯಶಃ ಮಹಿಳೆಯರಲ್ಲಿ ಆ ಭಾವನೆ ಬೆಳೆಯಬಹುದಲ್ಲವೇ?

ಶ್ರೀಮತಿ ಎಲ್. ಮುಖರ್ಜಿ: ಅದು ಸಾಧ್ಯ. ಪರಿಣಾಮವನ್ನು ತಿಳಿಯದೇ ನಾನು ಈ ಬಗ್ಗೆ ಉತ್ತರ ನೀಡಲಾರೆ.

ಡಾ. ಬಿ. ಆರ್. ಅಂಬೇಡ್ಕರ್: ಅದನ್ನು ನಾನು ಮೆಚ್ಚುತ್ತೇನೆ. ಆದರೆ ಈ ಅಂಶವನ್ನು ನಿಮ್ಮ ಗಮನಕ್ಕೆ ತರಬಯಸಿದೆ ಮಾತ್ರ.

ಶ್ರೀಮತಿ ಎಲ್. ಮುಖರ್ಜಿ: ಮುಂದೆ ಯಾವಾಗಲಾದರೂ ನಮ್ಮ ಮಹಿಳೆಯರು ಉದ್ಯೋಗಗಳನ್ನು ಸೇರುವ ಸ್ಥಿತಿಗೆ ಬಂದಾಗ ಈ ಕೋಮುಭಾವನೆ ಸಂಪೂರ್ಣವಾಗಿ ನಶಿಸಿಹೋಗಬಹುದು. ಹಾಗೆಂದು ನಾನು ಆಶಿಸುವೆ.

ಡಾ. ಬಿ. ಆರ್. ಅಂಬೇಡ್ಕರ್: ಅದನ್ನು ನಾನೂ ಆಶಿಸುತ್ತೇನೆ.

** ಡಾ. ಬಿ. ಆರ್. ಅಂಬೇಡ್ಕರ್: ಶ್ರೀಮತಿ ಸೇನ್‌ರವರೇ ನಾನು ನಿಮ್ಮನ್ನು ಕೇಳಬಯಸುವ ಇನ್ನೊಂದು ಪ್ರಶ್ನೆಯಿದೆ. ಫೆಡರಲ್ ಕೆಳಮನೆಯಲ್ಲಿ ಮಹಿಳೆಯರ ಪ್ರಾತಿನಿಧ್ಯದ ಬಗ್ಗೆ ನೀವು ನಿಮ್ಮ

---

* ಅದೇ, ಪುಟ ೨೩೫೪

** 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂ. II–ಸಿ, ೨೯ನೆಯ ಜುಲೈ ೧೯೩೩, ಪುಟಗಳು: ೨೩೫೫.

ಅಭಿಪ್ರಾಯಗಳನ್ನು ವಿವರಿಸಿದ್ದೀರಿ ಮತ್ತು ಶ್ವೇತಪತ್ರದಲ್ಲಿ ಮಾಡಲಾಗಿರುವ ಅಪ್ರತ್ಯಕ್ಷ ಚುನಾವಣೆಯ ಪದ್ಧತಿಗೆ ನಿಮ್ಮ ಆಕ್ಷೇಪಣೆಯನ್ನೂ ತಿಳಿಸಿರುವಿರಿ.

ಶ್ರೀಮತಿ ಪಿ. ಕೆ. ಸೇನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಜಾತೀಯ ಭಾವನೆಯನ್ನು ಪುರಸ್ಕರಿಸುವ ಯಾವುದೇ ವ್ಯವಸ್ಥೆಯನ್ನು ನೀವು ಒಪ್ಪುವುದಿಲ್ಲವೆಂದು ಹೇಳಿರುವುದನ್ನು ಬಿಟ್ಟರೆ, ಪ್ರಾಂತೀಯ ಶಾಸಕಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯದ ಬಗ್ಗೆ, ನಿಮ್ಮ ಅಭಿಪ್ರಾಯ ಎಲ್ಲಿಯೂ ನನಗೆ ದೊರೆತಿಲ್ಲ.

ಶ್ರೀಮತಿ ಪಿ. ಕೆ. ಸೇನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆ ಬಗ್ಗೆ ನೀವು ಏನಾದರೂ ಸೂಚನೆ ನೀಡುವುದಿದೆಯೇ?

ಶ್ರೀಮತಿ ಪಿ. ಕೆ. ಸೇನ್: ನಿಮ್ಮ ಪ್ರಶ್ನೆ ನನಗೆ ಸರಿಯಾಗಿ ಅರ್ಥವಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತೀಯ ಶಾಸನಸಭೆಗಳಲ್ಲಿ ಮಹಿಳೆಯರಿಗಾಗಿ ಅನೇಕ ಸ್ಥಾನಗಳನ್ನು ಇಡಲಾಗಿದೆಯಲ್ಲವೇ?

ಶ್ರೀಮತಿ ಪಿ. ಕೆ. ಸೇನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈ ಸ್ಥಾನಗಳಿಗೆ ಯಾವ ರೀತಿ ಆಯ್ಕೆ ಮಾಡಬೇಕೆಂದು ಶ್ವೇತಪತ್ರದಲ್ಲಿ ವಿವರವಾದ ವಿಧಾನಗಳನ್ನು ಹೇಳಲಾಗಿಲ್ಲ. ಶ್ವೇತಪತ್ರದ IIIನೆಯ ಅನುಬಂಧ, ೯೩ನೆಯ ಪುಟದಲ್ಲಿ "ಸಾರ್ವತ್ರಿಕ" ಎಂಬುದರಲ್ಲಿ ಮದರಾಸಿನ ೧೫೨ನೆಯ ಸ್ಥಾನಗಳಲ್ಲಿ ೬ ಮಹಿಳೆಯರು, ಒಬ್ಬ ಮಹಿಳೆಯೂ ಸೇರಿದಂತೆ ೨೯ ಮಹಮದೀಯರು ಎಂದು ನಮೂದಿಸಲಾಗಿದೆ. ಇದುವರೆಗೆ ಶ್ವೇತಪತ್ರದಲ್ಲಿ ಇಷ್ಟು ಮಾತ್ರ ನಮೂದಿಸಲಾಗಿದೆ.

ಶ್ರೀಮತಿ ಪಿ. ಕೆ. ಸೇನ್: ಪ್ರತಿಯೊಂದು ಪ್ರಾಂತ್ಯದಲ್ಲಿ ನಮಗೆ (ಮಹಿಳೆಯರಿಗೆ) ಆರು ಸ್ಥಾನಗಳನ್ನು ಕೊಡುವುದಾದರೆ ನಾವು ಈ ಕೋಮು ಪ್ರಶ್ನೆಯನ್ನೇ ಕೈಬಿಡುತ್ತೇವೆ. ಈ ವ್ಯವಸ್ಥೆ ಹೆಚ್ಚು ಉತ್ತಮವೆನಿಸಿದ್ದು ನಾವು ನಮ್ಮಲ್ಲಿ ದೊರೆಯುವ ಅತ್ಯುತ್ತಮ ಮಹಿಳೆಯರನ್ನು ಈ ಸ್ಥಾನಗಳಿಗೆ ಕಳುಹಿಸಬಹುದಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಆರು ಸ್ಥಾನಗಳನ್ನು ತುಂಬಲು ಇನ್ನಾವುದಾದರೂ ವಿಧಾನವನ್ನು ನೀವು ಸೂಚಿಸಬಲ್ಲಿರಾ?

ಶ್ರೀಮತಿ ಪಿ. ಕೆ. ಸೇನ್: ಹೌದು. ಫೆಡರಲ್ ವಿಧಾನಸಭೆಗೆ (ಪ್ರಾಂತ್ಯದ) ರಾಜಧಾನಿಯಿಂದ ಆಯ್ಕೆಯಾಗಬೇಕೆಂದು ಈಗಾಗಲೇ ಈ ಪ್ರಶ್ನೆಗೆ ಉತ್ತರ ನೀಡಿದ್ದೇನೆ. ಪ್ರಾಂತೀಯ ವಿಧಾನಸಭೆಗೂ ಇದೇ ಅನ್ವಯವಾಗುತ್ತದೆ. ರಾಜಧಾನಿಯಾಗಿರುವ ನಗರ ಘಟಕ ಕ್ಷೇತ್ರವಾಗಿರಬೇಕು. ಅದು ಸಣ್ಣ ಮತದಾರರ ಸಮೂಹವಾಗುವುದು. ಅದು ಹೆಚ್ಚು ಖರ್ಚಿನದಾಗುವುದಿಲ್ಲ ಮತ್ತು ಎಲ್ಲಾ ಪ್ರಾಂತ್ಯಗಳಲ್ಲಿ ಮಹಿಳೆಯರು ಈ ಸ್ಥಾನಗಳಿಗೆ ಸ್ಪರ್ಧಿಸುವುದು ಸಾಧ್ಯವಾಗುವುದು.

ಡಾ. ಬಿ. ಆರ್. ಅಂಬೇಡ್ಕರ್: ಮದರಾಸಿನಲ್ಲಿ ಆರು ಮಹಿಳೆಯರನ್ನು ಚುನಾಯಿಸಲು ನೀವು ರಾಜಧಾನಿ ನಗರ ಕ್ಷೇತ್ರ ಒಂದೇ ಇರಬೇಕೆನ್ನುವಿರಾ?

ಶ್ರೀಮತಿ ಪಿ. ಕೆ. ಸೇನ್: ಇಲ್ಲ, ಪ್ರಾಂತ್ಯದ ವಿವಿಧ ಭಾಗಗಳಲ್ಲಿ ಪ್ರತ್ಯೇಕ ಮತಕ್ಷೇತ್ರಗಳಿರುತ್ತವೆ.

ಡಾ. ಬಿ. ಆರ್. ಅಂಬೇಡ್ಕರ್: ಇದಕ್ಕೆ ಎಷ್ಟರಮಟ್ಟಿಗೆ ನಿಮ್ಮ ಒಪ್ಪಿಗೆ ಇದೆ ಎಂಬುದು ನಾನು ಕೇಳ ಬಯಸಿದ ಪ್ರಶ್ನೆ. ವಿವಿಧ ಕೋಮುಗಳ ಭಾವನೆಗಳಿಗೆ ರಿಯಾಯತಿಯಾಗಿ ನೀವು ಸಂಯುಕ್ತ ಮತದಾರ ಸಮೂಹದ ಆಧಾರದ ಮೇಲೆ ಸ್ತ್ರೀಯರನ್ನು ವಿಧಾನ ಪರಿಷತ್ತುಗಳಿಗೆ ಆಯ್ಕೆ ಮಾಡುವಾಗ ಒಟ್ಟು

ಸ್ಥಾನಗಳಲ್ಲಿ ಕೆಲವು ಸ್ಥಾನಗಳನ್ನು ಉದಾಹರಣೆಗಾಗಿ, ಮುಸಲ್ಮಾನ ಮಹಿಳೆಯರಿಗಾಗಿ ಮೀಸಲಾಗಿಡುವುದಕ್ಕೆ ಒಪ್ಪುವಿರಾ?

ಶ್ರೀಮತಿ ಪಿ. ಕೆ. ಸೇನ್: ನಾವು ಕೋಮುವಾರು ಮೀಸಲಾತಿಗೆ ವಿರುದ್ಧವಾಗಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ಐದು ಹಿಂದೂ ಮಹಿಳೆಯರನ್ನು ಚುನಾಯಿಸಲು ಹಿಂದೂ ಮಹಿಳೆಯರಿಂದ ಕೂಡಿದ ಪ್ರತ್ಯೇಕ ಮತದಾರರ ಸಮೂಹವನ್ನು ಮತ್ತು ಒಬ್ಬ ಮುಸ್ಲಿಂ ಮಹಿಳೆಯನ್ನು ಚುನಾಯಿಸಲು ಮುಸಲ್ಮಾನ ಮಹಿಳೆಯರ ಪ್ರತ್ಯೇಕ ಮತದಾರರ ಸಮೂಹ ರಚಿಸುವುದರ ವಿರುದ್ಧ ಇರುವ ನಿಮ್ಮ ಆಕ್ಷೇಪ ನನಗೆ ಅರ್ಥವಾಗುತ್ತದೆ. ನಾನು ತಿಳಿಯಬಯಸುವುದೇನೆಂದರೆ: ಹಿಂದೂ ಮತ್ತು ಮುಸಲ್ಮಾನ ಮಹಿಳೆಯರು ಒಟ್ಟಿಗೇ ಮತದಾನ ಮಾಡುವ ಒಂದು ಸಾಮಾನ್ಯ ಮತಕ್ಷೇತ್ರ ಎಂದರೆ ಸಂಯುಕ್ತ ಮತಕ್ಷೇತ್ರದಿಂದ ಕೊನೆಪಕ್ಷ ಒಂದು ಸ್ಥಾನವನ್ನು ಮುಸಲ್ಮಾನ ಮಹಿಳೆಗೆ ಮೀಸಲಾಗಿಡುವ ಕರಾರಿನೊಂದಿಗೆ ಮಾಡಬಹುದಾದ ವ್ಯವಸ್ಥೆಯನ್ನೂ ನೀವು ವಿರೋಧಿಸುವಿರಾ?

ಶ್ರೀಮತಿ ಪಿ. ಕೆ. ಸೇನ್: ಹೌದು, ಅದು ಈಗಾಗಲೇ ಇದೆ ಮತ್ತು ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಪ್ರತ್ಯೇಕ ಮತದಾರ ಸಮೂಹದ ಆಧಾರದ ಮೇಲಿರಬೇಕು. ಆದರೆ ಅದು ಯಾವ ವಿಧಾನದ್ದಾಗಿರಬೇಕೆಂಬುದು ಹೇಳಲಾಗಿಲ್ಲ. ಆದ್ದರಿಂದಲೇ ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಕೇಳಬಯಸಿದೆ. ಮದರಾಸಿನಲ್ಲಿ ಈ ಆರು ಸ್ಥಾನಗಳನ್ನು ಯಾವ ರೀತಿ ತುಂಬಬೇಕೆಂಬುದನ್ನು ಕುರಿತು ಶ್ವೇತಪತ್ರದಲ್ಲಿ ಯಾವುದೇ ವಿವರಗಳು ಲಭ್ಯವಿಲ್ಲ.

ಶ್ರೀಮತಿ ಪಿ. ಕೆ. ಸೇನ್: ಅದು ಪುರುಷರು ಮತ್ತು ಮಹಿಳೆಯರಿಂದ ಕೂಡಿದ ಸಂಯುಕ್ತ ಮತದಾರ ಸಮೂಹವಾಗಿರಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಅದು ನನಗೆ ಗೊತ್ತಿಲ್ಲ. ಬಹುಶಃ ಮಿಸ್ಟರ್ ಬಟ್ಲರರು ಈ ಆರು ಸ್ಥಾನಗಳನ್ನು ಯಾವ ರೀತಿ ತುಂಬಬೇಕೆಂಬುದರ ಬಗ್ಗೆ ನಮಗೆ ತಿಳಿಸಬಲ್ಲರು.

ಶ್ರೀಮತಿ ಎಲ್. ಮುಖರ್ಜಿ: ಅದು ಸಾಧ್ಯವಾಗುವುದಾದರೆ ನಮಗೆ ಯಾವ ರೀತಿಯ ಕೋಮು–ಭೇದವೂ ಬೇಕಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನೀವು ಹೇಳುವುದನ್ನು ನಾನು ಚೆನ್ನಾಗಿ ತಿಳಿದುಕೊಂಡಿರುವೆ. ಕೋಮು ಸಮತೋಲನ ಭಂಗವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಒಂದು ಸ್ಥಾನದ ಮೀಸಲಾತಿಯೊಂದಿಗೆ ಸಂಯುಕ್ತ ಮತದಾರ ಸಮೂಹವನ್ನು ಒಪ್ಪಿಕೊಳ್ಳುವ ಮಟ್ಟಿಗೆ ನಿಮ್ಮ ಆಕ್ಷೇಪಣೆಯನ್ನು ತಗ್ಗಿಸಲು ನೀವು ಸಿದ್ಧರಿರುವಿರಾ ಎಂದು ನಾನು ಕೇಳಬಯಸುತ್ತೇನೆ.

ಮಿಸ್ಟರ್ ಬಟ್ಲರ್: ಇದಕ್ಕೆ ಉತ್ತರ "ಮಹಿಳೆಯರ ವಿಶೇಷ ಸ್ಥಾನಗಳಿಗೆ ಯಾವ ವಿಧದ ಮತ ಕ್ಷೇತ್ರಗಳನ್ನು ಬಳಸಬೇಕೆಂಬುವ ಪ್ರಶ್ನೆ ಇನ್ನು ಪರಿಶೀಲನೆಯಲ್ಲಿದೆ" ಎಂಬ ವಾಕ್ಯಕ್ಕೆ ಡಾ. ಅಂಬೇಡ್ಕರರಿಗೆ ದೊರೆಯುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದಲೇ ಈ ಸ್ಥಾನಗಳನ್ನು ಸಾಮಾನ್ಯ ಮತ ಕ್ಷೇತ್ರಗಳಲ್ಲಿ ಮಹಿಳೆಯರ ಪ್ರತ್ಯೇಕ ಮತದಾರರ ಸಮೂಹದ ಮೂಲಕ ತುಂಬಲಾಗುವುದೇ ಎಂದು ನಾನು ಕೇಳಿದ್ದು. ಅದನ್ನು ಇಲ್ಲಿ ಸ್ಪಷ್ಟಪಡಿಸಿಲ್ಲ. ಅದನ್ನು ಹೇಗೆ ಮಾಡಲಾಗುವುದೆಂಬುದು ನನಗೆ ಗೊತ್ತಿಲ್ಲ. ಏಕೆಂದರೆ, ಸ್ಥಾನಗಳನ್ನು ನಿಗದಿ ಮಾಡಲಾಗಿರುವ ತಖ್ತೆ ಅಥವಾ ಪಟ್ಟಿಯಲ್ಲಿ ಅವುಗಳನ್ನು ಪ್ರತ್ಯೇಕ ವರ್ಗದಲ್ಲಿ

ಕೊಡಲಾಗಿದೆ. "ಸಾಮಾನ್ಯ" ಎಂಬ ವರ್ಗದಡಿಯಲ್ಲಿ ಆರು ಮಹಿಳಾ ಸ್ಥಾನಗಳು, "ಮಹಮದೀಯರು" ಎಂಬುದರ ಕೆಳಗೆ ಒಂದು ಎಂದು ಹೇಳಲಾಗಿದೆ. ಇದರಿಂದ ಮುಸಲ್ಮಾನ ಮಹಿಳೆಯರಿಗಾಗಿ ಮಾತ್ರ ಪ್ರತ್ಯೇಕ ಮತದಾರ ಸಮೂಹವಿರುವುದೆಂಬ ಅಭಿಪ್ರಾಯ ಉಂಟಾಗುವುದು. ಇದರ ಪರಿಣಾಮವಾಗಿ ೨೮ ಪುರುಷರು ಮತ್ತು ಒಬ್ಬ ಮಹಿಳೆ ಇರುವರೆಂದು ಅರ್ಥವಾಗುತ್ತದೆ. ಇದು ನನಗೆ ಅರ್ಥವಾಗಿಲ್ಲ. ಈ ಬಗ್ಗೆ ಹೆಚ್ಚು ಮಾಹಿತಿ ಕೇಳುತ್ತಿದ್ದೇನೆ.

ಅಧ್ಯಕ್ಷ: ನಾವು ಈ ಮಧ್ಯಾಹ್ನವನ್ನು ಸಾಕ್ಷಿಗಳಿಂದ ಮಾಹಿತಿ ಸಂಗ್ರಹ ಮಾಡಲು ವಿನಿಯೋಗಿಸುವುದು ವಿಹಿತವೆಂದು ನನಗನಿಸುತ್ತದೆ. ಈಗ ಆ ವಿಷಯಕ್ಕೆ ಬರುವಿರಾ?

ಶ್ರೀಮತಿ ಪಿ. ಕೆ. ಸೇನ್: ಕೊನೆಯ ಪಕ್ಷ ಅದು ಮಹಿಳೆಯರ ಪ್ರತ್ಯೇಕ ಮತದಾರ ಸಮೂಹವಾಗಿರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಿಮಗೆ ಬಿಟ್ಟಿದ್ದಾದರೆ, ನೀವು ಅವರಿಗೆ ಆರೂ ಸ್ಥಾನಗಳನ್ನು ನೀಡುವಿರಾ ಅಥವಾ ಅದಕ್ಕಿಂತಲೂ ಹೆಚ್ಚೋ?

ಶ್ರೀಮತಿ ಪಿ. ಕೆ. ಸೇನ್: ನಿಜವಾಗಿಯೂ.

ಡಾ. ಬಿ. ಆರ್. ಅಂಬೇಡ್ಕರ್: ಯಾರೂ ಇರದೇ ಹೋಗಬಹುದೆಂಬ ಭಯದಿಂದಲೇ?

ಶ್ರೀಮತಿ ಪಿ. ಕೆ. ಸೇನ್: ಹೌದು.

## (೧೨)

# ಪೂನಾ ಒಪ್ಪಂದದ ಮೇಲೆ ಜಂಟಿ ಸಮಿತಿಯಲ್ಲಿ ಚರ್ಚೆ

* ಸರ್ ಎನ್. ಎನ್. ಸರ್ಕಾರ್: ಸಂಗತಿಗಳನ್ನು ಸಂಕ್ಷೇಪಗೊಳಿಸಬಹುದಾದ ಒಂದು ಹೇಳಿಕೆಯನ್ನು ನಾನು ನೀಡಬಹುದೇ? ಸಮಿತಿಯು ಅನುಮತಿ ನೀಡುವುದಾದರೆ ಕೋಮು ನಿರ್ಣಯದ (Communal Decision) ಮೇಲೆ ಪ್ರಶ್ನೆ ಕೇಳುವ ಹಕ್ಕನ್ನು ನಾನು ಕೇಳಬಯಸುತ್ತೇನೆ. ಆದರೆ, ವಾಸ್ತವಿಕವಾಗಿ ಹಿಂದೂಗಳು ಮತ್ತು ಮುಸಲ್ಮಾನರ ನಡುವಣ ವಿವಾದಕ್ಕೆ ಸಂಬಂಧಿಸಿದಂತೆ ಯಾವ ಪ್ರಶ್ನೆಯನ್ನೂ ಕೇಳುವ ಉದ್ದೇಶ ನನಗಿಲ್ಲ. ಏಕೆಂದರೆ, ಅದು ಸಾಕ್ಷಿಗಳು ಸಾಬೀತುಪಡಿಸಬಹುದಾದ ಯಾವುದೇ ಸಂಗತಿಗಳನ್ನು ಅವಲಂಬಿಸಿಲ್ಲ. ನಾನು ಸಾಕ್ಷಿಗಳನ್ನು ಪೂನಾ ಒಪ್ಪಂದಕ್ಕೆ ಸಂಬಂಧಿಸಿದ ಯಾವುದೇ ಸಂಗತಿಗಳನ್ನು ಗೌರವಾನ್ವಿತರಾದ ತಮಗೆ ನೀಡುವಂತೆ ಕೇಳಬಯಸುವುದಿಲ್ಲ. ಸರ್ ಅನ್ನೇಪು ಪಾತ್ರೋರವರ ಹೇಳಿಕೆಯನ್ನು ಕುರಿತಾಗಿ ಇನ್ನೂ ಎರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನನಗೆ ಅನುಮತಿ ನೀಡಬೇಕು. ಅದು ಗೊಂದಲದಲ್ಲಿ ಸಿಲುಕಿದೆ ಎಂದು ಮುಂತಾಗಿ ಹೇಳಲಾಗಿದೆ ಮತ್ತು ಒಂದು ಪ್ರಾಂತ್ಯದ ಪರಿಣಾಮ ಇನ್ನೊಂದು ಪ್ರಾಂತ್ಯದ ಪರಿಣಾಮಗಳ ನಡುವೆ ಯಾವುದೇ ಸಂಬಂಧವೂ ಇರುವುದಿಲ್ಲ ಎಂದು ಆ ನಿರ್ಣಯವೇ ಸ್ಪಷ್ಟಪಡಿಸುತ್ತದೆ. ಆ ನಿರ್ಣಯವೇ ಹೇಳುವಂತೆ ಒಂದು ಪ್ರಾಂತ್ಯದಲ್ಲಿ ಯಾವುದೇ ಬದಲಾವಣೆಯನ್ನು ಇತರ ಯಾವುದೇ ಪ್ರಾಂತ್ಯದಿಂದ ಸ್ಪಷ್ಟವಾಗಿ ಬೇರೆ ರೀತಿಯಲ್ಲಿ ಮಾಡಬಹುದಾಗಿದೆ. ನನ್ನ ಮಿತ್ರ ಮಿಸ್ಟರ್ ಝಫ್‌ರುಲ್ಲಾ ಖಾನ್‌ರವರ ಹೇಳಿಕೆಯ ಬಗ್ಗೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ; ದುಂಡು ಮೇಜಿನ ಪರಿಷತ್ತಿನಲ್ಲಿ ನಾವು ಅತ್ಯಂತ ಹೆಚ್ಚಿನ ಪ್ರಮಾಣದ ಒಪ್ಪಿಗೆ ಪಡೆಯುವಂತಹವು ಯಾವ ಸಂಗತಿ ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೆವು. ಹಿಂದೂಗಳು ಶೇಕಡಾ ೧೦೦ರಷ್ಟು ಸ್ಥಾನಗಳನ್ನು ಪಡೆಯುವವರೆಗೆ ನಾನು ಅದರಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಲು ನಮಗೆ ಅವಕಾಶವಿತ್ತು. ಆದರೆ ಇಂತಹ ನಿಲುವನ್ನು ತಳೆಯುವುದು ಒಳ್ಳೆಯದಲ್ಲ. ಈ ಸಮಸ್ಯೆಯ ಗುಣಾವಗುಣಗಳನ್ನು ಪರಿಶೀಲಿಸಬೇಕೆಂದು ನಾನು ಈ ಸಮಿತಿಯನ್ನು ಬೇಡುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಒಂದೇ ಒಂದು ಮಾತನ್ನು ಹೇಳಬಹುದೇ?

ನಾನು ಈ ಪದವನ್ನು ಬಳಸಬಹುದಾದರೆ, ಈ ಕಡೆಯ ಕಚ್ಚಾಟವು ಪೂನಾ ಒಪ್ಪಂದಕ್ಕೆ ಸೀಮಿತ ವಾಗಿದೆ ಎಂದು ತಿಳಿದು ಮತ್ತು ಸರ್ ನೃಪೇಂದ್ರ ಸರ್ಕಾರ್‌ರವರು ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ಸ್ಥಾನಗಳನ್ನು ಹಂಚಿಕೊಡುವ ಪ್ರಶ್ನೆಯನ್ನು ಪುನಃ ಎತ್ತುವುದಿಲ್ಲವೆಂದು ತಿಳಿದು ನನಗೆ ಸಂತೋಷ ವೆನಿಸಿದೆ. ಆದರೆ ಚೌಧರಿ ಝಫ್‌ರುಲ್ಲಾ ಖಾನ್‌ರವರು ಮುಸಲ್ಮಾನರ ಮನೋಭಾವನೆಯ ಬಗ್ಗೆ ವ್ಯಕ್ತ ಪಡಿಸಿದ ಭಾವನೆಗಳು ಮತ್ತು ನಾನು ಮೊದಲಿನಿಂದಲೂ– ಎಂದರೆ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸುತ್ತಿರುವಾಗಿನಿಂದಲೂ– ವ್ಯಕ್ತಪಡಿಸಿದ ಭಾವನೆಗಳು ಒಂದೇ ಆಗಿರುತ್ತವೆ. ಮತ್ತು ನಾನೂ

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ II–ಸಿ, ೮೧ನೆಯ ಜುಲೈ ೧೯೩೩, ಪುಟಗಳು ೨೩೫೬–೬೧.

ಪೂನಾ ಒಪ್ಪಂದವು ಒಂದು ಅಂಗೀಕೃತವಾದ ಪ್ರಸ್ತಾಪ ಅಥವಾ ಯೋಜನೆಯಾಗಿದೆ ಎಂಬ ತಿಳುವಳಿಕೆಯ ಮೇಲೆ ಸಮಿತಿಯ ಕಲಾಪಗಳಲ್ಲಿ ಭಾಗವಹಿಸಲು ಒಪ್ಪಿದ್ದೆ. ಸರ್ ನೃಪೇಂದ್ರ ಸರ್ಕಾರ್‌ರವರು ಸಮಿತಿಯ ಮುಂದೆ ವಾಸ್ತವಿಕ ಸಂಗತಿಗಳನ್ನು ಮಂಡಿಸಲು ನಾನು ಆಕ್ಷೇಪಿಸುವುದಿಲ್ಲ. ಏಕೆಂದರೆ, ಏನಾದರೂ ತಪ್ಪುಗಳಿದ್ದರೆ, ಅವುಗಳನ್ನು ಸರಿಪಡಿಸಲು ನನಗೂ ಅವಕಾಶವಿದೆ ಎಂಬುದು ನನಗೆ ಗೊತ್ತಿದೆ. ಆದರೆ, ನನ್ನ ನಿಲುವಿಗೆ ಸಂಬಂಧಿಸಿದಂತೆ ಉದಾಹರಣೆಗಾಗಿ ನಿಮ್ನ ವರ್ಗಗಳವರ ಪ್ರಾತಿನಿಧ್ಯದ ಇಡೀ ಪ್ರಶ್ನೆಯನ್ನು ಪುನಃ ಎತ್ತುವುದಾದರೆ ನನಗೆ ಸಮಿತಿಯ ಕಲಾಪಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದೆಂದೆನಿಸುವುದಿಲ್ಲ.

ಸರ್ ಎನ್. ಎನ್. ಸರ್ಕಾರ್: ಈ ಹಂತದಲ್ಲಿ ನಾನು ಪ್ರಧಾನ ಮಂತ್ರಿಗಳಿಗೆ ಬರೆದಿರುವ ಈ ಪತ್ರವನ್ನು ಮತ್ತು ಸರ್ ರಬೀಂದ್ರನಾಥ್ ಟ್ಯಾಗೋರ್‌ರವರಿಂದ ಬಂದಿರುವ ದಿನಾಂಕ ೨೭ನೆಯ ಜುಲೈ ೧೯೩೩ರ ಒಂದು ತಂತಿ ಸಂದೇಶವನ್ನು ತಮಗೆ ನೀಡಲು ಗೌರವಾನ್ವಿತರಾದ ತಮ್ಮ ಅನುಮತಿ ಬೇಡುತ್ತೇನೆ.

**ಪ್ರಧಾನ ಮಂತ್ರಿಯವರಿಗೆ ಸರ್ ಎನ್.ಎನ್.ಸರ್ಕಾರ್‌ರವರ ಪತ್ರ.**

ಸೇಂಟ್ ಜೇಮ್ಸ್ ಕೋರ್ಟ್,
ಬಕಿಂಗ್ ಹ್ಯಾಮ್ ಗೇಟ್
ಲಂಡನ್, ಎಸ್.ಡಬ್ಲ್ಯೂ.೧,
೧೪ನೆ ಡಿಸೆಂಬರ್ ೧೯೩೨.

**ನನಗೆ ಪ್ರಿಯ ಪ್ರಧಾನಮಂತ್ರಿಯವರೆ,**

ನನ್ನನ್ನು ಕೋರಲಾಗಿರುವಂತೆ ನಾನು ತಮಗೆ ಕೆಲವು ತಂತಿ ಸಂದೇಶಗಳನ್ನು ಕಳುಹಿಸುತ್ತಿದ್ದೇನೆ. ಮೊದಲನೆಯ ತಂತಿ ಸಂದೇಶವು ಬಂಗಾಳದ ವಿಧಾನ ಪರಿಷತ್ತಿನ ೨೫ ಸದಸ್ಯರಿಂದ ಬಂದಿದೆ. ಅದರಲ್ಲಿ ಹೀಗೆ ಹೇಳಲಾಗಿದೆ:

> "ಬಂಗಾಳದ ವಿಧಾನ ಪರಿಷತ್ತಿನ ೨೫ ಸದಸ್ಯರ ಮನವಿ, ನಿಮ್ನ ವರ್ಗಗಳ ಪೂನಾ ಒಪ್ಪಂದವನ್ನು ಬಂಗಾಳದ ಹಿಂದೂಗಳೊಡನೆ ಆಲೋಚನೆ ಮಾಡದೆ ಮಾಡಲಾಗಿದೆ. ಲೋಥಿಯನ್ ಸಮಿತಿ ಅತಿ ಜಾಗರೂಕತೆಯಿಂದ ಪರೀಕ್ಷಿಸಿ ಕಂಡುಕೊಂಡಂತೆ ಭಾರತದ ಇತರ ಭಾಗಗಳಲ್ಲಿರುವಂತೆ ಬಂಗಾಳದಲ್ಲಿ ನಿಮ್ನ ವರ್ಗಗಳ ಸಮಸ್ಯೆ ಇರುವುದಿಲ್ಲ. ಬಂಗಾಳದಲ್ಲಿ ನಿಮ್ನ ವರ್ಗದವರು ರಾಜಕೀಯ ಅನನುಕೂಲತೆಯಿಂದ ಬಳಲುತ್ತಿದ್ದಾರೆ ಎಂದು ಆಪಾದಿಸುತ್ತಿರುವ ಅಂಬೇಡ್ಕರ್ ಮತ್ತು ಇತರರಿಗೆ ಬಂಗಾಳದ ಪರಿಸ್ಥಿತಿಯ ಬಗ್ಗೆ ಪ್ರತ್ಯಕ್ಷ ಜ್ಞಾನವಿರುವುದಿಲ್ಲ. ಪೂನಾ ಒಪ್ಪಂದವು ಬಂಗಾಳದ ಹಿಂದೂ ಸಮಾಜದ ಅಭಿವೃದ್ಧಿಯ ಬುಡವನ್ನೇ ಕತ್ತರಿಸಿ ಹಾಕುವಂತಹ ಕ್ರಾಂತಿಕಾರಿ ಬದಲಾವಣೆಯನ್ನು ಮುಂದೊಡ್ಡುತ್ತದೆ. ಲೋಥಿಯನ್ ಸಮಿತಿಯ ಯೋಜನೆಯು ಬಂಗಾಳದ ಪರಿಸ್ಥಿತಿಗೆ ಸಮರ್ಪಕವಾಗಿದೆಯಾದ್ದರಿಂದ ಬಂಗಾಳಕ್ಕೆ ಸಂಬಂಧಿಸಿದಂತೆ ಪೂನಾ ಒಪ್ಪಂದದಲ್ಲಿ ಮಾರ್ಪಾಡು ಮಾಡುವ ಅವಶ್ಯಕತೆಯನ್ನು ಮನಃಪೂರ್ವಕವಾಗಿ ಆಗ್ರಹಪಡಿಸಿರಿ. ಇದನ್ನು ಪ್ರಧಾನಿಯವರಿಗೆ ತೋರಿಸಿ:

"ಬಿ. ಸಿ. ಚಟರ್ಜಿ, ಎಸ್. ಎಂ. ಬೋಸ್, ಮಹಾರಾಜ ದಿನಾಜ್‌ಪುರ್, ಶ್ಯಾಮಪ್ರಸಾದ್ ಮುಖರ್ಜಿ, ರಾಯ್ ಬಹದೂರ್ ಕಾಮಿನಿಕುಮಾರ್ ದಾಸ್, ಸತ್ಯೇಂದ್ರ ಕುಮಾರ್ ದಾಸ್, ಕೇಶಬ್‌ಚಂದ್ರ ಬ್ಯಾನರ್ಜಿ, ಹರಿದನ್ ದತ್, ಸತೀಶ್ ಚಂದ್ರ ಮುಖರ್ಜಿ, ಶರತ್‌ಚಂದ್ರ ಮಿತ್ರ, ಆನಂದ ಮೋಹನ್ ಪೋದ್ದಾರ್, ಸತೀಶ್ ಚಂದ್ರ, ರಾಯ್ ಚೌಧುರಿ, ಹನುಮಾನ್ ಪ್ರಸಾದ್ ಪೋದ್ದಾರ್, ಕಿಶೋರಿ ಮೋಹನ್ ಚೌಧುರಿ, ಸತ್ಯಕಿಂಕರ್ ಸಹಾನಾ, ಖೇತ್ರಮೋಹನ್‌ರಾಯ್, ದೇಬ್ರಾಯ್ ಮೋಹಾಶಿ, ಶಾಂತಿಶೇಖರ್ ರಾಯ್, ಶರತ್‌ಕುಮಾರ್ ರಾಯ್, ಪಿ.ಬ್ಯಾನರ್ಜಿ, ಸುರೇಂದ್ರನಾಥ ಲಾ, ಶೈಲೇಶ್ವರಸಿಂಗ್ ರಾಯ್."

೨. ನಾನು ಈ ತಂತಿ ಸಂದೇಶವನ್ನು ಡಾ. ಅಂಬೇಡ್ಕರ್‌ರವರಿಗೆ ತೋರಿಸಿದೆ. ಅವರಿಗೂ ಸಹ ಒಂದು ತಂತಿ ಸಂದೇಶ ಬಂದಿದ್ದು, ಅದರ ಒಕ್ಕಣಿಕೆ ಈ ರೀತಿ ಇದೆ:

"ಬಂಗಾಳದ ಬಗ್ಗೆ, ಬಂಗಾಳಕ್ಕೆ ಸಂಬಂಧಿಸಿದಂತೆ ಪೂನಾ ಒಪ್ಪಂದವನ್ನು ಪರಿಷ್ಕರಿಸಬೇಕೆಂದು ಹಿಂದೂ ಮಿತ್ರರು ಈಗಾಗಲೇ ತಂತಿ ಸಂದೇಶ ಕಳುಹಿಸಿದ್ದಾರೆ. ಅವರು ಎರಡು ತಪ್ಪುಗಳನ್ನು ಮಾಡಿದ್ದಾರೆ. ಒಂದು ಲೋಥಿಯನ್ ಸಮಿತಿಗೆ ನಿಮ್ಮ ವರ್ಗಗಳ ಪಟ್ಟಿಯನ್ನು ಸಲ್ಲಿಸಲಾರದೇ ಹೋದುದು ಮತ್ತು ಎರಡನೆಯದು ಮುಂಬಯಿಯ ಸೆಪ್ಟೆಂಬರ್ ಸಮ್ಮೇಳನಕ್ಕೆ ಆಹ್ವಾನಿಸಿದಾಗ ಯಾರೂ ಪ್ರತಿಕ್ರಿಯೆ ತೋರದೇ ಹೋದುದು. ಈಗ ಅವರು ಹುಸಿ ಭಯ ವ್ಯಕ್ತಪಡಿಸುತ್ತಿರುವು ದಲ್ಲದೆ, ನಾಮಶೂದ್ರರು ಎಲ್ಲಾ ಸ್ಥಾನಗಳನ್ನು ಪಡೆದುಕೊಳ್ಳುವರೆಂಬ ಸಮರ್ಥನೀಯವಲ್ಲದ ಭಯ ಹೊಂದಿರುತ್ತಾರೆ. ಇದೂ ಅಲ್ಲದೇ ಬಂಗಾಳ ಸರಕಾರದ ಪ್ರಕಾರ ಮತ್ತು ಲೋಥಿಯನ್ ಸಮಿತಿಯ ಸಂಪುಟ(II)ದಲ್ಲಿ ಹೇಳಿರುವಂತೆ ನಿಮ್ಮ ವರ್ಗಗಳ ಜನಸಂಖ್ಯೆ ೧೦೩ ಲಕ್ಷವಿದೆ. ಆದರೆ, ಸ್ಥಾನಗಳ ಲೆಕ್ಕಾಚಾರಕ್ಕಾಗಿ ಲೋಥಿಯನ್ ಪ್ರಕಾರ ನಾವು ೭೫ ಲಕ್ಷ ಎಂದು ಇಟ್ಟುಕೊಂಡಿ ದ್ದೇವೆ. ಪೂನಾ ಒಪ್ಪಂದ ಲೋಥಿಯನ್ ಶಿಫಾರಸನ್ನೇ ಸಂಪೂರ್ಣ ಅನುಸರಿಸಿದೆ. ಲೋಥಿಯನ್ ಸಂಪುಟ IIರಲ್ಲಿ ಮಲ್ಲಿಕ್‌ರವರ ಟಿಪ್ಪಣಿ ನೋಡಿ. ಕಲ್ಕತ್ತಾದಲ್ಲಿ ಠಕ್ಕರ್‌ರವರು ಪೂನಾ ಒಪ್ಪಂದಕ್ಕೆ ಹಿಂದೂಗಳ ಅಭಿಪ್ರಾಯ ಸಾಮಾನ್ಯವಾಗಿ ಅದರ ಪರವಾಗಿದೆ ಎಂದು ಕಂಡುಕೊಂಡಿ ದ್ದಾರೆ. ಆದ್ದರಿಂದ ಮಂತ್ರಿಮಂಡಳಿಯಿಂದ ಒಪ್ಪಿಗೆ ಪಡೆದಿರುವ ಒಪ್ಪಂದವನ್ನು ಪರಿಷ್ಕರಿಸಲು ಬರುವುದಿಲ್ಲ."

**–ಬಿರ್ಲಾ ಮತ್ತು ಠಕ್ಕರ್.**

೩. ನನಗೆ ಇನ್ನೂ ಮೂರು ತಂತಿ ಸಂದೇಶಗಳು ಬಂದಿವೆ. ಅವು ಹೀಗಿವೆ:

"ಅಂಬೇಡ್ಕರ್‌ರವರಿಗೆ ಬಿರ್ಲಾರವರ ಕಡಲ ತಂತಿ ಸಂದೇಶ. ಬಿರ್ಲಾರವರಿಗೆ ಬಂಗಾಳದ ಪರಿಸ್ಥಿತಿಯ ಬಗ್ಗೆ ಎಳ್ಳಷ್ಟೂ ಪರಿಚಯವಿಲ್ಲ ಮತ್ತು ಅಲ್ಲಿ ಅವರಿಗೆ ಯಾವ ಪ್ರಾತಿನಿಧಿಕ ಸ್ಥಾನವೂ ಇಲ್ಲ. ಪೂನಾ ಒಪ್ಪಂದದಲ್ಲಿ ಮದರಾಸಿಗೆ ನೀಡಲಾದ ಸ್ಥಾನಗಳಿಗೆ ಸರಿಸಮನಾಗಿ ನಿಮ್ಮ ವರ್ಗದವರಿಗೆ ಬಂಗಾಳದಲ್ಲಿ ೩೦ ಸ್ಥಾನಗಳನ್ನು ನೀಡಿರುವುದು ಸಮರ್ಥನೀಯವಲ್ಲ. ಬಂಗಾಳದಲ್ಲಿ

ನಿಮ್ನ ವರ್ಗಗಳ ಪ್ರಶ್ನೆ ಬೇರೆ ಪ್ರಾಂತ್ಯಗಳಲ್ಲಿರುವ ಹಾಗೆ ತೀಕ್ಷ್ಣವಾಗಿಲ್ಲ. ಅದು ಬೇರೆ ಪ್ರಾಂತ್ಯಗಳಿಗೆ ಹೋಲಿಸಿದರೆ ಭಿನ್ನವಾಗಿದೆ. ಈ ಪ್ರಶ್ನೆಯ ಮೇಲೆ ಪ್ರಧಾನಿಯವರ ತೀರ್ಪು ಬಂಗಾಳ ಒಪ್ಪಬಹುದಾದ ಅತ್ಯಂತ ಗರಿಷ್ಠ ತೀರ್ಪಾಗಿದೆ."

"ಸತೀಶಚಂದ್ರಸೇನ್, ಬಿಜಯಕುಮಾರ್ ಬಸು, ಸತ್ಯೇಂದ್ರಚಂದ್ರ ಮಿತ್ರಾ, ಸತ್ಯಚರಣ್ ಮುಖರ್ಜಿ, ಸತ್ಯೇಂದ್ರ ನಾಥ್ ಸೇನ್, ಜಗದೀಶ್ ಚಂದ್ರ ಬ್ಯಾನರ್ಜಿ, ನಾಬಾಕುಮಾರ್ ಸಿಂಗ್ ದುಧೋರಿಯ, ಕೇಂದ್ರ ಶಾಸಕಾಂಗದಲ್ಲಿ ಹಾಜರಿರುವ ಬಂಗಾಳದ ಮುಸಲ್ಮಾನೇತರ ಪ್ರತಿನಿಧಿಗಳು."

**–ಅಮರ್‌ನಾಥ್ ದತ್ತ**

"ಈ ಹಿಂದೆ ತಂತಿ ಸಂದೇಶ ಕಳುಹಿಸಿದ ಬಂಗಾಳದ ಎಂ.ಎಲ್.ಸಿ.ಗಳು ಬಿರ್ಲಾ ಮತ್ತು ಠಕ್ಕರ್‌ರವರು ತಪ್ಪು ಮನವಿಯ ತಂತಿ ಸಂದೇಶ ಕಳುಹಿಸಿದ್ದಾರೆ ಎಂದು ಹೇಳುತ್ತಾರೆ. ಪೂನಾ ಒಪ್ಪಂದವನ್ನು ಮಾಡಿಕೊಂಡ ಸಮ್ಮೇಳನಕ್ಕೆ ಬಂಗಾಳದ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿರಲಿಲ್ಲ. ಲೋಥಿಯನ್ ಸಮಿತಿಯು ಬಂಗಾಳದಲ್ಲಿ ಯಾವ ಜಾತಿಗಳು ಅಸ್ಪೃಶ್ಯ ಮತ್ತು ಸಮೀಪವೇ ಇರುವುದಾಗಿದೆ ಎಂಬುದರ ಬಗ್ಗೆ ವಿಚಾರಣೆ ಮಾಡಿತ್ತು. ಹಿಂದೂ ಮತ್ತು ಮಹಮದೀಯರಿಂದ ಕೂಡಿದ ಪ್ರಾಂತೀಯ ಮತದಾನ ಹಕ್ಕು ಸಮಿತಿ ಸರಿಯಾದ ಉತ್ತರ ನೀಡಿದೆ. ವರದಿಯ ೨ನೆಯ ಸಂಪುಟ, ಮಲ್ಲಿಕ್‌ರವರ ಟಿಪ್ಪಣಿಯನ್ನು ಸಮಿತಿಯ ಮುಂದೆ ಇಡಲಾಗಿಲ್ಲ. ಅದನ್ನು ಗುಟ್ಟಾಗಿ ಸಿದ್ಧಗೊಳಿಸಲಾಗಿದೆ. ಮಲ್ಲಿಕ್‌ರವರು ಮಾಡಿದ ಬಂಗಾಳದ ನಿಮ್ನರ ವರ್ಗೀಕರಣ ಬೇರೆ ಪ್ರಾಂತ್ಯಗಳಲ್ಲಿ ಸುಬರ್ಣೋಬಣಿಕರು ಸಹಾನ್ ಮಹಿಷ್ಯಾರು ಸೇರಿದಂತೆ ಮಾಡಲಾಗಿರುವ ವರ್ಗೀಕರಣದಂತೆ ಇವರು ನಿಮ್ನ ವರ್ಗಕ್ಕಿಂತ ಭಿನ್ನವಾಗಿದ್ದಾರೆ. ಹಾಗೂ ಇಂಗ್ಲೆಂಡಿನಿಂದ ವಾಪಸಾದ ಭಾರತೀಯರು, ಬ್ರಾಹ್ಮೋ ಸಮಾಜದ ಜನ, ಬೈದ್ಯರು, ಕಾಯಸ್ತರನ್ನೂ ಕೂಡ ಬ್ರಾಹ್ಮಣರಿಂದ ವಿಭಿನ್ನವೆಂದು ಪರಿಗಣಿಸಲಾಗಿದೆ. ಬಂಗಾಳದ ಸಾರ್ವಜನಿಕ ಜೀವನ ಜಾತಿ ಭಾವನೆಗಳಿಂದ ಮುಕ್ತವಾಗಿದೆ. ೧೯೨೩ರಲ್ಲಿ ಉಚ್ಚ ಜಾತಿಯ ಸವರ್ಣ ಹಿಂದೂಗಳು ಮಾದರಿಪುರದಲ್ಲಿ ಚಟರ್ಜಿಯವರ ವಿರುದ್ಧ ಒಬ್ಬ ನಾಮಶೂದ್ರನನ್ನು ಚುನಾಯಿಸಿದ್ದರು. ದೇಶಬಂಧು ರವರು ಬ್ರಾಹ್ಮಣರ ಮಗಳನ್ನು ಮದುವೆಯಾಗುವುದರಲ್ಲಿ ಸಂಪ್ರದಾಯ ಬದ್ಧತೆಯನ್ನು ಕಡೆಗಣಿಸಿದ ರಾದರೂ ಅವರ ಅನುಯಾಯಿಗಳಲ್ಲಿ ಉಚ್ಚ ಜಾತಿಯ ಜನರಿದ್ದರು. ಹದಿನಾಲ್ಕನೆಯ ಜುಲೈನ ಕಲ್ಕತ್ತಾ ಗೆಜೆಟ್‌ನಲ್ಲಿ ಮಾಡಲಾದ ನಾಮಶೂದ್ರರ ವಿತರಣೆಯ ಪ್ರಕಾರ ಅವರಿಗೆ ೨೦ ಮೀಸಲು ಸ್ಥಾನಗಳ ಖಾತ್ರಿ ನೀಡಿದೆ. ಭವಿಷ್ಯದ ಬಗ್ಗೆ ನಾಮಶೂದ್ರೇತರರು ಗಾಬರಿಯಾಗಿದ್ದಾರೆ. ನಾಮಶೂದ್ರರು, ರಾಜಬನ್ಸಿಗಳು ಇತರ ನಿಮ್ನ ಜಾತಿಗಳವರನ್ನು ಸಾಮಾಜಿಕ ಸಂಪರ್ಕದಿಂದ ಕಠೋರವಾಗಿ ದೂರವಿರಿಸುತ್ತಾರೆಯಾದ್ದರಿಂದ ಅವರ ಉದ್ಧಾರಕ್ಕಾಗಿ ಅನೇಕ ತಲೆಮಾರುಗಳಿಂದ ಶ್ರಮಿಸುತ್ತಿರುವ ಉಚ್ಚ ಜಾತಿಯ ಜನರಿಗಿಂತ ಹೆಚ್ಚಾಗಿ ಅವರನ್ನು ಪ್ರತಿನಿಧಿಸುವ ಹಕ್ಕು ನಾಮಶೂದ್ರರಿಗಿರುವುದಿಲ್ಲ. ಪೂನಾ ಒಪ್ಪಂದವು ಎಂದೂ ಇರದ ಹಿಂದೂ ಬಂಗಾಳದ ವಿಭಜನೆಗೆ ಅವಕಾಶಮಾಡುತ್ತದೆ. ಪ್ರಧಾನಿಯವರಿಗೆ ತೋರಿಸಿ."

**–ಚಟರ್ಜಿ ಮತ್ತು ಇತರರು.**

೪. ನಾನು ಕಳೆದ ಆಗಸ್ಟ್‌ನಲ್ಲಿ ಭಾರತ ಬಿಟ್ಟೆ, ಪೂನಾ ಒಪ್ಪಂದದ ಬಗ್ಗೆ ನನಗೆ ಸ್ವಂತ ಮಾಹಿತಿ ಇಲ್ಲ.

೫. ನಿಮ್ಮ "ಕೋಮುವಾರು ನಿರ್ಣಯ"ದಲ್ಲಿ ಹೀಗೆ ಹೇಳಲಾಗಿದೆ. "ಮಹಾಪ್ರಭುಗಳ ಸರಕಾರವು ಅತ್ಯಂತ ಸ್ಪಷ್ಟವಾಗಿ ತಿಳಿಯಪಡಿಸುವುದೇನೆಂದರೆ ಅವರು ಈ ನಿರ್ಣಯವನ್ನು ಪರಿಷ್ಕರಿಸುವ ಯಾವುದೇ ಸಂಧಾನದಲ್ಲಿ ಅದು ಭಾಗವಹಿಸಲಾರದು ಮತ್ತು ಅದರಲ್ಲಿ ಮಾರ್ಪಾಡು ಮಾಡಲು ಸಂಬಂಧಪಟ್ಟ ಎಲ್ಲಾ ವರ್ಗಗಳವರ ಬೆಂಬಲವಿಲ್ಲದೆ ಸಲ್ಲಿಸಬಹುದಾದ ಯಾವುದೇ ಮನವಿಯನ್ನು ಪರಿಗಣಿಸಲು ಅದು ಸಿದ್ಧವಿಲ್ಲ."

೬. ನಿಮ್ಮ ಈ ನಿರ್ಣಯದ ಪ್ರಕಾರ ಹಿಂದೂಗಳಿಗೆ (ನಿಮ್ಮ ವರ್ಗದವರೆಂದು ಕರೆಯಲಾದ ಎಲ್ಲರೂ ಸೇರಿದಂತೆ) ೮೦ ಸ್ಥಾನಗಳನ್ನು ನೀಡಲಾಗಿದೆ. ಆದರೆ, ಮಹಮದೀಯರಿಗೆ ೧೧೯ ಸ್ಥಾನಗಳು, ಎಂದರೆ ಅವರಿಗೆ ಹಿಂದೂಗಳಿಗಿಂತ ಶೇಕಡಾ ೫೦ರಷ್ಟು ಹೆಚ್ಚು ಸ್ಥಾನಗಳು ದೊರೆಯುತ್ತವೆ. ಯೂರೋಪಿಯನ್ ಹಿತಾಸಕ್ತಿಗಳಿಗೆ ೨೫ ಸ್ಥಾನಗಳು, ಎಂದರೆ ಒಟ್ಟು ಸ್ಥಾನಗಳು ಶೇಕಡಾ ೧೦ರಷ್ಟು ದೊರೆಯುತ್ತವೆ. ಅವರು ಒಟ್ಟು ಜನಸಂಖ್ಯೆಯ ಶೇಕಡಾ ಒಂದಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿದ್ದಾರೆ. ಯುರೋಪಿಯನ್ನರ ವಿಷಯದಲ್ಲಿ ಅಂತಸ್ತು, ಪ್ರಭಾವ, ಶಿಕ್ಷಣ ಮುಂತಾದವುಗಳನ್ನು ನ್ಯಾಯಸಮ್ಮತವಾಗಿ ಪರಿಗಣಿಸಿರುವುದು ಸ್ಪಷ್ಟವೇ ಇದೆ. ಆದರೆ, ಹಿಂದೂಗಳು ಮತ್ತು ಮಹಮದೀಯರ ವಿಷಯದಲ್ಲಿ ಸಂಖ್ಯೆಯನ್ನು ಪರಿಗಣಿಸಲಾಗಿದೆ. ೨೧ ವರ್ಷ ವಯಸ್ಸಿಗಿಂತ ಕಡಿಮೆ ಇರುವ ಚಿಕ್ಕವರನ್ನೂ ಸೇರಿಕೊಂಡಂತೆ ಮಹಮದೀಯರ ಸಂಖ್ಯೆ ಶೇಕಡಾ ೫೪ರಷ್ಟಾಗುತ್ತದೆ ಎಂದು ವಾದಿಸಲಾಗಿದೆ. ಆದರೆ, ವಯಸ್ಕರನ್ನು ಮಾತ್ರ ಎಣಿಸಿದರೆ, ಅವರಿಗೆ ಬಹುಮತವಿದೆ ಎಂದು ವಾದಿಸಿದರೂ ಅದು ಗಣನೀಯವಾಗುವುದಿಲ್ಲ."

೭. ಮಹಮದೀಯರು ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೫೪ರಷ್ಟಿದ್ದಾರೆ ಎಂದು ಒಪ್ಪಿಕೊಂಡರೂ, ಅವರಿಗೆ ಹಿಂದೂಗಳಿಗಿಂತ ಶೇಕಡಾ ೫೦ರಷ್ಟು ಹೆಚ್ಚು ಸ್ಥಾನ ಕೊಡುವುದೆಂದರೆ ಅವರಿಗೆ ವಿಶೇಷ ಸ್ಥಾನಗಳನ್ನು ರಚಿಸುವುದೆಂದೇ ಅರ್ಥ. ೫೧ರಷ್ಟು ಎಂದರೆ ಅದು ಹಿಂದೂಗಳಿಗೆ ನೀಡಿರುವ ಸ್ಥಾನಗಳಿಗಿಂತ ಅಸಮ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದೇ ಹೇಳಬೇಕಾಗುತ್ತದೆ.

೮. ಯೂರೋಪಿಯನರಿಗೆ ೨೫, ಆಂಗ್ಲೋ–ಇಂಡಿಯನ್‌ರಿಗೆ ೪, ಕಾರ್ಮಿಕರಿಗೆ ೮ ಸ್ಥಾನಗಳಿಂದ ಕೂಡಿದ ವಿಶೇಷ ಸ್ಥಾನಗಳ ಸ್ವರೂಪವನ್ನು ನೋಡಿದರೆ ಹಿಂದೂಗಳು ಈ ಒಟ್ಟು ಸ್ಥಾನಗಳ ಮೇಲೆ ಸರಿಯಾದ ಪಾಲನ್ನು ಕಾಯ್ದುಕೊಳ್ಳುವುದು ಸಾಧ್ಯ ಎಂದೆನಿಸುವುದಿಲ್ಲ.

೯. ನಿಮ್ಮ ನಿರ್ಣಯದ ಒಕ್ಕಣಿಕೆಯನ್ನು ನೋಡಿದರೆ, ನಮ್ಮ ವಾದ ಎಷ್ಟೇ ಸತ್ವಯುತವಾಗಿದ್ದರೂ ಅದನ್ನು ನೀವು ಆಲಿಸಲಾರಿರಿ ಎಂಬುದನ್ನು ನಾನು ಸಂಪೂರ್ಣವಾಗಿ ಅರಿತಿದ್ದೇನೆ. ಆದರೆ ಎಷ್ಟೇ ಸದುದ್ದೇಶದಿಂದ ಕೂಡಿದ್ದರೂ ನಿಮ್ಮ ನಿರ್ಣಯ ಹಿಂದೂಗಳ ಬಗ್ಗೆ ಅತ್ಯಂತ ಅನ್ಯಾಯಯುತವಾಗಿದೆ. ಆದ ಕಾರಣವೇ ಬಂಗಾಳದ ನಿಮ್ಮ ವರ್ಗಗಳನ್ನುಳಿದ ಇತರ ಹಿಂದೂಗಳು ನಿಮ್ಮ ನಿರ್ಣಯದಿಂದ ಅವರಿಗೆ ನೀಡಲಾಗಿರುವುದನ್ನು ಹತ್ತಿಕ್ಕುವುದಕ್ಕೆ ಆಕ್ಷೇಪಿಸುತ್ತಿದ್ದಾರೆ. ವಾದಕ್ಕಾಗಿ, ಒಂದು ಕೋಮು ತನ್ನ ಪಾಲಿಗಿಂತಲೂ ಹೆಚ್ಚೆನಿಸಿದ ಶೇಕಡಾ ೫೦ರಷ್ಟು ಸ್ಥಾನಗಳನ್ನು ಪಡೆದುಕೊಳ್ಳುವುದೆಂದು ಇಟ್ಟುಕೊಂಡರೂ ಅದು ತಾನು ಅಸಮರ್ಥನೀಯವಾಗಿ ಪಡೆದುಕೊಂಡ ಲಾಭವನ್ನು ಭಾವನಾತ್ಮಕವಾದ ನ್ಯಾಯದ ಪರಿಗಣನೆಯಿಂದ ಬಿಟ್ಟುಕೊಡುವುದೆಂದು ನಿರೀಕ್ಷಿಸುವುದು ವ್ಯರ್ಥವೆನಿಸುವುದು.

೧೦. ಇದರಲ್ಲಡಗಿರುವ ವಿಷಯವು ಕೇವಲ ವಾಸ್ತವಿಕ ಸಂಗತಿಯ ಪ್ರಶ್ನೆಗೆ ಸಂಬಂಧಿಸಿರುವುದಾಗಿದೆ, ಎಂದರೆ ಈಗ ದೂರುತ್ತಿರುವ ಜನ ನಿಮ್ಮ ನಿರ್ಣಯದ ಮಾರ್ಪಾಟಿಗೆ ಅಥವಾ ಬದಲಾವಣೆಗೆ ಒಪ್ಪಿದ್ದಾರೆಯೇ? ಆಪಾದಿಸಲಾದಂತೆ ತಪ್ಪೆಸಗಿದಂತಾಗಿದೆ ಅಥವಾ ಅಸಡ್ಡೆಯಿಂದಾಗಿ ಒಪ್ಪಿಗೆ ನೀಡಿದಂತಾಗಿದೆ ಎಂದು ಒತ್ತಿ ಹೇಳುವ ವಾದದಲ್ಲಿ ಯಾವ ಸತ್ವವೂ ಇಲ್ಲ ಎಂದು ನಾನು ನಿವೇದಿಸಬಯಸುತ್ತೇನೆ. ಅದೇನೇ ಇರಲಿ, ಬಂಗಾಳದ ನಿಮ್ನ ವರ್ಗೇತರ ಹಿಂದೂಗಳು ಅಸಡ್ಡೆಯ ಮೂಲಕ ನಿಮ್ಮ ತೀರ್ಪನ್ನು ಮಾರ್ಪಡಿಸಲು ಒಪ್ಪದಂತಾಗಿದೆ ಎಂಬ ತೀರ್ಮಾನಕ್ಕೆ ಬರುವಂತಹ ಯಾವುದೇ ಅಸಡ್ಡೆ ಸಂಭವಿಸಿತ್ತೇ ಎಂಬುದನ್ನು ನಿರ್ಣಯಿಸಬೇಕಾಗಿದೆ.

೧೧. ಕೇವಲ ಬಿರ್ಲಾ ಮತ್ತು ಠಕ್ಕರ್‌ರವರು ತಮ್ಮ ತಂತಿ ಸಂದೇಶದಲ್ಲಿ ನಿವೇದಿಸಿರುವ ವಿವಾದಾಸ್ಪದ ಸಂಗತಿಗಳ ಆಧಾರದ ಮೇಲೆಯೇ ಪರಿಶೀಲಿಸಲಾಗದಷ್ಟು ಈ ಸಮಸ್ಯೆ ಗಂಭೀರವಾಗಿದೆ ಎಂದು ನಾನು ನಿವೇದಿಸಬಯಸುತ್ತೇನೆ. ಈ ಸಂಗತಿಗಳು ಮೂಲಭೂತವಾಗಿ ಸರಿಯಾಗಿವೆ ಎಂದು ಅಂದುಕೊಂಡರೂ ಇವುಗಳಿಂದ ಯಾವ ಒಪ್ಪಂದವೂ ಆಗುವುದು ಸಾಧ್ಯವಿಲ್ಲ.

೧೨. ನೊಂದ ಜನರ ಹಿತಾಸಕ್ತಿಯ ದೃಷ್ಟಿಯಿಂದ ಬಂಗಾಳದ ನಿಮ್ನವರ್ಗೇತರರು ಪೂನಾ ಒಪ್ಪಂದದ ಪರವಾಗಿದ್ದಾರೆಯೇ ಅಥವಾ ಅದಕ್ಕೆ ಅವರು ಬದ್ಧರಾಗಿದ್ದಾರೆಯೇ ಎಂಬ ವಿಷಯವಾಗಿ ಭಾರತ ಸರಕಾರ ಅಥವಾ ಬಂಗಾಳ ಸರಕಾರ ಅಥವಾ ಇನ್ನಾವುದೇ ಜವಾಬ್ದಾರಿ ಹಾಗೂ ತಟಸ್ಥ ಸಂಸ್ಥೆಯ ಮೂಲಕ ವಿಚಾರಿಸುವಂತಾಗಬೇಕು. ಯಾರು ವಿಚಾರಣೆ ಮಾಡಬೇಕೆಂಬುದು ವಿವರಗಳಿಗೆ ಸಂಬಂಧಿಸಿದ ವಿಷಯವಾಗಿದೆ.

ನಾನು ಈ ಪತ್ರದ ಪ್ರತಿಯನ್ನು ಮಾಹಿತಿಗಾಗಿ ಡಾ. ಅಂಬೇಡ್ಕರ್‌ರವರಿಗೆ ಕಳುಹಿಸಿಕೊಡುತ್ತಿದ್ದೇನೆ. ನಾನು ಈ ಕೂಡಲೆ ಲಂಡನ್ನಿನಿಂದ ಹೊರಡಬೇಕಾಗಿರುವುದರಿಂದ ನನ್ನ ಈ ಮನವಿ ತಲುಪಿರುವುದಕ್ಕಾಗಲೀ ಅಥವಾ ಉತ್ತರವನ್ನಾಗಲೀ, ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಲು ದಯವಿಟ್ಟು ಆದೇಶ ನೀಡಬೇಕೆಂದು ಕೋರುತ್ತೇನೆ:

**ಶ್ರೀ ನರೇಂದ್ರ ಕುಮಾರ್ ಬಸು, ಎಂ.ಎಲ್.ಸಿ.,**
**ಬಾರ್ ಅಸೋಸಿಯೇಷನ್, ಹೈಕೋರ್ಟ್,**
**ಕಲಕತ್ತಾ.**

**ತಮ್ಮ ವಿಶ್ವಾಸಿ,**
**(ಸಹಿ) ಎನ್. ಎನ್. ಸರ್ಕಾರ್,**
**ಸದಸ್ಯ,**
**ಭಾರತೀಯ ದುಂಡು ಮೇಜು ಪರಿಷತ್ತು.**

## ಸರ್ ರಬೀಂದ್ರನಾಥ್‌ರವರ ಕೇಬಲ್ (ಕಡಲ ತಂತಿ) ಸಂದೇಶ

ದಿನಾಂಕ ೨೭ ಜುಲೈ ೧೯೩೩.

**ಸರ್ ಎನ್. ಎನ್. ಸರ್ಕಾರ್‌ರವರಿಗೆ–**

ಕೋಮು ತೀರ್ಪಿನ ಬಗ್ಗೆ ಮಹಾತ್ಮಾಜಿಯವರು ಕಳುಹಿಸಿರುವ ಸೂಚನೆಗಳನ್ನು ಒಪ್ಪಿಕೊಳ್ಳುವಲ್ಲಿ ವಿಳಂಬಮಾಡಬಾರದೆಂದು ಕೋರಿ ನಾನು ಪ್ರಧಾನಮಂತ್ರಿಯವರಿಗೆ ಒಂದು ಕಡಲ ತಂತಿ ಸಂದೇಶವನ್ನು ಕಳುಹಿಸಿರುವುದಾಗಿ ನನಗೆ ನೆನಪಿದೆ. ಸದ್ಯದಲ್ಲಿ ನಾನು ತಲುಪುವುದಕ್ಕಿಂತ ಮುಂಚೆ ಮಾಡಿಕೊಳ್ಳಲಾದ ಪೂನಾ ಒಪ್ಪಂದದ ಪರಿಣಾಮಗಳ ಬಗ್ಗೆ ಶಾಂತಿಯಿಂದ ವಿಚಾರ ಮಾಡಲಾಗದಂತಹ ಅತ್ಯಂತ ತಾಪದಾಯಕ ಪರಿಸ್ಥಿತಿ ನಿರ್ಮಿತವಾಗಿದ್ದು ನಮಗೆ ಕನಿಷ್ಠ ಸಮಯಾವಕಾಶ ಅಥವಾ ಮನಶ್ಶಾಂತಿಯು ದೊರಕದಾಗಿದೆ. ಇದಕ್ಕೂ ಮುಂಚೆಯೇ ಸಪ್ರೂ ಮತ್ತು ಜಯಕರ್‌ರವರು ಬಂಗಾಳದಿಂದ ಒಬ್ಬನೂ ಜವಾಬ್ದಾರಿಯುತ ಪ್ರತಿನಿಧಿ ಇಲ್ಲದಿದ್ದ ಸದಸ್ಯರುಗಳೊಂದಿಗೆ ಹೊರಟುಹೋಗಿದ್ದರು. ಈ ಸಮಸ್ಯೆಯ ತ್ವರಿತ ತೀರ್ಮಾನದ ಮೇಲೆ ಮಹಾತ್ಮಾಜಿಯವರ ಜೀವ ಅವಲಂಬಿಸಿದ್ದುದರಿಂದಾಗಿ ಮತ್ತು ಈ ಗಂಡಾಂತರದಿಂದ ಉಂಟಾದ ಅಸಹನೀಯ ಕಾತರತೆಯ ಕಾರಣ ದುಡುಕಿನಿಂದ ನಾನು ಒಂದು ಕಟ್ಟುಪಾಡಿಗೆ ಸಿಗುವಂತಾಯಿತು. ಅದು ನಮ್ಮ ದೇಶದ ಶಾಶ್ವತ ಹಿತಾಸಕ್ತಿಗೆ ಮಾರಕವಾಗುವುದೆಂದು ಈಗ ನನಗೆ ಅರಿವಾಗಿದೆ. ರಾಜಕೀಯ ವ್ಯವಹಾರಗಳಲ್ಲಿ ನನಗೆ ಯಾವ ಅನುಭವವೂ ಇಲ್ಲದ್ದರಿಂದ ಮತ್ತು ಮಹಾತ್ಮಾಜಿಯವರ ಬಗ್ಗೆ ನನಗಿರುವ ಅತಿ ಹೆಚ್ಚಿನ ಪ್ರೀತಿಯಿಂದ ಹಾಗೂ ಭಾರತೀಯ ರಾಜ ಕೀಯದ ಬಗ್ಗೆ ಅವರಲ್ಲಿರುವ ಬುದ್ಧಿಮತ್ತೆಯಲ್ಲಿ ನನಗೆ ಅಪಾರ ವಿಶ್ವಾಸವಿರುವುದರ ಕಾರಣ ಬಂಗಾಳಕ್ಕೆ ನ್ಯಾಯ ದೊರಕಿದೆಯೇ, ಇಲ್ಲವೇ ಎಂದು ಸಾವಧಾನವಾಗಿ ವಿಚಾರಿಸುವುದೂ ನನಗೆ ಸಾಧ್ಯವಾಗಲಿಲ್ಲ. ಇಂತಹ ಅನ್ಯಾಯದಿಂದ ನಮ್ಮ ಪ್ರಾಂತ್ಯದಲ್ಲಿ ಶಾಂತಿಯುತ ಸರಕಾರಕ್ಕೆ ಸದಾಕಾಲ ಅಸಹನೀಯನ್ನಾಗಿಸುವಂತಹ ತೀವ್ರವಾದ ಕೋಮು ಭಾವನೆಯನ್ನು ಸದಾ ಜೀವಂತವಾಗಿಡುವ ಮೂಲಕ ಸಂಬಂಧಪಟ್ಟ ಎಲ್ಲರಿಗೂ ಕಷ್ಟದಾಯಕವಾಗುವುದೆಂಬುದರಲ್ಲಿ ಈಗ ನನಗೆ ಎಳ್ಳಷ್ಟೂ ಸಂಶಯವಿಲ್ಲ.

**–ರಬೀಂದ್ರನಾಥ್ ಟಾಗೋರ್.**

## ಪ್ರಧಾನಮಂತ್ರಿಯವರಿಗೆ ಅಡಕಗಳೊಂದಿಗೆ ಡಾ. ಅಂಬೇಡ್ಕರ್‌ರವರ ಪತ್ರ

ಇಂಪೀರಿಯಲ್ ಹೋಟೆಲ್,
ರಸ್ಸೆಲ್ ಸ್ಕ್ವೈರ್,
ಲಂಡನ್, ಡಬ್ಲ್ಯೂ-ಸಿ-೧
೫ನೆಯ ಜನವರಿ, ೧೯೩೩.

**ನನ್ನ ಪ್ರಿಯ ಪ್ರಧಾನಮಂತ್ರಿಯವರೆ,**

ಸರ್ ಎನ್. ಎನ್. ಸರ್ಕಾರ್‌ರವರು ಭಾರತಕ್ಕೆ ಹೊರಡುವ ಮುನ್ನ ತಮಗೆ ಬರೆದಿರುವ ೧೯ನೆಯ ಡಿಸೆಂಬರ್ ೧೯೩೨ರ ಪತ್ರದ ಪ್ರತಿಯನ್ನು ನನಗೆ ಕಳುಹಿಸಿಕೊಡುವ ಕೃಪೆ ಮಾಡಿದ್ದಾರೆ. ಅದರಲ್ಲಿ ಬಂಗಾಳದ ಸವರ್ಣ ಹಿಂದೂಗಳು ಬಂಗಾಳದ ನಿಮ್ನ ವರ್ಗದವರು ಮತ್ತು ಸವರ್ಣ ಹಿಂದೂಗಳ ನಡುವೆ ಆದ ಪೂನಾ ಒಪ್ಪಂದದ ಕರಾರುಗಳನ್ನು ತಮಗೆ ಈ ಒಪ್ಪಂದದಲ್ಲಿ ಪ್ರಾತಿನಿಧ್ಯವಿರದ್ದರಿಂದ ತಾವು ಅದನ್ನು ವಿರೋಧಿಸುವುದಾಗಿ ಅವರಿಂದ ಬಂದ ತಂತಿ ಸಂದೇಶವನ್ನು ತಮ್ಮೆದುರಿಗೆ ಮಂಡಿಸಿದ್ದಾರೆ.

ನನಗೂ ಸಹ ಇನ್ನೊಂದು ಪಕ್ಷದವರ ಪರವಾಗಿ ತಂತಿಗಳು ಬಂದಿವೆ. ಇವುಗಳಲ್ಲಿ ಶ್ರೀಯುತರುಗಳಾದ ಬಿರ್ಲಾ ಮತ್ತು ಠಕ್ಕರ್‌ರವರಿಂದ ಬಂದಿದ್ದ ಸರ್ ಎನ್. ಎನ್. ಸರ್ಕಾರ್‌ರವರಿಗೆ ತೋರಿಸಿದ್ದೆ. ಇವರು ಪೂನಾ ಒಪ್ಪಂದಕ್ಕೆ ಅವಕಾಶ ಮಾಡಿಕೊಟ್ಟ ಸಂಧಾನಗಳಲ್ಲಿ ಶ್ರೀಯುತ ಗಾಂಧಿಯವರ ಪರವಾಗಿ ಭಾಗವಹಿಸಿದ್ದರು ಮತ್ತು ಇದರ ಮೂಲ ಪಾಠವನ್ನು ಅವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ನಾನು ಇವುಗಳ ವಿವರಗಳನ್ನು ನೀಡಿ ನಿಮಗೆ ತೊಂದರೆ ಕೊಡಬಯಸುವುದಿಲ್ಲ. ಏಕೆಂದರೆ ಮೊದಲನೆಯದಾಗಿ ನನ್ನ ಅಭಿಪ್ರಾಯದಲ್ಲಿ ಮಹಾಪ್ರಭುಗಳ ಸರಕಾರ ಪೂನಾ ಒಪ್ಪಂದವನ್ನು ಆಗಲೇ ಸ್ವೀಕರಿಸಿರುವುದರಿಂದ ಇದು ಮುಗಿದುಹೋದ ವಿಷಯವಾಗಿದೆ ಮತ್ತು ಎರಡನೆಯದಾಗಿ ಸರ್ ಎನ್. ಎನ್. ಸರ್ಕಾರ್‌ರವರು ತಮಗೆ ಬಂದಿರುವ ತಂತಿ ಸಂದೇಶವನ್ನು ನಮ್ಮ ಮಾಹಿತಿಗಾಗಿ ಕಳುಹಿಸಿ ಕೊಡುವುದಕ್ಕಿಂತ ಹೆಚ್ಚೇನನ್ನೂ ಮಾಡುವುದಿಲ್ಲವೆಂದು ನನಗೆ ಆಶ್ವಾಸನೆ ನೀಡಿದ್ದರು.

ಆದರೆ, ಸರ್ ಎನ್. ಎನ್. ಸರ್ಕಾರ್‌ರವರು ತಂತಿ ಸಂದೇಶಗಳನ್ನು ಕಳುಹಿಸಿ ಕೊಡುವುದಷ್ಟರಿಂದಲೇ ತೃಪ್ತರಾಗದೆ, ಠಕ್ಕರ್ ಮತ್ತು ಬಿರ್ಲಾರವರು ತಮ್ಮ ತಂತಿಯಲ್ಲಿ "ಆಪಾದಿಸಲಾದ ಅಸಡ್ಡೆಯಿಂದುಂಟಾದ ಒಪ್ಪಂದ ಎಂದು ಒತ್ತಿ ಹೇಳುವ ವಾದ"ದಲ್ಲಿ ಯಾವ ಸತ್ವವೂ ಇಲ್ಲ ಎಂದು ಒತ್ತಾಯಪೂರ್ವಕವಾಗಿ ಹೇಳುವುದೂ ಅಲ್ಲದೆ, "ಬಂಗಾಳದ ನಿಮ್ನವರ್ಗೇತರರು ಪೂನಾ

ಒಪ್ಪಂದದಲ್ಲಿ ಭಾಗಿಗಳಾಗಿದ್ದಾರೆಯೇ ಇಲ್ಲವೇ ಅಥವಾ ಅದು ಅವರನ್ನು ಬದ್ಧರನ್ನಾಗಿ ಮಾಡುವುದೇ ಎಂಬ ಅಂಶದ ಬಗ್ಗೆ ವಿಚಾರಿಸಲು... ಭಾರತದ ಅಥವಾ ಬಂಗಾಳ ಸರಕಾರ ಅಥವಾ ಇನ್ನಾವುದೇ ಜವಾಬ್ದಾರಿಯುತ ಹಾಗೂ ತಟಸ್ಥ ಸಂಸ್ಥೆಯ ಮೂಲಕ ವಿಚಾರಣೆ ಮಾಡಿಸಬೇಕು" ಎಂದು ಒತ್ತಾಯಿಸಿದ್ದಾರೆ. ಅವರು ಎತ್ತಿರುವ ಈ ಪ್ರಶ್ನೆಯ ಮೇಲೆ ನನ್ನ ಅಭಿಪ್ರಾಯ ತಿಳಿಸಬೇಕೆಂದು ನಾನು ಭಾವಿಸಿದ್ದೇವೆ.

ನನ್ನ ಮೊದಲನೆಯ ನಿವೇದನೆ ಎಂದರೆ, ಬಂಗಾಳದ ಹಿಂದೂಗಳಿಗೆ ಪೂನಾ ಒಪ್ಪಂದದಲ್ಲಿ ಪ್ರಾತಿನಿಧ್ಯವಿರಲಿಲ್ಲ ಎಂದು ಇಟ್ಟುಕೊಂಡರೂ ಆ ಒಂದು ಕಾರಣಕ್ಕಾಗಿಯೇ ಒಪ್ಪಂದವು ಬಂಗಾಳಕ್ಕೆ ಅನ್ವಯವಾಗುವುದಿಲ್ಲ ಎಂದು ಹೇಳಲು ಬರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಮಹಾಪ್ರಭುಗಳ ಸರಕಾರದ ಕೋಮು ನಿರ್ಣಯದ ೪ನೆಯ ಪ್ಯಾರಾದಲ್ಲಿನ ಶರತ್ತುಗಳನ್ನು, ಎಲ್ಲರೂ ಒಪ್ಪಿಕೊಂಡ ತೀರ್ಮಾನದಂತೆ ತಳ್ಳಿಹಾಕಲು ಬರುವುದೆಂದು ಅರ್ಥವಲ್ಲವೆಂದೂ ಹಾಗೂ ಇಡೀ ಭಾರತಕ್ಕೆ ಅನ್ವಯವಾಗುವಂತೆ ಒಂದು ಬದಲೀ ಯೋಜನೆಯನ್ನು ನೀಡಬಹುದೆಂದು ನಿಗದಿಗೊಳಿಸಲಾಗಿಲ್ಲ. ಪೂನಾ ಒಪ್ಪಂದವು ಇಡೀ ಬ್ರಿಟಿಷ್ ಭಾರತದಲ್ಲಿ ಪ್ರತಿ ಪ್ರಾಂತ್ಯದ ನಿಮ್ನ ವರ್ಗ ಮತ್ತು ಸವರ್ಣೀಯರಿಗೆ ಅನ್ವಯವಾಗಲಿದ್ದು, ಅದರ ಮಾನ್ಯತೆಗೆ ಇದು ಪೂರ್ವಭಾವಿ ಕರಾರಾಗಿದೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದೇನೆಂದರೆ, ಕೋಮು ನಿರ್ಣಯದಲ್ಲಿ ಯಾವುದೇ ಪ್ರಾಂತ್ಯದ ಸಂಬಂಧದಲ್ಲಿಯೂ ಅಂತಹ ಯಾವುದೇ ರೀತಿಯ ವ್ಯವಧಾನ ಇರುವುದಿಲ್ಲ. ನಾನು ಅರ್ಥ ಮಾಡಿಕೊಂಡಿರುವಂತೆ ೪ನೆಯ ಪ್ಯಾರಾದಲ್ಲಿ ಕಾರ್ಯಗತಗೊಳಿಸುವಂತಹ ಬದಲೀ ಯೋಜನೆಗಳ ವಿಷಯದಲ್ಲಿ ಸಂಬಂಧಪಟ್ಟ ಎಲ್ಲಾ ಕೋಮಿನವರಲ್ಲಿ ಅದರ ಬಗ್ಗೆ ಪರಸ್ಪರ ಒಪ್ಪಿಗೆ ಇದೆ ಎಂದು ಮಹಾಪ್ರಭುವಿನ ಸರಕಾರಕ್ಕೆ ಮನವರಿಕೆಯಾಗಬೇಕೆಂದು ಮಾತ್ರ ಹೇಳಲಾಗಿದೆ. ನಾನು ೪ನೆಯ ಪ್ಯಾರಾವನ್ನು ಈ ರೀತಿ ಅರ್ಥೈಸಿರುವುದರ ಆಧಾರದ ಮೇರೆಗೆ ಬಂಗಾಳದ ಸವರ್ಣ ಹಿಂದೂಗಳ ಅನುಪಸ್ಥಿತಿಯ ಕಾರಣದಿಂದ ಬಂಗಾಳಕ್ಕೆ ಈ ಒಪ್ಪಂದ ಅನ್ವಯವಾಗುವುದಿಲ್ಲ ಎಂದು ಹೇಳುವ ಅಧಿಕಾರ ಅವರಿಗಿಲ್ಲ. ಇದಕ್ಕೆ ವಿರುದ್ಧದ ಅರ್ಥ ನಿಜವಾದರೆ, ಪಂಜಾಬ್, ಯು.ಪಿ. ಮತ್ತು ಬಿಹಾರ್ ಮತ್ತು ಓಡಿಸ್ಸಾದ ನಿಮ್ನ ವರ್ಗಗಳವರೂ ಕೂಡ ತಮಗೆ ಅದರಲ್ಲಿ ಪ್ರಾತಿನಿಧ್ಯವಿಲ್ಲದಿದ್ದ ಕಾರಣ ಪೂನಾ ಒಪ್ಪಂದವನ್ನು ತಿರಸ್ಕರಿಸಬಹುದಾಗಿದೆ.

ನನ್ನ ಎರಡನೆಯ ನಿವೇದನೆ ಏನೆಂದರೆ, ಸರ್ ಎನ್. ಎನ್. ಸರ್ಕಾರ್‌ರವರು ತಮಗೆ ಕಳುಹಿಸಿಕೊಟ್ಟಿರುವ ತಂತಿ ಸಂದೇಶಕ್ಕೆ ಸಹಿ ಹಾಕಿರುವವರು ಬಂಗಾಳದ ಸವರ್ಣ ಹಿಂದೂಗಳಿಗೆ ಪ್ರಾತಿನಿಧ್ಯವಿರಲಿಲ್ಲ ಎಂಬ ಗ್ರಹಿಕೆಯನ್ನು ಪುರಸ್ಕರಿಸುವ ಆವಶ್ಯಕತೆಯೇ ಇಲ್ಲ. ಅವರಿಗೆ ಪ್ರಾತಿನಿಧ್ಯವಿತ್ತೆಂಬ ನಿಜ ಸಂಗತಿಯನ್ನು ನಾನು ಬಲ್ಲೆ. ಶ್ರೀಯುತರುಗಳಾದ ಠಕ್ಕರ್ ಮತ್ತು ಬಿರ್ಲಾರವರು ಬಂಗಾಳದ ಹಿಂದೂಗಳು ಅವರಿಗೆ ಕಳುಹಿಸಿದ ಆಹ್ವಾನಕ್ಕೆ ಪ್ರತಿಕ್ರಿಯೆ ತೋರಲಿಲ್ಲ ಎಂದು ಹೇಳಿರುವರು. ಈ ಹೇಳಿಕೆಯ ಆಧಾರದ ಮೇಲೆ ಸರ್ ಎನ್. ಎನ್. ಸರ್ಕಾರ್‌ರವರು ವಿಚಾರಣೆಗಾಗಿ ತಮ್ಮ ಬೇಡಿಕೆಯನ್ನು ಮಂಡಿಸಿರುವುದು ಸರಿಯಲ್ಲ. ಗಮನಿಸಬೇಕಾದ ಇನ್ನೂ ಮಹತ್ವದ ಅಂಶವೆಂದರೆ ಬಂಗಾಳದ ಈ ಪ್ರತಿನಿಧಿಗಳು ಕೇವಲ ಮೂಕ ಪ್ರೇಕ್ಷಕರಾಗಿರದೆ, ಸಂಧಾನಗಳಲ್ಲಿ

ಸಕ್ರಿಯವಾಗಿ ಭಾಗವಹಿಸಿದ್ದರು. ಅವರಲ್ಲೊಬ್ಬರು ಬಂಗಾಳದ ರಾಜಾ ಪಕ್ಷಕ್ಕೆ ಸೇರಿದ ನಿಮ್ಮ ವರ್ಗದ ಯುವಕನೊಂದಿಗೆ ಮುಂಬಯಿಗೆ ಬಂದು ನನ್ನೊಡನೆ ಸುಮಾರು ಒಂದೂವರೆ ತಾಸು ಖಾಸಗಿಯಾಗಿ ಸಮಾಲೋಚಿಸಿ ಸವರ್ಣ ಹಿಂದೂಗಳೊಡನೆ ಸಂಯುಕ್ತ ಮತದಾರ ಸಮೂಹದ ಆಧಾರದ ಮೇಲೆ ಒಂದು ಒಪ್ಪಂದಕ್ಕೆ ಬರಬೇಕೆಂದು ಒತ್ತಾಯಿಸಿದುದು ನನಗೆ ಸರಿಯಾಗಿ ನೆನಪಿದೆ. ಆದ್ದರಿಂದ ಬಂಗಾಳದ ಸವರ್ಣ ಹಿಂದೂಗಳಿಗೆ ಪ್ರಾತಿನಿಧ್ಯವಿರಲಿಲ್ಲ ಎಂದು ಹೇಳುವುದು ಸರಿಯಲ್ಲ. ಶ್ರೀಯುತರುಗಳಾದ ಠಕ್ಕರ್ ಮತ್ತು ಬಿರ್ಲಾರವರ ನಿಷ್ಕೃಷ್ಟ ವಲ್ಲದ ಈ ಹೇಳಿಕೆ ಕ್ಷಮಾರ್ಹವಾಗಿದೆ. ಏಕೆಂದರೆ, ಇದರಲ್ಲಡಗಿರುವ ಪ್ರಶ್ನೆಗಳ ಗಂಭೀರತೆಯಿಂದಾಗಿ ಸಂಧಾನದ ಎಲ್ಲಾ ವಿವರಗಳನ್ನು ನೆನಪಿಟ್ಟುಕೊಳ್ಳುವುದು ಕಷ್ಟವೆನಿಸುವುದು. ನನ್ನೊಡನೆ ಸಮಾಲೋಚನೆ ಮಾಡಿದ ಬಂಗಾಳದ ಸವರ್ಣ ಹಿಂದೂವಿನ ಹೆಸರನ್ನು ಈಗ ತಿಳಿಸುವುದು ಸಾಧ್ಯವಾಗದಿದ್ದಕ್ಕಾಗಿ ವಿಷಾದಿಸುತ್ತೇನೆ. ಆದರೆ, ನಾನು ಭಾರತಕ್ಕೆ ಮರಳಿದ ಕೂಡಲೇ ಆತನ ಹೆಸರನ್ನು ನಿಮಗೆ ತಿಳಿಸುತ್ತೇನೆ.

ಆದ್ದರಿಂದ ಬಂಗಾಳದ ಸರ್ವ ಹಿಂದೂಗಳ ವತಿಯಿಂದ ಪೂನಾ ಒಪ್ಪಂದವನ್ನು ಪುನರ್ ಪರಿಶೀಲಿಸುವ ಅಗತ್ಯವಿಲ್ಲ. ನಿಮ್ಮ ವರ್ಗಗಳಿಗೆ ಸಂಬಂಧಿಸಿದಂತೆ ಅವರ ವಕ್ತಾರರಾದ ಶ್ರೀಯುತ ಎಮ್. ಬಿ. ಮಲ್ಲಿಕ್‌ರವರು ನಿಮ್ಮ ವರ್ಗಗಳವರು ಪೂನಾ ಒಪ್ಪಂದವನ್ನು ಒಪ್ಪಿಕೊಳ್ಳುವುದಾಗಿ ನನಗೆ ತಂತಿ ಸಂದೇಶ ಕಳುಹಿಸಿರುತ್ತಾರೆ. ಅವರ ಹಾಗೂ ಶ್ರೀಯುತರುಗಳಾದ ಠಕ್ಕರ್ ಮತ್ತು ಬಿರ್ಲಾರವರ ತಂತಿ ಸಂದೇಶಗಳ ಮೂಲ ಪ್ರತಿಗಳನ್ನು ತಮ್ಮ ಮಾಹಿತಿಗಾಗಿ ಇದರೊಂದಿಗೆ ಕಳುಹಿಸಿರುವೆ. ನಾನು ಮುಂದಿನ ವಾರ ಭಾರತಕ್ಕೆ ಹೊರಡಲಿದ್ದೇನೆ. ಈ ಸಂಬಂಧ ತಾವು ನನ್ನೊಡನೆ ಪತ್ರ ವ್ಯವಹಾರ ಮಾಡಬಯಸಿದರೆ ಈ ಕೆಳಗೆ ನೀಡಿರುವ ನನ್ನ ಮುಂಬಯಿ ವಿಳಾಸಕ್ಕೆ ಕಳುಹಿಸಿಕೊಡಬಹುದು.

**ತಮ್ಮ ವಿಶ್ವಾಸಿ,**
**(ಸಹಿ) ಬಿ. ಆರ್. ಅಂಬೇಡ್ಕರ್.**

**ವಿಳಾಸ:**
**ದಾಮೋದರ ಹಾಲ್,**
**ಪರೇಲ್,**
**ಮುಂಬಯಿ–೧೨ (ಭಾರತ).**

## ಡಿಸೆಂಬರ್ ೧, ೧೯೩೨ರ ತಂತಿ ಸಂದೇಶದ ಪ್ರತಿ

**೧೭೭೪, ದೆಹಲಿ ೧೧೮, ೨೯,೨೦೨೦.**
**ಡಿಎಲ್‌ಟಿ ಡಾಕ್ಟರ್ ಅಂಬೇಡ್ಕರ್, ಇಂಡಿಯಾ**
**ಆಫೀಸ್, ಲಂಡನ್.**

ಪುನರ್ ವಿಮರ್ಶೆಗಾಗಿ ಬಂಗಾಳದ ಹಿಂದೂ ಮಿತ್ರರ ತಂತಿ ಸಂದೇಶದ ವಿಷಯವಾಗಿ, ಬಂಗಾಳಕ್ಕೆ ಪೂನಾ ಒಪ್ಪಂದವನ್ನು ಅನ್ವಯಿಸುವ ಸಂಬಂಧದಲ್ಲಿ ಅವರು ಎರಡು ಬಾರಿ ತಪ್ಪಿಸಿದ್ದಾರೆ. ಒಂದನೆಯದಾಗಿ ಲೋಥಿಯನ್ ಸಮಿತಿಗೆ ನಿಮ್ನ ವರ್ಗಗಳ ಪಟ್ಟಿಯನ್ನು ಕೊಡುವಲ್ಲಿ ವಿಫಲರಾದರು. ಎರಡನೆಯದಾಗಿ ಮುಂಬಯಿಯ ಸೆಪ್ಟೆಂಬರ್ ಸಮ್ಮೇಳನಕ್ಕೆ ಆಹ್ವಾನ ಬಂದಾಗ ಯಾರೂ ಹೋಗಲಿಲ್ಲ. ಈಗ ಅವರು ಸುಳ್ಳು ಆಪಾದನೆ ಮಾಡುತ್ತಿದ್ದಾರೆ. ಅಲ್ಲದೆ ಅವರು ನಾಮಶೂದ್ರರು, ಎಲ್ಲಾ ಸ್ಥಾನಗಳನ್ನು ಪಡೆದುಕೊಳ್ಳುವರೆಂದು ವಿನಾಕಾರಣ ಭೀತರಾಗಿದ್ದಾರೆ. ಇದೂ ಅಲ್ಲದೆ, ಲೋಥಿಯನ್ ಎರಡನೆಯ ಸಂಪುಟದ ೨೬೩ನೆಯ ಪುಟದಲ್ಲಿ ಬಂಗಾಳ ಸರಕಾರದ ಪ್ರಕಾರ ನಿಮ್ನ ವರ್ಗಗಳವರ ಜನಸಂಖ್ಯೆ ೧೦೩ ಲಕ್ಷವಿದೆ. ಆದರೆ ಲೋಥಿಯನ್‌ಗೆ ನೀಡಿದ ನಮ್ಮ ಲೆಕ್ಕಾಚಾರದ ಪ್ರಕಾರ ಅದು ೭೫ ಲಕ್ಷ. ಪೂನಾ ಒಪ್ಪಂದ ಸಂಪೂರ್ಣವಾಗಿ ಲೋಥಿಯನ್ ಶಿಫಾರಸುಗಳನ್ನನುಸರಿಸಿದೆ. ಲೋಥಿಯನ್ ಎರಡನೆಯ ಸಂಪುಟದ ೨೫೧ನೆಯ ಪುಟದಲ್ಲಿ ಮಲ್ಲಿಕ್‌ರವರ ಟಿಪ್ಪಣಿ ನೋಡಿರಿ. ಕಲಕತ್ತಾದಲ್ಲಿ ಠಕ್ಕರ್‌ರವರು ಸಾಮಾನ್ಯವಾಗಿ ಹಿಂದೂಗಳ ಭಾವನೆಗಳು ಒಪ್ಪಂದದ ಪರವಾಗಿರುವುದನ್ನು ಕಂಡುಕೊಂಡಿದ್ದಾರೆ. ಆದ್ದರಿಂದ ಸಚಿವ ಸಂಪುಟದ ಒಪ್ಪಿಗೆ ಪಡೆದಿರುವ ಒಪ್ಪಂದವನ್ನು ಪುನರ್ ಪರಿಶೀಲಿಸಲು ಬರುವುದಿಲ್ಲ.

**–ಬಿರ್ಲಾ ಮತ್ತು ಠಕ್ಕರ್.**

## ೨೬ ಡಿಸೆಂಬರ್ ೧೯೩೨ನೇ ತಾರೀಖಿನ ತಂತಿ ಸಂದೇಶ ಡಬ್ಲ್ಯೂ ಎಲ್ ಟಿ ಅಂಬೇಡ್ಕರ್, ಭಾರತೀಯ ಸಮ್ಮೇಳನ, ಲಂಡನ್

ಬಂಗಾಳದ ನಿಮ್ನ ವರ್ಗಗಳು ಪೂನಾ ಒಪ್ಪಂದವನ್ನು ಒಪ್ಪಿಕೊಂಡಿದ್ದಾರೆ. ಹಿಂದೂ ಪರಿಷತ್ತಿನ ಹಿಂದೂ ಪ್ರತಿನಿಧಿಗಳೂ ಅದನ್ನು ಒಪ್ಪಿಕೊಂಡಿದ್ದಾರೆ. ಹಿಂದೂಗಳ ಮನವಿ ದುರುದ್ದೇಶದ ವಕ್ರಮಾರ್ಗ.

**–ಮಲ್ಲಿಕ.**

(೧೩)

# ಹಿಂದೂ ಮಹಾಸಭಾ ಪರವಾಗಿ

ಡಾ. ಬಿ. ಎಸ್. ಮೂಂಜೆ, ಶ್ರೀ ಬಿ. ಸಿ. ಚಟರ್ಜಿ, ಶ್ರೀ ಜೆ. ಬ್ಯಾನರ್ಜಿ, ಶ್ರೀ ಜಿ. ವಿ. ಗವಯಿ ರಾಯಸಾಹೇಬ್ ಮೆಹರಚಂದ್ ಖನ್ನಾ, ಶ್ರೀ ಆರ್. ಎಂ. ದೇಶಮುಖ್, ಶ್ರೀ ಭಾಯಿ ಪರಮಾನಂದ್ ಮತ್ತು ಪಂಡಿತ್ ನಾನಕ್ ಚಂದ್.

* ಡಾ. ಬಿ. ಆರ್. ಅಂಬೇಡ್ಕರ್: ಪ್ರಾರಂಭಕ್ಕೆ ಡಾ. ಮೂಂಜೆ ಅವರಿಗೆ ಒಂದು ಅಥವಾ ಎರಡು ಪ್ರಶ್ನೆಗಳನ್ನು ನಾನು ಕೇಳಬಯಸುತ್ತೇನೆ. ಈ ಮೂಲಕ ಅವರೇ, ಮಹಾತ್ಮಾ ಗಾಂಧಿ ಅವರು ನಡೆಸಿದ ಉಪವಾಸ ಸತ್ಯಾಗ್ರಹದಿಂದ ಉದ್ಭವಿಸಿದ ಪ್ರಶ್ನೆಯ ವಿಚಾರದಲ್ಲಿ ಏನು ಮಾಡಬಹುದೆಂಬ ಬಗ್ಗೆ ಚರ್ಚಿಸಲು ಮದನ ಮೋಹನ ಮಾಳವೀಯ ಅವರು ಕರೆದಿದ್ದ ಸಭೆಯಲ್ಲಿ, ಸರ್ ನೃಪೇಂದ್ರ ಸರ್ಕಾರ್ ಅವರು ನಿಮಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಆ ವಿವರಗಳನ್ನು ಪಡೆಯಲೆಂದು ನಾನು ನಿಮಗೆ ಕೇವಲ ಒಂದೆರಡು ಪ್ರಶ್ನೆಗಳನ್ನು ಕೇಳಲಿಚ್ಛಿಸುವೆ. ಮುಂಬಯಿಯಲ್ಲಿ ೧೯೩೨ರ ಸೆಪ್ಟೆಂಬರ್ ೧೨ರಂದು ಪಂಡಿತ ಮಾಳವೀಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದಲ್ಲಿ ನೀವು ಹಾಜರಿದ್ದಿರಿ.

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನಿಮಗೆ ಗೊತ್ತಿರಬಹುದು. ಆ ಸಭೆಯಲ್ಲಿ ಒಂದು ಉಪಸಮಿತಿಯನ್ನು ರಚಿಸಲಾಯಿತು.

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆ ಉಪಸಮಿತಿಯಲ್ಲಿ ನಿಮ್ಮ ವರ್ಗದ ಪ್ರತಿನಿಧಿಗಳಲ್ಲದೆ ಶ್ರೀ ಜಯಕರ್, ಸರ್ ತೇಜ್ ಬಹಾದ್ದೂರ್ ಸಪ್ರು ಮತ್ತಿತರರು ಸೇರಿದಂತೆ ಸವರ್ಣೀಯರ ಪ್ರತಿನಿಧಿಗಳೂ ಇದ್ದರು.

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆ ಉಪಸಮಿತಿಯು ಸದರಿ ಪ್ರಶ್ನೆಯ ಬಗ್ಗೆ ಚರ್ಚೆ ನಡೆಸಲು ಪೂನಾಕ್ಕೆ ಹೋಯಿತು.

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆ ಚರ್ಚೆಯು ಮಹಾತ್ಮಾ ಗಾಂಧಿ ಅವರ ಹತ್ತಿರದಲ್ಲೇ ನಡೆಯುವುದು ಅಪೇಕ್ಷಣೀಯ ಎಂದು ಅವರು ಭಾವಿಸಿದ್ದರು. ಉಪಸಮಿತಿಯ ಚರ್ಚೆಯ ಪರಿಣಾಮವಾಗಿಯೇ ಪೂನಾ ಒಪ್ಪಂದದ ಕರಡು ಸಿದ್ಧವಾಯಿತು. ಇದಕ್ಕೆ ಮಹಾತ್ಮಾಗಾಂಧಿ ಅವರ ಒಪ್ಪಿಗೆ ಇತ್ತು. ಹೌದೇ?

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ II–ಸಿ, ೩೧ನೆಯ ಜುಲೈ ೧೯೩೩, ಪುಟಗಳು ೨೪೨೫–೩೪.

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಉಪಸಮಿತಿಯನ್ನು ರಚನೆ ಮಾಡಿದ ಪ್ರಧಾನ ಸಮಿತಿಯು ಅನಂತರ ಮುಂಬಯಿಯಲ್ಲಿ ಸೆಪ್ಟೆಂಬರ್ ೨೫ರಂದು ಮತ್ತೆ ಸಭೆ ಸೇರಿತು. ಹೌದೇ?

ಡಾ. ಮೂಂಜೆ: ಇರಬಹುದು. ನಾನು ಹಾಜರಿರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆ ಸಭೆಯಲ್ಲಿ ಒಪ್ಪಂದವನ್ನು ಮತಕ್ಕೆ ಹಾಕಿ ಅಂಗೀಕಾರ ಮಾಡಲಾಯಿತು. ಅಲ್ಲವೇ?

ಡಾ. ಮೂಂಜೆ: ಎಲ್ಲಾ ವಿವರಗಳನ್ನು ತಿಳಿಸಲು ಡಾ. ಅಂಬೇಡ್ಕರ್ ಅವರು ನನಗೆ ಒಂದು ಸದವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ನನಗೆ ಸಂತೋಷವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಸ್ವಂತ ತಿಳುವಳಿಕೆಯಿಂದ ನೀವು ಅವುಗಳನ್ನು ಬಲ್ಲಿರಾ?

ಡಾ. ಮೂಂಜೆ: ನನಗೆ ಸ್ವತಃ ಗೊತ್ತಿರುವ ವಿವರಗಳನ್ನು ನಾನು ನೀಡಬಲ್ಲೆ.

ಡಾ. ಬಿ. ಆರ್. ಅಂಬೇಡ್ಕರ್: ಒಂದು ವಿಷಯವನ್ನು ಮಾತ್ರ ನಾನು ತಿಳಿದುಕೊಳ್ಳಬೇಕಿದೆ. ಪೂನಾದಲ್ಲಿ ತನ್ನ ಕಾರ್ಯವನ್ನು ಮುಗಿಸಿದ ಉಪಸಮಿತಿಯು ಮುಂಬಯಿಗೆ ಹಿಂತಿರುಗಿ, ತನ್ನ ಕಾರ್ಯಕಲಾಪದ ಬಗೆಗಿನ ವರದಿಯನ್ನು ಪ್ರಧಾನ ಸಮಿತಿಗೆ ಸಲ್ಲಿಸಿತು ಎಂಬುದು ನಿಮಗೆ ಗೊತ್ತೇ?

ಡಾ. ಮೂಂಜೆ: ಹೌದು. ಅದು ಸಲ್ಲಿಸಿರಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಶ್ರೀ ಗವಯಿ ಅವರನ್ನು ಪ್ರಶ್ನಿಸಬಯಸುವೆ. ಅವರು ಅಲ್ಲಿ ಇದ್ದರೆಂದು ಕಾಣುತ್ತದೆ. ಶ್ರೀ ಗವಯಿ ಅವರೇ, ಪೂನಾ ಒಪ್ಪಂದ ಕರಡು ಪ್ರತಿಯನ್ನು ಸಿದ್ಧಪಡಿಸಿದ ಚರ್ಚೆಯಲ್ಲಿ ನೀವೂ ಭಾಗವಹಿಸಿದ್ದಿರಾ?

ಶ್ರೀ ಗವಯಿ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನೀವು ಆ ಸಮಯದಲ್ಲಿ ರಾಜಾ–ಮೂಂಜೆ ಒಪ್ಪಂದ ಬಣ ಎಂದು ಕರೆಯಲಾಗುತ್ತಿದ್ದ ಗುಂಪಿಗೆ ಸೇರಿದ್ದಿರಿ. ಹೌದೇ? ಇದು ತಪ್ಪು ಎಂಬರ್ಥದಲ್ಲಿ ನಾನು ಈ ಪ್ರಶ್ನೆಯನ್ನು ಹಾಕುತ್ತಿಲ್ಲ.

ಶ್ರೀ ಗವಯಿ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನೀವು ಆಗ ಪೂನಾದಲ್ಲಿ ಹಾಜರಿದ್ದಿರಿ. ಹೌದೇ?

ಶ್ರೀ ಗವಯಿ: ಹೌದು. ನಾನು ಹಾಜರಿದ್ದೆ.

ಡಾ. ಬಿ. ಆರ್. ಅಂಬೇಡ್ಕರ್: ಒಪ್ಪಂದಕ್ಕೆ ಸಹಿ ಬಿದ್ದ ನಂತರ, ಉಪಸಮಿತಿಯು ಮುಂಬಯಿಗೆ ಹಿಂತಿರುಗಿ ಪಂಡಿತ ಮಾಳವೀಯ ಅವರ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ನಡೆಸಿತು. ಅಲ್ಲಿ ಪೂನಾ ಒಪ್ಪಂದವನ್ನು ಅನುಮೋದಿಸುವ ಗೊತ್ತುವಳಿಯನ್ನು ಇಡೀ ಸಮಿತಿಯು ಅಂಗೀಕರಿಸಿತು. ಹೌದೇ?

ಶ್ರೀ ಗವಯಿ: ಹೌದು.

ಡಾ. ಮೂಂಜೆ: ಈ ಅಂಶಗಳ ಬಗ್ಗೆ ಡಾ. ಅಂಬೇಡ್ಕರ್ ನನ್ನನ್ನು ಕೇಳಿದ್ದಾರೆ. ನಾನು ವಿವರಿಸಬಾರದೇ?

ಅಧ್ಯಕ್ಷ: ಡಾ. ಅಂಬೇಡ್ಕರ್ ಅವರ ವಿಚಾರಣೆಯ ಫಲಶ್ರುತಿಯನ್ನು ತಿಳಿಯಲು ಸಮಿತಿ ಬಯಸುತ್ತಿದೆ. ಡಾ. ಮೂಂಜೆ ಅವರೇ, ನಿಮ್ಮ ವಿವರಣೆಯನ್ನು ನಾವು ನಂತರ ಆಲಿಸುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಉಪಸಮಿತಿ ರಚನೆಯಾದ ನಂತರ, ಅದು ಮಹಾತ್ಮ ಗಾಂಧಿಯವರ ಜೊತೆ ವಿಷಯವನ್ನು ಚರ್ಚಿಸಲು ಹೋದ ಬಳಿಕ, ೧೯೩೨ರ ಸೆಪ್ಟೆಂಬರ್ ೨೪ರಿಂದ ೨೬ರವರೆಗೆ

ದೆಹಲಿಯಲ್ಲಿ ಹಿಂದೂ ಮಹಾಸಭಾದ ಅಧಿವೇಶನವೊಂದು ನಡೆಯಿತು. ಹೌದೇ?

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಪಂಡಿತ ಮಾಳವೀಯ ಅವರ ಅಧ್ಯಕ್ಷತೆಯಲ್ಲಿ ಅಲ್ಲವೇ?

ಡಾ. ಮೂಂಜೆ: ಅಲ್ಲ; ಶ್ರೀ ಎನ್. ಸಿ. ಕೇಳ್ಕರ್ ಅವರ ಅಧ್ಯಕ್ಷತೆಯಲ್ಲಿ.

ಡಾ. ಬಿ. ಆರ್. ಅಂಬೇಡ್ಕರ್: ದೆಹಲಿ ಸಭೆಯಲ್ಲಿ ಶ್ರೀ ರಾಮಾನಂದ ಚಟರ್ಜಿ ಅವರು ಹಾಜರಿದ್ದರೇ?

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ದೆಹಲಿಯ ಈ ಹಿಂದೂ ಮಹಾಸಭಾ ಅಧಿವೇಶನದಲ್ಲಿ ರಾಜಾ ನರೇಂದ್ರನಾಥ ಅವರೂ ಹಾಜರಿದ್ದರೇ?

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ದೆಹಲಿ ಅಧಿವೇಶನದಲ್ಲಿ ಈ ಒಪ್ಪಂದವನ್ನು ಸ್ಥಿರೀಕರಿಸುವ ತೀರ್ಮಾನ ಆಗಿದ್ದುದು ಸತ್ಯ ಸಂಗತಿಯಲ್ಲವೇ?

ಡಾ. ಮೂಂಜೆ: ಹೌದು. ನಿಸ್ಸಂದೇಹವಾಗಿ.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀ ರಾಮಾನಂದ ಚಟರ್ಜಿ ಅವರು ಬಂಗಾಳದ ಸವರ್ಣೀಯರ ಪ್ರಮುಖ ನಾಯಕರಲ್ಲವೇ?

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅವರು ಹಿಂದೂ ಮಹಾಸಭಾದ ಪ್ರಮುಖ ಸದಸ್ಯರೂ ಹೌದೇ?

ಡಾ. ಮೂಂಜೆ: ಹೌದು.

ಶ್ರೀ ಜೆ. ಬ್ಯಾನರ್ಜಿ: ಅವರು ಸವರ್ಣೀಯರಲ್ಲವೇ ಅಲ್ಲ; ಅವರು ಸವರ್ಣೇತರ ಹಿಂದೂ. ಅವರು ಬ್ರಹ್ಮೋ ಸಮಾಜಕ್ಕೆ ಸೇರಿದವರು.

ಜೆಟ್ಲಾಂಡ್‌ನ ಮಾರ್ಕೆಸ್: ಈ ಮುಂಚಿನ ಸಾಕ್ಷ್ಯದಲ್ಲಿ ತಪ್ಪಾಗಿರುವುದನ್ನು ನಾನು ಗಮನಿಸಿದೆ. ಅದು ಸಹಜವಾದ ತಪ್ಪೂ ಆಗಿರಬಹುದು. ಸರ್ ರವೀಂದ್ರನಾಥ ಟಾಗೋರ್ 'ಬ್ರಹ್ಮೋ' ಎಂದು ತಿಳಿಸ ಲಾಯಿತು. ಬ್ರಹ್ಮೋ ಎಂಬುದು ಸವರ್ಣೀಯ ಎಂಬ ಪದಕ್ಕಿಂತ ಪೂರ್ತಿ ಬೇರೆಯಾದ ಪದ. ಸಾಕ್ಷ್ಯ ನುಡಿಯುವಾಗ ಬ್ರಹ್ಮೋ ಎಂಬುದು ಬ್ರಾಹ್ಮಣ ಎಂದಾಗಿಬಿಟ್ಟಿತು. ಬ್ರಾಹ್ಮಣ ಎಂದರೆ ಹಿಂದೂಗಳಲ್ಲಿ ಇರುವ ಅತ್ಯಂತ ಉಚ್ಚ ಜಾತಿ. ಶ್ರೀ ರಾಮಾನಂದ ಚಟರ್ಜಿ ಅವರ ವಿಚಾರದಲ್ಲೂ ಹೀಗೇ ಆಗಿದೆ. ಅವರು ಬ್ರಹ್ಮೋ, ಬ್ರಾಹ್ಮಣರಲ್ಲ.

ಶ್ರೀ ಜೆ. ಬ್ಯಾನರ್ಜಿ: ಹೌದು.

ಶ್ರೀ ಝಫರುಲ್ಲಾ ಖಾನ್: ನಮಗೆ ಇದಾವುದೂ ತಿಳಿಯುತ್ತಿಲ್ಲ; ಆದರೆ ಅದನ್ನು ಅರ್ಥ ಮಾಡಿ ಕೊಳ್ಳಲು ನಾವು ಬಯಸುತ್ತೇವೆ. ಬ್ರಾಹ್ಮಣ ಅಥವಾ ಬ್ರಾಹ್ಮಣೇತರ ಎಂಬುದು ಹುಟ್ಟಿನ ಆಧಾರದ ಮೇಲೆ ಗುರುತಾಗುವಂಥದ್ದು. ಆದರೆ ಯಾರು ಹುಟ್ಟಾ ಬ್ರಾಹ್ಮಣ? ಇದು ಪ್ರಶ್ನೆ. ಜಾತಿಯಿಂದ ಡಾ. ಮೂಂಜೆ ಅವರು ಬ್ರಾಹ್ಮಣರು. ಜಾತಿ ಬಗೆಗಿನ ಅವರ ನಂಬಿಕೆ ಬಗ್ಗೆ ಅವರೇ ನಮಗೆ ಹೇಳ ಬೇಕು.

ಶ್ರೀ ಜೆ. ಬ್ಯಾನರ್ಜಿ: ಅವರು ಬೇರೆ ಧರ್ಮ ಸ್ವೀಕರಿಸಿದರೆ, ಅವರು ಹಿಂದೂ ಆಗಿ ಉಳಿಯುವುದಿಲ್ಲ.

ಶ್ರೀ ಎಂ. ಆರ್. ಜಯಕರ್: ಈ ಅಂಶದ ಮೇಲೆ ನಾನೊಂದು ಪ್ರಶ್ನೆ ಕೇಳಲೇ? ಒಬ್ಬ ಬ್ರಹ್ಮೋ

ಆಗಿದ್ದ ಮಾತ್ರಕ್ಕೆ ಆತ ಹಿಂದೂ ಆಗಿ ಉಳಿಯಲಾರ ಎಂದು ನೀವು ಹೇಳುತ್ತಿಲ್ಲ. ಅಲ್ಲವೇ?

ಶ್ರೀ ಜೆ. ಬ್ಯಾನರ್ಜಿ: ಧರ್ಮದ ಪ್ರಕಾರ ಆತ ಹಿಂದೂ ಆಗಿ ಉಳಿಯಲಾರ. ಇದು ನಿಶ್ಚಿತ. ಆತ ಹಿಂದೂಯೇತರ ಆಗಿಬಿಡುತ್ತಾನೆ. ಮದುವೆಯಾದಾಗ ಆತ ತನ್ನನ್ನು ತಾನು ಹಿಂದೂಯೇತರ ಎಂದೇ ಹೇಳಿಕೊಳ್ಳಬೇಕಾಗುತ್ತದೆ.

ಎಂ. ಆರ್. ಜಯಕರ್: ವಿವಾಹ ಕಾಯ್ದೆಗೆ ಸಂಬಂಧಿಸಿದಂತೆ ನಾನು ಮಾತಾಡುತ್ತಿಲ್ಲ. ಒಬ್ಬ ಹಿಂದೂ ಬ್ರಾಹ್ಮಣ, ಧಾರ್ಮಿಕವಾಗಿ ಬ್ರಹ್ಮೋ ಆದ ಮಾತ್ರಕ್ಕೆ ಆತ ಬ್ರಾಹ್ಮಣ ಆಗಿ, ಹಿಂದೂ ಆಗಿ ಉಳಿಯಲಾರ ಎಂದು ನೀವು ಹೇಳುತ್ತೀರಾ?

ಜೆ. ಬ್ಯಾನರ್ಜಿ: ನಿಶ್ಚಯವಾಗಿ ಆತ ಬ್ರಾಹ್ಮಣನಾಗಿ ಉಳಿಯಲಾರ.

ಡಾ. ಬಿ. ಆರ್. ಅಂಬೇಡ್ಕರ್: ಡಾ. ಮೂಂಜೆ ಅವರೇ, ಶ್ರೀಯುತ ರಮಾನಂದ ಚಟರ್ಜಿ ಅವರು ಬ್ರಹ್ಮೋ ಆಗಿರಲಿ, ಹಿಂದೂ ಆಗಿರಲಿ, ಅವರು ಹಿಂದೂ ಮಹಾಸಭಾ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬಂದವರಲ್ಲವೇ?

ಡಾ. ಮೂಂಜೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅವರು ಹಿಂದೂ ಹಿತಾಸಕ್ತಿಯ ಪ್ರತಿಪಾದಕರಲ್ಲವೇ?

ಡಾ. ಮೂಂಜೆ ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅವರು ಅಲ್ಲಿನ ಹಿಂದೂ ಮಹಾಸಭಾದ ಅಧ್ಯಕ್ಷರಲ್ಲವೇ?

ಡಾ. ಮೂಂಜೆ: ಹೌದು. ಅಧ್ಯಕ್ಷರೇ? ಈ ಬಗ್ಗೆ ನಾನು ಕೊಂಚ ವಿವರಿಸಲೇ.

ಅಧ್ಯಕ್ಷ: ಆಗಲಿ, ವಿವರಿಸಿ.

ಡಾ. ಮೂಂಜೆ: ಮುಂಬಯಿ ಸಭೆಗೆ ಪಂಡಿತ ಮಾಳವೀಯ ಅವರು ನನ್ನನ್ನು ಕರೆದಿದ್ದರು. ಸಭೆಯಲ್ಲಿ ಚರ್ಚೆ ನಡೆದಿದ್ದಾಗ, ಡಾ. ಅಂಬೇಡ್ಕರ್ ಅವರಿಗೆ ನೆನಪಾಗಬಹುದು. ನಾನು ಎದ್ದು ನಿಂತು "ಸಂಯುಕ್ತ ಮತಕ್ಷೇತ್ರಗಳಲ್ಲಿ ನಿಮ್ಮ ವರ್ಗಗಳಿಗಾಗಿ ಮೀಸಲಾತಿಯನ್ನು ನೀಡಲು ಮಹಾತ್ಮ ಗಾಂಧಿ ಸಿದ್ಧರಿರಲಿಲ್ಲದ್ದಾಗ, ಕೈಬಿಡಬಹುದು ಎಂಬ ದೃಷ್ಟಿಯಿಂದ ಇದ್ದ ನಮಗೆ ಈ ಪ್ರಶ್ನೆ ಬಗ್ಗೆ ನಿಮ್ಮ ವರ್ಗಗಳಿಗಾಗಿ ಮೀಸಲಾತಿಗೆ ಮನ್ನಣೆ ನೀಡಲು ಮಹಾತ್ಮಾ ಗಾಂಧಿಯವರು ಒಪ್ಪಿದ ಸುದ್ದಿ ಎರಡನೆಯ ದಿನವೇ ಬಂದದ್ದನ್ನು ಕೇಳಿ ನಮಗೆ ಸಮಾಧಾನವಾಯಿತು. ನನಗೆ ತುಂಬಾ ಸಂತೋಷವಾಯಿತು. ನಂತರ ಪುಣೆ ಒಪ್ಪಂದದ ರೂಪುರೇಷೆ ಸಿದ್ಧವಾಗುತ್ತಿದ್ದ ಸಭೆಯಲ್ಲಿ ನಾನು ಪಂಡಿತ ಮಾಳವೀಯ ಅವರಿಗೆ "ಈ ಪುಣೆ ಒಪ್ಪಂದವು ಪ್ರತ್ಯೇಕ ಮತಕ್ಷೇತ್ರ ತತ್ವದ ಮೇಲೆ ರೂಪುಗೊಳ್ಳುತ್ತಿದೆ. ವೈಯಕ್ತಿಕವಾಗಿ ನಾನು ಹಾಗೂ ಹಿಂದೂ ಮಹಾಸಭಾ ಪುಣೆ ಒಪ್ಪಂದ ತತ್ವವನ್ನು ಒಪ್ಪಿಕೊಳ್ಳುವುದಿಲ್ಲ" ಎಂದು ಸ್ಪಷ್ಟಪಡಿಸಿದೆ. ನಂತರ ಈ ಬಗ್ಗೆ ಮಾತುಕತೆ ನಡೆಸಲು ಇತರ ಸದಸ್ಯರ ಸಂಗಡ ನನಗೆ ಪುಣೆಗೆ ಹೋಗಲಾಗಲಿಲ್ಲ. ಆ ಹೊತ್ತಿಗೆ ಸ್ಥಾನ ಮೀಸಲಾತಿಯನ್ನು ಮಹಾತ್ಮ ಗಾಂಧಿ ಒಪ್ಪಿಕೊಳ್ಳಲು ಸಿದ್ಧರಿದ್ದರೆಂಬ ಸಂಗತಿ ತಿಳಿದು ನನಗೆ ನೆಮ್ಮದಿ ಉಂಟಾಯಿತು. "ಗಾಂಧಿ ಜೀವಕ್ಕಿದ್ದ ಅಪಾಯ ದೂರವಾಯಿತು" ಎಂದು ಭಾವಿಸಿ ನಾನು ದೆಹಲಿಗೆ ಹೋದೆ. ದೆಹಲಿಯಲ್ಲಿ ಹಿಂದೂ ಮಹಾಸಭಾ ಸಮಾವೇಶ ನಡೆದಿದ್ದಾಗಲೇ, ಗಾಂಧಿ ಅವರು ಪುಣೆ ಒಪ್ಪಂದವನ್ನು ಒಪ್ಪಿಕೊಂಡಿದ್ದಾರೆಂಬ ತಂತಿ ಸಂದೇಶ ಬಂತು. ಗಾಂಧಿ ಜೀವ ಉಳಿಸಲು ಪ್ರತಿಯೊಬ್ಬರೂ ಸಹಜವಾಗಿಯೇ ಕಾತುರರಾಗಿದ್ದರು. ನಾವು ಹಿಂದೂ ಮಹಾಸಭಾ ಸಮಾವೇಶದಲ್ಲಿ ಒಂದು ಗೊತ್ತುವಳಿ ಅಂಗೀಕರಿಸಿದೆವು...

ಡಾ. ಬಿ. ಆರ್. ಅಂಬೇಡ್ಕರ್: ಒಪ್ಪಂದವನ್ನು ಒಪ್ಪಿಕೊಂಡು ತಾನೇ?

ಡಾ. ಮೂಂಜೆ: ಹೌದು. ಒಪ್ಪಂದವನ್ನು ಒಪ್ಪಿಕೊಂಡು. ಆದರೆ ಸ್ಥಳದಲ್ಲೇ ಪಂಜಾಬ್ ಪರವಾಗಿ ರಾಜಾ ನರೇಂದ್ರನಾಥ್ ಒಪ್ಪಂದವನ್ನು ವಿರೋಧಿಸಿದರು. ಅವರ ವಿರೋಧ ಫಲಕಾರಿಯಾಗಲಿಲ್ಲ ವೆಂಬುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಸದನದಲ್ಲಿನ ಬಹುಸಂಖ್ಯೆಯ ಸದಸ್ಯರಲ್ಲಿ ಆಗ ಭಯ ಮೂಡಿತ್ತು.....

ಝಫರುಲ್ಲಾ ಖಾನ್: ಉಪವಾಸವೆಂಬ ಭಯದ ನೆರಳಿನಿಂದಾಗಿಯೇ?

ಡಾ. ಮೂಂಜೆ: ಒಪ್ಪಂದಕ್ಕೆ ಒಪ್ಪಿಗೆ ಸಿಗದೇ ಹೋದರೆ, ಮಹಾತ್ಮ ಗಾಂಧಿಯವರ ಪ್ರಾಣ ಉಳಿಯು ವುದಿಲ್ಲವೆಂದು ಭಾವಿಸಿ ಅವರು ಪುಣೆ ಒಪ್ಪಂದವನ್ನು ಒಪ್ಪಿಕೊಂಡರು. ಇದಿಷ್ಟು ವಿವರ. ಇನ್ನೊಂದು ನಿರ್ದಿಷ್ಟ ಅಂಶವೆಂದರೆ; ಜನಸಂಖ್ಯೆಯ ಆಧಾರದ ಮೇಲೆ ಸಂಯುಕ್ತ ಮತಕ್ಷೇತ್ರಗಳಲ್ಲಿ ಸ್ಥಾನ ಮೀಸಲಾತಿ ದೊರೆತರೆ ನನಗೆ ಸಂಪೂರ್ಣವಾಗಿ ತೃಪ್ತಿಯಾಗುತ್ತದೆ ಎಂದು ಮೊದಲನೇ ಮತ್ತು ಎರಡನೇ ದುಂಡು ಮೇಜಿನ ಪರಿಷತ್ತುಗಳ ಕಾಲದಲ್ಲಿ ಡಾ. ಅಂಬೇಡ್ಕರ್ ಅವರೇ ಹೇಳಿದ್ದರು. ಎರಡನೇ ದುಂಡು ಮೇಜಿನ ಪರಿಷತ್ತಿನ ಸಮಯದಲ್ಲಿ ಸಂಯುಕ್ತ ಮತಕ್ಷೇತ್ರಗಳಲ್ಲಿ ಹಿಂದೂಗಳ ಜತೆ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ನಿಮ್ಮ ವರ್ಗಗಳಿಗೆ ಸ್ಥಾನ ಮೀಸಲಾತಿಯನ್ನು ಒದಗಿಸುವ ವಿಷಯದ ಬಗ್ಗೆ ಹಿಂದೂಗಳು ಪ್ರಧಾನಿಗೆ ತಿಳಿಸುವ ಸಲಹೆಯನ್ನು ನಾನು ಮುಂದಿಟ್ಟ ಸಂದರ್ಭವೂ ಬಂದಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಅದಕ್ಕೆ ಒಪ್ಪಲಿಲ್ಲ, ಅಲ್ಲವೇ?

ಡಾ. ಮೂಂಜೆ: ಹೌದು. ಆಗ ಡಾ. ಅಂಬೇಡ್ಕರ್ ಒಪ್ಪಲಿಲ್ಲ. ಆದರೆ ಮೊದಲ ದುಂಡುಮೇಜಿನ ಪರಿಷತ್ತಿನ ಕಾಲದಲ್ಲಿ ಡಾ. ಅಂಬೇಡ್ಕರ್ ಒಪ್ಪಿಕೊಂಡಿದ್ದರು. ಅವರ ಸಮ್ಮತಿಯಿಂದಲೇ ಈ ಅಂಶವನ್ನು ಅಮೆರಿಕಾ ಪತ್ರಿಕೆಗಳಿಗೆ ನೀಡಲಾಗಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ನಾನಿದನ್ನು ಒಪ್ಪಿಕೊಳ್ಳುವುದಿಲ್ಲ.

ಎಂ. ಆರ್. ಜಯಕರ್: ಡಾ. ಮೂಂಜೆ ಅವರೇ, ನಾನೊಂದು ಪ್ರಶ್ನೆ ಕೇಳಲೇ? ದೆಹಲಿಯಲ್ಲಿ ಹಿಂದೂ ಮಹಾಸಭಾ ಪುಣೆ ಒಪ್ಪಂದವನ್ನು ಒಪ್ಪಿಕೊಂಡ ಬಗ್ಗೆ ನೀವು ಹೇಳುತ್ತಿದ್ದಿರಲ್ಲವೇ?

ಡಾ. ಮೂಂಜೆ: ಹೌದು.

ಎಂ. ಆರ್. ಜಯಕರ್: ಹಿಂದೂ ಮಹಾಸಭಾ, ಪುಣೆ ಒಪ್ಪಂದಕ್ಕೆ ಸಮ್ಮತಿಸಿದ್ದು ಅದರ ಗುಣ ಗಮನಿಸಿ ಅಲ್ಲ; ಮಹಾತ್ಮಾಗಾಂಧಿ ಜೀವ ಉಳಿಯುತ್ತದಲ್ಲ ಎಂಬ ಕಾರಣಕ್ಕಾಗಿ ಎಂಬುದು ನೀವು ಹೇಳುತ್ತಿರುವುದರ ಅರ್ಥವೇ?

ಡಾ. ಮೂಂಜೆ: ಪುಣೆ ಒಪ್ಪಂದವು ಪ್ರತ್ಯೇಕ ಮತಕ್ಷೇತ್ರ ಆಧರಿಸಿ ರೂಪುಗೊಳ್ಳುತ್ತಿತ್ತೆಂಬ ಕಾರಣದಿಂದ ನಾನಾಗಲಿ, ಹಿಂದೂ ಮಹಾಸಭಾ ಆಗಲಿ, ಅದನ್ನು ಒಪ್ಪಿಕೊಳ್ಳಲಿಲ್ಲ ಎಂದು ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಭಾಯಿ ಪರಮಾನಂದ: ನಾನೊಂದು ಮಾತು ಹೇಳಲೇ? ಪುಣೆ ಒಪ್ಪಂದದ ಬಗ್ಗೆ, ಬಂಗಾಳದ ಹಿಂದೂಗಳಂತೆಯೇ ಪಂಜಾಬ್ ಹಿಂದೂಗಳಿಗೂ ಅದೇ ಭಾವನೆ ಇದೆ. ಹಿಂದೂ ಮಹಾಸಭಾ ಅವಸರ ದಲ್ಲಿ ಒಪ್ಪಂದಕ್ಕೆ ಸಮ್ಮತಿ ನೀಡಿದ ದಿನವೇ, ರಾಜಾ ನರೇಂದ್ರನಾಥ ಅದನ್ನು ವಿರೋಧಿಸಿದ್ದರು. ಪುಣೆ ಒಪ್ಪಂದವಾದ ೪೮ ಗಂಟೆಗಳಲ್ಲಿ ಮುಂಬಯಿಯಲ್ಲಿ ಹಿಂದೂಗಳು ಬಹಿರಂಗ ಸಭೆ ನಡೆಸಿ ಪ್ರಕಟಿಸಿದರು. ಪಂಜಾಬ್ ಹಿಂದೂಗಳ ಕಾರ್ಯದರ್ಶಿ ಕೂಡ ಪ್ರತಿಭಟಿಸಿದರೂ ಪಂಜಾಬ್ ಹಿಂದೂಗಳು ಒಪ್ಪಂದವನ್ನು ವಿರೋಧಿಸುತ್ತಿದ್ದಾರೆಂಬುದನ್ನು ಡಾ. ಗೋಕುಲಚಂದ್ ಇಲ್ಲಿನ ಪ್ರಧಾನಿಯವರಿಗೆ ತಂತಿ ಸಂದೇಶದ

ಮೂಲಕ ತಿಳಿಸಿದರು. ಹಿಂದೂಗಳು ಭಾವನಾತ್ಮಕವಾಗಿ ಈಗಲೂ ಅದನ್ನು ವಿರೋಧಿಸುತ್ತಾರೆ. ಪುಣೆ ಒಪ್ಪಂದ ಪಂಜಾಬ್ ಮೇಲೆ ತುಂಬಾ ಕೆಟ್ಟ ಪರಿಣಾಮ ಬೀರಿದೆ ಎಂದು ವಿವರಿಸುವ ಲೇಖನಗಳು ಪತ್ರಿಕೆಗಳಲ್ಲಿ ಬಂದಿವೆ. ಇನ್ನೊಂದು ವಿಷಯವೆಂದರೆ, ಜನಗಣತಿ ವರದಿಯಲ್ಲಿ ಬುತ್ವಾಲ್, ಬಾರಾವಾಲಾ, ಕಬೀರಪಂಥಿ ಡೋಂ ಎಂದು ದಾಖಲಾಗಿರುವ ಪರಿಶಿಷ್ಟ ವರ್ಗಗಳು ನಿಮ್ನ ವರ್ಗಗಳ ಭಾಗವಾದ ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಕೊಂಡಿಲ್ಲ. ಇದಕ್ಕಾಗಿ ಈ ಜನಾಂಗಗಳೂ ಚಳವಳಿ ನಡೆಸಿವೆ. ಜನಗಣತಿ ವರದಿಯಲ್ಲಿ ಓರಿಯಾ ಎಂದು ದಾಖಲಾಗಿರುವ ಈ ಜನಾಂಗಗಳ ಜನಸಂಖ್ಯೆ ಪಂಜಾಬಿನಲ್ಲಿ ೫೦ ಸಾವಿರದಷ್ಟಿದೆ. ಪರಿಶಿಷ್ಟ ವರ್ಗ ಎಂದು ಅವರು ದಾಖಲೆಗಳಲ್ಲಿ ನಮೂದಿತರಾಗಲು ಈ ಚಳವಳಿ ನಡೆಸಿದ್ದಾರೆ. ಹಿಂದೂಗಳೆಂದು ತಮ್ಮನ್ನು ಕರೆದುಕೊಳ್ಳುವ ವರ್ಗಗಳಲ್ಲೇ ನಿಮ್ನ ವರ್ಗಗಳೆನ್ನಲಾದ ಜನಾಂಗಗಳ ಬಗ್ಗೆ ಪೂರ್ವಗ್ರಹ ಪೀಡಿತ ಭಾವನೆ ಇದೆ ಎಂಬುದು ಇದರಿಂದ ಕಂಡುಬರುತ್ತದೆ. ಆದ್ದರಿಂದ ಈ ವಿಷಯದ ಬಗ್ಗೆ ಸಂಯುಕ್ತ ಆಯ್ಕೆ ಸಮಿತಿ ಗಮನಹರಿಸಿ ಹೊಸ ವರ್ಗಗಳ ಪಟ್ಟಿಯಲ್ಲಿ ಸೇರಿಕೊಳ್ಳುವ ಹಕ್ಕು ಇಂಥವರಿಗೂ ಸಿಕ್ಕುವಂತೆ ನೋಡಿಕೊಳ್ಳಬೇಕು.

ಝುಫರುಲ್ಲಾ ಖಾನ್: ಅವರು ಹೇಳಿದ ಕೊನೆಯ ಅಂಶ ಸ್ಪಷ್ಟವಾಗಲಿಲ್ಲ. ನೀವು ಹೇಳಿದ ನಿರ್ದಿಷ್ಟ ವರ್ಗಗಳು ಪರಿಶಿಷ್ಟದಲ್ಲಿ ಸೇರಬಯಸುತ್ತವೆಯೇ?

ಭಾಯಿ ಪರಮಾನಂದ: ಹೌದು.

ಝುಫರುಲ್ಲಾ ಖಾನ್: ಅವರನ್ನು ಪರಿಶಿಷ್ಟದಲ್ಲಿ ಸೇರಿಸಲಾಗಿಲ್ಲವೇ?

ಭಾಯಿ ಪರಮಾನಂದ: ಇದು ಇನ್ನೊಂದು ಅಂಶ.

ಝುಫರುಲ್ಲಾ ಖಾನ್: ವಿಷಯವನ್ನು ಸ್ಪಷ್ಟಪಡಿಸಬಯಸುತ್ತೇನೆ. ಪರಿಶಿಷ್ಟದಲ್ಲಿ ಸೇರಿರುವ ಜನಾಂಗಗಳ ಹಾಗೆ ಈ ಜನಾಂಗಗಳು ತುಳಿತಕ್ಕೆ ತುತ್ತಾಗಿಲ್ಲ?

ಭಾಯಿ ಪರಮಾನಂದ: ನನ್ನ ಅಭಿಪ್ರಾಯ ಇದು: ಪರಿಶಿಷ್ಟ ಜಾತಿಯಲ್ಲಿನ ಹಿಂದೂಗಳು ತಾವು ಎಂದು ಅವರು ಹೇಳಿಕೊಂಡಿದ್ದರಿಂದಲೇ, ಇತರ ಜನಾಂಗಗಳಿಗೆ ಕೊಟ್ಟ ಈ ಹಕ್ಕನ್ನು ಪರಿಶಿಷ್ಟ ಜಾತಿಗಳಿಗೆ ನೀಡಲಿಲ್ಲ.

ಝುಫರುಲ್ಲಾ ಖಾನ್: ಪರಿಶಿಷ್ಟದಲ್ಲಿ ಸೇರುವ ಹಕ್ಕೇ?

ಭಾಯಿ ಪರಮಾನಂದ: ಹೌದು.

ಡಾ. ಮೂಂಜೆ: ಈ ವಿಷಯವನ್ನು ನಾನು ವಿವರಿಸಲೇ?

ಲೋಥಿಯಾನ್ ಸಮಿತಿಯಿಂದ ಮತ್ತು ಜನತೆಯಿಂದ ತಿಳಿದು ಬಂದಿರುವುದೇನೆಂದರೆ, ಪಂಜಾಬಿನಲ್ಲಿ ನಿಮ್ನ ವರ್ಗಗಳ ಸಮಸ್ಯೇ ಎಂಬುದೇ ಇಲ್ಲ. ಬಂಗಾಲದಲ್ಲಿ ನಿಮ್ನ ವರ್ಗಗಳ ಸಮಸ್ಯೆ ಅಷ್ಟೇನೂ ಗಂಭೀರವಾಗಿಲ್ಲ ಅಥವಾ ಅದು ತುರ್ತಾಗಿ ಪರಿಗಣಿಸಬೇಕಾದ ಮಟ್ಟದಲ್ಲೇನೂ ಇಲ್ಲ. ಪಂಜಾಬ್ ಮತ್ತು ಬಂಗಾಲಕ್ಕೆ ಸಂಬಂಧಿಸಿದಂತೆ ಹಿಂದೂ ಮಹಾಸಭಾದ ಅಭಿಪ್ರಾಯ ಇದು.

ಈ ಅಂಶವೇ ಈಗ ದೂರಾಗಿ ಪರಿಣಮಿಸಿದೆ. ಆರ್ಯ ಸಮಾಜದವರೆಂಬ ಕಾರಣಕ್ಕಾಗಿ ತಮ್ಮನ್ನು ನಿಮ್ನ ವರ್ಗಗಳಲ್ಲಿ ಸೇರಿಸಿಲ್ಲ ಎಂದು ಈ ಜನ ದೂರುತ್ತಿದ್ದಾರೆ. ನನ್ನ ಮಿತ್ರ ಪರಮಾನಂದ ಹೇಳುತ್ತಿರುವುದೂ ಇದನ್ನೇ. ಪ್ರತ್ಯೇಕ ಮತಕ್ಷೇತ್ರ ತತ್ವದಂತೆ, ಪಂಜಾಬಿನಲ್ಲಿ ನಿಮ್ನ ವರ್ಗಗಳನ್ನು, ತಮ್ಮ ಹಿತಾಸಕ್ತಿ ಕಾಯ್ದುಕೊಳ್ಳುವ ಗುಂಪನ್ನಾಗಿ ಸೃಷ್ಟಿಸುವುದೇ ಆದರೆ ಈ ಜನಾಂಗಗಳು ಪರಿಶಿಷ್ಟರಲ್ಲಿ ಸೇರಲೇಬೇಕು.

ಇಂಥ ಗುಂಪನ್ನು ಸೃಷ್ಟಿಸಬಾರದೆಂದಾದರೆ, ನಿಮ್ನ ವರ್ಗಗಳಲ್ಲಿ ತಾವೂ ಸೇರಿದ್ದೇವೆಂದು ಹೇಳಿಕೊಳ್ಳಲು ಈ ಜನಾಂಗಗಳಿಗೆ ಸಾಧ್ಯವಿರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಒಂದು ಪ್ರಶ್ನೆ ಕೇಳಬಹುದೇ? ನಿಮ್ಮ ಅಭಿಪ್ರಾಯದಂತೆ ಪಂಜಾಬಿನಲ್ಲಿ ನಿಮ್ನ ವರ್ಗಗಳಿಲ್ಲವೆಂಬ ಕಾರಣದಿಂದ ಪುಣೆ ಒಪ್ಪಂದವನ್ನು ಪಂಜಾಬಿಗೆ ಅನ್ವಯಿಸಲು ನೀವು ಆಕ್ಷೇಪಿಸುತ್ತಿದ್ದೀರಿ?

ಭಾಯಿ ಪರಮಾನಂದ: ಇತರ ಬಹುತೇಕ ಪ್ರಾಂತಗಳಲ್ಲಿರುವ ರೀತಿಯಲ್ಲಂತೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಯಾವುದೋ ಒಂದು ರೀತಿಯಲ್ಲಾದರೂ ಇವೆಯೇ ಅಥವಾ ಇಲ್ಲವೆ? ಪಂಜಾಬಿನಲ್ಲಿ ನಿಮ್ನ ವರ್ಗಗಳಿವೆಯೇ ಅಥವಾ ಇಲ್ಲವೇ?

ಭಾಯಿ ಪರಮಾನಂದ: ಪಂಜಾಬಿನಲ್ಲಿರುವವರು ಅಸ್ಪೃಶ್ಯರಲ್ಲ; ಅವರನ್ನು ಅಲ್ಲಿ ದೂರವಿಟ್ಟಿಲ್ಲ; ಅಲ್ಲಿ ಭೇದ ಭಾವವಿಲ್ಲ. ಪಂಜಾಬಿನಲ್ಲಿ ಸವರ್ಣೀಯ ಹಿಂದೂಗಳು ಮತ್ತು ನಿಮ್ನ ವರ್ಗಗಳ ಮಧ್ಯೆ ತಾರತಮ್ಯ ಇಲ್ಲವೆಂದು ಸೈಮನ್ ಕಮೀಷನ್ ಮತ್ತು ಭಾರತ ಸರ್ಕಾರದ ವರದಿಗಳಲ್ಲೂ ಹೇಳಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಅಲ್ಲಿ ನಿಮ್ನ ವರ್ಗಗಳಿಲ್ಲ, ಆದ್ದರಿಂದ ಅವರಿಗೆ ಅವಕಾಶ ಕಲ್ಪಿಸಿಲ್ಲ ಎಂದು ಮೊದಲು ಹೇಳಿದಿರಿ. ನಂತರ ಕೆಲವೊಂದು ನಿಮ್ನ ವರ್ಗಗಳನ್ನು ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಿಲ್ಲ ಎಂದು ಹೇಳುತ್ತಿದ್ದೀರಿ. ಒಂದಕ್ಕೊಂದು ಸಂಬಂಧವೇ ಇಲ್ಲವಲ್ಲ? ನನ್ನ ಈ ಪ್ರಶ್ನೆಗೆ ಏನು ಹೇಳುತ್ತೀರಿ?

ಪಂಡಿತ್ ನಾನಕ್ ಚಂದ್: ನಾನು ಈ ಅಂಶದ ಬಗ್ಗೆ ವಿಚಾರ ಮಾಡಿದ್ದೇನೆ; ವರ್ಗಗಳನ್ನು ದೂರವಿಟ್ಟಿರುವ ಉದಾಹರಣೆಗಳಿಲ್ಲ. ಇದ್ದರೂ ತೀರಾ ಗೌಣ. ಸರ್ಕಾರಿ ಅಧಿಕಾರಿಗಳು, ಸಿಕ್ಕರು, ಮುಸಲ್ಮಾನರು ಮತ್ತು ಹಿಂದೂಗಳು ಎಲ್ಲರೂ ಇದನ್ನು ಒಪ್ಪುತ್ತಾರೆ. ಆದರೂ ಕೆಲವೊಂದು ಜನಾಂಗಗಳನ್ನು ನಿಮ್ನ ವರ್ಗಗಳೆಂದು ಪರಿಶಿಷ್ಟದಲ್ಲಿ ಸೇರಿಸಲಾಗಿದ್ದು, ಈ ಜನಾಂಗಗಳಿಗೆ– ಅವು ಆರ್ಥಿಕವಾಗಿ ಮುಂದುವರೆದವಾಗಿರಬಹುದು ಅಥವಾ ಆಗಿರದೇ ಇರಬಹುದು– ಭೂ ಖರೀದಿಯೇ ಮುಂತಾದ ಕೆಲವೊಂದು ನಿರ್ದಿಷ್ಟ ಹಕ್ಕುಗಳು ದೊರಕದ ಹಾಗಾಗಿದೆ. ಆದ್ದರಿಂದ ಇಂಥ ಜನಾಂಗಗಳು ತಮ್ಮನ್ನೂ ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಬೇಕೆಂದು ಕೇಳುತ್ತಿವೆ.

ಡಾ. ಬಿ. ಆರ್. ಅಂಬೇಡ್ಕರ್: ಆ ಜನಾಂಗಗಳು ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಬೇಕೆಂದು ನೀವು ತುಂಬಾ ಕಾತುರರಾಗಿದ್ದೀರಿ ಅಲ್ಲವೆ?

ಪಂಡಿತ್ ನಾನಕ್ ಚಂದ್: ನನಗೇನೂ ಕಾತುರ ಇಲ್ಲ; ಆ ಜನಾಂಗಗಳಿಗೆ ಕಾತುರತೆ ಇದೆ. ನಿಮ್ನ ವರ್ಗಗಳು ಎಂದು ಯಾರನ್ನೂ ಗುರುತಿಸುವುದು ನನಗೆ ಬೇಕಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಬಂಗಾಲದ ಬಿ.ಸಿ. ಚಟರ್ಜಿ ಅವರನ್ನು ನಾನು ಒಂದೆರಡು ಪ್ರಶ್ನೆ ಕೇಳಬಯಸುವೆ. ಪುಣೆ ಒಪ್ಪಂದ ರೂಪುಗೊಳ್ಳುವ ಹಂತದಲ್ಲಿ ಬಂಗಾಲದ ಹಿಂದೂಗಳಿಗೆ ಪ್ರಾತಿನಿಧ್ಯವಿರಲಿಲ್ಲ ಎಂಬುದೇ ನಿಮ್ಮ ಮುಖ್ಯ ಆಕ್ಷೇಪಣೆ ಅಲ್ಲವೇ?

ಬಿ. ಸಿ. ಚಟರ್ಜಿ: ನನ್ನ ಆಕ್ಷೇಪಣೆಗಳ ಪೈಕಿ ಇದೂ ಒಂದು. ಆದರೆ ಮುಖ್ಯ ಆಕ್ಷೇಪಣೆ ಏನೆಂದರೆ...

ಡಾ. ಬಿ. ಆರ್. ಅಂಬೇಡ್ಕರ್: ಸಧ್ಯಕ್ಕೆ ಇದನ್ನು ಮುಗಿಸೋಣ. ಮುಂಬಯಿ ಮತ್ತು ಪುಣೆಯಲ್ಲಿ ಬಂಗಾಲದ ಹಿಂದೂಗಳು ಇದ್ದರೆಂದು ನಿಮ್ಮವರೇ ಹೇಳಿದ್ದು ನಿಮ್ಮ ಗಮನಕ್ಕೆ ಬಂದಿರಬೇಕಲ್ಲವೇ?

ಬಿ. ಸಿ. ಚಟರ್ಜಿ: ಹೌದು.

ಜೆ. ಬ್ಯಾನರ್ಜಿ: ನಾನು ಹೇಳಿದ್ದು: ಪುಣೆಯಲ್ಲಿ ಒಬ್ಬ ಸವರ್ಣೀಯ ಹಿಂದೂ ಹಾಜರಿದ್ದರು ಎಂದು.

ಡಾ. ಬಿ. ಆರ್. ಅಂಬೇಡ್ಕರ್: ಇತರ ಪ್ರಾಂತಗಳಿಂದ ಬಂದ ಎಷ್ಟೋ ಹಿಂದೂಗಳು ಇರಲಿಲ್ಲವೇ?

ಬಿ. ಸಿ. ಚಟರ್ಜಿ: ಇರಬಹುದು.

ಜೆಟ್ಲಾಂಡ್‌ನ ಮಾರ್ಕ್ವೆಸ್: ಡಾ. ಅಂಬೇಡ್ಕರ್ ಅವರೇ, ಅಲ್ಲಿ ಹಾಜರಿದ್ದ ಬಂಗಾಲದ ಹಿಂದೂಗಳ ಹೆಸರುಗಳನ್ನು ನೀವು ಹೇಳಿಬಿಟ್ಟರೆ, ಈ ಇಡೀ ವಿವಾದವನ್ನು ನಾವು ಬಗೆಹರಿಸಿಕೊಂಡು ಬಿಡಬಹುದಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ೧೪ ಮಾರ್ಚ್ ೧೯೩೩ರಂದು ಬಂಗಾಲದ ವಿಧಾನ ಪರಿಷತ್ತಿನಲ್ಲಿ ಚರ್ಚೆ ನಡೆದಾಗ ಈ ಹೆಸರುಗಳನ್ನು ಹೇಳಲಾಗಿತ್ತು. ಅವನ್ನು ನಾನು ಈಗಲೂ ಹೇಳುವೆ.

ಬಿ. ಸಿ. ಚಟರ್ಜಿ: ದಯವಿಟ್ಟು ಹೆಸರು ಹೇಳಿ.

ಡಾ. ಬಿ. ಆರ್. ಅಂಬೇಡ್ಕರ್: ಈ ಹೆಸರುಗಳ ಬಗ್ಗೆ ಯಾವ ವಿರೋಧಾಭಿಪ್ರಾಯವೂ ಇಲ್ಲ.

ಬಿ. ಸಿ. ಚಟರ್ಜಿ: ಆಗ ನಾನು ಇಂಗ್ಲೆಂಡಿನಲ್ಲಿದ್ದೆ.

ಡಾ. ಬಿ. ಆರ್. ಅಂಬೇಡ್ಕರ್: ಬಂಗಾಲದ ವಿಧಾನ ಪರಿಷತ್ ಸಭೆಗೆ ಹಾಜರಾಗಿದ್ದು ನಿಮ್ನ ವರ್ಗಗಳ ಪ್ರತಿನಿಧಿ ಮಲ್ಲಿಕ್ ಅವರ ಭಾಷಣವನ್ನು ನಾನು ಉಲ್ಲೇಖಿಸಿ ಹೇಳುವುದಾದರೆ...

ಜೆ. ಬ್ಯಾನರ್ಜಿ: ಅವರು ಪರಿಷತ್‌ಗೆ ಚುನಾಯಿತ ಸದಸ್ಯರಲ್ಲ; ನೇಮಕ ಹೊಂದಿದವರು. ಇದು ಸ್ಪಷ್ಟವಾಗಿರಲಿ.

ಡಾ. ಬಿ. ಆರ್. ಅಂಬೇಡ್ಕರ್: ಅವರು ನಿಮ್ನ ವರ್ಗಗಳ ಪ್ರತಿನಿಧಿ ಹೌದೋ ಅಲ್ಲವೋ?

ಜೆ. ಬ್ಯಾನರ್ಜಿ: ಅವರು ಎರಡು ಸಲ ಚುನಾವಣೆಗೆ ನಿಂತು ಸೋತುಹೋಗಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಈಗ ಹೇಳ ಹೊರಟಿರುವಂಥ ಅಂಶಕ್ಕೆ ನಿಮ್ಮ ಈ ವಿವರಣೆ ಯಾವ ರೀತಿಯಲ್ಲಿ ಸಂಬಂಧಪಟ್ಟಿದೆ? ಸಭೆಯಲ್ಲಿ ಬಂಗಾಲದ ಹಿಂದೂಗಳು ಹಾಜರಿದ್ದರೋ ಇಲ್ಲವೋ ಎಂಬ ಬಗ್ಗೆ ನಾನು ಅವರ ಭಾಷಣವನ್ನು ಉಲ್ಲೇಖಿಸುತ್ತಿರುವೆ. ಪುಣೆ ಒಪ್ಪಂದವನ್ನು ಬೆಂಬಲಿಸಿದ ಬಂಗಾಲ ನಿಮ್ನ ವರ್ಗಗಳ ಸದಸ್ಯರೊಬ್ಬರ ಹೇಳಿಕೆ ಬಂಗಾಲ ವಿಧಾನಪರಿಷತ್ತಿನ ಕಲಾಪದಲ್ಲಿ ಸೇರಿದ್ದು, ಅದನ್ನು ಇಲ್ಲಿ ಉಲ್ಲೇಖಿಸುವೆ.

> "ಹಿಂದೂ ಮಿಷನ್‌ನ ಸ್ವಾಮಿ ಸತ್ಯಾನಂದ, ಅಮೃತ ಸಮಾಜದ ಬಾಬು ಹರಿದಾಸ ಮಂಜುಂದಾರ್ ಎಂ.ಎ., ಬಿ.ಎಲ್., ಮಿಡ್ನಾಪುರ ಎಂ.ಎಲ್.ಸಿ. ಬಾಬು ಪ್ರಮಥನಾಥ ಬ್ಯಾನರ್ಜಿ, ಖಾದಿ ಪ್ರತಿಷ್ಠಾನದ ಬಾಬು ಎಸ್. ಸಿ. ದಾಸ್ ಗುಪ್ತಾ ಅಲ್ಲದೆ ಪಂಡಿತ ಮಾಳವೀಯ, ಸರ್ ತೇಜ್ ಬಹದ್ದೂರ್ ಸಪ್ರು, ಎಂ. ಆರ್. ಜಯಕರ್, ರಾಜಗೋಪಾಲಾಚಾರಿ ಮುಂತಾದವರು ಇದ್ದರೆಂಬುದನ್ನು ನಾವು ಬಲ್ಲೆವು."

ಜೆ. ಬ್ಯಾನರ್ಜಿ: ಇವರ ಪೈಕಿ ಒಬ್ಬರನ್ನು ಹೊರತುಪಡಿಸಿ ಬೇರಾರೂ ಪುಣೆಯಲ್ಲಿ ಇರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಪರಿಷತ್ತಿನ ಹೇಳಿಕೆ ಇದು.

ಜೆ. ಬ್ಯಾನರ್ಜಿ: ಮುಂದುವರೆಸಲು ನನಗೆ ಅವಕಾಶ ಕೊಡುವಿರಾ?

ಡಾ. ಬಿ. ಆರ್. ಅಂಬೇಡ್ಕರ್: ನಾನು ಪ್ರಶ್ನೆ ಕೇಳಿದಾಗ ದಯವಿಟ್ಟು ಉತ್ತರಿಸಿ.

ಜೆ. ಬ್ಯಾನರ್ಜಿ: ಈ ಹೇಳಿಕೆ ಸರಿಯಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಬಂಗಾಲ ವಿಧಾನ ಪರಿಷತ್ತಿನಲ್ಲಿ ಈ ಹೇಳಿಕೆಯನ್ನು ನೀಡಿದಾಗ ಯಾರೂ ಅಲ್ಲಗಳೆಯಲಿಲ್ಲವಲ್ಲ?

ಜೆ. ಬ್ಯಾನರ್ಜಿ: ಆ ದಿನ ನಾನು ಅಲ್ಲಿದ್ದೆ. ಅಂದು ಯಾರೂ ಭಾಷಣ ಮಾಡಲಿಲ್ಲ. ಕೆಲವೊಂದು ಹೇಳಿಕೆಯನ್ನು ಓದಲಾಯಿತು. ಈ ಅಂಶಗಳು ಅಂದು ಸದಸ್ಯರ ಗಮನಕ್ಕೆ ಬಂದಿಲ್ಲದಿರಬಹುದು. ಹೇಳಿಕೆಯನ್ನು ಅಸ್ಪಷ್ಟವಾಗಿ ಅಲ್ಲಿ ಓದಿದರು.

ಎಂ. ಆರ್. ಜಯಕರ್: ನಿಮ್ಮ ಪರಿಷತ್ತಿನ ನಡವಳಿಕೆಗಳನ್ನು ಪ್ರಕಟಿಸಲಾಗಿದೆಯಲ್ಲವೇ?

ಜೆ. ಬ್ಯಾನರ್ಜಿ: ಹೌದು.

ಎಂ. ಆರ್. ಜಯಕರ್: ಈ ಹೇಳಿಕೆ ಪ್ರಕಟವಾದ ಬಳಿಕ ಯಾರಾದರೂ ವಿರೋಧಾಭಿಪ್ರಾಯ ಸೂಚಿಸಿದ್ದರೇ?

ಜೆ. ಬ್ಯಾನರ್ಜಿ: ಹೌದು. ಚರ್ಚೆಯಲ್ಲಿ ಕೆಲವೊಂದು ಹೆಸರುಗಳು ಪ್ರಸ್ತಾಪವಾದ ಕೂಡಲೇ, ಪತ್ರಿಕೆಗಳ ಮೂಲಕ ವಿರೋಧಾಭಿಪ್ರಾಯ ವ್ಯಕ್ತಪಡಿಸಲಾಯಿತು.

ಡಾ. ಬಿ. ಆರ್. ಅಂಬೇಡ್ಕರ್: ಈ ಜನರು ಮುಂಬಯಿಯಲ್ಲಿ ಹಾಜರಿರಲಿಲ್ಲವೇ?

ಜೆ. ಬ್ಯಾನರ್ಜಿ: ನಾನು ಪುಣೆ ಬಗ್ಗೆ ಮಾತಾಡುತ್ತಿರುವೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ನಾನು ಮೊಟ್ಟ ಮೊದಲು ಮುಂಬಯಿ ವಿಚಾರ ಹೇಳುತ್ತಿರುವೆ. ಉಪಸಮಿತಿ ರಚನೆಯಾದಾಗ ಈ ಜನ ಮುಂಬಯಿಯಲ್ಲಿ ಇದ್ದರು. ನನ್ನ ಕಚೇರಿಯಲ್ಲಿ ಒಬ್ಬೊಬ್ಬರಾಗಿ ನನ್ನೊಂದಿಗೆ ಮಾತಾಡಿ "ದಯವಿಟ್ಟು ಒಪ್ಪಂದ ಮಾಡಿಕೊಳ್ಳಿ" ಎಂದು ಕೋರಿದ್ದರು. ಮುಂಬಯಿ ಟೈಂಸ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಈ ವಿಷಯವನ್ನು ನಾನು ಹೇಳಿದ್ದೆ. ನಿಮ್ಮ ಪರಿಷತ್ ಕಲಾಪಗಳು ಪ್ರಕಟವಾದ ಕೂಡಲೇ, ಮಾರ್ಚ್ ೧೭ರಂದು ಈ ಸಂದರ್ಶನ ಪ್ರಕಟವಾಯಿತು.

ಜೆ. ಬ್ಯಾನರ್ಜಿ: ನಿಮ್ಮ ಹೇಳಿಕೆಯನ್ನು ನಾನು ಮರುದಿನವೇ ಅಲ್ಲಗಳೆದೆ. ಸದಸ್ಯರ ಪೈಕಿ ಮೂವರು ಪುಣೆ ಒಪ್ಪಂದವಾದಾಗ ಪುಣೆಗೆ ಹೋಗಿರಲೇ ಇಲ್ಲ. ಇದನ್ನು ನೀವೇ ಒಪ್ಪಿಕೊಂಡಿದ್ದೀರಿ.

ಬಿ. ಸಿ. ಚಟರ್ಜಿ: ಇಲ್ಲಿ ಯಾರೂ ಯಾರನ್ನೂ ವಿವರಣೆ ಕೇಳಬೇಕಿಲ್ಲ. ಅವರನ್ನು ಮುಂಬಯಿಗೆ ಕಳಿಸಲಾಯಿತೇ? ಪುಣೆಗೆ ಹೋದ ಸದಸ್ಯರನ್ನು ಬಂಗಾಲದ ಹಿಂದೂಗಳು ಅಥವಾ ಬಂಗಾಲದ ಹಿಂದೂಗಳಲ್ಲಿ ಯಾರಾದರೊಬ್ಬರು ಕಳಿಸಿದರೇ? ಈ ಬಗ್ಗೆ ಡಾ. ಅಂಬೇಡ್ಕರ್ ಕೂಡ ವಿವರಣೆ ನೀಡಬೇಕಿಲ್ಲ. ಈ ಸದಸ್ಯರು ಅಲ್ಲಿಗೆ ಆಕಸ್ಮಿಕವಾಗಿ ಹೋಗಿರಬಹುದು; ಹಾಸಿಗೆ ಹಿಡಿದಿದ್ದ ಮಹಾತ್ಮ ಗಾಂಧಿಯನ್ನು ನೋಡಲು ಅವರು ಹೋಗಿದ್ದಿರಬಹುದು; ಕೆಲವರಂತೂ ವಾಸ್ತವವಾಗಿ ಗಾಂಧಿ ಶವ ಹೊರುವ ಸೌಭಾಗ್ಯವನ್ನು ತಮ್ಮದಾಗಿಸಿಕೊಳ್ಳಲು ಹೋಗಿದ್ದರು.

ಡಾ. ಬಿ. ಆರ್. ಅಂಬೇಡ್ಕರ್: ಎಲ್ಲರಿಗೂ ತಿಳಿದಿದ್ದಂತೆ, ಕಲ್ಕತ್ತಾದಿಂದ ಹೊರಟಿದ್ದ ಈ ಸದಸ್ಯರ ನಿರ್ದಿಷ್ಟ ಉದ್ದೇಶ ಮಾಳವೀಯ ಸಮ್ಮೇಳನಕ್ಕೆ ಹಾಜರಾಗುವುದಿತ್ತು. "ಲಿಬರ್ಟಿ" ಪತ್ರಿಕೆಯಲ್ಲಿ ಇದು ಪ್ರಕಟವಾಗಿದೆ.

ಜೆ. ಬ್ಯಾನರ್ಜಿ: ಬಂಗಾಲದ ಯಾವುದೇ ಸಾರ್ವಜನಿಕ ಸಂಸ್ಥೆಯಿಂದ ಅಧಿಕೃತವಾಗಿ ಅವರು ಅಲ್ಲಿಗೆ ಹೋಗಿರಲಿಲ್ಲ. ತಮ್ಮ ಖಾಸಗಿ ವ್ಯವಹಾರ ಅಥವಾ ಇನ್ನಾವುದೇ ಕೆಲಸದ ಮೇಲೆ ಅವರು ಅಲ್ಲಿಗೆ ಹೋಗಿರಬಹುದು. ನಾನು ಡಾ. ಅಂಬೇಡ್ಕರ್ ಅವರಿಗೆ ಒಂದು ವಿಷಯವನ್ನು ನಿವೇದಿಸಲೇ? ಬಂಗಾಲದಲ್ಲಿ ನಿಮ್ಮ ವರ್ಗಗಳಿವೆ ಎಂಬ ಹೇಳಿಕೆ ಇರುವುದೇ ಬಂಗಾಲದವರ ಪಾಲಿಗೆ ಕಳಂಕ ಎಂದು ನಾವು ಭಾವಿಸುತ್ತೇವೆ. ಜಾತಿ ಶೃಂಖಲೆ ಮತ್ತಿತರ ತಾರತಮ್ಯಗಳನ್ನು ತೊಡೆದು ಹಾಕಲು ಬಂಗಾಲಿ ಹಿಂದೂಗಳು ಶತಮಾನದಿಂದ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. ಇದನ್ನು ಡಾ. ಅಂಬೇಡ್ಕರ್ ಒಪ್ಪುವುದಿಲ್ಲವೇ?

ನಿಮ್ನ ವರ್ಗಗಳು ಯಾವುವು ಎಂಬುದನ್ನು ನಿರ್ಧರಿಸಲು ಲೋಥಿಯಾನ್ ಸಮಿತಿ ಅಸ್ಪೃಶ್ಯತೆ ಮತ್ತು ದೂರವಾಸ ಎಂಬ ಎರಡು ಅಂಶಗಳನ್ನು ಮೂಲಾಧಾರವಾಗಿ ಪರಿಗಣಿಸಿದ್ದು ಸರಿಯಾಗೇ ಇದೆ. ಯಾರು ಅಸ್ಪೃಶ್ಯತೆಗೆ ಮತ್ತು ದೂರವಾಸಕ್ಕೆ ಗುರಿಯಾಗಿದ್ದಾರೆಂಬ ಬಗ್ಗೆ ಬಂಗಾಲ ಸರ್ಕಾರ ವಿಚಾರಣೆ ನಡೆಸಬೇಕು. ಆಗ ಸಂಯುಕ್ತ ಮತಕ್ಷೇತ್ರ ಆಧಾರದಂತೆ ಬಂಗಾಲ ವಿಧಾನ ಪರಿಷತ್‌ನಲ್ಲಿ ಅವರ ಸಂಖ್ಯೆಗೆ ಅನುಗುಣವಾದ ಪ್ರಾತಿನಿಧ್ಯ ನೀಡಲು ನಾವು ಸಿದ್ಧರಾಗಿರಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಸಂಯುಕ್ತ ಮತ ಕ್ಷೇತ್ರಗಳ ವಿಷಯವನ್ನು ನಾನು ಚರ್ಚಿಸುತ್ತಿಲ್ಲ. ಮಾಳವೀಯ ಸಮಾವೇಶಕ್ಕೆ ಹಾಜರಾಗಲು ಬಂಗಾಲದ ಕೆಲ ಸವರ್ಣೀಯ ಹಿಂದೂಗಳು ಮುಂಬಯಿಗೆ ಹೋದ ಮಹತ್ವದ ವಿಷಯದ ಬಗ್ಗೆ ನಾನು ಮಾತನಾಡುತ್ತಿರುವೆ. ಕಲ್ಕತ್ತಾದಿಂದ ಹೊರಡುವ “ಲಿಬರ್ಟಿ” ಪತ್ರಿಕೆಯ (೧೭ ಸೆಪ್ಟೆಂಬರ್ ೧೯೩೨) ೫ನೇ ಪುಟದ ೪ನೇ ಕಾಲಂನಲ್ಲಿ ಈ ವಿಷಯದ ಸುದ್ದಿಯು ದೊಡ್ಡಕ್ಷರಗಳಲ್ಲಿ “ಸ್ವಾಮಿ ಸತ್ಯಾನಂದ, ಅಮೃತ ಸಮಾಜದ ಹರಿದಾಸ ಮಜುಂದಾರ್, ಜನೇಶ್ವರ ಮಂಡಲ್ ಅವರು ಮಾಳವೀಯ ಸಮಾವೇಶದಲ್ಲಿ ಭಾಗವಹಿಸಲು ಮುಂಬಯಿಗೆ ಈ ರಾತ್ರಿ ತೆರಳಲಿದ್ದಾರೆ” ಎಂದು ಪ್ರಕಟವಾಗಿದೆ. ಅವರು ತಮ್ಮ ಸ್ವಂತ ಕೆಲಸಕ್ಕೇನೂ ಹೊರಟಿರಲಿಲ್ಲ, ಅಲ್ಲವೇ?

ಬಿ. ಸಿ. ಚಟರ್ಜಿ: ಈ ಜನವೆಲ್ಲಾ ಯಾರು ಎಂದು ನನಗಂತೂ ಗೊತ್ತೇ ಇಲ್ಲ. ಅವರ ಬಗ್ಗೆ ನಾನು ಕೇಳುತ್ತಿರುವುದು ಇದೇ ಮೊದಲು. ತಮ್ಮ ಪ್ರಸ್ತಾಪದ ಪ್ರಚಾರ ಮಾಡಿಕೊಳ್ಳಲು ಈ ಜನ ಈ ಸುದ್ದಿಯನ್ನು ಪ್ರಕಟಿಸಿಕೊಂಡಿರಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಮುಂಬಯಿಯಲ್ಲಿ ನಡೆಯಲಿದ್ದ ಮಾಳವೀಯ ಸಮಾವೇಶದಲ್ಲಿ ಭಾಗವಹಿಸಲು ಕೆಲವು ಸವರ್ಣೀಯ ಹಿಂದೂಗಳು ಹೊರಟಿದ್ದಾರೆ ಎಂಬುದು ಬಂಗಾಲದ ಜನತೆಗೆ ಗೊತ್ತಾಗಿತ್ತು; ನಾನು ಹೇಳಬಯಸುವ ಅಂಶವೇ ಇದು. ಈ ಜನರು ಯಾರೋ ಎಂದಾಗಿದ್ದರೆ ಬಂಗಾಲದ ಸವರ್ಣೀಯ ಹಿಂದೂಗಳಲ್ಲಿ ಯಾರಾದರೂ ಮಾಳವೀಯ ಅವರಿಗೆ ಸುದ್ದಿ ಕಳಿಸಿ ಈ ಜನರನ್ನು ನಂಬದಿರಲು ತಿಳಿಸುತ್ತಿದ್ದರು.

ಬಿ. ಸಿ. ಚಟರ್ಜಿ: “ಲಿಬರ್ಟಿ” ಪತ್ರಿಕೆಯ ಯಾವುದೇ ಕಾಲಂನಲ್ಲಿ ಪ್ರಕಟವಾದ ಸುದ್ದಿಯನ್ನು ಬಂಗಾಲದ ಹಿಂದೂಗಳು ಗಂಭೀರವಾಗಿ ಪರಿಗಣಿಸಬೇಕೆಂದು ಅಪೇಕ್ಷಿಸುವುದು ಸಮರ್ಥನೀಯವೇನಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಬಂಗಾಲದ ಪ್ರತಿಯೊಬ್ಬರೂ ಈ ಅಂಶವನ್ನು ತಿಳಿದಿರಬೇಕಾಗಿತ್ತು ಎಂದಷ್ಟೇ ನಾನು ಹೇಳುತ್ತಿದ್ದೇನೆ.

ಬಿ. ಸಿ. ಚಟರ್ಜಿ: ಯಾರೂ ಪತ್ರಿಕೆಯನ್ನು ಮೊದಲಿನಿಂದ ಕೊನೆವರೆಗೆ ಕಾಲಂ ಕಾಲಂ ಹುಡುಕಿ ಓದುವುದಿಲ್ಲ. ಈ ಸುದ್ದಿ ನಮ್ಮ ಗಮನಕ್ಕೆ ಬರಲೇ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಈ ಬಗ್ಗೆ ನಾನು ಮತ್ತೆ ಒತ್ತಿ ಕೇಳುವುದಿಲ್ಲ ಬಿಡಿ.

ಸರ್ ಆಸ್ಟಿನ್ ಚೆಂಬರ್‌ಲೇನ್: ಮುಂಬಯಿಯಲ್ಲಿ ಇಂಥ ಒಂದು ಸಮಾವೇಶ ನಡೆಯುವುದಿತ್ತೆಂಬ ಸುದ್ದಿ ತಮಗೆ ತಿಳಿದಿರಲಿಲ್ಲವೆಂಬುದು ಚಟರ್ಜಿ ಅಭಿಪ್ರಾಯವೇ?

ಬಿ. ಸಿ. ಚಟರ್ಜಿ: ಸಮಾವೇಶ ನಡೆಯಲಿದೆ ಎಂಬುದು ನಮಗೆ ಗೊತ್ತಿತ್ತು. ಆದರೆ, ಸಮಾವೇಶಕ್ಕೆ ಬಂಗಾಲದಿಂದ ಯಾರಾದರೂ ಹೋಗಲಿರುವ ವಿಷಯ ಮಾತ್ರ ತಿಳಿದಿರಲಿಲ್ಲ.

ಸರ್ ಆಸ್ಟಿನ್ ಚೇಂಬರ್‌ಲೇನ್: ಜವಾಬ್ದಾರಿಯುತ ಸಂಘಟನೆ ನಿಮ್ಮದು ಎಂದುಕೊಳ್ಳುವ ನೀವು

ಸಮಾವೇಶದಲ್ಲಿ ಚರ್ಚೆಗೆ ಬರಲಿರುವ ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಮಂಡಿಸಲು ಸಮಾವೇಶಕ್ಕೆ ಯಾರನ್ನೂ ಏಕೆ ಕಳಿಸಲಿಲ್ಲ?

ಬಿ. ಸಿ. ಚಟರ್ಜಿ: ಅಲ್ಲಿ ಏನು ನಡೆಯಲಿದೆ ಎಂಬುದು ನಮಗೆ ಗೊತ್ತೇ ಇರಲಿಲ್ಲ. ನಾನು ಪ್ರಾಮಾಣಿಕ ವಾಗಿ ಹೇಳುತ್ತೇನೆ. ಕಲ್ಕತ್ತಾದಲ್ಲಿರುವ ನಮಗೆ ಮಹಾತ್ಮಾಗಾಂಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ ಎಂಬುದರ ಹೊರತು ಇನ್ನಾವ ವಿಷಯವೂ ತಿಳಿದಿರಲಿಲ್ಲ.

ಜೆ. ಬ್ಯಾನರ್ಜಿ: ಬಂಗಾಲದ ಸವರ್ಣೀಯ ಹಿಂದೂಗಳ ಹಣೆಬರಹವನ್ನು ನಿಶ್ಚಯಿಸಲೆಂದೇ ಮಾಳವೀಯ ಸಮಾವೇಶ ಸೇರಿರಲಿಲ್ಲ. ಹಾಗಾಗಿ ಈ ಸಮಾವೇಶದ ಸುದ್ದಿಗೆ ನಾವು ಹೆಚ್ಚಿನ ಪ್ರಾಮುಖ್ಯತೆ ಕೊಡಲೇ ಇಲ್ಲ. ಆದ್ದರಿಂದಲೇ ನಮ್ಮ ಸಂಘಟನೆ ಪರವಾಗಿ ಯಾರೂ ಅಲ್ಲಿಗೆ ಹೋಗಲಿಲ್ಲ. ನಿಜವಾಗಿ ಮುಖ್ಯವಾಗಿದ್ದು ಪೂನಾ ಸಮಾವೇಶ.

ಸರ್ ಆಸ್ಟಿನ್ ಚೇಂಬರ್‌ಲೇನ್: ಸಮಾವೇಶ ನಡೆಯುವ ವಿಷಯ ನಿಮಗೆ ಗೊತ್ತಿತ್ತು. ಆದರೆ ಅಲ್ಲಿ ಹಾಜರಾಗುವುದು ಅಗತ್ಯ ಎಂದು ನಿಮಗೆ ತೋರಲಿಲ್ಲ ಅಲ್ಲವೇ?

ಜೆ. ಬ್ಯಾನರ್ಜಿ: ಮುಂಬಯಿ ಮತ್ತು ಪುಣೆಯಲ್ಲಿ ನಡೆದ ಎರಡು ಸಮಾವೇಶಗಳ ಬಗ್ಗೆ ನಿಮಗೆ ಗೊಂದಲವಾದಂತಿದೆ. ಒಪ್ಪಂದಕ್ಕೆ ಸಹಿ ಬಿದ್ದಿದ್ದು ಪುಣೆಯ ಸಮಾವೇಶದಲ್ಲಿ. ಈ ಮುಖ್ಯ ಸಮಾವೇಶಕ್ಕೆ ಸವರ್ಣೀಯ ಹಿಂದೂಗಳನ್ನು ಆಹ್ವಾನಿಸಿರಲಿಲ್ಲ. ಮುಂಬಯಿಯಲ್ಲಿ ನಡೆದದ್ದು ಒಂದು ರೀತಿಯ ಪೂರ್ವಭಾವಿ ಸಮಾವೇಶ. ಆದ್ದರಿಂದ ಇದಕ್ಕೆ ನಾವು ಹೆಚ್ಚಿನ ಪ್ರಾಮುಖ್ಯತೆ ನೀಡದಿದ್ದುದು ನ್ಯಾಯವಾಗಿಯೇ ಇದೆ.

ಮಿ. ಝುಫರುಲ್ಲಾ ಖಾನ್: "ಈ ಸಮಾವೇಶಕ್ಕೂ ನಮಗೂ ಸಂಬಂಧವಿಲ್ಲ. ಆದ್ದರಿಂದ ಹೆಚ್ಚಿನ ಯಾವ ಫಲಿತಾಂಶವೂ ಹೊರಬೀಳದು. ಈ ಸಮಾವೇಶದಿಂದಾಗಿ ಮಹಾತ್ಮಾ ಗಾಂಧಿ ಜೀವ ಉಳಿದರೆ ಒಳ್ಳೆಯದು. ನಮ್ಮ ಹಿತಾಸಕ್ತಿಗೆ ಏನಾದರೂ ಧಕ್ಕೆ ಬಂದರೆ ಮುಂದೆ ನೋಡಿಕೊಳ್ಳೋಣ" ಎಂಬುದು ಬಂಗಾಲದ ಹಿಂದೂಗಳ ದೃಷ್ಟಿಕೋನವಾಗಿತ್ತು ಎಂದು ತೋರುತ್ತದೆ. ಹೌದೇ ಚಟರ್ಜಿ ಅವರೇ.

ಬಿ. ಸಿ. ಚಟರ್ಜಿ: ಊಹೂಂ, ಹಾಗಲ್ಲ. ಪ್ರಾಂತೀಯ ಮತದಾನ ಸಮಿತಿ ಮತ್ತು ಲೋಥಿಯಾನ್ ಸಮಿತಿ ಜತೆಗೆ ಸಹಕಾರ ನೀಡುವ ಸದವಕಾಶವು ನನ್ನ ಪಾಲಿಗೆ ಬಂದಿತ್ತು. ಅಸ್ಪೃಶ್ಯರು ಯಾರೆಂಬ ಬಗ್ಗೆ ನಾವು ಕೂಲಂಕಷವಾಗಿ ತನಿಖೆ ನಡೆಸಿದೆವು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಕೇಳುವ ಅಂಶ ಬಿಟ್ಟು ನೀವು ಬೇರೆಯದನ್ನೇ ಹೇಳುತ್ತಿದ್ದೀರಿ. ಮುಂಬಯಿ ಮತ್ತು ಪುಣೆಯಲ್ಲಿ ಏನೇನು ನಡೆಯಿತು ಎಂಬು ಬಗ್ಗೆ "ಲಿಬರ್ಟಿ" ಪತ್ರಿಕೆ ನಿಯತವಾಗಿ ಸುದ್ದಿ ಪ್ರಕಟಿಸುತ್ತಿತ್ತು. ಇದನ್ನು ನಿವು ಅಲ್ಲಗಳೆಯುವಿರಾ?

ಬಿ. ಸಿ. ಚಟರ್ಜಿ: ದಯವಿಟ್ಟು ಕ್ಷಮಿಸಿ. ನಾನು ಎಂದು "ಲಿಬರ್ಟಿ" ಪತ್ರಿಕೆ ಓದುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಇಲ್ಲಿ "ಲಿಬರ್ಟಿ" ಪತ್ರಿಕೆ ಓದಿದ್ದೇನೆ. "ದಿ ಸ್ಟೇಟ್ಸ್‌ಮನ್" ಪತ್ರಿಕೆಯನ್ನೂ ನಾನು ಉಲ್ಲೇಖಿಸಬಹುದಾಗಿತ್ತು; ಅದನ್ನೂ ತಂದು ತೋರಿಸಬಹುದಾಗಿತ್ತು. ಆದರೆ, ನಾನು ಅದನ್ನು ಬೇಕೆಂದೇ ತರಲಿಲ್ಲ. ಏಕೆಂದರೆ, ಆ ಪತ್ರಿಕೆಗೆ ಆಂಗ್ಲೋ ಇಂಡಿಯನ್ ಎಂದು ನೀವು ಹಣೆಪಟ್ಟಿ ಹಚ್ಚಿಬಿಡುತ್ತೀರೆಂದು ನನಗೆ ತಿಳಿದಿತ್ತು.

ಬಿ. ಸಿ. ಚಟರ್ಜಿ: ನಾನೇಕೆ ಹಾಗೆ ಹೇಳಲಿ?

ಡಾ. ಬಿ. ಆರ್. ಅಂಬೇಡ್ಕರ್: ಅದು (ಲಿಬರ್ಟಿ ಪತ್ರಿಕೆ) ಹಿಂದೂಗಳ ಪತ್ರಿಕೆ ಎಂಬುದು ನನಗೆ ಗೊತ್ತು. ಆದ್ದರಿಂದ ಅದನ್ನು ಉದ್ದೇಶಪೂರ್ವಕವಾಗಿ ನಾನು ತಂದಿರುವೆ.

ಬಿ. ಸಿ. ಚಟರ್ಜಿ: ಈ ಪತ್ರಿಕೆ ನನ್ನ ಮನೆಗೆ ಬರುತ್ತದೆ. ನಾನು ಆಗಾಗ ಓದುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ೨೦ನೇ ತಾರೀಖು ನಡೆದ ಮಾಳವೀಯ ಸಮಾವೇಶದ ಕಲಾಪಗಳು "ಲಿಬರ್ಟಿ" ಪತ್ರಿಕೆಯ ಮುಖಪುಟದ ತುಂಬಾ ಪ್ರಕಟವಾಗಿದೆ.

ಬಿ. ಸಿ. ಚಟರ್ಜಿ: ನಾನು ಅದನ್ನು ನಿಮ್ಮಿಂದಲೇ ಕೇಳುತ್ತಿದ್ದೇನೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಪತ್ರಿಕೆಯನ್ನು ನಿಮ್ಮ ಬಳಿಗೆ ಕಳಿಸುತ್ತೇನೆ. ನೀವು ಕಣ್ಣಾರೆ ನೋಡ ಬಹುದು.

ಬಿ. ಸಿ. ಚಟರ್ಜಿ: ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುವೆ.

ಡಾ. ಬಿ. ಆರ್. ಅಂಬೇಡ್ಕರ್: ಅದೇ ಪ್ರಕಾರ, ೨೧ರಂದು ಏನೇನು ನಡೆಯಿತು ಎಂಬುದು ೨೨ರ ಪತ್ರಿಕೆಯ ಮುಖಪುಟದಲ್ಲೇ ಪ್ರಕಟವಾಗಿದೆ.

ಬಿ. ಸಿ. ಚಟರ್ಜಿ: ಇರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಇದರಿಂದ ಪುಣೆ ಮತ್ತು ಮುಂಬಯಿಯಲ್ಲಿ ಏನು ನಡೆಯುತ್ತಿತ್ತು ಎಂಬುದು ಬಂಗಾಲದಲ್ಲಿ ಯಾರಾದರೂ ತಿಳಿಯುವಂತಿತ್ತು. ನಿಮಗೆ ಇನ್ನೊಂದು ಪ್ರಶ್ನೆ.....

ಬಿ. ಸಿ. ಚಟರ್ಜಿ: "ಬಂಗಾಲದ ಸಾರ್ವಜನಿಕ ಬದುಕಿಗೆ ಅನ್ವಯವಾಗುವ ಇಂಥ ಪ್ರಮುಖ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಣಯ ಕೈಗೊಳ್ಳುವ ಮುನ್ನ ಚರ್ಚೆಯಲ್ಲಿ ಪಾಲುಗೊಳ್ಳಲು ನಿಮ್ಮ ಪ್ರತಿನಿಧಿಯನ್ನು ಕಳಿಸಿ" ಎಂದು ಬಂಗಾಲದ ಸಾರ್ವಜನಿಕ ಸಂಸ್ಥೆಗಳನ್ನು ಕೋರಲಾಗುವುದೆಂದು ನಾವು ಭಾವಿಸಿದ್ದೆವು.

ಡಾ. ಬಿ. ಆರ್. ಅಂಬೇಡ್ಕರ್: ಉಪಸಮಿತಿ ರಚನೆಯಾದಾಗ ಅಲ್ಲಿನ ಪ್ರಾತಿನಿಧ್ಯದ ಬಗ್ಗೆ ಯಾವ ಪ್ರತಿಭಟನೆಯೂ ಕಂಡುಬರಲಿಲ್ಲ; ಅಲ್ಲವೇ?

ಬಿ. ಸಿ. ಚಟರ್ಜಿ: ಪ್ರತಿಭಟನೆ ಸೂಚಿಸುವ ಹಕ್ಕಾದರೂ ಯಾರಿಗಿತ್ತು?

ಡಾ. ಬಿ. ಆರ್. ಅಂಬೇಡ್ಕರ್: ೧೯೩೨ರ ಸೆಪ್ಟೆಂಬರ್ ೨೨ರ 'ಲಿಬರ್ಟಿ' ಪತ್ರಿಕೆ ನೋಡಿ. ಯಾವ ದಾಖಲೆಗಳ ಆಧಾರದ ಮೇಲೆ ನಾನು ಮಾತುಕತೆಗೆ ಸಿದ್ಧ ಎಂಬ ಬಗ್ಗೆ ಅಲ್ಲಿ ವರದಿಯಾಗಿದೆ. ನಾನು ಆಧಾರವನ್ನು ಸೂಚಿಸಿದೆ ಎಂಬುದನ್ನು ಶ್ರೀಯುತ ಜಯಕರ್ ಅವರು ದೃಢೀಕರಿಸುತ್ತಾರೆ. ಬಂಗಾಲದಲ್ಲಿ ೫೦ ಸ್ಥಾನಗಳ ಬೇಡಿಕೆಯನ್ನು ನಾನು ಮಂಡಿಸಿದ್ದೆ.

ಜೆ. ಬ್ಯಾನರ್ಜಿ: ನಿಮ್ಮ ವರ್ಗಗಳಿಗಾಗಿಯೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ನಿಮ್ಮ ವರ್ಗಗಳಿಗಾಗಿ, ಒಪ್ಪಂದ ಕುರಿತು ಮಾತುಕತೆ ನಡೆಸಬೇಕಿದ್ದ ಪಂಡಿತ ಮಾಳವೀಯ ಅವರಿಗೆ ನನ್ನ ಈ ಬೇಡಿಕೆಯನ್ನು ಬಂಗಾಲದ ಯಾವ ಸವರ್ಣೀಯ ಹಿಂದೂ ತಿಳಿಸಲಿಲ್ಲ; ಪ್ರತಿ ಹೇಳಿಕೆ ನೀಡಲಿಲ್ಲ; ನೀವಾದರೂ ಪುಣೆಗೆ ಪ್ರತಿನಿಧಿಯಾಗಿ ಯಾರನ್ನೂ ಕಳಿಸಲಿಲ್ಲ.

ಜೆ. ಬ್ಯಾನರ್ಜಿ: ಡಾ. ಅಂಬೇಡ್ಕರ್ ಅವರ ಸೂಚನೆಗೆ ನಾವು ಕೊಡಬೇಕಿದ್ದಷ್ಟು ಮಹತ್ವವನ್ನು ಆಗ ಕೊಡಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅವರ ಫಲವನ್ನು ನೀವೇ ಅನುಭವಿಸಬೇಕಾಗಿದೆ. ಕೇಂದ್ರ ಶಾಸಕಾಂಗದ ಉಭಯ ಸದನಗಳಲ್ಲಿ ೧೯೩೨ರ ಸೆಪ್ಟೆಂಬರ್ ೨೬ರಂದು ಪುಣೆ ಒಪ್ಪಂದವನ್ನು ಒಪ್ಪಿಕೊಂಡಿದ್ದಾಗಿ ಸರ್ಕಾರ ಪ್ರಕಟಿಸಿತು. ಕೇಂದ್ರ ಶಾಸಕಾಂಗದಲ್ಲಿ ಈ ಪ್ರಕಟಣೆಯನ್ನು ಎಲ್ಲರೂ ಶ್ಲಾಘಿಸಿದರು. ರಾಜ್ಯ

ಮಂಡಳಿ ಅಥವಾ ಶಾಸಕಾಂಗ ಎಲ್ಲೂ ಯಾವೊಬ್ಬ ಸದಸ್ಯರೂ ಈ ಒಪ್ಪಂದ ಒಪ್ಪಿಕೊಳ್ಳುವುದನ್ನು ವಿರೋಧಿಸಿಲ್ಲ, ಅಲ್ಲವೇ?

ಜೆ. ಬ್ಯಾನರ್ಜಿ: ಇರಬಹುದು.

ಎಂ. ಆರ್. ಜಯಕರ್: ಬಂಗಾಲಕ್ಕೆ ಕೇಂದ್ರ ಶಾಸಕಾಂಗದಲ್ಲಿ ಪ್ರಾತಿನಿಧ್ಯವಿದೆ.

ಸರ್ ಹರಿಸಿಂಗ್ ಗೌರ್: ವಿಧಾನ ಸಭೆಯಲ್ಲಿ ಗೃಹ ಸದಸ್ಯ ಸರ್ ಹ್ಯಾರಿ ಅವರು ಪ್ರಕಟಣೆಯೊಂದನ್ನು ನೀಡಿದಾಗ ಯಾವೊಬ್ಬ ಸದಸ್ಯರೂ ಪ್ರತಿಭಟಿಸಲಿಲ್ಲವೆಂದ ಡಾ. ಅಂಬೇಡ್ಕರ್ ಅವರ ಆರೋಪಕ್ಕೆ ಸಂಬಂಧಿಸಿದಂತೆ, ಸಂಯುಕ್ತ ಸಮಿತಿ ಗಮನಕ್ಕೆ ಒಂದು ವಿಷಯವನ್ನು ತರಲು ನಾನು ಬಯಸುತ್ತೇನೆ. ಅದೇನೆಂದರೆ, ಸರ್ಕಾರದ ನಿರ್ಣಯದ ಪ್ರಕಟಣೆ ಹೊರಟಾಗ ಸದನದ ಯಾವುದೇ ಸದಸ್ಯ ಈ ಬಗ್ಗೆ ಪ್ರತಿಭಟನೆ ಸೂಚಿಸುವುದು ಅಥವಾ ಇದನ್ನು ಉಲ್ಲೇಖಿಸಿ ಮಾತಾಡುವುದು ವಿಧಾನಸಭೆ ಆಚರಿಸಿಕೊಂಡು ಬಂದಿರುವ ಸಂಪ್ರದಾಯಕ್ಕೆ ಅನುಗುಣವಾದದ್ದಲ್ಲ.

ಲೆ. ಕ. ಸರ್ ಎಚ್. ಗಿಡ್ನಿ: ಸರ್ ಹ್ಯಾರಿ ಈ ಪ್ರಕಟಣೆ ಹೊರಡಿಸಿದಾಗ ನಾನು ಸದನದಲ್ಲಿದ್ದೆ. ಎಲ್ಲರೂ ಆಗ ಜಯಘೋಷ ಮಾಡಿದರು.

ಭಾಯಿ ಪರಮಾನಂದ: ನಾನೂ ಅಲ್ಲಿದ್ದೆ. ಯಾವ ಜಯಘೋಷವೂ ಕೇಳಿಬರಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದಕ್ಕೆ ಪ್ರಶಂಸೆ ಸಿಕ್ಕಿತು. ಪ್ರಶಂಸೆ ಎನ್ನುವ ಶಬ್ದವೇ ಸದನದ ಕಡತಗಳಲ್ಲಿವೆ.

ಲೆ. ಕ. ಸರ್ ಎಚ್. ಗಿಡ್ನಿ: ಜಯಘೋಷ ಎಂಬ ಶಬ್ದವನ್ನು ನಾನು ಪ್ರಶಂಸೆ ಎಂಬರ್ಥದಲ್ಲೇ ಬಳಸಿದ್ದೆ.

ಭಾಯಿ ಪರಮಾನಂದ: ಯಾರೋ ಕೆಲವರು ಅದನ್ನು ಪ್ರಶಂಸೆ ಮಾಡಿರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ೧೯೩೨ರ ಸೆಪ್ಟೆಂಬರ್ ೨೬ರಂದು ನಡೆದ ವಿಧಾನ ಪರಿಷತ್ತಿನ ಕಲಾಪಗಳಲ್ಲಿ (ಸಂಪುಟ ೫ ಸಂಚಿಕೆ ೫) ಇಡೀ ಹೇಳಿಕೆಯನ್ನು ನೀಡಲಾಗಿದೆ. ಹೇಳಿಕೆ ಮುಕ್ತಾಯಗೊಂಡ ನಂತರ ಆವರಣದಲ್ಲಿ "ಪ್ರಶಂಸೆ" ಎಂದು ಮುದ್ರಿಸಲಾಗಿದೆ. ರಾಜ್ಯ ಮಂಡಳಿಯಲ್ಲೂ ಅದೇ ಹೇಳಿಕೆಯನ್ನು ಪ್ರಕಟಿಸಲಾಯಿತು. ಸವರ್ಣೀಯ ಹಿಂದೂಗಳನ್ನು ಈ ಸದಸ್ಯರು (ಹೆಸರುಗಳನ್ನು ಹೇಳುತ್ತ) ವಿಧಾನ ಸಭೆಯಲ್ಲಿ ಪ್ರತಿನಿಧಿಸಿದ್ದರು. ಈ ಸದಸ್ಯರು (ಹೆಸರುಗಳನ್ನು ಹೇಳುತ್ತ) ರಾಜ್ಯ ಮಂಡಳಿಯಲ್ಲಿ ಪ್ರತಿನಿಧಿಸಿದ್ದರು ಎಂಬುದು ಸತ್ಯಸಂಗತಿಯಲ್ಲವೇ?

ಬಿ. ಸಿ. ಚಟರ್ಜಿ: ನನ್ನ ಉತ್ತರವೇನೆಂದರೆ, ತದನಂತರದ ಪರಿಣಾಮವೇನಾದೀತೆಂಬುದು ಆಗ ಈ ಸದಸ್ಯರಿಗೆ ಅರಿವಾಗಿರಲಿಲ್ಲ. ಈಗ ಅವರೆಲ್ಲರೂ ಅದನ್ನು ಖಂಡಿಸಲು ಒಂದುಗೂಡಿದ್ದಾರೆ.

ಭಾಯಿ ಪರಮಾನಂದ: ಈ ಅಂಶವನ್ನು ನಾನು ವಿವರಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಯಾವುದೇ ವಿವರಣೆ ಇಲ್ಲಿ ಅನಗತ್ಯ. ವಿಧಾನಸಭೆಯ ಸದಸ್ಯರು ಪ್ರತಿಭಟನೆ ಸೂಚಿಸಲಿಲ್ಲ. ಒಪ್ಪಂದವಾದ ನಂತರ ೧೯೩೨ ಸೆಪ್ಟೆಂಬರ್ ಬಂಗಾಲ ಪ್ರಾಂತದಲ್ಲಿ ಕಂಡುಬಂದ ಪ್ರತಿಭಟನೆಗಳ ಬಗ್ಗೆ ಹೇಳುವುದಾದರೆ ೧೯೩೨ರ ನವೆಂಬರ್ ರಂದು ಬಂಗಾಲ ವಿಧಾನ ಪರಿಷತ್ತಿನ ಕಲಾಪ ನಡೆಯಿತು, ಅಲ್ಲವೇ?

ಬಿ. ಸಿ. ಚಟರ್ಜಿ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಪುಣೆ ಒಪ್ಪಂದವನ್ನು ಬಂಗಾಲಕ್ಕೆ ಅನ್ವಯಿಸುವ ಬಗ್ಗೆ ವಿರೋಧ ವ್ಯಕ್ತಪಡಿಸಿದ ಯಾವುದೇ ಗೊತ್ತುವಳಿಯನ್ನು ಪರಿಷತ್ತಿನಲ್ಲಿ ಮಂಡಿಸಿರಲಿಲ್ಲ.

ಬಿ. ಸಿ. ಚಟರ್ಜಿ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ವರದಿ ಬಗ್ಗೆ ಹೇಳುತ್ತಿರುವೆ.

ಬಿ. ಸಿ. ಚಟರ್ಜಿ: ಆಗ ನಾವು ಮಾಡಿದ ಮೊದಲ ಕೆಲಸ, ಪರಿಷತ್ತಿನ ಪ್ರಭಾವಶಾಲಿ ಹಿಂದೂ ಸದಸ್ಯರನ್ನು ಕ್ಷಿಪ್ರ ಕಾಲದಲ್ಲಿಯೇ ಒಂದೆಡೆ ಸೇರಿಸಿದ್ದು. ಅಲ್ಲಿ ನಾವು ನಿರ್ಧರಿಸಿದ್ದೇನೆಂದರೆ, ನಾವು ಒಟ್ಟುಗೂಡಿ.....

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಪ್ರಶ್ನೆಗೆ ಮೊದಲು ಉತ್ತರ ಬರಲಿ. ನಂತರ ವಿವರಣೆ. ಪುಣೆ ಒಪ್ಪಂದವಾದ ತಕ್ಷಣವೇ ನಡೆದ ಬಂಗಾಲ ವಿಧಾನ ಪರಿಷತ್ತಿನ ನವೆಂಬರ್ ಅಧಿವೇಶನದಲ್ಲಿ ಪುಣೆ ಒಪ್ಪಂದವನ್ನು ವಿರೋಧಿಸುವ ವಿದ್ಯುಕ್ತ ಗೊತ್ತುವಳಿಯನ್ನೇನಾದರೂ ಮಂಡಿಸಲಾಗಿತ್ತೇ? ಇದಕ್ಕೆ ಉತ್ತರ ಬೇಕು.

ಬಿ. ಸಿ. ಚಟರ್ಜಿ: ನವೆಂಬರ್ ಅಧಿವೇಶನದಲ್ಲಿ ಪುಣೆ ಒಪ್ಪಂದ ವಿರೋಧಿಸಿ ಗೊತ್ತುವಳಿಯನ್ನು ಮಂಡಿಸಿದ್ದೆ. ಆದರೆ ಪಂಡಿತ ಮಾಳವೀಯ ಮತ್ತು ನಾಮಶೂದ್ರರ ಪ್ರಭಾಶಾಲಿ ಸದಸ್ಯರಾದ ರಸಿಕ ಬಿಶ್ವಾಸ್ ಅವರು ಒಂದುಗೂಡಿ ಮನವಿ ಮಾಡಿ, ನಾನು ಗೊತ್ತುವಳಿಯನ್ನು ಹಿಂತೆಗೆದುಕೊಳ್ಳುವಂತೆ ಮಾಡಿದರು. ನಾನು ಮುಂದಿಟ್ಟ ಅಂಶಗಳ ಹಿನ್ನೆಲೆಯಲ್ಲಿ ಇನ್ನೊಂದು ಸಭೆ ನಡೆಸುವಂತೆ ಡಾ. ಅಂಬೇಡ್ಕರ್ ಅವರನ್ನು ಕೋರುವುದಾಗಿ ಮತ್ತು ಪುಣೆ ಒಪ್ಪಂದವನ್ನು ಮಾರ್ಪಡಿಸುವುದಾಗಿ ಅವರು ನನಗೆ ಆಶ್ವಾಸನೆ ನೀಡಿದರು. ತಮಗೊಂದು ಅವಕಾಶ ಕೊಡಬೇಕೆಂದು ಪರಿಷತ್ತಿನಲ್ಲಿ ಈ ವಿಷಯವನ್ನು ತರಬಾರದು ಮತ್ತು ಡಿವಿಜನ್‌ಗೆ ಒತ್ತಾಯಿಸಬಾರದೆಂದು ಅವರು ನನ್ನನ್ನು ಪದೇ ಪದೇ ಒತ್ತಾಯಿಸಿದರು.

ಡಾ. ಬಿ. ಆರ್. ಅಂಬೇಡ್ಕರ್: ಗೊತ್ತುವಳಿಯನ್ನು ಮಂಡಿಸಿದಿರಾ?

ಬಿ. ಸಿ. ಚಟರ್ಜಿ: ಅದನ್ನು ಹಿಂತೆಗೆದುಕೊಳ್ಳಲು ಅವರು ನನಗೆ ಪುಸಲಾಯಿಸಿದರು.

ಡಾ. ಬಿ. ಆರ್. ಅಂಬೇಡ್ಕರ್: ಗೊತ್ತುವಳಿಯನ್ನು ಮಂಡಿಸಲಿಲ್ಲ, ಅಲ್ಲವೇ?

ಬಿ. ಸಿ. ಚಟರ್ಜಿ: ನಾನು ಅದನ್ನು ಹಿಂತೆಗೆದುಕೊಂಡೆ.

ಡಾ. ಬಿ. ಆರ್. ಅಂಬೇಡ್ಕರ್: ಗೊತ್ತುವಳಿ ಮಂಡನೆ ಆಗಲೇ ಇಲ್ಲ ತಾನೇ?

ಬಿ. ಸಿ. ಚಟರ್ಜಿ: ನಾನು ಗೊತ್ತುವಳಿಯನ್ನು ಹಿಂತೆಗೆದುಕೊಂಡೆ ಎಂದು ಹೇಳಿದೆನಲ್ಲ?

ಡಾ. ಬಿ. ಆರ್. ಅಂಬೇಡ್ಕರ್: ನೀವು ಆ ಬಗ್ಗೆ ನೋಟೀಸ್ ನೀಡಿದ್ದಿರಾ?

ಬಿ. ಸಿ. ಚಟರ್ಜಿ: ನಾನು ನೋಟೀಸ್ ಕೊಟ್ಟಿದ್ದೆ. ನಂತರ ಪಂಡಿತ ಮಾಳವೀಯ ಮತ್ತು ರಸಿಕ ಬಿಶ್ವಾಸ್ ಅವರ ಮನವಿ ಮೇರೆಗೆ ನಾನು ಅದನ್ನು ಹಿಂತೆಗೆದುಕೊಂಡೆ. ನಾನು ಗೊತ್ತುವಳಿಯನ್ನು ಮಂಡಿಸಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ೧೯೩೩ರ ಮಾರ್ಚ್ ಅಧಿವೇಶನದಲ್ಲಿ ಚರ್ಚೆಗೆ ಬಂದ ಸೂಚನೆಯು ವಿಶೇಷ ಸೂಚನೆಯಾಗಿತ್ತು. ಶ್ರೀಯುತ ಶಾಂತಿ ಶೇಖರೇಶ್ವರರೇ ಅವರ ಹೆಸರಲ್ಲಿ ಬಂದ ಸಾಮಾನ್ಯ ಸೂಚನೆಯನ್ನು ಮಂಡಿಸಲಾಗಲಿಲ್ಲ, ಅಲ್ಲವೇ?

ಜೆ. ಬ್ಯಾನರ್ಜಿ: ಆ ಸೂಚನೆ ತಲುಪಿರಲಾರದು.

ಡಾ. ಬಿ. ಆರ್. ಅಂಬೇಡ್ಕರ್: ಆದ್ಯತೆ ಕೊಡಲು ಕೇಳಿರಲಿಲ್ಲವೇ?

ಜೆ. ಬ್ಯಾನರ್ಜಿ: ಆದ್ಯತೆ ಕೊಡಲು ಕೇಳಿದ್ದೆವಾದರೂ ಅದನ್ನು ಪಡೆದುಕೊಳ್ಳಲಾಗಿರಲಿಲ್ಲ. ಸಮಯಾವಕಾಶ ತುಂಬಾ ಕಡಿಮೆಯಿತ್ತು. ನಂತರ ನಾನು ವಿಶೇಷ ಗೊತ್ತುವಳಿಯನ್ನು ಮಂಡಿಸಿದೆ.

ಡಾ. ಬಿ. ಆರ್. ಅಂಬೇಡ್ಕರ್: ಬಂಗಾಲ ವಿಧಾನ ಪರಿಷತ್ತಿನ ೧೯೩೩ರ ಮಾರ್ಚ್ ಅಧಿವೇಶನದಲ್ಲಿ ಒಂದು ತಿಂಗಳ ನಂತರ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಕಲ್ಕತ್ತಾದ ಆಲ್ಬರ್ಟ್ ಹಾಲ್‌ನಲ್ಲಿ ಏಪ್ರಿಲ್ ೨೧–೧೯೩೩ರಂದು ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀ ಸಮಲ್ ಎಂಬುವರೊಬ್ಬರು ಅಧ್ಯಕ್ಷತೆ ವಹಿಸಿದ್ದರು. ಪುಣೆ ಒಪ್ಪಂದ ವಿರೋಧಿಸಿದ ಬಂಗಾಲ ವಿಧಾನ ಪರಿಷತ್ತಿನ ನಡವಳಿಕೆಯನ್ನು ಖಂಡಿಸುವ ನಿರ್ಣಯವನ್ನು ಈ ಸಭೆ ತೆಗೆದುಕೊಂಡಿತು, ಹೌದೇ?

ಜೆ. ಬ್ಯಾನರ್ಜಿ: ಇರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ೧೯೩೩ರ ಏಪ್ರಿಲ್ ೨೨ರಂದು "ಲಿಬರ್ಟಿ" ಪತ್ರಿಕೆಯಲ್ಲಿ ಈ ನಿರ್ಣಯ ವನ್ನು ಪೂರ್ಣ ವಿವರ ಪ್ರಕಟವಾಯಿತು. ನಿಜವೇ?

ಬಿ. ಸಿ. ಚಟರ್ಜಿ: ಇರಬಹುದೇನೋ. ನನಗೆ ಅದು ತಿಳಿದಿಲ್ಲ. ಆಗ ನಾನು ಇಂಗ್ಲೆಂಡಿನಲ್ಲಿದ್ದೆ.

ಡಾ. ಬಿ. ಆರ್. ಅಂಬೇಡ್ಕರ್: ಪುಣೆ ಒಪ್ಪಂದದ ಕಾಲದಲ್ಲಿ ಬಂಗಾಲ ಸರ್ಕಾರಕ್ಕೆ ದಾರ್ಜಿಲಿಂಗ್‌ನಲ್ಲಿ ಎಲ್ಲೋ ಒಪ್ಪಿಗೆ ಸಿಕ್ಕಿತು ಮತ್ತು ಆಗ ಯಾವ ಹಿಂದೂಗಳ ಜತೆಗೂ ಸಮಾಲೋಚಿಸಲಿಲ್ಲ ಎಂದು ನೀವು ಸರ್ ನೃಪೇಂದ್ರ ಸರ್ಕಾರ್ ಅವರಿಗೆ ಉತ್ತರ ನೀಡುತ್ತಾ ಹೇಳಿದಿರಿ. ಹೌದೇ?

ಬಿ. ಸಿ. ಚಟರ್ಜಿ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ೧೯೩೨ ಸೆಪ್ಟೆಂಬರ್‌ನಲ್ಲಿ ಬಂಗಾಲ ಎಕ್ಸಿಕ್ಯೂಟಿವ್‌ನಲ್ಲಿ ಇದ್ದ ಸದಸ್ಯರು ಯಾರು? ಅವರು ಯಾವ್ಯಾವ ಧರ್ಮಕ್ಕೆ ಸೇರಿದವರಾಗಿದ್ದರು, ಹೇಳುವಿರಾ?

ಜೆ. ಬ್ಯಾನರ್ಜಿ: ಬಂಗಾಲ ಸರ್ಕಾರದಲ್ಲಿ ಮೂವರು ಬಂಗಾಲಿ ಸದಸ್ಯರಿದ್ದರು ಅಲ್ಲ, ಇಬ್ಬರು ಬಂಗಾಲಿ ಹಿಂದೂ ಸದಸ್ಯರಿದ್ದರು.

ಡಾ. ಬಿ. ಆರ್. ಅಂಬೇಡ್ಕರ್: ಇಬ್ಬರು ಬಂಗಾಲಿ ಹಿಂದೂ ಸದಸ್ಯರಿದ್ದ ಬಂಗಾಲ ಸರ್ಕಾರ ಪುಣೆ ಒಪ್ಪಂದವನ್ನು ಅನುಮೋದಿಸಲಿಲ್ಲ ಎಂಬುದು ನಿಮ್ಮ ಸೂಚನೆಯೇ?

ಜೆ. ಬ್ಯಾನರ್ಜಿ: ಸರ್ಕಾರದ ಬಗ್ಗೆ ನಾನೇನೂ ಹೇಳಲಾರೆ. ಆದರೆ ಸರ್ಕಾರದಲ್ಲಿದ್ದ ಇಬ್ಬರು ಬಂಗಾಲಿ ಹಿಂದೂ ಸದಸ್ಯರು ಪುಣೆ ಒಪ್ಪಂದವನ್ನು ಅನುಮೋದಿಸಲಿಲ್ಲ ಎಂಬುದು ಖಾತ್ರಿಯಾಗಿ ಗೊತ್ತು. ಅವರು ಈ ಒಪ್ಪಂದವನ್ನು ತೀವ್ರವಾಗಿ ವಿರೋಧಿಸಿದ್ದರು.

ಡಾ. ಬಿ. ಆರ್. ಅಂಬೇಡ್ಕರ್: ಸೆಂಟ್ರಲ್ ಎಕ್ಸಿಕ್ಯೂಟಿವ್‌ನಲ್ಲಿ ಸರ್ ಬಿ. ಎಲ್. ಮಿತ್ತಲ್ ಎಂಬ ಒಬ್ಬ ಬಂಗಾಲಿ ಹಿಂದೂ ಇದ್ದರು ಎಂದು ನೀವು ಹೇಳಿದಿರಿ, ಹೌದೇ?

ಜೆ. ಬ್ಯಾನರ್ಜಿ: ಹೌದು. ಸರ್ ಬಿ. ಎಲ್. ಮಿತ್ತಲ್ ಅವರ ಬಗ್ಗೆ ನಾನೇನೂ ಹೇಳಲಾರೆ. ವೈಸ್‌ರಾಯ್ ಅವರ ಕಾರ್ಯಕಾರಿ ಮಂಡಳಿಯ ಈಗಿನ ಸದಸ್ಯರನ್ನು ಆ ಬಗ್ಗೆ ನೀವು ಕೇಳಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಮಹಾತ್ಮಾಗಾಂಧಿ ಅವರ ಉಪವಾಸ ಸತ್ಯಾಗ್ರಹ ಸೃಷ್ಟಿಸಿದ ತುರ್ತು ಸ್ಥಿತಿಯ ಹಿನ್ನೆಲೆಯಲ್ಲಿ ಪುಣೆ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲವನ್ನೂ ಸರ್ಕಾರವು ಅವಸರದಲ್ಲಿ ಒಪ್ಪಿ ಕೊಂಡಿತೆಂದು ವಿಚಾರಣೆ ಕಾಲದಲ್ಲಿ ನೃಪೇಂದ್ರ ಸರ್ಕಾರ್ ತಿಳಿಸಿದ್ದಾರೆ. ಸರ್ಕಾರಕ್ಕೆ ಮಹಾತ್ಮಾ ಗಾಂಧಿ ಬರೆದ ಪ್ರಥಮ ಪತ್ರದ ದಿನಾಂಕ ಆಗಸ್ಟ್ ೧೮ ಅಲ್ಲ, ೧೯೩೨ ಮಾರ್ಚ್ ೧೧ (ಇದನ್ನು ಸರ್ ಸ್ಯಾಮುಯೆಲ್ ಹೋರೆ ಅವರಿಗೆ ಬರೆಯಲಾಗಿತ್ತು) ಅಲ್ಲವೇ? ಅಂದರೆ ನೃಪೇಂದ್ರ ಸರ್ಕಾರ್ ಉಲ್ಲೇಖಿಸಿದ

ಪತ್ರಕ್ಕೂ ಐದು ತಿಂಗಳ ಮೊದಲು. ಅಂದರೆ ಕೋಮು ನಿರ್ಣಯ (ಕಮ್ಯುನಲ್ ಡಿಸಿಷನ್) ನೀಡುವ ಮುಂಚೆ.

## ಮಹಾತ್ಮಾ ಗಾಂಧಿ ಅವರ ಪತ್ರದ ಸಾರಾಂಶ ಇದು:

**ಪ್ರಿಯ ಸರ್ ಸ್ಯಾಮ್ಯುಯೆಲ್,**

ದುಂಡು ಮೇಜಿನ ಪರಿಷತ್ತಿನಲ್ಲಿ ಅಲ್ಪಸಂಖ್ಯಾತರ ಹಕ್ಕಿನ ಪ್ರಶ್ನೆಗೆ ಸಂಬಂಧಿಸಿದಂತೆ ನನ್ನ ಭಾಷಣದ ಕೊನೆಯಲ್ಲಿ ನಾನು ಹೇಳಿದ್ದನ್ನು ನೆನಪು ಮಾಡಿಕೊಳ್ಳಿ. ನಿಮ್ಮ ವರ್ಗಗಳಿಗೆ ಪ್ರತ್ಯೇಕ ಮತ ಕ್ಷೇತ್ರ ಮಂಜೂರು ಮಾಡುವುದನ್ನು ನಾನು ನನ್ನ ಪ್ರಾಣವನ್ನು ಪಣವಾಗಿಟ್ಟು ವಿರೋಧಿಸುವೆ ಎಂದು ಹೇಳಿದ್ದೆ. ಭಾಷಣ ನೈಪುಣ್ಯ ಪ್ರದರ್ಶಿಸಲು ಅಥವಾ ಬಿಸಿ ವಾತಾವರಣದ ಪ್ರಭಾವಕ್ಕೊಳಗಾಗಿ ನಾನು ಹಾಗೆ ಹೇಳಲಿಲ್ಲ. ನಾನು ಗಂಭೀರವಾಗಿಯೇ ತುಂಬು ಜವಾಬ್ದಾರಿಯಿಂದಲೇ ಹಾಗೆ ಹೇಳಿದ್ದೆ.

ಮುಂದುವರೆಯುತ್ತ ಪತ್ರದಲ್ಲಿ

> "ಗೌರವಪೂರ್ವಕವಾಗಿ ನಾನು ಸರ್ಕಾರಕ್ಕೆ ತಿಳಿಸುವುದೇನೆಂದರೆ ವರ್ಗಗಳಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ಮಂಜೂರು ಮಾಡುವ ನಿರ್ಧಾರ ಕೈಗೊಂಡಿದ್ದೇ ಆದರೆ, ನಾನು ಆಮರಣ ಉಪವಾಸ ಸತ್ಯಾಗ್ರಹ ಮಾಡುತ್ತೇನೆ."

ಆಮರಣ ಉಪವಾಸ ಸತ್ಯಾಗ್ರಹದ ಬೆದರಿಕೆಯನ್ನು ಮೊದಲು ಒಡ್ಡಿದ್ದು ೧೯೩೨ರ ಮಾರ್ಚ್ ೧೧ರ ಪತ್ರದ ಮೂಲಕ. "ಕೋಮು ನಿರ್ಣಯ"ವಾದ ನಂತರ ಬರೆದ ಆಗಸ್ಟ್ ೧೮ರ ಪತ್ರದ ಮೂಲಕ ಅಲ್ಲ. ನಿಜವೇ?

ಜೆ. ಬ್ಯಾನರ್ಜಿ: ಪೂರ್ಣ ನಿಜ.

ಡಾ. ಬಿ. ಆರ್. ಅಂಬೇಡ್ಕರ್: ಈ ಬೆದರಿಕೆಗೆ ಸೊಪ್ಪು ಹಾಕದೇ ಸರ್ಕಾರ ನಿಮ್ಮ ವರ್ಗಗಳಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ೧೧ ಮಾರ್ಚ್ ಪತ್ರದ ಮೂಲಕ ನೀಡಿತು.

ಜೆ. ಬ್ಯಾನರ್ಜಿ: ಪ್ರತ್ಯೇಕ ತತ್ವ ಮುಂದಿಟ್ಟು ಎಲ್ಲಾ ಕೇಡನ್ನು ತರುತ್ತದೆ ಎಂಬುದೇ ಪುಣೆ ಒಪ್ಪಂದದ ವಿರುದ್ಧ ನಮಗಿರುವ ಆಕ್ಷೇಪಣೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಬೇರೆ. ನೀವು ಅದನ್ನು ಮಹಾತ್ಮಾಗಾಂಧಿಗೆ ಹೇಳಿರಿ. ನಾನು ಆ ಬಗ್ಗೆ ಚರ್ಚಿಸಲಾರೆ.

ಜೆ. ಬ್ಯಾನರ್ಜಿ: ಪುಣೆ–ಒಪ್ಪಂದಕ್ಕಿಂತ ಸರ್ಕಾರದ ತೀರ್ಪೇ ನಮಗೆ ಸ್ವೀಕಾರಾರ್ಹ.

ಡಾ. ಬಿ. ಆರ್. ಅಂಬೇಡ್ಕರ್: ಈ ಬಗ್ಗೆ ಒಂದೆರಡು ಪ್ರಶ್ನೆಗಳನ್ನು ಕೇಳುವೆ. ಸರ್ಕಾರದ ತೀರ್ಪು ಜಾರಿಗೊಂಡರೆ ನಿಮ್ಮ ವರ್ಗಗಳಿಗೆ ಸಿಕ್ಕುವ ಸ್ಥಾನಗಳಿಗಿಂತ ಪುಣೆ ಒಪ್ಪಂದದಿಂದ ಹೆಚ್ಚು ಸ್ಥಾನಗಳು ಸಿಗುತ್ತವೆ ಎಂಬುದೇ ನಿಮ್ಮ ಆಕ್ಷೇಪಣೆಗೆ ಕಾರಣವಾಗಿರಬೇಕು. ಗಾಂಧಿಗೆ ೧೯೩೨ರ ಸೆಪ್ಟೆಂಬರ್ ೮ರಂದು ಬರೆದು ಪತ್ರದಲ್ಲಿ ಪ್ರಧಾನಿ ಹೇಳಿದ್ದೇನು ಎಂಬುದನ್ನು ಗಮನಿಸಿ. "ಮುಸಲ್ಮಾನರಿಗೆ ಈಗ ನೀಡಲಾಗಿರುವ ಸ್ಥಾನಗಳಿಗಿಂತ ಹೆಚ್ಚು ಪಡೆದುಕೊಳ್ಳುವುದು ಅವರಿಗೆ ಸಾಧ್ಯವೇ ಇಲ್ಲ. ಬಹುತೇಕ ಪ್ರಾಂತ್ಯಗಳಲ್ಲಿ ಅವರು ತಮ್ಮ ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚು ಪ್ರಾತಿನಿಧ್ಯ ಪಡೆದಿದ್ದಾರೆ."

> ಪತ್ರದಲ್ಲಿ ಮುಂದೆ ಏನಿದೆ ನೋಡಿ: "ನಿಮ್ನ ವರ್ಗಗಳ ಕ್ಷೇತ್ರಗಳಿಂದ ತುಂಬಬೇಕಾಗಿರುವ ವಿಶೇಷ ಸ್ಥಾನಗಳ ಸಂಖ್ಯೆ ಕಡಿಮೆ ಎಂದೇ ಕಾಣುತ್ತದೆ. ನಿಮ್ನ ವರ್ಗಗಳ ಜನಸಂಖ್ಯೆಗೆ ನಿಮ್ನ ವರ್ಗಗಳಿಂದಲೇ ಆಯ್ಕೆಯಾದ ಕನಿಷ್ಠ ಪ್ರತಿನಿಧಿಗಳಾದರೂ ಶಾಸಕಾಂಗದಲ್ಲಿ ಇರಲಿ ಎಂದು ಈ ಏರ್ಪಾಡು ಮಾಡಲಾಗಿದೆ. ನಿಮ್ನ ವರ್ಗಗಳ ಜನಸಂಖ್ಯೆಯ ಶೇಕಡಾವಾರಿಗಿಂತ ಅವರಿಗೆ ನೀಡಲಾಗಿರುವ ವಿಶೇಷ ಸ್ಥಾನಗಳು ತುಂಬಾ ಕಡಿಮೆ."

ಜೆ. ಬ್ಯಾನರ್ಜಿ: ಖಂಡಿತ ಹೌದು. ಯಾಕೆಂದರೆ ನಿಮ್ನ ವರ್ಗಗಳಿಗೆ ಸೇರಿದ ಹಲವರು ಮುಕ್ತ ಕ್ಷೇತ್ರಗಳ ಮೂಲಕ ಬರುತ್ತಾರೆಂಬ ನಿರೀಕ್ಷೆಯಿದೆ. ಬಂಗಾಲದಲ್ಲಂತೂ ಈ ಸಾಧ್ಯತೆ ಹೆಚ್ಚು ಕಾಣುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಕೋಮು ತೀರ್ಪು ನೀಡುವಾಗ ಮತ್ತು ನಿಮ್ನ ವರ್ಗಗಳಿಗೆ ಸ್ಥಾನ ಏರ್ಪಾಟು ಮಾಡುವಾಗ ಅವರಿಗೆ ನೀಡಿರುವ ಸ್ಥಾನಗಳ ಸಂಖ್ಯೆ ಅವರ ಜನಸಂಖ್ಯಾ ಪ್ರಮಾಣಕ್ಕೆ ತಕ್ಕಂತೆ ಇಲ್ಲ; ಅದು ತುಂಬಾ ಕಮ್ಮಿ ಎಂದು ಸರ್ಕಾರ ಮತ್ತು ಪ್ರಧಾನಿ ನಿಸ್ಸಂದೇಹವಾಗಿ ಒಪ್ಪಿದ್ದಾರೆ.

ಜೆ. ಬ್ಯಾನರ್ಜಿ: ನಿಜವೇ. ನಿಮ್ನ ವರ್ಗದವರಿಗೆ ನೀಡಿರುವ ಸ್ಥಾನಗಳ ಸಂಖ್ಯೆ ಅವರ ಜನಸಂಖ್ಯೆ ಪ್ರಮಾಣಕ್ಕೆ ಹೋಲಿಸಿದರೆ ತುಂಬಾ ಕಮ್ಮಿ ಎಂದು ಪ್ರಧಾನಿ ಸ್ಪಷ್ಟವಾಗಿ ಹೇಳಿದ್ದು ನಿಜ. ಏಕೆಂದರೆ ನಿಮ್ನ ವರ್ಗಗಳಿಗೆ ಸೇರಿದವರು ಮುಕ್ತ ಕ್ಷೇತ್ರಗಳಿಂದ ಆರಿಸಿ ಬರುವುದು ಖಚಿತ ಎಂದು ಬಂಗಾಲದ ಉದಾಹರಣೆ ನೀಡಿ ಅವರು ಹೇಳುತ್ತಾರೆ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಧಾನಿ ಯಾವತ್ತೂ ಬಂಗಾಲದ ಉದಾಹರಣೆ ನೀಡಿ ಹೀಗೆ ಹೇಳಿಲ್ಲ. ನಾನು ನಿಮಗೆ ಭರವಸೆ ಕೊಡಬಲ್ಲೆ.

ಜೆ. ಬ್ಯಾನರ್ಜಿ: ನಾನು ತೀರ್ಪನ್ನು ಓದಿರುವೆ. ಪ್ರಧಾನಿ ಖಂಡಿತವಾಗಿ ಹೀಗೆ ಹೇಳಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ಇದಕ್ಕೆ ಸಂಬಂಧಪಟ್ಟಂತೆ ಬಂಗಾಲ ಪ್ರಾಂತ ಹಿಂದೂ ಸಮ್ಮೇಳನದ ಏಳನೇ ಅಧಿವೇಶನ ಮಾಲ್ಡಾನಲ್ಲಿ ೧೯೩೨ರ ಸೆಪ್ಟೆಂಬರ್ ೧೭ ಅಥವಾ ೧೮ರಲ್ಲಿ ನಡೆಯಿತು. ರಾಮಾನಂದ ಚಟರ್ಜಿ ಇದರ ಅಧ್ಯಕ್ಷತೆ ವಹಿಸಿದ್ದರು. ಹೌದೇ?

ಜೆ. ಬ್ಯಾನರ್ಜಿ: ಇರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಬಂಗಾಲ ಪ್ರಾಂತದ ಹಿಂದೂ ಸಮ್ಮೇಳನದ ಏಳನೇ ಅಧಿವೇಶನ ಅದು. ನಡೆದಿದ್ದು ಮಾಲ್ಡಾನಲ್ಲಿ. ಹೌದೇ?

ಜೆ. ಬ್ಯಾನರ್ಜಿ: ಇರಬಹುದು. ನನಗೆ ಖಚಿತವಾಗಿ ತಿಳಿದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಬಂಗಾಲ ಪ್ರಾಂತ ಹಿಂದೂ ಸಮ್ಮೇಳನದಲ್ಲಿ ಅಂಗೀಕರಿಸಲಾದ ಗೊತ್ತುವಳಿಯೊಂದನ್ನು ನಾನು ಓದಬಯಸುವೆ. ಇದು "ಲಿಬರ್ಟಿ" ಪತ್ರಿಕೆಯ ೧೯೩೨ ಸೆಪ್ಟೆಂಬರ್ ೧೯ರ ಸಂಚಿಕೆಯಲ್ಲಿ ಪ್ರಕಟವಾಗಿದೆ. "ಮುಂಬರುವ ಚುನಾವಣೆಯಲ್ಲಿ ನಿಮ್ನ ವರ್ಗಗಳು ಪ್ರತ್ಯೇಕ ಚುನಾವಣಾ ಕ್ಷೇತ್ರದ ಆಧಾರದ ಮೇಲೆ ಪ್ರಾತಿನಿಧ್ಯಕ್ಕೆ ಒತ್ತಾಯಿಸಬಾರದೆಂದು ಈ ಸಮ್ಮೇಳನ ಮನವಿ ಮಾಡುತ್ತಾ, ತಾನು ರಾಜಾ ಮೂಂಜೆ ಒಪ್ಪಂದಕ್ಕೆ ಬದ್ಧ ಎಂದು ಮತ್ತೆ ಹೇಳುತ್ತದೆ. ಸಂಯುಕ್ತ ಚುನಾವಣಾ ಕ್ಷೇತ್ರ ಆಧಾರದ ಮೇಲೆ ನಿಮ್ನ ವರ್ಗಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ನೀಡುವುದೆಂದರೆ ಹಿಂದೂಗಳಿಗೆ ಸಲ್ಲಬೇಕಾದ ಸ್ಥಾನಗಳಲ್ಲಿ ಬಹುಪಾಲನ್ನು ನಿಮ್ನ ವರ್ಗಗಳಿಗೆ ಸಮರ್ಪಿಸಿದಂತೆಯೇ. ಆದರೂ ಕೂಡ ಸಮ್ಮೇಳನ ಈ ನಿಬಂಧನೆಗೆ ಸಮ್ಮತಿಸಲು ಸಿದ್ಧ."

ಡಾ. ಮೂಂಜೆ: ಈ ಪ್ರಶ್ನೆಗೆ ನಾನು ಉತ್ತರಿಸಲೇ? ಈ ಗೊತ್ತುವಳಿ ಅಂಗೀಕೃತವಾಯಿತು. ನಾವು ಅದಕ್ಕೆ ಬದ್ಧರು. ಈ ಸಂಬಂಧದಲ್ಲಿ ನನ್ನ ಮಿತ್ರ ಶ್ರೀಯುತ ಚಟರ್ಜಿ ಅವರು ಡಾ. ಅಂಬೇಡ್ಕರ್‌ಗೆ ಕ್ರೀಡಾ ಮನೋಭಾವದಿಂದ ಸವಾಲೊಂದನ್ನು ಒಡ್ಡಿದರು. ಅಸ್ಪೃಶ್ಯರು ಮತ್ತು ಬಹಿಷ್ಕೃತರು ಎಂದು ವ್ಯಾಖ್ಯಾನಿಸಲಾದ ನಿಮ್ಮ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಸ್ಥಾನಗಳು ಬೇಕು? ಡಾ. ಅಂಬೇಡ್ಕರ್ ಸ್ಪಷ್ಟಪಡಿಸಲಿ. ಬಂಗಾಲ ಮತ್ತು ಪಂಜಾಬಿನಲ್ಲಿ ಈ ಸಮಸ್ಯೆ ಬಗೆಹರಿದುಬಿಡಲಿ.

ಡಾ. ಬಿ. ಆರ್. ಅಂಬೇಡ್ಕರ್: ಪಕ್ಷಗಳ ರಾಜಕೀಯದಲ್ಲಿ ನನ್ನ ಜನಾಂಗ ಹಣೆಬರಹ ನಿರ್ಧರಿಸುವುದು ನನಗೆ ಬೇಕಿಲ್ಲ. ನಾನು ಈ ಸವಾಲನ್ನು ಸ್ವೀಕರಿಸಲು ಸಾಧ್ಯವಿಲ್ಲ.

* ಡಾ. ಬಿ. ಆರ್. ಅಂಬೇಡ್ಕರ್: ಒಂದು ಉಪಪ್ರಶ್ನೆ. ನಿಮ್ಮ ಹಿಂದೂ ಮಹಾಸಭಾದಲ್ಲಿ ನಿಮ್ಮ ವರ್ಗಗಳ ಜನರನ್ನು ಸೇರಿಸಿಕೊಳ್ಳುತ್ತೀರೆಂದು ನಾನು ತಿಳಿಯಲೇ? ಅವರನ್ನೂ ಪ್ರತಿನಿಧಿಸುವುದಾಗಿ ನೀವು ಹೇಳಿಕೊಳ್ಳುತ್ತೀರಾ?

ಡಾ. ಮೂಂಜೆ: ನನ್ನ ಮಾತಿನ ಅರ್ಥವೇನೆಂದರೆ, ನಾನು ನಿಮ್ಮ ವರ್ಗಗಳನ್ನೂ ಪ್ರತಿನಿಧಿಸುತ್ತೇನೆ. ನನ್ನ ಪಕ್ಕ ಕುಳಿತಿರುವ ಸ್ನೇಹಿತ ಶ್ರೀಯುತ ಗವಯಿ ಹಿಂದೂ ಮಹಾಸಭಾ ಕಳಿಸಿರುವ ನಿಮ್ಮ ವರ್ಗದ ಪ್ರತಿನಿಧಿ. ನಾನು ಬಹುಸಂಖ್ಯಾತರ ಪ್ರತಿನಿಧಿಯೇ ಎಂಬುದು ಎಂದೂ ಸಿದ್ಧವಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ಬೇರೆ ವಿಷಯ. ನೀವು ನಿಮ್ಮ ವರ್ಗಗಳನ್ನು ಪ್ರತಿನಿಧಿಸುತ್ತೀರಾ? ಇದು ನನಗೆ ಗೊತ್ತಾಗಬೇಕು.

ಡಾ. ಮೂಂಜೆ: ನಿಮ್ಮ ವರ್ಗಗಳಲ್ಲಿನ ಬಹುಪಾಲು ಸಮುದಾಯವನ್ನು ನಾನು ಪ್ರತಿನಿಧಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಮಟ್ಟಿಗೆ ಹೇಳುವುದಾದರೆ, ಇದನ್ನು ನಾನು ಎಳ್ಳಷ್ಟೂ ಒಪ್ಪುವುದಿಲ್ಲ. ಶ್ರೀಯುತ ಗವಯಿ ಅವರು ಏನನ್ನುತ್ತಾರೋ? ಡಾ. ಮೂಂಜೆ ಪ್ರತಿನಿಧಿಸುವ ಸಂಘಟನೆಯ ಜತೆಗೆ ನಿಮ್ಮ ವರ್ಗಗಳು ಇರಲು ಸಾಧ್ಯವೇ ಇಲ್ಲ ಎಂದು ನಾನು ಪುನಃ ಹೇಳುತ್ತೇನೆ. ಇನ್ನು ಅವರು ಸಲ್ಲಿಸಿರುವ ಮನವಿ ಪತ್ರಕ್ಕೆ ನಿಮ್ಮ ವರ್ಗಗಳು ಅನುಮೋದನೆ ಸೂಚಿಸುವುದೂ ಸಾಧ್ಯವಿಲ್ಲ. ವಾಸ್ತವಾಂಶ ಎಂದರೆ, ಪಂಜಾಬ್ ಹಿಂದೂಗಳು ಇದನ್ನು ನಿರಾಕರಿಸಿದ್ದರು ಕೂಡ.

ಡಾ. ಮೂಂಜೆ: ಏನನ್ನು?

ಡಾ. ಬಿ. ಆರ್. ಅಂಬೇಡ್ಕರ್: ಮನವಿ ಪತ್ರದ ೫೭ನೇ ಭಾಗವನ್ನು ಪಂಜಾಬಿನ ನಿಮ್ಮ ವರ್ಗಗಳು ನಿರಾಕರಿಸಿದ್ದವು.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಸಿ, ೩೧ ಜುಲೈ ೧೯೩೩, ಪುಟ ೧೪೬೬

(೧೪)

## ಎಂ. ಕೆ. ಆಚಾರ್ಯ, ಎಲ್. ಎಂ. ದೇಶಪಾಂಡೆ, ಜೆ. ಎಲ್. ಬ್ಯಾನರ್ಜಿ, ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ಪ್ರತಿನಿಧಿಗಳು

* ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ಆಚಾರ್ಯರೇ, ಧರ್ಮದ ಮೂಲತತ್ವ ಎಂದು ನೀವು ಯಾವುದನ್ನು ಕರೆಯುತ್ತೀರೋ, ಅದರ ಮೇಲೆ ಪರಿಣಾಮ ಉಂಟುಮಾಡುವ ಕಾನೂನುಗಳನ್ನು ಮಾಡುವ ಅಧಿಕಾರ ಶಾಸಕಾಂಗಕ್ಕೆ ಇರಬಾರದೆಂದೇ ನೀವು ಬಯಸುತ್ತೀರಿ. ಅಲ್ಲವೇ?

ಎಂ. ಕೆ. ಆಚಾರ್ಯ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈ ಸಂಬಂಧದಲ್ಲಿ ಯಾವುದೇ ಕಾನೂನು ಆಗುವ ಮೊದಲು, ಧಾರ್ಮಿಕ ಸಂಸ್ಥೆಗಳ ಪ್ರಮುಖರಿಂದ ಒಂದು ಬಗೆಯ ಪೂರ್ವಭಾವಿ ಒಪ್ಪಿಗೆಯನ್ನು ಪಡೆದುಕೊಳ್ಳಬೇಕೆಂದು ನೀವು ಅಪೇಕ್ಷಿಸುತ್ತಿರಲ್ಲವೇ?

ಎಂ. ಕೆ. ಆಚಾರ್ಯ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಕಾನೂನು ಮಂಡಿಸಿದಾಗ ಮೂರನೇ ಎರಡರಷ್ಟು ಸದಸ್ಯರು ಒಪ್ಪಿಗೆ ನೀಡುವವರೆಗೆ ಅದು ಕಾಯ್ದೆ ಆಗಬಾರದು ಎನ್ನುತ್ತೀರಲ್ಲವೇ?

ಎಂ. ಕೆ. ಆಚಾರ್ಯ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಮೂರನೇ ಎರಡರಷ್ಟು ಜನ ಯಾರು? ಶಾಸಕಾಂಗದಲ್ಲಿ ಒಟ್ಟು ಸದಸ್ಯರ ಪೈಕಿಯೇ? ಅಥವಾ ಶಾಸಕಾಂಗದಲ್ಲಿನ ಹಿಂದೂ ಸದಸ್ಯರ ಪೈಕಿಯೇ?

ಎಂ. ಕೆ. ಆಚಾರ್ಯ: ಯಾವ ಧರ್ಮದ ಜನರ ಹಿತಕ್ಕೆ ಧಕ್ಕೆ ಉಂಟಾಗಲಿದೆಯೋ ಆ ಧರ್ಮಕ್ಕೆ ಸೇರಿದ ಸದಸ್ಯರ ಪೈಕಿ ಮೂರನೇ ಎರಡರಷ್ಟು ಜನ ಒಪ್ಪಿಗೆ ನೀಡಬೇಕು. ಹಿಂದೂಗಳ ಹಿತಕ್ಕೆ ಸಂಬಂಧಿಸಿದ್ದಾದರೆ ಮುಸ್ಲಿಂ ಸದಸ್ಯರನ್ನು ಒಪ್ಪಿಗೆ ಕೇಳಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಧರ್ಮದ ಮೂಲತತ್ವಗಳೇನು ಎಂಬ ಬಗ್ಗೆ ವ್ಯಾಖ್ಯೆ ರೂಪದಲ್ಲಿ ನೀವು ಹೇಳಬಲ್ಲಿರಾ? ಏಕೆಂದರೆ ಶಾಸಕಾಂಗ ಸಮಿತಿಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಎಂ. ಕೆ. ಆಚಾರ್ಯ: ಸಮಿತಿ ನನಗೆ ಮೂರು ಗಂಟೆ ಕಾಲಾವಕಾಶ ನೀಡುವುದಾದರೆ, ನಾನು ವಿನಮ್ರವಾಗಿ ಧರ್ಮದ ಮೂಲತತ್ವಗಳ ಬಗ್ಗೆ ಉಪನ್ಯಾಸ ನೀಡಬಯಸುವೆ.

ಸರ್ ಆಸ್ಟಿನ್ ಚೇಂಬರ್‌ಲೇನ್: ನೀವು ಮಿತವಾದ ಮಾತುಗಳಲ್ಲಿ, ಧರ್ಮದ ಮೂಲತತ್ವಗಳ ಬಗ್ಗೆ, ಅಧಿನಿಯಮದಲ್ಲಿ ಅಳವಡಿಸಲಾಗುವಂತೆ ವಿವರಿಸಲಾರಿರಿ, ಅಲ್ಲವೇ?

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಸಿ, ೨ ಆಗಸ್ಟ್ ೧೯೩೩, ಪುಟ ೧೬೦೫–೦೮.

ಎಂ. ಕೆ. ಆಚಾರ್ಯ: ನಾನು ಹೇಳಿದ್ದೂ ಅದನ್ನೇ. ಮೂರು ಶಬ್ದಗಳ ಉತ್ತರದಲ್ಲಿ ನನ್ನನ್ನು ಸಿಲುಕಿಸಬೇಕೆಂದು ಡಾ. ಅಂಬೇಡ್ಕರ್ ಯತ್ನಿಸುತ್ತಿದ್ದಾರೆ. ಆದರೆ, ಹಾಗೆ ಹೇಳುವುದು ನನಗೆ ಸಾಧ್ಯವಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಲು ನಾನು ಪ್ರಯತ್ನಿಸುತ್ತಿಲ್ಲ. ಬದಲಾಗಿ ನಿಮ್ಮನ್ನು ಅರ್ಥ ಮಾಡಿಕೊಳ್ಳಲು ನಾನು ಯತ್ನಿಸುತ್ತಿದ್ದೇನೆ. ಕಾಯ್ದೆ ಮಾಡಲು ಸಾಧ್ಯವಾಗುವ ಸ್ಪಷ್ಟ ಸೂತ್ರವೊಂದನ್ನು ನೀವು ಒದಗಿಸಬೇಕು. ಆಗ ಶಾಸಕಾಂಗವು ತನ್ನ ಅಧಿಕಾರ ವ್ಯಾಪ್ತಿ ಮೀರಿ ನಿರ್ದಿಷ್ಟ ಕಾಯ್ದೆಯೊಂದನ್ನು ಮಾಡಿತೇ ಎಂಬುದನ್ನು ಖಚಿತವಾಗಿ ಹೇಳಲು, ಸದನದ ಅಧ್ಯಕ್ಷ, ಗವರ್ನರ್, ನ್ಯಾಯಾಲಯಗಳು ಅಥವಾ ಇಂಥದನ್ನು ನಿರ್ಧರಿಸಲು ನಿಯುಕ್ತರಾದ ಯಾರಿಗೇ ಆಗಲಿ ಸಾಧ್ಯವಾದೀತು.

ಎಂ. ಕೆ. ಆಚಾರ್ಯ: ಸುಸೂತ್ರವಾದ ಒಂದು ಸೂತ್ರವನ್ನು ನಾನು ಸೂಚಿಸಿರುವೆ ಎಂದು ಭಾವಿಸಿದ್ದೇನೆ...

ಡಾ. ಬಿ. ಆರ್. ಅಂಬೇಡ್ಕರ್: ಧರ್ಮದ ಮೂಲತತ್ವಗಳು ಎಂದು ಮಾತ್ರ ನೀವು ಹೇಳಿದಿರಿ. ಅವು ಯಾವುವು?

ಎಂ. ಕೆ. ಆಚಾರ್ಯ: ಒಂದು ಧರ್ಮದ ಜನತೆಗೆ ಸಂಬಂಧಿಸಿದ ವಿಷಯದ ಬಗ್ಗೆ ಗವರ್ನರ್ ಅಥವಾ ಗವರ್ನರ್–ಜನರಲ್ ಆ ಪ್ರಾಂತದಲ್ಲಿನ ಆಯಾ ಧರ್ಮದ ಧಾರ್ಮಿಕ ಮುಂದಾಳುಗಳ ಅಭಿಪ್ರಾಯ ಪಡೆದು, ಅದಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಿದ ಸೂಚನೆಯನ್ನು ಶಾಸಕಾಂಗದಲ್ಲಿ ಮಂಡಿಸಿ, ಕಾಯ್ದೆ ಮಾಡಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಯಾವುದೇ ಕಾಯ್ದೆ ನಿಮ್ಮ ಧರ್ಮದ ಮೂಲತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆಯೋ ಇಲ್ಲವೋ ಎಂಬುದನ್ನು ಧಾರ್ಮಿಕ ಸಂಸ್ಥೆಗಳ ಮುಖಂಡರು ನಿರ್ಧರಿಸುತ್ತಾರೆ ಎಂದು ನೀವು ಹೇಳುತ್ತೀರಾ?

ಎಂ. ಕೆ. ಆಚಾರ್ಯ: ಹೌದು. ಇದನ್ನು ನಿರ್ಧರಿಸುವ ಅಧಿಕಾರ ಅವರಿಗೆ ಮಾತ್ರ ಇರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ಆಚಾರ್ಯರೇ, ನೀವು ಬ್ರಾಹ್ಮಣ ಜಾತಿಗೆ ಸೇರಿದವರು, ಹೌದೇ?

ಎಂ. ಕೆ. ಆಚಾರ್ಯ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ದೇಶಪಾಂಡೆ, ನೀವೂ ಬ್ರಾಹ್ಮಣ ಜಾತಿಯವರು, ಹೌದೇ?

ದೇಶಪಾಂಡೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ಬ್ಯಾನರ್ಜಿ ಅವರೇ, ನೀವೂ ಬ್ರಾಹ್ಮಣ ಜಾತಿಯವರು, ಹೌದೇ?

ಬ್ಯಾನರ್ಜಿ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ಆಚಾರ್ಯರೇ, ಹಿಂದೂ ಧರ್ಮದಲ್ಲಿ ಬ್ರಾಹ್ಮಣರು ಮಾತ್ರ ಪುರೋಹಿತರಾಗಲು ಸಾಧ್ಯ. ಇದು ನಿಜವಲ್ಲವೇ?

ಎಂ. ಕೆ. ಆಚಾರ್ಯ: ನಿಜವಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ ಹಿಂದೂ ಧರ್ಮವನ್ನು ಆಚರಿಸುತ್ತಿರುವ ಯಾರೇ ಆಗಲಿ, ಹಿಂದೂ ಧಾರ್ಮಿಕ ಸಂದರ್ಭಗಳಲ್ಲಿ ಪುರೋಹಿತರಾಗಬಹುದೆಂದೇ?

ಎಂ. ಕೆ. ಆಚಾರ್ಯ: ನನ್ನ ಮಾತಿನ ಅರ್ಥ ಅದಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದೇ ನನ್ನ ಪ್ರಶ್ನೆ. ಹೌದೋ ಅಲ್ಲವೇ, ಹೇಳಿ.

ಎಂ. ಕೆ. ಆಚಾರ್ಯ: ನೀವು ಸರಿಯಾಗಿ ಪ್ರಶ್ನೆ ಕೇಳಿ.

ಡಾ. ಬಿ. ಆರ್. ಅಂಬೇಡ್ಕರ್: ಬ್ರಾಹ್ಮಣ ಅಲ್ಲದ ಯಾರೇ ಆಗಲಿ ಧಾರ್ಮಿಕ ಸಂದರ್ಭಗಳಲ್ಲಿ ಪುರೋಹಿತರಾಗಬಹುದೇ?

ಎಂ. ಕೆ. ಆಚಾರ್ಯ: ಇದು ಸರಳವಾದ ಪ್ರಶ್ನೆ. ಪ್ರತಿ ಜಾತಿಯೂ, ಉಪಜಾತಿಯೂ ತನ್ನೊಳಗೆ ಒಬ್ಬ ಪುರೋಹಿತನನ್ನು ಹೊಂದಿದೆ. ಬ್ರಾಹ್ಮಣರು ಕೆಲವು ಜಾತಿಗಳ ಬಳಿಗೆ ಹೋಗುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಮ್ರನಾಗೇ ಹೇಳುತ್ತೇನೆ. ನೀವು ಸರಿಯಾಗಿ ಸಂಗತಿಯನ್ನು ವಿವರಿಸುತ್ತಿಲ್ಲ.

ಎಂ. ಕೆ. ಆಚಾರ್ಯ: ನಾನು ತಿಳಿದಂತೆ ಈ ಹೇಳಿಕೆ ಸರಿ.

ಡಾ. ಬಿ. ಆರ್. ಅಂಬೇಡ್ಕರ್: ದೇಶಪಾಂಡೆಯವರೇ, ನಿಮಗೆ ಗೊತ್ತೇ?

ದೇಶಪಾಂಡೆ: ಹೌದು. ಅದು ಹಾಗೇ.

ಎಂ. ಕೆ. ಆಚಾರ್ಯ: ಕೆಲವೊಂದು ಸಂದರ್ಭಗಳಲ್ಲಿ ಬ್ರಾಹ್ಮಣ ಪುರೋಹಿತನಾಗಿ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಎಲ್ಲಾ ಧಾರ್ಮಿಕ ಸಂಸ್ಥೆಗಳ ಮುಖಂಡರು ಬ್ರಾಹ್ಮಣರು, ಅಲ್ಲವೇ?

ದೇಶಪಾಂಡೆ: ಅಲ್ಲ. ಮುಂಬಯಿ ಪ್ರಾಂತದಲ್ಲಿ ಭಾರಿ ಆಸ್ತಿ ಹೊಂದಿರುವ ದೊಡ್ಡ ಮಠವೊಂದು ಬ್ರಾಹ್ಮಣೇತರರ ಕೈಯಲ್ಲಿದೆ?

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ?

ದೇಶಪಾಂಡೆ: ಕೆಲವು ಬ್ರಾಹ್ಮಣರ ಕೈಯಲ್ಲಿವೆ; ಇನ್ನೂ ಕೆಲವು ಬ್ರಾಹ್ಮಣೇತರರ ಕೈಯಲ್ಲಿವೆ.

ಡಾ. ಬಿ. ಆರ್. ಅಂಬೇಡ್ಕರ್: ಮುಂಬಯಿ ಪ್ರಾಂತದಲ್ಲಿನ ಎಲ್ಲಾ ಧಾರ್ಮಿಕ ಸಂಸ್ಥೆಗಳು ಬ್ರಾಹ್ಮಣರ ವಶದಲ್ಲೇ ಇಲ್ಲವೇ?

ದೇಶಪಾಂಡೆ: ಬೇರೆಯವರ ವಶದಲ್ಲಿಯೂ ಇವೆ. ಉದಾ: ಲಿಂಗಾಯಿತರು.

ಡಾ. ಬಿ. ಆರ್. ಅಂಬೇಡ್ಕರ್: ವಿಷಯವು ಗೊಂದಲಕ್ಕೀಡಾಗದಿರಲಿ. ನನ್ನ ಪ್ರಶ್ನೆಯೇನೆಂದರೆ; ಹಿಂದೂ ಧರ್ಮದ ಕಕ್ಷೆಯಲ್ಲಿ ಬರುವ ಲಿಂಗಾಯತರು, ಜೈನರು, ಬೌದ್ಧರು ಈ ಎಲ್ಲಾ ಜನಾಂಗಗಳ ಧಾರ್ಮಿಕ ಸಂಸ್ಥೆಗಳು ಬ್ರಾಹ್ಮಣರ ವಶದಲ್ಲಿಯೇ ಇವೆಯಲ್ಲವೇ?

ದೇಶಪಾಂಡೆ: ಮುಂಬಯಿ ಪ್ರಾಂತದಲ್ಲಿ ಬ್ರಾಹ್ಮಣೇತರರ ವಶದಲ್ಲಿರುವ ಧಾರ್ಮಿಕ ಸಂಸ್ಥೆಗಳೂ ಇವೆ.

ಡಾ. ಬಿ. ಆರ್. ಅಂಬೇಡ್ಕರ್: ಅವುಗಳ ಸಂಖ್ಯೆ ತೀರಾ ಕಮ್ಮಿ.

ದೇಶಪಾಂಡೆ: ಹೌದು. ಅದನ್ನು ಒಪ್ಪಬಹುದು. ಆದರೆ, ಎಲ್ಲಾ ಧಾರ್ಮಿಕ ಸಂಸ್ಥೆಗಳೂ ಬ್ರಾಹ್ಮಣರ ವಶದಲ್ಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಯಾವುದೇ ಸೂಚನೆಯೊಂದು ಕಾಯ್ದೆಯಾಗುವ ಮುನ್ನ ಧಾರ್ಮಿಕ ಸಂಸ್ಥೆಗಳ ಮುಖಂಡರ ಅಭಿಪ್ರಾಯ ಪಡೆದು, ಅದಕ್ಕೆ ಪೂರಕವಾಗಿಯೇ ಕಾಯ್ದೆ ಆಗಬೇಕೆಂದು ನೀವು ಈ ಮುಂಚೆ ಹೇಳಿದ್ದಿರಿ. ಅಂದರೆ, ಹಿಂದೂ ಸಮುದಾಯದ ಹಣೆಬರಹವನ್ನು ಧಾರ್ಮಿಕ

ಮಠಗಳಲ್ಲಿ ಮುಖಂಡರಾಗಿರುವ ಬಹುಸಂಖ್ಯಾತ ಬ್ರಾಹ್ಮಣರು ನಿರ್ಧರಿಸಬೇಕು ಎಂದಾಯಿತು. ಅಲ್ಲವೇ?

ಎಂ. ಕೆ. ಆಚಾರ್ಯ: ಹಾಗಲ್ಲವೇ ಅಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ದೇಶಪಾಂಡೆ ಅವರೇ, ನೀವು ಯಾರನ್ನು ಪ್ರತಿನಿಧಿಸುತ್ತೀರಿ ಎಂಬುದು ತಿಳಿಯಲಿ. ಸಾತಾರದಲ್ಲಿ ಬ್ರಾಹ್ಮಣೇತರರ ಪಕ್ಷವೊಂದಿದೆ, ಅಲ್ಲವೇ?

ದೇಶಪಾಂಡೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಸಾತಾರಾ ಜನಸಂಖ್ಯೆಯಲ್ಲಿ ಶೇ. ೯೦ರಷ್ಟು ಜನ ಬ್ರಾಹ್ಮಣೇತರರು, ಹೌದೇ?

ದೇಶಪಾಂಡೆ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಸಾತಾರಾ ಜಿಲ್ಲೆಯಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವೆ ತೀವ್ರ ವೈಷಮ್ಯ ಇದೆ, ಹೌದೇ?

ದೇಶಪಾಂಡೆ: ಕೆಲವು ವಿಷಯಗಳಲ್ಲಿ ಇದೆ; ಎಲ್ಲಾ ವಿಷಯಗಳಲ್ಲಿ ಅಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ರಾಜಕೀಯವಾಗಿ ಮತ್ತು ಸಮಾಜ ಸುಧಾರಣೆ ವಿಷಯದಲ್ಲೂ ವೈಷಮ್ಯ ಇದೆ, ಅಲ್ಲವೇ?

ದೇಶಪಾಂಡೆ: ರಾಜಕೀಯವಾಗಿ ಇದೆ.

ಡಾ. ಬಿ. ಆರ್. ಅಂಬೇಡ್ಕರ್: ಸಮಾಜ ಸುಧಾರಣೆಗೆ ಸಂಬಂಧಿಸಿದಂತೆ?

ದೇಶಪಾಂಡೆ: ಅಷ್ಟೇನೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ದೇವಸ್ಥಾನಗಳಲ್ಲಿ ಸಮಾನ ಅಧಿಕಾರ ಬೇಕು ಎಂದು ಬ್ರಾಹ್ಮಣೇತರರು ಅಲ್ಲಿ ಹೋರಾಟ ನಡೆಸಿಲ್ಲವೇ?

ದೇಶಪಾಂಡೆ: ಕೆಲವು ಕಡೆಗಳಲ್ಲಿ ನಡೆಸಿರಬಬಹುದು; ಎಲ್ಲಾ ಕಡೆಗಳಲ್ಲೂ ಅಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಏನೇ ಇದ್ದರೂ ಅವೆರಡೂ ಪ್ರತ್ಯೇಕ ಸಮೂಹಗಳು; ಎರಡಕ್ಕೂ ಪ್ರತ್ಯೇಕ ರಾಜಕೀಯ ಬದುಕಿದೆ.

ದೇಶಪಾಂಡೆ: ಹೌದು. ಪ್ರತಿಯೊಬ್ಬರಿಗೂ ತಮ್ಮದೇ ಆದ ಪ್ರತ್ಯೇಕ ಬದುಕಿದೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೂ ನೀವು ಕೆಲವೊಂದು ಬ್ರಾಹ್ಮಣರು ಸಾತಾರದಲ್ಲಿ ಬ್ರಾಹ್ಮಣೇತರರನ್ನೂ ಪ್ರತಿನಿಧಿಸಬಲ್ಲಿರಿ ಎಂದು ಹೇಳುತ್ತೀರಲ್ಲ?

ದೇಶಪಾಂಡೆ: ನನ್ನ ಮಟ್ಟಿಗೆ ಹೇಳುವುದಾದರೆ, ಹೌದು. ಹಾಗೇ ಹೇಳುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಮನವಿ ಪತ್ರದಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳನ್ನು ನೀವು ಮತ್ತು ಬ್ರಾಹ್ಮಣೇತರ ಮುಖಂಡ ಶ್ರೀಯುತ ಜಾಧವ ಇಬ್ಬರೂ ಒಪ್ಪುತ್ತೀರಿ ಎಂದು ನಿಮಗೆ ಅನಿಸುತ್ತದೆಯೇ?

ದೇಶಪಾಂಡೆ: ಶ್ರೀಯುತ ಜಾಧವ ಅವರ ವಿಷಯ ನನಗೆ ತಿಳಿಯದು; ನನ್ನ ಅಭಿಪ್ರಾಯ ನಾನು ಹೇಳಬಲ್ಲೆ.

ಡಾ. ಬಿ. ಆರ್. ಅಂಬೇಡ್ಕರ್: ನೀವಿಬ್ಬರೂ ಜೊತೆಯಾಗಿ ಊಟ ಮಾಡುತ್ತೀರಾ?

ದೇಶಪಾಂಡೆ: ಶ್ರೀಯುತ ಜಾಧವ ಮತ್ತು ನಾನೇ? ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಮದರಾಸು ಪ್ರಾಂತದಲ್ಲಿ ಬ್ರಾಹ್ಮಣೇತರರದು ಜಸ್ಟಿಸ್ ಪಾರ್ಟಿ ಇದೆ, ಹೌದೇ?

ಎಂ. ಕೆ. ಆಚಾರ್ಯ: ಕೆಲವು ವರ್ಷಗಳ ಹಿಂದಿತ್ತು. ಅದು ಈಗಲೂ ಇದೆಯೇ ಹೇಗೆಂಬುದು ನನಗೆ ಗೊತ್ತಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅದು ಒಂದೋ ಎರಡೋ ವರ್ಷ ಕಾಲ ಅಸ್ತಿತ್ವದಲ್ಲಿತ್ತು.

ಎಂ. ಕೆ. ಆಚಾರ್ಯ: ಅದು ಏಳೆಂಟು ವರ್ಷ ಕಾಲ ಇತ್ತು.

ಡಾ. ಬಿ. ಆರ್. ಅಂಬೇಡ್ಕರ್: ಮದರಾಸು ಪ್ರಾಂತದಲ್ಲೂ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ಮಧ್ಯೆ ತೀವ್ರ ವೈಷಮ್ಯ ಇದೆ.

ಎಂ. ಕೆ. ಆಚಾರ್ಯ: ಧಾರ್ಮಿಕ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅಂಥ ವೈಷಮ್ಯವೇನೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಎರಡೂ ಬಣಗಳಿಗೆ ಪ್ರತ್ಯೇಕ ಸಂಘಟನೆಗಳಿವೆ.

ಎಂ. ಕೆ. ಆಚಾರ್ಯ: ನನ್ನ ತಿಳುವಳಿಕೆಯಂತೆ, ಜಸ್ಟಿಸ್ ಪಾರ್ಟಿಯೊಳಗೆ ಈಗ ಬ್ರಾಹ್ಮಣರಿಗೂ ಪ್ರವೇಶ ನೀಡಲಾಗುತ್ತಿದೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಇಲ್ಲಿಯವರೆಗೆ ಅವರಿಗೆ ಪ್ರವೇಶ ಸಿಗುತ್ತಿರಲಿಲ್ಲ, ಅಲ್ಲವೇ?

ಎಂ. ಕೆ. ಆಚಾರ್ಯ: ಈಗಲಾದರೂ ಬ್ರಾಹ್ಮಣರಿಗೆ ಪ್ರವೇಶ ಸಿಗುತ್ತಿದೆ; ಅಂದರೆ ಬ್ರಾಹ್ಮಣೇತರರು ಬದಲಾಗುತ್ತಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ನೀವು ಕೇವಲ ಬ್ರಾಹ್ಮಣರ ದೃಷ್ಟಿಕೋನವನ್ನು ಮಾತ್ರ ಪ್ರತಿನಿಧಿಸುತ್ತೀರಿ ಎನ್ನುವುದು ಸರಿಯೇ?

ಎಂ. ಕೆ. ಆಚಾರ್ಯ: ಲೇಶಮಾತ್ರವೂ ಸರಿಯಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ೬೪ನೇ ನಂಬರ್ ಮನವಿ ಪತ್ರದಲ್ಲಿ ಪುಣೆ ಒಪ್ಪಂದ ಕುರಿತಂತೆ ಯಾವ ಪ್ರತಿಕ್ರಿಯೆಯೂ ಇಲ್ಲ, ಹೌದೇ?

ಎಂ. ಕೆ. ಆಚಾರ್ಯ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈ ಅಂಶ ನಿಜ ತಾನೇ?

ಎಂ.ಕೆ. ಆಚಾರ್ಯ: ನಿಜ.

ಡಾ. ಬಿ. ಆರ್. ಅಂಬೇಡ್ಕರ್: ೬೫ನೇ ನಂಬರ್ ಮನವಿ ಪತ್ರದ ೩ನೇ ಪುಟದಲ್ಲಿ "ಅದರ ಗುಣಗಳನ್ನು ಗಮನಿಸಿ ನಾವು ಪುಣೆ ಒಪ್ಪಂದವನ್ನು ಖಂಡಿಸುತ್ತೇವೆ" ಎಂದು ಹೇಳಿರುವುದರ ಹೊರತು, ಅಲ್ಲಿ ಬೇರಾವ ಉಲ್ಲೇಖವೂ ಇಲ್ಲ, ಅಲ್ಲವೇ?

ಎಂ. ಕೆ. ಆಚಾರ್ಯ: ಅಷ್ಟಿದ್ದರೆ ಸಾಕೆಂದು ನಾನು ಭಾವಿಸಿದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ನಿಮ್ಮ ಜಂಟಿಹೇಳಿಕೆ ತಡವಾಗಿ ನೀಡಿದುದು ಅಲ್ಲವೇ?

ಎಂ. ಕೆ. ಆಚಾರ್ಯ: ಹೌದು; ಬೇರೆಯವರಿಗಿಂತ ತಡವಾಗಿ ಈ ಅಭಿಪ್ರಾಯವನ್ನು ನಾವು ವ್ಯಕ್ತಪಡಿಸಿದೆವು.

ಡಾ. ಬಿ. ಆರ್. ಅಂಬೇಡ್ಕರ್: ಹಿಂದೂ ಮಹಾಸಭಾ ಸಾಕ್ಷ್ಯ ನೀಡಿದ ಬಳಿಕ?

ಎಂ. ಕೆ. ಆಚಾರ್ಯ: ಅಲ್ಲ, ಅದಕ್ಕೂ ತುಂಬಾ ಮೊದಲು.

ಡಾ. ಬಿ. ಆರ್. ಅಂಬೇಡ್ಕರ್: ನೀವು ಇಲ್ಲಿ ಹೇಳಿರುವಂತೆ ಪುಣೆ ಒಪ್ಪಂದವನ್ನು ಖಂಡಿಸಬೇಕೆಂಬ ಅಭಿಪ್ರಾಯ ಬಂತು ಎಂದಾದಲ್ಲಿ ಶ್ರೀಯುತ ದೇಶಪಾಂಡೆಯವರು ಮೊದಲೇ ಏಕೆ ಮನವಿ ಪತ್ರದಲ್ಲಿ ಈ ಅಂಶವನ್ನೂ ಸೇರಿಸಲಿಲ್ಲ?

ದೇಶಪಾಂಡೆ: ಅದು ಅವಶ್ಯಕ ಎಂದು ನನಗೆ ಅನಿಸಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಸಂಯುಕ್ತ ಮನವಿ ಪತ್ರದಲ್ಲಿ (೨ನೇ ನಂಬರ್) ಸಂಪೂರ್ಣ ಪ್ರಾಂತ ಸ್ವಾಯತ್ತತೆ ಮತ್ತು ಕೇಂದ್ರದ ಜವಾಬ್ದಾರಿಯನ್ನು ನೀವು ಕೇಳಿದ್ದಿರಿ. ಕೆಳಮನೆಗಳಿಗೆ ಮತಾಧಿಕಾರ ಕುರಿತಂತೆ ೪ನೇ ಪ್ಯಾರಾದಲ್ಲಿ "ನಮ್ಮ ದೇಶವಾಸಿಗಳ ಪೈಕಿ ಬಹುಜನರು ಪ್ರತಿನಿಧಿಗಳ ಸಂಸ್ಥೆ ನಡೆಸುವಲ್ಲಿ ಇನ್ನೂ ತರಬೇತಿ ಪಡೆದಿಲ್ಲ" ಎಂದಿದ್ದೀರಿ. ಹೀಗೆ ಹೇಳುವ ನೀವು ಯಾರ ಅನುಕೂಲಕ್ಕಾಗಿ ಪ್ರಾಂತ ಸ್ವಾಯತ್ತತೆ ಮತ್ತು ಕೇಂದ್ರದ ಜವಾಬ್ದಾರಿಯನ್ನು ಕೇಳುತ್ತಿದ್ದೀರಿ?

ಎಂ. ಕೆ. ಆಚಾರ್ಯ: ಮಾನ್ಯ ಸದಸ್ಯರು ಪೂರ್ಣ ಪ್ಯಾರಾವನ್ನು ಎಚ್ಚರಿಕೆಯಿಂದ ಓದಲಿ, ಉತ್ತರ ಅಲ್ಲೇ ಸಿಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಉತ್ತರ ಏನು?

ಎಂ. ಕೆ. ಆಚಾರ್ಯ: ಉತ್ತರ ಅಲ್ಲೇ ಇದೆ. ಓದಿ ನೋಡಿ.

ಡಾ. ಬಿ. ಆರ್. ಅಂಬೇಡ್ಕರ್: ಉತ್ತರ ಹೇಳಿ.

ಎಂ. ಕೆ. ಆಚಾರ್ಯ: ನಾವು ಪ್ರಾಂತ ಸ್ವಾಯತ್ತತೆಯನ್ನು ಮತ್ತು ಕೇಂದ್ರದ ಜವಾಬ್ದಾರಿಯನ್ನು ಆಗ್ರಹ ಪಡಿಸುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಪ್ರತಿನಿಧಿಗಳ ಸಂಸ್ಥೆ ನಡೆಸುವಲ್ಲಿ ನಿಮ್ಮ ದೇಶವಾಸಿಗಳನ್ನು ಯದ್ವಾತದ್ವದ ಮತಾಧಿಕಾರವು ಹೇಗೆ ತಾನೇ ತರಬೇತಿಗೊಳಿಸೀತು?

ಎಂ. ಕೆ. ಆಚಾರ್ಯ: ನಾವೂ ಹೇಳುವುದು ಇದನ್ನೇ. ಯದ್ವಾತದ್ವದ ಮತಾಧಿಕಾರ ನೀಡಿಕೆಯಿಂದ ಅವರಿಗೆ ತರಬೇತಿ ಸಿಗುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದ ಮತಾಧಿಕಾರವನ್ನು ಮೇಲ್ದರ್ಜೆಗೆ ಕೊಡಿ ಅಂತಲೇ?

ಎಂ. ಕೆ. ಆಚಾರ್ಯ: ಅಲ್ಲ; ತಾರತಮ್ಯವಿಲ್ಲದ ಪದ್ಧತಿ ಬೇಡ ಅಂದರೆ ತಾರತಮ್ಯ ಇರುವ ಪದ್ಧತಿ ಇರಲಿ ಅಂತ ಅರ್ಥ.

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ ಕೇವಲ ಬ್ರಾಹ್ಮಣರಿಗೆ ಮತ್ತು ಮೇಲ್ಜಾತಿಯವರಿಗೆ ಮಾತ್ರ ಮತಾಧಿಕಾರ ಇರಲಿ, ಅಂತಲೇ?

ಎಂ. ಕೆ. ಆಚಾರ್ಯ: ತಾರತಮ್ಯ ಇರಲಿ ಅಂದರೆ ಹಾಗೆಂದು ಅರ್ಥ ಅಲ್ಲ. ಶ್ವೇತಪತ್ರದ ಪ್ರಕಾರ ೩೮,೦೦೦,೦೦೦ ಜನ ಇದ್ದಾರೆ. ೨೦ ಅಥವಾ ೨೮ ದಶಲಕ್ಷವಾದರೂ ಸಾಕು. ಇಷ್ಟು ಜನ. ಯಾವೊಂದು ವರ್ಗಕ್ಕೆ ಮಾತ್ರ ಮತಾಧಿಕಾರಿ ನೀಡಿ ಎನ್ನುವುದಕ್ಕಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಮಲಬಾರ್‌ನಲ್ಲಿ ನಯ್ಯಾಡಿ ಎಂಬ ಜನಾಂಗ ಇದೆ, ನಿಮಗೆ ಗೊತ್ತೇ?

ಎಂ. ಕೆ. ಆಚಾರ್ಯ: ಗೊತ್ತು.

ಡಾ. ಬಿ. ಆರ್. ಅಂಬೇಡ್ಕರ್: ಡಾ. ಬಿ. ಆರ್. ಅಂಬೇಡ್ಕರ್: ಅಲ್ಲಿ ಸಾಮಾಜಿಕ ರಿವಾಜಿನಂತೆ ನಯ್ಯಾಡಿ ಜನ ರಸ್ತೆಯಲ್ಲಿ ತಿರುಗಾಡುವಂತಿಲ್ಲ.

ಎಂ. ಕೆ. ಆಚಾರ್ಯ: ಸಾರ್ವಜನಿಕ ರಸ್ತೆಗಳಲ್ಲಿ ಧಾರಾಳವಾಗಿ ತಿರುಗಾಡಬಹುದು.

ಡಾ. ಬಿ. ಆರ್. ಅಂಬೇಡ್ಕರ್: ತಾವು ಮಾರಾಟ ಮಾಡುವ ಪದಾರ್ಥಗಳನ್ನು ಈ ಜನ ೬೦ ಯಾರ್ಡ್ ದೂರ ಇಟ್ಟುಕೊಂಡು ಕೂಗಬೇಕು.....

ಎಂ. ಕೆ. ಆಚಾರ್ಯ: ನನಗೆ ಗೊತ್ತಿರುವಂತೆ ಈ ಮಾಹಿತಿ ಸರಿಯಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ನಿಮಗೆ ಮಾಹಿತಿ ಕೊಡುತ್ತೇನೆ.

ಎಂ. ಕೆ. ಆಚಾರ್ಯ: ಅದು ಸರಿಯಲ್ಲ, ನಾನದನ್ನು ಅಲ್ಲಗಳೆಯುವೆ. ನಾನು ಮಲಬಾರ್‌ನಲ್ಲಿ ಬಹಳ ವರ್ಷ ನೆಲೆಸಿದ್ದೆ. ಮಲಬಾರ್ ಬಗ್ಗೆ ಮಾನ್ಯ ಸದಸ್ಯರಿಗಿಂತ ನನಗೆ ಹೆಚ್ಚು ಗೊತ್ತು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಕೇಳಬೇಕೆಂದಿರುವ ಪ್ರಶ್ನೆ ಬೇರೆ. ಈ ಮಾಹಿತಿ ಸರಿ ಎಂದು ಭಾವಿಸಿ.....

ಎಂ. ಕೆ. ಆಚಾರ್ಯ: ಈ ಮಾಹಿತಿ ಸರಿಯಿಲ್ಲದಿರುವಾಗ, ಸರಿ ಎಂದು ನಾನು ಹೇಗೆ ಭಾವಿಸಲಿ?

ಡಾ. ಬಿ. ಆರ್. ಅಂಬೇಡ್ಕರ್: ಮಲಬಾರ್‌ನ ಸಾರ್ವಜನಿಕ ರಸ್ತೆಯಲ್ಲಿ ನಯ್ಯಾಡಿ ಜನ ತಿರುಗಾಡುವುದಕ್ಕೆ ಅಡ್ಡಿಪಡಿಸುವ ಯಾವನೇ ಹಿಂದೂ ಶಿಕ್ಷಾರ್ಹ ಎಂಬ ಕಾಯ್ದೆಯನ್ನು ಮಾಡಿದರೆ, ನಿಮ್ಮ ಧರ್ಮದ ಮೂಲತತ್ವಕ್ಕೆ ಧಕ್ಕೆ ಉಂಟು ಮಾಡಿದಂತೆ ಆಗುತ್ತದೆ ಎಂದು ಹೇಳುವಿರಾ?

ಎಂ. ಕೆ. ಆಚಾರ್ಯ: ತಪ್ಪು ಮಾಹಿತಿ ಮೇಲೆಯೇ ಮಾನ್ಯ ಸದಸ್ಯರು ಉತ್ತರಕ್ಕೆ ಒತ್ತಾಯಿಸುತ್ತಿದ್ದಾರೆ. ಮಲಬಾರ್‌ನಲ್ಲಿ ಅಂಥ ಪದ್ಧತಿಯೇ ಇಲ್ಲ. ಹಾಗಾಗಿ ಅಂಥ ಕಾಯ್ದೆಯ ಅಗತ್ಯವೇ ಇಲ್ಲ. ಒಂದು ವೇಳೆ ಅಂಥ ಪದ್ಧತಿ ಇದ್ದರೆ, ಆಗ ಇಂಥ ಕಾಯ್ದೆ ಅಗತ್ಯ ಬಿದ್ದರೆ, ಧರ್ಮದ ಯಾವ ಮೂಲತತ್ವಕ್ಕೂ ಅಂಥ ಕಾಯ್ದೆ ಧಕ್ಕೆ ಉಂಟುಮಾಡದು.

* ಡಾ. ಬಿ. ಆರ್. ಅಂಬೇಡ್ಕರ್: ಒಂದು ವಿಷಯವನ್ನು ಸ್ಪಷ್ಟಪಡಿಸಬಯಸುವೆ. ಶ್ರೀಯುತ ಆಚಾರ್ಯರೇ, ಪುಣೆ ಒಪ್ಪಂದದ ಪರಿಣಾಮಗಳನ್ನು ಪಂಡಿತ ಮಾಳವೀಯ ಅವರು ನಿರಾಕರಿಸುತ್ತಾರೆ ಎಂದು ಹೇಳಿದಿರಿ. ಪುಣೆ ಒಪ್ಪಂದವು ರಾಜಕೀಯ ಸಮಸ್ಯೆಯೊಂದನ್ನು ಬಗೆಹರಿಸಿತಷ್ಟೇ ಅಲ್ಲದೆ, ಅಸ್ಪೃಶ್ಯತೆ ತೊಡೆದುಹಾಕಲು ಮತ್ತು ಅಸ್ಪೃಶ್ಯರಿಗೆ ಹಿಂದೂ ದೇವಾಲಯಗಳ ಬಾಗಿಲನ್ನು ತೆರೆದಿಡಲು ಹಿಂದೂ ಸಮುದಾಯವನ್ನು ಈ ಒಪ್ಪಂದ ಬಾಧ್ಯಗೊಳಿಸಿದೆ ಎಂಬ ಗಾಂಧಿ ಅವರ ಅಭಿಪ್ರಾಯ ಸತ್ಯಾಂಶ ಅಲ್ಲವೇ?

ಎಂ. ಕೆ. ಆಚಾರ್ಯ: ನಾನು ತಿಳಿದಂತೆ ಗಾಂಧಿ ಹೇಳುವುದು ಹಾಗೆ.

ಡಾ. ಬಿ. ಆರ್. ಅಂಬೇಡ್ಕರ್: ಹಿಂದೂ ಸಮುದಾಯದ ಮೇಲೆ ಇಂಥ ಯಾವ ಬಾಧ್ಯತೆಯನ್ನೂ ಈ ಒಪ್ಪಂದ ಹೊರಿಸಿಲ್ಲ ಎನ್ನುತ್ತಾರೆ ಪಂಡಿತ ಮಾಳವೀಯ. ಆದ್ದರಿಂದಲೇ ಪುಣೆ ಒಪ್ಪಂದದ ಪರಿಣಾಮಗಳನ್ನು ಕುರಿತು ಅವರು ಹೆಚ್ಚು ಚಿಂತಿತರಾಗುವುದಿಲ್ಲ, ಅಲ್ಲವೇ?

ಎಂ. ಕೆ. ಆಚಾರ್ಯ: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ದೇವಾಲಯಗಳ ಬಾಗಿಲು ತೆರೆದಿಡಲು ಹಿಂದೂಗಳನ್ನು ಈ ಒಪ್ಪಂದ ಬಾಧ್ಯಗೊಳಿಸುತ್ತದೆ ಎಂದು ಗಾಂಧಿ ಹೇಳಿದರೆ, ಹಾಗೇನೂ ಇಲ್ಲ ಎನ್ನುತ್ತಾರೆ ಪಂಡಿತ ಮಾಳವೀಯ.

ಎಂ. ಕೆ. ಆಚಾರ್ಯ: ಹೌದು.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಸಿ, ೨ ಆಗಸ್ಟ್ ೧೯೩೩, ಪುಟ ೧೭೭೦.

## (೧೫)

# ಲೆ. ಕ. ಸಿ. ಇ. ಬ್ರೂಸ್ ಸಿಎಸ್ಐ, ಸಿಐಇ, ಸಿಬಿಇ, ಲೆ. ಸರ್ ಜಾರ್ಜ್ ಮ್ಯಾಕ್ಮನ್ ಕೆಸಿಬಿ, ಕೆಸಿಎಸ್ಐ, ಡಿಎಸ್ಒ, ಶ್ರೀಯುತ ಎಫ್. ಎಫ್. ಲೈಯ್ಯಾಲ್, ಸಿಐಇ, ಶ್ರೀಯುತ ವಾರಿಸ್ ಅಮೀರ್ ಅಲಿ ಐಸಿಎಸ್, ಶ್ರೀಯುತ ಒಸಿಜಿ ಹೇಯ್ಟರ್ ಮತ್ತು ಗೌರವಾನ್ವಿತ ನ್ಯಾಯಮೂರ್ತಿ ಡಬ್ಲ್ಯೂ. ಎ. ರೋಸಿಗ್ನೋಲ್

* ಡಾ. ಬಿ. ಆರ್. ಅಂಬೇಡ್ಕರ್: ನೀವು ಜಿಲ್ಲಾ ನ್ಯಾಯಾಧೀಶರಾಗಿದ್ದ ಕಾಲದಲ್ಲಿ ಭಾರತದಲ್ಲಿ ಮಂತ್ರಿಗಳಿದ್ದರೇ?

ಲೆ. ಕ. ಸಿ. ಇ. ಬ್ರೂಸ್: ಇದ್ದರು. ಆದರೆ ಅವರು ಚುನಾಯಿತ ಮಂತ್ರಿಗಳಲ್ಲ. ಅವರಿಗೂ ನನಗೂ ಯಾವ ಸಂಬಂಧವೂ ಇರಲಿಲ್ಲ. ಈ ಮನವಿ ಪತ್ರದ ಭವಿಷ್ಯ ಕುರಿತು ನಾನು ಉಲ್ಲೇಖಿಸುತ್ತೇನೆ. ನಾನು ತಿಳಿದಂತೆ ಉದ್ದೇಶಿಸಲಾದ ಸಂವಿಧಾನವು...

ಡಾ. ಬಿ. ಆರ್. ಅಂಬೇಡ್ಕರ್: ನೀವು ನಿಮ್ಮ ಅನುಭವದ ಹಿನ್ನೆಲೆಯಲ್ಲಿ ಮಾತಾಡುವಿರೆಂದು ನಾನು ಎಣಿಸಿದ್ದೆ.

ಲೆ. ಕ. ಸಿ. ಇ. ಬ್ರೂಸ್: ನಾನು ವಿವರಿಸುತ್ತೇನೆ. ಮಂತ್ರಿಗಳು ಚುನಾಯಿತ ಶಾಸನ ಸಭೆ ಅಧೀನದಲ್ಲಿ ಇರತಕ್ಕದ್ದು; ಅವರು ಶಾಸನಸಭೆಗೆ ಜವಾಬ್ದಾರರಾಗಿರತಕ್ಕದ್ದು. ಸಂಪುಟ ಏಳು ಬೀಳಿನಂತೆ ಅವರೂ ಏಳು ಬೀಳು ಕಾಣುವರೆಂಬ ಸಲಹೆ ಬರುವ ಒಂದು ಕಾಲದ ಬಗ್ಗೆ...

ಸರ್ ಹರಿಸಿಂಗ್ ಗೌರ್: ನಿಮ್ಮ ಮಾತುಗಳು ಪ್ರವಾದಿಯ ಮಾತುಗಳಂತಿವೆ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ ೨-ಸಿ, ೬ ಅಕ್ಟೋಬರ್ ೧೯೩೩. ಪುಟ ೧೬೧೨

## (೧೬)

## ವಿಂಗ್ ಕಮಾಂಡರ್ ಎ. ಡಬ್ಲ್ಯೂ. ಎಚ್ ಜೇಂಸ್ ಎಂಪಿ ಮತ್ತು ಡಾ. ಜೆ. ಎಚ್. ಹಟ್ಟನ್ ಸಿಐಇ, ಐಸಿಎಸ್

* ಡಾ. ಬಿ. ಆರ್. ಅಂಬೇಡ್ಕರ್: ಆದಿವಾಸಿಗಳ ಕಾಯ್ದೆಯನ್ನು ತಮ್ಮ ಸಾಂಪ್ರದಾಯಿಕ ಕಾಯ್ದೆಯೆಂದು ಅವರು ಮನವಿ ಮಾಡಿಕೊಳ್ಳಬಾರದೇ?

ವಿಂಗ್ ಕಮಾಂಡರ್ ಎ. ಡಬ್ಲ್ಯೂ. ಎಚ್. ಜೇಂಸ್: ಅದಾಗದು. ಆದಿವಾಸಿಗಳ ಕಾಯ್ದೆಗೆ ಹೈಕೋರ್ಟಿನ ಮನ್ನಣೆ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಹೈಕೋರ್ಟ್ ಯಾವುದೇ ಸಂಪ್ರದಾಯಕ್ಕೆ ಮನ್ನಣೆ ನೀಡಬಹುದಲ್ಲವೇ?

ವಿಂಗ್ ಕಮಾಂಡರ್ ಎ. ಡಬ್ಲ್ಯೂ. ಎಚ್. ಜೇಂಸ್: ಅದು ಹಿಂದೂ ಅಥವಾ ಮುಸ್ಲಿಂ ಸಂಪ್ರದಾಯ ಎಂದು ಸಿದ್ಧಪಡಿಸುವ ಅಗತ್ಯ ಇಲ್ಲ. ಆ ಅರ್ಥದಲ್ಲಿ ಯಾವುದೇ ಕಾನೂನು ಇಲ್ಲದಿದ್ದರೆ ಆ ಸಂಪ್ರದಾಯವೇ ಕಾನೂನಾಗಿರುತ್ತದೆ; ಸಾಮಾನ್ಯವಾಗಿ ನನ್ನ ಸ್ವಂತ ತಿಳುವಳಿಕೆಯಿಂದ ನಾನು ಮಾತಾಡುತ್ತಿಲ್ಲ.

** ಡಾ. ಬಿ. ಆರ್. ಅಂಬೇಡ್ಕರ್: ಡಾ. ಹಟ್ಟನ್ ಅವರೇ, ಮೇಜರ್ ಅಟ್ಲೀ ಅವರ ಪ್ರಶ್ನೆಗೆ ಉತ್ತರಿಸುತ್ತಾ, ಬಹಿಷ್ಕೃತ ಪ್ರದೇಶಗಳ ಆಡಳಿತದ ವಿಷಯ ಪ್ರಾಂತದ ವಿಷಯವಾಗುವುದಕ್ಕಿಂತ ಕೇಂದ್ರಕ್ಕೆ ಸೇರುವ ವಿಷಯವಾಗಬೇಕೆಂದು ನೀವು ಬಯಸುವುದಾಗಿ ಹೇಳಿದಿರೆಂದು ತಿಳಿಯುತ್ತೇನೆ.

ಡಾ. ಜೆ. ಎಚ್. ಹಟ್ಟನ್: ಅದು ನನ್ನ ಅನಿಸಿಕೆ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಪ್ರಬಂಧದಲ್ಲಿ ಚರ್ಚಿಸಲಾದ ಇನ್ನೂ ಕೆಲವು ವಿಷಯಗಳ ಬಗ್ಗೆ ಕೇಳುವುದಾದರೆ ಯಾವುದೇ ಪರಿಸ್ಥಿತಿಯಲ್ಲೂ ಈ ಜನ ಹೊಸ ಸಂವಿಧಾನದ ವ್ಯಾಪ್ತಿಯೊಳಗೆ ಬರಬಾರದೆಂಬ ಆಧಾರದ ಮೇಲೆ ನಿಮ್ಮ ಆಲೋಚನೆ ಮಂಡಿಸಿದ್ದೀರೆಂದು ಕಾಣುತ್ತದೆ.

ಜೆ. ಎಚ್. ಹಟ್ಟನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಇದುವೇ ನಿಮ್ಮ ಆಲೋಚನೆಯ ಪೂರ್ವಗ್ರಹಿಕೆ ಮತ್ತು ಆಧಾರವೇ?

ಡಾ. ಜೆ. ಎಚ್. ಹಟ್ಟನ್: ಜನರ ಜತೆ ಅವರು ಚೆದುರಿದಂತೆ ಜೀವಿಸುವ ಕೆಲವೊಂದು ಸಂದರ್ಭಗಳಲ್ಲಿ ಈ ನಿಲುವು ಬದಲಾಗಬಹುದೆಂದೂ ನಾನೂ ಒಪ್ಪಿಕೊಂಡೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಮುಖ್ಯವಾಗಿ ಹೇಳುವುದಾದರೆ, ಅದುವೆ ನಿಮ್ಮ ಆಲೋಚನೆಯ ಪೂರ್ವಗ್ರಹಿಕೆ.

---

* ಮಿನಿಟ್ಸ್ ಆಫ್ ಎವಿಡೆನ್ಸ್ ಸಂಪುಟ ೨–ಸಿ, ೧೬ ಅಕ್ಟೋಬರ್ ೩೩ ಪುಟ ೨೩೭೬

** ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಡಿ, ೧೬ ಅಕ್ಟೋಬರ್ ೩೩, ಪುಟ ೨೩೮೮–೯೦

ಡಾ. ಜೆ. ಎಚ್. ಹಟ್ಟನ್: ಮುಖ್ಯವಾಗಿ, ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈ ಜನರಿಗೋಸ್ಕರ ನಿಮ್ಮ ಮುಂದಿರುವ ಆದರ್ಶವೇನು? ಸರಿಯಾಗಿ ಉತ್ತರಿಸಲು ನಿಮಗೆ ಅನುಕೂಲವಾಗಲೆಂದು ನಾನು ಸ್ಪಷ್ಟವಾಗಿ ಪ್ರಶ್ನಿಸುವೆ.

ಡಾ. ಜೆ. ಎಚ್. ಹಟ್ಟನ್: ಯಾರಿಂದಲೇ ಆಗಲಿ, ಅತಿ ಕಡಿಮೆ ಪ್ರಮಾಣದ ಹಸ್ತಕ್ಷೇಪ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಕಲ್ಪಿಸಿಕೊಂಡಿರುವ ಹಾಗೆ ಕೇಳುವೆ. ಭಾರತದ ಇತರ ಸಮುದಾಯಗಳ ಜತೆಗೆ ಸಂಬಂಧವೇ ಇಲ್ಲದೆ, ಈ ಹಳೇ ಕಾಲದ ಜನ ಹಾಗೇ ಉಳಿಯಬೇಕೆಂಬುದು ನಿಮ್ಮ ಆದರ್ಶವೇ? ಅಥವಾ ಅವರು ಬಹಿಷ್ಕೃತ ಸಮುದಾಯವಾಗಿ ಉಳಿಯದೆ ಕಾಲಕ್ರಮೇಣ ಇತರ ಭಾರತೀಯರಂತೆಯೇ ಸಾರ್ವಜನಿಕ ಬದುಕಿನಲ್ಲಿ ಸಮಾನ ಪಾತ್ರ ವಹಿಸಬೇಕು ಎಂಬುದು ನಿಮ್ಮ ಆದರ್ಶವೇ?

ಡಾ. ಜೆ. ಎಚ್. ಹಟ್ಟನ್: ಎರಡನೆಯದೇ ನನ್ನ ಆದರ್ಶ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಅನಾಗರಿಕರಾಗಿ ಉಳಿಯಬಾರದೆಂಬುದೇ?

ಜೆ. ಎಚ್. ಹಟ್ಟನ್: ಕೊನೆಗೊಮ್ಮೆ ಅವರು ತಮ್ಮ ದೇಶದ ಬದುಕಿನಲ್ಲಿ ಭಾಗಿಗಳಾಗಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೇಳುವುದೂ ಅದನ್ನೇ.

ಡಾ. ಜೆ. ಎಚ್. ಹಟ್ಟನ್: ಕೆಲವು ವಿಷಯಗಳಲ್ಲಿ ಈ ಆದರ್ಶ ಸಾಧಿಸುವುದು ಸಾಧ್ಯವೇ ಆಗಲಾರದು. ಇದೂ ಸಾಧ್ಯ.

ಡಾ. ಬಿ. ಆರ್. ಅಂಬೇಡ್ಕರ್: ಮೊದಲು ಆದರ್ಶವೇನು ಎಂಬುದನ್ನು ಪರಿಶೀಲಿಸೋಣ.

ಡಾ. ಜೆ. ಎಚ್. ಹಟ್ಟನ್: ಸರಿ.

ಡಾ. ಬಿ. ಆರ್. ಅಂಬೇಡ್ಕರ್: ಧಾರ್ಮಿಕ ಪ್ರಶೆಯನ್ನು ನಾನು ಪ್ರಸ್ತಾಪಿಸುವುದೇ ಇಲ್ಲ. ಅವರು ಆ ಧರ್ಮ ಸೇರಬೇಕು ಅಥವಾ ಈ ಧರ್ಮ ಸೇರಬೇಕು ಎಂಬುದು ಪ್ರಶ್ನೆಯಲ್ಲ.

ಡಾ. ಜೆ. ಎಚ್. ಹಟ್ಟನ್: ಹೌದು, ಅದಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅವರು ನಾಗರಿಕ ಸಮಾಜದಲ್ಲಿ ಹಾಸುಹೊಕ್ಕಾದ ಬದುಕು ನಡೆಸಬೇಕು, ನಾನು ನಿಮ್ಮನ್ನು ಅರ್ಥ ಮಾಡಿಕೊಂಡಂತೆ ಇದೇ ನಿಮ್ಮ ಆದರ್ಶ, ಹೌದೇ?

ಡಾ. ಜೆ. ಎಚ್. ಹಟ್ಟನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಮತ್ತು ತಮ್ಮ ಆದಿವಾಸಿ ಸ್ಥಿತಿ ಮೀರಿ ಅವರು ಬೆಳೆಯಬೇಕು...

ಡಾ. ಜೆ. ಎಚ್. ಹಟ್ಟನ್: ಹೌದು. ಅದು ಅವಶ್ಯ.

ಡಾ. ಬಿ. ಆರ್. ಅಂಬೇಡ್ಕರ್: ಈ ಅನಾಗರಿಕ ಜನ ಮತ್ತು ಭಾರತದ ನಾಗರಿಕ ಜನ ಒಂದೇ ಸಾಮಾನ್ಯ ಪ್ರವಾಹದಲ್ಲಿ ಭಾಗಿಗಳಾಗಬೇಕಾದ ಸಾಮಾನ್ಯ ಪರಿಸ್ಥಿತಿ ಇರಬೇಕೆಂಬುದು ನಿಮ್ಮ ಅಪೇಕ್ಷೆ. ಅಂಥ ಪರಿಸ್ಥಿತಿ ಈಗ ನಿರ್ಮಾಣವಾಗಿದೆಯೇ?

ಡಾ. ಜೆ. ಎಚ್. ಹಟ್ಟನ್: ಇನ್ನೂ ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಭಾರತೀಯ ಸಮಾಜದ ನಾಗರಿಕ ವರ್ಗದ ಕಲ್ಪನೆಗಳು ಈ ಅನಾಗರಿಕ ವರ್ಗವನ್ನೂ ಒಳಸೇರುವಂತಾಗಬೇಕು...

ಡಾ. ಜೆ. ಎಚ್. ಹಟ್ಟನ್: ಈ ಕಲ್ಪನೆಗಳು ಅನಾಯಾಸವಾಗಿ ಒಳಸೇರುತ್ತವೆ ಎಂದು ನನಗೆ ತೋರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹೇಗೆ?

ಡಾ. ಜೆ. ಎಚ್. ಹಟ್ಟನ್: ಈ ಎರಡೂ ವರ್ಗಗಳನ್ನು ಬೇರೆ ಬೇರೆ ಮಾಡದಿದ್ದರೆ, ದಿಢೀರ್ ಸಂಪರ್ಕದಿಂದಾಗಿ ಅವರು ನಾಶ ಹೊಂದುವ ಸಾಧ್ಯತೆ ಇದೆಯೇನೋ ಎಂಬ ಆತಂಕ ನನಗಿದೆ. ಜಗತ್ತಿನ ಎಲ್ಲೆಡೆ ಸಂಭವಿಸಿರುವುದು ಇದೇ.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ತಿಳಿಯದು. ಆದರೆ, ಒಂದು ಅಂಶವನ್ನು ನಿಮಗೆ ಹೇಳಬಯಸುವೆ. ಈ ಅನಾಗರಿಕ ಜನ ಭಾರತೀಯ ಸಮಾಜದ ಭಾಗವಾಗಬೇಕೆಂಬ ನಿಮ್ಮ ಆದರ್ಶ ಈಡೇರಲು ಅವರನ್ನು ಕಟ್ಟುನಿಟ್ಟಾಗಿ ಹಾಗೂ ಸಂಪೂರ್ಣವಾಗಿ ಬೇರ್ಪಡಿಸುವುದೇ ಸರಿಯಾದ ದಾರಿ ಅಲ್ಲವೇ?

ಡಾ. ಜೆ. ಎಚ್. ಹಟ್ಟನ್: ಸಾಧ್ಯವಿರುವ ದಾರಿ ಅದೊಂದೇ ಎಂದು ನನಗನಿಸುತ್ತದೆ.

ಸರ್ ರೆಜಿನಾಲ್ಡ್ ಕ್ರಾಡಾಕ್: ಈ ಪಂಗಡಗಳ ಮಧ್ಯೆ ಹಲವು ಶೈಕ್ಷಣಿಕ ಏಜೆನ್ಸಿಗಳು ಕೆಲಸ ಮಾಡುತ್ತಿವೆ. ಅಲ್ಲವೇ?

ಡಾ. ಜೆ. ಎಚ್. ಹಟ್ಟನ್: ಹೌದು, ನಿಜ.

ಸರ್ ರೆಜಿನಾಲ್ಡ್ ಕ್ರಾಡಾಕ್: ಅವು ಮಿಷನರಿ ಏಜೆನ್ಸಿಗಳೇ ಅಥವಾ ಸರ್ಕಾರಿ ಶಾಲೆಗಳೂ ಅಲ್ಲಿ ನಡೆಯುತ್ತಿವೆಯೇ?

ಡಾ. ಜೆ. ಎಚ್. ಹಟ್ಟನ್: ಎಷ್ಟೋ ಸರ್ಕಾರಿ ಶಾಲೆಗಳೂ ಇವೆ.

ಸರ್ ರೆಜಿನಾಲ್ಡ್ ಕ್ರಾಡಾಕ್: ಈ ಶಾಲೆಗಳ ತರಗತಿಗಳ ಗುಣಮಟ್ಟ ಹೆಚ್ಚಿಸುವ ಬಗ್ಗೆ ನೀವು ಚಿಂತಿಸಬೇಕು.

ಡಾ. ಜೆ. ಎಚ್. ಹಟ್ಟನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಇದಕ್ಕೂ ಹೆಚ್ಚಿನದನ್ನು ನಾನು ಹೇಳಬೇಕಿದೆ. ನಿಮ್ಮ ಪ್ರಬಂಧವನ್ನು ಗಮನಿಸಿದಾಗ ಎರಡು ಅಂಶಗಳ ಬಗ್ಗೆ ನಿಮಗೆ ಆತಂಕವಿದೆ ಎಂಬುದು ಕಾಣುತ್ತದೆ (ತಪ್ಪಿದರೆ ದಯವಿಟ್ಟು ತಿದ್ದಿ) ವಿದ್ಯಾವಂತ ಅಥವಾ ಮುಂದುವರೆದ ಅಥವಾ ನಾಗರಿಕ ಭಾರತೀಯರು ಮತ್ತು ಈ ಅನಾಗರಿಕ ಜನರನ್ನು ಒಂದೇ ಸಂವಿಧಾನದ ಸಂಪರ್ಕಕ್ಕೆ ತಂದರೆ, ಅವರನ್ನು ಒಂದೇ ಸಂವಿಧಾನದಲ್ಲಿ ಸಮ್ಮಿಲಿತ ಗೊಳಿಸಿದರೆ ಅನಾಗರಿಕ ವರ್ಗವು ಭಾರತೀಯ ಸಮಾಜದ ನಾಗರಿಕ ಸಮುದಾಯದಿಂದ ಶೋಷಣೆಗೆ ಗುರಿಯಾಗುತ್ತದೆ.

ಡಾ. ಜೆ. ಹೆಚ್. ಹಟ್ಟನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಎರಡನೇದಾಗಿ, ಹೊಸ ಮಂಡಳಿಯು ಈ ಅನಾಗರಿಕ ವರ್ಗದತ್ತ ಸಾಕಷ್ಟು ಗಮನ ನೀಡಲಿಕ್ಕಿಲ್ಲವೆಂಬ ಆತಂಕವೂ ನಿಮಗಿದೆ, ಅಲ್ಲವೇ?

ಡಾ. ಜೆ. ಎಚ್. ಹಟ್ಟನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಒಂದು ಪ್ರಶ್ನೆ. ಅವರ ಭೂಮಿ ವಿಷಯ ತೆಗೆದುಕೊಳ್ಳುತ್ತೇನೆ. ಭೂಮಿಯನ್ನು ಈ ಅನಾಗರಿಕ ವರ್ಗದ ಕೈಯಲ್ಲೇ ಉಳಿಯಗೊಡುವುದೂ ಒಂದು ಪ್ರಮುಖ ಪ್ರಶ್ನೆ. ಏಕೆಂದರೆ ಅವು ಭೂರಹಿತ ಕೂಲಿಕಾರ ವರ್ಗವಾಗಬಾರದು. ಈ ಪ್ರಶ್ನೆ ಭಾರತದ ಅನೇಕ ಕೃಷಿ ವರ್ಗಗಳ ಮುಂದಿದೆ. ಆದ್ದರಿಂದಲೇ ಅನಾಗರಿಕ ವರ್ಗದ ರಕ್ಷಣೆಗಾಗಿ ಮುಂಬಯಿಯಲ್ಲಿ ಡೆಕ್ಕನ್ ಕೃಷಿ ಪರಿಹಾರ ಕಾಯ್ದೆ, ಪಂಜಾಬಿನಲ್ಲಿ ಭೂ ಪರಭಾರೆ ಕಾಯ್ದೆಯಂಥ ಕಾಯ್ದೆಗಳನ್ನು ಮಾಡಬೇಕಾದ ಅಗತ್ಯ ಕಂಡಿದೆ.

ಡಾ. ಜೆ. ಎಚ್. ಹಟ್ಟನ್: ಈ ಕಾಯ್ದೆಗಳನ್ನು ಮಾಡಬೇಕಾಗಿದ್ದು ನಿಜ.

ಡಾ. ಬಿ. ಆರ್. ಅಂಬೇಡ್ಕರ್: ಇಡೀ ಭಾರತಕ್ಕೆ ಅನ್ವಯಿಸುವ ಸಂವಿಧಾನದ ಕಕ್ಷೆಯೊಳಗೆ ಈ

ಅನಾಗರಿಕ ಜನರೂ ಬಂದರೆ, ಸಾಗುವಳಿ ಮಾಡುವವರ ಕೈಯಲ್ಲೇ ಭೂಮಿ ಉಳಿದು, ಲೇವಾದೇವಿ ವರ್ಗ ದೂರವಾಗಬೇಕೆಂಬ ಬೇಡಿಕೆ ಮಂಡಿಸುವಲ್ಲಿ ಅವರು ಒಂಟಿಯಾಗುಳಿಯಲಾರರು. ಇದೇ ಬೇಡಿಕೆ ಮಂಡಿಸುವ ಇನ್ನೂ ಹಲವರು ಶಾಸನ ಸಭೆಯಲ್ಲಿರುತ್ತಾರೆ. ನಾನು ಸ್ಪಷ್ಟಪಡಿಸುವ ಅಂಶವೆಂದರೆ, ಈ ಅನಾಗರಿಕ ವರ್ಗದ ಜನ ಪ್ರತ್ಯೇಕವಾಗಿ ಉಳಿಯುವುದಿಲ್ಲ.

ಡಾ. ಜೆ. ಎಚ್. ಹಟ್ಟನ್: ಅವರನ್ನು ಅವರ ಭೂಮಿಯಿಂದ ಹೊರಗಟ್ಟಲಾಗುತ್ತದೆ. ಇದು ಅನುಭವದ ಮಾತು.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಡಾ. ಹಟ್ಟನ್ ಅವರೇ, ಕೆಲಕಾಲದ ಹಿಂದೆ ಇದ್ದ ಮತ್ತು ಇಂದು ರಚಿಸಲಾಗುತ್ತಿರುವ ಶಾಸನ ಸಭೆಗಳು ಬೇರೆ ಬೇರೆಯೇ ಆಗಿವೆ. ಶ್ವೇತಪತ್ರದಡಿಯಲ್ಲಿ ಸಿದ್ಧಪಡಿಸಲಾಗುವ ಶಾಸನ ಸಭೆಯು ಹಿಂದಿನಂತೆ ಇರುವುದಿಲ್ಲ. ಈ ವ್ಯತ್ಯಾಸವನ್ನು ನೀವು ಗುರುತಿಸಬೇಕಲ್ಲವೇ?

ಡಾ. ಜೆ. ಎಚ್. ಹಟ್ಟನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಮುಕ್ತ ಮತ ಕ್ಷೇತ್ರಗಳಿಂದ ನಿರ್ದಿಷ್ಟ ಪ್ರಮಾಣದ ಪ್ರಾತಿನಿಧ್ಯ ಶಾಸನ ಸಭೆಯಲ್ಲಿರುತ್ತದೆ. ಈ ಪ್ರತಿನಿಧಿಗಳು ಬಡವರ ಪರವಾಗಿರುತ್ತಾರೆ. ಈ ಬಗೆಯ ವಿಷಯದಲ್ಲಿ ಹಿಂದಿನ ಶಾಸನ ಸಭೆಗಳಲ್ಲಿ ಹಾನಿಕರವಲ್ಲದ ಯಾವುದೇ ಮಾರ್ಗದರ್ಶನ ಇರುತ್ತಿದ್ದಿಲ್ಲ.

ಡಾ. ಜೆ. ಎಚ್. ಹಟ್ಟನ್: ನಾನು ಬಹುಬೇಗ ಹಾನಿಕರವಲ್ಲದ ಪಕ್ಷಕ್ಕೆ ಬಂದು ಅವರನ್ನು ಹೊರಗಿಡುವೆ.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಅದು ತಿಳಿಯದು. ಆದರೆ, ಅವರಿಗೆ ಶಾಸನಸಭೆಯಲ್ಲಿ ಬಹುಜನ ಸ್ನೇಹಿತರು ದೊರಕುತ್ತಾರೆ. ಈ ಅಂಶವನ್ನು ನೀವು ನಿರಾಕರಿಸುವುದಿಲ್ಲ, ಅಲ್ಲವೇ?

ಡಾ. ಜೆ. ಎಚ್. ಹಟ್ಟನ್: ಅದಕ್ಕೆ ನನ್ನ ಸಮ್ಮತಿಯಿಲ್ಲ. ಅವರಿಗೆ ಬಹಳ ಜನ ಸ್ನೇಹಿತರು ದೊರಕುತ್ತಾರೆಂಬುದು ಮೊದಲು ನನಗೆ ಮನವರಿಕೆಯಾಗಬೇಕು. ಸಮಾನ ಹಿತಾಸಕ್ತಿಯುಳ್ಳ ಇತರರೂ ಇರಬಹುದು; ಆದರೆ ವೈಯಕ್ತಿಕವಾಗಿ ಅವರೆಲ್ಲರ ಮಧ್ಯೆ ಸಮಾನ ಮನೋಭಾವ ತೀರಾ ಕಮ್ಮಿ ಇರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಅದೇ ಸ್ಥಿತಿಯಲ್ಲಿರುವ ಒಂದು ವರ್ಗದ ರಕ್ಷಣೆಗೆ ಸಂಬಂಧಪಟ್ಟ ಹಾಗೆ, ಹೌದು.

ಡಾ. ಜೆ. ಹೆಚ್. ಹಟ್ಟನ್: ಸಿಹಾತ್‌ನ ಮುಸಲ್ಮಾನ ರೈತನು ತನಗಾಗಿ ಗರಿಷ್ಠ ಪ್ರಮಾಣದ ರಕ್ಷಣೆಗೆ ಒತ್ತಾಯಿಸಿ ತನ್ನ ನೆರೆಹೊರೆಯವರಿಗೆ ಕನಿಷ್ಠ ರಕ್ಷಣೆ ದೊರಕಬೇಕೆಂದು ಅಪೇಕ್ಷಿಸುತ್ತಾನೆಂದು ನನಗೆ ತೋರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಭಾರತೀಯರ ಹಿತದ ದೃಷ್ಟಿಯಿಂದ ಅಗತ್ಯವಾಗಿರುವ ಕೆಲವು ಕಾಯ್ದೆಗಳು, ಈ ಅನಾಗರಿಕ ಜನರಿಗೆ ರಕ್ಷಣೆ ಒದಗಿಸುವಂತಾಗಬಾರದೆಂದು ಈ ಶಾಸನ ಸಭೆ ಉಲ್ಲೇಖಿಸಬೇಕು ಎಂಬುದು ನಿಮ್ಮ ಅನಿಸಿಕೆಯೇ?

ಡಾ. ಜೆ. ಎಚ್. ಹಟ್ಟನ್: ಅಲ್ಲ, ಅವರಿಗೆ ಅಂಥ ಸ್ಥಿತಿ ಒದಗಬೇಕು ಎಂದು ನನಗೆ ಅನಿಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಭೇದಭಾವ ಹೇಗೆ ಹುಟ್ಟುತ್ತದೆ?

ಡಾ. ಜೆ. ಎಚ್. ಹಟ್ಟನ್: ಅಗತ್ಯವಾದ ರಕ್ಷಣೆಯನ್ನು ಪಡೆಯುವಲ್ಲಿ ಅನಾಗರಿಕ ಜನರಿಗೆ ಗರಿಷ್ಠ ಮಟ್ಟದ ತೊಂದರೆ ಉಂಟಾದೀತು. ಹೊಸ ಸಂವಿಧಾನದಡಿಯಲ್ಲಿ ಗೇಣಿಗೆ ಅಗತ್ಯವಾದ ರಕ್ಷಣೆ ಸಿಗುತ್ತದೆಂದು ನಿಮ್ಮ ವರ್ಗಗಳಿಗೆ ಖಾತರಿಯಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಸಂಪೂರ್ಣವಾಗಿ ನಿಜ. ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

ಬೇರೆ ವರ್ಗಗಳೆಲ್ಲ ಒಂದುಗೂಡಲಾರವು. ಇತರ ಅಲ್ಪಸಂಖ್ಯಾತರಿಗೆ ದೊರಕುವ ರಕ್ಷಣೆಯನ್ನು ಈ ವರ್ಗಗಳು ತಡೆ ಹಿಡಿಯಲೂಬಹುದು. ಈ ಭಯ ಸಹಜ. ಆದರೆ, ಎರಡೂ ವರ್ಗಗಳ ಒಟ್ಟು ಶಕ್ತಿಯನ್ನು ತುಲನೆ ಮಾಡಿದಾಗ ಪ್ರಾಂತ ಸಂಪುಟದಲ್ಲಿ ಅನಾಗರಿಕ ವರ್ಗದ ಕೆಲವು ಪ್ರತಿನಿಧಿಗಳು ಇತರ ಬಲಾಢ್ಯ ವರ್ಗದೆದುರು ಏನೂ ಮಾಡಲಾರವು ಎಂಬ ನಿಮ್ಮ ಭಯಕ್ಕೆ ಹೆಚ್ಚು ಕಾರಣ ಇಲ್ಲ. ಶ್ವೇತಪತ್ರದ ಪ್ರಕಾರ ರಚನೆಯಾಗಿ ಜಾರಿಗೆ ಬರಲಿರುವ ಮುಂದಿನ ಶಾಸನ ಸಭೆಗಳ ಒಂದು ವಿಶ್ಲೇಷಣೆಯನ್ನು ನಾನು ಮಂಡಿಸುತ್ತಿರುವೆ. ಭಯಕ್ಕೆ ಹೆಚ್ಚು ಕಾರಣ ಇಲ್ಲವೆಂಬುದನ್ನು ಈ ವಿಶ್ಲೇಷಣೆ ಸ್ಪಷ್ಟಪಡಿಸುತ್ತದೆ.

ಡಾ. ಜೆ. ಎಚ್. ಹಟ್ಟನ್: ಜನಾಂಗ ಭೇದದ ಹಿನ್ನೆಲೆಯಲ್ಲಿ ಕೆಲವೊಂದು ಪ್ರದೇಶದಲ್ಲಾದರೂ ಈ ಭಯಕ್ಕೆ ಕಾರಣ ಇದ್ದೇ ಇರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಶಿಕ್ಷಣದ ವಿಷಯ ತೆಗೆದುಕೊಳ್ಳಿ. ಮುಂಬಯಿ ಪ್ರಾಂತದ ಅನಾಗರಿಕ ಜನರ ಬಗ್ಗೆ ಕೂಡ ಕೊಂಚ ತಿಳಿದುಕೊಳ್ಳುವ ಅವಕಾಶ ಸಿಕ್ಕಿತ್ತು. ನಮ್ಮಲ್ಲಿ ಹಿಂದುಳಿದ ವರ್ಗಗಳಿವೆ.

ಡಾ. ಜೆ. ಎಚ್. ಹಟ್ಟನ್: ಹೌದು. ನನಗೆ ಗೊತ್ತು.

ಡಾ. ಬಿ. ಆರ್. ಅಂಬೇಡ್ಕರ್: ನಾವು ಅವರಿಂದ ಹೆಚ್ಚೇನೂ ದೂರವಾಗಿಲ್ಲ.

ಡಾ. ಜೆ. ಎಚ್. ಹಟ್ಟನ್: ನಾನು ಬಲ್ಲೆ.

ಡಾ. ಬಿ. ಆರ್. ಅಂಬೇಡ್ಕರ್: ಶೈಕ್ಷಣಿಕವಾಗಿ ಹೇಳುವುದಾದರೆ, ಭಾರತದ ಬಹುಜನರಿಗೆ ಅನಾಗರಿಕ ಜನ ಅಥವಾ ಹಿಂದುಳಿದ ವರ್ಗಗಳ ಜನರಿಗಿಂತ ಶಿಕ್ಷಣದ ಅವಶ್ಯಕತೆ ಕಡಿಮೆ ಇದೆ ಎಂದು ಹೇಳಲಾಗದು.

ಡಾ. ಜೆ. ಎಚ್. ಹಟ್ಟನ್: ಯಾವುದನ್ನು ಹೇಳಲಾಗದು?

ಡಾ. ಬಿ. ಆರ್. ಅಂಬೇಡ್ಕರ್: ಶಿಕ್ಷಣದ ಅವಶ್ಯಕತೆ (ಉದಾ: ಹಿಂದುಳಿದ ವರ್ಗಗಳಿಗೆ) ಕಡಿಮೆ ಎಂದು ಹೇಳಲಾಗದು.

ಡಾ. ಜೆ. ಎಚ್. ಹಟ್ಟನ್: ಅವಶ್ಯಕತೆ ಕಡಿಮೆ ಇತ್ತು ಎಂದು ನೀವು ಹೇಳಬಾರದು.

ಡಾ. ಬಿ. ಆರ್. ಅಂಬೇಡ್ಕರ್: ಹೇಳಬಾರದೇ?

ಡಾ. ಜೆ. ಎಚ್. ಹಟ್ಟನ್: ಊಹೂಂ. ಹೇಳಬಾರದು.

ಡಾ. ಬಿ. ಆರ್. ಅಂಬೇಡ್ಕರ್: ಮುಂಬಯಿಯಲ್ಲಿ ಹಿಂದುಳಿದ ವರ್ಗಗಳು ಮತ್ತು ಈ ಅನಾಗರಿಕ ಜನರಿಗಾಗಿ ಇರುವ ಮಂಡಳಿಯಲ್ಲಿ ನಾನು ಇರುವೆ...

ಡಾ. ಜೆ. ಎಚ್. ಹಟ್ಟನ್: ಹೌದು. ಕೆಲವೆಡೆ ಅನಾಗರಿಕ ಜನ ಹೆಚ್ಚು ವಿದ್ಯಾವಂತರಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ಆದ್ದರಿಂದಲೇ ನಾನು ಹೇಳಿದ್ದು. ಶೈಕ್ಷಣಿಕ ಅವಶ್ಯಕತೆಯಿಂದಾಗಿ ಅವರು ವಿಧಾನ ಪರಿಷತ್ತಿನಲ್ಲಿ ಒಂಟಿಯಾಗಿ ಉಳಿಯಲಾರರು.

ಡಾ. ಜೆ. ಎಚ್. ಹಟ್ಟನ್: ಇರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಈ ಜನರ ಅತ್ಯಂತ ತುರ್ತಾದ ಅವಶ್ಯಕತೆ ಎಂದರೆ ಶಿಕ್ಷಣ. ಅವರ ಅವಶ್ಯಕತೆಗಳನ್ನೆಲ್ಲ ವಿಶೇಷ ಜವಾಬ್ದಾರಿ ವಹಿಸಿ ಗವರ್ನರರು ಹಣ ಒದಗಿಸಿ ಈಡೇರಿಸಬೇಕು. ಇದು ನಿಮ್ಮ ಬಯಕೆಯಲ್ಲವೇ?

ಡಾ. ಜೆ. ಎಚ್. ಹಟ್ಟನ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಮಂತ್ರಿಗಳು ಬೆಂಬಲ ನೀಡದಿದ್ದಾಗ್ಯೂ, ಈ ಅನಾಗರಿಕ ವರ್ಗಗಳ ಶಿಕ್ಷಣಕ್ಕಾಗಿ ಅಗತ್ಯ ಎನಿಸುವಷ್ಟು ಹಣವನ್ನು ಗವರ್ನರರು ನೀಡಬಹುದೇ?

ಡಾ. ಜೆ. ಎಚ್. ಹಟ್ಟನ್: ಅದು ಕಠಿಣ ಸಮಸ್ಯೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಜನರ ಕೆಲವು ಪ್ರತಿನಿಧಿಗಳು ವಿಧಾನ ಪರಿಷತ್ತಿನಲ್ಲಿದ್ದರೆ, ಮಂತ್ರಿಗಳು ಈ ವರ್ಗಗಳ ಮತಗಳ ಮೇಲೆ ಕಣ್ಣಿಟ್ಟಾದರೂ ಅವರ ಒತ್ತಾಯಕ್ಕೆ ಕಿವಿಗೊಡಬಹುದಲ್ಲವೇ? ಇದು ನನ್ನ ವಿಚಾರ.

ಡಾ. ಜೆ. ಎಚ್. ಹಟ್ಟನ್: ಕೆಲವೊಂದು ಮತಗಳು ಮಂತ್ರಿಗಳ ಮೇಲೆ ಅಂಥ ಯಾವ ಪರಿಣಾಮವನ್ನೂ ಬೀರಲಾರದೇನೋ?

ಡಾ. ಬಿ. ಆರ್. ಅಂಬೇಡ್ಕರ್: ಈ ಜನರಿಗೆ ತಕ್ಕಷ್ಟು ಪ್ರಾತಿನಿಧ್ಯ ಸಿಕ್ಕರೆ, ಮಂತ್ರಿಯೊಬ್ಬ ಅವರ ಪ್ರತಿನಿಧಿಗಳ ಮೇಲೆ ಅವಲಂಬಿಸಲೇಬೇಕಾಗುತ್ತದೆ. ಆಗ ಆ ಜನರ ಸಮಸ್ಯೆಗಳ ಬಗ್ಗೆ ಪರಿಹಾರ ಸೂಚಿಸಲು ಮುಂದಾಗಬೇಕಾಗುತ್ತದೆ.

ಡಾ. ಜೆ. ಎಚ್. ಹಟ್ಟನ್: ತತ್ವಶಃ ಹಾಗಾಗಬಹುದು. ಆದರೆ, ವ್ಯಾವಹಾರಿಕವಾಗಿ ಹಾಗೇನೂ ಆಗುವುದಿಲ್ಲ. ಏಕೆಂದರೆ, ಅವರ ಸಂಖ್ಯೆ ಅಷ್ಟೊಂದು ಕಮ್ಮಿ ಇರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ರಾಜಕೀಯದಲ್ಲಿ ಒಂದು ಮತ ಕೂಡ ಸಮತೋಲನವನ್ನು ಅಲುಗಿಸಬಹುದು.

ಲಾರ್ಡ್ ಯುಸ್ಟೇಸ್ ಪೆರ್ಸಿ: ಈ ಅನಾಗರಿಕ ಜನರನ್ನು ಪ್ರಾಂತಾಧಿಕಾರವಷ್ಟೇ ಅಲ್ಲದೇ ಗವರ್ನರರ ಅಧಿಕಾರದಿಂದಲೂ ದೂರ ಮಾಡಿ, ಅವರ ಮೇಲೆ ನೇರವಾಗಿ ಕೇಂದ್ರ ಅಧಿಕಾರ ಹೊಂದಿರಬೇಕು ಎಂದು ಡಾ. ಹಟ್ಟನ್ ಶಿಫಾರಸು ಮಾಡುತ್ತಿದ್ದಾರೆಂದು ನಾನು ತಿಳಿದಿದ್ದೆ. ಹಾಗಲ್ಲವೇ?

ಡಾ. ಜೆ. ಎಚ್. ಹಟ್ಟನ್: ಒಟ್ಟಾರೆ ನಾನು ಬಯಸುವುದು ಅದನ್ನೇ. ಗವರ್ನರ್ ಜನರಲ್ ಅವರ ಏಜೆಂಟರಾಗಿ ಗವರ್ನರರು ಕಾರ್ಯ ನಿರ್ವಹಿಸುವ ಸಂಪೂರ್ಣ ಬಹಿಷ್ಕೃತ ಪ್ರದೇಶಗಳಲ್ಲಿ ಶ್ವೇತಪತ್ರದ ಸೂಚನೆಗಳು ಸಮಾಧಾನಕರವಾಗಿವೆ.

ಲಾರ್ಡ್ ಯುಸ್ಟೇಸ್ ಪೆರ್ಸಿ: ಚಿಕ್ಕ ರಾಜ್ಯಗಳ ರಚನೆಗಾಗಿ ನೀವು ನೀಡಿದ ಸಲಹೆಗಳಿಂದ, ಈ ಇಡೀ ಕಾರ್ಯಾಚರಣೆಯು ಕೇಂದ್ರದಿಂದ ನಡೆಯಬೇಕೆಂದು ನೀವು ಬಯಸುವಿರಾಗಿ ನಾನು ಭಾವಿಸಿದ್ದೆ.

ಡಾ. ಜೆ. ಎಚ್. ಹಟ್ಟನ್: ಹೌದು. ಹಾಗೆಂದೇ ನಾನು ಬಯಸಿದ್ದು.

ಡಾ. ಬಿ. ಆರ್. ಅಂಬೇಡ್ಕರ್: ಹೀಗಿದ್ದರೂ ನಾನು ಈವರೆಗೆ ಹೇಳಿದ ಮಾತುಗಳು ಪರಿಶೀಲನಾರ್ಹ ವಾಗಿವೆ. ಏಕೆಂದರೆ, ಈ ಜನರಿಗೋಸ್ಕರ ಗವರ್ನರರು ಹಣ ಖರ್ಚು ಮಾಡಲೇಬೇಕು. ಆಗ ಮಂತ್ರಿಗಳು ಅದನ್ನು ವಿರೋಧಿಸಿದರೆ ತಿಕ್ಕಾಟ ಎದ್ದೇ ಏಳುತ್ತದೆ. ತಿಕ್ಕಾಟದ ಕಣ ಪ್ರಾಂತವನ್ನು ಬಿಟ್ಟು ಕೇಂದ್ರದ ಕಣದಲ್ಲಿ ನಡೆಯುತ್ತದೆ, ಅಷ್ಟೇ.

ಡಾ. ಜೆ. ಎಚ್. ಹಟ್ಟನ್: ಮಂತ್ರಿಗಳ ಮಾತಿಗೆ ಅಲ್ಲಿ ಅವಕಾಶವೇ ಇರಬಾರದೆಂದು ನಾನು ಭಾವಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ನನ್ನ ಪ್ರಕಾರ ಮಂತ್ರಿಗಳ ಮಾತಿಗೆ ಅವಕಾಶ ಇರಬೇಕು. ಏಕೆಂದರೆ ಬೇರೆ ಬಾಬಿಗೆ ವೆಚ್ಚ ಮಾಡಬೇಕಿದೆ ಎಂದು ಮಂತ್ರಿ ಹೇಳಬಹುದು. ಶಾಸನ ಸಭೆಯ ಭಾಗವಾಗಿಲ್ಲದ ಜನರ ಬದುಕಿನ ಬಗ್ಗೆ ಮಂತ್ರಿಯು ಆಸಕ್ತಿ ಹೊಂದಿರಬೇಕೆಂದು ಬಯಸಲಾಗದು.

ಡಾ. ಶಫಾತ್ ಅಹ್ಮದ್ ಖಾನ್: ಶಾಸನ ಸಭೆಯಲ್ಲಿ ಅನಾಗರಿಕ ವರ್ಗದ ಪ್ರತಿನಿಧಿಗಳಾಗಿರುವವರು ಸಾಮಾನ್ಯವಾಗಿ ನಿಮ್ಮ ವರ್ಗಗಳೊಂದಿಗೆ ಸೇರಲಾಗದೇ?

ಡಾ. ಬಿ. ಆರ್. ಅಂಬೇಡ್ಕರ್: ನಾನು ನೋಡಬಯಸುವುದು ಇದನ್ನೇ. ಆದ್ದರಿಂದಲೇ ಇವರಿಗೆ ಹೆಚ್ಚು ಜನ ಮಿತ್ರರು ದೊರಕುತ್ತಾರೆ.

ಡಾ. ಜೆ. ಎಚ್. ಹಟ್ಟನ್: ಪ್ರಾತಿನಿಧ್ಯದ ಮೇಲೆ ದುಷ್ಪರಿಣಾಮವಾಗುವುದೆಂದು ನನಗನಿಸು ವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮಷ್ಟು ನಾನು ನಿರಾಶಾವಾದಿಯಾದರೆ "ಈ ಸಂವಿಧಾನವೇ ನನಗೆ ಬೇಡ" ಎಂದು ಒಮ್ಮೆಗೇ ಹೇಳಬೇಕಾಗುತ್ತದೆ.

ಡಾ. ಜೆ. ಎಚ್. ಹಟ್ಟನ್: ಅನಾಗರಿಕ ಪಂಗಡಗಳಿಗಾಗಿ, ನಾನು ಹಾಗೆ ಹೇಳಲಾರೆ.

* * * * *

ಮೇಜರ್ ಅಟ್ಲೀ: ನಿಮ್ಮ ದೃಷ್ಟಿಕೋನದಂತೆ ಸೈಮನ್ ಕಮೀಷನ್ ಅರಣ್ಯಗಳನ್ನು ಶಿಫಾರಸು ಮಾಡಿತೆಂದು ನನಗೆ ತೋರುವುದೇ ಇಲ್ಲ. ಅರಣ್ಯಗಳು ವರ್ಗಾವಣೆಯಾಗಬೇಕೆಂದು ಸೈಮನ್ ಕಮೀಷನ್ ಶಿಫಾರಸು ಮಾಡಿತೇ?

ಡಾ. ಜೆ. ಎಚ್. ಹಟ್ಟನ್: ಇಲ್ಲ. ಬಹಿಷ್ಕೃತ ಪ್ರದೇಶದ ಆರ್ಥಿಕ ಆಡಳಿತದ ದೃಷ್ಟಿಯಿಂದ ನಾನು ಅದನ್ನು ಒಂದು ಸಲಹೆಯಾಗಿ ನೀಡಿದೆ.

ಲಾರ್ಡ್ ಯುಸ್ಟೇನ್ ಪೆರ್ಸಿ: ಬಹುಶಃ ಡಾ. ಹಟ್ಟನ್ ಅವರೂ ಈ ಸಮಸ್ಯೆಯನ್ನು ಎದುರಿಸುವರು. ಏಕೆಂದರೆ, ಪ್ರಾಂತೀಯ ಅರಣ್ಯ ಸಿಬ್ಬಂದಿ ಮತ್ತು ಪ್ರಾಂತೀಯ ಅರಣ್ಯ ನೀತಿ ಇರುವ ಸಂಪೂರ್ಣ ಬಹಿಷ್ಕೃತ ಪ್ರದೇಶ ಎಂದರೇನು ಎಂಬುದೇ ನನಗೆ ಅರ್ಥವಾಗದು.

ಡಾ. ಬಿ. ಆರ್. ಅಂಬೇಡ್ಕರ್: ಹಾಗೆ ಹೇಳುವುದಾದರೆ, ಪ್ರದೇಶವು ಬಹಿಷ್ಕೃತವಾಗಿಲ್ಲ; ಬಹಿಷ್ಕೃತ ವಾಗಿರುವವರು ಅಲ್ಲಿನ ಜನ.

ಡಾ. ಜೆ. ಎಚ್. ಹಟ್ಟನ್: ಅಲ್ಲ; ಶ್ವೇತಪತ್ರವನ್ನು ನಾನು ಓದಿರುವಂತೆ, ಪ್ರದೇಶ ಬಹಿಷ್ಕೃತವಾಗಿದೆ. ಸಂಪೂರ್ಣ ಬಹಿಷ್ಕೃತ ಪ್ರದೇಶದ ಬಗ್ಗೆ ಶ್ವೇತಪತ್ರದಲ್ಲಿ ವ್ಯಾಖ್ಯೆ ಏನಾದರೂ ಇದೆಯೇ?

## (೧೭)

# ದಿ ರೈಟ್, ಗೌರವಾನ್ವಿತ ಸರ್ ವಿನ್ಸಟನ್ ಚರ್ಚಿಲ್, ಸಿಎಚ್. ಹೌಸ್ ಆಫ್ ಕಾಮನ್ಸ್ ಸದಸ್ಯ.

* ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ಚರ್ಚಿಲ್ ಅವರೇ ಪ್ರಭುತ್ವದ ಸಂವಿಧಾನ ರಚಿಸಲು ಶ್ವೇತಪತ್ರ ಸೂಚಿಸುವುದಿಲ್ಲವಲ್ಲವೇ?

ಸರ್ ವಿನ್ಸಟನ್ ಚರ್ಚಿಲ್: ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ ತಾರ್ಕಿಕ ಮತ್ತು ಅಧ್ಯಾತ್ಮ ಸಂಬಂಧಿ ಪ್ರಶ್ನೆಗಳನ್ನು ಕೇಳಿ ನಾನು ನಿಮಗೆ ತೊಂದರೆ ಕೊಡಬಯಸುವುದಿಲ್ಲ. ಶ್ವೇತಪತ್ರಕ್ಕೆ ಸಂಬಂಧಿಸಿದಂತೆ ಯಾವ ಗೊಂದಲಕ್ಕೂ ಸಿಲುಕಿಸದ ಎರಡೋ ಮೂರೋ ಪ್ರಶ್ನೆಗಳನ್ನು ಮಾತ್ರ ಕೇಳಬಯಸುವೆ. ೧೯೩೧ರ ಡಿಸೆಂಬರ್ ೧ರಂದು ಸಂಸತ್ತಿನಲ್ಲಿ ನಡೆದ ಚರ್ಚೆಗೆ ಸಂಬಂಧಿಸಿದಂತೆ, ಪ್ರಧಾನಮಂತ್ರಿಯವರು "೩೧ರ ಡಿಸೆಂಬರ್ ಮಂಡಿಸಲಾದ ಕಮಾಂಡ್ ಪೇಪರ್ ಸಂಖ್ಯೆಯೆ ೩೯೭೨ (ಭಾರತೀಯ ದುಂಡು ಮೇಜಿನ ಪರಿಷತ್ತು)ನಲ್ಲಿ ತಿಳಿಸಿದಂತೆ ಭಾರತ ಕುರಿತ ಸರ್ಕಾರದ ನೀತಿಯನ್ನು ಈ ಸದನ ಅನುಮೋದಿಸುತ್ತದೆ" ಎಂಬ ಗೊತ್ತುವಳಿಯನ್ನು ಮಂಡಿಸಿದರು. ಅದು ಮೊದಲ ಶ್ವೇತಪತ್ರ; ಸಮಗ್ರ ಯೋಜನೆ ಅಲ್ಲ, ಅಲ್ಲವೇ?

ಸರ್ ವಿನ್ಸಟನ್ ಚರ್ಚಿಲ್: ಪ್ರಧಾನಿಯವರ ಭಾಷಣವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಪ್ರಧಾನಿಯವರ ಭಾಷಣ.

ಸರ್ ವಿನ್ಸಟನ್ ಚರ್ಚಿಲ್: ಹೌದು; ನಿಜ.

ಡಾ. ಬಿ. ಆರ್. ಅಂಬೇಡ್ಕರ್: ಸದನದಲ್ಲಿ ಮಂಡಿಸಿದ ಶ್ವೇತಪತ್ರವು ಸುಳಿವು ನೀಡಿದಂತೆ, ಸಂವಿಧಾನವು ಶ್ವೇತಪತ್ರದ ಮುಖ್ಯ ಸಲಹೆಗಳನ್ನೂ ಪ್ರಮುಖವಾಗಿ ಒಳಗೊಂಡಿತ್ತು. ಪ್ರಾಂತಗಳಲ್ಲಿ ಜವಾಬ್ದಾರಿಯುತ ಪ್ರಾಂತ ಸರ್ಕಾರ ಇದ್ದು, ಕಾನೂನು ಮತ್ತು ವ್ಯವಸ್ಥೆ ಅದಕ್ಕೆ ವರ್ಗಾವಣೆಯಾಗಬೇಕಿತ್ತು. ಕೇಂದ್ರದಲ್ಲಿ ರಕ್ಷಣೆ ಮತ್ತು ವಿದೇಶಾಂಗ ಸಂಬಂಧಗಳು ಕಾದಿರಿಸಿದ ವಿಷಯಗಳಾಗಬೇಕಿತ್ತು. ಅಲ್ಲವೇ?

ಸರ್ ವಿನ್ಸಟನ್ ಚರ್ಚಿಲ್: ಈ ಹಂತದಲ್ಲಿ ನಿಮ್ಮನ್ನು ಅಡ್ಡಪಡಿಸುವ ಯಾವ ಅಗತ್ಯವೂ ನನಗೆ ಕಂಡುಬರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಧಾನಿಯು ಈ ಗೊತ್ತುವಳಿಯನ್ನು ಮಂಡಿಸುವ ಮೂಲಕ ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. ಅವರ ಮಾತುಗಳನ್ನೇ ಓದುವುದಾದರೆ "ನಿನ್ನೆ ದುಂಡು ಮೇಜಿನ ಪರಿಷತ್ತಿಗೆ ನಾನು ನೀಡಿದ ಹೇಳಿಕೆಗೆ ಕ್ಯಾಬಿನೆಟ್‌ನ ಪೂರ್ಣ ಸಮ್ಮತಿಯಿತ್ತು. ಹೇಳಿಕೆ ಪರವಾಗಿ ಸದನವು ಮತ ನೀಡಿ ನಮ್ಮ ನೀತಿಯ ಜೊತೆಗೂಡಬೇಕೆಂದು ನಾವು ಅಪೇಕ್ಷಿಸುತ್ತೇವೆ."

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨-ಸಿ, ೨೪ ಅಕ್ಟೋಬರ್ ೧೯೩೩, ಪುಟ ೧೮೦೭-೦೮

ಇದು ಪ್ರಧಾನಿಯವರ ಆಶಯವಾಗಿತ್ತು. ನೀವು ಈ ಗೊತ್ತುವಳಿ ಮಂಡಿಸಿದ್ದೇನೆಂದರೆ:

> "ಮೂರನೇ ಸಾಲಿನ ಕಡೆಯಲ್ಲಿ ಈ ನಿಬಂಧನೆಗಳನ್ನು ಸೇರಿಸಬೇಕು; ವೆಸ್ಟ್ ಮಿನಿಸ್ಟರ್ ರಾಜ್ಯಾಂಗದಲ್ಲಿ ನಮೂದಿಸಿದಂತೆ ಪ್ರಭುತ್ವ ಸಂವಿಧಾನವನ್ನು ಭಾರತದಲ್ಲಿ ಜಾರಿಗೆ ತರಲು ಸದನವನ್ನು ಈ ನೀತಿಯು ಬಾಧ್ಯಗೊಳಿಸಬಾರದು. ಭಾರತದಲ್ಲಿ ಮತ್ತು ಭಾರತದ ಜತೆ ಬ್ರಿಟಿಷ್ ವ್ಯಾಪಾರಕ್ಕೆ ಯಾವುದೇ ಪೂರ್ವಾಗ್ರಹದ ಹಾಗೂ ದುಷ್ಪರಿಣಾಮಕ್ಕೆಡೆಮಾಡಿಕೊಡುವ ತಾರತಮ್ಯದಿಂದ ಈ ನೀತಿ ರಕ್ಷಣೆ ಒದಗಿಸಬೇಕು. ಭಾರತ ಸರ್ಕಾರದ ಯಾವ ವಿಸ್ತರಣೆಯೂ ಶಾಂತಿ, ಸುವ್ಯವಸ್ಥೆ ಮತ್ತು ಭಾರತೀಯ ಸಾಮ್ರಾಜ್ಯದ ಉತ್ತಮ ಸರ್ಕಾರಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಸರ್ವೋಚ್ಚ ಜವಾಬ್ದಾರಿಯನ್ನು ದುರ್ಬಲಗೊಳಿಸಬಾರದು."

೧೯೩೧ರ ಡಿಸೆಂಬರ್ ೩ರಂದು ಹೌಸ್ ಆಫ್ ಕಾಮನ್ಸ್‌ನಲ್ಲಿ ನಡೆದ ಈ ಚರ್ಚೆಯನ್ನು ಓದಿದ ಬಳಿಕ ನನಗನಿಸಿದ್ದೇನೆಂದರೆ, ನೀವು ಸೂಚಿಸಿದ ತಿದ್ದುಪಡಿಯನ್ನು ಪ್ರಧಾನಿ ಒಂದು ವೇಳೆ ಒಪ್ಪಿಕೊಂಡಿದ್ದ ಪಕ್ಷದಲ್ಲಿ ಅವರು ಮಂಡಿಸಿದ ಗೊತ್ತುವಳಿಯನ್ನು ಬೆಂಬಲಿಸಿ ಸರ್ಕಾರದ ಪರವಾಗಿ ಮತ ಚಲಾಯಿಸಲು ನೀವು ಸಮ್ಮತಿಸುತ್ತಿದ್ದಿರಿ. ಹೌದೇ?

ಸರ್ ವಿನ್ಸಟನ್ ಚರ್ಚಿಲ್: ಊಹಾ ಪ್ರಪಂಚದ ಅಂಥ ಸಂದರ್ಭದಲ್ಲಿ ಏನಾಗಬಹುದಿತ್ತು ಎಂದು ಹೇಳುವುದು ತುಂಬಾ ಕಷ್ಟ. ಆದರೆ, ಹಾಗೊಂದು ವೇಳೆ ಗೊತ್ತುವಳಿಗೆ ಸಂಬಂಧಿಸಿದಂತೆ ನನ್ನನ್ನು ಬೆಂಬಲಿಸಿದವರ ಜತೆಗೆ ಸರ್ಕಾರವೂ ಸಂಪೂರ್ಣವಾಗಿ ಸಮ್ಮತಿಸದಿದ್ದರೆ, ಹೌಸ್ ಆಫ್ ಕಾಮನ್ಸ್‌ನ ಕನ್ಸರ್ವೇಟಿವ್ ಸದಸ್ಯರ ನಿಸ್ಸಂದೇಹವಾಗಿಯೂ ಗರಿಷ್ಠ ಮಟ್ಟದ ನೆಮ್ಮದಿ ಉಂಟಾಗುತ್ತಿತ್ತು. ಅನಂತರ ಪೂರ್ಣ ನೆಮ್ಮದಿಯ ಹಾಗೂ ಒಟ್ಟಾರೆ ಹೆಚ್ಚು ಸಮ್ಮತಾರ್ಹ ವಾತಾವರಣ ಕಾಣಿಸಿಕೊಳ್ಳುತ್ತಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ಸುದೈವವಶಾತ್, ಈ ವಿಷಯವು ಊಹಾ ಪ್ರಪಂಚಕ್ಕೆ ಸೇರಿದ್ದೆಂದು ನನಗೆ ತೋರುವುದಿಲ್ಲ. ಆ ಚರ್ಚೆ ನಡೆದ ಸಂದರ್ಭದಲ್ಲಿ ನಿಮ್ಮ ತಿದ್ದುಪಡಿಗೆ ಸಂಬಂಧಪಟ್ಟಂತೆ ಅತ್ಯಂತ ನಿರ್ದಿಷ್ಟ ದೃಷ್ಟಿಕೋನವನ್ನು ನೀವು ತಾಳಿದಿರಿ ಎಂದೇ ನನಗೆ ಗೋಚರಿಸುತ್ತದೆ. ನೀವು ಭಾಷಣ ಮಾಡುತ್ತ ಹೇಳಿದ ಒಂದೆರಡು ಮಾತುಗಳನ್ನು ನೆನಪಿಸಿಕೊಳ್ಳಿ. ಆಗ ಸದನದಲ್ಲಿದ್ದ ಸದಸ್ಯರ ತಿಳುವಳಿಕೆ ಪ್ರಕಾರ ಸರ್ಕಾರ ಹೇಳುತ್ತಿದ್ದುದಕ್ಕೂ, ನೀವು ನಿಮ್ಮ ತಿದ್ದುಪಡಿಯಲ್ಲಿ ಹೇಳಬಯಸಿದ್ದಕ್ಕೂ ವ್ಯತ್ಯಾಸವೇ ಇರಲಿಲ್ಲ. ನನ್ನನ್ನು ಆಶ್ಚರ್ಯಚಕಿತನನ್ನಾಗಿಸಿದ ಮೊದಲ ಸಂಗತಿ ಇದು. ಅಲ್ಲವೇ?

ನಾನು ಎತ್ತಿ ಹೇಳಬಯಸುವ ಅಂಶವೆಂದರೆ; ಪ್ರಧಾನ ಹೇಳಿಕೆ ಮತ್ತು ನೀವು ಅಂದು ಹೌಸ್ ಆಫ್ ಕಾಮನ್ಸ್‌ನಲ್ಲಿ ಸೂಚಿಸಬಯಸಿದ ತಿದ್ದುಪಡಿ ಓದಿದ ಬಳಿಕ ನನಗೆ ಯಾವ ವ್ಯತ್ಯಾಸವೂ ಕಾಣಲಿಲ್ಲ. ನಿಮ್ಮ ನಿಲುವೂ ಸ್ಪಷ್ಟವಾಗಲಿಲ್ಲ.

ನನ್ನ ಈ ಮಾತನ್ನು ಸ್ಪಷ್ಟಪಡಿಸುವ ಒಂದು ಪ್ಯಾರಾ ಇಲ್ಲಿ ಓದುವೆ. ನೀವು ೨೩೪ನೇ ಕಾಲಂನಲ್ಲಿ ಹೇಳುವುದೇನೆಂದರೆ: "ನನ್ನ ಮಾತು ಮುಗಿಯಿತು. ಸದನವು ಇಷ್ಟು ದೀರ್ಘ ಕಾಲ ನನ್ನ ಮಾತುಗಳಿಗೆ ಕಿವಿಗೊಟ್ಟಿದ್ದಕ್ಕೆ ಧನ್ಯವಾದಗಳು. ನಮ್ಮ ತಿದ್ದುಪಡಿಯನ್ನು ರಕ್ಷಿಸಿಡದೇ ನಾವಿನ್ನೇನು ಮಾಡಬಲ್ಲೆವು. ಸರ್ಕಾರವನ್ನು ವಿಶ್ವಾಸಕ್ಕೆ ಗುರಿಪಡಿಸುವುದಲ್ಲ" ಮುಖ್ಯ ಅಂಶವೆಂದರೆ "ಬದಲಾಗಿ ಸದನ, ಪ್ರಧಾನ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ವಿಶ್ವಾಸವಿಡುವ ತತ್ವಗಳನ್ನೇ ಅದು (ತಿದ್ದುಪಡಿ) ಒತ್ತಿ ಹೇಳುತ್ತದೆ." ಅಂದರೆ ಪ್ರಧಾನಿ

ಹೇಳಿಕೆ ಮಂಡಿಸಿದ ಸೂಚನೆ ಮತ್ತು ನಿಮ್ಮ ತಿದ್ದುಪಡಿಯ ಸಾರದಲ್ಲಿ ಇರುವ ವ್ಯತ್ಯಾಸ ನಿಮಗೇ ಕಾಣಲಿಲ್ಲ?

ಸರ್ ವಿನ್ಸಟನ್ ಚರ್ಚಿಲ್: ಸಲಹೆಯ ಬಗ್ಗೆ ಸರ್ಕಾರ ಸೂಕ್ತ ನಿಲುವು ತಾಳಲಿಲ್ಲ ಎಂಬುದು ನಿಜಕ್ಕೂ ವಿಷಾದಕರ. ಆ ತಿದ್ದುಪಡಿಯನ್ನು ಬರವಣಿಗೆಯಲ್ಲಿ ತೆಗೆದುಕೊಂಡಿದ್ದರೆ, ನನಗೆ ಹೆಚ್ಚು ಸಂತೋಷ ವಾಗಿರುತ್ತಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ಅದೇ ದಿನ ನೀವು ಹೇಳಿದ ಇನ್ನೊಂದು ಪ್ಯಾರಾ ಉದಾಹರಿಸುವುದಾದರೆ: ಸಲಹೆಯನ್ನು ಅಂಗೀಕರಿಸದಿದ್ದರೆ ನೀವು ಸರ್ಕಾರದ ಪರವಾಗಿ ಮತ ಚಲಾಯಿಸಿ ಸಮಾಧಾನಪಡಿಸುತ್ತಿದ್ದಿರಿ. ಇದಕ್ಕೆ ಇದ್ದ ನಿಮ್ಮ ನಿಬಂಧನೆ ಏನೆಂದರೆ, ಅಂದು ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಧಾನಿಯ ಘೋಷಣೆ ಜತೆಗೆ ಸೆಕ್ರೆಟರಿ ಆಫ್ ಸ್ಟೇಟ್ ಅವರ ಭಾಷಣವೂ ಜತೆಗೂಡಬೇಕೆಂಬುದಾಗಿತ್ತು. ಇದು ನೀವು ಸರ್ಕಾರಕ್ಕೆ ಸೂಚಿಸಿದ ಎರಡನೇ ಪರ್ಯಾಯ ಮಾರ್ಗ.

ಸರ್ ವಿನ್ಸಟನ್ ಚರ್ಚಿಲ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಧಾನಿಯ ಪ್ರಕಟಣೆ ಜತೆಗೆ ಸೆಕ್ರೆಟರಿ ಆಫ್ ಸ್ಟೇಟ್ ಅವರ ಭಾಷಣವೂ ಆಗಬೇಕು ಎಂಬ ನಿಬಂಧನೆ ಹಾಕಿ, ಸರ್ಕಾರದ ಪರವಾಗಿ ಮತ ಚಲಾಯಿಸಲು ಸಿದ್ಧರಾಗಿದ್ದ ನಿಮ್ಮ ನಿಲುವನ್ನು ಗಮನಿಸಿದಾಗ ನನಗೆ ಅರ್ಥವಾಗದುದೇನೆಂದರೆ ಪ್ರಧಾನಿ ಹೇಳಿಕೆ ಜತೆಗೆ ಸೆಕ್ರೆಟರಿ ಆಫ್ ಸ್ಟೇಟ್‌ರವರ ಭಾಷಣ ಮತ್ತು ಈ ಸಮಿತಿಗೆ ಸಲ್ಲಿಸಲಾದ ಶ್ವೇತಪತ್ರಗಳ ನಡುವಣ ವ್ಯತ್ಯಾಸವೇನು? ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಧಾನಿ ಭಾಷಣವನ್ನು ಕುರಿತು ಸೆಕ್ರೆಟರಿ ಆಫ್ ಸ್ಟೇಟ್‌ರವರು ಮಾಡಿದ ವ್ಯಾಖ್ಯಾನ ಮತ್ತು ಈ ಸಮಿತಿಗೆ ಸಲ್ಲಿಸಲಾದ ಶ್ವೇತಪತ್ರ ಇವೆರಡರ ನಡುವೆ ಇರುವ ವ್ಯತ್ಯಾಸವನ್ನು ನೀವು ಸೂಚಿಸಬಲ್ಲಿರಾ?

ಸರ್ ವಿನ್ಸಟನ್ ಚರ್ಚಿಲ್: ನಮ್ಮ ಚರ್ಚೆಗಳ ಮೇಲೆ ಪ್ರಭಾವ ಮತ್ತು ಪರಿಣಾಮ ಬೀರುವ ಎಲ್ಲಾ ಸನ್ನಿವೇಶಗಳನ್ನು ಅರ್ಥ ಮಾಡಿಕೊಳ್ಳದಿದ್ದರೆ, ಸಂಸತ್ ಅಥವ ಹೌಸ್ ಆಫ್ ಕಾಮನ್ಸ್‌ನಲ್ಲಿ ಎರಡು ಕಡೆಗಳಿಂದ ನಡೆಯುವ ಚರ್ಚೆಯಲ್ಲಿನ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಹೊರಗಿನವರಿಗೆ ಕಷ್ಟವಾಗುವುದು.

ಲಿಖಿತ ರೂಪಕ್ಕಿಳಿಸಲು ನಾನು ಕೇಳಿದ ತಿದ್ದುಪಡಿ ಮತ್ತು ಸರ್ಕಾರದ ನಮ್ಮ ತಲೆ ಮೇಲೆ ಹೇರಿದ ಗೊತ್ತುವಳಿ ನಡುವೆ ನೈಜ ಹಾಗೂ ಬೃಹತ್ ವ್ಯತ್ಯಾಸವಿತ್ತೆಂಬ ಅಂಶ ವಾದಾತೀತ. ತೀಕ್ಷ್ಣ ಅಂತರ ಅಲ್ಲಿತ್ತು. ಬೆಂಬಲ ಕಳೆದುಕೊಳ್ಳುತ್ತಿರುವ ವರಸೆ ಬಳಸಿಯೇ ಪ್ರತಿಯೊಂದು ಬಣವೂ ತನ್ನ ಅಭಿಪ್ರಾಯ ಮಂಡಿ ಸುವುದು ಸಹಜ. ಆದರೂ ವ್ಯತ್ಯಾಸ ಅಲ್ಲಿತ್ತು. ಮತ್ತು ಅದು ಸ್ಪಷ್ಟವಾಗಿತ್ತು. ನಮ್ಮದು ಎರಡು ಶಾಸನ ಸಭೆಗಳುಳ್ಳ ಸಂಸತ್ತು. ನಮ್ಮ ಸಂಸದೀಯ ಸಂಸ್ಥೆಗಳನ್ನು ಮನ್ನಿಸಿದಾಗ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ನಡೆಯುವ ಚರ್ಚೆಯನ್ನು ಹೌಸ್ ಆಫ್ ಕಾಮನ್ಸ್ ಚರ್ಚೆಯ ಜತೆಗೇ ಪರಿಗಣಿಸಬೇಕೆಂಬುದನ್ನೇನೂ ನಾನು ಡಾ. ಅಂಬೇಡ್ಕರ್ ಅವರ ಗಮನಕ್ಕೆ ತರಬೇಕಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಹೌಸ್ ಆಫ್ ಲಾರ್ಡ್ಸ್ ಅಥವಾ ನಿಮ್ಮ ಪಕ್ಷದ ಇತರ ಸದಸ್ಯರ ನಿಲುವು ಏನೇ ಇರಲಿ, ನಾನು ನಿಮ್ಮ ನಿಲುವನ್ನು ಗೌರವದಿಂದಲೇ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುವೆ. ಸೆಕ್ರೆಟರಿ ಆಫ್ ಸ್ಟೇಟ್‌ರವರ ಭಾಷಣದ ಜತೆಗೆ ಪ್ರಧಾನಿ ಹೇಳಿಕೆ ಬಂದರೆ ಸರ್ಕಾರದ ಪರವಾಗಿ ಮತ ಚಲಾಯಿಸುವುದಾಗಿ ಸ್ಪಷ್ಟವಾಗಿ ನೀವು ಹೇಳಿದಿರಿ. ಸಂಯುಕ್ತ ಸಂಸತ್ ಸಮಿತಿ ಮುಂದೆ ಮಂಡಿಸಿದ ಶ್ವೇತಪತ್ರ ಮತ್ತು ಅಂದು ಹೌಸ್ ಆಫ್ ಕಾಮನ್ಸ್‌ನಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಅವರು ಪ್ರಧಾನಿ ಹೇಳಿಕೆಗೆ

ನೀಡಿದ ವ್ಯಾಖ್ಯೆ ಇವೆರಡರಲ್ಲಿ ನಿಮಗೆ ಏನಾದರೂ ವ್ಯತ್ಯಾಸ ಕಂಡುಬಂದೀತೇ? ವ್ಯತ್ಯಾಸ ಕಂಡು ಬಂದಿದ್ದರೆ ಅವಶ್ಯವಾಗಿ ಹೇಳಿ.

ಸರ್ ವಿನ್ಸಟನ್ ಚರ್ಚಿಲ್: ಭಾರತದಲ್ಲಿ ಫೆಡರಲ್ ವ್ಯವಸ್ಥೆ ನಿರ್ಮಿಸಬೇಕೆಂಬ ಮತ್ತು ಕಾನೂನು ಹಾಗೂ ವ್ಯವಸ್ಥೆಯನ್ನು ಪ್ರಾಂತಗಳಿಗೆ ವರ್ಗಾಯಿಸುವ ವಿಚಾರವನ್ನು ನಾನು ಎಂದೂ ಸಮ್ಮತಿಸಲಿಲ್ಲ. ನಾನೆಂದೂ ಈ ಅಭಿಪ್ರಾಯಕ್ಕೆ ವಿರುದ್ಧವಾಗಿ ಮಾತಾಡಿಲ್ಲ. ಡಾ. ಅಂಬೇಡ್ಕರ್ ಅವರಿಗೆ ಇಷ್ಟು ಖಾತರಿಯನ್ನು ನಾನು ಕೊಡಬಲ್ಲೆ.

ಡಾ. ಬಿ. ಆರ್. ಅಂಬೇಡ್ಕರ್: ಇನ್ನೇನೂ ನನ್ನ ಪ್ರಶ್ನೆಗಳಿಲ್ಲ.

* ಡಾ. ಬಿ. ಆರ್. ಅಂಬೇಡ್ಕರ್: ಅಧ್ಯಕ್ಷರೇ, ನಿಮ್ಮ ಅನುಮತಿ ಮೇರೆಗೆ ಒಂದು ಪ್ರಶ್ನೆ ಕೇಳಲೇ?

ಅಧ್ಯಕ್ಷ: ಕೇಳಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ಚರ್ಚಿಲ್ಲರೇ, ಜವಾಬ್ದಾರಿ ಸರ್ಕಾರ ಮತ್ತು ಪ್ರಭುತ್ವ ವ್ಯವಸ್ಥೆಯಲ್ಲಿ ಇರುವ ಅಂತರವನ್ನು ನೀವು ಗುರುತಿಸಬಲ್ಲಿರಾ?

ಸರ್ ವಿನ್ಸಟನ್ ಚರ್ಚಿಲ್: ಖಂಡಿತ. ಜವಾಬ್ದಾರಿ ಸರ್ಕಾರಕ್ಕೆ ನಾನಾ ಅರ್ಥಗಳಿವೆ. ಕೆಲವು ನಿಜ ಜೀವನದಲ್ಲೂ ಕಾಣಸಿಗುತ್ತದೆ.

ಮುಖ್ಯವಾದ ಕಾರ್ಯಗಳನ್ನು ಪ್ರಾಂತಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ವಹಿಸಿಕೊಡುವುದೂ ಜವಾಬ್ದಾರಿ ಸರ್ಕಾರದ ಅರ್ಥ. ಜವಾಬ್ದಾರಿ ಸರ್ಕಾರ ಎಂದರೆ, ತಾಂತ್ರಿಕವಾಗಿ ಬೇರೆ ಬೇರೆ ಪ್ರಮಾಣದಲ್ಲೂ ವ್ಯಾಖ್ಯಾನಿಸಲಾಗುತ್ತದೆ. ವಿಧಾನಸಭೆಗೆ ಜವಾಬ್ದಾರರಾಗುವ ಮಂತ್ರಿಗಳು ಇತ್ಯಾದಿ. ಆದರೆ, ನಮ್ಮ ಪ್ರಭುತ್ವ ಮತ್ತು ಸಾಮ್ರಾಜ್ಯ ವ್ಯವಸ್ಥೆಯಲ್ಲಿ ಜವಾಬ್ದಾರಿ ಸರ್ಕಾರ ಎಂದು ಕರೆಯಬಹುದಾದ ಸಾಂಸ್ಥಿಕ ರೂಪಗಳು ನಮ್ಮ ಚರಿತ್ರೆಯ ಘಟ್ಟಗಳಲ್ಲಿ ಕಾಣಸಿಗುವುದು ತೀರಾ ಕಮ್ಮಿ.

* * ಡಾ. ಬಿ. ಆರ್. ಅಂಬೇಡ್ಕರ್: ವಯಸ್ಕ ಮತದಾನದ ಹಕ್ಕು ನಿಮಗೆ ಸಮ್ಮತವೋ?

ಸರ್ ವಿನ್ಸಟನ್ ಚರ್ಚಿಲ್: ಇಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಏಕೆ?

ಸರ್ ವಿನ್ಸಟನ್ ಚರ್ಚಿಲ್: ಏಕೆಂದರೆ ಅದು ತುಂಬಾ ಅವ್ಯಾವಹಾರಿಕ ಎಂಬುದು ನನ್ನ ಅಭಿಪ್ರಾಯ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂ ೨–ಸಿ, ೨೫ ಅಕ್ಟೋಬರ್ ೧೯೩೩. ಪುಟ ೧೮೩೩

* * ಮಿನಿಟ್ಸ್ ಆಫ್ ಎವಿಡೆನ್ಸ್ ಸಂಪುಟ ೨–ಸಿ, ೨೫ ಅಕ್ಟೋಬರ್ ೧೯೩೩ ಪುಟ ೧೮೪೯

## (೧೮)

## ಲೆ. ಕ. ಸರ್ ಹೆನ್ರಿ ಗಿಡ್ನೆ, ಎಂ.ಎಲ್.ಐಎಂಎಸ್ (ನಿವೃತ್ತ), ಆಂಗ್ಲೋ ಇಂಡಿಯನ್ ಮತ್ತು ಡೊಮಿಸೈಲ್ಡ್ ಯುರೋಪಿಯನ್ ಅಸೋಸಿಯೇಷನ್ ಆಫ್ ಇಂಡಿಯಾ ಪರವಾಗಿ

* ಡಾ. ಬಿ. ಆರ್. ಅಂಬೇಡ್ಕರ್: ಹೊಸ ಸಂವಿಧಾನ ಬಂದರೆ ನಿಮ್ಮ ಜನಾಂಗದ ಗತಿಯೇನಾದೀತು ಎಂಬ ಬಗ್ಗೆ ನಿಮಗೆ ತುಂಬಾ ಆತಂಕ ಇರುವುದು ನನಗೆ ಅರ್ಥವಾಗುತ್ತದೆ. ಈ ಬಗೆಯ ಆತಂಕ ಇನ್ನು ಅನೇಕ ಅಲ್ಪಸಂಖ್ಯಾತ ಜನಾಂಗಗಳನ್ನೂ ಕಾಡುತ್ತಿದೆ ಎಂಬುದು ನನ್ನ ನಂಬಿಕೆ. ಆದ್ದರಿಂದ ನಿಮಗೆ ನನ್ನ ಪ್ರಶ್ನೆ ಏನೆಂದರೆ, ಭಾರತದ ವಿವಿಧ ಜನಾಂಗಗಳ ನೈತಿಕ ಮತ್ತು ಭೌತಿಕ ಸಮಸ್ಯೆಗಳನ್ನು ಕುರಿತಂತೆ ಪ್ರತಿವರ್ಷ ಒಂದು ವರದಿಯನ್ನು ಸಂಸತ್ತಿಗೆ ಸಲ್ಲಿಸಬೇಕೆಂಬ ಶಾಸನಬದ್ಧ ಆದೇಶ ಪಾಲಿಸುವ ಅಧಿಕಾರಿ ಅಥವಾ ಇಲಾಖೆಯೊಂದು ಭಾರತದ ಮುಂದಿನ ಸರ್ಕಾರದಲ್ಲಿ ಇರಬೇಕೆಂದು ಸಂವಿಧಾನದಲ್ಲಿ ಅಳವಡಿಸಿದರೆ, ನೀವು ಇಟ್ಟುಕೊಂಡಿರುವ ಉದ್ದೇಶ ಈಡೇರುತ್ತದೆಂದು ಭಾವಿಸುತ್ತೀರಾ? ವಿವಿಧ ಪ್ರಾಂತಗಳ ಆಡಳಿತದಲ್ಲಿ ನಿಮ್ಮ ಜನಾಂಗಗಳ ಹಿತಾಸಕ್ತಿಗೆ ಧಕ್ಕೆ ಬಂದಾಗ, ಅದನ್ನು ಸಂಸತ್ತಿನ ಗಮನಕ್ಕೆ ತರಲು ಇಂಥ ಸಲಹೆಯೇನಾದರೂ ಪ್ರಯೋಜನಕ್ಕೆ ಬಂದೀತೇ?

ಸರ್ ಹೆನ್ರಿ ಗಿಡ್ನೆ: ಅಂಥ ಸಲಹೆಗೆ ನನ್ನ ಪೂರ್ಣ ಸಮ್ಮತಿಯಿದೆ. ಆದರೆ ಇದಕ್ಕೂ ಮೊದಲು, ನಾನು ಗೌರವಪೂರ್ವಕವಾಗಿಯೇ ಹೇಳುವುದಾದರೆ, ಯಾರೋ ಒಬ್ಬರು ಅಥವಾ ಒಂದು ಇಲಾಖೆ ಪ್ರತಿ ವರ್ಷ ಸಂಸತ್ತಿಗೆ ವರದಿ ಸಲ್ಲಿಸುವುದಲ್ಲ, ನಿಜ ಜೀವನದಲ್ಲಿ ಅಲ್ಪಸಂಖ್ಯಾತ ಜನಾಂಗಗಳಿಗೆ ರಕ್ಷಣೆ ಒದಗಿಸುವ ದಿಸೆಯಲ್ಲಿ ಕ್ರಮ ಜರುಗಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಸ್ಪಷ್ಟಪಡಿಸಿಬಿಡುವೆ. ನಾನು ಹೇಳಿದ್ದು ನೀವು ಕೇಳಿದ್ದಕ್ಕೆ ಪರ್ಯಾಯವಾಗಿ ಅಲ್ಲ; ನೀವು ಕೇಳಿದ್ದರ ಜತೆಗೆ, ಪೂರಕವಾಗಿ.

ಸರ್ ಹೆನ್ರಿ ಗಿಡ್ನೆ: ಸರಿ.

ಡಾ. ಬಿ. ಆರ್. ಅಂಬೇಡ್ಕರ್: ನಿರ್ಲಕ್ಷ್ಯಕ್ಕೊಳಗಾಗುವ ಅಧಿಕಾರ ಪ್ರಜ್ಞೆಯನ್ನು ಹತೋಟಿಯಲ್ಲಿಡಲು ಈ ಅವಕಾಶ ಸಹಕಾರಿಯಾದೀತೇ?

ಸರ್ ಹೆನ್ರಿ ಗಿಡ್ನೆ: ಜನಾಂಗಗಳ ಮೇಲೆ ಪೂರ್ವಾಗ್ರಹದಿಂದ ನಡೆಯುವ ಅನ್ಯಾಯ ಸಂಸತ್ ಸದನಗಳ ಮುಂದೆ ತರುವ ದಿಸೆಯಲ್ಲಿ ಇದು ಮುಖ್ಯ ಮಾರ್ಗವಾದೀತೆಂದು ನನಗೆ ತೋರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಕೇವಲ ನಿಮಗೋ ಅಥವಾ ಇನ್ನೂ ಇತರರಿಗೂ ಹಾಗೆ ತೋರುತ್ತದೋ?

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಸಿ, ೧೦ ನವೆಂಬರ್ ೧೯೩೩, ಪುಟ ೧೯೯೬.

ಸರ್ ಹೆನ್ರಿ ಗಿಡ್ನೆ: ಎಲ್ಲಾ ಅಲ್ಪಸಂಖ್ಯಾತರಿಗೆ.

ಜಫರುಲ್ಲಾ ಖಾನ್: ಆಮೇಲೆ ಸಂಸತ್ತು ಏನು ಮಾಡುತ್ತದೆ?

ಡಾ. ಬಿ. ಆರ್. ಅಂಬೇಡ್ಕರ್: ಬೇರೆ ಬೇರೆ ರಾಜ್ಯಗಳ ಸರ್ಕಾರಗಳು ಅಲ್ಲಿನ ಅಲ್ಪಸಂಖ್ಯಾತ ಜನಾಂಗಗಳ ಬಗ್ಗೆ ತಮ್ಮ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುತ್ತವೆ ಎಂಬ ಬಗ್ಗೆ ಕೇವಲ ಗವರ್ನರ್–ಜನರಲ್ ಅಲ್ಲ, ಸಂಸತ್ತು ಕೂಡ ತಿಳಿದುಕೊಂಡಿರಬೇಕು.

ಸರ್ ಹರಿಸಿಂಗ್ ಗೌರ್: ಅದಕ್ಕೆ ನೀವು ಪ್ರಾಂತ ಸ್ವಾಯತ್ತತೆ ಎನ್ನುತ್ತೀರಾ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ನಿಸ್ಸಂದೇಹವಾಗಿ.

(೧೯)

## ಜೆ. ಸಿ. ಫ್ರೆಂಚ್ ಮತ್ತು ಎಸ್. ಎಚ್. ಮಿಲ್ಸ್ ಭಾರತದ ಪೊಲೀಸರ ಪರವಾಗಿ

* ಡಾ. ಬಿ. ಆರ್. ಅಂಬೇಡ್ಕರ್: ಉದ್ದೇಶಿತ ಸಂವಿಧಾನ ಜಾರಿಗೆ ಬಂದರೆ ಬಂಗಾಲದಲ್ಲಿ ಮುಸ್ಲಿಮರು ಮತ್ತು ನಿಮ್ನ ವರ್ಗಗಳು ಕಾಂಗ್ರೆಸ್ ಪ್ರಭಾವಕ್ಕೆ ಸಿಲುಕುತ್ತವೆ ಎಂದು ನೀವು ಖಂಡತುಂಡವಾಗಿ ಹೇಳಿದಿರಿ.

ಎಸ್. ಎಚ್. ಮಿಲ್ಸ್: ಈ ಜನಾಂಗಗಳ ಬಹುಪಾಲು ಸಮುದಾಯ ಕಾಂಗ್ರೆಸ್ ಪ್ರಭಾವಕ್ಕೆ ಸಿಲುಕುವ ಎಲ್ಲಾ ಸಾಧ್ಯತೆಗಳಿವೆ ಎಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ನ ವರ್ಗಗಳ ಪೈಕಿ ಶೇ. ೨೦ರಷ್ಟು ಎಂದು ಹೇಳಿದಿರಿ?

ಎಸ್. ಎಚ್. ಮಿಲ್ಸ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈಗ ನಿಮ್ನ ವರ್ಗಗಳು ಅಥವಾ ಮುಸಲ್ಮಾನರಲ್ಲಿ ಭಯೋತ್ಪಾದಕ ಚಳವಳಿಯನ್ನು ಬೆಂಬಲಿಸುವವರಿದ್ದಾರೆ ಎಂದು ನೀವು ಸೂಚಿಸುತ್ತಿಲ್ಲವಷ್ಟೇ?

ಎಸ್. ಎಚ್. ಮಿಲ್ಸ್: ಭಯೋತ್ಪಾದಕರೆಂದು ನಿಮ್ನ ವರ್ಗಗಳಿಗೆ ಸೇರಿದ ಅನೇಕರನ್ನು ನಾವು ದಸ್ತಗಿರಿ ಮಾಡಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಯಾವ ಜನಾಂಗದವರು?

ಎಸ್. ಎಚ್. ಮಿಲ್ಸ್: ಕೆಲವರು ವಿಶಿಷ್ಟ ಜನಾಂಗದವರು. ಶಹಾಗಳು ಜಾಸ್ತಿ, ಮಿಡ್ನಾಪುರದಲ್ಲಿ ನಿಮ್ನ ವರ್ಗಗಳಿಗೆ ಸೇರಿದವರು ಎಷ್ಟೋ ಜನ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ನ ವರ್ಗಗಳಲ್ಲಿನ ಪರಿಶಿಷ್ಟ ಜಾತಿ ಪೈಕಿ ಶಹಾ ಸೇರಿಲ್ಲ.

ಎಸ್. ಎಚ್. ಮಿಲ್ಸ್: ಹೌದು. ಮಿಡ್ನಾಪುರದಲ್ಲಿ ನಿಮ್ನ ವರ್ಗಗಳ ಅನೇಕ ಜನ ದಸ್ತಗಿರಿ ಆಗಿದ್ದಾರೆ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಅನುಭವಕ್ಕೆ ಬಂದಂತೆ, ಬಂಗಾಲದಲ್ಲಿ ನಾಮಶೂದ್ರರಂಥ ಜನಾಂಗಗಳು ಯಾವುದೇ ವಿಧದಲ್ಲಿ ಭಯೋತ್ಪಾದಕ ಚಳವಳಿಗೆ ಸಂಬಂಧಪಟ್ಟಿದ್ದಾರೆಯೇ?

ಎಸ್. ಎಚ್. ಮಿಲ್ಸ್: ಗೊತ್ತು.

ಡಾ. ಬಿ. ಆರ್. ಅಂಬೇಡ್ಕರ್: ಪ್ರತ್ಯೇಕ ಮತ ಕ್ಷೇತ್ರಗಳಿದ್ದರೂ ಈ ಜನಾಂಗಗಳ ಪ್ರತಿನಿಧಿಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಭಾವ ಬೀರುವುದೆಂದು ನಿಮಗೆ ಅನಿಸುವುದೇ?

ಎಸ್. ಎಚ್. ಮಿಲ್ಸ್: ಹೌದು. ಹೆಚ್ಚು ಸಾಧ್ಯತೆಯಿದೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗೆ ನಿಮಗೆ ಅನಿಸಲು ಕಾರಣಗಳೇನು?

ಎಸ್. ಎಚ್. ಮಿಲ್ಸ್: ಭಯೋತ್ಪಾದಕರನ್ನು ಬೆಂಗಾವಲಿಗಿಟ್ಟುಕೊಂಡಿರುವ ಕಾಂಗ್ರೆಸ್‌ಗೆ ಆ ಪ್ರಾಂತದಲ್ಲಿ ಜನ ಭಯಪಡುತ್ತಾರೆ. ಈ ಭಯದಿಂದಲೇ ಜನರು ಕಾಂಗ್ರೆಸ್‌ನ ಅಂಕೆಗೆ ಒಳಪಡುತ್ತಾರೆ.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಸಿ, ೧೩ ನವೆಂಬರ್ ೧೯೩೩, ಪುಟ ೨೦೪೩.

## (೨೦)

# ಸಾಕ್ಷ್ಯಕ್ಕಾಗಿ ಹಾಜರಾದ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಭಾರತೀಯ ಸಂವಿಧಾನ ಸುಧಾರಣೆಯ ಸಂಯುಕ್ತ ಸಮಿತಿ ಮುಂದೆ

* * ದಿ ರೈಟ್ ಗೌರವಾನ್ವಿತ ಸ್ಯಾಮ್ಯುಯೆಲ್ ಹೋರ್ ಬಿಟಿ, ಜಿಬಿಇ, ಸಿಎಮ್‌ಜಿಪಿ, ಸರ್ ಮಾಲ್ಕಂ ಹೇಲೇ, ಜಿಸಿಎಸ್‌ಐ, ಜಿಸಿಐಇ ಮತ್ತು ಫಿಂಡ್ಲೇಟರ್ ಸ್ಟೇವಾರ್ಟ್ ಕೆಸಿಬಿ, ಕೆಸಿಐಇ, ಸಿಎಸ್‌ಐ.

* ಡಾ. ಬಿ. ಆರ್. ಅಂಬೇಡ್ಕರ್: ನನಗೆ ಅರ್ಥವಾಗಲಿಲ್ಲ. ೯೨ ಮತ್ತು ೯೫ನೇ ಸಲಹೆ ಮೇರೆಗೆ ಸಹ ಶಾಸನ ಸಭೆ ಅಧಿವೇಶನ ನಡೆದಿದ್ದರೂ ಗವರ್ನರರು ತಮ್ಮ ಅಭಿಪ್ರಾಯಕ್ಕೆ ವಿರೋಧವಾಗಿ ತಮ್ಮ ಕಾಯ್ದೆಯನ್ನು ಶಾಸಕಾಂಗದ ಮುಂದೆ ಮಂಡಿಸಬೇಕಿಲ್ಲ.

ಸರ್ ಸ್ಯಾಮ್ಯುಯಲ್ ಹೋರ್: ಸಂಪೂರ್ಣವಾಗಿ ಸರಿ. ಅದು ಪೂರಾ ಗವರ್ನರರಿಗೇ ಸೇರಿದ್ದು.

* * ಸರ್ ಸ್ಯಾಮ್ಯುಯಲ್ ಹೋರ್ ಭಾರತದ ಸೆಕ್ರೆಟರಿ ಆಫ್ ಸ್ಟೇಟ್, ಮಾಲ್ಕಂ ಹೇಲೆ ಸಂಯುಕ್ತ ಪ್ರಾಂತದ ಗವರ್ನರ್, ಸರ್ ಫಿಂಡ್ಲೇಟರ್ ಸ್ಟೆವಾರ್ಟ್ ಲಂಡನ್‌ನಲ್ಲಿನ ಭಾರತ ಕಚೇರಿಯ ಖಾಯಂ ಅಧೀನ ಕಾರ್ಯದರ್ಶಿ.

ಡಾ. ಬಿ. ಆರ್. ಅಂಬೇಡ್ಕರ್: ಗವರ್ನರರಿಗೆ ಪೂರಾ ಅಧಿಕಾರವಿದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಸುಗ್ರೀವಾಜ್ಞೆಗಳು ಅಥವಾ ಶಾಸನಗಳು ಎಲ್ಲ ವಿಷಯಗಳಲ್ಲಿಯೂ ಅವರು ತಾವೇ ಖುದ್ದಾಗಿ ನಿರ್ಧಾರ ತೆಗೆದುಕೊಳ್ಳಬಹುದು.

* ಡಾ. ಬಿ. ಆರ್. ಅಂಬೇಡ್ಕರ್: ಈ ಅಂಶವನ್ನು ನಾನು ಇನ್ನೊಂದು ಹಂತಕ್ಕೆ ಮುಂದುವರೆಸಬಯಸುತ್ತೇನೆ. ಪ್ರಕರಣದ ಸನ್ನಿವೇಶದ ಮೇಲೆ ಅದು ಅವಲಂಬಿಸಿದೆಯೆಂದು ನೀವು ಹೇಳಿದಿರಿ. ಸರ್ ತೇಜ್ ಸಪ್ರು ಅವರ ಪ್ರಶ್ನೆ ಅದಾಗಿರಲಿಲ್ಲ. "ಈ ನಿಬಂಧನೆಯು ಮಧ್ಯೆ ಪ್ರವೇಶಿಸುವ ಅಧಿಕಾರ ಒದಗಿಸುವುದಿಲ್ಲ, ಶಾಂತಿ ಮತ್ತು ಸಮಾಧಾನಕ್ಕೆ ಇದು ಭಂಗ ತರುತ್ತದೆ. ಈ ಕಾಯ್ದೆಯನ್ನು ಮಂಡಿಸಲು ನಾನು ಸಮ್ಮತಿಸುವುದಿಲ್ಲ" ಎಂದು ಹೇಳುವಷ್ಟು ವ್ಯಾಪಕವಾಗಿದೆಯೇ ಎಂಬುದು ಈಗಿನ ಪ್ರಶ್ನೆ.

ಸರ್ ತೇಜ್ ಬಹಾದ್ದೂರ್ ಸಪ್ರು: ಇಂಥ ಕಾಯ್ದೆ ಯಾವುದೇ ವರ್ಗದ ಹಿತದ ದೃಷ್ಟಿಯಿಂದ

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಸಿ, ೧೪ ಜುಲೈ ೧೯೩೩. ಪುಟ ೭೨೯

* * ಮಿನಿಟ್ಸ್ ಆಫ್ ಎವಿಡೆನ್ಸ್: ಸಂಪುಟ ೨–ಬಿ, ೧೪ ಜುಲೈ ೧೯೩೩. ಪುಟ ೭೩೫

ಅನೇಪಕ್ಷಣೀಯ ಎಂದು ಬರೀ ಭಾವಿಸುವುದಷ್ಟೇ ಅಲ್ಲ. ಪ್ರಾಂತದ ಶಾಂತಿ ಮತ್ತು ನೆಮ್ಮದಿಗೆ ಭಂಗ ಬರುವುದೆಂದು ತೀರ್ಮಾನಿಸಿದಲ್ಲಿ ಸೂಕ್ತಕ್ರಮ ಕೈಗೊಳ್ಳಲು ಗವರ್ನರರಿಗೆ ಅಧಿಕಾರ ನೀಡುವಷ್ಟು ನೀಡುವಷ್ಟು ಈ ನಿಬಂಧನೆ ವ್ಯಾಪಕವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಅವರು ಈ ತೀರ್ಮಾನಕ್ಕೆ ಬಂದರೆ "ಇಂಥ ಕಾಯ್ದೆ ಮಂಡಿಸಲು ನಾನು ಸಮ್ಮತಿ ನೀಡುವುದಿಲ್ಲ" ಎಂದು ಹೇಳುವಷ್ಟು ಈ ನಿಬಂಧನೆ ವ್ಯಾಪಕವಾಗಿದೆಯೇ?

ಸರ್ ಸ್ಯಾಮ್ಯುಯೆಲ್ ಹೋರೆ: ಸಂಯುಕ್ತ ಪ್ರಾಂತಗಳಲ್ಲಿ ಕಳೆದೆರಡು ವರ್ಷಗಳಲ್ಲಿ ಕೃಷಿ ಮತ್ತು ಬಾಡಿಗೆ ವಿಷಯಗಳಿಗೆ ಸಂಬಂಧಿಸಿದಂತೆ ತೀವ್ರ ಬಿಕ್ಕಟ್ಟು ತಲೆದೋರಿತ್ತು. ಈ ನಿಬಂಧನೆಯನ್ನು ಅನ್ವಯಗೊಳಿಸುವ ಸಂದರ್ಭ ನಿಸ್ಸಂದೇಹವಾಗಿ ಅಲ್ಲಿ ಒದಗಿ ಬಂದಿತ್ತು. ಏಕೆಂದರೆ, ಕೆಲವು ಪ್ರಾಂತಗಳಲ್ಲಿನ ಗೇಣಿದಾರರು ಮತ್ತು ಬಾಡಿಗೆದಾರರು ದಂಗೆಯೇಳುವ ಎಚ್ಚರಿಕೆ ನೀಡಿದ್ದರು. ಕಾಯ್ದೆಯ ಪೂರ್ವಾಗ್ರಹ ದೃಷ್ಟಿಯಿಂದಾಗಿ ಕಷ್ಟಕ್ಕೆ ಸಿಲುಕಿದ ಜನ ಯಾವುದೋ ಒಂದು ವರ್ಗದವರಾಗಿದ್ದರೆ, ಈ ನಿಬಂಧನೆಯನ್ನು ಅನ್ವಯಗೊಳಿಸಬೇಕು ಎಂದು ನಾನು ಹೇಳುತ್ತಿರಲಿಲ್ಲ.

* ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತಗಳ ಎರಡನೇ ಸದನದ ಮೇಲೆ ಯಾವುದಾದರೂ ಪ್ರಶ್ನೆಗಳನ್ನು ಹಾಕಬೇಕೆಂದು ಸೆಕ್ರೆಟರಿ ಆಫ್ ಸ್ಟೇಟ್‌ರವರು ಅಪೇಕ್ಷಿಸುತ್ತಾರೆಯೇ ಎಂಬುದನ್ನು ನಾನು ತಿಳಿದುಕೊಳ್ಳ ಬಯಸುವೆ.

ಸರ್ ಸ್ಯಾಮ್ಯುಯೆಲ್ ಹೋರ್: ಸಮಿತಿಗೆ ಏನೇ ಅನಿಸಿದರೂ, ಮತದಾನದ ಪ್ರಶ್ನೆಗಳ ಜತೆಗೆ ಅವು ಬರುವುದೇ ಲೇಸು.

ಡಾ. ಬಿ. ಆರ್. ಅಂಬೇಡ್ಕರ್: ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಯಾವುದೇ ಪ್ರಶ್ನೆಗಳನ್ನು ನಾನು ಕೇಳುವುದಿಲ್ಲ.

ಅಧ್ಯಕ್ಷರು: ಸೆಕ್ರೆಟರಿ ಆಫ್ ಸ್ಟೇಟ್‌ರವರ ಸಲಹೆ ವ್ಯಾವಹಾರಿಕವಾದುದೆಂದೇ ನನ್ನ ಭಾವನೆ. ಆ ಪ್ರಶ್ನೆಗಳನ್ನು ಹಾಗೇ ಇಟ್ಟುಕೊಳ್ಳುವುದು ಮೇಲು.

ಡಾ. ಬಿ. ಆರ್. ಅಂಬೇಡ್ಕರ್: ಎರಡನೇ ಸದನ ಹೇಗೆ ರಚನೆಯಾಗಿದೆ ಎಂಬುದನ್ನು ನಾನು ಕೇಳಬಯಸಿದ್ದೆ. ಇದನ್ನು ಹಾಗೇ ಕಾದಿರಿಸಲೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಅದನ್ನು ಹಾಗೇ ಕಾದಿರಿಸುವುದು ಮೇಲು.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತಗಳಲ್ಲಿ ಮೇಲಿನ ಅಥವಾ ಕೆಳಗಿನ ಯಾವುದೇ ಸದನಗಳಿಂದ ಮಂತ್ರಿಗಳನ್ನು ನೇಮಿಸಬಹುದೆಂದು ಕಳೆದ ಸಲದ ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದಿರಿ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಶ್ವೇತಪತ್ರ ಸೂಚಿಸುವಂತೆ ಎರಡನೇ ಸದನದಲ್ಲಿ ೧೦ ಜನ ನಾಮಕರಣಗೊಂಡ ಸದಸ್ಯರು ಇರಬೇಕು ಎಂಬುದು ನಿಮಗೆ ನೆನಪಿದೆಯಷ್ಟೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಮೇಲಿನ ಸದನದಲ್ಲಿ ಕುಳಿತುಕೊಳ್ಳುವ ಈ ಹತ್ತು ಜನರೂ ಮಂತ್ರಿಗಳಾಗಲು ಅರ್ಹರೆಂಬುದು ನಿಮ್ಮ ಸೂಚನೆಯೇ?

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨-ಬಿ, ೧೪ ಜುಲೈ ೧೯೩೩, ಪುಟ ೭೪೭

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಅವರು ಮತ್ತು ಇತರ ಸದಸ್ಯರ ನಡುವೆ ನಾನು ಭೇದ ಭಾವ ತೋರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾಮಕರಣಗೊಂಡ ಸದಸ್ಯರು ಮಂತ್ರಿಗಳಾಗಲು ಅರ್ಹರೇ?

ಸರ್ ಸ್ಯಾಮ್ಯುಯೆಲ್ ಹೋರ್: ಖಂಡಿತಕ್ಕೂ ಅರ್ಹರು. ಅವರಿಗೂ ಅರ್ಹತೆ ಇರಬೇಕೆಂದೇ ನಾನು ತಿಳಿಯುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತ ಶಾಸನ ಸಭೆಗೆ ನಾಮಕರಣಗೊಂಡ ಸದಸ್ಯನು ಮಂತ್ರಿಯಾಗಲು ಅರ್ಹನಲ್ಲ ಎಂಬ ಸ್ಪಷ್ಟ ನಿಯಮವು ಈಗಿನ ಭಾರತ ಸರ್ಕಾರದ ಕಾಯ್ದೆಯಲ್ಲಿದೆ.

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಅವರು ಹೇಳುತ್ತಾರೆಂದ ಮೇಲೆ, ಅದು ಹಾಗಿರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ತಪ್ಪಿದ್ದರೆ ನಾನು ತಿದ್ದಿಕೊಳ್ಳುತ್ತೇನೆ. ಅಂಥ ನಿಯಮವಿದೆ ಎಂದೇ ನಾನು ನಂಬಿರುವೆ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಮೇಲಿನ ಸದನಕ್ಕೆ ನಾಮಕರಣಗೊಂಡ ಸದಸ್ಯರೂ ಹೊಸ ಸರ್ಕಾರದಲ್ಲಿ ಮಂತ್ರಿಗಳಾಗಲು ಅರ್ಹರೆಂದು ಹೇಳುವ ಮೂಲಕ ನೀವು ನಿಜಕ್ಕೂ ಅತ್ಯಂತ ಮಹತ್ವದ ಬದಲಾವಣೆಯನ್ನು ತರುತ್ತಿದ್ದೀರಿ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಅದು ಬೇರೆ ಮಾದರಿಯ ಸರ್ಕಾರ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಕಾರಣಗಳನ್ನು ಚರ್ಚಿಸುತ್ತಿಲ್ಲ. ವಾಸ್ತವ ಏನು ಎಂದು ಮಾತ್ರ ಹೇಳುತ್ತಿರುವೆ.

ಸರ್ ಸ್ಯಾಮ್ಯುಯೆಲ್ ಹೋರ್: ಕ್ಯಾಬಿನೆಟ್ ಸಾಮೂಹಿಕವಾಗಿ ಜವಾಬ್ದಾರಿ ಹೊರಬೇಕು. ಕ್ಯಾಬಿನೆಟ್ ಆಶಯಕ್ಕೆ ವಿರುದ್ಧವಾಗಿ ಯಾವ ಮಂತ್ರಿಯನ್ನೂ ಹೇರಬಾರದು ಎಂಬ ಡಾ. ಅಂಬೇಡ್ಕರ್ ಅಭಿಪ್ರಾಯದ ಹಿನ್ನೆಲೆಯಲ್ಲಿ ಗವರ್ನರರಿಗೆ ಮುಕ್ತ ಸ್ವಾತಂತ್ರ್ಯ ಒದಗಿಸುವ ಬಗ್ಗೆ ಹೇಳುವುದು ಎಷ್ಟೋ ಇದೆ.

* ಸರ್ ತೇಜ್ ಬಹದ್ದೂರ್ ಸಪ್ರು: ಮಂತ್ರಿಗಳ ನೇಮಕಾತಿಗೆ ಸಂಬಂಧಿಸಿದಂತೆ, ಚುನಾಯಿತ ಮತ್ತು ನಾಮಕರಣಗೊಂಡ ಸದಸ್ಯರ ನಡುವೆ ಈಗಿನ ಭಾರತ ಸರ್ಕಾರ ಕಾಯ್ದೆ ಭೇದಭಾವ ತೋರುತ್ತಿದೆ ಎಂಬ ಸರ್ ಸ್ಯಾಮ್ಯುಯೆಲ್ ಅಭಿಪ್ರಾಯ ಸರಿಯೇ?

ಸರ್ ಮಾಲ್ಕಂ ಹೇಲೇ: ಅದು ನನಗೆ ಹೊಸ ಅಂಶ. ನಾನು ಡಾ. ಅಂಬೇಡ್ಕರ್ ಅವರಿಂದಲೇ ಇದನ್ನು ಕೇಳುತ್ತಿರುವೆ.

ಸರ್ ತೇಜ್ ಬಹದ್ದೂರ್ ಸಪ್ರು: ಮಂತ್ರಿಗಳ ನೇಮಕಾತಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರ ಕಾಯ್ದೆಯು ಚುನಾಯಿತ ಮತ್ತು ನಾಮಕರಣಗೊಂಡ ಸದಸ್ಯರ ಮಧ್ಯೆ ಭೇದ ಭಾವ ತೋರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದ್ದು ೫೧ನೇ ಕಲಮು.

ಡಾ. ಬಿ. ಆರ್. ಅಂಬೇಡ್ಕರ್: ಅವರು ಚುನಾಯಿತರಾಗಬೇಕು.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಬಿ, ೧೪ ಜುಲೈ ೧೯೩೩, ಪುಟ ೭೪೮.

ಸರ್ ತೇಜ್ ಬಹದ್ದೂರ್ ಸಪ್ರು: ಡಾ. ಅಂಬೇಡ್ಕರ್ ಅವರು ಸರ್ ಸ್ಯಾಮ್ಯುಯೆಲ್ ಅವರಿಗೆ ಹೇಳಿದಂತೆ, ಮಂತ್ರಿಯಾಗುವ ವಿಷಯಕ್ಕೆ ಸಂಬಂಧಿಸಿ, ಚುನಾಯಿತ ಮತ್ತು ನಾಮಕರಣಗೊಂಡ ಸದಸ್ಯರನ್ನು ಭಾರತ ಸರ್ಕಾರ ಕಾಯ್ದೆ ತಾರತಮ್ಯ ದೃಷ್ಟಿಯಿಂದ ನೋಡುತ್ತದೆ.

ಸರ್ ಮಾಲ್ಕಂ ಹೇಲೇ: ಮಂತ್ರಿಯಾದ ಆರು ತಿಂಗಳ ಒಳಗೆ ಆ ವ್ಯಕ್ತಿ ಯಾವುದಾದರೂ ಕ್ಷೇತ್ರದಿಂದ ಚುನಾಯಿತನಾಗಬೇಕು ಎಂದು ಹೇಳುವ ಮಟ್ಟಿಗೆ ಮಾತ್ರ ಅದು ತಾರತಮ್ಯ ತೋರುತ್ತದೆ.

ಸರ್ ತೇಜ್ ಬಹದ್ದೂರ್ ಸಪ್ರು: ಆದರೆ ಈಗಾಗಲೇ ನಾಮಕರಣಗೊಂಡ ವ್ಯಕ್ತಿಯನ್ನು ಮಂತ್ರಿಯನ್ನಾಗಿ ನೇಮಕ ಮಾಡುವಲ್ಲಿ ಯಾವ ಅಡ್ಡಿಯೂ ಇರುವುದಿಲ್ಲ, ಅಲ್ಲವೇ?

ಸರ್ ಮಾಲ್ಕಂ ಹೇಲೇ: ಹೌದು.

ಸರ್ ತೇಜ್ ಬಹದ್ದೂರ್ ಸಪ್ರು: ಹಾಗೆ ಮಾಡಲಾಗಿದೆಯೇ?

ಸರ್ ಮಾಲ್ಕಂ ಹೇಲೇ: ಹೌದು.

ಸರ್ ತೇಜ್ ಬಹದ್ದೂರ್ ಸಪ್ರು: ನನಗೆ ತಿಳಿದಮಟ್ಟಿಗೆ ಹೇಳುವುದಾದರೆ, ಕಾನೂನು ಇರುವುದು ಹೀಗೆ. ಸದಸ್ಯನಲ್ಲದ ಯಾವುದೇ ವ್ಯಕ್ತಿಯನ್ನು ಮಂತ್ರಿಯನ್ನಾಗಿ ಗವರ್ನರರು ನೇಮಕ ಮಾಡಬಹುದು. ಹೀಗೆ ಮಾಡುವಲ್ಲಿ ಇರುವ ನಿಬಂಧನೆ ಏನೆಂದರೆ, ಆ ವ್ಯಕ್ತಿ ನೇಮಕಗೊಂಡ ಆರು ತಿಂಗಳಲ್ಲಿ ಶಾಸನ ಸಭೆಗೆ ಚುನಾಯಿತನಾಗಬೇಕು. ಇದೇ ಪ್ರಕಾರ ನಾಮಕರಣಗೊಂಡ ಸದಸ್ಯರಲ್ಲೂ ಯಾವುದೇ ವ್ಯಕ್ತಿಯನ್ನು ಮಂತ್ರಿಯನ್ನಾಗಿ ಗವರ್ನರರು ನೇಮಕ ಮಾಡಬಹುದು. ಕಾಯ್ದೆಯು ತಾರತಮ್ಯ ತೋರುವುದಿಲ್ಲ.

ಜಫರುಲ್ಲಾ ಖಾನ್: ನಾಮಕರಣಗೊಂಡ ಸದಸ್ಯ ಮಂತ್ರಿಯಾಗಿ ನೇಮಕಗೊಂಡರೆ ಆತ ನಾಮಕರಣಗೊಂಡ ಸದಸ್ಯನಾಗೇ ಮುಂದುವರೆಯುತ್ತಾನೆಯೋ ಅಥವಾ ಆತ ಚುನಾಯಿತನಾಗಲೇ ಬೇಕೋ?

ಸರ್ ಸ್ಯಾಮ್ಯುಯೆಲ್ ಹೋರ್: ಇಲ್ಲ, ಅದು ಸ್ಪಷ್ಟವಾಗಿದೆ. ನಾಮಕರಣಗೊಂಡ ಸದಸ್ಯನನ್ನೂ ಕೂಡ ಇತರರಂತೆಯೇ ನೋಡಿಕೊಳ್ಳಲಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಆತ ಚುನಾಯಿತನಾಗದಿದ್ದರೆ, ಆರು ತಿಂಗಳ ನಂತರ ಮಂತ್ರಿಯಾಗಿ ಮುಂದುವರೆಯಲಾರ.

* ಡಾ. ಬಿ. ಆರ್. ಅಂಬೇಡ್ಕರ್: ಕಲಮು ಓದಲೇ?

ಸರ್ ಸ್ಯಾಮ್ಯುಯೆಲ್ ಹೋರ್: ಈಗಿನ ಸ್ಥಿತಿಯಲ್ಲಿ ಓದುವುದು ಅಗತ್ಯವೇ?

ಡಾ. ಬಿ. ಆರ್. ಅಂಬೇಡ್ಕರ್: ನಿಜ ಸ್ಥಿತಿಯೇನೆಂಬುದನ್ನು ನಾನು ಕೇಳಬಯಸಿರುವೆನಾದ್ದರಿಂದ, ಅದು ಅಗತ್ಯ. ೫೮ನೇ ಕಲಮಿನ ೨ನೇ ಉಪ ಕಲಮು "ಸ್ಥಳೀಯ ಶಾಸನ ಸಭೆಗೆ ಚುನಾಯಿತನಾಗಿರದಿದ್ದರೆ ಅಥವಾ ಚುನಾಯಿತನಾಗದಿದ್ದರೆ ಯಾವ ಸಚಿವನೂ ಆರು ತಿಂಗಳಿಗಿಂತ ಹೆಚ್ಚು ಕಾಲ ಅಧಿಕಾರದಲ್ಲಿ ಉಳಿಯಲಾಗದು" ಎಂದು ಹೇಳುತ್ತದೆ. ನಾಮಕರಣಗೊಂಡ ಸದಸ್ಯ ಮಂತ್ರಿಯಾಗಿ ಮುಂದುವರೆಯಲು ಕಾಯ್ದೆ ಅನುವು ಮಾಡಿಕೊಡುವುದಿಲ್ಲ. ಆದರೆ, ಶ್ವೇತಪತ್ರದ ಸಲಹೆ ಹೇಳುವುದು ಹೀಗಲ್ಲ. ಅದು "ಎರಡನೇ ಸದನದ ನಾಮಕರಣಗೊಂಡ ಸದಸ್ಯ ಕೂಡ ಮಂತ್ರಿಯಾಗಲು ಅರ್ಹ" ಎಂದೇ ಹೇಳುತ್ತದೆ. ಮಂತ್ರಿಮಂಡಲ

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨-ಬಿ, ೧೪ ಜುಲೈ ೧೯೩೩, ಪುಟ ೭೪೯-೫೦

ರಚನೆ ಕುರಿತಂತೆ ಪ್ರಾಂತೀಯ ಸಂವಿಧಾನದ ಉಪಸಮಿತಿಯು ಶಿಫಾರಸಿನತ್ತ ನಾನು ನಿಮ್ಮ ಗಮನ ಸೆಳೆಯಬಯಸುವೆ: "ಶಾಸನ ಸಭೆಯಲ್ಲಿ ಆಯ್ಕೆ ಮಾಡಿಕೊಳ್ಳುವ ದಿಸೆಯಲ್ಲಿ ಪೂರ್ಣ ಪ್ರಯತ್ನ ಮಾಡಬೇಕೆಂದೂ" ಹೇಳುತ್ತದೆ. ಪ್ರಾಂತೀಯ ಸಂವಿಧಾನ ಸಮಿತಿಯ ಶಿಫಾರಸಿಗಿಂತ ತುಂಬಾ ವ್ಯತ್ಯಾಸ ವಿರುವುದು ಈ ಹಂತದಲ್ಲಿ.

ಸರ್ ಸ್ಯಾಮ್ಯುಯೆಲ್ ಹೋರ್: ನನಗೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಸಮಿತಿಯು "ಸಾಮಾನ್ಯವಾಗಿ" ಎಂದು ಹೇಳಿದೆ. ನನ್ನ ಕಲ್ಪನೆಯಂತೆ ಸಾಮಾನ್ಯವಾಗಿ ನಡೆಯುವುದು ಹೀಗೆಯೇ.

ಡಾ. ಬಿ. ಆರ್. ಅಂಬೇಡ್ಕರ್: ಸಾಮೂಹಿಕ ಜವಾಬ್ದಾರಿಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ, ಮಂತ್ರಿಮಂಡಲ ರಚನೆ ಮಾಡುವಾಗ ನಿರ್ದಿಷ್ಟ ಕ್ರಮವೊಂದನ್ನು ಅನುಸರಿಸಬೇಕೆಂಬ ಬಗ್ಗೆ ಸರ್ಕಾರವನ್ನು ಬಾಧ್ಯಗೊಳಿಸುವುದು ಅವಶ್ಯಕವಲ್ಲ ಎಂದು ನೀವು ಭಾವಿಸುವುದಿಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಉದಾಹರಿಸುತ್ತಿರುವ ದುಂಡು ಮೇಜಿನ ಪರಿಷತ್ತು ಹೀಗೆ ಭಾವಿಸಲಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಅಂದುಕೊಳ್ಳುತ್ತಿರುವುದೂ ಹಾಗೆಯೇ.

ಸರ್ ಸ್ಯಾಮ್ಯುಯೆಲ್ ಹೋರ್: ನೀವು ಇದೇ ಈಗ ಓದಿದ ಪ್ಯಾರಾ ಹೇಳುವಂತೆ "ಸಾಮಾನ್ಯವಾಗಿ" ಸಮಿತಿ ಭಾವಿಸಿದ್ದೂ ಹಾಗೆಯೇ.

ಡಾ. ಬಿ. ಆರ್. ಅಂಬೇಡ್ಕರ್: ಅಥವಾ "ಎಲ್ಲಾ ಪ್ರಯತ್ನಗಳನ್ನೂ" ಅಲ್ಲ ಎಂದು ಅವರು ಮಾಡ ಬೇಕಿತ್ತೇ?

ಸರ್ ಸ್ಯಾಮ್ಯುಯೆಲ್ ಹೋರ್: ಕೆಲವು ಶಬ್ದಗಳ ವ್ಯತ್ಯಾಸ ಅದು, ಅಷ್ಟೇ.

ಡಾ. ಬಿ. ಆರ್. ಅಂಬೇಡ್ಕರ್: ಸೂಚನೆ ೧೦೪ರ ಮೇರೆಗೆ ಮಂತ್ರಿಗಳಿಗೆ ಇರುವ ಸುಗ್ರೀವಾಜ್ಞೆ ಅಧಿಕಾರದ ಬಗ್ಗೆ ನಾನು ಮುಂದಿನ ಪ್ರಶ್ನೆ ಕೇಳಬಯಸುವೆ. ಸಂವಿಧಾನದ ಒಳಗೇ ಇಂಥ ಅವಕಾಶ ವೊಂದನ್ನು ಮಾಡುವುದು ಅಗತ್ಯವಾಯಿತೇಕೇ? ೧೯೨೦ರಂಥ ತುರ್ತು ಕಾಯ್ದೆ ಮಾಡಿಕೊಳ್ಳುವುದು ಪ್ರಾಂತೀಯ ಶಾಸನ ಸಭೆಯ ಮಂತ್ರಿ ಮಂಡಲವೊಂದಕ್ಕೆ ಸಾಧ್ಯವಿಲ್ಲವೇ? ಅಂಥ ಕಾಯ್ದೆಯಿಂದ ಅಧಿಕಾರ ಪಡೆಯಲಾಗದೇ? ೧೦೪ನೇ ಸೂಚನೆ ಬಗ್ಗೆ ಮಾತಾಡುವುದಾದರೆ: ನಿರ್ದಿಷ್ಟ ತುರ್ತುಸ್ಥಿತಿಯಲ್ಲಿ ಕರ್ತವ್ಯ ನಿರ್ವಹಿಸಲು ಅಗತ್ಯವಾಗುವ ಅಧಿಕಾರ ನೀಡುವಂತೆ ಪ್ರಾಂತೀಯ ಶಾಸನಸಭೆ ಕಾಯ್ದೆಯೊಂದನ್ನು ಹೊಂದಲು ಪ್ರಾಂತೀಯ ಮಂತ್ರಿ ಮಂಡಲಕ್ಕೆ ಸಾಧ್ಯವಿಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಶಾಸನಸಭೆ ಅಧಿವೇಶನ ನಡೆಯುತ್ತಾ ಇಲ್ಲದಾಗ, ತುರ್ತು ಕ್ರಮ ಕೈಗೊಳ್ಳಲು ಅಗತ್ಯವಾಗುವ ಕಾಯ್ದೆ ಮಾಡುವ ಅಧಿಕಾರ ಪ್ರತಿ ಸರ್ಕಾರಕ್ಕೆ ಇರಬೇಕೆಂದು ನಾನು ಯೋಚಿಸಬೇಕಿತ್ತು. ಭಾರತದಂಥ ದೇಶದಲ್ಲಿ ಇದು ಇನ್ನೂ ಅಗತ್ಯ. ಏಕೆಂದರೆ, ಭಾರತ ವಿಶಾಲವಾದ ದೇಶ. ಹಾಗಾಗಿ ಅಧಿವೇಶನ ನಿರ್ಧರಿಸುವುದೇ ಗಣನೀಯ ಸಮಯ ತೆಗೆದುಕೊಳ್ಳುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಎಂಥ ತುರ್ತು ಸ್ಥಿತಿಗಳಲ್ಲಿ ಜಾರಿಗೊಳಿಸಬಹುದೆಂಬುದನ್ನು ನಿಗದಿಪಡಿಸದಂತೆ ಪ್ರಾಂತೀಯ ಶಾಸನ ಸಭೆ ರಚಿಸುವ ಕಾಯ್ದೆಗಳನ್ನು ಬಳಸುವ ಅಧಿಕಾರ ಪ್ರಾಂತೀಯ ಮಂತ್ರಿ ಮಂಡಲಕ್ಕೆ ಸಿಗಬೇಕು; ಇಂಥ ಕಾಯ್ದೆ ಮಾಡಲು ಶಾಸನಸಭೆಗೆ ಅಧಿಕಾರ ನೀಡಬಹುದು. ಇದು ನನ್ನ ಸಲಹೆ. ಈ ಬಗೆಯ ಅವಕಾಶವನ್ನು ಸಂವಿಧಾನದಲ್ಲೇ ಒದಗಿಸುವುದು ಅವಶ್ಯವೇ?

ಸರ್ ಸ್ಯಾಮ್ಯುಯೆಲ್ ಹೋರ್: ಒಂದು ಸರ್ಕಾರಕ್ಕೆ ಇರುವ ಅಗತ್ಯವಾದ ಅಧಿಕಾರ ಅದು ಎಂದೇ

ನಾನು ಪರಿಗಣಿಸುತ್ತೇನೆ. ನಾವು ಸಮಗ್ರ ಸಂವಿಧಾನದ ಬಗ್ಗೆ ಚರ್ಚಿಸುತ್ತಿರುವುದರಿಂದ, ಈ ಅಧಿಕಾರ ವನ್ನು ಸಂವಿಧಾನದಲ್ಲೇ ಅಳವಡಿಸುವುದು ಸೂಕ್ತ.

ಡಾ. ಬಿ. ಆರ್. ಅಂಬೇಡ್ಕರ್: ಅದು ಜವಾಬ್ದಾರಿಯುತ ಸರ್ಕಾರಕ್ಕೆ ನೀಡಬೇಕೆಂದು ಉದ್ದೇಶಿಸಿರುವ ಅಧಿಕಾರ. ತುರ್ತು ಸ್ಥಿತಿಯಿರಲಿ, ಸಾಮಾನ್ಯ ಸ್ಥಿತಿಯಿರಲಿ, ಮಂತ್ರಿ ಮಂಡಲ ತಾನು ಉತ್ತರದಾಯಿಯಾಗಿರುವ ಶಾಸನ ಸಭೆಯಿಂದಲೇ ಇಂಥ ಅಧಿಕಾರವನ್ನು ಪಡೆಯಬೇಕು.

ಲಾರ್ಡ್ ಯುಸ್ಟೇಸ್ ಪೆರ್ಸಿ: ಕಾಯ್ದೆಯಿಲ್ಲದೇ ಹಿಂದೆ ಮಂತ್ರಿಗಳು ಚಲಾಯಿಸಿದ ಅಧಿಕಾರವನ್ನು ೧೯೨೦ರ ಕಾಯ್ದೆ ಈ ದೇಶದಲ್ಲಿ ಖಾಯಂಗೊಳಿಸಿತೆಂಬುದನ್ನು ಡಾ. ಅಂಬೇಡ್ಕರ್ ಅವರಿಗೆ ನಾನು ನೆನಪಿಸಬಯಸುತ್ತೇನೆ. ಸಂಸದೀಯ ಅನುಮತಿಗೆ ಬದ್ಧವಾಗಿ ಮಂತ್ರಿಮಂಡಲವು ತುರ್ತು ಆದೇಶ ಜಾರಿಗೊಳಿಸುವುದು ಈ ದೇಶದಲ್ಲಿ ಎಂದಿನಿಂದಲೂ ರೂಢಿಯಲ್ಲಿದೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಕೇಳುವುದು ಇಲ್ಲಿಗೆ ಮುಗಿಯಿತು.

* ಸರ್ ಹ್ಯೂಬರ್ಟ್ ಕಾರ್: ದೇಶದಲ್ಲಿ ಶಾಂತಿಗೆ ಉಂಟಾದ ಭಂಗವನ್ನು ತಡೆಗಟ್ಟಲು "ತನ್ನ ವಿಶೇಷ ಜವಾಬ್ದಾರಿ"ಯನ್ನು ನಿರ್ವಹಿಸುವಲ್ಲಿ ತನಗೆ ಅಡ್ಡಿಯಾಗಬಹುದೆನ್ನಿಸುವ ಯಾವುದೇ ಮಸೂದೆಯ ಮಂಡನೆಯಾದರೆ, ಮಂಡನೆಗೆ ಸಲಹೆ ಬಂದರೆ, ಮಂಡಿಸಿದ ಅಥವಾ ಸೂಚಿಸಿದ ಮಸೂದೆಗೆ ತಿದ್ದುಪಡಿ ಬಂದರೆ, ಅಂಥವನ್ನು ಗವರ್ನರ್ ಜನರಲ್ ತಳ್ಳಿಹಾಕಬಹುದು. ಅದು ಅವರ ಅಧಿಕಾರ ಎಂದು ನಂ.೪೪ ಹೇಳುತ್ತದೆ. ನನಗೆ ತಿಳಿದಂತೆ, ಅವರಿಗೆ ಈ ಅಧಿಕಾರ ಇರುವುದು, ದೇಶದ ಶಾಂತಿಗೆ ಭಂಗ ಬಂದಾಗ ಮಾತ್ರ; ಅವರ ವಿಶೇಷ ಜವಾಬ್ದಾರಿಗೆ ಅಡ್ಡಿ ಉಂಟಾದಾಗ ಇಂಥ ಯಾವುದಾದರೂ ಅಧಿಕಾರ ಅವರಿಗೆ ಇದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಇಲ್ಲವೆಂದು ನನಗನಿಸುತ್ತದೆ.

ಸರ್ ಹ್ಯೂಬರ್ಟ್ ಕಾರ್: ಉದಾಹರಣೆಗೆ (ಬಿ): "ಆರ್ಥಿಕ ಭದ್ರತೆ ಮತ್ತು ಫೆಡರೇಷನ್ನಿನ ಋಣ?"

ಸರ್ ಸ್ಯಾಮ್ಯುಯೆಲ್ ಹೋರ್: ಅಲ್ಲ. ಶಾಂತಿ ಕಾಪಾಡುವಂಥ ಗಂಭೀರ ವಿಷಯಕ್ಕೆ ಸಂಬಂಧಿಸಿ ದಂತೆ ಇರುವ ವಿಶೇಷ ಜವಾಬ್ದಾರಿಗೆ ಮಾತ್ರ ಅದು ಸೀಮಿತವಾಗುತ್ತದೆ.

ಸರ್ ಮಾಲ್ಕಂ ಹೇಲೀ: ಸರ್ ಹ್ಯೂಬರ್ಟ್ ಅವರಿಗೆ ನಾನು ಕಾರಣ ಕೊಡಬಲ್ಲೆ ಎಂದು ಅನಿಸುತ್ತದೆ. ಬ್ರಿಟಿಷ್ ಭಾರತದ ಸುರಕ್ಷೆ ಮತ್ತು ಶಾಂತಿಗೆ ಮಾತ್ರ ಸಂಬಂಧಿಸಿದ ಕಾಯ್ದೆಯ ೬೭(೨ಎ) ಕಲಮಿನ ಪುನರಾವರ್ತನೆಯಾದ ಪ್ರಯೋಗ.

ಸರ್ ಹ್ಯೂಬರ್ಟ್ ಕಾರ್: ಶಾಂತಿ ಮತ್ತು ಭದ್ರತೆಗೆ ಭಂಗವಲ್ಲದೇ ಇನ್ನಾವ ಸಂದರ್ಭಗಳಲ್ಲೂ ತಮ್ಮ ಜವಾಬ್ದಾರಿಗೆ ಬಾಧಕವಾಗುವ ಅಧಿಕಾರವನ್ನು ಗವರ್ನರ್ ಜನರಲ್‌ಗೆ ಕೊಡುವ ಅಗತ್ಯವಿದೆಯೆಂದು ಭಾವಿಸಲಾಗಿಲ್ಲವೇ?

ಸರ್ ಫಿಂಡ್ಲೇಟರ್ ಸ್ಟೆವಾರ್ಟ್: ಇಲ್ಲ. ಸದನ ಅಂಗೀಕರಿಸಿದ ಮಸೂದೆಯನ್ನು ಅನುಮೋದಿಸಲು ಅವರು ಅರ್ಥಾತ್ ನಿರಾಕರಿಸಬಹುದು.

ಸರ್ ಹ್ಯೂಬರ್ಟ್ ಕಾರ್: ಆದರೆ, ಚರ್ಚೆಯನ್ನು ಅವರು ನಿಲ್ಲಿಸಲಾರರು, ಅಲ್ಲವೇ?

ಸರ್ ಫಿಂಡ್ಲೇಟರ್ ಸ್ಟೆವಾರ್ಟ್: ಹೌದು.

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨-ಬಿ, ೧೮ ಜುಲೈ ೧೯೩೩, ಪುಟ ೭೮೪

ಡಾ. ಬಿ. ಆರ್. ಅಂಬೇಡ್ಕರ್: ನನ್ನವು ನೀತಿಗೆ ಸಂಬಂಧಿಸಿದ ಪ್ರಶ್ನೆಗಳಾದ್ದರಿಂದ, ಅವನ್ನು ನಾನು ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಹಾಕುವುದಿಲ್ಲ. ಅವನ್ನು ಹಾಗೇ ಉಳಿಸಿಕೊಳ್ಳುವೆ.

* ಡಾ. ಬಿ. ಆರ್. ಅಂಬೇಡ್ಕರ್: ಪ್ರಮಾಣಕ್ಕೆ ಸಂಬಂಧಿಸಿದಂತೆ ಶ್ರೀಯುತ ಬೊರ್ಗಾನ್ ಜೋನ್ಸ್ ಅವರು ಹಾಕಿದ ಪ್ರಶ್ನೆಗಳ ಸಂದರ್ಭದಲ್ಲಿ ಈ ದೇಶದ ಯಾವುದೇ ಜವಾಬ್ದಾರಿಯುತ ವ್ಯಕ್ತಿ ಸಮಯ ಮತ್ತು ಗತಿಗೆ ತನ್ನನ್ನು ತಾನು ಒಳಪಡಿಸಿಕೊಂಡಿಲ್ಲ ಎಂದು ಹೇಳಿದಿರಿ. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಭಾರತದ ಸಂವಿಧಾನ ಪರಮೋಚ್ಚ ಗುರಿ ಪ್ರಭುತ್ವದ ಸ್ಥಾನಮಾನ ಹೊಂದುವುದಾಗಿದೆ ಎಂಬ ಸಾಮಾನ್ಯ ಭಾವನೆ ಇದೆ ಎಂಬುದು ನನ್ನ ಅನಿಸಿಕೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹಾಗೆಂದು ಎಂದಿನಿಂದಲೂ ಹೇಳಿಕೊಂಡು ಬರಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಪರಮೋಚ್ಚ ಗುರಿ ಬಗ್ಗೆ ವಿವಾದವಿಲ್ಲ ಎಂದಂತಾಯಿತು ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು, ವಿವಾದವಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಸಮಯ ಮತ್ತು ಗತಿಗೆ ಒಳಪಡಿಸಿಕೊಳ್ಳುವ ಪ್ರಶ್ನೆಯನ್ನು ಸಂದರ್ಭ ಬಂದ ಹಾಗೆ ಎದುರಿಸಲು ಬಿಟ್ಟು, ಭಾರತವು ಪ್ರಭುತ್ವದ ಸ್ಥಾನಮಾನ ಹೊಂದುವುದೆಂಬ ಅಂಶವನ್ನು ಭಾರತ ಸರ್ಕಾರದ ಸಂವಿಧಾನದ ಪೀಠಿಕೆಯಲ್ಲಿ ಅಳವಡಿಸಲು ನೀವು ಸಿದ್ಧವೇ?

ಸರ್ ಸ್ಯಾಮ್ಯುಯೆಲ್ ಹೋರ್: ಸಂಸತ್ತಿನ ಕಾಯ್ದೆಯ ಪೀಠಿಕೆಯಲ್ಲಿ ಯಾವುದು ಸೇರಬೇಕು ಅಥವಾ ಯಾವುದು ಸೇರಬಾರದು ಎಂಬ ಬಗ್ಗೆ ವಾಗ್ದಾನ ಮಾಡಬಲ್ಲೆನೆಂದು ನನಗನಿಸುವುದಿಲ್ಲ. ಸಂಸತ್ತಿನ ಕಾಯ್ದೆಗಳ ಪೀಠಿಕೆಗಳ ಬಗ್ಗೆ ಒಳ್ಳೇ ಕಾರಣಗಳಿಗೋ ಕೆಟ್ಟ ಕಾರಣಗಳಿಗೋ ನನ್ನ ಪೂರ್ವಾಗ್ರಹವಿದೆ. ಹಾಗಾಗಿ ಡಾ. ಅಂಬೇಡ್ಕರ್ ಪ್ರಶ್ನೆಗೆ ನಾನು ಹೌದು ಎಂದೂ ಎನ್ನಲಾರೆ; ಇಲ್ಲವೆಂದೂ ಹೇಳಲಾರೆ. ಅದು ಸಮಿತಿಯೊಂದು ಪರಿಶೀಲಿಸಬೇಕಾದ ಅಂಶ. ಯಾವುದೇ ರೀತಿಯಲ್ಲಿ ಅದು ತಾತ್ವಿಕ ಪ್ರಶ್ನೆ ಎಂದು ನಾನು ಪರಿಗಣಿಸಲಾರೆ. ಅದು ಚರ್ಚಿಸಬೇಕಾದ ವಿಷಯ ಮಾತ್ರ ಹೌದು ಎಂದು ನನಗನಿಸುತ್ತದೆ. ಒಟ್ಟಾರೆ ಪೀಠಿಕೆಗಳಲ್ಲಿನ ಸಾಮಾನ್ಯ ಘೋಷಣೆಗಳಿಗೆ ನಾನು ವಿರೋಧಿ.

ಡಾ. ಬಿ. ಆರ್. ಅಂಬೇಡ್ಕರ್: ಇದು ವಾದ ನಡೆಯಬೇಕಾಗಿರುವ ವಿಷಯವಲ್ಲ. ಭಾರತೀಯರ ಮೇಲೆ ಅದು ಹೊಸ ಭರವಸೆ ಮೂಡಿಸುವ ಪರಿಣಾಮ ಬೀರಲಿರುವುದರಿಂದ, ಅದನ್ನು ಭಾರತ ಸರ್ಕಾರದ ಕಾಯ್ದೆಯ ಪೀಠಿಕೆಯಲ್ಲಿ ಅಳವಡಿಸುವುದು ಅಪೇಕ್ಷಣೀಯ ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಈ ಅಂಶದ ಮೇಲೆ ಡಾ. ಅಂಬೇಡ್ಕರ್ ಹೇಳಿದ್ದನ್ನು ನಾವು ಗಮನಿಸಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಫೆಡರೇಷನ್ ದಿನಾಂಕದ ಬಗ್ಗೆ ನಾನು ಮುಂದಿನ ಪ್ರಶ್ನೆ ಕೇಳಬಯಸುವೆ. ಫೆಡರೇಷನ್‌ನೊಳಗೆ ಪ್ರವೇಶಿಸುವ ರಾಜಕುಮಾರರಿಗೆ ಸಂಬಂಧಿಸಿದ ಕೆಲವು ನಿಶ್ಚಿತ ತತ್ವಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಫೆಡರೇಷನ್ ಉದ್ಘಾಟನೆಗೆ ದಿನಾಂಕ ನಿರ್ಧರಿಸುವುದು ನಿರೀಕ್ಷಿತವಾಗಿರಲಿಲ್ಲ. ನಿಮ್ಮ ಮುಂದೆ ನಾನು ಇಡಬಯಸುವ ಅಂಶ ಇದು. ಇಂಥ ಒಂದು ಸಲಹೆಗೆ ನೀವೇನು ಹೇಳುವಿರಿ? ನನ್ನ ಸಲಹೆ ಎಂದೇ ನಿಮ್ಮ ಮುಂದಿಡುವೆ: ರಾಜಕುಮಾರರಿಗೆ ಕಾಯದೇ ನೀವು ಫೆಡರೇಷನ್ ಆರಂಭಿಸಿದಿರಿ

---

* ಮಿನಿಟ್ಸ್ ಆಫ್ ಎವಿಡೆನ್ಸ್, ಸಂಪುಟ ೨–ಬಿ, ౧೮ ಜುಲೈ ೧೯೩೩, ಪುಟ ೭೯೭–೮೦೫

ಎಂದಿಟ್ಟುಕೊಳ್ಳಿ. ಗವರ್ನರ್ ಜನರಲ್ ಅಥವಾ ವೈಸ್‌ರಾಯ್ ನೇಮಕ ಮಾಡಿದ, ನಾಮಕರಣಗೊಂಡ ಬಣವನ್ನು ಒಪ್ಪಿಕೊಂಡಿರಿ ಎಂದು ಭಾವಿಸಿ; ಈ ಬಣದಲ್ಲಿ ಸರ್ಕಾರಿ ಅಧಿಕಾರಿಗಳು, ಅಧಿಕಾರೇತರರು ಇರಬಹುದು; ಅಥವಾ ಕೆಲವರು ಅಧಿಕಾರಿಗಳು ಮತ್ತು ಕೆಲವರು ಅಧಿಕಾರರೇತರರೂ ಇರಬಹುದು; ಹೀಗೆ ನೀವು ಫೆಡರೇಷನ್ ಉದ್ಘಾಟನೆ ಮಾಡಿದಿರಿ ಅಂದುಕೊಳ್ಳಿ; ಆದರೆ ರಾಜಕುಮಾರರು ಬಂದ ನಂತರ ಈ ನಾಮಕರಣಗೊಂಡ ಬಣದ ಸದಸ್ಯರನ್ನು ಕಿತ್ತು ಹಾಕಿ ಇತರ ರಾಜಕುಮಾರರಿಗೆ ಅವಕಾಶ ಕಲ್ಪಿಸಬಹುದು. ಈ ಬಗೆಯ ಸಲಹೆಗೆ ನಿಮ್ಮ ಆಕ್ಷೇಪವೇನಾದರೂ ಇದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಇಂಥ ಸಲಹೆಗೆ ನನ್ನ ಹಲವು ಆಕ್ಷೇಪಗಳಿವೆ. ತಕ್ಷಣ ನನಗೆ ಹೊಳೆಯುವುದೇನೆಂದರೆ, ಇಂಥ ಸಲಹೆ ತೀರಾ ಹೊಸದು. ರಾಜಕುಮಾರರಿಗೆ ಪೂರ್ಣ ಪ್ರಾತಿನಿಧ್ಯವಿರುವ ಅಖಿಲ ಭಾರತ ಫೆಡರೇಷನ್ ಅಲ್ಲದೇ ಇನ್ನಾವ ಫೆಡರೇಷನ್ ಬಗ್ಗೆಯೂ ನಾವು ಕಳೆದ ಮೂರು ವರ್ಷಗಳಿಂದ ಪರಿಶೀಲಿಸುತ್ತಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಿಜವೇ. ಆದರೂ ಈ ಸಲಹೆಯನ್ನು ನಿಮ್ಮ ಮುಂದಿಡುವೆ.

ಸರ್ ಸ್ಯಾಮ್ಯುಯೆಲ್ ಹೋರ್: ನಾನು ನನ್ನ ಉತ್ತರ ಮುಗಿಸಿಬಿಡುವೆ. ದಿಗಿಲುಹುಟ್ಟಿಸುವ ಪ್ರತಿ ಆಕ್ಷೇಪಣೆಗಳನ್ನು ಹೊರತುಪಡಿಸಿ, ನಾವು ನಮ್ಮ ಎಲ್ಲಾ ಚರ್ಚೆಗಳನ್ನು ಮತ್ತೊಮ್ಮೆ ಆರಂಭ ಮಾಡಬೇಕಾಗುತ್ತದೆ ಎಂಬುದೂ ಮುಖ್ಯ ಆಕ್ಷೇಪಣೆಯೇ. ನೀವು ಮುಂದಿಟ್ಟಿರುವಂತೆ ಒಂದು ವೇಳೆ ನಾಮಕರಣಗೊಂಡ ಬಣವು ಫೆಡರೇಷನ್‌ನಲ್ಲಿ ಸೇರಿದರು ಅಂದರೆ, ರಾಜಕುಮಾರರು ಫೆಡರೇಷನ್ ಒಳಗೇ ಬಾರದೇ ಹೋಗಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ ನೀವು ರಾಜಕುಮಾರರ ಪ್ರಾತಿನಿಧ್ಯವು ಫೆಡರೇಷನ್ ಭದ್ರವಾಗಿ ಉಳಿಯಲಿಕ್ಕಾಗಿ ಬೇಕೆನ್ನುತ್ತೀರಾ?

ಸರ್ ಸ್ಯಾಮ್ಯುಯೆಲ್ ಹೋರ್: ಅಷ್ಟೇ ಅಲ್ಲ, ಅದಕ್ಕೂ ಹೆಚ್ಚನ್ನು ನಾನು ಬಯಸುತ್ತೇನೆ. ಡಾ. ಅಂಬೇಡ್ಕರ್ ಅವರೇ, ಅಷ್ಟಕ್ಕೇ ನಾನು ನನ್ನನ್ನು ಮಿತಿಗೊಳಪಡಿಸಿಕೊಳ್ಳುವುದಿಲ್ಲ. ರಾಜಕುಮಾರರು ಇಂಥ ಫೆಡರೇಷನ್‌ನಲ್ಲಿ ಇರಲೇಬೇಕೆಂದು ನಾನು ಬಯಸಲು ಹಲವು ಕಾರಣಗಳಿವೆ. ಅವರು ಫೆಡರೇಷನ್‌ಗೆ ಬರೀ ಭದ್ರತೆಯನ್ನಲ್ಲದೇ ಇನ್ನೂ ಹಲವು ಅತ್ಯಮೂಲ್ಯ ಪ್ರಭಾವವನ್ನು ಒದಗಿಸುತ್ತಾರೆ.

ಡಾ. ಬಿ. ಆರ್. ಅಂಬೇಡ್ಕರ್: ಸಂವಿಧಾನದ ಖಾಯಂ ಭಾಗವಾಗಿ ಈ ಸಲಹೆಯನ್ನು ನಾನು ಸೂಚಿಸುತ್ತಿಲ್ಲ; ನನ್ನ ಸಲಹೆ ಸಂಕ್ರಮಣ ಕಾಲಕ್ಕೆ ಮಾತ್ರ. ರಾಜಕುಮಾರರು ಬರುವವರೆಗೆ ಮಾತ್ರ. ನಿರ್ದಿಷ್ಟ ಕಾಲದೊಳಗೆ ರಾಜಕುಮಾರರು ಬಾರದೇ ಹೋದರೆ ಎಂಬ ಅನನುಕೂಲತೆ ಪರಿಗಣಿಸಿ ನಾನು ಈ ಸಲಹೆ ಮುಂದಿಟ್ಟೆ. ಸದಸ್ಯರ ಸಮಸ್ಯೆ ಬಗೆಹರಿಯುವುದಷ್ಟೇ ನನ್ನ ಆಶಯವಾಗಿತ್ತು.

ಸರ್ ಸ್ಯಾಮ್ಯುಯೆಲ್ ಹೋರ್: ನನಗೆ ಅದು ಅರ್ಥವಾಗಿದೆ. ಈ ಬಗೆಯ ಮಧ್ಯಂತರ ಯೋಜನೆಗೆ ನಾನು ವ್ಯಕ್ತಪಡಿಸಿದಂಥ ಹಲವು ಗಂಭೀರ ಆಕ್ಷೇಪಣೆಗಳಿವೆ.

ನವಾಬ್ ಸರ್ ಲಿಯಾಕತ್ ಹಯಾತ್ ಖಾನ್: ಅಂಥ ಆಕಸ್ಮಿಕ ಪ್ರಸಂಗ ಬಂದಾಗ ನೀವು ಭೇಟಿಯಾಗುವಿರಲ್ಲ; ಆಗ ಇದನ್ನು ಪ್ರಸ್ತಾಪ ಮಾಡುವುದು ಒಳ್ಳೆಯದು. ಆಕಸ್ಮಿಕ ಪ್ರಸಂಗ ಬಂದಾಗ ನಾವು ಮತ್ತೆ ಸೇರುತ್ತೇವೆಂಬ ಭರವಸೆಯನ್ನು ನೀಡಲಾಗಿದೆ. ಅಂಥ ಸಲಹೆಯು ಈ ಹೊತ್ತಿಗಿಂತ ಆ ಕಾಲಕ್ಕೆ ಹೆಚ್ಚು ಸೂಕ್ತವಾಗಬಹುದು.

ಸರ್ ಎ. ಪಿ. ಪಾತ್ರೋ: ಅದು ಬಂದಾಗ ನೀವು ಇರುವಿರಲ್ಲ?

ಸರ್ ಸ್ಯಾಮ್ಯುಯೆಲ್ ಹೋರ್: ಅಖಿಲ ಭಾರತ ಫೆಡರೇಷನ್ ಕಟ್ಟಲು, ನಂತರ ಒಂದು ತಾತ್ಕಾಲಿಕ ಸರ್ಕಾರ ರಚಿಸಲಿಕ್ಕಾಗಿ ತಮ್ಮ ಗಮನವನ್ನು ಕೇಂದ್ರೀಕರಿಸಲು ಆಸ್ತೆ ತೋರುವವರು ಫೆಡರೇಷನ್ ಎಂದೂ ರಚನೆಯಾಗುವುದಿಲ್ಲವೆಂದೋ, ಎಂದೋ ರಚನೆಯಾಗುವುದೆಂದೋ ಭಾವಿಸುವುದು ನಿಜಕ್ಕೂ ದೊಡ್ಡ ತಪ್ಪು ಎಂಬುದೇ ನನ್ನ ಭಾವನೆ. ಇಂಥ ಸಲಹೆಗಳನ್ನು ನೀಡುವ ಸಮಿತಿ ಸದಸ್ಯರು ಮತ್ತು ಭಾರತದ ಪ್ರತಿನಿಧಿಗಳು ತಮ್ಮ ಸಲಹೆಗಳನ್ನು ಅರ್ಥ ಮಾಡಿಕೊಳ್ಳದೇ ಫೆಡರೇಷನ್ನನ್ನು ಇನ್ನಷ್ಟು ದೂರ ಮಾಡುತ್ತಾರೆ. ನನ್ನ ಅಭಿಪ್ರಾಯವನ್ನು ನಾನು ಮತ್ತೆ ಹೇಳುತ್ತೇನೆ. ಹೊರಗಿನ ನಮ್ಮ ಶತ್ರುಗಳಿಂದ ತಪ್ಪು ಅಭಿಪ್ರಾಯ ಮೂಡದಂತೆ ನೋಡಿಕೊಳ್ಳುವಲ್ಲಿ ನಾನು ನನ್ನ ಬ್ರಿಟಿಷ್ ಮತ್ತು ಭಾರತೀಯ ಮಿತ್ರರನ್ನೇ ಅವಲಂಬಿಸಬೇಕಿದೆ.

ಡಾ. ಬಿ. ಆರ್. ಅಂಬೇಡ್ಕರ್: ನಿಮ್ಮ ಅಭಿಪ್ರಾಯವೇನು? ಫೆಡರೇಷನ್ ಹೆಚ್ಚು ಮುಖ್ಯವೊ? ಜವಾಬ್ದಾರಿ ಹೆಚ್ಚು ಮುಖ್ಯವೋ?

ಸರ್ ತೇಜ್ ಬಹದ್ದೂರ್ ಸಪ್ರು: ಎರಡೂ ಅಲ್ಲವೋ?

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಅವರ ಪ್ರಶ್ನೆಯಲ್ಲಿ ಯಾವ ಹುರುಳೂ ನನಗೆ ಕಾಣುತ್ತಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಸಂಕ್ರಮಣ ಕಾಲದಲ್ಲಿ ನೀವು ಯಾವುದೇ ಪರ್ಯಾಯವನ್ನು ಪರಿಶೀಲಿಸಲು ಸಿದ್ಧರಿಲ್ಲವೆಂದಾದರೆ, ಫೆಡರೇಷನ್ ಇಲ್ಲದಿದ್ದರೆ ಜವಾಬ್ದಾರಿ ಇರುವುದಿಲ್ಲ ಎಂಬುದೇ ತೀರ್ಮಾನವಾಗುತ್ತದೆ, ಹೌದೇ?

ಸರ್ ಸ್ಯಾಮ್ಯುಯೇಲ್ ಹೋರ್: ಕಳೆದ ಮೂರು ವರ್ಷಗಳಿಂದ ಚರ್ಚಿಸುತ್ತಿರುವ ಸಂಗತಿಗಳನ್ನು ಈಗ ನಿಜಕ್ಕೂ ಡಾ. ಅಂಬೇಡಕರ್ ಪ್ರಸ್ತಾಪಿಸುತ್ತಿದ್ದಾರೆ. ಅಖಿಲ ಭಾರತ ಫೆಡರೇಷನ್ ಎಂಬ ಆಧಾರದ ಮೇಲೆ ಈ ಸಲಹೆಗಳು ನಿಂತಿವೆ ಎಂಬುದು ಕಳೆದ ಮೂರು ವರ್ಷಗಳಲ್ಲಿ ನಾವು ನಡೆಸಿದ ಪ್ರತಿ ಚರ್ಚೆಯಲ್ಲೂ ಸ್ಪಷ್ಟವಾಗಿದೆ. ಈ ಚರ್ಚೆ ನಡೆದು ಮೂರು ವರ್ಷಗಳಾಗಿರುವ ಈ ಹೊತ್ತಿನಲ್ಲಿ ನಾನು ಈ ಪ್ರಶ್ನೆಯನ್ನು ಮತ್ತೆ ಚರ್ಚೆಗೆ ಗುರಿಪಡಿಸಲು ಸಿದ್ಧನಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ನಿಜ. ಈ ವಿಷಯವನ್ನು ಮುಂದುವರೆಸಲು ನಾನೂ ಬಯಸುವುದಿಲ್ಲ. ನಿಮ್ಮ ಪರಿಶೀಲನೆಗಾಗಿ ನಾನು ಪರ್ಯಾಯವೊಂದನ್ನು ಸೂಚಿಸುತ್ತಿರುವೆ. ಇನ್ನೂ ಎರಡು ಪ್ರಶ್ನೆಗಳನ್ನು ನಾನು ಕೇಳುವುದಿದೆ. ಆದರೆ, ಇಂದು ನಾವು ಚರ್ಚಿಸುತ್ತಿರುವ ವಿಷಯದ ವ್ಯಾಪ್ತಿಗೆ ಅವು ಬರುತ್ತೇವೆಯೋ ಇಲ್ಲವೋ ನಾನರಿಯೆ. ಒಂದು ಫೆಡರಲ್ ಮೇಲ್ಮನೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ವಿದ್ಯಾರ್ಹತೆ ಕುರಿತದ್ದು...

ಕ್ಯಾಂಟರ್‌ಬರಿಯ ಅರ್ಚ್ ಬಿಷಪ್: ಈ ಅಂಶವು ಮತದಾನ ವಿಷಯದಲ್ಲಿ ಬರುತ್ತದೆಂದು ನನ್ನ ಅನಿಸಿಕೆ, ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಆರ್ಥಿಕ ರಕ್ಷಣಾ ಕ್ರಮಗಳ ಬಗ್ಗೆ ನಾನು ಒಂದೆರಡು ಪ್ರಶ್ನೆಗಳನ್ನು ಕೇಳಬಯಸುವೆ.

ಕ್ಯಾಂಟರ್‌ಬರಿಯ ಅರ್ಚ್ ಬಿಷಪ್: ಅದು ಹಣಕಾಸು ವಿಷಯದ ವ್ಯಾಪ್ತಿಯಲ್ಲಿ ಬರುವ ವಿಚಾರ.

ಡಾ. ಬಿ. ಆರ್. ಅಂಬೇಡ್ಕರ್: ರಕ್ಷಣೆ ಕುರಿತಂತೆ ನಾನು ಒಂದೆರಡು ಪ್ರಶ್ನೆಗಳನ್ನು ಕೇಳುವೆ. ಒಂದು ಮಿಲಿಟರಿ ಮಂಡಳಿ ಇರಬೇಕೆಂದು ರಕ್ಷಣಾ ಉಪಸಮಿತಿ ತನ್ನ ವರದಿಯಲ್ಲಿ ಶಿಫಾರಸು ಮಾಡಿ

ರುವುದು ನಿಮಗೆ ನೆನಪಿರಬಹುದು. ಇದಕ್ಕೆ ಸಂಬಂಧಿಸಿದ ಯಾವ ಸಲಹೆಯೂ ಶ್ವೇತಪತ್ರದಲ್ಲಿ ಕಾಣು ತ್ತಿಲ್ಲವಲ್ಲ?

ಕ್ಯಾಂಟರ್‌ಬರಿಯ ಅರ್ಚ್ ಬಿಷಪ್: ಅದು ಸಾಂವಿಧಾನಿಕ ಸಲಹೆ ಅಲ್ಲ; ಅದು ಆಡಳಿತಾತ್ಮಕ ಸಲಹೆ ಎಂದೇ ನಮ್ಮ ಅಭಿಪ್ರಾಯ.

ಡಾ. ಬಿ. ಆರ್. ಅಂಬೇಡ್ಕರ್: ಅದನ್ನು ನೀವು ಅಳವಡಿಸುವವರಿದ್ದೀರಾ?

ಕ್ಯಾಂಟರ್‌ಬರಿಯ ಅರ್ಚ್ ಬಿಷಪ್: ಸಾಮ್ರಾಜ್ಯ ರಕ್ಷಣಾ ಸಮಿತಿಯಂಥದ್ದನ್ನು ಭಾರತದಲ್ಲೂ ರೂಪಿಸ ಬೇಕು ಎಂಬುದನ್ನು ನಾನು ಎಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿರುವೆ. ನಮ್ಮ ಅನುಭವದ ಪ್ರಕಾರ ಅದು ಅವಶ್ಯ. ಇದು ನಮ್ಮ ನಂಬಿಕೆಯೂ ಹೌದು. ರಕ್ಷಣಾ ಸಮಸ್ಯೆಗಳನ್ನು ರಕ್ಷಣಾ ಮಂತ್ರಿ ಮತ್ತು ರಕ್ಷಣಾ ಖಾತೆಯ ಅಧಿಕಾರಿಗಳವರೆಗೆ ಮಾತ್ರ ತಂದರೆ ಸಾಲದು. ಏಕೆಂದರೆ, ಇಂದು ರಾಷ್ಟ್ರವೊಂದರ ಬದುಕಿನಲ್ಲಿ ರಕ್ಷಣೆಗೆ ವ್ಯಾಪಕ ಮಹತ್ವ ಇದೆ. ಕೆಲವೊಂದು ವಿಶಿಷ್ಟ ಚರ್ಚೆಗಾಗಿ ಸೂಕ್ತ ಮಂತ್ರಿಗಳಿರುವ ಒಂದು ಸಮಿತಿಯನ್ನು ಮಾಡಿಕೊಳ್ಳುವುದೂ ಉಪಯುಕ್ತವೆಂದು ನಾವು ಭಾವಿಸಿದ್ದೇವೆ. ಇಂಥದೊಂದು ಸಮಿತಿಯನ್ನು ರಚಿಸಲು ನಾಗರಿಕರ ಅನುಮೋದನೆಯಷ್ಟೇ ಅಲ್ಲ, ಮಿಲಿಟರಿ ಅನುಮೋದನೆಯೂ ಇದೆ. ಆದರೆ ಸಂಸತ್ತಿನ ಕಾಯ್ದೆಯಲ್ಲಿ ಪ್ರಸ್ತಾಪಿಸಲು ಸೂಕ್ತವಾದ ಪ್ರಶ್ನೆಗಿಂತ ಇದು ಮೂಲಭೂತವಾಗಿ ಆಡಳಿತಾತ್ಮಕವಾದ ಪ್ರಶ್ನೆ.

* * * * *

ಡಾ. ಬಿ. ಆರ್. ಅಂಬೇಡ್ಕರ್: ಕಾಯ್ದಿಟ್ಟ ವಿಷಯಗಳಿಗೆ ಸಂಬಂಧಿಸಿ, ಆಯವ್ಯಯದ ಆ ಭಾಗವನ್ನು ಮತಕ್ಕೆ ಹಾಕಲು ನೀವು ಸೂಚಿಸುವುದಿಲ್ಲ, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈಗ ಅಸ್ತಿತ್ವದಲ್ಲಿರುವ ಭಾರತ ಸರ್ಕಾರದ ಕಾಯ್ದೆಯು ಕಾಯ್ದಿಟ್ಟ ಇಲಾಖೆಗಳ ತತ್ವಕ್ಕೆ ವಿರೋಧವಾಗಿದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ನಮ್ಮ ಹಿಂದಿನ ಎಲ್ಲಾ ಚರ್ಚೆಗಳ ಆಧಾರದ ಮೇಲೆ ಅದು ಒಪ್ಪಿಗೆಯಾಗಿದೆ. ರಕ್ಷಣಾ ಖಾತೆಯ ಕೆಲವು ಅಂಶಗಳ ಬಗ್ಗೆ ದುಂಡು ಮೇಜಿನ ಪರಿಷತ್ತಿನಲ್ಲಿ ಸಾಕಷ್ಟು ಚರ್ಚೆಯಾಗಿತ್ತು. ಆಗ ಅಂಥ ಭಾಗಗಳನ್ನು ಮತಕ್ಕೆ ಹಾಕಬಾರದು ಎಂಬುದು ಸಾಮಾನ್ಯವಾಗಿ ಒಪ್ಪಿಗೆ ಯಾಗಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ಶಾಸನ ಸಭೆಯಲ್ಲಿ ಮತಕ್ಕೆ ಹಾಕಿದರೆ ಭೀಕರ ಅಪಾಯವೇನಾದರೂ ಉಂಟಾಗಬಹುದೆಂದು, ಅದರಲ್ಲಿ ಗಮನಾರ್ಹ ಪ್ರಮಾಣದ ಕಡಿತವೇನಾದರೂ ಕಂಡರೆ ಅದನ್ನು ಪ್ರಮಾಣೀಕರಿಸಲು ವೈಸ್‌ರಾಯ್ ಅವರಿಗೆ ಅಧಿಕಾರವಿದೆ ಎಂದು ನೀವು ಎಣಿಸುತ್ತೀರಾ?

ಸರ್ ಸ್ಯಾಮ್ಯುಯೆಲ್ ಹೋರ್: ಇಂಥ ವಿಷಯಗಳಲ್ಲಿ ವೈಸ್‌ರಾಯ್ ಅವರ ಜವಾಬ್ದಾರಿ ಸ್ಪಷ್ಟ ಹಾಗೂ ಪ್ರಶ್ನಾತೀತವಾಗಿರುವುದು ಸೂಕ್ತವೆಂಬುದು ನನ್ನ ಅನಿಸಿಕೆ. ಚರ್ಚೆಗೆ ಅವಕಾಶವಿರಬೇಕು. ಆದರೆ, ಅಗತ್ಯ ಖರ್ಚು ವೆಚ್ಚಗಳನ್ನು ಮತಕ್ಕೆ ಹಾಕುವಂತಿರಬಾರದು.

ಡಾ. ಬಿ. ಆರ್. ಅಂಬೇಡ್ಕರ್: ಕಮಾಂಡರ್ ಇನ್ ಚೀಫ್ ಅವರ ನೇಮಕಾತಿ ಬಗ್ಗೆ ಭಾರತ ಸರ್ಕಾರದ ಸದ್ಯದ ಕಾಯ್ದೆಯಲ್ಲಿ ಯಾವುದೇ ಉಲ್ಲೇಖ ಇಲ್ಲದಿರುವುದು ಒಂದು ಕುತೂಹಲಕಾರಿ ಆಕಸ್ಮಿಕವೇ ಸರಿ. ಕಮಾಂಡರ್ ಇನ್ ಚೀಫ್ ಕಾರ್ಯಕಾರಿ ಮಂಡಳಿಯ ಸದಸ್ಯ

ರಾಗಿದ್ದರೆ ಅವರು ಸದಸ್ಯರಿಗಿಂತ ಹೆಚ್ಚಿನವರು ಎಂಬುದನ್ನು ಮಾತ್ರ ಅಲ್ಲಿ ಪ್ರಸ್ತಾಪಿಸಲಾಗಿದೆ. ಶ್ವೇತ ಪತ್ರವಿರಲಿ, ಇಲ್ಲದಿರಲಿ, ಕಮಾಂಡರ್ ಇನ್ ಚೀಫ್ ನೇಮಕಾತಿಯನ್ನು ಮುಂದುವರೆಸಲು ಯೋಚಿಸಲಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಭಾರತ ಸರ್ಕಾರದ ಸದ್ಯದ ಕಾಯ್ದೆಯ ೧೯ನೇ ಕಾಲಂ (೧) ಹೇಳುವಂತೆ, ಭಾರತದಲ್ಲಿರುವ ಸರ್ಕಾರದ ಸೇನಾಪಡೆಗಳ ಕಮಾಂಡರ್–ಇನ್–ಚೀಫ್ ಅವರನ್ನು ರಾಯಲ್ ಸೈನ್ ಮಾನ್ಯುಯಲ್ ಪ್ರಕಾರ ಸರ್ಕಾರದಿಂದ ನೇಮಕ ಮಾಡಲಾಗುತ್ತಿದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಸಾಮಾನ್ಯವಾಗಿ ಅದು ಹಾಗೆಯೇ.

ಲಾರ್ಡ್ ಇರ್ವಿನ್: ಶ್ವೇತಪತ್ರದ ೩೯ನೇ ಪುಟದ ಕೆಳಭಾಗದಲ್ಲಿರುವ ಆರನೇ ಸಲಹೆಯಲ್ಲಿ ಈ ವಿಷಯ ಪ್ರಸ್ತಾಪವಾಗಿಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಪುಟ ೩೯, ಪ್ಯಾರಾ ೬.

ಡಾ. ಬಿ. ಆರ್. ಅಂಬೇಡ್ಕರ್: ಅವರ ನೇಮಕಾತಿ ಹೇಗಾಗುತ್ತದೆ? ಯಾರ ಸಲಹೆಯ ಮೇರೆಗೆ ಎಂಬುದನ್ನು ೬ನೇ ಪ್ಯಾರಾ ಹೇಳುವುದಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಚಕ್ರವರ್ತಿಯಿಂದ.

ಡಾ. ಬಿ. ಆರ್. ಅಂಬೇಡ್ಕರ್: ಯಾರ ಸಲಹೆಯ ಮೇರೆಗೆ?

ಸರ್ ಸ್ಯಾಮ್ಯುಯೆಲ್ ಹೋರ್: ಇಲ್ಲ, ಸರ್ಕಾರದಿಂದ ನೇಮಕಾತಿಯನ್ನು ಮಾಡಲಾಗುತ್ತದೆ.

ಸರ್ ಆಸ್ಟಿನ್ ಚೇಂಬರ್‌ಲೇನ್: ಸ್ವದೇಶದಲ್ಲಿರುವ ಮಂತ್ರಿಗಳ ಸಲಹೆಯ ಮೇರೆಗೆ ಸರ್ಕಾರವು ನೇಮಕ ಮಾಡುತ್ತದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ೧೯೩೧ರ ಫೆಬ್ರುವರಿ ೧೭ರಂದು ನಡೆದ ಶಾಸನ ಸಭೆಯ ಕಲಾಪಗಳನ್ನು ನಾನು ನೋಡಿದೆ. ಸರ್ ಗಾಡ್‌ಫ್ರೆ ಫೆಲ್ ಅವರು ಕಮಾಂಡರ್–ಇನ್–ಚೀಫ್ ಅವರ ನೇಮಕಾತಿಯಾದ ಸಂದರ್ಭವನ್ನು ಬಣ್ಣಿಸಿದ್ದು ಹೀಗೆ: "ಕಮಾಂಡರ್–ಇನ್–ಚೀಫ್ ನೇಮಕಾತಿಯನ್ನು ಮಂತ್ರಿ ಮಂಡಲದ ಸಲಹೆಯ ಮೇರೆಗೆ ಮಹಾಪ್ರಭುಗಳು ಮಾಡುತ್ತಾರೆ. ಮಂತ್ರಿಮಂಡಲವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅತ್ಯುಚ್ಚ ಮಿಲಿಟರಿ ಅಧಿಕಾರ ಪಡೆದಿರುವ ಇಂಪೀರಿಯಲ್ ಜನರಲ್ ಸ್ಟಾಫ್‌ನ ಮುಖ್ಯಸ್ಥನಿಂದ ಸಹಜವಾಗಿ ಸಲಹೆ ಪಡೆಯುತ್ತದೆ." ಅಂದರೆ ಈಗ ಜಾರಿಯಲ್ಲಿರುವ ನಿಯಮ ಮತ್ತು ಪದ್ಧತಿಯಂತೆ, ಇಂಪೀರಿಯಲ್ ಜನರಲ್ ಸ್ಟಾಫ್‌ನ ಮುಖ್ಯಸ್ಥನ ಸಲಹೆ ಮೇರೆಗೆ ಮಂತ್ರಿ ಮಂಡಲವು ಕಮಾಂಡರ್–ಇನ್–ಚೀಫ್ ಅವರ ನೇಮಕಾತಿಯನ್ನು ಮಾಡುತ್ತದೆ.

ಸರ್ ಸ್ಯಾಮ್ಯುಯೆಲ್ ಹೋರ್: ಮಂತ್ರಿಮಂಡಲದಿಂದ ಅವರು ನೇಮಕಗೊಳ್ಳುವುದಿಲ್ಲ. ಅವರು ಚಕ್ರವರ್ತಿಯಿಂದ ನೇಮಕಗೊಳ್ಳುತ್ತಾರೆ. ಪ್ರಧಾನಿಯ ಅಥವಾ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಅವರ ಸಲಹೆ ಮೇರೆಗೆ.

ಡಾ. ಬಿ. ಆರ್. ಅಂಬೇಡ್ಕರ್: ನಾವು ಯೋಚಿಸುತ್ತಿರುವ ಹೊಸ ಸರ್ಕಾರಕ್ಕೆ ಅನುಗುಣವಾಗಿ, ರಕ್ಷಣೆಯು ಭಾರತದ ಜನತೆಯ ಮತ್ತು ಭಾರತದ ಶಾಸನ ಸಭೆಗಳ ಜವಾಬ್ದಾರಿ ಎಂಬ ಹಿನ್ನೆಲೆಯಲ್ಲಿ ಈ ಪದ್ಧತಿ ಇದೆ ಎಂದು ನಿಮಗೆ ಅನಿಸುತ್ತಿದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ರಕ್ಷಣಾ ಖಾತೆಯಂಥ ಕಾಯ್ದಿಟ್ಟ ಇಲಾಖೆಗೆ ಸಂಬಂಧಿಸಿದಾಗ, ಅದು ಅನಿವಾರ್ಯ ಎಂಬುದು ನನ್ನ ನಂಬಿಕೆ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ಅದು ಭಾರತದ ಜನತೆಯ ಮತ್ತು ಭಾರತದ ಶಾಸನ ಸಭೆಗಳ ಜವಾಬ್ದಾರಿಯೂ ಹೌದು. ಸೆಕ್ರೆಟರಿ ಆಫ್ ಸ್ಟೇಟ್, ಗವರ್ನರ್ ಜನರಲ್ ಸಲಹೆ ಮೇರೆಗಲ್ಲದೆ ಇಂಪೀರಿಯಲ್ ಜನರಲ್ ಸ್ಟಾಫ್‌ನ ಮುಖ್ಯಸ್ಥನ ಜತೆ ಸಮಾಲೋಚಿಸುವ ಮಂತ್ರಿಮಂಡಲದ ಸಲಹೆ ಮೇರೆಗೆ ಹೊಸ ಸರ್ಕಾರದ ಪ್ರಮುಖ ಇಲಾಖೆಯ ಮುಖ್ಯ ಅಧಿಕಾರಿಯ ನೇಮಕಾತಿ ಆಗುತ್ತದೆ ಎಂಬುದು ಭಾರತದ ಜನತೆ ಜವಾಬ್ದಾರಿ ಹೊತ್ತಿರುವ ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ಹೊಂದುತ್ತದೆ?

ಸರ್ ಸ್ಯಾಮ್ಯುಯೆಲ್ ಹೋರ್: ನಿಜ. ರಕ್ಷಣಾ ಖಾತೆ ಕಾಯ್ದಿಟ್ಟ ಖಾತೆಯಾದರೆ, ಇಂಥ ಖಾತೆಗಳು ಜವಾಬ್ದಾರೀ ಸರ್ಕಾರದಿಂದ ನೇಮಕಾತಿಯನ್ನು ಪಡೆಯಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಈ ನೇಮಕಾತಿಯನ್ನು ವೈಸ್‌ರಾಯ್ ಮಾಡಿದರೆ ಸರಿ; ಸೆಕ್ರೆಟರಿ ಆಫ್ ಸ್ಟೇಟ್ ಮಾಡಿದರೂ ಸರಿ, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಅದರ ಅರ್ಥ ಹಾಗೇ ಆಗುತ್ತದೆ.

* ಸ್ಯಾಲಿಸ್‌ಬರಿಯ ಮಾರ್ಕ್ವೆಸ್: ನಾನು ಅರ್ಥ ಮಾಡಿಕೊಳ್ಳುವಂತೆ, ನಿಮ್ಮ ಯೋಜನೆ (ಅಥವಾ ಮೂರು ಯೋಜನೆಗಳಲ್ಲಿ ನೀವು ಬಯಸುವ ಯೋಜನೆ) ಈಗಾಗಲೇ ಸದನದಲ್ಲಿರುವ ರಾಜಕುಮಾರರ ಪ್ರಾತಿನಿಧ್ಯವನ್ನು, ಅದೇ ಪ್ರಮಾಣದಲ್ಲಿ ಈಗಾಗಲೇ ಪ್ರವೇಶ ದೊರಕಿಸಿಕೊಂಡಿರುವ ಇತರ ರಾಜಕುಮಾರರ ಪ್ರಾತಿನಿಧ್ಯವನ್ನೂ ಹೆಚ್ಚಿಸುವುದು. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: "ಈಗಾಗಲೇ ಪ್ರವೇಶ ದೊರಕಿಸಿಕೊಂಡವರ ಪ್ರಮಾಣದಲ್ಲಿ" ಎಂಬ ಲಾರ್ಡ್ ಸ್ಯಾಲಿಸ್‌ಬರಿ ಅವರ ಮಾತು ನನಗರ್ಥವಾಗದು.

ಸ್ಯಾಲಿಸ್‌ಬರಿಯ ಮಾರ್ಕ್ವೆಸ್: ಒಂದು ರಾಜ್ಯಕ್ಕೆ ಹತ್ತು ಸ್ಥಾನಗಳು ದೊರಕುತ್ತವೆ ಎಂದು ನಾನು ತಿಳಿದಿರುವೆ.

ಸರ್ ಸ್ಯಾಮ್ಯುಯೆಲ್ ಹೋರ್: ಲಾರ್ಡ್ ಸ್ಯಾಲಿಸ್‌ಬರಿ ಹೇಳುವುದು ಈಗ ನನಗರ್ಥವಾಯಿತು. ಅದು ಹಾಗೇ ಪರಿಣಮಿಸಬಹುದು.

ಸ್ಯಾಲಿಸ್‌ಬರಿಯ ಮಾರ್ಕ್ವೆಸ್: ಪ್ರಾಂತೀಯ ಹಂಚಿಕೆ ಅಂದರೆ ಪ್ರಾಂತಗಳಲ್ಲಿ ಸ್ಥಾನ ಹಂಚಿಕೆ ಕುರಿತಂತೆ ಒಂದು ಪ್ರಶ್ನೆ. ಈ ವಿಷಯದಲ್ಲಿ ತುಂಬಾ ಭಿನ್ನಾಭಿಪ್ರಾಯವಿದೆ ಎಂಬುದು ಅವರಿಗೆ ಗೊತ್ತು. ಪುಣೆ ಒಪ್ಪಂದದಂತೆ ಬಂಗಾಲದಲ್ಲಿ ಎಲ್ಲಾ ಜನಾಂಗಗಳಿಗೆ ಸಮರ್ಪಕ ಪ್ರಾತಿನಿಧ್ಯ ಸಿಕ್ಕಿದೆಯೋ ಇಲ್ಲವೋ ಎಂಬ ಬಗೆಗಿನ ಭಿನ್ನಾಭಿಪ್ರಾಯದ ಬಗ್ಗೆ ನಾನು ಚರ್ಚಿಸಬಯಸುವುದಿಲ್ಲ. ಸೆಕ್ರೆಟರಿ ಆಫ್ ಸ್ಟೇಟ್‌ರ ಈ ಪ್ರಶ್ನೆ; ಈ ವಿಷಯದ ಬಗ್ಗೆ ಅವರಿಗೆ ಏನಾದರೂ ಹೇಳಿಕೆ ನೀಡುವುದಿದೆಯೋ ಹೇಗೆ?

ಸರ್ ಸ್ಯಾಮ್ಯುಯೆಲ್ ಹೋರ್: ಸರ್ಕಾರದ ಕೋಮು ತೀರ್ಪಿನ ಬಗ್ಗೆಯೇ?

ಸ್ಯಾಲಿಸ್‌ಬರಿಯ ಮಾರ್ಕ್ವೆಸ್: ವಿಶೇಷವಾಗಿ ಬಂಗಾಲಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನಾನು ಮಾತಾಡುತ್ತಿರುವೆ.

---

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨–ಬಿ, ೨೦ ಜುಲೈ ೧೯೩೩, ಪುಟ ೮೧೩–೧೫

ಸರ್ ಸ್ಯಾಮ್ಯುಯೆಲ್ ಹೋರ್: ಮೇ ೨೦ರಂದು ಸರ್ಕಾರದ ಕೋಮು ತೀರ್ಪಿನ ಬಗ್ಗೆ ನಾನು ಸಮಿತಿ ಮತ್ತು ಪ್ರತಿನಿಧಿಗಳಿಗೆ ವಿತರಿಸಿದ ಮನವಿ ಪತ್ರಕ್ಕೆ ಸೇರಿಸುವಂಥದ್ದು ಇನ್ನೇನೂ ಇಲ್ಲ. ತನ್ನ ನಿರ್ಧಾರ ಕಡೆಯದೆಂದೇ ಸರ್ಕಾರ ಸ್ಪಷ್ಟಪಡಿಸಿತ್ತು. ಈ ನಿರ್ಧಾರದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವನ್ನು, ಒಂದು ವೇಳೆ ಇಂಥ ವ್ಯತ್ಯಾಸಕ್ಕೆ ವಿಭಿನ್ನ ಜನಾಂಗಗಳ ಅಧಿಕೃತ ನಾಯಕರು ಪೂರ್ಣ ಒಪ್ಪಿಗೆಯಿತ್ತಿದ್ದರೆ– ಮಾಡಲು ಅದು ಸಮ್ಮತಿಸಿತ್ತು. ಸರ್ಕಾರಿ ನೀತಿಯ ಆ ಹೇಳಿಕೆಗೆ ಸರ್ಕಾರದ ಸದಸ್ಯನಾಗಿ ನಾನು ಏನನ್ನೂ ಹೇಳಲು ಸಿದ್ಧನಿಲ್ಲ.

ಅಧ್ಯಕ್ಷ: ಸೆಕ್ರೆಟರಿ ಆಫ್ ಸ್ಟೇಟ್‌ರವರೇ, ನೀವು ಈಗ ತಾನೇ ಉಲ್ಲೇಖಿಸಿದ ಮನವಿ ಪತ್ರವನ್ನು ಕೊಡುವಿರಾ?

ಸರ್ ಸ್ಯಾಮ್ಯುಯೆಲ್ ಹೋರ್: ಇಗೋ, ಮನವಿ ಪತ್ರ ಹೀಗಿದೆ.

## ಮನವಿ ಪತ್ರ: ಕೋಮು ತೀರ್ಪು

ಕೋಮು ತೀರ್ಪು ಏರ್ಪಟ್ಟ ಹಿನ್ನೆಲೆ, ಅದರ ಉದ್ದೇಶ, ಶ್ವೇತಪತ್ರದ ಇತರ ಸಲಹೆಗಳಿಗಿಂತ ಅದು ಭಿನ್ನವಾಗಿರುವ ಬಗೆ, ಅದರ ವ್ಯಾಪ್ತಿ ಇತ್ಯಾದಿಗಳನ್ನು ಕುರಿತು ನಾನು ಲಘು ವಿವರಗಳನ್ನು ನೀಡಿದರೆ ಶ್ವೇತ ಪತ್ರದಲ್ಲಿನ ಈ ಅಂಶದ ಬಗ್ಗೆ ಹೆಚ್ಚು ತಿಳಿದಿರದ ನನ್ನ ಸಂಯುಕ್ತ ಆಯ್ಕೆ ಸಮಿತಿ ಸಹೋದ್ಯೋಗಿಗಳಿಗೆ ಉಪಯುಕ್ತವಾದೀತು ಎಂದು ಭಾವಿಸುತ್ತೇನೆ.

೨. ಭಾರತದ ಹಲವು ಜನಾಂಗಗಳಿಗೆ ಶಾಸನ ಸಭೆಯಲ್ಲಿ ದಕ್ಕಬೇಕಾದ ಸ್ಥಾನಗಳ ಸಂಖ್ಯೆ ಮತ್ತು ಆ ಸ್ಥಾನಗಳಿಗೆ ಚುನಾವಣೆ ನಡೆಯಬೇಕಾದ ಪದ್ಧತಿ ಕುರಿತಂತೆ ಭಾರತೀಯ ಪ್ರತಿನಿಧಿಗಳು ಪರಸ್ಪರರಿಗೆ ಒಪ್ಪಿಗೆಯಾಗುವಂಥ ತೀರ್ಮಾನಕ್ಕೆ ಬರುವಲ್ಲಿ ವಿಫಲವಾದ್ದರಿಂದ, ದುಂಡು ಮೇಜಿನ ಪರಿಷತ್ತಿನ ಮೊದಲನೇ ಮತ್ತು ಎರಡನೇ ಅಧಿವೇಶನ ಯಾವುದೇ ಫಲ ನೀಡಲಿಲ್ಲ. ಚುನಾವಣೆಗೆ ಸಂಬಂಧಿಸಿದಂತೆ, ಪ್ರತ್ಯೇಕ ಮತ ಕ್ಷೇತ್ರಗಳನ್ನು ಹೊಂದಬೇಕೇ ಅಥವಾ ಮೀಸಲು ಸ್ಥಾನಗಳನ್ನು ಸಂಯುಕ್ತ ಮತ ಕ್ಷೇತ್ರಗಳನ್ನಾಗಿಸಬೇಕೇ ಎಂಬುದು ತೀರ್ಮಾನವಾಗಬೇಕಿತ್ತು. (ಈ ವಿಷಯದ ನಿಬಂಧನೆಗಳಿಗೆ ಶಾಸನಬದ್ಧ ಆಯೋಗದ ವರದಿಯ ಪ್ರಥಮ ಸಂಪುಟದ ೧೪೯ ಮತ್ತು ೧೫೦ನೇ ಪ್ಯಾರಾಗಳನ್ನು ನೋಡಿ) ಅನೇಕ ಪ್ರಯತ್ನಗಳ ನಂತರವೂ ಈ ವಿಷಯದಲ್ಲಿ ಒಮ್ಮತಕ್ಕೆ ಬರಲು ವಿಫಲವಾಗಿದ್ದರಿಂದ, ಸಂವಿಧಾನದಲ್ಲಿ ಮಹತ್ವದ ಶೂನ್ಯ ಉಂಟಾಯಿತಷ್ಟೇ ಅಲ್ಲದೇ, ಕೋಮು ವಿಷಯಕ್ಕೇ ಸಂಬಂಧಿಸಿದಂತೆ ಸಂವಿಧಾನದ ಇತರ ಅಂಶಗಳ ಬಗ್ಗೆ ಕೆಲವು ಅಲ್ಪಸಂಖ್ಯಾತ ಜನಾಂಗಗಳು, ಶಾಸನ ಸಭೆಯಲ್ಲಿ ತಮ್ಮ ಪ್ರಾತಿನಿಧ್ಯದ ವಸ್ತುಸ್ಥಿತಿ ತಿಳಿಯುವ ತನಕ, ಚರ್ಚೆಗೇ ಬಾರದಂತಾಯಿತು.

೩. ಇಡೀ ಚರ್ಚೆ ಮುಂದುವರೆಯದಂತಾದಾಗ, ಅಡ್ಡಿಯನ್ನು ನಿವಾರಣೆ ಮಾಡಲು ಸರ್ಕಾರವು ಯಾವ ನೀತಿ ನಿಯಮವೂ ಇಲ್ಲದೇ ಈ ಸಂಬಂಧದಲ್ಲಿ ಅನಿವಾರ್ಯವಾಗಿ ತೀರ್ಪನ್ನು ರೂಪಿಸಬೇಕಾಯಿತು. ಸರ್ಕಾರವು ಈ ತೀರ್ಪಿನ ಅಂಶಗಳನ್ನು ತಾನು ಸಂಸತ್ತಿಗೆ ಸಲ್ಲಿಸುವ ಸಲಹೆಗಳಲ್ಲಿ ಅಳವಡಿಸಿತು. ಪ್ರಾಂತೀಯ ಶಾಸನ ಸಭೆಗಳ ಸ್ವರೂಪ ಮತ್ತು ಅವುಗಳಿಗೆ ಚುನಾವಣೆ

ನಡೆಯುವ ಶಾಸನ ಸಭೆಗಳ ಸ್ವರೂಪ ಮತ್ತು ಅವುಗಳಿಗೆ ಚುನಾವಣೆ ನಡೆಯುವ ರೀತಿ ಈ ತೀರ್ಪಿನಲ್ಲಿ ಅಡಕವಾಗಿದ್ದವು. ಶಾಸನಸಭೆಗಳ ಗಾತ್ರ ಮತ್ತು ವಿಶೇಷ ಹಿತಾಸಕ್ತಿಗಳಿಗೆ ಸ್ಥಾನಗಳ ಸಂಖ್ಯೆ ಇತ್ಯಾದಿ ಸ್ಪಷ್ಟ ಕೋಮು ಪ್ರಶ್ನೆಗಳನ್ನು ಇದರಲ್ಲಿ ಸೇರಿಸದೇ ಕೈಬಿಡುವುದು ಸಾಧ್ಯವೇ ಇರಲಿಲ್ಲವೆಂದು ತಿಳಿದಿತ್ತು. ಈ ಅಂಶಗಳ ಬಗ್ಗೆ ಸರ್ಕಾರವು ಭಾರತೀಯ ಮತದಾನ (ಲೋಥಿಯಾನ್) ಸಮಿತಿಯ ಸಲಹೆ ಪಡೆಯಿತು. ಒಪ್ಪಂದವನ್ನು ೧೯೩೨ರ ಆಗಸ್ಟ್ ೧೬ರಂದು ಪ್ರಕಟಿಸಿ cmd೪೧೪೭ರ ಮೇರೆಗೆ ಸಂಸತ್ತಿಗೆ ಸಲ್ಲಿಸಲಾಯಿತು.

೪. ನಿಮ್ನ ವರ್ಗಗಳಿಗೆ ಸಂಬಂಧಿಸಿದಂತೆ ಕೆಳಗೆ ವಿವರಿಸಿದ ಬದಲಾವಣೆಗೆ ಒಳಪಟ್ಟಂತೆ ತೀರ್ಪಿನ ವಿವರಗಳನ್ನು ಶ್ವೇತಪತ್ರದ ಪುಟ ೯೧ ಮತ್ತು ೯೩ರಲ್ಲಿ ಪುನಃ ಪ್ರಕಟಿಸಲಾಗಿದೆ (೯೧ನೇ ಪುಟದಲ್ಲಿನ ಚುನಾವಣಾ ಸಂಬಂಧಿ ವಿವರಗಳನ್ನು ಕೊಂಚ ಸಂಕ್ಷಿಪ್ತಗೊಳಿಸಲಾಗಿದೆ).

೫. ತೀರ್ಪಿನ ಮುನ್ನುಡಿಯಾಗಿದ್ದ ಪ್ರಕಟಣೆಯು ಈ ಕೆಳಗಿನ ಮುಖ್ಯ ಒಕ್ಕಣೆಯನ್ನು ಒಳಗೊಂಡಿತ್ತು. ನಾಲ್ಕನೇ ಪ್ಯಾರಾ: ಸರ್ಕಾರದ ದೃಷ್ಟಿಯನ್ನು ಬದಲಾಯಿಸುವ ಉದ್ದೇಶದಿಂದ ಆರಂಭಿಸಬಹುದಾದ ಯಾವುದೇ ಮಾತುಕತೆಯಲ್ಲೂ ಸರ್ಕಾರ ಭಾಗಿಯಾಗದು, ತೀರ್ಪಿಗೆ ತಿದ್ದುಪಡಿ ತರಬಯಸಿ ಸೂಚಿಸಿದ ಸಲಹೆಗಳ ಬಗ್ಗೆ ತೊಂದರೆಗೊಳಗಾದ ಎಲ್ಲಾ ವರ್ಗಗಳ ಸಮ್ಮತಿಯಿಲ್ಲದೇ ಹೋದರೆ, ಸರ್ಕಾರ ಅವನ್ನು ಪರಿಶೀಲಿಸಲು ಸಿದ್ಧವಿಲ್ಲ; ಸರ್ಕಾರ ಇದನ್ನು ಸ್ಪಷ್ಟಪಡಿಸಬಯಸುತ್ತದೆ. ಆದರೆ, ಸರ್ವಸಮ್ಮತ ಒಪ್ಪಂದ ರೂಪುಗೊಳ್ಳಬೇಕೆಂದು ಸರ್ಕಾರಕ್ಕೆ ತುಂಬು ಮನಸ್ಸಿನ ಆಸೆಯಿದೆ. ಆದ್ದರಿಂದ ಭಾರತ ಸಕಾರದ ಹೊಸ ಕಾಯ್ದೆ ಆಗುವ ಮುನ್ನ ಸಂಬಂಧಪಟ್ಟ ಜನಾಂಗಗಳು ಒಂದು ಅಥವಾ ಹೆಚ್ಚು ಗವರ್ನರರ ಪ್ರಾಂತಗಳ ಬಗ್ಗೆ ಅಥವಾ ಇಡೀ ಬ್ರಿಟಿಷ್ ಭಾರತದ ಬಗ್ಗೆ ಸಂಬಂಧಿಸಿದ ಆಚರಣೆ ಯೋಗ್ಯ ಪರ್ಯಾಯ ವ್ಯವಸ್ಥೆ ಕುರಿತು ಒಮ್ಮತ ಹೊಂದಿದ್ದರೆ, ಈ ನಮೂದಿಸಿದ ನಿಬಂಧನೆಗಳಿಗೆ ಪರ್ಯಾಯವಾಗಬಲ್ಲವುಗಳನ್ನು ಅಳವಡಿಸಬೇಕೆಂದು ಸರ್ಕಾರ ಸಂಸತ್ತಿಗೆ ಶಿಫಾರಸು ಮಾಡಬಹುದು.

೬. ನಿಮ್ನ ವರ್ಗಗಳ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಆಗಿರುವ ಮುಖ್ಯ ಬದಲಾವಣೆಯ ಹಿನ್ನೆಲೆಯು ಸಂಕ್ಷಿಪ್ತವಾಗಿ ಹೀಗೆ ಇದೆ:

ನಿಮ್ನ ವರ್ಗಗಳಿಗೆ ಪ್ರಾತಿನಿಧ್ಯ ನೀಡುವುದರಿಂದ ಹಿಂದೂ ಸಮುದಾಯವನ್ನು ಕೃತಕವಾಗಿ ವಿಭಜಿಸಿದಂತಾಗುವುದೆಂಬ ಆಕ್ಷೇಪ ಎತ್ತಿದ ಶ್ರೀಯುತ ಗಾಂಧಿ ಅವರು ತೀರ್ಪಿನ ಪ್ರಕಟಣೆ ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಪ್ರಕಟಿಸಿದರು. ಇಂತಹ ನಿಲುವನ್ನು ತಾಳುವುದು ಏಕೆ ಸಾಧ್ಯವಿಲ್ಲವೆಂಬ ಬಗ್ಗೆ ಪ್ರಧಾನ ಮಂತ್ರಿಯವರು ಪ್ರಕಟಿತ ಪತ್ರ ವ್ಯವಹಾರದಲ್ಲಿ ಕಾರಣಗಳನ್ನು ನೀಡಿದರು. ಆದರೆ ಗಾಂಧಿಗೆ ಮನವರಿಕೆಯಾಗಲಿಲ್ಲ. ಅವರು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಗಾಂಧಿಯವರ ಪರವಾಗಿ ಡಾ. ಅಂಬೇಡ್ಕರರ ನೇತೃತ್ವದ ನಿಮ್ನ ವರ್ಗ ಮತ್ತು ಸವರ್ಣೀಯ ಹಿಂದೂಗಳ ಪ್ರತಿನಿಧಿಗಳ ನಡುವೆ ಮಾತುಕತೆ ಶುರುವಾದವು. ಆಗ ಏರ್ಪಟ್ಟಿದ್ದೇ ಈಗ ಪುಣೆ ಒಪ್ಪಂದ ಎಂದು ಹೆಸರಾಗಿರುವ ಒಪ್ಪಂದ. ಆ ಪ್ರಕಾರ ಕೋಮು ತೀರ್ಪು ಸೂಚಿಸಿದ್ದಕ್ಕಿಂತ ಹೆಚ್ಚು ಸ್ಥಾನಗಳನ್ನು ಪ್ರತಿ ಪ್ರಾಂತದಲ್ಲಿ ನಿಮ್ನ ವರ್ಗಗಳಿಗೆ ನೀಡಿ, ಹೊಸ ಚುನಾವಣಾ ವ್ಯವಸ್ಥೆಯನ್ನೂ

ಸೂಚಿಸಲಾಯಿತು. ಆದರೆ ಹಿಂದೂ (ಮುಕ್ತ) ಮತ್ತು ಮೀಸಲು ಕ್ಷೇತ್ರಗಳ ಒಟ್ಟು ಸಂಖ್ಯೆ ಕೋಮು ತೀರ್ಪು ಸೂಚಿಸಿದ್ದಷ್ಟೇ ಉಳಿದಿತ್ತು. ತನ್ನ ಕೋಮು ತೀರ್ಪಿಗೆ ಮೇಲೆ ಹೇಳಿದ ೪ನೇ ಪ್ಯಾರಾದಂತೆ ಬಂದ ಆಚರಣೆಯೋಗ್ಯ ಸರ್ವಮಾನ್ಯ ಪರ್ಯಾಯ ಒಪ್ಪಂದದ ನಿಬಂಧನೆಗಳನ್ನು ಸರ್ಕಾರ ಅಂಗೀಕರಿಸಿತು. ಇದನ್ನು ಪ್ರಕಟಿಸಲಾಗಿ ಗಾಂಧಿ ತಮ್ಮ ಉಪವಾಸವನ್ನು ನಿಲ್ಲಿಸಿದರು. ೯೧ ಮತ್ತು ೯೩ನೇ ಪುಟದ ಶ್ವೇತಪತ್ರದ ಸಲಹೆಗಳಲ್ಲಿ ಪುಣೆ ಒಪ್ಪಂದದ ನಿಬಂಧನೆಗಳಿವೆ.

೭. ಪ್ರಾಂತೀಯ ಶಾಸನ ಸಭೆಗಳ ರಚನೆ ಮತ್ತು ಚುನಾವಣೆ ಪದ್ಧತಿ ಕುರಿತು ಶ್ವೇತಪತ್ರದ ಸಲಹೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ನಿಲುವು ಏನೆಂದರೆ, ಸರ್ಕಾರವು ಈ ಒಪ್ಪಂದದ ಯಾವುದೇ ಸಲಹೆಗಳನ್ನು ಬದಲಾಯಿಸಲು ಸಂಸತ್ತಿಗೆ ಶಿಫಾರಸು ಮಾಡುವುದಿಲ್ಲ. ಸಂಬಂಧಪಟ್ಟ ಜನಾಂಗಗಳು ಒಪ್ಪಿ ಸೂಚಿಸುವ ಸಲಹೆಗಳನ್ನು ಮಾತ್ರ ಅದು ಶಿಫಾರಸು ಮಾಡಬಹುದು. ಆದರೆ, ಹೊಸ ಸಲಹೆಗಳನ್ನು ರೂಪಿಸುವಲ್ಲಿ ಸರ್ಕಾರವು ಯಾವುದೇ ಮಾತುಕತೆಯಲ್ಲಿ ಭಾಗಿಯಾಗುವುದಿಲ್ಲ. ಮೇಲೆ ತಿಳಿಸಿದ ಸಂದರ್ಭದಲ್ಲಿ ತಾವೇ ಒಪ್ಪಿಕೊಂಡ ಪುಣೆ ಒಪ್ಪಂದದ ಹಿನ್ನೆಲೆಯಲ್ಲಿಯೂ ಸರ್ಕಾರ ಈ ಪ್ರತಿಜ್ಞೆ ಕೈಗೊಂಡಿದೆ.

೮. ಬ್ರಿಟಿಷ್ ಭಾರತದ ರಾಜ್ಯಗಳು ಮತ್ತು ಬ್ರಿಟಿಷ್ ಭಾರತದ ಫೆಡರಲ್ ಶಾಸನ ಸಭೆಗಳಿಗೆ ಸ್ಥಾನಗಳನ್ನು ನಿಗದಿಪಡಿಸದೇ ಹೋದರೆ, ಕೇಂದ್ರಕ್ಕೆ ಅಗತ್ಯವಾದ ನಿಯಮಗಳನ್ನು ಮಾಡಿಕೊಳ್ಳುವುದು ಇತ್ಯರ್ಥವಾಗದೇ ಹೋದೀತೆಂಬ ಹಿನ್ನೆಲೆಯಲ್ಲಿ, ಮೂಲ ಕೋಮು ತೀರ್ಪು ಕೇವಲ ಪ್ರಾಂತೀಯ ಶಾಸನ ಸಭೆಗಳ ಬಗ್ಗೆ ಮಾತ್ರ ಆಲೋಚಿಸಿತು. ಶ್ವೇತಪತ್ರದ ಪೀಠಿಕೆಯ ೧೮ನೇ ಪ್ಯಾರಾ ಜತೆಗೆ ಓದಬೇಕಾದ ಶ್ವೇತಪತ್ರದ ಪರಿಶಿಷ್ಟ–೧ ಮತ್ತು ೨ರಲ್ಲಿನ ಈಗ ಈ ಸಂಬಂಧದಲ್ಲಿನ ಸರ್ಕಾರಿ ಸಲಹೆಗಳೂ ಅಡಕವಾಗಿವೆ. ಇವು ಮೂಲ ಕೋಮು ತೀರ್ಪಿಗೆ ಪೂರಕವಾಗಿವೆ. ಮೇಲೆ ಹೇಳಿದ ಮೂಲ ಪ್ರಕಟಣೆಯ ೪ನೇ ಪ್ಯಾರಾದಂತೆ ಸರ್ಕಾರ ಈ ಬಗ್ಗೆ ಪ್ರತಿಜ್ಞೆ ಕೈಗೊಂಡಿಲ್ಲ. ಕೇಂದ್ರ ಶಾಸನಸಭೆಗಳಲ್ಲಿ ಬೇರೆ ಬೇರೆ ಜನಾಂಗಗಳ ನಡುವೆ ಸ್ಥಾನ ಹಂಚಿಕೆ ಕುರಿತು ಮತ್ತೆ ಸಂಶೋಧನೆ ನಡೆಯಬೇಕೆಂಬ ಬಗ್ಗೆ ಸರ್ಕಾರಕ್ಕೆ ಆಸ್ಥೆ ಇಲ್ಲ. ಪ್ರಾಂತೀಯ ಕೋಮು ತೀರ್ಪಿನ ಹಾಗೆಯೇ ಈ ಸಲಹೆಗಳೂ ಬರುವುವೆಂದು ಸರ್ಕಾರ ಭಾವಿಸಿಲ್ಲ. ಆದರೆ, ತಪ್ಪು ತಿಳುವಳಿಕೆ ಆಗದಿರಲಿ ಎಂದು ಹೇಳುವುದಾದರೆ, ಗವರ್ನರ್–ಜನರಲ್ ಅವರಿಂದ ಮೇಲ್ಮನೆಗೆ ನಾಮಕರಣ ಗೊಳ್ಳುವ ಹತ್ತು ಜನರ ಪೈಕಿ ಆರು ಜನ ಬ್ರಿಟಿಷ್ ಭಾರತದವರು ಮತ್ತು ನಾಲ್ವರು ಸಂಸ್ಥಾನಗಳವರು ಇರುತ್ತಾರೆ. ಬ್ರಿಟಿಷ್ ಭಾರತದ ಫೆಡರಲ್ ಶಾಸನ ಸಭೆ ಸ್ಥಾನಗಳ ೩ನೇ ೧ ಭಾಗ ಮುಸಲ್ಮಾನರಿಗೆ ಹಂಚಿಕೆಯಾಗಬೇಕು ಮತ್ತು ಬ್ರಿಟಿಷ್ ಭಾರತ ಮತ್ತು ಸಂಸ್ಥಾನಗಳಿಗೆ ಹಂಚಿಕೆಯಾಗಿರುವ ಶೇಕಡಾವಾರು ಸ್ಥಾನಗಳು ಎಂಬ ಎರಡು ಅಂಶಗಳ ಬಗ್ಗೆ ಬದಲಾವಣೆ ತರುವುದನ್ನು ಸರ್ಕಾರ ತೀವ್ರವಾಗಿ ಆಕ್ಷೇಪಿಸುತ್ತದೆ.

೯. ಸಾರಾಂಶವೆಂದರೆ, ಕೋಮು ತೀರ್ಪು ಶಾಸನ ಸಭೆಗಳ ಸ್ವರೂಪವನ್ನು ಮಾತ್ರ ಉಲ್ಲೇಖಿಸುತ್ತದೆ. ಸಂವಿಧಾನದಲ್ಲಿರುವ ದೃಷ್ಟಿಕೋನದಂತೆ ಕೋಮು ಹಿನ್ನೆಲೆಯು ಹಲವು ಅಂಶಗಳ ಬಗ್ಗೆ (ಉದಾ: ಗವರ್ನರರ ಮತ್ತು ಗವರ್ನರ್ ಜನರಲ್‌ರವರ ವಿಶೇಷ ಜವಾಬ್ದಾರಿ, ಕೇಂದ್ರ ಮತ್ತು ಪ್ರಾಂತಗಳ ನಡುವಣ ಸಂಬಂಧ, ಮೂಲಭೂತ ಹಕ್ಕುಗಳು ಇತ್ಯಾದಿ) ಕೋಮು ತೀರ್ಪು ಉಲ್ಲೇಖಿಸುವುದಿಲ್ಲ. ಕೋಮು ತೀರ್ಪಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತನ್ನ ನಿಲುವು

ಏನೆಂಬುದನ್ನು ಸರ್ಕಾರ ವ್ಯಾಖ್ಯಾನ ಮಾಡಿದೆ. ತನ್ನ ಈ ನಿಲುವನ್ನು ಬದಲಾಯಿಸಿಕೊಳ್ಳುವ ಬಗ್ಗೆ ಯಾವಾಗ ತಾನು ಸಿದ್ಧ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಿದೆ.

* * * * *

* ಸರ್ ಆಸ್ಟಿನ್ ಚೇಂಬರ್ ಲೇನ್: ಕಲಾಪಗಳ ಮಧ್ಯೆ ಆ ಬಗೆಯ ಸಲಹೆಗಳನ್ನು ನಮಗೆ ಕೊಡುವುದು ರಾಜ್ಯ ಕಾರ್ಯದರ್ಶಿಯ ಉದ್ದೇಶವೇ?

ಸರ್ ಸ್ಯಾಮ್ಯುಯೆಲ್ ಹೋರ್: ನಿಸ್ಸಂದೇಹವಾಗಿ. ಸಂವಿಧಾನ ಕಾಯ್ದೆಯ ಎಲ್ಲಾದರೂ ಒಂದೆಡೆ ಚುನಾಯಿಸುವ ಅಧಿಕಾರದ ನಿಬಂಧನೆಗಳು ಇರಬೇಕು. ಅದು ಅಗತ್ಯ ಎಂದು ನಾನು ಭಾವಿಸುವೆ.

ಡಾ. ಬಿ. ಆರ್. ಅಂಬೇಡ್ಕರ್: ಈಗಿನ ಭಾರತ ಸರ್ಕಾರದ ಕಾಯ್ದೆಯಲ್ಲೂ ಇದೇ ಬಗೆಯ ನಿಬಂಧನೆ ಗಳಿವೆ. ಒಂದು ಪರಿಶಿಷ್ಟದಲ್ಲಿ ಕೆಲವು ಕಲಮುಗಳಿವೆ.

ಸರ್ ಸ್ಯಾಮ್ಯುಯೆಲ್ ಹೋರ್: ಅದು ಪ್ರತಿ ಸಂವಿಧಾನದ ಕಾಯ್ದೆ ಮತ್ತು ಭಾರತ ಸರ್ಕಾರದ ಕಾಯ್ದೆಯಲ್ಲೂ ಇರುತ್ತದೆಂದು ನನಗನಿಸುತ್ತದೆ.

ಲಾರ್ಡ್ ಸ್ಯಾಲಿಸ್‌ಬರಿ: ಇದುವರೆಗೆ ನಾನು ಸಾಧ್ಯವಾದಷ್ಟು ಅದನ್ನು ಓದಿದೆ. ಆದರೆ, ಅದನ್ನು ಪ್ರಶಂಸಿಸುವುದು ನನಗೆ ಸಾಧ್ಯವಾಗಲಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ನಾವು ಪರಿಶೀಲಿಸಬೇಕಾದ ಪ್ರಶ್ನೆಗಳಲ್ಲಿ ಇದೂ ಒಂದು ಮತ್ತು ಸಂವಿಧಾನ ಕಾಯ್ದೆಯಲ್ಲಿ ಈ ಬಗ್ಗೆ ಯಾವುದಾದರೊಂದು ಅವಕಾಶವನ್ನು ನಾವು ಕಲ್ಪಿಸಬೇಕಿದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ಲಾರ್ಡ್ ಸ್ಯಾಲಿಸ್‌ಬರಿ ಮತ್ತೊಮ್ಮೆ ಅತ್ತ ಲಕ್ಷ್ಯ ವಹಿಸಿದರೆ, ಅವರು ಅದನ್ನು ಪೂರ್ತಿ ಪ್ರಶಂಸಿಸುವರು.

ಡಾ. ಬಿ. ಆರ್. ಅಂಬೇಡ್ಕರ್: ಭಾರತ ಸರ್ಕಾರ ಕಾಯ್ದೆಯ ೫ನೇ ಭಾಗದಲ್ಲಿ ಹೀಗಿದೆ: "ಈ ಕಾಯ್ದೆಯ ನಿಬಂಧನೆಗಳನ್ನು ಭಾರತೀಯ ಶಾಸನಸಭೆ ಒಪ್ಪಿಕೊಳ್ಳಬಹುದು. ಅಥವಾ ಬದಲಾಯಿಸಿಬಹುದು."

** ಜೆಟ್ಲಾಂಡಿನ ಮಾರ್ಕ್ವೆಸ್: ಒಂದು ಪೂರಕ ಪ್ರಶ್ನೆ. ನಾಲ್ಕು ಕ್ಷೇತ್ರದಿಂದ ನಿಮ್ನ ವರ್ಗಗಳ ಪ್ರತಿನಿಧಿಗಳು ಆಯ್ಕೆಯಾಗುತ್ತಾರಲ್ಲ, ಅವು ಒಂದೇ ಪ್ರದೇಶದಲ್ಲಿ ಬರುತ್ತವೆಯೆ?

ಸರ್ ಸ್ಯಾಮ್ಯುಯೆಲ್ ಹೋರ್: ಅದನ್ನು ಲೆಕ್ಕ ಹಾಕಲಾಗಿದೆಯೆಂದು ನನಗನಿಸುತ್ತಿಲ್ಲ. ಆದರೆ, ಒಂದೇ ಪ್ರದೇಶದಿಂದ ಅವರನ್ನು ಆಯ್ಕೆ ಮಾಡುವುದಿಲ್ಲ. ಮದರಾಸನ್ನು ಒಟ್ಟು ೧೫ ಪ್ರದೇಶಗಳನ್ನಾಗಿ ವಿಂಗಡಿಸಲಾಗುವುದು. ಅದರಲ್ಲಿ ೧೧ ಸಾಮಾನ್ಯ ಸ್ಥಾನಗಳು.

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ ಒಟ್ಟು ೧೫ ಸಾಮಾನ್ಯ ಸ್ಥಾನಗಳೇ?

ಸರ್ ಸ್ಯಾಮ್ಯುಯೆಲ್ ಹೋರ್: ಸಾಮಾನ್ಯ ಸ್ಥಾನಗಳು ೧೧. ಒಟ್ಟು ೧೯. ೧೧ ಏಕ ಸದಸ್ಯ ಸ್ಥಾನಗಳು. ೪ ದ್ವಿ ಸದಸ್ಯ ಸ್ಥಾನಗಳು.

ಜಫರುಲ್ಲಾ ಖಾನ್: ಒಂದು ವಿಷಯವನ್ನು ಸ್ಪಷ್ಟಪಡಿಸಲು ನಾನು ಸರ್ ಫಿಂಡ್ಲೇಟರ್ ಸ್ಟೆವಾರ್ಟ್

* ಮಿನಿಟ್ಸ್ ಆಫ್ ಎವಿಡೆನ್ಸ್: ಸಂಪುಟ ೨–ಬಿ, ೨೦ ಜುಲೈ ೧೯೩೩, ಪುಟ ೮೨೮

** ಅದೇ, ೨೧ ಜುಲೈ ೧೯೩೩ ಪು. ೮೩೨.

ಅವರಿಗೆ ಒಂದು ಪ್ರಶ್ನೆ ಹಾಕುವೆ. ನನಗೆ ತಿಳಿದುಕೊಳ್ಳಬೇಕಾಗಿರುವುದೇನೆಂದರೆ, ನಾಲ್ವರ ತಂಡ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸುತ್ತದೆಂದು ಭಾವಿಸೋಣ. ಮುಕ್ತ ಕ್ಷೇತ್ರದಲ್ಲಿ ಎಲ್ಲರೂ ಮತ ಚಲಾಯಿಸಿದಂತೆ ಇಲ್ಲೂ ಮತದಾನ ನಡೆಯುತ್ತದೆ. ಅದಿರಲಿ, ಆದರೆ, ಇಲ್ಲಿ ನಾಲ್ವರಲ್ಲಿ ಮೂವರು "ನಾವು ಸ್ಪರ್ಧಿಸಬಯಸುವುದಿಲ್ಲ" ಎಂದು ಹೇಳಿಬಿಟ್ಟರೆ, ಚುನಾವಣೆಗೂ ಮುಂಚೆ ಅವರು ಹಿಂದೆ ಸರಿಯಬಹುದೇ?

ಸರ್ ಪಿಂಡ್ಲೇಟರ್ ಸ್ಟೆವಾರ್ಟ್: ಅದು ಪುಣೆ ಒಪ್ಪಂದವನ್ನು ಅರ್ಥೈಸಿದಂತಾಯಿತು.

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಏನು ಹೇಳುತ್ತಾರೆ?

ಡಾ. ಬಿ. ಆರ್. ಅಂಬೇಡ್ಕರ್: ನಾಲ್ವರೂ ಸ್ಪರ್ಧಿಸಬೇಕೆಂದೇನೂ ಇಲ್ಲ.

ಸರ್ ಎನ್. ಎನ್. ಸರ್ಕಾರ್: ಅದು ಅರ್ಥವಾಯಿತು. ಆದರೆ ಅಲ್ಲಿನ ಪದಗಳು ಹಾಗೆ ಹೇಳುವುದಿಲ್ಲ.

ಜಫರುಲ್ಲಾ ಖಾನ್: ಈ ಯಾವುದೇ ಕ್ಷೇತ್ರಗಳಲ್ಲಿ ನಿಮ್ಮ ವರ್ಗಗಳು ನಾಲ್ಕು ಅಭ್ಯರ್ಥಿಗಳನ್ನು ಹಾಕಲೇಬೇಕೇ? ಒಬ್ಬ ಅಭ್ಯರ್ಥಿಯನ್ನು ಮಾತ್ರ ನಿಮ್ಮ ವರ್ಗಗಳು ನಿಲ್ಲಿಸಿದರೆ ಪುಣೆ ಒಪ್ಪಂದದ ನಿಬಂಧನೆಗಳನ್ನು ಮೀರಿದಂತಾದೀತೇ? ಈ ವಿಷಯದಲ್ಲಿ ಪುಣೆ ಒಪ್ಪಂದವನ್ನು ಸರ್ಕಾರ ಹೇಗೆ ಅರ್ಥೈಸುತ್ತದೆ?

ಸರ್ ಎ. ಪಿ. ಪಾತ್ರೋ: ಪೂರ್ವಭಾವಿ ಚುನಾವಣೆಯ ಉದ್ದೇಶವೇ ಇದರಿಂದ ಈಡೇರಿದಂತಾಗುವುದಿಲ್ಲ. ಒಂದು ಕ್ಷೇತ್ರದಿಂದ ನಾಲ್ವರನ್ನು ಚುನಾಯಿಸುವುದು ಎಂಬುದೇ ಪೂರ್ವಭಾವಿ ಚುನಾವಣೆಯ ಅರ್ಥ.

ಸರ್ ಎನ್. ಎನ್. ಸರ್ಕಾರ್: ನಾಲ್ವರ ಬದಲು ಒಬ್ಬರನ್ನೇ ಚುನಾಯಿಸುವ ಸ್ವಾತಂತ್ರ್ಯ ನಿಮ್ಮ ವರ್ಗಗಳಿಗಿರಬೇಕು. ಪುಣೆ ಒಪ್ಪಂದ ರೂಪಿಸುವಾಗ ಅರ್ಥೈಸಿದ್ದನ್ನೇ ನಾನಿಲ್ಲಿ ಈಗ ಹೇಳುತ್ತಿದ್ದೇನೆಂಬುದನ್ನು ಡಾ. ಅಂಬೇಡ್ಕರ್ ಅವರೆಲ್ಲ ದೃಢಪಡಿಸುವರು.

ಡಾ. ಬಿ. ಆರ್. ಅಂಬೇಡ್ಕರ್: ಹೌದು, ಅದು ಪೂರ್ಣ ಸರಿ.

ಜಫರುಲ್ಲಾ ಖಾನ್: ನಾಲ್ವರನ್ನು ನಿಲ್ಲಿಸಿದಲ್ಲಿ ಒಬ್ಬರು ಹಿಂತೆಗೆದುಕೊಳ್ಳಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಹೌದು.

* ಸರ್ ಎನ್. ಎನ್. ಸರ್ಕಾರ್: ನನಗೆ ಕೆಲವು ಮಾಹಿತಿಗಳು ಬೇಕು. ನಾನು ವಾದ ಮಾಡುತ್ತಿಲ್ಲ. ಕೋಮು ತೀರ್ಪು ಬಂದುದು ೧೭ ಆಗಸ್ಟ್ ೧೯೩೨ರಲ್ಲಿ. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಅಲ್ಲ, ಆಗಸ್ಟ್ ೧೬ರಂದು.

ಸರ್ ಎನ್. ಎನ್. ಸರ್ಕಾರ್: ನನ್ನ ಪ್ರತಿಯಲ್ಲಿ ೧೭ರಂದು ಎಂದಿದೆ. ಒಂದು ದಿನದ ವ್ಯತ್ಯಾಸ. ಇರಲಿ. ನಿಮ್ಮ ವರ್ಗಗಳಿಗೆ ಸಂಬಂಧಿಸಿದಂತೆ, ಈ ತೀರ್ಪು ಒಟ್ಟಾರೆ ಹೇಳುವುದೇನೆಂದರೆ, ಅವರು ಸಾಮಾನ್ಯ (ಮುಕ್ತ) ಕ್ಷೇತ್ರಗಳಲ್ಲೂ ಮತ ಚಲಾಯಿಸಬಹುದು; ಅವರ ಕ್ಷೇತ್ರಗಳು ಒಟ್ಟು ೧೦. ಈ ತೀರ್ಪು ಒಟ್ಟು ೨೦ ವರ್ಷ ಕಾಲ ಜಾರಿಯಲ್ಲಿರುವುದು. ಅದರ ಒಟ್ಟಾರೆ ತಿರುಳು ಇದು. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಸರ್ ಎನ್. ಎನ್. ಸರ್ಕಾರ್: ಇನ್ನೊಂದು ದಿನಾಂಕ ೧೮ ಆಗಸ್ಟ್ ೧೯೩೨. ಸತ್ಯಾಗ್ರಹ ಹೂಡುವುದಾಗಿ ಬೆದರಿಕೆ ಒಡ್ಡಿ ಮಹಾತ್ಮಾ ಗಾಂಧಿ ಪ್ರಧಾನಿಗೆ ಪತ್ರ ಬರೆದ ದಿನಾಂಕವೂ ಇದೇ.

---

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨–ಬಿ, ೨೧ ಜುಲೈ ೧೯೩೩, ಪುಟ ೮೫೮–೬೩

** ೭೪೮೮ರಿಂದ ೭೫೧೯ನೇ ಪ್ಯಾರಾವರೆಗೆ ಉಲ್ಲೇಖಿಸಿರುವ ಪತ್ರ ವ್ಯವಹಾರ ಇದೇ ಪುಸ್ತಕದ ೭೦೭–೧೪ ಪುಟಗಳಲ್ಲಿ ಮುದ್ರಿತವಾಗಿದೆ.

ಅವರು ತಮ್ಮ ಪತ್ರದಲ್ಲಿ "ಬ್ರಿಟಿಷ್ ಸರ್ಕಾರ ತಮ್ಮ ತೀರ್ಮಾನ ಬದಲಿಸಿ, ನಿಮ್ನ ವರ್ಗಗಳಿಗೆ ಪ್ರಾತಿನಿಧ್ಯ ಯೋಜನೆಯನ್ನು ಹಿಂತೆಗೆದುಕೊಂಡರೆ, ಈ ಉಪವಾಸ ನಿಲ್ಲುತ್ತದೆ" ಎಂದು ಬರೆದಿದ್ದರು. ಮಹಾತ್ಮಾ ಗಾಂಧಿ ಈ ಬೆದರಿಕೆ ಪತ್ರ ಬರೆದು, ಉಪವಾಸದ ಪರಿಣಾಮವನ್ನೂ ತಿಳಿಸಿದ್ದರು. ನಿಮ್ಮ ಮಾಹಿತಿಗೆ ಈ ದಿನಾಂಕ ಸರಿ ಹೋಗುತ್ತದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ನನ್ನಲ್ಲೀಗ ದಿನಾಂಕಗಳ ವಿವರಗಳಿಲ್ಲ. ಆದರೂ ಅದು ಸರಿ ಎನ್ನೋಣ.

ಸರ್ ಎನ್. ಎನ್. ಸರ್ಕಾರ್: ನನ್ನ ಪ್ರಶ್ನೆಯಲ್ಲಿ ಈ ಎಲ್ಲಾ ದಿನಾಂಕಗಳನ್ನೂ ನಾನು ಸೇರಿಸುವೆ. ಎಲ್ಲಾದರೂ ತಪ್ಪಾದರೆ ತಿಳಿಸಬಹುದು. ಸೆಕ್ರೆಟರಿ ಆಫ್ ಸ್ಟೇಟ್ ಒಪ್ಪುತ್ತಾರೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಆಗಲಿ.

ಸರ್ ಎನ್. ಎನ್. ಸರ್ಕಾರ್: ಆಗಸ್ಟ್ ೧೮ರಂದು ಮಹಾತ್ಮಾ ಗಾಂಧಿ ಪ್ರಧಾನಿಗೆ ಪತ್ರ ಬರೆದರು. ೧೯೩೨ರಲ್ಲಿ ಸೆಪ್ಟೆಂಬರ್ ೮ರಂದು ಮಹಾತ್ಮಾ ಗಾಂಧಿಗೆ ಉತ್ತರಿಸಿದ ಪ್ರಧಾನಿ ತಮ್ಮ ಪತ್ರದಲ್ಲಿ ಹಿಂದೂ ಸಮುದಾಯದಿಂದ ನಿಮ್ನ ವರ್ಗಗಳನ್ನು ಈ ತೀರ್ಪು ಯಾವ ವಿಧದಲ್ಲೂ ಬೇರ್ಪಡಿಸಿಲ್ಲ ಎಂದು ಸ್ಪಷ್ಟಪಡಿಸಿದರು. ದಯವಿಟ್ಟು ಈ ಪತ್ರದ ದಿನಾಂಕ ಗಮನಿಸಿ. ಯಾವ ಪ್ರಮಾದವೂ ಆಗಿಲ್ಲ ಎಂಬುದನ್ನು ಮಹಾತ್ಮಾ ಗಾಂಧಿಗೆ ಪ್ರಧಾನಿಯು ಮನವರಿಕೆ ಮಾಡಿಕೊಡಬಯಸಿದ್ದು ಸೆಪ್ಟೆಂಬರ್ ೮ರ ಪತ್ರದಲ್ಲಿ. ಸೆಪ್ಟೆಂಬರ್ ೧೫ರಂದು ಪಂಡಿತ ಮದನ ಮೋಹನ ಮಾಳವೀಯ ಅವರು ಸೆಪ್ಟೆಂಬರ್ ೧೭, ೧೮ರಂದು ದೆಹಲಿಯಲ್ಲಿ ಸಮಾವೇಶ ನಡೆಸುವುದಾಗಿ ಪತ್ರಿಕಾ ಪ್ರಕಟಣೆ ನೀಡಿದರು. "ಕೆಲವು ಸ್ನೇಹಿತರಿಗೆ" ಎಂದು ಪತ್ರಿಕೆಯಲ್ಲಿ ಪ್ರಕಟವಾಯಿತು. ಅದು ಸೆಪ್ಟೆಂಬರ್ ೧೮ರಂದು. ೧೯೩೨ರ ಸೆಪ್ಟೆಂಬರ್ ೧೬ರಂದು ಇದೇ ಮಾಳವೀಯ ಇನ್ನೊಂದು ಪತ್ರಿಕಾ ಪ್ರಕಟಣೆಯಲ್ಲಿ ಸಮಾವೇಶ ದೆಹಲಿಯಲ್ಲಲ್ಲ, ಮುಂಬಯಿಯಲ್ಲಿ ನಡೆಯುವುದು ಎಂದು ಹೇಳಿದರು. ಆಮರಣಾಂತ ಉಪವಾಸ ಎಂದು ನಂತರ ಹೇಳಲಾದ ಸತ್ಯಾಗ್ರಹ ಶುರುವಾಗಿದ್ದು ೧೯೩೨ರ ಸೆಪ್ಟೆಂಬರ್ ೨೦ರಂದು. ಮಹಾತ್ಮ ಗಾಂಧಿ ಸ್ಥಿತಿ ತುಂಬಾ ಗಂಭೀರವಾಗಿದೆ ಎಂಬ ಪ್ರಕಟಣೆ ಬಂದಿದ್ದು ಸೆಪ್ಟೆಂಬರ್ ೨೪ರಂದು. ಮಾರನೇ ದಿನ, ಸೆಪ್ಟೆಂಬರ್ ೨೫ರಂದು ಒಪ್ಪಂದಕ್ಕೆ ಸಹಿಗಳು ಬಿದ್ದವು.

ಇವು ನಾನು ಸಂಗ್ರಹಿಸಿದ ದಿನಾಂಕಗಳು. ಇವನ್ನು ನೀವು ಒಪ್ಪಿಕೊಳ್ಳಬಹುದು ಅಥವಾ ತಿದ್ದಬಹುದು.

ಸರ್ ಸ್ಯಾಮ್ಯುಯೆಲ್ ಹೋರ್: ಆಗಲಿ.

ಸರ್ ಎನ್. ಎನ್. ಸರ್ಕಾರ್: ಈ ಪ್ರಶ್ನೆಯಲ್ಲಿ ನಾನು ಇನ್ನಷ್ಟು ದಿನಾಂಕಗಳನ್ನು ಮುಂದಿಡುವೆ. ನಿಮ್ಮ ಬಳಿ ತಕ್ಷಣ ಉತ್ತರ ಇಲ್ಲದಿದ್ದರೆ ಪರವಾಗಿಲ್ಲ; ನಾನು ನನ್ನ ಅಂಶವನ್ನು ಸ್ಪಷ್ಟಪಡಿಸುವೆ. ಇವನ್ನು ಸಾಬೀತುಪಡಿಸಲು ನಾನು ಕೆಲವು ಸಾಕ್ಷ್ಯಗಳನ್ನು ಕರೆಯುವೆ.

ಒಪ್ಪಂದ ಸಹಿಯಾಗಿದ್ದು ಪುಣೆಯಲ್ಲಿ. ೧೯೩೨ರ ಸೆಪ್ಟೆಂಬರ್ ೨೫ರಂದು. ಇಲ್ಲಿ ಸಹಿ ಮಾಡಿರುವವರು ಬಹಳ ಜನ. ಎಲ್ಲರ ಹೆಸರುಗಳನ್ನೂ ನಾನಿಲ್ಲಿ ಓದುವುದಿಲ್ಲ. ಆದರೆ, ಒಂದು ಅಂಶವನ್ನು ಗಮನಿಸಿ. ಒಪ್ಪಂದಕ್ಕೆ ಬಂಗಾಲದ ಹಿಂದೂಗಳನ್ನು ಪ್ರತಿನಿಧಿಸಿ ಯಾರೂ ಸಹಿ ಮಾಡಿಲ್ಲ. ಮೂರನೇ ದಿನ ೨೬ರಂದು ಬೆಳಿಗ್ಗೆ ೧೧ ಗಂಟೆಗೆ ದೆಹಲಿಯಲ್ಲಿ ಗೃಹಖಾತೆಯ ಸದಸ್ಯ, ಸರ್ಕಾರವು ಒಪ್ಪಂದವನ್ನು ಅನುಮೋದಿಸಿದೆ ಎಂದು ಪ್ರಕಟಿಸಿತು.

"ನಿಮ್ನ ವರ್ಗಗಳ ಮುಖಂಡರು ಮತ್ತು ಹಿಂದೂ ಸಮುದಾಯದ ಇತರ ನಾಯಕರ ನಡುವೆ

ಒಪ್ಪಂದವಾಗಿದೆ ಎಂಬುದನ್ನು ಸರ್ಕಾರವು ತಿಳಿದುಕೊಂಡಿದೆ. ಇದರಿಂದ ತನಗೆ ತುಂಬಾ ನೆಮ್ಮದಿ ಉಂಟಾಗಿದೆ" ಎಂದು ಹೇಳಿತು. ಮರುದಿನವೇ ಇದನ್ನು ಸದನದಲ್ಲಿ ಪ್ರಕಟಿಸಲಾಯಿತು. ಈ ದಿನಾಂಕಗಳನ್ನು ನೀವು ಒರೆಗೆ ಹಚ್ಚಿ ನೋಡಬಹುದು. ನಿನ್ನೆ ನೀವು ಕೊಟ್ಟ ಉತ್ತರಗಳಿಂದ, ನಿಮ್ಮ ವರ್ಗದ ಮುಖಂಡರು ಮತ್ತು ಹಿಂದೂ ಸಮಾಜದ ಇತರ ನಾಯಕರ ನಡುವೆ ಒಪ್ಪಂದವಾಗಿದೆ ಎಂಬುದು ಸರ್ಕಾರದ ತಿಳುವಳಿಕೆಯಾಗಿದೆ ಎಂದು ನಾನು ತಿಳಿಯಬಹುದೇ? ನಿಮ್ಮ ತಿಳುವಳಿಕೆಯೂ ಇದೇ ಆಗಿರಬೇಕಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ನೀವು ಪೂರ್ತಿ ಮುಗಿಸಿದ ಬಳಿಕ ನಾನು ಉತ್ತರಿಸುವೆ.

ಸರ್ ಎನ್. ಎನ್. ಸರ್ಕಾರ್: ನನ್ನ ಈ ಪ್ರಶ್ನೆ ಮುಗಿಯಿತು.

ಸರ್ ಸ್ಯಾಮ್ಯುಯೆಲ್ ಹೋರ್: ಮೂಲ ಕೋಮು ತೀರ್ಪಿನ ನಾಲ್ಕನೇ ಪ್ಯಾರಾ ಮೇರೆಗೆ, ತಪ್ಪೋ ಸರಿಯೋ, ಸರ್ಕಾರವು ಸಂಬಂಧಪಟ್ಟ ಪಕ್ಷಗಳ ಅಂದರೆ ನಿಮ್ಮ ವರ್ಗಗಳು ಮತ್ತು ಇತರ ಹಿಂದೂಗಳ ನಡುವಣ ಅಖಿಲ ಭಾರತ ಒಪ್ಪಂದವನ್ನು ಪುಣೆ ಒಪ್ಪಂದ ಎಂದು ಒಪ್ಪಿಕೊಂಡಿತು. ಪುಣೆ ಒಪ್ಪಂದಕ್ಕೆ ಕಾರಣವಾದ ಮಾತುಕತೆಯ ಬಗ್ಗೆ ಭಾರತದ ಸಾರ್ವಜನಿಕ ಜೀವನದಲ್ಲಿರುವ ಪ್ರತಿಯೊಬ್ಬರಿಗೂ ಗೊತ್ತಿರಬೇಕಿತ್ತು. ತಮ್ಮ ಅಭಿಪ್ರಾಯಗಳು ನಿರ್ಲಕ್ಷ್ಯಕ್ಕೊಳಗಾಗಬಾರದೆಂದು ಎಚ್ಚರಿಕೆ ವಹಿಸಿ, ಅದನ್ನು ಸಂಬಂಧಪಟ್ಟವರಿಗೆ ಸೂಕ್ತ ರೀತಿಯಲ್ಲಿ ತಿಳಿಸಲು ಆಸಕ್ತ ಪಕ್ಷಗಳು ಮುಂದಡಿ ಇಡಬಹುದಿತ್ತು. ಸಮಿತಿಯು ದಯವಿಟ್ಟು ಈ ಸಂಗತಿಯನ್ನು ಗಮನಿಸಬೇಕು. ಅದೇನೆಂದರೆ, ಒಪ್ಪಂದವನ್ನು ಘೋಷಿಸಿದ ಸಾಕಷ್ಟು ಕಾಲದ ಬಳಿಕ ಯಾವುದೇ ವಿರೋಧವು ವ್ಯಕ್ತಪಟ್ಟಿಲ್ಲ. ಈ ಅಂಶಕ್ಕೆ ತುಂಬಾ ಮಹತ್ವವಿದೆ. ನಿಜವೆಂದರೆ, ಚರ್ಚೆ ನಡೆದಿರುವಾಗ ಒಪ್ಪಂದವನ್ನು ಬೆಂಬಲಿಸಿ ಅಸಂಖ್ಯಾತ ತಂತಿ ಸಂದೇಶಗಳು ನಮಗೆ ಬಂದವು. ಆ ಪೈಕಿ ಒಂದೂ ಒಪ್ಪಂದಕ್ಕೆ ವಿರೋಧವಾಗಿರಲಿಲ್ಲ; ನನಗೆ ಚೆನ್ನಾಗಿ ನೆನಪಿದೆ. ಸುಪ್ರಸಿದ್ಧ ಹಾಗೂ ಗೌರವಾನ್ವಿತ ಸರ್ ರವೀಂದ್ರನಾಥ ಟಾಗೋರ್ ಅವರೂ ಒಂದು ತಂತಿ ಸಂದೇಶ ಕಳಿಸಿದ್ದರು. ಬಂಗಾಲದಲ್ಲಿ ಮೊಟ್ಟ ಮೊದಲು ಯಾವಾಗ ವಿರೋಧ ಆರಂಭವಾಯಿತೆಂದು ನನಗೆ ಗೊತ್ತಿಲ್ಲ. ಸರ್ಕಾರವು ಒಪ್ಪಂದಕ್ಕೆ ಮಾನ್ಯತೆ ನೀಡಿದ ಮೂರು ತಿಂಗಳ ಬಳಿಕ ಬಂದ ವಿರೋಧವಲ್ಲದೇ ಇನ್ನಾವುದೂ ನನ್ನ ಗಮನಕ್ಕೆ ಬಂದಿಲ್ಲ. ಒಪ್ಪಂದವು ಬಂಗಾಲಕ್ಕೆ ಎಷ್ಟು ಉಪಯುಕ್ತ ಎಂಬ ಬಗ್ಗೆ ತನ್ನ ಅಭಿಪ್ರಾಯವನ್ನು ಬಂಗಾಲದಲ್ಲಿ ಕಂಡು ಬಂದಿರುವ ವಿರೋಧದ ಹಿನ್ನೆಲೆಯಲ್ಲಿ ಪರಿಶೀಲಿಸಲು ಸರ್ಕಾರವು ಸದಾ ಸಿದ್ಧವಿದೆ. ಆದರೆ ಸರ್ಕಾರವು ಒಂದು ಸರ್ಕಾರವಾಗಿ, ಮೂಲ ಕೋಮು ತೀರ್ಪಿನ ನಿಬಂಧನೆಗಳಿಗೆ ಬದ್ಧವಾಗಿದೆ. ಈ ನಿಬಂಧನೆಗಳ ಹಿನ್ನೆಲೆಯಲ್ಲಿ ಯಾವುದೇ ಮಾತುಕತೆ ನಡೆಸಲು ಸರ್ಕಾರ ಸಿದ್ಧವಾಗಿದೆ.

ಎಂ. ಆರ್. ಜಯಕರ್: ಸರ್ ರವೀಂದ್ರನಾಥ್ ಟಾಗೋರ್ ಅವರು ಕಳಿಸಿದ ತಂತಿ ಸಂದೇಶದ ಅಭಿಪ್ರಾಯವೇನು? ಅವರು ಒಪ್ಪಂದವನ್ನು ಅನುಮೋದಿಸಿದ್ದರೇ?

ಸರ್ ಸ್ಯಾಮ್ಯುಯೆಲ್ ಹೋರ್: ಒಪ್ಪಂದವನ್ನು ಅನುಮೋದಿಸಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದರು.

ಸರ್ ತೇಜ್ ಬಹಾದ್ದೂರ್ ಸಪ್ರು: ಸರ್ ಸ್ಯಾಮ್ಯುಯೆಲ್ ಹೋರ್ ಅವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಮತ್ತು ಸಮಿತಿಯ ಮುಂದೆ ನಾನು ಒಂದು ವಿಚಾರವನ್ನು ಮಂಡಿಸಲೇ? ಒಪ್ಪಂದದ ಮಾತುಕತೆಯು ಮುಂದುವರೆದಿದ್ದಾಗ, ನಾನು ಮತ್ತು ಜಯಕರ್ ನಾಲ್ಕೈದು ದಿನಗಳ ಕಾಲ ಪುಣೆಯಲ್ಲಿರುವ ಅವಕಾಶ ಬಂದಿತ್ತು. ಬಂಗಾಲದ ಹಿಂದೂಗಳಿಂದ ತಂತಿ ಸಂದೇಶ ಬಂದದ್ದು ನನಗೆ ಸ್ಪಷ್ಟವಾಗಿ ನೆನಪಿದೆ. ವೈಯಕ್ತಿಕವಾಗಿ ನನಗೂ ಬಂಗಾಲದ ಇಬ್ಬರೂ ಮೂವರು ಪ್ರಮುಖ ಹಿಂದೂಗಳಿಂದ

ತಂತಿ ಸಂದೇಶಗಳು ಬಂದಿದ್ದವು. ಆ ತಂತಿ ಸಂದೇಶಗಳು ಈಗ ನನ್ನ ಬಳಿಯಿಲ್ಲ. ಆದರೆ, ಇನ್ನೂ ಮುಂದುವರೆದು ನಾನು ಹೇಳಬಯಸುವುದೇನೆಂದರೆ, ಸರ್ ರವೀಂದ್ರನಾಥ ಟಾಗೋರ್ ಅವರು ಗಾಂಧೀಜಿಯವರನ್ನು ಅವರು ಉಪವಾಸ ಸತ್ಯಾಗ್ರಹ ಮಾಡುತ್ತಿರುವಾಗ ಅಥವಾ ಆಗ ತಾನೆ ಅವರು ಉಪವಾಸ ಮುಗಿಸಿದ ನಂತರ, ಜೈಲಿನಲ್ಲಿ ಭೇಟಿಯಾಗಿದ್ದರು. ನನಗೆ ಇಷ್ಟು ನೆನಪಿದೆ. ತಪ್ಪಿದರೆ ತಿದ್ದಬಹುದು.

ಸರ್ ಹರಿಸಿಂಗ್ ಗೌರ್: ಹೌದು. ಅವರು ಭೇಟಿಯಾಗಿದ್ದರು.

ಸರ್ ತೇಜ್ ಬಹಾದ್ದೂರ್ ಸಪ್ರು: ಆಗ ಯಾವುದೋ ಒಂದು ಸಮಾರಂಭ ಇತ್ತು. ಒಪ್ಪಂದಕ್ಕೆ ಸಹಿ ಬಿದ್ದ ತಕ್ಷಣ ನಾನು ಪುಣೆಯಿಂದ ಹೊರಟೆ. ಇದೆಲ್ಲ ನಾನು ಹೊರಟ ನಂತರ ನಡೆದದ್ದು. ಪ್ರಾಯಶಃ ಜಯಕರ್ ಅವರು ಆಗ ಪುಣೆಯಲ್ಲಿ ಇರಲಿಲ್ಲ.

ಎಂ. ಆರ್. ಜಯಕರ್: ರವೀಂದ್ರನಾಥ ಟಾಗೋರ್ ಬಂದಾಗ ನಾನು ಪುಣೆಯಲ್ಲಿ ಇರಲಿಲ್ಲ.

ಸರ್ ಎನ್.ಎನ್. ಸರ್ಕಾರ್: ಸರ್ ರವೀಂದ್ರನಾಥ ಟಾಗೋರ್ ಅವರು ಬ್ರಾಹ್ಮಣರೆಂಬುದು ಸರ್ ಸ್ಯಾಮ್ಯುಯೆಲ್ ಹೋರ್ ಅವರಿಗೆ ಗೊತ್ತೋ?

ಸರ್ ಸ್ಯಾಮ್ಯುಯೆಲ್ ಹೋರ್: ಸರ್ ನೃಪೇಂದ್ರ ಸರ್ಕಾರ್ ಹೇಳಿದ ಮೇಲೆ ನನಗೆ ಈ ವಿಷಯ ತಿಳಿಯಿತು. ಆದರೆ, ಒಂದು ವಿವಾದಾತೀತ ಸಂಗತಿ ಏನೆಂದರೆ, ಭಾರತದಿಂದ ವಾರಾನುಗಟ್ಟಲೆ ಬಂದ ಅಸಂಖ್ಯಾತ ತಂತಿ ಸಂದೇಶಗಳು ಮತ್ತು ಪತ್ರಗಳು ಒಪ್ಪಂದಕ್ಕೆ ಅನುಮೋದನೆ ನೀಡಬೇಕೆಂದು ಒತ್ತಾಯಿಸುತ್ತಿದ್ದವು. ಆದರೆ ಒಂದೇ ಒಂದೂ ವಿರೋಧದ ಅಭಿಪ್ರಾಯ ನಮಗೆ ಬರಲಿಲ್ಲ.

ಸರ್ ಎನ್. ಎನ್. ಸರ್ಕಾರ್: ನಾನು ಸೂಕ್ಷ್ಮ ವಿಷಯಗಳನ್ನು ಪ್ರಸ್ತಾಪಿಸುವುದಿಲ್ಲ. ಏಕೆಂದರೆ ಈ ವಿಷಯದ ಬಗೆಗಿನ ಸಾಕ್ಷಿಗಳನ್ನು ಪರಿಶೀಲಿಸಲು ನಾನು ಕಾಯುತ್ತಿದ್ದೇನೆ. ನೀವು ಈ ತಂತಿ ಸಂದೇಶಗಳನ್ನು ಅವಲೋಕಿಸಿದ್ದಿರಾ? ಅವೆಲ್ಲವೂ ಕಾಂಗ್ರೆಸ್ ಜನರಿಂದ ಬಂದಿಲ್ಲವಷ್ಟೇ?

ಸರ್ ಸ್ಯಾಮ್ಯುಯೆಲ್ ಹೋರ್: ಅವೆಲ್ಲವೂ ಹಿಂದೂಗಳಿಂದ ಬಂದಿವೆ. ಆ ಸಲಹೆಗಳೆಲ್ಲ ಕೇವಲ ಕಾಂಗ್ರೆಸ್ ಹಿಂದೂಗಳಿಂದ ಬಂದಿವೆ ಎಂಬುದನ್ನು ಒಂದು ಕ್ಷಣವೂ ಒಪ್ಪಿಕೊಳ್ಳಲು ನಾನು ಸಿದ್ಧನಿಲ್ಲ.

ಸರ್ ಎನ್. ಎನ್. ಸರ್ಕಾರ್: ಸಾಕಷ್ಟು ವಿರೋಧವು ಬಂದಿಲ್ಲವೇ, ಹಲವು ಜನರಿಂದ ಒಪ್ಪಂದದ ಪರ ತಂತಿ ಸಂದೇಶಗಳು ಬರುತ್ತಿದ್ದಾಗ, ನಾನು ಹೀಗೆ ಹೇಳಲೇ, ಮಹಾತ್ಮಾ ಗಾಂಧಿ ಆ ಬೆದರಿಕೆಯನ್ನು ಹಾಕಿದಾಗ ಹಿಂದೂ ಸಮುದಾಯದ ಬಹುಸಂಖ್ಯಾತರನ್ನು ಬಗ್ಗು ಬಡಿದಂತಾಗಲಿಲ್ಲವೇ? ಸರ್ಕಾರವು ಕೂಡ ಈ ಘಟನೆಗೆ ಹೊಣೆಯಾಯಿತು ಎನ್ನುವುದು ಸರಿಯಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಇದು ನಮಗೆ ಹೊಳೆಯಲೇ ಇಲ್ಲ.

ಸರ್ ಎನ್. ಎನ್. ಸರ್ಕಾರ್: ಅದು ನಿಮಗೆ ಈಗ ಹೊಳೆಯುತ್ತಿದೆ ಎಂದರೆ ಹೀಗೆ ಹೇಳುವೆ: "ಬ್ರಿಟಿಷ್ ಸರ್ಕಾರ ಹೀಗೇ ಹೀಗೇ ಮಾಡದಿದ್ದರೆ ನಾನು ಆಮರಣಾಂತ ಉಪವಾಸ ಮಾಡುವೆ" ಎಂದು ಅವರು ಹೇಳಿದಾಗ ನೀವು ಭಾರತ ದಂಡ ಸಂಹಿತೆಯ ೫೦೬ನೇ ಕಲಮು ತೋರಿಸಿ "ಹೀಗೆ ಮಾಡುವುದು ಅಪರಾಧ; ನಿಮ್ಮನ್ನು ಬಿಡುಗಡೆ ಮಾಡುತ್ತಿದ್ದೇವೆ" ಎಂದು ಹೇಳಿದಿರಿ. ಒಂದು ವೇಳೆ ಅವರು ಉಪವಾಸ ಮುಂದುವರೆಸಿದ್ದರೆ ಏನು ಪರಿಣಾಮವಾದೀತೆಂಬುದು ಸರ್ಕಾರಕ್ಕೂ ತಿಳಿದಿರಲಿಲ್ಲವೇ? ಭಾರತ ದಂಡ ಸಂಹಿತೆಯ ಪ್ರಕಾರ ಯಾವುದು ಅಪರಾಧವೋ ಅದನ್ನು ನೀವು ಎದುರಾಡದೇ ಒಪ್ಪಿಕೊಂಡಿದ್ದಷ್ಟೇ ಅಲ್ಲದೇ, ಜೈಲಿನಲ್ಲಿರಬೇಕಾದ ವ್ಯಕ್ತಿ ಬಿಡುಗಡೆಯಾಗಬೇಕು ಎಂದು ನೀವು ಸಲಹೆ ಮಾಡಿದಿರಿ.

ಸರ್ ಸ್ಯಾಮ್ಯುಯೆಲ್ ಹೋರ್: ನಾವು ಯಾವುದೇ ಭಯಕ್ಕೊಳಗಾಗಿ ಅಥವಾ ಅವಸರದಲ್ಲಿ ಕೆಲಸ ಮಾಡಲಿಲ್ಲ. ಸರ್ ನೃಪೇಂದ್ರ ಸರ್ಕಾರ್ ಅವರಿಗೆ ನಾನು ಆಶ್ವಾಸನೆ ಕೊಡುತ್ತೇನೆ. ನಮಗೆ ಲಭ್ಯವಿದ್ದ ಎಲ್ಲಾ ಸಾಕ್ಷ್ಯಗಳನ್ನು ಒರೆಗೆ ಹಚ್ಚಿ ಸಿದ್ಧಪಡಿಸಿ ಕೋಮು ತೀರ್ಮಾನದ ಪ್ರಕಾರ ಈ ಒಪ್ಪಂದ ಅಗಿದೆಯೇ ಎಂಬ ದೃಷ್ಟಿಕೋನದಿಂದ ನಾವು ಆ ಪ್ರಶ್ನೆಯನ್ನು ನೋಡಿದ್ದೆವು. ಒಪ್ಪಂದವು ಕೋಮು ತೀರ್ಮಾನದ ಪ್ರಕಾರವೇ ಆಗಿದೆ ಎಂಬುದು ನಮ್ಮ ನಂಬಿಕೆಯಾಗಿತ್ತು.

ಸರ್ ಎನ್. ಎನ್. ಸರ್ಕಾರ್: ೧೯೩೨ ಡಿಸೆಂಬರ್‌ನಲ್ಲಿ ಬಂಗಾಲ ಪರಿಷತ್ತಿನ ಸದಸ್ಯರಿಂದ ನವೆಂಬರ್‌ನಲ್ಲಿ ಇಲ್ಲಿಗೆ ಬಂದ ಕೆಲವು ತಂತಿ ಸಂದೇಶಗಳನ್ನು ಲಗತ್ತಿಸಿ ನಾನು ಒಂದು ಪತ್ರದ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಿದ್ದು ನಿಮಗೆ ಗೊತ್ತಿರಬಹುದು.

ಸರ್ ಸ್ಯಾಮ್ಯುಯೆಲ್ ಹೋರ್: ಆರಂಭದಿಂದ ಕೊನೆಯವರೆಗೆ ಸರ್ ನೃಪೇಂದ್ರ ಸರ್ಕಾರ್ ಅವರು ಈ ವಿಷಯದಲ್ಲಿ ಬಹಳ ಆಸಕ್ತಿ ವಹಿಸಿದ್ದಾರೆಂಬುದು ನನಗೆ ತಿಳಿದಿದೆ. ಪರಿಷತ್ತಿನ ಸದಸ್ಯರ ವಿನಂತಿ ಮೇರೆಗೆ ನಾನು ಆ ಪತ್ರವನ್ನು ಪ್ರಧಾನಿಗೆ ಕಳಿಸಿದೆ. ಬಂಗಾಲ ಪರಿಷತ್ತಿನ ೨೫ ಸದಸ್ಯರ ಬಂಗಾಲಕ್ಕೆ ಪ್ರಾತಿನಿಧ್ಯ ಇಲ್ಲ. ಇತ್ಯಾದಿ ವಿರೋಧ ಸೂಚಿಸಿದ್ದ ಈ ತಂತಿ ಸಂದೇಶವನ್ನು ಆ ಪತ್ರಕ್ಕೆ ಲಗತ್ತಿಸುವ ಮುನ್ನ ಡಾ. ಅಂಬೇಡ್ಕರ್ ಅವರಿಗೆ ತೋರಿಸಲಾಯಿತು. ಅವರು ಮುಂಬಯಿಗೆ ಒಂದು ತಂತಿ ಸಂದೇಶ ಕಳಿಸಿ, ಈ ತಂತಿ ಸಂದೇಶಕ್ಕೆ ಉತ್ತರವೇನೆಂದು ತಿಳಿಯಬಯಸಿದರು. ಅಂದರೆ, ಅವರು ಮುಂಬಯಿಯಿಂದ ತಮ್ಮ ವಿಚಾರವನ್ನು ವ್ಯಕ್ತಪಡಿಸಲು ಸಾಧ್ಯವಾಗಲೆಂದು ನಾನು ಅದನ್ನು ಅವರಿಗೆ ತೋರಿಸಿದೆ. ಅದು ಉಚಿತ ಎಂದೂ ನನಗನಿಸಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ಸರ್ ನೃಪೇಂದ್ರ ಸರ್ಕಾರ್ ಅವರು ದಯವಿಟ್ಟು ನನ್ನನ್ನು ಕ್ಷಮಿಸಬೇಕು. ಆ ಥರ ಯಾವುದನ್ನೂ ನಾನು ಮಾಡಿಲ್ಲ. ನೃಪೇಂದ್ರ ಸರ್ಕಾರ್ ಅವರು ನನಗೆ ಕೆಲವು ತಂತಿ ಸಂದೇಶಗಳನ್ನು ತೋರಿಸಿದ್ದರೆಂದು, ಆ ಬಗ್ಗೆ ನಾನು ಮುಂಬಯಿಯಿಂದ ಕೆಲವು ಮಾಹಿತಿ ತರಿಸಿಕೊಳ್ಳಬೇಕಾಗಿ ಅವರು ಕೇಳಿದ್ದರೆಂದು ಹೇಳುತ್ತಿದ್ದಾರೆ. ಆದರೆ ನಾನು ಅದ್ಯಾವುದನ್ನೂ ಮಾಡಲಿಲ್ಲ.

ಸರ್ ಎನ್. ಎನ್. ಸರ್ಕಾರ್: ಡಾ. ಅಂಬೇಡ್ಕರ್ ಅವರು ಆಗ ನನ್ನ ಕೈಗೆ ಇತ್ತ ಪ್ರತಿ ಒಂದು ನನ್ನ ಬಳಿ ಇದೆ. ಅವರು ತರಿಸಿಕೊಂಡ ಉತ್ತರವನ್ನು ನಾನು ಈಗ ಓದುವೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಉತ್ತರವಲ್ಲ; ನನಗೆ ಬಂದ ಸ್ವತಂತ್ರವಾದ ತಂತಿ ಸಂದೇಶ.

ಸರ್ ಎನ್. ಎನ್. ಸರ್ಕಾರ್: ಇಲ್ಲಿ ಮುಖ್ಯವಾಗಿರುವುದು ತಂತಿ ಸಂದೇಶದ ಒಕ್ಕಣೆ. ಮುಂಬಯಿಯಲ್ಲಿ ಹಾಜರ್ ಇಲ್ಲದಿದ್ದರಿಂದಲೇ ಬಂಗಾಲದ ಹಿಂದೂಗಳಿಗೆ ಈ ಗತಿ ಬಂದಿದೆ. ಅಂದರೆ ನಾವು ಒಪ್ಪಂದದ ಚರ್ಚೆಯಲ್ಲಿ ಭಾಗವಹಿಸದಿದ್ದುದಕ್ಕಾಗಿ ನಮಗೀ ಗತಿ ಎಂಬ ಒಕ್ಕಣೆ ತಂತಿ ಸಂದೇಶದಲ್ಲಿತ್ತು. ಪ್ರಧಾನಿಗೆ ಕಳಿಸಿದ ತಂತಿ ಸಂದೇಶಗಳಲ್ಲಿ ನೀವು ಅದನ್ನು ನೋಡಿರಲೇಬೇಕೆಂದು ನನ್ನ ನಂಬಿಕೆ.

ಸರ್ ಸ್ಯಾಮುಯೆಲ್ ಹೋರ್: ಆ ತಂತಿ ಸಂದೇಶಗಳನ್ನು ಡಿಸೆಂಬರ್‌ನಲ್ಲಿ ಕಳಿಸಲಾಯಿತು. ವಾಸ್ತವವಾಗಿ ಮಾತುಕತೆಯು ನಡೆಯುತ್ತಿದ್ದಾಗ ಅಲ್ಲ. ಇದು ನಿಜಕ್ಕೂ ದುರದೃಷ್ಟಕರ ಸಂಗತಿ ಎಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ತಂತಿ ಸಂದೇಶವು ನವೆಂಬರ್‌ದ್ದು. ಕಳಿಸಿದ್ದು ಡಿಸೆಂಬರ್‌ನಲ್ಲಿ ಯಾಕೆಂದರೆ ನಾನು ಉತ್ತರಗಳಿಗಾಗಿ ಕಾಯುತ್ತಿದ್ದೆ. ಬಂಗಾಲ ಪರಿಷತ್ತು ಮೊಟ್ಟ ಮೊದಲ ಬಾರಿಗೆ ಈ

ಮಾತುಕತೆಯ ನಂತರ ನವೆಂಬರ್‌ನಲ್ಲಿ ಸಭೆ ಸೇರಿತು. ಅವರು ಸಭೆ ಸೇರಿದ ಕೂಡಲೇ ೨೫ ಜನ ಸದಸ್ಯರು ಈ ಸಂದೇಶ ಅಥವಾ ಮನವಿಯನ್ನು ಪ್ರಧಾನಿಗೆ ಕಳಿಸಿದರು. ಯಾರು ಏನೇ ಹೇಳಲಿ. ನನಗೆ ಹೇಳಬೇಕಾಗಿದ್ದು ಇಷ್ಟೇ. ಆ ತಂತಿ ಸಂದೇಶದಲ್ಲಿ ಬಂಗಾಲದ ಬಗ್ಗೆ ಏನನ್ನೂ ಹೇಳಿಲ್ಲ.

ಒಂದು ಚಿಕ್ಕ ಪ್ರಶ್ನೆ. ಪುಣೆ ಒಪ್ಪಂದ ಮತ್ತು ಕೋಮು ತೀರ್ಮಾನದ ಪರಿಣಾಮವಾಗಿ ಸೃಷ್ಟಿಯಾದ ಪರಿಸ್ಥಿತಿಯಿಂದ ಗಂಭೀರ ಹಾಗೂ ಭಯಾನಕ ಪರಿಣಾಮಗಳು ಬಂಗಾಲದಲ್ಲಿ ಕಾಣುತ್ತವೆ ಎಂಬ ಅಭಿಪ್ರಾಯವನ್ನು ಸರ್ ಸ್ಯಾಮ್ಯುಯೆಲ್ ಹೋರ್ ಅವರು ಅನುಮೋದಿಸುತ್ತಾರೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ನಾನು ಹಾಗೆ ಭಾವಿಸುವುದಿಲ್ಲ.

ಸರ್ ಎನ್. ಎನ್. ಸರ್ಕಾರ್: ನಾನು ಹಾಗೆ ಭಾವಿಸುತ್ತೇನೆ.

ಡಾ. ಬಿ. ಆರ್. ಅಂಬೇಡ್ಕರ್: ಮಹಮದೀಯರಿಗೆ ಕೊಟ್ಟಿರುವ ೧೧೯ರಷ್ಟು ಹೆಚ್ಚು ಸ್ಥಾನಗಳನ್ನು ೧೦ ಅಥವಾ ೧೨ಕ್ಕೆ ಇಳಿಸಿದರೆ ಬಂಗಾಲದಲ್ಲಿ ಭಯಾನಕ ಪರಿಣಾಮಗಳು ಉಂಟಾಗುವುದೆಂದು ನಿಮ್ಮ ಅಭಿಪ್ರಾಯವೇ?

ಸರ್ ಎನ್. ಎನ್. ಸರ್ಕಾರ್: "ಆ ಸ್ಥಾನಗಳು ಹೆಚ್ಚು" ಎಂಬರ್ಥದ ಪದಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ ಮತ್ತು ಇದರ ಪರಿಣಾಮವಾಗಿ ಭಯಾನಕ ಪರಿಣಾಮ ಉಂಟಾಗುವುದೆಂದೂ ನನಗನಿಸುವುದಿಲ್ಲ.

* * * * *

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಸರದಿಯು ಬಂದಾಗ ಸರ್ ನೃಪೇಂದ್ರ ಸರ್ಕಾರ್ ಅವರು ಇಲ್ಲಿ ಇಲ್ಲದೇ ಹೋದಾರು; ಆದ್ದರಿಂದ ಅವರು ಕೇಳಿರುವ ಒಂದೆರಡು ಪ್ರಶ್ನೆಗಳ ಬಗ್ಗೆ ನಾನು ಕ್ಷಣಕಾಲ ಹೇಳಿಕೆಯೊಂದನ್ನು ನೀಡಲೇ? ಕಳೆದ ವರ್ಷ ೩ನೇ ದುಂಡು ಮೇಜಿನ ಪರಿಷತ್ತು ನಡೆದಾಗ ತಮಗೆ ಒಂದು ತಂತಿ ಸಂದೇಶ ಬಂದಿದ್ದಾಗಿ, ಅದಕ್ಕೆ ಉತ್ತರವಾಗಿ ನಾನು ಒಂದು ತಂತಿ ಸಂದೇಶವನ್ನು ಪಡೆದೆ ಎಂದು ನೃಪೇಂದ್ರ ಸರ್ಕಾರ್ ಅವರು ಹೇಳಿದರು. ನಾನು ಸ್ಪಷ್ಟಪಡಿಸಲಿಚ್ಛಿಸುವುದೇನೆಂದರೆ, ನನಗೆ ಬಂದ ತಂತಿ ಸಂದೇಶವು ನಾನು ಮಾಡಿದ ಯಾವುದೇ ತನಿಖೆಗೆ ಉತ್ತರವಾಗಿರಲಿಲ್ಲ; ನಾನು ತಪ್ಪಿದ್ದರೆ ಸರ್ ನೃಪೇಂದ್ರ ಸರ್ಕಾರ್ ಅವರು ತಿದ್ದಬಹುದು.

ಸರ್ ನೃಪೇಂದ್ರ ಸರ್ಕಾರ್: ನಾನು ಸಂಕ್ಷಿಪ್ತವಾಗಿ ಹೇಳುವೆ.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಒಂದು ಮಾತು ಹೇಳಬೇಕಾಗಿದೆ.

ಅಧ್ಯಕ್ಷ: ಡಾ. ಅಂಬೇಡ್ಕರ್ ತಮ್ಮ ಹೇಳಿಕೆಯನ್ನು ನೀಡಲಿ.

ಡಾ. ಬಿ. ಆರ್. ಅಂಬೇಡ್ಕರ್: ಸರ್ ನೃಪೇಂದ್ರ ಸರ್ಕಾರ್ ಅವರಿಗೆ ಬಂದ ತಂತಿ ಸಂದೇಶವು ಭಾರತೀಯ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಉಪವಾಸ ಸತ್ಯಾಗ್ರಹ ಮುಗಿದ ನಂತರ ಮಹಾತ್ಮಾ ಗಾಂಧಿಯವರು ಸ್ಥಾಪಿಸಿದ ಅಸ್ಪೃಶ್ಯತಾ ವಿರೋಧ ಮಂಡಳಿಯ ಸದಸ್ಯರಿಗೆ, ಪುಣೆ ಒಪ್ಪಂದವನ್ನು ವಿರೋಧಿಸಿ ನೃಪೇಂದ್ರ ಸರ್ಕಾರ್ ಅವರಿಗೆ ಈ ತಂತಿ ಸಂದೇಶವನ್ನು ಕಳಿಸಲಾಗಿತ್ತು ಎಂದು ಗೊತ್ತಾದಾಗ, ಅವರು ತಾವೇ ನಿರ್ಧರಿಸಿ ನನಗೆ ಒಂದು ತಂತಿ ಸಂದೇಶವನ್ನು ಕಳಿಸಿದ್ದರು. ಸರ್ ನೃಪೇಂದ್ರ ಸರ್ಕಾರ್ ಅವರು ಉಲ್ಲೇಖಿಸುತ್ತಿರುವುದು ಈ ಸಂದೇಶವನ್ನು. ನಾನು ನಡೆಸಿದ ಯಾವುದೇ ತನಿಖೆಗೆ ಉತ್ತರವಾಗಿ ಬಂದ ತಂತಿ ಸಂದೇಶ ಅದಲ್ಲ. ಸಮಿತಿಯ ಗಮನಕ್ಕೆ ನಾನು ತರಬಯಸುವ ಮುಂದಿನ ಅಂಶವೇನೆಂದರೆ, ಪುಣೆ ಒಪ್ಪಂದವನ್ನು ವಿರೋಧಿಸಿ ಬಂಗಾಲದ ಸ್ನೇಹಿತರು ತಮಗೆ ಕಳಿಸಿದ ತಂತಿ ಸಂದೇಶವನ್ನು ಸರ್ ನೃಪೇಂದ್ರ

ಸರ್ಕಾರ್ ಅವರು ನನಗೆ ತೋರಿಸಿ, ಯಾವುದೇ ವ್ಯಾಖ್ಯಾನವಿಲ್ಲದೆ ಪ್ರಧಾನಿಯ ಗಮನಕ್ಕೆ ತರುವ ಉದ್ದೇಶದಿಂದ ಅದನ್ನು ಕಳಿಸುವುದಾಗಿ ಮಾತ್ರ ಹೇಳಿದರು. ಆ ಪತ್ರವನ್ನು ಪ್ರಧಾನಿಗೆ ರವಾನಿಸಿದ್ದಷ್ಟೇ ಅಲ್ಲದೆ, ಪುಣೆ ಒಪ್ಪಂದವಾದಾಗ ಬಂಗಾಲದ ಸವರ್ಣೀಯ ಹಿಂದೂ ಪ್ರತಿನಿಧಿಗಳಿಗೆ ಅವಕಾಶವಿತ್ತೇ ಎಂಬ ಬಗ್ಗೆ ವಿಚಾರಣೆ ನಡೆಸಲು ಪ್ರಧಾನಿಯನ್ನು ಅವರು ಒತ್ತಾಯಿಸಿದ್ದು ನನಗೆ ತಿಳಿಯಿತು. ಈ ಹಿನ್ನೆಲೆಯಲ್ಲಿ ನಾನು ತಕ್ಷಣ ಪ್ರಧಾನಿಗೆ ಒಂದು ಪತ್ರವನ್ನು ಬರೆದೆ. ಜತೆಗೆ ನನಗೆ ಬಂದಿದ್ದ ತಂತಿ ಸಂದೇಶಗಳನ್ನೂ ರವಾನಿಸಿದೆ. ಪುಣೆ ಒಪ್ಪಂದವಾದಾಗ ಬಂಗಾಲದ ಸವರ್ಣೀಯ ಹಿಂದೂಗಳಿಗೆ ಪ್ರಾತಿನಿಧ್ಯವಿರಲಿಲ್ಲ ಎಂದು ನಮೂದಿಸಲಾದ ತಂತಿ ಸಂದೇಶವು ನನ್ನ ತಿಳುವಳಿಕೆ ಮಟ್ಟಿಗೆ ಸರಿಯಿಲ್ಲ ಎಂದೂ ತಿಳಿಸಿದ್ದೆ. ಏಕೆಂದರೆ ಪುಣೆ ಒಪ್ಪಂದವಾದಾಗ ಬಂಗಾಲದ ಸವರ್ಣೀಯ ಹಿಂದೂ ಸದಸ್ಯರು ಹಾಜರಿದ್ದರು ಎಂಬ ಸಂಗತಿ ನನಗೆ ತಿಳಿದಿತ್ತು. ನನ್ನೊಂದಿಗೆ ಅವರು ಆಗ ಮಾತನಾಡಿದ್ದರು. ಒಪ್ಪಂದಕ್ಕೆ ಬರಲು ಕೋರಿದ್ದರು. ಪ್ರಧಾನಿಗೆ ಬರೆದ ಪತ್ರದ ಪ್ರತಿಯನ್ನು ನನ್ನ ಸರದಿ ಬಂದಾಗ ನಾನು ಸಮಿತಿಯ ಮುಂದಿಡುವೆ. ಈ ಹಂತದಲ್ಲಿ ನಾನು ಹೇಳಬಯಸುವುದು ಇಷ್ಟು.

* ಸರ್ ಮಿರ್ಜಾ ಇಸ್ಮಾಯಿಲ್: ಸರ್ಕಾರವನ್ನು ನೇಮಿಸುವ ಶಾಸನ ಸಭೆಯು ಮೇಲ್ಮನೆಯ ಸದಸ್ಯರನ್ನು ನೇಮಕ ಮಾಡುವುದು ಎಂದು ಲಾರ್ಡ್ ಲೋಥಿಯಾನ್ ಹೇಳಿದರು. ಒಮ್ಮೆ ಈ ಸದಸ್ಯರು ಶಾಸನ ಸಭೆಯಿಂದ ಚುನಾಯಿತರಾದ ನಂತರ ಅವರಿಗೆ ಯಾವ ಜವಾಬ್ದಾರಿಯೂ ಉಳಿಯುವುದಿಲ್ಲ. ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಫೆಡರಲ್ ಸರ್ಕಾರದ ಮುಂದೆ ಬರುವ ಪ್ರತಿಯೊಂದು ವಿಷಯದ ಬಗ್ಗೆ ಅವರು ಶಾಸನ ಸಭೆಯ ಸಲಹೆಯನ್ನು ಪಡೆಯುವುದಿಲ್ಲ. ಒಮ್ಮೆ ಅವರು ಚುನಾಯಿತರಾದರೆ ಅವರು ಸ್ವತಂತ್ರರಾಗುತ್ತಾರೆ. ಆದರೆ ಪ್ರಾಂತೀಯ ಸರ್ಕಾರದ ಅಭಿಪ್ರಾಯವೇನೆಂದು ತಿಳಿಯಲು ಫೆಡರಲ್ ಸರ್ಕಾರ ಬಯಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತದಲ್ಲಿ ಇಂದು ಇರುವ ಸರ್ಕಾರವೇ?

ಸರ್ ಮಿರ್ಜಾ ಇಸ್ಮಾಯಿಲ್: ಹೌದು.

ಡಾ. ಬಿ. ಆರ್. ಅಂಬೇಡಕರ್: ಪ್ರಾಂತೀಯ ಸರ್ಕಾರದಲ್ಲಿ ಬದಲಾವಣೆಯಾದರೆ ಕೇಂದ್ರದಲ್ಲಿ ಪ್ರಾತಿನಿಧ್ಯವು ಬದಲಾಗುತ್ತದೆ, ಅಲ್ಲವೇ?

ಸರ್ ಮಿರ್ಜಾ ಇಸ್ಮಾಯಿಲ್: ಹೌದು. ಈಗಾಗಲೇ ಬೆಳೆಯುತ್ತಿರುವ ಪ್ರಾಂತೀಯ ಅತಿರೇಕವನ್ನು ನಿಮಗೆ ತಡೆಯಬೇಕಾಗಿದ್ದರೆ, ಇದೇ ಉತ್ತಮ ಮಾರ್ಗವೆಂದು ನನಗೆ ತೋರುತ್ತದೆ. ಈಗಾಗಲೇ ಕೆಳಮನೆಯಲ್ಲಿ ನಿಮಗೆ ಜನಪ್ರಿಯತೆ ಇದೆ. ಪ್ರಜಾಸತ್ತಾತ್ಮಕ ದೃಷ್ಟಿಯಿಂದ ಇದಕ್ಕೆ ಆಕ್ಷೇಪ ಇರಲೇಕೂಡದು. ಏಕೆಂದರೆ ಪ್ರಾಂತಗಳಲ್ಲಿ ಪ್ರಜಾಸತ್ತಾತ್ಮಕ ಸರ್ಕಾರಗಳಿವೆ.

ಡಾ. ಬಿ. ಆರ್. ಅಂಬೇಡ್ಕರ್: ಒಂದು ನಿರ್ದಿಷ್ಟ ವಿಷಯದ ಮೇಲೆ ಜನಮತ ಪಡೆಯಲು ಅವರನ್ನು ಮತದಾನಕ್ಕೆ ಒಳಪಡಿಸಿ.

ಎಂ. ಆರ್. ಜಯಕರ್: ಈ ದಾರಿಯನ್ನು ಹಿಡಿದರೆ ಪ್ರಾಂತೀಯ ಶಾಸನ ಸಭೆಗಳು ೫ ವರ್ಷ ಕಾಲ, ಜಫರುಲ್ಲಾ ಖಾನ್ ಅವರು ಹೇಳಿದಂತೆ, ಮೇಲ್ಮನೆಯು ೭ ವರ್ಷ ಕಾಲ ಅಸ್ತಿತ್ವದಲ್ಲಿದ್ದರೆ ಸಿಬ್ಬಂದಿಯಲ್ಲಿ ಅತ್ಯವಶ್ಯವಾಗಿ ಒಂದು ಬದಲಾವಣೆಯಾಗಬೇಕೆಂದು ಅರ್ಥವಾಗುವುದಿಲ್ಲವೇ.

---

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨–ಬಿ, ೨೫ ಜುಲೈ ೧೯೩೩, ಪುಟ ೮೯

* * ಡಾ. ಬಿ. ಆರ್. ಅಂಬೇಡ್ಕರ್: ಫೆಡರೇಷನ್ ಪ್ರವೇಶಿಸಿದ ಬಳಿಕ ಬೇರೆ ಬೇರೆ ಸಂಸ್ಥಾನಗಳು ಮಾಡುವ ಸಂವಿಧಾನ ಕಾಯ್ದೆಯಲ್ಲಿ ಅವಕಾಶವಿರುತ್ತದೆಯೇ ಎಂದು ನಾನು ಸೆಕ್ರೆಟರಿ ಆಫ್ ಸ್ಟೇಟ್‌ರವರನ್ನು ಕೇಳಬಯಸುವೆ.

ಸರ್ ಸ್ಯಾಮ್ಯುಯೆಲ್ ಹೋರ್: 'ಇಲ್ಲ.' ಅಲ್ಲಿ ಅವಕಾಶವಿರುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ಕೋರ್ಟಿನಲ್ಲಿ ವಿವಾದವೊಂದು ಉದ್ಭವಿಸಿದ್ದಾಗಿ ಭಾವಿಸೋಣ. ನಿರ್ದಿಷ್ಟ ವಿಷಯ ಒಂದು ಒಕ್ಕೂಟದ ಕಕ್ಷೆಯೊಳಗೆ ಬರುತ್ತದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸುವುದು ಕೋರ್ಟಿಗೆ ಹೇಗೆ ಸಾಧ್ಯ?

ಸರ್ ಸ್ಯಾಮ್ಯುಯೆಲ್ ಹೋರ್: ಒಬ್ಬ ಸಾಮಾನ್ಯ ಮನುಷ್ಯನಾಗಿ ನಾನು ಹೇಳುತ್ತೇನೆ. ಈಗ ಅವರು ಒಪ್ಪಂದಗಳನ್ನು ಪರಿಗಣಿಸುವ ಹಾಗೆ ಆಗಲೂ ಅವರು ಒಪ್ಪಂದವನ್ನು ಪರಿಗಣಿಸುತ್ತಾರೆಂಬುದೇ ನನ್ನ ಊಹೆ.

ಸರ್ ತೇಜ್ ಬಹದ್ದೂರ್ ಸಪ್ರು: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಆದರೆ, ಅದು ಸಂವಿಧಾನ ಖಾತೆಯ ಅಂಗವಾಗಿ ಅಲ್ಲ, ಅಲ್ಲವೇ?

ಸರ್ ಸ್ಯಾಮ್ಯುಯಲ್ ಹೋರ್: ಹಾಗಲ್ಲ, ಸಂವಿಧಾನ ಕಾಯ್ದೆಯಲ್ಲಿ ಅದು ಇರುವುದಿಲ್ಲ. ಈಗ ಸಂಸತ್ತಿನ ಯಾವುದೇ ಕಾಯ್ದೆಯಲ್ಲಿ ಒಪ್ಪಂದಗಳು ಇರುವುದಿಲ್ಲ. ಆದರೂ (ಸರ್ ತೇಜ್ ಬಹಾದ್ದೂರ್ ಸಪ್ರು ಮತ್ತು ಇತರ ಭಾರತೀಯರು ನಾನು ತಪ್ಪು ಹೇಳಿದರೆ ತಿದ್ದಲಿ) ಒಪ್ಪಂದಗಳನ್ನು ನಿರಂತರವಾಗಿ ಪರಿಗಣಿಸಲಾಗಿದೆ.

ಸರ್ ತೇಜ್ ಬಹಾದ್ದೂರ್ ಸಪ್ರು: ಹೌದು, ಒಪ್ಪಂದಗಳು ಎಲ್ಲೆಡೆ ಮುನಿಸಿಪಲ್ ಕಾಯ್ದೆಯ ಭಾಗವಾಗಿದೆ.

* ಡಾ. ಬಿ. ಆರ್. ಅಂಬೇಡ್ಕರ್: ಶ್ವೇತ ಪತ್ರದ ೭೦ನೇ ಪ್ರಸ್ತಾಪದ ಮೇರೆಗೆ ಗವರ್ನರ್ ಜನರಲ್‌ರವರು ಕಾನೂನು ಪ್ರಕಾರ ಹೊರಡಿಸಿದ ಆಜ್ಞೆಗಳು ಜಾರಿಯಾಗುವಂತೆ ನೋಡಿಕೊಳ್ಳುವುದು ಗವರ್ನರರ ವಿಶೇಷ ಜವಾಬ್ದಾರಿಯಾಗಿದೆ ಎಂಬ ಸಂಗತಿಯ ಕಡೆ ನಾನು ಗವರ್ನರರ ಗಮನ ಸೆಳೆಯಬಹುದೇ?

ಸರ್ ಸ್ಯಾಮ್ಯುಯೆಲ್ ಹೋರ್: ಆಗಲಿ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತೀಯ ಸರ್ಕಾರಗಳು ಜಾರಿಗೊಳಿಸಲು ಬಾಧ್ಯವಾಗುವ ಯಾವುದೇ ಆಜ್ಞೆಯನ್ನು (ಹಣಕಾಸಿಗೆ ಸಂಬಂಧಪಟ್ಟಂತೆ) ಗವರ್ನರ್ ಜನರಲ್ ಹೊರಡಿಸಿದರೆ, ಅವುಗಳು ಜಾರಿಯಾಗುವಂತೆ ನೋಡಿಕೊಳ್ಳಲು ಗವರ್ನರರು ಮುಂದಾಗುತ್ತಾರೋ?

ಸರ್ ಸ್ಯಾಮ್ಯುಯೆಲ್ ಹೋರ್: ಫೆಡರಲ್ ಕರ ಹೇರಿಕೆ ವಿಷಯದಲ್ಲಿ ಅದು ಹಾಗೆಯೇ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತೀಯ ಸರ್ಕಾರಗಳು ಜಾರಿಗೊಳಿಸಬೇಕೆಂದು ಒಕ್ಕೂಟವು ಹೊರಡಿಸುವ ಯಾವುದೇ ಆಜ್ಞೆಗಳು ಜಾರಿಯಾಗುವಂತೆ ನೋಡಿಕೊಳ್ಳಬೇಕಾದುದೂ ಗವರ್ನರರ ವಿಶೇಷ ಜವಾಬ್ದಾರಿ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು, ಗವರ್ನರ್ ಜನರಲ್ ಹೊರಡಿಸುವ ಯಾವುದೇ ಆಜ್ಞೆಗಳನ್ನು ಜಾರಿಗೊಳಿಸುವ ಜವಾಬ್ದಾರಿ ಗವರ್ನರರದು.

* * 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೨೫ ಜುಲೈ ೧೯೩೩ ಪುಟ ೯೦೧.

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨–ಬಿ, ೨೭ ಜುಲೈ ೧೯೩೩, ಪುಟ ೯೪೫

ಸರ್ ಹರಿಸಿಂಗ್ ಗೌರ್: ಗವರ್ನರ್ ಜನರಲ್ ಕಾನೂನು ಪ್ರಕಾರ ಹೊರಡಿಸುವ ಆಜ್ಞೆಗಳನ್ನು?

ಡಾ. ಬಿ. ಆರ್. ಅಂಬೇಡ್ಕರ್: ನಿಜವೇ. ಕಾನೂನು ಪ್ರಕಾರ ಹೊರಡಿಸುವ ಆಜ್ಞೆಗಳನ್ನೆ. ಇನ್ನೊಂದು ಪ್ರಶ್ನೆ. ಕೇಂದ್ರ ಮತ್ತು ಪ್ರಾಂತಗಳ ಆಡಳಿತ ಸಂಬಂಧ ಹೇಳುವ ಶ್ವೇತಪತ್ರದ ಪ್ರಸ್ತಾಪಗಳ ವಿಭಾಗದಲ್ಲಿ, ಕೇಂದ್ರ ಖಾತೆಗಳ ಆಡಳಿತವನ್ನು ನೋಡಿಕೊಳ್ಳಲು ಪ್ರಾಂತೀಯ ಸಿಬ್ಬಂದಿಯ ಸೇವೆಯನ್ನು ಕೇಂದ್ರವು ಬಳಸಿಕೊಳ್ಳಬಹುದೇ ಎಂಬುದು ಪ್ರಾಂತಕ್ಕೆ ಸೇರಿದ ವಿಷಯ. ಈ ಬಗ್ಗೆ ಅವಕಾಶ ಕಲ್ಪಿಸಲಾಗಿದೆ ಎಂದು ನನಗನಿಸುತ್ತದೆ. ಅದು ತನ್ನದೇ ಆದ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದು.

ಸರ್ ಸ್ಯಾಮ್ಯುಯೆಲ್ ಹೋರ್: ಬೇರೆ ಒಕ್ಕೂಟಗಳ ಉದಾಹರಣೆಯಿಂದ ಹೇಳುವುದಾದರೆ, ಆಡಳಿತದ ಒಂದೇ ಪ್ರಕ್ರಿಯೆಯು ಎರಡೂ ಆಡಳಿತಗಳಲ್ಲಿ ನಡೆಯುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕೆಂದು ನಾನು ಸದಾ ಆಶಿಸುತ್ತೇನೆ. ಸಾಮಾನ್ಯವಾಗಿ ಹೇಳುವುದಾದರೆ, ಭಾರತದಾದ್ಯಂತ ಆಡಳಿತಗಳನ್ನು ಪರಸ್ಪರರ ಬದಲು ಬಳಸುವುದು ಬಿಟ್ಟು, ಫೆಡರಲ್ ಸ್ವರೂಪದೊಳಗೆ ಒಕ್ಕೂಟದ ನಿರ್ದೇಶನಗಳನ್ನು ಪ್ರಾಂತೀಯ ಆಡಳಿತ ಜಾರಿಗೊಳಿಸುವುದು ಉತ್ತಮ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಎತ್ತಿ ತೋರಬಯಸಿದ ವಿಷಯ ಇದು. ಒಂದು ವೇಳೆ ಪ್ರಾಂತೀಯ ಸರ್ಕಾರಗಳು ಅವಿಧೇಯರಾದರೆ ಮತ್ತು ಕೇಂದ್ರ ಸರ್ಕಾರದ ಹಿಡಿತಕ್ಕೆ ಉತ್ತರದಾಯಿ ಆಗದೇ ಇದ್ದರೆ, ಕೇಂದ್ರವು ಪ್ರಾಂತದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲೇಬೇಕಾಗುತ್ತದೆ. ಮತ್ತು ಕೇಂದ್ರದ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಲ್ಲೂ ತನ್ನದೇ ಆದ ಸಿಬ್ಬಂದಿಯನ್ನು ನೇಮಕ ಮಾಡಿ ಕೊಳ್ಳಬಲ್ಲದು, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

* ಡಾ. ಬಿ. ಆರ್. ಅಂಬೇಡ್ಕರ್: ಖಾಯಂ ಒಪ್ಪಂದದ ಕಾರಣದಿಂದಾಗಿ ಬಂಗಾಲಕ್ಕೆ ಸಾಕಷ್ಟು ಕಂದಾಯವನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಬಂಗಾಲದಲ್ಲಿ ಆಡಳಿತದ ಮಟ್ಟ ಕನಿಷ್ಠವಾಗಿದೆ ಎಂದು ನಾನು ಸೂಚಿಸಬಯಸುತ್ತೇನೆ. ಅದೇ ವಿಷಯವನ್ನು ಬೇರೆ ರೀತಿಯಾಗಿ ಹೇಳುವ ರೀತಿಯೇ ಇದು.

ಸರ್ ಸ್ಯಾಮ್ಯುಯೆಲ್ ಹೋರ್: ಅದು ಒಂದು ಕಾರಣ. ಆದರೆ, ಖಾಯಂ ಒಪ್ಪಂದ ಎಂಬ ಸಂಗತಿ ಯನ್ನು ನಾವು ಒಪ್ಪಿಕೊಳ್ಳಲೇಬೇಕು.

* * ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ಉದ್ದೇಶಗಳಿಗಾಗಿ ಒಂದು ಆಣೆಯನ್ನೂ ವೆಚ್ಚ ಮಾಡದೆ ಪ್ರಾಂತೀಯ ಉದ್ದೇಶಗಳಿಗಾಗಿ ಒಂದು ಆಣೆ ಹೆಚ್ಚಿಸುವ ಮಾರ್ಗ ಶ್ವೇತಪತ್ರದಲ್ಲಿ ಇಲ್ಲ. ಇನ್ನೊಂದು ಕಲ್ಪನೆ ಏನೆಂದರೆ, ಪ್ರಾಂತಗಳಿಗೆ ಇನ್ನೂ ಹೆಚ್ಚಿನ ಆದಾಯ ತೆರಿಗೆ ಅಗತ್ಯವಿಲ್ಲ. ಆದರೆ, ಫೆಡರಲ್ ಸರ್ಕಾರಕ್ಕೆ ಇದೆ. ಅಂದರೆ ನಿಮಗೆ ಒಂದು ಆಣೆ ಬೇಕಾಗಿದ್ದರೆ ನೀವು ಎರಡು ಆಣೆಗಳನ್ನು ಹೆಚ್ಚಿಸಬೇಕು. ಏಕೆಂದರೆ ಪ್ರಾಂತಗಳಿಗೆ ಬೇಕಿಲ್ಲದಿದ್ದರೂ, ಫೆಡರಲ್ ಸರ್ಕಾರದ ಹೆಚ್ಚಿಸಿದ ಮೊತ್ತದ ಅರ್ಧ ಭಾಗ ಪ್ರಾಂತ ಸರ್ಕಾರಗಳಿಗೆ ಹೋಗಲೇಬೇಕು, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ನಾನು ಈ ಎಲ್ಲಾ ಅಂಶಗಳನ್ನು ಪರಿಗಣಿಸುವೆ. ಹೊಂದಾಣಿಕೆಗಳ

---

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨–ಬಿ, ೨೭ ಜುಲೈ ೧೯೩೩, ಪುಟ ೯೯೦

* * 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೨೮ ಜುಲೈ ೧೯೩೩ ಪುಟ ೧೦೦೨–೩.

ಜತೆಗೆ ಕೆಲವೊಂದು ಅಕ್ರಮಗಳೂ ಇದ್ದೇ ಇರಬಹುದು ಎಂಬುದನ್ನು ನೆನಪಿಟ್ಟುಕೊಳ್ಳಿ ಎಂದು ಸಮಿತಿಯ ಸದಸ್ಯರಿಗೆ ಹೇಳುತ್ತೇನೆ. ಅನುಸರಿಸಬಹುದಾದ ಮಾರ್ಗವನ್ನು ಶ್ವೇತಪತ್ರದಲ್ಲಿ ನಾವು ನಿಖರವಾಗಿ ಹೇಳುವುದಿಲ್ಲ. ಆದರೆ, ಕೇಂದ್ರ ಮತ್ತು ಪ್ರಾಂತಗಳ ನಡುವೆ ಆದಾಯ ತೆರಿಗೆ ಪಾಲಾಗುತ್ತಿರುವ ಪದ್ಧತಿಯಲ್ಲಿ ಕೆಲವು ಬಗೆಯ ಅಕ್ರಮಗಳು ಇದ್ದಿರಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಎರಡು ವಿಷಯಗಳ ಬಗ್ಗೆ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಸರ್ ಆಸ್ಟಿನ್ ಚೇಂಬರ್‌ಲೇನ್ ಅವರ ಗಮನ ಸೆಳೆಯಬಹುದೇ? ತಮ್ಮ ಸ್ವಂತ ವಿಷಯಗಳ ಬಗ್ಗೆ ಆದಾಯ ತೆರಿಗೆಯನ್ನು ಹೆಚ್ಚಿಸಲು ಅವಕಾಶವಿಲ್ಲ ಎಂದು ಸರ್ ಆಸ್ಟಿನ್ ಹೇಳಿದರು. ೧೩೯ನೇ ಪ್ರಸ್ತಾಪದ ಕಡೆಗೆ ನಾನು ಅವರ ಗಮನವನ್ನು ಸೆಳೆಯಬಯಸುತ್ತೇನೆ. ಅಲ್ಲಿ ಆವರಣದಲ್ಲಿ ಹೇಳಿರುವುದೇನು? "ಪಕ್ಕದಲ್ಲಿ ಸೂಚಿಸಲಾಗಿರುವ ಮೂಲಗಳಿಂದ ಬರುವ ನಿವ್ವಳ ಕಂದಾಯದ ಶೇ. ೭೫ಕ್ಕಿಂತ ಹೆಚ್ಚಿಗೆ ಇಲ್ಲದ, ಶೇ. ೫೦ಕ್ಕಿಂತ ಕಡಿಮೆ ಇಲ್ಲದ ನಿಗದಿಪಡಿಸಿದ ಶೇಕಡಾವಾರು."

ಸರ್ ಸ್ಯಾಮ್ಯುಯೆಲ್ ಹೋರ್: ಅದು ಆದಾಯ ತೆರಿಗೆ (ಪ್ರಾಂತಗಳು ವಿಧಿಸುವ ಯಾವುದೇ ಸರ್ ಚಾರ್ಜ್ ಹೊರತುಪಡಿಸಿ) ತಮ್ಮ ಉದ್ದೇಶಗಳಿಗಾಗಿ ಪ್ರಾಂತಗಳಿಗೆ ಆದಾಯ ತೆರಿಗೆ ಮೇಲೆ ಸರ್‌ಚಾರ್ಜ್ ವಿಧಿಸುವ ಹಕ್ಕು ಇದೆ.

ಸರ್ ಎ. ಪಿ. ಪಾತ್ರೋ: ಹೆಚ್ಚುವರಿಯಾಗಿದೆಯೆ?

ಡಾ. ಬಿ. ಆರ್. ಅಂಬೇಡ್ಕರ್: ಅದು ೧೩೯ನೇ ಪ್ರಸ್ತಾಪ. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಪ್ರಸ್ತಾವನೆಯ ೩೦ನೇ ಪುಟದ ಮೇಲ್ಭಾಗದಲ್ಲಿ ನಾನು ಅದನ್ನು ಸೂಚಿಸಿದೆನೆಂಬುದು ಸಮಿತಿಗೆ ತಿಳಿಯುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಫೆಡರಲ್ ಉದ್ದೇಶಗಳಿಗಾಗಿ ಆದಾಯದ ಮೇಲೆ ಸರ್ ಚಾರ್ಜ್ ವಿಧಿಸುವ ಬಗ್ಗೆ ಸೆಕ್ರೆಟರಿ ಆಫ್ ಸ್ಟೇಟ್ ಈಗ ತಾನೇ ನೀಡಿದ ಹೇಳಿಕೆಯತ್ತ ನಾನು ಅವರ ಗಮನ ಸೆಳೆಯಬಹುದೇ? ಗವರ್ನರ್ ಜನರಲ್ ಅವರು ನೀಡುವ ಪೂರ್ವ ಮಂಜೂರಾತಿಯೇ ಆಧಾರ ಎಂದು ಅವರು ಹೇಳಿದ್ದಾಗಿ ನನಗೆ ಅನಿಸುತ್ತದೆ. ಫೆಡರಲ್ ಉದ್ದೇಶಗಳಿಗಾಗಿ ಸರ್‌ಚಾರ್ಜ್ ವಿಧಿಸಲು ಗವರ್ನರ್ ಜನರಲ್ ಅವರ ಮಂಜೂರಾತಿ ಮುಂಚೆಯೇ ಅಗತ್ಯವೆಂದು ೧೪೧ನೇ ಪ್ರಸ್ತಾಪ ಹೇಳುವುದಿಲ್ಲ ಎಂಬ ಸಂಗತಿಯನ್ನು ನಾನು ಸೆಕ್ರೆಟರಿ ಆಫ್ ಸ್ಟೇಟ್‌ರವರ ಗಮನಕ್ಕೆ ತರಬಯಸುತ್ತೇನೆ. ಪ್ರಾಂತಗಳಿಗೆ ವಹಿಸಲಾಗಿರುವ ಆದಾಯಗಳ ಬಗ್ಗೆ ಗವರ್ನರ್ ಜನರಲ್ ಮುಂಚೆಯೇ ಮಂಜೂರಾತಿಯನ್ನು ನೀಡಿರಬೇಕು. ೧೩೮ ಮತ್ತು ೧೩೯ನೇ ಪ್ರಸ್ತಾಪದಲ್ಲಿ ನಮೂದಾಗಿರುವುದು ಇದೇ. ಗವರ್ನರ್ ಜನರಲ್ ಅವರು ಮುಂಚೆಯೇ ಒಪ್ಪಿರಬೇಕೆಂಬುದನ್ನು ೧೪೧ನೇ ಪ್ಯಾರಾ ಹೇಳುವುದಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್‌ರವರ ಅಭಿಪ್ರಾಯ ಸಂಪೂರ್ಣವಾಗಿ ಸರಿ ಎಂದು ನಾನು ಭಾವಿಸುವೆ. ನಾನು ವಿತರಣೆ ಮಾಡಲಿರುವ ಟಿಪ್ಪಣಿ ಬಗೆಗಿನ ನನ್ನ ಉತ್ತರವನ್ನು ಪರಿಶೀಲಿಸುವೆ.

ಸರ್ ಅಕ್ಬರ್ ಹೈದರಿ: ಪ್ರತ್ಯೇಕ ಫೆಡರಲ್‌ನ ಮುಖ್ಯ ವಿಧಿಗಳಲ್ಲಿ (೪೯ನೇ ವಿಧಿಯಲ್ಲಿ) (ಸರ್ ಚಾರ್ಜ್ ವಿಧಿಸುವ ಪ್ರಾಂತಗಳ ಅಧಿಕಾರಕ್ಕೆ ಸಂಬಧಿಸಿದ) "ಕೃಷಿಯೇತರ ಆದಾಯ, ಕಾರ್ಪೋರೇಷನ್‌ಗಳ ಆದಾಯದ ಮೇಲೆ ತೆರಿಗೆ ಹೇರಿಕೆ ಮತ್ತು ಆಡಳಿತ ನೋಡಿಕೊಳ್ಳುವುದು" ಎಂದು ನಿಖರವಾಗಿ ಹೇಳಲಾಗಿದೆ.

ಲಾರ್ಡ್ ಯುಸ್ಟೇಸ್ ಪೆರ್ಸಿ: ಅದು ಅಷ್ಟಕ್ಕೇ ಮುಗಿಯಿತೆಂದು ನನಗೆ ಅನಿಸುವುದಿಲ್ಲ. ಏಕೆಂದರೆ ನಮಗೆ ದೊರೆತ ಎಲ್ಲಾ ಸಾಕ್ಷಿಗಳು, ಭಾರತದಲ್ಲಿ ನಾನು ಕೇಳಿದ ಸಾಕ್ಷಿಗಳು ಪ್ರಾಂತೀಯ ಸರ್ ಚಾರ್ಜಿಗೆ ಕಡು ವಿರೋಧವಾಗಿದ್ದವು.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಖಂಡಿತವಾಗಿ ಗೊತ್ತು. ಅದು ವ್ಯಾಪಾರಿ ವರ್ಗದ ಅಭಿಪ್ರಾಯ.

ಲಾರ್ಡ್ ಯುಸ್ಟೇಸ್ ಪೆರ್ಸಿ: ನನಗೆ ಪ್ರಶ್ನಿಸಲು ಅವಕಾಶ ದೊರೆತ ಪ್ರತಿಯೊಬ್ಬ ಭಾರತೀಯರ ಅಭಿಪ್ರಾಯವೂ ಇದೇ.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ, ನಿಜವಾಗಿಯೂ ಹಾಗಿರಲಿಲ್ಲ.

ಲಾರ್ಡ್ ರಾಂಕೇಲರ್: ಡಾ. ಅಂಬೇಡ್ಕರ್ ಹೇಳಿದ್ದರಿಂದ ಉದ್ಭವಿಸಿದ ಮುಖ್ಯ ಪ್ರಶ್ನೆಯೊಂದನ್ನು ನಾನು ಕೇಳಲೇ? ನಿಶ್ಚಯವಾಗಿಯೂ ಫೆಡರಲ್ ತೆರಿಗೆ ಹೇರಿಕೆಯು ಗವರ್ನರ್ ಜನರಲ್ ಒಪ್ಪಿಗೆ ಮೇರೆಗೇ ನಡೆಯುತ್ತದೆ. ಇಲ್ಲಿ ನಮ್ಮಲ್ಲಿ ಇರುವಂತೆ ಗೊತ್ತುವಳಿಯನ್ನು ಅವರು ಚರ್ಚೆಗೆ ಒಳಪಡಿಸಿದರೆ ಮಾತ್ರ ತೆರಿಗೆ ಹೇರಲು ಪರಿಶೀಲಿಸಬಹುದು.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಆದರೆ ರಾಂಕೇಲರ್ ಎರಡು ಸ್ಥಿತಿಗಳನ್ನು ಗೊಂದಲಕ್ಕೆ ಗುರಿಪಡಿಸುತ್ತಿದ್ದಾರೆಂದು ನನ್ನ ಭಾವನೆ. ಸಾಮಾನ್ಯ ಸಾಂವಿಧಾನಿಕ ಸ್ಥಿತಿಯಲ್ಲಿ ಚಕ್ರವರ್ತಿ ಚರ್ಚೆ ಶುರು ಮಾಡಿದಾಗ, ವಿಷಯದ ಪರವಾಗಿ ಮತ ಬೀಳುತ್ತವೆ. ಆ ಸ್ಥಿತಿ ಹಾಗೇ ಉಳಿಯುತ್ತದೆ. ಭಾರತೀಯ ಸಂವಿಧಾನದ ಕೆಲವೊಂದು ವಿಶೇಷ ಒಪ್ಪಂದದ ಪ್ರಕಾರ, ಗವರ್ನರ್ ಜನರಲ್ ಮಧ್ಯೆ ಪ್ರವೇಶಿಸುವ ಇನ್ನೊಂದು ಸ್ಥಿತಿಯ ಬಗ್ಗೆ ನಾನು ಆಲೋಚಿಸುತ್ತಿದ್ದೆ.

ಲಾರ್ಡ್ ರಾಂಕೇಲರ್: ಅದು ಅರ್ಥವೆಂದು ನನಗೆ ನಿಶ್ಚಯವಾಯಿತು. ಆದರೆ ಡಾ. ಅಂಬೇಡ್ಕರ್ ಅವರಿಗೆ ಕೊಟ್ಟ ಉತ್ತರ ಬೇರೆಯದನ್ನೇ ಸೂಚಿಸಿದ ಹಾಗೆ ನನಗೆ ತೋರಿತು. ಅದೇನೆಂದರೆ ಪ್ಯಾರಾ ೧೪೧ರ ಪ್ರಕಾರ ಗವರ್ನರ್ ಜನರಲ್ ಅವರ ಪೂರ್ವ ಶಿಫಾರಸು ಇಲ್ಲದೇ ಫೆಡರಲ್ ಶಾಸನ ಸಭೆಗೆ ಕಾರ್ಯ ನಿರ್ವಹಿಸುವ ಅಧಿಕಾರ ಇದೆ ಎಂಬುದು.

ಎಂ. ಆರ್. ಜಯಕರ್: ಈ ಪ್ರಶ್ನೆಯ ಬಗ್ಗೆ ಹೇಳುವ ೫೪ನೇ ಪ್ರಸ್ತಾಪದತ್ತ ನಾನು ಲಾರ್ಡ್ ರಾಂಕೇಲರ್ ರವರ ಗಮನವನ್ನು ಸೆಳೆಯುತ್ತೇನೆ. "ತೆರಿಗೆ ಹೇರಲು ಫೆಡರಲ್ ಶಾಸನ ಸಭೆಯ ಯಾವುದೇ ಸದನದಲ್ಲಿ ಯಾವುದೇ ಪ್ರಸ್ತಾಪ ಮಾಡಬೇಕೆಂದರೆ ಗವರ್ನರ್ ಜನರಲ್ ಅವರ ಶಿಫಾರಸು ಅಗತ್ಯ."

ಲಾರ್ಡ್ ರಾಂಕೇಲರ್: ಹೌದು. ನನಗೂ ಹಾಗೆ ಅನ್ನಿಸಿತು. ನಾನು ಇದಕ್ಕೆ ಪೂರ್ತಿ ಒಪ್ಪುವೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಗವರ್ನರ್ ಜನರಲ್ ಅವರ ವಿಶೇಷಾಧಿಕಾರಕ್ಕೆ ಸಂಬಂಧಿಸಿದೆ. ಪ್ಯಾರಾ ೧೩೮ರಲ್ಲಿ ಸೂಚಿಸಿರುವಂತೆ, ತೆರಿಗೆಗಳು ಕೇಂದ್ರದ ಖಜಾನೆಗೆ ಹೋಗದೇ ಪ್ರಾಂತಗಳಲ್ಲಿ ಹಂಚಲ್ಪಡುತ್ತವೆಯಾದ್ದರಿಂದ ಅದನ್ನು ಹಾಗೆ ಮಾಡಿದೆ.

* ಡಾ. ಬಿ. ಆರ್. ಅಂಬೇಡ್ಕರ್: ಅಧ್ಯಕ್ಷರೇ, ಯಾವುದೇ ವಿವಾದ ಎಬ್ಬಿಸಲು ಅಲ್ಲ. ಮಾಹಿತಿಯನ್ನು ಪಡೆಯಲೆಂದು ನಾನು ಒಂದು ಕ್ಷಣ ಮಧ್ಯೆ ಪ್ರವೇಶಿಸಲೇ? "ಈಗಿರುವ ಮತ್ತು ಲಭ್ಯವಾಗಲಿರುವ ಹಕ್ಕುಗಳು" ಎಂಬ ನುಡಿಗಟ್ಟಿನ ಬಗ್ಗೆ ಕೆಲವೊಂದು ಭಿನ್ನಾಭಿಪ್ರಾಯ ಇದೆ ಎಂಬುದು ಸಮಿತಿಗೆ ಗೊತ್ತಿದೆ.

---

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨–ಬಿ, ೨೮ ಜುಲೈ ೧೯೩೩, ಪುಟ ೧೦೧೦

ನಾಗರಿಕ ಸೇವಾ ಸಿಬ್ಬಂದಿ ಒಂದು ದೃಷ್ಟಿಕೋನ ಹೊಂದಿದ್ದರೆ, ಚಕ್ರವರ್ತಿಯ ಕಾಯ್ದೆ ಅಧಿಕಾರಿಗಳು ಇನ್ನೊಂದು ದೃಷ್ಟಿ ಕೋನ ತಾಳುತ್ತಾರೆ. ಆ ವಿಧಿಯ ಕರಡು ಪ್ರತಿ ಸಿದ್ಧವಾಗುವ ಮುನ್ನ, ಸಮಿತಿಯು ಆ ವಿಷಯದ ಬಗ್ಗೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದೆಂದು ನಾನು ನಂಬುವೆ.

ದಕ್ಷಿಣ ಆಫ್ರಿಕಾದ ೧೯೦೯ರ ಸಂವಿಧಾನದಲ್ಲೂ "ಈಗಿರುವ ಮತ್ತು ಲಭ್ಯವಾಗಲಿರುವ ಹಕ್ಕುಗಳು" ಎಂಬ ನುಡಿಗಟ್ಟೇ ಇರುವುದು ಕಾಣುತ್ತದೆ. ಆ ನುಡಿಗಟ್ಟನ್ನು ಆಧರಿಸಿ ಅಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತಾರೆ? ದಕ್ಷಿಣ ಆಫ್ರಿಕಾ ಸರ್ಕಾರ ಅದನ್ನು ಹೇಗೆ ಅರ್ಥೈಸುತ್ತದೆ ಎಂಬುದನ್ನು ತಿಳಿದುಕೊಳ್ಳಲು ಡೊಮಿನಿಯನ್ ಕಚೇರಿಯಿಂದ ಆ ಮನವಿ ಪತ್ರವನ್ನು ತರಿಸಿಕೊಳ್ಳುವುದು ತಮಗೆ ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಸಾಧ್ಯವಿಲ್ಲವೇ ಎಂದು ನನಗೆ ಆಶ್ಚರ್ಯವಾಗುತ್ತದೆ.

ಸರ್ ಸ್ಯಾಮ್ಯುಯೆಲ್ ಹೋರ್: ಈ ಸಲಹೆಯನ್ನು ನಾನು ಅವಶ್ಯವಾಗಿ ಪರಿಶೀಲಿಸುವೆ. ಆದರೂ ಸೇವೆಗಳ ಬಗ್ಗೆ ಚರ್ಚೆಗೆ ಬಂದಾಗ, ನಾವು ಗಮನಿಸಬೇಕಾದ ಪ್ರಶ್ನೆ ಇದು. ಆದರೆ, ಸರ್ ಪುರುಷೋತ್ತಮ ದಾಸ್ ನಮ್ಮ ಮುಂದೆ ಇಟ್ಟ ಪ್ರಶ್ನೆ ಇದಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಅಲ್ಲ. ತುಲನಾತ್ಮಕವಾಗಿ ಅದು ಸಾಧ್ಯವಿಲ್ಲವೇ ಎಂಬ ಬಗ್ಗೆ ನನಗೆ ಮಾಹಿತಿ ಬೇಕು, ಅಷ್ಟೇ. ಯಾವುದೇ ವಿವಾದ ಸೃಷ್ಟಿಸುವುದು ನನಗೆ ಬೇಕಿಲ್ಲ ಎಂದು ನಾನು ಹೇಳಿದ್ದು ಈ ಕಾರಣದಿಂದಲೇ. ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

* ಡಾ. ಬಿ. ಆರ್. ಅಂಬೇಡ್ಕರ್: ೧೪೧ನೇ ಪ್ಯಾರಾ ಅನ್ವಯಗೊಳಿಸುವ ಸಂಬಂಧದಲ್ಲಿ, ಸರ್ ಅಕ್ಬರ್ ಹೈದರಿ ನೀಡಿದ ಹೇಳಿಕೆ ಬಗ್ಗೆ ನಾನು ಒಂದು ಪ್ರಶ್ನೆ ಕೇಳಬಯಸುವೆ. ಸೆಕ್ರೆಟರಿ ಆಫ್ ಸ್ಟೇಟ್‌ರವರೇ, ನಿನ್ನೆ ಆ ಹೇಳಿಕೆಯನ್ನು ಸಂಕ್ಷಿಪ್ತವಾಗಿ ಪರಿಶೀಲಿಸುತ್ತಾ ಕೆಲಮಟ್ಟಿಗೆ ಫೆಡರಲ್ ಸರ್ಕಾರದ ಭಾರಕ್ಕೆ ಹೆಗಲು ಕೊಡಲು ಸಂಸ್ಥಾನಗಳು ಒಪ್ಪಿಕೊಂಡಿವೆ ಎಂಬುದನ್ನು ತಿಳಿದು ನಿಮಗೆ ಸಂತೋಷವಾಯಿತೆಂದು ನೀವು ಹೇಳಿದಿರಿ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಸರ್ ಅಕ್ಬರ್ ಹೈದರಿ ವಿವರಿಸಿದ ಘಟ್ಟವೇ ಫೆಡರೇಷನ್ ಭಾರಕ್ಕೆ ಹೆಗಲು ಕೊಡಲು ಸಂಸ್ಥಾನಗಳು ಆರಂಭಿಸಬೇಕಾದ ಘಟ್ಟ. ಇದನ್ನು ನೀವು ಒಪ್ಪುತ್ತೀರಾ? ನನಗೆ ಇದು ಗೊತ್ತಾಗಬೇಕು. ನೀವು ಈಗಲೇ ಉತ್ತರಿಸಬಹುದು ಅಥವಾ ನಂತರವೂ ಉತ್ತರ ನೀಡಬಹುದು. ನನ್ನ ಆಕ್ಷೇಪವೇನೂ ಇಲ್ಲ. ತಮ್ಮ ಪಾಲನ್ನು ಭರಿಸಬೇಕೆಂದು ಸಂಸ್ಥಾನಗಳನ್ನು ಆಹ್ವಾನಿಸುವ ಮುಂಚೆ ಫೆಡರಲ್ ಹಣಕಾಸು ಹರಿದು ಹೋಗುವ ಒಂದು ಘಟ್ಟವನ್ನು ಅವರು ವಿವರಿಸಿದರು. ಇದು ನಿಮಗೆ ತಿಳಿದೇ ಇದೆ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಸರ್ ಅಕ್ಬರ್ ಹೈದರಿ: ಹೆಚ್ಚುವರಿ ಹೊರೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ವಾಸ್ತವವಾಗಿ ಮೂರು ಹೊರೆಗಳಿವೆ. (೧) ಆರಂಭದಲ್ಲೇ

---

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨–ಬಿ, ೨೭ ಜುಲೈ ೧೯೩೩, ಪುಟ ೯೪೫

ಕೈಗೊಳ್ಳ ಲಾಗುವ ಪರೋಕ್ಷ ತೆರಿಗೆ, (೨) ಒಂದು ನಿರ್ದಿಷ್ಟ ಅವಧಿ ಬಳಿಕ ವಿಧಿಸಲಾಗುವ ಕಾರ್ಪೋರೇಷನ್ ಅಥವಾ ತತ್ಸಮಾನ ತೆರಿಗೆಗಳು, (೩) ತುರ್ತು ಸ್ಥಿತಿಯಲ್ಲಿ ಹೇರಬಹುದಾದ ಹೆಚ್ಚಿನ ತೆರಿಗೆಗಳು.

ಡಾ. ಬಿ. ಆರ್. ಅಂಬೇಡ್ಕರ್: ಅವರು ಕೆಲವೊಂದು ನಿಬಂಧನೆಗಳನ್ನೂ ಹಾಕಿದ್ದಾರೆಂದು ನನಗನಿಸಿತು. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಅವರು ನಿಬಂಧನೆಗಳನ್ನು ಹಾಕಿದ್ದಾರೆ. ಹೆಚ್ಚಿನ ತೆರಿಗೆಯ ನಿಬಂಧನೆ. ತಪ್ಪಾಗಿದ್ದರೆ, ಸರ್ ಅಕ್ಬರ್ ನನ್ನ ತಿದ್ದಬೇಕು.

ಡಾ. ಬಿ. ಆರ್. ಅಂಬೇಡ್ಕರ್: ಒಕ್ಕೂಟವು ಸರ್‌ಚಾರ್ಜ್ ವಿಧಿಸಲು ಅಂಗೀಕರಿಸಬಹುದಾದ ಸಮರ್ಪಕ ನಿಬಂಧನೆಗಳು ಅವು ಎಂದು ಒಪ್ಪುತ್ತೀರಾ? ಅದು ನನಗೆ ಗೊತ್ತಾಗಬೇಕು.

ಸರ್ ಸ್ಯಾಮ್ಯುಯೆಲ್ ಹೋರ್: ನನಗೆ ಹಾಗೆ ತೋರುತ್ತದೆ. ಅಲ್ಲಿ ಬಳಸಿದ ಪದಗಳಿಗೆ ನಾನು ನಿರ್ದಿಷ್ಟ ವಾಗಿ ಬದ್ಧನಾಗದೇ, ಹೇಳುವುದಾದರೆ, ನನಗೆ ಕಾಣುವಂತೆ ಅದು ಸಾಮಾನ್ಯವಾಗಿ ನ್ಯಾಯಯುತ ವ್ಯವಸ್ಥೆ.

ಡಾ. ಬಿ. ಆರ್. ಅಂಬೇಡ್ಕರ್: ನನ್ನ ಮುಂದಿನ ಪ್ರಶ್ನೆ ಇಲ್ಲಿದೆ. ಆ ಸ್ಥಿತಿ ಅಥವಾ ಕನಿಷ್ಠ ೧೪೧ನೇ ಪ್ರಸ್ತಾಪದಲ್ಲಿರುವ ಸ್ಥಿತಿಯನ್ನು ನಾವು ಕಾಪಾಡಿಕೊಂಡರೆ, ಒಕ್ಕೂಟವು ತನ್ನ ಹಣಕಾಸನ್ನು ಪೂರ್ಣವಾಗಿ ಪರೋಕ್ಷ ತೆರಿಗೆಗಳ ಮೇಲೆಯೇ ತೂಗಿಸಿಕೊಳ್ಳಬೇಕಾಗುತ್ತದೆಂಬುದು ನಿಜ ಸಂಗತಿಯಾಗದೇ?

ಸರ್ ಸ್ಯಾಮ್ಯುಯೆಲ್ ಹೋರ್: ಸಂಪೂರ್ಣವಾಗಿ ಪರೋಕ್ಷ ತೆರಿಗೆಗಳ ಮೇಲಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಬಹುಮಟ್ಟಿಗೆ ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಬಹುಶಃ ಬಹುಮಟ್ಟಿಗೆ ಈಗಿನಂತೆಯೇ ಆಗಲೂ ಪರೋಕ್ಷ ತೆರಿಗೆಯು ಭಾರತೀಯ ಆದಾಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಸರ್ ಸ್ಯಾಮ್ಯುಯೆಲ್ ಹೋರ್ ಅವರೇ, ಈಗ ಇರುವುದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಒಕ್ಕೂಟದಲ್ಲಿ ಪರೋಕ್ಷ ತೆರಿಗೆಗೆ ಬರುತ್ತದೆ. ಸರಳವಾದ ಕಾರಣವೇನೆಂದರೆ, ರಾಜ್ಯಗಳು ಸಮ್ಮತಿಸುವುದಿಲ್ಲವಾದ್ದರಿಂದ ಬ್ರಿಟಿಷ್ ಭಾರತೀಯರೂ ನೇರ ತೆರಿಗೆಗೆ ಸಮ್ಮತಿಸುವುದಿಲ್ಲ. ಪರಿಣಾಮವಾಗಿ ರಾಜ್ಯಗಳು ಮತ್ತು ಒಕ್ಕೂಟಗಳೆರಡೂ ನೇರ ತೆರಿಗೆಗಿಂತ ಪರೋಕ್ಷ ತೆರಿಗೆಯನ್ನು ಇಷ್ಟಪಡುತ್ತವೆ. ಏಕೆಂದರೆ ಈ ತೆರಿಗೆಯನ್ನು ಕೇವಲ ಬ್ರಿಟಿಷ್ ಭಾರತ ಮಾತ್ರ ಭರಿಸುತ್ತದೆ. ಹೀಗಾಗಿ ಈಗ ಇರುವುದಕ್ಕಿಂತ ಆಗ ಪರೋಕ್ಷ ತೆರಿಗೆಗೆ ಹೆಚ್ಚುಹೆಚ್ಚು ಒತ್ತಾಯಪೂರ್ವಕ ಮಹತ್ವ ಬರುತ್ತದೆ. ಒಕ್ಕೂಟವು ಮತ್ತು ಘಟಕಗಳು ಕೂಡ ಅದನ್ನೇ ಬಯಸುತ್ತವೆ.

ಸರ್ ಸ್ಯಾಮ್ಯುಯೆಲ್ ಹೋರ್: ಇನ್ನೊಂದು ದೃಷ್ಟಿಯಿಂದ, ಸಂಸ್ಥಾನಗಳು ಪರೋಕ್ಷ ತೆರಿಗೆಯನ್ನೇ ಬಯಸುತ್ತವೆಂಬುದನ್ನು ನಾನು ಕಲ್ಪಿಸಿಕೊಳ್ಳಬಲ್ಲೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಏಕೆಂದರೆ ಸಂಸ್ಥಾನಗಳಿಗೆ ಈಗ ಬಿಡಿಗಾಸಿನ ಮೇಲೂ ಹಿಡಿತವಿಲ್ಲ. ಪರೋಕ್ಷ ತೆರಿಗೆಗೆ ವಿರೋಧವಾಗಿದ್ದರೆ, ಅವು ತೆರಿಗೆ ಹೇರಿಕೆಯ ಬಿರುಸಿನ ಪೆಟ್ಟನ್ನು ಸಹಿಸ ಬೇಕಾಗುತ್ತದೆ. ನಂತರವೂ ಅದು ಹಾಗೇ ಇರುತ್ತದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಈ ತ್ರಿಕೋನದ ಬಲಗಳಲ್ಲಿ, ನೇರ ತೆರಿಗೆ ಹೇರಿಕೆಯಲ್ಲಿ ಪ್ರಾಂತಗಳಿಗೆ ಪಾಲಿರುವುದರಿಂದ ಅವಕ್ಕೆ ಇದರಲ್ಲಿ ಆಸಕ್ತಿಯೂ ಇರುತ್ತದೆ ಎಂಬುದು ಡಾ. ಅಂಬೇಡ್ಕರ್ ಅವರ ನೆನಪಿನಲ್ಲಿರಲಿ.

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಅದು ಹಾಗಿರಬಹುದು. ಬ್ರಿಟಿಷ್ ಭಾರತದಲ್ಲಿ ಸೃಷ್ಟಿಯಾಗುವ

ಭಾರತೀಯ ಆದಾಯದ ಮೇಲೆ ಸಂಪೂರ್ಣವಾಗಿ ಒಕ್ಕೂಟವು ಆಕ್ರಮಣ ಮಾಡದಂತೆ ಪ್ರಾಂತವು ನೋಡಿಕೊಳ್ಳುತ್ತದೆ. ಅದು ಶುದ್ಧ ಏರಿಳಿತದ ಸಂಗತಿ. ಒಕ್ಕೂಟದಡಿಯಲ್ಲಿ ಹಣಕಾಸು ಹೇಗೆ ಕೊಚ್ಚಿ ಹೋಗುತ್ತದೆ ಎಂಬ ಕಡೆ ನಾನು ಗಮನ ನೀಡಬಯಸುವೆ. ಹಾಗೆ ಹೇಳುವುದಾದರೆ ಬದುಕಿ ಉಳಿಯಲು ಒಕ್ಕೂಟವು ತನ್ನ ಸುತ್ತ ಬೆಲೆಪಟ್ಟಿಯ ಗೋಡೆಯನ್ನು ಕಟ್ಟಿಕೊಂಡಿರಬೇಕಾಗುತ್ತದೆ, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಅದು ಏರಿಳಿತದ ಸಂಗತಿ ಎಂದು ಡಾ. ಅಂಬೇಡ್ಕರ್ ಹೇಳುತ್ತಾರೆ. ಅವರ ಅಭಿಪ್ರಾಯವನ್ನು ನಾನು ಸಮರ್ಥಿಸಬಯಸುವೆ. ಆದರೆ ಅದು ಏರಿಳಿತದ ಸಂಗತಿ ಎಂದು ಭಾವಿಸಿದ ಬಳಿಕ, ಭವಿಷ್ಯದಲ್ಲಿ ಏನಾದೀತೆಂದು ಹೇಳಲು ನಾನು ಒಪ್ಪುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇದನ್ನು ಇಲ್ಲಿಗೇ ನಾನು ಬಿಡುವೆ. ಇದೇ ೧೪೧ನೇ ಪ್ರಸ್ತಾಪದಿಂದ ಉದ್ಭವಿಸುವ ಸಂಗತಿ ಬಗ್ಗೆ ನಾನು ಸರ್ ಸ್ಯಾಮ್ಯುಯೆಲ್ ಹೋರ್ ಅವರನ್ನು ಪ್ರಶ್ನಿಸಬಯಸುವೆ.

ನಿಗದಿತ ಆಧಾರವೊಂದರ ಮೇಲೆ ಅಂದಾಜು ಮಾಡಲಾಗುವ ಮೊತ್ತದ ಸಮಕ್ಕೆ ರಾಜ್ಯಗಳು ತಮ್ಮ ಪಾಲನ್ನು ಫೆಡರಲ್ ಆದಾಯಕ್ಕೆ ನೀಡುವುದು ಎಂದು ನೀವು ಹೇಳಿದಿರಿ. "ನಿಗದಿತ" ಪದವನ್ನು ನೀವು ಅರ್ಥೈಸುವುದು ಯಾವ ರೀತಿ ಎಂಬುದನ್ನು ಇಂದು ಬೆಳಿಗ್ಗೆ ವಿವರಿಸಿದಿರಿ. ಆ ಬಗ್ಗೆ ನಾನು ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ. ಆದರೆ, ನನಗೆ ತಿಳಿಯಬೇಕಾಗಿರುವುದೇನೆಂದರೆ, ಈ ನಿಗದಿತ ಆಧಾರದ ಮೇಲೆ ಅಂದಾಜು ಮಾಡಲಾಗುವ ಮೊತ್ತವನ್ನು ನೀಡಬೇಕಾದ ರಾಜ್ಯವು, ಒಟ್ಟಾರೆ ಒಕ್ಕೂಟಕ್ಕೆ ಪಾವತಿ ಮಾಡುವ ಬಗ್ಗೆ ಶ್ವೇತಪತ್ರದಲ್ಲಿ ಅವಕಾಶವೇನಾದರೂ ಇದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಆಗ ಅದು ಸಂಸ್ಥಾನದಿಂದ ಸಂದಾಯವಾಗಬೇಕಾದ ಬಾಕಿಯಾಗುತ್ತದೆ, ಅಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಸಂಸ್ಥಾನವು ಪಾವತಿ ಮಾಡದಿದ್ದರೆ ಬಾಕಿಯಾಗುವುದು. ಈ ಹೊತ್ತು ಕೇವಲ ಒಂದು ಪ್ರಕರಣವನ್ನು ನಾನು ಪ್ರಸ್ತಾಪಿಸುವೆ.

ಸರ್ ಸ್ಯಾಮ್ಯುಯೆಲ್ ಹೋರ್: ಆಗ ವೈಸ್‌ರಾಯ್ ಮಧ್ಯಪ್ರದೇಶ ಮಾಡುತ್ತಾರೆಂಬುದು ನನ್ನ ಭಾವನೆ.

ಡಾ. ಬಿ. ಆರ್. ಅಂಬೇಡ್ಕರ್: ವೈಸ್‌ರಾಯ್‌ಗೆ ಸ್ಥಾನ ಇರುವುದು ಫೆಡರಲ್ ಸಂವಿಧಾನದ ಹೊರಗೆ ಎಂಬುದು ನಿಮಗೆ ಗೊತ್ತು.

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಪ್ಯಾರಾ ೧೨೯ ನೋಡಲಿ. ಆಗ "ಸಂಸ್ಥಾನದ ಫೆಡರಲ್ ಬಾಧ್ಯತೆಗಳನ್ನು ಒಕ್ಕೂಟದ ಸದಸ್ಯ ಸಂಸ್ಥಾನಗಳು ಪೂರೈಸುವಂತೆ ನೋಡಿಕೊಳ್ಳಲಿಕ್ಕಾಗಿ, ಸೂಚನೆಗಳನ್ನು ಹೊರಡಿಸಿ ಸರ್ಕಾರಗಳಿಗೆ ಕಳಿಸುವ ಅಧಿಕಾರವನ್ನು ಬಳಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯ ಗವರ್ನರ್ ಜನರಲ್‌ಗೆ ಇದೆ" ಎಂಬ ಮಾತು ಕಾಣುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಆದರೆ ಭಿನ್ನವಾಗಿರುವುದೇನೆಂದರೆ, ೧೨೯ನೇ ಪ್ಯಾರಾ ಗವರ್ನರ್ ಜನರಲ್‌ಗೆ ನಿರ್ದೇಶನ ನೀಡುವ ಅಧಿಕಾರವನ್ನು ಮಾತ್ರ ನೀಡುತ್ತದೆ. ನಿರ್ದೇಶನ ಗಳನ್ನು ಪಾಲಿಸದೇ ಹೋದಾಗ, ಪರಿಹಾರೋಪಾಯಗಳನ್ನು ಕೈಗೊಳ್ಳುವ ಅಧಿಕಾರವನ್ನು ಈ ಪ್ಯಾರಾ ನೀಡುವುದಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಪ್ರಾಂತಗಳಿಗಾಗಲಿ, ರಾಜ್ಯಗಳಿಗಾಗಲಿ, ಅಂಥ ಪರಿಸ್ಥಿತಿಯಲ್ಲಿ ಯಾವ ಕ್ರಮ ಕೈಗೊಳ್ಳಬಹುದೆಂಬ ಬಗ್ಗೆ ಸ್ಪಷ್ಟ ಅಧಿಕಾರವನ್ನು ಕಾಯ್ದೆಯಲ್ಲಿ ನಮೂದಿಸಲಾಗಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತಗಳಿಗಾಗಿ ನಮೂದಿಸಲಾಗಿದೆ. ಗವರ್ನರ್ ಜನರಲ್ ಅವರ ಆದೇಶಗಳ ಪಾಲನೆಯಾಗಿ, ಅವು ಜಾರಿಗೊಳ್ಳುವಂತೆ ನೋಡಿಕೊಳ್ಳುವ ವಿಶೇಷ ಜವಾಬ್ದಾರಿ ಗವರ್ನರ್‌ರಿಗಿದೆ. ಆ ಮಟ್ಟಿಗೆ ಅವರು ಗವರ್ನರ್ ಜನರಲ್ ಕೈಕೆಳಗೆ ನೇರವಾಗಿ ಕೆಲಸ ಮಾಡುವವರು. ಅಂದರೆ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಮತ್ತು ಪ್ರಾಂತಗಳ ನಡುವಣ ಸಂಬಂಧ ಕುರಿತಂತೆ ಕೂಡ ಗವರ್ನರ್ ಜನರಲ್ ಅವರ ಆದೇಶಗಳು ಜಾರಿಗೊಳ್ಳುವಂತೆ ಕ್ರಮ ಕೈಗೊಳ್ಳುವ ಅವಕಾಶ ಇದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಅದೇ ಹೊಣೆ ಇಲ್ಲೂ ಇದೆ ಎಂದು ನಾನು ಭಾವಿಸುತ್ತೇನೆ. ಗವರ್ನರ್ ಜನರಲ್ ಮತ್ತು ಸಂಸ್ಥಾನಗಳ ನಡುವೆ. ಇಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ಸೂಚನೆಗಳ ಸಾಧನ ಕುರಿತು ಮನವಿ ಪತ್ರದ ಬಗ್ಗೆ ನೀವು ವಿವರಿಸಿದಂತೆ, ಗವರ್ನರರು ಅವಿಧೇಯರಾದರೆ ಅವರನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ಕ್ರಮ ಕೈಗೊಳ್ಳ ಲಾಗುವುದೆಂದು ನೀವು ಹೇಳಿದಿರಿ. ಆದರೆ ಕೇಂದ್ರ ಮತ್ತು ಸಂಸ್ಥಾನಗಳ ಸಂಬಂಧದಲ್ಲಿ ಇಂಥ ಯಾವ ಕ್ರಮಕ್ಕೂ ಅವಕಾಶವಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಪ್ರತಿ ವಿಷಯದಲ್ಲೂ, ಜವಾಬ್ದಾರಿ ಎಂದರೆ ಗವರ್ನರ್ ಜನರಲ್ ನಿರ್ಧರಿಸಬಹುದಾದ ಜವಾಬ್ದಾರಿ. ಅಂದರೆ ಅಲ್ಲಿಂದ ಹೊರಡುವ ಸೂಚನೆಗಳಿಗೆ ಸಂಬಂಧ ಪಟ್ಟಂತೆ.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತಗಳ ಆಡಳಿತಕ್ಕೆ ಸಂಬಂಧಿಸಿದಂತೆ ಗವರ್ನರರು ಹೇಗೆ ಗವರ್ನರ್ ಜನರಲ್ ಅವರ ಅಧಿಕಾರಕ್ಕೆ ಒಳಪಡುತ್ತಾರೋ ಹಾಗೆ, ಫೆಡರೇಷನ್‌ಗೆ ಸಂಬಂಧಿಸಿದ ವಿಷಯಗಳ ಆಡಳಿತ ನೋಡಿಕೊಳ್ಳುವ ಹೊರತು ಇನ್ನಿತರ ವಿಷಯಕ್ಕೆ ಸಂಬಂಧಿಸಿದಂತೆ, ಗವರ್ನರ್ ಜನರಲ್ ಅವರ ನಿರ್ದೇಶನಗಳಿಗೆ ಸಂಸ್ಥಾನ ಆಳುವವರು ಒಳಪಡುವುದಿಲ್ಲ.

* * * * *

ಡಾ. ಬಿ. ಆರ್. ಅಂಬೇಡ್ಕರ್: ಆದರೆ ನೀವು ಹೇಳಿದಂತೆ ಸರ್ವೋಚ್ಚ ಅಧಿಕಾರ ವೈಸ್‌ರಾಯ್‌ಗಿದೆ, ಗವರ್ನರ್ ಜನರಲ್ ಅವರಿಗಿಲ್ಲ; ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಆದರೆ ಪರಿಣಾಮ ಒಂದೇ.

ಜಫರುಲ್ಲಾ ಖಾನ್: ಗವರ್ನರ್ ಜನರಲ್ ಅವರು ಔಪಚಾರಿಕವಾಗಿ ಮಾಡಿಕೊಂಡ ವಿನಂತಿ ಪ್ರಕಾರ ವೈಸ್‌ರಾಯ್ ಕ್ರಮ ಕೈಗೊಳ್ಳುತ್ತಾರೆ.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲಿ ಏಳುವ ಇನ್ನೊಂದು ಪ್ರಶ್ನೆಯನ್ನು ಕೇಳಲೇ? ಅದಕ್ಕೆ ಇನ್ನೊಂದು ಮಜಲೂ ಇದೆ. ಈ ಪಾಲೂ ನೀಡಬೇಕಾಗಿ ಬಂದಾಗ ಸಂಸ್ಥಾನಗಳು ಸಮೃದ್ಧಿಯಲ್ಲಿರುವುವು ಎಂದು ಪರಿಗಣಿಸಲಾಗಿದೆ. ಪಾಲು ನೀಡಬೇಕಾಗಿ ಬಂದಾಗ ಅವುಗಳಲ್ಲಿ ಸಮೃದ್ಧಿಯಿರುವಂತೆ ನೋಡಿಕೊಳ್ಳುವ ಅಧಿಕಾರವು ಭಾರತೀಯ ಸಂಸ್ಥಾನಗಳಿಂದ ಬರುವ ಈ ಪಾಲನ್ನೇ ಅವಲಂಬಿಸಿರುವ ಗವರ್ನರ್ ಜನರಲ್ ಅವರಿಗೆ ಇರುವಂತೆ ಶ್ವೇತಪತ್ರದಲ್ಲಿ ಅವಕಾಶ ಕಲ್ಪಿಸಿದೆಯೇ?

ರಾವ್ ಬಹದ್ದೂರ್ ಸರ್ ಕೃಷ್ಣಮಾಚಾರಿ: ಪ್ರಾಂತಗಳಿಗೆ ಸಂಬಂಧಿಸಿದಂತೆ ಏನು ಅವಕಾಶವಿದೆ? ಇಂಥ ಅವಕಾಶ ಪ್ರಾಂತಗಳಿಗೆ ಸಂಬಂಧಪಟ್ಟಂತೆ ಇದೆಯೇ?

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಒಕ್ಕೂಟಕ್ಕೆ ಇಷ್ಟು ಬಾಕಿ ಇದೆಯೆಂದು ಗವರ್ನರ್ ಪ್ರಮಾಣೀ ಕರಿಸಿ ಅಷ್ಟನ್ನು ಕೊಡಬೇಕು ಎಂದು ಹೇಳಿಬಿಟ್ಟರೆ ಕೊಡಲಾಗುವುದು.

ಜಫರುಲ್ಲಾ ಖಾನ್: ಪೂರ್ವಭಾವಿ ಚರ್ಚೆ ನಡೆದಿದ್ದಾಗ ನಾನು ಸೂಚಿಸಿದ ಸಲಹೆಯನ್ನು ಇಲ್ಲಿ ನೆನಪಿಸಲೇ? ಒಕ್ಕೂಟದ ಅಂಗವಾಗಿ ಸಂಸ್ಥಾನಗಳು ತಮ್ಮ ಪ್ರತಿಯೊಂದು ಲೆಕ್ಕಪತ್ರಗಳ ಪ್ರಮಾಣೀಕೃತ ಪ್ರತಿಗಳನ್ನು ತಮ್ಮ ಮಾಹಿತಿಗಾಗಿ ಕಳಿಸಬೇಕೆಂದು ವೈಸ್‌ರಾಯ್ ಕೇಳಬಹುದಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಇನ್ನೂ ಒಂದು ಅಂಶವಿದೆ. ಸೆಕ್ರೆಟರಿ ಆಫ್ ಸ್ಟೇಟ್ ಒಟ್ಟಿಗೇ ಉತ್ತರ ಕೊಡಬಹುದು. ಸಾಲ ಮಾಡುವ ಅಧಿಕಾರದ ಬಗ್ಗೆ ಹೇಳುತ್ತ ೧೪೬ನೇ ಪ್ಯಾರಾದಲ್ಲಿ, ಫೆಡರಲ್ ಆದಾಯದ ಭದ್ರತೆ ಮೇಲೆ ಒಕ್ಕೂಟವು ಸಾಲ ಮಾಡಬಹುದು ಎಂದು ಹೇಳಿದೆ. ೧೪೧ನೇ ಪ್ರಸ್ತಾಪದ ಮೇರೆಗೆ ನೀಡಲಾಗುವ ದೇಣಿಗೆಯು ಒಕ್ಕೂಟವು ಮಾಡುವ ಸಾಲಕ್ಕೆ ಭದ್ರತೆ ನೀಡುವ ಫೆಡರಲ್ ಆದಾಯದ ಒಂದು ಭಾಗವಾಗಿರುವುದು. ಫೆಡರಲ್ ಸಾಲಕ್ಕಾಗಿ ಒಕ್ಕೂಟವು ಸಂಗ್ರಹಿಸುವ ಒಂದು ಭಾಗವು ಹೀಗೆ ಹಣ ನೀಡುವ ಸಾಮರ್ಥ್ಯ ಮತ್ತು ಇಚ್ಛೆಗಳ ಅನಿಶ್ಚಯತೆಯಲ್ಲಿ ಇದ್ದುಬಿಡಬಹುದಾದರೆ, ಫೆಡರೇಷನ್ನಿನ ಘನತೆಯನ್ನು ಸಾಕಷ್ಟು ಹೆಚ್ಚಿಸುತ್ತದೆಂದು ನೀವು ಭಾವಿಸುತ್ತೀರಾ?

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡಕರ್ ಎತ್ತಿರುವ ಸಂದರ್ಭವು ಮೇಲಿಂದ ಮೇಲೆ ತಲೆದೋರುವ ಸಂದರ್ಭವಲ್ಲವೆಂದು ನಾನು ಯೋಚಿಸಬಹುದಾಗಿತ್ತು. ಮತ್ತು ಒಂದು ವೇಳೆ ಅಂಥ ಸಂದರ್ಭ ಬಂದರೆ ಅದು ಫೆಡರೇಷನ್ ಘನತೆಯನ್ನು ಗಣನೀಯವಾಗಿ ಹೆಚ್ಚು ಕಮ್ಮಿ ಮಾಡುವ ಸಂದರ್ಭ ಆಗುವುದಿಲ್ಲ. ಒಟ್ಟಾಗಿ ನೋಡಿದರೂ, ಇದು ತುಂಬಾ ಸಣ್ಣ ಮೊತ್ತ.

ಡಾ. ಬಿ. ಆರ್. ಅಂಬೇಡ್ಕರ್: ಅದು ಎಷ್ಟಾಗುವುದೆಂದು ನನಗೆ ತಿಳಿಯದು.

ಸರ್ ಸ್ಯಾಮ್ಯುಯೆಲ್ ಹೋರ್: ಒಂದು ಸಾರಿ ಬಾಕಿ ಉಳಿಯದಿದ್ದರೆ...

ಡಾ. ಬಿ. ಆರ್. ಅಂಬೇಡ್ಕರ್: ಅದು ತೀರಾ ಸಣ್ಣ ಮೊತ್ತವಾಗಿರುತ್ತದೆ ಎಂದು ನನಗನಿಸುವುದಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಭಾರತದ ಘನತೆಗೆ ಅದು ಬಹಳ ವ್ಯತ್ಯಾಸ ಉಂಟು ಮಾಡುತ್ತದೆಂದು ನಾನು ಭಾವಿಸುವುದಿಲ್ಲ.

ಸರ್ ಅಕ್ಬರ್ ಹೈದರಿ: ಸರ್ವೋಚ್ಚ ಅಧಿಕಾರವನ್ನು ಚಲಾಯಿಸುವ ಮೂಲಕ ಸಂಸ್ಥಾನಗಳ ಆರ್ಥಿಕ ಪರಿಸ್ಥಿತಿಯು ಗವರ್ನರರ ವಿಶೇಷ ಜವಾಬ್ದಾರಿಯಿಂದಾಗಿ ಪ್ರಾಂತಗಳ ಆರ್ಥಿಕ ಪರಿಸ್ಥಿತಿಗಿಂತ ಉತ್ತಮ ಸ್ಥಿತಿಯಲ್ಲಿಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ನಿನ್ನೆ ಸರ್ ಮಿರ್ಜಾ ಇಸ್ಮಾಯಿಲ್ ಅವರು ಬಹಿರಂಗಪಡಿಸಿದ ಹೇಳಿಕೆಯಿಂದ ಅತ್ಯಂತ ದಯನೀಯ ಸ್ಥಿತಿ ಇದೆಯೆಂದು ನಾನು ಭಾವಿಸಿದೆ.

ಸರ್ ಅಕ್ಬರಿ ಹೈದರಿ: ಆದಾಗ್ಯೂ ಅವರು ಸಮರ್ಪಕವಾಗಿ ತಮ್ಮ ಗೌರವ ಅರ್ಪಿಸುವ ಸಮತೋಲ ಬಜೆಟ್ ಅದಾಗಿತ್ತು.

* ಡಾ. ಬಿ. ಆರ್. ಅಂಬೇಡ್ಕರ್: ಭಾರತ ಸರ್ಕಾರದ ಕಾಯ್ದೆಯಲ್ಲಿ ನಾವು ಕಾಣುವ "ಈಗಿರುವ ಮತ್ತು ಸಂಗ್ರಹವಾಗುವ ಹಕ್ಕುಗಳು" ಎಂಬ ನುಡಿಗಟ್ಟು ದ.ಆಫ್ರಿಕಾದ ಸಂವಿಧಾನದ ಕಾಯ್ದೆಯಲ್ಲೂ ಕಂಡುಬರುತ್ತದೆ. ಇದನ್ನು ನಾನು ಸೆಕ್ರೆಟರಿ ಆಫ್ರಿಕಾದಲ್ಲಿ ಹೇಗೆ ಕೆಲಸ ನಿರ್ವಹಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಡೊಮಿನಿಯನ್ ಕಚೇರಿಯಿಂದ ಹೇಳಿಕೆಯನ್ನು ತರಿಸಿಕೊಳ್ಳುವುದು ಸಾಧ್ಯವಿಲ್ಲವೇ ಎಂಬ ಬಗ್ಗೆ ನಾನು ವಿಸ್ಮಯಪಡುತ್ತಿದ್ದೇನೆ.

---

* 'ಮಿನಿಟ್ಸ್ ಆಫ್ ಎವಿಡೆನ್ಸ್': ಸಂಪುಟ ೨-ಬಿ, ೩ ಅಕ್ಟೋಬರ್ ೧೯೩೩. ಪುಟ ೧೦೩೨.

ಸರ್ ಸ್ಯಾಮ್ಯುಯೆಲ್ ಹೋರ್: ಇದೇ ಅಂಶ ಆಧರಿಸಿ ನಾವು ವಿಚಾರಣೆ ಮಾಡಿದೆವು. ಬೇಸಿಗೆಯಲ್ಲಿ ಡಾ. ಅಂಬೇಡ್ಕರ್ ಅದನ್ನು ಪ್ರಸ್ತಾಪಿಸಿದ್ದರೆಂದು ನನ್ನ ಭಾವನೆ. ಮಾಹಿತಿಗಾಗಿ ನಾನು ಡೊಮಿನಿಯರ್ ಕಚೇರಿಯಲ್ಲಿ ಕೇಳಿದ್ದೇನೆ. ಇನ್ನೂ ಮಾಹಿತಿ ಸಿಕ್ಕಿಲ್ಲ. ಆದರೆ, ಪ್ರಕರಣಗಳು ಪ್ರತ್ಯೇಕವಾಗಿವೆ ಮತ್ತು ವಿಭಿನ್ನವಾಗಿವೆ ಎಂದು ಮಾತ್ರ ನನಗೆ ತಿಳಿದುಬಂತು. ದ. ಆಫ್ರಿಕಾ ಪ್ರಕರಣದಲ್ಲಿ ಪರಿಹಾರ ಧನದ ಭರವಸೆಯೇ ಇಲ್ಲ.

ಸರ್ ಮನುಭಾಯಿ ಎನ್. ಮೆಹತಾ: ಆಸ್ಟ್ರೇಲಿಯಾದಲ್ಲೂ ಅದು ಇದೆಯೆಂದು ಕಾಣುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ದ. ಆಫ್ರಿಕಾ ಸರ್ಕಾರವು ತನ್ನ ದೇಶದಲ್ಲಿ "ಸಂಗ್ರಹವಾಗುವ ಹಕ್ಕುಗಳು" ಎಂಬ ನುಡಿಗಟ್ಟನ್ನು ಹೇಗೆ ಅರ್ಥೈಸಿದೆ ಎಂಬುದನ್ನಷ್ಟೇ ನನಗೆ ತಿಳಿದುಕೊಳ್ಳಬೇಕಾಗಿತ್ತು.

ಸರ್ ಸ್ಯಾಮ್ಯುಯೆಲ್ ಹೋರ್: ಅದನ್ನು ಪಡೆಯಲು ಸಾಧ್ಯವೇ ಎಂದು ನೋಡುತ್ತೇನೆ. ದ. ಆಫ್ರಿಕಾ ಮತ್ತು ಆಸ್ಟ್ರೇಲಿಯಾಗಳನ್ನು ನಾನು ಕೇಳುವೆ.

* ಡಾ. ಬಿ. ಆರ್. ಅಂಬೇಡ್ಕರ್: ಒಂದು ಅಥವಾ ಎರಡು ಪ್ರಾಂತಗಳಿಗಾಗಿ ಲೋಕಸೇವಾ ಆಯೋಗ ನೇಮಕ ಮಾಡುವುದಕ್ಕೆ ಅಡ್ಡಿಯೇನೂ ಇಲ್ಲ, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಆ ಉದ್ದೇಶಕ್ಕಾಗಿ ನಾವು ಅವಶ್ಯವಾಗಿ ಅವಕಾಶ ಕಲ್ಪಿಸುತ್ತೇವೆ.

* * ಡಾ. ಬಿ. ಆರ್. ಅಂಬೇಡ್ಕರ್: ಸರ್ ಮಾಲ್ಕಂ ಹೇಲೇ ಅವರು ಉಲ್ಲೇಖಿಸಿದ ಪರಿಣಾಮವನ್ನು (ಅಂದರೆ ಸ್ಥಳೀಯ ತತ್ವಗಳ ಸೇವೆಗಳನ್ನು ಅನಾವರಣಗೊಳಿಸುವುದನ್ನು) ಎತ್ತಿ ತೋರಲೆಂದು ಮಾತ್ರ ನಾನು ಮಧ್ಯೆ ಪ್ರವೇಶಿಸುವೆ. ಅವರನ್ನು ಸಚಿವ ಖಾತೆಯ ಹಿಡಿತದೊಳಕ್ಕೆ ವರ್ಗಾಯಿಸಿದ ಕೂಡಲೇ ಅವರ ವೇತನ ಶ್ರೇಣಿ ಕಮ್ಮಿಯಾಗಿಬಿಡುತ್ತದೆ. ಸೇವೆಯೊಂದು ಪ್ರಾಂತೀಕರಣಗೊಂಡಾಗ ಮಂತ್ರಿಗೆ ಮುಂಚೆ ದೊರಕುತ್ತಿದ್ದುದಕ್ಕಿಂತ ಕಮ್ಮಿ ವೇತನ ಶ್ರೇಣಿ ಅನ್ವಯವಾಗುತ್ತದೆ. ಆದ್ದರಿಂದಲೇ ಈ ಕಮ್ಮಿ ವೇತನ ಶ್ರೇಣಿ ಐರೋಪ್ಯರನ್ನು ಆಕರ್ಷಿಸುತ್ತಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. "ಪ್ರಾಂತೀಯ ಸೇವೆಗಳು" ಎನ್ನುವ ಬದಲು ಅವರು "ಚಕ್ರಾಧಿಪತ್ಯದ ಸೇವೆಗಳು" ಎನ್ನುತ್ತಾರೆ.

ಡಾ. ಬಿ. ಆರ್. ಅಂಬೇಡ್ಕರ್: ವ್ಯತ್ಯಾಸ ಉಂಟು ಮಾಡಿರುವುದು ವೇತನ ಶ್ರೇಣಿ; ವರ್ಗಾವಣೆಯಲ್ಲ.

* * * ಡಾ. ಬಿ. ಆರ್. ಅಂಬೇಡ್ಕರ್: ಈ ವಿಷಯದ ಬಗ್ಗೆ ನಾನೊಂದು ಸಲಹೆ ನೀಡಲೇ? ಹೊಸಬರಿಗೆ ಸಾರಾಸಗಟಾಗಿ ಹಕ್ಕು ನೀಡುವ ಬದಲು ನಿವೃತ್ತಿ ಹೊಂದುವವರಿಗೆ ಅನುಕೂಲತೆ ಒದಗಿಸುವ ವಿಷಯವನ್ನು ಸೆಕ್ರೆಟರಿ ಆಫ್ ಸ್ಟೇಟ್ ತಮ್ಮ ಯುಕ್ತಾಯುಕ್ತ ಪರಿಜ್ಞಾನಕ್ಕೇ ಇಟ್ಟುಕೊಳ್ಳುವುದು ಉತ್ತಮ ವಲ್ಲವೇ? ಹೊಸ ನಿಬಂಧನೆಗಳಿಂದಾಗಿ ತೊಂದರೆಗೆ ಸಿಲುಕಿ ಈ ನಿಯಮಗಳನ್ನು ಬಳಸಿಕೊಳ್ಳಬಯಸ ದಂಥವರು ನಿವೃತ್ತಿ ಹೊಂದಲಿಚ್ಛಿಸುವ ಪ್ರಾಮಾಣಿಕ ಪ್ರಕರಣಗಳಲ್ಲಿ, ಅವರು ತಮ್ಮ ಅಧಿಕಾರ ಉಪಯೋಗಿಸಬಹುದಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಇಂಥ ಸಲಹೆಯನ್ನು ನಾವು ಪರಿಶೀಲಿಸಬಹುದು. ಹೊಸದಾಗಿ ಬಂದಿರುವವರ ಬಗ್ಗೆ ಡಾ. ಅಂಬೇಡ್ಕರ್ ಹೇಳುತ್ತಿದ್ದಾರೆಂದು ನಾನು ತಿಳಿದಿದ್ದೇನೆ, ಹೌದೇ?

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೩ ಅಕ್ಟೋಬರ್ ೩೩ ಪುಟ ೧೦೫೬

* * 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೩ ಅಕ್ಟೋಬರ್ ೩೩ ಪುಟ ೧೦೫೮

* * * 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೩ ಅಕ್ಟೋಬರ್ ೩೩ ಪುಟ ೧೦೭೨

ಡಾ. ಬಿ. ಆರ್. ಅಂಬೇಡ್ಕರ್: ಹೌದು. ನಾನು ಹೊಸಬರ ಬಗ್ಗೆ ಹೇಳುತ್ತಿದ್ದೇನೆ. ಸೆಕ್ರೆಟರಿ ಆಫ್ ಸ್ಟೇಟ್‌ರವರು ಕೆಲವೊಂದು ಅಧಿಕಾರವನ್ನು ತಮ್ಮಲ್ಲೇ ಇಟ್ಟುಕೊಂಡು ತಮಗೆ ಮತ್ತು ತಮ್ಮ ಸಲಹೆಗಾರರಿಗೆ ನಂಬಿಕೆಯಾಗುವ ಪ್ರಕರಣಗಳಲ್ಲಿ ಯುಕ್ತಾಯುಕ್ತ ಪರಿಜ್ಞಾನದಂತೆ ಚಲಾಯಿಸಬಹುದು. ಹೊಸ ನಿಬಂಧನೆಗಳಿಂದಾಗಿ ಒಬ್ಬ ವ್ಯಕ್ತಿಯಲ್ಲಿ ಅಸಮಾಧಾನ ಮತ್ತು ಅತೃಪ್ತಿ ಮೂಡಿದ್ದು ಮನವರಿಕೆಯಾದರೆ ಅವರು ತಮ್ಮ ಅಧಿಕಾರ ಬಳಸಿ ಅಂಥ ವ್ಯಕ್ತಿಗೆ ಅನುಕೂಲ ಮಾಡಿಕೊಡಬಹುದು.

ಸರ್ ಸ್ಯಾಮ್ಯುಯೆಲ್ ಹೋರ್: ಈ ಸಲಹೆ ಬಗ್ಗೆ ನಾನು ಪರಿಶೀಲಿಸಲು ಬಯಸುವೆ. ಆದರೆ ನನ್ನ ಮನಸ್ಸಿನಲ್ಲಿ ಏಳುತ್ತಿರುವ ಸಂದೇಹವೇನೆಂದರೆ, ಇಂಥ ಅಧಿಕಾರ ಇದ್ದ ಮಾತ್ರಕ್ಕೆ ಆ ಯುವಜನರ ತಂದೆ–ತಾಯಿಗಳಿಗೆ, ವಿಶ್ವವಿದ್ಯಾಲಯ ಅಥವಾ ಶಾಲೆಗಳಿಗೆ ನಂಬಿಕೆ ಬಂದೀತೇ? ಆದರೂ ಈ ಬಗ್ಗೆ ನಾನು ಯೋಚಿಸುವೆ.

* ಡಾ. ಬಿ. ಆರ್. ಅಂಬೇಡ್ಕರ್: ಸರ್ ಸ್ಯಾಮ್ಯುಯೆಲ್ ಹೋರ್ ಅವರೇ, ಸಾಮಾನ್ಯವಾಗಿ ಈ ಅವಕಾಶಗಳ ಬಗ್ಗೆ ನನ್ನದೊಂದು ಪ್ರಶ್ನೆ. ಈ ಪೂರ್ವ ಮಂಜೂರಾತಿ ನಿಯಮಗಳ ಕೊನೆಯ ಉದ್ದೇಶವನ್ನು, ಅರ್ಥಾತ್ ವೈಸ್‌ರಾಯ್ ಮತ್ತು ಗವರ್ನರ್ ಪಡೆದಿರುವ ವೀಟೋ ಅಧಿಕಾರದಿಂದ ಸಾಧಿಸಬಹುದು. ಈ ದೃಷ್ಟಿಯಿಂದ ನೋಡಿದರೆ, ಇಂಥ ಅವಕಾಶಗಳಿಂದ ಹೆಚ್ಚೇನನ್ನೂ ಸಾಧಿಸಲಾಗದು. ನನ್ನ ಮಾತಿನ ಅರ್ಥವೇನೆಂದರೆ, ವೈಸ್‌ರಾಯ್ ಪೂರ್ವ ಮಂಜೂರಾತಿಯನ್ನು ನೀಡಬಹುದಾದರೂ, ಅದೇ ಮೂಸದೆ ಕಡೆಗೆ ಅಂಗೀಕಾರಕ್ಕೆ ಬಂದಾಗ ಅವರು ಅದನ್ನು ಒಪ್ಪಿಕೊಳ್ಳಬೇಕೆಂದೇನೂ ಇಲ್ಲ. ಹಾಗಾಗಿ ವೀಟೋ ಅಧಿಕಾರದಿಂದ ಸಾಧಿಸಬಹುದಾದುದಕ್ಕಿಂತ ಹೆಚ್ಚೇನನ್ನೂ ಪೂರ್ವ ಮಂಜೂರಾತಿಯಿಂದ ಸಾಧಿಸಿದಂತಾಗುವುದಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್‌ರವರ ಅಭಿಪ್ರಾಯವನ್ನು ಒಪ್ಪಬೇಕೇ ಬೇಡವೇ ಎಂಬುದನ್ನು ನನಗೆ ನಿರ್ಧರಿಸಲಾಗುವುದಿಲ್ಲ. ವೀಟೋ ಬೇರೆ ಬಗೆಯ ಮಂಜೂರಾತಿ. ಅದು ಬಹಳ ದೊಡ್ಡ ಮತ್ತು ಗಂಭೀರ ಮಂಜೂರಾತಿ ಎಂದೇ ನನಗನಿಸುತ್ತದೆ. ಅದು ಬರುವುದು ಶಾಸನಸಭೆ ಕೆಲವೊಂದು ಪ್ರಸ್ತಾಪಗಳಿಗೆ ಒಪ್ಪಿಕೊಂಡ ನಂತರ. ಆದ್ದರಿಂದ ಅದು ಗಂಭೀರ ಮಂಜೂರಾತಿ ಎಂದೇ ನನ್ನ ಭಾವನೆ.

ಡಾ. ಬಿ. ಆರ್. ಅಂಬೇಡ್ಕರ್: ಅದೆಲ್ಲವನ್ನೂ ಹೊರತುಪಡಿಸಿ ವೈಸ್‌ರಾಯ್ ಅವರ ವಿಶೇಷ ಜವಾಬ್ದಾರಿಗಳ ಮೇಲೆ ದುಷ್ಪರಿಣಾಮ ಬೀರುವಂಥ ಯಾವುದೇ ಅಂಶವನ್ನು ತಡೆಗಟ್ಟುವುದು ಮುಖ್ಯ ಉದ್ದೇಶವಾಗಿರುವಾಗ, ವೀಟೋ ಪರಿಣಾಮಕಾರಿ ಕ್ರಮವೇ?

ಸರ್ ಸ್ಯಾಮ್ಯುಯೆಲ್ ಹೋರ್: ಈ ಎರಡನೇ ವಿಚಾರವನ್ನೇ ನಾನು ಪ್ರಸ್ತಾಪ ಮಾಡುವವನಿದ್ದೆ. ವೀಟೋಗೆ ದೀರ್ಘ ಚರಿತ್ರೆಯಿದೆ. ಬ್ರಿಟಿಷ್ ಅನುಭವದಿಂದ ಅದನ್ನು ಸಾಮಾನ್ಯವಾಗಿ ಒರೆಗೆ ಹಚ್ಚಲಾಗಿದೆ. ಸಾಂವಿಧಾನಿಕ ಔಪಚಾರಿಕತೆಯಲ್ಲಿ ವೀಟೋ ಕ್ರಮೇಣ ಹೆಚ್ಚು ಹೆಚ್ಚು ಸಾಮಾನ್ಯವಾಗುತ್ತಿದೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಹೇಳಬೇಕೆಂದಿದ್ದು ಇದು. ಪೂರ್ವ ಮಂಜೂರಾತಿ ನಿಯಮ ಮತ್ತು ವೀಟೋಗಳ ಪರಿಣಾಮಗಳಲ್ಲಿನ ವ್ಯತ್ಯಾಸವನ್ನು ಪರಿಗಣಿಸುವುದಾದರೆ, ಪೂರ್ವ ಮಂಜೂರಾತಿ ಚರ್ಚೆಗೆ ಆಸ್ಪದ ಕೊಡುವುದಿಲ್ಲ. ಆದರೆ ವೀಟೋ ಮಾತ್ರ ಹಾಗಲ್ಲ, ಹೌದೇ?

---

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೫ ಅಕ್ಟೋಬರ್ ೧೯೩೩. ಪುಟ ೧೧೧೮–೧೧೧೯

ಸರ್ ಸ್ಯಾಮ್ಯುಯೆಲ್ ಹೋರ್: ಅದು ಒಂದು ವ್ಯತ್ಯಾಸ.

ಡಾ. ಬಿ. ಆರ್. ಅಂಬೇಡ್ಕರ್: ಇದು ಒಂದು ವ್ಯತ್ಯಾಸ. ಈಗ ಸರ್ ಸ್ಯಾಮ್ಯುಯೆಲ್ ಹೋರ್ ಅವರೇ, ನಾನು ಎತ್ತಿ ಹೇಳಬೇಕಾಗಿರುವುದೇನೆಂದರೆ, ವೈಸ್‌ರಾಯ್ ಅವರ ವಿಶೇಷ ಜವಾಬ್ದಾರಿಯನ್ನು ವಿಮರ್ಶಿಸುತ್ತದೆಂಬ ಕಾರಣದಿಂದ ಚರ್ಚೆಗೆ ನಿಶ್ಚಿತವಾಗಿ ಆಸ್ಪದ ಕೊಡುವುದಿಲ್ಲ ಎನ್ನುವುದಾದರೆ, ಈ ಪೂರ್ವ ಮಂಜೂರಾತಿ ನಿಯಮವೂ ಚರ್ಚೆಯನ್ನು ಪತ್ರಿಕೆಗಳಲ್ಲಾಗಲೀ ಅಥವಾ ಸದನದ ಹೊರಗಿನ ಸಾರ್ವಜನಿಕ ವೇದಿಕೆಯಲ್ಲಾಗಲಿ ತಡೆ ಹಿಡಿಯಲು ಸಾಧ್ಯವಿಲ್ಲ. ಅಂದರೆ ಪೂರ್ವ ಮಂಜೂರಾತಿ ನಿಯಮದ ಮೇರೆಗೆ ಮಂಡಿಸಲಾದ ವಿಷಯವನ್ನು ವಿರೋಧಿಸಿ ಪತ್ರಿಕೆಗಳು ಮತ್ತು ಸಾರ್ವಜನಿಕರು ಟೀಕೆ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಲು ಸ್ವಾತಂತ್ರ್ಯ ಇರುವಾಗ ಬಾಯಿ ಕಟ್ಟುವುದು ಶಾಸನ ಸಭೆಯದು ಮಾತ್ರ. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಅದು ಡಾ. ಅಂಬೇಡ್ಕರ್ ಅರ್ಥೈಸುವ ಬಗೆ.

ಡಾ. ಬಿ. ಆರ್. ಅಂಬೇಡ್ಕರ್: ಹಾಗೆ ಅರ್ಥೈಸುವುದು ನ್ಯಾಯವಲ್ಲವೇ? ಪತ್ರಿಕೆಗಳು, ಬಹಿರಂಗ ಸಭೆಗಳು ಅಥವಾ ಇನ್ನೆಲ್ಲೂ ಪೂರ್ವ ಮಂಜೂರಾತಿ ವಿಷಯದ ಬಗೆಗಿನ ಚರ್ಚೆಯ ನಿಷೇಧವನ್ನು ಉಲ್ಲೇಖಿಸುವಷ್ಟು, ವೈಸ್‌ರಾಯ್ ಅವರ ಪೂರ್ವ ಮಂಜೂರಾತಿ ಅಧಿಕಾರ ವಿಸ್ತೃತಗೊಂಡು ಜಾರಿಯಾಗುವುದಿಲ್ಲ ಎಂಬುದು ನಿಶ್ಚಿತ, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ನಿಸ್ಸಂದೇಹವಾಗಿ ಆ ಬಗೆಯ ಚರ್ಚೆ ನಡೆಯುವುದು ಅಗತ್ಯ. ಆದರೂ ನನಗೆ ಬಲವಾಗಿ ಅನಿಸುವುದೇನೆಂದರೆ, ಶಾಸನ ಸಭೆಗಳಲ್ಲಿ ನಡೆಯುವ ಚರ್ಚೆ ಮತ್ತು ಹೊರಗಡೆ ನಡೆಯುವ ಬೇಜವಾಬ್ದಾರಿ ಚರ್ಚೆ ಮಧ್ಯೆ ತುಲನಾತ್ಮಕ ಅಂತರವಿದೆ. ಎರಡನೆಯದಾಗಿ, ಪೂರ್ವಾನು ಮತಿಯ ಮಂಜೂರಾತಿಯು ಕೆಲ ಕಾಲದಿಂದ ಜಾರಿಯಲ್ಲಿದೆ. ಪ್ರತಿ ದುಂಡು ಮೇಜಿನ ಪರಿಷತ್ತುಗಳಲ್ಲಿ ಅದನ್ನು ಹೊಸ ಸಂವಿಧಾನದ ಒಂದು ಭಾಗವಾಗಿ ಒಪ್ಪಿಕೊಳ್ಳಲಾಗಿತ್ತು. ಮೂರನೆಯದಾಗಿ ಪ್ಯಾರಾ ೧೧೯ರಲ್ಲಿ ಸೂಚಿಸಲಾಗಿರುವ ವಿಭಾಗಗಳನ್ನು ಡಾ. ಅಂಬೇಡ್ಕರ್ ಗಮನಿಸಿದರೆ, ಪ್ರತಿಯೊಂದು ವಿಭಾಗವೂ ಕೆಲ ಬಗೆಯ ವಿಶೇಷ ಎಚ್ಚರಿಕೆಗಳನ್ನು ವಹಿಸಬೇಕೆಂಬ ಬಗ್ಗೆ ಗಣನೀಯ ಪ್ರಮಾಣದ ಒತ್ತಾಯ ಅಲ್ಲಿರು ವುದನ್ನು ಕಾಣಬಹುದಾಗಿದೆ.

ಉದಾಹರಣೆಗೆ: ಧಾರ್ಮಿಕ ಹಕ್ಕುಗಳು ಮತ್ತು ರೀತಿ ರಿವಾಜುಗಳ ಪ್ರಶ್ನೆಯನ್ನು ತೆಗೆದುಕೊಂಡರೆ, ಆ ಬಗ್ಗೆ ಸನಾತನವಾದಿ ಹಿಂದೂಗಳ ಕೆಲವೊಂದು ಬಣಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿರುವುದನ್ನು ಅವರು ಗಮನಿಸಿರಲೇಬೇಕು. ಅವರ ಅಭಿಪ್ರಾಯವನ್ನು ಡಾ. ಅಂಬೇಡ್ಕರ್ ಒಪ್ಪುವುದಿಲ್ಲ. ಅವರದು ಪೂರ್ಣ ತಪ್ಪು ಎಂಬುದು ಡಾ. ಅಂಬೇಡ್ಕರ್ ಅಭಿಮತ. ಅವರಿಗೆ ಆ ವಿಷಯದಲ್ಲಿ ತೀವ್ರ ಆಕ್ಷೇಪ ಇರುವುದೂ ನಿಜ. ಭಾರತೀಯ ಶಾಸನ ಸಭೆಯಲ್ಲಿ ಆ ಬಗೆಯ ಪ್ರಶ್ನೆಗಳೇ ಇರಬಾರದೆಂದು ಅವರು ಆಗ್ರಹ ಪಡಿಸುತ್ತಾರೆ. ಈ ಹಂತದಲ್ಲಿ ನಾವು ಮಧ್ಯ ಮಾರ್ಗ ಅನುಸರಿಸುತ್ತಿದ್ದೇವೆ. ಆ ವಿಭಾಗಗಳಲ್ಲಿ ಪ್ರತಿಯೊಂದರ ಬಗ್ಗೆಯೂ ನಾನು ಹೀಗೆ ಹೇಳಬಲ್ಲೆ. ವಿಶೇಷ ಎಚ್ಚರಿಕೆಗಳನ್ನು ಕೈಗೊಳ್ಳುವಂತೆ ನಿರ್ದೇಶನಗಳು ಆ ವಿಭಾಗಗಳಲ್ಲಿವೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಮಂಡಿಸಲು ಯತ್ನಿಸಿದ್ದು ಇದು. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಈ ವಿಷಯಗಳ ಬಗ್ಗೆ ಬಹಿರಂಗವಾಗಿ ಚರ್ಚೆ ನಡೆಸಲು ಸ್ವತಂತ್ರರಿರುವಾಗ, ಅವನ್ನೇ

ಸದನದೊಳಗೆ ಚರ್ಚಿಸಲು ಅವರಿಗೆ ಸ್ವಾತಂತ್ರ್ಯ ಇರುವುದಿಲ್ಲ. ಪೂರ್ವ ಮಂಜೂರಾತಿ ನಿಯಮದ ಪ್ರಕಾರ ನೀವು ತರುತ್ತಿರುವ ವ್ಯತ್ಯಾಸ ಇದೊಂದೇ.

ಸರ್ ಸ್ಯಾಮ್ಯುಯೆಲ್ ಹೋರ್: ಅವರು ಗೊತ್ತುವಳಿ ಅಂಗೀಕರಿಸಬಹುದು.

ಡಾ. ಬಿ. ಆರ್. ಅಂಬೇಡ್ಕರ್: ಶ್ರೀಯುತ ಜಯಕರ್ ಅವರು "ಧರ್ಮ ಮತ್ತು ಧಾರ್ಮಿಕ ರೀತಿ ರಿವಾಜುಗಳು" ಎಂಬ ನುಡಿಗಟ್ಟಿನ ಬಳಕೆಗೆ ಸಂಬಂಧಿಸಿ ಎತ್ತಿದ ಅಂಶದ ಬಗ್ಗೆ ನಾನು ಕೇವಲ ಒಂದು ಸಲಹೆ ನೀಡುತ್ತೇನೆ. ಏನೆಂದರೆ "ಧರ್ಮ ಮತ್ತು ಧಾರ್ಮಿಕ ರೀತಿ ರಿವಾಜುಗಳು" ಎಂಬ ನುಡಿಗಟ್ಟಿನ ಬದಲು "ನಂಬಿಕೆಯ ಸಿದ್ಧಾಂತಗಳು" ಎಂದರೆ ಸಾಲದೇ?

ಸರ್ ಸ್ಯಾಮ್ಯುಯೆಲ್ ಹೋರ್: "ನಂಬಿಕೆಯ ಸಿದ್ಧಾಂತಗಳು" ಎಂಬ ಪದಪುಂಜ ಬಳಸಿದರೂ ಇದೇ ಬಗೆಯ ವಾದ ವಿವಾದ ನಡೆಯುತ್ತಿತ್ತು. ಆಕ್ಷೇಪ ಕಾಣಿಸಿಕೊಳ್ಳುತ್ತಿತ್ತು ಎಂದೇ ನನಗನಿಸುತ್ತದೆ.

ಸರ್ ಹರಿಸಿಂಗ್ ಗೌರ್: ಇನ್ನೂ ಹೆಚ್ಚು ಏಳುತ್ತಿತ್ತೇ?

ಸರ್ ಸ್ಯಾಮ್ಯುಯೆಲ್ ಹೋರ್: ಹಳೆಯದಕ್ಕಿಂತ ಈ ಹೊಸ ಪದಪುಂಜಕ್ಕೆ ಹತ್ತು ಹಲವು ಅರ್ಥ ವಿವರಣೆ, ವ್ಯಾಖ್ಯಾನಗಳು ಶುರುವಾಗುತ್ತಿದ್ದವೆಂದೇ ನನಗೆ ತೋರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಸಾಧ್ಯವಿದ್ದು ಮಟ್ಟಿಗೆ "ರೀತಿ ರಿವಾಜುಗಳು" ಎಂಬ ಪದವನ್ನು ಬಳಸದಿರುವುದು ಸೂಕ್ತವೆಂಬುದು ನನ್ನ ಅಭಿಪ್ರಾಯ.

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಹೇಳಿದ್ದನ್ನು ನಾನು ದಾಖಲು ಮಾಡಿ ಕೊಂಡಿರುತ್ತೇನೆ.

* ಲಾರ್ಡ್ ರಾಂಕೇಲರ್: ಸೆಕ್ರೆಟರಿ ಆಫ್ ಸ್ಟೇಟ್‌ರವರೆ, ಫೆಡರಲ್ ಕಾಯ್ದೆಯಿಂದ ಉದ್ಭವಿಸಿದಂಥ ನಿರೀಕ್ಷಿಸಿದ ಆದೇಶಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಿಲ್ಲವೇ? ಇದಕ್ಕೆ ತಗಲುವ ವೆಚ್ಚವನ್ನು ಪ್ರಾಂತಗಳಿಗೆ ವಿಧಿಸಬಹುದಲ್ಲ?

ಸರ್ ಸ್ಯಾಮ್ಯುಯೆಲ್ ಹೋರ್: ಈ ಹಣ ಸಂಗ್ರಹಿಸಲು ಸಿಬ್ಬಂದಿಯಿಲ್ಲ.

ಲಾರ್ಡ್ ರಾಂಕೇಲರ್: ಪ್ರಾಂತಗಳಿಗೆ ಕೇಂದ್ರದ ಬೊಕ್ಕಸದಿಂದ ಹಣ ಬರುತ್ತದೆ ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಆದಾಯ ತೆರಿಗೆ ಬರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಸರ್ ಆಸ್ಟಿನ್ ಚೇಂಬರ್‌ಲೇನ್ ಅವರ ಪ್ರಶ್ನೆಗೆ ನೀಡಿದ ಉತ್ತರ ಹೆಚ್ಚೂ ಕಮ್ಮಿ ಈ ಬಗೆಯಲ್ಲಿ ಇರಬೇಕಿತ್ತು. ಪೂರಕ ಕಾಯ್ದೆಗೆ ಸಂಬಂಧಪಟ್ಟಂತೆ ಫೆಡರಲ್ ಶಾಸನ ಸಭೆ ರಚಿಸಿದ ಪೂರಕ ಕ್ಷೇತ್ರದಲ್ಲಿನ ಯಾವುದೇ ಕಾಯ್ದೆಯು ಪ್ರಾಂತೀಯ ಸರ್ಕಾರ ರಚಿಸಿದ ಇಂಥದೇ ಕಾಯ್ದೆಗಿಂತ ಮೇಲಿನದು ಎಂದು ಶ್ವೇತಪತ್ರದ ಪ್ಯಾರಾ ಒಂದರಲ್ಲಿ ಹೇಳಲಾಗಿದೆ. ಪರಿಣಾಮವಾಗಿ, ಕೇಂದ್ರ ರಚಿಸಿದ ಕಾಯ್ದೆ ಮತ್ತು ಪ್ರಾಂತ ರಚಿಸಿದ ಕಾಯ್ದೆಗಳ ನಡುವೆ ಪೂರಕ ಕ್ಷೇತ್ರದಲ್ಲಿ ಘರ್ಷಣೆ ಉಂಟಾದರೆ, ಶ್ವೇತಪತ್ರದಲ್ಲಿನ ಅವಕಾಶದಂತೆಯೇ ಪ್ರಾಂತೀಯ ಕಾಯ್ದೆಗಿಂತಲೂ ಫೆಡರಲ್ ಕಾಯ್ದೆ ಮೇಲಿನದಾಗುತ್ತದೆ.

ಸರ್ ಅಸ್ಟಿನ್ ಚೇಂಬರ್‌ಲೇನ್: ಹೌದು. ಈ ಮುಂಚೆ ನಾನು ಸೆಕ್ರೆಟರಿ ಆಫ್ ಸ್ಟೇಟ್‌ರವರ ಮುಂದಿಟ್ಟ ಅಂಶ ಇದೇ.

---

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨-ಬಿ, ೧೦ ಅಕ್ಟೋಬರ್ ೧೯೩೩. ಪುಟ ೧೧೩೦

ಡಾ. ಬಿ. ಆರ್. ಅಂಬೇಡ್ಕರ್: ಕಾಯ್ದೆ ಹೇಳುವುದು ಹೀಗೆ ಎಂದು ನನಗನಿಸುತ್ತದೆ.

ಸರ್ ಅಸ್ಟಿನ್ ಚೇಂಬರ್‌ಲೇನ್: ಫೆಡರಲ್ ಶಾಸನ ಸಭೆ ರಚಿಸಿದ ಪೂರಕ ಕಾಯ್ದೆಯ ಆಡಳಿತಕ್ಕೆ ಸಂಬಂಧಿಸಿದ ನಿರ್ದೇಶನ ಮತ್ತು ಸೂಚನೆಗಳನ್ನು ಪ್ರಾಂತೀಯ ಗವರ್ನರರ ಮೂಲಕ ಪ್ರಾಂತೀಯ ಸರ್ಕಾರಕ್ಕೆ ಕಳಿಸುವ ಅಧಿಕಾರವು ಫೆಡರಲ್ ಕಾರ್ಯಕಾರಿಣಿಗಿದೆ. ಗವರ್ನರರು ನಾನು ತಿಳಿದಂತೆ, ಇಂಥ ನಿರ್ದೇಶನ ಮತ್ತು ಸೂಚನೆಗಳನ್ನು ಪಾಲಿಸಲು ಬಾಧ್ಯರು.

ಮಾರ್ಕ್ವಿಸ್ ಆಫ್ ರೀಡಿಂಗ್: ಸೆಕ್ರೆಟರಿ ಆಫ್ ಸ್ಟೇಟ್‌ರವರು ನಕಾರ ರೂಪದಲ್ಲಿ ಉತ್ತರಿಸಿದ್ದು ಇದೇ ಪ್ರಶ್ನೆ ಕುರಿತು.

ಸರ್ ಹರಿಸಿಂಗ್ ಗೌರ್: ಅನಧಿಕೃತ ಪತ್ರಿಕೆ ನಡೆಸುವವರು ಶಿಕ್ಷೆಗೆ ಗುರಿಯಾಗುವ ನಿಬಂಧನೆ ಇರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ತೋಚುತ್ತಿರುವ ಇನ್ನೊಂದು ಉದಾಹರಣೆ ನೀಡಲೇ? ನಿಗದಿ ಪಡಿಸಿದಷ್ಟು ಹಣವನ್ನು ಭದ್ರತಾ ಠೇವಣಿಯನ್ನಾಗಿಡದಿದ್ದರೆ ಯಾರೂ ಪತ್ರಿಕೆ ಆರಂಭಿಸುವಂತಿಲ್ಲ ಎಂಬ ನಿಬಂಧನೆಯಿರುವ ಕಾಯ್ದೆಯೊಂದನ್ನು ಕೇಂದ್ರ ಸರ್ಕಾರವು ತುರ್ತು ಸ್ಥಿತಿ ಸನ್ನಿವೇಶದಲ್ಲಿ ಮಾಡಿತೆಂದು ಭಾವಿಸಿ ಇಂಥ ಕಾಯ್ದೆ ಯಾವ ನಿರ್ದಿಷ್ಟ ವ್ಯಕ್ತಿಯ ಮೇಲೂ ದುಷ್ಪರಿಣಾಮ ಬೀರುವುದಿಲ್ಲ. ನಿರ್ದಿಷ್ಟ ಪ್ರಾಂತವೊಂದರಲ್ಲಿ ಸರ್ಕಾರಕ್ಕೆ ನೆರವಾಗುವ (ಪಕ್ಷದ ಮುಖವಾಣಿಯಾದ) ಪತ್ರಿಕೆಯೊಂದಿದೆ ಎಂದು ಭಾವಿಸಿ, ಕೇಂದ್ರ ಶಾಸನಸಭೆ ರಚಿಸಿದ ಪತ್ರಿಕಾ ಕಾಯ್ದೆ ಮೇಲೆ ಆ ಪತ್ರಿಕೆ ಪ್ರಭಾವ ಬೀರುತ್ತದೆ ಎಂದುಕೊಳ್ಳಿ. ಆ ಪತ್ರಿಕೆ ಮತ್ತು ಪ್ರಾಂತೀಯ ಸರ್ಕಾರದ ಸಂಬಂಧದಿಂದಾಗಿ ಅಂಥ ಪತ್ರಿಕೆ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ಸರ್ಕಾರವು ನಿರಾಕರಿಸುತ್ತದೆ ಎಂದಿಟ್ಟುಕೊಂಡರೆ, ಮುಂದೇನು? ನಿಶ್ಚಯವಾಗಿಯೂ ಇಂಥ ಪ್ರಸಂಗದಲ್ಲಿ ಯಾವೊಬ್ಬ ವ್ಯಕ್ತಿಗೂ ತೊಂದರೆ ಯಾಗುವುದಿಲ್ಲವೇ?

ಸರ್ ಹರಿಸಿಂಗ್ ಗೌರ್: ಅನಧಿಕೃತ ಪತ್ರಿಕೆ ನಡೆಸುವವರನ್ನು ಶಿಕ್ಷಿಸುವ ನಿಬಂಧನೆ ಇರುತ್ತದೆ ಯಲ್ಲವೇ?

ಡಾ. ಬಿ. ಆರ್. ಅಂಬೇಡ್ಕರ್: ಅದೇ ಈಗಿನ ವಿಷಯ.

ಸರ್ ಅಸ್ಟಿನ್ ಚೇಂಬರಲೇನ್: ಮಾಹಿತಿ ಹೊಂದುವ ಹಾಗೂ ಅದು ಸರ್ಕಾರಕ್ಕೆ ತಲುಪುವ ವ್ಯವಸ್ಥೆ ಇರ ಬೇಕು.

ಡಾ. ಬಿ. ಆರ್. ಅಂಬೇಡ್ಕರ್: ವಿಚಾರಣೆ ನಡೆಸಲು ಅವರು ನಿರ್ದಿಷ್ಟ ಅಧಿಕಾರಿಗೆ ಶುಲ್ಕ ನಿಗದಿಪಡಿಸಿ, ಸ್ಥಳೀಯ ಸರ್ಕಾರ ಆ ವಿಚಾರಣೆಯ ವೆಚ್ಚ ಪಾವತಿ ಮಾಡಿ, ಇದಕ್ಕಾಗಿ ಬಜೆಟ್‌ನಲ್ಲಿ ಈ ಬಗ್ಗೆ ವ್ಯವಸ್ಥೆ ಮಾಡದಿದ್ದರೆ ಏನಾಗುತ್ತದೆ?

ಸರ್ ಸ್ಯಾಮ್ಯುಯೆಲ್ ಹೋರ್: ಆ ಎಲ್ಲಾ ತೊಂದರೆಗಳೂ ನನಗೆ ತಿಳಿದಿವೆ. ಬೇರೆ ಕಡೆಯ ತೊಂದರೆಗಳನ್ನೂ ನೋಡದೇ ನನಗೆ ಬೇರೆ ಮಾರ್ಗವಿಲ್ಲ. ಡಾ. ಅಂಬೇಡ್ಕರ್ ಉಲ್ಲೇಖಿಸಿದ ಪ್ರಕರಣ ಕಾನೂನು ಮತ್ತು ವ್ಯವಸ್ಥೆಯ ಜವಾಬ್ದಾರಿ ಪ್ರಾಂತಕ್ಕೆ ಸೇರಿದ್ದು. ಫೆಡರೇಷನ್ ಆಸಕ್ತಿ ಏಕರೂಪತೆ ಕುರಿತದ್ದು. ಹಾಗೆಂದು ಪ್ರಾಂತಕ್ಕೆ ಸೇರಿದ ವಿಷಯದ ಮೇಲೆ ಫೆಡರೇಷನ್ ಕ್ರಮ ದುಷ್ಪರಿಣಾಮ ಬೀರಬಾರದು ಎಂಬುದೂ ಸರಿ. ಡಾ. ಅಂಬೇಡ್ಕರ್ ಮತ್ತು ಸರ್ ಅಸ್ಟಿನ್ ಚೇಂಬರಲೇನ್ ಅವರ ಪ್ರಶ್ನೆಗಳು ಸೂಚಿಸಿದ್ದರ ತಾರ್ಕಿಕ ತೀರ್ಮಾನ ತೆಗೆದರೆ, ಪ್ರಾಂತಗಳಲ್ಲಿನ ಕಾನೂನು ಮತ್ತು ವ್ಯವಸ್ಥೆ ಮೇಲೆ ಫೆಡರೇಷನ್ ಹತೋಟಿ ಇಟ್ಟುಕೊಂಡಿದೆ ಎಂದೇ ಅರ್ಥವಾಗುತ್ತದೆ. ಈ ಶ್ವೇತಪತ್ರದಲ್ಲಿ ನಮೂದಿಸಿದ ತತ್ವಗಳಿಗೆ ಇದು ಪೂರ್ತಿ ವಿರುದ್ಧವಾಗುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ದಯವಿಟ್ಟು ಕ್ಷಮಿಸಿ. ಕಾನೂನು ಮತ್ತು ವ್ಯವಸ್ಥೆ ಕೇಂದ್ರಕ್ಕೆ ಸಂಬಂಧಿಸಿಯೇ ಇಲ್ಲ; ಅದು ಸಂಪೂರ್ಣವಾಗಿ ಪ್ರಾಂತಕ್ಕೆ ಸೇರಿದ ವಿಷಯ ಎಂದು ನೀವು ಸ್ಪಷ್ಟಪಡಿಸಲೇಬೇಕು. ಈಗ ನೀವು ಮುಂದಿಟ್ಟ ವಾದವನ್ನು ನೀವು ಅವಶ್ಯಕವಾಗಿ ಮಾಡಬಹುದು. ಆದರೆ, ಅದನ್ನು ನೀವು ಪೂರಕ ಕಾಯ್ದೆ ಎಂದುಬಿಟ್ಟರೆ ಕಾಯ್ದೆ ತಿದ್ದುಪಡಿಯಾಗುವಂತೆ ಫೆಡರೇಷನ್ ನೋಡಿಕೊಳ್ಳಬೇಕೆಂಬುದು ನನ್ನ ಅನಿಸಿಕೆ.

* ಡಾ. ಬಿ. ಆರ್. ಅಂಬೇಡ್ಕರ್: ರಾಜ್ಯ ಕಾರ್ಯದರ್ಶಿಯವರೇ, ಭಾರತ ಸರ್ಕಾರದ ಕಾಯ್ದೆ ಪ್ರಕಾರ ಪೂರಕ ಕ್ಷೇತ್ರದ ಈಗಿನ ಸ್ಥಿತಿ ಬಗ್ಗೆ ನಿಮ್ಮ ಗಮನ ಸೆಳೆಯಬಯಸುವೆ. ಈಗಿನ ಭಾರತ ಸರ್ಕಾರದ ಕಾಯ್ದೆ ಪ್ರಕಾರ ಕೆಲವು ವಿಷಯಗಳು ಮಾತ್ರ ಅಥವಾ ಕೆಲವು ವಿಷಯಗಳ ಭಾಗಗಳು ಮಾತ್ರ ಕೇಂದ್ರ ಶಾಸನಸಭೆಗೆ ಅನುಗುಣವಾಗುತ್ತವೆ ಎಂದು ನಿಮಗೆ ಹೇಳಲಾಯಿತಾದ್ದರಿಂದ, ನಾನು ನಿಮ್ಮ ಗಮನ ಸೆಳೆಯಲು ಕುತೂಹಲಿಯಾಗಿದ್ದೇನೆ.

ಪರಭಾರೆ ನಿಯಮಗಳಿಗೆ ಸಂಬಂಧಿಸಿದ ೧ನೇ ಪಟ್ಟಿಯ ಎರಡನೇ ಭಾಗದ ಮೇರೆಗೆ ಕೆಲವು ಪ್ರಾಂತೀಯ ವಿಷಯಗಳನ್ನು ವಿಶೇಷವಾಗಿ ಪೂರಕ ವಿಷಯಗಳೆಂದು ಮಾಡಲಾಗಿದೆ. ಮೊಟ್ಟ ಮೊದಲು ವಿಷಯವನ್ನು ಗಮನಿಸಿ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತೀಯ ಎಂದು ಮಾಡಲಾದ ವಿಷಯಗಳು ಕೇಂದ್ರ ಶಾಸನ ಸಭೆಗೆ ಅನುಗುಣವಾಗಿರಬೇಕು, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಪರಭಾರೆ ನಿಯಮಗಳಿಗೆ ಸಂಬಂಧಪಟ್ಟ ಪಟ್ಟಿಯ ಎರಡನೇ ಭಾಗದಲ್ಲಿ ಸೇರ್ಪಡೆಯಾಗಿರುವ ೫೧ ವಿಷಯಗಳಲ್ಲಿ ೧೪ ವಿಷಯಗಳು ಕೇಂದ್ರ ಶಾಸನಸಭೆಗೆ ಅಥವಾ ಸರ್ಕಾರ ರಚಿಸಿದ ನಿಯಮಗಳಿಗೆ ವಿಷಯಗಳು ಕೇಂದ್ರ ಶಾಸನಸಭೆಗೆ ಅಥವಾ ಸರ್ಕಾರ ರಚಿಸಿದ ನಿಯಮಗಳಿಗೆ ಅಥವಾ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಸೇರಿದ ವಿಷಯ ಗಳೆಂದು ಸ್ಪಷ್ಟಪಡಿಸಲಾಗಿದೆ. ಇದು ಒಂದನೆಯದು. ಎರಡನೆಯ ವಿಷಯವೆಂದರೆ ಪೂರ್ವ ಮಂಜೂರಾತಿ ಮೇರೆಗೆ ಭಾರತ ಸರ್ಕಾರ ಕಾಯ್ದೆಯ ಕಲಮು ೬೭, ಉಪನಿಯಮ (೨)ರಂತೆ ಎಲ್ಲಾ ಪ್ರಾಂತೀಯ ಎಂದು ತಿಳಿಯಲ್ಪಡುತ್ತಿದ್ದರೂ, ಗವರ್ನರ್ ಜನರಲ್ ಅವರಿಂದ ಪೂರ್ವ ಮಂಜೂರಾತಿ ಪಡೆದಿದ್ದರೆ, ಆ ಇಡೀ ಕೇಂದ್ರೀಯ ವಿಷಯದ ಮೇಲೆ ಕಾಯ್ದೆ ಮಾಡಲು ಕೇಂದ್ರ ಸರ್ಕಾರ ಸ್ವತಂತ್ರವಾಗಿದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಪ್ರಾಂತೀಯ ಸರ್ಕಾರದ ಬಗ್ಗೆ ಹೇಳುವುದಾದರೆ, ಕಲಮು ೮೦(ಎ) ಪ್ರಕಾರ ಕೇಂದ್ರ ಸರ್ಕಾರವು ಪೂರಕ ಕ್ಷೇತ್ರದ ಮೇಲೆ ಹತೋಟಿ ಹೊಂದಿದೆ. ಇದರಿಂದಾಗಿ ಈಗ ಜಾರಿಯಲ್ಲಿರುವ ಕಾಯ್ದೆಯು ಪರಿಷತ್ತಿನಲ್ಲಿ ಗವರ್ನರ್ ಜನರಲ್ ಅವರಿಗೆ ಸ್ಪಷ್ಟವಾಗಿ ಮೀಸಲಿರಿಸಿದ ಕೇಂದ್ರೀಯ ವಿಷಯ ಎಂಬ ಬಗ್ಗೆ, ನಿಯಮ ಅಥವಾ ಕಾಯ್ದೆ ಪ್ರಕಾರ ಘೋಷಿಸಿರುವ ಯಾವುದೇ

---

* ಮಿನಿಟ್ಸ್ ಆಫ್ ಎವಿಡೆನ್ಸ್: ಸಂಪುಟ ೨-ಬಿ, ೧೨ ಅಕ್ಟೋಬರ್ ೧೯೩೩, ಪುಟಗಳು ೧೧೭೮-೮೧

ಕೇಂದ್ರೀಯ ಅಥವಾ ಪ್ರಾಂತೀಯ ವಿಷಯವನ್ನು ವಿಧಿಬದ್ಧಗೊಳಿಸುವ ಯಾವ ಕಾಯ್ದೆಯನ್ನೂ ಗವರ್ನರ್ ಜನರಲ್ ಅವರ ಪೂರ್ವ ಮಂಜೂರಾತಿ ಪಡೆಯದೇ ಯಾವುದೇ ಪ್ರಾಂತದ ಸ್ಥಳೀಯ ಸರ್ಕಾರ ಮಾಡುವಂತಿಲ್ಲ. ಇದು ಈಗಿನ ಸ್ಥಿತಿ; ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಗವರ್ನರ್ ಜನರಲ್‌ರ ಮಂಜೂರಾತಿ ಸಿಗುವುದಾದರೆ, ವ್ಯಾವಹಾರಿಕವಾಗಿ ಇದು ಎಲ್ಲಾ ಪ್ರಾಂತೀಯ ಮತ್ತು ಪೂರಕ ಕ್ಷೇತ್ರಕ್ಕೆ ಅನ್ವಯವಾಗುತ್ತದೆ. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈಗಿನ ಸಲಹೆ ಪ್ರಕಾರ ಈ ಇಡೀ ಸಂಗತಿಯನ್ನು ಮಾರ್ಪಡಿಸಲಾಗಿದೆ. ಅಂದರೆ, ಬಹುತೇಕ ವಿಷಯಗಳಲ್ಲಿ ಕೇಂದ್ರ ಶಾಸನ ಸಭೆಯ ಪೂರಕ ಅಧಿಕಾರವನ್ನು ಕಿತ್ತುಕೊಳ್ಳಬೇಕೆಂದು ಸೂಚಿಸಲಾಗಿದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ೩ನೇ ಪಟ್ಟಿ ಹೊರತುಪಡಿಸಿ ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಈಗ ೩ನೇ ಪಟ್ಟಿಯನ್ನು ಪರಿಶೀಲಿಸೋಣ. ನಾನು ಸಿದ್ಧಪಡಿಸಿದ ಪ್ರಬಂಧ ಕಳೆದುಹೋಗಿದ್ದರೂ, ನೆನಪಿನಿಂದ ಹೇಳುವುದಾದರೆ, ಈ ಪಟ್ಟಿಯಲ್ಲಿರುವ ಬಹುತೇಕ ವಿಷಯಗಳು ಸಂಪೂರ್ಣವಾಗಿ ಕೇಂದ್ರೀಯವಾದವು ಅಥವಾ ಪೂರಕವಾದವು, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು, ಸಾಮಾನ್ಯವಾಗಿ ಅದು ಹಾಗೇ. ಏಕರೂಪದ ಸರ್ಕಾರದ ಪ್ರಕಾರ ಅದು ಅನಿವಾರ್ಯ.

ಡಾ. ಬಿ. ಆರ್. ಅಂಬೇಡ್ಕರ್: ಅದು ನಿಜವೇ. ಸೆಕ್ರೆಟರಿ ಆಫ್ ಸ್ಟೇಟ್‌ರವರೇ, ಆದ್ದರಿಂದ ನನ್ನ ಸಲಹೆ ಏನೆಂದರೆ: ಭಾರತ ಸರ್ಕಾರದ ಕಾಯ್ದೆ ಮೇರೆಗೆ ಅಖಿಲ ಭಾರತ ಪ್ರಾಮುಖ್ಯತೆಯಿರುವ ಶಾಸನ ಕ್ಷೇತ್ರವು ಇನ್ನು ಮುಂದೆ ಆಡಳಿತಾತ್ಮಕವಾಗಿ ಕೇವಲ ಪ್ರಾಂತೀಯ ಎಂದು ಪರಿಗಣಿತವಾಗಲಿದೆ ಎಂದು ಹೇಳುವುದು ಅಷ್ಟೇನೂ ಸಮಂಜಸವಾಗಲಾರದು, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಅಲ್ಲ; ಪ್ರಾಂತಗಳು ಸ್ವಾಯತ್ತವಾಗಿರುವ ಫೆಡರೇಷನ್ ಸ್ಥಿತಿ ಮತ್ತು ಏಕರೂಪದ ಸರ್ಕಾರದ ಸ್ಥಿತಿಗಳಲ್ಲಿ ಅಪಾರ ವ್ಯತ್ಯಾಸ ಇದೆ. ಭಾರತ ಸರ್ಕಾರದ ಸ್ವರೂಪವನ್ನು ತೀರಾ ಕೇಂದ್ರೀಕೃತ ಸರ್ಕಾರದಿಂದ ಫೆಡರಲ್ ಸರ್ಕಾರವನ್ನಾಗಿ ನಾವು ನಿರ್ದಿಷ್ಟವಾಗಿ ಬದಲಾಯಿಸುತ್ತಿದ್ದೇವೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ವಿಷಯದ ಪ್ರಾಮುಖ್ಯತೆ ಬಗ್ಗೆ ಮಾತ್ರ ಮಾತಾಡುತ್ತಿದ್ದೆ. ೧೯೦೧ರವರೆಗೆ ಅಖಿಲ ಭಾರತ ಪ್ರಾಮುಖ್ಯತೆ ಪಡೆದಿದ್ದ ಒಂದು ವಿಷಯ ಇದ್ದಕ್ಕಿದ್ದ ಹಾಗೆ ಇಂಥ ಪ್ರಾಮುಖ್ಯತೆ ಕಳೆದುಕೊಂಡು ಈಗ ಕೇವಲ ಸ್ಥಳೀಯ ವಿಷಯವಾಗಿಬಿಡಬಾರದು. ಹೊಸ ಪ್ರಾಂತೀಯ ಸರ್ಕಾರಕ್ಕಾಗಿ ಹೆಚ್ಚು ರಿಯಾಯ್ತಿ ನೀಡಬೇಕಾಗುತ್ತದೆಂದು ನಾನು ಬಲ್ಲೆ. ಭಾರತ ಸರ್ಕಾರವನ್ನು ಸ್ಥಳೀಯ ಪ್ರಾಮುಖ್ಯತೆಗಿಂತ ಹೆಚ್ಚೆಂದು ಪರಿಗಣಿಸಲಾಗಿದೆ ಎಂಬ ನಿಜ ಸಂಗತಿಯನ್ನು ಗುರುತಿಸಲೇಬೇಕು, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಸರ್ಕಾರದ ಸೂಚಿತ ಸ್ವರೂಪ ಹೊಸ ನಮೂನೆಯದ್ದಾಗಿದೆ ಎಂಬುದನ್ನು ಒಪ್ಪಿಕೊಂಡಿರುವಾಗ, ಇಂಥ ಹೋಲಿಕೆ ಮಾಡುವುದೂ ತೀರಾ ಕಷ್ಟ ಎಂದು ನಾನು ಭಾವಿಸುವೆ. ಏಕರೂಪದ ಸರ್ಕಾರದ ಬದಲು ಸ್ವಾಯತ್ತ ಪ್ರಾಂತಗಳಲ್ಲಿರುವ ಫೆಡರೇಷನ್ ಸರ್ಕಾರವನ್ನು

ರಚಿಸುವ ದಿಸೆಯಲ್ಲಿ ನೀವು ಹೆಜ್ಜೆಯಿಟ್ಟ ಕ್ಷಣದಿಂದ ಸಮಸ್ಯೆಗೆ ಹೊಸ ಸ್ಥಿತಿ ನಿರ್ಮಾಣವಾಗುತ್ತದೆಂದು ನನಗನಿಸುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಅಂಶವನ್ನು ನಾನು ಇನ್ನಷ್ಟು ಮುಂದುವರೆಸುವುದಿಲ್ಲ. ಆದರೆ ಈ ವಿಷಯಗಳನ್ನು ಇಷ್ಟು ಕಾಲ ಕೇವಲ ಪ್ರಾಂತೀಯ ವಿಷಯಗಳಿಗಿಂತ ಹೆಚ್ಚು ಪ್ರಮುಖ ಎಂದು ಪರಿಗಣಿಸಲಾಗಿತ್ತು ಎಂಬ ಅಂಶದ ಕಡೆಗೆ ನಿಮ್ಮ ಗಮನ ಸೆಳೆಯುವುದು ನನ್ನ ಉದ್ದೇಶ.

ಸರ್ ಸ್ಯಾಮ್ಯುಯೆಲ್ ಹೋರ್: ಸಂಪೂರ್ಣ ಕೇಂದ್ರೀಕೃತ ಸರ್ಕಾರ ಇದ್ದಾಗಲೂ ಕೂಡ ಆಡಳಿತ ಪ್ರಾಂತೀಯವಾಗುತ್ತಾ ಬಂದಿದೆ ಎನ್ನುವುದೇ ಉಚಿತವಾಗುತ್ತದೆಂದು ನನಗೆ ತೋರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಕೇಂದ್ರದ ಹಿಡಿತವಿದ್ದರೆ ಮಾತ್ರ.

ಸರ್ ಸ್ಯಾಮ್ಯುಯೆಲ್ ಹೋರ್: ನನ್ನ ಉತ್ತರಕ್ಕೆ ಡಾ. ಅಂಬೇಡ್ಕರ್ ಟೀಕೆ ಸಮಗ್ರವಾಗಿದೆ ಎಂದು ನನಗೆ ಅನಿಸುವುದಿಲ್ಲ. ಪ್ರಾಂತಗಳಲ್ಲಿ ವರ್ಗಾವಣೆಯಾದ ಕ್ಷೇತ್ರದ ಬಗ್ಗೆ ಅದು ಏನನ್ನೂ ಹೇಳುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಇಲ್ಲ. ಅದು ಹಾಗೇ. ಇನ್ನು ಭಾರತ ಸರ್ಕಾರ ಕಾಯ್ದೆಯ ೪೫ನೇ ಕಲಮು ಮತ್ತು ೧೨೫ನೇ ಪ್ರಸ್ತಾಪದತ್ತ ನಿಮ್ಮ ಗಮನ ಸೆಳೆಯುವೆ. ೪೫ನೇ ಕಲಮು ವಿಧೇಯ ನಿಬಂಧನೆ ಎಂದು ಕರೆಯಲ್ಪಡುವುದು. ಸರ್ಕಾರಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿ ನಡವಳಿಕೆಗಳನ್ನು ಪ್ರಾಂತೀಯ ಸರ್ಕಾರವು ಭಾರತ ಸರ್ಕಾರಕ್ಕೆ ನಿರಂತರವಾಗಿ ಮತ್ತು ಕಾರ್ಯತತ್ಪರತೆಯಿಂದ ತಿಳಿಸಬೇಕು. ಸೆಕ್ರೆಟರಿ ಆಫ್ ಸ್ಟೇಟ್‌ರವರೇ, ನಿಮ್ಮಿಂದ ನಾನು ತಿಳಿದುಕೊಳ್ಳಬಯಸುವುದೇನೆಂದರೆ, ಈ ೪೫ನೇ ಕಲಮಿನಿಂದ ನೀವು ಕೈಬಿಡಬಯಸುವ ಪ್ರಸ್ತಾಪಗಳು ಮತ್ತು ಅಗತ್ಯಗಳು ಅರ್ಥಾತ್ ಪ್ರಾಂತಗಳು ಸ್ವಾಯತ್ತತೆ ಪಡೆದಾಗ ಇದು ಸ್ಫುಟವಾಗುತ್ತದೆ. ಪೂರಕವಲ್ಲದ ಸಂಗತಿಗಳಿಗೆ ಸಂಬಂಧಪಟ್ಟ ನಿರ್ದೇಶನವನ್ನು ನೀವು ಉಳಿಸಿ ಕೊಳ್ಳಬಯಸುತ್ತೀರಿ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಹತೋಟಿಯೇ ಇರಬಾರದೇ? ಪ್ರಾಂತೀಯ ಆಡಳಿತದ ವ್ಯಾಪ್ತಿಯಲ್ಲಿ ಏನು ನಡೆಯುತ್ತಿದೆ ಎಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸುತ್ತಿರಬೇಕು ಎಂದು ಬಯಸುತ್ತೀರಾ? ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು, ಯಾವುದೇ ಪ್ರಾಂತೀಯ ವಿಷಯಕ್ಕೆ ಸಂಬಂಧಿಸಿದ ಆಡಳಿತವನ್ನು ಕುರಿತ ಮಾಹಿತಿಯನ್ನು ತರಿಸಿಕೊಳ್ಳುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರಬೇಕೆಂದು ನೀವು ಬಯಸುತ್ತೀರಾ?

ಸರ್ ಸ್ಯಾಮ್ಯುಯೆಲ್ ಹೋರ್: ಇಲ್ಲ, ಇಂಥ ಸಾಮಾನ್ಯ ಉದ್ದೇಶ ನಮಗಿಲ್ಲ. ನೀವು ಫೆಡರೇಷನ್ ರಚಿಸಿಕೊಂಡ ಕೂಡಲೇ, ಫೆಡರೇಷನ್ ಮತ್ತು ಅದರ ಅಂಗಗಳ ನಡುವೆ ಅಧಿಕಾರದ ನಿರ್ದಿಷ್ಟ ಹಂಚಿಕೆ ಮಾಡಿಕೊಳ್ಳಬೇಕೆಂದು ನಾನು ಭಾವಿಸುತ್ತೇನೆ. ನೀವು ಈ ಹಂಚಿಕೆಯನ್ನು ಸ್ಪಷ್ಟವಾಗಿ ಮಾಡಿಕೊಂಡಷ್ಟೂ ಪರಸ್ಪರರ ಜವಾಬ್ದಾರಿ ಮಸುಕಾಗುವುದಿಲ್ಲ. ತೀರಾ ನಿಶ್ಚಯವಾಗಿ ಹೇಳುವುದಾದರೆ– ನಮ್ಮ ಯೋಜನೆಯ ಮೂಲ ತತ್ವಗಳಲ್ಲಿ ಇದೂ ಒಂದು– ಫೆಡರೇಷನ್, ಪ್ರಾಂತಗಳು ಮತ್ತು ಸಾಮ್ರಾಜ್ಯವಾದಿ ಸಂಸತ್ತಿನ ನಡುವೆ ಹಲವು ಕರ್ತವ್ಯಗಳನ್ನು ವಿಭಜಿಸುತ್ತೇನೆ.

ಎನ್. ಎಂ. ಜೋಶಿ: ಡಾ. ಅಂಬೇಡ್ಕರ್ ಎತ್ತಿದ ಮಾಹಿತಿ ಕುರಿತ ಅಂಶದ ಹಿನ್ನೆಲೆಯಲ್ಲಿ ಒಂದು ಉಪಪ್ರಶ್ನೆ, ಕೆಲವು ಪ್ರಕರಣಗಳಲ್ಲಿ ಅಖಿಲ ಭಾರತಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ಸಂಕಲನಕ್ಕೆ ತುಂಬಾ ಮಹತ್ವ ಇರುತ್ತದೆ. ಉದಾಹರಣೆಗೆ ಶಿಕ್ಷಣಕ್ಕೆ ಸಂಬಂಧಿಸಿದ ಅಖಿಲ ಭಾರತ ಮಟ್ಟದ ಅಂಕಿ ಅಂಶಗಳು. ಭಾರತ ಸರ್ಕಾರ

ಅಖಿಲ ಭಾರತ ಮಟ್ಟದಲ್ಲಿ ವರದಿಯೊಂದನ್ನು ಈ ಬಗ್ಗೆ ಹೊರಡಿಸುತ್ತದೆ. ಮುಂಬರುವ ಸರ್ಕಾರವೂ ಮಾಹಿತಿ ಸಂಗ್ರಹಿಸಿ ಅಖಿಲ ಭಾರತ ಮಟ್ಟದ ವರದಿ ಸಂಕಲನ ಸಿದ್ಧಪಡಿಸುವ ಅಧಿಕಾರ ಹೊಂದಿರುವುದೇ?

ಸರ್ ಸ್ಯಾಮ್ಯುಯೆಲ್ ಹೋರ್: ನಿರ್ದೇಶಿತ ಫೆಡರಲ್ ಕ್ಷೇತ್ರದಲ್ಲಿ ಮಾತ್ರ ಅಧಿಕಾರ ಹೊಂದಿರುತ್ತದೆ. ಫೆಡರಲ್ ಕ್ಷೇತ್ರದ ಹೊರಗೇ ಏನೇ ಮಾಡುವ ಮುನ್ನ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ.

ಎನ್. ಎಂ. ಜೋಶಿ: ಶಿಕ್ಷಣವು ಫೆಡರಲ್ ಕ್ಷೇತ್ರದಲ್ಲಿ ಇಲ್ಲವೇ?

ಲಾರ್ಡ್ ಯುಸ್ಟೇಸ್ ಪೆರ್ಸಿ: ಪ್ರತಿಯೊಂದು ಒಕ್ಕೂಟದಲ್ಲಿ (ಉದಾ: ಅಮೆರಿಕಾ) ಫೆಡರಲ್ ಸರ್ಕಾರದ ಸಂಶೋಧನೆ ಮತ್ತು ಅಂಕಿ ಅಂಶಗಳ ವಿಭಾಗಗಳು ಫೆಡರಲ್ ಕ್ಷೇತ್ರ ದಾಟಿ ಹೋಗುತ್ತವೆ ಎಂಬುದು ನಿಮ್ಮ ಗಮನದಲ್ಲಿದೆ ಎಂದು ನಾನು ಭಾವಿಸಿದ್ದೇನೆ. ಹೌದೇ ಸೆಕ್ರೆಟರಿಯವರೇ?

ಎನ್. ಎಂ. ಜೋಶಿ: ಉದಾಹರಣೆಗೆ ಸಂಯುಕ್ತ ಸಂಸ್ಥಾನಗಳಿಗಾಗಿ ಅಮೆರಿಕಾದಲ್ಲಿ ಒಂದು ಶೈಕ್ಷಣಿಕ ವರದಿಯನ್ನು ಪ್ರಕಟಿಸಲಾಗುತ್ತದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಲಾರ್ಡ್ ಯುಸ್ಟೇಸ್ ಅವರು ಒಂದನೇ ಪಟ್ಟಿಯ ೬ನೇ ಪರಿಶಿಷ್ಟ ನೋಡಿದರೆ, ಫೆಡರಲ್ ಕ್ಷೇತ್ರದಲ್ಲಿ ಸೇರ್ಪಡೆಯಾಗಿರುವ ಜನಗಣತಿ ಇತ್ಯಾದಿ ಅವರು ಹೇಳಿದ ಅಂಶಗಳನ್ನು ನಾವು ಪ್ರಕಟಿಸಿರುವುದು ಕಾಣುತ್ತದೆ. ಆಗ ಒಕ್ಕೂಟದ ಉದ್ದೇಶಕ್ಕಾಗಿ ನಾವು ಸಾಮಾನ್ಯವಾಗಿ ಅಖಿಲ ಭಾರತ ಮಟ್ಟದ ಅಂಕಿ ಅಂಶಗಳನ್ನು ಪರಿಗಣಿಸಬೇಕಾಗುತ್ತದೆ.

ಲಾರ್ಡ್ ಯುಸ್ಟೇಸ್ ಪೆರ್ಸಿ: ಆ ರೀತಿಯಾಗಿ ಅದನ್ನು ಏಕೆ ಮಿತಿಗೊಳಿಸಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಫೆಡರಲ್ ಸರ್ಕಾರ ಮಾಹಿತಿಯನ್ನು ಪ್ರಕಟಿಸಬಾರದೆನ್ನಲು ಕಾರಣವೇ ಇಲ್ಲ. ಅದರ ಮಾಹಿತಿ ಕೇವಲ ಫೆಡರಲ್ ಕ್ಷೇತ್ರಕ್ಕೆ ಮಾತ್ರ ಏಕೆ ಸೀಮಿತವಾಗಿರಬೇಕು? ನಾನು ಕೇಳಿರುವಂತೆ ಇನ್ನು ಯಾವ ಒಕ್ಕೂಟದಲ್ಲೂ ಹೀಗಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಆದರೆ ಫೆಡರಲ್ ಒಕ್ಕೂಟವೊಂದು ಶಿಕ್ಷಣ ಉದ್ದೇಶಗಳಿಗಾಗಿ ಮಾತ್ರ ಕೆಲಸ ಮಾಡಬಲ್ಲದು. ಒಕ್ಕೂಟದ ಕ್ಷೇತ್ರದ ಹೊರಗೆ ಫೆಡರಲ್ ಸರ್ಕಾರಕ್ಕೆ ಮಾನ್ಯತೆ ಇಲ್ಲ.

ಲಾರ್ಡ್ ಯುಸ್ಟೇಸ್ ಪೆರ್ಸಿ: ಪ್ರಾಂತೀಯ ಸರ್ಕಾರಗಳು ಮಾಹಿತಿ ಪೂರೈಸದಿದ್ದರೆ, ಅದು ಭಾರತದ ಬೌದ್ಧಿಕ ಮತ್ತು ನೈತಿಕ ಪ್ರಗತಿ ಬಗ್ಗೆ ವರದಿಯನ್ನು ಪ್ರಕಟಿಸಲಾರದು.

ಸರ್ ಸ್ಯಾಮ್ಯುಯೆಲ್ ಹೋರ್: ಲಾರ್ಡ್ ಯುಸ್ಟೇಸ್ ಮತ್ತು ನನ್ನ ಮಧ್ಯೆ ಭಿನ್ನಾಭಿಪ್ರಾಯ ಇದೆಯೆಂದು ನನಗನಿಸುತ್ತಿಲ್ಲ. ಈ ಕಾರ್ಯ ಚಟುವಟಿಕೆಯನ್ನು ಉಚಿತ ಮಿತಿಯೊಳಗೆ ಇಟ್ಟುಕೊಳ್ಳಬೇಕು ಎಂದಷ್ಟೇ ನಾನು ಅಭಿಪ್ರಾಯಪಟ್ಟಿದ್ದು. ಫೆಡರಲ್ ಸರ್ಕಾರ ತನಗೆ ಸಂಬಂಧಪಡದ ಯಾವಾವುದೋ ಮಾಹಿತಿಗಾಗಿ ಪ್ರಾಂತೀಯ ಸರ್ಕಾರಕ್ಕೆ ತೊಂದರೆ ನೀಡುತ್ತ ಹೋದರೆ, ಅದರಿಂದ ಅವೆರಡರ ನಡುವೆ ನಿರಂತರ ಘರ್ಷಣೆ ಉಂಟಾಗುತ್ತದೇನೋ.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ಹೊಳೆಯುವ ಒಂದು ಉದಾಹರಣೆ ನೀಡಲೇ? ನಿರ್ದಿಷ್ಟ ಪ್ರಾಂತದಲ್ಲಿ ಒಬ್ಬ ವಿದೇಶೀಯನ ವಿರುದ್ಧ ಕ್ರಿಮಿನಲ್ ವಿಚಾರಣೆ ನಡೆಸಲಾಗುತ್ತದೆ. ಈ ಬಗ್ಗೆ ಅವನ ಸರ್ಕಾರವು ಭಾರತ ಸರ್ಕಾರಕ್ಕೆ ತಿಳಿಸುತ್ತದೆ. ಆ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಭಾರತ ಸರ್ಕಾರಕ್ಕೆ ಮಾಹಿತಿ ಬೇಕೇ ಬೇಕಾಗುತ್ತದೆ. ಆ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪ್ರಾಂತೀಯ ಸರ್ಕಾರದಿಂದ ಬಯಸುವ ಸ್ಥಿತಿಯಲ್ಲಿ ಭಾರತ ಸರ್ಕಾರ ಇರುತ್ತದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಕ್ರಮ ಕೈಗೊಳ್ಳುವ ಸ್ಥಿತಿಯಲ್ಲೂ ಭಾರತ ಸರ್ಕಾರ ಇರುತ್ತದೆ. ವಿದೇಶಾಂಗ ವ್ಯವಹಾರ ಕ್ಷೇತ್ರದೊಳಗೆ ಅದು ಬರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ಕಾನೂನು ಮತ್ತು ವ್ಯವಸ್ಥೆಯು ವರ್ಗಾವಣೆಯಾದ ವಿಷಯ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಇರಬಹುದು. ಆದರೆ, ವಿದೇಶಾಂಗ ವ್ಯವಹಾರಕ್ಕೆ ಮೀಸಲಾತಿ ಇದೆ. ಈಗ ನೀವು ಚರ್ಚಿಸುತ್ತಿರುವ ೧೨೫ನೇ ನಿಬಂಧನೆಯೊಳಗೆ ಅದು ಬರುತ್ತದೆಂದು ಕಾಣುತ್ತದೆ. ವಿದೇಶಾಂಗ ವ್ಯವಹಾರ ಫೆಡರಲ್ ವಿಷಯ. ೧೨೫ನೇ ನಿಬಂಧನೆಯು ೨ನೇ ಪ್ಯಾರಾ ಪ್ರಕಾರ ಸರ್ಕಾರವು ಪ್ರಾಂತೀಯ ಸರ್ಕಾರಕ್ಕೆ ನಿರ್ದೇಶನ ನೀಡಬಲ್ಲದು.

ಡಾ. ಬಿ. ಆರ್. ಅಂಬೇಡ್ಕರ್: ತನ್ನ ಉದ್ದೇಶಕ್ಕೆ ಅಗತ್ಯವಿರುವ ಮಾಹಿತಿಯನ್ನು ಕೇಂದ್ರ ಸರ್ಕಾರ ಪಡೆಯುವ ಅವಶ್ಯಕತೆ ಇದೆಯೆಂದು ನಿಮಗೆ ಅನ್ನಿಸುತ್ತಿದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಖಂಡಿತವಾಗಿ. ಅಂಥ ಅವಶ್ಯಕತೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುವೆ.

ಡಾ. ಬಿ. ಆರ್. ಅಂಬೇಡ್ಕರ್: ಈ ಬಗ್ಗೆ ನಿಮ್ಮ ಗಮನವನ್ನು ಏಕೆ ಸೆಳೆದನೆಂದರೆ, ೧೨೫ನೇ ಪ್ರಸ್ತಾಪದಲ್ಲಿ ನನಗೆ ಈ ಮಾಹಿತಿ ಕಾಣಲಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಪ್ರಾಂತೀಯ ಸರ್ಕಾರದಿಂದ ಮಾಹಿತಿ ಸಂಗ್ರಹಿಸುವುದು ಅದರಿಂದಲೇ ಅಗತ್ಯವಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ೧೧೪ನೇ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಆರ್ಥಿಕ ಹೊರೆ ಹೇರಲು ಪೂರಕ ಅಧಿಕಾರ ಬಳಸಬಾರದೆಂಬ ನಿಬಂಧನೆ ಇದೆ. ನನಗೆ ಇದನ್ನು ತಿಳಿಯುವ ಬಯಕೆ. ನಿರ್ದಿಷ್ಟ ಪ್ರಸ್ತಾಪವೊಂದು ಆರ್ಥಿಕ ಹೊರೆ ಹೇರುತ್ತದೆಂದು ಒಂದು ಪಕ್ಷ ಹೇಳಿ, ಇನ್ನೊಂದು ಅದನ್ನು ನಿರಾಕರಿಸಿದರೆ ಈ ವಿವಾದವನ್ನು ಬಗೆಹರಿಸುವುದೆಂತು? ಉದಾಹರಣೆಗೆ ಹೇಳುವುದಾದರೆ, ಒಂದು ಹೊಸ ಸೇವೆಯನ್ನು ಹೊಸ ಪ್ರಾಂತಗಳು ಮುಂದುವರೆಸಬೇಕೆಂದು ಕೇಂದ್ರ ಸರ್ಕಾರ ಸಲಹೆ ಮಾಡುತ್ತದೆ. ಇದು ಆರ್ಥಿಕ ಹೊರೆ ಹೇರುತ್ತದೆಂದು ತೀರ್ಮಾನಿಸಬಹುದು. ಆದರೆ, ವಿವಾದಾಸ್ಪದವಾದ ಕೆಲವೊಂದು ಪ್ರಕರಣಗಳು ಅತ್ತಿತ್ತ ಓಲಾಡಬಹುದು.

ಸರ್ ಸ್ಯಾಮ್ಯುಯೆಲ್ ಹೋರ್: ಈಗಿರುವ ಅವಕಾಶಗಳಂತೆ, ಫೆಡರಲ್ ಕೋರ್ಟಿಗೆ ಶರಣು ಹೋಗಬೇಕಾಗುತ್ತದೆ. ಅದು ಸಾಕಷ್ಟು ವ್ಯಾಪಕ ಬಗೆಯಾಗಲಾರದು. ನಾನು ಹಿಂದೊಂದು ದಿನ ಹೇಳಿದಂತೆ, ಫೆಡರಲ್ ಕೋರ್ಟಿನಿಂದ ಒಪ್ಪಂದ ಸಾಧ್ಯವಾಗದ ಪ್ರಕರಣಗಳಿಗೆ ನಿರಂಕುಶ ಪದ್ಧತಿಯನ್ನು ಅನ್ವಯಿಸುವ ಸಾಧ್ಯತೆ ಬಗ್ಗೆ ನಾವು ಪರಿಶೀಲಿಸುತ್ತಿದ್ದೇವೆ.

ಎಂ. ಆರ್. ಜಯಕರ್: ಈಗ ಅದು ೧೫೫ (i)ನೇ ಪ್ಯಾರಾ ಪ್ರಕಾರ ಬರುತ್ತದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಫೆಡರಲ್ ಕೋರ್ಟು.

ಡಾ. ಬಿ. ಆರ್. ಅಂಬೇಡ್ಕರ್: ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಇನ್ನೊಂದೇ ಪ್ರಶ್ನೆ. ಏಕೆಂದರೆ ಇದು ನನ್ನ ಮಟ್ಟಿಗೆ ಸ್ಪಷ್ಟವಾಗಲಿಲ್ಲ. ಈ ಆಡಳಿತಾತ್ಮಕ ಸಂಬಂಧಗಳಿಗೆ ಸಂಬಂಧಪಟ್ಟಂತೆ, ಮೊಟ್ಟಮೊದಲು ಪ್ರಾಂತೀಯ ಸರ್ಕಾರಗಳನ್ನು ಮಧ್ಯವರ್ತಿಯಾಗಿ ಕೇಂದ್ರ ಸರ್ಕಾರ ನೇಮಿಸಿಕೊಳ್ಳಲೇಬೇಕೆ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಪೂರಕ ಅಥವಾ ಸಮಾನಾಧಿಕಾರ ಕ್ಷೇತ್ರದಲ್ಲಿ ನೇಮಿಸಿ ಕೊಳ್ಳಲೇಬೇಕು.

ಡಾ. ಬಿ. ಆರ್. ಅಂಬೇಡ್ಕರ್: ನೇಮಿಸಿಕೊಳ್ಳಬೇಕೆಂಬುದು ಕಡ್ಡಾಯವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ತನ್ನದೇ ಮಧ್ಯವರ್ತಿಗಳನ್ನು ಅದು ನೇಮಿಸಿಕೊಳ್ಳಲಾರದೇ?

ಸರ್ ಸ್ಯಾಮ್ಯುಯೆಲ್ ಹೋರ್: ಪೂರಕ ಕ್ಷೇತ್ರದಲ್ಲಿನ ಆಡಳಿತ ಪ್ರಾಂತೀಯವಾಗಿರಬೇಕೆಂಬುದು ನನ್ನ ಉದ್ದೇಶ.

ಡಾ. ಬಿ. ಆರ್. ಅಂಬೇಡ್ಕರ್: ನಿರ್ದೇಶನಗಳನ್ನು ನೀಡಬಹುದೇ ಇಲ್ಲವೇ ಎಂಬುದನ್ನು ಆಧರಿಸಿ ಪ್ರಾಂತೀಯವಾಗಿರಬೇಕೆಂಬುದು ಬೇರೆ ವಿಷಯ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ ಅದರ ಹಿಂದೆಯೇ ಕರೆ ಬಂದರೆ, ಪ್ರಾಂತೀಯ ಸರ್ಕಾರಗಳು ಕೇಂದ್ರ ಸರ್ಕಾರದ ಏಜೆನ್ಸಿ ಕೆಲಸವನ್ನು ಕೈಗೆತ್ತಿಕೊಳ್ಳಲು ಮುಂದಾಗುತ್ತವೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಫೆಡರಲ್ ಕಾಯ್ದೆ ಪ್ರಕಾರ ಮುಂದಾಗುತ್ತದೆ.

* ಡಾ. ಬಿ. ಆರ್. ಅಂಬೇಡ್ಕರ್: ಹಿಂದುಳಿದ ವರ್ಗಗಳು ಕೋಮು ತೀರ್ಪಿನಲ್ಲಿ ಸೇರಿ, ಅವುಗಳಿಗೆ ನಿಗದಿತ ಸಂಖ್ಯೆಯ ಸ್ಥಾನಗಳನ್ನು ನೀಡುವುದರಿಂದ ಅವರೂ "ಅಲ್ಪಸಂಖ್ಯಾತರು" ಎಂಬ ವ್ಯಾಖ್ಯೆಗೆ ಒಳಪಟ್ಟಂತಾಗುವುದಿಲ್ಲವೇ? ನೀವು ಈಗ ತಾನೇ ಹೇಳಿದಂತೆ, ಕೋಮು ತೀರ್ಪು ಗುರುತಿಸಿದ ಮತ್ತು ಪರಿಗಣಿಸಿದ ಜನಾಂಗಗಳೇ ಅಲ್ಪಸಂಖ್ಯಾತರು ಎಂದಾದರೆ, ಹಿಂದುಳಿದ ವರ್ಗಗಳೂ ಕೋಮು ತೀರ್ಪಿನಲ್ಲಿ ಸೇರ್ಪಡೆಯಾಗುತ್ತವೆ ಎಂದು ನಾನು ಊಹಿಸಬೇಕಾಗುತ್ತದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಬಹಿಷ್ಕೃತ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿ ತುಲನಾತ್ಮಕವಾಗಿ ಚಿಕ್ಕವಾಗಿ ಕಾಣುವ ಜನಸಮೂಹಗಳ ಈ ಕಠಿಣ ಪ್ರಶ್ನೆಯನ್ನು ನಾನು ಈ ಚರ್ಚೆ ನಂತರ ಮತ್ತೊಮ್ಮೆ ಚಿಂತಿಸುವೆ. ಸಾಮಾನ್ಯ ಬಯಕೆಯಾಗಿ ಕಾಣುವ ಈ ಪ್ರಶ್ನೆಯನ್ನು ಚರ್ಚಿಸಲು ಉತ್ತಮ ಬಗೆ ಯಾವುದು ಎಂಬ ಬಗ್ಗೆ ಸಮಿತಿ ಮತ್ತು ಸದಸ್ಯರು ವಿಚಾರ ಮಾಡುತ್ತಾರೆ.

ಡಾ. ಬಿ. ಆರ್. ಅಂಬೇಡ್ಕರ್: ಅಪರಾಧಿ ಪಂಗಡಗಳ ವಿಲಕ್ಷಣ ಸ್ಥಿತಿಯತ್ತ ನಿಮ್ಮ ಗಮನವನ್ನು ಸೆಳೆಯಲೇ, ಸೆಕ್ರೆಟರಿ ಆಫ್ ಸ್ಟೇಟ್‌ರವರೇ, ಸಾಮಾನ್ಯ ಜನಸಂಖ್ಯೆಯಲ್ಲಿ ಈ ಅಪರಾಧಿ ಪಂಗಡಗಳು ಹೆಚ್ಚು ಕಡಿಮೆ ಚದುರಿಹೋಗಿವೆ. ಮುಂಬಯಿಯ ಅನುಭವ ಇದು. ಬೇರೆ ಪ್ರಾಂತಗಳಲ್ಲೂ ಹೀಗೇ ಇರಬಹುದು. ಅಪರಾಧಿ ಪಂಗಡಗಳನ್ನು ರಕ್ಷಿಸಲು ಭಾರತ ಸರ್ಕಾರದ ಅಪರಾಧಿ ಪಂಗಡಗಳ ಕಾಯ್ದೆ ಇದೆ. ಇದು ನನ್ನ ಭಾವನೆ. ಅವರನ್ನು ರಕ್ಷಿಸುವ ಪದ್ಧತಿಯನ್ನು ವಿವರಿಸಲು ನಾನೊಂದು ಉದಾಹರಣೆ ನೀಡುವೆ. ಈ ಪಂಗಡಗಳ ಹಿತಾಸಕ್ತಿ ಕಾಪಾಡಲು ಮತ್ತು ಅವರ ಚಲನವಲನಗಳನ್ನು ನಿರ್ಧರಿಸಲು ಈ ಕಾಯ್ದೆ ಗವರ್ನರರಿಗೆ ಕೆಲವೊಂದು ಅಧಿಕಾರ ನೀಡುತ್ತದೆ. ಹರಿದು ಹಂಚಿ ಹೋಗಿದ್ದರೂ ಅವರನ್ನು ರಕ್ಷಿಸಿ, ಅವರ ಜೀವನ ಕ್ರಮ ಬದಲಾಗುವಂಥ ಪರಿಣಾಮ ಬೀರುವ ಕ್ರಮವನ್ನು ೧೦೮ನೇ ಪ್ಯಾರಾ ಪ್ರಕಾರ ಕೈಗೊಳ್ಳಲು ಗವರ್ನರರಿಗೆ ಸಾಧ್ಯವಾಗದೇ?

ಸರ್ ಸ್ಯಾಮ್ಯುಯೆಲ್ ಹೋರ್: ಬಹಿಷ್ಕೃತ ಮತ್ತು ಭಾಗಶಃ ಪರಿಷ್ಕೃತ ಪ್ರದೇಶಗಳಲ್ಲಾದರೆ ಮಾತ್ರ ಈ ಕಲಮಿನ ಪ್ರಕಾರ ಕ್ರಮ ಕೈಗೊಳ್ಳಲು ಸಾಧ್ಯ.

---

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೧೭ ಅಕ್ಟೋಬರ್ ೧೯೩೩, ಪುಟ ೧೨೦೬.

ಡಾ. ಬಿ. ಆರ್. ಅಂಬೇಡ್ಕರ್: ನಾನು ಮುಂದಿಡಲು ಬಯಸಿದ್ದೇನೆಂದರೆ ಆದಿವಾಸಿ ಪ್ರದೇಶ ಅಥವಾ ಮೂಲನಿವಾಸಿ ವರ್ಗಕ್ಕೆ ಸೇರಿದವರೆಂದು ಖಾತ್ರಿಯಾದ ಬಳಿಕ ಅವರು ಇತರ ಜನಾಂಗಗಳ ಜತೆಗೆ ವಾಸಿಸಲಿ, ಅಥವಾ ಬಹಿಷ್ಕೃತ ಪ್ರದೇಶಗಳಲ್ಲಿ ವಾಸಿಸಲಿ, ಅವರಿಗೆ ಅನ್ವಯವಾಗುವ ನಿರ್ದಿಷ್ಟ ಕಾಯ್ದೆಯನ್ನು ಅಪರಾಧಿ ಜನಾಂಗಗಳಿಗೆ ಸಂಬಂಧಿಸಿದಂತೆ ಮಾಡುವ ಹಾಗೆ ಪ್ಯಾರಾ ೧೦೮ರ ಪ್ರಕಾರ ಗವರ್ನರರು ಮಾಡಬಹುದಲ್ಲವೇ? ಅಪರಾಧಿ ವರ್ಗಗಳ ಕಾಯ್ದೆ ಈ ವರ್ಗಕ್ಕೆ ಸೇರಿದ ಜನ ಎಲ್ಲೇ ವಾಸಿಸಲಿ, ಅವರಿಗೆ ಅನ್ವಯವಾಗುತ್ತದಲ್ಲವೇ?

ಸರ್ ಮಾಲ್ಕಮ್ ಹೇಲೇ: ಅಪರಾಧಿ ಪಂಗಡಗಳ ಕಾಯ್ದೆ ಈಗ ಭಾರತ ಸರ್ಕಾರದ ಕಾಯ್ದೆ ಅಲ್ಲ. ಅದು ಪ್ರಾಂತೀಯ ಕಾಯ್ದೆಗೆ ಸೇರಿದೆ. ಅಪರಾಧಿ ಜನಾಂಗಗಳು ಎಂದು ಪ್ರಕಟಿಸಲಾದವರ ಚಲನ ವಲನಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು, ಅವರನ್ನು ನೋಂದಾಯಿಸಿಕೊಳ್ಳುವುದು, ಅವರ ಮೇಲೆ ನಿಬಂಧನೆಗಳನ್ನು ಹೇರುವುದು ಮುಂತಾದವನ್ನೆಲ್ಲ ಮಾಡಲು ಅಪರಾಧಿ ಪಂಗಡ ಕಾಯ್ದೆ ಪ್ರಕಾರ ಸ್ಪಷ್ಟವಾಗಿ ಅಧಿಕಾರ ಇರುವುದು ಸ್ಥಳಿಯ ಸರ್ಕಾರಕ್ಕೆ; ಗವರ್ನರರಿಗಲ್ಲ.

ಆದ್ದರಿಂದ ಹರಿದು ಹಂಚಿ ಹೋದಂತೆ ನೆಲೆಸಿರುವ ಮೂಲವಾಸಿಗಳು ಮತ್ತು ಹಿಂದುಳಿದ ವರ್ಗಗಳಿಗೆ ಅನ್ವಯಿಸಿದ ವಿಶೇಷ ರಕ್ಷಣಾ ಕ್ರಮವನ್ನು ಇಲ್ಲಿ ಅನ್ವಯಿಸುವುದು ಕಷ್ಟ. ಮೇಲಾಗಿ ಸ್ಥಳೀಯ ಶಾಸನಸಭೆ ಈ ವಿಷಯವನ್ನು ಸ್ವತಂತ್ರವಾಗಿ ಪರಿಶೀಲಿಸುವ ಮೂಲಕ ಕ್ರಮ ಕೈಗೊಳ್ಳಬಹುದು. ಸ್ಥಳೀಯ ಸರ್ಕಾರದ ಹೊರತು ಗವರ್ನರರಿಗೆ ಈ ಸಂಬಂಧಿ ವಿಶೇಷ ಅಧಿಕಾರ ಕೊಡಲಾಗಿಲ್ಲ ಎಂಬುದೇ ನನ್ನ ವಿಚಾರ.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಪ್ಯಾರಾ ೧೦೮ರ ಪ್ರಕಾರ ಜನರನ್ನು ಗವರ್ನರರು ಮೂಲ ನಿವಾಸಿಗಳು. ಹಿಂದುಳಿದ ವರ್ಗಗಳು ಎಂದು ವಿಭಾಗ ಮಾಡಿ ಪ್ರಕಟಣೆ ನೀಡಬಲ್ಲರು. ನಂತರ ಅವರು ಎಲ್ಲೇ ವಾಸವಾಗಿರಲಿ, ಅವರಿಗೆ ಅನ್ವಯವಾಗುವ ಕಾಯ್ದೆಯನ್ನು ಮಾಡಬಲ್ಲರು.

ಸರ್ ಸ್ಯಾಮ್ಯುಯೆಲ್ ಹೋರ್: ಪ್ಯಾರಾ ೧೦೮ರ ಪ್ರಕಾರ ಹಾಗೆ ಅವರು ಮಾಡಬಲ್ಲರು ಎಂದು ನನಗನಿಸುವುದಿಲ್ಲ. ಇದರ ಪ್ರಕಾರ ಅವರು ಪರಿಶಿಷ್ಟ ಪ್ರದೇಶದಲ್ಲಿ ನೆಲೆಸಿದ ಜನರ ಬಗ್ಗೆ ಮಾತ್ರ ಕ್ರಮ ಕೈಗೊಳ್ಳಬಹುದು.

* ಡಾ. ಬಿ. ಆರ್. ಅಂಬೇಡ್ಕರ್: ಈ ಸಮಸ್ಯೆಯ ಆರ್ಥಿಕ ಮಗ್ಗುಲನ್ನು ಸ್ಪಷ್ಟಪಡಿಸಲು ನಾನು ಒಂದೆರಡು ಪ್ರಶ್ನೆಗಳನ್ನು ಕೇಳುವೆ. ಮೊದಲನೆಯದಾಗಿ, ಭಾಗಶಃ ಬಹಿಷ್ಕೃತ ಪ್ರದೇಶಗಳು ಎಂದು ಕರೆಯಲಾಗುವ ಪ್ರದೇಶಗಳಿಗೆ ಹಣಕಾಸು ಒದಗಿಸುವ ವಿಷಯದ ಬಗ್ಗೆ.

ಸರ್ ಸ್ಯಾಮ್ಯುಯೆಲ್ ಹೋರ್: ಆಗಲಿ.

ಡಾ. ಬಿ. ಆರ್. ಅಂಬೇಡ್ಕರ್: ಭಾಗಶಃ ಬಹಿಷ್ಕೃತ ಪ್ರದೇಶಕ್ಕೂ ಒದಗಿಸಬೇಕಾದ ಹಣ ಇರುವಂಥ ಪ್ರಾಂತೀಯ ಬಜೆಟ್ ಇರುತ್ತದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಶಾಸನ ಸಭೆಯಲ್ಲಿ ಇಡೀ ಬಜೆಟ್ ಮೇಲೆ ಚರ್ಚೆ ನಡೆಸಬಹು ದಲ್ಲವೇ?

---

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨-ಬಿ, ೧೭ ಅಕ್ಟೋಬರ್ ೧೯೩೩. ಪುಟ ೧೨೧೮

ಸರ್ ಸ್ಯಾಮ್ಯುಯೆಲ್ ಹೋರ್: ಹೌದು ೧೯ನೇ ಪ್ಯಾರಾ ನಿಬಂಧನೆಗೆ ಒಳಪಟ್ಟು ನಡೆಸ ಬಹುದು.

ಡಾ. ಬಿ. ಆರ್. ಅಂಬೇಡ್ಕರ್: ನಾನು ಆ ವಿಷಯಕ್ಕೆ ಬರುವೆ. ೭೦ನೇ ಪ್ಯಾರಾ ಪ್ರಕಾರ ಗವರ್ನರರು ತಮ್ಮ ವಿಶೇಷ ಜವಾಬ್ದಾರಿಯನ್ನು ಚಲಾಯಿಸಿದಾಗ ಅವರು ಶಾಸನಸಭೆಯ ವ್ಯಾಪ್ತಿ ಮೀರಿ ಹೋಗುತ್ತಾರೆ. ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು. ಪ್ಯಾರಾ ೧೯...

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಸಾಮಾನ್ಯವಾಗಿ ಅದು ಪ್ರಾಂತೀಯ ಬಜೆಟ್‌ನ ಭಾಗವಾಗಿರುತ್ತದೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಪೂರ್ತಿ ಬಹಿಷ್ಕೃತ ಪ್ರದೇಶಗಳ ಬಗ್ಗೆಯೂ ನಾನು ಇಂಥದೇ ಪ್ರಶ್ನೆ ಕೇಳಬಯಸುವೆ. ಪ್ಯಾರಾ ೭೦(ಎಫ್) ಪ್ರಕಾರ ಗವರ್ನರರ ವಿಶೇಷ ಜವಾಬ್ದಾರಿಯು ಕೇವಲ ಭಾಗಶಃ ಪರಿಷ್ಕೃತ ಪ್ರದೇಶಗಳ ಆಡಳಿತಕ್ಕಾಗಿ ಗವರ್ನರರು ಪ್ರಾಂತೀಯ ನಿಧಿಯಿಂದ ಹಣ ತೆಗೆಯಲು ಬರುವುದಿಲ್ಲ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಅಂದರೆ ಪೂರ್ತಿ ಬಹಿಷ್ಕೃತ ಪ್ರದೇಶಗಳ ಆಡಳಿತಕ್ಕಾಗಿ ಗವರ್ನರರು ಪ್ರಾಂತೀಯ ನಿಧಿಯಿಂದ ಹಣ ತೆಗೆಯಲು ಬರುವುದಿಲ್ಲ ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಅವರ ತೀಕ್ಷ್ಣಮತಿಯು ಶ್ವೇತಪತ್ರದಲ್ಲಿನ ದೋಷವೊಂದನ್ನು ಪತ್ತೆ ಮಾಡಿದೆ; ಅವರು ಹೇಳುವುದು ನಿಜ.

ಡಾ. ಬಿ. ಆರ್. ಅಂಬೇಡ್ಕರ್: ಅವರಿಗೆ ಹಣ ತೆಗೆಯಲು ಬರುವುದಿಲ್ಲ ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಈಗ ಕರಡು ಸಿದ್ಧಪಡಿಸಿರುವಂತೆ, ಅವರಿಗೆ ಪ್ರಾಂತೀಯ ನಿಧಿಯಿಂದ ಹಣವನ್ನು ತೆಗೆಯಲು ಬರುವುದಿಲ್ಲ. ಇದೊಂದು ದೋಷ. ಇದನ್ನು ನಾವು ಕಡೆಯ ಕರಡು ಪ್ರತಿಯಲ್ಲಿ ಸರಿಪಡಿಸಲು ಸಲಹೆ ಮಾಡುತ್ತೇವೆ.

ಡಾ. ಬಿ. ಆರ್. ಅಂಬೇಡ್ಕರ್: ಪ್ಯಾರಾ ೪೯ರತ್ತಲೂ ನಾನು ನಿಮ್ಮ ಗಮನ ಸೆಳೆಯಬಯಸುತ್ತೇನೆ. ಉಪ ನಿಬಂಧನೆ (ಜಿ)ರ ಪ್ರಕಾರ ಬಹಿಷ್ಕೃತ ಪ್ರದೇಶಗಳಿಗೆ ಬೇಕಾಗುವ ವೆಚ್ಚವನ್ನು ಹೊಂದಿಸುವುದು ಗವರ್ನರ್ ಜನರಲ್ ಅವರ ವಿಶೇಷ ಜವಾಬ್ದಾರಿ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಗವರ್ನರ್ ಜನರಲ್ ಅವರ ಏಜೆಂಟ್ ಆಗಿರುವ ಗವರ್ನರರು ಪೂರ್ತಿ ಬಹಿಷ್ಕೃತ ಪ್ರದೇಶದ ಆಡಳಿತ ನೋಡಿಕೊಳ್ಳುವಾಗ, ತಮ್ಮ ವಿಶೇಷ ಜವಾಬ್ದಾರಿ ನಿರ್ವಹಿಸುವ ಗವರ್ನರ್ ಜನರಲ್ ಕಡೆಯಿಂದ ಬರುವ ಹಣದ ಮೇಲೆ ಅವಲಂಬಿಸಿರಬೇಕೆಂದು ನಾನು ಭಾವಿಸಲೇ?

ಸರ್ ಸ್ಯಾಮ್ಯುಯೆಲ್ ಹೋರ್: ಹಾಗಲ್ಲ. ಪ್ರಾಂತದಿಂದ ಖುದ್ದಾಗಿ ಗವರ್ನರರು ಹಣ ಕೇಳುವರು.

ಡಾ. ಬಿ. ಆರ್. ಅಂಬೇಡ್ಕರ್: ಪೂರ್ತಿ ಬಹಿಷ್ಕೃತ ಪ್ರದೇಶಗಳ ಆಡಳಿತಕ್ಕಾಗಿ ಪ್ರಾಂತೀಯ ನಿಧಿಯಿಂದ ತೆಗೆಯಲು ಸಾಧ್ಯವಾಗುವಂತೆ ಗವರ್ನರರ ವಿಶೇಷ ಜವಾಬ್ದಾರಿಗೆ ಸಂಬಂಧಿಸಿದ ನಿಯಮವನ್ನು ನೀವು ತಿದ್ದುಪಡಿ ಮಾಡುವ ಸಲಹೆ ಮಾಡುವಿರಾ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಎಂ. ಆರ್. ಜಯಕರ್: ಅದು ೯೬ನೇ ಪ್ಯಾರಾದ ಉಪ ಪ್ಯಾರಾ (ಬಿ)ನಲ್ಲಿ ಬರುವುದಿಲ್ಲವೇ? "ಅಂದಾಜು ವೆಚ್ಚದ ಬಗ್ಗೆ ಗವರ್ನರರು ಹೇಳಿಕೆ ನೀಡುವರು" ಇತ್ಯಾದಿ ತಮ್ಮ "ವಿಶೇಷ ಜವಾಬ್ದಾರಿ"ಗಳನ್ನು ನಿರ್ವಹಿಸಲು ಅಗತ್ಯವಾದ ಸಲಹೆಗಳು (ಯಾವುದಾದರೂ ಇದ್ದರೆ) ಅವು ಮತಕ್ಕೆ ಹಾಕಬಹುದಾದ ಬಾಬ್ತುಗಳಿರಲಿ, ಅಥವಾ ಮತಕ್ಕೆ ಹಾಕಲು ಬಾರದ ಬಾಬ್ತುಗಳಿರಲಿ– ಯಾವುವು ಎಂಬುದನ್ನು ಪ್ರತ್ಯೇಕವಾಗಿ ನಿರ್ದಿಷ್ಟಗೊಳಿಸುವ ಅಧಿಕಾರವನ್ನು ಗವರ್ನರರಿಗೆ ನೀವು ಕೊಟ್ಟಿದ್ದೀರಿ. ವಿಶೇಷ ಜವಾಬ್ದಾರಿಗಳೆಂದರೆ ಭಾಗಶಃ ಬಹಿಷ್ಕೃತ ಪ್ರದೇಶಗಳ ಮೇಲೆ ಮಾಡಲಿರುವ ವೆಚ್ಚವೂ ಸೇರುತ್ತದೆ.

ಡಾ. ಬಿ. ಆರ್. ಅಂಬೇಡ್ಕರ್: ನಾನು ಪೂರ್ತಿ ಬಹಿಷ್ಕೃತ ಪ್ರದೇಶಗಳ ಬಗ್ಗೆ ಮಾತಾಡುತ್ತಿರುವೆ.

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಎತ್ತಿರುವ ಅಂಶವು ಪೂರ್ತಿ ಬಹಿಷ್ಕೃತ ಪ್ರದೇಶಗಳಿಗೆ ಸಂಬಂಧಪಟ್ಟಿದ್ದು. ಕರಡು ಪ್ರತಿ ಸಿದ್ಧಪಡಿಸುವಾಗ ಸಂಭವಿಸಿದ ತಪ್ಪಿನಿಂದಾಗಿ, ಭಾಗಶಃ ಬಹಿಷ್ಕೃತ ಪ್ರದೇಶಗಳಿಗಾಗಿ ಪ್ರಾಂತೀಯ ನಿಧಿಯಿಂದ ಹಣವನ್ನು ತೆಗೆಯಬಲ್ಲ ಪ್ರಾಂತೀಯ ಗವರ್ನರರು ಪೂರ್ತಿ ಬಹಿಷ್ಕೃತ ಪ್ರದೇಶಗಳಿಗಾಗಿ ಪ್ರಾಂತೀಯ ನಿಧಿಯಿಂದ ಹಣವನ್ನು ತೆಗೆಯಲು ಬರುವುದಿಲ್ಲ ಎಂದಾಗಿ ಬಿಟ್ಟಿದೆ. ಇದು ಕರಡು ಸಿದ್ಧಪಡಿಸುವಲ್ಲಿ ನಡೆದ ಒಂದು ತಪ್ಪು.

* ಡಾ. ಬಿ. ಆರ್. ಅಂಬೇಡ್ಕರ್: ಶ್ರೀ ಜೋಶಿ ಅವರು ಹಾಕಿದ ಪ್ರಶ್ನೆಗಳಿಂದ ಉದ್ಭವಿಸಿದ ಪ್ರಶ್ನೆಯೊಂದನ್ನು ಕೇಳಲೇ? ನನಗೆ ಕಾಣುವ ತೊಂದರೆಯೊಂದರ ಕಡೆಗೆ ನಾನು ಸೆಕ್ರೆಟರಿ ಆಫ್ ಸ್ಟೇಟ್‌ರವರ ಗಮನವನ್ನು ಸೆಳೆಯಬಯಸುವೆ. ಭಾಗಶಃ ಬಹಿಷ್ಕೃತ ಪ್ರದೇಶಗಳಲ್ಲಿ ಚರ್ಚೆಯ ಸಾಧ್ಯತೆಗೆ ಅಥವಾ ಅದಕ್ಕೆ ಅವಕಾಶ ಕೊಡದಿರುವ ಅಧಿಕಾರವು ಗವರ್ನರರಿಗಿದೆ. ಆದರೆ, ಬಹಿಷ್ಕೃತ ಪ್ರದೇಶದಲ್ಲಿ ಯಾವುದೇ ಚರ್ಚೆ ನಡೆಸಲು ಅವರು ಅನುಮತಿ ನೀಡುವುದನ್ನು ನಿಷೇಧಿಸಲಾಗಿದೆ. ಈ ಆಧಾರದ ಮೇಲೆ ಕರಡು ಪ್ರತಿಯಲ್ಲಿ ನಮೂದಿಸಿದಂತೆ ೧೮೯ರ ಪ್ಯಾರಾ ಪ್ರಕಾರ ಬಹಿಷ್ಕೃತ ಮತ್ತು ಭಾಗಶಃ ಬಹಿಷ್ಕೃತ ಪ್ರದೇಶಗಳಲ್ಲಿ ಭಿನ್ನತೆಯನ್ನು ಕಾಣಬಹುದು.

ಬಹಿಷ್ಕೃತ ಪ್ರದೇಶದಲ್ಲಿ ಕಂಡ ಖೋತಾ ಸರಿಪಡಿಸಲು ಅಸ್ಸಾಂಗೆ ಸಂದಾಯ ಮಾಡಬೇಕಾದ ಸಹಾಯಧನಕ್ಕೆ ಸಂಬಂಧಿಸಿದಂತೆ, ಯಾವುದೇ ಪೂರ್ವ ನಿಗದಿತ ಮೊತ್ತವಿರಲಿಲ್ಲ. ಅಸ್ಸಾಂ ಪ್ರಾಂತದ ಸಾಮಾನ್ಯ ಕಂದಾಯದ ಒಂದು ಭಾಗವನ್ನು ಮಾತ್ರ ಮುಂಚಿತವಾಗೇ ನಿಗದಿಪಡಿಸಲಾಗಿತ್ತು. ಹೀಗೆಂದು ನೀವು ನಿನ್ನೆ ಮೇಜರ್ ಅಟ್ಲೀ ಅವರಿಗೆ ಉತ್ತರಿಸುತ್ತ ಹೇಳಿದಿರಿ. ಹೌದೇ ಸೆಕ್ರೆಟರಿ ಆಫ್ ಸ್ಟೇಟ್‌ರವರೇ?

ಸರ್ ಸ್ಯಾಮ್ಯುಯೆಲ್ ಹೋರ್: ಅದು ನಿರ್ದಿಷ್ಟ ಸಹಾಯಧನದ ಭಾಗವಾಗಿರಬೇಕೇ ಅಥವಾ ಸಾಮಾನ್ಯ ಸಹಾಯಧನದಲ್ಲಿ ಸೇರಿಕೊಂಡಿರಬೇಕೇ ಎಂದು ನಾನು ಆ ಪ್ರಶ್ನೆಯನ್ನು ವ್ಯಾಪಕವಾಗಿಸಿದೆ.

ಡಾ. ಬಿ. ಆರ್. ಅಂಬೇಡ್ಕರ್: ಅದು ಪೂರ್ವ ನಿಗದಿತ ಮೊತ್ತ ಎಂಬುದು ನಿಮ್ಮ ಭಾವನೆಯಲ್ಲ ಎಂದು ನೀವು ಹೇಳಿದ್ದಾಗಿ ನಾನು ಗ್ರಹಿಸಿದೆ.

ಸರ್ ಸ್ಯಾಮ್ಯುಯೆಲ್ ಹೋರ್: ಹಾಗಲ್ಲ. ನಾನು ಹೇಳಿದ್ದೇನೆಂದರೆ ಅಥವಾ ನಾನು ಹೇಳಬಯಸಿದ್ದೇನೆಂದರೆ, ನಾವು ಚರ್ಚಿಸುತ್ತಿದ್ದ ಅಂಕಿ ಸಂಖ್ಯೆಗಳಂತೆ ಅದು ಸಾಮಾನ್ಯ ನಿಧಿಯ ಭಾಗವೆಂದು

---

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨-ಬಿ, ೧೮ ಅಕ್ಟೋಬರ್ ೧೯೩೩. ಪುಟ ೧೨೨೩-೨೪

ನಾವು ಭಾವಿಸಿದ್ದೆವು. ಆದರೆ ಅದು ಉತ್ತಮ ಮಾರ್ಗವೇ ಎಂಬ ಬಗ್ಗೆ ಚರ್ಚಿಸಲು ನನಗೆ ಮುಕ್ತ ಮನಸ್ಸಿದೆ.

ಡಾ. ಬಿ. ಆರ್. ಅಂಬೇಡ್ಕರ್: ಒಳ್ಳೆಯದು. ಈ ವಿಷಯದ ಇನ್ನೊಂದು ಮಜಲನ್ನು ನಾನು ಪರಿಶೀಲಿಸುವೆ. ನಾನು ಹಾಕಿದ ಪ್ರಶ್ನೆಗೆ ಉತ್ತರಿಸುತ್ತ, ಬಹಿಷ್ಕೃತ ಪ್ರದೇಶಕ್ಕೆ ಹಣಕಾಸು ಒದಗಿಸುವ ಸಂಬಂಧದಲ್ಲಿ ನೀವು ಶ್ವೇತಪತ್ರದಲ್ಲಿನ ತಪ್ಪು ಸರಿಪಡಿಸಲಿದ್ದೀರಿ ಎಂದೂ, ಬಹಿಷ್ಕೃತ ಪ್ರದೇಶದಲ್ಲಿ ಖರ್ಚು ಮಾಡಹುದಾದ ಹಣವನ್ನು ಅಸ್ಸಾಂ ಪ್ರಾಂತದ ಸಾಮಾನ್ಯ ನಿಧಿಯಿಂದ ತೆಗೆದುಕೊಳ್ಳಲು ಪ್ರಾಂತದ ಗವರ್ನರರಿಗೆ ಅವಕಾಶ ಮಾಡಿಕೊಡಲಿದ್ದೀರಿ ಎಂದೂ ನೀವು ಹೇಳಿದಿರಿ.

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನನಗೆ ತೋರುವ ತೊಂದರೆ ಏನೆಂದರೆ, ಬಹಿಷ್ಕೃತ ಪ್ರದೇಶ ದಲ್ಲಿ ತಮ್ಮ ಆಡಳಿತ ನಡೆಸಲು ಅಸ್ಸಾಂ ಪ್ರಾಂತೀಯ ನಿಧಿಯಿಂದ ಹಣ ತೆಗೆಯುವ ಅಧಿಕಾರವು ಗವರ್ನರರಿಗೆ ಸಿಗುವುದಾದರೆ, ಅದು ಹಣವನ್ನು ಒದಗಿಸಲೆಂದು ಇರುವ ಶಾಸನ ಸಭೆ ಬಹಿಷ್ಕೃತ ಪ್ರದೇಶದ ವ್ಯವಹಾರದ ಬಗ್ಗೆ ಚರ್ಚಿಸುವುದನ್ನು ನಿಷೇಧಿಸಬೇಕು ಎಂಬ ೧೯ನೇ ಪ್ಯಾರಾಕ್ಕೆ ಹೊಂದಿಕೆಯಾಗುತ್ತದೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಡಾ. ಅಂಬೇಡ್ಕರ್ ಅವರು ನಿಜಕ್ಕೂ ಕಠಿಣ ಪ್ರಕರಣವೊಂದನ್ನು ಪ್ರಸ್ತಾಪಿಸಿದ್ದಾರೆ. ಅಸ್ಸಾಂ ಪೂರ್ಣ ಬಹಿಷ್ಕೃತ ಪ್ರದೇಶದ ಮೇಲೆ ಮಾಡುವ ವೆಚ್ಚದ ಬಹುಪಾಲು ಫೆಡರಲ್ ನಿಧಿಯಿಂದ ಬರುತ್ತದೆ. ಅವರು ಎತ್ತಿದ ಪ್ರಶ್ನೆಗೆ ಸಂಬಂಧಿಸಿದ ಹಣದ ಮೊತ್ತವೂ ಭಾರಿ ಏನಲ್ಲ. ಮೇಲಾಗಿ ಈ ಹಣದ ಜತೆಗೆ ಇನ್ನಷ್ಟು ಅಗತ್ಯ ಬೀಳುತ್ತದೆಂದೂ ಭಾವಿಸಬಹುದಾಗಿದೆ.

ಡಾ. ಬಿ. ಆರ್. ಅಂಬೇಡ್ಕರ್: ಗವರ್ನರರು ತಮ್ಮ ವಿಶೇಷ ಜವಾಬ್ದಾರಿಯಿಂದ ಹೆಚ್ಚುವರಿ ಹಣವನ್ನು ಪ್ರಮಾಣೀಕರಿಸದಿದ್ದರೆ, ನಿನ್ನೆ ನೀವು ಹೇಳಿದಂತೆ ಭಾಗಶಃ ಬಹಿಷ್ಕೃತ ಪ್ರದೇಶಗಳಲ್ಲಿನದು ಸಾಮಾನ್ಯ ಬಜೆಟ್ ಆಗಿರುತ್ತದೆ. ಆಗ ಇಡೀ ಬಜೆಟ್ ಶಾಸನಸಭೆಯ ಮುಂದೆ ಬಂದು ಚರ್ಚೆಗೆ ಗುರಿಯಾಗುತ್ತದೆ. ಆಗ ತೊಂದರೆಯನ್ನು ಎದುರಿಸಿ ಪಾರಾಗುವುದು ಹೇಗೆ? ನನಗೆ ಹೊಳೆಯುತ್ತಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಅಂಥ ಪ್ರಸಂಗದಲ್ಲಿ ಒಪ್ಪಂದದ ಅನುಕೂಲತೆ ಪಡೆದು ಕೆಲ ವರ್ಷಗಳ ಕಾಲ ತೊಂದರೆಯಿಂದ ಪಾರಾಗಬಹುದೆಂಬುದನ್ನು ನಾವು ಪರಿಶೀಲಿಸಿದ್ದೇವೆ. ಆದರೆ ನಾನು ಕಾತುರನಾಗಿರುವುದು ಪದೇ ಪದೇ ನಡೆಯುವ ಚರ್ಚೆಗಳನ್ನು ತಪ್ಪಿಸಲು.

ಡಾ. ಬಿ. ಆರ್. ಅಂಬೇಡ್ಕರ್: ಚರ್ಚೆ ತಡೆ ಹಿಡಿಯುವುದು ಮತ್ತು ಹೇಗೆ ನಿಷೇಧಿಸುವ ಅಥವಾ ಅನುಮತಿ ನೀಡದರುವ ಅಧಿಕಾರವನ್ನು ಗವರ್ನರರಿಗೆ ನೀಡುವುದು ಎಂಬ ಈ ಎರಡೂ ಅವಕಾಶಗಳನ್ನು ವ್ಯವಸ್ಥೆ ಮಾಡುವುದರಿಂದ ಉದ್ದೇಶ ಈಡೇರುತ್ತದೆ. ಈ ಅವಕಾಶಗಳಲ್ಲಿ ಗವರ್ನರರು ಯಾವುದನ್ನಾದರೂ ಬಳಸಬಹುದು, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಪೂರ್ಣ ಬಹಿಷ್ಕೃತ ಪ್ರದೇಶಗಳ ಪ್ರಕರಣಗಳಲ್ಲಿ ಚರ್ಚೆಗಳನ್ನು ಹೊರತುಪಡಿಸುವುದರಿಂದ ಹೆಚ್ಚು ಅನುಕೂಲತೆ ಇರುವುದೆಂದು, ಈ ವಲಯಗಳಲ್ಲಿ ಕೆಲಸ ಮಾಡುವ ಜನ ಸ್ಪಷ್ಟವಾಗಿ ನಮಗೆ ತಿಳಿಸಿದರು. ಆದರೆ ಪ್ರಾಂತೀಯ ನಿಧಿಯಿಂದ ಅಸ್ಸಾಂನಲ್ಲಿ ವೆಚ್ಚ ಮಾಡುವುದು ಕಷ್ಟವಾಗುತ್ತಿದೆ ಎಂಬುದು ನನಗೆ ಎಂದಿನಿಂದಲೂ ತಿಳಿದಿದೆ. ಕೆಲ ವರ್ಷಗಳಿಗೆಂದು ಇರುವ ಒಪ್ಪಂದದ ಬಜೆಟ್ ನವೀಕರಣಗೊಂಡಾಗ ಚರ್ಚೆ ನಡೆಸಬಹುದೇ ಎಂಬ ಬಗ್ಗೆ ಸಮಿತಿ ಮತ್ತು ಪ್ರತಿನಿಧಿಗಳು

ಆಲೋಚಿಸಬಹುದು ಎಂಬುದು ನನ್ನ ಭಾವನೆ. (ಸಮಿತಿಗೆ ಸಮಗ್ರ ಸ್ಥಿತಿ ಗೊತ್ತಿರಲಿ ಎಂದು ಹೇಳುವುದಾದರೆ) ಹಾಗೆ ಮಾಡುವುದು ಕೂಡ ಬಹು ಮಂದಿ ತಜ್ಞರ ಅಭಿಪ್ರಾಯಕ್ಕೆ ವಿರುದ್ಧವಾಗಿ ನಡೆದುಕೊಂಡಂತೆ.

ಡಾ. ಬಿ. ಆರ್. ಅಂಬೇಡ್ಕರ್: ತಜ್ಞರ ಮತ್ತು ನಿಮ್ಮ ಮನಸ್ಸಿನಲ್ಲಿರುವ ಉದ್ದೇಶ ಈಡೇರಬೇಕು ಎಂದಾದರೆ ಗೊತ್ತುವಳಿಯನ್ನು ಮಂಡಿಸಲು ಮತ್ತು ಅದರ ಮೇಲೆ ಚರ್ಚೆ ನಡೆಸಲು ಗವರ್ನರರಿಗೆ ಅಧಿಕಾರ ನೀಡುವುದೇ ಸೂಕ್ತ.

ಸರ್ ಸ್ಯಾಮ್ಯುಯೆಲ್ ಹೋರ್: ಈ ಬಗೆಯ ಚರ್ಚೆ ನಡೆಸುವುದನ್ನು ಮೇಲಿಂದ ಮೇಲೆ ಗವರ್ನರರು ನಿರಾಕರಿಸುವುದನ್ನು ತಪ್ಪಿಸಬೇಕೆಂದೇ ನಾವು ಬಯಸಿದ್ದೆವು. ಇಂತಹ ಸಂದರ್ಭದಲ್ಲಿ ಅವರು ತುಂಬಾ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು ಪೂರ್ತಿ ಬಹಿಷ್ಕೃತ ಪ್ರದೇಶಕ್ಕೆ ಸಂಬಂಧಿಸಿದಂತೆ ಚರ್ಚೆಗಳು ನಡೆಯುವುದಾಗಿ ನಾವು ನಿರೀಕ್ಷಿಸುವುದಿಲ್ಲ. ಪ್ರದೇಶಕ್ಕೆ ತೊಂದರೆ ಉಂಟುಮಾಡುವಂಥ ಚರ್ಚೆಗೆ ಅವಕಾಶ ಕೊಡುವಂತೆ ನಾವು ಯಾವ ಕ್ರಮವನ್ನೂ ಕೈಗೊಳ್ಳಲು ಬಯಸುವುದಿಲ್ಲ.

ಡಾ. ಬಿ. ಆರ್. ಅಂಬೇಡ್ಕರ್: ಗವರ್ನರರ ಅಧಿಕಾರವೇ ಈ ಬಗೆಯ ಸಂದರ್ಭಕ್ಕೆ ತಕ್ಕ ರಕ್ಷಣೆ ಎಂದು ಮಾತ್ರ ನಾನು ಸಲಹೆ ನೀಡಬಯಸಿದ್ದೆ. ನಾನು ಕೇಳುವುದು ಮುಗಿಯಿತು.

* ಡಾ. ಬಿ. ಆರ್. ಅಂಬೇಡ್ಕರ್: ಆ ಬಗ್ಗೆ ಒಂದು ಪ್ರಶ್ನೆ ಕೇಳಬಹುದೇ? ನಾನು ತಿಳಿದಂತೆ ಸಮಾನಾಧಿಕಾರ ಕ್ಷೇತ್ರದಲ್ಲಿ ಹೈಕೋರ್ಟಿನ ನಿರ್ಣಯಗಳ ಮೇಲೆ ಪ್ರೀವಿ ಕೌನ್ಸಿಲ್‌ಗೆ ಅಪೀಲ್ ಇರುತ್ತದೆ, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ನನಗರ್ಥವಾಗದ್ದು ಏನೆಂದರೆ, ಸಮಾನಾಧಿಕಾರ ಕ್ಷೇತ್ರದಲ್ಲಿನ ಪೂರಕ ಕಾಯ್ದೆಯನ್ನು ಅರ್ಥೈಸುವುದರಿಂದ ಹುಟ್ಟುವ ಪ್ರಕರಣದಲ್ಲಿ ಪ್ರೀವಿ ಕೌನ್ಸಿಲ್‌ಗೆ ಅಪೀಲ್ ಹೋಗಬಹುದೆಂದರೆ, ಇಂಥದೇ ಅಪೀಲನ್ನು ಫೆಡರಲ್ ಕೋರ್ಟಿಗೆ ಒಯ್ಯಲು ಅನುಮತಿ ನೀಡುವುದಕ್ಕೇನು ಕಷ್ಟ?

ಸರ್ ಸ್ಯಾಮ್ಯುಯೆಲ್ ಹೋರ್: ಫೆಡರಲ್ ಕೋರ್ಟಿನಲ್ಲಿ ಕೆಲಸದ ಒತ್ತಡ ಹೆಚ್ಚಾಗಿ ಹೆಚ್ಚು ನ್ಯಾಯಾಧೀಶರ ಅಗತ್ಯ ಬೀಳುವಂತಾಗಬಾರದೆಂಬುದು ನಮ್ಮಲ್ಲಿರುವ ಕಾರಣಗಳಲ್ಲಿ ಒಂದು.

* * ಡಾ. ಬಿ. ಆರ್. ಅಂಬೇಡ್ಕರ್: ೧೫೫ನೇ ಪ್ಯಾರಾ ಬಗ್ಗೆ ಸೆಕ್ರೆಟರಿ ಆಫ್ ಸ್ಟೇಟ್‌ರವರೆ, ನಾನೊಂದು ಪ್ರಶ್ನೆ ಕೇಳಬಯಸುವೆ. ಫೆಡರಲ್ ಕೋರ್ಟಿನ ಪ್ರತ್ಯೇಕ ಮೂಲಭೂತ ಕಾರ್ಯವ್ಯಾಪ್ತಿಗೆ ಈ ಪ್ಯಾರಾ ಸಂಬಂಧಪಟ್ಟಿದೆ. ಅಲ್ಲಿ ಹೇಳಿರಬಹುದಾದ ವ್ಯತ್ಯಾಸ ನನಗೆ ಅರ್ಥವಾಗುವುದಿಲ್ಲ. ವಿವಾದಕ್ಕೆ ಉಪ ಕಲಮು (ಎ) ಮತ್ತು (ಬಿ) ಪ್ರಕಾರ, ವಾದಿ ಮತ್ತು ಪ್ರತಿವಾದಿಗಳಿರುವಲ್ಲಿ ಫೆಡರಲ್ ಕೋರ್ಟಿನ ಪ್ರತ್ಯೇಕ, ಮೂಲಭೂತ ಕಾರ್ಯ ವ್ಯಾಪ್ತಿಯ ವಿಷಯದಲ್ಲಿ ನೀವು ಭೇದ ಭಾವ ಮಾಡುತ್ತೀರಿ ಎಂಬುದನ್ನು ೧೫೫ನೇ ಪ್ಯಾರಾದಲ್ಲಿ ನಾನು ಕಂಡೆ. ಆದರೆ ವಾದಿ ಮತ್ತು ಪ್ರತಿವಾದಿಗಳು ಖಾಸಗಿ ವ್ಯಕ್ತಿಗಳಾಗಿದ್ದಲ್ಲಿ ಫೆಡರಲ್ ಕೋರ್ಟಿಗೆ ಪ್ರತ್ಯೇಕ, ಮೂಲಭೂತ ಕಾರ್ಯವ್ಯಾಪ್ತಿ ಸಾಧ್ಯವಾಗದು. ಈಗ ನಾನು ಕೇಳಬೇಕೆಂದಿರುವ ಪ್ರಶ್ನೆ ಇದು. ಎರಡೂ ಪ್ರಕರಣಗಳಲ್ಲಿರುವ ವಿಷಯ ಒಂದೇ. ಅದು ಸಂವಿಧಾನ ಕಾಯ್ದೆಯ ಅರ್ಥೈಸುವಿಕೆಗೆ ಸಂಬಂಧಿಸಿದ್ದು. ನನಗೆ ಅರ್ಥವಾಗದ್ದೇನೆಂದರೆ, ವಿಷಯ ಒಂದೇ ಇರುವಾಗ, ವಾದಿ ಮತ್ತು ಪ್ರತಿವಾದಿಗಳ

---

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨-ಬಿ, ೧೯ ಅಕ್ಟೋಬರ್ ೧೯೩೩, ಪುಟ ೧೨೪೮

* * ಅದೇ, ಪುಟ, ಅಕ್ಟೋಬರ್ ೧೯೩೩, ಪುಟಗಳು ೧೨೯೨.

ಮೇಲೆ ಆಧಾರಿತ ಫೆಡರಲ್ ಕೋರ್ಟಿನ ಪ್ರತ್ಯೇಕ, ಮೂಲಭೂತ ಕಾರ್ಯ ವ್ಯಾಪ್ತಿ ವಿಷಯದಲ್ಲಿ ಈ ಭೇದ ಭಾವ ಏಕಿರಬೇಕು?

ಸರ್ ಸ್ಯಾಮ್ಯುಯೆಲ್ ಹೋರ್: ಫೆಡರಲ್ ಕೋರ್ಟುಗಳಿಗೆ ಸಂಬಂಧಿಸಿದಂತೆ, ಸಾಮಾನ್ಯವಾಗಿ ಸಂಭವಿಸುವುದೇ ಹೀಗೆ. ಮೂಲಭೂತ ಕಾರ್ಯವ್ಯಾಪ್ತಿ ಎಂದರೆ ಘಟಕಗಳ ನಡುವಣ ಕಾರ್ಯವ್ಯಾಪ್ತಿ. ಮನವಿ ವಿಚಾರಣೆ ನಡೆಸುವ ಅಧಿಕಾರವೂ ಕಾರ್ಯ ವ್ಯಾಪ್ತಿಯಲ್ಲಿ ಸೇರಿದ್ದಾಗ, ಹಕ್ಕಿನಂತೆ ವ್ಯಕ್ತಿಗಳು ವೈಯಕ್ತಿಕವಾಗಿ ಅಲ್ಲಿ ಕಾಣಿಸಿಕೊಳ್ಳುತ್ತಾರೆ.

ಡಾ. ಬಿ. ಆರ್. ಅಂಬೇಡ್ಕರ್: ಸಂವಿಧಾನ ಕಾಯ್ದೆಯ ಅರ್ಥಕ್ಕೆ ಸಂಬಂಧಪಟ್ಟಂತೆ, ವಿಷಯವು ಫೆಡರಲ್ ಕೋರ್ಟಿಗೆ ತಕ್ಷಣ ಹೋಗಬೇಕೆಂದಾದರೆ ಆಗ ಫೆಡರೇಷನ್‌ಗೆ ಸಂಬಂಧಪಟ್ಟ ಘಟಕಗಳೇ ಆಗಿರಲಿ, ಯಾವುದೇ ವ್ಯಕ್ತಿಗಳಾಗಿರಲಿ, ಇಂಥ ಭೇದ ಭಾವ ಇರಲಾಗದೆಂದು ನಾನು ಭಾವಿಸುವೆ. ನಿಮ್ಮ ಮಾತಿನ ಅರ್ಥ ಹೀಗೆಯೇ?

ಸರ್ ಸ್ಯಾಮ್ಯುಯೆಲ್ ಹೋರ್: ಫೆಡರಲ್ ಕೋರ್ಟಿನಲ್ಲಿ ಅಗತ್ಯ ಇರುವ ಕಾರ್ಯ ಮಾಡುವ ಪರಿಸ್ಥಿತಿಗಳಲ್ಲಿ ಅದೂ ಒಂದೆಂದು ನಾನು ಭಾವಿಸಬಹುದಿತ್ತು. ವೈಯಕ್ತಿಕ ಮೊಕದ್ದಮೆಗಳಲ್ಲಿ ಅದಕ್ಕೆ ಮೂಲಭೂತ ಕಾರ್ಯವ್ಯಾಪ್ತಿ ಇದ್ದುದಾದರೆ, ಅದು ಮೊಕದ್ದಮೆಗಳಿಂದ ತುಂಬಿ ಹೋಗಿರುತ್ತಿತ್ತು.

ಡಾ. ಬಿ. ಆರ್. ಅಂಬೇಡ್ಕರ್: ಆದರೆ ಎರಡೂ ಪ್ರಕರಣಗಳಲ್ಲಿನ ವಿಷಯ ಒಂದೇ. ಅದು ಸಂವಿಧಾನ ಕಾಯ್ದೆಯನ್ನು ಅರ್ಥೈಸುವುದು. ಕ್ರಿಯೆಯ ವಿಭಿನ್ನ ಉದ್ದೇಶಗಳ ಮೇಲೆ ಆಧರಿಸಿದ ಭೇದ ಭಾವವನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಸಂವಿಧಾನ ಉಲ್ಲಂಘನೆ ಎಂಬ ಕ್ರಿಯೆಯ ಉದ್ದೇಶ ಒಂದೇ ಇರುವಾಗ ವಾದಿ ಮತ್ತು ಪ್ರತಿವಾದಿಗಳು ಅಥವಾ ಘಟಕಗಳ ಆಧಾರದ ಮೇಲಿನ ಭೇದ ಭಾವಕ್ಕೆ ಯಾವ ಸಮರ್ಥನೆಯೂ ನನಗೆ ಕಾಣುವುದಿಲ್ಲ.

* ಡಾ. ಬಿ. ಆರ್. ಅಂಬೇಡ್ಕರ್: ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಇನ್ನೊಂದು ಪ್ರಶ್ನೆ ಕೇಳುವುದಿದೆ. ಈ ಬಗ್ಗೆ ಶ್ವೇತಪ್ರದಲ್ಲಿ ಯಾವ ಅವಕಾಶವೂ ನನಗೆ ಕಾಣುತ್ತಿಲ್ಲ. ನಿರ್ದಿಷ್ಟ ಪರಿಹಾರವನ್ನು ಬಯಸದಿದ್ದರೂ, ಯಾವುದೇ ಕಾಯ್ದೆಯೊಂದು ಅಸಾಂವಿಧಾನಿಕ ಎಂಬ ಘೋಷಣೆ ಬಯಸಿ ಖಾಸಗಿ ವ್ಯಕ್ತಿಗಳು ಮೊಕದ್ದಮೆ ಹೂಡುವ ಅವಕಾಶ ಕಲ್ಪಿಸಬೇಕೆಂಬುದು ಅಪೇಕ್ಷಣೀಯ ಎಂದು ಸೆಕ್ರೆಟರಿಯವರೇ, ನಿಮಗೆ ಅನಿಸುವುದಿಲ್ಲವೇ?

ನೀವು ಈಗ ನಮ್ಮ ಮುಂದೆ ತಂದಿರುವ ಎಲ್ಲಾ ಪ್ರಕರಣಗಳಲ್ಲಿ ನಿರ್ದಿಷ್ಟ ಪರಿಹಾರವನ್ನು ಬಯಸಲಾಗಿದೆ. ಫೆಡರೇಷನ್ ಅಥವಾ ಪ್ರಾಂತ ಮಾಡಿದ ಪ್ರಸ್ತಾಪವು ಸಾಂವಿಧಾನಿಕ ಎಂಬ ಬಗ್ಗೆ ಯಾವೊಬ್ಬ ವ್ಯಕ್ತಿಗಾದರೂ ಸಂದೇಹವಿದ್ದರೆ ಅವರು ತಮ್ಮ ಭವಿಷ್ಯದ ದೃಷ್ಟಿಯಿಂದ ಆ ಕ್ಷಣವೇ ಅದನ್ನು ಪರೀಕ್ಷಿಸಲು ಇಚ್ಛಿಸಬಹುದು. ಘೋಷಣೆ ಬಯಸಿ ಮೊಕದ್ದಮೆ ಹೂಡುವಾಗ ನಿರ್ದಿಷ್ಟ ಪರಿಹಾರ ಬಯಸಲು ಕಾರಣಗಳಿರದಿದ್ದರೂ, ಅವರು ಭವಿಷ್ಯದಲ್ಲಿ ತಮ್ಮ ಸ್ಥಾನ ಕಾಯ್ದುಕೊಳ್ಳಬಹುದು.

ಸರ್ ಸ್ಯಾಮ್ಯುಯೆಲ್ ಹೋರ್: ಇಂಥ ಪ್ರಶ್ನೆಗೆ ಉತ್ತರಿಸುವಾಗ ನಾನು ವಕೀಲನಲ್ಲವಲ್ಲ ಎಂಬ ಬಗ್ಗೆ ನನಗೆ ಕೊಂಚ ಅಳುಕಿದೆ. ಆದರೆ ಸಾಮಾನ್ಯನಂತೆ ನಾನು ಉತ್ತರಿಸುವುದಾದರೆ, ಯಾವ ತೊಂದರೆಯೂ

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨–ಬಿ, ೨೦ ಅಕ್ಟೋಬರ್ ೧೯೩೩, ಪುಟ ೧೨೯೩.

ಉಂಟಾಗದ ನಿರ್ದಿಷ್ಟ ವಿಷಯ ಇಲ್ಲದ ಈ ಬಗೆಯ ಸಾಮಾನ್ಯ ಹಕ್ಕನ್ನು ಒದಗಿಸುವುದು ತುಂಬಾ ಕಷ್ಟವಾಗಿತ್ತು ಎಂದೇ ನಾನು ಹೇಳಬಹುದಾಗಿತ್ತು.

ರೀಡಿಂಗ್‌ನ ಮಾರ್ಕ್ವೆಸ್: ನೀವು ಹೇಳಿದ್ದು ಈ ದೇಶದಲ್ಲಿ ಜಾರಿಯಲ್ಲಿರುವ ಕಾಯ್ದೆ ಬಗ್ಗೆ ಎಂದು ಹೇಳಲೇ? ಗಂಭೀರ ವಿವಾದ ಇಲ್ಲದಿದ್ದಾಗ ಮುಚ್ಚಳಿಕೆ ಪಡೆಯುವ ಈ ಕಠಿಣ ಮೊಕದ್ದಮೆಗೆ ಈ ನಿಯಮವು ಅನ್ವಯಿಸಲು ನಾವು ಬಿಡುವುದಿಲ್ಲ. ಗಂಭೀರ ವಿವಾದ ಇದ್ದಾಗ ಮಾಡಬಹುದು, ನಾವು ಎಂದೂ ಇದಕ್ಕೆ ಸಿದ್ಧರಿಲ್ಲ. ಭಾರತದಲ್ಲಿ ಹಾಗೆ ಜಾರಿಗೊಳಿಸಬಹುದು ಎಂದು ನನಗೆ ತೋರುವುದಿಲ್ಲ.

ಸರ್ ಹರಿಸಿಂಗ್ ಗೌರ್: ಕ್ರಮಕ್ಕೆ ಕಾರಣವಿಲ್ಲ. ಮೊಕದ್ದಮೆ ಹೂಡುವ ಅವಕಾಶ ಇಲ್ಲ.

ಜಫರುಲ್ಲಾ ಖಾನ್: ಸಂವಿಧಾನದಲ್ಲಿ ಇಂತಹ ಅವಕಾಶವನ್ನು ಕಲ್ಪಿಸಿದರೆ ನಿಜಕ್ಕೂ ತುಂಬಾ ದೊಡ್ಡ ತೊಂದರೆಗಳು ಎದುರಾಗುತ್ತವೆ. ಈ ಕಾಯ್ದೆ ಬಂದ ತಕ್ಷಣ ಭಾರತದಲ್ಲಿ ನೀವು ಲಕ್ಷಾಂತರ ಮೊಕದ್ದಮೆಗಳನ್ನು ಹೂಡುತ್ತೀರಿ.

ಡಾ. ಬಿ. ಆರ್. ಅಂಬೇಡ್ಕರ್: ತಮ್ಮ ಅಧಿಕಾರವನ್ನು ಪ್ರತಿಯೊಬ್ಬರೂ ಚಲಾಯಿಸುವರೆಂಬ ಬಗ್ಗೆ ನನಗೆ ತಿಳಿದಿಲ್ಲ.

ಸರ್ ಸ್ಯಾಮ್ಯುಯೆಲ್ ಹೋರ್: ಭಾರತದಲ್ಲಿ ನ್ಯಾಯ ವೃತ್ತಿಗೆ ಇದೊಂದು ಉತ್ತಮ ವಸ್ತುವಾಗಬಲ್ಲದು.

* ಡಾ. ಬಿ. ಆರ್. ಅಂಬೇಡ್ಕರ್: ಸೆಕ್ರೆಟರಿ ಆಫ್ ಸ್ಟೇಟ್‌ರವರೇ, ಒಂದೇ ಒಂದು ಪ್ರಶ್ನೆ: ಉಪಕಲಮು (ಸಿ)ಗೆ ಸಂಬಂಧಪಟ್ಟಂತೆ "ವಿಶೇಷ ಅಧಿಕಾರ" (ಗವರ್ನರ್ ಜನರಲ್ ಅವರ ವಿಶೇಷ ಅಧಿಕಾರ)ಗಳು ಎಂದರೆ ನನಗರ್ಥವಾದಂತೆ ಹೀಗೆ: ಸಾಮಾನ್ಯವಾಗಿ ಹೇಳುವುದಾದರೆ, ಭೇದ ಭಾವ ತೋರುವ ಕಾಯ್ದೆಯನ್ನು ಶಾಸನ ಸಭೆ ಅಂಗೀಕರಿಸಬಾರದು. ನಾನು ತುಂಬಾ ಸಾಮಾನ್ಯ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಮಾತಾಡುತ್ತಿರುವೆ, ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ವಾಸ್ತವವಾಗಿ ಯಾವ ಭೇದಭಾವವನ್ನೂ ತೋರಿದಂತಾಗುವುದಿಲ್ಲ ಎಂದು ಗವರ್ನರರಿಗೆ ಮನವರಿಕೆಯಾಗದ ತನಕ ಆಡಳಿತಾತ್ಮಕವಾಗಿ ಪ್ರಸಕ್ತ ಸರ್ಕಾರವು ಭೇದ ಭಾವ ಮಾಡುವಂತಿಲ್ಲ. ಹೌದೇ?

ಸರ್ ಸ್ಯಾಮ್ಯುಯೆಲ್ ಹೋರ್: ಅಲ್ಲ.

ಎಂ.ಆರ್. ಜಯಕರ್: ಗವರ್ನರ್ ಜನರಲ್‌ರಿಗೆ?

ಡಾ. ಬಿ. ಆರ್. ಅಂಬೇಡ್ಕರ್: ಗವರ್ನರ್ ಜನರಲ್ ಅಥವಾ ಗವರ್ನರರಿಗೆ. ಏಕೆಂದರೆ ಈ ಕಲಮು ಇಬ್ಬರಿಗೂ ಅನ್ವಯಿಸುತ್ತದೆ. ಇದು ಸಾಮಾನ್ಯವಾಗಿ ಮತ್ತು ತಾತ್ವಿಕವಾಗಿ ಇರುವ ಸ್ಥಿತಿ, ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಹೌದು.

ಡಾ. ಬಿ. ಆರ್. ಅಂಬೇಡ್ಕರ್: ಉಪಕಲಮು (ಸಿ) ಪ್ರಕಾರ, ಕಲಮಿನ ನಿಯಮಗಳಂತೆ ಬರುತ್ತಿದ್ದರೆ, ಭೇದಭಾವ ತೋರುವ ಕಾನೂನನ್ನು ಮಾಡುವ ಅಧಿಕಾರ ಗವರ್ನರ್ ಜನರಲ್ ಅವರಿಗಿದೆ. ಅಂದರೆ ಈ ಅಧಿಕಾರವನ್ನು ಆಡಳಿತಾತ್ಮಕ ಉದ್ದೇಶಗಳಿಗಾಗಿ ಮಾತ್ರವಲ್ಲ, ಶಾಸಕಾಂಗದ ಉದ್ದೇಶಗಳಿಗಾಗಿಯೂ ಕೊಡಲಾಗಿದೆ, ಹೌದೇ?

---

* 'ಮಿನಿಟ್ಸ್ ಆಫ್ ಎವಿಡೆನ್ಸ್', ಸಂಪುಟ ೨-ಬಿ, ೭ ನವೆಂಬರ್ ೧೯೩೩. ಪುಟ ೧೩೪೪.

ಸರ್ ಸ್ಯಾಮ್ಯುಯೆಲ್ ಹೋರ್: ಶ್ವೇತಪತ್ರದ ೧೮ನೇ ಪ್ರಸ್ತಾಪದ ಪ್ರಕಾರ ಇದು ಸಾಮಾನ್ಯ ಅಧಿಕಾರ.

ಡಾ. ಬಿ. ಆರ್. ಅಂಬೇಡ್ಕರ್: ಇಬ್ಬರಿಗೂ ಅದು ಅನ್ವಯಿಸುತ್ತದೆಯೇ? ಸರ್ಕಾರ ಅಲ್ಲದಿದ್ದರೂ ಗವರ್ನರರು ಭೇದ ಭಾವ ತೋರಬಹುದೆಂದೇ?

ಸರ್ ಸ್ಯಾಮ್ಯುಯೆಲ್ ಹೋರ್: ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವುದನ್ನು ತಡೆಗಟ್ಟಲು.

ಡಾ. ಬಿ. ಆರ್. ಅಂಬೇಡ್ಕರ್: ಹೌದು. ಇದು ಏನನ್ನು ಸೂಚಿಸುತ್ತದೆ? ಎಂದು ನಾನು ಕೇಳುತ್ತೇನೆ: ಧಕ್ಕೆಯನ್ನುಂಟು ಮಾಡುವ ದೃಷ್ಟಿಯಿಂದ ಕೆಲವೊಂದು ಜನರನ್ನು ಸೇನೆಗೆ ನೇಮಕ ಮಾಡಿಕೊಳ್ಳುವುದಿಲ್ಲ ಎಂದು ಗವರ್ನರ್ ಜನರಲ್ ಅವರು ಹೇಳಲು ಈ ನಿಬಂಧನೆ ಪ್ರಕಾರ ಸಾಧ್ಯವಾಗುತ್ತದೆ. ಈ ಕಲಮು ಪ್ರಕಾರ ಗವರ್ನರರು ಹೀಗೆ ಹೇಳಬಹುದೇ?

ಸರ್ ಸ್ಯಾಮ್ಯುಯೆಲ್ ಹೋರ್: ತಾತ್ವಿಕವಾಗಿ ಹೀಗೆ ಹೇಳುವುದು ಸಾಧ್ಯವಿದೆ. ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವ ಸಂದರ್ಭಗಳು ತುಂಬಾ. ಏಕೆಂದರೆ, ಭಾರತದ ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವುದೆಂಬ ನಿರ್ದಿಷ್ಟ ಪ್ರಕರಣವೊಂದು ಇದು ಡಾ. ಅಂಬೇಡ್ಕರ್ ಅವರ ಮನಸಿನಲ್ಲಿ ಇರಬಹುದು ನಾನು ಅದನ್ನು ಕಲ್ಪಿಸಿಕೊಳ್ಳಲೂ ಆಗದು.

ಡಾ. ಬಿ. ಆರ್. ಅಂಬೇಡ್ಕರ್: ಅದನ್ನು ಕೇಳಿ ನನಗೆ ಸಂತೋಷವಾಯಿತು. ಏಕೆಂದರೆ ಅದು ನನ್ನನ್ನು ಚಿಂತಾಕ್ರಾಂತನನ್ನಾಗಿಸಿತ್ತು.

ಸರ್ ಸ್ಯಾಮ್ಯುಯೆಲ್ ಹೋರ್: ಮಿಲಿಟರಿ ದೃಷ್ಟಿಯಿಂದ ಅದು ಒಳ್ಳೆಯದೋ, ಕೆಟ್ಟದ್ದೋ ನಾನು ಹೇಳುತ್ತಿಲ್ಲ. ಆದರೆ, ಈ ಸಂರಕ್ಷಣೆಯ ವ್ಯಾಪ್ತಿಯೊಳಗೆ ಅದು ಬರುವುದೆಂದು ನಾನು ಭಾವಿಸಲಾರೆ.

ಡಾ. ಬಿ. ಆರ್. ಅಂಬೇಡ್ಕರ್: ಪೋಲೀಸ್ ದಳದಲ್ಲಿ ನಿಮ್ನ ವರ್ಗಗಳನ್ನು ನೇಮಕ ಮಾಡಿಕೊಳ್ಳ ಬಾರದೆಂಬುದು ಈ ಕಲಮಿನ ಪ್ರಕಾರ ಗವರ್ನರರ ವಿಶೇಷ ಅಧಿಕಾರಗಳಲ್ಲಿ ಬರುವುದಿಲ್ಲ ಅಲ್ಲವೇ?

ಸರ್ ಸ್ಯಾಮ್ಯುಯೆಲ್ ಹೋರ್: ಇಲ್ಲ.

* * * *

# ವಿಷಯಸೂಚಿ


**ಅ**

ಅಂಜುಮಾನ್ ೫೫೪

ಅಂತ್ಯಜ ೫೮೭, ೫೮೮

ಅಂತ್ರೋಳೀಕರ್ ೩೨೫, ೩೪೨

ಅಂಬಾಲಾಲ್ ೬೩೧

ಅಂಬೆಗಾಂವ್ ೩೭೩

ಅಂಬೇಡ್ಕರ್ ೧, ೪, ೫, ೬, ೭, ೧೧, ೨೦, ೨೩, ೨೬, ೩೦, ೪೩, ೪೫, ೪೬, ೪೯, ೫೬, ೫೭, ೬೧, ೬೨, ೬೩, ೬೫, ೬೭, ೬೮, ೬೯, ೭೦, ೭೩, ೭೪, ೭೬, ೮೦, ೮೧, ೮೨, ೮೩, ೮೪, ೮೫, ೮೬, ೮೭, ೯೧, ೯೬, ೧೧೦, ೧೧೩, ೧೧೬, ೧೨೧, ೧೨೨, ೧೨೩, ೧೩೦, ೧೩೨, ೧೩೩, ೧೩೫, ೧೩೬, ೧೩೯, ೧೪೦, ೧೪೨, ೧೪೪, ೧೪೫, ೧೪೬, ೧೪೭, ೧೪೮, ೧೪೯, ೧೫೦, ೧೫೧, ೧೫೪, ೧೫೫, ೧೫೬, ೧೫೭, ೧೫೮, ೧೬೧, ೧೬೨, ೧೬೩, ೧೬೪, ೧೬೫, ೧೬೯, ೧೭೩, ೧೭೪, ೧೭೫, ೧೭೬, ೧೭೭, ೧೭೮, ೧೮೩, ೧೮೪, ೧೮೫, ೧೮೬, ೧೮೯, ೧೯೦, ೧೯೧, ೧೯೨, ೧೯೩, ೧೯೬, ೧೯೮, ೧೯೯, ೨೦೦, ೨೦೧, ೨೦೨, ೨೦೩, ೨೦೪, ೨೦೬, ೨೧೦, ೨೧೩, ೨೧೫, ೨೨೧, ೨೨೨, ೨೨೩, ೨೨೪, ೨೨೫, ೨೨೬, ೨೨೯, ೨೩೧, ೨೩೨, ೨೩೬, ೨೩೭, ೨೩೮, ೨೩೯, ೨೪೩, ೨೪೪, ೨೪೫, ೨೪೮, ೨೪೯, ೨೫೦, ೨೫೧, ೨೫೨, ೨೬೨, ೨೬೮, ೨೭೨, ೨೭೩, ೨೮೨, ೨೯೭, ೩೦೧, ೩೦೩, ೩೦೫, ೩೦೬, ೩೦೭, ೩೦೮, ೩೦೯, ೩೧೪, ೩೧೬, ೩೧೭, ೩೨೫, ೩೨೬, ೩೩೧, ೩೩೨, ೩೩೩, ೩೩೪, ೩೩೫, ೩೫೭, ೩೫೮, ೩೫೯, ೩೬೦, ೩೬೧, ೩೬೪, ೩೬೫, ೩೬೬, ೩೬೭, ೩೭೧, ೩೭೨, ೩೭೩, ೩೭೪, ೩೭೫, ೩೭೬, ೩೭೭, ೩೭೮, ೩೮೧, ೩೮೭, ೪೮೨, ೫೨೮, ೫೮೯, ೫೯೬, ೫೯೭, ೬೦೨, ೬೦೩, ೬೦೪, ೬೦೫, ೬೦೬, ೬೦೭, ೬೦೮, ೬೦೯, ೬೧೦, ೬೧೧, ೬೧೨, ೬೧೩, ೬೧೪, ೬೧೫, ೬೧೬, ೬೧೭, ೬೧೮, ೬೧೯, ೬೨೦, ೬೨೧, ೬೨೨, ೬೨೩, ೬೨೪, ೬೨೫, ೬೨೬, ೬೨೭, ೬೨೮, ೬೨೯, ೬೩೦, ೬೩೧, ೬೩೨, ೬೩೩, ೬೩೪, ೬೩೫, ೬೩೬, ೬೩೭, ೬೩೮, ೬೩೯, ೬೪೦, ೬೫೩, ೬೬೨, ೬೬೩, ೬೬೪, ೬೬೫, ೬೭೦, ೬೭೧, ೬೭೨, ೬೭೮, ೬೭೯, ೬೮೦, ೬೮೨, ೬೮೩, ೬೮೪, ೬೮೫, ೬೮೬, ೬೮೭, ೬೯೪, ೬೯೫, ೬೯೭, ೬೯೮, ೬೯೯, ೭೦೦, ೭೦೧, ೭೦೨, ೭೦೩, ೭೦೪, ೭೦೫, ೭೦೬, ೭೦೭, ೭೦೮, ೭೦೯, ೭೧೦, ೭೨೨, ೭೨೩, ೭೨೫, ೭೩೩, ೭೩೪, ೭೩೫, ೭೩೬, ೭೩೭, ೭೩೯, ೭೪೧, ೭೪೨, ೭೪೩, ೭೪೪, ೭೪೫, ೭೪೬, ೭೪೭, ೭೪೮, ೭೪೯, ೭೫೦, ೭೫೧, ೭೫೨, ೭೫೩, ೭೫೪, ೭೫೫, ೭೫೬, ೭೫೭, ೭೫೮, ೭೫೯, ೭೬೦, ೭೬೧, ೭೬೩, ೭೬೪, ೭೬೫, ೭೬೬, ೭೬೭, ೭೬೮, ೭೬೯, ೭೭೦, ೭೭೧, ೭೭೨, ೭೭೩, ೭೭೪, ೭೭೫, ೭೭೬, ೭೭೭, ೭೮೨, ೭೮೭, ೭೮೮, ೭೮೯, ೭೯೦, ೭೯೧, ೭೯೨, ೭೯೩, ೭೯೪, ೭೯೬, ೭೯೮, ೭೯೯, ೮೦೦, ೮೦೧, ೮೦೨,

೮೦೩, ೮೦೪, ೮೦೫, ೮೦೬, ೮೦೮, ೮೦೯,
೮೧೦, ೮೧೧, ೮೧೨, ೮೧೫, ೮೧೬, ೮೨೧,
೮೨೨, ೮೩೦, ೮೩೧, ೮೩೪, ೮೩೫, ೮೩೬,
೮೩೭, ೮೩೮, ೮೩೯, ೮೪೦, ೮೪೧, ೮೪೨,
೮೪೩, ೮೪೪, ೮೪೭, ೮೪೮, ೮೪೯, ೮೫೦,
೮೫೧, ೮೫೨, ೮೫೩, ೮೫೪, ೮೫೬, ೮೫೭,
೮೫೮, ೮೫೯, ೮೬೦, ೮೬೩, ೮೬೬, ೮೭೧,
೮೭೫, ೮೭೯, ೮೮೦, ೮೮೧, ೮೮೨, ೮೮೩,
೮೮೪, ೮೮೫, ೮೮೬, ೮೮೭, ೮೮೮, ೮೮೯,
೮೯೦, ೮೯೧, ೮೯೨, ೮೯೩, ೮೯೪, ೮೯೫,
೮೯೬, ೮೯೭, ೮೯೮, ೮೯೯, ೯೦೦, ೯೦೧,
೯೦೨, ೯೦೩, ೯೦೪, ೯೦೫, ೯೦೬, ೯೦೭,
೯೦೮, ೯೦೯, ೯೧೦, ೯೧೧, ೯೧೨, ೯೧೩,
೯೧೪, ೯೧೫, ೯೧೭, ೯೧೮, ೯೧೯, ೯೨೦,
೯೨೧, ೯೨೨, ೯೨೩, ೯೨೪, ೯೨೫, ೯೨೬,
೯೨೭, ೯೨೮, ೯೨೯, ೯೩೦, ೯೩೧, ೯೩೪,
೯೩೬, ೯೩೮, ೯೩೯, ೯೪೦, ೯೪೧, ೯೪೨,
೯೪೩, ೯೪೪, ೯೪೬, ೯೪೭, ೯೪೮, ೯೪೯,
೯೫೦, ೯೫೧, ೯೫೨, ೯೫೩, ೯೫೪, ೯೫೫,
೯೫೬, ೯೫೭, ೯೫೮, ೯೫೯, ೯೬೦, ೯೬೧,
೯೬೨, ೯೬೩, ೯೬೪, ೯೬೫, ೯೬೬, ೯೬೭,
೯೬೮, ೯೬೯, ೯೭೦, ೯೭೧, ೯೭೨, ೯೭೩,
೯೭೪, ೯೭೫, ೯೭೬, ೯೭೭, ೯೭೮, ೯೭೯,
೯೮೦, ೯೮೧, ೯೮೨, ೯೮೩, ೯೮೪, ೯೮೫,
೯೮೬, ೯೮೭, ೯೮೮, ೯೮೯, ೯೯೦, ೯೯೧,
೯೯೩, ೯೯೫, ೯೯೬, ೧೦೦೦, ೧೦೦೧,
೧೦೦೨, ೧೦೦೩, ೧೦೦೪, ೧೦೦೫, ೧೦೦೬,
೧೦೦೭, ೧೦೦೮, ೧೦೦೯, ೧೦೧೦, ೧೦೧೧,
೧೦೧೨, ೧೦೧೩, ೧೦೧೪, ೧೦೧೫, ೧೦೧೬,
೧೦೧೭, ೧೦೧೮, ೧೦೧೯, ೧೦೨೦, ೧೦೨೧,
೧೦೨೨, ೧೦೨೩, ೧೦೨೪, ೧೦೨೫, ೧೦೨೬,
೧೦೨೭, ೧೦೨೮, ೧೦೨೯, ೧೦೩, ೧೦೩೦
ಅಕುಶಿ ೩೨೬
ಅಕೆಡೆಮಿಕ್ ೫೭, ೬೫, ೭೪
ಅಕ್ಬರ್ ೧೦೦೫, ೧೦೦೭, ೧೦೦೮, ೧೦೧೧
ಅಕ್ಬರಿ ೧೦೧೧
ಅಗರವಾಲ ೫೮೭
ಅಗಾಖಾನ್ ೮೫೫
ಅಜಾದ್ ೪೧೮
ಅಜ್ನೋಟಿ ೫೯೫
ಅಟಿನ್ ೮೮೧
ಅಟ್ಲೀ ೯೭೨, ೯೬೬
ಅಡೋಲ್ಫ್ ಹಿಟ್ಲರ್ ೩೪೫
ಅಶ್ಲೀ ೧೦೨೫
ಅಥೆನ್ಸ್ ೪೪೯
ಅಧ್ಯಾರೋಹೀ ೬೬೬, ೬೭೬, ೬೭೭, ೭೦೯, ೭೭೧
ಅನಂತಕೃಷ್ಣ ೫೮೭
ಅನಂತಾಚಾರ್ಯ ೫೮೭
ಅನಿಬೆಸೆಂಟರು ೭೯೮
ಅಫೀಮು ೮೧೮
ಅಬಕಾರೀ ೯೭, ೮೨೭
ಅಬುಲ್ ೪೧೮
ಅಬ್ದುಲ್ ೬೧೫
ಅಮರ್‌ನಾಥ್ ೯೩೨
ಅಮಲ್‌ನೇರ್ ೩೯೫
ಅಮೃತ್ ೯೧೭, ೯೧೮, ೯೧೯, ೯೨೦, ೯೨೧, ೯೨೨, ೯೨೩, ೯೨೪
ಅಮೃತಲಾಲ್ ೫೯೧
ಅಮೇರಿಕಾ ೩೫, ೩೬, ೧೪೦, ೧೬೬, ೨೨೧, ೨೪೭, ೨೬೦, ೨೮೦, ೩೧೨, ೩೧೩, ೩೫೩, ೫೦೭, ೫೦೮, ೬೬೦, ೭೮೫, ೮೧೭, ೮೨೬, ೮೩೧, ೮೩೩, ೮೩೪, ೮೩೫, ೮೩೭, ೮೩೮,

೮೩೯, ೮೪೧, ೮೪೨, ೮೪೩, ೯೪೪, ೧೦೨೦
ಅಯ್ಯಂಗಾರ್ ೨೬೮, ೮೩೯, ೮೪೮
ಅಯ್ಯರ್ ೫೨೨
ಅರಖ್ ೬೪೪
ಅರಬ್ ೬೪೫
ಅರ್ಚ್ ೯೮೮, ೯೮೯
ಅರ್ಜುನ ೩೭೩
ಅಲೆಕ್ಸಾಂಡರ್ ೫೮೩
ಅಲ್‌ಫ್ರೆಡ್ ೯೦೪
ಅಲ್‌ಮೋರಾ ೮೬೪
ಅಸರಾಳೆ ೫೯೮
ಅಸೆಂಬ್ಲಿಯ ೭೯೩
ಅಸ್ಟಿನ್ ೮೮೧, ೧೦೧೫, ೧೦೧೬
ಅಸ್ಸಾಂ ೪೧, ೩೫೧, ೭೨೯, ೭೬೦, ೮೪೫, ೮೭೬, ೧೦೨೫, ೧೦೨೬
ಅಹಮದ್ ೯೮, ೩೭೭, ೩೭೯, ೫೩೬, ೬೭೮, ೬೯೭, ೭೬೭, ೭೯೪, ೮೦೯
ಅಹಮದ್‌ನಗರ ೧೧೧, ೧೪೮
ಅಹಮದಾಬಾದ್ ೨೯, ೩೦, ೨೫೫, ೨೮೧, ೨೮೨, ೨೮೩, ೩೧೭, ೩೧೯, ೩೯೫, ೩೯೬, ೫೯೬, ೬೩೧
ಅಹಮ್ಮದ್ ೧೪೭, ೧೪೯, ೮೦೪
ಅಹರ್‌ವಾರ್ ೬೪೫
ಅಹಲ್ಯೆ ೩೪೦
ಅಹಿರ್ ೫೯೫
ಅಹ್ಮದ್ ೩೩೬, ೯೭೧
ಅಹ್ಮದಾಬಾದ್ ೬೨೨

## ಆ

ಆಂಗ್ಲೋ ೪೫೪, ೪೭೦, ೪೭೧, ೫೨೬, ೫೩೧, ೭೫೪, ೭೭೪, ೮೫೬, ೮೫೭, ೮೫೮, ೮೫೯, ೮೬೭, ೮೭೦, ೮೭೧, ೯೩೩, ೯೫೦, ೯೭೭
ಆಂಡರ್‌ಸನ್ ೧೬೫, ೧೬೭
ಆಕರ್ಲೆಂಡ್ ೫೨೯, ೫೩೭
ಆಗಾಖಾನ್ ೮೫೬, ೮೫೮, ೮೫೯, ೮೭೧
ಆಚಾರ್ಯ ೯೫೮, ೯೫೯, ೯೬೪
ಆಟ್ಲಿ ೬೧೮, ೬೧೯
ಆದಿಶೂದ್ರರು ೩೨೮
ಆಫ್ರಿಕಾ ೧೯, ೨೧೫, ೪೬೪, ೪೭೫, ೪೯೫, ೫೦೦, ೫೦೩, ೬೭೪, ೭೩೧, ೮೦೩, ೮೦೬, ೮೧೦, ೮೩೧, ೯೦೩, ೧೦೦೭, ೧೦೧೧, ೧೦೧೨
ಆಯುರ್ವೇದ ೧೫
ಆರ್ಥರ್ ೮೭೯
ಆರ್ಮ್‌ಸ್ಟ್ರಾಂಗ್ ೩೫೫
ಆರ್ಯ ೬೧೦
ಆರ್ಲ್ ೫೨೯
ಆಲಮ್ನೇರ್ ೩೨೨
ಆಲಿ ೯೧೮
ಆಲ್ಫ್ರೆಡ್ ೭೩
ಆಲ್ಬರ್ಟ್ ೯೫೪
ಆಲ್ಬೇನಿಯ ೪೬೫, ೪೭೫
ಆಸ್ಕಿತ್ತರ ೮೦೬
ಆಸ್ಟಿನ್ ೯೪೯, ೯೫೦, ೯೫೮, ೯೯೦, ೯೯೫, ೧೦೦೫, ೧೦೧೫
ಆಸ್ಟ್ರಿಯಾ ೩೩, ೩೪೪, ೩೪೫, ೪೬೪, ೫೮೨, ೭೮೪, ೭೮೫
ಆಸ್ಟ್ರೇಲಿಯಾ ೧೮, ೧೯, ೨೨೧, ೩೪೪, ೩೫೩, ೩೫೪, ೫೦೦, ೫೦೬, ೫೦೭, ೫೦೮, ೫೧೧, ೬೭೪, ೭೮೫, ೮೦೬, ೮೧೦, ೮೧೧, ೮೧೩, ೮೧೬, ೮೨೫, ೮೩೩, ೮೩೪, ೮೩೭, ೮೩೯, ೮೪೧, ೮೪೩, ೮೪೪, ೧೦೧೨
ಆಸ್ತ್ರೀ ೫೨೨

## ಇ

ಇಂಗ್ಲೀಷ್ ೧೬೩, ೨೨೬, ೨೨೭, ೨೬೨, ೩೧೯, ೩೮೭, ೪೧೮, ೪೫೧, ೫೩೧, ೫೩೫, ೫೩೯, ೫೪೧, ೫೫೬, ೭೨೬, ೭೩೦, ೮೪೨, ೮೪೪

ಇಂಗ್ಲೆಂಡ್ ೭೦, ೧೩೪, ೧೪೬, ೧೬೭, ೧೮೩, ೨೮೩, ೨೮೫, ೨೮೬, ೨೮೯, ೩೦೧, ೩೩೮, ೩೪೩, ೩೪೪, ೩೪೮, ೩೫೩, ೩೮೭, ೪೨೬, ೪೩೬, ೪೪೮, ೪೫೦, ೪೫೧, ೪೫೨, ೪೫೮, ೪೮೫, ೪೯೦, ೪೯೫, ೫೦೨, ೫೧೩, ೫೧೬, ೫೩೦, ೫೩೧, ೫೩೨, ೫೩೮, ೫೪೧, ೫೪೩, ೬೫೩, ೭೨೬, ೭೨೭, ೮೦೯, ೮೧೧, ೮೪೮, ೮೫೧, ೯೩೨, ೯೪೭, ೯೫೪

ಇಂಡಿಯಾ ೧೩, ೩೧, ೮೮, ೯೧, ೨೩೮, ೨೩೯, ೩೧೭, ೪೩೧, ೫೧೧, ೫೮೭, ೫೮೮, ೫೮೯, ೫೯೧, ೫೯೩, ೫೯೯, ೬೦೩, ೬೮೯, ೬೯೦, ೬೯೨, ೭೧೧, ೭೧೩, ೭೨೧, ೭೫೪, ೮೨೭, ೯೩೮, ೯೭೭

ಇಂದೂಲಾಲ್ ೩೧೮

ಇಟಲಿ ೧೬೭, ೧೬೮, ೧೭೧, ೩೪೫, ೩೪೬, ೩೪೭, ೩೪೮, ೩೪೯, ೩೫೨, ೩೫೩, ೩೫೪, ೭೨೯

ಇಟಾಲಿಕ್ಸ್ ೫೩೬, ೬೦೩

ಇನಾಮ್‌ದಾರ ೨, ೩೨೬, ೪೫೭, ೪೫೮, ೪೭೦, ೬೩೦, ೬೩೯

ಇಬ್ರಾಹಿಮ್ ೫೩, ೨೩೫

ಇರ್ವಿನ್ ೯೦೧, ೯೯೦

ಇಲಿಯಾಜಡ್ ೪೩೫

ಇವಾನ್ಸ್ ೨೮೪

ಇಸ್ಥೋನಿಯ ೪೯೫

ಇಸ್ಮಾಯಿಲ್ ೧೬೨, ೮೧೪, ೧೦೦೨, ೧೦೧೧

ಇಸ್ಲಾಂ ೮೬೬

## ಉ

ಉಜ್ವಲ್‌ಸಿಂಗ್ ೭೦೮

ಉಪ್ಪಿನಕರ ೪೬

ಉಪ್ಪೆ ೩೭೩

ಉಮೇದುವಾರ ೬೪, ೪೨೬, ೭೩೨, ೭೩೯, ೭೫೭, ೭೯೩

ಉಲ್ ೩೨೯

ಉಲ್‌ಸ್ಟರ್ ೩೨೮, ೩೨೯, ೩೩೪

ಉಲ್ಲಾಸ್ ೩೬೪, ೩೬೬

## ಎ

ಎಡಬ್ಲ್ಯೂಎಚ್ ೯೬೬

ಎಡ್ಮಂಡ ೬೫೯

ಎಡ್ವರ್ಡ್ ೩೦೦, ೩೦೧, ೩೨೯, ೮೯೧, ೯೦೪, ೯೦೮, ೯೦೯, ೯೧೦, ೯೧೧, ೯೧೨

ಎಲೆನ್‌ಬರೋ ೫೪೭

ಎಲ್ಫಿನ್ಸೋನ್ ೨೯೭

ಎಲ್ಫಿನ್‌ಸ್ಟನ್ ೩೯೩, ೫೩೪, ೫೩೫, ೫೪೪, ೫೫೧

ಎಲ್ವಿನ್‌ಸ್ಟೆನ್ ೬೦

## ಏ

ಏಷಿಯಾ ೭೬೩

## ಐ

ಐಎಂಎಸ್ ೯೭೭

ಐಚಿಸನ್ ೫೧೩

ಐರಿಯಾನ್ ೮೦೭

ಐರಿಶ್ ೧೯, ೩೩

ಐರಿಷ್ ೩೦೧, ೩೨೯, ೪೯೦

ಐರೋಪ್ಯ ೨೯೩, ೩೩೦, ೩೯೮, ೪೩೧, ೪೫೮, ೫೧೮, ೫೧೯, ೫೨೪, ೫೨೬, ೫೩೦, ೫೩೧,

೫೩೩, ೮೭೦, ೮೭೧, ೧೦೧೨
ಐರ್ಲೆಂಡ್ ೨೧೫, ೩೦೧, ೩೨೮, ೩೨೯, ೪೪೯, ೪೯೦, ೬೭೪, ೮೦೬, ೮೦೭, ೮೦೯
ಐಲಿಂಗಟನ್ ೫೧೮
ಐಲೆಂಡ್ ೮೯೧

## ಒ

ಒಹಾಯೋ ೮೩೮

## ಓ

ಓಕ್ ೫೬೫
ಓರಿಸ್ಸಾ ೪೦, ೪೧, ೨೩೯, ೨೪೪, ೪೮೬, ೬೪೨, ೮೭೬, ೯೩೭
ಓಹಿಯೋ ೮೩೮

## ಕ

ಕಂಬೈ ೩೬೧
ಕಡೋಗನ್ ೬೨೦
ಕನ್ನಡ ೨೪೪
ಕಮ್ಯೂನಿಸ್ಟರು ೨೯೧
ಕರಂದೀಕರ ೧೩೧, ೧೩೨
ಕರಣಿಕ ೨೯೪, ೩೧೯, ೩೨೦, ೩೨೩, ೩೫೯
ಕರ್ಕರ್ ೯೦೧
ಕರ್ನಲ ೭೯೧
ಕರ್ನಾಟಕ ೯೬, ೨೩೮, ೨೪೦, ೨೪೩, ೨೪೫, ೪೧೪, ೪೧೫, ೪೮೨, ೪೮೩, ೫೨೬
ಕಲಾಲ್ ೬೫೦
ಕಲೂಪುರ ೫೯೬
ಕಲೋಟರು ೫೯೩
ಕಲೋನ್ ೩೪೫
ಕಲ್ಕತ್ತಾ ೬೧, ೧೯೧, ೧೯೨, ೨೯೧, ೨೯೨, ೩೮೨, ೪೦೭, ೪೧೮, ೫೫೭, ೫೮೭, ೬೬೫, ೭೨೫, ೮೪೪, ೮೪೬, ೯೩೧, ೯೩೨, ೯೩೪, ೯೪೮, ೯೪೯, ೯೫೦, ೯೫೪
ಕಲ್ಲಿಕೋಟೆ ೫೬೦
ಕವಿತಾ ೩೧೭, ೩೧೮
ಕಾಂಗ್ರೆಸ್ ೧೨, ೧೩, ೧೭, ೨೭, ೧೩೪, ೨೧೮, ೨೩೫, ೨೬೬, ೨೬೭, ೨೬೯, ೨೭೦, ೨೮೦, ೨೮೧, ೨೮೬, ೨೮೮, ೩೧೬, ೩೧೭, ೩೧೮, ೩೨೮, ೩೩೧, ೩೩೬, ೩೫೫, ೪೨೪, ೪೮೮, ೪೯೧, ೫೭೯, ೫೯೯, ೭೯೮, ೮೦೦, ೮೦೧, ೮೧೮, ೮೨೬, ೮೫೩, ೮೫೪, ೮೫೬, ೮೫೭, ೮೬೦, ೮೬೩, ೮೬೪, ೮೬೫, ೯೭೯, ೯೯೯
ಕಾಜೀ ೫೫೪
ಕಾಟಕೋನ ೭೩೧
ಕಾಥೇವಾಡ ೫೫೪, ೫೫೫, ೫೯೧, ೫೯೨, ೬೩೧
ಕಾನ್ಪುರ್ ೩೨೦, ೬೪೫, ೯೦೦
ಕಾಮತ್ ೧೪೧, ೧೪೮, ೧೪೯, ೧೫೧, ೧೫೨
ಕಾಮನ್‌ವೆಲ್ತ್ ೫೦೭, ೮೦೪, ೮೨೫, ೮೩೭
ಕಾಮನ್ಸ್ ೨೧೯, ೭೦೪
ಕಾಮಿಕ ೨೦೫
ಕಾಮಿನಿಕುಮಾರ್ ೯೩೧
ಕಾರ್ಡ್ಯೂ ೫೮೩
ಕಾರ್ಸೋನೈಟ್ ೩೨೯
ಕಾಶೀನಾಥ ೫೩೫
ಕಾಶ್ಮೀರ ೨೪೬
ಕಾಸಾಜಿ ೬೭೮
ಕಾಸ್‌ಗ್ರೇವ್ ೩೦೧
ಕಾಳೆ ೬೨, ೧೩೯, ೧೪೭
ಕಿಕಾಭಾಯಿ ೬೨೫
ಕಿಮಗ್ ೮೭೯
ಕೀಬಲ್ ೩೫೫

ಕುಂಜ್ರು ೨೬೯, ೨೭೦
ಕುಮಾರ್ ೯೩೧, ೯೩೪
ಕುಮಾರಸ್ವಾಮಿ ೧೯೪
ಕುಮಾವ್ ೮೬೪
ಕುಲಕರ್ಣಿ ೯೬, ೯೯, ೧೦೦, ೧೫೬
ಕೂಪರ್ ೩೦೪
ಕೃಷ್ಣಮಾಚಾರಿ ೧೦೧೦
ಕೆಂಟಕಿ ೮೩೮
ಕೆನಡಾ ೧೮, ೨೧೫, ೨೨೧, ೩೪೯, ೩೫೨, ೪೬೪, ೪೭೫, ೪೯೪, ೪೯೫, ೫೦೦, ೫೦೩, ೫೦೬, ೫೦೭, ೫೦೮, ೬೬೩, ೬೬೬, ೬೭೪, ೭೮೫, ೮೦೪, ೮೦೫, ೮೦೬, ೮೧೦, ೮೧೧, ೮೧೩, ೮೧೬, ೮೨೫, ೮೯೧, ೯೦೨, ೯೦೩
ಕೆಸಿಎಸ್ಐ ೯೬೫
ಕೇಂಬ್ರಿಜ್ ೩೯೨, ೩೯೫, ೮೫೧
ಕೇಕತ್ನೀಮ್‌ಭೋರ್ ೩೨೨
ಕೇಶಬ್‌ಚಂದ್ರ ೯೩೧
ಕೇಶವ್‌ಜಿ ೫೯೬
ಕೈರಾ ೩೧೯
ಕೈಸರ್ ೩೪೫, ೮೬೫
ಕೊಚ್ಚಿ ೧೦೦೮
ಕೊಡಗು ೨೩೮, ೨೩೯
ಕೊಲಾಬಾ ೧೨೮, ೧೩೦, ೧೩೨, ೪೭೩, ೫೮೯, ೫೯೧, ೬೩೩
ಕೊಲ್ಲಾಪುರ ೫೫೪
ಕೋವಾಸ್ ೩೬೪
ಕೌರ್ ೯೧೭, ೯೧೮, ೯೧೯, ೯೨೦, ೯೨೧, ೯೨೨, ೯೨೩, ೯೨೪
ಕೌರಾವ್ ೫೯೬
ಕೌಲ್ ೯೨೧
ಕೌಲತ್ ೧೯೪
ಕೌಸಾಜಿ ೭೩೩, ೭೩೪, ೭೪೨, ೭೪೬, ೭೪೯, ೭೫೦, ೭೭೦, ೭೭೩
ಕ್ಯಾಂಟರ್‌ಬರಿ ೯೮೮, ೯೮೯
ಕ್ಯಾಂಡಿ ೫೨೯, ೫೩೭
ಕ್ಯಾಟ್ಬೋ ೯೦೮
ಕ್ಯಾಥೊಲಿಕ್ ೩೪೪, ೩೪೫
ಕ್ಯುರೇಟರ್ ೫೪
ಕ್ರ್ಯಾಡಕ್ ೮೭೯, ೯೬೮
ಕ್ರಾನಿಕಲ್ ೫೮೯, ೫೯೬, ೬೦೧
ಕ್ರಿಶ್ಚಿಯನ್ ೩೨೩, ೩೨೪, ೭೯೩, ೮೫೬, ೮೫೭, ೮೫೯, ೮೬೬, ೮೬೭, ೮೭೧
ಕ್ರೂಕ್ಸ್ ೩೫೫
ಕ್ರೈಸ್ತ ೪೫೪, ೪೭೦, ೪೭೧
ಕ್ರೈಸ್ತವಾದಿ ೪೭೩
ಕ್ರೋಷಿ ೪೬೪
ಕ್ಲೇಮು ೧೨೪, ೧೨೫, ೧೨೬, ೭೧೦, ೭೫೩
ಕ್ವಾಲ್ಚೀಸ್ ೫೯೩
ಕ್ವಿನಾಯಿನ್ ೧೫
ಕ್ಸೇವಿಯರ್ ೩೯೩

## ಖ

ಖನ್ನಾ ೯೪೦
ಖಾನ್ ೧೮೩, ೧೮೪, ೧೯೧, ೨೪೫, ೨೫೧, ೩೭೪, ೫೫೪, ೫೬೧, ೬೦೨, ೬೧೫, ೬೭೮, ೬೮೫, ೬೯೭, ೭೬೬, ೭೬೭, ೭೬೮, ೭೯೪, ೮೦೪, ೮೧೦, ೮೪೮, ೮೫೦, ೯೨೯, ೯೪೨, ೯೪೪, ೯೫೦, ೯೭೧, ೯೭೮, ೯೮೩, ೯೮೭, ೯೯೫, ೯೯೬, ೧೦೦೨, ೧೦೧೦, ೧೦೨೯
ಖಾರಿಪುರ ೫೫೪
ಖುಲ್ಲಾ ೧೫

ಖರಲ್ ೫೯೫
ಖೇಡಗೀಕರ ೨೦೨
ಖೇರ್ ೮೧, ೮೫, ೮೬, ೧೬೧, ೧೬೩, ೨೦೦, ೨೨೧, ೨೨೩, ೨೨೪, ೨೫೧, ೩೦೪, ೩೧೪, ೩೧೭, ೩೩೧, ೩೩೨, ೩೩೪, ೩೩೫
ಖೇರ ೨೦೨, ೨೦೩
ಖೋತ ೧೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೦, ೧೩೧, ೧೩೨

ಗ

ಗಣಪತಿ ೪೧
ಗಣಿತಶಾಸ್ತ್ರಜ್ಞ ೨೮೨
ಗನೋರಿಯಾ ೧೫
ಗಾಂಧಿ ೨೮೨, ೩೩೭, ೪೩೦, ೫೯೧, ೭೯೫, ೭೯೮, ೮೦೧, ೮೦೫, ೮೫೬, ೮೫೭, ೮೫೮, ೮೬೪, ೯೦೦, ೯೪೩, ೯೪೪, ೯೫೫, ೯೯೩, ೯೯೭, ೯೯೯
ಗಾಡ್‌ಫ್ರೆ ೯೯೦
ಗಾಯಕ್‌ವಾಡ್ ೩೪೬, ೩೪೭
ಗಾರ್ಸಿಯ ೫೯೨
ಗಾವಿನ್ ೯೦೧
ಗಿಡ್ನಿ ೬೬೩, ೬೬೪, ೯೫೨
ಗಿಡ್ವೆ ೬೯೫, ೭೦೩, ೭೦೭, ೭೦೮, ೭೩೪, ೭೫೦, ೭೬೭, ೭೭೫, ೮೫೩, ೮೫೭, ೮೫೮, ೮೬೦, ೮೭೧, ೮೮೭, ೯೭೭, ೯೭೮
ಗುಂಡಪ್ಪ ೭೮೬
ಗುಂಡಾ ೧೯೧
ಗುಜರಾತ್ ೬೨, ೨೪೦, ೩೧೯, ೩೨೦, ೪೧೪, ೪೮೨
ಗುಜರಾತಿ ೬೨, ೯೬, ೨೨೧, ೨೪೦, ೨೪೨, ೨೪೩, ೨೪೬, ೨೯೩, ೨೯೪, ೩೧೭, ೩೧೯, ೫೮೮, ೬೩೪
ಗುತ್ತಿದೆ ೨೦೭
ಗುನ್ಹೇದಾರ ೧೪೦
ಗುಪ್ತಾ ೯೪೭
ಗುಪ್ತೆ ೨೪೮
ಗುಸುರ್ ೬೫೦
ಗೂರಿಂಗ್ ೩೪೫
ಗೆಜೆಟ್ ೯೩೨
ಗೇವಿಸ್ ೯೦೩
ಗೋಕುಲಚಂದ್ ೯೪೪
ಗೋಖಲೆ ೧೪೮, ೫೨೩
ಗೋರಖಪುರ ೬೪೪
ಗೋಳೆ ೩೪೭
ಗೌರ್ ೬೦೭, ೬೦೮, ೬೨೨, ೬೨೪, ೬೨೭, ೬೨೮, ೬೩೧, ೮೯೧, ೯೧೭, ೯೨೩, ೯೫೨, ೯೬೫, ೯೭೮, ೯೯೯, ೧೦೦೩, ೧೦೧೫, ೧೦೧೬, ೧೦೨೯
ಗ್ಯವಿನ್ ೮೧೦, ೮೧೧
ಗ್ರಿಫಿತ್ ೬೩೫
ಗ್ರೀಸ್ ೪೪೯, ೪೬೫, ೪೭೫
ಗ್ರೋಸ್ ೨೬೩
ಗ್ಲ್ಯಾಡಸ್ಟನ್ ೫೨೩
ಗ್ವಾಲಿಯರ್ ೫೯೪

ಚ

ಚಂದ್ ೯೪೦, ೯೪೬
ಚಂದರ್ ೮೦೯
ಚಟರ್ಜಿ ೯೩೨
ಚಟವಾಡ ೫೯೫
ಚಮರ್ ೬೫೦
ಚಮಾರ್ ೩೧೭

ಚಮಾರ್‌ದಾಸ್ ೫೪೯
ಚಿಕ್ಕೋಡಿ ೧೩೭
ಚಿಖರ್ದಿಗ್ರಾಮ ೩೭೩
ಚಿತಳೆ ೧೪೫, ೧೪೮, ೧೫೧, ೧೫೩, ೧೮೩
ಚಿಮಣ್ ೩೮೧
ಚಿಮನ್ ೭೬೬
ಚಿಮನ್‌ಲಾಲ್ ೭೫೭, ೭೫೮, ೭೫೯, ೭೬೫, ೭೬೬, ೭೭೦
ಚೀನಾ ೩೪೨, ೩೫೨, ೬೫೫
ಚುಂದ್ರಿಗಾರ ೧೬೧, ೧೬೧, ೧೬೨, ೧೯೦, ೧೯೩
ಚುನಿಲಾಲ ೩೫೭
ಚೆಂಬರ್‌ಲೇನ್ ೯೪೯
ಚೆಗ್‌ವಿಡ್ಡನ್ ೨೮೪
ಚೆಲಮ್ಸ್ ೮೮, ೪೫೬
ಚೆಲಮ್ಸ್‌ಫರ್ಡ್ ೪೨೯, ೪೯೭, ೫೬೬, ೭೯೫
ಚೆಲ್ಮಸ್‌ಫೋರ್ಡ್ ೭, ೮೦೦
ಚೇಂಬರ್‌ಲೇನ್ ೯೪೯, ೯೫೦, ೯೫೮, ೯೯೦, ೧೦೦೫, ೧೦೧೫, ೧೦೧೬
ಚೌದರ್ ೫೮೯
ಚೌಧರಿ ೯೨೯, ೯೩೧

## ಛ

ಛಾನ್ಸಲರ್ ೬೬೨, ೭೭೭, ೭೭೮, ೭೮೨, ೭೮೬, ೭೮೮, ೭೮೯, ೭೯೧, ೭೯೩, ೭೯೬, ೭೯೮, ೭೯೯, ೮೦೬, ೮೧೬, ೮೨೦, ೮೨೨, ೮೨೮, ೮೨೯, ೮೩೦, ೮೩೨, ೮೩೪, ೮೩೫, ೮೪೦, ೮೪೯
ಛಾರ್ಲ್ಸ್ ೯೦೫, ೯೦೬, ೯೦೭
ಛಿಶಾಂ ೮೩೫
ಛೇಂಬರ್ಲಿನ್ ೮೮೧

## ಜ

ಜಂಬೂಸಾರ್ ೫೮೮
ಜಗನ್ನಾಥ ೬೫೦
ಜಟ್‌ಲ್ಯಾಂಡ್ ೭೫೯
ಜನೇಶ್ವರ ೯೪೯
ಜಪಾನ್ ೩೪೯, ೩೫೨, ೩೫೩
ಜಫ್ರುಲ್ಲಾಖಾನ್ ೭೧೦, ೭೩೬, ೭೬೬, ೭೬೮, ೭೭೦, ೭೭೧, ೭೭೨, ೮೦೪, ೮೧೦, ೯೭೮, ೯೮೩, ೯೯೫, ೯೯೬, ೧೦೦೨, ೧೦೧೦, ೧೦೨೯
ಜಮ್ನಾದಾಸ್ ೨೯, ೪೫, ೮೨, ೮೪, ೮೭, ೧೮೩, ೧೮೪, ೧೮೫, ೨೦೦, ೨೦೧, ೨೦೩, ೨೨೯, ೨೫೨, ೨೬೮, ೨೯೭
ಜಮ್ಷೆಡ್‌ಪುರ ೬೪೨
ಜಯಕರ್ ೭೭೮, ೭೯೪, ೮೩೯, ೮೪೦, ೮೪೧, ೮೪೨, ೮೪೩, ೮೫೦, ೮೯೨, ೮೯೩, ೮೯೬, ೯೨೨, ೯೩೫, ೯೪೦, ೯೪೨, ೯೪೩, ೯೪೪, ೯೪೭, ೯೪೮, ೯೫೧, ೯೫೨, ೯೯೮, ೯೯೯, ೧೦೦೨, ೧೦೦೬, ೧೦೧೫, ೧೦೨೧, ೧೦೨೪, ೧೦೨೯
ಜರ್ಮನ್ ೨೪೭, ೩೪೫, ೩೪೬, ೪೬೪, ೫೮೨, ೭೮೫, ೭೮೯, ೭೯೨
ಜರ್ಮನಿ ೨೪೭, ೩೦೬, ೩೧೧, ೩೩೮, ೩೪೪, ೩೪೫, ೩೪೬, ೩೪೭, ೩೪೮, ೩೪೯, ೩೫೨
ಜರ್ವಿಸ್ ೫೩೫
ಜಲಗಾಂವ ೧೧೧
ಜವಾಹರಲಾಲ್ ೩೩೧, ೩೩೬
ಜಹಾಂಗೀರ್ ೩೬೪, ೬೭೮, ೭೩೩, ೭೩೪, ೭೩೮, ೭೪೨, ೭೪೬, ೭೪೯, ೭೫೦, ೭೭೦, ೭೭೩
ಜಾಧವ್ ೬೧, ೭೩, ೭೪, ೩೫೯, ೭೪೨, ೭೪೯, ೭೫೦, ೭೫೧, ೭೫೨, ೯೬೧

ಜಾನಾ ೩೧೭
ಜಾನ್ಸನ್ ೨೨೪, ೬೬೦
ಜಾಮ್ನೇರ್ ೩೨೨
ಜಾಯೇಗಾ ೩೧೭
ಜಾರ್ಜ್ ೫೩೫, ೫೩೭, ೯೬೫
ಜಾರ್ಜಿಯ ೮೩೫, ೮೩೬
ಜಾವಳಕರ್ ೩೬೧
ಜಿನೀವಾ ೩೪೫
ಜಿನ್ನಾ ೮೩೬, ೮೩೯, ೮೪೦, ೮೪೨, ೮೪೪
ಜುಗ್ಲಿಯಾಸ್ ೯೬
ಜುನಾಘಡ ೫೫೪
ಜೆಂತ್ರಾಲ್ ೩೨೦
ಜೆಕೋಸ್ಲೋವೇಕಿಯ ೪೬೪
ಜೆಕ್ ೪೬೪
ಜೆಟ್ಟಾಂಡ್ ೯೪೭
ಜೆಟ್‌ಲ್ಯಾಂಡ್ ೭೩೩, ೭೩೪, ೭೩೫, ೭೩೯, ೭೬೧, ೭೬೯, ೭೭೦, ೯೪೨, ೯೯೫
ಜೆರೆಮಿ ೩೧೨, ೩೧೩
ಜೇಮ್ಸ್ ೮೭೯, ೯೦೧, ೯೦೨, ೯೦೩, ೯೩೦, ೯೬೬
ಜೈಸ್ವಾರ್ ೬೪೫
ಜೋಗ್ ೨೩೭, ೨೩೯, ೨೪೩, ೨೪೪
ಜೋಗಯ್ಯ ೨೬೮
ಜೋನ್ಸ್ ೮೧೦, ೮೧೧, ೯೦೧, ೯೦೩, ೯೮೬
ಜೋಶಿ ೫೯೦, ೬೬೨, ೭೦೬, ೭೦೭, ೭೦೯, ೭೩೭, ೭೪೨, ೭೪೫, ೭೪೬, ೭೪೭, ೭೪೮, ೭೪೯, ೭೫೧, ೭೫೨, ೭೫೩, ೭೯೫, ೮೧೨, ೮೪೯, ೧೦೧೯, ೧೦೨, ೧೦೨, ೧೦೨೦, ೧೦೨೫
ಜ್ಯೂರಿ ೨೯೮, ೩೦೦

### ಝ

ಝಫರುಲ್ಲಾ ೮೪೮, ೮೫೦, ೯೨೯, ೯೪೨, ೯೪೪, ೯೪೫, ೯೫೦
ಝಬ್‌ವಾಲಾ ೧೯೦
ಝರೋಸ್ಟ್ರಿಯನ್ ೩೬
ಝೇವಿಯರ್ ೬೦

### ಟ

ಟರ್ಮಿನಲ್ ೯೦೯
ಟಾಗೋರ್ ೯೩೫, ೯೪೨, ೯೯೮, ೯೯೯
ಟಾಯಮ್ಸ್ ೩೪೬
ಟಾರ್ಟನ್ ೪೬೪
ಟೀಟೋಟಲ ೩೮
ಟೂಲೇ ೩೦೦
ಟೆಕ್ಸಾಸ್ ೮೩೧
ಟ್ಯಾಗೋರ್ ೯೩೦
ಟ್ರಾನ್ಸ್‌ವಾಲ್ ೮೩೧
ಟ್ರಿಬ್ಯೂನ್ ೩೪೨

### ಠ

ಠಕ್ಕರ್ ೫೯೧, ೯೩೧, ೯೩೨, ೯೩೪, ೯೩೬, ೯೩೯
ಠಾಕೂರ್ ೩೩೬
ಠಾಣಾ ೧೨೯, ೫೩೫

### ಡ

ಡಿಯೋ ೬೩೫
ಡೆಕ್ಕನ್ ೩೯೮, ೯೬೮
ಡೆನ್ಮಾರ್ಕ್ ೩೩
ಡೆಮ್ಲೋಕ್ಲೆಸ್ ೨೭೨
ಡೇನಿಯಲ್ ೩೫೪
ಡೈಸಿ ೨೯೯, ೪೬೦

ಡೊಮಿಸೈಲ್ಡ್ ೯೭೭
ಡೋಮಿ ೧೦೧೧, ೭೨೫
ಡೋಮಿನಿಯನ್ ೪೩೫, ೫೦೦, ೫೧೧, ೫೧೨, ೬೫೬, ೬೬೦, ೬೭೪, ೬೯೪, ೭೧೬, ೭೨೫, ೭೨೬, ೭೨೭, ೭೩೦, ೯೦೫
ಡ್ಯೂಕ್ ೮೫೧
ಡ್ವೈಯರ್ ೮೯೭, ೮೯೮, ೮೯೯, ೯೦೦
ಡ್ವೈರ್ ೮೯೯, ೯೦೦
ಥೋಲ್ಕಾ ೩೧೭

## ತ

ತಿಲಕರು ೮೯೮
ತೇಜ್ ೮೦೧, ೮೦೩, ೮೦೪, ೮೦೬, ೮೦೯, ೮೪೪, ೮೫೧, ೯೦೪, ೯೪೦, ೯೪೭, ೯೮೦, ೯೮೧, ೯೮೨, ೯೮೩, ೯೮೮, ೯೯೮, ೯೯೯, ೧೦೦೩
ತೇಜಬಹಾದ್ದೂರ್ ೭೯೬, ೮೪೪
ತೇಪೆಗಳು ೬೫೫
ತೈರ ೫೬೦
ತೊಂಡ್ಲೆರ್ ೩೩೮
ತ್ಯೂರಿನ್ ೩೪೫

## ಥ

ಥಕ್ಕರ್ ೫೯೩
ಥಟ್‌ವಾಡಿ ೩೨೬
ಥಾಂಪ್ಸನ್ ೯೦೪
ಥಾಂಸನ್ ೩೦೦, ೩೦೧
ಥಾಣಾ ೯೮, ೩೬೬, ೩೭೩
ಥಾಮಸ್ ೪೮೯, ೭೫೬, ೯೦೮
ಥೇಡ್ ೩೧೭
ಥೋರಾತ ೧೧೧
ಥ್ಯಾಂಪ್ಸನ್ ೯೦೪

## ದ

ದಖ್ಖನ್ ೧೬೮, ೫೯೬, ೮೯೮
ದಲ್ವಿ ೬೦೧
ದಾದಾಭಾಯಿ ೭೮೮, ೭೯೧, ೭೯೩, ೮೧೦, ೮೩೮
ದಾದೂಭಾಯಿ ೫
ದಾಮು ೫೯೬, ೫೯೭
ದಾರ್ಜಿಲಿಂಗ್ ೯೫೪
ದಾಸ್ ೧೦೦೭, ೫೯೯, ೯೩೧, ೯೪೭
ದಿನಾಜ್‌ಪುರ್ ೯೩೧
ದಿವಾಣೆ ೧೩೮, ೧೪೧, ೧೪೨
ದೀಕ್ಷಿತ್ ೧೪೬
ದುಮಾಳ ೩೭೩
ದುಲಿಯ ೬೫೦
ದೆಹಲವಿ ೧೮೩, ೧೮೪, ೧೯೧, ೨೦೨, ೨೩೭, ೨೪೫
ದೆಹಲಿ ೪೧೭, ೪೧೮, ೪೬೬, ೫೫೭, ೮೫೦, ೯೩೮, ೯೪೧, ೯೪೨, ೯೪೩, ೯೪೪, ೯೯೭
ದೇಗಾವ್ ೬೦೦
ದೇತಾಸ್ ೫೯೪
ದೇಬ್ರಾಯ್ ೯೩೧
ದೇವಯಾನಿ ೩೦೯
ದೇವಾಲಪುರ ೫೯೫
ದೇಶಪಾಂಡೆ ೯೫೮, ೯೫೯, ೯೬೦, ೯೬೧, ೯೬೨
ದೇಶಮುಖ್ ೯೪೦
ದೇಶೀರ ೧೯೧
ದೇಶೀಸೆರೆಯ ೨೦೭
ದೇಸಾಯಿ ೫
ದೈವದತ್ತವಾದ ೨೬೧
ದೋಮ್ ೬೫೦
ಧನ್‌ಜೀಷಾ ೩೦೪
ಧಮ್ ೫೮೮

ಧರಾವಿ ೧೨
ಧರ್ಮ್ ೬೪೯
ಧಾರವಾಡ ೩೯೫, ೪೪೬, ೫೪೯, ೫೫೦
ಧೇಡ್ ೩೧೭, ೫೯೨

## ನ

ನಂದಾ ೫೯೫
ನರೇಂದ್ರನಾಥ ೬೮೪, ೬೮೫, ೬೯೭, ೬೯೮, ೭೬೫, ೭೬೭, ೭೭೩, ೭೭೪, ೭೭೫, ೯೪೨, ೯೪೪
ನವಸಾರಿ ೫೮೮
ನವಾಬ್ ೬೦೨, ೯೮೭
ನಸಬಂದಿ ೩೪೭
ನಾಗಪುರ ೬೨೮
ನಾಥ್ ೯೩೨
ನಾನಕ್ ೯೪೦, ೯೪೬
ನಾಬಾಕುಮಾರ್ ೯೩೨
ನಾಮಶೂದ್ರ ೬೫೦, ೯೩೧, ೯೩೨, ೯೩೯, ೯೫೩, ೯೭೯
ನಾಮಶೂದ್ರೇತರರು ೯೩೨
ನಾಯ್ಡು ೩೩೬, ೮೫೮
ನಾರಾಯಣ ೩೭೧, ೫೯೦
ನಾರಿಮನ್ ೬೩
ನಾರ್ಮಲ್ ೫೫೬
ನಾರ್ವೆ ೩೪, ೩೪೪, ೭೯೩
ನಾಶೀಕ ೯೮
ನಾಸಿಕ್ ೩೭೨, ೩೯೫, ೮೩೯
ನಿಜಾಮರು ೨೦೬
ನಿಮ್ನವರ್ಗ ೫೮೯, ೫೮೯, ೬೦೯, ೬೧೦, ೬೧೧, ೬೧೩, ೬೧೬, ೬೨೩, ೬೨೫, ೬೩೨, ೬೩೩, ೬೩೫, ೬೩೬, ೬೩೭, ೬೫೭, ೬೫೮, ೬೯೧, ೬೯೨, ೭೦೨, ೭೦೫, ೭೦೬, ೭೧೦, ೭೧೧, ೭೧೨, ೭೧೩, ೭೧೬, ೭೧೭, ೭೨೧, ೭೨೨, ೭೨೮, ೭೩೨, ೭೩೯, ೭೫೦, ೭೭೯, ೭೮೧, ೭೯೩, ೮೦೧, ೮೫೯, ೮೬೫, ೮೭೦, ೮೭೪, ೮೭೫, ೮೭೬, ೮೭೭, ೮೭೮
ನಿಮ್ನವರ್ಗೇತರರು ೯೩೪, ೯೩೬
ನಿಯನ್ ೭೨೫
ನುರ್ ೬೫೦
ನೃಪೇಂದ್ರ ೯೨೯, ೯೩೦, ೯೪೦, ೯೫೪, ೯೯೯, ೧೦೦೦, ೧೦೦೧
ನೆಲ್ಸನ್ ೫೨೩
ನೆವ್ರಿಪಾನ್ ೫೯೫
ನೆಹರೂ ೩೩೧, ೩೩೬, ೪೧೮, ೪೧೯, ೪೪೫, ೭೩೩, ೭೭೮, ೮೦೧
ನೋಬಲ್ ೬೭೨
ನೋವಾಸ್ಕೋಷಿಯ ೮೯೧
ನ್ಯುಮೋನಿಯಾ ೫೯೩, ೬೩೪
ನ್ಯೂಜಿಲೆಂಡ್ ೧೮, ೨೧೬, ೩೪೪
ನ್ಯೂಬ್ರನ್ ೮೯೧
ನ್ಯೂಮನ್ ೮೭೯
ನ್ಯೂಯಾರ್ಕ್ ೩೫೨

## ಪ

ಪಂಗ್ರಿ ೩೭೩
ಪಂಜಾಬ್ ೩, ೧೯, ೪೦, ೪೧, ೧೬೬, ೨೪೬, ೩೦೦, ೪೧೬, ೪೧೭, ೪೧೮, ೪೬೬, ೪೮೬, ೪೮೯, ೬೪೯, ೬೯೫, ೭೨೯, ೭೩೧, ೭೩೩, ೭೬೦, ೮೫೮, ೮೫೯, ೮೬೮, ೮೭೦, ೮೭೪, ೮೭೬, ೮೯೭, ೯೩೭, ೯೪೩, ೯೪೪, ೯೪೫, ೯೪೬, ೯೫೭, ೯೬೮
ಪಗ್ರಿ ೫೯೪
ಪಟವಾರಿ ೫೯೩

ಪಟೇಲ ೯೬, ೩೨೬, ೫೯೩, ೬೦೦
ಪಟ್ವಾನಿ ೮೯೨
ಪಣಿಕ್ಕರ್ ೮೮೯, ೮೯೬
ಪಣ್‌ಗಾಂವ್ ೩೭೩
ಪನ್ನೀರ ೭೦೭, ೮೭೧
ಪನ್ನೀರಸೆಲ್ವಂ ೮೫೭
ಪಮಲಪುರ್ ೫೯೫
ಪರಮಾನಂದ್ ೯೪೦, ೯೪೪, ೯೪೫, ೯೪೬, ೯೫೨
ಪರೂಳೇಕರ್ ೧೭೪, ೧೭೫, ೨೦೧, ೨೦೨
ಪರೇಳ ೧೩೦, ೨೧೫, ೨೩೭
ಪರ್ಯೆಯಾ ೭೨೦
ಪರ್ದಾ ೪೭
ಪರ್ಮಾರ್ ೩೧೮, ೩೨೧
ಪಾಟಸ್ಕರ್ ೧೮೮, ೧೯೫, ೧೯೬, ೧೯೭
ಪಾಟೀಲ್ ೧೦೦, ೩೭೩, ೬೩೦
ಪಾಟ್ನಾ ೯೨೩
ಪಾತ್ರೋ ೧೦೦೫, ೬೮೪, ೭೭೮, ೯೨೯, ೯೮೭, ೯೯೬
ಪಾದ್ರಿ ೪೮೯, ೪೭೫
ಪಾಪಮ್ ೩೩೮
ಪಾರುಳೇಕರ್ ೨೮೦
ಪಾರ್ಸಿ ೧೭೭, ೨೯೩, ೨೯೪, ೩೪೪, ೬೭೮
ಪಿಂಟ್ ೩೫೪
ಪಿಂಡ್ಲೇಟರ್ ೯೯೬
ಪಿಂಪ್ಲಾದ್ ೩೭೨
ಪಿಕೆಟಿಂಗ್ ೨೭೩, ೨೭೪
ಪಿಕ್‌ಫೋರ್ಡ್ ೯೧೯
ಪಿಪ್ಲೋದ ೫೯೫
ಪಿರಮಿಡ್ ೫೮೩
ಪಿರಾಲಿ ೬೫೦
ಪೀನಲ್ ೧೮೬, ೧೯೨, ೨೧೩, ೨೧೪, ೪೭೬
ಪೀರ್‌ನ ೬೩೮
ಪೀಲ್ ೮೦೧, ೮೦೮, ೮೩೦, ೮೪೯
ಪುಣೆ ೧೩೭, ೧೪೮, ೧೫೮, ೧೫೯, ೧೬೯, ೨೨೪, ೩೨೬, ೩೭೬, ೩೯೫, ೩೯೬, ೩೯೭, ೬೦೨, ೯೪೩, ೯೪೪, ೯೪೬, ೯೪೭, ೯೪೮, ೯೫೧, ೯೫೨, ೯೫೩, ೯೫೪, ೯೫೫, ೯೬೨, ೯೬೪, ೯೯೧, ೯೯೩, ೯೯೪, ೯೯೬, ೯೯೮, ೯೯೯, ೧೦೦೧, ೧೦೦೨
ಪುರಿ ೬೫೦
ಪುರೂರ ೩೦೯
ಪುರೋಗಾಮೀ ೨೯೩
ಪೂನಾ ೯೩೦, ೯೪೦, ೯೪೧
ಪೂರ್ಯೈ ೮೨೪
ಪೆಟಿಚ್ ೧೩೬
ಪೆರೋಸಿಟ್ ೯೦೪
ಪೆರ್ಸಿ ೯೭೧, ೯೭೨, ೯೮೫, ೧೦೦೫, ೧೦೦೬, ೧೦೨೦
ಪೆಲ್ಡಮನ್ ೩೫
ಪೆಸ್ತಾನಶಹ ೧೩೫, ೧೩೬
ಪೇಜ್ ೯೦೧, ೯೦೩
ಪೇಯ್ನ್ ೪೮೯
ಪೇಷ್ವಾ ೫೩೬, ೬೩೦
ಪೊಲೆಂಡಿನಲ್ಲಿ ೪೬೪
ಪೋದ್ದಾರ್ ೯೩೧
ಪೋಪ ೪೭೩
ಪೋರ್ಚುಗಲ್ ೭೨೯
ಪೋಲರೂ ೪೬೪
ಪೋಲಾ ೬೦
ಪೋಲೀಷ್ ೫೮೨

ಪೋಲೂ ೬೦
ಪೋಲ್‌ನ ೫೯೬
ಪೌಂಡು ೨೧೫, ೨೧೬, ೨೨೧, ೩೫೩, ೭೬೩
ಪ್ರತಾಪ್ ೫೮೮
ಪ್ರಸಾದ್ ೯೩೧
ಪ್ರಾಟೆಸ್ಟಂಟರನ್ನು ೩೨೯
ಪ್ರಿನ್ಸಸ್ ೮೮೯
ಪ್ರಿವಿ ೧೦೩, ೧೪೭, ೨೩೪, ೬೬೬
ಪ್ರೇಮಚಂದ್ ೬೨೧, ೬೨೨
ಪ್ರೊಟೆಸ್ಟೆಂಟ್ ೮೭೮

## ಫ

ಫಂಡರಪುರ ೬೩೮
ಫಡಕೆ ೧೬೧, ೧೬೨
ಫರ್ಡ್ ೮೮, ೪೫೬
ಫಿಂಡ್ಲೇಟರ್ ೯೮೦, ೯೮೫, ೯೯೫
ಫುಳೆ ೩೬೧
ಫೆಡರಲ್ ೭೯೨, ೧೦೦೫, ೧೦೦೭, ೧೦೧೧
ಫೆಡೆರಿಕ್ ೩೫೫
ಫೆದರ್ ೨೯೯
ಫೆಲ್ಡರು ೧೬೮
ಫ್ಯಾಗನ್ ೮೭೯, ೮೮೦, ೮೮೧
ಫ್ಯಾಗ್ನ ೮೮೧
ಫ್ರಾಂಟಿಯರ್ ೨೬೯
ಫ್ರಾನ್ಸ್ ೧೬೭, ೧೬೮, ೨೨೧, ೩೩೮, ೩೪೪, ೩೪೫, ೩೪೭, ೩೪೮, ೩೫೨, ೬೫೩, ೭೨೯, ೮೨೩
ಫ್ರೀಸ್ಟೇಟ್ ೧೯
ಫ್ರೂಮ್ ೬೦೭
ಫ್ರೆಂಚ್ ೪೩೪, ೪೬೪, ೪೭೫, ೯೭೯
ಫ್ಲೆಮಿಂಗ್ ೨೬೨, ೩೬೧

## ಬ

ಬಂಗಾಳ ೩, ೧೯, ೪೧, ೩೯೫, ೪೧೭, ೪೧೮, ೪೬೬, ೪೮೬, ೪೮೯, ೫೩೧, ೫೩೩, ೫೩೯, ೫೪೨, ೫೪೩, ೫೫೦, ೫೫೧, ೬೪೯, ೬೯೫, ೭೨೯, ೭೩೧, ೭೩೩, ೭೬೦, ೮೩೮, ೮೪೫, ೮೪೬, ೮೫೮, ೮೬೮, ೮೭೬, ೯೧೯, ೯೩೦, ೯೩೧, ೯೩೨, ೯೩೩, ೯೩೪, ೯೩೫, ೯೩೬, ೯೩೭, ೯೩೮, ೯೩೯, ೯೪೨, ೯೪೪, ೯೪೫, ೯೪೬, ೯೪೭, ೯೪೮, ೯೪೯, ೯೫೦, ೯೫೧, ೯೫೨, ೯೫೩, ೯೫೪, ೯೫೬, ೯೫೭, ೯೭೯, ೯೯೧, ೯೯೭, ೯೯೮, ೧೦೦೦, ೧೦೦೧, ೧೦೦೨, ೧೦೦೪
ಬಂಡಸ್ರಾತ್ ೭೮೯
ಬಕಿಂಗ್ ೩೨೯, ೯೩೦
ಬಕ್ ೬೫೯
ಬಗ್ಗಿ ೫೯೪
ಬಟ್ಲರ್ ೭೯೧, ೯೦೦, ೯೨೭
ಬರ್ದೋಲಿ ೫೯೫
ಬದ್ಲಾಪುರ ೩೬೪, ೩೬೬, ೩೭೩
ಬನಿಯಾ ೭೧೩
ಬನ್ನಿ ೬೫೦
ಬಬೂಲಾ ೩೭೨, ೩೭೩
ಬರೊ ೪೫೭, ೪೬೭, ೪೭೯, ೪೮೦, ೪೮೧, ೪೮೪, ೪೯೧, ೫೬೬, ೫೭೨, ೫೭೩, ೫೭೬, ೬೧೧, ೬೧೨
ಬರೋಡಾ ೫೫೪, ೫೮೮, ೬೦೫, ೬೧೨
ಬರ್ಕಲೇ ೬೬೦
ಬರ್ಕ್ ೪೬೯, ೫೬೫
ಬರ್ನ್ ೮೮೨, ೮೮೫
ಬರ್ನಮ್ ೬೨೬, ೬೩೬
ಬರ್ನ್‌ಹಾರ್ಟ್ ೩೪೫

ಬರ್ಮಾ ೩, ೮, ೩೪೯, ೩೫೧, ೫೭೮, ೬೯೨
ಬರ್ಲಿನ್ ೩೩೮
ಬರ್ಹ್ಯಾಮ್ ೯೦೦
ಬಲೂಚಿಸ್ತಾನ ೪೧೬, ೪೧೭, ೪೧೮
ಬಲೂಟ ೯೪, ೬೦೦
ಬಲೈಯ ೫೯೩, ೫೯೪, ೫೯೫
ಬಲ್ಗೇರಿಯ ೪೬೫, ೪೭೫
ಬಹರ್ ೬೫೦
ಬಹಾದ್ದೂರ್ ೩೫೫, ೩೬೧, ೩೭೮, ೬೩೫, ೬೮೩, ೬೮೪, ೬೯೮, ೭೦೭, ೭೩೯, ೭೪೩, ೭೫೫, ೭೯೦, ೮೦೬, ೮೦೯, ೮೪೪, ೯೩೧, ೯೪೦, ೯೮೧, ೯೮೮, ೯೯೮, ೯೯೯, ೧೦೦೩
ಬಳ್ಳಾರಿ ೨೪೫
ಬಾಂಬೆ ೩೫೦, ೪೧೪, ೪೧೬, ೪೨೨, ೪೨೩, ೪೨೪, ೪೨೬, ೪೨೭, ೪೩೦, ೪೪೫, ೪೪೬, ೪೮೫, ೫೩೫, ೫೮೯, ೫೯೬, ೬೦೧, ೬೦೩, ೬೯೦
ಬಾಗ್ಡಿ ೬೫೦
ಬಾಜಪೇಯಿ ೫೭೩, ೫೭೫
ಬಾಟಲ್ಸ್‌ನ ೪೫೦
ಬಾಪುರಾವ್ ೫೯೬
ಬಾಪ್ಟಿಸ್ಟ್ ೪೫೦
ಬಾಫ್ ೬೫೦
ಬಾಬುರಾವ್ ೩೬೧
ಬಾಬೂ ೫೦೧
ಬಾಬೇ ೧೭
ಬಾಬ್ತುಗಳಿರಲಿ ೧೦೨೪
ಬಾರ್ಡೋಲಿ ೨೩೧, ೨೩೨
ಬಾರ್ಸಿ ೩೭೩
ಬಾಸಿರ್ ೧೯೪
ಬಾಸೂ ೭೬೦
ಬಿಕನೇರಿನ ೮೧೩
ಬಿಕಾನೇರ್ ೭೮೭, ೭೮೮, ೭೯೧, ೭೯೩, ೮೦೯
ಬಿಚೋಲ ೫೯೩
ಬಿಜಯಕುಮಾರ್ ೯೩೨
ಬಿಜಾಪುರ ೨೪೫
ಬಿಟಿ ೯೮೦
ಬಿರ್ಲಾ ೯೩೧, ೯೩೨, ೯೩೪, ೯೩೬, ೯೩೭, ೯೩೮, ೯೩೯
ಬಿಶ್ವಾಸ್ ೯೫೩
ಬಿಷಪ್ ೯೮೮, ೯೮೯
ಬಿಹಾರ್ ೩, ೪೦, ೪೧, ೧೦೮, ೨೧೬, ೪೮೬, ೬೪೨, ೮೭೬, ೯೩೭
ಬುತ್ವಾಲ್ ೯೪೫
ಬೆಂಥಮ್ ೩೧೨, ೩೧೩
ಬೆಂಥಾಲ್ ೯೦೮, ೯೦೯, ೯೧೦, ೯೧೧, ೯೧೨
ಬೆಕರ್ ೪೩೧
ಬೆನಾರಸ್ ೮೦೧
ಬೆಲ್ ೧೪೯, ೨೧೩, ೨೫೩, ೨೭೩, ೨೭೫
ಬೆಲ್ಜಿಯಂ ೮೨೩
ಬೇಗಮ್ ೭೩೩
ಬೈಕಲಾ ೧೩೦, ೨೧೫, ೨೩೭
ಬೈದ್ಯರು ೯೩೨
ಬೈಬಲ್ ೩೯
ಬೊಂಬಾಯಿ ೬೦೬
ಬೊರ್ಗಾನ್ ೯೮೬
ಬೋರ್ಸಾದ್ ೩೧೯, ೩೨೦, ೩೨೧
ಬೋಲೆ ೮೦
ಬೋಸ್ ೩೩೬, ೯೩೧
ಬೋಳೆ ೨೬೨, ೩೫೯, ೩೬೦, ೩೭೫
ಬೌದ್ಧರು ೯೬೦
ಬ್ಯಾನರ್ಜಿ ೯೩೧, ೯೩೨, ೯೪೦, ೯೪೨, ೯೪೩,

೯೪೬, ೯೪೭, ೯೪೮, ೯೫೦, ೯೫೧, ೯೫೨, ೯೫೩, ೯೫೪, ೯೫೫, ೯೫೬, ೯೫೮, ೯೫೯

ಬ್ಯಾರಿಸ್ಟರ್ ೮೮೩

ಬ್ಯಾಲಫರ್ ೪೯೦

ಬ್ರಿಟನ್ ೩೩, ೨೮೪, ೨೮೮, ೩೦೬, ೩೧೧, ೩೧೨, ೪೩೫, ೫೧೦, ೭೨೯, ೮೦೯, ೮೧೩, ೮೩೧

ಬ್ರಿಟಿಷ್ ೯೧೨

ಬ್ರಿಟೀಷ್ ೯೮, ೨೧೧, ೨೧೭, ೨೪೫, ೨೪೬, ೩೪೯, ೪೬೪, ೪೭೬, ೪೮೦, ೫೩೫, ೫೩೬, ೫೩೭, ೫೮೬, ೬೫೩, ೬೫೪, ೬೫೫, ೬೫೬, ೬೫೭, ೬೫೯, ೬೬೦, ೬೭೦, ೬೯೪, ೭೧೧, ೭೨೩, ೭೨೬, ೭೩೦, ೭೫೫, ೭೫೬, ೭೭೯, ೭೮೦, ೭೮೫, ೭೮೬, ೭೮೭, ೭೯೦, ೮೬೫

ಬ್ರೂಸ್ ೯೬೫

ಬ್ರೆಜಿಲ್ ೩೧೨

ಬ್ರೈಸ್ ೪೪೮, ೮೦೭, ೮೦೮, ೮೦೯

ಬ್ರೌನ್ ೮೩೧

ಬ್ರ್ಯಾಂಬಲ್ ೨೨೭, ೨೨೮

ಬ್ಲಂಟ್ ೬೪೪, ೬೪೫, ೬೪೭, ೬೪೮

ಬ್ಲಂಟರ್ ೬೪೩, ೬೪೩, ೬೪೪, ೬೪೫, ೬೪೬, ೬೪೮


## ಭ


ಭಂಡೇರಿ ೫೯೬

ಭಟ್ಟೀ ೩

ಭಲೂಟಾ ೯೮, ೯೯, ೧೦೦, ೧೦೧, ೧೦೩, ೧೦೪, ೧೦೫, ೧೦೬, ೧೦೭, ೧೦೯

ಭಾಗವತ ೩೪೦

ಭಾರತೀ ೫೨೪

ಭಾರತೀಕರಣ ೫೧೮, ೫೧೮, ೫೧೯, ೫೨೪, ೫೨೮, ೬೭೦, ೭೫೮

ಭೀಮರಾವ್ ೭೧೦, ೮೭೫

ಭುಯಿನ್ನಲಿ ೬೫೦

ಭುರ್ಗಿ ೪೧೬

ಭೂಪಾಲ್ ೫೯೪

ಭೂಸ್ಯೆನ್ಯ ೪೭೨, ೫೮೧, ೫೮೫

ಭೋಲೆ ೧೧೧, ೧೯೦, ೧೯೨, ೧೯೬, ೧೯೭


## ಮ


ಮಂಗ್ ೪೧, ೬೦೨, ೬೩೮, ೬೩೯

ಮಂಜುಂದಾರ್ ೯೪೭

ಮಂಡಲ್ ೯೪೯

ಮಂದನಗಾಡ್ ೬೦೦

ಮಂಬೈ ೮೬

ಮಜುಂದಾರ್ ೪೮೨, ೬೩೮, ೯೪೯

ಮಟ್ವನ್ ೬೦೦

ಮಡಿಮನ್ ೪೮೨, ೪೮೬, ೫೦೩, ೫೬೮, ೫೮೪, ೬೦೭

ಮದೀಯ ೪೧೭, ೪೭೨

ಮದ್ರಾಸ್ ೩, ೧೯, ೪೦, ೪೧, ೧೬೬, ೧೯೪, ೨೧೬, ೨೩೭, ೨೩೮, ೨೩೯, ೨೪೧, ೨೪೬, ೩೪೩, ೪೮೦, ೪೮೬, ೪೮೮, ೫೨೨, ೫೨೯, ೫೩೦, ೫೩೮, ೫೪೧, ೫೬೦, ೫೬೬, ೫೮೪, ೬೮೯, ೬೯೦, ೭೧೭, ೭೨೯, ೮೭೬, ೮೯೭, ೯೧೬, ೯೨೬, ೯೨೭, ೯೩೧, ೯೬೧, ೯೬೨, ೯೯೫

ಮನುಭಾಯಿ ೧೦೧೨

ಮನ್ರೋ ೩೪೩

ಮರಾಠ ೫೧, ೪೫೪, ೪೫೮, ೪೫೯, ೪೭೦, ೫೫೨, ೫೯೬

ಮರಾಠಿ ೧೬೩, ೨೪೨, ೩೩೬, ೪೫೮

ಮರಿಯಾ ೩೪೩

ಮಲಬಾರ್ ೯೬೩, ೯೬೪
ಮಲ್ಲಿಕ್ ೯೩೧, ೯೩೨, ೯೩೮, ೯೩೯, ೯೪೭
ಮವಾಲಿ ೧೭೯, ೧೮೭, ೧೯೧, ೧೯೯, ೨೦೦
ಮವ್ವು ೬೫೦
ಮಹದ್ ೫೮೯, ೫೯೧
ಮಹಬೂಬ್ ೮೯೩, ೮೯೪
ಮಹಮ್ ೫೮೯
ಮಹಮಡನ್ನರು ೫೧, ೭೦೯, ೭೩೧
ಮಹಮದ್ ೬೮೫, ೭೦೫, ೮೧೫, ೮೯೦
ಮಹಮೂದ್ ೮೮೯, ೮೯೦, ೮೯೧, ೮೯೨, ೮೯೩, ೮೯೪
ಮಹಮ್ಮದ್ ೧೮೩, ೧೮೪, ೧೯೧, ೨೪೫, ೬೧೬, ೬೧೮, ೬೯೬, ೭೦೬, ೭೦೭, ೮೦೩, ೮೦೬, ೮೧೧, ೮೬೫, ೮೯೨
ಮಹಮ್ಮದಖಾನ ೨೦೨
ಮಹರ್ ೯೬, ೩೧೪, ೩೭೩
ಮಹಲ್‌ಕಾರಿ ೩೨೩
ಮಹಾತ್ಮಾಗಾಂಧಿ ೮೦೧, ೮೦೨, ೮೫೬, ೮೫೭, ೮೫೯, ೯೪೦, ೯೪೧, ೯೪೩, ೯೪೪, ೯೪೮, ೯೫೦, ೯೫೪, ೯೫೫, ೯೯೬, ೯೯೭
ಮಹಾರ್ ೯೭, ೯೮, ೯೯, ೧೦೦, ೧೦೧, ೧೦೨, ೧೦೩, ೧೦೪, ೧೦೫, ೧೦೬, ೧೦೭, ೧೦೮, ೧೦೯, ೧೧೦, ೧೧೧, ೧೧೨, ೩೨೪, ೩೨೫, ೩೨೬, ೩೬೫, ೩೭೩, ೩೭೬, ೩೭೭, ೪೪೬, ೫೪೯, ೫೫೦, ೫೯೬, ೫೯೭, ೫೯೯, ೬೦೦, ೬೦೮, ೬೨೪, ೬೩೩, ೬೩೭, ೬೩೮
ಮಹಾರ್ಕಿ ೧೦೪
ಮಹಾರ್‌ದಾಸ ೫೯೯
ಮಹಿಷ್ಯಾ ೯೩೨
ಮಾಂಟೆಗ್ಯೂ ೭, ೮೮, ೪೧೬, ೪೨೯, ೪೫೬, ೪೯೭, ೫೬೬, ೫೮೬, ೭೯೫, ೮೦೦
ಮಾಂದೇಡ್ ೩೨೨
ಮಾಚೀ ೨೬೨
ಮಾಣಿಕ್‌ಜೀ ೭೮೮, ೭೯೩, ೮೩೮
ಮಾದರಿಪುರ ೯೩೨
ಮಾನೆಕ್ ೮೧೦
ಮಾನೆಕ್‌ಜೀ ೭೯೧
ಮಾಮ್ಲತ್‌ದಾರ್ ೩೧೯, ೩೨೦, ೩೨೧, ೩೨೩
ಮಾರ್ಕ್ವೆಸ್ ೬೮೩,೭೩೫, ೭೩೫, ೭೬೯, ೯೧೬, ೯೧೮, ೯೪೨, ೯೪೭, ೯೯೧, ೯೯೫, ೧೦೧೬, ೧೦೨೮,
ಮಾರ್ಕ್ಸ್ ೬೭೨
ಮಾರ್ಟಾಲಿಟಿ ೩೪೩
ಮಾರ್ದನ ೫೯೩
ಮಾರ್ಲೆ ೪೫೬, ೪೮೦, ೫೬೬
ಮಾರ್ಲೆಮಿಂಟೊ ೪೨೯
ಮಾಲ್ಕಂ ೯೮೦, ೯೮೨, ೯೮೩, ೯೮೫, ೧೦೧೨, ೧೦೨೩
ಮಾಲ್ವಾ ೬೭೪
ಮಾಲ್ಡಾ ೯೫೬
ಮಾಳವೀಯ ೭೯೯, ೮೦೦, ೮೦೧, ೮೦೨, ೯೪೦, ೯೪೧, ೯೪೨, ೯೪೩, ೯೪೭, ೯೪೮, ೯೪೯, ೯೫೦, ೯೫೧, ೯೫೩, ೯೬೪, ೯೯೭
ಮಿಡ್ನಾಪುರ ೯೪೭, ೯೭೯
ಮಿತ್ತರ್ ೧೯೪, ೭೩೮, ೭೪೬, ೭೪೯, ೭೫೮, ೭೬೭, ೭೯೯, ೮೦೯, ೯೫೪
ಮಿತ್ತರ ೬೯೫, ೭೩೩
ಮಿತ್ತಲ್ ೭೩೩, ೭೩೯
ಮಿಥಾ ೧೪೪, ೧೪೫, ೧೪೭, ೧೫೧
ಮಿರಾನ್ ೬೧೬
ಮಿರಾಸಿ ೭೨೦
ಮಿರ್ಜಾ ೭೮೭, ೮೧೪, ೧೦೦೨, ೧೦೧೧

ಮಿರ್ಡಿನ್ ೨೮೪
ಮಿಲಾನ್ ೩೪೫
ಮಿಲ್ಲರ್ ೬೧೨, ೬೧೪
ಮೀನ್ ೬೧೮
ಮೀರ್ ೮೮೯, ೮೯೦, ೮೯೧, ೮೯೨, ೮೯೩, ೮೯೪
ಮುಂಗಾಓನ್ ೪೭೩
ಮುಂಬೈ ೩, ೮, ೨೭, ೨೮, ೨೯, ೩೦, ೩೧, ೩೩, ೩೪, ೩೯, ೪೦, ೪೫, ೪೬, ೪೭, ೫೩, ೫೭, ೫೮, ೬೦, ೬೧, ೬೨, ೬೩, ೭೦, ೮೩, ೮೭, ೯೧, ೯೨, ೯೩, ೯೪, ೯೬, ೯೮, ೧೦೨, ೧೦೩, ೧೦೪, ೧೦೭, ೧೦೮, ೧೧೧, ೧೧೩, ೧೧೬, ೧೧೭, ೧೧೮, ೧೨೧, ೧೨೩, ೧೨೯, ೧೩೦, ೧೬೨, ೧೬೬, ೧೬೯, ೧೭೩, ೧೭೭, ೧೭೮, ೧೭೯, ೧೮೦, ೧೮೧, ೧೮೨, ೧೮೩, ೧೮೬, ೧೮೭, ೧೮೮, ೧೮೯, ೧೯೧, ೧೯೨, ೧೯೩, ೧೯೪, ೧೯೬, ೨೦೦, ೨೦೧, ೨೦೨, ೨೦೩, ೨೦೪, ೨೦೫, ೨೦೭, ೨೧೧, ೨೧೩, ೨೧೫, ೨೧೬, ೨೧೮, ೨೨೪, ೨೨೫, ೨೨೬, ೨೨೯, ೨೩೦, ೨೩೧, ೨೩೩, ೨೩೭, ೨೩೯, ೨೪೦, ೨೪೨, ೨೪೩, ೨೪೪, ೨೪೫, ೨೪೮, ೨೫೨, ೨೫೩, ೨೫೪, ೨೭೪, ೨೭೮, ೨೮೬, ೨೯೭, ೩೦೯, ೩೩೮, ೩೫೯, ೩೬೧, ೩೭೨, ೩೭೬, ೩೮೧, ೩೮೪, ೩೮೫, ೩೮೭, ೩೯೯, ೪೦೧, ೪೦೫, ೪೦೯, ೪೧೪, ೪೧೫, ೪೫೩, ೫೩೪, ೫೩೫, ೫೩೯, ೫೪೩, ೫೪೪, ೫೪೫, ೫೫೪, ೫೫೫, ೫೬೦, ೫೬೮, ೫೮೭, ೫೯೧, ೬೦೨, ೬೧೧, ೬೧೫, ೬೧೮, ೬೩೦, ೬೩೪, ೬೬೯, ೬೮೩, ೬೯೦, ೭೨೯, ೭೩೧, ೭೫೦, ೭೭೧, ೭೯೪, ೮೭೬, ೯೧೮, ೯೨೩, ೯೩೧, ೯೩೮, ೯೩೯, ೯೪೦, ೯೪೧, ೯೪೪, ೯೪೮, ೯೪೯, ೯೫೦, ೯೫೧, ೯೬೮, ೯೭೦, ೯೯೭, ೧೦೦೦, ೧೦೨೨
ಮುಕಾದಮ್ ೨೩೫, ೨೩೬, ೩೩೦, ೩೫೯
ಮುಖಬೂಲ್ ೮೮೯, ೮೯೦, ೮೯೧, ೮೯೨, ೮೯೩, ೮೯೪
ಮುಖರ್ಜಿ ೩೫೫, ೯೨೫, ೯೨೭, ೯೩೧, ೯೩೨
ಮುಜುಂದಾರ್ ೧೦೩, ೧೧೩, ೬೧೫, ೬೧೬
ಮುನ್ನಿ ೨೭೨, ೨೭೩, ೩೦೫
ಮುನ್‌ಷಿ ೫೭, ೫೮, ೬೨, ೬೪, ೭೬, ೭೭, ೧೯೦, ೧೯೧, ೧೯೨, ೨೦೦, ೨೦೧, ೨೦೨, ೨೦೩, ೨೨೩, ೨೨೪
ಮುನ್ನಿಪೇಟಾ ೩೨೬
ಮುರಾರ್ಜಿ ೨೩
ಮುರ್ಜಬಾನ್ ೨೦೮
ಮುಲ್ಕಿ ೩೭೩
ಮುಸಲೋನಿ ೩೩೧
ಮುಸಲ್ಮಾನ್ ೪೧೮, ೪೮೮, ೫೯೩, ೬೫೪, ೬೫೮, ೬೭೮, ೭೦೪, ೭೦೫, ೭೦೬, ೭೨೩, ೭೩೧, ೮೫೪, ೮೫೫, ೮೬೦, ೮೬೫, ೮೬೭, ೮೬೮, ೮೬೯, ೮೭೦, ೮೭೧, ೮೭೪, ೮೭೬, ೮೯೭, ೯೧೭, ೯೧೮, ೯೨೭, ೯೨೮, ೯೨೯, ೯೪೬, ೯೫೫, ೯೬೯, ೯೭೯, ೯೯೪
ಮುಸಲ್ಮಾನೇತರ ೯೩೨
ಮುಸ್ಲಿಂ ೪೭, ೧೪೦, ೧೫೪, ೧೫೮, ೧೫೯, ೧೬೧, ೧೭೯, ೧೮೦, ೨೪೫, ೨೪೬, ೨೮೨, ೨೮೬, ೨೮೭, ೪೧೭, ೪೧೮, ೪೨೯, ೪೬೬, ೪೬೭, ೪೮೮, ೪೯೧, ೯೨೭, ೯೫೮, ೯೬೬
ಮುಸ್ಸೋಲಿನಿ ೩೪೫, ೩೪೬
ಮುಹಮದ್ ೮೫೮
ಮೂಂಜೆ ೬೯೮, ೭೦೪, ೭೦೫, ೭೦೬, ೮೫೭, ೯೪೦, ೯೪೧, ೯೪೨, ೯೪೩, ೯೪೪, ೯೪೫,

೯೫೬, ೯೫೭
ಮೂರ್ ೮೨೫
ಮೂಲ್‌ಶೀ ೩೭೬
ಮೆಂಚೆಸ್ಟರ್ ೭೩
ಮೆಸ್ಟನ್ ೧೦
ಮೆಹತಾ ೨೯, ೪೫, ೮೨, ೮೪, ೮೭, ೧೦೧೨, ೧೮೩, ೧೮೪, ೧೮೫, ೨೦೦, ೨೦೧, ೨೦೩, ೨೨೯, ೨೫೨, ೨೬೭, ೨೬೮, ೨೯೭, ೩೩೯, ೩೫೭, ೩೬೪
ಮೆಹರಚಂದ್ ೯೪೦
ಮೆಹ್ರ ೫೯೮
ಮೇಧೆ ೬೩೬
ಮೈಕೆಲ್ ೮೯೭, ೮೯೮, ೮೯೯, ೯೦೦
ಮೊರಾರ್ಜಿ ೩೩೧
ಮೊಹಮಡನ್ ೩೬, ೪೬, ೫೨, ೫೩, ೫೪, ೫೫, ೬೨, ೬೩, ೬೭೨, ೬೯೫, ೭೦೬, ೭೦೭, ೭೦೮, ೭೩೧, ೭೩೨, ೭೩೩, ೭೯೩
ಮೊಹಮ್ಮದ್ ೨೩೭
ಮೊಹಲ್ಲಾ ೯೧೮
ಮೋಚಿ ೬೪೫
ಮೋದಿ ೭೬೫, ೭೭೫
ಮೋರೆ ೮೬, ೮೭
ಮೋರ್‌ಲ್ಯಾಂಡ್ ೩೭೮
ಮೋಹನ್ ೯೩೧
ಮೋಹಾಶಿ ೯೩೧
ಮ್ಯಾಕ್ ೯೦೧
ಮ್ಯಾಕ್ಮನ್ ೯೬೫
ಮ್ಯಾಗ್ಯಾರ ೪೬೪
ಮ್ಯಾಜಿಸ್ಟ್ರೇಟ್ ೧೪೨, ೧೮೮, ೧೯೩, ೧೯೪, ೧೯೫, ೧೯೭, ೧೯೮, ೨೩೪, ೪೬೨, ೫೯೧, ೬೦೦, ೬೨೭, ೬೩೬, ೮೩೯
ಮ್ಯಾಟ್ರಿಕ್ಯೂ ೭೩
ಮ್ಯೂನಿಕ್ ೩೪೫

## ಯ

ಯಹೂದ್ಯ ೨೯೩, ೩೪೬, ೪೬೪
ಯಾಜ್ಞಿಕ್ ೩೧೮
ಯುಗೋಸ್ಲಾನಿಯಾ ೪೬೫, ೪೯೫, ೭೨೯
ಯುನಿಟರಿ ೭೯೨
ಯುರೋಪ್ ೨೩, ೨೩, ೧೪೬, ೧೭೧, ೧೯೨, ೨೧೮, ೨೪೭, ೩೫೪, ೪೩೨, ೪೩೬, ೪೫೪, ೫೧೩, ೫೩೦, ೫೩೧, ೫೩೨, ೫೩೩, ೫೩೮, ೫೪೧, ೫೪೨, ೫೪೩, ೫೮೨, ೫೮೪, ೬೨೬, ೭೧೧, ೮೨೩, ೮೨೪, ೮೫೯
ಯುಸ್ಟೇನ್ ೯೭೨
ಯುಸ್ಟೇಸ್ ೮೭೯, ೯೭೧, ೯೮೫, ೧೦೦೬, ೧೦೨೦

## ರ

ರಜಪೂತ ೩೭೧, ೫೯೩
ರಣ್‌ಛೋಡ ೫೯೬
ರತ್ನಗಿರಿ ೯೮, ೧೨೮, ೧೨೯, ೧೩೦, ೧೩೧, ೧೩೨, ೬೦೦, ೬೩೩
ರಫಿಯುದ್ದೀನ್ ೧೪೭, ೧೪೯, ೩೭೭, ೩೭೯
ರಬೀಂದ್ರನಾಥ್ ೯೩೦, ೯೩೫
ರಮಾನಂದ ೯೪೩
ರವನಿಯಾ ೩೨೧
ರವೀಂದ್ರನಾಥ ೩೩೬, ೯೪೨, ೯೯೮, ೯೯೯
ರಷ್ಯ ೪೬೪, ೪೬೫
ರಸ್ಸೆಲ್ ೯೩೬
ರಹೀಮತುಲ್ಲಾ ೫೩, ೨೩೫
ರಾಂಕೇಲರ್ ೧೦೦೬, ೧೦೧೫
ರಾಜ್ ೬೫೦

ರಾಜಗೋಪಾಲಾಚಾರಿ ೩೩೧, ೯೪೭
ರಾಜಬನ್ನಿ ೯೩೨
ರಾಜಮಹೇಂದ್ರಿ ೨೪೬
ರಾಜಾ ೧೧೧, ೬೦೨, ೬೨೮, ೬೩೨, ೬೩೪, ೬೩೫, ೬೮೪, ೬೮೫, ೬೯೭, ೬೯೮, ೭೬೫, ೭೬೭, ೭೭೩, ೭೭೪, ೭೭೫, ೯೩೮, ೯೪೧, ೯೪೨, ೯೪೪, ೯೫೬
ರಾಜಾನರೇಂದ್ರನಾಥ ೬೯೭
ರಾಜೂರ್ ೩೭೨
ರಾಧಾಕಮಲ್ ೩೫೫
ರಾನಡೆ ೫೨೩
ರಾಬರ್ಟ್ ೨೫೩, ೨೭೩, ೨೭೫, ೮೭೯
ರಾಮ್ ೬೪೭
ರಾಮಚಂದ್ರ ೭೩೩
ರಾಮಚಂದ್ರರಾವ್ ೬೮೩, ೬೮೪, ೬೯೮, ೭೩೯, ೭೪೩
ರಾಮಾನಂದ ೯೪೨, ೯೫೬
ರಾಮೋಶಿಸ್ ೯೬
ರಾವಬಹದ್ದೂರ್ ೬೨, ೧೩೯, ೧೪೫, ೧೪೭, ೧೪೮, ೧೫೧, ೧೫೩, ೧೮೩, ೬೮೭, ೭೧೦
ರಾವ್‌ಸಾಹೇಬ ೫, ೧೫೬, ೯೪೦
ರಾಳೇರಾಸ್ ೩೭೩
ರಿಕ್ಲೆ ೫೦
ರೀವ್ ೩೫೯, ೩೬೫, ೩೬೬, ೩೭೧, ೩೭೩, ೩೭೬
ರುಥೇನಿ ೪೬೪
ರುಮೇನಿಯಾ ೧೬೮, ೪೬೪, ೪೬೫, ೪೭೫, ೫೮೨
ರೆಕ್ಸ್ ೨೬೨
ರೆಜಿನಾಲ್ಡ್ ೮೭೯, ೯೬೮
ರೆಡ್‌ಮಂಡ್ ೩೨೯
ರೇಖಾ ೨೭೫
ರೋಡೇಶಿಯಾ ೬೭೪
ರೋಫೆ ೯೦೧
ರೋಮನ್ ೨೮೧, ೩೪೪, ೩೪೫
ರೋಸಿ ೧೦೧
ರೋಸಿಗ್ನೋಲ್ ೯೬೫
ರೋಸ್‌ವೆಲ್ಟ್ ೩೫೩
ರೋಹಮ್ ೩೩೬, ೩೪೨, ೩೪೭, ೩೫೫
ರ್ಯಾಡಿಕಲ್ಸ್ ೭೨೬

## ಲ

ಲಂಡನ್ ೭೦, ೩೪೫, ೩೯೦, ೩೯೧, ೩೯೨, ೩೯೬, ೯೩೦, ೯೩೪, ೯೩೬, ೯೩೮, ೯೩೯, ೯೮೦
ಲಕ್ನೋ ೪೧೮, ೪೮೮, ೪೮೯, ೪೯೦, ೪೯೧, ೫೨೭
ಲಕ್ಷ್ಮಣ್ ೫೯೬, ೫೯೭
ಲಖ್ನೊ ೪೮೨
ಲಜಪತರಾಯ್ ೫೯೯
ಲತೀಫ್ ೬೧೫
ಲವರ್ಕ್ ೮೭೯
ಲಾಂಗ್ಡ ೩೨೪
ಲಾರ್ಡ್ ೭೭೦, ೮೩೪
ಲಾರ್ಡ್ಸ್ ೭೫೯, ೭೮೬, ೮೦೫, ೮೦೬, ೮೦೭, ೮೦೮, ೮೦೯, ೮೧೧, ೯೭೫
ಲಾಲ್ ೩೮೧, ೭೬೬
ಲಾಲ ೩೭೩
ಲಾಲಾ ೫೯೯
ಲಾವಣಿ ೨, ೨೪
ಲಾಹೋರ್ ೮೫೭
ಲಿಂಗಾಯಿತ ೯೬೦
ಲಿಥಿಯೇನಿಯ ೪೬೪
ಲಿಥುವೇನಿಯ ೪೯೫

ಲಿಬರ್ಟಿ ೯೪೮, ೯೪೯, ೯೫೦, ೯೫೧, ೯೫೪, ೯೫೬
ಲಿಯಾಕತ್ ೯೮೭
ಲಿಯೋ ३೪೮
ಲಿಯೋಜ್ಜಮನಿ ३೪೮
ಲೂಸಿಯಾ ೮३೧
ಲೇಟನ್ ೯೧३, ೯೧೪, ೯೧೫
ಲೈಯ್ಯಾಲ್ ೯೬೫
ಲೊವೆಚ್ ೧೯೪
ಲೋ ३೨೦
ಲೋಟ್ ೮೭೯
ಲೋತಿಯನ್ ೮೪೧
ಲೋಥಿಯಾನ್ ೬೪೦, ೮೪೧, ೯೧೬, ೯೧೮, ೯३೦, ೯३೧, ೯३೨, ೯३೯, ೯೪೫, ೯೪೮, ೯೫೦, ೯೯३, ೧೦೦೨
ಲೋಲಿ ೬೫೦
ಲೋವರ್ ೭೨೯
ಲ್ಯಾಟ್ವಿಯ ೪೬೪, ೪೯೫
ಲ್ಯಾನ್ಸ್ ೮೭೯

## ವ

ವಫೇಲ ೫೯೬
ವಡಗಾಂವ್ ३೨೪, ३೭೬
ವರ್ಜೀನಿಯಾ ೮३೬, ೮೪೨
ವರ್ಷಾ ೧೨೪
ವರ್ಸೇಲ್ಸ್ ३೧೧
ವಲ್ಲಭ್ ३३೧
ವಾಟ್ಪಲ್ ३೫೦
ವಾಡವಾಲ್ ೬೦೦
ವಾರನ್ ೪३೫
ವಾರಸಾ ೭೧೬
ವಾರಿಸ್ ೯೬೫
ವಾಲ್ಪರ್ ೨೮३
ವಿಂಟರ್‌ಬೊಥಾಮ್ ೯೦೮
ವಿಕ್ಟೋರಿಯಾ ೭೬೫
ವಿಟೋ ೬೭೮
ವಿಠೋಬ ೬३೮
ವಿನ್ಸಂಟರೂ ೪೮೯
ವಿನ್ಸಟನ್ ೯೭३, ೯೭೪, ೯೭೫, ೯೭೬
ವಿನ್ಸೆಂಟ್ ೪೮೯, ೪೯೧
ವಿಯೆನ್ನಾ ३३೮, ३೪೫
ವಿಲಿಯಂ ೪೮೯, ೪೯೧, ೯೦೧
ವಿಲೇ ೬೭
ವಿಲ್ಲೋಬೈ ೫೪೦
ವಿಲ್ಸ್ ೫
ವಿಲ್ಸನ್ ೬೦, ३೯३, ३೯೪
ವಿಷ್ಣುಸ್ಮೃತಿ ३३೯
ವಿಸಿಟರ್ ೪೦೭
ವೀಟೋ ೪೫೫, ೪೯೬, ೫೦೧, ೫೦೬, ೧೦೧३
ವೀರೇಶ್ವರ ೫೯೦
ವುಡ್ ೬೭೯
ವೆಟೇಜ ೬೯३
ವೆರ್ನಿ ೧೯೪
ವೆಲ್ಲಿಂಗ್ಟನ್ನರು ೫೨३
ವೇಥಿಯಾ ೯೬
ವೇಲ್ಸ್ ೧೮, ೭೦, ३೦೧, ३೪೪, ३೪೮
ವೈಕಾಂಟ್ ೮೮೨, ೮೮೫, ೯೦೦
ವೈಸ್‌ರಾಯ್ ೫೬೫, ೮೯೪, ೮೯೫, ೯೦೧, ೧೦೦೯, ೧೦೧೦
ವ್ಯಾಟ್ಸನ್ ೯೦೪
ವ್ಹೈಟ್ ೭೫೯

**ಶ**

ಶಫಾಯತ ೬೮೫, ೭೬೭, ೭೯೪, ೯೭೧

ಶಫಿ ೬೯೬, ೬೯೭, ೭೦೫, ೭೦೬, ೭೦೭, ೮೦೩, ೮೦೪, ೮೦೬, ೮೦೯, ೮೧೧, ೮೧೫

ಶರತ್‌ಕುಮಾರ್ ೯೩೧

ಶರತ್‌ಚಂದ್ರ ೯೩೧

ಶಹಾ ೯೭೯

ಶಾಂಫಾಯ್ ೩೪೨

ಶಾಂತಿಶೇಖರ್ ೯೩೧

ಶಾಪ್ಪಬೇರೀ ೭೨೭

ಶಾಫಟ್ಸ್ ೪೫೨

ಶಾರದಾ ೩೫೦

ಶಾಸ್ತ್ರಿ ೫೮೭, ೮೫೦

ಶಿವರಾಮ್ ೩೧೮, ೩೨೧

ಶಿವರಾವ್ ೭೪೫, ೭೪೮, ೭೪೯, ೭೫೨, ೭೫೩, ೭೫೯, ೭೬೬, ೭೬೮

ಶಿವಸ್ವಾಮಿ ೫೨೨

ಶೆಟ್ಟರು ೫೯೩

ಶೆಣ್ವಿಗಳು ೫೪೨

ಶೇಂಗಾವ ೨೩

ಶೇಖರೇಶ್ವರರೇ ೯೫೩

ಶೇಟರು ೫೯೨

ಶೇಷಶಾಯಿ ೨೫೨

ಶೈಲೇಶ್ವರಸಿಂಗ್ ೯೩೧

ಶ್ಯಾಮಪ್ರಸಾದ್ ೯೩೧

ಶ್ರದ್ಧಾನಂದರೂ ೫೯೯

ಶ್ರೀಕಾಂತ್ ೩೪೭

ಶ್ರೀಜಮ್ನಾದಾಸ್ ೨೬೭

ಶ್ರೀಜೈರಾಮದಾಸ ೭೧

ಶ್ರೀನಿವಾಸನ್ ೬೫೩, ೬೮೭, ೭೧೦, ೭೪೫, ೭೪೮, ೭೪೯, ೭೫೨, ೭೫೩, ೮೭೫

ಶ್ವೇತಪತ್ರ ೮೮೫, ೮೮೮, ೮೯೩, ೮೯೫, ೯೦೧, ೯೦೨, ೯೦೫, ೯೦೬, ೯೧೧, ೯೧೯, ೯೨೬, ೯೬೩, ೯೭೦, ೯೭೧, ೯೭೩, ೯೮೩, ೯೯೦, ೯೯೨, ೯೯೩, ೯೯೪, ೧೦೦೪, ೧೦೧೫, ೧೦೨೯

**ಷ**

ಷಫಿ ೮೫೮, ೮೬೫

ಷಹಲಾಜಾನಿ ೬೩

ಷಾ ೬೧೬, ೬೧೮

ಷಾಬುದ್ದೀನರು ೫೫೪

ಷಿಯನ್ ೫೪೦

ಷಿಲ್ಲಿಂಗ್ ೪೫೧

ಷೂಬರ್ಟ್ ೮೭೯, ೮೮೦

ಷೆನ್ವಿ ೫೩೧

ಷೊಬರ್ಟ್ ೮೮೦

**ಸ**

ಸಂಗಮ್ನೇರ್ ೩೨೪, ೩೩೪

ಸಕಲತ್‌ವಾಲಾ ೨೫೩

ಸಖಾರಾಮ್ ೩೭೧

ಸಗರ ೩೪೧

ಸಚ್ಚಿದಾನಂದ ೮೮೩, ೮೮೪, ೮೮೫, ೮೮೬, ೮೮೭, ೮೮೮

ಸತೀಶ್ ೯೩೧

ಸತೀಶಚಂದ್ರಸೇನ್ ೯೩೨

ಸತ್ಯಕಿಂಕರ್ ೯೩೧

ಸತ್ಯಚರಣ್ ೯೩೨

ಸತ್ಯವತಿ ೩೪೦

ಸತ್ಯಾನಂದ ೯೪೭, ೯೪೯

ಸತ್ಯೇಂದ್ರ ೯೩೧, ೯೩೨

ಸತ್ಯೇಂದ್ರಚಂದ್ರ ೯೩೨
ಸದಾಶಿವ ೫೩೫
ಸನವ್ದ ೫೯೫
ಸಪ್ರೂ ೮೪೪, ೮೫೧
ಸಪ್ರು ೭೭೮, ೭೯೦, ೭೯೬, ೮೦೧
ಸಮತಾ ೫೯
ಸಮನ್ ೧೨೫
ಸಮಲ್ ೯೫೪
ಸಯ್ಯದ್ ೬೭೮
ಸರ್ದಾರರು ೪೫೮, ೬೩೦
ಸರ್ಬಿಯನರೂ ೪೬೪
ಸಹಸ್ರಬುದ್ಧೆ ೩೫೫
ಸಹಾನ್ ೯೩೨
ಸಹಾನಾ ೯೩೧
ಸಹ್ಯಾದ್ರಿ ೩೫೫
ಸಾಂಗ್ಲಿ ೩೯೫
ಸಾತಾರಾ ೯೮, ೧೩೯, ೧೪೦, ೩೨೬, ೯೬೧
ಸಾಯಿಜ್‌ಪುರ ೩೨೦
ಸಾಹಿಬ್ ೬೧೫
ಸಿಂಗ್ ೬೦೮, ೭೦೯, ೭೫೦, ೭೬೮, ೭೭೨, ೮೦೪, ೮೦೫, ೮೫೬, ೯೩೨
ಸಿಂಡಿಕೇಟ್ ೫೭, ೬೫, ೬೯, ೩೮೩, ೪೦೧, ೪೦೪, ೪೦೫, ೪೦೬, ೪೦೭, ೪೦೯
ಸಿಂಧ್ ೧೩೫, ೨೩೯, ೨೪೦, ೪೧೪, ೪೧೫, ೪೧೬, ೪೧೭, ೪೧೮, ೪೨೦, ೪೪೫, ೪೮೫, ೫೨೬, ೫೫೨, ೫೫೪, ೫೬೮, ೭೩೧, ೭೬೦, ೮೬೯, ೮೭೬
ಸಿಂಧಿ ೧೩೪
ಸಿಂಫ್ ೭೦೭
ಸಿಂಹಳ ೪೯೦
ಸಿಖ್ ೬೫೪, ೬೯೫, ೭೦೪, ೭೦೫, ೮೫೬, ೮೫೭, ೮೫೯, ೮೬೦, ೮೬೬, ೮೭೪
ಸಿಟ್ರಿನ್ ೨೮೩
ಸಿಡೆನ್ ೮೯೮
ಸಿಡ್ನಾಮ್ ೬೦
ಸಿನ್ಹಾ ೫೨೩, ೮೮೩, ೮೮೪, ೮೮೫, ೮೮೬, ೮೮೭, ೮೮೮
ಸಿಮ್ಹಾ ೮೮೩
ಸಿಯನಾಡ್ ೮೦೭
ಸಿರೋಸಿಸ್ ೩೬
ಸಿಲೋನ್ ೪೫೨, ೪೫೩, ೪೯೦, ೭೫೯, ೭೬೨
ಸಿಹಾತ್ ೯೬೯
ಸುತಾರಾಂ ೩೦೪, ೩೪೦
ಸುನ್ನಿ ೬೫೦
ಸುಬರ್ಣೋಬಣಿಕರು ೯೩೨
ಸುಬ್ಬರಾಯನ್ ೭೩೧, ೭೩೬, ೮೪೭, ೮೪೮, ೮೪೯
ಸುಭಾನ ೫೯೫
ಸುಭಾಷ್ ೩೩೬
ಸುರತ್ ೭೮೬
ಸುರೇಂದ್ರನಾಥ ೯೩೧
ಸುರ್ದಿ ೩೭೩
ಸುಹ್ರಾವರ್ದಿ ೬೩೧
ಸೂರತ್ ೩೯೫, ೫೩೫, ೫೮೮, ೫೯೬
ಸೂರ್ಯದೇವ ೩೪೦
ಸೆಟಲ್‌ವಾಢ್ ೩೮೧, ೭೩೬, ೭೫೭, ೭೫೮, ೭೫೯, ೭೬೫, ೭೬೬, ೭೭೦
ಸೆನ್ ೮೮೯
ಸೆನೇಟ್ ೫೭, ೬೧, ೬೩, ೬೪, ೬೫, ೬೬, ೭೮, ೪೯೧
ಸೆನ್ಸಸ್ ೬೦೩
ಸೆಲ್ವಂ ೭೦೭, ೮೭೧
ಸೆಸಿಲ್ ೮೭೯

ಸೇನ್ ೮೯೨, ೮೯೪, ೮೯೫, ೮೯೬, ೯೨೫, ೯೨೬, ೯೨೭, ೯೨೮, ೯೩೨
ಸೈಡೆನ್ ೩೯೪
ಸೈಡೆನ್‌ಹ್ಯಾಮ್ ೬೦, ೩೯೩
ಸೈಮನ್ ೮೮೧
ಸೈಲಷಿಯಾ ೫೮೨
ಸೋನ್ ೨೯೯
ಸೋಮವಂಶೀ ೫೯೬, ೬೦೨
ಸೋಲಂಕಿ ೩೧೫, ೬೦೨, ೬೦೪, ೬೦೯, ೬೧೦, ೬೧೧, ೬೩೪
ಸೌತ್‌ಬರೋ ೪೬೭, ೪೭೯, ೪೮೬, ೪೯೨
ಸೌರಾಷ್ಟ್ರ ೫೮೮
ಸ್ಕಾಟಲೆಂಡ್ ೭೦
ಸ್ಕೊಲೋಸ್ಸೇರ್ ೨೬೨
ಸ್ಟೂವರ್ಟ್ ೫೩೫, ೫೪೪, ೫೫೧, ೫೮೨, ೮೩೫
ಸ್ಟೆವಾರ್ಟ್ ೯೮೦, ೯೮೫, ೯೯೫, ೯೯೬
ಸ್ಟೇನಿ ೭೬೬
ಸ್ಟೇನ್ಲೆ ೭೭೫
ಸ್ಟೇವಾರ್ಟ್ ೯೮೦
ಸ್ಟ್ಯೂಯರ್ಟ್ ೫೩೪
ಸ್ಟ್ರಕ್ಚರ್ ೮೫೬, ೮೬೫
ಸ್ಟ್ರಾಸಿ ೯೧೩
ಸ್ಟೇನ್ ೩೧೨, ೩೧೩, ೭೨೯
ಸ್ಪ್ಯಾನಿಷ್ ೩೧೨
ಸ್ಪ್ಯಾಂಕೀ ೬೬೨, ೬೬೩
ಸ್ಪ್ಯಾಡ್ಲರ್ ೬೧
ಸ್ಯಾಮ್ಯೂಯೆಲ್ ೭೯೯, ೮೦೧, ೯೫೪, ೯೫೫, ೯೮೦, ೯೮೧, ೯೮೨, ೯೮೩, ೯೮೪, ೯೮೫, ೯೮೬, ೯೮೭, ೯೮೮, ೯೮೯, ೯೯೦, ೯೯೧, ೯೯೨, ೯೯೫, ೯೯೬, ೯೯೭, ೯೯೮, ೯೯೯, ೧೦೦೦, ೧೦೦೧, ೧೦೦೩, ೧೦೦೪, ೧೦೦೫, ೧೦೦೬, ೧೦೦೭, ೧೦೦೮, ೧೦೦೯, ೧೦೧೦, ೧೦೧೧, ೧೦೧೨, ೧೦೧೩, ೧೦೧೪, ೧೦೧೫, ೧೦೧೬, ೧೦೧೭, ೧೦೧೮, ೧೦೧೯, ೧೦೨೦, ೧೦೨೧, ೧೦೨೨, ೧೦೨೩, ೧೦೨೪, ೧೦೨೫, ೧೦೨೬, ೧೦೨೭, ೧೦೨೮, ೧೦೨೯, ೧೦೩೦
ಸ್ಯಾಲಿಸ್ ೯೧೬
ಸ್ಯಾಲಿಸ್‌ಬರಿ ೯೯೧, ೯೯೫
ಸ್ವಿಟ್ಜರ್‌ಲ್ಯಾಂಡ್ ೩೪೪, ೭೮೫, ೮೧೭
ಸ್ವಿಸ್ ೮೪೦
ಸ್ವೀಡನ್ ೩೪೪

## ಹ

ಹಂಗೇರಿ ೪೬೪, ೫೮೨
ಹಕ್ಸರ್ ೭೮೯, ೭೯೦, ೭೯೧, ೭೯೨
ಹಟ್ಟನ್ ೯೬೬, ೯೬೭, ೯೬೮, ೯೬೯, ೯೭೦, ೯೭೧, ೯೭೨
ಹನುಮಾನ್ ೯೩೧
ಹಮೀದ್ ೯೧೭, ೯೧೮, ೯೨೪
ಹಯಾತ್ ೯೮೭
ಹರಾಮ್ ೩೧೭
ಹರಿಗೌರ್ ೬೦೮
ಹರಿದನ್ ೯೩೧
ಹರಿಸಿಂಗ್ ೬೦೭, ೬೦೮, ೬೨೨, ೬೨೪, ೬೨೭, ೬೨೮, ೬೩೧, ೬೩೨, ೮೯೧, ೯೧೭, ೯೨೩, ೯೫೨, ೯೬೫, ೯೭೮, ೯೯೯, ೧೦೦೩, ೧೦೧೫, ೧೦೧೬, ೧೦೨೯
ಹರ್ಕು ೪೭೩
ಹಸ್ಕರ್ ೮೦೨
ಹಾಕೆನ್‌ಹಲ್ ೯೦೧
ಹಾಟ್ಸನ್ ೨೬೨, ೩೭೩, ೫೯೭
ಹಾಪಕಿನ್ಸ್ ೭೩

ಹಾರ್ಟೋಗ್ ೯೧೫
ಹಾರ್ಟೋನ್ ೯೧೫
ಹಾರ್ಡೋಗ್ ೯೧೫
ಹಾಲೆಂಡ್ ೩೫೪
ಹಿಂದೂ ೫೨, ೧೪೦, ೧೫೮, ೧೫೯, ೧೬೩, ೧೮೦, ೨೨೧, ೩೧೪, ೩೧೫, ೩೨೦, ೩೨೨, ೩೨೩, ೩೨೪, ೩೨೬, ೪೧೬, ೪೧೮, ೪೧೯, ೪೭೩, ೪೮೦, ೪೮೮, ೫೩೪, ೫೩೭, ೫೪೪, ೫೪೭, ೫೫೩, ೫೬೭, ೫೭೩, ೫೮೫, ೫೮೬, ೫೮೮, ೫೮೯, ೫೯೧, ೫೯೩, ೫೯೪, ೫೯೫, ೫೯೯, ೬೦೦, ೬೦೧, ೬೦೪, ೬೦೭, ೬೦೮, ೬೦೯, ೬೧೩, ೬೧೮, ೬೨೨, ೬೨೪, ೬೨೭, ೬೨೮, ೬೪೩, ೬೪೪, ೬೪೬, ೬೪೯, ೬೫೩, ೬೫೪, ೬೫೮, ೬೯೩, ೭೦೫, ೭೧೭, ೭೧೮, ೮೫೯, ೮೬೩, ೮೬೫, ೯೩೦, ೯೩೧, ೯೩೩, ೯೩೬, ೯೩೭, ೯೩೮, ೯೩೯, ೯೪೨, ೯೪೩, ೯೪೪, ೯೪೫, ೯೪೬, ೯೪೭, ೯೪೮, ೯೪೯, ೯೫೦, ೯೫೨, ೯೫೪, ೯೫೬, ೯೫೮, ೯೬೪, ೯೯೩, ೯೯೭, ೯೯೮, ೯೯೯, ೧೦೦೦, ೧೦೦೨, ೧೦೧೪
ಹಿಂದೂಧರ್ಮ ೫೭೪, ೬೦೮
ಹಿಂದೂಸ್ಥಾನ ೪೧೮, ೫೩೨, ೫೪೨
ಹುಸೇನ್ ೩೬೦
ಹೆನ್ರಿ ೮೫೩, ೮೫೭, ೮೫೮, ೮೭೧, ೮೭೯, ೮೮೭, ೯೭೭, ೯೭೮
ಹೆರಾಲ್ಡ್ ೮೭೯
ಹೆಲ್ಮ್ ೩೯೦
ಹೇಯ್ವರ್ ೯೬೫
ಹೈದರಾಬಾದ್ ೩೯೫, ೫೫೪
ಹೈದರಿ ೧೦೦೫, ೧೦೦೭, ೧೦೧೧
ಹೋರ್ ೯೯೮
ಹೋಲಟ್ಜ್ ೩೯೦
ಹ್ಯಾಮ್ ೩೨೯, ೩೯೪, ೮೮೨, ೮೮೫, ೮೯೮, ೯೩೦
ಹ್ಯಾಮಿಲ್ ೫೭, ೫೯, ೬೫, ೭೫, ೭೮
ಹ್ಯಾರಿ ೯೫೨
ಹ್ಯಾರಿಸ್ ೬೧೨
ಹ್ಯಾರಿಸನ್ ೬೧೯
ಹ್ಯಾರೋ ೫೨೩
ಹ್ಯಾರ್ಟೋಗ್ ೯೧೩
ಹ್ಯೂಬರ್ಟ್ ೮೬೧, ೯೮೫